
ಪ್ರಧಾನ ಸಂಪಾದಕರು: ಡಾ. ಹೆಚ್. ಜೆ. ಲಕ್ಕಪ್ಪಗೌಡ

ಸಂಪಾದಕರು: ಜಯಾ ರಾಜಶೇಖರ್

ಅಭಿಜ್ಞ

ಡಾ. ಸಾ. ಶಿ. ಮರುಳಯ್ಯ
ಅಭಿನಂದನ ಗ್ರಂಥ





‘ಅಭಿಜ್ಞ’

ಡಾ। ಸಾಶಿಮ. ಅಭಿನಂದನ ಗ್ರಂಥ

ಪ್ರಧಾನ ಸಂಪಾದಕರು :

ಡಾ॥ ಎಚ್.ಜೆ. ಲಕ್ಕಪ್ಪಗೌಡ

ಸಂಪಾದಕರು:

ಶ್ರೀಮತಿ ಜಯಾ ರಾಜಶೇಖರ್

ಪ್ರಕಾಶಕರು :

ಡಾ। ಸಾ.ಶಿ. ಮರುಳಯ್ಯ ಅಭಿನಂದನ ಸಮಿತಿ,
‘ಗುರುಪ್ರಸಾದ’, ನಂ. ೮೪೫, ೪ನೆಯ ಮುಖ್ಯ ರಸ್ತೆ,
ವಿಜಯನಗರ, ಬೆಂಗಳೂರು - ೫೬೦ ೦೪೦.

ABHIGNA - A felicitation volume; presented to Dr. S. S. Marulaiah on the occasion of his 70th Birthday Celebration; Edited by Dr. H.J. Lakkappa Gowda; Published by Sa shi ma. Abhinandana Samithi, Guruprasada, 845, 4th Main, Vijayanagara, Bangalore - 560 040; No. of Pages 846 + xii


ಪ್ರಥಮ ಮುದ್ರಣ : ೨೦೦೧

ಬೆಲೆ : ರೂ. ೭೫೦/-


ವರ್ಣಶಿಲ್ಪಿ : ಚಂದ್ರನಾಥಾಚಾರ್

ಮುದ್ರಕರು :

ಬೂಸ್ನೂರು ಪ್ರಿಂಟರ್ಸ್
ಶಾಮನೂರು ರಸ್ತೆ
ದಾವಣಗೆರೆ - ೫೭೭ ೦೦೪.
ದೂರವಾಣಿ : (೦೮೧೯೨) ೨೩೦೭೭, ೨೦೮೩೭.



ಡಾ|| ಸಾ. ಶಿ. ಮರುಳಯ್ಯ



ತಂದೆ
ಶ್ರೀ ಶಿವರುದ್ರಯ್ಯನವರು



ತಾಯಿ
ಶ್ರೀಮತಿ ಸಿದ್ಧಮ್ಮನವರು



1962



1968



1975



1980

ಜೀವನದ ವಿವಿಧ ಘಟ್ಟಗಳಲ್ಲಿ




ಸಾಶಿಮ ಕುಟುಂಬ

ನಿಂತಿರುವವರು : ಮೊದಲನೆಯ ಸೊಸೆ ಸುವರ್ಣ ಪ್ರಸಾದ್, ಜ್ಯೇಷ್ಠಪುತ್ರ ಎಂ. ಶಿವಪ್ರಸಾದ್
ಪುತ್ರಿ ಎಂ. ರಾಗಿಣಿ ಸಂಗಮೇಶ್ವರ್, ಅಳಿಯ ಎಸ್. ಸಂಗಮೇಶ್ವರ್ ಮತ್ತು ಚಿ॥ ಸಂವೇದ್

ಕುಳಿತಿರುವವರು : ಸಾಶಿಮ, ಪತ್ನಿ ವೀಣಾ ಮರುಳಯ್ಯ, ಚಿ॥ ಆಶಿಷ್
ಮಡಿಲಲ್ಲಿ ಚಿ॥ ಓಜಸ್

ಒಳಚಿತ್ರ : ದ್ವಿತಿಯ ಪುತ್ರ ಎಂ. ರವಿಪ್ರಸಾದ್ ಮತ್ತು ಸೊಸೆ ಶೈಲಜಾ ಪ್ರಸಾದ್




ಅಧ್ಯಯನ ನಿರತ



ಫಲಕಗಳ ಪಂಕ್ತಿಯಲ್ಲಿ



ಮಡದಿಯೊಂದಿಗೆ



ಮೆಚ್ಚಿನ ಮಡದಿ ನೆಚ್ಚಿನ ಬರಹ



ಸಾಶಿಮ ಅಭಿನಂದನ ಸಮಿತಿಯ ಪೋಷಕರು

ಶ್ರೀ ಕೆ. ಶಿವರಾಂ, ಐ.ಎ.ಎಸ್.,



ಸಾಶಿಮ ಅಭಿನಂದನ ಸಮಿತಿಯ ಗೌರವಾಧ್ಯಕ್ಷರು

ಡಾ|| ಎಂ. ಎಂ. ಕಲಬುರ್ಗಿ

ಕುಲಪತಿಗಳು, ಹಂಪಿ ವಿಶ್ವ ವಿದ್ಯಾಲಯ

ಡಾ। ಸಾ.ಶಿ. ಮರುಳಯ್ಯ ಅಭಿನಂದನ ಸಮಿತಿ

ಪೋಷಕರು :
ಕೆ. ಶಿವರಾಮು, ಐ.ಎ.ಎಸ್.

ಸ್ವಾಗತಾಧ್ಯಕ್ಷರು :
ವತ್ಸಲಾ ಆರ್. ಪ್ರಭು

ಗೌರವಾಧ್ಯಕ್ಷರು :
ಡಾ। ಎಂ.ಎಂ.ಕಲಬುರ್ಗಿ

ಕಾರ್ಯಾಧ್ಯಕ್ಷರು :
ಜಯಾ ರಾಜಶೇಖರ್

ಉಪಾಧ್ಯಕ್ಷರುಗಳು :
ಡಾ। ಎಸ್. ವಿದ್ಯಾಶಂಕರ
ಕೆ.ಎ. ಸೋಮಯ್ಯ
ಎಸ್. ಶ್ರೀನಿವಾಸ ಉಡುಪ
ಸಿ.ಕೆ. ಪರಶುರಾಮಯ್ಯ
ಕೆ.ಎನ್. ಜಯಲಿಂಗಪ್ಪ
ಟಿ.ಮಹಾಬಲೇಶ್ವರ ಭಟ್ಟ
ಪಿ.ಆರ್. ಮಲ್ಲಿಕಾರ್ಜುನಯ್ಯ

ಕಾರ್ಯದರ್ಶಿಗಳು :
ಡಾ। ಸಿ.ಯು. ಮಂಜುನಾಥ್
ಎ.ಎಸ್. ಭಟ್

ಸಹಕಾರ್ಯದರ್ಶಿಗಳು :
ಕೆ.ಪಿ. ಮನೋಹರಯ್ಯ
ಜಯಮ್ಮ ಕರಿಯಣ್ಣ

ಕೋಶಾಧ್ಯಕ್ಷರು :
ಎನ್.ಎಂ. ಶಿವಕುಮಾರ್

ಲೆಕ್ಕ ಪರಿಶೀಲಕರು :
ಸದಾಶಿವ್ ಅಂಡ್ ಕೊ.
ಸರ್ಪಭೂಷಣ ಮಠದ ಮಹಡಿ,
ಬೆಂಗಳೂರು.

ಸಂಚಾಲಕರುಗಳು :

ಬೇಡರೆಡ್ಡಿಹಳ್ಳಿ ಪಂಪಣ್ಣ
ಕೆ. ವಾಸುದೇವಾಚಾರ್
ಕಾಯಿ.ಜಿ.ರೇಣುಕ
ಡಾ। ಬಿ.ನಂಜುಂಡಸ್ವಾಮಿ
ಬಿ. ಸ್ವಪ್ರಭಾನಂದ ಶರ್ಮ
ಚಂದ್ರಯ್ಯ ನಾಯ್ಡು
ಬಿ. ಸಿದ್ಧಗಂಗಯ್ಯ (ನಿಸರ್ಗಪ್ರಿಯ)
ಸಾಸಲು ಚಂದ್ರಶೇಖರ

ಸಂಪಾದಕರ ನುಡಿ

ಕನ್ನಡ ಶಿಕ್ಷಣ ಲೋಕದಲ್ಲಿ ಅತ್ಯಂತ ಜನಪ್ರಿಯ ಪ್ರಾಧ್ಯಾಪಕರೆಂದು ಪ್ರಕೀರ್ತಿತರಾದವರಲ್ಲಿ ಡಾ। ಸಾ.ಶಿ.ಮರುಳಯ್ಯ ಅವರು ಒಬ್ಬರು. ತಮ್ಮ ಬಹುಶ್ರುತವಾದ ವಿದ್ವತ್ತಿನಿಂದ, ಸರಳವೂ, ಸುಭಗವೂ ಹೃದಯಾಕರ್ಷಕವೂ ಆದ ವಾಗ್‌ವಿಲಾಸದಿಂದ, ನಿರೂಪಣೆಯ ವೈಶಿಷ್ಟ್ಯದಿಂದ, ವಿದ್ಯಾರ್ಥಿಗಳ ಮನಸ್ಸನ್ನು ತಟ್ಟಬಲ್ಲರು, ಅವರ ಕಣ್ಣಿಗೆ ಕಟ್ಟಬಲ್ಲ ವಿಷಯಚಿತ್ರಗಳ ಕಲಾಕಾರಿಕೆಯಿಂದ, ಸಂದರ್ಭಕ್ಕೆ ಸಂಬಂಧಿಸಿದ ವಿಷಯವನ್ನು ಕುರಿತ ಹತ್ತಾರು ಗ್ರಂಥಗಳ ಉಲ್ಲೇಖನ ಕೌಶಲದಿಂದ, ಮೆದುವಾದ, ಆತ್ಮೀಯವಾದ ದನಿಯಿಂದ, ವಿದ್ಯಾರ್ಥಿಗಳ ಅಪಾರ ಪ್ರೀತಿ, ಗೌರವಗಳಿಗೆ ಪಾತ್ರರಾದವರು. ಅಧ್ಯಾಪನ ಅವರ ಮೊದಲ ಒಲವು. ೨೦ ವಸಂತಗಳನ್ನು ಸಾರ್ಥಕವಾಗಿ ದಾಟಿ, ಮುಂದುವರೆಯುತ್ತಿರುವ ಅಪಾರ ಲವಲವಿಕೆಯ ಡಾ। ಸಾ.ಶಿ.ಮರುಳಯ್ಯ ಅವರು ಇಂದಿಗೂ ಬೇರೆ ಬೇರೆ ರೂಪದಲ್ಲಿ ಅಧ್ಯಾಪಕರೇ ಆಗಿ ತಮ್ಮ ಪಾಠ, ಪ್ರವಚನ, ಉಪನ್ಯಾಸಗಳಿಂದ ಜನಮನವನ್ನು ಆಕರ್ಷಿಸುತ್ತಿದ್ದಾರೆ.

ಡಾ। ಸಾ.ಶಿ. ಮರುಳಯ್ಯ ಅವರು ಗ್ರಾಮಾಂತರ ಪ್ರದೇಶದಲ್ಲಿ ಸಾಂಪ್ರದಾಯಿಕ ಕುಟುಂಬದಲ್ಲಿ ಹುಟ್ಟಿ, ಗ್ರಾಮ ಜೀವನದ ಎಲ್ಲಾ ಅನುಭವಗಳನ್ನು ಹೀರಿಕೊಂಡು ಬೆಳೆದ ಜೀವ. ಅಲ್ಲಿಯ ಭಾವ, ಭಾಷೆ, ಮುಗ್ಧತೆ, ಸೌಂದರ್ಯ, ನೋವು - ನಲಿವುಗಳು ಇಂದು ಕೂಡ ಅವರ ಬದುಕು - ಬರಹಗಳಲ್ಲಿ ಮಾಗಿದ ರೂಪದಲ್ಲಿ ಕಾಣಿಸಿಕೊಳ್ಳುತ್ತವೆ. ಯಾರನ್ನೂ ನೋಯಿಸದ, ಯಾರಿಗೂ ಘಾಸಿವುಂಟು ಮಾಡದ, ಸರಳ ಸಾತ್ವಿಕ ಮನೋಧರ್ಮ ಅವರದು. ವಿದ್ಯಾರ್ಥಿಯಾಗಿ, ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ, ಕವಿಯಾಗಿ, ನಾಟಕಕಾರರಾಗಿ, ಸಂಶೋಧಕರಾಗಿ, ವಿಮರ್ಶಕರಾಗಿ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪೀಠದ ಎತ್ತರಕ್ಕೆ ಏರಿ ಪ್ರಸಿದ್ಧರಾದರೂ ಅವರಲ್ಲಿ ಅಹಂಮಿಕೆ, ಡಂಭಾಚಾರ, ಸೋಗಲಾಡಿತನಗಳು ಅಂಕುರದೋರಿಲ್ಲ. ಅತ್ಯಂತ ಕಿರಿಯ. ವಯಸ್ಸಿನವರಿಂದ ಹಿಡಿದು ವೃದ್ಧ ವಯಸ್ಸಿನವರಿಗೂ ಪ್ರೀತಿ, ಸ್ನೇಹ, ಗೌರವಗಳ ಝುರಿಯನ್ನೇ ಅವರು ಹರಿಸುತ್ತಾರೆ. ಅವರ ಸ್ನೇಹ ಜೇನುತುಪ್ಪದಂತೆ ಶುದ್ಧ ಮತ್ತು ಸವಿ. ಅವರ ಈ ವ್ಯಕ್ತಿತ್ವ ಕನ್ನಡ ನಾಡಿನಲ್ಲಿ ಮತ್ತು ಹೊರಗೆ ಸಹಸ್ರಾರು ಸ್ನೇಹಿತರನ್ನೂ ಹಿತಚಿಂತಕರನ್ನೂ ಅವರಿಗೆ ಒದಗಿಸಿ ಕೊಟ್ಟಿದೆ. ಈ ಅಪಾರವಾದ ಸ್ನೇಹವಲಯದಲ್ಲಿ ಸದಾ ಸ್ಮಿತವದನರಾಗಿ ಮರುಳಯ್ಯ ಅವರು ರಾರಾಜಿಸುತ್ತಾರೆ.

ಡಾ। ಮರುಳಯ್ಯನವರ ಭಾವಗೀತೆಗಳು ಅಪೂರ್ವವೂ, ಸಹಜವೂ ಮತ್ತು ಆಕರ್ಷಕವೂ ಆದ ಗೇಯಗುಣದಿಂದ, ಸಹಜವಾಗಿಯೇ ಭಾವದ ಹನಿಗಳನ್ನು ಸ್ರವಿಸುವ ಸಂಗೀತಮಯ ಮತ್ತು ಅರ್ಥಬಂಧುರ ಪದಲಾಲಿತ್ಯದಿಂದ ಕಂಗೊಳಿಸುತ್ತವೆ. ಇದರಿಂದಾಗಿ ಸುಗಮ ಸಂಗೀತಗಾರರಿಗೆ, ಆಕಾಶವಾಣಿ ಮತ್ತು ದೂರದರ್ಶನಗಳಿಗೆ ಇವರ ಕವಿತೆಗಳು ಅಚ್ಚುಮೆಚ್ಚು. ಇವರನ್ನು ನೋಡದವರು ಸಹ ಅವರ ಈ ಕವಿತೆಗಳ ಕಾರಣದಿಂದಾಗಿ ಇವರ ಆರಾಧಕರಾಗಿದ್ದಾರೆ. ಸುಮಾರು ೭೫ ವೈವಿಧ್ಯಮಯ ಕೃತಿಗಳನ್ನು ರಚಿಸಿರುವ ಡಾ। ಮರುಳಯ್ಯ ಅವರು ಇನ್ನೂ ಬತ್ತದ ಸೆಲೆಯಾಗಿದ್ದಾರೆ. ೧೩ ಕವನ ಸಂಕಲನಗಳನ್ನು ಕನ್ನಡಕ್ಕೆ ಕೊಟ್ಟಿರುವ ಇವರು ಆ ಸಂಕಲನಗಳಲ್ಲಿ ಪರಿಸರಪರವಾದ, ಭಕ್ತಿಪರವಾದ, ಪ್ರೇಮಪರವಾದ, ಸ್ನೇಹಪರವಾದ ಹಾಗೂ ನವಿರಾದ ಸೂಕ್ಷ್ಮ ಅನುಭವಗಳ ಲೋಕವನ್ನು ವೈವಿಧ್ಯಮಯವಾಗಿ ತೆರೆದಿಟ್ಟಿದ್ದಾರೆ. ಕಥಾ ಕ್ಷೇತ್ರದಲ್ಲಿಯೂ ಕೈಯ್ಯಾಡಿಸಿರುವ

ಈ ಲೇಖಕರು ನೆಲದ ಸೊಗಡು, ಪುರುಷ ಸಿಂಹ, ಹೇಮಕೂಟ - ಮುಂತಾದ ಐತಿಹಾಸಿಕ ಹಾಗೂ ಸಾಮಾಜಿಕ ಕೃತಿಗಳನ್ನು ರಚಿಸಿದ್ದಾರೆ. ವೀರಶೈವ ಸಾಹಿತ್ಯದ ಬಗ್ಗೆ ಅತ್ಯಂತ ಆಳವಾದ ವಿದ್ವತ್ತನ್ನು ಪಡೆದಿರುವ ಇವರು ೨ ಆಧ್ಯಾತ್ಮಿಕ ಕಾದಂಬರಿಗಳನ್ನು ಸಹ ಬರೆದು, ಕಾದಂಬರಿ ಲೋಕದ ವಸ್ತು ವಿಸ್ತಾರಕ್ಕೆ ಕಾರಣರಾಗಿದ್ದಾರೆ. ಹಲವು ಜೀವನ ಚರಿತ್ರೆಗಳು ಇವರ ಲೇಖನದಿಂದ ಮೂಡಿ ಬಂದಿವೆ. ಆಕಾಶವಾಣಿಗಾಗಿ ಹಾಗೂ ರಂಗಭೂಮಿಗಾಗಿ ನಾಟಕಗಳನ್ನು, ಪ್ರಹಸನಗಳನ್ನು ಮತ್ತು ನೃತ್ಯ ರೂಪಕಗಳನ್ನು ರಚಿಸಿದ್ದಾರೆ. ಅತ್ಯಂತ ನಿರಾಯಸವಾದ ಭಾಷಾ ಕೌಶಲ, ಪಾತ್ರ ನಿರ್ಮಾಣ ಚಾತುರ್ಯ, ಸಂವಿಧಾನ ರಚನೆಗಳು ಇಲ್ಲಿ ಕಂಡು ಬರುತ್ತವೆ. ಸೃಜನಶೀಲ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಪರಿಣಿತಿಯನ್ನು ಪಡೆದಿರುವ ಇವರು ವಿಮರ್ಶಾ ಕ್ಷೇತ್ರದಲ್ಲಿಯೂ ಹೆಸರು ಮಾಡಿದ್ದಾರೆ. ಶೂನ್ಯ ಸಂಪಾದನೆ, ಮಾಸ್ತಿ ಅವರ ಕಾವ್ಯ, ವಚನ ಸಾಹಿತ್ಯ - ಮುಂತಾದವುಗಳನ್ನು ಕುರಿತು ಬರೆದ ಅವರ ವಿಮರ್ಶಾ ಬರಹಗಳು - ಗುಣೈಕ ಪಕ್ಷಪಾತಿಯಾದ ಸಹೃದಯ ವಿಮರ್ಶೆಗೆ ಮಾದರಿಯಾಗಿವೆ. ಸುಮಾರು ೨೫ ಕೃತಿಗಳನ್ನು ಅವರು ಸಂಪಾದಿಸಿ ಕೊಟ್ಟಿದ್ದಾರೆ. ಭಾಷಾಂತರ ಕ್ಷೇತ್ರದಲ್ಲೂ ಅವರ ಕೊಡುಗೆ ಗಣನೀಯವಾಗಿದೆ. ತಾತ್ವಿಕ ವಿವೇಚನೆಯನ್ನು ಒಳಗೊಂಡ ೫ ಗ್ರಂಥಗಳನ್ನೂ ಅವರು ಬರೆದಿದ್ದಾರೆ. ಅವರ 'ಕೆಳದಿ ಅರಸರು ಮತ್ತು ಕನ್ನಡ ಸಾಹಿತ್ಯ' ಎಂಬ ಮಹಾಪ್ರಬಂಧ ಆ ಕ್ಷೇತ್ರದ ಒಂದು ಗಮನಾರ್ಹವಾದ ವಿದ್ವತ್ ಕೃತಿ.

ಡಾ। ಸಾ.ಶಿ. ಮರುಳಯ್ಯ ಅವರ ವಿವಿಧ ಬಗೆಯ ವಿಶಿಷ್ಟ ಸಾಧನೆಗಳಿಗೆ ಸರ್ಕಾರ ಮತ್ತು ಜನತೆ ಅವರನ್ನು ಪ್ರೀತಿ ಅಭಿಮಾನಿಗಳಿಂದ ಗೌರವಿಸಿದ್ದಾರೆ. ಹೀಗಾಗಿ ಡಾ. ಸಾ.ಶಿ. ಮರುಳಯ್ಯ ಅವರು ಶಾಲಾ - ಕಾಲೇಜುಗಳಿಂದ ಹಿಡಿದು ವಿಶ್ವವಿದ್ಯಾನಿಲಯ ಮತ್ತು ಗುರು ಮನೆಗಳವರೆಗೂ ತಮ್ಮ ವಾಗ್ವೈಖರಿಯಿಂದ, ವಿಷಯ ನಿರೂಪಣೆಯ ಸೊಗಸಿನಿಂದ, ಅವುಗಳ ಅಂತರಾಳದಲ್ಲಿ ಚಿಮ್ಮುವ ವಿದ್ವತ್ತಿನಿಂದ, ಸಾತ್ವಿಕ ದೃಷ್ಟಿಯ ಜೀವನಪರ ಚಿಂತನೆಗಳಿಂದ ಕರ್ನಾಟಕದ ಸಾಹಿತ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಪ್ರಸಿದ್ಧರಾಗಿದ್ದಾರೆ.

ಅಜಾತಶತ್ರುವಾಗಿ ಸಾಹಿತ್ಯಪ್ರಿಯ ಮತ್ತು ಶಿಕ್ಷಣಪ್ರಿಯ ಹಾಗೂ ಅಸಂಖ್ಯಾ ವಿದ್ಯಾರ್ಥಿಗಳ ಮನದಲ್ಲಿ ಹಸಿರಾಗಿರುವ ಡಾ। ಸಾ.ಶಿ.ಮರುಳಯ್ಯ ಅವರಂಥ ವ್ಯಕ್ತಿಗಳ ಹೃದಯಸಂಪನ್ನತೆ ಮತ್ತು ಸಾಹಿತ್ಯಶ್ರೀಮಂತಿಕೆಗಳ ದ್ಯೋತಕವಾಗಿ ಅವರನ್ನು ಮುಂದಿನ ಪೀಳಿಗೆ ಸಹ ನೆನಪಿಸಿಕೊಳ್ಳುವ ರೀತಿಯಲ್ಲಿ ಗೌರವಿಸಬೇಕಾದ್ದು, ಅವರಿಂದ ಜೀವನಸ್ಫೂರ್ತಿಯನ್ನೂ ಮತ್ತು ಸಾಹಿತ್ಯಸ್ಫೂರ್ತಿಯನ್ನೂ ಪಡೆದ ಕನ್ನಡಿಗರೆಲ್ಲರ ಆದ್ಯಕರ್ತವ್ಯ. ಡಾ। ಮರುಳಯ್ಯ ಅವರಂತಹ ಸಾಹಿತ್ಯಾರ್ಪಣ ಮನಸತ್ವಿನ ಅಪರೂಪದ ವ್ಯಕ್ತಿಗಳಿಗೆ ನಮ್ಮ ಕೃತಜ್ಞತೆಗಳನ್ನು, ಪ್ರೀತಿ - ಗೌರವಗಳನ್ನು ಸೂಚಿಸುವುದು ಅವರನ್ನು ಒಣ ಮಾತುಗಳಿಂದ ಹೊಗಳುವುದರಿಂದ ಅಲ್ಲ; ಬಿರುದು-ಬಾವಲಿಗಳನ್ನಿತ್ತು ಸನ್ಮಾನಿಸುವುದರಿಂದ ಅಲ್ಲ. ಸಾಹಿತ್ಯಲೋಕ ಸದಾಕಾಲವೂ ಅವರನ್ನು ನೆನಪಿಸಿಕೊಳ್ಳುವ ಮೂಲಕ ನಿತ್ಯಸ್ಫೂರ್ತಿಯನ್ನು ಪಡೆಯಬಹುದಾದ ಶ್ರೀಮಂತ ಸಾಹಿತ್ಯ ಕಾಣಿಕೆಯೊಂದನ್ನು ಅವರಿಗೆ ಅರ್ಪಿಸುವುದು, ಆ ಮೂಲಕ ಅವರ ವ್ಯಕ್ತಿತ್ವ ಮತ್ತು ಸಾಧನೆಯನ್ನು ಮನನ ಮಾಡುವುದು ಹೆಚ್ಚು ಮೌಲಿಕವಾಗುತ್ತದೆ.

ಈ ಕಾರಣದಿಂದ ಸಾ.ಶಿ.ಮ. ಅವರ ಆಸಕ್ತಿಯ, ಪ್ರೀತಿಯ ವಲಯಗಳನ್ನು ಕುರಿತ ಅಮೂಲ್ಯ ಲೇಖನಗಳ ಹೆಬ್ಬೊತ್ತಿಗೆಯೊಂದನ್ನು ಈ ಮೂಲಕ ಅವರಿಗೆ ಅರ್ಪಿಸಲು ಅವರ ಅಭಿಮಾನಿಗಳ ಸಮಿತಿ ನಿರ್ಧರಿಸಿ ಸುತ್ತ ಕೆಲಸ ಮಾಡಿದೆ. ೯೦೦ಕ್ಕೂ ಹೆಚ್ಚು ಪುಟಗಳಲ್ಲಿ ಹರಡಿಕೊಂಡಿರುವ ಇಲ್ಲಿನ

ಲೇಖನಗಳು ಕನ್ನಡ ಸಾಹಿತ್ಯದ ಖ್ಯಾತನಾಮ ಲೇಖಕರಿಂದ, ಹಿರಿಯರಿಂದ ರಚಿತವಾದವುಗಳು. ಡಾ। ಮರುಳಯ್ಯನವರ ವ್ಯಕ್ತಿತ್ವ ಹಾಗೂ ಸಾಹಿತ್ಯಗಳನ್ನು ಕುರಿತ ನಿರ್ಮತ್ಸರಶೀಲ ಪ್ರೀತಿಯ ಆಕೃತಿಗಳಾದ ಲೇಖನಗಳು ಇಲ್ಲಿ ತುಂಬಿರುವಂತೆಯೇ ಪುರಾಣ, ಇತಿಹಾಸ, ಮಹಾಕಾವ್ಯ, ಭಾಷೆ, ಛಂದಸ್ಸು, ವಿಮರ್ಶೆ - ಮುಂತಾದ ವಿವಿಧ ವಿಷಯಗಳಿಗೆ ಸಂಬಂಧಿಸಿದ ಅತ್ಯಂತ ಅಪರೂಪದ ಹಾಗೂ ಗಾಢವೂ ಮತ್ತು ಸೂಕ್ಷ್ಮವೂ ಆದ ಹೊಸ ಸತ್ಯಗಳನ್ನು ಅಭಿವ್ಯಕ್ತಿಸುವ ವೈವಿಧ್ಯಮಯ ಸಂಶೋಧನಾ ಲೇಖನಗಳು ಇಲ್ಲಿ ಸೇರ್ಪಡೆಯಾಗಿವೆ. ಈ ಲೇಖನಗಳಲ್ಲಿ ನಮ್ಮ ಕನ್ನಡ ನಾಡಿನ ಧೀಮಂತ ಮನಸ್ಸುಗಳ ಸೋಪಜ್ಞಾಶೀಲ ಚಿಂತನೆಯ ಪ್ರಖರಕಿರಣಗಳು ಒಗ್ಗೂಡಿವೆ. ಈ ಕಾರಣದಿಂದಾಗಿ ಕನ್ನಡ ವಿದ್ವತ್ ಲೋಕ ಈ ಮೂಲಕ ಬಹುಪಯೋಗಿಯಾದ ಒಂದು ಬೃಹತ್ ಪರಾಮರ್ಶನ ಗ್ರಂಥವೊಂದನ್ನು ಪಡೆಯುವಂತಾಗಿದೆ; ಹಾಗೆಯೇ ಇದು ಡಾ। ಮರುಳಯ್ಯನವರ ವ್ಯಕ್ತಿತ್ವ ಸಾಧನೆಗಳಿಗೆ ಸಲ್ಲುವ ಗೌರವದ ಪ್ರತೀಕವೂ ಆಗಿದೆ. ಈ ಕವಿ ವಿದ್ವಾಂಸ ಹಾಗೂ ಪ್ರಾಧ್ಯಾಪಕರ ಮೇಲಿನ ಸ್ನೇಹ, ಪ್ರೀತಿ ಮತ್ತು ಅಭಿಮಾನಗಳಿಂದ ಇಲ್ಲಿನ ಲೇಖನಗಳನ್ನು ಒದಗಿಸಿಕೊಟ್ಟಿದ್ದಾರೆ. ಇಂತಹ ಒಂದು ಮಹಾನೆ ಕಾರ್ಯಕ್ಕೆ ನನ್ನನ್ನು ಸಾಂಕೇತಿಕವಾಗಿ ತೊಡಗಿಸಿ, ಪ್ರಧಾನ ಸಂಪಾದಕನಾಗಿ ಕಾರ್ಯ ನಿರ್ವಹಿಸಲು ಅನುವು ಮಾಡಿಕೊಟ್ಟ ಅಭಿನಂದನಾ ಸಮಿತಿಗೆ, ನಾನು ಪತ್ರ ಬರೆದಾಗ ಇಲ್ಲವೆನ್ನದೇ ಆಸಕ್ತಿ, ಉತ್ಸಾಹಗಳಿಂದ ತಮ್ಮ ಅಮೂಲ್ಯ ಲೇಖನಗಳನ್ನು ಕಳುಹಿಸಿಕೊಟ್ಟು ಉಪಕರಿಸಿದ ಈ ಸಂಪುಟದ ಲೇಖಕಬಂಧುಗಳಿಗೆ, ನನ್ನ ತುಂಬು ಹೃದಯದ ಕೃತಜ್ಞತೆಗಳು. ನನ್ನ ಈ ಸಂಪಾದನಾ ಕಾರ್ಯವನ್ನು ತುಂಬಾ ಹಗುರಗೊಳಿಸಿ ಹಗಲು - ಇರುಳುಗಳೆನ್ನದೇ ದುಡಿದ ಡಾ। ಮರುಳಯ್ಯನವರ ಅಭಿಮಾನಿ ಬಳಗಕ್ಕೆ ಹಾಗೂ ಈ ಸಂಪುಟವನ್ನು ಆಶ್ಚರ್ಯಕರವಾದ ವೇಗದಲ್ಲಿ ಅಚ್ಚು ಮಾಡಿಕೊಟ್ಟ ಬೂಸ್ನೂರು ಪ್ರಿಂಟರ್ಸ್‌ನ ಮಾಲೀಕರಾದ ಬೂಸ್ನೂರು ವಿ.ಶಿವಯೋಗಿ, ದಾವಣಗೆರೆ ಇವರಿಗೆ ಕೃತಜ್ಞತೆಯ ನಮನಗಳು.

ದಿನಾಂಕ : ೨೨-೦೧-೨೦೦೧

ಸ್ಥಳ : ಬೆಂಗಳೂರು.

ಡಾ। ಎಚ್.ಜೆ.ಲಕ್ಕಪ್ಪಗೌಡ

ಪ್ರಧಾನ ಸಂಪಾದಕರು.

ಕೃತಜ್ಞತೆಗಳು

'ಅಭಿಜ್ಞ' ಅಂದವಾಗಿ ಹೊರಬರಲು ಕಾರಣರಾದ ಕೆ.ಶಿವರಾಮು, ಎಚ್.ವಿ.ನಾಗೇಂದ್ರಪ್ಪ ಶಂಕರ್ ಮತ್ತಿತರ ಎಲ್ಲ ಕೊಡುಗೈ ದಾನಿಗಳಿಗೆ ಅಭಿನಂದನ ಸಮಿತಿ ಆಭಾರಿಯಾಗಿದೆ.

ಎನ್.ವಿ. ಶಿವಕುಮಾರ್

ಕೋಶಾಧ್ಯಕ್ಷರು.

ಪರಿವಿಡಿ

ಏಕಾಂತ ರಾಮಯ್ಯ - ಇತ್ತೀಚಿನ ಶೋಧಗಳು : ಒಂದು ಸಮೀಕ್ಷೆ

ಡಾ॥ ಬಿ.ಆರ್. ಹಿರೇಮಠ

ಏಕಾಂತ ರಾಮಯ್ಯನನ್ನು ಕುರಿತು ತಾಳಿಕೋಟೆ (ಕ್ರಿ.ಶ.೧೧೮೪), ಅಬ್ಬಲೂರು (ಕ್ರಿ.ಶ.೧೨೦೦), ಭೋಗಾವೆ, ಕುಡತಿನಿ (ಕ್ರಿ.ಶ.೧೨೧೦), ಮರಡಿಪುರ (ಕ್ರಿ.ಶ.೧೨೮೦) - ಹೀಗೆ ಐದು ಶಾಸನಗಳು ಮಾತ್ರ ಲಭಿಸುತ್ತವೆ. ಇವುಗಳಲ್ಲಿ ಅಬ್ಬಲೂರು ಶಾಸನ, ಏಕಾಂತ ರಾಮಯ್ಯನ ಚರಿತ್ರೆಯನ್ನು ವಿವರವಾಗಿ ಹೇಳುತ್ತದೆ. ಇದರ ಜೊತೆಗೆ ಈತನು ಅಬ್ಬಲೂರಿನಲ್ಲಿ ಮಾಡಿದ ವೀರಪ್ರತಿಜ್ಞೆಯ ಕಾರ್ಯಗಳು ಸೋಮೇಶ್ವರ ದೇವಾಲಯದ ಪೌಳಿಯಲ್ಲಿ ಶಿಲ್ಪರೂಪದಲ್ಲಿ ಕಂಡರಿಸಲ್ಪಟ್ಟಿವೆ. ಇದಲ್ಲದೆ ಏಕಾಂತರಾಮಿ ತಂದೆಗಳ ರಗಳೆ, ಬಸವಪುರಾಣ (ಸಂಧಿ ೪೯- ೧ ರಿಂದ ೧೩, ಸಂಧಿ ೫೨-೩೦ ರಿಂದ ೫೦), ಶಿವತತ್ವ ಚಿಂತಾಮಣಿ (ಸಂಧಿ ೩೭-೨೦೦, ೨೦೧), ವೀರಶೈವಾಮೃತ ಮಹಾಪುರಾಣ (ಕಾಂಡ ೪, ಸಂಧಿ ೮-೬ ರಿಂದ ೧೩), ಪಾಲ್ಕುರಿಕೆ ಸೋಮೇಶ್ವರ ಪುರಾಣ (ಸಂಧಿ ೪-೯೦-೯೧ ಹಾಗೂ ೧೧೬-೧೧೭) ಸಿದ್ಧೇಶ್ವರ ಪುರಾಣ (ಸಂಧಿ ೭-೪೪ ರಿಂದ ೫೩), ಬಸವೇಶ್ವರ ಪುರಾಣದ ಕಥಾಸಾಗರ, ಬಸವರಾಜ ವಿಜಯಂ (೩೪-೧ರಿಂದ ೧೬, ೩೬-೫೪ ರಿಂದ ೭೧), ಬೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರ (ಭಾಗ-೨, ಪುಟ-೪) ಮುಂತಾದ ಕೃತಿಗಳಲ್ಲಿಯೂ ಏಕಾಂತ ರಾಮಯ್ಯನನ್ನು ಕುರಿತು ವಿವರಗಳು ದೊರೆಯುತ್ತವೆ.

ಹೀಗೆ ಏಕಾಂತ ರಾಮಯ್ಯನ ಬಗೆಗೆ ಶಾಸನ ಪ್ರಮಾಣಗಳೂ ಶಿಲ್ಪ ಪ್ರಮಾಣಗಳೂ ಸಾಹಿತ್ಯ ಪ್ರಮಾಣಗಳೂ ಸಿಗುತ್ತಿದ್ದು, ಅವನ ಜೀವನ ಚರಿತ್ರೆಯ ರಚನೆಗೆ ಗಟ್ಟಿಯಾದ ಆಧಾರಗಳಾಗಿ ಪರಿಣಮಿಸಿರುತ್ತವೆ. ಇವು ನೀಡುವ ಸುಳಿವುಗಳನ್ನು ಆಧರಿಸಿ ಏಕಾಂತ ರಾಮಯ್ಯನನ್ನು ಕುರಿತು ಹೊಸ ವ್ಯಾಖ್ಯಾನಗಳನ್ನು ಮಾಡಲು

ಸಾಧ್ಯವಿದೆ. ಇದಲ್ಲದೆ ಈತನ ಹೆಸರಿನಲ್ಲಿ ದೇವಾಲಯವೂ, ಈತನ ವಂಶಜರೂ ಇದ್ದ ಬಗೆಗೆ ವಿವರಗಳೂ ಇತ್ತೀಚೆಗೆ ಕಂಡುಬಂದಿರುತ್ತವೆ. ಏಕಾಂತ ರಾಮಯ್ಯನನ್ನು ಕುರಿತ ಈ ಎಲ್ಲ ಇತ್ತೀಚಿನ ಶೋಧಗಳನ್ನು ಪರಿಚಯಿಸುವ, ಅರ್ಥೈಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

೧. ಏಕಾಂತ ರಾಮಯ್ಯ - ಅವನ ಸಮಕಾಲೀನರು (ಬಸವ - ಬಿಜ್ಜಳ - ಮಲ್ಲಿಕಾರ್ಜುನ ಪಂಡಿತಾರಾಧ್ಯರು)

ಪ್ರಬಲ ಜೈನ ಕೇಂದ್ರವಾಗಿದ್ದ ಅಬ್ಬಲೂರಿನಲ್ಲಿ ಏಕಾಂತ ರಾಮಯ್ಯನ ಆಗಮನದ ಮೂಲಕ ಜೈನರಿಗೂ (ವೀರ) ಶೈವರಿಗೂ ಘರ್ಷಣೆ ಆರಂಭವಾಯಿತು. ಇದು ದಿನದಿಂದ ದಿನಕ್ಕೆ ಬೆಳೆಯುತ್ತ , ಏಕಾಂತ ರಾಮಯ್ಯನ ಶಿರಸ್ಸು ಪವಾಡದಲ್ಲಿ ಪರ್ಯವಸಾನ ಹೊಂದಿತು. ಏಕಾಂತ ರಾಮಯ್ಯ ಅಬ್ಬಲೂರಿನಲ್ಲಿ ಜಿನಪ್ರಳಯ ಮಾಡಿದ. ಅಂದರೆ ಜಿನಬಿಂಬಗಳನ್ನು ಒಡೆದು, ಆ ಸ್ಥಳದಲ್ಲಿ ವೀರಸೋಮೇಶ್ವರಲಿಂಗ ಪ್ರತಿಷ್ಠಾಪಿಸಿದ. ಇದರಿಂದ ಅವಮಾನಿತರಾದ ಜೈನರು ಬಿಜ್ಜಳನಲ್ಲಿಗೆ ಹೋಗಿ, ಏಕಾಂತ ರಾಮಯ್ಯನ ವಿರುದ್ಧ ದೂರು ಸಲ್ಲಿಸಿದರು. ಬಿಜ್ಜಳ ಏಕಾಂತ ರಾಮಯ್ಯನನ್ನು ಕಲ್ಯಾಣಕ್ಕೆ ಕರೆಯಿಸಿದ ವಿವರಗಳು ಶಾಸನಸ್ಥವಾಗಿರುತ್ತವೆ[1]. ಇದರಿಂದ ಏಕಾಂತ ರಾಮಯ್ಯನ ಶಿರಸ್ಸು ಪವಾಡ ಘಟನೆ ನಡೆದುದು ಕಲಚುರಿ ಬಿಜ್ಜಳ ಬದುಕಿರುವಾಗಲೇ ಎಂಬುದು ಖಚಿತವಾಗುತ್ತದೆ. ಬಸವಣ್ಣನವರು ಕಲ್ಯಾಣದಿಂದ ನಿರ್ಗಮಿಸಿದುದು ಬಿಜ್ಜಳನ ವಧೆಯ ನಂತರ ಎಂಬುದು ಸಾಹಿತ್ಯ ಕೃತಿಗಳಿಂದ ವಿದಿತವಾಗುತ್ತದೆ. ಆದುದರಿಂದ ಏಕಾಂತರಾಮಯ್ಯನ ಶಿರಸ್ಸು ಪವಾಡ ನಡೆದ ಸಮಯದಲ್ಲಿ ಬಿಜ್ಜಳ ಹಾಗೂ ಬಸವಣ್ಣ ಇಬ್ಬರು ಕಲ್ಯಾಣದಲ್ಲಿದ್ದರೆಂದು ಹೇಳಬೇಕಾಗುತ್ತದೆ. ಬಿಜ್ಜಳ, ಏಕಾಂತ ರಾಮಯ್ಯನನ್ನು ಕಲ್ಯಾಣಕ್ಕೆ ಕರೆಸಿದುದನ್ನು ಅಬ್ಬಲೂರು ಶಾಸನ ತಿಳಿಸುತ್ತದೆ. ಏಕಾಂತ ರಾಮಯ್ಯ ಬಿಜ್ಜಳನ ವಿನಂತಿಯ ಮೇರೆಗೆ ಕಲ್ಯಾಣಕ್ಕೆ ಹೋದಾಗ ಬಸವಣ್ಣನವರನ್ನೂ ಕಂಡಿರುವ ಸಾಧ್ಯತೆಯಿದೆ. ಹೀಗಾಗಿ ಏಕಾಂತ ರಾಮಯ್ಯ - ಬಿಜ್ಜಳ - ಬಸವಣ್ಣನವರು ಸಮಕಾಲೀನರಾಗುತ್ತಾರೆ. ಈ ಎಲ್ಲ ವಿವರಗಳನ್ನು ನೀಡುವ ಅಬ್ಬಲೂರು ಶಾಸನದ ಕಾಲ ಕ್ರಿ.ಶ.೧೨೦೦. ಆದುದರಿಂದ ಇವರೆಲ್ಲರೂ ಕ್ರಿ.ಶ.೧೨೦೦ಕ್ಕೆ ವರೆಗೂ ಬದುಕಿದ್ದರೆಂದು ಹೇಳಬೇಕಾಗುತ್ತದೆ. ಆದರೆ ಕ್ರಿ.ಶ. ೧೧೮೪ರ ತಾಳಿಕೋಟೆ ಶಾಸನದಲ್ಲಿ ಬರುವ ''ಪರಿಯಳಿಗೆ ಅಣಿಲೆವಾಡ ಉಣಕಲ್ಲು ಸಂಪಗಾವಿ ಅಬ್ಬಲೂರು ಮಾರುಡಿಗೆ ಅಣಂಪೂರು ಕರಹಾಡ ಕೆಂಬಾವಿ ಬಮ್ಮುಕೂರು ಮೊದಲಾಗಿ ಅನನ್ತ ದೇಶದೇಶಾನ್ತರದಲಿದಿರಾದ ಪರಸಮಯಿಗಳಂ ಪಡಲ್ವಿಡ್ಸಿ ಲೋಕಮನಾಕಂಪಗೊಳ್ಸಿ.... ತಮ್ಮ ಭ್ರಿತ್ಯಾಚಾರದ ತೊಮ್ಮೆಯುಂ ತಳದಲಿಕ್ಕಿ ತೋರ್ಪ್ಪನ್ತೆ ತೋರಿದ ಪುರಾತನ ನೂತನರೆನಿಸಿದ ಅಸಂಖ್ಯಾತ ಗಣಂಗಳ'' [2] ಎಂಬ ಗದ್ಯದಲ್ಲಿ ಏಕಾಂತ ರಾಮಯ್ಯ ಶಿರಸ್ಸು ಪವಾಡ ನಡೆಸಿದುದರ ಸೂಚನೆಯಿದೆ ಎನಿಸುತ್ತದೆ. ಅಬ್ಬಲೂರಿನಲ್ಲಿ ಪರಸಮಯಿ (ಅನ್ಯಧರ್ಮದವರನ್ನು = ಜೈನರನ್ನು)ಗಳನ್ನು ಸೋಲಿಸಿ, ಶಿವ ಸಮಯವನ್ನು ಮೆರೆದ ಘಟನೆ ಏಕಾಂತ ರಾಮಯ್ಯನಿಗೆ ಮಾತ್ರ ಸಂಬಂಧಿಸಿದುದಾಗಿದೆ. ಆದುದರಿಂದ ಏಕಾಂತರಾಮಯ್ಯನ ಶಿರಸ್ಸು ಪವಾಡ ಘಟನೆ ಕ್ರಿ.ಶ.೧೧೮೪ ಹಾಗೂ ಕ್ರಿ.ಶ. ೧೨೦೦ ರ ಮಧ್ಯದಲ್ಲಿ ಜರುಗಿತೆಂದು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಇದರಿಂದ ಏಕಾಂತ ರಾಮಯ್ಯ ಕಲ್ಯಾಣಕ್ಕೆ ಹೋಗಿ ಬಸವ, ಬಿಜ್ಜಳರನ್ನು ಕಂಡುದು ಕ್ರಿ.ಶ. ೧೧೮೪ ಹಾಗೂ ಕ್ರಿ.ಶ ೧೨೦೦ರ ಮಧ್ಯದ ಅವಧಿಯಲ್ಲಿಯೇ ಎಂಬುದು ಗೊತ್ತಾಗುತ್ತದೆ. ಹೀಗಾಗಿ ಬಸವ, ಬಿಜ್ಜಳರ ಅಂತ್ಯಮಿತಿ ಕ್ರಿ.ಶ.೧೧೮೪ ಹಾಗೂ ಕ್ರಿ.ಶ. ೧೨೦೦ರ ಮಧ್ಯದ ಅವಧಿ ಎಂದು ಹೇಳಬೇಕಾಗುತ್ತದೆ.

ಏಕಾಂತ ರಾಮಯ್ಯ ಮಾಡಿದ ಪರಮ ಸಾಹಸಗಳನ್ನೂ ಆತನ ವೀರಮಾಹೇಶ್ವರ ನಿಷ್ಠೆಯನ್ನೂ, ದೈವೀಶಕ್ತಿಯನ್ನೂ ಮೆಚ್ಚಿದ ಕಲಚುರಿ ಚಕ್ರವರ್ತಿ ಬಿಜ್ಜಳ ಅಬ್ಬಲೂರಿನ ವೀರಸೋಮನಾಥ ದೇವಾಲಯಕ್ಕೆ (ಏಕಾಂತ ರಾಮಯ್ಯ ನಿರ್ಮಿಸಿದ) ಭೋಗಾವೆ ಗ್ರಾಮವನ್ನು 'ಏಕಾಂತ ರಾಮಯ್ಯನ ಕಾಲಂ ಕರ್ಚಿ' ದಾನವಾಗಿ ನೀಡಿದ ವಿಷಯವೂ ಕ್ರಿ.ಶ. ೧೨೦೦ರ ಅಬ್ಬಲೂರು ಶಾಸನದಲ್ಲಿದೆ. ಇಲ್ಲಿ ಚಕ್ರವರ್ತಿ ಬಿಜ್ಜಳ ಏಕಾಂತರಾಮಯ್ಯನ ಪಾದವನ್ನು ತೊಳೆದು, ವೀರಸೋಮನಾಥ

1. Epigraphia Indica XXIX. P.141.
2. South Indian Inscriptions XV No.56.

ದೇವರ ಸನ್ನಿಧಾನದಲ್ಲಿ ದಾನ ನೀಡಿದುದು ಸ್ಪಷ್ಟವಿದೆ. ಇದರಿಂದ ಈ ದಾನದ ಪ್ರಸಂಗದಲ್ಲಿ ಬಿಜ್ಜಳ, ಏಕಾಂತ ರಾಮಯ್ಯರು ಬದುಕಿದ್ದುದೂ ಬಿಜ್ಜಳ ಅಬ್ಬಲೂರಿಗೆ ಬಂದುದೂ ಏಕಾಂತ ರಾಮಯ್ಯ ಪೂಜನೀಯ ವ್ಯಕ್ತಿ ಅಂದರೆ ಸ್ಥಾನಾಚಾರ್ಯನಾಗಿದ್ದುದೂ ವ್ಯಕ್ತವಾಗುತ್ತದೆ. ಯಾಕೆಂದರೆ ಸ್ಥಾನಾಚಾರ್ಯರ 'ಕಾಲಂ ಕರ್ಚಿ' ದಾನ ನೀಡಿದುದನ್ನು ಶಾಸನಗಳು ವಿವರಿಸುತ್ತವೆ. ಹೀಗಾಗಿ ಏಕಾಂತ ರಾಮಯ್ಯ ಶಿರಸ್ಸು ಪವಾಡ ಘಟನೆಯ ತರುವಾಯ ವೀರಸೋಮೇಶ್ವರ ದೇವಾಲಯದ ಸ್ಥಾನಾಚಾರ್ಯನಾಗಿರುವುದರಲ್ಲಿ ಸಂದೇಹವಿಲ್ಲವೆನಿಸುತ್ತದೆ. ಇದಲ್ಲದೆ 'ಅಬ್ಬಲೂರು ಚರಿತೆ' (ಕ್ರಿ.ಶ. ೧೬೫೦) ಎಂಬ ಗ್ರಂಥದಲ್ಲಿಯೂ (ಸಂಧಿ ೬, ಪದ್ಯ ೩೮ ರಿಂದ ೪೪) ಏಕಾಂತ ರಾಮಯ್ಯನ ಈ ವೀರಮಾಹೇಶ್ವರ ನಿಷ್ಠೆಯನ್ನು ನೋಡಲು ಬಿಜ್ಜಳ, ಬಸವ ಹಾಗೂ ಇತರ ಶರಣರು ಕಲ್ಯಾಣದಿಂದ ಅಬ್ಬಲೂರಿಗೆ ಬಂದಿದ್ದರೆಂದು ಹೇಳಲಾಗಿದೆ.

ಬಿಜ್ಜಳ ಚಕ್ರವರ್ತಿಯಾಗಿ ಕಲ್ಯಾಣದಲ್ಲಿದ್ದುದು ಕ್ರಿ.ಶ. ೧೧೫೬ರಲ್ಲಿ. ಆದುದರಿಂದ ಬಸವಣ್ಣನವರು ಕ್ರಿ.ಶ. ೧೧೫೬ರ ತರುವಾಯವೇ ಕಲ್ಯಾಣಕ್ಕೆ ಹೋದರು. ''ಅಯ್ಯಾ ಭಕ್ತಿಗೆ ಬೀಡಾದುದು ಕಲ್ಯಾಣ ಮೂವತ್ತಾರು ವರುಷ, ಅಯ್ಯಾ ಅನುಭವಕ್ಕೆ ಶಿವಸದನವಾದುದು ಇಪ್ಪತ್ತೇಳು ವರುಷ''[3] ಮೊದಲಾದ ವಚನೋಕ್ತಿಗಳೂ ಬಸವಣ್ಣನವರು ಕಲ್ಯಾಣದಲ್ಲಿ ಕ್ರಿ.ಶ. ೧೧೯೨ ಅಥವಾ ೧೧೮೩ರ ವರೆಗೂ ಇದ್ದರೆಂಬುದನ್ನು ತಿಳಿಸುವಂತಿವೆ. ಈ ಎಲ್ಲ ಅಂಶಗಳು ಬಸವ, ಬಿಜ್ಜಳ, ಏಕಾಂತ ರಾಮಯ್ಯರು ಸಮಕಾಲೀನರೆಂಬುದನ್ನೂ ಬಸವ, ಬಿಜ್ಜಳರ ಅಂತ್ಯಮಿತಿ ೧೧೮೩ರ ತರುವಾಯ ಎಂಬುದನ್ನೂ ಗಟ್ಟಿಗೊಳಿಸಿಕೊಡುತ್ತವೆ.

ತೆಲುಗು ಪಂಡಿತಾರಾಧ್ಯ ಚರಿತ್ರೆಯ ಮೇರೆಗೆ ಬಸವಣ್ಣನವರು ಹಾಗೂ ಮಲ್ಲಿಕಾರ್ಜುನ ಪಂಡಿತಾರಾಧ್ಯರು ಸಮಕಾಲೀನರು ಹಾಗೂ ಸಮವಯಸ್ಕರು. ಕ್ರಿ.ಶ ೧೧೮೫ರ ಸಂಗಮೇಶ್ವರ ಶಾಸನ (ತೆಲುಗು) ಮಹಾಮಂಡಲೇಶ್ವರ ಕನ್ನಾಟ ಗೋಕರ್ಣದೇವ ಮಹಾರಾಜನು ಮಲ್ಲಿಕಾರ್ಜುನ ಪಂಡಿತಾರಾಧ್ಯರಿಗೆ ದಾನ ಮಾಡಿದ ವಿಷಯವನ್ನು ತಿಳಿಸುತ್ತದೆ. ಇದರಿಂದ ಮಲ್ಲಿಕಾರ್ಜುನ ಪಂಡಿತಾರಾಧ್ಯರು ಕ್ರಿ.ಶ. ೧೧೮೫ರಲ್ಲಿ ಬದುಕಿದ್ದರೆಂಬುದು ಸ್ಪಷ್ಟವಾಗುತ್ತದೆ. ಬಸವಣ್ಣನವರು ಲಿಂಗೈಕ್ಯರಾದ ಒಂದು ಶಿವರಾತ್ರಿಯ ನಂತರ ಪಂಡಿತಾರಾಧ್ಯರು ಲಿಂಗೈಕ್ಯರಾದರೆಂದು ಪಂಡಿತಾರಾಧ್ಯ ಚರಿತ್ರೆ ತಿಳಿಸುತ್ತದೆ. ಆದುದರಿಂದ ಬಸವಣ್ಣನವರು ಕ್ರಿ.ಶ.೧೧೮೫ರ ಸುಮಾರಿಗೆ ಲಿಂಗೈಕ್ಯರಾದರೆಂದೂ ಪಂಡಿತಾರಾಧ್ಯರು ಕ್ರಿ.ಶ೧೧೮೫ರ ತರುವಾಯ ಲಿಂಗೈಕ್ಯರಾದರೆಂದೂ ವ್ಯಕ್ತವಾಗುತ್ತದೆ.[4] ಹೀಗೆ ಈ ಮೇಲಿನ ಎಲ್ಲ ವಿವರಗಳಿಂದ ಬಸವ - ಬಿಜ್ಜಳ - ಏಕಾಂತರಾಮಯ್ಯ-ಮಲ್ಲಿಕಾರ್ಜುನ ಪಂಡಿತಾರಾಧ್ಯರು ಸಮಕಾಲೀನರೆಂಬುದೂ ಬಸವ, ಬಿಜ್ಜಳರು ಕ್ರಿ.ಶ. ೧೧೮೫ರ ವರೆಗೂ ಮಲ್ಲಿಕಾರ್ಜುನ ಪಂಡಿತಾರಾಧ್ಯರು ಕ್ರಿ.ಶ. ೧೧೮೬ರ ವರೆಗೂ ಏಕಾಂತರಾಮಯ್ಯ ಕ್ರಿ.ಶ. ೧೧೮೫ರ ತರುವಾಯವೂ ಬದುಕಿದ್ದರೆಂಬುದು ತಿಳಿದುಬರುತ್ತದೆ.

೨. ಏಕಾಂತ ರಾಮಯ್ಯ - ಉಗ್ರಭಕ್ತಿ, ಸ್ಥಾವರಲಿಂಗ ಪೂಜೆ

ಉಗ್ರಭಕ್ತಿ, ಸ್ಥಾವರಲಿಂಗಪೂಜೆಗಳು ಬಸವಪೂರ್ವ ಯುಗದಲ್ಲಿ ಪ್ರಚಲಿತದಲ್ಲಿದ್ದವು. ಸಾತ್ವಿಕ (ಶಾಂತ) ಭಕ್ತಿ, ಇಷ್ಟಲಿಂಗ ಪೂಜೆಯ ಉಪಕ್ರಮಗಳು ಬಸವಯುಗದಲ್ಲಿ ಬಳಕೆಯಲ್ಲಿದ್ದವು ಎಂಬುದು ಸಾಮಾನ್ಯವಾದ ಗ್ರಹಿಕೆಯಾಗಿದೆ. ಆದರೆ ಮೇಲಿನ ವಿವರಗಳಿಂದ ಬಸವಯುಗದಲ್ಲಿಯೇ ಉಗ್ರಭಕ್ತಿ, ಸ್ಥಾವರಲಿಂಗ ಪೂಜೆಗಳು ಆಚರಿಸಲ್ಪಡುತ್ತಿದ್ದವು ಎಂಬುದು ಖಚಿತವಾಗುತ್ತದೆ. ಏಕಾಂತ ರಾಮಯ್ಯ ಆರಂಭದಲ್ಲಿ ಶೈವನಾಗಿದ್ದು, ಆಮೇಲೆ ವೀರಶೈವನಾದಂತಿದೆ. ಈ ಕಾಲದ ವೀರಶೈವವು ಇಷ್ಟಲಿಂಗ ಪೂಜೆಯೊಂದಿಗೆ ಸ್ಥಾವರಲಿಂಗಪೂಜೆಯನ್ನೂ ಸಾತ್ವಿಕ ಭಕ್ತಿಯೊಂದಿಗೆ ಉಗ್ರಭಕ್ತಿಯನ್ನೂ ಮೈಗೂಡಿಸಿಕೊಂಡಂತಿದೆ. ಆದುದರಿಂದ ಏಕಾಂತ ರಾಮಯ್ಯ ಆ ಕಾಲದ (ವೀರಶೈವ) ಶಿವಶರಣನೆಂದು ಹೇಳಬಹುದಾಗಿದೆ. ಬಸವಣ್ಣನವರ ಕಾಲದಲ್ಲಿ ಹಾಗೂ ಅನಂತರ ಉಗ್ರಭಕ್ತಿ ಹಾಗೂ ಸ್ಥಾವರಲಿಂಗ ಪೂಜೆಗಳನ್ನು ಮುಂದುವರಿಸಿದ ಶ್ರೇಯಸ್ಸು ಏಕಾಂತ ರಾಮಯ್ಯನದಾಗಿರುತ್ತದೆ.

---

3. ಬಸವಣ್ಣನವರ ವಚನಗಳು : ವ.ಸಂ. ೧೧೬೬

4. ಬಸವಪಥ ೧೬-೬ ''ಬಸವಣ್ಣನವರ ಜೀವಮಾನದ ಕಾಲ'' - ಜಿ.ಎಸ್. ದೀಕ್ಷಿತ್ (ಪುಟ ೧೧-೧೪)

೩. ಏಕಾಂತ ರಾಮಯ್ಯ - ವಚನ ರಚನೆ

ಕೊಂಡಗುಳಿ ಕೇಶಿರಾಜ, ಜೇಡರ ದಾಸಿಮಯ್ಯ, ಬಸವಣ್ಣ ಮೊದಲಾದ ಶಿವಶರಣರ ವಚನ ರಚನೆಯ ಗಂಗೋತ್ರಿ ಶಿವ ದೇವಾಲಯಗಳೆಂಬುದನ್ನು ವಿದ್ವಾಂಸರು ಈಗಾಗಲೇ ತೋರಿಸಿಕೊಟ್ಟಿದ್ದಾರೆ. ಏಕಾಂತರಾಮಯ್ಯನೂ ದೇವಾಲಯ ಸಂಸ್ಕೃತಿಯಲ್ಲಿ ಬೆಳೆದುಬಂದವನಾಗಿದ್ದಾನೆ. ಏಕಾಂತ ರಾಮಯ್ಯನ ಹೆಸರಿನಲ್ಲಿ ಎನ್ನಯ್ಯ ಚೆನ್ನರಾಮ / ಎನ್ನಯ್ಯ ಚೆನ್ನರಾಮೇಶ್ವರಲಿಂಗ / ರಾಮೇಶ್ವರಲಿಂಗ ಅಂಕಿತದಲ್ಲಿ ಒಟ್ಟು ಆರು ವಚನಗಳು ಈಗ ಸಿಗುತ್ತವೆ. ಈ ವಚನಗಳ ಕರ್ತೃ ಏಕಾಂತ ರಾಮಯ್ಯ ಹಾಗೂ ಶಿರಸ್ಸು ಪವಾಡ ಮೆರೆದ ಏಕಾಂತರಾಮಯ್ಯರು ಅಭಿನ್ನರೆನಿಸುತ್ತದೆ. ಇದು ನಿಜವಾದರೆ ಶಿರಸ್ಸು ಪವಾಡದ ಏಕಾಂತ ರಾಮಯ್ಯ ಸ್ಥಾನಾಚಾರ್ಯನಾಗಿದ್ದುಕೊಂಡು ವಚನ ರಚನೆ ಮಾಡಿದನೆಂದಾಗುತ್ತದೆ. ಇದರಿಂದ ಲಕುಲೀಶ ಪಾಶುಪತ ಶೈವದ ಸ್ಥಾನಾಚಾರ್ಯ ಏಕಾಂತ ರಾಮಯ್ಯ ವಚನಕಾರನಾಗಿ ವಚನ ಪರಂಪರೆಯನ್ನು ಮುಂದುವರಿಸಿದನೆಂದು ಹೇಳಬೇಕಾಗುತ್ತದೆ. ಹೀಗೆ ಬಸವಪೂರ್ವಯುಗ ಹಾಗೂ ಬಸವಯುಗಗಳಲ್ಲಿ ವಚನ ರಚನೆ ಲಕುಲೀಶ ಪಾಶುಪತ ಶೈವರಿಂದಲೂ ನಡೆದು ಈ ಶೈವಮತದ ಪ್ರತಿನಿಧಿ ಏಕಾಂತ ರಾಮಯ್ಯನ ಮೂಲಕ ಅದು ಮುಂದುವರಿಯಿತೆಂಬುದನ್ನು ಇಲ್ಲಿ ಗಮನಿಸಬೇಕು. ಹೀಗೆ ಏಕಾಂತರಾಮಯ್ಯ ವೀರಮಾಹೇಶ್ವರ ನಿಷ್ಠೆಯ ಉಗ್ರಭಕ್ತನಾಗಿ, ಸ್ಥಾನಾಚಾರ್ಯನಾಗಿ, ವಚನಕಾರನಾಗಿ ಕಂಗೊಳಿಸುತ್ತಾನೆ.

೪. ಏಕಾಂತ ರಾಮಯ್ಯ - ಅವನ ವಂಶಜರು

ಬಸವಣ್ಣನವರ ತರುವಾಯವೂ ಏಕಾಂತ ರಾಮಯ್ಯ ಬದುಕಿದ್ದ. ಈ ಸಮಯದಲ್ಲಿ ಆತ ಮಾಡಿದ ವೀರಶೈವ ಸಂಘಟನೆ, ನಡೆಸಿದ ಸಾಮಾಜಿಕ ಹೋರಾಟ ಮೊದಲಾದ ಯಾವ ಸಂಗತಿಗಳೂ ಗೊತ್ತಾಗುವುದಿಲ್ಲ. ಆದರೆ ಏಕಾಂತದ ರಾಮಯ್ಯನಿಗೆ ರಾಮದೇವ ಭಟ್ಟ ಎಂಬ ಮೊಮ್ಮಗನಿದ್ದ ವಿಷಯ ಮಾತ್ರ ಕ್ರಿ.ಶ. ೧೨೦೭ರ ಬಂದಳಿಕೆಯ ಶಾಸನದಲ್ಲಿ ದಾಖಲಾಗಿದೆ [5]. ಈ ರಾಮದೇವ ಭಟ್ಟ, ಏಕಾಂತ ರಾಮಯ್ಯನ ಮಗನ ಮಗನೋ ಮಗಳ ಮಗನೋ ಎಂಬುದು ಸ್ಪಷ್ಟವಾಗುವುದಿಲ್ಲ. ಆದರೆ ಈತ ಏಕಾಂತ ರಾಮಯ್ಯನ ಮೊಮ್ಮಗನೆಂಬುದು ಸ್ಪಷ್ಟ.

ಏಕಾಂತ ರಾಮಯ್ಯನ ತಂದೆ - ತಾಯಿಗಳೂ ಶೈವ ಬ್ರಾಹ್ಮಣರು. ಈತ ಆರಂಭದಲ್ಲಿ ಶೈವನಾಗಿದ್ದು (ಬಸವಣ್ಣನವರಂತೆ), ಆಮೇಲೆ ವೀರಶೈವನಾದವ. ಆದರ ಈತನ ವಂಶಜನಾದ ಮೊಮ್ಮಗ ರಾಮದೇವ ಭಟ್ಟ ಮಾತ್ರ ವೀರಶೈವನಲ್ಲ. ಹೀಗೆ ಏಕಾಂತ ರಾಮಯ್ಯನ ವಂಶದಲ್ಲಿಯೇ ಇನ್ನೂ ಕೆಲವರು ಕ್ರಿ.ಶ. ೧೨೦೭ರ ಸುಮಾರಿಗೆ ಶೈವ ಬ್ರಾಹ್ಮಣರಾಗಿಯೇ ಉಳಿದಿದ್ದರು.

ಇಲ್ಲಿ ರಾಮದೇವ ಭಟ್ಟ ತನ್ನ ಅಜ್ಜನಾದ ಏಕಾಂತರಾಮಯ್ಯನ (ವೀರಶೈವ) ಧರ್ಮದ ಅನುಯಾಯಿ ಆಗದೇ ತನ್ನ ಪೂರ್ವಜರ (ಶೈವ ಬ್ರಾಹ್ಮಣ) ಧರ್ಮವನ್ನೇ ಏಕೆ ಮುಂದುವರಿಸಿದ ಎಂಬುದು ರಹಸ್ಯವಾಗಿಯೇ ಉಳಿಯುತ್ತದೆ [6].

ಕ್ರಿ.ಶ. ೧೫ನೆಯ ಶತಮಾನದ ಕೆಂಪನಪುರ ಗ್ರಾಮದ ಶಾಸನ [7] ಏಕಾಂತ ರಾಮಯ್ಯನ ಅನ್ವಯೋದ್ಭೂತ (ವಂಶಜ)ನಾದ 'ಏಕಾಂತ ಬಸವೇಶ್ವರ' ಇದ್ದನೆಂಬ ಹೊಸ ಸಂಗತಿಯನ್ನು ಪ್ರಥಮಬಾರಿಗೆ ತಿಳಿಸುತ್ತದೆ.

ಏಕಾಂತ ರಾಮಯ್ಯನ ಇನ್ನೊಬ್ಬ ವಂಶಜನಾದ ಈ ಏಕಾಂತ ಬಸವೇಶ್ವರನು ಸಾಮಾನ್ಯ ವ್ಯಕ್ತಿಯಾಗಿರಲಿಲ್ಲ. ಕೆಂಪನಪುರ ಶಾಸನದಲ್ಲಿಯ 'ರಾಕಾಂತರ್ನಿಸಿ ಜ್ರಂಭ ಮಾಣಶ ಶಭೃಜ್ಜಾಬಯಾಭಕೀರ್ತಿ', 'ಅನೇಕಾಂಡಾದಿ ವಿರುದ್ಧ ವಾಗ್ವಿಘಟನ ಪ್ರೌಢ

---

5. Epigraphia Carnatica VII ಶಿಕಾರಿಪುರ ೨೩೫.

6. ಬಸವಣ್ಣನವರ ವಂಶಜ [ಬಸವಣ್ಣನವರ ಅಣ್ಣ ದೇವರಾಜನ ಮಗನ (ಕಲಿದೇವರಸನ) ಮಗ ಅಂದರೆ ಮೊಮ್ಮಗ] ಹಾಲ ಬಸವಿದೇವನು ಕವಿಳಾಸಪುರದಲ್ಲಿ ಶೈವಾಚಾರ್ಯನಾಗಿದ್ದುದನ್ನು ಅರ್ಜುನವಾಡ ಶಾಸನ (ಕ್ರಿ.ಶ. ೧೨೬೦) ಹೇಳುತ್ತದೆ. ಹೀಗೆ ಬಸವಣ್ಣನವರ ತರುವಾಯ ಅವರ ವಂಶಜರೂ ವೀರಶೈವರಾಗಿ ಉಳಿಯದೆ ಶೈವರಾಗಿಯೇ ನಿಂತಿರುವುದನ್ನು ಇಲ್ಲಿ ಗಮನಿಸಬೇಕು.

7. Epigraphia Carnatica IV ಚಾಮರಾಜನಗರ ೧೪೪ (ಹೊಸ ಆವೃತ್ತಿ)

ಪ್ರತಾಪೋಜ್ವಲಃ', 'ವೀರಶೈವಮತ ಸ್ಥಾಪನಾಚಾರ್ಯ', 'ಶೃ(ಶ್ರಂ)ತಿ ಸ್ಮಾತೀತಿಹಾಸ ಪುರಾಣಾಗಮ ತಾತ್ಪರ್ಯ ಪ್ರತಿಪಾದಿತ' ಎಂಬ ಸಾಲುಗಳು ಏಕಾಂತ ಬಸವೇಶ್ವರನ ಎತ್ತರದ ವ್ಯಕ್ತಿತ್ವವನ್ನು ಎತ್ತಿ ತೋರಿಸುತ್ತವೆ. ಈತನಿಗೆ 'ವೃಷಭಾಧೀಶ ದೇಶಿಕ' ಎಂಬ ಪ್ರತಿನಾಮವೂ ಇದ್ದಿತು. ಈ (ಕೆಂಪನಪುರ) ಶಾಸನದಲ್ಲಿ ಏಕಾಂತರಾಮಯ್ಯನನ್ನು 'ಸ್ವಸ್ತಿ ಶ್ರೀಮದಖಿಲ ದೇವಕುಲ ಮಕುಟ ಸಂಕಲಿತಾಗಣಿತ-ಮಣಿಗಣ ಕಿರಣಾವರಣ ಶ್ರೀಚರಣ ಸರೋರುಹ ಶ್ರೀಮದ್ವೀರ ಸೋಮೇಶ್ವರ ದ್ವಾದಶಾವತಾರ ಶ್ರೀ ವೀರಭದ್ರ ನಿಜಸ್ವರೂಪ'ರೆಂದು ಹೇಳಲಾಗಿದೆ. ಇದು ಏಕಾಂತ ರಾಮಯ್ಯನ ವೀರವ್ಯಕ್ತಿತ್ವವನ್ನು ವಿಶಿಷ್ಟವಾಗಿ ವಿವರಿಸುತ್ತದೆ.

ಏಕಾಂತ ರಾಮಯ್ಯನ ವಂಶ (ಒಬ್ಬ ವ್ಯಕ್ತಿ) ೩೦೦ ವರ್ಷಗಳ ತರುವಾಯವೂ ಅದೇ ನಿಷ್ಠೆ, ವ್ಯಕ್ತಿತ್ವ, ಘನತೆಗಳ ಎತ್ತರದಲ್ಲಿ ಇದ್ದುದು ಅಭಿಮಾನದ ಸಂಗತಿಯೆನಿಸಿದೆ.

ಹೀಗೆ ಏಕಾಂತ ರಾಮಯ್ಯನ ಮೊಮ್ಮಗ ರಾಮದೇವ ಭಟ್ಟ (ಕ್ರಿ.ಶ.೧೨೦೭), ವಂಶಜ ಏಕಾಂತ ಬಸವೇಶ್ವರ (೧೫ನೆಯ ಶತಮಾನ)ರು ತುಂಗಭದ್ರೆಯ ದಕ್ಷಿಣದಲ್ಲಿದ್ದರು. ಇದರಲ್ಲಿ ರಾಮದೇವ ಭಟ್ಟ, ಅಜ್ಜನ (ವೀರಶೈವ) ಧರ್ಮವನ್ನು ಮುಂದುವರಿಸಲಿಲ್ಲ. ವಂಶಜ ಏಕಾಂತ ಬಸವೇಶ್ವರ ಮಾತ್ರ ತನ್ನ ಹಿರಿಯರ (ವೀರಶೈವ) ಧರ್ಮವನ್ನು ಉದ್ಧರಿಸಿದ, ಮುಂದುವರಿಸಿದ. ಇದಲ್ಲದೆ ಏಕಾಂತ ರಾಮಯ್ಯನ ವಂಶದ ಬಳ್ಳಿ ೧೫ನೆಯ ಶತಮಾನದವರೆಗೂ ಮುಂದುವರಿದಿದ್ದಿತೆಂಬುದು ಮೇಲಿನ ವಿವರಗಳಿಂದ ವ್ಯಕ್ತವಾಗುತ್ತದೆ.

೫. ಏಕಾಂತ ರಾಮಯ್ಯ - ಅವನ ಹೆಸರಿನ ದೇವಾಲಯ

ವಿಗ್ರಹ ಪ್ರತಿಷ್ಠಾಪನೆ, ದೇವಾಲಯ ನಿರ್ಮಾಣ ಕಾರ್ಯಗಳು ಶರಣ ಧರ್ಮಕ್ಕೆ ವಿರುದ್ಧವಾದವುಗಳು. ಹೀಗಾಗಿ ಅವರು ಜೀವಿತ ಕಾಲದಲ್ಲಿ ತಮ್ಮ ಹೆಸರಿನಲ್ಲಿ ವಿಗ್ರಹ ಮತ್ತು ದೇವಾಲಯಗಳನ್ನು ನಿರ್ಮಿಸಲಿಲ್ಲ. ಆದರೆ ಮುಂದೆ ಜನರು ಇವರ ಹೆಸರಿನಲ್ಲಿ ವಿಗ್ರಹ ಪ್ರತಿಷ್ಠಾಪನೆ, ದೇವಾಲಯ ನಿರ್ಮಾಣದಂಥ ಪುಣ್ಯ ಕಾರ್ಯವನ್ನು ಕೈಕೊಂಡರು. ಶಿವಶರಣರ ಹೆಸರಿನಲ್ಲಿ ಇಂಥ ಕಾರ್ಯ ಮಾಡುವುದರಿಂದ ತಮ್ಮ ಜೀವನ ಸಾರ್ಥಕವಾಗುವುದೆಂದು ಅಂದಿನ ಜನ ಭಾವಿಸಿದ್ದರು. ಹೀಗಾಗಿ ಕರ್ನಾಟಕದಲ್ಲಿ ಶಿವಶರಣರ ವಿಗ್ರಹ, ದೇವಾಲಯಗಳು ತಲೆಯೆತ್ತಿ ನಿಲ್ಲುವಂತಾಯಿತು. ಜೊತೆಗೆ ಶಿವಶರಣರ ಐತಿಹಾಸಿಕತೆಗೆ ಶಿಲ್ಪಪ್ರಮಾಣವೂ ಪ್ರಾಪ್ತವಾಯಿತು. ತುಂಬ ವಿರಳವಾಗಿ ದೊರೆಯುವ ಶಿವಶರಣರ ದೇವಾಲಯಗಳಲ್ಲಿ ಏಕಾಂತ ರಾಮಯ್ಯನ ದೇವಾಲಯ ಪ್ರಮುಖವಾಗಿರುತ್ತದೆ.

ಮುಳಬಾಗಿಲದ ಆವನಿಯ ಬೆಟ್ಟದಲ್ಲಿ ಏಕಾಂತ ರಾಮಯ್ಯನ ದೇವಾಲಯವಿದ್ದುದು ಗೊತ್ತಾಗುತ್ತದೆ [8]. ಇದು, ಅಬ್ಬಲೂರನ್ನು ಬಿಟ್ಟರೆ ಏಕಾಂತ ರಾಮಯ್ಯನ ಹೆಸರಿನಲ್ಲಿ ದೊರೆಯುವ ಎರಡನೆಯ ದೇವಾಲಯವಾಗಿರುತ್ತದೆ [9]. ಹೀಗೆ ತುಂಗಭದ್ರೆಯ ದಕ್ಷಿಣದಲ್ಲಿ ಏಕಾಂತರಾಮಯ್ಯನ ದೇವಾಲಯ ಲಭಿಸುತ್ತಿರುವುದು ಒಂದು ವಿಶೇಷವೆಂದೇ ಹೇಳಬೇಕಾಗುತ್ತದೆ. ಇದರಿಂದ ಏಕಾಂತ ರಾಮಯ್ಯನ ತರುವಾಯ, ಅವನ ಪ್ರಭಾವ ಈ ಪ್ರದೇಶದಲ್ಲಿ ಹರಡಿದುದು ಸ್ಪಷ್ಟವಾಗುತ್ತದೆ.

ಒಟ್ಟಿನಲ್ಲಿ ಏಕಾಂತ ರಾಮಯ್ಯನ ಶಿರಸ್ಸು ಪವಾಡ ಘಟನೆ ಕ್ರಿ.ಶ. ೧೧೮೪ ಮತ್ತು ಕ್ರಿ.ಶ. ೧೨೦೦ ದ ಮಧ್ಯ ಅಬ್ಬಲೂರಿನಲ್ಲಿ ನಡೆಯಿತು. ಏಕಾಂತ ರಾಮಯ್ಯ, ಬಿಜ್ಜಳ, ಬಸವ, ಮಲ್ಲಿಕಾರ್ಜುನ ಪಂಡಿತಾರಾಧ್ಯರು ಸಮಕಾಲೀನರು. ಬಿಜ್ಜಳ, ಬಸವಣ್ಣನವರ ಅಂತ್ಯಮಿತಿ ಕ್ರಿ.ಶ. ೧೧೮೪ರ ತರುವಾಯ, ಕ್ರಿ.ಶ ೧೧೮೫ರ ಸುಮಾರಿಗೆ ಎಂದು ಹೇಳಬೇಕಾಗುತ್ತದೆ.

---

8. Epigraphia Carnatica XVII ಪುಟ ೧೯

9. ಅಬ್ಬಲೂರಿನ ಸೋಮೇಶ್ವರ ದೇವಾಲಯದಲ್ಲಿ ಮಧ್ಯದಲ್ಲಿದ್ದುದು ಸೋಮೇಶ್ವರಲಿಂಗ. ಎಡಭಾಗ ಮತ್ತು ಬಲಭಾಗಗಳಲ್ಲಿರುವ ಲಿಂಗಗಳಿಗೆ ಅಗ್ಘವಣಿ ಹೊನ್ನಯ್ಯ, ಏಕಾಂತ ರಾಮಯ್ಯ ಎಂದು ಹೆಸರು.

ಏಕಾಂತ ರಾಮಯ್ಯ ಬಸವ, ಬಿಜ್ಜಳರ ತರುವಾಯವೂ ಬದುಕಿದ್ದ. ಬಸವಣ್ಣನವರ ಕಾಲಾವಧಿಯಲ್ಲೇ ಉಗ್ರಭಕ್ತಿ ಆಚರಣೆ ಹಾಗೂ ಸ್ಥಾವರಲಿಂಗ ಪೂಜೆಗಳು ಜರುಗುತ್ತಿದ್ದವು. ಏಕಾಂತ ರಾಮಯ್ಯ ಆರಂಭದಲ್ಲಿ ಶೈವನಾಗಿದ್ದು [10]. (ಸ್ಥಾವರ ಪೂಜಕ), ನಂತರ ವೀರಶೈವನಾದನು. ಏಕಾಂತ ರಾಮಯ್ಯನಿಗೆ ರಾಮದೇವ ಭಟ್ಟನೆಂಬ ಮೊಮ್ಮಗನಿದ್ದನು. ಈತನು ವೀರಶೈವನಾಗಿರದೆ ಶೈವಬ್ರಾಹ್ಮಣನಾಗಿದ್ದನು. ಏಕಾಂತ ರಾಮಯ್ಯನ ತಂದೆ - ತಾಯಿಗಳೂ ಶೈವ ಬ್ರಾಹ್ಮಣರು. ಮೊಮ್ಮಗ ರಾಮದೇವ ಭಟ್ಟ, ತನ್ನ ಅಜ್ಜ ಏಕಾಂತರಾಮಯ್ಯನ ವೀರಶೈವ ಧರ್ಮದ ಅನುಯಾಯಿ ಆಗಿ ಮುಂದುವರಿಯಲಿಲ್ಲ. ಏಕಾಂತ ಬಸವೇಶ್ವರ ಏಕಾಂತ ರಾಮಯ್ಯನ ಇನ್ನೊಬ್ಬ ವಂಶಜ. ಈತ ೧೫ನೆಯ ಶತಮಾನದಲ್ಲಿದ್ದು, ವೀರಶೈವ ಧರ್ಮದ ಪ್ರಸಾರ ಕಾರ್ಯ ಕೈಕೊಂಡ. ಈ ಏಕಾಂತ ಬಸವೇಶ್ವರನ ಉಲ್ಲೇಖ ಗುಬ್ಬಿಯ ಮಲ್ಲಣಾರ್ಯನ (ಕ್ರಿ.ಶ.೧೫೩೦) ವೀರಶೈವಾಮೃತಮಹಾಪುರಾಣ (೮-೮-೪೪)ದಲ್ಲಿಯೂ ಬರುತ್ತದೆ. ಏಕಾಂತ ರಾಮಯ್ಯನ ವಂಶಜರು ೧೫ನೆಯ ಶತಮಾನದವರೆಗೂ ಇದ್ದರು. ಏಕಾಂತ ರಾಮಯ್ಯನ ತರುವಾಯ ವೀರಶೈವಧರ್ಮ ತುಂಗಭದ್ರೆಯ ದಕ್ಷಿಣದ ಕಡೆಗೆ ಸಾಗಿತು. ಹೀಗೆ ಇತ್ತೀಚಿನ ಶೋಧಗಳ ಮೂಲಕ ಏಕಾಂತ ರಾಮಯ್ಯ ಹಾಗೂ ಅವನ ವಂಶಜರನ್ನು ಕುರಿತು ಹಲವಾರು ಹೊಸ ಸಂಗತಿಗಳು ಬೆಳಕಿಗೆ ಬಂದಿರುತ್ತವೆ. ಈ ಮೂಲಕ ಅವುಗಳ ಸ್ಥೂಲ ಪರಿಚಯ ಆಗುವುದೆಂದು ಭಾವಿಸಿದ್ದೇನೆ.

---

10. ಬಸವಣ್ಣನವರು ಕಲ್ಯಾಣಕ್ಕೆ ಹೋಗುವವರೆಗೆ ಶೈವರಾಗಿಯೇ ಇದ್ದರೆಂದು ಹರಿಹರನ ಬಸವರಾಜದೇವರ ರಗಳೆಯಿಂದ ಊಹಿಸಬಹುದಾಗಿದೆ.

ಸಾಂಸ್ಕೃತಿಕ ಕೇಂದ್ರಗಳಾಗಿ ದೇವಸ್ಥಾನಗಳು

ಡಾ|| ಬಾ.ರಾ. ಗೋಪಾಲ

ದೈವ ಸಾಕ್ಷಾತ್ಕಾರ ಬಯಸುವ, ಮೋಕ್ಷ ಬಯಸುವ ಜನರು ಅನುಸರಿಸುವ ಹಲವಾರು ಮಾರ್ಗಗಳಲ್ಲಿ ಭಕ್ತಿ ಮಾರ್ಗವೂ ಒಂದು. ಮೂರ್ತಿ ಪೂಜೆ ಇದರ ಒಂದು ಅಂಗ. ಜನ ಸಾಮಾನ್ಯರು ಮೂರ್ತಿಯಲ್ಲಿ ದೈವತ್ವವನ್ನು ಆಹ್ವಾನಿಸಿ, ಅದು ದೈವದ ಪ್ರತೀಕ ಎಂದು ಭಾವಿಸಿ ಅದಕ್ಕೆ ಪೂಜೆ - ಪುನಸ್ಕಾರಗಳನ್ನು ಮಾಡತೊಡಗಿದರು. ಕ್ರಮೇಣ ಇದು ಕೇವಲ ವೈಯಕ್ತಿಕವಾಗಿರದೆ ಸಮಾಜದ ಎಲ್ಲರೂ ಒಂದೆಡೆ ಸೇರಿ ಪೂಜೆಮಾಡುವ ಪದ್ಧತಿ ಮೂಡಿತು. ಇದರ ಫಲವೇ ದೇವಾಲಯಗಳ ನಿರ್ಮಾಣ. ಹೀಗೆ ದೇವಾಲಯಗಳನ್ನು ಕಟ್ಟಿಸುವ ಸಂಪ್ರದಾಯ ಭಾರತದಲ್ಲಿ ಆರಂಭವಾದುದು ಬೌದ್ಧಧರ್ಮವು ನಮ್ಮ ನಾಡಿನಲ್ಲಿ ಜನ್ಮ ತಾಳಿ ಪ್ರಬಲವಾದಾಗ. ಬೌದ್ಧರು ಸ್ತೂಪ, ವಿಹಾರಗಳನ್ನು ಇದಕ್ಕಾಗಿ ಕಟ್ಟಿಸಿದರು. ಬುದ್ಧನ ವಿಗ್ರಹಾರಾಧನೆಗೆ ಮುನಿಗಳ ನಿವಾಸಕ್ಕೂ ಇವು ಉಪಯೋಗಿಸಲ್ಪಟ್ಟುವು. ಈ ಪದ್ಧತಿ ಹಿಂದೂಧರ್ಮವನ್ನು ಆಕರ್ಷಿಸಿತು. ಹಿಂದೂ ದೇವಾಲಯಗಳ ನಿರ್ಮಾಣ ಅಂದಿನಿಂದ ಆರಂಭವಾಯಿತೆನ್ನಬಹುದು.

ಬ್ರಾಹ್ಮಣರು ನಿಯಮ, ಹೋಮ, ದೀಕ್ಷೆಗಳನ್ನು ಮಾಡುತ್ತಿದ್ದು ದೇವಾಲಯಗಳಲ್ಲಿ ಸದಾ ಮಂತ್ರಘೋಷಗಳು ಕೇಳಿ ಬರುತ್ತಿತ್ತೆಂದು ತಾಳಗುಂದದ ಪ್ರಣವೇಶ್ವರ ದೇವಾಲಯದ ಶಾಸನ ತಿಳಿಸುತ್ತದೆ. ಇದರ ಕಾಲ ಸುಮಾರು ಕ್ರಿ.ಶ. ೩೫೦. ಈ ದೇವಾಲಯದಲ್ಲಿ ನೀರಿನ ಸೌಕರ್ಯಕ್ಕಾಗಿ ಕದಂಬರ ಕಾಕುಸ್ಥವರ್ಮ ಒಂದು ಕೆರೆಯನ್ನು ತೋಡಿಸಿದನೆನ್ನುತ್ತದೆ. ಈ ಶಾಸನ ಇಲ್ಲಿ ಸಾತವಾಹನಕುಲದ ಸಾತಕರ್ಣಿ ಮುಂತಾದವರು ಪೂಜಿಸುತ್ತಿದ್ದರೆಂಬ ಮಾತು ಈ ದೇವಾಲಯದ ಪ್ರಾಚೀನತೆಯನ್ನು ಸೂಚಿಸುತ್ತದೆ.

ದೇವಸ್ಥಾನ ಕಟ್ಟಿಸುವುದು, ದೇವಸ್ಥಾನಗಳನ್ನು ಜೀರ್ಣೋದ್ಧಾರ ಮಾಡುವುದು. ಪುಣ್ಯಕಾರ್ಯವೆಂಬ ಭಾವನೆ ನಂತರ ಗರಿಗೆದರಿತು. ದೇವಸ್ಥಾನ ನಿರ್ಮಾಣವಾದ ಬಳಿಕ ಅಲ್ಲಿ ಪೂಜಾದಿ ಕೈಂಕರ್ಯಗಳನ್ನು ನಡೆಸಿಕೊಂಡು ಹೋಗಲು ದೇವಸ್ಥಾನಗಳಿಗೆ ದತ್ತಿಗಳನ್ನು ಬಿಡಲಾಯಿತು. ದೇವಾಲಯದ ಆಸ್ತಿ ಹೀಗೆ ಬೆಳೆಯಿತು. ಅಲ್ಲದೆ ದೇವಪೂಜೆಯ ಭಾಗವಾಗಿ ನೃತ್ತ, ಸಂಗೀತ ಇತ್ಯಾದಿ ಕಲೆಗಳು ಬೆಳೆದುವು. ದೇವಾಲಯ ಕಲೆಗಳಿಗೆ ಪೋಷಣೆ ನೀಡಿತು. ಜನ ಸಾಂಘಿಕವಾಗಿ ದೇವಾಲಯಗಳಲ್ಲಿ ಸೇರಿದಾಗ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳೂ ಆರಂಭಿಸಲ್ಪಟ್ಟವು. ಪುರಾಣ, ಹರಿಕಥಾ ಶ್ರವಣಗಳಿಗೆ ದೇವಾಲಯದ ಮಂಟಪಗಳು ಕಲಾ ಭವನಗಳಾದುವು. ದೇವಾಲಯ ವಾಸ್ತು ಶಿಲ್ಪದಲ್ಲಿ ಇದಕ್ಕೆಂದೇ ಪ್ರತ್ಯೇಕವಾಗಿ ಮುಖಮಂಟಪಗಳನ್ನೂ, ರಂಗಮಂಟಪಗಳನ್ನೂ ಅಳವಡಿಸಲಾಯಿತು. ಇವುಗಳನ್ನೆಲ್ಲವನ್ನೂ ದೇವರ ಕೈಂಕರ್ಯವೆಂದು ಭಾವಿಸಿದುದರಿಂದ ಇವುಗಳಿಗಾಗಿಯೂ ಸಹ ಪ್ರತ್ಯೇಕ ದಾನಗಳನ್ನು ನೀಡಲಾಯಿತು. ದತ್ತಿಗಳನ್ನು ಬಿಡಲಾಯಿತು. ಪೂಜಾ ಕಾಲದಲ್ಲಿ 'ಸಂಗೀತಮವಧಾರಯ', 'ನೃತ್ಯಮವಧಾರಯ' ಎಂದು ಹೇಳಿ ದೇವರಿಗೆ ಸೇವೆ ಸಲ್ಲಿಸುವುದು, ವೇದ, ಪುರಾಣ, ಉಪನಿಷತ್ತುಗಳಿಂದ ಉದ್ಧೃತ ಭಾಗಗಳನ್ನು ಪಠಿಸಲು, ಶ್ರೀವೈಷ್ಣವ ದೇವಾಲಯಗಳಲ್ಲಿ ಪ್ರಬಂಧ ಪಾರಾಯಣ ಮಾಡಲು ಏರ್ಪಾಡುಗಳನ್ನು ಮಾಡಲಾಯಿತು. ವ್ಯವಸಾಯಕ್ಕೆ ಸಂಬಂಧಿಸಿದಂತಹ ಹಬ್ಬಗಳನ್ನು, ಉದಾಹರಣೆಗೆ : ಸಂಕ್ರಾಂತಿ - ಇತರ ಸಮಾರಂಭಗಳನ್ನು ಆಚರಿಸಲು ವಿಶೇಷ ಉತ್ಸವಗಳನ್ನು ಆಚರಣೆಗೆ ತರಲಾಯಿತು. ಇವುಗಳು ದೇವಪೂಜೆಯ ಅಂಗಗಳೆನಿಸಿದರೂ ಸಹ, ವಿಶೇಷವಾಗಿ ಗ್ರಾಮದ ನಗರದ ಜನ ಒಂದೆಡೆ ಕಲೆತು ಸುಖ ಸಂತೋಷಗಳಲ್ಲಿ ಭಾಗವಹಿಸಿ ಅನ್ಯೋನ್ಯತೆಗಳನ್ನು ಬೆಳೆಸಿಕೊಳ್ಳಲು ಇವು ಸಾಧನಗಳಾದುವು.

ಸಾಮಾಜಿಕ ಸಂಸ್ಥೆಗಳು ಎಂದಾಗ ಕೇವಲ ಸಂಗೀತ ಇತ್ಯಾದಿ ಲಲಿತಕಲೆಗಳಿಗಷ್ಟೇ ಪ್ರೋತ್ಸಾಹ ನೀಡುವ ಕೇಂದ್ರಗಳೆಂದು ಭಾವಿಸಲಾಗದು. ಸಮಾಜಕಾರ್ಯಕ್ಕೆ ಸಂಬಂಧಿಸಿದ ಯಾವುದೇ ಸಂಸ್ಥೆ ಸಾಮಾಜಿಕಸಂಸ್ಥೆ ಎನಿಸುತ್ತದೆ. ಇದು ಸಮಾಜದ ಸೌಕರ್ಯಕ್ಕೆ, ಜನಸೇವೆಗೆ ತೊಡಗಿಸಿಕೊಂಡಂತಹ ಒಂದು ಸಂಸ್ಥೆ. ಹೀಗೆ ಅರ್ಥೈಸಿದಾಗ ದೇವಾಲಯಗಳ ಸಮಾಜ ಕಾರ್ಯದ ವ್ಯಾಪ್ತಿ ವಿಸ್ತಾರವಾಗುತ್ತದೆ. ವಿದ್ಯಾರ್ಥಿಗಳಿಗೆ ವಸತಿಗಾಗಿ ದೇವಸ್ಥಾನದಲ್ಲಿಯೇ ಅಥವಾ ಅದರ ಆವರಣದಲ್ಲಿಯೋ ಒಂದು ಸತ್ರವನ್ನು ಕಟ್ಟಿಸಿ ತನ್ಮೂಲಕ ಅವರ ಯೋಗಕ್ಷೇಮವನ್ನೂ ದೇವಸ್ಥಾನಗಳು ನೋಡಿಕೊಳ್ಳುತ್ತಿದ್ದವು. ದೇವಸ್ಥಾನಗಳ ಆದಾಯ ಹೆಚ್ಚಿದಂತೆ ಅವುಗಳು ಬ್ಯಾಂಕ್‌ಗಳಂತೆ ಕಾರ್ಯನಿರ್ವಹಿಸತೊಡಗಿದುವು. ಕೆರೆ-ಕಾಲುವೆಗಳ ದುರಸ್ತಿಗೆ, ದೇವಾಲಯಗಳ ಭಂಡಾರದಿಂದ ಧನವನ್ನು ಸಾಲವಾಗಿ ನೀಡಲಾಗುತ್ತಿತ್ತು. ನಂತರದ ಶತಮಾನಗಳಲ್ಲಿ ಇಂತಹ ಸಾಲಗಳನ್ನು ವೈಯಕ್ತಿಕವಾದ ಸಾಂಸಾರಿಕ ತೊಂದರೆಗಳನ್ನು ನಿವಾರಿಸಿಕೊಳ್ಳಲು ಸಹ - ಮದುವೆ, ಮುಂಜಿ, ಹಬ್ಬ ಹರಿದಿನಗಳ ಆಚರಣೆಗೆ ಕೊಡಲಾಗುತ್ತಿತ್ತು. ಇದಕ್ಕೆ ತಕ್ಕ ಬಡ್ಡಿಯನ್ನು ವಸೂಲು ಮಾಡಿ ಆ ಆದಾಯವನ್ನು ದೇವಾಲಯದಲ್ಲಿ ನಂದಾದೀಪದ ಎಣ್ಣೆಗೋ, ಮತ್ತಾವುದಾದರೂ ವೆಚ್ಚಕ್ಕೋ ಸರಿದೂಗಿಸಲಾಗುತ್ತಿತ್ತು. ದೇವಸ್ಥಾನಕ್ಕೆ ಸೇರಿದಂತಿದ್ದ ಸತ್ರಗಳು, ಅರವಂಟಿಗೆಗಳು ಮುಂತಾದುವನ್ನು ನಡೆಸಿಕೊಂಡು ಬರುತ್ತಿದ್ದವು. ಈ ಎಲ್ಲ ಅಂಶಗಳೂ ನಮಗೆ ಕರ್ನಾಟಕದ ಶಾಸನಗಳಿಂದ ಸ್ಪಷ್ಟವಾಗಿ ತಿಳಿದು ಬರುತ್ತವೆ.

ಶಿವಮೊಗ್ಗ ಜಿಲ್ಲೆಯ ಬಳ್ಳಿಗಾವೆಯಲ್ಲಿರುವ ಕೇದಾರೇಶ್ವರ ದೇವಸ್ಥಾನ ಇಂತಹುದೊಂದು ದೊಡ್ಡ ಕೇಂದ್ರ. ಈ ಕೇದಾರಸ್ಥಾನನ್ನು ಶಾಸನವೊಂದು ತಿಳಿಸುತ್ತದೆ.

> ದಕ್ಷಿಣ ಕೇದಾರಸ್ಥಾನಮಂ ಶಿವಲಿಂಗ ಪೂಜಾ ಪುಳಕಸ್ಯ ರಸಕೇದಾರಸ್ಥಾಮುಂ
> ನೈಷ್ಠಿಕ ಬ್ರಹ್ಮಚರ್ಯ ಶಿವಮುನಿ ಜನಾನುಷ್ಠಾನ ನಿಷ್ಠಿತ ಸ್ಥಾನಮುಂ
> ಸಾಂಗಋಗ್ಯಜು ಸಾಮಾಥರ್ವ ಚತುರ್ವೇದ ಸ್ವಾಧ್ಯಾಯಸ್ಥಾನಮುಂ
> ಕೌಮಾರ ಪಾಣಿನೀಯ ಶಾಕಟಾಯನ ಶಬ್ದಾನುಶಾಸನಾದಿ ವ್ಯಾಕರಣ ವ್ಯಾಖ್ಯಾನ ಸ್ಥಾನಮುಂ
> ನ್ಯಾಯ ವೈಶೇಷಿಕ ಮೀಮಾಂಸಾ ಸಾಂಖ್ಯ ಬೌದ್ಧಾದಿ ಷಡ್ದರ್ಶನ ವ್ಯಾಖ್ಯಾನಸ್ಥಾನಮುಂ
> ಲಾಕುಳಸಿದ್ಧಾಂತ ಪಾತಂಜಳಾದಿ ಯೋಗ ಶಾಸ್ತ್ರ ವ್ಯಾಖ್ಯಾನ ಸ್ಥಾನಮುಂ

ಅಷ್ಟಾದಶಪುರಾಣ ಧರ್ಮಶಾಸ್ತ್ರಸಕಳಕಾಖ್ಯ ನಾಟಕ ನಾಟಿಕಾದಿ ವಿವಿಧ ವಿದ್ಯಾಸ್ಥಾನಮುಂ
ದೀನಾನಾಥ ಪಂಗ್ವಂಧ ಬಧಿರ ಕಥಕ ಗಾಯಕ ವಾದಕ ವಾಂಶಿ ನರ್ತಕ ವೈತಾಳಿಕ ನಗ್ನ ಭಗ್ನ
ಕ್ಷಪಣಕೈಕ ದಂಡಿ ತ್ರಿದಂಡಿ ಹಂಸ ಪರಮಹಂಸಾದಿ ನಾನಾ ದೇಶ ಭಿಕ್ಷುಕ
ಜನಾನಿದಾರ್ಯ್ಯನ್ನ ದಾನ ಸ್ಥಾನಮುಂ
ನಾನಾನಾಥ ರೋಗಿಜನ ರೋಗಬೈಷಜ್ಯ ಸ್ಥಾನಮುಂ
ಸಕಲ ಭೂತಾಭಯಪ್ರದಾನ ಸ್ಥಾನಮುಂ

ಆಗಿತ್ತು ಈ ಕೇದಾರೇಶ್ವರ ದೇವಾಲಯ. ಈ ವರ್ಣನೆಯಲ್ಲಿ ಹೆಚ್ಚು ಕಡಿಮೆ ದೇವಾಲಯಗಳ ಎಲ್ಲ ಹೊಣೆಗಾರಿಕೆಗಳನ್ನು ವಿವರಿಸಲಾಗಿದೆ. ಇದು ಪೂಜಾಸ್ಥಾನ, ನೈಷ್ಠಿಕ ಬ್ರಹ್ಮಚಾರಿಗಳ ಮುನಿಗಳ ಸ್ಥಾನ. ಇಲ್ಲಿ ಚತುರ್ವೇದಗಳ ಅಧ್ಯಯನ, ಕೌಮಾರ, ಪಾಣಿನೀಯ, ಶಾಕಟಾಯನ ಶಬ್ದಾನುಶಾಸನಾದಿ ವ್ಯಾಕರಣ ಶಾಸ್ತ್ರಗಳ ವ್ಯಾಖ್ಯಾನ, ಷಡ್ದರ್ಶನಗಳ ವ್ಯಾಖ್ಯಾನಗಳು ನಡೆಯುತ್ತಿದ್ದುವು. ಪುರಾಣಗಳ, ಧರ್ಮಶಾಸ್ತ್ರಗಳ, ಎಲ್ಲ ಕಾವ್ಯ ನಾಟಕ-ನಾಟಿಕೆಗಳನ್ನು ಕಲಿಸುವ ವಿದ್ಯಾಸ್ಥಾನ, ಹಲವಾರು ದೀನ, ದಲಿತ, ಕಥಕ, ಗಾಯಕ ಮುಂತಾದವರಿಗೆ ಇಲ್ಲಿ ಅನ್ನದಾನ ಮಾಡಲಾಗುತ್ತಿತ್ತು. ಅನಾಥ ರೋಗಿಗಳಿಗೆ ಔಷಧಿಗಳನ್ನು ಇಲ್ಲಿ ಕೊಡಲಾಗುತ್ತಿತ್ತು. ಸಕಲ ಭೂತಗಳಿಂಗೆ ಅಭಯ ಇಲ್ಲಿ ದೊರೆಯುತ್ತಿತ್ತು.

ಕಲಚುರಿ ಬಿಜ್ಜಳನ ಕಾಲದಲ್ಲಿ ರೇಚರಸನು ದಾನ ಮಾಡಲು ಬಯಸಿ ಎಂತಹ ದಾನವು ಶ್ರೇಷ್ಠ ಎಂದು ಧರ್ಮ ಪ್ರಸಂಗ ಸಮಯದಲ್ಲಿ ಕೇಳಿದಾಗ ಭೂಮಿದಾನ, ಗ್ರಾಮದಾನ ಹಾಗೂ ಅನ್ನದಾನಗಳ ಮಹೋನ್ನತಿಯನ್ನು ಆತನಿಗೆ ತಿಳಿಸಲಾಯಿತು. ಜೊತೆಗೆ ವಿದ್ಯಾದಾನವೂ ಶ್ರೇಷ್ಠವೆಂದು ಹೇಳಲಾಯಿತು :

ಯತ್ಪುಣ್ಯಂ ತೀರ್ಥಯಾತ್ರಾಯಾಂ ಯತ್ಪುಣ್ಯಂ ಯಜ್ವನಾಂ ತಥಾ
ತತ್ಪುಣ್ಯಂ ಕೋಟಿಗುಣಿತಂ ವಿದ್ಯಾದಾನಾಲ್ಲಭೇನ್ನರ ಃ

ಅಲ್ಲದೆ

ಛಾತ್ರಾಣಾಂ ಭೋಜನಾಭ್ಯಂಗವಸ್ತ್ರಂ ಭಿಷಮದಪಿವಾ
ದತ್ವಾ ಪ್ರಾಪ್ನೋತಿ ಪುರುಷಃ ಸರ್ವಾನ್ಕಾಮಾನ್ ನ ಸಂಶಯಃ

ಎಂದು ವಿದ್ಯಾರ್ಥಿಗಳಿಗೆ ಊಟ, ಅಭ್ಯಂಜನ ವಸ್ತ್ರಗಳ ದಾನಮಾಡುವುದು ಉಚಿತವೆಂದು ತಿಳಿಸಿಕೊಡಲಾಯಿತು. ಅದರಂತೆ ಕ್ರಿ.ಶ. ೧೧೮೭-೮೮ರಲ್ಲಿ ದೇವರ ಅಂಗಭೋಗ, ರಂಗಭೋಗ, ನಿತ್ಯ ನೈಮಿತ್ತಿಕ ಪೂಜೆ, ಬಲಿ ಹೋಮ ಚೈತ್ರ ಪವಿತ್ರ ಮಾಟಕೂಟ ನವ ಕರ್ಮಕ್ಕಂ ನಾಲ್ಕುವೇದ ಖಂಡಿತವೆರಡು ಭಟ್ಟವೃತ್ತಿ ಕಂನಡಕ್ಷರ ನಿಕ್ಷೆ ಘಳಿಯಾರವಾಱುಂ ಖಂಡಿತದುಪಾಧ್ಯಾಯ ಚ್ಛಾತ್ರಂಗ್ರಾಸ ವಸ್ತ್ರಕ್ಕಂ ಸತ್ರಕ್ಕವೆಂದು ತಾಳಗುಂದದ ಪ್ರಣವೇಶ್ವರ ದೇವಾಲಯಕ್ಕೆ ಭೂಮಿದಾನ ಮಾಡಲಾಯಿತೆನ್ನುತ್ತದೆ ಅಲ್ಲಿನ ಶಾಸನ. ಆ ದೇವಸ್ಥಾನದಲ್ಲಿ ಋಗ್ವೇದ, ಯಜುರ್ವೇದ, ಸಾಮವೇದ ಹಾಗೂ ಇತರ ಶಾಸ್ತ್ರಗಳ ಅಧ್ಯಯನಕ್ಕೂ ವೇದಾಂತದ ಸ್ವಯಂಪಾಕಿ ಸ್ವಾಮಿಗಳಿಗೆ, ಹೂದೋಟದ ಮಾಲೆಗಾಱರಿಗೆ, ಸತ್ರದಲ್ಲಿ ಅಖಂಡಿತದ ಛಾತ್ರಂಗೆ ಊಟಕ್ಕೆ, ಸತ್ರಕ್ಕಾಗಿ ಅಲ್ಲಿ ಅಡಿಗೆ ಮಾಡುವ ಬಾಣಸಿತ್ತಿಯರಿಗೆ, ವಡ್ಡವಾರದಲ್ಲಿ ಅಭ್ಯಂಜನ ಸ್ನಾನಕ್ಕೆ ಪ್ರತಿ ಸೋಮವಾರ ಉಗುರುಗಳನ್ನು ಕತ್ತರಿಸುವ ನಾವಿದನ ಜೀವಿತಕ್ಕೆ ಕನ್ನಡದ ಉಪಾಧ್ಯಾಯರಿಗೆ ಬಾಲಶಿಕ್ಷೆಯ ಶಾಸ್ತ್ರದವರು, ಪುರಾಣ ಹೇಳುವವರಿಗೆ - ಮುಂತಾದವರಿಗೆ ಭೂಮಿದಾನಗಳನ್ನು ಮಾಡಿದಂತೆ ಶಾಸನ ಉಲ್ಲೇಖಿಸುತ್ತದೆ.

ದೇವಸ್ಥಾನ ಹಲವಾರು ವೃತ್ತಿಗಳವರಿಗೆ ಕಸಬುದಾರರಿಗೆ ಉದ್ಯೋಗಗಳನ್ನು ಕಲ್ಪಿಸಿಕೊಡಲಾಗುತ್ತಿತ್ತು. ಸ್ತೋತ್ರಪಾಠಗಳನ್ನೂ ಶ್ರೀ ವೈಷ್ಣವಾಲಯಗಳಲ್ಲಿ ಪ್ರಬಂಧ ಪಾರಾಯಣಗಳನ್ನೂ ಮಾಡಲಾಗುತ್ತಿತ್ತು. ಇವುಗಳನ್ನು ಕೇಳಲಿಕ್ಕೆಂದೇ ಅಲ್ಲಿನ ಜನ ಬರುತ್ತಿದ್ದರು. ಎಂತಲೇ ಇದಕ್ಕಾಗಿ ವಿಶೇಷವಾದ ದತ್ತಿಗಳನ್ನು ಬಿಡಲಾಗಿತ್ತು. ಪಾಂಡವಪುರ ತಾಲೂಕಿನ ತೊಣ್ಣೂರು ಗ್ರಾಮದ ಲಕ್ಷ್ಮೀನಾರಾಯಣ ದೇವಾಲಯದಲ್ಲಿ ತಿರುವಾಯ್ಮೊಳಿ ಪ್ರಬಂಧವನ್ನು ಪಠಿಸಲು ಏರ್ಪಾಡನ್ನು ಮಾಡಲಾಗಿತ್ತು. ಅದರಂತೆ ವಿಟಣ್ಣ ಎಂಬಾತ ದೇವಾಲಯದ ಶ್ರೀ ವೈಷ್ಣವ ಪ್ರಮುಖರಿಂದ ಭೂಮಿಯನ್ನು ತತ್ಕಾಲೋಚಿತ ಕ್ರಯಕ್ಕೆ ಪಡೆದು ಅಲ್ಲಿ ಪರ್ವ ದಿನಗಳಲ್ಲಿ ತಿರುವಾಯ್ಮೊಳಿಯನ್ನು ಪಠಿಸಲು ಹಾಗು ಇತರ ಸೇವೆಗಳನ್ನು ನಡೆಸಲು ದಾನ ಮಾಡಿದನೆಂದು ಹೇಳಿದೆ.

ಕ್ರಿ.ಶ. ೧೫೨೪ರಲ್ಲಿ ಕೃಷ್ಣದೇವರಾಯನ ಊಳಿಗಕ್ಕೆ ಸೇರಿದ ಬಸವಪ್ಪನಾಯಕನು ಚೆಂನಕೇಶವನಾಥನ ತೆಪ್ಪೋತ್ಸವಕ್ಕಾಗಿ ಒಂದು ತೆಪ್ಪ ಕೊಳವನ್ನು ಅಗೆಸಿ ವಸಂತ ಮಂಟಪವನ್ನು ಕಟ್ಟಿಸಿ ಆಗ ಹತ್ತು ದಿನಗಳು ಅಲ್ಲಿ ದೇವರ ಪೂಜೆಗೆ, ನೈವೇದ್ಯಕ್ಕೆ, ಸತ್ರವಲ್ಲಿ ೪೦ ಜನರ ಊಟಕ್ಕೆ ಎರಡು ಗ್ರಾಮಗಳನ್ನು ದಾನವಾಗಿ ನೀಡಿದನೆಂದು ಬೇವಾರಿನ ಶಾಸನ ತಿಳಿಸುತ್ತದೆ. ಅದೇ ಗ್ರಾಮದಲ್ಲಿ ಶಂಕರದೇವರ ಪುರವರ್ಗದಲ್ಲಿ ಇಪ್ಪತ್ತೈಯ್ದು ಒಕ್ಕಲುಗಳು ಮನೆ ಮಾಡಿಕೊಂಡಾಗ ಅವರಿಗೆ ಮೊದಲಗಡನವೆಂದು, ಎಂದರೆ ಬೀಜಧನವೆಂದು ದೇವಾಲಯದ ಭಂಡಾರದಿಂದ ೫೦ ಗದ್ಯಾಣಗಳನ್ನು ಕೊಡಲಾಯಿತು. ಇದಕ್ಕೆ ಬಡ್ಡಿಯನ್ನೇನೂ ಪಡೆಯದೆ ಅಂಗ ಭಾವವೇ ತೆಱು - ಎಂದರೆ ದೇವಾಲಯದ ಅಂಗರಕ್ಷಕ ಸೇವೆಯೇ ಬಡ್ಡಿ ಎಂಬುದಾಗಿ ನಿರ್ಣಯಿಸಲಾಯಿತೆಂದು ಅಮೃತೇಶ್ವರ ದೇವಾಲಯದ ಕ್ರಿ.ಶ. ೧೧೭೮ನೆಯ ವರ್ಷದ ಶಾಸನ ತಿಳಿಸುತ್ತದೆ.

ದೂರದ ಕಾಶಿಯಲ್ಲಿ ವಿಶ್ವೇಶ್ವರ ದೇವನಿಗೆ ನೈವೇದ್ಯಕ್ಕೂ ಅಲ್ಲಿ ಕಾಶಿಯ ನಿವಾಸಿಗಳಿಗೂ ಇತರರಿಗೂ ಸತ್ರ ಭಿಕ್ಷೆಗೆಂದೂ ಹೊಯ್ಸಳ ಮುಮ್ಮಡಿ ನರಸಿಂಹನು ಕ್ರಿ.ಶ. ೧೨೭೯ರಲ್ಲಿ ಹೆಬ್ಬಾಲೆ ಗ್ರಾಮವನ್ನು ಕಟ್ಟು ಗುತ್ತಗೆಯಾಗಿ ಕೊಟ್ಟನೆಂದು ತಾಮ್ರ ಶಾಸನವೊಂದರಲ್ಲಿ ಹೇಳಿದೆ. ''ಸರ್ವೈಃ ಕಾಶೀವಾಸಿಭಿರ್ದೀಯಮಾನ ಸತ್ರಭಿಕ್ಷಾದಿ ಧರ್ಮಾರ್ಥಂ ಚ ಶ್ರೀ ವಿಶ್ವೇಶ್ವರ ದೇವಪೂಜಾರ್ಥಂ ಚ ಸೋಯಂ ಶ್ರೀ ವೀರನಾರಸಿಂಹ ದೇವಸ್ತೇಭ್ಯಃ ಕಾಶೀವಾಸಿಭ್ಯಃ ಶ್ರೀ ವಿಶ್ವೇಶ್ವರ ದೇವಾಯ ಚ ''.

ದೇವಾಲಯಗಳು ಹಲವಾರು ಸಂದರ್ಭಗಳಲ್ಲಿ ನ್ಯಾಯಪೀಠಗಳಂತೆ ಕಾರ್ಯನಿರ್ವಹಿಸಿದ್ದೂ ಉಂಟು. ಸೌಭಾಗ್ಯಪುರದ ಪ್ರಸನ್ನಕೇಶವ ದೇವರ ವೃತ್ತಿಗಳಿಗೆ ಸಂಬಂಧಿಸಿದ ಸಿದ್ಧಾಯವನ್ನು ದೇವಾಲಯದ ಅಮೃತಪಡಿಗಾಗಿದ್ದ ಧನದೊಳಗಿಂದ ಕೊಡಬೇಕಾಗಿ ಬಂದು ದೇವಾಲಯದಲ್ಲಿ ಶ್ರೀಕಾರ್ಯ್ಯ ನಿಂತುಹೋಯಿತು. ರಾಣಿ ಉಮಾದೇವಿಯು ದೇವಾಲಯದ ಮಹಾಜನರನ್ನು - ನಂಬಿಗಳನ್ನು - ಅಂದರೆ ಪೂಜಾರಿಗಳನ್ನು - ಬರಮಾಡಿಕೊಂಡು ಹದಿನೆಂಟು ನಾಡ ವೈಷ್ಣವರನ್ನು ಬರಮಾಡಿಕೊಂಡು ದೇವರ ೧೫ ವೃತ್ತಿಗಳಲ್ಲಿ ೨ ವೃತ್ತಿಗಳನ್ನು ಸರ್ವಮಾನ್ಯವಾಗಿ ಪೂಜಾಕಾರ್ಯಕ್ಕಾಗಿ ಇಟ್ಟುಕೊಂಡು ಉಳಿದ ೧೩ ವೃತ್ತಿಗಳನ್ನು ಕ್ರಯದಾನ ಮಾಡಿ ಅದರಿಂದ ಬಂದ ಹಣದಿಂದ ಬಾಕಿ ಇದ್ದ ಸಿದ್ಧಾಯವನ್ನು ತೀರಿಸುವ ನಿರ್ಣಯ ಕೈಗೊಂಡಳು. ಇದು ದೇವಾಲಯದ ಸ್ವತ್ತಾದ ಕಾರಣ ಅದಕ್ಕೆ ಸಂಬಂಧಿಸಿದ ನಂಬಿಗಳು ಶ್ರೀವೈಷ್ಣವರು ಈ ನಿರ್ಣಯದಲ್ಲಿ ಭಾಗಿಗಳಾಗಿದ್ದರೆಂಬುದು ಗಮನಾರ್ಹ. ಕೇಶವಾಪುರದ ದೇವಾಲಯದ ಕೆಲಸಗಾರರು ತಮ್ಮ ತಮ್ಮ ಕೆಲಸದಲ್ಲಿ ಅನಾಸಕ್ತರಾಗಿದ್ದಂತೆ ತೋರಿದ್ದರಿಂದ ಅವರ ಬಗೆಗೆ ಒಂದು ತೀರ್ಮಾನಕ್ಕೆ ಬರಲಾಯಿತು. ಅದರಂತೆ ಒಂದು ಹಣ ಅಥವಾ ಪ್ರಸಾದದಲ್ಲಿ ಒಂದು ಪಿಂಡವನ್ನು ಪಡೆಯುವ ಅಥವಾ ಬೆಣ್ಣೆಯೂರು, ಮುಗುಳಿ ಗ್ರಾಮಗಳಲ್ಲಿನ ೧೦೦ ಕಮ್ಮ ಭೂಮಿಯನ್ನು ಅನುಭವಿಸುವವರಾಗಲಿ, ಅವರು ಸ್ತ್ರೀಯರಾಗಿರಲಿ ಪುರುಷರಾಗಿರಲಿ ಕೇಶವದೇವನಿಗೆ ಅವಶ್ಯ ಕಾರ್ಯ ಮುಂದಾಗಿ ಊರಿಂಗೆ ಹೋದದಿವಸ ಅಥವಾ ವ್ಯಾಧಿಯಾಗಿರ್ದ ದಿವಸ ಹೊರತುಪಡಿಸಿ ನಿತ್ಯವೂ ಸೇವೆಯನ್ನು ಸಲಿಸಬೇಕೆಂದು ತೀರ್ಮಾನಿಸಲಾಯಿತು.

ಹೀಗೆ ಕರ್ನಾಟಕದಲ್ಲಿ ದೇವಾಲಯಗಳು ಇತ್ತೀಚಿನವರೆವಿಗೂ ಸಾಮಾಜಿಕ ಜೀವನದ ಅವಿಭಾಜ್ಯ ಅಂಗವಾಗಿ ಗುರುತರವಾದ ಜವಾಬ್ದಾರಿಯನ್ನು ಹೊಂದಿದ್ದವು.

ಕರಸ್ಥಲದ ಮಲ್ಲಿಕಾರ್ಜುನ ಒಡೆಯ : ಒಬ್ಬ ನೂತನ ವಚನಕಾರ

ಡಾ|| ವೀರಣ್ಣ ರಾಜೂರ

ವೀರಶೈವ ಸಾಹಿತ್ಯ ಚರಿತ್ರೆಯಲ್ಲಿ ಕರಸ್ಥಲದ ಶಾಂತೇಶ, ಕರಸ್ಥಲದ ವೀರಣ್ಣೊಡೆಯ ಮತ್ತು ಕರಸ್ಥಲದ ನಾಗಿದೇವ ಎಂಬ ಹೆಸರುಗಳು ಪ್ರಸಿದ್ಧವಾಗಿವೆ. ಇವರು ಒಂದೆ ಗುರುಶಿಷ್ಯ ಪರಂಪರೆಗೆ ಸೇರಿದ ಅನುಭಾವಿಗಳು.[1] ಇವರ ಸಾಲಿಗೆ ಸೇರುವ ಮತ್ತೊಬ್ಬ ವ್ಯಕ್ತಿ ಪ್ರಸ್ತುತ 'ಕರಸ್ಥಲದ ಮಲ್ಲಿಕಾರ್ಜುನ ಒಡೆಯ' ಅಥವಾ 'ಕರಸ್ಥಲದ ಮಲ್ಲಿಕಾರ್ಜುನ'. ಈತನ ವಯಕ್ತಿಕ ಸಂಗತಿಗಳು ಹೆಚ್ಚಿಗೆ ತಿಳಿದಿಲ್ಲ. 'ಬ್ರಹ್ಮಾದ್ವೈತ ಸಿದ್ಧಾಂತ ಷಟ್‌ಸ್ಥಲಾಭರಣ'[2] ಎಂಬ ವಚನ ಸಂಕಲನದ ಪ್ರತಿಸ್ಥಲದ ಅಂತ್ಯ ಗದ್ಯದಲ್ಲಿ ''ಶ್ರೀ ಕರಸ್ಥಲದ ಮಲ್ಲಿಕಾರ್ಜುನ ಒಡೆಯರು ಸೇರಿಸಿದ ಮಹಾನುಭಾವ ಬೋಧೆಯಪ್ಪ ಶ್ರೀ ಮದ್ಬ್ರಹ್ಮಾದ್ವೈತ ಸಿದ್ಧಾಂತ ಷಟ್‌ಸ್ಥಲಾಭರಣ...'' ಎಂದು ಹೇಳಲಾಗಿದ್ದು, ಈ ಕೃತಿಯ ಸಂಯೋಜಕ ಕರಸ್ಥಲದ ಮಲ್ಲಿಕಾರ್ಜುನ ಒಡೆಯ ಎಂಬುದು ಸ್ಪಷ್ಟವಾಗುತ್ತದೆ. ಈ ಕೃತಿಯ ಆದಿ ಮತ್ತು ಅಂತ್ಯದಲ್ಲಿರುವ ಸ್ತುತಿರೂಪದ ಕಂದಗಳಲ್ಲಿ 'ಪರಮಗುರು ಶಾಂತೇಶ' ಎಂಬ ಹೆಸರು ಉಕ್ತವಾಗಿದೆ. ಈ 'ಶಾಂತೇಶ' ಇವನ ಗುರುವಾಗಿರಬೇಕು. ಕರಸ್ಥಲದ ವೀರಣ್ಣೊಡೆಯ ಮತ್ತು ಕರಸ್ಥಲದ ನಾಗಿದೇವರ ಗುರುವೂ ಶಾಂತೇಶನೇ ಆಗಿರುವನೆಂಬುದು ಅವರ

---

1. ಶಾಂತೇಶನ ಶಿಷ್ಯ ವೀರಣ್ಣೊಡೆಯ, ವೀರಣ್ಣೊಡೆಯನ ಶಿಷ್ಯ ನಾಗಿದೇವ.

2. ಬ್ರಹ್ಮಾದ್ವೈತ ಸಿದ್ಧಾಂತ ಷಟ್‌ಸ್ಥಲಾಭರಣ : (ಸಂ.) ಡಾ. ಆರ್.ಸಿ. ಹಿರೇಮಠ, ಪ್ರ. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೧೯೭೩.

ಕೃತಿಗಳಲ್ಲಿ ಬಳಕೆಯಾದ ಅಂಕಿತಗಳಿಂದ ವೇದ್ಯವಾಗುತ್ತದೆ. ಇದರಿಂದ ಮಲ್ಲಿಕಾರ್ಜುನ ಒಡೆಯನೂ ಮೇಲಿನವರ ಪರಂಪರೆಗೆ ಸೇರಿದವನಾಗುತ್ತಾನೆ. ಕರಸ್ಥಲದ ವೀರಣ್ಣೊಡೆಯ ಪ್ರೌಢದೇವರಾಯನ (೧೪೧೯-೧೪೪೭) ಕಾಲದಲ್ಲಿದ್ದವನೆಂದು ತಿಳಿದು ಬರುವುದರಿಂದ ಅವನ ಪರಿಸರದವನಾದ ಮಲ್ಲಿಕಾರ್ಜುನ ಒಡೆಯನೂ ಅದೇ ಕಾಲದವನೆಂದು ಊಹಿಸಬಹುದಾಗಿದೆ. [3]

ಕರಸ್ಥಲದ ಮಲ್ಲಿಕಾರ್ಜುನ ಒಡೆಯ ತನ್ನನ್ನು ''......ಲಿಂಗಾಂಗ ಸಂಯೋಗಾನುಭವ ಪ್ರಸಿದ್ಧ ಪರಿಪೂರ್ಣ ಶೀಲ ಪರಮಾದ್ವೈತ ವಿಶ್ರಾಂತರುಮಪ್ಪ ಪರಮಚರರೂಪ ಶ್ರೀ ಕರಸ್ಥಲದ ಮಲ್ಲಿಕಾರ್ಜುನ ಒಡೆಯರು''[4] ಎಂದು ಕರೆದುಕೊಂಡಿದ್ದಾನೆ. ಇದುವರೆಗೆ ಈತ ಕೇವಲ ಸಂಕಲನಕಾರನೆಂದು ನಂಬಲಾಗಿತ್ತು. ಆದರೆ ಈಗ ವಚನಕಾರನೂ ಆಗಿದ್ದಾನೆ ಎಂಬ ಸಂಗತಿ ಸ್ಪಷ್ಟವಾಗಿದೆ. ಈತನೆ ಸಂಕಲಿಸಿದ 'ಬ್ರಹ್ಮಾದ್ವೈತ ಸಿದ್ಧಾಂತ ಷಟ್‌ಸ್ಥಲಾಭರಣ' ಕೃತಿಯಲ್ಲಿ 'ಪರಮಗುರು ಶಾಂತಮಲ್ಲಿಕಾರ್ಜುನ' ಎಂಬ ಅಂಕಿತದ ನಾಲ್ಕು ವಚನಗಳಿದ್ದು, ಸಂಪಾದಕರು ಅವುಗಳ ಕರ್ತೃ ಅಜ್ಞಾತ ಎಂದು ಪ್ರಶ್ನಾರ್ಥಕ ಚಿಹ್ನೆ ಹಾಕಿದ್ದಾರೆ. ಈ ಅಂಕಿತದ ಒಂದು ವಚನ (ಕರಸ್ಥಲದ ಲಿಂಗವ.....) ಗುರುಸಿದ್ಧ ದೇವನ 'ಚಿದೈಶ್ವರ್ಯ ಚಿದಾಭರಣ' ಕೃತಿಯಲ್ಲಿಯೂ ಇದ್ದು, ಅದರ ಕರ್ತೃ 'ಕರಸ್ಥಲ ಮಲ್ಲಿಕಾರ್ಜುನದೇವ (?)' ಇರಬಹುದೆಂದು ಆ ಕೃತಿಯ ಸಂಪಾದಕ ಶ್ರೀ ಪಿ.ಎಂ. ಗಿರಿರಾಜು ಅವರು ಪ್ರಶ್ನಾರ್ಥಕ ಚಿಹ್ನೆಯೊಂದಿಗೆ ಸೂಚಿಸಿದ್ದಾರೆ. [5] ಜಾಳಿಗೆ ಕಂತೆ ಸಿದ್ಧಲಿಂಗ ಶಿವಯೋಗಿಯ 'ಶಿವಯೋಗ ಚಿಂತಾಮಣಿ' ಎಂಬ ವಚನ ಸಂಕಲನದಲ್ಲಿಯೂ ಈ ಅಂಕಿತದ ಒಂದು ವಚನವಿದ್ದು (ಅಂತರಂಗದಲ್ಲಿ....), ಅದರ ಕರ್ತೃ ತಿಳಿದಿಲ್ಲವೆಂದು ಪ್ರಶ್ನಾರ್ಥಕ ಚಿಹ್ನೆ ಹಾಕಲಾಗಿದೆ. [6] ಇದರಿಂದ ಈ ಅಂಕಿತದ ಕರ್ತೃವಿನ ಬಗೆಗೆ ಸಮಸ್ಯೆ ಇದೆ ಎಂಬುದು ಸ್ಪಷ್ಟವಾಗುತ್ತದೆ. ಇದನ್ನು ಈಗ ದೊರೆತ ಆಧಾರಗಳ ಹಿನ್ನೆಲೆಯಲ್ಲಿ ಕೆಳಗಿನಂತೆ ಬಗೆಹರಿಸಬಹುದಾಗಿದೆ.

ಕರಸ್ಥಲ ಮಲ್ಲಿಕಾರ್ಜುನ ಒಡೆಯನ 'ಬ್ರಹ್ಮಾದ್ವೈತ ಸಿದ್ಧಾಂತ ಷಟ್‌ಸ್ಥಲಾಭರಣ'ದ ಆದಿ ಮತ್ತು ಅಂತ್ಯ ಕಂದ ಹಾಗೂ ಈ ವಚನಗಳ ಅಂಕಿತ ಒಂದೇ ಆಗಿದೆ. [7] ಇದರಿಂದ ಈ ಕೃತಿಯ ಕರ್ತೃ ಮತ್ತು 'ಪರಮಗುರು ಶಾಂತಮಲ್ಲಿಕಾರ್ಜುನ' ಅಂಕಿತದ ವಚನ ಕರ್ತೃ ಒಬ್ಬನೇ ಎಂಬುದು ಖಚಿತವಾಗುತ್ತದೆ. ಅಂದರೆ ಕರಸ್ಥಲದ ಮಲ್ಲಿಕಾರ್ಜುನ ಒಡೆಯನೇ ಈ ವಚನ ಮತ್ತು ವಚನಸಂಕಲನದ ಕರ್ತೃ ಎಂದು ಹೇಳಬೇಕಾಗುತ್ತದೆ.

---

3. ಡಾ. ಆರ್.ಸಿ. ಹಿರೇಮಠ ಅವರು ಇವನ ಕಾಲವನ್ನು ೧೫ನೆಯ ಶತಮಾನದ ಪೂರ್ವಾರ್ಧವಿರಬಹುದೆಂದು ಊಹಿಸಿದ್ದಾರೆ. (ಬ್ರಹ್ಮಾದ್ವೈತ ಸಿದ್ಧಾಂತ ಷಟ್‌ಸ್ಥಲಾಭರಣ, ಪ್ರಸ್ತಾವನೆ. ಪು. ೪)

4. ಬ್ರಹ್ಮಾದ್ವೈತ ಸಿದ್ಧಾಂತ ಷಟ್‌ಸ್ಥಲಾಭರಣ : ಸ್ಥಲಾಂತ ಗದ್ಯ.

5. ಚಿದೈಶ್ವರ್ಯ ಚಿದಾಭರಣ : (ಸಂ.) ಪಿ.ಎಂ. ಗಿರಿರಾಜು, ಶರಣ ಸಂತಾನ ಪ್ರಕಾಶನ, ಮೈಸೂರು, ಪು. ೨೪೮.

6. ಶಿವಯೋಗ ಚಿಂತಾಮಣಿ : (ಸಂ.) ಡಾ. ಉಮಾದೇವಿ, ಪ್ರ : ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯ ಮಠ, ಗದಗ (೧೯೮೭) ಪು. ೪೦೧, ಇಲ್ಲಿ ಅಂಕಿತದಲ್ಲಿನ 'ಶಾಂತ' ಎಂಬುದು ಲೋಪವಾಗಿದೆ.

7. ಕಂದಗಳಲ್ಲಿ 'ಪರಮಗುರುಶಾಂತೇಶ' ಎಂದಿದ್ದರೆ ವಚನಗಳಲ್ಲಿ 'ಪರಮಗುರು ಶಾಂತಮಲ್ಲಿಕಾರ್ಜುನ' ಎಂದಿದೆ. ಇಲ್ಲಿ ಕಂದದ ರಚನಾ ವಿನ್ಯಾಸದ ಮಿತಿಗನುಗುಣವಾಗಿ 'ಶಾಂತಮಲ್ಲಿಕಾರ್ಜುನ' ಎಂಬುದನ್ನು 'ಶಾಂತೇಶ' ಎಂದು ಸಂಕ್ಷೇಪಗೊಳಿಸಿದಂತೆ ತೋರುತ್ತದೆ.

ಈಗ ಕರಸ್ಥಲದ ಮಲ್ಲಿಕಾರ್ಜುನ ಒಡೆಯನ ನಾಲ್ಕು ವಚನಗಳು ಮಾತ್ರ ದೊರೆತಿವೆ. ನೋಡಿ :

೧

ಸತಿಯರ ನೋಡಿ ಸಂತೋಷವ ಮಾಡಿ,
ಸುತರ ನೋಡಿ ಸಮ್ಮಾನವನ್ನೆದಿ.
ಮತಿಯ ಹೆಚ್ಚುಗೆಯಿಂದ ಮೈಮಱೆದೊಱಗಿ
ಸತಿಸುತರೆಂಬ ಸಂಸಾರದಲ್ಲಿ
ಮತಿಗೆಟ್ಟು ಮರುಳಾದುದನೇನೆಂಬೆ,
ಎನ್ನ ಪರಮಗುರು ಶಾಂತಮಲ್ಲಿಕಾರ್ಜುನಾ ?[8]

೨

ಕರಸ್ಥಲದ ಲಿಂಗವ ಬಿಟ್ಟು
ಧರೆಯ ಮೇಲಣ ಪ್ರತಿಷ್ಠೆಗೆಱಗುವ
ನರಕಿ ನಾಯಿಗಳನೇನೆಂಬೆನಯ್ಯ
ಪರಮಗುರು ಶಾಂತಮಲ್ಲಿಕಾರ್ಜುನಾ?[9]

೩

ಅಂತರಂಗದಲ್ಲಿ ಅಱಿವಿಲ್ಲದವಂಗೆ
ಬಹಿರಂಗದಲ್ಲಿ ಕ್ರೀಯಿದ್ದು ಫಲವೇನು?
ಅದು ಕಣ್ಣಿಲ್ಲದವನ ಬಾಳುವೆಯಂತೆ.
ಬಹಿರಂಗದಲ್ಲಿ ಕ್ರೀಯಿಲ್ಲದವಂಗೆ
ಅಂತರಗದಲ್ಲಿ ಅಱಿವಿದ್ದು ಫಲವೇನು?
ಅದು ಶೂನ್ಯಾಲಯದ ದೀಪದಂತೆ.
ಅಂತರಂಗದ ಅಱಿವು, ಬಹಿರಂಗದ ಕ್ರಿಯೆ -
ಈ ಉಭಯಾಂಗವೊಂದಾಗಬೇಕು.
ಅದೆಂತೆಂದಡೆ :
'ಅಂತರ್ಜ್ಞಾನಂ ಬಹಿಃಕ್ರಿಯಾ ಏಕೀಭಾವೋ ವಿಶೇಷತಃ'
ಇಂತೆಂದುದಾಗಿ,
ಅಂತರಂಗದಲ್ಲಿ ಅಱಿವು, ಬಹಿರಂಗದಲ್ಲಿ ಕ್ರೀಯುಳ್ಳ ಮಹಾತ್ಮನೆ
ಭಕ್ತನಪ್ಪ, ಮಾಹೇಶ್ವರನಪ್ಪ, ಪ್ರಸಾದಿಯಪ್ಪ ,
ಪ್ರಾಣಲಿಂಗಿಯಪ್ಪ, ಶರಣೈಕ್ಯನಪ್ಪ
ನಮ್ಮ ಪರಮಗುರು ಶಾಂತಮಲ್ಲಿಕಾರ್ಜುನ ತಾನೆಯಪ್ಪ.[10]

೪

ವಾರಿಧಿಯೊಳಗಣ ವಾರಿಕಲ್ಲ ಕಡಿದು
ತೊಲೆ ಕಂಬವ ಮಾಡಿ ಮನೆಯ ಕಟ್ಟಿಕೊಂಡು
ಒಕ್ಕಲಿರಬಹುದೇ ಅಯ್ಯ?
ಅಗ್ನಿಯೊಳಗಿಪ್ಪ ಕರ್ಪೂರವ ಕರಡಿಗೆಯ ಮಾಡಿ
ಪರಿಮಳವ ತುಂಬಿ, ಅನುಲೇಪನ ಮಾಡಿ
ಸುಖಿಸಬಹುದೇ ಅಯ್ಯಾ?
ವಾಯುವಿನೊಳಗಣ ಪರಿಮಳವ ಹಿಡಿದು
ದಂಡೆಯ ಕಟ್ಟಿ ಮಂಡೆಯೊಳಗೆ ಮುಡಿಯಬಹುದೆ ಅಯ್ಯ?
ಬಯಲ ಮರೀಚಿಕಾಜಲವ ಕೊಡನಲ್ಲಿ ತುಂಬಿ
ಹೊತ್ತು ತಂದು ಅಡಿಗೆಯ ಮಾಡಿಕೊಂಡು
ಉಣಬಹುದೆ ಅಯ್ಯ?
ನಿಮ್ಮ ನೆಱೆಯಱಿದು ನೆರೆದು ಪರವಶನಾಗಿ
ತನ್ನ ಮಱೆದ ಪರಶಿವಯೋಗಿಗೆ
ಮರಳಿ ಪರಿಭವಂಗಳುಂಟೆ
ಪರಮಗುರು ಶಾಂತಮಲ್ಲಿಕಾರ್ಜುನಾ?[11]

---

8. ಆಕರ : ಬ್ರಹ್ಮಾದ್ವೈತ ಸಿದ್ಧಾಂತ ಷಟ್‌ಸ್ಥಲಾಭರಣ : ಸಂಸಾರಸ್ಥಲ ಪು. ೩೧ ವಚನ - ೩.

9. ಆಕರ : ಬ್ರಹ್ಮಾ : ಸ್ಥಾವರಲಿಂಗನಿರಸನ ಸ್ಥಲ. ಪು. ೯೧, ವ. ೬; ಮತ್ತು ಚಿದೈಶ್ವರ್ಯ ಚಿದಾಭರಣ : ಸದ್ವೀರ ಮಾಹೇಶ್ವರ ಗುರುಲಿಂಗಾನುಭಾವ ಸ್ಥಲ, ಪು. ೫೧, ವ. ೧೧೦.

10. ಆಕರ : ಬ್ರಹ್ಮಾ : ಜ್ಞಾನಕ್ರಿಯಾ ವಿಶ್ವಾಸ ಸ್ಥಲ, ಪು.೧೧೧, ವ.೪ ; ಮತ್ತು ಶಿವಯೋಗ ಚಿಂತಾಮಣಿ : ಜ್ಞಾನ ಕ್ರಿಯಾಚಾರ ಸಮಾನಸ್ಥಲ ಪು ೮೨ - ೮೩, ವ. ೩.

11. ಬ್ರಹ್ಮಾ : ಸಂಗ್ರಹ ಮಹಾತ್ಮೆ, ಪು. ೩೨೨, ವ.೧.

ಇವುಗಳಲ್ಲಿ - ಇಷ್ಟಲಿಂಗವಿದ್ದೂ ಸ್ಥಾವರಲಿಂಗವನ್ನು ಪೂಜಿಸುವ 'ನರಕಿ ನಾಯಿಗಳ' ನಿಂದೆ, 'ಸತಿಸುತರೆಂಬ ಸಂಸಾರದಲ್ಲಿ ಮೈ ಮರೆದು ಮತಿಗೆಟ್ಟು ಮರುಳಾದವರ' ಟೀಕೆ, ಅಂತರಂಗದ ಅರಿವಿಲ್ಲದ ಬಹಿರಂಗದ ಕ್ರಿಯಾವಂತರ ವಿಮರ್ಶೆ, 'ಪರಶಿವನ ನಿಜನೆಲೆಯರಿದು ನೆರೆದು ಪರವಶನಾಗಿ ತನ್ನ ಮರೆದು ಪರಿಭವದಿಂದ ಮುಕ್ತನಾದ ಪರಶಿವಯೋಗಿಯ' ಸ್ವರೂಪವರ್ಣನೆ ಮಾಡಲಾಗಿದೆ. ''ಅಂತರಂಗದಲ್ಲಿ ಅರಿವಿಲ್ಲದವಂಗೆ ಬಹಿರಂಗದಲ್ಲಿ ಕ್ರಿಯೆಯಿದ್ದು ಫಲವೇನು?' ಅದು ಕಣ್ಣಿಲ್ಲದವನ ಬಾಳುವೆಯಂತೆ, ಬಹಿರಂಗದಲ್ಲಿ ಕ್ರಿಯೆಯಿಲ್ಲದವರಿಗೆ ಅಂತರಂಗದಲ್ಲಿ ಅರಿವಿದ್ದು ಫಲವೇನು? ಅದು ಶೂನ್ಯಾಲಯದ ದೀಪದಂತೆ'' ''ವಾಯುವಿನೊಳಗಣ ಪರಿಮಳವ ಹಿಡಿದು ದಂಡೆಯ ಕಟ್ಟ ಮಂಡೆಯೊಳಗೆ ಮುಡಿಯಬಹುದೆ ಅಯ್ಯ? ಬಯಲ ಮರೀಚಿಕಾಜಲವ ಕೊಡದಲ್ಲಿ ತುಂಬಿ ಹೊತ್ತು ತಂದು ಅಡಿಗೆಯ ಮಾಡಿ ಉಣಬಹುದೆ ಅಯ್ಯ?'' ಎಂಬಂಥ ವಾಕ್ಯಗಳು ನೇರ ನಿರೂಪಣೆ, ಸರಳ ಭಾಷೆ, ಉದಾತ್ತ ಭಾವಗಳಿಂದ ಗಮನ ಸೆಳೆಯುತ್ತವೆ.

ಈ ನಾಲ್ಕರಲ್ಲಿ ಎರಡು ವಚನಗಳು (ಕರಸ್ಥಲದ ಲಿಂಗವಬಿಟ್ಟು...ಸತಿಯ ನೋಡಿ.....) 'ಸಕಲಪುರಾತನರ ವಚನಗಳು' ಕಟ್ಟುಗಳಲ್ಲಿ 'ಮಡಿವಾಳ ಮಾಚಯ್ಯಗಳ ಸಮಾಚಾರದ ಮಲ್ಲಿಕಾರ್ಜುನ' ಎಂಬ ವಚನಕಾರನ ಹೆಸರಿನಡಿಯಲ್ಲಿ ದೊರೆಯುತ್ತವೆ[12]. ಅಂಕಿತ ಮಾತ್ರ 'ಪರಮ ಪಂಚಾಕ್ಷರ ಮೂರ್ತಿ ಶಾಂತ ಮಲ್ಲಿಕಾರ್ಜುನ ' ಎಂದಿದೆ. ಇಬ್ಬರ ಹೆಸರಿನಲ್ಲಿಯ ವಿಶೇಷಣವನ್ನು ತೆಗೆದರೆ ಉಳಿಯುವ 'ಮಲ್ಲಿಕಾರ್ಜುನ' ಎಂಬುದು ; ಇಬ್ಬರ ಅಂಕಿತದಲ್ಲಿನ 'ಪರಮ ಪಂಚಾಕ್ಷರ ಮೂರ್ತಿ' ಮತ್ತು 'ಪರಮಗುರು' ಎಂಬ ವಿಶೇಷಣಗಳನ್ನು ತೆಗೆದರೆ ಉಳಿಯುವ 'ಶಾಂತಮಲ್ಲಿಕಾರ್ಜುನ' ಎಂಬುದು ಒಂದೇ ಆಗಿರುವುದು, ಇವರಿಬ್ಬರೂ ಭಿನ್ನರೋ ಅಥವಾ ಅಭಿನ್ನರೋ ಎಂಬ ಸಂಶಯಕ್ಕೆ ಎಡೆಮಾಡುತ್ತದೆ. ಕಾಲಮಾನದ ದೃಷ್ಟಿಯಿಂದ - ವಿದ್ವಾಂಸರ ಅಭಿಪ್ರಾಯದ ಪ್ರಕಾರ - ಒಬ್ಬ ೧೨ನೆಯ ಶತಮಾನಕ್ಕೆ ಸೇರಿದವನಾದರೆ (ಮಡಿವಾಳ ಮಾಚಯ್ಯಗಳ ಸಮಾಚಾರದ ಮಲ್ಲಿಕಾರ್ಜುನ), ಮತ್ತೊಬ್ಬ (ಕರಸ್ಥಳದ ಮಲ್ಲಿಕಾರ್ಜುನ ಒಡೆಯ) ೧೫ನೆಯ ಶತಮಾನಕ್ಕೆ ಸೇರಿದವನಾಗಿದ್ದಾನೆ. ಹಸ್ತ ಪ್ರತಿಗಳಲ್ಲಿ 'ಮಡಿವಾಳ ಮಾಚಯ್ಯಗಳ ಸಮಾಚಾರದ' ಎಂಬುದು 'ಮಡಿವಾಳ ಮಾಚಯ್ಯಗಳ ಸಮಯಾಚಾರದ' ಎಂದು ಪಾಠಾಂತರಗೊಂಡು ದೊರೆಯುತ್ತದೆ. ಇದರಿಂದ ಮಡಿವಾಳ ಮಾಚಯ್ಯನ 'ಸಮಯಾಚಾರ'ವನ್ನು - ಅಂದರೆ ಗಣಾಚಾರ ನಿಷ್ಠೆಯನ್ನು ಪಾಲಿಸುವ ವ್ಯಕ್ತಿ ಈತ ಎಂಬುದು ವ್ಯಕ್ತವಾಗುತ್ತದೆ. ಆ ವ್ಯಕ್ತಿ ಯಾವ ಕಾಲದವನಾದರೂ ಆಗಿರಬಹುದು. ಈಗ ದೊರೆತ ಮಲ್ಲಿಕಾರ್ಜುನ ಒಡೆಯನ ವಚನಗಳಲ್ಲಿಯೂ ಗಣಾಚಾರನಿಷ್ಠೆ ಎದ್ದು ತೋರುತ್ತದೆ. ಹೀಗಾಗಿ ಕರಸ್ಥಲದ ಮಲ್ಲಿಕಾರ್ಜುನ ಒಡೆಯನೇ 'ಮಡಿವಾಳ ಮಾಚಯ್ಯಗಳ ಸಮಯಾಚಾರದ ಮಲ್ಲಿಕಾರ್ಜುನ' ಆಗಿರುವ ಸಂಭವವಿದೆ. ಇದನ್ನು ಖಚಿತಗೊಳಿಸಲು ಇನ್ನಷ್ಟು ಆಧಾರಗಳ ಅವಶ್ಯಕತೆಯಿದೆ.

●

12. ಸಕಲ ಪುರಾತನರ ವಚನಗಳು (ಸಂಪುಟ-ಮೂರು) (ಸಂ.) ಡಾ. ಎಂ.ಎಸ್.ಸುಂಕಾಪುರ, ಪ್ರ.ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪು. ೨೧೯ ; ಮೈಸೂರು ವಿಶ್ವವಿದ್ಯಾಲಯದ ಕನ್ನಡ ಸಾಹಿತ್ಯ ಚರಿತ್ರೆ, (ಸಂ-೪, ಪು. ೬೪೪)ಯಲ್ಲಿ ಇವನ ಹೆಸರಿನಲ್ಲಿ ಒಂದು ವಚನ ಮಾತ್ರ ಸಿಕ್ಕಿದೆ ಎಂದು ಹೇಳಿ 'ವಾರಿಧಿಯೊಳಗಣ....' ಎಂಬ ವಚನವನ್ನು ಉದಾಹರಿಸಿದ್ದಾರೆ. ಆದರೆ ಈಗ ದೊರೆತ ವಚನಗಳ ಸಂಖ್ಯೆ ನಾಲ್ಕು.

‘ಕೆಳದಿನೃಪ ವಿಜಯ’ದಲ್ಲಿ ತೆಂಕನಾಡು- ಕಾಸರಗೋಡು

ಶ್ರೀ ಕಯ್ಯಾರ ಕಿಞ್ಞಣ್ಣ ರೈ

ಕೆಳದಿಯ ಅರಸರ ಚರಿತ್ರೆಯನ್ನು ಲಿಂಗಣ್ಣ ಕವಿ ಬರೆದಿದ್ದು ಅದಕ್ಕೆ ‘ಕೆಳದಿನೃಪ ವಿಜಯಂ’ ಎಂಬ ಹೆಸರಿದೆ ; ಇದು ಕಾವ್ಯರೂಪದಲ್ಲಿರುವ ಕೆಳದಿಯ ಅರಸರ ಚರಿತ್ರೆಯಾಗಿರುವುದು. ಈ ಅರಸರು, ಮೊದಲು ಕೆಳದಿಯಲ್ಲಿದ್ದು , ಮತ್ತೆ ಇಕ್ಕೇರಿಯಲ್ಲಿ ನೆಲಸಿ, ಆಮೇಲೆ ಬಿದನೂರಿನಲ್ಲಿಯೂ ವಾಸಿಸಿದ ಕಾರಣ ಇವರಿಗೆ ಇಕ್ಕೇರಿಯ ಅರಸರು ಅಥವಾ ನಾಯಕರೆಂದೂ, ಬಿದನೂರಿನ ಅರಸರೆಂದೂ ಹೆಸರಿದೆ. ‘ಕೆಳದಿನೃಪ ವಿಜಯಂ’ ಪದ್ಯರೂಪದಲ್ಲಿ ಬರೆದಿರುವ ಚರಿತ್ರ ಗ್ರಂಥ. ಈ ರೀತಿ ಪದ್ಯದಲ್ಲಿ ಚರಿತ್ರ ಬರೆಯುವ ಪದ್ಧತಿ ಕನ್ನಡದಲ್ಲಾಗಲಿ ಸಂಸ್ಕೃತದಲ್ಲಾಗಲಿ ಅಪೂರ್ವ. ಈ ಗ್ರಂಥ ಒಂದು ಮಹತ್ವದ ಕೃತಿ. ಈ ಕವಿ ತನ್ನನ್ನು ‘ಕೆಳದೀ ವರಬಸವೇಂದ್ರಾಶ್ರಿತ’ನೆಂದು ಹೇಳಿ ಕೊಂಡಿರುವುದರಿಂದ ಕೆಳದಿ ಅರಸು ಬಸವಪ್ಪನಾಯಕನ ಆಶ್ರಯದಲ್ಲಿದ್ದು ಕೃತಿ ರಚಿಸಿದನೆಂದು ತಿಳಿದುಕೊಳ್ಳಬಹುದು. ಕೆಳದಿಯಲ್ಲಿ ಇಬ್ಬರು ಬಸವಪ್ಪ ನಾಯಕರು ಆಳಿದ್ದರು; ಅವರಲ್ಲಿ ಹಿರಿಯವನು ಕ್ರಿ.ಶ. ೧೬೨೦ರಿಂದ ೧೬೩೭ರ ವರೆಗೂ, ಕಿರಿಯವನು ಕ್ರಿ.ಶ. ೧೭೫೦ರ ಸುಮಾರಿಗೂ ಆಳಿದವರು; ಈತನು ಎರಡನೆಯ ಬಸವಪ್ಪನಾಯಕನ ಕಾಲದವನೆಂದು ತಿಳಿಯಬಹುದು.

ಈ ಗ್ರಂಥದಲ್ಲಿ ಆದಿಯಿಂದ ಅಂತ್ಯದವರೆಗೂ ಕೆಳದಿಯ ಅರಸರ ಚರಿತ್ರೆಯೇ ಇದ್ದು, ಸಂದರ್ಭಾನುಸಾರ ಚಿತ್ರದುರ್ಗದ ನಾಯಕರು, ಬೇಲೂರ ಅರಸರು, ವಿಜಯನಗರದ ಅರಸರು, ಷಾಹಿರಾಜರು, ಮರಾಟ ರಾಜರು, ಡಿಲ್ಲಿಯ ಸುಲ್ತಾನರು ಇವರೆಲ್ಲರ ವಿಚಾರವೂ ಬರುತ್ತದೆ. ಇಲ್ಲಿ ಕೊಟ್ಟ ಕಾಲ ಕಾರ್ಯಾದಿಗಳು ಇತಿಹಾಸವನ್ನು ಶಾಸನಗಳನ್ನು ನೋಡಿದರೂ ಸರಿಯಾಗಿವೆ. ಈ ಗ್ರಂಥ ಗದ್ಯಪದ್ಯಗಳಿಂದ ಕೂಡಿದ ಚಂಪೂಕಾವ್ಯವಾಗಿದೆ. ಸದ್ಯ, ಆ ಗ್ರಂಥದಲ್ಲಿ ತುಳುನಾಡೆಂದು ಪ್ರಸಿದ್ಧವಾದ ದಕ್ಷಿಣ

ಕನ್ನಡ ಜಿಲ್ಲೆಗೆ, ಎಂದರೆ ಕಾಸರಗೋಡನ್ನೂ ಕೂಡಿದ್ದ ತೆಂಕನಾಡಿಗೆ, ಸಂಬಂಧಿಸಿ ಬಂದ ಕೆಲವೊಂದು ಉಲ್ಲೇಖಗಳನ್ನು ಈ ಕೆಳಗೆ ವಿವರಿಸಿ ಕೊಡಲಾಗಿದೆ. ಆದರಿಂದ ಈ ತೆಂಕಣನಾಡಿನ ಗಡಿಯಲ್ಲಿರುವ ಕಾಸರಗೋಡಿನ ಪೂರ್ವಚರಿತ್ರೆಯನ್ನು ತಿಳಿದುಕೊಳ್ಳಲು ನೆರವಾಗುವುದು.

ಶಾಲಿವಾಹನ ಶಕ ವರ್ಷ ೧೪೩೬ನೆಯ ಶ್ರೀಮುಖ ಸಂವತ್ಸರದ ಶ್ರಾವಣ ಶುದ್ಧ ಮೂರರಂದು ಕೆಳದಿಯ ಚೌಡಪ್ಪ ನಾಯಕನ ಮಗ ಸದಾಶಿವ ನಾಯಕನಿಗೆ ಇಕ್ಕೇರಿ ಅರಮನೆಯಲ್ಲಿ ಪಟ್ಟಾಭಿಷೇಕವಾಯಿತು. ಆತನು ಬಹಳ ಪರಾಕ್ರಮಶಾಲಿಯಾಗಿದ್ದು ಧರ್ಮನಿರತನೂ ಇದ್ದು ಇದಿರಾಂತವರನ್ನು ಜಯಿಸಿ -

''ಘಟ್ಟವನಿಳಿದು ಪರಶುರಾಮ ಕ್ಷೇತ್ರಮಂ ಸಾರ್ದು -

ತುಳುವ ರಾಜರ್ಕಳೆಲ್ಲಂ
ಮಲೆತಿರೆ ನಿಗ್ರಹಿಸಿ ಮೆರೆವ **ಕಾಸರಗೋಡೊಳ್**
ತೊಲಗದ ಕಂಬವನಾನೃಪ
ತಿಲಕಂ ತಾ ನಿಲಿಸಿ ಮೆರೆದನತಿ ಸಾಹಸಮಂ

''ಇಂತು ಮಲೆತಿರ್ಪ ತುಳುವ ಮನ್ನೆಯರ ಮದಮಂ ಮುರಿದು ಸ್ವಾಧೀನಂ ಗೆಯ್ದು ಕರಮಂ ಕೊಂಡು ಹಣಮಣಿಹಮಂ ತೆತ್ತು ನಡೆವಂತು ಕಟ್ಟಳೆಯಂ ರಚಿಸಿ, ಮರಳ್ದೈತಂದು ರಾಯರಿಂದುಚಿತಮಾದುಡುಗೊರೆ ಮುಂತಾದ ಬಹುಮಾನಮಂ ಪಡೆದಾರಾಯರಿಂದಪ್ಪಣೆವೆತ್ತು ಸೈನ್ಯಸಮೇತನಾಗತ್ಯಂತ ಸಂಭ್ರಮದಿಂ ತೆರಳ್ದೈತಂದು ಇಕ್ಕೇರಿಯ ಪುರವರಮಂ ಪೊಕ್ಕು...''

- ಹೀಗೆ, ಘಟ್ಟದ ಮೇಲೆ ವಿಜಯಯಾತ್ರೆ ಮಾಡಿದ ನಂತರ, ಘಟ್ಟವನ್ನಿಳಿದು **ಪರಶುರಾಮ ಕ್ಷೇತ್ರವೆಂದು ಪ್ರಸಿದ್ಧವಾದ ತುಳುನಾಡಿಗೆ** ಬಂದು, ಅಲ್ಲಿ ಆತನಿಗೆ ಇದಿರಾದ ತುಳುವ ರಾಜರುಗಳನ್ನೆಲ್ಲಾ ಸೋಲಿಸಿ **ಕಾಸರಗೋಡಿನಲ್ಲಿ ತೊಲಗದ ಕಂಬವನ್ನು** ನೆಡೆಸಿ, ಇಲ್ಲಿನ ರಾಜರಿಂದ ಕಪ್ಪಕಾಣಿಕೆ ಪಡೆದು ತೆರಳಿದನು ಎಂದಿದೆ.

ಆ ಮೇಲೆ, ಶಾಲಿವಾಹನ ಶಕ ವರ್ಷ ೧೫೧೦೦೫ರ ಚಿತ್ರಭಾನು ಸಂವತ್ಸರದ ಮಾರ್ಗಶಿರ ಶುದ್ಧ ಐದರಂದು ದೊಡ್ಡ ಸಂಕಣನಾಯಕನ ಮಗ ವೆಂಕಟಪ್ಪ ನಾಯಕನಿಗೆ ಇಕ್ಕೇರಿಯಲ್ಲಿ ಪಟ್ಟಾಭಿಷೇಕವಾಯಿತು. ಆತನೂ ಹಲವು ಸಾಹಸ ಪರಾಕ್ರಮಗಳನ್ನು ಮಾಡಿ ವಿಜಯಯಾತ್ರೆ ಗೈಯುತ್ತಾ ಘಟ್ಟವನ್ನಿಳಿದು ಹೊನ್ನೆಯಕಂಬಳಿಯೆಂಬ ಮನ್ನೆಯನನ್ನು ಸೋಲಿಸಿ, ಹೊಸಂಗಡಿ, ಕಡರಿ, ಬಗ್ಗವಾಡಿಯ ಹೋಬಳಿ ಕೊಲ್ಲೂರು ಮುಂತಾದ ಸೀಮೆಯ ಪರಿವಾರಗಳನ್ನು ಭೇಟಿಯಾಗಿ **ಕೊಲ್ಲೂರಲ್ಲಿ ಮೂಕಾಂಬಿಕೆಗೆ** ಪೂಜಾದಿಗಳು ಲೋಪವಿಲ್ಲದೆ ನಡೆವಂತೆ ನಿಯಮಿಸಿ, ಮುಂದೆ ಹೋಗಿ -

''ಭೈರಸವೊಡೆಯರುಮಂ ತ
ದ್ಧೀರಂ ನಿಗ್ರಹಿಸಿ ಕೊಪ್ಪಮಂ **ಬೆಳ್ಳಾರೆಯಂ**
ಕಾರಕಳ ಕಳಸಖಾಂಡ್ಯದ
ಚಾರುಪರಿಸ್ತರಣ ಭೂಮಿಯಂ ವಶಗೈದಂ''

''ಇಂತು ಕಾರಕಳದ ಭೈರಸವೊಡೆಯರಂ ನಿಗ್ರಹಿಸಿ, ತದ್ರಾಜ್ಯ ಪರಿಸ್ತರಣಂಗಳಂ ವಶಂಗೈದ ನಂತರಂ, ಮಾಳಕಾಡ ಹೊಳೆಯ ಬಯಲೂರ ಕೋಂಟೆಗಳಂ ನಿರ್ಮಾಣಂ ಗೈಸಿದನಂತುಮಲ್ಲದೆಯಂ''

''ಬಲ್ಲಿದ **ಶಿರಾಲೆ**ಯವರಂ
ಘಲ್ಲಿಸಿ ವಶಗೈದು ಕೂಡೆತದ್ಭೂತಳಮಂ
ಹಲ್ಲರ್ಗಡೆಯೆನಿಸಿದ ಕೇ
ಡಿಲ್ಲದವಸುಪುರವನಾನೃಪಂ ಸಾಧಿಸಿದಂ''

"ಇಂತು ಬಸರೂರಂ ಸಾಧಿಸಿ ಮಹಾಲಿಂಗೇಶ್ವರ ದೇವರ ಪೂಜೆ ಲೋಪವಾಗದಂತು ನಿಯಮಂಗೆಯ್ದು ತೆರಳ್ದನಂತುಮಲ್ಲದೆಯುಂ"

"ಅವನೀಶಭೂತಪಾಂಡ್ಯೋ
ದ್ಭವರ್ಗಳ್ಮುನ್ನಾಳ್ದ ಪರಮವೈಭವದಿಂದೊ
ಪ್ಪುವ ಬಾರಕೂರ ಸಂಸ್ಥಾ
ನವನುರೆವಶಗೈದನಾ ನೃಪಾಲಕತಿಲಕಂ"

"ಇಂತಾ ವೆಂಕಟಪ್ಪ ನಾಯಕಂ ಬಾರಕೂರ ಸಂಸ್ಥಾನಮಂ ಸ್ವಾಧೀನಂ ಗೆಯ್ದು ಬಾರಕೂರು ಕಲ್ಯಾಣಪುರ ಮಲ್ಲಿಕಾರ್ಜುನಗಿರಿ ಕಂಡುಲೂರ ಕೋಂಟೆಗಳಂ ನಿರ್ಮಾಣಂ ಗೈಸಿದನಂತು ಮಲ್ಲದೆಯುಂ"

"ಮುರಿದು ಸುರಾಲರತೊಳಹರ
ಸಿರಿಯರ ನಾಲ್ವತ್ತು ನಾಡು ಕೆಲನಾಡುಂ ಶಂ
ಕರನಾರಾಯಣ ಬೈಂದೂ
ರ್ವೆರಸಿದ ಹಳ್ಳಿಗೆರೆಯವನಿಯಂ ಸಾಧಿಸಿದಂ".

"ಇಂತು ಸುರಾಲರ ತೊಳಹರ ಸೀಮೆಗಳಂ ವಶಂಗೈದ ನಂತರಂ

"ಬಂಗಾಜಿಲ ಸಾವಂತಮ
ನಂಗೊಳಿಸುವ ಚೌಟಮೂಲ ಕುಂಬಳೆಯಿವರಂ
ಭಂಗಿಸಿತದ್ಧರೆಯುಮನು
ತ್ತುಂಗ ಶ್ರೀ ಮಂಗಳೂರನುರೆ ಸಾಧಿಸಿದಂ".

"ಇಂತು ಚೌಟ ಬಂಗಾಜಿಲ ಸಾಮಂತಮೂಲ ಕುಂಬಳೆ ಕಾಸರಗೋಡ ಮನ್ನೆಯರ ಮುರಿದು ತದ್ಧರಿತ್ರಿಯಂ ವಶಗೈದು ಮಂಗಳೂರ ಸಂಸ್ಥಾನಮಂ ಸ್ವಾಧೀನಂ ಗೈದನಂತರಂ ಮೂಲಿಕೆ ಕೊಡೆಯಾಲ ಮೂಡಬಿದಿರೆ ಉಳ್ಳಾಲ ಕುಂಬಳೆ ಕಾಸರಗೋಡು ಪುದುವೆಟ್ಟು ಬೆಳ್ಳಾರೆ, ಕಾಂತಮಂಗಲ, ಬಂದ್ಯಡಕ, ಕುಂಡಂಕುಳಿ ಕೊಲ್ಲೂರಬಾಚಿ, ಶಿಶಿಲ ಚಂದ್ರಗಿರಿ ಕಿದುಟು ಮೂಡಗೊಡೆಯಾಲ ಪಣಿಯಾಲ ಮುಂತಾದ ಕೋಂಟೆಗಳಂ ಬಲಿಯಿಸಿದಂ "

- ಈ ರೀತಿ, ಕೊಲ್ಲೂರಿನಿಂದ ತೊಡಗಿ, ಕಾಸರಗೋಡು, ಕುಂಬಳೆ, ಬಂದ್ಯಡ್ಕದವರೆಗೆ ಚಂದ್ರಗಿರಿ ಪಣಿಯಾಲದವರೆಗೆ ಆಡಳಿತ ನಡೆದು, ಕೋಟೆಕೊತ್ತಳಗಳು ನಿರ್ಮಾಣಗೊಂಡು, ಆತನ ಅಧೀನವಾಯಿತು. ಅದೇ ವೆಂಕಟಪ್ಪನಾಯಕನು -

"ಬಾರಕೂರ್ಬೆಣ್ಣೆವಳ್ಳಿಯು
ಮಾರಗ ಶಂಕರನಾರಾಯಣ ಸಾಗರ ಬೋ
ಳೂರುಕೊಡೆಯಾಲಗಳೊಳುಮು
ದಾರಮಹತ್ತಿನ ಮಠಂಗಳಂ ಕಟ್ಟಿಸಿದಂ....."

"ಮತ್ತಮದಲ್ಲದಾವೆಂಕಟಪ್ಪನಾಯಕಂ ಕೊಲ್ಲೂರ ಮೂಕಾಂಬಿಕೆಯಮ್ಮನವರ ದೇವಸ್ಥಾನಮಂ ವಿಸ್ತಾರಮಾಗಿ ಶಿಲಾಮಯವನಾಗಿಸಿ ವಿಶೇಷ ಭೂ ಸ್ವಾಸ್ಥೆಯಂ ಬಿಡಿಸಿ, ತದ್ಪೂಜಾ ವಿಭವಂಗಳಂ ಲೋಪವಿಲ್ಲದಂತೆ ನಡೆಸಿ, ತಾಂ ಸಾಧಿಸಿದ ಘಟ್ಟದ ಕೆಳಗಣ ಮಹಾದೇವತಾಸ್ಥಳಂಗಳೊಳ್ ಪ್ರತಿವರ್ಷ ಶ್ರಾವಣ ಮಾಸದೊಳ್ ವಿಶೇಷಗಟ್ಟಳೆಯಾಗಿ ಪೂಜೆ, ಕಾರ್ತಿಕ ಮಾಸದೊಳ್ ಲಕ್ಷದೀಪಾರಾಧನೆ, ರಥೋತ್ಸವಾದಿಗಟ್ಟಳೆಗಳ್ನಡೆವಂತು ನಿಯಾಮಕಂ ಗೈಸಿ"ದನು.

ಶಾಲಿವಾಹನ ಶಕವರ್ಷ ೧೫೫೧ರ ಶುಕ್ಲ ಸಂವತ್ಸರದ ಮಾರ್ಗಶಿರ ಶುದ್ಧ ಒಂದರಲ್ಲಿ ಪಟ್ಟವೇರಿದ ವೀರಭದ್ರ ನಾಯಕನು, ರಾಜ್ಯದ ಆಡಳಿತದಲ್ಲಿ ಉಂಟಾದ ಮನಸ್ತಾಪದಿಂದ ಘಟ್ಟದ ಕೆಳಗಿನ **ಕಂಡಲೂರಲ್ಲಿ** ನೆಲಸಿರಲು, ಅವನನ್ನು ಬಿದುರೂರಿಗೆ ಬರಿಸಬೇಕೆಂದು ಶಿವಪ್ಪನಾಯಕನು ಘಟ್ಟವಿಳಿದು **ಗುಳವಾಡಿಗೆ** ಬಂದು, **ಕಂಡಲೂರಲ್ಲಿ** ಅರಸನನ್ನು ಸಂದರ್ಶಿಸಿ, ಮರಳಿ ಬರಬೇಕೆಂದು ಹೇಳಿದಾಗ ವೀರಭದ್ರನಾಯಕನು ತಾನಿಲ್ಲಿಯೇ ನೆಲಸುವುದಾಗಿಯೂ, ನಿನ್ನ ಮೂಲಕವೇ ಅಲ್ಲಿನ ಸಕಲ ಕಾರ್ಯಗಳೂ ನಡೆಯಲೆಂದೂ ಶಿವಪ್ಪನಾಯಕನಿಗೆ ಹೇಳಿದ ಸಂಗತಿಯಿದೆ. ಆ ವೀರಭದ್ರನಾಯಕನ ತರುವಾಯ ಶಾಲಿವಾಹನ ಶಕವರ್ಷ ೧೫೬೭ನೆಯ ಪಾರ್ಥಿವ ಸಂವತ್ಸರದ ಮಾರ್ಗಶಿರ ಶುದ್ಧ ಹನ್ನೆರಡರಲ್ಲಿ ಸಿದ್ಧಪ್ಪನಾಯಕನ ಮಗ ಶಿವಪ್ಪನಾಯಕನಿಗೆ **ವೇಣುಪುರದ** ಅರಮನೆಯಲ್ಲಿ ಪಟ್ಟಾಭಿಷೇಕವಾಯಿತು. ಆತನು -

''ಕರೆಯವನಿಗೆ ಬಾಧಕರಾ
ಗಿರುವ ಪರಂಗಿಗಳ ಬಲವನುಡುಗಿಸಿ **ಕುಂದಾ**
ಪುರಗಂಗುವಳ್ಳಿ ಹೊನ್ನಾ
ವರಗಳ ಕೋಂಟೆಗಳನಾನ್ನಪಂ ವಶಗೈದಂ.
ಕಂಗೊಳಿಪ **ಮಂಗಳೂರು**
ತ್ತುಂಗ ಪರಿಸ್ತರಣಮಂ ವಶಂಗೈದು ಬಳಿ
ಕ್ಕಿಂಗರೀಜಾದ್ಯರಾಗಮ
ನಂಗಳಮಂ ತವಿಸಿ ರಾಜ್ಯಮಂ ಬಾಳಿಸಿದಂ.''

''ಅಂತು **ಮಂಗಳೂರ ಕೋಂಟೆಯಂ** ಕೊಂಡನಂತರ **ಮಳವೆಯಂ** ಕಟ್ಟಿ, ಕೀಳೂರಂ ಸಾಧಿಸಿ, **ಬೇಕಲ ಚಿತ್ತಾರಿ**ಗಳೆಂಬ ಕೋಂಟೆಗಳುಮಂ ಮತ್ತಂ **ಚಂದ್ರಗಿರಿ** ಮುಂತಾದ ಕೋಂಟೆಗಳುಮಂ ಬಲ್ಪುಗೈಸಿದನಂತುಮಲ್ಲದೆಯುಂ -

''ಬಳಿಕುರು ನೀಲೇಶ್ವರದು
ಜ್ಜ್ವಳಿಪಿಳೆಯಂಕೊಂಡು, **ನಾಯಿಮಾರರ ನೆಲದೊಳ್**
ತೊಲಗದ ಕಂಬವನನುವಿಂ
ನಿಲಿಸಿ ಮಹಾದ್ಭುತ ಪರಾಕ್ರಮವನುರೆ ಮೆರೆದಂ.

'' ಇಂತು ನೀಲೇಶ್ವರದ ಗಡಿಮುಖದೊಳ್ ತೊಲಗದ ಕಂಬಮಂ ನಿಲಿಸಿ, ನಾಯಿಮಾರರಂ ವಶಂಗೈದು, ಪಣಮಣಿಹಗಳಂ ಕೊಂಡ ನಂತರಂ **ಕೊಲ್ಲಂತಮಾಪಳರ್ಮುಂತಾದ ಕೇರಳ ಮಂಡಳದ ಮನ್ನೆಯರ್ಕಳಂ** ಎದೆಗೆಡಿಸಿ ಮರಳ್ದಂ ಅಂತು ಮಲ್ಲದೆಯುಂ -

'' ರಂಜಿಸುವಲತ್ತನಾಡಂ
ಮಂಜುಳಮೆನಿಸಿರ್ಪ ಪಡುವನಾಡನಿಳಾಭೃ
ತ್ಕುಂಜರನುನ್ಮೂಲಿತರಿಪು
ಪುಂಜಂ ಶಿವನೃಪತಿ ಶೌರ್ಯದಿಂ ಸಾಧಿಸಿದಂ''

- ಹೀಗೆ ಶಿವಪ್ಪನಾಯಕನು ವಿದೇಶೀಯರಾದ ಪರಂಗಿಗಳನ್ನು ನಿಗ್ರಹಿಸಿ **ಕುಂದಾಪುರ, ಗಂಗೊಳ್ಳಿ, ಮಂಗಳೂರು, ಬೇಕಲ, ಚಿತ್ತಾರಿ, ಚಂದ್ರಗಿರಿ** ಮೊದಲಾದ ಕಡೆಗಳಲ್ಲಿ ವಿಜಯಯಾತ್ರೆ ಮಾಡಿ **ನೀಲೇಶ್ವರದಲ್ಲಿ ನಾಯಿಮಾರರನ್ನು ಸೋಲಿಸಿ ಅಲ್ಲಿ ತೊಲಗದ ಕಂಬವನ್ನು ನೆಡಿಸಿ ಕೊಲ್ಲಂನ ಮಾಪಿಳ್ಳೆ ಮುಂತಾದ ಕೇರಳದ ಮಾಂಡಳಿಕರನ್ನೂ ಜೈಸಿ, ಆಲವತ್ತನಾಡು, ಮಂಜುಳವೆಂಬ ಪಡುವನಾಡು ಮಂಜೇಶ್ವರವನ್ನೂ** ಗೆದ್ದ ವಿಷಯ ಇಲ್ಲಿ ಉಲ್ಲೇಖವಿದೆ. ಆ ಮೇಲೆ ಶಾಲಿವಾಹನ ಶಕವರ್ಷ ೧೫೮೩ರ ಪ್ಲವ

ಸಂವತ್ಸರದ ಭಾದ್ರಪದ ಶುದ್ಧ ಹದಿನೈದರಲ್ಲಿ ಶಿವಪ್ಪನಾಯಕನ ಪುತ್ರ ಭದ್ರಪ್ಪನಾಯಕನಿಗೆ ಪಟ್ಟವಾಯಿತು. ಆತನೂ ವಿಜಯಯಾತ್ರೆ ಮಾಡುತ್ತಾ -

''**ವೇಣುಪುರದಿಂ** ತೆರಳ್ದ -
ಕ್ಷೀಣಬಲಂ ಭದ್ರಭೂಮಿಪಂ **ಕೊಲ್ಲೂರಂ**
ಮಣದೆ ಪೊರ್ದಿಬಳಿಕ್ಕಾಂ
ಕೋಟೀಶ್ವರನೆಸೆವ **ವಸುಪುರ**ವನುರೆ ಸಾರ್ದಂ
ಕ್ರೋಡಪುರವರವನಾನೃಪ
ಚೂಡಾಮಣಿಯೆಯ್ದಿ ಸಾರ್ದು **ಕೊಟೀಶ್ವರ**ಮಂ
ನೀಡುಮಲ್ಲಿಂ ತೆರಳ್ದೊ
ಳ್ನಾಡೊಳಧಿಕಮೆನಿಪಶೃಂಗಪುರಮಂ ಪೊಕ್ಕಂ''

ಕೊಲ್ಲೂರು, ವಸುಪುರ, ಕ್ರೋಡಪುರ, ಕೋಟೇಶ್ವರಗಳಿಗೆ ಭದ್ರಪ್ಪನಾಯಕನು ಸಂದರ್ಶಿಸಿದ ವಿಷಯ ಮೇಲೆ ಹೇಳಿದೆ. ಅನಂತರ ಶಾಲಿವಾಹನ ಶಕವರ್ಷ ೧೫೮೬ರ ಶೋಭಕೃತ್ಸಂವತ್ಸರದ ಫಾಲ್ಗುಣ ಶುದ್ಧ ಹತ್ತರಂದು ಶಿವಪ್ಪನಾಯಕನ ಪುತ್ರ ಹಿರಿಯ ಸೋಮಶೇಖರ ನಾಯಕನಿಗ ವೇಣುಪುರದರಮನೆಯಲ್ಲಿ ಪಟ್ಟಕಟ್ಟಲಾಯಿತು. ಆತನು ಕುಹಕಿಗಳಿಂದಾಗಿ ಹತನಾದಾಗ, ಅವನ ಪತ್ನಿ ಚೆನ್ನಮ್ಮಾಜಿ ರಾಜ್ಯವಾಳುತ್ತಿರಲು, ಆಕೆಯ ವಿರುದ್ಧ ದಂಗೆಯೆದ್ದವರನ್ನು ನಿಗ್ರಹಿಸಲು,

''ಚೆನ್ನಮ್ಮಾಜಿ **ವೇಣುಪುರದರಮನೆಯಿಂ** ತೆರಳ್ದು, ಭುವನಗಿರಿಯ ದುರ್ಗದರಮನೆಯಂ ಸಾರ್ದು, **ಕಾಸರಗೋಡು ತಿಮ್ಮಣ್ಣನಾಯಕ**, ಸಬ್ಬುನೀಸ ಕೃಷ್ಣಪ್ಪಯ್ಯರಂ ನಂಬುಗೆಯ ಮೇಲೆ ಬರಿಸಿ ಕೊಳಲ್, ಒಡನೆ ಅವರೆಲ್ಲರುಂ ಭುವನಗಿರಿಯ ಪರಿವಾರದವರ್ಸಹಿತಮೊಂದಾಗಿ ತಮ್ಮ ತಮ್ಮ ರಾಗದ್ವೇಷಂ ಮಾಣ್ದು ಏಕಮತದಿಂ ಮಂತ್ರಾಲೋಚನೆಯಂ ರಚಿಸಿ... ರಾಜತ್ವಕ್ಕೆ ಚೆನ್ನಮ್ಮಾಜಿಯನೆ ಅರ್ಹಳಂ ಮಾಡಿಕೊಂಡಿಂತು ಸಂಸ್ಥಾನದ ಕಾರ್ಯಂಗಳನೆಲ್ಲಮಂ ಚೆನ್ನಮ್ಮಾಜಿಯೆ ಮಾಡಿಕೊಂಡು ನಡೆಸುತ್ತಮಿರಲ್...''

ಎಂಬೀ ವಚನದಿಂದ **ಕಾಸರಗೋಡಿನ ತಿಮ್ಮಣ್ಣನಾಯಕ ಸಬ್ಬುನೀಸ ಕೃಷ್ಣಪ್ಪಯ್ಯ**ರ ವಿಷಯ ಬರುತ್ತದೆ. ಇವರು ಈ **ಕಡೆಯ ಕಾಸರಗೋಡಿನಿಂದ ಹೋಗಿ ಅಲ್ಲಿ ನೆಲಸಿರುವ** ವೀರರು ಇರಬೇಕೆಂದು ತೋರುತ್ತದೆ. ಉತ್ತರ ಕನ್ನಡದಲ್ಲಿಯೂ ಒಂದು ಕಾಸರಕೋಡು ಎಂಬ ಸ್ಥಳವಿದೆ; ಆದರೆ ಈ ಕಾವ್ಯದಲ್ಲಿ ಕಾಸರಗೋಡು ಎಂಬ ಸ್ಪಷ್ಟವಾದ ಬರೆಹವಿದೆ. ಈ **ಕಾಸರಗೋಡು ತಿಮ್ಮಣ್ಣ ನಾಯಕನನ್ನು** ಚನ್ನಮ್ಮಾಜಿ, **ಸೇನಾನಾಯಕನನ್ನಾಗಿ ನೇಮಿಸಿ ಅನೇಕರ ದರ್ಪವನ್ನು ಅಡಗಿಸಿದಳೆಂದೂ** ಈ ಗ್ರಂಥದಲ್ಲಿ ಹೇಳುತ್ತದೆ. ಮಾತ್ರವಲ್ಲದೆ, ಚೆನ್ನಮ್ಮಾಜಿಯ ವಿರುದ್ಧ ದಂಗೆಯೆದ್ದ.

''ಜಾತಪ್ಪನ ಭದ್ರಪಂ ಘಟ್ಟದ ಕೆಳಗಣ ರಾಜ್ಯಕ್ಕೆ ತಾನಧಿಕಾರಿಯಾಗಿರಬೇಕೆಂಬಪೇಕ್ಷೆಯಿಂ **ಚೌಟಬಂಗಾಜಿಲ ಸಾವಂತ ಮುಂತಾದ ತುಳುವ ಮನ್ನೆಯರ್ಕಳಂ ಬೋಧಿಸಿ ಕಾರಕಳಮಲ್ಲಿಕಾರ್ಜುನ**ಗಿರಿ ಮುಂತಾದ **ಕೋಂಟೆಗಳಂ ಸ್ವಾಧೀನಮಂ ಮಾಡಿಕೊಂಡಿರ್ದಿರ್ಜೆ**'' ದರೆ ದಳವಾಯಿ ಭದ್ರಪ್ಪನನ್ನು ಕಳುಹಿಸಿ ಚೆನ್ನಮ್ಮಾಜಿ ದಂಗೆ ಅಡಗಿಸಿದಳು. ''**ಕಾಸರಗೋಡು ತಿಮ್ಮಣ್ಣ ನಾಯಕ ಸಬ್ಬುನೀಸ ಕೃಷ್ಣಪ್ಪಯ್ಯರೊಡನೆ ಅಸಂಖ್ಯಾತಮಾದ ಸೇನಾಸಮೂಹಮಂ ತೆರಳ್ಚಿಸಿ**'' 'ಮಾಯಾವಿ'ಗಳನ್ನು ಅಡಗಿಸಿದಳು ಎಂದೂ ಹೇಳುತ್ತದೆ. ಹಾಗಾಗಿ **ಕಾಸರಗೋಡು ತಿಮ್ಮಣ್ಣನಾಯಕ ಸಬ್ಬುನೀಸ ಕೃಷ್ಣಪ್ಪಯ್ಯ ಇವರಿಬ್ಬರೂ ಅತ್ಯಂತ ಶೂರರಿದ್ದರೆಂದು ತಿಳಿಯಬಹುದು.**

ಅನಂತರ ಚೆನ್ನಮ್ಮಾಜಿಯ ಪುತ್ರ ಹಿರಿಯ ಬಸಪ್ಪನಾಯಕನಿಗೆ ಶಾಲಿವಾಹನ ಶಕವರ್ಷ ೧೬೨೦ರ ಈಶ್ವರ ಸಂವತ್ಸರದ ಶ್ರಾವಣಶುದ್ಧ ಹದಿನಾಲ್ಕನೆಯಂದು ವೇಣುಪುರದರಮನೆಯಲ್ಲಿ ಪಟ್ಟಾಭಿಷೇಕವಾಯಿತು. ಈ ಬಸಪ್ಪನಾಯಕನು ಸದ್ಧರ್ಮದಿಂದ ರಾಜ್ಯವಾಳುತ್ತಿದ್ದು ವಿಜಯಯಾತ್ರೆ ಮಾಡುತ್ತಾ -

''ಮತ್ತಮಲ್ಲದೊಂದವಸರದೊಳ್ ಮಲೆಯಾಳದವರ್ಮಾಯಾವಿಗಳ ಸೈನ್ಯಮಂ ಸಹಾಯಂ ಮಾಡಿಕೊಂಡೈದಿ ಚಂದ್ರಗಿರಿಯ ಕೋಂಟೆಯಂ ವೇಡೈಸಿರಲ್, ಗರಜಿಸಿ ಬಸವಪ್ಪದೇವರೊಡನೆ ಸೈನ್ಯ ಸಮೂಹಮಂ ತೆರಳ್ಚಿಸಿ ಕಳುಹಿ, ಮಾಯಾವಿಗಳ ಸೈನ್ಯಮಂ ಸಂಹರಿಸಿ ಮದೋದ್ರೇಕದಿಂದಿದಿರ್ಚಿದ ಮಲೆಯಾಳರಂ ನಿಗ್ರಹಿಸಿ ಚಂದ್ರಗಿರಿ ಕೋಂಟೆಯಂ ಮಗುಳ್ದಾಜಿರಂಗದೊಳ್ ಸ್ವಾಧೀನಂ ಗೆಯ್ದು ಬಲ್ಪುಗೈಸಿ ಉಭಯ ಸಂಸ್ಥಾನಗಳ್ಗಮನ್ಯೋನ್ಯ ವಿರೋಧಂ ಪುಟ್ಟಿ ವರ್ತಿಸದಂತು, ನಿಯೋಗಿ ಶರಜಾನಾಗಪ್ಪಯ್ಯನ ಮುಖದೊಳ್ಕ್ರಿಯಾಪೂರ್ವಕಮಾಗಿ ಭಾಷಾಪತ್ರಿಕೆಯಂ ರಚಿಯಿಸಿ ನಿರ್ವೈರಮಂ ನಿಮಿರ್ಚಿಸಿದಂ''

ಅದಾದನಂತರ ಶಾಲಿವಾಹನ ಶಕವರ್ಷ ೧೬೩೭ನೆಯ ಜಯ ಸಂವತ್ಸರದ ಪುಷ್ಯ ಬಹುಳ ಹತ್ತರಂದು ಬಸವಪ್ಪ ನಾಯಕನ ಮಗ ಸೋಮಶೇಖರ ನಾಯಕನಿಗೆ ವೇಣುಪುರದರಮನೆಯಲ್ಲಿ ಪಟ್ಟವಾಯಿತು. ಆತನೂ ವಿಜಯಯಾತ್ರೆ ಕೈಕೊಂಡು-

''ಚಳಕದೆ ಕಳಸದಘಟ್ಟಮ
ನಿಳಿದಾಭೂಮೀಶವರ್ಯ ಸುಬ್ರಹ್ಮಣ್ಯ
ಸ್ಥಳಕೈದಿ ಪರ್ಮೆಯಿಂ ಮಂ
ಜುಳ ಸುಬ್ರಹ್ಮಣ್ಯ ದೇವರಂ ಭಜಿಯಿಸಿದಂ

ಪೊರಮಟ್ಟಲ್ಲಿಂ ಕೋಟೀ
ಶ್ವರಕೈದುತೆ ದಿವ್ಯಕೋಟಲಿಂಗೇಶ್ವರನಂ
ಧರಣೀಶಂ ಪೂಜಿಸಿ ವಸು
ಪುರದೆ ಮಹಾದೇವಲಿಂಗಮಂ ಭಜಿಯಿಸಿದಂ

ಅಲ್ಲಿಂದಂತೆರಳ್ದೊಪ್ಪುವ
ಕೊಲ್ಲೂರಿಂಗೈದಿ ತನ್ನಪಾಲಂ ಪುರಜಿ
ದ್ವಲ್ಲಭೆ ಮೂಕಾಂಬೆಯ ಪದ
ಪಲ್ಲವಮಂ ಪರಮಭಕ್ತಿಯಿಂದರ್ಚಿಯಿಸಿದಂ''

- ಮೇಲಿನ ಪದ್ಯದಲ್ಲಿ ಸೋಮಶೇಖರ ನಾಯಕನು ಸುಬ್ರಹ್ಮಣ್ಯ, ಮಂಜೇಶ್ವರ, ಕೋಟೇಶ್ವರ, ಕೊಲ್ಲೂರುಗಳಿಗೆ ಹೋದ ವಿಷಯವಿದೆ.

''ದುರುಳರಹನಾಯಿಮಾರರ
ನುರೆಕೂಡಿಸಿ ಕುಹಕಗೈಯ್ಯುತ್ತಿಹ ಕುಂಬಳೆಯಾ
ವರಸಾಮಂತರನುರೆ ಪಿಡಿ
ತರಿಸುತೆ ದುರ್ಗದೊಳಗಂಕೆಯಂ ಮಾಡಿಸಿದಂ ''

ಎಂಬೀ ಪದ್ಯದಲ್ಲಿ ನಾಯಿಮಾರರನ್ನು ಸೋಲಿಸಿ, ಕುಂಬಳೆಯ ಸಾಮಂತರಾಜನನ್ನು ಸೆರೆಹಿಡಿದು ದುರ್ಗದಲ್ಲಿರಿಸಿದ ವಿಷಯವಿದೆ. ಕೆಳದಿನೃಪವಿಜಯದಲ್ಲಿ ಅಲ್ಲಲ್ಲಿ 'ಮಾಯಾವಿ'ಗಳೆಂದೂ 'ಕುಹಕಿ'ಗಳೆಂದೂ, 'ದುರುಳ'ರೆಂದೂ, ಕೆಳದಿ ನಾಯಕರಿಗೆ ಇದಿರಾದವರನ್ನು ಕವಿ ಸಂಬೋಧಿಸುತ್ತಾನೆ. ತನ್ನ ಆಶ್ರಯದಾತನಿಗೆ ಇದಿರಾದ್ದರಿಂದ, ಕವಿಗೆ ಅವರು ಮಾಯಾವಿಗಳೂ ದುರುಳರೂ ಕುಹಕಿಗಳೂ ಆಗುತ್ತಾರೆ. ನಾಯಿಮಾರರೂ ಇಲ್ಲಿನ ರಾಜಮನೆತನದ ಆಶ್ರಯದಲ್ಲಿ ಯೋಧರಾಗಿದ್ದರು. ಕೆಳದಿಯ ನಾಯಕರ ಚರಿತ್ರೆಯನ್ನು ಹೇಳುವಾಗ, ಕವಿ, ಅವರು ಕೊಲ್ಲೂರಿನ ಮೂಕಾಂಬಿಕೆಯ ಪರಮಭಕ್ತರಾಗಿದ್ದರೆಂದು ಅಲ್ಲಲ್ಲಿ ವಿವರಿಸುತ್ತಾನೆ. ಸೋಮಶೇಖರ ನಾಯಕನೂ ಕೊಲ್ಲೂರಲ್ಲಿ ವಿಶೇಷ ಪೂಜಾದಿಗಳನ್ನು ಮಾಡಿಸುತ್ತಾನೆಂದು ಹೇಳಿ ಮತ್ತೆ ಆತನು ವಿಜಯಯಾತ್ರೆಗೈಯ್ಯುತ್ತಾ -

"..... ಬಂಗಾಡಿಯ ಘಟ್ಟವಿಳಿದು ಮುಂತೈದುತ್ತುಂ -
"ಸುರುಚಿರ ಸುಬ್ರಹ್ಮಣ್ಯ
ಕ್ಕಿರದಾನೃಪವರ್ಯನೈದಿ ಸುಬ್ರಹ್ಮಣ್ಯೇ
ಶ್ವರನಂ ಸದ್ಭಕ್ತಿಯೊಳಂ
ದಿಂದರ್ಚಿಸಿ ತಳರ್ದುಮಂಗಳೂರಂ ಸಾರ್ದಂ.
"ಎಸೆವ ಕೊಡೆಯಾಲದಿಂದಂ
ವಸುಪುರಕೈತಂದು ತನ್ಮಹಾಲಿಂಗೇಶಂ
ಗೊಸೆದು ಮಹಾಪೂಜೆಯ ವಿರ
ಚಿಸಿ ಬೀಳ್ಕೊಂಡಾ ಹೊಸಂಗಡಿಯ ಸಾರ್ದಿರುತಂ
"ಆ ರಾಜೇಂದ್ರಂ ಶಂಕರ
ನಾರಾಯಣಕೈದಿ ನಿಂದುತತ್ಸ್ವಾಮಿಯ ಪಾ
ದಾರವಿಂದಗಳನರ್ಚಿಸಿ
ಭೂರಮಣಂ ಸೈನ್ಯ ವೆರಸುಮುಂತೈದುತ್ತುಂ
"ಸಾರಿಕುಂದಾಪುರವ ಬೈಂ
ದೂರನಭೀಕ್ಷಿಸುತೆ ಸಾರ್ದುಗೋಕರ್ಣಕ್ಕಾ
ಧಾರಿಣಿಯಧಿಪತಿ..."

- ಇಂತು ಘಟ್ಟವಿಳಿದು ಬಂಗಾಡಿ, ಸುಬ್ರಹ್ಮಣ್ಯ, ಮಂಗಳೂರು, ಕೊಡೆಯಾಲ, ಹೊಸಂಗಡಿ, ಶಂಕರನಾರಾಯಣ, ಕುಂದಾಪುರಗಳೆಲ್ಲವನ್ನೂ ಆತನು ಸಂದರ್ಶಿಸಿದಂತೆ ವಿವರಿಸಿದೆ. ಆತನ ತರುವಾಯ, ಶಾಲಿವಾಹನ ಶಕವರ್ಷ ೧೬೬೨ನೆಯ ಸಿದ್ಧಾರ್ಥಿ ಸಂವತ್ಸರದ ಜ್ಯೇಷ್ಠ ಬಹುಳ ಐದರಂದು ವೀರಭಧ್ರ ನಾಯಕನ ಮಗ ಬಸವಪ್ಪ ನಾಯಕನಿಗೆ ಪಟ್ಟವಾಯಿತು. ಆತನೂ ಕೊಲ್ಲೂರಿಗೆ ಹೋಗಿ ಮೂಕಾಂಬಿಕೆಯನ್ನು ಆರಾಧಿಸಿದನು. ಆ ಮೇಲೆ,

"ಉಡುಪಿನ ಬಳಿಯೊಳ್ ಮಲಪಿನ
ಪೊಡವಿಯೊಳಂ ಪಶ್ಚಿಮಾಂಬುಧಿಯ ತೀರದೊಳು
ಗ್ಗಡಮೆನೆ ದರಿಯಾಬಾದಿನ
ಗಡಮಂ ನಿರ್ಮಾಣಗೆಯ್ಸಿದಂ ಬಸವಪ್ಪನೃಪಂ

''ಈ ಪರಿಯಲ್ಲದೆ ಪಡುವಣ
ಕೂಪಾರದ ತೀರದೊಳ್ವಿರಾಜಿಸುತಿರ್ಪಾ
ಕಾಪಿನಸಮೀಪದೊಳ್ ತ
ದ್ಭೂಪಂ ನೆಲೆಗೊಳಿಸಿದಂ ಮನೋಹರಗಡಮಂ

''ಭೂನುತಕಲ್ಯಾಣಪುರ
ಸ್ಥಾನದೊಳತಿರಮ್ಯಮಾಗೆ ಬಸವಮಹೀಶಂ
ತೋನಸೆಯೆಂಬ ಸುಕೋಟೆಯ
ತಾನುರೆ ನಿರ್ಮಾಣಗೆಯ್ಸಿದಂ ಸಂತಸದಿಂ.

''ವರಕುಂದಾಪುರದೆಡೆಯೊಳ್
ಸ್ಥಿರಮಪ್ಪಂತೆಸೆವಬೆಣ್ಣೆಗೆರೆಯೆನಿಪ ಪರಿ
ಸ್ತರಣವನತಿಶಯಮೆನಲೆಸೆ
ವರಮನೆಯಂ ರಚನೆಗೈಸಿದಂ ಬಸವನೃಪಂ

''ಇಂದ್ರವಿಭವನಿಭವಿಭವನ
ರೇಂದ್ರಂ ತಾಂ ಮಂಗಲೂರ ತಾಣದೆ ಶಿವರಾ
ಜೇಂದ್ರಗಿರಿಯೆಂಬ ಗಡಮಂ
ಸಾಂದ್ರಯಶಂ ರಚನೆಗೆಯ್ಸಿದಂ ಪೊಸಬಗೆಯಿಂ.

- ಎಂಬೀ ಮೇಲಿನ ಪದ್ಯಗಳಲ್ಲಿ ಬಸವಪ್ಪ ನಾಯಕನು, ಉಡುಪಿ, ಮಲ್ಪೆ, ದರಿಯಾಬಾದ್, ಕಾಪು, ಕಲ್ಯಾಣಪುರ, ಕುಂದಾಪುರ, ತೋನ್ಸೆ, ಮಂಗಳೂರು ಮೊದಲಾದ ಕಡೆಗಳಲ್ಲಿ ಕೋಟೆ ಕೊತ್ತಲಕಟ್ಟಿಸಿದ ವಿಚಾರ ಹೇಳಿದೆ.

''ಮತ್ತ ಮದಲ್ಲದೊಂದವಸರದೊಳ್ ನಾಯಿಮಾರರ್ಕಳ್ಮಾರ್ಮಲೆತು
''ವರಚಂದ್ರಗಿರಿಯ ಸುಪರಿ
ಸ್ತರಣಮನಾಕ್ರಮಿಸಿರಲ್ಕೆ ಸೈನ್ಯ ಸಮೇತಂ
ಧುರವಿಜಯನನಿಕ್ಕೇರಿಯ
ಮರಿಯಪನಂ ಕಳುಹಿಮಗುಳ್ದದಂ ವಶಗೈದಂ.

- ಇಂತು ನಾಯಿಮಾರರಾಕ್ರಮಿಸಿದ ಚಂದ್ರಗಿರಿಯ ಕೋಂಟೆಯಂ ವಶಂಗೆಯ್ದು ಸುಖಮಿರುತ್ತುಂ....''

- ಈ ತೆರನಾಗಿ ಆದಿಯಿಂದ ಕೊನೆವರೆಗೂ ಕರ್ನಾಟಕದ ತೆಂಕನಾಡಾಗಿರುವ ತುಳುನಾಡಾದ ದಕ್ಷಿಣ ಕನ್ನಡಕ್ಕೆ, ಅದರ ಅಂಗವಾದ ಕಾಸರಗೋಡಿಗೆ, ಇಲ್ಲಿನ ಕೋಟೆಕೊತ್ತಲಗಳ ಭದ್ರತೆಗೆ, ಆಗಾಗ ಕೆಳದಿಯ ರಾಜರು ಅನೇಕ ತಲೆಮಾರುಗಳಿಂದಲೂ ಬರುತ್ತಿದ್ದರು; ಅವರಿಗಿದಿರಾಗಿ ಕಾಳಗವಿತ್ತವರನ್ನು ಸೋಲಿಸಿ ತೊಲಗದ ಕಂಬವನ್ನು ಕಾಸರಗೋಡಿನಲ್ಲಿಯೂ ನೀಲೇಶ್ವರದಲ್ಲಿಯೂ ಸ್ಥಾಪಿಸಿದರು; ಇಂತು ತುಳುನಾಡಿನಲ್ಲಿ ಕನ್ನಡದ ರಾಜ್ಯಭಾರ ಬಹುಕಾಲ ಇಕ್ಕೇರಿ ರಾಜರಿಂದ ನಡೆಯುತ್ತಾ ಬಂತು. ಬ್ರಿಟಿಷರ ಆಡಳಿತ ಕಾಲದಲ್ಲಿಯೂ ಕನ್ನಡದ ಪ್ರಭಾವ ಅಳಿಸದೆ ಬೆಳೆಯಿತು ಎಂಬೀ ವಿಷಯ ಅತ್ಯಂತ ಗಮನಾರ್ಹ ಸಂಗತಿಯಾಗಿದೆ. ಈ ಕೆಳದಿ ರಾಜರ ಕಾಲದಲ್ಲಿ ತುಳುನಾಡಿನ ಹಾಗೂ ಕಾಸರಗೋಡು ಕುಂಬಳೆ ನೀಲೇಶ್ವರದ ಸಾಮಂತರಾಜರಿಗೆ ಬಂಟರು, ಬಿಲ್ಲವರು, ನಾಯಿಮಾರರೇ ಮೊದಲಾದ ಯೋಧಜನಾಂಗ ಸೈನಿಕರಾಗಿಯೂ ಸೇನಾಧಿಪತಿಗಳಾಗಿಯೂ ಇದ್ದರು; ಅವರನ್ನೇ ಮತ್ತೂ ತಮ್ಮ ಕೈಕೆಳಗೆ ನೇಮಿಸಿಕೊಂಡರೆ, ಎಲ್ಲಿಯಾದರೂ ತಮಗೆ ವಿರುದ್ಧವಾಗಿ ದಂಗೆಯೇಳಬಹುದೆಂಬ ಶಂಕೆಯಿಂದ, ಕೆಳದಿ ನಾಯಕರು ತಮ್ಮ ಕೋಟೆಯ ಕಾವಲಿಗಾಗಿ, ಅವರ ಊರಿಂದಲೇ ರಾಮರಾಜ ಕ್ಷತ್ರಿಯರನ್ನು, ಆರ್ಯ ಮಹಾರಾಷ್ಟ್ರ ಕ್ಷತ್ರಿಯರನ್ನು, ಸಫಲಿಗರನ್ನೂ, ಒಕ್ಕಲಿಗರನ್ನೂ ಕರೆತಂದರೆಂದು ತಿಳಿದುಬರುತ್ತದೆ. ಈ ಜನಾಂಗದವರು ಈಗಲೂ ಇಲ್ಲಿ ನೆಲಸಿದ್ದಾರೆ.

ಪ್ರೇಮಯೋಗಿ ಚಂಡಿದಾಸ

ಡಾ॥ ಪಂಚಾಕ್ಷರಿ ಹಿರೇಮಠ

ಬಂಗಾಲದ ಮಧ್ಯಕಾಲೀನ ವೈಷ್ಣವ ಸಾಹಿತ್ಯ, ವೈಷ್ಣವ ಪದಗಳು ಬಂಗಾಲದ ಇತಿಹಾಸದಲ್ಲಿ, ಬಂಗಾಲದ ಸಾಹಿತ್ಯದಲ್ಲಿ ಅಪೂರ್ವ ಹಾಗೂ ಭವ್ಯವಾದ ಅಧ್ಯಾಯಗಳನ್ನು ತೆರೆದಿವೆ. ಈ ಪದಾವಳಿಗಳು ಮಹಿಮಾಪೂರ್ಣವಾದ, ಬಹು ತೇಜೋಮಯವಾದ ಭಾವನೆಯನ್ನು ಅಭಿವ್ಯಕ್ತಗೊಳಿಸುತ್ತವೆ. ಅವುಗಳಲ್ಲಿ ಅನುಭಾವ, ಭಗವದ್ಭಕ್ತಿ, ಬೆಡಗು, ಅಧ್ಯಾತ್ಮದ ಸಾಂಕೇತಿಕತೆಯನ್ನು ಬದಿಗಿರಿಸಿ ಕೇವಲ ಅಲ್ಲಿರುವ ಪ್ರೀತಿ - ಪ್ರೇಮ, ಮೋಹಕತೆಯನ್ನು ಕಾಣಲು, ಅನುಭವಿಸಲು ನಮಗೆ ಸಾಧ್ಯವಾದರೂ ಅದೊಂದು ಪುಣ್ಯವೆ.

ಆ ಮಧುರವಾದ, ಯಾವಾಗಲೂ ಬೆಳುದಿಂಗಳೇ ಹಬ್ಬಿರುವ, ಸದಾ ವಸಂತಮಾಸವೆ ನೆಲಸಿರುವ ಆ ಸ್ವಪ್ನ ಲೋಕ, ಸದಾ ಹಸಿರಾಗಿರುವ ತೋಟ, ಎಲ್ಲ ಕಾಲದಲ್ಲೂ ಹೂ ಅರಳಿ ಸೂಸುತಿರುವ ಆ ಗಂಧ ಸಮೀರ, ಹಸಿರಹುಲ್ಲ ಮೆತ್ತನೆಯ ಮೇಲೆ ಕುಣಿಯುತ್ತಿರುವ ಅಲೌಕಿಕ ಸುಂದರಿ ರಾಧಾ, ಆ ಮನಮೋಹ ನೃತ್ಯಕ್ಕೆ ಹಿನ್ನೆಲೆ ಸಂಗೀತ ನೀಡುವ ಆ ಪವಿತ್ರ ಯಮುನಾ ನದಿ, ಪುರುಷೋತ್ತಮನಾದ ಶ್ರೀ ಕೃಷ್ಣನ ಮಧುರಮಯ ಕೊಳಲಗಾನ - ಅದು -ಆ -ನೆಲ - ಪರಮ ಪವಿತ್ರಸ್ಥಲ. ಪರಿಪೂರ್ಣ ಸಂತಸವನ್ನು, ಪರಮಾನಂದವನ್ನು ನೀಡುವ ಪುಣ್ಯಸ್ಥಳ. ಭಗವಂತನಲ್ಲಿ ಪ್ರೇಮವಿಹ್ವಲಳಾದ ರಾಧೆಯ ಪಾದಸ್ಪರ್ಶದಿಂದ ಅದು - ಆ ವೃಂದಾವನ ಇನ್ನೂ ಪುನೀತಗೊಂಡಿದೆ, ಪುಲುಕಿತವಾಗಿದೆ. ಆಕೆಯ ಅನಂತ ಅಪಾರವಾದ ಪ್ರೇಮ, ದೈವೀಭಾವದಿಂದೊಡಗೂಡಿದ ಆಸಕ್ತಿ ಅಲ್ಲಿ ಪ್ರಕಾಶಮಾನಗೊಂಡಿದೆ. ಶ್ರೀ ಕೃಷ್ಣನ ಸುಳುಹಿನಿಂದಾಗಿ ಅಲ್ಲಿಯ ಗಾಳಿಯಲ್ಲಿ, ಅಲ್ಲಿಯ ಪ್ರತಿಯೊಂದು ವಸ್ತುವಿನಲ್ಲಿ ಸೋಮ ಸುಗಂಧ ಸುಳಿದಿದೆ.

ಈ ಅಪಾರವಾದ ಮಧುರಮಯ ವಾತಾವರಣದಲ್ಲಿ, ಅಪಾರ ಚೆಲುವೆಯಾದ ರಾಧೆಯ ಆನಂದಪೂರ್ಣ ಪ್ರೇಮದಲ್ಲಿ ಶ್ರೀಕೃಷ್ಣ ಪರವಶಗೊಂಡಿದ್ದನಲ್ಲದೆ ಪ್ರೇಮಮಯಿ ರಾಧೆಯಲ್ಲಿ ತನ್ನನ್ನು ತಾನೇ ಕಳೆದುಕೊಂಡ ಅನುಭವ - ಪರಮಾತ್ಮನದು.

ಈ ಮಧುರಾನುಭವವನ್ನು ಹೇಳುವ ಬಂಗಾಲಿ ಪದಾವಳಿಗಳು ಬಹು ಕೋಮಲ, ಬಹು ಸೂಕ್ಷ್ಮ, ಬಹು ಸಂವೇದನಾಶೀಲಯುಳ್ಳವುಗಳಾಗಿವೆ. ಇವು ಸಾಹಿತ್ಯದಲ್ಲಿ ಅನರ್ಘ್ಯ ರತ್ನಗಳು. ಇಲ್ಲಿ ಬರುವ ರಾಧಾ ಪ್ರೇಮದ ಆತ್ಮ, ಆಕೆ - ಪರಮಾತ್ಮ, ಜೀವಾತ್ಮದಲ್ಲಿ ಸಂಬಂಧ ಬೆಳೆಸುವಾಕೆ.

ಕಲಾತ್ಮಕ ಅಭಿವ್ಯಕ್ತಿಯ ಶಕ್ತಿಯನ್ನು ಪಡೆದಂಥ ಜಯದೇವ, ವಿದ್ಯಾಪತಿ, ಚಂಡಿದಾಸ ಚೈತನ್ಯ ಮತ್ತು ಇನ್ನಿತರ ಕವಿಗಳು ವಿಷ್ಣು ಪುರಾಣ ಹಾಗೂ ಭಾಗವತ ಪುರಾಣಗಳಲ್ಲಿ ಬರುವ ಪೌರಾಣಿಕ ಕಥೆಗಳಿಗೆ ಹೊಸ ಬೆಳಕನ್ನು ನೀಡಿದರು, ಹೊಸ ದೃಷ್ಟಿಯನ್ನು ಕೊಟ್ಟರು, ಹೊಸ ಒಪ್ಪವನ್ನು ಹಾಕಿದರು. ಜೀವಾತ್ಮನ ಮೋಹ, ಲೌಕಿಕ ಆಸಕ್ತಿಗಳಿಗೆ ಪರಮಾತ್ಮನ ಅಲೌಕಿಕ, ಆಧ್ಯಾತ್ಮಿಕ ಸಂಸ್ಕಾರ ನೀಡಿದರು. ಅನುಭಾವದ ಮಾಧುರ್ಯ, ರಾಧಾ - ಕೃಷ್ಣರ ಪ್ರೇಮದ ಸುತ್ತಲೂ ಸುತ್ತುವರಿದಿದೆ. ರಾಧಾ-ಕೃಷ್ಣ ಈ ಅಪೂರ್ವವಾದ, ಅದ್ವಿತೀಯ ದೇಣಿಗೆಯನ್ನು ವೈಷ್ಣವ ಕವಿಗಳು ಭಾರತೀಯ ಸಾಹಿತ್ಯಕ್ಕೆ ನೀಡಿದರು.

ಇಲ್ಲಿ ಶ್ರೀಕೃಷ್ಣ-ಪುರುಷ, ರಾಧಾ-ಪ್ರಕೃತಿ. ಈ ಪುರುಷ (ಪರಮಾತ್ಮ) ಈ ಪ್ರಕೃತಿ (ಜೀವಾತ್ಮ)ಯ ಪ್ರೇಮ ಮಿಲನವೇ ಲೋಕೋದ್ಧಾರ ಮಾಡಲು ಸಾಧ್ಯವಾಯಿತು. ಈ ಜೀವ ಬದುಕಿದರೆ ಸಾಲದು, ಭಗವಂತನನ್ನು ಪೂಜಿಸಿದರೆ ಸಾಲದು, ಪರಮಾತ್ಮನಲ್ಲಿ ಒಂದಾಗಬೇಕು, ಬೆರೆಯಬೇಕು - ಹಾಲು ಸಕ್ಕರೆ ಬೆರೆತಂತೆ, ನದಿ ಕಡಲ ಕೂಡಿದಂತೆ.

ಇಂಥ ಮಧುರ ಕಾವ್ಯದ ಅಭೂತಪೂರ್ವವಾದ ಮೇಳದ ಮೊದಲ ಕವಿ ಜಯದೇವ. ಸಂಸ್ಕೃತದಲ್ಲಿ ಈ ಮಹಾನುಭಾವ ಮನೋಹರವಾದ, ಆಹ್ಲಾದಕರವಾದ 'ಗೀತ-ಗೋವಿಂದ' ಕಾವ್ಯವನ್ನು ರಚಿಸಿದ. ಬಹು ಮಹತ್ವಪೂರ್ಣವಾದ ಪುರಾತನ ಪುರಾಣಗಳಲ್ಲಿ ಅಂತಹ ಹೇಳಿಕೊಳ್ಳುವಂಥ ಸ್ಥಾನ ಪಡೆಯದ ರಾಧಾ, ಇಲ್ಲಿ ಗೋವಿಂದನ ಪ್ರಾಣವಾಗಿ ದರ್ಶನ ನೀಡುತ್ತಾಳೆ. ಜಯದೇವ ತನ್ನ ಈ ಪ್ರೇಮ ಕಾವ್ಯಕ್ಕೆ ಸಾಮಗ್ರಿಯನ್ನು ಬ್ರಹ್ಮವೈವರ್ತ ಪುರಾಣದಿಂದ ಪಡೆದಿರಬೇಕೆಂದು ಹೇಳಲಾಗುತ್ತಿದೆ. ಹಾಗಿದ್ದರೂ 'ಗೀತ-ಗೋವಿಂದ' ಕಾವ್ಯ ಆತನ ಅದ್ಭುತವಾದ, ಚೈತನ್ಯಪೂರ್ಣವಾದ ಪ್ರತಿಭೆಯ ಸಾಕಾರರೂಪು. ಹೊಸರೂಪ, ಹೊಸ ಸೊಗಸನ್ನು ಆತನ ಬಹುಮುಖ ಪ್ರತಿಭೆ ನೀಡಿದೆ ಆ ಕಾವ್ಯಕ್ಕೆ ಎಂಬ ಮಾತು ಪರಮಸತ್ಯ.

'ಗೀತಗೋವಿಂದ' ಅದೊಂದು ಈಡಿಲ್ಲದ, ಸಮಾನವಿಲ್ಲದ, ಅಪ್ರತಿಮ, ಅನುಪಮ ಕಾವ್ಯ; ಅದರ ಅಪಾರದವಾದ ಸೌಂದರ್ಯ, ಅದರ ಮಧುರ ಸಂಗೀತ ಅಲೌಕಿಕವಾದ ಆನಂದವನ್ನುಂಟು ಮಾಡುತ್ತದೆ. ಆ ಕಾವ್ಯದ ಸುಕುಮಾರತೆ ನನ್ನನ್ನು ಮಂತ್ರಮುಗ್ಧಗೊಳಿಸಿದೆ.

ಮತ್ತೆ ಬಂದಾತ ವಿದ್ಯಾಪತಿ. ಗಂಭೀರವಾದ ಭಾಷೆ ಆತನದು. ಬಂಗಾಲಿ ಭಾಷೆಯ ಮೇಲೆ ಅಪಾರ ಪ್ರಭುತ್ವ ಆತನದು. ವಿದ್ಯಾಪತಿಯ ಪಾಂಡಿತ್ಯ ಬಹು ಚೇತನಾಪೂರ್ಣ, ಸಜೀವವಾದುದು. ಆತನ ಕಾವ್ಯವೆಂದರೆ ದಿವ್ಯವಾದ ಸಂಗೀತ, ಬಂಗಾಲಿ ಕಾವ್ಯ ಕ್ಷಿತಿಜದಲ್ಲಿ ವಿದ್ಯಾಪತಿ ಹಾಗೂ ಚಂಡಿದಾಸ ಜೊತೆ ಜೊತೆಯಲ್ಲಿ ಬೆಳಗಿದ ನಕ್ಷತ್ರಗಳು.

ಚಂಡಿದಾಸನ ಕಾವ್ಯ, ಸ್ಫಟಿಕದಷ್ಟು ನಿರ್ಮಲವಾದ ಚಿತ್ರಣಶಕ್ತಿ, ಶೋಭಾಯಮಾನವಾದ, ಪ್ರಕಾಶಮಾನವಾದ, ಚೇತನಾಪೂರ್ಣವಾದ ಉಪಮೆಗಳು, ಪ್ರತಿಮೆಗಳು, ಸಾದೃಶ್ಯಾದಿಗಳಿಂದಾಗಿ ಅದ್ಭುತಶಕ್ತಿಯನ್ನು ಪಡೆದಿವೆ.

ಯಾವುದೇ ವಸ್ತುವಿನ ಚಿತ್ರೀಕರಣದಲ್ಲಿ ಪ್ರಬುದ್ಧವಾದ, ಮಧುರವಾದ ಶೈಲಿಯಲ್ಲಿ, ಸಮ್ಮಿಶ್ರತ್ವದ ಅಗಾಧಶಕ್ತಿಯಲ್ಲಿ ಚಂಡಿದಾಸ ವಿದ್ಯಾಪತಿಗಿಂತಲೂ ಅಧಿಕ ಶ್ರೇಷ್ಠನಾಗಿದ್ದಾನೆ. ಉತ್ಕೃಷ್ಟನಾಗಿದ್ದಾನೆ, ಅಲಂಕಾರಪ್ರಾಯನಾಗಿದ್ದಾನೆ.

ಚಂಡಿದಾಸನ ಪರಿಪೂರ್ಣವಾದ, ಶುದ್ಧವಾದ ಭಾವಗೀತ, ನಿಷ್ಕಪಟವಾದ, ತೀಕ್ಷ್ಣವಾದ, ಭಾವಾತಿರೇಕ, ಭಾವಾಭಿವ್ಯಕ್ತಿ ಹಾಗೂ ಜೇನಿನಂಥ ಪದಗಳಿಂದಾಗಿ ಆತನ ಪ್ರೇಮ ಗೀತಗಳು ಓದುಗನ ಮನದಾಳಕ್ಕೂ ಧುಮುಕುತ್ತವೆ.

ಸುಖ, ಸುಲಭತೆ, ಆತುರ, ಪ್ರಾಮಾಣಿಕತನ ಈ ನಾಲ್ಕು ಚಂಡಿದಾಸನ ಕಾವ್ಯದಲ್ಲಿ ಕಂಡುಬರುವ ವಿಶೇಷ ಲಕ್ಷಣಗಳು. ಆತನ ಕಾವ್ಯದಲ್ಲಿ ತೀಕ್ಷ್ಣವಾದ ವೇದನೆಯಿದೆ. ವೇದನೆಯಿಂದೊಡಗೂಡಿದ ಆತನ ವಿರಹ ಕಾವ್ಯ ಓದುಗರನ್ನು ಪ್ರೇಮಮಯ ಕಾವ್ಯ ಲೋಕದಲ್ಲಿ ವಿಹಾರ ಮಾಡಿಸುತ್ತದೆ. ಸ್ವಪ್ನ ಲೋಕವನ್ನೇ ಓದುಗನ ಎದುರಿನಲ್ಲಿ ನಿರ್ಮಿಸುತ್ತದೆ. ಆತನ ಕಾವ್ಯದ ಅನುಭಾವ ಮಧುರಾನುಭವವಲ್ಲದೆ ಭಕ್ತನ ವೇದನಾನುಭವವೂ ಹೌದು. ಸಾವಿರಾರು ರೂಪದಲ್ಲಿ ಪ್ರೇಮದ ಸಾವಿರಾರು ಪ್ರಕಾರಗಳನ್ನು ಶಬ್ದದಲ್ಲಿ ನಿರೂಪಿಸಿ ಶಬ್ದಕ್ಕೆ ಜೀವದಾನ ಮಾಡಿದ್ದಾನೆ, ಚೈತನ್ಯ ನೀಡಿದ್ದಾನೆ. ಆತನ ದಿವ್ಯಶಕ್ತಿಯಿಂದಾಗಿ ಶಬ್ದ ಮಾತನಾಡುತ್ತವೆ. ಭಕ್ತನ ಅನುಭಾವದ ಈ ಗೀತಗಳಲ್ಲಿ ದೈವೀಭಾವ ಶೃತಿಯಾಗಿ, ನಾದವಾಗಿ ಹಾಸುಹೊಕ್ಕಾಗಿರುವುದನ್ನು ಅನುಭವಿಸುತ್ತೇವೆ.

ಸೊಗಸಿನಲ್ಲಿ, ಚೆಲುವಿನಲ್ಲಿ, ಸೂಕ್ಷ್ಮತೆಯಲ್ಲಿ, ಶುದ್ಧತೆಯಲ್ಲಿ ಚಂಡಿದಾಸ ವಿದ್ಯಾಪತಿಯನ್ನು ಬಹುವಾಗಿ ಮೀರಿಸಿದ್ದಾನೆ. ಮಧುರವಾದ ಭಾವಗೀತದ ಜಗತ್ತಿನಲ್ಲಿ ಬಂಗಾಲದ ಯಾವ ಕವಿಗೂ ಚಂಡಿದಾಸನನ್ನು ಮೀರಿಸಲು ಸಾಧ್ಯವಾಗಲಿಲ್ಲ. ಭಾವಗೀತದಲ್ಲಿ ವಿಶ್ವದ ಮಹಾಕವಿಗಳ ಸಾಲಿನಲ್ಲಿ ಚಂಡಿದಾಸ ದೇದೀಪ್ಯಮಾನವಾಗಿದ್ದಾನೆ.

*".....Chandidasa, the charmingly sweet, we have a real taste of the finest mature type of rhythmic utterance of religious sentiments and experiences...

...Chandidasa sang with the heart of a Vaishnava devotee of the love of Radha and Krishna. According to Vaishnava tradition Krishna is not only the beloved hero of Vrindavan and Mathura, but the supreme lord of all beings and Radha, a Princess among Gopis, is not merely the finest damsel of his choice, but his; eternal companion and in a deeper and symbolic sense represents man or the soul of man who is ever is quest of the loving master. Thus the ceaseless attraction of man to god and viceversa provides the key to the universal appeal of this particular kind of poetry.

....The language of Chandidasa is simple, cryptic and unostentatious, while the delicate lyric beauty of it remains unrivalled till even this day..."

ಚಂಡಿದಾಸನ ಕವಿತೆಗಳು ಬಹು ಮಧುರ, ಪ್ರೇಮಮಯ, ಆನಂದಮಯ, ದೈವೀಶಕ್ತಿಯಿಂದ ಓತಪ್ರೋತ !

ಈ ಮಹಾ ಪ್ರೇಮಮಯ ಕವಿಯ ನಂತರ ಬಂದವರು ಚೈತನ್ಯ; ಗೋವಿಂದದಾಸ, ಜ್ಞಾನದಾಸ, ಬಲರಾಮದಾಸ, ವಾಸುದೇವ ಘೋಷ, ಪ್ರೇಮದಾಸ, ನರಹರಿ ಸರಕಾರ, ಓದುನಂದನ, ನಮ್ಮ ಕಾಲದ ಕವೀಂದ್ರ ರವೀಂದ್ರರು, ಅರವಿಂದರು, ಶತಶತಮಾನಗಳಿಂದಲೂ ಬಂದ ಈ ಎಲ್ಲ ಕವಿಗಳ ಮೇಲೂ ಚಂಡಿದಾಸನ ಕಾವ್ಯಪ್ರಭಾವ ಅಪಾರವಾಗಿದೆ. ಇಂತಹ ಚಂಡಿದಾಸನನ್ನು, ಚಂಡಿದಾಸನ ಭಾವನಾತ್ಮಕ ಜೀವನವನ್ನು ಅರಿತರೆ ಬಂಗಾಲದ ಮೂಲ ಪ್ರಾಣದ ಗತಿಯನ್ನೇ ಅರಿತಹಾಗೆ.

ಪ್ರೇಮವೇ ದೇವರು ಎಂದು ತಿಳಿದು ಬಾಳಿದ ಈ ಮಹಾಕವಿ ಪ್ರೇಮದ ಅನಂತ ರಸದಲ್ಲಿ ತನ್ನ ಸಮಸ್ತ ಆತ್ಮವನ್ನೇ ಪೂರ್ಣ ರೂಪವಾಗಿ ನಿಮಜ್ಜಿತಗೊಳಿಸಿದ್ದ. ಪ್ರೇಮವೇ ಆತನ ಜೀವನದ ಮೂಲ ಮಂತ್ರವಾಗಿತ್ತು. ಪ್ರೇಮವೇ ಜಪ, ಪ್ರೇಮವೇ ತಪ, ಪ್ರೇಮವೇ ಸಾಧನ, ಸಿದ್ಧಿಯಾಗಿತ್ತು. ಈ ಪ್ರೇಮ ಜೀವಿ, ರಾಧಾ-ಕೃಷ್ಣರ ಜೀವನ ಲೀಲೆಯ ವರ್ಣನೆಯ ನೆಪದಲ್ಲಿ ಪ್ರೇಮ ದೇವತೆಯ ಗುಣಗಾನವನ್ನೇ ಮಾಡಿದ್ದಾನೆ. ಆತನ ಪ್ರತಿಯೊಂದು ಹಾಡಿನಲ್ಲಿ, ಕಾವ್ಯದಲ್ಲಿ ಪ್ರೇಮವೇ ಮೈವೆತ್ತಿ ನಿಂತಿದೆ. ಆತ ಸದಾಕಾಲ ಪ್ರೀತಿ, ಪ್ರೀತಿಯೆಂದೇ ಪಠಿಸಿದ; ತಪಗೈದ. ಈ ಪ್ರೀತಿಯಲ್ಲಿ, ಪ್ರೇಮದಲ್ಲಿ ಹೃದಯದ

* The Songs from Chandidas - by Samirkanta Gupta.

ವಿಶುದ್ಧ ರಸಮಯ ಭಾವುಕತೆಯ ಪ್ರಬಲತೆಯೇ ಅಧಿಕವಾಗಿದೆ. ಪ್ರೀತಿಯೇ ದೇವರು - ಎಂದು ತಿಳಿದು ಜೀವಿಸಿದ ಈ ಅದ್ಭುತ, ಅಸಾಧಾರಣ ಕವಿಯ ಜೀವನವೂ ಅದ್ಭುತವಾಗಿದೆ, ಅಸಾಧಾರಣವಾಗಿದೆ.

ಪಶ್ಚಿಮ ಬಂಗಾಲದ ಬೀರಭೂಮ ಜಿಲ್ಲೆಯಲ್ಲಿ ನನ್ನೂರ ಎಂಬ ಹೆಸರಿನ ಗ್ರಾಮ. ಇಂದಿಗೆ ಸುಮಾರು ಆರುನೂರು ವರುಷಗಳ ಪೂರ್ವದಲ್ಲಿ (ಹದಿನೈದನೆಯ ಶತಮಾನದ ಪೂರ್ವಾರ್ಧ) ಬ್ರಾಹ್ಮಣ ಕುಟುಂಬವೊಂದರಲ್ಲಿ ಚಂಡಿದಾಸನ ಜನನವಾಯಿತು. ಒಂದು ಸಾಮಾನ್ಯ ಗ್ರಾಮ್ಯ ಗೃಹಸ್ಥ ಕುಟೀರವೊಂದರಲ್ಲಿ, ಪ್ರೇಮದೀಪದ ಕಿರಣವೊಂದು ಪ್ರಜ್ವಲಿತಗೊಂಡುದರ ಫಲವಾಗಿ ಅದರ ಅವರ್ಣನೀಯ ಪ್ರಕಾಶದಿಂದಾಗಿ ಇಂದಿಗೂ ಆ ಗ್ರಾಮದ ಹೆಸರು ಪವಿತ್ರವಾಗಿದೆ. ಆ ಗ್ರಾಮ ಕ್ಷೇತ್ರವಾಗಿದೆ.

ಚಂಡಿದಾಸ ಮಹಾಕವಿ, ಆತನ ಹೃದಯ ಮತ್ತು ಜೀವನ ಕಾವ್ಯರಸದಿಂದ ಮಾರ್ಮಿಕ ಸಂವೇದನೆಗೊಳಗಾಗಿತ್ತು. ಈ ಸಂವೇದನೆಯ ಮೂಲ ಉಗಮ ಪ್ರೇಮವೆಂದೇ ಹೇಳಬೇಕು. ಚಂಡಿದಾಸನ ಜೀವನ ಮತ್ತು ಧರ್ಮ ಎಲ್ಲ ಪ್ರೇಮವನ್ನೇ ಆವರಿಸಿದ್ದವು. ಪ್ರೇಮಾಮೃತಗೈದ ಚಂಡಿದಾಸನ ಜೀವನ, ಬದುಕೆಲ್ಲವೂ ಪ್ರೇಮಮಯವಾಗಿತ್ತು.

ಯೌವನದಲ್ಲಿ ಚಂಡಿದಾಸ ದೇವಿ ವಿಶಾಲಾಕ್ಷಿಯ ಪೂಜಾರಿಯಾಗಿದ್ದ. ಶಾಂತ, ಶುಚಿ, ಶುಭ್ರ ಸಂಯತಾತ್ಮನಾದ ಚಂಡಿದಾಸನ ಚಿತ್ತದರ್ಪಣದಲ್ಲಿ ದೇವಿ ವಿಶಾಲಾಕ್ಷಿಯಲ್ಲದೆ ಬೇರಿನ್ನಾವುದರ ಪ್ರತಿಮೂರ್ತಿಯೂ ಇರಲಿಲ್ಲ. ಆಂತರಿಕ ತನ್ಮಯತೆಯಿಂದ ಆತ ದೇವಿಯ ಪೂಜೆಗೈಯುತ್ತಿದ್ದ. ಹೀಗಿರುವಾಗ ಒಂದು ದಿನ ಚಂಡಿದಾಸ ಪ್ರಾತಃ ಸೂರ್ಯನ ಸ್ವರ್ಣಿಮ ಕಿರಣಗಳಲ್ಲಿ ಒಂದು ಅಪೂರ್ವ ಸ್ವರ್ಣ ಪ್ರತಿಮೆಯನ್ನು ನೋಡಿದ. ಅದುವೇ ಆತನ ಜೀವನದ ಶುಭಲಗ್ನ ; ಈ ಶುಭದೃಷ್ಟಿಯೊಂದಿಗೇನೇ ಆತನ ಅಂತರದೃಷ್ಟಿಕ ಕಾಣಿಸಿಕೊಂಡಿತು. ಒಂದು ಕ್ಷಣದಲ್ಲಿ ಆತ ತನ್ನ ಚಿರಂತನಿಯಾದ ಪ್ರಿಯತಮೆಯನ್ನು ಗುರುತಿಸಿದ. ಅವಳು ಯಾರು? ಸಮಾಜದಲ್ಲಿ ಅವಳ ಸ್ಥಾನಮಾನವೇನು? ದೇವಿಮಂದಿರದಲ್ಲಿ ತನ್ನ ಕರ್ತವ್ಯವೇನು? ಆ ಕ್ಷಣದಿಂದ ಎಲ್ಲವನ್ನು ಮರೆತ. ತಾನು ಬ್ರಾಹ್ಮಣ, ಆಕೆ ಮಡಿವಳ ಎಂಬುದನ್ನೂ ಲೆಕ್ಕಿಸಲಿಲ್ಲ. ಜೀವನ ಮಾರ್ಗದಲ್ಲಿ ಸಾಗಿರುವಂತೆಯೇ ಮಾನವನಿಗೆ ಅಕಸ್ಮಾತ್ತಾಗಿ ತನ್ನ ಚಿರಪರಿಚಿತ ಸಂಗಾತಿಯೊಬ್ಬಳ ಪರಿಚಯವಾಗುತ್ತದೆ; ದರ್ಶನವಾಗುತ್ತದೆ. ಆಗ ಆ ಆತ್ಮ ವ್ಯಾಕುಲ ಆವೇಗದಲ್ಲಿ ತನ್ನೆರಡೂ ಕೈಗಳನ್ನು ಮುಂದೆ ಚಾಚಿ ತನ್ನ ಮಾನಸಿಯ ಸ್ವಾಗತಗೈಯುತ್ತದೆ. ಅದೇ ಸ್ಥಿತಿ ಚಂಡಿದಾಸನದಾಯಿತು. ಪ್ರಿಯತಮೆಗಾಗಿ ಚಂಡಿದಾಸ ತನ್ನ ಹೃದಯಮಂದಿರದಲ್ಲಿ ಅನಂತ ಭಕ್ತಿಯ ವೇದಿಕೆಯನ್ನೇ ನಿರ್ಮಿಸಿದ. ಆಂತರಿಕ ಪ್ರೇಮದಿಂದ ಹೃದಯ ಪೀಠದಲ್ಲಿ ಅವಳನ್ನು ಪ್ರತಿಷ್ಠೆಗೊಳಿಸಿದ - ಭಕ್ತನೊಬ್ಬ ಮಂದಿರದಲ್ಲಿ ದೇವತೆಯ ಪ್ರತಿಷ್ಠೆಗೊಳಿಸುವ ಹಾಗೆ.

ಚಂಡಿದಾಸನ ಈ ಅತುಲನೀಯ ಮತ್ತು ಅಪಾರ್ಥಿವ ಪ್ರೇಮ ಅವರ್ಣನೀಯವಾಗಿದೆ. ಭಾಷೆ ಇಲ್ಲಿ ಮೌನ. ಮಾತು ಇಲ್ಲಿ ಮೈಲಿಗೆ. ಚಂಡಿದಾಸನ ಪ್ರೇಮ - ಧರ್ಮದಿಂದ, ಮರ್ಮಸ್ಪರ್ಶ ಮಾಡಿಕೊಳ್ಳುವವರೆಗೂ ಆತನ ಜೀವನ ದರ್ಶನದ ದೃಷ್ಟಿಕೋನ ತಿಳಿಯುವುದು ಅಸಾಧ್ಯ. ಆತನ ಪ್ರೇಮೋನ್ಮಾದದ ಸ್ವರ್ಗೀಯ ಸೌಂದರ್ಯದಿಂದ, ಆತನ ಭಾವಾವೇಗ ಪೂರ್ಣ ಜೀವನ ಪ್ರವಾಹದಿಂದ ಮತ್ತು ಕಾಯಾ-ವಾಚಾ-ಮನಸಾ, ಸರ್ವತೋಮುಖಿ, ಸರ್ವತೋಭಾವದ ಆತ್ಮ ಸಮರ್ಪಣದ ಪರಮ ಚರಿತಾರ್ಥದಿಂದ ಪರಿಚಿತರಾಗಬೇಕಾದರೆ, ಪ್ರೇಮಿಯ ಚಿತ್ತ, ಮಾನವೀಯ ಪ್ರೇಮದ ವ್ಯಥೆ ವೇದನೆಗಳ ಪರಿವೇಷವನ್ನು ಅತಿಕ್ರಮಿಸಿ ಭಗವತ್ - ಪ್ರೇಮದ ಅಮೃತ ಸಮುದ್ರದಲ್ಲಿ ಲೀನವಾಗಿ, ಆತ್ಮಾನಂದದ ಪರಮ ಅನುಭೂತಿಯನ್ನು ಪ್ರಾಪ್ತ ಮಾಡಿಕೊಳ್ಳುವಂಥ ಮಾನವ ಜೀವನ ದರ್ಶನದ ಆ ಉತ್ತುಂಗ ಶೃಂಗದ ಮೇಲೆ ನಿಲ್ಲುವುದು ಅವಶ್ಯ. ಆಗ ನಾವು ಚಂಡಿದಾಸನನ್ನು ಅರಿಯಲು ಶಕ್ಯರಾಗಬಹುದು, ಆತನ ಕಾವ್ಯವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಗಬಹುದು.

ಚಂಡಿದಾಸನ ಪ್ರೇಮಧರ್ಮದ ಮೂಲ ಆದರ್ಶ, ಸಹಜತೆ, ಸರಳತೆ, ಸುಂದರತೆ. ಜ್ಞಾನ ದರ್ಶನದಿಂದ, ಶಾಸ್ತ್ರಾದಿ ಶುಷ್ಕ ನಿರ್ದೇಶದಿಂದ ಈ ಪ್ರೇಮವನ್ನು ಹೃದಯಂಗಮಗೊಳಿಸುವುದು ಅಸಾಧ್ಯ. ಯಾವ ಗ್ರಂಥದಲ್ಲಿಯೂ ಈ ಪ್ರೇಮಮಾರ್ಗದ ನಿರ್ದೇಶ ಸಿಗಲಾರದು. ಅಂತಃಕರಣ, ಪ್ರೇಮಾನುಭೂತಿಯಿಂದ ಆನಂದಾನುಭೂತಿಯನ್ನು ಪಡೆದಾಗ ಮಾತ್ರ ಜೀವನದ ಗತಿ ಸರಳವಾಗುತ್ತದೆ; ಸಹಜವಾಗುತ್ತದೆ; ಸುಂದರವಾಗುತ್ತದೆ. ರಸಾಂಬುಧಿಯಲ್ಲಿ ಪ್ರೇಮವೊಂದು ಕಮಲ. ಪ್ರೇಮಕಮಲದ ಮಾಧುರ್ಯವನ್ನೀಂಟುವವನು ಏಕಮಾತ್ರ ಪ್ರೇಮಿ. ಚಂಡಿದಾಸನ ಮನ, ಪ್ರಾಣ, ಜೀವನ, ಧರ್ಮ, ಜೀವನ ದರ್ಶನದ ದೃಷ್ಟಿಕೋನವೇ ಪರಿವರ್ತನಗೊಂಡವು. ಪ್ರೇಮಸೂರ್ಯನ ಅಪರೂಪ ಮಧುರ ಸ್ಪರ್ಶದಿಂದ ಆತನ ಚಿತ್ತಕಮಲದ ದಲದಲವೂ ರೂಪ-ರಸ-ಸೌಂದರ್ಯಾನುಭೂತಿಯ ಸೃಷ್ಟಿಯಲ್ಲಿ ಪೂರ್ಣ ವಿಕಸಿತಗೊಂಡವು.

ಚಂಡಿದಾಸನ ಪ್ರೇಮ ಅತೀಂದ್ರಿಯ ಅನುಭೂತಿಯ ಉಚ್ಚಸ್ತರದ ಮೇಲೆ ಹೇಗೆ ತಲುಪಿತು - ಎಂಬ ಪ್ರಶ್ನೆಯ ಉತ್ತರದಲ್ಲಿ ಆತನ ಪ್ರೇಮ ಪೂಜೆಯ ಮೂಲದಲ್ಲಿ ದೇವಿ ವಿಶಾಲಾಕ್ಷಿಯ ನಿರ್ದೇಶನವಿತ್ತೆಂದು ಹೇಳಲಾಗುತ್ತದೆ. ಹೃದಯದ ವಿಹ್ವಲತೆಯಲ್ಲಿ ವಿವಶನಾಗಿ ಚಂಡಿದಾಸ ದೇವಿ ವಿಶಾಲಾಕ್ಷಿಯ ಚರಣಕಮಲದಲ್ಲಿ ಶರಣಾಗತನಾದಾಗ ದೇವಿ ತನ್ನ ಪರಮ ಭಕ್ತನಿಗೆ ಸಾಂತ್ವನ ನೀಡುತ್ತ - ನನ್ನ ಪೂಜೆ ಮಾಡುವ ಹಾಗೆಯೇ ನಿಷ್ಕಾಮ ಭಾವದಿಂದ ಆಂತರಿಕ ಪ್ರೇಮ ಮತ್ತು ಭಕ್ತಿಯಿಂದ ನಿನ್ನ ಪ್ರೇಯಸಿಯ ಆರಾಧನೆ ಮಾಡು; ಆಗ ನಿನ್ನ ಮನಸ್ಸಿನ ವಿಹ್ವಲತೆ ಮಾಯವಾಗುತ್ತದೆ - ಎಂದು ಹೇಳಿದಳಂತೆ. ಈ ಕಥೆ ಎಲ್ಲಿಯವರೆಗೆ ಸತ್ಯವಾಗಿದೆಯೆಂಬುದನ್ನು ಹೇಳುವುದು ಕಠಿಣವಾದರೂ ಮನುಷ್ಯ, ದುಃಖ - ವೇದನೆಗಳ ಮಾರ್ಮಿಕ ಆಘಾತಗಳಿಂದ ತತ್ತರಿಸಿ ಪರಮಾತ್ಮನಲ್ಲಿ ಶರಣು ಹೋಗುವುದು ಸ್ವಾಭಾವಿಕ. ಆಗ ಅಂತರಾತ್ಮನ ಆಳದಲ್ಲಿ ಮನುಷ್ಯನಿಗೆ ಪರಮಾತ್ಮನ ಪ್ರೇರಣೆ ಹಾಗೂ ನಿರ್ದೇಶ ಪ್ರಾಪ್ತವಾಗುತ್ತದೆ - ಎಂಬುದನ್ನು ಯಾರೂ ಒಪ್ಪಬಹುದಾಗಿದೆ.

ಚಂಡಿದಾಸನ ಪ್ರೇಮ ಮಾರ್ಗದಲ್ಲಿ ವಿಘ್ನವೇ ಇರಲಿಲ್ಲವೆಂದು ಹೇಳುವ ಹಾಗಿಲ್ಲ. ದುಃಸಹನೀಯ ಪ್ರೇಮಯಾಚನೆ, ಪ್ರಿಯತಮೆಯನ್ನು ಜೀವನದಲ್ಲಿ ಪರಮಾತ್ಮನ ರೂಪದಲ್ಲಿ ಪಡೆಯುವ ಅಸೀಮ ವ್ಯಾಕುಲತೆ ಒಂದಾದರೆ, ಇನ್ನೊಂದೆಡೆ ಸಮಾಜ ಮತ್ತು ಜಗತ್ತಿನ ಭರ್ತ್ಸನೆ, ಅಸಹಿಷ್ಣು ದೃಷ್ಟಿಯ ಅಸಹನೀಯ ಧಿಕ್ಕಾರ ; ಬೆದರಿಕೆಗಳು. ದುಃಖ ಮತ್ತು ಯಾತನೆಗಳಿಂದಲೇ ಮನುಷ್ಯನ ಜೀವನದಲ್ಲಿ ಕಠೋರವಾದ ತಪಸ್ಸು ಸಾಧ್ಯವಾಗುತ್ತದೆ; ಸಿದ್ಧಿಯನ್ನು ಪಡೆಯುತ್ತದೆ. ಯಾರ ತಪಸ್ಸು ಸಾರ್ಥಕಗೊಳ್ಳುತ್ತದೆಯೋ ಅವರ ಆತ್ಮ ಪೂರ್ಣಗೊಳ್ಳುತ್ತದೆ; ಸ್ಫಟಿಕದಷ್ಟು ನಿರ್ಮಲವಾಗುತ್ತದೆ; ಬಂಗಾರದ ಹಾಗೆ ಹೊಳೆ ಹೊಳೆಯುತ್ತದೆ. ಚಂಡಿದಾಸನ ಪ್ರೇಮ ಸಾಧನೆ ಕಷ್ಟ ಸಾಧ್ಯವಾದ ತಪಸ್ಸಿನಲ್ಲಿ ಸಫಲತೆ ಪಡೆದು ಆಂತರಿಕ ವಿಕಾಸದಲ್ಲಿ ಪುಣ್ಯಪ್ರದ ಸಿದ್ಧಿಯನ್ನು ಪಡೆಯುತ್ತದೆ. ಅಲ್ಲಿ ಪ್ರಣಯಿ ಮತ್ತು ಪ್ರಣಯಿನಿ ಈರ್ವರೂ ಗೌಣರಾಗುತ್ತಾರೆ; ಪ್ರೇಮವೇ ಮುಖ್ಯವಾಗುತ್ತದೆ.

ಎಲ್ಲ ದಿಕೆಗಳಲ್ಲಿಯ ಆಕೆಗಳನ್ನು ಒಂದೆಡೆ ಹಿಡಿದೆಳೆದು ತಂದು, ಪ್ರೇಮದ ಆಧಾರದಲ್ಲಿ ಅವುಗಳ ಪೂರ್ಣಾನುಭೂತಿಯನ್ನು ಪ್ರಾಪ್ತ ಮಾಡಿಕೊಳ್ಳುವುದೇ ಪ್ರೇಮಸಾಧನೆಯ ಚರಮ ಸೀಮೆ. ಚಂಡಿದಾಸನ ಈ ಮಾನವ ಪ್ರೇಮ ಅವನ ಆಂತರ್ಯದಲ್ಲಿ ಬ್ರಹ್ಮಸ್ವಾದದ ದರ್ಶನವನ್ನು ಪಡೆದು ಪುನೀತಗೊಂಡಿತು.

ಚಂಡಿದಾಸನ ಪ್ರೇಮಸಾಧನೆಯ ಆಧಾರ ಓರ್ವ ಸಾಮಾನ್ಯ ಸ್ತ್ರೀಯಾಗಿದ್ದರೂ ಅವಳು ಅಸಾಮಾನ್ಯಳಾಗಿದ್ದಳು. ಆಕೆಯ ಪ್ರೇಮವೂ ಅಸಾಧಾರಣವಾಗಿತ್ತು. ರಾಮಿಯ ಸಹಜ ಸುಂದರ ಮತ್ತು ಅಲೌಕಿಕ ಪ್ರೇಮದಿಂದಲೇ ಪ್ರೇರಣೆಹೊಂದಿ, ಚಂಡಿದಾಸ ಉಚ್ಚಕೋಟಿಯ ಪ್ರೇಮಯೋಗಿಯಾದ. ರಾಮಿಯ ದೃಷ್ಟಿಯಲ್ಲಿ ಚಂಡಿದಾಸ ಮಹಾ ಮಾನವನಾಗಿದ್ದ. ಆಕೆಯ ಆರಾಧ್ಯ ದೇವನಾಗಿದ್ದ. ರಾಮಿಯ ಮನದಲ್ಲಿ ಪ್ರೇಮದೊಂದಿಗೆ ಶ್ರದ್ಧೆಯೂ ಇತ್ತು. ಶ್ರದ್ಧಾಸ್ಪದ ವ್ಯಕ್ತಿ ದೇವತ್ವದಲ್ಲಿ ಸಮ್ಮಿಲಿತಗೊಳ್ಳುವಂತಹ ಭಕ್ತಿ ವಿಹ್ವಲತೆಯ ಭಾವಾವೇಗವೂ ಅವಳಲ್ಲಿತ್ತು. ರಾಮಿ ಚಂಡಿದಾಸನಿಗೆ 'ಠಾಕೂರ' ಎಂದೇ ಸಂಬೋಧಿಸುತ್ತಿದ್ದಳು. ಅವನನ್ನು ಅನಂತ ಮನಸ್ಕಳಾಗಿ ಪೂಜಿಸುತ್ತಿದ್ದಳು. ತಾನು ಆತನ ದಾಸಿ ಎಂದು ತಿಳಿದು ಆತ್ಮ ಲೋಪದ

ಗಂಭೀರ ಸಂಯೋಗದಿಂದ ಅವಳು ಶೀತ ಛಾಯೆಯ ಹಾಗೆ, ಕಂಟಕಹೀನ ಪುಷ್ಪಗಳ ಸದೃಶವಾಗಿ ಚಂಡಿದಾಸನ ಮಾರ್ಗದಲ್ಲಿ ತನ್ನನ್ನೇ ತಾನು ಹಾಸಿಕೊಳ್ಳಬೇಕೆಂದು ಇಚ್ಛಿಸುತ್ತಿದ್ದಳು; ಚಂಡಿದಾಸನ ಕೋಮಲ ಚರಣಗಳಿಗೆ ನೋವಾಗದಿರಲೆಂದು :

ಎಲ್ಲೆಲ್ಲಿ ನನ್ನ ಸ್ವಾಮಿಯ ಕಿರಣ ಚರಣ ಹೋಗುವವೋ
ಅಲ್ಲಲ್ಲಿ ಈ ನೆಲದ ಮೇಲೆ ನನ್ನನ್ನೇ ನಾನು ಹಾಸಿಕೊಳ್ಳುವೆ;

ಇದು ರಾಮಿ ಚಂಡಿದಾಸನನ್ನು ಪ್ರೀತಿಸಿದ ರೀತಿ.....

ರಾಮಿಯ ಮನದಲ್ಲಿ ಪ್ರೇಮದ ಮಹತಿ ಎಷ್ಟಿದೆಯೆಂಬುದು ಪಿತೃಶ್ರಾದ್ಧದ ಸಮಯದಲ್ಲಿ ಚಂಡಿದಾಸ ಪ್ರಾಯಶ್ಚಿತ್ತ ಮಾಡಿಕೊಂಡು ಸಮಾಜದಲ್ಲಿ . ಪುನಃ ಪ್ರತಿಷ್ಠಿತನಾಗಬೇಕೆಂದು ಯೋಚನೆಗೀಡಾದಾಗ ನಮಗೆ ಗೋಚರಿಸುತ್ತದೆ. ಆ ಕ್ಷಣದಲ್ಲಿ ಅವನ ಚಿತ್ತ ಚಂಚಲಗೊಂಡಿತ್ತು. ಅವನ ಚೈತನ್ಯದ ಮೇಲೆ ಮೃತ್ಯುವಿನ ಹಾಗೆ ನಿಶ್ಚೇಷ್ಟತೆ ಹರಡಿಕೊಂಡಿತ್ತು. ಅದು ಕೇವಲ ಕ್ಷಣ ಮಾತ್ರ. ರಾಮಿಯ ಪ್ರಜ್ವಲಿತ ಹಾಗೂ ಶಾಶ್ವತ ಪ್ರೇಮಕಿರಣ ಆ ಸಮಯದಲ್ಲಿ ಅವನಿಗೆ ಸರಿಯಾದ ಮಾರ್ಗದರ್ಶನ ನೀಡಿತು. ಪ್ರೇಮದ ಸತ್ಯಪಥದಿಂದ ದೂರಾಗುತ್ತಿದ್ದ ಚಂಡಿದಾಸನನ್ನು ಅಂದು ರಾಮಿಯೇ ತನ್ನ ಅಪಾರ ಪ್ರೇಮದಿಂದ ಕಾಪಾಡಿದಳು. ಹೆಣ್ಣಿನ ಸಾಧಾರಣ ಗುಣದ ಲಜ್ಜೆ; ಜಗತ್ತಿನ ಭೀತಿ - ಎಲ್ಲವನ್ನೂ ಅಂದು ಮರೆತು ದಾರಿ ತಪ್ಪುತ್ತಿದ್ದ ಚಂಡಿದಾಸನನ್ನು ರಾಮಿ ಕಾಪಾಡದೆ ಹೋಗಿದ್ದರೆ, ಪ್ರೇಮ ಸಾಧಕರಲ್ಲಿ ಚಂಡಿದಾಸನ ಹೆಸರು ಇಂದು ಇಷ್ಟು ಭವ್ಯವಾಗಿ, ಚಿರವಾಗಿ ನಿಲ್ಲುತ್ತಿರಲಿಲ್ಲ. ಅಂದು ಆಕೆ ಹಾಡಿದಳು :

ತೋಮಾರ ಚರಿತೆ ಜಗತ ಪವಿತ್ರ
ತೋಮಾರ ಸಾಧು ಜೇ ವಾದ್ ।
ತುಮಿಸೆ ಸಕಲ ಜಾತೆ ಪಾ ತೋಲೋ
ನೀಚ ಪ್ರೇಮೆ ಉನಮಾದ ॥
ವರ್ಣಾಶ್ರಮ ಭಾವ ಪಿರೀತಿ ಕೈ ದೃಢ
ಜಾಹಾರ ಪಿರೀತಿ ಹಯ ॥

ಓ। ಪರಮ ಪುರುಷ
ನಿನ್ನ ಚರಿತ್ರೆ ಜಗವ ಪವಿತ್ರಗೊಳಿಸಿದೆ ।
ಇಂತಿರಲು ನೀನೇಕೆ ಈ ಜಾತಿ ಪಂಥಗಳ
ಸುಳಿಯಲಿ ಸಿಲುಕುತಿಹೆ ।
ಪ್ರೇಮಧರ್ಮದೆದುರಿನಲ್ಲಿ
ವರ್ಣಾಶ್ರಮ ಧರ್ಮದ ನೆಲೆಯಲ್ಲಿ?

ಪ್ರೇಮವೇ ಪ್ರಾಣವಾಗಿರುವ, ಸರ್ವಸ್ವವಾಗಿರುವ ಈ ಕವಿಗೆ ಜಗತ್ತಿನ ನಿಂದೆ, ಲೋಕ ಭೀತಿ ಯಾವೂ ಗಣನೆಗೆ ಬರಲಿಲ್ಲ. ಆತ ಇವುಗಳನ್ನೆಲ್ಲ ಮೀರಿ ನಿಂತ. ಹಾಗೆಂದೆ ಆತ ರಾಮಿಯ ಕಾರಣದಿಂದಾಗಿ ಆತನ ಮಸ್ತಕದ ಮೇಲೆ ಜಗತ್ತಿನ ತಿಳುವಳಿಕೆಯ ಪ್ರಕಾರ ಕಲಂಕವಿದ್ದರೂ ಅದನ್ನು ತೊಡೆದು ಹಾಕಿ, ನಿರ್ವಿಕಾರ ಚಿತ್ತದಿಂದ ಪ್ರೇಮ ಸಾಧನೆಯಲ್ಲಿ ತಲ್ಲೀನನಾದ. ಕಲಂಕದ ಆ ಕಪ್ಪು ತಿಲಕ ಆತನ ಪಾಲಿಗೆ ಮಹಾಭಾಗ್ಯದ ತಿಲಕವಾಗಿ ಪರಿಣಮಿಸಿತು. ಆಗಲೇ ಚಂಡಿದಾಸ ಹಾಡಿದ :

ಕಲಂಕೀ ಬಲಿಯಾ ಡಾಕೆ ಸಬ ಲೋಕೆ ತಾಹಾತೆ ನಾಹಿಕ ದುಃಖ ।
ತೋಮಾರ ಲಾಗಿಯಾ ಕಲಂಕೇರ ಹಾರ ಗಲಾಯ ಪರಿತೆ ಸುಖ ।

ಜನರು ನಮಗೆ ಕಲಂಕಿಯೆಂದೆನ್ನುತ್ತಾರೆ
ಅನ್ನಲಿ ಬಿಡು, ನಮಗೆ ದುಃಖವೇಕೆ ।
ನಿನ್ನ ಕಾರಣದಿಂದಾಗಿ ನನಗೆ ಬಂದಿರುವ ಈ ಕಲಂಕ,
ನನ್ನ ಪಾಲಿಗೆ ಅದುವೇ ಕಂಠಾಭರಣ ದೇವಿ ।

ಚಂಡಿದಾಸನ ಅಲೌಕಿಕ ಪ್ರೇರಣೆಯನ್ನು ಅಭೂತಪೂರ್ವವಾದ ಪ್ರೇಮವನ್ನು ಪಡೆದ ರಾಮಿ ತನ್ನ ಎಲ್ಲವೂ ಆದ ಚಂಡಿದಾಸನನ್ನು ಕುರಿತು ಕವಿತೆಗಳನ್ನು ರಚಿಸಿದಳು. ಆಕೆಯ ಈ ರಚನೆಯ ತುಂಬ ಚಂಡಿದಾಸನ ಬಗೆಗೆ ಆಕೆಯಲ್ಲಿದ್ದ ಅಪಾರ ಪ್ರೇಮ ತುಂಬಿಕೊಂಡಿದೆ. ಚಂಡಿದಾಸ ಒಂದು ಕ್ಷಣ ಮಾತ್ರಕ್ಕೂ ರಾಮಿಯಿಂದ ದೂರವಾದರೆ ಆ ಕ್ಷಣ ಯುಗವಾಗುತ್ತದೆ ರಾಮಿಗೆ. ಆಕೆಯ ಪ್ರಾಣ ವ್ಯಾಕುಲಗೊಳ್ಳುತ್ತದೆ. ಹಾಗೆ ಆದಾಗಲೆಲ್ಲ ಆಕೆ ಹಾಡಿದಳು...

ತುಮಿ ದಿವಾಭಾಗೆ ನಿಶಾ ಅನುರಾಗೇ ಭ್ರಮೋ ಸದಾ ವನೆ ವನೇ ।
ತಾಹೆ ತಬ ಮುಖ ನಾ ದೇಖಿಯಾ ದುಃಖ ಪಾಯೀ ಬಹು ಕ್ಷಣೆ ಕ್ಷಣೇ ।
ತೃಟ ಸಮ ಕಾಲ ಮಾನಿ ಸುಜಂಜಾಲ ಯುಗತುಲ್ಯ ಹಯ ಜ್ಞಾನ ।
ತೋಮಾರ ವಿರಹೇ ಮನ ಸ್ಥಿರ ನಹೆ ವ್ಯಾಕುಲಿತ ಹಯ ಪ್ರಾಣ ।

ನೀನು ದಿವಾರಾತ್ರಿ ವನವನವ ಚರಿಸುತಿಹೆ ।
ನಾನೋ ಕ್ಷಣಕ್ಷಣಕ್ಕೂ ನಿನ್ನ ಕಾಣಲೆಂದು ದುಃಖತಪ್ತಳಾಗಿಹೆ ।
ನೀನಿಲ್ಲದ ಒಂದೊಂದು ಕ್ಷಣವೂ ಯುಗವಾಗಿ ಕಾಡಿಸುತಿದೆ ।
ನೀನಿಲ್ಲದ ವಿರಹದಿಂದಾಗಿ ಎನ್ನ ಮನ ಚಂಚಲಗೊಂಡಿದೆ ।

ಶ್ರೀ ಕೃಷ್ಣನ ರಾಧೆಯ ಹಾಗೆಯೇ ಚಂಡಿದಾಸನ ಈ ರಾಮಿ ಆಹ್ಲಾದ ಶಕ್ತಿಯಾಗಿದ್ದಳು. ಚಂಡಿದಾಸನ ಧರ್ಮ-ಕರ್ಮ, ಮುಕ್ತಿ-ಮೋಕ್ಷ , ಇಹ-ಪರ, ಗತಿ-ಮತಿ, ಜಪ-ತಪ, ಅವನ ಕಣ್ಣಿನ ಬೆಳಕು, ಅವನ ಪ್ರೇಮಾಶ್ರುವಿನ ಉಗಮ, ಅವನ ಪ್ರೇಮ ಸಾಧನದ ಆಶ್ರಯ ಗುರು, ಅವನ ಜೀವನದ ಆಧಾರ, ಅವನ ವೇದಮಾತೆ ಗಾಯತ್ರಿ - ಎಲ್ಲವೂ ರಾಮಿಯಾಗಿದ್ದಳು. ತನ್ನ ಎಲ್ಲವೂ ಆದ ರಾಮಿಯನ್ನು ಕುರಿತು ಚಂಡಿದಾಸ ಸ್ತುತಿಸಿದ ರೀತಿ ಹೀಗೆ :

ತುಮಿ ರಜಕಿನೀ ಆಮಾರ ರಮಣೀ ತುಮ ಹವೋ ಪಿತೃ-ಮಾತೃ ।
ತ್ರಿಸಂಧ್ಯಾ - ಯಾಜನ ತೋಮಾರಯೀ ಭಜನ ತುಮ ವೇದಮಾತಾಗಾಯತ್ರೀ ॥
ತುಮಿ ವಾಮ್ ವಾದಿನಿ ಹರೇರ ಧರಣೀ ತುಮಿ ಗೋ ಗಲಾರ ಹಾರಾ ।
ತುಮಿ ಸ್ವರ್ಗ - ಮರ್ತ್ಯ, ಪಾತಾಲ - ಪರ್ವತ ತುಮಿ ಜೆ ನಯನೇರ ತಾರಾ ॥

ರಾಮಿ । ನೀನು ನನ್ನ ರಮಣಿ
ನೀನು ನನ್ನ ತಾಯಿ, ನನ್ನ ತಂದೆ
ನನ್ನ ತ್ರಿಸಂಧ್ಯಾಪೂಜನ, ನೀನೇ ನನ್ನ ಭಜನ
ನೀನು ನನ್ನ ಗಾಯತ್ರಿ, ವೇದಮಾತೆ ।
ನೀನು ವಾಗ್‌ವಾದಿನಿ, ದುರ್ಗತಿನಾಶಿನಿ
ನೀನು ನನ್ನ ಕಂಠಾಭರಣ ।
ನೀನೇ ಸ್ವರ್ಗ ಮರ್ತ್ಯ ಪಾತಾಳ ಎಲ್ಲವೂ
ನೀನು ನನ್ನ ಕಣ್ಣಿನ ಬೆಳಕು ।

'ವೇದಮಾತೆ ಗಾಯತ್ರಿ' ಎಂದು ತಿಳಿದು ಚಂಡಿದಾಸ ತನ್ನ ರಾಮಿಯ ಪೂಜೆಗೈಯುತ್ತಿದ್ದ. ಅದರೊಂದಿಗೆ ರಾಮಿಯನ್ನೇ ಮೂಲವಾಗಿರಿಸಿಕೊಂಡು ಅವನು 'ಕೃಷ್ಣಪ್ರೇಮ' ತನ್ಮಯಳಾದ ರಾಧೆಯ ವಿರಹವೇದನೆ, ಆಶೆ-ನಿರಾಶೆ, ಮಿಲನದ ಉತ್ಸುಕತೆಗಳನ್ನೆಲ್ಲ ಸಜೀವ ಚಿತ್ರಣ ಚಿತ್ರಿಸುತ್ತಿದ್ದ. ಕೃಷ್ಣನ ಹೆಸರು ಕೇಳುತ್ತಿರುವಂತೆಯೇ ರಾಧಾ ಭಾವಸಮಾಧಿಯಲ್ಲಿ ಲೀನಳಾಗುತ್ತಿದ್ದಳು. ಹಾಗಿದ್ದರೂ ಚಿತ್ತವ್ಯಾಕುಲತೆ ದೂರವಾಗುತ್ತಿರಲಿಲ್ಲ. ಕೃಷ್ಣನ ಮುಖ ಚಂದ್ರಿಕೆಯನ್ನು ಪಾನಗೈಯ್ಯಬೇಕೆಂದು ರಾಧೆಯ ನಯನ ಚಕೋರ ಚಿಂತಿತವಾಗುತ್ತಿತ್ತು. ಕೃಷ್ಣನ ಪ್ರೇಮದಲ್ಲಿ ಹುಚ್ಚಿಯಾದ ರಾಧಾ ತನ್ನ ಕಪ್ಪು - ಕಪ್ಪು ಕೇಶರಾಶಿಯನ್ನೇ ಹರಡಿಕೊಂಡು, ಅದರಲ್ಲಿಯೇ ತನ್ನ ಶ್ಯಾಮನ ಶೋಭೆಯ ಅಪರೂಪ ಸೌಂದರ್ಯವನ್ನು ಕಾಣಲು ಪ್ರಯತ್ನಿಸುತ್ತಿದ್ದಳಲ್ಲದೆ ಆಕಾಶದ ನೀಲ ಮೇಘವನ್ನು ಶ್ಯಾಮಕಾಂತಿ ಕೃಷ್ಣನೆಂದು ತಿಳಿದು, ತನ್ನೆರಡೂ ಕೈಗಳನ್ನು ಚಾಚಿ ಅಪ್ಪಬೇಕೆಂದು ಓಡುತ್ತಿದ್ದಳು. ಕೃಷ್ಣನ ಪ್ರೇಮದಲ್ಲಿ ತನ್ಮಯಗೊಂಡ ವಿರಹಿಣಿ ರಾಧಾ, ನೀಲಮಯ ಆಕಾಶವನ್ನು ತದೇಕಚಿತ್ತಳಾಗಿ ನೋಡುತ್ತಲೇ ಇದ್ದಳು. ಎತ್ತ ನೋಡಿದರೂ ಅತ್ತ ಶ್ಯಾಮಮಯವೇ ಗೋಚರವಾಗುತ್ತದೆ. ಪ್ರೇಮಯೋಗಿನಿ ರಾಮಿಯ ಹಾಗೆಯೇ ರಾಧಾ ಕೂಡ ಪ್ರೇಮ ವಿಹ್ವಲತಾ ತಪಸ್ವಿನಿ. ಕೇವಲ ಪ್ರೇಮದ ಸ್ಮೃತಿಯಿಂದಲೇ ಅವಳ ತನು ಪುಲುಕಿತಗೊಂಡು ನೇತ್ರಗಳು ಪ್ರೇಮಾಶ್ರುಗಳಿಂದ ತುಂಬುತ್ತಿದ್ದವು. ವಿರಹ ವ್ಯಥೆಯಿಂದ ಯಾತನೆ ಪಡುತ್ತಿದ್ದ ರಾಧೆಗೆ ತನ್ನ ಇರವಿನ ಪರವೆ ಇರುತ್ತಿರಲಿಲ್ಲ. ದಶೇಂದ್ರಿಯಂಗಳೂ ಪರವಶಗೊಂಡಿರುವಾಗ ತನ್ನ ಇರವನ್ನು ಕುರಿತು ವಿಚಾರ ಮಾಡುವಂತಹ ಪರಿಜ್ಞಾನವೆಲ್ಲಿ? ತಾನು ಮತ್ತು ಭಗವಂತನ ಪೂಜೆ ಬೇರೆ ಬೇರೆಂದೆನಿಸುತ್ತಿರಲಿಲ್ಲ.

ಈ ಅಪೂರ್ವ ತನ್ಮಯತೆಯನ್ನು ಚಂಡಿದಾಸ ರಾಮಿಯಿಂದಲೇ ಪಡೆದ. ಈ ಮಾನವೀಯತೆಯ ಪ್ರೇಮದಲ್ಲಿಯೇ ವಿಶ್ವಪ್ರೇಮದ ಉಗಮವಿದೆ. ತಾಯಿಯ ಪ್ರೀತಿ, ತಂದೆಯ ವಾತ್ಸಲ್ಯ, ಪತಿ - ಪತ್ನಿಯರ ತನ್ಮಯ ಪ್ರೇಮ, ಸಖಿಸ ಮರ್ಮಾನುಭೂತಿ ಎಲ್ಲವೂ ಈ ಅನಂತ ಪ್ರೇಮ ಭಾವದ ಸ್ಫುರಣಗಳಾಗಿವೆ. ಈ ಸ್ಫುರಣದಲ್ಲಿಯೇ ಮಾನವನ ಶ್ರೇಷ್ಠತ್ವವಡಗಿದೆ. ತನ್ನ ಆರಾಧ್ಯ ದೇವಿಯ ಮಹಾಪೀಠದ ಮೇಲೆ ತನ್ನ ಪ್ರೇಯಸಿಯನ್ನು ಆಸನಾರೂಢಳನ್ನಾಗಿ ಮಾಡಿ, ಭಕ್ತಿ ಮತ್ತು ಪ್ರೇಮಾಶ್ರುವಿನ ನೈವೇದ್ಯದಿಂದ ಅವಳ ಪೂಜೆಗೈಯುವುದು ಮಾನವನಿಗೆ ಮಾತ್ರ ಸಾಧ್ಯ. ಆದರೆ ಈ ಹಂತಕ್ಕೆ ಬರಬೇಕಾದರೆ ಮಾನವನ ಮನ ಅದೆಂತಹ ಸಿದ್ಧಿಯನ್ನು ಪಡೆದಿರಬೇಕು !

ಪ್ರೇಮವಿಹ್ವಲತಾ ತಪಸ್ವಿನಿಯಾದ ರಾಮಿ ತನ್ನ ಪರಮ ಆರಾಧ್ಯನಾದ, ತನ್ನ ಸರ್ವಸ್ವವೂ ಆದ ಚಂಡಿದಾಸನ ಮುಖಮಂಡಲವನ್ನು ಸದಾಕಾಲ ಅನಿಮಿಷನೇತ್ರೆಯಾಗಿ ನೋಡಬೇಕೆಂದು ಬಯಸುತ್ತಾಳೆ. ಆತನ ಬಗೆಗೆ ಆಕೆಯಲ್ಲಿರುವ ಪ್ರೇಮ ಅಪೂರ್ವವಾದುದು. ಅಮೋಘವಾದುದು.

> ಕುಟಿಲ ಕುಂತಲ ಕತ ಸುನಿರ್ಮಲ ಶ್ರೀಮುಖ ಮಂಡಲ ಶೋಭಾ ।
> ಹೇರಿ ಹಯ ಮನೆ ಯೆ ದುಯೀ ನಯನೆ ನಿಮೇಷ ದಿಯಾಛೆ ಕೇಬಾ ॥
> ಚಾಹೆ ಸರ್ವಕ್ಷಣ ಹಯ ದರಶನ ನಿವಾರಣ ಸೇಹ ಕರೆ ।
> ವೊಹೇ ಪ್ರಾಣಾಧಿಕ, ಕಿ ಕಬ ಅಧಿಕ ದೋಷ ದಿಯೇ ವಿಧಾತಾರೇ ॥
> ತುಮಿ ಜೆ ಆಮಾರ ಆಮೆ ಹೇ ತೋಮಾರ ಸುಹೃತ್ ಕೆ ಅಛೆ ಆರ ।
> ಖೇದೆ ರಾಮೀ ಕಯ ಚಂಡಿದಾಸ ಬಿನಾ ಜಗತ್ ದೇಖಿ ಆಂಧಾರ ॥

> ನನ್ನ ಚೆಲುವ ಚೆನ್ನಿಗ ರಾಮ,
> ನಿನ್ನ ಸುಂದರ ಮುಖಮಂಡಲ
> ನಿನ್ನ ಗುಂಗುರು ಗುಂಗುರು ಕೇಶರಾಶಿ
> ನಿನ್ನ ಮುಖದಲಿ ಸದಾ ಲಾಸ್ಯವಾಡುವ

ತೇಜಃಪುಂಜ ಮಹಾ ಬೆಳಕನು
ಸದಾ ನೋಡುತ್ತಲಿರಬೇಕು -
ಎನ್ನುವ ನನ್ನ ಬಯಕೆಯನು ಈ ರೆಪ್ಪೆಗಳು
ಪೂರ್ಣಗೊಳಿಸಲಾರದವಾಗಿವೆ.
ಓ । ಈ ರೆಪ್ಪೆಗಳನು ನನ್ನ ಕಣ್ಣಲಿ ಯಾರು , ಏಕೆ
ಜೋಡಿಸಿದರೋ ಎಂದು ದುಃಖಿತಳಾಗಿದ್ದೇನೆ ।
ನನ್ನ ಬದುಕಿನ ಎಲ್ಲ ಸಮಯವನು
ಅನಿಮಿಷನೇತ್ರೆಯಾಗಿ ನಿನ್ನ ಮುಖದಲಿಹ
ಅಪಾರ ಸೌಂದರ್ಯವನು ನೋಡುತ್ತಲೇ ಇರುವ
ಬಯಕೆ ನನ್ನದು ।
ಆದರೆ,
ಆಗಾಗ ಕಣ್ಣ ಈ ರೆಪ್ಪೆಯ ಬಡಿತದಿಂದಾಗಿ
ಆ ಕ್ಷಣದಲ್ಲೆಲ್ಲ ನಿನ್ನನ್ನು ನೋಡದವಳಾಗುತ್ತೇನೆ ।
ಹೃದಯದ ಮಿಡಿತಕ್ಕಿಂತಲೂ ಸಮೀಪವಾದ
ಓ । ಎನ್ನ ಪ್ರಿಯತಮ ।
ನಾನಿನ್ನೇನು ಹೇಳಲಿ,
ಭಗವಂತನಿಗೆ ಆರೋಪ ಮಾಡಿಯಾದರೂ
ಏನು ಫಲ?
ನೀನು ನನ್ನವನು, ನಾನು ನಿನ್ನವಳು
ಮೂರನೆಯವರ ಅವಶ್ಯಕತೆಯೇ ಇಲ್ಲ ಇಲ್ಲಿ ।
ನೀನಿಲ್ಲದೆ ಹೋದರೆ ಈ ಜಗತ್ತು
ಕತ್ತಲೆಯ ತವರು ।

ಹೀಗೆ ಚಂಡಿದಾಸನ ಅಮೋಘ ವ್ಯಕ್ತಿತ್ವವನ್ನು , ರೂಪ ಸೌಂದರ್ಯವನ್ನು ಮನದುಂಬಿ ರಾಮಿ ಹೇಳಿದ ಹಾಗೆ ಚಂಡಿದಾಸನೂ ರಾಮಿಯ ಘನತೆಯನ್ನು, ರಾಮಿಯ ಶ್ರೇಷ್ಠತೆಯನ್ನು ಅವಳ ಅಪಾರ ಭಗವತ್ - ಪ್ರೇಮದಲ್ಲಿ ತೇಂಕಾಡಿದ ಸುಖವನ್ನು ಕೊಂಡಾಡುವ ರೀತಿಯೂ ಅಪೂರ್ವವಾಗಿದೆ.

ಏಕ ನಿವೇದನ ಕರಿ ಪುನಃ ಪುನಃ ಶುನೋ ರಜಕಿನೀ ರಾಮೀ ।
ಯುಗಲ ಚರಣ ಶೀತಲ ದೇಖಿಯಾ ಶರಣ ಲಯಿಲಾಮ ಆಮಿ ॥
ರಜಕಿನೀ ರೂಪ ಕಿಶೋರೀ ಸ್ವರೂಪ ಕಾಮ-ಗಂಧ ನಾಹಿ ತಾಯ ।
ನಾ ದೇಖಿಲೆ ಮನ ಕರೆ ಉಚಾಟನ ದೇಖಿಲೆ ಪರಾಣ ಜುಡಾಯ ॥

ಓ। ಪ್ರೇಮಮಯಿ ರಜಕಿನಿ ರಾಮಿ ।
ನಾನು ನಿನ್ನಲಿ ಅನವರತವೂ
ಪ್ರಾರ್ಥನೆ ಸಲ್ಲಿಸುತ್ತಿದ್ದೇನೆ

ನಿನ್ನ ಚರಣಗಳ ತಂಪಿನಲಿ
ಬದುಕಲೆಂದು, ನಾ ನಿನ್ನ ಚರಣದಾಸನಾಗಿದ್ದೇನೆ ।
ನಿನ್ನ ರೂಪವೋ ಕಿಶೋರಿ - ಸ್ವರೂಪ
ಅಲ್ಲಿ ಕಾಮ - ಗಂಧವೂ ಸುಳಿಯದು
ನಿನ್ನನು ನೋಡದಿರುವುದೇ ಸಾವು - ಎನಗೆ ।
ನಿನ್ನ ನೋಡಿದೆನೋ ಬಂತು ಪ್ರಾಣ
ಆಗಲೇ ನವಚೇತನ - ಮೈಮನದುಂಬ.

ಈ ಪ್ರೇಮಾನುಭೂತಿಯಿಂದಲೇ ಪ್ರೇಮಿ ಕವಿ ನರ - ನಾರಿಯ ಶಾಶ್ವತ ಪ್ರೇಮ ಪಿಪಾಸೆಯಿಂದ, ಭಾವಮಯ ಪ್ರಕೃತಿಯ ಅಪೂರ್ವ ಕ್ರಾಂತಿಯಿಂದ, ಗ್ರಹಚಂದ್ರಿಕಾ ತಾರೆಗಳ ಅನಾದಿ ಅನಂತ ರಹಸ್ಯದೊಂದಿಗೆ ಪರಿಚಿತನಾಗುತ್ತಾನೆ. ಈ ಪರಿಚಯವೇ ಮಾನವನ ಮೂಲ ಪರಿಚಯ ಮಾಡಿಕೊಡುತ್ತ, ಆನಂದರಸದಲ್ಲಿ ಆತ್ಮವನ್ನು ಉಲ್ಲಸಿತಗೊಳಿಸುತ್ತದೆ. ಆಗಲೇ ಕವಿ ಹಾಡುತ್ತಾನೆ :

ನನ್ನ ಹೃದಯ ಮಂದಿರದಲಿ ಪ್ರಥಮವಾಗಿ
ನೀನು ನೀಲಾಂಜನವ ಹಿಡಿದುಕೊಂಡು ಬಂದೆ
ನೀನು ತಂದ ಬೆಳಕಿನೊಂದಿಗೇನೇ
ನಿನ್ನನ್ನೇ ಹಿಂಬಾಲಿಸಿ ಬಂದವು ಮೂರು ಲೋಕಂಗಳು ।

ಈ ವಿಶ್ವಾನುಭೂತಿಯಲ್ಲಿ ಉಚ್ಚ, ನೀಚ, ಭೇದ ಭಾವನೆಗಳಿಗೆ ಸ್ಥಾನವೇ ಇಲ್ಲ. ಚಂಡಿದಾಸನ ವೇದನಾಪೀಡಿತ ಕಂಠದಿಂದಲೂ ಅಪೂರ್ವ ಭಾವಮಯ, ಓಜಸ್ವಿನಿ ವಾಣಿ ನಿಃಸೃತಗೊಂಡಿತ್ತು - ದ್ವಿಜ-ಚಾಂಡಾಲರಲ್ಲಿ, ಮನುಷ್ಯ-ಮನುಷ್ಯರಲ್ಲಿ ಭೇದವೆಣಿಸಬಾರದು-ಎಂದು. ಹದಿನೈದನೆಯ ಶತಮಾನದ ಅಂದಿನ ಉತ್ಕಟ ಧರ್ಮಾಭಿಮಾನಿಗಳಾದ ಬ್ರಾಹ್ಮಣರನ್ನು ತನ್ನ ಅಪಾರ ಹಾಗೂ ಪವಿತ್ರಮಯ ಪ್ರೇಮದಿಂದಾಗಿ, ಮಾನವ ಮಾನವರಲ್ಲಿ ಭೇದವೆಣಿಸಬಾರದೆಂಬ ತತ್ವವನ್ನು ಮನ್ನಿಸುವಂತೆ ಮಾಡಿದ ಶ್ರೇಯಸ್ಸು ಚಂಡಿದಾಸನದು. ಮನುಷ್ಯತ್ವವೇ ಮಾನವನ ಏಕಮಾತ್ರ ಮತ್ತು ಶ್ರೇಷ್ಠ ಪರಿಚಯವೆಂದು ಈ ಕ್ರಾಂತಿಕಾರಿ ಪ್ರೇಮಿ ಕವಿ ಸಾರಿದ. ಮಾನವತ್ವದ ಈ ಮಹಾ ಮಂತ್ರದ ಘೋಷಣೆಯನ್ನು ಆರುನೂರು ವರುಷಗಳ ಪೂರ್ವದಲ್ಲಿ ಕವಿ ಚಂಡಿದಾಸನ ಕಾವ್ಯವಾಣಿಯೇ ಮಾಡಿತ್ತು :

ಶುನೋ ರೇ ಮಾನುಷ ಭಾಯಿ
ಸಬಾರ ಉಪರೇ ಮಾನುಷ ಸತ್ಯ
ತಾಹಾರ ಉಪರೇ ನಾಯಿ ।

ಕೇಳು। ಓ, ನನ್ನ ಮಾನವ ಭ್ರಾತೃ ।
ಮಾನವತ್ವವೇ ಎಲ್ಲದಕೂ ಹಿರಿದಾದುದು
ಅದಕಿಂತಲೂ ಎತ್ತರದಲಿ ಆವುದೂ ಇಲ್ಲ
ಇದೊಂದೇ ನಿತ್ಯ ಸತ್ಯವಾದುದು ।

ಚಂಡಿದಾಸನ ಈ ಮಹಾಮಹಿಮವಾಣಿ ಎಲ್ಲ ಕಾಲಕ್ಕೂ ಮಾನವಕುಲದ ಮಹೋನ್ನತಿಯನ್ನು ಎತ್ತಿ ತೋರಿಸುತ್ತದೆ. ಈ ಎಲ್ಲ ಶ್ರೇಯದ ಮೂಲ ರಾಮಿಯೆಂದೇ ಹೇಳಬೇಕು. ರಾಮಿಯ ಈ ಅನಂತ ಪ್ರೇಮ ಚಂಡಿದಾಸನನ್ನು, ಅಕ್ಷಯ

ಆತ್ಮಾನಂದದ ಅಧಿಕಾರಿಯನ್ನಾಗಿ ಮಾಡಿ ಮಾನವತ್ವದ ಮಹಿಮೆಯಲ್ಲಿ ಸುಪ್ರತಿಷ್ಠಿತಗೊಳಿಸಿತು. ಈ ಮಹಿಮೆಯ ಎದುರಿನಲ್ಲಿ ದೇವತ್ವವೂ ಕೂಡ ತುಚ್ಛವಾಗಿದೆ.

ರಾಮಿ ತಾನು ರಾಧೆಯೆಂದೇ ತಿಳಿದು ಚಂಡಿದಾಸನನ್ನು ಕೃಷ್ಣನ ರೂಪದಲ್ಲಿ ಪೂಜಿಸುತ್ತಿದ್ದಳು. ಚಂಡಿದಾಸ ತಾನು ಕೃಷ್ಣನೆಂದು ತಿಳಿದು ರಾಮಿಯನ್ನು ರಾಧೆಯ ರೂಪದಲ್ಲಿ ಕಂಡು ಪ್ರೀತಿಸಿದ. ರಾಧಾ - ಕೃಷ್ಣ ಅವರಿಗೆ ದೇವಿ, ದೇವತೆಗಳಾಗಿರಲಿಲ್ಲ. ಅವರು ಪ್ರೇಮದೇವತೆಯ ಎರಡು ಸ್ವರೂಪವೆಂದು ಭಾವಿಸಿದ್ದರು. ಚಂಡಿದಾಸನಿಗೆ ತನ್ನ ಪ್ರೇಯಸಿ ರಾಮಿ, ರಾಧೆಯಿಂದ ಯಾವ ರೀತಿಯಲ್ಲೂ ಕಡಿಮೆಯಿರಲಿಲ್ಲ. ಅಷ್ಟೇ ಅಲ್ಲ ರಾಧೆಗಿಂತ ಅವಳು ಶ್ರೇಷ್ಠಳೆಂದು ಭಾವಿಸಿದ್ದ. ರಾಧಾ ಮತ್ತು ಕೃಷ್ಣ ಎಂಬ ಹೆಸರಿನಿಂದ ಅವನೆಷ್ಟು ಗೀತೆಗಳನ್ನು ರಚಿಸಿದ್ದಾನೋ ಅವೆಲ್ಲವೂ ರಾಮಿಯ ಬಗೆಗೆ ತನ್ನಲ್ಲಿದ್ದ ಅಪಾರ ಪ್ರೇಮ ಹಾಗೂ ವಿವಿಧ ಭಾವನೆಗಳನ್ನು ವ್ಯಕ್ತಗೊಳಿಸಲೋಸುಗವೇ ರಚಿಸಿದವುಗಳಾಗಿವೆ.

ಈ ಅಲೌಕಿಕ ಪ್ರೇಮದಿಂದ ಚಂಡಿದಾಸ, ತನ್ನ ಪ್ರೇಯಸಿಯಾದ ರಾಮಿ ದೇವತೆಯೆಂದೇ ತಿಳಿದು ಪೂಜಿಸಿದ.

ಚಂಡಿದಾಸ ರಾಮಿಯಿಂದ ಸಾರ್ಥಕ ಪಡೆದ. ರಾಮಿ ಚಂಡಿದಾಸನಿಂದ ಸಾರ್ಥಕ ಪಡೆದಳು. ಈ ಪೂರಕವಾದ ಪೂಜೆಯಲ್ಲಿ ಅವರೀರ್ವರೂ ಅಮರರಾದರು.

ಮಂಕ

ಡಾ॥ ಮ.ಸು. ಕೃಷ್ಣಮೂರ್ತಿ

ಕನ್ನಡದಲ್ಲಿ ಮಂಕ, ಮಂಕು ಒಂದು ಕಾಲಕ್ಕೆ ಉಜ್ವಲವಾದ ಅರ್ಥವಾಹಕ ಶಬ್ದಗಳಾಗಿದ್ದಿರಬೇಕು. ಗಾಂಪರೊಡೆಯರ ಶಿಷ್ಯನಾಗಿ 'ಮಂಕ'ನೇನೋ ಸಾಕಷ್ಟು ಉಜ್ವಲನಾಗಿ ಮೆರೆದದ್ದುಂಟು. ಆದರೆ ಈಗೇಕೋ ಇವರಿಗೆಲ್ಲ ಮಂಕು ಬಡಿದಿರುವಂತೆ ಕಾಣುತ್ತದೆ.

ಕಿಟಲ್ ಅವರು ಮಂಕು ಶಬ್ದವನ್ನು ಕುರಿತು ವಿವೇಚನೆ ಮಾಡಿದ್ದಾರೆ. ಆದರೆ ಮಂಕ ಮಂಕಿಯರನ್ನೇಕೋ ಬಿಟ್ಟಿದ್ದಾರೆ. ನಾನು ತಿಳಿದಂತೆ ಈ ಮಂಕು, ಮಂಕ, ಮಂಕಿಯರ ಇತಿಹಾಸವನ್ನು ಕನ್ನಡದಲ್ಲಿ ಯಾರೂ ಬರೆದಿಲ್ಲ, ಬಹುಶಃ ಇತಿಹಾಸಕಾರರ ಮುಖಕ್ಕೆ ಯಾರೋ ಮಂಕುಬೂದಿ ಎರಚಿರಬೇಕು.

ನನಗೆ ತಿಳಿದ ಮಟ್ಟಿಗೆ ಈ ಮಂಕ ಶಬ್ದ ಕನ್ನಡದಲ್ಲಿ ಬಳಕೆಯಲ್ಲಿರುವ ಅತ್ಯಂತ ಪ್ರಾಚೀನ ಶಬ್ದಗಳಲ್ಲಿ ಒಂದು. ಮೊದಲಿಗೆ ಅದು ಒಬ್ಬ ವ್ಯಕ್ತಿಯ ಹೆಸರಾಗಿದ್ದು ಅನಂತರ ಅವನ ಮಂಕುಬೂದಿಯ ಪ್ರಭಾವಕ್ಕೆ ಸಿಲುಕಿ Dimner, want of lustre, obscurity of intellectual perception, Confusion of mind, stupidity, stubbrnness, ಎಂಬ ಅರ್ಥ ಪರಂಪರೆಯನ್ನು ಪಡೆಯಿತು. 'ಮಂಕು ಬೂದಿ'ಗೆ A powder that confuses the mind ಎಂಬ ಅರ್ಥವನ್ನು ಕಿಟಲ್ ನೀಡಿದ್ದಾರೆ.

ಬನ್ನಿರಿ ಈಗ ಈ ಮಂಕ ಮತ್ತು ಆತನ ಮಂಕು ಬೂದಿಯ ಪರಿಚಯ ಮಾಡಿಕೊಳ್ಳೋಣ.

''ನಾನೇ ಈ ಅವಸರ್ಪಿಣೀ ಕಾಲದ ಚರಮ ತೀರ್ಥಂಕರ, ನಾನೇ ಹೌದು, ನಾನೇ ಅವಸರ್ಪಿಣಿಯ ದಂಶದ ಚರಮ ವೈದ್ಯ ! ವೈದ್ಯ, ವೈದ್ಯ !

'ಅವಸರ್ಪಿಣೀ' ಎಂದರೆ ಕಾಲದ ಅಧೋಮುಖೀಗತಿ. ಕ್ರಿಸ್ತಪೂರ್ವ ಆರನೆಯ ಶತಮಾನ ಶ್ರಾವಸ್ತಿ ನಗರದ ಒಂದು ರಾಜಪಥದಲ್ಲಿ ಗಡ್ಡ ಮೀಸೆಗಳನ್ನು ಕೆದರಿಕೊಂಡು, ಕೆದರಿದ ತಲೆಯ ಒಬ್ಬ ಪುರುಷ ಕೂಗುತ್ತ ಹೋಗುತ್ತಿದ್ದ - 'ವೈದ್ಯ, ವೈದ್ಯ, ಕಿವಿಯ ವೈದ್ಯ, ಕಣ್ಣಿನ ವೈದ್ಯ, ಕಪಾಲದವೈದ್ಯ, ಲಲಾಟವೈದ್ಯ, ಲಲಾಟರೇಖೆಯ ವೈದ್ಯ! ಪಂಚೇಂದ್ರಿಯಗಳ ವೈದ್ಯ, ಬಳಲಿದ ಕಾಲಿನ ವೈದ್ಯ, ಕೈ ವೈದ್ಯ, ಮುರಿದ ಮನದ ಮದ್ದುಗಾರ, ಒಡೆದ ಭಾಗ್ಯದ ವೈದ್ಯ!'

'ಈ ರೀತಿ ಆ ಕ್ಷಪಣಕ ವೇಷಧಾರಿ ವೈದ್ಯ ತನ್ನ ಮಸ್ಕರ ದಂಡವನ್ನು ಅಲ್ಲಾಡಿಸಿ ಅಲ್ಲಾಡಿಸಿ ಕೂಗುತ್ತಿದ್ದಾನೆ 'ಬನ್ನಿ ಬನ್ನಿ ನನ್ನ ಬಳಿಗೆ ಬನ್ನಿ ! ನಾನು ಭಿಷಗ್ರತ್ನ ! ದೃಷ್ಟಿದಾತ ಕವಿ, ಪದಕರ್ತ, ನಾನು ವಿಶಲ್ಯಕರಣಿಯನ್ನು ನೀಡುತ್ತೇನೆ. ಸಂಜೀವನಿಯನ್ನು ಕೊಡುತ್ತೇನೆ, ನಾನೇ ಈ ಅವಸರ್ಪಿಣೀ ಯುಗದ ಚರಮ ತೀರ್ಥಂಕರ!'

ಆತನ ಮೈಮೇಲೆ ಒಂದು ನೀಲಿಯ ಅಧೋವಸ್ತ್ರವನ್ನು ಬಿಟ್ಟರೆ ಬೇರೆ ಬಟ್ಟೆಯಿರಲಿಲ್ಲ , ಅವನ ಹೆಗಲ ಮೇಲೆ ಒಂದು ಜೋಳಿಗೆ, ಕೈಯಲ್ಲಿ ಒಂದು ಮಸ್ಕರದಂಡ ಎಂದರೆ ಬಿದಿರಿನ ಗಳುವನ್ನು ಕಡಿದು ಮಾಡಿಕೊಂಡ ದಂಡ. ಆತನ ಮಾತುಗಳೇ ವಿಲಕ್ಷಣ ! ಆದರೆ ವದನ ಕೆಂಡದಂತೆ ಉಜ್ವಲ !

ಅವನು ಬಾಯಿಂದ ಹೇಳುತ್ತಲೇ ಇದ್ದಾನೆ ವೈದ್ಯ ವೈದ್ಯ ! ನಾನೊಂದು ಅಂಜನ ತಯಾರಿಸಿದ್ದೇನೆ. ಕಾಳರಾತ್ರಿಯಲ್ಲಿ ಮಿಸುನಿಯಂತೆ ಮಿನುಗುವ ಮೂಲಿಕೆಗಳನ್ನು ಸಂಗ್ರಹಿಸಿ, ಸರ್ಪಮಣಿ, ಬೆಕ್ಕಿನ ಉಗುರು, ಮುಳ್ಳುಹಂದಿಯ ಮುಳ್ಳು, ಘೇಂಡಾಮೃಗದ ಕೊಂಬು, ಇವೆಲ್ಲದರ ಪುಟಪಾಕವನ್ನು ತಯಾರಿಸಿದ್ದೇನೆ. ಅದಕ್ಕೆ ಶುದ್ಧ ಹಸುವಿನ ತುಪ್ಪ ಬೆರೆಸಿದ್ದೇನೆ. ಅದರಿಂದ ಈ ನೇತ್ರಾಂಜನವನ್ನು ತಯಾರಿಸಿದ್ದೇನೆ. ನನ್ನ ಬಳಿ ಅಂಜನವಿದೆ ಶಲಾಕೆಯಿದೆ ನಿಮ್ಮ ಬಳಿ ರುಗ ಚಕ್ಷುವಿದೆ ನಾನು ಶಲಾಕಾಪುರುಷ, ನೀವು ರೋಗ ವಿದ್ಧ ಜೀವಿಗಳು, ಬನ್ನಿ ನೀವು ಶಲಾಕಾ ಪುರುಷನ ಬಳಿಗೆ ! ನನ್ನ ಬಳಿಗೆ ಬನ್ನಿ, ವೈದ್ಯ ! ವೈದ್ಯ!

ಶ್ರಾವಸ್ತಿಯ ಬೀದಿಯಲ್ಲಿ ಈ ಅದ್ಭುತ ಪುರುಷನ ಹಿಂದೆ ಜನ ಕಿಕ್ಕಿರಿದರು. ಕೊನೆಗೆ ಅವನು ಮಕರಂದ ಶೆಟ್ಟಿಯ ಮಾವಿನ ತೋಪಿನಲ್ಲಿ ಬೀಡುಬಿಟ್ಟ . ತನ್ನ ಜೋಳಿಗೆಯಿಂದ ಒಂದು ಬಟ್ಟೆ ತೆಗೆದು ಹಾಸಿದ, ಅದರ ಮೇಲೆ ಮುಪ್ಪು, ಮೃತ್ಯು ಮತ್ತು ದುಃಖದ ಚಿತ್ರವಿತ್ತು. ಅದನ್ನು ತೋರಿಸಿ ಅವನು ಹೇಳಿದ. 'ಈ ಜಗತ್ತು ದುಃಖಮಯ, ತೃಷ್ಣಾಮಯ, ಎಲ್ಲೆಲ್ಲೂ ನೋವಿದೆ ಕ್ರೌರ್ಯವಿದೆ, ತುಟಿಯಿದೆ, ಸೋಲಿದೆ. ಈ ರೀತಿ ಇರುವುದೆಲ್ಲ ತಲೆಬೇನೆ, ಚಕ್ಷುಶೂಲೆ, ಜ್ವರದಾಹ, ಇದಕ್ಕೆಲ್ಲ ನಾನು ಮದ್ದು ನೀಡುತ್ತೇನೆ'.

ಜೈನರಲ್ಲಿ ಕಾಲವನ್ನು ಉತ್ಸರ್ಪಿಣಿ ಮತ್ತು ಅವಸರ್ಪಿಣಿ ಎಂದು ಎರಡು ವಿಧವಾಗಿ ವಿಂಗಡಿಸುತ್ತಾರೆ. ಅವಸರ್ಪಿಣಿ ಧರ್ಮದ ಇಳಿಗಾಲ. ಇಂಥ ಅವಸರ್ಪಿಣಿಯಲ್ಲಿ ನಿಜಕ್ಕೂ ಜನರಿಗೆ ಕಣ್ಣುಬೇನೆ. ಕರ್ಮಕಾಂಡದ ಹೊಗೆಯಿಂದ ಎಲ್ಲರಿಗೂ ಕಣ್ಣುಬೇನೆ. ಮುಂದೇನು ಎಂಬ ಪ್ರಶ್ನೆ ಅವರಿಗೆ ತಲೆನೋವು ತಂದಿತ್ತು . ಎಲ್ಲರಲ್ಲೂ ತೃಷ್ಣೆ ಮತ್ತು ಸಂಚಯದ ಭೀಕರ ಜ್ವರದಾಹ! ಒಂದು ಕಾಲಕ್ಕೆ ಅಲ್ಲಿ ಗಣತಂತ್ರಗಳಿದ್ದವು. ಈಗ ಅದು ಹೋಗಿ ರಾಜತಂತ್ರ ಬಂದಿತ್ತು. ಕೇವಲವಜ್ಜಿ ಮತ್ತು ಮಲ್ಲ ಗಣತಂತ್ರ ಮಾತ್ರ ಉಳಿದಿದ್ದವು. ಈ ಗಣತಂತ್ರದಲ್ಲಿ ಬದುಕು ಸರಳ, ಪ್ರಾಮಾಣಿಕ ಹಾಗೂ ಸಾಮತ್ವಾಧಾರಿತ. ಆದರೆ ಕೋಶಲ ಮತ್ತು ಮಗಧದ ರಾಜತಂತ್ರದಲ್ಲಿ ಸಾಮಂತಶಾಯಿ ತಾನೇತಾನಾಗಿತ್ತು , ಹಿಂದಿನ ನೈತಿಕತೆ ಕಣ್ಮರೆಯಾಗಿತ್ತು. ಒಂದೆಡೆ ಸರ್ವ ಸಂಗ್ರಹಿಗಳಾದ ವ್ಯಾಪಾರಿಗಳು, ಮತ್ತೊಂದೆಡೆ ಸ್ವೇಚ್ಛಾಚಾರಿ ವಿಷಯಲೋಲುಪರಾದ ಕ್ಷತ್ರಿಯರು. ಇವರ ನಡುವೆ ಸಮಾಜ ಸುಟ್ಟು ಉರಿಯುತ್ತಿತ್ತು. ಧರ್ಮ ಪುರೋಹಿತಶಾಹಿಯ ಕೈಯಲ್ಲಿ ಸಿಕ್ಕಿ ನರಳುತ್ತಿತ್ತು. ಈ ರೀತಿ ಎಲ್ಲೆಲ್ಲೂ ಅನವಸ್ಥೆ, ಅಶಾಂತಿ ! ಇತಿಹಾಸ ಹೊಸಯುಗದ ಪ್ರಸವ ವೇದನೆಯಿಂದ ಒದ್ದಾಡುತ್ತಿತ್ತು.

ಇಂಥ ಪರಿಸ್ಥಿತಿಯಲ್ಲಿ ಯಾವನಾದರೂ ಮನೆ ಬಾಗಿಲಿಗೆ ಬಂದು ಮದ್ದು ಕೊಡುತ್ತೇನೆಂದರೆ ಒಲ್ಲೆನೆನ್ನುವರಾರು? ಆದ್ದರಿಂದ ಸಹಜವಾಗಿಯೇ ಅಂದು ಶ್ರಾವಸ್ತಿಯಲ್ಲಿ ಎಲ್ಲಿಲ್ಲದ ಜನ ! ಆ ವೈದ್ಯ ತನ್ನ ದೊಣ್ಣೆ ಅಲ್ಲಾಡಿಸಿ ಅಲ್ಲಾಡಿಸಿ ತನ್ನ ದರ್ಶನವನ್ನು ಬಿತ್ತರಿಸತೊಡಗಿದ. ಜನ ಮೈಯೆಲ್ಲ ಕಿವಿಯಾಗಿ ಕೇಳತೊಡಗಿತು.

ವೈದ್ಯನೆಂದು ಹೇಳಿಕೊಂಡ ಈ ಮಾತುಗಾರ ಬುದ್ಧ ಮತ್ತು ಮಹಾವೀರ ಇವರಿಬ್ಬರ ಸಮಕಾಲೀನ ! ಪ್ರತಿದ್ವಂದ್ವಿ ! 'ಕೋಣಮೆರಡುಂ ಹೋರೆ ಗಿಡುವಿಂಗೆ ಮೃತ್ಯು' ಎನ್ನುತ್ತಾನೆ ರಾಘವಾಂಕ. ಆದರೆ ಈ ಇಬ್ಬರು ಘಟಾನುಘಟಿಗಳಿಗೂ ಸವಾಲುಹಾಕಿ ಸಡ್ಡು ಹೊಡೆದು ನಿಂತ ಈ ಮಹಂತನೇ ಮಂಕ ! ಮಂಕುಪುತ್ರ ಮಕ್ಖಲಿ (ಮಂಖಲಿ) ಗೋಶಾಲಕ ಎಂದು ಆತನ ಪೂರ್ತಿ ಹೆಸರು. ಅವನು ಆಜೀವಕ ಸಂಪ್ರದಾಯದ ಅಚೇಲಕ ಶಾಖೆಯ ಗುರು ಮತ್ತು ಒಬ್ಬ ಬಡ ಭಟ್ಟಂಗಿ (ಮಂಖ) ಇಲ್ಲವೆ ಕ್ಷಪಣಕನ ಮಗ. ಮಕ್ಖಲಿ ಗೋಶಾಲಕನ ಹೆಸರು ಬೌದ್ಧಗ್ರಂಥ 'ಸಾತುಂಜ ಫಲಸುತ್ತ' (ದೀರ್ಘನಿಕಾಮ) ಹಾಗೂ ಜೈನಗ್ರಂಥ 'ಭಗವತೀ ಸೂತ್ರ' ಹಾಗೂ ವೈದಿಕರ 'ಮಹಾಭಾರತ'ದ ಶಾಂತಿಪರ್ವ (ಮಂಕಿ ಗೀತಾ ಅಧ್ಯಾಯ ೧೭೭) ಈ ಮೂರರಲ್ಲೂ ದೊರೆಯುತ್ತದೆ. ಈ ಮೂರರಲ್ಲೂ ಅವನ ಬಾಯಿಂದ ಒಂದೇ ಮಾತನ್ನು ಹೇಳಿಸಿದೆ, 'ನಿಯಿತಿವಾದ'. ಅವನ ಮೂಲಸಿದ್ಧಾಂತವೆಂದರೆ 'ನತ್ಥಿ ಪುರಿಸ್ಕಾರೇ! ನಾಸ್ತಿ ಪುರುಷಕಾರಂ (ಪುರುಷಾರ್ಥತ್ರಥಿ)'.

ಮೌರ್ಯಯುಗದಲ್ಲಿ ಅವನ ಶಿಷ್ಯರು ಸಾಕಷ್ಟು ಸಂಖ್ಯೆಯಲ್ಲಿದ್ದರು. ಬಹಳ ದಿನದವರೆಗೆ ಆಜೀವಕ ಸಂಪ್ರದಾಯ ದಕ್ಷಿಣ ಭಾರತದ ಕೆಲವು ಭಾಗಗಳಲ್ಲಿ ಹಾಗೂ ಮಗಧದ ಸುತ್ತಮುತ್ತ ಅಸ್ತಿತ್ವದಲ್ಲಿತ್ತು. ಮಂಖರ ವೇಷ ಗಡ್ಡ ಮೀಸೆಯಿಂದ ಕೂಡಿ ಚಿತ್ರ ವಿಚಿತ್ರವಾಗಿರುತ್ತಿತ್ತು. ಗೋಶಾಲಕ ಮಂಖ ಬುದ್ಧನನ್ನು ಬಿಟ್ಟು ಮಹಾವೀರನ ಶಿಷ್ಯನಾದಾಗ ಅವನ ಬಳಿ ಸಾಟಿಕ, ಪಾಟಿಕ, ಕುಂಡಿಕಾ, ಉಪಾನಹ ಹಾಗೂ ಚಿತ್ರ ಫಲಕಗಳಿದ್ದವಂತೆ. ಈ ವಿವರಗಳು ಮೇಲಣ ಗ್ರಂಥಗಳಿಂದ ದೊರೆಯುತ್ತವೆ. ಆದರೆ ಅಲ್ಲಿ ಮಸ್ಕರದಂಡದ ಉಲ್ಲೇಖವಿಲ್ಲ. ಆಜೀವಕರ ಅಚೇಲಕ ಶಾಖೆಯಲ್ಲಿ ಬೊಂಬಿನ (ಮಸ್ಕರ) ದಂಡ ಹಿಡಿದುಕೊಳ್ಳುವ ಪದ್ಧತಿಯಿತ್ತು. ಕೆಲವರ ಪ್ರಕಾರ ಗೋಶಾಲಕನಿಗೆ 'ಮಂಖಲಿ' ಅಥವಾ 'ಮಕ್ಕಲಿ' ಎಂಬ ಬಿರುದು ಬರಲು ಕಾರಣ ಅವನು ಮಂಖ (ಚಾರಣ) ಪುತ್ರನಾದುದರಿಂದಲೇ ಅಲ್ಲ ಅದರ ಜೊತೆಗೆ ಮಸ್ಕರ (ಮಕ್ಖಲ)ಗಳು ಹಿಡಿದುಕೊಂಡುದರಿಂದಲೂ ಬಂದಿರಬೇಕು. ಹಾಡು ಹೇಳಿ ಭಿಕ್ಷಾಟನೆ ಮಾಡುತ್ತಿದ್ದ ಕಥಾಜೀವಿ ಜನರನ್ನು ಆಗ 'ಮಂಖ'ರೆಂದು ಕರೆಯುತ್ತಿದ್ದರು. ಅಂತೂ ಯಾವ ಕಾರಣದಿಂದಲಾದರೂ ಆಗಲಿ ಗೋಶಾಲಕನಿಗೆ ಮಂಖ(ಕ) ಎಂಬ ಹೆಸರು ಬಂದುದಂತೂ ಸ್ಪಷ್ಟ.

'ಮಂಖ' ಶಬ್ದ (ಮಕ್ಕ-ತಿರುಗಾಡು, ಪರಿವ್ರಜನ ಮಾಡು) ಮಕ್ಷ (ಸುತ್ತಿ ಸುತ್ತಿ ಸಂಗ್ರಹ ಮಾಡು) (ಮಧುಮಕ್ಷಿ ಶಬ್ದ ನೋಡಿ)ದಿಂದ ಬಂದಿದೆಯೆಂದೂ ಹೇಳಲಾಗುತ್ತದೆ. ಅಂತೂ ಮಂಖ ಅಥವಾ ಮಕ್ಷ ಮಧುಕರೀ ವೃತ್ತಿಯಿಂದ, ಮಧುಕರಿಗಳಂತೆ. ಗೀತ ಗುಂಜನದಿಂದ ಜೀವಿಸುವ ಅಲೆಮಾರಿ ಜನರಿರಬೇಕು. ಗೋಶಾಲಕನ ತಂದೆ ಮಗಧದ ಸರವಣ ಗ್ರಾಮದಲ್ಲಿ 'ಗೋಬಹುಲ' ಎಂಬ ಬ್ರಾಹ್ಮಣನ ಗೋಶಾಲೆಯಲ್ಲಿ ವಾಸವಾಗಿದ್ದ. ಅವನ ಹೆಂಡತಿ ಭದ್ರೆ. ಗಂಡ ಹೆಂಡಿರಿಬ್ಬರೂ ಅಲೆಮಾರಿಗಳು. ಕಾಲಾನಂತರದಲ್ಲಿ ಅವರಿಗೆ ಒಬ್ಬ ಮಗ ಹುಟ್ಟಿದ. 'ಗೋಶಾಲಕ' ಎಂದು ಹೆಸರಿಡಲಾಯಿತು.

ಕೊಂಚ ದೊಡ್ಡವನಾದ. ಅಲ್ಪಸ್ವಲ್ಪ ವಿದ್ಯೆ ಕಲಿತು ಈ ಗೋಶಾಲಕ ತಾನೂ ಅಲೆಮಾರಿಯಾಗಿ ಹೊರಟ. ಹೊಸದನ್ನು ಯೋಚಿಸುವ, ಕಾಣುವ ಗೀಳು ಅವನ ತಲೆಯಲ್ಲಿತ್ತು. ಈ ಗೋಶಾಲಕನ ಬಾಲ್ಯ, ಯೌವನದ ಬಗೆಗೆ ಯಾವ ವಿವರವೂ ದೊರೆಯುವುದಿಲ್ಲ. ಒಬ್ಬ ದರಿದ್ರ ಭಟ್ಟಂಗಿಯ ಹುಡುಗನ ಬಾಲ್ಯ, ಯೌವನ ಯಾರಿಗೆ ಬೇಕು? ಅವನ ಈ ಕಾಲ ತೀವ್ರವಾದ ಅಭಾವ, ನಿರಾಶೆ, ಸೋಲು, ಕ್ಷುದ್ಧ ಪಿಪಾಸೆ, ಗ್ಲಾನಿಯಿಂದ ತುಂಬಿದ್ದಿರಬೇಕು. ತಲೆಯಲ್ಲಿ ಚಿಂತೆಯ ತೀವ್ರ ಕಿಡಿಯಿದುದ್ದರಿಂದ ಅವನಿಗೆ ಬದುಕಿನಲ್ಲಿ ಯಾವುದರಲ್ಲೂ ಆಸ್ಥೆಯುಂಟಾಗದೆ ಸಹಜವಾಗಿಯೇ ಅವನು ಪುರುಷಾರ್ಥ ಇಲ್ಲವೆ ಕರ್ಮದಲ್ಲಿ ನಂಬಿಕೆ ಕಳೆದುಕೊಂಡು ನಿಯತಿವಾದದ ಜನಕನಾದ.

ಶ್ರಾವಸ್ತಿಯ ಆ ಮಾವಿನ ತೋಪಿನಲ್ಲಿ ಎಂದಿನಂತೆ ಜನ ಸಂದಣಿ ಸೇರಿದೆ. ಕ್ಷಪಣಕ ವೇಷಧಾರಿ ಮಂಕ ಒಂದು ಹೊಸ ಚಿತ್ರಪಟವನ್ನು ಹರಡಿಕೊಂಡು ಪುರುಷಾರ್ಥಕ್ಕೆ ವ್ಯಾಖ್ಯಾನ ನೀಡುತ್ತಿದ್ದಾನೆ. ಆ ಚಿತ್ರದ ಮೇಲುಗಡೆ ಒಂದು ಒಂಟೆಯಿದೆ. ಒಂಟೆಯ ಹೆಗಲ ಮೇಲೆ ಒಂದು ನೊಗಯಿದೆ. ನೊಗದ ಅತ್ತಿತ್ತ ಎರಡು ಹೋರಿಗರುಗಳಿವೆ. ಅವು ಒಂಟೆಯ ಹೆಗಲಿಗೆ ನೇತಾಡುತ್ತಿರುವಂತೆ ಕಾಣುತ್ತವೆ. ಚಿತ್ರ ನೋಡಿದರೆ ಈ ಮರಿ ಎತ್ತುಗಳು ಕಾಲು ಬಡಿಯುತ್ತಿರುವಂತೆ ಕಂಡರೆ ಒಂಟೆ ಗಾಬರಿಗೊಂಡಂತೆ ಕಾಣುತ್ತದೆ. ಅವುಗಳ ಹಿಂದೆ ಒಬ್ಬಾತ ಕೈ ಎತ್ತಿ ಕೂಗಿಕೊಳ್ಳುತ್ತಿರುವಂತೆ ಚಿತ್ರಿಸಲಾಗಿದೆ.

ಆ ಕ್ಷಪಣಕ ವೇಷಧಾರಿ ಮಂಕ ಚಿತ್ರಪಟವನ್ನು ಮೇಲಕ್ಕೆ ಹಿಡಿದು ಹೇಳತೊಡಗಿದ, ''ಓ ಜನರೇ, ಕುಂಬಾರರೇ, ರಥಕಾರರೇ, ಧನುಷ್ಕಾರರೇ, ವಿವಿಧ ಶಿಲ್ಪ ಕರ್ಮದಲ್ಲಿ ನಿರತರಾದ ಮಾನಿಸರೇ, ನನ್ನ ಮಾತು ಕೇಳಿ, 'ನತ್ಥಿಪುರಿಸ್ಕಾರೇ! ನಾಸ್ತಿ ಪುರುಷಕಾರಂ-ಪುರುಷಾರ್ಥಕರ್ಮ ಇವೆಲ್ಲ ಅರ್ಥವಿಲ್ಲದ ಮಾತುಗಳು, ಇವಕ್ಕೆ ಯಾವ ಬೆಲೆಯೂ ಇಲ್ಲ. ನಾನು ಮಂಕ(ಖ) ನನ್ನನ್ನು ಮಂಕಿಋಷಿ ಎಂದೂ ಕರೆಯುತ್ತಾರೆ. ನೈಮಿಷಾರಣ್ಯದ ಬ್ರಾಹ್ಮಣರು ನನ್ನನ್ನು ಟುಂಕಿಋಷಿ ಎಂದು ಕರೆಯುತ್ತಾರೆ. ಇದರಲ್ಲಿ ನನ್ನ ಖ್ಯಾತಿ - ಅಪಖ್ಯಾತಿಗಳೆರಡೂ ಇವೆ. ನನಗಾಗದವರು ನನಗೆ ಈ ಹೆಸರು ಕೊಟ್ಟಿದ್ದಾರೆ. ಈ ಕರ್ಮವಾದೀ ಬ್ರಾಹ್ಮಣರ ಮಾತು ಕೇಳಿಕೊಂಡು ನಾನು ಧನೋಪಾರ್ಜನೆಗೆ ಏನೇನು ಮಾಡಲಿಲ್ಲ ? ಜನಗಳ ಮನೆ ಮನೆಯ ಬಾಗಿಲಿಗೆ ಹೋಗಿ ನಾಯಿಯಂತೆ ಅಲೆದೆ. ಆದರೆ ಅದರಿಂದ ನನ್ನ ಬಯಕೆ ಈಡೇರಲಿಲ್ಲ. ನನ್ನ ಸ್ಥಿತಿ ಸುಧಾರಿಸಲಿಲ್ಲ. ಬಹುಶಃ ವಿಧಿವಿಧಾನವೇ ಹೀಗೆಂದು ಕಾಣುತ್ತದೆ. ನಿಯತಿ ನಿಯಾಮಕವೇ ಸರ್ವಸ್ವ, ಪುರುಷಾರ್ಥ ವ್ಯರ್ಥ! ಇಷ್ಟಾದರೂ ನಾನು ಹತಾಶನಾಗಲಿಲ್ಲ. ನನ್ನಲ್ಲಿ ಕೊನೆಯದಾಗಿ ಉಳಿದಿದ್ದ ಹಣ ಹಾಕಿ ಎರಡು ಸಣ್ಣ ವಯಸ್ಸಿನ ಎತ್ತುಗಳನ್ನೂ ಕೊಂಡುಕೊಂಡೆ. ನನ್ನ ಪೈತೃಕ ಕಸುಬು ಕವಿತೆ ಮತ್ತು ವೈದ್ಯ; ವೃತ್ತಿ ಭಿಕ್ಷಾಟನೆ. ಆದರೂ ನಾನು ಕಾಯಕದಿಂದ ಬದುಕ ಬಯಸಿದೆ. ಆದರೆ ನನ್ನ ನಿಯತಿ ನಗುತ್ತಿತ್ತು. ನಾನು ಕೃಷಿಯ ಉಪಕರಣಗಳನ್ನು ಕಲೆ ಹಾಕುತ್ತಿದ್ದೆ. ಆದರೆ ನನ್ನ ನಿಯತಿ ನಗುತ್ತಿತ್ತು. ನನ್ನ ಈ ಎತ್ತುಗಳನ್ನು ಕಳ್ಳಕಾಕರು ಕದಿಯಲಿಲ್ಲ, ಗಂಧರ್ವರು ಅಪಹರಿಸಲಿಲ್ಲ, ಒಂದು ಕೆಟ್ಟ ಮೋರೆಯ ಒಂಟೆ ಹಾಡೆ ಹಗಲಿನಲ್ಲಿ ಇವುಗಳನ್ನು ಹಾರಿಸಿಕೊಂಡು ಕಾಡಿಗೆ ಓಡಿಹೋಯಿತು. ನಾನು ಮರದ ಬೊಂಬೆಯಂತೆ ನೋಡುತ್ತ ನಿಂತಿದ್ದೆ.

ಹೀಗೆ ಹೇಳಿ ಮಂಕ ಆ ಚಿತ್ರವನ್ನು ಎತ್ತರಿಸಿ ತೋರಿಸಿದ, ಅನಂತರ ಶ್ಲೋಕದ ಮೇಲೆ ಶ್ಲೋಕ ಹೇಳಿ ತನ್ನ ಸಿದ್ಧಾಂತ ಪ್ರತಿಪಾದನೆ ಮಾಡತೊಡಗಿದ ;

''ನ ಚೈವ ವಿಹಿತಂ ಶಕ್ಯಂ ದಕ್ಷೇಣಾಪಿ ಹಿತುಂ ಧನಮ್
ಯುಕ್ತೇನ ಶ್ರದ್ಧಯಾ ಸಮ್ಯನೀಹಾಂ ಸಮನುಸಿಷ್ಠತಾ ॥
ಉದ್ಯಮ್ಯೋದ್ಯಮ್ಯಮೇ ದಮ್ಯೇ ವಿಷಮೇ ಚೈವ ಗಚ್ಛತಃ
ಉತ್ಥಿಷ್ಯ ಕಾಕತಾಲೀಯ ಮುತ್ಪಥೇ ನೈವ ಧಾವತಃ
ಮಣೀವೋಷ್ಟ್ರಸ್ಯ ಲಂಬ್ಯೇತೇ ಪ್ರಿಯೌವತ್ಸತರೌ ಮಮ ॥
ಶುದ್ಧಂ ಹಿ ದೈವಂ ವೇದಂ ಹತೇ ನೈವಾಸ್ತಿ ಪೌರುಷಮ್ ಶಾಂತಿಪರ್ವ ೧೭೭.

ಅರ್ಥಾತ್ ಮನುಷ್ಯ ಎಷ್ಟೇ ಚತುರನಾಗಿರಲಿ, ಅವನ ಹಣೆಯಲ್ಲಿ ಬರೆದಿಲ್ಲದ ಹಣವನ್ನು ಎಷ್ಟೇ ನಿಷ್ಠೆ, ಶ್ರದ್ಧೆಯಿಂದ ದುಡಿದರೂ, ಪುರುಷಾರ್ಥ ಮಾಡಿದರೂ ಪಡೆಯಲಾರ. ಈ ಒಂಟೆ ನನ್ನ ಎಳೆ ಎತ್ತುಗಳನ್ನು ಕೆಟ್ಟ ಹಾದಿಯಲ್ಲಿ ಕೊಂಡೊಯ್ಯುತ್ತಿದೆ. ಕಾಕತಾಳೀಯವಾಗಿ ಇವುಗಳನ್ನು ಹೆಗಲ ಮೇಲೆ ಎತ್ತಿಕೊಂಡು ಕೆಟ್ಟ ಹಾದಿಯಲ್ಲೇ ಓಡುತ್ತಿದೆ. ಈ ಒಂಟೆಯ ಮಣಿಕುಂಡಲವೋ ಎಂಬಂತೆ ನನ್ನ ಹೋರಿಗರುಗಳು ನೇತಾಡುತ್ತಿವೆ. ಇದು ದೈವಲೀಲೆ ಹಠದಿಂದ ಮಾಡಿದ ಪುರುಷಾರ್ಥದಿಂದ ಏನೂ ಆಗದು.

ಈ ಶ್ಲೋಕಗಳ ಮೂಲಕ ಜನರನ್ನು ಮರುಳುಗೊಳಿಸಿದ ಬಳಿಕ ಮಂಕ ತನ್ನ ಮುಕ್ತಿರಹಸ್ಯವನ್ನು ಬಿತ್ತರಿಸುತ್ತಿದ್ದ. ಮೋಕ್ಷಕ್ಕಾಗಿ ತಪಸ್ಸು ಮೊದಲಾದವು ವ್ಯರ್ಥವೆಂದು ಸಾರಿ 'ನತ್ಥಿ ಪುರಸ್ಕಾರೇ' ಎಂದು ಪ್ರತಿಪಾದಿಸುತ್ತಿದ್ದ, ಮನುಷ್ಯ ೧೪ ಸಾವಿರ ಯೋನಿಗಳಲ್ಲಿ ೬೪ ಸಾವಿರ ಮಹಾಕಲ್ಪಗಳಲ್ಲಿ ಸುತ್ತಿ ತೊಳಲಾಡುವುದು ಅನಿವಾರ್ಯ. ಈ ಚಕ್ರ ಮುಗಿವ ತನಕ ಹುಟ್ಟು ಸಾವುಗಳನ್ನು ತಡೆಯುವ ಕಲ್ಪನೆ ವ್ಯರ್ಥ. ಈ ಜನ್ಮಚಕ್ರ ಮುಗಿದಂದೇ ಆವಾಗಮನವೂ ನಿಂತೀತು. ತನ್ನಷ್ಟಿಗೆ ತಾನೆ 'ವಿಶುದ್ಧತೆ' ಒದುಗುವುದು. ಆಗ ಮುಕ್ತಿ ತನಗೆ ತಾನೆ ದೊರೆಕೊಳ್ಳುವುದು. ಅದಕ್ಕೆ ಮುನ್ನ ಚಡಪಡಿಸುವುದು ವ್ಯರ್ಥ. ಪ್ರತಿಯೊಬ್ಬ ವ್ಯಕ್ತಿಯೂ ನಲವತ್ತೊಂಬತ್ತು ನೂರು ಸಾರಿ ಆ ಜೀವಕನಾಗಿ ಜನ್ಮ ತಳೆಯಬೇಕಾಗುತ್ತದೆ. ಯಾವ ಘಟನೆಗೂ ಕಾರ್ಯ ಕಾರಣ ಸಂಬಂಧವಿಲ್ಲ.

ಈ ರೀತಿ ತನ್ನ ಸಿದ್ಧಾಂತ ಪ್ರತಿಪಾದನೆ ಮಾಡುತ್ತ ಕೊನೆಗೆ ಮಂಕ ಹೀಗೆ ಉಪಸಂಹಾರ ಮಾಡುತ್ತಿದ್ದ . ಪ್ರಾಣಿಗಳ ಕ್ಲೇಶಗಳಿಗೆ 'ಹೇತು' ಪ್ರತ್ಯಯವಲ್ಲ. ಹೇತುವಿಲ್ಲದೆಯೆ, ಪ್ರತ್ಯಯವಿಲ್ಲದೆಯೇ ಪ್ರಾಣಿಗಳು ಕ್ಲೇಶಕ್ಕೊಳಗಾಗುತ್ತವೆ. ಹುಟ್ಟುವುದೇ ಒಂದು ದೊಡ್ಡ ವ್ಯಥೆ. ಕ್ಲೇಶ ತೊಲಗುವುದು 'ವಿಶುದ್ಧತೆ'ಯುಂಟಾದಾಗ. ಈ ವಿಶುದ್ಧತೆಗೆ ಯಾವ ಹೇತುವೂ ಇಲ್ಲವೆ? ಹೇತು ಪ್ರತ್ಯಯವಿಲ್ಲದೆಯೇ ಪ್ರಾಣಿ ಶುದ್ಧನಾಗುತ್ತಾನೆ. ಆತ್ಮಕಾರವೂ ಇಲ್ಲ, ಪುರುಷಾಕಾರವೂ ಇಲ್ಲ, ಬಲವೂ ಇಲ್ಲ, ವೀರ್ಯವೂ ಇಲ್ಲ, ಎಲ್ಲ ಸತ್ವ ಪ್ರಾಣ, ಭೂತ, ಜೀವ ಗಣಗಳು ವಿವಶ. ಎಲ್ಲವೂ ಬಲ ವೀರ್ಯವಿರಹಿತ. ನಿಯತಿ ನಿರ್ಮಿತ ಅವಸ್ಥೆಯನ್ನು ಮುಟ್ಟಿ ಜೀವ ಆರು ಸಾವಿರ ಜನ್ಮಗಳಲ್ಲಿ ಸುಖ ದುಃಖವನ್ನು ಅನುಭವಿಸುತ್ತದೆ. ೧೪ ಸಾವಿರ ಪ್ರಮುಖ ಯೋನಿಗಳಿವೆ, ಮತ್ತೆ ೮೦೦ ಮತ್ತೆ ೬೦೦ ಐನೂರು ಕರ್ಮಗಳಿವೆ. ೧೪ ಸಾವಿರ ಮಹಾಕಲ್ಪಗಳಲ್ಲಿ ಹುಟ್ಟಿ ಸತ್ತು ಮಾಡಿದ ಮೇಲೆ ದುಃಖದ ಅಂತ್ಯ.

ಶ್ರಾವಸ್ತಿಯ ಜನಕ್ಕೆ ಮಂಕನ ಈ ಮಾತು ಎಷ್ಟು ಅರ್ಥವಾಯಿತೋ ! ನೀರಿಳಿಯದ ಗಂಟಲಲ್ಲಿ ಕಡುಬು ತುರುಕಿದಂತಾಗಿರಬೇಕು. ಆದರೆ ಜನ ಮರುಳೋ ಜಾತ್ರೆ ಮರುಳೋ ಎಂಬಂತೆ ಅರ್ಥವಾಗದಷ್ಟೂ ಆಕರ್ಷಣೆ ಹೆಚ್ಚಿತು. 'ನತ್ಥಿ ಪುರಿಸ್ಕಾರೇ' ಪುರುಷಾರ್ಥವೆಂಬುದಿಲ್ಲ, ನಡೆ ಮಜಾ ಮಾಡೋಣ ಎಂಬ ಮಾತು ಜನಕ್ಕೆ ತುಂಬ ಅಪ್ಯಾಯಮಾನವಾಗಿರ ಬೇಕು. ಗಾನ-ಪಾನ-ನೃತ್ಯ ಹಾಗೂ ವೀಣಾವಾದನದ ನಡುವೆ ಈ ಸಂಪ್ರದಾಯ ಬೆಳೆಯಿತು. ಅದರ ಅಂತರ್ವಾಸ ನೀಲ 'ಸಾಟಕ'(ಬಟ್ಟೆ) ಮತ್ತು ಮಸ್ಕರ(ಗಳು) ದಂಡ ಇಡೀ ಉತ್ತರ ಭಾರತದಲ್ಲಿ ಜನಪ್ರಿಯವಾಯಿತು. ಅವರು ತಮ್ಮ ಭೋಗಾಚಾರವನ್ನು ಚಿತ್ರವಿಚಿತ್ರ ಶಬ್ದಗಳಿಂದ ವ್ಯಕ್ತಪಡಿಸುತ್ತಿದ್ದರು.

ಮಂಕನ ನಿಯತಿವಾದದ ಉಲ್ಲೇಖವನ್ನು ಮಹಾಭಾರತದ ಶಾಂತಿಪರ್ವದಲ್ಲಿ ಕಾಣಬಹುದು. ಆದರೆ ವೇದವ್ಯಾಸರು ಈ ನಿಷ್ಕರ್ಮ ದರ್ಶನವನ್ನು ಕರ್ಮದರ್ಶನವನ್ನಾಗಿ ಮಾರ್ಪಡಿಸಿದ್ದಾರೆ. ಶಾಂತಿಪರ್ವದಲ್ಲಿ ಈ ಪ್ರಕರಣವನ್ನೇ 'ಮಂಕಿಗೀತಾ' ಎಂದು ಕರೆದಿದೆ. ಅಲ್ಲಿ ಮಂಕಿಋಷಿ ತನ್ನ ಎತ್ತುಗಳನ್ನು ಒಂಟೆ ಅಪಹರಿಸಿದ ಕಥೆಯನ್ನು ಹೇಳಿ ನಿಯತಿವಾದವನ್ನು ಪ್ರತಿಪಾದಿಸುತ್ತಾನೆ. 'ಮಂಕಿಗೀತೆ'ಯು ಪೂರ್ವಪಕ್ಷ ಬೌದ್ಧ ಹಾಗೂ ಜೈನರಲ್ಲಿರುವ ನಿಯತಿವಾದೀ ದಾರ್ಶನಿಕ ಮಂಖಿಗೋಶಾಲಕನದೇ. ಆದರೆ ಉತ್ತರ ಪಕ್ಷಮಾತ್ರ ಬೇರೆ. ಅಲ್ಲಿ ವ್ಯಾಸರು ಈ ನಿಯತಿವಾದ ಹಾಗೂ ನಿಷ್ಕರ್ಮದೊಂದಿಗೆ ವೈರಾಗ್ಯ ಹಾಗೂ ಬ್ರಹ್ಮ ಜಿಜ್ಞಾಸೆಗೆ ಸಂಬಂಧ ಕಲ್ಪಿಸುತ್ತಾರೆ. ಅದರ ಪ್ರಕಾರ, ಎಲ್ಲ ಕರ್ಮಗಳೂ ವ್ಯರ್ಥ ಆದ್ದರಿಂದ ಕರ್ಮತ್ಯಾಗ ಮಾಡಿ ಬ್ರಹ್ಮನತ್ತ ಮುಖ ಮಾಡಬೇಕು. ಮಂಕನ ಮಹಾಭಾರತದ ಈ ಹೇಳಿಕೆ ನಿರಾಶೆಯನ್ನು ತೊಡೆದುಹಾಕಿ ಒಂದು ಸ್ವೀಕಾರಾತ್ಮಕ ದರ್ಶನದ ರೂಪ ತಳೆಯುತ್ತದೆ. ''ತಸ್ಮಾನ್ನಿರ್ವೇದರವ್ವೇಹ ಗಂತವ್ಯ ಸುಖ ಮಿಚ್ಛತಾ ಸುಖಂ ಸ್ವಪಿತಿ ನಿರ್ವಿಣ್ಣೋ ನಿರಾಶಾಶ್ಚಾರ್ಥ ಸಾಧನೇ''. (ಆದ್ದರಿಂದ ಸುಖವನ್ನು ಬಯಸುವಾತ ಧನ ಮೊದಲಾದ ಬಗೆಗೆ ವೈರಾಗ್ಯ ತಳೆಯಬೇಕು. ಯಾರು ಧನೋಪಾರ್ಜನೆಯ ಪ್ರಯತ್ನದಿಂದ ವಿರತರಾಗಿ ಆಶಾ ರಹಿತರಾಗಿರುವರೋ ಅವರು ನೆಮ್ಮದಿಯ ನಿದ್ದೆ ಮಾಡಬಲ್ಲರು).

ಆತ ಹೇಳುತ್ತಾನೆ 'ಕಾಮಂ ಜಾನಾಮಿ ತೇಮೂಲಂ ಸಂಕಲ್ಪಾತ್ ಕಿಲ ಜಾಯತೇ' ಆದ್ದರಿಂದ ಆತ ಸಂಕಲ್ಪಹೀನ ಹಾಗೂ ಇಚ್ಛಾಹೀನನಾಗುವ ಪ್ರತಿಜ್ಞೆ ಮಾಡುತ್ತಾನೆ. ತಸ್ಮಾತ್' ಉತ್ಸೃಜ್ಯ ಕಾಮಾನ್ ವೈ ಸತ್ವಮೇವಾ ಶ್ರಮಾಮ್ಯಹಂ' ನಾನು ಸತ್ವವನ್ನು ಆಶ್ರಯಿಸುತ್ತೇನೆ, ಬ್ರಹ್ಮನಲ್ಲಿ ಪ್ರವೇಶಿಸುತ್ತೇನೆ.

ಆದರೆ ಇದು ವ್ಯಾಸರು ಮಂಕದರ್ಶನಕ್ಕೆ ಕೆಟ್ಟ ತಿರುವೇ ಹೊರತು ಮಂಕ ದರ್ಶನವಲ್ಲ. ಮಂಕಿಗೀತೆಯಲ್ಲಿ ಪ್ರತಿಪಾದಿತವಾಗಿರುವಂತೆ ಅದು ಬ್ರಹ್ಮವಾದವಾಗಿದ್ದರೆ ಮಂಕನನ್ನು ಯಾರೂ ಬೈಯುತ್ತಿರಲಿಲ್ಲ.

ಮಂಕನ ಜೀವನದರ್ಶನ 'ಮಂಕಿ ಗೀತಾ'ದಲ್ಲಿ ಪ್ರತಿಪಾದಿತವಾದ ಬ್ರಹ್ಮವಾದವಾಗಿದ್ದರೆ ಅವನ ಆಜೀವಕ ಸಂಪ್ರದಾಯ ಇಷ್ಟೊಂದು ಸ್ವೇಚ್ಛಾಚಾರಿಯಾಗಿರುತ್ತಿರಲಿಲ್ಲ. ಮಂಕನ ದರ್ಶನದ ಮೂಲರೂಪ ಹೀಗಿದೆ.

ಪೂರ್ವಪಕ್ಷ : ಎಲ್ಲವೂ ನಿಯತಿಯಿಂದ ಚಾಲಿತ, ಆದ್ದರಿಂದ ಕರ್ಮ ಇಲ್ಲವೆ ಪುರುಷಾರ್ಥಕ್ಕೆ ಯಾವ ಅರ್ಥವೂ ಇಲ್ಲ, ನಿಯತಿಯೇ ಸರ್ವಸ್ವ.

ಉತ್ತರಪಕ್ಷ : ಆದ್ದರಿಂದ ಏನೂ ಮಾಡಬೇಡ, ಮಜಮಾಡು, ವೀಣೆಬಾರಿಸು.

ಆಗ ಪ್ರಚಲಿತವಿದ್ದ ಎಲ್ಲ ಸಂಶಯವಾದಿಗಳ ಅಸ್ತಿತ್ವವಾದಿಗಳ ದರ್ಶನದ ಪೂರ್ವಪಕ್ಷ ಸರಿಯಾಗಿದೆ, ಆದರೆ ಉತ್ತರ ಪಕ್ಷ ನಕಾರಾತ್ಮಕ, ಅತಿಚಾರವಾದಿ. ಈ ರೀತಿ ಅವರೆಲ್ಲರ ದರ್ಶನ ಆಕರ್ಮಕ. ಜಗದ ಜಂಜಡದಿಂದ, ತಾಪತ್ರಯಗಳಿಂದ ಬಿಡುಗಡೆ ಹೊಂದಲು ಕರ್ಮಣ್ಯಾದರ್ಶನವೊಂದರ ಅಗತ್ಯವಿತ್ತು. ಬುದ್ಧ ಮತ್ತು ಮಹಾವೀರ ಈ ಸಂತ್ರಾಸದಿಂದ ಮುಕ್ತಿಹೊಂದಲು ಒಂದು ದಾರಿತೋರಿದರು. ಕರ್ಮ ಪ್ರಧಾನ ದರ್ಶನವನ್ನು ನೀಡಿದರು, ದ್ವಂದ್ವದಿಂದ ಮೇಲೇಳಲು ವ್ಯಕ್ತಿತ್ವದ ಪುನರ್ಘಟನೆಯ ದರ್ಶನವನ್ನು ಆಚರಣಪ್ರಧಾನ ಜೀವನವನ್ನು ಬೋಧಿಸಿದರು.

ಆಜೀವಕರ ಗುರುವಾಗುವ ಮುನ್ನ ಮಂಕ ವರ್ಧಮಾನ ಮಹಾವೀರರ ಬಳಿ ಆಧ್ಯಾತ್ಮಿಕ ಶಿಕ್ಷಣ ಪಡೆದಿದ್ದ. ಆತ ಮಹಾವೀರನ ಜೊತೆ ಏಳೆಂಟು ವರ್ಷ ಇದ್ದನಂತೆ. ಅದಕ್ಕೆ ಮುಂಚೆ ಅವನು ದಾಸನಾಗಿದ್ದ, ದಾಸ್ಯದಿಂದ ಬಿಡುಗಡೆ ಹೊಂದಲು ಅವನು ಜೈನ ಶ್ರಾವಕನಾಗಿರಬೇಕು. ಏಕೆಂದರೆ ಭಿಕ್ಷು ಇಲ್ಲವೆ ಶ್ರಾವಕನನ್ನು ಗೃಹಪತಿ ಮತ್ತೆ ಹಿಡಿದುಕೊಂಡು ಹೋಗುವಂತಿರಲಿಲ್ಲ. ಬೌದ್ಧಗ್ರಂಥ 'ಸುಮಂಗಲಾ ವಿಲಾಸಿನೀ'ಯ ಪ್ರಕಾರ ಅವನು ದಾಸನಾಗಿದ್ದ, ಮಹಾಭಾರತದ ಪ್ರಕಾರ ಕೃಷಿಕ.

ಏನಾದರೂ ಆಗಲಿ ಇಷ್ಟೆಲ್ಲ ಅವತಾರಗಳಾದ ಮೇಲೆ ಅವನು ಮಹಾವೀರನ ಬಳಿ ಇರತೊಡಗಿದ. ಆತನ ಜೊತೆ ಆರೆಂಟು ವರ್ಷಕಾಲ ಅಡ್ಡಾಡುತ್ತ ಮೈಕೈ ತುಂಬಿಕೊಂಡ ಮೇಲೆ ಅವನಿಗೆ ಅನ್ನಿಸಿತು - ಈ ಅವಸರ್ಪಿಣೀಕಾಲದ ಚರಮ ತೀರ್ಥಂಕರ ಮಹಾವೀರನಲ್ಲ , ನಾನೇ. ಅವದಮತ ಪ್ರವಾದಿ ವ್ಯಕ್ತನಾದರೆ ವಿದೂಷಕನ ರೂಪದಲ್ಲಿ ಮೈದೋರುತ್ತಾನೆ. ಮಂಕನ ಬದುಕಿನ ದುರಂತವೂ ಇದೇ !

ಜೈನ ಗ್ರಂಥಗಳ ಪ್ರಕಾರ ಮಂಕ ಮಹಾವೀರರನ್ನು ಕಂಡದ್ದು ವಿಜಯ ಗಾಥಾಪತಿ ಎಂಬ ಗೃಹಸ್ಥನ ಮನೆಯಲ್ಲಿ. ಅಲ್ಲಿ ಭಗವಾನ್ ಮಹಾವೀರನಿಗೆ ದಾನ ಮಾಡಿದ ಪುಣ್ಯ ಫಲದಿಂದಾಗಿ ಗಾಥಾಪತಿಯ ಮನೆಯಲ್ಲಿ ಪಂಚ ದಿವ್ಯ ವಸ್ತುಗಳು ಮೈದೋರಿದವು, ಅದನ್ನು ಕಂಡು ಮಂಕ ತನಗೆ ದೀಕ್ಷೆ ಕರುಣಿಸಬೇಕೆಂದು ಮಹಾವೀರರಲ್ಲಿ ಯಾಚಿಸಿದ. ಆದರೆ ಆಗ ಭಗವಾನ್ ಮಹಾವೀರ ಮೌನತಳೆದರು. ಅನಂತರ ಮಂಕನ ಪ್ರತಿಭೆಯನ್ನು ಗುರುತಿಸಿ ಆತನ ಬುದ್ಧಿ ಸದ್ಧರ್ಮ ಪ್ರಚಾರದಲ್ಲಿ ತೊಡಗಲಿ ಎಂದು ಅವನಿಗೆ ದೀಕ್ಷೆ ನೀಡಿದರು. ಅವನು ಮಂಡೆ ಬೋಳಿಸಿ ತನ್ನ ಸಮಸ್ತ ವಸ್ತುಗಳನ್ನೂ ದಾನ ಮಾಡಿದ, ಆದರೆ ಆತನ ಅಹಂಕಾರ ತಾನೇ ತೀರ್ಥಂಕರನಾಗಬೇಕೆಂದು ಚಡಪಡಿಸಿತು.

''ಯಾವ ಲಾಭಕ್ಕಾಗಿ ಈ ಮಾನಸಿಕ ದಾಸ್ಯವನ್ನು ಸ್ವೀಕರಿಸಲಿ? ಎಲ್ಲವೂ ನಿಯತಿಯಿಂದ ನಿಶ್ಚಿತವಾಗಿರುವಾಗ ಯಾರ ಹಂಗು ಏಕೆ? ಯಾವ ಗುರುತಾನೇ ಏನು ಕೊಟ್ಟಾನು? ನಿಜವಾದ ದಾತ ನಿಯತಿ'' ಈ ರೀತಿ ಅವನು ಯೋಚಿಸಿದ, ಭಗವಾನ್ ಮಹಾವೀರನ ಜೊತೆ ಇದ್ದರೂ ಅಂಟಿಯೂ ಅಂಟದಂತಿತ್ತು ಅವನ ನಂಟು. ಭಗವಾನ್ ಮಹಾವೀರರ ಮರ್ಮದೃಷ್ಟಿಗೆ ಇದು ವೇದ್ಯವಾಗದಿರಲಿಲ್ಲ, ಅವರಿಗೆ ಅಯ್ಯೋ ಎನಿಸುತ್ತಿತ್ತು. ಅವರು ಮಂಕನ ಅಹಂಕಾರ ವಿಗಲಿತವಾಗಲಿ ಎಂದು ತಮ್ಮ ಅನುಭವಗಳನ್ನು ಹೇಳುತ್ತಿದ್ದರು. ಆದರೆ ಮಹಾವೀರರು ಹೇಳಿದ್ದೆಲ್ಲ ಗೋರ್ಕಲ್ಲಮೇಲೆ ನೀರೆರೆದಂತಾಗುತ್ತಿತ್ತು. ಅವನು ಕಪಟನಾಟಕವಾಡುತ್ತ ಹೇಳುತ್ತಿದ್ದ, ''ಭಗವಂತ, ತಮ್ಮ ಧರ್ಮವನ್ನು ಆಶ್ರಯಿಸಿ ನಾನು ಕೃತಾರ್ಥನಾದೆ, ನಿಮ್ಮ ಅಮೃತವಾಣಿಯಿಂದ ನಾನು ಪುನೀತನಾದೆ'' ಅನಂತರ ಅವರಿಗೆ ಮೂರು ಸಲ ಪ್ರದಕ್ಷಿಣೆ ಮಾಡಿ ತನ್ನ ಕೋಣೆಗೆ ಹೋಗುತ್ತಿದ್ದ. ಇಲ್ಲವೆ ಹಿಪ್ಪೆಯ ತೋಪಿಗೋ ಅಥವಾ ವೇಣುವನಕ್ಕೋ ಹೋಗುತ್ತಿದ್ದ. ಈ ರೀತಿ ಮಂಕನನ್ನು ಜೊತೆಯಲ್ಲಿಟ್ಟುಕೊಂಡು ಮಹಾವೀರರು ಆರು ವರ್ಷ ಕಾಲ ವಿಹರಿಸಿದರು.

ಒಮ್ಮೆ ಭಗವಾನ್ ಮಹಾವೀರರು ಗೋಶಾಲಕನೇ ಮೊದಲಾದ ಶಿಷ್ಯರೊಂದಿಗೆ ಕೂರ್ಮಗ್ರಾಮದಲ್ಲಿ ವಿಹರಿಸುತ್ತಿದ್ದರು. ಹಾದಿಯಲ್ಲಿ ಒಂದು ಎಳ್ಳಿನ ಗಿಡ ಸಿಕ್ಕಿತು. ಅದರಲ್ಲಿ ಎಳ್ಳು ಹೂ ಬಿಟ್ಟಿತ್ತು. ಮಂಕ ಕೇಳಿದ, ''ಭಗವಾನ್ ಈ ಎಳ್ಳು ಹೂಗಳಲ್ಲಿರುವ ಜೀವ ಈ ಹೂಗಳು ನಾಶವಾದ ಮೇಲೆ ಎಲ್ಲಿಗೆ ಹೋಗುತ್ತದೆ?''

ಮಹಾವೀರರು ಉತ್ತರ ಕೊಟ್ಟರು ''ಇದೇ ಗಿಡದ ಕಾಯಿಗಳಲ್ಲಿ ಬೀಜವಾಗಿ ಮೈದೋರುವುದು'', ಮಂಕನ ಮನಸ್ಸಿಗೆ ಸಮಾಧಾನವಾಗಲಿಲ್ಲ. ಮಹಾವೀರರು ತಮ್ಮ ಇತರ ಶಿಷ್ಯರೊಂದಿಗೆ ಮುಂದೆ ಸಾಗಿದಾಗ ಅವನು ಹಿಂದುಳಿದ, ಆ ಗಿಡವನ್ನು ಕಿತ್ತೊಗೆದ. ಅನಂತರ ಮಹಾವೀರರ ವಿಹಾರ ಸಮಾರೋಹದಲ್ಲಿ ಸೇರಿಕೊಂಡ. ಯಾರೂ ಅವನು ಮಾಡಿದುದನ್ನು ಗಮನಿಸಲಿಲ್ಲ. ಸಂಯೋಗದಿಂದ ಅಂದೇ ಮಳೆ ಬಂದಿತು. ಕಿತ್ತು ಬಿಸಾಡಿದ ಗಿಡ ಹೇಗೋ ಚಿಗುರಿಕೊಂಡಿತು. ಕಾಲಾಂತರದಲ್ಲಿ ಅದರಲ್ಲಿ ಕಾಯಿಬಿಟ್ಟಿತು ; ಬೀಜ ಹುಟ್ಟಿಕೊಂಡಿತು. ಆದರೆ ಮಂಕನಿಗೆ ಇದೊಂದೂ ಗೊತ್ತಾಗಲಿಲ್ಲ. ಕೆಲಕಾಲಾನಂತರ ಮಹಾವೀರರು ಕೂರ್ಮಗ್ರಾಮಕ್ಕೆ ಮರಳಿ ಬಂದರು. ಅವರ ಮಾತು ಸುಳ್ಳೆಂದು ಸಾಬೀತು ಮಾಡಲು ಮಂಕ ಎಳ್ಳಿನ ಗಿಡದ ಮಾತೆತ್ತಿದ.

ಮಹಾವೀರರು ಹೇಳಿದರು ''ಸತ್ಯವೆಂದಿಗೂ ಸೋಲದು. ಗಿಡ ಅಲ್ಲೇ ಇದ್ದೀತು. ಆ ಎಳ್ಳು ಹೂಗಳಿಂದ ಬೀಜ ಹುಟ್ಟಿರಬೇಕು''. ಹುಡುಕಿದಾಗ ಅವರ ಮಾತು ನಿಜವಾಗಿತ್ತು. ಗಿಡ ಹತ್ತಿರದಲ್ಲೇ ಇತ್ತು. ಮಂಕ ಎಲ್ಲರೆದುರಿಗೂ ತಲೆ ತಗ್ಗಿಸಬೇಕಾಯಿತು. ಆದರೆ ಆ ತರುವಾಯ ಅವನು ತನ್ನ ದಾರ್ಶನಿಕ ನಿಷ್ಕರ್ಷೆಯನ್ನು ಹೀಗೆ ಹೇಳಿದ, ''ನಿಯತಿಗೆ ಎಂದೂ ಸೋಲಿಲ್ಲ. ಮಳೆ ಬಂದದ್ದು ನಿಯತಿ. ಹೂವುದುರಿ ಅದರಿಂದ ಬೀಜ ಮೂಡಿದ್ದೂ ನಿಯತಿಯೇ. ಆದ್ದರಿಂದ ಎಲ್ಲವೂ ನಿಯತಿ! ನಾನು ಗಿಡ ಕಿತ್ತು ಹಾಕಿದ್ದು ಸತ್ಕರ್ಮವೂ ಅಲ್ಲ ; 'ಅಪಕರ್ಮ'ವೂ ಅಲ್ಲ; ಅದೊಂದು ನಿರರ್ಥಕತೆ' ಅನಂತರ ಅವನು ಪರಿವರ್ತನವಾದ ಎಂಬ ಸಿದ್ಧಾಂತವನ್ನು ಪ್ರತಿಪಾದಿಸಿದ. ಅದರಂತೆ ಪ್ರತಿಯೊಂದು ಜೀವವೂ ಸತ್ತು ಮತ್ತೆ ಅದೇ ಶರೀರದಲ್ಲಿ ಜನ್ಮ ತಳೆಯುತ್ತದೆ, ಹೂವು ಕಾಯಿಯಾದಂತೆ ಜೀವದ ಈ ಪರಿವರ್ತನೆ ಚರಮ ಸತ್ಯ. ಅದು ನಿಯತಿಯ ವಿಧಾನದಂತೆ ಘಟಸುತ್ತದೆ. ಆದ್ದರಿಂದ ಸುಮ್ಮನೆ ಕೈಕಾಲು ಬಡಿದರೇನು ಪ್ರಯೋಜನ? 'ನಾಸ್ತಿ ಪುರುಷಕಾರಂ'.

ಮಂಕ ಉದ್ದಂಡನಾಗಿ ವೇಶ್ಯಾಯನ ಎಂಬ ತಪಸ್ವಿಯನ್ನು ಬಹಳ ಕಾಡುತ್ತಿದ್ದ, ಒಮ್ಮೆ ವೇಶ್ಯಾಯನ ಸಿಟ್ಟಿಗೆದ್ದು 'ತೇಜೋಲೇಶ್ಯಾ' ಎಂಬ ದಾಹಕ ಶಕ್ತಿಯನ್ನು ಛೂಬಿಟ್ಟ. ಅದರಿಂದ ನರಳಿದ ಮಂಕ ಮಹಾವೀರರಿಗೆ ಶರಣಾದ, ಅವರು ಅವನ ಮೇಲೆ ಮರುಕಗೊಂಡು ಶೀತೋಲೇಶ್ಯಾ ಎಂಬ ಶಕ್ತಿಯನ್ನು ಆಹ್ವಾನಿಸಿ ಅವನ ಉರಿಯನ್ನು ಶಮನಗೊಳಿಸಿದರು.

ಮಂಕ ಮಹಾವೀರರಿಂದ ತೇಜೋಲೇಶ್ಯಾ ಶಕ್ತಿಯ ಸಿದ್ಧಿಗಳಿಸುವುದನ್ನು ಕಲಿತ, ಆರು ತಿಂಗಳು ತಪಸ್ಸು ಮಾಡಿ ಅದನ್ನು ಗಳಿಸಿದ, ಆದರೆ ಅದರ ಅಹಂಕಾರದಲ್ಲಿ ಮೆರೆಯ ತೊಡಗಿದ. ಮಹಾವೀರರು ಆತನಿಗೆ ಧ್ಯಾನಸ್ಥನಾಗುವಂತೆ ಸಂಶಯ ಕೀಟವನ್ನು ತೊರೆಯುವಂತೆ ಬುದ್ಧಿವಾದ ಹೇಳಿದರು.

ಆದರೆ ಗೋಶಾಲಕನ ಹಮ್ಮು ಹೆಚ್ಚುತ್ತಲೇ ಹೋಯಿತು, ಅವನು ನಿಶ್ಚಯಿಸಿದ ಧ್ಯಾನದ ಬದಲು ಪಾನ ರೂಪ ರಸದ ಚರಮಪಾನದಲ್ಲಿ ವರ್ತಮಾನವನ್ನು ಗಟ್ಟಿಯಾಗಿ ಹಿಡಿದುಕೊಳ್ಳಬೇಕು. ಗತಕಾಲ ದುಃಖದ ಕರ್ತೃ ಭವಿಷ್ಯ ದುಃಖದದಾತ. ವರ್ತಮಾನ, ಕೇವಲ ವರ್ತಮಾನ ಒಂದೇ ನಚ್ಚಬಹುದಾದದ್ದು. ಆದರೆ ಅದೂ ಕೂಡ ಕಾಲದ ಅನಂತ ಪ್ರವಾಹದಲ್ಲಿ ಒಂದು ಬಿಂದು ಮಾತ್ರ. ಅದಕ್ಕೆ ಯಾವ ದಿಕ್ಕು ನೆಲೆಯೂ ಇಲ್ಲ. ನಿಯತಿಯ ಅಂಗುಲಿ ನಿರ್ದೇಶದಂತೆ ಅದು ಹರಿಯುತ್ತಿರುತ್ತದೆ. ಆದ್ದರಿಂದ ಎಲೆ ಮನವೆ, ಈ ಇಂದಿನ ಬಿಂದು ಹರಿದು ಹೋಗುವ ಮುನ್ನ ಅದನ್ನು ಹಿಡಿದುಕೋ, ಅದನ್ನು ಪ್ರೀತಿಸು, ಚರಮಪಾನದ ಮೂಲಕ; ಈ ರೀತಿ ಯೋಚಿಸಿ ಮಂಕ ಮಹಾವೀರರ ಆಶ್ರಮವನ್ನು ತೊರೆದು ಆಜೀವಕ ಸಂಪ್ರದಾಯವನ್ನು ಸೇರಿದ, ಅಲ್ಲಿ ತನ್ನ ದರ್ಶನವನ್ನು ಸ್ಥಾಪಿಸಿದ, ಅದರ ಪ್ರತೀಕ ನಿಯತಿಯ ಮಸ್ಕರದಂಡ.

'ಪ್ರತಿಯೊಂದು ಜೀವಿಗೂ ಈ ಮಸ್ಕರ ದಂಡರನ್ನು ಹೊರುವ ಶಾಪ' ಇದೇ ಮಂಕನ ಮೂಲಭೂತ ದರ್ಶನ.

ಮಂಕ ಕ್ರಮೇಣ ಮಹಾವೀರರ ಕಡುವೈರಿಯಾಗಿಬಿಟ್ಟ. ಅವನು ಮತ್ತೆ ಔಷಧಿ ಪೆಟ್ಟಿಗೆ ಚಿತ್ರಫಲಕ ಹಾಗೂ ಮಸ್ಕರದಂಡವನ್ನು ಹಿಡಿದು ಕಾಶಿ, ಕೋಸಲ, ಮಗಧ ವಿದೇಹಗಳಲ್ಲಿ ವಿಹರಿಸತೊಡಗಿದ. ಕೊನೆಗೆ ಶ್ರಾವಸ್ತಿಯನ್ನೇ ತನ್ನ ಕೇಂದ್ರವನ್ನಾಗಿ ಮಾಡಿಕೊಂಡು ತಾನು ಈ ಅವಸರ್ಪಿಣೀ ಯುಗದ ಚರಮ ತೀರ್ಥಂಕರನೆಂದು ಘೋಷಿಸಿಕೊಂಡು, ಹೀಗೆ ಪ್ರಚಾರ ಮಾಡತೊಡಗಿದ. ಆಜೀವಕ ಗೋಶಾಲಕನೇ ಚರಮಶಾಸ್ತ್ರ ಚರಮ ಆಚಾರ್ಯ. ಆಜೀವಕಮತವೇ ಚರಮ ಮತ

'ನಾಸ್ತಿಪುರುಷಕಾರಂ' ಚರಮಸತ್ಯ. 'ಸಂಸಾರಶುದ್ಧಿ' ಇಲ್ಲವೆ 'ಜನ್ಮವಿರೋಧ'ವೇ ಚರಮನಿಯತಿ, ಆದರೆ ಇದು ಕರ್ಮ ಅಥವಾ ಪುರುಷಾರ್ಥದಿಂದಾಗದು, ತನ್ನಷ್ಟಿಗೆ ತಾನೆ ಆಗುವುದು, ಆದ್ದರಿಂದ ಓ ಭದ್ರಮುಖ ಮಾನಿಸರೇ, ಚರಮಪಾನ, ಚರಮಗಾನ, ಚರಮನೃತ್ಯ, ಚರಮಪುಷ್ಪಾಂಜಲಿ - ಉತ್ಸವ, ಚರಮಸ್ನಾನ, ಚರಮಗಂಧ ಸಿಂಚನ ಹಾಗೂ ಚರಮ ಪುನುಗು ಸಂಗ್ರಾಮದ ನಡುವೆ ನಿಯತಿ ದಂಡವನ್ನು ಹಿಡಿದು ಅನ್ಯ ಶಂಕೆಗಳಿಂದ ಅದಂಡ್ಯರಾಗಿ ನೀವು ನಿರ್ಭಯರಾಗಿ ವಿಚರಿಸಿ.

ಆಗ ಉತ್ತರ ಭಾರತದಲ್ಲಿ ಬೌದ್ಧ, ಜೈನ ಧರ್ಮಗಳಿಂದಾಗಿ ಜನಸಾಮಾನ್ಯರ ಮನಸ್ಸು ಸಂದೇಹ ಸಂದೋಹದಲ್ಲಿ ತೊಳಲಾಡುತ್ತಿತ್ತು. ಸಹಜವಾಗಿಯೇ ಈ ಹೊಸ ದರ್ಶನವೂ ಮುಗ್ಧರನ್ನು ಆಕರ್ಷಿಸಿತು. ಮೊತ್ತ ಮೊದಲು ಗೋಶಾಲಕನಿಗೆ ಆರು ಮಂದಿ ಜೈನರು ಶಿಷ್ಯರಾಗಿ ದೊರೆತರು. ಅವರಿಗೆ ಮಹಾವೀರರ ಶಿಸ್ತು ಒಗ್ಗಲಿಲ್ಲ. ಹೀಗಾಗಿ ಅವರು ಈ ಸಹಜ ಮಾರ್ಗದತ್ತ ಒಲಿದರು. ಒಂದೇ ಕಾಲದಲ್ಲಿ ಇಬ್ಬಿಬ್ಬರು ತೀರ್ಥಂಕರರು ಬಂದುದನ್ನು ಕಂಡು ಇವರಲ್ಲಿ ನಿಜವಾದ ತೀರ್ಥಂಕರ ಯಾರು? ನಕಲಿ ತೀರ್ಥಂಕರ ಯಾರು? ಎಂಬ ಶಂಕೆ ಜನರಲ್ಲಿ ಮೂಡಿತು.

ಒಮ್ಮೆ ಮಂಕ ತನ್ನ ಶಿಷ್ಯರೊಂದಿಗೆ ರಾಜಗೃಹಕ್ಕೆ ಬಂದ, ಮಗಧ ಸಮ್ರಾಟ ಅಜಾತಶತ್ರುವಿನ ಮನದಲ್ಲಿ ಜಿಜ್ಞಾಸೆ ಮೂಡಿತು. ಆತ ಕೇಳಿದ 'ಭನ್ತೇ, ಗಜಾರೋಹಣ, ಅಶ್ವಾರೋಹಣ, ರಥಿಕ ಧನುರ್ಗ್ರಾಹ, ಯುದ್ಧ ಧ್ವಜಧಾರಣ, ವ್ಯೂಹ ರಚನೆ, ವೀರ ರಾಜಪುತ್ರರು, ಮಹಾನಾಗ, ಶೂರ, ಸೂದ, ನಾಪಿತ, ಸ್ನಾಪಿಕ, ಪಾಚಕ, ಮೂಲಕಾರ, ಕುಂಬಾರ, ರಜಕ, ಗಣಕ, ಇವರೆಲ್ಲ ಕಷ್ಟಪಟ್ಟು ದುಡಿಯುತ್ತಾರೆ. ತಮ್ಮ ಹೆಂಡತಿ ಮಕ್ಕಳನ್ನು ಸುಖಿಗಳನ್ನಾಗಿ ಮಾಡುತ್ತಾರೆ. ಶ್ರಮಣರಿಗೆ, ಬ್ರಾಹ್ಮಣರಿಗೆ ದಾನ ನೀಡುತ್ತಾರೆ. ಆದರೆ ಶ್ರಮಣರಾದರೂ ಇಂಥದೇ ಫಲ ಈ ಜನ್ಮದಲ್ಲೇ ಅವರಿಗೆ ದೊರೆಯುವುದೇ? ಹಾಗೆ ದೊರೆಯುವುದಾದರೆ ಆ ಫಲ ಯಾವುದು?'

ಅಜಾತಶತ್ರುವಿನ ಈ ಪ್ರಶ್ನೆ ಬೌದ್ಧಗ್ರಂಥ ಸಾಮಂಜ 'ಫಲಸುತ್ತ'ದಲ್ಲಿ ಉಲ್ಲಿಖಿತವಾಗಿದೆ, ಅದರ ಪ್ರಕಾರ ಸಮ್ರಾಟ ತನ್ನ ಕಾಲದ ಮಂಖಲಿ ಗೋಶಾಲ, ಪುರಾಣಕಶ್ಯಪ, ಅಜಿತಕೇಶಕಂಬಲಿ, ಪರ್ಷ ಕಾಚ್ಚಾಯನ, ಸಂಜಯ ವೇಲೆಟ್ಟಿಪುತ್ರ ಹಾಗೂ ನಿಗ್ರಗಂಥ ಮಹಾವೀರ ಈ ಆರು ಮಂದಿಗೆ ಈ ಪ್ರಶ್ನೆ ಹಾಕಿದನಂತೆ, ಆದರೆ ಅವರಲ್ಲಿ ಯಾರ ಉತ್ತರದಿಂದಲೂ ಅವನಿಗೆ ತೃಪ್ತಿ ದೊರೆಯಲಿಲ್ಲ ಕೊನೆಗೆ ಬುದ್ಧನ ಉತ್ತರ ಅವನಿಗೆ ತೃಪ್ತಿ ನೀಡಿತಂತೆ.

ಮಹಾವೀರರಿಂದ ಬೇರಾದ ಮೇಲೆ ಗೋಶಾಲಕ ಘೋಷಿಸತೊಡಗಿದ, ''ಈ ಅವಸರ್ಪಿಣೀಯುಗದ ತೀರ್ಥಂಕರ ನಾನೊಬ್ಬನೇ.'' ಆದರೆ ಕಾಲಪುರುಷ ಅವನನ್ನು ತೀರ್ಥಂಕರನಲ್ಲ, ಪ್ರತಿತೀರ್ಥಂಕರ ಅಥವಾ ವಿದೂಷಕನ ರೂಪದಲ್ಲಿ ಸ್ವೀಕರಿಸಿದ.

ಕಾಲದ ಮಹಾವೇದಿಕೆಯ ಮೇಲೆ ಮಂಕ ತನ್ನ ಕೊನೆಯ ನಾಟ್ಯವಾಡತೊಡಗಿದ. ಶ್ರಾವಸ್ತಿಯ ಒಬ್ಬ ರೂಪಸಿ ತರುಣಿ, ಒಬ್ಬ ರುಂಭಕಾರ ಕನ್ಯೆಯ ರೂಪ ಲಾವಣ್ಯಕ್ಕೆ ಹಾಗೂ ಧನ ಸಂಪತ್ತಿಗೆ ಮಂಕ ಮರುಳಾದ. ನೀಲವಾರುಣಿಯಂಥ ಆ ಹೆಣ್ಣನ್ನು ಅವನು 'ಹಾಲಾಹಲ' ಎಂದು ಕರೆಯುತ್ತಿದ್ದ. ಬೌದ್ಧ, ಜೈನ ಗ್ರಂಥಗಳಲ್ಲೂ ಆಕೆಯನ್ನು ಇದೇ ಹೆಸರಿನಿಂದ ಕರೆಯಲಾಗಿದೆ. ಆಕೆ ಅಲೌಕಿಕ ಸುಂದರಿ. ಚೆಲುವು ಅವಳ ಮೈಯಿಂದ ತೊಟ್ಟಿಕ್ಕುತ್ತಿತ್ತು. ಅವಳ ಈ ಚೆಲುವಿಗೆ ಮಾರು ಹೋದ ಪ್ರತಿತೀರ್ಥಂಕರ. ಅವನೇನೋ ಹೇಳುತ್ತಿದ್ದ 'ನತ್ಥಿ ಪುರಸ್ಕಾರೇ' ಎಂದು. ಆದರೆ ಅವನು ತನ್ನ ಚರಮ ಪುರುಷಾರ್ಥನನ್ನು ಆ ಕುಂಬಾರ ಹೆಣ್ಣು ಹಾಲಾಹಲಾಳ ರೂಪ ಚಕ್ರದಲ್ಲಿ ಅರಸುತ್ತಿದ್ದ. ಈ ರೀತಿ ಅವನ ದರ್ಶನವೆಲ್ಲ ಕೊನೆಗೆ ಹೆಣ್ಣಿನಲ್ಲಿ ಕೇಂದ್ರಿತವಾಯಿತು.

ಮಂಕ ಭಗವಾನ್ ಮಹಾವೀರರೊಂದಿಗೆ ಅನಿಮಿತ್ತ ವೈರ ಸಾಧಿಸಿದ. ಕಾಲುಕೆರೆದುಕೊಂಡು ಹೋಗಿ ಕದನಕ್ಕಿಳಿದ. 'ತೇಜೋಲೇಶ್ಯಾದ'ದ ಕಥೆಯನ್ನು ನೋಡಿದೆವು. ಈಗ ಅವನು ಅವರ ಶಿಷ್ಯರನ್ನು ಕಾಡತೊಡಗಿದ. ಅವನು ಅವರ ಮೇಲೆ ತೇಜೋಲೇಶ್ಯಾ ಶಕ್ತಿಯನ್ನು ಛೂಬಿಟ್ಟ. ಅದರ ಫಲವಾಗಿ ಅವರಿಬ್ಬರೂ ಜ್ವರ ಪೀಡಿತರಾಗಿ ಅಸುನೀಗಿದರು. ಇದರಿಂದ ಪ್ರಮತ್ತನಾಗಿ ಮಂಕ ಮಹಾವೀರರ ಬಳಿಗೆ ಬಂದು ಅವರನ್ನು ಮೂದಲಿಸಿದ ನಾನು ಗೋಶಾಲಕನಲ್ಲ. ನಿಮ್ಮ ಶಿಷ್ಯ ಗೋಶಾಲಕ

ಎಂದೋ ಸತ್ತುಹೋದ. ಅವನು ಈಗ ದೇವಲೋಕದಲ್ಲಿದ್ದಾನೆ. ನಾನು ಕೌಂಡಿನ್ಯಾಯನ ಗೋತ್ರದ ಉದಾಯಿ ಎಂಬುವನು. ನಾನು ಶರೀರಾಂತರ ಪ್ರವೇಶ ಕಲೆಯನ್ನು ಬಲ್ಲೆ. ನಾನು ಗೋಶಾಲಕನ ಮೃತ ಶರೀರವನ್ನು ಹೊಕ್ಕು ಈ ಏಳನೆಯ ಶರೀರವನ್ನು ಪಡೆದಿದ್ದೇನೆ. ಇದಕ್ಕೆ ಮುಂಚೆ ನಾನು ಗೋಮಾಯ ಪುತ್ರ ಅರ್ಜುನನ ಶರೀರದಲ್ಲಿದ್ದೆ.

ಮಹಾವೀರರು ತಮ್ಮ ಅಮೋಘ ದೃಷ್ಟಿಯಿಂದ ಅವನ ಸುಳ್ಳನ್ನು ಭೇದಿಸಿ ಅಂಥ ಸೋಗುಸಲ್ಲದೆಂದು ಅವನಿಗೆ ಹೇಳಿದರು. ಆದರೆ ಅವನು ಅವರನ್ನೇ ಗೇಲಿ ಮಾಡಿ ಹೊರಟುಹೋದ. ಮತ್ತೆ ಮಾರನೆಯ ದಿನವೇ ಅವನು ಕಾಲು ಕೆರೆದುಕೊಂಡು 'ಯುದ್ಧಂದೇಹಿ' ಎಂಬ ಧೋರಣೆಯಿಂದ ಬಂದ. ಆದರೆ ಮಹಾವೀರರು ವೀತರಾಗಿಗಳು. ಅವರು ಮಿಸುಕಲೂ ಇಲ್ಲ. ಆದರೆ ಮಂಕ ಅಹಂಕಾರದಿಂದ 'ತೇಜೋಲೇಶ್ಯಾ' ಶಕ್ತಿಯನ್ನು ಅವರ ಮೇಲೆ ಛೂಬಿಟ್ಟ. ಅದರ ಜ್ವಾಲೆಯನ್ನು ಕಂಡು ಮಹಾವೀರರ ಶಿಷ್ಯರು ಹಾಹಾಕಾರ ಮಾಡತೊಡಗಿದರು. ಆದರೆ ಆ ಶಕ್ತಿ ಚೇತನ ತರುವಂಥ ಶೀತಲ ಸುಗುಂಧಿತ ಮಹಾವೀರರ ಶರೀರಕ್ಕೆ ಮೂರು ಸುತ್ತು ಪ್ರದಕ್ಷಿಣೆ ಹಾಕಿ ಮರಳಿತು. ಅಷ್ಟೇ ಅಲ್ಲ, ತನ್ನನ್ನು ಛೂಬಿಟ್ಟ ಮಂಕನ ಶರೀರವನ್ನೇ ಹೊಕ್ಕಿತು. ಅದನ್ನು ತಿನ್ನತೊಡಗಿತು. ಆದರೂ ಅವನು ನಿರ್ಲಜ್ಜನಾಗಿ ಹೇಳಿದ, 'ಆಯುಷ್ಮಂತ ಮಹಾವೀರನೆ, ನೀನು ನನ್ನ ತೇಜೋಲೇಶ್ಯಾದಿಂದ ಹತನಾಗಿದ್ದಿಯೇ. ಇನ್ನು ಆರು ತಿಂಗಳೊಳಗಾಗಿ ಸಾಯುವೆ'.

ಮಹಾವೀರರು ಹೇಳಿದರು 'ಗೋಶಾಲಕ ನಾನು ಇನ್ನೂ ಹದಿನಾರು ವರ್ಷ ಜಿನತ್ವದೊಂದಿಗೆ ಈ ಧರಿತ್ರಿಯಲ್ಲಿ ವಿಚರಿಸುವೆ. ಆದರೆ ನೀನು ಕೇವಲ ಏಳು ರಾತ್ರಿಯ ಅತಿಥಿ'.

ಗೋಶಾಲಕ ತನ್ನ ಚರಮ ಆಶ್ರಯಳಾದ ಹಾಲಾಹಲಾ ತರುಣಿಯ ಬಳಿಗೆ ಮರಳಿದ. ಅವನ ದೇಹವೆಲ್ಲ ಪ್ರಚಂಡ ಜ್ವರದಿಂದ ಉರಿಯುತ್ತಿತ್ತು. ಭಯಂಕರ ಪಿತ್ತಜ್ವರ! ಶರೀರದ ತಾಪವನ್ನು ಶಮನಗೊಳಿಸಲು ಅವನು ಮಾವಿನ ಹಣ್ಣನ್ನು ತಿನ್ನತೊಡಗಿದ. ಮತ್ತೆ ತಾಪ ವ್ಯಥೆಯನ್ನು ಮರೆಯಲು ಮದ್ಯಪಾನ ಅನಂತರ ಅರ್ಧವಿಕ್ಷಿಪ್ತ ಶಬ್ದಗಳಲ್ಲಿ ಲಾಲಸೆಯ ಸಾಕ್ಷಾತ್‌ಮೂರ್ತಿ ಆ ಹಾಲಾಹಲಳನ್ನು ಕುರಿತು ಗೀತರಚನೆ ಮಾಡುತ್ತಿದ್ದ, ಆಮೇಲೆ ನರ್ತನ, ಮತ್ತೆ ಸುಗಂಧಿತ ವಾಸಂತೀ ಪುಷ್ಪಗಳ ಅಂಜಲಿಯನ್ನು ಹಾಲಾಹಲಾಗೆ ಅರ್ಪಿಸುತ್ತಿದ್ದ. ಇಷ್ಟೆಲ್ಲ ಮಾಡುತ್ತ ಅವನು ಉರಿಯಿಂದ ಚೀರುತ್ತಿದ್ದಾಗ ಹಾಲಾಹಲಾಳ ದಾಸದಾಸಿಯರು ಅವನ ಮೇಲೆ ಬಿಂದಿಗೆಗಟ್ಟಲೆ ನೀರು ಸುರಿಯುತ್ತಿದ್ದರು, ಇಲ್ಲದಿದ್ದರೆ ಅವನೇ ಛಿದ್ರಧಾರಾಯಂತ್ರದಡಿಯಲ್ಲಿ ಕುಳಿತು ಕೂಗಿಕೂಗಿ ಹೇಳತೊಡಗುತ್ತಿದ್ದ. 'ನಾನು ಅಂತಿಮ ತೀರ್ಥಂಕರ, ಪುಷ್ಪಜಲವನ್ನು ಮಳೆಗರೆಯುವ ಮೇಘಗಳಿಗೆ ಅಪ್ಪಣೆ ಮಾಡುತ್ತೇನೆ. ನಾನು ಇಂದ್ರನಿಗೆ ಆದೇಶ ನೀಡುತ್ತೇನೆ. ಚರಾಚರಗಳೆಲ್ಲ ನನಗೆ ದಿವ್ಯ ಪುಷ್ಪಜಲದಿಂದ ಅಭಿಷೇಕ ಮಾಡಲಿ. ವೈದೇಹೀ ಪುತ್ರ ಅಜಾತ ಶತ್ರುವಿಗೆ ಅವನ ಕ್ಷುದ್ರ ಅನುಚರಗಣಗಳು ಗಂಧಪುಷ್ಪಾಭಿಷೇಕ ಮಾಡುವಂತೆ ಇಂದ್ರ ನನಗೆ ಪುಷ್ಪಾಭಿಷೇಕ ಮಾಡಲಿ'.

ಇಷ್ಟಾದರೂ ಅವನ ದೇಹತಾಪ ಶಮನವಾಗದಿದ್ದರೆ ಅವನು ಅಗರು ಚಂದನಾದಿಗಳನ್ನು ಮೈಗೆ ಲೇಪಿಸಿಕೊಳ್ಳುತ್ತ ತಾನು ದೇವತುಲ್ಯ 'ಗಂಧಹಸ್ತಿ'ಯೆಂದು ಹೇಳಿಕೊಳ್ಳುತ್ತ ಉಪದೇಶ ನೀಡುತ್ತಿದ್ದ, 'ಗಂಧಸಿಂಧುರದಂತೆ ನಿರ್ಲಜ್ಜದಿಂದಿರು. ಓ ಅಚೇಲಕ, ಓ ಆಜೀವಕ ನೀನು ಸೃಷ್ಟಿಯ ಎಲ್ಲ ಸುಗಂಧವನ್ನೂ ಮೈಗೆ ಲೇಪಿಸಿಕೊಳ್ಳುತ್ತ ನಡೆ, ನಿರ್ಲಜ್ಜದಿಂದ ಮತ್ತ ಹಸ್ತಿಯಂತೆ ಅಲೆ.

ದೇಹದಲ್ಲಿ ಉರಿಹೆಚ್ಚಾದಾಗ ಅವನು ಆರ್ತನಾದ ಮಾಡುತ್ತಿದ್ದ , ''ಸಂಗ್ರಾಮ ವಿಕಳ ಸಂಗ್ರಾಮ! ಮಹಾಶಿಲಾಕಂಟಕ ಸಂಗ್ರಾಮ, ಸಂಘಟ್ಟಿಸಿದೆ. ರಥಮುಸಲಗಳ ಹೊಯ್ಲು ! ಆದರೆ ಈ ಇಂದ್ರ ಪ್ರದತ್ತ ವಜ್ರಗಳು, ಈ ಮಹಾಶಿಲಾ ಕಂಟಕಿಗಳು, ಈ ರಥ ಮುಸಲಗಳು ನಿನ್ನ ಕೂದಲನ್ನೂ ಕೊಂಕಿಸಲಾರವು. ತೀರ್ಥಂಕರನಾದ ನಾನು ನಿನಗೆ ಅಭಯ ನೀಡುತ್ತಿದ್ದೇನೆ. ನನ್ನ ಉಪದೇಶ ಕೇಳು - ಚರಮಪಾನವೇ ಸತ್ಯ, ಚರಮಗಾನವೇ ಸತ್ಯ ! ಚರಮ ನೃತ್ಯ ಸತ್ಯ ! ಚರಮ ಅಂಜಲಿ ಕರ್ಮ ಸತ್ಯ ! ಪುಷ್ಪ ಸಂವರ್ತ ಮಹಾಮೇಘದ ಚರಮ ಅಭಿಷೇಕ ಸತ್ಯ, ಚರಮ ಗಂಧಹಸ್ತಿಯಂಥ ವಿಹಾರ ಸತ್ಯ, ಚರಮಮಹಾ ಶಿಲಾಕಂಟಕ ಸಂಗ್ರಾಮ ಸತ್ಯ ಹಾಗೂ ಚರಮ ರಥಮುಸಲದ ಹೊಯ್ಲು ಸತ್ಯ. ಮತ್ತೆ ಚರಮತೀರ್ಥಂಕರ ಸತ್ಯ. ಇದೆಲ್ಲ ಅಷ್ಟ ಚರಮಗಳು ! ಇವುಗಳನ್ನರಿತು ಮನುಷ್ಯ ಅಭ್ಯಾಸ ಪಡೆಯಬಲ್ಲ , ಇದೇ ನನ್ನ ಚರಮ ಅಷ್ಟಾಂಗ ''.

ಮಂಕನ ಈ ಅಷ್ಟಚರಮವಾದ ಬುದ್ಧನ ಅಷ್ಟಾಂಗ ಮಾರ್ಗದ ಸಂಯಮ ಪ್ರಧಾನ ಉಪದೇಶಕ್ಕೆ ವಿಲೋಮವಾದ ಸ್ವಚ್ಛಂದಮಾರ್ಗ.

ಈ ರೀತಿ ಆಜೀವಕರ ದರ್ಶನ ನಿಯತಿವಾದ, ಧರ್ಮ ನಿಷ್ಕರ್ಮವಾದ ಆಚಾರ ಅಷ್ಟಚರಮವಾದ. ಆದರೆ ಈ ಅಷ್ಟಚರಮವಾದ ಮಂಕಿನ ಜ್ವರಪ್ರಲಾಪ ಅಷ್ಟೆ. ಅವನ ದುಃಸ್ವಪ್ನ ಪೀಡಿತ ಮನದ ಕಳವಳ. ಆದರೆ ಅವನ ಈ ದುಃಸ್ವಪ್ನ ಪೀಡಿತ ಪ್ರಲಾಪದ ಕೆಲವು ಮಾತುಗಳು ಮುಂದೆ ನಿಜವಾಗಿ ಪರಿಣಮಿಸಿದವು. ಆದ್ದರಿಂದ ಅವನ ಶಿಷ್ಯರು ಅವನ ಈ ಪ್ರಲಾಪವನ್ನು ಗಂಭೀರವಾಗಿ ತೆಗೆದುಕೊಂಡರು.

ಮಂಕ ಕಂಡ ಕನಸು ನೂರಕ್ಕೆ ನೂರರಷ್ಟು ನಿಜವಾದದ್ದು ನಿಜಕ್ಕೂ ಒಂದು ವಿಸ್ಮಯವೇ ಸರಿ, ಅಜಾತ ಶತ್ರು ಮತ್ತು ಲಿಚ್ಛವಿಗಳ ನಡುವೆ ಭಯಂಕರ ಕಾಳಗ ಕೈಗಟ್ಟಿತು, ಅಜಾತ ಶತ್ರು ಆ ಯುದ್ಧದಲ್ಲಿ 'ಮಹಾಶಿಲಾ ಕಂಟಕ' ಹಾಗೂ 'ರಥಮುಶಲ' ಯಂತ್ರ ಆಯುಧಗಳನ್ನು ಬಳಸಿದ ಕೋಸಲ ವಿದೇಹದ ಗಣಸಂಘ ಧನುರ್ಧರ ಲಿಚ್ಛವಿಗಳ ನೇತೃತ್ವದಲ್ಲಿ ಮಗಧ ಸಾಮ್ರಾಟ ಅಜಾತ ಶತ್ರುವಿನೊಡನೆ ಐದು ವರ್ಷಗಳ ಕಾಲ ದೀರ್ಘ ಯುದ್ಧ ಮಾಡಿದರು. ಅಂತಿಮ ಯುದ್ಧದಲ್ಲಿ ಮಹಾಶಿಲಾ ಕಂಟಕ ಹಾಗೂ ರಥಮುಶಲ ಯಂತ್ರಗಳ ಪ್ರಯೋಗದ ಮೂಲಕ ಅಜಾತ ಶತ್ರು ವಿಜಯಗಳಿಸುವ ಉತ್ತರ ಭಾರತದಲ್ಲಿ ಗಣತಂತ್ರ ಈ ರೀತಿ ಪರಾಜಯಗೊಂಡಿತು.

ಮಂಕನ ಅವಸಾನ ಸಮೀಪಿಸುತ್ತ ಬಂತು. ಅವನು ಹಾಲಾಹಲಾಳೆದುರಿಗೆ ಮಣ್ಣಿನ ಪಾತ್ರೆಯಲ್ಲಿ ತುಂಬಿ ತುಂಬಿ ಪಾನ ಮಾಡುತ್ತಿದ್ದ, ಪ್ರಲಾಪ ಮಾಡುತ್ತಿದ್ದ. 'ಚರಮೇ ಪಾನೇ, ಚರಮೆನಟ್ಟೇ, ಚರಮೇ ಅಂಜಲಿ ಕ್ರಮ್ಮೇ...!' ಅವನು ಮಾವಿನ ಹಣ್ಣಿನ ರಸ ಹೀರುತ್ತಿದ್ದ, ಮೈಮೇಲೆ ಪುಷ್ಪಮಿಶ್ರಿತ ತಣ್ಣೀರನ್ನು ಸುರಿದುಕೊಳ್ಳುತ್ತಿದ್ದ, ಅನಂತರ ತರುಣಿ ಹಾಲಾಹಲಾಳೆದುರು ವಿನತನಾಗಿ ಬೀಳುತ್ತಿದ್ದ ; ಅಥವಾ ಕೆಲವೊಮ್ಮೆ ವೀಣೆಯನ್ನು ಹಿಡಿದುಕೊಂಡು ಯಾವುದೋ ರಾಗದ ಒಂದು ಚರಣ ನುಡಿಸುತ್ತಿದ್ದ. ಕೊನೆಗೆ ವಿಕೃತಜ್ವರಾಲಾಪದ ಸ್ವರದಲ್ಲಿ ಕಣ್ಣು ಕುಣಿಸಿ, ತಲೆಯಲ್ಲಾಡಿಸುತ್ತಿದ್ದ. ಕೊನೆಗೆ ಸುಸ್ತಾಗಿ ನೆಲಕ್ಕುರುಳುತ್ತಿದ್ದ. ಈ ರೀತಿ ದೃಶ್ಯ ನಡೆಯುತ್ತಿತ್ತು. ಅದೇ ಹೊತ್ತಿಗೆ ಅವನ ಒಬ್ಬ ಪ್ರಿಯಶಿಷ್ಯ ವಟುಕ ದಿಶಾಚರ ಅವನ ಬಳಿಗೆ ಬಂದು ಬಿನ್ನವಿಸಿಕೊಂಡ, ''ಮಹಾ ಮಂಕ ಒಂದು ಪ್ರಶ್ನೆ ನನ್ನನ್ನು ಕಾಡುತ್ತಿದೆ. ಅದರ ಸಮಾಧಾನಕ್ಕಾಗಿ ನಿನ್ನಲ್ಲಿಗೆ ಬಂದಿದ್ದೇನೆ''.

ಮಂಕನ ಧ್ಯಾನ ಭಂಗವಾಯಿತು. ಅವನು ಕ್ರುದ್ಧನಾಗಿ ತನ್ನ ಬರ್ಪರವನ್ನು ಅವನತ್ತ ಎಸೆದು ಹೇಳಿದ ''ನಡೆ, ತೊಲಗಾಚೆ ಇಲ್ಲಿಂದ. ಪ್ರಶ್ನೆಯಂತೆ, ಸಮಾಧಾನವಂತೆ ! ಅಯ್ಯೋ ಮೂರ್ಖ, ನನ್ನನ್ನು ಕೇಳುವೆಯಾ? ಈ ವೀಣೆಯನ್ನು ಕೇಳು. ಟಿಂಗ್, ಟಿಂಗ್, ಟಾಂಗ್, ಮೂರ್ಖ ವೀಣೆಯನ್ನು ಬಾರಿಸು ಎಲ್ಲ ಉತ್ತರವೂ ನಿನಗೆ ವೀಣೆಯಿಂದ ದೊರೆಯುತ್ತದೆ. ಅನಂತರ ಗೋಶಾಲಕ ವೀಣೆಯ ತಂತಿಗಳನ್ನು ಟಿಂಗ್ ಟಂಗ್ ಎಂದು ಮಿಡಿಯುತ್ತ ತನ್ನ ಅಷ್ಟ ಚರಮವಾದವನ್ನು ಪುನರುಚ್ಚರಿಸಿದ ಚರಮೇಪಾನೇ (ಟಿಂಗ್) ಚರಮೇನಟ್ಟೇ (ಟಿಂಗ್) ಚರಮೇ ಗಯೇ(ಟಿಂಗ್) ಚರಮೇ ಅಂಜಲಿಕಮ್ಮೆ (ಟಿಂಗ್) ಟಿಂಗ್ ಚರಮೇ ಪುಷ್ಪ ಸಂವರ್ತನಮಹಾ ಮೇಘೇ (ಟಿಂಗ್ ಟಿಂಗ್) ಚರಮೇ ಶ್ರೇಯಸ್‌ನಾಗಗಂಧಹಸ್ತೀ (ಟಿಂಗ್ ಟಿಂಗ್) ಚರಮೇ ಮಹಾಶಿಲಾ ಕಂಟಕ ಸಂಗ್ರಾಮೇ ಚರಮರಥಮುಸಲೇ (ಟಿಂಗ್ ಟಿಂಗ್) ಕೊನೆಗೆ ಚರಮೇ ತೀರ್ಥಂಕರೇ.

ಈ ರೀತಿ ಮಂಕ ವೀಣೆಯನ್ನು ಮಿಡಿದು, ತನ್ನ ದರ್ಶನವನ್ನು, ಐತಿಹಾಸಿಕ ದುಸ್ವಪ್ನವನ್ನು ಬಡಬಡಿಸಿದ.

ಅವನ ಅಂತಿಮ ಉಪದೇಶವನ್ನು ಪಡೆದು ಶಿಷ್ಯ ಧನ್ಯನಾಗಿ ಬಂದ ದಾರಿ ಹಿಡಿದ.

ಅದೇ ದಿನ ರಾತ್ರಿ ಮಂಕನ ಜ್ವರ ಇನ್ನೂ ಉಲ್ಬಣಿಸಿತು; ಅವನ ಮೈ ಕೆಂಡದಂತೆ ಉರಿಯುತ್ತಿತ್ತು. ಮಹಾವೀರರ ವಾಣಿಯಂತೆ ಅದು ಅವನ ಕೊನೆಯ ರಾತ್ರಿ. ಅಂದಿಗೆ ಏಳು ದಿನದ ಹಿಂದೆ, ಅವನು ಮಹಾವೀರರ ಮೇಲೆ ಮಂತ್ರ ಪ್ರಯೋಗ ಮಾಡಿದ್ದ ಇಂದು ಅವನ ಕಾಳರಾತ್ರಿ. ಅವನು ತನ್ನ ಶಿಷ್ಯರನ್ನು ಸೂರ್ಯಾಸ್ತವಾದ ಮೇಲೆ ಕರೆದು ಹೇಳಿದ, 'ನೋಡಿರಿ, ಇಂದು ನಾನು ಕಾಲಕವಲಿತನಾದರೆ ನನ್ನ ಶವವನ್ನು ಸುಗಂಧಿತ ಗಂಧೋದಕದಲ್ಲಿ ತೊಳೆಯಿರಿ, ಚಂದನವನ್ನು ನನ್ನ

ಮೈಗೆ ಬಳಿಯಿರಿ, ಬಹುಮೂಲ್ಯವಾದ ಹಂಸದುಕೂಲವನ್ನು ಉತ್ತರೀಯವಾಗಿ ಅಧೋವಸ್ತ್ರವಾಗಿ ತೊಡಿಸಿ ನಾನಾ ರೀತಿಯಲ್ಲಿ ಅದನ್ನು ಅಲಂಕರಿಸಿ ರಾಜಮಾರ್ಗದಲ್ಲಿ ಮೆರವಣಿಗೆಯಲ್ಲಿ ಕೊಂಡೊಯ್ಯಿರಿ. ಶವಯಾತ್ರೆಯಲ್ಲಿ ಹೀಗೆ ಘೋಷಿಸಿ ''ಮಂಕ ಪುತ್ರ ಭಗವಾನ್ ಗೋಶಾಲಕ ಅವಸರ್ಪಿಣೀಯುಗದ ಚರಮ ತೀರ್ಥಂಕರ!''.

ಶಿಷ್ಯರು ಅದರಂತೆ ನಡೆಸಲು ತೀರ್ಮಾನಿಸಿದರು. ಹಾಲಾಹಲಾಳ ಹತ್ತಿರ ಅಪಾರ ಧನ ಸಂಪತ್ತಿತ್ತು. ಆದ್ದರಿಂದ ಶೀಘ್ರವೇ ಎಲ್ಲ ಸಾಮಗ್ರಿಗಳೂ ಸಿದ್ಧವಾದವು. ಎಲ್ಲರೂ ಚರಮ ಅನಿವಾರ್ಯ ಘಟನೆ ಮೃತ್ಯುವಿನ ನಿರೀಕ್ಷೆಯಲ್ಲಿ ಕುಳಿತರು.

ರಾತ್ರಿ ಉರುಳಿದಂತೆಲ್ಲ ಜ್ವರತಾಪ ಹೆಚ್ಚುತ್ತ ಹೋಯಿತು ; ಮಂಕನ ಪ್ರಲಾಪವೂ ಹೆಚ್ಚಿತು. ಜೈನ ಗ್ರಂಥಗಳ ಪ್ರಕಾರ ಕೊನೆಗಾಲದಲ್ಲಿ ಮಂಕನಿಗೆ ಸತ್ಯಗೋಚರಿಸಿತು, ಭಗವಾನ್ ಮಹಾವೀರರ ಕರುಣ ಶ್ರಾವಣ ಅವನನ್ನು ತೋಯಿಸಿತು. ಅವನಿಗೆ ಪಶ್ಚಾತ್ತಾಪವಾಯಿತು. ಅವನು ಅವಬದ್ಧ ಕಂಠದಿಂದ ಹೇಳ ತೊಡಗಿದ, ''ಅಯ್ಯೋ, ನಾನು ಜಿನನಲ್ಲದಿದ್ದರೂ ಜಿನೇಂದ್ರನೆಂದು ಜಂಭ ಕೊಚ್ಚಿದೆ. ನನ್ನ ಬಾಳೆಲ್ಲ ಹುಸಿ, ಮೋಸ ! ಬಾಳಿನುದ್ದಕ್ಕೂ ಮುಖವಾಡ ತೊಟ್ಟು ಬಹುರೂಪಿಯಾಗಿ ಕುಣಿದೆ. ನಾನು ಅವಸರ್ಪಿಣೀಯುಗದ ತೀರ್ಥಂಕರನಲ್ಲ, ವಿದೂಷಕ, ತೀರ್ಥಂಕರರೆಂದರೆ ಭಗವಾನ್ ಮಹಾವೀರರು, ಅವರು ಪರಮ ಕಾರುಣಿಕ ಜಿನೇಂದ್ರರು''.

ಅನಂತರ ಅವನು ಆಜೀವಕ ಮತದ ಪ್ರಧಾನ ಶಿಷ್ಯರನ್ನು ಕರೆದು ಹೇಳಿದ, ''ನೋಡಿ, ನಾನು ಜೀವನದುದ್ದಕ್ಕೂ ಪಾಪ ಮಾಡುತ್ತಿದ್ದೆ. ತೀರ್ಥಂಕರನಲ್ಲದಿದ್ದರೂ ತೀರ್ಥಂಕರನೆಂಬ ಸೋಗು ಹಾಕಿದೆ. ಆದ್ದರಿಂದ ಈಗ ನಾನು ಕಾಲವಾದರೆ ನನ್ನ ಎಡಗಾಲಿಗೆ ಹಗ್ಗ ಕಟ್ಟಿ ಮೂರು ಸಾರಿ ಉಗುಳಿ, ನನ್ನ ಮುಖಕ್ಕೆ ಮೂರು ಸಾರಿ ಉಗುಳಿ, ಅನಂತರ ಶ್ರಾವಸ್ತಿಯ ರಾಜಮಾರ್ಗದಲ್ಲಿ ನನ್ನನ್ನು ಎಳೆದುಕೊಂಡು ಹೋಗಿ. ಹೀಗೆ ಹೇಳುತ್ತ ಹೋಗಿ - ಮಂಕ ಜಿನನಲ್ಲ, ತೀರ್ಥಂಕರನಲ್ಲ, ತೀರ್ಥಂಕರ ಭಗವಾನ್ ಮಹಾವೀರರು. ಈ ಗೋಶಾಲಕ ಶ್ರವಣ ಘಾತುಕ, ಸತ್ಯಘಾತಕನಾಗಿದ್ದ, ವಿದೂಷಕನಾಗಿದ್ದ .''

ಶಿಷ್ಯರು ಅವನ ಅಭಿಲಾಷೆಯನ್ನು ಈಡೇರಿಸಿದರು. ಅವನ ಎಡಗಾಲಿಗೆ ಹಗ್ಗ ಕಟ್ಟಿ ಮುಖದ ಮೇಲೆ ಮೂರು ಸಲ ಉಗುಳಿದರು. ಅನಂತರ ಮೇಲೆ ಹೇಳಿದಂತೆ ಮೂರು ಸಾರಿ ಘೋಷಿಸಿದರು. ಆ ತರುವಾಯ ಶವವನ್ನು ಮತ್ತೊಮ್ಮೆ ಗಂಧೋದಕದಿಂದ ತೊಳೆದರು. ಚಂದನಲೇಪಿಸಿದರು, ಹಂಸದ ಗುರುತಿನ ಉತ್ತರೀಯ ಹೊದಿಸಿದರು. ಅಮೂಲ್ಯ ಕುಂಡಲ, ತೋಳಬಂದಿ ಮೊದಲಾದ ಒಡವೆ ತೊಡಿಸಿ ಶವವನ್ನು ಅಲಂಕರಿಸಿದ ಪುಷ್ಪ ರಥದಲ್ಲಿರಿಸಿ ವೈಭವದಿಂದ ಮೆರವಣಿಗೆ ಮಾಡಿದರು. ಹಾದಿಯಲ್ಲಿ ಹೋಗುವಾಗ 'ಅಜೀವಕ ಗುರು ಮಂಕ ಗೋಶಾಲಕನಿಗೆ ಜಯವಾಗಲಿ' ಎಂದು ಘೋಷಿಸಿದರು. ಕೊನೆಗೆ ಅವನ ಅಂತ್ಯಕ್ರಿಯೆ ಮಾಡಿದರು.

ಈ ರೀತಿ ಎರಡೂವರೆ ಸಾವಿರ ವರ್ಷ ಹಿಂದೆ ಮೂಡಿದ ಒಬ್ಬ ಪ್ರತಿ ತೀರ್ಥಂಕರನ ಪ್ರತಿಭೆ ಅಸ್ತಂಗತವಾಯಿತು. ಭಾರತೀಯ ದರ್ಶನದಲ್ಲಿ ಮಂಕ ಚಾರ್ವಾಕರೊಂದಿಗೆ ಭೌತಿಕವಾದಿ ನಾಸ್ತಿಕ ದಾರ್ಶನಿಕ ಎಂದು ಹೇಳಿದೆ. ಅವನನ್ನು ಆಧುನಿಕ ಅರ್ಥದಲ್ಲಿ ಅಸ್ತಿತ್ವವಾದಿ, ಕಾಮೂ, ಸಾರ್ತ್ರೆ ಮೊದಲಾದವರ ಪೂರ್ವ ಪುರುಷನೆನ್ನಬಹುದು. ಜೈನ, ಬೌದ್ಧ, ಬ್ರಾಹ್ಮಣರೆಲ್ಲ ಮಂಕನದರ್ಶನವನ್ನು ಹಿಡಿದು ಎಳೆದಾಡಿದ್ದಾರೆ. ಮಂಕ ಜೈನ ಪರಂಪರೆಯಂತೆ ಕೊನೆಯಲ್ಲಿ ಪಶ್ಚಾತ್ತಾಪ ಪಟ್ಟ ಕಥೆ ಬರಿಯ ಕಥೆಯಾಗಿರಬೇಕು; ಏಕೆಂದರೆ ಆತನದು ಸ್ವತಂತ್ರ ಮನೋವೃತ್ತಿ. ಎಂಥ ಮಹಾಮಹಿಮರನ್ನೂ ಲಕ್ಷಿಸದೆ ತನ್ನ ವಿಚಾರಗಳನ್ನು ನಿರ್ಭಯನಾಗಿ ಪ್ರಚಾರ ಮಾಡಿದ ಧೀಮಂತ. ಆತನ ವಿಚಾರವನ್ನು ನಾವು ಒಪ್ಪಲಿ, ಬಿಡಲಿ; ಅವೈದಿಕ, ಸ್ವತಂತ್ರ ವಿಚಾರ ಪರಂಪರೆಯೇನು ಎನ್ನುವುದನ್ನು ಅರ್ಥಮಾಡಿಕೊಳ್ಳುವುದರಲ್ಲಿ ಆತನ ದರ್ಶನ ಸಹಕಾರಿ. ಅಜೀವಕರು ದಕ್ಷಿಣ ಭಾರತದಲ್ಲೂ ಇದ್ದರೆಂಬುದನ್ನು ಮೇಲೆ ನೋಡಿದೆವು. ಕನ್ನಡನಾಡಿನಲ್ಲೂ ಅದರ ಪ್ರಚಾರ ನಡೆದಿತ್ತೇ? ಮಂಕನಿಗೂ ಕನ್ನಡದ ಮಂಕಿಗೂ ಏನಾದರೂ ಸಂಬಂಧವಿದೆಯೇ? ಎಂಬ ಬಗಗೆ ವಿದ್ವಾಂಸರು ವಿಚಾರ ಮಾಡಬೇಕು.

ಕನ್ನಡ ಅಂಕಣ ಸಾಹಿತ್ಯ

ಡಾ॥ ಸದಾನಂದ ಕನವಳ್ಳಿ

ಇತ್ತೀಚಿನ ದಿನಗಳಲ್ಲಿ ಯಾವುದೇ ಭಾಷೆಯ ದಿನಪತ್ರಿಕೆ, ನಿಯತಕಾಲಿಕೆಯಲ್ಲಿ ಅಂಕಣಬರಹ ಇದ್ದೇ ಇರುವುದನ್ನು ಗಮನಿಸಬಹುದು. ಇದು ಅಂಕಣಬರಹದ ಜನಪ್ರಿಯತೆಯನ್ನು ತೋರಿಸುತ್ತದೆ. ಓದುಗರು ಇಷ್ಟೊಂದಾಗಿ ಇಷ್ಟಪಡದಿದ್ದರೆ ಅಂಕಣ ಬರಹ ಇಷ್ಟೊಂದು ವ್ಯಾಪಕವಾಗಿ ಪ್ರಕಟಗೊಳ್ಳುತ್ತಿತ್ತೇ? ಅಂಕಣ ಬರಹ ಎಷ್ಟೊಂದು ವ್ಯಾಪಕವಾಗಿದೆಯೆಂದರೆ ಅದು ಯಾವುದೆ ಪತ್ರಿಕೆಯ ಅವಿಭಾಜ್ಯ ಅಂಗವಾಗಿ ಬಿಟ್ಟಿದೆ. ಅದೊಂದು ಸಾಹಿತ್ಯ ಪ್ರಕಾರವೆಂದೇ ಗುರುತಿಸಲ್ಪಟ್ಟಿದೆ.

ಅಂಕಣ ಬರಹವೆಂದರೆ ಒಂದು ಪತ್ರಿಕೆಯಲ್ಲಿ ನಿರ್ದಿಷ್ಟ ಸ್ಥಳಾವಕಾಶದಲ್ಲಿ ಪ್ರತಿ ಸಂಚಿಕೆಯಲ್ಲೂ ಒಂದಿಲ್ಲೊಂದು ವಿಷಯ ಕುರಿತು ಬರೆಯುವುದು. ಇದರಲ್ಲಿ ಎರಡು ವಿಧ. ಒಂದು, ಒಂದೇ ವಿಷಯದ ಬೇರೆ ಬೇರೆ ಸಮಸ್ಯೆಗಳನ್ನು ಕುರಿತು ಬರೆಯುವಂಥದ್ದು. ಉದಾಹರಣೆಗೆ ಕ್ರೀಡೆ, ಆರೋಗ್ಯ, ಸಿನೆಮಾ, ಕೃಷಿ, ಸಾಹಿತ್ಯ, ಸಂಸ್ಕೃತಿ, ರಾಜಕಾರಣ, ಸಾಮಾಜಿಕ ಸಮಸ್ಯೆಗಳು, ಆರ್ಥಿಕ ಚಿಂತನೆ, ವಿಜ್ಞಾನ ಇತ್ಯಾದಿ. ಕ್ರೀಡಾ ಅಂಕಣಕಾರ ಪ್ರತಿ ಸಂಚಿಕೆಯಲ್ಲಿ ಕ್ರೀಡೆ ಕುರಿತೇ ಬರೆಯುವುದು, ಕೃಷಿ ಅಂಕಣಕಾರ ಕೃಷಿ ಕುರಿತೇ ಬರೆಯುವುದು ಇತ್ಯಾದಿ. ಇನ್ನೊಂದು, ಅಂಕಣಕಾರನಿಗೇ ವಿಷಯದ ಆಯ್ಕೆಯ ಸ್ವಾತಂತ್ರ್ಯ ನೀಡುವುದು. ಅಂದರೆ, ಅಂಕಣಕಾರ ತನ್ನಿಷ್ಟದ ಪ್ರಚಲಿತ ಸಮಸ್ಯೆ, ಸಾಹಿತ್ಯ, ಸಾಂಸ್ಕೃತಿಕ ವಿದ್ಯಮಾನ ಅಥವಾ ಯಾವುದೇ ಮಹತ್ವದ ವಿಷಯವನ್ನು ತನ್ನ ಲೇಖನದ ವಸ್ತುವಾಗಿಸಿಕೊಳ್ಳಬಹುದು. ಎರಡನೆಯ ವಿಧದಲ್ಲಿ ಅಂಕಣಕಾರ ಎಲ್ಲ ವಿಷಯಗಳ ಬಗೆಗೂ ತಿಳಿದಿರಬೇಕಾಗುತ್ತದೆ. ಇಲ್ಲವೆ ತಿಳಿದುಕೊಳ್ಳಬೇಕಾಗುತ್ತದೆ. ಒಂದನೆಯ ವಿಧಕ್ಕೆ ತಮ್ಮ ಕ್ಷೇತ್ರದಲ್ಲಿ ಮಾತ್ರ

ವಿಶೇಷಜ್ಞನಿದ್ದರೆ ಆಯಿತು. ಎರಡನೆಯದಕ್ಕೆ ಹರವಾದ ಓದು, ವಿಧವಿಧ ಲೋಕಾನುಭವ ಅಗತ್ಯ. ಒಂದೆನೆಯದನ್ನು ಆಯಾ ಕ್ಷೇತ್ರದಲ್ಲಿ ಆಸಕ್ತ ಇದ್ದವರು ಮಾತ್ರ ಓದಿದರೆ ಎರಡನೆಯದನ್ನು ಸಾಮಾನ್ಯ ಆಸಕ್ತಿ ಇದ್ದವರೆಲ್ಲ ಓದುವರು. ಉದಾಹರಣೆಗೆ, ಆರ್ಥಿಕ ವಿಷಯ ಕುರಿತ ಅಂಕಣವನ್ನು ಆರ್ಥಿಕ ಕ್ಷೇತ್ರದಲ್ಲಿ ಆಸಕ್ತಿ ಹೊಂದಿದವರು ಮಾತ್ರ ಓದುವರು. ಆದರೆ, ಅಂಕಣಕಾರ ಶ್ರೀ ಸಾಮಾನ್ಯನನ್ನೂ ತಟ್ಟುವ ರೀತಿಯಲ್ಲಿ ಬರೆದರೆ ಸಾಮಾನ್ಯ ಓದುಗನೂ ಆ ಅಂಕಣವನ್ನು ಓದಿಯಾನು.

ಅಂಕಣ ಬರಹ ಯಾವ ಸಾಹಿತ್ಯ ಪ್ರಕಾರಕ್ಕೆ ಸೇರಿದ್ದು? ಎಂಬ ಪ್ರಶ್ನೆಗೆ ಪ್ರಬಂಧ, ಹರಟೆ ಪ್ರಕಾರಕ್ಕೆ ಸೇರಿದ್ದು ಎಂದೇ ಉತ್ತರ ಹೇಳಬೇಕಾಗುತ್ತದೆ. ಪ್ರಬಂಧಕಾರನಂತೆ ಅಂಕಣಕಾರನೂ ತಾನು ಆಯ್ದುಕೊಂಡ ವಿಷಯದ ನಾನಾ ಮಗ್ಗುಲುಗಳನ್ನು ತಾರ್ಕಿಕವಾಗಿ ವಿವೇಚಿಸಬೇಕಾಗುತ್ತದೆ. ಕ್ರಮಬದ್ಧವಾಗಿ ಹೆಣೆಯಬೇಕಾಗುತ್ತದೆ. ಆಕರ್ಷಕವಾಗಿ ನಿರೂಪಿಸಬೇಕಾಗುತ್ತದೆ. ಪ್ರಬಂಧಕಾರನಿಗೆ ಸ್ಥಳ ಮಿತಿ ಇರುವುದಿಲ್ಲ. ಆದರೆ, ಅಂಕಣಕಾರ ಸ್ಥಳ ಮಿತಿಯಿಲ್ಲದೆ ಬರೆಯಲು ಪತ್ರಿಕೆಯ ಪುಟ ಸೀಮಿತಿಯಲ್ಲಿ ಅವಕಾಶ ದೊರೆಯದು. ಪತ್ರಿಕೆಯಲ್ಲಿ ನಾನಾ ವಿಷಯಗಳನ್ನು ಕುರಿತು ಲೇಖನಗಳಿರುವುದರಿಂದ ಅವೆಲ್ಲಕ್ಕೂ ಅದರ ಒಟ್ಟು ಪುಟಸಂಖ್ಯೆಯ ಮಿತಿಯಲ್ಲಿಯೆ ಅವಕಾಶವುಂಟು. ಅಂತೆಯೆ, ಅಂಕಣಕ್ಕೂ ಇಂತಿಷ್ಟು ಶಬ್ದಗಳು ಎಂಬ ಮಿತಿ ಇರುತ್ತದೆ. ಆ ಮಿತಿಯೊಳಗೇ ಅಂಕಣಕಾರ ತನ್ನ ಜಾಣ್ಮೆ ತೋರಬೇಕಾಗುತ್ತದೆ. ಹೀಗಾಗಿ, ಪ್ರಬಂಧಕಾರನಿಗಿದ್ದ ಸ್ಥಳಾವಕಾಶ ಸ್ವಾತಂತ್ರ್ಯ ಅಂಕಣಕಾರನಿಗೆ ಇಲ್ಲದಿರುವುದರಿಂದ ಅವನ ಕಾರ್ಯ ಕಷ್ಟಕರ. ಹತ್ತು ಪುಟಗಳಲ್ಲಿ ಹೇಳುವುದನ್ನು ಒಂದೋ ಎರಡೋ ಪುಟಗಳಲ್ಲಿ ಹೇಳಬೇಕಾಗುತ್ತದೆ. ಅಲ್ಲದೆ, ಪ್ರಬಂಧಕಾರ ತನಗೆ ಮೂಡು ಬಂದಾಗ ಲೇಖನಿ ಎತ್ತಿಕೊಳ್ಳಬಹುದು, ವಿಚಾರಲಹರಿ ಮುಂದುವರಿಯುವವರೆಗೂ ಬರೆಯಬಹುದು. ಬೇಸರ ಬಂದರೆ ಲೇಖನಿ ಕೆಳಗಿಡಬಹುದು. ಮತ್ತೆ ಯಾವಾಗಲೋ ಮೂಡು ಮರಳಿದಾಗ ಪುನಃ ಬರಹ ಮುಂದುವರಿಸಬಹುದು. ಅಂಕಣಕಾರನಿಗೆ ಸಮಯ ಸ್ವಾತಂತ್ರ್ಯವಿಲ್ಲ. ಅವನು ಮೂಡಿಗಾಗಿ ಕಾಯುವಂತಿಲ್ಲ. ಸದಾ ಮೂಡಿನಲ್ಲಿದ್ದು ಬರೆಯಲು ಸನ್ನದ್ಧನಾಗಿರಬೇಕು. ನಿರ್ದಿಷ್ಟ ಸಮಯಕ್ಕೆ ಅಂಕಣ ಬರಹ ಕಳಿಸಲೇಬೇಕು. ಆದುದರಿಂದ, ಅಂಕಣಕಾರ ಹೆಚ್ಚು ಬರಹ ಶಿಸ್ತು, ಕಟ್ಟುನಿಟ್ಟು ಮೈಗೂಡಿಸಿಕೊಳ್ಳಬೇಕಾಗುತ್ತದೆ.

ಪರಂಪರೆ

ಕನ್ನಡ ಅಂಕಣ ಸಾಹಿತ್ಯಕ್ಕೆ ಸುದೀರ್ಘ ಪರಂಪರೆಯಿದೆ. ಹಾಗೆ ನೋಡಿದರೆ, ಅದು ಕನ್ನಡ ಪ್ರತಿಕೋದ್ಯಮ ಹುಟ್ಟಿದಂದಿನಿಂದಲೆ ಆರಂಭಗೊಂಡಿದೆ. ಪ್ರಥಮ ಕನ್ನಡ ಪತ್ರಿಕೆ 'ಮಂಗಳೂರು ಸಮಾಚಾರ' ಜುಲೈ ೧, ೧೮೪೩ರಂದು ಉದಯಿಸಿತು. ಅಂದಿನಿಂದಲೆ ಅದರ ಸಂಪಾದಕ ಹರ್ಮನ್ ಮೊಗ್ಲಿಂಗ್ 'ನೈತಿಕ ವಿಚಾರಗಳು' ಎಂಬ ಅಂಕಣ ಬರೆಯಲಾರಂಭಿಸಿದರು. ಅವರ ನೈತಿಕ ವಿಚಾರಗಳು ಕ್ರೈಸ್ತ ಧರ್ಮದ ಪ್ರಚಾರವೇ ಆಗಿದ್ದವೆಂದು ಬೇರೆ ಹೇಳಬೇಕಿಲ್ಲ. ಅಷ್ಟೇ ಪ್ರಾಚೀನವಾದುದು ಮಂಗಳೂರಿನ 'ಕಂಠೀರವ' ಪತ್ರಿಕೆಯಲ್ಲಿ ಹುರಳೀ ಭೀಮರಾಯರು ಬರೆಯುತ್ತಿದ್ದ ಅಂಕಣ 'ರಾಷ್ಟ್ರಬಂಧು'ವಿನಲ್ಲಿ ಕಡೆಂಗೋಡ್ಲು ಶಂಕರಭಟ್ಟರು 'ಅಲ್ಲಲ್ಲಿ ಇಷ್ಟಿಷ್ಟು' ಎಂಬ ಅಂಕಣವನ್ನು ಬರೆಯುತ್ತಿದ್ದರು. ಅದೇ 'ರಾಷ್ಟ್ರಬಂಧು'ವಿನಲ್ಲಿ ಸನಾತನಿ ಎಂಬ ಕಾವ್ಯನಾಮದಿಂದ ವಾಸುದೇವ ಉಪಾಧ್ಯಾಯರು ಹಾಸ್ಯ ಚಟಾಕಿಯ ಅಂಕಣ ಬರೆಯುತ್ತಿದ್ದರು. 'ಜಯಂತಿ'ಯಲ್ಲಿ ಶ್ರೀರಂಗರು ಬರೆಯುತ್ತಿದ್ದ 'ಮಂಗನ ಮಲ್ಲಿನಾಥ' ರಾಜಕೀಯ ವಿಷಯ ಕುರಿತದ್ದು. ಶ್ರೀರಂಗರ ವ್ಯಂಗ್ಯ, ಟೀಕೆ ಅಂಕಣಬರಹಕ್ಕೆ ಹೊಸ ಆಯಾಮ ಒದಗಿಸಿತು.

ಅಂಕಣ ಬರಹಕ್ಕೆ ಸ್ಥಾನಗೌರವ ತಂದುಕೊಟ್ಟವರು ಸಿದ್ಧವನಹಳ್ಳಿ ಕೃಷ್ಣಶರ್ಮರು ಮತ್ತು ನಿರಂಜನರು. ಕೃಷ್ಣಶರ್ಮರು 'ವಾಹಿನಿ'ಯಲ್ಲಿ 'ಮಾತಿನ ಮಂಟಪ' ಅಂಕಣವನ್ನು ೧೯೪೨ರಿಂದ ೧೯೪೬ರವರೆಗೂ ಬರೆದರು. ಅದರೊಂದಿಗೆ ಅವರು ಎಷ್ಟೊಂದು ತಾದಾತ್ಮ್ಯ ಹೊಂದಿದ್ದರೆಂದರೆ ಅದನ್ನು ನಿಲ್ಲಿಸಿದ ನಂತರ ಹಲವಾರು ವರ್ಷ ಬರವಣಿಗೆಯನ್ನೇ ನಿಲ್ಲಿಸಿಬಿಟ್ಟರು. ಪುನಃ ೧೯೬೦ ದಶಕದಲ್ಲಿ 'ಸಂಯುಕ್ತ ಕರ್ನಾಟಕ', 'ಕರ್ಮವೀರ'ಗಳಲ್ಲಿ 'ಮಾತಿನ ಮಂಟಪ' ಕಟ್ಟಿದರು. ಕೆಲಕಾಲ 'ಪ್ರಜಾವಾಣಿ'ಯಲ್ಲೂ 'ಚಿಂತನ ಮಂಥನ' ಬರೆದರು. ಅವರದು ಆದರ್ಶಮಯ ಮಾತುಗಳು, ಅನನುಕರಣೀಯ ಶೈಲಿ. ಚಿಕ್ಕ ಚಿಕ್ಕ ವಾಕ್ಯಗಳು. ಉದಾಹರಣೆಗೆ, ''ರವೀಂದ್ರರದು ಕಾವ್ಯಕರ್ಮವಾದರೆ ಗಾಂಧೀಜಿಯವರದು ಕರ್ಮಕಾವ್ಯ.''

ಅದೇ ಸುಮಾರಿಗೆ ನಿರಂಜನರು 'ಪ್ರಜಾವಾಣಿ'ಯಲ್ಲಿ 'ಬೇವು-ಬೆಲ್ಲ', 'ಜನಪ್ರಗತಿ'ಯಲ್ಲಿ 'ಸುದಿನ ಸಂಚಯ' ಅಂಕಣಗಳಲ್ಲದೆ 'ಚಿತ್ರಗುಪ್ತ'ದಲ್ಲೂ 'ಐದು ನಿಮಿಷ' ಎಂಬ ಒಂದು ಅಂಕಣ ಬರೆಯುತ್ತಿದ್ದರು. ಅವರವರ ವಿಚಾರಧಾರೆಗಳಿಂದ ಸಿದ್ಧವನಹಳ್ಳಿ ಕೃಷ್ಣಶರ್ಮರು ಗಾಂಧಿವಾದಿಗಳೆಂಬುದನ್ನೂ ನಿರಂಜರನು ಮಾರ್ಕ್ಸ್‌ವಾದಿಯೆಂಬುದನ್ನು ಸುಲಭವಾಗಿ ಗುರುತಿಸಬಹುದಾಗಿತ್ತು. ೬೦ರ ದಶಕದಲ್ಲಿ ನಿರಂಜರು 'ಕರ್ಮವೀರ'ದಲ್ಲಿ 'ನನ್ನ ಅಂಕಣ' ಎಂಬ ಬೆಂಗಳೂರು ಪತ್ರವನ್ನೂ 'ಜನಪ್ರಗತಿ'ಯಲ್ಲಿ 'ಕಾಲಕ್ಷೇಪ' ಅಂಕಣವನ್ನು ಬರೆಯುತ್ತಿದ್ದರು. ಅವು ಕೇವಲ ಕಾಲಕ್ಷೇಪವಾಗಿರದೆ ವಿಚಾರ ಪ್ರಚೋದಕವಾಗಿದ್ದವು.

ದೊಡ್ಡ ದೊಡ್ಡ ಕನ್ನಡ ಸಾಹಿತಿಗಳ ದಂಡೇ ಅಂಕಣ ಬರಹ ನಿರತರಾಗಿದ್ದುದು ಗಮನಾರ್ಹ ಸಂಗತಿ. ಎಲ್.ಎಸ್.ಶೇಷಗಿರಿರಾಯರು 'ಪ್ರಜಾಮತ'ದಲ್ಲಿ 'ಸಹಚಿಂತನ' ಅಂಕಣವನ್ನು ದೀರ್ಘಕಾಲ ಬರೆದರು. ವಿ.ಎಂ. ಇನಾಮದಾರರು 'ಸುಧಾ'ದಲ್ಲಿ 'ಸಾಹಿತ್ಯ ವಿಹಾರ' ಅಂಕಣವನ್ನು ಬಹುಕಾಲ ಬರೆದರು. ಹೆಸರೇ ಸೂಚಿಸುವಂತೆ ಅವು ಸಾಹಿತ್ಯ ಕುರಿತ ಬರಹಗಳಾಗಿದ್ದವು. ಶೇಷಗಿರಿಯರದೂ ಹಾಗೆಯೇ. ಸಾಹಿತ್ಯ - ಸಂಸ್ಕೃತಿ ಕುರಿತದ್ದು. 'ಕರ್ಮವೀರ'ದಲ್ಲಿ ಬಸವರಾಜ ಕಟ್ಟೀಮನಿಯವರ 'ಶಾಸಕ-ಸಾಹಿತಿಯ ಸಂಪುಟದಿಂದ' ಬಹುಕಾಲ ಪ್ರಕಟಗೊಂಡಿತು. ಸಾಹಿತ್ಯಕ ವಿಷಯಗಳಿಗಿಂತ ತಮ್ಮ ಅನುಭವಕ್ಕೆ ಹೆಚ್ಚು ಪ್ರಾಧಾನ್ಯ ನೀಡಿದರು. ವೈಯಕ್ತಿಕ ರಾಗರೋಷಗಳು ಸಿಂಹಪಾಲು ಪಡೆದಿದ್ದವು. ಕಟ್ಟೀಮನಿಯವರು 'ಪ್ರಜಾಮತ'ದಲ್ಲೂ 'ಮಾನಸ ಸರೋವರ' ಎಂಬ ಅಂಕಣ ಬರೆದದ್ದಿದೆ. ಎಷ್ಟೋ ವರ್ಷಗಳಿಂದ ಕು.ಶಿ. ಹರಿದಾಸ ಭಟ್ಟರು 'ಉದಯವಾಣಿ'ಯಲ್ಲಿ ಅದರ ಆರಂಭದಿಂದಲೂ 'ಲೋಕಾಭಿರಾಮ' ಅಂಕಣವನ್ನು ಒಂದು ವ್ರತವೆಂಬಂತೆ ನಿರಂತರವಾಗಿ ವಾರವಾರವೂ ಬರೆಯುತ್ತಿದ್ದಾರೆ. ಸಾಹಿತ್ಯ, ಶಿಕ್ಷಣ, ಸಾಮಾಜಿಕ ವಿಷಯಗಳನ್ನೆತ್ತಿಕೊಂಡು ಚಿಂತಿಸುತ್ತಿದ್ದಾರೆ. 'ವಾಹಿನಿ'ಯಲ್ಲಿ ತ.ರಾ.ಸು. 'ತೋಚಿದ್ದು ಗೀಚಿದ್ದು' ಅಂಕಣ ಬರೆಯುತ್ತಿದ್ದರು. ವಸ್ತು , ಮನಸ್ಸಿಗೆ ಹೊಳೆದ ಯಾವುದಾದರೂ ಇರಬಹುದೆಂಬುದನ್ನು ಶೀರ್ಷಿಕೆಯೆ ಸೂಚಿಸುತ್ತದೆ. ಜಿ.ಪಿ.ರಾಜರತ್ನಂ 'ಸುಧಾ'ದಲ್ಲಿ 'ಭ್ರಮರ', 'ಪ್ರಜಾಮತ'ದಲ್ಲಿ 'ವಿಚಾರ ಸರಣಿ' ಎಂಬ ಅಂಕಣ ಬರೆದರು. ವಾರವಾರವೂ ಒಂದು ತತ್ವ, ಮೌಲ್ಯ ಕುರಿತು ವಿಚಾರಲಹರಿ ಅವರದು. ಗಾತ್ರದಲ್ಲಿ ಚಿಕ್ಕದಾದರೂ ಪಾತ್ರದಲ್ಲಿ ಹಿರಿದಾಗಿದ್ದ ಅಂಕಣವದು. ಅವೆಲ್ಲ ಸಂಕಲನಗೊಂಡು ಗ್ರಂಥರೂಪದಲ್ಲಿ ಪ್ರಕಟಿತವಾಗಿವೆ. 'ಸಂಯುಕ್ತ ಕರ್ನಾಟಕ'ದಲ್ಲಿ ಕೆ.ಟಿ.ಪಾಂಡುರಂಗಿಯವರು ಬರೆದ 'ವಿಚಾರ ಜ್ಯೋತಿ' ಮತ್ತು 'ಕಸ್ತೂರಿ'ಯಲ್ಲಿ ಬರೆದ 'ಜೀವನ ದರ್ಶನ' ಅಂಕಣಗಳೂ ಇದೇ ಮಾದರಿಯವು.

ಪತ್ರಿಕೆಗಳಲ್ಲಿ ಹಾಸ್ಯಬರಹಗಳಿಗೆ ಅಪಾರ ಬೇಡಿಕೆಯಿದೆ. ಹಾಸ್ಯ ಯಾರಿಗೆ ತಾನೆ ಇಷ್ಟವಲ್ಲ ! ಬೀಚಿ 'ಸಂಯುಕ್ತ ಕರ್ನಾಟಕ'ದಲ್ಲಿ 'ಬೀಚಿದ್ದು ಗೀಚಿದ್ದು' ಅಂಕಣವನ್ನು ಕೆಲಕಾಲ ಬರೆದರು. 'ಪ್ರಜಾಮತ' ದಲ್ಲಿ 'ಎನಗೆ ನಗೆಯು ಬರುತಿದೆ' ಅಂಕಣ ಬರೆದರು. 'ಮಯೂರ'ದಲ್ಲಿ 'ಮರೆಯಲಾಗದ ಮಹಾನುಭಾವ' ಬರೆದರು. ಹಾಸ್ಯದ ಹೊನಲು ಹರಿಸಿದರು. ಕೆಲವರ್ಷ 'ಸುಧಾ'ದ 'ನೀವು ಕೇಳಿದಿರಿ' ಎಂಬ ಓದುಗರ ಪ್ರಶ್ನೆಗಳ ಅಂಕಣದಲ್ಲಿ ಉತ್ತರಗಳನ್ನು ನೀಡಿದರು. ಅದು 'ಉತ್ತರಭೂಪ' ಗ್ರಂಥವಾಗಿಯೂ ಪ್ರಕಟಿತಗೊಂಡಿತು. ರಾವಬಹಾದ್ದೂರ ತಾವೇ ಸಂಪಾದಕರಾಗಿದ್ದ 'ಕಲ್ಯಾಣ ಡೈಜೆಸ್ಟ್'ನಲ್ಲಿ 'ದೇಭ (ದೇಶಭಕ್ತ)ನ ಉವಾಚ' ಎಂಬ ಹಾಸ್ಯಭರಿತ ಅಂಕಣ ಬರೆದರು. ಒಂದು ಅತ್ಯುತ್ತಮವಾದ ದೇಭ ಪಾತ್ರವನ್ನೆ ಸೃಷ್ಟಿಸಿದರು. ಉದಾರಹಣೆಗೆ, ದೇಭ ದಿಲ್ಲಿಗೆ ಬಂದಿರುತ್ತಾನೆ. ಅದು ಸಿಂಡಿಕೇಟ್ ಇಂಡಿಕೇಟ್‌ಗಳಲ್ಲಿ ಕಾಂಗ್ರೆಸ್ ಇಬ್ಭಾಗವಾಗಿದ್ದ ದಿನಗಳು. ವಿಮಾನ ನಿಲ್ದಾಣದಲ್ಲಿ ದೇಭನನ್ನು ಸ್ವಾಗತಿಸಿ ತಮ್ಮ ತಮ್ಮ ಗುಂಪಿಗೆ ಸೇರಿಸಿಕೊಳ್ಳಲು ಎರಡೂ ಬದಿಯವರು ಪೈಪೋಟಿ ನಡೆಸಿದ್ದರು. ದೇಭನೊ ಊಸರವಳ್ಳಿ. ಸಿಂಡಿಕೇಟೋ ಇಂಡಿಕೇಟೋ ತಿಳಿಯದು. ಆ ಬಗೆಗೆ ಯಾರೊ ಪ್ರಶ್ನಿಸಿದರು. ದೇಭ ಉತ್ತರಿಸಿದ : ''ನಾನು ಉಂಡಿಕೇಟು'' ತಿನ್ನಲು ಹೆಚ್ಚು ಯಾವ ಕಡೆ ಲಭ್ಯವೊ ಆ ಕಡೆಯವನು ಎಂಬ ಇಂಗಿತ ವ್ಯಕ್ತಪಡಿಸಿದ. ಇತ್ತೀಚೆಗೆ ನವುರಾದ ಹಾಸ್ಯ ಭರಿತ ಅಂಕಣ ಬರೆದವರು ಎನ್ಕೆ, 'ಪ್ರಜಾಮತ'ದಲ್ಲಿ , 'ಕರ್ಮವೀರ'ದಲ್ಲಿ 'ಎನ್ಕೇನ ಪ್ರಕಾರೇಣ' ಎಂದು ಅಂಕಣಕ್ಕೆ ಹೆಸರಿಟ್ಟಿದ್ದುದು ಅವರ ಹಾಸ್ಯಪ್ರಿಯತೆಯ ದ್ಯೋತಕ. 'ವಿಕಟ ವಿನೋದಿನಿ', 'ಉಷಾ',

'ಕಥಾಂಜಲಿ' ಮೊದಲಾದ ಪತ್ರಿಕೆಗಳಲ್ಲಿ ಸುಪ್ರಸಿದ್ಧ ಹಾಸ್ಯ ಸಾಹಿತಿಗಳಾದ ಜಿ. ನಾರಾಯಣ, ನಾಡಿಗೇರ ಕೃಷ್ಣರಾಯರು, ಟಿ.ಸುನಂದಮ್ಮ, ಬೀಚಿ, ನರಸಿಂಹಮೂರ್ತಿ ಮೊದಲಾದವರು ಅಂಕಣ ಬರೆದದ್ದಿದೆ. ಹಾಸ್ಯಕ್ಕೇ ಮೀಸಲಾದ 'ಕೊರವಂಜಿ'ಯಲ್ಲಿ ರಾ.ಶಿ. (ಡಾ. ಎಂ. ಶಿವರಾಂ) 'ತಿಂಗಳ ತಿಳಿಗಾಳು' ಅಂಕಣ ಬರೆಯುತ್ತ ಓದುಗರನ್ನು ಬಿದ್ದುಬಿದ್ದು ನಗುವಂತೆ ಮಾಡುತ್ತಿದ್ದರು.

ಇನ್ನು, ಹವ್ಯಾಸಿ ಯಾ ವೃತ್ತಿ ನಿರತ ಪತ್ರಕರ್ತರು ಅನೇಕ ಅಂಕಣಗಳನ್ನು ಬರೆದಿರುವುದು, ಬರೆಯುತ್ತಿರುವುದು ಉಂಟು. 'ಪ್ರಜಾಮತ'ದಲ್ಲಿ ಹಾಗೂ 'ಸಂಯುಕ್ತ ಕರ್ನಾಟಕ'ದಲ್ಲಿ ಕೋ. ಚನ್ನಬಸಪ್ಪ, 'ಸಂಯುಕ್ತ ಕರ್ನಾಟಕ'ದಲ್ಲಿ ಎಸ್.ಜಿ. ಮೈಸೂರ ಮಠ ಮೊದಲಾದವರನ್ನು ಇಲ್ಲಿ ಹೆಸರಿಸಬಹುದು. ಕೆಲಕಾಲ 'ಸಂಯುಕ್ತ ಕರ್ನಾಟಕ'ದ ಸಂಪಾದಕರಾಗಿದ್ದು ಆ ವೃತ್ತಿ ಬಿಟ್ಟ ಮೇಲೆ ಕೆ. ಜನಾರ್ದನ 'ತರಂಗ'ದಲ್ಲಿ 'ವಿಧಾನ ವೀದಿಯಿಂದ' ಅಂಕಣ ಬರೆದರು. ಕರ್ನಾಟಕದ ರಾಜಕೀಯ ವಿದ್ಯಮಾನಗಳ ವಿಶ್ಲೇಷಣೆ ಅದರ ವಸ್ತು. ಇದೇ ಮಾದರಿಯ ಅಂಕಣವನ್ನು 'ಸುಧಾ'ದಲ್ಲಿ ಆರ್.ಪಿ. ಜಗದೀಶ ಬರೆಯುತ್ತಿದ್ದಾರೆ. 'ಸುಧಾ'ದಲ್ಲಿ ಎಚ್ಚೆಸ್ಕೆ ಅವರ 'ವಾರದ ವ್ಯಕ್ತಿ', ಸಮದರ್ಶಿಯವರ 'ಸುದ್ದಿಯ ಹಿನ್ನೆಲೆ', 'ಪ್ರಜಾವಾಣಿ'ಯಲ್ಲಿ ಎಚ್ಚೆಸ್ಕೆ ಅವರ ಪ್ರತಿ ಸೋಮವಾರ ಪ್ರಕಟವಾಗುವ 'ಆರ್ಥಿಕ ಚಿಂತನೆ' ಜನಪ್ರಿಯ ಅಂಕಣಗಳು. 'ವಾರದ ವ್ಯಕ್ತಿ' ಚುಟುಕಾದ ವ್ಯಕ್ತಿ ಚಿತ್ರ ನೀಡಿದರೆ 'ಆರ್ಥಿಕ ಚಿಂತನೆ' ಗಹನವಾದ ಆರ್ಥಿಕ ಸಮಸ್ಯೆಗಳನ್ನು ಸುಲಲಿತವಾಗಿ ಬಿಚ್ಚಿಡುತ್ತದೆ. ಐ.ಕೆ. ಜಾಗೀರದಾರ 'ಪ್ರಜಾಮತ'ದಲ್ಲಿ 'ವಿಚಾರ ಸರಣಿ' ಅಂಕಣವನ್ನು, ಕೆಲಕಾಲ ನಡೆದು ನಿಂತ ತಮ್ಮದೇ 'ಸಂಕೇತ'ದಲ್ಲಿ 'ಹಕೀಕತ್' ಅಂಕಣವನ್ನು ಬರೆದರು. 'ಹಕೀಕತ್'ನಲ್ಲಿ ವಿಶ್ಲೇಷಣೆ ಚನ್ನಾಗಿರುತ್ತಿತ್ತು. ವೈಕುಂಠರಾಜು ತಮ್ಮದೇ 'ವಾರಪತ್ರಿಕೆ'ಯಲ್ಲಿ 'ಚುಚ್ಚುಮದ್ದು' ಅಂಕಣದಲ್ಲಿ ಚುಚ್ಚುವ ಕೆಲಸವನ್ನು ಚನ್ನಾಗಿಯೆ ನಿರ್ವಹಿಸುತ್ತಿದ್ದಾರೆ. ಪಾಟೀಲ ಪುಟ್ಟಪ್ಪ ತಮ್ಮ 'ಪ್ರಪಂಚ'ದಲ್ಲಿ 'ನನ್ನ ಹೃದಯದಿಂದ ನಿಮ್ಮ ಹೃದಯಕ್ಕೆ', 'ಪ್ರಜಾವಾಣಿ'ಯಲ್ಲಿ 'ನಮ್ಮ ನಾಡು, ನಮ್ಮ ನುಡಿ' ಬರೆದಿದ್ದಾರೆ, ಬರೆಯುತ್ತಿದ್ದಾರೆ. ಇತ್ತೀಚೆಗೆ 'ತರಂಗ'ದಲ್ಲಿ 'ಪಾಪು ಪ್ರಪಂಚ' ಅಂಕಣ ಬರೆಯುತ್ತಿದ್ದಾರೆ. ವ್ಯಕ್ತಿಗಳ, ಘಟನೆಗಳ ಒಳನೋಟ ಇವುಗಳಲ್ಲಿ ದೊರೆಯುತ್ತದೆ. ಈ ಬರಹಗಳು ನಂತರ ಪುಸ್ತಕ ರೂಪದಲ್ಲಿಯೂ ಪ್ರಕಟಿತವಾಗಿವೆ. ಅದೇ ರೀತಿ ಲಂಕೇಶರು 'ಲಂಕೇಶ ಪತ್ರಿಕೆ'ಯಲ್ಲಿ ಬರೆಯುತ್ತಿರುವ 'ಸಂಪಾದಕನ ಟಿಪ್ಪಣಿಗಳು' ಪುಸ್ತಕ ರೂಪದಲ್ಲಿ ಪ್ರಕಟಿತಗೊಂಡಿವೆ. ಸಂತೋಷಕುಮಾರ ಗುಲ್ವಾಡಿ 'ತರಂಗ'ದಲ್ಲಿ ಬರೆಯುತ್ತಿರುವ 'ಅಂತರಂಗ ಬಹಿರಂಗ' ಎಂಬ ಸಂಪಾದಕೀಯಗಳೂ ಅದೇ ಹೆಸರಿನಲ್ಲಿ ಗ್ರಂಥರೂಪದಲ್ಲಿ ಪ್ರಕಟಿತಗೊಂಡಿವೆ. 'ಸುಧಾ'ದಲ್ಲಿ ಈ ಮಟ್ಟದ ಸಂಪಾದಕೀಯಗಳಿರುವುದಾದರೂ ಅವಕ್ಕೆ ಅಂಕಿತ ಇರುವುದಿಲ್ಲ. ಯಾರು ಬರೆದುದೆಂಬುದು ಗೊತ್ತಿದ್ದರೂ ಶ್ರೇಯಸ್ಸು ನೀಡಲುಬಾರದು. ಇಲ್ಲಿಯೂ ಒಂದೆರಡು ಗಮನಾರ್ಹ ಹಾಸ್ಯ ಅಂಕಣಗಳು ಮಿಂಚಿವೆ. 'ಕರ್ಮವೀರ'ದಲ್ಲಿ ಸಂಪಾದಕ ಪಾ.ವೆಂ. ಆಚಾರ್ಯರು ಲಾಂಗೂಲಾಚಾರ್ಯ ಕಾವ್ಯನಾಮದಿಂದ ಬರೆಯುತ್ತಿದ್ದ 'ಓದುಗರೊಡನೆ ಹರಟೆ' ಮತ್ತು 'ಪ್ರಜಾವಾಣಿ'ಯಲ್ಲಿ ಸಂಪಾದಕ ಟಿ.ಎಸ್.ಆರ್. (ಟಿ.ಎಸ್.ರಾಮಚಂದ್ರರಾವ್) ಅವರ 'ಛೂಬಾಣ' ಅಂಕಣಗಳು ಓದುಗರಿಗೆ ಕಚಗುಳಿ ಇಟ್ಟವೆ. ಇಬ್ಬರವೂ ಅನನುಕರಣೀಯ ಶೈಲಿ. ಅವರ ನಂತರ ಆ ಅಂಕಣಗಳು ಕಣ್ಮುಚ್ಚಿರುವುದೇ ಇದಕ್ಕೆ ಸಾಕ್ಷಿ.

ಮಹತ್ವ, ಪ್ರಭಾವ

ಅಂಕಣ ಸಾಹಿತ್ಯಕ್ಕೆ ಇಂದು ಹಿಂದೆಂದಿಗಿಂತ ಮಹತ್ವ ಪ್ರಾಪ್ತವಾಗಿದೆ. ಅಂತಲೆ, ಪ್ರತಿಯೊಂದು ಪತ್ರಿಕೆಯೂ ಆಕರ್ಷಕ ಅಂಕಣಕಾರರನ್ನು ನಿಯೋಜಿಸುತ್ತದೆ. ಸಾಹಿತ್ಯ ಕೃತಿಯನ್ನು ಕೆಲವು ಸಾಹಿತ್ಯಾಸಕ್ತರು ಮಾತ್ರ ಓದುತ್ತಾರೆ. ಆದರೆ, ಅಂಕಣ ಬರಹವನ್ನು ಲಕ್ಷಾಂತರ ಓದುಗರು ಓದುತ್ತಾರೆ. ಹೀಗಾಗಿ, ಪತ್ರಿಕೆಯಲ್ಲಿ ಬರೆಯುವವರನ್ನು ಬಹು ಜನರು ಗುರುತಿಸುತ್ತಾರೆ. ಕತೆ, ಕವನ, ನಾಟಕ, ಕಾದಂಬರಿ ಬರೆದವರಿಗಿಂತ ಅಧಿಕ ಜನಪ್ರಿಯತೆ ದೊರೆಯುತ್ತದೆ. 'ವಾಚಕರ ವಾಣಿ'ಯಲ್ಲಿ ಒಂದು ಪತ್ರ ಪ್ರಕಟವಾದರೆ ಅದು ಸಾವಿರಾರು ಓದುಗರ ಅಭಿಪ್ರಾಯವನ್ನು ಪ್ರತಿನಿಧಿಸುತ್ತದೆ ಎಂದೇ ಲೆಕ್ಕ. ಏಕೆಂದರೆ, ಹಾಗೆ ವಿಚಾರ ಮಾಡುವವರು ಅನೇಕರಿದ್ದಂತೆ ಆ ವಿಚಾರವನ್ನು ಬರಹಕ್ಕಿಳಿಸುವವರು ಒಬ್ಬರೋ ಇಬ್ಬರೋ ಮಾತ್ರ ಇರುತ್ತಾರೆ. ಅದೇ ರೀತಿ ಅಂಕಣಕಾರನ ವಿಚಾರಗಳು ಜನಮನದಲ್ಲಿ ಸಾರ್ವಜನಿಕ ಅಭಿಪ್ರಾಯ ರೂಪಿಸುವ ಶಕ್ತಿ ಹೊಂದಿರುತ್ತವೆ.

ಇತ್ತೀಚೆಗೆ ಗಮನ ಸೆಳೆದ ಅಂಕಣಕಾರರೆಂದರೆ ಕೀರ್ತಿನಾಥ ಕುರ್ತಕೋಟಿ. ಅವರು 'ಪ್ರಜಾವಾಣಿ'ಯಲ್ಲಿ ಹದಿನೈದು ದಿನಕ್ಕೊಮ್ಮೆ ಬರೆಯುತ್ತಿರುವ 'ಸಮ್ಮುಖ' ಅಂಕಣಬರಹಗಳು 'ಉರಿಯ ನಾಲಗೆ' ಶೀರ್ಷಿಕೆಯಡಿ ಗ್ರಂಥರೂಪದಲ್ಲಿ ಹೊರಬಂದಿವೆ. ಅವರ ವಸ್ತು ಸಾಮಾನ್ಯವಾಗಿ ಸಾಹಿತ್ಯ ಮತ್ತು ಸಂಸ್ಕೃತಿ. ಅಂಕಣಬರಹಕ್ಕೆ ದೊಡ್ಡ ಹೆಸರು, ಗೌರವ ತಂದುಕೊಟ್ಟವರೆಂದರೆ ಹಾ.ಮಾ.ನಾ. ಅವರಷ್ಟು ಅಂಕಣ ಕೃಷಿ ಮಾಡಿದವರು ಇನ್ನೊಬ್ಬರಿಲ್ಲ. ತಮ್ಮೆಲ್ಲ ಬುದ್ಧಿಶಕ್ತಿಯನ್ನು ಅಂಕಣ ಬರಹಕ್ಕೆ ಮೀಸಲಾಗಿಟ್ಟಿರುವರೇನೋ ಎನ್ನುವಷ್ಟು ಹಾ.ಮಾ.ನಾ. ಅದರೊಂದಿಗೆ ಅವಿಭಾಜ್ಯವಾಗಿದ್ದಾರೆ. ಅಂಕಣ ಬರಹದೊಂದಿಗೆ ಅವರ ನಂಟು ೧೯೫೦ರಷ್ಟು ಹಳೆಯದು. ಆಗ ಅವರು ಇಂಟರ್‌ಮೀಡಿಯೆಟ್ ವಿದ್ಯಾರ್ಥಿ. ಶಿವಮೊಗ್ಗೆಯಿಂದ ಹೊರಡುತ್ತಿದ್ದ 'ನಂದಿನಿ' ಮಾಸ ಪತ್ರಿಕೆಯಲ್ಲಿ 'ಪೂರ್ಣಿಮೆಗೆ ಪತ್ರಗಳು' ಎಂಬ ಅಂಕಣ ಬರೆದರು. ಪ್ರಸ್ತುತ 'ತರಂಗ'ದಲ್ಲಿ ಅವರ 'ಸ್ವಗತ' ಅಂಕಣ ಮುನ್ನಡೆದಿದೆ. ಹಲವಾರು ಪತ್ರಿಕೆಗಳಲ್ಲಿ ಅವರ ಅಂಕಣಬರಹ ಕುಡಿಯೊಡೆದಿದೆ. 'ಕನ್ನಡಪ್ರಭ'ದಲ್ಲಿ 'ಸಾಹಿತ್ಯ ಸಲ್ಲಾಪ', 'ಪ್ರಜಾಮತ'ದಲ್ಲಿ 'ಹಾ.ಮಾ.ನಾ. ಬರೆಯುತ್ತಾರೆ', 'ಪ್ರಜಾವಾಣಿ'ಯಲ್ಲಿ 'ಸಂಪ್ರತಿ' ಅಲ್ಲದೆ 'ಇಂಚರ', 'ಪುಸ್ತಕ ಪ್ರಪಂಚ', 'ಗ್ರಂಥಲೋಕ' ಪತ್ರಿಕೆಗಳಲ್ಲೂ ಅವರು ಅಂಕಣ ಬರೆದದ್ದಿದೆ. ಏಕಕಾಲಕ್ಕೆ ಮೂರು ಪತ್ರಿಕೆಗಳಲ್ಲಿ ಅಂಕಣ ಬರೆದ ಹಿರಿಮೆ ಅವರದು. 'ಸಂಪ್ರತಿ' ಅಂಕಣವನ್ನು ವಾರಕ್ಕೊಮ್ಮೆಯಂತೆ ಐದು ವರ್ಷ ಎಂಟು ತಿಂಗಳು ಬರೆದುದು ದಾಖಲೆ. ಒಟ್ಟು ೨೮೭ ಲೇಖನಗಳು. ಅವೇ ಮೂರು ಸಂಪುಟಗಳಾಗಿ ಹೊರಬಂದಿವೆ. ಹಾ.ಮಾ.ನಾ. ಅವರ ಎಲ್ಲ ಅಂಕಣ ಬರಹಗಳು ಹದಿಮೂರು ಪುಸ್ತಕಗಳಾಗಿ ಸಂಕಲಿತವಾಗಿರುವುದು ಅಚ್ಚರಿ, ಹೆಮ್ಮೆ ಮೂಡಿಸುತ್ತದೆ. ಇಷ್ಟು ವ್ಯಾಪಕವಾಗಿ, ವಿಪುಲವಾಗಿ, ವೈವಿಧ್ಯಮಯವಾಗಿ ಬರೆದಿರುವ ಹಾ.ಮಾ.ನಾ. ಅವರದು ದೈತ್ಯಸಾಧನೆ.

'ಸಂಪ್ರತಿ'ಯಲ್ಲಿ ಹಾ.ಮಾ.ನಾ. ಅವರ ಪ್ರಥಮ ಲೇಖನ 'ಮಾತಿನ ಮಾಲಿನ್ಯ'ಕ್ಕೆ ಪ್ರತಿಕ್ರಿಯಿಸುತ್ತ ಐವತ್ತು ಓದುಗರು ಮೆಚ್ಚುಗೆ ಪತ್ರ ಬರೆದಿದ್ದರು. ಅದರ ಮೇಲೆ ಅಂಕಣ ಬರಹದ ಜನಪ್ರಿಯತೆಯ ಅಂದಾಜು ಕಟ್ಟಬಹುದು. ಕೆನಡಾ, ಅಮೆರಿಕೆಗಳಿಂದಲೂ ಮೆಚ್ಚುಗೆ ಪತ್ರಗಳು ಬಂದುದಿದೆ. ಪಾಂಡಿತ್ಯ ಹೊರೆಯಾಗದಂತೆ, ಎಲ್ಲ ಮಾಹಿತಿ ಸಂಗ್ರಹಿಸಿ, ವಿಶ್ಲೇಷಿಸಿ, ಕಲಾತ್ಮಕವಾಗಿ ನಿರೂಪಿಸುವುದರಲ್ಲಿಯೆ ಹಾ.ಮಾ.ನಾ. ಅವರ ಅಂಕಣ ಬರಹದ ಶ್ರೇಷ್ಠತೆ ಅಡಗಿದೆ. ''ಈ ಬರಹಗಳಲ್ಲಿ ನಾನು ಯಾವತ್ತೂ ಒಂದು ಸ್ವಂತ ದೃಷ್ಟಿಕೋನವನ್ನು ಬಿಂಬಿಸಲು ಯತ್ನಿಸಿದ್ದೇನೆ. ಬರಹಗಳು ವಿಪುಲ ಮಾಹಿತಿಯನ್ನು ಒಳಗೊಂಡಿರುತ್ತವೆ. ಅಂಕಣಕಾರನ ಅಭಿಪ್ರಾಯಗಳನ್ನು ಒಳಗೊಂಡಿರುತ್ತವೆ. ಇದನ್ನು ಎಷ್ಟರ ಮಟ್ಟಿಗೆ ಸುಂದರವಾಗಿ, ಕಲಾತ್ಮಕವಾಗಿ, ಪರಿಣಾಮಕಾರಿಯಾಗಿ ಹೇಳಬಹುದೆಂಬುದನ್ನು ತೋರಿಸಲು ಪ್ರಯತ್ನಿಸಿದ್ದೇನೆ.... ಕನ್ನಡ ಓದುಗರಿಗೆ ಸುಲಭವಾಗಿ ದೊರೆಯದ ಸಂಗತಿಗಳನ್ನು ಪರಿಚಯಿಸಬೇಕು, ವಿಶ್ಲೇಷಿಸಬೇಕು ಎಂಬ ಆಸೆಯಿಂದ ನಾನು ಈ ಕೆಲಸ ಮಾಡಿದ್ದೇನೆ. ನಮ್ಮ ಜನರ ದೃಷ್ಟಿ ವಿಶಾಲವಾಗಬೇಕು; ಅವರಲ್ಲಿ ಚಿಂತನಶೀಲತೆ ವೃದ್ಧಿಸಬೇಕು ಎಂಬುದೇ ನನ್ನ ಅಪೇಕ್ಷೆ. ಅದಕ್ಕಾಗಿ ನನ್ನ ಬರವಣಿಗೆಯಲ್ಲಿ ಒಂದು ಹೊಸ ಮಾರ್ಗವನ್ನು ಹಿಡಿದಿದ್ದೇನೆ. ಅದೆಂದರೆ, ಹೇಳುವುದನ್ನೇ ಆದಷ್ಟು ಆಕರ್ಷಕವಾಗಿ ಹೇಳಬೇಕೆಂಬುದು', ಎಂದು ಹಾ.ಮಾ.ನಾ. ತಮ್ಮ ಅಂಕಣ ಸಾಹಿತ್ಯದ ಆಶಯ, ಉದ್ದೇಶಗಳನ್ನು ಗುರುತಿಸಿಕೊಂಡಿದ್ದಾರೆ. ಈ ತೆರನ ಹದವರಿತ ಅಂಕಣ ಸಾಹಿತ್ಯ ಮಾದರಿಯಾಗಬಲ್ಲಂತಹದು. ಆದರೆ ಸುಲಭ ಸಾಧ್ಯವಾದುದೇನೂ ಅಲ್ಲ.

ಜೀವನದ ಮೇಲೆ ಅಂಕಣ ಸಾಹಿತ್ಯದ ಪ್ರಭಾವದ ಪ್ರಶ್ನೆ ಕ್ಲಿಷ್ಟವಾದುದು. ಸಾಹಿತ್ಯ, ಜೀವನದ ಮೇಲೆ ಪ್ರಭಾವ ಬೀರುತ್ತದೆಯೆ ಎಂಬ ಪ್ರಶ್ನೆಗೆ ಹೌದು, ಇಲ್ಲ ಎರಡೂ ಎಂದು ಉತ್ತರಿಸಬೇಕಾಗುತ್ತದೆ. ಫ್ರೆಂಚ್ ಕ್ರಾಂತಿಗೆ ಪ್ರೇರಣೆ ಒದಗಿಸಿದ ರೂಸೋನ 'ದ ಸೋಶಿಯಲ್ ಕಾಂಟ್ರ್ಯಾಕ್ಟ್' ಮತ್ತು ಗಾಂಧೀಜಿಗೆ ಸರ್ವೋದಯದ ಕಲ್ಪನೆ ನೀಡಿದ ರಸ್ಕಿನ್‌ನ 'ಅಂಟು ದಿಸ್ ಲಾಸ್ಟ್' ಮೊದಲಾದ ಕೆಲವು ಸಾಹಿತ್ಯ ಕೃತಿಗಳನ್ನು ಜೀವನದ ಮೇಲೆ ನೇರ ಪ್ರಭಾವದ ಉದಾಹರಣೆಯಾಗಿ ಮುಂದಿಡಬಹುದಾದರೂ ಒಟ್ಟಾರೆ ಸಾಹಿತ್ಯ ನೇರ ಪ್ರಭಾವ ಮಾಡಿದುದು ಕಡಿಮೆಯೆ. ಅಂಕಣ ಲೇಖನಗಳೂ ನೇರ ಪ್ರಭಾವ

ಒದಗಿಸಿದ ಪ್ರಸಂಗಗಳುಂಟು. ಆದರೆ, ಯಾವುದೊಂದು ಸಾಮಾಜಿಕ ಕ್ರಿಯೆಗೆ ಅದೊಂದೇ ಪ್ರೇರಕವಾಗಿದ್ದಿತೆ ಇಲ್ಲವೆ ಇನ್ನೂ ಅನೇಕ ಅನ್ಯ ಕಾರಣಗಳಿದ್ದವೆ ಹೇಳುವುದು ಕಷ್ಟಕರ. ಆದಾಗ್ಯೂ, ಅಂಕಣಸಾಹಿತ್ಯಕ್ಕೆ ಜನಮನ ರೂಪಿಸುವ ಶಕ್ತಿಯಿದೆ. ಒಂದೆರಡು ನಿದರ್ಶನ ಕೊಡಬಹುದು. ಸಂಸ್ಕೃತದಿಂದ ಕನ್ನಡಕ್ಕೆ ಆಗುತ್ತಿದ್ದ ಅನ್ಯಾಯವನ್ನು ಹಾಮಾನಾ 'ಪ್ರಜಾಮತ'ದ ತಮ್ಮ ಅಂಕಣದಲ್ಲಿ 'ಸಂಸ್ಕೃತ-ಸಂಸ್ಕೃತಿ-ವಿಜ್ಞಾನಿ', 'ಸಂಸ್ಕೃತದ ಗತಿ' 'ಶಾಪ ಹಿಡಿದ ಕನ್ನಡ' ಮೊದಲಾದ ಲೇಖನಗಳ ಮೂಲಕ ಖಂಡಿಸಿದರು. ಕನ್ನಡಿಗರನ್ನು ಎಚ್ಚರಿಸಿದರು. ಹುರಿದುಂಬಿಸಿದರು. ಅವರ ಲೇಖನಗಳು ಗೋಕಾಕ ಸಮಿತಿಯ ನೇಮಕಕ್ಕೆ ಕಾರಣೀಭೂತವಾದವು. ಜ್ಞಾನಪೀಠ ಪ್ರಶಸ್ತಿ, ಕಾಳಿದಾಸ ಸಮ್ಮಾನ ಮಾದರಿಯಲ್ಲಿ ಕರ್ನಾಟಕ ಸರಕಾರ ಸಂಗೀತಗಾರರಿಗೆ ಪುರಂದರ ಪ್ರಶಸ್ತಿ ಸಾಹಿತಿಗಳಿಗೆ ಪಂಪ ಪ್ರಶಸ್ತಿ ಆರಂಭಿಸಬಹುದೆಂದು ಹಾಮಾನಾ 'ಸಂಪ್ರತಿ' ಅಂಕಣದಲ್ಲಿ ಬರೆದರು. ಕರ್ನಾಟಕ ಸರ್ಕಾರ ಹಾಮಾನಾ ಸಲಹೆ ಒಪ್ಪಿ ಪುರಂದರ ಪ್ರಶಸ್ತಿ , ಪಂಪ ಪ್ರಶಸ್ತಿ ಸ್ಥಾಪಿಸಿದೆ. ನಮ್ಮ ರಾಜ್ಯಕ್ಕೆ 'ಕರ್ನಾಟಕ' ಎಂದು ನಾಮಕರಣ ಮಾಡುವುದರಲ್ಲೂ ಹಾ.ಮಾ.ನಾ. ಅವರ ಅಂಕಣ ಬರಹ ಕಾರಣವಾಯಿತು. ಪ್ರತ್ಯೇಕ ಕನ್ನಡ ವಿಶ್ವವಿದ್ಯಾಲಯದ ಅವಶ್ಯಕತೆಯಿಲ್ಲ, ಕರ್ನಾಟಕದಲ್ಲಿರುವ ಎಲ್ಲ ವಿಶ್ವವಿದ್ಯಾಲಯಗಳೂ ಕನ್ನಡ ವಿಶ್ವವಿದ್ಯಾಲಯಗಳಾಗಬೇಕು ಎಂದು ಹಾಮಾನಾ ಬರೆದರು. ಸರಕಾರವೇನೋ ಕನ್ನಡ ವಿಶ್ವವಿದ್ಯಾಲಯವನ್ನು ಸ್ಥಾಪಿಸಿತು. ಆದರೆ, ಅದರ ಸ್ವರೂಪ, ಧ್ಯೇಯೋದ್ದೇಶಗಳ ಬಗೆಗೆ ಪತ್ರಿಕೆಗಳಲ್ಲಿ ವ್ಯಾಪಕ ಚರ್ಚೆ ಏರ್ಪಟ್ಟಿತು.

ಹಾಮಾನಾ ಅವರ ಅಂಕಣ ಬರಹಗಳ ಪ್ರಥಮ ಸಂಕಲನ 'ಸಂಪ್ರತಿ-೧'ಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ೧೯೮೯ರ ಪ್ರಶಸ್ತಿ ಬಂತು. ಇದು ಯಾವುದೇ ಭಾರತೀಯ ಭಾಷೆಯಲ್ಲಿ ಅಂಕಣ ಬರಹಕ್ಕೆ ಬಂದ ಪ್ರಥಮ ರಾಷ್ಟ್ರೀಯ ಪ್ರಶಸ್ತಿ. ಆ ಸಂದರ್ಭದಲ್ಲಿ ಅಂಕಣ ಬರಹ ಸಾಹಿತ್ಯವೇ ಅಲ್ಲ, ಸಾಹಿತ್ಯವೆಂದರೂ ಅದು ಕಳಪೆ ದರ್ಜೆಯ ಸಾಹಿತ್ಯ ಎಂದು ಮೂಗು ಮುರಿದವರು ಹಲವಾರು ಕನ್ನಡ ಸಾಹಿತಿಗಳು. ಆಗ ಎದ್ದು ಕುಳಿತು ಇದು ನಿಜವೆ ಎಂದು ಗಮನಿಸಬೇಕಾಯಿತು. ಕಾವ್ಯ, ಸಾಹಿತ್ಯ ಎಂದರೇನೆಂದು ಕರಾರುವಾಕ್ಕಾಗಿ ವ್ಯಾಖ್ಯಾನಿಸಲು ಸಾಧ್ಯವಾಗಿಲ್ಲ. ಕಾಲಕಾಲಕ್ಕೆ ಇವುಗಳ ಅರ್ಥ ಹಿಗ್ಗುತ್ತ ಬಂದಿದೆ. ಒಂದು ಕಾಲಕ್ಕೆ ಕಾವ್ಯವೆಂದರೆ ಮಹಾಕಾವ್ಯ ಮಾತ್ರ ಎಂಬ ಭಾವನೆ ಇತ್ತು . ಕಾವ್ಯವೆಂದು ಮನ್ನಣೆ ಪಡೆಯಲು ಭಾವಗೀತೆ ಹೆಣಗಬೇಕಾಯಿತು. ಇಂದು ಭಾವಗೀತೆ ಕಾವ್ಯ ಹೌದೊ ಅಲ್ಲವೊ ಎಂದೂ ಯಾರೂ ಚರ್ಚಿಸುವುದಿಲ್ಲ. ಅದಕ್ಕೆ ಕಾವ್ಯಮನ್ನಣೆಯ ಮುದ್ರೆ ಬಿದ್ದಿದೆ. ಕಾವ್ಯವೆಂದರೆ ಭಾವಗೀತೆಯೆ ಎನ್ನುವಷ್ಟರ ಮಟ್ಟಿಗೆ ಬಂದಿದೆ.

ಯಾವುದೆ ಹೊಸ ಸಾಹಿತ್ಯ ಪ್ರಕಾರಕ್ಕೆ ಮನ್ನಣೆ ಕೂಡಲೆ ದೊರೆಯುವುದಿಲ್ಲ. ಮಾನವನ ಮನಸ್ಸಿನಲ್ಲಿ ಹೊಸದಕ್ಕೆ ವಿರೋಧವಿರುತ್ತದೆ. ಭೂಮಿ ದುಂಡಗಿದೆಯೆಂದು ಗ್ಯಾಲಿಲಿಯೊ ಹೇಳಿದರೆ ಅವನನ್ನು ಸೆರೆಮನೆಗೆ ಅಟ್ಟಲಿಲ್ಲವೆ? ಇಂದು ಭೂಮಿ ಚಪ್ಪಟೆಯಾಗಿದೆ ಎನ್ನುವವರನ್ನು ಹುಚ್ಚರ ಆಸ್ಪತ್ರೆಗೆ ಸೇರಿಸಬೇಕಾದೀತು. ಅಂಕಣ ಸಾಹಿತ್ಯವನ್ನು ಸಾಹಿತ್ಯವೆಂದು ಮನಸ್ಸಿಲ್ಲದ ಮನಸ್ಸಿನಿಂದ ಒಪ್ಪಲಾಗುತ್ತಿದೆ. ಅದು ಒಂದು ಸಾಹಿತ್ಯ ಪ್ರಕಾರವೆಂಬುದು ನಿರ್ವಿವಾದ. ಸಾಹಿತ್ಯದಲ್ಲಿ ಸೃಜನಶೀಲ, ಸೃಜನೇತರ ವಿಭಾಗಗಳನ್ನು ಕಲ್ಪಿಸಿರುವುದರಿಂದ ಯಾವುದು ಪ್ರಥಮ ದರ್ಜೆಗೆ ಸೇರಿದ್ದು , ಯಾವುದು ಅಲ್ಲ ಎಂಬ ಬಗೆಗೆ ವೃಥಾ ಗೊಂದಲ ಸೃಷ್ಟಿಯಾಗಿದೆ. ಪ್ರಬಂಧ, ಲಲಿತ ಪ್ರಬಂಧಕ್ಕೂ ಮನ್ನಣೆ ತಡವಾಗಿಯೆ ದೊರೆತದ್ದು. ಒಂದು ಮಾತು; ಪ್ರಬಂಧ, ಸಾಹಿತ್ಯವೆಂದಾದರೆ ಅಂಕಣ ಬರಹವೂ ಸಾಹಿತ್ಯವೆ. ಏಕೆಂದರೆ, ಅಂಕಣ ಬರಹ ಪ್ರಬಂಧಸಾಹಿತ್ಯದ ವಿಸ್ತರಣೆಯೇ.

ಜೈನರು - ಕನ್ನಡ ಭಾಷೆ

ಡಾ|| ಸಂಗಮೇಶ್ವರ ಸವದತ್ತಿಮಠ

ಕನ್ನಡ ಭಾಷೆಗೂ ಜೈನರಿಗೂ ಇರುವ ನಂಟು ಇಂದು ನಿನ್ನೆಯದಲ್ಲ ಶತಮಾನದಾಚೆಯದೂ ಅಲ್ಲ, ಸಹಸ್ರ ಸಹಸ್ರ ವರ್ಷಗಳಾಚೆಯದು. ಪ್ರಾಯಃ ಕನ್ನಡ ಭಾಷೆಗೆ ಹುಟ್ಟಿನೊಂದಿಗೇ ಜೈನರ ಸಂಪರ್ಕ ಉಂಟಾಗಿದೆಯೆಂದರೆ ತಪ್ಪಿಲ್ಲ. ಮೂಲ ದಕ್ಷಿಣ ದ್ರಾವಿಡ ಭಾಷಾ ಶಾಖೆಯಿಂದ ಕ್ರಿ.ಶ.ಪೂ.ಸು. ಮೂರನೆಯ ಶತಮಾನದ ವೇಳೆಗೆ ಕನ್ನಡ ಭಾಷೆ ಸ್ವತಂತ್ರವಾಯಿತೆಂದು ದ್ರಾವಿಡ ಭಾಷಾ ವಿಜ್ಞಾನಿಗಳ ಅಭಿಪ್ರಾಯ. ಕರ್ನಾಟಕಕ್ಕೆ ಜೈನರು ಪ್ರವೇಶಿಸಿದ್ದೂ ಸರಿಸುಮಾರು ಕ್ರಿ.ಶ.ಪೂ. ಮೂರನೆಯ ಶತಮಾನಕ್ಕೆ ಸ್ವಲ್ಪ ಮುಂಚೆ. ಅಶೋಕನ ಮೊಮ್ಮಗನಾದ ಸಂಪ್ರತಿ ಚಂದ್ರಗುಪ್ತನು ಕ್ರಿ.ಶ.ಪೂ.ಸು. ೨೩೦ರಿಂದ ಈಚೆಗೆ ಜೈನಮುನಿ ಭದ್ರಬಾಹು ಭಟಾರರಿಂದ ಜೈನದೀಕ್ಷೆ ಪಡೆದುಕೊಂಡು ಮುನಿಗಳೊಂದಿಗೇ ಕರ್ನಾಟಕವನ್ನು ಪ್ರವೇಶಿಸಿದನು [1]. ಅಂದರೆ ಕನ್ನಡ ಭಾಷೆ ಜನಿಸುವ ಹೊತ್ತಿಗೆ ಇಲ್ಲವೆ ಜನಿಸುವ ಪೂರ್ವದಲ್ಲಿ ಕರ್ನಾಟಕದಲ್ಲಿ ಜೈನ ಧರ್ಮ ಇತ್ತು.

ಜೈನರ ಮೂಲ ಪ್ರಾಚೀನ ಭಾಷೆ ಪ್ರಾಕೃತ. ಜೈನಧರ್ಮದ ಹಲವಾರು ಶ್ರೇಷ್ಠ ಉದ್‌ಗ್ರಂಥಗಳೆಲ್ಲಾ ಪ್ರಾಕೃತ ಭಾಷೆಯಲ್ಲಿ ಇವೆ. ಭದ್ರಬಾಹುಭಟಾರರು ಅವರ ಶಿಷ್ಯ ವರ್ಗ ಶ್ರವಣಬೆಳ್ಗೊಳದಲ್ಲಿ ನೆಲೆಸಲಾರಂಭಿಸಿದೊಡನೆಯೆ ಅವರ ಜಿನಧರ್ಮ,

---

1. ಭಾಗವತ ಕಥೆಯೊಂದರ ಆಧಾರದಿಂದ ಕರ್ನಾಟಕದಲ್ಲಿ ಬೌದ್ಧ ಧರ್ಮಕ್ಕಿಂತ ಪೂರ್ವದಲ್ಲಿಯೇ ಜೈನ ಧರ್ಮ ಪ್ರವೇಶಿಸಿರಬೇಕೆಂದೂ ಊಹಿಸಲಾಗಿದೆ. (ನೋಡಿ ಕನ್ನಡ ಭಾಷೆಯ ಚರಿತ್ರೆ - ಪ್ರ.ಗೋ.ಕುಲಕರ್ಣಿ ಪು. ೧೦೮)

ಸಂಸ್ಕೃತಿ ಕರ್ನಾಟಕದಲ್ಲಿ ಕನ್ನಡದೊಂದಿಗೇ ಬೆಳೆಯತೊಡಗಿತು. ಜೈನರ ತೊಟ್ಟಿಲಲ್ಲಿ ಕನ್ನಡದ ಕೂಸು ಅನಾಯಾಸವಾಗಿ ಬೆಳೆಯತೊಡಗಿತು. ವೈದಿಕ ಸಂಸ್ಕೃತಿಯ ಅಧಿಕೃತ ಆಸ್ತಿಯೆನಿಸಿದ್ದ ಸಂಸ್ಕೃತ ಭಾಷೆಯ ತೆಕ್ಕೆಯನ್ನು ಬಿಡಿಸಿಕೊಂಡು ಪ್ರಾಕೃತದ ಸೌಗಂಧವನ್ನು ಬೀರುವ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದವರು ಜೈನರು. ಅಂತೆಯೆ ಕನ್ನಡ ಭಾಷೆಯ ಮೇಲೆ ಪ್ರಾಕೃತದ ದಟ್ಟವಾದ ಪ್ರಭಾವ ಬೀರಲು ಜೈನರು ಕಾರಣರಾದರು. ಜೈನರಿಂದಾಗಿ ಕನ್ನಡಕ್ಕೆ ಪ್ರಾಕೃತದ ಮತ್ತೊಂದು ಕಣ್ಣು ದೊರೆಯಿತು. ಪ್ರಾಯಃ ಜೈನರ ಪ್ರಾಕೃತದಿಂದಾಗಿ ಅನೇಕ ಸಂಸ್ಕೃತ ಪದಗಳು ಪ್ರಾಕೃತದ ಮೂಲಕ ಕನ್ನಡದ ಒಡಲು ಸೇರಿದವು. ಹೀಗಾಗಲು ಮೂಲ ಕಾರಣ ಎಂದರೆ ಜೈನರು ಕನ್ನಡವನ್ನು ಅಪ್ಪಿಕೊಂಡದ್ದು.

ಕನ್ನಡದ ಮೊಟ್ಟಮೊದಲ ಶಾಸನ ಹಲ್ಮಿಡಿ ಶಾಸನ. ಕ್ರಿ.ಶ. ಐದನೆಯ ಶತಮಾನದ ಈ ಶಾಸನದ ಭಾಷೆಯಲ್ಲಿ ಜೈನರ ಭಾಷೆಯ ಸುಳುಹು ಕಾಣಬಹುದು. ಭಟಹರ (ಭಟಾರ), ಬಟರಿ ಮುಂತಾದ ಶಬ್ದಗಳನ್ನಿಲ್ಲಿ ಗಮನಿಸಬೇಕು. ಪಂಪನ ತಮ್ಮ ಜಿನವಲ್ಲಭನ ಶಾಸನದಲ್ಲಿ ಜಯಣನ್ದಿ, ಸಿದ್ಧಾನ್ತಭಟಾರಸಿದ್ಧಶಿಲೆ, ಕೊಂಡಕುಂದಾನ್ವಯ, ಜಿನವಲ್ಲಭ, ಜಿನಪ್ರತಿಮೆ ಇತ್ಯಾದಿ ಶಬ್ದಗಳು ಜೈನ ಪರಿಭಾಷೆಯನ್ನು ಸೂಚಿಸುವಂಥವು. ಹೀಗೆಯೆ ಜೈನ ಶಾಸನಗಳಲ್ಲಿ ಜೈನರ ಭಾಷೆಯನ್ನು ಪರಿಚಯಿಸುವ ವಿಪುಲ ಶಬ್ದಗಳನ್ನು ಗುರುತಿಸಬಹುದಾಗಿದೆ. ಜೈನಪರವಾದ ಶಾಸನಗಳಲ್ಲಿ - ''ಆಚಾರ್ಯರ ಹೆಸರಿನ ಹಿಂದೆ ಸಂಘ, ಗಣ, ಗಚ್ಛ, ಅನ್ವಯಗಳ ಉಲ್ಲೇಖ ತಪ್ಪದೇ ಬರುತ್ತದೆ. ಇವು ಮೂಲ ನಂದಿ, ದ್ರಾವಿಡ, ಶ್ರೀ, ಕಿತ್ತೂರ ಸಂಘವೆಂದೂ ದೇವ, ಸೇನ, ಬಲಾತ್ಕಾರ (ಬಳಗಾರು), ದೇಶೀಯ, ಪುನ್ನಾಗ, ವೃಕ್ಷಮೂಲ, ಚಂದ್ರಿಕಾವಾಟ, ಸೂರಸ್ತ, ಕಾಣೂರ್, ಕಾರೆಯ ಆಜಿಗಣವೆಂದೂ, ಪೊಗರಿ, ಪುಸ್ತಕ, ತಗರಿಗಲ್, ಸರಸ್ವತಿ, ಕೇರೂರ್, ಚಿತ್ರಕೂಟ, ತಿಂತ್ರಿಣೀಕ ಮೇಘಪಾಷಾಣಗಚ್ಛ ಎಂದೂ, ಪೊರಳ್, ಪಾಷಾಣ, ಕೊಂಡಕುಂದ, ಅರುಂಗಳ, ಕೀರ್ತ್ಯಾಚಾರ್ಯ, ಹನಸೋಗೆ, ಮೈಲಾಪ, ಇಂಗುಳೇಶ್ವರಿನ್ವಯ ಎಂಬ ಶಬ್ದಗಳು ಕಾಣುತ್ತವೆ. ''ಇವಲ್ಲದೆ ಮರಣಕ್ಕೆ ಸಂಬಂಧಿಸಿದ ಸಮಾಧಿ ಸಲ್ಲೇಖನ, ಇಂಗಿಣಿ, ನೋಂಪಿ, ಮುಡಿಪು ನಿಷಧಿ ಪದಗಳ ಜೀವದಯಾಷ್ಟಮಿ, ನಂದೀಶ್ವರದಷ್ಟಮಿ, ವ್ರತಗಳ ಬಸದಿ, ಚೈತ್ಯಾಲಯ, ನಖರಜಿನಾಲಯ, ತ್ರಿಕೂಟಜಿನಾಲಯ ಹೆಸರಿನ ದೇವಮಂದಿರಗಳ ಪ್ರಸ್ತಾಪ ಅನೇಕ ಶಾಸನಗಳಲ್ಲಿವೆ.'' [2]

ಶಾಸನಗಳನ್ನು ಹಾಗೂ ಧರ್ಮ ಪರಿಭಾಷೆಯನ್ನು ಬಿಟ್ಟು ಕನ್ನಡ ಕಾವ್ಯಕ್ಷೇತ್ರದೆಡೆಗೆ ಹೊರಳಿದರೆ ಅಲ್ಲಿಯೂ ಜೈನರ ಕನ್ನಡ ಪ್ರೀತಿ ವಿಜೃಂಭಿಸಿದೆ. ಕರ್ನಾಟಕವನ್ನು ಪ್ರವೇಶಿಸಿದಾಗಿನಿಂದ ಜೈನರು ಸ್ಥಳೀಯ ಕನ್ನಡಭಾಷೆಯನ್ನು ತಮ್ಮದಾಗಿಸಿಕೊಂಡು ಅದರಲ್ಲಿಯೇ ಅಪೂರ್ವ ಸಾಹಿತ್ಯ ಹಾಗೂ ಶಾಸ್ತ್ರ ಕೃತಿಗಳನ್ನು ರಚಿಸಿ ಕನ್ನಡ ಭಾಷೆಯನ್ನು ಸಕಲ ಆಯಾಮಗಳಲ್ಲಿ ಬಳಸಿಕೊಂಡು ಅದಕ್ಕೊಂದು ಘನತೆಯನ್ನು ತಂದುಕೊಟ್ಟ ಮೊದಲಿಗರಾಗಿದ್ದಾರೆ. ಕನ್ನಡ ಭಾಷೆ ಸ್ವತಂತ್ರಗೊಂಡು ಸುಮಾರು ಸಾವಿರ ವರ್ಷಗಳ ಅವಧಿಯಲ್ಲಿ ಅದು ಸಾಹಿತ್ಯದ ಸುವರ್ಣ ಯುಗವನ್ನು ಕಾಣುವಂತೆ ಮಾಡುವಲ್ಲಿಯೂ ಜೈನ ಕವಿಗಳ ಕಾಣಿಕೆ ಅತ್ಯಮೂಲ್ಯವಾಗಿದೆ. ಬ್ರಾಜಿಷ್ಣುವಾಗಲಿ, ಪಂಪ, ಪೊನ್ನ, ರನ್ನರಾಗಲಿ, ನಾಗವರ್ಮ, ನಯಸೇನ, ರತ್ನಾಕರವರ್ಣಿಯಾಗಲಿ, ಆಧುನಿಕ ಜೈನ ಸಾಹಿತಿಗಳಾಗಲಿ ಕನ್ನಡ ಭಾಷೆಯನ್ನು ಸಹಜ ಸೊಬಗಿನಲ್ಲಿ ಬಳಸಿ ಬೆಳೆಸಿದರು.

ಕನ್ನಡಕ್ಕೆ ಜೈನ ಕವಿಗಳು ಮೊದಲಿನಿಂದಲೂ ಪ್ರಥಮ ಪ್ರಾಶಸ್ತ್ಯವನ್ನೀಯುತ್ತಲೇ ಬಂದಿದ್ದಾರೆ. ತಮ್ಮ ಧರ್ಮಭಾಷೆ ಪ್ರಾಕೃತವಿದ್ದರೂ ಕನ್ನಡವನ್ನು ಅವರು ತಮ್ಮ ಧರ್ಮ ಪ್ರಚಾರಕ್ಕಾಗಿ ಸ್ಥಳೀಯ ಭಾಷೆಯಾಗಿ ಸಮರ್ಥವಾಗಿ ಬಳಸಿದ್ದಾರೆ. ಅಂತೆಯೆ ವಡ್ಡಾರಾಧನೆ, ಆದಿಪುರಾಣ, ಧರ್ಮಾಮೃತ, ಭರತೇಶ ವೈಭವದಂತಹ ಸರ್ವಶ್ರೇಷ್ಠ ಕೃತಿಗಳು ಜೈನಕವಿಗಳಿಂದ ರಚನೆಗೊಂಡಿವೆ. ಕನ್ನಡ ಭಾಷೆಯ ಬಗೆಗೆ ಜೈನ ಕವಿಗಳು ವ್ಯಕ್ತಪಡಿಸಿರುವ ಅಭಿಪ್ರಾಯಗಳು ಇಡೀ ಜೈನ ಸಮಾಜದ ಅಭಿಪ್ರಾಯಗಳೇ ಆಗಿವೆಯೆಂದರೆ ತಪ್ಪಲ್ಲ. ಸ್ಥಳೀಯ ಕನ್ನಡನುಡಿಯನ್ನು ಜೈನರು ತಮ್ಮ ಕಾವ್ಯ ಮಾಧ್ಯಮ ಭಾಷೆಯನ್ನಾಗಿಸಿಕೊಂಡಿದ್ದರಿಂದ ಆ ನುಡಿಯ ಬಗೆಗಿನ ಅವರ ಅಭಿಮಾನ ನೂರ್ಮಡಿಗೊಂಡು ಬೆಳೆಯಿತು. ಕನ್ನಡ ನುಡಿಯ ಸಹಜದೇಸಿಗೆ ಅವರು ಮಾರು ಹೋದರು.

---

2. ಡಾ|| ಎಂ.ಎಂ. ಕಲಬುರ್ಗಿ - ಕವಿರಾಜ ಮಾರ್ಗ ಪರಿಸರದ ಕನ್ನಡ ಸಾಹಿತ್ಯ ೧೯೭೩.

ಕನ್ನಡನುಡಿಯ ದೇಸಿಯ ಬಳಕೆ ಎರಡು ದೃಷ್ಟಿಯಿಂದ ಮಹತ್ವವೆಂಬುದನ್ನವರು ಅರಿತಿದ್ದಂತೆ ತೋರುತ್ತದೆ.

೧. ಸಂಸ್ಕೃತ ಪ್ರಾಕೃತ ಭಾಷೆಯು ಕೇವಲ ಪಂಡಿತಮಾನ್ಯವಾದ್ದರಿಂದ ಕನ್ನಡ ಭಾಷೆಯುಳ್ಳ ಸ್ಥಳೀಯ ಸಾಮಾನ್ಯರಿಗೂ ಧರ್ಮ ಪ್ರಚಾರವನ್ನು ಆ ಮೂಲಕ ಮಾಡಿಕೊಡುವುದು ಸುಲಭವಾದುದು.

೨. ಬಹುಸಂಖ್ಯಾತ ಹಿಂದೂ ಕನ್ನಡಿಗರೊಡನೆ ಆತ್ಮೀಯ ಸಂಬಂಧಕ್ಕೆ ಕನ್ನಡ ಭಾಷೆ ಅತ್ಯಂತ ಅವಶ್ಯವೆನಿಸಿದುದು.

ಈ ಕಾರಣಗಳಿಂದ ಕರ್ನಾಟದ ಜೈನರು ಕನ್ನಡವನ್ನೇ ತಮ್ಮ ಮನೆ ಮಾತಾಗಿ ಪ್ರೀತಿಯಿಂದ ಸ್ವೀಕರಿಸಿದರು. ಬೌದ್ಧಧರ್ಮವು ಕ್ಷೀಣಿಸಿದ ಸಂದರ್ಭದಲ್ಲಿ ಶೈವ ವೈಷ್ಣವರು ಇನ್ನಷ್ಟು ಪ್ರಬಲರಾದರು. ಅವರ ಸಂಸ್ಕೃತ ವ್ಯಾಮೋಹ ಇನ್ನಷ್ಟು ಗಟ್ಟಿಕೊಂಡಿತು. ಬಹುಸಂಖ್ಯಾತರಾದ ಇವರೊಡನೆ ಪೈಪೋಟಿಗೆ ನಿಲ್ಲುವುದಕ್ಕಿಂತ ಜನಸಾಮಾನ್ಯರೆಡೆಗೆ ಕನ್ನಡದ ಮೂಲಕ ಸಾಗುವುದೇ ಸಾಧು ಮಾರ್ಗವಾಗಿ ಜೈನರಿಗೆ ಪರಿಣಮಿಸಿರಬೇಕು. ಹೀಗೆ ಐತಿಹಾಸಿಕ ಅನಿವಾರ್ಯತೆಯಿಂದಲೂ ಕನ್ನಡದ ಬಂಡಿಗೆ ಜೈನರು ಹೆಗಲುಗೊಡಬೇಕಾಗಿ ಬಂದಿರಬೇಕು. ಹೀಗಾಗಿ ಧರ್ಮಕ್ಕೆ ಸಂಬಂಧಿಸಿದಂತೆ ಮೊದ ಮೊದಲು ಪ್ರಾಕೃತವನ್ನು ಬಳಸಿದರೂ ಆನಂತರ ಅವರು ಕನ್ನಡವನ್ನೇ ಎಲ್ಲದಕ್ಕೂ ಸ್ವೀಕರಿಸಿದರು. ಕನ್ನಡ ನುಡಿಯನ್ನೇ ತಮ್ಮ ಉಸಿರನ್ನಾಗಿಸಿಕೊಂಡರು. ಕ್ರಿ.ಶ. ೮ನೇ ಶತಮಾನದ ವೇಳೆಗಾಗಲೇ ಕರ್ನಾಟಕದ ಸಮಗ್ರ ಜೈನರೆಲ್ಲರೂ ಅಪ್ಪಟ ಕನ್ನಡಿಗರಾಗಿದ್ದರು.

ಜೈನರು ಕನ್ನಡ ಭಾಷಾ ಮಾಧ್ಯಮಕ್ಕೆ ಸಂಬಂಧಿಸಿದಂತೆ ಎರಡು ಪ್ರಮುಖ ಅಂಶಗಳಿಗೆ ಒತ್ತು ಕೊಟ್ಟರು.

೧. ಹಳೆಯದನ್ನು ಬಿಟ್ಟು ಹೊಸಗನ್ನಡದ ಹೊಸ ರೀತಿಯಲ್ಲಿ ಸಾಹಿತ್ಯ ರಚಿಸಬೇಕೆಂಬ ಹಂಬಲದಿಂದ ಆ ರೀತಿ ನಡೆದುಕೊಂಡದ್ದು.

೨. ಹೊಸ ಬಗೆಯನ್ನು ಅನುಸರಿಸುವಲ್ಲಿ 'ದೇಸಿ'ಯನ್ನು ಮುಖ್ಯವಾಗಿಸಿಕೊಂಡದ್ದು.

'ಪಟಿಗನ್ನಡವನ್ನು ಪೊಲಗೆಡಿಸಿ ನುಡಿ'ಯುತ್ತಿದ್ದ ರೀತಿಯನ್ನು ಶ್ರೀ ವಿಜಯ ಖಂಡಿಸಿದ್ದನ್ನು ನೋಡಿದರೆ ಆ ಕಾಲಕ್ಕಾಗಲೇ ಪ್ರಾಯಃ ಜೈನರು ಹಳಗನ್ನಡವನ್ನು ಸರಿಸಿ ಹೊಸಗನ್ನಡದಲ್ಲಿ ಬರೆಯುವ ಪ್ರಯತ್ನವನ್ನು ನಡೆಸಿದಂತೆ ತೋರುತ್ತದೆ. ಕ್ರಿ.ಶ. ೯ನೆಯ ಶತಮಾನದ ಪೂರ್ವದಲ್ಲಿ 'ಹಳಗನ್ನಡ' 'ಹೊಸಗನ್ನಡ' ಎಂಬ ಪದಗಳು ಕನ್ನಡ ಭಾಷೆಯ ಅವಸ್ಥೆಯನ್ನು ಸೂಚಿಸುವಂಥವಲ್ಲ, ಆದರೆ ಕನ್ನಡ ಭಾಷಾ ಶೈಲಿಯನ್ನು ಸೂಚಿಸುವಂತಹವು. ಕ್ರಿ.ಶ. ೮ನೆಯ ಶತಮಾನ ಹಾಗೂ ಅದಕ್ಕೂ ಹಿಂದಿನ ಕಾಲದ ಈ ಹಳಗನ್ನಡ ಹೊಸಗನ್ನಡ ಶೈಲಿಗಳನ್ನು ಕುರಿತು ಕಪಟರಾಳ ಕೃಷ್ಣರಾಯರು - "ಕನ್ನಡದ ದೇಶೀ ಪದಗಳು ವಿಶಿಷ್ಟ ಮಾರ್ಗದಲ್ಲಿ ಉಪಯೋಗಿಸಲ್ಪಡುತ್ತ ಬಂದಿರುವುದರಿಂದ ಅವು ಕಾವ್ಯಕ್ಕೆ ಲಕ್ಷಣವಾದವು. ಈ ಪ್ರಾಚೀನ ಪದ್ಧತಿಯೇ ಪವಿಗನ್ನಡ. ಬರಬರುತ್ತ ಅವು ಜನರಿಗೆ ತಿಳಿಯದಂತಾಗಿ ಅವುಗಳ ಬದಲು ಸಂಸ್ಕೃತಮಿಶ್ರಿತ ಪದ್ಧತಿ ಬಳಕೆಯಲ್ಲಿ ಬಂದಿತು. ಅದುವೆ ಆ ಕಾಲದ ಹೊಸಗನ್ನಡ"[3] ಎಂದು ಅಭಿಪ್ರಾಯಪಟ್ಟಿದ್ದಾರೆ. ಶ್ರೀವಿಜಯ ಹೇಳಿ ಉದಾಹರಿಸಿರುವ ಉದಾಹರಣೆಗಳಿಂದ ಇಲ್ಲಿ ಹೇಳಿದ ಹಳಗನ್ನಡ ಸರಿ ಎನಿಸಿದರೂ ಶಾಸನಗಳಲ್ಲಿ ಬಳಕೆಗೊಂಡ ಕನ್ನಡ ಭಾಷೆಯನ್ನು ಗಮನಿಸಿದಾಗ ಇದು ಸರಿ ಎನಿಸದು. ಜೈನ ಕವಿಗಳಲ್ಲಿ ೧೨ನೆಯ ಶತಮಾನದ ಆದಿಯಲ್ಲಿ ಇದ್ದ ನಯಸೇನನೂ ಕೂಡ ತಾನು ಪೊಸಗನ್ನಡದಲ್ಲಿಯೇ ಬರೆದಿರುವೆನೆಂದಿದ್ದಾನೆ. ಕನ್ನಡ ಕಾವ್ಯಭಾಷೆಯ ಬಗೆಗೆ ಅವನು ವ್ಯಕ್ತಪಡಿಸಿರುವ ಅಭಿಪ್ರಾಯಗಳು ಗಮನಾರ್ಹವಾಗಿವೆ. "ಪೊಸಗನ್ನಡದಿಂ ವ್ಯಾವರ್ಣಿಸುವೆಂ ಸತ್ಕೃತಿಯನೆಂದು ಕನ್ನಡಮಂ ಚಿಂತಿಸಿ ಕೊಡಲಾರದಕ್ಕಟ ಮಿಸುಕದ ಸಕ್ಕದಮನಿಕ್ಕುವವನುಂ ಕವಿಯೆ?"

---

3. ಹಳೆಗನ್ನಡ - ಹೊಸಗನ್ನಡ ಐತಿಹಾಸಿಕ ವಿವೇಚನೆ - ಸಾಹಿತ್ಯ ಪರಿಷತ್ ಪತ್ರಿಕೆ (೨೨-೩).

''ಸಕ್ಕದಮಂ ಪೇಳ್ವೊಡೆ ನೆಱೆ ಸಕ್ಕದಮಂ ಪೇಳ್ಗೆ
ಸುದ್ದಗನ್ನಡದೊಳ್ ತಂದಿಕ್ಕುವುದೇ ಸಕ್ಕದಮಂ? ತಕ್ಕುದೆ
ಬೆರಸಲ್ಕೆ ಘೃತಮುಮಂ ತೈಲಮುಮಂ''

ಎಂದು ಮುಂತಾಗಿ ನಯಸೇನನು ಹೇಳಿದ ಮಾತುಗಳಿಂದ ಶುದ್ಧ ಕನ್ನಡದಲ್ಲಿ ಸಂಸ್ಕೃತವನ್ನು ಸೇರಿಸಿ ಬಳಸುವುದು ಉಚಿತವಲ್ಲ. ಅಷ್ಟೇ ಅಲ್ಲದೆ ಶುದ್ಧ ಕನ್ನಡದಲ್ಲಿ ಬರೆಯುವ ಅವಶ್ಯಕತೆ ಇದೆ ಎಂಬುದು ಇಲ್ಲಿ ಧ್ವನಿತವಾಗುತ್ತದೆ.

''.... ಕವಿಗಳಾದವರು ಕನ್ನಡ ಪದಗಳಿಗಾಗಿ ಚಿಂತಿಸುವ ಪ್ರಸಂಗ ಬಂದಿತ್ತು ಎಂದರೆ ಕನ್ನಡ ಬಡವಾಗಿತ್ತೆಂದಲ್ಲ. ಕನ್ನಡದ ನುಡಿಗಟ್ಟುಗಳನ್ನು ಹೇಗೆ ಬಳಸಬೇಕೆಂಬುದೇ ಅವರಿಗೆ ಸಮಸ್ಯೆಯಾಗಿತ್ತು. ಕವಿರಾಜಮಾರ್ಗಕಾರನ ಕಾಲಕ್ಕೆ, ಪೂರ್ವದಲ್ಲಿ ಉಪಯೋಗಿಸಲ್ಪಡುತ್ತಿದ್ದ ಕನ್ನಡ ದೇಶಿ ಪದಗಳ ವಿಶಿಷ್ಟರೀತಿ ಪಟಗನ್ನಡ ಅಥವಾ ಹಳೆಯ ರೀತಿಯಾದರೆ ಅಲ್ಲಿಂದ ಮುಂದೆ ಬಂದ ಸಂಸ್ಕೃತ ಮಿಶ್ರಿತ ಪದಪದ್ಧತಿಯು ಬರಬರುತ್ತ ಅತಿರೇಕಕ್ಕೆ ಹೋಗಿ ನಯಸೇನನ ಕಾಲಕ್ಕೆ ಬರುವ ಹೊತ್ತಿಗೆ ಕನ್ನಡಕ್ಕಾಗಿ ಚಿಂತಿಸುವ ಗತಿ ಕವಿಗಳಿಗೆ ಬಂದಿತು. ವಿಪರೀತ ಸಂಸ್ಕೃತಮಿಶ್ರಿತ ಪದಪದ್ಧತಿ ನಯಸೇನನಿಗೆ ಹಳೆಯದಾಗಿ ಕಂಡಿತು. ಆದುದರಿಂದಲೆ ನಯಸೇನ ಒಂದು ರೀತಿಯ ಹಟಕ್ಕೆ ಬಿದ್ದವನಂತೆ, ಕಾವ್ಯದ ತುಂಬ ಕನ್ನಡ ನುಡಿಗಟ್ಟುಗಳನ್ನು ಉಪಮೆಗಳನ್ನು ನಾಣ್ಣುಡಿಗಳನ್ನು ಸೂರೆ ಮಾಡಿ ಅನೇಕ ಹೊಸ ನಾಣ್ಣುಡಿ ಜಾಣ್ಣುಡಿಗಳಂತಹ ಸೂಕ್ತಿಗಳನ್ನು ರಚಿಸಿ ಚಂಪೂರೂಪದಲ್ಲಿಯೆ ಹೊಸ ಶೈಲಿಯ ಕೃತಿಯೊಂದನ್ನು ಕನ್ನಡಕ್ಕಿತ್ತು ಕೀರ್ತಿಕಾಯನಾದ. ಈ ಅರ್ಥದಲ್ಲಿಯೇ ನಯಸೇನ 'ಪೊಸಗನ್ನಡ'ಶಬ್ದವನ್ನು ಬಳಸಿರುವುದು. ಕನ್ನಡ ಆಡುಮಾತಿನ ಶ್ರೀಮಂತಿಕೆಯನ್ನು ಅದರ ವಿಶಿಷ್ಟ ಪದಪದ್ಧತಿಯ ಬೆಡಗು ಬಿನ್ನಾಣಗಳನ್ನು ಗೂಢತತ್ತ್ವಗಳ ವಿವೇಚನೆಗೆ ಅದು ಉತ್ತಮ ಮಾಧ್ಯಮ ಆಗಬಲ್ಲುದೆಂಬುದನ್ನು ಒಟ್ಟಿನಲ್ಲಿ ಕನ್ನಡದ ಸತ್ತ್ವ ಸಾಮರ್ಥ್ಯಗಳನ್ನು ಮನವರಿಕೆ ಮಾಡಿಕೊಡಬಲ್ಲ ವಿಶಿಷ್ಠ ಶೈಲಿಯಲ್ಲಿ ರಚನೆಗೊಂಡ ನಯಸೇನನ ಧರ್ಮಾಮೃತ ನಿಜವಾದ ಅರ್ಥದಲ್ಲಿ ಅಂದಿನ ಕಾಲಕ್ಕೆ ಪೊಸಗನ್ನಡ ಕೃತಿಯೇ. ಆದರೆ ಅದರ ಪ್ರಭಾವ ಅವನ ಅನಂತರದ ಕನ್ನಡ ಜೈನ ಕವಿಗಳ ಮೇಲೆ ಅಷ್ಟಾಗಿ ಆಗದೆ ಇರುವುದು ಸಾಹಿತ್ಯ ಪ್ರಪಂಚದ ವೈಚಿತ್ರ್ಯಗಳಲ್ಲೊಂದು''[4] ಎಂಬ ಡಾ|| ಬಿ.ವ್ಹಿ. ಮಲ್ಲಾಪುರ ಅವರ ಅಭಿಪ್ರಾಯಗಳನ್ನು ನಾವು ಒಪ್ಪಲೇಬೇಕು. ಕನ್ನಡದಲ್ಲಿ ಹೊಂದಿಕೆಯಾಗದ ಸಂಸ್ಕೃತ ಪದಗಳನ್ನು ಕನ್ನಡದಲ್ಲಿ ಸೇರಿಸಬಾರದು ಎಂಬುದು ನಯಸೇನನ ಅಭಿಪ್ರಾಯ. ಅಂದರೆ ಕನ್ನಡ ಭಾಷೆಯ ಜಾಯಮಾನ, ರಚನೆಗೆ ಹೊಂದಿಕೆಯಾಗುವ ಸಂಸ್ಕೃತಪದಗಳನ್ನು ತೆಗೆದುಕೊಂಡರೆ ಅಭ್ಯಂತರವಿಲ್ಲವೆಂದೇ ಅವನ ಅಭಿಪ್ರಾಯ. 'ತಕ್ಕುದೆ ಬೆರಸಲ್ಕೆ ಘೃತಮುಮಂ ತೈಲಮುಮಂ' ಎಂದು ಈ ನಿಟ್ಟಿನಲ್ಲಿ ಕೇಳಿದ ಪ್ರಶ್ನೆಯಲ್ಲೆ ಘೃತ, ತೈಲ ಎಂಬ ಸಂಸ್ಕೃತ ಪದಗಳಿವೆ. ಇವು ಕನ್ನಡದ ಜಾಯಮಾನಕ್ಕೆ ಹೊದಬಲ್ಲಂತಹವೇ? '' ಕನ್ನಡದ ಬಗೆಗೆ ಇಷ್ಟೊಂದು ಗಂಭೀರವಾಗಿ ಹೇಳಿ ತನ್ನ ಮಾತಿನಂತೆ ನಡೆದುಕೊಳ್ಳಲು ಯತ್ನಿಸಿದರೂ ನಯಸೇನ ಸಂಸ್ಕೃತದ ತೆಕ್ಕೆಯಿಂದ ಬಿಡಿಸಿಕೊಳ್ಳಲು ಸಾಧ್ಯವಾಗಿಲ್ಲ. ಉದಾಹರಣೆಗೆ -

ಭುವನ ಪ್ರಖ್ಯಾತ ಕೀರ್ತಿಧ್ವಜಯಮಳಯಶಂ ಸತ್ಯವಾರಾಶಿ ಚಿತ್ತೋ
ದ್ಭವಮೇಘಾನೀಕ ತೀವ್ರಾನಳನಘ ಹರಣಂ ಕೂರ್ಮಯಿಂ ಪೇಟೆ ಚಿತ್ತೋ
ದ್ಭವದಿಂ ತ್ರೈವಿಧ್ಯಚಕ್ರೇಶ್ವರ ವಿಮಳಪಾದಾಂಭೋಜ ಭೃಂಗಂ ವಿನೇಯ
ಪ್ರವರಂ ಸಾನಂದ ನಾಡಂ ಸುಕವಿ ಜನಮನಃ ಪದ್ಮಿನೀರಾಜಹಂಸಂ

ಎಂಬ ಅವನ ನುಡಿಯನ್ನು ಅರ್ಥೈಸಲು ಸಂಸ್ಕೃತ ಪಂಡಿತರೇ ಬೇಕು. ಕನ್ನಡಪ ಆದಿಕವಿ ಪಂಪನೂ ಅಷ್ಟೇ. ತಾನು 'ರಾಜದ್ರಾಜಕಮೆನಿಸಿದ ಸಾಜದ ಪುಲಿಗೆರೆಯ ತಿರುಳ್ಗನ್ನಡ'ದಲ್ಲಿ ಬರೆಯುತ್ತಿರುವುದಾಗಿ ಹೇಳಿಕೊಂಡ. 'ಬಗೆಪೊಸತಪ್ಪುದಾಗಿ

4. ಡಾ|| ಬಿ.ವ್ಹಿ. ಮಲ್ಲಾಪುರ - ನಯಸೇನ ಹಾಗೂ ಅವನ ಕೃತಿಗಳು (ಮಹಾಪ್ರಬಂಧ)

ಮೃದು ಬಂಧದೊಳೊಂದುವುದು ಒಂದಿ ದೇಸಿಯೊಳ್‌ಪುಗುವುದು ಪೊಕ್ಕು ಮಾರ್ಗದೊಳೆ ತಳ್ವುದು ತಳ್ತೊಡೆ ಕಾವ್ಯ ಬಂಧಂ ಒಪ್ಪುಗುಂ' ಎಂದು ಮುಂತಾಗಿ ಸಹಜ ಕನ್ನಡ ಭಾಷೆಯ ಸೊಬಗಿನ ಸೋನೆಯನ್ನು ಹರಿಸುವೆನೆಂದು ಹೇಳಿಯೂ -

'ಇದರೊಳ್ ಶ್ವೇತಾತಪತ್ರಸ್ಥಗಿತ ದಶದಿಶಾಮಂಡಲಂ ರಾಜಚಕ್ರಂ
ಪುದಿದಟ್ಟಾಡಿತ್ತ ಡಂಗಿತ್ತದಟೊಳೆ ಕುರುರಾಜಾನ್ವಯಂ ಮತ್ತತಾಪ
ಕ್ಕಿದಱಿಂದಂ ನೋಡ ಅಗುರ್ವುರ್ವಿದುದಿದುವೆ ಮಹಾಭಾರತಕ್ಕಾದಿಯಾ
ಯ್ತುಬ್ಜದಳಾಕ್ಷೀ ಪೇಟಿ ಸಾಮಾನ್ಯಮೆ ಬಗೆಯೆ ಭವತ್ಕೇಶಪಾಶ ಪ್ರಪಂಚಂ'

ಇಂಥ ಸಂಸ್ಕೃತ ಭೂಯಿಷ್ಠ ಪದ್ಯಗಳನ್ನು ಹೇರಳವಾಗಿ ಸುರಿಸಿದ್ದಾನೆ - ಪಂಪ, 'ಪದ್ಯಂ ವದ್ಯಂ ಗದ್ಯಂ ಹೃದ್ಯಂ' ಎಂದು ನಂಬಿ ಗದ್ಯದಲ್ಲಾದರೂ ಸಾಜದ ಕನ್ನಡ ದೊರೆತೀತೆ? ಇಲ್ಲಿ ನೋಡಿ - ''.... ಅದಱ ನಡುವಣಾರ್ದ್ರ ಮೃತ್ತಿಕಾವಿರಚಿತಮಪ್ಪ ಚತುರಾಂತರದೊಳ್... ಗುಣಾರ್ಣವನನಾದ್ರುಪದಜೆಯನೊಡನೆ ಕುಳ್ಳಿರಿಸಿ ಹಿತಪುರೋಹಿತ ಪ್ರಾಜ್ಯಾಜ್ಯಾಹುತಿ ಹುತಹುತವಹ ಸಮಕ್ಷದೊಳ್ ಕೈಯ್ನೀರೆಱೆದು ಪ್ರಾಣಿ ಗ್ರಹಣಂ ಗೆಯ್ಗೆ...'' ಇಂಥ ಅನೇಕ ಕ್ಲಿಷ್ಟ ಗದ್ಯಭಾಗಗಳೂ ಸಾಕಷ್ಟಿವೆ. ಕನ್ನಡ ವಾಗ್ದೇವಿಯ ಭಂಡಾರವನ್ನು ಒಡೆದ ರನ್ನನು ''ಪೊಸದೇಸೆಯ ಬೆಡಂಗು ಕನ್ನಡಮೆರಡಱುನೂಱಱ ಕನ್ನಡಮಾ ತಿರುಳುಗನ್ನಡಂ'' ಎಂದು ಹೇಳಿಯೂ ಮೇಲೆ ಉದಾಹರಿಸಿರುವ ಪಂಪನ ಶೈಲಿಯನ್ನೇ ಅನುಸರಿಸಿದ್ದಾನೆ. - ಭಾಷಾಶೈಲಿಯಲ್ಲಿ. ''ಪೆಱರ್ ಮಾಡಿದ ದೇಸೆಯಂ ಕಡಂಗೊಳ್ಳದ ಕೊಳ್ಳದ ಹೆಮ್ಮೆ ಪೊನ್ನನಿಗಿದ್ದರೆ, ಶಾಂತಿನಾಥನಿಗೆ ದೇಸಿ ದೇಸೆವೆತ್ತಿರೆ... ಪೊಸದೇಸಿಯೊಳೊಂದಿದ ಮಾರ್ಗಂ ಒಳ್ಪು'' ಎಂಬ ಅಭಿಪ್ರಾಯವಿದೆ. ಇಷ್ಟಾಗಿಯೂ ಪಂಪಾದಿಗಳು ಸಂಸ್ಕೃತ ಭೂಯಿಷ್ಠ ಕನ್ನಡ ಭಾಷಾ ಧಾರೆಯನ್ನೆರೆದು ನಮ್ಮನ್ನು ಬೆರಗುಗೊಳಿಸುತ್ತ ಕನ್ನಡದಲ್ಲಿ ದೇಸಿಯನ್ನು ದೂಷಿಸಿ ಮಾರ್ಗವನ್ನು ಎತ್ತಿ ಹಿಡಿದವರೇ ಹೆಚ್ಚು . ಇದಕ್ಕೆ ಮುಖ್ಯ ಕಾರಣವೆಂದರೆ ಪಂಡಿತಮಾನ್ಯರ, ಆಶ್ರಯದಾತರ ಮೆಚ್ಚುಗೆಯನ್ನು ಪಡೆಯಲು 'ದೇಸಿಗಿಂತ ಮಾರ್ಗವೇ ಶ್ರೇಷ್ಠ ಎಂಬ ನಂಬಿಕೆ ಬಲವಾಗಿ ಅವರಲ್ಲಿ ಬೇರೂರಿತ್ತು. ಆದರೆ ಜೈನ ಕವಿಗಳು ಮಾತ್ರ ಶ್ರೀ ವಿಜಯನು ಹೇಳಿರುವಂತೆ

''ದೋಸಮನೆಗುಣದವೊಲುದ್ಭಾಸಿಸಿ ಕನ್ನಡದೊಳೊಲ್ದು ಪೂರ್ವಾಚಾರ್ಯರ್ ದೇಸಿಯನೆ ನಿರಿಸಿ ಖಂಡಪ್ರಾಸಮನತಿಶಯಮಿದೆಂದು ಯತಿಯಂ ಮಿಕ್ಕರ್.''

ಜನ್ನನು ಒಬ್ಬೊಬ್ಬ ಜೈನ ಕವಿಯೂ ಎಂಥ ಕನ್ನಡ ಭಾಷಾಶೈಲಿಗೆ ಪ್ರಸಿದ್ಧಿ ಪಡೆದಿದ್ದಾನೆ ಎಂಬುದನ್ನು ಹೀಗೆ ಹೇಳಿದ್ದಾನೆ :

'ಎನಕನುಕೂಲಮಕ್ಕೆ ಗುಣವರ್ಮನ ಜಾಣ್ನುಡಿ ಪಂಪನಿಂಪು ಪೊನ್ನನ ಬಗೆ, ನಾಗವರ್ಮನ ಬಹುಜ್ಞತೆ, ರನ್ನನ ಕಾಂತಿ ನಾಗಚಂದ್ರನ ರಸಭಾವಂ, ಅಗ್ಗಳನ ವಕ್ರತೆ, ನೇಮಿಯ ದೇಸೆ, ಪುಷ್ಪಬಾಣನ ಮೃದುಬಂಧ, ಈ ಕವಿಗಳಲ್ತೆ ಜಿನೇಂದ್ರಪುರಾಣ ಕರ್ತೃಗಳ್'

ರತ್ನಾಕರವರ್ಣಿಯೊಬ್ಬನನ್ನು ಬಿಟ್ಟರೆ, ನಯಸೇನನ ಅನಂತರ ಜೈನರ ಕಾವ್ಯಾಭಿವ್ಯಕ್ತಿ ಹೆಚ್ಚು ಪ್ರಜ್ವಲಿಸಲಿಲ್ಲ. ರತ್ನಾಕರವರ್ಣಿ ಅಚ್ಚಗನ್ನಡ ಶೈಲಿಯನ್ನು ಮತ್ತೊಮ್ಮೆ ಸಮರ್ಥವಾಗಿ ಬಳಸಿದ ಮಹಾಕವಿ. ಅನಂತರದ ಅವಧಿಯಲ್ಲಿ ಪಂಪ, ರನ್ನ, ನಯಸೇನ, ರತ್ನಾಕರವರ್ಣಿಯರಂಥ ಕವಿಗಳು ಕನ್ನಡ ಭಾಷೆಯನ್ನು ದುಡಿಸಿಕೊಂಡ ರೀತಿಯಲ್ಲಿ ಸಮರ್ಥವಾಗಿ ಭಾಷೆಯನ್ನು ದುಡಿಸಿಕೊಂಡ ಜೈನ ಕವಿಗಳು ಮೂಡಿಬರಲಿಲ್ಲ.

ಒಟ್ಟಾರೆ ಜೈನ ಕವಿಗಳು ಶಿಷ್ಟ ಮತ್ತು ದೇಸಿ ಎರಡನ್ನೂ ಸಮನ್ವಯವಾಗಿಯೇ ಕಂಡಿದ್ದಾರೆ. ದೇಸಿಗೆ ಒತ್ತು ಕೊಟ್ಟರೂ ಶಿಷ್ಟ ಭಾಷೆಯ ಜೊತೆ ಜೊತೆಗೇ ಅದನ್ನು ತೂಗಿಸಿಕೊಂಡು ಹೋಗಿದ್ದಾರೆ. ತಮ್ಮ ತಮ್ಮ ಸಮಕಾಲೀನ ಕನ್ನಡ ಆಡುನುಡಿಯ ಎಷ್ಟೋ ಅಂಶಗಳನ್ನು ಅವರು ತಮ್ಮ ಕೃತಿಗಳಲ್ಲಿ ಪೋಣಿಸಿದ್ದಾರೆ. ಕೆಲವು ಉದಾಹರಣೆಗಳನ್ನಿಲ್ಲಿ ಮಾದರಿಗಾಗಿ ನೋಡಬಹುದಾಗಿದೆ.

ಖೇಚರಿ-ಗೀಚರಿ, ಸುಖ-ಗಿಖ, ಬಿದಿ-ಗಿದಿ, ಗಿಡಿಗಿಡಿ ಜಂತ್ರ-ಮಿಳಿಮಿಳಿನೇತ್ರ, ಇಂಥ ಹಲವು ಬಗೆಯ ಪ್ರತಿಧ್ವನಿತ ಶಬ್ದಗಳು, ದ್ವಿರುಕ್ತಿಗಳು ಹಾಗೆಯೆ ದೇಸಿ ಬಳಕೆಯ ಮಾತುಗಳು ಹೇರಳವಾಗಿ ಜೈನ ಕವಿಗಳ ಕನ್ನಡದಲ್ಲಿ ಬಳಕೆಯಾಗಿವೆ.

''ಅಂತಿಂತೆನ್ನದೆ ಮುಂ ಪೇಟ್ದಿಂತೆ ಉಸಿರದೆ ಮೋನದಿಂದ ಮಣ್ಬುಗು''

ಈ ಮಾತನ್ನು ನಾವು ಈಗಲೂ ಉತ್ತರ ಕರ್ನಾಟಕದಲ್ಲಿ -

''ಹಾಂಗ ಹಿಂಗನ್ನದೆ ಮುನ್ನೋಡೆ ಬಾಯ್‌ಮುಚಗೊಂಡ ನಾ ಹೇಳ್ದಂಗ ತಿಂದಕ್ಯಾಸ ಹೋಗ -ಎಂದು ಆಡು ನುಡಿಯಲ್ಲಿ ಬಳಸುವುದನ್ನು ಗುರುತಿಸಬಹುದು. 'ಮಾತರಿಯದ ಸೂಳೆ ಕುಂಟಣಿಯಂ ಬೈದಳ್' 'ಪೇಲಿಂಗೆ ನೊಣಗಳ್ ಕಡುಸೋಲದಿಂ ಎಱಂಗುವವು ಕಪ್ಪುರಕ್ಕೆ ಏಗೆಯ್ದುಂ ಎಱಗವು ಜಗದೊಳ್ ಪೇಲೇಂ ಮೇಲಾಯ್ತೆ? ಕಪ್ಪುರಂ ಕೀಳಾಯ್ತೆ?'

'ನಚ್ಚಿದೆಮ್ಮೆ ಕೋಣನೀದಿತ್ತು', 'ಗರ್ಭಿಣಿಯಾದ ರಂಡೆಯಂತೆ', 'ನಿನಗೆ ಬೇನೆ ಮೂಡಿತ್ತೇ?', 'ಮಠದ ಬೆಕ್ಕಿನಂತೆ', 'ಮೊದಲಿಂ ಪಂದಿಗಳೊಡನಾಡಿದ ಕಱುವುಂ ಪಂದಿಯಂತೆ ಪೇಲಂ ತಿಂಗುಂ', 'ಇಕ್ಕುಳೊಳ್ ಕಯ್ಯಂ ಕುಯ್ದುಂ ಸುಣ್ಣಮನಿಡುವೆಂ', 'ಭಟಾರಾ ಎನ್ನ ಪೊಟಿಲೊಳಿರ್ಪ ಇಳಾಮಹಾದೇವಿಗೆ ಮಕ್ಕಳೇನಕ್ಕುಮೋ' 'ನರಜನ್ಮ ಪಡೆದಾಗ ತಾಳ್ವಷ್ಟುವ್ರತದೊಳಾಚರಿಸಬೇಕೆಲ್ಲರು ತಾಯೆ ಮರುಳಾಗಬಾರದು ಭೋಗಕಮ್ಮಾಜ'.

ಹೀಗೆಯೆ ಜೈನ ಕವಿಗಳು ಆಯಾ ಕಾಲದ ಕನ್ನಡ ಭಾಷೆಯನ್ನು ಸಮರ್ಥವಾಗಿ ಬಳಸಿ ಕನ್ನಡ ಸಾಹಿತ್ಯಕ್ಕೆ ಹೇಗೋ ಹಾಗೆಯೆ ಕನ್ನಡ ಭಾಷೆಯ ಬೆಳವಣಿಗೆಗೂ ಮೌಲಿಕ ಕಾಣಿಕೆಯನ್ನಿತ್ತಿದ್ದಾರೆ. ಪಂಪ ಬ್ರಾಜಿಷ್ಣುಗಳ ಕಾಲದಿಂದ ರತ್ನಾಕರವರ್ಣಿ ದೇವಚಂದ್ರರವರೆಗೆ ವಿವಿಧ ಅವಸ್ಥೆ ಶೈಲಿಗಳನ್ನೂ ಕನ್ನಡದಲ್ಲಿ ಜೈನರು ಬಳಸಿಕೊಂಡಿದ್ದಾರೆ.

ಹಟಗನ್ನಡ ಬೆಳುಗನ್ನಡ
ಒಳುಗನ್ನಡ ಮಿಶ್ರಗನ್ನಡಂ ಕಬ್ಬದೊಳಂ
ತಿಳಿದೆಲ್ಲ ಮಿಶ್ರಮಾಗಿಯು
ಮಿಳೆ ಗಱೀವಂದದೊಳೆ ಪೇಟ್ದೆ ರಾಜಾವಳಿಯಿಂ

ಹಟಗನ್ನಡ ಬೆಳುಗನ್ನಡ
ಒಳುಗನ್ನಡವಚ್ಚಗನ್ನಡಂ ಪೊಸತೆಂಬುದು
ತೆಳುಗನ್ನಡ ಮಿಶ್ರದಿಂದ
ನಿಳೆಯೊಳೆ ಸತ್ಪುರುಷರೊಂದಿ ಕೇಳ್ವುದು ಸಂತತಂ

ಎಂದು ಕ್ರಿ.ಶ. ೧೮೦೦ ರಲ್ಲಿದ್ದ ಜೈನಕವಿ ದೇವಚಂದ್ರ, ಹೇಳಿದ್ದಾನೆ. ಹಳಗನ್ನಡ ಇರಲಿ, ಬೆಳುಗನ್ನಡ ಇರಲಿ ಒಳುಗನ್ನಡವಿರಲಿ ತೆಳುಗನ್ನಡವಿರಲಿ ಮಿಶ್ರಗನ್ನಡವಿರಲಿ ಅಚ್ಚಗನ್ನಡವಿರಲಿ ಎಲ್ಲ ಕನ್ನಡಗಳನ್ನೂ ಜೈನ ಕವಿಗಳು ಬಳಸಿದ್ದಾರೆ.

ಇಲ್ಲಿಯವರೆಗೆ ನಾವು ಕ್ರಿ.ಶ. ೧೮೦೦ರವರೆಗಿನ ಕನ್ನಡ ಜೈನ ಸಮಾಜದ ಪ್ರತಿನಿಧಿಗಳಾದ ಪ್ರಮುಖ ಜೈನಕವಿಗಳು ಕನ್ನಡ ಭಾಷೆಯ ಒಲವು ನಿಲುವುಗಳನ್ನು ಅಲ್ಲಿಷ್ಟು ಇಲ್ಲಿಷ್ಟು ನೋಡಿ ಪರಿಚಯಿಸಿಕೊಂಡದ್ದಾಯಿತು.

ಕನ್ನಡ ಭಾಷೆಯ ವ್ಯಾಕರಣ ಕ್ಷೇತ್ರಕ್ಕೆ ಜೈನರ ಕೊಡುಗೆ ಏನು? ಎಂಬುದನ್ನು ಒಂದಿಷ್ಟು ನೋಡುವುದು ಇಲ್ಲಿ ಅವಶ್ಯ. ಭಾರತೀಯ ಪ್ರಾಚೀನ ವ್ಯಾಕರಣ ಕ್ಷೇತ್ರಕ್ಕೆ ಜೈನರ ಕಾಣಿಕೆ ಅಪಾರವಾಗಿದೆ. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ 'ಜೈನೇಂದ್ರ ವ್ಯಾಕರಣ' ಎಂಬ ಪ್ರತ್ಯೇಕ ವ್ಯಾಕರಣ ಪದ್ಧತಿಯನ್ನು ಪ್ರಾರಂಭ ಮಾಡಿದ ಮೂಲಪುರುಷ ಕರ್ನಾಟಕದ ಪೂಜ್ಯಪಾದ. ಪಾಣಿನಿಯ ವ್ಯಾಕರಣಕ್ಕೆ 'ಶಬ್ದಾವತಾರ' ಎಂಬ ನ್ಯಾಸವನ್ನು ಬರೆದವನೀತ. ಈ ನ್ಯಾಸವನ್ನು ಬೋಧಿಸಲು ನಾಗಾಯಿ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರೊಬ್ಬರನ್ನು ನೇಮಿಸಿದ ಸಂಗತಿ ನಾಗಾಯಿ ಶಾಸನದಲ್ಲಿದೆ. ಚಾವುಂಡರಾಯನು ಪೂಜ್ಯಪಾದ ಭಟ್ಟಾರರನ್ನು ''ವ್ಯಾಕರಣ ಕರ್ತೃಗಳ್ ಸುಕವಿ ಪ್ರಣುತರ್'' ''ಗಗನಗಮನ ಸಾಮರ್ಥ್ಯರ್'' ಎಂದು ಹೊಗಳಿದರೆ

ಪೂಜ್ಯಪಾದನ 'ಶಬ್ದಾವತಾರ'ಕ್ಕೆ ಟೀಕೆಯನ್ನು ಬರೆದವನು ಗಂಗರಾಜ ದುರ್ವಿನಿತ. ಮಳಖೇಡದ ಚಕ್ರವರ್ತಿ ನೃಪತುಂಗನ ಆಸ್ಥಾನ ಸಭಾಸದನಾಗಿದ್ದ ಶಾಕಟಾಯನನು 'ಶಬ್ದಾನುಶಾಸನ'ವೆಂಬ ಸಂಸ್ಕೃತ ವ್ಯಾಕರಣ ಪರಂಪರೆಯನ್ನೇ ಆರಂಭಿಸಿದನು. ಕೇಶಿರಾಜನು ಸ್ಮರಿಸಿರುವ ಸುಮನೋಬಾಣನು ಒಬ್ಬ ವೈಯಾಕರಣ. ಇವರೆಲ್ಲರ ವ್ಯಾಕರಣಗಳು ಕನ್ನಡದುವೇ? ಎಂಬುದು ಅವು ಉಪಲಬ್ಧವಾಗುವವರೆಗೂ ತಿಳಿಯದು.

ಕನ್ನಡದ ಮೊಟ್ಟಮೊದಲ ಉಪಲಬ್ಧ ಕೃತಿ 'ಕವಿರಾಜಮಾರ್ಗ'ವು ಜೈನ ವೈದಿಕ ಇಬ್ಬರು ಲೇಖಕರ ಸಮ್ಮಿಶ್ರ ಕೃತಿ. ಮೂಲತಃ ಜೈನನಾದ ಶ್ರೀವಿಜಯ 'ಕವಿಮಾರ್ಗ'ವನ್ನು ರಚಿಸಿ ಅಮೋಘವರ್ಷ ನೃಪತುಂಗನ ಆಶ್ರಯಕ್ಕೆ ಬಂದ ಆಸ್ಥಾನಪಂಡಿತನಾದಾಗ ಸ್ವತಃ ನೃಪತುಂಗನ ವಿಚಾರಗಳನ್ನು ಅದರಲ್ಲಿ ಸೇರಿಸಿ 'ಕವಿರಾಜಮಾರ್ಗ'ವನ್ನಾಗಿಸಿದ್ದಾನೆ. ಈ ದೃಷ್ಟಿಯಿಂದ ಜೈನನಾದ ಶ್ರೀವಿಜಯನ ಕೊಡುಗೆ ಅತ್ಯಮೌಲ್ಯವಾದುದು. ಕನ್ನಡ ನುಡಿಯ ಬಗೆಗೆ ಅವನು ಹೇಳುವ ಕನ್ನಡ, ತಿರುಳ್ಗನ್ನಡ, ಪಟಗನ್ನಡ ಕನ್ನಡ - ಸಂಸ್ಕೃತ ಬೆರಕೆ, ದಕ್ಷಿಣೋತ್ತರ ಮಾರ್ಗ, ಪ್ರಭೇದಗಳು ಕನ್ನಡ ವ್ಯಾಕರಣ ವಿಚಾರಗಳು, ಅಲಂಕಾರ, ಛಂದಸ್ಸಿನ ವಿಚಾರಗಳು ಇತ್ಯಾದಿ ಒಟ್ಟಾರೆ ಕನ್ನಡದ ಘನತೆಯನ್ನು ಎತ್ತಿ ಹಿಡಿದಿವೆ.

ಜನ್ನ ಯಶೋಧರ ಚರಿತೆಯಲ್ಲಿ 'ರನ್ನಂ ವೈಯಾಕರಣಂ ಜನ್ನಂ ಮೇಣ್ ಕವಿಗಳೊಳಗೆ ವೈಯಾಕರಣಂ' ಎಂದು ಹೇಳಿದ್ದು ಸತ್ಯವಾಗಿದ್ದರೆ ಕನ್ನಡದ ಮೊಟ್ಟ ಮೊದಲ ವೈಯಾಕರಣ ರನ್ನನೇ ಆಗುತ್ತಾನೆ. ಪಂಪಮಹಾಕವಿಯು ಭೀಮನಿಂದ ಹೇಳಿಸಿದ ''ನನ್ನ ನುಡಿ ಠಾಠಥಾಥಣಂ'' ಎಂಬ ಮಾತು ವೈಯಾಕರಣನ ಮುಖದಿಂದ ಬರುವಂಥದಲ್ಲವೆ? ಶಬ್ದಸ್ಮೃತಿ ಹಾಗೂ ಕರ್ನಾಟಕ ಭಾಷಾಭೂಷಣ ಈ ವ್ಯಾಕರಣ ಕೃತಿಗಳನ್ನು ಇಬ್ಬರು ಬೇರೆ ಬೇರೆ ನಾಗವರ್ಮರು ರಚಿಸಿರುವರೆಂದೂ ಸ್ಮೃತಿಕಾರನಿಗಿಂತ ಭಾಷಾಭೂಷಣಕಾರ ಭಿನ್ನನೂ ಅರ್ವಾಚೀನನೂ ಆಗಿದ್ದಾನೆಂದು ಡಾ|| ಪಿ.ಕೃಷ್ಣಭಟ್ಟರು ಅಭಿಪ್ರಾಯಪಡುತ್ತಾರೆ. ಇದು ಖಚಿತವಾದರೆ ನಮಗೆ ಇಬ್ಬರು ಜೈನವೈಯಾಕರಣರು ದೊರೆಯುತ್ತಾರೆ.

ನಾಗವರ್ಮನ ಕರ್ನಾಟಕ ಭಾಷಾಭೂಷಣವು ಸಂಸ್ಕೃತದಲ್ಲಿ ರಚಿತಗೊಂಡ ಸಮಗ್ರ ಕನ್ನಡ ವ್ಯಾಕರಣ ಕೃತಿ. ಕನ್ನಡ ಭಾಷೆಯನ್ನು ಕುರಿತು ವ್ಯಾಕರಣಗಳಲ್ಲಿ ಇದು ಮೊಟ್ಟ ಮೊದಲ ಲಭ್ಯ ಕೃತಿ. ಕರ್ನಾಟಕದ ಹೊರಗಿನ ವಿದ್ವಾಂಸರಿಗೂ ಕನ್ನಡ ಭಾಷೆಯ ಸ್ವರೂಪ ಮಹತ್ವವನ್ನು ತಿಳಿಸಿಕೊಡುವ ಉದ್ದೇಶವೂ ನಾಗವರ್ಮನಿಗಿರಬೇಕು. ಅನಾಮಧೇಯ ಪಂಡಿತನೊಬ್ಬ ಇದಕ್ಕೆ ಕನ್ನಡದಲ್ಲಿ ಟೀಕೆಯನ್ನು ರಚಿಸಿದ್ದಾನೆ. 'ಶಬ್ದಸ್ಮೃತಿ' ನಾಗವರ್ಮನ ಕಾವ್ಯಾವಲೋಕನದ ಮೊದಲ ಪ್ರಕರಣವಾದರೂ ಒಂದು ರೀತಿಯಲ್ಲಿ ತನ್ನಷ್ಟಕ್ಕೆ ಪೂರ್ಣ ವ್ಯಾಕರಣ ಕೃತಿ. ಕನ್ನಡದಲ್ಲಿ ಬರೆಯಲ್ಪಟ್ಟ ಉಪಲಬ್ಧ ಮೊಟ್ಟ ಮೊದಲ ಕೃತಿ. ಅಷ್ಟಾಧ್ಯಾಯಿಯನ್ನು ಅನುಸರಿಸಿಯೂ ನಾಗವರ್ಮನು ಇಲ್ಲಿ ತನ್ನ ಸ್ವಂತಿಕೆಯನ್ನು ಮೆರೆದಿದ್ದಾನೆ.

ಕನ್ನಡ ವ್ಯಾಕರಣ ಪರಂಪರೆ ಜೈನರಿಂದಲೇ ಆರಂಭಗೊಂಡು ಜೈನರಿಂದಲೆ ಬೆಳೆದುದರಿಂದ ಹದಿಮೂರನೆಯ ಶತಮಾನದ ಕೇಶಿರಾಜನ ಶಬ್ದಮಣಿದರ್ಪಣದ ಮೇಲೆ ಜೈನ ಪ್ರಭಾವ ದಟ್ಟವಾಗಿ ಆಗಿದೆ. ಈ ಕಾರಣದಿಂದ ಕೇಶಿರಾಜನನ್ನು ಜೈನನೆಂದೇ ಭಾವಿಸಿದ್ದರು.

ಹದಿನಾರನೆಯ ಶತಮಾನದ ಕೊನೆಕೊನೆಗೆ ಆಳಿದ ವಿಜಯನಗರ ಅರಸರ ಆಳ್ವಿಕೆಯಲ್ಲಿ ಭಟ್ಟಾಕಳಂಕನೆಂಬ ಜೈನ ಮುನಿ ಶ್ರೇಷ್ಠ, ಉದ್ದಾಮ ಶಾಸ್ತ್ರಜ್ಞ, ಮುನ್ನಿನ ಕನ್ನಡ ವ್ಯಾಕರಣಗಳೆಲ್ಲವಂ ಇಕ್ಕಿಮೆಟ್ಟುವಂತೆ 'ಶಬ್ದಾನುಶಾಸನ'ವನ್ನು ರಚಿಸಿದ. ಆದರೆ ಇದು ಇದ್ದುದು ಸಂಸ್ಕೃತದಲ್ಲಿ. ಹಳಗನ್ನಡ ಭಾಷೆಯನ್ನು ಇದು ವಿಶೇಷವಾಗಿ ಲಕ್ಷಿಸಿದೆ. ಸಂಸ್ಕೃತಕ್ಕೆ ಅಷ್ಟಾಧ್ಯಾಯಿ ಇದ್ದಂತೆ ಕನ್ನಡಕ್ಕೆ ಶಬ್ದಾನುಶಾಸನ. ಎಂ.ವಿ. ಸೀತಾರಾಮಯ್ಯ ಅವರು - ''ನಾಗವರ್ಮ ತನ್ನನ್ನು ಅಭಿನವಶರ್ವವರ್ಮ'' ಎಂದು ಕರೆದುಕೊಂಡಿರುವನಷ್ಟೇ. ಆ ಬಿರುದು ಅವನಿಗೆ ಸಲ್ಲುವ ಪಕ್ಷಕ್ಕೆ ಒಂದು ದೃಷ್ಟಿಯಿಂದ... ಕೇಶಿರಾಜ ಕನ್ನಡದ 'ಪಾಣಿನಿ'ಯಾದರೆ ಭಟ್ಟಾಕಳಂಕ ಕನ್ನಡದ 'ಅಭಿನವಪಾಣಿನಿ' ಎಂದು ಕರೆದದ್ದು ಅತ್ಯಂತ ಸಮರ್ಪಕವಾಗಿದೆ.

ಕ್ರಿ.ಶ. ೧೯೦೦ರ ಅನಂತರದ ಈಚಿನ ದಶಕಗಳಲ್ಲಿ ಜೈನರು ಕನ್ನಡದ ಆಗುಹೋಗುಗಳ ಪ್ರವಾಹದಲ್ಲಿ ಹೆಚ್ಚು ಕಡಿಮೆ ಲೀನವಾಗಿ ತಾವು ನೆಲೆಸಿದ ಪ್ರದೇಶದ ಕನ್ನಡ ಭಾಷೆಯನ್ನೇ ತಮ್ಮ ಭಾಷೆಯನ್ನಾಗಿಸಿಕೊಂಡು - ಸಾಹಿತ್ಯಿಕ ಸಾಂಸ್ಕೃತಿಕ ಬದುಕಿನಲ್ಲಿ ಮುನ್ನಡೆದಿದ್ದಾರೆ. ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ಇರುವ ಬೇರೆ - ಬೇರೆ ಸಾಮಾಜಿಕ ಪ್ರಭೇದ ಭಾಷೆ ಉಪಭಾಷೆಗಳಂತೆ ಜೈನರದೇ ಆದ ಒಂದು ವಿಶಿಷ್ಟ ಸಾಮಾಜಿಕ ಕನ್ನಡ ಭಾಷಾ ಪ್ರಭೇದವನ್ನಾಗಲಿ ಉಪ ಭಾಷೆಯನ್ನಾಗಲಿ ಗುರುತಿಸಲಾಗಿಲ್ಲ. ಆಧುನಿಕ ಕಾಲದಲ್ಲಿ ಜೈನರು ಬಳಸುವ ಭಾಷೆ ಆಯಾ ಪ್ರದೇಶದಲ್ಲಿ ಬಹುಸಂಖ್ಯಾತ ಮಧ್ಯಮ ಮತ್ತು ಉಚ್ಚ ವರ್ಗದ ಜನರು ಬಳಸುವಂತಹ ಕನ್ನಡ ಭಾಷೆಯೇ ಆಗಿದೆ. ಅ.ನೇ.ಉಪಾಧ್ಯೆ, ಮಿರ್ಜಿ ಅಣ್ಣಾರಾಯ, ಶಾಂತಿನಾಥದೇಸಾಯಿ, ಹಂಪನಾಗರಾಜಯ್ಯ ಮುಂತಾದವರು ಬಳಸಿರುವ ಕನ್ನಡವನ್ನು ಈ ಮಾತಿಗೆ ಉದಾಹರಣೆಯಾಗಿ ನೀಡಬಹುದು.

ಇನ್ನು ಕರ್ನಾಟಕದ ಹೊರಗಿನಿಂದ ಬಂದು ಈಚೆಗೆ ಕರ್ನಾಟಕದಲ್ಲಿ ನೆಲೆಸಿರುವ ಜೈನರು, ವ್ಯವಹಾರಕ್ಕಾಗಿ ಇಲ್ಲಿ ಎಷ್ಟು ಬೇಕೋ ಅಷ್ಟನ್ನು , ತಮ್ಮ ತಮ್ಮ ಮೂಲ ಮಾತೃಭಾಷಾಧ್ವನಿ ಧ್ವನಿಮಾ, ಆಕೃತಿಮಾ ಹಾಗೂ ವಾಕ್ಯಮಟ್ಟದ ಚೌಕಟ್ಟಿನಲ್ಲಿ ಮಾತನಾಡುತ್ತಾರೆ. ಸಾಮಾನ್ಯವಾಗಿ ಅವರು ತಮ್ಮ ಮಕ್ಕಳನ್ನು ಆಂಗ್ಲಭಾಷಾ ಶಾಲೆಗಳಿಗೆ ಸೇರಿಸುತ್ತಾರೆ. ಹಳ್ಳಿಗಳಲ್ಲಿ ಪ್ರಾಚೀನ ಕಾಲದಿಂದಲೂ ನೆಲೆಸುತ್ತ ಬಂದ ಜೈನರು ಇಲ್ಲಿಯ ಸ್ಥಳೀಯ ಸಹಜ ಕನ್ನಡವನ್ನೇ ನುಡಿಯುತ್ತಾರೆ. ಜೈನ ಧಾರ್ಮಿಕ ಪರಿಸರವೊಂದನ್ನು ಬಿಟ್ಟು ಉಳಿದೆಲ್ಲಾ ಡೋಮೇನ್‌ಗಳಲ್ಲಿ ಜೈನರು ಬಳಸುವ ಕನ್ನಡ ಭಾಷೆಗೂ ಇತರ ಸಾಮಾಜಿಕ ಉಚ್ಚವರ್ಗದ ಜೈನರು ಬಳಸುವ ಕನ್ನಡ ಭಾಷೆಗೂ ಗಮನಾರ್ಹವೆನಿಸುವ ವ್ಯತ್ಯಾಸಗಳು ಕಂಡು ಬರುವುದಿಲ್ಲ. ಸ್ಥಳೀಯ ಜಾನಪದ ಭಾಷಾ ಜೀವನಾಡಿಯೇ ಅವರಲ್ಲಿ ಮಿಡಿಯುತ್ತಿದೆ. ಉದಾಹರಣೆಗೆ ಜೈನರ ಹೆಸರುಗಳನ್ನೇ ತೆಗೆದುಕೊಂಡರೆ, ದೇಸಾಯಿ, ಪಾಟೀಲ, ಕುಲಕರ್ಣಿ, ದೇಶಪಾಂಡೆ, ಜೋಶಿ, ಕುಡಚಿ, ಮಿರ್ಜಿ, ಉಪಾಧ್ಯೆ, ಗಾಳಿ ಹೀಗೆಯೇ ಜೈನ ಜೈನೇತರ ಜನರಲ್ಲಿ ಭೇದವೇ ಕಂಡು ಬರುವುದಿಲ್ಲ. ಸುಶಿಕ್ಷಿತ ಜೈನರಲ್ಲಿಯಂತೂ ಶಿಷ್ಟ ಕನ್ನಡದ ಗಂಧವೇ ತುಂಬಿದೆ. ಮಿರ್ಜಿ ಅಣ್ಣಾರಾಯರು, ಶಾಂತಿನಾಥ ದೇಸಾಯಿಯವರು ತಮ್ಮ ಕಾದಂಬರಿ, ಕಥೆಗಳಲ್ಲಿ ಆಡುನುಡಿಯನ್ನು ಸಾಕಷ್ಟು ಬಳಸಿದ್ದಾರೆ. ಆದರೆ ಅದನ್ನು ಜೈನರ ಆಡುನುಡಿ ಎನ್ನಲು ಬಾರದು. ಇಲ್ಲಿ ಒಂದು ಉದಾಹರಣೆ ನೋಡಬಹುದು. ಶಾಂತಿನಾಥ ದೇಸಾಯಿಯವರ 'ಸಂಬಂಧ' ಕಾದಂಬರಿಯಲ್ಲಿ ಸುಶಿಕ್ಷಿತ ಪಾತ್ರಗಳ ಒಂದು ಸಂಭಾಷಣೆ ಹೀಗೆ ಬರುತ್ತದೆ.

''ರಾಧಾ ನೀ ಅಂದ್ರ... ಆಯ್ ಲೈಕಯು, ಲವ್ಹಯು''

''ಆಯ್ ಲೈಕ್ ಯು ಟೂ''

''ಇಂಗ್ಲೀಷ ಭಾಷೆ ಅಷ್ಟು ಸುರಕ್ಷಿತ ಅಲ್ಲ'' ನಾನಂದೆ.

''ನನಗ ಕೇಳಿದ್ರ ನೀವ ಏನೂ ಹೇಳುವ ಅವಶ್ಯಕತೆ ಇದ್ದಿಲ್ಲ. ಭಾಷೆಗಿಂತ ಮೌನ ಲೇಸು.''

ಇಲ್ಲಿ ಆಡುನುಡಿ ಬರಬರುತ್ತ ಶಿಷ್ಟವಾಗುತ್ತ ನಡೆದಿರುವುದನ್ನು ಗುರುತಿಸಬಹುದು. ಮಿರ್ಜಿ ಅಣ್ಣಾರಾಯರ 'ನಿಸರ್ಗ' ಕಾದಂಬರಿಯಲ್ಲಿ ಆಡುನುಡಿಯ ಸೊಗಡು ಹೆಚ್ಚು ದಟ್ಟವಾಗಿದೆ. ಆದರೆ ಅವರದೇ ಇತರ ಕಾಂದಬರಿಗಳಲ್ಲಿ ಶಿಷ್ಟ - ಜಾನಪದ ಶೈಲಿಗಳ ಮಿಶ್ರಣ ಕಂಡು ಬರುತ್ತದೆ.

ಒಟ್ಟನಲ್ಲಿ ಕನ್ನಡ ಭಾಷೆಗೆ ಜೈನರು ಸಲ್ಲಿಸಿದ ಸೇವೆ ಅನುಪಮವಾದುದು.

ಕಾವ್ಯಲಕ್ಷಣ ಮತ್ತು ಕಾವ್ಯೋದ್ದೇಶ

ಡಾ|| ಪಿ.ಎಸ್. ರಾಮಾನುಜಂ

ಹಿಂದೆ ಕಾವ್ಯ ಮೀಮಾಂಸೆಯಲ್ಲಿ ಕಾವ್ಯದ ಶರೀರ ಹಾಗೂ ಆತ್ಮಗಳ ಬಗ್ಗೆ ಅಂದರೆ ಕಾವ್ಯತ್ವದ ಬಗ್ಗೆ ಮೀಮಾಂಸಕರು ಅನೇಕ ಸಿದ್ಧಾಂತಗಳನ್ನು ಮಂಡಿಸಿದರು. ಕಾವ್ಯದ ಲಕ್ಷಣದ ಬಗ್ಗೆ ಹೇಳುತ್ತಾ ಯಾವ ಅಂಶದಿಂದ ಅದು ಕಾವ್ಯವೆನಿಸುತ್ತದೆ ಎಂಬುದನ್ನು ವಿವರಿಸುತ್ತಾ ಹೋದರು. ಆದರೆ ಇಂದು ನಾವು ಕಾವ್ಯದ ಬಗ್ಗೆ ಮಾತನಾಡುವಾಗ ಕಾವ್ಯವೆಂದರೇನು ಎಂಬ ಪ್ರಶ್ನೆಗೆ ಕಾವ್ಯದಲ್ಲಿ ಏನಿರಬೇಕೆಂಬುದನ್ನು ಹೇಳುತ್ತಾ ಹೋಗುತ್ತೇವೆ ಎನಿಸುತ್ತದೆ. ವಾಕ್ ಮತ್ತು ಅರ್ಥ, ಈ ಎರಡು ಅಂಗಗಳನ್ನು ಹೊಂದಿರುವ ಅಂಗಿಯಾದ ಕಾವ್ಯ, ರಸಾತ್ಮಕವಾದುದರಿಂದ ಶುಷ್ಕವಾದ ವಾಕ್ಯಕ್ಕಿಂತ ಭಿನ್ನ ವಸ್ತು ಏನೇ ಇದ್ದರೂ, ಅದನ್ನು ಯಾವ ರೀತಿಯ ಶಬ್ದವು ಕಾವ್ಯಮಯ ಅಭಿವ್ಯಕ್ತಿಯಾಗಿಸುತ್ತದೆ ಎಂಬುದರ ಬಗ್ಗೆ ನಾವು ಯೋಚಿಸುವುದು ಅಗತ್ಯ. ಕಾವ್ಯವು ಅವಿದಿತಗುಣಾಸುಕವೇರ್ಭಣಿತಿಃಕರ್ಣೇಷುವಮತಿ ಮಧುಧಾರಂ, ಎಂಬಂತೆ ಅರ್ಥವಾಗುವ ಮೊದಲೇ ಮಧುರವಾಗಿ ತೋರುವ ಸೃಷ್ಟಿ. ಇದನ್ನೇ ಇಂಗ್ಲೀಷಿನಲ್ಲಿ Poetry communicates before it is understood ಎಂದರು. ಇದರಂತೆ, ಕಾವ್ಯದಲ್ಲಿ ಹೂರಣದ ಆಸ್ವಾದನೆಗೆ ಮೊದಲು, ಅದರ ಹೊರ ರೂಪವೇ ಸಂಗೀತದಂತೆ ಯಾವುದೋ ಒಂದು ಅನಿರ್ವಚನೀಯ ಸಂವಹನವನ್ನು ಹೊಂದಿರುತ್ತದೆ.

ಈ ಮಾತು ಬರಿಯ ಗೇಯರೂಪದ ಕಾವ್ಯಕ್ಕೆ ಮಾತ್ರ ಅನ್ವಯಿಸುವಂತಹುದಲ್ಲ. ಅಗೇಯವಾದರೂ ಅರ್ಥದ ತತ್ವವನ್ನು ಸಮರ್ಥವಾಗಿ ಬಿಂಬಿಸುವ ಹಾಗೂ ಕಾಂತಾಸಮ್ಮಿತತೆಯಿಂದ ಹೃದಯಸ್ಪರ್ಶಿಯಾಗುವಂತೆ ಹೇಳುವ ಅಭಿವ್ಯಕ್ತಿ ಆಗಬಹುದಾದ್ದರಿಂದ ಕಾವ್ಯವು ಕೇವಲ ವಾಕ್ಯದ ಘಟ್ಟದಿಂದ ಬಹಳ ಮೇಲೆ ಇರುತ್ತದೆ.

ಶಬ್ದಸಾಧುತ್ವ, ಶಬ್ದಸೌಂದರ್ಯ, ಶಬ್ದದ ಅದುಷ್ಟತೆ, ಶಬ್ದದ ಗುಣವತ್ವ, ಇವೆಲ್ಲ ಕಾವ್ಯದ ಬಹಿರಂಗ ರೂಪಗಳಾದ್ದರಿಂದ, ಕಾವ್ಯವೆಂದರೇನು ಎನ್ನುವಾಗ ವಾಗರ್ಥಗಳ ಮೊದಲ ಅಂಗವಾದ ಶಬ್ದದ ಬಗ್ಗೆ ಚಿಂತಿಸುವುದನ್ನು ಮರೆಯಬಾರದು.

ಕಾವ್ಯದ ವಸ್ತುವನ್ನು ವಿವರಿಸುವಾಗ, ಕಾಲಾನುಗುಣವಾಗಿ ಕಾವ್ಯೋದ್ದೇಶಕ್ಕೆ ಅನುಗುಣವಾಗಿ ಹೇಳಬೇಕಾಗುತ್ತದೆ. ಭಾರತೀಯ ಕಾವ್ಯಮೀಮಾಂಸೆಯಲ್ಲಿ ಅಲಂಕಾರಗಳು, ರೀತಿ, ವಕ್ರೋಕ್ತಿ, ರಸ, ಧ್ವನಿಗಳ ಸಿದ್ಧಾಂತಗಳಲ್ಲಿ ಕಾವ್ಯದ ಜೀವಾಳವನ್ನು ಕುರಿತು ಮಾತನಾಡುವಾಗ ಕಾವ್ಯದ ಲಕ್ಷಣದಲ್ಲಿ ಶಬ್ದ ಅರ್ಥಗಳೆರಡರ ಸಮಾನ ಮುಖ್ಯತ್ವ ಸಮ್ಮಿಳಿತವಾಗಿದೆ. ಅದರಿಂದಲೇ ಕಾವ್ಯದ ಲಕ್ಷಣಕ್ಕೆ ಮೊದಲು ರಸಗ್ರಂಥಗಳು ಕಾವ್ಯೋದ್ದೇಶದ ಬಗ್ಗೆ ಮಾತನಾಡುತ್ತವೆ. ಇತರ ಶಾಸ್ತ್ರಸಾಹಿತ್ಯಗಳ ಮಾರ್ಗಗಳಿಗೆ ಉದ್ದಿಷ್ಟ ವಿಷಯವನ್ನು ಜನರಿಗೆ ತಲುಪಿಸುವುದರಲ್ಲಿ ಕಷ್ಟವಾಗಿರುವಾಗ ಅದೇ ವಿಷಯವನ್ನು ಕಾವ್ಯವು ಆಕರ್ಷಕವಾಗಿ ಜನರಿಗೆ ತಲುಪಿಸುತ್ತದೆ. ಕಾವ್ಯವು ರಸಾಸ್ವಾದವನ್ನು ಕೊಡುವುದರ ಮೂಲಕ ಸಹೃದಯರನ್ನು ಉದ್ದಿಷ್ಟ ಮಾರ್ಗದಲ್ಲಿ ಒಯ್ಯಬೇಕು. ಈ ಮಾರ್ಗ ಸಾಮಾಜಿಕ, ಅಂದರೆ ವ್ಯಾವಹಾರಿಕವಾಗಿರಬಹುದು ಅಥವಾ ಅದನ್ನು ಮೀರಿದ ನೆಲೆಗೆ ಸಂಬಂಧಪಟ್ಟದ್ದಾಗಿರಬಹುದು. ಇದರಲ್ಲಿ ಒಳಿತು ಕೆಡಕುಗಳ ವಿಷಯವಿರಬಹುದು, ಸಮಾಜದಲ್ಲಿರುವ ಶೋಷಣೆ, ತುಳಿತ ಮುಂತಾದ ವಿಷಯಗಳಿರಬಹುದು, ಆತ್ಮೋದ್ಧಾರದ ವಿಷಯವಿರಬಹುದು, ಅಂಗೀಕೃತ ಪಂಥಗಳ ವಿಷಯವಿರಬಹುದು, ಶುದ್ಧವಾದ ಪ್ರಕೃತಿ ವಿಷಯವಿರಬಹುದು, ಒಂದು ನೀತಿ ವಿಷಯಕ ಕಥಾನಕವಿರಬಹುದು, ಉತ್ಕಟವಾದ ಯಾವುದೇ ಭಾವಗಳಿರಬಹುದು. ಈ ವಿಷಯಗಳನ್ನು ಮನಮುಟ್ಟುವಂತೆ, ಹೃದಯಕ್ಕೆ ನಾಟುವಂತೆ, ಸಹೃದಯರು ಅದರೆಡೆಗೆ ಆಕೃಷ್ಟರಾಗುವಂತೆ ರಸಾಸ್ವಾದದ ಉಪಕರಣದ ಮೂಲಕ ಸಾಧಿಸುವುದೇ ಕಾವ್ಯೋದ್ದೇಶ. ಇಲ್ಲಿ ಕಾವ್ಯ ವಿಷಯ, ರೋಗಗ್ರಸ್ತ ಮನಸ್ಸಿಗೆ ಔಷಧವಾದರೆ, ಅದರ ಕಾವ್ಯ ಸ್ವರೂಪ, ಅದಕ್ಕೆ ಆಪ್ಯಾಯನ, ಅಂದರೆ ಅದಕ್ಕೆ ಸವರಿರುವ ಸಕ್ಕರೆಯ ಮಧುವಿನ ಸಿಹಿ ಲೇಪ. ಇದನ್ನೇ ಆಲಂಕಾರಿಕರು ಈ ರೀತಿ ಹೇಳಿದರು. 'ಕಟುಕೌಷಧೂಪಶಮನೀಯಸ್ಯ ರೋಗಸ್ಯ ಸಿತಶರ್ಕರೋಪಶಮನೀಯತ್ವೇ ಕಸ್ಯವಾರೋಗಿಣಃ ಸಿತಶರ್ಕರಾ ಪ್ರವೃತ್ತಿಃ ಸಾಧೀಯಸೀ ನ ಸ್ಯಾತ್?' (ವಿಶ್ವನಾಥ - ಸಾಹಿತ್ಯದರ್ಪಣ).

ಚತುರ್ವರ್ಗ ಫಲಪ್ರಾಪ್ತಿಃ ಸುಖಾದಲ್ಪಧಿಯಾಮಪಿ
ಕಾವ್ಯಾದೇವ, - (ಸಾಹಿತ್ಯದರ್ಪಣ)

ಅಂದು ಧರ್ಮಾಧರ್ಮ ವಿವೇಕವೇ ಕಾವ್ಯೋದ್ದೇಶವಾಗಿತ್ತು. ಅಂದರೆ ನ್ಯಾಯ ಅನ್ಯಾಯಗಳ ವಿವೇಕ, ಸಮಾಜಕ್ಕೆ ಒಳಿತುಕೆಡಕುಗಳ ವಿಶ್ಲೇಷಣೆ ಮಾಡಿ ಒಳಿತನ್ನು ತೋರಿಸುವುದು ಹಾಗೂ ಕೆಡಕನ್ನು ದೂರೀಕರಿಸುವುದು. ಇದನ್ನೇ ಕಾವ್ಯ ಮೀಮಾಂಸಕನಾದ ಆಚಾರ್ಯ ಮಮ್ಮಟನು ಶಿವೇತರಕ್ಷತಿ ಎನ್ನುವುದು. ಶಿವೇತರವೆಂದರೆ ಅಸಾಧು, ಅಮಂಗಳ, ಕೆಟ್ಟದ್ದು. ಅದನ್ನು ಹೋಗಲಾಡಿಸುವುದು ಶಿವೇತರಕ್ಷತಿ. ಇದು ಕಾವ್ಯದ ಪ್ರಮುಖ ಪ್ರಯೋಜನಗಳಲ್ಲಿ ಒಂದು.

ಆತನ ಪ್ರಕಾರ - ಕಾವ್ಯಂ ಯಶಸೇರ್ಥಕೃತೇ ಶಿವೇತರಕ್ಷತಯೇ
ಸದ್ಯಃ ಪರನಿರ್ವೃತಯೇ ಕಾಂತಾಸಮ್ಮಿತತಯೋಪದೇಶಯುಜೇ

ಇದರಲ್ಲಿ ಸದ್ಯಃ ಪರನಿರ್ವೃತಿ ಎಂದರೆ ಬ್ರಹ್ಮಾಸ್ವಾದ ಸಹೋದರವಾದ, ಅನಿರ್ವಚನೀಯವಾದ ಕಾವ್ಯರಸಾಸ್ವಾದವೂ ಒಂದು. ಇದನ್ನೇ ಚರಮ ಪ್ರಯೋಜನವೆಂದು ಹೇಳುವವರೂ ಇದ್ದಾರೆ. ಆದರೆ ಇದು ಶಿವೇತರಕ್ಷತಿಯ, ಕೃತ್ಯಾಕೃತ್ಯವಿವೇಕದ ಒಂದು ಸಮರ್ಥ ಆಕರ್ಷಕ ಉಪಕರಣವೆಂದು ತಿಳಿದುಕೊಳ್ಳುವುದೇ ಉಚಿತವೆಂದು ನನ್ನ ಅಭಿಪ್ರಾಯ.

ಈ ಶಿವೇತರಕ್ಷತಿಯ ಸಿದ್ಧಾಂತ ಸಾರ್ವಕಾಲಿಕ. ಅದು ಈಗಲೂ ಪ್ರಸ್ತುತ. ಅಶಿವ ಎಂದರೆ ವ್ಯಕ್ತಿಗೆ ಹಾಗೂ ವ್ಯಕ್ತಿಗಳ ಸಮಷ್ಟಿಯಾದ ಸಮಾಜಕ್ಕೆ ಬಾಧಕವಾದ ಅಂಶ. ಅದನ್ನು ನಾಶಪಡಿಸುವ ಕರ್ತವ್ಯ ಕವಿಯದೂ ಕೂಡ. ಆತ

ಪ್ರಭುವಿನಂತಾಗಲಿ, ಮಿತ್ರನಂತಾಗಲಿ ಬರದೆ ಕಾಂತಾಸಮ್ಮಿತತೆಯಿಂದ ಬಂದು ಹೇಳುವವನು. ಸುತ್ತಮುತ್ತ ಕಾಣುವ, ಸಮಾಜಕ್ಕೆ ಅಹಿತವಾದ ವಿಷಯಗಳನ್ನು ಎತ್ತಿ ತೋರಿಸಿ ಖಂಡಿಸಿ ಜನರು ಅವನ ಅಭಿಪ್ರಾಯಕ್ಕೆ ಆಕೃಷ್ಟರಾಗುವಂತೆ ಮಾಡುವುದು. ಹೀಗೆ ಮಾಡಿದರೆ ಮುಂದಿನದನ್ನು ಜನರೇ ನಡೆಸಿಕೊಳ್ಳುತ್ತಾರೆ. ಕವಿಯು ಇದನ್ನು ಅನ್ಯೋಕ್ತಿಯಲ್ಲಿ ಆಕ್ರೋಶದ ಭಾವಾವಿಷ್ಟವಾದ ಅಭಿವ್ಯಕ್ತಿಯಲ್ಲಿ ಮಧುರ ರಚನಾಚಾತುರ್ಯವಿರುವ ರಸಮಯವಾದ ಸ್ವರೂಪಗಳಲ್ಲಿ ಆವಿಷ್ಕೃತಗೊಳಿಸಬಹುದು. ಎಲ್ಲ ಸಂಚಾರಿಭಾವಗಳು, ಸ್ಥಾಯಿಭಾವಗಳನ್ನು ಉಪಯೋಗಿಸಿ ರಸೋತ್ಪತ್ತಿ ಮಾಡಬಹುದು. ಇದರಿಂದ ಸಮಾಜಕ್ಕೆ ಒಳಿತಾಗುವ ಪ್ರಯೋಜನ ಸಾಧಿತವಾಗಬೇಕು.

ಕವಿಯು ಸೂಕ್ಷ್ಮವಾಗಿ ತನ್ನ ಸುತ್ತ ನಡೆಯುವ ವಿದ್ಯಮಾನಗಳನ್ನು ಅವಲೋಕಿಸುತ್ತ ಅದಕ್ಕೆ ಪ್ರತಿಸ್ಪಂದಿಸಬೇಕು ಎಂಬ ಅಂಶ ಶಿವೇತರಕ್ಷತಿ ಎಂಬುದರಲ್ಲಿ ವೇದ್ಯವಾಗುತ್ತದೆ.

ಈ ಕಾವ್ಯಪ್ರಯೋಜನದ ಚೌಕಟ್ಟಿನಲ್ಲಿ ಕನ್ನಡದ, ಅಷ್ಟೇಕೆ, ಎಲ್ಲ ಸಾಹಿತ್ಯದ ಎಲ್ಲಾ ಪಂಥಗಳೂ ಮಾರ್ಗಗಳೂ ಬಂದುಬಿಡುತ್ತವೆ. ಆದರೆ ಶಿವೇತರವನ್ನು ಗುರುತಿಸುವ ಶಕ್ತಿ ಕವಿಗಿರಬೇಕು, ಮತ್ತೆ ಅದನ್ನು ಸಮರ್ಥವಾಗಿ ಕಾವ್ಯಾತ್ಮಕವಾಗಿ ಹೇಳುವ ಕಲೆಯಿರಬೇಕು. ಪರಂಪರೆಯ ಅಂದರೆ ಚರಿತ್ರೆಯ ಹಾಗೂ ವರ್ತಮಾನದ ಒತ್ತಡಗಳಿಂದ ಶಿವೇತರವನ್ನು ಗುರುತಿಸುವ ಸಾಮರ್ಥ್ಯ ಬರುತ್ತದೆ.

ಈ ರೀತಿಯ ಕಾವ್ಯ ಸಿದ್ಧಿಸಬೇಕಾದರೆ ಕವಿಗೆ ಪೂರ್ವಸಿದ್ಧತೆ ಇರಬೇಕು. ಅದರಿಂದಲೇ ವಿದ್ವತ್ಕವಯಃ ಕವಯಃ ಎಂದರು. ಕವಿಗೆ ಎಲ್ಲ ಕ್ಷೇತ್ರಗಳಲ್ಲೂ ಜ್ಞಾನವಿರಬೇಕು; ಶಬ್ದಪ್ರಭುತ್ವ, ಅರ್ಥಪ್ರಭುತ್ವಗಳಿರಬೇಕು. ಅವನ ಅನುಭವ ಆಳವಾಗಿರಬೇಕು. ಅನುಭವವೇ ಕಾವ್ಯವಾಗುವುದಿಲ್ಲ. ಅದರಿಂದ ದೂರ ನಿಂತು ನಿರ್ಲಿಪ್ತತೆಯಿಂದ ಅದನ್ನು ವಿಶ್ಲೇಷಿಸಿ ನಂತರ ಅದನ್ನು ಕಾವ್ಯವಾಗಿಸಬೇಕು. ಬುದ್ಧಿಯು ಇಲ್ಲಿ ಹೃದಯದೊಳಗೆ ಸೇರಿಸಿಕೊಳ್ಳಬೇಕು. ಕಾಳಿದಾಸನ ಉಪಮೆಯನ್ನೂ, ಭಾರವಿಯ ಅರ್ಥಗೌರವವನ್ನೂ, ದಂಡಿಯ ಪದಲಾಲಿತ್ಯವನ್ನೂ ವಿಮರ್ಶಕರು ಹೊಗಳಿ ಹೇಳಿದಾಗ, ಹೇಗೆ ಅಲಂಕಾರಗಳ ಚಮತ್ಕಾರಗಳ, ಅರ್ಥದ ಗಾಂಭೀರ್ಯ, ಪದಗಳ ಲಾಲಿತ್ಯ, ಇವೆಲ್ಲ ವಾಕ್ಯವನ್ನು ಕಾವ್ಯವಾಗಿಸುತ್ತವೆ ಎಂಬುದನ್ನು ತಿಳಿಸಿದರು. ಇವೆಲ್ಲ ಗುಣಗಳು. ಇವುಗಳನ್ನು ಸಿದ್ಧಿಸಿಕೊಳ್ಳುವುದಾದರೆ ಕವಿಯು ಕೃಷಿ ಮಾಡಬೇಕು. ಅವನ ಜ್ಞಾನದ ದಿಗಂತವನ್ನು ವಿಸ್ತರಿಸಿಕೊಳ್ಳಬೇಕು. ಅನುಭವದ ಆಳವನ್ನು ಹೆಚ್ಚಿಸಿಕೊಳ್ಳಬೇಕು. ಹೇಗೆ ಹಾಡಿದ್ದೆಲ್ಲ ರಾಗವಾಗುವುದಿಲ್ಲವೋ ಹಾಗೆಯೇ ಹೇಳಿದ್ದೆಲ್ಲವೂ ಕಾವ್ಯವೂ ಆಗುವುದಿಲ್ಲ. ಕವಿಯು ಹೇಳುವುದನ್ನು ಅಧಿಕಾರವಾಣಿಯಿಂದ ಹೇಳುವವನಾಗಬೇಕು. ಅಧಿಕಾರಕ್ಕೆ ಅನುಭವ ಜ್ಞಾನಗಳೇ ಅಡಿಪಾಯ. ಮಹಾಕವಿಗಳು, ತಮ್ಮ ಕಾವ್ಯಗಳಲ್ಲಿ ರಾಜನೀತಿ, ಪಾರಮಾರ್ಥಿಕ ಜ್ಞಾನ, ವ್ಯಾವಹಾರಿಕ ನೀತಿ, ಪ್ರಕೃತಿ ಸೌಂದರ್ಯ, ಹೀಗೆ ಎಲ್ಲ ವಿಷಯಗಳಲ್ಲಿಯೂ ಸಂಚರಿಸುವುದನ್ನು ನೋಡಿದ್ದೇವೆ. ಅಂದಿನ ಸರ್ವಜ್ಞಾನ ಭಾಗಗಳಲ್ಲಿಯೂ ತಲಸ್ಪರ್ಶಿಯಾದ ಜ್ಞಾನವನ್ನು ಸಂಪಾದಿಸಿಕೊಂಡು ಅದರ ಬಲದಲ್ಲಿ ತಮ್ಮ ಕಾವ್ಯನಿರ್ಮಾಣ ಸಾಮರ್ಥ್ಯವನ್ನು ಪರೀಕ್ಷಿಸಿರುವುದನ್ನು ನೋಡಿದ್ದೇವೆ.

ವಿವಿಧ ಮಾರ್ಗಗಳಲ್ಲಿ ಹಾದು ಪ್ರಯೋಗಾತ್ಮಕತೆಯನ್ನು ರೂಢಿಸಿಕೊಂಡು ಬರುತ್ತಿರುವ ಕನ್ನಡದ ವಿಪುಲ ಸಾಹಿತ್ಯಕ್ಕೆ ಇಂದು ಕಾವ್ಯಸಾಮಗ್ರಿ ಅಪಾರವಾಗಿದೆ. ಈ ಸಾಮಗ್ರಿಯನ್ನು , ವಸ್ತು ಯಾವುದೇ ಪಂಥದ್ದಾಗಿರಲಿ, ಕಾವ್ಯವಾಗಿಸಿಕೊಳ್ಳುವ ಸಾಮರ್ಥ್ಯದ ಬಗ್ಗೆ ನಾವು, ಕಾವ್ಯವೇನು ಎಂದು ಕಾವ್ಯ ಲಕ್ಷಣವನ್ನು ಹೇಳಿದಾಗ, ಗಮನ ಕೊಡಬೇಕು. ಕಾವ್ಯೋದ್ದೇಶವನ್ನು ಹೇಳುವಾಗ ಕಾವ್ಯಾನಂದವು ಕಾವ್ಯಪ್ರಯೋಜನಕ್ಕೆ ಉಪಕರಣ ಮಾತ್ರ ಎಂಬುದನ್ನು ಗಮನದಲ್ಲಿಟ್ಟು ಶಬ್ದಾರ್ಥಗಳ ಸಿದ್ಧಿಗೆ ಪ್ರಯತ್ನಿಸಬೇಕು. ಆಗಲೇ ಕವಿಗೆ ಕಾವ್ಯಸಿದ್ಧಿ ಹಾಗೂ ಕಾವ್ಯೋದ್ದೇಶ ಸಿದ್ಧಿ. ಅಂತಹ ಕಾವ್ಯಗಳು ಕಾಲದ ಪರೀಕ್ಷೆಯಲ್ಲಿ ಸಫಲವಾಗುವುವು.

ಕಾವ್ಯಕ್ಕೆ ಸ್ವಾನುಭವವೇ ಪ್ರೇರಕ. ಒಂದೊಂದು ಕವನದಲ್ಲೂ ಒಂದೊಂದು ಅನುಭವದ ಹಿನ್ನೆಲೆಯಿದ್ದೇ ಇರುತ್ತದೆ. ಅದು ಸುಖದ್ದೇ ಇರಬಹುದು ಅಥವಾ ಶೋಕಃ ಶ್ಲೋಕತ್ವಮಾಗತಃ ಎಂಬಂತೆ ದುಃಖದ್ದೇ ಇರಬಹುದು. ಜ್ಞಾನ ಯಾವುದೇ

ಆಗಿದ್ದರೂ ಅದು ಹೊರಬರುವ ಮಾರ್ಗ ಕಾವ್ಯಮಾರ್ಗವಾಗಿದ್ದಲ್ಲಿ , ಅಲ್ಲಿಂದ ಹೊರಬರುವ ಶಬ್ದಸೃಷ್ಟಿಯು ಕಾವ್ಯವೇ ಆಗಿರುತ್ತದೆ.

ಕಾವ್ಯವು ಕೇವಲ ಸ್ವಪ್ನವಲ್ಲ. ಕವಿ ಕನಸುಗಾರನಲ್ಲ. ಆದರೆ ಆತ ತನ್ನ ಸಮರ್ಥವಾದ ಮಾತಿನಿಂದ ಜನತೆಯ ಚಿಂತನೆಗೆ ಹಾಗೂ ಶಕ್ತಿಗೆ ಒಂದು ಮಾರ್ಗವನ್ನು ತೋರಿಸಬಲ್ಲ. ಆ ಮಾರ್ಗಕ್ಕೆ ಸೆಳೆಯಬಲ್ಲ. 'ವಂದೇ ಮಾತರಂ' ಇಡೀ ಭಾರತದಲ್ಲಿ ರಣರಣಿಸಿ ಜನಗಳಲ್ಲಿ ಸ್ವಾತಂತ್ರ್ಯ ಸಮರದ ಸ್ಫೂರ್ತಿಯನ್ನು ತಂದೊಡ್ಡಲಿಲ್ಲವೇ? ಕುಮಾರವ್ಯಾಸನ ಭಾರತ, ತೊರವೆ ರಾಮಾಯಣ ಮುಂತಾದ ಮಹಾಕಾವ್ಯಗಳು ಕನ್ನಡನಾಡಿನ ಮೂಲೆ ಮೂಲೆಗಳನ್ನು ತಲುಪಿ ಜನಸಾಮಾನ್ಯರ ಹೃದಯದಲ್ಲಿ ನೆಲೆಸಿ, ಅವರನ್ನು ಸುಸಂಸ್ಕೃತ ಹಾದಿಯತ್ತ ನಡೆಸಲಿಲ್ಲವೇ?

ಜನಸಾಮಾನ್ಯರ ವಿಷಯ ಬಂದಾಗ ಒಂದು ವಿಷಯ ಹೇಳಬೇಕು. ಶಿಷ್ಟಸಂಪ್ರದಾಯಕ್ಕೆ ಸೇರಿದ್ದೆಂದು ಅಥವಾ ಮಾರ್ಗ ಕಾವ್ಯಗಳೆಂದು ನಾವು ಕಾವ್ಯಗಳ ಒಂದು ವಿಭಾಗವನ್ನು ಪರಿಗಣಿಸಿ ಜನಸಾಮಾನ್ಯರನ್ನು ಸ್ಪಂದಿಸುವಂತೆ ಮಾಡುವ ಪ್ರಗತಿಶೀಲ ಕಾವ್ಯಪ್ರಯೋಗದಲ್ಲಿ ಕೈಹಾಕಿದೆವು ನಿಜ. ಆದರೆ ಇದರಲ್ಲಿ ನಾವು ನಮ್ಮದೇ ಆದ ಒಂದು ಶಿಷ್ಟ ಅಥವಾ ವಿಶಿಷ್ಟ ಮಾರ್ಗವನ್ನು ರೂಢಿಸಿಕೊಂಡು ಸಾಮಾನ್ಯ ಜನರನ್ನೂ ಮುಟ್ಟದೆ ಹೋದೆವೇನೋ ಎನ್ನಿಸುತ್ತದೆ. ಕಾವ್ಯದ ನಡುವೆ ಮನುಷ್ಯನನ್ನು ವಸ್ತುವಾಗಿ ಇಟ್ಟು ಅವನನ್ನೇ ನಾವು ತಲುಪದಂತಾದರೆ ಅದೊಂದು ದುರಂತ. ಇದಕ್ಕೆ ಅನೇಕ ಕಾರಣಗಳಿರಬಹುದು. ಮುಖ್ಯವಾದ ಕಾರಣವೆಂದರೆ ನನಗೆ ತೋರುವುದು ನಾವು ನಮ್ಮ ಕಾವ್ಯಶೈಲಿ ಹಾಗೂ ಚಿಂತನಗಳನ್ನು ಆಯಾತ ಮಾಡಿಕೊಂಡು ಅಪರಿಚಿತವಾಗಿಸಿರುವುದು. ಪ್ರಯೋಗಶೀಲತೆಯಿರಬೇಕು ಎಂಬುದು ಸತ್ಯ. ಯಾವುದೇ ಹೊಸ ಪ್ರಯೋಗಕ್ಕೆ ಸ್ವಾಗತವಿದೆ. ಆದರೆ ಈ ಪ್ರಯೋಗ ನಮ್ಮ ಅವಶ್ಯಕತೆಗಳಿಂದ ನಮ್ಮದೇ ಮಣ್ಣಿನಲ್ಲಿ ಉದ್ಭೂತವಾಗಬೇಕು. ನಮ್ಮ ವಾತಾವರಣಕ್ಕೆ ಅನುಗುಣವಾದ ಸಹಜವಾದ ವಿಕಸನವಾಗಬೇಕು, ಈ ಮಣ್ಣಿನ ವಾಸನೆ ಇಲ್ಲದಿದ್ದರೆ, ನಮ್ಮ ಪ್ರಯೋಗವು ಅತಿಶಿಷ್ಟವಾಗಿ, ಒಂದು ಅಲ್ಪಸಂಖ್ಯೆಯ ವಿಶಿಷ್ಟ ಗುಂಪಿನಲ್ಲಿ ಮಾತ್ರ ಉಳಿದು ನಡೆದುಹೋಗಿ ಬಿಡುತ್ತದೆ. ಕಾಲದ ಕರ್ಕಶ ತುಳಿತಕ್ಕೆ ಸಿಕ್ಕ ಕ್ಷೀಣವಾಗಿ ಬಿಡುತ್ತದೆ.

ಪ್ರಪಂಚದಲ್ಲಿ ಎಲ್ಲೆಲ್ಲೂ ವಿವಿಧ ಸಾಹಿತ್ಯ ಚಳುವಳಿಗಳು, ಅಂದರೆ ಮಾರ್ಗಗಳು ಮೂಡಿಬರುತ್ತಿರುವಾಗ ಅದರಿಂದ ನಮ್ಮ ಸಾಹಿತ್ಯ ಪ್ರಭಾವಿತವಾಗುವುದು ಅಸಹಜವೇನಲ್ಲ. ಆದರೆ ಸ್ವತ್ವವನ್ನು ಸಂಪೂರ್ಣಬೇರಿನಿಂದ ಕಿತ್ತು ಅದರಲ್ಲಿ ಪರಕೀಯ ಸತ್ವವನ್ನು ತುಂಬುವುದು ಸ್ವರೂಪನಾಶಕ. ಇಂತಹ ಕ್ರಿಯೆ ಮುಮೂರ್ಷುದಶೆಯಲ್ಲಿರುವ ಸಾಹಿತ್ಯಕ್ಕೆ ಬೇಕೇ ವಿನಾ ಚೈತನ್ಯದಿಂದ ಚಿಮ್ಮುತ್ತಿರುವ ಕನ್ನಡ ಸಾಹಿತ್ಯಕ್ಕಲ್ಲ. ಆದ್ದರಿಂದ ಹೊಸ ಮಾರ್ಗಗಳಲ್ಲಿ ಹೋಗುವ ಉತ್ಸಾಹದಲ್ಲಿ ನಮ್ಮತನವನ್ನು ಕಳೆದುಕೊಳ್ಳದಿರುವಂತೆ ಎಚ್ಚರಿಕೆಯಿಂದ ನಾವು ಸಾಗಬೇಕಾಗಿದೆ. ಬದಲಾವಣೆಯ ಹೊಸ ಗಾಳಿ, ನಮ್ಮ ಮಲ್ಲಿಗೆಯ ಪರಿಮಳವನ್ನು ಹೊತ್ತು ಬೀಸುತ್ತಿರುವ ನಮ್ಮದೇ ಮಂದಮಾರತದೊಡನೆ ಸಮನ್ವಿತವಾಗಿ ಒಂದು ನವೀನವಾದ ಹಿತವನ್ನೂ ಗಂಧವನ್ನೂ ಕೊಡುವರಾಗಬೇಕು. ಕೆಂಧೂಳನ್ನು ಕೆದರಿಕೊಂಡು ಬರುವ ಚಂಡಮಾರುತಕ್ಕೆ ಬಲಿಯಾಗಿ ಅದರೊಡನೆ ಸುತ್ತುವುದು ನಮಗೆ ಸರಿಯಲ್ಲ.

ನಮಗೆ ನಮ್ಮದೇ ಸಮಸ್ಯೆಗಳಿವೆ. ನಮ್ಮದೇ ದೌರ್ಬಲ್ಯಗಳಿವೆ. ನಮ್ಮದೇ ಶಕ್ತಿಯೂ ಇದೆ. ಯಾವುದೇ ಮಾರ್ಗ ಬೆಳೆದರೂ, ಅದು ನಮ್ಮದೇ ನೆಲ ಮಣ್ಣು ರಸಗಳನ್ನು ಹೀರಿಕೊಂಡು ಬೆಳೆಯುತ್ತಾ ಬಲಿಯಬೇಕು.

ಸಮಕಾಲೀನ ಕವಿತೆಯನ್ನು ನೋಡಿದಾಗ, ಮನಸ್ಸಿಗೆ ಹರ್ಷವಾಗುತ್ತದೆ. ಜೀವನೋತ್ಸಾಹ, ಸಹಾನುಭೂತಿ, ಅನ್ಯಾಯದ ಬಗ್ಗೆ ಆಕ್ರೋಶ, ವಿಡಂಬನೆ, ಪಂಥಾಹ್ವಾನ ಸ್ವೀಕರಿಸುವ ಎದೆಗಾರಿಕೆ, ಇವುಗಳೆಲ್ಲ ಇದ್ದು ಅನುಭವದ ವೈವಿಧ್ಯ ಹಾಗೂ ವಿಸ್ತಾರವನ್ನು ಅವು ತೋರಿಸುತ್ತವೆ. ವಿವಿಧ ಪಂಥಗಳು ತರಂಗಗಳಂತೆ ಎದ್ದೆದ್ದು ಬರುತ್ತಿದ್ದು ಸಾಹಿತ್ಯ ತನ್ನದೇ ವರ್ಣಜಾಲದಿಂದ ಮಿನುಗುತ್ತಿದೆ.

ಇವೆಲ್ಲದರ ನಡುವೆ ನಮ್ಮ ಕಾವ್ಯದ ಭವಿಷ್ಯ ಹೇಗಿರಬೇಕು ಎಂಬ ಪ್ರಶ್ನೆ ಮೂಡುತ್ತದೆ. ಯಾವ ಆಶೋತ್ತರಗಳನ್ನು ಅದು ಪ್ರತಿಧ್ವನಿಸಬೇಕು, ಯಾವ ಮಾರ್ಗದಲ್ಲಿ ಅದು ತೂಕದಿಂದ ಮುಂದುವರಿಯಬೇಕು ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳಬೇಕಾಗಿದೆ.

ಮಾರ್ಗವಿಲ್ಲದೆಯೂ ಕವಿ ಬೆಳೆಯಬಲ್ಲ. ಕವಿಹೃದಯವುಳ್ಳವನ ಮನಸ್ಸು ನಾಲಿಗೆ ಸುಮ್ಮನಿರಲಾರದು. ಅವು ಅವನ ಅನುಭವಗಳನ್ನು ತನ್ನದೇ ಶೈಲಿಯಲ್ಲಿ ಶಬ್ದಮಯವಾಗಿಸಿ ಅರ್ಥವನ್ನು ಪರಿಪುಷ್ಟಗೊಳಿಸಿ ಹೊರತಳ್ಳುತ್ತದೆ. ಕವಿವಾಣಿಯು ಹ್ಲಾದೈಕಮಯಿ, ಅನನ್ಯಪರತಂತ್ರೆ, ನವರಸರುಚಿರೆ. ಮನುಷ್ಯನು ಹಂತ ಹಂತವಾಗಿ ಸಾಧಿಸಿರುವ ಅನೇಕ ಅದ್ಭುತಕಾರ್ಯಗಳಲ್ಲಿ ಕಾವ್ಯವೂ ಒಂದು. ಹೃದಯ ಸಂವಾದದ ಭಾಷೆ ಇದು. ಸಮಾಜವನ್ನು ಏಳುವಂತೆ, ಕಣ್ತೆರೆಯುವಂತೆ ಮಾಡುವ ಶಬ್ದರೂಪವಾದ ಸಾರ್ಥಕ ಶಕ್ತಿಯಿದು. ಇದನ್ನು ನಾವು ಆರಾಧಿಸಬೇಕಾಗುತ್ತದೆ.

ಆಗ ಅದು ನಮ್ಮ ವಶವಾಗುತ್ತದೆ. ಅದೊಂದು ಸಾಧನೆ, ಅದೊಂದು ಆತ್ಮವಿಕಾಸದ ತಪಸ್ಸು. ಈ ತಪಸ್ಸಿನಲ್ಲಿ ಸಮಾಜದ ಒಳಿತಿನ ಧ್ಯೇಯ ಮಾತ್ರ ಸ್ಥಿರವಾಗಿರಬೇಕು. ಮಿಕ್ಕೆಲ್ಲ ಫಲಗಳೂ ಆನುಷಂಗಿಕ ಮಾತ್ರ. ಕೃತ್ಯಾಕೃತ್ಯಗಳಲ್ಲಿ ಪ್ರವೃತ್ತಿ ಹಾಗೂ ನಿವೃತ್ತಿ, ಯಾವುದು ಕೃತ್ಯ ಯಾವುದು ಅಕೃತ್ಯ, ಯಾವುದು ಪಥ್ಯ, ಯಾವುದು ಅಪಥ್ಯ ಎಂಬುದನ್ನು ತಿಳಿದು ಹೇಳುವ ಯೋಗ್ಯತೆಯನ್ನು ನಾವು ಅನುಭವದಿಂದ, ಕೃಷಿಯಿಂದ ಸಂಪಾದಿಸಿಕೊಳ್ಳಬೇಕು. ಆಗ ಮಾತ್ರ ನಮ್ಮ ಕಾವ್ಯ ಸೃಷ್ಟಿ 'ಶಿವ' ವಾಗುತ್ತದೆ.

●

ಕುವೆಂಪು ಮತ್ತು ಪಾಶ್ಚಾತ್ಯ ಕಾವ್ಯ ಮೀಮಾಂಸೆ

ಡಾ|| ಸಿ.ಪಿ. ಕೃಷ್ಣಕುಮಾರ್

೧

ಕುವೆಂಪು ಅವರು ಸೋಪಜ್ಞವಾದ ಕಾವ್ಯವನ್ನು ಕೊಟ್ಟಂತೆಯೆ ಸ್ವೋಪಜ್ಞವಾದ ಕಾವ್ಯ ಮೀಮಾಂಸೆಯನ್ನು ಕೊಟ್ಟಿದ್ದಾರೆ ಎನ್ನುವುದು ಅವರ ಅಗ್ಗಳಿಕೆಗಳಲ್ಲೊಂದು. ''ಕುವೆಂಪು ಅವರ ಭಾಸ್ವರ ಪ್ರತಿಭೆ ಸಾರಸ್ವತ ಸತ್ಯವನ್ನು ಸಾಕ್ಷಾತ್ಕರಿಸಿಕೊಂಡು ಒಂದು ಕಡೆ ಮಹೋನ್ನತ ಮಹಾಕಾವ್ಯವನ್ನು ನಿರ್ಮಿಸಿದಂತೆ ಇನ್ನೊಂದು ಕಡೆ ಕಾವ್ಯಮೀಮಾಂಸೆಯ ಪರಮೋಪನಿಷದ್ರಹಸ್ಯವನ್ನು ಭೇದಿಸಲು ಯತ್ನಿಸಿದೆ.'' [1] ಅದು ಸಫಲ ಯತ್ನವೂ ಹೌದು.

ಭಾರತೀಯ ಪರಂಪರೆಯಲ್ಲಿ ಭದ್ರವಾಗಿ ನೆಲೆಗೊಂಡ ಚೇತನ, ಕುವೆಂಪು. ಆದರೆ ಭಾರತೀಯ ಪರಂಪರೆ ಮೂಲತಃ ಸಂಕುಚಿತವಾದುದಲ್ಲ, ಔದಾರ್ಯ ಅದರ ಜೀವಲಕ್ಷಣ ಎಂಬುದನ್ನು ನೆನಪಿಡಬೇಕು. ''ಆನೋ ಭದ್ರಾಃ ಕ್ರತವೋ ಯಂತು ವಿಶ್ವತಃ'' (ಒಳ್ಳೆಯ ಆಲೋಚನೆಗಳು ಎಲ್ಲ ಕಡೆಗಳಿಂದಲೂ ಬರಲಿ) ಎಂಬುದು ಋಗ್ವೇದದ ಉಕ್ತಿ. ಎಂತಲೇ ಕುವೆಂಪು 'ವಿಶ್ವಪಥ'ದಲ್ಲಿ ಯಾತ್ರೆ ಕೈಕೊಂಡವರು. ಅವರದು ಪ್ರಾಚ್ಯ-ಪಾಶ್ಚಾತ್ಯಗಳು ಸಂಧಿಸುವ ಸಮನ್ವಯ ಕಾವ್ಯಮೀಮಾಂಸೆ ; ಮೌಲಿಕವಾದ ತೌಲನಿಕ ಹೊಳಹುಗಳನ್ನೊಳಗೊಂಡದ್ದು. ''ಭಾರತೀಯ ಕಾವ್ಯಮೀಮಾಂಸೆ ನಮ್ಮ ರಸಚೇತನದ ಗುಡಿಗೆ ಅಡಿಗಲ್ಲಾಗಿ ನಿಲ್ಲಬೇಕಾಗುತ್ತದೆ [2]''

---

1. ಕೆ. ಕೃಷ್ಣಮೂರ್ತಿ, 'ಗಂಗೋತ್ರಿ', ಪುಟ ೫೨೦

2. ಕುವೆಂಪು, ಮುನ್ನುಡಿ, ತೀ.ನಂ. ಶ್ರೀಕಂಠಯ್ಯನವರ 'ಭಾರತೀಯ ಕಾವ್ಯಮೀಮಾಂಸೆ', ೧೯೫೩, ಪು. VIII,

ಎಂದು ಹೇಳುವ ಕುವೆಂಪು, ಅದರ ಎಷ್ಟೋ ತತ್ತ್ವಗಳನ್ನು ಪುನರ್ ವ್ಯಾಖ್ಯಾನಿಸಿ, ಅದರ ಕ್ಷಿತಿಜಗಳನ್ನು ವಿಸ್ತರಿಸಿದ್ದಾರೆ; ಅದಕ್ಕೆ ಹೊಸ ಆಯಾಮಗಳನ್ನೊದಗಿಸಿದ್ದಾರೆ. ಆದರೂ ಅವರ ನಿಲುವು ಏಕಪಕ್ಷೀಯವಾದುದಲ್ಲ ; ಅವರ ಸಮನ್ವಯ ಧೋರಣೆಗೆ ಸುಸಾಕ್ಷಿಯಾಗಿವೆ, ಈ ಉಕ್ತಿಗಳು: ''ಸಾಹಿತ್ಯ ಸೃಷ್ಟಿಯಲ್ಲಿ ಹೇಗೊ ವಿಮರ್ಶೆ ದೃಷ್ಟಿಯಲ್ಲಿಯೂ ಹಾಗೆಯೆ ಪಾಶ್ಚಾತ್ಯದ ಅಂಧಾನುಕರಣವಾಗಲಿ ಭಾರತೀಯತೆಯ ಅಂಧಾನುಸರಣವಾಗಲಿ ಉತ್ತಮ ಸೃಷ್ಟಿಗೆ ಕಾರಣವಾಗದು. ಎಂದ ಮೇಲೆ, ಕನ್ನಡದ ಕಾವ್ಯವಿಮರ್ಶೆ ಸಮನ್ವಯರೂಪವಾದ ಒಂದು ನವವಿಧಾನವನ್ನು ಅನುಸರಿಸಿ ತನ್ನ ವೈಶಿಷ್ಟ್ಯವನ್ನು ಸ್ಥಾಪಿಸುವುದರ ಮೂಲಕ ಲೋಕದ ಕಾವ್ಯವಿಮರ್ಶೆಗೆ ತನ್ನ ಕಾಣಿಕೆಯನ್ನು ಸಲ್ಲಿಸಬೇಕಾಗಿದೆ''[3].

ಪಾಶ್ಚಾತ್ಯ ವಿಮರ್ಶೆಯ ಪರಿಮಿತಿಯ ಅರಿವೂ ಕುವೆಂಪು ಅವರಿಗಿದೆ. ''ಪಾಶ್ಚಾತ್ಯ ಸಾಹಿತ್ಯ ವಿಮರ್ಶೆ ಕ್ರಿಸ್ತಮತದ ತತ್ತ್ವಗಳ ಮೇಲೆ ನಿಲ್ಲುತ್ತದೆ. ಆ ತತ್ತ್ವಗಳ ಎಲ್ಲ ಉಪಾಧಿಗಳಿಂದಲೂ ಅದು ಬದ್ಧವಾಗಿ, ಅತ್ಯಂತ ಪರಿಮಿತವೂ ಸಂಕುಚಿತವೂ ಆಂಶಿಕವೂ ಆಗುತ್ತದೆ. ಅದರ ಆ ನ್ಯೂನತೆಯಿಂದ ನಾವು ಪಾರಾಗಿ, ಸರ್ವತೋಮುಖವೂ ಸರ್ವಗ್ರಾಸಿಯೂ ಆಗಿರುವ ನಮ್ಮ ಋಷಿದರ್ಶನದ ಪೂರ್ಣದೃಷ್ಟಿಯ ಮೇಲೆ ನಿಲ್ಲಬೇಕಾಗುತ್ತದೆ''.

ಭವಿಷ್ಯತ್ ಕಾವ್ಯಮೀಮಾಂಸೆ, ವಿಮರ್ಶೆಗಳ ಚಿತ್ರವೊಂದನ್ನು ಕುವೆಂಪು ಹೀಗೆ ಕೊಡುತ್ತಾರೆ. ''ನಮ್ಮ ಮುಂದಿನ ಕಾವ್ಯಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆಗಳು ಪಾಶ್ಚಾತ್ಯ ಮತ್ತು ಭಾರತೀಯ ಕಾವ್ಯಮೀಮಾಂಸೆಗಳಿಂದ ಮಾತ್ರವಲ್ಲದೆ ತತ್ತ್ವಶಾಸ್ತ್ರ ಯೋಗ ವಿಜ್ಞಾನ, ಸೌಂದರ್ಯ ಮೀಮಾಂಸೆ, ಮತ್ತು ಮನಶ್ಶಾಸ್ತ್ರ ಇವುಗಳಿಂದಲೂ ಬೆಳಕು ಪಡೆದು ಧೀರವಾಗಿ ಸ್ವತಂತ್ರವಾಗಿ' ಪೂರ್ಣ ದೃಷ್ಟಿಯ ಕಡೆಗೆ ಮುನ್ನಡೆಯಬೇಕಾಗುತ್ತದೆ''[4]. ಈ ಅರ್ಥದಲ್ಲೂ ಕುವೆಂಪು ಅವರಿಂದ ಉದ್ದಿಷ್ಟವಾಗಿರುವುದು ಸಮನ್ವಯ ಮೀಮಾಂಸೆಯೇ. ವಾಸ್ತವವಾಗಿ, ಈ ಬಗೆಯ ಮೀಮಾಂಸೆಯನ್ನು ಕನ್ನಡದಲ್ಲಿ ಮೊದಲು ಕೊಟ್ಟವರು ಕುವೆಂಪು. ಅದು ಮುಂದೆ ಅಷ್ಟಾಗಿ ಬೆಳೆಯಲಿಲ್ಲವೆನ್ನುವುದು ಬೇರೆ ಮಾತು.

ಅನೇಕ ಪಾಶ್ಚಾತ್ಯ ಕಾವ್ಯ ತತ್ತ್ವಗಳನ್ನು ಕುವೆಂಪು ಕನ್ನಡಕ್ಕೆ ತಂದಿದ್ದಾರೆ. ಅವರ ವಿಚಾರಧಾರೆಯ ಮೇಲೆ ಪ್ರಭಾವ ಬೀರಿರುವ ಪಾಶ್ಚಾತ್ಯ ವಿಮರ್ಶಕರೆಂದರೆ ಐ.ಎ.ರಿಚರ್ಡ್ಸ್, ಎ.ಸಿ. ಬ್ರಾಡ್ಲೆ, ಕ್ರೋಚೆ, ಸಿ.ಡೇ.ಲೂಯಿ ಮುಂತಾದವರು; ಮನಃಶಾಸ್ತ್ರಕ್ಕೆ ಸಂಬಂಧಿಸಿದಂತೆ ಸಿ.ಜಿ.ಯೂಂಗ್‌ನಿಂದ ಕುವೆಂಪು ಪ್ರಭಾವಿತರಾಗಿದ್ದಾರೆ. ಅವನ ಸಮಷ್ಟಿ ಪ್ರಜ್ಞೆಯ (Collective unconscious) ಸಿದ್ಧಾಂತವನ್ನವರು ಪುರಸ್ಕರಿಸುತ್ತಾರೆ. ಆಂಗ್ಲ ರೊಮ್ಯಾಂಟಿಕ್ ಕವಿಗಳ ವಿಚಾರಗಳಿಂದಲೂ ಅವರು ಕೆಲವೊಮ್ಮೆ ಪ್ರೇರಣೆ ಪಡೆದಿದ್ದಾರೆ. ಆದರೆ ತಮ್ಮ ಮತಿಯ ಒರೆಗಲ್ಲಿಗೆ ತಿಕ್ಕಿ ನೋಡದೆ ಯಾವುದನ್ನೂ ಕುವೆಂಪು ಒಪ್ಪಿಕೊಳ್ಳುವುದಿಲ್ಲವೆಂಬುದು ಗಮನಾರ್ಹ. ಅವರಿಗೆ ಹೆಚ್ಚು ಪ್ರಿಯನಾದವನು ರಿಚರ್ಡ್ಸ್ ; ಆದರೆ ಅವನನ್ನು ಕೂಡ ಅವರು ಕಣ್ಣು ಮುಚ್ಚಿಕೊಂಡು ನಕಲು ಮಾಡುವುದಿಲ್ಲ.

ಪಶ್ಚಿಮದ ಪ್ರಭಾವ, ಪ್ರೇರಣೆಗಳೇನೇ ಇದ್ದರೂ ಕುವೆಂಪು ಅವರ ಕಾವ್ಯಜಿಜ್ಞಾಸೆ ಪ್ರಮುಖವಾಗಿ ಭಾರತೀಯ ಆಲೋಚನೆಗಳನ್ನು ಆಧರಿಸಿದ ದರ್ಶನಾತ್ಮಕ ಜಿಜ್ಞಾಸೆಯೇ. ಆರ್ಷಪ್ರಜ್ಞೆ ಅದರಲ್ಲಿ ಸ್ಥಾಯಿ; ಸ್ವೋಪಜ್ಞತೆಗೆ ಲೋಪವಿಲ್ಲ.

ದರ್ಶನ ಎಂದರೇನು ! ಋಷಿಯ ಅಪರೋಕ್ಷಾನುಭೂತಿಗೆ ಹತ್ತಿರವಾದುದು, ಬುದ್ಧಿಪೂರ್ವಕವಾದುದಲ್ಲ, ಬುದ್ಧಿ ಪೂರ್ವವಾದ ಸಿದ್ಧಿ ಎಂದು ಉತ್ತರಿಸುವ ಕುವೆಂಪು, ''ಇಂಗ್ಲಿಷಿನ 'Creative vision' ಎಂಬ ಪದ ಇದಕ್ಕೆ ಕೊಂಚ ಮಟ್ಟಿಗೆ ಸಂವಾದಿ'' ಎನ್ನುತ್ತಾರೆ.

---

3. ಅಲ್ಲೇ.

4. ಕುವೆಂಪು, ಪೂರ್ವೋಕ್ತ, ಪು. IX,

'ಕಲೆಗಾಗಿ ಕಲೆ' ಎನ್ನುವುದು ಪಶ್ಚಿಮದಲ್ಲಿ ಪ್ರಚಲಿತವಾದ ಒಂದು ಪ್ರಬಲ ವಾದ. ಅದನ್ನು ಕುವೆಂಪು ಉಗ್ರವಾಗಿ ಖಂಡಿಸುತ್ತಾರೆ. ಅವರು ದೃಢವಾಗಿ ಹೇಳುತ್ತಾರೆ : ''ಕಲೆಗಾಗಿ ಕಲೆ ಎಂಬ ಸೂತ್ರ ಕಲಾಪೂರ್ಣವಾದುದಾರೂ ಪೂರ್ಣವಾದುದಲ್ಲ... ಅದು ನಮ್ಮನ್ನು ಉತ್ತಮ ಗತಿಗೆ ಕೊಂಡೊಯ್ಯಲು ಸಮರ್ಥವಾಗಿರುವಂತೆಯೆ ಅಧೋಗತಿಗೆ ಕೊಂಡೊಯ್ಯುವುದೂ ಸಾಧ್ಯ.'' ಅವರು ಮತ್ತೂ ಸೇರಿಸುತ್ತಾರೆ : ''ಧರ್ಮ ಬೋಧೆಗಾಗಿಯೆ ಕಲೆ ಎನ್ನುವುದರಂತೆಯೆ 'ಕಲೆಗಾಗಿ ಕಲೆ' ಎನ್ನುವ ಸೂತ್ರವೂ ನಮ್ಮ ಸಂಸ್ಕೃತಿಗೆ ಸಹಜವಾದುದಲ್ಲ. ಅದು ಪಾಶ್ಚಾತ್ಯರಿಂದ ಆಮದಾಗಿ ಬಂದುದು.'' ಅತಿರೇಕಗಳಿಗೆ ಕುವೆಂಪು ಚಿಂತನದಲ್ಲಿ ಸ್ಥಾನವಿಲ್ಲ.

ಕುವೆಂಪು ಅವರ ಕಾವ್ಯಮೀಮಾಂಸೆ ಜೀವನಮೀಮಾಂಸೆ ಕೂಡ ಎಂಬುದು ಮುಖ್ಯವಾದ ವಿಚಾರ. ಅವರು ಸಾಹಿತ್ಯಕ್ಕಷ್ಟೆ ತಮ್ಮನ್ನು ಸೀಮಿತ ಮಾಡಿಕೊಳ್ಳದೆ, ತಮ್ಮ ದೃಷ್ಟಿಯನ್ನು ಆಚೆಗೂ ಚಾಚುತ್ತಾರೆ ಎಂಬುದನ್ನು ಮರೆಯಕೂಡದು. ಕಲೆಯನ್ನು ವೈಭವೀಕರಿಸುವುದಿಲ್ಲ , ಕುವೆಂಪು.

ಕುವೆಂಪು ಕಾವ್ಯಮೀಮಾಂಸೆಯಲ್ಲಿ ಎರಡು ಭಾಗಗಳನ್ನು ಕಲ್ಪಿಸುತ್ತಾರೆ, ವಿದ್ವಾಂಸರೊಬ್ಬರು : ಒಂದು, ಕವಿಯ ಮಹತ್ವ ಮತ್ತು ಕಾವ್ಯಪ್ರಯೋಜನಗಳನ್ನು ನಿರೂಪಿಸುವಂಥದು; ಇನ್ನೊಂದು ಕಾವ್ಯಮೀಮಾಂಸೆಯ ಕೆಲವು ತತ್ವಗಳ ಜಿಜ್ಞಾಸೆಗೆ ಸಂಬಂಧಿಸಿದ್ದು. ಕವಿಯನ್ನು ರಸಋಷಿ, ವಿಭೂತಿ ಇತ್ಯಾದಿಯಾಗಿ ಕರೆಯುವ ಮತ್ತು ಆತ್ಮಸಾಕ್ಷಾತ್ಕಾರ, ಜೀವನೋನ್ನತಿಗಳು ಕಾವ್ಯ ಪ್ರಯೋಜನವೆನ್ನುವ ಮೊದಲನೆಯ ಭಾಗದಲ್ಲಿ ''ಭಾವುಕತೆ, ಸಾಂಪ್ರದಾಯಿಕತೆ, ಆದರ್ಶಮಯತೆ ಕಾಣಿಸಿಕೊಂಡರೆ, ಎರಡನೆಯದರಲ್ಲಿ ವಸ್ತುನಿಷ್ಠತೆ, ವಿಚಾರ ಪ್ರಖರತೆ, ವ್ಯಾಖ್ಯಾನ ನೈಪುಣ್ಯ, ಬಹುಶ್ರುತತೆ ಮತ್ತು ತಾರ್ಕಿಕ ಪ್ರತಿಭೆ ಗೋಚರಿಸುತ್ತವೆ'' [5]. ಆದರೆ ಮೊದಲನೆಯ ಭಾಗವನ್ನು ಕುರಿತ ಆಕ್ಷೇಪಣೆ ಪೂರ್ತಿ ಸತ್ಯವಲ್ಲ. ಈ ಹೇಳಿಕೆಯನ್ನು ಲಕ್ಷಿಸಬಹುದು: ''...ಭಾರತೀಯ ಮಹಾತ್ಮರ ವಿಚಾರಗಳಿಂದ ಭಾವಿತವೂ ಪ್ರಭಾವಿತವೂ ಆದ ಈ ಪ್ರಫುಲ್ಲ ವ್ಯಕ್ತಿತ್ವದಲ್ಲಿ ಕೇವಲ ಸಂಪ್ರದಾಯ ಜಡರ ಅಂಧ ಶ್ರದ್ಧೆ, ಸಂಕುಚಿತ ಅಭಿಮಾನಗಳಿಗೆ ಆಸ್ಪದವಿಲ್ಲ'' [6]. ಸತ್ಯ ನಡುವೆ ಎಲ್ಲೋ ಇದೆ !

ಪಾಶ್ಚಿಮಾತ್ಯ ಕಾವ್ಯ ತತ್ತ್ವಗಳಿಗೆ ಕುವೆಂಪು ಕನ್ನಡ ಮತ್ತು ಸಂಸ್ಕೃತ ಕೃತಿಗಳಿಂದ ನಿದರ್ಶನಗಳನ್ನು ಕೊಟ್ಟು ವಿವರಿಸುವುದು ಒಂದು ವೈಶಿಷ್ಟ್ಯವೆನ್ನಬೇಕು.

೨

'ಪ್ರತಿಕೃತಿ', 'ಪ್ರತಿಮಾ' ಎಂಬ ಎರಡು ಮಾತುಗಳನ್ನಿಟ್ಟುಕೊಂಡು, ಕಲಾಪ್ರಪಂಚದ ರಹಸ್ಯವನ್ನು ಅನಾವರಣ ಮಾಡುತ್ತಾರೆ, ಕುವೆಂಪು. ಈ ದೃಷ್ಟಿಯಿಂದ 'ಪ್ರತಿಮಾ ಮತ್ತು ಪ್ರತಿಕೃತಿ' ಹಾಗೂ 'ನಾಟಕ ಕಲೆಯಲ್ಲಿ ಪ್ರತಿಕೃತಿ ಮತ್ತು ಪ್ರತಿಮಾವಿಧಾನಗಳು' ಎಂಬ ಪ್ರಬಂಧಗಳು ಉಪಾದೇಯವಾಗಿವೆ. ಇಲ್ಲಿ 'ಪ್ರತಿಮಾ' ಎಂಬುದು ಇಂಗ್ಲಿಷಿನ 'Image' ಎಂಬುದರ ಅನುವಾದವಾದರೂ, ಇನ್ನೂ ವ್ಯಾಪಕವಾದ ಅರ್ಥವುಳ್ಳದ್ದು; ಭಾರತೀಯ ಕಾವ್ಯಮೀಮಾಂಸೆಯ 'ವಕ್ರೋಕ್ತಿ'ಗೆ ಸಂವಾದಿಯಾದುದು.[7] ('ಪ್ರತಿಕೃತಿ' ಯಾದರೋ ಸ್ವಭಾವೋಕ್ತಿ ಅಥವಾ 'ವಾರ್ತೆ'ಗೆ). ಪ್ರತಿಮೆ ಬೇರೆ, ವಿಗ್ರಹ ಬೇರೆ.

---

5. ಜಿ.ಎಸ್. ಶಿವರುದ್ರಪ್ಪ 'ಗತಿಬಿಂಬ' ಪು. ೧೨೫. ಮೊದಲನೆಯ ಭಾಗದಲ್ಲಿ ಆಂಗ್ಲ ರೊಮ್ಯಾಂಟಿಕ್ ಕವಿಗಳ ಪ್ರಭಾವವೂ ಉಂಟೆಂದು ಜಿ.ಎಸ್.ಎಸ್. ಅವರ ಅಭಿಮತ.

6. ಕೆ. ಕೃಷ್ಣಮೂರ್ತಿ, ಪೂರ್ವೋಕ್ತ ೫೨೧

7. 'Image'ಗೆ ಸಂವಾದಿಯಾಗಿ 'ಪ್ರತಿಮಾ' ಶಬ್ದವನ್ನು ಕನ್ನಡದಲ್ಲಿ ಮೊತ್ತಮೊದಲು ಬಳಸಿದವರು ಕುವೆಂಪು ಅವರೇ ಇರಬಹುದೆ? ವಿಚಾರ ಮಾಡಬೇಕು. (ಹೀಗೆ ಹೇಳುವಾಗ 'ಪ್ರತಿಮಾ ನಾಟಕ'ವನ್ನೂ ಜ್ಞಾಪಿಸಿಕೊಳ್ಳಬೇಕು.

ಪ್ರತಿಮಾವಿಧಾನ ಎಂದರೇನು? ''ಇದ್ದುದನ್ನು ಇದ್ದಂತೆಯೆ ಚಿತ್ರಿಸಲು 'ಪ್ರಯತ್ನಿಸುತ್ತದೆ' ಪ್ರತಿಕೃತಿಯ ವಿಧಾನ.. ಇದ್ದುದನ್ನು ಇದ್ದಂತೆಯೇ, ನಡೆದುದನ್ನು ನಡೆದಂತೆಯೆ ಚಿತ್ರಸಬೇಕು ಎಂಬ ಪ್ರಯತ್ನಕ್ಕೆ ಹೋಗದೆ, ಇದ್ದದ್ದೂ ನಡೆದದ್ದೂ ತನಗೆ ಹೇಗೆ ಗೋಚರಿಸಿತೊ ಆ ತನ್ನ ಅನುಭವಕ್ಕೆ ಆಕಾರ ಕಲ್ಪನೆ ಮಾಡುವ ಪ್ರಯತ್ನದ ರೀತಿಯನ್ನು ಪ್ರತಿಮಾ ವಿಧಾನವೆಂದು ಕರೆಯುತ್ತೇವೆ''. ಪ್ರತಿಕೃತಿ ವಿಧಾನ ವಸ್ತುನಿಷ್ಠವಾದರೆ, ಪ್ರತಿಮಾ ವಿಧಾನ ತತ್ತ್ವನಿಷ್ಠ. ''ಪ್ರತಿಮಾ ದೃಷ್ಟಿಗೆ ವಸ್ತುವಿಗಿಂತಲು ಆ ವಸ್ತು ಪ್ರಚೋದಿಸುವ ಅನುಭವವೆ ವಿಶೇಷವಾಗಿ ಮಾನ್ಯ ವಿಷಯ''. ಕಲೆಯಲ್ಲಿ ಸತ್ಯ - ಭಾವ ಸತ್ಯ - ಅಭಿವ್ಯಕ್ತವಾಗುವುದು ಬಹುಮಟ್ಟಿಗೆ ಪ್ರತಿಮಾ ವಿಧಾನದಿಂದಲೆ ಹೊರತು ಪ್ರತಿಕೃತಿ ವಿಧಾನದಿಂದಲ್ಲ. ಸ್ವಪ್ನ ಸತ್ತೆಯಲ್ಲಿ ಪ್ರತಿಮಾ ವಿಧಾನವೆ ಕೆಲಸ ಮಾಡತಕ್ಕದ್ದು. ''ಪ್ರತಿಮಾ ರಚನೆ ಸುಪ್ತ ಚಿತ್ತದಲ್ಲಿ ಸಾಗುವ ಗುಪ್ತಕರ್ಮ''.

''ಪ್ರತಿಮೆಯೊಂದು ಅವತರಣ ಕ್ರಿಯೆ'' ಎನ್ನುತ್ತಾರೆ, ಕುವೆಂಪು. ''ಪ್ರತಿಮೆ ಎಂಬುದು ಮೂಲಾನುಭವಕ್ಕೆ 'ನಾವು' ನೀಡುವ ಆಕಾರವಲ್ಲ. ಅದು, ಮೂಲಾನುಭವವು ತನಗೆ ಅನಿವಾರ್ಯವೂ ಅವಶ್ಯಕವೂ ಆಗಿರುವ ಸಹಜ ಧರ್ಮದ ಪ್ರೇರಣಶಕ್ತಿಯಿಂದ ಪಡೆಯುವ ರೂಪಧಾರಣೆ. ಅದೊಂದು ಅವತರಣ ಕ್ರಿಯೆ''. ಪ್ರತಿಮಾ ವಿಧಾನದ ಹಿರಿಮೆ ಗರಿಮೆಗಳನ್ನು ಅವರು ಹೀಗೆ ಅರುಹುತ್ತಾರೆ:. ''ಸಾಹಿತ್ಯ ಸೀಮೆಯಲ್ಲಿ ಮಾತ್ರವಲ್ಲದೆ ಇತರ ಕಲಾವಲಯಗಳಲ್ಲಿಯೂ ಮತ್ತು ಮತ ಪ್ರಪಂಚದಲ್ಲಿಯೂ ಅಲ್ಪವೂ ಮಿತವೂ ಆಗಿರುವ ಪ್ರತಿಕೃತಿಯ ವಿಧಾನಕ್ಕೆ ಅಗಮ್ಯವಾದುದನ್ನು ಮಹಾದ್ಭುತವಾಗಿ ಸಾಧಿಸಿ, ಸರ್ವಜನಾದರಣೀಯವೂ ಸಕಲ ಸಹೃದಯ ಸಂಪೂಜ್ಯವೂ ಆಗಿ ಶೋಭಿಸುತ್ತದೆ, ಪ್ರತಿಮಾ ವಿಧಾನ''; ''ನರತ್ವದಿಂದ ಸುರತ್ವಕ್ಕೆ ವಿಕಾಸಗೊಳ್ಳಲು ತಪಸ್ವಿಯಾಗಿರುವ ಮಾನವತೆಗೆ ಒಂದಿನಿತಾದರೂ ನೆರವಾಗುವ ಕಲೆ ದೈವೀ ಕಲೆ ; ಅದಕ್ಕೆ ಪ್ರತಿಕೂಲವಾಗುವ ಕಲೆ ಎಷ್ಟು ಮನೋಹರವಾಗಿದ್ದರೂ ಆಸುರೀ ಕಲೆ. ಇದುವರೆಗೆ ಪ್ರಪಂಚದ ಸಾಹಿತ್ಯದಲ್ಲಿ ದೈವೀ ಕಲೆಗೆ ವಿಶೇಷ ಸಹಾಯವಾಗಿ ನಿಂತಿರುವ ವಿಧಾನವೆಂದರೆ ಪ್ರತಿಮಾ ವಿಧಾನ''.

ನಿರ್ದಿಷ್ಟವಾಗಿ ನಾಟಕ ಕಲೆಯನ್ನು ಕುರಿತು ಹೇಳುತ್ತ, ''ಆ ಕಲೆಗೆ ಕ್ಷೇಮಕರವಾದುದು ಪ್ರತಿಮಾ ವಿಧಾನ'' ಎನ್ನುತ್ತಾರೆ, ಕುವೆಂಪು. (ಕಲೆಗೆ ಮಾತ್ರವಲ್ಲ, ಕಲಾವಿದನಿಗೂ ಅದು ಕ್ಷೇಮಕರ!).

'ಸಾಹಿತ್ಯದಲ್ಲಿ ಪ್ರತಿಮಾ' ಎಂಬ ಸುದೀರ್ಘ ಪ್ರಬಂಧದಲ್ಲಿ ಕೆಲವೆಡೆ ಸಿ.ಡೇ ಲೂಯಿಯ ಹೇಳಿಕೆಗಳನ್ನು ಅನುವಾದಿಸಲಾಗಿದೆ [8]. (ಇಲ್ಲಿ 'ಪ್ರತಿಮಾ' ಎಂಬುದು 'Poetic Image'ಗೆ ಸಮಾನಾರ್ಥಕವಾಗಿ ಬಳಕೆಗೊಂಡಿದೆ) ಆದರೂ ಕಾವ್ಯಪ್ರತಿಮೆಯನ್ನು ಕುರಿತ ''ಭಾವಾವಿಷ್ಟ ಶಬ್ದ ಚಿತ್ರ' (Word-picture) ಎಂಬ ಲೂಯಿಯ ಲಕ್ಷಣೀಕರಣವನ್ನು ಮೀರಿ, ದೂರ ಹೋಗುತ್ತಾರೆ ಕುವೆಂಪು. ಪ್ರತಿಮೆಯ ಹಿಂದಿರತಕ್ಕದ್ದು ಧ್ವನಿತತ್ತ್ವವೇ.

ಸಂಕೇತ (sign), ಪ್ರತೀಕ (symbol), ಪ್ರತಿಮೆ (image)ಗಳ ನಡುವಣ ಭೇದವನ್ನು ಕುವೆಂಪು ಬಹು ಸೂಕ್ಷ್ಮವಾಗಿ, ಶಾಸ್ತ್ರೀಯವಾಗಿ ವಿವೇಚಿಸುತ್ತಾರೆ. ಪ್ರತಿಮೆಯ ಬಗೆಗೆ ಅವರು ಹೇಳುತ್ತಾರೆ : '' 'ಪ್ರತೀಕ' 'ಸಂಕೇತ'ದ ಮುಂದುವರಿಕೆ ಅಥವಾ ವಿಸ್ತರಣೆಯಾಗಿರುವಂತೆ 'ಪ್ರತಿಮೆ' 'ಪ್ರತೀಕ'ದ ಒಂದು ಲೋಕೋತ್ತರವಾದ ಆವಿರ್ಭೂತಿಯಾಗಿರುತ್ತದೆ. ಆದರೆ 'ಪ್ರತಿಮೆ' 'ಸಂಕೇತ'ದಂತೆ ಜಾಗ್ರತ್ ಬುದ್ಧಿಯ ರಚನೆಯೂ ಅಲ್ಲ, 'ಪ್ರತೀಕ'ದಂತೆ ಬುದ್ಧಿ ಕ್ರಿಯೆಯಿಂದ ಸಂಭವಿಸುವ ರಚನೆಗೆ ಒದಗುವ ಭಾವಮಯತೆಯಿಂದಲೂ ಅದು ಸಿದ್ಧವಾಗುವುದಿಲ್ಲ. ವಾಸ್ತವ ಜಗತ್ತಿನಲ್ಲಾಗುವ ಸಹಜ ಸೃಷ್ಟಿಯಂತೆ ಕಲಾ ಜಗತ್ತಿನಲ್ಲಿ ಮೂಡುವ ಅದು ತನಗೆ ತಾನೆಂಬಂತೆ ಸಂಭವಿಸುವ ಒಂದು 'ಸೃಜನೆ' '' . ಪ್ರತಿಮೆಯ ಉಗಮ ಸಮಷ್ಟಿ ಚಿತ್ತದಲ್ಲಿ ; ''ಅದೊಂದು ನಿಗ್ರಹಾನುಗ್ರಹ ಸಮರ್ಥವಾದ ದೇವತಾ ವಿಭೂತಿ''.

---

8. ಕುವೆಂಪು ತಮ್ಮ ಋಣವನ್ನು ಅಡಿ ಟಿಪ್ಪಣಿಗಳಲ್ಲಿ (ಮೂಲೋಕ್ತಿ ಸಹಿತ) ತಪ್ಪದೆ ಉಲ್ಲೇಖಿಸುವುದು ಗಮನಾರ್ಹ. ಇದು ಅವರಿಂದ ಕಲಿಯಬೇಕಾದ ಒಂದು ಪಾಠವೂ ಹೌದು.

ಭಗವದ್ ಗೀತೆಯಲ್ಲಿ ಬರುವ ವಿಶ್ವರೂಪ ದರ್ಶನ, ರಾಮಾಯಣದ ಆಂಜನೇಯನ ಸಾಗರಲಂಘನ ಪ್ರಕರಣ - ಇವುಗಳನ್ನು ಬೃಹತ್ ಪ್ರತಿಮೆಗಳೆಂದು ಕರೆದು, ವ್ಯಾಖ್ಯಾನಿಸಿದ್ದಾರೆ, ಕುವೆಂಪು, ''ಇಡಿಯ ಕಾವ್ಯವೆ ಒಂದು ಮಹತ್ತಾದ ದರ್ಶನ ಧ್ವನಿಗೆ ಬೃಹತ್ ಪ್ರತಿಮೆಯಾಗಿ ಹೊರಹೊಮ್ಮಬಹುದು'' ಎಂದು ಹೇಳಿ, ಡಾಂಟೆಯ 'ಡಿವೈನ್ ಕಾಮೆಡಿ'ಯ ನಿದರ್ಶನ ಕೊಡುತ್ತಾರೆ. ''ಒಮ್ಮೊಮ್ಮೆ ಒಂದು ಉಪಮಾ, ಒಂದು ರೂಪಕ... ಪ್ರತಿಮೆಯಾಗಿ ದರ್ಶನಧ್ವನಿಯ ಕುಬೇರಶ್ರೀಗೆ ಬಾಗಿಲು ತೆರೆಯುವ ಕೀಲಿಕೈಯಾಗಿ ಪರಿಣಮಿಸಬಹುದು'' ಎಂಬ ಹೇಳಿಕೆಯ ಪೂರ್ವಾರ್ಧ ಸಿ.ಡೇ ಲೂಯಿಯ "....a metaphor, a simile may create an image" ಎಂಬ ಉಕ್ತಿಯ ಭಾಷಾಂತರ, ಆದರೆ ದರ್ಶನ ಧ್ವನಿಯ ಪ್ರಸಕ್ತಿಯಲ್ಲಿ ಕುವೆಂಪು ಅವರ ಸ್ವಂತಿಕೆಯಿದೆ.

ಪ್ರತಿಮಾ ಪ್ರಕಾರಗಳಲ್ಲಿ ಒಂದಾದ ರೂಪಕವನ್ನು ಕುರಿತು ಕುವೆಂಪು ಲೂಯಿಯನ್ನನುಸರಿಸಿ, ''ಅದೊಂದು ಸೌಂದರ್ಯ ವಿಶೇಷ ಮಾತ್ರವಲ್ಲ, ಶಕ್ತಿ ವಿಶೇಷವೂ ಹೌದು. ಅದೊಂದು ಶಬ್ದ ಪ್ರಕಾರ ಮಾತ್ರವಲ್ಲ, ಅರ್ಥ ಪ್ರಕಾರ ಮಾತ್ರವಲ್ಲ ; ಅನುಭವ ಪ್ರಕಾರವೂ ಆಗಿದೆ'' ಎನ್ನುತ್ತಾರೆ. ಆದರೆ ಲೂಯಿಯ ವಿಚಾರಕ್ಕೆ ವಿರುದ್ಧವಾಗಿ 'ಮೃತರೂಪಕ'ಗಳನ್ನು ಕುವೆಂಪು ಸಮರ್ಥಿಸುತ್ತಾರೆ; ಅವು ಕೂಡ ಪ್ರತಿಭಾ ಸಂಚಾರದಿಂದ ಸಜೀವವಾಗಬಹುದು ಎಂದು ವಿವರಿಸುತ್ತಾರೆ "....today they are dead. They are dead because, having performed their evolutionary task, they were needed no more" ಎಂಬ ಲೂಯಿಯ ಹೇಳಿಕೆಯನ್ನು ಕುರಿತು, ''ಗ್ರೀಕರ ಪುರಾಣ ಮತ್ತು ಮತ ಇವುಗಳಿಂದ ಸಂಪೂರ್ಣ ವಿಭಿನ್ನವಾದ ಕ್ರೈಸ್ತ ಮತವನ್ನವಲಂಬಿಸಿದ ಜನಕ್ಕೆ ಇದು ಅನ್ವಯವಾಗುವಂತೆ ತನ್ನ ಮತ ತತ್ತ್ವ ಧರ್ಮ ಸಂಸ್ಕೃತಿಗಳ ಹೊಕ್ಕುಳ ಬಳ್ಳಿ ಅಖಂಡವಾಗಿದ್ದು ಅತ್ಯಂತ ಪ್ರಾಚೀನವನ್ನು ಅತ್ಯಂತ ನವೀನಕ್ಕೆ ಜೀವಂತವಾಗಿ ಬಂಧಿಸಿರುವ ಭಾರತೀಯ ಸಾಹಿತ್ಯಕ್ಕೆ ಅಷ್ಟರ ಮಟ್ಟಿಗೆ ಅನ್ವಯವಾಗುವುದಿಲ್ಲ'' ಎನ್ನುತ್ತಾರೆ. ಕುವೆಂಪು.

'ಭಾಷೆ : ಲೋಕೋಪಯೋಗಿ ಮತ್ತು ಭಾವೋಪಯೋಗಿ' ಎಂಬ ಪ್ರಬಂಧದಲ್ಲಿ ಐ.ಎ. ರಿಚರ್ಡ್ಸ್‌ನ ಮತ್ತು ಆನಂದವರ್ಧನನ ಆಲೋಚನೆಗಳ, ಸಮನ್ವಯವಿದೆ. ಭಾಷೆಗೆ ಎರಡು ಉಪಯೋಗಗಳಿವೆಯೆಂದು ಹೇಳುತ್ತಾನೆ ರಿಚರ್ಡ್ಸ್ : 'scientific use' ಮತ್ತು 'emotive use'. (ಕುವೆಂಪು emotive use ಎಂಬುದನ್ನು 'ಭಾವೋಪಯೋಗಿ' ಎಂದು ನೇರವಾಗಿ ಅನುವಾದಿಸಿದ್ದಾರೆ ; ಆದರೆ 'scientific use' ಎಂಬುದನ್ನು ವ್ಯಾಪಕಾರ್ಥ ಕೊಡುವಂತೆ 'ಲೋಕೋಪಯೋಗಿ' ಎಂದು ಬದಲಿಸಿದ್ದಾರೆ ; ಅದು ಸಾಧುವಾಗಿದೆ [9]. ಆನಂದವರ್ಧನ ಹೇಳುವ 'ವಾಚ್ಯ' ಮತ್ತು 'ಪ್ರತೀಯಮಾನ' ರಿಚರ್ಡ್ಸ್‌ನ 'scientific use' ಹಾಗೂ 'emotive use'ಗಳಿಗೆ ಕ್ರಮವಾಗಿ ಸಂವಾದಿಯಾಗಿವೆ ಎಂದು ಹೇಳುತ್ತಾರೆ ಕುವೆಂಪು [10].

ಭಾಷೆಯ 'ಭಾವೋಪಯೋಗ'ವನ್ನು ಅವರು ಕುಮಾರವ್ಯಾಸನ ''ಕೋಲ ಗುರುವಿನ ಮರಣ ವಾರ್ತಾ ಕಾಲಸರ್ಪನ ತಂದು ಸಂಜಯ ಹೇಳಿಗೆಯ ನೀಡಾಡಿದನು ಧೃತರಾಷ್ಟ್ರನಿದಿರಿನಲಿ'' ಎಂಬ ರೂಪಕದಿಂದ ಪರಿಣಾಮಕಾರಿಯಾಗಿ ನಿದರ್ಶಿಸುತ್ತಾರೆ. ''...ಸಹೃದಯನ ಹೃದಯ ಕವಿಯ ಆ ವರ್ಣನೆಯನ್ನು ಓದಿದಾಗ ಒಂದು ರಸಾನುಭವವನ್ನು ಆಸ್ವಾದಿಸಿ ಹಿಗ್ಗುತ್ತದೆ. ಆ ಸಂದರ್ಭದಲ್ಲಿ ಕವಿಯ ಉಕ್ತಿಯೇ ಸತ್ಯತಮ; 'ದ್ರೋಣ ಸತ್ತ' ಎಂಬ ವಾರ್ತಾ ಸತ್ಯ ಅತ್ಯಂತ ಅಲ್ಪ ಸತ್ಯ ಅಥವಾ ಸತ್ಯದ ಅತ್ಯಂತ ಕನಿಷ್ಠಾಂಶ; ರಕ್ತಮಾಂಸ ಹೃದಯ ಪ್ರಾಣ ಮನಸ್ಸು ಚೇತನ ಸಹಿತವಾದ ಜೀವಂತ ಮನುಷ್ಯನ ವ್ಯಕ್ತಿತ್ವಕ್ಕೂ ಅವನ ಅಸ್ಥಿಪಂಜರಕ್ಕೂ ಇರುವಷ್ಟು, ವ್ಯತ್ಯಾಸ, ಅಂತರ, ಕವಿ ಹೇಳಿರುವ ಪೂರ್ಣ ಸತ್ಯಕ್ಕೂ 'ದ್ರೋಣ ಸತ್ತ' ಎಬ ವರದಿಯ ಅಂಶ ಸತ್ಯಕ್ಕೂ ಎಂಬುದು ಸುಸ್ಪಷ್ಟವಾಗಿ ಅನುಭವಗೋಚರವಾಗುತ್ತದೆ.''

---

9. ಕುವೆಂಪು ಅವರ ಭಾಷಾಂತರ ಪ್ರತಿಭೆಯನ್ನು ಅವರ ಕಾವ್ಯಮೀಮಾಂಸೆಯ ಬರಹಗಳಲ್ಲೂ ಕಾಣಬಹುದು.

10. ಆದರೆ ಅವು ಸಂಪೂರ್ಣ ಪರ್ಯಾಯ ಪದಗಳಲ್ಲವೆಂದೂ ಆ ಬಗ್ಗೆ ಬೇರೊಂದು ಲೇಖನ ಬರೆಯುವುದಾಗಿಯೂ ಸೂಚಿಸಿದ ಕುವೆಂಪು, ಅದನ್ನು ಬರೆಯಲಿಲ್ಲ.

ಒಟ್ಟಿನಲ್ಲಿ ಧ್ವನಿತತ್ತ್ವದ ಪುನಃ ಸ್ಥಾಪನೆಯಿದೆ 'ಭಾಷೆ : ಭಾವೋಪಯೋಗಿ ಮತ್ತು ಲೋಕೋಪಯೋಗಿ' ಲೇಖನದಲ್ಲಿ.

ಕಾವ್ಯಜಗತ್ತಿನ ಸ್ವರೂಪ ಮತ್ತು ಕಾವ್ಯಪ್ರಯೋಜನಗಳಿಗೆ ಸಂಬಂಧಿಸಿದವು, 'ಕವಿ ಕೃತಿಯ ಅನನ್ಯ ಪರತಂತ್ರತೆ' ಮತ್ತು 'ಕವಿ ನಿರ್ಮಿತಿಯಲ್ಲಿ ನಿಯತಿ ಕೃತ ನಿಯಮರಾಹಿತ್ಯ' ಎಂಬ ಪ್ರಬಂಧಗಳು.

'ಕವಿ ಕೃತಿಯ ಅನನ್ಯ ಪರತಂತ್ರತೆ'ಯಲ್ಲಿ ಒಂದು ಕಡೆ ಮಮ್ಮಟನ, ಇನ್ನೊಂದು ಕಡೆ ಎ.ಸಿ. ಬ್ರಾಡ್ಲೆ, ಐ.ಎ. ರಿಚರ್ಡ್ಸ್, ಕ್ಲೈವ್ ಬೆಲ್, ಎಸ್. ಅಲೆಕ್ಸಾಂಡರ್ ಮುಂತಾದವರ ವಿಚಾರಗಳನ್ನು ಬಳಸಿಕೊಳ್ಳಲಾಗಿದೆ.

ಮಮ್ಮಟ ತನ್ನ 'ಕಾವ್ಯ ಪ್ರಕಾಶ'ದಲ್ಲಿ ''ನಿಯತಿಕೃತ ನಿಯಮರಹಿತಾಂ ಹ್ಲಾದೈಕಮಯೀಂ ಅನನ್ಯ ಪರತಂತ್ರಾಂ...'' ಎಂದು ಸರಸ್ವತಿಯನ್ನು, ಅರ್ಥಾತ್ ಕಾವ್ಯಪ್ರಪಂಚವನ್ನು ಬಣ್ಣಿಸಿದ್ದಾನೆ. ಅವನ ಬಣ್ಣನೆಯನ್ನೇ ಹೋಲುವಂತಿದೆ ಎ.ಸಿ. ಬ್ರಾಡ್ಲೆಯ ಹೇಳಿಕೆ : "its nature is to be not a part, nor yet a copy of the real world..... but to be real world by itself independent, complete, autonomous". (''ಅನ್ಯಾಶ್ರಯ ನಿರಪೇಕ್ಷವಾದದ್ದು; ಸ್ವಸಂಪೂರ್ಣವಾದದ್ದು; ಸ್ವತಂತ್ರವಾದ್ದು'') ಆದರೆ ಬ್ರಾಡ್ಲೆಯ ಮಾತನ್ನು ಐ.ಎ. ರಿಚರ್ಡ್ಸ್ ಖಂಡಿಸಿದ್ದಾನೆ. ಅವನ ವಾದದ ಅಭಿಪ್ರಾಯವಿದು : ''ಕಾವ್ಯಕ್ಕೂ ಜೀವನಕ್ಕೂ ಭಿನ್ನತೆಯನ್ನು ಕಲ್ಪಿಸುವುದಾಗಲಿ, ಒಂದಕ್ಕೊಂದನ್ನು ಎದುರು ಮಾಡುವುದಾಗಲಿ... ಸಕಾರಣವಾಗಿ ತೋರುವುದಿಲ್ಲ. ಲೋಕಾನುಭವಕ್ಕೂ ಕಾವ್ಯಾನುಭವಕ್ಕೂ ಅಂತಹ ಸ್ವರೂಪ ವ್ಯತ್ಯಾಸವೇನೂ ಇಲ್ಲ. ಕಾವ್ಯಾನುಭವದಲ್ಲಿ ಏನಿದ್ದರೂ ಅದೆಲ್ಲ ಲೋಕಾನುಭವದಿಂದಲೇ ಬಂದದ್ದು. ಕಾವ್ಯಪ್ರಪಂಚದ ಸತ್ಯತೆ ವಾಸ್ತವ ಜಗತ್ತಿನ ಸತ್ಯದಿಂದ ಯಾವ ಅರ್ಥದಲ್ಲಿಯೂ ಪ್ರಭಿನ್ನವಾದುದಲ್ಲ. ಕಾವ್ಯ ಜಗತ್ತಿಗೇ ವಿಶೇಷವಾದ ಯಾವ ನಿಯಮಗಳೂ ಇಲ್ಲ. ನಿಯತಿಕೃತವಾದ ನಿಯಮಗಳಲ್ಲದೆ ಅನ್ಯಪ್ರಕಾರದ ನಿಯಮಗಳಾವುವೂ ಅಲ್ಲಿಲ್ಲ. ಎಲ್ಲ ಕಾವ್ಯಾನುಭವಗಳೂ ಲೋಕಾನುಭವಗಳ ಜಾತಿಗೇ ಸೇರುತ್ತವೆ; ಸಮಲಕ್ಷಣವಾಗಿರುತ್ತವೆ. ಆ ಅನುಭವಕ್ಕೆ ರಸಾನುಭವ ಎಂದು ಹೆಸರಿಟ್ಟ ಮಾತ್ರಕ್ಕೆ ಅದರ ಸ್ವರೂಪ ಬದಲಾಯಿಸುವುದಿಲ್ಲ. ಆದ್ದರಿಂದ ರಸಾನುಭವಕ್ಕೆ ಅಲೌಕಿಕತೆಯನ್ನು ಆರೋಪಿಸುವುದರಲ್ಲಿ ಸ್ವಲ್ಪವೂ ಅರ್ಥವಿಲ್ಲ.''

ಕುವೆಂಪು ಎರಡು ನಿಲುವುಗಳನ್ನೂ ಪರೀಕ್ಷಿಸಿ, ಕವಿಕೃತಿ 'ಅನನ್ಯ ಪರತಂತ್ರ' ಎಂದು ನಿರ್ಣಯಿಸುತ್ತಾರೆ. (ಇದು ಮಮ್ಮಟನ ಮತವೇ). ''ಅದು ಕೇವಲ 'ಸ್ವತಂತ್ರ'ವೂ ಅಲ್ಲ, ಕೇವಲ 'ಪರತಂತ್ರ'ವೂ ಅಲ್ಲ; ಸಂಪೂರ್ಣವಾಗಿ 'ಅನ್ಯ 'ಪರತಂತ್ರ'ವೂ ಅಲ್ಲ'' ಎಂದು ಅವರು ಹೇಳುತ್ತಾರೆ. ''ಕವಿಕೃತಿ ಸಂಪೂರ್ಣವಾಗಿ ಲೋಕಭಿನ್ನವಾದುದೂ ಅಲ್ಲ; ಸಂಪೂರ್ಣವಾಗಿ ಲೋಕಾಶ್ರಯವಾದುದೂ ಅಲ್ಲ ; ಸಂಪೂರ್ಣವಾಗಿ ಲೋಕಾನುಕೃತಿಯೂ ಅಲ್ಲ ; ಅದೊಂದು ಅನನ್ಯ ಪರ ತಂತ್ರವಾದ ಪ್ರತಿಮಾ'' ಎನ್ನುವುದು ಅವರ ನಿಲುವು.

ಕಾವ್ಯ ಅಲೌಕಿಕ ಎಂಬುದು ಸಾಮರಸ್ಯಯುತವಾದ ಕುವೆಂಪು ದೃಷ್ಟಿಗೆ ಸಮ್ಮತವಲ್ಲ. ಅವರ ಈ ಹೇಳಿಕೆ ತುಂಬ ಗಮನಾರ್ಹವಾಗಿದೆ. ''ಈ ಅರ್ಥದಲ್ಲಿ (ಪ್ರತಿಮಾರ್ಥದಲ್ಲಿ) ಮಾತ್ರ ಕವಿಕೃತಿಯನ್ನೂ ಅದರಿಂದೊದಗುವ ರಸಾನುಭವವನ್ನೂ 'ಅಲೌಕಿಕ' ಎಂಬ ವಿಶಾಲಾರ್ಥದ ವಿಶೇಷಣದಿಂದ ವರ್ಣಿಸಬಹುದು; ಲೋಕಕ್ಕೆ ಸಂಪೂರ್ಣವಾಗಿ ಭಿನ್ನವಾದುದು ಎಂಬ ಅರ್ಥದಲ್ಲಿ ಅಲ್ಲ. ಬಹುಶಃ 'ಲೋಕಾತಿಶಯ', 'ಲೋಕೋತ್ತರ', 'ಲೋಕಾತಿಕ್ರಾಂತ' ಎಂಬ ಪದಗಳಿಂದ ನಮಗೆ ಹೆಚ್ಚು ಬೆಳಕು ದೊರೆಯಬಹುದೆಂದು ತೋರುತ್ತದೆ''.

'ಕವಿ ನಿರ್ಮಿತಿಯಲ್ಲಿ ನಿಯತಿಕೃತ ನಿಯಮ ರಾಹಿತ್ಯ' ಪ್ರಬಂಧದಲ್ಲಿ ಕುವೆಂಪು ನೇಮಿಚಂದ್ರನ ''ಕಟ್ಟುಗೆ ಕಟ್ಟದಿರ್ಕೆ ಕಡಲಂ ಕಪಿಸಂತತಿ...'' ಎಂಬ ಪದ್ಯವನ್ನು ಉದ್ಧರಿಸಿ, ಅವನು ಪ್ರತಿಕೃತಿ ದೃಷ್ಟಿಯ ಪ್ರತಿನಿಧಿ ಎಂದೂ ಷೇಕ್ಸ್‌ಪಿಯರ್‌ನ "The poet's eye in a fine frenzy rolling... gives to airy nothing a local habitation and a name" ಎಂಬ ಉಕ್ತಿಯನ್ನು ಉದ್ಧರಿಸಿ, ಅವನು ಪ್ರತಿಮಾದೃಷ್ಟಿಯ ಪ್ರತಿನಿಧಿ ಎಂದೂ ಹೇಳುತ್ತಾರೆ.

''ಕಾವ್ಯಲೋಕದಲ್ಲಿ ಮೇಲೆ ಹೇಳಿದ ನಿಯತಿಕೃತಿ ನಿಯಮರಾಹಿತ್ಯವು ಉತ್ತಮ ಸಹೃದಯನ ರಸಾಸ್ವಾದನೆಗೆ ಯಾವ ಅಡಚಣೆಯನ್ನೂ ತಂದೊಡ್ಡುವುದಿಲ್ಲ. ಏಕೆಂದರೆ ಅವನಿಗೆ ಈ ಸಂದರ್ಭದಲ್ಲಿ ಪ್ರಕೃತವಾದದ್ದು ಭಾವ ಸಂವಾದವೆ ಹೊರತು ಲೋಕಸಂವಾದವಲ್ಲ. ಶಾಸ್ತ್ರಭಾಷೆಗೆ ಅವಶ್ಯಕವಾದ ಲೋಕೋಪಯೋಗ ಇಲ್ಲಿ ಗಮ್ಯವಲ್ಲ ; ಕಾವ್ಯಭಾಷೆಯ ಗಮ್ಯ ಅದರ ಭಾವೋಪಯೋಗದಿಂದ ಮಾತ್ರ ಸಿದ್ಧಿಸುತ್ತದೆ'' ಎಂದು ವಿವರಿಸುವ ಕುವೆಂಪು, ''ಒಂದು ಕವಿಕೃತಿ ನಿಜವಾಗಿಯೂ ನಿಯತಿಕೃತ ನಿಯಮ ರಹಿತವೆ? ಹೌದು ಎಂದರೆ ಯಾವ ಅರ್ಥದಲ್ಲಿ? ಅಲ್ಲ ಎಂದರೆ ಯಾವ ಅರ್ಥದಲ್ಲಿ?'' ಎಂಬ ಮತ್ತು ''ಆ ಭಾವಸಂವಾದದಿಂದಾಗುವ ರಸಾನುಭಾವಕ್ಕೆ ವಸ್ತು ಸಂವಾದವೊಂದಿದೆಯೆ ಎಂಬ ಪ್ರಶ್ನೆಗೆ ಅರ್ಥವಿಲ್ಲವೆ?'' ಎಂಬ ಪ್ರಶ್ನೆಗಳನ್ನು ಎತ್ತುತ್ತಾರೆ. ''ಕವಿ ಕೃತಿ' ನಿಯತಿಕೃತ ನಿಯಮರಹಿತವೆ' ಎಂಬ ಪ್ರಶ್ನೆಗೆ 'ಪ್ರತಿಕೃತಿ ದೃಷ್ಟಿ' ಹೌದು ಎಂದು ಉತ್ತರ ಹೇಳಿದರೆ, 'ಪ್ರತಿಮಾದೃಷ್ಟಿ' ಅಲ್ಲ ಎಂದು ಹೇಳುತ್ತದೆ'' ಇದು ಮೊದಲನೆಯ ಪ್ರಶ್ನೆಯ ವಿಷಯವಾಯಿತು ''ಪಂಚೇಂದ್ರಿಯ ಲೋಕಸತ್ಯವನ್ನು ಮೀರಿದ ಅತೀಂದ್ರಿಯ ಮತ್ತು ಅತಿಮನೋಗ್ರಾಹ್ಯವಾದ ಅನ್ಯಲೋಕ ಸತ್ಯಗಳೂ ಇವೆ. ಆ ಅನುಭವಗಳನ್ನು ಇಂದ್ರಿಯ ಗ್ರಾಹ್ಯವಾಗುವ ರೀತಿಯಲ್ಲಿ ಮಾನುಷವಾದ ಸಂಕೇತಭಾಷೆಯಿಂದ ಹೇಳಬೇಕಾದರೆ ಕವಿ ನಮ್ಮ ನಿತ್ಯ ಪರಿಚಿತ ಲೋಕನಿಯತಿಯ ನಿಯಮಗಳನ್ನು ಕ್ರಮದಲ್ಲಿ ರೂಪದಲ್ಲಿ ಉಕ್ತಿ ರೀತಿಗಳಲ್ಲಿ ಉಲ್ಲಂಘಿಸಬೇಕಾಗುತ್ತದೆ. ಆ ಉಲ್ಲಂಘನೆಯಲ್ಲಿಯೂ ಅವನು ಬೇರೊಂದು ನಿಯತಿಯ ಬೇರೆ ಬೇರೆ ನಿಯಮ ಪ್ರಕಾರಗಳನ್ನು ಕೈ ಬಿಡುವುದಿಲ್ಲ. ಏಕೆಂದರೆ ಒಂದು ನಿಯತಿ ಮತ್ತು ಅದರ ನಿಯಮಗಳಿರದೆ ಯಾವ ಸೃಷ್ಟಿಯೂ ಸಾಧ್ಯವಾಗುವುದಿಲ್ಲ. ಸೃಷ್ಟಿಯೆಂದರೆ ನಿಯತಿ ನಿಯಮಾಧೀನವಾಗಿಯೆ ಹೊಮ್ಮುವ ರಚನೆ'' ಎಂಬುದು ಕುವೆಂಪು ಅವರ ವಿವರಣೆ. ಇನ್ನು ಭಾವ ಸಂವಾದವನ್ನು ಕುರಿತ ಎರಡನೆಯ ಪ್ರಶ್ನೆ ; ಬಹಳ ಮುಖ್ಯವಾದುದು. ಇದಕ್ಕೆ ಹಿನ್ನೆಲೆ, ಐ.ಎ. ರಿಚರ್ಡ್ಸ್‌ನ ಈ ಅರ್ಥದ ನಿಲುವು: ''ಕವಿ ಯಾವ ಮಟ್ಟದವನೆ ಆಗಲಿ, ಕಾವ್ಯ ಯಾವ ರೀತಿಯದೆ ಆಗಲಿ ಸಹೃದಯನಿಗೆ ಅವನ ಕೃತಿಯ ಅಧ್ಯಯನದಿಂದಾಗುವ ಪ್ರಯೋಜನ ಬರಿಯ ಭಾವ ವಿಲಾಸ; ವ್ಯಕ್ತಿಗತ ಮತ್ತು ಸಂಪೂರ್ಣವಾಗಿ ವೈಯಕ್ತಿಕವಾದದ್ದು. ಆ ಉಲ್ಲಾಸವನ್ನೊ ಆಹ್ಲಾದವನ್ನೊ ಸವಿದರಾಯಿತು. ಆ ಸವಿಯುವಿಕೆಯೆ ರಸಾನುಭವ. ಅದಕ್ಕೆ ಅದೇ ಪ್ರಯೋಜನ. ಇನ್ನಾವುದಾದರೂ ಬೇರೆಯ ಪ್ರಯೋಜನವನ್ನು ಹುಡುಕುವುದು ವ್ಯರ್ಥ.''

ಕುವೆಂಪು ಎರಡನೆಯ ಪ್ರಶ್ನೆಗೆ - ಅರ್ಥಾತ್ ರಿಚರ್ಡ್ಸ್‌ನ ವಾದಕ್ಕೆ - ದೀರ್ಘವಾಗಿ ಉತ್ತರಿಸುತ್ತಾರೆ; ಇಷ್ಟನ್ನು ಮಾತ್ರ ಗ್ರಹಿಸಬಹುದು : ''ಭಾವ ಸಂವಾದದಿಂದಾಗುವ ರಸಾನುಭವ ಮಾತ್ರವೆ ಪರಮ ಪ್ರಯೋಜನವೂ ಪರಮ ಪುರುಷಾರ್ಥವೂ ಆಗಿರುವ ಪಕ್ಷದಲ್ಲಿ... ಕಾವ್ಯಕ್ಕೂ ಯಾವುದಾದರೊಂದು ತಾತ್ಕಾಲಿಕ ಆಹ್ಲಾದವನ್ನೊ ಆವೇಶವನ್ನೊ ಮನೋಹರವಾದ ಉನ್ಮೇಷವನ್ನೊ ತಂದುಕೊಡುವ ಮಾದಕ ಪದಾರ್ಥಕ್ಕೂ ಹೆಚ್ಚಿನ ಮೌಲ್ಯ ಭೇದವಿರುವಂತೆ ತೋರುವುದಿಲ್ಲ ,'' ''ಮೇಲಣ ದೃಷ್ಟಿ ನಿಜವಾದರೆ ಜಗತ್ತಿನ ಕಾವ್ಯಗಳೆಲ್ಲದರ ಬೆಲೆ ಹೆಂಡದ ಬೆಲೆಯ ಮಟ್ಟಕ್ಕೆ ಇಳಿದುಹೋಗುವುದರಲ್ಲಿ ಸಂದೇಹವಿಲ್ಲ .''

ರಿಚರ್ಡ್ಸ್‌ನ ಹೆಸರನ್ನು ಕುವೆಂಪು ಗೌರವದಿಂದ ಉಲ್ಲೇಖಿಸುತ್ತಾರೆ. ''ಆಧುನಿಕ ಸಾಹಿತ್ಯ ವಿಮರ್ಶಕರಲ್ಲಿ ವೈಜ್ಞಾನಿಕ ದೃಷ್ಟಿ ಮತ್ತು ಪ್ರಾಯೋಗಿಕ ಮನಶ್ಶಾಸ್ತ್ರಗಳಿಂದ ಪ್ರೇರಿತರಾಗಿ ಕಾವ್ಯ, ಕಾವ್ಯಭಾಷೆ ಮತ್ತು ಕಾವ್ಯಾನುಭವಗಳನ್ನು ವಿಶ್ಲೇಷಿಸ ಹೊರಟವರಲ್ಲಿ ಐ.ಎ. ರಿಚರ್ಡ್ಸ್ ಪ್ರಸಿದ್ಧರಾಗಿದ್ದಾರೆ''. ಅವನ ಉದ್ದೇಶದ ಬಗೆಗೂ ಕುವೆಂಪು ಅವರಿಗೆ ಗೌರವವಿದೆ: ''ಆ ಕಾರ್ಯಕ್ಕೆ ಅವರು ಉನ್ನತ ಉದ್ದೇಶದಿಂದಲೆ ತೊಡಗಿದ್ದಾರೆ. ಕಲಾನುಭವ ಕಾವ್ಯನುಭವಗಳು ಖಿಲವಾಗುತ್ತಿರುವ ಈ ವೈಜ್ಞಾನಿಕ ಯುಗದಲ್ಲಿ, ಆರ್ಥಿಕವಾಗಿ ಮುಂದುವರಿಯುತ್ತಿದ್ದರೂ ಮಾನವ ಚೇತನೆಗೆ ಹಿಂದಿನ ಮತಶ್ರದ್ಧೆಯ ಕೀಲು ತಪ್ಪಿದಂತಾಗಿ ಅಶಾಂತಿ, ಅತೃಪ್ತಿ, ಅಸೂಯೆ, ಸಂದೇಹ, ಸಂಶಯ, ಅತಿ ಕಾಮುಕತೆ, ಆದರ್ಶ ತಿರಸ್ಕಾರ, ಧ್ಯೇಯಲಘುತ್ವ ಇತ್ಯಾದಿಗಳಿಂದ ಇಳಿಯುತ್ತಿರುವ ನಾಗರಿಕತೆಯ ಕಬ್ಬಿಣದ ಕರಾಳ ಮುಷ್ಟಿಯಲ್ಲಿ ಸಿಕ್ಕಿ ಜಜ್ಜರಿತವಾಗಿರುವ ಮಹಾಯುದ್ಧಾನಂತರದ ಪಾಶ್ಚಾತ್ಯ

ಜನರ ಸೀಳು ಸೀಳಾದ ವ್ಯಕ್ತಿತ್ವಕ್ಕೆ ರಸಾನುಭವದ ರಕ್ಷಣೆಯನ್ನು ಒದಗಿಸಬೇಕೆಂಬುದೆ ಅವರ ಆಶಯ''. ರಿಚರ್ಡ್ಸ್ ಕಾವ್ಯದ ಸ್ವರೂಪವಿದು : ''....ರಸಾಂಶದ ಮಿಶ್ರಣದಲ್ಲಿರುವ ಬೌದ್ಧಿಕಾಂಶ ಶ್ರದ್ಧಾಂಶಗಳನ್ನು ಅದರ ಭಾವಾಂಶದಿಂದ ಪ್ರತ್ಯೇಕಿಸಿದರೆ ವಿಜ್ಞಾನದೃಷ್ಟಿ ಅವಮಾನಿತವಾಗದೆ ಕಾವ್ಯದ ಭಾವಾಂಶದಿಂದ ಪುಷ್ಟಿ ಪಡೆಯಲು ಹಿಂಜರಿಯದೆಂದು ನಿರ್ಣಯಿಸಿ ರಸಾನುಭವಕ್ಕೆ ಭಂಗ ಬರದಂತೆ ಅದನ್ನು ವಿಭಜಿಸಿ ಪ್ರತ್ಯೇಕಿಸಲು ಪ್ರಯತ್ನಿಸಿದ್ದಾರೆ. ಆ ಪ್ರಯತ್ನದ ಫಲವೇ ಮೇಲೆ ಪ್ರತಿಪಾದಿತವಾಗಿರುವ ಸಿದ್ಧಾಂತ .'' ಅದರ ಪ್ರಕಾರ, ''ನಮ್ಮ ರಸಾನುಭವಕ್ಕೆ ಕಾವ್ಯದಲ್ಲಿರಬಹುದಾದ ಮತೀಯ ತಾತ್ತ್ವಿಕ ಬೌದ್ಧಿಕಾಂಶ ಶ್ರದ್ಧಾಂಶಗಳು ಅನಾವಶ್ಯಕ; ಅವು ಬರಿಯ ಅವಲಂಬನ ರೂಪವಾದ ನಂಬಿಕೆಗಳಿಗೆ ಹೊರತು ವೈಜ್ಞಾನಿಕ ಸತ್ಯಗಳಲ್ಲ. ಆದ್ದರಿಂದ ಅವುಗಳನ್ನು ಸಂಪೂರ್ಣವಾಗಿ ತ್ಯಜಿಸಿ, ಅಥವಾ ನಿರ್ಲಕ್ಷಿಸಿ, ಭಾವಾಂಶವನ್ನು ಮಾತ್ರ ಅನುಭವಿಸಿ, ನಮ್ಮ ಬದುಕಿನ ಛಿದ್ರತೆಯನ್ನು ಮುಚ್ಚಿ ಶೂನ್ಯತೆಯನ್ನು ತುಂಬಿಕೊಂಡು, ತುಂಬು ಬಾಳನ್ನು ಬಾಳಬೇಕು''.

ಆದರೆ ''ಪೂರ್ವೋಕ್ತ ಸಿದ್ಧಾಂತವನ್ನು ಒಪ್ಪಿಕೊಂಡರೆ ಎಂತಹ ಆತ್ಮವಂಚಕವಾದ ಮಿಥ್ಯಾಚಾರಕ್ಕೆ ಸಮ್ಮತಿಸಿದಂತಾಗುತ್ತದೆ...'' ಎಂಬುದು ಕುವೆಂಪು ಅವರ ಟೀಕೆ. ಇದು ಅವರ ಅಂತಿಮವಾದ, ಅಸ್ಖಲಿತವಾದ ನಿರ್ಣಯ: ''ಕಾವ್ಯದ ಮಟ್ಟಿಗೆ ಭಾವಸಂವಾದವೆ ಪ್ರಕೃತವೆಂದು ಒಪ್ಪಿದರೂ, ಅಂತಹ ಭಾವಕ್ಕೆ ಯಾವುದೋ ರೀತಿಯಲ್ಲಿ, ಯಾವುದಾದರೊಂದು ಭೂಮಿಕೆಯಲ್ಲಿ , ಯಾವುದೊ ಸೂಕ್ಷ್ಮಾತಿಸೂಕ್ಷ್ಮವಾದ ಸ್ವರೂಪದಲ್ಲಿ ವಸ್ತು ಸಂವಾದವೊಂದಿರುತ್ತದೆ; ಅದು ಸತ್ಯ, ನಿತ್ಯ ಸತ್ಯ.'' ಭಾವಸಂವಾದವಾದ ಲಘು ಕವಿಗಳಿಗೂ ಲಘು ಕೃತಿಗಳಿಗೂ ಅನ್ವಯಿಸುತ್ತದೆ, ಸಮಷ್ಟಿ ಪ್ರಜ್ಞೆಯ ಆವಿರ್ಭಾವಗಳಾದ ಮಹಾಕಾವ್ಯಗಳಿಗಲ್ಲ ಎಂದೂ ಹೇಳುತ್ತಾರೆ, ಕುವೆಂಪು.

ಒಟ್ಟಿನಲ್ಲಿ , ''ನಿಯತಿಕೃತ ನಿಯಮರಹಿತಾಂ'' ಎಂಬ ಮಮ್ಮಟನ ಮಾತು, ಐ.ಎ. ರಿಚರ್ಡ್ಸ್‌ನ ಭಾವ ಸಂವಾದ ಸಿದ್ಧಾಂತ ಎರಡೂ ಕುವೆಂಪು ಅವರಿಂದ ತಿರಸ್ಕೃತವಾಗಿವೆ. ಆದರೆ ಅವುಗಳಲ್ಲಿರುವ ಆಂಶಿಕ ಸತ್ಯಗಳನ್ನು ಅವರು ಸ್ವೀಕರಿಸಿದ್ದಾರೆ.

'ರಸಾನುಭವದ ಅಲೌಕಿಕತೆ' ಎಂಬ ಪ್ರಬಂಧದಲ್ಲಿ ಮತ್ತೆ ಕಾವ್ಯ ಪ್ರಯೋಜನದ ಪ್ರಶ್ನೆ ಚರ್ಚಿತವಾಗಿದೆ. "Art for art's sake", "All art is useless" ಎಂಬ ಪಾಶ್ಚಾತ್ಯ ವಾದಗಳನ್ನು ಅಲ್ಲಗಳೆಯುತ್ತಾರೆ, ಕುವೆಂಪು. ''ಕಲೆಗಾಗಿ ಕಲೆ, 'ಕವಿತೆಗಾಗಿ ಕವಿತೆ' ಎಂಬ ಸಿದ್ಧಾಂತಗಳಿಂದ ಮಾನವ ಸಂಸ್ಕೃತಿಗೂ ಸಾಮಾಜಿಕ ಜೀವನಕ್ಕೂ ಎಂತಹ ಹಾನಿ ತಟ್ಟಬಲ್ಲುದು...'' ಎಂದು ಅವರು ಹೇಳಿ, 'ಕಲೆಗಾಗಿ ಕಲೆ'ಯನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕಾಗುತ್ತದೆ ಎನ್ನುತ್ತಾರೆ.

''ಸೌಂದರ್ಯಾನುಭವ ಅಥವಾ ರಸಾನುಭವವನ್ನು ಅಲೌಕಿಕ ಎಂದು ವರ್ಣಿಸುವುದರಲ್ಲಿ ಏನು ಔಚಿತ್ಯವಿದೆ?'' ಎಂದು ಪ್ರಶ್ನೆ ಹಾಕಿಕೊಂಡು, ''ರಸಾನುಭವ ಅಲೌಕಿಕ ಎಂದರೆ, ಲೋಕದ ಸಂಬಂಧವನ್ನೆಲ್ಲ ಕಡಿದುಕೊಂಡು ಬಿಟ್ಟದ್ದು ಎಂದರ್ಥವಲ್ಲ; ಲೋಕೋತ್ತರವಾದದ್ದು ಎಂದಷ್ಟೆ ಅರ್ಥ'' ಎಂದು ಉತ್ತರಿಸುತ್ತಾರೆ, ಕುವೆಂಪು. ''ರಸ ಅಲೌಕಿಕ ಎಂದ ಮಾತ್ರಕ್ಕೆ ಅದರ ಲೋಕೋತ್ತರತ್ವ ಅದರ ಲೋಕ ವ್ಯಾಪಾರತ್ವವನ್ನು ತಿರಸ್ಕರಿಸುವುದಿಲ್ಲ. ತನಗೊದಗಿದ ವಿಶೇಷಣದ ಆಧಾರದ ಮೇಲೆ ತನ್ನ ಲೌಕಿಕವಾದ ಜವಾಬುದಾರಿಯಿಂದ ತಪ್ಪಿಸಿಕೊಳ್ಳಲು ಅದಕ್ಕೆ ಅಧಿಕಾರವಿಲ್ಲ'' ಎಂದು ತೀರ್ಪು ನುಡಿಯುತ್ತಾರೆ. ''ಕಾವ್ಯಾನುಭವದಿಂದ ವಂಚಿತವಾದರೆ ಜನಜೀವನ ಶುಷ್ಕವಾಗಿ ಮೃತಪ್ರಾಯವಾಗುತ್ತದೆ ಎಂದು ಕಂಡುಕೊಂಡವರು ಕಾವ್ಯಾನುಭವದಲ್ಲಿರುವ ಜೀವನ ಪೋಷಕಾಂಶವನ್ನೆ ತೆಗೆದು ಹಾಕುವ ಪ್ರಯತ್ನಕ್ಕೆ ಕೈ ಹಾಕಿದ್ದಾರೆ'' ಎಂದು ಐ.ಎ. ರಿಚರ್ಡ್ಸ್‌ನನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳುವ ಕುವೆಂಪು, ''ಆ ರಸಾನುಭವ ಪ್ರಯೋಜನವನ್ನು ಬದುಕಿನ ಶಾಶ್ವತ ಪುರುಷಾರ್ಥಗಳ ಮಹತ್ತರ ಪ್ರಯೋಜನಕ್ಕೆ ಅಧೀನಗೊಳಿಸಬೇಕಾಗುತ್ತದೆ'' ಎಂದು ನಿರ್ಣಯಿಸುತ್ತಾರೆ. ಅವರ ದೃಷ್ಟಿಯಲ್ಲಿ ಕಲೆ ಭಾವೋಪಯೋಗಿ ಮಾತ್ರವಲ್ಲ, ಲೋಕೋಪಯೋಗಿ ಕೂಡ. ('ಭವೋಪಯೋಗಿ' ಎನ್ನಲೂಬಹುದು). ನೀತಿಬೋಧೆ, ಧಾರ್ಮಿಕೋನ್ನತಿ, ಆಧ್ಯಾತ್ಮಿಕ ವಿಕಾಸ, ಸಾಮಾಜಿಕ ಕ್ಷೇಮ, ರಾಜಕೀಯ ಉತ್ಕರ್ಷ ಇತ್ಯಾದಿ ಪ್ರಯೋಜನಗಳೂ ಕಲೆಯಿಂದ

ಸಿದ್ದಿಸಬೇಕು ಎಂಬುದು ಕುವೆಂಪು ಅವರ ಗಟ್ಟಿ ನಿಲುವು. ಆದರೆ ''ಕಾವ್ಯದ ವಲಯದಲ್ಲಿ ಸಹೃದಯ ರಸಾನುಭವವೆ ಮುಖ್ಯ ಲಕ್ಷ್ಯ. ಆ ಭೂಮಿಕೆಯಷ್ಟರಲ್ಲಿ ರಸವೆ ಸಕಲ ಪ್ರಯೋಜನ ಮೌಲಿಭೂತವಾದದ್ದು ಎಂಬ ವಾದದಲ್ಲಿ ಸತ್ಯಾಂಶವಿಲ್ಲದಿಲ್ಲ'' ಎಂದು ಅವರು ಒಪ್ಪುತ್ತಾರೆ.

''ರಸೋ ವೈ ಸಃ'' ಪ್ರಬಂಧದಲ್ಲಿ ಹೆನ್ರಿ ಬರ್ಗ್‌ಸನ್, ಎಸ್. ಅಲೆಕ್ಸಾಂಡರ್, 'ದಾರ್ಶನಿಕ ಸೌಂದರ್ಯ ಮೀಮಾಂಸಕ' ಕ್ರೋಚೆ - ಇವರ ಅಭಿಪ್ರಾಯಗಳನ್ನು ಕುವೆಂಪು ಉಲ್ಲೇಖಿಸುತ್ತಾರೆ. ''ಕಲಾರಂಗದಲ್ಲಿ ಸಾಧ್ಯವಾಗುವಂತೆ ಲೋಕರಂಗದಲ್ಲಿಯೂ ರಸಾನುಭವ ಸಾಧ್ಯವಾಗುವುದಿಲ್ಲವೆ? '' ಎಂಬುದು ಇಲ್ಲಿ ಪ್ರಸಕ್ತವಾದ ಪ್ರಶ್ನೆ. ಇದಕ್ಕೆ ಭಾರತೀಯ ಕಾವ್ಯಮೀಮಾಂಸೆಯಲ್ಲಿ ಉತ್ತರವಿಲ್ಲ. ಸಾಮಾನ್ಯನಿಗಲ್ಲದಿದ್ದರೆ ಕವಿಗೆ, ಅಂತೆಯೆ ಸಹೃದಯನಿಗೆ ಲೋಕರಂಗದಲ್ಲಿ ರಸಾನುಭೂತಿ ಶಕ್ಯವಿಲ್ಲವೆ ಎಂದು ಕೇಳುತ್ತಾರೆ, ಕುವೆಂಪು.

ಕ್ರೋಚೆಯ ಹೇಳಿಕೆಯೊಂದನ್ನು ಅವರು ಆಧರಿಸಿ, ಲೋಕ ಭೂಮಿಕೆಯಲ್ಲೂ ರಸಾನುಭವವನ್ನು ಪಡೆಯಬಹುದೆಂದು ವಾದಿಸುತ್ತಾರೆ. ಕ್ರೋಚೆಯ ಗಣ್ಯವಾದ ಉಕ್ತಿಯಿದು : ''ನನ್ನ ಅನುಭವವನ್ನೇ ನಾನು ಗಮನಿಸಿ ಹೇಳುವುದಾದರೆ, ಯಾವುದಾದರೊಂದು ಇಂದ್ರಿಯಾನುಭವದ ಸಾನ್ನಿಧ್ಯದಲ್ಲಿ , ನಾನು ರಾಗದ್ವೇಷಗಳಿಗೂ ಮೋಹ ಜುಗುಪ್ಸೆಗಳಿಗೂ ವಶನಾಗದೆ, ವಾದ ಚಿಂತನಾದಿಗಳ ಜಟಿಲತೆಗೆ ಸಿಕ್ಕಿ ಮನಸ್ಸಿನ ಏಕಾಗ್ರತೆಯನ್ನು ಕಳೆದುಕೊಳ್ಳದಿದ್ದರೆ, ನಾವು ಎಂತಹ ಮನಃಸ್ಥಿತಿಯಲ್ಲಿ ಇರುತ್ತೇವೆ ಎಂದರೆ, ಯಾವ ಮನಃಸ್ಥಿತಿಯನ್ನು ನಾವು ಕಲಾಕೃತಿಯಿಂದ ಮಾತ್ರ ಪಡೆಯಬಹುದು ಎಂದು ಭಾವಿಸುತ್ತೇವೆಯೊ ಅಂತಹುದೆ ಆದ ಆನಂದಾನುಭವ ಸ್ಥಿತಿಯಲ್ಲಿ....''

ಋಷಿಯಾದವನಿಗೆ ಸರ್ವತ್ರ ರಸಾನುಭೂತಿ ಲಭ್ಯವೆಂದು ''ರಸೋ ವೈ ಸಃ'' ಎಂಬ ಉಪನಿಷದ್ವಾಕ್ಯದ ಆಧಾರದಿಂದ ತಿಳಿಸುತ್ತಾರೆ ಕುವೆಂಪು. ಪ್ರಕೃತಿ ರಂಗದಲ್ಲಿ ಸಾಮಾನ್ಯರೂ ಸುಲಭವಾಗಿ ರಸಾನುಭವ ಪಡೆಯಬಲ್ಲರೆಂದು ಅವರ ಅಭಿಮತ.

'ಮಹೋಪಮೆ' ಎಂಬ ಪ್ರಬಂಧದಲ್ಲಿ ಕುವೆಂಪು ಪಾಶ್ಚಾತ್ಯ ಕಾವ್ಯ ಪ್ರಪಂಚದ 'Homeric simile'(ಹೋಮರೋಪಮೆ) ಎಂಬುದನ್ನು 'ಮಹೋಪಮೆ' ಎಂಬ ಹೆಸರಿನಿಂದ ಲಕ್ಷಣೀಕರಿಸುತ್ತಾರೆ. (ತಮ್ಮ 'ಚಿತ್ರಾಂಗದಾ' ಮತ್ತು 'ಶ್ರೀ ರಾಮಾಯಣ ದರ್ಶನಂ' ಕಾವ್ಯಗಳಲ್ಲಿ ಅವರು ಹಲವಾರು ಮಹೋಪಮೆಗಳನ್ನು ಸೃಷ್ಟಿಸಿದ್ದಾರೆ. ಹೀಗಾಗಿ, ಮಹೋಪಮೆಯ ಲಕ್ಷ್ಯ, ಲಕ್ಷಣ ಎರಡೂ ಅವರಿಂದ ಪ್ರಣೀತವಾಗಿವೆ.

'ಪಂಪನಲ್ಲಿ ಭವ್ಯತೆ' ಹಾಗೂ 'ಭೂಮಾನುಭೂತಿ ಮತ್ತು ಭವ್ಯತಾ ಅನುಭವದ ಮೀಮಾಂಸೆ' ಲೇಖನಗಳಲ್ಲಿ 'ಭವ್ಯತೆ' ಎಂಬುದನ್ನು ಪಾಶ್ಚಾತ್ಯರ 'Sublime' ಎಂಬುದಕ್ಕೆ ಸಂವಾದಿಯಾಗಿ ಬಳಸಿದ್ದಾರೆ, ಕುವೆಂಪು. ಭಾರತೀಯ ಕಾವ್ಯ ಮೀಮಾಂಸೆಯಲ್ಲಿ 'ಭವ್ಯತೆ'ಯಿಲ್ಲ (ಆದರೆ ಆ ಶಬ್ದ ಜೈನಧರ್ಮದಲ್ಲಿ ಕಂಡುಬರುತ್ತದೆ); 'ಅದ್ಭುತ'ವಿದೆ. 'ಭವ್ಯತೆ' ಅದ್ಭುತ ರಸಕ್ಕಿಂತ ಮುಂದೆ ಹೋಗತಕ್ಕದ್ದು. 'ಪಂಪನಲ್ಲಿ ಭವ್ಯತೆ'ಯಲ್ಲಿ ಭವ್ಯತೆಯ ಲಕ್ಷಣೀಕರಣ ಮಾತ್ರವಿದೆ : ''ಎಲ್ಲಿ ಸೌಂದರ್ಯ ಪರಿಮಿತದಲ್ಲಿ ವಿಹರಿಸುತ್ತದೆಯೋ ಅಲ್ಲಿ ಮೈದೋರುವುದು ಲಾಲಿತ್ಯ. ಎಲ್ಲಿ ಅದು ಅಪರಿಮಿತದಲ್ಲಿ ವಿಜೃಂಭಿಸಿ ವಿರಾಟ್ ಸ್ಪರ್ಶಿಯಾಗುತ್ತದೆಯೋ ಅಲ್ಲಿ ಹೊರ ಹೊಮ್ಮುವುದು ಭವ್ಯತೆ.''

'ಭೂಮಾನುಭೂತಿ ಮತ್ತು ಭವ್ಯತಾ ಅನುಭವದ ಮೀಮಾಂಸೆ' ಪ್ರಬಂಧದಲ್ಲಿ 'ಆಂಗ್ಲೇಯ ವಿಮರ್ಶಕವರೇಣ್ಯ' ಎ.ಸಿ. ಬ್ರಾಡ್ಲೆಯ 'The sublime' ಪ್ರಬಂಧದ ದಟ್ಟವಾದ ಪ್ರಭಾವವಿದೆ. ರುಡೋಲ್ಫ್ ಓಟೊ ಮತ್ತು ವಿಲಿಯಂ ಜೇಮ್ಸ್‌ರ ಅಭಿಪ್ರಾಯಗಳನ್ನು ಉಲ್ಲೇಖಿಸಿದ್ದಾರೆ ಕುವೆಂಪು. ಆದರೆ ಬ್ರಾಡ್ಲೆಯಲ್ಲಿ 'ಭೂಮಾನುಭೂತಿ' ಉಕ್ತವಾಗಿಲ್ಲ ; ಅದರ ಸೂಚನೆಯಷ್ಟೆ ಇದೆ. ('ಭೂಮಾ' ಉಪನಿಷತ್ತಿನಲ್ಲಿ ಬರುವ ಶಬ್ದ). ಭೂಮಾನುಭೂತಿ ಲೋಕಸ್ತರದ್ದೆಂದೂ ಭವ್ಯತಾ ಅನುಭವದ ಕಲಾಸ್ತರದ್ದೆಂದೂ ಹೇಳುತ್ತಾರೆ ಕುವೆಂಪು. ಎರಡಕ್ಕೂ ಇರುವ ಸಂಬಂಧವನ್ನು ಅವರು ಹೀಗೆ ವಿವರಿಸುತ್ತಾರೆ :

''ಭೂಮಾನುಭೂತಿಗೂ ಮತ್ತು ಭವ್ಯತಾ ಅನುಭವಕ್ಕೂ ಇರುವ ಸಂಬಂಧವು ಭಾವಕ್ಕೂ ಮತ್ತು ರಸಕ್ಕೂ ಇರುವ ಸಂಬಂಧವನ್ನು ಹೋಲುತ್ತದೆ. ಭಾವ ಒಂದು ಲೋಕವ್ಯಾಪಾರ ; ರಸ ಅದರಿಂದ ಮುಂದುವರಿದ ಅಥವಾ ಮೇಲ್ವರಿದ ಲೋಕೋತ್ತರ ವ್ಯಾಪಾರ. ಆದ್ದರಿಂದ ಭಾವವನ್ನು ಲೌಕಿಕವೆಂದೂ ರಸವನ್ನು ಅಲೌಕಿಕವೆಂದೂ ಕರೆಯುತ್ತಾರೆ. ಸಾಮಾನ್ಯವಾಗಿ ಭಾವವನ್ನು ಲೋಕದಲ್ಲಿಯೂ ರಸವನ್ನು ಕಾವ್ಯಕಲಾದಿ ರಂಗದಲ್ಲಿಯೂ ಅನುಭವಿಸುತ್ತೇವೆ. ಭಾವಕ್ಕೆ ಲೌಕಿಕ ಕ್ರಿಯಾಪೇಕ್ಷೆ ಇರುವುದರಿಂದಲೂ ಸ್ವಾರ್ಥ ಮತ್ತು ಅಹಂಕಾರಗಳಿಂದ ಕಲುಷಿತವಾಗಿರುವುದರಿಂದಲೂ ಅದರ ಸ್ಥಾನ ಕೆಳಮಟ್ಟದ್ದು ; ಸಂಗದೂರವಾಗಿ ಸಾಕ್ಷಿಪ್ರಜ್ಞಾಧೀನವಾಗಿ, ಶಮತ್ವವನ್ನು ಪಡೆದು, ರಜೋ ಗುಣದಿಂದ ವಿಮುಕ್ತವಾಗಿ ಸತ್ವದಿಂದ ಕೂಡಿ, ಆಸ್ವಾದ್ಯವಾಗಿರುವುದರಿಂದ ರಸದ ಸ್ಥಾನ ಮೇಲುಮಟ್ಟದ್ದು. ಆದರೆ ಇಲ್ಲಿ 'ಭೂಮಾನುಭೂತಿ' ಮತ್ತು 'ಭವ್ಯತೆ'ಗಳ ನಡುವೆ, ಕೀಳು ಮೇಲಿನ ಸ್ಥಾನ ಅದಲು ಬದಲಾಗುತ್ತದೆ... ಲೋಕಾನುಭವ ಸ್ವರೂಪದ 'ಭೂಮಾನುಭೂತಿ'ಗೇ ಕಲಾನುಭವ ಸ್ವರೂಪದ 'ಭವ್ಯತೆ' ಪ್ರತಿಬಿಂಬ ಸ್ಥಾನದಲ್ಲಿ ನಿಲ್ಲುತ್ತದೆ.''

ನಾಸದೀಯ ಸೂಕ್ತದಲ್ಲಿ ಭೂಮಾನುಭೂತಿಯ ಪರಾಕಾಷ್ಠೆಯನ್ನು ಕಾಣಬಹುದೆನ್ನುತ್ತಾರೆ, ಕುವೆಂಪು.

ಬ್ರಾಡ್ಲೆ ಹೇಳುವ 'Sublime, grand, beautiful, graceful, pretty ಎಂಬ ಭವ್ಯತಾ ಪ್ರಕಾರಗಳನ್ನು ಕುವೆಂಪು 'ಸೌಂದರ್ಯದ ಪಂಚಾಂಗಗಳು' ಅಥವಾ 'ರಸದ ಪಂಚಸ್ಥಿತಿಗಳು' ಎಂದು ಕರೆದು, ಕ್ರಮವಾಗಿ ಭವ್ಯ, ಅದ್ಭುತ, ಸುಂದರ, ರಮ್ಯ, ಲಲಿತ ಎಂದು ಭಾಷಾಂತರಿಸಿದ್ದಾರೆ. ಬ್ರಾಡ್ಲೆಯನ್ನನುಸರಿಸಿ, ''ಭವ್ಯತಾ ಅನುಭವಕ್ಕೆ ಬಾಹ್ಯಕವಾದ ಬೃಹತ್ತು ಅನಿವಾರ್ಯವಾಗಿ ಅವಶ್ಯಕವಾದುದೇನಲ್ಲ'' ಎಂದು ಹೇಳಿ, ಅವನು ಕೊಡುವ ಒಂದು ನಿದರ್ಶನವನ್ನೇ ತಾವೂ ನಿರೂಪಿಸಿದ್ದಾರೆ.

'ಇದಾವ ನ್ಯಾಯ?' ಎಂಬ ಪ್ರಬಂಧದಲ್ಲಿ ಪಾಶ್ಚಾತ್ಯ ವಿಮರ್ಶೆಯ 'ಕಾವ್ಯ ನ್ಯಾಯ' (Poetic justice) ಸಿದ್ಧಾಂತವೂ ಅಂತರ್ನಿಹಿತವಾಗಿರುವಂತೆ ತೋರುತ್ತದೆ.

೩

ಸಮನ್ವಯ, ಸರ್ವೋದಯ, ಪೂರ್ಣದೃಷ್ಟಿ - ಇವು ತಮ್ಮ ಸಾಹಿತ್ಯದ ಮೂರು ಕಣ್ಣುಗಳೆನ್ನುತ್ತಾರೆ, ಕುವೆಂಪು. ಅವರ ಕಾವ್ಯಚಿಂತನ ಈ ಹೇಳಿಕೆಗೆ ಹೊರತಲ್ಲ.

ಎಲ್ಲವನ್ನೂ ಆಧ್ಯಾತ್ಮೀಕರಿಸುತ್ತಾರೆ, ಕುವೆಂಪು. ಇದೊಂದು ಮಿತಿಯೆನಿಸಬಹುದು, ಸಾಕಷ್ಟು ಸಿದ್ಧತೆ, ಸಂಸ್ಕಾರಗಳಿಲ್ಲದವರಿಗೆ. ಆದರೆ ವಾಸ್ತವವಾಗಿ ಅಂತಲ್ಲ. ಕೇವಲ ಸಾಹಿತ್ಯಕ ದೃಷ್ಟಿಯಿಂದ ನೋಡಿದರೆ, ಕೆಲವು ತೊಡಕುಗಳೂ ಕುವೆಂಪು ಕಾವ್ಯಮೀಮಾಂಸೆಯಲ್ಲಿ ಎದುರಾಗಬಹುದು. ಆದರೆ ಅದನ್ನು ಮುಖ್ಯವಾಗಿ ಜೀವನ ಮೌಲ್ಯಗಳ ನಿಟ್ಟಿನಿಂದ ನೋಡಬೇಕು. ''ಒಂದು ಕೃತಿ ಸಾಹಿತ್ಯ ಕೃತಿಯೇ ಎಂಬುದನ್ನು ನಿರ್ಧರಿಸಬೇಕಾದರೆ ಸಾಹಿತ್ಯಕ ಮಾನದಂಡಗಳು ಸಾಕು; ಆದರೆ ಒಂದು ಕೃತಿ ಉನ್ನತ ಸಾಹಿತ್ಯ ಕೃತಿಯೇ ಎಂಬುದನ್ನು ನಿರ್ಧರಿಸಬೇಕಾದರೆ ಸಾಹಿತ್ಯಕ ಮಾನದಂಡಗಳು ಸಾಲವು'' ಎಂಬರ್ಥದ ಟಿ.ಎಸ್.ಎಲಿಯಟ್ಟನ ಉಕ್ತಿ ಇಲ್ಲಿ ಸ್ಮರಣೀಯ.

ಕುವೆಂಪು ತಮ್ಮ 'ರಸೋ ವೈ ಸಃ' ಪ್ರಬಂಧದ ಕಡೆಯಲ್ಲಿ ಹೇಳುತ್ತಾರೆ : ''ದೇವತೆಗಳು ನಿಜ ಸ್ವರೂಪದಿಂದ ಪ್ರತ್ಯಕ್ಷವಾಗುವುದುಂಟೆಂದು ಪ್ರಾಚೀನ ಮತ್ತು ಆಧುನಿಕ ಅನುಭವಗಳೆರಡೂ ಒಪ್ಪುತ್ತವೆ... ಆ ದೇವತೆಗಳೂ ಶಕ್ತಿಗಳೂ ಚೈತನ್ಯಗಳೂ ಕಾವ್ಯ ಕಲೆಗಳಲ್ಲಿಯೂ ಲೋಕ ಜೀವನದಲ್ಲಿಯೂ ಪರೋಕ್ಷವಾಗಿ ಭಾವಚರವೂ ಭಾವಗೋಚರವೂ ಆಗಬಲ್ಲವು, ದರ್ಶನಧ್ವನಿ ಸಮರ್ಥವಾದ ಚೇತನಕ್ಕೆ''. ಈ ಶ್ರದ್ಧೆಯಿಲ್ಲದವರಿಗೆ ಕುವೆಂಪು ಅವರ ಸಾಹಿತ್ಯವಾಗಲಿ, ಸಾಹಿತ್ಯ ವಿಮರ್ಶೆಯಾಗಲಿ ಸಂಪೂರ್ಣ ಗ್ರಾಹ್ಯವಾಗದೆ ಹೋಗಬಹುದು.

ಏನೇ ಇರಲಿ, ಭಾರತೀಯ ಕಾವ್ಯಮೀಮಾಂಸೆಗಿಂತ ತೌಲನಿಕ ಕಾವ್ಯಮೀಮಾಂಸೆಗೇ ಕುವೆಂಪು ಕೊಡುಗೆ ಮಿಗಿಲಾದುದು, ಮಹತ್ತರವಾದುದು. ಪ್ರತಿಮೆ, ಭವ್ಯತೆ, ಮಹೋಪಮೆ ಮುಂತಾದ ಕೆಲವು ಮುಖ್ಯ ತತ್ತ್ವಗಳನ್ನೂ ಪ್ರಕ್ರಿಯೆಗಳನ್ನೂ ಅವರು ಪಶ್ಚಿಮದಿಂದ ತಂದುಕೊಟ್ಟಿದ್ದಾರೆ; ವಿಮರ್ಶೆಯ ಪರಿಭಾಷೆಗೆ ಲೋಕೋಪಯೋಗಿ, ಭಾವೋಪಯೋಗಿ, ಪ್ರತಿಕೃತಿ, ಪ್ರತಿಮಾ, ಭಾವಸತ್ಯ ಮುಂತಾದುವನ್ನು ಕಾಣಿಕೆಯಾಗಿ ನೀಡಿದ್ದಾರೆ.[11]

ಕುವೆಂಪು ಕಾವ್ಯ ಜಿಜ್ಞಾಸೆಯ ಬಗೆಗೆ ಮೂರು ವಿಮರ್ಶೋಕ್ತಿಗಳನ್ನೀಗ ಉದ್ಧರಿಸಬಹುದು :

'' ಈ ಕಾವ್ಯ ಚಿಂತನದಲ್ಲಿ ಭಾರತೀಯ ಹಾಗೂ ಪಾಶ್ಚಾತ್ತ್ಯ ಚಿಂತನೆಗಳು ಮೇಳಗೊಂಡಿರುವುದರ ಜೊತೆಗೆ ಕವಿಯ ಸ್ವಾನುಭವಜನ್ಯ ವಿಶಿಷ್ಟಾನುಭವಗಳೂ ಮೇಳಗೊಂಡಿವೆ''[12].

''ಕಾವ್ಯಮೀಮಾಂಸೆಗೆ ತಮ್ಮ ಕೊಡುಗೆಗಳನ್ನು ಕೊಟ್ಟ ಕನ್ನಡ ಲೇಖಕರು ವಿರಳ. ಈ ವಿರಳರಲ್ಲಿ ಕುವೆಂಪು ಅಗ್ರಗಣ್ಯರು. ಸ್ವತಃ ಕವಿಯಾಗಿರುವುದರಿಂದ ಅವರ ಮೀಮಾಂಸೆಗೆ ಒಂದು ವಿಶಿಷ್ಟವಾದ ಹೊಳಪು ಬಂದಿದೆ... ತೌಲನಿಕ ಅಧ್ಯಯನಕ್ಕೆ ಇಲ್ಲಿ ಉಜ್ವಲವಾದ ಉದಾಹರಣೆಗಳು ದೊರೆಯುತ್ತವೆ. ಕುವೆಂಪು ತಮ್ಮ ಗಾಢವಾದ ಚಿಂತನೆಯಿಂದ ನಮ್ಮ ಕಾವ್ಯಮೀಮಾಂಸೆಯ ಕಲ್ಪನೆಗಳನ್ನೂ ಪರಿಭಾಷೆಯನ್ನೂ ಬೆಳೆಸಿದ್ದಾರೆ; ಆಲೋಚನೆಯ ದಿಗಂತಗಳನ್ನು ವಿಸ್ತರಿಸಿದ್ದಾರೆ. ಈ ಬರಹಗಳಲ್ಲಿ ಹಳತು ಹೊಸತರ, ಪೂರ್ವ ಪಶ್ಚಿಮಗಳ ಅಪೂರ್ವ ಸಂಗಮವನ್ನು ನೋಡಬಹುದಾಗಿದೆ. ಇಲ್ಲಿ ವಿಚಾರಗಳನ್ನು ಕಸಿ ಮಾಡಲಾಗಿದೆ''[13].

''ಕುವೆಂಪು ಅವರು ತಮ್ಮ ಕಾವ್ಯ ನಿರ್ಮಿತಿಯಲ್ಲಿ ಪಾಶ್ಚಾತ್ಯ ಕಾವ್ಯದ ಸಮಸ್ತ ಪ್ರಕಾರಗಳನ್ನು ಕನ್ನಡಕ್ಕೆ ತರುವ ಸಾಹಸ ಸಂಕಲ್ಪದಲ್ಲಿ ಹೇಗೆ ಯಶಸ್ವಿಯಾದರೋ ಹಾಗೆ ಕಾವ್ಯ ಮೀಮಾಂಸೆಯ ತತ್ತ್ವಗಳನ್ನು ಕನ್ನಡಕ್ಕೆ ತರುವ ಸಾಹಸದಲ್ಲಿ ಯಶಸ್ವಿಯಾಗಿದ್ದಾರೆ. ಕುವೆಂಪು ಅವರ ಕಾವ್ಯಮೀಮಾಂಸೆ ಭಾರತೀಯ ದರ್ಶನಗಳ ಹಿನ್ನೆಲೆ, ಕನ್ನಡ ಕಾವ್ಯ ಪರಂಪರೆಯ ಪ್ರಜ್ಞೆ, ಪಾಶ್ಚಾತ್ತ್ಯ ಕವಿಗಳ, ವಿಮರ್ಶಕರ, ಮನಸ್ ಶಾಸ್ತ್ರದ, ತತ್ತ್ವ ಶಾಸ್ತ್ರದ ಅಧ್ಯಯನದ ಪರಿಣಾಮ, ಶ್ರೀ ಅರವಿಂದರ ಪೂರ್ಣಯೋಗದ ಬೆಂಬಲ - ಈ ಎಲ್ಲ ಶಕ್ತಿಗಳ ಸಂಚಯನದಿಂದ ನವನವೋನ್ಮೇಷ ಶಾಲಿನಿಯಾಗಿದೆ.''[14]

---

11. ಕುವೆಂಪು ಅವರ ಕಾವ್ಯ ಮೀಮಾಂಸೆ, ವಿಮರ್ಶೆಗಳ ಪರಿಭಾಷೆಯಂತೆ ವಿಶಿಷ್ಟ ಭಾಷೆಯೂ ಪರಿಭಾವನೀಯ.

12. ಸುಜನಾ, 'ಕುವೆಂಪು , ಬೇಂದ್ರೆ, ಕಾರಂತ' , ಪು. ೩೧

13. ಹಾ.ಮಾ.ನಾಯಕ, (ಸಂ.) 'ದಾರ್ಶನಿಕ ಕಾವ್ಯ ಮೀಮಾಂಸೆ', ಮೊದಲ ಮಾತು, ಪು V.

14. ಜಿ.ಎಸ್. ಶಿವರುದ್ರಪ್ಪ, ಪೂರ್ವೋಕ್ತ, ಪು. ೧೨೯.

ಸಂಸಾರ : ವಚನಕಾರರ ದೃಷ್ಟಿಯಲ್ಲಿ

ಡಾ|| ಪಿ.ವಿ. ನಾರಾಯಣ

ಸಂಸಾರ ಎಂದರೆ ಕುಟುಂಬ ಎಂಬ ಅರ್ಥ ಈಗ ಇದ್ದರೂ ಅದು ಒಟ್ಟಾರೆ ಐಹಿಕತೆಯನ್ನು ಪ್ರತಿನಿಧಿಸುವ ಪದ. ವಚನಕಾರರೂ ಇದೇ ವ್ಯಾಪಕ ಅರ್ಥದಲ್ಲಿ 'ಸಂಸಾರ' ಶಬ್ದವನ್ನು ಬಳಸಿದ್ದಾರೆ. ತಮಗೆ ಹಿಂದಿದ್ದ ಸಂಸಾರದ ಬಗೆಗಿನ ಮನೋಭಾವನೆಯನ್ನೇ ವಚನಕಾರರೂ ತಳೆದಿದ್ದರೂ, ಆಡುವ ಸನ್ನಿವೇಶ, ಮನಃಸ್ಥಿತಿಗಳಿಗೆ ಅನುಗುಣವಾಗಿ ವಚನಕಾರರು ಸಂಸಾರದ ಬಗೆಗಿನ ನಿಲುವುಗಳನ್ನು ವ್ಯಕ್ತಪಡಿಸುತ್ತಾರೆ. ಸ್ಥೂಲವಾಗಿ ವಚನಕಾರರ ನಿಲವನ್ನು ಮೂರು ನೆಲೆಗಳಲ್ಲಿ ಪರಿಶೀಲಿಸಬಹುದು ಎನ್ನಿಸುತ್ತದೆ.

ಬಸವಾದಿಗಳಿಗೆ ಹಿಂದೆ ಪ್ರಚಲಿತವಾಗಿದ್ದ ಸಂಸಾರದ ಬಗೆಗಿನ ವ್ಯಾಪಕ ಅಭಿಪ್ರಾಯವೆಂದರೆ 'ಬ್ರಹ್ಮಸತ್ಯ ಜಗನ್ಮಿಥ್ಯ' ಎಂಬುದೇ. ಬುದ್ಧನಂತಹವರು ಆತ್ಮ -ಮೋಕ್ಷಗಳ ಬಗ್ಗೆ ತಾಳಿದ ನಿಲವನ್ನು ಖಂಡಿಸಿ ಅದ್ವೈತವನ್ನು ಪ್ರತಿಪಾದಿಸಿದ ಶಂಕರಾಚಾರ್ಯರ ಈ ಅಭಿಪ್ರಾಯವೇ ಒಂದು ಬಗೆಯಲ್ಲಿ ಇಲ್ಲಿನ ಎಲ್ಲ ಧಾರ್ಮಿಕ ವಲಯಗಳಲ್ಲೂ ಒಪ್ಪಿತವಾದುದು; ಆದರೆ ವಿವರಗಳಲ್ಲಿ ವ್ಯತ್ಯಾಸವಿರಬಹುದು ಅಷ್ಟೆ.

ಸಂಸಾರ ಅಥವಾ ಇಹದ ಬದುಕು ಸಾಧಕ ಜೀವಿಯ ಪರೀಕ್ಷಾಭೂಮಿ. ಈ ಜಗತ್ತಿನಲ್ಲಿ ಮಾತ್ರವೇ ಸಾಧಕನು ಸತ್ಯವನ್ನು ಅರಿಯಬಲ್ಲ; ಆದ್ದರಿಂದ ಇದು ಕರ್ಮಭೂಮಿ ಎಂಬ ನಿಲವು ಸಾಧಾರಣವಾದ ಪ್ರಚಲಿತ ಕಲ್ಪನೆ. ಪ್ರಭುಲಿಂಗ ಲೀಲೆಯಲ್ಲಿ ಶಿವನೇ ಪಾರ್ವತಿಗೆ ಈ ರೀತಿ ವಿವರಿಸುತ್ತಾನೆ : ''ಭೋಗ ಭೂಮಿಯ ಭೋಗ ತನುವಿನಲಾಗದನುಪಮಸಿದ್ಧಿ ಕರ್ಮೋದ್ಯೋಗ ಭೂಮಿಯ ಕರ್ಮತನುವಿನಲಲ್ಲದದಱಿಂದೆ ಯೋಗಯೋಗ್ಯರು ಯೋಚಿಸುತ ಭೂಭಾಗದಲಿ

ಮಾನವ ಶರೀರಿಗಳಾಗಿ ಸಾಧಿಸಿ ನಿಜವನಱಿವರು ಗಿರಿಜೆ ಕೇಳೆಂದ'' (ಪ್ರಭುಲಿಂಗಲೀಲೆ, ಸಂಧಿ ೨ : ಪದ್ಯ ೩೪), ಈ ಜನ್ಮವು ಕರ್ಮತನುವಿನದು. ಆ ಮೂಲಕ ಮಾತ್ರವೇ 'ನಿಜವಱಿ'ವುದು ಸಾಧ್ಯ. ಹೀಗಾಗಿ ಈ ಸಂಸಾರವು ಸಾಧಕರಿಗೆ ಒಂದು ಸವಾಲು; ಅದನ್ನೆದುರಿಸಿ ಗೆಲ್ಲುವುದೇ ಅವರ ಧ್ಯೇಯ. ಆದ್ದರಿಂದಲೇ ಈ ಸಂಸಾರವು ಸಾಧಕರಿಗೆ ಗೆಲ್ಲಬೇಕಾದ, ದ್ವೇಷಿಸಬೇಕಾದ ಒಂದು ಭೂತದಂತಿದೆ ಎಂಬ ಭಾವನೆಯು ವಚನಕಾರರಲ್ಲೂ ಸಾಮಾನ್ಯವಾಗಿತ್ತು.

ವೀರಶೈವದ ತಾತ್ವಿಕ ನಿಲವು ವಿಶಿಷ್ಟಾದ್ವೈತ. ತನ್ನಲ್ಲಿಯೇ ಇರುವ ಶಿವತ್ವವನ್ನು ಗುರುತಿಸಿಕೊಂಡು ಆ ದಿಸೆಯಲ್ಲಿ ಸಾಗಿ, ಕೊನೆಗೆ ಅದೇ ಆಗಿಬಿಡುವುದೇ ಜೀವದ ಗುರಿ. ಈ ವಿಕಾಸವು ಆರು ಹಂತಗಳಲ್ಲಿ ಸಾಗುತ್ತದೆ; ಅವೇ ಷಟ್‌ಸ್ಥಲಗಳು. ಮೊದಲನೆಯದಾದ ಭಕ್ತಸ್ಥಲದ ಪ್ರಾರಂಭಿಕ ಹಂತದಲ್ಲಿಯೇ ಸಾಧಕನು ಸಂಸಾರ - ಹೇಯಸ್ಥಲದಲ್ಲಿ ನಿಂತಿರುತ್ತಾನೆ. ಐಹಿಕತೆಯ ಕ್ಷುಲ್ಲಕತೆ, ಕ್ಷಣಿಕತೆಗಳನ್ನು ಮನವರಿಕೆ ಮಾಡಿಕೊಳ್ಳುವುದೇ ಭಕ್ತನ ಆದ್ಯ ಕರ್ತವ್ಯ. ಎಲ್ಲ ವಚನಕಾರರೂ ಸಂಸಾರದ ಬಗ್ಗೆ ಇಂತಹ ಅಸಹ್ಯ ಭಾವನೆಯನ್ನೇ ತಳೆದಿದ್ದಾರೆ. ಕಪ್ಪೆಯೊಂದನ್ನು ಹಾವು ಹಿಡಿದಿದೆ, ಆದರೆ ಆ ಕಪ್ಪೆ ಹಾರುವ ನೊಣಕ್ಕೆ ಆಸೆಪಡುತ್ತದೆ; ಹರಕೆಯೊಪ್ಪಿಸಲು ಬಲಿಗಾಗಿ ಎಳೆದೊಯ್ಯಲಾಗುವ ಕುರಿಯೊಂದು ತೋರಣದ ತಳಿರನ್ನು ತಿನ್ನಲು ಮುಂದಾಗುತ್ತದೆ - ಇಂತಹ ಚಿತ್ರಗಳ ಮೂಲಕ ಸಾಂಸಾರಿಕ ಕ್ಷಣಿಕತೆಯನ್ನವರು ಬಣ್ಣಿಸುತ್ತಾರೆ. ಬಸವಣ್ಣನ ಒಂದು ಸುಂದರ ವಚನ ಪ್ರಸಿದ್ಧವಾಗಿದೆ :

ನಿಮಿಷದ ನಿಮಿಷಂ ಬೋ, ಕ್ಷಣದೊಳಗರ್ಧಂ ಬೋ
ಕಣ್ಣ ಮುಚ್ಚಿ ಬಿಚ್ಚು ವೈಸುಬೇಗಂ ಬೋ
ಸಂಸಾರದಾಗುಂ ಬೋ, ಸಂಸಾರದ ಹೋಗುಂ ಬೋ
ಸಂಸಾರಮೊಪ್ಪಂ ಬೋ
ಕೂಡಲ ಸಂಗಮದೇವಾ ,
ನೀ ಮಾಡಿದ ಮಾಯಂ ಬೋ, ಅಭ್ರಚ್ಛಾಯಂ ಬೋ.

ಈ ಸಂಸಾರಕ್ಕಾಗಿ ಆಶಿಸುವ ವ್ಯಕ್ತಿ ದೇಹವೂ ಅಸಹ್ಯಕರ. 'ಅಮೇಧ್ಯದ ಹಡಿಕೆ, ಮೂತ್ರದ ಕುಡಿಕೆ, ಎಲುವಿನ ತಡಿಕೆ, ಕೀವಿನ ಹಡಿಕೆ' ಎಂದೋ (ಮಹಾದೇವಿ) 'ಎಲುವಿನ ಹಂಜರ, ಕರುಳಿನ ಜಾಳಿಗೆ. ಅಮೇಧ್ಯದ ಹುತ್ತ , ಮೂತ್ರದ ಬಾವಿ' ಮುಂತಾಗಿಯೋ ದೇಹವನ್ನು ಅನೇಕ ವಚನಗಳಲ್ಲಿ ಬಣ್ಣಿಸಲಾಗಿದೆ. ಕಿರುರೂಪದಲ್ಲಿ ದೇಹ, ಹಿರಿರೂಪದಲ್ಲಿ ಪ್ರಪಂಚ ಎರಡೂ ಒಂದೇ ನೆಲೆಯವು. ಇವೆರಡರ ಸಂಬಂಧವೇ ಸಂಸಾರ. ಅವುಗಳ ಹೀನ ನಂಟನ್ನು ಮುರಿಯುವುದೇ ಸಾಧನೆ. ಆದರೆ ಇದೆಲ್ಲ ಶಿವನದೇ ಲೀಲೆ. ಹೀಗಾಗಿ ಅವನ ಕರುಣೆಯಿಲ್ಲದೆ ಈ ಭವಸಾಗರವನ್ನು ದಾಟಲಾಗದು. 'ಸಂಸಾರವೆಂಬ ಹಗೆಯಯ್ಯ ತಂದೆ.... ನಿಮ್ಮ ಮರೆವೊಕ್ಕೆ ಕಾಯಯ್ಯಾ' (ಮಹಾದೇವಿ) 'ಕಾಲಲಿ ಕಟ್ಟಿದ ಗುಂಡು, ಕೊರಳು ಕಟ್ಟದ ಬೆಂಡು, ತೇಲಲೀಯದು ಗುಂಡು, ಮುಳಗಲೀಯದು ಬೆಂಡು, ಇಂತಪ್ಪ ಸಂಸಾರ ಶರಧಿಯ ದಾಂಟಿಸಿ ಕಾಲಾಂತರನೆ ಕಾಯೋ' (ಬಸವಣ್ಣ) ಎಂದು ಜೀವ ಪ್ರಾರ್ಥಿಸುತ್ತದೆ.

ಕೊಟ್ಟಕೊನೆಗೆ ಶಿವಕರುಣೆಯಾಗಿ ಇದರಿಂದ ಪಾರಾಗಬೇಕಾದರೂ, ಅದಕ್ಕಾಗಿ ಮಾಡಬೇಕಾದ ಪ್ರಯತ್ನದ ಬಗ್ಗೆ ಮಾರ್ಗದರ್ಶನ ಮಾಡುವವನು ಗುರು. ಹೀಗಾಗಿ ಗುರುಕರುಣೆ ಬಿಡುಗಡೆಯ ಕಡೆಗೆ ಕರೆದೊಯ್ಯುವ ಸಾಧನ. 'ಗುರು ಕರುಣಿಸಲು ಸಂಸಾರ ವಿಷಯ ಕೆಟ್ಟಿತ್ತು , ಮಾಯಾಪ್ರಪಂಚು ಬಿಟ್ಟಿತ್ತು , ಹುಟ್ಟರತು ಹೋಯಿತ್ತು' (ಜೇಡರ ದಾಸಿಮಯ್ಯ)' ಎನ್ನ ಸದ್ಗುರು ಸ್ವಾಮಿ ಎನಗೆ ಕರುಣಿಸಲು ಎನ್ನ ಸಂಸಾರ ವಿಷಯ ಕೆಟ್ಟಿತ್ತಯ್ಯಾ' (ಜೇಡರ ದಾಸಿಮಯ್ಯ) - ಹೀಗೆ ಗುರುವಿನ ಮಹಿಮೆಯನ್ನು ವಚನಕಾರರು ಹೊಗಳುತ್ತಾರೆ.

ಸಂಸಾರದ ಸ್ವರೂಪವನ್ನು ಅರಿಯುವುದು ಅದರಿಂದ ದೂರಾಗುವ ಮೊದಲ ಹೆಜ್ಜೆ. ಸಂಸಾರ ತನ್ನಲ್ಲಿ ತಾನು ಕ್ಷುಲ್ಲಕವಲ್ಲವೇನೋ. ಏಕೆಂದರೆ ಈ ಸಂಸಾರವೇ ಸಾಧನೆಗೆ ಭೂಮಿಕೆ. ಹೀಗಾಗಿ ವ್ಯಕ್ತಿ - ಸಂಸಾರದ ನಡುವಣ

ಸಂಬಂಧವಿರುವುದು ವ್ಯಕ್ತಿ ಸಂಸಾರವನ್ನು ಕಟ್ಟಿಕೊಂಡ ರೀತಿಯಲ್ಲಿ. ತಾನು ಅದರಿಂದ ದೂರವಾಗಬೇಕೆಂದರೆ ತನ್ನ ಮನಸ್ಸಿನಲ್ಲಿ ಆ ಬಗ್ಗೆ ಇರುವ ಮೋಹವನ್ನು ನಿವಾರಿಸಿಕೊಳ್ಳಬೇಕು. ಹಾಗಾಗಿ ವಸ್ತುವನ್ನು ದೂರಿ ಪ್ರಯೋಜನವಿಲ್ಲ. ಅದರ ಬಗ್ಗೆ ಮೋಹಗೊಳ್ಳುವ ಮನಸ್ಸನ್ನು ನಿಯಂತ್ರಿಸಬೇಕು. 'ಹೆಣ್ಣು ಮಾಯೆಯೆಂಬರು, ಹೆಣ್ಣು ಮಾಯೆಯಲ್ಲ... ಮನದ ಮುಂದಣ ಆಸೆಯೇ ಮಾಯೆ ಕಾಣಾ' (ಅಲ್ಲಮ) ಎಂಬ ಅರಿವಿರಬೇಕು. ಅದು ಬಿಟ್ಟು ವಸ್ತುವಿನಿಂದ ದೂರಾದರೆ ಅದನ್ನು ಗೆದ್ದಂತೆ ಅಲ್ಲ ; ಅದರ ಗೀಳು ಮನಸ್ಸಿನಲ್ಲಿ ಉಳಿಯಬಹುದು. 'ಆರುವನೊಲ್ಲೆನೆಂದು ಅರಣ್ಯಕ್ಕೆ ಹೋಗುವದು ದುರುಳತನ. ಊರೊಳಗಿರ್ದಡೆ ನರರ ಹಂಗು, ಅರಣ್ಯದೊಳಗಿರ್ದಡೆ ತರುಗಳ ಹಂಗು' (ಸಕಲೇಶ ಮಾದರಸ).

ಈ ರೀತಿ ಸಂಸಾರವನ್ನು ಹೀನವೆಂದೂ, ತ್ಯಾಜ್ಯವೆಂದೂ ಭಾವಿಸಿ, ಅದರಿಂದ ಪಾರಾಗಲು ಹಂಬಲಿಸುವ ಬಗೆಯು ವಚನಕಾರರು ಸಂಸಾರದ ಬಗ್ಗೆ ವ್ಯಕ್ತಪಡಿಸಿದ ಮನೋಭಾವದ ಮೊದಲ ನೆಲೆಯಾದರೆ; ಸಂಸಾರ - ಪ್ರಪಂಚ ಒಂದು ಮಟ್ಟದಲ್ಲಿ ವಾಸ್ತವವೇ. ಅದನ್ನು ಪರಿಗಣಿಸಿ, ಅದನ್ನೇ ಮುಂದುವರಿಯುವ ಸೋಪಾನವಾಗಿ ಮಾಡಿಕೊಳ್ಳಬೇಕೆಂದು ಪ್ರತಿಪಾದಿಸಿದುದು ಎರಡನೆಯ ನೆಲೆ. ಈ ನೆಲೆಯಲ್ಲಿ ಐಹಿಕಕ್ಕೂ - ಆಧ್ಯಾತ್ಮಿಕ ಸಾಧನೆಗೂ ಮೂಲಭೂತ ವಿರೋಧವಿಲ್ಲವೆಂಬ ನಿಲವನ್ನು ವಚನಕಾರರು ತಾಳಿದರು. ಗಜೇಶ ಮಸಣಯ್ಯನ ಈ ವಚನವನ್ನು ನೋಡಿ :

''ಹೊನ್ನ ಬಿಟ್ಟು ಲಿಂಗವ ನುತಿಸಬೇಕೆಂಬರು ;
ಹೊನ್ನಿಗೂ ಲಿಂಗಕ್ಕೆಯೂ ವಿರುದ್ಧವೇ?
ಹೆಣ್ಣ ಬಿಟ್ಟು ಲಿಂಗವನೊಲಿಸಬೇಕೆಂಬರು ;
ಹೆಣ್ಣಿಗೆಯೂ ಲಿಂಗಕ್ಕೆಯೂ ವಿರುದ್ಧವೇ?
ಮಣ್ಣ ಬಿಟ್ಟು ಲಿಂಗವನೊಲಿಸಬೇಕೆಂಬರು ;
ಮಣ್ಣಿಗೆಯೂ ಲಿಂಗಕ್ಕೆಯೂ ವಿರೋಧವೇ ?....
ಅಱಿದಡೆ ಕಾಣಬಹುದು, ಮಱಿದಡೆ ಕಾಣಬಾರದು''

ಹೆಣ್ಣು ಹೊನ್ನು ಮಣ್ಣು -ಇದು ತನ್ನ ಪ್ರಸಾದ ಕಾರಣದಿಂದ ಒಂದೆಡೆ ಸೇರಿ ಕನ್ನಡದಲ್ಲಿ ಐಹಿಕತೆಗೆ ಸಂಕೇತವಾದ ನುಡಿಗಟ್ಟಾಗಿದೆ. ಐಹಿಕತೆಯನ್ನು ತೊರೆದು ಆಮುಷ್ಮಿಕ ಸಾಧನೆ ಮಾಡುವುದು ಒಂದು ದಾರಿಯಾದರೆ, ಅದನ್ನು ಹೊಂದಿಯೂ ಸಾಧನೆ ಮಾಡುವುದು ಇನ್ನೊಂದು ದಾರಿ. ಉರಿಲಿಂಗಪೆದ್ದಿ ತನ್ನೊಂದು ವಚನದಲ್ಲಿ ಹೀಗೆನ್ನುತ್ತಾನೆ : ''ಬಿಟ್ಟಡೆ ಹೆಣ್ಣು ಹೊನ್ನು ಮಣ್ಣು ಈ ಮೂರನೂ ಬಿಟ್ಟು ಜ್ಞಾನದಲ್ಲಿ ಸುಳಿಯಬಲ್ಲಡೆ ಭವಂ ನಾಸ್ತಿ ತಪ್ಪದು. ಹಿಡಿದಡೆ ಹೆಣ್ಣು ಮಣ್ಣು ಹೊನ್ನು ಈ ಮೂರನೂ ಹಿಡಿದು ಸದ್ಭಕ್ತಿಯಿಂದ ದಾಸೋಹವ ಮಾಡಬಲ್ಲಡೆ ಭವಂ ನಾಸ್ತಿ ತಪ್ಪದು''. ಇಹನಿರಾಕರಣೆಯಿಂದ ಮಾತ್ರವೇ ಸಾಧನೆ ಎಂಬ ತಪ್ಪು ತಿಳಿವಳಿಕೆಯಿಂದಲೋ ಅಥವಾ ಹಾಗೆ ತೋರಿಸಿಕೊಳ್ಳಬೇಕೆಂಬ ಚಾಪಲ್ಯದಿಂದಲೋ ಬಲವಂತವಾಗಿ ಇಹದೂರನಾಗಲು ಪ್ರಯತ್ನಿಸಬಾರದು. ಈ ಭಾವನೆಯು ಬಸವಣ್ಣನ ಪ್ರಸಿದ್ಧ ವಚನವೊಂದರಲ್ಲಿದೆ : ''ಇಂದ್ರಿಯ ನಿಗ್ರಹ ಮಾಡಿದರೆ ಹೊಂದುವುವು ದೋಷಂಗಳು; ಮುಂದೆ ಬಂದು ಕಾಡುವವು ಪಂಚೇಂದ್ರಿಯಂಗಳು ಸತಿಪತಿ ರತಿ ಸುಖವ ಬಿಟ್ಟರೇ ಸಿರಿಯಾಳ ಚೆಂಗಳೆಯರು? ಸತಿ ಪತಿ ರತಿ ಸುಖ ಭೋಗೋಪಭೋಗವ ಬಿಟ್ಟನೆ ಸಿಂಧುಬಲ್ಲಾಳನು? ನಿಮ್ಮ ಮುಟ್ಟಿ, ಪರಧನ ಪರಸ್ತ್ರೀಗೆಳಸಿದಡೆ ನಿಮ್ಮ ಚರಣಕ್ಕೆ ದೂರ ಕೂಡಲಸಂಗಮ ದೇವಾ''. ನ್ಯಾಯರ್ಜಿತವಲ್ಲದ್ದನ್ನು 'ಪರಧನ ಪರಸ್ತ್ರೀ' ಎಂಬ ಪದ ಸಂಕೇತಿಸುತ್ತಿದೆ. ಹೀಗೆ ನ್ಯಾಯಯುತವಾದ ರೀತಿಯಲ್ಲಿ, ಸಹಜವಾದ ಆಕಾಂಕ್ಷೆಗಳನ್ನು ಪೂರೈಸಿಕೊಳ್ಳುವುದು ಸರಿ ಎಂಬುದೇ ಈ ಹಂತದಲ್ಲಿ ವಚನಕಾರರ ನಿಲವು. ಇದನ್ನು ಸಿದ್ಧರಾಮ ನೇರ ನುಡಿಗಳಲ್ಲಿ ವ್ಯಕ್ತಪಡಿಸುತ್ತಾನೆ. ''ಭಕ್ತನ ಮನ ಹೆಣ್ಣಿನೊಳಗಾದಡೆ ವಿವಾಹವಾಗಿ ಕೂಡುವುದು. ಭಕ್ತನ ಮನ ಮಣ್ಣಿನೊಳಗಾದಡೆ ಕೊಂಡು ಆಲಯವ ಮಾಡುವುದು. ಭಕ್ತನ ಮನ ಹೊನ್ನಿನೊಳಗಾದಡೆ ಬಳಲಿ ದೊರಕಿಸುವುದು ನೋಡಾ ಕಪಿಲ ಸಿದ್ಧಮಲ್ಲಿಕಾರ್ಜುನಾ.'' ಹೆಣ್ಣು ಹೊನ್ನು ಮಣ್ಣುಗಳು

ಐಹಿಕತೆಯನ್ನು ಸೂಚಿಸುವಂತೆಯೇ ಆ ಪದಗಳ ಹಿಂದೆ ಕ್ರಮವಾಗಿ ಬಂದ 'ವಿವಾಹವಾಗಿ' 'ಕೊಂಡು' 'ಬಳಲಿ' - ಪದಗಳು ಅವುಗಳನ್ನು ಪಡೆಯಬೇಕಾದ ನ್ಯಾಯಮಾರ್ಗವನ್ನು ಸೂಚಿಸುತ್ತವೆ.

ಸಂಸಾರ ಆಧ್ಯಾತ್ಮಿಕ ಸಾಧನೆಯ ದೃಷ್ಟಿಯಿಂದ ಅಪಾಯಕಾರಿ, ಹೌದು. ಆದರೆ ಅದರ ಅಪಾಯಕಾರಿಕತೆಯನ್ನು ನಿವಾರಿಸಿಕೊಂಡು ಅದರಲ್ಲಿರುವುದು ಇನ್ನೊಂದು ಮಾರ್ಗ; ಒಂದು ರೀತಿಯಲ್ಲಿ ನ್ಯಾಯಮಾರ್ಗದಲ್ಲಿ ಅದನ್ನು ಅನುಭವಿಸುವ ಮತ್ತೊಂದು ರೂಪು ಇದು. ಹೀಗಾಗಿ ಸಂಸಾರವನ್ನು ಹಾವಿಗೆ ಹೋಲಿಸುವ ಮಹಾದೇವಿಯಕ್ಕನು ಅದರ ವಿಷದ ಹಲ್ಲನ್ನು ಕಿತ್ತರೆ ಅದು ಅಪಾಯಕಾರಿಯಾಗುಳಿಯದು ಎನ್ನುತ್ತಾಳೆ. ಅಕ್ಕನದೇ ಇನ್ನೊಂದು ವಚನವು ಸಂಸಾರವನ್ನು ಬೆಟ್ಟ - ಸಮುದ್ರ - ಸಂತೆಗಳಿಗೆ ಹೋಲಿಸಿ ಸಾಂಸಾರಿಕ ಕೋಟಲೆಯನ್ನು ಮೃಗ-ತೆರೆನೊರೆ - ಶಬ್ದಗಳೊಂದಿಗೆ ಸಮೀಕರಿಸುತ್ತಾಳೆ. ಕೊನೆಗೆ ನೇರವಾಗಿ ''ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದಡೆ ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು'' ಎಂದು ಸೂಚಿಸುತ್ತಾಳೆ. ಸಂಸಾರದಲ್ಲಿದ್ದೂ ಅದರ ಅಪಾಯದಿಂದ ಪಾರಾಗಲು ಸಾಧ್ಯವಾಗುವುದು 'ಸಮಾಧಾನ'ದಿಂದ ಮಾತ್ರ. ಆದರೆ ಸಂಸಾರ ನಿರಸನದ ಡಾಂಭಿಕತೆಯು ನಿಜವಾಗಿ ಅಪಾಯಕಾರಿಯೆಂಬುದು ವಚನಕಾರರ ಅಭಿಮತ. ಇದು ''ಅಱಿಯದೆ ಭಕ್ತಿಜ್ಞಾನ ವೈರಾಗ್ಯವೆಂಬ ಬರಿ ವೇಷಕ್ಕಿಂತ ಬಡ ಸಂಸಾರವೇ ಲೇಸು'' ಎಂಬ ಚೆನ್ನಬಸವಣ್ಣನ ಮಾತಿನಲ್ಲಿ ಎಚ್ಚರಿಕೆಯಾಗಿ ಬಂದಿದೆ. ಇಂತಹ ಮಾತುಗಳನ್ನಾಡುವಾಗ ಈ ಸಂಸಾರದ ಬಯಕೆಯ ಸಹಜ ತೀವ್ರತೆಯ ಅರಿವು, ಒಂದು ನೆಲೆಯಲ್ಲಿ ಅದನ್ನು ಸವಿಯಬೇಕಾದ ಆವಶ್ಯಕತೆ ಇಂತಹ ವಿವೇಕ ಪ್ರಜ್ಞೆಯು ವಚನಕಾರರಲ್ಲಿ ಕಾಣುತ್ತದೆ.

ಮೂರನೆಯ ನೆಲೆಯೆಂದರೆ ಶುದ್ಧ ವಿಸ್ಮಯಭಾವ. ಚಿಂತಕರಾದ ವಚನಕಾರರು ಪ್ರಕೃತಿ - ಜೀವಗಳ ಸಂಬಂಧವನ್ನು ಕುರಿತು ಆಲೋಚಿಸಿದಂತೆಯೇ ಸಂಸಾರ - ವ್ಯಕ್ತಿಗಳ ನಡುವಣ ಸಂಬಂಧದ ಬಗ್ಗೆಯೂ ಚಿಂತನೆ ನಡೆಸುತ್ತಾರೆ. ''ಎತ್ತಣ ಮಾಮರ, ಎತ್ತಣ ಕೋಗಿಲೆ..... ಗುಹೇಶ್ವರಲಿಂಗಕ್ಕೆಯೂ ಎನಗೆಯೂ ಎತ್ತಣಿಂದೆತ್ತ ಸಂಬಂಧವಯ್ಯಾ'' ಎಂಬ ಅಲ್ಲಮನ ಉದ್ಗಾರ ಪ್ರಸಿದ್ಧವಾಗಿದೆ. ಹೀಗೆಯೇ ವ್ಯಕ್ತಿಯನ್ನು ಸಂಸಾರವು ಒಳಗೊಳ್ಳುವ ಬಗೆಯನ್ನು ಕುರಿತು ಅನೇಕರು ಉದ್ಗರಿಸಿದ್ದಾರೆ. ಸಾಧಕನ ದೇಹದ ಸಹಜ ಆಕಾಂಕ್ಷೆಗಳೂ ಅವನ ಸ್ಥಿಮಿತದಲ್ಲಿ ಬರಲಾರದ ಸ್ಥಿತಿ ಜೇಡರ ದಾಸಿಮಯ್ಯನನ್ನು ಚಿಂತನೆಗೆ ತೊಡಗಿಸುತ್ತದೆ. ಈ ದೇಹ - ಮನಸ್ಸುಗಳ ಸಂಬಂಧ ಒಂದು ತೊಡಕು, ಮನಸ್ಸು ಅನೇಕ ಬಾರಿ ದೇಹದ ಸಹಜಕ್ರಿಯೆಗಳನ್ನು ನಿಯಂತ್ರಿಸಲಾರದು; ದೇಹ ಮನಸ್ಸಿನ ಇರಾದೆಗೆ ಅನುಗುಣವಾಗಿ ನಡೆಯಲಾರದು. ಇದೊಂದು 'ಬಿನ್ನಾಣ', ದಾಸಿಮಯ್ಯನ ವಚನ ಹೀಗಿದೆ :

''ಎನ್ನೊಡಲಾದರೆ ಎನ್ನಿಚ್ಚೆಯಲ್ಲಿರದೆ
ನಿನ್ನೊಡಲಾದರೆ ನಿನ್ನಿಚ್ಚೆಯಲ್ಲಿರದೆ
ಅದು ಎನ್ನೊಡಲೂ ಅಲ್ಲ ನಿನ್ನೊಡಲೂ ಅಲ್ಲ
ಅದು ನೀ ಮಾಡಿದ ಜಗದ ಬಿನ್ನಾಣದೊಡಲು ಕಾಣಾ ರಾಮನಾಥ. ''

ಸಂಸಾರ ಸಾಧಕನ ಮನಸ್ಸನ್ನು ಆಕರ್ಷಿಸುವ ತೊಡಕಾಗಿದೆ ಎಂಬುದನ್ನು ವಚನಕಾರರೂ ಒಪ್ಪುತ್ತಾರೆ. ಆದರೆ ಇದರ ಹಿಂದೆ ಸೃಷ್ಟಿಕರ್ತನ 'ಲೀಲೆ'ಯಿದೆ, ಆ ಬಗ್ಗೆ ಚಕಿತರಾಗುತ್ತಾರೆ. 'ಅಮರಗುಂಡ ಮಲ್ಲಿಕಾರ್ಜುನ' ಅಂಕಿತದ ವಚನಕಾರನೂ (ಪುರದ ನಾಗಣ್ಣ ಅಥವಾ ಮಲ್ಲಿಕಾರ್ಜುನ ಪಂಡಿತಾರಾಧ್ಯ) ಇದನ್ನು 'ಬಿನ್ನಾಣ' ಎನ್ನುತ್ತಾನೆ : ''ನೆನೆವ ಮನಕ್ಕೆ ಹೊನ್ನ ತೋರಿದೆ, ನೋಡುವ ಕಂಗಳಿಗೆ ಹೆಣ್ಣ ತೋರಿದೆ, ಪೂಜಿಸುವ ಕೈಗೆ ಮಣ್ಣ ತೋರಿದೆ. ಇಂತೀ ತ್ರಿವಿಧಕ್ಕೆ ತ್ರಿವಿಧವ ತೋರಿ ನೀ ಬೇಕಾದ ಬಿನ್ನಾಣಕ್ಕೆ ಬೆರಗಾದೆನ್ನೈ ಅಮರಗುಂಡ ಮಲ್ಲಿಕಾರ್ಜುನ!'' ಇಲ್ಲಿ ಶರಣ ಬೆರಗಾಗಿರುವುದು ಈ ಸಾಂಸಾರಿಕ ಆಕರ್ಷಣೆಯನ್ನೊಡ್ಡಿಯೂ ಅವೆಲ್ಲದರಿಂದ ಸೃಷ್ಟಿಕರ್ತ ದೂರಾಗಿರುವ ಬಗ್ಗೆ. ವ್ಯಕ್ತಿಯನ್ನು ಸೃಷ್ಟಿಸಿದಾತನೇ ಸಂಸಾರವನ್ನೂ ಸೃಷ್ಟಿಸಿದ್ದಾನೆ. ಆದರೆ ತಾನು ಅದರಿಂದ ದೂರಾಗಿರುವ ಬಗ್ಗೆ ಸೊಡ್ಡಳ ಬಾಚರಸನೂ ಇದೇ ವಿಸ್ಮಯವನ್ನು ವ್ಯಕ್ತಪಡಿಸುತ್ತಾನೆ : ''ತನುವಿಕಾರ ಮನವಿಕಾರ ಜನನ ಮರಣ ಸ್ಥಿತಿ ಕಾರಣ, ಹೊನ್ನ ತೋರಿದೆ ಜಗದ ಕಣ್ಣ ಮೊದಲಿಂಗೆ ; ಹೆಣ್ಣನುಳಿಸಿದೆ ಜಗದ

ಕಣ್ಣ ಮೊದಲಿಂಗೆ ; ಮಣ್ಣ ಹರಹಿದೆ ಜಗದ ಕಣ್ಣ ಮೊದಲಿಂಗೆ; ತನುವ ತಪ್ಪಿಸಿ ಜಗವ ಸಂಸಾರಕ್ಕೊಪ್ಪಿಸಿ ನುಣ್ಣನೆ ಹೋದೆ ಉಪಾಯದಿ ದೇವರಾಯ ಸೊಡ್ಡಳಾ!'' ಇಂತಹ ಬೆರಗಿನ ಕ್ಷಣಗಳಲ್ಲಿ ವಚನಕಾರರು ಉಪದೇಶಾತ್ಮಕವೂ ಆಗದೆ, ವಿಶ್ಲೇಷಣಬುದ್ಧಿಯನ್ನು ತೋರದೆ ಜಗತ್ತಿನ ತೊಡಕಿನ ಬಗ್ಗೆ ಅನುಭವಾತ್ಮಕವಾದ ಚಿಂತನೆಗೆ ತೊಡಗುತ್ತಾರೆ.

ಬದುಕಿನ ಗುರಿ ಏನೇ ಆಗಿರಲಿ ತತ್‌ಕ್ಷಣದಲ್ಲಿ ಈ ಬದುಕು ವಾಸ್ತವವೇ. ಕೇವಲ ಉಪದೇಶ, ವಿಶ್ಲೇಷಣೆ, ಚಿಂತನೆ, ಬೆರಗುಗಳ ಮೂಲಕ ತತ್‌ಕ್ಷಣದ ಸನ್ನಿವೇಶವನ್ನು ಎದುರಿಸಲಾಗದು. ಅದಕ್ಕೆ ಬೇಕಾದದ್ದು ವಾಸ್ತವಬುದ್ಧಿಯೇ. ಅನೇಕ ಸನ್ನಿವೇಶಗಳಲ್ಲಿ ಆಕರ್ಷಣೆ, ದೈಹಿಕ ಆಕಾಂಕ್ಷೆಗಳ ಬಗ್ಗೆ ಕಟುವಾಗಿ ಟೀಕಿಸುವ ವಚನಕಾರರು ಈ ವಾಸ್ತವದ ನೆಲೆಯಲ್ಲಿ ವಾಸ್ತವವಾಗಿಯೇ ಆಲೋಚಿಸುತ್ತಾರೆ; ಇಲ್ಲಿನ ಸಮಸ್ಯೆಗಳನ್ನು ಇಲ್ಲಿಯೇ ಪರಿಹರಿಸುವ ಮಾರ್ಗಾನ್ವೇಷಣೆಗೆ ತೊಡಗುತ್ತಾರೆ. ಇಂತಹ ಆಲೋಚನ ವಿಧಾನವು ಅಲ್ಲಮನಂತಹವನಲ್ಲಿ ಕಾಣುವುದಿಲ್ಲ ; ಜೇಡರ ದಾಸಿಮಯ್ಯನಂತಹವರಲ್ಲಿ ಕಾಣುತ್ತದೆ. ಹಸಿವು ಅತ್ಯಂತ ಮೂಲಭೂತ ಅನುಭವ. ಆಹಾರದ ನಂತರ ಈ ಹಸಿವಿನ ವ್ಯಾಪ್ತಿ ವಿಸ್ತಾರಗೊಳ್ಳುತ್ತದೆ, ಹೀಗಾಗಿ ಇದು ವಾಸ್ತವ ಬದುಕಿನ ಪ್ರಾಥಮಿಕ ಸಮಸ್ಯೆ. ಈ ಹಸಿವನ್ನು ಕುರಿತು ದಾಸಿಮಯ್ಯ ಹೀಗೆನ್ನುತ್ತಾನೆ : ''ಹಸಿವೆಂಬ ಹೆಬ್ಬಾವು ಬಸಿಱ ಬಂದು ಹಿಡಿದೊಡೆ ವಿಷವೇಱಿತ್ತಯ್ಯ ಆಪಾದ ಮಸ್ತಕಕ್ಕೆ. ಹಸಿವಿಗನ್ನವನಿಕ್ಕಿ ವಿಷವನಿಳುಹಬಲ್ಲಡೆ ವಸುಧೆಯೊಳಗಾತನೇ ಗಾರುಡಿಗ ಕಾಣಾ ರಾಮನಾಥ''. ಹಸಿವಿನ ಅಗಾಧ ಶಕ್ತಿಯನ್ನು ಹೆಬ್ಬಾವಿನ ಪ್ರತಿಮೆಯ ಮೂಲಕ ಅಭಿವ್ಯಕ್ತಿಸುವ ಈ ವಚನವು ವ್ಯಾಪಕ ಅರ್ಥಶಕ್ತಿಯನ್ನು ಪಡೆದಿದೆ. ಹಸಿವನ್ನು ಹಿಂಗಿಸಬೇಕಾದ ಅವಶ್ಯಕತೆಯನ್ನೂ ಧ್ವನಿಸುತ್ತದೆ.

ಇಲ್ಲಿ ವರ್ಗೀಕರಿಸುವಂತೆ ; ಮೊದಲ ನೆಲೆಯಲ್ಲಿ ವಚನಕಾರರು ದೇಹವನ್ನು ಒಂದು ಅಸಹ್ಯಕರ ಅನಿವಾರ್ಯವೆಂಬಂತೆ ಪರಿಭಾವಿಸಿದ್ದನ್ನು ಕಂಡಿದ್ದೇವೆ. ಆದರೆ ಈ ದೇಹ ಒಮ್ಮೆಗೇ ಅನೇಕ ಮಿತಿಗಳಿಂದ ಆವೃತವಾಗಿದ್ದರೂ, ಅಗಾಧ ಸಾಧ್ಯತೆಗಳಿಂದಲೂ ಕೂಡಿದೆ. ಹೀಗಾಗಿ ಮಾನವನ ದೇಹ, ವ್ಯಕ್ತಿ- ಅಸ್ತಿತ್ವ ಸಾಧನೆಗಳ ಭೂಮಿಕೆ. ಇದನ್ನು ಲಘುವಾಗಿ ಕಾಣುವುದನ್ನು ಜೇಡರ ದಾಸಿಮಯ್ಯ ವಿರೋಧಿಸುತ್ತಾನೆ ; ಅಷ್ಟೇ ಅಲ್ಲ, ಶಿವನಿಗೂ ಸವಾಲು ಹಾಕುತ್ತಾನೆ ; ಆತನ ಗುಡುಗನ್ನು ಕೇಳಿ : ''ಒಡಲುಗೊಂಡೆನಾಗಿ ಮೃಡ ನಿಮಗೆ ಹಗೆಯಾದೆನಯ್ಯಾ'' ಎಂದು ಹಲುಬುವ ಈತನೇ ''ಒಡಲುಗೊಂಡವ ಹಸಿವ, ಒಡಲುಗೊಂಡವ ಹುಸಿವ. ಒಡಲುಗೊಂಡವನೆಂದು ನೀನೆನ್ನ ಜಡಿದೊಮ್ಮೆ ನುಡಿಯದಿರಾ. ನೀನೆನ್ನಂತೆ ಒಮ್ಮೆ ಒಡಲುಗೊಂಡು ನೋಡಾ ರಾಮನಾಥ.'' ಮಾನವ ಬದುಕಿನ ಸಮಸ್ಯೆಗಳನ್ನೆಲ್ಲ ಅಡಕಗೊಳಿಸಿ ಹೇಳುವ ಈ ವಚನ ದೇಹದ ಬಗ್ಗೆ ವಚನಕಾರರು ಇರಿಸಿಕೊಂಡು ಅತ್ಯಂತ ವಾಸ್ತವ ನಿಲುಮೆಯಾಗಿದೆ; ದೇಹ, ಬದುಕುಗಳ ಬಗೆಗಿನ ಗೌರವದ ಸಂಕೇತವೂ ಆಗಿದೆ.

ಹೀಗೆ ವಚನಕಾರರು ವಿವಿಧ ನೆಲೆಗಳಲ್ಲಿ ಸಂಸಾರವನ್ನು ಪರಿಭಾವಿಸಿದ್ದಾರೆ. ಅವರು ನಂಬಿದ್ದು, 'ಅದ್ವೈತ'ಕ್ಕೆ ಅನುಗುಣವಾದ 'ಜಗನ್ಮಿಥ್ಯಾ'ವಾದವನ್ನೇ. ಆದರೆ ಅವರು ಜನಸಾಮಾನ್ಯರ ದೃಷ್ಟಿಯಿಂದಲೂ ಸಮಸ್ಯೆಗಳನ್ನು ವಿಶ್ಲೇಷಿಸಿದ್ದರಿಂದ ಆ ಭಾವನೆ ಶ್ರುತಿಯಾಗಿದ್ದರೂ, ಬೇರೆ ಬೇರೆ ಹಂತಗಳಲ್ಲಿ, ಆಯಾ ಸನ್ನಿವೇಶಕ್ಕೆ ತಕ್ಕಂತಹ ನೆಲೆಗಳನ್ನು ತಲುಪಿದ್ದಾರೆ. 'ಜಗನ್ಮಿಥ್ಯಾ'ವಾದವನ್ನು ಸಂಪೂರ್ಣವಾಗಿ ನಿರಾಕರಿಸುವ ಕ್ರಾಂತಿಕಾರಿ ನಿಲವನ್ನೇನೂ ಅವರು ತಾಳಲಿಲ್ಲ. ಆದರೆ ಜೀವನದ ಕಟುವಾಸ್ತವಗಳ ಬಗ್ಗೆ ಚಿಂತಿಸಿದಾಗ ಅವರಲ್ಲಿ ಬದುಕಿನ ಬಗ್ಗೆ ಸಹಾನುಭೂತಿ ಉಕ್ಕಿದೆ.

ಶಾಸನಗಳಲ್ಲಿ ನುನ್ನವಂಶ

ಡಾ॥ ಹಂಪ ನಾಗರಾಜಯ್ಯ

ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕು ಶಾಸನಗಳಲ್ಲಿ ೨೮ನೆಯ ಸಂಖ್ಯೆಯದು ಕೆಲವು ದೃಷ್ಟಿಗಳಿಂದ ಪ್ರಾಮುಖ್ಯ ಪಡೆದಿದೆ; ಈ ಶಾಸನದ ಕಾಲ ಕ್ರಿ.ಶ. ೧೨೦೮. ಈ ಶಾಸನವು ಸಾದ್ಯಂತವಾಗಿ ಜೈನ ಶಾಸನ. ಇದರ ಸಾರಾಂಶವಿಷ್ಟು : ಭರತಕ್ಷೇತ್ರದ ಕುಂತಳ ದೇಶದಲ್ಲಿ ಬನವಾಸಿ ದೇಶವು ಕಂಗೊಳಿಸುತ್ತಿತ್ತು. ಯದುಕುಲದ ಸಳ ಸುದತ್ತ ಮುನಿಪರ ಬಳಿ ಇರುವಾಗ ಒಮ್ಮೆ ಪದ್ಮಾವತಿ ಯಕ್ಷಿಯು ಹುಲಿಯ ರೂಪದಲ್ಲಿ ಕಾಣಿಸಿಕೊಂಡಳು. ಸುದತ್ತ ಮುನಿಯು 'ಪೊಯ್ ಸಳ' ಎಂದು ಅಪ್ಪಣೆ ಮಾಡಿದರು. ಅಂದಿನಿಂದ ಹೊಯ್ಸಳವಂಶ ಆರಂಭವಾಯಿತು. ಸಳನಾದ ಮೇಲೆ ಹಲವರು ದ್ವಾರಸಮುದ್ರದಿಂದ ಆಳಿದರು. ಬಲ್ಲಾಳದೇವನು ಆಳುತ್ತಿರುವಾಗ ಆತನ ಆಳ್ವಿಕೆಗೆ ಸೇರಿದ ಎಡೆನಾಡಿನ ಜಿಡ್ಡವಳಿಗೆ (ಜಿಡ್ಡುಳಿಗೆ - ೭೦) ನಾಡಿನಲ್ಲಿದ್ದ ಕೊಡಕಣಿ ಗ್ರಾಮದಲ್ಲಿ ಶಾಂತಿನಾಥ ಜಿನಾಲಯ ನಿರ್ಮಾಣವಾಯಿತು.

ಕೊಡಕಣಿ ಗ್ರಾಮದ ಗಾವುಂಡನಾಗಿದ್ದವನು ಮಸನನೆಂಬುವನು. ಈತನ ಮಗ ಕೀರ್ತಿಗಾವುಂಡ. ಇವನಿಗೆ ಸೋಮ, ಮಸನ, ಮಹಾದೇವ, ರಾಮ - ಎಂಬ ನಾಲ್ವರು ಮಗಂದಿರು. ಕೀರ್ತಿಗಾವುಂಡನ ಅಳಿಯ ಮಹಾದೇವ ದಂಡನಾಯಕ. ಈ ದಂಡನಾಯಕನ ಕಾಲದಲ್ಲಿ ಕೊಡಕಣಿಯಲ್ಲಿ ಒಂದು ಪ್ರತಿಷ್ಠಿತ ಜೈನ ವಂಶವಿದ್ದಿತು. ಆ ಊರಿನ ಮಲ್ಲಸೆಟ್ಟಿ ಮತ್ತು ಮಾಚಾಂಬಿಕೆಯರ ಮಗನಾದ ನೇಮನಿಗೆ ಮೂಲ ಸಂಘ ಕಾಣೂರುಗಣದ ಗುಣಚಂದ್ರರು ಗುರು. ನೇಮಿಸೆಟ್ಟಿಯು (ನೇಮ) ನುನ್ನ ವಂಶಜನು. ನೇಮಿಸೆಟ್ಟಿಯು ನಿಷ್ಠಾವಂತನಾದ ಜಿನಭಕ್ತ. ಎಡೆನಾಡಿನ ಜಿಡ್ಡಳಿಗೆ ಕಂಪಣದಲ್ಲಿ ನೇಮಿಸೆಟ್ಟಿಯು ಹಲವು ಬಸದಿಗಳನ್ನು ಮಾಡಿಸಿದನು. ಅವುಗಳಲ್ಲಿ ಕೊಡಕಣಿಯಲ್ಲಿ

ಕಟ್ಟಿಸಿದ ಶಾಂತಿನಾಥ ಜಿನಗೃಹದ ದಾಖಲೆ ಮಾತ್ರ ದೊರೆತಿದೆ. ಈ ದಾಖಲೆಯ ಶಾಸನದಿಂದ ಪ್ರಸ್ತುತ ಸಂಪ್ರಬಂಧದ ಎಲ್ಲೆಗೆ ಒಳಪಡುವ ಮೂರು ಪದ್ಯಗಳನ್ನು ಉದಾಹರಿಸುತ್ತೇನೆ :

ಸಲ್ಲಲಿತ ಗುಣಗಣಂ ಶ್ರೀ
ವಲ್ಲಭನಭಿಮಾನ ಮೂರ್ತ್ತಿ ಕೀರ್ತ್ತಿವಧೂಧ
ಮ್ಮಿಲ್ಲವಿರಾಜಿತ ಮಲ್ಲಿ
ಫುಲ್ಲಂ ಶ್ರೇಷ್ಠಿ ಪ್ರತಾನ ಮಣ್ಡನ ಮಲ್ಲಂ ॥

ಎನೆ ನೆಗಳ್ದ ಮಲ್ಲಸೆಟ್ಟಿಗ
ಮನುಪಮ ಚಾರಿತ್ರೆ ಸೀತೆ ಮಾಚಾಂಬಿಕೆಗಂ
ಜನಿಯಿಸಿದಂ ಸುಕ್ರಿತಂ ಸಂ
ಜನಿಯಿಸೆ ನಿಜಕುಲಕೆ ನೇಮನಖಿಳ ಲಲಾಮಂ ॥

ನೆಗಳ್ದರ್ಗ್ಗುರುಗಳ್ಗುಣ ಚಂ
ದ್ರಗಣಿವರಮ್ಮೂಲ ಸಂಘ ಕಾಣೂರ್ಗ್ಗಣದೊ
ಳ್ಸೊಗಯಿಸುವ ನುನ್ನವಂಶ ದೊ
ಳಗೆಸೆವರ ರಾಗಂ ನೇಮನಭಿಜನಮಂ ॥

(EC. VIII ೨೮.೧೨೦೮.ಪು. ೧೨-೧೩)

ಮೂಲಸಂಘ ಕಾಣೂರುಗಣದೊಳಗೆ ಸೊಗಯಿಸುವ ನುನ್ನವಂಶಕ್ಕೆ ಸೇರಿದ ಗುಣಚಂದ್ರಗಣಿವರರು ಪ್ರಸಿದ್ಧರಾಗಿದ್ದರು: ಅವರ ಶಿಷ್ಯನೂ ಅಭಿಜನ ರಾಮನೂ ನುನ್ನ ವಂಶದೊಳಗೆ ಶೋಭಿಸುವವರ ಪ್ರೀತಿಗೆ ಪಾತ್ರನೂ ಆದ ನೇಮನು (ನೇಮಿಸೆಟ್ಟಿ) ಗುಣಚಂದ್ರಗಣಿವರರ ಶಿಷ್ಯನಾಗಿದ್ದನು.

ಈ 'ನುನ್ನ ವಂಶ' ಎಂಬುದು ಯಾವುದು? ಈ ವಂಶವು ಶ್ರಾವಕ(ಗೃಹಸ್ಥ)ರಿಗೆ ಸೇರಿದ್ದೊ ಅಥವಾ ಸವಣರಿಗೆ (ಜೈನ ಸನ್ಯಾಸಿ) ಸೇರಿದ್ದೊ? ಎಂಬ ಪ್ರಶ್ನೆಗಳು ಉದ್ಭವಿಸುತ್ತವೆ. ಇದುವರೆಗೆ 'ನುನ್ನ ವಂಶ' ಕುರಿತು ಎಲ್ಲೂ ಒಂದು ಸಣ್ಣ ಟಿಪ್ಪಣಿ ಕೂಡ ಪ್ರಕಟವಾಗಿಲ್ಲ. ಶಾಸನಗಳ ಅಧ್ಯಯನ ಕಾಲದಲ್ಲಿ ನಾನು ಅರೆಬರೆಯಾಗಿ ಗುರುತು ಹಾಕಿಕೊಂಡಿರುವ ಹಳೆಯ ಸಾಮಗ್ರಿಯ ಆಧಾರಗಳನ್ನು ಮರು ಪರಿಶೀಲಿಸುವಾಗ ಮೇಲ್ಕಂಡ ಶಾಸನದ ಜತೆಗೆ ಇನ್ನೆರಡು ಶಾಸನಗಳಲ್ಲೂ ನುನ್ನ ವಂಶದ ಪ್ರಸ್ತಾಪವಿರುವುದು ಕಂಡುಬಂದಿದೆ.

ಹನ್ನೆರಡನೆಯ ಶತಮಾನದ ಕರ್ನಾಟಕದಲ್ಲಿ ಆಗಿ ಹೋದ ಪ್ರಖ್ಯಾತ ಮತ್ತು ಪ್ರಭಾವೀ ವ್ಯಕ್ತಿತ್ವದ ಜೈನಾಚಾರ್ಯರಲ್ಲಿ ಭಾನುಕೀರ್ತಿ ಸಿದ್ಧಾಂತಿದೇವರು ಮೂರ್ಧನ್ಯರಾಗಿದ್ದಾರೆ. ಅವರ ಮತ್ತು ಅವರ ಗುರುಶಿಷ್ಯ ಪರಂಪರೆಯನ್ನು ಪರಿಚಯಿಸುವ ಕೆಲವು ಶಾಸನಗಳು ಪ್ರಕಟವಾಗಿವೆ. ಅವುಗಳಲ್ಲಿ ತೀರ ಮುಖ್ಯವಾದ ಶಾಸನಗಳು :

EC.11 (೧೯೭೩) ೫೬೫ (ಎಕ V ಚಪ ೧೪೬) ೧೧೭೩ , ಪು. ೩೪೭

EC.VIII-ii ಸೊರಬ ೨೩೩, ೧೧೩೯ ಉದ್ದರೆ (ಉದ್ರಿ)

ಅದೇ : ಸಾಗರ ೧೫೯. ೧೧೫೯ ಹೆರಕೆರೆ

ಅದೇ : ಸೊರಬ ೩೪೫. ೧೧೭೧ ತೆವರತೆಪ್ಪ

ಅದೇ : ಸೊರಬ ೧೪೦.೧೧೯೮

ARSIE ೧೯೨೭-೨೮. APP. E. No. ೫೧.೧೨ ಶ.

EC. VII. ಶಿಕಾರಿಪುರ ೧೯೭.೧೧೮೦.ಪು. ೨೮೮-೯೦. ಸಾಲು ೬೩-೬೪

EC. VIII.ಸೊರಬ ೩೮೪.೧೧೭೭-೭೮

SII.XV.೫೬೮.೧೨.ಶ. ಕಲಕೇರಿ (ಧಾರವಾಡ ಜಿ. / ಮುಂಡರಗಿ ತಾ.) ಪು. ೩೭೮.

EC. VII. (೧೯೭೯) ೧೬೯ (IVನಾಮಂ ೯೪) ೧೧೪೨.ಕಸಲಗೆರೆ (ಮಂಡ್ಯ ಜಿ/ ನಾಮಂ. ತಾ.) ಪು. ೧೬೯.

EC. VII. ಶಿಕಾರಿಪುರ ೨೨೫.೧೨೦೪. ಪು. ೩೦೨. ಸಾಲು : ೫೫.

ಭಾನುಕೀರ್ತಿ ಸಿದ್ಧಾಂತದೇವರು ಮಹಾಮಂಡಳಾಚಾರ್ಯರು. ಇವರು ಶ್ರೀ ಮೂಲಸಂಘ ಕುಂದಕುಂದಾನ್ವಯ ಕಾಣೂರುಗಣ ತಿಂತ್ರಿಣೀಗಚ್ಛದವರು. ಇವರು ಸುಮಾರು ೮೫ ರಿಂದ ೯೦ ವರ್ಷದವರೆಗೆ ಜೀವಿಸಿದ್ದ ದೀರ್ಘಾಯು. ವರ್ಚಸ್ವೀ ತಪಸ್ವಿಯೂ ವಕ್ತೃವೂ ಆದ ಭಾನುಕೀರ್ತಿಸಿದ್ಧಾಂತಿಯ ಪ್ರಭಾವ ಚಾಳುಕ್ಯ ಸಾಮ್ರಾಜ್ಯದಲ್ಲಿ ಗಾಢವಾಗಿದ್ದಿತು. ಪೆರ್ಮಾಜಗದೇಕಮಲ್ಲ (೧೧೩೭-೪೯), ನೂರ್ಮಡಿ ತೈಲಪ (೧೧೪೯-೧೧೬೨) ಮತ್ತು ನಾಲ್ಮಡಿ ಜಗದೇಕಮಲ್ಲ (೧೧೬೩-೧೧೮೩) - ಈ ಮೂವರು ಚಾಳುಕ್ಯ ರಾಜರ ಕಾಲದಲ್ಲಿ ಧಾರ್ಮಿಕ ಕ್ಷೇತ್ರದ ನಾಯಕರೆನಿಸಿದ್ದವರು ಭಾನುಕೀರ್ತಿ ಸಿದ್ಧಾಂತಿಕ ದೇವರು. ರಾಮಣಂದಿ (೧೦೫೦) ವ್ರತಿಪತಿಯ ಶಿಷ್ಯ ಪದ್ಮನಂದಿ ಬ್ರತಿಪತಿಯ (೧೦೭೭:EC. VIII.ಸೊರಬ ೨೬೨) ಶಿಷ್ಯ ಮುನಿಚಂದ್ರ ಸಿದ್ಧಾಂತಿ ದೇವ ಯಮಿನರು (೧೧೦೦). ಈ ಸಿದ್ಧಾಂತ ಚಕ್ರೇಶ ಮುನಿಚಂದ್ರರ ಶಿಷ್ಯರೇ ಭಾನುಕೀರ್ತಿ ಸಿದ್ಧಾಂತ. ಇವರಿಗೆ ಅಪಾರವಾದ ಶಿಷ್ಯ ಸಂಪತ್ತು. ರಾಜ ರಾಣಿಯರೂ ಮಂತ್ರಿ ಮಹಾಮಂಡಲೇಶ್ವರೂ ಮಹಾ ದಂಡಾಧೀಶರೂ ಇವರ ಆಜ್ಞಾನುವರ್ತಿಗಳು. ಇವರ ಗುರುಗಳ ಗುರುಗಳಾದ ಪದ್ಮನಂದಿ ಸಿದ್ಧಾಂತಿದೇವರು 'ಆ ಬಸ್ಸಣಿಕಾ ತೀರ್ತ್ಥಾದಿ ಸಕಳ ಚೈತ್ಯಾಯಕ್ಕೆ ಆಚಾರ್ಯರುಂ ಮಂಡಳಾಚಾರ್ಯರುಮೆನಿಸಿ'ದ್ದರು (EC. VIII.ಸೊರಬ ೨೬೨.೧೦೭೫) ಅವರ ಪ್ರಶಿಷ್ಯರಾದ ಭಾನುಕೀರ್ತಿ ಸಿದ್ಧಾಂತಿಯೂ ಮಂಡಳಾಚಾರ್ಯರೆನಿಸಿ ಅನೇಕ ಜಿನಮಂದಿರಗಳ ರಚನೆಗೆ ಕಾರಣರಾದರು. ಕಮಲಭವ ಕವಿ (೧೨೩೫) ಶಾಂತೀಶ್ವರ ಪುರಾಣ ಕಾವ್ಯದಲ್ಲಿಯೂ, ಮಂಗರಾಜ ಕವಿಯು (೧೩೬೦) ಖಗೇಂದ್ರಮಣಿ ದರ್ಪಣದಲ್ಲಿಯೂ ಭಾನುಕೀರ್ತಿ ಮುನಿಯನ್ನು ನುತಿಸಿದ್ದಾರೆ.

ಕಲಚುರ‍್ಯ ಮಹಾರಾಜನಾದ ಆಹವಮಲ್ಲನ ಮಹಾಪ್ರಧಾನನೂ ಬಾಹತ್ತರ ನಿಯೋಗಾಧಿಪತಿಯೂ ಆದ ರೇಚಣ ದಂಡಾಧೀಶನಿಗೆ ಆಪ್ತಮಂತ್ರಿಯಾದ ಚಿಕ್ಕಮಾಗಡಿ (ಮಾಗುಣ್ಡ) ಬೊಪ್ಪನು ಕಟ್ಟಿಸಿದ 'ರತ್ನತ್ರಯ ಬಸದಿ'ಗೆ ಸ್ಥಾನಾಚಾರ್ಯರು ಈ ಭಾನುಕೀರ್ತಿ ಸಿದ್ಧಾಂತ ಮುನಿ. ಈ ವಿಚಾರವನ್ನು ತಿಳಿಸಿರುವ ಶಾಸನದಲ್ಲಿ ಇವರನ್ನು ಹೀಗೆ ಪರಿಚಯಿಸಿದೆ: 'ಆ ಶ್ರೀಮನ್ಮೂಲ ಸಂಘದ ಕ್ರಾನೂರ್ಗ್ಗಣದ ತಿಂತ್ರಿಕ ಗಚ್ಛದ ನುನ್ನವಂಶದ ಶ್ರೀ ಮದ್ಭಾನುಕೀರ್ತಿ ಸಿದ್ಧಾನ್ತದೇವರ್' (EC. VII. ಶಿಕಾರಿಪುರ ೧೯೭.೧೧೮೦. ಪು. ೨೯೦. ಚಿಕ್ಕಮಾಗಡಿ ಸಾಲು : ೧೦೪). ಮೇಲ್ಕಂಡ ಚಿಕ್ಕಮಾಗಡಿ (ಶಿವಮೊಗ್ಗ ಜಿ / ಶಿಕಾರಿಪುರ ತಾ) ಶಾಸನದಲ್ಲಿಯೇ ಇನ್ನೊಂದು ಕಡೆ ಸಂಸ್ಕೃತದಲ್ಲಿ ಹೀಗಿದೆ : (ಮುನಿಚಂದ್ರರ) ತಚ್ಛಿಷ್ಯಂ ಪ್ರಕಟೀಕೃತಕೀರ್ತ್ತಿಚ್ಛತ್ರಂ ಭಾನುಕೀರ್ತ್ತಿ ಕ್ರಾಣೂರ್ಗ್ಗಣ ಭೂಮಿಚ್ಛಂನ ತಿಂತ್ರಿಣೀಕ ಸುಗಚ್ಛಂ ಶ್ರೀ ನುನ್ನವಂಶನೆಸೆದಂ ಜಗದೊಳ್॥ (ಸಾಲು : ೬೧-೬೨)

ಈ 'ನುನ್ನ ವಂಶ'ವೆಂಬುದು ಜೈನ ಮುನಿ ಸಂಘಕ್ಕೆ ಸೇರಿದ ಒಂದು ಕುಲ. ಅನ್ವಯ, ಬಳಿ, ಕುಲ ಎಂಬುವು ಇದೇ ಅರ್ಥದ ಇತರ ಸಮಾನಾರ್ಥಕ ಸಂವಾದಿ ಶಬ್ದಗಳು. ಕುಂದಕುಂದಾನ್ವಯ, ಅರುಂಗಳಾನ್ವಯ, ಇಂಗುಳೇಶ್ವರ ಬಳಿ,

ಪನಸೋಗೆ ಬಳಿ ಇದ್ದ ಹಾಗೆ ನುನ್ನ ವಂಶವೂ ಏರ್ಪಟ್ಟಿದೆಯೆಂದು ಅರ್ಥೈಸಬಹುದು. ನುನ್ನ ವಂಶವು ಯಾಪನೀಯ ಸಂಘಕ್ಕೆ ಸೇರಿದ ಕಾಣೂರುಗಣ ಮತ್ತು ತ್ರಿಂತ್ರಿಣಿ ಗಚ್ಛದಲ್ಲಿ ಅಳವಟ್ಟಿತ್ತು. ಯಾಪನೀಯ ಶಾಖೆಯು ಚಾಳುಕ್ಯರ ಆಳ್ವಿಕೆಯಲ್ಲಿ ತನ್ನ ಪ್ರಸಿದ್ಧಿಯ ಪರಾಕಾಷ್ಠ ಸ್ಥಿತಿಯನ್ನು ಮುಟ್ಟಿತ್ತು. ಕೊಪಣವು ಈ ಯಾಪನೀಯರಿಗೆ ಬಹುದೊಡ್ಡ ಮುಖ್ಯ ಕೇಂದ್ರವಾಗಿತ್ತು ಮತ್ತು ಇಡೀ ಕಲ್ಯಾಣ ಚಾಳುಕ್ಯರ ಸಾಮ್ರಾಜ್ಯದ ಉದ್ದಗಲಗಳಲ್ಲಿ ಯಾಪನೀಯ ಸಂಘಕ್ಕೆ ಸೇರಿದ ನಾನಾ ಗಣ - ಗಚ್ಛಗಳು ಚಟುವಟಿಕೆಯಿಂದ ವಿಜ್ರಂಭಿಸಿದುವು. ಸೂರಸ್ತಗಣ, ಕಾಣೂರು ಗಣ, ಕಾರೇಯಗಣ, ಕುಮುದಿಗಣ, ಬಲಾತ್ಕಾರ (ವಳಗಾಱ) ಗಣ, ಸೇನಗಣ, ಮೈಳಾಪಾನ್ವಯ, ತಿಂತ್ರಿಣೀ ಗಚ್ಛ, ಪೊಗರಿಗಚ್ಛ - ಮೊದಲಾದುವು ಈ ಕಾಲದ ಶಾಸನಗಳಲ್ಲಿ ವಿಪುಲವಾಗಿ ಕಂಡುಬರುತ್ತವೆ. ನುನ್ನವಂಶ ಮಾತ್ರ, ಈ ಯಾಪನೀಯದ ತೆಕ್ಕೆಯಲ್ಲಿ ಒಂದು ಸಣ್ಣ ಎಸಳಾಗಿ ಕಾಣುತ್ತದೆ.

ನುನ್ನ ವಂಶದ ನಿಷ್ಪತ್ತಿಯ ಜಿಜ್ಞಾಸೆ ತೊಡಕಿನದಾಗಿದೆ. ನನಗೆ ತಿಳಿದಂತೆ 'ನುನ್ನ' ಎಂಬ ಶಬ್ದವು 'ನುತ್ತ' ಎಂಬ ಶಬ್ದಕ್ಕೆ ಸೇರುವಂತಿದೆ. ನಾಗವರ್ಮ ವಿರಚಿತ ಅಭಿಧಾನ ರತ್ನಮಾಲಾ ಕರ್ಣಾಟಕ ಟೀಕೆಯಲ್ಲಿ - ''ನುನ್ನಂ ಕ್ಷಿಪ್ತಂ - ಈ ಎರಡು ನೂಕಲ್ಪಟ್ಟುದು'' ಎಂದಿದೆ (ಪು. ೧೨೬:೭೬೭-೮೨) ನುತ್ತ, ನುನ್ನ ಎಂದರೆ ಹೊರದೂಡಿದುದು ಎಂಬರ್ಥ. ನುನ್ನ ವಂಶವು ಒಂದು ಹೊರದೂಡಲ್ಪಟ್ಟ ವಂಶ (ಬಳಿ, ಅನ್ವಯ) ವೆಂದು ಪರಿಗಣಿಸುವುದು ಹೇಗೆ, ಅದಕ್ಕೆ ಬೇರೆ ಪೂರಕ ಆಧಾರಗಳು ಏನು - ಎಂಬ ಪ್ರಶ್ನೆ ಎದುರಾಗುತ್ತದೆ. ಹೀಗಾಗಿ 'ನುನ್ನ' ಎಂಬ ಶಬ್ದದ ನಿಷ್ಪತ್ತಿ ಸರಿಯಾಗಿ ತಿಳಿಯದು: ಈ ವಿಚಾರದಲ್ಲಿ ಚಿಂತನ ಮಂಥನಕ್ಕೆ ಇನ್ನೂ ಅವಕಾಶವಿದೆ.

●

ಕೆಳದಿ ಅರಸರು ಮತ್ತು ಉಡುಪಿ ಶ್ರೀಕೃಷ್ಣ

ಲೇ : ಕೆಳದಿ ಗುಂಡಾಜೋಯಿಸ್

ದಕ್ಷಿಣ ಭಾರತದ ಮಧ್ಯಕಾಲೀನ ಇತಿಹಾಸದ ಕೊನೆಯ ಭಾಗ ಹಾಗೂ ಆಧುನಿಕ ಕಾಲದ ಪೂರ್ವ ಭಾಗದ ಚರಿತ್ರೆಯಲ್ಲಿನ ಹಲವಾರು ಅರಸು ಮನೆತನಗಳಲ್ಲಿ ಕ್ರಿ.ಶ. ೧೪೯೯ ರಿಂದ ೧೭೬೩ರವರೆಗೆ ಆಳಿದ ಕೆಳದಿ ಅರಸು ಮನೆತನವು ರಾಜಕೀಯವಾಗಿಯೂ ಮತ್ತು ಸಾಂಸ್ಕೃತಿಕವಾಗಿಯೂ ಪ್ರಮುಖವಾದುದು. ೧೫೬೫ರಲ್ಲಿ ವಿಜಯನಗರದ ಪತನಾನಂತರ ಕೆಳದಿ ಅರಸರು ಸ್ವತಂತ್ರವಾದ ಅಸ್ತಿತ್ವವನ್ನು ಹೊಂದಿದರು. ಆದರೆ ಇವರು ಸ್ವತಂತ್ರವಾಗಿ ಆಳಿದರೂ ವಿಜಯನಗರದ ಧಾರ್ಮಿಕ ಧೋರಣೆ, ಸಂಸ್ಕೃತಿ, ಘನತೆ ಗಾಂಭೀರ್ಯಗಳನ್ನು ಪರಿಣಾಮಕಾರಿಯಾಗಿ ಉಳಿಸಿಕೊಂಡು ಬರುವಲ್ಲಿ ವಿಪುಲ ಪ್ರಯತ್ನ ನಡೆಸಿದರು. ಸ್ವಾತಂತ್ರ್ಯ ಪೂರ್ವದ ಮೈಸೂರು ಸಂಸ್ಥಾನದಷ್ಟೇ ವಿಶಾಲ ಪ್ರದೇಶವನ್ನು ಹೊಂದಿದ್ದ ಈ ಸಂಸ್ಥಾನವು ತನ್ನ ಕಾಲದಲ್ಲಿ ಅತ್ಯಂತ ವೈಭವದಿಂದಲೂ ಹಾಗೂ ನೆಮ್ಮದಿಯಿಂದಲೂ ರಾಜ್ಯಭಾರವನ್ನು ನಡೆಸಿತು. ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ದಕ್ಷಿಣ ಕನ್ನಡ, ಉತ್ತರ ಕನ್ನಡ, ಕೊಡಗು, ಚಿತ್ರದುರ್ಗ ಹಾಗೂ ತುಮಕೂರು ಜಿಲ್ಲೆಯ ಹಲವು ಭಾಗಗಳು, ಕಾಸರಗೋಡು (ಕಣ್ಣಾನೂರು ಕೇರಳದ ತಳಿಪರಾಂಬಾದವರೆಗೂ) ಜಿಲ್ಲೆಗಳನ್ನು ಆವರಿಸಿಕೊಂಡು ಪೂರ್ವಕ್ಕೆ ಹರಪನಹಳ್ಳಿ, ದಕ್ಷಿಣಕ್ಕೆ ಕೇರಳ ಹಾಗೂ ಮೈಸೂರು, ಪಶ್ಚಿಮಕ್ಕೆ ಅರಬ್ಬೀ ಸಮುದ್ರ, ಉತ್ತರಕ್ಕೆ ಬಿಜಾಪುರ ಈ ರೀತಿ ಮೇರೆಯಾಗಿದ್ದುವು.

ಈ ಅರಸರ ಮೂಲ ಸಂಸ್ಥಾನಕ್ಕೆ ಕೆಳದಿ ಸಂಸ್ಥಾನವೆಂದೇ ಹೆಸರು [1]. ಕಾಲಕ್ರಮೇಣ ಇಕ್ಕೇರಿ ಮತ್ತು ಬಿದನೂರು (ಈಗಿನ ಹಳೆನಗರ) ರಾಜಧಾನಿಗಳಾಗಿ

---

1. 'ಕೆಳದಿ ಮೂಲ ಸಂಸ್ಥಾನದ ಮನ್ನೆಯ ಚೌಡಪ್ಪನಾಯಕ', ಕೆ.ನೃ.ವಿ. ಹಾಗೂ ಶಾಸನಗಳನ್ನು ನೋಡಿರಿ.

ಮಾರ್ಪಟ್ಟಿತು. ತೀರ್ಥಹಳ್ಳಿಯಲ್ಲಿರುವ ಭುವನಗಿರಿದುರ್ಗವು (ಈಗಿನ ಕೌಲೇದುರ್ಗ) ಈ ಅರಸರ ಪ್ರಮುಖ ರಕ್ಷಣಾ ಕೇಂದ್ರವಾಯಿತು. ಹಲವು ಕಾಲದವರೆಗೆ ಇಲ್ಲಿಯೂ ರಾಜಧಾನಿಯ ಚಟುವಟಿಕೆಗಳು ನಡೆದವು.

ವಿಜಯನಗರದ ಪತನಾನಂತರ ಧಾರ್ಮಿಕ ಹಾಗೂ ಸಾಂಸ್ಕೃತಿಕ ಪರಂಪರೆಯಲ್ಲಿ ಆ ಸಾಮ್ರಾಜ್ಯದ ಧ್ಯೇಯ ಧೋರಣೆಗಳನ್ನು ಮುಂದುವರಿಸಿಕೊಂಡು ಬಂದರು. ಈ ರಾಜಮನೆತನಕ್ಕೆ ಅಧೀನರಾಗಿದ್ದ ಮಾಂಡಲೀಕರೂ ಕೂಡ ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಕಲೆ, ಸಾಹಿತ್ಯ, ಧರ್ಮ ಹಾಗೂ ವ್ಯಾಪಾರ. ವ್ಯವಸಾಯಗಳಿಗೆ ವಿಶೇಷವಾದ ಪ್ರೋತ್ಸಾಹ ನೀಡಿ ತಮ್ಮ ತಮ್ಮ ಪ್ರದೇಶಗಳನ್ನು ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ಹಾಗೂ ಆರ್ಥಿಕವಾಗಿ ಸಮೃದ್ಧಿಗೊಳಿಸಿದರು. ಅಷ್ಟೇ ಅಲ್ಲದೆ ತಮ್ಮ ಹಾಗೂ ಕುಟುಂಬದಲ್ಲಿ ಅನುಸರಿಸುತ್ತಿದ್ದ ವೈಯಕ್ತಿಕ ಧರ್ಮ ಯಾವುದೇ ಆಗಿರಲಿ ಇತರ ಎಲ್ಲಾ ಧಾರ್ಮಿಕ ಪಂಥಗಳನ್ನು ಸಹಾನುಭೂತಿಯಿಂದಲೂ ವಿಶ್ವಾಸದಿಂದಲೂ ಪರಿಪೋಷಿಸಿದರು. ಸರ್ವಧರ್ಮ ಸಮನ್ವಯತೆಯ ಮಾರ್ಗದಲ್ಲಿ ಕೆಳದಿ ಅರಸರು ಕೈಗೊಂಡ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಧೋರಣೆಯು ಹಿರಿದಾದುದು ಹಾಗೂ ಆದರ್ಶಪ್ರಾಯವಾದುದು.

ನೆಮ್ಮದಿಯ ರಾಜ್ಯ ಕೆಳದಿ

ಕೆಳದಿ ಸಂಸ್ಥಾನವು ಎಲ್ಲ ರೀತಿಯಿಂದಲೂ ನೆಮ್ಮದಿಯಿಂದ ಬಾಳಿದ ರಾಜ್ಯವೆಂಬುದನ್ನು ಯಾವ ಇತಿಹಾಸಕಾರನೂ ಅಲ್ಲಗಳೆಯಲಾರನು. ಈ ಅರಸರು ಪ್ರಜೆಗಳ ಸುಖವೇ ತಮ್ಮ ಸುಖವೆಂದು ಅರಿತಿದ್ದರು. ೧೬೨೩ ರಿಂದ ಆರಂಭಿಸಿ ರಾಣಿ ವೀರಮ್ಮಾಜಿಯ ಕಾಲದವರೆಗೂ ಈ ರಾಜ್ಯದಲ್ಲಿ ಸಂಚರಿಸಿದ ಇಟಲಿಯ ಪಿಯತ್ರೋ ಡೆಲ್ಲಾ ವಾಲ್ಲೆ, ಇಂಗ್ಲೆಂಡಿನ ಪೀಟರ್ ಮಂಡಿ, ಅಲೆಗ್ಜಾಂಡರ್ ಹ್ಯಾಮಿಲ್‌ಟನ್, ಜಾನ್ ಫ್ರಾಯರ್, ಅಬೇಕರಿ, ಜಾಕೋಬಸ್ ಕ್ಯಾಂಟರ್ ವಿಚರ್ ಮುಂತಾದ ವಿದೇಶಿಯ ಪ್ರವಾಸಿಗಳು ಈ ರಾಜ್ಯದ ನೆಮ್ಮದಿಯ ಸ್ಥಿತಿಯನ್ನು ತಮ್ಮ ಪ್ರವಾಸೀ ಕಥನಗಳಲ್ಲಿ ವರ್ಣಿಸಿ ವಿಶ್ಲೇಷಿಸಿದ್ದಾರೆ. ಇವುಗಳ ಸಂಶೋಧನೆಗಳಿಂದ ಅನೇಕ ಕುತೂಹಲಕರ ಸಂಗತಿಗಳನ್ನು ಕಾಣಬಹುದಾಗಿದೆ. ಮಾದರಿಗಾಗಿ ಹಲವನ್ನು ಇಲ್ಲಿ ನಿರೂಪಿಸಲಾಗಿದೆ[2].

ಕ್ರಿ.ಶ. ೧೬೨೩ ರಲ್ಲಿ ಇಕ್ಕೇರಿಗೆ ಭೇಟಿಯಿತ್ತಿದ್ದ ಇಟಲಿ ಪ್ರವಾಸಿ ಪಿಯತ್ರೋ ಡೆಲ್ಲಾವಾಲ್ಲೆಯು - ರಾಜಮಾರ್ಗವು ಬಹು ಸುರಕ್ಷಿತವಾಗಿದ್ದುವು ; ಹೊನ್ನಾವರ ಮಾರ್ಗಗಳು ಸುಂದರ ಹಾಗೂ ವಿಶಾಲವಾಗಿವೆ; ಇಕ್ಕೇರಿಗೆ ಹೋಗುವ ಮಾರ್ಗವು ವಿಶಾಲ ವೃಕ್ಷಗಳಿಂದಲೂ, ಧೂಪದ ಮರಗಳ ತಂಪು ನೆರಳುಗಳಿಂದಲೂ, ತಟಾಕಗಳಿಂದಲೂ ಮನ ಮೋಹಕವಾಗಿತ್ತೆಂದು ವರ್ಣಿಸಿದ್ದಾನೆ[3]. ಜಾಕೋ ಬಸ್ ಕ್ಯಾಂಟರ್ ವಿಚರನು ಕೆಳದಿ ರಾಜ್ಯವು ದಕ್ಷಿಣ ಭಾರತದ ಕಣಜವೆಂದು ಹೆಸರಿಸಿದ್ದಾನೆ. ಕ್ರಿ.ಶ. ೧೭೩೯-೫೪ರಲ್ಲಿ ಈತನು ಇಮ್ಮಡಿ ಬಸಪ್ಪನಾಯಕನ ಕಾಲದಲ್ಲಿರುವ ಸುರಕ್ಷಿತ ಶಾಂತಿಯನ್ನು ಉಲ್ಲೇಖಿಸುತ್ತಾ ಬಿದನೂರಿನಿಂದ ಕಡಲ ತೀರದ ಬಂದರುಗಳಿಗಿರುವ ರಸ್ತೆಗಳು ಸುರಕ್ಷಿತವಾಗಿವೆ; ತುಂಬಿದ ಹಣದ ಚೀಲಗಳೊಂದಿಗೆ ಮಾರ್ಗಕ್ರಮಣ ಮಾಡುತ್ತಿರುವ ದಾರಿ ಹೋಕರಿಗೆ ದರೋಡೆ ಹಾಗೂ ಹಿಂಸೆಗಳ ಭಯವು ಎಳ್ಳಷ್ಟೂ ಕಂಡು ಬರಲಿಲ್ಲವೆಂದು ಉದ್ಗರಿಸಿದ್ದಾನೆ. ಈಗಿನ ಸನ್ನಿವೇಶಗಳಿಗೆ ಇದನ್ನು ಹೋಲಿಸಿದಲ್ಲಿ ಕೇವಲ ಕಟ್ಟುಕಥೆಗಳೋಪಾದಿಯಲ್ಲಿ ಕಂಡು ಬಂದರೆ ಅಚ್ಚರಿಯೆನಿಸಲಾರದು. ಕೆಳದಿ ರಾಜ್ಯದಲ್ಲಿ ಮಕ್ಕಳಿಗೆ ಉಚಿತವಾಗಿ ಹಾಲು - ಬೆಣ್ಣೆ ಸರಬರಾಜಾಗುತ್ತಿತ್ತೆಂದು ಮತ್ತೊಬ್ಬ ವಿದೇಶಿ ಪ್ರವಾಸಿಯು ಹೇಳಿದ್ದಾನೆ. ಸ್ಟೋಕ್ಸ್ ಎಂಬಾತನು ಕೆಳದಿ ರಾಜಧಾನಿ ಬಿದನೂರನ್ನು ಸಂದರ್ಶಿಸಿ, ಜನಸಂಖ್ಯೆಯಲ್ಲಿ ಮತ್ತು ಸಂಪತ್ತಿನಲ್ಲಿ ಭಾರತದಲ್ಲಿಯೇ ಅತ್ಯುನ್ನತ ದರ್ಜೆಯಲ್ಲಿದ್ದ ಈ ಪ್ರದೇಶವು ನಿರ್ಜನವಾಗುತ್ತಿರುವುದು ನಾಡಿನ ದೌರ್ಭಾಗ್ಯವೆಂಬುದಾಗಿ ಕಣ್ಣೀರ್ಗರೆದು ಉಲ್ಲೇಖಿಸಿದ್ದಾನೆ.

---

2. ಅನುಬಂಧ ನೋಡಿರಿ.

3. ಶ್ರೀ ಹೆಚ್.ಎಲ್. ನಾಗೇಗೌಡರವರ ಪ್ರವಾಸಿ ಕಂಡ ಇಂಡಿಯಾ ಸಂ. ನೋಡಿ.

ಕೆಳದಿಯ ಧಾರ್ಮಿಕ ನೀತಿ

ಕೆಳದಿಯ ನಾಯಕರು ವೀರಶೈವ ಮತಾವಲಂಬಿಗಳು. ಈ ಅರಸುಮನೆತನದ ಕುಲದೇವರುಗಳು ಕೆಳದಿ ಶ್ರೀ ರಾಮೇಶ್ವರ, ಇಕ್ಕೇರಿಯ ಶ್ರೀ ಅಘೋರೇಶ್ವರ ಮತ್ತು ಕೊಲ್ಲೂರಿನ ಶ್ರೀ ಮೂಕಾಂಬಿಕಾ ದೇವಿ. ಇವರು ವೀರಶೈವರಾಗಿದ್ದರೂ ಇತರ ಧರ್ಮ ಹಾಗೂ ಮತಗಳಲ್ಲಿ ಯಾವ ವೈರತ್ವವನ್ನೂ ಹೊಂದಿರಲಿಲ್ಲ. ಇವರ ಕಾಲದಲ್ಲಿ ಹಿಂದೂ, ಜೈನ, ಶೈವ, ವೈಷ್ಣವ, ವೀರಶೈವ, ಇಸ್ಲಾಂ ಮತ್ತು ಕೈಸ್ತ ಧರ್ಮಗಳು ಸಮಾನ ಪೋಷಣೆಯಲ್ಲಿ ಮುಂದುವರಿದು ಬಾಳಿಕೊಂಡು ಬಂದುವು. ಸರ್ವಧರ್ಮವನ್ನು ಸಮಾನ ಆದರಣೆಗಳಿಂದ ಈ ಅರಸರು ರಕ್ಷಿಸಿಕೊಂಡು ಬಂದಿರುವುದಕ್ಕೆ ಅವಶೇಷಗಳೇ ಸಾಕ್ಷಿಯಾಗಿವೆ. ಸಾವಿರಾರು ವರ್ಷಗಳಿಂದ ಅನೂಚಾನವಾಗಿ ಬೆಳೆದು ಬಂದ ಪ್ರಾಚೀನತಮ ವೈದಿಕ ಧಾರ್ಮಿಕ ಕಾರ್ಯಗಳಾದ ಯಜ್ಞಯಾಗಾದಿ ಕರ್ಮಗಳನ್ನು ನೆರವೇರಿಸಿದರು. ದೇಶ ಕಲ್ಯಾಣಾರ್ಥವಾಗಿ ಶಿವಪ್ಪನಾಯಕನು ವಾಜಪೇಯ ಯಾಗಗಳನ್ನು ನೆರವೇರಿಸಿದನು. ಅದ್ವೈತ, ದ್ವೈತ, ವಿಶಿಷ್ಟಾದ್ವೈತ, ಶಕ್ತಿವಿಶಿಷ್ಟಾದ್ವೈತ ಪಂಥಗಳ ಮಠಗಳು ಇವರ ಕಾಲದಲ್ಲಿ ಸಮಾನ ಧರ್ಮ ಪೋಷಣೆಯಲ್ಲಿ ಬೆಳೆದುಬಂದು, ವಿಪುಲ ಉಂಬಳಿ ಉತ್ತಾರಗಳು ಲಭಿಸಿದುವು. ಇಸ್ಲಾಂ ಧರ್ಮ ಪೋಷಣೆಯಲ್ಲಿ ಭುವನಗಿರಿಯಲ್ಲಿ ಮಸೀದಿಯೊಂದನ್ನೂ ಈ ಅರಸರು ನಿರ್ಮಿಸಿ ರಕ್ಷಿಸಿದರು. ಹಂಪನಕಟ್ಟೆಯ ರೋಮನ ಕೆಥೋಲಿಕ್ ಮಿಲಾಗ್ರಿ ಇಗರ್ಜಿಯು ಮಹಾರಾಣಿ ಚೆನ್ನಮ್ಮಾಜಿಯ ಕಾಲದಲ್ಲಿ ನಿರ್ಮಾಣಗೊಂಡಿತು. ಅನೇಕ ಅಗ್ರಹಾರಗಳೂ, ಮಠಗಳೂ ಇವರ ಕಾಲದಲ್ಲಿ ಪ್ರವೃದ್ಧಿಗೊಂಡುವು. ಮನಸ್ಸು ಮಾಡಿದ್ದಲ್ಲಿ ತಮ್ಮ ವೈಯಕ್ತಿಕ ಧರ್ಮವನ್ನು ರಾಜ್ಯದಲ್ಲೆಲ್ಲಾ ಜಾರಿಯಲ್ಲಿ ತರಲು ಸಾಮರ್ಥ್ಯವಿದ್ದರೂ ಅದನ್ನು ಕಾರ್ಯಗತಗೊಳಿಸದೆ ಸರ್ವಧರ್ಮಸಮನ್ವತೆಯ ಮಾರ್ಗದಲ್ಲಿ ಕ್ರಮಿಸಿರುವ ಇವರ ಆದರ್ಶವು ಮುಂದಿನ ಪೀಳಿಗೆಗೆ ಅನುಕರಣೀಯವಾಗಿದೆ.

ದೇವಾಲಯಗಳು ಮತ್ತು ಧಾರ್ಮಿಕ ದತ್ತಿಗಳು

ಕ್ರಿ.ಶ. ೪೨೦ರಿಂದ ವಿಜಯನಗರದವರೆಗೂ ನಿರ್ಮಾಣಗೊಂಡಿದ್ದ ಪ್ರಸಿದ್ಧ ದೇವಾಲಯಗಳೂ, ಮಠಗಳೂ ಇವರ ಅಧೀನದಲ್ಲಿದ್ದು ರಕ್ಷಣೆಗೆ ಒಳಪಟ್ಟುವು. ಬನವಾಸಿ, ಬಳ್ಳಿಗಾವೆ, ಬೇಲೂರು, ಹಳೆಯಬೀಡು, ಶ್ರವಣಬೆಳುಗೊಳ, ಶೃಂಗೇರಿ, ಉಡುಪಿ, ಕೊಲ್ಲೂರು, ಕಾರ್ಕಳ, ಮೂಡಬಿದರೆ ಮುಂತಾದ ಪ್ರಸಿದ್ಧ ದೇವಾಲಯಗಳು ಇವರ ಆಡಳಿತದಲ್ಲಿ ಜೀರ್ಣೋದ್ಧಾರ ಹೊಂದಿದುವು. ಸೊರಬದ ೪೭೫ನೇ ಶಾಸನವೊಂದು ೧೫೭೦-೧೫೮೫ರಲ್ಲಿ ಆಳಿದ ರಾಮರಾಜ ನಾಯಕನು ಖಿಲವಾಗಿದ್ದ ಬನವಾಸಿ ದೇವಾಲಯವನ್ನು ಜೀರ್ಣೋದ್ಧರಿಸಿದುದನ್ನು ಹೇಳಿದೆ. ಈ ದೇವಾಲಯಗಳ ಪುರೋಭಿವೃದ್ಧಿ ಹಾಗೂ ವಾರ್ಷಿಕ ವೆಚ್ಚಕ್ಕಾಗಿ ಈ ಅರಸರು ಗ್ರಾಮ ಭೂಮಿಗಳನ್ನು ಉಂಬಳಿಯಾಗಿತ್ತರು. ತೀರ್ಥಹಳ್ಳಿಯ ೧೬೬ನೆಯ ಶಾಸನವೊಂದು ಕೆಳದಿ ವೆಂಕಟಪ್ಪ ನಾಯಕನು ಮೂಡಬಿದರೆಯಲ್ಲಿರುವ ತ್ರಿಭುವನ ತಿಲಕ ಚೂಡಾಮಣಿ ಬಸದಿಯನ್ನು ನಿರ್ಮಿಸಿ ಕೊಟ್ಟಿರುವುದನ್ನು ಉಲ್ಲೇಖಿಸುತ್ತದೆ. (ಚಂದ್ರಮ) - ಗೊಮ್ಮಟೇಶ್ವರ ಚರಿತ್ರೆಯಲ್ಲಿ ಉಲ್ಲೇಖನಗೊಂಡಿರುವ ಚಾರಿತ್ರಿಕ ಸಂಗತಿಯೊಂದು ೧೬೪೬ರಲ್ಲಿ ವೀರಭದ್ರನಾಯಕನು ಕಾರ್ಕಳದಲ್ಲಿ ಜರುಗಿದ ಗೊಮ್ಮಟಾಭಿಷೇಕಕ್ಕೆ ವಿಶೇಷ ಪ್ರೋತ್ಸಾಹ ನೀಡಿರುವುದನ್ನು ತಿಳಿಸುತ್ತದೆ.

ಹಿಂದಿನ ದೇವಾಲಯಗಳ ಜೀರ್ಣೋದ್ಧಾರವಲ್ಲದೆ ಕೆಳದಿ ಅರಸರು ಸುಮಾರು ಇನ್ನೂರಕ್ಕೂ ಹೆಚ್ಚಾಗಿ ದೇವಾಲಯಗಳು, ಮಠಗಳು, ಬಸದಿಗಳು, ಮಸೀದಿ ಹಾಗೂ ಚರ್ಚುಗಳನ್ನು ತಮ್ಮ ಕಾಲದಲ್ಲಿ ನಿರ್ಮಿಸಿ, ಅವುಗಳ ಆಡಳಿತ ವೆಚ್ಚಗಳಿಗೆ ಉಂಬಳಿ ಉತ್ತಾರಗಳನ್ನು ನೀಡಿದ್ದಾರೆ. ಅವುಗಳೆಲ್ಲವನ್ನೂ ವಿವರಿಸಲು ಲೇಖನ ವಿಸ್ತಾರಭಯದಿಂದ ನಿಲ್ಲಿಸಲಾಗಿದೆ. ಕೆಳದಿ, ಇಕ್ಕೇರಿ, ಬಿದನೂರು, ಕೊಲ್ಲೂರು ಮುಂತಾದ ದೇವಾಲಯಗಳನ್ನು ಈಗಲೂ ಕಾಣಬಹುದಾಗಿದೆ.

ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಾಲಯವನ್ನು ಜೀರ್ಣೋದ್ಧರಿಸಿ ಈ ಅರಸರು ಹೇರಳ ರತ್ನಾಭರಣಗಳನ್ನು ಸಲ್ಲಿಸಿದರು. ಶ್ರೀದೇವಿಯ ಕಂಠದಲ್ಲಿರುವ ಪಚ್ಚೆಯು ಕೆಳದಿ ಚೆನ್ನಮ್ಮಾಜಿಯು ನೀಡಿದುದಾಗಿ ಪ್ರಚಲಿತವಿದೆ. ದಕ್ಷಿಣ ಕನ್ನಡದ

ಕೋಟೇಶ್ವರ, ಸುಬ್ರಮಣ್ಯ, ಪೊಳಲಿ, ಮಂಜೇಶ್ವರ, ಬಸರೂರುಗಳಲ್ಲಿರುವ ದೇವಸ್ಥಾನಗಳಿಗೆ ಈ ನಾಯಕರು ದೊಡ್ಡ ರಥಗಳನ್ನು ನಿರ್ಮಿಸಿಕೊಟ್ಟು ರಥೋತ್ಸವದ ಖರ್ಚಿಗಾಗಿ ಉಂಬಳಿ - ಉತ್ತಾರಗಳನ್ನು ನೀಡಿದರು. ಶೃಂಗೇರಿ, ಉಡುಪಿ ಹಾಗೂ ಇತರೆ ಮಠಗಳಿಗೆ ಉಂಬಳಿಗಳನ್ನು ಇತ್ತು ರಕ್ಷಿಸಿದರು. ತಮ್ಮ ರಾಜ್ಯದ ಎಲ್ಲಾ ಭಾಗಗಳಲ್ಲೂ ಇರುವ ಮಹಾ ದೇವಸ್ಥಾನಗಳಲ್ಲಿ ಶ್ರಾವಣ ಮಾಸದಲ್ಲಿ ವಿಶೇಷ ಪೂಜೆಗಳೂ, ಕಾರ್ತೀಕ ಮಾಸದಲ್ಲಿ ಲಕ್ಷ ದೀಪೋತ್ಸವಗಳೂ ನಡೆಯುವಂತೆ ಏರ್ಪಡಿಸಿದರು. ಮಂಜೇಶ್ವರ, ಅನಂತೇಶ್ವರ, ಮಂಗಳೂರು ಮಹಾಮಾಯಿ ದೇವಸ್ಥಾನಗಳು ಈ ಅರಸರ ಕಾಲದಲ್ಲಿ ಅಭಿವೃದ್ಧಿಗೊಂಡುವು.

ಅಗ್ರಹಾರಗಳು - ಛತ್ರಗಳು

ರಾಜ್ಯದಲ್ಲಿ ಅನೇಕ ಅಗ್ರಹಾರಗಳೂ ಈ ಅರಸರ ಕಾಲದಲ್ಲಿ ನಿರ್ಮಿಸಲ್ಪಟ್ಟು ಪರಿಪೋಷಿತಗೊಂಡುವು. ಕುಶಾವತೀ ತೀರದ ಸದಾಶಿವಪುರ ಅಗ್ರಹಾರ, ವರದಾ ನದೀ ತೀರದ ವಿಶ್ವನಾಥಪುರ ಅಗ್ರಹಾರ, ತುಂಗಭದ್ರಾ ತೀರದ ವೀರಾಂಬಾಪುರ, ಶರಾವತೀ ತೀರದ ಅಭಿನವ ವೀರಾಂಬಾಪುರ ಅಗ್ರಹಾರಗಳು, ಶಿವರಾಜಪುರ - ವೆಂಕಟಾಪುರ ಅಗ್ರಹಾರಗಳು, ಚೆನ್ನಮ್ಮಾಜಿಯು ಸ್ಥಾಪಿಸಿದ ಬಂಟವಾಳದ ಸಮೀಪವಿರುವ ಶಂಭೂರು, ನಾಟಿ, ಸರ್ಪಾಡಿ, ನಾವೂರು ಅಗ್ರಹಾರಗಳು ಪ್ರಮುಖವಾಗಿವೆ. ಜನರೆಲ್ಲರೂ ಸಾಧಾರಣವಾಗಿ ಇವುಗಳೆಲ್ಲವೂ ಪೂರ್ಣಯ್ಯನ ಅಗ್ರಹಾರಗಳು, ಛತ್ರಕನ ಅಗ್ರಹಾರಗಳು ಎಂದು ಹೇಳುತ್ತಿರುವುದು ಸತ್ಯಕ್ಕೆ ದೂರವಾದ ಮಾತಾಗಿದ್ದು , ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನೇಕರಿಗೆ ಕೆಳದಿ ಅರಸರ ಇತಿಹಾಸವೇ ಮರೆತು ಹೋದಂತಾಗಿರುವುದು ದುರ್ದೈವವೆಂಬುದಾಗಿ ಗಣಪತಿರಾವ್ ಐಗಳ್‌ರವರು ತಮ್ಮ ವಿಸ್ತಾರವಾದ ಲೇಖನದಲ್ಲಿ ಕಂಬನಿದುಂಬಿದ್ದಾರೆ.

ಉಡುಪಿ ಶ್ರೀಕೃಷ್ಣ ಮತ್ತು ಮಠಗಳು

ಮಧ್ವಾಚಾರ್ಯರ ಮೂಲ ಕೇಂದ್ರ ಬಿಂದುವಾದ ಉಡುಪಿಯು ದಕ್ಷಿಣ ಭಾರತದಲ್ಲಿಯೇ ಪ್ರಮುಖ ಧಾರ್ಮಿಕ ಕೇಂದ್ರ, ಉಡುಪಿಯ ಶ್ರೀ ಕೃಷ್ಣ ಹಾಗೂ ಮಠಗಳಿಗೂ ಕೆಳದಿ ಅರಸರು ವಿಪುಲ ರಕ್ಷಣೆಯೊದಗಿಸಿ ದ್ವೈತ ಧರ್ಮವನ್ನು ಪರಿಪಾಲಿಸಿಕೊಂಡು ಬಂದರು. ದಕ್ಷಿಣ ಕನ್ನಡದ ಗಣಪತಿ ಐಗಳ್‌ರವರೇ ನಿರೂಪಿಸಿದಂತೆ ಈ ಅರಸರು ಅಷ್ಟ ಮಠಗಳಿಗೂ ಉಂಬಳಿ ಉತ್ತಾರಗಳನ್ನು ನೀಡಿದರು. ಶಿವಮೊಗ್ಗ ಜಿಲ್ಲೆಯ ಸೊರಬದ ೫೫ನೆಯ ಶಾಸನವು ಉಡುಪಿಯ ದ್ವೈತ ಮಠಕ್ಕೆ ಕಂತನಹಳ್ಳಿ ಗ್ರಾಮವನ್ನು ಈ ನಾಯಕರು ನೀಡಿರುವುದನ್ನು ಉಲ್ಲೇಖಿಸಿದೆ. ಇದು ಉಡುಪಿ ಶ್ರೀ ಕೃಷ್ಣದೇವರಿಗೆ ಹಾಗೂ ಮಠದ ವಾದಿರಾಜ ತೀರ್ಥರಿಗೆ ಸಲ್ಲಿಸಿದ ಕಾಣಿಕೆಯನ್ನು ವಿವರಿಸಿದೆ. ಉಡುಪಿ ತಾಲ್ಲೂಕಿನ ಕೃಷ್ಣ ಮಠದ ಉತ್ತರ ದಿಕ್ಕಿನ ಗೋಡೆಗೆ ತಾಗಿಸಿ ಕಟ್ಟಿರುವ ಶಿಲಾ ಫಲಕದಲ್ಲಿರುವ ೨೯೭ನೆಯ ಶಾಸನವು ಉಡುಪಿಯ ಪರ್ಯಾಯೋತ್ಸವದಲ್ಲಿ ದೇವಾಲಯ ಹಾಗೂ ಮಠಕ್ಕೆ ಬಾರಕೂರು ಸಮೀಪವಿರುವ ಹೂವಿನಕೆರೆ ಗ್ರಾಮವನ್ನು ಕೆಳದಿ ಅರಸರು ನೀಡಿರುವುದನ್ನು ದಕ್ಷಿಣ ಭಾರತ ಶಾಸನ ಸಂ. VIII ರಲ್ಲಿ ಪ್ರಸ್ತಾಪಿಸಲಾಗಿದೆ. ಈ ಶಾಸನದಲ್ಲಿ ಕ್ರಿ.ಶ. ೧೫೯೨ ರಿಂದ ೧೬೨೯ರವರೆಗೆ ರಾಜ್ಯವಾಳಿದ ಹಿರಿಯ ವೆಂಕಟಪ್ಪ ನಾಯಕನ ಕಾಲದಲ್ಲಿ ಉಡುಪಿಯ ಮಠದ ವೇದವೇದ್ಯ ತೀರ್ಥ ಶ್ರೀಪಾದಂಗಳವರು ತಮ್ಮ ಪರ್ಯಾಯ ಪೀಠದಲ್ಲಿದ್ದಾಗ ಶ್ರೀ ಕೃಷ್ಣ ದೇವಾಲಯದ ಗರ್ಭಾಗಾರದ ಮುಂದಿನ ಭಾಗವನ್ನು ಶಿಲಾಮಯವಾಗಿ ನಿರ್ಮಿಸಿ ಎರಡು ನೆಲೆಯಾಗಿ ತಾಮ್ರದ ಹೊದಿಕೆಯನ್ನು ಕಟ್ಟಿಸಿಕೊಡಲಾಯಿತು. ರಾಮಕೃಷ್ಣಪ್ಪ ಒಡೆಯನು ಈ ಕಾಲದಲ್ಲಿ ಅಧೀನ ಅಧಿಕಾರಿಯಾಗಿದ್ದನು. ಶ್ರೀಕೃಷ್ಣದೇವರ ಪುನಃ ಪ್ರತಿಷ್ಠೆಯೂ ಇದೇ ಕಾಲದಲ್ಲಿಯೇ ಜರುಗಿತು. ಶಾಸನದಲ್ಲಿ ಇನ್ನೂ ಅನೇಕ ದಾನಗಳ ವಿವರಗಳಲ್ಲದೆ ದೇವರ ಅಮೃತಪಡಿಗೆಂದು ಹೂವಿನಕೆರೆ ಗ್ರಾಮವೂ ಉಂಬಳಿಯಾಗಿ ನೀಡಲ್ಪಟ್ಟಿತು.

ಶಾ.ಶ.೧೬೨೨ ಪ್ರಮಾಥಿನಾಮ ಸಂ॥ದ ಚೈತ್ರ ಬ ೧೨ ರಲ್ಲಿ ಕೆಳದಿ ಸೋಮಶೇಖರನಾಯಕನು ಗೋಪಾಲನಿಗೆ ಬರಸಿ ಕಳುಹಿದ ನಿರೂಪದಲ್ಲಿ ಶ್ರೀ ಕೃಷ್ಣದೇವರಿಗೆ ದೇವತಾ ಸೇವೆ ಕಟ್ಟಳೆ ಬಗ್ಗೆ ಬಾರಕೂರು ಹೋಬಳಿ ಶಿವಳ್ಳಿ ಮಾಗಣೆಯಲ್ಲಿ ಉತ್ತಾರ ನೀಡಿದ ಚಾರಿತ್ರಿಕ ದಾಖಲೆಯು ಮದರಾಸಿನ ಪುರಾತತ್ವ ಹಸ್ತಪ್ರತಿ ಭಂಡಾರದಲ್ಲಿರುವ ಮೆಕಂಜೀ ಸಂಗ್ರಹ ನಂ. ೨೩೫, ಕಡತ ೧೦೫ರಲ್ಲಿ ಒಳಗೊಂಡಿದೆ.

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯ ತಾಲ್ಲೂಕಿನಲ್ಲಿರುವ ಮಹಿಷಿ ಹಾಗೂ ಬಾಳಗಾರು ಗ್ರಾಮದಲ್ಲಿರುವ ಶ್ರೀ ಅಕ್ಷೋಭ್ಯ ತೀರ್ಥಸ್ವಾಮಿಗಳ ಮಠಕ್ಕೂ ಈ ಅರಸರು ಭೂದಾನವಿತ್ತಿದ್ದಾರೆ. ಈ ದಿಸೆಯಲ್ಲಿ ದಿವಂಗತರಾದ ಶ್ರೀಗಳು ನನಗೆ ವಾತ್ಸಲ್ಯದಿಂದ ಸಂಶೋಧನೆಗೆ ಪ್ರೋತ್ಸಾಹವಿತ್ತು ಆಗಾಗ್ಗೆ ಕೆಳದಿಯ ನಮ್ಮ ಮನೆಗೂ ಭೇಟಿಯಿತ್ತು ಅನುಗ್ರಹಿಸಿದ್ದರು. ಇನ್ನೂ ಅನೇಕ ಸಂಗ್ರಹಗಳನ್ನು ಸಂಶೋಧನೆಗೆ ಒದಗಿಸುವುದಾಗಿ ಭರವಸೆಯಿತ್ತಿದ್ದರು. ದುರದೃಷ್ಟವಶಾತ್ ಅವರ ಅಕಾಲ ಮರಣದಿಂದ ಇದಕ್ಕೆ ಧಕ್ಕೆಯೊದಗಿದುದು ದುರ್ದೈವ. ಶಿವಮೊಗ್ಗ ತಾಲ್ಲೂಕಿನ ಹಿರಿಯೂರು ಮಾಗಣೆ ತಾರೀಕಟ್ಟೆ ಗ್ರಾಮದ ಮೂಲ ಶಾಸನ ದಾಖಲೆಯ ಛಾಯಾ ಪ್ರತಿ (ಜೆರಾಕ್ಸ್)ಯೊಂದು ನನಗೆ ಪ್ರಸಂಗವಶಾತ್ ನಾಡಿಗ್ ಗೋಪಾಲರಾವ್ ಮುಖಾಂತರ ಲಭಿಸಿತು. ಇನಾಂ ಕಮೀಷನರ್ ಆಫೀಸಿನಲ್ಲಿ ಸಾದರ ಪಡಿಸಿದ್ದ ಈ ಅಪ್ರಕಟಿತ ಶಾಸನದಲ್ಲಿ ಕ್ರಿ. ೧೭೧೩ರಲ್ಲಿ ಕೆಳದಿ ಬಸಪ್ಪನಾಯಕನು ವೈಷ್ಣವ ಮಠ ಮತ್ತು ಅಗ್ರಹಾರಗಳಿಗೆ ನೀಡಿದ ಉಂಬಳಿಗಳ ವಿಸ್ತಾರ ವಿವರಣೆಗಳಿವೆ. ಇದರ ಸಂಪ್ರಬಂಧದ ಸಾರಾಂಶವನ್ನು ೨೨-೨-೧೯೮೬ರಿಂದ ೨೪-೨-೧೯೮೬ರವರೆಗೆ ಜಬ್ಬಲ್‌ಪುರದಲ್ಲಿ ಜರುಗಿದ ಶಾಸನ ಶಾಸ್ತ್ರ ವಿದ್ವತ್ ಸಮ್ಮೇಳನದಲ್ಲಿ ಸಾದರಪಡಿಸಿರುವೆನು. ನಗರದ ೩೯ನೇ ಶಾಸನವು ಹರತಾಳು ಸೀಮೆಯನ್ನು ರಾಮಾನುಜ ಮಠಕ್ಕೆ ನೀಡಿದ ಉಂಬಳಿಯನ್ನು ಹೇಳಿದೆ [4].

ಕರ್ನಾಟಕ ಸರ್ಕಾರದ ಅಭಿಲೇಖಾ ಇಲಾಖೆಯಲ್ಲಿ ಚಾರಿತ್ರಿಕ ದಾಖಲೆಯ ಸರ್ವೇಕ್ಷಣಾ ಸದಸ್ಯನಾಗಿ ಗೋವಾದಲ್ಲಿರುವ ಪರ್ತಗಾಳಿ ಶ್ರೀ ಜೀವೋತ್ತಮ ಮಠದಲ್ಲಿ ಸಂಶೋಧನೆಯನ್ನು ನಾನು ಕೈಗೊಂಡಾಗ ಕೆಳದಿ ಚೆನ್ನಮ್ಮಾಜಿಯು ಮಠಕ್ಕೆ ನೀಡಿದ ಅನೇಕ ಉತ್ತಾರಗಳು ಕಂಡು ಬಂದುವು. ಈ ಅಪ್ರಕಟಿತ ಶಾಸನವನ್ನು ಹಾಗೂ ಇಲ್ಲಿನ ಸಂಶೋಧನೆ ಕೈಗೊಳ್ಳಲು ಸಹಾಯ ಮಾಡಿದ ಶ್ರೀ ಶ್ರೀಗಳು, ಶ್ರೀ ಪಿ.ಆರ್.ನಾಯಕರು, ಐ.ಎ.ಎಸ್., ಡಾ. ಜಿ.ಎಸ್.ದೀಕ್ಷಿತರು ಹಾಗೂ ಡಾ. ದೇಶಿಕಾಚಾರ್ಯರನ್ನು ನೆನೆಯುವುದು ನನ್ನ ಆದ್ಯ ಕರ್ತವ್ಯವಾಗಿದೆ. ಶಾಸನಗಳ ವಿಸ್ತೃತ ನನ್ನ ಲೇಖನ ಡಾ.ಟಿ.ಎಂ.ಎ. ಪೈರವರ 'ಸುದರ್ಶನ' ಅಭಿನಂದನಾ ಗ್ರಂಥದಲ್ಲಿ ಪ್ರಕಟವಾಗಿರುವುದನ್ನು ಅವಲೋಕಿಸಬಹುದಾಗಿದೆ.

ಉಪ ಸಂಹಾರ

ಕೆಳದಿ ಲಿಂಗಣ್ಣ ಕವಿಯು ನೃಪವಿಜಯದಲ್ಲಿ ಉಲ್ಲೇಖಿಸಿದಂತೆ - ಬ್ರಹ್ಮ ಕ್ಷತ್ರಿಯಾದಿ ವರ್ಣಾಶ್ರಮಾಚಾರ ಧರ್ಮ ಕರ್ಮಂಗಳಂ ಶ್ರುತಿಸ್ಮೃತ್ಯುಕ್ತಮಾರ್ಗೋಲ್ಲಂಘನಮಾಗದಂತು ನಡೆಯಿಸಿ, ಶೈವ ವೈಷ್ಣವಾದಿ ಷಡ್ದರ್ಶನವರ್ತಿಗಳಂ ತತ್ತದುಕ್ತ ಮಾರ್ಗದೊಳ್ನಡೆವಂತು ನಿಯಾಮಕಂಗೈಸಿ, ಸ್ವರಾಷ್ಟ್ರಸ್ಥಿತ ಸಮಸ್ತ ಜನರೊಳ್ ಜಾತಿ ಸಂಕರಮಾಗಿ ನಡೆಯದಂತಾಜ್ಞಾಪಿಸಿ ತಾಂ ಧರ್ಮದಿಂ ರಾಜ್ಯಭಾರ ವಿಚಾರ ತತ್ಪರರಾಗಿ ರಾಜಧರ್ಮದಿಂ ವರ್ತಿಸುತ್ತುಂ.... ಎಂಬಂತೆ ಕೆಳದಿ ಅರಸರ ಧಾರ್ಮಿಕ ನೀತಿ ಆದರ್ಶಪ್ರಾಯವಾದುದು. ಈಗಿನ ಜಾತ್ಯಾತೀತ ರಾಷ್ಟ್ರದ ಆಡಳಿತದಲ್ಲಿ ಇದು ಮಾರ್ಗದರ್ಶನ ನೀಡಬಲ್ಲದು.

ಭಾರತ ವೈವಿಧ್ಯಮಯ ಧರ್ಮ ಹಾಗೂ ಮತಗಳ ಆಗರ. ವೈವಿಧ್ಯತೆಯಲ್ಲಿಯೂ ಏಕತೆಯನ್ನು ಪರಿಪಾಲಿಸಿಕೊಂಡು ಕೆಳದಿ ಆಳರಸರು ಮುಂದಿನ ಪೀಳಿಗೆಗೆ ತಳಹದಿಯನ್ನುಂಟುಮಾಡಿದ್ದಾರೆ. ಅವರು ಮನಸ್ಸು ಮಾಡಿದ್ದರೆ ಔರಗಂಜೇಬನು ರಾಜ್ಯದಲ್ಲೆಲ್ಲಾ ಇಸ್ಲಾಂ ಧರ್ಮವನ್ನೇ ಜಾರಿಗೊಳಿಸಿದ್ದಂತೆ ವೀರಶೈವ ಧರ್ಮ ಸುಧಾರಕರಾಗಲು ಅವಕಾಶವಿತ್ತು. ಆದರೆ ಇವರ ಧಾರ್ಮಿಕ ನೀತಿಯು ಸರ್ವಧರ್ಮ ಸಮನ್ವಯತೆಯಲ್ಲಿ ವಿಶ್ವಧರ್ಮದೆಡೆಗೆ ಕುವೆಂಪುರವರ ವಿಶ್ವಮಾನವತೆಯ ತತ್ವದಲ್ಲಿ ಆದರ್ಶನೀಯವಾಗಿರುವಂತೆ ಕ್ರಮಿಸಿತು. ಈ ದಿಸೆಯಲ್ಲಿ ಕೆಳದಿ ಚೆನ್ನಮ್ಮಾಜಿಯು ದತ್ತುಪುತ್ರ ಬಸವಪ್ಪನಾಯಕನಿಗೆ ನೀಡಿದ ಉಪದೇಶವು ಮನನೀಯವಾದುದು. ಮತೀಯ ಅಭಿಮಾನಕ್ಕಿಂತ ದುರಭಿಮಾನವು ಹೇಯವಾದುದು. ಇದನ್ನು ಪರಿಪಾಲಿಸಿಕೊಂಡು ಬರುವಲ್ಲಿ ಈಗಿನ ಸಮಾಜ ಹಾಗೂ ಆಡಳಿತಾತ್ಮಕ ಶಕ್ತಿಗಳು ಪ್ರಯತ್ನಶೀಲರಾಗಬೇಕಾಗಿದೆ ಎಂದು ಹೇಳಬೇಕಿಲ್ಲವಷ್ಟೆ?

---

4. ಪೂಜ್ಯ ಶ್ರೀ ರಾಘವೇಂದ್ರ ಯತಿಸಾರ್ವಭೌಮರು ಕೆಳದಿ ರಾಜ್ಯಕ್ಕೆ ಸೇರಿದ್ದ ಉಡುಪಿಗೆ ಭೇಟಿಯಿತ್ತ ಸಂಗತಿಯನ್ನು ಆಧರಿಸಿ ಸಂಶೋಧನೆಗೆ ಯತ್ನಿಸುತ್ತಿದ್ದೇನೆ.

ಅನುಬಂಧ ೧

Peace and order reigned supreme under the Keladi rulers, law and justice were respected in the Keladi state and the people were on the whole happy and contented under their monarchs. About the security in the Keladi state, Alexander Hamilt on has the following remarks to make : "The subject of this country observe the laws so well, that Robbery or Murder are hardly heard of among them. And a stranger may pass through the country without being asked where he is going, or what Business he has." About the law-abiding habits of the people of Mangalore, John Fryer says : They have well constituted laws and observe them obediently. Mr. Stoakes, in his survey of Nagar (Keladi) Division, remarks about the nature of the people of Keladi thus -

"I have no where in India seen so msuch honesty and veracity as among the country people of Nagara (the capital of KELADI). The ryots of Nagara have always prided themselves on their nationality"

Keladi polity -
Dr. K.N.Chitnis,
Prof. of History,
University of Poona (Page No. 12)

ಅನುಬಂಧ ೨

ಕೆಳದಿ ಅರಸರು ದ್ವೈತ ಧರ್ಮಕ್ಕೆ ನೀಡಿದ ಪ್ರೋತ್ಸಾಹವನ್ನು ಕುರಿತ ಆಕರಗಳು (ಸ್ಥೂಲವಾಗಿ)

1. ಉಡುಪಿ ಶ್ರೀ ಕೃಷ್ಣ ದೇವಾಲಯ ಮತ್ತು ಮಠ	1. EC vol VIII sb 55 2. Mac.col. No. 235 and Kadata 105 ORI, Madras. 3. Unpublished Kannada Letters Kept in the Cochin Archives Bundle No. IV Let Nos. 18-26. (Religions in Coastal Karnataka - Foot Note P 68) 4. ಉಡುಪಿ ಶ್ರೀ ಕೃಷ್ಣಮಠದ ಉತ್ತರದಿಕ್ಕಿನ ಗೋಡೆಗೆ ತಾಗಿಸಿ ನಿಲ್ಲಿಸಿರುವ ಶಿಲಾ ಫಲಕ ನಂ. ೨೯೭ನೆಯ ಶಾಸನ.
2. ಶ್ರೀ ಅಕ್ಷೋಭ್ಯ ತೀರ್ಥಮಠ ಬಾಳಗಾರು. (ತೀರ್ಥಹಳ್ಳಿ ತಾ.)	ಪೂಜ್ಯ ಶ್ರೀಗಳಿಂದ ಲಭಿಸಿದ ಈ ಆಕರಗಳು ಪ್ರಕಟಣೆಯಲ್ಲಿದೆ.
3. ತಾರೀಕಟ್ಟೆ ಗ್ರಾಮದ ಶಾಸನ	ಕೆಳದಿ ಬಸಪ್ಪನಾಯಕನು ವೈಷ್ಣವ ಮಠ ಹಾಗೂ ಅಗ್ರಹಾರ ಗಳಿಗೆ ನೀಡಿದ ಅಪ್ರಕಟಿತ ಶಾಸನ - ಇನಾಂ ಆಫೀಸಿನಲ್ಲಿ ಲಭಿಸಿದ ಈ ದಾಖಲೆ ದಿ. ೨೨-೨-೧೯೮೬ ರಂದು ಜಬ್ಬಲ್‌ಪುರದಲ್ಲಿ ಜರುಗಿದ ಶಾಸನ ಶಾಸ್ತ್ರ ವಿದ್ವತ್ ಸಭೆ ಯಲ್ಲಿ ನಾನು ಸಾದರ ಪಡಿಸಿದ ಪ್ರಬಂಧದ ಸಾರಾಂಶ.
4. ಗೋವಾ ಪರ್ತಗಾಳಿ ಜೀವೋತ್ತಮ ಮಠ	ಕರ್ನಾಟಕ ಸರಕಾರದ ಪತ್ರಾಗಾರ ಇಲಾಖೆಯ ಮುಖಾಂತರ ನಾನು ಕೈಗೊಂಡ ಸಂಶೋಧನೆಯಲ್ಲಿ ಲಭಿಸಿದ ದಾಖಲೆಗಳು - ವಿವರಗಳು 'ಜೀವೋತ್ತಮ' ಹಾಗೂ ಟಿ.ಎಂ.ಎ. ಪೈ ಸ್ಮರಣ ಸಂಚಿಕೆ ನೋಡಿರಿ.
5. ಭದ್ರನರಸಿಂಹದೇವರು ಮಂಜೇಶ್ವರ-ನಂದಾದೀಪ, ಅಮೃತಪಡಿ, ಅಯನೋತ್ಸವ, ಕಾರ್ತೀಕ ಪೂಜೆ ಹಾಗೂ ರಥೋತ್ಸವ ಕಟ್ಟಳೆಗೆ.	Religions in Coastal Karnataka 1500-1763 A.D. by Dr. Vasantha Madhava - Page 46.
6. ಬಾರಕೂರು ಶ್ರೀ ನಾರಾಯಣ ದೇವರಿಗೆ ಉಂಬಳಿ	EC vol VIII TL 83

ಇತ್ಯಾದಿ

ಸಾಮಾಜಿಕ ಮೌಲ್ಯಗಳು ಅಂದು - ಇಂದು

(ಯುವಜನರನ್ನು ಕುರಿತಂತೆ)

ಡಾ॥ ಎಚ್.ಎಂ. ಮರುಳಸಿದ್ದಯ್ಯ

ಮೌಲ್ಯದ ವ್ಯಾಖ್ಯಾನ

'ಮೌಲ್ಯ' ಮಾನವನು ಯಾವುದಾದರೂ 'ವಿಷಯ'ಕ್ಕೆ ಕಟ್ಟುವ ಬೆಲೆ. 'ವಿಷಯ' ವ್ಯಕ್ತಿಯಾಗಿರಬಹುದು. ಲಿಂಗವಾಗಿರಬಹುದು, ಕಾಲವಾಗಿರಬಹುದು, ಆಲೋಚನೆಯಾಗಿರಬಹುದು, ಸೂತ್ರವಾಗಿರಬಹುದು, ದೃಷ್ಟಿಯಾಗಿರಬಹುದು, ಸಂಗತಿಯಾಗಿರಬಹುದು, ಸಂಬಂಧವಾಗಿರಬಹುದು, ಚರಾಚರ ಜಗತ್ತಿನ ಯಾವ ಅಂಶವಾದರೂ ಆಗಿರಬಹುದು. ಮಾನವನ ದೃಷ್ಟಿಗೆ ಬಿದ್ದ, ಅನುಭವಕ್ಕೆ ವೇದ್ಯವಾದ, ಆಲೋಚನೆಗೆ ಹೊಳೆದ ಯಾವುದಾದರೂ ವಿಷಯದ ಬೆಲೆಯನ್ನು ನಿರ್ಧರಿಸುವುದು, ನಿರ್ಧರಿಸಿದ ಆ ಬೆಲೆಯನ್ನು ಕೆಲವಾರು ಕಾಲ ಮುಂದುವರಿಸಿ ಕೊಂಡು ಹೋಗುವುದು ಅಥವಾ ಅದನ್ನು ಬದಲಿಸುವುದು ಅಥವಾ ಬದಲಿಸಲು ಹಿಂಜರಿಯುವುದು ಸ್ವಾಭಾವಿಕ. ಮೌಲ್ಯಗಳು ಭೌತ, ಮಾನಸಿಕ ಹಾಗೂ ಸಾಮಾಜಿಕ, ಕೆಲವೊಮ್ಮೆ ಅಧಿಭೌತಿಕ, ಈ ಎಲ್ಲ ಸಂಗತಿಗಳಿಗೆ ಮತ್ತು ಆಯಾಮಗಳಿಗೆ ಸಂಬಂಧಿಸಿರುತ್ತವೆ.

ಆದರೆ, ಯಾವುದೇ ಸಂಗತಿಯಾಗಲಿ, ಪ್ರಸಂಗವಾಗಲಿ, ಅಂಶವಾಗಲಿ ಅದರ ಮೌಲ್ಯವು ಸಾಪೇಕ್ಷವಾಗಿರುತ್ತದೆ. ಅಂದರೆ, ಅದು ಇನ್ನೊಂದಕ್ಕೆ ಸಂಬಂಧಿಸಿರುತ್ತದೆ. ಒಂದು ಮೌಲ್ಯದ ಏರಿಳಿವು ಇತರ ಮೌಲ್ಯಗಳ ಏರಿಳಿವುಗಳಿಗೆ ಹೊಂದಿಕೊಂಡಿರುತ್ತದೆ. ಭೌತ ವಸ್ತು ಸಂಗತಿಗಳಿಗೆ ಅನ್ವಯಿಸಿದ ಮೌಲ್ಯಗಳು ಮಾನಸಿಕ ಹಾಗೂ ಸಾಮಾಜಿಕ ಸಂಗತಿ, ಅಂಶಗಳ ಮೌಲ್ಯಗಳೊಡನೆ ಸಾಪೇಕ್ಷ

ಸಂಬಂಧಗಳನ್ನು ಹೊಂದಿರುತ್ತವೆ. ಆದುದರಿಂದ, 'ಸಾಮಾಜಿಕ ಮೌಲ್ಯಗಳು' ಎಂದೊಡನೆ ಭೌತ ಮತ್ತು ಮಾನಸಿಕ ಸಂಗತಿಗಳ ಮೌಲ್ಯಗಳಿಗೆ ಸಂಬಂಧಿಸಿರುವುದಿಲ್ಲ ಎಂದು ಹೇಳುವುದು ತಪ್ಪಾಗುತ್ತದೆ.

ಜೊತೆಗೆ ಸಾಮಾಜಿಕ ಮೌಲ್ಯಗಳು ಪ್ರತ್ಯೇಕವಾದವುಗಳಾಗಿರದೆ ವ್ಯಾಪಕವಾದವುಗಳು (Inclusive). ಆದುದರಿಂದ ಇವುಗಳ ವ್ಯಾಪ್ತಿಯಲ್ಲಿ ಆರ್ಥಿಕ, ರಾಜಕೀಯ, ಧಾರ್ಮಿಕ ಹಾಗೂ ಶೈಕ್ಷಣಿಕ ಮೌಲ್ಯಗಳು ಸೇರಿರುತ್ತವೆ. ಇವನ್ನು ಮರೆತು ಸಾಮಾಜಿಕ ಮೌಲ್ಯಗಳನ್ನು ಅರ್ಥಮಾಡಿಕೊಳ್ಳುವುದಾಗಲಿ, ಅವುಗಳ ಏರಿಳಿವುಗಳನ್ನು ಅಳೆಯುವುದಾಗಲಿ ಸಾಧ್ಯವಿಲ್ಲ. ಯಾಕೆಂದರೆ, ಈ ಎಲ್ಲವೂ ಒಂದಕ್ಕೊಂದು ಕಾರಣ ಪರಿಣಾಮಗಳ ಕ್ರಿಯಾತ್ಮಕ (Functional) ಪ್ರಕ್ರಿಯೆಯ ಸುಳಿವಿಗೆ ಸಿಕ್ಕಿರುತ್ತವೆ. ಇನ್ನೊಂದು ದೃಷ್ಟಿಯಿಂದ ನೋಡುವುದಾದರೆ ಇವೆಲ್ಲಾ ಒಂದರೊಳಗೊಂದು ಸೇರಿಕೊಂಡಿರುತ್ತವೆ. ಆದರೆ ಇವನ್ನು ಸೂಕ್ಷ್ಮವಾಗಿ ಅರಿತುಕೊಳ್ಳಲು ಇವನ್ನು ಸೈದ್ಧಾಂತಿಕವಾಗಿ ಬೇರ್ಪಡಿಸಿ ಗುರುತಿಸುವುದು ಅಗತ್ಯವಾಗುತ್ತದೆ. ಹೀಗಾಗಿ, 'ಸಾಮಾಜಿಕ' ಎಂದು ಕೆಲವು ಮೌಲ್ಯಗಳನ್ನು ಬೇರ್ಪಡಿಸಿ, ಗುರುತಿಸುವುದಾದರೆ ಅವನ್ನು ಮಾನವ ಸಂಬಂಧಗಳ ಜಾಲಕ್ಕೆ (Net-work of humal relations) ಅಂಟಿಸಬೇಕು. ಅಂದರೆ, ಆ ಸಂಬಂಧಗಳ ಅಂತರಿಕ ಮತ್ತು ಸಂವೈಧಾನಿಕ ಅಂಶಗಳಾದ ಸ್ಥಾನಮಾನಗಳು, ಪಾತ್ರ-ಮನೋದೃಷ್ಟಿಗಳು, ಮಾತುಕತೆಗಳು, ಊಟ ಉಪಚಾರಗಳು, ಉಡಿಗೆ ತೊಡಿಗೆಗಳು, ಮನೆ-ಮಠಗಳು, ಇತ್ಯಾದಿಗಳಿಗೆ ಅನ್ವಯಿಸಿ ಹೇಳುವುದು ಹೆಚ್ಚು ಸೂಕ್ತವಾಗುತ್ತದೆ. ಆದರೂ ಮಾನವ ಸಂಬಂಧಗಳು ಮತ್ತಿತರ ಸಂಬಂಧೀ ಅಂಶಗಳು ವಿವಿಧ ವಿಶೇಷ ಶಕ್ತಿಗಳ ಪ್ರಭಾವಕ್ಕೆ ಒಳಗಾಗಿರುತ್ತವೆ ಎಂಬುದನ್ನು ನಾವು ಮರೆಯುವಂತಿಲ್ಲ.

ಮೌಲ್ಯಗಳನ್ನು ಸಾಮಾಜಿಕ ಸಂಬಂಧಗಳಿಗೆ ಅನ್ವಯಿಸಿ ಪರಿಶೀಲಿಸಿದಾಗ ವ್ಯಕ್ತಿ - ವ್ಯಕ್ತಿಗಳೊಳಗೆ, ವ್ಯಕ್ತಿ - ಗುಂಪುಗಳೊಳಗೆ, ಗುಂಪು - ಗುಂಪುಗಳೊಳಗೆ, ಹಾಗೆಯೇ ಸಮುದಾಯ-ಸಮುದಾಯಗಳೊಳಗೆ ಇರುವ, ಇರಬೇಕೆಂದು ಅಪೇಕ್ಷಿಸುವ, ಇರಬಾರದೆಂದು ನಿಷೇಧಿಸುವ ಸಂಬಂಧಗಳು ಸಹಜವಾಗಿಯೇ ಮನದೆದುರು ಮೂಡುತ್ತವೆ. ಸಂಬಂಧಗಳ ಜಾಲದಲ್ಲಿ ಸಿಕ್ಕಿರುವ ವ್ಯಕ್ತಿಗಳ ವ್ಯಕ್ತಿ , ಲಿಂಗ, ವಯಸ್ಸು , ಜಾತಿ, ಧರ್ಮ, ಆರ್ಥಿಕತೆ, ಶೈಕ್ಷಣಿಕ ಸ್ಥಿತಿ, ವೈವಾಹಿಕ ಸ್ಥಾನ, ಕೌಟುಂಬಿಕ ರಚನೆ, ಬಳಗದ ಚೌಕಟ್ಟು, ಇತ್ಯಾದಿಗಳಿಂದ ಮಾನವ ಸಂಬಂಧಗಳು ಪ್ರಭಾವಿತವಾಗಿರುತ್ತವೆ. ಸಬಲವಾಗುತ್ತವೆ. ಅಲ್ಲದೆ, ಸಹಜವಾದ ಸಾಮಾಜಿಕ ಬದಲಾವಣೆ ಮತ್ತು ನಿರ್ದಿಷ್ಟ ಗುರಿಯನ್ನಿರಿಸಿಕೊಂಡು ಪರಿವರ್ತನೆಯ ಮಾನವ ಸಂಬಂಧಗಳಲ್ಲಿ ಸ್ಥಿತ್ಯಂತರವನ್ನು ತರುತ್ತವೆ.

ಈ ಸೈದ್ಧಾಂತಿಕ ಚೌಕಟ್ಟಿನಲ್ಲಿ ನಮ್ಮ ನಾಡಿನ ಯುವಕ ಯುವತಿಯರ ಆಸಕ್ತಿ - ನಿರಾಸಕ್ತಿಗಳ, ಶಕ್ತಿ - ನಿಶ್ಶಕ್ತಿಗಳ, ಮನೋದೃಷ್ಟಿಗಳ, ಕರ್ತವ್ಯ - ಕ್ರಿಯೆಗಳ ಪರಿಶೀಲನೆಯನ್ನು ಮಾಡಿದರೆ ಸಾಮಾಜಿಕ ಮೌಲ್ಯಗಳ ಏಳು ಬೀಳುಗಳನ್ನು ದೂರಗು ದೂರಗಾದರೂ ಅರಿತುಕೊಳ್ಳಬಹುದು.

ಭಾರತಕ್ಕೆ ಸ್ವಾತಂತ್ರ್ಯ ಬರುವ ಮೊದಲು ಮತ್ತು ಸ್ವಾತಂತ್ರ್ಯಾನಂತರ, ಕರ್ನಾಟಕ ಉದಯದ ಮೊದಲು ಮತ್ತು ಆನಂತರದ ಪರಿಸ್ಥಿತಿಗಳನ್ನೂ ಮನಗಂಡು ಯುವಕರ ಪಾತ್ರವನ್ನು ವಿಶ್ಲೇಷಿಸಿದರೆ ಅವರ ದೃಷ್ಟಿ-ಸಂಬಂಧಗಳು, ಕರ್ತವ್ಯ ವಲಯಗಳು ಸಮಸ್ಯೆ - ಪರಿಹಾರಗಳು, ಇವೆಲ್ಲವುಗಳನ್ನು ಆವರಿಸಿರುವ ಮೌಲ್ಯಗಳ ವಿನ್ಯಾಸ ಮತ್ತು ಅವುಗಳ ಒಳಪದರುಗಳ ರಾಚನಿಕತೆಯನ್ನು ಅರಿತುಕೊಳ್ಳಲಾದೀತು. ಆದರೆ, ಒಂದು ಎಚ್ಚರಿಕೆಯನ್ನು ನಾವು ಮನದಲ್ಲಿರಿಸಿಕೊಳ್ಳುವುದು ಅಗತ್ಯ. ಯುವಕ ಯುವತಿಯರ ಸ್ಥಾನ ಮಾನದ ಬಗ್ಗೆ, ಪಾತ್ರ ವೈಶಿಷ್ಟ್ಯದ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ಸಾರ್ವತ್ರಿಕವಾಗಿ ಅಭಿವ್ಯಕ್ತಪಡಿಸಲಾಗುತ್ತಿದ್ದರೂ ಯುವಜನರ ಬಗೆಗಿನ ನಿಷ್ಕೃಷ್ಟ ಸಂಶೋಧನೆ ಮಹತ್ತರವಾಗಿ ನಡೆದಿಲ್ಲದುದರಿಂದ ಅವರ ವಾಸ್ತವ ಸ್ಥಿತಿಯನ್ನು ಖಚಿತವಾಗಿ ಹೇಳುವುದು ಅಷ್ಟು ಸುಲಭವಲ್ಲ. ಅಲ್ಲದೆ, ವ್ಯಕ್ತಪಡಿಸಿದವು, ಅನುಭವೈಕವಾದರೂ, ಹೆಚ್ಚಾಗಿ ಕಾಲ್ಪನಿಕ ಹಂದರದ ಮೇಲೆ ಹರಡಿದ ಅಭಿಪ್ರಾಯಗಳಾಗುವ ಹೆದರಿಕೆಯೂ ಇದೆ.

ಮನ್ವಂತರದ ಕಾಲ

ಸತತ ಹೋರಾಟದಿಂದ ಭಾರತಕ್ಕೆ ಸ್ವಾತಂತ್ರ್ಯ ಬಂದದ್ದು ೧೯೪೭ರಲ್ಲಿ. ಬ್ರಿಟಿಷ್ ಆಡಳಿತಕ್ಕೆ ನೇರವಾಗಿ ಒಳಗಾದ ಪ್ರದೇಶಗಳಿಗೆ ಬಂದ ಸ್ವಾತಂತ್ರ್ಯದ ಉಸಿರು ದೇಶೀಯ ಸಂಸ್ಥಾನಗಳ ಶರೀರ ಪ್ರವೇಶಿಸಿದ್ದುದು ಅನಂತರ. ಇದು ಒಂಭತ್ತು ಜಿಲ್ಲೆಗಳ ಹಳೆಯ ಮೈಸೂರು ಸಂಸ್ಥಾನಕ್ಕೂ ಅನ್ವಯಿಸುತ್ತದೆ. ಪ್ರಜಾಭಿಪ್ರಾಯಕ್ಕೆ ಅವಕಾಶವನ್ನು (ಪ್ರಜಾಪ್ರತಿನಿಧಿ ಸಭೆಯ ಮೂಲಕ) ಮೈಸೂರು ಸಂಸ್ಥಾನದ ಆಳರಸರು ೧೮೮೧ರಷ್ಟು ಹಿಂದೆಯೇ ಕಲ್ಪಿಸಿ ಕೊಟ್ಟಿದ್ದರೂ ಭಾರತಕ್ಕೆ ಸ್ವಾತಂತ್ರ್ಯ ಬಂದು ಭಾರತೀಯ ಪ್ರಜಾ ಸಾಮಾನ್ಯರೇ ರಾಜ್ಯಭಾರವನ್ನೂ ವಹಿಸಿಕೊಂಡಿದ್ದರೂ ೧೯೪೭ ಆಗಸ್ಟ್‌ನಲ್ಲಿ ಮೈಸೂರು ಸಂಸ್ಥಾನದ ಆಡಳಿತವು ರಾಜರ ಮತ್ತು ದಿವಾನರ ಕೈಯಲ್ಲಿಯೇ ಉಳಿದಿತ್ತು. ಅನಂತರದ ದಿಟ್ಟ ಹೋರಾಟದ ನಂತರ ೧೯೪೭ರ ಅಕ್ಟೋಬರ್ ಹೊತ್ತಿಗೆ, ಪ್ರಜಾಪ್ರಜ್ಞೆ ಎಚ್ಚರಗೊಂಡ ಮೇಲೆ, ಪ್ರಜಾಪ್ರಭುತ್ವಕ್ಕೆ ಅಲ್ಲಿಯ (ಕೆಲವೊಂದು ನಿಯಮಗಳಿಗೆ ಒಳಗಾಗಿ) ಅವಕಾಶವಾಯಿತು [1].

ಭಾರತವು ಜನಪದದ ಇಚ್ಛೆಯಂತೆ ೧೯೫೦ರಲ್ಲಿ ಗಣರಾಜ್ಯವಾದದ್ದೂ, ಭಾರತದ ರಾಜಕೀಯ ಸ್ವಾತಂತ್ರ್ಯಕ್ಕೆ ಹೋರಾಡುತ್ತಿದ್ದ ರಾಷ್ಟ್ರೀಯ ಕಾಂಗ್ರೆಸ್ ಪಕ್ಷವು ರಾಷ್ಟ್ರೀಯ ಅಭಿವೃದ್ಧಿಗೂ, ದೇಶೀಯ ಭಾಷೆಗಳ ಬೆಳವಣಿಗೆಗೂ ಗಮನವಿತ್ತುದರಿಂದ ಯೋಜನಾಭಿವೃದ್ಧಿ ಕಾರ್ಯಕ್ರಮವನ್ನು ೧೯೫೧ರಲ್ಲಿ ಆರಂಭಿಸಿದ್ದುದು, ಭಾಷಾನ್ವಯ ರಾಜ್ಯಗಳ ರಚನೆಯನ್ನು ೧೯೫೬ರಲ್ಲಿ ಕೈಕೊಂಡುದುದೂ ಭಾರತೀಯರ ಜೀವನದಲ್ಲಿ ಆದ ಬಹು ಮುಖ್ಯ ಐತಿಹಾಸಿಕ ಘಟನೆಗಳು. ಇವು, ಇತರ ಘಟನೆಗಳ ಮತ್ತು ಪ್ರಕ್ರಿಯೆಗಳ ಜೊತೆಗೂಡಿ, ಅನೇಕ ಸ್ಥಿತ್ಯಂತರಗಳಿಗೆ ಎಡೆಮಾಡಿಕೊಟ್ಟವು.

ಕಂಡ ಕನಸು

ಯೋಜನಾಬದ್ಧ ಅಭಿವೃದ್ಧಿಯು ಪ್ರಜಾತಂತ್ರಾತ್ಮಕ ಗಣರಾಜ್ಯದ ಸ್ಥಾಪನೆಯಾನಂತರ ಕೈಕೊಳ್ಳಲ್ಪಟ್ಟುದುದರಿಂದ ಅನುಷ್ಠಾನಕ್ಕೆಂದು ಪ್ರಮುಖವಾಗಿ ಎರಡು ಗುರಿಗಳನ್ನು ಅದು ಇರಿಸಿಕೊಂಡಿತು : ವ್ಯಕ್ತಿ ಪ್ರತಿಷ್ಠೆಯನ್ನು ಎತ್ತಿ ಹಿಡಿಯುವ ಪ್ರಜಾಸತ್ತಾತ್ಮಕ ತತ್ತ್ವಾದರ್ಶ (Ideology) ಮತ್ತು ಸರ್ವಸಮಾನತೆಯನ್ನು ಗೌರವಿಸುವ ಸಮತಾವಾದದ ತತ್ತ್ವಾದರ್ಶ. ಈ ಅವಳಿ ತತ್ತ್ವಾದರ್ಶಗಳ ಈಡೇರಿಕೆಗಾಗಿ ಸಮಗ್ರ ರಾಷ್ಟ್ರೀಯ ಅಭಿವೃದ್ಧಿಯ ಹಿನ್ನೆಲೆಯನ್ನು ಒದಗಿಸಬೇಕೆಂಬುದು ಒಪ್ಪಿಕೊಂಡ ಮಾತು. ಅಭಿವೃದ್ಧಿಯ ಮಾತು ಹೆಚ್ಚು ಢಾಳವಾಗಿ ಸ್ವಾತಂತ್ರ್ಯಾನಂತರ ಕೇಳಿ ಬರತೊಡಗಿತ್ತಾದರೂ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲೂ ಆ ಬಗ್ಗೆ ಆಲೋಚಿಸಲಾಗುತ್ತಿತ್ತು.

ಭಾರತದ ಬಿಡುಗಡೆಗೆ ದುಡಿದವರ ಕನಸು ಭವ್ಯ ಭಾರತವನ್ನು ಕಟ್ಟುವುದಾಗಿತ್ತು. ನ್ಯಾಯಮೂರ್ತಿ ಮಹದೇವಗೋವಿಂದ ರಾನಡೆ (೧೮೪೨-೧೯೦೧) ಅವರ ಮಾತುಗಳಲ್ಲಿ ನವೀಕೃತ ಭಾರತ ಹೀಗಿತ್ತು : ''ಬಿಡುಗಡೆಗೊಂಡ ಮನುಷ್ಯತ್ವದಿಂದ, ಉಲ್ಲಸಿತ ಆಕಾಂಕ್ಷೆಯಿಂದ ಕರ್ತವ್ಯಕ್ಕೆ ಎಂದೂ ವಿಮುಖವಾಗದ ವಿಶ್ವಾಸದಿಂದ, ಎಲ್ಲರನ್ನೂ ಋಜುಮಾರ್ಗದಿಂದ ನೋಡಿಕೊಳ್ಳುವ ನ್ಯಾಯದೃಷ್ಟಿಯಿಂದ, ಮಬ್ಬು ಮುಸುಕಿರದ ಧೀ ಮತ್ತು ಪೂರ್ಣ ಕೃಷಿಗೈದ ಶಕ್ತಿಗಳಿಂದ, ಮತ್ತು ಕೊನೆಯದಾಗಿ, ಎಲ್ಲ ಗಡಿಗಳನ್ನೂ ದಾಟಿ ದುಮ್ಮಿಕ್ಕುವ ಪ್ರೇಮದಿಂದ ನವೀಕರಣಗೊಂಡ ಭಾರತಿಯು ಪ್ರಪಂಚದ ರಾಷ್ಟ್ರಗಳ ಸಾಲಿನಲ್ಲಿ ತನ್ನ ಸರಿಯಾದ ಸ್ಥಾನವನ್ನು ಪಡೆದುಕೊಳ್ಳುತ್ತಾರೆ ಮತ್ತು ಪ್ರಸಂಗವನ್ನು ತನ್ನ ಅಂಕೆಯಲ್ಲಿರಿಸಿಕೊಳ್ಳುವ ಹಾಗೂ ತನ್ನ ಗುರಿಯನ್ನು ಸೇರುವ ಪ್ರಭುತ್ವವನ್ನು ಆಕೆ ಪಡೆಯುತ್ತಾಳೆ. ಇದು ಸೇರತಕ್ಕಂಥ ಗುರಿ; ಇದು ಆಶ್ವಾಸನೆಗೊಂಡ ಭೂ ಪ್ರದೇಶ. ದೂರದಿಂದ ಇದನ್ನು ದರ್ಶಿಸುವವರು ಸುಖಿಗಳು. ಇದನ್ನು ದೊರಕಿಸುವಲ್ಲಿ ಕಾರ್ಯನಿರತರಾಗಿರಲು ಮತ್ತು ಇದನ್ನು ದೊರಕಿಸುವಲ್ಲಿ ಕಾರ್ಯನಿರತರಾಗಿರಲು ಮತ್ತು ಇದನ್ನು ಸೇರುವ ಹಾದಿಯನ್ನು ಸ್ವಚ್ಛಗೊಳಿಸಲು ಅನುಜ್ಞೆ

---

1. ಹಳೆಯ ಮೈಸೂರಿನಲ್ಲಿ ನಡೆದ ರೋಮಾಂಚಕ ಹೋರಾಟದ ಕೆಲವು ವಿವರಗಳಿಗೆ : ಎಚ್.ಎಸ್.ದೊರೆಸ್ವಾಮಿ 'ಹೋರಾಟದ ಹೆಜ್ಜೆಗಳು' ಯೋಧಮೇಳದ ಪ್ರಕಟನೆ ಗಾಂಧೀನಗರ, ಬೆಂಗಳೂರು, ೧೯೭೨, ನೋಡಿ.

ಪಡೆದಾಡುವವರು ಪರಮ ಸುಖಿಗಳು. ಆಗ ಕ್ಷಾಮ - ಡಾಮರಗಳು, ದಮನ - ದುಃಖಿಗಳು, ಭೂತಕಾಲದ ಕಲ್ಪನೆಗಳಾಗುತ್ತವೆ ಮತ್ತು ನಾವೀಗ ಪೌರಾಣಿಕವೆಂದು ಕರೆಯುವಂಥ ಕಾಲದಲ್ಲಿ ಹೇಗೋ ಹಾಗೆ ದೇವತೆಗಳು ಅಂದು ಮತ್ತೊಮ್ಮೆ ಈ ಭೂಮಿಗೆ ಇಳಿದು ಬರುತ್ತಾರೆ ಹಾಗೂ ಮಾನವನರೊಂದಿಗೆ ಒಡನಾಡುತ್ತಾರೆ.

ನವೀಕೃತ ಭಾರತದ ಉದಯವನ್ನು ವೀಕ್ಷಿಸುತ್ತಿದ್ದ ಸುಖಿಗಳ ಗುಂಪಿಗೆ ಹಿಂದಿನವರು ಸೇರಿದ್ದರೆ, ಅಂಥ ಭಾರತವನ್ನು ಸಾಧ್ಯಗೊಳಿಸುವಲ್ಲಿ ಶ್ರಮ ವಹಿಸುವ ಬಹುಸುಖಿಗಳೂ, ಸಾಧ್ಯವಾಗಿಸಿಕೊಂಡ ಪವಿತ್ರ ಭೂಮಿಯಲ್ಲಿ ಉಸಿರಾಡುತ್ತಾ ಓಡಿಯಾಡುವ ಪರಮಸುಖಿಗಳೂ ಆಗುವ ಅವಕಾಶವು ಇಂದಿನವರಿಗೆ, ಆದರಲ್ಲೂ ಯುವ ಜನರಿಗೆ, ಇದೆ ಎಂಬುದು ಬಲ್ಲವರೆಲ್ಲರ ಅಭಿಪ್ರಾಯ. ಆದರೆ ವಾಸ್ತವ ಸ್ಥಿತಿ ಏನು, ಹೇಗೆ, ಯಾಕೆ?

ಪಂಚಭೂತಗಳು

ಎರಡನೆಯ ಜಾಗತಿಕ ಯುದ್ಧವಾದ ನಂತರ ಪ್ರಪಂಚವು ಹೊಸ ಉಸಿರನ್ನಾಡತೊಡಗಿತು. ಪರಕೀಯರ ವಸಾಹತುಶಾಹಿ ಆಡಳಿತದ ಕಟ್ಟಡ ಬಿರುಕುಬಿಟ್ಟು ಸಡಿಲಗೊಂಡಿತು. ಭಾರತಕ್ಕೆ ಬಂದ ಸ್ವಾತಂತ್ರ್ಯವು ಸಾಲು ಸಾಲು ಹೊಸ ರಾಷ್ಟ್ರಗಳ ಜನನಕ್ಕೆ ನಾಂದಿ ಹಾಡಿತು. ಆದುದರಿಂದಲೇ ೧೯೪೭ ಅತೀ ಮಹತ್ವದ ವರ್ಷ.

ಆದರೆ, ಸ್ವಾತಂತ್ರ್ಯಾನಂತರದ ಜಗತ್ತನ್ನು ರಾಜಕೀಯವಲ್ಲದ ದೃಷ್ಟಿಯಿಂದ ನೋಡಿದರೆ ಒಡೆದ ಪ್ರಪಂಚವನ್ನು ನಾವು ಕಾಣುತ್ತೇವೆ. ಅಭಿವೃದ್ಧಿಗೊಂಡ ಪಶ್ಚಿಮ, ಅನಭಿವೃದ್ಧ ಪೂರ್ವ. ಇತ್ತೀಚೆಗೆ ರಾಜಕೀಯವನ್ನು ಬೆರೆಸಿದ ದೃಷ್ಟಿಯಿಂದ ನೋಡಿದರೆ ಜಗತ್ತು ಮೂರು ಹೋಳಾಗಿರುವುದನ್ನು ಕಾಣುತ್ತೇವೆ. ಬಂಡವಾಳ ಶಾಹಿ ರಾಷ್ಟ್ರಗಳ ಜಗತ್ತು, ಸಮತಾವಾದಿ ಜಗತ್ತು ಮತ್ತು ಕೊನೆಯ ಜಗತ್ತು 'ಅನಭಿವೃದ್ಧಿ' ಎನ್ನಿಸಿಕೊಂಡು, ಇತ್ತೀಚೆಗೆ 'ಅಭಿವೃದ್ಧಿ ಶೀಲ' ಎನ್ನಿಸಿಕೊಳ್ಳುತ್ತಿರುವ ಹಿಂದುಳಿದ ರಾಷ್ಟ್ರಗಳ ಕೂಟ. ಈ ಕೂಟದಲ್ಲಿ ಏಶಿಯಾದ ಕೆಲವು ಮತ್ತು ಲ್ಯಾಟಿನ್ ಅಮೆರಿಕೆಯ ರಾಷ್ಟ್ರಗಳು ಸೇರುತ್ತವೆ. ಭಾರತವು ಈ ಜಗತ್ತಿಗೆ ಸೇರಿದ, ಅಭಿವೃದ್ಧಿಗೊಳ್ಳಲು ಹೆಣಗುತ್ತಿರುವ ರಾಷ್ಟ್ರ.

ಅಭಿವೃದ್ಧಿಶೀಲ ರಾಷ್ಟ್ರಗಳು, ಸಾಮಾನ್ಯವಾಗಿ ಪುರಾತನ ಸಮಾಜಗಳನ್ನೂ, ನವೀನ ರಾಜ್ಯ ಪದ್ಧತಿಯನ್ನೂ ಹೊಂದಿವೆ. ಇಲ್ಲಿ ರಾಜಕೀಯ ಶೈಥಿಲ್ಯ, ಆರ್ಥಿಕ ದೌರ್ಬಲ್ಯ, ಸಾಮಾಜಿಕ ಅಸಮಾನತೆ, ಧಾರ್ಮಿಕ ಕ್ಲೈಬ್ಯ, ಮಾನಸಿಕ ಅಶಾಂತಿ, ಇತ್ಯಾದಿ ಪ್ರಮುಖ ವೈಲಕ್ಷಣ್ಯಗಳು ಸ್ಪಷ್ಟವಾಗಿ ಕಾಣುತ್ತವೆ. ಇಲ್ಲಿನ ಸಮಸ್ಯೆಗಳು, ತೊಡಕುಗಳು, ಕ್ಲಿಷ್ಟ ಪ್ರಸಂಗಗಳು ಹಲವಾರು. ಇವೆಲ್ಲವುಗಳನ್ನು 'ಪಂಚಭೂತ'ಗಳೆಂದು (Five evils) ವಿಂಗಡಿಸಬಹುದೇನೊ: ಅಸಮ ಸಾಮಾಜಿಕ ವ್ಯವಸ್ಥೆ, ಅಜ್ಞಾನ, ದಾರಿದ್ರ್ಯ, ಅನಾರೋಗ್ಯ ಮತ್ತು ಕೊಳಕು. ಇವುಗಳೊಡನೆ ದುಷ್ಟ ಪೂರಕಗಳಾದ ದೌರ್ಜನ್ಯ, ದಬ್ಬಾಳಿಕೆ, ಭ್ರಷ್ಟಾಚಾರ, ದೋಷಪೂರಿತದೃಷ್ಟಿಗಳು, ಇತ್ಯಾದಿ ವಿಜೃಂಭಿಸುತ್ತಲಿವೆ. ಇವುಗಳ ಬಗ್ಗೆ ಸ್ವಲ್ಪ ವಿವರ ಬೇಕೆನಿಸುತ್ತದೆ.

ಸ್ತರವಿನ್ಯಸ್ಥ ಸಮಾಜ

ಭಾರತೀಯ ಸಮಾಜವು ಮುಖ್ಯವಾಗಿ ಸ್ತರಗಳು, ಏಣಿ ಶ್ರೇಣಿಗತಗೊಂಡ ಘಟಕಸಂಚಯ. ವರ್ಣ-ಜಾತಿಗಳು, ತರತಮಭೇದದ ಸಂಬಂಧಗಳನ್ನು ಹೊಂದಿರುವುದು ಮಡಿ - ಮೈಲಿಗೆಯ ಭದ್ರ ನಂಬುಗೆಯ ತಳಹದಿಯ ಮೇಲೆ ಸಹಜವಾದ ವಯೋಲಿಂಗಗಳನ್ನು ಗುರುತಿಸುವುದರ ಜೊತೆ ಜೊತೆಗೆ ಜನರನ್ನು ವರ್ಣ-ಜಾತಿಗಳನ್ನಾಗಿ ವಿಂಗಡಿಸಿ, ಅವರಿಗೆ (ಅಂದರೆ ಅವರ ಗುಂಪುಗಳಿಗೆ) ನಿಶ್ಚಿತ್ತವಾದ ಉದ್ಯೋಗಗಳನ್ನು ಹಂಚಿ, ಏರಿಳಿವಿನ ಸ್ಥಾನಗಳನ್ನು ಗೊತ್ತು ಮಾಡಿ ಅವರನ್ನು ಜಡಜೀವಿಗಳನ್ನಾಗಿಸಿದ್ದುದೂ, ಕರ್ಮ ಸಿದ್ಧಾಂತದ ವಿಪರ್ಯಾಸವನ್ನು ಜೀವನ ದೃಷ್ಟಿಯಲ್ಲಿ ಸ್ಥಿರವಾಗಿ ಅಳವಡಿಸಿಕೊಂಡಿದ್ದುದೂ, ಹಳೆಯ ಮೌಲ್ಯಗಳು ಸಡಿಲದೇ ಉಳಿದುಕೊಂಡು ಬರಲು ಸಾಧ್ಯವಾಯಿತು. ಭೌಗೋಲಿಕವಾಗಿಯಾಗಲಿ, ಸಾಮಾಜಿಕವಾಗಿಯಾಗಲಿ, ಆರ್ಥಿಕವಾಗಿಯಾಗಲಿ ಸಂಚಲನಾತ್ಮಕತೆಯು ಜೀವನದ ಭಾಗವಾಗದೇ ಹೋಯಿತು. ಬ್ರಾಹ್ಮಣ್ಯದಿಂದ ಸಿಡಿದು ಬಂಡಾಯವೆದ್ದ ಬೌದ್ಧ, ಜೈನ, ವೀರಶೈವ, ಶೀಕ್ ಮುಂತಾದ ಧಾರ್ಮಿಕ ಗುಂಪುಗಳೂ ಹಳೆಯ

ಮೌಲ್ಯಗಳಿಗೆ, ಆಚರಣೆಗಳಿಗೆ ಬಲಿಯಾಗದೇ ಉಳಿಯಲು ಸಾಧ್ಯವಾಗಲಿಲ್ಲ. ಹೀಗಾಗಿ 'ಒಳಿತು' ಉಳಿದುಕೊಂಡು ಬರಲು ಸಾಧ್ಯವಾದಂತೆಯೇ 'ಕೆಡುಕು' ಅವ್ಯಾಹತವಾಗಿ ಹಬ್ಬಲು ಅವಕಾಶವಾಯಿತು. ಹದಿನೆಂಟು ಹತ್ತೊಂಬತ್ತನೆಯ ಶತಮಾನದ ಸಮಾಜೋ-ಧಾರ್ಮಿಕ ಆಂದೋಲನಗಳೂ, ಗಾಂಧಿಯವರ ಸತತ ಪ್ರಯತ್ನವೂ ಏಣಿ ಶ್ರೇಣಿಗತ ಸಮಾಜವನ್ನಾಗಲೀ, ಅಸ್ಪೃಶ್ಯತೆಯನ್ನಾಗಲೀ ತಿದ್ದಿ ಸರಿಪಡಿಸಲು ಸಾಧ್ಯವಾಗಲಿಲ್ಲ. ಹಳೆಯ ವರ್ಣ-ಜಾತಿಯ ಮೇಲಧಿಕಾರದ ಜೊತೆಗೆ ನವೀನಕಾಲದ ಅರ್ಥೋ-ರಾಜಕೀಯ ಶಕ್ತಿಯು ಸೇರಿಕೊಂಡು ಕೆಳಸ್ತರದವರ ಮೇಲೆ ದಬ್ಬಾಳಿಕೆ ನಡೆಸಲೂ, ಅವರನ್ನು ಶೋಷಿಸಲೂ ಉಚ್ಚವರ್ಗಕ್ಕೆ ಹೆಚ್ಚಿನ ಪುಷ್ಟಿ ದೊರೆಯಿತು.

ವಯೋ - ಲಿಂಗಗಳ ಸ್ಥಿತಿ - ಗತಿ

ವರ್ಣ ಜಾತಿಗಳ ಮೇಲು ಕೀಳುಗಳ ವಿನ್ಯಾಸದ ವಾಸ್ತವತೆಯು ವಯೋಲಿಂಗಗಳ ವೃಂದಗಳಿಗೂ ಅನ್ವಯಿಸುತ್ತಿದ್ದದ್ದನ್ನು ನಾವು ಗಮನಿಸಬೇಕು. ಪರಂಪರೆಯ ಪ್ರಕಾರ ಹೊಣೆಗಾರಿಕೆಯ, ತೀರ್ಪು ತೆಗೆದುಕೊಳ್ಳುವ ಅಧಿಕಾರವನ್ನು ನಡೆಸುವ, ಮಾರ್ಗದರ್ಶನವನ್ನು ನೀಡುವ ಸಾಮರ್ಥ್ಯವನ್ನು ಹೊಂದಿದ್ದವರು ಹಿರಿಯರು, ಕಿರಿಯರಲ್ಲ, ಗಂಡಸರು, ಹೆಂಗಸರಲ್ಲ, ಮೇಲ್‌ಸ್ತರದವರು, ಕೆಳಸ್ತರದವರಲ್ಲ. ಮದುವೆಯ ವಯಸ್ಸಿಗೆ ಬಂದಿದ್ದರೂ, ಕೆಲವೊಮ್ಮೆ ಅವರು ತಂದೆ - ತಾಯಿಗಳಾಗಿದ್ದರೂ ಯುವಜನಕ್ಕೆ ಅಂತಹ ಸ್ಥಾನವಿಲ್ಲ. ಅವರು ಹಿರಿಯರ ನೆರಳಾಗಿ ನಡೆದು ಕೊಳ್ಳುತ್ತಿದ್ದುದೇ ಹೆಚ್ಚು ಮಾತ್ರವೇ ಅಲ್ಲ, ಅದು ಸೂಕ್ತವೂ ಎಂದು ನಂಬಲಾಗುತ್ತಿತ್ತು. ಮನೆಯ ಯಾಜಮಾನ್ಯ, ಊರಿನ ಉಸ್ತುವಾರಿಕೆ, ಪ್ರಾದೇಶಿಕವಾಗಿ ಹಬ್ಬಿರುವ ಜಾತಿಯ ಅಕ್ಷ ಸಂಘಟನೆ (Horizontal unity), ರಾಜ್ಯದ ಆಡಳಿತೆ, ರಾಷ್ಟ್ರದ ನೇತೃತ್ವ, ಇತ್ಯಾದಿಗಳೆಲ್ಲಾ ಹಿರಿಯರಿಗೇ ಮೀಸಲು. ಕಿರಿಯರ ಪ್ರತಿಯೊಂದು ನಡವಳಿಕೆಯನ್ನು ರೂಪಿಸುವುದು ಹಿರಿಯರ ಜವಾಬ್ದಾರಿಯು ಮಾತ್ರವಲ್ಲದೆ ಅದು ಅವರಿಗಿದ್ದ ಅಧಿಕಾರಿವೂ ಆಗಿತ್ತು.

ಯುವಕ ಯುವತಿಯರ ಪ್ರತಿಯೊಂದು ಆಲೋಚನೆಗೆ ಮತ್ತು ಕ್ರಿಯೆಗೆ ಹಿರಿಯರ ಮಾರ್ಗದರ್ಶನ ಮತ್ತು ಒಪ್ಪಿಗೆಯ ಅಗತ್ಯವಿತ್ತು. ಹಿರಿಯರಾದರೂ ಪರಂಪರಾಗತ ನಡವಳಿಕೆಯ ಮೌಲ್ಯಗಳ ಬೆಳಕಿನಲ್ಲಿಯೇ ಮಾರ್ಗದರ್ಶನ ನೀಡುತ್ತಿದ್ದುದು, ಒಪ್ಪಿಗೆಯನ್ನು ಕೊಡುತ್ತಿದ್ದುದು. ವಯಸ್ಸಿಗೆ ಹೇಗೋ ಹಾಗೆ ಲಿಂಗಕ್ಕೂ ಪರಂಪರೆಯ ಬೆಳಕಿನಲ್ಲಿಯೇ ಸ್ಥಾನಮಾನದ ನಿರ್ಧಾರ. ಹೆಣ್ಣಿಗಿಂತ ಗಂಡು, ಹೆಂಡತಿಗಿಂತ ಗಂಡ, ಮಗಳಿಗಿಂತ ಮಗ ಶ್ರೇಷ್ಠ; ಗಂಡು ಹೆಣ್ಣುಗಳ ಕರ್ತವ್ಯ ವಲಯಗಳು ಸಹಜವಾಗಿಯೇ ಭಿನ್ನವಾಗಿರುತ್ತವೆ, ಭಿನ್ನವಾಗಿರಬೇಕು; ಒಳಗಿನ ವ್ಯವಸ್ಥೆಗೆ ಹೆಣ್ಣೂ, ಹೊರಗಿನ ವ್ಯವಹಾರಕ್ಕೆ ಗಂಡೂ ನಿಯಮಿತರಾದವರು. ವೈವಾಹಿಕ ಸ್ಥಿತಿಯು ವ್ಯಕ್ತಿಯ ಸ್ಥಾನ ಮತ್ತು ಕರ್ತವ್ಯಗಳನ್ನು ಗುರುತಿಸಿ ಮಾನ್ಯ ಮಾಡಲು ಅಗತ್ಯ. ಇದರಂತೆಯೇ ಜಾತಿ-ಉಪಜಾತಿಗಳು, ನಗರ-ಹಳ್ಳಿಗಳು, ಸಿರಿತನ-ಬಡತನಗಳು, ವಿದ್ಯೆ-ಅನಕ್ಷರತೆ, ಇತ್ಯಾದಿಗಳು, ಲಿಂಗ-ವಯಸ್ಸಿಗೆ ನಾನಾ ತೆರನ ಆಯಾಮಗಳನ್ನು ಒದಗಿಸುತ್ತಿದ್ದವು.

ಆದರೂ ಆಗದಂಥ ಬದಲಾವಣೆ

ಒಟ್ಟಿನಲ್ಲಿ ಹೇಳುವುದಾದರೆ, ಭಾರತದ ಸ್ವಾತಂತ್ರಕ್ಕೆ ಮುನ್ನ ಇದ್ದ ಹಿಂದಿನ ನಡವಳಿಕೆ ಹಾಗೂ ಮನೋದೃಷ್ಟಿಗಳು ಜನರ ಜೀವನ ಶೈಲಿಯನ್ನು ಹಾಗೆಯೇ ಮುಂದುವರಿಸಿಕೊಂಡು ಹೋಗಲು ಸಾಕಷ್ಟು ಹಿನ್ನೆಲೆಯನ್ನೂ ಒದಗಿಸಿದ್ದವು. ಮೇಲ್ ಜಾತಿಯವರೂ, ಶ್ರೀಮಂತರೂ, ದೊಡ್ಡ ಜಮೀನ್‌ದಾರರೂ ವಿದ್ಯಾವಂತರೂ, ನಗರವಾಸಿಗಳೂ, ವಯಸ್ಸಾದವರೂ ಗಂಡಸರೂ, ಮುಂದುವರಿದವರಾಗಿದ್ದರೆ, ಕೆಳಜಾತಿಯವರೂ, ಬಡವರೂ, ಭೂರಹಿತ ಕೃಷಿ ಕಾರ್ಮಿಕರೂ, ಅನಕ್ಷರಸ್ಥರೂ, ಹಳ್ಳಿಗರೂ, ಯುವ ಜನರೂ, ಹೆಂಗಸರೂ, ಹಿಂದುಳಿದವರಾಗಿದ್ದರು. ಇಂಥ ಸಮಾಜೋ - ಆರ್ಥಿಕ ಸ್ಥಿತಿಗೆ ಧಕ್ಕೆ ಒದಗಿತು. ಮನೋದೃಷ್ಟಿಗಳ ಮತ್ತು ಮೌಲ್ಯಗಳ ವಿನ್ಯಾಸಕ್ಕೆ ಸ್ಥಿತ್ಯಂತರ ಒದಗ ತೊಡಗಿತು.

ಸ್ವಾತಂತ್ರ್ಯ ಬಂದಿದ್ದು ಮುಖ್ಯವಾಗಿ ರಾಜಕೀಯ ವಲಯದಲ್ಲಿ. ಆರ್ಥಿಕ ಹಾಗೂ ಸಾಮಾಜಿಕ ವಲಯಗಳು ಅಸ್ಪೃಶ್ಯವಾಗಿಯೇ ಉಳಿದವು. ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಆಧುನಿಕ ಶಿಕ್ಷಣ ಹರಡತೊಡಗಿದ್ದುದೂ ನಿಜ,

ಔದ್ಯೋಗೀಕರಣಕ್ಕೆ ಚಾಲನೆ ದೊರೆಕೊಂಡುದೂ ನಿಜ, ನಗರೀಕರಣದ ಪ್ರಕ್ರಿಯೆಗೆ ಬಲಬಂದದ್ದೂ ನಿಜ. ಪ್ರಜಾತಂತ್ರಾತ್ಮಕ ತತ್ತ್ವಾದರ್ಶಕ್ಕೆ ಮಾನ್ಯತೆ (ಮೇಲು ಮೇಲಿನ ರೀತಿಯಲ್ಲಾದರೂ) ದೊರೆಯತೊಡಗಿದ್ದುದೂ ನಿಜ, ಸಮಾಜವಾದಕ್ಕೆ ಒಂದು ನೆಲೆಯು ಸಿದ್ಧವಾಗುತ್ತಿದ್ದುದೂ ನಿಜ. ಆದರೆ ಇವೆಲ್ಲವೂ ಮೇಲ್‌ಸ್ತರದ, ಅಸಂಘಟಿತ, ಆಲಂಕಾರಿಕ ವಸ್ತು ವಿಶೇಷಗಳಾಗಿದ್ದುವಲ್ಲದೆ, ಅವುಗಳ ಚೈತನ್ಯವು ಆಳವಾಳವಾಗಿ ಭಾರತೀಯರ ವೈಯಕ್ತಿಕ ಹಾಗೂ ಸಾಂಘಿಕ ಜೀವನದಲ್ಲಿ ಪ್ರವೇಶಿಸಿ ಬೇರು ಬಿಡಲಿಲ್ಲ. ಇಂಥ ಸ್ಥಿತಿಗೆ ಕಾರಣಗಳೆಂದರೆ, ರಾಜಕೀಯ ಸ್ವಾತಂತ್ರ್ಯಕ್ಕೆ ನೀಡಿದ, ಮಿತಿಮೀರಿದೆ ಎನ್ನಬಹುದಾದಂಥ ಪ್ರಥಮ ಪ್ರಾಶಸ್ತ್ಯ; ರಾಜಕೀಯ ಸ್ವಾತಂತ್ರ್ಯದಿಂದಲೇ ಇತರ ಎಲ್ಲ ವಲಯಗಳೂ ಕ್ರಾಂತಿಮಯವಾಗಿ, ಅವುಗಳಲ್ಲೆಲ್ಲಾ ಸ್ವಾತಂತ್ರ್ಯದ ಜೀವ ಸಂಚಾರಗೊಳ್ಳುತ್ತದೆ, ಎಂಬ ಭ್ರಮೆ; ಅವಾಸ್ತವ ರೀತಿಯ ಆಶ್ವಾಸನೆಗಳು, ಪರಂಪರೆಯ ಕಪಿಮುಷ್ಟಿ..

ರಾಜಕೀಯ ಸ್ವಾತಂತ್ರ್ಯ ಬಂದಾಗ ರಾಜಕೀಯ ನೇತೃತ್ವವನ್ನು ವಹಿಸಿಕೊಂಡವರು ಮೇಲ್‌ಸ್ತರದ ಮತ್ತು ವಯಸ್ಸಾದ ಜನ. ರಾಜಕೀಯ ಅಧಿಕಾರದಿಂದಲೇ ಎಲ್ಲವನ್ನೂ ಸಾಧಿಸಬಹುದೆಂಬ ನಂಬುಗೆಯಿಂದ, ಬರಿಯ ಘೋಷಣೆ ಆಶ್ವಾಸನೆ, ಇತ್ಯಾದಿಗಳಿಂದಲೇ ಪ್ರಜಾತಂತ್ರಾತ್ಮಕ ಸಮಾಜವಾದವನ್ನು ಬಿತ್ತಿ ಬೆಳೆಯಲು ಸಾಧ್ಯವೆಂದು ಬಗೆದು ಮುಂದುವರಿಯಲಾಯಿತು. ಆದರೂ ಯೋಜಿತ ಅಭಿವೃದ್ಧಿಯನ್ನು ಜಾರಿಗೆ ತಂದದ್ದೂ, ವಯಸ್ಕರ ಮತದಾನವನ್ನು ಆರಂಭಿಸಿದ್ದುದೂ, ಪಂಚಾಯಿತಿ ರಾಜ್ಯವನ್ನು ಸ್ಥಾಪಿಸಿದ್ದುದೂ ಭಾರತದಲ್ಲೇ ಹೊಸ ವಾತಾವರಣದ ಸೃಷ್ಟಿಗೆ ಹಾದಿ ಮಾಡಿಕೊಟ್ಟಿತು. ಇದರ ಜೊತೆಗೆ ಹಿಂದುಳಿದ ವರ್ಗಗಳ ಏಳಿಗೆಗೆ, ಗ್ರಾಮೀಣ ಅಭಿವೃದ್ಧಿಗೆ, ಮಹಿಳೆಯರ ಮತ್ತು ಮಕ್ಕಳ ಕಲ್ಯಾಣಕ್ಕಾಗಿ, ಯುವಕರ ಪುರೋಭಿವೃದ್ಧಿಗೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ವಿಭಾಗಗಳನ್ನು ನಿರ್ದೇಶನಾಲಯಗಳನ್ನು ಆರಂಭಿಸಿದ್ದುದು ನವಜಾಗ್ರತಿಗೆ ಹೆಚ್ಚಿನ ಚಾಲನೆ ದೊರಕಿತು. ಸರ್ಕಾರದ ಈ ಕ್ರಮಗಳ ಜೊತೆಗೆ ಖಾಸಗಿ ಸಂಘಟನೆಗಳು (ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ) ಸಮಾಜಕಲ್ಯಾಣ, ಗ್ರಾಮೀಣ ಅಭಿವೃದ್ಧಿ ಮತ್ತು ಯುವಜನ ಶಕ್ತಿ ಸಂವರ್ಧನೆಗೆ ಹಲವಾರು ಕ್ರಮಗಳನ್ನು ಕೈಗೊಂಡುದು ಪ್ರಗತಿಗೆ ಹೆಚ್ಚಿನ ಬಲ ಬರಲಿಕ್ಕೆ ಸಾಧ್ಯವಾಗತೊಡಗಿತು.

ಅಸಮರ್ಪಕ ಹೆಜ್ಜೆ

ರಾಷ್ಟ್ರೀಯ ತತ್ತ್ವಾದರ್ಶದ ಅನುಷ್ಠಾನಕ್ಕೆಂದು ಕೈಗೊಂಡ ಹಲವಾರು ಕಾರ್ಯಕ್ರಮಗಳಲ್ಲಿ ಜನರು ಸಕ್ರಿಯವಾಗಿ ಭಾಗವಹಿಸಬೇಕೆಂದು ಒಂದು ಹಿರಿಯ ಆಶಯವಾಗಿತ್ತು. ಯೋಜನೆಗಳು ಜನರಿಗಾಗಿ ರೂಪಿತವಾಗಿದ್ದುವಾದರೂ ಅವು ಜನರಿಂದ ರೂಪಿತವಾದವುಗಳಾಗಿರಲಿಲ್ಲ ಎಂಬುದು, ಯುವಜನರ ಸಹಕಾರ ದೊರೆಕೊಂಡಿರಲಿಲ್ಲ ಎಂಬುದು, ಮಹಿಳೆಯರು ಅಭಿವೃದ್ಧಿ ಕಾರ್ಯದ ಬಗೆಗೆ ಏನೇನೂ ಆಸಕ್ತಿ ಹೊಂದಿರಲಿಲ್ಲ ಎಂಬುದು ಅರಿವಾಗತೊಡಗಿ ಸ್ವಾತಂತ್ರ್ಯದ ಆಶೋತ್ತರಗಳೆಲ್ಲಾ ಕನಸಿನಗಂಟುಗಳಾಗಿಯೇ ಉಳಿಯುತ್ತವೆಂಬುದು ಸ್ಪಷ್ಟವಾಗತೊಡಗಿತು.

ಯುವಜನರು ಅಧಿಕವಾಗಿ ಅಭಿವೃದ್ಧಿ ಯೋಜನೆಗಳಲ್ಲಿ ಭಾಗವಹಿಸಬೇಕು, ರಾಜಕೀಯ ಮತ್ತು ಆರ್ಥಿಕ ಉತ್ಥಾನಕ್ಕೆ ಹೆಣಗಬೇಕು, ಅಧಿಕಾರದ ನಿರ್ವಹಣೆಯಲ್ಲಿ ಪಾಲ್ಗೊಳ್ಳಬೇಕು, ಈ ಪ್ರಕ್ರಿಯೆಗಳಲ್ಲಿ ತಮ್ಮ ವ್ಯಕ್ತಿತ್ವವನ್ನು ರೂಪಿಸಿ ಬೆಳೆಸಿಕೊಳ್ಳಬೇಕು, ಎಂಬುದು ಎಲ್ಲರ ಆಶಯವಾಗಿದ್ದುದರಿಂದ ಅನೇಕ ಕಾರ್ಯಕ್ರಮಗಳನ್ನು ಅವರಿಗಾಗಿಯೇ ಹಮ್ಮಿಕೊಳ್ಳಲಾಯಿತು. ರಾಜ್ಯಮಟ್ಟದಲ್ಲಿ ಯುವಜನ ಸೇವಾ ನಿರ್ದೇಶನಾಲಯದ ಸ್ಥಾಪನೆಯಾಗಿ ಯುವಜನರ ಚೇತನದ ಪ್ರಕಾಶನಕ್ಕೆ ಅವಕಾಶವನ್ನು ಕಲ್ಪಿಸಲಾಯಿತು. ಅವರ ಶಾರೀರಿಕ, ಮಾನಸಿಕ ಹಾಗೂ ಸಾಮಾಜಿಕ ಬೆಳವಣಿಗೆಯನ್ನು ಸಾಧಿಸಲು ಆಟಗಳು, ವಿನೋದಗಳು, ಸಾಹಸ ಕಾರ್ಯಕ್ರಮಗಳು, ರಾಷ್ಟ್ರೀಯ ಸೇವೆಗಳು, ಇತ್ಯಾದಿಗಳನ್ನು ಹಮ್ಮಿಕೊಳ್ಳಲಾಯಿತು. ನಿರುದ್ಯೋಗಿ ಪದವೀಧರರಿಗೆ ನೆರವಾಗಲೆಂದು ಸ್ಟೈಪಂಡರಿ ಪ್ರಾಯೋಜನೆಯನ್ನು (Project) ರೂಪಿಸಿ ವಿದ್ಯಾವಂತ ಯುವಜನರಿಗೆ (ಸಹಸ್ರ ಸಂಖ್ಯೆಯಲ್ಲಿ) ಸಮಾಜದ ನಾನಾ ಕಾರ್ಯಕ್ಷೇತ್ರಗಳಲ್ಲಿ ದುಡಿಯುವ ಅವಕಾಶವನ್ನೂ ಕಲ್ಪಿಸಲಾಯಿತು. ತಾಂತ್ರಿಕ ಶಿಕ್ಷಣದಲ್ಲಿ ತರಬೇತಿಗೊಂಡು ಯುವಜನರಿಗೆ ಸ್ವಯಂ ಉದ್ಯೋಗದಲ್ಲಿ ತೊಡಗಲು ಬೇಕಾದ ನೆರವನ್ನು ನೀಡುವಂಥ

ಕ್ರಮವನ್ನು ಕೈಗೊಳ್ಳಲಾಯಿತು. ಹಳ್ಳಿ - ಕೊಳೆಗೇರಿಗಳಲ್ಲಿ ಯುವಕ ಮಂಡಲ, ಮಹಿಳಾ ಮಂಡಲಗಳ ಸ್ಥಾಪನೆಗೆ ಪ್ರೋತ್ಸಾಹವನ್ನು ನೀಡಲಾಯಿತು.

ಆದರೆ ಈ ಎಲ್ಲಾ ಯೋಜನೆ - ಪ್ರಾಯೋಜನೆಗಳು ಎಲ್ಲ ಯುವಜನರನ್ನು ಒಳಗೊಳ್ಳಲಿಲ್ಲ. ಅವರ ಆಶೋತ್ತರಗಳಿಗೆ ಸೂಕ್ತ ಉತ್ತರವನ್ನು ನೀಡಲಿಲ್ಲ. ಸ್ವೈಪಂಡರಿಯವರು ಏನು ಮಾಡುತ್ತಾರೆ, ಏನು ಮಾಡುತ್ತ ಇಲ್ಲ ಎಂಬುದನ್ನು ನೋಡಿ, ಅವರಿಗೆ ಸರಿಯಾದ ಮಾರ್ಗದರ್ಶನ ನೀಡಲು ಯಾವ ಕ್ರಮವನ್ನೂ ಸರಿಯಾಗಿ ತೆಗೆದುಕೊಳ್ಳಲಿಲ್ಲ. ಅವರು ಸಂಘಗಳನ್ನು ಕಟ್ಟಿಕೊಂಡು, ತಮ್ಮ ಸ್ವೈಪಂಡರಿಯ ಮೊತ್ತವನ್ನು ಹೆಚ್ಚಿಸಿಕೊಳ್ಳುವ ಮತ್ತು ತಮಗೆ ಸೂಕ್ತ ಖಾಯಂ ಕೆಲಸವನ್ನು ಪಡೆಯುವ ಪ್ರಯತ್ನದಲ್ಲಿ ನಿರತರಾಗತೊಡಗಿದರು. ಸ್ಟೈಪಂಡರಿ ದೊರೆಯದವರು ನಿರುದ್ಯೋಗಿ ಪದವೀಧರರ ಸಂಘಗಳನ್ನು ಸಂಘಗಳನ್ನು ನಿರ್ಮಿಸಿಕೊಂಡು ಕೆಲಸ ದೊರಕಿಸಿಕೊಳ್ಳಲು ಹೋರಾಡ ತೊಡಗಿದರು. ಇವರ ಸಂಖ್ಯೆ ಬಹು ದೊಡ್ಡದಲ್ಲವಾದರೂ, ಹಳ್ಳಿಹಳ್ಳಿಗಳಲ್ಲಿ ಸರಿಯಾದ ಉದ್ಯೋಗವಿಲ್ಲದ ಲಕ್ಷಾಂತರ ಯುವಜನರ ದನಿಯು ಕೇಳಿಸದ ರೀತಿಯಲ್ಲಿ ಇವರ ಸಮಸ್ಯೆಗಳೇ ಢಾಳವಾಗಿ ವರ್ಣಿತವಾಗುತ್ತಿರುವುದು ವಾಸ್ತವಸ್ಥಿತಿಯನ್ನು ಮರೆಮಾಡುತ್ತಿದೆ. ಯಾರ ಆವಶ್ಯಕತೆಯು ಎಷ್ಟು ತೀಕ್ಷ್ಣ ಎನ್ನುವುದು ಗೊಂದಲದಿಂದಾಗಿ ಗೊತ್ತಾಗುವುದೇ ಕಷ್ಟವಾಗಿದೆ. ಇದರಿಂದಾಗಿ ಮೌಲ್ಯಗಳ ಅಂತರಂಗವೂ ಗೊಂದಲಮಯ.

ಕಡ್ಡಾಯ ಶಿಕ್ಷಣವು ಬಹಳ ಹಿಂದೆಯೇ ಪೂರ್ಣಜಾರಿಗೆ ಬರಬೇಕಾಗಿತ್ತಾದರೂ ವಯಸ್ಕರ ಶಿಕ್ಷಣವನ್ನು ವ್ಯಾಪಕವಾಗಿ ಜಾರಿಗೆ ತರಬೇಕಾಗಿತ್ತಾದರೂ ಯಾವುದೂ ನೆರವೇರಲಿಲ್ಲ. ಶಾಲಾ - ಕಾಲೇಜುಗಳ ಸಂಖ್ಯೆಯಲ್ಲಿ ಹೆಚ್ಚಳ ಕಂಡರೂ, ರಾಜ್ಯ ಬೊಕ್ಕಸದಿಂದ ಕೋಟಿಗಟ್ಟಲೆ ಹಣವು ಶಿಕ್ಷಣಕ್ಕೆ ವಿನಿಯೋಗವಾಗುತ್ತಿದ್ದರೂ ಶಿಕ್ಷಣವು ಸಾರ್ವತ್ರಿಕವಾಗಲಿಲ್ಲ. ಅಕ್ಷರಸ್ಥರ ಸಂಖ್ಯೆ ಗಣನೀಯವಾಗಿ ಏರಲಿಲ್ಲ. ಶೇಕಡಾ ೪೦ಕ್ಕಿಂತಲೂ ಕಡಿಮೆ ಜನರು ಅಕ್ಷರಸ್ಥರು (ಅದರಲ್ಲೂ ಮಹಿಳೆಯರಲ್ಲಿ ಶೇಕಡಾ ೨೦ಕ್ಕಿಂತಲೂ ಕಡಿಮೆ) ಎಂಬುದೂ, (ಇತ್ತೀಚೆಗೆ ಇವರ ಸಂಖ್ಯೆಯು ಏರುತ್ತಾ ಇದೆ) ಕಲಿತವರೆಲ್ಲಾ ಉದ್ಯೋಗಸ್ತರಾಗಲಿಲ್ಲವೆಂಬುದೂ, ಶೇಕಡ ೫೦-೬೦ ಜನರು ಬಡತನದ ರೇಖೆಯ ಕೆಳಗಿದ್ದಾರೆಂಬುದೂ, ಲಂಚಗುಳಿತನ ಎಲ್ಲ ಕ್ಷೇತ್ರಗಳಲ್ಲೂ ವಿಜೃಂಭಿಸುತ್ತಿರುವುದೂ, ಸರ್ಕಾರದ ಯಾವ ಸಂಘಟನೆಯಲ್ಲೂ ವ್ಯವಸ್ಥೆ ಕಾಣದಿರುವುದೂ, ನಗರಗಳಿಗೂ ಗ್ರಾಮಗಳಿಗೂ ಇದ್ದ ಅಂತರದ ಕಂದಕವು ಅಗಲವಾಗುತ್ತಲೇ ಇರುವುದೂ, ಕುಡಿತ, ಸೂಳೆಗಾರಿಕೆ, ಅಲಸಿತನ ಕೊಳಕು ಢಾಳವಾಗುತ್ತಿರುವುದೂ ಮೌಲ್ಯಗಳ ಛಿದ್ರೀಕರಣಕ್ಕೆ ಪ್ರೋತ್ಸಾಹದ ವಾತಾರವಣವನ್ನು ನಿರ್ಮಿಸುತ್ತಿದೆ.

ಅಧಃಪತನ

ಯುವಜನರಿಗೂ ಮಹಿಳೆಯರಿಗೂ ಗಮನ ನೀಡುತ್ತಿರುವುದು ನಿಜವಾದರೂ, ಅನೇಕ ಕ್ಷೇತ್ರಗಳಲ್ಲಿ ಯುವಕರ ಪಾತ್ರಕ್ಕೆ ಮನ್ನಣೆ ದೊರಕುತ್ತಿರುವುದು ನಿಜವಾದರೂ ಯುವಜನತೆಯು ಕೆಲವು ದುಷ್ಟಶಕ್ತಿಗಳ ಪ್ರಭಾವಕ್ಕೆ ಒಳಗಾಗಿ ರಾಷ್ಟ್ರ ನಿರ್ಮಾಣದ ಮಹತ್ವದ ಕಾರ್ಯದಲ್ಲಿ ಸಕ್ರಿಯ ಪಾತ್ರವನ್ನು ಅಪೇಕ್ಷಿತ ರೀತಿಯಲ್ಲಿ ವಹಿಸದೇ ಹೋಗುತ್ತಿರುವುದು ಅನುಭವ ವೇದ್ಯ. ರಾಜಕೀಯ ಪಕ್ಷಗಳು ಯುವ ಸಂಘಟನೆಯ ನೆಪದಲ್ಲಿ ಯುವಕರನ್ನು ಒಡೆಯುತ್ತಲಿವೆ. ಯುವ ವಿದ್ಯಾರ್ಥಿಗಳನ್ನು ರಚನಾತ್ಮಕ ಕಾರ್ಯಗಳಿಂದ ವಿಮುಖಗೊಳಿಸುತ್ತಲಿವೆ. ಹಳ್ಳಿ-ಕೊಳೆಗೇರಿಗಳಲ್ಲಿ ಯುವಕರು ಗೂಂಡಾ ವರ್ತನೆಯನ್ನು ತಮ್ಮ ಜೀವನ ಶೈಲಿಯನ್ನಾಗಿ ಮಾಡಿಕೊಳ್ಳುತ್ತಲಿದ್ದಾರೆ. ಸ್ಥಳೀಯ, ರಾಜ್ಯ ಹಾಗೂ ರಾಷ್ಟ್ರೀಯ ಚುನಾವಣೆಗಳನ್ನೇ ಮುಖ್ಯವಾಗಿರಿಸಿಕೊಂಡು ತಮ್ಮೆಲ್ಲ ಸಾಮರ್ಥ್ಯವನ್ನು ಅದಕ್ಕೆ ಕೇಂದ್ರೀಕರಿಸಿಕೊಂಡು ಯುವಕರು ಅಡ್ಡ ಹಾದಿಯಲ್ಲಿ ಮುಂದುವರಿಯಲು ಮಾದಕ ಸ್ಥಿತಿಯು ನಿರ್ಮಿತವಾಗುತ್ತಿದೆ.

ಶಿಕ್ಷಣಕ್ಕೂ ಉದ್ಯೋಗಕ್ಕೂ ತಳಿಕೆ ಇರದಿರುವುದೂ ಸಹಕಾರಿ ನೌಕರಿಯೇ, ಅದರಲ್ಲೂ ಕರಣಿಕ ಶೈಲಿಯೇ, ಮುಖ್ಯ ಆಕರ್ಷಣೆಯಾಗುತ್ತಿರುವುದೂ, ಅನಿಯಂತ್ರಿತವಾಗಿ ಜನಸಂಖ್ಯೆಯು ಹೆಚ್ಚುತ್ತಿರುವುದೂ, ಜಾತೀಯತೆ ಲಂಚಗುಳಿತನವು ಅವ್ಯಾಹತವಾಗಿ ಹರಡುತ್ತಿರುವುದೂ ಯುವಕರು ನಿರುದ್ಯೋಗಿಗಳಾಗಿ ಅವರ ಶಕ್ತಿ ವ್ಯರ್ಥವ್ಯಯವಾಗಲು ಕಾರಣಗಳಾಗುತ್ತಲಿವೆ. ಶಿಕ್ಷಣವು ವ್ಯಕ್ತಿತ್ವದ ವಿಕಸನಕ್ಕೆ ರಾಷ್ಟ್ರ ನಿರ್ಮಾಣದ ಸಿದ್ಧತೆಗೆ ಅವಕಾಶ ಮಾಡಿಕೊಡುತ್ತಿಲ್ಲವಾದುದರಿಂದ ಶಿಕ್ಷಣ ಕೇಂದ್ರಗಳಲ್ಲಿಯೂ ಮುಷ್ಕರ, ದೊಂಬಿ, ಆರೋಪ ಇತ್ಯಾದಿಗಳು ಪ್ರಮುಖ ಲಕ್ಷಣಗಳಾಗುತ್ತಿವೆ.

ಅವಿಭಕ್ತ ಕುಟುಂಬಗಳು ಒಡೆಯುತ್ತಿರುವುದು, ಬಳಗದವರು ತಮ್ಮ ಹೊಣೆಗಾರಿಕೆಯನ್ನು ತ್ಯಜಿಸುತ್ತಿರುವುದು, ಊರು ವಠಾರಗಳು ಪರಕೀಯತೆಯನ್ನು ಹೆಚ್ಚಿಸಿಕೊಳ್ಳುತ್ತಿರುವುದು, ವಿಷಯಾಸಕ್ತಿಯು ಸಾರ್ವತ್ರಿಕವಾಗುತ್ತಿರುವುದು ಯುವ ಜನರ ಮೇಲಿನ ಹಿಡಿತವು ಸಡಿಲಾಗುವುದಕ್ಕೆ ಅವರ ಹೊಣೆಗೇಡಿ ಚರ್ಯೆಗೆ ಕಡಿವಾಣವಿಲ್ಲದಿರುವುದಕ್ಕೆ ಕಾರಣಗಳಾಗುತ್ತಲಿವೆ. ಬೀಡಿ ಸಿಗರೇಟು ಸೇದುವುದು, ಮದ್ಯವ್ಯಸನಿಗಳಾಗುವುದು ಮತ್ತುಬರಿಸುವ ಔಷಧಿ ಸೇವನೆಗೆ ಮನಸೋಲುವುದು, ಲೈಂಗಿಕ ವ್ಯವಹಾರಕ್ಕೆ ಬಲಿಯಾಗುವುದು, ಸುಲಭಜೀವನಕ್ಕೆ ಮಾರ್ಗೋಪಾಯವನ್ನು ಕಂಡು ಹಿಡಿಯುವಲ್ಲಿಯೇ ಆಸಕ್ತಿ ತೋರಿಸುವುದು, ಇವೆಲ್ಲಾ ಸಾಮಾಜಿಕ ಮೌಲ್ಯಗಳ ಅಧಃಪತನದ ಕುರುಹುಗಳಾಗುತ್ತಲಿವೆ.

ದುಷ್ಟದೃಷ್ಟಿಗಳು

ಸಾಮಾಜಿಕ ಸಮಸ್ಯೆಗಳು ಉಲ್ಬಣಗೊಳ್ಳುತ್ತಲಿರುವುದರಿಂದಲೂ, ಅವುಗಳನ್ನು ಪರಿಹರಿಸಲು ಪರಿಣಾಮಕರ ಕ್ರಮಗಳನ್ನು ನಿಷ್ಠೆಯಿಂದ ಕೈಗೊಳ್ಳದಿರುವುದರಿಂದಲೂ ಯುವ ಜನರು - ಬೇರೆಯವರಂತೆಯೇ ಎರಡು ಬಹು ಮುಖ್ಯ ಚಿಂತಾಜನಕ ಅಥವಾ ಅನಾರೋಗ್ಯಕರ ಮನೋದೃಷ್ಟಿಗಳಿಗೆ (Pathological attitudes) ಬಲಿಯಾಗುತ್ತಿದ್ದಾರೆ. ಅವೇ ನಿರ್ಲಕ್ಷ್ಯ (Apathy) ಮತ್ತು ಪರಾಙ್ಮುಖತೆ (Alienation) ತಮ್ಮ ಕರ್ತವ್ಯದ ಬಗ್ಗೆ ಪ್ರಜ್ಞೆ ಮತ್ತು ಆಸಕ್ತಿ ಇರದೆ, ಸುತ್ತ ಮುತ್ತಲಿರುವ ಸಮಸ್ಯೆಗಳ ಬಗ್ಗೆ ಸ್ಪಂದಿಸದೇ ಇರುವುದು ಸಮಸ್ಯೆಯ ಪರಿಹಾರಕ್ಕೆ ಏನಾದರೂ ಮಾಡಬೇಕು ಎಂದು ಯೋಚಿಸದೇ ಇರುವುದು, ಸಂಯೋಜಿತ ಕಾರ್ಯಗಳಲ್ಲಿ ಭಾಗವಹಿಸಬೇಕು ಎಂಬ ಇಚ್ಛೆ ಇಲ್ಲದಿರುವುದು ನಿರ್ಲಕ್ಷ್ಯೆಯ ಪ್ರಕಟರೂಪಗಳು. ಈ ನಿರ್ಲಕ್ಷ್ಯೆಗೆ ದುಷ್ಟಪೂರಕವಾಗಿರುವುದೇ ಪರಾಙ್ಮುಖತೆ.

ತನ್ನ ಬಗ್ಗೆ, ತನ್ನ ವೃತ್ತಿಯ, ತನ್ನ ಪರಿಸರದ, ತನ್ನ ಸಮುದಾಯದ, ಇತ್ಯಾದಿಗಳ ಬಗ್ಗೆ ಅಭಿಮಾನವಿರದೆ ಅನ್ಯರಲ್ಲೇ ತಾನು ಸೊಗಸಾಗಿ ಜೀವಿಸಬಲ್ಲೆ, ಆದ್ದರಿಂದಲೇ ಆ ಸ್ಥಿತಿಗೆ ತಾನು ವರ್ಗವಾಗಿ ಹೋಗಬೇಕು ಎಂಬ ಭಾವನೆಯೇ ದಟ್ಟವಾಗುತ್ತಲಿದೆ. ಯುವ ಜನರು ಒಂದು ತೆರನ ಕಲ್ಪನಾಲೋಕದ (Fantasy) ಪ್ರಜೆಗಳಾಗುವ ಹಂಬಲವನ್ನು ಪುಷ್ಟೀಕರಿಸಿಕೊಳ್ಳುತ್ತಿದ್ದಾರೆ. ತನ್ನ ಹಳ್ಳಿಯು ವಾಸಕ್ಕೆ ಅಯೋಗ್ಯವಾದುದರಿಂದ ತಾನು ನಗರಕ್ಕೆ ವಲಸೆ ಹೋಗಬೇಕು; ತನ್ನ ವೃತ್ತಿಯು ತನ್ನ ಯೋಗ್ಯತೆಗೆ ತಕ್ಕದಲ್ಲದುದರಿಂದ ಅನ್ಯ ವೃತ್ತಿಗೆ ಹಾರಬೇಕು; ತನ್ನ ಜೀವನ ಶೈಲಿಯು ಹೀನಾಯವಾದುದರಿಂದ ಅನ್ಯರ ಶೈಲಿಯನ್ನು ಅಳವಡಿಸಿಕೊಳ್ಳಬೇಕು. ಇಂಥ ಅತೃಪ್ತಿ ಇಂಥ ಕನಸಿನ ಲೋಕದ ಯಾತ್ರಾ ಸಿದ್ಧತೆಯಲ್ಲೇ ತಲ್ಲೀನವಾಗಿರುವುದು ಯುವಜನರಲ್ಲಿ ಅಂಟುಜಾಡ್ಯವಾಗುತ್ತಲಿದೆ.

ಕಾಲಲಿ ಕಟ್ಟಿದ ಗುಂಡು

ಯುವಜನರ ಇಂದಿನ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಬಸವಣ್ಣನ ಮಾತೊಂದು ನೆನಪಾಗುತ್ತದೆ. ಇಕ್ಕಟ್ಟಿನ ಪ್ರಸಂಗದಲ್ಲಿ ಸಿಕ್ಕವನು ಕಾಲಲ್ಲಿ ಗುಂಡನ್ನು, ಕೊರಳಲ್ಲಿ ಬೆಂಡನ್ನು ಕಟ್ಟಿಕೊಂಡವನ ಸ್ಥಿತಿಯಲ್ಲಿರುತ್ತಾನೆ. ಈಜಲು ಹೊರಟವನು ಕಾಲಿನಲ್ಲಿ ಕಟ್ಟಿಕೊಂಡ ಗುಂಡಿನ ಸೆಳೆತದಿಂದ ಮುಳುಗಬೇಕಾಗುತ್ತದೆ. ಆದರೆ ಕೊರಳಲ್ಲಿ ಕಟ್ಟಿಗೊಂಡ ಬೆಂಡು ಮುಳಗಲೀಯದು. ತೇಲಿ ಮುಂದೆ ಹೋಗಬೇಕೆಂದರೆ ಗುಂಡು ತೇಲಲೀಯದು. ಇದನ್ನು ಮನ್ವಂತರದ ಸ್ಥಿತಿ ಎನ್ನಲಿಕ್ಕೆ ಬಾರದು. ಸ್ಥಗಿತವಾದ ಸ್ಥಿತಿ ಎನ್ನಲೂ ಬಾರದು. ಹಿಂದಕ್ಕೂ ಹೋಗಲಾರದ, ಮುಂದಕ್ಕೂ ಹೋಗಲಾರದ ಸ್ಥಿತಿ. ಇಂದಿನ ಮೌಲ್ಯಗಳ ತಾಕಲಾಟದಲ್ಲಿ ಸಿಕ್ಕು ಯುವಜನರು ಒದ್ದಾಡುವಂತಾಗಿದೆ.

ತೀವ್ರವಾಗಿ ಬದಲಾವಣೆಯಾಗುತ್ತಿರುವುದರಿಂದ ಮೌಲ್ಯಗಳು ತೀವ್ರ ಗತಿಯಲ್ಲಿ ಪರಿವರ್ತನೆಗೊಳ್ಳುತ್ತಲಿವೆ. ಮನುಷ್ಯರ ಮನೋದೃಷ್ಟಿಗಳಲ್ಲಿ, ಸಂಬಂಧಗಳಲ್ಲಿ, ವೃತ್ತಿಗಳಲ್ಲಿ, (ನಿರುದ್ಯೋಗ ಪರಿಸ್ಥಿತಿಯಲ್ಲಿ), ಅವುಗಳಿಗೆ ಸಂಬಂಧಿಸಿದ ಮೌಲ್ಯಗಳಲ್ಲಿ ಸ್ಥಿತ್ಯಂತರವು ಕಾಣುತ್ತಲಿದೆ. ಹಿರಿಯರ ಪಾತ್ರವನ್ನು ಯುವಕರು ವಹಿಸಿಕೊಳ್ಳಬೇಕೆಂದು ಇಂದಿನ ಮೌಲ್ಯವು ಒತ್ತಿ ಹೇಳುತ್ತಿರುವುದರಿಂದ ಹಿರಿಯರು ತಮ್ಮ ಕರ್ತವ್ಯದಿಂದ ವಿಮುಕ್ತರಾಗುತ್ತಿದ್ದಾರೆ. ಕಿರಿಯರು ಅದರ ಬಗ್ಗೆ ನಿರಾಸಕ್ತರಾಗಿದ್ದಾರೆ.

ಹಳೆಯ ಮೌಲ್ಯಗಳ ಭದ್ರ ಕಟ್ಟಡದಲ್ಲಿ ಬಿರುಕು ಬಿಟ್ಟಿರುವುದಾದರೂ ಹೊಸ ಮೌಲ್ಯಗಳ ಕಟ್ಟಡದ ಬುನಾದಿಯ ಕಲ್ಲನ್ನು ಇನ್ನೂ ಹಾಕಿಲ್ಲ. ಹಳೆಯದರ ಹಿಡಿತ ಇನ್ನೂ ಬಿಗಿಯಾಗಿದೆ, ಹೊಸದರ ಸೆಳವು ಬಲವಾಗಿರದಿದ್ದರೂ ದುರ್ಬಲವಾಗಿಲ್ಲ.

ಏಣಿಶ್ರೇಣಿಗತ ವ್ಯವಸ್ಥೆ ಹಳೆಯದು, ವ್ಯಕ್ತಿಯ ನಿರ್ಣಾಯಕ ಸ್ಥಾನವು ಸ್ಪಷ್ಟವಾಗಿದ್ದು , ಪರಂಪರೆಯ ಬೆಳಕಿನಲ್ಲಿ ಆತನ ಜೀವನ ಸಾಗಬೇಕು. ಆದರೆ ಹೊಸ ಆಕಾಂಕ್ಷೆಯ ಪ್ರಕಾರ ವ್ಯಕ್ತಿಯು ಮುಕ್ತ ವ್ಯಕ್ತಿತ್ವವನ್ನು ಹೊಂದಿರಬೇಕು. ಅವನು ಎಲ್ಲರಲ್ಲೂ ಸಮಾನವಾಗಿ ಸಾಮರ್ಥ್ಯವನ್ನು ಹೊಂದಿರಬೇಕು. ಯಾರೂ ಕೀಳಲ್ಲ , ಯಾರೂ ಉಚ್ಚರಲ್ಲ. ತನಗೆ ಯಾವುದು ಇಷ್ಟವೊ ಅದನ್ನು ವ್ಯಕ್ತಿಯು ಮಾಡಬಹುದು. ಆದರೆ ಆತನ ಕ್ರಿಯೆಯು ಅನ್ಯರ ಹಕ್ಕಿಗೆ ಧಕ್ಕೆ ಒದಗುವಂತಿರಕೂಡದು. ಈ ಹೊಸ ಮೌಲ್ಯಗಳು ಹೊಸ ಆದರ್ಶಗಳು, ಹೊಸ ಸೂತ್ರಗಳು ವಾಸ್ತವ ಪ್ರಪಂಚದಿಂದ ಇನ್ನೂ ದೂರವೇ ಉಳಿದಿವೆ.

ಇದಕ್ಕೆ ಅನೇಕ ಕಾರಣಗಳಿವೆ. ಬಹು ಮುಖ್ಯವಾದವುಗಳೆಂದರೆ, ಹಿರಿಯರ ಆದರ್ಶವಲ್ಲದ ವರ್ತನೆ, ತೀವ್ರವಾಗಿ ಬದಲಾವಣೆಯು ಉಂಟುಮಾಡಿದ ಗೊಂದಲ, ರಚನಾತ್ಮಕ ಕಾರ್ಯಕ್ಕೆ ದೊರೆಯುತ್ತಿರುವ ಅಲ್ಪ ಪ್ರೋತ್ಸಾಹ, ದುಷ್ಪಕ್ರಮಗಳನ್ನು ಕಡೆಗಣಿಸುವ ಇಲ್ಲವೆ ಮೆಚ್ಚುವ ಅಥವಾ ಅನಿವಾರ್ಯವೆಂದು ಒಪ್ಪಿಕೊಳ್ಳುವ ಪ್ರಸಂಗಗಳ ಹೆಚ್ಚಳ. ಆದುದರಿಂದ ಯುವಜನರನ್ನು ದಿಗ್‌ಭ್ರಮೆಯಾವರಿಸಿದೆ. ಸುತ್ತಲೂ ಅನಿಶ್ಚಿತ ಭವಿಷ್ಯದ ಕತ್ತಲು ಕವಿದಿದೆ. ಇಂಥ ಕಲ್ಲೋಲದಲ್ಲಿ ಯಾವುದು ತಾತ್ಕಾಲಿಕ ತೃಪ್ತಿಯನ್ನು ವಿಷಯಲೋಲುಪತೆಯ ಪರಾಕಾಷ್ಠತೆಯನ್ನು ತರುತ್ತದೋ ಅದನ್ನೇ ಸರಿಯೆಂದು ಅನುಸರಿಸುವುದೇ ಯುವಕರ ಪ್ರವೃತ್ತಿಯಾಗುತ್ತಿದೆ.

ಆಗಬೇಕಾದದ್ದು

ಯುವಜನರು ತಮ್ಮ ವ್ಯಕ್ತಿತ್ವವನ್ನು ಪೂರ್ಣ ಅರಳಿಸಿಕೊಳ್ಳಲೂ, ಸಮಾಜದ ಉನ್ನತಿಯ ಕಾರ್ಯದಲ್ಲಿ ಭಾಗವಹಿಸಲೂ ಸಮರ್ಥರಾಗಬೇಕಾದರೆ, ಕ್ಷೇಮರಾಜ್ಯವನ್ನು ಕಟ್ಟುವ ಮಹಾಕಾರ್ಯದಲ್ಲಿ ಅವರು ಸಕ್ರಿಯವಾಗಿ ಪಾಲುಗೊಳ್ಳಬೇಕಾದರೆ ಸಮಗ್ರ ಅಭಿವೃದ್ಧಿಯ ಕಾರ್ಯಕ್ರಮದ ಅನುಷ್ಠಾನವಾಗಬೇಕು.

ಸಾಪೇಕ್ಷವಾಗಿ ಹೇಳುವುದಾದರೆ ಯಾವ ಮೌಲ್ಯವೂ ತೀರಾ ಹಳೆಯದಲ್ಲ. ಯಾವುದೂ ತೀರಾ ಹೊಸದಲ್ಲ. ಹೊಸ ಮೌಲ್ಯದ ಹಿನ್ನೆಲೆಯಾಗಿ ಹಳೆಯ ಮೌಲ್ಯವೂ ಹಳೆಯ ಮೌಲ್ಯದ ಅಂತರಂಗದಲ್ಲಿ ಹೊಸ ಮೌಲ್ಯದ ಬೀಜವೂ ಇರುವುದನ್ನು ನಾವು ಸೂಕ್ಷ್ಮವಾಗಿ ಪರಿಶೀಲಿಸಿದರೆ ಗೊತ್ತಾಗುತ್ತದೆ. ಹಳೆಯ ಮೌಲ್ಯಗಳೆಲ್ಲವನ್ನೂ ತ್ಯಜಿಸಬೇಕಾದದ್ದಿಲ್ಲ. ಅಲ್ಲದೆ ಅವನ್ನು ಇದ್ದಕ್ಕಿದ್ದ ಹಾಗೆ ತ್ಯಜಿಸುವುದೂ ಸಾಧ್ಯವಿಲ್ಲ. ಜೊತೆಗೆ ಅವೆಲ್ಲವನ್ನೂ ಸಂಪೂರ್ಣವಾಗಿ ಧ್ವಂಸಮಾಡುವುದಾಗಲಿ, ತ್ಯಜಿಸುವುದಾಗಲಿ ಅಸಾಧ್ಯದ ಮಾತು. ಇದೇ ರೀತಿಯಲ್ಲಿ , ಹೊಸ ಮೌಲ್ಯಗಳನ್ನು ಸಂಪೂರ್ಣವಾಗಿ ಇದ್ದಕ್ಕಿದ್ದ ಹಾಗೆ ಸ್ವೀಕರಿಸಿ ನಮ್ಮ ಜೀವನದ ಭಾಗವನ್ನಾಗಿ ಮಾಡಿಕೊಳ್ಳುವುದೂ ಸಾಧ್ಯವಿಲ್ಲ. ಹಳೆಯ ಮೌಲ್ಯವನ್ನು ಬಿಡುವುದಕ್ಕೆ ಇರುವ ಹಿಂದೇಟಿನ ದೃಷ್ಟಿಯಂತೆ, ಹೊಸ ಮೌಲ್ಯವನ್ನು ಸ್ವೀಕರಿಸಲೂ ಹಿಂದೇಟಿನ ದೃಷ್ಟಿ ಇದ್ದೇ ಇರುತ್ತದೆ. ಅಂತೆಯೇ, ಹಳೆ ಮೌಲ್ಯಗಳ ಸ್ಥಾನದಲ್ಲಿ ಹೊಸ ಮೌಲ್ಯಗಳನ್ನು ಸ್ಥಾಪಿಸುವ ಆತುರವೂ ಇರುತ್ತದೆ. ಈ ಪ್ರಕ್ರಿಯೆಯ ಪರಿಸ್ಥಿತಿಯನ್ನು ಅರಿತುಕೊಳ್ಳುವುದು ಯುವಜನರಿಗೂ, ಇತರರಿಗೂ ಅತ್ಯಗತ್ಯ. ಇದರಿಂದ ವಾಸ್ತವತೆಯ ಅರಿವಾಗುತ್ತದೆ, ಗೊಂದಲದ ವಾತಾವರಣವು ತಿಳಿಯಾಗುತ್ತದೆ, ಎಂಥ ಕ್ರಮಗಳನ್ನು ಕೈಗೊಳ್ಳಬೇಕೆಂಬುವ ಜ್ಞಾನೋದಯವಾಗುತ್ತದೆ.

ಯುವಜನ ಕಾರ್ಯಕ್ರಮಗಳು, ಸಾಮಾನ್ಯವಾಗಿ, ಸಾರ್ವತ್ರಿಕ ಪ್ರಸಂಗಗಳಲ್ಲಿ ಸಾಂಘಿಕ ರೂಪಗಳಲ್ಲಿ ಪ್ರಕಟವಾಗುತ್ತವೆ. ಶಾಲೆ-ಕಾಲೇಜುಗಳಲ್ಲಿ, ಕ್ರೀಡಾಂಗಣಗಳಲ್ಲಿ, ಸಭೆ ಮೆರವಣಿಗೆಗಳಲ್ಲಿ ಯುವಜನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದುಂಟು. ಮನೋದೈಹಿಕ ಹಾಗೂ ಸಾಮಾಜಿಕ ಊನಸ್ಥಿತಿಗೆ ಬಲಿಯಾದ ಯುವಕ ಅಥವಾ ಯುವತಿಯನ್ನು ವೈಯಕ್ತಿಕ ಸಲಹಾ ಲೋಚನೆಯ (Counselling) ಪ್ರಕ್ರಿಯೆಗೆ ಒಳಗುಮಾಡುವ, ಕೌಟುಂಬಿಕ ಬಿಕ್ಕಟ್ಟಿನ ಪ್ರಸಂಗಗಳನ್ನು ಬಿಡಿಸುವ ಕ್ರಮಗಳು ಹೆಚ್ಚಬೇಕಾಗಿದೆ.

ಪ್ರತಿಯೊಂದು ಪ್ರೌಢಶಾಲೆ, ಕಾಲೇಜು, ಕೊಳೆಗೇರಿ, ಹಳ್ಳಿ, ಇತ್ಯಾದಿ ಸಂಘಟನೆ ಮತ್ತು ಸಮುದಾಯಗಳಲ್ಲಿ ತರಬೇತಿ ಪಡೆದ ಸಮಾಜಕಾರ್ಯಕರ್ತರನ್ನು ನೇಮಿಸುವುದು ಉಚಿತ. ಯುವಕನ (ಯುವತಿಯ) ಕುಂದುಕೊರತೆಗಳನ್ನು, ಶಕ್ತಿ ಸಾಮರ್ಥ್ಯಗಳನ್ನು ಗಮನದಲ್ಲಿರಿಸಿಕೊಂಡು ಅವರೊಡನೆ ಬೆರೆತು ಅವರ ಅಭ್ಯುದಯದ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸುವಲ್ಲಿ ಸಮಾಜ ಕಾರ್ಯಕರ್ತನು ಮಹತ್ವದ ಪಾತ್ರವನ್ನು ವಹಿಸಲು ಸಾಧ್ಯ. ಅರೆಮನಸ್ಸಿನ ರೀತಿಯಲ್ಲಿ ಯುವಕ ಮಂಡಲಿಗಳನ್ನು ಸ್ಥಾಪಿಸುವುದರಿಂದ, ಅವುಗಳು ವಿಘಟನೆಗೆ ಒಳಗಾಗುವಂಥ ಪ್ರಸಂಗಗಳನ್ನು ತಡೆಯದೇ ಹೋಗುವುದರಿಂದ, ಕರಣಿಕಪ್ರಭುತ್ವದ (Bureaucracy) ದುಷ್ಟ ವ್ಯವಹಾರವನ್ನು ನಿರ್ಬಂಧಿಸದೇ ಇರುವುದರಿಂದ ಹಲವಾರು ಅನಿಷ್ಟ ಪರಿಣಾಮಗಳಿಗೆ ಅವಕಾಶವಾಗುತ್ತದೆ. ಸಮಾಜಕಾರ್ಯಕರ್ತನಿಂದ ಇಂಥ ಅನಾಹುತವನ್ನು ತಪ್ಪಿಸಲು ಸಾಧ್ಯವಾದೀತು.

ಪ್ರಗತಿಪರ ಯೋಜನೆಯು ಅತ್ಯುತ್ತಮವಾಗಿ ರೂಪಿತವಾಗಿರಬಹುದು. ಆದರೆ ಅದರ ಅನುಷ್ಠಾನವು ನಿಷ್ಠೆಯಿಲ್ಲದೆ ಅವೈಜ್ಞಾನಿಕವಾಗಿ ನಡೆಯುವುದರಿಂದ ನಿರೀಕ್ಷಿತ ಪರಿಣಾಮವು ದೊರೆಯದೇ ಹೋಗುತ್ತದೆ. ಸಮಾಜಕಾರ್ಯಕರ್ತನ ನೆರವಿನಿಂದ ಯೋಜನೆಗಳ ಅನುಷ್ಠಾನವು ಸರಿಯಾಗಿ ಆಗುತ್ತದೆಂದು ನಿರೀಕ್ಷಿಸಬಹುದು.

ಸಮಾಜಕಾರ್ಯಕರ್ತರ ನೇಮಕವು ದುಬಾರಿಯ ಸಲಹೆ ಎನ್ನಿಸಬಹುದಾದರೂ ಆಗುವ ಅನಾಹುತವನ್ನು ತಪ್ಪಿಸಲು ಇದು ದುಬಾರಿಯಲ್ಲ ಎನಿಸುತ್ತದೆ. ಆದರೆ ಬರಿಯ ಸಮಾಜಕಾರ್ಯಕರ್ತರ ನೇಮಕದಿಂದ ಎಲ್ಲವೂ ಒಳಿತಾಗುತ್ತದೆಂದು ನಿರೀಕ್ಷಿಸುವುದು ತಪ್ಪಾಗುತ್ತದೆ. ಆ ಕಾರ್ಯಕರ್ತನು ಇತರ ಅಭಿವೃದ್ಧಿ ಸಿಬ್ಬಂದಿಯವರೊಂದಿಗೆ ಕಾರ್ಯೋನ್ಮುಖವಾಗುವುದು ಬಹು ಮುಖ್ಯ. ಇದಕ್ಕಾಗಿ ಇವನಿಗೆ ಹೇಗೋ ಹಾಗೆ ಇತರ ಸಿಬ್ಬಂದಿಯವರಿಗೂ ಸೂಕ್ತ ತರಬೇತಿ ಮತ್ತು ಮುಕ್ತ ವಾತಾವರಣ ನಿರ್ಮಾಣವಾಗಬೇಕು. ಸ್ಥಳೀಯ ರಾಜ್ಯ ಸಂಘಟನೆಗಳೂ, ಸರ್ಕಾರದ ಇತರ ಸಂಘಟನೆಗಳೂ, ಸ್ವಯಂಸೇವಕ ಸಂಘಟನೆಗಳೂ ವಿಕೇಂದ್ರೀಕರಣವನ್ನು ತಮ್ಮ ಕಾರ್ಯಶೈಲಿಯನ್ನಾಗಿ ಸ್ವೀಕರಿಸಬೇಕು. ನಿಯಮ-ನಿಬಂಧನೆಗಳು ನೆರವಾಗಬೇಕಲ್ಲದೆ ಅಡ್ಡಿಯನ್ನೊಡ್ಡಕೂಡದು. ಕೆಂಪುದಾರಿಕೆ (Red-tapism) ಮತ್ತು ಲಂಚಗುಳಿತನದ ಹಾವಳಿಯು ಅಡಗಬೇಕು. ಇವೆಲ್ಲವೂ, ಒಂದಕ್ಕೊಂದು ಕ್ರಿಯಾತ್ಮಕ ಸಂಬಂಧಗಳನ್ನು ಹೊಂದಿರುವುದರಿಂದ ಅಭಿವೃದ್ಧಿ ಕಾರ್ಯದಲ್ಲಿ ತೊಡಗಿರುವ ಎಲ್ಲ ಕಾರ್ಯಕರ್ತರೂ ಜನರ ಜೀವನದ ಹಾಸು ಹೊಕ್ಕುಗಳಾಗಿ ದುಡಿಯುವಂತಾಗಬೇಕು. ಅದರಲ್ಲೂ ಯುವಜನರಿಗೆ ಹೆಚ್ಚಿನ ಒತ್ತನ್ನು ಕೊಡಬೇಕು. ಸಮಾಜ ಕಾರ್ಯಕರ್ತನು ಸಂಯೋಜನೆಯ ಕ್ರಿಯೆಯ ನಿರ್ದೇಶಕನಾಗಿರಬೇಕು.

ಯಾವ ಕೆಲಸವೂ ಬರಿಯ ಅಲಂಕಾರ (Ornamental) ವಾಗಿರದೆ, ಕ್ರಿಯಾತ್ಮಕ (Functional) ಆಗಿದ್ದರೆ, ಅದು ಯಶಸ್ವಿಯಾಗುತ್ತದೆ. ವೈಯಕ್ತಿಕ ಸಾಧನೆಗೆ ಅವಕಾಶವನ್ನು ಒದಗಿಸುವ, ಸಾಧನೆಯನ್ನು ಪ್ರಶಂಸಿಸುವ, ಯೋಗ್ಯತೆಗೆ ಬೆಲೆ ನೀಡುವ, 'ಪಂಚಭೂತಗಳ' ಉಚ್ಚಾಟನೆಗೆ ಪ್ರಮಾಣಿಕವಾಗಿ ಪ್ರಯತ್ನಿಸುವ ಕೆಲಸ ಎಲ್ಲೆಡೆಗೂ ನಡೆದರೆ ನವೀನ ಮೌಲ್ಯಗಳನ್ನು ಬಿತ್ತಿ ಬೆಳೆಯಲೂ ಅವನ್ನು ಸಂಪೋಷಿಸಲೂ ಸಾಮಾಜಿಕ ಸಮಾನತೆಯನ್ನು ಸಾಧ್ಯವಾಗಿಸಲೂ, ಸಾಮಾಜಿಕ ಅಭಿವೃದ್ಧಿಯನ್ನು ಪಡೆಯಲೂ ಆಗುತ್ತದೆ.

ಕರ್ನಾಟಕ ಜಾನಪದ ಮತ್ತು ಲೋಕದೃಷ್ಟಿ

ಡಾ॥ ಪುರುಷೋತ್ತಮ ಬಿಳಿಮಲೆ

೧

ಕನ್ನಡ ಜಾನಪದ ಕ್ಷೇತ್ರದಲ್ಲಿ 'world view' ಎಂಬ ಪದದ ಬಗ್ಗೆ ಅಷ್ಟಾಗಿ ಚರ್ಚೆ ನಡೆದಿಲ್ಲ . 'ವಿಶ್ವಕಲ್ಪನೆ', 'ವಿಶ್ವಪರಿಕಲ್ಪನೆ', 'ವಿಶ್ವತೋದೃಷ್ಟಿ' ಎಂಬಿತ್ಯಾದಿ ಪದಗಳನ್ನು ಕೆಲವರು 'world view' ಗೆ ಸಂವಾದಿಯಾಗಿ ಬಳಸಿದ್ದುಂಟು. ಇದಕ್ಕೆ ಕಾರಣ ಮತ್ತೆ ಇಂಗ್ಲಿಷಿನಲ್ಲಿರುವ ಮೂಲಪದ 'world conception' ಎಂಬುದೇ ಆಗಿದೆ. ಸ್ಯಾಂಡರ್ ಎರ್ಡೆಸ್‌ನು ಲಾಜೋಸ್ ಅಮಿ ಎಂಬ ಕತೆಗಾರನನ್ನು ಸಂದರ್ಶಿಸಿ, ವಿಶ್ವದ ಹುಟ್ಟು ಮತ್ತು ನಾಶದ ಬಗೆಗೆ ಅವನ ಅಭಿಪ್ರಾಯಗಳನ್ನು ಸಂಗ್ರಹಿಸಿ, ಮಂಡಿಸಿದಾಗ 'world conception' ಎಂಬ ಪದವನ್ನು ಔಚಿತ್ಯಪೂರ್ಣವಾಗಿಯೇ ಬಳಸಿದ (Sandar Erdez 1983) ಆದರೆ 'world view' ಪದವು ವಿಶ್ವದ ಹುಟ್ಟು ಮತ್ತು ಅಂತ್ಯದ ಬಗೆಗೆ ನೀಡುವ ವಿವರಗಳಿಗೆ ಮಾತ್ರ ಸೀಮಿತವಾಗಿರುವುದಿಲ್ಲ. ಇದನ್ನು ಗಮನಿಸಿಯೇ ಅಲೆನ್ ಡಂಡೆಸರು ತಮ್ಮದೊಂದು ಲೇಖನದಲ್ಲಿ 'world view' ಎಂಬ ಪದವನ್ನು ವಿವರಿಸುತ್ತ 'ಅದು ಹೇಗೆ ಲೋಕದ ಬಗೆಗೆ ಜನರ ನಿಲುವುಗಳನ್ನು ಪ್ರಸ್ತುತ ಪಡಿಸುತ್ತದೆ' ಎಂದು ವಿಶ್ಲೇಷಿಸಿದ್ದಾರೆ. (Dundes 1979:226) ಅಮೇರಿಕನ್ನರ 'world view' ಬಗೆಗೆ ಕುತೂಹಲಕರ ವಿವರಗಳನ್ನು ನೀಡುವ ಡಂಡೆಸ್ಸರು ತಮ್ಮ ವಾದ ಮಂಡನೆಗಾಗಿ ಅಮೇರಿಕದ ಬಾಲಕರ ಜೀವನ ವಿಧಾನ, ಅವರು ಬಳಸುವ ಶುಭಾಶಯ ಪತ್ರ, ವಿದಾಯ ಹೇಳುವ ರೀತಿ ಮತ್ತು ಆ ಸಂದರ್ಭದಲ್ಲಿ ಬಳಸಲಾಗುವ ವಿಶಿಷ್ಟ ನುಡಿಗಟ್ಟುಗಳು, ತಮಾಷೆಯ ಮಾತುಗಳು ಮತ್ತು ಹಾಸ್ಯ ಪ್ರಸಂಗಗಳು - ಇವನ್ನು ಆಕರ ಸಾಮಗ್ರಿಗಳನ್ನಾಗಿ ಬಳಸಿಕೊಂಡಿದ್ದಾರೆ. ಡಂಡೆಸರ ಈ ವಿಶಾಲನೋಟವನ್ನು ಗಮನಿಸಿದರೆ ಜಾನಪದ ಲೋಕದ ಸಮಸ್ತ

ವಿವರಗಳೂ ಇದರಲ್ಲಿ ಸೇರ್ಪಡೆಯಾಗುತ್ತವೆ. ಇದನ್ನು ಗಮನಿಸಿಕೊಂಡರೆ 'world view' ಎಂಬ ಪದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ 'ಲೋಕದೃಷ್ಟಿ' ಎಂಬ ಪದವನ್ನು ಬಳಕೆಗೆ ತರಬಹುದು ಎಂದು ತೋರುತ್ತದೆ. ಲೋಕದ ಹುಟ್ಟು, ನಾಶಗಳ ಜೊತೆಗೆ ಲೋಕ ಸಮಸ್ತದ ಬಗ್ಗೆ ಜನಪದರು ಹೊಂದಿರುವ ದರ್ಶನವೇ ಲೋಕ ದೃಷ್ಟಿ[1]. ಇದು ಪ್ರಜ್ಞಾಪೂರ್ವಕವಾದ ಅಭಿವ್ಯಕ್ತಿಯನ್ನು ಹೊಂದಿದೆ ಎನ್ನುವಂತಿಲ್ಲ. ಜನರು ಬದುಕುವ ರೀತಿಯಲ್ಲಿ ಅವರ ಭಾಷಿಕ ರಚನೆಗಳಲ್ಲಿ ಅದು ಅಂತಸ್ಥವಾಗಿರುತ್ತದೆ. ಮಾಲಿನೋವಸ್ಕಿ (೧೯೨೨), ರೋಬರ್ಟ ರೆಡ್ ಫೀಲ್ಡ್ (೧೯೫೩-೮೫), ಗರ್ಟ್ಜ್, ಕ್ಲುಕೋಮ್ (೧೯೪೯:೩.೫೮), ಕೆರ್ನಿ (೧೯೭೫:೨೪೭-೭೦) ಗ್ರೂಲೆ (೧೯೬೫) ಮೊದಲಾದ ಮಾನವಶಾಸ್ತ್ರಜ್ಞರು ಲೋಕದೃಷ್ಟಿಯ ಬಗೆಗಣ ನಮ್ಮ ಅರಿವನ್ನು ಸಾಕಷ್ಟು ವಿಸ್ತರಿಸಿದ್ದಾರೆ. ಆದರೆ ಯಾಕೋ ಡಂಡೆಸ್ ಒಬ್ಬರನ್ನು ಬಿಟ್ಟರೆ ಉಳಿದಂತೆ ಜಾಗತಿಕ ಮಟ್ಟದಲ್ಲಿಯೂ ಜಾನಪದ ವಿದ್ವಾಂಸರು ಲೋಕದೃಷ್ಟಿಯ ಬಗೆಗೆ ಹೆಚ್ಚು ಚರ್ಚಿಸಿಲ್ಲ. ಕನ್ನಡ ಜಾನಪದ ಇಲ್ಲವೇ ತುಳು ಜಾನಪದದ ಲೋಕದೃಷ್ಟಿಯನ್ನು ವಿವರಿಸಬಲ್ಲಂಥ ಲೇಖನಗಳೂ ಪ್ರಕಟವಾಗಿಲ್ಲ. ಇಷ್ಟಿದ್ದರೂ ಜೀ.ಶಂ.ಪರಮಶಿವಯ್ಯ (೧೯೭೫), ವಿವೇಕ ರೈ (೧೯೮೫), ಚಂದ್ರಶೇಖರ ಕಂಬಾರ (೧೯೮೦), ಪೀಟರ್ ಕ್ಲಾಸ್ (೧೯೮೭), ರಾಮಾನುಜನ್ (೧೯೮೬), ಸತ್ಯನಾಥ (೧೯೮೮) ಮೊದಲಾದವರು ಜಾನಪದರ ಕುರಿತು ನಡೆಸಿದ ವಿಶ್ಲೇಷಣೆಗಳಲ್ಲಿ ಜನಪದರ ಲೋಕದೃಷ್ಟಿಯ ಕುರಿತಾದ ಕೆಲವು ಸೂಚನೆಗಳಿವೆ.

ಕರ್ನಾಟಕ ಜಾನಪದವೂ ಸೇರಿದಂತೆ, ಜಗತ್ತಿನ ಯಾವುದೇ ಭಾಷೆಯ ಜಾನಪದಕ್ಕೆ 'ಒಂದು ಲೋಕ ದೃಷ್ಟಿ' ಅಂತ ಇರುವುದಕ್ಕೆ ಸಾಧ್ಯವಿಲ್ಲ. ಅದರ ಬದಲು ಅಲ್ಲಿ ಹಲವು ಲೋಕದೃಷ್ಟಿಗಳಿರುತ್ತವೆ. ಜಾನಪದದ ಮೂಲಗುಣವೇ ವಿಕೇಂದ್ರೀಕೃತವಾಗಿರುವುದಾಗಿದೆ. ದೇಶದಿಂದ ದೇಶಕ್ಕೆ, ಜನಾಂಗದಿಂದ ಜನಾಂಗಕ್ಕೆ, ಜಾತಿಯಿಂದ ಜಾತಿಗೆ, ಬಳಿಯಿಂದ ಬಳಿಗೆ, ಕುಟುಂಬದಿಂದ ಕುಟುಂಬಕ್ಕೆ ಮತ್ತು ಇನ್ನೂ ಸೂಕ್ಷ್ಮವಾಗಿ ವ್ಯಕ್ತಿಯಿಂದ ವ್ಯಕ್ತಿಗೆ ಲೋಕದೃಷ್ಟಿಯ ಸ್ವರೂಪದಲ್ಲಿ ಭಿನ್ನತೆಗಳಿರುವುದು ಸಹಜವೇ ಆಗಿದೆ. ಇಷ್ಟಿದ್ದರೂ ಕಾಲ, ಸ್ಥಳ ಮತ್ತು ನಿರ್ದಿಷ್ಟ ಸಮುದಾಯಕ್ಕೆ ಸಂಬಂಧಿಸಿದಂತೆ ಜನರ ಲೋಕದೃಷ್ಟಿಯಲ್ಲಿ ಸಮಾನ ಅಂಶಗಳೂ ಗೋಚರವಾಗಬಹುದು. ಆದ್ದರಿಂದಲೇ 'ಲೋಕದೃಷ್ಟಿಯು ಸಂಸ್ಕೃತಿ ನಿಷ್ಠವಾಗಿದೆ' ಎಂದು ಹೇಳಲಾಗುತ್ತಿದೆ. ಅದು ಸಂಸ್ಕೃತಿ ನಿಷ್ಠವಾಗಿರುವುದರಿಂದಲೇ ಸಾಕಷ್ಟು ಗೊಂದಲಗಳನ್ನೂ, ವೈರುದ್ಧ್ಯಗಳನ್ನು, ಭಿನ್ನ ಸಂಸ್ಕೃತಿಗಳ ನಡುವೆ ಬಗೆ ಬಗೆಯ ಕರ್ಷಣಗಳನ್ನು ಉಂಟು ಮಾಡಿಬಿಟ್ಟಿದೆ. ಜನರು ತಮ್ಮ ಲೋಕದೃಷ್ಟಿಯನ್ನು ಮಾತ್ರ 'ಶಿಷ್ಟ'ವೆಂದು ಗ್ರಹಿಸಿ, ಉಳಿದವುಗಳನ್ನು 'ಪರಿಶಿಷ್ಟ' ಮಾಡಿರುವುದುಂಟು.

ಜನಪದರ ಲೋಕದೃಷ್ಟಿಯು ಅವರ ಸಂಸ್ಕೃತಿಯ ಎಲ್ಲ ಬಿಡಿ ಘಟಕಗಳಲ್ಲಿಯೂ ಅವತರಿಸಿರುತ್ತದೆ. ಹಾಗೆಯೇ ಆ ಸಂಸ್ಕೃತಿಯ ಒಟ್ಟು ಸ್ವರೂಪದಲ್ಲಿಯೂ ಗೋಚರಿಸುತ್ತಿರುತ್ತದೆ. ಸಂಸ್ಕೃತಿಯ ಪ್ರಕಟರೂಪ ಮತ್ತು ನಿಗೂಢ ಲೋಕಗಳಲ್ಲೂ ಅದು ತಾನೇ ತಾನಾಗಿ ಪ್ರತೀತಗೊಂಡಿರುತ್ತದೆ. ಹಾಗಂತ ಕೆಲವು ಬಗೆಯ ಸಂಸ್ಕೃತಿಗಳು ಕೆಲವನ್ನು ಮಾತ್ರ ತಾಳಿಕೊಳ್ಳುತ್ತವೆ, ಕೆಲವನ್ನು ಅವು ತಾಳಿಕೊಳ್ಳಲಾರವು. ಲೋಕದೃಷ್ಟಿಯ ಅಧ್ಯಯನದಲ್ಲಿ ಅವೆರಡೂ ಮುಖ್ಯವಾಗುತ್ತವೆ. ಏನು ಹಾಜರಾಗಿದೆ ಮತ್ತು ಯಾವುದು ಗೈರು ಹಾಜರಾಗಿದೆ ಎಂಬುದರ ತಲಸ್ಪರ್ಶಿ ವಿವೇಚನೆಯಿಂದ ಲೋಕ ದೃಷ್ಟಿಯನ್ನು ಅರ್ಥ ಮಾಡಿಕೊಳ್ಳಬಹುದು. ಕರಾವಳಿ ಕರ್ನಾಟಕದಲ್ಲಿ ತಾಳಮದ್ದಳೆ ಇದೆ. ಪಾಡ್ದನಗಳಿವೆ ಮತ್ತು ಭೂತಗಳಿವೆ. ಉತ್ತರ ಮತ್ತು ದಕ್ಷಿಣ ಕರ್ನಾಟಕದಲ್ಲಿ ಅವು ಇಲ್ಲ. ಏಕೆ ಅವುಗಳು ಇವೆ? ಮತ್ತು ಏಕೆ ಅವುಗಳು ಇಲ್ಲ? ಎಂಬ ಪ್ರಶ್ನೆಗಳೇ ಸಂಸ್ಕೃತಿಯ ತಳವನ್ನು ಕೆದಕುತ್ತವೆ ಮತ್ತು ಆ ಮೂಲಕ ಜನರ ದರ್ಶನವನ್ನು ಅರ್ಥಮಾಡಿಕೊಳ್ಳಲು ಬೇಕಾದ ನೆಲೆಗಳನ್ನು ಒದಗಿಸಿಕೊಡುತ್ತವೆ.

---

1. 'ಜಾನಪದದಲ್ಲಿ ಲೋಕದೃಷ್ಟಿ' ಎಂಬ ಲೇಖನದಲ್ಲಿ ನಾನು ಈ ಕುರಿತು ಚರ್ಚಿಸಿದ್ದೇನೆ ನೋಡಿ : ಪುರುಷೋತ್ತಮ ಬಿಳಿಮಲೆ ೧೯೯೦ : ೧೫೨-೧೬೧.

ಇರುವುದರ ಮೂಲಕ ಇಲ್ಲದಿರುವಿಕೆಯನ್ನು ಮತ್ತು ಇಲ್ಲದಿರುವಿಕೆಯ ಮೂಲಕ ಇರುವುದನ್ನು ತಿಳಿಯುವ ಪ್ರಯತ್ನವಿದು. ಇಂಥ ಪ್ರಯತ್ನಗಳು ಜನರ ಲೋಕದೃಷ್ಟಿಯನ್ನು ಅನಾವರಣ ಮಾಡುತ್ತ ಲೋಕ ವಿಮರ್ಶೆ ಅಥವಾ ಸಂಸ್ಕೃತಿ ವಿಮರ್ಶೆಯ ಸ್ವರೂಪವನ್ನು ಪಡೆದುಕೊಳ್ಳುತ್ತವೆ.

ಸಂಸ್ಕೃತಿಯೊಂದರ ಲೋಕದೃಷ್ಟಿಯು ಮೂಲತಃ ಅದ್ಯಂತಿಕವಾಗಿ ಸೈದ್ಧಾಂತಿಕವಾಗಿರುತ್ತದೆ. ಜನರು ತಾವು ಕಂಡ ಲೋಕದ ಕುರಿತು ಎಂಥ ಭಾವನೆಗಳನ್ನು ಹೊಂದಿರುತ್ತಾರೆ? ಅವರು ತಮ್ಮ ಮೌಖಿಕ ವಿವರಣೆ ಅಥವಾ ಸಾಮಾಜಿಕ ನಡಾವಳಿಗಳು ಮತ್ತು ಆಚರಣೆಗಳ ಮೂಲಕ ಏನನ್ನು ಸಂವಹನಗೊಳಿಸಲು ಬಯಸುತ್ತಾರೆ? ಸಂಸ್ಕೃತಿಯೊಂದರ ಲೋಕದೃಷ್ಟಿಯ ಸ್ವರೂಪವೇನು? ಒಂದು ನಿರ್ದಿಷ್ಟ ಸ್ಥಳ ಮತ್ತು ಕಾಲಕ್ಕೆ ಸಂಬಂಧಿಸಿದಂತೆ ಲೋಕದೃಷ್ಟಿಯು ಏನನ್ನು ಪೂರೈಸಿ ಕೊಡುತ್ತದೆ? ಎಂಬಿತ್ಯಾದಿ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕು. ಮೂಲತಃ ಇವೆಲ್ಲವೂ ನಿಜವಾಗಿಯೂ ಒಂದೇ ಪ್ರಶ್ನೆಯ ವಿವಿಧ ರೂಪಗಳಾಗಿವೆ. ಲೋಕದೃಷ್ಟಿಯು ಒಂದು ನಿಯೋಗಾತ್ಮಕ ರಚನೆ ಅಂದರೆ ನಿರ್ದಿಷ್ಟ ಬಗೆಯ ಉದ್ದೇಶಗಳನ್ನು ಸಾಧಿಸಲು ಬಳಸುವ ಸಂವಹನ ಮಾಧ್ಯಮ. ತನ್ನ ವ್ಯಾಪ್ತಿಗೆ ಒಳಪಡುವ ಜನರನ್ನು ಪ್ರಭಾವಿಸಲು, ಅವರನ್ನು ಒಂದು ಕೇಂದ್ರದಲ್ಲಿ ಹಿಡಿದಿಡಲು, ನಿಶ್ಚಿತ ಆಕೃತಿ ಮತ್ತು ವಿನ್ಯಾಸಗಳ ಮೂಲಕ ಪರಿಣಾಮ ಬೀರಲು ಸಂಭವಿಸುವ ಕ್ರಿಯೆ. ಭಾರತದ ಜಾತಿ ಸಮಾಜದಲ್ಲಿ ಎಲ್ಲ ಜಾತಿಗಳಿಗೂ ಗ್ರಾಹಕರಿರುತ್ತಾರೆ. ಇಂಥ ಗ್ರಾಹಕರನ್ನು ಪ್ರಭಾವಿಸಲು, ಜಾತಿಗೆ ನಿಷ್ಠರಾಗಿರುವಂತೆ ಒತ್ತಾಯಿಸಲು, ಲೋಕದೃಷ್ಟಿ ಬಳಕೆಯಾಗುತ್ತದೆ.

ಲೋಕದೃಷ್ಟಿ ಯಾಕಾಗಿ ಬೇಕು? ಎಂಬ ನಿಯೋಗಾತ್ಮಕ ಪ್ರಶ್ನೆಯನ್ನು ಒಡ್ಡಿ, ಈ ಚರ್ಚೆಯನ್ನು ಇನ್ನೂ ಸ್ವಲ್ಪ ಮುಂದುವರಿಸಬಹುದು. ಏಕೆಂದರೆ, ಲೋಕದೃಷ್ಟಿ ಎಂದರೇನು? ನಿಮ್ಮ ಲೋಕದೃಷ್ಟಿಯ ಸ್ವರೂಪವೇನು? ಎಂಬಿತ್ಯಾದಿ ನೇರ ಪ್ರಶ್ನೆಗಳಿಗೆ ಉತ್ತರ ಸಿಗುವುದು ಕಷ್ಟ. ಸ್ವತಃ ಲೋಕದೃಷ್ಟಿ ಉಳ್ಳವರಿಗೆ ಅದರ ಬಗ್ಗೆ ಪ್ರಜ್ಞೆ ಇರಬೇಕೆಂದೇನೂ ಇಲ್ಲ. ಮಾತೃಭಾಷೆಯನ್ನು ಚೆನ್ನಾಗಿ ಮಾತಾಡಬಲ್ಲವನಿಗೆ ಆ ಭಾಷೆಯ ವ್ಯಾಕರಣ ತಿಳಿದಿರಬೇಕೆಂದೇನೂ ಇಲ್ಲವಲ್ಲ. ವ್ಯಾಕರಣವೇನಿದ್ದರೂ ಪಂಡಿತರ ಕೆಲಸ. ಲೋಕದೃಷ್ಟಿಯಾದರೂ ಅಷ್ಟೆ. ಜನರ ಜೀವನ ವಿಧಾನದ ಎಲ್ಲ ಸೂಕ್ಷ್ಮ ಘಟಕಗಳಲ್ಲೂ ಅದು ಧ್ವನಿಪೂರ್ಣವಾಗಿ ಸೇರಿಕೊಂಡಿರುತ್ತದೆ. ಚಿಕಿತ್ಸಕ ದೃಷ್ಟಿ ಇರುವವನು ಇಂಥವನ್ನು ಭಾಷಿಕವಾಗಿ ಪುನರ್-ಸಂಘಟಿಸಿ, ವ್ಯಾಖ್ಯಾನಕ್ಕೆ ಬೇಕಾದ ವಲಯವನ್ನು ನಿರ್ಮಿಸಿಕೊಳ್ಳಬೇಕಾಗುತ್ತದೆ. ಹೀಗಾಗಿ ಎಷ್ಟೇ ಬೇಡವೆಂದರೂ ಲೋಕದೃಷ್ಟಿಯ ಕುರಿತಾದ ಚರ್ಚೆ ಅಂತಿಮವಾಗಿ ವ್ಯಾಖ್ಯಾನವಲಂಬಿತ ಮಾರ್ಗವನ್ನೇ ಹಿಡಿಯಬೇಕಾಗುತ್ತದೆ. ಇದನ್ನು ಬಿಟ್ಟರೆ ಉಳಿದವು ಕೇವಲ ತಾಂತ್ರಿಕ ಪ್ರಶ್ನೆಗಳಾಗಿರುತ್ತವೆ. ಅಂದರೆ ಲೋಕದೃಷ್ಟಿಯ ನಿರೂಪಣೆಗಳಲ್ಲಿ ಕಂಡುಬರುವ ನಿರೂಪಕ ಮತ್ತು ನಿರೂಪೇಯರ ನಡುವಣ ಸಂವಹನ ಹೇಗೆ ಸಾಧಿತವಾಗುತ್ತದೆ? ಈ ಸಂವಹನದಲ್ಲಿ ತನ್ನ ದೃಷ್ಟಿಕೋನವನ್ನು ಒಪ್ಪಿಕೊಳ್ಳುವಂತೆ, ಒಮ್ಮತವನ್ನು ತಾದಾತ್ಮ್ಯವನ್ನು ಸಾಧಿಸುವಂತೆ ನಿರೂಪಕನು ನಿರೂಪೇಯನನ್ನು ಅಥವಾ ಕೇಳುಗನನ್ನು ಅರ್ಥ ಜ್ಞಾತೃವನ್ನಾಗಿ ಮಾಡುವ ವಿಧಾನಗಳೇನು? ಹಾಗೂ ನಿರ್ದಿಷ್ಟ ಸಂಸ್ಕೃತಿಯೊಂದು ತನ್ನ ಲೋಕ ದೃಷ್ಟಿಯನ್ನೇ ವಾಸ್ತವವನ್ನಾಗಿ ಸ್ವೀಕರಿಸಲು ಬೇರೆಯವರನ್ನು ಒತ್ತಾಯಿಸುವ ವೈಖರಿಯೇನು? ಎಂಬಿತ್ಯಾದಿ ಪ್ರಶ್ನೆಗಳು ಇಲ್ಲಿ ಮುನ್ನೆಲೆಗೆ ಬರುತ್ತವೆ. ಪ್ರಸ್ತುತ ಪ್ರಬಂಧದಲ್ಲಿ ಈ ಅಂಶಗಳನ್ನು ಅಷ್ಟಾಗಿ ಪರಿಶೀಲನೆಗೆ ಎತ್ತಿಕೊಂಡಿಲ್ಲ.

ಸಂಸ್ಕೃತಿಯು ತನ್ನ ಒಟ್ಟು ವಿವರಗಳ ಮೂಲಕ ಹೇಗೋ ಹಾಗೆ ಅತ್ಯಂತ ಸೂಕ್ಷ್ಮಸ್ತರದಲ್ಲಿ ಕೂಡಾ ಏನನ್ನೋ ಪ್ರಕಟಿಸುತ್ತದೆ ಎಂಬ ಪ್ರಶ್ನೆಗೆ ಉತ್ತರಿಸಲು, ಸಂಸ್ಕೃತಿ ಕೂಡಾ ಒಂದು ನಿರ್ದಿಷ್ಟ ನಿರ್ಮಾಣ ಅಥವಾ ರಚನೆ ಎಂಬ ಪೂರ್ವಗ್ರಹಿಕೆಯ ಚೌಕಟ್ಟು ಅವಶ್ಯಕ. ಅಂದರೆ ಸಂಸ್ಕೃತಿಯು ಅದು ಇರುವಂತೆ ವಾಸ್ತವ ಸಂಗತಿಗಳ ತಟಸ್ಥ, ವಸ್ತುನಿಷ್ಠ ಅಭಿವ್ಯಕ್ತಿ ಎನ್ನುವಂತಿಲ್ಲ. ಅದರ ವಿವರಗಳ ಸಂಯೋಜನೆಯ ಹಿಂದೆ ಒಂದು ನಿರ್ದಿಷ್ಟವಾದ ಚಿಂತನಾವಿನ್ಯಾಸವಿರುತ್ತದೆ : ಸೈದ್ಧಾಂತಿ ಕಥೆಯಿರುತ್ತದೆ. ಸಂಸ್ಕೃತಿಯ ಬಗೆಗಣ ಈಚಿನ ಅಧ್ಯಯನಗಳು ಸಂಸ್ಕೃತಿಯ ಸೈದ್ಧಾಂತಿಕ ಕಲ್ಪನೆ ಹಲವು ಸೂಕ್ಷ್ಮ

ಅವತರಣಗಳಲ್ಲಿ ಪ್ರತ್ಯಕ್ಷವಾಗುತ್ತಿರುವುದನ್ನು ಬಹಿರಂಗಗೊಳಿಸುತ್ತಿವೆ. ಮೇಲ್ಮಟ್ಟದಲ್ಲಿ ಅಥವಾ ಸರಳವಾದ ನೆಲೆಗಳಲ್ಲಿ ರಾಜಕೀಯ, ಮತೀಯ ಮತ್ತು ಕಲಾತ್ಮಕ ರೂಪಗಳಲ್ಲಿ ಅದು ಸಾಮಾನ್ಯನಿಗೂ ಅರ್ಥವಾಗುವಂತಿರುತ್ತದೆ. ಆಯಾ ಸಂಸ್ಕೃತಿಗಿರುವ ವ್ಯಾವಹಾರಿಕ ಜ್ಞಾನದಲ್ಲಿ ಈ ಸೈದ್ಧಾಂತಿಕತೆ ಕ್ರಿಯಾಶೀಲವಾಗುತ್ತಿರುತ್ತದೆ. ಆದ್ದರಿಂದಲೇ ಜನರು ತಮ್ಮ ವ್ಯಾವಹಾರಿಕ ನೆಲೆಯನ್ನು ಆಧರಿಸಿಕೊಂಡು ತಮ್ಮ ಸಂಸ್ಕೃತಿ ಶ್ರೇಷ್ಠ ಎಂಬ ಭಾವನೆಗೆ ಪಕ್ಕಾಗಿ ಬಿಡುತ್ತಾರೆ. ಇದು ಒಂದು ಬಗೆಯಲ್ಲಿ ಮಿಥ್ಯಾಪ್ರಜ್ಞೆ . ಅಥವಾ ಸಂಸ್ಕೃತಿಯೊಂದರ ಹುಸಿ ನೆಲೆ. ಇವರು ಬೇರೆ ಸಂಸ್ಕೃತಿಗಳಿಗೂ ಅಂಥ ಸೈದ್ಧಾಂತಿಕತೆ ಇರುತ್ತದೆ ಎಂಬುದನ್ನು ಮರೆತುಬಿಟ್ಟು ಎಷ್ಟೋ ಬಾರಿ ಆಕ್ರಮಣ ಶೀಲರಾಗುತ್ತಾರೆ. ನಮ್ಮಲ್ಲಿರುವ ವಿವಿಧ ಜಾತಿಗಳ ಜನರು ಕೆಲವು ಬಾರಿ ತಮ್ಮದಲ್ಲದ ಜಾತಿಗಳ ಬಗೆಗೆ ಹುಚ್ಚರಂತೆ ವರ್ತಿಸುತ್ತ, ತಮ್ಮ ಮಿಥ್ಯಾಪ್ರಜ್ಞೆಯನ್ನು ಪ್ರಕಟಿಸುವುದುಂಟು. ಮತ-ಧರ್ಮ-ಪ್ರದೇಶಗಳ ವಿಷಯದಲ್ಲೂ ಈ ಮಿಥ್ಯಾ ಪ್ರಜ್ಞೆ ತೀವ್ರವಾಗಿ ಕಾಡುತ್ತದೆ. ಸಂಸ್ಕೃತಿಯೊಂದರ ಸೈದ್ಧಾಂತಿಕತೆಯು ಹೀಗೆ ಜನರನ್ನು ಭ್ರಮಾತ್ಮೀಕರಣಕ್ಕೆ ಒಳಪಡಿಸಿಬಿಡುತ್ತದೆ. ಇಲ್ಲಿ ನಿಜಕ್ಕೂ ಏನು ಸಂಭವಿಸುತ್ತಲಿದೆ ಹಾಗೂ ಏನು ಮಾಡಲಾಗುತ್ತಿದೆ ಎಂಬ ಬಗೆಗೆ ಒಂದು ರೀತಿಯ ಹುಸಿ ಕಲ್ಪನೆಯನ್ನು ಸೃಷ್ಟಿಸಲಾಗುತ್ತದೆ. ಜನಪದರ ಲೋಕದೃಷ್ಟಿ ಎಷ್ಟೋ ಬಾರಿ ಇಂಥ ಭ್ರಮಾತ್ಮಕ ನೆಲೆಗಳಲ್ಲಿ ಕಾರ್ಯನಿರತವಾಗುವುದೂ ಉಂಟು.

ಭ್ರಮಾತ್ಮೀಕರಣಕ್ಕೆ ಎರಡು ಆಯಾಮಗಳಿವೆ. ಭ್ರಮಾತ್ಮೀಕರಣಗೊಳಿಸುವ ಕ್ರಿಯೆ ಮತ್ತು ಭ್ರಮಾತ್ಮೀಕರಣಕ್ಕೆ ಒಳಪಟ್ಟ ಸ್ಥಿತಿ. ಒಂದು ಕರ್ತರಿ ಪ್ರಯೋಗ, ಇನ್ನೊಂದು ಕರ್ಮಣೀ ಪ್ರಯೋಗ.

ಈ ನಾಡಿನಲ್ಲಿ ಅಕ್ಷರಸ್ಥರು ಮತ್ತು ಮೇಲ್ಜಾತಿಯ ಜನರು ಅನಕ್ಷರಸ್ಥರ ಮತ್ತು ಕೆಳಜಾತಿಯ ಜನರ ಲೋಕದಷ್ಟಿಯನ್ನು ಭ್ರಮಾತ್ಮೀಕರಣಕ್ಕೆ ಒಳಪಡಿಸಿದ್ದಾರೆ. ಐತಿಹಾಸಿಕ ಕಾರಣಗಳಿಗಾಗಿ ಕೀಳರಿಮೆಗೆ ಒಳಗಾಗಿರುವ ಅನಕ್ಷರಸ್ಥರು ಮತ್ತು ಕೆಳಜಾತಿಯ ಜನರು ಭ್ರಮಾತ್ಮೀಕರಣಕ್ಕೆ ಒಳಪಟ್ಟಿದ್ದಾರೆ ಕೂಡ. ಭ್ರಮಾತ್ಮೀಕರಣಕ್ಕೆ ಒಳಪಡಿಸುವ ಕ್ರಿಯೆಯೆಂದರೆ ಬೇರೆಯವರನ್ನು ಗೊಂದಲಕ್ಕೀಡು ಮಾಡುವುದು, ತಮ್ಮವರಲ್ಲದವರಿಂದ ಏನನ್ನೋ ಮರೆಮಾಡುವುದು, ಸೂಕ್ಷ್ಮ ವಿವರಗಳನ್ನು ಗೋಜಲುಗೊಳಿಸುವುದು, ಅನುಭವ - ಕ್ರಿಯೆ - ಪ್ರಕ್ರಿಯೆಗಳನ್ನು ಮುಚ್ಚಿಟ್ಟು ನಿಗೂಢಗೊಳಿಸುವುದು, ನೈಜ ಸಂಗತಿಗಳನ್ನು ವಿರೂಪಗೊಳಿಸುವುದು. ನೈಜ ಸಂಗತಿಗಳ ಮೇಲೆ, ವಾಸ್ತವ ವಿಷಯಗಳ ಮೇಲೆ ಪರದೆ ಎಳೆದ ಕಾರಣವಾಗಿ ತೆರೆ ಮರೆಯಲ್ಲಿ ನಿಜಕ್ಕೂ ಏನು ಘಟಿಸುತ್ತಿದೆ ಎಂಬ ವಿವೇಚನೆ ತಪ್ಪಿ ಹೋಗಿ, ಭ್ರಮೆ - ವಾಸ್ತವಗಳ ಕುರಿತಾಗಿ ನೈಜ ವಿವೇಕವೂ ಇಲ್ಲವಾಗುತ್ತದೆ. ಅನುಭವಗಳ, ಕ್ರಿಯೆಗಳ, ಪ್ರಕ್ರಿಯೆಗಳ ನಿಜ ರೂಪಗಳನ್ನು ಪ್ರದರ್ಶಿಸುವ ಬದಲಾಗಿ ಇಲ್ಲಿ ಮಿಥ್ಯಾ ಕಲ್ಪನೆಗಳನ್ನು ಒದಗಿಸಲಾಗುತ್ತದೆ. ನಿಜಗಳ ಬದಲು ಮಿಥ್ಯೆಗಳು ಮುನ್ನೆಲೆಯಲ್ಲಿ ವಿಜೃಂಭಿಸುತ್ತವೆ. ಜನರು ಮಿಥ್ಯೆಗಳೊಡನೆ ಗುದ್ದಾಡುತ್ತ ತಮ್ಮ ಸೃಜನಶೀಲತೆಯನ್ನು ಹುಸಗೊಳಿಸಿಕೊಳ್ಳುತ್ತಾರೆ.

ಭ್ರಮೆಗೆ ಒಳಪಟ್ಟ ಸ್ಥಿತಿಯು ಗೊಂದಲದಲ್ಲಿರುವ ಭಾವವನ್ನು ವಿಶದೀಕರಿಸುತ್ತದೆ. ಈ ಭಾವವನ್ನು ಭ್ರಮಾತ್ಮೀಕರಣ ಕ್ರಿಯೆಯೇ ಉಂಟು ಮಾಡುತ್ತದೆ. ಇಂಥಲ್ಲಿ ವ್ಯಕ್ತಿಯಾಗಲೀ, ಸಮಾಜವಾಗಲೀ ಅಥವಾ ಸಮುದಾಯವಾಗಲೀ ತನ್ನ ಗೊಂದಲದ ಸ್ಥಿತಿಯನ್ನು ತಾನೇ ಅರ್ಥ ಮಾಡಿಕೊಳ್ಳಲಾರದಾಗುತ್ತದೆ. ಗೊಂದಲದಲ್ಲಿ ಇದ್ದರೂ ಗೊಂದಲದಲ್ಲಿ ಇದ್ದೇವೆ ಎಂಬ ಪ್ರಜ್ಞೆ ಅಲ್ಲಿ ಇರುವುದಿಲ್ಲ. ಆದ್ದರಿಂದ ಅಲ್ಲಿ ಕರ್ತರಿ ಮತ್ತು ಕರ್ಮಣಿಗಳ ನಡುವೆ ಸಂಘರ್ಷವೂ ಇರುವುದಿಲ್ಲ ; ಕರ್ಷಣವೂ ಇರುವುದಿಲ್ಲ. ಹುಸಿ ಕಾರಣಗಳಿಗಾಗಿ ಸಂಘರ್ಷ ಗೌಣವಾಗುತ್ತದೆ. ಆಗಾಗ್ಗೆ ಸಂಘರ್ಷದ ತೀವ್ರತೆ ಕಂಡುಬಂದರೂ ಅದಕ್ಕೆ ಭ್ರಮೆಯ ಕವಚನವನ್ನು ಹೊದಿಸಲಾಗುತ್ತದೆ. ಇಂಥ ಸಂದರ್ಭಗಳೇ ಮಿಥ್ಯಾಶಾಂತಿ, ಸುಳ್ಳು ಸುಭಿಕ್ಷ ಮತ್ತು ಅಪ್ರಸ್ತುತ ಸುಂದರ ಇತಿಹಾಸವನ್ನು ನಿರ್ಮಿಸುತ್ತವೆ. ಭಾರತದಲ್ಲಂತೂ ಹೀಗೆ ಮಾಡಲಾಗಿದೆ ಮತ್ತು ಈಗಲೂ ಅಂಥ ಕೆಲಸಗಳನ್ನು ಮಾಡಲಾಗುತ್ತಿದೆ.

ಭ್ರಮಾತ್ಮೀಕರಣವನ್ನು ಇರಗೊಳಿಸಲು ಘಟನೆಗಳಿಗೆ ನಿರ್ದಿಷ್ಟ ರೀತಿಯ ನಿರ್ದೇಶನವನ್ನು ನೀಡಲಾಗುತ್ತದೆ. ತನ್ನ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳಲು ಇತರರಲ್ಲಿ ಏನೋ ಪರಿವರ್ತನೆಯನ್ನು ಉಂಟುಮಾಡಲು ಶ್ರಮಿಸಲಾಗುತ್ತದೆ ಅಂದರೆ ತನ್ನ

ಲಾಭಕ್ಕಾಗಿ ಇತರರನ್ನು ನಿಗದಿತ ಕ್ರಿಯೆಗಳ ಮೂಲಕ ಪ್ರಭಾವಿಸಲಾಗುತ್ತದೆ. ಯಾವುದೇ ಸ್ಥಿತಿಯನ್ನು ಮರೆಮಾಡುವುದು, ಅದುಮಿಡುವುದು ಮಾತ್ರವಲ್ಲ ಇನ್ನೊಬ್ಬ ಅದನ್ನು ಬಹಿರಂಗಗೊಳಿಸಲೂ ಬಾರದು. ಆ ಇನ್ನೊಬ್ಬನೂ ಅದನ್ನು ಮರೆಮಾಚಿ ಇಡುವಂತಾಗಬೇಕು ಮತ್ತು ಮರೆಯುವಂತಾಗಬೇಕು (ಉದಾಹರಣೆ : ದನದ ಮಾಂಸ ತಿನ್ನುವ ದಲಿತರ ಸ್ಥಿತಿ) ಹಾಗೆಂದು ಇನ್ನೊಬ್ಬರ ಮೇಲೆ ಪ್ರಯೋಗಿಸುವ ಎಲ್ಲ ಪ್ರಭಾವಗಳೂ ಭ್ರಮಾತ್ಮೀಕರಣವನ್ನು ಉಂಟು ಮಾಡಬೇಕಿಲ್ಲ. ಆಜ್ಞೆಗಳು, ಒತ್ತಾಯಗಳು, ಅಡೆತಡೆಗಳು - ಇವುಗಳಿಂದ ಇನ್ನೊಬ್ಬ ವ್ಯಕ್ತಿಯ ವರ್ತನೆಯನ್ನು ನಿಯಂತ್ರಿಸಬಹುದು, ನಿರ್ದೇಶಿಸಬಹುದು ಒಲಿಸಬಹುದು. ಇಲ್ಲಿ ಮೇಲ್ನೋಟಕ್ಕೆ ಭ್ರಮಾತ್ಮೀಕರಣವಿಲ್ಲ ನಿಜ. ಆದರೆ ವ್ಯಕ್ತಿಯ ಕ್ರಿಯೆಗಳ ಮೇಲೆ ಅದೃಷ್ಟವನ್ನು, ಅಸಹಾಯಕತೆಯನ್ನು, ಹೊದಿಸಿ ಆ ಕ್ರಿಯೆಗಳಿಗೆ ಕರ್ತೃ ಕಾರಣನಲ್ಲ ಎಂದು ಸಾಧಿಸಲಾಗುತ್ತದೆ. ಆಗ ಭ್ರಮಾತ್ಮೀಕರಣ ಕಾರ್ಯಗತವಾಗುತ್ತದೆ. ತನ್ನ ಕ್ರಿಯೆಗಳಿಗೆ ತಾನು ಜವಾಬ್ದಾರನಾಗದೇ ಇರುವ ಹೀನ ಸ್ಥಿತಿ ನಿರ್ಮಾಣವಾಗುತ್ತದೆ. ವ್ಯಕ್ತಿಯ ಅಭಿಪ್ರಾಯಗಳನ್ನು ಕ್ರಿಯೆಗಳನ್ನು, ಅವನದಲ್ಲದ ಇನ್ನೊಂದು ದೃಷ್ಟಿಕೋನದೊಳಗೆ ಅಡಕಗೊಳಿಸಲಾಗುತ್ತದೆ. ಹೀಗೆ ಮಾಡುವುದರಿಂದ ಸಮಾಜದ ಸಿದ್ಧರೂಪಗಳನ್ನು, ಸಂಪ್ರದಾಯಗಳನ್ನು ಉಳಿಸಿಕೊಳ್ಳಲು ಸಹಾಯಕವಾಗುವುದು. ಹಾಗಾಗಿ ಆಳುವ ವರ್ಗ ಈ ಬಗೆಯ ಕೆಲಸಗಳನ್ನು ಸದಾ ಮಾಡುತ್ತಿರುತ್ತದೆ. ಶ್ರೇಣೀಕರಣದ ಮೇಲ್ತುದಿಯಲ್ಲಿರುವ ಜನರೂ ಅಂಥ ಶ್ರೇಣೀಕರಣದಿಂದಾಗುವ ಲಾಭವನ್ನು ಶಾಶ್ವತವಾಗಿರಿಸಿಕೊಳ್ಳಲು ಕೆಳಗಿನವರನ್ನು ಭ್ರಮಾತ್ಮೀಕರಣಕ್ಕೆ ಒಳಪಡಿಸುತ್ತಲೇ ಇರುತ್ತಾರೆ. ಬೇರೆಯವರನ್ನು ಸಿದ್ಧ ಎರಕದಲ್ಲಿ ರೂಪಿಸುವ ಯಜಮಾನ ಸಂಸ್ಕೃತಿಯು, ತನ್ನ ಔನ್ನತ್ಯವನ್ನೂ , ತನ್ನ ಕುರಿತಾದ ಪೂರ್ವಗ್ರಹಿಕೆಗಳನ್ನು ಉಳಿಸಿಕೊಳ್ಳಲು, ಸಮಾಜ ಹೇಗಿರಬೇಕು, ವ್ಯಕ್ತಿಗಳು ಹೇಗಿರಬೇಕು? ಸರಿ - ತಪ್ಪುಗಳೆಂದರೇನು? ಯಾವುದು ಗೌರವ - ಯಾವುದು ಅಗೌರವ, ಯಾವುದು ಸಂಸ್ಕಾರ; ಯಾವುದು ಅನಾಗರಿಕ ವರ್ತನೆ ಎಂಬಿತ್ಯಾದಿಗಳನ್ನು ಜ್ಯಾರಿಗೊಳಿಸುತ್ತದೆ. ಇತರ ಆಲೋಚನೆಯ ವ್ಯವಸ್ಥೆಯನ್ನು ಶಿಥಿಲಗೊಳಿಸಿಬಿಟ್ಟಾವು ಎಂಬ ಆತಂಕದಲ್ಲಿ ಸಂಘರ್ಷವೇ ಇಲ್ಲ ಎಂಬ ನಟನೆಯಲ್ಲೂ ಅದು ತೊಡಗುತ್ತದೆ. ಸದ್ಯದ ಸ್ಥಿತಿಯನ್ನು ಅಭೇದ್ಯಗೊಳಿಸುವುದು ಹಾಗೂ ಸಂಘರ್ಷವೇ ಇಲ್ಲವೆಂಬ ಮುಖವಾಡ ಧರಿಸುವುದು ಭ್ರಮಾತ್ಮೀಕರಣದ ಮುಖ್ಯ ಲಕ್ಷಣಗಳು. ಇನ್ನೊಬ್ಬರ ಸ್ವಂತ ವಿಶ್ವಾಸವನ್ನು ಕೀಳರಿಮೆಗೆ ಒಳಪಡಿಸಿ, ತನ್ನದೇ ದೃಷ್ಟಿಕೋನವನ್ನು ಸಂದೇಹಿಸುವಂತೆ ಇಲ್ಲಿ ಪರೋಕ್ಷವಾಗಿ ಒತ್ತಡ ಹೇರಲಾಗುವುದು.

ಸ್ವಲ್ಪ ದೀರ್ಘವಾದರೂ ವಿಷಯ ಈಗ ಖಚಿತವಾಗುತ್ತದೆ. ಈ ದೇಶದಲ್ಲಿ ಜನಪದರ ಲೋಕ ದೃಷ್ಟಿ ಭ್ರಮಾತ್ಮೀಕರಣಕ್ಕೆ ಒಳಪಟ್ಟಿದೆ. ಹಿಂದೂಧರ್ಮವು ಅದಕ್ಕಿಂತ ಹೊರತಾಗಿರುವುದನ್ನೆಲ್ಲ ಭ್ರಮಾತ್ಮೀಕರಣಗೊಳಿಸಿದೆ. ಚರಿತ್ರೆಯ ಘಟನೆಗಳು ಅದನ್ನು ಸಾಬೀತುಪಡಿಸುತ್ತವೆ. ವ್ಯಕ್ತಿಯೊಬ್ಬ ಹುಟ್ಟಿದಾಗಲೇ ಇಲ್ಲಿ ಒಂದು ಜಾತಿಗೆ ಒಳಪಡುತ್ತಾನೆ. ತಾಯಿಯ ಮೊಲೆ ಹಾಲು ಕುಡಿಯುವ ಮುನ್ನವೇ ಆತನ ಸಾಮಾಜಿಕ ಸ್ಥಾನಮಾನಗಳನ್ನು ಸೈದ್ಧಾಂತಿಕವಾಗಿ ನಿರ್ಧರಿಸಲಾಗುತ್ತದೆ. ಆತನು ಏನನ್ನಾದರೂ ಯೋಚಿಸುವ ಮುನ್ನವೇ ಆತನನ್ನು ಯಜಮಾನ ವರ್ಗದ ಸೈದ್ಧಾಂತಿಕತೆಯ ಜ್ಞಾತೃವನ್ನಾಗಿ (Subjected being) ಮಾಡಲಾಗುತ್ತದೆ. ಬ್ರಾಹ್ಮಣೇತರ ಜನವರ್ಗ ಹೀಗೆ ಬೌದ್ಧಿಕವಾಗಿ ಭ್ರಮಾತ್ಮೀಕರಣಕ್ಕೆ ಒಳಪಟ್ಟ ಸ್ಥಿತಿ ನಮ್ಮ ಕಣ್ಣ ಮುಂದಿದೆ. ಅಂಥ ಭ್ರಮಾತ್ಮೀಕರಣ ಪ್ರಕ್ರಿಯೆಗಳನ್ನು ಸಾರಾಸಗಟಾಗಿ ಮುಂದುವರಿಸಲಾಗುತ್ತಿದೆ. ಜಾನಪದದಲ್ಲಿನ ಲೋಕದೃಷ್ಟಿಯನ್ನು ಅರ್ಥಮಾಡಿಕೊಳ್ಳುವುದು ಎಂದರೆ ಇದುವರೆಗೆ ವಿವರಿಸಲಾದ ಭ್ರಮಾತ್ಮೀಕರಣ ಪ್ರಕ್ರಿಯೆಯನ್ನು ದೂರವಿಡುವುದೇ ಆಗಿದೆ. ಅದು ಆಳುವವರ್ಗದ ವ್ಯಾವಹಾರಿಕ ಜ್ಞಾನವನ್ನು ಪ್ರಶ್ನಿಸುತ್ತದೆ ಮತ್ತು ಅಂತಹ ಪ್ರಶ್ನೆಗಳ ಮೂಲಕವೇ ಯಜಮಾನ ಸಂಸ್ಕೃತಿಯ ಮೌಲ್ಯಮಾಪನ ಮಾಡುತ್ತದೆ. ಯಜಮಾನ ಸಂಸ್ಕೃತಿಯ ತನ್ನ ನಿಲುವುಗಳನ್ನು ಪುನರ್ ವಿಮರ್ಶಿಸಿಕೊಳ್ಳಲು ಕೂಡಾ ಅದು ಒತ್ತಾಯಿಸುತ್ತದೆ.

ಕರ್ನಾಟಕ ಜಾನಪದದ ಒಂದೆರಡು ಉದಾಹರಣೆಗಳನ್ನು ಆಧರಿಸಿಕೊಂಡು ಮೇಲಿನ ವಾದವನ್ನು ಇನ್ನಷ್ಟು ಬೆಳೆಸಬಹುದು.

೨

ಕರ್ನಾಟಕ ಜಾನಪದಕ್ಕೆ ಪ್ರಧಾನವಾಗಿ ನಾಲ್ಕು ಅಂಗಗಳಿವೆ. ಅವುಗಳೆಂದರೆ :

೧. ಮೌಖಿಕ ಸಾಹಿತ್ಯ ರೂಪಗಳು

೨. ಭೌತಿಕ ಜಾನಪದ

೩. ಸಾಮಾಜಿಕ ಆಚರಣೆಗಳು ಮತ್ತು

೪. ಪ್ರದರ್ಶನಾತ್ಮಕ ಕಲೆಗಳು.

ಇವರಲ್ಲಿ ಮೊದಲನೆಯದಾದ ಮೌಖಿಕ ಸಾಹಿತ್ಯದಲ್ಲಿ ಹಾಡುಗಳು, ಕತೆಗಳು, ಮಹಾಕಾವ್ಯಗಳು, ಕಥನಗೀತೆಗಳು, ಲಾವಣಿಗಳು, ಗಾದೆಗಳು, ಒಗಟುಗಳು ಮತ್ತಿತರ ರೂಪಗಳು ಅಡಕವಾದರೆ, ಎರಡನೆಯದಾದ ಭೌತಿಕ ಜಾನಪದದಲ್ಲಿ ವಾಸ್ತುಶಿಲ್ಪ, ಕರಕುಶಲ ವಸ್ತುಗಳು, ಉಡುಗೆ - ತೊಡುಗೆಗಳು, ಕಸೂತಿ ಮತ್ತಿತರವು ಸೇರ್ಪಡೆಯಾಗುತ್ತವೆ. ಮೂರನೆಯದಾದ ಸಾಮಾಜಿಕ ಆಚರಣೆಗಳಲ್ಲಿ ಮತ್ತೆರಡು ಪ್ರಭೇದಗಳಿವೆ. ಅವುಗಳೆಂದರೆ ಮನುಷ್ಯ ಹುಟ್ಟಿನಿಂದ ಸಾಯುವಲ್ಲಿವರೆಗಣ ವಿವಿಧ ಹಂತಗಳಲ್ಲಿ ಆಚರಿಸುವ ಜೀವನಾವರ್ತನದ ಆಚರಣೆಗಳು ಮತ್ತು ವರುಷದಿಂದ ವರುಷಕ್ಕೆ ಸಾಗಿ ಬರುವಾಗ ಕಾಲ ಬದಲಾದಂತೆ ಆಚರಿಸಲಾಗುವ ವಾರ್ಷಿಕ ಆಚರಣೆಗಳು, ಕೊನೆಯದಾದ ಪ್ರದರ್ಶಕ ಕಲೆಗಳಲ್ಲಿ ಕ್ರೀಡೆ, ಯಕ್ಷಗಾನ, ತಾಳಮದ್ದಳೆ, ನೃತ್ಯ, ಬೇಟೆ, ನಾಟಕ ಮತ್ತಿತರ ಅಂಶಗಳು ಅಡಕವಾಗುತ್ತವೆ. ಈ ನಾಲ್ಕು ಅಂಗಗಳಲ್ಲಿ ಮೊದಲನೆಯದಾದ ಸಾಹಿತ್ಯ ರೂಪಗಳ ಸಂಗ್ರಹ ಸಾಕಷ್ಟು ಪ್ರಮಾಣದಲ್ಲಿ ನಡೆದಿದೆ. ಆದರೆ ಎರಡನೆಯದಾದ ಭೌತಿಕ ಜಾನಪದ ಕ್ಷೇತ್ರದಲ್ಲಿ ಏನೇನೂ ಕೆಲಸ ನಡೆದಿಲ್ಲ. ಈಚಿನ ದಿನಗಳಲ್ಲಿ ಬೇರೆ ಬೇರೆ ಜಾತಿಯ ಜನರ ಜೀವನಾವರ್ತನ ಮತ್ತು ವಾರ್ಷಿಕಾವರ್ತನದ ಆಚರಣೆಗಳ ಸಂಗ್ರಹ ಮತ್ತು ಅಧ್ಯಯನ ನಡೆಯುತ್ತಿದೆ. ಪ್ರದರ್ಶಕ ಕಲೆಗಳ ಅಧ್ಯಯನವೂ ಕನಿಷ್ಠ ಪ್ರಮಾಣದಲ್ಲಿದೆ.

ಕರ್ನಾಟಕ ಜಾನಪದದಲ್ಲಿನ ಲೋಕದೃಷ್ಟಿಯನ್ನು ಅರ್ಥಮಾಡಿಕೊಳ್ಳಬೇಕಾದರೆ ಮೇಲೆ ಹೇಳಿದ ನಾಲ್ಕು ಅಂಗಗಳ ವಿಸ್ತೃತವಾದ ಮತ್ತು ಗಂಭೀರವಾದ ಅಧ್ಯಯನ ನಡೆಸಬೇಕು. ಇನ್ನೂ ಪೂರ್ಣಮಟ್ಟದ ಸಂಗ್ರಹವೇ ನಡೆಯದಿರುವ ಈ ಸಂದರ್ಭದಲ್ಲಿ ಅಧ್ಯಯನವಂತೂ ಅಸಾಧ್ಯವಾಗಿದೆ. ಮೇಲಾಗಿ ಇಡೀ ಕರ್ನಾಟಕದ ಜಾನಪದಕ್ಕೆ 'ಒಂದು ಲೋಕದೃಷ್ಟಿ'ಯಂತೂ ಇರಲು ಸಾಧ್ಯವಿಲ್ಲ. ಜಾತಿ, ಪ್ರದೇಶ ಮತ್ತು ಕಾಲವನ್ನು ಅನುಸರಿಸಿ ಅವು ಭಿನ್ನ ಭಿನ್ನವಾಗಿರಲೇಬೇಕು. ಈ ಅರಿವಿನಲ್ಲಿಯೇ ಒಂದೆರಡು ಅಂಶಗಳನ್ನು ಮುಂದೆ ಮಂಡಿಸಲಾಗಿದೆ.

ಮೊದಲು ಮಾನವನ ಬಗೆಗಣ ಗ್ರಹಿಕೆಗಳನ್ನೇ ಪರಿಶೀಲಿಸಬಹುದು.

ಮೌಖಿಕ ಸಾಹಿತ್ಯರೂಪಗಳಾದ ಕತೆಗಳು, ಕಾವ್ಯಗಳು ಮತ್ತು ಕಥನ ಗೀತೆಗಳಲ್ಲಿ ನಾಯಕನನ್ನು ಹೇಗೆ ಕಂಡರಿಸಲಾಗಿದೆ ಎಂದು ನೋಡಬೇಕು. ಇದೇ ಸಂದರ್ಭದಲ್ಲಿ ಕತೆಗಳ ಬಗ್ಗೆ ಎ.ಕೆ.ರಾಮಾನುಜನ್, ಕಾವ್ಯಗಳ ಬಗ್ಗೆ ವಿವೇಕ ರೈ ಮತ್ತು ಕಥನಗೀತೆಗಳ ಬಗ್ಗೆ ಜೀ.ಶಂ. ಪರಮಶಿವಯ್ಯನವರು ನಡೆಸಿದ ಅಧ್ಯಯನಗಳನ್ನು ನೆನಪಿಟ್ಟುಕೊಳ್ಳಬೇಕು. ರಾಮಾನುಜನ್ ಹೇಳಿದ ಹಾಗೆ 'ಕತೆಗಳು ಭಾರತದ ಘೋಷಿತ ಮೌಲ್ಯಗಳಿಗಿಂತ ಭಿನ್ನವಾದ ಸತ್ಯವನ್ನು ಅನಾವರಣಗೊಳಿಸುತ್ತವೆ;' ನಮ್ಮ ಮಾರ್ಗ ಸಂಪ್ರದಾಯದ ಕಲಾಕೃತಿಗಳಲ್ಲಿ ಹಿರಿಯಮಗನೇ ನಾಯಕನಾಗಿ ಪಟ್ಟವೇರುತ್ತಾನೆ. (ಉದಾ : ರಾಮಾಯಣದಲ್ಲಿ ರಾಮ, ಭಾರತದಲ್ಲಿ ಧರ್ಮರಾಯ, ಭಾಗವತದಲ್ಲಿ ಬಲರಾಮ) ಆದರೆ ಜನಪದ ಕತೆಗಳಲ್ಲಿ ಕಿರಿಯ ಮಗನೇ ಸಾಹಸಗಳನ್ನು ಮೆರೆಯುತ್ತಾನೆ. ಅವಳಿಗಳಿದ್ದಲ್ಲಿ ಕಿರಿಯನೇ ಉಗ್ರನಾಗಿರುತ್ತಾನೆ. ಈ ಕಿರಿಯರ ಸಾಹಸ ಕಲ್ಪನೆಯಲ್ಲೂ ಜನಪದರು ತಮ್ಮದೇ ಆದ ಧೋರಣೆಗಳನ್ನು ಹೊಂದಿರುವಂತಿದೆ. ಕತೆ, ಕಾವ್ಯ, ಪಾಡ್ದನ ಮತ್ತಿತರ ಪ್ರಕಾರಗಳಲ್ಲಿ ಕಂಡುಬರುವ ವೀರಕಲ್ಪನೆಯಲ್ಲಿ ಒಂದು ಬಗೆಯ ಕ್ರಿಯಾತ್ಮಕ ಗುಣಧರ್ಮ ಕಂಡುಬರುತ್ತದೆ. ಈ ಪ್ರಕಾರಗಳಲ್ಲಿ ಒಬ್ಬಾತ ವೀರನಾಗಿ ಸಾಹಸಗಳನ್ನು ಮೆರೆಯಲು ಕಾರಣ ಆತ ದೈವದ ಅವತಾರವಾಗಿರುವುದಲ್ಲ. ಅಥವಾ ಅವನಿಗೆ ಪೂರ್ವ ಜನ್ಮದ ಪುಣ್ಯ ವಿಶೇಷಗಳಾವುವೂ ಇರುವುದಿಲ್ಲ. ಶ್ರೀರಾಮನು ವಿಷ್ಣುವಿನ ಅವತಾರ ಆಗಿರುವಂತೆ, ಅರ್ಜುನನು ಇಂದ್ರನ ಮಗನಾಗಿರುವಂತೆ ಇಲ್ಲಿ ಘಟನೆಗಳನ್ನು

ಸಂಘಟಿಸಲಾಗುತ್ತಿಲ್ಲ. ಈ ಜನಪದ ನಾಯಕರು ಜನಿಸುವಾಗ ಪುಷ್ಪವೃಷ್ಟಿಯೂ ಆಗುವುದಿಲ್ಲ, ಯಾವ ದೇವತೆಗಳೂ ಸಂಭ್ರಮಿಸುವುದಿಲ್ಲ. ಅವನ ಜನನದಿಂದ ಊರಿಗೆ ಅಂತಹ ಪ್ರಸಿದ್ಧಿ ಏನೂ ಬರುವುದಿಲ್ಲ ಮತ್ತು ಅವರ ಜನನ 'ಶುಭ ಮುಹೂರ್ತದಲ್ಲಿಯೂ' ನಡೆಯುವುದಿಲ್ಲ. ''ಒಂದಾನೊಂದು ಊರಿನಲ್ಲಿ ಒಂದಾನೊಂದು ಕಾಲದಲ್ಲಿ' ಆತ ಎಲ್ಲರಂತೆ ಹುಟ್ಟುತ್ತಾನೆ. ಆತ ಬೆಳೆಯುತ್ತಾ ಇರುವಾಗ ಕೆಲವು ಬಗೆಯ ಸವಾಲುಗಳನ್ನು ಇದಿರಿಸಬೇಕಾಗುತ್ತದೆ. ತೀವ್ರತರದ ಬಿಕ್ಕಟ್ಟುಗಳಿಗೆ ಮುಖಾಮುಖಿಯಾಗಬೇಕಾಗುತ್ತದೆ. ಇಂಥ ಸಂದಿಗ್ಧಗಳಲ್ಲಿ ಕೇವಲ ಮಾನವೀಯವಾಗಿ ನಡೆದುಕೊಳ್ಳುವ ಈ ನಾಯಕರು ಒಂದೋ ಸವಾಲುಗಳನ್ನು ಉತ್ತರಿಸಿ, ಗೆದ್ದು ಜನಪ್ರಿಯರಾಗುತ್ತಾರೆ ಇಲ್ಲವೇ ಅಕಾಲ ಮರಣಕ್ಕೆ ಒಳಗಾಗಿ ಸತ್ತ ರಕ್ಷಕ ದೈವಗಳಾಗಿ ಮಾರ್ಪಡುತ್ತಾರೆ. ನಾಯಕನ ಇಂಥ ಸಾಧನೆಗಳಿಗೂ ಆತನ ಸಾಮಾಜಿಕ ಸ್ಥಾನಮಾನಗಳಿಗೂ ಏನೇನೂ ಸಂಬಂಧ ಇರುವುದಿಲ್ಲ. ಅದರ ಬದಲು ಬದುಕನ್ನು ಅವರು ಇದಿರಿಸುವ ಸಂದರ್ಭಗಳಲ್ಲಿ ತೋರುವ ಕ್ರಿಯಾತ್ಮಕತೆಯೇ ಅವರನ್ನು ವೀರರನ್ನಾಗಿಸುತ್ತದೆ. ಕುಮರಿ ಬೇಸಾಯ ಮಾಡುತ್ತಿದ್ದ ಹೊಲೆಮಾದಿಗರನ್ನು ಇದಿರಿಸಿದ ವಲಸೆಗಾರ ಕುರುಬರ ನಾಯಕನಾಗಿ ಮೈಲಾರ ಅವಿರ್ಭವಿಸಿದ, ಚಿಕ್ಕಮ್ಮನ ಪ್ರೇಮವನ್ನು ತಿರಸ್ಕರಿಸಿದ ಕುಮಾರ ರಾಮ, ಜನಪದ ಇತಿಹಾಸದಲ್ಲಿ ಸ್ಥಾನಗಳಿಸಿದ. ದೇವಸ್ಥಾನದ ಛಾವಣಿಯನ್ನೇರುವ ಧೈರ್ಯ ತೋರಿದ ಕೊರಗ ತನಿಯ, ಅದ್ಭುತವಾದ ಗೊಮ್ಮಟನನ್ನು ಕೆತ್ತಿ ದುರಂತಕ್ಕೀಡಾದ ಕಲ್ಕುಡ, ಗಂಡಸಿನ ಅಹಂಕಾರದ ನೆಲೆಗಳಿಗೆ ಸವಾಲೆಸಿದು ಪುರುಷ ಲಯ ಭೇದಿಸಿದ ಸಿರಿ ಇವರುಗಳೇ ಸತ್ತ ದೈವಗಳಾಗುತ್ತಾರೆ. ಇದೇ ರೀತಿ ಕಡಲಿನಲ್ಲಿ ಸಾಹಸ ಮಾಡಿದ ಬಬ್ಬರ್ಯ, ಮಂತ್ರವಾದ ಕಲಿತು ಸಾಧನೆ ಮಾಡಿದ ಬಾರಗ, ಬಾವಿಗೆ ತಳ್ಳಲ್ಪಟ್ಟ ಹೊಲೆಯರ ಹುಡುಗನನ್ನು ಸೀರೆಯ ಸೆರಗಿನಿಂದ ಮೇಲೆತ್ತಿದ ತನ್ನಿಮಾನಿಗ ಸುಬ್ರಹ್ಮಣ್ಯ ದೇವಸ್ಥಾನದ ಧ್ವಜಸ್ತಂಭವನ್ನು ಭೇದಿಸಿದ ಕಿನ್ನಿಮಣಿ ಪುಮಾಣಿ, ಭಾಗ ಮಂಡಲದಲ್ಲಿ ಸೂಳೆಯರ ಮೇಳ ಮಾಡಿಸಿದ ಪುರುಷ , ಪ್ರೇಮಕ್ಕಾಗಿ ಸರ್ವಸ್ವವನ್ನೂ ಕಳಕೊಂಡ ಬೊಟ್ಟುಪಾಡಿ ಬಳ್ಳಾಲ, ಲೌಕಿಕದ ಎಲ್ಲ ಕಷ್ಟಗಳಿಗೂ ಮೈಒಡ್ಡಿ ಕೊನೆಗೆ ಮಳೆಯಾಗಿ ಹರಿದು ಉಪಕರಿಸಿದ ಉತ್ತರದೇವಿ, ಗಂಡನೊಡನೆ ಕೊಂಡವೇರಿದ ಈರೋಬಿ, ಊರ ಜನರ ಹಿತಕ್ಕಾಗಿ ಮಗುವಿನೊಡನೆ ಕೆರೆಗೆ ಬಲಿಯಾದ ಹುಳಿಯಾರು ಕೆಂಚಪ್ಪ ಇವರೆಲ್ಲರ ವೀರತ್ವದ ಕಲ್ಪನೆಯೇ ವಿಶಿಷ್ಟವಾದುದು. ಜನಪದ ಲೋಕದೃಷ್ಟಿಯ ಪ್ರತ್ಯಕ್ಷ ಪ್ರಮಾಣದಂತಿರುವ ಈ ಕಾವ್ಯಗಳು ತಮ್ಮ ಇರುವಿಕೆಯ ರೀತಿಯಿಂದಲೇ ಮುಖ್ಯವಾಗಿವೆ.

ವ್ಯಕ್ತಿಯ ಸಾಧನೆಯನ್ನು ಹೀಗೆ ಗೌರವಿಸುವ ಜನಪದ ನಿರೂಪಣೆಗಳು, ವ್ಯಕ್ತಿಯ ಸಾವಿನ ಬಗೆಗೂ, ಸಾವಿನಾಚೆಯ ಬದುಕಿನ ಬಗೆಗೂ ತುಂಬ ಕುತೂಹಲ ಹುಟ್ಟಿಸುವ ವಿವರಣೆಗಳನ್ನು ನೀಡುತ್ತವೆ. ಜನಪದ ನಾಯಕರು ಸತ್ತು ರೂಪಾಂತರಗೊಳ್ಳುವುದುಂಟು. ಈ ರೂಪಾಂತರ ಪ್ರಕ್ರಿಯೆಯು ಹಿಂದೆ ವಿವರಿಸಲಾದ ವೀರತ್ವದ ಕಲ್ಪನೆಯೊಂದಿಗೆ ಸಂಬಂಧ ಹೊಂದಿರುತ್ತವೆ. ಬಿಕ್ಕಟ್ಟಿನ ಘಳಿಗೆಗಳಲ್ಲಿ ವೀರತ್ವವನ್ನು ಮೆರೆದ ನಾಯಕರು ಅಕಾಲ ಮರಣಕ್ಕೆ ಒಳಗಾದ ಅನಂತರ ರೂಪಾಂತರ ಹೊಂದಿ, ತನ್ನ ಸಾವಿಗೆ ಕಾರಣವಾದ ಶಕ್ತಿಗಳ ವಿರುದ್ಧ ಸೇಡು ತೀರಿಸಿಕೊಳ್ಳುತ್ತಾರೆ. ಅಂಥ ಸಂದರ್ಭದಲ್ಲಿ ನಿರೂಪಣೆಗಳು ಭ್ರಾಮಕದಂಥ ರಚನೆಗಳನ್ನು ಸೃಜಿಸುತ್ತವೆ. ಲೌಕಿಕ ಪ್ರಪಂಚ ಹೇಗಿರಬೇಕೆಂದು ಭಾವಿಸಲಾಗುತ್ತದೋ, ಅಂಥ ಭಾವನೆಗಳು ಪಲ್ಲಟಗೊಂಡು, ಯೋಜಿತ ವಿನ್ಯಾಸಗಳು ಛಿದ್ರಗೊಂಡಾಗ ನಾಯಕನು ಸತ್ತು, ರೂಪಾಂತರ ಹೊಂದಿ, ಯೋಜಿತ ವಿನ್ಯಾಸಗಳನ್ನು ಮತ್ತೆ ಚಾಲ್ತಿಗೆ ತರುತ್ತಾನೆ. ಇಲ್ಲಿ ರೂಪಾಂತರಿತ ಲೋಕ ಮತ್ತು ಲೌಕಿಕ ಲೋಕಗಳು ಒಂದಕ್ಕೊಂದು ಪೂರಕವೂ, ವಿರುದ್ಧವೂ ಆಗಿದ್ದು ಸಮಬಲದ ಕರ್ಷಣೆಯಲ್ಲಿರುತ್ತವೆ. ವಾರ್ಷಿಕಾಚರಣೆಗಳಲ್ಲಿ ಬರುವ ಹಬ್ಬಗಳು ಅಂಥ ವಿರುದ್ಧ ಲೋಕವನ್ನು ಸಮನ್ವಯಗೊಳಿಸಿ, ಸಂಭ್ರಮಿಸುವುದನ್ನೇ ಸಂಕೇತಿಸುತ್ತವೆ. ಮೈಲಾರನ ಜಾತ್ರೆಯಲ್ಲಿ ಮಣಿಮಲ್ಲಾಸುರನ ವಧೆಯ ಇತಿಹಾಸವನ್ನೇ ಪುನರ್ - ನವೀಕರಿಸಲಾಗುತ್ತದೆ. ಅಲ್ಲಿ ಕುರುಬರು ಸಂಭ್ರಮಿಸಿದರೆ ಹೊಲೆ ಮಾದಿಗರು ರೋದಿಸುತ್ತಾರೆ. ಸತ್ತು ಹೋಗಿರುವ ಮೈಲಾರ ಮತ್ತು ಸತ್ತು ಹೋಗಿರುವ ಮಣಿಮಲ್ಲಾಸುರರು ಕಾರಣಿಕಮದ ದಿವಸ ಮತ್ತೆ ಕಾಣಿಸಿಕೊಂಡು, ಎರಡು ಲೋಕಗಳ ನಡುವೆ ಸಮನ್ವಯವನ್ನು ಸಾಧಿಸಿ, ಕರ್ಷಣೆಯನ್ನು ಗೌಣಗೊಳಿಸುತ್ತಾರೆ. ಹೀಗೆ ಮಾಡದೇ ಹೋದರೆ ವಿನಾಶ ಸಂಭವಿಸುತ್ತದೆ ಎಂದು ಜನರು ಭಾವಿಸುತ್ತಾರೆ.

ಹೀಗೆ ಸಾವಿನಾಂತರದ ರೂಪಾಂತರಗಳು, ಜನ ಸಾಮಾನ್ಯರ ನೆಲೆಯಿಂದ ಉನ್ನತ ಸ್ಥಿತಿಗೆ ಏರಿದ ಕಥಾನಕವೊಂದನ್ನು ಪ್ರಸ್ತುತಪಡಿಸುತ್ತವೆ. ಈ ರೂಪಾಂತರವು ಪುನರ್ಜನ್ಮವಲ್ಲ ಎಂಬುದನ್ನು ಗಮನಿಸಿದಾಗ ಜನಪದರ ಈ ಲೋಕದೃಷ್ಟಿಯ ಅನನ್ಯತೆಯೂ ತಿಳಿಯುತ್ತದೆ. ಉಪನಿಷತ್ತಿನ ಮುನಿಗಳು ಪುನರ್ಜನ್ಮವನ್ನು ಕಲ್ಪಿಸಿದರು ಎನ್ನಲಾಗುತ್ತಿದೆ. ಮಾನವಗ್ರಹ್ಯ ಸೂತ್ರಗಳು ಪುನರ್ಜನ್ಮದ ಕಲ್ಪನೆಯನ್ನು ಶಾಸ್ತ್ರೀಯಗೊಳಿಸಿ ಸತ್ತವನನ್ನು ಹೇಗೆ ಪುನರ್ಜನ್ಮಕ್ಕೆ ಒಳಪಡಿಸಬಹುದು ಎಂದು ಹೇಳಿ ಕೊಟ್ಟವು. ಇಮೋರಿಸ್ ಬೂಗಾರ್ಡಸ್ ಹೇಳಿದಂತೆ ''ಪುನರ್ಜನ್ಮದ ಕಲ್ಪನೆಯ ಮೂಲಕ ತೀವ್ರವಾದ ಸಾಮಾಜಿಕ ನಿಯಂತ್ರಣವನ್ನು ಸಾಧಿಸಲಾಯಿತು.'' ಪುನರ್ಜನ್ಮದ ಸೈದ್ಧಾಂತಿಕತೆಯನ್ನು ಇತರರ ಮೇಲೆ ಹೇರಿ ಜನರನ್ನು ಭ್ರಮಾತ್ಮೀಕರಣಗೊಳಿಸಲಾಗಿತ್ತು. ಆದರೆ ಜನಪದರಲ್ಲಿರುವ ರೂಪಾಂತರದ ಕಲ್ಪನೆ ಪುನರ್ಜನ್ಮದ ಕಲ್ಪನೆಯನ್ನು ನಿರಾಕರಿಸುತ್ತದೆ. ಹಾಗೆ ನೋಡಿದರೆ ಜನಪದರ ಜೀವನಾವರ್ತನದ ಆಚರಣೆಯಲ್ಲೂ ಪುನರ್ಜನ್ಮದ ಕಲ್ಪನೆಗಳಿದ್ದಂತಿಲ್ಲ. ಸಾಹಿತ್ಯ ಅಕಾಡೆಮಿಯವರು ಈಚೆಗೆ ಪ್ರಕಟಿಸಿದ ಉಪಸಂಸ್ಕೃತಿ ಅಧ್ಯಯನ ಮಾಹಿತಿಯ ಕೃತಿಗಳಲ್ಲಿ ಬಂದಿರುವ ಸಾವಿನಾಚರಣೆಯ ವಿವರಗಳಲ್ಲಿ ಅಂಥ ಸೂಚನೆಗಳಿಲ್ಲ. ಇದ್ದ ವ್ಯಕ್ತಿಯೊಬ್ಬ ಸಾವಿನ ಕಾರಣವಾಗಿ ಇಲ್ಲವಾದಾಗ, ಸತ್ತ ಮನೆಯ ಸಮತೂಕ ತಪ್ಪುತ್ತದೆ. ಭೌತಿಕವಾಗಿ ಮತ್ತು ಬೌದ್ಧಿಕವಾಗಿ ಅಲ್ಲಿ ಅಸ್ತವ್ಯಸ್ತತೆ ಉಂಟಾಗುತ್ತದೆ. ಈ ಅಸ್ತವ್ಯಸ್ತವನ್ನು ಹೋಗಲಾಡಿಸಿ, ತಪ್ಪಿದ ಸಮತೂಕವನ್ನು ಸರಿಪಡಿಸಿಕೊಳ್ಳಲು ೧೬ ದಿನಗಳ ಮಧ್ಯಂತರ ಜಗತ್ತೊಂದನ್ನು ನಿರ್ಮಿಸಿಕೊಳ್ಳಲಾಗುವುದು. ಇರುವ ಮತ್ತು ಇಲ್ಲದೇ ಇರುವ ಎರಡು ವಿರುದ್ಧ ಜಗತ್ತುಗಳ ನಡುವಣ ಈ ಸ್ಥಿತಿಯು ಕಾಲ್ಪನಿಕವೂ ಅಮೂರ್ತವೂ ಆಗಿದ್ದು, ಜನರ ಅವಶ್ಯಕತೆಯನ್ನು ಚೆನ್ನಾಗಿ ಈಡೇರಿಸುತ್ತದೆ. ಈ ಮಧ್ಯಂತರ ಜಗತ್ತಿನಲ್ಲಿ ನಿಜವಾಗಿಯೂ ಇಲ್ಲವಾದವನನ್ನು ಇದ್ದಂತೆ ಭಾವಿಸಿಕೊಂಡು ಆದರಿಸಲಾಗುವುದು. ಸಾವಿನ ದಿನದಿಂದ ದೂರ ಸರಿಯುತ್ತಿದ್ದಂತೆ ಮಧ್ಯಂತರ ಜಗತ್ತಿನ ಸಾಂದ್ರತೆ ಕಡಿಮೆಯಾಗುತ್ತ ಬಂದು, ೧೬ ನೇ ದಿನಕ್ಕೆ ಅದು ಪೂರ್ತಿ ನಾಶವಾಗುವುದು. ಆ ದಿವಸ ಆತನನ್ನು ಈಗಾಗಲೇ ಸತ್ತು ಹೋದವರ ಸಾಲಿಗೆ ಸೇರಿಸಿಬಿಟ್ಟು ಕೈ ಮುಗಿಯಲಾಗುವುದು. ಅಲ್ಲಿಂದ ಮುಂದೆ ಆತನಿಗೆ ಲೌಕಿಕ ಜಗತ್ತಿನಲ್ಲಿ ಯಾವುದೇ ಸ್ಥಾನವಿಲ್ಲ. ಹೀಗೆ ಜನಪದರು ತಮ್ಮ ಆಚರಣೆಗಳಲ್ಲಿ ಕೂಡ ಪುನರ್ಜನ್ಮಕ್ಕೆ ಸ್ಥಾನಕಲ್ಪಿಸಿಲ್ಲ. ಸತ್ತವರು ರೂಪಾಂತರಗೊಂಡು ರಕ್ಷಕ ದೈವವಾಗುವ ಧಾರ್ಮಿಕತೆಗೂ, ಜನಪದರು ಸಾವಿನ ಬಗೆಗೆ ಹೊಂದಿರುವ ಲೋಕದೃಷ್ಟಿಗೂ ಆಳದಲ್ಲಿ ಜೈವಿಕ ಸಂಬಂಧವಿದೆ. ಎರಡೂ ಕಡೆ ಲೌಕಿಕಕ್ಕೇ ಪ್ರಾತಿನಿಧ್ಯ ನೀಡಲಾಗಿದೆ; ಮತ್ತು ಸಾವಿನಾಚೆಗಣ ಜಗತ್ತನ್ನು ಕಲ್ಪಿಸಿ ನಿರಾಕರಿಸಲಾಗಿದೆ.

ವ್ಯಕ್ತಿಯೊಬ್ಬನು ವಾಸಿಸುತ್ತಿರುವ ನೆಲದ ಬಗ್ಗೆ ಜನಪದರು ಯಾವ ಅಭಿಪ್ರಾಯಗಳನ್ನು ಹೊಂದಿದ್ದಾರೆ? ಬಳ್ಳಾರಿ, ರಾಯಚೂರು, ಗುಲ್ಬರ್ಗಾ, ಚಿತ್ರದುರ್ಗ ಜಿಲ್ಲೆಗಳಲ್ಲಿ ದೊರಕುವ ಜಾನಪದದಲ್ಲಿ ಆದಿಮ ಜನಾಂಗದ ಕೆಲವು ಲಕ್ಷಣಗಳು ಗೋಚರಿಸಿದರೂ ಜನರ ಭೌತಿಕ ವಿಶ್ವದ ಹೃದಯ ಸ್ಥಾನದಲ್ಲಿ ಕೃಷಿ ಕೆಲಸದ ಭೂಮಿಯೇ ಪ್ರಧಾನ ಸ್ಥಾನ ಪಡೆದಿದೆ. ಕೃಷಿ ಕೆಲಸ ಮತ್ತು ಉತ್ಪಾದನೆಯನ್ನು ಗಮನದಲ್ಲಿರಿಸಿಕೊಂಡೇ ಕಾಲಕ್ಕೂ ಕೆಲವು ಗುಣಗಳನ್ನು ಆರೋಪಿಸಲಾಗಿದೆ. ಉತ್ತರ ಕರ್ನಾಟಕದಲ್ಲಿ ಜನಪ್ರಿಯವಾಗಿರುವ 'ಗುಳ್ಳವ್ವ' ಆಷಾಡಮಾಸದ ಅನಿಷ್ಟಗಳನ್ನು ಕಳೆಯಲೆಂದೇ ಬರುತ್ತಾಳೆ. ತುಳು ನಾಡಿನಲ್ಲಿ ಆ ಕೆಲಸವನ್ನು ಆಟಿಕಳೆಂಜ ಮಾಡುತ್ತಾನೆ. ಆಷಾಡ ಮಾಸವನ್ನು ಅನಿಷ್ಟ ತಿಂಗಳೆಂದು ಕರೆಯುವುದಕ್ಕೆ ಕೃಷಿ ಸಮಾಜಕ್ಕೆ ಮಾತ್ರ ಸಾಧ್ಯ. ಅದೇ ಕೃಷಿ ಸಮಾಜವು ಸುಗ್ಗಿಯನ್ನು ಸಂಭ್ರಮದಲ್ಲಿರಿಸಿದೆ. ಈ ಕೃಷಿ ಆಧಾರಿತ ಚಿಂತನಾಕ್ರಮವು ಜೀವನಾವರ್ತನದ ಆಚರಣೆಗಳನ್ನು ಪ್ರಭಾವಿಸಿದೆ. ಉದಾಹರಣೆಗೆ ಅನಿಷ್ಟ ತಿಂಗಳಾದ ಆಷಾಡದಲ್ಲಿ ಹುಡುಗಿ ಮೈನೆರೆತರೆ ಆಕೆಗೆ ಒಳ್ಳೆಯ ಗಂಡ ಸಿಗುವುದಿಲ್ಲ. ಸುಗ್ಗಿ ತಿಂಗಳು ಮದುವೆಗೆ ಒಳ್ಳೆಯದು ಇತ್ಯಾದಿ. ಕನ್ನಡ ಜನಪದ ತ್ರಿಪದಿಗಳು ಮತ್ತು ತುಳು ನಾಡಿನ ಕವಿತೆಗಳು ತಮ್ಮ ಕೇಂದ್ರದಲ್ಲಿ ಕೃಷಿ ಆಧರಿತ ಸಮಾಜವೊಂದನ್ನು ಕಲ್ಪಿಸಿಕೊಂಡಿವೆ [2]. ನಾನು ಹಿಂದೆ ಹೇಳಿದ ರೂಪಾಂತರಿತ ಶಕ್ತಿಗಳು

2. ಕನ್ನಡ ಜಾನಪದದಲ್ಲಿನ ವಿಷಯಗಳು ಬಹುಮಟ್ಟಿಗೆ ಕೃಷಿ ಸಮಾಜವನ್ನು ಕುರಿತಾಗಿವೆ. ಕೃಷಿ ಪೂರ್ವ ಸಮಾಜದ ಕೆಲವು ಉಲ್ಲೇಖಗಳೂ ಸಿಗುವುದಿಲ್ಲವೆಂದಲ್ಲ. ಅದಕ್ಕಿಂತ ಮಿಗಿಲಾಗಿ ವಲಸೆಗಾರ ಪಶುಪಾಲಕರಿಗೂ, ಕೃಷಿಕರಿಗೂ ನಡೆದ ಸಂಘರ್ಷಗಳ ಚಿತ್ರವೇ ಹೆಚ್ಚು ಲಭಿಸುತ್ತದೆ. ಮೈಲಾರ ಜಾತ್ರೆ, ಅಂಥ ಸಂಘರ್ಷದ ರೂಪಕವಾಗಿದೆ. ಎಸ್.ಎಸ್.ಹಿರೇಮಠರು ಇಂಥ ಸಂಘರ್ಷಗಳ ಕಡೆ ನಮ್ಮ ಗಮನವನ್ನು ಸೆಳೆದಿದ್ದಾರೆ. ನೋಡಿ : ಎಸ್.ಎಸ್.ಹಿರೇಮಠ ೧೯೯೨, ೧೯೯೩.

ಅಂತಿಮವಾಗಿ ಕೃಷಿಯನ್ನೇ ಸಂರಕ್ಷಿಸುತ್ತವೆ. ಈ ಕೃಷಿ ಭೂಮಿಯ ಇನ್ನೊಂದು ಅಂಚಿನಲ್ಲಿ ಅರಣ್ಯ ಇದ್ದು, ಅದು ತನ್ನೊಳಗೆ ಇರಿಸಿಕೊಂಡು ಪ್ರಾಣಿಗಳಿಂದಾಗಿ ಕೃಷಿ ಭೂಮಿಗೆ ವಿರುದ್ಧವಾಗಿದೆ. ಬೇಟೆಯ ಮೂಲಕ ಕಾಡು ಪ್ರಾಣಿಗಳ ನಾಶ ಸಾಧ್ಯ ಆಗದಿದ್ದಾಗ, ಆರಾಧನೆಯ ಮೂಲಕ ಅವುಗಳನ್ನು ಒಲಿಸಿಕೊಳ್ಳಲು ಪ್ರಯತ್ನಿಸಲಾಗುವುದು. ಇಂಥ ಒಲಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ನಾಡು ಮತ್ತು ಕಾಡಿನ ಮಧ್ಯ ಭಾಗದಲ್ಲಿ ವಾಸಿಸುವ ಪರವ, ಪಂಬದ, ಅಜಿಲ, ಬೇಡ, ಕುರುಬರೇ ಮೊದಲಾದವರು ದೈವ ಮಾಧ್ಯಮದವರಾಗಿ ಕೆಲಸ ಮಾಡುತ್ತಾರೆ. ಈ ಜನಗಳು ಕಾಡಿನ ಒಳಗೆ ನುಗ್ಗಿ ಅದನ್ನು ಕೃಷಿಕರಿಗೆ ಒದಗಿಸಬಲ್ಲರು. ಕಾಡು ಮತ್ತು ನಾಡಿನ ಗಡಿಗಳನ್ನು ಅತಿಕ್ರಮಿಸುವ ಶಕ್ತಿ ಇವರಿಗೆ ಇರುವುದರಿಂದಲೇ ಇವರು ಲೌಕಿಕದಿಂದ ರೂಪಾಂತರಿತ ಲೋಕದತ್ತಲೂ, ರೂಪಾಂತರಿತ ಲೋಕದಿಂದ ಲೌಕಿಕದತ್ತಲೂ ಚಲಿಸಬಲ್ಲವರಾಗಿರುತ್ತಾರೆ. ಯಜಮಾನ ಸಂಸ್ಕೃತಿ ಯಾರನ್ನು ದೂರವಿರಿಸಿತೋ ಅವರೇ ಜನಪದ ಸಂಸ್ಕೃತಿಯಲ್ಲಿ ದೈವ ಪಾತ್ರಿಗಳಾಗಿರುತ್ತಾರೆ ಎಂಬುದನ್ನು ಇಲ್ಲಿ ಗಮನಿಸಬೇಕು. ಕಾಡಿನ ಹೊರ ಅಂಚಿನಲ್ಲಿ ನಾಡಿಗೆ ತಾಗಿಕೊಂಡಿರುವ 'ಬನ'ಗಳೂ ಅತಂಕಿತ ಸ್ಥಾನಗಳೇ ಆಗಿವೆ. ಅಲ್ಲಿ ಹಾವುಗಳು ವಾಸಿಸುತ್ತವೆ ಎಂದು ನಂಬಲಾಗುತ್ತಿದೆ. ಹೀಗೆ ಜನಪದರ ಲೋಕದೃಷ್ಟಿಯು ನಾಡು, ಕಾಡು, ಬನಗಳ ಒಂದು ಘಟಕವನ್ನು ಸೃಷ್ಟಿಸಿಕೊಂಡು, ಅವುಗಳಲ್ಲಿ ಭಿನ್ನ ಬಗೆಯ ಶಕ್ತಿಗಳನ್ನು ಸ್ಥಾಪಿಸಿಕೊಂಡಿದೆ ಮತ್ತು ಬಗೆಬಗೆಯ ಆಚರಣೆಗಳ ಮೂಲಕ ಆ ಶಕ್ತಿಗಳ ನಡುವಣ ಕರ್ಷಣವನ್ನು ಕಡಿಮೆ ಮಾಡುತ್ತ ಒಂದು ಬಗೆಯ ಸಮನ್ವಯವನ್ನು ಸಾಧಿಸಿಕೊಂಡು ಬಂದಿದೆ.

ಕಾಡು, ನಾಡು, ಬನ ಮತ್ತು ಈ ಮೂರು ಲೋಕಗಳಲ್ಲಿರುವ ಸಸ್ಯವರ್ಗ, ಪ್ರಾಣಿವರ್ಗಗಳನ್ನು ಗಮನಿಸಿದ ಜನಪದರು, ಆ ಒಟ್ಟು ವ್ಯವಸ್ಥೆಯನ್ನು ಅವ್ಯವಸ್ಥಿತವಾದುದು ಎಂದು ನಂಬುತ್ತಾರೆ. ಆದ್ದರಿಂದ ಆಚರಣೆಗಳ ಸಂದರ್ಭಗಳಲ್ಲಿ ಬಣ್ಣ ಶಬ್ದಗಳ ಮೂಲಕ ಪ್ರಕೃತಿಯ ಅವ್ಯವಸ್ಥೆಯನ್ನು ವ್ಯವಸ್ಥಿತಗೊಳಿಸಿ, ತಮ್ಮ ಸಂಸ್ಕೃತಿಗೆ ತಾತ್ಕಾಲಿಕವಾಗಿ ಒಗ್ಗಿಸಿಕೊಂಡು ಬಿಡುತ್ತಾರೆ. ಡೋಲಿನ ನಿಯತವಾದ ಶಬ್ದ , ತಾನೆ ಸಮ್ಮೇಳಗಳ ಲಯಬದ್ಧ ಪೆಟ್ಟು ಮತ್ತು ವಾದ್ಯಗಳ ನಾದ ಪ್ರಕೃತಿಯಲ್ಲಿ ಅಂಥ ಕೃತಕ ವ್ಯವಸ್ಥೆಯೊಂದನ್ನು ನಿರ್ಮಿಸಿ ಬಿಡುತ್ತವೆ. (ನಿಯತವಾದ ಶಬ್ದಕ್ಕೆ ಆ ಶಕ್ತಿ ಇದೆಯೇ ಹೊರತು ಗದ್ದಲಕ್ಕೆ ಇಲ್ಲ) ಹೀಗೆ ಪ್ರಕೃತಿಯನ್ನು ತಮ್ಮ ನೇರಕ್ಕೆ ನಿಯುಕ್ತಿಗೊಳಿಸಿಕೊಂಡ ಅನಂತರವೇ ಅಲ್ಲಿ ವಿವಿಧ ರೀತಿಯ ಕ್ರಿಯೆಗಳು ಜರುಗುತ್ತವೆ. ಜೀವನಾವರ್ತನ ಮತ್ತು ವಾರ್ಷಿಕಾವರ್ತನದಲ್ಲಿ ಹೇಳಲಾಗುವ ಹಾಡುಗಳು, ವ್ಯಕ್ತಿಯ ಶೃಂಗಾರ ಮತ್ತು ಕಾಲದ ಬೇರ್ಪಡಿಸುವಿಕೆಯಂಥ ಕೆಲಸಗಳ ಹಿಂದೆ ಪ್ರಕೃತಿಯನ್ನು ಸಂಸ್ಕೃತಿಯ ತೆಕ್ಕೆಗೆ ಒಗ್ಗಿಸುವ ಸಾಹಸವೇ ಕಾಣುತ್ತದೆ. ಮದುವೆಯಲ್ಲಿ ಹಾಕಲಾಗುವ ಮಂಟಪ, ಕಟ್ಟುವ ತೋರಣ, ಬರೆವ ರಂಗೋಲಿ ಮತ್ತಿತರ ಚಟುವಟಿಕೆಗಳ ಹಿಂದೆ ಈ ಆಶಯವಿದೆ.

ಕಾಲಕ್ಕೆ ಸಂಬಂಧಿಸಿದಂತೆ ಜನಪದರು ಹೊಂದಿರುವ ದೃಷ್ಟಿಕೋನವನ್ನು ಪರಿಶೀಲಿಸಿ ಈ ಚರ್ಚೆಯನ್ನು ಕೊನೆಗೊಳಿಸಬಹುದು. ಭಾರತೀಯ ಚಿಂತನಾಕ್ರಮದಲ್ಲಿ ಕಾಲವನ್ನು ಚಕ್ರಾಕಾರವಾಗಿ ಗ್ರಹಿಸಲಾಗಿದೆ ಎಂದು ಹೇಳಲಾಗಿದೆ. ನಾಲ್ಕು ಯುಗಗಳ ಬೃಹತ್ ಚಕ್ರವನ್ನೇ ಅದಕ್ಕೆ ಉದಾಹರಿಸಲಾಗುತ್ತಿದೆ. ಕಾಲವು ಚಕ್ರಾಕಾರವಾಗಿದ್ದು, ಮತ್ತೆ ಮತ್ತೆ ಪುನರಾವರ್ತನೆ ಹೊಂದುತ್ತದೆ ಎಂಬ ನಂಬಿಕೆ ಇರುವ ನಾಡು, ಆ ಕಾರಣಕ್ಕೇ ಇತಿಹಾಸವನ್ನು ಬರೆದುಕೊಳ್ಳುವುದಿಲ್ಲ ಎಂದೂ ಹೇಳಲಾಗುತ್ತಿದೆ. ಅದೇನೇ ಇರಲಿ, ಜನಪದರು ಕಾಲವನ್ನು ಮಂಡಲಾಕಾರದಲ್ಲಿ ಗ್ರಹಿಸಿದಂತಿಲ್ಲ. ಅವರಲ್ಲಿ ಪುನರ್ಜನ್ಮದ ಕಲ್ಪನೆ ಇಲ್ಲ ಎಂಬುದನ್ನು ಈಗಾಗಲೇ ಹೇಳಲಾಗಿದೆ. ದಲಿತರ ಅನೇಕ ಕುಣಿತಗಳಲ್ಲಿ ಅವರು ಹಿಂದೆ - ಮುಂದೆ ಚಲಿಸುತ್ತಾರೆಯೇ ವಿನಾ ವೃತ್ತಾಕಾರದಲ್ಲಿ ಅಲ್ಲ. ಕೋಟಿ ಚೆನ್ನಯರ ಕುಣಿತ ಅಂಕು ಡೊಂಕಾಗಿದ್ದು ಮುಂದಕ್ಕೆ ಸಾಗುತ್ತದೆ. ಜೊತೆಗೆ ಜನಪದರು ತಮ್ಮ ಇತಿಹಾಸವನ್ನು ಭಿನ್ನ ರೀತಿಯಲ್ಲಿ ದಾಖಲಿಸಿಕೊಂಡಿದ್ದಾರೆ. ಪಶ್ಚಿಮದಿಂದ ಬಂದ ಚಿಂತನಾಕ್ರಮಗಳು ಜನಪದರ ಇತಿಹಾಸ ಕಲ್ಪನೆಯನ್ನು ಗ್ರಹಿಸಲಾರವು. ಕರ್ನಾಟಕದ ಪ್ರಸಿದ್ಧ ರಾಜರಾಗಿದ್ದ ವಿಜಯನಗರದ ಅರಸುಗಳ ಸುದೀರ್ಘ ಚರಿತ್ರೆಯನ್ನು ಬೇರೆ ಬೇರೆ ವಿದ್ವಾಂಸರು ಮತ್ತೆ ಮತ್ತೆ ಬರೆದಿದ್ದಾರೆ. ಆದರೆ ಹಂಪಿ ಪರಿಸರದ ಜಾನಪದದಲ್ಲಿ ಲಿಖಿತ ಆಕರಗಳನ್ನು ಬಳಸಿ ಬರೆದ ಚರಿತ್ರೆಯ ಒಂದು ಪುಟ್ಟ ಅಂಶವೂ ದಾಖಲಾಗಿಲ್ಲ. ಕಂಪಿಲ ಮತ್ತು ಕುಮಾರ ರಾಮರ ಬಗೆಗೆ ಚರಿತ್ರೆಕಾರರು ಏನೂ ಬರೆದಿಲ್ಲ. ಏಕೆಂದರೆ ಅವರ ಬಗ್ಗೆ ವಿಶೇಷ ಉಲ್ಲೇಖಗಳೇ ದೊರೆತಿಲ್ಲ. ಆದರೆ ಕಂಪ್ಲಿ ಪರಿಸರದಲ್ಲಿನ ಮೌಖಿಕ ನಿರೂಪಣೆಗಳಲ್ಲಿ ಇವರಿಬ್ಬರು ಮತ್ತೆ ಮತ್ತೆ ಕಾಣಿಸಿಕೊಂಡಿದ್ದಾರೆ. ನಮ್ಮ ಸಾಂಪ್ರದಾಯಿಕ ಇತಿಹಾಸಕಾರರು ಯಾವುದರ ಬಗ್ಗೆ ಉತ್ಸಾಹದಿಂದ

ಬರೆದಿದ್ದಾರೋ ಅವುಗಳ ಬಗ್ಗೆ ಜಾನಪದ ಮೌನವಾಗಿದೆ. ಜಾನಪದ ಯಾವುದರ ಬಗ್ಗೆ ಉತ್ಸಾಹದಿಂದ ವರ್ಣಿಸಿದೆಯೋ ಅದರ ಬಗ್ಗೆ ಚರಿತ್ರಕಾರರು ಚಕಾರ ಎತ್ತಿಲ್ಲ. ಲಿಖಿತ ಇತಿಹಾಸವು ಯುದ್ಧಗಳ ಮೂಲಕ ವಿಜಯನಗರ ಸಂಸ್ಥಾನ ನಾಶವಾದ್ದನ್ನು ಹೇಳಿದರೆ, ಮೌಖಿಕ ನಿರೂಪಣೆಗಳು ಸಂಸ್ಥಾನದ ಅಳಿವನ್ನು ಅದರ ಪತನಮುಖಿ ನೈತಿಕತೆಯಲ್ಲಿ ಗುರುತಿಸುತ್ತದೆ. ಈ ನೈತಿಕ ಅವನತಿಯು ಕುಟುಂಬದ ಭದ್ರತೆ ಮತ್ತು ಅವಸಾನಕ್ಕೆ ಕಾರಣವಾಗುತ್ತದೆ. ಜಾನಪದರ ಲೋಕದೃಷ್ಟಿಗೆ ಸಂಸ್ಥಾನಕ್ಕಿಂತ ಕುಟುಂಬಗಳೇ ಮುಖ್ಯವಾಗಿವೆ. ಅದಕ್ಕೆ ಚರಿತ್ರೆ ಎಂದರೆ ಕೌಟುಂಬಿಕ ಚರಿತ್ರೆ ಅಷ್ಟೆ. ಹೀಗೆ ಜನಪದರು ತಮ್ಮದೇ ಆದ ಇತಿಹಾಸ ಕಲ್ಪನೆಯನ್ನು ಇಟ್ಟುಕೊಂಡಿದ್ದಾರೆ.

೩

ಇದುವರೆಗೆ ನಡೆಸಿದ ಚರ್ಚೆಯಲ್ಲಿ ವ್ಯಕ್ತಿ, ದೇಶ ಮತ್ತು ಕಾಲಕ್ಕೆ ಸಂಬಂಧಿಸಿದಂತೆ ಜನಪದರ ಲೋಕದೃಷ್ಟಿ ಯಾವ ಬಗೆಯ ನಿಲುವನ್ನು ಹೊಂದಿದೆ ಎಂಬ ವಿಷಯ ಸ್ಪಷ್ಟವಾಯಿತು. ಜನಪದರ ಈ ಲೋಕದೃಷ್ಟಿಯ ಹೃದಯ ಭಾಗದಲ್ಲಿ ಕೃಷಿ ಸಮಾಜವಿದ್ದು ಅದು ವ್ಯಕ್ತಿಯ ಅಂಕಿತಕ್ಕೆ ಒಳಪಟ್ಟಿದೆ. ಈ ಸಮಾಜಕ್ಕೆ ಕೆಲವು ನಿಯಮಗಳಿವೆ. ವ್ಯಕ್ತಿ ಸತ್ತು ರೂಪಾಂತರ ಹೊಂದಿಯಾದರೂ ಆ ನಿಯಮಗಳನ್ನು ರಕ್ಷಿಸುತ್ತಾನೆ. ಕೃಷಿ ಸಮಾಜದ ಹೊರ ಅಂಚಿನಲ್ಲಿ ಅರಣ್ಯವಿದ್ದು, ಅದು ನಿಗೂಢವಾಗಿದೆ. ಸಂಸ್ಕೃತಿ-ಪ್ರಕೃತಿ ಮತ್ತು ರೂಪಾಂತರಿತ ಜಗತ್ತಿನ ಸಮನ್ವಯವನ್ನು ಕಾಯ್ದುಕೊಳ್ಳುವುದೇ ಜನಪದ ಲೋಕದೃಷ್ಟಿಯ ಪ್ರಮುಖ ಕಾರ್ಯ. ಇಲ್ಲಿ ಲೌಕಿಕ ಲೋಕಕ್ಕೆ ಆದ್ಯತೆ ಇದೆ. ಆ ಜಗತ್ತಿಗೆ ತೊಂದರೆ ಉಂಟು ಮಾಡುವಂಥ ಶಕ್ತಿಗಳನ್ನು ನಿಯಂತ್ರಿಸುವ ಸಾಮರ್ಥ್ಯವೂ ಮಾನವನಿಗಿರುತ್ತದೆ. ಲೌಕಿಕವಾಚೆಗಿನ ಬದುಕಿನ ಬಗೆಗೆ ಒಂದು ಕಲ್ಪನೆ ಇದ್ದೂ, ಅದಕ್ಕೆ ಶರಣಾಗದಿರುವುದೇ ಜನಪದ ಲೋಕದೃಷ್ಟಿಯ ವಿಶಿಷ್ಟ ಗುಣವಾಗಿದೆ.

ಭಾರತವನ್ನು ಕುರಿತು ಬರೆಯಲಾದ ಅನೇಕ ಗ್ರಂಥಗಳಲ್ಲಿ ಜನಪದರ ಲೋಕದೃಷ್ಟಿಯನ್ನು ಉಲ್ಲೇಖಿಸಲಾಗಿಲ್ಲ. ಹಾಗಾಗಿ ಅಂಥ ಬರಹಗಳು ಪಾರ್ಶ್ವಿಕವಾಗಿವೆ. ಸ್ವಲ್ಪ ತಡವಾಗಿಯಾದರೂ ಈಗ ಜನಪದರ ಲೋಕದೃಷ್ಟಿಯತ್ತ ನಾವು ಗಮನಹರಿಸಬೇಕಾಗಿದೆ.

ಪರಾಮರ್ಶನ ಕೃತಿಗಳು

೧. ಪರಮಶಿವಯ್ಯ ಜೀ.ಶಂ. ೧೯೭೫, **ಜಾನಪದ ಕೆಲವು ಮುಖಗಳು**, ಬೆಂಗಳೂರು, ಕರ್ನಾಟಕ ಸರಕಾರಿ ಪ್ರಕಾಶನ.

೨. ಪೀಟರ್ ಜೆ.ಕ್ಲಾಸ್ ೧೯೮೭, **ತುಳುವ ದರ್ಶನ** (ಕನ್ನಡಕ್ಕೆ ನಾವಡ ಎ.ವಿ. ಮತ್ತು ಸುಭಾಶ್ಚಂದ್ರ ಎ.ವಿ.) ಕುಂದಾಪುರ: ಪ್ರಾದೇಶಿಕ ವ್ಯಾಸಂಗ.

೩. ಪುರುಷೋತ್ತಮ ಬಿಳಿಮಲೆ ೧೯೯೦, **ಕರಾವಳಿ ಜಾನಪದ**, ಮಂಗಳಗಂಗೋತ್ರಿ.

೪. ಚಂದ್ರಶೇಖರ ಕಂಬಾರ ೧೯೮೦, **ನಮ್ಮ ಜಾನಪದ**, ಬೆಂಗಳೂರು : ಅಭಿಜಾತ ಗ್ರಂಥ ಮಾಲೆ.

೫. ವಿವೇಕ ರೈ ಬಿ.ಎ. ೧೯೮೫ **ತುಳು ಜನಪದ ಸಾಹಿತ್ಯ**, ಬೆಂಗಳೂರು : ಕನ್ನಡ ಸಾಹಿತ್ಯ ಪರಿಷತ್ತು.

೬. ಸತ್ಯನಾಥ ಟಿ.ಎಸ್. ೧೯೮೮, **ಕನ್ನಡ ಜಾನಪದ - ಕೆಲವು ಮುಖಗಳು**, ಮೈಸೂರು, ಶಾರದಾ ಪ್ರಕಾಶನ.

೭. Dundes Alan 1979, **Analytic Essays in Folklore** : The Hague: Mountan Publications.

೮. Clifford Gurtz 1987, Ethos worldview and the analysis of sacred symbols (In every man his way, Readings in cultural Anthropology (ed.) Alan Dundes) Englewood cliffs : prentice Hall.

೯. Ramanujan A.K. 1986, Two Realms of Kannada Folklore (In Another Harmony) Berkely: University of california press.

ಸಂಸ್ಕೃತ ಭಾಷೆಯಲ್ಲಿ ವೀರಶೈವದರ್ಶನ

ಶ್ರೀ ಹೆಚ್. ಗಂಗಾಧರ್

ವೀರಶೈವ ಎಂಬುದು ಜಗತ್ತಿನ ಅನೇಕ ದರ್ಶನಗಳಲ್ಲಿ ಒಂದಾಗಿದೆ. ವೀರಶೈವ ಶಬ್ದವು ತತ್ತ್ವ ಸೂಚಕವೋ, ಜಾತಿ ಸೂಚಕವೋ ಎಂಬುದನ್ನು ಮೊದಲು ಅರಿಯಬೇಕು. ದರ್ಶನಕ್ಕೂ ಜಾತಿಗೂ ಅಪಾರ ಅಂತರ ಇದೆ. ದರ್ಶನ ಎಂದರೆ ತತ್ವದ ಆದರ್ಶ. ಈ ಶಬ್ದದ ಉತ್ಪತ್ತಿಯ ಬಗೆಗೆ ಹೀಗೆ ಅರ್ಥೈಸಿದ್ದಾರೆ. ದೃಶ್ಯತೇ, ಅನೇನ ಇತಿ ದರ್ಶನಂ ಅಂದರೆ ಯಾವುದರ ಮೂಲಕ ನೋಡುತ್ತೇವೆಯೋ ಅದು ದರ್ಶನ. ವಸ್ತುವನ್ನು ಸತ್ಯ ಭೂತವಾಗಿ ತಾತ್ವಿಕ ಸ್ವರೂಪದಿಂದ ನೋಡಬೇಕಾದುದು ಅಗತ್ಯ. ನಾವು ಯಾರು? ಎಲ್ಲಿಂದ ಬಂದಿರುತ್ತೇವೆ? ಸರ್ವತ್ರ ದೃಶ್ಯವಾಗಿರುವ ಜಗತ್ತಿನ ಸತ್ಯ ಸ್ವರೂಪವೇನು? ಇದರ ಉತ್ಪತ್ತಿ ಎಲ್ಲಿಂದ ಆಯಿತು? ಇದರ ಸೃಷ್ಟಿಗೆ ಯಾರು ಕಾರಣ? ಇದು ಚೇತನವೇ ಅಥವಾ ಅಚೇತನವೇ? ಆ ಸಂಸಾರದಲ್ಲಿ ನಾವು ಯಾವ ಕಾರ್ಯವನ್ನು ಮಾಡಬೇಕು? ಜೀವನವನ್ನು ಚೆನ್ನಾಗಿ ಕಳೆಯಲು ನಾವು ಯಾವ ಸಾಧನೆ ಮಾರ್ಗವನ್ನು ಅವಲಂಬಿಸಬೇಕು? ಇತ್ಯಾದಿ ಪ್ರಶ್ನೆಗಳಿಗೆ ಉಚಿತವಾಗಿ ಸಮಾಧಾನವನ್ನು ಕೊಡುವುದೇ ದರ್ಶನದ ಪ್ರಧಾನ ಧ್ಯೇಯವಾಗಿರುತ್ತದೆ [1]. ಹೀಗೆ ಸರ್ವ ವ್ಯಾಪಕವಾದ ಒಂದು ತತ್ವದ ಮಾರ್ಗದರ್ಶನ ಮಾಡುವ ವಿಧಿ ವಿಧಾನಕ್ಕೆ ದರ್ಶನವೆಂದೂ, ಶಾಸ್ತ್ರವೆಂದೂ ಕರೆಯುತ್ತಾರೆ. ಅದನ್ನೇ ಇಂಗ್ಲೀಷಿನಲ್ಲಿ 'ಫಿಲಾಸಫಿ' ಎನ್ನುತ್ತಾರೆ. ಇದು ಎರಡು ಗ್ರೀಕ್ ಶಬ್ದಗಳ ಮಿಶ್ರಣ. ಗ್ರೀಕ್ ಭಾಷೆಯಲ್ಲಿ ಫಿಲಾಸ್ ಎಂದರೆ ಪ್ರೇಮ ಅಥವಾ ಅನುರಾಗ ಸೋಫಿಯಾ ಎಂದರೆ ವಿದ್ಯೆ. ಆದ್ದರಿಂದ ಫಿಲಾಸಫಿ ಎಂದರೆ ವಿದ್ಯೆಯ ಪ್ರೇಮ, ವಿದ್ಯೆಯ ಅನುರಾಗ ಎನ್ನುತ್ತಾರೆ. ಕ್ರಿಸ್ತಪೂರ್ವ ೫ನೇ ಶತಮಾನದಲ್ಲಿ ಗ್ರೀಕ್ ದೇಶದ ಇತಿಹಾಸಕಾರನಾದ ಹಿರೋಡೋಟಸ್ ಎಂಬುವನು ಈ ಶಬ್ದವನ್ನು

1. ಭಾರತೀಯ ದರ್ಶನ - ಬಲದೇವ ಉಪಾಧ್ಯಾಯ ಪು. ೩

ಮೊದಲು ಪ್ರಯೋಗಿಸಿದನೆಂದು ಮತ್ತು ಅದನ್ನೇ ಸಾಕ್ರೇಟಿಸಿನ ಶಿಷ್ಯನಾದ ಪ್ಲೇಟೋ ಮತ್ತು ಅರಿಸ್ಟಾಟಲರು ಪ್ರಚಲಿಸಿದರೆಂದೂ ತಿಳಿದುಬರುತ್ತದೆ. ಇಂಗ್ಲೀಷಿನಲ್ಲಿ ಹೇಳುವ 'ಫಿಲಾಸಫಿ' ಶಬ್ದ ಭಾರತೀಯ ಶಬ್ದವಾದ ದರ್ಶನ ಎಂಬುದರಷ್ಟು ವ್ಯಾಪಕವಾದುದಲ್ಲ. ದರ್ಶನಕ್ಕೆ ಸಮಾನವಾದ ಶಬ್ದವನ್ನು ಜಗತ್ತಿನ ಬೇರೆ ಯಾವ ಭಾಷೆಯಲ್ಲೂ ಕಾಣಲು ಸಾಧ್ಯವಿಲ್ಲ.

ಜಾತಿ ಮತ್ತು ಪಂಥಗಳ ವಿಚಾರಧಾರೆಯನ್ನು ಚರ್ಚಿಸುವಾಗ ಆಚರಣೆಗಳನ್ನು ಅನುಮೋದಿಸುವಾಗ ಅದಕ್ಕೆ ಧರ್ಮ ಎಂದು ಕರೆಯುತ್ತಾರೆ. ಇಂಗ್ಲೀಷಿನಲ್ಲಿ 'ರಿಲಿಜನ್' ಎಂದು ಕರೆಯುವುದು ಉಂಟು. ಪಾಶ್ಚಾತ್ಯ ರಾಷ್ಟ್ರದಲ್ಲಿ ದರ್ಶನಕ್ಕೂ ಧರ್ಮಕ್ಕೂ ಅಪಾರ ಅಂತರ ಇದೆ. ಆದರೆ ಭಾರತದಲ್ಲಿ ದರ್ಶನ ಮತ್ತು ಧರ್ಮ ಪ್ರತ್ಯೇಕವಾದರೂ, ಧರ್ಮ ದರ್ಶನಕ್ಕೆ ಪೂರಕವಾಗಿದೆ. ಆದರೆ ದುರ್ದೈವದಿಂದ ಧರ್ಮ ಜಾತಿಯ ಪರಿಧಿಯಲ್ಲಿ ಸಿಲುಕಿ ದರ್ಶನಕ್ಕಿರುವ ಮಹತ್ವವನ್ನು ಕಳೆದುಕೊಂಡಿದೆ ಎನ್ನಬಹುದು. ದರ್ಶನ ಎಂದರೆ ಆಧ್ಯಾತ್ಮ ವಿದ್ಯೆ ಎಂದು ಭಾರತೀಯರು ಭಾವಿಸಿದ್ದಾರೆ. ಶ್ರೀ ಕೃಷ್ಣನು ಸಮಸ್ತ ವಿದ್ಯೆಗಳಲ್ಲಿ ಆಧ್ಯಾತ್ಮ ವಿದ್ಯೆ. ಅದೇ ತನ್ನ ಸ್ವರೂಪವೆಂದು ಹೇಳಿದ್ದಾನೆ [2]. ಉಪನಿಷತ್ತಿನಲ್ಲಿ ಇದನ್ನು ಬ್ರಹ್ಮವಿದ್ಯೆ ಎಂದೂ, ಇದು ಸರ್ವ ವಿದ್ಯಾ ಪ್ರತಿಷ್ಠ ಎಂದು ಕರೆಯಲಾಗಿದೆ [3]. ಭಾರತೀಯರಿಗೆ ದರ್ಶನ ಎಂಬುದು ಪ್ರಮುಖವಾದ ಆಧ್ಯಾತ್ಮ ವಿದ್ಯೆ. ಸೃಷ್ಟಿಯ ಸತ್ಯವನ್ನು ಕಾಣುವ ಸಾಧನೆ ಎನ್ನಬಹುದು. ಧರ್ಮವು ಸಹ ದರ್ಶನಕ್ಕೆ ಸಹಾಯಕಾರಿಯಾದ ಆಚಾರ ವಿಚಾರಗಳ ವಿವರಣೆ ಎನ್ನಬಹುದು. Philosophy in India is essentially spiritual Religion is a rational synthesis of Ideas [4].

ಅನೇಕ ಜನ ಪಾಶ್ಚಾತ್ಯ ವಿದ್ವಾಂಸರು ಭಾರತದಲ್ಲಿರುವ ದರ್ಶನ ಮತ್ತು ಧರ್ಮದ ಸಮರಸಗಳನ್ನು ಕುರಿತು ಮುಕ್ತ ಕಂಠದಿಂದ ಪ್ರಶಂಸಿದ್ದಾರೆ. ಹವೆಲ್‌ರವರು ತಮ್ಮ ಗ್ರಂಥದಲ್ಲಿ ಹೀಗೆ ಹೇಳಿದ್ದಾರೆ. In India religon is hardly a dogma, but a working hypothesis of human conduct adopted to different stages of spiritual development and different condition of life [5].

ಇಂತಹ ವ್ಯಾಖ್ಯಾನದ ಹಿನ್ನೆಲೆಯಲ್ಲಿ ವೀರಶೈವ ಎಂಬುದು ಒಂದು ದರ್ಶನ ಸೂಚಕವೇ ಹೊರತು ಜಾತಿ ಸೂಚಕ ಶಬ್ದವಲ್ಲ ಎಂದು ಅರ್ಥವಾಗುತ್ತದೆ. ಇದೇ ಅರ್ಥದಲ್ಲಿ ವೀರಶೈವ ಪದ ವ್ಯಾಖ್ಯಾನವನ್ನು ಸಿದ್ಧಾಂತ ಶಿಖಾಮಣಿಯಲ್ಲಿ ವೀ - ಎಂದರೆ ವಿದ್ಯೆ, ರ - ಎಂದರೆ ರಮಿಸುವುದು, ಅಂದರೆ ಶಿವ ಜೀವರ ಐಕ್ಯ ಸೂಚಕವಾದ ವಿದ್ಯೆಯಲ್ಲಿ ಯಾರು ನಿರಂತರವಾಗಿ ನೆಲೆಸಿರುವರೋ ಅವರು ವೀರಶೈವರು ಎಂದು ಕರೆಯಲ್ಪಟ್ಟಿದೆ.

> ವಿಶಬ್ದೇನೋಚ್ಯತೇ ವಿದ್ಯಾ ಶಿವಜೀವೈಕ್ಯ ಬೋಧಿನೀ
> ತಸ್ಯಾಂರಮಂತೇ ಯೇ ಶೈವಾಃ ವೀರಶೈವಾ ಸ್ತುತೇಮತಾಃ [6]

---

2. (ಆಧ್ಯಾತ್ಮ ವಿದ್ಯಾ, ವಿದ್ಯಾನಾಂವಾದ:,ಪ್ರವದತಾಂ ನಹಂ. ಗೀತೆ - ೧೦-೨೩)
3. (ಸಬ್ರಹ್ಮ ವಿದ್ಯಾಂ ಸರ್ವ ವಿದ್ಯಾ ಪ್ರತಿಷ್ಠ - ಮುಂಡಕ ಉಪನಿಷತ್ತು ೧-೧).
4. Indian Philosophy Dr. Radhakrishnan Vol I. P. 24
5. Ibid : Vol - I, P. 26,
6. Outlines of the religous literature of India. Page - 26 J.N. Firkhar
   History of Kanarees literature by E.P. Rice, Page - 49.

ಈ ವ್ಯಾಖ್ಯಾನವನ್ನು ಜೆ.ಎಸ್.ಪರ್ಕ್‌ಹಾರ್ ಅವರು ತಮ್ಮ ಕೃತಿಯಾದ Outlines of the religous literature of India. (Page - 261) ಅದನ್ನೇ ಇ.ಪಿ. ರೈಸ್‌ರವರು History of Kanarees literature. (Page - 49) ಎಂಬ ಕೃತಿಯಲ್ಲಿ ಈ ವ್ಯಾಖ್ಯಾನವನ್ನು ಅನುಮೋದಿಸಿದ್ದಾರೆ.

ಮೇಲ್ಕಂಡ ವ್ಯಾಖ್ಯಾನಗಳಿಂದ ವೀರಶೈವ ಎಂಬುದು ಒಂದು ದರ್ಶನ ಎನ್ನುವುದು ಖಚಿತವಾಗಿದೆ. ದರ್ಶನ ಯಾವುದೇ ವ್ಯಕ್ತಿಯಿಂದ ಸಂಸ್ಥಾಪಿಸಲ್ಪಟ್ಟಿರುವ ಅಂಶವಲ್ಲ. ದರ್ಶನದ ಗುರಿ ಮುಟ್ಟಲು ಅವಲಂಬಿಸುವ ಮಾರ್ಗಗಳು ಧರ್ಮಗಳಾಗಿ ಅವು ಜಾತೀಯತೆಯ ರೂಪವನ್ನು ತಳೆಯುತ್ತವೆ. ಆ ಆಚರಣೆಗಳ ಮಾರ್ಗದರ್ಶಕರು ಅಥವಾ ನಿರ್ದೇಶಕರು ಜಾತೀಯತೆಯ ಸಂಸ್ಥಾಪಕರೆಂದು ಪರಿಗಣಿಸಲ್ಪಡುತ್ತಾರೆ. ಈ ಮಾರ್ಗದಲ್ಲಿ ಆಚರಣೆಗಳನ್ನು ನಿರೂಪಿಸಿದ ಮಹಾನುಭಾವರಾದ ಬುದ್ಧ, ಮಹಾವೀರ, ಕ್ರೈಸ್ತ, ಮಹಮದ್, ಇವರುಗಳ ಹೆಸರಿನಲ್ಲಿ ಒಂದು ಜನಾಂಗವು ಜಾತಿ ಸೂಚಕವಾಗಿ ಸಂಬೋಧಿಸಲ್ಪಟ್ಟಿದೆ. ಭಾರತದಲ್ಲಿರುವ ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ, ಮೀಮಾಂಸೆ, ವೇದಾಂತ ಮತ್ತು ಅದರಲ್ಲಿರುವ ಪ್ರಭೇದಗಳಾದ ಅದ್ವೈತ, ವಿಶಿಷ್ಟಾದ್ವೈತ, ದ್ವೈತ, ಶಕ್ತಿ ವಿಶಿಷ್ಟಾದ್ವೈತ ಇವು ದರ್ಶನಗಳೇ ಹೊರತು ಯಾವುದೇ ಪ್ರತ್ಯೇಕ ಧರ್ಮದ ಸೂಚಕಗಳಲ್ಲ. ವೀರಶೈವ ಎಂಬುದು ಶಕ್ತಿ ವಿಶಿಷ್ಟಾದ್ವೈತ ದರ್ಶನದ ಪರ್ಯಾಯ ಸೂಚಕ ಪದ ಎನ್ನಬಹುದು. ಈ ದರ್ಶನದ ಮೂಲ ಅತ್ಯಂತ ಪ್ರಾಚೀನವಾದುದು. ಭಾರತೀಯ ಸಾಹಿತ್ಯದಲ್ಲಿ ಸಂಸ್ಕೃತವೇ ಅತ್ಯಂತ ಪ್ರಾಚೀನ ಭಾಷೆ ಎನ್ನುವುದು ನಿರ್ವಿವಾದ. ಅದರಲ್ಲೂ ಋಗ್ವೇದವೇ ಸಂಸ್ಕೃತದ ಎಲ್ಲ ಗ್ರಂಥಗಳಿಗಿಂತಲೂ ಪ್ರಾಚೀನ ಗ್ರಂಥ ಎಂದು ವಿಖ್ಯಾತವಾಗಿದೆ. ವೀರಶೈವ ದರ್ಶನದ ಸ್ವರೂಪಗಳು ಅದಕ್ಕೂ ಹಿಂದೆ ಇದ್ದವು ಎನ್ನುವುದು ಸಂಶೋಧನೆಗಳಿಂದ ಲಭ್ಯವಾಗಿವೆ. ವೀರಶೈವ ದರ್ಶನದ ಮೂಲ ಸ್ವರೂಪದೃಷ್ಟಿ ದರ್ಶನ ಎನ್ನಬಹುದು.

ಸೃಷ್ಟಿಯಲ್ಲಿ ಸತ್ಯದ ಸಾಕ್ಷಾತ್ಕಾರ ಪಡೆಯಲು ದೃಷ್ಟಿಯೋಗ ಒಂದು ಪ್ರಮುಖ ಸಾಧನ ಎಂದು ಭಾವಿಸಿದವರು ವೀರಶೈವ ದಾರ್ಶನಿಕರು. ದೃಷ್ಟಿ ಯೋಗದ ಸಾಧನೆಗಾಗಿ ಲಿಂಗವನ್ನು ಪೂರಕವಾಗಿ ಬಳಸಿಕೊಂಡು ಅದನ್ನು ಅಂಗೈ ಮೇಲೆ ಇಟ್ಟುಕೊಂಡು ದೃಷ್ಟಿಸುತ್ತಾ ಸತ್ಯದ ನೆಲೆಯನ್ನು ಕಂಡುಕೊಳ್ಳುವುದು ವೀರಶೈವ ದರ್ಶನದ ಗುರಿ. ಇಂತಹ ಕ್ರಿಯೆ ಅಥವಾ ಸಾಧನ ಮಾರ್ಗವೇ ಪೂರ್ವದಲ್ಲಿ ಇತ್ತು ಎಂಬುದಕ್ಕೆ ಅನೇಕ ಉಲ್ಲೇಖಗಳು ಇವೆ. ಋಗ್ವೇದದ ಪೂರ್ವದಲ್ಲಿ ಸಿಂಧೂ ನದಿ ತೀರದ ಮಹೆಂಜೋದಾರೋ ನಗರದ ಸಂಸ್ಕೃತಿಯನ್ನು ಸಂಶೋಧನೆ ಮಾಡಿದ ಸರ್ ಜಾನ್.ಮಾರ್ಷಲ್‌ರವರು ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ [7]. Pre-historic lingas is the Indus valley. They were sacred objects. The smaller ones serving as amulets to be carried on the person just as miniature linga, are commonly carried by saivites today.

ಹರಪ್ಪಾ ಮತ್ತು ಮಹೆಂಜೋದಾರೋ ಸಂಶೋಧನೆಗಳಲ್ಲಿ ಎಡದ ಕೈನ ಅಂಗೈಯಲ್ಲಿ ಲಿಂಗದಂತಹ ಸಂಕೇತವನ್ನು ಇಟ್ಟುಕೊಂಡು ಅದನ್ನು ನೋಡುತ್ತಿರುವ ಮೂರ್ತಿಗಳು ಮತ್ತು ಪಶುಮೂರ್ತಿಗಳು ದೊರೆತಿವೆ ಎಂದು ಆ ಸಂಸ್ಕೃತಿಯ ಸಂಶೋಧಕನಾದ ಫಾದರ್ ಹೆರಾಸ್ ಮತ್ತು ಬ್ಯಾನರ್ಜಿ ಮೊದಲಾದ ವಿದ್ವಾಂಸರು ಉಲ್ಲೇಖಿಸಿದ್ದಾರೆ. ಆದಕಾರಣ ಈ ಸಿದ್ಧಾಂತದ ಸೂಕ್ಷ್ಮ ಸ್ವರೂಪಗಳು ವೇದ ಪೂರ್ವದಲ್ಲಿ ಇತ್ತು ಎಂದು ವ್ಯಕ್ತವಾಗಿದೆ. ಅಲ್ಲಿ ದೊರೆತ ಲಿಪಿಯ ಬಗೆಗೆ ಇನ್ನೂ ಸಂಶೋಧನೆ ನಡೆಯುತ್ತಿದೆ. ಅದರ ವಿವರಣೆಯ ಅರಿವಾದಾಗ ವೀರಶೈವ ದರ್ಶನದ ಮೇಲೆ ಮಹತ್ವದ ಬೆಳಕು ಚೆಲ್ಲಬಹುದೆಂದು ಊಹಿಸಬಹುದಾಗಿದೆ.

ವೀರಶೈವ ದರ್ಶನದ ವಿಶ್ಲೇಷಣೆಗೆ ಮತ್ತು ವ್ಯಾಖ್ಯಾನಗಳಿಗೆ ನಾವು ಸಂಸ್ಕೃತದ ಗ್ರಂಥಗಳತ್ತ ಗಮನ ಹರಿಸುವುದು ಅನಿವಾರ್ಯ. ವೀರಶೈವ ದರ್ಶನ ಮತ್ತು ಅದಕ್ಕೆ ಸಂಬಂಧಿಸಿದ ಧರ್ಮದ ಬಗೆಗೆ ಇರುವ ಗ್ರಂಥಗಳ ವಿವರಣೆ ಕೊಡುವುದು

7. Indian civilization, Sr. John marshal P. 59

BF

ನಮ್ಮ ಮುಖ್ಯ ಉದ್ದೇಶವಲ್ಲ. ಈ ದರ್ಶನಕ್ಕೆ ಸಂಬಂಧಪಟ್ಟ ಗ್ರಂಥಗಳ ಬಗೆಗೆ ಅನೇಕ ವಿದ್ವಾಂಸರು ಈಗಾಗಲೇ ವಿವರಣೆಯನ್ನು ನೀಡಿದ್ದಾರೆ. ವಿದ್ವಾಂಸರಾದ ಪಂಡಿತ ಬಸವರಾಜಯ್ಯನವರು ದೇಗುಲಜ್ಯೋತಿ ಎಂಬ, ಕನಕಪುರ ಮಠಾಧ್ಯಕ್ಷರಾದ ಶ್ರೀ ನಿರ್ವಾಣ ಸ್ವಾಮಿಗಳವರ ಸ್ಮರಣ ಸಂಪುಟದಲ್ಲಿ ಬರೆದ ಲೇಖನದಲ್ಲಿ ೪೭ ಸಂಸ್ಕೃತ ಕೃತಿಗಳನ್ನು ಉಲ್ಲೇಖಿಸಿದ್ದಾರೆ ಮತ್ತು ಅದೇ ಸಂಪುಟದಲ್ಲಿ ಪದ್ಮಶ್ರೀ ಶಿವಮೂರ್ತಿ ಶಾಸ್ತ್ರಿಗಳವರ ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತ ಲೇಖನದಲ್ಲಿ ಹೀಗೆ ಹೇಳಿದ್ದಾರೆ. ''ವೀರಶೈವ ಮತದ ಪ್ರತಿಪಾದನೆಗಾಗಿ ಕ್ರಿ.ಶ. ೮ನೆಯ ಶತಕದಲ್ಲಿ ಗೋಕರ್ಣದಲ್ಲಿದ್ದ ಶ್ರೀ ನೀಲಕಂಠ ಶಿವಾಚಾರ್ಯನೂ ಕ್ರಿ.ಶ. ೧೩ನೆಯ ಶತಮಾನದಲ್ಲಿ ಆಂಧ್ರ ಪ್ರದೇಶದಲ್ಲಿದ್ದ ಶ್ರೀಪತಿ ಪಂಡಿತನೂ, ಬ್ರಹ್ಮಸೂತ್ರಗಳ ಮೇಲೆ ಭಾಷ್ಯಗಳನ್ನು ಬರೆದಿದ್ದಾರೆ. ಅಲ್ಲದೆ ನಾರಾಯಣೋಪನಿಷತ್, ಕೇನೋಪನಿಷತ್, ಸಿದ್ಧಾಂತ ಶಿಖೋಪನಿಷತ್ ಈಶಾವಾಸ್ಯೋಪನಿಷತ್ ಮೊದಲಾದುವುಗಳಿಗೆ ವೀರಶೈವ ವಿದ್ವಾಂಸರು ಸ್ವಮತದ ಪರವಾಗಿ ಭಾಷ್ಯಗಳನ್ನು ಬರೆದಿದ್ದಾರೆ. ಇದೇ ರೀತಿ ಭಗವದ್ಗೀತೆಗೆ ಕೂಡ ವೀರಶೈವ ಭಾಷ್ಯವನ್ನು ಈಗ ಬರೆಯಲಾಗಿದೆ. ವೀರಶೈವರು ವಿಶೇಷವಾಗಿ ಆಗಮ ಪ್ರಮಾಣ ಹಾಗೂ ಅನುಭವ ಪ್ರಮಾಣವನ್ನು ಅಂಗೀಕರಿಸಿರುವುದರಿಂದ ಇವರಿಗೆ ಪ್ರಸ್ಥಾನತ್ರಯ ಭಾಷೆಗಳ ಅಗತ್ಯ ಕಾಣಲಿಲ್ಲವೆಂದು ಹೇಳಬಹುದು. ಆದರೂ ಕ್ರಿ.ಶ. ೧೫ನೆಯ ಶತಮಾನದಲ್ಲಿದ್ದ ಆಚಾರ್ಯ ನಂದಿಕೇಶ್ವರನು 'ಲಿಂಗಧಾರಣ ಚಂದ್ರಿಕೆ'ಯಲ್ಲಿಯೂ, ೧೮ನೇ ಶತಮಾನದಲ್ಲಿದ್ದ ಮರಿತೋಂಟದಾರ್ಯನು 'ವೀರಶೈವಾನಂದ ಚಂದ್ರಿಕೆ'ಯಲ್ಲಿಯೂ ವೀರಶೈವ ಮತವು ವೇದಾಗಮ ಸಮ್ಮತವೆಂದು ವಿದ್ವತ್ಪೂರ್ಣವಾಗಿ ಸಮರ್ಥಿಸಿದ್ದಾರೆ. ಪೂರ್ವಾಚಾರ್ಯರಿಂದ ನಿರೂಪಿತವಾಗಿರುವ ಸಿದ್ಧಾಂತಶಿಖಾಮಣಿ, ಕ್ರಿಯಾಸಾರ, ಅನುಭವಸೂತ್ರ, ಶಿವಾದ್ವೈತಮಂಜರಿ, ಧರ್ಮಶಿರೋಮಣಿ, ವೀರಶೈವಾಚಾರಕೌಸ್ತುಭ, ಸೋಮನಾಥಭಾಷ್ಯ, ಕೈವಲ್ಯಸಾರ, ಶಿವರಹಸ್ಯ, ಪರಮರಹಸ್ಯ, ಶಿವಗೀತೆ, 'ಸ್ಕಾಂದ-ಲಿಂಗ ಪುರಾಣಗಳು' ಶಿವಧರ್ಮ ಪುರಾಣ, ಶ್ವೇತಾಶ್ವತರೋಪನಿಷತ್, ಶಿವಯೋಗ ಪ್ರದೀಪಿಕಾ, ವೇದಾಂತಸಾರ ವೀರಶೈವ ಚಿಂತಾಮಣಿ, ಶ್ರುತಿಸಾರ ಭಾಷ್ಯಂ, ಪಂಚ ಬ್ರಹ್ಮೋದಯ ಭಾಷ್ಯಂ, ದೀಕ್ಷಾಬೋಧೆ, ಭಕ್ತಾಧಿಕ್ಯ, ಶಿವಾದಿತ್ಯ ಇತ್ಯಾದಿ ಸಂಸ್ಕೃತ ಗ್ರಂಥಗಳ ಉಲ್ಲೇಖ ಇದೆ [8]. ಈ ದೃಷ್ಟಿಯಿಂದ ವೀರಶೈವ ದರ್ಶನದ ಮೇಲೆ ಬೆಳಕು ಚೆಲ್ಲಬಲ್ಲ ಗ್ರಂಥಗಳ ಪರಿಚಯವನ್ನು ಇದರಿಂದ ಪಡೆಯಬಹುದು. ಈ ಗ್ರಂಥಗಳಲ್ಲಿ ದರ್ಶನಕ್ಕಿಂತಲೂ ಹೆಚ್ಚು ಧರ್ಮ ಮತ್ತು ನೈತಿಕ ವಿಚಾರಗಳಿಗೆ ಸಂಬಂಧಪಟ್ಟ ಕೃತಿಗಳಿವೆ. ಅದನ್ನು ಅನುಸರಿಸಿ ಕನ್ನಡದಲ್ಲಿ ವಚನ ಸಾಹಿತ್ಯವು ವೀರಶೈವ ಧರ್ಮ ಮತ್ತು ಸಮಾಜ ಜೀವನದ ಸರ್ವ ಮುಖಗಳನ್ನು ಪ್ರತಿಬಿಂಬಿಸುವ ಸಾಹಿತ್ಯವಾಗಿ ಸೃಷ್ಟಿಯಾಗಿದೆ.

ಲಿಂಗೈಕ್ಯ ನಂಜುಂಡಾರಾಧ್ಯರು ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರಿಗೆ ಅರ್ಪಿಸಿದ ಅವರ ಅಮೃತ ಮಹೋತ್ಸವದ ಸಮರ್ಪಣ ಗ್ರಂಥವಾದ ಅರ್ಚನ ಗ್ರಂಥದಲ್ಲಿ ವೀರಶೈವ ಸಂಸ್ಕೃತ ಗ್ರಂಥಗಳಿಗೆ ಕನ್ನಡ ಟೀಕೆಗಳು ಎಂಬ ಲೇಖನದಲ್ಲಿ ಕೆಲವು ಸಂಸ್ಕೃತದ ಗ್ರಂಥಗಳನ್ನು ಉಲ್ಲೇಖಿಸಿದ್ದಾರೆ [9].

ಮೈಸೂರು ವಿಶ್ವವಿದ್ಯಾನಿಲಯದ ಸಂಸ್ಕೃತ ವಿಭಾಗದ ಮುಖ್ಯಸ್ಥರಾದ ಡಾ.ಹೆಚ್.ಪಿ. ಮಲ್ಲೇದೇವರು ಅವರು ೧೯೮೦ರಲ್ಲಿ ಮೈಸೂರಿನಲ್ಲಿ ನಡೆದ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಸ್ಮರಣ ಸಂಚಿಕೆಯಲ್ಲಿ ಸಂಸ್ಕೃತದಲ್ಲಿ ವೀರಶೈವ ಸಾಹಿತ್ಯ ಎಂಬ ಲೇಖನದಲ್ಲಿ ಅಪ್ರಕಟಿತವಾದ ಕೃತಿಗಳು ಎಂದು ೫೫ ಗ್ರಂಥಗಳನ್ನು ಉಲ್ಲೇಖಿಸಿದ್ದಾರೆ [10].

೧೯೮೩ರಲ್ಲಿ ಮೈಸೂರಿನಲ್ಲಿ ನಡೆದ ಅಖಿಲ ಭಾರತ ವೀರಶೈವ ಮಹಾಸಭೆಯ ೨೦ನೇ ಅಧಿವೇಶನದಲ್ಲಿ ಪ್ರಕಟವಾದ ಸ್ಮರಣ ಸಂಪುಟದಲ್ಲಿ ಮೈಸೂರಿನ ಕುಂದೂರು ಮಠಾಧ್ಯಕ್ಷರಾದ ಶ್ರೀ ಇಮ್ಮಡಿ ಶಿವಬಸವಸ್ವಾಮಿಗಳವರು ಸಂಸ್ಕೃತ ಸಾಹಿತ್ಯಕ್ಕೆ

---

8. ದೇಗುಲ ಜ್ಯೋತಿ ಪು. ೧೯೭

9. ಅರ್ಚನಾ ಪು.೧೦/೪೦

10. ಅನುಭಾವ ಪು. ೭೩

ಮೈಸೂರು ಜಿಲ್ಲೆಯ ವೀರಶೈವರ ಕೊಡುಗೆ ಎಂಬ ಲೇಖನದಲ್ಲಿ ಮೈಸೂರು ಜಿಲ್ಲೆಯ ವಿದ್ವಾಂಸರು ರಚಿಸಿದ ಸಂಸ್ಕೃತದ ಕೃತಿಗಳನ್ನು ಉಲ್ಲೇಖಿಸಿದ್ದಾರೆ [11].

ಇವುಗಳಲ್ಲದೆ ಇನ್ನು ಅನೇಕ ಮಹತ್ವದ ಗ್ರಂಥಗಳು ಧಾರ್ಮಿಕ ಆಂದೋಲನದಲ್ಲಿ ನಾಶವಾಗಿವೆ ಎಂಬುದನ್ನು ವಿದ್ವಾಂಸರಾದ ಇ.ಪಿ.ರೈಸ್‌ರವರು ಒಂದೆಡೆ ಉಲ್ಲೇಖಿಸಿದ್ದಾರೆ. ಸಾಮಾನ್ಯ ದೃಷ್ಟಿಯಿಂದ ಈ ಗ್ರಂಥಗಳ ಆಂತರಿಕ ವಿಚಾರಕ್ಕೆ ಪ್ರಯತ್ನಿಸದೇ ಅವುಗಳ ಪರಿಚಯವನ್ನು ಮಾತ್ರ ಮಾಡಲಾಗಿದೆ. ಅದಕ್ಕೆ ಈ ಗ್ರಂಥಗಳು ಕೆಲವು ದಾರ್ಶನಿಕ ವಿಷಯಗಳನ್ನು ಮತ್ತೆ ಕೆಲವು ಧಾರ್ಮಿಕ ಅಥವಾ ಆಚರಣೆ ವಿಷಯಗಳನ್ನು ಉಲ್ಲೇಖಿಸಿ ಎಂದು ಎರಡು ವಿಧವಾಗಿ ವಿಂಗಡಿಸಬಹುದು. ವೀರಶೈವದರ್ಶನದಲ್ಲಿ ಧರ್ಮದ ಸ್ವರೂಪವು ನಾನಾ ರೀತಿಯಲ್ಲಿ ಒಳಗೊಂಡಿರುವುದರಿಂದ ಕೆಲವು ಗ್ರಂಥಗಳನ್ನು ನಿರ್ದಿಷ್ಟವಾದ ಯಾವುದೇ ಒಂದು ವರ್ಗಕ್ಕೆ ಸೇರಿಸುವುದು ಕಷ್ಟಸಾಧ್ಯ.

ಈ ಲೇಖನದಲ್ಲಿ ವೀರಶೈವಧರ್ಮದ ಅಭಿಮಾನಿಗಳು ಬರೆದ ಕೃತಿಗಳ ವಿವರಣೆ ನೀಡುವುದು ನಮ್ಮ ಉದ್ದೇಶವಲ್ಲ. ಸಂಸ್ಕೃತದ ಗ್ರಂಥಗಳಲ್ಲಿ ವೀರಶೈವ ದರ್ಶನ ಹೇಗೆ ವಿಕಸನವಾಗುತ್ತಾ ಬಂದಿದೆ ಎಂಬುದರ ಸೂಕ್ಷ್ಮ ಪರಿಚಯ ಮಾಡಿಕೊಡಲು ಅಪೇಕ್ಷಿಸಲಾಗಿದೆ. ಆದಕಾರಣ ವೀರಶೈವದರ್ಶನವು ಅನ್ಯಕೃತಿಗಳಲ್ಲಿ ಹೇಗೆ ರೂಪುಗೊಂಡಿದೆ ಎಂಬುದನ್ನು ವಿಶ್ಲೇಷಿಸುವ ಪ್ರಯತ್ನವನ್ನು ಮಾಡಲಾಗಿದೆ. ಪ್ರಸಿದ್ಧ ವಿದ್ವಾಂಸರಾದ ಶಂಭಾ ಜೋಷಿಯವರು ''ಶಿವ ರಹಸ್ಯ ಅಥವಾ ವೇದದಲ್ಲಿ ಕಾಣುವ ವೀರಶೈವ ಮತದ ಬೇರುಗಳು'' ಎಂಬ ಕೃತಿಯಲ್ಲಿ ಕೆಲವು ಪ್ರಮುಖವಾದ ಅಂಶಗಳನ್ನು ಪ್ರಸ್ತಾಪ ಮಾಡಿದ್ದಾರೆ. ವೀರಶೈವರು ರುದ್ರ ಅಥವಾ ಶಿವನನ್ನು ನಿಷ್ಠೆಯಿಂದ ಉಪಾಸನೆ ಮಾಡುವ ಜನ ಸಮುದಾಯ. ರುದ್ರ ಅಥವಾ ಶಿವ ಸಾಮರಸ್ಯ ಋಗ್ವೇದದಲ್ಲಿ ಕಂಡು ಬರುತ್ತದೆ ಎಂದು ಉಲ್ಲೇಖಿಸಿರುವುದಲ್ಲದೆ ವೀರಶೈವ ದರ್ಶನದ ಸೂಕ್ಷ್ಮ ಸ್ವರೂಪವು ಋಗ್ವೇದದ ಅನೇಕ ರುಚೆಗಳಲ್ಲಿ ವ್ಯಕ್ತವಾಗಿವೆ ಎಂಬುದನ್ನು ವಿವರಿಸಿದ್ದಾರೆ. ಅವರ ಕೃತಿಯು ವೀರಶೈವ ದರ್ಶನದ ಪ್ರಾಚೀನತೆಯನ್ನು ಸೂಚಿಸುವ ಒಂದು ಪ್ರಥಮ ಪ್ರಯತ್ನವಾಗಿದೆ ಎನ್ನಬಹುದು. ಆ ಗ್ರಂಥದ ಮುನ್ನುಡಿಯ ವಿಷಯಗಳು ಗಮನಾರ್ಹ.

The foundations of veershaiva philosophy could be easily seen in the Vedas. The origin of its principle of equality could be treated to the Rigvedic saying ಅಜ್ಯೇಷ್ಠಾ, ಅಕನಿಷ್ಠಾ describing the followers of Rudra. The Rigveda also refers to the unique devotion of the '**Rudras**', and history shows us numerous instance where-in Veerashaivas have considered everything that was not offered to Shiva as only fit to be discarded and distroyed. It is this extreme devotion of the Veerashaivas that forms the basis of 'Bhakti-Yoga' which the Aryans learnt from the Dravidians[12].

ಕರ್ನಾಟಕ ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶರಾಗಿದ್ದ ಶ್ರೀ ಟಿ.ಎನ್. ಮಲ್ಲಪ್ಪನವರು ಅಖಿಲಭಾರತ ವೀರಶೈವ ಮಹಾಸಭೆಯ ೧೯ನೇ ಅಧಿವೇಶನದ ಸ್ಮರಣ ಸಂಚಿಕೆಯಲ್ಲಿ ಬರೆದ ಬಸವ ಪೂರ್ವದ ವೀರಶೈವ - ಶಿವಾದ್ವೈತ ದರ್ಶನ ಎಂಬ ಲೇಖನದಲ್ಲಿ ಋಗ್ವೇದದಲ್ಲಿ ನಾಸದಿಯ ಸೂಕ್ತ : ನಾಸದಿಯ ಸೂಕ್ತವು ಉಪನಿಷತ್ತಿನಲ್ಲಿನ ಆಧ್ಯಾತ್ಮ ವಿವೇಚನೆಗೆ ತಳಹದಿ ಆಗಿರುವಂತೆಯೇ ವೀರಶೈವರ ಶಿವಾದ್ವೈತ ಸಿದ್ಧಾಂತದ ಆವಿಷ್ಕಾರಣ ಸಾಧನವಾಗಿದೆ. ಸನಾತನ ಕಾಲದಲ್ಲಿ ಮೊದಲು ನಾಸದಿಯ ಸೂಕ್ತದಲ್ಲಿ ಬೇರಲ್ಲಿ ಒಡೆದು ಮುಂಡಕ, ಶ್ವೆತಾಶ್ವತರ ಉಪನಿಷತ್ತುಗಳಲ್ಲಿ ಬೆಳೆದು ನಿಂತು ವಾಯುವೀಯ ಸಂಹಿತ

---

11. ಅ॥ಭಾ॥ವೀ॥ ಮಹಾಸಭೆಯ ೨೦ನೇ ಅಧಿವೇಶನದ ಸ್ಮರಣ ಸಂಪುಟ ಪು. ೧೯

12. ಶಂ.ಭಾ. ಜೋಷಿ , ಶಿವರಹಸ್ಯ ಪು. VIII

ಶ್ರೀಕಂಠ ಭಾಷ್ಯದಲ್ಲಿ ಹೂ ಬಿಟ್ಟು, ಮಿಡಿಯಾಗಿ, ಕಾಯಾಗಿ, ವಚನ ವಾಙ್ಮಯದಲ್ಲಿಯೂ, ಸಿದ್ಧಾಂತದ ಶಿಖಾಮಣಿಯಲ್ಲಿಯೂ ಫಲ ಬಿಟ್ಟು ವೀರಶೈವವು ಮತ್ತೂ ವೃಕ್ಷವಾಯಿತು ಎಂದು ಹೇಳಿದ್ದಾರೆ [13].

ವೀರಶೈವ ದರ್ಶನದ ವಿಚಾರ ಧಾರೆಗಾಗಿ ಋಗ್ವೇದ ಮತ್ತು ಅಥರ್ವಣ ವೇದದ ಕೆಲವು ಸಂಕೇತಗಳು ಪೂರಕವಾಗಿವೆ ಎಂಬುದನ್ನು ಅನೇಕ ವಿದ್ವಾಂಸರು ಚರ್ಚಿಸಿದ್ದಾರೆ. ವೀರಶೈವ ದರ್ಶನದ ಮೇಲೆ ವಿಶ್ಲೇಷಣಾತ್ಮಕ ಕೃತಿಗಳನ್ನು ರಚನೆ ಮಾಡಿದ ದಾರ್ಶನಿಕರು ವೇದಗಳಲ್ಲದೆ ಉಪನಿಷತ್ತುಗಳನ್ನು ಕೂಡ ಉದಾಹರಿಸಿದ್ದಾರೆ. ಅನಂತರ ವೇದಗಷ್ಟೇ ಪ್ರಖ್ಯಾತವಾದ ಮತ್ತೊಂದು ಸಾಹಿತ್ಯ ವಾಹಿನಿಯೆಂದರೆ ಆಗಮಶಾಸ್ತ್ರ. ವೀರಶೈವ ದರ್ಶನವು ಸಾಕಷ್ಟು ಬೆಳಕಿಗೆ ಬಂದಿರುವುದು ಆಗಮಶಾಸ್ತ್ರದಿಂದ ಎಂಬುದನ್ನು ಮುಂದೆ ಕಾಣುತ್ತೇವೆ. ವೇದಗಳಿಗೂ ಆಗಮಗಳಿಗೂ ವಿರೋಧ ಭಾವನ ಇದೆ ಎಂದು ಭಾವಿಸಲು ಆಗುವುದಿಲ್ಲ. ಶ್ರೀ ಸಿದ್ಧಗಂಗಾ ಕ್ಷೇತ್ರದ ಚರಜಂಗಮ ಅಧಿಕಾರ ಪ್ರದಾನ ಮಹೋತ್ಸವದ ಸಂಚಿಕೆಯಾದ ಅನುಗ್ರಹ ಸಂಚಿಕೆಯಲ್ಲಿ ವಿದ್ವಾಂಸರಾದ ಶ್ರೀ ವಿಶ್ವನಾಥ ಶಾಸ್ತ್ರಿಗಳು ಬರೆದ ಶ್ರೀಕಂಠಭಾಷ್ಯ ಲೇಖನದಲ್ಲಿ ಇವುಗಳ ಸಮನ್ವಯತೆಯನ್ನು ಹೀಗೆ ಹೇಳುತ್ತಾರೆ. ''ವೇದಗಳನ್ನು ಮತ್ತು ಶಿವಾಗಮಗಳನ್ನು ಶಿವನೊಬ್ಬನೇ ನಿರ್ಮಾಣ ಮಾಡಿರುವುದರಿಂದ ಅವುಗಳಿಗೆ ನಾವು ಭೇದವನ್ನು ಒಪ್ಪುವುದಿಲ್ಲ. ವೇದಗಳನ್ನೂ ಶಿವಾಗಮವೆಂದು ವ್ಯವಹಾರ ಮಾಡುವುದು ಯುಕ್ತವೇ ಆಗುತ್ತದೆ. ಪಂಚಬ್ರಹ್ಮ - ಪ್ರಣವ - ಪಾಂಚಾಕ್ಷರೀ ಮೊದಲಾದ ಮಂತ್ರಗಳೂ ಲಿಂಗಾರ್ಚನ - ಭಸ್ಮ ರುದ್ರಾಕ್ಷಿಧಾರಣಾದಿ ಧರ್ಮಗಳೂ ವೇದಗಳಲ್ಲಿಯೂ, ಶಿವಾಗಮಗಳಲ್ಲಿಯೂ ಸಮವಾಗಿ ಪ್ರತಿಪಾದಿಸಲ್ಪಟ್ಟಿವೆ. ಆದ್ದರಿಂದ ವೇದಗಳು ಮತ್ತು ಶಿವಾಗಮಗಳು ಸಮಪ್ರಮಾಣವಾಗಿವೆ. ಆದರೆ ವೇದಗಳಲ್ಲಿ ತ್ರೈವರ್ಣಿಕರಿಗೆ ಮಾತ್ರ ಅಧಿಕಾರವೂ ಆಗಮಗಳಲ್ಲಿ ಎಲ್ಲರಿಗೂ ಅಧಿಕಾರವೂ ಹೀಗೆ ಅಧಿಕಾರ ಭೇದ ಮಾತ್ರ ಇರುವುದು.

ಮನುಸ್ಮೃತಿ ವ್ಯಾಖ್ಯಾನಕಾರನಾದ ಕಲ್ಲೂಕನು ''ವೈದಿಕೀ ತಾಂತ್ರಿಕೀ ಚೈವದ್ವಿವಿಧಾ ಶೃತಿಕೀರ್ತಿತಾ'' ಅಂದರೆ ವೇದ ಮತ್ತು ತಂತ್ರಶಾಸ್ತ್ರಗಳೆರಡನ್ನೂ ಶೃತಿ ಎಂದು ವ್ಯಾಖ್ಯಾನಿಸಿದ್ದಾನೆ.

ಇತ್ತೀಚಿನ ಸಂಶೋಧಕರು ವೀರಶೈವ ದರ್ಶನದ ವಿಚಾರ ವಿಶ್ಲೇಷಣೆಗೆ ಅನೇಕ ಉಪನಿಷತ್ತುಗಳನ್ನು ಅವಲಂಬಿಸಿರುವುದು ಕಂಡುಬರುತ್ತದೆ. ಡಾ.ಹೆಚ್.ಪಿ. ಮಲ್ಲೇದೇವರು ಅವರು ತಮ್ಮ ಕೃತಿಯಲ್ಲಿ ಅನ್ನಪೂರ್ಣ ಉಪನಿಷತ್, ಅಥರ್ವಶಿರಾ ಉಪನಿಷತ್, ಆತ್ಮ ಉಪನಿಷತ್, ಅಥರ್ವಶಿಖಾ ಉಪನಿಷತ್, ಬಸ್ಮ ಜಾಬಾಲ, ಬೃಹಾದಾರಣ್ಯಕ, ಬ್ರಹ್ಮ ವಿದ್ಯೆ, ಛಾಂದೋಗ್ಯ, ದಾನ್ಯ ಬಿಂದು, ಕಠ, ಮುಂಡಕ, ಮಹಾಉಪನಿಷತ್, ಮೈತ್ರೇಯಣಿ, ಮಾಂಡೂಕ್ಯ, ಮಂಡಲಬ್ರಾಹ್ಮಣ, ನಾರದ ಪರಿವ್ರಾಜಿಕ, ಉತ್ತರ ತಾಪನೀಯ, ಪಿಂಗಳ, ರುದ್ರಾಕ್ಷಿ, ಜಾಬಾಲ ಶಾಂಡಿಲ್ಯ, ಶೇತಾಶ್ವತರ, ತೈತ್ತರೀಯ, ತೇಜೋಬಿಂದು, ತ್ರಿಪಾದ ವಿಭೂತಿ, ಮಹಾನಾರಾಯಣ, ಯೋಗ ಚೂಡಾಮಣಿ, ಯೋಗಶಿಖಾ ಮುಂತಾದ ಉಪನಿಷತ್‌ಗಳನ್ನು ಉದಾಹರಿಸಿ ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸಿದ್ದಾರೆ [15].

ಹೀಗೆ ವೀರಶೈವ ದರ್ಶನವು ಅನೇಕ ಕೃತಿಗಳಲ್ಲಿ ಬೆಳಗಿದೆ. ದಾರ್ಶನಿಕರು ಜಾಬಾಲ, ಮೈತ್ರೇಯ ಉತ್ತರ ತಾಪನೀಯ ಹಂಸ ಮುಂತಾದ ಸಾಮಾನ್ಯ ಉಪನಿಷತ್ತುಗಳಿಂದಲೂ, ಮುಂಡುಕ ಪ್ರಶ್ನ, ಕಠ, ಬೃಹದಾರಣ್ಯಕ ಮುಂತಾದ ಪ್ರಮುಖ ಉಪನಿಷತ್ತುಗಳಿಂದಲೂ ಉದಾಹರಿಸಿರುವುದು .ಕಂಡು ಬರುತ್ತದೆ. (ಸಿದ್ಧಾಂತ ಶಿಖಮಣಿ ಮರಿತೋಂಟದಾರ್ಯ ಭಾಷ್ಯ. ಅಧ್ಯಾಯ-೮, ಶ್ಲೋಕ ೧೭-೧೮). ಪ್ರಾಚೀನ ಸಂಸ್ಕೃತ ಗ್ರಂಥಗಳ ಅಧ್ಯಯನದ ಅಭಾವದಿಂದ ವೀರಶೈವ ದರ್ಶನದ ಪರಿಚಯ ಜಗತ್ತಿನಲ್ಲಿ ಸಾಕಷ್ಟು ಆಗಿಲ್ಲ. ವಿದ್ವಾಂಸರಾದ ಡಾ. ಸುಧೇಂದುಕುಮಾರ್ ದಾಸ್ ಅವರು ೧೯೨೩-೨೪ರಲ್ಲಿ ಲಂಡನ್ ವಿಶ್ವವಿದ್ಯಾನಿಲಯದಲ್ಲಿ ಶೈವದರ್ಶನದ ಸಂಶೋಧನೆ ನಡೆಸುವಾಗ ಬರೆದ ಕೃತಿಯ ಮುನ್ನುಡಿಯಲ್ಲಿ ಹೀಗೆ ಹೇಳಿದ್ದಾರೆ :

---

13. ಅ॥ಭಾ॥ವೀ॥ಮಹಾಸಭೆಯ ೧೯ನೇ ಅಧಿವೇಶನದ ಸ್ಮರಣ ಸಂಪುಟ, ಪು. ೪೨

14. ಅನುಗ್ರಹ, ಪು. ೭೪

15. H.P. Malledevaru, Essentials of Virasaivism : Bharatiya Vidya Bhavan.

The literature of the Kashmera Trika School has not as yet been thorougly studied by students of philosophy. The same is also the case with the lingayata Saiva school. As a matter of fact we find only inadequate accounts of these highly interesting philosophical systems in the well-known works on the histroy of Indian philosophical systems. What little we do get about them is as a sort of passing reference only [16].

ಮೇಲ್ಕಂಡ ಮಾತು ಇಂದಿಗೂ ಸತ್ಯವಾಗಿದೆ. ಒಂದು ದೃಷ್ಟಿಯಿಂದ ದೊರೆಯುವ ಸಂಸ್ಕೃತದ ಗ್ರಂಥಗಳಲ್ಲಿ ಉಲ್ಲೇಖಿಸಲ್ಪಟ್ಟ ವೀರಶೈವ ದರ್ಶನದ ಬಗೆಗೆ ಆಳವಾದ ಅಧ್ಯಯನ ನಡೆದಿಲ್ಲ. ಇನ್ನು ಅನೇಕ ಕೃತಿಗಳು ಸಂಶೋಧಿತವಾಗಿದ್ದು ಪ್ರಕಟಗೊಂಡಿಲ್ಲ. ಇತ್ತೀಚಿನ ವಿದ್ವಾಂಸರು ಸಂಸ್ಕೃತ ಭಾಷೆಯನ್ನು ಧಿಕ್ಕರಿಸಿ ವೀರಶೈವ ದರ್ಶನಕ್ಕೆ ಶರಣರ ವಚನಗಳು ಮೌಲ್ಯಾಧಾರಗಳೆಂದೂ ಮೂಲಾಧಾರವೆಂದೂ ಭಾವಿಸಿರುವುದು ದುರದೃಷ್ಟಕರ ಸಂಗತಿ. ಶರಣರು ವೇದ ಉಪನಿಷತ್ತುಗಳಿಂದಲೂ ಮತ್ತು ಆಗಮ ಶಾಸ್ತ್ರಗಳಿಂದಲೂ ಪ್ರೇರಣೆಯನ್ನು ಪಡೆದಿರುವ ಅಂಶವನ್ನು ಅನೇಕ ವಚನಗಳಲ್ಲಿ ಪ್ರತ್ಯಕ್ಷವಾಗಿ ಕಾಣಬಹುದು. ವೀರಶೈವದರ್ಶನದ ಆಳ ಮತ್ತು ಅಂತರಗಳನ್ನು ಅರಿಯಲು ನಾವು ಸಂಸ್ಕೃತದ ಭಾಷೆಯನ್ನು ಅವಲಂಬಿಸಿರುವುದರಿಂದ ಈ ದರ್ಶನದ ಮೇಲೆ ಹೆಚ್ಚು ಬೆಳಕು ಚೆಲ್ಲಿದಂತಾಗುವುದಲ್ಲದೇ, ಈ ದರ್ಶನ ನಿಜವಾಗಿಯೂ ವಿಶ್ವ ದರ್ಶನವೆಂದು ತೋರಿಸಿಕೊಳ್ಳಲು ಸಾಧ್ಯವಾಗುತ್ತದೆ. ಭಾಷಾಭೇದವನ್ನು ಮರೆತು ನಾವು ಈ ದರ್ಶನದ ಮಹತ್ವವನ್ನು, ಪ್ರಭುತ್ವವನ್ನು ಅರಿತುಕೊಳ್ಳಲು ಭಾರತದ ಅನೇಕ ಭಾಷೆಗಳನ್ನು ಅವಲಂಬಿಸುವ ಅಗತ್ಯವಿದೆ.

ಆಗಮಗಳಿಂದ ಪ್ರೇರಣೆ

ಭಾರತೀಯ ದರ್ಶನ ಸಾಹಿತ್ಯದಲ್ಲಿ ಎರಡು ಸಮಾನಾಂತರ ಪ್ರವಾಹಗಳನ್ನು ಕಾಣುತ್ತೇವೆ. ಒಂದು ನಿಗಮ ಮತ್ತೊಂದು ಆಗಮ. ವೇದ ಉಪನಿಷತ್ತು ಮುಂತಾದ ಸಾಹಿತ್ಯವೇ ನಿಗಮವೆಂದು, ತಂತ್ರ ಸಾಹಿತ್ಯವನ್ನು ಆಗಮ ಸಾಹಿತ್ಯವೆಂದು ಕರೆಯಲಾಗಿದೆ. ಈ ಎರಡರ ವಿವರಣೆಯನ್ನು ವಿದ್ವಾಂಸರಾದ ಪಿ.ಸಿ.ಬಾಗಚಿ ಹೀಗೆ ಹೇಳಿದ್ದಾರೆ :

The tantra is regarded as sruti or agama revelation as opposed to a smruti or nigama, "Tradition". It is this class with the Vedas, It is usually denied as "Srutisakhavisesah" a particular branch of the vedas[17].

ಆಗಮ ಸಾಹಿತ್ಯವನ್ನು ತಂತ್ರ ಸಾಹಿತ್ಯವೆಂದು ಕರೆಯಲಾಗಿದೆ. ಆಗಮ ಮತ್ತು ತಂತ್ರಗಳ ಉತ್ಪತ್ತಿಯನ್ನು ಹೀಗೆ ಹೇಳಿದೆ : ''ನಿಗಮಾಗಮಗಳು ಭಾರತ ಸಂಸ್ಕೃತಿಯ ಮೂಲ'' ಎಂಬ ಮಾತಿದೆ. 'ಬರು' ಎಂಬ ಅರ್ಥದ 'ಗಮಧಾತುವಿಗೆ' 'ಅಜ್' ಉಪಸರ್ಗ ಸೇರಿ ಆ-ಗಮ್-ಆಗಮ. ಆಗಮ ಎಂದರೆ ಪರಂಪರೆಯಿಂದ ಬಂದ ಜ್ಞಾನ ಎಂದು ಅರ್ಥವಾಗುತ್ತದೆ. 'ಸಂಸ್ಕೃತದಲ್ಲಿ ಗತ್ಯರ್ಥಕ ಧಾತುಗಳಿಗೆ ಜ್ಞಾನ ಎಂದು ಅರ್ಥ. ಇದರಂತೆ ನಿರ್-ಗಮ್-ನಿಗಮ. ನಿಗಮ ಎಂದರೆ ಸಮ್ಯಕ್ ಜ್ಞಾನ. 'ವಿದ್-ಜ್ಞಾನ್', ವೇದ-ಜ್ಞಾನ. ಒಟ್ಟಿನಲ್ಲಿ ಈ ಎಲ್ಲ ಪದಗಳಿಗೂ 'ಪೂರ್ಣಜ್ಞಾನ' 'ಜ್ಞಾನರಾಶಿ' ಎಂಬುದೇ ಅರ್ಥ. ಆಗಮಗಳಿಗೆ ತಂತ್ರವೆಂದು ಹೆಸರು. 'ತನ್ಯತೇ ವಿಸ್ತಾರ್ಯತೇ ಜ್ಞಾನಂ, ಅನೇನ ತ್ರಾಯತೆ ಚ' ಎಂದರೆ ಯಾವುದರಿಂದ

---

16. Shakthi or Divine Power University of Culcut, S.K. Das.

17. The Cultural heritage of India, Vol - IV, Ramakrishna. Mission Institute of culture, Calcutta 1956, PP. 211-22

ಜ್ಞಾನವು ಬೆಳೆಯುವುದೋ ಅದರಿಂದ ಮಾನವನ ಉದ್ಧಾರವಾಗುತ್ತದೆಯೋ ಅದೇ ತಂತ್ರ [18]. ಆಗಮಗಳಿಗೆ ತಂತ್ರವೆಂದು ಹೆಸರು ಇದ್ದಾಗ್ಯೂ ಪ್ರತ್ಯೇಕ ದೃಷ್ಟಿಯಿಂದ ತಂತ್ರ ಸಾಹಿತ್ಯವು ವಿಫುಲವಾಗಿ ಭಾರತದಲ್ಲಿ ಬೆಳದಿದೆ. ಅದರ ವೈಶಾಲ್ಯತೆಯನ್ನು, ಮಹತ್ವವನ್ನು ಕುರಿತು ಸರ್.ಜಾನ್‌ವುಡ್‌ರೋಫ್‌ರವರು ತಮ್ಮ 'ದಿ ಪ್ರಿನ್ಸಿಪಲ್ ಆಫ್ ತಂತ್ರ' ಮುಂತಾದ ಕೃತಿಗಳಲ್ಲಿ ಉಲ್ಲೇಖಿಸಿದ್ದಾರೆ. ಹಾಗೆಯೇ ತಂತ್ರಸಾಹಿತ್ಯದ ಮೇಲೆ ವಿದ್ವತ್‌ಪೂರ್ಣವಾದ ಸಂಶೋಧನೆಯನ್ನು ನಡೆಸಿದ ಮಹಾನುಭಾವರಲ್ಲಿ ಕಲ್ಕತ್ತಾದ ವಿದ್ವಾಂಸರಾದ ಪಿ.ಸಿ.ಬಾಗಚಿ, ಚಿಂತಾಹರಣ ಚಕ್ರವರ್ತಿ, ಕಾಶಿಯಲ್ಲಿದ್ದ ಮಹಾ ಮಹೋಪಾಧ್ಯಾಯ ಗೋಪಿನಾಥ, ಕವಿರಾಜ ಮುಂತಾದ ಮಹಾನುಭಾವರನ್ನು ಸ್ಮರಿಸಬಹುದು. ತಂತ್ರಸಾಹಿತ್ಯದ ಪಾಂಡಿತ್ಯವನ್ನು ಸಂಶೋಧಿಸುವುದರ ಜೊತೆಗೆ ಆಗಮ ಸಾಹಿತ್ಯದ ಪಾಂಡಿತ್ಯವನ್ನು ಪ್ರಸ್ತಾಪ ಮಾಡಿದ್ದಾರೆ. ಕರ್ನಾಟಕದಲ್ಲಿ ಆಗಮಸಾಹಿತ್ಯದ ಪರಿಶೀಲನೆ ಮತ್ತು ಪರಿಶೋಧನೆ ಆರಂಭವಾದುದು ಇತ್ತೀಚೆಗೆ. ಅದರಲ್ಲಿ ಡಾ.ಎಸ್.ಸಿ. ನಂದೀಮಠ್‌ರವರು ನಡೆಸಿದ ಅಧ್ಯಯನ ಗಮನಾರ್ಹವಾದುದು. ಆಗಮಶಾಸ್ತ್ರದ ಸಂಖ್ಯೆ, ಪ್ರಾಚೀನತೆ ಮತ್ತು ಅವುಗಳ ಸಿದ್ಧಾಂತವನ್ನು ಕುರಿತು ೧೯೬೨-೬೩ರಲ್ಲಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದ ಪತ್ರಿಕೆಯಲ್ಲಿ ವಿದ್ವತ್‌ಪೂರ್ಣವಾದ ಎರಡು ಲೇಖನಗಳನ್ನು ಪ್ರಕಟಮಾಡಿದ್ದಾರೆ [19].

ಅವರ ನೇತೃತ್ವದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾಗಿದ್ದ ಲಿಂ॥ ಡಾ.ಹೆಚ್.ಪಿ. ಮಲ್ಲೇದೇವರುರವರು ಆಗಮಗಳನ್ನು ಕುರಿತು ಪ್ರೌಢಪ್ರಬಂಧವನ್ನು ಬರೆದಿದ್ದಾರೆ. ಇದಕ್ಕೆ ಹಿಂದೆ ಸೊಲ್ಲಾಪುರದ ವಾರದಮಲ್ಲಪ್ಪನವರು, ಕಾಶೀ ಜಂಗಮವಾಡಿ ಮಠದ ಜಗದ್ಗುರುಗಳು ಮತ್ತು ಕಾಶೀನಾಥ ಶಾಸ್ತ್ರಿಗಳು ಇವುಗಳ ಅಧ್ಯಯನ ಮತ್ತು ಪರಿಶೋಧನೆ ನಡೆಸಿ ಅವುಗಳ ಮಹತ್ವವನ್ನು ಸೂಕ್ಷ್ಮವಾಗಿ ಪರಿಚಯಿಸಿದ್ದರು. ಇತ್ತೀಚಿನ ವಿದ್ವಾಂಸರಾದ ಡಾ.ಜ.ಚ.ನಿಯವರು, ವಿದ್ವಾನ್ ನಂಜುಂಡಾರಾಧ್ಯರವರು ಈ ಬಗೆಗೆ ಸಾಕಷ್ಟು ಕಾರ್ಯ ನಡೆಸಿದ್ದಾರೆ. ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನೆಯಲ್ಲಿ ಡಾ.ಹೆಚ್.ಪಿ. ಮಲ್ಲೇದೇವರು ಅವರ ನೇತೃತ್ವದಲ್ಲಿ ಕೆಲವು ಆಗಮಗಳು ಪರಿಷ್ಕೃತವಾಗಿ ಪ್ರಕಟವಾಗಿವೆ. ಈ ಎಲ್ಲ ವಿದ್ವಾಂಸರ ಕೃತಿಗಳನ್ನು ಅವಲೋಕನ ಮಾಡಿದಾಗ ಆಗಮ ಸಾಹಿತ್ಯವು ಅತ್ಯಂತ ಪ್ರಾಚೀನ ಸಾಹಿತ್ಯ ಎಂಬುದು ವ್ಯಕ್ತವಾಗಿದೆ. ಕ್ರಿ.ಶ. ೮ನೇ ಶತಮಾನಕ್ಕಿಂತ ಮೊದಲೇ ಈ ಆಗಮಗಳು ಇದ್ದವು ಎಂಬುದಕ್ಕೆ ಶಿಲಾಶಾಸನಗಳು ಮತ್ತು ಪುರಾವೆಗಳು ದೊರೆಯುತ್ತವೆ. ಕಂಬೋಜ ಶಾಸನಗಳಲ್ಲಿ ಹೇಳಿರುವಂತೆ ಶಿವಾಗಮಗಳು ೮ನೇ ಶತಮಾನಕ್ಕಿಂತ ಮುಂಚೆ ಇದ್ದವು ಎಂದು ಸಂಶೋಧಕರು ಅಭಿಪ್ರಾಯ ಪಟ್ಟಿದ್ದಾರೆ. ಕ್ರಿ.ಶ. ೮೫೯ರಲ್ಲಿ ಪ್ರತಿ ಮಾಡಿದ ಪರಮೇಶ್ವರ ಆಗಮವು ನೇಪಾಳದ ದರ್ಬಾರ್ ಗ್ರಂಥಾಲಯದಲ್ಲಿ ದೊರೆತಿತ್ತೆಂದು ಅನೇಕ ವಿದ್ವಾಂಸರು ಈಗಾಗಲೇ ಉಲ್ಲೇಖಿಸಿದ್ದಾರೆ.

೮ನೇ ಶತಮಾನಕ್ಕಿಂತ ಮುನ್ನ ಕಾಶ್ಮೀರದ ಗುಪ್ತ ಲಿಪಿಯಲ್ಲಿ ರಚಿತವಾದ ನಿಶ್ವಾಸ ತಂತ್ರದಲ್ಲಿ (೧) ವಿಜಯ (೨) ನಿಶ್ವಾಸ (೩) ಸ್ವಯಂಬುವ ಮತ (೪) ವಾತುಳ (೫) ವೀರಭದ್ರ (೬) ರೌರವ (೭) ಮುಕುಟ (೮) ವೀರೇಶ (೯) ಚಂದ್ರಹಾಸ (೧೦) ಜ್ಞಾನ (೧೧) ಮುಖಬಿಂಬ (೧೨) ಪ್ರೋದ್ಗೀತಾ (೧೩) ಲಲಿತ (೧೪) ಸಿದ್ಧಿ (೧೫) ಸಂತಾನ (೧೬) ಸರ್ವೋದ್ಗೀತ (೧೭) ಕಿರಣ (೧೮) ಪರಮೇಶ್ವರ ಎಂಬ ೧೮ ಆಗಮಗಳ ಉಲ್ಲೇಖವಿದೆ. ಕಾಮಿಕ ಆಗಮದಲ್ಲಿ ಸಹ ೧೮ ಆಗಮಗಳ ವಿವರಣೆ ಇದೆ. ಶಿವಾಗಮಗಳ ಸಂಖ್ಯೆ ೨೮ ಎಂಬುದು ಈಗಾಗಲೇ ಪ್ರಚಲಿತವಾಗಿದೆ. ಅದಲ್ಲದೆ ಅದರ ಜೊತೆಯಲ್ಲಿ ೨೨೫ ಉಪ ಆಗಮಗಳು ಇರುವುದಾಗಿ ತಿಳಿಯಬಂದಿದೆ. ಶಿವರಹಸ್ಯದಲ್ಲಿ ಸಹ ೧೮ ಶಿವಾಗಮಗಳನ್ನು ಉಲ್ಲೇಖಿಸಿದೆ. ಡಾ. ನಂದಿಮಠ್‌ರವರು ತಮ್ಮ ಲೇಖನದಲ್ಲಿ ೨೮ ಆಗಮಗಳು ಮತ್ತು ಉಪ ಆಗಮಗಳ ಹೆಸರುಗಳನ್ನು ಉಲ್ಲೇಖಿಸಿದ್ದಾರೆ. ಕೆಲವು ಆಗಮಗಳಲ್ಲಿ ೧೮ ಆಗಮಗಳನ್ನು ಹೇಳಿರುವುದಕ್ಕೆ ನಿರ್ದಿಷ್ಟ ಕಾರಣ ಇರಬಹುದು. ಪಂಡಿತ ಗೋಪೀನಾಥ ಕವಿ

---

18. ವಿದ್ವಾನ್ ಎಂ.ಜಿ. ನಂಜುಂಡಾರಾಧ್ಯರವರು,ಅನುಗ್ರಹ, ಪು. ೯೦.

19. Karnataka university Journal Vol - 6 and 7

ರಾಜರು ಈ ೨೮ರಲ್ಲಿ ೧೦ನ್ನು ಶಿವಾಗಮಗಳೂ ಎಂದೂ, ೧೮ನ್ನು ರುದ್ರ ಆಗಮಗಳೆಂದು ವ್ಯಾಖ್ಯಾನಿಸಿದ್ದಾರೆ ಮತ್ತು ವಿಂಗಡಿಸಿದ್ದಾರೆ. ಈ ವಿಭಾಗವು ತಂತ್ರಾಲೋಕದ ಟೀಕಾಕಾರರಾದ ಜಯರಥರಿಂದ ಉದಾಹರಿಸಲ್ಪಟ್ಟ ಶ್ರೀಕಂಠ ಸಂಹಿತೆಯ ಉಲ್ಲೇಖದಲ್ಲಿ ಹೇಳಿದೆ. ಶಿವಾಗಮಗಳಲ್ಲಿ (೧) ಕಾಮಿಕಾ ಆಗಮ (೨) ಯೋಗಜ, ಶ್ಲೋಕಗಳು ಒಂದು ಲಕ್ಷ (೩) ಚಿಂತ-ಶ್ಲೋಕಗಳು ಒಂದು ಲಕ್ಷ (೪) ಕಾರಣ - ಶ್ಲೋಕಗಳು ಒಂದು ಕೋಟಿ (೫) ಅಜಿತ - ಶ್ಲೋಕಗಳು ಒಂದು ಲಕ್ಷ (೬) ಸುದೀಪ್ತಕ - ಶ್ಲೋಕಗಳು ಒಂದು ಲಕ್ಷ (೭) ಸೂಕ್ಷ್ಮ - ಶ್ಲೋಕಗಳು ಒಂದು ಲಕ್ಷ (೮) ಸಹಸ್ರ (೯) ಸಪ್ರಭೇದ - ಶ್ಲೋಕಗಳು ೩ ಕೋಟಿ (೧೦) ಅಂಶುಮಾನ. ಈ ಹತ್ತು ಹೆಸರುಗಳು ಕಿರಣ ಆಗಮದಲ್ಲಿಯೂ ಸಹ ಶಿವಾಗಮಗಳೆಂದು ಉಲ್ಲೇಖಿಸಲ್ಪಟ್ಟಿವೆ. ಶ್ರೀಕಂಠ ಸಂಹಿತೆಯಲ್ಲಿ ಸುಪ್ರಭೇದ ಆಗಮಕ್ಕೆ ಬದಲಾಗಿ ಮುಕುಟ ಆಗಮದ ಹೆಸರು ಇದೆ.

ರುದ್ರ ಆಗಮಗಳು

(೧) ವಿಜಯ (೨) ನಿಶ್ವಾಸ (೩) ಪಾರಮೇಶ್ವರ (೪) ಪುರೋದ್ಗೀತ (೫) ಮುಖಬಿಂಬ (೬) ಸಿದ್ಧಿ (೭) ಸಂತಾನ (೮) ನರಸಿಂಹ (೯) ಚಂದ್ರಹಾಸ (೧೦) ವೀರಭದ್ರ (೧೧) ಸ್ವಾಯಂಬುವ (೧೨) ವಿರಕ್ತ (೧೩) ರೌರವ (೧೪) ಮುಕುಟ (೧೫) ಕಿರಣ (೧೬) ಗಲಿತ (೧೭) ಆಗ್ನೇಯ ಎಂಬ ೧೭ ಹೆಸರುಗಳನ್ನು ಮಾತ್ರ ಉಲ್ಲೇಖಿಸಿದ್ದಾರೆ [20].

ಮೇಲ್ಕಂಡ ೨೮ ಆಗಮಗಳು ಶಿವಾಗಮಗಳೆಂದು ಈಗಾಗಲೇ ಪ್ರಖ್ಯಾತವಾಗಿವೆ. ಈ ಆಗಮಗಳಲ್ಲಿ ಶಿವ ಸಂಬಂಧವಾದ ವಿಷಯವೇ ಹೆಚ್ಚು ವಿವರಿಸಲ್ಪಟ್ಟಿದೆ. ಆದಕಾರಣ ಶೈವ ದಾರ್ಶನಿಕರು ಎಲ್ಲರೂ ಆಗಮಗಳನ್ನು ತಮ್ಮ ಆಧಾರ ಗ್ರಂಥಗಳಾಗಿ ಬಳಸಿಕೊಂಡಿರುವುದನ್ನು ನಾವು ಶೈವ ದರ್ಶನದಲ್ಲಿ ಕಾಣಬಹುದು.

ಆಗಮಗಳಲ್ಲಿ ವೀರಶೈವ ದರ್ಶನ

ವೀರಶೈವ ಪದಕ್ಕೆ ತಾತ್ವಿಕವಾದ ಅರ್ಥ ಇರುವುದನ್ನು ಸಿದ್ಧಾಂತ ಶಿಖಾಮಣಿಯ ಆಧಾರದ ಮೇಲೆ ಈಗಾಗಲೇ ವಿವರಿಸಲಾಗಿದೆ. ವೀರ ಶಬ್ದವು ಶಿವ ಶಬ್ದವು ವೇದ ಉಪನಿಷತ್ತುಗಳಲ್ಲಿ ಉಲ್ಲೇಖಿಸಿರುವುದನ್ನು ಶಂಬಾ ಜೋಷಿಯವರು ತಮ್ಮ ಕೃತಿಯಲ್ಲಿ ವಿವರಿಸಿದ್ದಾರೆ. ಆದರೆ ವೀರಶೈವ ಶಬ್ದವು ಶಿವಾಗಮಗಳಲ್ಲಿ ವಿವರಿಸಲ್ಪಟ್ಟಿರುವುದನ್ನು ನಾವು ಗಮನಿಸಬೇಕು. ಪರಮೇಶ್ವರ ಆಗಮಗಳಲ್ಲಿ ಹೀಗೆ ಹೇಳಿದೆ :

ಯಥಾ ವೀರೋ ರಣೇ ಶೂರೋ ವೀರಶೈವ ಮತೇ ತಥಾಃ ।
ಭಕ್ತ್ಯಾ ವೀರೋ ನವೈರೇಣನ ಬಲೇನ ಚ ಕಾರ್ಯತಃ ॥

ಪರಮೇಶ್ವರ ತಂತ್ರವು ಅತ್ಯಂತ ಪ್ರಾಚೀನವಾದುದು ಎಂಬುದಕ್ಕೆ ಸಾಕಷ್ಟು ಆಧಾರಗಳು ಇವೆ. ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದ ಗ್ರಂಥಾಲಯದಲ್ಲಿ ಕ್ರಿ.ಶ. ೭೬೫ರಲ್ಲಿ ಪ್ರತಿ ಮಾಡಿದ ಪರಮೇಶ್ವರ ಆಗಮದ ಹಸ್ತಪ್ರತಿ ಒಂದು ಇರುವುದಾಗಿ ಬೆಂಡಾಲ್‌ರವರು ಉಲ್ಲೇಖಿಸಿದ್ದಾರೆ. ಆ ಆಗಮಗಳಲ್ಲಿ ವೀರಶೈವ ದರ್ಶನಕ್ಕೆ ಬೆಳಕು ನೀಡಬಲ್ಲ ಅನೇಕ ಸಂಗತಿಗಳು ದೊರೆಯುತ್ತವೆ. ಆದ್ದರಿಂದ ವೀರಶೈವ ದರ್ಶನ ಪ್ರಾಚೀನವಾದುದು ಎಂಬುದನ್ನು ನಾವು ಒಪ್ಪಬೇಕಾಗುತ್ತದೆ. ಅದರಂತೆ ಚಂದ್ರಜ್ಞಾನ ಆಗಮದಲ್ಲಿ ವೀರಶೈವದ ಧರ್ಮದ ಸ್ವರೂಪವನ್ನು ಹೀಗೆ ವಿವರಿಸಿದೆ.

ಇಷ್ಟಲಿಂಗವಿಯೋಗೇ ವಾ ವ್ರತಾನಂ ವಾ ಪರಿಚ್ಯುತ್ :
ತೃಣವತ್ ಪ್ರಾಣ ಸಂತ್ಯಾಗ ಇತಿ ವೀರವ್ರತಂ ಮತಂ:
ಭಕ್ತ್ಯುತ್ಸಾಹ ವಿಶೇಷೋಪಿ ವೀರತ್ವಮಿತಿ ಕಥ್ಯತೇ :
ವೀರವ್ರತ ಸಮಾಯೋಗಾದ್ ವೀರಶೈವ ಪ್ರಕೀರ್ತಿತಂ :

---

20. ತಂತ್ರ ಔರ್ ಆಗಮಶಾಸ್ತ್ರೋಂಕ್ ದಿಗ್ದರ್ಶನ್ , ಪಂ॥ಗೋಪೀನಾಥ ಕವಿರಾಜ್, ಪು. ೫೯-೬೧

ಅಂದರೆ ಇಷ್ಟ ಲಿಂಗವು ಕಳೆದು ಹೋದರೆ ಪ್ರಾಣವನ್ನು ನಿರ್ಲಕ್ಷವಾಗಿ ತ್ಯಾಗ ಮಾಡಬೇಕು ಎಂಬುದೇ ವೀರವ್ರತ. ಈ ಭಕ್ತುತ್ಸಾಹ ವಿಶೇಷವೇ ವೀರತ್ವ ಎಂದು ವರ್ಣಿಸಲಾಗಿದೆ. ಆತ್ಮಹತ್ಯೆಯು ಪಾಪವು ಅಲ್ಲದೆ ಈ ತರಹದ ವಿಧಿಯನ್ನು ನಡವಳಿಕೆಯಲ್ಲಿ ತರಲು ಕಷ್ಟವಾಗಬಹುದು ಎಂಬ ಮಾತು ಬೇರೆ. ಪ್ರಾಯಃ ಈ ಶ್ಲೋಕದ ಆಧಾರದ ಮೇಲೆ ಕ್ರಿ.ಶ. ೮ನೇ ಶತಮಾನದಲ್ಲಿದ್ದ ಹರಿಭದ್ರ ಸೂರಿ ಎಂಬ ಜೈನ ದಾರ್ಶನಿಕರು ತಮ್ಮ ಷಡ್‌ದರ್ಶನ ಸಮುಚ್ಚಯ ಎಂಬ ಗ್ರಂಥದಲ್ಲಿ ವೀರಶೈವರ ಈ ಆಚರಣೆಯ ವಿವರಣೆಯನ್ನು ಉಲ್ಲೇಖಿಸಿರುವುದು ಕಂಡು ಬರುತ್ತದೆ.

ಕಾಮಿಕಾ ಆಗಮದ ಉತ್ತರಾರ್ಧದಲ್ಲಿ ವೀರಶೈವ ವಿರಕ್ತ ಸಂಪ್ರದಾಯದ ವಿವರಣೆ ಇದೆ. ಹಾಗೆಯೇ ವೀರಶೈವ ದಾರ್ಶನಿಕರ ಅನುಭಾವದ ವಿವರಣೆಯು ಯೋಗಜ ಆಗಮ, ಸೂಕ್ಷ್ಮ ಆಗಮ ಇವುಗಳಲ್ಲಿ ದೊರೆಯುತ್ತದೆ. ಸುಪ್ರಭೇದ ಮತ್ತು ಸ್ವಯಂಭುವ ಆಗಮದಲ್ಲಿ ವೀರಶೈವ ದರ್ಶನದ ಪಂಚಚಾರ್ಯರುಗಳ ದಾರ್ಶನಿಕ ಉಲ್ಲೇಖ ಇದೆ. ವೀರ ಆಗಮವು ಪೂರ್ಣವಾಗಿ ವೀರಶೈವ ವಿಚಾರಧಾರೆಗೆ ಮೀಸಲಾಗಿದೆ. ಮುಕುಟ, ಚಂದ್ರಜ್ಞಾನ, ಸಂತ, ಪರಮೇಶ್ವರ ಆಗಮಗಳಲ್ಲಿ ವೀರಶೈವ ದರ್ಶನದ ವಿವರಣೆಗಳು ಇವೆ. ಈ ಆಗಮಗಳ ವಿವರಣಾತ್ಮಕವಾದ ದರ್ಶನವನ್ನು Veerasaivagama-phase of the Agamantha ಎಂಬ ಲೇಖದಲ್ಲಿ ಶ್ರೀ ವಿ.ವಿ. ರಮಣನ್‌ರವರು ವಿಶ್ಲೇಷಿಸಿದ್ದಾರೆ [21]. ವಾತುಳ ಆಗಮದ ಉತ್ತರ ಭಾಗದಲ್ಲಿ ವೀರಶೈವ ಅನುಭಾವ ಮೀಮಾಂಸೆಯ ವಿವರಣೆ ಇದೆ. ಸುಪ್ರಬೇಧ ಆಗಮದಲ್ಲಿ ಲಿಂಗ ತತ್ತ್ವದ ವಿವರಣೆ ಇದೆ. ಕಾಮಿಕಾಗಮದ ಶಿವಜ್ಞಾನ ಪಟಲದಲ್ಲಿ ಲಿಂಗ, ನಾದಬಿಂದು ತತ್ವಗಳ ವಿವರಣೆ ಇದೆ. ಪಂಚಾಕ್ಷರಿ ಮಂತ್ರದ ವಿಧಿ ವಿಧಾನಗಳು ಈ ಆಗಮದಲ್ಲಿ ವಿವರಿಸಲ್ಪಟ್ಟಿದೆ.

ಶ್ರೀ ಶಂಕರರು ಮತ್ತು ವೀರಶೈವ

ಶ್ರೀ ಶಂಕರಾಚಾರ್ಯರಿಗೆ ರಂಭಾಪುರಿ ಪೀಠಾಧೀಶ್ವರರಾದ ಜಗದ್ಗುರು ರೇಣುಕಾಚಾರ್ಯರು ಚಂದ್ರಮೌಳೀಶ್ವರ ಲಿಂಗವೊಂದನ್ನು ಕೊಟ್ಟರು ಎಂಬ ಸಂಗತಿ ಶಂಕರ ದಿಗ್ವಿಜಯದಲ್ಲಿ ಉಲ್ಲೇಖಿಸಿದೆ. ಆ ಬಗೆಗೆ ಅನೇಕ ವಾದ ವಿವಾದಗಳು ಉದ್ಭವಿಸಿದವು. ಕರ್ನಾಟಕ ವಿದ್ವಾಂಸರೊಬ್ಬರು ಆ ಬಗೆಗೆ ವಿಮರ್ಶಾತ್ಮಕವಾದ ಗ್ರಂಥವನ್ನು ರಚಿಸಿದ್ದಾರೆ. ಅವರು ಶೃಂಗೇರಿ ಪೀಠಕ್ಕೆ ಬೇರೆ ಬೇರೆ ಕಡೆಯಿಂದ ಬಂದ ನಾಲ್ಕು ಲಿಂಗಗಳನ್ನು ಒಪ್ಪಿಕೊಂಡು ಶ್ರೀ ರೇಣುಕರಿಂದ ಚಂದ್ರಮೌಳೀಶ್ವರ ಲಿಂಗವನ್ನು ಕೊಟ್ಟಲ್ಪಟ್ಟರು ಎಂಬುದನ್ನು ನಿರಾಕರಿಸಲು ಸಾಕಷ್ಟು ಪ್ರಯತ್ನವನ್ನು ನಡೆಸಿದ್ದಾರೆ. ಪ್ರಾಯಃ ಅನ್ಯಮತೀಯರಿಂದ ಆಚಾರ್ಯರಂತಹ ಮಹಾನುಭಾವರು ಒಂದು ಲಿಂಗವನ್ನು ಪಡೆದಿದ್ದಾರೆ ಎಂದರೆ ಅದು ಸಮಾಜದ ದೃಷ್ಟಿಯಿಂದ ಕೀಳಾಗಿ ಪರಿಭಾವಿಸಬಹುದು ಎನ್ನುವ ಕಾರಣಕ್ಕಾಗಿ ಈ ಪ್ರಯತ್ನ ನಡೆಸಿರಬಹುದು. ನಿಷ್ಪಕ್ಷಪಾತದಿಂದ ನೋಡಿದರೆ ಇದನ್ನು ನಿರಾಕರಿಸುವುದಕ್ಕಾಗಿ ಅಷ್ಟೊಂದು ದೊಡ್ಡ ಪ್ರಯತ್ನವನ್ನು ನಡೆಸುವ ಅಗತ್ಯವಿಲ್ಲ. ಒಂದು ವೇಳೆ ಶಂಕರಾಚಾರ್ಯರು ರೇಣುಕರಿಂದ ಚಂದ್ರಮೌಳೀಶ್ವರ ಲಿಂಗವನ್ನು ಪಡೆದಿದ್ದರೆ ಅದರಲ್ಲಿ ಕೊಟ್ಟವರು ಮೇಲೆಂದು ಪಡೆದವರು ಕೀಳೆಂದು ಭಾವಿಸುವ ಅಗತ್ಯವಿಲ್ಲ. ಇಬ್ಬರೂ ಮಹಾನುಭಾವರೇ ಮತ್ತು ಈ ರಾಷ್ಟ್ರದ ಸಂಸ್ಕೃತಿಯನ್ನು ಸಂರಕ್ಷಿಸುವ ಮಹಾನುಭಾವರೇ ಆಗಿದ್ದಾರೆ. ಮಹಾನುಭಾವರು ಎಲ್ಲ ಭೇದಗಳನ್ನು ಮರೆತು ಒಂದು ಮಹತ್ವ ಕಾರ್ಯಕ್ಕೆ ಒಂದುಗೂಡಿ ಮುನ್ನಡೆದಿದ್ದರೆ ಆಶ್ಚರ್ಯವೇನಲ್ಲ. ಅದು ಒಂದು ದೃಷ್ಟಿಯಿಂದ ಪ್ರಶಂಸನೀಯ. ಹೀಗೆ ವಿಶ್ವಾಸದಿಂದ ತಮಗೆ ದೊರೆತ ಅಮೂಲ್ಯ ವಸ್ತುವೊಂದನ್ನು ಆತ್ಮೀಯರೊಬ್ಬರಿಗೆ ಅರ್ಪಿಸಿದರೆ ಅದನ್ನು ಅವರು ಸ್ವೀಕರಿಸುವುದು ವಿಶ್ವಾಸದ ಸಂಕೇತವೆಂದು ಪರಿಗಣಿಸುವುದು ಯೋಗ್ಯವಾದ ಸಂಗತಿ. ಅಲ್ಲಿ ಮೇಲು, ಕೀಳು ಪ್ರಶ್ನೆ ಉದ್ಭವಿಸುವುದಿಲ್ಲ. ರಾಜಮನೆತನದಿಂದ, ಪಾಳೇಗಾರರ ಮನೆತನದಿಂದ ಬಂದಂತಹ ಲಿಂಗಗಳನ್ನು ಶೃಂಗೇರಿ ಪೀಠದ ಮಹಾನುಭಾವರು ಸ್ವೀಕರಿಸಿರುವುದು ಐತಿಹಾಸಿಕ ಸತ್ಯವಾಗಿರುವಾಗ

---

21. ಸಿದ್ಧಾಂತ ದೀಪಿಕಾ ಸಂ. ೧೧

ರೇಣುಕರಿಂದ ಚಂದ್ರಮೌಳೀಶ್ವರ ಲಿಂಗವು ಶೃಂಗೇರಿ ಪೀಠಕ್ಕೆ ಬಂದಿದ್ದರೆ ಅದನ್ನು ನಿರಾಕರಿಸುವ ಅಪಾರ ಸಾಹಸಕ್ಕೆ ಕೈ ಹಚ್ಚುವ ಅಗತ್ಯವಿರುವುದಿಲ್ಲ. ಅದೊಂದು ಮಹತ್ವದ ಘಟನೆಯೆಂದು ನಾವು ಇಬ್ಬರು ಮಹಾನೀಯರನ್ನು ಭಕ್ತಿಯಿಂದ ಸ್ಮರಿಸಿದರೆ ಅದರಿಂದ ಈ ರಾಷ್ಟ್ರದ ಇತಿಹಾಸಕ್ಕೆ ಕಳಸ ಇಟ್ಟಂತೆ ಆಗುತ್ತದೆ. ಅದರಿಂದ ಈ ರಾಷ್ಟ್ರದ ಇಂದಿನ ಸಮಾಜಗಳು ಮಹಾನುಭಾವರ ಹಿರಿಮೆ ಗರಿಮೆಗಳನ್ನು ಅರ್ಥಮಾಡಿಕೊಂಡು ರಾಷ್ಟ್ರ ಉನ್ನತಿಯ ಪಥದತ್ತ ಸಾಗಬೇಕಾಗುತ್ತದೆ[22].

ಶಂಕರಾಚಾರ್ಯರು ವೀರಶೈವಮತವನ್ನು ವೇದ ವಿರೋಧಿ ಮತವೆಂದು ಪರಿಗಣಿಸಿರಬಹುದೇ ಎಂಬ ವಿಚಾರ ವಿದ್ವಾಂಸರಲ್ಲಿ ಉದ್ಭವಿಸಿರುವಂತೆ ಕಾಣುತ್ತದೆ. ಶ್ರೀ ಶಂಕರರ ವ್ಯಾಸಸೂತ್ರ ಭಾಷ್ಯದ ''ಪತ್ಯುರ್ ಅಸಮಂಜಸ್ಯ'' ಎಂಬ ಸೂತ್ರದ ಮೇಲೆ ಬರೆದ ವ್ಯಾಖ್ಯಾನವು ವೀರಶೈವದರ್ಶನವನ್ನು ಒಳಗೊಂಡ ಪಾಶುಪತ ಸಿದ್ಧಾಂತವನ್ನು ಟೀಕಿಸಿರುವುದಾಗಿ ಉಲ್ಲೇಖಿಸಿದೆ. ಈ ವಿಷಯವನ್ನು ವಿಶ್ಲೇಷಣೆ ಮಾಡಿದಾಗ ಭಾಮತಿ, ರತ್ನಪ್ರಭಾ, ನ್ಯಾಯನಿರ್ಣಯ ಕೃತಿಯ ಕರ್ತೃಗಳು ಈ ಸೂತ್ರದ ವ್ಯಾಖ್ಯಾನವು (೧) ಶೈವ (೨) ಕಾರುಣಿಕ (೩) ಪಾಶುಪತ (೪) ಕಾಪಾಲಿಕ ಮತಗಳ ನಿರಾಕರಣೆಗೆ ಸಂಬಂಧಿಸಿದವು ಎಂದು ಅಭಿಪ್ರಾಯ ಪಟ್ಟಿದ್ದಾರೆ. ೧೫ನೇ ಶತಮಾನದ ವೀರಶೈವ ದಾರ್ಶನಿಕರಾದ ಚೆನ್ನವೃಷಭೇಂದ್ರ ಸ್ವಾಮಿಯವರು ತಮ್ಮ ವೀರಶೈವ ಸರ್ವೋತ್ಕರ್ಷ ದೀಪಿಕದಲ್ಲಿ ಈ ವಿಷಯದ ಬಗೆಗೆ ವಿಪುಲವಾದ ವಿವರಣೆಯನ್ನು ನೀಡಿದ್ದಾರೆ.

ಅಪ್ಪಯ್ಯದೀಕ್ಷಿತರ ಪರಿಮಳಭಾಷ್ಯವನ್ನು ಬಳಸಿಕೊಂಡು ಪಾಶುಪತ ಮತದಲ್ಲಿ ವೈದಿಕ ಮತ್ತು ಅವೈದಿಕ ಪಾಶುಪತ ಎಂದು ಎರಡು ಭಾಗಗಳು ಇರುವುದಾಗಿಯೂ, ವೈದಿಕ ಪದವು ವೀರಶೈವ ದರ್ಶನಕ್ಕೆ ಪೂರಕವಾದುದೆಂದು ಹೇಳಿದ್ದಾರೆ. ಆದ್ದರಿಂದ ಶಂಕರಾಚಾರ್ಯರ ಟೀಕೆ ಲಾಕುಲೀಶ ದರ್ಶನಕ್ಕೆ ಪೂರಕವಾದ ಪಾಶುಪತ ಮತದ ನಿರಾಕರಣೆಯೇ ಹೊರತು ವೀರಶೈವದ ನಿರಾಕರಣೆ ಅಲ್ಲ ಎಂದು ಸಮರ್ಥಿಸಿದ್ದಾರೆ. ವ್ಯಾಸಸೂತ್ರದ ಮೇಲೆ ರಚಿತವಾದ ಶ್ರೀಕಂಠಭಾಷ್ಯಕಾರರ ವೀರಶೈವ ದರ್ಶನ ವಿಚಾರಧಾರೆಯು ವೇದತತ್ವವನ್ನು ಅನುಸರಿಸಿದೆ. ಪ್ರಾಚೀನ ಭಾಷ್ಯಕಾರರಾದ ರೇಣುಕ, ಶಂಖಕರ್ಣ, ಗೋಕರ್ಣ, ದಾರುಕ ಮುಂತಾದವರ ಭಾಷ್ಯದ ಆಧಾರದ ಮೇಲೆ ಈ ಭಾಷ್ಯ ಬರೆಯಲಾಗಿದೆ ಎಂದು ಹೇಳಿದ್ದಾರೆ. ಈ ಭಾಷ್ಯಗಳು ಈಗಲು ಸಹ ಲಬ್ಧವಿಲ್ಲದಿರುವುದು ದುರ್ದೈವ. ಭಾಮತಿ ಕೃತಿಕಾರರಾದ ವಾಚಸ್ಪತಿಮಿಶ್ರರವರು ಶಂಕರರು ಮಹೇಶ್ವರ ದರ್ಶನಕಾರರನ್ನು ನಿರಾಕರಿಸಿದ್ದಾರೆಂದು ತಮ್ಮ ವ್ಯಾಸಸೂತ್ರ ಭಾಷ್ಯದಲ್ಲಿ ಹೀಗೆ ಹೇಳಿದ್ದಾರೆ. 'ಮಹೇಶ್ವರ್‌ಶ್ಚತ್ವಾರ ಶೈವಾಃ ಪಾಶುಪತಾಃ ಕಾರುಣಿಕಾಃ ಸಿದ್ಧಾಂತಿನಃ ಕಾಪಾಲಿಕಾಶ್ವೇತಿಃ ಚತ್ವಾರೋಪ್ಯಮೋ ಮಹೇಶ್ವರ ಪ್ರಣೀತ ಸಿದ್ಧಾಂತಾನುಯಾಯಿತಯಾ ಮಹೇಶ್ವರಾ[23].

ಒಂದು ವೇಳೆ ಶಂಕರಾಚಾರ್ಯರು ಅಂದಿನ ಶೈವ ದರ್ಶನದ ಕೆಲವು ಪ್ರಭೇದಗಳನ್ನು ನಿರಾಕರಿಸಿರಬಹುದು. ವೀರಶೈವವು ಶಂಕರರ ಶುದ್ಧ ಅದ್ವೈತವನ್ನು ಒಪ್ಪಿಕೊಳ್ಳುವುದಿಲ್ಲ. ಶಕ್ತಿ ವಿಶಿಷ್ಟ ಅದ್ವೈತ ಎಂಬುದು ವೀರಶೈವ ದರ್ಶನದ ಸ್ವರೂಪ. ಶುದ್ಧ ಅದ್ವೈತಕ್ಕೆ ಭಿನ್ನವಾಗಿರುವುದರಿಂದ ಮತ್ತು ಶಕ್ತಿ ತತ್ವವನ್ನು ಅವಲಂಬಿಸಿರುವ ಕಾರಣ ಶಂಕರಾಚಾರ್ಯರು ಈ ದರ್ಶನದ ಬಗೆಗೂ ನಿರಾಕರಣೆ ಮಾಡಿರಬಹುದು. ಆದರೆ ವೈಚಾರಿಕ ಭಿನ್ನತೆ ಇದ್ದ ಮಾತ್ರಕ್ಕೆ ಅದನ್ನೇ ವ್ಯಕ್ತಿ ವಿರೋಧವಿತ್ತು ಎನ್ನುವುದು ಯುಕ್ತವೆನಿಸುವುದಿಲ್ಲ. ಈ ವಿವರಣೆಗಳು ಶಂಕರಾಚಾರ್ಯರ ಕಾಲದಲ್ಲಿ ವೀರಶೈವ ದರ್ಶನವಿತ್ತೆಂಬುದಕ್ಕೆ ಪೂರಕಗಳಾಗುತ್ತವೆ.

ಪುರಾಣಗಳಲ್ಲಿ ವೀರಶೈವ ದರ್ಶನ

ಭಾರತೀಯ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಸಂಸ್ಕೃತ ಸಾಹಿತ್ಯದಲ್ಲಿ ಪುರಾಣ ಸಾಹಿತ್ಯವು ಅಮೂಲ್ಯವಾದುದು. ವ್ಯಾಸ ಕೃತಿಯೆಂದು ಪ್ರಖ್ಯಾತವಾದ ಪುರಾಣಗಳು, ಅಷ್ಟಾದಶ ಪುರಾಣಗಳು ಎಂದು ಪ್ರಖ್ಯಾತವಾಗಿವೆ. ಅದರಲ್ಲಿ ೧೦ ಶಿವ

---

22. 'ಶಂಕರ ಚಂದ್ರಮೌಳೀಶ್ವರ ಶೃಂಗೇರಿ', ಲ.ನ. ಶಾಸ್ತ್ರಿ.

23. ಬ್ರಹ್ಮಸೂತ್ರ ಶಾರೀರಿಕ ಭಾಷ್ಯ ಸಂ. ೨-೨-೩೭.

ಪುರಾಣಗಳು ಎಂದು, ೮ ವಿಷ್ಣುಪುರಾಣಗಳೆಂದು ಅಭಿಪ್ರಾಯಪಡಲಾಗಿದೆ [24]. ಮ ಎಂದರೆ ಮತ್ಸ್ಯ ಮತ್ತು ಮಾರ್ಕಾಂಡೇಯ, ಬ ಅಂದರೆ ಭಾಗವತ ಮತ್ತು ಭವಿಷ್ಯ, ಬ್ರ ಅಂದರೆ ಬ್ರಹ್ಮ, ಬ್ರಹ್ಮಾಂಡ, ಬ್ರಹ್ಮ ವೈವರ್ತ, ವ ಅಂದರೆ ವಿಷ್ಣು, ವಾಮನ, ವರಹ ವಾಯು, ಅ-ಅಗ್ನಿ, ನ-ನಾರಾದ, ಪ-ಪದ್ಮ, ಲಿ-ಲಿಂಗ, ಗ-ಗರುಡ, ಕು-ಕೂರ್ಮ, ಸ್ಕ-ಸ್ಕಂದ ಇವು ಪ್ರಖ್ಯಾತವಾದ ೧೮ ಪುರಾಣಗಳು. ಈ ಪುರಾಣಗಳಲ್ಲಿಯೂ ಸಹ ವೀರಶೈವ ದರ್ಶನ ಮತ್ತು ಧರ್ಮದ ವಿವರಣೆಗಳು ಕಂಡು ಬರುತ್ತವೆ. ಅದರಲ್ಲಿ ವಿಶಿಷ್ಟವಾದ ಶಿವ ಪುರಾಣದ ವಾಯುವೀಯ ಸಂಹಿತೆಯಲ್ಲಿ ಮತ್ತು ಶಂಕರ ಸಂಹಿತೆಯಲ್ಲಿ ಹಾಗೂ ಸ್ಕಂದ ಪುರಾಣದಲ್ಲಿ ಶಿವ ಸಂಹಿತೆಯಲ್ಲಿ ಲಿಂಗಪುರಾಣದಲ್ಲಿ, ಪದ್ಮಪುರಾಣದಲ್ಲಿ, ಭವಿಷ್ಯಪುರಾಣದಲ್ಲಿ ಮತ್ತು ಇನ್ನಿತರ ಪುರಾಣದಲ್ಲಿಯೂ ಸಹ ವೀರಶೈವ ದರ್ಶನದ ರೂಪುರೇಷೆಗಳನ್ನು ಕಾಣುತ್ತೇವೆ. ವ್ಯಾಸ ಪ್ರಣೀತವಾದ ಶಿವರಹಸ್ಯದಲ್ಲಿ ವೀರಶೈವ ದರ್ಶನಕ್ಕೆ ಆಧಾರ ಭೂತವಾದ ಕೆಲವು ಅಂಶಗಳನ್ನು ವಿವರಿಸಿದೆ. ವೀರಶೈವ ದರ್ಶನದ ಪ್ರಮುಖ ತತ್ವವಾದ ಲಿಂಗಧಾರಣೆ ವಿಷಯವು ಹೀಗೆ ಹೇಳಿದೆ.

ನ ಪ್ರಾಣ ಲಿಂಗನಿಯಮಃ ಕಲಿಜದ್ವಿಜಾನಾಂಃ
ಶಸ್ತ್ರಃ ಪ್ರಶಸ್ತಮಗಜೇ ಕಿಲ ಹಸ್ತಬದ್ಧಂಃ
ಲಿಂಗಂ ಗಲೇ ಚ ಹೃದಯೇ ಕಿಲ ತಾಂತ್ರಿಕಾಣಂ
ದೇವಸ್ಯ ಕಾರುಣ್ಯ ವಿಧಿಂ ಪ್ರವದಂತಿಯೇ ವೇದಾಃ
ನಾಯಂ ವೈದಿಕ ಸಮ್ಮತೋ ವಿಧಿರಯರಃ
ಲಿಂಗಾರ್ಚನಂ ಕೇವಲಂಃ
ಭಸ್ಮಾಕ್ಷಾರಿ ವಿಧಾರುಣಂ ಚ ನಿಯತಂಃ
ತ್ಯಾಜ್ಯಂ ನ ಚೈತದ್ವಿ ಜೈಃ ।

ಪಾರ್ವತಿಯೇ ಕಲಿಯುಗದ ದ್ವಿಜರಿಗೆ ಪ್ರಾಣ ಲಿಂಗ ಪೂಜಾ ನಿಯಮವೇನು ಇಲ್ಲ. ಕೈಯಲ್ಲಿ ಪೂಜಿಸುವ ಶಿವ ಲಿಂಗವೇ ದೇವರಿಗೆ ಪ್ರಶಸ್ತವೆಂದು ಹೇಳಲ್ಪಟ್ಟಿದೆ. ತಾಂತ್ರಿಕರಿಗೆ ಮಾತ್ರ ಕೊರಳು ಮತ್ತು ಹೃದಯದಲ್ಲಿ ಮಹದೇವನ ಲಿಂಗಧಾರಣೆ ವಿಧಿ ವಿಧಾನಗಳು ಒಂದೊಂದು ಪ್ರಕರಣದಲ್ಲಿ ಹೇಳುವುವು. ಪಾರ್ವತಿಯೇ, ಆದರೆ ಕಂಠ ಮತ್ತು ಹೃದಯದಲ್ಲಿ ಶಿವಲಿಂಗಧಾರಣೆ ಮಾಡುವುದು ವೈದಿಕ ಸಮ್ಮತವಾದ ವಿಧಿಯಲ್ಲ. ತಪ್ಪದೇ ಶಿವಲಿಂಗ ಅರ್ಚನೆಯನ್ನು ಮಾಡುವುದೇ ವೇದದ ಒಂದು ಕಟ್ಟಪ್ಪಣೆ. ಭಸ್ಮಧಾರಣೆ, ರುದ್ರಕ್ಷಿಧಾರಣೆಗಳು ಮಾತ್ರ ನಡೆಯುತ್ತ ಇದ್ದವುಗಳು. ಬ್ರಾಹ್ಮಣರು ಇದನ್ನು ಎಂದೂ ಬಿಡಬಾರದು [25].

---

24. ೧೮ ಪುರಾಣಗಳ ಬಗೆಗೆ ದೇವಿಭಾಗವತದಲ್ಲಿ ಹೀಗೆ ಹೇಳಿದೆ : ಮದ್ವಯಂ, ಭದ್ವಯಂ, ದ್ವೈವ, ಬ್ರತ್ರಯಂ, ವಚತುಷ್ಟಯಂ : ಅನಾಪಲಿಂಗ ರುಷ್ಕಾನೀ ಪುರಾಣಾನಿ, ಪೃಥಕ್ ಪೃಥಕ್.

25. ಶಿವರಹಸ್ಯ ಕನ್ನಡಭಾಷಾಂತರ ಶ್ರೀ ಜಯಚಾಮರಾಜ ಗ್ರಂಥಮಾಲಾ, ಮೈಸೂರು, ಸಂ. ೨೬, ಅ.೫೦ ಶ್ಲೋ-೨೨-೨೩. ಪುಟ-೨೭೧.

ಮೇಲಿನ ವಿವರಣೆಯಿಂದ ಬ್ರಾಹ್ಮಣನು ಲಿಂಗಾಧಾರಿಯಾಗಿದ್ದನು ಎಂದು ಅಥವಾ ಲಿಂಗಾಧಾರಿಗಳು ಬ್ರಾಹ್ಮಣ ವರ್ಗದವರೆಂದು ಸಮಾಜದಲ್ಲಿ ಮಾನ್ಯತೆಯನ್ನು ಪಡೆದಿದ್ದರೆಂದು ವ್ಯಕ್ತವಾಗುತ್ತದೆ.

ಹೀಗೆ ವೀರಶೈವ ದರ್ಶನದ ಅನೇಕ ಅಂಶಗಳು ಪುರಾಣ ಸಾಹಿತ್ಯದಲ್ಲಿ ವಿವರಿಸಲ್ಪಟ್ಟಿದೆ. ಶಿವಪುರಾಣ, ಲಿಂಗ ಪುರಾಣ, ಸ್ಕಂದ ಪುರಾಣ, ಪದ್ಮ ಪುರಾಣದಲ್ಲಿ ವೀರಶೈವ ಧರ್ಮದ ಸಂಕೇತಗಳಾದ ಅಷ್ಟಾವರಣ ಪಂಚಾಚಾರ ತತ್ವದ ವಿವರಣೆಗಳೂ ಅಪ್ರತ್ಯಕ್ಷವಾಗಿ ಷಟ್‌ಸ್ಥಲ ಸಿದ್ಧಾಂತದ ದಾರ್ಶನಿಕ ಸ್ವರೂಪವು ದೊರೆಯುತ್ತದೆ. ವೀರಶೈವ ಧರ್ಮ ಮತ್ತು ದರ್ಶನ ದೃಷ್ಟಿಯಿಂದ ಅಷ್ಟಾದಶ ಪುರಾಣಗಳ ಸಮಗ್ರ ಅಧ್ಯಯನದ ಅವಶ್ಯಕತೆ ಇದೆ. ಇದಲ್ಲದೆ ವೀರಶೈವ ದರ್ಶನದ ವಿವರಣೆ ನೀಡಬಲ್ಲ ಅದೆಷ್ಟೋ ಸಂಸ್ಕೃತ ಗ್ರಂಥಗಳು ಲುಪ್ತವಾಗಿವೆ. ವೀರಶೈವ ದರ್ಶನಕ್ಕೆ ಮೀಸಲಾಗಿದ್ದ ವೇದದ ಭಾಗವಾದ ಪರಾತ ಸಂಹಿತೆ ಎಂಬುದು ಒಂದು ಕೃತಿ ಇದ್ದು ಅದನ್ನು ಅನೇಕ ಕಡೆ ಉದಾಹರಿಸಲಾಗಿದೆ. ಆದರೆ ಇಂದು ಆ ಸಾಹಿತ್ಯವು ಲುಪ್ತವಾಗಿದೆಯೆಂದು ಎಸ್.ಕೆ. ದಾಸ್‌ರವರು ತಮ್ಮ ಕೃತಿಯಲ್ಲಿ ಉಲ್ಲೇಖಿಸಿದ್ದಾರೆ.

ವಚನ ಸಾಹಿತ್ಯದಲ್ಲಿ ಸಂಸ್ಕೃತದ ಸುಳಿವು

ವೀರಶೈವ ದರ್ಶನಕ್ಕೆ ೧೨ನೇ ಶತಮಾನದಲ್ಲಿ ಬಸವಾದಿ ಶರಣರಿಂದ ಹೊಸ ಪ್ರೇರಣೆ ದೊರೆತಿರುವುದು ನಿರ್ವಿವಾದ ಸಂಗತಿ. ಭಾರತೀಯ ದಾರ್ಶನಿಕ ಇತಿಹಾಸದಲ್ಲಿ ಶರಣರ ಕಾರ್ಯ ಸಾಧನೆ ಚಿರಸ್ಮರಣೀಯ. ಅವರ ಮಹಾಕಾರ್ಯಗಳಲ್ಲಿ ವಚನ ಶಾಸ್ತ್ರದ ರಚನೆಯೊಂದು ಅಮೂಲ್ಯ ಕೊಡುಗೆ ಎಂದು ವೀರಶೈವ ವಿದ್ವಾಂಸರು ಅಭಿಮಾನದಿಂದ ಉಲ್ಲೇಖಿಸಿದ್ದಾರೆ. ಜನಸಾಮಾನ್ಯರಿಗೆ ಮುಟ್ಟದೆ ಕೇವಲ ವಿದ್ವಾಂಸರ ಸಂಪತ್ತಾಗಿದ್ದ ಮತ್ತು ಸಂಸ್ಕೃತದಲ್ಲಿ ಗುಪ್ತವಾಗಿದ್ದ ದರ್ಶನದ ಸೊಬಗನ್ನು ಜನಸಾಮಾನ್ಯರ ಭಾಷೆಯಲ್ಲಿ ಕನ್ನಡದ ವಚನ ರೂಪದಲ್ಲಿ ರಚಿಸಿ ಜನತೆಯಲ್ಲಿ ಧಾರ್ಮಿಕ ಪ್ರಜ್ಞೆಯನ್ನು ಮೂಡಿಸಿದುದು ಒಂದು ಮಹತ್ವದ ಘಟನೆ ಎನ್ನಬಹುದು. ಆದರೆ ಜಗತ್ತಿನಲ್ಲಿ ಈ ಕಾರ್ಯ ಮೊಟ್ಟಮೊದಲನೆಯದು ಎಂದು ಹೇಳುವದು ಕಷ್ಟ ಸಾಧ್ಯ. ಎರಡೂವರೆ ಸಹಸ್ರ ವರ್ಷಗಳ ಹಿಂದೆ ಬುದ್ಧ ಭಗವಾನರು ತಮ್ಮ ದರ್ಶನವನ್ನು ಪ್ರಚಾರ ಮಾಡುವುದಕ್ಕಾಗಿ ಅಂದಿನ ಉತ್ತರ ಭಾರತದ ಜನಭಾಷೆಯಾಗಿದ್ದ ಪಾಳಿ ಭಾಷೆಯನ್ನು ತಮ್ಮ ಪ್ರಚಾರದ ಮಾಧ್ಯಮವಾಗಿ ಬಳಿಸಿಕೊಂಡು ಅನೇಕ ಕೃತಿಗಳನ್ನು ರಚಿಸಿದರು. ಆದರೆ ಬೌದ್ಧ ದರ್ಶನ ಸಂಪೂರ್ಣ ಪಾಳಿ ಭಾಷೆಯಲ್ಲಿದ್ದಾಗ ಹೆಚ್ಚು ಪ್ರಚಲಿತವಾಗಲಿಲ್ಲ ಮತ್ತು ಪ್ರಯೋಜನಕಾರಿಯೂ ಆಗಲಿಲ್ಲ. ಬೌದ್ಧ ವಿದ್ವಾಂಸರು ಮತ್ತೆ ಸಂಸ್ಕೃತ ಭಾಷೆಯನ್ನೇ ಅವಲಂಬಿಸಿ ತನ್ಮೂಲಕ ತಮ್ಮ ಸಿದ್ಧಾಂತವನ್ನು ಜಗತ್ತಿನಲ್ಲಿ ಪ್ರಚಾರಗೊಳಿಸಿದರು. ಆದ್ದರಿಂದ ಜಗತ್ತಿನ ಜನಸಂಖ್ಯೆಯಲ್ಲಿ ಐದನೇ ಎರಡರಷ್ಟು ಜನರು ಬೌದ್ಧರು ಇದ್ದಾರೆ. ಅನೇಕ ರಾಷ್ಟ್ರಗಳು ಸಂಪೂರ್ಣವಾಗಿ ಬೌದ್ಧ ಸಂಪ್ರದಾಯಕ್ಕೆ ಒಳಗಾಗಿದೆ. ಅದೇ ಸಮಯದಲ್ಲಿ ತಮ್ಮ ದರ್ಶನದ ಪ್ರಚಾರಕ್ಕಾಗಿ ಜೈನ ಸಂತರು ಪ್ರಾಕೃತ ಭಾಷೆಯನ್ನು ತಮ್ಮ ಪ್ರಚಾರ ಮಾಧ್ಯಮವಾಗಿ ಬಳಸಿಕೊಂಡರು. ಅದು ಸಹ ಹೆಚ್ಚು ಕಾಲ ನಿಲ್ಲದೆ ಸಾಕಷ್ಟು ಜೈನ ಸಾಹಿತ್ಯ ಸಂಸ್ಕೃತ ಭಾಷೆಯಲ್ಲಿ ವಿಕಸಿತವಾಯಿತು. ಆದಕಾರಣ ಭಾರತದ ಮಹಾದರ್ಶನಗಳಲ್ಲಿ ಇದು ಒಂದು ಎಂದು ಪ್ರಖ್ಯಾತವಾಯಿತು. ಇವೆರಡು ಕ್ರಿ.ಶ. ೬ ರಿಂದ ೯ನೇ ಶತಮಾನಗಳವರೆಗೆ ಸಂಬಂಧಿಸಿದ ಪರಿವರ್ತನೆ. ೮ನೇ ಶತಮಾನಕ್ಕೆ ಮುನ್ನ ಇಸ್ಲಾಂ ಸಂಸ್ಕೃತಿಯು ಅರೇಬಿಯಾ ಭಾಷೆಯಲ್ಲಿ ಪ್ರಚಲಿತವಾಗಿದ್ದು, ತದನಂತರ ಬಂದ ಶಿವಶರಣರ ಶರಣ ಸಾಹಿತ್ಯ ಮತ್ತು ಹರಿದಾಸ ಸಾಹಿತ್ಯದ ರೀತಿಯಂತೆ ಜನರಾಡುವ ಭಾಷೆಯಲ್ಲಿ ಸೂಫಿ ಸಂತರು ಇಸ್ಲಾಂ ದರ್ಶನದ ಕೃತಿಗಳನ್ನು ರಚಿಸಿರುವುದು ಕಂಡುಬರುತ್ತದೆ. ಇಂತಹ ಘಟನೆಗಳು ಮಹಾರಾಷ್ಟ್ರ ಮತ್ತು ಬಂಗಾಳದಲ್ಲೂ ನಡೆದಿದೆ. ಇವುಗಳಿಗಿಂತಲೂ ಪೂರ್ವದಲ್ಲಿ ತಮಿಳುನಾಡಿನಲ್ಲಿ ಸಂತ ಸಾಹಿತ್ಯವು ತಮಿಳು ಭಾಷೆಯಲ್ಲಿ ಪ್ರಚಲಿತವಾಗಿರುವುದನ್ನು ನಾವು ಕಾಣುತ್ತೇವೆ. ಹೀಗೆ ಸಂಸ್ಕೃತದಲ್ಲಿ ಇದ್ದಂತಹ ಅನೇಕ ದಾರ್ಶನಿಕ ವಿಚಾರಗಳನ್ನು ಜನಸಾಮಾನ್ಯರ ಭಾಷೆಯಲ್ಲಿ ಪ್ರಸಾರ ಮಾಡುವ ಮಹಾಕಾರ್ಯ

ಭಾರತದಲ್ಲಿ ಅತ್ಯಂತ ಪ್ರಾಚೀನವಾದುದು ಎಂಬುದನ್ನು ನಾವು ಇತಿಹಾಸದಿಂದ ಅರಿಯಬೇಕಾಗಿದೆ. ಆದಾಗ್ಯೂ ಶಿವಶರಣರು ಕನ್ನಡ ನುಡಿಗೆ ಕೊಟ್ಟ ಸಂಪತ್ತು ಅಮೂಲ್ಯವಾದುದು ಎಂಬುದನ್ನು ಕಡೆಗಣಿಸುವಂತಿಲ್ಲ.

ಪಾಶ್ಚಾತ್ತ್ಯದರ್ಶನ ಶಾಸ್ತ್ರ ವಿಮರ್ಶಕರು ಇತ್ತೀಚಿನವರೆಗೂ ಬೆಳೆದು ಬಂದ ಎಲ್ಲ ದರ್ಶನಗಳನ್ನು ಪ್ಲೇಟೋ ದರ್ಶನದ ಟಿಪ್ಪಣಿಗಳು ಎಂದು ವಿಶ್ಲೇಷಿಸಿದ್ದಾರೆ. ಪ್ರಾಯಶಃ ಭಾರತೀಯ ಸಂಸ್ಕೃತಿಯ ದರ್ಶನಗಳ ಬಗೆಗೆ ಈ ಮಾತನ್ನೇ ಅನ್ವಯಿಸಿ ಎಲ್ಲ ದರ್ಶನ ಕೃತಿಗಳು ಸಂಸ್ಕೃತ ಭಾಷಾ ಕೃತಿಗಳಿಗೆ ಟಿಪ್ಪಣಿಗಳು ಎಂದು ಹೇಳಲು ಸಾಧ್ಯವಾಗಬಹುದು. ಕನ್ನಡವನ್ನು ತಮ್ಮ ದಾರ್ಶನಿಕ ಪ್ರಚಾರದ ಮಾಧ್ಯಮವಾಗಿ ಶಿವಶರಣರು ಬಳಸಿಕೊಂಡಿರುವುದ ಸಹಜ. ಆದರೆ ಅದು ಸಂಸ್ಕೃತದ ಪ್ರೇರಣೆಯಿಂದ ಆಯಿತು ಎಂಬುದನ್ನು ನಾವು ಗಮನಿಸಬೇಕು. ಶರಣ ಸಂಸ್ಕೃತಿಯ ಕಿರೀಟ ಪ್ರಾಯರಾದ ಬಸವಣ್ಣನವರು ತಮ್ಮ ವಚನಗಳಲ್ಲಿ ಸಂಸ್ಕೃತ ಕೃತಿಗಳ ಅನೇಕ ಅಂಶಗಳನ್ನು ಉಲ್ಲೇಖಿಸಿರುವುದು ಕಂಡುಬರುತ್ತದೆ. ''ಸಂಸ್ಕೃತ ಪ್ರಮಾಣಗಳಿರುವ ಬಸವಣ್ಣನವರ ವಚನಗಳು'' ಎಂಬ ಶ್ರೀ ಚ. ಸುಂದರೇಶನ್‌ರವರ ಕೃತಿ ಸ್ಮರಣೀಯ. ಅದರಂತೆ ಎಲ್ಲ ಶರಣರ ಕೃತಿಗಳಲ್ಲಿ ಬರುವ ಸಂಸ್ಕೃತದ ಪ್ರಮಾಣಗಳನ್ನು ಒಂದೆಡೆ ಸಂಗ್ರಹಿಸಿದರೆ ಅದರಿಂದ ಶರಣ ತತ್ವದ ಅಧ್ಯಯನ ಮಾಡುವವರಿಗೆ ಅಭಿಮಾನಿಗಳಿಗೆ ಮತ್ತಷ್ಟು ಪ್ರೇರಣೆ ದೊರೆಯುತ್ತದೆ ಎಂದು ಹೇಳಬಹುದು. ೧೨ನೇ ಶತಮಾನದ ನಂತರ ಬಂದ ಶಿವಶಿರಣರು ತಾವು ರಚಿಸಿದ ವಚನಗಳಿಗೆಲ್ಲ ಸಂಸ್ಕೃತದ ಮಹಾಕೃತಿಗಳ ಪ್ರೇರಣೆಯನ್ನು ಪಡೆದಿರುವುದು ಕಂಡುಬರುತ್ತದೆ. ಅದರಲ್ಲಿ ಕಲ್ಲುಮಠದ ಪ್ರಭುದೇವರು ರಚಿಸಿದ ಲಿಂಗಲೀಲಾವಿಲಾಸಚಾರಿತ್ರ್ಯ, ಗುಬ್ಬಿ ಮಲ್ಲಣ್ಣಾರ್ಯರ ಗುಣಭಾಷಿತ ರತ್ನಮಾಲೆ ಇವು ಪ್ರಮುಖವಾಗಿ ಹೆಸರಿಸಬೇಕಾದ ಕೃತಿಗಳು. ಚನ್ನಬಸವಣ್ಣನವರ ವಚನಗಳಲ್ಲಿ[26].

ಗುರು ಲಿಂಗ ಚರಲಿಂಗಂ ಭಾವಲಿಂಗಂ ಪ್ರಸಾದಕಂ ।	
ಚತುರ್ವಿಧಾತ್ಮಕಜ್ಞಾನಂ ಲಿಂಗಭಕ್ತಸ್ಯ ಲಕ್ಷಣಂ ॥	ಚ.ಬ. ವಚನ - ೩೯
ಗುರುಲಿಂಗಜಂಗಮದ್ವೇಷೇಯೋನರಸ್ಸದುರಾತ್ಮಕಂ	ಅದೇ - ೪೩
ಲಿಂಗಜಂಗಮಯೊರ್ಮಧ್ಯೇಜಂಗಮಸ್ತು ವಿಕ್ಷೇಪಃ	ಅದೇ -೧೦೮
ಮಹಂತೊ ಲಿಂಗರೂಪೇಣ ಮಹಂತೋಜಂಗಮಸ್ತಥಾ	ಅದೇ - ೧೩೮
ಲಿಂಗದೃಷ್ಟಿ ನಿರೀಕ್ಷ್ಯಾಸ್ಯಾಲ್ಲಿಂಗಹಸ್ತೋಪಸ್ಪರ್ಶನಂ	ಅದೇ - ೨೨೮
ತಲ್ಲಿಂಗಧಾರಣಚ್ಛಿಷ್ಯಃ ಪೂರ್ವಜನ್ಮ ವಿವರ್ಜಿತಃ	ಅದೇ - ೬೨೧
ಲಿಂಗಧಾರೀ ಸುಭಕ್ತಶ್ಚಲಿಂಗಬಾಹ್ಯ ಸತೀಸುತಃ	ಅದೇ - ೧೧೨
ಪಾದೋದಕ ಪ್ರಸಾದಾಭ್ಯಾಂ ವಿನಾತೃಪ್ತಿರ್ನಜಾಯತೆ	ಅದೇ - ೧೪೪೦
ಇಷ್ಟಲಿಂಗಾರ್ತಿತಂರೂಪಂ ರುಚಿ ಃ ಪ್ರಾಣಸಮರ್ಪಿತಾ	ಅದೇ - ೧೫೬೯
ಇಷ್ಟಲಿಂಗಂಪರಿತ್ಯಜಂ -	ಅದೇ - ೧೬೭೩

ಮುಂತಾದ ಅನೇಕ ಉಲ್ಲೇಖಗಳಿರುತ್ತವೆ. ಇವು ಇಷ್ಟಲಿಂಗ, ಲಿಂಗಧಾರಣವಿಧಿ, ಗುರು ಲಿಂಗಜಂಗಮ ತತ್ವವನ್ನು ಪ್ರತಿಪಾದಿಸುತ್ತವೆ. ಹನ್ನೆರಡನೆಯ ಶತಮಾನದ ಶರಣರು ಸಂಸ್ಕೃತದಲ್ಲಿ ಯಾವುದೇ ಧಾರ್ಮಿಕ ಕೃತಿಯನ್ನು ರಚನೆ ಮಾಡಿದಂತೆ ಕಂಡುಬರುವುದಿಲ್ಲ. ಶರಣರ ವಚನಗಳಲ್ಲಿ ಇಂತಹ ಉದಾಹರಣೆಗಳು ದೊರೆಯುವುದರಿಂದ ಶರಣರಿಗಿಂತ ಹಿಂದೆ ವೀರಶೈವ ದರ್ಶನವನ್ನು ವಿಶ್ಲೇಷಿಸುವ ಗ್ರಂಥಗಳು ರಚನೆಯಾಗಿದ್ದವೆಂದು ಧಾರಾಳವಾಗಿ ಹೇಳಬಹುದು. ಕೆಲವರು ಈ ಸಂಸ್ಕೃತದ

---

26. ಚನ್ನಬಸವಣ್ಣನವರ ವಚನಗಳು, ಸಂಗ್ರಹ ವಚನ ಸಂಪುಟ ಸಂ.

ಉದಾಹರಣೆಗಳು ಪ್ರಕ್ಷಿಪ್ತ ಯಾರೋ ನಂತರ ಸೇರಿಸಿರಬೇಕೆಂದು ವಾದಿಸುವುದು ಉಂಟು. ಆದರೆ ಅದಕ್ಕೆ ನಿರ್ದಿಷ್ಟ ಆಧಾರಗಳಿಲ್ಲ. ಶರಣರಿಗಿಂತ ಮುನ್ನ ವೀರಶೈವ ದರ್ಶನವಿತ್ತೆಂದರೆ ವೀರಶೈವ ದರ್ಶನಕ್ಕಾಗಲಿ ಶರಣತತ್ವ ಸಂಪತ್ತಿಗಾಗಲೀ ಯಾವ ಕಳಂಕವು ಬರಲಾರದು. ತತ್ವವನ್ನು ದಾರ್ಶನಿಕ ಸಂಪತ್ತಾಗಿ ಸ್ವೀಕರಿಸುವುದು ಶ್ರೇಯಸ್ಕರ. ಇತಿಹಾಸದ ಒರೆಗಲ್ಲಿಗೆ ಹಚ್ಚುವ ಉದ್ಯಮದಿಂದ ಮನುಕೂಲಕ್ಕೆ ಯಾವ ಲಾಭವೂ ಆಗದು. ಅದರಂತೆ ಸ್ವತಂತ್ರ ಸಿದ್ಧಲಿಂಗೇಶ್ವರ ವಚನಗಳು ಕೆರೆಯ ಪದ್ಮರಸನ ದೀಕ್ಷಾಭೋಧೆ ವಿಶೇಷಾನುಭವ ಷಟ್‌ಸ್ಥಲ, ಷಟ್‌ಸ್ಥಲ ಬ್ರಹ್ಮಾದ್ವೈತ ಸಿದ್ಧಾಂತ ಷಟ್‌ಸ್ಥಲಾಭರಣ, ಲಿಂಗಚಿದಮೃತ ಭೋಧೆವೀರಶೈವ ಚಿಂತಾಮಣಿ, ಮುಂತಾದ ಕೃತಿಗಳಲ್ಲಿ ವಚನಕಾರರು ಸಂಸ್ಕೃತದ ಅನೇಕ ಉದಾಹರಣೆಗಳನ್ನು ಉಲ್ಲೇಖಿಸಿರುವುದು ಕಂಡುಬರುತ್ತದೆ. ಇದನ್ನು ಗಮನಿಸಿದಾಗ ಶರಣರು ಸಹ ಸಂಸ್ಕೃತ ಭಾಷೆಯ ಕೃತಿಗಳ ಮೇಲೆ ಪ್ರಭುತ್ವವನ್ನು ಪಡೆದಿದ್ದರು ಎಂಬುದು ಮತ್ತು ಆ ಭಾಷೆಯನ್ನು ಅವಲಂಬಿಸಿದ್ದಾರೆ ಎಂಬುದು ಖಚಿತವಾಗುತ್ತದೆ. ವಚನ ಶಾಸ್ತ್ರದಲ್ಲಿ ಬರುವ ಅನೇಕ ಶ್ಲೋಕಗಳು ವೇದ, ಉಪನಿಷತ್ತು ಮತ್ತು ಆಗಮಗಳಿಂದ ಉದಾಹರಿಸಲ್ಪಟ್ಟಿವೆ. ಆದಕಾರಣ ವೀರಶೈವ ದರ್ಶನವು ಸಂಸ್ಕೃತ ಸಾಹಿತ್ಯದಲ್ಲಿ ಸಾಕಷ್ಟು ಬೆಳೆದಿದೆ ಎಂಬುದು ವಿದಿತವಾಗುತ್ತದೆ. ವೀರಶೈವ ದರ್ಶನವು ನಿಜಕ್ಕೂ ವಿಶ್ವದರ್ಶನವೆಂದು ಹೇಳಬೇಕಾದರೆ ಸಂಸ್ಕೃತ ಗ್ರಂಥಗಳಲ್ಲಿರುವ ದರ್ಶನದ ರಹಸ್ಯವನ್ನೆಲ್ಲಾ ಪ್ರಕಾಶಗೊಳಿಸುವ ಅಗತ್ಯವಿದೆ.

ವೀರಶೈವ ಸಾಹಿತ್ಯಾಧ್ಯಯನಕ್ಕೆ ವೀರಶೈವೇತರರ ಕೊಡುಗೆ

ಡಾ|| ಎಸ್.ಎಂ. ವೃಷಭೇಂದ್ರಸ್ವಾಮಿ

ಪ್ರಾಚೀನ ಇತಿಹಾಸವನ್ನು ಪಡೆದಿರುವ ಭಾರತೀಯ ಸಾಹಿತ್ಯದ ಒಂದು ಪ್ರಮುಖ ಅಂಗವಾದ ಕನ್ನಡ ಸಾಹಿತ್ಯದ ಅತ್ಯಂತ ವಿಶೇಷ ಕೊಡುಗೆ ವೀರಶೈವ ಶಿವಶರಣರ ವಚನ ಸಾಹಿತ್ಯ ಮತ್ತು ಶಿವಕವಿಗಳ ಪುರಾಣ ಸಾಹಿತ್ಯ. ವೇದ - ಉಪನಿಷತ್ತು, ರಾಮಾಯಣ-ಮಹಾಭಾರತ-ಭಾಗವತದಂಥ ಅಖಿಲ ಭಾರತೀಯ ಭಾಷೆಗಳ ಸಾಹಿತ್ಯವನ್ನು ಮೀರಿದ ವಿಶಿಷ್ಟ ಸಾಹಿತ್ಯ ಕನ್ನಡ ಶಿವಶರಣರ ವಚನ ವಾಙ್ಮಯ ಮತ್ತು ದಾಸಪರಂಪರೆಯ ಗೀತಸಾಹಿತ್ಯ. ಇವೆರಡೂ ಸಂಮಿಶ್ರ ಸಂಸ್ಕೃತಿಯ ಭಾರತೀಯ ವಾಙ್ಮಯದ ಅತಿ ವಿಶಿಷ್ಟ ಹಾಗೂ ಅನನ್ಯ ಅಂಶಗಳಾಗಿವೆ. ಅದರಲ್ಲೂ, ವಚನವಾಙ್ಮಯ ಹಾಗೂ ವೀರಶೈವ ಪುರಾಣಸಾಹಿತ್ಯ, ವಸ್ತು-ಭಾಷೆ-ಆಶಯ ದೃಷ್ಟಿಯಿಂದ, ಸಮಕಾಲೀನತೆಯಲ್ಲಿ ಸಾರ್ವಕಾಲೀನತೆ, ದೇಶೀಯತೆಯಲ್ಲಿ ಭಾರತೀಯತೆ ಹಾಗೂ ವಿಶ್ವಮಾನವೀಯ ಮೌಲ್ಯಗಳನ್ನು ಬಿಂಬಿಸುತ್ತಿರುವ ವಿಶಿಷ್ಟ ಸಾಹಿತ್ಯವಾಗಿದೆ. ಜೈನ, ವೀರಶೈವ, ಬ್ರಾಹ್ಮಣ ಸಾಹಿತ್ಯ ಶಾಖೆಗಳು ಇಪ್ಪತ್ತನೆಯ ಶತಮಾನದವರೆಗೆ ಬಹುಶಃ ಪ್ರತ್ಯೇಕವಾಗಿಯೇ ಬೆಳೆದುಬಂದಿವೆ. ಪರಸ್ಪರ ಖಂಡನೆ ಮಂಡನೆಯ ಪ್ರಭಾವಗಳು ಕಾಣಿಸಿದರೂ, ತಮ್ಮ ವೈಯಕ್ತಿಕತೆಯ ವರ್ತುಲದಲ್ಲಿಯೇ ಬೆಳೆದು ಬಂದಿರುವುದು ಸರ್ವವಿದಿತ. ಧಾರ್ಮಿಕ ನಂಬಿಕೆ, ಧರ್ಮತತ್ವಗಳ ಪ್ರಚಾರ ಅಂದಂದಿನ ಸಾಮಾಜಿಕ ಪರಿಸರಕ್ಕೆ ಸ್ಪಂದಿಸುವ ಅನಿವಾರ್ಯತೆಗಳಿಂದ, ಜೈನ-ಬ್ರಾಹ್ಮಣ ವಾಙ್ಮಯ ಬೆಳೆದು ಬಂದರೆ, ವೀರಶೈವ ಸಾಹಿತ್ಯ ನೂತನ ಸಾಮಾಜಿಕ ಸಿದ್ಧಾಂತಗಳನ್ನು ನಿರೂಪಿಸುವ, ಧಾರ್ಮಿಕ ಭಾವನೆಗಳನ್ನೂ ಪರಿಷ್ಕರಿಸುವ ಕ್ರಾಂತಿಕಾರೀ ಸಾಹಿತ್ಯವಾಗಿ ಮೂಡಿಬಂದಿದೆ. ಅದಕ್ಕಿಂತಲೂ ಹೆಚ್ಚಾಗಿ, ಹಿಂದೆ ಎಂದೂ ಆಗದ

ರೀತಿಯಲ್ಲಿ ವೀರಶೈವ ವಚನ ಹಾಗೂ ಕಾವ್ಯ ಸಾಹಿತ್ಯ ಸಮಾಜೋ-ಧಾರ್ಮಿಕ ಮಾನವೀಯ ಮೌಲ್ಯಾನ್ವೇಷಕ ಜನತಾ ಸಾಹಿತ್ಯವಾಗಿ ಬೆಳೆದು ಬಂದಿರುವುದು ಒಂದು ವಿಶೇಷ. ವೀರಶೈವ ವಚನ ವಾಙ್ಮಯ ಹಾಗೂ ಪುರಾಣ ಕಾವ್ಯ ಸಾಹಿತ್ಯ. ಕನ್ನಡ ಸಾಹಿತ್ಯಕ್ಕೆ ನೂತನ ದಿಗಂತಗಳನ್ನು ತೆರೆದಿದೆ, ವಿನೂತನ ಜನತೆಯ ಭಾಷೆಯನ್ನು ಖನಿಗೊಳಿಸಿದೆ. ವೈಯಕ್ತಿಕಾನುಭವದ ಸಮಕಾಲೀನ ಬದುಕಿಗೆ ಸ್ಪಂದಿಸುವ ಸಾಮಾಜೀಕರಣ ಪ್ರಕ್ರಿಯೆಯನ್ನು ಬಿಂಬಿಸುವ ಅಸಾಮಾನ್ಯ ಸಾಹಿತ್ಯವಾಗಿ ಬೆಳೆದುಬಂದಿದೆ. ಇಪ್ಪತ್ತನೆಯ ಶತಮಾನದಲ್ಲೂ ಪ್ರಸ್ತುತವಾದ, ನೂತನ ಸಾಹಿತ್ಯ ಚಿಂತನೆಗೆ ಸ್ಫೂರ್ತಿ ನೀಡಬಲ್ಲ, ಆಂತರಿಕ ಸತ್ವವನ್ನೊಳಗೊಂಡಿದೆ ಈ ಶಿವಶರಣ ವಾಙ್ಮಯ. ಇದರ ಪೋಷಣೆ - ಪ್ರಯೋಜನ - ಸಂಗೋಪನ ಕಾರ್ಯವನ್ನು, ಕನ್ನಡ ನಾಡಿನಲ್ಲೆಲ್ಲ ವ್ಯಾಪಕವಾಗಿ ಹಬ್ಬಿರುವ ವೀರಶೈವ ಸಂಸ್ಥಾನಮಠ ಪೀಠಗಳು 'ವ್ರತ'ವೆಂಬಂತೆ ಮಾಡಿಕೊಳ್ಳುತ್ತಾ ಬಂದಿವೆ. ಆದರೆ ಇಪ್ಪತ್ತನೆಯ ಶತಮಾನದಲ್ಲಿ ಅನೇಕ ವೀರಶೈವೇತರರೂ ಈ ಕಾರ್ಯಕ್ಕೆ ಮುಂದೆ ಬಂದುದು ಗಣನೀಯವಾದ ಸಂಗತಿ. ಅಲ್ಲಿನ ಸಾರ್ವಕಾಲೀನ ಮೌಲ್ಯಗಳನ್ನು ಎತ್ತಿ ಹಿಡಿಯುವ ನಿಷ್ಠೆಯ ಕಾರ್ಯವನ್ನು ಸ್ವಪ್ರೇರಣೆಯಿಂದ ಕೈಗೆತ್ತಿಕೊಂಡವರು ಹಲವರು. ವಚನ ಹಾಗೂ ಕಾವ್ಯ ಸಾಹಿತ್ಯವನ್ನು ಧಾರ್ಮಿಕ ಪರಿವೇಶದಿಂದ ಹೊರತಂದು, 'ಶುದ್ಧ ಸಾಹಿತ್ಯಿಕ ಮೌಲ್ಯ'ಗಳನ್ನು ಎತ್ತಿ ತೋರುವಲ್ಲಿ, ವೀರಶೈವರಂತೆ ವೀರಶೈವೇತರರೂ, ಮುಖ್ಯವಾಗಿ ಕ್ರಿಶ್ಚಿಯನ್ ಪಾದ್ರಿಗಳು, ಬ್ರಾಹ್ಮಣ ಸಾಹಿತಿಗಳು, ಅಬ್ರಾಹ್ಮಣ ಸಾಹಿತಿಗಳು ವಿಶೇಷ ಸೇವೆ ಸಲ್ಲಿಸಿರುವರು. ಕೆಲವರು ಈ ಸಾಹಿತ್ಯವನ್ನು, ತಮ್ಮ ಧರ್ಮಸಾಹಿತ್ಯ ಪ್ರಚಾರಕ್ಕೆ ಬಳಸಿದರೆ, ಮತ್ತೆ ಕೆಲವರು 'ಗುಮಾನಿ'ಯಿಂದಲೇ ಕಂಡರೂ ಇದರ ವಿಶೇಷ ಮಹತ್ವ ಅಂಶಗಳನ್ನು, ಮುಕ್ತಕಂಠದಿಂದ ಹೊಗಳಿರುವರು. ಆದರೆ, ವೀರಶೈವ ಸಾಹಿತ್ಯ ಎಂಬ ಮುದ್ರೆ ಈ ಶತಮಾನದ ಪ್ರಾರಂಭದಲ್ಲಿಯೇ ಬಿದ್ದುದರಿಂದ, ಬಹುಜನ ವೀರಶೈವೇತರರು ಇದರ ಪ್ರಭಾವದಿಂದ ದೂರವೇ ಉಳಿದುದು ದುರ್ದೈವದ ಸಂಗತಿ. ರಾಜ್ಯಮಾನ್ಯ ಶ್ರೇಷ್ಠ ಉತ್ತಮ ಜಾತಿಯ ಸಾಹಿತಿವರೇಣ್ಯರನೇಕರು, ಇತ್ತ ಕಿರುಗಣ್ಣು ಹಾಯಿಸದಿರುವುದೂ, ಷೆಲ್ಲಿ , ಕೀಟ್ಸ್ , ವರ್ಡ್ಸ್‌ವರ್ಥರನ್ನು ಬಾಯಿ ತುಂಬ ಹೊಗಳುವ ಇಂಥವರು ಸಾರ್ವಜನಿಕ ಕ್ಷೇತ್ರದಲ್ಲಿ ತಮ್ಮ ಉನ್ನತ ಬರವಣಿಗೆಗಳಲ್ಲಿ ಇದನ್ನು ಗಮನಿಸದೇ ಇರುವುದೂ ಅವರಿಗೇ ನಷ್ಟವಾದರೂ, ಸಾಹಿತ್ಯಾಭಿರುಚಿಗೂ ನಷ್ಟವಾಯಿತು. ಪ್ರಗತಿಶೀಲ, ನವ್ಯ, ಬಂಡಾಯಗಳಂಥ ಪಂಥ ಕಟ್ಟಿದ ಅನೇಕರು, ವಚನ ಸಾಹಿತ್ಯದಿಂದ ಸ್ಫೂರ್ತಿಪಡೆಯದೇ, ಎಲಿಯಟ್, ಸಾರ್ತ್ರೆ, ಕಾಮು, ಕಾಫ್ಕರತ್ತ ಹೊರಳಿದುದೂ ಅಷ್ಟೇ ಸಾಂಸ್ಕೃತಿಕ ದುರಂತ. ದಾಸಸಾಹಿತ್ಯಕ್ಕೂ ಇಂಥದೇ ಗತಿಯೊದಗಿತೆಂಬುದೂ ಅಷ್ಟೇ ಸತ್ಯ. ನಮ್ಮ ನಾಗರಿಕ ಚಕ್ರ ಉರುಳುರುಳಿ ಮತ್ತೆ ದೇಶಿಯತೆಗೇ ಬರುವ ಕಾಲ ಸನ್ನಿಹಿತವಾಗಿದೆ. ಪರದೇಶೀಯ ಸಾಹಿತ್ಯ, ಅರ್ಥಸಿದ್ಧಾಂತ, ಜೀವನ ಶೈಲಿಗಳಿಗೆ ಮರುಳಾದ, ಮಾರುಹೋದ 'ಬುದ್ಧಿ - ಪ್ರಬುದ್ಧ ಬದ್ಧ ಸಾಹಿತಿಮಾನ್ಯರೂ, ಭಾರತೀಯ ಸಂಸ್ಕೃತಿ-ಸಾಹಿತ್ಯ-ಜೀವನ ಸಿದ್ಧಾಂತಗಳನ್ನು ಮರು ಪರಿಶೀಲಿಸುವುದರತ್ತ ಮುನ್ನಡೆದರೆ ಒಳ್ಳೆಯದು. ಕಳಪೆಯಾದುದೆಷ್ಟೇ ಇದ್ದರೂ ಜೀವಂತ ಜನಾಂಗ ಸತ್ತ್ವದ 'ಗಟ್ಟಿ ನೆಲ' ಎಂದಿಗೂ ಮಾನ್ಯವಾದುದಾಗಿದೆ. ಅಂತೆಯೇ ಕನ್ನಡ ಭಾಷೆಯ ಅನನ್ಯ ಸಾಹಿತ್ಯಗಳಾದ ಶರಣ-ದಾಸ ಸಾಹಿತ್ಯ ಸತ್ತ್ವ ಎಂದಿಗೂ ಚಿರಂತನ ಸಾಹಿತ್ಯಕ್ಕೆ ಮಾರ್ಗದರ್ಶನ ನೀಡಬಲ್ಲುದು. ಆಧುನಿಕ ವಚನಕಾರರು, ನೂತನ ಹರಿದಾಸ ಪರಂಪರೆಯ ಉಪಾಸಕರು, ಈ ಸತ್ಯವನ್ನು ಸಾಬೀತುಗೊಳಿಸಿರುವರು. ಕಾರಣ ವೀರಶೈವ ಸಾಹಿತ್ಯ ಅದರ ಆಂತರಿಕ ಸತ್ವ ಹಾಗೂ ಜೀವನ ಶೋಧನೆ ಮತ್ತು ಮೌಲ್ಯ ನಿರೂಪಣೆಯಿಂದಾಗಿ ಎಂದಿಗೂ ಪ್ರಸ್ತುತವಾದುದಾಗಿದೆ. ಇನ್ನಾದರೂ, ಅತ್ಯಾಧುನಿಕ ನವ್ಯ - ಬಂಡಾಯ ಪಂಥವನ್ನು ಬೆನ್ನು ಹತ್ತಿ, ಅನುಕರಣಶೀಲರಾಗಿ, ಜೀವಂತವಾದುದನ್ನು ನಿರ್ಮಿಸಲು ಅಸಮರ್ಥರಾದ ಅನೇಕ ಕಿರಿಯ ಸಾಹಿತ್ಯ ಪ್ರೇಮಿಗಳು, ನಾಡಿನ ಪ್ರೇರಕ ಶಕ್ತಿಗಳಾದ ಶರಣ-ದಾಸ ಸಾಹಿತ್ಯ ಹಾಗೂ ಜೀವಂತಿಕೆಯಿಂದ ತುಂಬಿ ತುಳುಕುತ್ತಿರುವ ಜನಪದ ಸಾಹಿತ್ಯವನ್ನು ಗಂಭೀರವಾಗಿ ಪರಿಗಣಿಸಿ, ನೂತನ ಸ್ಫೂರ್ತಿ ಪಡೆಯಲೆಂದು ಹಾರೈಸುವೆ. ಕಾರಣ, ಹಿರಿಯ ಸಾಹಿತಿ ಮನ್ನೆಯರು, ವೀರಶೈವ ವಚನ - ಕಾವ್ಯ - ಹಾಡುಗಬ್ಬ ಸಾಹಿತ್ಯವನ್ನು ಮೆಚ್ಚಿ ನಂಬಿ ಬಾಳಬಟ್ಟೆಯ ಪರಮಾಗಮವೆಂದು ಕೈವಾರಿಸಿದ, ಪರೀಕ್ಷಿಸಿದ ಕೆಲವು ವಿವರಗಳನ್ನು ಇಲ್ಲಿ ದಾಖಲಿಸಲಾಗಿದೆ. ಆಯಾ ಧರ್ಮೀಯರು

ಆತ್ಮಾಭಿಮಾನದಿಂದ ಮಾಡಿದ ಕಾರ್ಯಗಳಿಗೆ, ಪೂರಕವಾಗಿ ಇತರ ಧರ್ಮೀಯರು ದುಡಿದಿರುವುದು ಅಭಿಮಾನದ ಅಷ್ಟೇ ಅಲ್ಲ ಮಾರ್ಗದರ್ಶಕ ಸಂಗತಿಯಾಗಿದೆ. ವೀರಶೈವ ವಚನಕಾವ್ಯ ಸಾಹಿತ್ಯ ಕ್ಷೇತ್ರದಲ್ಲಿ ಕೃಷಿ ಮಾಡಿದೆ, ಅನ್ಯ ಧರ್ಮೀಯರ ಸೇವೆ - ಕೊಡುಗೆ ಒಂದು ಸಮಗ್ರ ಪಿಎಚ್.ಡಿ. ಸಂಶೋಧನ ಮಹಾಪ್ರಬಂಧದ ವಸ್ತುವಾಗುವಷ್ಟು ವ್ಯಾಪಕವಾಗಿದೆ. ಅದಕ್ಕೆ ಸ್ಫೂರ್ತಿ ನೀಡಬಹುದಾದ ಮುಖ್ಯಾಂಶಗಳನ್ನು ಮಾತ್ರ ವಿವೇಚಿಸುವ ಪ್ರಯತ್ನ ಮಾಡಿರುವೆ. ಇದು ಎಲ್ಲ ದಾಖಲೆಗಳ ಸಮಗ್ರ ಸಮೀಕ್ಷೆಯಲ್ಲ, ದೊರೆವ ಮಾಹಿತಿಯ ಸ್ಥೂಲ ವಿವೇಚನೆ ಮಾತ್ರ ಎಂಬುದನ್ನು ವಿನಯವಾಗಿ ಹೇಳಬಯಸುವೆ.

ಕ್ರಿಶ್ಚಿಯನ್ ಮಿಷನರಿಗಳು ಮತ್ತು ವೀರಶೈವ ಸಾಹಿತ್ಯ

ಭಾರತದಲ್ಲಿ ಕ್ರೈಸ್ತನ ಸಂದೇಶಗಳನ್ನು ಬೀರಿ, ಮತಾಂತರ ಮಾಡುವ ಉದ್ದೇಶದಿಂದ ಬಂದ ಲಂಡನ್ ಮಿಷನ್, ಬಾಸೆಲ್ ಮಿಷನ್‌ಗಳ 'ಪಾದ್ರಿ'ಗಳು, ಜನತೆಯ ಭಾಷಯಾದ ಕನ್ನಡವನ್ನು ಕಲಿಯಲು, ಆ ಭಾಷೆಯ ವ್ಯಾಕರಣ, ವಾಕ್ಯರಚನಾ ವಿಧಾನಗಳನ್ನು ಕಲಿತು, ಶಬ್ದ ಸಂಪತ್ತನ್ನು ಸಂಗ್ರಹಿಸಿ, ಜನಪ್ರಿಯವಾದ ದೇಸೀಯ ಸಾಹಿತ್ಯವನ್ನು ಅಭ್ಯಾಸ ಮಾಡಿ, ಸಂಪಾದಿಸಿ ಪ್ರಕಟಿಸುವ ಕಾರ್ಯ ಮಾಡಿ, ಮಹದುಪಕಾರ ಮಾಡಿ, ಮಾರ್ಗದರ್ಶನ ನೀಡಿದರು. ಭಾರತದಲ್ಲಿ ಮುದ್ರಣ ಕಲೆಯನ್ನು ಸಂಶೋಧನೆ, ಸಂಪಾದನೆ, ವ್ಯಾಕರಣ ನಿಘಂಟು ರಚನೆ, ತೌಲನಿಕ ಅಧ್ಯಯನ, - ಒಟ್ಟಿನಲ್ಲಿ 'ಪುಸ್ತಕ ಸಂಸ್ಕೃತಿ'ಯನ್ನು ನಿರ್ಮಿಸಿದ ಮುಂಚೂಣಿಗರವರು. ಕನ್ನಡ ಭಾಷೆ - ಸಾಹಿತ್ಯವನ್ನು ಹೊಸ ದಿಕ್ಕಿನತ್ತ ಹೊರಳಿಸಿದ ಕ್ರೈಸ್ತ ಮಿಷನರಿಗಳು ಹಾಗೂ ಆಂಗ್ಲ ಅಧಿಕಾರಿಗಳು ಜನಪ್ರಿಯವಾದ ವೀರಶೈವ ಸಾಹಿತ್ಯದ ಸೇವೆಯನ್ನೂ ಮಾಡಿದರು. ಕನ್ನಡ ಸಾಹಿತ್ಯದ ಪ್ರಥಮ 'ಚರಿತ್ರೆ'ಯನ್ನು ಬರೆದ ಇ.ಪಿ. ರೈಸರು 'A History of Kannada literature' ಎಂಬ ಕೃತಿಯಲ್ಲಿ ಜೈನ, ವೀರಶೈವ, ಬ್ರಾಹ್ಮಣ ಸಾಹಿತ್ಯವೆಂಬ ಅಭಿದಾನವನ್ನು ನೀಡಿ, ಈ ಮೂರು ಪ್ರವಾಹಗಳೂ ಕನ್ನಡದಲ್ಲಿ ಒಡನೊಡನೆಯೇ ಹರಿದು ಬಂದಿವೆ ಎಂದು ಕನ್ನಡ ಸಾಹಿತ್ಯ ಚರಿತ್ರೆಗೆ ದಿಗ್ದರ್ಶನ ನೀಡಿದರು. ಇಂಥ ಸಮಗ್ರ ದೃಷ್ಟಿ ಹಿಂದಿನ ದೇಶೀಯ ಧರ್ಮಪ್ರೇರಿತ ಕವಿ - ಲೇಖಕರಲ್ಲಿರಲಿಲ್ಲ ; ಪರಸ್ಪರ ಪ್ರಭಾವದ ವಿಚಾರ ಮಾಡುವುದೂ ದೂರವೇ ಉಳಿದಿದ್ದಿತು. ಅಂತೆಯೇ ೧೮೭೪ರಲ್ಲಿ ಕೇಶಿರಾಜನ ಶಬ್ದಮಣಿ ದರ್ಪಣವನ್ನು ಸಂಪಾದಿಸಿದ ರೆವರೆಂಡ್ ಕಿಟಲ್ ಅವರು, ವೀರಶೈವ ಸಾಹಿತ್ಯ ಕೃತಿಗಳ ದಿಗ್ದರ್ಶನ ಮಾಡಿದರು. ತಮ್ಮ ಸುಪ್ರಸಿದ್ಧ ನಿಘಂಟಿನಲ್ಲಿ ಬಸವಪುರಾಣ, ಗಿರಿಜಾಕಲ್ಯಾಣ ಮುಂತಾದ ವೀರಶೈವ ಸಾಹಿತ್ಯ ಗ್ರಂಥಗಳಿಂದ ಹೇರಳ 'ಉದ್ಧರಣ' (Quotation) ಗಳನ್ನು ಆರಿಸಿರುವುದು ಗಮನಾರ್ಹ ವಿಚಾರ. ಇ.ಪಿ.ರೈಸ್ ಮತ್ತು ಊರ್ಥ್ ಅವರು ಬಸವಪುರಾಣ ಹಾಗೂ ಚನ್ನಬಸವ ಪುರಾಣಗಳ ಸಾರವನ್ನು ಇಂಗ್ಲೀಷಿನಲ್ಲಿ ಬರೆದು, ಮುಂಬಯಿಯ ರಾಯಲ್ ಏಷಿಯಾಟಿಕ್ ಸೊಸೈಟಯ ಮುಖಪತ್ರಿಕೆಯ ಎಂಟನೆಯ ಸಂಪುಟದಲ್ಲಿ ಪ್ರಕಟಿಸಿ, ವೀರಶೈವ ಸಾಹಿತ್ಯದ ಪ್ರಮುಖವಾದ ಎರಡು ಗ್ರಂಥಗಳ ಮಹತ್ವವನ್ನು, ಹೊರ ದೇಶ - ಭಾಷೆಗಳಿಗೆ ಪರಿಚಯಿಸಿದರು. ಇತರ ಅನೇಕ ಮಹತ್ವದ ಕನ್ನಡ ಸಾಹಿತ್ಯ ಗ್ರಂಥಗಳ ಸಂಪಾದನೆ, ಪ್ರಕಟನೆಯೊಡನೆ ವೀರಶೈವ ಸಾಹಿತ್ಯ ಕೃತಿಗಳನ್ನೂ ಈ ಕ್ರೈಸ್ತ ಮಿಷನರಿಗಳು ಅಭ್ಯಾಸ ಮಾಡಿದರು, ವ್ಯಾಖ್ಯಾನಿಸಿದರು, 'ಉದ್ಧಾರ'ಗಳನ್ನೂ ಹೆಕ್ಕಿ ತೋರಿದರು.

ಸ್ವಾತಂತ್ರ್ಯಾನಂತರ, ಕ್ರೈಸ್ತ ಮಿಷನರಿ ಸಂಸ್ಥೆಗಳು ವಿಶೇಷವಾಗಿ ಶಿಕ್ಷಣ ಪ್ರಸಾರದ ಕಡೆ ಮನಸ್ಸು ಕೊಟ್ಟರು; ಸಾಹಿತ್ಯ ದೃಷ್ಟಿ ಕಡಿಮೆಯಾಯಿತು. ಆದರೂ, ಆಸಕ್ತರಾದ ಕೆಲವು ಪಾದ್ರಿಗಳೂ ಕ್ರಿಶ್ಚಿಯನ್ ಧರ್ಮೀಯರು ಬೇರೊಂದು ರೀತಿಯಲ್ಲಿ ವೀರಶೈವ ಧರ್ಮ - ಸಾಹಿತ್ಯದ ಅಧ್ಯಯನ ಮುಂದುವರಿಸಿರುವರು. ಶ್ರೀ ನಿಜಗುಣ ಶಿವಯೋಗಿ ಮತ್ತು ಆತನ ಕೃತಿಗಳು ಎಂಬ ಲೇಖನವನ್ನು ಕ.ಸಾ.ಪರಿಷತ್ ಪತ್ರಿಕೆಯಲ್ಲಿ ಬರೆದ ಶ್ರೀ ಪಿ.ಜೆ. ಥಾಮಸ್, 'ಕ್ರೈಸ್ತ ಹಾಗೂ ವೀರಶೈವ ಸಿದ್ಧಾಂತ' (ವಿಶ್ವಪ್ರಭೆ-೩ ಪು. ೬೧೨-೬೯) ಎಂಬ ವಿದ್ವತ್‌ಪೂರ್ಣ ಲೇಖನ ಬರೆದ ಫಾದರ್ ಗ್ರೆಗರಿ ಡಿಸೋಜಾ, ವೀರಶೈವ ಹಾಗೂ ಕ್ರಿಶ್ಚಿಯನ್ ಧರ್ಮದ ' Grace ಮತ್ತು ಗುರುಕಾರುಣ್ಯ' ಮತ್ತು 'ಜ್ಞಾನ ದೀಕ್ಷೆ ಮತ್ತು ಇಷ್ಟಲಿಂಗಧಾರಣ' ಮುಂತಾದ ತೌಲನಿಕಾಧ್ಯಯನದ ಲೇಖನಗಳನ್ನು ನೀಡಿರುವ ಡಾ. ವಿಲ್ಯಂ ಮಾಡ್ಥಾ ಮುಂತಾದವರ ಸೇವೆಯನ್ನು ಇಲ್ಲಿ ಸ್ಮರಿಸಬೇಕು.

ಫಾದರ್ ಸಿ.ಸಿ.ಎ.ಫೈ., ಶ್ರೀ ಚಂದ್ರಶೇಖರ ಕರ್ಬಿ, ಫಾದರ್ ವಿಲಿಯಂ ಡಿಸೋಜಾ ಅವರೂ ತಮ್ಮ ಕೆಲವು ಪುಸ್ತಕ, ಲೇಖನಗಳಲ್ಲಿ ವೀರಶೈವ ಧರ್ಮ - ಸಾಹಿತ್ಯದ ವಿವೇಚನೆ ಮಾಡಿರುವರು. ಡಾ. ಆರ್.ಸಿ.ಹಿರೇಮಠ, ಪ್ರೊ.ಸಂ.ಶಿ. ಭೂಸನೂರುಮಠ ಅವರೊಡನೆ ಶೂನ್ಯ ಸಂಪಾದನೆಯನ್ನು ಐದು ಸಂಪುಟಗಳಲ್ಲಿ ಇಂಗ್ಲೀಷಿಗೆ ಅನುವಾದ ಮಾಡಿದ ಪ್ರೊ.ಮೆನಿಝಿಸ್ ಅವರು, ಶ್ರೀ ಎಸ್.ಎಂ. ಅಂಗಡಿಯವರೊಡನೆ, ಅನೇಕ ವೀರಶೈವ ವಚನಕಾರರ ಕೃತಿಗಳನ್ನು, ಇಂಗ್ಲೀಷಿಗೆ ಭಾಷಾಂತರ ಮಾಡಿರುವರು. ಇದೊಂದು ಗಮನಾರ್ಹ ಸೇವೆ.

ಕ್ರೈಸ್ತ ಧರ್ಮೀಯರಾಗಿದ್ದು, ಶಿವಶರಣ ಸಾಹಿತ್ಯ - ಧರ್ಮ - ಸಿದ್ಧಾಂತದ ಬಗೆಗೆ ವಿಶೇಷ ಆಸಕ್ತಿ ಅಭಿಮಾನ ಹೊಂದಿದ್ದ, ತಿರುಳ್ಗನ್ನಡದ ತಿರುಕ ಸರ್ವಜ್ಞ ಸಾಹಿತಿ ರೆ. ಉತ್ತಂಗಿ ಚೆನ್ನಪ್ಪನವರ ಕೊಡುಗೆಗಳನ್ನು, ಇಲ್ಲಿಯೇ ಪ್ರಸ್ತಾಪಿಸುವುದು ಸೂಕ್ತ. ಜನಮಾನಸದಲ್ಲಿ ಗಾಳಿಯಂತಿದ್ದ, ಜನತೆಯ ಕವಿ ಸರ್ವಜ್ಞನನ್ನು, ಆತನ ತ್ರಿಪದಿಗಳ ವಿಶ್ವಮಾನವೀಯ ತತ್ತ್ವಗಳನ್ನು ಬೆಳಕಿಗೆ ತಂದರು ಶ್ರೀ ಉತ್ತಂಗಿ ಚನ್ನಪ್ಪ. ಅವರ ಹಿರಿಯರು ಪೂರ್ವಾಶ್ರಮದಲ್ಲಿ ವೀರಶೈವರಾಗಿದ್ದರೆಂಬ ಸಂಸ್ಕಾರದಿಂದಲೋ, ಧಾರವಾಡ ತಮ್ಮ ನೆಲೆಯಾದ್ದರಿಂದ ಶ್ರೀ ಮೃತ್ಯುಂಜಯ ಶ್ರೀಗಳ ಕೃಪೆ, ಶ್ರೀಮತಿ ಜಯದೇವಿತಾಯಿ ಲಿಗಾಡೆಯವರ ಆಶ್ರಯ - ನೆರವಿನಿದಲೋ, ಶ್ರೀ ಉತ್ತಂಗಿಯವರ ಸೇವೆ ವೀರಶೈವಕ್ಕೆ ದೊರೆಯುವಂತಾಯಿತು. ಸರ್ವಜ್ಞ ವಚನಗಳು, ಸಿದ್ಧರಾಮ ಸಾಹಿತ್ಯ, ಅನುಭವ ಮಂಟಪದ ಐತಿಹಾಸಿಕತೆ ಮುಂತಾದ ಕೃತಿಗಳ ಮೂಲಕ, ಶರಣರು ಐತಿಹಾಸಿಕ ವ್ಯಕ್ತಿಗಳು, ಅನುಭವ ಮಂಟಪ, ಕಲ್ಯಾಣದಲ್ಲಿ ಅಸ್ತಿತ್ವದಲ್ಲಿತ್ತು. ಶಿವಶರಣರು ವಿಶ್ವಮಾನವ ತತ್ತ್ವವನ್ನು ಪ್ರತಿಪಾದಿಸಿದವರು ಮತ್ತು ಅವರು ಕಟ್ಟಬಯಸಿದ 'ಸಮಾಜ' ಆಧುನಿಕ ಯುಗಕ್ಕೆ ಮಾರ್ಗದರ್ಶಕ ಹಾಗೂ ಅವರ 'ದರ್ಶನ' - ಜಗತ್ತಿನ ಶ್ರೇಷ್ಠ ದರ್ಶನಗಳಿಗೆ ಹೆಗಲೆಣೆಯಾಗಿದೆ ಮುಂತಾದ ಮಹತ್ವದ ಅಂಶಗಳೊಡನೆ, 'ಸಿದ್ಧರಾಮನು ಶೈವನಲ್ಲ, ವೀರಶೈವ' ಎಂಬುದನ್ನು ಸ್ಥಾಪಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಕ್ರಿಸ್ತ ಹಾಗೂ ಬಸವಣ್ಣನವರು ಶ್ರೀ ಉತ್ತಂಗಿ ಅವರಿಗೆ ಸಮಪೂಜ್ಯರಾಗಿದ್ದರು. ಜಗತ್ತಿನ ವ್ಯಾಪಕ ಧರ್ಮವಾದ ಕ್ರಿಶ್ಚಿಯನ್ ಧರ್ಮತತ್ತ್ವ - ವೇದಾಂತಗಳಿಗೆ, ಸಮ - ಸಮಾನ ವೀರಶೈವದ್ದೆಂದು ಅವರು ತಿಳಿದಿದ್ದರು; ಬರೆದಿರುವರು. ವೀರಶೈವೇತರರ ವೀರಶೈವದ ಸೇವೆ ಕೈಕೊಂಡವರಲ್ಲೇ ಅಗ್ರ ಗಣ್ಯರು ರೆ||. ಉತ್ತಂಗಿ ಚನ್ನಪ್ಪ. ಅವರ ಕೊಡುಗೆಗಳನ್ನು ವೀರಶೈವರು ಎಂದೂ ಮರೆಯಲಾರರು, ಎಂದಿಗೂ ಕೃತಜ್ಞರಾಗಿರುವರು.

ನವೋದಯ ಕಾಲದ ಹಿರಿಯ ಸಾಹಿತಿಗಳ ಸೇವೆ

ಕುಮಾರವ್ಯಾಸ ಭಾರತದಷ್ಟೇ ಜನಪ್ರಿಯ ಸಾಹಿತ್ಯ ಗ್ರಂಥಗಳು, ಬಸವ ಪುರಾಣ ಮತ್ತು ರಾಜಶೇಖರ ವಿಳಾಸ, ಇಪ್ಪತ್ತನೆಯ ಶತಮಾನದ ಆಸು-ಪಾಸಿನಲ್ಲಿ ಈ ಕೃತಿಗಳ ಪುರಾಣ, ಕೀರ್ತನ, ವ್ಯಾಖ್ಯಾನ ನಡೆದೇ ಇದ್ದಿತು. ೧೯೨೮ರ ಸುಮಾರಿಗೆ ಶ್ರೀ ಪಿ.ಜಿ. ಹಳಕಟ್ಟಿ ಅವರು ಹಳೆಯ ತಾಳೆವೋಲೆ ಕಟ್ಟುಗಳನ್ನೆಲ್ಲ ಶೋಧಿಸಿ ವಚನ ಸಾಹಿತ್ಯ ಹಾಗೂ ಹರಿಹರನ ರಗಳೆಗಳನ್ನು ಪ್ರಚುರಪಡಿಸಿದ ಮೇಲೆ ವಚನ ಸಾಹಿತ್ಯದ ಸೊಬಗು, ಹರಿಹರ - ರಾಘವಾಂಕರ ಕೃತಿಗಳ ಮಹತ್ವ ಜನಮನದ ಮುಂದೆ ಬರುವಂತಾಯಿತು. ಅಂತೆಯೇ ಸರ್ಪಭೂಷಣ ಶಿವಯೋಗಿ, ನಿಜಗುಣ ಶಿವಯೋಗಿ, ಕಡಕೊಳ್ಳದ ಮಡಿವಾಳಪ್ಪ ಮುಂತಾದವರ 'ಭಜನೆ ಹಾಡು'ಗಳು ಅತ್ಯಂತ ವ್ಯಾಪಕ ಜನಮನ್ನಣೆಯನ್ನು ಪಡೆದಿದ್ದವು. ಸರ್ವಜ್ಞನ ವಚನಗಳಂತೂ, ನಾಡಿನ ಎಲ್ಲ ವರ್ಗದ ಜನರ ನಾಲಿಗೆಯ ಮೇಲೆ ವಿಹರಿಸುತ್ತಿದ್ದವು. ಹೀಗಾಗಿ ವೀರಶೈವೇತರರೂ ಈ ಎಲ್ಲ ಕೃತಿಗಳ ಸಾಹಿತ್ಯಿಕ ಮೌಲ್ಯಕ್ಕಾಗಿ ಅಭ್ಯಾಸ ಮಾಡುವ ಪ್ರವೃತ್ತಿ ಬೆಳೆದು ಬಂದಿದ್ದಿತು. ಆದರೆ, ಕನ್ನಡ ಸಾಹಿತ್ಯವನ್ನು, ಧರ್ಮದ ಆಧಾರದ ಮೇಲೆ ವಿಂಗಡಿಸುವ ಪ್ರಯತ್ನದಿಂದಾಗಿ, ಆಯಾ ಧರ್ಮೀಯರೇ, ಆಯಾ ಧರ್ಮ-ಸಾಹಿತ್ಯ ಗ್ರಂಥಗಳತ್ತ ವಿಶೇಷ ಒಲವರ ತೋರುವ ಪ್ರವೃತ್ತಿ ಬೆಳೆದು ಬಂದಿತು. ಆದರೂ, ವೀರಶೈವ ಸಾಹಿತ್ಯದ ಬಹುಸಂಖ್ಯೆಯ ಕೃತಿಗಳು ಬಹುಧರ್ಮೀಯರ ಪ್ರಿಯ ಕೃತಿಗಳಾದುದು, ಅವರೆಲ್ಲರ ಅಧ್ಯಯನವನ್ನು ಆಹ್ವಾನವೆನಿಸಿದ್ದು ಆ ಸಾಹಿತ್ಯದ ಅನನ್ಯ ಗುಣದಿಂದಾಗಿ. ಅಲ್ಲದೆ, ಧಾರ್ಮಿಕಾಂಶಕ್ಕೆ ಒತ್ತು ನೀಡುವ ಕೃತಿಗಳು ಅವಜ್ಞೆಗೆ ಗುರಿಯಾದುದೂ ಅನಿವಾರ್ಯ. ಆದರೆ, ಬಸವಪುರಾಣದಂಥ ಒಂದು

ಅತ್ಯಂತ ಮಹತ್ವದ ಕೃತಿ, ಶೂನ್ಯ-ಸಂಪಾದನೆಯಂಥ ಸಮಾಜೋ-ಧಾರ್ಮಿಕ-ದಾರ್ಶನಿಕ ಕೃತಿಗಳೂ ಮತೀಯ ಸಾಹಿತ್ಯವೆಂಬ ಹಣೆಪಟ್ಟ ಕಟ್ಟಿಕೊಳ್ಳುವಂತಾಯಿತು. ಕ್ರಿ.ಶ. ೧೮೮೭ರಲ್ಲಿ ಪ್ರಕಟವಾದ ಶ್ರೀರಂಗಪಟ್ಟಣದ ಕೃಷ್ಣಮಾಚಾರ್ಯರು ಬರೆದ 'ಹೊಸಗನ್ನಡ ನುಡಿಗನ್ನಡಿ' ಎಂಬ ವ್ಯಾಕರಣ ಗ್ರಂಥದ ಮುನ್ನುಡಿಯಲ್ಲಿ, ಕನ್ನಡ ಭಾಷೆಗೆ ಮನ್ನಣೆ ನೀಡುವ, ಮಾಧ್ವ, ವೀರಶೈವ ಹಾಗೂ ಜೈನರ ಭಾವನೆಗಳನ್ನು ದಾಖಲಿಸುತ್ತಾ '....ಲಿಂಗಧಾರಿಗಳಾದ ಕರ್ಣಾಟಕ ದೇಶದ ಶೂದ್ರರು ಬಸವಪುರಾಣ ಮೊದಲಾದ್ದನ್ನು ಕನ್ನಡದಲ್ಲಿಟ್ಟುಕ್ಕೊಂಡು ಈ ಭಾಷೆಯಲ್ಲಿ ಬಹಳ ಗಣ್ಯ ಮಾಡುತ್ತಾರೆ' ಎಂದರೆ, ತೀ.ನಂ.ಶ್ರೀಕಂಠಯ್ಯನವರು 'ಶೂನ್ಯ ಸಂಪಾದನೆ ಒಂದು ಮತೀಯ ಕೃತಿ' ಗ್ರಂಥ ಎಂದಿರುವರು. ಆದರೆ ಎಂ.ಆರ್.ಶ್ರೀನಿವಾಸಮೂರ್ತಿಗಳ ವಚನ ಧರ್ಮಸಾರಕ್ಕೆ 'ಮುನ್ನುಡಿ' ಬರೆದ ಶ್ರೀ ಬಿ.ಎಂ.ಶ್ರೀಕಂಠಯ್ಯನವರು, 'ಮತ'ಕ್ಕಿಂತಲೂ 'ಧರ್ಮ' ದೊಡ್ಡ ಮಾತು. ಮತ ಕಾದಿ ಮಡಿದರೆ ಧರ್ಮ ಕೂಡಿಸಿ ಬದುಕಿಸುತ್ತದೆ... ಸತ್ಯ, ಸೌಂದರ್ಯ, ಸ್ವಾತಂತ್ರ್ಯ, ಸಹಾನುಭೂತಿ, ಸರ್ವಸಮತೆ - ಇವೆಲ್ಲಾ ಸದ್ಧರ್ಮದ ಲಕ್ಷಣಗಳು.... ವಚನ ಧರ್ಮಸಾರ ಯಾರಿಗೂ, ಸತ್ಯವೇ, ಯಾರಿಗೂ ಧರ್ಮವೇ.... ಈ ಮಹಾವಾಕ್ಯಗಳಿಗಿಂತ ಹೆಚ್ಚಿನ ಧರ್ಮ, ಸತ್ಯ ಎಲ್ಲಿ ಕಾಣಬಹುದು ಎಂಬ ಪ್ರಶ್ನೆಯಲ್ಲಿಯೇ, ಕನ್ನಡದ ಮಟ್ಟಿಗೆ ಇನ್ನೆಲ್ಲಿಯೂ ಇಲ್ಲ. ವಚನ ಸಾಹಿತ್ಯದಲ್ಲಿ ಮಾತ್ರ ಎಂಬ ಉತ್ತರವನ್ನೇ ನೀಡಿ, ತಮ್ಮ ಧೀಮಂತಿಕೆಯನ್ನು ಮೆರೆದಂತೆ, ವಚನ ಸಾಹಿತ್ಯದ ವಿಶ್ವಮಾನ್ಯ ಮೌಲ್ಯವನ್ನು ಪ್ರಪ್ರಥಮವಾಗಿ ಎತ್ತಿತೋರಿದರು. ಇದರಿಂದಾಗಿ ಅ.ನ.ಕೃಷ್ಣರಾಯರು, ತ.ಸು. ಶಾಮರಾಯರು, ಜೆ.ಪಿ. ರಾಜರತ್ನಂ, ಡಿ.ಎಲ್.ನರಸಿಂಹಾಚಾರ್ಯರಂಥ ಗಣ್ಯಮಾನ್ಯ ಸಾಹಿತಿಗಳು ವಚನ ಸಾಹಿತ್ಯದ ಕೃಷಿಯಲ್ಲಿ ತೊಡಗಿದರು. ಹರಿಹರನ ರಗಳೆಗಳು, ಹರಿಶ್ಚಂದ್ರ ಕಾವ್ಯ ಮತ್ತು ಸಿದ್ಧರಾಮ ಚರಿತದಂಥ ಸಾಹಿತ್ಯಿಕ ಮೌಲ್ಯದ ಕೃತಿಗಳು, ಜಾತಿಗಳಿಗತೀತವಾದ ಪ್ರೀತಿಯ ಕೃತಿಗಳಾದುವು. ಶೂನ್ಯ ಸಂಪಾದನೆ ಸರ್ವಮಾನ್ಯವಾದ ನೂತನ ದರ್ಶನ ಗ್ರಂಥವಾಗಿ ಮನ್ನಣೆ ಪಡೆಯಿತು. ಇದಕ್ಕೆ ಶ್ರೀ ಪಿ.ಜಿ. ಹಳಕಟ್ಟಿ, ಶ್ರೀ ಹರ್ಡೇಕರ ಮಂಜಪ್ಪ, ಶ್ರೀ ಶಿ.ಶಿ. ಬಸವನಾಳ, ಶ್ರೀ ಎಚ್.ದೇವೀರಪ್ಪ, ಡಾ.ಆರ್.ಸಿ.ಹಿರೇಮಠ, ಪ್ರೊ.ಸ.ಸ. ಮಾಳವಾಡ ಮುಂತಾದ ಸಂಸ್ಕೃತಿ ಸಾಹಿತ್ಯ ಪ್ರಿಯ ವ್ಯಕ್ತಿಗಳು ಶರಣ ಸಾಹಿತ್ಯಕ್ಕೆ ಸಲ್ಲಿಸಿದ ಸೇವೆಯೂ ಮುಖ್ಯ ಕಾರಣ ಎಂಬುದನ್ನು ಮರೆಯಬಾರದು. ಆದರೂ, ಡಿ.ವಿ.ಜಿ. ಪಂಜೆ ಮಂಗೇಶರಾವ್, ಶಿವರಾಮ ಕಾರಂತ, ಆದ್ಯರಂಗಾಚಾರ್, ವಿ.ಸೀತಾರಾಮಯ್ಯ ಮುಂತಾದ ಮನ್ನಣೆಯ ಸಾಹಿತಿಗಳು ಶಿವಶರಣ ವಚನ - ಕಾವ್ಯ ಸಾಹಿತ್ಯದ ಬಗೆಗೆ ವಿಶೇಷ ಗಮನವಿರಿಸಲಿಲ್ಲವೆಂಬುದು - ಕಾರಣಗಳೇನೇ ಇದ್ದರೂ ವಿಚಿತ್ರ ಸಂಗತಿ.

ಆದರೂ, ನವೋದಯ ಸಾಹಿತ್ಯಯುಗದ ದಿಗ್ಗಜಗಳಾದ, ಎಂ.ಆರ್.ಶ್ರೀನಿವಾಸಮೂರ್ತಿ, ಶ್ರೀ ಡಿ.ಎಲ್. ನರಸಿಂಹಾಚಾರ್, ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ಕೆ.ಜಿ. ಕುಂದಣಗಾರ, ಶ್ರೀ ಉತ್ತಂಗಿ ಚೆನ್ನಪ್ಪ, ಜೆ.ಪಿ. ರಾಜರತ್ನಂ, ಪರಮೇಶ್ವರ ಭಟ್ಟ, ಕೆ. ವೆಂಕಟರಾಮಪ್ಪ, ಹಳಪೇಟೆ ಚಿಂತಾಮಣಿ ಮುಂತಾದವರು ಶಿವಶರಣರ ವಚನ - ಕಾವ್ಯ ಸಾಹಿತ್ಯಕ್ಕೆ ವಿಶೇಷ ಕಾಣಿಕೆ ಸಲ್ಲಿಸಿರುವರು. ನಿರ್ಮಮಭಾವದಿಂದ, ಸತ್ಯ-ಪ್ರೀತಿ, ಸೌಂದರ್ಯವೇ ಗುರಿಯಾದ ನಿಷ್ಠೆಯಿಂದ, ವೀರಶೈವ ಸಾಹಿತ್ಯದ ಹಿರಿಮೆ - ಗರಿಮೆಗಳನ್ನು ಪ್ರಕಾಶಿಸಿರುವರು. ಪ್ರಭುಲಿಂಗಲೀಲೆ ಸಂಗ್ರಹವನ್ನು ಸಿದ್ಧಪಡಿಸಿ, ಭಕ್ತಿಭಂಡಾರಿ ಬಸವಣ್ಣ ಎಂಬ ವಿನೂತನ ಜೀವನ ಚರಿತ್ರೆಯನ್ನು ನೀಡಿ, 'ವಚನ ಧರ್ಮಸಾರ' ಎಂಬ ಸಮಗ್ರ ವಚನ ಸಾಹಿತ್ಯದ ವಚನಕಾರರ ಜೀವನ-ದರ್ಶನ-ದೀಧಿತಿಗಳನ್ನು ಎಳೆಎಳೆಯಾಗಿ ಬಿಡಿಸಿ, ವಿಶೇಷ ಸಾಧನೆ ಮಾಡಿದ, ಶ್ರೀ ಎಂ.ಆರ್. ಶ್ರೀನಿವಾಸಮೂರ್ತಿ ಅವರು 'ವಚನ'ಗಳು ನಮ್ಮ ಕನ್ನಡ ಸಾಹಿತ್ಯದ ಉಪನಿಷತ್ತುಗಳು. ಆ ಕವಿಗಳು ನಮ್ಮ ಕನ್ನಡ ನಾಡಿನ ರಸಋಷಿಗಳು. ಆ ರಸಋಷಿಗಳ ಉಪದೇಶಸಾರ 'ಸಾಹಿತ್ಯವೇ ದರ್ಶನ, ದರ್ಶನವೇ ಸಾಹಿತ್ಯ, ಸತ್ಯವೇ ಸೌಂದರ್ಯ, ಸೌಂದರ್ಯವೇ ಸತ್ಯ' ಎಂಬ ಹೃದಯ ತುಂಬಿದ ನುಡಿಗಳಿಂದ ತಮ್ಮ 'ವಚನ ಧರ್ಮಸಾರ'ವನ್ನು ಮುಗಿಸಿರುವರು. ಅಲ್ಲದೆ, 'ವಚನಕಾರರು, ಸಂಸ್ಕೃತದ ಆಚಾರ್ಯರಲ್ಲ, ಅಚ್ಚ ಕನ್ನಡದ ಬೇಸಾಯಗಾರರು' ಎಂದೂ, ಭಕ್ತಿ, ಜ್ಞಾನ, ವೈರಾಗ್ಯ, ಕರ್ಮಯೋಗ, ಶರಣಸತಿ - ಲಿಂಗಪತಿ ತತ್ವಗಳ ಅನುಷ್ಠಾನ ಮೂರ್ತಿಗಳಾದ ಕ್ರಮವಾಗಿ, ಬಸವಣ್ಣ, ಚೆನ್ನಬಸವಣ್ಣ, ಪ್ರಭುದೇವರು, ಸಿದ್ಧರಾಮ ಮತ್ತು

ಮಹದೇವಿಯಕ್ಕಗಳ ಸಂಕ್ಷಿಪ್ತ ಜೀವನ ಚಿತ್ರವನ್ನು ಅತ್ಯಂತ ಮನೋಜ್ಞವಾಗಿ, ಅವರವರ ಸ್ವಯ ವಚನಗಳ ಜತನವಾದ ಅಧ್ಯಯನದಲ್ಲಿ ರೂಪಿಸಿರುವುದು ಆದರ್ಶದ ವಿಷಯ. ಅಲ್ಲದೆ ಅಷ್ಟಾವರಣ, ಷಟ್‌ಸ್ಥಲ, ಪಂಚಾಚಾರ ಮತ್ತು ವಚನಕಾರರ ಸಮಾಜರಚನೆ, ಸ್ತ್ರೀಸ್ವಾತಂತ್ರ್ಯ, ವಿಚಾರವಾದ ಹಾಗೂ ನೀತಿಯನ್ನು ಅತ್ಯಂತ ಸರಳವಾಗಿ ನಿರೂಪಿಸಿರುವರು. ಅತ್ಯಂತ ವಿನಯಶೀಲರೂ, ಪ್ರಭಾವೀ ಪ್ರವಚನಕಾರರೂ, ಸತ್ಯ-ಶುದ್ಧ ಶಿಕ್ಷಕರೂ ಆಗಿದ್ದ ಶ್ರೀ ಎಂ.ಆರ್.ಶ್ರೀನಿವಾಸಮೂರ್ತಿಗಳು ವೀರಶೈವ ವಚನ - ಸಾಹಿತ್ಯಕ್ಕೆ ನೀಡಿದ ಕೊಡುಗೆ ಅತ್ಯಂತ ಗಮನಾರ್ಹವಾದುದು.

ಶ್ರೀ ಪಿ.ಜಿ. ಹಳಕಟ್ಟಿಯವರು ಹಲವು ಸಂಪುಟಗಳಲ್ಲಿ 'ವಚನ ಶಾಸ್ತ್ರಸಾರ'ವನ್ನು ಪ್ರಕಟಿಸಿ, ವಚನ ಅಧ್ಯಯನಕ್ಕೆ 'ಮೂಲಧನ'ವನ್ನು ನೀಡಿದಂತೆ, ಸ್ವಾತಂತ್ರ್ಯ ಹೋರಾಟಗಾರರೂ, ಗಾಂಧೀ ಭಕ್ತರೂ, ಆಗಿದ್ದ ಶ್ರೀ ರಂ.ರಾ.ದಿವಾಕರ ಅವರು ವೇದ - ಆಗಮ - ಉಪನಿಷತ್ತು ಹಾಗೂ ಭಗವದ್ಗೀತೆಯ ತತ್ತ್ವ - ಸಿದ್ಧಾಂತಗಳಿಗೆ, ಸಮಾನವಾದ, ಪ್ರಗತಿಪರ ಹಾಗೂ ಗತಶೀಲವಾದ ವಿಚಾರವಾಹಿನಿ ಈ ವಚನ ವಾಙ್ಮಯ ಎಂಬುದನ್ನು ಸವಿಸ್ತಾರವಾಗಿ, ಸಾಧಾರವಾಗಿ 'ಪ್ರ-ಸ್ಥಾಪಿಸಿರುವ' 'ವಚನಶಾಸ್ತ್ರ ರಹಸ್ಯ'ವೆಂಬ ಹೆಬ್ಬೊತ್ತಿಗೆಯನ್ನು ನೀಡಿ, ವಚನ ಸಾಹಿತ್ಯ ಕುರಿತ ಚಿಂತನೆಯನ್ನು ದಿಗಂತ ವ್ಯಾಪ್ತಗೊಳಿಸಿದರು. ಅಲ್ಲದೆ, ಆತ್ಮಾನುಭವ, ಹೃದಯ ನಿವೇದನೆ, ಅಂತರಂಗ - ಬಹಿರಂಗಾನುಭವಗಳನ್ನು - ವಚನಕಾರರು, ವಚನ ರೂಪದಲ್ಲಿ ಬಿಂಬಿಸಿದಂತೆ, ಶ್ರೀ ರಂ.ರಾ.ದಿವಾಕರರು 'ಅಂತರಾತ್ಮನಿಗೆ' ಎಂಬ ಪ್ರಥಮ ಆಧುನಿಕ ವಚನ ಸಂಗ್ರಹವನ್ನು ನೀಡಿ, ಮುಂದೆ ಹತ್ತಿಪ್ಪತ್ತು ಜನ ಆಧುನಿಕ ಸಾಮಾಜಿಕ ವಚನಕಾರರ ನಿರ್ಮಾಣಕ್ಕೆ ಪ್ರೇರಣೆ ನೀಡಿದರು. ಜೊತೆಗೆ, ವಚನಕಾರರ ಅನುಭಾವ ಮಾರ್ಗವನ್ನು, ಅರವಿಂದ, ಗಾಂಧಿ ಹಾಗೂ ಪಾಶ್ಚಾತ್ಯ ಅನುಭಾವಿಗಳೊಡನೆ ತೌಲನಿಕವಾಗಿ ವಿವೇಚಿಸಿ, ಶ್ರೀ ಮೃತ್ಯುಂಜಯ ವ್ಯಾಖ್ಯಾನ ಮಾಲೆಯ ಪ್ರಥಮ ಉಪನ್ಯಾಸವನ್ನು ನೀಡಿ, ಅನುಭಾವಿಗಳ, ವಿಚಾರವಾದಿಗಳ ಕಣ್ಣು ತೆರೆಯಿಸುವ ಕಾರ್ಯ ಮಾಡಿದರು. ಶ್ರೀ ಹಳಕಟ್ಟಿಯವರ ವಚನಶಾಸ್ತ್ರಸಾರಕ್ಕೆ, ಪೂರಕವಾದ 'ವಚನ ಶಾಸ್ತ್ರ ರಹಸ್ಯ'ವನ್ನು ನೀಡಿ, ವಚನಗಳ ಅಧ್ಯಯನಕ್ಕೆ ದಿಕ್ಕು - ದೆಸೆ ತೋರಿದರು. ಕನ್ನಡ ಸಂತರ ಅನುಭಾವ ಪಥವನ್ನು ದಿಗ್ದರ್ಶಿಸಿದ ಶ್ರೀ ರಾನಡೆ, ಶರಣರ ಅನುಭಾವ ಸಾಹಿತ್ಯಕ್ಕೆ ವಿಶ್ವ ಮನ್ನಣೆ ತಂದರು. ಮುಂದೆ. ಡಾ.ಜಚನಿ. ಪ್ರೊ. ಭೂಸನೂರು ಮಠ, ಶ್ರೀ ಜೋಳದರಾಶಿ ದೊಡ್ಡನಗೌಡರು. ಡಾ. ತಿಪ್ಪೇರುದ್ರಸ್ವಾಮಿ, ಶ್ರೀ ನಂಜುಂಡಾರಾಧ್ಯ, ಡಾ.ಆರ್.ಸಿ. ಹಿರೇಮಠ, ಶ್ರೀ ಟಿ.ಜಿ. ಸಿದ್ದಪ್ಪಾರಾಧ್ಯ, ಡಾ. ವಿದ್ಯಾಶಂಕರ, ಡಾ.ಎಸ್.ಎಸ್.ಮರುಳಯ್ಯ, ಶ್ರೀ ಷಣ್ಮುಖಯ್ಯ ಅಕ್ಕೂರಮಠ ಮುಂತಾದ ವೀರಶೈವ ತತ್ವಚಿಂತಕರು ಈ ಕಾರ್ಯವನ್ನು ಮುಂದುವರಿಸಿದರು. ಡಾ. ಸಿದ್ದಯ್ಯ ಪುರಾಣಿಕರು, 'ಬಸವಣ್ಣನವರ ಜೀವನ ಹಾಗೂ ಸಂದೇಶ', 'ಮಾದೇವಿ', ಅಲ್ಲಮಪ್ರಭು, ಸಿದ್ಧರಾಮ ಮುಂತಾದ 'ಜೀವನ ಚರಿತ್ರೆಗಳ ಜೊತೆಗೆ, ಸರ್ವಶರಣರ ಜೀವನ ವೃತ್ತಾಂತವನ್ನು ಸಂಗ್ರಹವಾಗಿ ನಿರೂಪಿಸುವ, ಬಹು ಜನಪ್ರಿಯ ಕೃತಿ 'ಶರಣ ಚರಿತಾಮೃತ'ದಂಥ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ನೀಡಿ ಕೃತಾರ್ಥರಾದರು. ಇಲ್ಲಿನವರೆಗೆ ಪ್ರಕಟವಾದ 'ಬಸವಣ್ಣನವರ ಜೀವನ ಚರಿತ್ರೆಗಳಲ್ಲೇ ಶಿಖರ ಪ್ರಾಯವಾದ. ಸರ್ವಂಕಷವೈಚಾರಿಕ ವಿವೇಚನೆಯ ಆದರ್ಶ ಕೃತಿ 'ಬಸವಣ್ಣನವರ ಜೀವನ ಹಾಗೂ ಸಂದೇಶ' - ಇದನ್ನು ಎಲ್ಲ ಭಾರತೀಯ ಹಾಗೂ ವಿದೇಶ ಭಾಷೆಗಳಲ್ಲಿ ಅನುವಾದಿಸುವುದಕ್ಕೆ ಹೇಳಿ ಮಾಡಿಸಿದಂಥ 'ಅಧಿಕೃತ ಗ್ರಂಥ' ಎಂಬುದನ್ನು ಹೇಳಲು ಯಾವ ಸಂಕೋಚವೂ ಬೇಡ. ಸಮಗ್ರ ವಚನ ಸಾಹಿತ್ಯ ಸಂಶೋಧನೆ - ಪ್ರಕಟಣೆ ಕೈಕೊಂಡ ಡಾ.ಆರ್.ಸಿ. ಹಿರೇಮಠ, ಡಾ.ಎಂ.ಎಸ್. ಸುಂಕಾಪುರ ಅವರ ಗೆಯ್ಮೆ ಬೃಹತ್ ಪ್ರಮಾಣದ್ದು.

ಶರಣರ ವಚನ ಸಾಹಿತ್ಯ ಹಾಗೂ ವೀರಶೈವ ಕಾವ್ಯದ ಅಧ್ಯಯನಕ್ಕೆ ತಮ್ಮನ್ನು ವಿಶೇಷವಾಗಿ ಅರ್ಪಿಸಿಕೊಂಡ, ಕನ್ನಡ ವಿದ್ವತ್ ಪ್ರಪಂಚದ ದಿಗ್ದಂತಿ ಪ್ರೊ. ಡಿ.ಎಲ್.ನರಸಿಂಹಾಚಾರ್ಯರು. ಸರ್ವಂಕಷ ಪಾಂಡಿತ್ಯದ, ಶಬ್ದದ ಅಪಾರವಾರಿಧಿಯ ಅಧಿಕೃತ ಪಂಡಿತರಾದ ಶ್ರೀ ದೊ.ಲ.ನ. ವೀರಶೈವ ಸಾಹಿತ್ಯದತ್ತ ಗಮನಹರಿಸಿದುದು ಈ ಸಾಹಿತ್ಯಾಧ್ಯಯನಕ್ಕೆ ಒಂದು ಗೌರವ ತಂದಿತು. ವ್ಯಾಪಕ ಸಂಶೋಧನೆಯ ಮೂಲಕ, ವಚನ ಹಾಗೂ ವಚನಕಾರರ ನೆಲೆ - ಬೆಲೆಗಳನ್ನು ನಿರ್ಧರಿಸಿ, ವೀರಶೈವ

ಪುರಾಣ ಸಾಹಿತ್ಯದ 'ಮೌಲ್ಯಮಾಪನ' ರೀತಿಯ ಹೊಸ ಹಾದಿಯನ್ನೇ ರೂಪಿಸಿದ ಶ್ರೀ ಡಿ.ಎಲ್.ಎನ್.ರ ಪರಿಣತ ಲೇಖನಿಯಿಂದ ಮೂಡಿದ 'ಸಿದ್ಧರಾಮ ಚಾರಿತ್ರ ಸಂಗ್ರಹ' 'ಹಂಪೆಯ ಹರಿಹರ' 'ವಿಜಯನಗರ ಕಾಲದ ವೀರಶೈವ ಸಾಹಿತ್ಯ' 'ಕೆಲವು ವಚನಕಾರರು' 'ದೇವಾಂಗ ದಾಸಿಮಯ್ಯನ ಪುರಾಣ' (ವಿಮರ್ಶೆ) ಪ್ರಭುದೇವರ ಪುರಾಣ (ವಿಮರ್ಶೆ) ಮುಂತಾದ ಗ್ರಂಥ - ಲೇಖನಗಳ ಮೂಲಕ ವೀರಶೈವ ಸಾಹಿತ್ಯ ಮತ್ತು ವಚನ ಸಾಹಿತ್ಯದ ಅಧ್ಯಯನಕ್ಕೆ ವಿಶೇಷ ಕಳೆ ಬಂದಿತು. 'ಸಿದ್ಧರಾಮ ವೀರಶೈವನಲ್ಲ, ಶೈವ' ಎಂಬ ಬಿರುಗಾಳಿ ಎಬ್ಬಿಸಿದ ವಿಚಾರವನ್ನು ಶ್ರೀ ಉತ್ತಂಗಿ ಚನ್ನಪ್ಪ ಮುಂತಾದವರ ವಾದಗಳಿಂದ ಪ್ರಭಾವಿತರಾಗಿ, ಶ್ರೀ ಸುಜನಾ ಎತ್ತಿ ತೋರಿದ 'ವಚನ'ವೊಂದರ ಆಧಾರ ಒಪ್ಪಿ, ತಮ್ಮ ನಿಲುವನ್ನು ಬದಲಾಯಿಸಿದುದು ಅವರ ಮುಕ್ತ ಸಂಶೋಧನಾ ದೃಷ್ಟಿಗೆ ಸಾಕ್ಷಿ. ಡಿ. ಎಂದರೆ, ದೊಡ್ಡ ಬೆಲೆ, ಅವರು ಹುಟ್ಟಿದ ಊರು. ಅಂತೆಯೇ, ಕನ್ನಡ ಸಾಹಿತ್ಯಕ್ಕೆ, ನಿಘಂಟುವಿಗೆ, ಸಂಶೋಧನೆಗೆ, ಅಧ್ಯಾಪನೆಗೆ 'ದೊಡ್ಡ ಬೆಲೆ' ತಂದುಕೊಟ್ಟಂತೆ, ವೀರಶೈವ ಕಾವ್ಯ - ವಚನ ಅಧ್ಯಯನ ಸಂಶೋಧನೆಗೂ ಅವರಿಂದ 'ದೊಡ್ಡ ಬೆಲೆ' ಒದಗಿಬಂದಿದೆ ಎಂಬುದು ಅಭಿಮಾನದ ಮಾತು. ಅವರ ಶಿಷ್ಯರಾದ ಡಾ.ಎಲ್.ಬಸವರಾಜು, ಶ್ರೀ ಎಚ್.ದೇವೀರಪ್ಪ, ಡಾ.ತಿಪ್ಪೇರುದ್ರಸ್ವಾಮಿ, ಡಾ.ವೃಷಭೇಂದ್ರಸ್ವಾಮಿ, ಡಾ.ಶಿವಾನಂದ ವಿರಕ್ತಮಠ, ಡಾ.ಎಂ.ಎಂ.ಕಲಬುರ್ಗಿ, ಡಾ. ವೀರಣ್ಣ ರಾಜೂರ ಮುಂತಾದವರು ಡಾ. ಚಿದಾನಂದಮೂರ್ತಿ, ಡಾ. ವೆಂಕಟಾಚಲಶಾಸ್ತ್ರೀ ಹಾಗೂ ಇತರರು ವ್ಯಾಪಕವಾದ ವಚನ - ವೀರಶೈವ ಕಾವ್ಯಾಧ್ಯಯನ ಮುಂದುವರಿಸಿದರು.

ಶ್ರೀ ಡಿ.ಎಲ್.ಎನ್. ಅವರ ಸಮಕಾಲೀನರಾದ ಶ್ರೀ ತೀ.ನಂ. ಶ್ರೀಕಂಠಯ್ಯ, ಶ್ರೀ ಕಪಟ್ರಾಳ ಕೃಷ್ಣರಾಯರು, ಡಾ.ಎಸ್.ಶ್ರೀಕಂಠಶಾಸ್ತ್ರಿಗಳು, ಶ್ರೀ ಗೋವಿಂದ ಪೈಗಳು, ಶ್ರೀ ಭೀಮಸೇನರಾಯರು ತಮ್ಮ ವೀರಶೈವ ವಚನ ಸಾಹಿತ್ಯದ ಸಂಶೋಧನೆ - ವಿಮರ್ಶೆಯ ಮೂಲಕ ಗಣನೀಯ ಕಾರ್ಯ ಮಾಡಿರುವರು. ಪ್ರೊ. ಕೆ.ಜಿ. ಕುಂದಣಗಾರರು 'ಹರಿಹರದೇವ' ಎಂಬ ಗೌರವ ಗ್ರಂಥ ಹಾಗೂ ವಿಪರೀತ ಚರ್ಚೆಗೆ ಗುರಿಯಾದ 'ಅಕ್ಕಮಹಾದೇವಿ' ಗ್ರಂಥಗಳ ಮೂಲಕ ಸಲ್ಲಿಸಿರುವ ಸೇವೆ ಗಣನೀಯವಾದುದು. ಅದೇ ರೀತಿ "Basaveswara and his times" ಎಂಬ ಶ್ರೇಷ್ಠ ಸಂಶೋಧನಾತ್ಮಕ ಕೃತಿ ಹಾಗೂ ಅನೇಕ ಲೇಖನಗಳ ಮೂಲಕ ವೀರಶೈವಾಧ್ಯಯನಕ್ಕೆ ಮಹತ್ವದ ಕಾಣಿಕೆ ಸಲ್ಲಿಸಿದ ಡಾ. ದೇಸಾಯಿ ಪಾಂಡುರಂಗರಾವ್ ಅವರ ಹೆಸರೂ ಸ್ಮರಣೀಯವಾದುದು. ಅಥಣಿಯ ಮನೋಹರರಾವ್ ದೇಶಪಾಂಡೆ ಅವರ 'ಪ್ರಭುವಿನ ಪ್ರಭೆ' ಸಂಶೋಧಕರಾದ ಶ್ರೀ ಕೆ.ವೆಂಕಟರಾಯಾಚ್ಯಾರ (ನಿಜಗುಣರ ಭಕ್ತಿಗೀತೆಗಳು), ಕುವೆಂಪು ಅವರ ಏಕಮಾತ್ರ ಲೇಖನ 'ವಚನಕಾರ ಬಸವೇಶ್ವರರು' - ಆತ ಜಗಜ್ಯೋತಿಯಾಗದಿದ್ದರೂ, ನಮ್ಮ ಮನೆಯ ನಂದಾದೀಪ ಆದರೆ ಸಾಕು ಎಂಬರ್ಥದ ಲೇಖನ ಮರೆಯಲಾಗದ ಕೊಡುಗೆ. ಶ್ರೀ ಪರಮೇಶ್ವರ ಭಟ್ಟರು ಹೃದಯ ತುಂಬಿ ಬರೆದ 'ಅಕ್ಕಮಹಾದೇವಿ' ಕಿರುಹೊತ್ತಿಗೆಯಾದರೂ ಅತ್ಯಂತ ಪರಿಣಾಮಕಾರಿ ಕೃತಿ. ಕಾದಂಬರಿ ಸಾಮ್ರಾಟರೆಂದೇ ಹೆಸರಾಗಿದ್ದ ಅ.ನ.ಕೃಷ್ಣರಾಯರು, ಸಾವಿರಾರು ಜನಮುಟ್ಟುವ ಭಾಷಣಗಳ ಮೂಲಕ, ಈ ಶತಮಾನದ ಐವತ್ತು ಮತ್ತು ಅರವತ್ತನೆಯ ದಶಕದಲ್ಲಿ ವೀರಶೈವ ಸಾಹಿತ್ಯ ಮತ್ತು ವಚನ ಸಾಹಿತ್ಯವನ್ನು ಅತ್ಯಂತ ಜನಪ್ರಿಯಗೊಳಿಸಿದರು; ಅವರ ಮುಕ್ತಮನದ ಸೇವೆ ಚರಿತ್ರಾರ್ಹವಾದುದು. 'ಚೆನ್ನಬಸವನಾಯಕ' - ಮಾಸ್ತಿ ವೆಂಕಟೇಶಅಯ್ಯಂಗಾರ, ರೇವಣಸಿದ್ಧ, ಅಲ್ಲಮಪ್ರಭು, ಬಸವೇಶ್ವರ ನಾಥ ಪಂಥೀಯರು ಎಂಬ ಶ್ರೀ ಕಪಟ್ರಾಳ್ ಕೃಷ್ಣರಾವ್ ಮುಂತಾದ ಸಮಸ್ಯಾತ್ಮಕ ಸಾಹಿತ್ಯ ಎದುರಿಸಿದ ಪ್ರತಿಭಟನೆಯನ್ನು ಬೆಂಬಲಿಸಿ, 'ಸಾಹಿತ್ಯವನ್ನು ಜಾತಿಮತಗಳ ಕೀಳು ಮಟ್ಟಕ್ಕಿಳಿಸುವ ಪ್ರಯತ್ನ ಖಂಡನೀಯವಾದುದು' ಎಂದು ತಮ್ಮ ಮಣಿಪಾಲದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದಲ್ಲಿ ಭಾವಾವೇಶಪೂರ್ವಕವಾಗಿ ಪ್ರಸ್ತಾಪಿಸಿರುವರು. (೧೯೬೦) ಹೀಗೆ, ಇನ್ನೂ ಅನೇಕ ವೀರಶೈವೇತರರು, ವೀರಶೈವ ಸಾಹಿತ್ಯದ ಸೇವೆ ಮಾಡಿರುವರು.

ಸಾಹಿತ್ಯ ಚರಿತ್ರೆಕಾರರ ಕೊಡುಗೆಗಳು

ಕನ್ನಡ ಸಾಹಿತ್ಯ ಚರಿತ್ರೆ ಬರೆದ ಇ.ಪಿ.ರೈಸ್, ಕಿಟೆಲ್, ಶ್ರೀ ಆರ್. ನರಸಿಂಹಾಚಾರ್ (ಕನ್ನಡ ಕವಿ ಚರಿತೆ ೧, ೨, ೩,) ಡಾ.ರಂ.ಶ್ರೀ. ಮುಗಳಿ, ಪ್ರೊ. ಮರಿಯಪ್ಪ ಭಟ್, ಶ್ರೀ ತ.ಸು. ಶಾಮರಾವ್ ಮುಂತಾದವರು ವೀರಶೈವ ವಚನ ಹಾಗೂ ಸಾಹಿತ್ಯ ಕೃತಿಗಳಿಗೇ ವಿಶೇಷ ಒತ್ತುಕೊಟ್ಟು, ಸಾದ್ಯಂತ ವಿವರಗಳನ್ನು ನೀಡಿ, ಚರ್ಚಿಸಿರುವರು. ವೀರಶೈವ ವಾಙ್ಮಯದ ಉಪಾಂಗಗಳಾದ ಮಂತ್ರಗೋಪ್ಯ, ಯೋಗಾಂಗ ತ್ರಿವಿಧಿ, ವಚನಗದ್ಯ, ಬೆಡಗಿನ ವಚನ, ಸ್ವರವಚನಗಳ ಮೌಲ್ಯಮಾಪನ ಸಕ್ರಮವಾಗಿ ನಡೆದುಬಂದಿಲ್ಲ. ಅವರ ದೃಷ್ಟಿ 'ಕವಿಚರಿತೆ', ಅಥವಾ 'ಶುದ್ಧ ಸಾಹಿತ್ಯ ಚರಿತ್ರೆ' ಮಾತ್ರವಾಗಿದ್ದಿತು. ಆದರೆ, ವೀರಶೈವ ಕಾವ್ಯಸಾಹಿತ್ಯ, ವಚನ ಸಾಹಿತ್ಯ, ಕೇವಲ್ಯ ಸಾಹಿತ್ಯ ಟೀಕಾ ಸಾಹಿತ್ಯ ಮುಂತಾದ ವಾಙ್ಮಯದ ಅಪಾರತೆ, ಜಟಿಲತೆಗಳತ್ತ, ಸಂಶೋಧಕರ ಗಮನ ಸೆಳೆಯುವಲ್ಲಿ ಸಾರ್ಥಕ ಕಾರ್ಯ ಮಾಡಿದರು. ಮೂಲವನ್ನು ಮರು ಪರಿಶೀಲನೆಗೆ ಒಳಗಾಗಿಸದೆ, ಪರಂಪರೆಯ ಹೇಳಿಕೆಗಳನ್ನು ಮುಂದುವರಿಸಿ, ಬಲಾಢ್ಯ ಕೃತಿಗಳಿಗೆ ಹೆಚ್ಚಿನ ಮಹತ್ವ ನೀಡಿ, ಕಿರುಕೃತಿಗಳ ಕಡೆಗೆ ಗಮನವಿರಿಸಲಾಗದ ಲೋಪ ಅಲ್ಲಿದೆ. ಹೀಗಾಗಿ ಈ ವ್ಯಕ್ತಿ ರಚಿತ ಸಾಹಿತ್ಯ ಚರಿತ್ರೆಗಳಿಂದ ಸಮಗ್ರ ವೀರಶೈವ ವಾಙ್ಮಯಕ್ಕೆ ನ್ಯಾಯ ಸಂದಿಲ್ಲ ಎಂಬ ಮಾತು ಸತ್ಯ. ಈ ಬಗೆಗೆ ಅನೇಕ ಲೇಖನಗಳೂ ಪ್ರಕಟವಾಗಿವೆ.

ಆದರೆ, ಬೆಂಗಳೂರು, ಮೈಸೂರು ವಿಶ್ವವಿದ್ಯಾಲಯಗಳ ಪರಿಣತರು ಸಂಪಾದಿಸಿರುವ ೧) ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆಯ ಸಂಪುಟಗಳು (ಸಂ.:ಡಾ.ರಂ.ಶ್ರೀ.ಮುಗಳಿ ಮತ್ತು ಡಾ.ಜಿ.ಎಸ್.ಶಿವರುದ್ರಪ್ಪ) ೨) ಕನ್ನಡ ಸಾಹಿತ್ಯ ಚರಿತ್ರೆ ಸಂಪುಟಗಳು. (ಸಂ. : ಡಾ.ಹಾ.ಮಾ. ನಾಯಕ ಮತ್ತು ಡಾ. ವೆಂಕಟಾಚಲಶಾಸ್ತ್ರಿ - ಮೈಸೂರು) ೩) ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ ಸಂಪುಟಗಳು. (ಪ್ರಧಾನ ಸಂಪಾದಕರು : ಡಾ. ಜಿ.ಎಸ್.ಶಿವರುದ್ರಪ್ಪ, ಬೆಂಗಳೂರು ವಿ.ವಿ.), ಏಕವ್ಯಕ್ತಿ ರಚಿತ ಸಾಹಿತ್ಯ ಚರಿತ್ರೆಗಳಲ್ಲಿ ಅನೇಕ ಪರಿಣತರ ಲೇಖನಗಳ ಸಂಗ್ರಹಗಳಾದ್ದರಿಂದ, ಇತರ ಸಾಹಿತ್ಯ ಕೃತಿಗಳಂತೆ, ವೀರಶೈವ ವಚನ ಹಾಗೂ ಕಾವ್ಯ ಸಾಹಿತ್ಯದ ಬಗೆಗೂ ಕೂಲಂಕಷವಾದ ಚರ್ಚೆ, ಈ ಸಂಪುಟಗಳಲ್ಲಿ ವಿಮರ್ಶೆ ಮೂಡಿಬಂದಿದೆ. ಡಾ.ಜಿ.ಎಸ್.ಶಿವರುದ್ರಪ್ಪನವರು ಪ್ರಸ್ತಾವನೆಯಲ್ಲಿ ಹೇಳಿರುವಂತೆ 'ಸಾಹಿತ್ಯವೆಂದರೆ ಕೇವಲ ಸೃಜನಾತ್ಮಕ ಕೃತಿಗಳು ಮಾತ್ರವಲ್ಲ, ಕರ್ನಾಟಕದ ಸಾವಿರ ವರ್ಷಗಳ ಸಮಷ್ಟಿ ಮನಸ್ಸು, ಯಾವ ಯಾವ ಅಭಿವ್ಯಕ್ತಿ ಪ್ರಕಾರಗಳಲ್ಲಿ ತನ್ನನ್ನು ತಾನು ಪ್ರಕಟಪಡಿಸಿಕೊಂಡಿದೆಯೋ ಆ ಸಮಸ್ತ ವಾಙ್ಮಯದ ಪರಿಶೀಲನೆಯೂ ಈ ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆಯ ತೆಕ್ಕೆಯೊಳಗೆ ಬರಬೇಕೆಂಬುದು ನಮ್ಮ ಆಶೆಯಾಗಿದೆ. ಸಾಹಿತ್ಯವನ್ನು ತನಗೆ ತಾನೇ ಒಂದು ಪ್ರತ್ಯೇಕ ಘಟಕವೆಂಬಂತೆ ಭಾವಿಸದೆ, ಅದು ಯಾವ ಸಾಮಾಜಿಕ ಪರಿಸ್ಥಿತಿಯ ಒತ್ತಡದಿಂದ ಸಂಭವಿಸಿತೋ, ಆ ಸಮಾಜದ ಸಮಸ್ತ ಆಯಾಮಗಳಿಂದ ಸಾಹಿತ್ಯವನ್ನು ಅಧ್ಯಯನ ಮಾಡಿದಾಗಲೇ ಅದು ನಿಜವಾದ ಸಮಗ್ರತೆ' ಎಂಬ ಎಚ್ಚರ - ಚಚ್ಚರಗಳಿಂದ ರೂಪಿತವಾದ, ಸಂಪಾದಿತವಾದ ಮೈಸೂರು - ಬೆಂಗಳೂರು ವಿಶ್ವವಿದ್ಯಾಲಯದ ಸಾಹಿತ್ಯ ಚರಿತ್ರೆಯ ಸಂಪುಟಗಳು ಸಾರ್ಥಕ ಪ್ರಯತ್ನಗಳಾಗಿವೆ. ಆದರೂ, ವೀರಶೈವ 'ವಾಙ್ಮಯ'ದ ಅನೇಕ ಕೃತಿಗಳು, ಸಾಹಿತ್ಯ ರೂಪಗಳು ಇವುಗಳ ತೆಕ್ಕೆಯಲ್ಲಿ ಸಿಗದಿರುವುದರಿಂದ, ವೀರಶೈವ ವಾಙ್ಮಯಕ್ಕೆ ಸಂಪೂರ್ಣ ನ್ಯಾಯ ದೊರಕಿಲ್ಲ. ಇಂಥ ಸಮಗ್ರತೆ ತರುವ ಪ್ರಯತ್ನವನ್ನು ಶ್ರೀ ಕನವಳ್ಳಿ ಮತ್ತು ಕೆರಿಮನಿ ಅವರು ಸಂಪಾದಿಸಿದ ವೀರಶೈವ ಸಾಹಿತ್ಯ ಚರಿತ್ರೆ ಮಾಡಿದೆ. ಆದರೂ, 'ವೀರಶೈವ ಸಮಗ್ರ ವಾಙ್ಮಯ ಇತಿಹಾಸ' ಪ್ರತ್ಯೇಕವಾಗಿ ಕನಿಷ್ಠ ಮೂರು - ನಾಲ್ಕು ಸಂಪುಟಗಳಲ್ಲಿ ಬರಬೇಕಾದ ಅವಶ್ಯಕತೆ ಇದೆ. ಅಂಥದ್ದನ್ನು ಕೈಕೊಳ್ಳುವ ಧೀರ ಸಂಶೋಧಕರು, ಪ್ರಕಟಿಸುವ ದೂರದರ್ಶಿತ್ವದ ಹೃದಯ ಸಂಪನ್ನ ಮಠಾಧೀಶ, ಸಂಸ್ಥಾನಾಧೀಶರು ಮುಂದೆ ಬರಬೇಕಾಗಿದೆ. ಹುಬ್ಬಳ್ಳಿಯ ಶ್ರೀ ಮೂರುಸಾವಿರಮಠ, ಗದುಗಿನ ಶ್ರೀ ತೋಂಟದಾರ್ಯ ಮಠದ ವೀರಶೈವ ಅಧ್ಯಯನ ಸಂಸ್ಥೆ, ಧಾರವಾಡದ ಶ್ರೀ ಮುರುಘಾಮಠ, ಚಿತ್ರದುರ್ಗದ ಬೃಹನ್ಮಠ, ಶ್ರೀ ಸಿರಿಗೆರೆ ಬೃಹನ್ಮಠ, ಸುತ್ತೂರು ಸಂಸ್ಥಾನಮಠ, ಹಂಪಿ ಹೇಮಕೂಟ ಸಂಸ್ಥಾನದ ಹರಿಹರ ಸ್ಮಾರಕ ಹಾಗೂ ಕರ್ನಾಟಕ, ಮೈಸೂರು, ಬೆಂಗಳೂರು ವಿಶ್ವವಿದ್ಯಾಲಯಗಳು ವೀರಶೈವ ಸಾಹಿತ್ಯಕ್ಕೆ

ಸಲ್ಲಿಸಿದ ಸೇವೆ ಅಪಾರ. ಈಚೆಗೆ ಕರ್ನಾಟಕ ಸಾಹಿತ್ಯ ಅಕಾಡಮಿ, ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆಯನ್ನು ಪುನರ್ ಮೌಲೀಕರಣ ಮಾಡಿಸಿ, ಪ್ರಕಟಿಸುವ ಕಾರ್ಯ ಕೈಗೆತ್ತಿಕೊಂಡಿದೆ. ಅಲ್ಲದೆ, ಬೆಂಗಳೂರಿನ ನವಕರ್ನಾಟಕ ಸಂಸ್ಥೆ, ಬಸವಸಮಿತಿ, ಮೈಸೂರಿನ ಡಿ.ವಿ.ಕೆ. ಮೂರ್ತಿ, ಗೀತಾ ಪ್ರಕಾಶನ, ಮುಂತಾದ ಸಂಸ್ಥೆಗಳ ಸೇವೆಯೂ ವೀರಶೈವರ ಕೃತಜ್ಞತೆಗೆ ಪಾತ್ರವಾಗಿವೆ.

ಭಾಷಾಂತರಕಾರರ ಕೊಡುಗೆ

ಸಮಗ್ರ ವಿಶ್ವವೇ ಒಂದು ಮನೆಯಾಗುತ್ತಿರುವ, ಪ್ರಪಂಚದ ಎಲ್ಲ ಭಾಷೆಗಳು ಎಲ್ಲರ ನಾಲಗೆಯಲ್ಲಿ ಮೂಡಬೇಕಾಗಿರುವ ಇಂದಿನ ಸಂಕೀರ್ಣ ಪರಿಸ್ಥಿತಿಯಲ್ಲಿ, ಸಾಹಿತ್ಯ ಕೃತಿಗಳ ಅನುವಾದ ಒಂದು ಮುಖ್ಯ ಕೆಲಸ. ಶಿವಶರಣರ ವಚನಗಳನ್ನು ಇಂಗ್ಲೀಷ್‌ಗೆ ಅನುವಾದಿಸುವ ಪ್ರಥಮ ಪ್ರಯತ್ನ ಶ್ರೀ ಪಿ.ಜಿ. ಹಳಕಟ್ಟಿ ಅವರದು. ನಂತರ ವೀರಶೈವರೂ, ವೀರಶೈವೇತರರೂ ಈ ಕಾರ್ಯವನ್ನು ಮುಂದುವರಿಸಿರುವರು. ಪ್ರೊ. ಮೆನೆಝಿಸರ ಸೇವೆಯನ್ನು ಆಗಲೇ ಸ್ಮರಿಸಿಯಾಗಿದೆ. ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರರು 'Sayings of Basava' ಶ್ರೀ ಎ.ಕೆ. ರಾಮಾನುಜಂ ಅವರು 'Speaking of Shiva' ಮತ್ತು ಬಳ್ಳಾರಿಯ ಶ್ರೀ ಪಿ. ಶಾಮರಾವ್ (೧೯೬೬) ಅವರು 'Veerashaiva Vachanas and Vachankaras' ಶ್ರೀನಿವಾಸ ಅಯ್ಯಂಗಾರ ಮತ್ತು ಪ್ರೊ. ಬಸವನಾಳರು ಜೊತೆಗೂಡಿ ಭಾಷಾಂತರಿಸಿದ 'Musings of Basava' ಮತ್ತು ಪ್ರೊ. ದೇವೇಂದ್ರಕುಮಾರ ಹಕಾರಿ ಮತ್ತು ಅವರ ಕ್ರಿಶ್ಚಿಯನ್ ಮಿತ್ರರು ಅನುವಾದಿಸಿದ ಬಸವಣ್ಣನವರ ವಚನಗಳ ಕೃತಿಯನ್ನೂ ಇಲ್ಲಿ ದಾಖಲಿಸಬಹುದಾಗಿದೆ. ವೀರಶೈವೇತರರು ನಿಷ್ಠೆಯಿಂದ ನೆರವೇರಿಸಿದ ಈ ಭಾಷಾಂತರಗಳಲ್ಲಿ ಅರ್ಥದ ಅಸ್ಪಷ್ಟತೆ, ಅನುವಾದದ ದುರೂಹ್ಯತೆಯ ದೋಷಗಳು ಅನಿವಾರ್ಯ. ಆದರೆ, ವೀರಶೈವರಾಗಿರುವ ಶ್ರೀ ಸಂಗನಾಳಮಠ (ಬಿಜಾಪುರ), ಶ್ರೀ ಎಸ್.ಎಸ್.ಒಡೆಯರ, ಶ್ರೀ ಬಿ.ಜೂಗಪ್ಪ , ಶ್ರೀ ಟಿ.ಎಚ್.ಎಂ. ಸದಾಶಿವಯ್ಯ, ಶ್ರೀ ವ್ಹಿ.ವ್ಹಿ. ಕಳಕಪ್ಪನವರ್, ಪ್ರಿ.ಸಜ್ಜನ, ಡಾ. ಎರವಿನ ತೆಲಿಮಠ, ಶ್ರೀ ಪ್ರಭುಶಂಕರ ಮುಂತಾದವರ ಅನುವಾದಗಳಲ್ಲಿ ಸ್ಪಷ್ಟತೆ ನೇರ ಗಮ್ಯತೆಗಳಿದ್ದರೂ, ಮೂಲ ಇಂಗ್ಲೀಷ್‌ನ ನುಡಿಗಟ್ಟಿನಲ್ಲಿ ಎರಕ ಹೊಯ್ಯುವಲ್ಲಿ ಕೊಂಚ ಕೊರತೆ ಮೈದೋರಿರುವುದು ಅನಿವಾರ್ಯ. ಆದರೂ, ವೀರಶೈವ ಕಾವ್ಯ ಹಾಗೂ ವಚನ ಸಾಹಿತ್ಯವನ್ನು ಇತರ ಭಾಷೆಗಳಿಗೆ ಅನುವಾದಿಸಿ ಪ್ರಕಟಿಸುವ ಒಂದು ಸಮಗ್ರ ಯೋಜನೆ ಆಗಬೇಕಾಗಿದೆ. ಬಸವ ಸಮಿತಿ, ಶ್ರೀ ಮೂರುಸಾವಿರಮಠ, ಶ್ರೀ ಸಿರಿಗೆರೆ ಬೃಹನ್ಮಠ, ಇಂಗ್ಲೀಷ್ ಹಾಗೂ ಇತರ ಭಾರತೀಯ ಭಾಷೆಗಳಿಗೆ ಅನುವಾದಗೊಂಡ ವಚನ ಸಾಹಿತ್ಯ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ಪ್ರಕಟಿಸಿರುವುದು ಅಭಿಮಾನದ ಸಂಗತಿ. ಶ್ರೀ ಬಾಡಾಲು ರಾಮಯ್ಯ ಅವರು ವಚನಗಳನ್ನು ತೆಲುಗು ಭಾಷೆಗೆ ತರ್ಜುಮೆ ಮಾಡುವ ಮೂಲಕ ವಿಶೇಷ ಸೇವೆ ಸಲ್ಲಿಸಿರುವರು. ಶ್ರೀಮತಿ ಜಯದೇವಿತಾಯಿ ಲಿಗಾಡೆಯವರು ಮರಾಠಿಗೆ ಮಾಡಿದ ಅನುವಾದಗಳನ್ನೂ ಇಲ್ಲಿ ಸ್ಮರಿಸಬಹುದಾಗಿದೆ. ಶ್ರೀ ಸರ್ಪಭೂಷಣಮಠದ ಲಿಂ. ಶಿವಕುಮಾರ ಮಹಾಸ್ವಾಮಿಗಳು, ಪ್ರಭುದೇವರ ವಚನಗಳನ್ನು ಹಿಂದಿಗೆ ಅನುವಾದ ಮಾಡಿರುವರು. ಪ್ರೊ. ನಾಯ್ಕರ್ ಅವರು ಸರ್ವಜ್ಞನ ವಚನಗಳನ್ನು ಇಂಗ್ಲೀಷ್ ಭಾಷೆಗೆ ತರ್ಜುಮೆ ಮಾಡಿರುವರು. ಹೀಗೆ ಅವರು ವೀರಶೈವ ವಚನ ವಾಙ್ಮಯ ವೀರಶೈವೇತರರಿಂದಲ್ಲದೆ, ವೀರಶೈವರಿಂದಲೂ ಇತರ ಭಾಷೆಗೆ ಅನುವಾದಗೊಂಡಿರುವುದು ಅಭಿನಂದನೀಯ ಸಂಗತಿ. ಶಿವಶರಣರ ಹಾಗೂ ವೀರಶೈವ ಪುರಾಣ ಸಾಹಿತ್ಯ ಕೃತಿಗಳನ್ನು ವಿವಿಧ ಭಾಷೆಗಳಿಗೆ ಭಾಷಾಂತರಿಸುವ ಮುಖ್ಯ ಕಾರ್ಯಯೋಜಿತ ರೀತಿಯಲ್ಲಿ ಆಗಬೇಕಾಗಿದೆ.

ವೀರಶೈವ ತತ್ತ್ವ - ದರ್ಶನ ವಿವೇಚನೆ

ಪ್ರೊ. ಸಾಖರೆ, ಡಾ. ನಂದೀಮಠ, ಪ್ರೊ. ಭೂಸನೂರುಮಠ, ಡಾ. ಜಚನಿ, ಶ್ರೀ ಟಿ.ಎನ್. ಮಲ್ಲಪ್ಪ, ಪ್ರೊ. ನಂಜುಂಡಾರಾಧ್ಯ, ಶ್ರೀ ವೈ. ನಾಗೇಶ ಶಾಸ್ತ್ರಿಗಳು ಮುಂತಾದವರು ಬರೆದ ಕೃತಿಗಳ ಮೂಲಕ, ಶರಣರ ತತ್ತ್ವ ಜಗತ್ತಿನಲ್ಲಿ ಹರಡುವ ಅನೇಕ ಪ್ರಯತ್ನಗಳು ನಡೆದಿರುವುದು ಉಲ್ಲೇಖನಾರ್ಹ. ಅಮೇರಿಕೆಯ ಭಾಷಾ ವಿಜ್ಞಾನಿ ಶ್ರೀ ಮೆಕಾರ್ಮಿಕ್ ಅವರೂ, ಇಂಗ್ಲೆಂಡಿನ ಪಾದ್ರಿ ರಾಬರ್ಟ್‌ಸನ್ ಅವರೂ, ಅಮೇರಿಕೆಯ Michael R. Black [(1) Women of Shunya Sampadane - House Wives and Saints in Veerashaivism (2) Work as Workship in

Veerashaiva Tradition (3) Astavarana in Shunyasampadane - Pattern of Religious Association in Fifteenth Century] ಬೆಂಗಳೂರಿನ ಶ್ರೀ ಸಿ.ಎಚ್. ಪ್ರಹ್ಲಾದರಾವ್ - ಇಂಗ್ಲೀಷಿನಲ್ಲಿ ಪ್ರೊ. ಭೂಸನೂರುಮಠ ಅವರ ಪರಾಮರ್ಶೆಯ ಸಂಗ್ರಹಾನುವಾದವನ್ನೂ , ಶ್ರೀ ಹರ್ಡೇಕರ ಮಂಜಪ್ಪನವರನ್ನು ಕುರಿತ ಬೃಹದ್ ಗ್ರಂಥದಲ್ಲಿ ಶ್ರೀ ಜಿ.ಎಸ್. ಹಾಲಪ್ಪನವರೊಡನೆ, ಅನುವಾದ ಕಾರ್ಯ ಮಾಡಿದ ಪ್ರೊ. ರಾಘವೇಂದ್ರರಾವ್ ಅವರ ಸೇವೆಯನ್ನೂ ಈ ಸಂದರ್ಭದಲ್ಲಿ ಸ್ಮರಿಸಬೇಕಾಗಿದೆ.

ಆಧುನಿಕ ಸಾಹಿತ್ಯದ ಕವಿ - ವಿಮರ್ಶಕರನೇಕರು, ಬಸವಾದಿಗಳ ಜೀವನ - ಸಾಧನೆ - ಸಿದ್ಧಿಗಳ ಬಗೆಗೆ ಕವಿತೆಗಳನ್ನು ಬರೆದಿದ್ದಾರೆ. ನಾಟಕಗಳನ್ನು ರಚಿಸಿದ್ದಾರೆ. ವಿಮರ್ಶಾತ್ಮಕ ಲೇಖನಗಳನ್ನು ಬರೆದಿದ್ದಾರೆ. ಅವರಲ್ಲಿ ಕೆಲವರನ್ನು ಮಾತ್ರ ಸ್ಮರಿಸುವುದಾದರೆ, ವೀರಶೈವೇತರರಾದ ಡಾ. ವೆಂಕಟಾಚಲಶಾಸ್ತ್ರಿ, ಪ್ರೊ. ಸುಜನಾ, (ಬಸವಣ್ಣನವರ ವಚನಗಳಲ್ಲಿ ಪ್ರಾಣಿರೂಪಕಗಳು - ಇತ್ಯಾದಿ) ಶ್ರೀ ಕೆ.ಶಿವರಾಮ ಐತಾಳ (ದೇವರ ದಾಸಿಮಯ್ಯನ (ವಚನ) ಷಟ್ಪದಿಗಳು - ಪ್ರಭು ವಚನ ಷಟ್ಪದಿಗಳು - ಇತ್ಯಾದಿ) ದೇ. ಜವರೇಗೌಡರು, ಡಾ. ಸಿ.ಪಿ.ಕೆ., ಡಾ.ಜಿ.ಎಚ್.ನಾಯಕ, ಡಾ.ಪಿ.ವಿ. ನಾರಾಯಣ (ವಚನ ಚಳವಳಿ ತೆಲುಗು ಬಸವಪುರಾಣದ ಕನ್ನಡಾನುವಾದ ಇತ್ಯಾದಿ) ಡಾ.ಟಿ.ಜಿ. ಕಲಘಟಗಿ (ಜೈನಧರ್ಮ - ವೀರಶೈವ ಧರ್ಮ) ಪ್ರೊ. ಕೆ.ಜಿ. ನಾಗರಾಜಪ್ಪ (ಮರುಚಿಂತನೆ ಇತ್ಯಾದಿ) ಮುಂತಾದ ವೀರಶೈವೇತರರ ಕೊಡುಗೆಯನ್ನು ಇಲ್ಲಿ ದಾಖಲಿಸಬಹುದಾಗಿದೆ. ಇದೂ ಒಂದು ವ್ಯಾಪಕ ಸಂಶೋಧನೆಯ ವಿಷಯ.

ಬಸವ, ಪ್ರಭುದೇವ, ಅಕ್ಕಮಹಾದೇವಿಯರನ್ನು ಕುರಿತ ಆಧುನಿಕ ನಾಟಕಗಳು, ವೀರಶೈವೇತರರಿಂದ ರಚನೆಗೊಂಡು ಪ್ರಸಿದ್ಧವಾಗಿವೆ. ಶ್ರೀ ಗಿರೀಶ ಕಾರ್ನಾಡರ 'ತಲೆದಂಡ', ಮುಂಬಯಿಯ ಬಿ.ಎ. ಸನದಿಯವರ ಅಕ್ಕನನ್ನು ಕುರಿತ ನಾಟಕಗಳನ್ನು ಇಲ್ಲಿ ಸ್ಮರಿಸಬಹುದು. ಅ.ನ.ಕೃ. ಅವರ ಕಿತ್ತೂರ ಚೆನ್ನಮ್ಮನನ್ನು ಕುರಿತ ಕಾದಂಬರಿ, 'ಕೆಳದಿ ಚೆನ್ನಮ್ಮಾಜಿ' ಭಾಗ ೧, ೨, ಕಾದಂಬರಿ (ಶ್ರೀ ಜಿ.ಕೆ. ರಾವ್) ಅನುಪಮಾ ನಿರಂಜನರ ಕೆಳದಿ ರಾಜ್ಯದ ಇತಿಹಾಸ ಕುರಿತ ಕಾದಂಬರಿ, ಮುಂತಾದವನ್ನೂ ಇಲ್ಲಿ ನೆನಪು ಮಾಡಿಕೊಳ್ಳಬಹುದು. ಇನ್ನೂ ಅನೇಕ ಜನ ಆಧುನಿಕ ಸಾಹಿತ್ಯ ಕ್ಷೇತ್ರದಲ್ಲಿ ವೀರಶೈವ ಶರಣ - ಶರಣೆಯರನ್ನು, ರಾಜ - ರಾಣಿಯರನ್ನು ಕುರಿತು ಬರೆದಿರುವರು. ಹೀಗೆ, ಶತಮಾನಗಳಿಂದ ವೀರಶೈವ ಸಾಹಿತ್ಯಕ್ಕೆ ವೀರಶೈವೇತರರೂ ಸೇವೆಯನ್ನು ನಿರಂತರವಾಗಿ ಸಲ್ಲಿಸುತ್ತಾ ಬಂದಿರುವರು. ಅವರೆಲ್ಲರ ದೃಷ್ಟಿಯನ್ನು ಪ್ರತಿನಿಧಿಸುವಂತೆ ಕಾಣುವ ಪ್ರೊ. ಕೆ.ಜಿ. ಕುಂದಣಗಾರರು, ಗದುಗಿನ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದಲ್ಲಿ ವೀರಶೈವ ಸಾಹಿತ್ಯವನ್ನು ಕುರಿತು ಆಡಿದ ನುಡಿಗಳಿವು :

''ವೀರಶೈವ ಕನ್ನಡ ನಾಡಿನಲ್ಲಿಯೇ ಹುಟ್ಟಿ ಕನ್ನಡಿಗರ ಜೀವನೋದ್ಧಾರಕ್ಕಾಗಿ ಪಣ ತೊಟ್ಟು ನಿಂತ ಧರ್ಮ. ಆ ಧರ್ಮದ ಉದಯವಾದೊಡನೆ, ಕನ್ನಡ ಸಾಹಿತ್ಯದ ಸ್ವರೂಪವೇ ಬೇರೆಯಾಯಿತು. ಗಾತ್ರದಲ್ಲಿಯೂ, ಸತ್ವದಲ್ಲಿಯೂ ಕನ್ನಡ ಸಾಹಿತ್ಯ ಹಿರಿದಾಗುವಂತೆ ಮಾಡಿದ ಶ್ರೇಯಸ್ಸು ವೀರಶೈವ ಶರಣರಿಗೂ - ಕವಿಗಳಿಗೂ ಸಲ್ಲುತ್ತದೆ. ಅಸಂಖ್ಯಾತರಾದ ಶಿವಶರಣರಲ್ಲಿ ಬಸವಣ್ಣ, ಚೆನ್ನಬಸವಣ್ಣ, ಪ್ರಭುದೇವ, ಮಹಾದೇವಿಯಕ್ಕ, ಸಿದ್ಧರಾಮೇಶ್ವರ ಇವರೇ ಮೊದಲಾದವರ ಹೆಸರುಗಳು ಚಿರಸ್ಥಾಯಿಯಾಗಿವೆ. ವಿಶ್ವಸಾಹಿತ್ಯದಲ್ಲಿಯೇ ವಿಶಿಷ್ಟ ಸ್ಥಾನವನ್ನು ಪಡೆಯಲರ್ಹವಾದ ವಚನ ವಾಙ್ಮಯ ಉದಯವಾದುದು ಈ ಶಿವಶರಣರ ಹಸ್ತದಲ್ಲಿ. ಜೀವನವನ್ನು ಅರೆದು ನೋಡಿ, ಬರೆದು ನೋಡಿ, ಶಿವಶರಣರು ಅದರ ಹೊಸ ಮೌಲ್ಯವನ್ನು ಕಂಡರು; ನೂತನ ಸಮಾಜವನ್ನು ನಿರ್ಮಿಸಿದರು. ಜಾತಿ, ಮತ, ಕುಲ, ಗೋತ್ರಗಳ ಸೂತಕಗಳನ್ನು ಹರಿದರು; ಹೆಣ್ಣು ಗಂಡೆಂಬ ಭೇದವನ್ನಳಿದರು. ಸಮತೆ - ಸತ್ಯ - ದಯೆ - ಇಂತಹ ತತ್ವಗಳನ್ನು ಆಧಾರವಾಗಿಟ್ಟುಕೊಂಡ ಈ ಶರಣ ಸಾಹಿತ್ಯ ವಿಶ್ವಮಾನ್ಯವಾಗಿದೆ. ವೀರಶೈವ ಯುಗದಲ್ಲಿ ಖ್ಯಾತಿವೆತ್ತ ಕವಿಗಳೆಂದರೆ ಹರಿಹರ, ರಾಘವಾಂಕ, ಕೆರೆಯ ಪದ್ಮರಸ, ಭೀಮಕವಿ, ಚಾಮರಸ, ನಿಜಗುಣ ಶಿವಯೋಗಿ, ವಿರೂಪಾಕ್ಷ ಪಂಡಿತ, ಷಡಕ್ಷರಿ ಮೊದಲಾದವರು. ವೀರಶೈವ ಕವಿಗಳ ಕೈಯ್ಯಲ್ಲಿ ಕನ್ನಡ

ಸಾಹಿತ್ಯದ ಅನೇಕ ಹೊಸ ಪ್ರಕಾರಗಳು ಉದಯವಾದವು, ಪರಿಪುಷ್ಟಿಗೊಂಡವು. ರಗಳೆ, ಷಟ್ಪದಿ, ತ್ರಿಪದಿ, ಹಾಡು ಮುಂತಾದ ಕಾವ್ಯ ರೂಪಗಳು ಕನ್ನಡದಲ್ಲಿ ಪ್ರಚುರವಾಗಿ, ಕನ್ನಡ ಸಾಹಿತ್ಯದೇವಿಯು ಬೀದಿವರಿವ ಬೀರನ ಹೃದಯದವರೆಗೂ ಮನೆಯವರೆಗೂ ಬರುವಂತಾಯಿತು. ಜಲಪ್ರಪಾತದಂತಿರುವ ಹರಿಹರನ ಕಾವ್ಯ ಸ್ರೋತ, ಸತ್ಯ - ಸೌಂದರ್ಯಗಳ ಸಾಕಾರ ಸ್ವರೂಪದಂತಿದ್ದ ರಾಘವಾಂಕನ ನಾಟ್ಯ ಪ್ರತಿಭೆ, ಮಾಧುರ್ಯ - ಗಾಂಭೀರ್ಯಗಳಿಂದ ಬಿಗಿವಡೆದ ಚಾಮರಸನ ಅಂತರ್ಮಾರ್ಗದೋಜೆ, ಶೃಂಗಾರ ಭಕ್ತಿಗಳ ಸಂಗಮವಾಗಿದ್ದ ಷಡಕ್ಷರದೇವನ ಕಾವ್ಯದ ಔನ್ನತ್ಯ - ಆಳ - ಇವು ಕನ್ನಡ ಸಾಹಿತ್ಯದ ನಿಜವಾದ ಅಗ್ಗಳಿಕೆಗಳು '' - ಈ ಅಗ್ಗಳಿಕೆಗಳೊಡನೆ, ಶಿವಶರಣರ ತತ್ವಜ್ಞಾನ, ಆರ್ಥಿಕ ಸಿದ್ಧಾಂತಗಳು, ಶಿವಯೋಗ ಮಹತ್ವ, ಭಾಷಾ - ಶೈಲಿಯ ವೈಶಿಷ್ಟ್ಯ ಹಾಗೂ ಜೀವ - ಜೀವದ ಉದ್ಧಾರದ ಪರಮ ಗುರಿ ಮುಂತಾದ ಮೌಲ್ಯಗಳ ಹೆಗ್ಗಳಿಕೆಯೂ ಸೇರಿ, ವೀರಶೈವರಂತೆಯೇ ವೀರಶೈವೇತರರನ್ನೂ ಕರೆತಂದು, ಸಹಪಂಕ್ತಿ ಭೋಜನ ಮಾಡಿಸಿದೆ, ತೃಪ್ತಿ ತುಂಬಿಸಿದೆ. ವೀರಶೈವ ಒಂದು ಜಾತಿಯಲ್ಲ, ಬಹುಜನ ಸಮಾಜಧರ್ಮ, ವಿಶ್ವಮಾನವರನ್ನು ಹುಟ್ಟಿಸಿದ ಧರ್ಮ. ಆ ಧರ್ಮ - ಸಮಾಜ ಪ್ರೇರಿತ ಸಾಹಿತ್ಯವೂ ಜನಸಾಮಾನ್ಯರನ್ನು, ವಿಶ್ವಮಾನವರನ್ನಾಗಿ ಮಾಡಬಲ್ಲ ಶಕ್ತಿ ಹೊಂದಿದೆ. ಅದು ಅಗೆದಷ್ಟು ಚಿನ್ನವನ್ನು ಕೊಡುವ ಗಣಿ ; ತುಳುಕಿಸಿದಷ್ಟೂ ಹೊಸ ಜೀವಜಲವನ್ನು ಚಿಮ್ಮಿಸುವ ನಿರಂತರ ಚಿಲುಮೆ, ಜೀವನದಿ, ದೇವನದಿ ಈ ವೀರಶೈವಸಾಹಿತ್ಯ ಎಂಬುದು ವೀರಶೈವೇತರರಿಗೂ ಹೆಮ್ಮೆ ತುಂಬುವ ಸಾಹಿತ್ಯ. ಇಲ್ಲಿದೆ ವೀರಶೈವ - ವಚನ ಕಾವ್ಯ - ಸಾಹಿತ್ಯ ಸಕೀಲ, ರಹಸ್ಯ !!

ಅನುಭಾವ ಕಾವ್ಯ ಪರಂಪರೆ : ಒಂದು ಟಿಪ್ಪಣಿ

ಡಾ॥ ದೇವೇಂದ್ರಕುಮಾರ ಹಕಾರಿ

ಕನ್ನಡ ನಾಡಿನಲ್ಲಿ ಅನುಭಾವ ಕಾವ್ಯಕ್ಕೆ ಸಾವಿರಾರು ವರ್ಷಗಳ ಪರಂಪರೆಯಿದೆ; ಅಷ್ಟೇ ಸುದೀರ್ಘ ಪರಂಪರೆ ಹೈದರಾಬಾದ್ ಕರ್ನಾಟಕದ ಸಾಹಿತ್ಯದಲ್ಲಿಯೂ ಕಂಡುಬರುತ್ತದೆ. ಅನುಭಾವ ಕಾವ್ಯದ ಈ ಪರಂಪರೆಯ ಪ್ರವಾಹಕ್ಕೆ ಎರಡು ದಡಗಳು: ಒಂದು ಮೌಖಿಕ ಪರಂಪರೆಯ ಜನಪದ ಹಾಡು ಮತ್ತೊಂದು ಲಿಖಿತ ಪರಂಪರೆಯ ಶಿಷ್ಟಪದ ಸಾಹಿತ್ಯ. ಈ ಎರಡರಲ್ಲಿಯೂ ಪರಸ್ಪರ ಕೊಳುಕೊಡೆ ಜರುಗಿದ್ದರೂ ಪ್ರಭಾವಗಳಿಗೆ ಒಳಗಾಗಿದ್ದರೂ ಎರಡೂ ತಮ್ಮತನ ಉಳಿಸಿಕೊಂಡು ಬೆಳೆದುಬಂದವು.

ಇದಕ್ಕೆ ಸಂಬಂಧಿಸಿದ ತನ್ನ ಕಾಲದ ಸಂಗತಿಗಳನ್ನು ಗಮನಿಸಿದ ಕವಿರಾಜಮಾರ್ಗಕಾರನು 'ದೇಸಿ' 'ಮಾರ್ಗ'ಗಳ ಎರಡು ಕವಲುಗಳನ್ನು ಗುರುತಿಸಿ 'ಆ ನಾಡವರ್ಗಳೆ' ಅಂದರೆ ಈ ನಾಡಿನ ಜನ 'ನಿಜದಿ ಚದುರ'ರಾದವರು 'ಕಾವ್ಯ ಪ್ರಯೋಗ ಪರಿಣತಮತಿ'ಗಳಾದವರು, ಕಬ್ಬಗಳನ್ನು ರಚಿಸಿದರು ಎಂದು ದೇಸಿಗಬ್ಬ ಕುರಿತು ಕೆಲ ವಿವರ ನೀಡುತ್ತಾನೆ. 'ಪದಂ', 'ಮೆಲ್ವಾಡು', 'ಪಾಡು', 'ಪಾಡುಗಬ್ಬಂ', 'ಬೆದಂಡೆಗಬ್ಬ' ಈ ಪ್ರಕಾರಗಳು ಅಂದಿನ ಕಾವ್ಯಪ್ರಯೋಗ ಪರಿಣತಮತಿಗಳ ವಿವಿಧ ರಚನೆಗಳೇ. ಈ ಕಾವ್ಯ ಪ್ರಯೋಗ ಪರಿಣತಮತಿಗಳು ಕುರಿತು ಓದಿದವರಲ್ಲ. ಶಾಸ್ತ್ರ ಛಂದಸ್ಸು ಅಲಂಕಾರಗಳನ್ನು ನಿಖರವಾಗಿ ಶಾಸ್ತ್ರೀಯ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿದವರಾಗಿರಲಿಲ್ಲ. ಅವರು ನುಡಿದುದು ಒಗಟು, ಕಥೆ, ಗಾದೆ, ಹಾಡಿದುದು ಪದ ಕಬ್ಬ. ಅಡುಗೆಮನೆ ಬಂಕ ಅಂಗಳಂಗಳದಲ್ಲಿ ಹಾಡಿನ ಸುರಿಮಳೆ; ಬಿತ್ತಿಗೆ ಕಣ ಕಟ್ಟು ಹಂತಿ ರಾಸಿಗಳಲ್ಲಿ ಪದಗಳ ಬೀಸು. ಅಪರಿಮಿತ ವ್ಯಾಪ್ತಿಯ ಜನಜೀವನ - ಜೀವನಾನುಭವಗಳ ಕಣಜವೇ ಮೌಖಿಕ ಪರಂಪರೆಯ ಜನಪದ ಗದ್ಯ; ಜನಪದ ಕಾವ್ಯ. ಅನುಭಾವ ಕಾವ್ಯ ಜನಪದ ಕಾವ್ಯದ ಒಂದು ಮಹತ್ವದ ಭಾಗ.

ಅನುಭಾವವೆಂಬುದು ಅಂತರಂಗದ ರತ್ನ ಎಂದು ಕರೆದ ಶರಣರು ಈ ಅಮೂರ್ತತೆಗೆ ವ್ಯಾಖ್ಯೆ ಮಾಡುತ್ತ 'ಶಿಶು ಕಂಡ ಕನಸಿನಂತೆ' 'ಮೂಗ ಸವಿದ ಸಕ್ಕರೆಯಂತೆ' ಎಂದು ವಿವರಿಸುತ್ತಾರೆ. ಇದು ಒಂದು ಅಮೂರ್ತದಿಂದ ಮತ್ತೊಂದು ಅಮೂರ್ತಕ್ಕೆ ಸಂಚಲಿಸಿದಂತೆ ಕಂಡರೂ ಅನುಭಾವ ಎನ್ನುವುದು ಒಂದು 'ನಿಲುವು', ಅದು ಶಬ್ದಕ್ಕೆ ನಿಲುಕದಂಥದು. ಕೇವಲ ಹೃದಯಕ್ಕೆ ಮಾತ್ರ ಮುಟ್ಟುವಂಥದು. ಅಂತರಂಗದ ಅನಿರ್ವಚನೀಯ ಸಂವೇದನೆ ಅದೇ ಅನುಭಾವ ಎನ್ನುವುದನ್ನು ಸೂಚಿಸಿದರು.

ಆ. ೧೨ನೆಯ ಶತಮಾನದ ಶಿವಶರಣರ ಅನುಭಾವ ಮಂಟಪ ರೂಪುಗೊಳ್ಳುವ ಹೊತ್ತಿಗೆ ಸಾಮಾಜಿಕ ಉತ್ಕ್ರಾಂತಿ, ಮಾನವ ಪುನರ್ನಿರ್ಮಾಣ, 'ಸಕಲಜೀವಾತ್ಮರ ಲೇಸ' ಸಾಧಿಸುವ ಗುರಿ ಹೊಂದಿದ ವಚನ ಸಾಹಿತ್ಯ ಅನುಭಾವದ ಸಮಷ್ಟಿ ಪ್ರಜ್ಞೆಯ ಪ್ರಕಾಶದಲ್ಲಿ ಸೃಷ್ಟಿಗೊಂಡದ್ದು ಅದರ ಬೆಂಬಳಿವಿಡಿದು ದಾಸಸಾಹಿತ್ಯ ಪರಂಪರೆ. ಅಲ್ಲಿಂದ ಮತ್ತೆ ಜೈನ ಕೀರ್ತನೆ ಹಾಡುಗಳು ಸರ್ವಜ್ಞನ ತ್ರಿಪದಿಗಳವರೆಗೆ ಅದೊಂದು ವ್ಯಾಪಕ ಸೃಷ್ಟಿಯೇ ನಡೆಯಿತು.

ಮೌಖಿಕ ಪರಂಪರೆಯ ಅನುಭಾವ ಕಾವ್ಯ ಬಿಡಿ ಬಿಡಿಯಾಗಿಯೇ ಅಂದಂದಿಗೇ ಮೂಡಿ ಹಾಡಿದುದನ್ನು ಕೇಳಿ ನೆನಪಿನಿಂದ ಮತ್ತೆ ಮತ್ತೆ ಹಾಡಿ ಎಷ್ಟೋ ಕಾಲ ಹಾಡುಗಳ ರಚನೆ ನಡೆದು, ಕಂಠಪಾಠವಾಗಿಯೇ ಸಾಗಿ ಬಂದಿತು. ಒಂದು ಪರಂಪರೆಯಾಯಿತು. ಅದೇ ಹಾಡುಗಬ್ಬದ ಪರಂಪರೆ. ಈ ಹಾಡುಗಬ್ಬದ ಒಂದು ಮಹತ್ವದ ಭಾಗ ತತ್ವ ಪದಗಳು - ತಂಬೂರಿ ಹಾಡುಗಳು. ಇದಕ್ಕೆ ಕೈವಲ್ಯ ಸಾಹಿತ್ಯವೆಂದೂ ಕರೆಯಲಾಗಿದೆ. ಅನುಭಾವ ಕಾವ್ಯದ ತವರುಮನೆ ತುಂಗಭದ್ರೆಯನ್ನು ಕಟ್ಟಿಕೊಂಡು ಕೃಷ್ಣಾ, ಗೋದಾವರಿ ತಟಾಕಗಳ ಪ್ರದೇಶ ಸಗರನಾಡು, ಉಡುತೊರೆ ನಾಡು - ಎರೆನಾಡು ಕೂಡಿದ ಕಲ್ಯಾಣ ನಾಡು. ಈ ಪ್ರದೇಶದ ಒಂದು ಜನಪದ ಹಾಡು ಕೇಳಿ : ಸಂದರ್ಭ ಹೀಗಿದೆ : ಒಂದು ಸಮೃದ್ಧವಾದ ಮರ; ಮರದ ಕೊಲ್ಲೆ ಕೊಲ್ಲೆ ಜಲ್ಲಿ ಜಲ್ಲಿ ಹೂ ಇತ್ಯಾದಿ. ಕುಕಿಲಿಡುವ ಹಕ್ಕಿ ಕೋಗಿಲೆಗಳ ಹಿಂಡು. ಎಂಥ ಮಧುರ - ಎಷ್ಟು ಸುಂದರ. ಇದು ಹೀಗೇ ಸ್ಥಿರವಾಗಿ ಇರಬಾರದೇ, ಎಂಥ ಅಪೂರ್ವ ಅನುಭವ ! ನೋಡ ನೋಡುತ್ತಿದ್ದಂತೆ ಹಕ್ಕಿಗಳು ಪುರ್ರೆಂದು ಹಾರಿಹೋಗುತ್ತವೆ. ಚಂಡಮಾರುತ ಮರವೂ ಬಿತ್ತೋ ಏನೋ.

ಮರದ ಮ್ಯಾಲಿನ ಹಕ್ಕಿ ಪುರ್ರನೇ ಹಾರಿತ್ತ
ಸ್ಥಿರವಲ್ಲ ಜೀವಾ ಅನಕೊಂಡ್ಯಾ - ಈ ಮಾತ
ನನ್ನೊಳಗ ನಾನು ತಿಳಕೊಂಡ್ಯಾ

ಜೀವನದಲ್ಲಿ ಯಾವುದೂ ಸ್ಥಿರವಲ್ಲ. ನಿತ್ಯಪರಿವರ್ತನೆ, ರೂಪಾಂತರ. ಇದು ಜೀವನದ ಸಹಜ ಕ್ರಿಯೆ. ಈ ಜೀವ ಚಿರಂತನವಲ್ಲ. ಈ ಮಾತು ಒಂದು ತತ್ವ. ಇದನ್ನೇ ನನ್ನೊಳಗೆ ನಾನು ತಿಳಿದುಕೊಳ್ಳಬೇಕು. ಇದು ಅಂತರಂಗದ ಅರಿವು. ಈ ಅರಿವು ಒಳಗೆ ಒಡಮೂಡಿದಾಗ ಅದು ಅನುಭಾವ - ಒಳಬೆಳಗು. ಕಾರಣ ಅನುಭಾವ ಅಂತರಂಗದ ಪ್ರಕಾಶ. ಈ ಒಳಬೆಳಗಿನಲ್ಲಿ ನಿಂತು ಬದುಕನ್ನು ನೋಡುವವ - ಬದುಕಿನ ಮರ್ಮ ತಿಳಿಯುವ, ಸಾರ ಅಸಾರ ವಿಚಾರ ಮಾಡುವ, ಸತ್ಯ ಅಸತ್ಯಗಳ ಗುಟ್ಟು ಅರಿಯುವ ಅನುಭಾವಿ... ತನ್ನ ಅಜ್ಞಾನವನ್ನೇ ವಿಡಂಬಿಸುವ ಆತ್ಮಜ್ಞಾನಿ. ಅನುಭಾವ ನಮ್ಮ ಜನರಿಗೆ ಉಸಿರಾಡಿಸುವಷ್ಟು ಸಹಜ. ಕುಟ್ಟುತ್ತ, ಬೀಸುತ್ತ, ಹಾಡಿದ ಪದಗಳೆಷ್ಟು. 'ಓಂ ಎಂದು ಕುಟ್ಟಬೇಕು, ಸೋಮೆಂದು ಬೀಸಬೇಕು' ಎನ್ನುವ ಹಾಡು ಇದಕ್ಕೆ ಸಾಕ್ಷಿ. ಕೈಯಲ್ಲಿ ಶ್ರುತಿಗಾಗಿ ತಂಬೂರಿ ಹಿಡಿದು, ಲಯಕ್ಕಾಗಿ ಚಿಟಿಕೆ ಹೊಡೆಯುತ್ತ ಅಥವಾ ತಾಳ ಹಾಕುತ್ತ ತಮಗೆ ತೋಚಿದ ತಮಗೆ ಹೊಳೆದ ಒಂದು ತತ್ವ ನೀತಿಯನ್ನು ಹಾಡಿನ ರೂಪದಲ್ಲಿ ಹಾಡುತ್ತ ಮನೆ ಮನೆಗೆ ಹೋಗುವ ವೇಷಗಾರರ ದಾಸರ ಪರಂಪರೆಯೇ ಈ ಅನುಭಾವ ಕಾವ್ಯಕ್ಕೆ ನಾಂದಿ.

ಈ. ಶಿಷ್ಟಪದ ಸಾಹಿತ್ಯದ ಮೇಲೆ ಜನಪದ ಅನುಭಾವ ಕಾವ್ಯದ ಪ್ರಭಾವ ಪರಿಣಾಮ ಬೇರೆ ವಿಷಯ. ಆದರೆ ಶರಣ ತತ್ವಗಳನ್ನು ಪ್ರಸಾರ ಮಾಡಲು ಅನೇಕ ಅನುಭಾವಿ ಕವಿಗಳು ಹುಟ್ಟಿಕೊಂಡಿದ್ದರೆ ಅಚ್ಚರಿಯಿಲ್ಲ. ಬಾಲ ಬಸವರು,

ಬಹುರೂಪಿಗಳು (ಢಕ್ಕೆಯ ಮಾರಯ್ಯ, ಬಹುರೂಪಿ ಚೌಡಯ್ಯ) 'ತಂದಾನತಾನ'ದವರು, ಕರಪಾಲದವರು ಈ ಬಗೆಯ ಕಾಯಕ ಕೈಕೊಂಡ ವ್ಯಕ್ತಿ - ತಂಡಗಳು. ಅದೇ ರೀತಿ ದಾಸರು ಕೂಡ. ರಾಯಚೂರು ಜಿಲ್ಲೆಯ ಕನ್ನಾಳು, ಕುಕನೂರು, ಮಂಗಳೂರು, ಗಾವರಾಳು ಮೊದಲಾದ ಭಾಗದಲ್ಲಿದ್ದ ಕೆಲವು ದಾಸರ ಕುಟುಂಬಗಳು ಸುಗ್ಗೀಕಾಲದಲ್ಲಿ ಇಂದಿಗೂ ವೇಷ ಧರಿಸಿ ಮನೆಮನೆಗೆ ಹೋಗಿ ತತ್ವಪದ ಹಾಡುವುದುಂಟು. ಜನಪದ ಅನುಭಾವದ ಹಾಡುಗಳು ಶರಣರ ಕಾಲದಲ್ಲಿ ಸ್ವರವಚನದ ರೂಪವನ್ನು ದಾಸರ ಕಾಲದಲ್ಲಿ ಸುಳಾದಿ ಕೀರ್ತನೆಗಳ ರೂಪ ಪಡೆದಿರುವುದು ಸಹಜವಾಗಿದೆ.

ನೀಲಾಂಬಿಕೆಯ ಸುಪ್ರಸಿದ್ಧವಾದ -

ನೋಡು ನೋಡು ನೋಡು ನೋಡಿ ಲಿಂಗವೇ
ನೋಡು ಬಸವಯ್ಯನವರು ಮಾಡಿದಾಟವಾ

ಎನ್ನುವ ಕಲ್ಯಾಣ - ಬಸವಣ್ಣನ ಕೊನೆಗಾಲದ ಹಿನ್ನೆಲೆಯ ಈ ಪದ ನಮ್ಮ ಹಳ್ಳಿಗಾಡಿನಲ್ಲಿ ನೀಲಾಂಬಿಕೆಯ ಹಾಡು ಅಥವಾ ನೀಲಮ್ಮನಹಾಡು ಎಂದೇ ಪ್ರಸಿದ್ಧವಾಗಿತ್ತು. ಈ ಹಾಡಿನ ಎರಡನೆಯ ನುಡಿ ಹೀಗಿದೆ :

ಅಲ್ಲಿಗೆನ್ನನು ಬರಹೇಳಿದರಂತೆ
ಇಲ್ಲಿ ತಾವಿಲ್ಲವೆ ಸಂಗಯ್ಯನು
ಅಲ್ಲಿ ಇಲ್ಲಿ ಎಂಬ ಉಭಯ ಸಂದೇಹ
ಬಲ್ಲ ಮಹಾತ್ಮರಿಗಿದು ಗುಣವೆ ಹೇಳೋ

ಈ ಬಗೆಯ ಗಂಭೀರ ತಾತ್ವಿಕ ಚಿಂತನೆ ಮುಂದುವರೆದು ಹಾಡುಗಬ್ಬದ ಕವಲಾದ ಅನುಭಾವ ಪದ ಅಥವಾ ತಂಬೂರಿ ಹಾಡುಗಳ ಒಂದು ಅದ್ಭುತ ಪರಂಪರೆಯೇ ನಿರ್ಮಾಣವಾಯಿತು.

ಉ. ಅಲಿಖಿತ ಜನಪದ ಅನುಭಾವದ ಹಾಡುಗಳ ಧಾಟಿ, ಲಯ, ಮಾಧುರ್ಯಗಳಿಗೆ ಮಾರುಹೋದ ಅನೇಕ ಶರಣರು ಆ ಬಗೆಯ ಹಾಡುಗಳನ್ನು ರಚಿಸಿದರು. ಉದಾಹರಣೆಗೆ ಪ್ರಭುದೇವರ -

ಆದಿಯಲಾದ ಮಹಾಘನಲಿಂಗವು ಇನ್ನೇನಿನ್ನೇನೊ
ಸಾಧಿಸಿಹೆನೆಂದೊಡೆ ಸಾಧಿಸಲಳವಲ್ಲ ಇನ್ನೇನಿನ್ನೇನೋ

ಅಕ್ಕ ಮಹಾದೇವಿಯ ಕೆಲವು ರಚನೆಗಳು ಕೂಡ ಈ ಕೈವಲ್ಯ ಸಾಹಿತ್ಯದ ಅಥವಾ ಅನುಭಾವ ಕಾವ್ಯದ ಮಾದರಿಗಳೇ.

ಹಾಡುಗಬ್ಬದ ಜನಪದ ಪರಂಪರೆಯ ಜೀವನಾಡಿಯನ್ನು ಗುರುತಿಸಿ ಲಿಖಿತ ಪರಂಪರೆಯ ಅನುಭಾವ ಸಾಹಿತ್ಯದಲ್ಲಿ ಅದರ ಪ್ರತಿಸೃಷ್ಟಿ ಮಾಡಿದ ಶ್ರೇಯಸ್ಸು ಹಾಡುಗಬ್ಬದ ಶಿಖರಪ್ರಾಯ ಕವಿ ನಿಜಗುಣ ಶಿವಯೋಗಿಗಳು. ಅವರು ಚಂದ ಯಾವುದು - ಚೆಲುವೆಂದರೇನು ಎನ್ನುವುದನ್ನು ಕುರಿತ ಹಾಡು ಕೇಳಿ :

ಎಲ್ಲರೊಡನೆ ವೈರವಿಲ್ಲದೆ ಕೂರ್ಪುದು ಚೆಂದಮಾಮಾ
ತಲ್ಲಣಿಸದೆ ನೀತಿಯಲ್ಲಿರಲಾರ್ಪುದೆ ಚೆಂದಮಮಾ
ದ್ವೇಷವಿಲ್ಲದೆ, ಸಮಾಜದ ಸಮಸ್ತರ ಜೊತೆ
ಪ್ರೀತಿಯಿಂದ ಹೊಂದಿ ಬಾಳುವುದೇ ಚೆಂದ
ಚಾಪಲ್ಯ ಚೇಷ್ಟೆಗಳನ್ನು ಬಿಟ್ಟು ನೀತಿಯಲ್ಲಿರುವುದೇ ಚೆಂದ.

ಹೀಗೆ ಲೌಕಿಕ ನೀತಿಯಿಂದ ಮೊದಲುಗೊಂಡು -

ಜಾಣನು ಲೌಕಿಕ ಪರಮಾರ್ಥವೆರಡನು
ಮಾಣದೆ ಕೂಡಿ ನಡೆಸುತಿಹ ನಿಂತು

ಹೇಗೆ ?

ಕೊಳನ ಹೊಕ್ಕರೆ ಒಡಲಿನ ತಂಪು ಬಿಸಿಲಿನ
ಜಳನು ಮಿಕ್ಕ ಮೈಯೊಳು ಕಾಣ್ಬಂತೆ
ತಿಳಿವಿನ ಸುಖವನು ವಿಷಯಾಭಿರತಿಯನು
ಗೊಳಿಸುತೆ ಸಮಯವೊಂದರೊಳೆಯ್ದುತಿಹನು

ಕೊಳದಲ್ಲಿ ಹೊಕ್ಕಾಗ ನೀರಲ್ಲಿರುವ ಶರೀರ ಭಾಗಕ್ಕೆ ತಂಪು, ಮಿಕ್ಕ ಭಾಗಕ್ಕೆ ಬಿಸಿಲಿನ ಜಳ ಸಮನಿಸಿ ಅನುಭವಕ್ಕೆ ಬರುವಂತೆ ಇರವಿನ ಸವಿ ಅರಿವಿನ ಸುಖಗಳು ನಿತ್ಯಾಚರಣೆ (ಧರ್ಮಾಚರಣೆ)ಯಲ್ಲಿ ಸಮನಿಸಿ ಪರಮಾರ್ಥದ - ಕೈವಲ್ಯದ - ಅನುಭಾವ ತನ್ನಲ್ಲಿ ಹೊಮ್ಮಬೇಕು, ಇತ್ಯಾದಿ ಸರ್ಪಭೂಷಣ ಶಿವಯೋಗಿಗಳು ಅನುಭಾವದ ನೆಲೆಗೇ ಕೈಯಿಕ್ಕಿದರು. ಈ ಕಾಯ ಬಿಟ್ಟು ಬೇರೆ ನೆಲೆ ಅನುಭಾವಕ್ಕೆಲ್ಲಿದೆ?

ಕಾಯಕಾಂತಾರವ ಹೊಕ್ಕು ಬೇಟೆಯನಾಡಿ
ಮಾಯಾ ಮೋಹದ ಮೃಗಗಳ ಕೊಲ್ಲಿರೋ
ಶರೀರವೆಂದೆಂಬುವ ಹೊಲನ ಹಸನ ಮಾಡಿ
ಪರತತ್ವ ಬೆಳೆಯನೆ ಬೆಳೆದುಣ್ಣಿರೋ....

ಆದರೆ ಅನುಭಾವದ ನಿಜಪಥದ ದಿಕ್ಕು ತೋರಿದ ಸರ್ಪಭೂಷಣರ ಮಾತು ಕೇಳಿ :

ಬಾಯಬ್ರಹ್ಮವ ನುಡಿದನುಭಾವವಿಲ್ಲದ
ಮಾಯಾಮೋಹಿಗೆ ಮೋಕ್ಷವೆಂದೆಂದಿಗಹುದೇ
ತಿರುಕರಂಗಡಿ ಬೀದಿಯೊಳಗೆ ಕೂಡುತ ರಾಜ
ರರಮನೆಯೊಳ ಸುದ್ದಿಗಳನಾಡುವಂತೆ
ಅರಿಯದೆ ಪರವಸ್ತುವಿನ ಗೊತ್ತು ಗುರಿಯನು
ಹಿರಿಯರಾಡುವ ಮಾತು ಕಿವಿಯೊಳು ಕೇಳಿ '

ಮನದಲ್ಲಿ ಮೋಹ ಮಾಯೆ (ಭ್ರಮೆ)ಗಳನ್ನು ತುಂಬಿಕೊಂಡು, ಬಾಯಿಂದ ಬ್ರಹ್ಮಜ್ಞಾನ ನುಡಿದರೆ ಏನು ಬಂತು? ಅಂತರಂಗದ ಅರಿವೇ ನಿಜವಾದ ಆತ್ಮಜ್ಞಾನ. ಅದೇ ಸ್ವ-ಸ್ವರೂಪ ಜ್ಞಾನ. 'ನಾನಾನೆಂಬುದು ನಾನಲ್ಲ' ಅದು ತಾನೇ ತಾನಾಗಿರುವ ಪರಂಜ್ಯೋತಿಯ ಕಾಯರೂಪ. ಆತ್ಮಜ್ಞಾನಿ ಅಥವಾ ಅನುಭಾವಿಗೆ ಅಖಂಡ ಮಾನವಕುಲ ಒಂದೇ ಎನ್ನುವ ದಿವ್ಯತೆ ಸ್ಫುರಿಸುತ್ತದೆ. ಈ ಅಂತಃಸ್ಫುರಣದ ಬೆಳಕಿನಲ್ಲಿ ಪ್ರಪಂಚ ಅವರ ಕಣ್ಣಿಗೆ ಇಡಿಯಾಗಿ ಗೋಚರಿಸುತ್ತದೆ. ಈ ಮರ್ತ್ಯ ಜಡವಾಗಿರದೆ ಮಹಾ ಚೈತನ್ಯದ ವ್ಯಕ್ತರೂಪವಾಗಿ ತೋರುತ್ತದೆ. ಇದರ ನಿಜಗುಟ್ಟು ಅರಿಯದೆ 'ಮೋಕ್ಷ' ಮುಕ್ತಿ ಎಂದು ಬಡಬಡಿಸುವವರನ್ನು ಘನಮಠದ ನಾಗಭೂಷಣ ಶಿವಯೋಗಿಗಳು ಕಲ್ಯಾಣ ನಾಡಿನ ಅಂಬಿಗರ ಚೌಡಯ್ಯನ ಮಾತಿನ ಜಾಡು ಹಿಡಿದವರು - ಸೂಚ್ಯವಾಗಿ ಅಲ್ಲ, ಬಿಚ್ಚು ನುಡಿಯಲ್ಲೇ ಹೇಳುತ್ತಾರೆ.

ಎಲ್ಲ ಭಕ್ತಿಯದೆಲ್ಲಿ ಮುಕ್ತಿಯೋ ಈ ಸೂಳೆ ಮಕ್ಕಳಿ
ಗೆಲ್ಲಿ ಭಕ್ತಿಯದೆಲ್ಲಿ ಮುಕ್ತಿಯೋ
ಎಲ್ಲಿ ಭಕ್ತಿಯದೆಲ್ಲಿ ಮುಕ್ತಿಯೋ ಕಳ್ಳಹಾದರಗಿತ್ತಿಯಾ ಪರಿ
ಖುಲ್ಲತನದಲಿ ಚರಿಸಿ ಶಿವಪದವೆಲ್ಲಿ ಕಾಣದೆ ಸಾಯುತಿಹರಿಗೆ

ಊ. ಮೌಖಿಕ ಪರಂಪರೆಯ ಜನಪದ ಅನುಭಾವದ ಹಾಡುಗಳಿಂದ ಮೊದಲುಗೊಂಡು ಲಿಖಿತ ಪರಂಪರೆಯ ಅಕ್ಕಮಹಾದೇವಿ, ಅಲ್ಲಮಪ್ರಭು, ನಿಜಗುಣ, ಪುರಂದರದಾಸ, ಕನಕದಾಸ, ಸರ್ಪಭೂಷಣ ಶಿವಯೋಗಿ, ಮೈಲಾರ ಬಸವಲಿಂಗ ಶರಣರು, ಶಿಶುನಾಳ ಷರೀಫರ ವರೆಗೆ ಒಂದು ಅಖಂಡ ಅನುಭಾವ ಕವಿಗಳ ಪರಂಪರೆಯೇ ಬೆಳೆದಿದೆ. ಇದರಲ್ಲಿ ಹೈದರಾಬಾದ ಕರ್ನಾಟಕದ್ದೇ ಸಿಂಹಪಾಲು.

ಕಲ್ಲೂರಿನ ಲಿಂಗಬಡೆಯ (೧೬೨೫), ಚಿದಾನಂದಾವಧೂತ (೧೭೦೦), ಘನಮಠದಾರ್ಯ (೧೮೨೮), ಕಡಕೋಳ ಮಡಿವಾಳಪ್ಪ (೧೮೨೦), ಕೂಡಲೂರು ಬಸವಲಿಂಗಶರಣ (೧೮೦೦), ನಿಂಬರಗಿ ಮಹಾರಾಜ, ಶಂಕರಾನಂದ, ಗುಡಗೇರಿ ಸಂಗಪ್ಪ, ನೀರಲಕೇರಿ ಬಸವಲಿಂಗಶರಣ (೧೮೧೨), ನೀರಲಗಿ ತಾತ, ಕೆಸ್ತೂರುದೇವರು, ಗೂಗಲ್ಲ ನರಸಪ್ಪಯ್ಯ (೧೭೮೦), ಗೊಬ್ಬೂರು ಹಂಪಣ್ಣ (೧೭೯೩), ದೇವದುರ್ಗದ ಚೆನ್ನಮಲ್ಲ ಕವಿ (೧೮೫೦), ಹೇರೂರು ವಿರುಪಣ್ಣ (೧೮೫೫), ಅರವಲೆ ಬಿಜಲಿವಸ್ತಾದಿ (೧೮೬೦), ಹೊಸಪೇಟೆಯ ಪಂತೋಜಿ ಅಯ್ಯಪ್ಪ (೧೯೦೦), ದೇವದುರ್ಗದ ಅಮಾತೆವ್ವ, ರಾಮಪುರದ ಬಕ್ಕಪ್ಪ, ಗೂಗಲ್ಲು ಪರಪ್ಪ, ಮಹಾಗಾಂವ, ಮೀರಾಸಾಬ, ಬೈರಾಮಡಿಗಿ ಹೈದರಸಾಬ, ಕಾಳಗಿ ಮಶಾಕ್‌ಸಾಬ, ಸಾವಳಿಗಿ ಮಹಮ್ಮದ, ಮಂಗಲಗಿ ನನ್ನೇಸಾಬ, ಲಾಡಂತಿಯ ಲಾಡಮದನಸಾಬ ಮುಂತಾದವರು ಅನುಭಾವದ ಕಾವ್ಯಪರಂಪರೆಯನ್ನು ಉಳಿಸಿಕೊಂಡು ಬಂದ ಮಹನೀಯರು.

ಏ. ಜನಪದ ಧರ್ಮದಲ್ಲಿ ಒಂದು ಅತ್ಯಂತ ಮುಖ್ಯ ಶ್ರದ್ಧೆ 'ಸರ್ವಚೈತನ್ಯ'ವಾದವೆಂದು ಗುರುತಿಸಲಾಗುತ್ತಿದೆ. ಎಲ್ಲವೂ ಪರಮ ಚೇತನ ದಿವ್ಯಪ್ರಕಾಶ. ಒಳಗು ಹೊರಗು ಬರೀ ಬೆಳಗು - ಸಕಲವೂ ಆತ್ಮಸ್ವರೂಪ. ಇದು ನಿರಾಳ ಚೈತನ್ಯದ ಸೃಷ್ಟಿ. ಆತ್ಮನ ಪೂಜೆ ಮಾಡುವುದು ಹೇಗೆ?

ಯಾತರಿಂದಲಿ ಮಾಡಲಿ ಆತ್ಮನ ಪೂಜಾ
ಎತ್ತ ನೋಡಲು ತಾನಿದೇ

ಎಂದು ಹಾಡಿದ ಕೂಡಲೂರು ಬಸವಲಿಂಗ ಶರಣರ ವ್ಯಕ್ತಿತ್ವಕ್ಕೆ ಸಾಟಿಯೆಲ್ಲಿದೆ? ಕಾಯಿಪಲ್ಲೆ ವ್ಯಾಪಾರ ಮಾಡಿಕೊಂಡಿದ್ದ ಯಾದಗಿರಿ ಹತ್ತಿರದ ಬಳಿ ಚಕ್ರದ ಈ ಶರಣನಿಗೆ ದೊರೆತ ಮಾರ್ಗದರ್ಶನ ಯಾರದು? ಆತನೇ ಕಡಕೋಳ ಮಡಿವಾಳಪ್ಪ.

ಕರುಣಾಕರ ಶರಣಬಸವೇಶ್ವರರ ಕೃಪೆಯಿಂದಾಗಿ ಅಂದು ಬಹು ದೊಡ್ಡ ಅನುಭಾವಿಯೆಂದು ಪ್ರಖ್ಯಾತನಾಗಿದ್ದಾತ ಕಡಕೋಳ ಮಡಿವಾಳಪ್ಪ. ಕಾಯಿಪಲ್ಲೆ ವ್ಯಾಪಾರ ಮಾಡುತ್ತಿದ್ದ ಕೂಡಲೂರು ಬಸವಲಿಂಗಪ್ಪ ಆತನಲ್ಲಿಗೆ ಆಗಾಗ ಬರುತ್ತಿದ್ದ; ಅನೇಕ ಲೌಕಿಕ ಆಧ್ಯಾತ್ಮಿಕ ಗೋಷ್ಠಿ ನಡೆಸುತ್ತಿದ್ದ. ಹೀಗೇ ಒಮ್ಮೆ ಚರ್ಚೆಯಲ್ಲಿ ಬಸವಲಿಂಗಪ್ಪ ಮಡಿವಾಳಪ್ಪನನ್ನು ಕೇಳಿದ :

'ನಾನು ಎಷ್ಟು ದುಡಿದರೂ ಹಣ ಸಾಲದು. ಹೆಚ್ಚು
ಶ್ರೀಮಂತನಾಗೋ ಹ್ಯಾಂಗೆ?'

ಬಸವಲಿಂಗಪ್ಪನಲ್ಲಿ ಹುದುಗಿದ ಆಧ್ಯಾತ್ಮದ ಖನಿಜವನ್ನು ಗುರುತಿಸಿದ ಮಡಿವಾಳಪ್ಪ ಹೇಳಿದನಂತೆ : ''ಎಲ್ಲರೂ ಹಣ ಗಳಿಸುತ್ತಾರೆ. ಶ್ರೀಮಂತರಾಗುತ್ತಾರೆ. ಅದರ ಹಿಂದೆ ಯಾಕೆ ಬೆನ್ನುಹತ್ತುತ್ತೀ. ನಿನ್ನ ಉದ್ಯೋಗವನ್ನೇ ಕಾಯಕ ಎಂದು ಮಾಡು. ಶರಣರ ದಾಸೋಹದ ದಾರಿ ಹಿಡಿ. ಬೇರೆ ರೀತಿಯ ಹಣ ಗಳಿಸು. ಅದು ನೀರಲ್ಲಿ ಮುಳುಗಬಾರದು, ಗಾಳಿಗೆ ಹಾರಬಾರದು, ಬಯಲಲ್ಲಿಟ್ಟರೂ ಕದಿಯಲು ಸಾಧ್ಯವಾಗದು. ಅಂಥ ಧನ ಗಳಿಸಬೇಕು''.

ಧನವ ಗಳಿಸಬೇಕು ಇಂಥಾದ್ದು. ಈ
ಜನರಿಗೆ ತಿಳಿಯದಂಥಾದ್ದು
ಅನುದಿನ ಅಜಹರಿ ಮನುಮುನಿಗಳಿಗೆಲ್ಲ
ಹೌದು ಹೌದು ಹೌದೆಂಬಂಥಾದ್ದು
....

ಮರವಿಗೆ ಬಾರದಂಥಾದ್ದು ನಿಜ
ಅರುವಿನಲ್ಲಿ ಇರುವಂಥಾದ್ದು
ಮರೆವು ಕಳೆದು ಶ್ರೀಗುರು ಮಹಾಂತೇಶನ
ಕರುಣದಿಂದ ಕಾಯುವಂಥಾದ್ದು.

ಈ ಪ್ರಸಂಗವೇ ಮುಂದೆ ಕೂಡಲೂರ ಬಸವಲಿಂಗ ಶರಣ ಒಂದು ರಚನೆಯ ವಸ್ತುವಾಗಿ ಹೊಮ್ಮಿತು.

ವ್ಯಾಪಾರ ಎನಗಾಯಿತೋ ಕೂಡ್ಲೂರ ಸಂತೀಲಿ
ವ್ಯಾಪಾರ ಎನಗಾಯಿತೋ
ವ್ಯಾಪಾರ ಎನಗಾಯ್ತು ಶ್ರೀಪತಿ ದಯದಿಂದ
ಆ ಪರಬ್ರಹ್ಮನು ತಾನೆ ತಾನಾದದ್ದು
....

ಐದು ಪದರಿನ ಚೆಲುವು
ಅದರೊಳು ಬಹುಕಾಲ ಹೊನ್ನು ತುಂಬಿದ್ದೆನೊ
ಐದೈದು ಇಪ್ಪತ್ತೈದು ಜಮಾ ಮಾಡಿ ಬಿಚ್ಚಲು
ಸಾಧ್ಯಮಾಡಿಕೊಂಡ ಸರಿ ಬಂದ ಒಡವೆಯ

ಇದು ಬಸವಲಿಂಗಪ್ಪ ಮಾಡಿದ ಅನುಭಾವದ ವ್ಯಾಪಾರ; ಗಳಿಸಿದ ಅರಿವಿನ ಸಂಪತ್ತು. ಇಂಥ ಅನೇಕರಿಗೆ ಅರಿವಿನ ತವನಿಧಿ ತೋರಿದ ಅನುಭಾವಿಯೇ ಕಡಕೋಳ ಮಡಿವಾಳಪ್ಪ.

ಜಾತಿ ಕುಲ ಪಂಥಗಳ, ಮೇಲು ಕೀಳುಗಳನ್ನು ಧಿಕ್ಕರಿಸಿ, ಜೀವನ ಶ್ರದ್ಧೆ, ಪರಸ್ಪರ ಪ್ರೀತಿ ಗೌರವಗಳಿಂದ ಕೂಡಿದ ಸ್ವಾವಲಂಬಿ ಸಮಾಜ ನಿರ್ಮಾಣಕ್ಕಾಗಿ ಹೋರಾಡಿದ ಮಹಾನುಭಾವಿಗಳು ಶಿವಶರಣರು. ಅವರ ಅನುಭಾವ ಪಥದಲ್ಲೆ ತಮ್ಮ ಕಾಯಕ - ದಾಸೋಹ ತತ್ವಾಚರಣೆಗಳ ಮೂಲಕ ಬೆಳಕಿನ ಹೆಜ್ಜೆ ಮೂಡಿಸಿದವರು ಶರಣ ಬಸವೇಶ್ವರ. ಅವರ ಅಂತಃಕರಣದ ಜೀವದ್ರವ್ಯದಿಂದ ಮರುಹುಟ್ಟು ಪಡೆದ ಮಹಾನುಭಾವ ಜೇವರಗಿ ತಾಲ್ಲೂಕಿನ ಕಡಕೋಳ ಮಡಿವಾಳಪ್ಪ.

ಕಲಬುರ್ಗಿ ಜಿಲ್ಲೆಯ ಬಿದನೂರಿನಲ್ಲಿ ಕಣ್ತೆರೆದ ಮಡಿವಾಳಪ್ಪ. ತಿಪ್ಪೆಯಲ್ಲಿ ಹುಟ್ಟಿದ ಪತ್ರೀಗಿಡ ಎಂದು ಕರೆಸಿಕೊಂಡು, ಅರಳಗುಂಡಿಗೆ, ಚಿಮಣಗೇರಿ, ಶ್ರೀಶೈಲ ಮತ್ತೇ ಅರಳಗುಂಡಿಗೆ ಶರಣಬಸವನ ಕೃಪಾದೃಷ್ಟಿ. ಮೌಢ್ಯಗಳ ವಿರುದ್ಧ ಹೋರಾಟ. ಅಲ್ಲಿಂದ ಕೋಣಸಿರಸಿ, ಜಂಬೇರಾಳ, ಮತ್ತೆ ಕಡಕೋಳ - ಹೀಗೆ ಈ ಕಲ್ಯಾಣ ನಾಡಿನ ಎಲ್ಲ ದಾರಿಗಳನ್ನೂ ಸುತ್ತಿ, ಸುರಪುರದ ದೊರೆಗಳಿಂದ ಸನ್ಮಾನಿತನಾಗಿ, ಅನೇಕ ಸಿದ್ಧಿಗಳನ್ನು ಹೊಂದಿದ್ದರೂ ಅದಾವುದನ್ನೂ ಸ್ವಾರ್ಥಕ್ಕಾಗಿ ಬಳಸದೆ, ಕಾಯಕನಿಷ್ಠರಾಗಿ ಬಾಳುತ್ತ ಅನುಭಾವದ ಅಕ್ಷಯ ಭಂಡಾರ ಬಿಟ್ಟು ಹೋದವರು ಮಡಿವಾಳ ಶರಣರು.

ಐ. ಈ ನಿಟ್ಟಿನಲ್ಲಿ ನಾಡಿನ ಹಿರಿಯ ಕವಿ, ವಿದ್ವಾಂಸ ಶಾಂತರಸ ಮಾಡಿದ ಕಾರ್ಯ ಇಂದು ಅನೇಕರಿಗೆ ಮಾರ್ಗದರ್ಶಿಯಾಗಿದೆ. ೧೯೭೩ರಷ್ಟು ಹಿಂದೆಯೇ ಅವರು ಪ್ರಕಟಿಸಿದ 'ಎಡದೊರೆನಾಡಿನ ಅನುಭಾವಿ ಕವಿಗಳು' 'ಕೂಡಲೂರ ಬಸವಲಿಂಗ ಶರಣರ ಸ್ವರವಚನಗಳು' ಈ ನಾಡಿನ ಸಂಶೋಧಕರಿಗೆ ಒಂದು ಹೊಸ ಕ್ಷಿತಿಜವನ್ನು ಅನಾವರಣಗೊಳಿಸಿತು. ಈ ಎರಡು ದಶಕಗಳ ಕಾಲಾವಧಿಯಲ್ಲಿ ಅನೇಕರು ಕಾರ್ಯ ಮಾಡಿದ್ದಾರೆ. ಪ್ರೊ.ಬಸವನಾಳ, ಡಾ. ಪುರಾಣಿಕ, ಡಾ. ಎಂ.ಎಸ್. ಲಠ್ಠೆ, ಡಾ. ಬಿರಾದಾರ, ಡಾ. ಎಂ.ಎಂ. ಕಲಬುರ್ಗಿ, ಎಲ್. ಬಸವರಾಜು ಇನ್ನೂ ಅನೇಕರು ಈ ಕಾರ್ಯ ಮಾಡಿದ್ದಾರೆ; ಕೈಗೆತ್ತಿಕೊಂಡಿದ್ದಾರೆ. ಇತ್ತೀಚೆಗೆ ಮೃತ್ಯುಂಜಯ ಶಾಸ್ತ್ರೀಮಠರು 'ಕೂಡಲೂರು ಬಸವಲಿಂಗ ಶರಣರ' ಬಗೆಗೆ ಪಿಎಚ್.ಡಿ. ಪದವಿ ಪಡೆದಿದ್ದಾರೆ. (ಕೂಡಲೂರು ಬಸವಲಿಂಗ ಶರಣರು : ಒಂದು ಅಧ್ಯಯನ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೧೯೯೨). ಗದುಗಿನ ವೀರಶೈವ ಅಧ್ಯಯನ ಸಂಸ್ಥೆ ಡಾ. ಲಠ್ಠೆ ಸಂಪಾದಿಸಿದ 'ಕಡಕೋಳ ಮಡಿವಾಳೇಶ್ವರ ವಿರಚಿತ ಸ್ವರವಚನಗಳು' ಕೃತಿ ಪ್ರಕಟಿಸಿದೆ (೧೯೮೨).

ಕಡಕೋಳ ಮಡಿವಾಳಪ್ಪನ ಬಗ್ಗೆ ಆಳವಾದ ಅಧ್ಯಯನ ಕೈಕೊಂಡು ಅವರ ಹಾಡು ಮತ್ತು ವಚನಗಳ ಬೆಲೆಗಟ್ಟುವ ಕಾರ್ಯ, ಅನುಭಾವ ಕಾವ್ಯದ ಹಿರಿಮೆ ವೈಶಿಷ್ಟ್ಯಗಳನ್ನು ಎತ್ತಿ ತೋರಿಸುವ ಒಬ್ಬ ಸಂಶೋಧಕನಿಗಾಗಿ ಕಾಲ ನಿರೀಕ್ಷಿಸುತ್ತಿದೆ. ಈ ಲೇಖನ ಅಂಥ ಒಂದು ಸಂಶೋಧನೆಗೆ ಪ್ರೇರಣೆಯಾಗಲಿ.

ಎಲಿರೊ ಎಲಿರೊ ಕೆಡಬ್ಯಾಡಿರೊ
ನಿಮ್ಮ ಒಡಲೊಳಗೆ ಶಿವಹಾನ ನೋಡಿರೋ
ಕುಲ ಚಲಕೆ ಹೊಡೆದಾಟ ಬೇಡಿರೊ - ಮುಂದ
ನೆಲೆ ಮಾಡಿಕೊಳ್ಳೋದ ನೋಡಿರೋ

ಎಂದು ಸಾರಿದ ಮಡಿವಾಳಪ್ಪನ ಸ್ವರವಚನದೊಂದಿಗೆ ಮಂಗಲ ಹಾಡೋಣ.

ಎಲ್ಲಾರೂಪವು ತಾನಂತೆ ಶಿವ
ನೆಲ್ಲೆಲ್ಲಿಯು ತುಂಬಿಹನಂತೆ
ನೆನಿಯವ ದುರುಳಂಗಂತಕನಂತೆ
ಗುಣಿಗಳ ಮನದಲ್ಲಿಹನಂತೆ.

ಕರ್ನಾಟಕ ಜನಪದ ಸಂಗೀತ

ಶ್ರೀ ಎಚ್.ಎಲ್. ನಾಗೇಗೌಡ

೧. ಜನಪದ ಸಂಗೀತದ ಉಗಮ

ಕೇಳಿದ ಕೂಡಲೇ ತನ್ನ 'ದನಿ - ಬನಿ'ಗಳಿಂದ, 'ನಡೆ-ನುಡಿ'ಗಳಿಂದ ಮತ್ತು 'ಗತ್ತು - ಗೈರತ್ತು'ಗಳಿಂದ ನಮ್ಮನ್ನು ಆಕರ್ಷಿಸುವ ಗ್ರಾಮೀಣರ ಸಂಗೀತವೇ ಜನಪದ ಸಂಗೀತ. ಅದು ಹುಟ್ಟಿದ್ದು ಪ್ರಕೃತಿಯ ಮಡಿಲಲ್ಲಿ. ಬೆಳೆದದ್ದು ದಿನನಿತ್ಯದ ಕಾಯಕದಲ್ಲಿ ; ಫಲವಾದದ್ದು ಮುಗ್ಧ ಹಳ್ಳಿಗರ ಬಾಯಲ್ಲಿ.

ಭೂಮಿಯ ಮೇಲೆ ಮಾನವನ ಅವತಾರದೊಂದಿಗೇ ಜನಪದ ಸಂಗೀತದ ಅವತಾರವೂ ಆಯಿತೆನ್ನಬಹುದು. ಮನುಷ್ಯ ಮಾತು ಕಲಿತದ್ದು, ತನ್ನದೊಂದು ಭಾಷೆಯನ್ನು ರೂಪಿಸಿಕೊಂಡದ್ದು ಈಚೆಗೆ ತಾನೆ. ಅದಕ್ಕೆ ಮೊದಲು ಆತ ತನ್ನ ಸುತ್ತ ಮುತ್ತ ಕೇಳಿಬರುತ್ತಿದ್ದ ಖಗ ಮೃಗಗಳ ಕೂಗನ್ನೋ, ಮರಗಿಡಗಳ ಸುಯ್ದನಿಯನ್ನೋ, ಕ್ರಿಮಿಕೀಟಗಳ ಚೀರ್ದನಿಯನ್ನೋ, ಸಿಡಿಲು ಗುಡುಗುಗಳ ಅಬ್ಬರವನ್ನೋ, ನದಿ - ಸಾಗರಗಳ ಮೊರೆತವನ್ನೋ ಕೇಳಿ, ನೋಡಿ, ಬೆಚ್ಚಿ, ಬೆದರಿ ಅಥವಾ ಸುಖ ಸಂತೋಷಪಟ್ಟು ಆಯಾ ಸಂದರ್ಭ ಸನ್ನಿವೇಶಗಳಿಗೆ ತಕ್ಕುದಾದ ದನಿಯನ್ನು ವ್ಯಕ್ತಪಡಿಸುವ ಹಸುಳೆಯಂತೆ [1].

---

1. ಶಿಷ್ಟ ಸಂಗೀತಕ್ಕೆ ಆಧಾರವಾದ ಸ(ಷಡ್ಜ), ರಿ(ರಿಷಭ), ಗ (ಗಂಧಾರ), ಮ (ಮಧ್ಯಮ), ಪ (ಪಂಚಮ), ಧ (ಧೈವತ), ನಿ (ನಿಷಾದ) ಎಂಬೀ ಸಪ್ತ ಸ್ವರಗಳು ಪ್ರಾಣಿಗಳು ಹೊರಡಿಸುವ ಶಬ್ದಗಳ ಆಧಾರವನ್ನು ಸೂಚಿಸುತ್ತವೆ ಎಂದು ಸಂಗೀತ ಶಾಸ್ತ್ರದಲ್ಲಿಯೇ ಹೇಳಿದೆ.

ಗುನುಗುನಿಸುವುದೇ ಮನುಷ್ಯನ ಹಾಡಿಗು ನಾಂದಿ. ಬೀಸುವ ತಾಯಿ ಬೀಸುವ ಲಯಕ್ಕೆ ಗುನುಗುನಿಸಿದಳು. ಕುಟ್ಟುವ ಹೆಂಗಸು ಒನಕೆಯ ಗತಿಗೆ ಗುನುಗುನಿಸಿದಳು. ಹೀಗೆ ಪ್ರತಿಯೊಂದು ಕೆಲಸಕ್ಕೂ ಸಮಯ ಸಂದರ್ಭ ಸನ್ನಿವೇಶಗಳಿಗೂ ತಕ್ಕ ದನಿ-ಧಾಟಿಗಳಲ್ಲಿ ಮನುಷ್ಯ ಗುನುಗುನಿಸಲಾರಂಭಿಸಿದ. ಹೀಗೆ ಬಾಯಲ್ಲಿ ಗುನುಗುನಿಸುತ್ತಾ ದೇವರು ಕೊಟ್ಟ ಎರಡು ಕೈಗಳನ್ನು ತಟ್ಟಿದ; ಕಲ್ಲು ಕಡ್ಡಿಗಳನ್ನು ಕುಟ್ಟಿದ ; ಮಡಕೆ ಕುಡಿಕೆಗಳನ್ನು ಬಡಿದ. ಹಾಗೆ ಬಡಿಯುತ್ತಾ ಬಡಿಯುತ್ತಾ ಇದ್ದಂತೆ ಅವನ ಕಾಲುಗಳು ಕುಣಿಯಲಾರಂಭಿಸಿದವು. ಹೀಗೆ ಹಾಡಿಗಿಂತ ಮೊದಲು ಕುಣಿತ ಆರಂಭವಾಯಿತು.

ಮಾತು ಕಲಿತ ಮೇಲೆ ಕೇವಲ ಗುನುಗುನಿಸುವುದರಲ್ಲಿಯೇ ಇದ್ದವನು ಹಾಡಿನ ಬೆನ್ನೇರಿದ. ಹಾಡು ಕಟ್ಟಿ ಹಾಡಲಾರಂಭಿಸಿದ; ಬಡಿದುಕೊಂಡು ಕುಣಿಯಲಾರಂಭಿಸಿದ. ಪ್ರತಿಯೊಂದು ಕೆಲಸಕ್ಕೂ, ಪ್ರತಿಯೊಂದು ಸಂದರ್ಭಕ್ಕೂ, ಪ್ರತಿಯೊಂದು ವಿಷಯಕ್ಕೂ ಹಾಡು ಕಟ್ಟಿದ. ಒಬ್ಬ ಕಟ್ಟಿದ ಹಾಡನ್ನು ಹತ್ತು ಜನ ಹಾಡಿದರು. ಹತ್ತು ಜನ ಹಾಡಿದ್ದನ್ನು ನಾಡಿನ ಜನ ಹಾಡಿದರು. ಮೊದಲ ಹಾಡಿನ ತೊರೆಗೆ ಹೊಸ ಹೊಸ ಸಂಗತಿಯ ಹಳ್ಳಗಳು ಸೇರಿಕೊಂಡವು. ತೊರೆ ನದಿಯಾಯಿತು. ನದಿಗಳೆಲ್ಲಾ ಸೇರಿ ಸಮುದ್ರವಾಯಿತು. ಸಂಗೀತದ ಸಪ್ತ ಸ್ವರಗಳಂತೆ ಜನಪದ ಸಾಹಿತ್ಯ - ಸಂಗೀತ - ನೃತ್ಯಗಳ ಸಪ್ತ ಸಾಗರಗಳೇ ಸೃಷ್ಟಿಯಾದುವು; ಇಡೀ ಭೂಮಂಡಲವನ್ನೆಲ್ಲಾ ಅಪ್ಪಿ ಆಲಂಗಿಸಿದುವು ; ಭಾಷೆ ಬೇರೆಯಾದರೂ ಭಾವ ಒಂದೇ ಎಂಬ ಮೂಲ ಸತ್ವವನ್ನು, ಸತ್ಯವನ್ನು ಪ್ರಪಂಚದಲ್ಲೆಲ್ಲಾ ಹರಡಿದುವು. ಈ ಕಾರಣ ಜಾನಪದದ ಒಂದು ಪ್ರಮುಖ ಅಂಗವಾದ ಜನಪದ ಸಂಗೀತವನ್ನು ಕೇವಲ ರಾಗ ತಾಳಗಳ ದೃಷ್ಟಿಯಿಂದಷ್ಟೇ ಅಲ್ಲದೆ ಇಡೀ ಮಾನವನ ಮೂಲಕ್ಕೆ ಹೋಗಿ ಅವನ ಅಂದಂದಿನ ಸಾಮಾಜಿಕ ಹಾಗೂ ಸಾಂಸ್ಕೃತಿಕ ದೃಷ್ಟಿಯಿಂದಲೂ ನೋಡುವ ಹೊಸ ವಿಧಾನ ಆರಂಭವಾಗಿದೆ. ಜಗತ್ತಿನ ಮಾನವ ವರ್ಗಗಳಲ್ಲಿ ಕಂಡುಬರುವ ಅವರ ಗೀತೆಗಳು, ಸಂಗೀತಗಳು, ನೃತ್ಯಗಳು ಮತ್ತು ವಾದ್ಯಗಳ ಮೂಲಕ ವಿಶ್ವಮಾನವನನ್ನೇ ಗುರುತಿಸಬಹುದೆಂಬ ಅಭಿಪ್ರಾಯ ಮೂಡಿಬರುತ್ತಿದೆ [2].

೨. ಜನಪದ ಸಂಗೀತ ಅಪೌರುಷೇಯ ಹಾಗೂ ಅನಾದಿ

ವೇದಗಳು ಅಪೌರುಷೇಯ ಎನ್ನುತ್ತಾರೆ. ಹೌದು. ಹಾಗೆಯೇ ನಮ್ಮ ಜನಪದ ಸಂಗೀತವೂ ಅಪೌರುಷೇಯವೇ. ವೇದಗಳು ಅನಾದಿ ಎನ್ನುತ್ತಾರೆ, ನಿಜ. ಅಂತೆಯೇ ನಮ್ಮ ಜನಪದ ಸಂಗೀತ ಇನ್ನೂ ಹೆಚ್ಚು ಅನಾದಿ. ಏಕೆಂದರೆ ಋಗ್ವೇದ ಮತ್ತು ಅದಕ್ಕೆ ಹಿಂದಿನ ಕಾಲದಿಂದಲೂ ಜನಪದ ಸಂಗೀತ ಇತ್ತೆಂಬುದು ವಿದ್ವಾಂಸರ ಅಭಿಪ್ರಾಯ.

''ವೇದ ಸಾಹಿತ್ಯದಲ್ಲಿ ಅತ್ಯಂತ ಹಳೆಯದೆಂದರೆ ಋಗ್ವೇದ, ಅದರಲ್ಲಿ ಅತ್ಯರಿತ ಹಳೆಯ ಜನಪದ ಗೀತೆಗಳೂ ಲಾವಣಿಗಳೂ ಬರುತ್ತವೆ... ಗೃಹ್ಯ ಸೂತ್ರಗಳಲ್ಲಿ ಮದುವೆ ಮುಂತಾದ ಶುಭ ಸಂದರ್ಭಗಳಲ್ಲಿ ಹಾಡುತ್ತಿದ್ದ ಹಾಡುಗಳು ಸಿಕ್ಕುತ್ತವೆ.... ಜಾತಕಗಳಲ್ಲಿ ಜನಪದ ಗೀತೆಗಳ ಪುರಾತನ ಮಾದರಿಯ ಅನೇಕ ಗಾದೆಗಳನ್ನು ಕಾಣಬಹುದು..... ಕಾಳಿದಾಸನು ತನ್ನ ರಘುವಂಶದಲ್ಲಿ ಕಬ್ಬಿನ ನೆರಳಿನಲ್ಲಿ ಭತ್ತದ ಗದ್ದೆಗೆ ಬರುವ ಹಕ್ಕಿಗಳನ್ನು ಕಾಯಲು ಕುಳಿತ ಹುಡುಗಿಯರು ರಘುವಿನ ಕೀರ್ತಿ ಕಾರ್ಯಗಳನ್ನು ತಮ್ಮ ಸುಮಧುರ ಕಂಠದಿಂದ ಹಾಡುತ್ತಿದ್ದರೆಂದು ಹೇಳಿದ್ದಾನೆ'' [3].

ಇದು ಇದ್ದ ಸಂಗತಿಯನ್ನೇ ಹೇಳಿದೆ. ಏಕೆಂದರೆ ವೇದಗಳಿಗಿಂತ ಮುನ್ನ, ವಾಲ್ಮೀಕಿ, ವ್ಯಾಸರ ರಾಮಾಯಣ, ಮಹಾಭಾರತಗಳಿಗಿಂತ ಮೊದಲು, ಜನಪದರ ಬಾಯಲ್ಲಿ , ಹಾಡಿನಲ್ಲಿ ಅಪಾರ ಗೀತೆಗಳು ನಲಿದಾಡುತ್ತಿದ್ದವು. ಋಷಿಗಳಾಗಲೀ,

---

2. ಈ ಬಗೆಯ ಅಧ್ಯಯನವನ್ನು ethnomusicology ಎಂದು ಕರೆಯಲಾಗಿದೆ. ಭಾರತಕ್ಕಿಂತ ಮೊದಲೇ ಅಮೇರಿಕಾ ಮುಂತಾದ ದೇಶಗಳು ಈ ಬಗ್ಗೆ ಕೆಲಸ ಆರಂಭಿಸಿವೆ. ನಮಗೆ ಬೇಡವಾದ್ದು ಅವರಿಗೆ ಬೇಕಾಗಿದೆ. ಅಮೇರಿಕಾದ ವಿಶ್ವವಿದ್ಯಾನಿಲಯಗಳ ಒಕ್ಕೂಟವು ಪುಣೆಯಲ್ಲಿ ಅಂತಹ ಒಂದು ಸಂಸ್ಥೆಯನ್ನು ಇತ್ತೀಚೆಗೆ ಸ್ಥಾಪಿಸಿದೆ.

3. ಡಾ|| ಕೆ.ಡಿ. ಉಪಾಧ್ಯಾಯ -'Studies in India Folk Culture' Calcutta - 1964.

ವ್ಯಾಸ ವಾಲ್ಮೀಕಿಗಳಾಗಲೀ, ಕಾಳಿದಾಸ ಭಾಸರಾಗಲೀ ಜನಪದದ ಒಂದು ಅಂಗವೇ ಆಗಿದ್ದರು. ಜನಪದರಲ್ಲಿದ್ದುದೇ ಅವರು ಕಟ್ಟಿದ ಕಾವ್ಯಗಳಿಗೆ ವಸ್ತುವಾಯಿತು. ಕವಿಗಳ ಕಾವ್ಯಸೃಷ್ಟಿ ಶೂನ್ಯದಿಂದ ಆಗಲಿಲ್ಲ. ಜನಪದರ ಬಾಯಲ್ಲಿದ್ದ ರಾಮಾಯಣ ಮಹಾಭಾರತಗಳನ್ನೇ ಅವರು ತಮ್ಮ ಕಾವ್ಯ ಭಾಷೆಯಲ್ಲಿ ಹೇಳಿದರು. ಈಗಲೂ ಹಳ್ಳಿಗರ ಬಾಯಲ್ಲಿ ಅವರದೇ ಆದ ರಾಮಾಯಣ, ಮಹಾಭಾರತಗಳಿರುವುದನ್ನು ಕಾಣಬಹುದು. ಗುಣಸಾಗರಿ, ಬಾಲನಾಗಮ್ಮ, ಕರೇಭಂಟ, ಮಲೆಯ ಮಾದೇಶ್ವರ, ಮಂಟೇಸ್ವಾಮಿ, ಎಲ್ಲಮ್ಮ, ಜುಂಜಪ್ಪ, ಮೈಲಾರಲಿಂಗ ಇತ್ಯಾದಿ ದೀರ್ಘ ಕಥನ ಕಾವ್ಯಗಳನ್ನು ಕೇವಲ ನೆನಪಿನಿಂದಲೇ ದಿನಗಟ್ಟಲೆ ಹಾಡುವ ಸಾಹಸಿಗಳು ನಮ್ಮಲ್ಲಿದ್ದಾರೆ. ಓದುಬಲ್ಲವರಲ್ಲದ ಕಾರಣ ಇವರು ಪುಸ್ತಕಗಳಿಂದ ಕಲಿತರೆಂದು ಹೇಳಲಾಗುವುದಿಲ್ಲ. ಅವು ಅವರ ಕಂಠದಲ್ಲಿ ಶತಶತಮಾನಗಳ ಕಾಲದಿಂದ ಉಳಿದು ಬಂದಂಥವುಗಳು. ಇವನ್ನು ಕೇಳಿಯೇ ನಮ್ಮ ಕವಿಗಳು ತಮ್ಮ ಕಾವ್ಯ ರಚಿಸಿದರು ಎಂದು ಹೇಳಬಹುದು [3ಅ].

೩. ಜನಪದ ಸಂಗೀತ ಮತ್ತು ಶಿಷ್ಟ ಸಂಗೀತ

ಜನಪದರಿಗೆ ಎಂದಿಗೂ ರಾಜಾಶ್ರಯವಿರಲಿಲ್ಲ. ಅವರಿಗೆ ಅರಸು ಗಿರಸುಗಳ ಋಣವೂ ಇರಲಿಲ್ಲ. ಅವರು ಯಾರ ಹಂಗೂ ಇಲ್ಲದೆ ಬಾಳಿದರು; ತಮಗೆ ತಿಳಿದಂತೆ ಹಾಡಿದರು, ಕುಣಿದರು. ಈ ಕಾರಣವೇ ಅವರದು ಹೃದಯ ಸಂಗೀತ; ಶಿಷ್ಟ ಸಂಗೀತ, ಬುದ್ಧಿ ಸಂಗೀತ.

ಜನಪದರು ಎಷ್ಟು ಅಂತರ್ಮುಖಿಗಳೋ ಅಷ್ಟೇ ಬಹಿರ್ಮುಖಿಗಳು. ಅವರು ಹಳ್ಳಿಯವರಾಗಲಿ ಆದಿವಾಸಿಗಳಾಗಲಿ ಒತ್ತಡಕ್ಕೆ ಸಿಲುಕಿದಾಗ ತಮ್ಮ ಭಾವನೆ ವ್ಯಕ್ತಪಡಿಸಿಬಿಡುತ್ತಾರೆ. ಉದಾಹರಣೆಗೆ, ಅವರ ಹತ್ತಿರದವರೊಬ್ಬರು ತೀರಿಕೊಂಡರೆಂದು ಇಟ್ಟುಕೊಳ್ಳೋಣ. ಆಗ ಅವರು ಎದೆ ತಟ್ಟಿಕೊಂಡು ಬಾಯಿ ಬಡಿದು ಕೊಂಡು ಗೋಳೋ ಎಂದು ಊರಿಗೆಲ್ಲಾ ಕೇಳುವಂತೆ ಅಳುತ್ತಾರೆ. ಆದರೆ ಕಲಿತ ನಗರದ ಜನ ನೆರೆಮನೆಗೂ ಗೊತ್ತಾಗದ ರೀತಿಯಲ್ಲಿ ಮೌನವಾಗಿ ದುಃಖಿಸುತ್ತಾರೆ. ಹೀಗಾಗಿ ಜನಪದರ ಹಾಡು, ಕುಣಿತ, ಕಲೆ - ಇವೆಲ್ಲ ನೇರ ಹಾಗು ಸರಳ. ಇವನ್ನು ಅವರ ಸಂಗೀತದಲ್ಲಿಯೂ ಕಾಣಬಹುದು. ಭಾವುಕರಾದ ಅವರದು ಮಳೆ ಹೋದಾಗ ಹರಿದುಬರುವ ತೊರೆಯೋ ನದಿಯೋ ಇದ್ದಂತೆ. ಅದು ಯಾರ ಅಂಕೆಗೂ ಒಳಪಡದೆ ಸ್ವಚ್ಛಂದವಾಗಿ ಸಾಗುತ್ತದೆ. ಆದರೆ ಶಿಷ್ಟರ ಸಂಗೀತ [4] ಇಂಜಿನಿಯರುಗಳು ನಿರ್ಮಿಸಿದ ಕಾಲುವೆಗಳಲ್ಲಿ ಹರಿಯುವ ನೀರಿನಂತೆ. ಅದು ಅವರೇ ಕಟ್ಟಿದ ಜಲಾಶಯಗಳಲ್ಲಿ ನಿಂತು, ತೂಬೆತ್ತಿದಾಗ ಹರಿಯುತ್ತದೆ. ಆದರೆ ಶಿಷ್ಟ ಸಂಗೀತವೂ ಈ ಕಟ್ಟುಪಾಡಿಗೆ ಒಳಗಾಗಿರಲಿಲ್ಲವೆಂಬುದು ಮುಂದಿನ ಮಾತುಗಳಿಂದ ಸ್ಪಷ್ಟವಾಗುತ್ತದೆ :

"It is not to be supposed that it (classical music) arose as a result of conscious and deliberate application of the principles of accoustics or mathematics but as the ideal

---

3ಅ. At the foundation of the music any land is the 'unsophiticated' art of the people, the folk music. For it is out of this martix, which often is undistinguishable from mere expletives in the most premevel stage, has grown the art music of the 'civilied' (An introduction to Indian Music by B. Chaitanya Deva)

4. ಶಿಷ್ಟ ಸಂಗೀತ -'Classical Music' ಅನ್ನು ನಾವು ಶಾಸ್ತ್ರೀಯ ಸಂಗೀತ ಎಂದು ಕರೆಯದೆ 'ಶಿಷ್ಟ ಸಂಗೀತ' ಎಂದು ಕರೆದಿದ್ದೇವೆ. ಅದನ್ನು 'ಶಾಸ್ತ್ರೀಯ ಸಂಗೀತ' ಎಂದು ಕರೆದ ಪಕ್ಷದಲ್ಲಿ ಜನಪದ ಅಶಾಸ್ತ್ರೀಯ ಎಂಬ ಅರ್ಥಕ್ಕೆ ಎಡೆ ಮಾಡಿಕೊಟ್ಟಂತಾಗುತ್ತದೆ. ಆದರೆ ಜನಪದ ಸಂಗೀತವೂ ಶಾಸ್ತ್ರೀಯವೇ ತಾನೆ.

refinement of spontaneous evolution from the rich experience of folk and natural music which the Aryan forest dwellers of pre Vedic ages were well conversant...." [5]

ಅಂದರೆ, ಶಿಷ್ಟಸಂಗೀತದ ಇಂತಿಂಥ ಹಾಡಿಗೆ ಇಂತಿಂಥ ಸ್ವರ ರಾಗ ತಾಳ ಎಂದು ಬುದ್ಧಿಪೂರ್ವಕವಾಗಿ ಲೆಕ್ಕಾಚಾರವಾಗಿ ಸೂತ್ರೀಕರಿಸಿ ಹೇಳಲಿಲ್ಲ. ಅವೆಲ್ಲಾ ಆರ್ಯರಿಗಿಂತ ಇಲ್ಲಿ ಮೊದಲೇ ನೆಲೆಸಿದ್ದ ಜನಪದರ ಸಂಗೀತದ ಫಲ.

ಇದು ನೂರಕ್ಕೆ ನೂರೂ ನಿಜವಾದ ಸಂಗತಿ. ಏಕೆಂದರೆ, ಜನಪದರ ಧಾಟಿಗಳನ್ನು ಯಥೇಚ್ಛವಾಗಿ ಬಳಸಿಕೊಂಡ ಪುರಂದರ, ಕನಕದಾಸಾದಿಗಳು ತಮ್ಮ ಕೀರ್ತನೆಗಳಿಗೆ ಯಾವ ರಾಗ ತಾಳಗಳನ್ನೂ ಸೂಚಿಸಿರಲಿಲ್ಲ. ಅದು ಈಚೆಗೆ ಆದ ಕೆಲಸ. ತ್ಯಾಗರಾಜರಂತಹ ವಾಗ್ಗೇಯಕಾರರೂ ಸಹ ತಮ್ಮ ದಿವ್ಯನಾಮ ಸಂಕೀರ್ತನೆಗಳಿಗೂ ಗೇಯ ಪ್ರಬಂಧಗಳಿಗೂ ಜನಪದ ಸಂಗೀತದ ಧಾಟಿಗಳನ್ನೇ ಬಳಸಿಕೊಂಡರೆಂದು ಸಂಗೀತ ಶಾಸ್ತ್ರಜ್ಞರೇ ಹೇಳುತ್ತಾರೆ. ಯಾವುದಕ್ಕೂ ದೇಸಿ ಮತ್ತು ಮಾರ್ಗ ಎಂದು ಉಂಟಷ್ಟೆ. ಹೇಗೆ ಹಳ್ಳಿಯಿಂದ ದಿಳ್ಳಿಯೋ ಹಾಗೆಯೇ ದೇಸಿ ಸಂಗೀತದಿಂದ ಮಾರ್ಗ ಸಂಗೀತ. ಆದರೆ ಮಾರ್ಗ ಸಂಗೀತ ಶಿಷ್ಟ ಸಂಗೀತವಾಗಿ ಅರಮನೆ ಗುರುಮನೆಗಳಲ್ಲಿ ನಗರಗಳಲ್ಲಿ ಬೆಳೆದು ಹೆಸರಾಯಿತು. ದೇಶಿ ಸಂಗೀತ ಕಾಡಿನ ಕುಸುಮವಾಗಿ ಮುಡಿವವರಿಲ್ಲದೆ ಉದುರಿಹೋಗುತ್ತಾ ಬಂತು. ಅದರ ಕಡೆ ಯಾರೂ ಗಮನಹರಿಸಲಿಲ್ಲ.

೪. ಜನಪದ ಸಂಗೀತ ಹಾಗೂ ಸಿನೆಮಾ ಸಂಗೀತ

ಶಿಷ್ಟ ಸಂಗೀತ ಜನಪದ ಸಂಗೀತದಿಂದ ಪ್ರಯೋಜನ ಪಡೆದರೂ ಅದನ್ನು ತನ್ನದಾಗಿ ಮಾಡಿಕೊಳ್ಳಲಿಲ್ಲ. ಅದು ಜನಸಾಮಾನ್ಯರ ಮಟ್ಟಕ್ಕೆ ಇಳಿಯಲೇ ಇಲ್ಲ. ಆದುದರಿಂದ ಅದು ಶಿಷ್ಟ ಸಂಗೀತ ಅಥವಾ ಮಡಿ ಸಂಗೀತವಾಯಿತು. ಆದರೆ ಅದೇ ಸಿನೆಮಾ ಹಳ್ಳಿ ದಿಳ್ಳಿಗಳಲ್ಲೆಲ್ಲಾ ಮೆರೆಯಿತು.

ಸಿನೆಮಾ ಸಂಗೀತ ಅಶಾಸ್ತ್ರೀಯ ಸಂಗೀತವೇನಲ್ಲ. ಅದೂ ಶಾಸ್ತ್ರೀಯವೇ, ಅಂದರೆ ಶ್ರುತಿ ಲಯಬದ್ಧವಾದುದೇ. ಅದರ ಸಾಹಿತ್ಯ ಕೇಳಲು ಅಷ್ಟೇನೂ ಅಸಭ್ಯವಲ್ಲದಿದ್ದರೂ ಪರದೆಯ ಮೇಲೆ ಪಾತ್ರಧಾರಿಗಳು ಮಾಡುವ ಅಭಿನಯದಿಂದಾಗಿ ಅದು ಅಸಹ್ಯವಾಗಿಯೂ, ಅಸಭ್ಯವಾಗಿಯೂ ಕಾಣುತ್ತದೆ. ಕಾಸಿನ ಆಸೆಗಾಗಿ ಸಿನೆಮಾ ತಯಾರಕರು ಹಾಡಿಸದ ಹಾಡಿಲ್ಲ. ಮಾಡಿಸದ ಕೆಲಸವಿಲ್ಲ. ಕೆಲವು ವೇಳೆ ಶಿಷ್ಟ ಸಂಗೀತದ ರಾಗಗಳನ್ನೂ ಅನೇಕ ವೇಳೆ ಜನಪದದ ಸಂಗೀತದ ಧಾಟಿಗಳನ್ನೂ ಅವರು ಬಳಸಿಕೊಂಡಿದ್ದಾರೆ. ಜನಪದ ವಾದ್ಯಗಳನ್ನೂ ಸಾಕಷ್ಟು ಉಪಯೋಗಿಸಿಕೊಂಡಿದ್ದಾರೆ. ಗ್ರಾಮೀಣ ಜೀವನಕ್ಕೆ ಸಂಬಂಧಿಸಿದ ಚಿತ್ರಗಳಲ್ಲಂತೂ ಜನಪದ ಧಾಟಿಗಳು ಹಾಗೂ ವಾದ್ಯಗಳನ್ನು ಬಳಸಿಕೊಂಡು ತಮ್ಮ ಚಿತ್ರಕ್ಕೆ ಮೆರುಗು ನೀಡಿದ್ದಾರೆ. ಈವತ್ತು ಬಹು ಜನಪ್ರಿಯವಾದ ಸಿನೆಮಾ ಹಾಡುಗಳೆಂದರೆ ಜನಪದ ನುಡಿಯಲ್ಲಿ ಜನಪದ ಧಾಟಿಯಲ್ಲಿ ಹಾಡಿದ ಹಾಡುಗಳು.

ಇವನ್ನು ನಮ್ಮ ಹಳ್ಳಿಯ ಜನ ಬಹು ಆಸಕ್ತಿಯಿಂದ ಕೇಳುವುದನ್ನು ಕಂಡಿದ್ದೇವೆ. ಅಷ್ಟೇ ಅಲ್ಲ, ಆ ಸಿನೆಮಾ ಧಾಟಿಗಳಲ್ಲಿ ತಮ್ಮ ಪದಗಳನ್ನು ಹಾಡುವುದನ್ನೂ ನೋಡಿದ್ದೇವೆ. ಇದು ಸ್ವಾಭಾವಿಕವೇ. ಹುಟ್ಟಿದಂದಿನಿಂದ ಒಣ ರೊಟ್ಟಿ ಕಡಿದು ಸಾಕಾಗಿದ್ದ ಬಾಯಿ ಮಸಾಲೆ ದೋಸೆ ಸಿಕ್ಕಿದರೆ ಅದನ್ನು ಮುಕ್ಕದೆ ಬಿಡುತ್ತದೆಯೇ; ಆದರೆ ಮಸಾಲೆ ದೋಸೆ ಬಾಯಿಗೆ ರುಚಿಯಾದರೂ ಹೊಟ್ಟೆಗೆ ಕೆಟ್ಟದ್ದು - ಅದೂ ಡಾಲ್ಡಾ ಮುಂತಾದ ಎಣ್ಣೆಗಳನ್ನು ಉಪಯೋಗಿಸಿದಾಗ. ಇದನ್ನು ಸಿನೆಮಾ ತಯಾರಕರು ಅರ್ಥ

---

5. Studies in Indian Music - T.V. Subba Rao

ಮಾಡಿಕೊಳ್ಳಬೇಕು. ಜನಪದ ಸಂಗೀತದಲ್ಲಿ ನೂರಾರು ಧಾಟಿಗಳಿವೆ. ಅವುಗಳನ್ನು ಆಯಾ ಧಾಟಿಯಲ್ಲಿಯೇ ಆಯಾ ವಾದ್ಯಗಳನ್ನು ಉಪಯೋಗಿಸಿಯೇ ಹಾಡಿಸಿದರೆ ಜನಪದ ಸಂಗೀತದ ಮೂಲ ಸತ್ವವನ್ನು ಉಳಿಸಿದಂತೆಯೂ ಈಗಾಗಲೇ ಬೇಡವಾಗಿರುವ ಜನಪದ ಗೀತೆಗಳನ್ನು ಪ್ರಚಾರಪಡಿಸಿದಂತೆಯೂ ಆಗುತ್ತದೆ. ಸಿನೆಮಾ ಮಾಧ್ಯಮ ಬಹು ಪ್ರಭಾವಶಾಲಿಯಾದ ಮಾಧ್ಯಮ ಆದ್ದರಿಂದ ಒಳ್ಳೆಯದನ್ನು ನಮ್ಮ ಜನರಿಗೆ ತೋರಿಸುವ ಜವಾಬ್ದಾರಿಯನ್ನು ಅವರು ಸರಿಯಾಗಿ ನಿರ್ವಹಿಸಬೇಕಾಗಿದೆ.

೫. ಜನಪದ ಸಂಗೀತದ ವಿಶಿಷ್ಟ ಲಕ್ಷಣಗಳು

೧) ಜನಪದ ಸಂಗೀತದಲ್ಲಿ ಆಡು ನುಡಿಯೇ ಪ್ರಧಾನ. ಆ ನುಡಿಯ ಸಾಹಿತ್ಯದಲ್ಲಿ ರಚನೆಯಾದ ಹಾಡುಗಳನ್ನು ಹಾಡುವ ಧಾಟಿಯೇ ಬೇರೆ.

೨) ಜನಪದ ಸಂಗೀತದ ದನಿ - ಧಾಟಿ ಇತ್ಯಾದಿಗಳು ಒಬ್ಬರಿಂದೊಬ್ಬರಿಗೆ ಕೇಳ್ಮೆಯಿಂದ ಬಂದಂಥವುಗಳು. ಅದಕ್ಕೆ ಶಿಷ್ಟ ಸಂಗೀತದ ಕಟ್ಟುಪಾಡುಗಳಿಲ್ಲ. ಆದರೂ ಅವಕ್ಕೂ ಒಂದೊಂದು ಧಾಟಿ ಉಂಟು. ಆ ಧಾಟಿಗಳಲ್ಲಿ ಆಯಾ ಸಂದರ್ಭದಲ್ಲಿ ಮಾತ್ರ ಹಾಡಬೇಕು.

೩) ಜನಪದ ಸಂಗೀತವೂ ರಾಗ ಪ್ರಧಾನವೇ. ಆದರೆ ಹಾಡುವವರಿಗೆ ಅದು ಗೊತ್ತಿಲ್ಲ. ಯಾವ ರಾಗ, ಯಾವ ತಾಳ ಎಂದು ಅವರು ಹೇಳಲಾರರು. ಆದರೂ ಅವನ್ನು ಇಂಥ ದನಿ, ಇಂಥ ಧಾಟಿ, ಇಂಥ ಮಟ್ಟು ಎಂದು ಹೇಳುತ್ತಾರೆ. ಉದಾ: ಬೀಸುವ ದನಿ, ಸೋಬಾನೆ ದನಿ, ಕೋಲಾಟದ ಧಾಟಿ, ಯಕ್ಷಗಾನದ ಮಟ್ಟು ಹೀಗೆ.

೪) ಹಳ್ಳಿಯ ಹಾಡುಗಳು ಸಾಮಾನ್ಯವಾಗಿ ಒಂದೇ ಸ್ಥಾಯಿಯಲ್ಲಿರುತ್ತವೆ; ಮೂರು ನಾಲ್ಕು, ಬಹಳ ಅಂದರೆ ಐದು ಸ್ವರಗಳ ಬಳಕೆಯೇ ಹೆಚ್ಚು.

೫) ಜನಪದ ಸಂಗೀತ ಲಯ ಪ್ರಧಾನವಾದುದು. ಕಾರಣ, ಇದರ ಸಾಹಿತ್ಯ ಇರುವುದು ಬಹುಮಟ್ಟಿಗೆ ತ್ರಿಪದಿಯಲ್ಲಿ. ಈ ತ್ರಿಪದಿ ಸಾಹಿತ್ಯ ಹಾಡುವವರು ಬಹುಮಟ್ಟಿಗೆ ಹೆಂಗಸರು. ಹಾಡುವುದೂ ವಾದ್ಯಗಳಿಲ್ಲದೆ. ವಾದ್ಯಗಳಿಲ್ಲದೆ ಹಾಡುವಾಗ ಲಯ ಪ್ರಾಧಾನ್ಯತೆ ಪಡೆಯುತ್ತದೆ.

೬) ಜನಪದ ಸಂಗೀತವನ್ನು ಮುಮ್ಮೇಳ ಹಿಮ್ಮೇಳಗಳಲ್ಲಿ ಹಾಡಬೇಕಾದ ಕಾರಣ ರಾಗಾಲಾಪನೆ, ಗಮಕ ಇವುಗಳಿಗೆ ಅವಕಾಶವಿಲ್ಲ. ಈ ಕಾರಣ ಈ ಸಂಗೀತದಲ್ಲಿ ಒಂದು ಬಗೆಯ ಏಕ ತಾನತೆ (dullness or monotony) ಕಾಣುತ್ತೇವೆ. ಈ ಏಕತಾನತೆ ಕೊಂಚ ಮಟ್ಟಿಗೆ ನಿವಾರಣೆಯಾಗುವುದು ಸೂಕ್ತ ವಾದ್ಯಗಳ ಬಳಕೆಯಿಂದ.

೭) ಜನಪದ ಸಂಗೀತದಲ್ಲಿ ಕಂಠ ಧ್ವನಿಗೆ ಸ್ವಾತಂತ್ರ್ಯವಿದೆ. ಈ ಕಾರಣ ಅದರಲ್ಲಿ ಸ್ವಚ್ಛಂದ ಸ್ವರೂಪವಿದೆ. ಹಳ್ಳಿಗರು ತಮ್ಮ ಕಂಠವನ್ನು ಏರಿಳಿಸಿ ಸಂಗೀತದಲ್ಲಿ ಕಾಣಲಾರದ ಮಾಧುರ್ಯವನ್ನು ಒದಗಿಸುತ್ತಾರೆ. ಇದನ್ನೇ ನಾವು ಜನಪದ ಸಂಗೀತದ ಗುಟ್ಟು ಎಂದರೂ ತಪ್ಪಿಲ್ಲ. ಜನಪದ ಸಂಗೀತದ ಈ ಸ್ವಚ್ಛಂದತೆಯ ಕಾರಣ ಅದಕ್ಕೆ ಸ್ವರಗಳನ್ನು ಹಾಕುವುದು ತುಂಬಾ ಕಷ್ಟ . ಹಾಕಿದರೂ ಅದು ಕೇವಲ ಜನಪದ ರಾಗದ ಛಾಯೆಯಾಗುವುದೇ ಹೊರತು ಅದೇ ಆಗುವುದಿಲ್ಲ. ಆ ಸ್ವರಗಳಲ್ಲಿ ಹಾಡಿದರೆ ಆ ಹಾಡು ತನ್ನ ಮೂಲ ಸೊಗಡನ್ನೇ ಕಳೆದುಕೊಳ್ಳುತ್ತದೆ. ಈ ಕಾರಣ ಜನಪದ ಸಂಗೀತವನ್ನು ಕೇಳಿ ಕೇಳಿ ಅನುಸರಿಸಬೇಕು ಅಥವಾ ಅನುಕರಿಸಬೇಕೇ ಹೊರತು ಪುಸ್ತಕದಿಂದ ಕಲಿಯಲು ಆಗುವುದಿಲ್ಲ. ಆದರೂ ಧಾಟಗಳಿಗೆ ಸ್ವರಪ್ರಸ್ತಾರ ಹಾಕಿ ಇಡುವುದು ಒಳ್ಳೆಯದು. ಹಾಗೆ ಮಾಡದೇ ಹೋದರೆ ಮೂಲ ಧಾಟಿಯ ಛಾಯೆಯೂ ಆಮೇಲೆ ಸಿಕ್ಕುವುದಿಲ್ಲ.

೮) ''ಜನಪದ ಗಾಯಕರು ಲಘು ಗುರುಗಳ ನಿಯಮಗಳನ್ನು ಅಷ್ಟು ಕಟ್ಟುನಿಟ್ಟಾಗಿ ಪಾಲಿಸದೆ ತಮ್ಮ ಅನುಕೂಲಕ್ಕೆ ತಕ್ಕಂತೆ ಲಘುವನ್ನು ಗುರುವಾಗಿಯೂ, ಗುರುವನ್ನು ಲಘುವಾಗಿಯೂ ಬದಲಾಯಿಸಿಕೊಂಡು ಹಾಡಿಬಿಡುತ್ತಾರೆ....'' [6]

೯) ಕೆಲಸ ಮಾಡುವಾಗ, ಶಾಸ್ತ್ರ ಸಂಬಂಧ ನಡೆಯುವಾಗ, ಪೂಜೆ ಪುನಸ್ಕಾರಗಳು ಆಗುವಾಗ ಜನಪದರು ಹಾಡಿಕೊಳ್ಳುವುದರಿಂದ ಅವರ ಸಂಗೀತದ ಸವಿಯನ್ನು ಆಯಾ ಸಂದರ್ಭದಲ್ಲಿ ಹಾಡುವಾಗಲೇ ಕೇಳಿ ಆನಂದಿಸಬೇಕು. ಸಂದರ್ಭವಿಲ್ಲದೆ ಹಾಡಿದ ಹಾಡುಗಳನ್ನು ಕೇಳಿ ಆ ಸಂಗೀತದ ಬಗ್ಗೆ ತೀರ್ಮಾನಕ್ಕೆ ಬರಬಾರದು. ಶಿಷ್ಟ ಸಂಗೀತದಲ್ಲಿ ಬಹು ಮುಖ್ಯವಾದ ಮನೋಧರ್ಮವನ್ನು ನಾವು ಜನಪದ ಸಂಗೀತದಲ್ಲೂ ಕಾಣಬಹುದು. ಆದರೆ ಅದು ಆಯಾ ಸಂದರ್ಭದಲ್ಲಿ ಹಾಡಿದಾಗ ಮಾತ್ರ [7].

೬. ಜನಪದ ಸಂಗೀತದಲ್ಲಿ ಗುರುತಿಸಲ್ಪಟ್ಟ ಕೆಲವು ರಾಗಗಳು

ಜನಪದ ಸಂಗೀತದ ರಾಗಗಳನ್ನು ಗುರುತಿಸುವ ಕೆಲಸ ನಡೆದೇ ಇಲ್ಲ ಎನ್ನಬಹುದು. ಇದಕ್ಕೆ ಒಂದು ಕಾರಣ ಅದು ಅಷ್ಟು ಸುಲಭವಾದ ಕೆಲಸವಲ್ಲದಿರುವುದು. ಆದರೂ ಕೊಂಚ ಕೆಲಸ ಈ ಬಗ್ಗೆ ನಡೆದಿದೆ. 'ಜನಪದ ಸಂಗೀತ ಬೇರು, ಶಿಷ್ಟ ಸಂಗೀತ ಮೇರು' ಎಂದು ಡಾ|| ರಾ. ಸತ್ಯನಾರಾಯಣ ಹೇಳಬೇಕಾದರೆ ಯಾವ ಬೇರಿನಿಂದ ಯಾವ ಮೇರು ಎಂಬುದನ್ನು ಅಧ್ಯಯನ ದೃಷ್ಟಿಯಿಂದಲಾದರೂ ಸಂಶೋಧಿಸಬೇಕಾಗಿದೆ. ಅಂಥ ಸಂಶೋಧನೆ ನಡೆದಿಲ್ಲ. ಮೇಲೆ ಮೇಲೆ ಅಷ್ಟಿಷ್ಟು ನಡೆದಿದೆ. ಅದನ್ನು ಈಗ ಗಮನಿಸೋಣ.

ಡಾ|| ಶಿವರಾಮ ಕಾರಂತರು ಹಳ್ಳಿಯ ಹಿರಿಯರು ಮುಂಜಾನೆ ಎದ್ದು ಹಾಡುವ ಉದಯರಾಗಗಳಲ್ಲಿ ಮೋಹನ, ಭೂಪಾಲಿ, ಆರಭಿ, ರೇಗುಪ್ತಿಯಂತಹ ರಾಗಗಳನ್ನು ಕಾಣಬಹುದೆಂದು ಹೇಳುತ್ತಾರೆ. ಭೂತಾನ ಪಾಡ್ದನಗಳಲ್ಲಿ ಸಾಮಗಾನದ ಸಂಚಾರವನ್ನೂ, ಜೋಗುಳದ ಹಾಡುಗಳಲ್ಲಿ ನವರೋಜು ರಾಗವನ್ನೂ, ಜೋಗುಳದ ದ್ವಿಪದಿ ರಚನೆಯಲ್ಲಿ ಬರುವ ಜೋ ಜೋ ಎಂಬ ಸೊಲ್ಲುಗಳಲ್ಲಿ ಹಿಂದೂಸ್ಥಾನೀ ಜೋಗ್ ರಾಗವನ್ನೂ, ಹಲವಾರು ಸೋಬಾನೆ ಹಾಡುಗಳ ಅಧಿಕ ಭಾಗಗಳಲ್ಲಿ ಮಧ್ಯಮಾವತಿ, ಮೋಹನ ರಾಗಗಳನ್ನೂ, ಎಲ್ಲರೂ ಕೂಡಿ ಹಾಡುವ ಸೊಲ್ಲಾದ 'ಶೋಬಾನೆ' ಎಂಬುದರಲ್ಲಿ ನವರೋಜನ್ನೂ, ದೇವಾಲಯಗಳಲ್ಲಿ ಹಾಡುವ ಮಂಗಳ ಗೀತೆಗಳಲ್ಲಿ ಧವಳಾರ ರಾಗವನ್ನೂ ಗುರುತಿಸಬಹುದು ಎಂದಿದ್ದಾರೆ [8].

೧೯೭೪ರಲ್ಲಿ ಮಾಡಿದ ಒಂದು ರೇಡಿಯೋ ಭಾಷಣದಲ್ಲಿ ಶ್ರೀ ಎಂ.ಡಿ.ಪಾರ್ಥಸಾರಥಿ ಎಂಬುವರು ಶಾಸ್ತ್ರೀಯ ಸಂಗೀತಕ್ಕೆ ಜನಪದ ಸಂಗೀತದ ರಾಗಗಳು ಅಡಿಪಾಯ ಎಂದು ಹೇಳುತ್ತಾ, ಬೆಟ್ಟಕುರುಬರು ದುಡಿ ಬಾರಿಸಿಕೊಂಡು ಹಾಡುವ ಪದಗಳಲ್ಲಿ ಖರಹರಪ್ರಿಯ ರಾಗವನ್ನೂ, ಲಂಬಾಣಿಗರ ಮತ್ತು ಹಕ್ಕಿಪಿಕ್ಕರ ಹಾಡುಗಳಲ್ಲಿ ಸಹ ಅದೇ ರಾಗವನ್ನೂ ಗುರುತಿಸಬಹುದು ಎಂದಿದ್ದಾರೆ. ಅವರು ಮುಂದುವರಿದು, ಪುರಂದರದಾಸರ ಕಾಲದಿಂದ ಮಾಯಾಮಾಳವಗೌಳ ರಾಗವೇ

---

6. Folklore and Folk Music of Uttarpradesh - Dr. K.D. Upadhyaya 'Folk Music and folklore'. Published by Folk Music and folklore Research institute, Calcutta(1977).

7. ಸೋಬಾನೆ ಚಿಕ್ಕಮ್ಮ ಹೇಳುತ್ತಿದ್ದಳು, 'ಯಮದೋನ ಮ್ಯಾಲೆ ಗದ್ದೆ ನಾಟಿ ಹಾಕುವಾಗ ಹಾಡಿಬಿಟ್ರೆ, ಎಲ್ರ ಕಣ್ಣಲ್ಲೂ ನೀರು ಸುರದೋಗೋವು' ಎಂದು.

8. ಜಾನಪದ ಗೀತೆಗಳು - ಕೆ. ಶಿವರಾಮ ಕಾರಂತ, ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟಣೆ - ೧೯೬೬.

ಪ್ರಧಾನವಾಗಿತ್ತೆಂದೂ, ಆ ರಾಗವನ್ನು ಗಾಡಿಪದ, ಸುಗ್ಗಿ ಕುಣಿತ, ಕೋಲಾಟ, ಕರಪಾಲ ನೃತ್ಯಗಳಲ್ಲಿಯೂ ಗುರುತಿಸಬಹುದೆಂದು ಹೇಳಿದ್ದಾರೆ. ತಂದಾನ ತಾನದ ಗದ್ದೆ ಕೊಯ್ಯುವ ಪದ, ನಾಟಪದ, ವೀರಕುಣಿತ ಮುಂತಾದವುಗಳಲ್ಲಿ ಶಂಕರಾಭರಣ, ಗುಮಟೆಪದದಲ್ಲಿ ತೋಡಿ, ದಂಬಡಿ ನುಡಿಸಿಕೊಂಡು ಹಾಡುವ ತತ್ವಪದಗಳಲ್ಲಿ ಸಿಂಧುಭೈರವಿ, ಲಾವಣಿಯಲ್ಲಿ ಚಕ್ರವಾಕ ರಾಗಗಳನ್ನು ಕಾಣಬಹುದೆಂದು ತಿಳಿಸಿ ಎಲ್ಲಾ ಜನಪದ ಗೀತೆಗಳಲ್ಲಿ ಐದು ಸ್ವರಗಳ ರಾಗವೇ ಮುಖ್ಯ ಎಂದಿದ್ದಾರೆ.

'ಶಾಸ್ತ್ರೀಯ ಸಂಗೀತಕ್ಕೆ ಜನಪದ ಸಂಗೀತದ ಕೊಡುಗೆ' ಎಂಬ ಲೇಖನದಲ್ಲಿ ಶ್ರೀ ಬೆಂಗಳೂರು ಎಸ್. ಮುಕುಂದ ಅವರು ಕರ್ನಾಟಕ ಸಂಗೀತದ ಸುಪ್ರಸಿದ್ಧ ತೋಡಿ, ಕಾಮವರ್ಧಿನಿ, ಕಾಂಭೋಜಿ, ಭೈರವಿ ಇತ್ಯಾದಿ ರಾಗಗಳು ದ್ರಾವಿಡ ಸಂಪ್ರದಾಯ ಸಂಗೀತದಿಂದ ಪೋಷಿತವಾಗಿ ದೇವಸ್ಥಾನಗಳ ಸಂಗೀತದಲ್ಲಿ ಬೆಳವಣಿಗೆ ಹೊಂದಿದ ರಾಗಗಳಾಗಿವೆ ಎನ್ನುತ್ತಾರೆ. ಮುಂದುವರಿದು, ಕೊರವಂಜಿಗಳ ಮೂಲಕ ಬಹಳ ಹಳೆಯ ಕಾಲದಲ್ಲಿ ಪ್ರಸಿದ್ಧಿಯಾದ ರಾಗವೇ ಪುನ್ನಾಗವರಾಳಿ (ಮುಗುಡಿಯರಾಗ). ಕೆಲವು ಬಗೆಯ ಗುಡ್ಡವಾಸಿ ಕಣಿ ಹೇಳುವವರ ಜನಪದ ಸಂಗೀತವೇ ಆನಂದ ಭೈರವಿ ರಾಗದ ತಳಹದಿ ಎಂದು ಊಹಿಸಲಾಗಿದೆ ಎಂದು ಬರೆಯುತ್ತಾರೆ. ಲಾಲಿ ಹೇಳಿ ನಿದ್ರೆ ಮಾಡಿಸುವ ಹೆಣ್ಣುಮಕ್ಕಳ ಗೀತೆಗಳಿಂದ ನೀಲಾಂಬರಿ ಮತ್ತು ನವರೋಜು (ಲಾಲಿ ಮಟ್ಟು) ರಾಗಗಳೂ, ರಂಗವಲ್ಲಿ ಹಾಕುವಾಗ ಹಾಡುವ ಪದಗಳಿಂದ ಭೂಪಾಳಿ, ಭೌಳಿ ಮತ್ತು ರೇವಗುಪ್ತಿ ರಾಗಗಳು ಪ್ರಭಾತ ರಾಗಗಳಾಗಿಯೂ ಬೆಳೆದುಬಂದವೆಂದು ತಿಳಿಸುತ್ತಾರೆ [9].

ಶ್ರೀಮತಿ ಎಚ್.ಆರ್. ಲೀಲಾವತಿ ಅವರು ಜನಪದ ಸಂಗೀತದಲ್ಲಿ ಕಾಣಬರುವಂತಹ ರಾಗಗಳೆಂದರೆ ಆನಂದ ಭೈರವಿ, ನೀಲಾಂಬರಿ, ನವರೋಜು, ಕುರಂಜಿ, ಪುನ್ನಾಗವರಾಳಿ, ತೋಡಿ, ಆಹಿರಿ, ನಾದನಾಮಕ್ರಿಯಾ, ಸಾವೇರಿ, ಪೀಲು, ಪಹಾಡಿ ಇತ್ಯಾದಿಗಳೆಂದೂ, ಹೆಚ್ಚಾಗಿ ಬಳಸಲಾದ ತಾಳಗಳೆಂದರೆ ಆದಿ ಮತ್ತು ರೂಪಕಗಳೆಂದೂ ಹೇಳುತ್ತಾರೆ [10].

ಇನ್ನೂ ಮುದ್ರಣವಾಗದ ಡಾ|| ಎಲ್.ಜಿ. ಸುಮಿತ್ರ ಅವರ 'ಮಹಾ ಪ್ರಬಂಧ' (Thesis) ದಲ್ಲಿ ಜನಪದ ಗೀತೆಗಳ ರಾಗಗಳಾದರೂ ಯಾವ ಕಟ್ಟುಪಾಡಿಗೂ ಒಳಪಡದೆ ಸಹಜ ಸುಂದರವಾಗಿ ರೂಪುಗೊಂಡವು, ಹೀಗೆ ತಾವು ರೂಪಿಸಿದ ದನಿಗಳಲ್ಲಿ ಹಳ್ಳಿಗರು ಕಂಡುಕೊಂಡ ಮಾಧುರ್ಯವನ್ನು ಎಷ್ಟು ಹೊಗಳಿದರೂ ತೀರದು. ಒಂದೊಂದು ಹಳ್ಳಿಯಲ್ಲೂ ಇಂದಿಗೂ ವಿಧವಿಧವಾದ ದನಿಗಳು ಪ್ರಚಾರದಲ್ಲಿವೆ ಎಂದು ಹೇಳುತ್ತಾ, 'ರಾಗ' ಎನ್ನುವ ಪದಕ್ಕೆ ಸಂಗೀತ ಶಾಸ್ತ್ರದಲ್ಲಿ ಚೆನ್ನಾಗಿ ಸೂತ್ರೀಕರಣ ಮಾಡಿರುವ ವ್ಯಾಪ್ತಿಯಿದೆಯೆಂದೂ, ಆ ಸೂತ್ರೀಕರಣದೊಂದಿಗೆ ಜನಪದ ಹಾಡುಗಳನ್ನು ಮೇಳ ಮಾಡಲಾಗುವುದಿಲ್ಲವೆಂದೂ, ಆದ್ದರಿಂದ ಜನಪದ ಗೀತೆಗಳ ರಾಗ ಧಾಟಿಗಳನ್ನೂ ವರ್ಣಮಟ್ಟುಗಳನ್ನೂ ಅಂದರೆ Folk Melody ಗಳ Tune ಗಳನ್ನು ಕುರಿತು ಬರೆಯುವಾಗ 'ದನಿ' ಎಂಬ ಪದವನ್ನೇ ಉಪಯೋಗಿಸಿರುವುದಾಗಿ ಹೇಳಿದ್ದಾರೆ.

ಮೇಲಿನ ಮಾತುಗಳಿಂದ ಜನಪದ ಗೀತ - ಸಂಗೀತದ 'ರಾಗಗಳನ್ನೂ ದನಿಗಳನ್ನೂ ಗುರುತಿಸುವ ಕೆಲಸ ಇನ್ನೂ ಆಗಬೇಕಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಮೇಲೆ ಹೇಳಿದ ಒಬ್ಬೊಬ್ಬರೂ ತಮ್ಮ ತಮ್ಮ ಕಿವಿಗೆ ಬಿದ್ದ ಜನಪದ ಗೀತೆಗಳನ್ನು, ಬಹು ಮಟ್ಟಿಗೆ ಸಂಪ್ರದಾಯ ಗೀತೆಗಳನ್ನು, ಗಮನಿಸಿ ಅವು ಇಂತಿಂಥ ರಾಗದಲ್ಲಿವೆ ಎಂದು ಹೇಳಿದ್ದಾರೆ. ಆದರೆ ಜನಪದ ಗೀತೆಗಳದು ದೊಡ್ಡ ಸಾಗರ. ಆ ಸಾಗರದ ಆಳ - ಅಗಲಗಳನ್ನು ಇನ್ನೂ ತಿಳಿಯಬೇಕಾಗಿದೆ. ಕರ್ನಾಟಕದಲ್ಲಿ ಮತ್ತು ಅದಕ್ಕೆ ತಾಗಿಕೊಂಡಿರುವ ಆಂಧ್ರಪ್ರದೇಶ, ಮಹಾರಾಷ್ಟ್ರ ಮುಂತಾದ ಗಡಿ ರಾಜ್ಯಗಳ ಬೇರೆ ಭಾಷೆಗಳಲ್ಲಿ ಇರುವ ಜನಪದ ಸಂಗೀತದ

---

9. 'ಜಾನಪದ ಜಗತ್ತು' - ಸಂಪುಟ ೨ ಸಂಚಿಕೆ ೪.

10. 'ಜಾನಪದ ಜಗತ್ತು' - ಸಂಪುಟ ೨ ಸಂಚಿಕೆ ೨.

ಧ್ವನಿಮುದ್ರಿಕೆಗಳನ್ನು ನಮ್ಮ ಮುಂದಿಟ್ಟುಕೊಂಡು ಅಧ್ಯಯನ ನಡೆಸಬೇಕಾಗಿದೆ. ಈ ದಿಸೆಯಲ್ಲಿ ನಾವು ಒಂದು ಹೆಜ್ಜೆ ಇಟ್ಟಿದ್ದೇವೆ. ಸಾವಿರಾರು ಗಂಟೆಗಳ ಕಾಲ ಕೇಳಬಹುದಾದಷ್ಟು ಜನಪದ ಗೀತೆಗಳನ್ನು ಧ್ವನಿಮುದ್ರಣ ಮಾಡಿಕೊಂಡಿದ್ದೇವೆ. ಹೀಗೆ ಮಾಡುವಾಗ ಯಾರ್‍ಯಾರ ಬಾಯಲ್ಲಿ ಏನೇನು ಸಾಹಿತ್ಯವಿದೆ, ಏನೇನು ಧಾಟಿಗಳಿವೆ ಎಂಬುದನ್ನು ಹಾಡಿಸಿದ್ದೇವೆ. ಮುಂದಿನ ಅಧ್ಯಯನ, ಸಂಶೋಧನೆಗಳಿಗೆ ಇವು ತುಂಬಾ ಅನುಕೂಲವಾಗುತ್ತವೆ.

ಈಗ ನಾವು ಆ ಧ್ವನಿಮುದ್ರಿಕೆಗಳ ಒಂದು ವರ್ಗೀಕರಣ ಮಾಡಲು ಯತ್ನಿಸಿದ್ದೇವೆ. ಈ ವರ್ಗೀಕರಣವನ್ನು ಜನಪದ ಸಂಗೀತದ ದೃಷ್ಟಿಯಿಂದ ಮಾಡಲಾಗಿದೆ. ಹೀಗೆ ಮಾಡುವಲ್ಲಿ ಯಾವ ಹಾಡು ಯಾವ ರಾಗ ತಾಳದಲ್ಲಿದೆ ಎಂದು ಶಿಷ್ಟ ಸಂಗೀತದ ರಾಗ ತಾಳಗಳಿಗೆ ತಾಳೆ ಹಾಕುವುದಕ್ಕೆ ಹೋಗಿಲ್ಲ. ಅದು ಅಷ್ಟು ಸುಲಭವಾದ ಕೆಲಸವೂ ಅಲ್ಲ. ಆದರೆ ಆ ಕೆಲಸಕ್ಕೆ ನಾವು ಮಾಡಿರುವ ವರ್ಗೀಕರಣ ತುಂಬಾ ಅನುಕೂಲವಾಗುವುದರಲ್ಲಿ, ಸಂದೇಹವಿಲ್ಲ. ಯಾವ ಯಾವ ಬಗೆಯ ಹಾಡುಗಳಿವೆ. ಅವನ್ನು ಯಾವ ಯಾವ ಸಂದರ್ಭದಲ್ಲಿ ಹಾಡುತ್ತಾರೆ, ಅವುಗಳ ದನಿ ಧಾಟಿ ಮಟ್ಟುಗಳು ಯಾವುವು ಎಂದು ನಾವು ಗುರುತಿಸಿದ್ದೇವೆ. ಇದೇ ಒಂದು ದೊಡ್ಡ ಕೆಲಸ ಎಂಬುದರಲ್ಲಿ ಸಂದೇಹವಿಲ್ಲ. ಏಕೆಂದರೆ, ಕೇವಲ ಬಾಯಲ್ಲಿರುವ ಗೀತೆಗಳಾಗಲೀ ಅಥವಾ ಮುದ್ರಿತ ಪುಸ್ತಕಗಳಲ್ಲಿರುವ ಗೀತೆಗಳಾಗಲೀ ಅವನ್ನು ಹಾಡುವ ಬಗೆ ಏನೆಂಬುದನ್ನು ಧ್ವನಿಮುದ್ರಕೆಗಳಿಂದಲೇ ತಿಳಿಯಬೇಕಾಗುತ್ತದೆ. ಈ ಧ್ವನಿ ಮುದ್ರಿಕೆಗಳೂ ಹಾಡುವವರೂ ಇಲ್ಲದೇ ಹೋದಾಗ ಎಂತಹ ಅನಾಹುತ ಆಗುವುದೆಂಬುದನ್ನು ಊಹಿಸಲೂ ಸಾಧ್ಯವಿಲ್ಲ. ಅಲ್ಲದೆ ಜನಪದ ಸಂಗೀತವನ್ನು ಅಧ್ಯಯನ ಮಾಡುವವರಿಗೆ ಕರ್ನಾಟಕ ಜಾನಪದ ಟ್ರಸ್ಟಿನ ಧ್ವನಿಮುದ್ರಿಕೆಗಳಲ್ಲದೆ ವಿಡಿಯೋ ಚಿತ್ರಗಳು (ಧ್ವನಿ ಸಮೇತ) ಮತ್ತು ಜಾನಪದ ವಸ್ತು ಸಂಗ್ರಹಾಲಯದ ವಾದ್ಯಗಳು ತುಂಬಾ ಸಹಾಯವಾಗುತ್ತದೆ.

೭. ತ್ರಿಪದಿ ಮತ್ತು ಗೀತ ಪ್ರಕಾರಗಳು

ತ್ರಿಪದಿ ಕನ್ನಡದ ಗಾಯತ್ರಿ ಎಂಬ ಮಾತು ನೂರಕ್ಕೆ ನೂರು ಸತ್ಯ. ಜನಪದ ಸಾಹಿತ್ಯ ಹಾಗು ಸಂಗೀತವನ್ನು ಗಮನಿಸಿದರಂತೂ ಅದು ಸತ್ಯಸ್ಯ ಸತ್ಯ. ಈ ಮೂರು ಸಾಲಿನ ಛಂದಸ್ಸಿನ ಸೃಷ್ಟಿ ಹೇಗಾಯಿತೋ ಗೊತ್ತಿಲ್ಲ. ಬಹುಶಃ ಬೇರೆ ಭಾಷೆಗಳಲ್ಲಿ ಇಲ್ಲದ ಈ ಛಂದಸ್ಸು ಕನ್ನಡಕ್ಕೇ ವಿಶಿಷ್ಟ ಕೊಡುಗೆ. ಈ ಛಂದಸ್ಸು ಇಲ್ಲದೇ ಹೋಗಿದ್ದರೆ ನಮ್ಮ ಜನಪದ ಸಾಹಿತ್ಯವೂ ಸಂಗೀತವೂ ಬಡವಾಗುತ್ತಿದ್ದುವೆಂದೇ ಹೇಳಬೇಕು. ಅದರ ಪ್ರಾಸ ಹಾಗೂ ಆವರ್ತನೆಗಳು ನೆನಪಿಗೆ ಸುಲಭ ಸಾಧನವಾಗಿ ಹಾಡಿಗೆ ಅನುಕೂಲ ಮಾಡಿಕೊಟ್ಟು ನಮ್ಮ ಸಾಹಿತ್ಯ - ಸಂಗೀತವನ್ನು ಶ್ರೀಮಂತಗೊಳಿಸಿವೆ. ಕಿರಿದರಲ್ಲಿ ಹಿರಿದರ್ಥವನ್ನು ಕೂಡಿಟ್ಟು ಕೊಳ್ಳುವ ಸಾಮರ್ಥ್ಯ ತ್ರಿಪದಿಗೆ ಮಾತ್ರ ಉಂಟು. ಕನ್ನಡದ ಎರಡಕ್ಷರದ ನುಡಿಯಲ್ಲಿ ನಮ್ಮ ಹಳ್ಳಿಗರು ಅದರಲ್ಲೂ ಹೆಣ್ಣು ಮಕ್ಕಳು ಹಾಡಿನ ಸೂರೆಯನ್ನೇ ಮಾಡಿದರು; ದನಿ - ಧಾಟಿಗಳ ಸುಗ್ಗಿಯನ್ನೇ ಕಂಡರು. ಕನ್ನಡದ ಆಡುನುಡಿಯೇ ತ್ರಿಪದಿಯ ನಡೆಗೆ ಚಾಲನೆ. ಅಲ್ಲದೆ ಆ ನುಡಿಯಲ್ಲಿ ಬರೆದ ತ್ರಿಪದಿಯೇ ನಿಜವಾದ ತ್ರಿಪದಿ.

ಜನಪದ ಗೀತ - ಸಾಹಿತ್ಯದಲ್ಲಿ ತ್ರಿಪದಿಯದು ಬಹು ದೊಡ್ಡ ಪ್ರಕಾರ. ಬಹುಮಟ್ಟಿನ ಹೆಂಗಸರ ಹಾಡುಗಳಿರುವುದು ಈ ಛಂದಸ್ಸಿನಲ್ಲಿ. ಇದರಲ್ಲಿ ಮೂರು ಪಾದಗಳಿವೆಯಷ್ಟೆ. ಇದನ್ನು ಹಾಡುವಾಗ ಮೊದಲನೆಯ ಪಾದವನ್ನೂ ಎರಡನೆಯ ಪಾದವನ್ನೂ ಒಟ್ಟಿಗೆ ಹಾಡಿ ಕೊಂಚ ನಿಲ್ಲಿಸುತ್ತಾರೆ. ಆಮೇಲೆ ಮತ್ತೆ ಎರಡನೆಯ ಪಾದವನ್ನೂ ಹಾಡುತ್ತಾರೆ. ಹಾಗೆ ಹಾಡುವಾಗ ನಿಲ್ಲಿಸದೆ ಅದಕ್ಕೆ ಬೇರೇನೋ ಸೇರಿಸಬೇಕೆನ್ನುವ ಸೂಚನೆ ತೋರಿಸಿ ಮೂರನೆಯ ಪಾದವನ್ನು ಹಾಡಿ ನಿಲ್ಲಿಸುತ್ತಾರೆ.

ಉದಾ : ಕಲ್ಲಮ್ಮ ತಾಯಿ ಮೆಲ್ಲಮ್ಮ ರಾಗೀಯ
ಜಲ್ಲ ಜಲ್ಲಾನೆ ಉದುರಮ್ಮ : ನಮ್ಮನೆಯ
ಬೆಲ್ಲದಾರುತಿಯ ಬೆಳಿಗೇವು.

ಇಲ್ಲಿ 'ಕಲ್ಲಮ್ಮ ತಾಯಿ.....ಉದುರಮ್ಮ' ಎಂಬಲ್ಲಿಯವರೆಗೆ ಹಾಡಿ ಕೊಂಚ ನಿಲ್ಲಿಸಿ, 'ಜಲ್ಲ ಜಲ್ಲಾನ ಉದುರಮ್ಮ' ಎಂಬುದಕ್ಕೆ 'ನಮ್ಮನೆಯ' ಎಂಬ ಪದ ಸೇರಿಸಿಕೊಂಡು ಮೂರನೆಯ ಸಾಲಿನ 'ಬೆಲ್ಲದಾರುತಿಯ ಬೆಳಿಗೇವು' ಎಂಬುದರೊಡನೆ ಒಟ್ಟಿಗೆ ಹಾಡುತ್ತಾರೆ. ಮೊದಲು ಎರಡನೆಯ ಸಾಲನ್ನು ಹಾಡಿ ನಿಲ್ಲಿಸಿದಾಗ ಆ ನಿಲ್ಲುವ ಸ್ಥಾನವನ್ನು ಲಾಕ್ಷಣಿಕರು 'ಯತಿ' ಎಂದು ಕರೆದಿದ್ದಾರೆ. ಆದರೆ ಇದನ್ನೇ 'ಸೊಲ್ಲು' ಎಂದು ಕರೆದು, ಅದನ್ನು ಅಡ್ಡಗೀಟು ಅಥವಾ ಗೆರೆ ಹಾಕಿ ಗುರುತಿಸುತ್ತಾರೆಂದು ಒಬ್ಬರು ಹೇಳಿದ್ದಾರೆ. ಮತ್ತೂ ಮುಂದುವರಿದು ಈ ಸೊಲ್ಲು 'ಅರೆಸೊಲ್ಲು', 'ಸವಿ ಸೊಲ್ಲು' ಮತ್ತು 'ತನಿಸೊಲ್ಲು' ಹೇಗಾಗುತ್ತದೆ ಎಂಬುದನ್ನು ತಿಳಿಸಿದ್ದಾರೆ [11]. ಆದರೆ ಸೊಲ್ಲು ಎಂಬ ಪದದ ಪ್ರಯೋಗವೇ ಈ ಸಂದರ್ಭದಲ್ಲಿ ಸರಿ ಹೋಗುವುದಿಲ್ಲ. ಸೊಲ್ಲಿಗೆ ಬೇರೊಂದು ಅರ್ಥವಿದೆ [12]. ಅದನ್ನು ಮುಂದೆ ಹೇಳಲಾಗುವುದು.

ಜನಪದ ಗೀತ - ಸಾಹಿತ್ಯದಲ್ಲಿ ತ್ರಿಪದಿಯ ದೊಡ್ಡ ಪ್ರಕಾರವನ್ನು ಬಿಟ್ಟರೆ ತ್ರಿಪದಿಯಲ್ಲಿಲ್ಲದ ಸಾಹಿತ್ಯವೂ ಸಾಕಷ್ಟಿದೆ. ಇದನ್ನು ಕೆಲವರು ಸಾಂಗತ್ಯ ಎಂದರೆ, ಕೆಲವರು ರಗಳೆ, ಮತ್ತೆ ಕೆಲವರು ಲಾವಣಿ ಎಂದೆಲ್ಲಾ ಕರೆದಿದ್ದಾರೆ. ಆದರೆ ಸಾಂಗತ್ಯ ಮತ್ತು ರಗಳೆಗಳೂ ಹಾಡುಗಬ್ಬದ ಛಂದಸ್ಸುಗಳೇ ಆದ ಕಾರಣ ಅವು ಸರಿಯಾದ ಪ್ರಯೋಗಗಳಾಗುವುದಿಲ್ಲ. ಲಾವಣಿಯೂ ಅಷ್ಟೆ. ಅದು ಕಥನ ಗೀತೆಗಳಿಗೆ ಮೀಸಲಾದ ಪ್ರಕಾರ. ಆದ್ದರಿಂದ ಜನಪದ ಗೀತ - ಸಾಹಿತ್ಯವನ್ನು ನಾವು ಹೀಗೆ ವಿಂಗಡಿಸುತ್ತೇವೆ.

ಅ. ತ್ರಿಪದಿ ಸಾಹಿತ್ಯ | ಆ. ಕಾವ್ಯ ಸಾಹಿತ್ಯ

ಇ. ನಾಟಕ ಸಾಹಿತ್ಯ | ಈ. ತತ್ವ ಮತ್ತು ಭಜನೆ ಸಾಹಿತ್ಯ

ಮೇಲ್ಕಂಡ ಬೇರೆ ಬೇರೆ ಸಾಹಿತ್ಯವನ್ನು ಹಾಡುವ ರೀತಿಯೇ ಬೇರೆಬೇರೆ ಎಂಬುದನ್ನು ಗಮನಿಸಿದಾಗ ನಮ್ಮ ವಿಂಗಡಣೆ ಸಂಗೀತ ದೃಷ್ಟಿಯಿಂದಲಾದರೂ ಸರಿ ಎನಿಸದೆ ಇರಲಾರದು. ಈಗ ಗೀತ - ಸಾಹಿತ್ಯ ಪ್ರಕಾರಗಳ ಮುಖ್ಯ ಲಕ್ಷಣಗಳನ್ನು ನಾವು ಹೀಗೆ ಗುರುತಿಸಿದ್ದೇವೆ.

ಅ. ತ್ರಿಪದಿ ಸಾಹಿತ್ಯ : ಸ್ತ್ರೀಯರೇ ಬಹುಮಟ್ಟಿಗೆ ಈ ಸಾಹಿತ್ಯದ ಹಾಡುಗಾರರು. ಹಾಡುವಾಗ ವಾದ್ಯಗಳಿಲ್ಲ, ನೃತ್ಯವೂ ಇಲ್ಲ. ಪಲ್ಲವಿಗಳು ಹೇರಳವಾಗಿ ಈ ಸಾಹಿತ್ಯದಲ್ಲಿ ಬರುತ್ತವೆ. ಈ ಗೀತೆಗಳಲ್ಲಿ ದನಿ ಹಾಗೂ ಲಯಗಳೇ ಪ್ರಧಾನ. ಅಪ್ಪಟ ಆಡುನುಡಿಯೇ ಈ ಸಾಹಿತ್ಯದ ಮುಖ್ಯ ಲಕ್ಷಣವಾಗಿ ಹತ್ತು ಜನರ ಸ್ವತ್ತಾಗಿರುತ್ತದೆ.

ಆ. ಕಾವ್ಯ ಸಾಹಿತ್ಯ : ಇದು ಬಹುಮಟ್ಟಿಗೆ ಪುರುಷರ ಸಾಹಿತ್ಯ. ರಗಳೆ, ಸಾಂಗತ್ಯ ಛಂದಸ್ಸುಗಳಲ್ಲಿ ಬರುವ ಈ ಗೀತ - ಸಾಹಿತ್ಯವನ್ನು ವಾದ್ಯ ಸಮೇತ, ಲಲಿತ ನೃತ್ಯದೊಡನೆ ಹಾಡುತ್ತಾರೆ. ಪಲ್ಲವಿಗಳಿಗಿಂತ ಸೊಲ್ಲುಗಳೇ ಈ ಸಾಹಿತ್ಯದಲ್ಲಿ ಹೆಚ್ಚು. ತಾಳ ಪ್ರಧಾನವಾದ ಹಾಡುಗಾರಿಕೆಯಾದುದರಿಂದ ದನಿಗಿಂತ ಧಾಟಿ ಈ ಹಾಡುಗಳ ವೈಶಿಷ್ಟ್ಯ. ಸಾಹಿತ್ಯ ಕೊಂಚ ಮಟ್ಟಿಗೆ ಗ್ರಂಥಸ್ಥ. ಅನೇಕ ವೇಳೆ ರಚನಕಾರರು ಯಾರೆಂಬುದೂ ಗೊತ್ತಾಗುತ್ತದೆ. ಉದಾ : ಗೀಗೀ ಮತ್ತು ಲಾವಣಿಗಳು.

ಇ. ನಾಟಕ ಸಾಹಿತ್ಯ : ಈ ಸಾಹಿತ್ಯದಲ್ಲಿ ರಚಿಸಲ್ಪಟ್ಟ ಯಕ್ಷಗಾನ - ಬಯಲಾಟ, ದೊಡ್ಡಾಟ, ಸಣ್ಣಾಟ ಹಾಗೂ ಪಾರಿಜಾತ ಎಂಬಿತ್ಯಾದಿ ಜನಪದ ನಾಟಕಗಳನ್ನು ಆಡುವವರು ನೂರಕ್ಕೆ ತೊಂಬತ್ತೊಂಬತ್ತು ಪಾಲು ಪುರುಷರು. ಈ ನಾಟಕಗಳ ರಚನಕಾರರು ಯಾರೆಂಬುದೂ ಖಚಿತವಾಗಿರುತ್ತದೆ. ಭಾಷೆ ಆಡುನುಡಿಯಿಂದ ದೂರ ಹೋಗಿ ಬಹುಮಟ್ಟಿಗೆ

---

11. ಕನ್ನಡ ಜಾನಪದ ಸಾಹಿತ್ಯ ಭಂಡಾರ - ಸಂ. ೧ - ಗೀತೆಗಳು, ಮತಿಘಟ್ಟ ಕೃಷ್ಣಮೂರ್ತಿ ಪುಟ ೪೭-೪೯.

12. ಯತಿ ಸ್ಥಾನದಲ್ಲಿ ಬರುವ ಪದಕ್ಕೆ 'ಲಯಪದ' ಎಂದು ಶ್ರೀ ಬೆಟಗೇರಿ ಕೃಷ್ಣಶರ್ಮರು ಹೇಳಿದ್ದಾರೆ. ಕನ್ನಡ ಜನಪದ ಸಾಹಿತ್ಯ. ಕರ್ನಾಟಕ ವಿ.ವಿ. ಪ್ರಕಟಣೆ.

ಗ್ರಂಥಸ್ಥವಾಗಿರುತ್ತದೆ. ಅಲ್ಲದೆ ಸಂಸ್ಕೃತಮಯವಾಗಿರುತ್ತದೆ. ಹಾಡುಗಾರಿಕೆ ಮತ್ತು ಕುಣಿತಗಳಿಗೆ ಹೆಚ್ಚು ಪ್ರಾಧಾನ್ಯತೆ ಇದ್ದು ಅವುಗಳಿಗೆ ನಿರ್ದಿಷ್ಟ ರಾಗ ಮತ್ತು ತಾಳಗಳನ್ನು ಹೇಳಲಾಗಿದೆ. ಆದರೆ ಹಾಡುಗಾರಿಕೆಯ ಶೈಲಿಯೇ ಬೇರೆಯಾದ ಕಾರಣ ಅವನ್ನು 'ಮಟ್ಟು' ಎಂದು ಕರೆಯಲಾಗಿದೆ.

ಈ. ತತ್ವಮತ್ತು ಭಜನೆ ಸಾಹಿತ್ಯ : ಈ ಸಾಹಿತ್ಯ ಪ್ರಕಾರದ ಹಾಡುಗಳನ್ನು ಕರ್ನಾಟಕದ ಹಳ್ಳಿ ಹಳ್ಳಿಗಳಲ್ಲಿ ಹಾಡುತ್ತಾರೆ. ಇವು ಜಾನಪದದ ಪ್ರಕಾರಕ್ಕೆ ಸೇರುತ್ತವೆಯೇ ಇಲ್ಲವೇ ಎಂಬ ಸಂದೇಹದ ಬಗ್ಗೆ ಇನ್ನೂ ಸ್ಪಷ್ಟ ಅಭಿಪ್ರಾಯ ಮೂಡ ಬೇಕಾಗಿದೆ. ಹಳ್ಳಿಗರ ಮನಸ್ಸನ್ನು ಸೂರೆ ಮಾಡಿರುವ ಈ ಹಾಡುಗಳನ್ನು ಶಿಷ್ಟ ಸಂಗೀತದಲ್ಲಿ ತರಲಾಗುವುದಿಲ್ಲ. ಹಾಗೆಯೇ ಶಿಷ್ಟ ಸಾಹಿತ್ಯದ ಭಾವಗೀತೆಗಳೆಂದೂ ಹೇಳಲಾಗುವುದಿಲ್ಲ. ಆದ್ದರಿಂದ ಜನಪದರ ಬಾಯಲ್ಲಿ ಪ್ರಚಲಿತವಿರುವ ಈ ಹಾಡುಗಳನ್ನು ಜಾನಪದದ ವ್ಯಾಪ್ತಿಯಲ್ಲಿಯೇ ತರುವುದು ಸೂಕ್ತ. ಗ್ರಂಥಸ್ಥ ಭಾಷೆಯ ಯಕ್ಷಗಾನ - ಬಯಲಾಟಗಳನ್ನು ಜಾನಪದ ಎಂದು ಪರಿಗಣಿಸುವುದಾದರೆ ಇವನ್ನೂ ಹಾಗೆಯೇ ಪರಿಗಣಿಸಬೇಕಾಗುತ್ತದೆ. ಈ ಹಾಡುಗಳಲ್ಲಿ ಸ್ಪಷ್ಟವಾದ ರಾಗ ತಾಳಗಳಿರುತ್ತವೆ. ಸಾಹಿತ್ಯ, ಯಕ್ಷಗಾನ ಬಯಲಾಟ ಸಾಹಿತ್ಯದಷ್ಟು ಗ್ರಂಥಸ್ಥವಲ್ಲ. ರಚನಕಾರರೂ ಸಾಮಾನ್ಯವಾಗಿ ಗೊತ್ತಿರುತ್ತಾರೆ. ವಾದ್ಯಗಳಿಲ್ಲದೆ ಈ ಹಾಡುಗಳನ್ನು ಹಾಡುವುದಿಲ್ಲ. ಬಹುಮಟ್ಟಿಗೆ ಹತ್ತಾರು ಜನರು ಕೂಡಿ ಹಾಡುತ್ತಾರೆ.

೮. ಲಯ, ತಾಳ, ಗತ್ತು

'ಶ್ರುತಿ ತಾಯಿ, ಲಯ ತಂದೆ' - ಇದು ಸಂಗೀತ ಶಾಸ್ತ್ರದಲ್ಲಿ ಬರುವ ಮಾತು. ಇಲ್ಲಿ 'ಲಯ' ಎನ್ನುವುದನ್ನು 'ತಾಳ' ಎನ್ನಲಿಲ್ಲ. ಆದರೆ ಸಂಗೀತಗಾರರೆಲ್ಲ ಲಯ ಎನ್ನುವ ಬದಲು ತಾಳ ಎಂದೇ ಸಾಮಾನ್ಯವಾಗಿ ಹೇಳುವುದು ವಾಡಿಕೆಯಾಗಿದೆ. ಲಯವೇ ತಾಳವಾಗಿದ್ದರೆ ತಾಳ ಎಂಬ ಮಾತು ಬರಬೇಕಾಗಿರಲಿಲ್ಲ. ಅಂದರೆ ಲಯ ಮತ್ತು ತಾಳಗಳಿಗೆ ಸೂಕ್ಷ್ಮ ವ್ಯತ್ಯಾಸವಿದೆ ಎಂದಾಯಿತು. ತಾಳದಲ್ಲಿ ಲಯ ಇದೆ. ಆದರೆ ಲಯದಲ್ಲಿ ತಾಳ ಇಲ್ಲ. ಈ ವ್ಯತ್ಯಾಸವನ್ನು ನಮ್ಮ ಜನಪದ ಸಂಗೀತವನ್ನು ಕುರಿತು ಹೇಳುವಾಗ ನಾವು ಮುಖ್ಯವಾಗಿ ಗಮನಿಸಬೇಕಾಗಿದೆ. ಹಳ್ಳಿಗರ ಮೊದಲ ಕಾಯಕವಾದ ಬೀಸುವುದನ್ನು ತೆಗೆದುಕೊಳ್ಳಿ. ಬೀಸುವ ಕಲ್ಲಿನ ಲಯಕ್ಕೆ ಹಳ್ಳಿಯವರು ಹಾಡುತ್ತಾರೆ. ಇಲ್ಲಿ ತಾಳ ಇದೆಯೇ ಎಂದರೆ ಇಲ್ಲ, ಉಂಟು ಎಂದು ಹೇಳಲು ಸಂದೇಹ ಪಡಬೇಕಾಗುತ್ತದೆ. ಆದರೆ ಲಯ ಇದೆಯೇ ಎಂದರೆ ಇದೆ ಎಂದು ನಿಸ್ಸಂದೇಹವಾಗಿ ಹೇಳಬಹುದು. ಇದು ಲಯ ಮತ್ತು ತಾಳಗಳಿಗೆ ಇರುವ ವ್ಯತ್ಯಾಸ. ಲಯ ಹಾಡಿನ ಒಂದು ನಡಿಗೆ. ಅದು ಸೃಷ್ಟಿ ನಿಯಮ. ತಾಳ ಮನುಷ್ಯ ಕೃತ. ಅದು ಒಂದು ನಿಷ್ಕರ್ಷೆಯಾದ, ಗೊತ್ತಾದ, ನಿಖರವಾದ ಅಳತೆ, ತಾಳ ವಾದ್ಯಗಳಿದ್ದಂತೆ ಲಯವಾದ್ಯಗಳಿಲ್ಲ. ಹೀಗಾಗಿ ನಮ್ಮ ಸಂಗೀತವನ್ನು ಕುರಿತು ಆಲೋಚಿಸುವಾಗ ಬಹುಮಟ್ಟಿಗೆ ವಾದ್ಯರಹಿತವಾದ ಹೆಂಗಸರ ಹಾಡುಗಳಲ್ಲಿ ಲಯವನ್ನೂ ವಾದ್ಯ ಸಹಿತದ ಗಂಡಸರ ಹಾಡುಗಳಲ್ಲಿ ತಾಳವನ್ನೂ ಕಾಣಬಹುದು.

ಹಾಡುಗಳೇ ಇಲ್ಲದೆ ಕೇವಲ ವಾದ್ಯವಷ್ಟೇ ಕುಣಿತದಲ್ಲಿ ಇರುವುದನ್ನು ನಾವು ಗಮನಿಸಿದಾಗ ಅಲ್ಲಿ ಬರುವ ತಾಳವನ್ನು 'ಗತ್ತು' ಎಂದು ಗುರುತಿಸಿದ್ದೇವೆ. ಹಳ್ಳಿಯವರು ತಮಟೆ ಮುಂತಾದ ವಾದ್ಯಗಳನ್ನು ಬಾರಿಸಿಕೊಂಡು ಕುಣಿಯುವಾಗ, ಉದಾಹರಣೆಗೆ ಸುಗ್ಗಿ ಕುಣಿತ, ರಂಗದ ಕುಣಿತಗಳಲ್ಲಿ 'ಆ ಗಸ್ತು ಹಾಕು', 'ಈ ಗಸ್ತು ಬಡಿ' ಎಂದು ಹೇಳುವುದುಂಟು. ಈ ಗಸ್ತೇ ಗತ್ತು. ಗಸ್ತು ಸಹ ತಾಳವೇ. ಆದರೆ ಕೊಂಚ ಭಿನ್ನ.

ಒಟ್ಟಿನಲ್ಲಿ, ಹೆಂಗಸರ ಹಾಡಿನಲ್ಲಿ ಲಯವನ್ನೂ, ಗಂಡಸರ ವಾದ್ಯ ಸಹಿತವಾದ ಹಾಡಿನಲ್ಲಿ ತಾಳವನ್ನೂ, ಬರೆ ವಾದ್ಯಕ್ಕೆ ತಕ್ಕ ಹಾಗೆ ಕುಣಿಯುವುದರಲ್ಲಿ ಗತ್ತನ್ನೂ ಕಾಣಬಹುದು.

೯. ದನಿ - ಧಾಟಿ - ಮಟ್ಟು

'ಹಳ್ಳಿಯ ಹಾಡುಗಾರರು 'ರಾಗ' ಎಂಬ ಪದವನ್ನು ಉಪಯೋಗಿಸುವುದೇ ಅಪರೂಪ. ಯಕ್ಷ ಎನ್ನುವುದುಂಟು. ಈ ರಾಗ ಎಂಬ ಪದಕ್ಕೆ ಬದಲು ನಮ್ಮವರು 'ದನಿ' 'ಧಾಟಿ' 'ಮಟ್ಟು' ಎಂಬ ಪದಗಳನ್ನು ಸಾಮಾನ್ಯವಾಗಿ ಬಳಸುತ್ತಾರೆ. ಹೀಗೆ ಹೇಳುವುದರಲ್ಲಿ ಅರ್ಥವೂ ಇದೆ.

ಹೆಂಗಸರು ಹಾಡುವಾಗ 'ದನಿ' ಎಂಬ ಪದವನ್ನೇ ಬಳಸುತ್ತಾರೆ. ಏಕೆಂದರೆ, ಅವರ ಹಾಡಿನಲ್ಲಿ ದನಿಯೇ ಪ್ರಧಾನ. ಒಬ್ಬಳ ಜೊತೆಗೆ ಇನ್ನೊಬ್ಬಳು ಹಾಡಿದರೆ ಅದಕ್ಕೆ 'ದನಿ ಕೊಡುವುದು' ಎನ್ನುತ್ತಾರೆ. ಇಲ್ಲಿ ದನಿ ಶ್ರುತಿಯಾಗುತ್ತದೆ. ಯಾರೇ ಆಗಲಿ ಇನ್ನೊಬ್ಬರು ದನಿಶ್ರುತಿ ಇಲ್ಲದೆ ಹಾಡುವುದು ಕಷ್ಟ. ಜನಪದರು ಹಾಡುವಾಗ ಒಬ್ಬರೇ ಹಾಡುವುದು ಅಪರೂಪ. ಕಗ್ಗದಪದ, ಗಾಡಿಪದ, ಕಳದಪದ, ಯಾಲಪದ (ತೆಲುಗಿನಲ್ಲಿ) ಇಂಥವನ್ನು ಹಾಡುವಾಗ ಮಾತ್ರ ಒಬ್ಬರೇ ಹಾಡುತ್ತಾರೆ. ಆ ಹಾಡಿನ ದನಿಯೇ ಒಂದು ಬಗೆ - ಮಸೀದಿಗಳಲ್ಲಿ ನಮಾಜಿಗೆ ಕರೆಯುವಾಗಿನ ದನಿಯಂತೆ. ಅದು ಬಿಟ್ಟರೆ ಉಳಿದೆಲ್ಲ ವೇಳೆ ಮುಮ್ಮೇಳ - ಹಿಮ್ಮೇಳದಲ್ಲಿ ಕನಿಷ್ಠ ಪಕ್ಷ ಇಬ್ಬಿಬ್ಬರಾದರೂ ಕೂಡಿ ಹಾಡುತ್ತಾರೆ. ಬೀಸುವಾಗ ಕಲ್ಲಿನ ಶ್ರುತಿಯಿದ್ದರೂ ಕೇಳಬೇಕು. ಏಕೆಂದರೆ ಕಲ್ಲಿನ ಕೊರಳಿಗೆ ಕಾಳು ಹೊಯ್ಯುವುದು, ಬೀಸುವುದು ಕಷ್ಟವಾಗುತ್ತದೆ. ಬೀಸುವಾಗ ಸಾಮಾನ್ಯವಾಗಿ ಹಿಮ್ಮೇಳದವರಿರುವುದಿಲ್ಲ. ಆದರೆ ಜೋಡಿ ಕಲ್ಲುಗಳ ಮೇಲೆ ಬೀಸುವಾಗ ಒಂದು ಕಲ್ಲಿನವರು ಮುಮ್ಮೇಳ ಹಾಡಿದರೆ ಇನ್ನೊಂದು ಕಲ್ಲಿನವರು ಹಿಮ್ಮೇಳ ಹಾಡುವುದುಂಟು. ಒಟ್ಟಿನಲ್ಲಿ ಹೆಂಗಸರು ಹಾಡುವ ಬಹುತೇಕ ಹಾಡುಗಳಲ್ಲಿ ವಾದ್ಯಗಳ ಉಪಯೋಗವಿಲ್ಲ. ಕೇವಲ ಲಯ ಪ್ರಧಾನವಾದ ದನಿಯೇ ಅವರ ಹಾಡಿನ ಗುಟ್ಟು. ತಮ್ಮ ಗಂಟಲನ್ನು ಹೊರಳಿಸಿ ಬೇರೆ ಬೇರೆ ದನಿಗಳಲ್ಲಿ ಹಾಡುವ ಸಿದ್ಧಿ ಅವರಿಗೆ ಒದಗಿದೆ. ಆದ್ದರಿಂದ ಹೆಂಗಸರ ರಾಗಕ್ಕೆ 'ದನಿ' ಎಂದು ಕರೆಯುವುದು ಬಹು ಸೂಕ್ತ.

ಧಾಟಿ ಎಂಬ ಪದವನ್ನು ಸಾಮಾನ್ಯವಾಗಿ ಜನಪದ ಗೀತೆಗಳ ರಾಗಗಳಿಗೆ ಬಳಸಿದರೂ ಅದಕ್ಕೂ ಒಂದು ವಿಶಿಷ್ಟವಾದ ಅರ್ಥವಿದೆ. ಈ ವಿಶಿಷ್ಟ ಅರ್ಥವನ್ನು ತೀರಾ ಹಳ್ಳಿಯವರಲ್ಲಿ ಮಾತಾಡಿದಾಗ ಕಾಣಬಹುದು. ಧಾಟಿ ಎಂಬ ಪದವನ್ನು ಹೆಚ್ಚಾಗಿ ಬಳಸುವವರು ಗಂಡಸರು. ಎಲ್ಲಿ ಅವರು ವಾದ್ಯಗಳನ್ನು ಉಪಯೋಗಿಸಿ ಹಾಡುತ್ತಾರೊ ಮತ್ತು ಹಾಗೆ ಮಾಡುವಾಗ ಲಲಿತವಾದ ಕುಣಿತವನ್ನೂ ಮಾಡುತ್ತಾರೊ ಅಲ್ಲಿ ಧಾಟಿ ಎಂಬ ಪದವನ್ನು ಬಳಸುತ್ತಾರೆ. ಕೇವಲ ಕುಣಿತವೇ ಇರುವ, ಉದಾ : ಸುಗ್ಗಿ ಕುಣಿತ, ಡೊಳ್ಳು ಕುಣಿತಗಳನ್ನು ನಾವಾಗಲೇ 'ಗಸ್ತು' ಅಥವಾ 'ಗತ್ತು' ಎಂದು ಗುರುತಿಸಿದ್ದೇವೆ.

ಇನ್ನು ಮಟ್ಟಿನ ವಿಷಯ. ಈ ಪದವನ್ನು ನಾಟಕಗಳಲ್ಲಿ ಹೆಚ್ಚಾಗಿ ಬಳಸುತ್ತಾರೆ. 'ನಾಟಕದ ಮಟ್ಟು' ಎಂದೇ ಹೇಳುವುದುಂಟು. ಇಲ್ಲಿ ನಾಟಕವೆಂದರೆ ಈಗಿನ ಹಾಡುಗಳಿಲ್ಲದ ಆಧುನಿಕ ನಾಟಕಗಳಲ್ಲ. ಹಾಡುಗಳೇ ಹೆಚ್ಚಾಗಿದ್ದ ನಾಟಕಗಳೂ ಯಕ್ಷಗಾನದ ಎಲ್ಲ ಪ್ರಕಾರಗಳೂ ಈ ವ್ಯಾಪ್ತಿಯಲ್ಲಿ ಬರುತ್ತವೆ. ಯಕ್ಷಗಾನಗಳ ಪ್ರತಿಗಳಲ್ಲಿ ಹಾಡುಗಳಿಗೆ ಇಂತಿಂಥ ರಾಗ, ತಾಳ ಎಂದು ಹೇಳಿದ್ದರೂ ಭಾಗವತರುಗಳು, ಅದರಲ್ಲೂ ಘಟ್ಟದ ಮೇಲಿನ ಮೂಡಲಪಾಯ ಭಾಗವತರು, ಮಟ್ಟು ಎಂದೇ ರಾಗಕ್ಕೆ ಹೇಳುತ್ತಾರೆ. ಹೀಗೆ ಹೇಳುವುದರಲ್ಲಿ ಅರ್ಥವೂ ಇದೆ. ಯಕ್ಷಗಾನದಲ್ಲಿ ರಾಗಗಳನ್ನು ಹಾಡುವ ರೀತಿ ಶಿಷ್ಟ ಸಂಗೀತದಲ್ಲಿ ಹಾಡುವ ರಾಗಗಳ ರೀತಿಯಲ್ಲಿ ಇರುವುದಿಲ್ಲ. ಯಕ್ಷಗಾನ ರಾಗಗಳ ಶೈಲಿಯೇ ಒಂದು ತರಹ. ''ಉಚ್ಚ ಶ್ರುತಿಯಲ್ಲಿ ಹಾಡುವುದು, ಮಂದ್ರ ಸ್ಥಾಯಿಯಲ್ಲಿ ಸಂಚರಿಸದೆ ಹೆಚ್ಚಾಗಿ ತಾರಸ್ಥಿತಿಯಲ್ಲೇ (ಅದರಲ್ಲೂ ಗಾಂಧಾರದವರೆಗೆ ಮಾತ್ರ) ಸಂಚರಿಸುವುದು. ರಾಗಗಳಲ್ಲಿ ವಿಶಿಷ್ಟವಾದ ಕೆಲವೊಂದು ಎಳೆತ, ಒಂದೇ ಹಾಡನ್ನು ಗತಿಭೇದದಿಂದ ಹಾಡುವುದು (ಲಯ ವಿನ್ಯಾಸಕ್ಕಾಗಿ). ಚಂಡೆ - ಮದ್ದಳೆಗಳಂತಹ ತಾಳವಾದ್ಯಗಳ ಹಿಮ್ಮೇಳ ಮುಂತಾದ ವೈಶಿಷ್ಟ್ಯಗಳು ಮಾತ್ರ ಯಕ್ಷಗಾನವನ್ನು ಜನಪದ ಗೀತೆಗಳಿಂದ ಪ್ರತ್ಯೇಕಿಸುತ್ತವೆ. ಯಕ್ಷಗಾನ ಶೈಲಿಗೆ ನಾಲ್ಕೈದು ಶತಮಾನಗಳ ಪರಂಪರೆಯಿದೆ. ಈ ಸಂಪ್ರದಾಯವು ಶುದ್ಧ ಕರ್ನಾಟಕಿಯೂ ಅಲ್ಲ, ಉತ್ತರಾದಿಯೂ ಅಲ್ಲ. ಆ ಶೈಲಿ ಅದರದೇ'' (ಯಕ್ಷಗಾನ ಸಂಗೀತ : ಎಂ. ರಾಜಗೋಪಾಲಚಾರ್ಯ). ಘಟ್ಟದ

ಮೇಲಿನ ಯಕ್ಷಗಾನ ಶೈಲಿಗಳಲ್ಲಿ ಹಲವಾರು ಒಳಶೈಲಿಗಳಿವೆ. ಅವನ್ನು ಘಟ್ಟದ ಕೋರೆ, ಮೂಡಲಪಾಯ, ಲೇಪಾಕ್ಷಿ , ದೊಡ್ಡಾಟ ಎಂದೆಲ್ಲಾ ಕರೆಯಲಾಗಿದೆ. ಒಟ್ಟಿನಲ್ಲಿ ಯಕ್ಷಗಾನದ ರಾಗಗಳನ್ನು ಮಟ್ಟು ಎಂದು ಕರೆಯುವುದು ಸೂಕ್ತವೇ ಆಗಿದೆ.

೧೦. ಪಲ್ಲವಿ - ಸೊಲ್ಲು

ಪದಗರ್ಭ, ಲಯ - ಇವುಗಳ ಕೊನೆಯಲ್ಲಿ ಸಮೀಚೀನವಾಗಿ ಬೆರೆತ ಸಾಹಿತ್ಯದ ವಿನ್ಯಾಸ ಮತ್ತು ಸ್ವರಗಳ ಕಲ್ಪನೆಯೇ ಪಲ್ಲವಿಯು. ಇಲ್ಲಿ ಲಕಾರಕ್ಕಿರುವದ್ವಿತ್ವವು ಲಯದ ಪ್ರಾಮುಖ್ಯತೆಗೆ ಸೂಚಿಯೆಂದೂ, ಪಲ್ಲವವೆಂದರೆ ಚಿಗುರಿನಂತೆ ನಳನಳಿಸುತ್ತಾ ನವೀನ ಕಲ್ಪನೆಗಳಿಂದ ಶೋಭಿಸುವ ಗಾನವೃಕ್ಷವಿದಾದುದರಿಂದ ಇದು ಪಲ್ಲವಿ [13].

ಪಲ್ಲವಿಯ ಈ ಲಕ್ಷಣಗಳು ನಮ್ಮ ಹಳ್ಳಿಯವರಿಗೆ ಗೊತ್ತಿಲ್ಲದಿದ್ದರೂ ಅವುಗಳನ್ನೊಳಗೊಂಡ ಸಾವಿರಾರು ಪಲ್ಲವಿಗಳನ್ನು ಅವರು ಹಾಡುತ್ತಾರೆ. ಬಹುಶಃ ಶಿಷ್ಟ ಸಂಗೀತದ ಪಲ್ಲವಿಗಳಿಗೆ ಜನಪದರ ಬಾಯಲ್ಲಿ ಇರುವ ಸಾವಿರಾರು ಪಲ್ಲವಿಗಳೇ ಸ್ಫೂರ್ತಿ ನೀಡಿರಬೇಕು.

ಹಳ್ಳಿಗರು ತಮ್ಮ ಪಲ್ಲವಿಗಳಿಗೆ ಪಲ್ಲವಿ ಎಂದು ಹೆಸರು ಹೇಳುವುದು ಅಪರೂಪ. ಪಲ್ಲವಿಯನ್ನು ಸೇರಿಸಿ ಹಾಡಿಬಿಡುತ್ತಾರೆಯೇ ವಿನಃ ಅದೇನು ಹಾಡಿದ್ದು ಎಂದು ಕೇಳಿದರೆ ಏನು ಎಂದು ಹೇಳಲಾರರು. ಅಪರೂಪವಾಗಿ, ಅದೂ ನಾವು ಒತ್ತಾಯ ಮಾಡಿದಾಗ, ಅಥವಾ ಸೂಚನೆ ಕೊಟ್ಟಾಗ, 'ಪಲ್ಲವಿ', 'ಪಲ್ಲ', 'ಸೊಲ್ಲು' ಎಂದು ಬಾಯಿ ಬಿಡುತ್ತಾರೆ. 'ದನಿ' ಎಂದೂ 'ಧಾಟಿ' ಎಂದೂ ಒಮ್ಮೊಮ್ಮೆ ಹೇಳುವುದುಂಟು.

ಹೆಂಗಸರೇ ಜನಪದ ಹಾಡುಗಳಲ್ಲಿ ಬರುವ ಸಾವಿರಾರು ಪಲ್ಲವಿಗಳಿಗೆ ಹಕ್ಕುದಾರರು. ಗಂಡಸರ ಬಾಯಲ್ಲಿ ಪಲ್ಲವಿಗಳೇ ಇಲ್ಲ ಎನ್ನಬಹುದು. ಅಷ್ಟರ ಮಟ್ಟಿಗೆ ಹೆಂಗಸರು ಅವನ್ನು ತಮ್ಮದಾಗಿ ಮಾಡಿಕೊಂಡಿದ್ದಾರೆ. ಕಾರಣಕ್ಕೆ ಹುಡುಕಬೇಕಾಗಿಲ್ಲ. ಅವರ ಪದಗಳೆಲ್ಲ ತ್ರಿಪದಿಯಲ್ಲಿವೆ. ಈ ತ್ರಿಪದಿ ಛಂದಸ್ಸಿನಲ್ಲಿರುವ ಪದಗಳನ್ನು ಹಾಡುವಾಗಲೇ ಪಲ್ಲವಿಗಳನ್ನೂ ಹಾಡುತ್ತಾರೆ. ಈ ಛಂದಸ್ಸು ಬಿಟ್ಟು ಬೇರೆ ಛಂದಸ್ಸಿನ ಹಾಡುಗಳನ್ನು ಹಾಡುವಾಗ, ಅದರಲ್ಲಿಯೂ ಗಂಡಸರು, ಸೊಲ್ಲುಗಳನ್ನು ಹೇಳುತ್ತಾರೆ. ಆದ್ದರಿಂದ ತ್ರಿಪದಿಯೇ ಜನಪದ ಸಂಗೀತ ವೃಕ್ಷ ಚಿಗುರೊಡೆದು ನಳನಳಿಸುವಂತೆ ಮಾಡಿದ್ದು ಎನ್ನಬಹುದು.

ಪಲ್ಲವಿಗಳನ್ನು ಹೇಗೆಂದರೆ ಹಾಗೆ ಸಂದರ್ಭಕ್ಕೆ ಸರಿಹೋಗದಿದ್ದರೂ ಹಾಡುತ್ತಾರೆಂಬ ಮಾತಿದೆ. ಇದು ಸ್ವಲ್ಪ ಮಟ್ಟಿಗೆ ಸರಿ. ಏಕೆಂದರೆ, ಹಾಡುವವರು ಅನುಭವಸ್ಥರಲ್ಲದಿರುವಾಗ ಅಥವಾ ಸರಿಯಾದ ಪಲ್ಲವಿ ಆ ಸಂದರ್ಭಕ್ಕೆ ಮರೆತು ಹೋಗಿರುವಾಗ ಯಾವುದೋ ಪಲ್ಲವಿಯನ್ನು ಹಾಡಿ ಬಿಡಬಹುದು. ಆದರೆ ಅನುಭವವುಳ್ಳ ಹಾಡುಗಾತಿಯರು ಎಂದೂ ತಪ್ಪು ತಪ್ಪಾಗಿ ಪಲ್ಲವಿಗಳನ್ನು ಸೇರಿಸಿ ಹಾಡುವುದಿಲ್ಲ.

ಮತ್ತು ಪಲ್ಲವಿಗಳು ಅರ್ಥಹೀನವೆಂಬ ಮಾತೂ ಸರಿಯಲ್ಲ. ಪಲ್ಲವಿಗಳು ಬಹುಮಟ್ಟಿಗೆ ಅರ್ಥಪೂರ್ಣವಾಗಿಯೂ ಸಂದರ್ಭೋಚಿತವಾಗಿಯೂ ಇರುತ್ತವೆ. ಉದಾಹರಣೆಗೆ ಮದುವೆ ಪದಗಳಲ್ಲಿ ಬೂರ ಇಡುವ ಹಾಡು ಇದು :

ಅಡ್ಡಗ್ವಾಡೆ ಮ್ಯಾಲೆ ಅಪರಂಜಿ ತೆರಿಹೂದು
ಭದ್ರೇರು ಕಂಚ ಬೆಳಿಗ್ಯಾರೆ
ಭದ್ರೇರು ಕಂಚ ಬೆಳಗಿ ಬೂವಾನಿಕ್ಕಿ
ಅದವೀನಾಡ ಹರಿಕಹಳೆ

---

13. ರಾಗ ಆಲಾಪನ ಪದ್ಧತಿ ತಾನ ಮತ್ತು ಪಲ್ಲವಿ - ಸಂಪಾದಕರು ಎಸ್. ಚೆನ್ನಕೇಶವಯ್ಯ - (೧೯೭೬)

ಬೂವ ಇಡುವ ಭದ್ರೆಯರು ಅಡ್ಡಗೋಡೆಯ ಮೇಲೆ ಅಪರಂಜಿ ಬಣ್ಣದ ತೆರೆ ಕಟ್ಟಿ ಕಂಚನ್ನು ಅಂದರೆ ಕಂಚಿನ ಮಿಳ್ಳೆ ಇತ್ಯಾದಿಗಳನ್ನು ಬೆಳಗಿ ಬೂವ ಇಟ್ಟರು. ಇದಕ್ಕೆ ಸೇರಿಸುವ ಪಲ್ಲವಿ ಎಷ್ಟು ಅರ್ಥಪೂರ್ಣವಾಗಿದೆ ನೋಡಿ :

ಫಳಿರೆಂದಾವಲ್ಲೆ- ಮುತ್ತಿನಾಭರಣದ
ಸುಳಿರಂಭೆ ನಿಲ್ಲೆ!

ಈ ಪಲ್ಲವಿಯನ್ನು ಮೇಲ್ಕಂಡ ನುಡಿಯಲ್ಲಿ ಸೇರಿಸಿ ಹಾಡುವ ಬಗೆ ಹೀಗಿದೆ :

ಅಡ್ಡಗ್ವಾಡೆ ಮ್ಯಾಲೆ ಅಪರಂಜಿ ತೆರಿಹೂದು
ಭದ್ರೇರು ಕಂಚ ಬೆಳಿಗ್ಯಾರೆ - ಫಳಿರೆಂದಾವಲ್ಲೇ...
ಭದ್ರೇರು ಕಂಚ ಬೆಳಗಿ! ಬೂವಾನಿಕ್ಕಿ
ಅದವೀನಾಡ ಹರಿಕಹಳೆ - ಫಳಿರೆಂದಾವಲ್ಲೇ....

ನುಡಿಯಲ್ಲಿ ಬರುವ ಭದ್ರೆಯರ ವರ್ಣನೆ ಎಷ್ಟು ಸೊಗಸಾಗಿ ಪಲ್ಲವಿಯಲ್ಲಿ ಬಂದಿದೆ ನೋಡಿ.

ಪಲ್ಲವಿಗಳ ರಚನೆ ಪ್ರಾಸಬದ್ಧವಷ್ಟೇ ಅಲ್ಲದೆ ಸಂಪೂರ್ಣ ಅರ್ಥವನ್ನೊಳಗೊಂಡಿರುತ್ತದೆ ಮತ್ತು ಜನಪದ ಸಂಗೀತದಲ್ಲಿ (ಮೇಲೆ ಸೂಚಿಸಿದಂತೆ) ಪಲ್ಲವಿಯನ್ನು ನುಡಿಯ ಮಧ್ಯದಲ್ಲಿ ಮತ್ತು ಕೊನೆಯಲ್ಲಿ ಸೇರಿಸಿ ಹಾಡುವುದು ಒಂದು ವೈಶಿಷ್ಟ್ಯ. ಇನ್ನೊಂದು ವಿಷಯವೆಂದರೆ, ಪಲ್ಲವಿಯ ದನಿ ಒಂದಾದರೆ ನುಡಿಯ ದನಿ ಇನ್ನೊಂದು ಇರುವುದು. ಇದು ತುಂಬಾ ಕಷ್ಟವಾದರೂ ನುರಿತ ಗಾಯಕಿಯರು ಹಾಗೆ ಹಾಡಬಲ್ಲರು. ಮತ್ತೊಂದು ವಿಶೇಷವೆಂದರೆ, ಶಿಷ್ಟ ಸಂಗೀತದಲ್ಲಿ ಪಲ್ಲವಿಯನ್ನು ಮೊದಲು ಹಾಡಿ ಅನಂತರ ನುಡಿ ಹಾಡುತ್ತಾರೆ. ನಮ್ಮ ಗ್ರಾಮೀಣ ಗಾಯಕಿಯರು ನುಡಿಯನ್ನು ಆರಂಭಿಸಿ ಎಲ್ಲಿ ಬೇಕೋ ಅಲ್ಲಿ ಪಲ್ಲವಿ ಸೇರಿಸಿ ಬೇರೊಂದು ದನಿಯಲ್ಲಿ ಹಾಡುತ್ತಾರೆ.[14]

ಪಲ್ಲವಿಗಳ ಚೆಲ್ಲಾಟವನ್ನು ಹಳ್ಳಿಯ ಹೆಂಗಸರು ದೇವರ ಮೇಲೆ ಹಾಡುವ ಪದಗಳಲ್ಲಿ ವಿಶೇಷವಾಗಿ ಕಾಣಬಹುದು.

ಇನ್ನು ಸೊಲ್ಲು. ಈ ಪದಕ್ಕೆ ಮಾತು, ನುಡಿ ಎಂಬ ಸಾಮಾನ್ಯ ಅರ್ಥಗಳಿದ್ದರೂ ಜನಪದರ ಹಾಡಿನಲ್ಲಿ ಇದಕ್ಕೆ ಬೇರೊಂದು ಅರ್ಥವಿದೆ. ಸೊಲ್ಲು ಪಲ್ಲವಿಯಂತೆ ಕಂಡರೂ ಪಲ್ಲವಿಯೇ ಅಲ್ಲ. ಅದು ಬಹಳ ಅಂದರೆ ಒಂದು ಕಿರುಪಲ್ಲವಿ ಅಥವಾ ಪಲ್ಲವಿಯ ತುಣುಕು. ಸೊಲ್ಲುಗಳು ಸಾಮಾನ್ಯವಾಗಿ ಉದ್ಗಾರಗಳು. ಉದಾ : ಮರದ ದಿಮ್ಮಿಯನ್ನೋ ಭಾರಿ ಹೇರನ್ನೋ ಹೇರುವಾಗ ಅಥವಾ ನೂಕುವಾಗ ಒಬ್ಬ 'ಕೂಗೋ ಹುಂಜ' ಎಂದರೆ ಉಳಿದವರು 'ಹೈ ಸಾ' ಎನ್ನುತ್ತಾರೆ. ಒಬ್ಬ 'ಆಯೋಲೆ' ಎಂದರೆ ಇನ್ನೊಬ್ಬ 'ಓಹೋ' ಎನ್ನುತ್ತಾನೆ. ಅಥವಾ ಒಬ್ಬ 'ಲಾಮಲೇ' ಎಂದರೆ ಉಳಿದವರು 'ಶಹಭಾಸ್' ಎನ್ನುತ್ತಾರೆ. ಇವೆಲ್ಲಾ ಸೊಲ್ಲುಗಳು. ಹಾಗೆಯೇ 'ಸುವ್ವಿ', 'ಸುವ್ವಲಾಲಿ', 'ಸುವ್ವಿಸುವ್ವಮ್ಮ ಲಾಲಿ ಸುವ್ವಲಾಲಿ' - ಇವು ಸೊಲ್ಲುಗಳು. ಹೆಳವರು ಮನೆತನಗಳನ್ನು ಹೊಗಳುವಾಗ 'ಶಿವಾ ಶಿವಾ ಉತ್ತುಮರ ಮಕ್ಕಳ್ಹುಟ್ಟಿ ತಾಯಿ ತಂದೆ ಕೊಂಡಾಡಿಸಿ' ಎಂದು ಒಬ್ಬ ಕಣಿ ಹೇಳಿದಂತೆ ಹೇಳಿದ ಮೇಲೆ ಇನ್ನೊಬ್ಬ 'ಆ.....ಹೌದೂ' ಎಂದು ಹೇಳುವುದು ಸೊಲ್ಲು. ಅದೇ ಹೆಳವರು 'ಕುಲಸ್ವಾಮಿ ಪಾದುವೇ ಮನಿಸ್ವಾಮಿ ಪಾದುವೇ ಗುರುಸ್ವಾಮಿ ಪಾದುವೇ' ಎಂದು ಹೇಳಿದ ಮೇಲೆ 'ರಾಮು ರಾಮು' ಎಂದು ಹೇಳುವುದು ಸೊಲ್ಲು. 'ಮಾಗಡಿ ಕೆಂಪನುಗೌಡ ಗೂಡು ಮಡಕೆ ಕಟ್ಟಿದಾಗ... ತಂದಾನುತಾನ' ಎಂಬಲ್ಲಿ 'ತಂದಾನು ತಾನ'

---

14. ಕರ್ನಾಟಕ ಜಾನಪದ ಟ್ರಸ್ಟಿನ ಧ್ವನಿಮುದ್ರಿಕೆ ಭಂಡಾರದಲ್ಲಿ ೫೦೦ ಕ್ಕೂ ಹೆಚ್ಚು ಪಲ್ಲವಿಗಳು ನಮಗೆ ದೊರೆಯುವುದರಲ್ಲಿ ಸಂದೇಹವಿಲ್ಲ.

ಎಂಬುದು ಸೊಲ್ಲು. ಕೋಲುಪದಗಳಲ್ಲಿ 'ಕೋಲು ಕೋಲನ್ನ ಕೋಲೆ' ಎಂಬುದು ಸೊಲ್ಲು. 'ಹರ ನನ್ನ ಮಾದೇವ, ಶಿವ ನನ್ನ ಮಾದೇವ! ಮಡಿದ ವಾರ್ತೆಯ ಕೇಳಿ... ಕಲ್ಯಾಣ ದೇವನೆ' ಎಂಬಲ್ಲಿ 'ಕಲ್ಯಾಣ ದೇವನೇ' ಎಂಬುದು ಸೊಲ್ಲು. 'ದಾರಾಪುರದ ದೊರಿಯ ಮಗನೆ - ಸುವ್ವಲಾಲಿ, ಅವನು ಧೀರಕಾಣಿ ಕರಿಯಭಂಟ - ಸುವ್ವಲಾಲಿ' ಎಂಬ ಹಾಡಿನಲ್ಲಿ 'ಸುವ್ವಲಾಲಿ' ಎಂಬುದು ಸೊಲ್ಲು.

ಸಾಮಾನ್ಯವಾಗಿ ಮುಮ್ಮೇಳದವರು ನುಡಿ ಅಥವಾ ಚರಣ ಹಾಡಿದರೆ ಹಿಮ್ಮೇಳದವರು ಸೊಲ್ಲು ಹಾಡುತ್ತಾರೆ. ಇದರಿಂದ ಸೊಲ್ಲಿನ ಕೆಲಸ ಹಾಡುವವರು ಉಸಿರು ತೆಗೆದುಕೊಳ್ಳಲು ಅನುಕೂಲ ಮಾಡಿಕೊಡುವುದಾಗಿದೆ. ಹಾಡಿಗೆ ರಂಜನೆ ಒದಗಿಸುವ ಕೆಲಸವನ್ನೂ ಅದು ಮಾಡುತ್ತದೆ.

ಸಾಮಾನ್ಯವಾಗಿ ತ್ರಿಪದಿಗಳಲ್ಲಿ ಪಲ್ಲವಿಗಳೂ ಬೇರೆ ಗೀತ ಪ್ರಕಾರಗಳಲ್ಲಿ ಸೊಲ್ಲುಗಳೂ ಬಂದರೂ, ತ್ರಿಪದಿಯನ್ನು ಕಥನಗೀತೆಯಾಗಿ ಹಾಡಿದಾಗಲೂ ಸೊಲ್ಲು ಬರುವುದುಂಟು.

ಉದಾ :

ಕೋಳಿ ಕೂಗಿತು ಮೂಡು ಕೆಂಪೇರಿತು
ಮೂಡು ಕೆಂಪೇರಿತು
ಏಳಿ ಈರೋಬಿ ಬೆಳಗಾದೊ.... ಸುವ್ವಿ
ಏಳಿ ಈರೋಬಿ ಬೆಳಗಾದೋ ನಿನ್ನಟ್ಟಿ
ಬೆಳಗಾದೋ ನಿನ್ನಟ್ಟಿ
ಕೀಲಾದ ಎಮ್ಮೆ ಕರ ಉಂಡೋ... ಸುವ್ವಿ

ಇಲ್ಲಿ 'ಮೂಡು ಕೆಂಪೇರಿತು' ಮತ್ತು 'ಬೆಳಗಾದೊ ನಿನ್ನಟ್ಟಿ' ಎಂಬ ನುಡಿಗಳನ್ನು ಎರಡೆರಡು ಸಲ ಹೇಳಿರುವುದನ್ನು ಗಮನಿಸಿ. ಹೀಗೆ ಎರಡೆರಡು ಸಲ ಹೇಳುವಾಗ ಉಸಿರು ಕಟ್ಟಿದಂತಾಗುತ್ತದೆ. ಅದರಲ್ಲೂ ಹಿಮ್ಮೇಳ ಇಲ್ಲದೆ ಮುಮ್ಮೇಳದವರೇ ಇರುವಾಗ ಇನ್ನೂ ಕಷ್ಟ. ಆಗೆಲ್ಲ ಅನಿವಾರ್ಯವಾಗಿ ಕಟ್ಟಿದ ಉಸಿರನ್ನು ಬಿಡಲು ಸೊಲ್ಲು ಸಹಾಯಕ್ಕೆ ಬರಲೇ ಬೇಕು.

೧೧. ಜನಪದ ಸಂಗೀತದ ಪ್ರಕಾರಗಳು

ಮೇಲೆ ಹೇಳಿದ ಹತ್ತಾರು ಅಂಶಗಳನ್ನು ಗಮನಿಸಿ ನಾವು ಜನಪದ ಸಂಗೀತದ ಪ್ರಕಾರಗಳನ್ನು ಗುರುತಿಸುವ ಕೆಲಸ ಮಾಡಿದ್ದೇವೆ. ಹಾಗೆ ಹಾಡುವಾಗ ಯಾವ ಹಾಡನ್ನು ಯಾವ ರಾಗದಲ್ಲಿ ಹಾಡುತ್ತಾರೆಂದು ಹೇಳಲು ಹೋಗಿಲ್ಲ. ಅದಕ್ಕೆ ಶಿಷ್ಟ ಸಂಗೀತ ಮತ್ತು ಜನಪದ ಸಂಗೀತ - ಇವೆರಡರ ಆಳವಾದ ಅಧ್ಯಯನ ಬೇಕಾಗುತ್ತದೆ. ಅಲ್ಲದೆ, ಜನಪದ ಸಂಗೀತಕ್ಕೆ ಸ್ವರಪ್ರಸ್ತಾರ ಹಾಕಿ ರಾಗ ತಾಳಗಳನ್ನು ಹೇಳುವುದು ಸಾಧ್ಯವಿಲ್ಲ ಎಂದೂ, ಹಾಗೆ ಹಾಕಿದರೂ ಶಿಷ್ಟ ರಾಗದ ಛಾಯೆಯನ್ನು ಕಾಣಬಹುದೇ ಹೊರತು ಅದೇ ರಾಗದಲ್ಲಿ ಹಾಡಲು ಸಾಧ್ಯವಿಲ್ಲ ಎಂಬುದೂ ಎಲ್ಲರ ಅಭಿಪ್ರಾಯವಾಗಿದೆ. ಆದರೂ ಆ ಕೆಲಸ ಆಗಬೇಕಾಗಿದೆ. ಏಕೆಂದರೆ ಈಗ ಹಾಡುತ್ತಿರುವವರು ಕಣ್ಮರೆಯಾದರೆ ಅವರ ಬಾಯಲ್ಲಿರುವ ದನಿ, ಧಾಟಿ ಮತ್ತು ಮಟ್ಟುಗಳೂ ಕಿವಿಮರೆಯಾಗುತ್ತವೆ. ಜನಪದ ಗೀತೆಗಳನ್ನು ಕೇವಲ ಪುಸ್ತಕಗಳಿಂದ ಓದಿಕೊಂಡರೆ ಗೀತೆಗಳಲ್ಲಿ ಹಾಡುವ ಧಾಟಿ ಏನೆಂದು ತಿಳಿಯುವುದಿಲ್ಲ. ಅವನ್ನು ಮೂಲಗಾಯಕರ ಬಾಯಿಂದಲೇ ಕೇಳಬೇಕು. ಇಲ್ಲವೇ ಧ್ವನಿ ಮುದ್ರಿಕೆಗಳನ್ನು ಆಲಿಸಬೇಕು. ಯಾವುದೇ ಗೀತ ಸಾಹಿತ್ಯದ ಸೊಗಸು ಸೊಗಡುಗಳನ್ನು ಕಾಣಬೇಕಾದರೆ ಅದನ್ನು ಹಾಡಬೇಕು. ಗದ್ಯ ಓದಿದಂತೆ ಪದ್ಯ ಓದಿದರೆ

ಪ್ರಯೋಜನವಿಲ್ಲ. ಆದ್ದರಿಂದ ಜನಪದ ಸಂಗೀತದ ಅಧ್ಯಯನಕ್ಕೆ ಅನುಕೂಲವಾಗಲೆಂದು ನಾವು ನಮ್ಮಲ್ಲಿರುವ ಸಾವಿರಾರು ಗಂಟೆಗಳ ಜನಪದ ಸಂಗೀತವನ್ನೂ ಅದರಲ್ಲಿ ಕೇಳಿ ಬರುವ ನೂರಾರು ಧಾಟಿಗಳನ್ನೂ ಗುರುತಿಸುವ ಕೆಲಸ ಮಾಡಿದ್ದೇವೆ. ದನಿ, ಧಾಟ ಮತ್ತು ಮಟ್ಟುಗಳೆಂದು ವಿಭಾಗಿಸಿಕೊಂಡು, ಅವನ್ನು ಹಾಡುವ ಸಂದರ್ಭ, ಹಾಡಿನ ವಿಷಯ, ಹಾಡಿನ ಕಥಾ ನಾಯಕಿ ಅಥವಾ ನಾಯಕ ಇವುಗಳನ್ನು ಗಮನಿಸಿ, ಅವಕ್ಕೆ ತಕ್ಕ ಹೆಸರನ್ನು ಕೊಡುವ ಕೆಲಸ ಮಾಡಲಾಗಿದೆ. ಕೆಲವರು ಅದರಲ್ಲಿಯೂ ಹೆಂಗಸರು ಹಾಡುವ ಕೆಲವು ದನಿಗಳನ್ನು ಯಾವುದಕ್ಕೂ ಸೇರಿಸದೆ ಅವರ ಹೆಸರಿನಲ್ಲಿಯೇ ಗುರುತಿಸಲಾಗಿದೆ. ಏಕೆಂದರೆ, ಅವು ಅಷ್ಟು ವಿಶಿಷ್ಟವಾಗಿವೆ. [15]

೧೨. ಹೆಂಗಸರ ದನಿಗಳು

ಹೆಂಗಸರ ಪದಗಳಲ್ಲಿ ಬರುವ 'ರಾಗ'ಗಳನ್ನು 'ದನಿ' ಎಂದು ಕರೆಯಲಾಗಿದೆಯಷ್ಟೆ. ಈ ದನಿಗಳಲ್ಲಿ ಬರುವ ರಾಗಗಳನ್ನು ಇಂತಿಂಥ ರಾಗ ಅಥವಾ ದನಿ ಎಂದು ಗುರುತಿಸುವ ಕೆಲಸ ಇನ್ನೂ ಆಗಿಲ್ಲ. ಆಗಿರುವಷ್ಟು ಕೆಲಸವನ್ನು ಮೇಲೆ ಆಗಲೇ ಹೇಳಲಾಗಿದೆ. ಆದರೆ ಆಗಬೇಕಾದ ಕೆಲಸ ಅಪಾರ. ಅಷ್ಟೇ ಅಲ್ಲ, ತುಂಬ ಕಠಿಣವಾದ ಕೆಲಸ. ಅದು ಅಸಾಧ್ಯವೆಂದೇ ಹೇಳಬೇಕು. ಏಕೆಂದರೆ, ಎಷ್ಟು ಜನ ಹಾಡುಗಾತಿಯರಿದ್ದರೂ (ಪ್ರತಿ ಹಳ್ಳಿಯಲ್ಲಿ ಒಬ್ಬಿಬ್ಬರಾದರೂ ಇದ್ದಾರೆ) ಅಷ್ಟು ಬಗೆಯ ದನಿಗಳಿವೆ ; ಈ ದನಿಗಳನ್ನು ಕೇಳಿ ಕೇಳಿ ರೂಢಿಸಿಕೊಳ್ಳಬೇಕೇ ಹೊರತು ಸ್ವರಪ್ರಸ್ತಾರ ಇತ್ಯಾದಿಗಳಿಂದ ಸಾಧ್ಯವಿಲ್ಲ. ಆದರೂ ದನಿಯ ಸ್ಥೂಲ ಪರಿಚಯವನ್ನು ಸ್ವರಪ್ರಸ್ತಾರದಿಂದ ಮಾಡಿಕೊಳ್ಳುವ ಸಾಧ್ಯತೆಯಿದೆ. ಈ ಕೆಲಸವನ್ನು ನಾವು ಈಗಾಗಲೇ ಕೈಗೊಂಡಿದ್ದೇವೆ.

ನಮ್ಮ ಹಳ್ಳಿಯ ಹೆಂಗಸರ ಪದಗಳಲ್ಲಿ ನೂರಾರು ದನಿಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಏಕೆಂದರೆ, ಒಂದೊಂದು ಪದವನ್ನೂ ಆಯಾ ದನಿಯಲ್ಲಿಯೇ ಹಾಡುವುದು ಕ್ರಮ ಮತ್ತು ರೂಢಿ. ಸಾಮಾನ್ಯವಾಗಿ ಈ ದನಿಗಳು ಬದಲಾವಣೆಯಾಗುವುದು ಅಪರೂಪ. ಅಲ್ಲದೆ ಒಂದೊಂದು ದನಿಯಲ್ಲಿ ಹಲವಾರು ಒಳದನಿಗಳಿರುತ್ತವೆ. ಉದಾ : 'ಸೋಬಾನೆ ದನಿ' ಎಂದು ನಾವು ಕರೆಯುವ ದನಿಯಲ್ಲಿ ಸ್ಪಷ್ಟವಾಗಿ ಆರೇಳು ಒಳದನಿಗಳನ್ನು ಗುರುತಿಸಬಹುದು. ಅವು ಯಾವುವೆಂದರೆ, ಶಾಸ್ತ್ರದ ನೀರಿನ ದನಿ, ಶಾಸ್ತ್ರದಬತ್ತ ಕುಟ್ಟುವದನಿ, ಅರಿಶಿಣ ಎಣ್ಣೆ ಶಾಸ್ತ್ರದದನಿ, ನೀರೆರೆಯುವ ದನಿ, ಧಾರೆ ಮುಹೂರ್ತದ ದನಿ, ಬೂವ ಇಡುವ ದನಿ, ಓಕಳಿಶಾಸ್ತ್ರದ ದನಿ - ಹೀಗೆ, ವಾಸ್ತವವಾಗಿ ಶಾಸ್ತ್ರದ ನೀರಿನ ದನಿಯೇ ಸೋಬಾನೆ ದನಿ ಎನ್ನಬಹುದು. ಆ ದನಿಯಲ್ಲಿಯೇ ಬಹುತೇಕ ಸೋಬಾನೆ ಪದಗಳು ಕೊಂಚ ವ್ಯತ್ಯಾಸದಲ್ಲಿ ಹಾಡಲ್ಪಡುತ್ತವೆ. ಮೇಲೆ ಹೇಳಿದ ಒಳದನಿಗಳು ಸೋಬಾನೆ ಪದಗಳ ವ್ಯಾಪ್ತಿಯಲ್ಲಿ ಬಂದರೂ ಅವುಗಳದೇ ಪ್ರತ್ಯೇಕವಾದ ದನಿಯನ್ನು ಹೊಂದಿರುತ್ತವೆ.

---

15. ರಾಗಗಳ ಬಗ್ಗೆ ಬೇರೆ ಬೇರೆ ಲಾಕ್ಷಣಿಕರು ಏನು ಹೇಳುತ್ತಾರೆಂದು ತಿಳಿಸುತ್ತಾ ರತ್ನಾಕರನು ಈ ಪಂಚಗೀತೆಗಳಿಂದ ಒಟ್ಟು ೩೦ ಗ್ರಾಮ ರಾಗಗಳೂ, ಆ ಗ್ರಾಮ ರಾಗಗಳಿಂದ ೯೨ ಭಾಷಾ ೨೦ ವಿಭಾಷಾ, ೪ ಅಂತರ ಭಾಷಾ ರಾಗಗಳೂ, ಮಾರ್ಗರಾಗದ ಇತರ ಭಾಗಗಳಾದ ೮ ಉಪ ರಾಗಗಳೂ ೨೦ ರಾಗಗಳೂ, ಒಟ್ಟು ೧೭೮ ರಾಗಗಳೂ ದೇಶೀಯ ರಾಗಗಳಲ್ಲಿ ಅನುಕ್ರಮವಾಗಿ ಪ್ರಾಚೀನರ ೮ ಮತ್ತು ತನ್ನ ಕಾಲದಲ್ಲಿದ್ದ ೧೩ ರಾಗಾಂಗ ೧೧ ಮತ್ತು ೯ ಭಾಷಾಂಗ ೧೨ ಮತ್ತು ೮ ಕ್ರಿಯಾಂಗ ೩ ಮತ್ತು ೨೭ ಉಪಾಂಗ - ಇವೆಲ್ಲ ಸೇರಿ ಆಗುವ ೨೬೪ ರಾಗಗಳ ಹೆಸರನ್ನು ಉದಾಹರಣ ಪೂರ್ವಕ ಲಕ್ಷಣಗಳನ್ನು ಕೊಟ್ಟಿದ್ದಾನೆ ಎನ್ನುತ್ತಾರೆ. ಎಸ್. ಚನ್ನಕೇಶವಯ್ಯ ಅವರು ತಮ್ಮ 'ರಾಗ ಆಲಾಪನ ಪದ್ಧತಿ ತಾನ ಮತ್ತು ಪಲ್ಲವಿ' ಎಂಬ ಗ್ರಂಥದಲ್ಲಿ ಈ ಮಾತನ್ನು ಗಮನಿಸಿದಾಗ ನಮ್ಮ ಗ್ರಾಮೀಣರ ಬಾಯಲ್ಲಿದ್ದ, ಈಗ ಅವರ ಬಾಯಲ್ಲಿರುವ ನೂರೆಂಟು ದನಿ - ಧಾಟಿ - ಮಟ್ಟುಗಳೇ. ಆ ೨೬೪ ರಾಗಗಳಿಗೆ ಸ್ಫೂರ್ತಿ ನೀಡಿರಬಾರದೇಕೆ ಎಂಬ ವಿಷಯ ಅಧ್ಯಯನಕ್ಕೆ ಅರ್ಹವಾದುದಾಗಿದೆ.

ಈಗ ನಾವು ಕರ್ನಾಟಕ ಜಾನಪದ ಟ್ರಸ್ಟಿನ ಅಪಾರ ಧ್ವನಿಮುದ್ರಿಕೆಗಳ ಆಧಾರದ ಮೇಲೆ ಈ ಕೆಳಗೆ ಕಂಡ ಹೆಂಗಸರ ದನಿಗಳನ್ನೂ, ಒಳದನಿಗಳನ್ನೂ ಗುರುತಿಸುವ ಪ್ರಯತ್ನ ಮಾಡಿದ್ದೇವೆ. ಕೆಲವು ಹೆಂಗಸರಲ್ಲಿ ತಮ್ಮವೇ ಆದ ವಿಶಿಷ್ಟ ದನಿಗಳಿವೆ. ಅಂಥವುಗಳನ್ನು ಅವರು ಹಾಡುವ ಪದಗಳ ಹೆಸರಿನಲ್ಲಿ ಅಥವಾ ಅವರ ಹೆಸರಿನಲ್ಲಿಯೇ ಗುರುತಿಸಲಾಗಿದೆ.

ಬೀಸುವ ದನಿ

ಬೀಸುವುದು ಎಲ್ಲಾ ಜನಾಂಗಗಳಲ್ಲಿ ಎಲ್ಲಾ ದೇಶಗಳಲ್ಲಿ ಇದ್ದದ್ದೆ. ಇದು ಸಾಮಾನ್ಯವಾಗಿ ಹೆಂಗಸರ ಕಾಯಕ. ಶ್ರಮದಿಂದ ಕೂಡಿದ ಈ ಕಾಯಕದ ಆಯಾಸವನ್ನು ಪರಿಹರಿಸಿಕೊಳ್ಳಲು ಹೆಂಗಸರು ಹಾಡದೆ ಬೀಸುವುದೇ ಇಲ್ಲ. ಅಲ್ಲದೆ, ಇನ್ನೊಂದು ಅನುಕೂಲವೂ ಬೀಸುವಾಗ ಹಾಡುವುದರಿಂದ ಉಂಟು. ಹೆಣ್ಣು, ಅದರಲ್ಲಿಯೂ ಭಾರತದಲ್ಲಿ ಹಲವಾರು ಚಿಂತೆಗಳಿಗೆ ಒಳಗಾಗುತ್ತಾಳೆ. ಅತ್ತೆ - ಮಾವಂದಿರ ಕಾಟ, ಮಕ್ಕಳಿಲ್ಲದ ಸಂಕಟ, ಕೆಟ್ಟ ಗಂಡನ ಹಿಂಸೆ, ನೆರೆ ಹೊರೆಯವರ ಆಕ್ಷೇಪಣೆ - ಇವೆಲ್ಲ ಆಕೆಯ ಚಿಂತೆಗೆ ಕಾರಣಗಳು. ಇವನ್ನು ಹೇಳಿಕೊಳ್ಳುವುದು ಹೇಗೆ ಮತ್ತು ಯಾರಲ್ಲಿ? ಅದಕ್ಕೋಸ್ಕರವೇ ಆಕೆ ಬೀಸುವ ಹಾಡಿನಲ್ಲಿ ತನ್ನ ದುಃಖವನ್ನು ಹೇಳಿಕೊಂಡು ತನ್ನ ಮನಸ್ಸಿನ ವೇದನೆಯನ್ನು ಹಗುರ ಮಾಡಿಕೊಳ್ಳುತ್ತಾಳೆ. ಹಾಗೆಯೇ, ಸುಖ ಸಂತೋಷಗಳನ್ನು ಹಾಡಿನಲ್ಲಿ ಹೊರಗೆಡವುತ್ತಾಳೆ. ತಪ್ಪು ದಾರಿ ಹಿಡಿದ ಗಂಡನನ್ನೋ ಇನ್ನಿತರ ಬಂಧುಬಳಗದವರನ್ನೋ ಹಾಡಿನ ರೂಪದಲ್ಲಿ ತಿದ್ದುತ್ತಾಳೆ.

ಬೀಸುವ ದನಿಗೆ ಕಲ್ಲೇ ಶ್ರುತಿ ಅಥವಾ ಗತಿ ಅಥವಾ ಲಯ. ಕಲ್ಲಿನ ದರ್‍ರ್‍ದರ್‍ರ್ ಎಂಬ ಗತಿಗೆ ಬೆಳಗಿನ ತಂಪು ಹೊತ್ತಿನಲ್ಲಿ ರಾಗವಾಗಿ, ನಿಧಾನವಾಗಿ ಹಾಡಲಾರಂಭಿಸಿದರೆ ಆ ದನಿಗೆ ಸಮಾನವಾದ ರಾಗ ಬೇರೊಂದಿಲ್ಲ. ಈ ರಾಗವನ್ನೂ, ದೇವರ ಮುಂದೆ ಬೆಳಗಿನ ಹೊತ್ತು ಸಂಸ್ಕೃತ ಭಾಷೆಯಲ್ಲಿ ಹೇಳುವ ಮಂತ್ರಘೋಷವನ್ನೂ ಅರಬ್ಬೀ ಭಾಷೆಯಲ್ಲಿ ಮುಸಲ್ಮಾನ ಮುಲ್ಲಾಗಳು ನಮಾಜಿಗೆ ಕರೆಯುವ ದನಿಯನ್ನೂ ಒಂದೇ ಸಾಲಿನಲ್ಲಿ ಸೇರಿಸಬಹುದು. ಇವು ಮೂರೂ ಒಂದೇ ಬಗೆಯಾಗಿರುತ್ತವೆ. ಕಾರಣ, ಇವು ಮೂರರ ಮೂಲ ಬಹುಶಃ ಒಂದೇ ಇರುವುದು. ಆ ಮೂಲ ಯಾವುದೆಂದು ನಾವು ಹೇಳಲು ಸದ್ಯಕ್ಕೆ ಶಕ್ಯವಾಗಿಲ್ಲ. ಅಧ್ಯಯನ ಮಾಡಿದರೆ ಆ ಮೂಲವನ್ನು ಹೇಳಲು ಸಾಧ್ಯವಾಗಬಹುದು. ಒಟ್ಟಿನಲ್ಲಿ ಇವು ಮೂರರ ದನಿಗಳು ಬಹು ಮಾಧುರ್ಯವಾಗಿಯೂ ಇಂಪಾಗಿಯೂ ಇರುತ್ತವೆ; ಕೇಳುಗರನ್ನು ಬೇರೊಂದು ಲೋಕಕ್ಕೆ ಕರೆದೊಯ್ಯುತ್ತವೆ; ನಾದರಸದಲ್ಲಿ ನಮ್ಮನ್ನು ತೇಲಾಡಿಸುತ್ತವೆ.

ಬೀಸುವಾಗ ಹತ್ತಾರು ಬಗೆಯ ಪದಗಳನ್ನು ಹಾಡುತ್ತಾರೆ. ಸೋಬಾನೆ ಚಿಕ್ಕಮ್ಮನಂತಹ ನುರಿತ ಹಾಡುಗಾತಿಯರು ಅಕ್ಕತಂಗಿಯರ ಮೇಲೆ, ಅಣ್ಣ ತಮ್ಮಂದಿರ ಮೇಲೆ, ಅತ್ತೆ - ಸೊಸೆಯರ ಮೇಲೆ, ಚುಂಚನಗಿರಿ ಭೈರಪ್ಪ, ನಂಜನಗೂಡು ನಂಜಪ್ಪ, ಮೇಲುಕೋಟೆ ಚಲುವಯ್ಯ, ಗೊಲ್ಲರ ಜುಂಜಪ್ಪ, ಗಂಗೆ - ಗೌರಿ ಇವರುಗಳ ಮೇಲೆ ಹಾಡಬಲ್ಲರು. ಅಲ್ಲದೆ ತ್ರಿಪದಿಗಳಲ್ಲಿರುವ ಇವುಗಳ ಸಾಹಿತ್ಯ ಬೀಸುವ ದನಿಯಲ್ಲಿ ಹಾಡಲು ತುಂಬಾ ಅನುಕೂಲವಾದುದು. ವಾಸ್ತವವಾಗಿ ತ್ರಿಪದಿ ಸಾಹಿತ್ಯವನ್ನು ಯಾವ ದನಿ, ಧಾಟಿ ಮತ್ತು ಮಟ್ಟುಗಳಲ್ಲಾದರೂ ಹಾಡಬಹುದು. ಅಷ್ಟರಮಟ್ಟಿಗೆ ತ್ರಿಪದಿ ಜನಪದ ಸಂಗೀತಕ್ಕೆ ಮೂಲವಾಗಿದೆ ಎನ್ನಬಹುದು.

ಬೀಸುವ ದನಿಯಲ್ಲಿ ಕಲ್ಲಿನ ಗತಿ ಇಲ್ಲದೆಯೇ ಹಾಡಬಹುದು. ಈ ಕಾರಣದಿಂದಲೇ ಬೀಸದೆಯೇ ಗಂಡಸರು ಬೀಸುವ ಪದಗಳನ್ನೂ ಇನ್ನಿತರ ತ್ರಿಪದಿ ಸಾಹಿತ್ಯವನ್ನೂ ಹಾಡಬಲ್ಲರು. ಆದರೆ ಬೀಸುವ ದನಿಗೆ ಮೆರುಗು ಬರುವುದು ಬೀಸಿಕೊಂಡು ಹಾಡಿದಾಗ ಮಾತ್ರ.

ಕುಟ್ಟುವ ದನಿ

ಸಾಮಾನ್ಯವಾಗಿ ಕುಟ್ಟುವಾಗ ಹಾಡುವುದಿಲ್ಲ. ಏಕೆಂದರೆ, ಕುಟ್ಟುವುದನ್ನೂ ಹಾಡುವುದನ್ನೂ ಒಟ್ಟಿಗೆ ಮಾಡುವುದು ಕಷ್ಟ. ಆದರೆ ಮದುವೆಯಲ್ಲಿ ಶಾಸ್ತ್ರದ ಭತ್ತ ಕುಟ್ಟುವಾಗ ಮತ್ತು ಕರಾವಳಿ ತೀರದಲ್ಲಿ ಮತ್ತು ಘಟ್ಟದ ಪ್ರದೇಶಗಳಲ್ಲಿ ಕುಟ್ಟುವ ಗತಿಗೆ ಅನುಗುಣವಾಗಿ ಬೇರೆಯವರು, ಅಂದರೆ ಭತ್ತವನ್ನೋ ಅಕ್ಕಿಯನ್ನೋ ಒರಳಿಗೆ ನೂಕುವವರು ಹಾಡುತ್ತಾರೆ. ಆಗ ಕುಟ್ಟುವವರು ಕಟ್ಟಿದ ಉಸಿರು ಬಿಡಲು 'ಯಹ್ಯಾ; ಯಹ್ಯಾ' ಎಂದು ಹೇಳುತ್ತಾರೆ. ಮದುವೆಯ ಭತ್ತ ಕುಟ್ಟುವ ಶಾಸ್ತ್ರದಲ್ಲಿ 'ಸುವ್ವಿ ಬಾ ಸುವ್ವಿ ಸುವ್ವಾ ಬಾ' ಎಂಬ ಸೊಲ್ಲೆತ್ತಿ ತ್ರಿಪದಿ ಸಾಹಿತ್ಯದಲ್ಲಿ ಕುಟ್ಟುವ ಪದಗಳನ್ನು ಹಾಡುತ್ತಾರೆ. ಇವುಗಳನ್ನು ಒನಕೆ ಹಾಡುಗಳೆಂದು ಕರೆಯಲಾಗಿದೆ. ಈ ಹಾಡಿನ ಒಂದು ತ್ರಿಪದಿ ಹೀಗಿದೆ :

ಒಂದೊಬ್ಬೆ ಕುಟ್ಟುವಾಗ ಒಬ್ಬಣ್ಣ ನುಣಬಂದ
ಒಬ್ಬಳಿಗೊಬ್ಬೆ ನುರಿಯಾವು - ಅಣ್ಣಯ್ಯ
ಎಬ್ಬಿಸೋ ನಿನ್ನ ಮಡದೀಯ
ಸುವ್ವೀ ಸುವ್ವೀ ಸುವ್ವಾಲೆ ;

ಇನ್ನೊಂದು ಕುಟ್ಟುವ ಹಾಡು ಹೀಗಿದೆ :

ಸುವ್ವಕ್ಕ ಸುವ್ವನಾರಿ, ಹೆಗಲಮೇಲಿನ ಕೋರಿ
ಹಾರಿ ಹೋಯಿತವ್ವ ಹರದಾರಿ, ನಾರಿ ಹಾಕ ವೈಯ್ಯಾರಿ
ಕುಟ್ಟಿ ಕುಟ್ಟಿ ನನ್ನ ರಟ್ಟೆಲ್ಲಾ ನೊಂದಾವ
ಕಟ್ಟಿ ಮ್ಯಾಲಿನ ಕಲ್ಲು ಸಡಿಲ್ಯಾವ ನಾರಿ - ಹಾಕ ವೈಯ್ಯಾರಿ

ಮೊಸರು ಕಡಿಯುವ ದನಿ

ಮೊಸರು ಕಡೆಯುವಾಗ ಸಾಮಾನ್ಯವಾಗಿ ಹಾಡುವುದಿಲ್ಲ. ಆದರೂ ಒಂದೆರಡು ಹಾಡುಗಳು ದೊರೆತಿವೆ. ಈ ಹಾಡನ್ನು ಮಂತಿಗೆ ಹಗ್ಗದ ಎರಡು ತುದಿಗಳನ್ನು ಎರಡು ಕೈಗಳಲ್ಲಿ ಹಿಡಿದು ಹಿಂದಕ್ಕೆ ಮುಂದಕ್ಕೆ ಆಡಿಸುತ್ತ ಹಾಗೆ ಆಡಿಸಿದಾಗ ಮೊಸರಿನ ಮಡಕೆಯ ಸೀರ್ ಬೋರ್ ಎಂಬ ಗತಿಗೂ ಕೈಗಳ ಲಯಕ್ಕೂ ತಕ್ಕಂತೆ ಹಾಡು ಹಾಡಲಾಗುತ್ತದೆ. ಒಂದು ಹಾಡು ಹೀಗಿದೆ :

ಆಕಳ ಮೊಸರಿನ ತೂಕದ ಕಡೆಗೋಲು
ಯಾಕವ್ವ ಬೆಣ್ಣೆ ಬರಲಿಲ್ಲ - ಮನೆ ದೇವರಿಗೆ
ದೀಪ ಹಚ್ಚಿಸುವ ಹದಿನಾರು
ಮುದ್ದೀನ ಮಗನೆ ಮುದ್ದೆ ಬೆಣ್ಣೆಯ ಕೊಡುವೆ
ಬುದ್ಧಿವಂತನಾಗೊ ಎಲಮಗನೆ

ಸೋಬಾನದ ದನಿಗಳು

ಹಿಂದೆಲ್ಲ ಮದುವೆ ಒಂಬತ್ತು, ಐದು ಅಥವಾ ಮೂರು ದಿನಗಳು ನಡೆಯುತ್ತಿದ್ದವು. ಅಷ್ಟು ದಿನಗಳೂ ಎಲ್ಲಾ ಶಾಸ್ತ್ರಗಳನ್ನೂ ತಪ್ಪದೆ ಆಚರಿಸುತ್ತಿದ್ದರು. ಆ ಶಾಸ್ತ್ರಗಳು ನಡೆಯುವಾಗಲೆಲ್ಲ ಹಾಡುಗಳಿರುತ್ತಿದ್ದವು. ಮಂಗಳವಾದ್ಯ ಇದ್ದರೂ ಸರಿಯೆ, ಇಲ್ಲದಿದ್ದರೂ ಸರಿಯೆ ಹೆಂಗಸರ ಹಾಡುಗಳು ಇರಲೇಬೇಕು. ಸೋಬಾನದ ಪದಗಳನ್ನು ಮದುವೆ ಪದಗಳು ಅಥವಾ ಲಗ್ನದ ಪದಗಳೆಂದೂ ಕರೆಯುತ್ತಾರೆ.

ದಕ್ಷಿಣ ಕರ್ನಾಟಕದ ಕಡೆ 'ಸೋಬಾನವೆಲ್ಲ ಶಿವನಿಗೆ' ಅಥವಾ 'ಸೋಬಾನ' ಎಂದು ಸೊಲ್ಲನ್ನು ಹಿಮ್ಮೇಳದವರು ಹೇಳಿದರೆ ಉತ್ತರ ಕರ್ನಾಟಕದ ಕಡೆ 'ಸೋ' ಸಾಮಾನ್ಯವಾಗಿ ಹೇಳುತ್ತಾರೆ.

'ಸೋಬಾನದ ಪದಗಳಲ್ಲಿ ಹಲವಾರು ಒಳದನಿಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಅವ್ಯಾವುವೆಂದರೆ :

ಶಾಸ್ತ್ರದ ನೀರು ತರುವ ಅಥವಾ ಗಂಗೆ ಪೂಜೆ ದನಿ
ಶಾಸ್ತ್ರದ ಬತ್ತ ಕುಟ್ಟುವ ದನಿ
ಅರಿಶಿಣ ಎಣ್ಣೆ ಹಚ್ಚುವ ದನಿ
ಅರಿಶಿಣ ಎಣ್ಣೆ ಹಚ್ಚಿದ ಮೇಲೆ ಸ್ನಾನ ಮಾಡಿಸುವ ದನಿ
ಧಾರೆ ಮುಹೂರ್ತದ ದನಿ
ಹೆಣ್ಣು - ಗಂಡುಗಳಿಗೆ ಬೂವ ಇಡುವ ದನಿ
ಬೂವ ಉಂಡಮೇಲೆ ಎಂಜಲು ತೆಗೆಯುವ ದನಿ
ಓಕಳಿ ಇಟ್ಟಾಡುವ ದನಿ

ಇನ್ನೊಂದು ದನಿಯನ್ನೂ ಮದುವೆ ಪದಗಳಲ್ಲಿ ನಾವು ಗುರುತಿಸಬಹುದು. ಅದೇನೆಂದರೆ, ಬ್ರಾಹ್ಮಣರು ಹೇಳುವ ಮಂತ್ರಗಳಂತೆ ಹೇಳುವ 'ಮುದ್ರಿಕೆಗಳು'.

ಶಕುನ ಶಕುನ
ಶತಕೋಟಿ ಪುಣ್ಯ
ಬಾರಪ್ಪ ಮಗನೆ
ಬಲಗಾಲು ಮುಂದಾಗಿ
ಬಲದಲೇನು ಕಂಡೆ
ಬಮ್ಮದೇವರು ಕಂಡೆ
ಎಡದಲೇನು ಕಂಡೆ
ಈರಣ್ಣ ಸ್ವಾಮಿ ಕಂಡೆ
ಅಕ್ಕಮ್ಮ ಗರತಿ ಕಂಡೆ
ಮುಕ್ಕಣ್ಣ ಶಿವನ ಕಂಡೆ ಇತ್ಯಾದಿ.

ಹೀಗೆ ಮಂತ್ರಗಳನ್ನು ಹೇಳಿದಂತೆ ಹೇಳುತ್ತ ಅಕ್ಷತೆಯನ್ನು ವಧೂ ವರರ ಮೇಲೆ ಹಾಕುತ್ತ ಹರಸುವ ಮುತ್ತೈದೆಯರ ಈ ಮುದ್ರಿಕೆ ದನಿಯೇ ಒಂದು ತರಹ. ಬ್ರಾಹ್ಮಣ ಪುರೋಹಿತರನ್ನು ಕರೆಸದ ಹರಿಜನರ ಹಿರಿಯರೂ ಈ ಮುದ್ರಿಕೆಗಳನ್ನು ಹೇಳಿ ಹರಸುತ್ತಾರೆ.

ಮೈನೆರದ ದನಿ

ಹೆಣ್ಣು ಮೈನೆರೆದಾಗ ಗುಡ್ಲು ಕೂಡುವ ಶಾಸ್ತ್ರದಲ್ಲಿ , ತಾಯಿ ಮನೆ ಒಸಗೆ ಮತ್ತು ಬಳಗದ ಒಸಗೆ ಹಾಕುವ ಸಂದರ್ಭಗಳಲ್ಲಿ ಹಾಡುವ ಪದಗಳು ಸೋಬಾನೆ ಪದಗಳ ದನಿಯಲ್ಲೇ ಸಾಗುತ್ತವೆ. ಆದರೆ ಉತ್ತರ ಕರ್ನಾಟಕದ ಕಡೆ ಉದಾ: ಬಾಚಗೊಂಡನಹಳ್ಳಿ ಹೆಂಗಸರು ಹೊರಡಿಸುವ ದನಿ ವಿಶಿಷ್ಟವಾಗಿರುತ್ತದೆ.

ಬಯಕೆ ದನಿ

ಚೊಚ್ಚಲು ಬಸಿರಿಗೆ ಬಗೆ ಬಗೆಯಾದ ಬಯಕೆಗಳು ಬರುತ್ತವೆ. ಈ ಬಯಕೆಗಳನ್ನು ಬಣ್ಣಿಸುವ ಹಾಡುಗಳ ದನಿಗಳೂ ಬಗೆಬಗೆಯಾಗಿರುತ್ತವೆ; ಮತ್ತು ವಿಶಿಷ್ಟವಾಗಿರುತ್ತವೆ. ಬಾಚಗೊಂಡನಹಳ್ಳಿಯ ಮರಿಯಕ್ಕ ಮತ್ತು ಸಂಗಡಿಗರು 'ಬಾಲಾನ

ಬಸುರೀಗೆ ಬಯಕೆ' ಎಂದು ಹಾಡನ್ನು ಎತ್ತಿಕೊಂಡು ಏನೇನು ಬಯಕೆಗಳು ಎಂಬುದನ್ನು ಬಹು ಸೊಗಸಾಗಿ ದನಿಯಲ್ಲಿ ಹಾಡುತ್ತಾರೆ. 'ಬಾರಮ್ಮ ಬಾ ಸಖಿಯೇ, ಒಂದನೆ ತಿಂಗಳು ನಮ್ಮ ಗೌರೀಗೆ' ಎಂಬುದು ಇನ್ನೊಂದು ದನಿಯ ಹಾಡು. 'ಬಸಿರಿದೀನಿ ಹೆಸರೇನಿಡಾನ' ಎಂಬುದೊಂದು. ಬಯಕೆ ತೀರಿದ ಮೇಲೆ ದಿನ ತುಂಬಿ ಹಡೆಯುವುದು ಹತ್ತಿರ ಬಂದಂತೆ ಗಂಡನೊಡನೆ ಏಕಾಂತದಲ್ಲಿ ಹಾಡುವ ಹಾಡಿನ ಇನ್ನೊಂದು ದನಿ ವಿಶಿಷ್ಟವಾದುದು.

ಬಾಣಂತಿ ದನಿ

ಹೆಣ್ಣು ಹೆತ್ತು ಬಾಣಂತಿಯಾಗಿರುವಾಗಲೂ ಹಾಡುತ್ತಾರೆಂದರೆ ಆಶ್ಚರ್ಯವಲ್ಲವೇ? ಹೌದು. ಬಾಣಂತಿಯಾಗಿದ್ದರೂ ಗಂಡ ಹೆಂಡತಿಯ ಸಹವಾಸ ಬಯಸಿದಾಗ ಅದಕ್ಕೆ ಆಕ್ಷೇಪಿಸಿ ಹೆಂಡತಿ ಹೇಳುವ ವಿಶಿಷ್ಟ ದನಿಯ ಹಾಡೇ ಇದು :

ಬಾಣತಿಯೋ ರಂಗ ಬಾಣತಿಯೋ

ಗಂಡ :

ಹಾದಿಯ ನೋಡಲಾರೆ ದಿನಗಳ ಕಳಿಲಾರೆ
ಸಖಿಯಳೇ ಬಾ ಮಂಚಕೆ ನಾಲೆ ರಾತ್ರೀಕೆ

ಹೆಂಡತಿ :

ನಡುಕಟ್ಟು ಬಿಚ್ಚಿಲ್ಲ ಬಾಯಿಯ ಗಬ್ಬುನಾತ ಹೋಗಿಲ್ಲ
ಬ್ಯಾಡ ಸ್ವಾಮಿ ಬ್ಯಾಡ - ನಾ ಬಾಣತಿಯೋ ರಂಗ ಬಾಣತಿಯೋ.

ಲಾಲಿ ಜೋಗುಳ ದನಿ

ಹತ್ತು ತಿಂಗಳು ಹೊತ್ತು ತಿರುಗಿದ ಹೆಣ್ಣು ಹಡೆದಾದ ಮೇಲೆ ಮಗುವಿಗೆ ಪ್ರೀತಿಯ ಹೆಸರಿಟ್ಟು ಅದನ್ನು ತೊಟ್ಟಿಲಲ್ಲಿ ಹಾಕಿ ತೂಗುವಾಗ ಲಾಲಿ ಪದಗಳನ್ನೂ ಜೋಗುಳದ ಪದಗಳನ್ನೂ ಅವುಗಳದೇ ಆದ ದನಿಯಲ್ಲಿ ಹಾಡುತ್ತಾರೆ. ಆ ದನಿಯಲ್ಲಿ ಹಾಡಿದಾಗ ಅಳುವ ಮಕ್ಕಳು ಮಲಗಿ ನಿದ್ದೆ ಹೋಗುತ್ತವೆ. 'ಜೋ ಜೋ ಕಂದ, ಜೋ ಎನ್ನ ಕಂದಾ' 'ಜೋ ಜೋ ರಾಜಾನೆ ಜೋ ಎಂದು ಕೂಗ್ಯಾರೇ ಗೋಪಿಕೃಷ್ಣನ ಜೋಜೋ' ಎಂಬಿತ್ಯಾದಿ ಹಲವಾರು ಸೊಲ್ಲುಗಳಲ್ಲಿ ಹಾಡುವ ತೊಟ್ಟಿಲು ತೂಗುವ ದನಿಗಳು ಹಲವಾರು.

ದೂರಿ ದನಿ

ತೊಟ್ಟಿಲಲ್ಲಿ ಮಲಗಿದ್ದಾದ ಮೇಲೆ ಇನ್ನೂ ಸರಿಯಾಗಿ ಕುಳಿತುಕೊಳ್ಳಲಾರದ ಮಗುವನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಅದನ್ನು ಎರಡು ಕೈಗಳಿಂದ ಹಿಂದಕ್ಕೂ ಮುಂದಕ್ಕೂ ಆಡಿಸುತ್ತಾ

ದೂರಿ ದೂರಿ ದೂರಿ ದೂರಿ
ನಾರಿ ಕಂದ ದೂರಿ ದೂರಿ
ನಾಗರಮರಿ ದೂರಿ ದೂರಿ
ದೂರಿನಾಡೊ ದೂರಿ ದೂರಿ
ಮಕ್ಕಳೇಸೇ ದೂರಿ ದೂರಿ
ಮನೆಯ ತುಂಬ ದೂರಿ ದೂರಿ
ಆತುಕೊಳ್ಳೇ ದೂರಿ ದೂರಿ
ಭೂಮಿತಾಯಿ ದೂರಿ ದೂರಿ

ಎಂದು ಹಾಡುವ ದನಿ'ದೂರಿ ದನಿ', ಈ ದನಿಯೇ ಒಂದು ಬಗೆಯಾಗಿರುತ್ತದೆ. ಅದನ್ನು ಕೇಳುವ ಮಗು ಅಳುವುದನ್ನು ನಿಲ್ಲಿಸಿ ಉಯ್ಯಾಲೆ ಆಡಿದಂತಾಗಿ ಬಾಯಲ್ಲಿ ಬೆಳ್ಳಿಟ್ಟು ಚೀಪುತ್ತಾ ಸುಮ್ಮನಾಗುತ್ತದೆ.

ಹಚ್ಚೆ ದನಿ

ಹಚ್ಚೆ ಹೊಯ್ಯುವ ಕೊರಮರ ಹೆಂಗಸರು ಜೋಡಿಸಿದ ಸೂಜಿಗಳಿಂದ ಹಚ್ಚೆ ಮಸಿ ಹಚ್ಚಿದ ತೋಳಿನ ಮೇಲೆ ಚುಚ್ಚುವ ಗತಿಗೆ ತಕ್ಕಂತೆ ಹಾಡುವುದೇ ಹಚ್ಚೆ ದನಿ. ಆಗ ಹಾಡುವ ಪದ ಹೀಗಿದೆ :

ಬಾ ನನ್ನ ನಾದುನಿಯೇ
ಹಚ್ಚೆ ಹೂದೇನು ಬಾರೆ ಬಿತ್ತರಿ ತೋಳಿನ ಮ್ಯಾಲೆ
ನಿನ್ನ ಹಚ್ಚೆಯ ಮ್ಯಾಲೆ ಗಿಣಿರಾಮ - ಬಾ ನನ್ನ ನಾದುನಿಯೇ
ನಿನ್ನ ಹಚ್ಚೆಯ ಮ್ಯಾಲೆ ಗಿಣಿರಾಮ ಬರೆದೇನು
ಚುಚ್ಚಿಸಿಕೊಳ್ಳೋದು ನಿನ್ನ ಭಾರ - ಬಾ ನನ್ನ ನಾದುನಿಯೇ

ತಿಂಗಳುಮಾವನ ದನಿ

ತಿಂಗಳು ಮಾವನ ಪೂಜೆ ಮಾಡುವಾಗ ಹೆಂಗಸರು ಹಾಡುವ ಹಾಡಿನ ದನಿಯೇ ಒಂದು ಬಗೆ. 'ಕೋಲುಮಲ್ಲಿಗೆ ಕೋಲೆ, ಕೋಲು ಸಂಪಿಗೆ ಕೋಲೆ'. 'ಅಚ್ಚಚ್ಚ ಬೆಳುದಿಂಗಳೇ, ನನ್ನೂರು ಹಾಲಿನಂಥ ಬೆಳುದಿಂಗಳೇ' ಎಂಬಿತ್ಯಾದಿ ಸೊಲ್ಲುಗಳನ್ನೆತ್ತಿಕೊಂಡು ಹಾಡುವ ದನಿ ವಿಶಿಷ್ಟವಾದುದು.

ಕುಂತಿ ಪೂಜೆ ದನಿ

ಹೆಂಗಸರ ದನಿಗಳಲ್ಲಿ ಬಹು ಮನೋಹರವಾದ ದನಿ ಎಂದರೆ ಕುಂತಿಪೂಜೆ ಮಾಡುವಾಗ ಹಾಡುವ ದನಿ.

ಏ ಗಿಣಿ ಏ ಗಿಣಿಯೇ - ಕುಂತಮ್ಮಗೆ
ರಾಗದೊಂದರಗಿಣಿಯೇ
ಅಥವಾ
ತರಗೆಲ್ಲಾ ಬಾಳೆಯೋ - ನಮ್ಮ ಕುಂತಿಗೆ
ತುರುಬೆಲ್ಲ ಮಲ್ಲಿಗೆಯೋ -

ಎಂಬಿತ್ಯಾದಿ ಪಲ್ಲವಿಗಳನ್ನು ಹಾಕಿಕೊಂಡು ಬಹುಭಕ್ತಿಯಿಂದ ಹಾಡುವ ಈ ದನಿಯನ್ನು ಮತ್ತು ಒಳದನಿಗಳನ್ನು ಎಷ್ಟು ಕೇಳಿದರೂ ಮನಸ್ಸಿಗೆ ಆಗುವ ತೃಪ್ತಿ ಅಷ್ಟಿಷ್ಟಲ್ಲ.

ದೇವರ ದನಿ

ಇಡೀ ಹಳ್ಳಿ ಹೆಣ್ಣು ಮಕ್ಕಳ ಪದಗಳಲ್ಲಿ ಸಂಗೀತದ ದೃಷ್ಟಿಯಿಂದ ಮೊದಲ ಸ್ಥಾನ ದೇವಲ ದೇವರು, ಗ್ರಾಮ ದೇವರು ಮುಂತಾದ ದೇವಾನುದೇವತೆಗಳ ಮೇಲೆ ಹಾಡದ ಹಳ್ಳಿಯ ಹೆಂಗಸರಿಲ್ಲ. ಹಾಗೆಯೇ ಪಲ್ಲವಿಗಳ ವಿಪುಲತೆಯನ್ನೂ ಅವನ್ನು ಹಾಡುವ ಸೊಗಸನ್ನೂ ಆನಂದಿಸಬೇಕಾದರೆ ದೇವರ ಪದಗಳನ್ನು ಕೇಳಬೇಕು. ಒಂದೊಂದು ದೇವರ ಮೇಲೆ ಹಾಡುವಾಗ ಒಂದೊಂದು ದನಿಯಲ್ಲಿ ಹಾಡುವುದರಿಂದ ದೇವರ ದನಿಯಲ್ಲಿ ಅನೇಕ ಒಳದನಿಗಳನ್ನು ಕಾಣಬಹುದು. ಈ ದನಿಗಳಲ್ಲಿ ಲಯಕ್ಕಿಂತ ಹೆಚ್ಚಾಗಿ ಅವುಗಳ ನಡೆಯನ್ನು ಹೆಚ್ಚಾಗಿ ಗಮನಿಸಬಹುದು. ತಬಲ ಮುಂತಾದ ತಾಳವಾದ್ಯಗಳನ್ನೂ ಈ ಹಾಡುಗಳಿಗೆ ತಕ್ಕಂತೆ ನುಡಿಸಬಹುದು. ಜನಪದ ಸಂಗೀತದ ಅಭ್ಯಾಸಿಗಳಿಗೆ ಇದೊಂದು ದೊಡ್ಡ ನಿಧಿ ಎನ್ನಬಹುದು. ಒಂದು ಪದ -

ಹೆಣ್ಣು ಮಕ್ಕಳು ಬಲ್ಲಿ ಬಣ್ಣಾವ ಉಡುಬಲ್ಲಿ
ಸಣ್ಣ ಮಲ್ಲಿಗೆಯ ಮುಡುಕೊಂಡು
ಕೆರಿಯ ಸುತ್ತ ಕಿರಿಯ ಮಲ್ಲಿಗೆ - ಉಡುಸಲವ್ವನ
ಗುಡಿಯ ಸುತ್ತಾ ರಾಜ ಸಂಪಿಗೆ ॥ಪ॥
ಸಣ್ಣ ಮಲ್ಲಿಗೆಯ ಮುಡುಕೊಂಡು - ಉಡುಸಲವ್ವನ
ಕಂಬಕಾರುತಿಯ ಬಳಗು ಚೆಲ್ಲಿ

ನಾಟಿ ಪದ

ಹೆಂಗಸರು ಹತ್ತಿಪ್ಪತ್ತು ಜನ ಸೇರಿ ನಾಟಿ ಹಾಕುವಾಗ ಅಥವಾ ಕಳೆ ಕೀಳುವಾಗ ಇಡೀ ದಿನವೆಲ್ಲ ಹಾಡಬಹುದಾದಂತಹ ಕಥನ ಗೀತೆಗಳನ್ನು ಹಾಡಲು ಆರಿಸಿಕೊಳ್ಳುತ್ತಾರೆ. ಇಬ್ಬರು ಮುಮ್ಮೇಳ ಹಾಡಿದರೆ ಉಳಿದವರು ಹಿಮ್ಮೇಳ ಹಾಡುತ್ತಾರೆ. ಒಂದೊಂದು ಕಥನಗೀತೆಯೂ ಒಂದೊಂದು ದನಿಯಲ್ಲಿರುತ್ತದೆ. ಆ ದನಿಗಳನ್ನು ಆಯಾ ಕಥನಗೀತೆಯ ಹೆಸರಿನಲ್ಲಿಯೇ ಇಲ್ಲಿ ಗುರುತಿಸಲಾಗಿದೆ. ಅವು ಯಾವುವೆಂದರೆ : ೧. ಗುಣಸಾಗ್ರಿ ದನಿ, ೨. ಸಾರಂಗಧರನ ದನಿ, ೩. ಉತ್ತರ ದೇವಿ ದನಿ, ೪. ಬಂಜೆ ಹೊನ್ನಮ್ಮನ ದನಿ, ೫. ರಾಮ - ಸೀತೆ ದನಿ, ೬. ಬಾಲನಾಗಮ್ಮನ ದನಿ, ೭. ಈರೋಬಿ ದನಿ, ೮. ಕಾಳಿಂಗರಾಯನ ದನಿ, ೯. ಕತ್ತಲರಾಯನ ದನಿ, ೧೦. ಹೇಮಗಿರಿ ಜೋಗಿ ಅಥವಾ ನಾಗರಗನ್ನೆ ದನಿ, ೧೧. ಸರ್ಜಪ್ಪನಾಯಕನ ದನಿ, ೧೨. ಕೊಡಗಿನ ವೀರರಾಜನ ದನಿ, ೧೩. ಮದಗದ ಕೆಂಚಮ್ಮನ ದನಿ, ೧೪. ಕರೇಬಂಟನ ದನಿ, ೧೫. ಮೈದಾಳು ರಾಮಣ್ಣನ ದನಿ, ೧೬. ಬಳೆಗಾರ ಶೆಟ್ಟಿ ದನಿ ೧೭. ಗಂಗೆ - ಗೌರಿ ದನಿ ಇತ್ಯಾದಿ. ನಾಗರಗನ್ನೆ ಹಾಡು ಹೀಗೆ ಆರಂಭವಾಗುತ್ತದೆ :

ದ್ವಾರಾವತಿ ಪಟ್ಟಣಕೆ ಯಾರಮ್ಮ
ದೊರಿಗಳೂ - ತಂದನ್ನೇ ತಾನ
ತಾಯಿ ಮುದ್ದವ್ವನ ದೊರಿತನ
ಕಾಣಮ್ಮಾ - ತಂದನ್ನೇ ತಾನ
ತಾಯಿ ಮುದ್ದವ್ವಗೆ ಏಳು ಮಂದಿ
ಮಗದೀರು - ತಂದನ್ನೇ ತಾನ

ಕೆಲವು ವಿಶಿಷ್ಟ ದನಿಗಳು

ಕೆಲವು ಹಾಡುಗಳನ್ನು ಹಾಡುವಾಗ, ಅವರು ಯಾವ ಪ್ರದೇಶದವರೇ ಆಗಲಿ, ಅವನ್ನು ಅವಕ್ಕೆ ಮಾತ್ರ ಮೀಸಲಾದ ದನಿಯಲ್ಲಿ ಹಾಡುತ್ತಾರೆ. ೧. ಅಚ್ಚಮಾದಿಗಳ ಹೆಣ್ಣಿನ ದನಿ, ೨. ಜೋಕುಮಾರನ ದನಿ, ೩. ಬಿದಿರಮ್ಮ ತಾಯಿ ದನಿ, ೪. ಉತ್ತರದೇವಿ ದನಿ ಇತ್ಯಾದಿ.

ಕೆಲವು ಅಪೂರ್ವ ದನಿಗಳು

ಕರ್ನಾಟಕದ ನಾನಾ ಕಡೆ ಥ್ವ ಗಾಯಕಿಯರ ದನಿಗಳು ಅಪೂರ್ವವಾಗಿರುವುದು ಕಂಡುಬಂದಿದೆ. ಅಂಥವರ ಹೆಸರು, ದನಿ ಮತ್ತು ಪದಗಳು ಯಾವುವೆಂದರೆ : ೧. ಕೋಟೆ ಚಿಕ್ಕವ್ವನ ದನಿ, ೨. ಬಂಜೆಯ ಮೇಲೆ ಹಾಡುವ ಚುಂಚನಹಳ್ಳಿ ಪಾಳ್ಯದ ಗಿರಿಯಮ್ಮನ, ೩. ರವಿಕಣ್ಣ (ರವಿಕರ್ಣ)ನ ಮೇಲೆ ಹಾಡುವ ಹೆರಗನಹಳ್ಳಿ ಸೋಬಾನೆ ಮತ್ತು ಇತರ ವಿಷಯಗಳ ಮೇಲೆ ಹಾಡುವ ಮಧುರೆ ಎಲ್ಲಮ್ಮ ಮತ್ತು ಸಂಗಡಿಗರ ದನಿ, ಇತ್ಯಾದಿ.

ಸೋಬಾನೆ ಚಿಕ್ಕಮ್ಮ ರವಿಕಣ್ಣನ ಮೇಲೆ ಹಾಡುವ ರೀತಿ ಹೀಗಿದೆ :

ಮೂರು ತಿಂಗಳ ಕಮಲಕ್ಷ್ಮಿ
ತೋಳ ಮೇಲೊಂದಾಡುವಾಗ
ತೊಟ್ಟಲಲ್ಲೊಂದಾಡುವಾಗ
ಆಗೊಂಟ ರವಿಕಣ್ಣ ಮೂಡನಾಡಿಗೆ - ಸುವ್ವಿ
ಆಗೊಂಟ ರವಿಕಣ್ಣ ಮೂಡನಾಡಿಗೆ - ಸುವ್ವಿ
ಮೂಡನಾಡಿಗೆ ಹೋದಾನೆ
ಮೂರುಸಾವಿರ ಮುತ್ತ ತಂದ
ಮೂರು ಸಾವಿರ ಮುತ್ತ ತಂದ
ಹೇರಮೇಲೊಂದೇರನಾಗಿ ಮೂರಕೂತವ್ನೆ - ಸುವ್ವಿ
ಹೇರಮೋಲೊಂದೇರನಾಗಿ ಮೂರಕೂತವ್ನೆ - ಸುವ್ವಿ

ಆರತಿ ಮತ್ತು ಮಂಗಳಾರತಿ ದನಿಗಳು

ಹಳ್ಳಿಯ ಹೆಂಗಸರು ಅನೇಕ ಆರತಿ ಪದಗಳನ್ನು ಮದುವೆಗಳಲ್ಲಿ, ಮಂಗಳಾರತಿ ಪದಗಳನ್ನು ದೇವರ ಪೂಜೆಯಲ್ಲಿ ಹಾಡುತ್ತಾರೆ. ಇವು ಸಂಪ್ರದಾಯದ ಹಾಡುಗಳಲ್ಲಿ ಬರುವ ದನಿಗಳಿಗಿಂತ ಭಿನ್ನವಾಗಿವೆ.

ವಚನಗಳು ಮತ್ತು ಸಂವಹನ ಮಾಧ್ಯಮ

(ಸಮಾಜೋ – ಭಾಷಿಕ ಪರಿಶೀಲನೆ)

ಡಾ|| ವಿ. ಶಿವಾನಂದ

ಪಾರಂಪರಿಕ ಸಮೂಹ ಮಾಧ್ಯಮಗಳಲ್ಲಿ (Traditional mass Communications) ಕನ್ನಡದ ವಚನಗಳು, ಅವುಗಳ ಭಾಷೆ, ವಾಗ್ರೂಪ ಪ್ರಸಾರಣೆ, ಸಾಂಸ್ಕೃತಿಕ ಸಂದರ್ಭಗಳ ದೃಷ್ಟಿಯಿಂದ ಮಹತ್ವದ ಕೊಡುಗೆಯಾಗಿವೆ. ಈ ಮಾಧ್ಯಮವನ್ನು ಆಧುನಿಕ ಸಾಮಾಜಿಕ ಭಾಷಾ ವಿಶ್ಲೇಷಣೆಯಿಂದ ಇನ್ನಷ್ಟು ನಿಖರವಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವೆಂದು ವಿವರಿಸುವುದು ಇಲ್ಲಿನ ಉದ್ದೇಶ.

ವಚನ ಮಾಧ್ಯಮ ಕುರಿತ ಯೋಚಿಸುವವರು ಮೊದಲಿಗೆ ವಚನಕಾರರ ಸಾಮಾಜಿಕ ಪರಿಕಲ್ಪನೆಯನ್ನು ಅರ್ಥ ಮಾಡಿಕೊಂಡವರಾಗಿರಬೇಕು. ಅದನ್ನೊಂದು ಸಮಾಜವೆಂಬುದಕ್ಕಿಂತ ಒಂದು ಸುಸಂಘಟಿತ, ಪ್ರಗತಿಪರ ವಿಚಾರಧಾರೆಯ ಜನ ಸಮೂಹ ಅಥವ 'ಸಮುದಾಯ' (Social community) ವೆಂದು ಇಲ್ಲಿ ಕರೆಯಲಾಗಿದೆ. ವಚನಕಾರರು ಸಮಾಜದ ವಿಭಿನ್ನ ಶ್ರೇಣಿ, ವರ್ಗ, ಜಾತಿ, ಕುಲ, ಗೋತ್ರ ಹಾಗೂ ವಿಭಿನ್ನ ಭೌಗೋಲಿಕ ಪರಿಸರ ಮತ್ತು ಪ್ರಾಂತೀಯ ಭಾಷಾ ವಲಯಗಳಿಂದ ಬಂದವರಾದ್ದರಿಂದ ಒಬ್ಬೊಬ್ಬರ ವಚನ ಶೈಲಿಯಲ್ಲಿ ಭಾಷಿಕ ವ್ಯತ್ಯಾಸಗಳನ್ನು ಭೌಗೋಲಿಕ ಮತ್ತು ಸಾಮಾಜಿಕ ಸ್ತರದಲ್ಲಿ ಗುರುತಿಸಲು ಸಾಧ್ಯವಾಗಬಹುದಾದರೂ ಅದರ ಸಮಗ್ರ ಭಾಷಾಧ್ಯಯನ ಇಲ್ಲಿನ ಗುರಿಯಾಗಿಲ್ಲ. ಹೇಗೆ ವಚನ ಪ್ರಕಾರ ಒಂದು ವಿಶಿಷ್ಟ ಸಮುದಾಯಕ್ಕೂ, ವೈಚಾರಿಕ ಪ್ರಣಾಲಿಗೂ ಹಾಗೂ ಅದರ ಉದ್ದೇಶಿತವಾದ ಸಾಮಾಜಿಕ ಚಳುವಳಿಗೂ ಒಂದು ಸಶಕ್ತ ಮಾಧ್ಯಮವಾಗಿ ಒಂದು ನಿರ್ದಿಷ್ಟ ಸಾಮಾಜಿಕ ಭಾಷಾ ಶೈಲಿ (Sociolinguistic

style) ಯಾಗಿ ರೂಪುಗೊಂಡಿತೆಂಬುದನ್ನು ಮಾತ್ರ ಇಲ್ಲಿ ವಿವರಿಸಬಹುದಾಗಿದೆ. ಬರ್ನಸ್ಟೈನ್ ಎಂಬ ಸಮಾಜೋ - ಭಾಷಾ ವಿಜ್ಞಾನಿಯು ಸಾಮಾಜಿಕ ಸಮುದಾಯವೊಂದರ ಸ್ತರದಲ್ಲಿ ಅದರ ಸ್ಥಿರತ್ತ್ವದ ಆಧಾರದ ಮೇಲೆ ಸಾಮಾನ್ಯವಾಗಿ ಎರಡು ವಿಧದ ಸಾಮುದಾಯಿಕ ಶೈಲಿಗಳು ಭಾಷೆಯಲ್ಲಿ ನಿರ್ಮಾಣಗೊಳ್ಳಬಹುದೆಂದು ತರ್ಕಿಸುತ್ತಾನೆ.(Bernstein : 1967, 1975). ೧. ಸಾವಯವ ಸ್ಥಿರ ಶೈಲಿ ೨. ಯಾಂತ್ರೀಕೃತ ಸ್ಥಿರ ಶೈಲಿ [1]. (Organic and Mechanical styles) ಸಾವಯವ ಅಥವ ಪರಿಪೂರ್ಣ ಶೈಲಿಯನ್ನು ವಿಭಿನ್ನ ಸಾಮಾಜಿಕ ಶ್ರೇಣಿ ಆಧಾರದ ಮೇಲೆ ಒಂದೊಂದು ಸನ್ನಿವೇಶ, ಸಂದರ್ಭಕ್ಕನುಗುಣವಾಗಿ ಭಿನ್ನ ಭಿನ್ನ ರೂಪದಲ್ಲಿ ಭಾಷೆಯನ್ನು ಬಳಸುವಲ್ಲಿ ಕಾಣಬಹುದಾಗಿದ್ದರೆ ಯಾಂತ್ರಿಕ ಸ್ಥಿರ ಶೈಲಿಯನ್ನು ಒಂದು ನಿರ್ದಿಷ್ಟ ಸಮುದಾಯದವರು ನಿರ್ದಿಷ್ಟ ಆಶೋತ್ತರಗಳ ಅಭಿವ್ಯಕ್ತಿಗಾಗಿ ಬಳಸುವಲ್ಲಿ ಕಾಣಲು ಸಾಧ್ಯವಾಗುತ್ತದೆ. ಮೊದಲಿನದರಲ್ಲಿ ಭಾಷಾ ವೈವಿಧ್ಯಕ್ಕೂ ಎರಡನೆಯದರಲ್ಲಿ ಭಾಷಾ ಶೈಲಿಯ ಏಕತೆಗೂ ಮಹತ್ವವಿರುತ್ತದೆ.

ವಚನಕಾರರ ಸಮುದಾಯದಲ್ಲಿ ಯಾಂತ್ರೀಕೃತ ಸ್ಥಿರತ್ವ ಭಾಷಾ ಶೈಲಿಯ ಲಕ್ಷಣಗಳನ್ನು ಕಾಣಬಹುದಾಗಿದೆ. ಔತ್ತರೇಯ ಸಂತರಲ್ಲಿ ರಾಮ ಭಕ್ತಿ ಪಂಥದವರು ಅವಧೀ ಶೈಲಿಯನ್ನೂ ಕೃಷ್ಣ ಭಕ್ತಿ ಪಂಥದವರು ಬ್ರಜ ಭಾಷಾ ಶೈಲಿಯನ್ನೂ ಅದೇ ರೀತಿ ಔತ್ತರೇಯ ಕಬೀರ ಪಂಥಿಗಳು ಹಾಗೂ ಮತ್ತಿತರ ನಿರ್ಗುಣ ಪಂಥಿಗಳು 'ದೋಹಾ'ವನ್ನು ಬೆಂಗಾಲಿನ ಹಜೀಯ ಭಕ್ತರು 'ಬಾಭಲ'ನ್ನು ಮರಾಠೀ ಸಂತರು 'ಓವೀ' ರೂಪವನ್ನು ತಮಿಳು ನಾಡಿನ ನಾಯನ್ಮಾರರು 'ತೇವಾರಂ'ಗಳನ್ನು ಕರ್ನಾಟಕದ ಹರಿದಾಸರು ಕೀರ್ತನ ರೂಪವನ್ನು ಏಕೆ ತಮ್ಮ ತಮ್ಮ ಏಕೈಕ ಮಾಧ್ಯಮವಾಗಿಸಿಕೊಂಡರೆಂದರೆ ಇವರೆಲ್ಲರೂ ತಮ್ಮದೇ ಆದ 'ಪಂಥ'ವನ್ನು ಎಂದರೆ ಸಮಾಜಕ್ಕಿಂತ ಬೇರೆಯಾದ ಸಮುದಾಯ ಸಂಘಟನೆಯನ್ನು ಹೊಂದಿದ್ದು ತಮ್ಮ ತಮ್ಮ ಭಾವಾತ್ಮಕ ನೆಲೆಗಳಲ್ಲಿ ವಿಶಿಷ್ಟವಾದ ಸಾಮುದಾಯಿಕ ಭಾಷಾ ಶೈಲಿಯನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಇದರಲ್ಲಿ ಕರ್ನಾಟಕದ ಶಿವಶರಣರ ಒಂದು ವೈಲ್ಲಕ್ಷಣ್ಯವೆಂದರೆ ಇತರರು ಹೆಚ್ಚಾಗಿ ಛಂದೋಬದ್ಧ ಸಾಹಿತ್ಯ ರೂಪವನ್ನು ಇಲ್ಲವೆ 'ಹಾಡಿನ ಬಂಧ'ವನ್ನು ಒಂದು ಚೌಕಟ್ಟಿನಲ್ಲಿ ಪ್ರಯೋಗಿಸಿದ್ದರೆ ಇವರು ನೇರವಾಗಿ ತಮ್ಮ ಕಣ್ಣ ಮುಂದಿನ ಸಜೀವ ಮತ್ತು ಸಹಜವಾದ ದೈನಂದಿನ ಭಾಷೆಯನ್ನೇ ಯಾವುದೇ ಛಂದೋ ನಿಯಮಗಳ ಕಟ್ಟು - ನಿಟ್ಟಿಲ್ಲದೆ ಮುಕ್ತ ರೂಪದಲ್ಲಿ ಪ್ರಯೋಗಿಸಿರುವುದೇ ಆಗಿದೆ. ಸಾಮಾಜಿಕ ಭಾಷಾ ವಿಜ್ಞಾನಿಗಳು ಭಾವಿಸಿರುವಂತೆ 'ಭಾಷೆ' (Language) ಎಂಬುದು ಒಂದು ಅಮೂರ್ತವಾದ ಸಂಕೇತ. ನಿಜವಾದ ಭಾಷೆಯೆಂದರೆ 'ಸಾಮಾಜಿಕ ನಿರ್ವಹಣೆಗೊಳಗಾದ ಮಾತು' (Speech) [2]. ವಚನಕಾರರು ನೇರವಾಗಿ ತಮಗೆ ನಿಕಟವಾಗಿದ್ದ ಈ ಮಾತಿನ ಭಾಷಾ ಮಾಧ್ಯಮದಲ್ಲೇ ವೈಚಾರಿಕ ಸಂವಹನಕ್ಕೆ ತೊಡಗಿದ್ದರಿಂದ ಅವರು ತಮಗರಿಯದಂತೆಯೇ ತಮಗಿಂತ ಪೂರ್ವದಲ್ಲಿ ಸ್ಥಾಯಿಯಾಗಿದ್ದ 'ಹಳೆಗನ್ನಡ' ಪಂಡಿತ ಮಾನ್ಯ ಪೌರೋಹಿತ್ಯಶಾಹಿಯಾದ 'ಸಂಸ್ಕೃತ ಭಾಷಾವಿಷ್ಟವಾದ ಹಾಗೂ ಪರಿಮಿತ ಸಮೂಹ ಸಂಪಹನ ಮಾಧ್ಯಮವಾದ ಭಾಷಾ ಶೈಲಿಯ ಪ್ರಭಾವವನ್ನು ಇಲ್ಲದಾಗಿಸಿ ಅದರ ಸ್ಥಾನದಲ್ಲಿ ದೇಶ ಭಾಷಾ ಶೈಲಿರೂಪವನ್ನು ವಿಜೃಂಭಿಸುವಂತೆ ಮಾಡಿದರು.

---


1. In organic solidarity one can expect many situational styles. The Inter - connection of the various social groups of different social groups of different social status sometimes is called organic solidarity. Mechanical solidarity is emphasized wherever individuals share a common system of beliefs and sentiments which produces a detailed regulaton of conduct - Bernstein.

2. ಸಾಮಾಜಿಕ ಭಾಷಾ ವಿಜ್ಞಾನದಲ್ಲಿ 'ಸಸ್ಯೂರಿಯನ್ ಡಿಕಾಟಮಿ' ಹಾಗೂ ಕೆ.ಎಲ್. ಪೈಕ್‌ನು ಪ್ರತಿಪಾದಿಸಿರುವ Etic ಮತ್ತು Emic ಪ್ರಮೇಯಗಳು 'ಅಮೂರ್ತವಾದ ಭಾಷೆ ಮತ್ತು ಮೂರ್ತ ಭಾಷೆ ಇಲ್ಲವೆ ವ್ಯಾವಹಾರ ಪ್ರಣಾಲಿಯ ಭಾಷಾ ಸ್ವೇತ ಅವಸ್ಥೆಗಳನ್ನು ವಿವರಿಸುವ ಸಿದ್ಧಾಂತಗಳಾಗಿವೆ.

ವನಚಗಳಲ್ಲಿನ ಅಂಕಿತಗಳನ್ನು ಬಿಟ್ಟರೆ ಇವು ಮುಕ್ತರೂಪದ ವಾಕ್ಯಗಳೇ ಆಗುತ್ತವೆ. ವೈಚಾರಿಕ ಏಕ ಸೂತ್ರತೆಗಾಗಿ ಒಂದು ಮೂಲ ವಾಕ್ಯಕ್ಕೆ ಪೋಷಕವಾಗುವಂತೆ ಅನೇಕ ಬಿಡಿ ವಾಕ್ಯಗಳು ಸೇರುತ್ತ ಹೋಗಿ ಒಂದು ವಚನ ಬಂಧ, ಸಿದ್ಧಗೊಳ್ಳುತ್ತದೆ. ಹೆಚ್ಚು ಸಂಖ್ಯೆಯಲ್ಲಿ ವಚನಕಾರರು ಏಕಕಾಲಕ್ಕೆ ಈ ಸೃಷ್ಟಿಗೆ ತೊಡಗಿದ್ದರಿಂದ ಅವರು ತಮ್ಮ ಇಷ್ಟದೈವ, ಗುರು ಇಲ್ಲವೆ ತಮ್ಮ ಸ್ವಂತ ಹೆಸರನ್ನೇ ಕೊನೆಯಲ್ಲಿ ಮುದ್ರಿಕೆಯಾಗಿಟ್ಟುಕೊಂಡಿರುವುದು ಇವು ಇಂಥವರವೇ ವಚನಗಳೆಂದು ತಿಳಿಯಲು ಅನುಕೂಲವಾಗಿದೆ. ಆದರೆ ಈ ಮುದ್ರಿಕೆಯನ್ನುಳಿದಾಗಲೂ ವಚನ ತನ್ನ ಭಾಷಿಕ ರೂಪದಲ್ಲಿ ತನ್ನದೇ ಆದ ಸ್ವರೂಪವನ್ನು ಹೊಂದಿರುತ್ತದೆ. ಇದೊಂದು ಏಕರೂಪಾತ್ಮಕವಾದ ವಿಚಾರ ಸಾಮ್ಯವುಳ್ಳ ವ್ಯಕ್ತಿಗಳ ಸಾಮುದಾಯಿಕ ನುಡಿ, ಇದನ್ನು ಒಟ್ಟು ಆ ಸಮುದಾಯದ ವ್ಯಾಕರಣ (Verbal Repertoire) ಎನ್ನಬಹುದು [3]. ಸಾಮಾಜಿಕ ಸನ್ನಿವೇಶ, ಸಂದರ್ಭ ಹಾಗೂ ವಿಷಯ (Topic) ಗಳ ಮೇಲಿಂದ ಆ ಶೈಲಿಯಲ್ಲಿ ನಾವು ಅನೇಕ ರೀತಿಯ ಆಂತರಿಕ ವ್ಯತ್ಯಾಸಗಳನ್ನು ಸಹಜವಾಗಿ ಕಾಣಬಹುದು ಆಧರೆ ಅದೆಲ್ಲದುರ ಅಭಿವ್ಯಕ್ತಿಗಾಗಿ ವಚನಕಾರರು 'ವಚನ'ವನ್ನೇ ಏಕೈಕ ಸಂವಹನ ಮಾಧ್ಯಮವಾಗಿಸಿಕೊಂಡಿದ್ದಾರೆ. ಇದರ ಸ್ವರೂಪವನ್ನು ವಚನ ನಿರ್ವಹಣೆಯ ಮೇಲಿಂದ ಕೆಳಗಿನ ಆಕೃತಿಯೊಂದರ ಮೇಲಿಂದ ತಿಳಿಯಬಹುದಾಗಿದೆ.

ವಚನಕಾರರು - ವಚನ ಭಾಷಾ ಶೈಲಿ

ಸಾಮಾಜಿಕ ಸ್ತರ	ದೈನಂದಿನ ಆಡು ಭಾಷೆ, ವ್ಯಕ್ತಿ ಭಾಷೆ, ಉಪ ಭಾಷೆ (ಸಾಮಾಜಿಕ / ಪ್ರಾಂತೀಯ)
ಸಾಮುದಾಯಿಕ ಸ್ತರ	ಸಾವಯವ ಭಾಷಾ ಶೈಲಿ - ಯಾಂತ್ರೀಕೃತ ಶೈಲಿ.
ವಚನಕಾರ ಸಮುದಾಯ	- ವಚನ ಭಾಷಾ ಶೈಲಿ



ವಚನಗಳು ಹೊರಹೊಮ್ಮಿದ ಸಂದರ್ಭದಲ್ಲಿ ಅವು ಮೌಖಿಕ ರೂಪದ್ದಾಗಿವೆ. (Oral or spoken) ವಚನ ಸಂವಹನ ಪ್ರಕ್ರಿಯೆಯಲ್ಲಿ ಮೌಖಿಕ ಪ್ರಸಾರ (Oral transmission) ಅವುಗಳ ಮೂಲ ಉದ್ದೇಶಗಳಲ್ಲೊಂದಾಗಿದೆ. ಅವು ಧಾರ್ಮಿಕ ಸ್ಥಲಕಟ್ಟುಗಳಲ್ಲಿ ನಿಯೋಜಿತಗೊಂಡ ಕಾಲದಲ್ಲಿ ಕಾಲಕ್ರಮಾನುಸಾರವಾಗಿ ಲಿಖಿತ (Written) ಪ್ರಣಾಲಿಗೆ ಒಳಗಾಗಿವೆ. ವಚನ ಮಾಧ್ಯಮದ ಒಟ್ಟು ಪ್ರಸಾರದಲ್ಲಿ ಮೂರು ಮುಖ್ಯ Channelಗಳು ಕಾರ್ಯ ನಿರ್ವಹಿಸಿವೆ. ೧. ಸಂವಹನ ಕ್ಷೇತ್ರ (Field of

3. The totality of Linguistic varieties used in this way and they may be very many - by a particular community of speakers can be called that community's verbal repertoire. (Trudgill Peter 1984.)


discource), ೨. ಸಂವಹನ ರೀತಿ (Mode of discource), ೩. ಸಂವಹನ ಶೈಲಿ (Style of discource), ಸಾಮಾಜಿಕ ಭಾಷಾ ವಿಜ್ಞಾನದಲ್ಲಿ ಗುರುತಿಸಲಾಗುವ 'Register' ದಂತಹ ಭಾಷಾ ಪ್ರಭೇದವನ್ನು ವಚನ ಮಾದರಿ ಹೋಲುತ್ತದೆ [4]. ಆದರೂ ಇದು 'ರಜಿಸ್ಟರ್'ಗಿಂತ ಹೆಚ್ಚು ವ್ಯಾಪಕವಾದ ಸಾಮಾಜಿಕ ಸಂದರ್ಭಗಳಲ್ಲಿ ಬಳಕೆಗೊಂಡುದರಿಂದ ನಾವಿಲ್ಲಿ ಒಂದು ಪ್ರತ್ಯೇಕ ಭಾಷಾ ಶೈಲಿಯೆಂದೇ ಪರಿಗಣಿಸಬೇಕಾಗುತ್ತದೆ. ಭಾಷಿಕ ಶೈಲಿಯ ವ್ಯಾಪ್ತಿ ವಿಸ್ತಾರವಾದುದು ತೆಲುಗು ಭಾಷಾ ತಜ್ಞರಾದ ಭದ್ರಿರಾಜು, ಕೃಷ್ಣಮೂರ್ತಿ ಅವರು ಶೈಲಿ ಪ್ರಭೇದಗಳನ್ನು ಸಂದರ್ಭದ ಮೇಲಿಂದ ಮೌಖಿಕ ಮತ್ತು ಗ್ರಾಂಥಿಕವೆಂದಾಗಿ ವಿಂಗಡಿಸುತ್ತಾರೆ. (Krishnamurti Bh.) ಇವುಗಳಲ್ಲಿ ಗ್ರಾಂಥಿಕವು ಪುನಃ ಔಪಚಾರಿಕ ಮತ್ತು ಅನೌಪಚಾರಿಕ ಎಂಬ ಅಂತಃಪ್ರಭೇದಗಳನ್ನು ಪಡೆಯುತ್ತದೆ. ಔಪಚಾರಿಕದಲ್ಲಿ ಬಳಕೆಗೊಳ್ಳುವ ಭಾಷಾ ಶೈಲಿಗಳನ್ನು, ವಿಶಿಷ್ಟ ಪರಿಭಾಷಾತ್ಮಕ (Registers) ಸಮೂಹ ಮಾಧ್ಯಮ, ಸಾಹಿತ್ಯ, ಪಠ್ಯ, ಶೈಕ್ಷಣಿಕ ಮುಂತಾದ ವಲಯಗಳಲ್ಲಿ ಕಾಣಬಹುದು. ಈ ಪ್ರಭೇದಗಳಲ್ಲಿ ವಚನ ಭಾಷಾ ಶೈಲಿಯು ಕೆಲವೊಂದು ವೃತ್ತಿಪರ ವಚನಕಾರರ ಕಾಯಕದ ವಚನಗಳಲ್ಲಿ ರಜಿಸ್ಟರ್ ಮಾದರಿಯನ್ನು ಸಂಗೋಷ್ಠಿ ಸಂಭಾಷಣೆಗಳಲ್ಲಿ ಸಮೂಹ, ಸಂವಹನ ಮಾಧ್ಯಮ ಮಾದರಿಯನ್ನು ಆಯಾ ವಿಷಯಗಳಿಗೆ ತಕ್ಕಂತೆ ಆಯಾ ಸ್ತರದ ಶೈಲಿಯ ರೂಪಗಳನ್ನು ಪ್ರತಿನಿಧಿಸುತ್ತದೆ. ಕೆಲವೊಂದು ವಚನಕಾರರು ಮುಖ್ಯವಾಗಿ ಅಂಬಿಗರ ಚೌಡಯ್ಯ, ಘನಲಿಂಗಿ, ಷಣ್ಮುಖ ಶಿವಯೋಗಿಗಳು ದೈನಂದಿನ ಆಡುನುಡಿಗೆ ಹತ್ತಿರವಾಗಿ ಅನೌಪಚಾರಿಕ ವ್ಯವಹಾರಿಕ ಶೈಲಿಗಳನ್ನು ಬಳಸಿದರೆ ಅಲ್ಲಮ, ಸಿದ್ದರಾಮ, ಬಸವ, ಚೆನ್ನಬಸವಣ್ಣ ಇವರೇ ಮೊದಲಾದವರು ಹೆಚ್ಚಾಗಿ ಔಪಚಾರಿಕ ಹಾಗೂ ಗ್ರಾಂಥಿಕ ಮಟ್ಟಕ್ಕೆ ಅನುಗುಣವಾದ ಸಾಹಿತ್ಯಕ ಶೈಲಿಯ ರೂಪಗಳನ್ನು ಕಾಣಿಸಿದ್ದಾರೆ. ಈ ಸಂವಹನ ಮಾಧ್ಯಮವನ್ನು ವ್ಯಕ್ತಿ ನಿಷ್ಠವಾಗಿಸುವದಕ್ಕಿಂತ ವಸ್ತು ನಿಷ್ಠ ರೀತಿಯಲ್ಲಿ ಇಡೀ ವಚನಕಾರರ ಭಾಷಾ ಶೈಲಿಯನ್ನು ಮುಖ್ಯವಾಗಿ ಎರಡು ಘಟ್ಟಗಳಲ್ಲಿ ವಿಂಗಡಿಸಿ ವಿಶ್ಲೇಷಿಸಬಹುದಾಗಿದೆ.

ಸಾಮಾಜಿಕ ಸನ್ನಿವೇಶ / ಸಂದರ್ಭ (Social Situation or context)			ವಿಷಯ (Topic)
ನಿದರ್ಶನಕ್ಕೆ :	-	(i)	ಧಾರ್ಮಿಕ, ಪರವಸ್ತು , ಆತ್ಮ , ಸೃಷ್ಟಿ ವಿಕಾಸ.
ಪೂಜೆ, ಅರ್ಚನೆ,	-		ಅಂತರಂಗ ನಿರೀಕ್ಷಣೆ,
ಕಾಯಕ	-		ಧರ್ಮ, ಆಧ್ಯಾತ್ಮ, ದೀಕ್ಷಾ ವಿಧಾನ,
ದಾಸೋಹಾಚರಣೆ	-		ಶಿವಯೋಗ.
ಅನುಭಾವಗೋಷ್ಠಿ	-		ಭಕ್ತಿ, ಜ್ಞಾನ.
ಗುರು - ಶಿಷ್ಯ ಸಂಯೋಗ	-	(ii)	ಸಾಮಾಜಿಕ
ಶರಣ ಸಂದರ್ಶನ	-		ಕುಟುಂಬ, ಸ್ತ್ರೀ ವಿಚಾರ
ಇತರ ಲೋಕ ಸಂಗ್ರಹ	-		ಕುಲಭೇದ ನಿರಸನ
ಕಾರ್ಯ ಸನ್ನಿವೇಶಗಳು	-	(iii)	ಆರ್ಥಿಕ
ಲೋಕವಿಡಂಬನೆ - ಸಮಾಜ ವಿಮರ್ಶೆ	-		ವೃತ್ತಿ ಗೌರವ, ಕಾಯಕ ಮಹತ್ವ

4. ಹಾಲಿಡೇ (Holliday) ಇದನ್ನು ವ್ಯಾಖ್ಯಾನಿಸಿರುವುದು ಇಂತಿದೆ. Register is a type of code which serves for certain occasion or certain matter.

ಮೇಲಿನ ಇವೆರಡು ಸ್ತರಗಳಲ್ಲಿ ಯೋಚಿಸಿದಾಗ ವಚನ ಭಾಷಾ ಶೈಲಿ ಎಲ್ಲಿಯೂ ವಿವಿಕ್ತವಾದ, ಏಕಾಂತದ ನುಡಿಯಾಗಿರದೆ ಅದೊಂದು ಸಾಂದರ್ಭಿಕ ಸನ್ನಿವೇಶ ಇಲ್ಲವೆ ವಿಷಯಕ್ಕನುಗುಣವಾಗಿ ಬದ್ಧವಾದ ಸಾಮಾಜಿಕ ನಿಯಂತ್ರಿತವಾದ ಒಂದು ಸಂವಹನ ಮಾಧ್ಯಮವಾಗಿರುವದು ತಿಳಿದು ಬರುತ್ತದೆ. ವಚನ ಶೈಲಿಯಲ್ಲಿ ಅಂತಃ ಪ್ರಭೇದಗಳು ಹೆಚ್ಚುವ ರೀತಿ ಸಾಮಾಜಿಕ ಭಾಷಾ ವಿಜ್ಞಾನದಲ್ಲಿ ಅನ್ವಯಗೊಳ್ಳುವ ಸಾಮಾಜಿಕ ಉಪಭಾಷಾತ್ಮಕ ಶೈಲಿ ಪ್ರಭೇದಗಳಂತೆಯೇ ಮುಖ್ಯವಾಗಿ ಎರಡು ಶ್ರೇಣಿಗಳಲ್ಲಿ ನಡೆಯುತ್ತದೆ. ಲಂಬ ಶ್ರೇಣಿ ಮತ್ತು ಸಮಸ್ತರ ಶ್ರೇಣಿ. (Vertical and Horizantal stratifications)ಇದನ್ನು ಕೆಳಗಿನ ಆಕೃತಿಯಲ್ಲಿ ಸೂಚಿಸಿದೆ.

ವಚನ ಶೈಲಿ ಪ್ರಭೇದಗಳು



ಸನ್ನಿವೇಶನಿಷ್ಠ ಶೈಲಿಯ ವಚನಗಳು ಹೆಚ್ಚಾಗಿ ಸರಳ, ಹಾಗೂ ವಾಚ್ಯ ರೂಪದ ಅಭಿವ್ಯಕ್ತಿಗಳಾದರೆ ವಿಷಯ ನಿಷ್ಠ ಶೈಲಿಯ ವಚನಗಳು ಹೆಚ್ಚು ಸಂಕೀರ್ಣ, ವಿಪುಲಾರ್ಥ ಪ್ರತೀತಿಯುಳ್ಳವು, ಆಲಂಕಾರಿಕವೂ ಆದವುಗಳು. ಈ ಸರಳತೆ ಮತ್ತು ಸಂಕೀರ್ಣತೆ ಎಲ್ಲಿ ಎಲ್ಲಿ , ಹೇಗೆ ವ್ಯಕ್ತಗೊಂಡಿದೆಯೆಂಬುದನ್ನು ತಿಳಿಯುವಲ್ಲಿ ಒಂದು ವಚನ ಸನ್ನಿವೇಶ ಪ್ರಧಾನವೋ ಅಥವ ವಿಷಯ ಪ್ರಧಾನವೋ ಎಂಬುದನ್ನು ಮೊದಲಿಗೆ ಗುರುತಿಸಿಕೊಳ್ಳಬೇಕಾಗುತ್ತದೆ. ಸನ್ನಿವೇಶಗಳು ಸಾಮಾಜಿಕ ಮಟ್ಟದ ಘಟನೆ, ಕ್ರಿಯೆ, ಆಚರಣೆಗಳಿಂದ ಸ್ಫೂರ್ತಿಗೊಂಡು ಇವು ಸಮಸ್ತರ ಶ್ರೇಣಿಯಲ್ಲಿ ಮುಂದುವರೆಯುತ್ತವೆ. ಇದರಲ್ಲಿ ವಚನಕಾರನ ವಿಶ್ವಪರಿಗ್ರಹಣ (World view) ಲೋಕಾನುಭವ ಬುದ್ಧಿ, ಜಾಣ್ಮೆ (Wit and wisdom) ಗಳಿಗೆ ಮಹತ್ವವಿರುತ್ತದೆ. ಲಂಬ ಶ್ರೇಣಿಯಲ್ಲಿ ವಚನಕಾರನ ಅನುಭವದ ಆಳ, ಇಂದ್ರಿಯಾತೀತ ಮನಸ್ಸಿಗೆ ಹೊಳೆವ ಆಲೋಚನೆಗಳು, ಒಂದೊಂದು ವಿಷಯದ ಅಧಿಕೃತ ಸಮರ್ಥನೆಗೆ ಬೇಕಾದ ಪಾಂಡಿತ್ಯ, ಬಹುಶ್ರುತತ್ವಗಳು ಕಾಣಿಸಿಕೊಳ್ಳುತ್ತವೆ. ಅದೆಷ್ಟೋ ವಚನಕಾರರು ವೇದಾಗಮ, ಶ್ರುತಿ, ಸ್ಮೃತಿ, ಉಪನಿಷತ್, ಕಲ್ಪ , ತಂತ್ರ, ಪುರಾಣಗಳಲ್ಲಿ ಗತಿ, ಮತಿವುಳ್ಳವರಾಗಿರುವದನ್ನು ಅವರು ಕೊಟ್ಟಿರುವ ಉದಾಹರಣೆಗಳ ಮೇಲಿಂದ ತಿಳಿಯಬಹುದು. ಬೌದ್ಧಿಕ, ಭೌತಿಕ ಸಂಗತಿಗಳ ಆಚೆಗೆ ಸಾಮಾನ್ಯ ಚೇತನಗಳಿಗೆ ಹೊಳೆಯದಂತಹ ನಿಗೂಢವಾದ ಅನುಭವಗಳನ್ನು ಲೋಕ ವಿಪರ್ಯಯ ಶೈಲಿಯಾದ ಬೆಡಗಿನ ಪರಿಭಾಷೆಯಲ್ಲಿ ಹೇಳಿರುವದೂ ಸಹ ಇಂಥಲ್ಲಿ ಕಂಡು ಬರುತ್ತದೆ. ಒಟ್ಟಿನಲ್ಲಿ ವಿಷಯದ ಸರಳತೆ, ಗಾಂಭೀರ್ಯಗಳ ಮೇಲಿಂದ ಇಲ್ಲಿನ ಶೈಲಿ ಸಾಹಿತ್ಯಕವೂ, ಸಾಲಂಕೃತದ್ದೂ ಆಗಿ ತೋರುತ್ತದೆ. ಕೆಲವೊಮ್ಮೆ ಸನ್ನಿವೇಶ ನಿಷ್ಠವಾದ ಒಂದು ಸರಳ ವಚನ ಸಾಹಿತ್ಯ ನಿಷ್ಠವಾಗಿಯೂ ವಿಷಯನಿಷ್ಠ ವಚನ ಬಾಹ್ಯಸ್ತರದಲ್ಲಿ ಸರಳವಾಗಿಯೂ ಕಾಣುವದೂ ಉಂಟು. ಹೀಗಾಗುವದಕ್ಕೆ ಮುಖ್ಯ ಕಾರಣವೆಂದರೆ ವಚನ ಯಾವ ಮಟ್ಟದ್ದೇ ಆಗಿರಲಿ, ಶೈಲಿ ಪ್ರಭೇದವನ್ನೇ ಸೂಚಿಸುತ್ತಿರಲಿ ವಚನಕಾರರು ತಮ್ಮ ಸಮಗ್ರ ಅನಿಸಿಕೆಗಳನ್ನು ವಚನಗಳ ಏಕೈಕ ಮಾಧ್ಯಮದಲ್ಲಿ ಸಾಮಾಜಿಕ ಸಂವಹನ ಮತ್ತು ಸಮೂಹ ಮಾಧ್ಯಮ ಕ್ರಿಯೆಗೆ ಅವನು

ಅಳವಡಿಸಿಕೊಂಡಿದ್ದರಿಂದ ಸರಳತೆ ಮತ್ತು ಸಂಕೀರ್ಣತೆಗಳೆರಡೂ ಮೇಲ್ವರಿಕೆಯ ರೂಪದಲ್ಲಿ ಕಾಣಿಸಿಕೊಂಡಿವೆ. ಆದುದರಿಂದ ಮೇಲಿನ ಮಾನದಂಡವನ್ನು ಕೇವಲ ವಚನಗಳ ಶೈಲಿಯ ಅಧ್ಯಯನದ ಅನುಕೂಲಕ್ಕಾಗಿ ಮಾಡಿಕೊಂಡಿದ್ದೆಂಬುದನ್ನು ಲಕ್ಷಿಸಬೇಕು. ಇದನ್ನು ವಚನೋದಾಹರಣೆಗಳಿಂದ ಇಲ್ಲಿ ಸ್ಪಷ್ಟಪಡಿಸಲಾಗಿದೆ.

ಸನ್ನಿವೇಶ ನಿಷ್ಠ ಸರಳ ಶೈಲಿ

ಬಸವಣ್ಣನವರ ' ಉಭಯ ಕುಶಲೋಪರಿ' ಸನ್ನಿವೇಶ ಕುರಿತಾದ ಒಂದು ವಚನ ಹೀಗಿದೆ :

'ಏನಿ ಬಂದಿರಿ? ಹದುಳವಿದ್ದಿರಾ?' ಎಂದರೆ ನಿಮ್ಮ ಮೈಸಿರಿ ಹಾರಿ ಹೋಹುದೆ? ಅತಿಥಿ ಅಭ್ಯಾಗತರನ್ನು ಎದುರುಗೊಳ್ಳುವಾಗ ಅವರ ಯೋಗ - ಕ್ಷೇಮ ಕುರಿತು ಆಡುವ ದೈನಂದಿನ ಹಾರೈಕೆ ನುಡಿಗೆ ಮೇಲಿನ ವಚನ ನಿದರ್ಶನ. ಇಂತಹ ಸರಳ ವಚನಕ್ಕೆ ಯಾವ ವ್ಯಾಖ್ಯಾನವೂ ಬೇಕಾಗುವದಿಲ್ಲ.

ಇವರದೇ ಇನ್ನೊಂದು ವಚನ ದೈವ ಪೂಜೆಯಲ್ಲಿ ವಿಲಂಬ ಸಲ್ಲದು. ಸಮಯ ಗತಿಸುವ ಮೊದಲೇ ದೇವತಾರ್ಚನೆಯನ್ನು ಕೈಕೊಳ್ಳಬೇಕು. ವ್ಯಕ್ತಿಯ ಆಯುಷ್ಯ ವ್ಯರ್ಥವಾಗಿ ಕಳೆಯುವ ಈ ಸನ್ನಿವೇಶವನ್ನು ವಚನ ಇಲ್ಲಿ ಧ್ವನಿಸುತ್ತದೆ.

> 'ನೆರೆ ಕೆನ್ನೆಗೆ ತೆರೆ ಗಲ್ಲಕೆ ಶರೀರ ಗೂಡುವೋಗದ ಮುನ್ನ.
> ಹಲ್ಲು ಹೋಗಿ ಬೆನ್ನು ಬಾಗಿ ಅನ್ಯರಿಗೆ ಹಂಗಾಗದ ಮುನ್ನ
> ಕಾಲ ಮೇಲೆ ಕೈಯನೂರಿ ಕೋಲು ಹಿಡಿಯದ ಮುನ್ನ......

ಸರಳತೆ ಮತ್ತು ಸಂಕೀರ್ಣತೆ ಎರಡೂ ಒಟ್ಟಿಗೆ ಕಾಣಿಸಿಕೊಳ್ಳುವ ಬಸವಣ್ಣನವರ ಇನ್ನೊಂದು ವಚನವನ್ನಿಲ್ಲಿ ಉದಾಹರಿಸಿದೆ.

> 'ಮನೆಯೊಳಗೆ ಮನೆಯೊಡೆಯನಿದ್ದಾನೋ? ಇಲ್ಲವೋ!

ಇದು ಬಹಿಃಸ್ತರದಲ್ಲಿ ಮನೆ, ಮನೆಯನ್ನು ಸ್ವಚ್ಛವಾಗಿರಿಸಿಕೊಳ್ಳಬೇಕಾದ ಮನೆಯೊಡೆಯನ ಅನುಪಸ್ಥಿತಿಯನ್ನು, ಅಂತಃಸ್ತರದಲ್ಲಿ ಶರೀರವೆಂಬ ಮನೆ ಇದನ್ನು ಹುಸಿ, ತಾಮಸಗಳಿಗೆ ಒಳಗಾಗಿಸಿದ ಅಜ್ಞಾನ ಜೀವ, ಇದರ ಪರಿಣಾಮವಾಗಿ ಆತ್ಮನ ಅರಿವಿಲ್ಲದಿರುವುದು. ಇಂತಹ ಸಾಮತಿ ವಾಕ್ಯಗಳ ಮೂಲಕ ಮನೆಯೊಡೆಯ = ದೇವರು ಇಲ್ಲದಾಗಿರುವ ನಿಷೇಧ ಸೂಚಕ ವಚನ ಇದಾಗಿದೆ. ಬಹಿಃಸ್ತರದಲ್ಲಿ ಇದು ಒಂದು ಸನ್ನಿವೇಶವನ್ನು ನಿರ್ದೇಶಿಸಿದರೆ ಆಂತರ್ಯದಲ್ಲಿ ಒಂದು ವಿಷಯದ ಕಡೆಗೆ ಒಲಿಯುತ್ತದೆ. ಇದರಿಂದಾಗಿ ಇಡೀ ವಚನ ಸರಳತೆಯಿಂದ ಸಂಕೀರ್ಣಕ್ಕೆ ತಿರುಗುತ್ತದೆ.

ವಿಷಯ ನಿಷ್ಠ ಸಂಕೀರ್ಣ ಶೈಲಿ

ಅಲ್ಲಮನ ವಚನಗಳ ಮುದ್ರಿಕೆ 'ಗುಹೇಶ್ವರ' ಎಂಬುದು ಗುಹ್ಯವಾದ, ಗೂಢವಾದ ಅಧ್ಯಾತ್ಮ ಅರ್ಥ, ನಿರ್ವಚನಗಳಿಗೆ ಅನ್ವರ್ಥಕವಾಗೇ ಇದೆ. ಇವನಲ್ಲಿ 'ಜ್ಞಾನ', 'ಅಜ್ಞಾನ', 'ಮಾಯೆ' ಎಂಬಿವೇ ಮೊದಲಾದ ಅಮೂರ್ತ ವಿಷಯ (Abstract Ideas)ಗಳಿಗೆ ಮೂರ್ತ ರೂಪದ ಶಬ್ದ ಚಿತ್ರಗಳು ರೂಪಕಾಲಂಕಾರದ ಮೂಲಕ ಬಂದು ಸೇರಿರುವ ಒಂದು ಸಂಕೀರ್ಣ ವಚನವನ್ನು ಮಾದರಿಯಾಗಿ ಉದಾಹರಿಸಿದೆ.

> ಅಜ್ಞಾನವೆಂಬ ತೊಟ್ಟಿಲೊಳಗೆ ಜ್ಞಾನವೆಂಬ ಶಿಶುವ ಮಲಗಿಸಿ
> ಸಕಲ ವೇದ ಶಾಸ್ತ್ರವೆಂಬ ನೇಣು ಕಟ್ಟಿ, ಹಿಡಿದು ತೂಗಿ
> ಜೋಗುಳವಾಡುತ್ತಿದ್ದಾಳೆ ಭ್ರಾಂತಿಯೆಂಬ ತಾಯಿ.
> ತೊಟ್ಟಿಲು ಮುರಿದು ನೇಣು ಹರಿದು ಜೋಗುಳ ನಿಂದಲ್ಲದೆ
> ಗುಹೇಶ್ವರನೆಂಬ ಲಿಂಗವ ಕಾಣಬಾರದು.

ವಚನಕಾರರ ಸಂಕೀರ್ಣ ವಚನದ ಶೈಲಿಯಲ್ಲಿ ಸಂಸ್ಕೃತ ವೈದಿಕ ಮಾನ್ಯವಾದುದು, ಪ್ರೌಢ ಹಾಗೂ ಪಂಡಿತವರ್ಗಕ್ಕೆ ಮಾತ್ರ ಮೀಸಲಾದುದೆಂಬ ಭಾಷಾ ಮಡಿವಂತಿಕೆಯನ್ನೇನೂ ನಾವು ಕಾಣಲಾರೆವು. ತಮ್ಮ ವಿಷಯ ವಿವೇಚನೆಗೆ ಸಂಸ್ಕೃತ ಶಬ್ದಗಳನ್ನು ಸಾಕಷ್ಟು ಬಳಸಿದ್ದರೂ. ಅವು ವಚನಗಳ ಸಂದರ್ಭದಲ್ಲಿ ಅರ್ಥನಾವೀನ್ಯವನ್ನು (Semantic Innovation) ಪಡೆದುಕೊಳ್ಳುತ್ತವೆ. ಚೆನ್ನಬಸವಣ್ಣ ಓರ್ವ ವ್ಯುತ್ಪನ್ನಮತಿಯುಳ್ಳ ವಚನಕಾರ, ವೀರಶೈವ ಧರ್ಮ ಸಿದ್ಧಾಂತವನ್ನು ಸೂತ್ರ ಪರಿಭಾಷೆಯಲ್ಲಿ ತಂದು ಕೊಳ್ಳಬಲ್ಲ ಸಾಮರ್ಥ್ಯ ಹಾಗೂ ಅದನ್ನು ವ್ಯಾಖ್ಯಾನಿಸಬಲ್ಲ ಪಾಂಡಿತ್ಯಗಳೆರಡೂ ಅವನಲ್ಲಿವೆ - ನಿದರ್ಶನಕ್ಕೆ

> ಪದಾರ್ಥ ಪದಾರ್ಥವೆಂದೆಂಬಿರಿ ಪದವಾವುದು? ಅರ್ಥವಾವುದು? - ಎಂದರಿಯಿರಿ.
> ಪದವೆ ಲಿಂಗ ಅರ್ಥವೇ ಭಕ್ತ ಇದನರಿದು ಪದಾರ್ಥವೆಂದು
> ತಂದು ಅರ್ಪಿತವ ಮಾಡಬಲ್ಲರೆ ಕೂಡಿಪ್ಪನಯ್ಯಾ ನಮ್ಮ ಕೂಡಲ ಚೆನ್ನ ಸಂಗಮದೇವ.

ಅಲ್ಲಮನಿಂದ ಮೊದಲಾಗಿ ಅಖಂಡೇಶ್ವರರವರೆಗೂ ಒಂದು ಪರಂಪರೆಯಾಗಿ ಬೆಳೆದು ಬಂದ ಬೆಡಗಿನ ಶೈಲಿಯ ಒಂದು ಸಂಕೀರ್ಣ ವಚನವನ್ನು ಷಣ್ಮುಖ ಶಿವಯೋಗಿಯಿಂದ ಉದಾಹರಿಸಬಹುದು.


> ನೀರಿಲ್ಲದ ಭೂಮಿಯಲ್ಲಿ ಬೇರಿಲ್ಲದ ವೃಕ್ಷ ಹುಟ್ಟಿತ್ತು ಕಂಡೆ
> ಆ ವೃಕ್ಷ ಎಲೆಯಿಲ್ಲದೆ ಹಣ್ಣು ತಳೆದಿರ್ಪುದ ಕಂಡೆ.
> ಆ ಹಣ್ಣನು ಒಂದು ಕಾಲಿಲ್ಲದ ಇರುವೆ ಬಂದು ನುಂಗಿತ್ತು ಕಂಡೆ.

ಭೌತ ಜೈವಿಕ ವಸ್ತುಗಳಾದ ಗಿಡ ಮರಗಳು ಬೆಳೆಯಲು ಖ-ಭೌತ ಸಂಪನ್ಮೂಲಗಳಾದ ಗಾಳಿ, ನೀರು, ಸೂರ್ಯ ಪ್ರಕಾಶ, ಮಣ್ಣು ಅಷ್ಟೇ ಆವಶ್ಯಕ. ಆದರೆ ವಚನಕಾರನು ಪ್ರತಿಮೆಯಾಗಿರಿಸಿದ ಇಲ್ಲಿನ ವೃಕ್ಷ ಅದರ ಬೇರು, ಎಲೆ, ಹಣ್ಣುಗಳು ಇದಾವ ಸಂಪನ್ಮೂಲಗಳನ್ನು ಬಳಸಿಕೊಳ್ಳದೆ ಬೆಳೆದಿರುವದೇ ಇಲ್ಲಿನ ಬೆಡಗು, ವೈಚಿತ್ರ್ಯ. ಇದರ ಆಂತರಿಕ ಅರ್ಥದ ಒಗಟನ್ನು ಬಿಡಿಸಿಕೊಂಡಾಗ ವಚನ ಒಂದು ಅಪೂರ್ವ ಸಸ್ಯರೂಪಕ ವಿಷಯನಿಷ್ಠ ಶೈಲಿಗೆ ಉದಾಹರಣೆಯಾಗಿ ನಿಲ್ಲುತ್ತದೆ.

ಅಸಂಖ್ಯಾತ ವಚನಗಳನ್ನೆಲ್ಲ ಅಭ್ಯಸಿಸಲು ಈ ರೀತಿಯ ವಿಭಜನೆಯನ್ನು ಒಂದು ತೋರಬೆರಳಾಗಿ ಮಾತ್ರ ಗ್ರಹಿಸಿಕೊಳ್ಳಬಹುದು.

ವಚನಗಳಲ್ಲಿ ಸಾಮಾಜಿಕ ಸಂವಹನ ಪ್ರಕ್ರಿಯೆ

ಸಮೂಹ ಮಾಧ್ಯಮ, ಸಂವಹನ ಪ್ರಕ್ರಿಯೆ (Mass medias and communication or interaction of speech) ಇವೆರಡೂ ಇಂದಿನ ಪ್ರಚಲಿತ ವಿಷಯಗಳಾಗಿವೆ. ವಚನಗಳು ಎಂಟು ನೂರು ವರುಷಗಳಷ್ಟು ಹಿಂದೆ ಪಾರಂಪಾರಿಕ ಸಬಲ ಸಂವಹನ ಮಾಧ್ಯಮವಾಗಿ ಅಭಿವ್ಯಕ್ತಿಗೊಳಗಾಗಿ ಹೊಸದೊಂದು ವಿಚಾರದ ಸ್ಥಾಪನೆಗೂ ಸಾಮಾಜಿಕ ಸಂಘಟನೆಗೂ ಕಾರಣವಾದ ಸಂಗತಿ ಇಲ್ಲಿ ಉಲ್ಲೇಖನೀಯ. ಸಾಮೂಹಿಕ, ಸಂವಹನ ಮಾಧ್ಯಮದ ಪದ್ಧತಿಯನ್ನಿಲ್ಲಿ ಕೆಳಗಿನಂತೆ ನಿರ್ದೇಶಿಸಬಹುದು.



ವಚನಗಳಲ್ಲಿನ ಸಾಮಾಜಿಕ ಸಂವಹನವನ್ನು ಅಂತಃಸಂವಹನ (Intra communication) ಮತ್ತು ಅಂತರ್ - ಸಂವಹನ (Inter communication) ವೆಂದಾಗಿ ವಿಂಗಡಿಸಬಹುದು.

ಅಂತಃಸಂವಹನದಲ್ಲಿ ಒಬ್ಬನೇ ವ್ಯಕ್ತಿ , ತನ್ನ ಅಂತರಂಗ ನಿರೀಕ್ಷಣೆ ಅಥವ ತನ್ನ ಇಷ್ಟದೈವದೊಡನೆ ಕೇಳಿಸುವ ಮೊರೆ, ಆರ್ತತೆ, ಅಂತರಂಗದ ಸಂಘರ್ಷ, ವೈಯಕ್ತಿಕ ಅನುಭವ, ವ್ಯಕ್ತಿಗತ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ ಇವೇ ಮುಂತಾದ ವಿವರಗಳು ಸಂವಹನದ ಸ್ರೋತಗಳಾಗುತ್ತವೆ. ಅಂತರ್ - ಸಮುದಾಯ ಮತ್ತು ಅಂತರ್ - ಸಾಮಾಜಿಕ ಸಂವಹನಗಳೆರಡೂ ಸಮೂಹ - ನಿಷ್ಠವಾದುವು. ಇವನ್ನು ಕ್ರಮವಾಗಿ (೧) ವಕ್ತಾರ - ಶ್ರೋತಾರ (೨) ವ್ಯಕ್ತಿ - ಗೋಷ್ಠಿಯ ಸದಸ್ಯರು. (೩) ವ್ಯಕ್ತಿ - ಸಮಾಜ ಸ್ತರಗಳಲ್ಲಿ ಗುರುತಿಸಬಹುದು.

ವಿಚಾರಗಳ ಅಭಿವ್ಯಕ್ತಿಯೊಂದೇ ಸಂವಹನದ ಗುರಿಯಾಗಿರದೆ ಸಮಾಜದಲ್ಲಿ ವ್ಯಕ್ತಿ ತನ್ನ ಗುರುತನ್ನು ನೆಲೆಗೊಳಿಸುವ ಹಾಗೂ ಸಾಂಸ್ಕೃತಿಕ ಸಂಬಂಧವನ್ನು ಸ್ಥಾಪಿಸುವ ಉದ್ದೇಶವೂ ಅದಕ್ಕಿರುತ್ತದೆ. ಸಾಮಾಜಿಕ ಭಾಷೆಯ ಮುಖ್ಯ ಉದ್ದೇಶ ಇದೇ ಆಗಿದೆ. ಇದರಿಂದಾಗಿ ವಚನಕಾರರ ವ್ಯಕ್ತಿ , ವಚನಕಾರರ ಸಮಾಜ ಮತ್ತು ವಚನ ಸಂಸ್ಕೃತಿ - ಈ ಮೂರರ ನಡುವೆ ವಚನ ಭಾಷಾ ಶೈಲಿ, ಸಂವಹನ ಮಾಧ್ಯಮವಾಗಿ ನಿಲ್ಲುತ್ತದೆ. ವಚನಕಾರರು ಸಾಮಾನ್ಯವಾಗಿ ಅಂದಿನ ಪ್ರಚಲಿತ ಸಾಮಾಜಿಕ ಉಪಭಾಷೆಯನ್ನೇ 'ರಚನೆ' ಅಥವ ರೂಪ ಮಟ್ಟದಲ್ಲಿ (Structural level) ಸ್ವೀಕರಿಸಿದ್ದರೂ ಅದರ ನಿರ್ವಹಣೆ ವಚನ ಸಂದರ್ಭ ಮತ್ತು ಸನ್ನಿವೇಶದಲ್ಲಿ ವಿಶಿಷ್ಟದ್ದಾಗುತ್ತದೆ. ಎಂದರೆ ವ್ಯಾಕರಣ ರಚನೆ ಒಂದೇ ಆಗಿದ್ದರೂ ಅರ್ಥ, ಉದ್ದೇಶ, ಆಶಯಗಳು ಅವರು ಅದನ್ನು ನಿರ್ವಹಿಸಿರುವ ಸಾಂಸ್ಕೃತಿಕ ಸಂದರ್ಭಕ್ಕೆ ಅನ್ವಯಿಸಿರುತ್ತವೆ. ವಚನ ಸಂವಹನದಲ್ಲಿ ಅಭಿವ್ಯಕ್ತಿಗೊಂಡಿರುವ ಸಾಮಾಜಿಕ ಭಾಷೆಯ ಸ್ವರೂಪವನ್ನಿಲ್ಲಿ ಈ ಕೆಳಗಿನ ಹಂತಗಳಲ್ಲಿ ಕಾಣಬಹುದಾಗಿದೆ.

೧. ವ್ಯಕ್ತಿನಾಮ ವಿಶಿಷ್ಟ ಅಂಕಿತ ನಾಮ ವಾಚಕ (ವಚನ ಮುದ್ರಿಕೆ) ಸಂವಹನೆ

೨. ಪುರುಷ ವಾಚಕ ದರ್ಶಕ ಸರ್ವನಾಮ ಸಂವಹನೆ

೩. ಸಂಬಂಧ ವಾಚಕ ಅಥವಾ ಕೌಟುಂಬಿಕ ನಾಮ ಸಂವಹನೆ

೪. ಕೌಟುಂಬಿಕೇತರ ಸಂಬಂಧವಾಚಿ ಸಂವಹನೆ (by non-kin persons)

೫. ಕಾಯಕ ಅಭಿಧಾನ ಸಂವಹನೆ

೬. ವೃತ್ತಿಸೂಚಕ ನಾಮ ಸಂವಹನೆ

೭. ಸಮಗ್ರ ಮಾನವಿಕ ಸಮಾಜ ಸಂವಹನೆ

೮. ಸಂಬೋಧನಾ ಪರ ಅವ್ಯಯಗಳು*

ಮೇಲಿನ ವಚನ ಭಾಷಾ ಸಂವಹನೆ ಪ್ರತ್ಯಕ್ಷವಾಗಿ ಭಾಷೆ ನಿಯೋಗವಾಗುವ ಕಾಲಕ್ಕೆ ಅನ್ವಯಿಸುತ್ತದೆ. ವಚನ ಶೈಲಿಯನ್ನು ವಿಶ್ಲೇಷಿಸಿಕೊಳ್ಳುವಾಗ ಅದನ್ನು ಮೌಖಿಕ ಪ್ರಸಾರದಲ್ಲಿ ಹಾಗೂ ಲಿಖಿತ ಪ್ರಸಾರದಲ್ಲಿ ತಿಳಿಯಬೇಕಾಗುತ್ತದೆ.

ಯಾವುದೇ ಮೌಖಿಕ ಪ್ರಸಾರದ ಶೈಲಿಯಲ್ಲಿ ಮುಖ್ಯವಾದ ಅಂಶಗಳೆಂದರೆ ಅವುಗಳಲ್ಲಿ ಕಂಡುಬರುವ ಅನುಕರಣ ಶಬ್ದ ಸರಣಿ, ಅನುಕರಣ ಪದಪುಂಜ, ಇಲ್ಲವೆ ಅನುಕರಣ ವಾಕ್ಯ ಸರಣಿಗಳು ನಾಣ್ಣುಡಿ, ನುಡಿಗಟ್ಟುಗಳು, ಬೈಗುಳ ಪದಗಳು ಮುಂತಾದವು. ಲಿಖಿತ ಶೈಲಿಯಲ್ಲಿ ವಿಶಿಷ್ಟ ಪದಬಂಧ, ವಿಶಿಷ್ಟ ಪದಗಳ ಪ್ರಾಸಬದ್ಧತೆ, ಲಯ ಸಾಮತಿಗಳು, ಅಲಂಕಾರಗಳು ಆಯಾ ವಿಷಯ ಕುರಿತ ವಿಶಿಷ್ಟ ಪರಿಭಾಷೆಗಳಿರುತ್ತವೆ.

---

* ಲೇಖನ ವಿಸ್ತಾರ ಭಯದಿಂದ ಇವಕ್ಕೆ ವಚನಗಳನ್ನು ಉದಾಹರಿಸಲಾಗಿಲ್ಲ.

ಮೇಲಿನ ಇವೆಲ್ಲ ನಿಟ್ಟಿನಲ್ಲಿ ವಚನ ಮಾಧ್ಯಮವನ್ನು ಕುರಿತು ಪ್ರತ್ಯೇಕ ಅಧ್ಯಯನಕ್ಕೆಗೊಳ್ಳುವ ಅಗತ್ಯವಿದೆ. ವಚನಕಾರರ ವೈಚಾರಿಕ ಮತ್ತು ಭಾಷಿಕವಾದ ವಾದ ಅಭಿವ್ಯಕ್ತಿ ಕ್ರಮಗಳು ಕನ್ನಡದ ಮಟ್ಟಿಗಂತೂ ಅತ್ಯಂತ ಸೃಜನಶೀಲ ಸಾಮಾಜಿಕ ಸಂವಹನ ಮಾಧ್ಯಮಗಳು. ಆಧುನಿಕ ದೃಶ್ಯ ಮಾಧ್ಯಮ ಶ್ರವ್ಯ ಮಾಧ್ಯಮಗಳು ಯಂತ್ರ, ತಂತ್ರಜ್ಞಾನದ ಕೊಡುಗೆಗಳೇ ಹೊರತು ಮನುಷ್ಯನ ಚಿಂತನಾತ್ಮಕ, ಸಂವೇದನಾತ್ಮಕ, ಸೃಜನಶೀಲ ಪ್ರಣಾಲಿಗಳೆಂದೂ ಆಗಲಾರವು. ಮಾನವ ಸಮಾಜದ ಅಭಿವೃದ್ಧಿಯಲ್ಲಿ ಸಾಮಾಜಿಕ ಭಾಷೆ ಮತ್ತು ಅದರ ಸಂವಹನ ಪ್ರಕ್ರಿಯೆಗಳೇ ಸಂಸ್ಕೃತಿಯ ಸ್ವಾರ್ಜಿತ ಸೊತ್ತುಗಳಾಗುತ್ತವೆ. ಆಧುನಿಕ ಸಮೂಹ ಮಾಧ್ಯಮಗಳ ಆಕರ್ಷಕ ಜಾಲದಲ್ಲಿ ಜಗತ್ತಿನ ಎಷ್ಟೋ ಭಾಷೆಗಳು ಇಂದು ನಶಿಸುತ್ತ ನಡೆದಿರುವ ಕಾಲದಲ್ಲಿ ಪಾರಂಪರಿಕ ವಚನಮಾಧ್ಯಮದಂತಹ ಕೊಡುಗೆಗಳನ್ನು ಕುರಿತು ಗಂಭೀರವಾಗಿ ಆಲೋಚಿಸುವ ಅಗತ್ಯವಿದೆಯೆಂದು ಬೇರೆ ಹೇಳಬೇಕಾದುದಿಲ್ಲ.

ನಿರಚನ ಸಿದ್ಧಾಂತ ರಚನಾ ಸಿದ್ಧಾಂತ ಮತ್ತು ನವ್ಯ ವಿಮರ್ಶೆ

ಡಾ|| ಕೆ. ಕೇಶವ ಶರ್ಮ

ನಿರಚನ ಸಿದ್ಧಾಂತದ ಬಗೆಗೆ ಅನೇಕ ತಪ್ಪು ಗ್ರಹಿಕೆಗಳಿವೆ. ಬೇರೊಂದು ಅರ್ಥದಲ್ಲಿ ಹೇಳುವುದಿದ್ದರೆ, ಈಗ ಸಾಹಿತ್ಯ ವಿಮರ್ಶೆಯ ಸಿದ್ಧಾಂತದ ಬಗೆಗೆ ಮಾತಾಡುವುದೂ ಒಂದು ವ್ಯವಹಾರವಾಗಿದೆ. ಒಂದು ವ್ಯಾಪಾರವಾಗಿದೆ. ಸದ್ಯದ ಸಂದರ್ಭದಲ್ಲಿ ಸಾಹಿತ್ಯ ವಿಮರ್ಶೆಯ ಸಿದ್ಧಾಂತಗಳು ಹೊಸ ಹೊಸ ಆಸಕ್ತಿ ಮತ್ತು ಹೊಸ ಹೊಸ ಪರಿಭಾಷೆಗಳನ್ನು ಹುಟ್ಟು ಹಾಕುತ್ತಿವೆ. ಅದರ ಜೊತೆಗೆ ಸಾಹಿತ್ಯ ವಿಮರ್ಶೆಯ ಸಿದ್ಧಾಂತಗಳು ಹೊಸ ಬಗೆಯ ಪಂಥಾಹ್ವಾನಗಳನ್ನು ಎದುರಿಸುತ್ತಿವೆ ಕೂಡ. ಈ ದೃಷ್ಟಿಯಿಂದ ನಿರಚನ ಸಿದ್ಧಾಂತವು ತನ್ನ ಹತ್ತಿರದ ಸಂಬಂಧಿ ನಿಲುವುಗಳನ್ನು ಒಳಗೊಂಡಿರುವ ರಚನಾಸಿದ್ಧಾಂತ ಮತ್ತು ನವ್ಯ ವಿಮರ್ಶೆಯ ಕುರಿತು ಇಲ್ಲಿ ಚರ್ಚಿಸಬೇಕಾಗಿದೆ.

ನಿರಚನ ಸಿದ್ಧಾಂತವು 'ನಿರಚನ' ಎನ್ನುವ ಆಯಾಮವನ್ನು ಒಳಗೊಂಡಿದ್ದರೆ, 'ರಚನಾಸಿದ್ಧಾಂತ' ವು ರಚನೆಯ ಕ್ರಮವೆಂಬ ಅಂಶವನ್ನು ಒಳಗೊಂಡಿರುತ್ತದೆ. ರಚನಾ ಸಿದ್ಧಾಂತವು 'ಪ್ರಾಯೋಗಿಕ' ಮತ್ತು 'ಸಾಮಾನ್ಯಭಾವನೆ' (Common sense) ಪರಿ ಭಾಷೆಗಳನ್ನು ಒಳಗೊಂಡಿದೆ. ರಚನಾಸಿದ್ಧಾಂತವು ಪ್ರಾರಂಭವಾದಾಗ ತನ್ನ ಹಿಂದಿನ ಸಾಹಿತ್ಯ ವಿಮರ್ಶೆಯ ಸಿದ್ಧಾಂತಗಳ ವಿರುದ್ಧ ದೊಡ್ಡದಾಗಿ ಪ್ರತಿಭಟಿಸಿತು. ಅಷ್ಟೇ ಅಲ್ಲ ರಚನಾವಾದಿಸಿದ್ಧಾಂತವು ಒಂದು ರೀತಿಯಲ್ಲಿ ಶೈಕ್ಷಣಿಕ ಆಸಕ್ತಿಯೇ ಆಯಿತು. ಈ ರೀತಿಯ ಜಗಳಗಳನ್ನು ಸಾಹಿತ್ಯ ವಿಮರ್ಶೆಯ ಸಿದ್ಧಾಂತಗಳಲ್ಲಿ ಮಾಮೂಲಿಯಾಗಿ ಕಾಣಬಹುದು.

ನಿರಚನ ಸಿದ್ಧಾಂತವು ಹೆಸರೇ ಸೂಚಿಸುವಂತೆ ರಚನಾಸಿದ್ಧಾಂತದ ಒಳನೋಟ ಮತ್ತು ರಚನಾಸಿದ್ಧಾಂತದ ಪರಿಕಲ್ಪನೆಗಳನ್ನು ನಿರಾಕರಿಸುತ್ತದೆ. ಯಾತಕ್ಕೆ ರಚನಾವಾದದ ಪರಿಕಲ್ಪನೆಗಳನ್ನು ನಿರಾಕರಿಸುತ್ತದೆಯೆಂಬುದು ಗಮನಾರ್ಹವಾಗಿದೆ. ರಚನಾವಾದವು ಒಂದು ನಿರ್ದಿಷ್ಟ ರಚನಾಕ್ರಮದಲ್ಲಿರುವ ಧ್ವನಿ; ಅದರ ಸಂಕೀರ್ಣತೆಗಳ ಕುರಿತು ಮಾರ್ಗದರ್ಶನ ಮಾಡುವುದು ಸರಿಯಷ್ಟೇ? ರಚನಾವಾದವು ಒಂದು ರಚನಾಕ್ರಮದ ಸ್ವಭಾವ. ಅದರ ಮಾನದಂಡಗಳು ಹೇಳುತ್ತದೆ. ರಚನಾಕ್ರಮವು ಹೇಗೆ ರೂಪುಗೊಂಡಿದೆಯೆಂದು ತಿಳಿಯುವುದು ಅದರ ಮೂಲ ಆಸಕ್ತಿಯಾಗಿದೆ. ವಿಮರ್ಶಕನ ವೈಯಕ್ತಿಕ ಆಸಕ್ತಿ ; ಆತನ ಒಳನೋಟಗಳು ಒಂದು ರಚನಾಕ್ರಮದ ಓದಿನ ಮೇಲೆ ಪ್ರಭಾವ ಬೀರುತ್ತವೆ. ಓದುಗನ ಬುದ್ಧಿವಂತಿಕೆ, ಆತನ ಗ್ರಹಿಕೆಯ ನೆಲೆಗಳು ರಚನಾವಾದದ ದೃಷ್ಟಿಯಿಂದ ಮುಖ್ಯವಾಗಿರುತ್ತದೆ. ಸಾಹಿತ್ಯಕ್ಕೆ ಪ್ರತಿಕ್ರಿಯಿಸುವುದೆಂದರೆ ಪರ್ಯಾಯವಾದ ಸೂಚನೆಗಳ ಮೂಲಕ ಮಾತನಾಡುವುದು ಎಂದು ಅದು ಭಾವಿಸುತ್ತದೆ.

ನಾಮ್ ಚಾಮ್‌ಸ್ಕಿಯ ಪ್ರಕಾರ ''ಭಾಷಿಕ ರಚನೆಯೆಂದರೆ ಅದು ಮನುಷ್ಯನ ಮನಸ್ಸಿನ ದ್ಯೋತಕ'' ಈ ವಾದವೂ ರಚನಾವಾದದ ಚರ್ಚೆಯ ಸಂದರ್ಭದಲ್ಲಿ ಮುಖ್ಯವಾಗಿದೆ. ಹಾಗೆಯೇ ರಚನಾವಾದದ ಪ್ರಕಾರ, ಸಾಹಿತ್ಯ ಕೃತಿಯ ಭಾಷೆಯು ದಿನ ನಿತ್ಯದ ಭಾಷೆಯಲ್ಲಿರುವ ವಾಕ್ಯರಚನೆಯಂತಲ್ಲ. ಅದರಲ್ಲಿ ವಿಶೇಷವಾದ ಭಾಷಿಕ ಸೂಚನೆಗಳಿರುತ್ತವೆ. ಸಾರ್ವಜನಿಕವಾದ; ವ್ಯಾಕರಣಬದ್ಧ ಪ್ರತಿಕ್ರಿಯೆಯು ಸಾಹಿತ್ಯಕೃತಿಗೆ ಮುಖ್ಯವಾಗುವುದಿಲ್ಲ. ಅಷ್ಟೇ ಅಲ್ಲದೆ ರಚನಾವಾದದಲ್ಲಿ ತರಬೇತಿಗೊಳಿಸಲಾಗಿರುವ ಬುದ್ಧಿವಂತಿಕೆಯಿರುತ್ತದೆ. ಸಾಹಿತ್ಯದ ಬಗೆಗಿನ ಜ್ಞಾನವನ್ನು ನಿರ್ದಿಷ್ಟ ಉದ್ದೇಶಕ್ಕೆ ತಕ್ಕಂತೆ ಒಂದೆಡೆಗೆ ತಂದು ಚರ್ಚೆಯನ್ನು ಅದು ಪ್ರಾರಂಭಿಸುತ್ತದೆ. ಒಂದು ನಿರ್ದಿಷ್ಟ ಪಠ್ಯವನ್ನು ಸಾಂಪ್ರದಾಯಿಕವಾದ ರೀತಿಯಲ್ಲಿ ನಿರ್ವಚಿಸುವ ರಚನಾವಾದವು ಪಠ್ಯಕ್ಕೆ ನಿರ್ದಿಷ್ಟ ಅರ್ಥವಿದೆಯೆಂದು ಹೇಳುತ್ತದೆ. ಕೃತಿಯೊಂದು ಸತ್ಯವನ್ನು ಹೇಳುತ್ತದೆ. ವಿಮರ್ಶಕನು ಅದನ್ನು ವಿನಯದಿಂದ ಗ್ರಹಿಸ ಬೇಕಾಗುತ್ತದೆ. ರಚನೆಯೆನ್ನುವುದು ಒಂದು ಪ್ರಾತಿನಿಧಿಕ ಸ್ವರೂಪ. ರಚನೆಗೆ ಒಂದು ರೀತಿಯ ಸಮಗ್ರತೆಯಿರುತ್ತದೆ. ಈ ಸಮಗ್ರತೆಯು ಅದರ ಅನನ್ಯತೆಗೆ ಕಾರಣವಾಗಿರುತ್ತದೆ. ಇತ್ಯಾದಿ ವಾದಗಳನ್ನು ರಚನಾವಾದವು ಮಂಡಿಸುತ್ತದೆ.

ನಿರಚನವು ಈ ರೀತಿಯ 'ಅನ್ವಯ'ದ ಮತ್ತು ಚೌಕಟ್ಟಿನೊಳಗೆ ನಿರ್ದಿಷ್ಟ ಅರ್ಥವಂತಿಕೆಯನ್ನು ಕಾಣುವ ಪ್ರಕ್ರಿಯೆಯನ್ನು ಕಾಣುತ್ತದೆ. ಕೃತಿ ಹೇಳುವ ಸತ್ಯವೆಂದರೆ ಯಾವುದು? ಎಂಬುದು ನಿರಚನ ಸಿದ್ಧಾಂತದ ಪ್ರಶ್ನೆಯಾಗಿದೆ. ಈ ಮಾತಿನ ಹಿಂದೆ ನೀಶೆಯ ತತ್ವಜ್ಞಾನದ ಗ್ರಹಿಕೆಗಳು ಸೇರಿಕೊಂಡಿವೆ. ವಾಸ್ತವವಾಗಿ ನಾವು 'ಸತ್ಯ'ವೆಂದು ಯಾವುದನ್ನು ಹೇಳುತ್ತೇವೆಯೋ ಅದು ಪೂರ್ಣ ಸತ್ಯವಾಗಿರುವುದಿಲ್ಲ. ''ಮನುಷ್ಯನ ಮನಸ್ಸು ಮೊದಲು ವಸ್ತುವನ್ನು ಪ್ರತಿಮೆಯಾಗಿ ಪರಿವರ್ತಿಸುತ್ತದೆ. ಮೊದಲು ರೂಪಕ : ಅದನ್ನು ಅವಲಂಬಿಸಿಕೊಂಡಂತೆ ಧ್ವನಿ : ಅನಂತರ ಬರವಣಿಗೆ, ಹೀಗಿರುತ್ತದೆ''. ಸತ್ಯವೆನ್ನುವುದು ಅನ್ವಯಕ್ಕೆ ಸಂಬಂಧಿಸಿದ್ದು , ಹಾಗೆಯೇ ಆಲೋಚನೆಯೆನ್ನುವುದು ಶುದ್ಧ ರೀತಿಯಲ್ಲಿ ಇರುತ್ತದೆಯೆಂದು ಹೇಳಲು ಬರುವುದಿಲ್ಲ.

ರಚನಾವಾದದ ಪ್ರಕಾರ ಒಂದು ಕೃತಿಯಲ್ಲಿ ಬರುವ ಪ್ರತಿಮೆಯೂ ಕೂಡ ಆ ಪಠ್ಯದಲ್ಲಿ ಅದರದೇ ಆದ ಅನನ್ಯತೆಯನ್ನು ಪಡೆದುಕೊಂಡಿರುತ್ತದೆ. ರಚನಾವಾದದ ಪ್ರಕಾರ ರಚನೆಯೆನ್ನುವುದು ನಿರ್ದಿಷ್ಟ ಆಲೋಚನಾ ಕ್ರಮದಿಂದ ಹುಟ್ಟಿರುವಂಥದ್ದು. ಹಾಗೆಯೇ ಒಂದು ಪಠ್ಯವು ನಿರ್ದಿಷ್ಟ ವಸ್ತುವನ್ನು ಒಳಗೊಂಡಿರುತ್ತದೆ. ಈ ವಿಚಾರವನ್ನು ನಿರಚನ ಸಿದ್ಧಾಂತವು ನಿರಾಕರಿಸುತ್ತದೆ. ನಿರಚನದ ಪ್ರಕಾರ ನಿರ್ದಿಷ್ಟ ಆಲೋಚನಾ ಕ್ರಮದ ರಚನೆಯೆನ್ನುವುದೇ ಪ್ರಶ್ನಾರ್ಹವಾದುದು. ರಚನೆಯ ಅರ್ಥವಂತಿಕೆಯೆನ್ನುವುದು ಮನಸ್ಸಿನ ಭಾವನೆಗಳನ್ನು ಸೂಚಿಸುತ್ತದೆ. ಅದು ಬುದ್ಧಿವಂತಿಕೆಯನ್ನು ಮಿತಿಗೊಳಿಸುತ್ತದೆ. ಬೇರೆ ಬೇರೆ ರೀತಿಯ ರಚನಾಕ್ರಮವೆನ್ನುವುದು ಮನುಷ್ಯನ ಬುದ್ಧಿವಂತಿಕೆಯಿಂದ ಒಡಗೂಡಿದ ಹುಡುಕಾಟವಾಗಿರುತ್ತದೆ. ಸಾಹಿತ್ಯದ ರಚನೆಯೆನ್ನುವುದು ಈ ಕಾರಣದಿಂದ ಮನುಷ್ಯನ ಒಟ್ಟು ಆಲೋಚನಾಕ್ರಮದ ಪೂರ್ಣ ವಿವರಣೆಯೆಂದು ಭಾವಿಸಬೇಕಾದ್ದಿಲ್ಲ. ರಚನಾವಾದವು ಅರ್ಥವು ರಚನೆಯಲ್ಲಿಯೇ ಇದೆಯೆಂದು ಹೇಳುತ್ತದೆ. ಅಂದರೆ ರಚನಾವಾದದ ಪ್ರಕಾರ, ಆ ಅರ್ಥಕ್ಕೆ ಇರುವ

ಕೇಂದ್ರವು ರಚನೆಯ ಒಳಗಡೆಗೆ ಇರುತ್ತದೆ. ಅದು ಶಬ್ದಸಂಯೋಜನೆಯಿಂದಲೇ ಪ್ರಾರಂಭವಾಗುತ್ತದೆ. ಆದರೆ ನಿರಚನ ಸಿದ್ಧಾಂತವು ಶಬ್ದವನ್ನು ಹೇಳಿದ ಮನಸ್ಸಿನಿಂದ ಪ್ರಾರಂಭಿಸಿ ಅರ್ಥ, ಪರಿಕಲ್ಪನೆಗಳ ನಡುವಣ ಸಂಬಂಧವನ್ನು ನಿರ್ವಚಿಸುತ್ತದೆ. ಇಮ್ಯಾನುಯಲ್ ಕಾಂಟ್ (೧೭೨೪-೧೮೦೪)ನ ಪ್ರಕಾರ 'ಆಲೋಚನೆಯನ್ನು ನಿರ್ದಿಷ್ಟ ಸ್ವಂತ, ಹೊರಗಿನ ಜಗತ್ತಿಗಿಂತ ಬಾಹಿರವಾದುದು ಎಂದು ಭಾವಿಸಬೇಕಿಲ್ಲ; ನಿಜ ಜೀವನದಲ್ಲಿ ಜರುಗುವ ಘಟನೆಗಳು, ಅನುಭವ ಹಾಗೂ ಆಲೋಚನಾ ಕ್ರಮಕ್ಕೆ ಸಂಬಂಧವಿರುತ್ತದೆ. ಘಟನೆಯೊಂದರ ಕಾರಣ ಮತ್ತು ಅದರ ಪರಿಣಾಮಗಳು ಕಾಂಟ್‌ನ ಚರ್ಚೆಯಲ್ಲಿ ಬರುತ್ತದೆ. ಕಾಂಟನ ಪ್ರಕಾರ 'ಪ್ರಜ್ಞೆ'ಯು ಹೊರಗಿನ ಜಗತ್ತನ್ನು ನೇರವಾಗಿ ಯಾವುದೇ ರೂಪವಿಲ್ಲದೆಯೇ ಸ್ವೀಕರಿಸುತ್ತದೆಯೆಂದು ಭಾವಿಸುವುದು ಕಷ್ಟ. 'ಜ್ಞಾನ'ವೆನ್ನುವುದು ಮನುಷ್ಯನ ಮನಸ್ಸಿನ ಉತ್ಪಾದನೆ. ಮನಸ್ಸು ಜಗತ್ತನ್ನು ಬೇಕಾದಂತೆ ಅನ್ವಯಿಸುತ್ತದೆ. ಜಗತ್ತನ್ನು ಅರ್ಥ ಮಾಡಿಕೊಳ್ಳುವ ರೀತಿಯಲ್ಲಿ ಮನುಷ್ಯ 'ಸತ್ಯ'ವನ್ನು ಕಟ್ಟಿಕೊಳ್ಳುತ್ತಾನೆ. ''ಈ ವಾದದಲ್ಲಿ ಹೇಳಲಾಗಿರುವಂತೆ 'ಸತ್ಯ' ಎನ್ನುವುದು ನಮ್ಮ ಆಲೋಚನೆಗೆ ಅನುಗುಣವಾಗಿ 'ಕಟ್ಟ'ಲಾಗಿರುವುದು. ಹೀಗಾಗಿ 'ಒಂದು ಕೃತಿಯಲ್ಲಿ ನಿರ್ದಿಷ್ಟ ಸತ್ಯವು ಅಡಗಿದೆಯೆಂದು ರಚನಾವಾದವು ಹೇಳುವುದು ಈ ದೃಷ್ಟಿಯಿಂದ ಅರ್ಥಹೀನವಾಗಿ ಕಾಣಿಸುತ್ತದೆ''.

ಸಸೂರ ಭಾಷಾ ವಿಜ್ಞಾನವು ರಚನಾವಾದಕ್ಕೆ ಮೂಲ ಸೆಲೆಯನ್ನು ಒದಗಿಸಿದೆ. ಸಸೂರನ ಪ್ರಕಾರ ನಮ್ಮ ಜಗತ್ತಿನ ಜ್ಞಾನವು ಭಾಷೆಯಿಂದ ಆವೃತವಾಗಿದ್ದು, ಭಾಷೆಯು ಜ್ಞಾನವನ್ನು ಪ್ರತಿನಿಧಿಸುತ್ತದೆ. ಅಷ್ಟೇ ಅಲ್ಲದೆ ನಾವು ಬರವಣಿಗೆಯಲ್ಲಿ ಹೇಳುವ ವಸ್ತುವಿಗೂ ನಿಜವಾದ ವಸ್ತುವಿಗೂ ವ್ಯತ್ಯಾಸವಿದೆ. ಒಂದು ವಸ್ತುವಿನ ಮೂಲಕ ನಾವು ಪಡೆಯುವ ಜ್ಞಾನವು ಸಂಕೇತದ (ಚಿಹ್ನೆ = sign) ಮೂಲಕ ರಚನಾಕ್ರಮವನ್ನು ಪಡೆಯುತ್ತದೆ. ಈ ಅಭಿಪ್ರಾಯದಂತೆ ರಚನಾಕ್ರಮವೆನ್ನುವುದು ವ್ಯಕ್ತಪಡಿಸುವಲ್ಲಿ ರೂಪುಗೊಂಡಿರುತ್ತದೆ.

ಆಲೋಚನೆ ಮತ್ತು ಅರ್ಥಕ್ಕಿರುವ ಸಂಬಂಧದ ನಿರ್ವಚನವೇ ರಚನಾವಾದದ ಪ್ರಾರಂಭದ ಹಂತವಾಗಿರುತ್ತದೆ. ರಚನಾವಾದವು ಒಂದು ರೀತಿಯಿಂದ ಶೈಕ್ಷಣಿಕವಲಯದ ಒಂದು ನಿರ್ಮಾಣ ಅಷ್ಟೆ.

ರಚನಾವಾದವು ಸರಳ ದ್ವಂದ್ವದ ಪರಿಭಾಷೆಯನ್ನು ಇಟ್ಟುಕೊಂಡಿದೆ. ಒಂದು ಕೃತಿಯನ್ನು ನಿರ್ದಿಷ್ಟವಾಗಿ ಓದುವುದನ್ನು ವಿವರಿಸುತ್ತದೆ. ಅಷ್ಟೇ ಅಲ್ಲ ಅದೊಂದು ರೀತಿಯಲ್ಲಿ ಸಲಹೆ ಕೊಡುವ ಮಾದರಿಯನ್ನು ನಿರ್ವಹಿಸುತ್ತದೆ. ರಚನೆಯ ಪರಿಕಲ್ಪನೆಯೆನ್ನುವುದು ಒಂದು ವಸ್ತುವನ್ನು ಕೇಂದ್ರದಲ್ಲಿರಿಸಿಕೊಂಡು ಅದನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸುವುದೇ ಆಗಿರುತ್ತದೆ. ಹೀಗಾಗಿ ರಚನಾವಾದಿ ವಿಮರ್ಶೆಯು 'ವಸ್ತು' ವೆಂಬುದನ್ನು ನಿರ್ಣಾಯಕವಾಗಿ ಪರಿಶೀಲಿಸುತ್ತದೆ.

ಇದರೊಂದಿಗೆ ನವ್ಯ ವಿಮರ್ಶೆಯು ಬಳಸಿದ ಪರಿಭಾಷೆಯನ್ನು ಕೂಡಾ ನಾವು ಪರಿಶೀಲಿಸಬೇಕು. ನವ್ಯ ವಿಮರ್ಶೆಯು ವ್ಯಂಗ್ಯ (irony) ಘರ್ಷಣೆ (tension) ವಿರೋಧಾಭಾಸ (paradox) ಇತ್ಯಾದಿ ಪರಿಭಾಷೆಗಳನ್ನು ಆಕರ್ಷಕವಾಗಿ ಬಳಸುತ್ತದೆ. ಆದರೆ ಈ ರೀತಿಯ ಪರಿಭಾಷೆಗಳು ಅಮೂರ್ತವಾದ ಯಾಂತ್ರಿಕತೆಯನ್ನು ಪ್ರತಿಪಾದಿಸುತ್ತದೆಯೆಂಬುದು ಗಮನಾರ್ಹ. ಇಷ್ಟೆ ಅಲ್ಲದೆ ನವ್ಯ ವಿಮರ್ಶೆಯ ಪ್ರಕಾರ ಕಾವ್ಯದ ಭಾಷೆಗೆ ಸ್ವಾಯತ್ತವಾದ ಸಾಧ್ಯತೆಗಳೂ ಇರುತ್ತದೆ. ನವ್ಯ ವಿಮರ್ಶೆಯು ಸಾಹಿತ್ಯವನ್ನು ಓದುವ ಕ್ರಮದ ಬಗ್ಗೆ ಒಂದು ಶಿಸ್ತನ್ನು ಕಲಿಸಿಕೊಡುತ್ತದೆಯೆಂಬುದು ನಿಜ.

ನಿರಚನ ಸಿದ್ಧಾಂತವು ಈ ರೀತಿಯ ತೀರ್ಪಿನ ವಿರುದ್ಧ ನಿಲ್ಲುತ್ತದೆ. ನಿಶ್ಚಿತವಾದುದು ಎಂಬುದಕ್ಕೆ ಅನಿಶ್ಚಿತತೆಯೆನ್ನುವುದೇ ನಿರಚನದ ಪ್ರಕಾರ ಪಠ್ಯದ ಮುಖ್ಯ ನೆಲೆಯಾಗಿರುತ್ತದೆ. ಒಂದರ ನಂತರ ಮತ್ತೊಂದು ಎಂಬ ಪರಿಕಲ್ಪನೆಯನ್ನು ನಿರಚನವು ಛೇದಿಸುತ್ತದೆ. ರಚನಾವಾದಿಗಳು ವಸ್ತುವನ್ನು ಒಂದು ರಚನಾಕ್ರಮದ ಒಳಗಡೆಗೆ ಪುನರ್ ನಿರ್ಮಾಣ ಮಾಡುತ್ತಾರೆ, ಛೇದಿಸುವುದಿಲ್ಲ. ರಚನೆಯೆನ್ನುವುದು ರಚನಾವಾದಿಗಳ ಪ್ರಕಾರ ಹಲವು ಅಂಶಗಳು ಸೇರಿಕೊಂಡು ಹುಟ್ಟಿರುವ ಪರಿಕ್ರಮವಾಗಿದೆ. ಹೀಗಾಗಿ ಈ ಅಂಶಗಳನ್ನು ಒಡೆದು ಒಂದು ಘಟಕವಾಗಿ ಪರಿಶೀಲಿಸಲು ಬರುವುದಿಲ್ಲ. ರಚನಾಕ್ರಮದ

ಏಕತೆಯೆಂಬುದು ಅನೇಕ ಅಂಶಗಳು ಪರಸ್ಪರ ಸಹಯೋಗವನ್ನು ಇಟ್ಟುಕೊಂಡು ರೂಪಿತವಾಗಿರುವ ಪರಿಕಲ್ಪನೆಯಾಗಿದೆ. ರಚನಾ ವಾದಿಗಳು ತಮ್ಮ ಚರ್ಚೆಯನ್ನು ಪ್ರಾರಂಭಿಸುವಾಗ ಅದಕ್ಕೆ ಅರಿಸ್ಟಾಟಲ್‌ನ ವಾದದಲ್ಲಿ ತಮ್ಮ ಬೇರುಗಳನ್ನು ಕಂಡುಕೊಳ್ಳುವುದು ಸರಿಯಷ್ಟೆ? ಅರಿಸ್ಟಾಟಲ್ ''ದುರಂತ ನಾಟಕವೆಂದರೆ 'ಕ್ರಿಯೆ' (action) ಯ ಗಂಭೀರ ಅನುಕರಣೆಯಾಗಿರುತ್ತದೆ. ಅದು ಅದರಷ್ಟಕ್ಕೆ ಪರಿಪೂರ್ಣವಾಗಿರುತ್ತದೆ. ಅದರಲ್ಲಿಯೂ ಘಟನೆಗಳು ಕರುಣೆ, ಭಯ, ಮೊದಲಾದ ಅಂಶಗಳನ್ನು ಹೊಂದಿಕೊಂಡಿರುತ್ತದೆ'' ಇದರೊಂದಿಗೆ ಅರಿಸ್ಟಾಟಲ್ ಕ್ರಿಯೆ; ಕಾಲ; ಸ್ಥಳಗಳ ಐಕ್ಯತೆಯ ಬಗೆಗೂ ವಿವರಿಸಿದ್ದಾನೆ. 'ಕೆಥಾರ್ಸಿಸ್ ಸಿದ್ಧಾಂತ'ವನ್ನು ಮಂಡಿಸುವಾಗ ಅರಿಸ್ಟಾಟಲ್ ಕೊಡುವ ಕೆಲವು ವಿವರಗಳು ಗಮನಾರ್ಹವಾಗಿದೆ. ಈ 'ಕೆಥಾರ್ಸಿಸ್ ಸಿದ್ಧಾಂತ'ದ ಪರಿಕಲ್ಪನೆಯಾದರೂ ವೈದ್ಯಕೀಯ ಪರಿಭಾಷೆಯನ್ನು ಒಳಗೊಂಡಿದ್ದರೂ ಅದು ಭಾವನೆಗಳ ಕುರಿತು ಮಾತಾಡುತ್ತದೆ. ''ಒಬ್ಬ ವೈದ್ಯ ಕೊಡುವ ಔಷಧ ದೇಹದ ವ್ಯಾಧಿಯನ್ನು ಪರಿಹರಿಸುವಂತೆ ಅಂತರಂಗದ ಭಾವ ಪ್ರಪಂಚಕ್ಕೆ ಸಂಬಂಧಿಸಿದ ವಿಕಾರಗಳನ್ನು ಉತ್ತಮ ಕಾವ್ಯದಲ್ಲಿಯ ತೀವ್ರವಾದ ಭಾವನುಭಾವ ಪರಿಹರಿಸುತ್ತದೆ. ಔಷಧದ ಮೂಲಕ ದೇಹ ಸ್ಥಿತಿಯಲ್ಲಿ ಸಮತೂಕ ಸಿದ್ಧಿಸುವಂತೆ ಭಾವಾನುಭವದ ಮೂಲಕ'' ಅಂತರಂಗದಲ್ಲಿಯೂ ಒಂದು ಬಗೆಯ ಸಮಸ್ಥಿತಿ ಸಿದ್ಧಿಸುತ್ತದೆ. ಅಂಥ ಸಮಸ್ಥಿತಿಯೇ ರುದ್ರನಾಟಕ ಒದಗಿಸುವ ಮನಸ್ಸಾಮಧಾನದ ಮೂಲಕ ಇದು ಕೆಥಾರ್ಸಿಸ್ ಸಿದ್ಧಾಂತದ ವಿವರಣೆ. ರಚನಾವಾದಿಗಳಿಗೆ ಅರಿಸ್ಟಾಟಲ್ ಹೇಳುವ 'ಐಕ್ಯದ' ಬಗೆಗಿನ ವಿವರಗಳು ಮತ್ತು ಕೆಥಾರ್ಸಿಸ್‌ನ ಪರಿಕಲ್ಪನೆಗಳು ಮುಖ್ಯವಾಗಿವೆ. ರಾಚನಿಕ ಪರಿಕ್ರಮದಲ್ಲಿ 'ವಿಷಯ' ಮತ್ತು 'ವಸ್ತು'ವಿನ ನಡುವಣ ದ್ವಂದ್ವದ ಕಲ್ಪನೆಯು ಮುಖ್ಯವಾಗಿರುವುದರಿಂದ ಈ ರೀತಿಯ ಚರ್ಚೆಗಳಿಗೆ ಮೂಲನೆಲೆಯನ್ನು ಅರಿಸ್ಟಾಟಲ್‌ನ ಮೂಲಕ ರಚನಾವಾದಿಗಳು ಕಂಡುಕೊಳ್ಳುತ್ತಾರೆ.

ಫ್ರಾಯ್ಡನ ಮನೋವೈಜ್ಞಾನಿಕ ವಿಶ್ಲೇಷಣೆಯ ಸಂದರ್ಭದಲ್ಲಿ 'ನಾರ್ಸಿಸಸ್' ಮತ್ತು 'ಈಡಿಪಸ್' ನ ಚರ್ಚೆಗಳು ಬಂದುವಷ್ಟೆ? ಈ ವಿವರಣೆಗಳು ಕೂಡಾ ರಾಚನಿಕ ವಿಧಾನಗಳನ್ನು ಅವಲಂಬಿಸಿದೆ. ಮನುಷ್ಯನ ಚಟುವಟಿಕೆಯನ್ನು ಈ ಪರಿಭಾಷೆಗಳು ವಿವರಿಸುವಾಗ ಸಂಕೇತದ ರಚನಾ ಕ್ರಮವನ್ನು ಅಥವಾ ಸಂಕೇತಗಳನ್ನು ನಿರ್ದಿಷ್ಟ ರಚನೆಯ ಪರಿಕ್ರಮದಲ್ಲಿ ವಿವರಿಸುತ್ತದೆ.

ಇದರ ಜೊತೆಗೆ ಗಮನಿಸಬೇಕಾದ ಅಂಶವೆಂದರೆ, ತುಂಬಾ ವಿಶಾಲವಾದ ಅರ್ಥದಲ್ಲಿ ರಚನಾವಾದದ ವಿವರಣೆಯು ನಮ್ಮ ಮೇಲೆ ಪ್ರಭಾವವನ್ನು ಬೀರಿದೆ. ರಚನಾಕ್ರಮದ ಬಗೆಗೆ ಅರಿಸ್ಟಾಟಲ್ ಮತ್ತು ಪ್ಲೇಟೋ ಹೇಳಿರುವ ವಿವರಗಳು ನಮ್ಮನ್ನು ವ್ಯಾಪಿಸಿಕೊಂಡಿದೆ. ಆದರೆ ನೇರವಾದ ಅರ್ಥದಲ್ಲಿ ಆಧುನಿಕ ರಚನಾವಾದದ ಸಂದರ್ಭದಲ್ಲಿ, ನಾವು ರಷ್ಯನ್ ರೂಪನಿಷ್ಠರ್, ಲೆವಿಸ್ಟ್ರಾಸ್ ಮಾನವಶಾಸ್ತ್ರದಲ್ಲಿ, ಸಸೂರ ಭಾಷಾ ವಿಜ್ಞಾನದಲ್ಲಿ ಎಂದು ಹೆಸರಿಸುತ್ತೇವೆ. ರೂಪನಿಷ್ಠರು ಸಂಕೇತಕೇಂದ್ರಿತ ವಿಮರ್ಶೆಯ ಬಗೆಗೆ ಪ್ರತಿಕ್ರಿಯಿಸುತ್ತಾರೆ. ರೂಪನಿಷ್ಠರು ಸಾಹಿತ್ಯದ ಅನನ್ಯತೆಯನ್ನು ಸಾಹಿತ್ಯದ ಒಳಗಡೆಗೆ ವಿವರಿಸುವುದು ಮಾತ್ರವಲ್ಲದೆ ಸಾಹಿತ್ಯ ಕೃತಿಯೆನ್ನುವುದು ಸ್ವಯಂ ಸಂಪೂರ್ಣ ರಚನೆಯೆಂದು ಪರಿಭಾವಿಸುತ್ತಾರೆ. ಕೃತಿಯೇ ಒಂದು ಕೇಂದ್ರವೆಂದು ಪರಿಭಾವಿಸುವುದು ರೂಪನಿಷ್ಠರ ಚರ್ಚೆಯ ಪ್ರಧಾನ ಪರಿಕಲ್ಪನೆಯಾಗಿದೆ. ಆದರೆ ಈ 'ಕೇಂದ್ರ' ಕಲ್ಪನೆಯೇ ನಿರಚನದ ನೆಲೆಯಿಂದ ಹೇಳುವುದಿದ್ದರೆ ಚರ್ಚಾರ್ಹವಾದುದು. ಪ್ರಾಪ್ ಮಹಾಶಯನು ಜಾನಪದ ಕತೆಗಳ ರಚನಾಕ್ರಮವನ್ನು ಅದರ ಆಶಯಕ್ಕೆ ಅನುಗುಣವಾಗಿ ವಿವರಿಸುತ್ತಾನೆ. ಜಾನಪದ ಕತೆಯ ಆಶಯಗಳು ಹೇಗಿವೆಯೆಂದು ಚರ್ಚಿಸುವುದು ಆತನ ಉದ್ದೇಶ. ಹೀಗೆ ಯುರೋಪಿನ ರಚನಾವಾದವು ರೂಪನಿಷ್ಠತೆ ಜೊತೆಗಿನ ಸಂಬಂಧದಲ್ಲಿ ನಿರ್ವಚನಗೊಂಡಿದೆ.

ರಚನಾವಾದವು ಭಾಷಾ ವಿಜ್ಞಾನದ ಮೇಲೆ ಬೀರಿರುವ ಪರಿಣಾಮಗಳು ಗಮನಾರ್ಹವಾಗಿದೆ. ರಚನಾವಾದಿ ದೃಷ್ಟಿಕೋನದ ಭಾಷಾವಿಜ್ಞಾನಿಗಳ ಮುಖ್ಯ ಗಮನವು ಒಂದು ವಾಕ್ಯದ ರಚನಾಕ್ರಮವನ್ನು ಅವಲಂಬಿಸಿಕೊಂಡಿದೆ. ರಚನಾವಾದಿಗಳ ದೃಷ್ಟಿಕೋನದ ಪ್ರಕಾರ ಒಂದು ನಿರ್ದಿಷ್ಟ ವಾಕ್ಯದ ಹಿಂದಿರುವ ನಿಯಮ ಮತ್ತು ಅದರ ಅಭಿವ್ಯಕ್ತ ರೂಪವು

ಮುಖ್ಯವಾಗಿರುತ್ತದೆ. 'ನೀರೆ ನೀರಿಲಿ ನಡೆವಾಗ ನೀರಿಗಿ ಚೆಲ್ಲಾಟ' ಈ ವಾಕ್ಯವು ಸಂಯೋಜನೆಗೊಂಡ ಕ್ರಮವನ್ನು ನೋಡಿ : 'ನೀರೆ ' 'ನೀರಿಲಿ' ನಡೆವಾಗ (ಕ್ರಿಯಾಪದ) 'ನೀರಿಗಿ' 'ಚೆಲ್ಲಾಟ', ಈ ರೀತಿಯ ಬಿಡಿಯಾದ ಪದಗಳು ಸೇರಿಕೊಂಡು ಒಂದು ಕೇಂದ್ರ ಆಶಯವನ್ನು ನಿರೂಪಿಸುತ್ತದೆ.

ಟ್ರೌಬಿಸ್ಟ್ಯ್‌ಕಾಯ (Troubstzkoy) ಯು ಒಂದು 'ಧ್ವನಿಮಾ' ದ ಬದಲಾವಣೆಯಿಂದ ಅರ್ಥಗಳಲ್ಲಿ ಹೇಗೆ ಬದಲಾವಣೆಯುಂಟಾಗುತ್ತದೆಯೆಂದು ಪರಿಶೀಲಿಸುತ್ತಾನೆ.

ಉದಾ : ಅವನು ಪೇಟೆಗೆ ಹೋದನು
ಅವಳು ಪೇಟೆಗೆ ಹೋದಳು

'ನು' ಮತ್ತು 'ಳು' ವಿನ ನಡುವಿನ ವ್ಯತ್ಯಾಸವು ಅರ್ಥದ ದೃಷ್ಟಿಯಿಂದ ಪ್ರಧಾನ ವ್ಯತ್ಯಾಸವನ್ನು ಉಂಟು ಮಾಡಿದೆ. ಅವನ ಬದಲು ಅವಳು ಪೇಟೆಗೆ ಹೋಗಿದ್ದಾಳೆ. 'ಪೇಟೆ' ಮತ್ತು 'ಹೋಗುವ' ಕ್ರಿಯೆ ಒಂದೇ. ಆದರೆ ಹೋದವರು ಮಾತ್ರ ಬೇರೆ.

ಸಸೂರನು ರಚನೆಯನ್ನು ಭಾಷಿಕ ಸಂಜ್ಞೆಯ ಮೂಲಕ ಚರ್ಚಿಸುತ್ತಾನೆ. ಭಾಷಿಕ ಸಂಜ್ಞೆಯು ಸೂಚಕ ಮತ್ತು ಸೂಚಿತನ ನಡುವೆ ನಿರ್ದಿಷ್ಟವಾದ ಸಂಬಂಧವನ್ನು ಕಲ್ಪಿಸುತ್ತದೆ. 'ಒಂದು ಶಬ್ದ ಹಾಗೂ ಅದು ಸೂಚಿಸುವ ವಸ್ತುಗಳ ನಡುವೆ ಯಾವುದೇ ಬಗೆಯ ತಾರ್ಕಿಕ ಅಥವಾ ಅರ್ಥಪೂರ್ಣ ಸಂಬಂಧವಿಲ್ಲ. ಅವುಗಳ ಸಂಬಂಧ ಯಾದೃಚ್ಛಿಕವಾದುದು. ಭಾಷೆಯಲ್ಲಿ ಮತ್ತು ನಿರ್ದೇಶನ ಕೇವಲ ರೂಢಿಗತ ಹಾಗೂ ಸಾಂಕೇತಿಕ' (ಸಿ.ಎನ್. ರಾಮಚಂದ್ರನ್ ೧೯೮೯ ಪು. ೧೦೧) ಭಾಷಾ ವಿಜ್ಞಾನದಲ್ಲಿ ರಾಚನಿಕ ಮಾದರಿಯ ಚರ್ಚೆಯು ಭಾಷಿಕ ಹಾಗೂ ಸಂಕೇತಶಾಸ್ತ್ರದ ಪರಿಭಾಷೆಯನ್ನು ಒಳಗೊಂಡು ರೂಪುಗೊಂಡಿದೆ. ಸಸೂರನ ರಾಚನಿಕ ದೃಷ್ಟಿಕೋನದ ಹೀಗೆ ಸಂಗ್ರಹಿಸಿ ಹೇಳಬಹುದು : ಒಂದು ರಚನೆಯ ಅಥವಾ ವ್ಯವಸ್ಥೆಯ ಕುರಿತು ಚರ್ಚಿಸುವುದೆಂದರೆ ಅದರ ಅಂತರ್ಗತ ನಿಯಮಗಳನ್ನು ಪರಿಶೀಲಿಸುವುದು ಎಂದು ಮಾತ್ರ ಅರ್ಥ. ಎರಡನೆಯದಾಗಿ ಸೂಚಕ - ಸೂಚಿತ ಸಂಬಂಧವು ಯಾದೃಚ್ಛಿಕವಾದುದು. 'ಸೂಚಿತ' ಬದಲಾಗುತ್ತಾ ಹೋಗುವುದರಿಂದ ನಮ್ಮ ಅಭ್ಯಾಸ ಸೂಚಕಗಳಿಗೇ ಮತ್ತು ಸೂಚಕ - ಸೂಚಿತ ಸಂಬಂಧಗಳಿಗೆ ಸೀಮಿತವಾಗಿರಬೇಕು. ಮೂರನೆಯದಾಗಿ ಭಾಷಿಕ ಸಂಜ್ಞೆಯ ಮೌಲ್ಯ ಅದರ ಧ್ವನಿ, ಶಾಬ್ದಿಕ ಪರಿಸರವನ್ನು ಅವಲಂಬಿಸಿರುವುದರಿಂದ ಒಂದು ರಚನೆಯಲ್ಲಿ ಕ್ರಮ - ರೀತಿಗಳು ಇರುತ್ತವೆಯೇ ಹೊರತು ವಾಸ್ತವದ ಅಂಶಗಳಲ್ಲ. ಸಸೂರನ ಪ್ರಕಾರ ''ಭಾಷೆ ಒಂದು ರೂಪವೇ ಹೊರತು ಸತ್ಯವಲ್ಲ'' (ವಿವರಗಳಿಗೆ ನೋಡಿ: ಸಿ.ಎನ್. ರಾಮಚಂದ್ರನ್ ೧೯೮೯ ಪು. ೧೦೧ ರಿಂದ ೧೦೩).

ಟ್ರೌಬಿಸ್ಟ್ಯ್‌ಕಾಯ್ ಕುರಿತಂತೆ 'ನಿರಚನವಾದಿ' ಡೆರಿಡಾ ಈ ಕೆಳಗಿನಂತೆ ಪ್ರತಿಕ್ರಿಯಿಸಿರುವುದು ರಚನಾವಾದ ಮತ್ತು ನಿರಚನವಾದದ ಸಂಬಂಧಾಂತರಗಳನ್ನು ಸೂಚಿಸುತ್ತದೆ.

೧. ರಾಚನಿಕ ಕ್ರಮವು ಪ್ರಜ್ಞಾಪೂರ್ವಕವಾದ ಭಾಷಿಕ ಕ್ರಮದಿಂದ ಅಪ್ರಜ್ಞಾಪೂರ್ವಕವಾದ ಭಾಷಿಕ ರಚನಾಕ್ರಮದ ಕಡೆಗೆ ಜಿಗಿಯಿತು.

೨. ಎರಡನೆಯದಾಗಿ ಪದಕ್ಕಿರುವ ಸ್ವತಂತ್ರ ಅನನ್ಯತೆಯನ್ನು ಪ್ರಶ್ನಿಸಿ ಪದಗಳಿರುವ ಪರಸ್ಪರ ಸಂಬಂಧವನ್ನು ವಿವರಿಸುತ್ತದೆ. ಅಂದರೆ ಒಂದು ಪದವು ಒಂದು ವಾಕ್ಯದ ಸಂಯೋಜನೆಯಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದುಕೊಳ್ಳುತ್ತದೆ.

೩. ಮೂರನೆಯದಾಗಿ ಒಂದು ಪದ್ಧತಿಯ ಒಳಗಡೆಗೆ ಇರುವ ಪರಿಕಲ್ಪನೆಯನ್ನು ಅದು ಹೇಳುತ್ತದೆ.

೪. ನಾಲ್ಕನೆಯದಾಗಿ ಸಾಮಾನ್ಯವಾದ ನಿಯಮವನ್ನು ಶೋಧಿಸುವುದು ಅದರ ಮುಖ್ಯ ಆಸಕ್ತಿಯಾಗಿದೆ.

ಒಟ್ಟನಲ್ಲಿ ಡೆರಿಡಾನು ಹೀಗೆ ರಚನಾವಾದದ ನೆಲೆಗಳಿಗೆ ಪ್ರತಿಕ್ರಿಯಿಸುತ್ತಾನೆ. ರಚನೆಯ ನಿಷ್ಠತೆಯು ಕೂಡ ಸಾಮಾನ್ಯವಾದ ನಿಯಮವನ್ನು ಅವಲಂಬಿಸಿಕೊಂಡಿದೆ. ಹೀಗಾಗಿ ರಚನಾವಾದದಲ್ಲಿ ಸ್ವಂತಿಕೆಯಲ್ಲಿ ಇರಬಹುದಾದ ವ್ಯತ್ಯಾಸ (difference) ಎನ್ನುವುದು ಮುಖ್ಯ ಪರಿಕಲ್ಪನೆಯಾಗಿಲ್ಲ. ಅದರೊಂದಿಗೆ 'ಸ್ವ - ಅನನ್ಯತೆ' ಎನ್ನುವುದರ ಬಗೆಗೆ ರಚನಾವಾದಿಗಳು ಚರ್ಚಿಸುವುದಿಲ್ಲ. ಅವರಿಗೆ ಅದು ಮುಖ್ಯವಲ್ಲ. ಪದದಲ್ಲಿ ಬಳಕೆಯಾಗುವ ಒಂದೊಂದು ಸ್ವರಕ್ಕೂ ಸ್ವ-ಅನನ್ಯತೆಯೆಂಬುದು ಇರುತ್ತದೆ.

ಮ <u>ರ</u>

<u>ರ</u> ಮ

ಈ ಮೇಲಿನ ಪದಗಳ ಜೊಡಿಯಲ್ಲಿ 'ರ'ವು ಸ್ಥಾನಪಲ್ಲಟ ಹೊಂದಿರುವುದರಿಂದ ಹೊಸ ಅರ್ಥವನ್ನು ಕೊಟ್ಟಿದೆ. 'ಮರ' ನಾಮ ಪದವಾದರೂ ಅದು ಮೂಲತಃ 'ಮರ' ಪರಿಕಲ್ಪನೆಯನ್ನು 'ಮರದ' ಜಡಸ್ಥಿತಿಯನ್ನು ಸೂಚಿಸುತ್ತದೆ.

ರಚನಾವಾದಿಗಳು 'ವಿಷಯ'ವನ್ನು 'ವಸ್ತು'ವನ್ನು ವಿಭಜಿಸುತ್ತಾರೆ. ವಿಷಯಕ್ಕೂ ವಸ್ತುವಿಗೂ ದ್ವಂದ್ವಾತ್ಮಕವಾದ ನಿಲವು ಇರುತ್ತದೆಯೆಂದು ರಚನಾವಾದಿಗಳು ನಂಬುತ್ತಾರೆ.

ರಚನಾವಾದಿಗಳ ಅಂತಿಮ ನಿಲುವೆಂದರೆ ಪ್ರತಿಯೊಂದು ರಚನೆಯೂ ನಿರ್ದಿಷ್ಟವಾದ ವಸ್ತುವನ್ನು ಹೊಂದಿರುತ್ತದೆ. ವಸ್ತುವು ತನಗೆ ಬೇಕಾದ ಕ್ರಿಯಾತ್ಮಕ ಸ್ವರೂಪವನ್ನು ಹೊಂದಿರುತ್ತದೆ. ಇಲ್ಲಿ ಬಳಕೆಯಾದ ನಿಲುವನ್ನು ಗಮನಿಸಿ ರಚನೆಯು ವಸ್ತುವಿನ ಜೊತೆಗೆ ತನ್ನ ನಿಲುವನ್ನು ಸ್ಥಾಪಿಸಿಕೊಂಡಿರುತ್ತದೆ. ವಸ್ತುವಿಗೆ ರಚನೆಯ ಒಳಗಡೆಗೆ ಕ್ರಿಯಾತ್ಮಕವಾದ ಸ್ವರೂಪವಿರುತ್ತದೆ. ಡೆರಿಡಾನ ಪ್ರಕಾರ ಅಂತರ್ ಪಠ್ಯ ಅನ್ನುವುದು ಕೇವಲ ವಸ್ತುವಿನ ಹಾಜರಾತಿ ಅಲ್ಲ. ವಿಷಯಕ್ಕೂ ವಸ್ತುವಿಗೂ ಬಹಳ ಅಂತರವಿದೆಯೆ? ಅಥವಾ ಬೇರೊಂದು ರೀತಿಯಲ್ಲಿ ಹೇಳುವುದಿದ್ದರೆ ವಿಷಯವು ಬೇರೆ - ವಸ್ತುವು ಬೇರೆ ಎಂದು ಒಡೆದು ಹೇಳುವುದು ಸಾಧ್ಯವೆ? ಒಂದು ವಸ್ತುವು ಒಂದು ರಚನಾಕ್ರಮದಲ್ಲಿ ಹಾಜರಾಗುತ್ತದೆಯೆಂದು ಭಾವಿಸೋಣ, ವಸ್ತುವು ರಚನಾ ಕ್ರಮದಲ್ಲಿ ಹಾಜರಾಗುವುದಕ್ಕೆ ಏನು ಕಾರಣ ಎನ್ನುವ ಪ್ರಶ್ನೆಯನ್ನು ಕೇಳಬೇಡವೆ?

ರಚನಾವಾದಿ ಚರ್ಚೆಯಲ್ಲಿ 'ಸಂವಹನ' ಎನ್ನುವ ಪರಿಭಾಷೆ ಬಳಕೆಯಾಗಿದೆ. ಇದು ಒಂದು ರೀತಿಯಿಂದ 'ಹುಡುಕಾಟ'ದ ಮುಖ್ಯ ಪರಿಕರವೂ ಆಗಿದೆ. ಒಂದು ರಚನಾಕ್ರಮದ ಒಳಗಡೆಗೆ ಬರುವ ಒಂದು ವಸ್ತುವಿನ ನಿಜವಾದ ಅರ್ಥವೇನು ಎಂದು ಹುಡುಕುವುದು ಅಥವಾ ಒಂದು ಭಾಗದಲ್ಲಿ ಬರುವ ಪರಿಕಲ್ಪನೆಯೇನು ಎಂದು ತಿಳಿಯುವುದು ಮತ್ತು ಅದನ್ನು 'ಬಗೆ' (operation)ಯುವುದು ರಚನಾವಾದ ಗ್ರಹಿಕೆಯ ಕ್ರಮವಾಗಿದೆ. ಈ ರೀತಿಯ ಕ್ರಮದ ಬಾರ್ತೆಸ್ ಹೇಳುವ ಪ್ರತಿಕ್ರಿಯೆಯು ಕುತೂಹಲಕಾರಿಯಾಗಿದೆ. 'ನಿರ್ದಿಷ್ಟ ವಸ್ತುವಿನ ಜ್ಞಾನವೊಂದನ್ನು ಭಾಷಿಕ ಸಂಜ್ಞೆಯು ಸೂಚಿಸುತ್ತದೆಯೆಂದು ಭಾವಿಸುವುದಕ್ಕಿಂತ ಒಂದು ವಸ್ತುವಿನ ದರ್ಶನವನ್ನು ಒಂದು ಸಂಜ್ಞೆಯು ಸೂಚಿಸುತ್ತದೆ ಎಂದು ಹೇಳುವುದು ಸೂಕ್ತ'. ರಚನಾವಾದವು ಕೆಲವು ಸರಳ ದ್ವಂದ್ವನಿಲುವನ್ನು ಆಧರಿಸಿಕೊಂಡು ನಿಂತಿದೆಯಷ್ಟೆ?

ಸೂಚಕ	-	ಸೂಚಿತ
ಭಾವನಾತ್ಮಕ	-	ಬೌದ್ಧಿಕ
ಬರವಣಿಗೆ	-	ಮಾತು
ಅವಕಾಶ	-	ಕಾಲ
Passivity	-	ಕ್ರಿಯಾತ್ಮಕ (Activtity)

ಈ ರೀತಿಯ ಸರಳ ದ್ವಂದ್ವದ ನಿಲುವಿನಿಂದಾಗಿ ರಚನಾವಾದವು ಕೆಲವು ತೊಡಕುಗಳನ್ನು ಎದುರಿಸಿದೆ. ಈ ಬಗೆಯ ದ್ವಂದ್ವದ ನಿಲುವಿನಿಂದಾಗಿ ಎರಡು ವರ್ಗೀಕರಣಗಳು ಏರ್ಪಡುವುದರ ಜೊತೆಗೆ ಪ್ರತ್ಯೇಕಿತವಾದ ಚೌಕಟ್ಟುಗಳು ಬಂದು ಬಿಡುತ್ತದೆ. ವಾಸ್ತವವಾಗಿ ಹಾಗಿರುವುದಿಲ್ಲ ಎನ್ನವುದು ನಿರಚನದ ವಾದವಾಗಿದೆ.

ಡೆರಿಡಾ ವ್ಯಾಕರಣದ ರಚನೆಯ ಬಗೆಗೆ ಮಾತಾಡುವಾಗ ಕೆಲವು ವಾದಗಳನ್ನು ಮಂಡಿಸುತ್ತಾನೆ. ಡೆರಿಡಾ ಕೂಡಾ ಭಾಷಿಕ ಸಂಜ್ಞೆಗಳನ್ನು ಆಧರಿಸುತ್ತಾನೆ. ರಚನೆಯ ನಿರಚನೆಯೆನ್ನುವುದು ಎಲ್ಲಾ ರೀತಿಯ ಪಠ್ಯಗಳ ನಿರಚನೆಯೂ ಆಗಿರುತ್ತದೆ. ನಿರ್ದಿಷ್ಟಗೊಳಿಸಲಾಗಿರುವ ಅಥವಾ 'ಹೇರಲಾಗಿರುವ' ಸಂಗತಿಗಳನ್ನು ನಿರಚನೆಯು ನಿರಾಕರಿಸುತ್ತದೆ. ಒಂದು ವಾಕ್ಯದಲ್ಲಿ ಬಳಕೆಯಾಗುವ ಭಾಷಿಕ ಸಂಜ್ಞೆಯನ್ನು ಪರಿವರ್ತಿಸಿಕೊಳ್ಳಲು ಸಾಧ್ಯ ಅಥವಾ ತೊಡೆದು ಹಾಕಲು ಸಾಧ್ಯ'. ಈ ಅರ್ಥದಲ್ಲಿ ಡೆರಿಡಾ ಕೂಡಾ ರಾಚನಿಕ ವಿಧಾನದ ಜೊತೆಗೆ ಸಂಬಂಧವನ್ನು ಇರಿಸಿಕೊಂಡಿದ್ದಾನೆ.

ನೀತೆಯ ವಾದವನ್ನು ಪುಷ್ಟೀಕರಿಸಿದ ರಾಲೆಂಡ್‌ಬಾರ್ತಸ್ ಕೂಡಾ ಈ ವಾದವನ್ನೇ ಪುಷ್ಟೀಕರಿಸಿದ್ದಾನೆ. ನೀಶೆಯ ವಾಕ್ಯವು ಹೀಗಿದೆ : 'ರಾಚನಿಕವಾಗಿ ಮನುಷ್ಯನು ಕೇಳುತ್ತಿರುತ್ತಾನೆ. ಇದು ಸ್ಥಗಿತಗೊಂಡ, ನಿಜವಾದ ಅರ್ಥವಂತಿಕೆಯನ್ನು ಒಳಗೊಂಡಿರುವ ಯಾಂತ್ರಿಕ ಪ್ರತಿಕ್ರಿಯೆಯಲ್ಲ. ಮನುಷ್ಯತ್ವವು ಅರ್ಥವನ್ನು ಸೃಷ್ಟಿಸುತ್ತದೆ'.

ಡೆರಿಡಾನ ಪ್ರಕಾರ ಒಂದು ನಿರ್ದಿಷ್ಟ ರಚನೆಯ ವಸ್ತುವನ್ನು ಶೋಧಿಸುವಾಗ ಮಾತ್ರ ರಚನಾವಾದ ಕೆಲಸ ಮುಗಿಯುತ್ತದೆಯೆಂದು ಭಾವಿಸಬೇಕಾಗಿಲ್ಲ. ಭಾಷೆಯ ರಚನೆಯಲ್ಲಿ ವಸ್ತುವಿದೆಯೆಂದು ತಿಳಿಯಬೇಕಾಗಿಲ್ಲ. ವಿಷಯ ಮತ್ತು ವಸ್ತುನಿಷ್ಠರ ರಚನೆಯ ಪ್ರಶ್ನೆಯೂ ಅಷ್ಟೆ. ಒಂದು ರಚನೆಯ ಹಿಂದೆ ಬಯಕೆಯು ಇದೆಯೆಂದಾದರೆ ರಚನೆಯು ಮನುಷ್ಯನ ಮನಸ್ಸನ್ನು ನಿಜವಾಗಿಯೂ ಸೂಚಿಸುತ್ತದೆಯೇ? ಎಂದು ಕೇಳಬೇಕಾಗುತ್ತದೆ.

ಡೆರಿಡಾನ್ ಈ ವಾದದ ಪ್ರಕಾರ ರಚನೆಯಲ್ಲಿಯೇ ಎಲ್ಲವೂ ಇಲ್ಲ. ರಚನೆಯ ಆಚೆಗೂ ಸತ್ಯವಿದೆ. ರಚನೆಯು ಪೂರ್ಣ ಪ್ರಮಾಣದಲ್ಲಿ ಮನುಷ್ಯನ ಮನಸ್ಸನ್ನು ಸೂಚಿಸುತ್ತದೆಯೆಂದು ಕೂಡಾ ತಿಳಿಯಬೇಕಾಗಿಲ್ಲ. ರಚನೆಯಲ್ಲಿ ವಸ್ತುವನ್ನು ತುಂಬಿಸುವ ಮನುಷ್ಯನ ಮನಸ್ಸಿನ ನಿಜವಾದ ಬಯಕೆ ಅದುವಾಗಿತ್ತೆ? ಅಥವಾ ಅದನ್ನು ಗ್ರಹಿಸುವ ಮನುಷ್ಯನ ಮನಸ್ಸಿನ ನಿಜವಾದ ಸ್ಥಿತಿಯೇನು? ಸತ್ಯವು ಎಲ್ಲಿ ಅಡಗಿದೆ? ರಾಚನಿಕ ವಿಧಾನವು ಒಂದು ಭಾಷಿಕ ಸಂಜ್ಞೆಯಲ್ಲಿ ಉಂಟಾಗುವ ಏರಿಳಿತವು ಅದರ ಒಳಗಡೆಗೆ ಜರುಗತ್ತದೆಯೆಂದು ಪರಿಭಾವಿಸುತ್ತದೆ. ರಾಚನಿಕ ವಿಧಾನದಲ್ಲಿ ಭಾಷಿಕ ಸ್ವಭಾವದಲ್ಲಿ ಉಂಟಾಗುವ ಏರಿಳಿತವಿದು.

ಬರವಣಿಗೆಯೆಂಬುದನ್ನು ನೋಡಿ : ಬರವಣಿಗೆಯ ಸ್ವರೂಪದಲ್ಲಿ ಸರಳ ಅರ್ಥದಲ್ಲಿ ಒಂದು ಕೇಂದ್ರವಿದೆ. ನಾವು ಒಂದು ಪುಸ್ತಕದ ಬಗೆಗೆ ಮಾತಾಡುವುದೆಂದರೆ ಅಥವಾ ಆ ಪುಸ್ತಕದ ಬಗೆಗೆ ಬರೆಯುವುದೆಂದರೆ ಆ ಪುಸ್ತಕದ ಬರೆಯುವುದು ಮಾತ್ರ. ನಾವು ಒಂದು ಪುಸ್ತಕದ ಬಗೆಗೆ ಬರೆಯುವುದೆಂದರೆ ಅಲ್ಲಿ ಲೇಖಕ ಗೈರುಹಾಜರಿ ಆಗುತ್ತಾನೆ. ಪುಸ್ತಕದ ವಿಷಯ ಮಾತ್ರ ಮುಖ್ಯವಾಗುತ್ತದೆ. 'ವಿಷಯ' ಮುಖ್ಯವಾಗುವುದೆಂದರೆ ಅಲ್ಲಿ ವಿಷಯದ ಅನ್ವಯ ಮಾತ್ರವೇ ಇರುತ್ತದೆ. 'ಬರವಣಿಗೆ'ಯು ಈ ಸಂದರ್ಭದಲ್ಲಿ ಅದರಲ್ಲಿಯೇ ಇರುತ್ತದೆ. ನಾವು ಗುರುತಿಸುವ ಬರವಣಿಗೆಯೆನ್ನುವುದು ಬರವಣಿಗೆಯ ಮಾಧ್ಯಮದ ಒತ್ತಡಕ್ಕೆ ಗುರಿಯಾಗಿರುತ್ತದೆ. ಇದರ ಪರಿಣಾಮವಾಗಿ ಬರವಣಿಗೆಯನ್ನು ಸಾಮಾನ್ಯವಾದ ಹಾಗೂ ಸಾರ್ವತ್ರಿಕವಾದ ಮೌಲ್ಯವೆಂದು ಪರಿಗಣಿಸುತ್ತೇವೆ. ಇದು ಪಲಾಯನವಾದದ ಸ್ವರೂಪವೆ?

ಹೀಗಿದ್ದರೂ ಬರವಣಿಗೆಯ ಆಯ್ಕೆಯು ಒಂದು ರೀತಿಯಿಂದ ತಾರ್ಕಿಕವಾದುದಾಗಿರುತ್ತದೆ. ಧ್ವನಿಯ ಸಾಧ್ಯತೆಯನ್ನು ನಿರಾಕರಿಸುತ್ತದೆ. ಬರವಣಿಗೆಯ ಸಂದರ್ಭದಲ್ಲಿ ಹೇಳುವವನು ಮತ್ತು ಕೇಳುವವನು ಗೈರು ಹಾಜರಿಯಾಗಿರುತ್ತಾನೆ. ಈ

ಅರ್ಥದಲ್ಲಿ ಬರವಣಿಗೆಯೇ ಮಾತು ಆಗಿಬಿಡುತ್ತದೆ. ಮಾತು ಬರವಣಿಗೆಗೆ ಇಳಿದಾಗ ಒತ್ತಡಕ್ಕೆ ಗುರಿಯಾಗುತ್ತದೆ. ರಾಚನಿಕವಾಗಿ ಬರವಣಿಗೆ ಮತ್ತು ಮಾತು ವ್ಯತ್ಯಾಸವಿಲ್ಲದಿದ್ದರೆ ಬರವಣಿಗೆಯ ಆಯ್ಕೆಯೆಸ್ನುವುದು ಅನುಮಾನವನ್ನು ಸೃಷ್ಟಿಸುತ್ತದೆ.

ಇವರ ಜೊತೆಗೆ 'ನಿರಚನ ಸಿದ್ಧಾಂತ'ದ ಪ್ರಮುಖ ಆಸಕ್ತಿಯೆಂದರೆ ಈಗಾಗಲೇ ಸಾಹಿತ್ಯ ವಿಮರ್ಶೆಯನ್ನು ಒಂದು ಸಮಸ್ಯಾತ್ಮಕ ಕೇಂದ್ರವಾಗಿ ರೂಪಿಸಲಾಗಿದೆಯಷ್ಟೆ. ಹಾಗೆಯೇ 'ಸಾಹಿತ್ಯ'ವನ್ನು ತತ್ವಜ್ಞಾನವನ್ನು ಪ್ರತ್ಯೇಕವೆಂಬಂತೆ ಕಾಣಲಾಗಿದೆ. ತತ್ವಜ್ಞಾನವನ್ನು ಸಾಹಿತ್ಯವಾಗಿ ಓದಬಹುದು ಅಥವಾ ಸಾಹಿತ್ಯವನ್ನು ತತ್ವಜ್ಞಾನವಾಗಿ ಓದಬಹುದು.

ಬಾರ್ತಸನ್ ಪ್ರಕಾರ ರಚನಾವಾದದ ಕ್ರಿಯೆಯೆಂದರೆ ಪ್ರಾರಂಭ ಮತ್ತು ಅಂತದ ನಡುವೆ ಓದುವ ಒಂದು ಅಭ್ಯಾಸ ಕ್ರಮ ಮಾತ್ರ. ಅದು ಕೇವಲ ಅಧ್ಯಯನದ ಕ್ರಮವೆಂದು ಪರಿಭಾವಿಸಬೇಕಾಗಿಲ್ಲ. ರಚನಾವಾದವು ಅದರದೇ ಆದ ಕಾರಣವನ್ನು ಇಟ್ಟುಕೊಂಡಿದೆ. ಆದರೆ 'ನಿರಚನಸಿದ್ಧಾಂತ'ವು ಪಠ್ಯವನ್ನು ನಿರ್ದಿಷ್ಟಗೊಳಿಸಿಕೊಂಡು ಓದುವುದಿಲ್ಲ. ಹಾಗೆಂದು ಒಂದು ಅರ್ಥದ ವಿಜ್ಞಾನವನ್ನು (Science of meaning) ನಿರಾಕರಿಸುವುದಿಲ್ಲ. ರಚನಾವಾದಿಗಳು ಹೇಳುವ 'ಪೂರ್ಣತೆ'ಯ ಕಲ್ಪನೆಯನ್ನು ನಿರಾಕರಿಸುವುದರ ಮೂಲಕ ನಿರಚನವು ಹೊಸದೊಂದನ್ನು ಪಡೆಯಲು ಯತ್ನಿಸುತ್ತದೆ. ಬಾರ್ತಸ್ ಹೇಳುವ ಪ್ರಕಾರ, ''ನಿರಚನವು ರಚನವಾದಿಗಳು ಹೇಳಿದ ವಿಚಾರವನ್ನು ಅಸ್ಥಿರಗೊಳಿಸುತ್ತದೆ. ರಚನಾವಾದಿಗಳು ತೊಟ್ಟ ನಿಲುವನ್ನು ಬಿಡುತ್ತದೆ. ರಚನಾವಾದವು ಹೇಳಿರುವ ಮಾದರಿಗಳು ಒಂದು ರೀತಿಯಲ್ಲಿ ಸಾಮಾನ್ಯ ಜ್ಞಾನದ ಕೊರತೆಯಿಂದ ಬಳಲುತ್ತದೆ''.

ಇನ್ನು ನವ್ಯ ವಿಮರ್ಶೆಯಲ್ಲಿ ಬಳಸಲಾಗಿರುವ 'ವ್ಯಂಗ್ಯ' 'ವಿರೋಧಾಭಾಸ' (Paradox) ನ ಪ್ರಶ್ನೆಯು ಭಾಷೆಯ ಅಲೌಕಿಕತೆಯನ್ನು ಸೂಚಿಸುತ್ತದೆಯೆಂದು ನಿರಚನವಾದಿಗಳು ಹೇಳುತ್ತಾರೆ. ಬಾರ್ತಸನ್ 'ನವ್ಯ ವಿಮರ್ಶಕರು ಪ್ರತಿಪಾದಿಸಿದ ಬುದ್ಧಿವಂತಿಕೆಯ ಬಗ್ಗೆ, ಕಲ್ಪನಾ ಚಾತುರ್ಯದ ಬಗೆಗೆ ಮಾತಾಡಿದರಷ್ಟೆ? ನವ್ಯ ವಿಮರ್ಶೆಯ ಬಗ್ಗೆ ಮಾತಾಡಿದ 'ವಿಟ್' ವಾಸ್ತವವಾಗಿ ಕ್ರಿಶ್ಚಿಯನ್ ನಂಬಿಕೆಯನ್ನು ಸೂಚಿಸುತ್ತದೆ. ಪಠ್ಯದ ಒಳನೆಯ್ಗೆಯ ಬಗೆಗೆ ಮಾತಾಡುವ ನವ್ಯ ವಿಮರ್ಶೆಯು ಕ್ರಿಶ್ಚಿಯನ್ ತಾತ್ವಿಕತೆಯಲ್ಲಿ ಬರುವ 'ಹೃದಯ'ದ ಪರಿಕಲ್ಪನೆಯನ್ನು ಸೂಚಿಸುತ್ತದೆ' ಎಂದು ಹೇಳುತ್ತಾನೆ.

ಹೀಗಿದ್ದರೂ ನಿರಚನವಾದದ ಪ್ರಕಾರ 'ಕವಿತೆಯ ಸ್ವಾಯತ್ತತೆಯ ಪ್ರಶ್ನೆಯಲ್ಲ. ಅದು ಮನುಷ್ಯ ಸಂಬಂಧದ ಬಗೆಗಿನ ನಂಬಿಕೆಯೂ ಹೌದು. ಮನುಷ್ಯನ ಕಾರಣಗಳನ್ನು ಕವಿತೆಯ ಸ್ವಾಯತ್ತತೆಯು ಪ್ರತಿಪಾದಿಸುತ್ತದೆ.

ನವ್ಯ ವಿಮರ್ಶೆಯಲ್ಲಿ ಬಂದ ವ್ಯಂಗ್ಯ ಮತ್ತು ವಿರೋಧಾಭಾಸ (Paradox) ನ ಪ್ರಶ್ನೆಯು ಭಾಷೆಯ ಆಧ್ಯಾತ್ಮಿಕತೆಯನ್ನು ವಿವರಿಸುವುದರೊಂದಿಗೆ ಅದರಲ್ಲಿ ಕಾವ್ಯ ಮೀಮಾಂಸೆ ಮತ್ತು 'ಸತ್ಯ'ದ (Poetic truth) ಬಗೆಗಿನ ಧಾರ್ಮಿಕ ನಿಲುವು ಜೊತೆ ಜೊತೆಗೆ ವ್ಯಕ್ತವಾಗಿದೆ. ಹೀಗಾಗಿ ನವ್ಯ ವಿಮರ್ಶೆಯು ತಳೆಯುವ ನಿಲುವು ಕಲ್ಪನೆ ಮತ್ತು ತತ್ವಜ್ಞಾನದ ನಡುವಣ ಒಂದು ರೇಖೆಯಾಗಿರುತ್ತದೆ.

ನವ್ಯ ವಿಮರ್ಶೆ ಮತ್ತು ರಚನಾವಾದವು ಎತ್ತುವ ಪ್ರಶ್ನೆಗಳು ಒಂದು ರೀತಿಯ ಅಸಾಂಗತ್ಯದ ಬೌದ್ಧಿಕವಾಗಿ ಉಂಟಾದ ಅತೃಪ್ತಿಯ ಪ್ರತೀಕದಂತೆ ಕಾಣಿಸುತ್ತದೆ.

ನವ್ಯ ವಿಮರ್ಶೆಯಲ್ಲಿ ಬಂದ ಮತ್ತೊಂದು ಪರಿಭಾಷೆ ಅನ್ವಯದ ಬಗೆಗಿನದು 'ಅನ್ವಯ' ಎನ್ನುವುದು ಹೊರಗಿನಿಂದ ತಂದು 'ಒಳಗಡೆ'ಗೆ ಅನ್ವಯಿಸುವುದು ಎಂಬುದನ್ನು ಸೂಚಿಸುತ್ತದೆ. ಈ ರೀತಿಯ ಅನ್ವಯದ ಕ್ರಮದಿಂದ ಶಿಸ್ತು ಮುಖ್ಯವಾಗಿ ವಿಮರ್ಶಕನ ಸ್ವಾತಂತ್ರ್ಯವು ಹೊರಟು ಹೋಗುತ್ತದೆಯೆಂದು ನಿರಚನವಾದಿಗಳು ಹೇಳುತ್ತಾರೆ.

ಎಲಿಯಟ್ ಒಂದು ಸಂದರ್ಭದಲ್ಲಿ "ಒಬ್ಬ ಅತ್ಯುತ್ತಮ ವಿಮರ್ಶಕನು ವಿಶ್ಲೇಷಣೆಯ ಸನ್ನಿವೇಶದಲ್ಲಿ ನಿರ್ದಿಷ್ಟ ಮೂಲತತ್ವ ಹಾಗೂ ವ್ಯಾಖ್ಯೆಗಳನ್ನು ಇಟ್ಟುಕೊಂಡು ಬುದ್ಧಿವಂತಿಕೆಯಿಂದ ಕೃತಿಯೊಂದನ್ನು ಪರಿಶೀಲಿಸುತ್ತಾನೆ" ಎಂದು ಹೇಳುತ್ತಾನೆ. ಇದನ್ನು ಬಾರ್ತಸ್ ಮತ್ತು ಹಾರ್ಡ್‌ಮನ್ ಇಬ್ಬರೂ ತಿರಸ್ಕರಿಸುತ್ತಾರೆ. ಎಲಿಯಟ್ಟನ ನಿಲುವು ಸಾಹಿತ್ಯ ಹಾಗೂ ತತ್ವಜ್ಞಾನವನ್ನು ಬೇರೆಯಾಗಿ ನೋಡುತ್ತದೆಯೆಂಬುದೇ ಈ ನಿರಾಕರಣೆಗೆ ಕಾರಣವಾಗಿದೆ.

ಒಟ್ಟಾರೆ ಯಾವುದೇ ಸಂಕೀರ್ಣವಾದ ಉದ್ದೇಶವನ್ನು ಇಟ್ಟುಕೊಂಡು ಭಾಷೆಯನ್ನು ಗ್ರಹಿಸುವುದಾಗಲೀ, ಒಂದು ಮಾದರಿಯನ್ನು ಸೂಚಿಸುವುದಾಗಲೀ ಸರಿಯಲ್ಲವೆಂದು ನಿರಚನ ಸಿದ್ಧಾಂತವು ಹೇಳುತ್ತದೆ. ರಚನಾವಾದವು ಕಟ್ಟುನಿಟ್ಟಿನ ಪರಿಭಾಷೆಯನ್ನು 'ದ್ವಂದ್ವ'ದ ಪರಿಭಾಷೆಯನ್ನು ಒಳಗೊಂಡಿದ್ದರೆ, ನವ್ಯವಿಮರ್ಶೆಯಲ್ಲಿ ಆಂತರಿಕ ಸಂಕಟವಿದೆ; ಸ್ವಂತ ಅನುಮಾನಗಳಿವೆ.

ಅಲ್ಲಮಪ್ರಭುವಿನ ಅಂಕಿತದ ಹಿಂದೆ

ಪ್ರೊ॥ ಸೀತಾರಾಮ ಜಾಗೀರ್‌ದಾರ್

ಅಲ್ಲಮ ಪ್ರಭುವಿನ ಹೆಸರು ಹಾಗೂ ಅಂಕಿತ ಎರಡೂ ನನ್ನನ್ನು ಅನೇಕ ವರ್ಷಗಳಿಂದ ಚಿಂತನಕ್ಕೆ ಒಳಗು ಮಾಡಿವೆ. ಅದರ ಫಲ ಈಗಾಗಲೇ ಅರ್ಪಿಸಿದ್ದೇನೆ.[1] ಈಗ ಆ ವಿಚಾರ ವೃಕ್ಷದ ಇನ್ನೊಂದು ಫಲವನ್ನು ಅರ್ಪಿಸುತ್ತಿದ್ದೇನೆ. 'ಅಲ್ಲಮ' ಶಬ್ದ ಹಾಗೂ 'ಗುಹೇಶ್ವರ' ಸ್ಥಲ ಈ ಎರಡೂ ನನ್ನ ಚಿತ್ತವನ್ನು ಕೆದಕಿ ಉತ್ತರವನ್ನು ಕಂಡುಕೊಳ್ಳಲು ಪ್ರೇರೇಪಿಸಿವೆ. ಏಕೆಂದರೆ ಈ ಎರಡೂ ಶಬ್ದಗಳು ಕೇವಲ ಕರ್ಣಾಟಕದವಲ್ಲ ! ನಮ್ಮ ವಿದ್ವಾಂಸರು ಭಾವಿಸಿದ್ದರು !!

'ಗುಹೇಶ್ವರ' ಇದು ಸರಿಯಾದ ರೂಪ ಮತ್ತು ಪ್ರೊ॥ ಎಸ್.ಎಸ್. ಭೂಸನೂರುಮಠ ಅವರು ಸ್ವೀಕರಿಸಿದ ಅಂಕಿತ 'ಗೊಹೇಶ್ವರ' ಅಲ್ಲ ಎಂಬುದನ್ನು ನಿರ್ಧರಿಸಿದ ನನಗೆ [2] 'ಗುಹೇಶ್ವರ' ಎಷ್ಟು ಪ್ರಾಚೀನ ಎಂಬ ಬಗ್ಗೆ ಸಮಸ್ಯೆ ತಲೆಯೆತ್ತಿತ್ತು. 'ಗುಹೇಶ್ವರ ತೀರ್ಥ' ಎಂಬ ಸ್ಥಳೋಲ್ಲೇಖ ಕ್ರಿ.ಶ. ೭೪೨ರಲ್ಲಿ ಬರೆಯಲಾದ ರಾಷ್ಟ್ರಕೂಟ ದೊರೆ ದಂತಿದುರ್ಗನ ಎಲ್ಲೋರಾದ ಶಾಸನದಲ್ಲಿ ದಾಖಲೆಯಾದುದು ಕಂಡುಬಂದಿತು [3]. ಅದು 'ಗೊಹೇಶ್ವರ' ಎಂಬುದು ಸಾಧು ಸ್ವರೂಪವಲ್ಲ ಎಂದು ನಿರ್ಣಯಿಸಿತು. ಆ ಸ್ಥಳ ಒರಿಸ್ಸಾದ 'ಗುಹೇಶ್ವರ ಪಾಟಕ/ ಗುಹೇಶ್ವರ ವಾಟಕ' ಎಂಬ ಸ್ಥಳವನ್ನು ಸೂಚಿಸುತ್ತಿರಬಹುದು ಎಂದೂ ಸೂಚಿಸಿರುವೆ [4].

---

1. 'ಸಂಶೋಧನ' ಅಭಿನಂದನ ಸಂಪುಟ, ಪು. ೧೮೪-೨೦೦
2. ಅದೇ ಪು. ೧೯೬-೧೯೭
3. Ep. Ind. Vol. XXV, PP 25-31
4. ಸಂಶೋಧನ (ಪೂರ್ವೋಕ್ತ) ಪು. ೧೯೬.

ಸತ್ಯವನ್ನು ಕಾಣಬಯಸುವ ಮನಸ್ಸು ಇನ್ನೂ ಹುಡುಕುತ್ತಲೇ ಇದೆ. ವಿ.ಸಂ. ೭೬೭ (ಕ್ರಿ.ಶ. ೭೧೦-೧೧)ನೇ ವರ್ಷದಲ್ಲಿ ಬರೆಯಲ್ಪಟ್ಟಿರುವ ಇಂದ್ರಗಡ ಶಿಲಾಶಾಸನದಲ್ಲಿ ಅಲ್ಲೊಂದು 'ಗುಹೇಶ್ವರ' ದೇವಾಲಯ ಇದ್ದುದನ್ನು ದಾಖಲಿಸಿದೆ. ಅದನ್ನು ನಮ್ಮ ಗುಹೇಶ್ವರಭಕ್ತ ಅಲ್ಲಮಪ್ರಭು ಹುಟ್ಟುವುದಕ್ಕಿಂತ ಮುಂಚೆ ಏನಿಲ್ಲವೆಂದರೂ ಸುಮಾರು ನಾಲ್ಕುನೂರು ವರ್ಷ ಮುಂಚೇ ಕಟ್ಟಲ್ಪಟ್ಟಿದೆ! ನೋಡಿ ಈ ವಾಕ್ಯ :

ಪರಲೋಕಸಾಧನಾರ್ಥೇ ಗುಹೇಶ್ವರಾಯ ಪ್ರತಿಪಾದಿತಮಿತಿ॥ [5]

ಒರಿಸ್ಸಾ ಹಾಗೂ ಮಧ್ಯಪ್ರದೇಶಗಳಲ್ಲಿ ತೊಳಲಾಡುತ್ತಿದ್ದ ನನಗೆ, ದೇವಪ್ರಯಾಗದ ಬ್ರಾಹ್ಮೀಶಾಸನಗಳು ಇನ್ನಷ್ಟು ಅಚ್ಚರಿಯಲ್ಲಿ ಮುಳುಗಿಸಿದುವು. ಈ ಶಾಸನಗಳ ಕಾಲ ಕ್ರಿ.ಶ. ೨೦೦-೫೦೦ ಎಂದು ಶಾಸನ ತಜ್ಞ ಡಾ.ಬಿ.ಸಿ.ಎಚ್. ಛಾಬ್ರಾ ಅವರು ನಿರ್ಣಯಿಸಿದ್ದಾರೆ [6]. ದೇವಪ್ರಯಾಗ ಸ್ಥಳ ಹಿಮಾಲಯದ ಗಿರಿಸಾನುಗಳಲ್ಲಿದೆ. ಅಲಕನಂದಾ ಹಾಗೂ ಭಾಗೀರಥೀ ನದಿಗಳ ಸಂಗಮಸ್ಥಾನವೇ ದೇವ ಪ್ರಯಾಗ; ಅಲ್ಲಿಂದ ಮುಂದೇ 'ಗಂಗಾ'. ಈ ಪವಿತ್ರ ಸ್ಥಳದಲ್ಲಿ ಕೇದಾರನಾಥ ಹಾಗೂ ಬದರೀನಾಥ ಪುಣ್ಯ ಕ್ಷೇತ್ರಗಳಿಗೆ ಹೋಗುವ ಯಾತ್ರಿಗಳು ತಂಗುತ್ತಿದ್ದರು. ಪ್ರಾಯಃ ಹೀಗೆ ತಂಗಿದ ಇಬ್ಬರು ಯಾತ್ರಾರ್ಥಿಗಳ ಹೆಸರುಗಳು ಹೀಗಿವೆ :

ಶಾಸನ . ಸಂಖ್ಯೆ XI : ಗುಹೇಶ್ವರದತ್ತ

ಶಾಸನ ಸಂಖ್ಯೆ XII : ಶ್ರೀಮದ್ ಗುಹೇಶ್ವರದತ್ತಸ್ಯ

ಈ ಎರಡೂ ಶಾಸನಗಳನ್ನು ಗಮನಕ್ಕೆ ತೆಗೆದುಕೊಂಡರೆ 'ಗುಹೇಶ್ವರ' ಎಂಬ ಅಭಿಧಾನ ಏನಿಲ್ಲವೆಂದರೂ ಕ್ರಿಸ್ತ ಶಕದ ಆರಂಭ ಕಾಲದಲ್ಲೇ ಇದ್ದಿರುವ ವಸ್ತುವಾಗಿದೆ. ಈ ಆಧಾರಗಳಿಂದಲೂ ಅಲ್ಲಮ ಪ್ರಭುವಿನ ಅಂಕಿತ 'ಗುಹೇಶ್ವರ' ಎಂಬುದೇ ಸರಿಯಾದದ್ದು, ಇತರ ರೂಪಗಳು ಸರಿಯಲ್ಲ. ಅರ್ಥಾತ್ 'ಗುಹ್ಯೇಶ್ವರ', 'ಗೊಹೇಶ್ವರ', 'ಗೋಗೇಶ್ವರ', 'ಗೊಗ್ಗೇಶ್ವರ' ಹಾಗೂ 'ಗೋಗೇಶ್ವರ' ಮುಂತಾದುವು ವಿಕೃತ ರೂಪಗಳು. ಇದು ಉತ್ತರ ಭಾರತದ ಯಾವುದೋ ಒಂದು ಸ್ಥಳದ ಸ್ಥಾವರಲಿಂಗದ ಪಳೆಯುಳಿಕೆ. ಶರಣರು ಯಾವುದೋ ಒಂದಿಲ್ಲೊಂದು ಸ್ಥಾವರಲಿಂಗವನ್ನು ಅಂಕಿತವಾಗಿ ಬಳಸಿರುವುದು ಗಮನಾರ್ಹ ಸಂಗತಿ [7].

'ಅಲ್ಲಮ' ಶಬ್ದದ ಬಗೆಗೂ ಇನಿತು ಯೋಚಿಸಿದಾಗ ಇದರ ಪ್ರಯೋಗಗಳೂ ಮಧ್ಯ ಭಾರತದಲ್ಲಿಯೆ ಹೆಚ್ಚು ಕಂಡು ಬಂದುದು ಒಂದು ಸೋಜಿಗ. ಅಲ್ಲಮ ಶಬ್ದದಲ್ಲಿನ ಮೂಲ ಸ್ವರೂಪ 'ಅಲ್ಲ' ಎಂದು ಈಗಾಗಲೇ ಗಮನಕ್ಕೆ ತಂದುದಾಗಿದೆ. ಅದು 'ಸ್ತ್ರೀ' ದೇವತೆಯನ್ನು ಸೂಚಿಸುತ್ತದೆ ಎಂಬುದನ್ನೂ ಕಂಡರಿಸಿ ಆಗಿದೆ. ಈ ಸಂಬಂಧದಲ್ಲಿ ಇನ್ನಷ್ಟು ಸಂಗತಿಗಳನ್ನು ಇಲ್ಲಿ ಅಭ್ಯಾಸಿಗಳ ಗಮನಕ್ಕೆ ತರಲಾಗುವುದು.

ಹೈಹಯ ವಂಶದ ಒಂದನೆಯ ಪೃಥ್ವೀ ದೇವನ ಆಮೋದಾ ತಾಮ್ರಶಾಸನವನ್ನು ಕುರಿತು ಬರೆಯುತ್ತ ದಿವಂಗತ ರಾಯ್ ಬಹದ್ದೂರು ಹೀರಾಲಾಲ್ ಅವರು ಆ ಶಾಸನದಲ್ಲಿ ಬರುವ 'ನೋನ್ನಲಾ' ದೇವಿಯನ್ನು ಕುರಿತು ಹೀಗೆ ಬರೆದಿದ್ದಾರೆ :

---

5. Ep. Ind. Vol. XXXII, PP 112-117

6. Dr. B.Ch. Chhabra "Devaprayag Brahmi Inscriptions" Ep. Ind. Vol. XXX, PP 133-135.

7. ಪೂರ್ವೋಕ್ತ 'ಸಂಶೋಧನ' ಪು. ೧೯೩.

Nonnala more correctly nonalla as found in other records of the same family. This seems to be an inflation of 'Noni' which in the Chattisgarhi dialect of Hindi means 'a inaiden', as it does in Oriya and Bengali. The ladies of rank apparently had the termination ' alla' added to their names, as we find other queens of the same family bearing the names like Avalla, Lachchalla, Rajalla, Rambhalla, Jasalla, Somalla and Trialla [8].

ಕರ್ನಾಟಕದ ರಾಜ ಮನೆತನದ ಹೆಸರುಗಳಲ್ಲಿಯೂ ‘ಆವಲ್ಲದೇವಿ’ [9] ‘ಲಚ್ಛಲ್ಲ’ [10] (<ಲಚ್ಛಲ <ಲಕ್ಷ್ಮ್ಯಲ್ಲ <ಲಕ್ಷ್ಮೀ ಅಲ್ಲ <ಲಕ್ಷ್ಮೀ ಅಲ್ಲಾ) ದೇವಿ ಎಂಬವರು ಇದ್ದರು. ‘ಅಲ್ಲ’ (<ಅಲ್ಲಾ) ‘ಅಲ/ಲ’ ಸ್ವರೂಪವನ್ನು ತಳೆದು ‘ಶಾಂತಲ’ ‘ಜಕ್ಕಲ’ ‘ಬಮ್ಮಲ’ ಹಾಗೂ ‘ಕೇತಲ’ ಮುಂತಾಗಿ ರೂಪ ತಳೆದು ನಿಂತುದನ್ನು ಕಾಣಬಹುದಾಗಿದೆ. ‘ಅಲ್ಲಶಕ್ತಿ’ ಅಲ್ಲ / ಅಲ್ಲಾ ಆಗಿ ಮುಂದೆ ಅದು ‘ಲ’ ರೂಪದಲ್ಲಿ ಉಳಿದಿದೆ.

ಆವಲ್ಲದೇವಿ	:	ಆವಲ್ಲ <ಆಹವ + ಅಲ್ಲ <ಆಹವ + ಅಲ್ಲಶಕ್ತಿ
ಲಚ್ಛಲ	:	ಲಚ್ಛಲ್ಲ <ಲಕ್ಷ್ಮೀ + ಅಲ್ಲ (ಲಕ್ಷ್ಮೀ >ಲಚ್ಛಿ)
ಭಾಗಲ	:	ಭಾಗಲ್ಲ <ಭಾಗ + ಅಲ್ಲ (ಭಾಗ < ಭಾಗೀರಥೀ)
ಬಾಚಲ	:	ಬಾಚಲ್ಲ <ಬಾಚ + ಅಲ್ಲ (ಬಾಚ = ಸೂರ್ಯ) (ಬಾಚ < ಭಾಸ್ಕರ = ಸೂರ್ಯ)
ಮಾಟಿಲ/ಮಾಳಲ/ ಮೈಳಲ	:	ಮಾಟಿ < ಮಾಳ + ಅಲ್ಲ > ಮಾಟಿಲ /ಮಾಳಲ
ಕೇತಲ	:	ಕೇತ + ಅಲ್ಲ (ಕೇದಾರೇಶ್ವರನ ಶಕ್ತಿ)
ಚಾಮಲ	:	ಚಾಮ + ಅಲ್ಲ (< ಶ್ಯಾಮ + ಅಲ್ಲ = ಶ್ಯಾಮಲ ವೈಷ್ಣವೀ ದೇವಿ)

---

8. Ep. Ind. Vol. XIX, PP 77-78, ಇತ್ತೀಚೆಗೆ ಕೊಪ್ಪಳದಲ್ಲಿ ದೊರಕಿದ ಶಾಸನಗಳಲ್ಲಿ ರಂಬಲ (ರಂಭಲ್ಲಾ) ದೇವಿಯ ಸ್ಮಾರಕ ಶಾಸನವೂ ಒಂದಾಗಿದೆ. ARIE. 1993-94 (ಎನ್.ಎನ್.ಎಸ್. ಅವರ ಸಂಗ್ರಹ) ಈ ಶಾಸನವನ್ನು ಅಪ್ರಕಟಿತ ಸಾಮಗ್ರಿಯಿಂದ ಎತ್ತಿಕೊಂಡಿದ್ದೇನೆ; ಇದಕ್ಕಾಗಿ ಭಾರತ ಸರ್ಕಾರದ ಪೂರಾಭಿಲೇಖ ಇಲಾಖೆಯ ನಿರ್ದೇಶಕರಾಗಿರುವ ಶ್ರೀ ಎಂ.ಎಸ್. ಕಟ್ಟಿ, ಮುಖ್ಯ ಶಾಸನ ತಜ್ಞರಾಗಿರುವ ಶ್ರೀ. ಎಂ.ಡಿ. ಸಂಪತ್ ಹಾಗೂ ಸಹಾಯಕ ಶಾಸನ ತಜ್ಞಾಧಿಕಾರಿ ಎನ್ ನಂಜುಂಡ ಸ್ವಾಮಿ ಅವರಿಗೆ ಋಣಿ ಆಗಿರುವೆ.
9. ಕಲ್ಯಾಣದ ಚಾಳುಕ್ಯ ಚಕ್ರವರ್ತಿ ಆಹವಮಲ್ಲ ಸೋಮೇಶ್ವರನ (ಕ್ರಿ.ಶ. ೧೦೪೪-೧೦೬೮) ಸೋದರಿ ಆವ್ವಲ್ಲದೇವಿಯನ್ನು ಸೇವುಣ ದೊರೆ ಭಿಲ್ಲಮನಿಗೆ (Bhillama III) ಕೊಟ್ಟು ಮದುವೆಯಾಗಿತ್ತು.
10. Ep. car. vol. XIII (pt. II), P. 1 (1987).
    - a) Lachchaladevi qn. of sovidevarasa of Bandanike
    - b) Lachchaladevi qn. of kadamba king.
    - c) Lachchaladevi qn. of udayaditya Ganga king.

ಕಂಚಲ	:	ಕಂಚಿ + ಅಲ್ಲ (= ಕಾಮಕ್ಷಿ)
ಪದ್ಮಲ	:	ಪದ್ಮ + ಅಲ್ಲ > ಪದ್ಮಲ್ಲ > ಪದ್ಮಲ
ಜಾಕಲ	:	ಜಾನಕಿ + ಅಲ್ಲ (ಜಾನಕಿ > ಜಾಕವ್ವೆ ಆದುದ ಪಂಪ ಭಾರತದಿಂದ ಸ್ಪಷ್ಟವಿದೆ. ಅರಿಕೇಸರಿಯ ತಾಯಿ ಜಾಕವ್ವೆ)
ಸಾವಳ / ಸಾವಲ	:	ಸಾವ್ < ಶ್ಯಾಮ + ಅಲ್ಲ > ಶ್ಯಾಮಲ > ಸಾಮಲ > ಸಾವಲ / ಸಾವ಼ಳ
ನಾಗಲ	:	< ನಾಗ + ಅಲ್ಲ
ರಂಬಲ	:	ರಂಬಲ < ರಂಭಲ್ಲಾ < ರಂಭಾ + ಅಲ್ಲ > ರಂಭಲ
ರೆಬ್ಬಲ	:	ರೇವ > ರೆಬ್ಬ > ರೆಬ್ಬ + ಅಲ್ಲ > ರೆಬ್ಬಲ
ಚಂದಲ / ಚಂದ್ರಲ	:	ಚಂದ್ರ + ಅಲ್ಲ ; ಸನ್ನತಿಯಲ್ಲಿ ಇರುವ ದೇವಸ್ಥಾನ 'ಚಂದ್ರಲಾ' ದೇವಿಯದು.
ಯೆಂಗಲ / ವೆಂಗಲ	:	ವೆಂಗ + ಅಲ್ಲ (ವೆಂಕಟಾದ್ರಿಯ ಶಕ್ತಿ ; ಪದ್ಮಾವತಿ = ಪದ್ಮಲ)
ಬಿಜ್ಜಲ (ಬಿಜ್ಜಲದೇವಿ)	:	ಬಿಜ್ಜ (ವಜ್ರ) + ಅಲ್ಲ (= ವಜ್ರಶಕ್ತಿ)

ಹೀಗೆಯೆ ಇನ್ನೂ ಹಲವು ಹೆಸರುಗಳ ಒಂದು ಪಟ್ಟಿಯನ್ನು ಕೊಡಬಹುದು. ಈ ಎಲ್ಲ ಶಬ್ದಗಳಲ್ಲಿ ಉತ್ತರ ಭಾಗ 'ಅಲ್ಲ ಶಕ್ತಿ' ಅಲ್ಲ ಅಥವಾ ಅಲ್ಲಾ ಆಗಿ ಕನ್ನಡದಲ್ಲಿ ಅಲ್ಲಾ/ ಅಲ್ಲಶಕ್ತಿ > ಅಲ್ಲ > ಅಲ > ಲ ಆಗಿ ವ್ಯವಹರಿಸಿದೆ. ಆದುದರಿಂದ 'ಅಲ್ಲ' ಈ ಶಬ್ದವು ಕೇವಲ ಕರ್ನಾಟಕಕ್ಕೆ ಮೀಸಲೂ ಅಲ್ಲ ; ಯಾವುದೇ ಒಂದು ವಿಶಿಷ್ಟ ಪಂಗಡಕ್ಕೆ ಸೀಮಿತವೂ ಅಲ್ಲ.

'ಅಲ್ಲ' ಶಬ್ದದ ಹಲವು ರೂಪಗಳನ್ನು ಪರಿಶೀಲಿಸುವುದು ಆ ಶಬ್ದದ ವಿವೇಚನೆಗೆ ಬಹಳ ಮುಖ್ಯವಾದುದು. ಅದು ಹಲವು ರೂಪದಲ್ಲಿ ಪ್ರಯೋಗದಲ್ಲಿ ಇದ್ದದ್ದು ಕಂಡು ಬರುತ್ತದೆ. 'ಅಲ್ಲ' 'ಅಲ್ಲಾ' 'ಆಲ' 'ಅಲ್ಹಣ' 'ಅಲ್ಲಟ' 'ಅಲ್ಲಪ್ಪ' 'ಅಲ್ಲರಸ' 'ಅಲ್ಲಪುಲಿ' 'ಅಲೌಢ' 'ಅಲ್ಲಘಟ್ಟ / ಅಲ್ಲಾಘಾಟ್' 'ಅಲ್ಲೂರು' 'ಅಲ್ಲೂರಕ' ಮುಂತಾಗಿ ಹಲವು ರೂಪದಲ್ಲಿ ಕಂಡುಬರುತ್ತದೆ.

'ಅಲ್ಹಣ' ಇದು ಸ್ತ್ರೀ ಹೆಸರು ಇದ್ದಂತೆ ಪುರುಷರ ಹೆಸರೂ ಆಗಿರಬಹುದು ಮಧ್ಯ ಪ್ರದೇಶದಲ್ಲಿ ಈ ಹೆಸರು ಬಳಕೆಯಲ್ಲಿ ಇದ್ದುದುಕಂಡು ಬರುತ್ತದೆ. ಕಳಚುರಿ [11] ಹಾಗೂ ಪ್ರತಿಹಾರ ಅರಸು ಮನೆತನಗಳಲ್ಲಿ 'ಅಲ್ಹಣದೇವಿ' ಎಂಬ ಹೆಸರಿನ ರಾಣಿಯರಿದ್ದರು.

'ಅಲೌಢ' ಎಂಬುದನ್ನು 'ವಲೌಢ' ಎಂದು ತಪ್ಪಾಗಿ ಓದಿದ್ದಾರೆ. ಡಾ. ಡಿ.ಸಿ. ಸರ್ಕಾರ್, ಇದಕ್ಕೆ ಕಾರಣ 'ಚ' ಹಾಗೂ 'ವ' ಅಕ್ಷಗಳ ಸಾದೃಶ್ಯತೆ, 'ಚಲೌಢ' ಎಂಬುದನ್ನು 'ವಲೌಢ' ಎಂದು ಓದಿದ್ದಾರೆ. ಇಲ್ಲಿನ ದೋಷವನ್ನು ಸ್ವತಃ ಡಿ.ಸಿ. ಸರ್ಕಾರ್ ಅವರೇ ಗಮನಿಸಿದ್ದಾರೆ.

There is little difference between the forms of letters 'ch' and 'v' and this fact renders the reading of personal and geographical names doubtful in some cases [12] ಎಂದು ಹೇಳಿದ್ದಾರೆ.

---

11. ಡಾ. ವ್ಹಿ.ವ್ಹಿ. ಮಿರಾಶಿ " Inscriptions of the Kalachuri Chedi Era" pp 313, 319, 320, 326, 330, 637, 643 and 648 (1955).

12. Ep. Ind. Vol. XXXii, p. 118

'ಅಲ್ಲ ಶಕ್ತಿ' ಎಂಬುದು ಸೇನ್ದ್ರಕ ರಾಜನೊಬ್ಬನ ಹೆಸರು. ಬಾಗುಮ್ರಾ ತಾಮ್ರ ಶಾಸನದ ಪ್ರಕಾರ ಈತ ಕಳಚುರಿ ಶಕ ೪೦೬ರಲ್ಲಿ (ಕ್ರಿ.ಶ. ೬೫೫-೬೫೬) ಇದ್ದನು. ''ಬಲಿ ಚರು ವೈಶ್ವದೇವ ಅಗ್ನಿ ಹೋತ್ರ ಇತ್ಯಾದಿ ಕ್ರಿಯೆಗಳಿಗೆ'' ಎಂದು ಪಲಿಸ (ಜಲಿಸ) ಗ್ರಾಮವನ್ನು ದತ್ತಿಕೊಟ್ಟನು. ಸೇಂದ್ರಕರಲ್ಲಿ 'ಶಕ್ತಿ' ಎಂಬುದು ಪ್ರತಿಯೊಬ್ಬ ವ್ಯಕ್ತಿಯ ಹೆಸರಿನೊಂದಿಗೆ ಸೇರುತ್ತದೆ. ಉದಾ : ಭಾನು ಶಕ್ತಿ, ಆದಿತ್ಯಶಕ್ತಿ, ಜಯಶಕ್ತಿ, ಕುಂದಶಕ್ತಿ ಇತ್ಯಾದಿ [13]. ಅರ್ಥಾತ್ 'ಅಲ್ಲ' ಎಂಬುದು ಮೂಲಶಬ್ದ ರೂಪ. ಅಲ್ಲಮಪ್ರಭು 'ನಾಗವಂಶಿ' (> ನಾಗವಾಸಿ > ನಾಗ) ಪಂಗಡಕ್ಕೆ ಸೇರಿದ ಕುಟುಂಬದವರಾಗಿರಬಹುದು. ಅವರ ವಚನಗಳನ್ನು ಅವಲೋಕಿಸಿದರೆ, ತೌಲನ ವಿಮರ್ಶೆಯ ತಕ್ಕಡಿಗೆ ಹಾಕಿದರೆ ಬಸವಣ್ಣನವರ ಹಾಗೆ ಅವರು ಸಂಗೀತ ಕಲೆಯಲ್ಲಿ ಪಳಗಿದ್ದರೆಂದು ತೋರದು. ಅವರ ವಚನಗಳಲ್ಲಿ ಅದು ಬಸವಣ್ಣನವರ ವಚನಗಳಲ್ಲಿ ಪಡಿಮೂಡಿ ನಿಂತಂತೆ ನಿಂತಿಲ್ಲ. ಉದಾಹರಣೆಗೆ ಬಸವಣ್ಣನವರ ಈ ಕೆಲವು ವಚನಗಳನ್ನು ನೋಡಿ :

೧. ಆಡಿದರೇನು **ಹಾಡಿದರೇನು** ಓದಿದರೇನು ತ್ರಿವಿಧ ದಾಸೋಹವಿಲ್ಲ
ದನ್ನಕ್ಕ? ಆಡದೇ ನವಿಲು? **ಹಾಡದೇತಂತಿ**? ಓದದೇಗಿಣಿ?
ಭಕ್ತಿ ಇಲ್ಲದವರನೊಲ್ಲ ಕೂಡಲ ಸಂಗಮದೇವ.

೨. **ತಾಳಮಾನ ಸರಸ ನಾನರಿಯೆ** ವಜೆ ಬಜಾವಣೆಯ ಲೆಕ್ಕವ
ನರಿಯೆ. ಅಮೃತಗಣ ದೇವಗಣವನರಿಯೆ, ಕೂಡಲ ಸಂಗಮ
ದೇವಾ ನಿನಗೆ ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ.

೩. ಎನ್ನ ಕಾಯವ ದಂಡಿಗೆಯ ಮಾಡಯ್ಯ, ಎನ್ನ ಶಿರವ ಸೋರೆಯ
ಮಾಡಯ್ಯ, ಎನ್ನ ನರವ ತಂತಿಯ ಮಾಡಯ್ಯ, ಎನ್ನ ಬೆರಳ
ಕಡ್ಡಿಯ ಮಾಡಯ್ಯ, **ಬತ್ತೀಸರಾಗವ ಹಾಡಯ್ಯ** [14], ಉರದ ಲೊತ್ತಿ
ಬಾರಿಸು ಕೂಡಲಸಂಗಮದೇವ.

೪. **ವಚನದಲ್ಲಿ ನಾಮಾಮೃತ ತುಂಬಿ,** ನಯನದಲ್ಲಿ ಮೂರುತಿ ತುಂಬಿ,
ಮನದಲ್ಲಿ ನಿಮ್ಮ ನೆನಹು ತುಂಬಿ, ಕಿವಿಯಲ್ಲಿ ನಿಮ್ಮ ಕೀರ್ತಿ ತುಂಬಿ
ಕೂಡಲ ಸಂಗಮದೇವಾ ನಿಮ್ಮ ಚರಣಕಮಲದಲ್ಲಾನು ತುಂಬಿ

'ಹಾಡಿದರೇನು' 'ಹಾಡದೇ ತಂತಿ', 'ತಾಳಮಾನ ಸರಸ ನಾನರಿಯೆ' 'ಎನ್ನ ಕಾಯವ ದಂಡಿಗೆ (= ವೀಣೆ)........ಉರದದಲೊತ್ತಿ ಬಾರಿಸು (= ಬಾಜಿಸು) ಕೂಡಲ ಸಂಗಮದೇವ''ಎಂಬ ಇಡೀ ವಚನ ಹಾಗೂ 'ವಚನದಲ್ಲಿ ನಾಮಾಮೃತ ತುಂಬಿ, ಎಂಬಲ್ಲಿ ಸಂಗೀತ ಕಲೆ ತನ್ನಷ್ಟಕ್ಕೆ ತಾನೇ ಒಡಮೂಡಿ ನಿಂತಿದೆ. ಪ್ರಭುದೇವರ ವಚನಗಳಲ್ಲಿ ಈ ತೆರನಾದ ಸಂಗೀತ ಕಲೆಯನ್ನು ತುಂಬಿಕೊಂಡ ಒಂದೂ ವಚನ ಕಂಡು ಬರದು ; ಇದು ಸೋಜಿಗದ ಸಂಗತಿ. ಸಂಗೀತ ಕಲೆ ಅವರ ಜೀವನದಲ್ಲಿ - ಜೀವನದ ಮರಳುಗಾಡಿನಲ್ಲಿ - ಸಂಪೂರ್ಣ ಇಂಗಿ ಹೋಯಿತೆ?

ಕವಿಗಳ, ಮನುಷ್ಯರ, ನಡೆ ನುಡಿಗಳು ಅವರ ಸಾಹಿತ್ಯದಲ್ಲಿ ಇನಿತು ಪಡಿಮೂಡಿ ನಿಲ್ಲುತ್ತವೆ ಎಂಬುವುದು ಲೋಕರೂಢಿ. ಬಸವಣ್ಣನವರ ಜೀವನ ಗತಿ ಅವರ ವಚನಗಳಲ್ಲಿ ಪ್ರತಿಫಲಿಸಿ ನಿಂತಿದ್ದರೆ ಅಲ್ಲಮ ಪ್ರಭುಗಳ ಜೀವನವು ಅವರ ವಚನಗಳಲ್ಲಿ

---

13. ಅದೇ ಪು. ೧೧೯.

14. ವಚನ ಧರ್ಮಸಾರ (ಲೇ. ಎಂ.ಆರ್. ಶ್ರೀ.) ಗ್ರಂಥದಲ್ಲಿ 'ಮುವ್ವತ್ತೆರಡು ರಾಗವ ಹಾಡಯ್ಯ' ಎಂಬ ಪಾಠವಿದೆ. ಡಾ. ಹಳಕಟ್ಟಿಯವರ ಪಾಠವೇ ನನಗೆ ಸರಿಯೆಂದು ತೋರುತ್ತದೆ. ವಚನ ಧರ್ಮಸಾರ, ಪು. ೪೮ (೧೯೪೬).

ಪ್ರತಿಫಲಿಸಿ ನಿಂತಿದೆ. ನಾದಯೋಗಿಗಳಿಗೆ ಸಂಬಂಧಪಟ್ಟ ಜೀವನ ಪ್ರಭುಗಳ ವಚನದಿಂದ ಕಟ್ಟಿಕೊಡಲು ಬಾರದು. ಈ ದಿಶೆಯಲ್ಲಿ ಇನ್ನಷ್ಟು ಸಂಶೋಧನೆ ಆಗಬೇಕು. ಸಮಕಾಲೀನ ಆಂತರಿಕ ಪ್ರಮಾಣಗಳ ಕೊರತೆ ನಮಗೆ ಅವರನ್ನು ಕುರಿತ ಆನಂತರ ನೂರಾರು ವರುಷಗಳ ಅವಧಿಯಾಚೆಗೆ ಸೃಷ್ಟಿಗೊಂಡ ಕೃತಿಗಳ ಜೊತೆಗೆ ಹೋಲಿಸಿದಾಗ (ಸದ್ಯ ಅಭ್ಯಾಸಿಗೆ) ಕಂಡು ಬರುವುದು ಸಹಜ. ಮಲಹಣ (ಮಲ್ಹಣ) ಶಿವಶರಣರ ಹಾಗೆ ಅಲ್ಲಮ (<ಅಲ್ಹಣ) ಶಿವಶರಣರ ವಂಶಸ್ಥರೂ ಉತ್ತರ ಭಾರತದಿಂದ ಬಂದು ಕರ್ನಾಟಕದಲ್ಲಿ ನೆಲಸಿದವರೆಂದು ತೋರುತ್ತದೆ.

'ಗುಹೇಶ್ವರ' ಹಾಗೂ 'ಅಲ್ಲಮ' ಈ ಎರಡೂ ಶಬ್ದಗಳು ಕರ್ನಾಟಕದವು ಎನ್ನುವುದಕ್ಕಿಂತ ಮಧ್ಯ ಪ್ರದೇಶ ಹಾಗೂ ಒರಿಸ್ಸಾ ಪ್ರದೇಶ ಎಂದರೆ ಪ್ರಾಚೀನ ಕಾಲದ ಮಧ್ಯ ಭಾರತದವು ಎಂದು ತೋರುತ್ತದೆ. 'ನಾಗವಾಸಕ್ಕಧಿಪತಿ' ಇದು 'ಗಜಪತಿ' ಇದಕ್ಕೆ ಹತ್ತಿರವಾದ ಶಬ್ದವಾಗಿರಬಹುದು [15]. 'ನಾಗಧ್ವಜ (ಹಸ್ತಿ ಧ್ವಜ) ನಾಗ ಎಂದರೆ ಸರ್ಪ ಎಂಬ ಅರ್ಥದ 'ಸರ್ಪಧ್ವಜ' ಎಂಬ ರೀತಿಯಲ್ಲಿ (ದುರ್ಯೋಧನನ ಧ್ವಜದ ರೀತಿಯಲ್ಲಿ) ಬದಲಿ ಹೊಂದಿದಂತೆ ಬದಲಿ ಹೊಂದಿದೆ.

ಕಾಲನ ಕೈಯಲ್ಲಿ ಏನೇನೋ ಆಗಿದೆ. ಅಲ್ಲಮಪ್ರಭುವಿನ ಚರಿತ್ರೆಯ ಹಿಂದೆ ಏನೇನೋ ಅದ್ಭುತವಡಗಿದೆ.

---

15. ಹಸ್ತಿನಾವತಿ = ನಾಗಪುರ, ನೋಡಿ ಪಂಪನ ವಿಕ್ರಮಾರ್ಜುನ ವಿಜಯ: ನಾಗಪುರಮನಿಟಿಸುವ ನಾಗಪುರಮನಾ ನಾಗಶಯನಂ ಪೊಕ್ಕು - ಆಶ್ವಾಸ : ೯೫.

'ದಿವ್ಯ' ಪದ ನಿರ್ವಚನ

ಪ್ರೊ ॥ ಗೌ.ಮ. ಉಮಾಪತಿ ಶಾಸ್ತ್ರಿ

ಎನ್ನಿಂದ ಕಿರಿಯರಿಲ್ಲ : ಶಿವಭಕ್ತರಿಂದ ಹಿರಿಯರಿಲ್ಲಾ -
ನಿಮ್ಮ ಪಾದ ಸಾಕ್ಷಿ , ಎನ್ನ ಮನ ಸಾಕ್ಷಿ.
ಕೂಡಲ ಸಂಗಮದೇವಾ, ಎನಗಿದೇ ದಿವ್ಯ![1]

ಇದೊಂದು ಬಸವಣ್ಣನವರ ಬಹು ಜನಪ್ರಿಯವಾದ ವಚನ. ಇಲ್ಲಿ ಭಕ್ತಿ ಭಂಡಾರಿ ಬಸವಣ್ಣನವರ ಕಿಂಕರಭಾವ ಮೂರ್ತಿಮತ್ತಾಗಿದೆ. ಈ ವಚನ ಬಸವಣ್ಣನವರ ಆದರ್ಶ ಭಕ್ತಿಭಾವಕ್ಕೆ ಸಾಕ್ಷಿ ನುಡಿಯುವುದಲ್ಲದೆ, ಹನ್ನೆರಡನೆಯ ಶತಮಾನದ ನ್ಯಾಯಾಂಗ ಪದ್ಧತಿಯನ್ನು ಸಂಕೇತಿಸುತ್ತದೆ; ದಂಡನಾಯಕ ಬಸವಣ್ಣನವರು ತಮ್ಮ ಕಾಲದಲ್ಲಿ ರೂಢಿಯಲ್ಲಿದ್ದ ನ್ಯಾಯಾಂಗದ ರೀತಿ ನೀತಿಗಳನ್ನು ಸಮಗ್ರವಾಗಿ ತಿಳಿದುಕೊಂಡು ಧರ್ಮದರ್ಶಿಗಳಿಗೂ ಆದರ್ಶರಾಗಿದ್ದರೆನ್ನುವುದನ್ನೂ ಸೂಚ್ಯವಾಗಿ ಹೇಳುವಂತಿದೆ.

ಕಲ್ಯಾಣದರಸು ಬಿಜ್ಜಳನ ಆಸ್ಥಾನದಲ್ಲಿ ಬಸವಣ್ಣನವರು ಧರ್ಮದರ್ಶಿಗಳು - ದಂಡನಾಯಕರು ದಣ್ಣಾಯಕರು ಆಗಿದ್ದರು. ಸ್ಮೃತಿಕಾರ ಮನು ಧರ್ಮವನ್ನೇ ದಂಡವೆನ್ನುತ್ತಾನೆ :

ದಂಡಃ ಶಾಸ್ತಿ ಪ್ರಜಾಃ ಸರ್ವಾಃ ದಂಡ ಏವಾಭಿರಕ್ಷತಿ ।
ದಂಡಃ ಸುಪ್ತೇಷು ಜಾಗರ್ತಿ ದಂಡಂ ಧರ್ಮಂ ವಿದುರ್ಬುಧಾಃ ॥
- ಮ.ಸ್ಮೃ. (ಅ.೭, ಶ್ಲೋ. ೧೮).

---

1. ಬ.ಷ.ವ, ವ - ೩೩೪ (ಭಕ್ತಿಸ್ಥಳ, ವ- ೮೫)

'ಎನಗಿಂತ ಕಿರಿಯರಿಲ್ಲ, ಶಿವ ಭಕ್ತರಿಗಿಂತ ಹಿರಿಯರಿಲ್ಲ' ಎಂಬುದು ಬಸವಣ್ಣನವರ ಶಪಥ. ಇದು ಅವರ ಸತ್ಯವಚನ. ತಾನು ಹೇಳುವ ಮಾತಿನ ಸತ್ಯತೆಯನ್ನು ಸಿದ್ಧಮಾಡಿ ಕೊಡುವುದಕ್ಕಾಗಿ ಬೇರೊಬ್ಬನನ್ನು ಪ್ರಮಾಣ ರೂಪದಲ್ಲಿ ಸಾಕ್ಷಿಯಾಗಿ ಕೊಡುವುದು ನ್ಯಾಯಾಂಗದ ಒಂದು ವಿಧಾನ.

ಸಾಕ್ಷಿಯಾಗಿ ಬಂದವನು ನಿಜವನ್ನೇ ನುಡಿಯಬೇಕು. ''ಸಾಕ್ಷಿಯು ನ್ಯಾಯಾಸ್ಥಾನದಲ್ಲಿ ಸತ್ಯವನ್ನು ಹೇಳಿದರೆ ತಾನು ಹಿಂದೆ ಮಾಡಿದ ಪಾಪಗಳಿಂದ ಮುಕ್ತನಾಗಿ ಪುನೀತನಾಗುತ್ತಾನೆ. ಸತ್ಯ ನುಡಿಯುವುದರಿಂದ ಧರ್ಮದ ಏಳ್ಗೆಯಾಗುತ್ತದೆ. ಆದುದರಿಂದ ಸಾಕ್ಷಿಗಳು ಉಚ್ಚ ಕುಲದವರೇ ಇರಲಿ, ನೀಚಕುಲದವರೇ ಇರಲಿ, ಎಲ್ಲರೂ ಸತ್ಯವನ್ನೇ ಹೇಳಬೇಕು''[2] ಎಂದು ಮನುವಿನ ವಚನ. ಸಿಕ್ಕ ಸಿಕ್ಕವರನ್ನು ಸಾಕ್ಷಿಗಳೆಂದು ಕರೆಯಲು ಬರುವುದಿಲ್ಲ. ಸಾಕ್ಷಿ ಹೇಳುವುದಕ್ಕೂ ಯೋಗ್ಯತೆ ಬೇಕು. ''ಸಾಕ್ಷಿಗಳು ಯಾವ ಕುಲದವರೇ ಇರಲಿ, ಅವರು ಆಪ್ತರಾಗಿರಬೇಕು - ಯಥಾರ್ಥವಾದುದನ್ನೇ ಯಾವಾಗಲೂ ಹೇಳುತ್ತಿರಬೇಕು. ಅಂತಹ ಸತ್ಯವಂತರನ್ನೇ ನ್ಯಾಯ ಕಾರ್ಯಗಳಲ್ಲಿ ಸಾಕ್ಷಿಗಳೆಂದು ಪರಿಗಣಿಸಬೇಕು. ಸಾಕ್ಷಿಗಳು ಎಲ್ಲ ಧರ್ಮವನ್ನೂ ತಿಳಿದವರಾಗಿರಬೇಕು. ಅವರು ಲೋಭಿಗಳಾಗಿರಬಾರದು. ಇದಕ್ಕೆ ವಿಪರೀತರಾದವರನ್ನು ಸಾಕ್ಷಿಗಳೆಂದು ತೆಗೆದುಕೊಳ್ಳಲೇಬಾರದು''[3] ಎಂದು ಮನುವು ಕಟ್ಟು - ನಿಟ್ಟಾಗಿ ವಿಧಿಸಿದ್ದಾನೆ.

ಕಠೋರವಾಗಿ ನುಡಿದು - ನಿಂದಿಸಿ ಪರರ ಮನವನ್ನು ನೋಯಿಸುವುದು ಧರ್ಮ ದೃಷ್ಟಿಯಿಂದ ಪಾಪ, ಲೋಕವ್ಯವಹಾರದಿಂದ ಅಪರಾಧ. ಅಂಥ ನಿಂದಕರನ್ನು - ಪ್ರತ್ಯಕ್ಷ ಅಪರಾಧಿಗಳನ್ನು ಅನಾಯಾಸವಾಗಿ ಹಿಡಿದು ದಂಡಿಸಬಹುದು. ಆದರೆ ಇಬ್ಬರೇ ಒಬ್ಬರನ್ನೊಬ್ಬರು ಅಪರಾಧಿಯೆಂದು ಆರೋಪಿಸುತ್ತಾ ನ್ಯಾಯಾಸ್ಥಾನಕ್ಕೆ ಬಂದಾಗ ಅರ್ಥಿ - ಪ್ರತ್ಯರ್ಥಿ (ವಾದಿ - ಪ್ರತಿವಾದಿ)ಗಳ ವಿವಾದವನ್ನು ಬಗೆಹರಿಸಲು ಪ್ರಮಾಣರೂಪದಲ್ಲಿ ಸಾಕ್ಷಿಗಳು ಬೇಕಾಗುತ್ತವೆ. ವಿವಾದಗ್ರಸ್ತ ವಿಷಯದಲ್ಲಿ ಸಾಕ್ಷಿ ಹೇತುಕವಾಗಿ ಸತ್ಯ ನಿರ್ಣಯವಾಗುತ್ತದೆ.[4] ಸಾಕ್ಷಿಗಳು ಐದು ಪ್ರಕಾರವೆಂದು ಸ್ಮೃತಿಕಾರ ನಾರದನು ಹೇಳಿರುವನು :

ಲಿಖಿತಃ ಸ್ಮಾರಿತಶ್ಚೈವ ಯದೃಚ್ಛಾಭಿಜ್ಞ ಏವ ಚ ।
ಗೂಢಶ್ಚೋತ್ತರ ಸಾಕ್ಷೀ ಪಂಚವಿಧಃ ಸ್ಮೃತಃ ॥

ಸಾಕ್ಷಿಗಳು ಅನಿಂದಿತಚರಿತ್ರರಾಗಿರಬೇಕು. ಅವರು ತಮ್ಮ ತಮ್ಮ ಕಾಯಕಗಳನ್ನು ಸತ್ಯತನದಿಂದ ಮಾಡುತ್ತಿದ್ದು ರಾಜರ ವಿಶ್ವಾಸಕ್ಕೆ ಪಾತ್ರರಾಗಿರಬೇಕು[5].

ಸಾಕ್ಷಿಯ ಹೊಣೆ ಬಹಳ ಗುರುತರವಾದುದು. ಅವನು ಧರ್ಮರಕ್ಷಣೆಯ ಕಾರ್ಯದಲ್ಲಿ - ರಾಜ್ಯದ ನ್ಯಾಯಾಂಗದ ಸುವ್ಯವಸ್ಥೆಯಲ್ಲಿ ಸಹಕಾರಿಯಾಗಬಲ್ಲನು. ಅವನು ಸತ್ಯವಾಗಿ ಸಾಕ್ಷಿ ನುಡಿಯಬೇಕು, ಇಲ್ಲದಿದ್ದರೆ ನ್ಯಾಯಸ್ಥಾನದ ಕಟ್ಟೆಯನ್ನೇ

---

2. ಸತ್ಯೇನ ಪೂಯತೇ ಸಾಕ್ಷೀ ಧರ್ಮಃ ಸತ್ಯೇನ ವರ್ಧತೇ ।
ತಸ್ಮಾತ್ಸತ್ಯಂ ಹಿ ವಕ್ತವ್ಯಂ ಸರ್ವವರ್ಣೇಷು ಸರ್ವದಾ ॥ - ಮ.ಸ್ಮೃ. (ಅ-೮, ಶ್ಲೋಕ - ೮೩.)

3. ಆಪ್ತಾಃ ಸರ್ವೇಷು ವರ್ಣೇಽಷು ಕಾರ್ಯಾಃ ಕಾರ್ಯೇಷು ಸಾಕ್ಷಿಣಃ ।
ಸರ್ವಧರ್ಮವಿದೋಽಲುಬ್ಧಾ ವಿಪರೀತಾಂಸ್ತು ವರ್ಜಯೇತ್ ॥ - ಮ.ಸ್ಮೃ. (ಅ-೮ : ೬೩.)

4. ವಿಪ್ರತಿಪತ್ತೌ ಸಾಕ್ಷಿನಿಮಿತ್ತಾ ಸತ್ಯವ್ಯವಸ್ಥಾ । - ಗೌ.ಧ.ಸೂ. (ಅಧ್ಯಾಯ - ೧೩. ಸೂತ್ರ - ೧.)

5. ಬಹವಃ ಸ್ಯುರನಿಂದಿತಾಃ ಸ್ವಕರ್ಮಸು ಪ್ರತ್ಯಾಯಿಕಾ ರಾಜ್ಞಾಂ । - ಗೌ.ಧ.ಸೂ. (ಅಧ್ಯಾಯ - ೧೩. ೨.)

ಹತ್ತಬಾರದು. ಕೇಳಿದಾಗ ಏನೂ ಹೇಳದೆ ಸುಮ್ಮನಿರುವುದು, ಸುಳ್ಳು ನುಡಿಯುವುದು - ಎರಡೂ ಅಪರಾಧವೇ [6]. ಇಂಥ ಸಾಕ್ಷಿ ದೋಷಿಯಾಗುತ್ತಾನೆ. ದಂಡನೆಗೆ ಗುರಿಯಾಗುತ್ತಾನೆ. ''ಸತ್ಯತನದಿಂದ ಧರ್ಮ, ಅದರಿಂದ ಸ್ವರ್ಗ ಪ್ರಾಪ್ತಿ, ಅಸತ್ಯದಿಂದ ಅಧರ್ಮ. ಅದರಿಂದ ನರಕ'' [7] ಎಂಬುದನ್ನು ಸಾಕ್ಷಿಯು ತಿಳಿದು ಆಚರಿಸಬೇಕು.

ಸತ್ಯವಂತರಾದ ಸಾಕ್ಷಿಗಳು ಇಲ್ಲದಿರುವಾಗ ರಾಜನು ತನ್ನ ಸಭಾಸದರನ್ನೇ ಸಾಕ್ಷಿಗಳೆಂದು ನೇಮಿಸಬಹುದು. ''ಹಿರಿಯರಿಲ್ಲದಿದ್ದರೆ ಅದು ಸಭೆಯಲ್ಲ. ಧರ್ಮವನ್ನು ಹೇಳದಿದ್ದರೆ ಅವರು ಹಿರಿಯರಲ್ಲ. ಸತ್ಯವಿಲ್ಲದಿದ್ದರೆ ಅದು ಧರ್ಮವಲ್ಲ. ಮೋಸದಿಂದ ಕೂಡಿದ್ದರೆ ಅದು ಸತ್ಯವಲ್ಲ'' [8] ಎಂದು ನಾರದನು ಹೇಳಿರುವುದು ಬಹು ಸಮಂಜಸವಾಗಿದೆ. ಸಾಕ್ಷಿಗಳಿಂದಲೂ ನ್ಯಾಯ ನಿರ್ಣಯವಾಗದಿದ್ದಾಗ ವಿದ್ವಾಂಸರ ವಚನಗಳೇ ಪ್ರಮಾಣವೆನಿಸುತ್ತವೆ. ಅಲ್ಲಿಯೂ ಸಂದೇಹ ಬಂದರೆ ಅಭಿಯುಕ್ತರೇ ಶಪಥ ಮಾಡಿ ತಮ್ಮ ಮಾತಿನ ಸಮರ್ಥನೆ ಮಾಡಿಕೊಳ್ಳಬೇಕು. ಇಲ್ಲವೆ ತಮ್ಮನ್ನು ನಿರಪರಾಧಿಗಳೆಂದು ಸಿದ್ಧ ಮಾಡಿಕೊಡಬೇಕು.

ಪಾಪ ಮಾಡಿದವರು ತಾವು ಮಾಡಿದ ಪಾಪವನ್ನು ಯಾರೂ ನೋಡುವದಿಲ್ಲವೆಂದು ತಿಳಿದಿರುತ್ತಾರೆ. ಆದರೆ ಅವರ ಅಂತರಾತ್ಮದ ಶಕ್ತಿಗಳ ರೂಪದಲ್ಲಿರುವ ದೇವತೆಗಳೇ ಅವರ ಪಾಪ ಕರ್ಮಗಳಿಗೆ ಸಾಕ್ಷಿಯಾಗಿರುತ್ತಾರೆ. [9] ಸೂರ್ಯ, ಚಂದ್ರ, ಗಾಳಿ, ಬೆಂಕಿ, ಮುಗಿಲು, ನೆಲ, ನೀರು, ಹೃದಯ, ಯಮ, ಹಗಲು, ಇರುಳು, ಬೆಳಗು, ಸಂಜೆಗಳ ರೂಪದಲ್ಲಿ ಧರ್ಮದೇವತೆಯು ಮಾನವನ ಆಚರಣೆಗಳನ್ನು ನಿರೀಕ್ಷಿಸುತ್ತಿರುತ್ತದೆ [10] . ಯುಕ್ತಾಯುಕ್ತ ವ್ಯವಹಾರಗಳಿಗೆ ನಮ್ಮ ಹೃದಯವೇ

---

6. ಸಭಾ ವಾ ನ ಪ್ರವೇಷ್ಟವ್ಯಾ ವಕ್ತವ್ಯಂ ವಾ ಸಮಂಜಸಂ ।
ಅಬ್ರುವನ್ ವಿಬ್ರುವನ್ ವಾಽಪಿ ನರೋ ಭವತಿ ಕಿಲ್ಬಿಷೀ ॥ - ಮ. ಸ್ಮೃ. (ಅ. ೮ : ೧೩)
ಅವಚನೇ ದೋಷಿಣಃ ಸ್ಯುಃ - ಗೌ.ಧ.ಸೂ. ಅಧ್ಯಾಯ ೧೩: ೭.

7. ಸ್ವರ್ಗಃ ಸತ್ಯವಚನೇ ವಿಪರ್ಯಯೇ ನರಕಃ । - ಗೌ.ಧ.ಸೂ. (ಅಧ್ಯಾಯ - ೧೩. : ೮)
ದೇವಲೋಕ ಮರ್ತ್ಯಲೋಕವೆಂಬುದು ಬೇಱಿಲ್ಲ ಕಾಣಿ ಭೋ ।
ಸತ್ಯವ ನುಡಿವುದೆ ದೇವಲೋಕ ; ಮಿಥ್ಯವ ನುಡಿವುದೆ ಮರ್ತ್ಯಲೋಕ ।
ಆಚಾರವೇ ಸ್ವರ್ಗ, ಅನಾಚಾರವೇ ನರಕ.
ಕೂಡಲಸಂಗಮದೇವಾ, ನೀವೇ ಪ್ರಮಾಣು । - ಬ.ಷ.ವ. ವ-೨೪೯ (ಭಕ್ತಜ್ಞಾನಿಸ್ಥಳ - ೧೨೬)

8. ನ ಸಾ ಸಭಾ ಯತ್ರ ನ ಸಂತಿ ವೃದ್ಧಾಃ
ನ ತೇ ವೃದ್ಧಾ ಯೇ ನ ವದಂತಿ ಧರ್ಮಂ।
ನಾಸೌ ಧರ್ಮೋ ಯತ್ರ ನ ಸತ್ಯಮಸ್ತಿ
ನ ತತ್ ಸತ್ಯಂ ಯಚ್ಛಲೇನಾನುವಿದ್ಧಂ ॥

9. ದುನ್ಯಂತೇ ವೈ ಪಾಪಕೃತೋ ನ ಕಶ್ಚಿತ್ ಪಶ್ಯತೀತಿ ನಃ ।
ತಾಂಶ್ಚ ದೇವಾಃ ಪ್ರಪಶ್ಯಂತಿ ಸ್ವಸ್ಯೈವಾಂತರ ಪೌರುಷಾಃ ॥ - ಸ್ಕಾ.ಪು. ೪೪ : ೭.

10. ಆದಿತ್ಯ ಚಂದ್ರಾವನಿಲೋಽನಲಶ್ಚ
ದ್ಯೌರ್ಭೂಮಿರಾಪೋ ಹೃದಯಂ ಯಮಶ್ಚ।
ಅಹಶ್ಚ ರಾತ್ರಿಶ್ಚ ಉಭೇ ಚ ಸಂಧ್ಯೇ
ಧರ್ಮೋ ಹಿ ಜಾನಾತಿ ನರಸ್ಯ ವೃತ್ತಂ ॥ - ಸ್ಕಾ.ಪು. ೪೪:೮
ದ್ಯೌರ್ಭೂಮಿರಾಪೋ ಹೃದಯಂ ಚಂದ್ರಾಗ್ನಿಯಮಾನಿಲಾಃ
ರಾತ್ರಿಃ ಸಂಧ್ಯೇ ಚ ಧರ್ಮಶ್ಚ ವೃತ್ತಜ್ಞಾಃ ಸರ್ವದೇಹಿನಾಂ ॥ - ಮ.ಸ್ಮೃ.(ಅ.೮: ೮೬)

ಎಲ್ಲದಕ್ಕೂ ಮಿಗಿಲಾದ ಸಾಕ್ಷಿಯಾಗಿದೆ, 'ತನ್ನ ಆತ್ಮವೇ ಉತ್ತಮ ಸಾಕ್ಷಿ, ಉತ್ತಮ ಗತಿ, ಎಂದು ಮನುವಿನ ಅನುಭವವಾಣಿ. ಪವಿತ್ರವಾದ ಆತ್ಮಸಾಕ್ಷಿಯನ್ನು ಮಾನವನು ಅಸತ್ಯ ನುಡಿದು ಅವಮಾನಗೊಳಿಸಬಾರದಂತೆ [11].

ನಮ್ಮ ಮಾತಿನ ಸತ್ಯತೆಯನ್ನು ಪ್ರಮಾಣಿಸಿ ತೋರುವುದಕ್ಕೆ ಗುರುಹಿರಿಯರ ಇಲ್ಲವೆ ಇಷ್ಟದೇವತೆಯ ಹೆಸರಿಟ್ಟು ಆಣೆ ಮಾಡುತ್ತೇವೆ. ಇದು ಸರ್ವ ಸಾಮಾನ್ಯವಾದ ಶಪಥದ ಪ್ರಕಾರ. ಅಂತೆಯೆ, ಬಸವಣ್ಣನವರು ತಮ್ಮ ಕೈಂಕರ್ಯದ ನುಡಿಗೆ ಗುರುವೂ ಇಷ್ಟದೈವತವೂ ಆದ ಕೂಡಲಸಂಗಮದೇವನ ಪಾದದ ಸಾಕ್ಷಿಯನ್ನಾಗಿ ಒಡ್ಡುತ್ತಾರೆ.

ಬಸವಣ್ಣನವರು ಇಲ್ಲಿ ಮಾಡಿರುವ ಶಪಥವು ಒಂದು ದಿವ್ಯ. [12] ದಿವ್ಯವು ಆರೋಪಿಯಾದ ಅಭಿಯುಕ್ತನ ಅಪರಾಧವನ್ನು ನಿರ್ಣಯಿಸುವ ನ್ಯಾಯಾಂಗದ ಒಂದು ಪ್ರಕಾರ. ಸ್ಮೃತಿ ಧರ್ಮಶಾಸ್ತ್ರಗಳಲ್ಲಿ ಅಪರಾಧದ ಸ್ವರೂಪ, ಅಪರಾಧವನ್ನು ಕಂಡು ಹಿಡಿಯುವ ಉಪಾಯ, ಸಾಕ್ಷಿಯ ಮಹತ್ವ, ಅಪರಾಧಕ್ಕೆ ತಕ್ಕ ಶಿಕ್ಷೆ (ದಂಡ) ಮೊದಲಾದ ನ್ಯಾಯಾಂಗದ ಪ್ರಾಚೀನ ಪದ್ಧತಿಗಳ ವ್ಯವಸ್ಥಿತವಾದ ನಿರೂಪಣೆಯಿದೆ. ಮನು, ಅತ್ರಿ, ಹಾರೀತ, ಅಂಗಿರಸ, ಕಾತ್ಯಾಯನ, ಬೃಹಸ್ಪತಿ, ಪರಾಶರ, ಗೌತಮ ಮೊದಲಾದವರು ಸ್ಮೃತಿಕಾರರು. ನಿಜಗುಣ ಶಿವಯೋಗಿಗಳು ಹತ್ತೊಂಬತ್ತು ಧರ್ಮಶಾಸ್ತ್ರಗಳ ಉಲ್ಲೇಖ ಮಾಡಿರುವರು. [13] ಪುರಾಣಗಳಲ್ಲಿ ಈ ಧರ್ಮಶಾಸ್ತ್ರಗಳ ರೀತಿ ನೀತಿಗಳು ಅಡಕವಾಗಿವೆ.

ಸ್ಕಾಂದಮಹಾಪುರಾಣದ ಮಾಹೇಶ್ವರ ಖಂಡದಲ್ಲಿಯ ಕೌಮಾರಿಕಾಖಂಡ (ಉತ್ತರಭಾಗ)ದ ನಾಲ್ವತ್ತುನಾಲ್ಕನೆಯ ಅಧ್ಯಾಯದಲ್ಲಿ ಅಷ್ಟವಿಧ ದಿವ್ಯದ ಸವಿಸ್ತರ ವರ್ಣನೆ ಬಂದಿದೆ. ಪಾಪ-ಪುಣ್ಯಗಳ ಪರೀಕ್ಷಾವಿಧಾನಗಳಾದ ದಿವ್ಯದಎಂಟು ಪ್ರಕಾರಗಳನ್ನು ಅರ್ಜುನನು ತಿಳಿಯಬಯಸಿದಾಗ ನಾರದಮುನಿಯು ಅವನ್ನು ವಿವರಿಸಿದನು.

ಶಪಥಾಃ ಕೋಶಘಟಕೌ ವಿಷಾಗ್ನೀ ತಪ್ತಮಾಷಕೌ।
ಫಾಲಂ ಚ ತಂಡುಲಂ ಚೈವ ದಿವ್ಯಾನ್ಯಷ್ಟೌ ವಿದುರ್ಬುಧಾಃ॥

(೧) ಶಪತ, (೨) ಕೋಶ, (೩) ಘಟ, (೪) ವಿಷ, (೫) ಅಗ್ನಿ, (೬) ತಪ್ತಮಾಷ, (೭) ಫಾಲ, (೮) ತಂಡುಲ - ಹೀಗೆ ಎಂಟು ವಿಧ ದಿವ್ಯಗಳನ್ನು ಪಂಡಿತರು ತಿಳಿಯುವರು.

---

11. ಆತ್ಮೈವ ಹ್ಯಾತ್ಮನಃ ಸಾಕ್ಷೀ ಗತಿರಾತ್ಮಾ ತಥಾತ್ಮನಃ ।
ಮಾವಮಂಸ್ಥಾಃ ಸ್ವಮಾತ್ಮಾನಂ ನೃಣಾಂ ಸಾಕ್ಷಿಣಮುತ್ತಮಂ ॥ - ಮ. ಸ್ಮೃ. (ಅ.೮ : ೮೪).

12. 'ದಿಬ್ಯ' ಮತ್ತು 'ದಿಬ್ಬ' ಪದಗಳು 'ದಿವ್ಯ'ದ ತದ್ಭವ (ಅಪಭ್ರಂಶ)ಗಳು.

13. ಬಳಿಕ ಮನುಸ್ಮೃತಿ, ಅತ್ರಿಸ್ಮೃತಿ, ಹಾರೀತಸ್ಮೃತಿ, ವಿಷ್ಣು ಸ್ಮೃತಿ, ಯಾಜ್ಞವಲ್ಕ್ಯ, ಉಶನಸ್ಮೃತಿ, ಆಂಗೀರಸಸ್ಮೃತಿ,ಯಮಸ್ಮೃತಿ, ಆಪಸ್ತಂಬಸ್ಮೃತಿ, ಸಂವರ್ತ, ಕಾತ್ಯಾಯನಸ್ಮೃತಿ, ಬೃಹಸ್ಪತಿಸ್ಮೃತಿ, ಪರಾಶರಸ್ಮೃತಿ, ವ್ಯಾಸಸ್ಮೃತಿ, ಶಂಖಲಿಖಿತಸ್ಮೃತಿ, ದಕ್ಷಸ್ಮೃತಿ, ಗೌತಮಸ್ಮೃತಿ, ಶಾತಾತಪಸ್ಮೃತಿ, ವಶಿಷ್ಟಸ್ಮೃತಿಗಳೆಂಬಿವೇ ಆಯಾಯ ನಾಮಧೇಯಮುಳ್ಳವರಿಂದುಕ್ತಮಾದ ಹತ್ತೊಂಬತ್ತು ಧರ್ಮಶಾಸ್ತ್ರಂಗಳ್ವಱೊಳಗೆ ಕೃತಯುಗದಲ್ಲಿ ಮನುಸ್ಮೃತಿಯೇ ಮುಖ್ಯವಾಗಿಹುದು. ತ್ರೇತಾಯುಗದಲ್ಲಿ ಗೌತಮಸ್ಮೃತಿ ಧರ್ಮವೇ ಮುಖ್ಯವಾಗಿಹುದು. ದ್ವಾಪರಯುಗದಲ್ಲಿ ಶಂಖಲಿಖಿತಸ್ಮೃತಿ ಧರ್ಮವೇ ಮುಖ್ಯವಾಗಿಹುದು. ಕಲಿಯುಗದಲ್ಲಿ ಪರಾಶರ ಸ್ಮೃತಿ ಧರ್ಮವೇ ಮುಖ್ಯವಾಗಿಹುದು.

- ವಿ.ಚಿಂ. ಪರಿಚ್ಛೇದ-೧, ಪು : ೫೬.

೧. ಶಪಥ

ರಾಜದ್ರೋಹ, ಅಭಿಶಾಪ,[14] ಸಾಹಸ [15] ಮೊದಲಾದ ಅಪರಾಧಗಳಲ್ಲಿ ಸಾಕ್ಷಿಗಳಿಲ್ಲದೆ ಪರಸ್ಪರ ವಿವಾದವು ವಾದಿ - ಪ್ರತಿವಾದಿಗಳಲ್ಲಿ ಉಂಟಾಗಲು ಶಪಥದಿಂದಲೇ ಸತ್ಯವನ್ನು ತಿಳಿಯಬೇಕಾಗುವುದು [16] ಸತ್ಯಕ್ಕಾಗಿ ಶಪಥ ಮಾಡಬೇಕು. ವ್ಯರ್ಥವಾಗಿ ಶಪಥ ಮಾಡುವವನು ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ವಿನಾಶಕ್ಕೆ ಗುರಿಯಾಗುವನು [17].

ಬ್ರಾಹ್ಮಣನು ಶಾಸ್ತ್ರ, ಕ್ಷತ್ರಿಯನು ಶಸ್ತ್ರವನ್ನು ಮುಟ್ಟಿ, ವೈಶ್ಯ ಮತ್ತು ಶೂದ್ರರು ತಮ್ಮ ಗುರುವಿನ ಹೆಸರು ತೆಗೆದುಕೊಂಡು ಶಪಥ ಮಾಡಬೇಕು. ಆರೋಪಿಯು ಧರ್ಮನಿಷ್ಠನೆಂಬುದನ್ನು ತಿಳಿದೂ ರಾಜನು ಸಿಟ್ಟು ಇಲ್ಲವೆ ಲೋಭದಿಂದ ಶಪಥಕ್ಕೆ ನಿಲ್ಲಿಸಿದರೆ ತಾನೇ ಪಾಪಕ್ಕೆ ಗುರಿಯಾಗುವನು. ಕಾರಣ ಸತ್ಯವಂತರನ್ನು ಇಂತಹ ದಿವ್ಯಗಳಿಗೆ ಗುರಿಯಾಗದಂತೆ ನೋಡಿಕೊಳ್ಳುವುದು ರಾಜನ ಕರ್ತವ್ಯ [18].

ಮಹರ್ಷಿಗಳು ಮತ್ತು ದೇವತೆಗಳೂ ಸತ್ಯ ಪರೀಕ್ಷೆಗಾಗಿ ಶಪಥ ಮಾಡಿರುವರು. ಸಂದಿಗ್ಧ ಕಾರ್ಯನಿರ್ಣಯದಲ್ಲಿ ಶಪಥವೇ ಪರಮೋಪಾಯವೆಂದು ಅವರು ಬಗೆದಿದ್ದರು. ನೂರು ಮಕ್ಕಳನ್ನು ತಿಂದ ಆರೋಪವನ್ನು ವಿಶ್ವಾಮಿತ್ರನು ಮಾಡಲು ವಸಿಷ್ಠನು ತನ್ನ ಪರಿಶುದ್ಧಿಗಾಗಿ ಪಿಜವನರಾಜನ ಪುತ್ರನಾದ ಸುದಾಸನೆಂಬ ರಾಜನ ಮುಂದೆ ಶಪಥ ಮಾಡಿದನಂತೆ [19].

ಈ ಶಪಥ ದಿವ್ಯ ಆಣೆ ಮಾತಿನ ಬಗೆಯಲ್ಲಿ ಈಗಲೂ ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಶ್ರೀ ಮಂಜುನಾಥ ಸ್ವಾಮಿಯ ಸನ್ನಿಧಿ ಹಾಗು ಧರ್ಮಾಧಿಕಾರಿ ಶ್ರೀ ಹೆಗ್ಗಡೆಯವರ ಸಮ್ಮುಖದಲ್ಲಿ ನಡೆಯುತ್ತಿದೆ.

---

14. ಇಲ್ಲದ ದೋಷಾರೋಪಣೆ; ಅಸತೋ ದೋಷಸ್ಯ ಅಧ್ಯಾರೋಪಃ, ಪಾತಕಾಭಿಯೋಗಃ - ಯಾ.ಸ್ಮೃ. ಮಿತಾಕ್ಷರಾ ಟೀಕೆ.

15. ಕಳ್ಳತನ, ವ್ಯಭಿಚಾರ, ಪರಸ್ತ್ರೀ ಅಪಹರಣ, ವಿಷ, ಶಸ್ತ್ರ ಮುಂತಾದವುಗಳಿಂದ ಪ್ರಾಣ ತೆಗೆಯುವುದು - ಯಾ.ಸ್ಮೃ. (ವ್ಯವಹಾರಾಧ್ಯಾಯ, ಶ್ಲೋ ೧೨-ಮಿತಾಕ್ಷರಾ).

16. ಅಸಾಕ್ಷಿಕೇಷು ಚಾರ್ಥೇಷು ಮಿಥೋ ವಿವದಮಾನಯೋಃ ।
ಅವಿಂದಂಸ್ತತ್ತ್ವತಃ ಸತ್ಯಂ ಶಪಥೇನಾಪಿ ಲಭ್ಯಯೇತ್ ॥ - ಮ.ಸ್ಮೃ. (ಅ.೮:೧೦೯).
ಅಸಾಕ್ಷಿಕೇಷು ಚಾರ್ಥೇಷು ಮಿಥೋ ವಿವದಮಾನಯೋಃ ।
ರಾಜದ್ರೋಹಾದಿಶಾಪೇಷು ಸಾಹಸೇಷು ತಥೈವ ಚ ॥
ಅವಿಂದಂಸ್ತತ್ತ್ವತಃ ಸತ್ಯಂ ಶಪಥೇನಾಭಿಲಂಘಯೇತ್ । - ಸ್ಕಾ.ಪು. ೪೪ : ೩-೪.

17. .....ತಸ್ಮಾದಭಿಜ್ಞ್ನಾಯ ಸತ್ಯಾರ್ಥಂ ಶಪಥಾಂಶ್ಚರೇತ್ ।
ವೃಥಾ ಹಿ ಶಪಥಾನ್ ಕುರ್ವನ್ಪ್ರೇತ್ಯ ಚೇಹ ವಿನಶ್ಯತಿ ॥ - ಸ್ಕಾ.ಪು. ೪೪ : ೯ ಮತ್ತು - ಮ. ಸ್ಮೃ. (ಅ.೮ : ೧೧೧)

18. ಜ್ಞಾತ್ವಾ ಧರ್ಮಿಷ್ಠತಾಂ ರಾಜಾ ಪುರುಷಸ್ಯ ವಿಚಕ್ಷಣಃ ।
ಕ್ರೋಧಾಲ್ಲೋಭಾತ್ಕಾರಯಂಶ್ಚ ಸ್ವಯಮೇವ ಪ್ರದುಷ್ಯತಿ ॥ - ಸ್ಕಾ.ಪು. ೪೪-೨೬

19. ಮಹರ್ಷಿಭಿಶ್ಚ ದೇವೈಶ್ಚ 'ಸತ್ಯಾರ್ಥಾಃ' ಶಪಥಾಃ ಕೃತಾಃ ।
('ಕಾರ್ಯಾರ್ಥಂ ' ಎಂದು ಮನುಸ್ಮೃತಿಯಲ್ಲಿ ಪಾಠಾಂತರ) - ಸ್ಕಾ.ಪು. ೪೪-೪.
ವಸಿಷ್ಠಶ್ಚಾಪಿ ಶಪಥಂ ಶೇಪೆ ಪೈಜವನೇ ನೃಪೇ - ಮ.ಸ್ಮೃ. (ಅ.೮ : ೧೧೦.)

೨. ಕೋಶ ದಿವ್ಯ

ಸಂಕಲ್ಪಪೂರ್ವಕವಾಗಿ ದೇವರ ಅಭಿಷೇಕದ ಜಲವನ್ನು ಆಪಾದಿತನಿಗೆ ಕುಡಿಸಬೇಕು. ಇದೇ ಕೋಶಪರೀಕ್ಷೆಯು. ಇದರ ಫಲವು ಇಪ್ಪತ್ತೊಂದು ರಾತ್ರಿಗಳಲ್ಲಿ ತಿಳಿಯುವುದು [20].

೩. ಘಟದಿವ್ಯ

ಹಳ್ಳ ದಿಣ್ಣೆಗಳಿಲ್ಲದಿರುವ ಸಮತಲ ನೆಲದಲ್ಲಿ ಆಗ್ನೇಯ ದಿಕ್ಕಿನ ಕಡೆ, ಅತ್ತಿಯ ಮರದ ಏಳು ಹಸ್ತ ಅಳತೆಯ ಎರಡು ಮಂಡಿಗೆಗಳನ್ನು ಹೂಳಬೇಕು. ಎರಡು ಹಸ್ತ ಅವು ಭೂಮಿಯಲ್ಲಿ ನೆಟ್ಟರಬೇಕು. ಇವೆರಡರ ನಡುವೆ ನಾಲ್ಕು ಹಸ್ತ ಅಂತರವಿರಬೇಕು. ಬುದ್ಧಿವಂತನಾದ ಅಧಿಕಾರಿಯು ಅವುಗಳ ಮೇಲೆ ಗಟ್ಟಿಯಾದ ಕೊರಡನ್ನು ಇಡಬೇಕು. ಅದರ ನಡುವೆ (ಮಧ್ಯೆ) ನಾಲ್ಕು ಹಸ್ತ ಅಳತೆಯ ದಂಡೆಯನ್ನು ತೂಗು ಹಾಕಬೇಕು. ಈ ದಂಡಿಗೆಯ ಖದಿರ, ಅರ್ಜುನ, ಶಿಂಶಪ, ಸಾಲವೃಕ್ಷದಿಂದ ಮಾಡಿದುದು ಆಗಿರಬೇಕು. ಎರಡೂ ಕಡೆ ಹಗ್ಗಗಳನ್ನು ಕಟ್ಟಿದ ಮೇಲೆ ಪೂರ್ವಮುಖವಾಗಿ ಕುಳಿತ ಆಪಾದಿತನ ಕೈಯಿಂದ ಕಲಶಸ್ಥಾಪನೆ ಮಾಡಿಸಬೇಕು. ಕಲಶ ಕಲ್ಲಿನದಾದರೂ ಆಗಿರಬಹುದು. ತುಲಾಧಾರಣವನ್ನು ನಿಪುಣ ವರ್ತಕ, ಅಕ್ಕಸಾಲಿಗ ಇಲ್ಲವೆ ಕಂಚುಗಾರನಿಂದ ಮಾಡಿಸಬೇಕು. ಅವರು ಆಪಾದಿತ ಮತ್ತು ಆಪಾದಕ ಇಬ್ಬರ ವಿಷಯದಲ್ಲಿಯೂ ಪಕ್ಷಪಾತವಿಲ್ಲದವರಾಗಿರಬೇಕು. ನ್ಯಾಯಾಧಿಪತಿಯು ತುಲಾಧಾರಕನಿಗೆ ಪರೀಕ್ಷಾ ಕಾರ್ಯದಲ್ಲಿ ಸರಿಯಾದ ತಿಳುವಳಿಕೆ ಕೊಡಬೇಕು. ಬ್ರಹ್ಮ - ಸ್ತ್ರೀ - ಬಾಲಕವಧೆ ಮಾಡಿದವರ ಮೇಲೆ ಈ ದಿವ್ಯ ಪ್ರಯೋಗ ನಡೆಯುತ್ತಿತ್ತು.

ಒಂದು ರಾತ್ರಿ ಉಪವಾಸವಿದ್ದ ಆಪಾದಿತನನ್ನು ಒಂದು ಪರಡಿಯಲ್ಲಿ ಕುಳ್ಳಿರಿಸಬೇಕು. ಎರಡನೆಯ ಪರಡಿಯಲ್ಲಿ ಕಲಶವನ್ನು ಇಟ್ಟು ಆಪಾದಿತನ ಸರಿ ತೂಕದ ಮಣ್ಣನ್ನು ಅದರಲ್ಲಿ ತುಂಬಬೇಕು. ಆಪಾದಿತನ ತಲೆಗೆ ಒಂದು ಚೀಟಿಯನ್ನು ಕಟ್ಟಬೇಕು. ಅದರಲ್ಲೆ ''ಎಲೆ ತಕ್ಕಡಿಯೆ, ನೀನು ಬ್ರಹ್ಮನ ಮಗಳು. ನಿನಗೆ ತುಲೆಯೆಂಬ ಹೆಸರು ಅನ್ವರ್ಥಕವಾಗಿದೆ. 'ತು' ಭಾರಸೂಚಕ. 'ಲ' ಲಘುತೆಯ ಸಂಕೇತ. ಅಪರಾಧ ಪರೀಕ್ಷೆಗೆ ಗುರಿಯಾಗುವ ಇವನನ್ನು ಸಂಶಯದಿಂದ ಪಾರು ಮಾಡು ಎಂದು ಬರೆದಿರಬೇಕು [21].

ಒಂದು ಕಡೆ ಆಪಾದಿತನನ್ನು, ಇನ್ನೊಂದು ಕಡೆ ಪತ್ರ ಸಹಿತವಾಗಿ ಮಣ್ಣು ತುಂಬಿದ ಕುಂಭವನ್ನು ಮತ್ತೊಮ್ಮೆ ತಕ್ಕಡಿಯಲ್ಲಿಟ್ಟು ತೂಗಲು ಆಪಾದಿತನು ಹಗುರಾಗಿ ಮೇಲಕ್ಕೆ ಹೋದರೆ ನಿರಪರಾಧಿಯೆಂದು ನಿರ್ಣೀತನಾಗಿ ಬಿಡುಗಡೆ ಹೊಂದುವನು. ಅವನು ಕೆಳಗೆ ಬಂದರೆ ಅಪರಾಧಿಯೆಂದು ನ್ಯಾಯಾಧೀಶರು ನಿರ್ಣಯ ಕೊಡುತ್ತಿದ್ದನು. [22]

---

20. An ordeal at which either the plaintiff or the defendant, is obliged to sip two handfulls of water, previously consecrated by the bathing of an idol. K.E.D. Kittel, Vol. II, P. 533,

21. ಬ್ರಹ್ಮಣಸ್ತ್ವಂ ಸುತಾ ದೇವಿ ತುಲಾನಾಮ್ನೇತಿ ಕಥ್ಯಸೇ ।
ತುಕಾರೋ ಗೌರವೇ ನಿತ್ಯಂ ಲಕಾರೋ ಲಘುನಿ ಸ್ಮೃತಃ ॥
ಗುರುಲಾಘವಸಂಯೋಗಾತ್ ತುಲಾ ತೇನ ನಿಗದ್ಯಸೇ ।
ಸಂಶಯಾನ್ಮೋಚಯಸ್ವೈನಮಭಿಶಪ್ತಂ ನರಂ ಶುಭೇ ॥ - ಸ್ಕಾ.ಪು. ೪೪: ೩೯-೪೦.

22. ಯಾ.ಸ್ಮೃ. (ವ್ಯವಹಾರಾಧ್ಯಾಯ, ಶ್ಲೋ. ೧೦೨)

ಪರೀಕ್ಷೆಯ ಕಾಲದಲ್ಲಿ ತ್ರಾಸಿನ ಹಗ್ಗಗಳು ಹರಿದರೆ, ಕೊರಡುಗಳು ಮುರಿದರೆ ಮತ್ತೆ ಪರೀಕ್ಷೆಯನ್ನು ಏರ್ಪಡಿಸಬೇಕಾಗುತ್ತಿತ್ತು.

೪. ವಿಷದಿವ್ಯ

ಇದು ಕಾಳಸರ್ಪದ ವಿಷ ಮತ್ತು ಗಿಡಮೂಲಿಕೆಯ ವಿಷವೆಂದು ಎರಡು ವಿಧ. ಹಿಮಾಲಯದಲ್ಲಿ ದೊರೆಯುವ ಶೃಂಗಿ ಇಲ್ಲವೆ ವತ್ಸನಾಭಿ ಎಂಬ ಬೇರಿನ ವಿಷವನ್ನು ಈ ಪರೀಕ್ಷೆಯಲ್ಲಿ ಉಪಯೋಗಿಸಲಾಗುತ್ತಿತ್ತು. ಘಟಸರ್ಪದ ವಿಷದಿಂದ ಪರೀಕ್ಷೆ ಮಾಡುವಾಗ ''ಬ್ರಹ್ಮಪುತ್ರನಾದ ವಿಷವೆ, ಸತ್ಯಧರ್ಮಗಳ ಪರೀಕ್ಷೆಯಲ್ಲಿ ನೀನೇ ಸಮರ್ಥನು. ಆಪಾದಿತನು ನಿರಪರಾಧಿಯಾಗಿದ್ದರೆ ಅವನಿಗೆ ನೀನು ಅಮೃತಪ್ರಾಯನಾಗು'' ಎಂದು ಏಳು ಸಲ ಹೇಳಿ ಆಪಾದಿತನಿಗೆ ಸರ್ಪವನ್ನು ಮುಟ್ಟಿಸಬೇಕು. ಘಟಸರ್ಪವು ಆಪಾದಿತನನ್ನು ಕಚ್ಚದಿದ್ದರೆ ಅವನು ನಿರ್ದೋಷಿಯೆಂದು ತಿಳಿಯಲಾಗುತ್ತಿತ್ತು.

ಆರು ಇಲ್ಲವೆ ಏಳು ಯವಗಳಷ್ಟು [23] ತೂಕದ ಗಿಡಮೂಲಿಕೆಯ ವಿಷವನ್ನು ತುಪ್ಪದಲ್ಲಿ ಬೆರೆಸಿ ಆಪಾದಿತನಿಗೆ ಮೇಲಿನಂತೆ ಮಂತ್ರವನ್ನು ಹೇಳುತ್ತಾ ಕುಡಿಯಲು ಕೊಡಬೇಕು. ಆಮೇಲೆ ವಿಷವೇಗವಾಗಲಿ, ವಾಂತಿ - ಮೂರ್ಛೆಗಳಾಗಲಿ ಕಾಣದಿದ್ದರೆ ವಿಷವು ಜೀರ್ಣವಾಗಿದೆಯೆಂದು ತಿಳಿದು ಆಪಾದಿತನು ಪರಿಶುದ್ಧನೆಂದು ಧರ್ಮಾಧಿಕಾರಿಯು ಸಾರುತ್ತಿದ್ದನು.

೫. ಅಗ್ನಿದಿವ್ಯ

ಈ ಪರೀಕ್ಷೆ ಸೂರ್ಯದೇವನ ಸಾಕ್ಷಿಯಾಗಿ ನಡೆಯುತ್ತಿತ್ತು. ಸೂರ್ಯದೇವತೆಯ ಸುತ್ತಲೂ ಏಳು ಸುತ್ತುಗಳ ಮಂಡಲವನ್ನು ಬರೆಯಬೇಕು. ಒಂದೊಂದು ಸುತ್ತಿಗೆ ಹದಿನಾರು ಅಂಗುಲ ಅಗಲವಿರಬೇಕು. ರಾತ್ರಿ ಉಪವಾಸವಿದ್ದು ಸ್ನಾನ ಮಾಡಿ ಒದ್ದೆ ಬಟ್ಟೆಯನ್ನುಟ್ಟ ಆಪಾದಿತನನ್ನು ಕರೆಯಿಸಿ ಚೌಕು ಮಂಡಲದಲ್ಲಿ ನಿಲ್ಲಿಸಬೇಕು. ಅವನ ಎರಡೂ ಅಂಗೈಗಳಲ್ಲಿ ಏಳು ಅರಳೆಲೆಗಳನ್ನು ಹೊಸ ದಾರದಿಂದ ಕಟ್ಟಬೇಕು. ಎಂಟು ಅಂಗುಲ ವ್ಯಾಸದ ಮತ್ತು ಐವತ್ತು ಪಲ [24] ತೂಕದ ಕಬ್ಬಿಣದ ಕಾದ ಗುಂಡನ್ನು ಅವನ ಅಂಗೈಯಲ್ಲಿಟ್ಟು ಮಂಡಲದಲ್ಲಿ ಅವನನ್ನು ಏಳು ಸಲ ಸುತ್ತುವರಿಸಬೇಕು. ಆ ಮೇಲೆ ಅವನ ಅಂಗೈಗಳ ಎಲೆಗಳನ್ನು ಬಿಚ್ಚಿ ಆ ಕೂಡಲೇ ಅವನಿಂದ ಭತ್ತವನ್ನು ಕುಟ್ಟಿಸಬೇಕು [25]. ಇಷ್ಟಾದರೂ ಅವನ ಕೈಗಳಲ್ಲಿ ಬೊಬ್ಬೆಗಳು ಏಳದಿದ್ದರೆ ಅವನು ನಿರ್ದೋಷಿಯೆಂದು ಸಾರಲ್ಪಡುತ್ತಿದ್ದನು.

೬. ತಪ್ತಮಾಷ

ಕಬ್ಬಿಣ, ತಾಮ್ರ ಇಲ್ಲವೆ ಮಣ್ಣಿನಿಂದ ಮಾಡಿದ ಹದಿನಾರು ಅಂಗುಲ ವ್ಯಾಸ ಮತ್ತು ನಾಲ್ಕು ಅಂಗುಲ ಆಳವಿರುವ ಪಾತ್ರೆಯಲ್ಲಿ ಇಪ್ಪತ್ತು ಪಲ ತೂಕದ ತುಪ್ಪ ಅಥವಾ ಎಣ್ಣೆಯನ್ನು ಹಾಕಿ ತಳಮಳ ಕಾಯಿಸಬೇಕು. ಆಮೇಲೆ ಅದರಲ್ಲಿ ಬಂಗಾರದ ಮಾಷದ (ಉದ್ದಿನ) ಕಾಳುಗಳನ್ನು ಹಾಕಬೇಕು. ಆಪಾದಿತನು ತನ್ನ ಹೆಬ್ಬಟ್ಟು ಮತ್ತು ಮೊದಲನೆಯ ಬೆರಳುಗಳಿಂದ

---

23. ಆರು ಬಿಳಿಯ ಸಾಸಿವೆಗಳ ತೂಕ ಒಂದು ಯವವೆನಿಸುತ್ತದೆ.
ಗೌರಸರ್ಷಪಾಃ ಷಟ್ ಮಧ್ಯೋ ನ ಸ್ಥೂಲೋ ನಾಪಿ ಸೂಕ್ಷ್ಮೋ ಯವೋ ಭವತಿ । -ಮ.ಸ್ಮೃ. (ಅ.೮ :೧೩೪, ಟೀಕೆ).

24. ೩ ಯವ = ೧ ಕೃಷ್ಣಲ
೫ ಕೃಷ್ಣಲ = ೧ ಮಾಷ
೧೬ ಮಾಷ = ೧ ಸುವರ್ಣ
೪ ಸುವರ್ಣ = ೧ ಪಲ
- ಮ. ಸ್ಮೃ. (ಅ-೮:೧೩೪-೧೩೫)

25. ಯಾಜ್ಞವಲ್ಕ್ಯ ಕೈಗಳಿಂದ ಭತ್ತವನ್ನು ತಿಕ್ಕಿಸಬೇಕೆಂದು ಹೇಳುತ್ತಾನೆ.
ಮುಕ್ತಾಗ್ನಿಂ ಮೃದಿತವ್ರೀಹಿರ ದಗ್ಧಃ ಶುದ್ಧಿ ಮಾಪ್ನುಯಾತ್ । - ಯಾ.ಸ್ಮೃ. (ವ್ಯವಹಾರಾಧ್ಯಾಯ, ಶ್ಲೋ.೧೦೩)

ಆ ಕಾಳುಗಳನ್ನು ಸುಡುವ ಎಣ್ಣೆಯಿಂದ ಹೊರಗೆ ತೆಗೆಯುವಂತೆ ಮಾಡಬೇಕು. ಆಗ ಕೈಯಲ್ಲಿ ಬೊಬ್ಬೆಗಳೇಳದಿದ್ದರೆ ಆಪಾದಿತನು ದೋಷರಹಿತನೆಂದು ನಿರ್ಣಯವಾಗುತ್ತಿತ್ತು.

೭. ಫಾಲದಿವ್ಯ

ಎಂಟು ಅಂಗುಲ ಉದ್ದ ಮತ್ತು ನಾಲ್ಕು ಅಂಗುಲ ಅಗಲವಿರುವ ಹನ್ನೆರಡು ಪಲ ಭಾರದ ಕಬ್ಬಿಣದ ತಗಡನ್ನು ಬೆಂಕಿಯಲ್ಲಿ ಕೆಂಪಗೆ ಕಾಯಿಸಬೇಕು. ಅಪಾದಿತನು ಆರು ಅಂಗುಲದಷ್ಟು ಪಾಳಾವನ್ನು ನಾಲಗೆಯಿಂದ ಮೂರು ಸಲ ನೆಕ್ಕಬೇಕು. ಹಾಗೆ ಮಾಡಿದ ಮೇಲೆ ಆಪಾದಿತನ ನಾಲಗೆಯು ಸುಡದಿದ್ದರೆ ಅವನು ನಿರ್ದೋಷಿಯೆಂದು ನ್ಯಾಯ ನಿರ್ಣಾಯಕರು ಘೋಷಣೆ ಮಾಡಬೇಕಾಗುತ್ತಿತ್ತು.

೮. ತಂಡುಲದಿವ್ಯ

ಅಕ್ಕಿಯ ಕಾಳುಗಳನ್ನು ಒಂದು ರಾತ್ರಿ ನೀರಿನಲ್ಲಿ ನೆನೆಯಿಸಿ ಮರುದಿನ ಆಪಾದಿತನಿಗೆ ಅವನ್ನು ತಿನ್ನಲು ಕೊಡಬೇಕು. ಅವನು ತಾನು ಅಗೆದ ಅಕ್ಕಿಯನ್ನು ಮೂರು ಸಲ ಎಲೆಗಳ ದೊನ್ನೆಯಲ್ಲಿ ಉಗುಳಬೇಕು. ಅವನ ಉಗುಳಿನಲ್ಲಿ ರಕ್ತವು ಕಂಡುಬಂದರೆ ಅವನು ಅಪರಾಧಿಯೆಂದು ತಿಳಿಯಲ್ಪಡುತ್ತಿದ್ದನು.

ಧರ್ಮಶಾಸ್ತ್ರ ಮತ್ತು ಪುರಾಣಗಳಲ್ಲಿ ಇನ್ನೂ ಕೆಲವು ದಿವ್ಯಗಳ[26] ಉಲ್ಲೇಖವಿದೆ. ಅವುಗಳಲ್ಲಿ 'ಸಶಿರಸ್ಕ'ವೇ ಮಹಾದಿವ್ಯವೆಂದು ಹೇಳಿದೆ. ಈ ದಿವ್ಯವನ್ನು ಅಬ್ಬಲೂರ ಏಕಾಂತರಾಮಯ್ಯಗಳು ಮಾಡಿ ಮೆರೆದ ಪವಾಡದ ಕಥೆ ಶಾಸನೋಕ್ತವಾಗಿದೆ[27].

ಈ ಎಲ್ಲ ದಿವ್ಯಗಳನ್ನು ದೇಶ - ಕಾಲ - ಪರಿಸ್ಥಿತಿಗನುಗುಣವಾಗಿ ಪ್ರಯೋಗಿಸಬೇಕಾಗುತ್ತಿತ್ತು. ವ್ಯಾಧಿಯಿಂದ ನಾಶಹೊಂದಿದ ದೇಶದಲ್ಲಿ ಶಪಥ ಮತ್ತು ಕೋಶ ದಿವ್ಯಗಳ ಪ್ರಯೋಗಕ್ಕೆ ನಿಷೇಧವಿದೆ. ಬಿರುಗಾಳಿಯ ಪ್ರದೇಶದಲ್ಲಿ ಘಟದಿವ್ಯ ಮತ್ತು ಬೇಸಗೆಯ ಕಾಲದಲ್ಲಿ ಅಗ್ನಿ ದಿವ್ಯವನ್ನು ಪ್ರಯೋಗಿಸಬಾರದೆಂದು ಹೇಳಿದೆ. ಬ್ರಾಹ್ಮಣ ಮತ್ತು ಕ್ಷತ್ರಿಯರಿಗೆ ಫಾಲದ ಪ್ರಯೋಗವನ್ನು ನಿಷೇಧಿಸಿದೆ. ಬ್ರಾಹ್ಮಣರಿಗೆ ವಿಷದಿವ್ಯದ ಪರೀಕ್ಷೆ ವರ್ಜ್ಯವಂತೆ. ಕುಷ್ಠ ಮತ್ತು ಪಿತ್ತರೋಗವುಳ್ಳವರಿಗೆ

---

26. ಯಾಜ್ಞವಲ್ಕ್ಯನು ಉದಕವಿಧಿಯ ವಿಶಿಷ್ಟ ಪ್ರಯೋಗವನ್ನು ಹೇಳಿರುವನು :

''ವರುಣನೆ, ನನ್ನನ್ನು ಸತ್ಯಧರ್ಮ ಮೂಲಕ ರಕ್ಷಿಸು'' ಎಂದು ಪ್ರಾರ್ಥಿಸಿ ಆಪಾದಿತ ಹೊಕ್ಕಳಮಟ್ಟ ನೀರಿನಲ್ಲಿ ನಿಂತ ಪುರುಷನ ಎರಡೂ ತೊಡೆಗಳನ್ನು ಹಿಡಿದುಕೊಂಡು ಮುಳುಗಿರಬೇಕು. ಆಗ ಬಿಟ್ಟ ಬಾಣವನ್ನು ತರಲು ಇನ್ನೊಬ್ಬ ವೇಗವಾಗಿ ಓಡಿ ಮರಳುವ ತನಕವೂ ಆಪಾದಿತ ಮುಳುಗಿದ್ದರೆ ಅವನು ನಿರಪರಾಧಿ ಎಂದು ತಿಳಿಯಲಾಗುತ್ತಿತ್ತು.

- ಯಾ.ಸ್ಮೃ. (ವ್ಯವಹಾರಾಧ್ಯಾಯ, ಶ್ಲೋ. ೧೦೮-೧೦೯)

27. ಶಿವಸನ್ನಿಧಿಯಲ್ಲಿ ಅನ್ಯದೇವತಾಸ್ತುತಿಯನ್ನು ಕೇಳಬಾರದೆಂಬ ವೀರವ್ರತಪಾಲನೆಗಾಗಿ ಏಕಾಂತ ರಾಮಯ್ಯಗಳು ಈ ದಿವ್ಯವನ್ನು ಮಾಡಬೇಕಾಯಿತು. ''ಮುನ್ನಿನ ಹಿತರರ ಹೇಳಲೇಕೆ ನಿನ್ನಯ ಸಿರಮಂ ಜನಮರಿಯಲರಿದು ಕೊಟ್ಟಾತನೊಳಿಂ ಪಡೆ ನೀನೆ ಭಕ್ತನಾತನೆ ದೇವಂ'' ಎಂದು ಪರವಾದಿಗಳು ವಾದಿಸಲು ವೀರಕಲಿ ಬಲ್ಲಾಳು ಏಕಾಂತ ರಾಮಯ್ಯನು ''ಸ್ವಕಂಧರಮಂ ಚಕ್ಕನೆ ಹುಲ್ಲಕಟ್ಟನರಿವಂತೆ ಅಕ್ಲೇಶದಿಂದಾಗಳಂ ತರಿದೀಶಾಂಘ್ರಿಯೊಳಿಕ್ಕಿ ಶಂಕರಗಣಕಾನಂದವಂ ಮಾಡಿದಂ''. ಮೇಲಿನಂತೆ ಓಲೆ ಬರೆದುಕೊಟ್ಟು ಸೋತ ಮೇಲೆ ಮಾತಿಗೆ ತಪ್ಪಿದ ಪರವಾದಿಗಳು ಬಿಜ್ಜಳರಾಜನಲ್ಲಿ ದೂರು ಒಯ್ಯುವರು. ಆಗ ಓಲೆಯಂತೆ ರಾಜನು ಏಕಾಂತ ರಾಮಯ್ಯಗಳಿಗೆ ಜಯಪತ್ರವನ್ನು ಕೊಟ್ಟುದಲ್ಲದೆ ಗೊಗಾವೆಯೆಂಬ ಗ್ರಾಮವನ್ನು ದತ್ತಿಯಾಗಿ ಕೊಟ್ಟು ಸನ್ಮಾನಿಸಿದನು. - Epi. Ind. V, P. 245.

ವಿಷಪ್ರಯೋಗ ಮಾಡಲಾಗದಂತೆ. ಮುಖರೋಗವುಳ್ಳವರಿಗೆ ತಂಡುಲದಿವ್ಯದ ವಿನಾಯಿತಿಯಿದೆ. ಆದರೆ ತಪ್ತಮಾಷಕವು ಎಲ್ಲರಿಗೂ ವಿಹಿತವೆಂದು ಹೇಳಲಾಗಿದೆ [28].

ಅಗ್ನಿ, ಜಲ, ಮಣ್ಣು ಇವೆಲ್ಲ ದಿವ್ಯವಾದ ವಸ್ತುಗಳು, ಈಶ್ವರನ ಅಷ್ಟತನುಗಳು. ಶಪಥದಲ್ಲಿ ಶುಚಿಯಾದವನನ್ನು ಉರಿಯುವ ಬೆಂಕಿಯು ಸುಡದು. ನೀರು ಅವನನ್ನು ಮುಳುಗಿಸದು, ಸತ್ಯವಂತರು ಎಂದೂ ದುಃಖಕ್ಕೆ ಗುರಿಯಾಗರು [29]. ಆದುದರಿಂದ ನ್ಯಾಯನಿರ್ಣಯದಲ್ಲಿ ರಾಜನು ಬಹು ದಕ್ಷತೆ ವಹಿಸಬೇಕಾಗುವದು. ನಿರಪರಾಧಿಗಳನ್ನು ದಂಡಿಸುವ ಮತ್ತು ಅಪರಾಧಿಗಳನ್ನು ದಂಡನೆಗೆ ಗುರಿಮಾಡದಿರುವ ಅರಸನು ಕರ್ತವ್ಯಚ್ಯುತನಾಗುವುದಿಷ್ಟೇ ಅಲ್ಲ, ಅವನು ಬಹು ಅಪಕೀರ್ತಿ ಪಡೆಯುತ್ತಾನೆ, ನರಕಕ್ಕೂ ಹೋಗುತ್ತಾನೆ [30].

ಕೆಲವರು ಆಸುರೀ ಮಾರ್ಗದಿಂದ ದಿವ್ಯ ಪರೀಕ್ಷೆಗಳನ್ನು ಸ್ತಂಭಿಸುತ್ತಿದ್ದರು. ಆದುದರಿಂದ ಸ್ತಂಭನ ಪ್ರತೀಕಾರ ಮಾಡುವಂತಹ ಸಮರ್ಥರನ್ನೇ ದಿವ್ಯ ಪರೀಕ್ಷೆಗಳಲ್ಲಿ ನಿರ್ಣಾಯಕರೆಂದು ನೇಮಿಸಲಾಗುತ್ತಿತ್ತು. ಸ್ತಂಭಕರು ಕಳ್ಳರಿಗಿಂತಲೂ ಕಳ್ಳರು, ಮಹಾಪರಾಧಿಗಳು, ಅಂತಹ ಲೋಕಕಂಟಕರನ್ನು ರಾಜನು ತನ್ನ ರಾಜ್ಯದಿಂದ ಹೊರಗೆ ಹಾಕಬೇಕಾಗುತ್ತಿತ್ತು [31].

ನಮ್ಮ ನಾಡಿನ ಅನೇಕ ಶಿಲಾಶಾಸನಗಳಲ್ಲಿ ದಿವ್ಯ ಸಾಕ್ಷ್ಯದ ಉಲ್ಲೇಖಗಳಿವೆ. ಬೆಳಗಾಂವ ಜಿಲ್ಲೆಯ ಕಿತ್ತೂರು ಗ್ರಾಮದಲ್ಲಿಯ ಬಸವಣ್ಣನ ಗುಡಿಯೊಂದರಲ್ಲಿ ಗೋವೆಯ ಕದಂಬರಾಜರ ಕಾಲದ (ಕ್ರಿ.ಶ. ೧೧೮೮) ಶಾಸನವಿದೆ. ಅದರಲ್ಲಿ ಒಂದು ಭೂಮಿಯ ಸಲುವಾಗಿ ಶಿವಶಕ್ತಿ ಮತ್ತು ಕಲ್ಯಾಣಶಕ್ತಿ ಎಂಬ ಇಬ್ಬರು ಬ್ರಾಹ್ಮಣರಿಗೆ ವಿವಾದ ಬಂದುದರಿಂದ ಶಿವಶಕ್ತಿಯು ದೇಗಾವಿಯ ಮಹಾಜನ ಸಭೆಯ ಸಮಕ್ಷಮ ಕಾದ ರಂಟೆಯ ಕುಳವನ್ನು ಕೈಯಲ್ಲಿ ಹಿಡಿದು ದಿವ್ಯ ಮಾಡಿದ ಉಲ್ಲೇಖವಿದೆ. ಶಿವಶಕ್ತಿಯ ಕೈಯು ಸುಡದಿದ್ದುದರಿಂದ ಅವನನ್ನು ನಿರಪರಾಧಿಯೆಂದು ಬಗೆದು ಅವನಿಗೇ ಭೂಮಿಯನ್ನು ಕೊಟ್ಟ ಪ್ರಸಂಗ ಶಾಸನೋಕ್ತವಾಗಿದೆ [32].

ಹನ್ನೆರಡನೆಯ ಶತಮಾನದಲ್ಲಿ ಯುರೋಪದ ಕೆಲವು ರಾಷ್ಟ್ರಗಳಲ್ಲಿ ಇಂತಹ ದಿವ್ಯಗಳು ನ್ಯಾಯ ನಿರ್ಣಯದಲ್ಲಿ ಪ್ರಮಾಣವೆನಿಸಿದ್ದು ಆಶ್ಚರ್ಯಕರ. ಇಂಗ್ಲಂಡದ ರಾಜ ಹೆನ್ರಿ ದ್ವಿತೀಯನು ತನ್ನ ಶಾಸನ ಕಾಲದಲ್ಲಿ (ಕ್ರಿ.ಶ.೧೧೫೪-೮೯) ಇಂತಹ ಕಠಿಣ ದಿವ್ಯಗಳನ್ನು ಕೌಂಟಿ ಅಥವಾ ಷೈರ್ ಎಂಬ ಜಿಲ್ಲಾ ಭಾಗಗಳಲ್ಲಿಯ ನ್ಯಾಯ ಸ್ಥಾನಗಳಲ್ಲಿ ಲಾರ್ಡ್ ಎಂಬ ಶಾಸಕ, ಷೆರಿಫ್ ಎಂಬ ನ್ಯಾಯಾಧೀಶ, ಕ್ಲರ್ಜಿ ಎಂಬ ಧರ್ಮಗುರು ಮತ್ತು ನಗರದ ಮುಖ್ಯಸ್ಥರ ಸಮಕ್ಷಮ ನ್ಯಾಯ ನೀಡುವುದಕ್ಕಾಗಿ ಅನುಸರಿಸುತ್ತಿದ್ದುದು ಕುತೂಹಲಕಾರಿಯಾಗಿದೆ. ಭಾರತೀಯ ನ್ಯಾಯನಿರ್ಣಯ ವಿಧಾನಗಳ ಅನುಕರಣೆ ಇದಾಗಿರಬಹುದೆ?

---

28. ತಪ್ತಮಾಷಕಮರ್ಹಂತಿ ಸರ್ವೇ ಧರ್ಮಂ ನಿರತ್ಯಯಂ । — ಸ್ಕಾ.ಪು.

29. ಯಮಿದ್ಧೋ ನ ದಹತ್ಯಗ್ನಿ ರಾಪೋ ನೋನ್ಮಜ್ಜಯಂತಿ ಚ ।
ನ ಚಾರ್ತಿಮೃಚ್ಛತಿ ಕ್ಷಿಪ್ರಂ ಸ ಜ್ಞೇಯಃ ಶಪಥೇ ಶುಚಿಃ ॥ — ಮ.ಸ್ಮೃ. (ಅ. ೮ : ೧೧೫)

30. ಅದಂಡ್ಯಾನ್ ದಂಡಯನ್ ರಾಜಾ ದಂಡ್ಯಾಂಶ್ಚೈವಾಪ್ಯದಂಡಯನ್ ।
ಅಯಶೋ ಮಹದಾಪ್ನೋತಿ ನರಕಂ ಚೈವ ಗಚ್ಛತಿ ॥ — ಮ.ಸ್ಮೃ. (ಅ-೮ :೧೨೮)

31. ದಿವ್ಯಾನಾಂ ಸ್ತಂಭಕಾನ್ ಜ್ಞಾತ್ವಾ ಪಾಪಾನ್ನಿತ್ಯಂ ಮಹೀಪತಿಃ ।
ವಿವಾಸಯೇತ್ ಸ್ವಕಾದ್ರಾಷ್ಟ್ರಾತ್ತೇ ಹಿ ಲೋಕಸ್ಯ ಕಂಟಕಾಃ ॥ — ಸ್ಕಾ.ಪು. ೪೪ : ೨೨.

32. ಬೊ.ಕ.ಗೆ. (ಪು. ೫೦೨) ಮತ್ತು ಕ.ಸಂ. (ಪು. ೧೧೬)

ತಪ್ಪಿತಸ್ಥನೆಂಬ ಸಂಶಯಕ್ಕೆ ಗುರಿಯಾದವನು ನಿಜವಾಗಿ ಅಪರಾಧಿಯೆ ಇಲ್ಲವೆ ನಿರಪರಾಧಿಯೆ ಎಂಬುದನ್ನು ತೀರ್ಮಾನಿಸಲು ಪ್ರಯೋಗಿಸುತ್ತಿದ್ದ ಅಗ್ನಿ ದಿವ್ಯ 'ಆರ್ಡಿಯಲ್' ಎನಿಸಿತ್ತು :

Henry's great work was the drawing up of a new plan of carrying out law, which did much for the welfare and freedom of Englishmen. Up to his reign, most of the law business of the country had been done at the shire courts.

These were meetings held at certain times, in each county and attended by the lords of the county, the sheriff, the clergy and the people from the towns.

Here, if a man brought a charge against another man, he had to bring witnesses to support it. The accused man had to bring persons who could speak well of him, and very often the question whether he was guilty or not was settled by the votes of the whole meeting.

Sometimes he was tried by the method called ordeal. He had to plunge his hand into boiling water or to walk a certain number of paces holding a red-hot iron. If he received no hurt, he was believed to be innocent.

This way of settling disputes was very rough and ready, and often led to further quarrels [33].

ಪ್ರಾಚೀನ ಕಾಲದ ಈ ಪರೀಕ್ಷಾ ಪದ್ಧತಿಗಳು ಬಹು ಕಠಿಣವಾದವು ಸುಳ್ಳು ಹೇಳುವ ಸಾಕ್ಷಿಯ ತಲೆ ಬೋಳಿಸಿ. ಬತ್ತಲೆ ಮಾಡಿ, ಮನೆಮನೆಗೆ ಭಿಕ್ಷೆ ಬೇಡುವಂತೆ ಮಾಡುವುದಲ್ಲದೆ ಅವನನ್ನು ಕುರುಡನನ್ನಾಗಿ ಮಾಡಿ ವೈರಿಗಳಿಗೆ ಒಪ್ಪಿಸಲಾಗುತ್ತಿತ್ತು [34]. ಈ ಪರೀಕ್ಷಾ ರೂಢಿಗಳು ಸಾವಿರಾರು ವರ್ಷಗಳಿಂದ ನಡೆದು ಬಂದಿದ್ದವು.

ಬಸವಣ್ಣನವರು ವೈದಿಕ ಮೊದಲಾದ ನಿರರ್ಥಕವಾದ ಮತ್ತು ಹಿಂಸಾಮಯವಾದ ಆಚರಣೆಗಳನ್ನು ಪ್ರತಿಭಟಿಸಿದಂತೆ ಪ್ರಜೆಗಳಲ್ಲಿ ಸಮತ್ವ ದೃಷ್ಟಿಯಿಲ್ಲದ ನ್ಯಾಯಾಂಗದ ಈ ಕುರುಡು ಮತ್ತು ಕಠೋರ ರೂಢಿಗಳನ್ನು ವಿರೋಧಿಸಿದರು. ಅಪರಾಧಿಗಳಿಗೆ ಅವರು ಕಠಿನ ಶಿಕ್ಷೆಯನ್ನಲ್ಲ, ಕರುಣೆಯನ್ನು ತೋರಿ, ಕೃಪಾಕಟಾಕ್ಷ ಬೀರಿ ಅವರ ಮನವನ್ನೇ ಪರಿವರ್ತಿಸುವ ಹೊಸದೊಂದು ವಿಧಾನವನ್ನು ಕಂಡುಕೊಂಡಿದ್ದರು. ಅವರ ದೃಷ್ಟಿ, ಹಸ್ತ, ವಚನ ಎಲ್ಲವೂ ಪರುಷಶಕ್ತಿಯಾಗಿ ಪರಿಣಮಿಸಿದ್ದವು. ಪತಿತಪಾವನ ಬಸವನ ಈ ದಿವ್ಯ ಚರಿತೆಯನ್ನು ಹರಿಹರನ ಮಾತಿನಲ್ಲಿಯೇ ಕೇಳಬೇಕು. ಕಳ್ಳರು ಕೊರಳಲ್ಲಿ ಕಟ್ಟಿಕೊಂಡ

---

33. Britain and Her Neighbours, Book IV. Chapter III, PP 41-42 : by Duncan Mac Gillivray, M.A., LL.D.: Blackie & Son Limited, London.

34. ನಗ್ನೋ ಮುಂಡಃ ಕಪಾಲೇನ ಭಿಕ್ಷಾರ್ಥೀ ಕ್ಷುತ್ಪಿಪಾಸಿತಃ ।
ಅಂಧಃ ಶತ್ರುಕುಲಂ ಗಚ್ಛೇದ್ಯಃ ಸಾಕ್ಷ್ಯ ಮನೃತಂ ವದೇತ್ ॥ - ಮ.ಸ್ಮೃ. (ಅ.೮ : ೯೩).

ಬದನೆಕಾಯಿಗಳನ್ನು ಲಿಂಗಗಳನ್ನಾಗಿ ಮಾಡುವುದಲ್ಲದೆ ಅವರ ಭವಿತನವನ್ನು ತೊಲಗಿಸಿ ಸದ್ಭಕ್ತರನ್ನಾಗಿ ಮಾಡಿದ ಪವಾಡ ಪರಮಾದ್ಭುತವಾದುದು :

ನೋಡೆ ವೇಧಾದೀಕ್ಷೆಯಾದುದಾ ಡಂಬರಿಗೆ
ನೋಡೆ ಬಸವನ ಕರುಣೆವೊದಗಿತ್ತು ಮೂರ್ಖರಿಗೆ
ಮುನಿಪುಂಗವರ್ ಬಸವಕರುಣಮಂ ಪಡೆವರೇ
ಮನುಕುಲಂಗಳ್ ಬಸವದೀಕ್ಷೆಯಂ ಪಡೆವರೇ [35]

ಬಸವಣ್ಣನವರ ಈ ಕಾರುಣ್ಯದಿವ್ಯದ ಪರಿಣಾಮವಾಗಿ ಬಿಜ್ಜಳರಾಯನ ರಾಜ್ಯದಲ್ಲಿ ಹೊಸದೊಂದು ಕ್ರಾಂತಿಯಾಯಿತು. ಅಪರಾಧಿಗಳೇ ಇಲ್ಲವಾದರು. ನ್ಯಾಯಾಸ್ಥಾನದ ಧರ್ಮಾಧಿಕಾರದಲ್ಲಿದ್ದ ಪ್ರಾಡ್ವಿವಾಕ [36] ಮೊದಲಾದ ಅಧಿಕಾರಿಗಳಿಗೆ ಕೆಲಸವೇ ಇಲ್ಲವಾಗಿರಬೇಕು. ಅವರೆಲ್ಲ ಬಸವಣ್ಣನವರ ಸತ್ಯ ಮತ್ತು ಅಹಿಂಸೆಯ ನೀತಿಯನ್ನು ಕಂಡು ಅಸೂಯೆಪಟ್ಟು ಬಿಜ್ಜಳನಲ್ಲಿ ದೂರಿಕೊಂಡಾಗ ಒಂದು ವಿಪ್ಲವವೇ ನಡೆದು ಅದಕ್ಕೆ ಬಸವಮಹಾತ್ಮನು ಬಲಿಯಾಗಿರಬಹುದೆಂದು ಊಹಿಸಲು ಸಾಧ್ಯವಿದೆ.

ಸಹಾಯಕ ಗ್ರಂಥಸೂಚಿ

೧ ಬ.ಷ.ವ. ಬಸವಣ್ಣನವರ ಷಟ್‌ಸ್ಥಳ ವಚನಗಳು,
ಸಂಪಾದಕರು : ಶ್ರೀ ಬಸವನಾಳ ಶಿವಲಿಂಗಪ್ಪನವರು, ಎಂ.ಎ.
ಧಾರವಾಡ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ಸಾಹಿತ್ಯ ಸಮಿತಿಯ ಪ್ರಕಟನೆ-೮.
ದ್ವಿತೀಯ ಮುದ್ರಣ, ೧೯೪೫.

೨ ಸ್ಕಾ.ಪು. ಶ್ರೀ ಸ್ಕಾಂದ ಮಹಾಪುರಾಣಂ, ಶ್ರೀ ಜಯಚಾಮರಾಜೇಂದ್ರ ಗ್ರಂಥ ರತ್ನಮಾಲಾ,
ಸಂಖ್ಯಾ - ೧೪; ೧೯೪೫.

೩. ಮ.ಸ್ಮೃ. ಮನುಸ್ಮೃತಿಃ (ಕುಲ್ಲೂಕಭಟ್ಟೀಯ ಅನ್ವರ್ಥಮುಕ್ತಾವಲೀ ವ್ಯಾಖ್ಯಾ), ನಿರ್ಣಯಸಾಗರ ಮುದ್ರಣ, ೧೯೩೩.

೪. ಗೌ.ಧ.ಸೂ. ಗೌತಮಧರ್ಮಸೂತ್ರಂ (ಮಸ್ಕರಿ ಭಾಷ್ಯೋಪೇತಂ)
ಸಂಪಾದಕ : ಎಲ್. ನರಸಿಂಹಾಚಾರ್ಯ, Mysore Government Oriental Library Series; Bibliotheca Sanskritica, No. 50; 1917.

35. ಬ.ದೇ.ರ., ಸ್ಥಲ -೯, ಪಂಕ್ತಿ : ೫೯-೬೨.

36. ನ್ಯಾಯಸಭೆಯ ಮಧ್ಯೆ ವಾದಿ - ಪ್ರತಿವಾದಿಗಳ ಸಮಕ್ಷಮದಲ್ಲಿ ಸಾಕ್ಷಿಗಳ ವಿಚಾರಣೆ ಮಾಡಲು ರಾಜನಿಂದ ನೇಮಿಸಲ್ಪಟ್ಟ ಬ್ರಾಹ್ಮಣ ನ್ಯಾಯಾಧಿಕಾರಿ ; ಹಿಂದುಸ್ತಾನದ ಪ್ರಾಚೀನ ರಾಜ್ಯ ಪದ್ಧತಿಗಳು : ವಿಷ್ಣು ಹರಿ ಒಡೆಯರ. ಎಂ.ಎ., ಎಲ್‌ಎಲ್.ಬಿ., ಚಿಕ್ಕೋಡಿ ; ನವಜೀವನ ಗ್ರಂಥ ಭಂಡಾರ, ಸಂಪಾದಕರು : ಆಲೂರ ವೆಂಕಟರಾಯರು, ಧಾರವಾಡ, ೧೯೩೧; (೧೪ನೆಯ ಪ್ರಕರಣ, ಪು. ೮೦).

೫. ಯಾ.ಸ್ಮೃ. ಯಾಜ್ಞವಲ್ಕ್ಯಸ್ಮೃತಿ (ವಿಜ್ಞಾನೇಶ್ವರ ಕೃತ ಮಿತಾಕ್ಷರಾಟೀಕಾ ಸಹಿತ)
ಸಂಪಾದಕ : ಉರ್ಮೇಶಚಂದ್ರ ಪಾಂಡೆ, ಚೌಖಂಬಾ ಪ್ರಕಾಶನ,
ವಾರಾಣಸೀ, ಪ್ರಥಮ ಸಂಸ್ಕರಣ ೧೯೬೭.

೬. ಬ.ದೇ.ರ. ಹರಿಹರ ಕವಿಯ ಬಸವರಾಜದೇವರ ರಗಳೆ
ಸಂಪಾದಕರು : ಟಿ.ಎಸ್. ವೆಂಕಣ್ಣಯ್ಯ, ಎಂ.ಎ. ೧೯೩೮.

೭. ವಿ. ಚಿಂ. ವಿವೇಕ ಚಿಂತಾಮಣಿ (ನಿಜಗುಣ ಶಿವಯೋಗಿ ಕೃತ)
ಸಂಪಾದಕ : ಜಿ.ಎಂ. ಉಮಾಪತಿ ಶಾಸ್ತ್ರಿ ಎಂ.ಎ., ಬಾಗಲಕೋಟೆ,
ಪ್ರಕಾಶಕರು : ಶ್ರೀ ಜ. ಗಂಗಾಧರ ಧರ್ಮಪ್ರಸಾರಕ ಮಂಡಲ, ಮೂರುಸಾವಿರಮಠ, ಹುಬ್ಬಳ್ಳಿ.

೮. ಬೊ.ಕ.ಗೆ. ಬೊಂಬಾಯಿ ಕರ್ನಾಟಕ ಗೆಜೆಟಿಯರ್ - ವೆಂಕಟರಂಗೊ ಕಟ್ಟಿ,

೯. ಕ.ಸಂ. ಕರ್ನಾಟಕ ಸಂಸ್ಕೃತಿ, ದೇವುಡು ನರಸಿಂಹ ಶಾಸ್ತ್ರಿ ಶಾರದಾ ಪ್ರಕಟನಾಲಯ, ಬೆಂಗಳೂರು,
೧೯೬೧ ದ್ವಿ.ಮು.

೧೦. K.E.D. Kannada - English Dictionary by Rev. F. Kittel,
Basel Mission, Mangalore, 1894.

೧೧. Epi.Ind. Epigraphia Indica, Volume - V.

ತೆಲುಗಿನಲ್ಲಿ ಶತಕಸಾಹಿತ್ಯ

ಡಾ॥ ಶ್ರೀಕೃಷ್ಣ ಭಟ್ ಅರ್ತಿಕಜೆ

ಸಾಹಿತ್ಯವನ್ನು ಮುಖ್ಯವಾಗಿ ಎರಡು ವಿಭಾಗ ಮಾಡಬಹುದು. ಒಂದು ಕೇವಲ ಮನರಂಜನೆಗಾಗಿ, ಆನಂದಕ್ಕಾಗಿ, ಹೊತ್ತು ಕಳೆಯುವುದಕ್ಕಾಗಿ ಓದಬಹುದಾದಂಥ ಸಾಹಿತ್ಯ. ಇನ್ನೊಂದು ಅದಕ್ಕಿಂತ ಭಿನ್ನವಾದ ಆದರೆ ಜನ ಜೀವನಕ್ಕೆ ಪ್ರಯೋಜನಕಾರಿಯಾದ ಜನರ ಬಾಳಿಗೊಂದು ಅರ್ಥವನ್ನು ನೀಡಬಲ್ಲ ಬೋಧಪ್ರದ ಸಾಹಿತ್ಯ. ವೈವಿಧ್ಯಮಯವೂ ಆದ, ವಿಪುಲವೂ ವೈಶಿಷ್ಟ್ಯ ಪೂರ್ಣವೂ ಆದ ಭಾರತೀಯ ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ಒಂದಾದ 'ಶತಕ'ವು ಈ ಎರಡನೆಯ ವಿಭಾಗವಾದ ಬೋಧಪ್ರದ ಸಾಹಿತ್ಯದ ಸಾಲಿಗೆ ಸೇರುತ್ತದೆ. ಭಾರತದ ಅನೇಕ ಭಾಷೆಗಳಲ್ಲಿ ಶತಕಗಳು ರಚಿತವಾಗಿವೆ. ಶತಕವು ಸ್ತೋತ್ರ ಸಾಹಿತ್ಯವೆಂದೂ, ನೀತಿಬೋಧಕ ಸಾಹಿತ್ಯವೆಂದೂ ಹೆಸರು ಪಡೆದಿದೆ.

ಶತಕ ಸಾಹಿತ್ಯದಲ್ಲಿ ಸಂಖ್ಯೆಗೆ ಹೆಚ್ಚಿನ ಮಹತ್ವವಿದೆ. 'ಶತಕ'ವೆಂದರೆ ನೂರು ಪದ್ಯಗಳಿಂದ ಕೂಡಿದ ಕಾವ್ಯ. ನೂರು ಇಲ್ಲವೆ ನೂರಕ್ಕಿಂತ ತುಸು ಹೆಚ್ಚು ಅಥವಾ ಕಡಿಮೆ ಇರುವ ಒಂದೇ ರೀತಿಯ ಮಕುಟವನ್ನು ಹೊಂದಿದ, ಮುಕ್ತಕಗಳಂತಹ ಬಿಡಿ ಪದ್ಯಗಳ ಸಮುದಾಯವೇ 'ಶತಕ'. ಶತಕಗಳು ಮುಖ್ಯವಾಗಿ ಭಕ್ತಿ, ನೀತಿ, ವೈರಾಗ್ಯ, ಶೃಂಗಾರ, ಧರ್ಮ, ತತ್ವ ಮುಂತಾದ ವಿಚಾರಗಳನ್ನು ಬೋಧಿಸುತ್ತವೆ. ಶತಕ ಸಾಹಿತ್ಯವು ಪ್ರಾಕೃತ ಭಾಷೆಯಲ್ಲಿ ಆರಂಭವಾಗಿ ಸಂಸ್ಕೃತದಲ್ಲಿ ಸರ್ವತೋಮುಖವಾಗಿ ಬೆಳೆದು ದ್ರಾವಿಡ ಭಾಷೆಗಳಲ್ಲಿ ಪ್ರಸಿದ್ಧಿ ಹಾಗೂ ಜನಪ್ರಿಯತೆ ಗಳಿಸಿದೆ. ಭಾರತೀಯ ಭಾಷೆಗಳಾದ ಪ್ರಾಕೃತ, ಸಂಸ್ಕೃತ, ಹಿಂದಿ, ಕನ್ನಡ, ತೆಲುಗು, ತಮಿಳು ಹಾಗೂ ಮಲಯಾಳಗಳಲ್ಲಿ ಅನೇಕ ಶತಕಗಳು ರಚಿತವಾಗಿವೆ. ಸಂಸ್ಕೃತ ಭಾಷೆಯ ಹೊರತಾಗಿ ಶತಕ ಸಾಹಿತ್ಯವು ವಿಪುಲವಾಗಿ ಹಾಗೂ ವೈವಿಧ್ಯಮಯವಾಗಿ ಬೆಳೆದುದು ತೆಲುಗು

ಹಾಗೂ ಕನ್ನಡ ಭಾಷೆಗಳಲ್ಲಿ. ಕನ್ನಡ ಶತಕಗಳು ಸಂಸ್ಕೃತ ಶತಕಗಳ ಪ್ರಭಾವದಿಂದ ಮತ್ತು ಪರಿಪೋಷಣೆಯಿಂದ ಬೆಳೆದು ಬಂದಿರುವುದು ಕಂಡು ಬರುತ್ತದೆ. ಆದರೂ ಕನ್ನಡ ಶತಕಗಳ ವಸ್ತು, ಛಂದಸ್ಸು ಮತ್ತು ನಿರೂಪಣಾ ಕ್ರಮಗಳನ್ನು ಗಮನಿಸಿದಾಗ ಅವುಗಳಲ್ಲಿ ಕನ್ನಡತನವಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಕನ್ನಡದಲ್ಲಿ ಹನ್ನೊಂದನೆಯ ಶತಮಾನದಲ್ಲಿ ಆರಂಭವಾದ ಶತಕ ಸಾಹಿತ್ಯ ಇಂದಿನವರೆಗೆ ಮುಂದುವರಿದುಕೊಂಡು ಬಂದಿದೆ.

ಸಂಸ್ಕೃತ ಶತಕಗಳ ಪ್ರಭಾವ ಕನ್ನಡ ಶತಕಗಳ ಮೇಲೆ ಸಾಕಷ್ಟು ಆಗಿದೆ. ಸಂಸ್ಕೃತದಲ್ಲಿ ಪ್ರಸಿದ್ಧವಾದ ಭರ್ತೃಹರಿಯ ಶತಕತ್ರಯಗಳ ಅನುಸರಣೆಯಲ್ಲಿ ಶೃಂಗಾರ, ನೀತಿ, ವೈರಾಗ್ಯ ವಿಷಯಕ ಶತಕಗಳು ಕನ್ನಡದಲ್ಲಿ ರಚಿತವಾಗಿವೆ. ಭರ್ತೃ ಹರಿಯ ಹಾಗೂ ಅಮರು ಕವಿಯ ಶತಕಗಳನ್ನು ಕೆಲವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಉಳಿದ ಭಾಷೆಗಳಲ್ಲಿ ರಚಿತವಾದ ಶತಕಗಳ ಪ್ರಭಾವ ಕನ್ನಡ ಶತಕಗಳ ಮೇಲೆ ಆಗಿಲ್ಲ. ತೆಲುಗಿನ ಕೆಲವು ಶತಕಗಳು ಕನ್ನಡಕ್ಕೆ ಅನುವಾದಗೊಂಡಿವೆ. ಕನ್ನಡ ಶತಕಗಳೇ ತೆಲುಗು ಶತಕಗಳ ರಚನೆಗೆ ಮಾರ್ಗದರ್ಶಕವಾಗಿರಬೇಕೆಂಬ ಅಭಿಪ್ರಾಯವೂ ಇದೆ.

''ಆ ಕಾಲ ಮುನ ತೆಲುಗು ಕನ್ನಡ ಮುಲಕುಗಲ ಸನ್ನಿಹಿತ ಸಂಬಂಧ ಮುನು ಬಟ್ಟಿ ಕನ್ನಡ ಶತಕ ರಚನಲೇ ತೆಲುಗು ಶತಕ ರಚನಲುಕು ಮಾರ್ಗದರ್ಶಕಮು ಕಾವಚ್ಚನು''. ಆ ಕಾಲದಲ್ಲಿ ಕನ್ನಡ ತೆಲುಗುಗಳಿಗೆ ಹತ್ತಿರದ ಸಂಬಂಧವಿದ್ದುದರಿಂದ 'ಕನ್ನಡ ಶತಕ ರಚನೆಯೇ ತೆಲುಗು ಶತಕ ರಚನೆಗೆ ಮಾರ್ಗದರ್ಶಕವಾಗಿರಬೇಕು' ಎಂದು ವಿಮರ್ಶಕರು ಹೇಳಿದ್ದಾರೆ. ಕನ್ನಡ ಶತಕಗಳಿಗೂ ತೆಲುಗಿನ ಶತಕಗಳಿಗೂ ಹೆಚ್ಚಿನ ಹೋಲಿಕೆಗಳು ಕಂಡುಬರುತ್ತವೆ. ದ್ರಾವಿಡ ಭಾಷೆಗಳಲ್ಲಿ ಹೆಚ್ಚು ಶತಕಗಳ ರಚನೆಯಾಗಿರುವುದು, ಶತಕಗಳಿಗೆ ಹೆಚ್ಚಿನ ಜನಪ್ರಿಯತೆ ಹಾಗೂ ಪ್ರಸಿದ್ಧಿ ದೊರಕಿರುವುದು ತೆಲುಗಿನಲ್ಲಿ. ಕನ್ನಡದಲ್ಲಿ ತೆಲುಗಿಗಿಂತ ಮೊದಲೇ ಶತಕಗಳ ರಚನೆಯಾಗಿದ್ದರೂ ಅವು ತೆಲುಗಿನ ಶತಕಗಳಷ್ಟು ಜನಪ್ರಿಯವಾಗಿಲ್ಲ. ಕನ್ನಡ ಶತಕಗಳ ಸಂಖ್ಯೆಯೂ ತೆಲುಗಿನ ಶತಕಗಳ ಸಂಖ್ಯೆಗಿಂತ ಕಡಿಮೆ. ತಮಿಳಿನಲ್ಲಿಯೂ ಶತಕ ಸಾಹಿತ್ಯದ ಬೆಳವಣಿಗೆ ಆಗಿದೆ. ತಮಿಳಿನ ಶತಕಗಳ ಮೇಲೆ ಸಂಸ್ಕೃತದ ಪ್ರಭಾವ ಆಗಿರುವುದಾದರೂ ಅವು ತಮ್ಮ ಸ್ವಂತಿಕೆಗಳ ಮೂಲಕ ವೈಶಿಷ್ಟ್ಯ ಪೂರ್ಣವಾಗಿವೆ. ಮಲಯಾಳ ಶತಕಗಳ ಮೇಲೆ ಸಂಸ್ಕೃತದ ಪ್ರಭಾವ ಹೆಚ್ಚಾಗಿ ಆಗಿರುವುದು ಕಂಡುಬರುತ್ತದೆ. ತೆಲುಗು, ಕನ್ನಡ, ತಮಿಳು ಭಾಷೆಗಳಿಗಿಂತ ಮಲಯಾಳದಲ್ಲಿ ಶತಕಗಳ ಸಂಖ್ಯೆ ಕಡಿಮೆ. ಮಲಯಾಳ ಸಾಹಿತ್ಯದಲ್ಲಿ ಶತಕಗಳಿಗೆ ಹೆಚ್ಚಿನ ಪ್ರಾಧಾನ್ಯವೂ ದೊರೆತಿಲ್ಲ. ಪ್ರಾಕೃತದಲ್ಲಿ ಕೇವಲ ಕೆಲವು ಶತಕಗಳು ರಚಿತವಾಗಿವೆ. ಸಂಸ್ಕೃತದಿಂದಲೇ ಜನಿಸಿದ ಹಿಂದಿಯಲ್ಲಿ ಕೆಲವು ಶತಕಗಳ ರಚನೆಯಾಗಿದ್ದರೂ ಅವುಗಳಿಗೆ ಹೆಚ್ಚಿನ ಮಹತ್ವ ದೊರೆಯದಿರುವುದು ಆಶ್ಚರ್ಯವಾಗಿದೆ.

ಸಂಖ್ಯಾ ದೃಷ್ಟಿಯಿಂದ ತೆಲುಗಿನಲ್ಲಿ ಶತಕಗಳ ರಚನೆ ಹೆಚ್ಚು ಆಗಿದೆ. ವಿಮರ್ಶಕರ ಅಭಿಪ್ರಾಯದಂತೆ ಈಗ ತಿಳಿದಿರುವ ಮಟ್ಟಿಗೆ ಎರಡು ಸಾವಿರಕ್ಕಿಂತಲೂ ಹೆಚ್ಚು ಶತಕಗಳು ತೆಲುಗಿನಲ್ಲಿ ರಚಿತವಾಗಿವೆ. (ಡಾ. ದಿವಾಕರ್ಲ ವೆಂಕಟಾವಧಾನಿ - ಆಂಧ್ರ ವಾಙ್ಮಯ ಚರಿತ್ರೆ). ಶತಕ ಸಾಹಿತ್ಯವು ಆಂಧ್ರ ಭಾಷೆಯಲ್ಲಿ ಅತಿವಿಸ್ತಾರವಾಗಿ ಬೆಳೆದಿರುವಷ್ಟು ಮತ್ತಿನ್ನಾವ ಭಾಷೆಯಲ್ಲಿಯೂ ಬೆಳೆದಿಲ್ಲ. ಆಂಧ್ರ ವಾಙ್ಮಯದಲ್ಲಿ ಶತಕಗಳಿಗೆ ವಿಶಿಷ್ಟ ಸ್ಥಾನವಿದೆ. ತೆಲುಗಿನಲ್ಲಿ ಶತಕಗಳ ರಚನೆಯಾಗುವುದಕ್ಕೆ ಸಂಸ್ಕೃತ ಶತಕಗಳ ಪ್ರಭಾವವೇ ಕಾರಣವೆಂಬುದನ್ನು ಆಂಧ್ರ ಸಾಹಿತ್ಯ ವಿಮರ್ಶಕರು ಒಪ್ಪುತ್ತಾರೆ. ಎನ್.ವೆಂಕಟರಾವು ಎಂಬವರು ಶತಕ ಕಾಲ ಚರಿತ್ರಕ್ಕೆ ಬರೆದ ಪೀಠಿಕೆಯಲ್ಲಿ ತೆಲುಗು ಕನ್ನಡಗಳಿಗೆ ಇರುವ ಹತ್ತಿರದ ಸಂಬಂಧವನ್ನನುಸರಿಸಿ ಕನ್ನಡ ಶತಕ ರಚನೆಗಳೇ ತೆಲುಗು ಶತಕ ರಚನೆಗೆ ಮಾರ್ಗದರ್ಶಕವಾಗಿರಬಹುದೆಂದು ಸ್ಪಷ್ಟಪಡಿಸಿದ್ದಾರೆ. ತೆಲುಗಿನ ಶತಕಗಳಲ್ಲಿ ಪ್ರಾಕೃತ ಸಂಸ್ಕೃತಗಳ ಪರಿಣಾಮವಿದ್ದರೂ ಅವುಗಳಿಗೆ ತಮ್ಮದೇ ಆದ ಪ್ರತ್ಯೇಕತೆಯಿರುವುದು ಕಂಡುಬರುತ್ತದೆ. ತೆಲುಗಿನಲ್ಲಿ ಶತಕಗಳ ಆರಂಭ ಹನ್ನೆರಡನೆಯ ಶತಮಾನದಲ್ಲಿಯೇ ಆಗಿರುವುದಾದರೂ ಹೆಚ್ಚು ಶತಕಗಳ ರಚನೆಯಾಗಿರುವುದು ಹದಿನೆಂಟು ಹತ್ತೊಂಬತ್ತನೆಯ ಶತಮಾನಗಳಲ್ಲಿ ಎನ್ನಬಹುದು.

ತೆಲುಗಿನ ಶತಕಗಳಲ್ಲಿ ಯತಿಪ್ರಾಸ ನಿಯಮ ಮತ್ತು ಮಕುಟ ನಿಯಮಗಳಿವೆ. ಸಂಖ್ಯಾ ನಿಯಮವು ಇರುವುದಾದರೂ ಅದನ್ನವರು ಕಟ್ಟುನಿಟ್ಟಾಗಿ ಪಾಲಿಸಿಲ್ಲ. ಒಂದೇ ಮಕುಟವಿರುವ ಪಂಡಿತಾರಾಧ್ಯನ ಶಿವತತ್ತ್ವಸಾರ ಹಾಗೂ ವೇಮನನ ಕೃತಿಗಳನ್ನು ನೂರಾರು, ಸಾವಿರಾರು ಪದ್ಯಗಳಿದ್ದರೂ ಶತಕವೆಂದೇ ಕರೆಯುತ್ತಾರೆ. ಶಿವತತ್ತ್ವಸಾರದಲ್ಲಿ ೪೮೯ ಪದ್ಯಗಳಿವೆ. ವೇಮನ ಪದ್ಯಗಳು ಸಾವಿರಾರು ಇವೆ. ತೆಲುಗಿನ ಕವಿಗಳು ತಮ್ಮ ಕವಿತಾಭ್ಯಾಸದ ಕಾಲದಲ್ಲಿ ಶತಕಗಳನ್ನು ರಚಿಸುತ್ತಾರೆಂದು ಆಂಧ್ರ ಸಾಹಿತ್ಯ ವಿಮರ್ಶಕರು ಹೇಳುತ್ತಾರೆ. ತೆಲುಗಿನ ಕೆಲವು ಪ್ರಸಿದ್ಧ ಕವಿಗಳೂ ಮಹಾಕವಿಗಳೆನ್ನಿಸಿದವರೂ ಶತಕಗಳನ್ನು ರಚಿಸಿದ್ದಾರೆ. ಹಿಂದೆ ಆಂಧ್ರದ ಶಾಲೆಗಳಲ್ಲಿ ಮಕ್ಕಳಿಗೆ ಸುಮತಿ ಶತಕ, ವೇಮನ ಶತಕ, ನರಸಿಂಹ ಶತಕ, ಭಾಸ್ಕರ ಶತಕ, ಕೃಷ್ಣ ಶತಕ ಮೊದಲಾದ ಶತಕಗಳ ಪದ್ಯಗಳನ್ನು ಓದಿಸುತ್ತಿದ್ದರು. ಮನೆಗಳಲ್ಲಿಯೂ ಹಿರಿಯರು ಈ ಶತಕಗಳ ಪಠನ ಮಾಡುತ್ತಿದ್ದರು. ಆಂಗ್ಲ ವಿದ್ಯಾಭ್ಯಾಸದ ಪ್ರಭಾವದಿಂದಾಗಿ ಕ್ರಮೇಣ ವಿದ್ಯಾಭ್ಯಾಸದಲ್ಲಿ ಶತಕಗಳ ಅಧ್ಯಯನಕ್ಕೆ ಪ್ರಾಧಾನ್ಯ ಕಡಿಮೆಯಾಯಿತು.

ತೆಲುಗಿನ ಲಾಕ್ಷಣಿಕರು ಶತಕಗಳನ್ನು ಕಾವ್ಯಗಳೆಂದು ಪರಿಗಣಿಸಲಿಲ್ಲ. ಆದರೂ ಈ ಶತಕಗಳಿಗೆ ಜನಾದರಣೆ ದೊರಕಿದೆ. ತೆಲುಗಿನಲ್ಲಿ ವಿವಿಧ ವಸ್ತು - ವಿಷಯಗಳಿಗೆ ಸಂಬಂಧಿಸಿದ ಶತಕಗಳ ರಚನೆಯಾಗಿದೆ. ಆದರೂ ಶೃಂಗಾರ ನೀತಿ ಶತಕಗಳಿಗಿಂತ ಭಕ್ತಿ ಶತಕಗಳೇ ಹೆಚ್ಚಾಗಿವೆ.

ತೆಲುಗಿನ ಲಾಕ್ಷಣಿಕರು ಶತಕವನ್ನು ಕ್ಷುದ್ರ ಕಾವ್ಯ, ಚಾಟು ಪ್ರಬಂಧ, ಲಘು ಕಾವ್ಯ ಸಂಖ್ಯಾ ಮೂಲಕ ಕಾವ್ಯ, ಉಪ ಕಾವ್ಯ ಮೊದಲಾದ ವಿಭಾಗಗಳಿಗೆ ಸೇರಿಸಿದ್ದಾರೆ. ವಿನ್ನಕೋಟ ಪೆದ್ದನನು ತನ್ನ ಕಾವ್ಯಾಲಂಕಾರ ಚೂಡಾಮಣಿಯಲ್ಲಿ ಸಂಖ್ಯಾ ಪೂರ್ವಕವಾದ ರಚನೆಯನ್ನು ಹೇಳುವ ಸಂದರ್ಭದಲ್ಲಿ ಶತಕದ ಬಗ್ಗೆ ''ಶತಕ ಮನನೊಪ್ಪುಮರಿ ಪದ್ಯ ಶತಮುಕೂಡಾ'' ನೂರು ಪದ್ಯಗಳಿಂದ ಕೂಡಿರುವುದು ಶತಕ - ಎಂದು ಹೇಳಿದ್ದಾನೆ. (ಡಾ. ಕೆ. ಗೋಪಾಲಕೃಷ್ಣ ರಾವು - ಆಂಧ್ರ ಶತಕ ಸಾಹಿತ್ಯ ವಿಕಾಸಮು ೧೯೭೬, ಪು. ೪). ಆಂಧ್ರದ ಆಲಂಕಾರಿಕರಲ್ಲಿ ಕೆಲವರು ಪ್ರತ್ಯಕ್ಷವಾಗಿಯೂ ಕೆಲವರು ಪರೋಕ್ಷವಾಗಿಯೂ ಶತಕಗಳನ್ನು ವಿಶಿಷ್ಟವಾದ ಒಂದು ಕಾವ್ಯ ಪ್ರಭೇದವೆಂದು ಗುರುತಿಸಿರುವುದು ಕಂಡು ಬರುತ್ತದೆ. ವಂಗೂರಿ ಸುಬ್ಬರಾವ್, ನಾಗೇಶ್ವರರಾವ್, ಡಾ.ಕೆ.ಗೋಪಾಲಕೃಷ್ಣ ರಾವು ಮೊದಲಾದವರು ಆಂಧ್ರ ಶತಕ ಸಾಹಿತ್ಯದ ಬಗ್ಗೆ ಆಳವಾದ ಅಧ್ಯಯನ ನಡೆಸಿದ್ದಾರೆ. ಅವರು ಶತಕ ಸಾಹಿತ್ಯದ ಲಕ್ಷಣವನ್ನು ನಿರೂಪಿಸಲೂ ಯತ್ನಿಸಿದ್ದಾರೆ. ಡಾ. ಕೆ. ಗೋಪಾಲಕೃಷ್ಣರಾವು ಅವರು ''ಮಕುಟಾತ್ಮಕ ಮಗು ಶತಮುಕ್ತಕ ಸಮುಚ್ಛಯಮೇ ಶತಕಮು'' - ಮಕುಟವಿರುವ ನೂರು ಮುಕ್ತಗಳ ಸಮುದಾಯವೇ ಶತಕ ಎಂದು ಶತಕವನ್ನು ನಿರ್ವಚಿಸಬಹುದೆಂದು ಹೇಳುತ್ತಾರೆ. (ಆಂಧ್ರ ಶತಕ ಸಾಹಿತ್ಯ ವಿಕಾಸಮು ೧೯೭೬, ಪು. ೬).

ತೆಲುಗಿನಲ್ಲಿ ಪ್ರಧಾನವಾಗಿರುವ ಶತಕದ ಲಕ್ಷಣಗಳು ಸಂಖ್ಯಾ ನಿಯಮ, ಮಕುಟ ನಿಯಮ, ಛಂದೋನಿಯಮ, ರಸ ನಿಯಮ, ಆತ್ಮಾಶ್ರಯ ಕವಿತಾ ಧರ್ಮ ಮೊದಲಾದುವು. ಇವುಗಳಲ್ಲಿ ಹೆಚ್ಚಿನ ಲಕ್ಷಣಗಳು ಸಂಸ್ಕೃತ ಪ್ರಾಕೃತ ಮೊದಲಾದ ಶತಕಗಳಲ್ಲಿವೆ. ತೆಲುಗಿನಲ್ಲಿ ಮಕುಟ ರಹಿತವಾದ ಶತಕಗಳಿದ್ದರೂ ಮಕುಟ ಸಹಿತವಾದ ಶತಕಗಳ ಸಂಖ್ಯೆಯೇ ಹೆಚ್ಚು. ಆದುದರಿಂದ ತೆಲುಗಿನಲ್ಲಿ ಮಕುಟ ನಿಯಮವು ಶತಕದ ಒಂದು ಪ್ರಧಾನ ಲಕ್ಷಣವಾಗಿದೆ. ಮಕುಟಗಳೆಲ್ಲ ಹೆಚ್ಚಾಗಿ ಸ್ತುತಿ ನಮಸ್ಕಾರಾತ್ಮಕವಾಗಿರುತ್ತವೆ. ಕೆಲವರು ಒಂದು ಶತಕದ ಎಲ್ಲಾ ಪದ್ಯಗಳಲ್ಲಿಯೂ ಒಂದೇ ಮಕುಟವನ್ನು ಬಳಸಿದರೆ ಇನ್ನು ಕೆಲವರು ಒಂದೇ ಅರ್ಥ ಬರುವ ಬೇರೆ ಬೇರೆ ಮಕುಟಗಳನ್ನು ಬಳಸಿದ್ದಾರೆ. ಕೆಲವರು ಪದ್ಯಗಳ ಆದಿಯಲ್ಲೂ ಕೆಲವರು ಮಧ್ಯದಲ್ಲೂ ಇನ್ನು ಕೆಲವರು ಅಂತ್ಯದಲ್ಲೂ ಮಕುಟಗಳನ್ನು ಬಳಸಿದ್ದಾರೆ. ಸಂಖ್ಯಾ ನಿಯಮವನ್ನು ತೆಲುಗಿನಲ್ಲಿ ಅಷ್ಟು ಕಟ್ಟು ನಿಟ್ಟಾಗಿ ಪಾಲಿಸಿಲ್ಲ. 'ವೃತ್ತಗಳಲ್ಲಿ ಮಾತ್ರವಲ್ಲದೆ ಸೀಸ, ಕಂದ, ಆಟವೆಲದಿ ಮೊದಲಾದ ದೇಶೀ ಛಂದಸ್ಸುಗಳಲ್ಲಿಯೂ ತೆಲುಗು ಶತಕಗಳ ರಚನೆಯಾಗಿದೆ.

ತೆಲುಗಿನಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದ ಶತಕಗಳ ರಚನೆಯಾಗಿದೆ. ಭಕ್ತಿ ಇಲ್ಲವೆ ಸ್ತುತಿ, ಶೃಂಗಾರ, ನೀತಿ, ವೇದಾಂತ, ಹಾಸ್ಯ, ಚಾರಿತ್ರಿಕ, ಜೀವನ ಚರಿತ್ರೆ, ಆತ್ಮ ಚರಿತ್ರೆ ವ್ಯಾಜನಿಂದಾಸ್ತುತಿ, ಕಥೆ ಸಮಸ್ಯೆ, ನಿಘಂಟು, ಮಾನವಸ್ತುತಿ, ಅನುವಾದ, ಅಚ್ಚ ತೆಲುಗು, ಚಾಟು, ಅನ್ಯಾಪದೇಶ, ಸಾಮಾನ್ಯ ವಿಷಯಕ, ಸಂಕೀರ್ಣ ಮುಂತಾದ ವಿವಿಧ ವಿಷಯಗಳಿಗೆ ಸಂಬಂಧಿಸಿದ ಅನೇಕ ಶತಕಗಳಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯನೇ (೧೧೬೦-೧೧೭೦) ತೆಲುಗಿನ ಮೊದಲ ಶತಕ ಕರ್ತನೆಂದು ಸಾಹಿತ್ಯ ಚರಿತ್ರಕಾರರು ಹೇಳಿದ್ದಾರೆ. ಈತನ 'ಶಿವತತ್ತ್ವಸಾರ'ವೆಂಬ ಕೃತಿಯಲ್ಲಿ ಸಾವಿರಕ್ಕಿಂತಲೂ ಹೆಚ್ಚು ಪದ್ಯಗಳಿವೆಯೆಂದೂ ಅವುಗಳಲ್ಲಿ ೫೦೦ ಮಾತ್ರ ಸಿಕ್ಕಿವೆಯೆಂದೂ ಹೇಳುತ್ತಾರೆ. ಶಿವತತ್ತ್ವಸಾರದಲ್ಲಿ ಪಾಲ್ಕುರಿಕೆ ಸೋಮನಾಥಾರಾಧ್ಯನ ವೃಷಾಧಿಪ ಶತಕವೇ ಮೊದಲನೆಯ ಶತಕವೆಂದು ಕೆಲವರು ವಾದಿಸುತ್ತಾರೆ. ವೃಷಾಧಿಪ ಶತಕವು ಭಕ್ತಿಪಾರವಶ್ಯವನ್ನು ತಿಳಿಸುತ್ತದೆ. ಇದರಲ್ಲಿ ಶಾಂತ, ದಾಸ್ಯ, ಸಖ್ಯ, ವಾತ್ಸಲ್ಯ, ಮಧುರ ಮೊದಲಾದ ಭಕ್ತಿಗಳು ನಿರೂಪಿತವಾಗಿವೆ. ತೆಲುಗಿನಲ್ಲಿ ಭಕ್ತಿಯ ನಾನಾ ಮುಖಗಳನ್ನು ಚಿತ್ರಿಸುವ ಶತಕಗಳಿವೆ. ಭಕ್ತಿ ಶತಕಗಳಲ್ಲಿ ಶೈವ ಭಕ್ತಿ ಶತಕಗಳು ಹಾಗೂ ವೈಷ್ಣವ ಭಕ್ತಿ ಶತಕಗಳು ಪ್ರಧಾನವಾಗಿವೆ. ಶಿವವಿಷ್ಣು ಮಾತ್ರವಲ್ಲದೆ ಇತರ ದೇವತೆಗಳನ್ನು ಸ್ತುತಿಸುವ ಶತಕಗಳೂ ಅನೇಕ ಇವೆ. ವೃಷಾಧಿಪ ಶತಕದಲ್ಲಿ ಕವಿಯು ತೆಲುಗು, ಕನ್ನಡ, ತಮಿಳು, ಮರಾಠಿ, ಮಲಯಾಳ ಮೊದಲಾದ ಭಾಷೆಗಳಲ್ಲಿ ಪದ್ಯಗಳನ್ನು ರಚಿಸಿ ತನ್ನ ಬಹು ಭಾಷಾ ಪ್ರತಿಭೆಯನ್ನು ತೋರಿಸಿದ್ದಾನೆ. ಬಸವೇಶ್ವರನ ಸಿದ್ಧಾಂತವನ್ನು ಪಂಡಿತ ಪಾಮರರಿಗೆ ತಿಳಿಸುವುದು ಈ ಶತಕದ ಉದ್ದೇಶ. ಇದರಲ್ಲಿ 'ಬಸವಾ, ಬಸವಾ ಬಸವಾ ವೃಷಾಧಿಪ' ಎಂಬ ಮಕುಟವಿದೆ. ಈ ಶತಕವನ್ನು ಕಲುಗೋಡು ಅಶ್ವತ್ಥರಾವು ಎಂಬವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಯಥಾವಾಕ್ಕುಲ ಅನ್ನಮಯ್ಯನ ಸರ್ವೇಶ್ವರ ಶತಕ ಧೂರ್ಜಟಿಯ ಕಾಳಹಸ್ತೀಶ್ವರ ಶತಕ, ನಾರಾಯಣ ಕವಿಯ ಶಿವಶತಕ, ವಿಶ್ವನಾಥ ಸತ್ಯನಾರಾಯಣರ ವಿಶ್ವೇಶ್ವರ ಶತಕ ಮೊದಲಾದುವು ಶೈವಭಕ್ತಿ ಸಂಬಂಧವಾದ ಶತಕಗಳು.

ವಿಷ್ಣು, ಕೃಷ್ಣ, ರಾಮ ಮೊದಲಾದ ದೇವರನ್ನು ಸ್ತುತಿಸುವ ಅನೇಕ ವೈಷ್ಣವ ಭಕ್ತಿ ಶತಕಗಳು ತೆಲುಗಿನಲ್ಲಿ ರಚಿತವಾಗಿವೆ. ವಿಷ್ಣು ಸಂಬಂಧವಾದ ಶತಕಗಳಲ್ಲಿ ದುಷ್ಟ ಶಿಕ್ಷಣ ಮತ್ತು ಶಿಷ್ಟ ಸಂರಕ್ಷಣಕ್ಕಾಗಿ ಅವತಾರಗಳನ್ನು ಎತ್ತಿದ ವಿಚಾರಗಳು ನಿರೂಪಿತವಾಗಿವೆ. ಕೃಷ್ಣ ಸಂಬಂಧವಾದವುಗಳಲ್ಲಿ, ಗೋಪಾಲಕವೃತ್ತಿ, ಪೂತನಾ ಸಂಹರಣ, ಗೋವರ್ಧನೋದ್ಧರಣ, ರಾಸಕ್ರೀಡೆ, ಗೋಪಿಕಾ ವಿಹಾರ ಇತ್ಯಾದಿ ವಿಚಾರಗಳು ವರ್ಣಿತವಾಗಿವೆ. ಪೋತನನ ನಾರಾಯಣ ಶತಕ, ಶೇಷಪ್ಪ ಕವಿಯ ನರಸಿಂಹಶತಕ, ಪಾನಕಾಲರಾಯ ಕವಿಯ ಮಂಗಳಾನೃಸಿಂಹ ಶತಕ, ರಾಮದಾಸ ಕವಿಯ ದಾಶರಥಿ ಶತಕ, ವೆನ್ನಲಕಂಟಿ ಸಿದ್ಧನ ಮಂತ್ರಿಯ ದೇವಕೀನಂದನ ಶತಕ, ನರಸಿಂಹ ಕವಿಯ ಕೃಷ್ಣ ಶತಕ, ರಾವೂರಿ ಸಂಜೀವ ಕವಿಯ ವೀರನಾರಾಯಣ ಮುಕುಂದ ಶತಕ ಇವಲ್ಲದೆ ರಂಗಶಾಯಿ ಶತಕ, ಯಾದಗಿರೀಂದ್ರ ಶತಕ ಮೊದಲಾದುವು ವೈಷ್ಣವ ಭಕ್ತಿ ಶತಕಗಳು. ರಾಮಚಂದ್ರ ಕವಿಯ ಮಹಿಷಾಸುರ ಮರ್ದಿನೀ ಶತಕ, ವೆಂಕಟೇಶ್ವರ ಕವಿಯ ಕಾಮೇಶ್ವರೀ ಶತಕ, ಮುನಿನಾಥ ಕವಿಯ ಲಕ್ಷ್ಮೀ ಶತಕ ಮತ್ತು ಲಲಿತಾ ಶತಕ, ಹನುಮಯ್ಯನ ಮಹಾಲಕ್ಷ್ಮೀ ಶತಕ ಮೊದಲಾದುವು ಇತರ ಭಕ್ತಿ ಶತಕಗಳು.

ವೇದೋಪನಿಷತ್ತುಗಳಲ್ಲಿ ವರ್ಣಿತವಾಗಿರುವ ತತ್ತ್ವಗಳ ಆಧಾರದಲ್ಲಿ ತಾತ್ತ್ವಿಕ ಶತಕಗಳು ರಚಿತವಾಗಿವೆ. ಭಕ್ತಿ ಶತಕಗಳಲ್ಲಿ ಭಕ್ತಿಯೇ ಮೋಕ್ಷಕ್ಕೆ ಕಾರಣವೆಂದು ಹೇಳಲಾಗಿದೆ. ತಾತ್ತ್ವಿಕ ಶತಕಗಳಲ್ಲಿ ಜ್ಞಾನವೇ ಮೋಕ್ಷಕ್ಕೆ ಮೂಲವೆಂದು ವಿವರಿಸಲಾಗಿದೆ. ಸಾಧನೆಗಳು ಬೇರೆ ಬೇರೆಯಾದರೂ ಗುರಿ ಒಂದೇ. ತಾತ್ತ್ವಿಕ ಶತಕಗಳಲ್ಲಿ ವೈರಾಗ್ಯ, ಕಪಟ ಭಕ್ತಿ, ನಿರಸನ, ಸದ್ಗುರು ಬೋಧ, ಜ್ಞಾನಿ ಲಕ್ಷಣ ಪಿಂಡೋತ್ಪತ್ತಿ ಕ್ರಮ, ತತ್ತ್ವ ಬೋಧ, ತತ್ತ್ವ ವಿವರಣೆ ಮೊದಲಾದ ಅನೇಕ ವಿಚಾರಗಳ ನಿರೂಪಣೆಯಿದೆ. ಇವುಗಳಲ್ಲಿ ಸದಾನಂದಯೋಗಿಯ ಸದಾನಂದಯೋಗಿ ಶತಕ, ಪರಮಾನಂದ ಯತೀಂದ್ರರ ಶಿವಮುಕುಂದ ಶತಕ ಮತ್ತು ಸಂಪಗಿಮನ್ನ ಶತಕ ಅಂತೆಯೇ ಕೇವಲಾತ್ಮಕ ಶತಕ, ಸ್ವಪ್ರಕಾಶ ಶತಕ, ಅನಿಲ ರೂಪಾತ್ಮಕ ಶತಕ, ನಾರಾಯಣ ಶತಕ,

ಮನಶ್ಶತಕ, ಆತ್ಮಾರಾಮ ಗೋವಿಂದ ಶತಕ, ಮಲ್ಲನ ಯೋಗಿ ಶತಕ, ಭದ್ರಾದ್ರಿರಾಮ ಶತಕ, ಮನಶ್ಶುದ್ಧಿ ಶತಕ, ಸದಾಚಾರ್ಯ ಶತಕ ಮುಂತಾದ ಅನೇಕ ತಾತ್ತ್ವಿಕ ಶತಕಗಳು ತೆಲುಗಿನಲ್ಲಿ ರಚಿವಾಗಿವೆ.

ತೆಲುಗಿನ ನೀತಿ ಶತಕಗಳಿಗೆ ಸಂಸ್ಕೃತ ನೀತಿ ಶತಕಗಳ ಪ್ರಭಾವವೇ ಕಾರಣ. ರಾಮಾಯಣ, ಮಹಾಭಾರತ, ಭಾಗವತ ಮುಂತಾದ ಪುರಾಣಗಳ ಆಧಾರದಲ್ಲಿ ನೀತಿಯನ್ನು ಹೇಳುವ ಶತಕಗಳೂ ಮತ, ರಾಜಕೀಯ, ವೈಯಕ್ತಿಕ ಮೊದಲಾದ ಅನೇಕ ವಿಚಾರಗಳಿಗೆ ಸಂಬಂಧಿಸಿದ ನೀತಿಯನ್ನು ಹೇಳುವ ಶತಕಗಳು ತೆಲುಗಿನಲ್ಲಿವೆ. ಕೆಲವು ಶತಕಗಳಲ್ಲಿ ಒಂದೇ ನೀತಿಯು ನಿರೂಪಿತವಾಗಿದ್ದರೆ, ಕೆಲವು ಶತಕಗಳಲ್ಲಿ ನಾನಾ ರೀತಿಯ ನೀತಿಗಳನ್ನು ಬೋಧಿಸಲಾಗಿದೆ. ಇವಲ್ಲದೆ ಕೆಲವು ಬಾಲಕ ಬಾಲಿಕೆಯರ ವಯೋಧರ್ಮಾನುಸಾರವಾಗಿ ಹೇಳುವ ನೀತಿ ಶತಕಗಳಿವೆ. ಕನ್ನಡದ ಸೋಮೇಶ್ವರ ಶತಕದಂತೆಯೇ ತೆಲುಗಿನ ನೀತಿ ಬೋಧಕ ಶತಕವಾದ ಸುಮತಿ ಶತಕವೂ ಅತ್ಯಂತ ಪ್ರಸಿದ್ಧವೂ ಜನಪ್ರಿಯವೂ ಆಗಿದೆ. ವೇದತಿರುಮಲಾಚಾರ್ಯರ ನೀತಿಶತಕ, ಕೊಂಡರಾಜಾಮಾತ್ಯನ ಜಗನ್ನಾಯಕ ಶತಕ, ನೀಲಕಂಠೇಶ್ವರನ ನೀಲಕಂಠ ಶತಕ, ಅಂತೆಯೇ ಭಾಸ್ಕರ ಶತಕ, ಕುಮಾರ ಶತಕ, ಕುಮಾರೀ ಶತಕ, ಮಾನಿನೀ ಶತಕ, ಸತ್ಯವ್ರತಿ ಶತಕ, ಬಾಲಮಿತ್ರ ಶತಕ, ಕುಮತಿ ಶತಕ, ಕೈಸ್ತನ ನೀತಿ ಶತಕ, ಅನ್ಯಾಪದೇಶ ಶತಕ ಮುಂತಾದ ಅನೇಕ ನೀತಿ ಶತಕಗಳು ತೆಲುಗಿನಲ್ಲಿವೆ.

ನಿಂದೆಯನ್ನು ಹಾಸ್ಯ ಪೂರ್ವಕವಾಗಿ ಹೇಳಿ ಅನ್ಯಾಪದೇಶವಾಗಿ ನೀತಿ ಬೋಧೆ ಮಾಡುವ ಶತಕಗಳಿಗೆ ಅಧಿಕ್ಷೇಪ ಶತಕಗಳೆಂದು ಹೇಳಲಾಗಿದೆ. ಇಂತಹ ಶತಕಗಳಲ್ಲಿ ಕವಿ ಚೌಡಪ್ಪ ಶತಕ, ಭರ್ಗ ಕುಕ್ಕುಟೇಶ್ವರ ಶತಕ, ಭಕ್ತ ಮಂದಾರ ಶತಕ, ವೇಣುಗೋಪಾಲ ಶತಕ, ಚಂದ್ರಶೇಖರ ಶತಕ, ಮದನಗೋಪಾಲ ಶತಕ, ಶಾರ್ದೂಲ ಶತಕ, ಸರ್ವಶೂನ್ಯ ಶತಕ, ಸಿರಿಸಿರಿ ಮುಚ್ಚ ಶತಕ, ದಾಶರಥಿ ಶತಕ, ಪಿಲ್ಲಿ ಶತಕ ಮೊದಲಾದುವುಗಳನ್ನು ಹೆಸರಿಸಬಹುದು. ತೆಲುಗಿನಲ್ಲಿ ಕೆಲವು ಹಾಸ್ಯಪ್ರಧಾನ ಶತಕಗಳಿದ್ದು, ವಸ್ತು ವೈಲಕ್ಷಣ್ಯವೇ ಅವುಗಳಲ್ಲಿ ಪ್ರಧಾನವಾಗಿದೆ. ಮೊಗಚುಟ್ಟಿ ಶತಕ, ಪಕೋಡೀ ಶತಕ, ಚೀಪುರು ಪುಲ್ಲ ಶತಕ, ವಿಸನಕರ್ರ ಶತಕ ಮೊದಲಾದುವು ವಸ್ತು ವೈಲಕ್ಷಣ್ಯಗಳಿಂದ ಕೂಡಿದ ಹಾಸ್ಯ ಶತಕಗಳಾಗಿವೆ.

ತೆಲುಗಿನ ಕೆಲವು ಭಕ್ತಿ ಶತಕಗಳಲ್ಲಿ ಶೃಂಗಾರ ನಿರೂಪಣೆಯಿದೆ. ಭಕ್ತಿ ಸಂಬಂಧವಾಗಿ ಈ ಶೃಂಗಾರವು ಬಂದಿರುತ್ತದೆ. ರಾಧೆ ಹಾಗೂ ಕೃಷ್ಣ, ಗೋಪಿಯರು ಹಾಗೂ ಕೃಷ್ಣ ಇವರ ಪ್ರಣಯ ಸನ್ನಿವೇಶವನ್ನು ಚಿತ್ರಿಸುವ ಮಧುರಭಕ್ತಿಯಿಂದ ಕೂಡಿದ ಶತಕಗಳೂ ರಚಿತವಾಗಿವೆ. ಇನ್ನು ಕೆಲವು ಶೃಂಗಾರ ಶತಕಗಳಲ್ಲಿ ನಾಯಕ ನಾಯಿಕೆಯರ ವಿರಹ, ಶೃಂಗಾರದ ವಿವಿಧ ಅವಸ್ಥೆಗಳು, ಕಾಮಶಾಸ್ತ್ರ ರಹಸ್ಯಗಳು ಮುಂತಾದ ವಿಚಾರಗಳ ನಿರೂಪಣೆಯಿದೆ. ವೆಂಕಟೇಶ್ವರ ಶತಕ, ಶೃಂಗಾರ ವೃತ್ತಲ ಪದ್ಯ ಶತಕ, ಇಂದು ಶತಕ, ಸುಂದರೀಮಣಿ ಶತಕ, ಲಾವಣ್ಯ ಶತಕ, ಕೀರವಾಣಿ ಶತಕ, ಮದನಗೋಪಾಲ ಶತಕ, ಬ್ರಹ್ಮಾನಂದ ಶತಕ, ಮೋಹಿನೀ ಶತಕ, ಶೃಂಗಾರ ಶತಕ ಮೊದಲಾದುವು ತೆಲುಗಿನ ಶೃಂಗಾರ ಶತಕಗಳಾಗಿವೆ.

ಒಂದಕ್ಕಿಂತ ಹೆಚ್ಚು ವಿಷಯಗಳು ನಿರೂಪಿತವಾಗಿರುವ ಸಂಕೀರ್ಣ ಶತಕಗಳೂ ತೆಲುಗಿನಲ್ಲಿವೆ. ವೇಮನ ಶತಕ, ಅನುಭವ ರಸಿಕ ಶತಕ, ಶಾಂತಾನಂದ ಯೋಗಿ ರಾಮ ಶತಕ, ಶರಭಾಂಕ ಲಿಂಗ ಶತಕ, ಅಹಂಕಾರ ಶತಕ, ಅಮರನಾರಾಯಣ ಶತಕ, ಶ್ಯಾಮಲಾಂಬಾ ಶತಕ, ಸರ್ವಮಂಗಳಾ ಶತಕ, ಸರ್ವಲೋಕೇಶ್ವರ ಶತಕ ಮೊದಲಾದುವು ಈ ವಿಭಾಗಕ್ಕೆ ಸೇರುತ್ತವೆ. ಇವಲ್ಲದೆ ತೆಲುಗಿನಲ್ಲಿ ವಿವಿಧ ವಸ್ತುಗಳನ್ನು ಹೊಂದಿದ ಅನೇಕ ಶತಕಗಳ ರಚನೆಯಾಗಿದೆ. ಆದರೆ ಇವುಗಳೆಲ್ಲ ಆಧುನಿಕ ಶತಕಗಳಾಗಿವೆ. ವ್ಯಾಕರಣ, ನಿಘಂಟು ಪ್ರಹೇಳಿಕಾ ಶತಕ, ನಾನಾರ್ಥ ಶಿವಶತಕ, ನಾನಾರ್ಥ ಶತಕ, ತತ್ಸಮ ಶತಕ, ಪಚನ ಶತಕ, ಲಿಂಗ ಭೇದ ಶತಕ, ಚಾಟು ಶತಕ, ಸತ್ಯನಾರಾಯಣ ಶತಕ, ಹರಿಹರ ಶತಕ, ಅಮೃತಾಂಜನ ಶತಕ, ವಾರ ಕಾಮಿನೀ ಶತಕ ಮೊದಲಾದುವು ವಿವಿಧ ವಿಷಯಗಳನ್ನು ನಿರೂಪಿಸುವ ಶತಕಗಳು.

ಐತಿಹಾಸಿಕಾಂಶಗಳನ್ನೊಳಗೊಂಡ ಹಾಗೂ ರಾಜಕೀಯ ಸಂಬಂಧವಾದ ಕೆಲವು ಚಾರಿತ್ರಿಕ ಶತಕಗಳು ತೆಲುಗಿನಲ್ಲಿವೆ. ಇವುಗಳಲ್ಲಿ ಆಂಧ್ರ ನಾಯಕ ಶತಕ, ಸಿಂಹಾದ್ರಿ ನರಸಿಂಹ ಶತಕ, ಸುಬ್ರಹ್ಮಣ್ಯ ಶತಕ, ಭದ್ರಗಿರಿ ಶತಕ, ವೆಂಕಟಾಚಲ ರಮಣ ಶತಕ, ವಿಷ್ಣವಾತ್ಮಕ ಕಾತ್ಯಾಯನೀ ಶತಕ, ಭಾರತಾಂಬಿಕಾ ಶತಕ, ಜಯಾಂಧ್ರ ಶತಕ, ಮುಲ್ಕಿ ಶತಕ ಮೊದಲಾದುವು ಪ್ರಸಿದ್ಧವಾಗಿವೆ. ಶತಕಗಳು ಮುಕ್ತಕದ ಲಕ್ಷಣ ಹೊಂದಿದ್ದು ಪದ್ಯಗಳಲ್ಲಿ ಏಕ ಸೂತ್ರತೆ ಇರುವುದಿಲ್ಲ. ಆದರೂ ಅದಕ್ಕಿಂತ ಭಿನ್ನವಾಗಿರುವ ಕಥನಾತ್ಮಕ ಶತಕಗಳನ್ನು ಕೆಲವರು ರಚಿಸಿದ್ದಾರೆ. ತೆಲುಗಿನಲ್ಲಿ ರಾಮಾಯಣ, ಭಾರತ ಹಾಗೂ ಭಾಗವತಗಳಿಗೆ ಸಂಬಂಧಿಸಿದ ಕಥೆಗಳನ್ನೊಳಗೊಂಡ ಅನೇಕ ಶತಕಗಳಿವೆ. ಕನ್ನಡದಲ್ಲಿ ಇಂತಹ ಶತಕಗಳು ತೀರಾ ಕಡಿಮೆ. ಕಥಾನಾತ್ಮಕ ಶತಕಗಳಲ್ಲಿ ಮುಕುಂದ ರಾಘವ ಶತಕ, ಪ್ರಸನ್ನ ರಾಘವ ಶತಕ, ರಾಮಾಯಣ ಸಂಗ್ರಹ ಶತಕ, ಲವಕುಮಾರ ಶತಕ, ರಾಜಕಂಠೀರವ ಶತಕ, ರಾಮಕಥಾ ಪ್ರತಿಪಾದಕ ಧೈರ್ಯ ಶತಕ, ಭಾಗವತ ದಶಮಸ್ಕಂಧ ಶತಕ, ಮೀನಾಕ್ಷಿ ಶತಕ, ಕಸ್ತೂರಿ ರಂಗ ನಾಯಕ ಶತಕ - ಮೊದಲಾದುವುಗಳನ್ನು ಹೆಸರಿಸಬಹುದು. ಆತ್ಮಕಥೆ ಹಾಗೂ ಜೀವನ ಚರಿತ್ರೆಗೆ ಸಂಬಂಧಿಸಿದ ಶತಕಗಳಲ್ಲಿ ಹರಿಹರೇಶ್ವರ ಶತಕ, ಬಿಲ್ವೇಶ್ವರ ಶತಕ, ಕಾಮೇಶ್ವರೀ ಶತಕ, ಆರೋಗ್ಯ ಭಾಸ್ಕರ ಶತಕ, ಮೃತ್ಯುಂಜಯ ಶತಕ, ಟರಕಾಯಚಿಪ್ಪ ಶತಕ, ಭಾರ್ಗವೀ ಶತಕ, ಗೋಪಾಲಕೃಷ್ಣ ಮೂರ್ತಿಶತಕ ಮುಂತಾದುವು ಮುಖ್ಯವಾದುವುಗಳು.

ಸಂಸ್ಕೃತದ ಅನೇಕ ಶತಕಗಳು ತೆಲುಗಿಗೆ ಭಾಷಾಂತರಗೊಂಡಿವೆ. ಅಮರು ಶತಕವನ್ನೂ, ಭರ್ತೃಹರಿಯ ಶತಕಗಳನ್ನೂ ಕೆಲವರು ಅನುವಾದಿಸಿದ್ದಾರೆ. ಸೂರ್ಯ ಶತಕ, ಭಲ್ಲಟ ಶತಕ, ಮಹಿಷ ಶತಕ, ಚಾಣಕ್ಯ ಶತಕ ಮೊದಲಾದುವು ಇತರ ಅನುವಾದ ಶತಕಗಳು.

ಈ ರೀತಿ ತೆಲುಗಿನಲ್ಲಿ ಶತಕ ಸಾಹಿತ್ಯವು ಎಲ್ಲಾ ದೃಷ್ಟಿಯಿಂದಲೂ ವೈವಿಧ್ಯಮಯವಾಗಿಯೂ ಜನಪ್ರಿಯವಾಗಿಯೂ ಬೆಳೆದಿದೆ.

●

ಮಾನವತಾವಾದ : ಒಂದು ವಿಶ್ಲೇಷಣೆ

ಪ್ರೊ॥ ಬಿ.ವಿ. ವೀರಭದ್ರಪ್ಪ

ಧಾರ್ಮಿಕ ಪರಿಭಾಷೆಯಲ್ಲಿ ಮಾನವತಾವಾದಕ್ಕೆ ಅನೇಕ ಅರ್ಥಗಳಿವೆ. ಅವುಗಳಲ್ಲಿ ಕ್ರಿಸ್ತನು ದೇವನಲ್ಲ, ಮನುಷ್ಯ ಎಂಬ ವಾದ ಮುಖ್ಯವಾದುದು. ಆದರೆ ಇಂದು ಮಾನವತಾವಾದ ಸಾಮಾಜಿಕ ಚಳುವಳಿಗಳಿಗೆ ಮಾತ್ರ ಸೀಮಿತವಾಗಿದೆ. ಆದರೂ ಅದನ್ನು ಖಚಿತವಾಗಿ ವ್ಯಾಖ್ಯಾನಿಸುವುದು ಸುಲಭವಲ್ಲ. ಮಾನವತಾವಾದಿಯು ಮನುಷ್ಯನನ್ನೊಳಗೊಂಡು ಎಲ್ಲ ಪ್ರಾಣಿಗಳ ನೋವನ್ನು ಕಡಿಮೆ ಮಾಡುವ ಮತ್ತು ನಲಿವನ್ನು ಹೆಚ್ಚಿಸುವ ಧ್ಯೇಯವನ್ನು ಹೊಂದಿರುತ್ತಾನೆ. ಪ್ರಾಣಿಗಳಿಗೆ ಮತ್ತು ಮಾನವನಿಗೆ ಆಗುವ ದೈಹಿಕ ಕ್ರೌರ್ಯವನ್ನು ಕಡಿಮೆ ಮಾಡುವುದರ ಜೊತೆಗೆ ಸುಖಿಯಾದ ಮಾನವನನ್ನು ಮತ್ತಷ್ಟು ಸುಖಿಯಾಗಿಸುವುದಕ್ಕಿಂತ ಅಸುಖಿಯಾದವನನ್ನು ಸುಖಿಯಾಗಿಸುವುದರತ್ತ ಶ್ರಮಿಸುತ್ತಾನೆ. ಮಾನವತಾವಾದವು ಮಾನವರನ್ನೆಲ್ಲಾ ಸಮಾನವಾಗಿ ಪರಿಗಣಿಸುವ ಪ್ರಜಾಪ್ರಭುತ್ವದತ್ತ ಹೆಚ್ಚು ವಾಲುತ್ತದೆ. ಪ್ರಾಣಿಗಳನ್ನು ಪ್ರಯೋಗಾಲಯಗಳಲ್ಲಿ ಕತ್ತರಿ ಪ್ರಯೋಗಕ್ಕೆ ಒಳಪಡಿಸುವುದನ್ನು ವಿರೋಧಿಸುವುದರಿಂದ ಹಿಡಿದು ಸಮಾಜವಾದದವರೆಗೆ ವ್ಯಾಪಿಸಿರುವ ಅನೇಕ ಸಾಮಾಜಿಕ ಚಳುವಳಿಗಳಲ್ಲಿ ಅದು ಅಂತರ್ಗತವಾಗಿದೆ.

ಹದಿನೆಂಟನೇ ಶತಮಾನದ ನಂತರದ ಮಾನವತಾವಾದಿಗಳು ಹೆಚ್ಚಾಗಿ ಧರ್ಮ ನಿರಪೇಕ್ಷಕರಾಗಿದ್ದಾರೆ ಅಥವಾ ಸಂದೇಹವಾದಿಗಳಾಗಿದ್ದಾರೆ. ಅವರಿಗೆ ದೈವ ಕೇಂದ್ರವಾದ ಧರ್ಮಗಳಲ್ಲಿ ನಂಬಿಕೆ ಇಲ್ಲ. ಅದಕ್ಕೆ ಬದಲಾಗಿ ಮಾನವನ ಜೀವನವನ್ನು ಹಸನುಗೊಳಿಸುವ ಮಾನವೀಯತೆಯಲ್ಲಿ ವಿಶ್ವಾಸವಿದೆ. ಸಂಸ್ಥೀಕೃತ ಧರ್ಮಗಳು ಪುರೋಹಿತಶಾಹಿ ಹಿಡಿತದಲ್ಲಿ ಸಿಕ್ಕು ಜನಾಂಗ ಜನಾಂಗಗಳ ನಡುವೆ

ಧರ್ಮಯುದ್ಧಗಳನ್ನು ಹುಟ್ಟು ಹಾಕುತ್ತಾ, ಮತೀಯ ಕಲಹಗಳನ್ನುಂಟು ಮಾಡುತ್ತಾ ಮಾನವನ ಶಾಂತಿಗೆ ಭಂಗವನ್ನುಂಟುಮಾಡುತ್ತಿರುವುದರಿಂದ ವಿಚಾರವಂತರಾದ ಮಾನವತಾವಾದಿಗಳು ಧರ್ಮಗಳನ್ನು ನಿರಾಕರಿಸುತ್ತಾರೆ.

ಮನುಷ್ಯ ಮನುಷ್ಯನನ್ನು ದ್ವೇಷಿಸುವಂತೆ ಮಾಡುವ ಧರ್ಮಗಳು ನಮ್ಮಲ್ಲಿವೆ; ಆದರೆ ನಮ್ಮ ನಮ್ಮಲ್ಲಿ ಪ್ರೀತಿಯನ್ನು ಬೆಳೆಸುವ ಧರ್ಮಗಳು ಇಲ್ಲ ಎಂದು ಜೋನಾಥನ್ ಸ್ವಿಫ್ಟ್ ಒಮ್ಮೆ ಹೇಳಿದ ಮಾತು ಅಕ್ಷರಶಃ ಸತ್ಯವಾಗಿದೆ. ಜನಾಂಗ ಜನಾಂಗಗಳ ನಡುವೆ ಹೆಚ್ಚುತ್ತಿರುವ ದ್ವೇಷ ಭಾವನೆಯನ್ನು ಕಡಿಮೆ ಮಾಡಲು ಧರ್ಮಗಳು ಯಾವ ಪ್ರಯತ್ನವನ್ನೂ ಮಾಡಿಲ್ಲ. ಆದರೆ ಉರಿಯುವ ಬೆಂಕಿಗೆ ತುಪ್ಪವನ್ನು ಸುರಿಯುವ ಕೆಲಸವನ್ನು ಯಥೇಚ್ಛವಾಗಿ ಮಾಡುತ್ತಾ ಬಂದಿವೆ.

ಎಲ್ಲ ಧರ್ಮೀಯರೂ ವಿಜ್ಞಾನವನ್ನು ಯುದ್ಧಕ್ಕೆ ನೆರವು ನೀಡುವ ಮತ್ತು ದ್ವೇಷ ಸಾಧನೆಯ ಮಾಧ್ಯಮವನ್ನಾಗಿ ಬಳಸುತ್ತಿದ್ದಾರೆ. ಶಾಂತಿ ಮತ್ತು ಪ್ರೇಮಗಳನ್ನು ಹರಡಲು ಧರ್ಮಗಳು ಅಸಮರ್ಥವಾಗಿವೆ ಎಂಬುದನ್ನು ಇತಿಹಾಸ ಅನೇಕ ಸಾರಿ ಸಾಬೀತುಪಡಿಸಿದೆ. ಕ್ರೈಸ್ತ, ಇಸ್ಲಾಂ ಅಥವಾ ಹಿಂದು - ಯಾವುದೇ ಧರ್ಮವಿರಲಿ ತನ್ನ ಅನುಯಾಯಿಗಳಲ್ಲಿ ಅಸಹಿಷ್ಣುತೆಯನ್ನು ಬೆಳೆಸಿ ಅನ್ಯಧರ್ಮೀಯರ ವಿರುದ್ಧ ಕೊಲೆ, ಹಿಂಸಾಚಾರಕ್ಕೆ ಪ್ರೇರಣೆ ನೀಡಿರುವುದು ಇತಿಹಾಸದ ಅಧ್ಯಯನದಿಂದ ಸ್ಪಷ್ಟವಾಗುತ್ತದೆ. ಭಿನ್ನ ಧಾರ್ಮಿಕ ನಂಬಿಕೆಗಳು ಘರ್ಷಣೆಗೆ ಕಾರಣವಾಗಬೇಕಾಗಿಲ್ಲ. ಆದರೆ ಎಲ್ಲ ಧರ್ಮಗಳು ಅಂತರಂಗದಲ್ಲಿ ಮತಾಂಧತೆಯ ಆರಾಧನೆಗೆ ಕಂಕಣ ತೊಟ್ಟಿವೆ. ಚರಿತ್ರೆಯ ಉದ್ದಕ್ಕೂ ಯಹೂದಿ, ಕ್ರೈಸ್ತ, ಇಸ್ಲಾಂ, ಸಿಖ್ ಮತ್ತು ಹಿಂದು ಧರ್ಮಗಳು ಅಸಹಿಷ್ಣುತೆಯಿಂದ ನಡೆದುಕೊಂಡ ಅಸಂಖ್ಯ ಉದಾಹರಣೆಗಳಿವೆ.

ಅಸಹಿಷ್ಣುತೆಯ ಉಗಮ ಮೊದಲ ದೈವಾಜ್ಞೆ (Commandment)ಯಿಂದಲೇ ಪ್ರಾರಂಭವಾಗುತ್ತದೆ. ''ನೀನು ನನ್ನ ಮುಂದೆ ಇತರ ದೇವರುಗಳನ್ನು ಹೊಂದಿರಕೂಡದು'' ಎಂದು ದೇವರು ಮೋಸಸ್‌ನಿಗೆ ಆಜ್ಞೆ ಮಾಡುತ್ತಾನೆ. ಪ್ರವಾದಿಗಳ ಈ ಕಲ್ಪನೆ ದಿನದಿಂದ ದಿನಕ್ಕೆ ಬಲವಾಗಿ ಬೇರೂರಿ ಬೆಳೆಯಿತು. ಮುಂದಿನ ಧರ್ಮಗಳೂ ಇದನ್ನೇ ಅನುಸರಿಸಿದುವು. ಮೊದಲು ಯಹೂದಿಗಳಿಗೂ ಕ್ರೈಸ್ತರಿಗೂ ದೇವರ ವಿಷಯದಲ್ಲಿ ಘರ್ಷಣೆಯಾಯಿತು. ಯಹೂದಿಗಳು ಇತರ ಧರ್ಮಗಳ ದೇವರನ್ನು ಎಂದೂ ಒಪ್ಪಿಕೊಳ್ಳಲಿಲ್ಲ. ಕ್ರೈಸ್ತ ಧರ್ಮ ಪ್ರವರ್ಧಮಾನಕ್ಕೆ ಬಂದ ನಂತರ ಯಹೂದಿಗಳಿಗೆ ಸವಾಲು ಹಾಕಿತು. ಸಿಕ್ಕಿಸಿಕ್ಕಲ್ಲಿ ಯಹೂದಿಗಳನ್ನು ಚಿತ್ರಹಿಂಸೆ ಮಾಡುವುದರ ಮೂಲಕ ಕ್ರೈಸ್ತ ಯುಗದ ವೈಭವ ಪ್ರಾರಂಭವಾಯಿತು. ಇತರ ಧರ್ಮೀಯರನ್ನು ಕ್ರೈಸ್ತರು ಮೂರ್ತಿ ಪೂಜಕರೆಂದು ತಿರಸ್ಕಾರದಿಂದ ಕಾಣಲಾರಂಭಿಸಿದರು.

ಬೈಬಲ್‌ನಲ್ಲಿರುವ ಅತಾರ್ಕಿಕ ಸಂಗತಿಗಳನ್ನು ಬಹಿರಂಗಗೊಳಿಸಿದ್ದಕ್ಕಾಗಿ ಅನೇಕ ಕ್ರೈಸ್ತರೇ ಕ್ರೈಸ್ತ ಮತಾಂಧರಿಂದ ಚಿತ್ರ ಹಿಂಸೆಗೊಳಗಾಗಿ ಹುತಾತ್ಮರಾದರು. ಅನೇಕ ಭೌತ ವಿಜ್ಞಾನಿಗಳು ಚರ್ಚಿನ ಕೋಪಕ್ಕೆ ತುತ್ತಾಗಿ ತೊಳಲಾಡಿದರು. ಕೋಪರ್ನಿಕಸ್‌ನ ವಾದವನ್ನು ಬೆಂಬಲಿಸಿದರೆ ಚರ್ಚಿನ ವಕ್ರದೃಷ್ಟಿಗೆ ಈಡಾಗಬೇಕಾಗುವುದೆಂದು ವಿಜ್ಞಾನಿಗಳು ಹೆದರಿದರು. ಆದರೆ ಬ್ರೂನೋ ಮಾತ್ರ ಪರಿಣಾಮವನ್ನು ಲೆಕ್ಕಿಸದೆ ಆ ವಾದವನ್ನು ಬೆಂಬಲಿಸಿದ. ಅದಕ್ಕಾಗಿ ಅವನು ಭಾರೀ ಬೆಲೆಯನ್ನು ತೆರಬೇಕಾಯಿತು; ದೇಶಾಂತರ ಅಲೆಯಬೇಕಾಯಿತು. ತನ್ನ ಬೆನ್ನಟ್ಟಿ ಹಿಂಬಾಲಿಸಿದ ಧಾಳಿಕಾರರನ್ನು ಮೂದಲಿಸಿ ಅವನು ತಿರುಗಿಬಿದ್ದ. ಇದರ ಪರಿಣಾಮವಾಗಿ ಧರ್ಮ ದ್ರೋಹದ ಆಪಾದನೆಯನ್ನು ಹೊತ್ತು ವೆನಿಸ್ಸಿನ ಸೆರೆಮನೆಯಲ್ಲಿ ಕೊಳೆಯಬೇಕಾಯಿತು. ಕೊನೆಗೆ ಅವನನ್ನು ಜೀವಸಹಿತ ಸುಟ್ಟು ಅವನ ಬೂದಿಯನ್ನು ಗಾಳಿಗೆ ತೂರಲಾಯಿತು. ಕೋಪರ್ನಿಕಸನು ಹುತಾತ್ಮಕನಾದ ಅನೇಕ ವರ್ಷಗಳ ನಂತರ ಗೆಲಿಲಿಯೋನ ದೂರದರ್ಶಕ ಯಂತ್ರದಿಂದ ಕೋಪರ್ನಿಕಸನ ಸಿದ್ಧಾಂತ ಸರಿ ಎಂದು ದೃಢಪಟ್ಟಿತು.

ಬೈಬಲ್‌ನ ಹೇಳಿಕೆಗೆ ವಿರುದ್ಧವಾಗಿ ಭೂಮಿ ಸೂರ್ಯನ ಸುತ್ತ ಸುತ್ತುತ್ತದೆಂದು ಸತ್ಯವನ್ನು ಕಂಡು ಹಿಡಿದ ಮಹಾ ವಿಜ್ಞಾನಿ ಗೆಲಿಲಿಯೋ ತನ್ನ ಸಿದ್ಧಾಂತವನ್ನು ಪ್ರಚುರ ಪಡಿಸದಂತೆ ಚರ್ಚು ಆತನ ಮೇಲೆ ಒತ್ತಡ ತಂದಿತು. ಅವನು ತನ್ನ ಇಚ್ಛೆಗೆ ವಿರುದ್ಧವಾಗಿ ತನ್ನ ಸಿದ್ಧಾಂತವನ್ನು ಹಿಂತೆಗೆದುಕೊಳ್ಳಬೇಕಾಯಿತು.

ಮತ್ತೊಬ್ಬ ಮೇಧಾವಿ ಡಾರ್ವಿನ್‌ನ ವಿಕಾಸವಾದವೂ ಬೈಬಲ್‌ನ ಹೇಳಿಕೆಗೆ ದೊಡ್ಡ ಆಘಾತವನ್ನುಂಟುಮಾಡಿತು. ಡಾರ್ವಿನ್ನನ ಸಿದ್ಧಾಂತ ''ಭವ್ಯವಾದ ದೈವ ಸೃಷ್ಟಿಗೆ ಕಳಂಕವನ್ನುಂಟು ಮಾಡುವ ಪ್ರಯತ್ನ '' ಎಂದು ಕ್ರಿಶ್ಚಿಯನ್ನರು ಬೊಬ್ಬೆ ಹಾಕಿದರು. ಕ್ರೈಸ್ತ ಮತದ ಎಲ್ಲ ಪಂಗಡಗಳೂ - ಕ್ಯಾಥೋಲಿಕ್, ಪ್ರಾಟಿಸ್ಟಾಂಟ್, ಲೂತೆರೆನ್, ಆಂಗ್ಲಿಕನ್ ಇತ್ಯಾದಿ - ಡಾರ್ವಿನ್‌ನನ್ನು ಖಂಡಿಸುವುದರಲ್ಲಿ ಒಟ್ಟುಗೂಡಿದರು.

ಕ್ರೈಸ್ತಧರ್ಮ ಕ್ರೈಸ್ತರಿಗೆ ಮಾತ್ರ ಮೋಕ್ಷ ಸಾಧ್ಯವಿದೆ ಎಂದು ಭಾವಿಸುವಂತೆ ಇತರ ಎಲ್ಲಾ ಧರ್ಮಗಳೂ ತಮ್ಮ ಧರ್ಮೀಯರಿಗೆ ಮಾತ್ರ ಮೋಕ್ಷ ಮೀಸಲು ಎಂಬಂತೆ ವರ್ತಿಸುತ್ತಾ ಬಂದಿವೆ. ಪ್ರತಿಯೊಬ್ಬ ಮುಸ್ಲಿಮನನ್ನು ಸೋದರನಂತೆ ಕಾಣಬೇಕೆಂದು ಹೇಳುವ ಇಸ್ಲಾಂ ಧರ್ಮ ಇತರರ ಹೃದಯದಲ್ಲಿ ಭೀತಿಯನ್ನು ಭಿತ್ತಿ ಅವರನ್ನು ನರಕದ ಅಗ್ನಿಗೆ ತಳ್ಳಲೆಳಸುತ್ತದೆ. ದೇವರು ಮತ್ತು ಧರ್ಮದ ಹೆಸರಿನಲ್ಲಿ ಯುದ್ಧ ಮಾಡುವುದು ಪ್ರತಿಯೊಬ್ಬ ಮುಸ್ಲಿಮನ ಕರ್ತವ್ಯವೆಂದು ಬೋಧಿಸಲಾಗಿದೆ.

ಬಾಗದಾದಿನ ಖಲೀಫನು ಅಲೆಕ್ಸಾಂಡ್ರಿಯಾವನ್ನು ಗೆದ್ದು ವಶಪಡಿಸಿಕೊಂಡಾಗ ಆ ನಗರದ ಬೃಹದ್ ಗ್ರಂಥಾಲಯವನ್ನು ಸುಟ್ಟು ಹಾಕಲು ಆಜ್ಞೆ ಮಾಡಿದ. ಏಕೆಂದರೆ ಅವನ ಪ್ರಕಾರ ಆ ಗ್ರಂಥಗಳು ಖುರಾನಿನ ಬೋಧನೆಗೆ ವಿರುದ್ಧವಾಗಿದ್ದರೆ ಅವು ನಾಶವಾಗಲು ಯೋಗ್ಯವಾದುವು, ಇಲ್ಲವೆ ಅವು ಖುರಾನಿನ ಅಭಿಪ್ರಾಯಗಳನ್ನು ಅನುಮೋದಿಸುವುದಾದರೆ ಅವು ಅನಗತ್ಯ. ತಮ್ಮ ಧರ್ಮದವರಲ್ಲಿ ಸೋದರಭಾವವನ್ನು ತರುವುದರಲ್ಲಿಯೂ ಇಸ್ಲಾಂ ಯಶಸ್ವಿಯಾಗಿಲ್ಲ. ಇರಾನ್ ಮತ್ತು ಇರಾಖ್ ರಾಷ್ಟ್ರಗಳು ಎರಡೂ ಮುಸ್ಲಿಂ ರಾಷ್ಟ್ರಗಳಾದರೂ ೮೦ರ ದಶಕದ ಉದ್ದಕ್ಕೂ ಭೀಕರ ಯುದ್ಧದಲ್ಲಿ ತೊಡಗಿದ್ದುವು. ಇರಾಖ್ ನೆರೆಯ ಮುಸ್ಲಿಂ ರಾಷ್ಟ್ರಗಳಾದ ಕುವಾಯಿತ್ ಮತ್ತು ಸೌದಿ ಅರೇಬಿಯಾ ವಿರುದ್ಧ ಆತ್ಮಘಾತಕ ಯುದ್ಧದಲ್ಲಿ ತೊಡಗಿತು.

ಧರ್ಮಗಳಲ್ಲೆಲ್ಲಾ ಸಿಖ್ ಧರ್ಮ ಶ್ರೇಷ್ಠ, ಗುರುದ್ವಾರವೇ ಅತ್ಯಂತ ಪವಿತ್ರವಾದ ದೇವಮಂದಿರ (ಅಷ್ಟಪದಿ ೩, ಪೌರಿ ೮; Selection from the Sacred writings of Sikhs by Dr. Trilochan Singh) ಎಂದು ಸಿಖ್ ಧರ್ಮ ಭಾವಿಸುತ್ತದೆ.

ಹಿಂದು ಧರ್ಮ ಅನ್ಯ ಧರ್ಮೀಯರನ್ನು ಮ್ಲೇಚ್ಛರೆಂದು ತುಚ್ಛೀಕರಿಸುವುದರ ಜೊತೆಗೆ ತನ್ನ ಧರ್ಮದವರಲ್ಲಿಯೇ ತಾರತಮ್ಯವನ್ನು ಕಲ್ಪಿಸಿ ಶೂದ್ರಗಳನ್ನು ಪಶುಗಳಿಗಿಂತಲೂ ಕಡೆಯಾಗಿ ಕಾಣುತ್ತಾ ಬಂದಿದೆ. ಶೂದ್ರನು ವೇದ ಮಂತ್ರಗಳ ಪಠನವನ್ನು ಕೇಳಿದರೆ ಅವನ ಕಿವಿಯಲ್ಲಿ ಸೀಸದ ಎರಕವನ್ನು ಸುರಿಯಬೇಕು, ಅವನು ಮಂತ್ರಗಳನ್ನು ಪಠಿಸಿದರೆ ಅವನ ನಾಲಗೆಯನ್ನು ಕತ್ತರಿಸಬೇಕು ಎಂದು ಗೌತಮ ಧರ್ಮ ಸೂತ್ರವು ನಿಯಂತ್ರಿಸುತ್ತದೆ.

''ಕೆಳಜಾತಿಯ ಜನರಿಗೆ ಯಾವ ವಿದ್ಯೆಯನ್ನೂ ಕಲಿಸಬಾರದು. ಯಾವನಾದರೂ ಉಪಾಧ್ಯಾಯನು ಶೂದ್ರನಿಗೆ ವಿದ್ಯೆ ಕಲಿಸಲು ಪ್ರಯತ್ನಿಸಿದರೆ ಅವನಿಗೆ ಪಾಪ ತಟ್ಟುತ್ತದೆ. ಯಾವನಾದರೂ ಬ್ರಾಹ್ಮಣನು ಶೂದ್ರನಿಗೆ ವಿದ್ಯೆ ಕಲಿಸಿದರೆ ಉಳಿದ ಬ್ರಾಹ್ಮಣರು ಅವನನ್ನು ಬಹಿಷ್ಕರಿಸಿ ಊರಿಂದ ಗಡೀಪಾರು ಮಾಡಬೇಕು'' ಎಂದು ಸ್ಕಂದ ಪುರಾಣದ ವೈಷ್ಣವ ಕಾಂಡ ಮತ್ತು ಬ್ರಹ್ಮ ಕಾಂಡಗಳಲ್ಲಿ ವಿವರಿಸಲಾಗಿದೆ.

ವಿಜ್ಞಾನವು ಮಾನವತಾವಾದದ ಬೆಳವಣಿಗೆಯಲ್ಲಿ ಬಹು ಮುಖ್ಯ ಪಾತ್ರ ವಹಿಸಿತು. ಅದು ಮೂಢನಂಬಿಕೆಗಳನ್ನು ಬುಡಮೇಲು ಮಾಡತೊಡಗಿತು, ಮಾನವರಲ್ಲಿ ತಾರತಮ್ಯ ಮಾಡುವುದನ್ನು ತಡೆಗಟ್ಟಿತು. ಅಸಹಿಷ್ಣುತೆಯನ್ನು ತೊಡೆದು ಹಾಕಲು ನೆರವಾಯಿತು. ಒಟ್ಟಾರೆ ವಿಜ್ಞಾನವು ವೈಚಾರಿಕತೆಯನ್ನು ಬೆಳೆಸುವಲ್ಲಿ ಸಹಕಾರಿಯಾಯಿತು. ಹತ್ತೊಂಬತ್ತನೆಯ ಶತಮಾನದಲ್ಲಿ ವಿಜ್ಞಾನವು ಕೆಲವು ಸಂದರ್ಭಗಳಲ್ಲಿ ಮಾನವೀಯ ತತ್ವಗಳ ಪರವಾಗಿ ಮತ್ತು ಬೇರೆ ಕೆಲವು ಸಂದರ್ಭಗಳಲ್ಲಿ ವಿರುದ್ಧವಾಗಿ ಹೋರಾಡಿತು. ವೈದ್ಯಕೀಯ ವಿಜ್ಞಾನ ಮತ್ತು ಶಸ್ತ್ರ ಚಿಕಿತ್ಸೆಯು ಮಾನವನ ದೈಹಿಕ ನೋವು ಮತ್ತು ನರಳಿಕೆಗಳನ್ನು ಕಡಿಮೆ ಮಾಡುವಲ್ಲಿ ಅಸಾಧಾರಣ ಪ್ರಗತಿಯನ್ನು ಸಾಧಿಸಿದುವು. ಅನ್ವಯಿಕ ವಿಜ್ಞಾನವು ಮಾನವನ ಸುಖ ಮತ್ತು ಸವಲತ್ತುಗಳನ್ನು ಹೆಚ್ಚಿಸುವಲ್ಲಿ ಗಣನೀಯ ಸಾಧನೆ ಮಾಡಿತು.

ಆದರೆ ಮಾಲ್ಥಸ್ ಮತ್ತು ಡಾರ್ವಿನ್ನರ ಸಿದ್ಧಾಂತಗಳು ಹೋರಾಟದ ಅಗತ್ಯವನ್ನು ಒಂದು ಸಿದ್ಧಾಂತವನ್ನಾಗಿ ಮಾಡಿದುದರಿಂದ ಮಾನವೀಯತೆಯ ನೀತಿಯನ್ನೇ ಪ್ರಶ್ನಿಸುವಂತಾಯಿತು. ಭೌತ ವಿಜ್ಞಾನವು ಮಾನವತಾವಾದಕ್ಕೆ ಪೂರಕವಾಗಿದ್ದರೆ ಜೀವ ವಿಜ್ಞಾನವು ವಿರುದ್ಧವಾಗಿ ಕೆಲಸ ಮಾಡಿತು. ಕೈಗಾರಿಕಾ ಕ್ರಾಂತಿಯಲ್ಲಿ ವಿಜ್ಞಾನವು ದುಡಿಯುವ ವರ್ಗವನ್ನು ಹೊಸ ಆಪತ್ತಿಗೆ ಈಡು ಮಾಡಿತು. ಯುದ್ಧದಲ್ಲಿ ಅತಿಯಾದ ಸಾವು ನೋವುಗಳಿಗೆ ಕಾರಣವಾಯಿತು. ವಿಜ್ಞಾನದ ಒಟ್ಟಾರೆ ಕಾಣಿಕೆ ಮಾನವನ ದುಃಖವನ್ನು ಕಡಿಮೆ ಮಾಡುವುದಾಗಿದೆಯೆ ಎಂದು ನಿರಾಶಾವಾದಿಗಳು ಪ್ರಶ್ನೆ ಮಾಡುವಂತಾಯಿತು.

ಕಳೆದ ಎರಡು ಶತಮಾನಗಳಲ್ಲಿ ಹಲವಾರು ಸ್ವಯಂ ಸೇವಾ ಸಂಸ್ಥೆಗಳು ಕೆಲವು ನಿರ್ದಿಷ್ಟ ಮಾನವೀಯ ಉದ್ದೇಶಗಳ ಸಾಧನೆಗಾಗಿ ಗಮನಾರ್ಹ ಚಟುವಟಿಕೆಗಳಲ್ಲಿ ತೊಡಗಿರುವುದು ವೇದ್ಯವಾಗುತ್ತದೆ. ದಾಸ್ಯ ಪದ್ಧತಿಯ ನಿರ್ಮೂಲನಕ್ಕಾಗಿ ನಡೆದ ಚಳುವಳಿ ಬಹುಮಟ್ಟಿಗೆ ಯಶಸ್ಸನ್ನು ಸಾಧಿಸಿದೆ. ಇಂದು ಎಲ್ಲೋ ಕೆಲವು ಜನಾಂಗಗಳ ಮೂಲೆಗಳಲ್ಲಿ ದಾಸ್ಯ ಪದ್ಧತಿ ಮುಂದುವರೆದಿರುವುದು ಕಂಡು ಬರುತ್ತದೆ. ಕೆಲವು ಸಂಸ್ಥೆಗಳು ಅದನ್ನು ಸಂಪೂರ್ಣವಾಗಿ ತೊಡೆದು ಹಾಕಲು ಪ್ರಯತ್ನಿಸುತ್ತಿವೆ. ಕೈಗಾರಿಕೆಗಳು, ನೈರ್ಮಲ್ಲೀಕರಣ ಮತ್ತು ವಸತಿ ಸೌಕರ್ಯಗಳಲ್ಲಿ ಪ್ರಗತಿಪರ ಗುಂಪುಗಳು ಮಾಡಿದ ಸುಧಾರಣೆಗಳನ್ನು ಆಧುನಿಕ ಸರ್ಕಾರಗಳು ಅಳವಡಿಸಿಕೊಂಡ ಪರಿಣಾಮವಾಗಿ ಭಾಗಶಃ ಯಶಸ್ಸು ಸಾಧ್ಯವಾಗಿದೆ. ಅಪರಾಧಿಗಳಿಗೆ ಅನ್ವಯಿಸುವ ಕಾನೂನು ಕ್ರಮಗಳು ಮತ್ತು ಜೈಲುಗಳ ಸುಧಾರಣೆಗಾಗಿ ಮಾನವತಾವಾದಿಗಳು ನೀಡಿದ ಸಲಹೆಗಳನ್ನು ಸರ್ಕಾರಗಳು ಕಾರ್ಯಗತ ಮಾಡಿವೆ. ಔಷಧೋಪಚಾರ, ಮಾನಸಿಕ ರೋಗಿಗಳ ಬಗ್ಗೆ ಕಾಳಜಿ, ಕ್ರೀಡೆಗಳು, ಕಲೆ ಮತ್ತು ಸಂಗೀತಗಳಿಗೆ ನೀಡುವ ಪ್ರೋತ್ಸಾಹ, ಅನಾಥ ಸೇವೆ ಮುಂತಾದ ಸಾಮಾಜಿಕ ಸೇವಾ ಕಾರ್ಯಗಳು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಯುತ್ತಿವೆ. ಯುದ್ಧ ಸಮಯದಲ್ಲಿ ಉತ್ತಮ ನೈರ್ಮಲ್ಯ ಮತ್ತು ಶುಶ್ರೂಷೆಗಳನ್ನು ಒದಗಿಸುವ ಉದ್ದೇಶದಿಂದ ಒಂದು ಸಣ್ಣ ಗುಂಪಿನ ಮೂಲಕ ಪ್ರಾರಂಭವಾದ ರೆಡ್‌ಕ್ರಾಸ್ ಇಂದು ಪ್ರಪಂಚದ ಯಾವುದೇ ಭಾಗದಲ್ಲಿ ಭೀಕರ ಆಪತ್ತುಗಳು ಸಂಭವಿಸಿದಾಗ ಸಂಕೀರ್ಣ ಸ್ವರೂಪದ ಪರಿಹಾರಗಳನ್ನು ಒದಗಿಸುವ ಬೃಹತ್ ಸೇವಾ ಸಂಸ್ಥೆಯಾಗಿ ಬೆಳೆದಿದೆ.

ಮಾನವತಾವಾದದ ಚಳುವಳಿಗಳು ಮಹಿಳೆಯರು, ಮಕ್ಕಳು ಮತ್ತು ಪ್ರಾಣಿಗಳ ರಕ್ಷಣೆಗಾಗಿ ವಿಶೇಷವಾಗಿ ತಮ್ಮ ಗಮನವನ್ನು ಹರಿಸಿವೆ. ಮಹಿಳೆಯರು ನಿಸರ್ಗದತ್ತವಾಗಿ ಕೀಳು ವರ್ಗಕ್ಕೆ ಸೇರಿದವರಾಗಿದ್ದಾರೆ ಎಂಬ ಅರಿಸ್ಟಾಟಲನ ವಾದವನ್ನು ಇಂದು ಯಾರೂ ಅಂಗೀಕರಿಸುವುದಿಲ್ಲ. ಆದರೆ ಪ್ರಕೃತಿ ಮತ್ತು ಸಮಾಜಗಳು ಮಹಿಳೆಯರನ್ನು ಕೆಲವು ಸನ್ನಿವೇಶಗಳಲ್ಲಿ ಕೀಳು ಸ್ಥಿತಿಯಲ್ಲಿಡಲು ಸಂಚು ಮಾಡಿವೆ ಎಂಬುದನ್ನು ಅಂಗೀಕರಿಸುತ್ತಾ ಅವರ ರಕ್ಷಣೆಗಾಗಿ ಆಧುನಿಕ ಮಾನವತಾವಾದ ಕನಿಷ್ಠ ವೇತನ, ವಿಶೇಷ ಕೈಗಾರಿಕಾ ಶಾಸನ, ಹೆರಿಗೆ ಭತ್ಯ ಇತ್ಯಾದಿಗಳ ಮೂಲಕ ಪ್ರಯತ್ನಶೀಲವಾಗಿದೆ. ಮಕ್ಕಳನ್ನು ಬಾಲ ಕಾರ್ಮಿಕ ಶಾಸನದ ಮೂಲಕ ರಕ್ಷಿಸಲಾಗುತ್ತಿದೆ. ಮಕ್ಕಳ ಮೇಲೆ ನಡೆಯುವ ಕ್ರೌರ್ಯವನ್ನು ತಡೆಗಟ್ಟಲು ಕೆಲವು ಸಂಸ್ಥೆಗಳು ಅಸ್ತಿತ್ವಕ್ಕೆ ಬಂದಿವೆ. ಪ್ರಾಣಿಗಳ ಮೇಲೆ ನಡೆಯುತ್ತಿರುವ ಹಿಂಸಾಚಾರವನ್ನು ನಿಯಂತ್ರಿಸಲು ಇಂದು ಎಲ್ಲ ನಾಗರಿಕ ಸರ್ಕಾರಗಳು ತಮ್ಮದೇ ಆದ ಕಾಯ್ದೆಗಳನ್ನು ಆಚರಣೆಯಲ್ಲಿ ತಂದಿವೆ. ಪ್ರಾಣಿಗಳಿಗಾಗುತ್ತಿರುವ ಕ್ರೌರ್ಯದ ವಿರುದ್ಧ ಪ್ರಜ್ಞಾವಂತ ಪ್ರಜೆಗಳು ನೀಡುವ ದೂರುಗಳನ್ನು ಪರಿಶೀಲಿಸಿ ಸಂಬಂಧಪಟ್ಟವರಿಗೆ ಎಚ್ಚರಿಕೆಯನ್ನು ನೀಡುವ ಮತ್ತು ತಪ್ಪಿತಸ್ಥರನ್ನು ಶಿಕ್ಷಿಸುವ ಕಾನೂನುಗಳು ಇಂದು ಜಾರಿಯಲ್ಲಿವೆ. ಪ್ರಯೋಗಾಲಯಗಳಲ್ಲಿ ಪ್ರಾಣಿಗಳಿಗೆ ಚಿತ್ರ ಹಿಂಸೆಯಾಗುವುದನ್ನು ಈ ಕಾಯಿದೆ ತಡೆಗಟ್ಟುತ್ತದೆ. ಆಹಾರಕ್ಕಾಗಿ ಪ್ರಾಣಿಗಳನ್ನು ಬಲಿ ಕೊಡುವಾಗಲೂ ಅವುಗಳಿಗೆ ಹಿಂಸೆಯಾಗುವುದನ್ನು ತಡೆಗಟ್ಟುವ ವಿಧಾನಗಳು ಇಂದು ಬಳಕೆಗೆ ಬಂದಿವೆ.

ಮಾನವತಾವಾದವನ್ನು ಪರಸ್ಪರ ವಿರೋಧಿಗಳಾದ ರಾಜಕೀಯ ಪಕ್ಷಗಳು, ವಿಭಿನ್ನ ಧಾರ್ಮಿಕ ಗುಂಪುಗಳು ಬೆಂಬಲಿಸಿರುವುದು ಉಂಟು. ಮಾನವತಾವಾದಿಗಳು ಆಗಾಗ ವಿರುದ್ಧ ಉದ್ದೇಶಗಳಿಗಾಗಿ ಹೋರಾಡಬೇಕಾಗಿದೆ.

ಕ್ಷಯರೋಗದಿಂದ ನರಳುವವರ ಪ್ರಾಣವನ್ನು ಉಳಿಸಬೇಕೆಂಬ ಅವರ ಅಪೇಕ್ಷೆ ಪ್ರಯೋಗಾಲಯದ ಪ್ರಾಣಿಗಳನ್ನು ಸಂರಕ್ಷಿಸಬೇಕೆಂಬ ಅವರ ಬಯಕೆಗೆ ವಿರುದ್ಧವಾಗಿದೆ. ಮಾನವತಾವಾದವು ಅಂತಹ ವಿರೋಧಾಭಾಸಗಳ ಸಮಸ್ಯೆಗಳನ್ನು ಹೋಗಲಾಡಿಸಲು ಯಾವ ಪರಿಹಾರವನ್ನೂ ನೀಡುವುದಿಲ್ಲ.

ಮಾನವತಾವಾದದ ಚಟುವಟಿಕೆಗಳನ್ನು ಕುರಿತು ಕೆಲವು ಟೀಕೆಗಳೂ ಇವೆ. ಅಪರಾಧ, ಬಡತನ, ಯುದ್ಧಗಳಂತಹ ವಿಷಯಗಳಲ್ಲಿ ಮಾನವೀಯ ಕಾರ್ಯಕ್ರಮಗಳು ಪರಿಣಾಮಕಾರಿಯಾಗುವುದಿಲ್ಲ ಎಂದು ವಿಮರ್ಶಕರ ಮತ. ಅಂತಹ ವಿಧಾನಗಳು ಕೇವಲ ಉಪಶಮನಕಾರಿಗಳು. ಪರಿಹಾರೋಪಾಯಗಳನ್ನು ಉಗ್ರವಾದ ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುವುದನ್ನು ತಪ್ಪಿಸಲು ಮಾತ್ರ ಅವುಗಳಿಂದ ಸಾಧ್ಯವಾಗಬಹುದು. ಬಡವರು ಮತ್ತು ತುಳಿತಕ್ಕೊಳಗಾದವರ ಬಗ್ಗೆ ಕನಿಕರ ತೋರಿಸುವ ಕೋಮಲ ಹೃದಯದ ಜನ ವಾಸ್ತವವಾಗಿ ದುರ್ಬಲರ ನೆರವಿಗೆ ಬರುವುದರ ಬದಲು ಅವರನ್ನು ಇನ್ನಷ್ಟು ತೊಂದರೆಗೀಡು ಮಾಡುತ್ತಾರೆ ಎಂಬುದು ವಿಮರ್ಶಕರ ಅಭಿಮತ. ಏತಕ್ಕೆಂದರೆ ತುಳಿತಕ್ಕೊಳಗಾದವರು ತಮ್ಮ ಕಷ್ಟಗಳು ಒಂದು ಮಿತಿಯನ್ನು ಮೀರಿದ ಮೇಲೆ ತಮ್ಮ ವಿರೋಧಿಗಳ ವಿರುದ್ಧ ತಿರುಗಿ ಬಿದ್ದು ಬಂಡೇಳುತ್ತಾರೆ. ಮಾನವತಾವಾದಿಗಳ ಉಪಶಮನ ಕ್ರಮ ಬಂಡೇಳುವಿಕೆಯನ್ನು ತಡೆಗಟ್ಟಿ ಅವರು ಶಾಶ್ವತವಾಗಿ ಕಷ್ಟದಲ್ಲೇ ತೊಳಲಾಡುವಂತೆ ಮಾಡುತ್ತದೆ ಎಂಬುದು ಅವರ ತರ್ಕವಾಗಿದೆ.

ಮಾನವತಾವಾದವನ್ನು ಕುರಿತು ಜೀವ ವಿಜ್ಞಾನಿಗಳು ಮತ್ತೊಂದು ಬಗೆಯ ವಿಮರ್ಶೆಯನ್ನು ಮುಂದಿಟ್ಟಿದ್ದಾರೆ. ಮಾನವೀಯ ಕಾರ್ಯಕ್ರಮಗಳು ಪ್ರಕೃತಿ ನಿಯಮಕ್ಕೆ ವಿರುದ್ಧವಾದುವು ಎಂಬುದು ಅವರ ವಾದ. ಜೀವ ಚೈತನ್ಯದಲ್ಲಿ ನಿರಂತರವಾದ ಸ್ಪರ್ಧೆ ಇರುವುದರಿಂದಲೇ ಸೃಷ್ಟಿಯಲ್ಲಿ ಪ್ರಗತಿ ಸಾಧ್ಯವಾಗಿದೆ. ಈ ಸ್ಪರ್ಧೆಯಲ್ಲಿ ಶ್ರೇಷ್ಠವಾದುದು ಮತ್ತು ಬಲಿಷ್ಠವಾದುದು ಮಾತ್ರ ಉಳಿಯುತ್ತದೆ, ಕನಿಷ್ಠವಾದುದು ಮತ್ತು ದುರ್ಬಲವಾದುದು ನಾಶವಾಗುತ್ತದೆ. ಇದರಿಂದ ಹಿಂದಿನ ತಲೆಮಾರಿಗಿಂತ ಮುಂದಿನ ತಲೆಮಾರಿನ ಸಂತತಿ ಶ್ರೇಷ್ಠವೂ, ಬಲಿಷ್ಠವೂ ಆಗಿ ಅಭಿವೃದ್ಧಿ ಹೊಂದುತ್ತಾ ಹೋಗುತ್ತದೆ. ದುರ್ಬಲರ ಬೆಂಬಲಕ್ಕೆ ನಿಲ್ಲುವುದರಿಂದ ಹಸಿವಿನಿಂದ ನರಳಿ ನಾಶವಾಗುವ ಸಂತತಿಯನ್ನು ಉಳಿಸಿದಂತಾಗುತ್ತದೆ. ಇದರಿಂದ ಅನರ್ಹ ಸಂತಾನ ನಮ್ಮನ್ನು ಅವನತಿಯತ್ತ ಕೊಂಡೊಯ್ಯಲು ಅವಕಾಶ ಕಲ್ಪಿಸಿದಂತಾಗುತ್ತದೆ. ಅರ್ಹವಾದುದು ಮಾತ್ರ ಉಳಿಯಬೇಕೆಂಬ ನಿಸರ್ಗ ನಿಯಮಕ್ಕೆ ಮಾನವತಾವಾದ ಅಡ್ಡಿಯನ್ನುಂಟು ಮಾಡಿ ಪ್ರಗತಿಗೆ ಮಾರಕವಾಗುತ್ತದೆ. ಈ ವಾದದ ಪ್ರತಿಪಾದಕ ಹರ್ಬರ್ಟ್ ಸ್ಪೆನ್ಸರ್ ದುರ್ಬಲರಿಗೆ ನೀಡುವ ಪರಿಹಾರದ ವಿರುದ್ಧ ಹೀಗೆ ಹೇಳುತ್ತಾನೆ : "Perading all nature, we may see at work a stern discipline which is a little cruel that it may be very kind". ಮಾನವತಾವಾದ ಮಧ್ಯ ಪ್ರವೇಶಿಸುವುದನ್ನು ಅಲ್ಲಗಳೆಯುವ ಈ ಸಿದ್ಧಾಂತವು ತಾರ್ಕಿಕವಾಗಿ ಅಸಂಗತವಾದುದಾಗಿದೆ. ಔಷಧೋಪಚಾರ, ಶಸ್ತ್ರ ಚಿಕಿತ್ಸೆಗಳೆಲ್ಲಾ ಪ್ರಕೃತಿಯನ್ನು ನಿಯಂತ್ರಿಸುವ ಮಧ್ಯ ಪ್ರವೇಶಗಳಲ್ಲವೆ? ಅವುಗಳ ಉಪಯುಕ್ತತೆಯನ್ನು ಅಲ್ಲಗಳೆಯಲು ಸಾಧ್ಯವೆ? ಸಂತಾನ ನಿಯಂತ್ರಣಕ್ಕಾಗಿ ಅನುಸರಿಸುವ ಎಲ್ಲ ವಿಧಾನಗಳೂ ಒಂದು ರೀತಿಯಲ್ಲಿ ಪ್ರಕೃತಿ ನಿಯಮಗಳೊಳಗೆ ಮಾಡುವ ಮಧ್ಯ ಪ್ರವೇಶಗಳೇ ಆಗಿವೆ.

ಮೇಲಿನ ವಾದದ ತಾರ್ಕಿಕತೆಯನ್ನು ಸ್ವಲ್ಪ ಒಳಹೊಕ್ಕು ನೋಡಬಹುದು. ಹತ್ತು ಜನರ ಒಂದು ಸಮುದಾಯವಿದೆ ಎಂದು ಭಾವಿಸೋಣ. ಅದರಲ್ಲಿ ಒಂದನೆಯವನು ಶ್ರೇಷ್ಠ, ಹತ್ತನೆಯವನು ಕನಿಷ್ಠ ಎಂದು ಭಾವಿಸುವುದಾದರೆ, ಕನಿಷ್ಠವಾದ ಹತ್ತನೆಯವನು ಮೊದಲು ನಾಶವಾಗಬೇಕು. ಆಗ ಒಂಭತ್ತನೆಯವನು ಕನಿಷ್ಠನಾಗುತ್ತಾನೆ ಮತ್ತು ನಾಶವಾಗಲು ತಕ್ಕವನಾಗುತ್ತಾನೆ. ಅವನು ನಾಶವಾದ ಮೇಲೆ ಎಂಟನೆಯವನು. ಹೀಗೆ ಶ್ರೇಷ್ಠನಾದ ಒಂದನೆಯವನನ್ನುಳಿದು ಮಿಕ್ಕವರೆಲ್ಲಾ ನಾಶವಾಗಲು ಯೋಗ್ಯರಾಗುತ್ತಾರೆ. ಒಂದನೆಯವನು ಒಬ್ಬನೇ ಉಳಿದಾಗ ಅವನು ಶ್ರೇಷ್ಠನಾಗುತ್ತಾನೆ. ಹೇಗೆ? ಶ್ರೇಷ್ಠವಾದುದು ಮಾತ್ರ

ಉಳಿಯಲು ಅರ್ಹವಾದುದು ಎಂಬ ಸಿದ್ಧಾಂತವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ದರೆ ನಾವು ಇಲ್ಲಿಗೆ ಬಂದು ತಲುಪುತ್ತೇವೆ. ಅಂದರೆ ಸೃಷ್ಟಿಯಲ್ಲಿ ಶ್ರೇಷ್ಠತೆಗೆ ಸ್ಥಾನವಿರುವಂತೆ ಸಾಮಾನ್ಯತೆಗೂ ಅವಕಾಶವಿರುವುದು ಅನಿವಾರ್ಯವಾಗುತ್ತದೆ.

ಮಾನವತಾವಾದದ ಮೇಲಿನ ಇನ್ನೊಂದು ಟೀಕೆ ಅದು ದುಃಖವನ್ನು ನಿವಾರಿಸುವ ಪ್ರವೃತ್ತಿಯನ್ನು ಮಾತ್ರ ಹೊಂದಿದೆ ಎಂಬ ಕಾರಣಕ್ಕಿರಬಹುದು. ದುರ್ಬಲರಿಗೆ ಮಾತ್ರ ಈ ಸಿದ್ಧಾಂತ ಪ್ರಿಯವಾಗುತ್ತದೆ ಎಂಬುದು ಅಷ್ಟು ಸರಿಯಲ್ಲ. ನಿಜವಾದ ಮಾನವೀಯತೆ ಪರರ ದುಃಖವನ್ನು ಕಡಿಮೆ ಮಾಡುವುದರಲ್ಲಿ ಮಾತ್ರ ಮುಕ್ತಾಯವಾಗುವುದಿಲ್ಲ. ಪರೋಪಕಾರ ಮಾಡುವವನೂ ಆ ಕೆಲಸದಿಂದ ಮಾನಸಿಕ ಸುಖವನ್ನು ಪಡೆಯುತ್ತಾನೆ. ನಿಜವಾದ ಮಾನವತಾವಾದಿಯು ತಾನು ಬೇರೆಯವರಿಗೆ ಸಹಾಯ ಮಾಡುತ್ತಿದ್ದೇನೆ ಎಂಬ ಅಹಂಭಾವವನ್ನು ಹೊಂದಿರದೆ ತಾನು ಮಾಡುವ ಕೆಲಸದಿಂದಲೇ ಆತ್ಮ ಸಂತೋಷವನ್ನು ಪಡೆಯುತ್ತಾನೆ. ಈ ಸುಖ ಯಾವ ಆಧ್ಯಾತ್ಮಿಕ ಸುಖಕ್ಕಿಂತಲೂ ಕಡಿಮೆಯಾದುದಲ್ಲ. ಒಂದು ರೀತಿಯಲ್ಲಿ ಸಂಸ್ಥೀಕೃತ ಧರ್ಮಗಳು ನೀಡುವ ಸುಖಕ್ಕಿಂತ ಈ ಬಗೆಯ ಸುಖ ಶ್ರೇಷ್ಠವಾದುದು.

ಆದಯ್ಯ : ವ್ಯಕ್ತಿ, ಅಭಿವ್ಯಕ್ತಿ

(ರತ್ನ ಪಕ್ಷಿಯ ನುಂಗಿ ರತ್ನ ಕೆಟ್ಟಿತ್ತು)

ಡಾ॥ ಮಲ್ಲೇಪುರಂ ಜಿ. ವೆಂಕಟೇಶ

ಕಂಡೆ ಕಾಣೆನೆಂಬುದು ಕಂಗಳ ಭ್ರಮೆ
ಕೂಡಿದೆನಗಲಿದೆನೆಂಬುದು ಕಾಯ ಭ್ರಮೆ
ಅರಿದೆ ಮರೆದೆನೆಂಬುದು ಚಿದೋಽಹಂ ಭ್ರಮೆ
ಓದು ವೇದಂಗಳ ಜಿನುಗುವುದು ಮನದ ಭ್ರಮೆ
ಇಹಪರಂಗಳಾಸೆಗೆಯ್ವುದು ಜೀವಭ್ರಮೆ
ಸೌರಾಷ್ಟ್ರ ಸೋಮೇಶ್ವರನೆಂಬುದು ಸಕಲ ಭ್ರಮೆ

(ಆದಯ್ಯನ ವಚನಗಳು ಪು. ೬೯)

೧

ವಚನವಾಙ್ಮಯವು ಧಾರ್ಮಿಕ ಪಂಥದ ತುರ್ತಿನ ಚಿಂತನಾಮಾಧ್ಯಮವಾಗಿ ಒಂದರ್ಥದಲ್ಲಿ ಬೆಳೆದು ಬಂದಿತು. ಹನ್ನೆರಡನೆಯ ಶತಮಾನದ ಸಾಂಸ್ಕೃತಿಕ ಬದುಕಿಗೆ ಹೊಸನೆಲೆಯನ್ನು ತಂದುಕೊಟ್ಟದ್ದನ್ನು ಕನ್ನಡ ವಿಮರ್ಶೆ ಈಗಾಗಲೇ ಗುರುತಿಸಿದೆ. ವಚನವಾಙ್ಮಯವು ಕೇವಲ ಧಾರ್ಮಿಕನೆಲೆಯ ವಾಹಕ ಎನ್ನುವ ಮಾತು ಅರ್ಧ ಸತ್ಯವಾದರೆ; ಪೂರ್ಣ ಸತ್ಯ ಇರುವುದು ಧರ್ಮಾತೀತ ನೆಲೆಯನ್ನು ಕಂಡುಕೊಳ್ಳುವುದರಲ್ಲಿ. ಇದನ್ನು ಇನ್ನಷ್ಟು ಆಳವಾಗಿ ಚಿಂತಿಸಿದರೆ: ಅವರಿಗೆ ಮಾತು ಮತ್ತು ಬದುಕು ಎರಡೂ ಬೇರಾಗದೆ ಅವೆರಡಕ್ಕೂ ಇರುವ ಅನಿವಾರ್ಯ ಸಂಬಂಧದ ತುರ್ತು ನಿಖರವಾಗಿ ತಿಳಿಯಲು ಯತ್ನಿಸಿದರು. ಹೀಗಾಗಿಯೇ ಭೌತಿಕ ಮತ್ತು ಆಧ್ಯಾತ್ಮಿಕ ಸಂಯೋಜನೆಗೆ

ಮಾಧ್ಯಮವಾದ 'ಶಬ್ದ' ಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆಂಬುದು ಅನುಭವದಿಂದಲೇ ತಿಳಿದಿದ್ದರು. ವಾಗರ್ಥ ಅನುಭವಗಳ ಅಭಿನ್ನತೆಯ ಪ್ರಜ್ಞೆ ವಚನಕಾರರಲ್ಲಿ ಮೂಡಿದ್ದ ನೆಲೆಗಳನ್ನು ಮೂವರು ಮುಖ್ಯವಚನಕಾರರು ನಿರ್ವಚಿಸುವುದು ಹೀಗೆ : ಅಲ್ಲಮಪ್ರಭು ಹೀಗೆನ್ನುತ್ತಾನೆ :

''ಮಾತೆಂಬುದು ಜ್ಯೋತಿರ್ಲಿಂಗ
ಸ್ವರವೆಂಬುದು ಪರತತ್ತ್ವ''

ಅವನೆ ಇನ್ನೊಂದು ಕಡೆ

''ವಾಕು ಪಾಕವಾದಡೇನು ಮನಪಾಕವಾಗದನ್ನಕ್ಕ''

ಇನ್ನು ಚೆನ್ನಬಸವಣ್ಣನ ಮಾತು ಹೀಗಿದೆ :

''ಶಬ್ದ ಸೋಪಾನವ ಕಟ್ಟಿ ನಡೆಸಿದವರು ಶರಣರು ''

ಇನ್ನು, ಬಸವಣ್ಣನ ಮಾತು ಜನಪ್ರಿಯವಾದರೂ ಇನ್ನೂ ಅರ್ಥವನ್ನು ಬಗೆಯುತ್ತ ಹೋದರೆ ಬೆಳಕಿನ ಲೋಕ ತೆರೆಯುತ್ತದೆ :

ನುಡಿದರೆ ಮುತ್ತಿನಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು
ನುಡಿದರೆ ಲಿಂಗಮೆಚ್ಚಿ ಅಹುದಹುದೆನ್ನಬೇಕು
ನುಡಿಯೊಳಗಾಗಿ ನಡೆಯದಿದ್ದರೆ
ಕೂಡಲ ಸಂಗಮದೇವನೆಂತೊಲಿವನಯ್ಯಾ?

ಪ್ರಮುಖರಾದ ಈ ಮೂವರು ವಚನಕಾರರು ಮಾತು ಮತ್ತು ಅರ್ಥದ ಮುಖಾಂತರ 'ಶಬ್ದಸೋಪಾನ'ದ ನೆಲೆಯನ್ನು ಗುಟ್ಟು ಹೊಡೆದ ಸಂಗತಿ ನನಗೆ ಮುಖ್ಯವೆಂದು ಈಗಲೂ ಅನ್ನಿಸುತ್ತಿದೆ. ಇಡಿ ವಚನಸಾಹಿತ್ಯವನ್ನು ಆಳಕ್ಕಿಳಿದು ನೋಡಿದರೆ ಮುಖ್ಯವಾಗಿ ಮೂರು ಸಂಗತಿಗಳು ನಮಗೆ ಎದ್ದು ಕಾಣುತ್ತವೆ :

೧. ನೈತಿಕ ನೆಲೆಯಲ್ಲಿ ಜೀವನವನ್ನು ಶೋಧಿಸುವ ವಚನಗಳು

೨. ಬೋಧನೆ ಮತ್ತು ಕಲಾಸಂಯಮವನ್ನು ತಮ್ಮ ಶಬ್ದಸೋಪಾನದ ಸಂದೋಹದಲ್ಲಿ ಅಡಗಿಸಿಟ್ಟುಕೊಂಡ ವಚನಗಳು

೩. ಧ್ವನಿಪೂರ್ಣವಾಗಿದ್ದು, ತನ್ನ ಸತ್ವಸಂಪನ್ನತೆಯಿಂದ ಅಸಾಮಾನ್ಯವಾದ ವಚನ ರಚನೆಗಳು

ಮೇಲಿನ ಮೂರು ಸಂಗತಿಗಳನ್ನು ಸೂಕ್ಷ್ಮವಾಗಿ ವಚನಗಳಿಗೆ ಅನ್ವಯಿಸಿ ನೋಡಬಹುದಾದ ಸ್ಪಷ್ಟ ದಿಕ್ಕಿನತ್ತ ಇಂದಿನ 'ವಚನ ವಿಮರ್ಶೆ' ಹಾಯ್ದಿದೆ ಎಂದು ನನಗಾದರೂ ಅನ್ನಿಸುತ್ತದೆ. ಪ್ರಸ್ತುತ ಮೂರು ಸಂಗತಿಗಳು, ವಚನ ಸಾಹಿತ್ಯದ ಅಪಾರ ರಾಶಿಯನ್ನು ತನ್ನ ತೆಕ್ಕೆಗೆ, ಅರ್ಥಪೂರ್ಣವಾದ ನೆಲೆಯಲ್ಲಿ ವಿಶ್ಲೇಷಿಸಲು ಅನುಕೂಲವು ಆಗುತ್ತದೆ. ವಚನ ರಚನೆಗಳನ್ನು ಕುರಿತು ಇಲ್ಲಿಯವರೆಗಿನ ಒಟ್ಟು ವಿಮರ್ಶೆಯ ಅರ್ಥವ್ಯಾಪ್ತಿ - ಧಾರ್ಮಿಕ ಚಿಂತನಾ ಮಾದರಿಯ ಅರ್ಥ ವ್ಯಾಪ್ತಿಯ ನೆಲೆಯಿಂದ

ಸಾಂಸ್ಕೃತಿಕ ಅರ್ಥ ವ್ಯಾಪ್ತಿಯ ನೆಲೆಗೆ ಜರುಗಿತ್ತೆಂಬುದು ಸತ್ಯವಷ್ಟೆ ! ಇದಿಷ್ಟೆ, ಇಂದಿನ ವಿಮರ್ಶೆಯನ್ನು ತನ್ನ ಒಡಲಲ್ಲಿ ಇಟ್ಟುಕೊಳ್ಳಲಾರದು. ಇದನ್ನು ದಾಟುವ ಬಗೆಯಲ್ಲೆ ವಚನ ಸಾಹಿತ್ಯಕ್ಕೆ ಹೊಸ 'ಆಯಾಮ' ಮತ್ತು ಹೊಸ 'ಬೆಳಕು' ಪ್ರಾಪ್ತವಾಗಲು ಅವಕಾಶವಿದೆ.

ಮೇಲೆ ಹೇಳಿದ ಮೂರು ಸಂಗತಿಗಳನ್ನೂ ಹೀಗೆ ಅನ್ವಯಿಸಿ ನೋಡಬಹುದು. ಚೆನ್ನಬಸವಣ್ಣ - ಆದಯ್ಯನಂತಹವರು ಮೊದಲ ಮಾದರಿಯ ವಚನಕಾರರಾಗಿ ಕಂಡುಬಂದರೆ, ಜೇಡರದಾಸಿಮಯ್ಯ - ಸಿದ್ಧರಾಮರು ಎರಡನೆ ಮಾದರಿಯ ವಚನಕಾರರಾಗಿ ಕಂಡುಬರುತ್ತಾರೆ. ಇನ್ನು ಮೂರನೆಯ ಮಾದರಿಗೆ ಅಲ್ಲಮಪ್ರಭು ಮತ್ತು ಬಸವಣ್ಣನವರು ಸ್ಪಷ್ಟವಾದ ನಿಲುವಿನಲ್ಲಿ ಕಾಣಬರುತ್ತಾರೆ. ವಚನರಚನೆಗಳ ಹಿಂದಿನ ಮನೋಧರ್ಮದ ಮಾದರಿಗಳನ್ನು ಹಿಡಿದು ನೋಡಿದಾಗ ಒಟ್ಟಾರೆ ವಚನಸಾಹಿತ್ಯವನ್ನು ಈ ಬಗೆಯ ನೆಲೆಯಲ್ಲಿ ಅರ್ಥೈಸುವುದು ಸಾಂಸ್ಕೃತಿಕವಾಗಿ ಮತ್ತು ಸಾಹಿತ್ಯಕವಾಗಿ ಹೆಚ್ಚು ಔಚಿತ್ಯ ಎಂದು ನನಗನಿಸುತ್ತದೆ ! ಸೂಕ್ಷ್ಮವಾಗಿ ವಚನಗಳನ್ನು ನೋಡಿದಾಗ ತಟ್ಟನೆ ನಮಗೆ ತಿಳಿದು ಬರುವ ಸಂಗತಿಗಳಿಷ್ಟು : ವಚನಗಳ ರಚನೆಯ ಹಿಂದಿನ ಹಲವು ಮುಖ್ಯ ಮಾದರಿಗಳನ್ನು ಏಕಕೇಂದ್ರಿತ ನೆಲೆಯಿಂದ ಮಾತ್ರ ನೋಡದೆ ಬಹುಕೇಂದ್ರಿತ ನೆಲೆಗಳಲ್ಲಿ ನೋಡಬೇಕಾದ ಅನಿವಾರ್ಯತೆಯನ್ನು ಇಲ್ಲಿಯವರೆಗಿನ ವಚನ ವಿಮರ್ಶೆಯ ಇತಿಹಾಸ ನಮ್ಮನ್ನು ತಳ್ಳುತ್ತಿದೆ, ಪ್ರೇರಿಸುತ್ತಿದೆ. ಈ ಹಿನ್ನೆಲೆಯಲ್ಲಿ ಆದಯ್ಯನನ್ನು ನೋಡಬೇಕಾದ ಅಗತ್ಯವಿದೆ.

ಆದಯ್ಯನನ್ನು ಕನ್ನಡ ಸಾಹಿತ್ಯದ ವಚನವಿಮರ್ಶೆಯೂ ತೀರ ಗೌಣವಾಗಿಯೇ ಪರಿಶೀಲಿಸಿದೆ. ಅಲ್ಲೊಂದು ಇಲ್ಲೊಂದು ಲೇಖನಗಳಲ್ಲೊ, ಪ್ರಾಸಂಗಿಕ ಉಲ್ಲೇಖಗಳಲ್ಲೊ ಇವನು ಹರಿದು ಹೋಗಿರುವುದು ನಿಜ. ಆದಯ್ಯ - ಚೆನ್ನಬಸವಣ್ಣನ ಮಾದರಿಯ ವಚನರಚನಕಾರನೆಂಬುದು ಸತ್ಯ. ಆದರೆ, ನಮ್ಮ ವಿಮರ್ಶೆ ಅವನನ್ನು ಬಸವಣ್ಣನ ಜತೆ ಹೆಚ್ಚಾಗಿ ತಳುಕು ಹಾಕಿದೆ. ಇದು ಅಷ್ಟು ಉಚಿತವಲ್ಲ ಅನ್ನುವ ಕಾರಣದಿಂದಾಗಿ ಒಟ್ಟಾರೆ ವಚನ ಸಾಹಿತ್ಯವನ್ನು ಮೂರು ಮಾದರಿಗಳಾಗಿ ಇಟ್ಟುಕೊಂಡು ಸಾಹಿತ್ಯಕ ಮತ್ತು ಸಾಂಸ್ಕೃತಿಕ ನೆಲೆಗಳಲ್ಲಿ ನೋಡಲು ಶುರುಮಾಡಿದ್ದು !

೨

ಆದಯ್ಯನ ಇತಿವೃತ್ತ ತೀರ ಸ್ವಲ್ಪವೇ. ಇವನು ಸೌರಾಷ್ಟ್ರದಲ್ಲಿ ಹುಟ್ಟಿದ. ಪುಣ್ಯವತಿ ಮತ್ತು ಘೋರದತ್ತ ಇವನ ತಂದೆ ತಾಯಂದಿರು. ಬಾಲ್ಯದಲ್ಲಿ ಪ್ರೌಢ ವಿದ್ಯಾಭ್ಯಾಸ ಮಾಡಿದ. ಇವನ ತಂದೆ ತಾಯಂದಿರು ವರ್ತಕ ದಂಪತಿಗಳಾದುದರಿಂದ ಮಗನು ವ್ಯಾಪಾರ ಮಾಡಬೇಕೆಂಬ ಬಯಕೆ. ಹೀಗಾಗಿ ಆದಯ್ಯ ವಂಶದ ಕಾಯಕವನ್ನು ಮುಂದುವರೆಸುತ್ತಾನೆ. ಚಿನ್ನ - ಬೆಳ್ಳಿ ವ್ಯವಹಾರದಲ್ಲಿ ಆದಯ್ಯ ತೊಡಗಿರಬೇಕು [1]. ಒಮ್ಮೆ ಪುಲಿಗೆರೆಗೆ ಬರುತ್ತಾನೆ. ಅಲ್ಲಿ ಸುರಹೊನ್ನೆ ಬಸದಿಯ ಪೂಜಾರಿ ಪಾರಿಶ

---

1. ಈ ಮಾತನ್ನು ಅವನ ವಚನವೊಂದರಿಂದ ಬಗೆದು ನೋಡಬಹುದು.
ಕಲ್ಲಿನಲ್ಲಿ ಕನಕ ಒಗೆದರೆ, ಕನಕ ಕಲ್ಲಿಂಗೆ ಕಿಂಕರನಪ್ಪುದೆ?
ಶುಕ್ತಿಯಲ್ಲಿ ಮೌಕ್ತಿಕ ಒಗೆದರೆ ಮುತ್ತು ಶುಕ್ತಿಗೆ ಕಿಂಕರನಪ್ಪುದೆ?
ಧರೆಯಲ್ಲಿ ಸುರತರು ಒಗೆದರೆ ಸುರತರು ಧರೆಗೆ ಕಿಂಕರನಪ್ಪುದೆ?
ಜನನಿಯ ಉದರದಲ್ಲಿ ಘನ ಶರಣ ಒಗೆದರೆ, ಜನನಿ ಜನಕಂಗೆ ಕಿಂಕರನಪ್ಪನೆ?
ಸೌರಾಷ್ಟ್ರ ಸೋಮೇಶ್ವರಾ!
ನಿಮ್ಮ ಶರಣರು ಸ್ವತಂತ್ರಶೀಲರು ಅಗ್ರಗಣ್ಯರು ! (ಆದಯ್ಯನ ವಚನಗಳು ಪು. ೧೬೬)

ಪಂಡಿತನ ಮಗಳು ಪದ್ಮಾವತಿ ಕಣ್ಣಿಗೆ ಬೀಳುತ್ತಾಳೆ. ಕಣ್ಣಿಗೆ ಕಣ್ಣು ಕೂಡಿ ಕಾಮಲತೆ ಕುಡಿ ತುಂಬಿ ಬರುವುದು. ತಂದೆ - ತಾಯಿಗಳು ಮದುವೆಯಾಗಲು ಅನುಮತಿ ನೀಡುತ್ತಾರೆ. ಹೋಜೇಶ್ವರನ ಸ್ಥಾನಪತಿಯಿಂದ ಶಿವದೀಕ್ಷೆ ಕೊಡಿಸಿ ಆದಯ್ಯ ಅವಳನ್ನು ಮದುವೆ ಆಗುತ್ತಾನೆ. ದಾಸೋಹ ನಡೆದ ಒಂದು ಸಂದರ್ಭದಲ್ಲಿ ನಡೆದ ಘಟನೆಯಿಂದ ಪಾರಿಶ ಪಂಡಿತನಿಗೂ ಆದಯ್ಯನಿಗೂ ಮಾತಿಗೆ ಮಾತು ಬೆಳೆಯುತ್ತದೆ. ಸೌರಾಷ್ಟ್ರ ಸೋಮೇಶ್ವರನನ್ನು ಸುರಹೊನ್ನೆ ಬಸದಿಯಲ್ಲಿ ಸ್ಥಾಪಿಸುತ್ತೇನೆಂದು ಪ್ರತಿಜ್ಞೆ ಮಾಡುತ್ತಾನೆ. ಮುಂದೆ ಅದೇ ರೀತಿ ಮಾಡುತ್ತಾನೆ. ಇದು ಆದಯ್ಯನ ಆಧ್ಯಾತ್ಮಿಕ ಜೀವನದ ಹಿಂದಿನ ಪೂರ್ವಪಾತಳಿ. ಆದಯ್ಯನ ಉತ್ತರಪಾತಳಿಯಲ್ಲಿ ಭೌತಿಕ ಮತ್ತು ಆಧ್ಯಾತ್ಮಿಕ ಇವೆರಡೂ ವಿಕಾಸಗೊಂಡು ವಚನಕಾರನಾಗುತ್ತಾನೆ. ಈಗಿರುವ ಐತಿಹ್ಯದಂತೆ ಸೋಮನಾಥನ ಬಲದ ಕಂಬದಲ್ಲಿ ಐಕ್ಯವನ್ನು ಆದಯ್ಯ ಪದ್ಮಾವತಿಯರಿಬ್ಬರೂ ಪಡೆಯುತ್ತಾರೆ [2].

ಆದಯ್ಯನ ಒಂದು ವಚನದಲ್ಲಿ ಬರುವ ಮಾತು ಹೀಗಿದೆ : ಅದು ಅವನ ತಾತ್ವಿಕ ನೆಲೆಯನ್ನು ಒಮ್ಮೆಗೇ ಶೋಧಿಸುತ್ತದೆ.

ಬಸವಣ್ಣನ ಭಕ್ತಿಸ್ಥಲ, ಮಡಿವಾಳ ಮಾಚಣ್ಣನ ಮಾಹೇಶ್ವರ ಸ್ಥಲ,
ಘಟ್ಟಿವಾಳ ಮುದ್ದಣ್ಣನ ಪ್ರಸಾದಿ ಸ್ಥಲ, ಚೆನ್ನಬಸವಣ್ಣನ ಪ್ರಾಣಲಿಂಗಿಸ್ಥಲ,
ಪ್ರಭುವಿನ ಶರಣಸ್ಥಲ, ಸೊಡ್ಡಳ ಬಾಚರಸರ ಐಕ್ಯಸ್ಥಲ,
ಅಜಗಣ್ಣನ ಆರೂಢ, ನಿಜಗುಣನ ನಿಬ್ಬೆರಗು,
ಅನುಮಿಷನ ನಿಶ್ಚಲ, ಮಹಾದೇವಿಯಕ್ಕನ ಜ್ಞಾನ
ನಿಂಬಿಯಕ್ಕನ ನಿಶ್ಚಯ, ಮುಕ್ತಾಯಕ್ಕನ ಅಕ್ಕರು
ಸತ್ಯಕ್ಕನ ಯುಕ್ತಿ, ಅಲ್ಲಾಳಿಯಕ್ಕನ ಸಮತೆ,
ರೇವಣಸಿದ್ಧಯ್ಯ ದೇವರ ನಿಷ್ಠೆ, ಸಿದ್ಧರಾಮ ತಂದೆಗಳ ಮಹಿಮೆ,
ಮರುಳಸಿದ್ಧಯ್ಯ ದೇವರ ಅದೃಷ್ಟ ಪ್ರಸಾದದ ನಿಷ್ಠೆ
ಏಕೋರಾಮಯ್ಯಗಳ [3] ಆಚಾರ ನಿಷ್ಠೆ, ಪಂಡಿತಾರಾಧ್ಯರ ಸ್ವಯಂ ಪ್ರಕಾಶ
ಮುಗ್ಧಸಂಗಯ್ಯ, ಮೈದುನ ರಾಮಣ್ಣ, ಬೇಡರ ಕನ್ನಪ್ಪ, ಕೋಳೂರ
ಕೊಡಗೂಸು, ತಿರುನೀಲನಕ್ಕರು, ರುದ್ರಪಶುಪತಿಗಳು, ದೀಪದ ಕಲಿಯಾರು
ಇಂತಿವರ ಮುಗ್ಧಭಕ್ತಿ ನಿಮ್ಮೊಳಸಗೆಂದಪ್ಪುದೋ
ಸೌರಾಷ್ಟ್ರ ಸೋಮೇಶ್ವರಾ! (ವಚನ - ೨೮೭)

---

2. "ಲಕ್ಷ್ಮೇಶ್ವರ ಸೋಮನಾಥ ದೇವಾಲಯದೊಳಗೆ ರಂಗಮಂಟಪದ ಬಲಕ್ಕೆ ಇರುವ ಒಂದು ಶಿವಲಿಂಗಕ್ಕೆ ಆದಯ್ಯನ ಗದ್ದುಗೆ ಎಂದು ಈಗಲೂ ಹೇಳುತ್ತಾರೆ" ಉದ್ಧೃತ ಆದಯ್ಯನ ವಚನಗಳು (ಸಂ : ಬಿ. ಉತ್ತಂಗಿ ೧೯೫೭ ಪು. VII, ಅಡಿಟಿಪ್ಪಣಿ)

3. ಆದಯ್ಯ ತನ್ನ ವಚನದಲ್ಲಿ 'ಏಕೋರಾಮಯ್ಯ'ನ ಪ್ರಸ್ತಾಪ ಮಾಡುತ್ತಿರುವುದರಿಂದ ಅಬ್ಬಲೂರು ಶಾಸನದಲ್ಲಿ (ಕ್ರಿ.ಶ. ೧೧೫೦-೧೧೯೦) ಉಲ್ಲೇಖಗೊಂಡಿರುವ ಏಕಾಂತ ರಾಮಯ್ಯನೇ ಏಕೋರಾಮಯ್ಯ. ಆದಯ್ಯ, ಅವನಿಂದ ಈಚೆಗೆ ಇಲ್ಲವೆ ಅವನ ಸಮಕಾಲೀನನಾಗಿರಬಹುದೆಂದು ತೋರುತ್ತದೆ.

ಈ ದೀರ್ಘ ವಚನದಲ್ಲಿ ಮುಖ್ಯ ವಚನಕಾರರೆಲ್ಲ ಬಂದಿದ್ದಾರೆ. ಆದಯ್ಯ ಇವರ ಸಮಕಾಲೀನ ಅಥವಾ ಅನಂತರದ ವಚನಕಾರನಾಗಿರಬಹುದೆಂದು ತಿಳಿಯಬಹುದಾಗಿದೆ. ಅವನು ಬರೆದಿರುವ ಒಟ್ಟು ಮುನ್ನೂರತೊಂಬತ್ತೇಳು ವಚನಗಳು ಸಿಕ್ಕಿದ್ದು ಇದರಲ್ಲಿ ಬೆಡಗಿನ ವಚನಗಳೂ ಸೇರಿರುವುದು ಗಮನೀಯ.

೩

ಆದಯ್ಯನ ಒಟ್ಟು ವಚನಗಳನ್ನು ಹಿಡಿದು ನೋಡಿದಾಗ ಸ್ಥೂಲವಾಗಿ ಈ ಮೂರು ಅಂಶಗಳು ಎದ್ದು ಕಾಣಬರುತ್ತವೆ.

೧. ಆದಯ್ಯನನ್ನು ಚೆನ್ನಬಸವಣ್ಣನಂತಹ ತಾತ್ತ್ವಿಕ
ವಚನಕಾರರ ಜತೆ ಸಮೀಕರಿಸಬೇಕೇ ಹೊರತು; ಬಸವಣ್ಣನ
ಜತೆ ಅವನನ್ನು ಸಮೀಕರಿಸಲಾಗುವುದಿಲ್ಲ.

೨. ಆದಯ್ಯನಲ್ಲಿ ಸಾಹಿತ್ಯಕ ಗುಣವುಳ್ಳ ರಚನೆಗಿಂತ
ಅವನ ಒಟ್ಟು ಆಸಕ್ತಿ ಇರುವುದೇ 'ತಾತ್ತ್ವಿಕ ಅನುಭಾವ'ದ
ಶೋಧನೆಯಲ್ಲಿ. ಕೇವಲ ಅನುಭಾವಕ್ಕಿಂತ ಶಾಸ್ತ್ರಗಮ್ಯ -
ವಾದ ಅನುಭಾವವೇ ಆದಯ್ಯನಿಗೆ ಮುಖ್ಯವಾಗಿ ಕಾಣಿಸುತ್ತಿದೆ.

೩. ಯಾವುದೇ ಚಳುವಳಿ ನಡೆಯುವಾಗ ಸೃಷ್ಟಿಶೀಲ
ರಚನೆಗಳ ಜತೆಜತೆಗೆ ತಾತ್ತ್ವಿಕ ರಚನೆಗಳ ಅಗತ್ಯವೂ ಉಂಟು.
ಇದಕ್ಕೆ ಎರಡು ಮುಖಗಳಿವೆ. ಒಂದು :
'ವಿಷಯ ಪ್ರತಿಪಾದನೆ' ಇನ್ನೊಂದು 'ಕಾವ್ಯ ವಿನೋದನೆ.'
ವಚನ ಸಾಹಿತ್ಯ ಚಳುವಳಿಯ ಸಂದರ್ಭದಲ್ಲಿ
ಆದಯ್ಯನದು ಶಾಸ್ತ್ರಗಮ್ಯವಾದ 'ತಾತ್ತ್ವಿಕ ರಚನೆ'ಗಳೇ
ಆಗಿರುವುದು ಆಕಸ್ಮಿಕವಲ್ಲ.

ಆದಯ್ಯ ಒಬ್ಬ ಶಾಸ್ತ್ರಕಾರನ ನಿಲುಮೆಯಲ್ಲಿ ನಮಗೆ ಕಾಣಬರುತ್ತಾನೆ. ಅವನ ವಚನಗಳಲ್ಲಿ ಶಾಸ್ತ್ರಪರಿಷ್ಕೃತವಾದ ಮನಸ್ಸು, ಆಲೋಚನೆಯನ್ನು ಅನುಭಾವದ ನೆಲೆಯಲ್ಲಿ ಗುರುತಿಸುವ ಒಳನೋಟ, ವೀರಶೈವ ಶಾಸ್ತ್ರ ಪರಿಭಾಷೆಯನ್ನು ಅರಗಿಸಿಕೊಂಡ ನಿಷ್ಠೆ - ಉದ್ದಕ್ಕೂ ಕಾಣಬರುತ್ತದೆ! 'ಅಂಗ ಮತ್ತು ಲಿಂಗ'ದ ಚರ್ಚೆ, ಆಧ್ಯಾತ್ಮಿಕ ನೆಲೆಯ ಬಹುಮುಖ್ಯವಾದ ಚರ್ಚೆಗಳಲ್ಲಿ ಒಂದು. ಅದನ್ನು ಆದಯ್ಯನು ಚಿಂತಿಸುವ ರೀತಿಗೆ ಅವನ ಅನುಭಾವಕ್ಕಿಂತ ಶಾಸ್ತ್ರನಿಷ್ಠೆ ಎದ್ದು ಕಾಣುತ್ತದೆ.

ಅಂಗವೆ ಲಿಂಗ ಲಿಂಗವೆ ಅಂಗವೆಂದೆಂಬರು
ಅಂಗವು ಲಿಂಗವೆ? ಲಿಂಗಕ್ಕೆ ಅಂಗ ಉಂಟೆ?
ಅದು ತಾ ನಾಮರೂಪು ಕ್ರಿಯೆ ಇಲ್ಲವಾಗಿ

ಮಾತು ಮನ ನಿಲುಕದ ಲಿಂಗವು ಅಂಗವಪ್ಪುದು
ಮಿಥ್ಯ ಕಾಣಾ ಸೌರಾಷ್ಟ್ರ ಸೋಮೇಶ್ವರಾ! [4] (ವಚನ - ೨೨೨)

ಬಸವಣ್ಣನ ವಚನಗಳಲ್ಲಿ ಈ ಬಗೆಯ ರಚನೆಗಳಿಲ್ಲವೆಂದು ಹೇಳಲಾರೆ. ಇದ್ದರೂ ಅವು ತೀರ ಗೌಣ. ಅವನ ವಚನಗಳು ಅವನು ಕಂಡ ಅನುಭವವೇ ಪರಮಪ್ರಾಮಾಣ್ಯವಾಗಿ ಬರುತ್ತವೆ. ಆದಯ್ಯನಲ್ಲಿ ಅವುಗಳ ಚಿಂತನಾಪ್ರಧಾನವಾದ ಲಹರಿಗಳಾಗಿ ಬರುವುದು ಮಾತ್ರವಲ್ಲ ; ಅವುಗಳಿಗೆ ಶಾಸ್ತ್ರಶುದ್ಧವಾದ ಅನುಭಾವವಾಗಿ ತರುತ್ತಾನೆ.

ಅನುಭಾವ ಸಾಹಿತ್ಯವಾದ ಬಳಿಕ ಅನುಭವಿಸಲೆಲ್ಲಿಯದೋ?
ಸಂಚಿತ, ಪ್ರಾರಬ್ಧ, ಆಗಾಮಿಯ ಅದ್ವೈತ ಸಾಹಿತ್ಯವಾದ ಬಳಿಕ
ಸಂದೇಹ ಭ್ರಾಂತಿ ಎಲ್ಲಿಯದೋ?
ಉಂಟಲ್ಲವೆಂಬ ಪ್ರಸಾದ ಸಾಹಿತ್ಯವಾದ ಬಳಿಕ
ಭೋಗೋಪಭೋಗಂಗಳೆಲ್ಲಿಯವೋ?
ಅಷ್ಟ ಭೋಗಂಗಳು ಸೌರಾಷ್ಟ್ರ ಸೋಮೇಶ್ವರ ಸಾಹಿತ್ಯವಾದ ಬಳಿಕ
ಮಲ, ಮಾಯಾ, ಕರ್ಮ ತಿರೋಧಾನವೆಂಬ ಚತುರ್ವಿಧ
ಪಾಶಂಗಳೆಲ್ಲಿಯವೋ? (ವಚನ - ೯೨)

ಈ ವಚನದಲ್ಲಿ ಆದಯ್ಯನದು ತಾತ್ತ್ವಿಕ ಕನಸುಗಳ ಜತೆಗೆ ನಡೆದಾಡುವ ಧೀರನಾಗಿ ನಮ್ಮ ಕಣ್ಣ ಮುಂದೆ ಬರುತ್ತಾನೆ. ಹೀಗಾಗಿಯೇ ಅವನ ಬಹುತೇಕ ವಚನಗಳಲ್ಲಿ ಶಿವಾಗಮಗಳಿಂದ, ಶಾಸ್ತ್ರಕಾರರುಗಳಿಂದ ಸಂಸ್ಕೃತ ಉಕ್ತಿಗಳನ್ನು ತನ್ನ ಮಾತಿಗೆ ಆಧಾರವಾಗಿ ನೀಡುತ್ತಾನೆ [5]. ಇದಕ್ಕೆ ಅವನ ಈ ವಚನವನ್ನು ನೋಡಬಹುದು :

---

4. ಈ ತಾತ್ತ್ವಿಕ ನೆಲೆಯನ್ನು ಮತ್ತೆ ಶೋಧಿಸಲು ತೊಡಗಿದಂತೆ ಆದಯ್ಯ ಮತ್ತೊಂದು ವಚನದಲ್ಲಿ ಇದನ್ನು ಪೃಥಕ್ಕರಿಸುತ್ತ ಹೀಗೆ ಯೋಚಿಸುತ್ತಾನೆ :
ಅಂಗ, ಲಿಂಗ ರತಿಯಿಂದ ಆಯತವಾಯಿತ್ತು.
ಪ್ರಾಣ, ಲಿಂಗ ರತಿಯಿಂದ ಸ್ವಾಯತವಾಯಿತ್ತು.
ಭಾವ, ಲಿಂಗ ರತಿಯಿಂದ ಸನ್ನಹಿತವಾಯಿತ್ತು.
ಇಂತು ಆಯತ, ಸ್ವಾಯತ, ಸನ್ನಹಿತ ಇಂತೀ ತ್ರಿವಿಧ ಒಂದಾದ ಬಳಿಕ,
ಕೊಟ್ಟುಕೊಂಬ ಉಪಚರಿಯಕ್ಕಿಂಬಿಲ್ಲ
ಸೌರಾಷ್ಟ್ರ ಸೋಮೇಶ್ವರ ಲಿಂಗಕ್ಕೆ (ವಚನ-೨೬೬)
ತನ್ನ ಇನ್ನೊಂದು ವಚನದಲ್ಲಿ 'ಮನ ಲಿಂಗವಾದರೆ ನಿಚ್ಚ ನಿಚ್ಚ ಲಯವಪ್ಪುದೇ?' - (ವಚನ-೨೭೪) ಎಂಬುದನ್ನು ಇದರೊಂದಿಗಿಟ್ಟು ನೋಡಬಹುದು.

5. ಈ ಮಾದರಿಯ ಸಂಪ್ರದಾಯ ಆದಯ್ಯನದು ಮಾತ್ರವಲ್ಲ - ಚೆನ್ನಬಸವಣ್ಣನದೂ ಕೂಡ. ಅಲ್ಲಲ್ಲಿ ಬಸವಣ್ಣ ಬಳಸಿದರೂ ಅದು ತೀರ ಗೌಣ. ತಾನು ವ್ಯಂಜಿಸುವ ಅರ್ಥದ ನಿಲುಗಡೆಗೆ ತಾತ್ವಿಕ ವಿನ್ಯಾಸದ ರೂಪಕ್ಕಾಗಿ ಇಂತಹ ಶ್ಲೋಕಗಳನ್ನು ತಂದು 'ವಿಷಯ ಪ್ರತಿಪಾದನೆ'ಯ ಕಡೆ ತನ್ನ ಗಮನ ಕೇಂದ್ರೀಕರಿಸುತ್ತಿದ್ದನು. ಇದು ಬಹುತೇಕವಾಗಿ ಶಾಸ್ತ್ರನಿಷ್ಠೆ ಕಾಣುವ ವಚನಕಾರನ ಮಾದರಿಯದೆಂದು ಹೇಳಬಹುದು.

ಭವಿಯೊಂದು ಕುಲ ಭಕ್ತನೊಂದು ಕುಲವೆಂಬ
ಭಂಗದ ಮಾತ ಕೇಳಲಾಗದು
ಅದೇನು ಕಾರಣವೆಂದರೆ, ಭವಿಭಕ್ತಂಗೆ
ಸಂಬಂಧ ಉಂಟಾದ ಕಾರಣ
ಇದಕ್ಕೆ ಶ್ರುತಿ :
''ಭಕ್ತಾನಾಂ ಭವಿಸಂಪರ್ಕಂ, ಭವೇರಾಶ್ರಮೋ ಭಕ್ತಸ್ಯ
ಭವಿಭಕ್ತಾ ಉಭೌ ದೇವಿ ಮದ್ಭಕ್ತಸ್ಯ ಪ್ರಕೀರ್ತಿತೌ''
ಇಂತೆಂದುದಾಗಿ
ಶಿವಪ್ರಸಾದ ಭವಿಗೆ, ಭವಿಯ ಪ್ರಸಾದ ಭಕ್ತಂಗೆ
ಇದು ಕಾರಣ ಸೌರಾಷ್ಟ್ರ ಸೋಮೇಶ್ವರನಲ್ಲಿ
ಭಕ್ತನಾದರೆ ಭವಿಯಾಗಿರಬೇಕಯ್ಯಾ (ವಚನ - ೧೮)

ಆದಯ್ಯನು ಭವಿ-ಭಕ್ತರ ಬಗೆಗಿನ ಪರಿಕಲ್ಪನೆಯನ್ನು ಶಾಸ್ತ್ರನಿಷ್ಠೆಯಲ್ಲಿ ನೋಡಲು ತೊಡಗುತ್ತಾನೆ. ಇದೇ ಮಾತನ್ನು ಬಸವಣ್ಣ, ಅನುಭಾವ ನಿಷ್ಠೆಯ ನೆಲೆಯಲ್ಲಿ ನೋಡುತ್ತಾನೆ. ಆದಯ್ಯನಿಗೆ ಶಾಸ್ತ್ರಕಾರನ ನಿಲುವು ಮುಖ್ಯವಾಗುತ್ತ ಹೋಗುವುದರಿಂದ ಅವನ ವಚನಗಳು ಶುದ್ಧಾಂಗವಾಗಿ ಶಾಸ್ತ್ರ ಸಂವಾದದ ಮಾದರಿಗಳು ಆಗುತ್ತವೆ. ಆದರೆ, ವೇದ, ಶಾಸ್ತ್ರ ಪುರಾಣ, ಆಗಮಗಳನ್ನು ವಚನ ಸಾಹಿತ್ಯದ ಮುಖ್ಯವಾದ ತಾತ್ತ್ವಿಕ ನಿಲುವಾಗಿ ಭೇದಿಸತೊಡಗುತ್ತದೆ. ಇದನ್ನು ವೈದಿಕ ವಿರೋಧೀ ನಿಲುವಿನ ಚರ್ಯೆಯೆಂದು ಕರೆಯಬಹುದು. ಇದಕ್ಕೆ ಆದಯ್ಯನೂ ಹೊರತಲ್ಲ :

ವೇದಂಗಳ ಹಿಂದೆ ಹರಿಯದಿರು ಹರಿಯದಿರು
ಶಾಸ್ತ್ರಂಗಳ ಹಿಂದೆ ಸುಳಿಯದಿರು ಸುಳಿಯದಿರು
ಪುರಾಣಂಗಳ ಹಿಂದೆ ಬಳಸದಿರು ಬಳಸದಿರು!
ಆಗಮಂಗಳ ಹಿಂದೆ ತೊಳಲದಿರು ತೊಳಲದಿರು
ಸೌರಾಷ್ಟ್ರ ಸೋಮೇಶ್ವರನ ಕೈವಿಡಿದು
ಶಬ್ದಜಾಲಂಗಳಿಗೆ ಬಳಲದಿರು ಬಳಲದಿರು! (ವಚನ - ೧೨೧)

ವಚನಕಾರರು ವೈದಿಕ ವಿರೋಧೀ ನಿಲುವಿನವರೇ ಎಂದರೆ : ಹೌದು. ಆದರೆ, ಅವರು ಒಪ್ಪುವುದು ಶಿವಾಗಮ ಸಿದ್ಧಾಂತದ ನಿಲುವುಗಳನ್ನು ಮಾತ್ರ. ಶಿವಾಗಮ ಸಿದ್ಧಾಂತ, ವೈದಿಕ ಸಿದ್ಧಾಂತಗಳಿಗಿಂತ ಭಿನ್ನವೆಂಬ ತಿಳಿವಳಿಕೆ ಖಚಿತವಾಗಿ ಆದಯ್ಯನಂತಹ ವಚನಕಾರರಲ್ಲಿ ಮುಖ್ಯವಾಗಿ ಎದ್ದು ಕಾಣುತ್ತದೆ! ಇದಕ್ಕಾಗಿಯೇ ಷಡ್ದರ್ಶನಗಳನ್ನು ಧಿಕ್ಕರಿಸುತ್ತಾನೆ.

ಆರು ದರುಶನಂಗಳು ತಮ ತಮಗೆ
ಬೇರೆ ಬೇರೊಂದೊಂದ ಕಿರಿಕಲ್ಪಿಸಿಕೊಂಡಿರಲು
ಆರರಿಂ ಮೀರಿಪ್ಪ
ಅಜಡಾದ್ವೈತವನಾರು ಬಲ್ಲರಯ್ಯಾ? (ವಚನ-೧೨೨)

ಹೀಗಾಗಿ, ಶಾಸ್ತ್ರ ಚಿಂತನೆಯ ಪರಿಷ್ಕೃತ ಪ್ರವೃತ್ತಿ ಆದಯ್ಯನಲ್ಲಿ ಎದ್ದು ನಿಲ್ಲುತ್ತದೆ!

ಆದಯ್ಯನದು ಪ್ರಥಮವಾಗಿ ಶಾಸ್ತ್ರಗಮ್ಯವಾದ ಅನುಭಾವವೆಂದು ಹಿಂದೆ ಹೇಳಿದೆ. ಆದರೆ, ಎಲ್ಲ ಕಡೆ ಈ ನಿಲುವಿನಲ್ಲೇ ಸಂಚರಿಸಲಾರ. ಅದಕ್ಕೂ ಮೀರಿದ ಉತ್ಕಟವಾದ ಹೊಳಹುಗಳನ್ನು ಚಿಮ್ಮಿಸಬಲ್ಲ. ಬಸವಣ್ಣನ ವಚನವೊಂದನ್ನು ನೆನಪಿಸುವ ವಚನ ಹೀಗಿದೆ :

ಪಾತಾಳದಿಂ ಕೆಳಗೆ ಪಾದ, ಸುವರ್ಲೋಕದಿಂ ಮೇಲೆ ಉತ್ತಮಾಂಗ ;
ಬ್ರಹ್ಮಾಂಡವೇ ಮಕುಟ, ಗಗನವೇ ಮುಖ ;
ಚಂದ್ರಾರ್ಕಗ್ನಿಗಳೇ ನೇತ್ರ, ದಶದಿಕ್ಕುಗಳೇ ಬಾಹುಗಳು ;
ಮಹದಾಕಾರವೇ ಶರೀರ, ತನುಗಳೇ ತನೂರುಹ ;
ಶೂನ್ಯವೇ ಕರಸ್ಥಲದ ಲಿಂಗ, ನಕ್ಷತ್ರವೆ ಪುಷ್ಪ ;
ನಿತ್ಯವೇ ಪೂಜೆ, ಮೇಘವೇ ಜಡೆ ;
ಬೆಳದಿಂಗಳೇ ವಿಭೂತಿ, ಪರ್ವತಂಗಳೇ ರುದ್ರಾಕ್ಷಿಗಳು ;
ಪಂಚಬ್ರಹ್ಮವೇ ಪಂಚಾಕ್ಷರ, ತತ್ವಂಗಳೇ ಜಪಮಾಲೆ
ಮೇರುವೇ ದಂಡಕೋಲು, ಸಮುದ್ರವೇ ಕಮಂಡಲ ;
ಋತುಗಳಾರು ಷಟ್ಸ್ಥಲ, ಶೇಷನೇ ಕಟಿಸೂತ್ರ ;
ಜಗವೆ ಕಂಥೆ, ಅನಂತನೇ ಕೌಪೀನ ;
ತ್ರಿಗುಣ ಒಂದಾದುದೆ ಖರ್ಪರ, ಚತುರ್ಯುಗವೇ ಗಮನ
ಮಿಂಚೇ ಅಂಗರುಚಿ ; ಸಿಡಿಲೇ ಧ್ವನಿ ;
ವೇದಾಗಮವೇ ವಾಕ್ಯ, ಜ್ಞಾನಮುದ್ರೆಯೇ ಉಪದೇಶ ;
ಪೃಥ್ವಿಯೇ ಸಿಂಹಾಸನ, ದಿವಾರಾತ್ರಿಯೇ ಅರಮನೆ ;
ಶಿವಜ್ಞಾನವೇ ಐಶ್ವರ್ಯ, ನಿರಾಳವೇ ತೃಪ್ತಿ ;
ಇಂತಪ್ಪ ಚೈತನ್ಯ ಜಂಗಮಕ್ಕೆ
ಆನು 'ನಮೋನ್ನಮಃ' ಎನುತಿರ್ದೆನಯ್ಯಾ ಸೌರಾಷ್ಟ್ರ ಸೋಮೇಶ್ವರಾ [6] (ವಚನ - ೭೩)

ಈ ವಚನದಲ್ಲಿ ಅನುಭಾವದ ಬೆಳಕು ಮತ್ತು ಶಾಸ್ತ್ರಗಮ್ಯ ನೆಲೆಗಳೆರಡೂ ಒಂದಕ್ಕೊಂದು ಹಾಸುಹೊಕ್ಕಾಗಿ ಹೆಣೆದುಕೊಂಡು ನಮ್ಮ ಮುಂದೆ ಬಂದು ನಿಲ್ಲುತ್ತದೆ. ಇನ್ನೊಂದು ವಚನದಲ್ಲಿ ಕರಣ, ಇಂದ್ರಿಯ, ತನು-ಮನ ಪ್ರಾಣಗುಣಗಳ ಬಗ್ಗೆ ಹೇಳುವಾಗ

ಇನನ ಕರದಲ್ಲಿ ತಮವಿದ್ದು ಬದುಕಬಲ್ಲುದೆ?
ವಾಯುವಿನ ಹಸ್ತದಲ್ಲಿ ಸೊಡರಿದ್ದು ಬೆಳಗಬಲ್ಲುದೆ?
ಉರಿಯ ಮುಖದಲ್ಲಿ ಕರ್ಪುರವಿದ್ದು ಜೀವಿಸಬಲ್ಲುದೆ?
ಸೌರಾಷ್ಟ್ರ ಸೋಮೇಶ್ವರನ ಶರಣರ ಮುಂದೆ
ಕರಣ ಮಥನ, ಇಂದ್ರಿಯದಿಚ್ಛೆ, ತನುಗುಣ,
ಮನಗುಣ, ಪ್ರಾಣಗುಣಾದಿಗಳಿರಬಲ್ಲವೆ? (ವಚನ - ೨೮೩)

ಮೂರು ಲೋಕೋತ್ತರವಾದ 'ಉಪಮಾನ'ಗಳನ್ನು ಉದಾತ್ತವಾಗಿ ನೀಡುತ್ತ ಸಮರ್ಥಿಸುವಾಗಲೂ ಆದಯ್ಯನ ಒಟ್ಟು ತಾತ್ವಿಕ ಮನಸ್ಸು ಅದರ ಜತೆಗೂಡಿಕೊಂಡಿರುವ ಕವಿಯ ಪ್ರತಿಭೆಯ ಸಮೀಪಕ್ಕೆ ಜಗುಳುವ ರೀತಿ ತಕ್ಷಣವೇ ನಮ್ಮ ಮುಂದೆ

---

6. ನನಗೆ ತಿಳಿದಂತೆ ಆದಯ್ಯನ ಅತ್ಯುತ್ತಮ ವಚನಗಳಲ್ಲಿ ಇದೂ ಒಂದು. ಇದು ಬಸವಣ್ಣನು ಮಂಡಿಸಿದ ರೂಪಕಕ್ಕೆ ಜೋಡಿಸಿದ 'ಮಾಲಾರೂಪಕ' ಎಂದು ಹೇಳಬಹುದು. ಇದು ಬಸವಣ್ಣನ ವಚನದ ಮುಂದುವರಿಕೆಯ ಫಲ. ಬಸವಣ್ಣ ಹಾಗೂ ಆದಯ್ಯನ ವಚನಗಳೆರಡನ್ನೂ ಮುಂದೆ ಇಟ್ಟುಕೊಂಡು 'ರೂಪಕ'ದ ನೆಲೆಯಿಂದ ವಿವರಿಸಲು, ವ್ಯಾಖ್ಯಾನಿಸಲು, ವಿಶ್ಲೇಷಿಸಲು ದಾರಿಗಳಿವೆ.

ಬಂದು ನಿಲ್ಲುತ್ತದೆ! ಎಲ್ಲರಿಗೂ ಗೊತ್ತಿರುವ ಸಂಗತಿಯನ್ನೇ ಮುಂದೊಡ್ಡುವ ರೀತಿ ; ಭಾಷೆಯ ಬಳಕೆಯ ಅನನ್ಯ ಸಾಧಾರಣತೆ; ನಿರ್ದಿಷ್ಟ ಚೌಕಟ್ಟಿನಲ್ಲಿ ತನ್ನ ನಿಲುಮೆಯನ್ನು ಪ್ರಕಟಿಸುವ ಕ್ರಮ; ಆದಯ್ಯನ ವಚನ ರಚನೆಯ ಹಲವು ಹಂತದ ಅಭಿವ್ಯಕ್ತಿ ಕ್ರಮಗಳನ್ನು ನಾವು ಚಿಂತಿಸುವಂತೆ ಮಾಡುತ್ತವೆ.

ಮುತ್ತು ನೀರೊಳಗೆ ಹುಟ್ಟಿ, ಮರಳಿ ನೀರಾಗದಂತೆ
ತಿಳಿಯ ಕಾಸಿದ ತುಪ್ಪ, ಕ್ಷೀರವಾಗದಂತೆ,
ತೊಟ್ಟು ಬಿಟ್ಟ ಹಣ್ಣು, ಹೂಮಿಡಿಯಾಗದಂತೆ,
ಸಂಸಾರದಲ್ಲಿ ಹುಟ್ಟಿ, ಅದ ಹೊದ್ದದೆ,
ಸ್ವಯಂಪ್ರಕಾಶ ಲಿಂಗದ ಬೆಳಗಿನಲ್ಲಿ ಬೆಳೆದು
ತಲ್ಲೀಯವಾಗಿರ್ದರಯ್ಯಾ, ಸೌರಾಷ್ಟ್ರ ಸೋಮೇಶ್ವರಾ
ನಿಮ್ಮ ಶರಣರು ! (ವಚನ - ೩೦೬)

ವಚನಾಭಿವ್ಯಕ್ತಿಯ ಅನನ್ಯತೆಯನ್ನು ವ್ಯಂಜಿಸುವ ಕ್ರಮದಲ್ಲೇ ಆದಯ್ಯ ಉಳಿದ ವಚನಕಾರರಂತೆ ಅಮುಖ್ಯ ವಚನಕಾರನಾಗುವುದಿಲ್ಲ ಎಂಬ ಅಂಶ ನನಗೆ ಇಲ್ಲಿ ಅನನ್ಯವಾಗಿ ಕಾಣುತ್ತದೆ. 'ಸ್ವಯಂ ಪ್ರಕಾಶದ ಲಿಂಗದ ಬೆಳಕಿನಲ್ಲಿ ಬೆಳೆದು ತಲ್ಲೀಯವಾಗಿರ್ದ' ಪರಿಯನ್ನು ಆದಯ್ಯ ಮೂರು ಮುಖ್ಯ ವಸ್ತುಗಳ ಹಿನ್ನೆಲೆಯಲ್ಲಿ ಚಿಂತನೆಗೆ ಗುರಿಪಡಿಸುತ್ತಾನೆ. ಮುತ್ತು ನೀರಿನಿಂದ ಹುಟ್ಟುವುದೇನೋ ಸರಿ. ಅದು ಮುತ್ತಾದ ಮೇಲೆ ಪುನಃ ನೀರಾಗಲು ಹೇಗೆ ತಾನೆ ಸಾಧ್ಯ? ಬೆಣ್ಣೆ ಕಾಸಿರುವ ತುಪ್ಪ ಪುನಃ ಹಾಲಾಗಲು ಸಾಧ್ಯವೇ? ಹಾಲು ಪೂರ್ವಗುಣ ಅದರ ಉತ್ತರೋತ್ತರ ಗುಣ ತುಪ್ಪತಾನೆ? ಹೂ ಇದ್ದದ್ದು ಮಿಡಿಯಾಗುತ್ತದೆ. ಮಿಡಿಯಾದದ್ದು ಕಾಯಾಗುತ್ತದೆ, ಕಾಯಾದದ್ದು ಹಣ್ಣಾಗುತ್ತದೆ. ಇದೇ ಹೂಮಿಡಿಯ ಫಲಿತರೂಪ. ಇಂಥ ಹೂಮಿಡಿ ಹಣ್ಣಾದ ಮೇಲೆ, ತೊಟ್ಟು ಕಳಚಿಕೊಂಡ ಮೇಲೆ ಪೂರ್ವಗುಣ ಪಡೆಯಲು ಹೇಗೆ ಸಾಧ್ಯವಿಲ್ಲವೋ ಹಾಗೆ ಶರಣರು ತಮ್ಮ ಪೂರ್ವಗುಣದಿಂದ ಉತ್ತರೋತ್ತರ ಫಲಿತ ಗುಣಕ್ಕೆ ತಲುಪಿದ್ದಾರೆ. ಅದೇ ಪರಮಗಂತವ್ಯ, ಅದೇ ಪರಮೋತ್ತಮ; ಅದೇ ತಲ್ಲೀಯಲಿಂಗ ಆರಾಧನೆ! ಇದನ್ನು ಆದಯ್ಯ ಮೂರು ರೂಪಕೋಕ್ತಿಗಳ ಮುಖಾಂತರ ವ್ಯಂಜಿಸುವ ಅಸಾಮಾನ್ಯ ವಾಗನುಭವದ ಅಭಿವ್ಯಕ್ತಿ ಚಿಕಿತ್ಸಕನನ್ನಾಗಿ ಮಾಡುತ್ತದೆ!

ಹೀಗಾಗಿ ಆದಯ್ಯನಲ್ಲಿ ಸರ್ವತ್ರ, ಸರ್ವದಾ ಕಾವ್ಯ ಸಂಮಾರ್ಜನೆ ತುಂಬಿರುವುದಿಲ್ಲ. ಹಾಗೆಂದು ಕೇವಲ ಶುಷ್ಕಶಾಸ್ತ್ರವೂ ಅವನದ್ದಲ್ಲ ಎಂಬುದನ್ನು ಹೇಳುವುದಕ್ಕಾಗಿಯೇ ಕೆಲವು ವಚನಗಳನ್ನು ಈ ಮೇಲೆ ಉದಾಹರಿಸಿದ್ದಾಯ್ತು. ಚೆನ್ನಬಸವಣ್ಣನ ಭಾಷೆಯಲ್ಲಿ ಬಿಗಿ ಮತ್ತು ತರ್ಕದ ತಾಡನ ಮೇಲಿಂದ ಮೇಲೆ ಹಾಯುತ್ತದೆ[7]. ಆದಯ್ಯನಲ್ಲಿ ಅದಿಲ್ಲವೆಂದು ಹೇಳಲಾರೆ. ಆದರೆ, ತಾರ್ಕಿಕತಾಡನದ ಮೇಲೆ ಆದಯ್ಯ ನಿಲ್ಲಲಾರ! ಅವನಿಗೆ ಬೇಕಾದದ್ದು ತರ್ಕಮೀರಿದ ಅನುಭಾವದ ಚಿರಂತನ ಸತ್ಯ. ಅಂಥ ಚಿರಂತನ ಸತ್ಯವನ್ನು ಹೆಕ್ಕುವುದರಲ್ಲಿ ಆದಯ್ಯ ಅನುಸರಿಸುವ ಹಾದಿ ಉಳಿದವರಿಗಿಂತ ಭಿನ್ನ.

ತಿಳಿದ ತಿಳಿಗೊಳದ ತಳಿತ ತಾವರೆಯರಳ
ತಂಡುಲದ ರುಚಿಯ ಕಳಹಂಸಿ ಬಲ್ಲುದಲ್ಲದೆ
ಒಡನಿರ್ದ ನೀರುಗಾಗೆ ತಾನೆತ್ತ ಬಲ್ಲುದೋ?
ಸುಧಾಕಿರಣನಿಂ ಬೆಳಗಿದ ಬೆಳದಿಂಗಳ ರುಚಿಯ

---

7. ತರ್ಕ ಎಂಬುದು ಜೀವನಾನುಭವದ ಶೋಧನೆ. ಜೀವನವನ್ನು ತರ್ಕದ ಹಳಿಯ ಮೇಲೆ ನಿಲ್ಲಿಸಲು ಬಾರದು. ''ನ ಏಷಾ ತರ್ಕೇಣ ಮತಿರಾಪನೇಯ'' ಎಂಬ ಮಾತು ಬಹಳ ಹಿಂದಿನಿಂದಲೂ ಉಂಟು. ತರ್ಕ ಸತ್ಯವನ್ನು ಹೊರಳಿಸಲಾರದು ಎಂಬ ತಿಳಿವಳಿಕೆಯ ಮಾದರಿಯಿದು.

ಚಕೋರ ಬಲ್ಲುದಲ್ಲದೆ ಒಡನಿರ್ದ ಕಾಕೋಳಿ
ತಾನೆತ್ತ ಬಲ್ಲುದೋ?
ಕಾರ್ಗಾಲದ ಮುಂಬನಿಯ ಸುಖವ
ಚಾದಗೆಯು ಬಲ್ಲುದಲ್ಲದೆ ಅಡವಿಯಲ್ಲಿರ್ದ ಕಕ್ಕೋರ
ತಾನೆತ್ತ ಬಲ್ಲುದೋ?
ಸೌರಾಷ್ಟ್ರ ಸೋಮೇಶ್ವರನ ಶರಣರ ಇರವ
ಮಹಾನುಭಾವಿಗಳು ಬಲ್ಲರಲ್ಲದೆ
ಒಡನಿರ್ದ ಜಡಮತಿಯ ಮಾನವರು ತಾವೆತ್ತ ಬಲ್ಲರೋ? (ವಚನ - ೧೩೫)

ಬಹುಶಃ ಆದಯ್ಯನ ವಚನಗಳ ಆಂತರ್ಯದ ಶಕ್ತಿಯ ಅಂತಃಸ್ಫುರಣ ಎಷ್ಟು ಶಕ್ತಿಯುತವಾದುದೆಂಬುದನ್ನು ಮೇಲಿನ ವಚನ ತನ್ನ ಆಂತರ್ಯದ ನೆಲೆಯಲ್ಲೇ ಮುಂದೆ ನಿಲ್ಲುವ ಕ್ರಮ ಸಾಹಿತ್ಯಾಭಿವ್ಯಕ್ತಿಯ ಕ್ರಮದಿಂದಲೂ ಅನನ್ಯ ಹೇಗೋ ಅನುಭಾವದ ಮುಖಾಂತರ ಆವರಣಗೊಂಡ ನಿಲುವೂ ಕೂಡ ಅಷ್ಟೇ ಅನನ್ಯವಾದುದು ಮಾತ್ರವಲ್ಲ ಅಸಾಧಾರಣವಾದುದೂ ಸಹ! ಒಂದು ಕಡೆ ದೈವಿಕನೆಲೆಯ ಅಪ್ಪುಗೆಯ ಉತ್ಸಾಹ ಮತ್ತೊಂದು ಕಡೆ ಮಾನವಿಕ ನೆಲೆಯ ಭಾವ - ಇವೆರಡನ್ನು ಒಂದೆಡೆ ತಂದು ನಿಲ್ಲಿಸುವ ರೀತಿ ಸೋಜಿಗಪಡುವಷ್ಟು ಸಂತೋಷವನ್ನು ತರುತ್ತದೆ ! ಒಂದೆಡೆ ಮಹಾನುಭಾವಿಗಳು ಮತ್ತೊಂದೆಡೆ ಜಡಮತಿಗಳು - ಇವೆರಡಕ್ಕೂ ಕೊಂಡಿಕೊಡುವ ವಿಶೇಷಣಗಳು. ಕ್ರಿಯಾವೇದನೆ, ಆಪ್ತಭಾವ, ಆಲೋಕದ ಬೆಳಗು, ವಚನವನ್ನು ಓದುತ್ತಿರುವಾಗಲೇ ನಮ್ಮನ್ನು ತಟ್ಟುತ್ತದೆ !

ಐಕ್ಯಸ್ಥಲದಲ್ಲಿ ಹಾಲನ್ನು ಕೂಡಿದ ಹಾಲಿನಂತೆ ಇರುವ ಶರಣರ ನಿಲುವನ್ನೆ ಆದಯ್ಯ ಕಂಡ ಬಗೆ ಭಿನ್ನಪಾತಳಿಯದು ಮಾತ್ರವಲ್ಲ ಅದು ಆದಯ್ಯನೇ ಕಂಡ ಪರಮಾನುಭಾವ.

ಹೆಚ್ಚದು ಕುಂದದು, ಮಚ್ಚದು ಬೆಚ್ಚದು,
ಬಾಡದು ಬತ್ತದು, ಕಂದದು ಕುಂದದು,
ಕರಗದು ಕೊರಗದೆನ್ನರಿವು,
ಸೌರಾಷ್ಟ್ರ ಸೋಮೇಶ್ವರಾ
ಲಿಂಗದೊಡಗೂಡಿ ತಾನೆನ್ನದಿದಿರೆನ್ನದು (ವಚನ-೩೫೦)

ಆದಯ್ಯನ ಒಟ್ಟು ಅನುಭಾವಾಭಿವ್ಯಕ್ತಿಯ ಕ್ರಮದ ನೆಲೆಯನ್ನು ಚೆನ್ನಬಸವಣ್ಣನಂತಹ ಶಾಸ್ತ್ರಕಾರನೊಡನೆ ನೋಡುವ ಹಾಗೆ ಮುಖ್ಯ ವಚನಕಾರರ ಮುಖ್ಯ ನಿಲುವಿನೊಡನೆ ಇಟ್ಟು ನೋಡಬೇಕಾಗುತ್ತದೆ. ಯಾವುದು ಬಸವಣ್ಣನ ಸರಳ ರಚನೆಯ ಹಿಂದೆ ಮಹದೋದ್ದೇಶವಿತ್ತೋ ಅದನ್ನು ಅಷ್ಟೇ ಸಮರ್ಥವಾಗಿ ಬೇರೆ ಬೇರೆ ರಚನೆಯ ಹಿನ್ನೆಲೆಯಲ್ಲಿ ಮುಂದುವರೆಸಿಕೊಂಡು ಹೋಗಬೇಕಾದ ಅನಿವಾರ್ಯವಾದ ತುರ್ತೂ ಸಹ ಇತ್ತೆಂಬುದನ್ನು ನಾವು ಮರೆಯುವಂತಿಲ್ಲ. ಆದಯ್ಯನ ವಚನ ರಚನೆಯ ಹಿಂದೆ, ಸಮೃದ್ಧವಾದ, ಅನುಭವದ ಆಳವನ್ನು ಶೋಧಿಸುವ ಪ್ರಕ್ರಿಯೆ ಶುರುವಾಗಿತ್ತು. ಅದು ವಿವಿಧ ಮಾದರಿಗಳಲ್ಲಿ , ವಿವಿಧ ನೆಲೆಗಳಲ್ಲಿ , ವಿವಿಧ ಆಕೃತಿಗಳಲ್ಲಿ ಒಡಮೂಡುತ್ತಿದ್ದುವು. ಇಂಥ ಹಲವು ಮಾದರಿಗಳನ್ನು ಸವಾಲಾಗಿ ತೆಗೆದುಕೊಂಡು, ವಚನ ರಚನೆಯ ಬಿಕ್ಕಟ್ಟುಗಳಿಂದ ಹೊರಬಂದು ವಚನಾಕೃತಿಯ ಆಶಯದಲ್ಲಿ ಮುಳುಗಬೇಕಾದ ಅನಿವಾರ್ಯ ತುರ್ತೂ ಆಗಿತ್ತು. ಇದನ್ನು ತಿಳಿದರೆ, ಆದಯ್ಯನ ರಚನೆಯ ಹಿಂದೆ ಸಾಹಿತ್ಯಕ ವಚನಾಕೃತಿಯ ಒತ್ತಡ ಮತ್ತು ಬಿಕ್ಕಟ್ಟುಗಳು ಇರುವಂತೆ, ಅವುಗಳನ್ನು ದಾಟಬೇಕಾದ ಅನಿವಾರ್ಯ ಇರುವುದನ್ನೂ ತಿಳಿಯಬಹುದಾಗಿದೆ! ಹೀಗಾಗಿ ಸರಳತೆಯೊಂದಿಗೆ ಶಾಸ್ತ್ರನಿಷ್ಠತೆಯನ್ನೂ, ತರ್ಕದೊಂದಿಗೆ ಜಾಣ್ಮೆಯ ಸಂವಾದವನ್ನೂ, ಅನುಭವದೊಂದಿಗೆ ನಿರನುಭವದ ಜಡಾದ್ವೈತವನ್ನೂ ಮೆರೆಯಬಲ್ಲ ಕುತೂಹಲಿ ನಮ್ಮ ಆದಯ್ಯ.

ಆದಯ್ಯ ಅಲ್ಲಮನಂತೆ ಸಂಪೂರ್ಣ ಯೋಗಿಶ್ರೇಷ್ಠನಲ್ಲ; ಬಸವಣ್ಣನಂತೆ ಸರಳರೂಪಾಕೃತಿಯ ಸಾಮಾನ್ಯನೂ ಅಲ್ಲ. ಅವನು ಒಮ್ಮೆ ಶಾಸ್ತ್ರಯೋಗಿ, ಮತ್ತೊಮ್ಮೆ ಅನುಭಾವಯೋಗಿ, ಮಗುದೊಮ್ಮೆ ಸಿದ್ಧರೂಪ ನಿರಂಜನಯೋಗಿ. ಇಂಥ ಹಲವು ನೆಲೆಗಳಲ್ಲಿ ಸಂಚರಿಸುತ್ತ ಅವುಗಳ ಮುಖಾಂತರ ಸಮಸ್ತಕಳೆಗಳನ್ನು ವಾಗದ್ವೈತದಲ್ಲಿ ಸಾಧಿಸಿಕೊಂಡ ವಿಶಿಷ್ಟ ವಚನಕಾರ ಕೂಡ !

ವಚನಸಾಹಿತ್ಯದ ಕುತೂಹಲಿಗಳಿಗೆ ಇನ್ನೂ ಆಹಾರವಾಗದ ಆದಯ್ಯ, ಹಲವು ಮುಖ್ಯವಾದ ಆದಿಭೌತಿಕ, ಆಧ್ಯಾತ್ಮಿಕ, ಆದಿದೈವಿಕ ಸ್ತರಗಳ ವಿನ್ಯಾಸದಲ್ಲಿ ಅವನ ವಚನಗಳ ಆಂತರ್ಯದ ಶಕ್ತಿಯನ್ನು ತೆರೆದು ತೋರಿಸುವ ಅಗತ್ಯ ಇದೆ ! ಮುಖ್ಯ ವಚನಕಾರರ ಜತೆ ತಾತ್ತ್ವಿಕ ಸಂತುಲನೆಗೆ ಅವಕಾಶವಿರುವುದನ್ನು ನಾವು ಮರೆಯುವಂತಿಲ್ಲ. ಇಷ್ಟೆಲ್ಲ ಮಾತುಗಳು ಆದಯ್ಯನ ವಚನಗಳನ್ನು ಓದುತ್ತೋದುತ್ತಲೇ ಮೂಡಿದೆ. ಒಂದು ಬೆಡಗಿನ ವಚನದೊಂದಿಗೆ ಆದಯ್ಯನ ತಾತ್ತ್ವಿಕ ಒತ್ತು, ಭಾವದ ಒನಪು, ಭಾಷೆಯ ಬೆಡಗು, ನಿಜದ ನೆಲೆ, ಮಾನವ ಲೋಕದ ಅನುಭಾವದ ಅನೂಹ್ಯಗಳನ್ನೂ ವಿವರಿಸುವುದಕ್ಕೆ ಬಿಡಬಹುದು:

> ಹದಿನಾರಂಗುಲದುದ್ದ ಸರ್ಪನ ವಿಷಕೆಟ್ಟು,
> ಎರಡು ಕಾಲನಾಕಾಶದಲೂರಿ ನಿಂದಿತ್ತು.
> ಬಹುಮುಖದ ಪಕ್ಷಿ ಏಕಮುಖವಾಗಿ ಚಂಚುಪುಟದಲ್ಲಿರ್ದ
> ರತ್ನಪಕ್ಷಿಯ ನುಂಗಿ ರತ್ನ ಕೆಟ್ಟಿತ್ತು,
> ಸೌರಾಷ್ಟ್ರ ಸೋಮೇಶ್ವರನಲ್ಲಿ ಅರಸುವ ಬನ್ನಿರೆ
> ಸುಜ್ಞಾನ ಭರಿತರು ! (ವಚನ - ೩೮೩)

ಆದಯ್ಯನ ವಚನಗಳಿಗೆ ಆದಯ್ಯನೇ ತೋರಿಸುತ್ತಿರುವ ವ್ಯಾಖ್ಯಾನದ ಮತ್ತೊಂದು ಪರಿ ಈ ಬಗೆಯದು ! ಈ ಹಿನ್ನೆಲೆಯಲ್ಲಿ ಆದಯ್ಯನನ್ನು ಮತ್ತೊಮ್ಮೆ ಪುನರ್ ವ್ಯಾಖ್ಯಾನಕ್ಕೊಳಪಡಿಸುವುದು ಅಗತ್ಯವೂ ಅನಿವಾರ್ಯವೂ ಆದ ಒತ್ತಡವಾಗಿದೆ !

ಬಳಸಿಕೊಂಡ ಆಕರಗಳು

೧. ಆದಯ್ಯನ ವಚನಗಳು, ಸಂ : ಶ್ರೀ ಉತ್ತಂಗಿ ಚೆನ್ನಪ್ಪನವರು ಪ್ರಕಾಶಕರು : ಮೃತ್ಯುಂಜಯ ಮಹಾಸ್ವಾಮಿಗಳು, ಮುರುಘಾಮಠ, ಧಾರವಾಡ ೧೯೫೭.

೨. ಸೋಮನಾಥ ಚಾರಿತ್ರ, ಸಂ : ಆರ್.ಸಿ. ಹಿರೇಮಠ, ಪ್ರಕಾಶಕರು ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ ೧೯೬೭.

೩. ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ (ನಾಲ್ಕನೆಯ ಸಂಪುಟ) ಸಂ : ಟಿ.ವಿ. ವೆಂಕಟಾಚಲಶಾಸ್ತ್ರೀ. ಪ್ರಕಾಶಕರು ಮೈ. ವಿಶ್ವವಿದ್ಯಾನಿಲಯ, ಮೈಸೂರು ೧೯೭೭.

೪. ಮಧ್ಯಕಾಲೀನ ಭಕ್ತಿ ಮತ್ತು ಅನುಭಾವ ಸಾಹಿತ್ಯ ಹಾಗೂ ಚಾರಿತ್ರಿಕ ಪ್ರಜ್ಞೆ - ಡಾ. ಬಸವರಾಜ ಕಲ್ಗುಡಿ, ಪ್ರ : ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು - ೧೯೮೮.

೫. Mysticism and philosophy - Stace. W.T. Mackmillan 1960.

೬. The varieties of Religious Experience - Williom James Fontana Publication 1975.

೭. Guide to philosophy - C.E.M. Joad, London Victor, Gollancz Ltd. 1946.

ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಬಾಹುಬಲಿ

ಪ್ರೊ॥ ವಸಂತ ಕುಷ್ಟಗಿ

ಜೈನಧರ್ಮವು ವಿಶ್ವಮಾನ್ಯ ಧರ್ಮಗಳಲ್ಲಿ ಒಂದು. ಬದುಕನ್ನು ಸುಂದರಗೊಳಿಸುವಲ್ಲಿ ಈ ಧರ್ಮದ ಕೊಡುಗೆಯೂ ವಿಶಿಷ್ಟವಾಗಿದೆ. ಅದು ಸಾಹಿತ್ಯ ಮತ್ತು ಶಿಲ್ಪಕಲೆಯ ಮುಖಾಂತರ ಇಂದಿಗೂ ಪ್ರಭಾವವನ್ನು ಬೀರುತ್ತಲೇ ಇದೆ. ಸಹ ಬಾಳ್ವೆಗೆ, ವ್ರತಬದ್ಧ ಜೀವನಕ್ಕೆ ತಾನು ಬೆಂಬಲವಾಗಿ ನಿಂತು ವಿಶ್ವದ ಬದುಕನ್ನು ಚೇತೋಹಾರಿಯಾಗಿಡಲು ಯಾವಾಗಲೂ ಪ್ರಯತ್ನಿಸುತ್ತಲೇ ಬಂದಿದೆ. ಅದರಲ್ಲಿಯೂ ಕರ್ನಾಟಕದ ನೆಲೆಯಲ್ಲಿಯಂತೂ ಜೈನಧರ್ಮವು ಹಾಸುಹೊಕ್ಕಾಗಿ ಬೆಳೆಯಿತು. ಸೌಹಾರ್ದದಿಂದ ತಾನು ಸಾಧಿಸಿದ ಜೀವನ ಮೌಲ್ಯಗಳನ್ನು ಎಲ್ಲ ಮತಗಳವರೂ ಮೆಚ್ಚಿ, ಅಪರೂಪವಾದುವುಗಳನ್ನು ಅಳವಡಿಸಿಕೊಂಡು ನೆಮ್ಮದಿಯ ಬಾಳಿಗಾಗಿ ಹವಣಿಸಿರುವುದು ಇತಿಹಾಸದಾಖಲೆಯ ಮಾತು. ಈ ಮಾತಿಗೆ ಕನ್ನಡ ಸಾಹಿತ್ಯ ಮತ್ತು ಕನ್ನಡ ನಾಡಿನ ಶಿಲ್ಪಗಳು ತೆರೆದ ಪುಸ್ತಕಗಳಾಗಿವೆ.

''ಕನ್ನಡ ಸಾಹಿತ್ಯದ ಆರಂಭ ಕಾಲವೆನ್ನುವುದು ಒಟ್ಟಿನಲ್ಲಿ ಜೈನಧರ್ಮದ ಉಚ್ಛ್ರಾಯಕಾಲ. ಜೈನಧರ್ಮದ ಕವಿಗಳು ಕನ್ನಡ ಭಾಷೆಯಲ್ಲಿ ಸಾಹಿತ್ಯದ ಚಿನ್ನದ ಬೆಳೆ ತೆಗೆದು ಭಾಷಾ ಸಾಹಿತ್ಯಗಳ ಹೆಮ್ಮೆಗೆ ಕೋಡು ಮೂಡಿಸಿದ ಕಾಲ'' [1]. ಆ ಕಾಲದ ಧಾರ್ಮಿಕ ಮತ್ತು ಲೌಕಿಕ ಸಾಹಿತ್ಯವು ಕಾವ್ಯಧರ್ಮದ ಮೂಲಕ ಮಾನವ ಧರ್ಮವನ್ನು

---

1. ಕರ್ನಾಟಕದಲ್ಲಿ ಜೈನಧರ್ಮ - ಒಂದು ಅಧ್ಯಯನ. ಸಂಪಾದಕರು : ಡಾ.ಜಿ.ಟಿ.ಕಲಘಟಗಿ, ಜೈನ ಧರ್ಮ ಮತ್ತು ಕನ್ನಡ ಸಾಹಿತ್ಯ, ಪುಟ ೬೨; ೧೯೭೬; ಲೇ. ಡಾ.ಟಿ.ವಿ. ವೆಂಕಟಾಚಲಶಾಸ್ತ್ರಿ

ನಾಡಿನಲ್ಲಿ ಬೆಳಸಲು ಪ್ರಯತ್ನಿಸಿದುವು. ಜೈನಧರ್ಮದ ಮೂಲಭೂತ ತತ್ತ್ವಗಳನ್ನು ನೋಡಿದರೆ ಅವು ಮಾನವ ಧರ್ಮದ ಭದ್ರ ತಳಹದಿಯ ಮೂಲಮೌಲ್ಯಗಳಾಗಿಯೇ ಇಂದಿಗೂ ಬೆಳಕು ಬೀರುತ್ತವೆ. ''ಪುಸಿಯದುದು, ಪರಾಂಗನೆಗೆ ಆಟಿಸದದು, ಕೊಲ್ಲದದು, ಮೋದಮಿಲ್ಲದುದು, ಅಱಿವಂ ಪೊಸಯಿಸುವುದು, ವೈರಾಗ್ಯದ ದೆಸೆಗೆ ಎಸೆಪುದು ಧರ್ಮ. ಅದಱ ತಡೆವುದೆ ಅಧಮಂ; ಧರ್ಮಂ ಅಮರೇಂದ್ರಗತಿಯಂ, ಅಧರ್ಮಂ ಅಧೋಗತಿಯಂ ಎಸಗುವ ಎಸಕದೊಳೆ ಈಗುಂ. ಧರ್ಮಾಧರ್ಮ ಕ್ರಿಯೆಗಳೆ ನೆರ್ಮಂ ಜೀವಕ್ಕೆ ಮನುಜಗತಿಯೊಳೆ ಮಾಟ್ಕುಂ'' ಎಂದು ಪಂಪನು ಆದಿಪುರಾಣದಲ್ಲಿ ಹೇಳಿರುವ ಮಾತುಗಳೇ ಆ ಮೌಲ್ಯದ ಮಾತುಗಳು, ಇಂತಹ ಜೈನಧರ್ಮಸಾರವನ್ನು ಸ್ಥೂಲವಾಗಿ ಹೀಗೆ ಸಂಗ್ರಹಿಸಬಹುದು :

''ಜೀವ ಚೈತನ್ಯ ಸ್ವರೂಪವಾದದ್ದು, ಶಾಶ್ವತವಾದದ್ದು. ಅನಂತ ಜ್ಞಾನ, ಅನಂತ ದರ್ಶನ, ಅನಂತ ವೀರ್ಯ, ಅನಂತ ಸುಖಗಳಿಂದ ಕೂಡಿರುವುದು ಜೀವದ ಸ್ವಭಾವ. ಈ ಜೀವ ಅಜೀವದೊಡನೆ ಹೇಗೋ ಸೇರಿಕೊಂಡು ಕರ್ಮದ ಕಟ್ಟಿನಲ್ಲಿ ಸಿಕ್ಕಿ ಬಿದ್ದಾಗ ಈ ಅನಂತ ಜ್ಞಾನಾದಿಗಳ ಮೇಲೆ ಒಂದು ಆವರಣ ಕವಿದುಕೊಳ್ಳುತ್ತದೆ. ಆಗ ಜೀವ ತನ್ನ ಸ್ವರೂಪವನ್ನು ಮರೆತು ಚತುರ್ಗತಿ ರೂಪವಾದ ಸಂಸಾರದಲ್ಲಿ ತೊಳಲುತ್ತಿರುತ್ತದೆ. ಶುಭಾಶುಭಕರ್ಮಗಳನ್ನು ಮಾಡಿ ಮನುಷ್ಯನಾಗಿ, ದೇವತೆಯಾಗಿ, ತಿರ್ಯಕ್ ಪ್ರಾಣಿಯಾಗಿ, ನಾರಕಿಯಾಗಿ ಮತ್ತೆ ಮತ್ತೆ ಹುಟ್ಟುತ್ತಲೇ ಇರುತ್ತದೆ. ಹೀಗೆ ಹುಟ್ಟು ಸಾವುಗಳ ಚಕ್ರದಲ್ಲಿ ಸುತ್ತುತ್ತ ಮಿಥ್ಯಾಜ್ಞಾನ ಮೋಹಾದಿಗಳಿಂದ ಕರ್ಮದ ಕಟ್ಟನ್ನು ಗಟ್ಟಿಗೊಳಿಸುತ್ತ ಸಂಸಾರದಲ್ಲೆ ಸಿಕ್ಕಿ ತೊಳಲುತ್ತಿರುವಾಗ ಹಲವು ಹಲವು ಪುಣ್ಯ ಕರ್ಮಗಳ ಫಲದಿಂದ ಕ್ರಮಕ್ರಮವಾಗಿ ಸಂಸಾರದ ತೊಡರುಗಳನ್ನು ಬಿಡಿಸಿಕೊಳ್ಳಬೇಕೆಂಬ ಬಯಕೆಯುಂಟಾಗುತ್ತದೆ. ಆ ಭವ್ಯಜೀವಿಗೆ ಕಾಲಲಬ್ಧಿ ದೊರೆತಾಗ ಎಂದರೆ ಪಕ್ವಕಾಲ ಬಂದಾಗ, ಸಮ್ಯಕ್ ದರ್ಶನ, ಸಮ್ಯಕ್ ಜ್ಞಾನ, ಸಮ್ಯಕ್ ಚಾರಿತ್ರ ರೂಪವಾದ ರತ್ನತ್ರಯದಲ್ಲಿ ಮನಸ್ಸು ಹೋಗಲು ಅವಕಾಶವಾಗುತ್ತದೆ. ರತ್ನತ್ರಯವನ್ನಾಶ್ರಯಿಸಿದ ಜೀವಕ್ಕೆ ತತ್ತ್ವಸ್ವರೂಪ ಚೆನ್ನಾಗಿ ಗೊತ್ತಾಗುತ್ತದೆ. ಆ ಬಳಿಕ ಜೀವ ತನ್ನೆಡೆಗೆ ಹರಿದು ಬಂದ ಸಂಸಾರಕ್ಕೆ ಬಂಧಿಸುವ ಕರ್ಮಗಳನ್ನು ಬರಗೊಡದೆ ತಡೆದು ಆ ಮೊದಲೆ ಬಂದು ಮೈಗೂಡಿರುವ ಕರ್ಮಗಳನ್ನು ತಪಸ್ಸಿನಿಂದ ನಿಶ್ಶೇಷವಾಗಿ ನಾಶಮಾಡಿ ಸಂಸಾರದ ಬಲೆಯಿಂದ ಬಿಡಿಸಿಕೊಂಡು ಬೇರೆಯಾಗುತ್ತದೆ. ಹೀಗೆ ಕರ್ಮಬಂಧನದಿಂದ ಬಿಡುಗಡೆ ಹೊಂದಿದ ಮುಕ್ತಾತ್ಮ ತನ್ನ ಸಹಜ ಸ್ವರೂಪವನ್ನು ಪಡೆದು ಅನಂತಜ್ಞಾನಗಳಿಂದ ಬೆಳಗುತ್ತ ಶಾಶ್ವತವಾದ ಮೋಕ್ಷಸುಖದಲ್ಲಿ ಲೋಕಾಗ್ರದಲ್ಲಿ ನೆಲೆಗೊಳ್ಳುತ್ತದೆ[2]''.

ಇಂಥ ಮಾನವ ತತ್ತ್ವಗಳಿಂದ ಕೂಡಿದ ಜೈನಧರ್ಮವು ತನ್ನ ಉದಾತ್ತತೆಯಿಂದ ಕರ್ನಾಟಕದಲ್ಲಿ ಬೆಳೆಯಿತು ಎಂಬುದಕ್ಕೆ, ಇಂದಿನ ಕರ್ನಾಟಕದ ಬಹುತೇಕ ಊರುಗಳಲ್ಲಿ ಜೈನ ಶಿಲ್ಪಕಲೆಯ ಭಗ್ನಾವಶೇಷಗಳು ಇಲ್ಲದೆ ಇಲ್ಲ ಎಂಬುದೇ ಗಟ್ಟಿ ಸಾಕ್ಷಿ. ಅಲ್ಲದೆ ಈ ಜೈನ ಶಿಲ್ಪ ಸ್ಮಾರಕಗಳು ಕಲಾ ಹಿರಿಮೆಯಿಂದ ಕೂಡಿರುವುದರಿಂದ, ಕರ್ನಾಟಕಕ್ಕಷ್ಟೇ ಅಲ್ಲ, ಒಟ್ಟು ಭಾರತೀಯ ಶಿಲ್ಪಕ್ಕೆ ವಿಶಿಷ್ಟ ಸ್ಥಾನವನ್ನು ಕಲ್ಪಿಸಿಕೊಟ್ಟಿವೆ. ಕರ್ನಾಟಕದ ''ಶ್ರವಣಬೆಳಗೊಳದಲ್ಲಿರುವ ವಿಧವಿಧವಾದ ಬಸದಿಗಳು ಹಾಗೂ ಭವ್ಯವಾದ ಗೊಮ್ಮಟೇಶ್ವರ ಇತಿಹಾಸದಲ್ಲಿಯಷ್ಟೇ ಅಲ್ಲ, ಜಗತ್ಪ್ರಸಿದ್ಧ. ಅಲ್ಲದೆ ಜೈನ ಕಲೆ ಹಾಗೂ ಧರ್ಮದಲ್ಲಿ ಈ ಸ್ಥಳದಂಥ ಹಾಗು ಹುಂಚದಂಥ ಕ್ಷೇತ್ರಗಳಿಗೆ ಸರಿದೂಗುವಂಥ ಮಹತ್ತ್ವದ ಸ್ಥಳಗಳು ದಕ್ಷಿಣ ಭಾರತದ ಇತಿಹಾಸದಲ್ಲಿ ಮತ್ತೆಲ್ಲಿಯೂ ಕೇಳಿಬಂದಿಲ್ಲ[3]. ಇದನ್ನೆಲ್ಲ ಗಮನಿಸಿದರೆ, ಇದೆಲ್ಲ ನಮ್ಮ ಉದಾತ್ತ ಸಂಸ್ಕೃತಿಯ ಬೆಳವಣಿಗೆಗೆ ಮೂಕ ಸಾಕ್ಷಿಯೆಂದು ಎನ್ನಿಸದೇ ಇರದು.

---

2. ಆದಿಪುರಾಣ ಸಂಗ್ರಹ : ಸಂ.ಎಲ್. ಗುಂಡಪ್ಪ; ಪೀಠಿಕೆ ಪುಟ XXI, XXII, ೧೯೫೬.
3. ಕರ್ನಾಟಕ ಮತ್ತು ಜೈನ ಸಂಸ್ಕೃತಿ, ಲೇ: ಕರ್ನಾಟಕದಲ್ಲಿ ಜೈನ ಶಿಲ್ಪ - ಅ.ಸುಂದರ, ಪುಟ ೧೨೦, ಮು. ೧೯೭೫, ಕರ್ನಾಟಕ ವಿಶ್ವವಿದ್ಯಾಲಯ ಪ್ರಸಾರಾಂಗ.

ಕರ್ನಾಟಕದಲ್ಲಿರುವ ಅಪರೂಪ ಜೈನಶಿಲ್ಪದಲ್ಲಿ ಗೊಮ್ಮಟಗಳ ದರ್ಶನ ನಮ್ಮ ಹೆಮ್ಮೆಯ ಮಾತು. ಏಕೆಂದರೆ ಗೊಮ್ಮಟೇಶನ ಎಂಟು ಶಿಲ್ಪಗಳು ಕರ್ನಾಟಕದಲ್ಲಿಯೇ ನೆಲೆಸಿದ್ದು, ನಮ್ಮ ಸಂಸ್ಕೃತಿಯ ಭವ್ಯತೆಯನ್ನು ಸದಾ ಹಸುರಾಗಿಡುವಲ್ಲಿ ಸಫಲತೆಯನ್ನು ತಂದಿವೆ. ಇವುಗಳಲ್ಲಿ ಹಾಸನ ಜಿಲ್ಲೆಯ ಶ್ರವಣಬೆಳಗೊಳದ ವಿಂಧ್ಯಗಿರಿ (ಇಂದ್ರಗಿರಿ)ಯಲ್ಲಿ ಗಂಗರಾಜ ರಾಚಮಲ್ಲನ ಸೇನಾಧಿಕಾರಿ/ ಮಂತ್ರಿಯಾಗಿದ್ದ ಚಾವುಂಡರಾಯನು ನಿರ್ಮಿಸಿದ ೫೭ ಅಡಿ ಎತ್ತರದ ಮೂರ್ತಿಯು ಮುಖ್ಯವಾದದ್ದು : ಇದರ ನಿರ್ಮಾಣವು ಕ್ರಿ.ಶ. ೯೮೧-೮೩ರಲ್ಲಿ ; ಎರಡನೆಯದು ಪಾಂಡ್ಯರಾಜನಾದ ವೀರಪಾಂಡ್ಯನಿಂದ ಕ್ರಿ.ಶ.೧೪೩೨ರಲ್ಲಿ ಮಂಗಳೂರು ಜಿಲ್ಲೆಯ ಕಾರ್ಕಳದಲ್ಲಿ ನಿರ್ಮಿತವಾದದ್ದು. ೪೧ ೧/೩ ಅಡಿ ಎತ್ತರ; ಮೂರನೆಯದು ತಿಮ್ಮರಾಜನೆಂಬವನಿಂದ ಅದೇ ಮಂಗಳೂರು ಜಿಲ್ಲೆಯ ವೇಣೂರಿನಲ್ಲಿ ಕ್ರಿ.ಶ. ೧೬೦೪ರಲ್ಲಿ ನಿರ್ಮಿತವಾದ್ದು; ೩೫ ಅಡಿ ಎತ್ತರ; ನಾಲ್ಕನೆಯದು ಮೈಸೂರು ಜಿಲ್ಲೆಯ ಇಲವಾಲದ ಬಳಿ ಶ್ರವಣ ಗುಡ್ಡದ ಮೇಲೆ ಇದೆ. ಇದರ ಎತ್ತರ ೨೦ ಅಡಿ. ಐದನೆಯದು ೧೮ ಅಡಿ ಎತ್ತರದ ಶಿಲಾಮೂರ್ತಿ. ಕನ್ನಂಬಾಡಿ ಕಟ್ಟೆಯ ಹತ್ತಿರದ ಬಸ್ತಿಯಲ್ಲಿದೆ. ಧರ್ಮಸ್ಥಳದಲ್ಲಿ ೧೯೭೫ರಲ್ಲಿ ಸ್ಥಾಪನೆಯಾದ ೪೬ ಅಡಿ ಎತ್ತರದ ಸುಂದರಮೂರ್ತಿಯು ಆರನೆಯದು; ಏಳನೆಯದು ಬೆಳಗಾಂವ ಜಿಲ್ಲೆಯ ಶೇಡಬಾಳದ ೧೨ ಅಡಿ ಎತ್ತರದ ಗೊಮ್ಮಟ; ಎಂಟನೆಯದು ೧೦ ಅಡಿ ಎತ್ತರದ ಮೂರ್ತಿ. ಧಾರವಾಡ ಜಿಲ್ಲೆಯ ಕಳಸಾಪುರದಲ್ಲಿದೆ. ಹೀಗೆ ''ಇವು ಎಂಟು ಮೂರ್ತಿಗಳು ಕನ್ನಡ ನಾಡಿಲ್ಲೇ ಇರುವುದು ಒಂದು ಸೋಜಿಗವೇ ಆಗಿದೆ'' [4].

ಈ ಎಲ್ಲ ಗೋಮ್ಮಟೇಶನ ಶಿಲಾಮೂರ್ತಿಗಳಲ್ಲಿ ಮಹಾಭವ್ಯ ಶಿಲ್ಪ ಶ್ರೇಷ್ಠಕೃತಿಯೆಂದರೆ ಶ್ರವಣಬೆಳಗೊಳದ ಗೊಮ್ಮಟೇಶ್ವರನದು. ಈ ಅತ್ಯದ್ಭುತವಾದ ಶಿಲ್ಪಕಲಾದರ್ಶನದಿಂದ ವಿಶ್ವದ ಕೋಟಿ ಕೋಟಿ ಜನ, ಹೃದಯವನ್ನು ತುಂಬಿಕೊಂಡಿದ್ದಾರೆ. ಇದನ್ನೆಲ್ಲ ಯೋಚಿಸಿದರೆ, ''ಕರ್ನಾಟಕದಲ್ಲಿರುವ ಜೈನರ ಬೃಹತ್ ಶಿಲ್ಪಗಳು ಪ್ರಪಂಚದ ವಸ್ತುಗ್ಳಾಗಿವೆ'' [5] ಎಂಬುದು ಅಕ್ಷರಶಃ ಸತ್ಯ. ಅದರಂತೆ ಈ ಅದ್ಭುತ ರಮ್ಯ ಕಲಾಕೃತಿಗಿಂತಲೂ, ''ಭವ್ಯವಾದದ್ದು ಅಥವಾ ಹೆಚ್ಚು ಪ್ರಭಾವ ಬೀರುವುದು ಬೇರೆಲ್ಲೂ ಅಸ್ತಿತ್ವದಲ್ಲಿಲ್ಲ....[6] ಎಂಬ ಖ್ಯಾತ ಪ್ರವಾಸಿ ಸಾಹಿತಿ ಫರ್ಗುಸನ್ ಅವರ ಅಭಿಪ್ರಾಯವನ್ನು ಇಲ್ಲಿ ನೆನಪಿಸಿಕೊಳ್ಳುವುದು ಒಳ್ಳೆಯದು. ಅಷ್ಟೇ ಅಲ್ಲ ಈ ಶಿಲ್ಪಕಲೆಯು ಔನ್ನತ್ಯದ ದೃಷ್ಟಿಯಿಂದಲೂ, ನೈಪುಣ್ಯತೆಯ ದೃಷ್ಟಿಯಿಂದಲೂ, ''ಈಜಿಪ್ಟ್ ಅಬುಸಿಂಬಲ್ ದೇವಾಲಯಗಳು ಮತ್ತು ಕಂಪೂಚಿಯಾದ ಅಂಗ್ಕೋರ್‌ವಾಟ ದೇವಾಲಯಗಳಿಗೆ ಸರಿಗಟ್ಟುತ್ತದೆ ಇಲ್ಲವೆ ಬಹುಶಃ ಅವುಗಳನ್ನು ಮೀರಿಸುತ್ತದೆ [7].

ಈ ಗೊಮ್ಮಟೇಶ್ವರನೆಂದರೆ, ಮತ್ತೆ ಬೇರೆಯಾರೂ ಅಲ್ಲ. ಐಹಿಕ ಪ್ರಪಂಚದಲ್ಲಿ ಅದ್ಭುತ ವಿಜಯವನ್ನು ಪಡೆದ ಕ್ಷಣದಲ್ಲೆ ಸರ್ವವನ್ನೂ ತ್ಯಾಗ ಮಾಡಿದ ಬಾಹುಬಲಿಯು, ಈಗಿನ ಕಾಲಚಕ್ರದ ಮೊದಲನೆಯ ತೀರ್ಥಂಕರ ಆದಿನಾಥನ ಎರಡನೆಯ ಮಗ. ಭರತ ಹಿರಿಯ ಮಗ. ಆದಿನಾಥನು ರಾಜ್ಯವನ್ನು ತ್ಯಜಿಸುವಾಗ ಹಿರಿಯಮಗ ಭರತನಿಗೂ ಉಳಿದ ಮಕ್ಕಳಿಗೂ ಆ ರಾಜ್ಯವನ್ನು ಹಂಚಿದನು. ಮುಂದೆ ಭರತನು ಇಡೀ ದೇಶವನ್ನು ಗೆಲ್ಲುವಾಗ, ಬಾಹುಬಲಿ ಆತನಿಗೆ ಪಕ್ಕಾಗಲಿಲ್ಲ. ಇಬ್ಬರಿಗೂ ಘರ್ಷಣೆ ಆರಂಭವಾದಾಗ, ಯುದ್ಧವು ಬೇಡವೆಂದೂ, ದ್ವಂದ್ವಯುದ್ಧದಿಂದ ಸಮಸ್ಯೆಯನ್ನು ಪರಿಹರಿಸಿಕೊಳ್ಳಬೇಕೆಂದು ನಿರ್ಧರಿಸಲಾಯಿತು. ಆ ಪ್ರಕಾರದ ಶಕ್ತಿಯುಕ್ತಿಗಳು ಪರೀಕ್ಷೆಯಲ್ಲಿ ಭರತನಿಗಿಂತ ಬಲಶಾಲಿಯಾದ ಬಾಹುಬಲಿ ವಿಜಯಿ ಆದ. ಆದರೆ ಅದೇ ಕ್ಷಣದಲ್ಲಿ ಬಾಹುಬಲಿಗೆ ಐಹಿಕಯಶಸ್ಸಿನ ನಿರರ್ಥಕತೆಯು ಮನದಟ್ಟಾಗಿ, ಕಠಿಣತಪಸ್ಸಿಗೆ ತೊಡಗಿ

---

4. ಕರ್ನಾಟಕದ ಜೈನ ತೀರ್ಥಕ್ಷೇತ್ರಗಳು; ಲೇ. ಸಿ.ವ್ಹಿ. ಕೆರಿಮನಿ, ೧೯೭೫ ಪುಟ ೧೦೫.
5. ಶ್ರೀ ಎಸ್.ಸಿ. ಘೋಸಾಲರ, 'ದಿ ಸೆಕ್ರೆಡ್ ಆಫ್ ದಿ ಜೈನ್ಸ್' ಪುಸ್ತಕದಿಂದ
6. ಖ್ಯಾತ ಪ್ರವಾಸೀ ಸಾಹಿತಿ ಫರ್ಗುಸನ್ ಉವಾಚ
7. ಭಗವಾನ್ ಬಾಹುಬಲಿ ಶಾಂತಿಯ ರಾಜಕುವರ; ಸರಕಾರದ ಪ್ರಕಟಣೆ ೧೯೮೧.

ನಿರ್ವಾಣಹೊಂದಿದ. ಇಂಥ ಅಭಿಮಾನಧನನ ಭವ್ಯತೆಯ ಮೂರ್ತಿಗಳೇ ಆ ಗೊಮ್ಮಟೇಶ್ವರಮೂರ್ತಿಗಳು. ಬಿಸಿಲು ಚಳಿಯನ್ನದೆ, ಮಳೆ ಗಾಳಿಯೆನ್ನದೆ, ಹಸಿವೆ ನೀರಡಿಕೆಯನ್ನದೆ, ಭೂವ್ಯೋಮಗಳ ಮಧ್ಯೆ ಇರುವ ಇಂಗಿತಾರ್ಥವನ್ನು ತೋರಿಸಿಕೊಡುತ್ತಿರುವ ಮಹಾಮೂರ್ತಿಗಳು. ಅವುಗಳಲ್ಲಿ ಶ್ರವಣಬೆಳಗೊಳದ ಮೂರ್ತಿ ಅಖಂಡಶಿಲೆಯಲ್ಲಿದೆ. ಪಾದದಲ್ಲಿ ಅತ್ತಇತ್ತ ಹುತ್ತಗಳು. ಈ ಹುತ್ತಗಳು ಬಾಹುಬಲಿಯು ಒಂದು ವರ್ಷ ನಿಂತ ನಿಲುವನ್ನು ಬಿಡದೆ ತಪಸ್ಸು ಮಾಡುವಾಗ ಬೆಳೆದುವುಗಳು. ಆಗ ಬಳ್ಳಿ ಆತನನ್ನು ಬಳಸಿತು. ಮಾಧವೀಲತೆ ಪಾದಗಳಿಂದ ಹೊರಟು, ಎರಡು ಭಾಗವಾಗಿ ಮೂರ್ತಿಯ ಎರಡು ತೋಳುಗಳನ್ನು ಅಡರಿ ಸುತ್ತುಹಾಕಿಕೊಂಡು ಮೇಲೇರಿದೆ. ಮೇಲೇರಿದ ಲತೆಯಲ್ಲಿಯ ಎಲೆಗಳು ಸಿಂಗಾರವಾಗಿ ಮೂರ್ತಿಯ ಎದೆಯೆತ್ತರಕ್ಕೆ ಬಂದಾಗ ಆ ಲತೆ ಹೂ ಬಿಟ್ಟಿದೆ. ಮತ್ತು ಬಾಹುಬಲಿಯ ಮುಖದಲ್ಲಿ ಹಸುಮಗುವಿನ ಮಂದಹಾಸ, ದೇವರನ್ನು ಕಂಡವನ ಆನಂದ, ಕೃತಕೃತ್ಯನಾದವನ ಪ್ರಶಾಂತಿ, ಇನ್ನಾವುದಕ್ಕೂ ಕುಗ್ಗದ ಜಗ್ಗದ ಸ್ಥೈರ್ಯಗಳೆಲ್ಲ ಹೆಪ್ಪುಗಟ್ಟಿವೆ.

ಇಂಥ ಬಾಹುಬಲಿಯನ್ನು ಕಂಡು ಭಾವುಕರು / ಶಿಲ್ಪಿಗಳು / ಕವಿಗಳು ದೇಶಾದ್ಯಂತ ಮೈ ಮರೆತರು. ಅದನ್ನು ಚಿರಂತನಗೊಳಿಸಲು ಕಾವ್ಯಗಳು ಸೃಷ್ಟಿಯಾದವು. ಕರ್ನಾಟಕದ ಕವಿಗಳೂ ಈ ಬಾಬತ್ತಿನಲ್ಲಿ ಹಿಂದೆ ಬೀಳಲಿಲ್ಲ. ಅವರೂ ಈ ಬಾಹುಬಲಿಯನ್ನು ಚಿರಸ್ಥಾಯಿಗೊಳಿಸಲು ತಮ್ಮ ತಮ್ಮ ಕಾವ್ಯಗಳಲ್ಲಿ ಸೆರೆಹಿಡಿದಿದ್ದಾರೆ. ಕೇವಲ ಪ್ರಾಚೀನ ಕನ್ನಡ ಕಾವ್ಯಗಳಲ್ಲಿಯ ಬಾಹುಬಲಿಯನ್ನು ಕುರಿತು ಗುರುತಿಸಿ ಬರೆಯುವುದೇ ನನಗೆ ಸೀಮಿತವಾದ ಭಾಗ. ಆ ದಿಸೆಯಲ್ಲಿ ನನ್ನ ಅಲ್ಪ ಪ್ರಯತ್ನವು ಇದು ಆಗಿದೆ.

ಈ ಬಾಹುಬಲಿಗೆ, 'ದೋರ್ಬಲಿ' 'ಸೌನಂದಿ', 'ಭುಜಬಲಿ', 'ಕುಕ್ಕುಟೇಶ' ಎಂಬ ಹೆಸರುಗಳೂ ಇವೆ. ಆದರೆ ನಮ್ಮ ಕರ್ನಾಟಕದಲ್ಲಿ ಅವನನ್ನು ಗೊಮ್ಮಟೇಶ್ವರ ಎಂದೂ ಕರೆಯಲಾಗಿದೆ. ಬಹುಶಃ ಚಾವುಂಡರಾಯನ ಶ್ರದ್ಧೆ ವಿಶ್ವಾಸಗಳು ಅವನಿಗೆ ಆ ಹೆಸರನ್ನು ತಂದಿರಬೇಕು. ಏಕೆಂದರೆ ಚಾವುಂಡರಾಯನ ಗುರು ನೇಮಿಚಂದ್ರನು, ಚಾವುಂಡರಾಯನನ್ನು 'ಗೋಮಟ' ಎಂದು ಬಿರುದಿಸಿ ಕರೆದ. ಆ ಗೋಮಟನ ಈಶ್ವರನೇ ಗೊಮ್ಮಟೇಶ್ವರ ಎಂದು ಬಾಹುಬಲಿಯೆಂದು ಖ್ಯಾತಿ ಪಡೆದನೆಂಬುವುದು ಗಮನಿಸಬೇಕಾದ ವಿಷಯ. ಆದರೆ ದಿ. ಗೋವಿಂದ ಪೈಗಳು ಈ 'ಗೊಮ್ಮಟ' ಶಬ್ದಕ್ಕೆ 'ಸ್ಫುರದ್ರೂಪಿ' ಎಂದು ಅರ್ಥೈಸಿದ್ದಾರೆ. ಬಹುಶಃ ತುಂಬ ಸುಂದರನಾದ ಈ ಬಾಹುಬಲಿಯನ್ನು ಮನ್ಮಥನೆಂದು ಗುರುತಿಸುವುದರಿಂದ ಪೈಗಳ ಅರ್ಥವನ್ನೂ ಗಮನದಲ್ಲಿಟ್ಟುಕೊಳ್ಳಬೇಕು. ಏಕೆಂದರೆ ಈ ಮನ್ಮಥನಾದ ಗೋಮ್ಮಟೇಶ್ವರನೇ ಬಾಹುಬಲಿ.

ಬಾಹುಬಲಿಯು ಶಕ್ತಿಗೆ, ರೂಪಕ್ಕೆ, ತ್ಯಾಗಕ್ಕೆ, ವಿವೇಕಕ್ಕೆ - ಇನ್ನೊಂದು ಹೆಸರೆಂದು ಬಾಳಿ ಹೋದ ಮಹಾತ್ಮ. ಜೈನ ಧರ್ಮದಲ್ಲಿಯ ಮೊದಲ ಕಾಮದೇವ. ಇಂಥ ಪುಣ್ಯಾತ್ಮನ ಚರಿತ್ರೆಯು ನಮಗೆ ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಮೊತ್ತ ಮೊದಲಿಗೆ ಕ್ರಿ.ಶ. ೯೪೧ರಲ್ಲಿ ಬದುಕಿ ಬಾಳಿದ ಆದಿಕವಿ ಪಂಪನು ಬರೆದ ಧಾರ್ಮಿಕ ಕಾವ್ಯವಾದ ಆದಿಪುರಾಣದಲ್ಲಿಯೇ ಲಭ್ಯವಾಗುತ್ತದೆ. ಈ ಕಾವ್ಯದ ೧೬ ಆಶ್ವಾಸಗಳಲ್ಲಿ, ಭರತ ಬಾಹುಬಲಿಗಳ ಪ್ರಕರಣಗಳನ್ನೊಳಗೊಂಡ ಹದಿನಾಲ್ಕನೆಯ ಆಶ್ವಾಸವು ಉಳಿದವುಗಳಿಗಿಂತ ವಿಶಿಷ್ಟವಾದದ್ದು. ''ಕರ್ನಾಟಕದ ಶಿಲ್ಪದಲ್ಲಿ ಗೊಮ್ಮಟೇಶ್ವರನ ವಿಗ್ರಹವು ಹೇಗೋ, ಕನ್ನಡ ಕಾವ್ಯಗಳಲ್ಲಿ ಹದಿನಾಲ್ಕನೆಯ ಆಶ್ವಾಸ ಹಾಗೆ, ಅದ್ವಿತೀಯ'' [8] ಏಕೆಂದರೆ ಬಾಹುಬಲಿಯಂತೆ ಪಂಪನೂ ಅಭಿಮಾನದ ಮೂರ್ತಿ. 'ಅರಾತಿ ನಾಯಕರ ಪಟ್ಟನೆ ಪಾಱಿಸುವ', 'ಚತುರಂಗ ಬಳ ಭಯಂಕರಣ'ತ್ವವು ಇಬ್ಬರಿಗೂ ಸಮಾನಧರ್ಮವಾಗಿರುವುದು. ಆದರೂ ಭರತೇಶ್ವರನ ವೈಭವದಲ್ಲಿ ಬಾಹುಬಲಿಯ ಪ್ರಸಂಗವು ಒಂದು ಅಂಗ. ಇಲ್ಲಿನ ಕಥೆಗ

---

8. ಪಂಪ ; ಕವಿಕಾವ್ಯಮಾಲೆ ಐ.ಬಿ.ಎಚ್. ಆದಿಪುರಾಣ ಲೇಖಕ - ಜಿ.ಪಿ. ರಾಜರತ್ನಂ, ೧೯೭೭, ಪು. ೭೧.

ಭರತ ನಾಯಕ, ಬಾಹುಬಲಿ ಪ್ರತಿನಾಯಕ, ಇದೆ ಪಂಪನ ವಿಕ್ರಮಾರ್ಜುನ ವಿಯದಲ್ಲಿ; ''ಅರ್ಜುನ ಕರ್ಣ ಇದ್ದ ಹಾಗೆ. ಅರ್ಜುನನನ್ನು ನಾಯಕನನ್ನಾಗಿ ಮಾಡಿಕೊಂಡು ಸಮಸ್ತ ಭಾರತವನ್ನು ಬರೆಯುತ್ತೇನೆಂದು ಪ್ರತಿಜ್ಞೆ ಮಾಡಿದ ಕವಿ, ಕರ್ಣನ ವಧೆಯಾದಾಗ ಅರ್ಜುನನನ್ನು ಕೂಡ ಮರೆತು, 'ನೆನೆಯದಿರಣ್ಣ ಭಾರತದೊಳಿಂ ಪೆಱರಾರುಮನೊಂದೆ ಚಿತ್ತದಿಂ ನೆನೆವೊಡೆ ಕರ್ಣನಂ ನೆನೆಯ' ಎಂದು ಪರವಶನಾದುದನ್ನು ಇಲ್ಲಿ ನೆನೆಯಬಹುದು [9]. ಅದರಂತೆ ಆದಿಪುರಾಣದ ಕಥೆಯನ್ನು ಓದಿದವರು, 'ಒಂದೆ ಚಿತ್ತದಿಂ ನೆನೆವೊಡೆ' ಬಾಹುಬಲಿಯನ್ನು ನೆನೆಯಬೇಕಾಗುತ್ತದೆ. ಈ ಮಾತು ಹೃದಯದಿಂದ ಚಿಮ್ಮಿ ಬರಬೇಕಾದರೆ, ಭರತನ ಲೌಕಿಕ ದಿಗ್ವಿಜಯದ ಸಂದರ್ಭದಲ್ಲಿ ಬಾಹುಬಲಿಯ ಚಿತ್ರವನ್ನು ನೋಡಬೇಕು.

ಭರತ ಕ್ರೂರವಾದ ಚಕ್ರರತ್ನವನ್ನು ಮುಂದಿಟ್ಟುಕೊಂಡು ದೇಶ ದೇಶಗಳ ಮೇಲೆ ದಾಳಿಯಿಟ್ಟು ಆರೂ ಖಂಡಗಳನ್ನು ಗೆದ್ದ. ಈ ಗೆಲುವಿನಿಂದ ಭರತನ ಗರ್ವವು ಮೇರೆ ಮೀರಿತು. ವೃಷಭಾಚಲದಲ್ಲಿ ತನ್ನ ವಿಜಯ ಪ್ರಶಸ್ತಿಯನ್ನು, ಕೆತ್ತಿಸಲು ಹೋದಾಗ, 'ಹಿಂದಿನ ಕಲ್ಪಶತಕೋಟಿಗಳಲ್ಲಿ' ಬಾಳಿದ, 'ಚಕ್ರಿವೃಂದದ' ಪ್ರಶಸ್ತಿಗಳನ್ನು ಕಂಡು ಆತನ 'ಕೊಳಗೊಂಡ ಗರ್ವರಸ'ವು ಸೋರಿ ಹೋಯಿತು. ಇಷ್ಟಾದರೂ ನಾಚಿಕೆಯನ್ನು ಪಟ್ಟುಕೊಳ್ಳದೇ, ನಾಚಿಕೆಯನ್ನು ಸರಿಸಿ, ಹಿಂದಿನೊಬ್ಬನ ಪ್ರಶಸ್ತಿಯನ್ನು ಕೆಡಿಸಿ ಅದರ ಮೇಲೆ ತನ್ನ ಪ್ರಶಸ್ತಿಯನ್ನು ಕೆತ್ತಿಸಿ ಸಣ್ಣವನಾದ. ಈ ಬಗೆ ಇಷ್ಟಕ್ಕೆ ನಿಲ್ಲದೆ, ಆತನು ತನ್ನ ಎಲ್ಲ ತಮ್ಮಂದಿರನ್ನು ತನ್ನ ಅಧೀನಕ್ಕೆ ತೆಗೆದುಕೊಂಡನು. ಅವರೆಲ್ಲರೂ ಆತನ ಈ ಹೇಸಿತನಕ್ಕೆ ಹೇಸಿ ತಂದೆಯ ಬಳಿಗೆ ಹೋಗಿ ತಪಸ್ಸುಗೈದರು. ಆದರೆ ಬಾಹುಬಲಿ ಮಾತ್ರ ಶರಣಾಗಲಿಲ್ಲ. ಆಗ ಭರತನು ಅವನನ್ನು ಕೆಣಕಿದ. ಮಹಾಸಂಧಿವಿಗ್ರಹಿಯ ಸಹಿತ ಪತ್ರ ಕಳಿಸಿದ. ಆ ಮಹಾಸಂಧಿವಿಗ್ರಹಿಯು ಬಾಹುಬಲಿಯನ್ನು ಆಸ್ಥಾನದಲ್ಲಿ ಕಂಡಾಗ,

ಮರಕತನಗಂ ದಿವ್ಯಂ ಮರ್ತ್ಯೋತ್ತಮಾಕೃತಿಯೆಂಬಿನಂ
ವಿರಚಿಸಿದ ನಿಂತಾದಿಬ್ರಹ್ಮಂ ಹರಿನ್ಮಣಿ ವರ್ಣನಂ
ನೆರೆದುವಿದು ಮೇಣ್, ಕ್ಷಾತ್ರಂ ತೇಜಂ ಧರಾಧಿಪರೂಪದಿಂ
ಧರೆಗೆನುತುಮಾದೂತಂ ಕಣ್ಬುಳ್ಕೆ ನೋಡಿ ಕುಮಾರನಂ.

'ಚಕ್ರಿಗಮೆಸೆಯದಿನಿತು ತೇಜಸ್ಫುರಿತಂ ಎಂದು ಮನದೊಳೆ ಬಗೆದು ವಿಸ್ಮಯಂಬಟ್ಟು' ಭರತನು ಕಳಿಸಿದ ಪತ್ರವನ್ನು ಒಪ್ಪಿಸಿದನು. ಆ ಪತ್ರದಲ್ಲಿಯ ಧ್ವನಿಗಳನ್ನು ಗುರುತಿಸಿ ಬಾಹುಬಲಿ ಯುದ್ಧಕ್ಕೆ ಸಿದ್ಧನಾದನು. ಮಂತ್ರಿಗಳ ಸಲಹೆಗೆ ಇಬ್ಬರೂ ಒಪ್ಪಿ, ದೃಷ್ಟಿಯುದ್ಧ, ಜಲಯುದ್ಧ, ಮಲ್ಲಯುದ್ಧಗಳನ್ನಾಡಿದರು. ಎಲ್ಲದರಲ್ಲಿಯೂ ಭರತನಿಗೆ ಅಪಜಯ. ಬಾಹುಬಲಿ ಕುಸ್ತಿಯಲ್ಲಿ ಭರತನನ್ನು ಹಿಡಿದೆತ್ತಿದರೂ ನೆಲಕ್ಕೆ ಕುಕ್ಕಲಿಲ್ಲ. ಆದ್ದರಿಂದ ಆಗಿನ ಬಾಹುಬಲಿಯ ಆ ಕ್ಷಣದ ಭಾವನೆಗಳು ಹೇಗಿರಬೇಕೆಂಬುದನ್ನು ಪಂಪನ ಮಾತುಗಳಲ್ಲಿಯೇ ಕೇಳಬೇಕು :

ಭರತಾವನೀಶ್ವರಂ ಗುರು
ಪಿರಿಯಣ್ಣಂ ಚಕ್ರವರ್ತಿ ಮಹಿಮಾಕರನೀ
ದೊರೆಯನುಮಳವಱಿಯೆ ವಸುಂ
ಧರೆಯೊಳ್ ತಂದಿಕ್ಕಿ ಭಂಗಮಂ ಮಾಡುವೆನೇ
ಎಂದೊಯ್ಯನಿೞಿಪೆ ನೆಲದೊಳ್

---

9. ಪಂಪ ; ಕವಿಕಾವ್ಯ ಮಾಲೆ ಐ.ಬಿ.ಎಚ್. ಆದಿಪುರಾಣ ಲೇ. - ಜಿ.ಪಿ. ರಾಜರತ್ನಂ, ೧೯೭೭, ಪುಟ ೭೦. ಶ್ರೀ ಸೀತಾರಾಮ ಜಾಗೀರದಾರ ಅವರ ಸಾಪೇಕ್ಷದಲ್ಲಿ ಆ.ಪು. ೭-೧೧-೯೪೧.

ದುಂದುಭಿರವದೊಡನೆ ವಿಜಯ ಘೋಷಣೆ ನೆಗಟ್ದಿ
ತ್ತೆಂದು ಭುಜಬಲಿಯ ಬಲದೊಳ್
ಕುಂದುಕಂ ಪಿಱಿದುಮಾಯ್ತು ಭರತನ ಬಲದೊಳ್'.

ಇಲ್ಲಿ ಬಾಹುಬಲಿಯ ವ್ಯಕ್ತಿತ್ವದ ಸೊಬಗು ಕಾಣುತ್ತದೆ. ಆದರೆ ಭರತನ ಸೋಲಿಗೆ ಬಹುಶಃ ಪಂಪನು ಹೇಳುವಂತೆ, 'ಹುಂಡಾವಸರ್ಪಿಣೀ' ವಿಳಸನವೇ ಕಾರಣ. ಮುಂದೆ ಭರತನು ಅತಿಭಂಗದಿಂದ ಇನ್ನಷ್ಟು ಕುಪಿತನಾಗಿ ಬಾಹುಬಲಿಯ ಮೇಲೆ ಚಕ್ರವನ್ನು ಪ್ರಯೋಗಿಸಿದನು. ಆದರೆ ಅದು ಬಾಹುಬಲಿಗೆ ಪ್ರದಕ್ಷಿಣೆ ಹಾಕಿ ಆತನ ಭುಜದ ಬಳಿ ಬಂದು ನಿಂತಿತು. ಆಗ ಭರತನು ನಾಚಿ ತಲೆ ತಗ್ಗಿಸಿದ. ಆ ಸನ್ನಿವೇಶದಲ್ಲಿ ಬಾಹುಬಲಿಗೆ 'ಅಣ್ಣನಲ್ಲಿ ದೊಡ್ಡ ಅವಿನಯವನ್ನು ಎಸಗಿದೆನಲ್ಲ' ಎಂದು ಪಶ್ಚಾತ್ತಾಪ ಮೂಡುತ್ತದೆ. ಆ ಸಂದರ್ಭದ ಆತನ ಎತ್ತರದ ಭಾವನೆಗಳು :

ಅವಧರಿಸಿದೆ ನಿನ್ನೊಳ್ ಪಿರಿ
ದವಿನಯಮಂ ನೆಗಟ್ದಿ ದೋಷಮಂ ತಪದೊಳ್ ನೀ
ಗುವೆನಸದಾಗ್ರಹಮಂ ಬಿಸು
ಡುವುದೊರ್ಮೆಗೆ ಮಱೆವುದೆನ್ನ ದುರ್ವಿಳಸನಮಂ ॥

ಎಂಬುವು. ಯುದ್ಧಕ್ಕೆ ಮೊದಲು ಮಹಾಸಂಧಿವಿಗ್ರಹಿಗೆ 'ಎಮ್ಮಂದಮಂ ನೀನೆ ಕಾಣ್ಬೈ' ಎಂದು ಷಡ್ಡುಹೊಡೆದು ಹೇಳಿದ ಬಾಹುಬಲಿಯೆಲ್ಲಿ? ಈಗ ತಾನು ಗೆದ್ದುದೆಲ್ಲವನ್ನೂ ಸೋತವನಿಗೆ ಕೊಟ್ಟು ತಪಶ್ಚರಣ ನಿಶ್ಚಳ ನಿಶ್ಚಯಮನನಾದ ಈ ಆತ್ಮಬಲಿ ಎಲ್ಲಿ! ಬಾಹುಬಲಿಯ ಇಲ್ಲಿನ ಒಂದೊಂದು ಮಾತಿನಲ್ಲಿ ಆತನ ಆತ್ಮೋನ್ನತ್ಯವು ಅಭಿವ್ಯಕ್ತಗೊಂಡಿದೆ. ಅಂತೆಯೇ ಆಗ ಭರತನಲ್ಲಿಯೂ ಜ್ಞಾನೋದಯವಾಗುತ್ತದೆ. ತಾನೇಕೆ ಹೀಗೆ ಮಾಡಿದೆನೆಂದು ಸಂಕಟವಾಗುತ್ತದೆ. ಬಾಹುಬಲಿಗೆ ತಪೋವನಕ್ಕೆ ಹೋಗಕೂಡದೆಂದು ಅಂಗಲಾಚುತ್ತಾನೆ. ಆದರೆ ಬಾಹುಬಲಿ ತನ್ನ ನಿಶ್ಚಯವನ್ನು ಬದಲಿಸುವುದಿಲ್ಲ. ಆಗ ಭರತ ತಮ್ಮನ ಕಾಲ ಬಳಿ ಕುಸಿದು ಆತನ ಪಾದಗಳನ್ನು ತನ್ನಯ ಕಣ್ಣೀರಿನಿಂದ ತೊಳೆಯುವ ಇಲ್ಲಿ ಚಿತ್ರವು ಮಹೋನ್ನತವಾದುದು.

ನಿಜ ಪಾದಾಂಬುರುಹಕ್ಕೆ ಪಾದ್ಯವಿಧಿಯಂ ನೇತ್ರಾಂಬುವಿಂ ಮಾಡುವ
ಗ್ರಜನತ್ಯುನ್ನತಮಪ್ಪ ಮಸ್ತಕದ ಮೇಗೋರಂತೆ ಪಾಯ್ವಾತ್ಮಬಾ
ಷ್ಪಜಳೌಘಂಗಳಿನಂದು ಬಾಹುಬಲಿ ತನ್ನಿಂದಂ ನಿಧೀಶಂಗೆ ವಂ
ಶಜ ರಾಜ್ಯಾಭಿಷವೋತ್ಸಂ ನೆಗಟ್ದಿದೆಂಬಾಶಂಕೆಯಂ ಮಾಡಿದಂ''

ಇಂತಹ ಚಿತ್ರ ಆದಿಪುರಾಣದಲ್ಲಿ ಮತ್ತೊಂದಿಲ್ಲ.

ಅನಂತರ ಬಾಹುಬಲಿಯು ಭರತನಿಗೆ ರಾಜ್ಯವನ್ನೊಪ್ಪಿಸಿ ತಂದೆಯ ಬಳಿಗೆ ಹೋಗಿ ದೀಕ್ಷೆ ಪಡೆದು ತಪಸ್ಸು ಮಾಡತೊಡಗಿದನು. ಆತನು ಬಹುಕಾಲ ತಪಸ್ಸು ಮಾಡುತ್ತಿದ್ದರೂ, 'ಭರತನ ರಾಜ್ಯದಲ್ಲಿ ನಿಂತಿರುವೆನಲ್ಲ' ಎಂಬ ಮಾನಕಷಾಯ ಕಾರಣವಾಗಿ ಅವನಿಗೆ ಕೇವಲ ಜ್ಞಾನವು ಹುಟ್ಟಲಿಲ್ಲ. ಆಗ ಭರತ ಹೋಗಿ ಕಾಲ್ಗೆರಗಿ ಪೂಜಿಸಿ,

ನಿನ್ನ ಮಡಗೂಟ್ನಿಲಂ ಮಾ
ನೋನ್ನತ ನೀನೀಯೆ ಬಂದುದೆನಗಿದನೆನತೆಂ
ದೇನ್ನಿನಗೆ ಬಗೆಯಲಪ್ಪುದೆ
ನಿನ್ನನೆ ನೀಂ ಬಗೆಯ ಬಗೆಯದಿರ್ ಪೆಱಪೆಱತಾ

ಎನಲೊಡ ಮಂತಃಕರಣದೊ
ಳಿನಿಸಾನುಂ ನಿಂದುದೊಂದು ಮಾನಕಷಾಯಂ
ಮುನಿಪತಿಗೆ ಪೋಗೆ ಪುಟ್ಟಿದು
ದನಂತ ವಸ್ತು ಪ್ರಕಾಶಿ ಕೇವಳ ಬೋಧಂ

ಎಂದು ತಿಳಿ ಹೇಳಿದನು. ಇದರಿಂದಾಗಿ ಅವನ ಮನಸ್ಸಿನ ದುಗುಡವು ದೂರಾಗಿ ಬೇರೊಂದನ್ನು ನೆನೆಯದೇ ಆತ್ಮಧ್ಯಾನಕ್ಕೆ ಬಾಹುಬಲಿ ಮನಸ್ಸು ಕೊಟ್ಟನು. ಅದರಿಂದಾಗಿ ಆತನು ಕೇವಲಜ್ಞಾನ ಪಡೆದನು.

ಹೀಗೆ ಪಂಪನ ಆದಿಪುರಾಣದಿಂದಲೇ ಕನ್ನಡ ಕಾವ್ಯಗಳಲ್ಲಿ ಬಾಹುಬಲಿಯು ತನ್ನ ವ್ಯಕ್ತಿತ್ವವನ್ನು ಅಚ್ಚೊತ್ತಿದಂತೆ ಮೂಡಿಸಿಕೊಂಡು, ಸಾರಸ್ವತ ಲೋಕದ ಮೆಚ್ಚಿಗೆಯನ್ನು ಪಡೆಯುತ್ತಾನೆ. ಆದರೆ ಪಂಪನು ಮಾತ್ರ ಜಿನಸೇನಾಚಾರ್ಯರು ಸಂಸ್ಕೃತದಲ್ಲಿ ಬರೆದ ಪೂರ್ವಪುರಾಣದಿಂದ ಸ್ಫೂರ್ತಿ ಪಡೆದಿರುವನೆಂಬುದನ್ನು ಮರೆಯುವಂತಿಲ್ಲ. ಈ ಜಿನಸೇನಾಚಾರ್ಯರು ರಾಷ್ಟ್ರಕೂಟರ ನೃಪತುಂಗನ ಪರಮಗುರುಗಳಾಗಿದ್ದರು. ಅವರು ಬರೆದು ಉಳಿದಿದ್ದ ಭಾಗವನ್ನು ಅವರ ಶಿಷ್ಯರಾದ ಗುಣಭದ್ರಾಚಾರ್ಯರು ಬರೆದು ಮುಗಿಸಿದರು. ಇದಕ್ಕೆ ಉತ್ತರಪುರಾಣವೆನ್ನುತ್ತಾರೆ. ಈ ಎರಡು ಪುರಾಣಗಳು ಸೇರಿದ್ದೇ ಮಹಾಪುರಾಣ. ಇದೇ ೬೩ ತ್ರಿಶಷ್ಠಿ ಶಲಾಕಾ ಪುರುಷರ ಚರಿತ್ರೆ. ಈ ಗ್ರಂಥವನ್ನು ಇಡಿಯಾಗಿ ಕ್ರಿ.ಶ. ೯೭೮ರಲ್ಲಿ ಚಾವುಂಡರಾಯನು ಕನ್ನಡ ಗದ್ಯದಲ್ಲಿ ತಂದನು. ಈ ಗ್ರಂಥವು 'ಚಾವುಂಡರಾಯ ಪುರಾಣ' ಎಂದೇ ಖ್ಯಾತಿ ಪಡೆದಿದೆ. ಅದರಲ್ಲಿಯೂ ಸಾಂದರ್ಭಿಕವಾಗಿ ಬಾಹುಬಲಿಯ ಚಿತ್ರಣ ಬಂದಿದೆ. ಆದ್ದರಿಂದ ಚಾವುಂಡರಾಯನು ಬಾಹುಬಲಿಯ ವ್ಯಕ್ತಿತ್ವಕ್ಕೆ ಮಾರುಹೋಗಿರಲೇಬೇಕು. ಈ ಒಂದು ಹಿನ್ನೆಲೆಯಲ್ಲಿ ಅದ್ಭುತ ತ್ಯಾಗದ ಮೂರ್ತಿ ಬಾಹುಬಲಿಯ ಪ್ರತಿಮೆಯನ್ನು ಆತನು ಪ್ರತಿಷ್ಠಾಪಿಸಿದುದು ವಿಶೇಷ ಮಹತ್ವವನ್ನು ಪಡೆಯುತ್ತದೆ.

ಚಾವುಂಡರಾಯನು ಶ್ರವಣಬೆಳಗೊಳದಲ್ಲಿ ಅದ್ಭುತ ಭವ್ಯವಾದ ಬಾಹುಬಲಿಯ ಮೂರ್ತಿಯನ್ನು ಪ್ರತಿಷ್ಠಾಪಿಸುವ ಸಂದರ್ಭದಲ್ಲಿ ರನ್ನ ಮತ್ತು ದಾನ ಚಿಂತಾಮಣಿ ಅತಿಮಬ್ಬೆಯು ಅಲ್ಲಿಗೆ ಹೋಗಿದ್ದರು. ದಾನ ಚಿಂತಾಮಣಿ ಅತಿಮಬ್ಬೆಯು ಶ್ರೇಷ್ಠ ಜಿನಭಕ್ತಳು. ಆಕೆ, ಅಲ್ಲಿ , ಜಿನೇಶ್ವರನನ್ನು ಕಾಣುವವರೆಗೆ, 'ಅನ್ನಮಂ ಬಿಸುಟು, ಪರ್ವತಮಂ ಪಱಿದೇಱಿ' ಆ ಜಿನನ ಬಳಿ ನಿಂತಾಗ, ಮಾರ್ಗಾಯಾಸ ಆರುವಂತೆ ಮಳೆಯಾಯಿತಂತೆ. ಆ ಮಳೆ, 'ದೇವಭಕ್ತೆಗದು ಚೋದ್ಯಮೆ ಕೊಳ್ಳವೆ ಪುಷ್ಪವೃಷ್ಟಿಗಳ್'. ಇಂಥ ಪುಷ್ಪವೃಷ್ಟಿಯಾದಾಗ ಅವಳು 'ಚಕ್ರವರ್ತಿ ಪೂಜಿತೆ' ಆಗಲಾರಳೆ। ನಿಶ್ಚಯವಾಗಿ ಆಕೆ 'ಚಕ್ರವರ್ತಿ ಪೂಜಿತೆ' ಆದಳು. ಲೋಕಪೂಜ್ಯತೆಯನ್ನೂ ಸಂಪಾದಿಸಿದಳು. ಇಂಥ ಅವಳ ಧರ್ಮನಿಷ್ಠೆ , ಸಂಯಮ, ವ್ರತಪಾಲನೆ, ಶುಭ್ರ ಶೀಲಗಳನ್ನು ಕಂಡು ಮಹಾಕವಿ ರನ್ನನು ತನ್ನ ಅಜಿತಪುರಾಣದಲ್ಲಿ,

ಬಳಿಯರಳೆಯಂತೆ ಗಂಗಾ
ಜಳದಂತೆಸೆವಜಿತಸೇನ ಮುನಿಪತಿಯ ಗುಣಾ
ವಳಿಯಂತೆ ನೆಗಟ್ದಿ ಕೊಪಣಾ
ಚಳದಂತೆ ಪವಿತ್ರಮತ್ತಿಮಬ್ಬೆಯ ಚರಿತಂ.

ಎಂದು ಮನಮೆಚ್ಚಿ ಕೊಂಡಾಡಿದ್ದಾನೆ. ಮತ್ತೆ ಆಕೆ, 'ಜಗಕ್ಕೆ ದಾನಗುಣದಿಂ ಸಮ್ಯಕ್ತ್ವದಿಂ ಧರ್ಮದಿಂ ಮಿಗೆ ಶೀಲವ್ರತದಿಂ ಸದಾಚರಣದಿಂ ಶ್ರೀ ದಾನ ಚಿಂತಾಮಣೀ' ಎಂದೂ ಆಕೆಯ ಭಕ್ತಿ ಕ್ರಮ, ಆಕೆಯ 'ಗುಣಕ್ಕಾರುಂ ಸಮಂ ಪೋಲ್ವರೇ' ಎಂದೂ ಅತ್ಯಂತ ಹೃದಯ ತುಂಬಿ ನಮನ ಸಲ್ಲಿಸಿದ್ದಾನೆ.

ಪಂಪನ ಆದಿಪುರಾಣದ ಅನಂತರ ಕ್ರಿ.ಶ. ೧೨೯೦ರ ಸಂದರ್ಭದಲ್ಲಿ ಹಸ್ತಿಮಲ್ಲನೆಂಬ ಕವಿ ಹತ್ತು ಪರ್ವಗಳಲ್ಲಿ ಪೂರ್ವಪುರಾಣವನ್ನು ಗದ್ಯದಲ್ಲಿ ಬರೆದನು. ಉಭಯ ಭಾಷಾ ಚಕ್ರವರ್ತಿಯಾಗಿದ್ದ ಆತನು 'ಪಂಪನ ಆದಿ ಪುರಾಣವನ್ನೇ

ಬಹು ಮಟ್ಟಿಗೆ'[10] ಇಲ್ಲಿ ಅನುಸರಿಸಿದ್ದಾನೆ. ಆದರೆ 'ಈತನ ಗದ್ಯ ಶೈಲಿಯ ಮೇಲೆ ಚಾವುಂಡರಾಯನ ಪ್ರಭಾವವು'[11] ಇರುವುದನ್ನು ಗುರುತಿಸಬಹುದು ಮತ್ತು ಇದು ಆದಿನಾಥನ ಕಥೆಯನ್ನೇ ಬಿತ್ತರಿಸುವುದರಿಂದ ಭರತ - ಬಾಹುಬಲಿಯರ ಪ್ರಸಂಗವೂ ಇದರಲ್ಲಿ ಚಿತ್ರಿತವಾಗಿದೆಯೆಂಬುದನ್ನೂ ಗಮನಿಸಬೇಕು.

ರತ್ನಾಕರವರ್ಣಿಯ ಭರತೇಶ ವೈಭವದ ಬಾಹುಬಲಿಯ ಚಿತ್ರಣವನ್ನು ಕೈಗೆತ್ತಿಕೊಳ್ಳುವ ಮುನ್ನ, ಪುಣ್ಯಾತ್ಮ ಚೆಲುವ ಚೆನ್ನಿಗರಾಯನಾದ ಬಾಹುಬಲಿಯನ್ನು ಕುರಿತು ಪ್ರತ್ಯೇಕವಾಗಿರುವ ಕೆಲವು ಪ್ರಾಚೀನ ಕನ್ನಡ ಕಾವ್ಯಗಳಲ್ಲಿಯ, ಆತನ ಭವ್ಯಚಿತ್ರಣಗಳನ್ನು ನೋಡುವ ಸಾಹಸ ಮಾಡೋಣ. ನಮ್ಮ ಕವಿಗಳ ಮೇಲೆ ಆತನ ವ್ಯಕ್ತಿತ್ವದ ಮುದ್ರೆ ಎಷ್ಟು ಬಲವಾಗಿದೆಯೆಂಬುದನ್ನು ಗುರುತಿಸೋಣ.

ಈ ಸಾಲಿನಲ್ಲಿ ಮೊತ್ತ ಮೊದಲಿಗೆ 'ಗೊಮ್ಮಟ ಸ್ತುತಿ' ಎಂಬ ಗ್ರಂಥವನ್ನು ಕೈಗೆತ್ತಿಕೊಳ್ಳೋಣ. ಇದನ್ನು ಬೊಪ್ಪಣ್ಣ ಪಂಡಿತನೆಂಬವನು ಬರೆದಿದ್ದಾನೆ. ಈತನ ಕಾಲ ಕ್ರಿ.ಶ. ೧೧೮೦. ಈ ಪುಟ್ಟ ಗ್ರಂಥದಲ್ಲಿ ಐದು ಕಂದ ಪದ್ಯಗಳು ೨೭ ಕನ್ನಡ ವೃತ್ತಗಳಿವೆ. ಈ ವೃತ್ತಗಳಲ್ಲಿ ಮತ್ತೇಭ, ಚಂಪಕಮಾಲೆ, ಶಾರ್ದೂಲ, ಮಹಾಸ್ರಗ್ಧರೆ ಮತ್ತು ಉತ್ಪಲಮಾಲೆಗಳನ್ನು ಬಳಸಲಾಗಿದೆ. ಈ ಎಲ್ಲ ವೃತ್ತಗಳು ಬೆಳ್ಗೊಳದ ಗೊಮ್ಮಟೇಶನನ್ನು ಸ್ತುತಿಸುವ ಪದ್ಯಗಳೇ ಆಗಿವೆ. ಈ ಪದ್ಯಗಳ ಅರ್ಥವನ್ನು ತಿಳಿದುಕೊಂಡ ಮೇಲೆ 'ಬಾಹುಬಲಿಯ ವ್ಯಕ್ತಿತ್ವದ ಎತ್ತರ, ಸೌಂದರ್ಯ ಮತ್ತು ಅತಿಶಯ- ಇವುಗಳು ಮನನವಾಗುತ್ತವೆ'[12]. ಆಗ ಗೊಮ್ಮಟೇಶ್ವರನ 'ಸಂಪದ್ಯುಕ್ತವಾದ ಪರಮಾತ್ಮ ಸ್ವರೂಪವಾದ ರೂಪು ಲೋಕಪೂಜ್ಯ'[13] ವಾದುದು ಅನುಭವಕ್ಕೆ ಬರುತ್ತದೆ. ಈ ಅನುಭವವು ದಿವ್ಯಾನುಭವವೇ ಆಗಿರುತ್ತದೆ. ಅಂತಹ ದಿವ್ಯಾನುಭವವನ್ನು ನೀಡುವ ಕೆಲವು ಪದ್ಯಗಳು :

ಶ್ರೀ ಗೊಮ್ಮಟ ಜಿನನಂ ನರ
ನಾಗಾಮರ ದಿತಿಜ ಖಚರಪತಿ ಪೂಜಿತನಂ
ಯೋಗಾಗ್ನಿ ಹತಸ್ಮರನಂ
ಯೋಗಿಧ್ಯೇಯನನಮೇಯನಂ ಸ್ತುತಿಯಿಸುವೆಂ

ಅತಿ ತುಂಗಾಕೃತಿಯಾದೊಡಾಗದದಱೊಳ್ ಸೌಂದರ್ಯಮೌನ್ನತ್ಯಮುಂ
ನುತ ಸೌಂದರ್ಯಮುಮಾಗೆ ಮತ್ತತಿಶಯಂ ತಾನಾಗದದೌನ್ನತ್ಯಮುಂ
ನುತಿ ಸೌಂದರ್ಯಮುಮೂರ್ಜಿತಾತಿಶಯ ಮುಂ ತನ್ನಲ್ಲಿ ನಿಂದಿರ್ದುವೇಂ
ಕ್ಷಿತಿ ಸಂಪೂಜ್ಯಮೊ ಗೊಮ್ಮಟೇಶ್ವರ ಜಿನ ಶ್ರೀರೂಪಮಾತ್ಮೋಪಮಂ ॥

ಸಮ್ಮದವಾಗಲಾಗ ಕೊಲೆಯುಂ ಪುಸಿಯುಂ ಕಳವುಂ ಪರಾಂಗನಾ
ಸಮ್ಮತಿಯುಂ ಪರಿಗ್ರಹದ ಕಾಂಕ್ಷೆಯುಮೆಂಬಿವಱಿಂದಮಾದೊಡೆಂ

---

10. ಕನ್ನಡ ಸಾಹಿತ್ಯ ಚರಿತ್ರೆ ; ಪುಟ ೨೨೨, ೧೯೭೪, ಲೇ. ಡಾ|| ರಂ. ಶ್ರೀ. ಮುಗಳಿ
11. ಕನ್ನಡ ಸಾಹಿತ್ಯ ಚರಿತ್ರೆ; ಪುಟ ೨೨೨; ೧೯೭೪; ಲೇ. ಡಾ. ರಂ. ಶ್ರೀ. ಮುಗಳಿ.
12. ಕರ್ನಾಟಕ ಮತ್ತು ಜೈನ ಸಂಸ್ಕೃತಿ ; ೧೯೭೫, ಶ್ರೀ ಪಿ.ಬಿ. ಕೆರಿಮನಿ ಅವರ ಜೈನ ತೀರ್ಥ ಕ್ಷೇತ್ರಗಳು ಎಂಬ ಲೇಖನ.
13. ಅದೇ

ದುಂ ಮನುಜಂಗಿಹತ್ರೆಯ ಪರತ್ರೆಯ ಕೇಡೆನುತುಂ ಮಹೋಚ್ಚದೊಳ್
ಗೊಮ್ಮಟದೇವನಿರ್ದು ಸಲೆ ಸಾಱುವೋಲೆಸೆದಿರ್ದನೀಕ್ಷಿಸೈ

ಪೊಡವಿಗೆ ಸಂದ ಗೊಮ್ಮಟ ಜಿನೇಂದ್ರ ಗುಣಸ್ತವಶಾಸನಕ್ಕೆ ಕ
ನ್ನಡಗವಿ ಬಪ್ಪನೆಂದೆನಿಪ ಬೊಪ್ಪಣ ಪಂಡಿತನೊಲ್ದು ಪೇೞ್ದಿವಂ
ಕಡೆಯಿಸಿದಂ ಬಲಂ ಕವಡಮಯ್ಯನ ದೇವಣ್ಣನಟ್ಟಿಂದೆಚಾ
ಗಡೆಗೆಯ ರುದ್ರನಾದರದೆ ಮಾಡಿಸಿದಂ ವಿಳಸತ್ ಪ್ರತಿಷ್ಠೆಯಂ [14]

ಇಂತಹ ಅಪರೂಪವಾದ ಪದ್ಯಗಳನ್ನು ಅದೇ ಸಮಯದಲ್ಲಿ ಎಂದರೆ ಕ್ರಿ. ೧೧೮೦ರಲ್ಲಿ, ಗೊಮ್ಮಟದ್ವಾರದ ಎಡ ಭಾಗದಲ್ಲಿ ಕೆತ್ತಿರುವ ಶಾಸನದಲ್ಲಿ ಕಾಣಬಹುದಾಗಿದೆ.

ಮಧುರನೆಂಬ ಕವಿಯು ಕ್ರಿ.ಶ. ೧೩೮೫ರ ಸಮಯದಲ್ಲಿ ಬಾಳಿ ಬದುಕಿದವನು. ಅವನು ಧರ್ಮನಾಥ ಪುರಾಣವನ್ನೂ, ಒಂಬೊತ್ತು ವೃತ್ತಗಳಿರುವ 'ಗೊಮ್ಮಟ ಸ್ತುತಿ' ಎಂಬ ಅಷ್ಟಕವನ್ನು ಬರೆದಿದ್ದಾನೆ.

ಈ ಅಷ್ಟಕದ ಪ್ರತಿಯೊಂದು ವೃತ್ತವೂ 'ಗುಮ್ಮಟೇಶ್ವರಾ' ಎಂದು ಮುಗಿಯುತ್ತದೆ. ಎರಡು ವೃತ್ತಗಳನ್ನು ಇಲ್ಲಿ ಉದ್ಧರಿಸಲಾಗಿದೆ [15]:

ಭೂನಾಥಾಸ್ಥಾನ ಚೂಡಾಮಣಿ ಮಧುರ ಕವೀಂದ್ರಂ ವಿನೇಯಾನುಕಂಪಾ ।
ಧೀನಂ ಸದ್ಭಕ್ತಿಯಿಂ ಬಿತ್ತರಿಸಲಭಿನವ ಪ್ರಾತಿಹಾರ್ಯಂಬೊಲಂಪಾ ॥
ದೀನವ್ಯ ಶ್ರವ್ಯ ದಿವ್ಯಾಷ್ಟಕಮನೆ ನುಡಿದರ್ಗೋ ಎದರ್ಗಾವಗಂ ನಿ
ತ್ಯಾನಂದ ಶ್ರೀಯನೀವಂ ಬೆಳುಗುಳನಗರೀ ನಾಯಕಂ ಗುಮ್ಮಟೇಶಂ ॥

ಮಱೆಗೆಂದುಂ ಕೋಡದುಗ್ರಾತಪಕೆ ಸೆಡೆಯದುದ್ಯದ್ಧಿ ಮಕ್ಕಳ್ಕದೋರಂ
ತೊಲವಿಂ ಸಮ್ಯಕ್ತ್ವಪೋಮಾರ್ಗದೊಳೊದವಿದವಂಗಕ್ಷಯಶ್ರೀಕರಂಕೆ
ಯೊಳ್ಳಗಪ್ಪಳ್ ತಪ್ಪಳೆಂದುರ್ವರೆಗೆನುವಿಸುತ್ತವಂತಾವಗಂ ತೋಱುವೀ ನಿ ।
ಶ್ಚಲ ಮೂರ್ತಿಶ್ರೀಯ ಸಾಮರ್ಥ್ಯಮನಱಿಮರುಳರ್ ಬಲ್ಲರೇ ಗುಮ್ಮಟೇಶಾ॥

ಇಂತಹ ಪದ್ಯಗಳಲ್ಲಿ ನಿಶ್ಚಲಮೂರ್ತಿ ಶ್ರೀಯ ಸಾಮರ್ಥ್ಯವು ಭೌಮವಾಗಿರುವುದು ಕಣ್ಣಿಗೆ ಕಟ್ಟಿ ನಿಲ್ಲುವುದು.

ಈ ಮಧುರನು ಹಂಪಿನಿವಾಸಿಯಾಗಿದ್ದು, ಜನಜನಿತವಾಗಿರುವ ಲಕ್ಷ್ಮೀಧರಾಮಾತ್ಯನನ್ನು ಕುರಿತು ಶಾಸನವನ್ನು ಬರೆದಿದ್ದಾನೆ. ಆ ಶಾಸನ ಪದ್ಯವು ಕನ್ನಡ ಸಂಸ್ಕೃತಿಯ ತಿರುಳನ್ನೇ ಕಾಲಾನುಕಾಲಕ್ಕೆ ನೀಡುವ ಮೌಲಿಕ ದಾಖಲೆಯಾಗಿದೆ :

ಕೆಱೆಯಂ ಕಟ್ಟಿಸು ಬಾವಿಯಂ ಸವಸು ದೇವಾಗಾರಮಂ ಮಾಡಿಸ
ಜ್ಜಱೆಯೊಳ್ಸಿಲ್ಕಿದನಾಥರಂ ಬಿಡಿಸು ಮಿತ್ರರ್ಗಿಂಬುಕೆಯ್ ನಂಬಿದ

14. 'ಕನ್ನಡ ಬಾವುಟ' ಪುಸ್ತಕದಿಂದ

15. ಕರ್ನಾಟಕ ಕವಿ ಚರಿತೆ ಪ್ರಥಮ ಸಂಪುಟ ; ೧೯೬೧; ಪುಟ ೪೯೧.

ಗ್ರ್ಗಱಿವೆಟ್ಟಾಗಿರು ಶಿಷ್ಟರಂ ಪೊರೆಯೆನುತ್ತಿಂತೆಲ್ಲವಂ ಪಿಂದೆ ತಾ
ಯೆಱಿದಳ್ಪಾಲೆಱಿವಂದು ತೊಟ್ಟು ಕಿವಿಯೊಳ್ ಲಕ್ಷ್ಮೀಧರಾಮಾತ್ಯನಾ ॥

ಈ ಶಾಸನ ಪದ್ಯವನ್ನು ಪ್ರತಿಯೊಬ್ಬರೂ ಪ್ರತಿದಿವಸ ಪಠಣ ಮಾಡುವಂತಹದು.

ಬಾಹುಬಲಿಯ ಚರಿತ್ರೆಯನ್ನು ಕುರಿತು ಕ್ರಿ.ಶ. ೧೬೧೪ರ ಪಂಚಬಾಣನು ಒಂದು ಸಾಂಗತ್ಯ ಕಾವ್ಯವನ್ನು ಬರೆದಿದ್ದಾನೆ.

ಈ ಕೃತಿಗೆ 'ಭುಜಬಲಿ ಚರಿತೆ' ಎಂದೂ ಹೆಸರಿದೆ. ಈ ಕಾವ್ಯದ ಕಥಾಸಾರವು ಇಂತಿದೆ :

''ಆದಿನಾಥಗೆ ಇಬ್ಬರು ಪತ್ನಿಯರು. ಮೊದಲನೆಯವಳಾದ ಯಶಸ್ವತಿಯ ಮಗ ಭರತ, ಎರಡನೆಯವಳಾದ ಸುನಂದೆಯ ಮಗ ಭುಜಬಲಿ. ಇವರಿಬ್ಬರು ಸೋದರರಲ್ಲಿ ವಿವಾದ ಹುಟ್ಟಿ ಘೋರ ಯುದ್ಧವಾಯಿತು. ಭರತ ಸೋತ - ಭುಜಬಲಿ ಗೆದ್ದ. ಆದರೆ ಗೆದ್ದದ್ದನ್ನೆಲ್ಲ ಅಣ್ಣನಿಗೆ ಕೊಟ್ಟು ವೈರಾಗ್ಯ ತಾಳಿದ. ಭರತನು ಚಿನ್ನದಿಂದ ೫೨೫ ಮೇರು ಉದ್ದವಾದ ಗೊಮ್ಮಟ ಪ್ರತಿಮೆಯನ್ನು ಮಾಡಿಸಿ ಪೌದನಪುರದಲ್ಲಿರಿಸಿದನು. ಅಲ್ಲಿ ಕುಕ್ಕುಟ ಸರ್ಪಗಳ ದೆಸೆಯಿಂದಾಗಿ ಆ ವಿಗ್ರಹದ ಬಳಿಗೆ ಯಾರೂ ಹೋಗುತ್ತಿರಲಿಲ್ಲ. ಈ ಪ್ರತಿಮೆಯ ವಿಷಯವಾಗಿ ಚಾವುಂಡರಾಯನಿಗೆ ಮಧುರೆಯ ಜೈನಯತಿ ತಿಳಿಸಿದ. ತಾಯಿಯು ಆ ವಿಗ್ರಹವನ್ನು ಸಂದರ್ಶಿಸಿದಲ್ಲದೆ ಹಾಲನ್ನೂ ಕುಡಿಯುವುದಿಲ್ಲವೆಂದು ಪ್ರತಿಜ್ಞೆ ಮಾಡಿದಳು. ತಾಯಿ ಮಕ್ಕಳು ಪೌದನಪುರಕ್ಕೆ ಹೊರಟರು. ದಾರಿಯಲ್ಲಿ ಚಂದ್ರಬೆಟ್ಟಕ್ಕೆ ಬಂದು ಭದ್ರಬಾಹು ಸ್ವಾಮಿಗಳಿಗೆ ನಮಸ್ಕರಿಸಿ ನಿಂತರು. ದೊಡ್ಡ ಬೆಟ್ಟಕ್ಕೆ ಕುರ್ಚಿಭೂ ತನಾಗಿ ಚಾವುಂಡರಾಯ ಬಾಣ ಬಿಟ್ಟರೆ ಗೊಮ್ಮಟೇಶ್ವರ ಪ್ರತ್ಯಕ್ಷನಾಗುವನೆಂದು ರಾತ್ರಿ ಸ್ವಪ್ನ ಕಂಡರು. ಆ ಪ್ರಕಾರ ನಡೆದುಕೊಂಡಾಗ ಗೊಮ್ಮಟ ಪ್ರತ್ಯಕ್ಷನಾದ. ಅನಂತರ ವಿಗ್ರಹಕ್ಕೆ ಹಾಲಿನ ಅಭಿಷೇಕ ಮಾಡಿದರೆ ವಿಗ್ರಹ ನೆನೆಯಲಿಲ್ಲ. ಮುದುಕಿಯೊಬ್ಬಳು ಗುಳ್ಳದ ಕಾಯಿಯಲ್ಲಿ ತುಂಬಿಟ್ಟದ್ದ ಹಾಲಿನಿಂದ ಅಭಿಷೇಕ ಮಾಡಿದಾಗ ಆ ವಿಗ್ರಹವು ಆಪಾದ ಮಸ್ತಕ ನೆನೆಯಿತು. ಹಾಲಿನ ಕೋಡಿಯು ಬೆಟ್ಟವನ್ನೆಲ್ಲ ವ್ಯಾಪಿಸಿತು. ಇದು ನಿಷ್ಠಾ ಭಕ್ತಿಯ ಮಹಿಮೆ. ಅನಂತರ ಗೊಮ್ಮಟೇಶನ ಮಹಿಮೆ ಶ್ರವಣಬೆಳಗೊಳದ ಸುತ್ತೆಲ್ಲ ಬೆಳೆಯ ತೊಡಗಿತು.

ಪಂಚಬಾಣನು ತನ್ನ ಈ ಕೃತಿಯ ಉತ್ಕೃಷ್ಟತೆಯನ್ನು ಹೀಗೆ ನಿರೂಪಿಸಿದ್ದಾನೆ :

ತಂಗಾಳಿಯ ತಂಪ ತರುಣಿಯಧರದಿಂಪ
ತಿಂಗಳ ಬೆಳಗಿನ ಸೊಂಪ
ಕಂಗೊಳಿಪುದು ಪಂಚಬಾಣನ ಕೃತಿ ಸುಜ
ನಂಗಳಿಗತಿ ಹರುಷವನು ॥

ಈತನ ಮತ್ತೊಂದು ವೈಶಿಷ್ಟ್ಯವೆಂದರೆ ಸ್ತುತಿರೂಪದ ಹಾಡುಗಳನ್ನೂ ರಚನೆ ಮಾಡಿರುವುದಾಗಿದೆ. ಅಂತಹ ಸ್ತುತಿರೂಪದ ಹಾಡುಗಳಲ್ಲಿ ಕೆಲವು ಗುಮ್ಮಟೇಶ್ವರನ ಕುರಿತು ಇವೆ. ಅವುಗಳಲ್ಲಿ ಒಂದನ್ನು ಇಲ್ಲಿ ಉದ್ಧೃತಗೊಳಿಸಲಾಗಿದೆ [16] :

ಎಂದೆಂದೂ ಪಾಲಿಸೋ ನೀಯೆನ್ನ
ತಂದೆ ಗುಮ್ಮಟನಾಥ ತ್ರಿಜಗ ವಿನೂತ ॥ಪ॥

ಇನಕುಲಾಂಬುಜ ಮಿತ್ರ ಮಂಗಲವೆತ್ತ ಸುಗಾತ್ರ
ಮುನಿಜನವನ ವಸಂತ
ಚಂದನಸಿತಘನ ಇಂದುವಿಂದ ಶಾಂತ
ಸಂಸಾರವನಧಿಗಟಿದ ನಿಶ್ಚಿಂತ ॥೧॥

---

16. ಕರ್ನಾಟಕ ಕವಿಚರಿತೆ ಸಂಪುಟ II, ಪುಟ ೩೧೪, ೧೯೭೩.

ದುರಿತಗೋಧೂಮ ಘರಟ್ಟ ದುರ್ಮಾರ್ಗತ್ರಿಪುರಸುಟ್ಟ
ಪರಮಭವ್ಯರಬಂಧು
ಶಾಶ್ವತ ಸೌಖ್ಯವರವೀವ ಕರುಣಾಸಿಂಧು
ನಿರ್ಮಲ ಬೋಧಧರನೆ ಸುಮನಸಂದು ॥೨॥

ಭೂತಳಕುನ್ನತನೆಂದು ಬೆಳ್ಗುಳಾದ್ರಿಯಲ್ಲಿ ನಿಂದು
ಸಂಶಯ ಜಸವ ತೊಟ್ಟಾ
ಪಂಚಬಾಣನಿಗೋತು ಮತಿಯನೆ ಕೊಟ್ಟಾ
ಚಕ್ರಿಯಧರೆ ಖ್ಯಾತಿಸೆ ಗೆಲಿದ ದಿಟ್ಟಾ ॥೩॥

ಇಂತಹ ಸ್ತುತಿಪರ ಹಾಡುಗಳನ್ನು ಪರಾಮರ್ಶಿಸಿದಾಗ ಬಾಹುಬಲಿಯನ್ನು ನೋಡುವುದರಿಂದ, ನೆನೆಯುವದರಿಂದ, ಹಾಡುವುದರಿಂದ ದುರಿತಗಳು ದೂರವಾಗಿ, ಬದುಕನ್ನು ಸತ್ಯನಿಷ್ಠೆಗಳಿಂದ ಪರಿಪೂರ್ಣವಾಗುವುದರ ನಂಬಿಕೆಯು ತ್ರಿಕಾಲಕ್ಕೂ ಸ್ಥಿರವಾಗಲು ಸಾಧ್ಯವಿದೆ.

ಜಿನಮತವಾರ್ಧಿವರ್ಧನ ಚಂದ್ರಮ ಭವ್ಯ
ಹೃತ್ಕುವಲಯ ಚಂದ್ರಮನು
ಅನುಪಮನು ವಿಬುಧ ಚಕೋರ ಚಂದ್ರಮನೆಂದು
ಜನರೊಲ್ದು ಬಣ್ಣಪರವನ ॥

ಎಂದು ಚಂದ್ರಮನೆಂಬ ಕವಿಯು ತನ್ನ ಬಗ್ಗೆ ತಾನು ಕ್ರಿ.ಶ. ೧೬೪೬ರಲ್ಲಿ ಹೇಳಿಕೊಂಡಿರುವವನು; 'ಕಾರ್ಕಳದ ಗೊಮ್ಮಟೇಶ್ವರ ಚರಿತೆ' ಎಂಬ ಸಾಂಗತ್ಯ ಕಾವ್ಯವನ್ನು ಬರೆದಿದ್ದಾನೆ. ಅವನಿಗೆ ಚದುರ ಚಂದ್ರಮನೆಂಬ ಹೆಸರೂ ಇದೆ. ಈತನು ತನ್ನ ಕಾವ್ಯದಲ್ಲಿ ಬಾಹುಬಲಿಯ ಅರ್ಥಾತ್ ಗೊಮ್ಮಟೇಶ್ವರನ ಚರಿತ್ರೆಯನ್ನೂ ಮತ್ತು ಕಾರ್ಕಳದಲ್ಲಿ ಬಾಹುಬಲಿಯ ವಿಗ್ರಹವನ್ನು ಪ್ರತಿಷ್ಠಾಪಿಸಿರುವ ಸಂಗತಿಯನ್ನು ನಿರೂಪಿಸಿದ್ದಾನೆ. 'ಅರಿರಾಯರ ಗಂಡರ ದಾವಣಿ' ಎಂಬ ಬಿರುದುಳ್ಳ ಉತ್ತರ ಮಧುರಾನಾಥನಾದ ಪಾಂಡ್ಯನೃಪನು ತೌಳವದೇಶದ ಕಾರ್ಕಳದಲ್ಲಿ ಲಲಿತಕೀರ್ತಿಯ ಉಪದೇಶದಿಂದ ಗೊಮ್ಮಟೇಶ್ವರನ ವಿಗ್ರಹವನ್ನು ಮಾಡಿಸಿ ಅದನ್ನು ೨೦ ಚಕ್ರಗಳುಳ್ಳ ಬಂಡಿಯ ಮೇಲಿಟ್ಟು ಒಂದು ತಿಂಗಳವರೆಗೂ ಬೆಟ್ಟದ ಮೇಲಕ್ಕೆ ಎಳೆಯಿಸಿ ಸಾಗಿಸಿ ಕ್ರಿ.ಶ. ೧೪೩೧ರಲ್ಲಿ ಪ್ರತಿಷ್ಠಾಪಿಸಿದನು ಎಂದು ಹೇಳಿ ತನ್ನ ಪೋಷಕನಾದ ದೊರೆಯ ವಿಷಯವಾಗಿ ಕವಿ ಹೀಗೆ ಬರೆದಿದ್ದಾನೆ : ಆ ಪಾಂಡ್ಯರಾಜನ ವಂಶದಲ್ಲಿ ವೀರ ನರಸಿಂಹ ಬಂಗರಾಜೇಂದ್ರನು ಹುಟ್ಟಿದನು. ಅವನ ಹೆಂಡತಿ ಗುಮ್ಮಟಾಂಬೆ. ಮಗ ಇಮ್ಮಡಿ ಭೈರವರಾಯ; ಇವನ ಹೆಂಡತಿ ಮಲ್ಲಿದೇವಿ; ಮಕ್ಕಳು ಭುವನೈಕ ವೀರ ಪಾಂಡ್ಯೇಂದ್ರ, ಚಂದ್ರಶೇಖರ, ಅರಿರಾಯರ ಗಂಡರ ದಾವಣಿ ಇಮ್ಮಡಿ ಭೈರವರಾಯ. ಪಟ್ಟಪೊಂಬುಚ್ಚಪುರವರಾಧೀಶ್ವರನಾದ ಈ ಇಮ್ಮಡಿ ಭೈರವರಾಯನು ಕ್ರಿ.ಶ. ೧೬೪೬ರಲ್ಲಿ ಗೊಮ್ಮಟೇಶ್ವರನಿಗೆ ಪುನಃ ಪ್ರತಿಷ್ಠೆ, ಪೂಜೆ, ಅಭಿಷೇಕ ಮುಂತಾದುವನ್ನು ಮಾಡಿಸಿದನು[17]. 'ಈ ಗೊಮ್ಮಟನಿಗೆ ಅಗಲವಾದ ಕಿವಿಗಳು, ದಪ್ಪವಾದ ಮೂಗು, ಸುರುಳಿ ಸುರುಳಿಯಾದ ಕೂದಲುಗಳು ಹಾಗೂ ಅರ್ಧ ತೆರೆದ, ಕಣ್ಣುಗಳು, ಆಕರ್ಷಣೀಯ ದಿವ್ಯ ಭವ್ಯತೆಯು ಯಾತ್ರಿಕರ ಹೃದಯದಲ್ಲಿ ಅಚ್ಚಳಿಯದೆ ನಿಲ್ಲುವ ನಿಲುವು ಈತನದಾಗಿದೆ' [18]. ಈ ಗೊಮ್ಮಟನನ್ನು ಕುರಿತು ಶ್ರೀ ವಾಲಿಹೌಸ್ ಎಂಬವರು ಕ್ರಿ.ಶ. ೧೮೭೫ರ ಮಾರ್ಚ್ ತಿಂಗಳಿನ

---

17. ಕರ್ನಾಟಕ ಕವಿ ಚರಿತೆ ಸಂಪುಟ II, ಪುಟ ೩೨೬, ೩೨೭, ೧೯೭೩.

18. ಕರ್ನಾಟಕ ಮತ್ತು ಜೈನ ಸಂಸ್ಕೃತಿ ; ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟ, ಪುಟ ೧೧೨ ; ೧೯೭೫.

ಪ್ರೀಜಿರ್ಸ್ ಮ್ಯಾಗಝಿನ್‌ದಲ್ಲಿ 'ವಜ್ರದಂಡಿಯ ಒಂದೇ ಶಿಲೆಯಲ್ಲಿ ಈ ವಿಗ್ರಹವನ್ನು ಕೆತ್ತಲಾಗಿದೆ. ವಿಗ್ರಹವು ದಿಗಂಬರಮೂರ್ತಿ. ಶತಶತಮಾನಗಳವರೆಗೆ ಮಳೆ ಮತ್ತು ಬಿಸಿಲಿಗೆ ಸಿಕ್ಕು ಎಡಬಲ ಪಾರ್ಶ್ವಗಳಲ್ಲಿಯ ಶಿಲೆಯ ಬಣ್ಣ ಕಪ್ಪಾಗಿದೆ. ವಿಗ್ರಹದ ಮುಖ ಅತ್ಯಂತ ಕಳಾಪೂರ್ಣವಾಗಿದೆ'. ಎಂದು ವರ್ಣಿಸಿದ್ದಾನೆ. ಇಂಥ ಕಳಾಪೂರ್ಣ ಚೇತೋಹಾರಿಯಾದ ಗೊಮ್ಮಟೇಶ್ವರನ ವರ್ಣನೆಯು ಹೃದಯಕ್ಕೆ ಆಪ್ಯಾಯಮಾನವಾಗಿದೆ. ಅಂತಹ ಒಂದು ಸುಂದರ ಪದ್ಯವು ಇಂತಿದೆ :

ಕುರುಳ್ಗಳು ಮನಸಿಜಮೃಗವ ಪಿಡಿಯಲಿಕ್ಕಿ
ದುರುಳ್ಗಳೆಂಬಂತಾಜಿನನ
ಸಿರದೊಳಗೊಪ್ಪಿದುವಾ ಸಿರಿ ಮೊಗದಾ
ವರೆಗೆಱಗುವ ತುಂಬಿಯಂತೆ ॥

ಅಬ್ಬಾ ಎಂತಹ ಸುಂದರ ಮತ್ತು ಧ್ವನಿ ರಮ್ಯ ವರ್ಣನೆ. ಇಂತಹ ಶಬ್ದಚಿತ್ರಗಳನ್ನು ನೋಡಿದಾಗ ಕವಿಯು ನಿಸರ್ಗಪ್ರಿಯನೂ ಚಿತ್ರಕಾರನೂ ಆಗಿರಬೇಕೆಂಬ ಶಂಕೆ ಮೂಡುತ್ತದೆ. ಅದೇ ರೀತಿ ಕನ್ನಡಿಗರ ರಸಿಕತೆಗೆ ಸಂಬಂಧಪಟ್ಟ ಒಂದು ಪದ್ಯ :

ತುಪ್ಪದೊಳಗೆ ಹದವಱಿದು ಕಾಳಿಸಿ ಕಮ್ಮ
ನಪ್ಪ ಹಪ್ಪಳ ಸಂಡಗೆಗಳ
ಒಪ್ಪದೊಳಗೆಯಿಕ್ಕಿ ಪಳಿದ್ಯವ ಬಡಿಸಲು
ಚಪ್ಪರಿಸಿದುಣುತಿರ್ದರಾಗ ॥

ಇನ್ನೊಂದು ಪದ್ಯ ದುರ್ಜನರನ್ನು ಕುರಿತು ಸ್ಪಷ್ಟ ಚಿತ್ರ ನೀಡಿದೆ :

ಗೋವಿನ ಮೊಲೆಯ ಪಾಲನು ಬಿಟ್ಟು ರಕ್ತವ
ಸೇವಿಪ ಜಿಗುಳೆಗಳಂತೆ
ಭಾವರಸವ ಬಿಟ್ಟು ದೋಷವನಱಸುವ
ಗಾವಿಲರಿಗೆ ಗತಿಯುಂಟೆ ॥

ಇಂತಹ ಪದ್ಯಗಳಿಂದ ಚದುರ ಚಂದ್ರಮನ ಗೊಮ್ಮಟೇಶ್ವರ ಚರಿತೆಯು ಬದುಕಿನಲ್ಲಿ ವಿಶ್ವಾಸವನ್ನಷ್ಟೇ ಮೂಡಿಸದೆ ಬದುಕನ್ನು ಹೃದ್ಯವಾಗಿಸಿಕೊಳ್ಳುವ ಕಲೆಯನ್ನು ಸಾಧಿಸಿಕೊಡುವುದು ಇದರ ವೈಶಿಷ್ಟ್ಯ.

೧೮ನೆಯ ಶತಮಾನದಲ್ಲಿ ಅನಂತ ಕವಿ ಎಂಬವನು ಸುಮಾರು ಕ್ರಿ.ಶ. ೧೭೮೦ರಲ್ಲಿ ಆಗಿ ಹೋಗಿದ್ದಾನೆ. ಆತನು, 'ಬೆಳ್ಗೊಳದ ಗೊಮ್ಮಟೇಶ್ವರ ಚರಿತೆ' ಅಥವಾ 'ಬೆಳ್ಗೊಳ ವಿಸ್ತಾರ' ಎಂಬ ಸಾಂಗತ್ಯ ಕಾವ್ಯವನ್ನು ಬರೆದು ಅಂದಿನ ಯಾತ್ರಿಕರು ಶ್ರವಣಬೆಳ್ಗೊಳಕ್ಕೆ ಬಂದು ಹೋಗುವಾಗಿನ ಅನುಭವಗಳನ್ನು ಅದರಲ್ಲಿ ಸಂಗ್ರಹಿಸಿಟ್ಟಿದ್ದಾನೆ.- 'ಅನುಭವವು ಸವಿಯಲ್ಲ, ಅದರ ನೆನಪೇ ಸವಿಯು' ಎಂಬಂತೆ. ಈ ಕಾವ್ಯದಲ್ಲಿ ಗೊಮ್ಮಟೇಶ್ವರನ ಚರಿತೆಯ ಜೊತೆಗೆ ಶ್ರವಣಬೆಳ್ಗೊಳಕ್ಕೂ, ಕೆಲವರು ಜೈನ ಗುರುಗಳಿಗೂ ಸಂಬಂಧಪಟ್ಟ ಕೆಲವು ಅಂಶಗಳನ್ನು ಹೇಳಲಾಗಿದೆ. ''ಕಲಿಯುಗದ ೬೦೦ನೆಯ ವರ್ಷದಲ್ಲಿ ಗೊಮ್ಮಟೇಶ್ವರ ಪ್ರತಿಷ್ಠೆಯಾದಂತೆಯೂ, ಚಾವುಂಡರಾಜನು ಹಿಂದಣ ವಿಗ್ರಹವನ್ನೇ ಶಿಲ್ಪಿಗಳಿಂದ ತಿದ್ದಿಸಿದಂತೆಯೂ,

ಕಲ್ಯಬ್ದಷಟ್ಛತವಿನುತ ವಿಭವ ಚೈತ್ರ
ದಲ್ಲಿಯ ಶುಕ್ಲ ಪಂಚಮಿಯ
ಮಲ್ಲಿಯ ರವಿವಾರ ಕುಂಭ ಲಗ್ನದಿ ಜಿನ
ವಲ್ಲಭಗಾಯ್ತು ಪ್ರತಿಷ್ಠೆ

ಕಡೆಯಾಣೆ ಬೊಂಬೆಗೆ ಕವಿದಿರ್ದ ದೂಳಿಯ
ಕೊಡಪಿಸಿ ಪೊಳಪಿಕ್ಕಿದಂತೆ
ಕಡಸಿ ಸಿಲ್ಪಿಗರಿಂದವೊಪ್ಪವಿಕ್ಕಿಸೆ ಕಾಂತಿ
ಮಡುಗಟ್ಟಿ ನಿಂದವೊಲಾಯ್ತು ॥

ಎಂದು ಹೇಳಿ ಹೊಸ ಸಂಗತಿಯನ್ನು ನೀಡಿದ್ದಾನೆ [19]. ಇದು ಸಂಶೋಧನೆಯ ದೃಷ್ಟಿಯಿಂದ ಬಹು ಮಹತ್ತ್ವದ ವಿಷಯವಾದರೂ ನಂಬುವುದು ಕಷ್ಟ. ನಂಬಿದರೆ ನಂಬಿಸುವುದೂ ಕಷ್ಟ. ಇದಲ್ಲದೆ ಈ ಕೆಳಗಿನ ಕೆಲವು ಐತಿಹಾಸಿಕ ಮಹತ್ತ್ವವುಳ್ಳ ಕೆಲವು ಅಂಶಗಳನ್ನು ಈ ಕಾವ್ಯದಿಂದ ಗುರುತಿಸಿ ಉಲ್ಲೇಖಿಸಲು ಸಾಧ್ಯವಿದೆ : ೧. ಬಸವಶೆಟ್ಟಿಯ ಮಗ ಅಣ್ಣಯ್ಯನು ಚಿಕ್ಕದೇವರಾಜನಲ್ಲಿ ಟಂಕಸಾಲೆಯ ಅಧಿಕಾರಿಯಾಗಿದ್ದನು. ೨. ಅಣ್ಣಯ್ಯನು ಚಿಕ್ಕದೇವರಾಜನಿಂದ ಬೆಳ್ಗೊಳದಲ್ಲಿ ಕಲ್ಯಾಣಿಯನ್ನು ಕಟ್ಟಿಸಿದನು. ೩. ಅಣ್ಣಯ್ಯನ ಬೀಗ ಪುಟ್ಟಯ್ಯನು ಪಾರ್ಶ್ವನಾಥ ಬಸ್ತಿಯ ಮಾನಸ್ತಂಭವನ್ನು ಕಟ್ಟಿಸಿದನು. ಅದರಂತೆ ಚಂದ್ರಗಿರಿಯ ಪ್ರಾಕಾರವನ್ನೂ ಕಟ್ಟಿಸಿದನು. ೪. ಪ್ರಭಾಚಂದ್ರನು ಶ್ರವಣಬೆಳುಗೊಳದ ಯತಿಯಾಗಿದ್ದನು. ೫. ಅಭಯಚಂದ್ರನೆಂಬವನು ಶಶಕಪುರದ ಸಳನಿಗೆ ಗುರುವಾಗಿದ್ದನು. ಈ ಎಲ್ಲ ಅಂಶಗಳು ಸಂಶೋಧನಾ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಷಯಗಳು.

ಈ ಅಂಶಗಳಲ್ಲದೆ, ಈ ಮುನ್ನ ಉಲ್ಲೇಖಿಸಿದಂತೆ ಯಾತ್ರಾರ್ಥಿಗಳ ಅನುಭವ ಸಾರದ ಕೆಲವು ದೃಶ್ಯಗಳನ್ನು ಎತ್ತಿ ತೋರಿಸಬೇಕು. ಈ ಕಾರ್ಯವನ್ನು ಡಾ॥ ಷ. ಶೆಟ್ಟರ್ ಅವರು ನಿರ್ವಹಿಸಿಕೊಟ್ಟಿದ್ದಾರೆ. 'ಶ್ರವಣಬೆಳ್ಗೊಳ' ಎಂಬ ಕರ್ನಾಟಕ ಪ್ರವಾಸಿ ಮಾಲಿಕೆಯ ಪುಸ್ತಕದ ಲೇಖಕರಾದ ಅವರು ಅದರಲ್ಲಿ ಯಾತ್ರಾರ್ಥಿಗಳ ಸ್ವಾರಸ್ಯವಾದ ಆರು ದೃಶ್ಯಗಳನ್ನು ಸಂಗ್ರಹಿಸಿದ್ದಾರೆ. ''೧೮ನೆಯ ಶತಮಾನದಲ್ಲಿ ಬೆಳ್ಗೊಳಕ್ಕೆ ಬರುವ ಯಾತ್ರಿಕರು ಅನೇಕ ವಿಘ್ನ-ವಿಪತ್ತುಗಳನ್ನೆದುರಿಸಿ, ಕಾಲ್ನಡಿಗೆಯಲ್ಲಿ, ಎತ್ತಿನ ಬಂಡಿ, ಕುದುರೆಗಳ ಮೇಲೆ ಕುಳಿತೋ ಇಲ್ಲವೆ ಪಲ್ಲಕ್ಕಿಯನ್ನು ಏರಿಯೋ ಬರುತ್ತಿದ್ದರು. 'ಬೆಡಗಿನಕ್ಕರ' 'ಚರಣಾದಿ ಮಸ್ತಕದವರೆಗೆ ಸುಂದರತೆವೆತ್ತ 'ತೊಳಗಿ ಬೆಳಗುವ' ಗೊಮ್ಮಟವನ್ನು ಕಾಣದಿದ್ದರೆ ಸಾರ್ಥಕವೇನು? ಎಂಬುದು ಅವರ ಪ್ರಶ್ನೆಯಾಗಿತ್ತು. ಗೊಮ್ಮಟೇಶ್ವರನ ಚರಿತೆ ಅಥವಾ ಬೆಳ್ಗೊಳ ವಿಸ್ತಾರ ಎಂಬ ಗ್ರಂಥದಲ್ಲಿ ಅನುಂತ ಕವಿಯು ತನ್ನ ಕಾಲದಲ್ಲಿ ಬರುತ್ತಿದ್ದ, ಬಂದು ನಿಲ್ಲುತ್ತಿದ್ದ, ನಿಂತು ಆನಂದಿಸುತ್ತಿದ್ದ ಯಾತ್ರಿಕರ ಚಿತ್ರವನ್ನು ಕೊಟ್ಟು ಅವರು ಪಡುತ್ತಿದ್ದ ಆನಂದ ಆಶ್ಚರ್ಯದ ಬಗೆಯನ್ನು ಅವರು ಪ್ರಯಾಣಕ್ಕೆ ಮಾಡಿಕೊಳ್ಳುತ್ತಿದ್ದ ಸಿದ್ಧತೆಯ ವಿವರವನ್ನು ಅವರಲ್ಲಿ ಉದ್ಭವಿಸುತ್ತಿದ್ದ ಆಶೆ ಆತುರಗಳನ್ನು ಬಣ್ಣಿಸಿರುವನು'' ಎಂದು ಅಲ್ಲಿ ಟಿಪ್ಪಣಿಸಿದ್ದಾರೆ. ಹಾಗೆ ಅವರು ಸಂಗ್ರಹಿಸಿದ ಒಂದು ದೃಶ್ಯವನ್ನು ಇಲ್ಲಿ ಮಾಸಲೆಯಾಗಿ ಆಸ್ವಾದಿಸಬಹುದು.

''ದೃಶ್ಯ ೧ : ಇಳಿಸು ಗೋಣಿಯ, ಗುಮ್ಮಡಿಯ ಹೊಡೆಸು.

ಅರಿತಿರಾ, ಕೇಳಿದಿರಾ, ಜನಾತಿಶಯ ಏನು? ಈ ಬೆಳ್ಗೊಳದೊಡೆಯನ ಖ್ಯಾತಿ ಹಬ್ಬಿದೆ ನೋಡು, ನೋಡು. ಆತನ ದಿವ್ಯ ಭವ್ಯ ಮೂರ್ತಿಯ ನೋಡದ ದೃಷ್ಟಿ ಯಾತಕ್ಕೆ? ಎಂದು ತಮ್ಮಲ್ಲಿಯೆ ನುಡಿಯುತ್ತ, ಬೆಳ್ಗೊಳಕ್ಕೆ ಭವ್ಯರು ಪಯಣದ ಸಿದ್ಧತೆ ಮಾಡಿಕೊಂಡರು.

(೧) 'ಇಳಿಸು ಗೋಣಿಯ - ಎತ್ತಿಗೆ ಮೇವ ತೋರಿಸು. ಸುದತಿಯರು ಮುಂದೆ ಸಾಗಲಿ - ರಥಕ್ಕೆ ಎತ್ತುಕಟ್ಟ ಕಂಟಲೆ ಹೇರಿಸು. ಮಕ್ಕಳನ್ನು ತುರಗಗಳ ಮೇಲೆ ಕೂರಿಸು. ಎಲ್ಲರೂ ಮುಂದೆ ಸಾಗುವವರೆಗೂ ನಿಲ್ಲು' ಎಂದು ಹಿರಿಯರು ಸೂಚನೆ ಕೊಡುತ್ತಿದ್ದರು.

---

19. ಕರ್ನಾಟಕ ಕವಿ ಚರಿತೆ III; ಪುಟ ೧೩೬, ೧೩೭, ೧೯೭೪.

(೨) 'ಅಶ್ವವನಾರೋಹಿಸು, ಅಂದಳವನೇರು. ವಾರಣವನು ಹತ್ತು. ರಥವ ಸಾರಿ ಕುಳ್ಳಿರು. ಪಲ್ಲಕ್ಕಿಯನೇರು' ಎಂದು ಒಬ್ಬರಿಗೊಬ್ಬರು ಹೇಳುತ್ತ ಜನರೆಲ್ಲ ಸಂಧಿಸಿದರು.

(೩) 'ಭಾಜನ ತುಂಬಿದ ಕಂಟಲೆಗಳನ್ನು ನೀನು ಗಮನವಿಟ್ಟು ಸಾಗಿಸು ಭೃತ್ಯ' ಎಂದು ಆಳಿಗೆ ಆಜ್ಞೆಯೂ ಬಂದಿತು.

(೪) ಅಲ್ಲೊಬ್ಬ ರೂಪವತಿಯು ಸಡಗರದಿಂದ ಸಿಂಗರಿಸಿಕೊಂಡು, ಒನಪು ಒಯ್ಯಾರ ಬೀರುತ್ತ ಆಲಸ್ಯದಿಂದ ಅಡಿಯಿಡುತ್ತಿದ್ದಳು. ಅವಳ ಮಂದಗತಿಯನ್ನು ಕಂಡ ಅವಳ ಪ್ರಿಯತಮ ಹೀಗೆ ಛೇಡಿಸಿದ -

'ನಮ್ಮವರೆಲ್ಲ ಮುಂದಾದರು, ನಡೆ ಹೆಣ್ಣೆ, ನಿನ್ನ ಮಲೆತಮೊಲೆ, ತಿಕ್ಕುವ ತಿಕ ನಿನ್ನನ್ನು ನಡೆಯಲೀಯವು. ನಿನ್ನ ಯವ್ವನದ ಭಾರವೇ ಸಾಕು, ಹೊರಲಾಗದಷ್ಟು ಒಡವೆಗಳನ್ನು ಬೇರೆ ತೊಟ್ಟಿರುವಿ ನೀನು. ಇವನ್ನೆಲ್ಲ ಹೊತ್ತು ನೀನು, ಮುಂದೆ ಸಾಗಲಾರೆ. ಮೆಲ್ಲಗಾದರೂ ಅಡಿಯಿಡು'.

ಇದರಂತೆ ಇನ್ನುಳಿದ ದೃಶ್ಯಗಳು ಸ್ವಾರಸ್ಯವಾಗಿವೆ. ಆ ದೃಶ್ಯಗಳ ಶೀರ್ಷಿಕೆಗಳು ಇಂತಿವೆ : ಅಮ್ಮ ನನಗೆ ಮುತ್ತಿನ ಏಕಾವಳಿ; ಬರಬೇಡ ಅಳಬೇಡ ಬರುವಿಯಂತೆ, ದಾರಿ ವೆಚ್ಚಕ್ಕೆ ಮೂರು ಸಾವಿರ ಸಾಲದು; ನನ್ನವ್ವ ಬಳಲಿದಳು ಬೆಂಡಾಗಿರುವ ನನ್ನಪ್ಪ ; ಅತಿಶಯ ಪಟ್ಟರು, ಬೆಕ್ಕಸವಟ್ಟು ವಿಸ್ಮಿತರಾದರು. ಈ ಸ್ವಾರಸ್ಯಕರ ಮಾದರಿಗಳನ್ನು ನೋಡಿದರೆ ಅಂದಿನ ಜನಜೀವನದ ರಸಿಕತೆಯ ನೋಟವೂ ಈ ಪುಸ್ತಕದಿಂದ /ಕಾವ್ಯದಿಂದ ದೊರೆಯುತ್ತದೆ.

ಅನಂತ ಕವಿಯ ಕಾವ್ಯವನ್ನು ಬಿಟ್ಟರೆ ನಮ್ಮ ಕನ್ನಡಕವಿಗಳಲ್ಲಿ ಚಿಕ್ಕಣ್ಣ ಪಂಡಿತನ ''ಬಾಹುಬಲಿಚರಿತೆ' ಹಾಗೂ ದೇವಚಂದ್ರನ 'ರಾಜಾವಳೀ ಕಥೆ' ಎಂಬುವು ಉಲ್ಲೇಖನೀಯವಾದುವು. ಇಲ್ಲಿ ಗೊಮ್ಮಟನ ಐತಿಹ್ಯ ಮತ್ತು ಪವಾಡಗಳು ಪ್ರಸ್ತಾಪಿಸಲಾಗಿರುವುದು ಗಮನಾರ್ಹ. ಅದರಂತೆ ಕನ್ನಡಿಗ ದೊಡ್ಡಯ್ಯನು ಸಂಸ್ಕೃತದಲ್ಲಿ ಬರೆದಿರುವ 'ಭುಜಬಲಿ ಶತಕ'ವು ನಮ್ಮ ಪರಿಧಿಯಲ್ಲಿ ಬರದಿದ್ದರೂ ಅದನ್ನಷ್ಟು ಇಲ್ಲಿ ಉಲ್ಲೇಖಿಸದರೆ ಸಾಕು. ಇನ್ನು ನಾವು ಇದುವರೆಗೆ ಕಾದಿದ್ದ ಕ್ರಿ.ಶ. ೧೫೫೦ರಲ್ಲಿ ಬದುಕಿ ಬಾಳಿದ ರತ್ನಾಕರವರ್ಣಿಯ ಚಿತ್ರಕ್ಕೆ ಬರುವುದು ಸಮಂಜಸ.

ಬಾಹುಬಲಿಯ ಸುಂದರ ಚಿತ್ರವನ್ನು ನೀಡಿ, ಭರತನ ವ್ಯಕ್ತಿತ್ವವನ್ನು ಸುಂದರಗೊಳಿಸಿದ ಅತ್ಯಂತ ಜನಪ್ರಿಯ ಸಾಂಗತ್ಯ ಕಾವ್ಯ ನಮ್ಮ ಈ ರತ್ನಾಕರವರ್ಣಿಯ 'ಭರತೇಶ ವೈಭವ'. ಭರತ ಬಾಹುಬಲಿಯರಿಗೆ ಸಂಬಂಧಪಟ್ಟಂತೆ ಈ ಕಾವ್ಯದಲ್ಲಿ ಹುದುಗಿರುವ ಕೆಲವು ಮಹತ್ತ್ವದ ಅಂಶಗಳನ್ನು ನಾವಿಲ್ಲಿ ಗುರುತಿಸಿದರೆ ಸಾಕು. 'ಬಾಹುಬಲಿಯ' ಚಿತ್ರಣದಿಂದ ಕನ್ನಡ ಕಾವ್ಯ ಸಂಪತ್ತು ಶ್ರೀಮಂತವಾಗಿರುವುದಷ್ಟೇ ಅಲ್ಲ, ಆ ಮುಖಾಂತರ ಮಾನವ್ಯವು ಶಿಖರದ ತುತ್ತತುದಿ ಮುಟ್ಟಿರುವುದನ್ನು ಕಾಣಬಹುದಾಗಿದೆ. ಈ ಮಾನವ್ಯದ ದರ್ಶನದಲ್ಲಿ ಕನ್ನಡಿಗರ ಹಿರಿಯ ಹೃದಯ ಸಂಪತ್ತೂ ಹಾಸು ಹೊಕ್ಕಾಗಿರುವುದನ್ನು ಮನಗಾಣಬಹುದಾಗಿದೆ. ಈ ದೃಷ್ಟಿಯಿಂದಲೇ ಹದಿನಾರನೆಯ ಶತಮಾನದಲ್ಲಿ ರತ್ನಾಕರವರ್ಣಿ ಬರೆದಿರುವ ಭರತೇಶವೈಭವವನ್ನು ಕುರಿತು ಕೊನೆಯಲ್ಲಿ ವಿಚಾರಕ್ಕೆ ಎತ್ತಿಕೊಂಡಿರುವುದರ ಮುಖ್ಯವಾದ ಅಂಶ. ಈ ಸಂದರ್ಭದಲ್ಲಿ ಆದಿಕವಿ ಪಂಪನ ಆದಿಪುರಾಣದ ೧೪ನೆಯ ಆಶ್ವಾಸದಲ್ಲಿಯ ಕಥಾಭಾಗವನ್ನು ಸ್ವಲ್ಪ ನೆನಪಿಗೆ ತಂದುಕೊಳ್ಳುವುದು ಒಳಿತು. ಅಲ್ಲಿ ಭರತ ಬಾಹುಬಲಿಗಳು ದೃಷ್ಟಿಯುದ್ಧ, ಜಲಯುದ್ಧ, ಮಲ್ಲಯುದ್ಧಗಳನ್ನು ತಮ್ಮಲ್ಲಿಯೇ ನಡೆಸಿ ಭರತನು ಸೋಲನಪ್ಪುವಂತೆ ಆಗುತ್ತದೆ. ಇದರಿಂದ ಆಘಾತಕ್ಕೊಳಗಾದ ಭರತನು ತಮ್ಮನ ಮೇಲೆ ಚಕ್ರವನ್ನು ಪ್ರಯೋಗಿಸಿದ. ಆ ಚಕ್ರವು ಬಾಹುಬಲಿಯ ಕೂದಲೆಳೆಯನ್ನೂ ಕೊಂಕಿಸದೆ ಆತನ ಬಳಿ ಬಂದು ವಿಧೇಯವಾಗಿ ನಿಂತಿತು. ''ಅಣ್ಣನು ಸಾಮ್ರಾಜ್ಯ ಮೋಹದಿಂದ ತಮ್ಮನ ಕೊಲೆಗೆ ಹೇಸಲಿಲ್ಲವೆಂದು ಬಾಹುಬಲಿಯು, ರಾಜ್ಯಮೋಹವು ಘೋರ ಪಾಪಕ್ಕೆ ಅವಕಾಶವನ್ನುಂಟು ಮಾಡುವುದೆಂದು ಭಾವಿಸಿ

ವೈರಾಗ್ಯಪರನಾದನು ಎಂದು ಪಂಪ ಕವಿಯು ವರ್ಣಿಸಿದ್ದಾನೆ''[20] ಅದು ಭರತನ ಮೇಲೆ ಆದ ಪರಿಣಾಮವು ಇಂತಿದೆ:

ತನಗಲ್ಲದುದಂ ಮಾಡಿದ
ನಿನಿತಂ ಚಕ್ರೇಶನೆಂಬ ಕುಲವೃದ್ಧರ ಭೂ
ವನಿತಾಧೀಶರ ನುಡಿಗ
ಳ್ಗೆ ನಾಣ್ಚಿದಂ ಭರತರಾಜನನವನತ ಮಕುಟಂ''

ಆ ಸಂದರ್ಭದಲ್ಲಿ ಬಾಹುಬಲಿಯ ಮನಸ್ಸಿನ ಮೇಲ ಆದ ಪರಿಣಾಮವು ಇಂತಿದೆ :

ಸೋದರರೊಳ್ ಸೋದರರಂ
ಕಾದಿಸುವುದು ಸುತನ ತಂದೆಯೆಡೆಯೊಳ್ ಬಿಡದು
ತ್ಪಾದಿಸುವುದು ಕೋಪಮನಳ
ವೀ ದೊರೆತೆನೆ ತೊಡರ್ವುದೆಂತು ರಾಜ್ಯಶ್ರೀಯೋಳ್

ನೆಲಸುಗೆ ನಿನ್ನ ವಕ್ಷದೊಳೆ ನಿಶ್ಚಲಮೀ ಭಟ ಖಡ್ಗಮಂಡಲೋ
ತ್ಪಲವನ ವಿಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ ಭೂ
ವಲಯಮನಯ್ಯನಿತ್ತುದುಮನಾಂ ನಿನಗಿತ್ತೆ ನಿದೇವುದಣ್ಣ ನೀ
ನೊಲಿದ ಲತಾಂಗಿಗಂ ಧರೆಗೆಮಾಟಿಸಿದಂದು ನೆಗಳ್ತೆ ಮಾಸದೇ?

''ಇಲ್ಲಿ ಬಾಹುಬಲಿಗೆ ಬಂದ ವಿರಕ್ತಿಯು ಯುದ್ಧಾನಂತರದ್ದಲ್ಲದೇ, ಬಂದದ್ದು ಜಿಗುಪ್ಸೆಯಿಂದ. ರಾಮಾಯಣ ಭಾರತಗಳ ಜಾಡನ್ನೇ ಹಿಡಿದು ಭರತ ಬಾಹುಬಲಿಗಳ ಯುದ್ಧ ನಡೆಯುತ್ತದೆ. ಈ ಸಂದರ್ಭದಲ್ಲಿ ಬಾಹುಬಲಿಯ ವಿರಕ್ತಿಗೂ ಭರತನ ನಡೆಗೂ ಬೆಲೆ ಬರುವುದಿಲ್ಲ. ಭರತನು ಬಾಹುಬಲಿಯ ಮೇಲೆ ಚಕ್ರವನ್ನು ಪ್ರಯೋಗಿಸುವಲ್ಲಿ ಮತ್ತು ಇದರಿಂದ ಬಾಹುಬಲಿಗೆ ವಿರಕ್ತಿ ಬರುವಲ್ಲಿ ಮಾನವೀಯ ದೋಷಗಳೇ ಎದ್ದು ಕಾಣುತ್ತವೆ. ಇದೇ ಸಂದರ್ಭ ರತ್ನಾಕರನ ಕೈಯಲ್ಲಿ ಹೊನ್ನಾಗಿದೆ [21]''.

ಅಣ್ಣ ತಮ್ಮಂದಿರ ಜಗಳ ಇದು ಪರಂಪರಾನುಗತವಾಗಿ ಬಂದಿರುವ ಮಾತು. ಇದನ್ನು ಅಲ್ಲಿಗೇ ನಿಲ್ಲಿಸಿ ಬಿಡಬೇಕೆಂಬುದೇ ರತ್ನಾಕರವರ್ಣಿಯ ಉದ್ದೇಶ. ಆದ್ದರಿಂದ ಇಲ್ಲಿ ಯುದ್ಧಕ್ಕೆ ಆಸ್ಪದ ನೀಡದೇ ಮನಸ್ಸನ್ನು ತಿದ್ದುವ ಕಾರ್ಯದ ತಿರುವು ನಿಜಕ್ಕೂ ಮನೋಜ್ಞವಾಗಿದೆ; ಆದರ್ಶಪ್ರಾಯವಾಗಿದೆ; ಶಿರೋರತ್ನವಾಗಿದೆ.

ನಿನಗಾನು ಪಗೆಯೆ ನೀನೆನಗೆ ಪಗೆಯೆ ಹೇಳು
ಜಿನಪುತ್ರರಿದನು ನಾವಿಂದು
ನೆನೆದಾಗ ಮುಂದೆ ಸಮಸ್ತರ್ಗೆ ದ್ರೋಹ ಶಾ
ಸನವ ಬರೆದುಕೊಟ್ಟೆವಲ್ತೆ

---

20. ಕನ್ನಡಸಾಹಿತ್ಯದಲ್ಲಿನಾಲ್ಕು ನಾಯಕರತ್ನಗಳು ; ಡಾ. ದ.ರಾ. ಬೇಂದ್ರೆ, ೧೯೬೮; ಪುಟ ೧೪, ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟನ.
21. ಅದೇ. ಪುಟ ೧೫.

ಎಂಬ ಮಾತು ಕಾವ್ಯದ ಜೀವಾಳವಷ್ಟೇ ಅಲ್ಲ. ಅದು ವಿಶ್ವದ ಬದುಕಿನ ಜೀವಾಳವಾಗುವ ಶಕ್ತಿಯನ್ನು ಪಡೆದಿದೆ. ಇದು ಮುಂಬರುವ ಪೀಳಿಗೆಗಾಗಿ, ಅಣ್ಣ ತಮ್ಮಂದಿರ ಜಗಳಗಳು ಇತಿಶ್ರೀಯಾಗುವುದಕ್ಕೆ ರತ್ನಾಕರವರ್ಣಿಯು ಭರತನ ಮೂಲಕ ಹೇಳಿಸಿದ ಮಾತುಗಳು, ನಿತ್ಯವಾಗಿರಬೇಕಾದ ಸ್ನೇಹ ಶಾಸನ. ಆ ಶಾಸನವು ಇಂದಿಗೂ ನುಡಿಯುವ ಮಾತು. ಅದು ಇಂತಿದೆ :

ಕೇಳಣ್ಣ ಚಕ್ರವ ಬಯಸಿತಿಲ್ಲಾನು ಶ
ಸ್ತ್ರಾಲಯದೊಳು ತಾನೆ ಹುಟ್ಟಿ
ಏಳಿಸಿ ನಾಡ ಸುತ್ತಿಸಿತು ನಿಮ್ಮೆಲ್ಲರ
ಆಲಿಗೆ ನೋವಾಗುವಂತೆ.

ಕೌಶಲಿಯೊಳು ನೀನು ಸುಖ ಬಾಳು ನನಗೊಂದು
ದೇಶವ ಕೊಟ್ಟು ಬೇರಿರಿಸು
ಕ್ಲೇಶದ ಮಾತಲ್ಲ , ಸಂತೋಷ ಪುರುಪರ
ಮೇಶನ ಕೆಂಬಜ್ಜೆಯಾಣೆ ॥

ಈ ಮಾತುಗಳು ಮುಂದೆಯು ಬೇಕಾಗುತ್ತವೆ. ಭರತನ ಈ ಮಾತುಗಳು ಬಾಹುಬಲಿಗಷ್ಟೇ ಅಲ್ಲ ಲೋಕಕ್ಕೇ ಅಣ್ಣನ ಮಾತುಗಳಿಗಾಗಿ ಬಿಡುತ್ತವೆ. ಅಂತೆಯೇ ಈ ಸನ್ನಿವೇಶದ ಪ್ರಭಾವವು ಅಲ್ಲಿಯ ಪರಿಸರದ ಮೇಲೆಲ್ಲ ಆಗಿ ಬಾಹುಬಲಿಯು,

ಗರುಡ ಮಂತ್ರಕೆ ವಿಷವಿಳಿವಂತೆ ಭರತ ಭೂ
ವರನ ವಾಕ್ಯವ ಕೇಳಲಾಗಿ
ಜರಜರಿದಂಗಜಗೆತ್ತಿದ ಕೋಪ ಪೈ
ಸರಿಸಿತು ಹೃದಯ ತಂಪಾಯ್ತು.

ಮುಂದಿನ ಚಿತ್ರವು, ಪಂಪನ ಬಾಹುಬಲಿಗಿಂತ ಒಂದು ತೂಕ ಹೆಚ್ಚುಗೊಳಿಸುವ ಮಾನವ್ಯದ ಮಂದಾರವಾಗಿ ರತ್ನಾಕರವರ್ಣಿಯಲ್ಲಿ, ಅರಳಿದೆ. ಆ ಅರಳಿನ ಕಂಪು ಬಾಹುಬಲಿಯ ಮುಂದಿನ ಮಾತುಗಳಲ್ಲಿ :

ತಾನು ಅಣ್ಣನಿಗೆ ಇದಿರಾಗಿ ಪಾಪಿಯಾದೆನು; ಇದು ಕುಲಕೆ
ಲೋಕಾಪವಾದ. ಇದನ್ನು ತಪಸ್ಸಿನಿಂದೇ ತೊಳೆಯಬೇಕು.
ಆಜಿರಂಗದಲ್ಲಿ ಆಢ್ಯತೆ ತೋರಿ ಲಘುವಾದೆ ॥

ಎಂದು ಇತ್ಯಾದಿಯಾಗಿ ಅಂತರಂಗ ಪರಿಶೀಲನೆಗೆ ತೊಡಗಿದ ಬಾಹುಬಲಿಯ ಮುಂದಿನ ಸಾಧನೆ ಕ್ಷಿತಿಜ ದಾಟಿದ ಭೌಮ ವಾಗುತ್ತದೆ. ಅಣ್ಣನಿಗೆ ಅವನಾಡುವ ಒಂದೊಂದು ಮಾತು ಕೆಡದ ಕುಂದದ ಮೌಕ್ತಿಕ. ಕೇಳಿ ನೋಡಿ :

ಹರಿದುದು ಸಂಸಾರ ಸುಖದಾಸೆ ನಿಮ್ಮೆಲ್ಲ
ರೆರಕದ ಮಮತೆ ಜಾರಿದುದು
ಮುರಿದ ಚಿತ್ತವನ್ನಿನ್ನು ಮೊನೆ ಮಾಡಬಹುದೆ ಬಾ
ಯ್ದೆರೆದು ಹೋಗೆಂದುಸುರೆಂದಾ

ಶಕ್ತಿಯೆಂಬುದು ದಿನದಿನಕೆ ಹೆಚ್ಚುವುದೆ ವಿ
ರಕ್ತಿ ಬೇಕೆಂದಾಗ ಬಹುದೆ?
ಮುಕ್ತಿಗೆ ತಕ್ಕ ಸಾಧನ ಕೂಡಿತಿದು ಮಹಾ
ಯುಕ್ತಿಯಲ್ಲವೆ ಕಳುಹೆಂದಾ ॥

ಈ ಚಿತ್ರದಲ್ಲಿ ಬಾಹುಬಲಿಯು ಮಹಾಮಾನವನಾಗುತ್ತಾನೆ. ಏಕೆಂದರೆ ಇಲ್ಲಿ ವಿರಕ್ತಿಯು ಪಕ್ವವಾದ ಕನ್ನಡ ಮಾವುಜೇನಾಗಿದೆ. ಮತ್ತು ಸೊಗಸಾದ ಮಾರ್ದವತೆಯೇ ಎಲ್ಲೆಲ್ಲಿಯೂ ಕೂಡ. ಆ ಸೋಂಕಿನಲ್ಲಿ ಭರತನಾಡುವ ಮಾತುಗಳೂ ಕೂಡ ಹೊನ್ನೂ ಸಕ್ಕರೆ. ಸ್ನೇಹಾಂತಃಕರಣದ ಮಣಿಮಾಲೆ ಮತ್ತೆ ಈ ಮಾತುಗಳಲ್ಲಿ ರಾಜಯೋಗವು ತುಂಬಿದೆ. ಇಕೋ ನೋಡಿ :

ಈ ಸಿರಿಯ ನಾನು ಪುಣ್ಯದ ಫಲವೆಂದು
ದಾಸೀನದೊಳು ನೋಡುತಿಹೆನು
ಆಸೆಯಿಲ್ಲೆನಗೆ ನೀನೊಪ್ಪುಗೊಳ್ ಮುಂದಣ
ಭೂಸುದತೀಶ ನೀನಲ್ತೆ ॥

ಅರಸನಾಗಿ ನೀನೂರೊಳಿರ್ದೆ ನೀನಟ್ಟಿದ
ದೊರೆಯಾಗಿ ನಾನೆಯ್ದಿ ನಿನ್ನ
ಧರೆಯ ಸಾಧಿಸಿ ತಂದೆನೊಪ್ಪುಗೊಳ್ ನಿನ್ನ ಭೂ
ವರ ವೃಂದವಿದೆ ಕಟಕವಿದೆ ॥

ಬದೆಗರಂದದಿ ಹೋರಲೇತಕೆ, ಗೆಲುವು ನಿ
ನ್ನದು ಸೋಲವೆನಗೆ ಹೋಗೆಂದ.

ಇಲ್ಲಿ ಯಾರು ಹೆಚ್ಚು, ಯಾರು ಕಡಿಮೆ? ಯೋಗ ಭೋಗಗಳ ಸಮನ್ವಯ ನಿರಂಜನ ಸಿದ್ಧರ ಮಾತುಗಳು.

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಬಾಹುಬಲಿಯನ್ನು ಬದುಕಿನ ಹೆಮ್ಮೆಯೆಂದಾಗಿಸಿ ಚಿತ್ರಿಸಿರುವ ಆನಂದದ ಚಿತ್ರಗಳ ಸಮೀಕ್ಷೆಯನ್ನು ಕರ್ನಾಟಕ ಕವಿಚರಿತೆಕಾರರು ಉಲ್ಲೇಖಿಸಿರುವ,

ಕಂಡೆಂ ಕಣ್ಗಳ ಪುಣ್ಯಪುಂಜಮನೆ ಕಾಣ್ಬಂತೀಗಳಾನಂದದಿಂ
ಕಂಡೆಂ ಕಣ್ಗಳ ಕೌತುಕಂ ಕೊನರುತಿರ್ಪಂತೀಗಳೊಂದಚ್ಚಿಱಿಂ
ಕಂಡೆಂ ಕಣ್ಬಡೆದಿರ್ದುದರ್ಕೆ ಫಲಮೆಂಬಂತೀಗಳೊಂದೇಱ್ಗಿಯಿಂ
ಕಂಡೆಂ ಕಣ್ದಣಿವಂತು ಸಂತಸದೊಳಾಂ ಶ್ರೀ ಗುರು ಗುಮ್ಮಟಾಧೀಶನಂ ॥[22]

ಎಂಬ ಅಜ್ಞಾತ ಕವಿಯ ಪದ್ಯದಿಂದ ಸದ್ಯಮಂಗಳ ಹಾಡೋಣ.

22. ಕರ್ನಾಟಕ ಕವಿಚರಿತೆ ; ಪ್ರಥಮ ಸಂಪುಟ ; ೧೯೬೧; ಪುಟ ೫೦೭.

ನಿಜಗಲ್ಲಿನ ಪಾಳೆಯಗಾರರು (?)

ಡಾ॥ ಎಚ್.ಎಸ್. ಗೋಪಾಲರಾವ್

ಲೇಖನದ ಶೀರ್ಷಿಕೆಗೆ ಸಂಬಂಧಿಸಿದಂತೆ ಹೇಳಲೇಬೇಕಾದ ಕೆಲವು ಮಾತುಗಳನ್ನು ಲೇಖನದ ಕೊನೆಯಲ್ಲಿ ಚರ್ಚಿಸುವ ಇಚ್ಛೆಯಿಂದ, ಮೊದಲು ನಿಜಗಲ್ಲನ್ನು ಪರಿಚಯಿಸಲು ಪ್ರಯತ್ನಿಸುತ್ತೇನೆ.

ಬೆಂಗಳೂರಿಗೆ ಸುಮಾರು ೫೦ ಕಿಲೋಮೀಟರ್ ದೂರದಲ್ಲಿ ೪ನೆಯ ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲೇ ದಾಬಸ್‌ಪೇಟೆ - ತುಮಕೂರುಗಳ ನಡುವೆ ನಿಜಗಲ್ಲು ದುರ್ಗವಿದೆ. ರಸ್ತೆಯ ಒಂದು ಪಕ್ಕದಲ್ಲಿ ನಿಜಗಲ್ಲುದುರ್ಗ ಮತ್ತು ಹಳೆ ನಿಜಗಲ್ಲು ಗ್ರಾಮ, ಮತ್ತೊಂದು ಪಕ್ಕದಲ್ಲಿ ಹೊಸ ನಿಜಗಲ್ಲು ಗ್ರಾಮಗಳಿವೆ. ಸು. ೧೦೮೫ ಮೀಟರ್ ಎತ್ತರದ ನಿಜಗಲ್ಲು ದುರ್ಗಕ್ಕೆ ಸುರಗಿರಿ, ಶೂರಗಿರಿ, ಸಿದ್ಧರಬೆಟ್ಟ, ಉದ್ದಂಡಯ್ಯನ ಬೆಟ್ಟ ಎಂಬ ಹೆಸರುಗಳೂ ಇವೆ. ದುರ್ಗದ ಮೇಲೆ ಕೋಟೆಯ ಅವಶೇಷಗಳಿದ್ದು, ಇಂದಿಗೂ ಹಿಂದೂ, ಮುಸ್ಲಿಂ ಜನಾಂಗದವರುಗಳಿಗೆ ಪವಿತ್ರ ಕ್ಷೇತ್ರವಾಗಿ ಪರಿಚಿತವಾಗಿದೆ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ 'ನಿಜಗಲ್ಲಿನ ರಾಣಿಯರು' ಎಂಬ ಒಂದು ಕಥೆಯೂ ಈ ನಿಜಗಲ್ಲು ದುರ್ಗಕ್ಕೆ ಸಂಬಂಧಿಸಿದ್ದೆಂದೇ ತಿಳಿಯಲಾಗಿದೆ. ಇವಿಷ್ಟು ನಿಜಗಲ್ಲು ದುರ್ಗಕ್ಕೆ ಪ್ರವೇಶಿಸಲು ಸಾಮಾನ್ಯ ಪರಿಚಯ.

ನಿಜಗಲ್ಲಿಗೆ ಸಂಬಂಧಿಸಿದಂತೆ ಕ್ರಿ.ಶ. ೧೨೮೮ ರಿಂದ ಕ್ರಿ.ಶ. ೧೭೭೦ರವರೆಗಿನ ಲಭ್ಯವಿರುವ ಹಲವು ದಾಖಲೆಗಳನ್ನು ಇಲ್ಲಿ ಪರಿಶೀಲಿಸುವ ಪ್ರಯತ್ನ ಮಾಡಲಾಗಿದೆ.

ಎ.ಕ. IX ನೆಲಮಂಗಲ ೬೩ರ ಮೂಲಕ ದಾಖಲಾಗಿರುವ ಶಾಸನದ ಕಾಲವನ್ನು ಕ್ರಿ.ಶ.ಸು. ೧೨೮೮ ಎಂದು ತಿಳಿಯಲಾಗಿದೆ. ಶಾಸನದ ಪಾಠ ಬಹಳ ಅಸ್ಪಷ್ಟವಾಗಿದೆ. ಲಭ್ಯ ಪಾಠದ ಮೂಲಕ ಇದು ಶಿವ (ಮಲ್ಲಿಕಾರ್ಜುನ) ದೇವಾಲಯಕ್ಕೆ ನೀಡಿದ

ದಾನವನ್ನು ಪ್ರಸ್ತಾಪಿಸಿರುವುದು ತಿಳಿಯುತ್ತದೆ. ನಿಜಗಲಿಯ ಪುರವು ನರಸೆಯ ಪುರಕೆ ಸಲುವ ಊರಾಗಿತ್ತೆಂದೂ, ಅಲ್ಲಿಯ 'ಗುಡ್ಡಗಳ ಅರಮನೆ'ಗೆ ಅಧಿಕಾರಿಗಳು ವರುಸ ನಿಬಂಧಿಯಾಗಿ ನಿಜಗಲಿಯ ಪುರದ ಉತ್ಪತ್ತಿಯ ಕೆಲವು ಭಾಗವನ್ನು ನೀಡಬೇಕೆಂದೂ ಶ್ರೀಮನ್ಮಹ ಪ್ರಧಾನ ಕಂಬಯ್ಯ ದಂಣ್ಣಾಯಕರ ಸಹಿತವಾಗಿ ಕರುಮಾಣಿಕದೇವ ಮತ್ತು ಕಲಿಸಿಗತ್ತರು ಶಾಸನ ಮಾಡಿದಂತೆ ಸೂಚನೆಯಿದೆ. ಈ ಶಾಸನದಲ್ಲಿ ಉಕ್ತರಾಗಿರುವ ದಾನಿಗಳ ಹೆಸರು ಸಮಕಾಲೀನ ಮತ್ತು ಸಮೀಪ ಸ್ಥಳಗಳ ಮತ್ತಾವ ಶಾಸನದಲ್ಲೂ ಪ್ರಸ್ತಾಪಿತವಾಗಿಲ್ಲ. ಕಂಬಯ್ಯ ದಂಣ್ಣಾಯಕನು ಯಾವ ಮಾಂಡಳಿಕನಿಗೆ ಅಥವಾ ಚಕ್ರವರ್ತಿಗೆ ಮಹಾಪ್ರಧಾನನಾಗಿದ್ದ ಎಂಬ ವಿವರಗಳು ಸದ್ಯಕ್ಕೆ ಲಭ್ಯವಿಲ್ಲ. ಈವರೆಗಿನ ರಾಜಕೀಯ ಇತಿಹಾಸದ ಅಧ್ಯಯನದ ಪ್ರಕಾರ ಕ್ರಿ.ಶ. ೧೩ನೆಯ ಶತಮಾನದ ಕೊನೆಯ ಕಾಲದಲ್ಲಿ ತುಮಕೂರು, ಬೆಂಗಳೂರು ಜಿಲ್ಲೆಗಳ ಬಹುತೇಕ ಭಾಗಗಳು ಹೊಯ್ಸಳರ ಆಡಳಿತ ವ್ಯಾಪ್ತಿಗೇ ಸೇರಿದ್ದವು. ಆ ಕಾಲದ ದಾಖಲೆಗಳ ಮೂಲಕ ಪಾಳೆಯಗಾರರು ಎಂಬ ವರ್ಗ. ಇನ್ನೂ ರೂಪುಗೊಂಡಿರಲಿಲ್ಲವೆಂಬುದು ತಿಳಿದಿದೆ. ಚಕ್ರವರ್ತಿ, ಮಾಂಡಳಿಕ, ಪ್ರಧಾನ, ದಂಡನಾಯಕ ಇತ್ಯಾದಿ ಅಧಿಕಾರಿಗಳು, ಪೆರ್ಗ್ಗಡೆ (ಹೆಗ್ಗಡೆ), ನಾಡಗಾವುಂಡ, ಮಹಾಜನ ಇತ್ಯಾದಿ ಸ್ಥಳೀಯ ಅಧಿಕಾರಿಗಳು ಆಡಳಿತ ವ್ಯವಸ್ಥೆಯನ್ನು ನಿರ್ವಹಿಸುತ್ತಿದ್ದರು.

ಕ್ರಿ.ಶ. ಸು. ೧೨೮೮ರ ವೇಳೆಗೆ ಪಾಳೆಯಗಾರರು ಇರಲಿಲ್ಲವಾದರೂ ನಿಜಗಲಿಯಪುರವಿತ್ತು. ಅಲ್ಲೊಂದು ಶಿವಾಲಯವಿತ್ತು. ಅಲ್ಲೊಂದು 'ಗುಡ್ಡಗಳ ಅರಮನೆ'ಯಿತ್ತು. ಅವಕ್ಕೆ ದಾನದತ್ತಿಗಳು ಲಭ್ಯವಾಗಿದ್ದವು. ಕ್ರಿ.ಶ. ೧೨೮೮ರಿಂದ ೧೯೯೮ರ ವರೆಗೆ ನಿಜಗಲ್ಲಿನ ಪ್ರಸ್ತಾಪವಿರುವ ಯಾವ ಐತಿಹಾಸಿಕ ದಾಖಲೆಯೂ ಸದ್ಯಕ್ಕೆ ಲಭ್ಯವಿಲ್ಲ. ಆದರೆ ಚಿತ್ರದುರ್ಗದ ಎರಡು ಶಿಲಾಶಾಸನಗಳು 'ನಿಜಗಲಿ ಕಟಕರಾಯ ರಾಜಧಾನಿ ಹೊಸಪಟ್ಟಣದಲು' ಎಂದು ಉಲ್ಲೇಖಿಸಿವೆ [1]. ಎಪಿಗ್ರಾಫಿಯಾ ಕರ್ನಾಟಿಕಾದ IXನೆಯ ಸಂಪುಟದ ಮುನ್ನುಡಿಯಲ್ಲಿ ಈ ವಿಷಯದ ಪ್ರಸ್ತಾವನೆ ಇದೆ [2]. (ಆದರೆ ಶಾಸನಗಳ ಸಂಖ್ಯೆ ೪ ಮತ್ತು ೫ ಎಂದಿದೆ). ಸಂಪಾದಕರು ಹೊಸಪಟ್ಟಣದ ವಿವರಣೆ ನೀಡುತ್ತಾ 'ಅದು ಹೊಯಿಸಣ ದೇಶದಲ್ಲಿತ್ತು. ನಿಜಗಲ್ಲು ಎನ್ನುವುದು ನೆಲಮಂಗಲ ತಾಲ್ಲೂಕಿನಲ್ಲಿದೆ' ಎಂಬ ಸೂಚನೆ ನೀಡಿದ್ದಾರೆ. ಖ್ಯಾತ ಸಂಶೋಧಕ ಹುಲ್ಲೂರು ಶ್ರೀನಿವಾಸ ಜೋಯಿಸರು ತಮ್ಮ 'ಚಿತ್ರದುರ್ಗದ ಮಾತನಾಡುವ ಕಲ್ಲುಗಳು' ಎಂಬ ಲೇಖನದಲ್ಲಿ [3] ನಿಜಗಲಿ ಕಟಕರಾಯನನ್ನು ಕುರಿತು ಬರೆಯುತ್ತಾ ಎ.ಕ. IX ಚಿತ್ರದುರ್ಗ ೨ ಮತ್ತು ೩ ಸಂಖ್ಯೆಯ ಶಾಸನಗಳಲ್ಲಿ ಉಕ್ತವಾಗಿರುವ ನಿಜಗಲಿ ಕಟಕರಾಯ ಮತ್ತು ನೆಲ್ಲೂರಿನ ಒಂದು ಶಾಸನದ ಕಟಕರಾಯರ ಬಗೆಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸುವಾಗ ಬುಕ್ಕರಾಯನ ಕಾಲದಲ್ಲಿ ನಿಜಗಲಿ ಕಟಕರಾಯನು ಒಬ್ಬ ಪ್ರಮುಖ ವ್ಯಕ್ತಿಯಾಗಿದ್ದಿರಬಹುದು ಎಂದು ತಿಳಿಸಿದ್ದಾರೆ. ನಿಜಗಲಿ ಕಟಕರಾಯನ ಬಗೆಗೆ ದಕ್ಷಿಣ ಭಾರತದ ಯಾವ ಶಾಸನವೂ ಸ್ಪಷ್ಟವಾದ ಮಾಹಿತಿ ನೀಡಿಲ್ಲ. ನಿಜಗಲಿಯು ಬೆಂಗಳೂರು ಜಿಲ್ಲೆಯ ನಿಜಗಲ್ಲು ಬೆಟ್ಟವನ್ನೇ ಸೂಚಿಸಿರಬಹುದೆಂದು ಬಿ. ಸೂರ್ಯನಾರಾಯಣರಾಯರ ಅಭಿಪ್ರಾಯವಾಗಿದೆ [4].

ಹುಲ್ಲೂರು ಶ್ರೀನಿವಾಸಜೋಯಿಸರು ಚಾಲುಕ್ಯವಂಶಕ್ಕೆ ಸೇರಿದ ಒಂದು ಶಾಖೆಯ ವಂಶಾವಳಿಯನ್ನು ತಾಮ್ರ ಶಾಸನವೊಂದರ ಆಧಾರದ ಮೂಲಕ ಗುರುತಿಸುತ್ತಾ , ಆ ವಂಶದಲ್ಲಿ ನಿಜಗಲಿ ಮತ್ತು ಕಚೆಗರಾಜ ಎಂಬ ಇಬ್ಬರು ರಾಜರು ಇದ್ದರು (ಕ್ರಿ.ಶ. ೧೦ನೇ ಶತ) ಎಂದು ತಿಳಿಸುತ್ತಾರೆ. ನಿಜಗಲಿ ಎನ್ನುವುದು ಕಟಕರಾಯನ ಬಿರುದಾಗಿರುವ ಸಾಧ್ಯತೆಗಳನ್ನು ಅಲ್ಲಗಳೆಯಲಾಗುವುದಿಲ್ಲ. ಕಟಕರಾಯನ ಬಗೆಗೆ ಇನ್ನೂ ವಿವರಗಳು ದೊರೆಯಬೇಕಾಗಿದೆ. ನಿಜಗಲ್ಲಿಗೂ - ನಿಜಗಲಿ ಕಟಕರಾಯನಿಗೂ ಸಂಬಂಧವಿರುವಂತಿಲ್ಲ.

---

1. ಎ.ಕ. XI ಚಿತ್ರದುರ್ಗ ೨ ಮತ್ತು ೩ ; ಕ್ರಿ.ಶ. ೧೩೫೫ ಮತ್ತು ೧೩೫೬
2. ಎ.ಕ. IX - ಮುನ್ನುಡಿ ಪು. ೨೪
3. ಲೇಖನದ ಕೃಪೆ : ಶ್ರೀ ಲಕ್ಷ್ಮಣ್ ತೆಲಗಾವಿ, ಚಿತ್ರದುರ್ಗ.
4. ಬಿ.ಸೂರ್ಯನಾರಾಯಣರಾವ್, ದಿ ನೆವರ್ ಟು ಬಿ ಫರ್‌ಗಾಟನ್ ಎಂಪೈರ್, ಪು-೧೯೫; ಅಡಿಟಿಪ್ಪಣಿ.

ಕ್ರಿ.ಶ.೧೭ನೆಯ ಶತಮಾನದ ನಂತರದ ಕೆಲವು ಶಾಸನಗಳು ನಿಜಗಲ್ಲಿನ ಬಗೆಗೆ ಖಚಿತವೆನಿಸುವ ಮಾಹಿತಿಗಳನ್ನೊದಗಿಸಿವೆ. ಶಾಲೀವಾಹನ ಶಕ ೧೬೨೦ನೆಯ ಬಹುಧಾನ್ಯ ಸಂಪತ್ಸರ ಅಂದರೆ ಕ್ರಿ.ಶ. ೧೬೯೮ರಲ್ಲಿ ನಿಜಗಲ್ಲು ಎನಿಸಿಕೊಂಡು ಪ್ರತಿನಾಮಾಂಕಿತವಾದ ಶ(ಶೂ)ರಗಿರಿ ದುರ್ಗದಲ್ಲಿ ಕಲ್ಲುಕೋಟೆ ಕಟ್ಟಲು ಬಿಳುಗಲಿ ಕೆಂಪರಾಜಯ್ಯನವರ ಕುಮಾರ ದಾಸರಾಜಯ್ಯನವರು ಆರಂಭಿಸಿದರು. ಬಹುಧಾನ್ಯ, ಪ್ರಮಾಥಿ, ವಿಕ್ರಮ - ಈ ಮೂರು ವರ್ಷಗಳಲ್ಲಿ ಕೋಟೆ ಕೊತ್ತಳಗಳ ಪೂರ್ವದಿಕ್ಕಿನ ಊರು ಬಾಗಿಲು, ವಿಷು ಮತ್ತು ಚಿತ್ರಭಾನು ಸಂವತ್ಸರಗಳಲ್ಲಿ ದಕ್ಷಿಣದಿಕ್ಕಿನ ಊರು ಬಾಗಿಲು, ಪಾರ್ಥಿವ ಸಂವತ್ಸರದಲ್ಲಿ ಕುಂಭಿ ಪೂರ್ವದಿಕ್ಕಿನ ಊರು ಬಾಗಿಲು ಆಯಿತೆಂದು ನಿಜಗಲ್ಲು ಬೆಟ್ಟದ ಮೇಲೆ ಅಕ್ಕ ತಂಗಿಯರ ದೊಣೆಯ ಬಳಿಯ ಬಂಡೆಯ ಮೇಲಿನ ಶಾಸನದಿಂದ ತಿಳಿಯುತ್ತದೆ [5]. ಕೋಟೆಯ ನಿರ್ಮಾಣದ ಕೆಲಸ ಪೂರ್ಣವಾಗಲು ಸುಮಾರು ೭ ವರ್ಷಗಳು ಬೇಕಾಗಿದೆ. ಕೋಟೆಗೆ ಉತ್ತರ ಮತ್ತು ಪಶ್ಚಿಮ ದಿಕ್ಕುಗಳ ಕಡೆ ಬಾಗಿಲುಗಳಿಲ್ಲದಿರುವುದು ಗಮನಾರ್ಹ. ಈಗಲೂ ನಿಜಗಲ್ಲು ಬೆಟ್ಟವನ್ನು ಪೂರ್ವ ಮತ್ತು ದಕ್ಷಿಣ ಭಾಗಗಳಿಂದ ಮಾತ್ರ ಹತ್ತಲು ಸಾಧ್ಯ. ಪಶ್ಚಿಮ ಭಾಗ ಅತಿ ಕಡಿದಾಗಿಯೂ, ಉತ್ತರ ಭಾಗ ಅತಿ ಇಳಿಜಾರಾಗಿಯೂ ಇರುವುದರಿಂದ ಈ ಎರಡು ಭಾಗಗಳಿಂದಲೂ ಶತ್ರುಗಳು ಸುಲಭವಾಗಿ ದುರ್ಗವನ್ನು ವಶಪಡಿಸಿಕೊಳ್ಳಲು ಸಾಧ್ಯವಿಲ್ಲವೆಂದು ಕಟ್ಟಿದ ಕೋಟೆಗೆ ಪೂರ್ವ ಮತ್ತು ದಕ್ಷಿಣ ಭಾಗಗಳಲ್ಲಿ ಮಾತ್ರ ಬಾಗಿಲುಗಳನ್ನು ಇಡಲಾಗಿದೆ. ಶಾಸನದ ಪ್ರಕಾರವೇ ನಿಜಗಲ್ಲು ಊರು ಬೆಟ್ಟದ ಮೇಲೆಯೇ ಇತ್ತು ಎಂದು ತಿಳಿಯುತ್ತದೆ. ಕೋಟೆ, ಕೊತ್ತಳಗಳ ನಿರ್ಮಾಣದ ಸಮಯದಲ್ಲೇ ನಿರ್ಮಿತವಾದ ಹಜಾರದ ಚಾವುಡಿ ಈಗ ಇಲ್ಲವಾದರೂ. ದಕ್ಷಿಣದಿಕ್ಕಿನ ಊರಬಾಗಿಲ ಬಳಿಯ ವಿಘ್ನೇಶ್ವರನ ಗುಡಿ ಇದೆ. ಈಗ ಅದು ಪೂರ್ಣ ಶಿಥಿಲಾವಸ್ಥೆಯಲ್ಲಿದ್ದು, ವಿಘ್ನೇಶ್ವರನ ವಿಗ್ರಹ ನಡುನೆತ್ತಿಯ ಮೇಲಿನ ಸೂರ್ಯನತ್ತ ಮುಖ ಮಾಡಿ ಬಿದ್ದಿದೆ.

ಅದೇ ಬೆಟ್ಟದ ಮೇಲೆ ಪರಮೇಶ್ವರ ದೇವರ ಗವಿಯ ಬಲಭಾಗದಲ್ಲಿ ಬಿಳುಗಲಿ ಕೆಂಪರಾಜಯ್ಯನವರ ಕೊಮಾರ ದಾಸರಾಜಯ್ಯನವರ ಸೇವೆ ಎಂದು ಗಣಪತಿಯ ವಿಗ್ರಹದ ಕೆಳಗೆ ಕೆತ್ತಲಾಗಿರುವ ಶಾಸನ ತಿಳಿಸುತ್ತಿದೆ. ಅದರ ಕಾಲವೂ ಕ್ರಿ.ಶ.೧೬೯೮ [6].

ಮೇಲೆ ಉಲ್ಲೇಖಿಸಿದ ಎರಡೂ ಶಾಸನಗಳು ದಾಸರಾಜಯ್ಯನನ್ನು 'ಚಿಕ್ಕದೇವರಾಯ ವೊಡೆಯರೈಯನವರ ಸೇವಕ' ಎಂದೇ ದಾಖಲಿಸಿವೆ. (ಶ್ರೀಮತು ಚಿಕ್ಕದೇವರಾಯ ವೊಡೆಯರೈಯನವರ ಆಳುವಿಕೆಯಲೂ ಯೀ ವೂರ ಸ್ವಾಮಿಯವರ ಸೇವಕನಾದ ಬಿಳುಗಲಿ ಕೆಂಪರಾಜಯ್ಯನವರ ಕೊಮಾರರು ದಾಸರಾಜಯ್ಯನವರು.)

ದೇವರಾಯನ ದುರ್ಗದ ತಾಮ್ರಶಾಸನವೊಂದು ಕ್ರಿ.ಶ. ೧೭೧೯ರಲ್ಲಿ ಕಕುದ್ಗಿರಿ ಕ್ಷೇತ್ರಕ್ಕೆ ಉತ್ತರಭಾಗದಲ್ಲಿರುವ ಶೂರಗಿರಿ ದುರ್ಗದಲ್ಲಿ ತಿಮ್ಮರಾಜ ವಡೆಯರ ಪೌತ್ರರಾದ ಕೆಂಪರಾಜ ವಡೇರ ಪುತ್ರರಾದ ದಾಸರಾಜೈಯನವರು ಕರ್ಷಣಾದಿ ಪ್ರತಿಷ್ಠೆಯನ್ನು ಮಾಡಿಸಿ ಲಕ್ಷ್ಮೀನರಸಿಂಹಸ್ವಾಮಿಯವರ ಸಕಲ ಸೇವೆ ನಿಮಿತ್ತ, ಲಕ್ಷ್ಮೀನರಸಿಂಹಸ್ವಾಮಿಯ ಶ್ರೀ ಭಂಡಾರಕ್ಕೆ ಪುದುವಟ್ಟಾಗಿ ಸಮರ್ಪಣೆ ಮಾಡಿದ ದ್ರವ್ಯದಲ್ಲಿ ದೇವಸ್ಥಾನಕ್ಕೆ ಕ್ರಮಬದ್ಧವಾಗಿ ಸಂಪಾದಿಸಿದ ವೃತ್ತಿಗಳ ವಿವರಣೆ ನೀಡಿದೆ. ಅಲ್ಲದೆ ದೇವಸ್ಥಾನದ ಅರ್ಚಕ ವೃತ್ತಿಯನ್ನು ತಾತಾಚಾರ್ಯರಿಗೆ ನೀಡಿದ್ದನ್ನೂ ಶಾಸನವು ಉಲ್ಲೇಖಿಸಿದೆ. ಈ ಶಾಸನವನ್ನು ಬರೆದವನು ಬೇಗೂರು ಸ್ಥಳದ ಚನ್ನಮಲ್ಲಯ್ಯ [7].

ದೇವರಾಯನ ದುರ್ಗದ ಮತ್ತೊಂದು ತಾಮ್ರಶಾಸನವು [8]. ಅದೇ ಶೂರಗಿರಿ ದುರ್ಗದ ಲಕ್ಷ್ಮೀನರಸಿಂಹ ಸ್ವಾಮಿಯ ದೀಪಾರಾಧನೆ ಮುಂತಾದ ಸಕಲ ಸೇವೆಗೆ ಬಿಳಗಲಿ ದಾಸರಾಜೈಯನ ವಿಜ್ಞಾಪನೆಯಂತೆ ಕೃಷ್ಣರಾಜ ವಡೆಯರವರು

---

5. ಎ.ಕ. IX, ನೆಲಮಂಗಲ ೬೫; ಕ್ರಿ.ಶ. ೧೭೦೫.
6. ಅದೇ - ೬೬; ಕ್ರಿ. ಶ. ೧೬೯೮.
7. ಎ.ಕ. XII, ತುಮಕೂರು ೪೬; ಕ್ರಿ.ಶ. ೧೭೧೯.
8. ಎ.ಕ.XII, ೪೭, ಕ್ರಿ.ಶ. ೧೭೧೯.

ನರಸಿಂಹಪುರ (ಹೆಗ್ಗುಂದ ಹೋಬಳಿ ಗೋಟಿಕೆರೆಯ ಪ್ರತಿನಾಮ) ಗ್ರಾಮ ಮತ್ತು ಉಪಗ್ರಾಮಗಳನ್ನು ನೀಡಿದ್ದನ್ನು ಉಲ್ಲೇಖಿಸಿದೆ. ಅದೇ ದೇವರ ಸೇವೆಗಾಗಿ ದಾಸರಾಜೈಯನವರೇ ಸೋಮಸಾಗರದ ಅಗ್ರಹಾರದಲ್ಲಿ ಕ್ರಮಬದ್ಧವಾಗಿ ಸಂಪಾದಿಸಿದ ವೃತ್ತಿಗಳ ವಿವರಗಳನ್ನು ದೇವರಾಯನ ದುರ್ಗದ ಮತ್ತೊಂದು ಶಾಸನ ಉಲ್ಲೇಖಿಸಿದೆ [9].

ಕ್ರಿ.ಶ. ೧೭೧೯-೨೦ರ ವೇಳೆಗೆ ತೆಪ್ಪದ ಬೇಗೂರಿನಲ್ಲಿ ತಾಯೂರ ಪ್ರಭುಗಳು ಕೆಂಪರಾಜೆಯ ಅರಸಿನವರ ಕುಮಾರ ದಾಸರಾಜಯ್ಯ ಅರಸಿನವರು ಗಂಗಾಧರ ಸ್ವಾಮಿಯ ಪ್ರತಿಷ್ಠೆ ಮಾಡಿಸಿದ್ದನ್ನು ಶಾಸನವೊಂದು ಉಲ್ಲೇಖಿಸುತ್ತಾ, ತೆಪ್ಪದ ಬೇಗೂರು ನಿಜಗಲ್ಲು ದುರ್ಗದ ದಾಸರಾಜಯ್ಯ ಅರಸಿನವರ ಆಳ್ವಿಕೆಗೆ ಸೇರಿದ್ದುದನ್ನು ದಾಖಲಿಸಿದೆ [10].

ಈಗಾಗಲೇ ಪ್ರಸ್ತಾಪಿತವಾಗಿರುವ ದೇವರಾಯನ ದುರ್ಗದ ಎ.ಕ. XII, ತುಮಕೂರು ೪೭ನೇ ಸಂಖ್ಯೆಯ ಶಾಸನದಲ್ಲಿರುವ ವಿಷಯವೇ ನಿಜಗಲ್ಲು ಹೋಬಳಿ ನರಸಿಂಹಪುರ ಗ್ರಾಮದ ಒಂದು ಶಿಲಾಶಾಸನದಲ್ಲೂ ಉಕ್ತವಾಗಿದೆ [11].

ತ್ಯಾಮಗೊಂಡಲಿನ ಮತ್ತೊಂದು ತಾಮ್ರಶಾಸನದ ಪ್ರಕಾರ [12] ಶೂರಗಿರಿ ಸ್ಥಳಕ್ಕೆ ಕಂಬಾಳು, ಮಾಚನಹಳ್ಳಿ, ಗೊಟ್ಟಿಕೆರೆ ಇತ್ಯಾದಿ ಗ್ರಾಮಗಳು ಸೇರಿದ್ದು , ನರಸೈಯ ಎಂಬುವನು ಸ್ಥಳದ ಶಾನುಭೋಗನಾಗಿದ್ದನು. ಆ ಶಾಸನವು ಕೃಷ್ಣರಾಜ ಒಡೆಯರು ಮಾಚನಹಳ್ಳಿ ಮತ್ತು ಗೊಟ್ಟೀಕೆರೆ ಗ್ರಾಮಗಳನ್ನು ಕ್ರಯಭೂದಾನವಾಗಿ ನೀಡಿರುವುದನ್ನು ದಾಖಲಿಸಿದೆ.

ನಿಜಗಲ್ಲು ಐತಿಹಾಸಿಕವಾಗಿ ಪ್ರಮುಖವಾಗಿ ಗಮನ ಸೆಳೆಯುವುದು ೧೭೭೦ರ ಮೈಸೂರು - ಮರಾಠ ಯುದ್ಧಗಳ ಸಂದರ್ಭದಲ್ಲಿ ; ಮಾರ್ಕ್‌ವಿಲ್ಕ್ಸ್‌ನ 'ಹಿಸ್ಟರಿ ಆಫ್ ಮೈಸೂರ್' ಮತ್ತು 'ಹೈದರ್‌ನಾಮಾ'ಗಳು ಮರಾಠರ ಸೇನೆಯನ್ನು ಹಲವು ದಿನಗಳ ಕಾಲ ತಡೆದಿಟ್ಟ ನಿಜಗಲ್ಲು ದುರ್ಗವನ್ನು ಕುರಿತು ಸ್ವಲ್ಪ ವಿವರಣೆ ನೀಡಿವೆ.

ಮೈಸೂರು ಸಂಸ್ಥಾನದ ಉತ್ತರ ಮತ್ತು ಪೂರ್ವಭಾಗಗಳಲ್ಲಿ ಮರಾಠರ ಹಾವಳಿ ಹೆಚ್ಚಾದಾಗ, ಅವರೊಡನೆ ಒಪ್ಪಂದಕ್ಕೆ ಹೈದರ್ ಆಲಿ ಸಿದ್ಧನಾದ. ಆದರೆ ಮರಾಠರ ಪರವಾಗಿ ಮಾಧವರಾವ್ ಕೇಳಿದ ಒಂದು ಕೋಟಿ ರೂಪಾಯಿಗೆ ಬದಲು ಹೈದರ್ ನೀಡಲು ಒಪ್ಪಿದ್ದು ಹನ್ನೆರಡು ಲಕ್ಷ ರೂಪಾಯಿಗಳು. ಒಪ್ಪಂದದ ಮಾತು ಮುಂದುವರಿಯಲಿಲ್ಲ. ಎರಡೂ ಕಡೆಯವರು ಸಹಾಯಕ್ಕೆ ಬ್ರಿಟಿಷರನ್ನು ಕೋರಿದರು. ಬ್ರಿಟಿಷರು ತಟಸ್ಥರಾಗಿ ಉಳಿದರು. ಬ್ರಿಟಿಷರ ತಾಟಸ್ಥ್ಯ ಕ್ರಮವನ್ನು ಹೈದರ್ ದ್ವೇಷಿಸಿದ.

ಆಕ್ರಮಣಕಾರಿಗಳಾಗಿ ಮುಂದುವರಿದ ಮರಾಠರ ಸೈನ್ಯವು ನಿಜಗಲ್ಲು ದುರ್ಗವನ್ನು ವಶಪಡಿಸಿಕೊಳ್ಳಲು ಪ್ರಯಾಸ ಪಡಬೇಕಾಯಿತು. ಕೊನೆಗೆ ಚಿತ್ರದುರ್ಗದ ಪಾಳೆಯಗಾರರ ನೆರವಿನಿಂದ ನಿಜಗಲ್ಲುದುರ್ಗ ಮರಾಠರ ವಶವಾಯಿತು. ಆ ವೇಳೆಗೆ ಮರಾಠರ ನಾಯಕ ಮಾಧವರಾವ್ ಅನಾರೋಗ್ಯದ ಕಾರಣ ಪೂನಾಕ್ಕೆ ಹಿಂದಿರುಗಿ, ಮರಾಠರ ಸೇನೆಯು ತ್ರಯಂಬಕ್ ಮಾಮಾನ ನೇತೃತ್ವದಲ್ಲಿ ಮುಂದುವರಿಯಿತು [13]. ಇದೇ ವಿಷಯವನ್ನು ಚಿತ್ರದುರ್ಗದ ಬಖೈರು ಸಹ ಉಲ್ಲೇಖಿಸಿದೆ [14]. ಇದೇ ಘಟನೆಗೆ ಸಂಬಂಧಿಸಿದಂತೆ ಕರ್ನಲ್ ಮಾರ್ಕ್ ವಿಲ್ಕ್ಸ್‌ನ ವಿವರಣೆ ಸ್ವಲ್ಪ ವಿಸ್ತಾರವಾಗಿದೆ.

---

9. ಎ.ಕ. XII, ೪೮; ಕ್ರಿ.ಶ. ೧೭೨೦.
10. ಎ.ಕ. IX, ನೆಲಮಂಗಲ ೪೬; ಕ್ರಿ.ಶ. ೧೭೨೦.
11. ಎ.ಕ. IX, ೭೦; ಕ್ರಿ.ಶ. ೧೭೧೯.
12. ಎ.ಕ. IX, ೫೧; ಕ್ರಿ.ಶ. ೧೭೬೩.
13. ಸಿ.ಹಯವದನರಾವ್, ಮೈಸೂರು ಗೆಜೆಟಿಯರ್, ಸಂ.II, ಭಾಗ IV, ಪು. ೨೫೦೭.
14. ಹುಲ್ಲೂರು ಶ್ರೀನಿವಾಸ ಜೋಯಿಸ್ (ಸಂ) ; ಚಿತ್ರದುರ್ಗದ ಬಖೈರು, ಪುಟ ೧೩

ನಿಜಗಲ್ಲು ದುರ್ಗವನ್ನು ಮರಾಠರು ಮುತ್ತಿದ ಕಾಲದಲ್ಲಿ. ಅದರ ಜವಾಬ್ದಾರಿಯನ್ನು ಹೊತ್ತಿದ್ದವನು ನರಸಣ್ಣ ಎಂಬ ಅಧಿಕಾರಿ ಎಂದು ವಿಲ್ಕ್ಸ್‌ನ ಬರಹದಿಂದ ತಿಳಿಯುತ್ತದೆ. ನಿಜಗಲ್ಲು ದುರ್ಗದಲ್ಲೇ ವಾಸವಾಗಿದ್ದ ನರಸಣ್ಣನು ನಿಜಗಲ್ಲು ದುರ್ಗದ ಕೋಟೆಯನ್ನು ಬಲಪಡಿಸಲು, ಅಲ್ಲಿಯ ಗಳಿಕೆಯನ್ನು ಉಪಯೋಗಿಸಿಕೊಳ್ಳಲು ಅನುಮತಿ ಪಡೆದಿದ್ದ. ಈ ಕಾರಣದಿಂದ ನಿಜಗಲ್ಲುದುರ್ಗದಲ್ಲಿ ಅಪಾರ ಹಣ ಸಂಗ್ರಹ ಇದೆ ಎಂಬ ಭಾವನೆಯೂ ಮಾಧವರಾವ್ ಆ ದುರ್ಗವನ್ನು ಮುತ್ತಲು ಕಾರಣವಾಗಿರಬೇಕು. ಅಲ್ಲದೆ ಮೈಸೂರು ಸಂಸ್ಥಾನವನ್ನು ಪ್ರವೇಶಿಸಲು ಗಡಿಯ ನಿಜಗಲ್ಲು ದುರ್ಗವನ್ನು ದಾಟುವುದು ಅನಿವಾರ್ಯವಾಗಿತ್ತು. ನಿಜಗಲ್ಲು ದುರ್ಗದ ಮುತ್ತಿಗೆಯ ಸುದ್ದಿಯನ್ನು ತಿಳಿದು, ಬೆಂಗಳೂರಿನಿಂದ ಸರ್ದಾರ್‌ಖಾನ್ ಎಂಬ ಅಧಿಕಾರಿಯು ತನ್ನ ಸೈನ್ಯದೊಡನೆ ರಾತ್ರಿ ಪ್ರಯಾಣ ಮಾಡಿ ನಿಜಗಲ್ಲಿನ ರಕ್ಷಣೆಗೆ ನಿಂತ. ಸುಮಾರು ಮೂರು ತಿಂಗಳುಗಳ ಕಾಲ (ಹೈದರ್‌ನಾಮಾದ ಪ್ರಕಾರ ೧೩ ದಿನಗಳು) ದುರ್ಗವನ್ನು ವಶಪಡಿಸಿಕೊಳ್ಳಲು ಮರಾಠರು ಮಾಡಿದ ಪ್ರಯತ್ನ ಫಲ ನೀಡಲಿಲ್ಲ. ಹೋರಾಟದ ಸಮಯದಲ್ಲಿ ಮಾಧವರಾವ್‌ನ ಸಹೋದರ ನಾರಾಯಣರಾವ್ ಗಾಯಗೊಂಡ. ಕುಪಿತನಾದ ಮಾಧವರಾವ್ ಧಾಳಿಯನ್ನೇನೋ ಬಲಗೊಳಿಸಿದ. ಆದರೂ ದುರ್ಗವನ್ನು ವಶಪಡಿಸಿಕೊಳ್ಳಲಾಗಲಿಲ್ಲ. ಆಗ ಅವನು ಚಿತ್ರದುರ್ಗದ ಪಾಳೆಯಗಾರನ ನೆರವು ಪಡೆದು, ನಿಜಗಲ್ಲು ದುರ್ಗವನ್ನು ವಶಪಡಿಸಿಕೊಂಡು, ಅಲ್ಲಿನ ಸೈನಿಕರ ಮೂಗು ಮತ್ತು ಕಿವಿಗಳನ್ನು ಕತ್ತರಿಸುವಂತೆ ಆಜ್ಞಾಪಿಸಿದ. ಆದರೆ ಸರ್ದಾರ್ ಖಾನನನ್ನು ಯಾವ ನಿರ್ಬಂಧವೂ ಇಲ್ಲದೆ ಬಿಡುಗಡೆ ಮಾಡಿದ [15]. ಹೀಗೆ ನಿಜಗಲ್ಲು ದುರ್ಗ ಕ್ರಿ.ಶ. ೧೭೭೦ರ ಮೇ ಒಂದನೆಯ ತಾರೀಕಿನಂದು ಮರಾಠರ ಕೈವಶವಾಯಿತು.

ಕ್ರಿ.ಶ. ೧೨೨೮ರ ಶಾಸನದ ಮೂಲಕ ತಿಳಿಯುವ ನಿಜಗಲಿಯ ಪುರವು ಈಗಿನ ಹಳೆಯ ನಿಜಗಲ್ಲು ಎಂದೂ, ಅಲ್ಲೇ ಉಲ್ಲೇಖಿತವಾಗಿರುವ ಶಿವದೇವಾಲಯವು ಈಗ ಪಾಳು ಬಿದ್ದಿರುವ ಶಿವಾಲಯವೆಂದೂ ತಿಳಿಯಬಹುದಾಗಿದೆ.

ಕ್ರಿ.ಶ ೧೬೯೮ರರಲ್ಲಿ ನಿಜಗಲ್ಲುದುರ್ಗಕ್ಕೆ ಕಲ್ಲು ಕೋಟೆ ಕಟ್ಟಲು ಆರಂಭಿಸಲಾದುದನ್ನು ಪೂರ್ವೋದಾಹೃತ ಶಾಸನವೊಂದು ತಿಳಿಸಿದೆ. ಅಂದರೆ ಆ ಮೊದಲಿಗೆ ಅಲ್ಲಿ ಮಣ್ಣಿನ ಕೋಟೆಯೇನಾದರೂ ಇತ್ತೆ? ಎಂಬ ಅನುಮಾನ ಬಂದರೂ, ಅದರ ಪರಿಹಾರಕ್ಕೆ ಯಾವ ಸುಳಿವುಗಳೂ ಉಳಿದಿಲ್ಲ. ನಿಜಗಲ್ಲು ದುರ್ಗವನ್ನು ಬಲಪಡಿಸಲು ಕಲ್ಲುಕೋಟೆಯ ನಿರ್ಮಾಣ ಆರಂಭವಾಗಿರಬೇಕು. ಇದನ್ನು ಕಾರ್ಯಗತಗೊಳಿಸಿದವನು ಬಿಳುಗಿಲೆ ದಾಸರಾಜಯ್ಯ. ಈತನು ಚಿಕ್ಕದೇವರಾಜ ಒಡೆಯರ ಸೇವಕನೆಂದೇ ಶಾಸನ ಉಲ್ಲೇಖಿಸಿದೆ.

ದೇಶದ ಒಳಗೆ ಮತ್ತು ಗಡಿಯ ಪ್ರದೇಶಗಳ ಮುಖ್ಯಸ್ಥಳಗಳಲ್ಲಿ ಆಡಳಿತ ನಿರ್ವಹಣೆಗೆ ಕಾರ್ಯಕರ್ತ ಮತ್ತು ಪಾರುಪತ್ಯಗಾರ ಎಂಬ ಅಧಿಕಾರಿಗಳನ್ನು ಚಿಕ್ಕದೇವರಾಜ ಒಡೆಯರು ನೇಮಿಸುತ್ತಿದ್ದರು ಎಂದು ತಿಳಿದಿದೆ [16]. ಹಾಗೆ ನೇಮಕಗೊಂಡ ಹಲವರಲ್ಲಿ ಬಿಳುಗಲಿ ಕೆಂಪರಾಜಯ್ಯನ ಮಗ ದಾಸರಾಜಯ್ಯನಿಗೆ ನಿಜಗಲ್ಲು ದುರ್ಗದ ಸೀಮೆಯ ಆಡಳಿತಾಧಿಕಾರವನ್ನು ನೀಡಲಾಗಿತ್ತು. ಅದೇ ದಾಸರಾಜಯ್ಯನೇ ನಿಜಗಲ್ಲುದುರ್ಗದ ಕಲ್ಲುಕೋಟೆಯ ನಿರ್ಮಾಣ ಮಾಡಿಸಿದವನು. ೧೬೯೮ರಂದ ೧೭೦೦ರವರೆಗೆ ನಿಜಗಲ್ಲುದುರ್ಗದ ಆಡಳಿತವನ್ನು ಬಿಳುಗಿಲೆ ದಾಸರಾಜಯ್ಯನೇ ನಿರ್ವಹಿಸಿರುವುದಕ್ಕೆ ಹಲವು ಶಾಸನಗಳು ದಾಖಲೆಯಾಗಿವೆ. ಮಣ್ಣೆ, ಕೋಳಾಲ, ಹೆಗ್ಗುಂದ, ಕಂಬಾಳು, ನರಸಿಂಹಪುರ, ಮಾಚನಹಳ್ಳಿ, ಗೊಟ್ಟಿಕೆರೆ, ತೆಪ್ಪದ ಬೇಗೂರು - ಇತ್ಯಾದಿ ಸ್ಥಳಗಳು ಶೂರಗಿರಿ ಸೀಮೆಗೆ ಸೇರಿದ್ದುವೆಂದು ಶಾಸನಗಳು ತಿಳಿಸುತ್ತವೆ. ಈಗಿನ ನೆಲಮಂಗಲ ತಾಲ್ಲೂಕಿನ ಪೂರ್ವ - ಪಶ್ಚಿಮ ನಿಜಗಲ್ಲಿನಿಂದ ತೆಪ್ಪದ ಬೇಗೂರು, ಉತ್ತರ - ದಕ್ಷಿಣ ಕೋಳಾಲದಿಂದ ಕಂಬಾಳಿನವರೆಗಿನ ಪ್ರದೇಶವು ನಿಜಗಲ್ಲು ದುರ್ಗದ ಸೀಮೆ ಅಥವಾ ಸುರಗಿರಿ ಸ್ಥಳಕ್ಕೆ ಸೇರಿದ್ದವು.

---

15. ಕರ್ನಲ್ ಮಾರ್ಕ್ ವಿಲ್ಕ್ಸ್; ಹಿಸ್ಟಾರಿಕಲ್ ಸ್ಕೆಚಸ್ ಆಫ್ ದಿ ಸೌತ್ ಇಂಡಿಯಾ ಇನ್ ಅನ್ ಅಟೆಂಪ್ಟ್ ಟು ಟ್ರೇಸ್ ದಿ ಹಿಸ್ಟರಿ ಆಫ್ ಮೈಸೂರ್, ಪು. ೬೮೭.
16. ಸಿ. ಹಯವದನರಾವ್, ಮೈಸೂರು ಗೆಜೆಟಿಯರ್, ಸಂ. I, ಪು. ೩೩೪.

ನಿಜಗಲ್ಲು ದುರ್ಗವು ಗಡಿಯ ಸೀಮೆಯಾಗಿದ್ದು, ದುರ್ಗದ ಪಶ್ಚಿಮ ಮತ್ತು ಉತ್ತರ ಭಾಗಗಳು ಈಗಾಗಲೇ ತಿಳಿಸಿರುವಂತೆ ದುರ್ಗಮವಾಗಿದ್ದುದರಿಂದ ಶತ್ರುಗಳು ಸುಲಭವಾಗಿ ಅದನ್ನು ಆಕ್ರಮಿಸಲು ಸಾಧ್ಯವಿರಲಿಲ್ಲ. ಇದೇ ಕಾರಣದಿಂದ ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ಅದಕ್ಕೊಬ್ಬ ದಳವಾಯಿಯನ್ನು ಕಾರ್ಯಕರ್ತನನ್ನಾಗಿ ನೇಮಿಸಿ, ಅಲ್ಲಿ ಕಲ್ಲುಕೋಟೆಯನ್ನು ನಿರ್ಮಿಸಿ, ದುರ್ಗವನ್ನು ಮತ್ತಷ್ಟು ಬಲಪಡಿಸಲು ಪ್ರಯತ್ನಗಳು ನಡೆದಿವೆ. ಚಿಕ್ಕದೇವರಾಜ ಒಡೆಯರ ನಂತರ ಕೃಷ್ಣರಾಜ ಒಡೆಯರ ಕಾಲದಲ್ಲೂ ನಿಜಗಲ್ಲು ದುರ್ಗವು ಪ್ರಮುಖ ಗಡಿ ಸೀಮೆಯಾಗಿ ಮಾನ್ಯತೆ ಪಡೆದಿದೆ. ಹೈದರ್ ಆಲಿ ಕೂಡಾ ಇಂತಹ ಗಡಿ ಸೀಮೆಗಳ ಬಲವರ್ಧನೆಗೆ ಆದ್ಯತೆ ನೀಡಿದ್ದನು.

ನಿಜಗಲ್ಲುದುರ್ಗವನ್ನು ವಶಪಡಿಸಿಕೊಳ್ಳಲು ಮರಾಠರಿಗೆ ನೆರವಾದವನು ಬಿಚ್ಚುಗತ್ತಿ ಭರಮನಾಯಕ ಎಂಬುದು ವಿಲ್ಕ್ಸ್‌ನ ವರದಿ. ಆದರೆ ೧೭೭೦ರಲ್ಲಿ ಚಿತ್ರದುರ್ಗದ ಪಾಳೆಯಗಾರನಾಗಿದ್ದವನು ಕೊನೆಯ ಮದಕರಿನಾಯಕ. ಇದರಿಂದ ವಿಲ್ಕ್ಸ್‌ಗೆ ಚಿತ್ರದುರ್ಗದ ಪಾಳೆಯಗಾರನ ಹೆಸರಿನ ಪರಿಚಯ ಸ್ಪಷ್ಟವಾಗಿರಲಿಲ್ಲ ಎಂದು ಭಾವಿಸಬಹುದಾಗಿದೆ. ಹೈದರ್‌ನಾಮಾವು ನಿಜಗಲ್ಲುದುರ್ಗವನ್ನು ವಶಮಾಡಿಕೊಳ್ಳಲು ಮರಾಠರಿಗೆ ನೆರವು ನೀಡಿದ ಚಿತ್ರದುರ್ಗದ ಪಾಳೆಯಗಾರನನ್ನು 'ಮೆದಕೆರೆನಾಯಕ' ಎಂದೇ ಉಲ್ಲೇಖಿಸಿದೆ. ಹೈದರನಿಗೆ ಮದಕರನಾಯಕನ ಬಗೆಗೆ ಹಗೆತನ ಹೆಚ್ಚಲು ಇದು ಒಂದು ಕಾರಣವಾಗಿರಬೇಕು.

ಮರಾಠರು ಮತ್ತು ಮೈಸೂರಿನ ಸೈನ್ಯಗಳ ನಡುವೆ ನಿಜಗಲ್ಲುದುರ್ಗದಲ್ಲಿ ನಡೆದ (ಹೈದರ್‌ನಾಮಾದ ಪ್ರಕಾರ ೧೩ ದಿನಗಳು ಮತ್ತು ವಿಲ್ಕ್ಸ್‌ನ ಪ್ರಕಾರ ೩ ತಿಂಗಳು) ಯುದ್ಧವು ಭೀಕರವಾಗಿತ್ತೆನ್ನುವುದನ್ನು ವಿಲ್ಕ್ಸ್‌ನ ಮಾತುಗಳಷ್ಟೇ ಅಲ್ಲದೆ ನಿಜಗಲ್ಲುದುರ್ಗಕ್ಕೆ ಸಂಬಂಧಿಸಿದ ಆಸುಪಾಸಿನ ದಂತಕಥೆಗಳೂ ದಾಖಲಿಸಿವೆ.

ಪಾಳೆಯಪಟ್ಟುಗಳ ಪ್ರಮುಖ ನೆಲೆಗಳೆಂದು ಪರಿಗಣಿತವಾಗಿರುವ ಅನೇಕ ದುರ್ಗಗಳ ಮೇಲಿನ ಕೋಟೆ, ಅರಮನೆ, ಉಗ್ರಾಣ, ದೊಣೆಗಳ ಹಾಗೆಯೇ ನಿಜಗಲ್ಲು ದುರ್ಗದ ಮೇಲೆಯೂ ಕೋಟೆ, ಅರಮನೆ, ಉಗ್ರಾಣ ಇತ್ಯಾದಿ ಅವಶೇಷಗಳೂ ಇರುವುದರಿಂದ ಇದನ್ನೂ ಒಂದು ಪಾಳೆಯಪಟ್ಟು ಎಂದು ಭಾವಿಸಲು ಅವಕಾಶಗಳಿದ್ದರೂ, ಈವರೆಗಿನ ಯಾವ ಇತಿಹಾಸಕಾರನೂ ನಿಜಗಲ್ಲಿಗೆ ಒಂದು ಪಾಳೆಯಪಟ್ಟಿನ ಸ್ಥಾನವನ್ನೂ, ಅಲ್ಲಿ ಆಳಿದವರಿಗೆ ಪಾಳೆಯಗಾರರ ಸ್ಥಾನವನ್ನೂ ನೀಡಿಲ್ಲದಿರುವುದು ಗಮನಾರ್ಹ.

ನಿಜಗಲ್ಲುದುರ್ಗವು ಒಂದು ಪ್ರಮುಖ ಗಡಿಸೀಮೆಯಾಗಿತ್ತು. ಮೈಸೂರು ಮರಾಠರ ನಡುವಿನ ಯುದ್ಧದಲ್ಲಿ ಪ್ರಬಲ ವಿರೋಧ ವ್ಯಕ್ತಪಡಿಸಿದ ದುರ್ಗವಾಗಿ ಇತಿಹಾಸದಲ್ಲಿ ವಿಶೇಷ ಸ್ಥಾನ ಗಳಿಸಿದೆ.

ಲೇಖನದ ಆರಂಭದಲ್ಲಿ ಉಲ್ಲೇಖಿಸಿದಂತೆ 'ನಿಜಗಲ್ಲಿನ ಪಾಳೆಯಗಾರರು?' ಎಂಬ ಶೀರ್ಷಿಕೆಯನ್ನು ಕುರಿತು ಈಗ ವಿವರಣೆ ಅವಶ್ಯಕವಿಲ್ಲ ಎಂದು ಭಾವಿಸಲಾಗಿದೆ.

ನಿಜಗಲ್ಲು ಎಂದೂ ಒಂದು ಪಾಳೆಯಪಟ್ಟಾಗಿರಲಿಲ್ಲ. ಅದನ್ನು ಪಾಳೆಯಗಾರರು ಆಳಲಿಲ್ಲ. ಅದು ಒಂದು ಗಡಿಸೀಮೆಯ ಗಡಿಠಾಣ್ಯ ಮಾತ್ರ ಆಗಿತ್ತು. ಅದರ ಆಡಳಿತ ವ್ಯವಸ್ಥೆಯನ್ನು ಮೈಸೂರು ಅರಸರ ಪರವಾಗಿ ನಿರ್ವಹಿಸಿದವರು, ಅವರೇ ನೇಮಿಸಿದ ತಾಯೂರು ಬಿಳುಗಿಲೆಯ ಪ್ರಭುಗಳ ದಳವಾಯಿಗಳ ಮನೆತನದ ದಾಸರಾಜಯ್ಯ ಮತ್ತು ಅವನ ನಂತರ ಸ್ಥಳೀಯ ಆಡಳಿತಗಾರರು (ಶಾನುಭೋಗ ನರಸಣ್ಣ.)

ಶಿವಾಗಮಗಳಲ್ಲಿ ವೀರಶೈವ ಧರ್ಮ ಮತ್ತು ಸಂಸ್ಕೃತಿ

ಶ್ರೀ ಷಣ್ಮುಖಯ್ಯ ಅಕ್ಕೂರಮಠ

ಭಾರತೀಯ ಸಂಸ್ಕೃತಿಯಲ್ಲಿ ವೈದಿಕ ಹಾಗೂ ಆಗಮಿಕ ಸಂಸ್ಕೃತಿಗಳೆಂಬ ಎರಡು ಪ್ರವಾಹಗಳು ಪ್ರಧಾನವಾಗಿವೆ. ಎರಡೂ ಪರಂಪರೆಗಳು ಪ್ರಾಚೀನ. ವೇದಾಗಮ, ನಿಗಮಾಗಮ ಎಂದು ರೂಢಿಯಲ್ಲಿ ಅವುಗಳನ್ನು ಒಟ್ಟಿಗೆ ಕರೆಯುವ ಪದ್ಧತಿ ಇದೆ. ಆದ್ದರಿಂದ ಭಾರತೀಯ ಸಂಸ್ಕೃತಿ ನಿಗಮಾಗಮ ಸಂಸ್ಕೃತಿ.

ವೇದವೆಂದರೆ ಜ್ಞಾನ. ಆಗಮವೆಂದರೆ ಅನುಷ್ಠಾನ. ವೇದವೆಂದರೆ ಅರಿವು. ಆಗಮ ಅದರ ಅನ್ವಯ. ದೇವಾಲಯ ಸಂಪ್ರದಾಯ, ಮೂರ್ತಿ ಕಲ್ಪನೆ, ಪೂಜಾ ವಿಧಾನ, ಇಷ್ಟಲಿಂಗ ಪೂಜಾ ಪದ್ಧತಿ ಇವು ವೈದಿಕವಲ್ಲ ; ಆಗಮದ ನೆಲೆಯಿಂದಲೇ ಮೂಡಿ ಬಂದವು. ನಂತರ ವೈದಿಕ ಮಂತ್ರಗಳನ್ನು, ವೈದಿಕ ಕಲ್ಪನೆಗಳನ್ನು ಅಳವಡಿಸಿಕೊಂಡವು. ಶೈವ, ವೈಷ್ಣವ, ಶಾಕ್ತ ಪಂಥಗಳ ಆಗಮ ಸಾಹಿತ್ಯ ವಿಪುಲವಾಗಿದೆ. ಶೈವಾಗಮಗಳನ್ನು ಕುರಿತು ಸಾಕಷ್ಟು ವಿವೇಚನೆ ನಡೆದಿದೆ. ಇದೇ ಸಂಪ್ರದಾಯಕ್ಕೆ ಸೇರಿದ ವೀರಶೈವಾಗಮಗಳ ಬಗ್ಗೆ ಹೆಚ್ಚು ವಿವೇಚನೆ ನಡೆದಿಲ್ಲ. ವಿದ್ವಜ್ಜನರ ಗಮನ ಅಷ್ಟಾಗಿ ಈ ಕಡೆ ಹರಿಯಲಿಲ್ಲ.

ವೀರಶೈವ ಆಗಮಗಳನ್ನು ಕುರಿತು ಈಗ ನಮಗೆ ಉಪಲಬ್ಧವಿರುವ ಆಗಮ ಸಾಹಿತ್ಯವೆಂದರೆ ಹುಬ್ಬಳ್ಳಿಯ ಮೂರುಸಾವಿರ ಮಠದ ಪ್ರಕಟಣೆ 'ತಂತ್ರ ಸಂಗ್ರಹ' (೧೯೧೪). ಇದರಲ್ಲಿ ವಾತುಲಾಗಮ ದೇವೀಕಾಲೋತ್ತರ, ಸೂಕ್ಷ್ಮಾಗಮ, ಪಾರಮೇಶ್ವರಾಗಮಗಳಿವೆ. ಇವು ಪೂರ್ಣ ರೂಪದಲ್ಲಿಲ್ಲ. ಪಂಡಿತ ಕಾಶೀನಾಥ

ಶಾಸ್ತ್ರಿಗಳು ಸೂಕ್ಷ್ಮಾಗಮ, ಪಾರಮೇಶ್ವರಾಗಮ, ಮಕುಟಾಗಮ, ಕಿರಣಾಗಮ, ಚಂದ್ರಜ್ಞಾನಾಗಮಗಳನ್ನು ಪ್ರಕಟಿಸಿದ್ದಾರೆ. ಸೊಲ್ಲಾಪುರದ ವಾರದ ಮಲ್ಲಪ್ಪನವರು (೧೯೦೫) ಸ್ವಯಂಭುವ, ಸುಪ್ರಭೇದ ಹಾಗೂ ಪಾರಮೇಶ್ವರಾಗಮಗಳನ್ನು ಪ್ರಕಟಿಸಿದ್ದಾರೆ. ಡಾ|| ನಂದೀಮಠ ಅವರು ಆಗಮಗಳ ಮೇಲೆ ಮಹಾಪ್ರಬಂಧ ರಚಿಸಿದ್ದಾರೆ. ಅವರು ನೇಪಾಳದ ದರ್ಬಾರ್ ಲೈಬ್ರರಿಯಲ್ಲಿ ಆಗಮಗಳ ಹಸ್ತ ಪ್ರತಿಗಳುಂಟೆಂದು ತಿಳಿಸುತ್ತಾರೆ. ವಿದ್ಯಾವಾಚಸ್ಪತಿ ಶಂಭುಲಿಂಗ ಶಿವಾಚಾರ್ಯರ ಪುಸ್ತಕ 'ಆಗಮ ಪರಿಜ್ಞಾನ' ಆಗಮಗಳ ಮೇಲೆ ಬೆಳಕು ಚೆಲ್ಲುತ್ತದೆ. ಕಾಶೀ ಮಹಾವಿದ್ವಾಂಸರಾದ ಗೋಪೀನಾಥ ಕವಿರಾಜರ Some aspects of Indian philosophy ಗ್ರಂಥವು ಶೈವಾಗಮಗಳನ್ನು ಕುರಿತು ಬರೆದ ಪ್ರೌಢ ಪ್ರಬಂಧ. ಕರ್ನಾಟಕದ ಖ್ಯಾತ ವಿದ್ವಾಂಸರಾದ ಸಿದ್ಧರಾಮಪ್ಪ ಪಾವಟೆ ಅವರು ಬರೆದ Veerashaiva philosophy of the Shivagamas ಕೃತಿ ಚಿಕ್ಕದಾದರೂ, ಅತ್ಯಂತ ಮಹತ್ವಪೂರ್ಣವಾಗಿದೆ. ಡಾ. ಎಚ್.ಪಿ. ಮಲ್ಲೇದೇವರು ಬರೆದ Shivagamas and upanishats ಮಹಾಪ್ರಬಂಧ ಮೌಲಿಕವಾದುದು. ಡಾ.ಆರ್.ಆರ್. ದಿವಾಕರ ಅವರ ವಚನಶಾಸ್ತ್ರ ರಹಸ್ಯ ಎನ್ನುವ ಗ್ರಂಥದಲ್ಲಿ ೧೧ನೆಯ ಪ್ರಕರಣವು ಶಿವಾಗಮಗಳ ಹಾಗೂ ವಚನ ಶಾಸ್ತ್ರದ ತೌಲನಿಕ ಅಧ್ಯಯನ. ಪ್ರೊ. ಎಂ.ಆರ್. ಸಾಖರೆಯವರು ಲಿಂಗಧಾರಣ, ಚಂದ್ರಿಕೆಗೆ ಬರೆದ ವಿದ್ವತ್ ಪೂರ್ಣವಾದ ಮುನ್ನುಡಿ, ವಿವೇಕ ಚಿಂತಾಮಣಿಯ ಆಗಮ ಪಾದದಲ್ಲಿ ಬರುವ ಆಗಮದ ವಿಚಾರ, ಡಾ. ಜ.ಚ.ನಿ. ಅವರು ಬರೆದ ಶಿವಾಗಮ ಸಾಹಿತ್ಯ, ಶಿವಾಗಮಗಳಲ್ಲಿ ವೀರಶೈವ ಧರ್ಮ ಹಾಗೂ ಸಂಪಾದಿಸಿದ ವೀರಾಗಮ ಬೃಹತ್ ಕೃತಿ. ಆಸ್ಥಾನ ವಿದ್ವಾನ್ ಎಂ.ಜಿ. ನಂಜುಂಡಾರಾಧ್ಯರು ಸಂಪಾದಿಸಿದ 'ಶಿವಾಗಮ ಸೌರಭ' ಮೈಸೂರು ಪ್ರಾಚ್ಯ ವಿದ್ಯಾಸಂಸ್ಥೆಯವರು ಪ್ರಕಟಿಸಿದ ವಾತುಲ ಶುದ್ಧಾಗಮ ೧೧ ಹಾಗೂ ವೀರಾಗಮೋತ್ತರಮ್ ೧. ಗುಬ್ಬಿ ಮಲ್ಲಣ್ಣಾರ್ಯರ ವಾತುಲಾಗಮದ ಟೀಕೆಯ ಹಸ್ತಪ್ರತಿ ಕರ್ನಾಟಕ ವಿಶ್ವವಿದ್ಯಾಲಯದ ಹಸ್ತ ಪ್ರತಿ ಭಂಡಾರದಲ್ಲಿದೆ. ಇಷ್ಟು ಸಾಹಿತ್ಯ ಸಾಮಗ್ರಿ ಶಿವಾಗಮಗಳಲ್ಲಿ ವೀರಶೈವ ಧರ್ಮ, ತತ್ತ್ವ, ಸಂಸ್ಕೃತಿಯನ್ನು ಕುರಿತು ಅಧ್ಯಯನ ಮಾಡುವವರಿಗೆ ಉಪಲಬ್ಧವಿದೆ. ಕುಂಭಕೋಣಂ, ತಂಜಾವೂರು ಗ್ರಂಥ ಭಂಡಾರಗಳಲ್ಲೂ ಕೆಲವು ಆಗಮಗಳು ದೊರೆಯುತ್ತವೆ ಎಂದು ಸಂಶೋಧಕರ ಅಭಿಪ್ರಾಯ.

ಶಿವಾಗಮಗಳು ವೀರಶೈವ ಸಿದ್ಧಾಂತಕ್ಕೆ ಅಡಿಗಲ್ಲುಗಳು. ಎಲ್ಲ ಆಗಮಗಳೂ ಸಂಪೂರ್ಣವಾಗಿ ದೊರೆತಿದ್ದರೆ ವೀರಶೈವ ದರ್ಶನದ ಬೆಳವಣಿಗೆಗೆ ತುಂಬ ಸಹಾಯಕವಾಗುತ್ತಿತ್ತು. ವೀರಶೈವ ದಾರ್ಶನಿಕರು, ಆಚಾರ್ಯರು, ವಚನಕಾರರು, ಪುರಾಣಕಾರರು ಹಾಗೂ ಕವಿಗಳು ಆಗಮ ವಾಕ್ಯಗಳನ್ನು ತಮ್ಮ ತಮ್ಮ ಕೃತಿಗಳಲ್ಲಿ ಉಲ್ಲೇಖಿಸಿರುವುದರಿಂದ ವೀರಶೈವ ಧರ್ಮದ ಪ್ರಾಚೀನತೆಗೆ ಪರಿಪೂರ್ಣತೆಗೆ ಸಾಕಷ್ಟು ಸಹಾಯವಾಗಿದೆ. ವೀರಶೈವ ವಿದ್ವಾಂಸರು ಆಗಮ ಸಾಹಿತ್ಯದ ಕಡೆಗೆ ಲಕ್ಷ್ಯ ಕೊಟ್ಟು ಸಹೃದಯತೆಯಿಂದ ಅಧ್ಯಯನ ಮಾಡಿ ಈ ಸಾಹಿತ್ಯವನ್ನು ಕುರಿತು ಕೃತಿಗಳನ್ನು ರಚಿಸಿ ಪ್ರಚಾರಕ್ಕೆ ತಂದರೆ ಕೇವಲ ವೀರಶೈವ ದಾರ್ಶನಿಕ ಸಾಹಿತ್ಯಕ್ಕಷ್ಟೇ ಅಲ್ಲ, ಜಗತ್ತಿನ ದಾರ್ಶನಿಕ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದಂತಾಗುತ್ತದೆ.

ಶಿವಾಗಮಗಳಲ್ಲಿ ಶೈವ, ವೀರಶೈವ ಎರಡೂ ತತ್ವಗಳಿವೆ. ಕಾರಣ, ವೀರಶೈವ ಶೈವಧರ್ಮವೃಕ್ಷದ ಒಂದು ಶಾಖೆ. ಶೈವ ವಿಭಾಗಕ್ಕೆ ಸೇರಿದ ಒಂದು ಪ್ರಭೇದ. ಶೈವ ಸಂತಾನ. ಇಂದು ಎಲ್ಲರನ್ನೂ ಸಾರಾಸಗಟಾಗಿ ಹಿಂದುಗಳೆಂದು ಕರೆಯುವಂತೆ, ಹಿಂದೆ ಶೈವಧರ್ಮದ ಬೇರೆ ಬೇರೆ ಶಾಖೆಯವರನ್ನು ಒಟ್ಟಾಗಿ ಶೈವರೆಂದೇ ಕರೆಯುತ್ತಿದ್ದರು. ಮೊದಲು ವೀರಶೈವಕ್ಕೆ ಶೈವಗ್ರಂಥಗಳೇ ಪಠ್ಯಪುಸ್ತಕಗಳಾಗಿದ್ದವು. ವೀರಶೈವರು ಶಿವನ ವರ್ಗದವರು. ಇಷ್ಟಲಿಂಗವೂ ಶಿವ. ಶಿವಸ್ತೋತ್ರ, ಶಿವಪಾರಾಯಣ, ಶಿವಧ್ಯಾನ, ವೀರಶೈವರಿಗೆ ಮಾನ್ಯ. ವೀರಶೈವರು ಜಪಿಸುವ ಮಂತ್ರ ಶಿವಪಂಚಾಕ್ಷರಿ (ನಮಃ ಶಿವಾಯ) ಹೀಗಾಗಿ ಶೈವಕ್ಕೂ, ವೀರಶೈವಕ್ಕೂ ಅವಿನಾಭಾವ ಸಂಬಂಧ. ಆದ್ದರಿಂದ ಶಿವಾಗಮಗಳಲ್ಲಿ ಎರಡು ಸಂಸ್ಕೃತಿಗಳ ವಿಚಾರಧಾರೆಯನ್ನು ಕಾಣುತ್ತೇವೆ. ಪೂರ್ವಭಾಗದಲ್ಲಿ ದೇವಾಲಯದ ಸಂಸ್ಕೃತಿ, ಉತ್ತರ ಭಾಗದಲ್ಲಿ ಇಷ್ಟಲಿಂಗ ಸಂಸ್ಕೃತಿಗಳನ್ನು

ಕಾಣುತ್ತೇವೆ. ಒಂದಕ್ಕೊಂದು ಪರಸ್ಪರ ವಿರೋಧದಂತೆ ಕಂಡರೂ, ಒಂದು ಹಳೆಯದು, ಇನ್ನೊಂದು ಹೊಸದು. ದೇವಾಲಯ ಸಂಸ್ಕೃತಿಯ ವಿಕಾಸ ರೂಪವೇ ಇಷ್ಟಲಿಂಗ ಸಂಸ್ಕೃತಿ. ಹಳೆಯದನ್ನು ಸ್ಥಾವರಲಿಂಗ ಎಂದು ಕರೆದ ಆಗಮಕಾರರು, ಇಷ್ಟಲಿಂಗವನ್ನು 'ಜಂಗಮಲಿಂಗ'ವೆಂದು ಅರ್ಥಪೂರ್ಣವಾಗಿ ಕರೆದಿದ್ದಾರೆ.

ಆಗಮ ಎಂದರೇನು?

ಆಗಮ ಶಬ್ದಕ್ಕೆ ಬರು ಎಂದು ಅರ್ಥ. ಗಮ್ ಧಾತು ಅಜಿ ಉಪಸರ್ಗ ಸೇರಿ ಆ + ಗಮ ಎಂದರೆ ಪೂರ್ಣಜ್ಞಾನ ಎಂದು ಅರ್ಥ. ಆಗಮಗಳು ಪರಮಾತ್ಮನ ವಾಣಿ ಎನ್ನುವ ನಂಬಿಕೆ ಇದೆ. ತಂತ್ರ ಎನ್ನುವ ಇನ್ನೊಂದು ಹೆಸರೂ ಇದೆ. ತನುತೆ ವಿಸ್ತಾರ್ಯತೆ ಜ್ಞಾನಂ ಅನೇನ ತ್ರಾಯತೇ ಚ ಇತಿ ತಂತ್ರಮ್. ಜ್ಞಾನ ವಿಕಾಸವಾಗಿ ಮನುಷ್ಯನ ಉದ್ಧಾರ ಸಾಧ್ಯ ಎನ್ನುವ ಅರ್ಥದಲ್ಲಿ ತಂತ್ರ ಎಂದು ಹೆಸರು. ಶಿವ - ಶಕ್ತಿಗಳನ್ನು ಉಪಾಸಿಸುವ ಪೂಜಾ ವಿಧಾನವೂ ತಂತ್ರವೆ. ವೈದಿಕೀ ತಾಂತ್ರಿಕೀ ಚೈವ ದ್ವಿಧಾ ಶೃತಿ ಕೀರ್ತಿತಾ (ಮನುಸ್ಮೃತಿ ವ್ಯಾಖ್ಯಾನ) ವೇದಗಳಂತೆ ಆಗಮಗಳೂ 'ಶೃತಿ' ಎನ್ನುವ ಗೌರವಕ್ಕೆ ಪಾತ್ರವಾಗಿದೆ. ಈಶಾನ್ಯ ಶಿವಾಚಾರ್ಯರು ತಮ್ಮ ಪದ್ಧತಿ ಗ್ರಂಥದಲ್ಲಿ 'ಶಿವಾಗಮಾಶ್ಚ ವೇದಾಶ್ಚ ನಿತ್ಯ ಏವ ಪ್ರಮಾಣತಃ' ಎನ್ನುತ್ತಾರೆ. 'ಆಗತಂ ಶಿವ ವಕ್ತ್ರೇಭ್ಯಃ ಗತಂತು ಗಿರಿಜಾಶೃತೌ' ಶಿವನಿಂದ ಗಿರಿಜೆಗೆ ಬೋಧಿಸಿದ ಜ್ಞಾನವೇ ಆಗಮ - ಎಂದು ಶಾರದಾ ತಿಲಕ (ಪುಟ ೨೬) ತಿಳಿಸುತ್ತದೆ. ಅಮರಸಿಂಹ ತನ್ನ ಕೋಶದಲ್ಲಿ ತಾಂತ್ರಿಕೋಜ್ಞಾತ ಸಿದ್ಧಾಂತಃ ಎಂದು ಕರೆದರೆ, ಪಾಲ್ಕುರಿಕೆ ಸೋಮನಾಥನು ತನ್ನ 'ಜ್ಯೋತಿರ್ಮಯ ಶಾಂಭವೀಜ್ಞಾನ ದೀಕ್ಷಾ ಬೋಧೆಯಲ್ಲಿ ಆಗಮಗಳನ್ನು ಸಿದ್ಧಾಂತ ಶಾಸ್ತ್ರಗಳೆಂದು ಕರೆಯುತ್ತಾನೆ. ಶಿವಾಗಮಗಳಿಗೆ ಶಿವಶಾಸನಃ, ವೇದಸಾರಃ ಎನ್ನುವ ಅಪರ ನಾಮಗಳೂ ಇವೆ.

> ಅಷ್ಟಾದಶ ಪುರಾಣಾನಾಂ ಕರ್ತಾ ಸತ್ಯವತೀ ಸುತಃ ।
> ಕಾಮಿಕಾದಿ ಪ್ರಭೇದಾನಾಂ ಯಥಾ ದೇವೋ ಮಹೇಶ್ವರಃ ॥

ಸೂತ ಸಂಹಿತೆ ಹೇಳುವ ಈ ಮಾತು ಶಿವಾಗಮಗಳಿಗೆ ಈಶ್ವರನೇ ಕರ್ತನೆಂದು ತಿಳಿಸುತ್ತವೆ. ಆಗಮಗಳಲ್ಲಿ ಶೈವ - ಶಾಕ್ತ - ಪಾಂಚರಾತ್ರ - ವೈಖಾಸನ - ಜೈನ - ಬೌದ್ಧವೆಂಬ ಅನೇಕ ಪ್ರಕಾರಗಳಿವೆ. ಶಿವಾಗಮಗಳ ಉತ್ತರ ಭಾಗದಲ್ಲಿ, ವೀರಶೈವದ ತತ್ತ್ವದ ನೆಲೆಯನ್ನು ಕಾಣುತ್ತೇವೆ. ಸ್ವಯಂಭುವ, ಸುಪ್ರಭೇದ, ವಾತುಲ, ಮಕುಟ, ಪೌಷ್ಕರ, ಪಾರಮೇಶ್ವರ, ಕಾಮಿಕ, ಕಿರಣ, ಸೂಕ್ಷ್ಮ, ಚಂದ್ರಜ್ಞಾನ ಆಗಮಗಳಲ್ಲಿ ವೀರಶೈವ ತತ್ತ್ವ ಸ್ಪಷ್ಟವಾಗಿ ಕಂಡುಬರುತ್ತದೆ.

> ಸಿದ್ಧಾಂತಾಖ್ಯೇ ಮಹಾತಂತ್ರೇ ಕಾಮಿಕಾದ್ಯೇ ಶಿವೋದಿತೇ ।
> ನಿರ್ದಿಷ್ಟಮುತ್ತರೇ ಭಾಗೇ ವೀರಶೈವ ಮತಂಪರಂ ॥ (ಸಿದ್ಧಾಂತ ಶಿಖಾಮಣಿ)

ಎಂದು ಸಿದ್ಧಾಂತ ಶಿಖಾಮಣಿಯು ಶಿವಾಗಮಗಳ ಉತ್ತರಭಾಗದಲ್ಲಿ ವೀರಶೈವ ಮತದ ವಿಚಾರಗಳಿವೆ ಎನ್ನುವ ವಿಚಾರವನ್ನು ಸ್ಪಷ್ಟವಾಗಿ ತಿಳಿಸುತ್ತದೆ. ಮಹಾಭಾರತದಲ್ಲಿ ಬರುವ ಭಗವದ್ಗೀತೆಯಲ್ಲಿ ಅನೇಕ ಆಗಮ ಶ್ಲೋಕಗಳಿವೆ ಎಂಬುದನ್ನು ಸಿದ್ಧರಾಮಪ್ಪ ಪಾವಟೆ ಅವರು ಸಾಧಾರವಾಗಿ ಪ್ರತಿಪಾದಿಸಿದ್ದಾರೆ. ಈ ವಿಷಯದಲ್ಲಿ ಆಸಕ್ತಿವುಳ್ಳವರು ಆಸ್ಥಾನ ವಿದ್ವಾನ್ ಎಂ.ಜಿ. ನಂಜುಂಡಾರಾಧ್ಯರು ಸಂಪಾದಿಸಿದ ಶಿವಾಗಮ ಸೌರಭದ ಅನುಬಂಧಗಳು (ಪುಟ ೫೪) ಇಲ್ಲೂ ನೋಡಬಹುದು.

ಕೆಲವು ಆಗಮಗಳು ಪ್ರಾಚೀನವಾಗಿವೆ; ಕೆಲವು ನೂತನವಾಗಿವೆ. ಆಗಮ ಪರಂಪರೆ ಪ್ರಾಚೀನವಾದರೂ ಕಾಲಕಾಲಕ್ಕೆ ಆಗಮಗಳು ಸೃಷ್ಟಿಯಾಗುತ್ತಾ ಬಂದಿವೆ. ಸ್ಮೃತಿಗಳ ಹೆಸರಿನಲ್ಲಿ ದೇವಲ ಸ್ಮೃತಿ, ಉಪನಿಷತ್ತುಗಳ ಹೆಸರಿನಲ್ಲಿ ಅಲ್ಲೋಪನಿಷತ್, ವಚನೋಪನಿಷತ್, ಪುರಂಧರೋಪನಿಷತ್‌ಗಳಂತೆ ಹಳೇ ಆಗಮದ ಹೆಸರು ಹಿಡಿದು ಹೊಸ ಆಗಮಗಳು ಸೃಷ್ಟಿಯಾಗಿವೆ, ಆಗುತ್ತಾ ಇವೆ. ಆದರೂ ಪ್ರಸಿದ್ಧವಾದ ಪ್ರಾಚೀನ ಆಗಮಗಳೂ ಇವೆ.

ಆಗಮಗಳ ಬಗ್ಗೆ ಇನ್ನೂ ಸಂಶೋಧನೆ ನಡೆಯಬೇಕಾಗಿದೆ. ವೇದ - ಉಪನಿಷತ್ - ಬ್ರಹ್ಮಸೂತ್ರ - ಪುರಾಣಗಳಿಗೆ ಭಾಷ್ಯ -ವ್ಯತ್ಯಾಸವಾಗುವಂತೆ ಭಾಷಾಶಾಸ್ತ್ರದ ಆಧಾರದ ಮೇಲೆ ಆಗಮಗಳ ಕಾಲವನ್ನು ಗುರುತಿಸಬಹುದಾಗಿದೆ.

ಆಗಮಗಳ ಇತಿಹಾಸ

ಆಗಮಗಳ ಕಾಲ ಕ್ರಿ.ಶ. ಒಂದನೆಯ ಶತಮಾನದಿಂದ ೧೩ನೆಯ ಶತಮಾನದವರೆಗೂ ಇದೆ ಎಂದು ವಿದ್ವಾಂಸರ ಅಭಿಪ್ರಾಯ. ೮ - ೯ ನೇ ಶತಮಾನದ ಕೆಲವು ಆಗಮಗಳ ಹಸ್ತಪ್ರತಿಗಳು ನೇಪಾಳದ ಗ್ರಂಥ ಭಂಡಾರದಲ್ಲೂ ಕ್ರಿ.ಶ.೮೫೯ರ ಪರಮೇಶ್ವರಾಗಮದ ಹಸ್ತಪ್ರತಿ ಕೇಂಬ್ರಿಜ್ ಲೈಬ್ರರಿಯಲ್ಲಿದೆ ಎಂದು ಅಭಿಪ್ರಾಯವಿದೆ (ಯುಗಯಾತ್ರೀ ಭಾರತೀಯ ಸಂಸ್ಕೃತಿ ಸಂಪುಟ : ೧, ಪುಟ ೧೬೩) ಶಿವಾಗಮಗಳ ಇತಿಹಾಸ ಪ್ರಾಚೀನವಾದುದು. ಕಾಮಿಕಾದಿ ವಾತುಲಾಂತದವರೆಗೆ ೨೮ ಶಿವಾಗಮಗಳು. ಇವುಗಳನ್ನು ದಿವ್ಯಾಗಮಗಳೆಂದು ಕರೆಯುತ್ತಾರೆ. ಶಾಸನಗಳಲ್ಲೂ ಇವುಗಳ ಉಲ್ಲೇಖವಿದೆ. ಕ್ರಿ.ಶ. ೫ನೇ ಶತಮಾನದ ಶಾಸನ ಕಂಚಿಯ ಕೈಲಾಸನಾಥನ ಗುಡಿಯಲ್ಲಿದೆ ಎಂದು ಡಾ. ರಾಧಾಕೃಷ್ಣರು ತಮ್ಮ 'ಇಂಡಿಯನ್ ಫಿಲಾಸಫಿ' (ಭಾಗ ೨)ರಲ್ಲಿ ತಿಳಿಸುತ್ತಾರೆ. ಆದರೆ ಎಲ್ಲ ಆಗಮಗಳೂ ಪೂರ್ಣರೂಪದಲ್ಲಿ ದೊರೆಯುವುದಿಲ್ಲ.

ಆಗಮಗಳ ಸ್ವರೂಪ

ಶಿವಾಗಮಗಳಲ್ಲಿ ಕ್ರಿಯಾಪಾದ, ಚರ್ಯಪಾದ, ಯೋಗಪಾದ, ಜ್ಞಾನಪಾದಗಳೆಂಬ ನಾಲ್ಕು ವಿಧ. ಕ್ರಿಯಾಪಾದದಲ್ಲಿ ದೇವಾಲಯ, ಮೂರ್ತಿ ಪ್ರತಿಷ್ಠಾಪನೆಯ ವಿಚಾರವಿದೆ. ಚರ್ಯಪಾದದಲ್ಲಿ ವಿಗ್ರಹ ಪೂಜಾಕ್ರಮವಿದೆ. ಯೋಗಪಾದದಲ್ಲಿ ಶಿವಮಂತ್ರ, ಧ್ಯಾನ, ಸಮಾಧಿ ಇತ್ಯಾದಿ ಭಾಗವಿದೆ. ಜ್ಞಾನಪಾದದಲ್ಲಿ ಶೈವ - ವೀರಶೈವ ತತ್ತ್ವ ಪ್ರತಿಪಾದನೆ ಇದೆ. ವೇದ ಭಗವಂತನ ಉಸಿರು. ಆಗಮ ಭಾಷೆ ಎಂದು ಭಾರತೀಯರ ನಂಬಿಕೆ. ಶಿವಾಗಮಗಳಲ್ಲಿ ಶೈವ, ವೀರಶೈವ ತತ್ತ್ವಗಳಲ್ಲದೆ, ಶಿಲ್ಪ, ಚಿತ್ರ, ಸಂಗೀತ, ಜ್ಯೋತಿಷ್ಯ, ಯಂತ್ರ, ಮಂತ್ರ, ಕೃಷಿ, ರತ್ನಪರೀಕ್ಷೆ, ಹಸ್ತಸಾಮುದ್ರಿಕಾ - ಹೀಗೆ ಎಲ್ಲ ಶಾಸ್ತ್ರಗಳೂ ಇವೆ. ಭಾರತೀಯ ಧರ್ಮ, ಸಾಹಿತ್ಯ, ಕಲೆ, ಸಂಸ್ಕೃತಿಗಳ ಜ್ಞಾನಕೋಶಗಳು ಆಗಮಗಳು.

ಶಿವಾಗಮಗಳ ಉತ್ತರ ಭಾಗದ ವೀರಶೈವ ತತ್ತ್ವಗಳನ್ನೊಳಗೊಂಡ ಆಗಮ ವಿಭಾಗಕ್ಕೆ 'ಸಿದ್ಧಾಂತಾಗಮ' ಎಂದು ಕರೆಯುತ್ತಾರೆ. ವೀರಶೈವ ಸಿದ್ಧಾಂತ ಗ್ರಂಥಗಳಲ್ಲಿ, 'ವೀರಶೈವಾಗಮ' ಎನ್ನುವ ಹೆಸರು ವಿಪುಲವಾಗಿ ಉಲ್ಲೇಖವಾಗಿದೆ. ನೀಲಕಂಠ ಶಿವಾಚಾರ್ಯರ ಕ್ರಿಯಾಸಾರದಲ್ಲಿ 'ವೀರಶೈವಾಗಮಾಖ್ಯಾತ' ಚನ್ನಬಸವ ಪುರಾಣದಲ್ಲಿ 'ವೀರಶೈವಾಗಮ' ಮಗ್ಗೆಯ ಮಾಯಿದೇವರ ಶತಕತ್ರಯದಲ್ಲಿ - 'ವೀರ ಶಿವಾಗಮೋಕ್ತ' ಚಿಹ್ನಾಂಕಿತರಾದವರ್ಗೆ', ಚಾಮರಸನ ಪ್ರಭುಲಿಂಗಲೀಲೆಯಲ್ಲಿ ಅಕ್ಕಮಹಾದೇವಿಯ ತಂದೆ, ನಿರ್ಮಲನನ್ನು 'ವೀರಶೈವಾಗಮಿಕ' ಎಂದು ಕರೆದಿದ್ದಾರೆ. ಈ ಪದ ವಚನಗಳಲ್ಲೂ ಪ್ರಯೋಗವಾಗಿದೆ. ಹೀಗೆ 'ವೀರಶೈವಾಗಮ' ಪದ ಅನೇಕ ಶತಮಾನಗಳಿಂದ ವೀರಶೈವ ಗ್ರಂಥಗಳಲ್ಲಿ ಬಳಕೆಯಾಗಿದೆ. ವೀರಶೈವರಿಗೆ ಆಗಮಗಳು ಪ್ರಮಾಣ ಗ್ರಂಥಗಳು ಹಾಗೂ ವೀರಶೈವ ತತ್ತ್ವಗಳಿಗೆ ಮೂಲ ಆಕರಗಳು. ವೀರಶೈವ ಸಂಸ್ಕೃತ ಸಿದ್ಧಾಂತ ಗ್ರಂಥಗಳಲ್ಲಿ, ಕನ್ನಡ ಗ್ರಂಥಗಳಲ್ಲಿ, ವಚನ ಸಾಹಿತ್ಯದಲ್ಲಿ, ಕಾವ್ಯ, ಪುರಾಣ, ಶತಕಗಳಲ್ಲಿ, ಆಂಧ್ರ, ತಮಿಳು, ಮಹಾರಾಷ್ಟ್ರದ ವೀರಶೈವ ಗ್ರಂಥಗಳಲ್ಲಿ ಆಗಮಗಳ ಉಲ್ಲೇಖವನ್ನು ಕಾಣುತ್ತೇವೆ. ತತ್ತ್ವ ಪ್ರತಿಪಾದನೆಗೆ, ಆಗಮಗಳ ವಾಕ್ಯಗಳನ್ನೇ ಉದ್ಧರಿಸಿ ಪ್ರತಿಪಾದಿಸುವುದು ವೈಶಿಷ್ಟ್ಯವಾಗಿದೆ.

ವೀರಶೈವಕ್ಕೆ ಆಗಮಗಳ ನೆಲೆ - ಹಿನ್ನೆಲೆ

ಆಗಮಗಳಲ್ಲಿ ವೀರಶೈವರನ್ನು ಸಾಮಾನ್ಯ, ವಿಶೇಷ, ನಿರಾಭಾರಿ ಎಂದು ವಿಂಗಡಿಸುತ್ತಾರೆ. ಇದು ತಾತ್ವಿಕವಾದ ಹಂತವನ್ನು ಸಾಧಕನಲ್ಲಿ ಗುರುತಿಸುವ ವಿಧಾನವಾಗಿದೆ.

ವೀರಶೈವನಾರು? ಎನ್ನುವ ಪ್ರಶ್ನೆಗೆ ಪರಮೇಶ್ವರಾಗಮ ಉತ್ತರಿಸುತ್ತದೆ :

ವೀರತ್ವಂ ನಾಮ ದೇವೇಶಿ ಯಥಾ ವೀರೋರಣೀ ಭವಃ
ತಥಾ ಮತೇಚ ಸದ್ಭಕ್ತ್ಯಾ ವೀರೋ ವೈರಾಗ್ಯತೋ ಭವೇತ್॥

ಯುದ್ಧ ಭೂಮಿಯಲ್ಲಿ ನಿಷ್ಠೆಯಿಂದ ಹೋರಾಡುವ ವೀರನಂತೆ, ವೀರಶೈವ ತತ್ತ್ವದಲ್ಲಿ ನಿಷ್ಠೆ , ತ್ಯಾಗ, ಗುಣ ಉಳ್ಳವನೇ ವೀರಶೈವನೆಂದು ಅರ್ಥಪೂರ್ಣವಾಗಿ ತಿಳಿಸುತ್ತಾರೆ.

ವೀರಶೈವ ಮತ ತತ್ತ್ವಗಳಿಗೆ ಆಗಮಗಳು ಆಧಾರವೆಂದು ಆಚಾರ್ಯರು, ದಾರ್ಶನಿಕರು, ಭಾಷ್ಯಕಾರರು, ವಚನಕಾರರು ಸ್ಪಷ್ಟವಾಗಿ ತಿಳಿಸುತ್ತಾರೆ. ಉದಾಹರಣೆಗೆ ಕೆಲವನ್ನು ಇಲ್ಲಿ ಅವಲೋಕಿಸಬಹುದು :

೧. ವೇದ ಶಾಸ್ತ್ರ ಪುರಾಣೇಷು । ಕಾಮಿಕಾದ್ಯಾಗಮೇಷುಚ ।
ಲಿಂಗಧಾರಣ ಮಾಖ್ಯಾತಂ । ವೀರಶೈವಸ್ಯ ನಿಶ್ಚಯಾತ್ ॥
(ಶಿವಯೋಗಿ ಶಿವಾಚಾರ್ಯರು ಸಿದ್ಧಾಂತ ಶಿಖಾಮಣಿಯಲ್ಲಿ)

೨. ಸಿದ್ಧಾಂತಾಗಮ ಶೃತಿ ಸ್ಮೃತಿ । ಪುರಾಣೇಷು ವೈದಿಕಾನಾಂ ।
ವರಾನನೇ ಲಿಂಗಧಾರಣಮಾಖ್ಯಾತಂ । ಸರ್ವಸಿದ್ಧಿ ಪ್ರದಾಯಕಂ ॥
(ಶ್ರೀಪತಿ ಪಂಡಿತ ; ಶ್ರೀ ಕರಭಾಷ್ಯೆ)

೩. ಸಕಲ ನಿಗಮಾಗಮ ಸಾರಂ । ಷಟ್‌ಸ್ಥಲಂ ಜ್ಞಾನಮೇತತ್ ಭವ।
ವಿಪಿನ ಕುಠಾರಂ । ಸರ್ವತಂತ್ರಂ। ಪ್ರಸಿದ್ಧಂ ॥
(ಶಂಕರ ಸಂಹಿತೆ ಷಟ್‌ಸ್ಥಲಾಧ್ಯಾಯ ಉತ್ತರ ಶಂಕರ ಸಂಹಿತಾ ಅಧ್ಯಾಯ ೮೪)

೪. ಶಿವಾಗಮೋಕ್ತಾಶ್ರಮನಿಷ್ಠ ಮಾನವಃ ।
ತ್ರಿಪುಂಡ್ರ ಲಿಂಗಂತು ಸದ್ವೆವಧಾರಯೇತ್ ॥
(ಸೂತ ಸಂಹಿತೆ, ಅಧ್ಯಾಯ ೪; ೩೧ ನೇ ಶ್ಲೋಕ)

೫. ವೀರತಂತ್ರೋದಿತಾಚಾರ ಸಂಪನ್ನ ಸರ್ವೋಪನಿಷತ್ಪ್ರತಿಪಾದ್ಯ ।
ಜ್ಞಾನಗೋಚರ ಕೈವಲ್ಯಸಾರಮಾರಭ್ಯತೇ ॥
(ಮರಿತೋಂಟದಾರ್ಯರು ಕೈವಲ್ಯಸಾರದಲ್ಲಿ)

೬. ಸರ್ವೇಷಾಂ ಆಗಮಾನಾಂ ಸಮುದಾಯೈಃ ಸಂಗೃಹೀತ್ಯೆ ಃ ॥
(ನೀಲಕಂಠ ಶಿವಾಚಾರ್ಯರು ಕ್ರಿಯಾಸಾರದಲ್ಲಿ)

೭. ನುತಿಯ ಚಮತ್ಕೃತಿಯಲ್ಲಿದು
ಶೃತಿ ಶಾಸ್ತ್ರಾಗಮ ಪುರಾಣ ರಹಸ್ಯಾದಿಗಳೋಳ್
ಗತಿ ಯಶ ಯುಕ್ತಾರ್ಥಂ ಸಂ ।
ಮ್ಮತವನೆ ಪೇಳ್ವೆನಿದನು ಚಿತ್ತೈಸಿ ಭಕ್ತಜನಂ ॥
(ಕೆರೆಯ ಪದ್ಮರಸ ದೀಕ್ಷಾಬೋಧೆಯಲ್ಲಿ)

೮. ಶಿವಾಗಮ ರಹಸ್ಯಾರ್ಥಾನ್ । ಸಿದ್ಧ ಸಿದ್ಧಾಂತ ಪದ್ಧತಿಂ
ಸಂಕೇಪತಃ ಕೃತಾಲೋಡ್ಯ । ಶಿವಯೋಗ ಪ್ರದೀಪಿಕಾ ॥
(ಚನ್ನಸದಾಶಿವಯೋಗೀ ಶಿವಯೋಗ ಪ್ರದೀಪಿಕೆಯಲ್ಲಿ)

೯. ಮಮಾತಯಾ ನಿರಾಸಸ್ಯ। ಲಿಂಗನಿಷ್ಠಾ ವಿಧೇಸ್ತಥಾ ।
ಶಾಸನಾಚ್ಛಾಸ್ತ್ರಮಿತ್ಯುಕ್ತೋ । ವೀರಶೈವ ಮಹಾಗಮಾಃ ॥
(ಜಕ್ಕಣಾರ್ಯ ಏಕೋತ್ತರ ಶತಸ್ಥಲದಲ್ಲಿ)

೧೦. ಶಿವಾಗಮೈಃ ಶಿವಾದ್ವೈತರಹಸ್ಯಃ ಪಾರಮಾರ್ಥಿಕೈಃ ।
ಕಥ್ಯತ ಶಿವಸಿದ್ಧಾಂತ । ತಂತ್ರಂ ಷಟಸ್ಥಲ ನಿರ್ಣಯಂ ॥
(ಮಗ್ಗೆಯ ಮಾಯಿದೇವರು ಅನುಭವ ಸೂತ್ರದಲ್ಲಿ)

೧೧. ವೇದ ವೇದಾಂತಾಗಮ ಪುರಾಣಂಗಳಲ್ಲಿ ಸಾರತರಮೆನಿಸಿದತಿರಹಸ್ಯಾರ್ಥ
ಪ್ರತಿಪಾದಕಮಾದ ವೀರಶೈವ ಮಾರ್ಗದಿಂ ಲಿಂಗಾಂಗ ಸಂಗಿಗಳಾದ ಷಟ್
ಸ್ಥಲ ಜ್ಞಾನಿಗಳಿಗೆ ಅವಿರಳ ಶಿವೈಕ್ಯಮಕ್ಕು.
(ನಿಜಗುಣ ಶಿವಯೋಗಿಗಳು ವಿವೇಕ ಚಿಂತಾಮಣಿಯಲ್ಲಿ , ಪ್ರಕರಣ ೯)

೧೨. ವೀರಶೈವ ಸಿದ್ಧಾಂತ ಗ್ರಂಥ ಸಿದ್ಧಾಂತ ಶಿಖಾಮಣಿಯು ಶಿವಾಗಮಗಳ ಸಾರವಾಗಿದೆ.

ಇನ್ನು ವಚನಗಳಲ್ಲಿ ಉದ್ಧೃತ ಶಿವಾಗಮ ವಾಕ್ಯಗಳನ್ನು ಅವಲೋಕಿಸಬಹುದು.

೧. ಶ್ರೀ ಗುರುವಾದಾತನು ಸಕಲಾಗಮಂಗಳ ಹೃದಯವನರಿದು ಉಪದೇಶವ ಮಾಡುವ ಪರಿಯಂತೆಂದಡೆ
ವೀರತಂತ್ರೇ (ವೀರಾಗಮ) ಬ್ರಾಹ್ಮಣಂ ತ್ರೀಣಿವರ್ಷಾಣಿ । ಕ್ಷತ್ರಿಯಂ ವರ್ಷಷಟ್ಕುಚ ।
ವೈಶ್ಯಂತು ನವವರ್ಷಾಣಿ। ಶೂದ್ರಂ ದ್ವಾದಶವರ್ಷಕೆ । ಎಂಬುದಾಗಿ ಕೂಡಲ ಚನ್ನಸಂಗಮದೇವಾ ॥
(ಚನ್ನಬಸವಣ್ಣ)

೨. ವಾತುಲೇ: 'ಏವಂ ನಿರ್ವಹತೇಯಸ್ತು ಯಾವಜ್ಜೀವ ಪ್ರತಿಜ್ಞಯಾ'
(ಹಾವಿನಹಾಳ ಕಲ್ಲಯ್ಯ)

೩. ವೀರಾಗಮಸಾಕ್ಷಿಃ 'ಕಿಂ ಮಾಂಸಂ ಕಾ ಶಿವೇಭಕ್ತಿಃ ಕಿಂ ಮದ್ಯಂ ಕಶ್ಶಿವಾರ್ಚನ ಃ
(ಬಸವಣ್ಣ)

೪. ವೀರತಂತ್ರೇಃ 'ಮೃಗಯಾ ಮದ್ಯವೇಶ್ಯಾ ಅನ್ಯದೈವಸ್ಯ ಪೂಜಕಃ'
(ಮಡಿವಾಳ ಮಾಚಿದೇವ)

೫. ಆಗಮಸಾಕ್ಷಿ : ಸರ್ವಾಚಾರ ಪರಿಭ್ರಷ್ಟೋ.....
- ವೇದಶಾಸ್ತ್ರ ಪುರಾಣಾಗಮಂಗಳು ಹೇಳುತ್ತವೆ (ಉರಿಲಿಂಗ ಪೆದ್ದಿ)

೬. ಓಂಕಾರವೆಂಬ ವೃಕ್ಷದಲ್ಲಿ ಆಗಮಗಳೆಂಬ ಕಾಯಿ ಬಲಿತು (ಉರಿಲಿಂಗಪೆದ್ದಿ)

(ವಚನಶಾಸ್ತ್ರಸಾರ, ಭಾಗ ೧, ಫ.ಗು. ಹಳಕಟ್ಟಿ ಸಂಪಾದಿತ ೧೯೨೩, ವಿಜಾಪುರ ಪ್ರಕಟಣೆ)

ಹೀಗೆ ಮೇಲ್ಕಂಡ ವೀರಶೈವ ಧಾರ್ಮಿಕ ಸಾಹಿತ್ಯದಲ್ಲಿ ಆಗಮಗಳ ಆಧಾರದ ಉಲ್ಲೇಖಗಳನ್ನು ಗಮನಿಸಿದರೆ, ವೀರಶೈವಕ್ಕೆ ಆಗಮಗಳು ಆಧಾರ ಗ್ರಂಥಗಳು ಎಂದು ಸ್ಪಷ್ಟವಾಗುತ್ತದೆ.

ಆಗಮುಗಳ ರಚನಾ ತಂತ್ರ

ಆಗಮಕಾರರು ಪ್ರಾಚೀನ ಪದ್ಧತಿಯನ್ನು ಅನುಸರಿಸಿ ಸಂವಾದಾತ್ಮಕ ತಂತ್ರದಲ್ಲಿ ಆಗಮಗಳನ್ನು ರಚಿಸಿದ್ದಾರೆ. ಈ ತಂತ್ರ ಓದುಗರಲ್ಲಿ ಕುತೂಹಲವನ್ನುಂಟುಮಾಡುತ್ತದೆ. ವೇದ, ಉಪನಿಷತ್ತು, ಭಗವದ್ಗೀತೆ, ಭಾಗವತ, ಸಿದ್ಧಾಂತ ಶಿಖಾಮಣಿ, ಯೋಗವಾಶಿಷ್ಠ ಮೊದಲಾದ ಪ್ರಸಿದ್ಧ ಗ್ರಂಥಗಳಲ್ಲಿ ಈ ಸಂವಾದಾತ್ಮಕ ತಂತ್ರದ ಬಳಕೆಯನ್ನು ಕಾಣಬಹುದಾಗಿದೆ. ಆಗಮಗಳಲ್ಲಿ ಶಿವನನ್ನೇ ಉಪದೇಶಕನನ್ನಾಗಿ ಮಾಡಿ, ಪಾರ್ವತಿ ಸ್ಕಂಧರು ಶ್ರೋತೃಗಳಾಗಿದ್ದಾರೆ. ಆಗಮಗಳು ಪ್ರಶ್ನೋತ್ತರ ರೂಪದಲ್ಲಿವೆ. ಪಾರ್ವತಿ - ಸ್ಕಂದರು ಇಲ್ಲಿ ಸಾಂಕೇತಿಕರಾಗುತ್ತಾರೆ. ಸಾಧಕರ, ಸರ್ವಲೋಕ ಹಿತಾರ್ಥವೇ ಇವುಗಳ ಗುರಿಯಾಗಿದೆ. ಆಗಮ ಸಾಹಿತ್ಯ ಸಮೂಹ ಸೃಷ್ಟಿ. ಆಗಮಕಾರರು ಅನಾಮಧೇಯರು. ಹೆಸರನ್ನು ಬಯಸದ ಕೀರ್ತಿಯನ್ನು ಆಶಿಸದ ನಿರ್ಲಿಪ್ತರು. ಜಗತ್ತಿಗೆ ಜ್ಞಾನಭಂಡಾರವನ್ನೇ ನೀಡಿದ ಅಜ್ಞಾತ ಶಿವಾಚಾರ್ಯರು. ದಾರ್ಶನಿಕರು. ಭಾರತದ ಎಲ್ಲ ಮತಧರ್ಮದವರಿಗೂ ಆಗಮಗಳಿವೆ. ಆದರೆ ಅವುಗಳನ್ನು ರಚಿಸಿದವರ ಹೆಸರುಗಳು ಮಾತ್ರ ಅಜ್ಞಾತವಾಗಿವೆ. ಭಾರತದಲ್ಲಿ ಪ್ರಮುಖವಾದ ೧೮ ಪುರಾಣಗಳನ್ನು ಬರೆದ ವಿದ್ವಾಂಸರು, ಎಲ್ಲವನ್ನು ವ್ಯಾಸರ ತಲೆಗೆ ಕಟ್ಟಿಹಾಕಿದರು. ತಮ್ಮ ಹೆಸರುಗಳನ್ನು ಎಲ್ಲೂ ಉಲ್ಲೇಖಿಸಲಿಲ್ಲ. ಆದರೆ ಆಗಮಗಳಲ್ಲಿ ಯಾರ ತಲೆಗೂ ಕಟ್ಟುವ ಕೆಲಸ ನಡೆಯಲಿಲ್ಲ. ಇದು 'ಶಿವನ ಉಪದೇಶ' ಎಂದು ಭಾವಿಸಿ ಸುಮ್ಮನಾದರು. ಇದು ಅವರ ದೈವಶ್ರದ್ಧೆಯ ಸಂಕೇತ ಹಾಗೂ ಅರ್ಪಿತ ಮನೋಭಾವಕ್ಕೆ ಸಾಕ್ಷಿ ಎಂದು ಹೇಳಬಹುದು. ಆಗಮಗಳಲ್ಲಿ ಬರುವ ಶಿವ ಪಾರ್ವತಿಗೆ, ಕುಮಾರನಿಗೆ ಬೋಧಿಸಿದ ಎನ್ನುವ ವಿಚಾರವನ್ನು ನಂಬಬೇಕಾಗಿಲ್ಲ. ಅದೊಂದು ತಾತ್ವಿಕ ಸಂಕೇತ ಎಂದು ಭಾವಿಸಬೇಕು. ಆಗಮಗಳಲ್ಲಿ ಇಂಥ ಅನೇಕ ಸಂಕೇತಗಳಿವೆ, ಅವುಗಳಿಗೆ ವಿಶಿಷ್ಟವಾದ ಅರ್ಥಗಳಿವೆ.

ಆಗಮಗಳಲ್ಲಿ ವೀರಶೈವತತ್ತ್ವ

ಇನ್ನು ಆಗಮಗಳಲ್ಲಿ ವೀರಶೈವತತ್ತ್ವದ ಸ್ವರೂಪವನ್ನು ಕುರಿತು ವಿವೇಚಿಸಬೇಕಾಗಿದೆ : ಆಗಮಕಾರರು ಭಾರತೀಯ ಶೈವ ಧರ್ಮದಲ್ಲಿ ಅನಾದಿ - ಆದಿ - ಅನು - ಮಹಾಯೋಗ - ಜ್ಞಾನ - ವೀರಶೈವವೆಂದು ಏಳು ಪ್ರಭೇದಗಳನ್ನು ಹೇಳುತ್ತಾರೆ. ಇವುಗಳಲ್ಲಿ ಸರಳವಾದ ರಚನೆಯ ವೀರಶೈವ ಸರ್ವೋತ್ಕೃಷ್ಟವೆನ್ನುವ ಗೌರವಪೂರ್ಣ ಉಲ್ಲೇಖವಿದೆ. 'ಸರ್ವೇಷಾಮಪಿ ಶೈವಾನಾಂ ವೀರಶೈವಂ ಮಹೋತ್ತಮಂ, ಸುಲಭಾ ದೇವಪೂಜಾ, ಸುಲಭಂ ಚ ಕ್ರಿಯಾವಹಂ' ಎಂದು ಹೇಳಿ ಮತ್ತೆ 'ಏಕ ಏವಾಯ ಮೇತಸ್ಮಿನ್ ಸರ್ವಸ್ಮಿನ್ ಜಗತೀತಯಃ' ಜಗತ್ತಿನಲ್ಲಿ ಇದೊಂದೇ ಎಂದು ಶಿಫಾರಸು ಮಾಡುತ್ತದೆ. ಹೀಗೆ ವೀರಶೈವದ ಲಕ್ಷಣವನ್ನು ಸುಪ್ರಭೇದಾಗಮ ಅರ್ಥಪೂರ್ಣವಾಗಿ ವ್ಯಾಖ್ಯಾನಿಸುತ್ತದೆ :

> ಯೋ ಹಸ್ತಪೀಠೇ ನಿಜಮಿಷ್ಟಲಿಂಗಂ ।
> ವಿನ್ಯಸ್ಯ ತಲ್ಲೀನ ಮನಃ ಪ್ರಚಾರಃ
> ಬಾಹ್ಯಕ್ರಿಯಾ ಸಂಕುಲ ನಿಸ್ಪೃಹಾತ್ಮಾ
> ಸಂಪೂಜ್ಯಮತ್ಯಂಗ ಸವೀರಶೈವ ಃ

ಯಾವನು ತನ್ನ ಹಸ್ತಪೀಠದಲ್ಲಿ ಇಷ್ಟಲಿಂಗವನ್ನಿಟ್ಟು, ಬಾಹ್ಯ ವ್ಯವಹಾರಗಳಿಂದ ವಿಮುಖನಾಗಿ ಇಷ್ಟಲಿಂಗದಲ್ಲಿ ನಿಷ್ಠೆಯಿಂದ ಮನಸ್ಸನ್ನು ಲೀನಗೊಳಿಸಿ, ಪೂಜಿಸುವ ಅಂಗನೇ (ಸಾಧಕ) ವೀರಶೈವ ಎಂದು ಅನ್ವರ್ಥಕವಾಗಿ ವಿವರಿಸುತ್ತದೆ. ವೇದ - ಉಪನಿಷತ್ತುಗಳಿಂದ ಲಭಿಸುವ ಜ್ಞಾನಕ್ಕೆ 'ವಿದ್ಯೆ' ಎಂದು ಹೆಸರು. ಅಂಥ ವಿದ್ಯೆ (ಅಧ್ಯಾತ್ಮ) ಯಲ್ಲಿ ರಮಿಸುವವನು ವೀರಶೈವ ಎನ್ನುವ ನಿರ್ವಚನವೂ ಇದೆ.

ಶಿವಾಗಮಗಳಲ್ಲಿ ಇಷ್ಟಲಿಂಗದ ಪರಿಕಲ್ಪನೆ ಅತ್ಯಂತ ವಿಶಿಷ್ಟವಾಗಿದೆ.

ಪೀಠಿಕಾ ಪೃಥಿವೀಲಿಂಗಮಾಕಾಶಃ ಸೃಷ್ಟಿಕಾರಣಂ
ನಿಸ್ಸಂದೇಹಮಿದಂ ಜ್ಞಾನಮಂಡಜಂ ಲಿಂಗಮೀರಿತಂ (ಸೂಕ್ಷ್ಮಾಗಮ)

ಆಕಾಶವೇ ಲಿಂಗ, ಪೃಥ್ವಿಯೇ ಪೀಠಿಕೆ, ಸರ್ವಭೂತಗಳಿಗೆ, ಚರಾಚರಗಳಿಗೆ, ನಿಲಯ ಮಾತ್ರ ಲಯಕಾರಣವಾಗಿ ಲಿಂಗವೆನಿಸಿದೆ. ಲಿಂಗವನ್ನು ವಿಶ್ವರೂಪ ಪ್ರತಿಮಾ ವಿಧಾನದಲ್ಲಿ ಬಣ್ಣಿಸುವುದು ಎಂಥ ಭವ್ಯ ಕಲ್ಪನೆ ಇದು.

ಅದೇ ಆಗಮ ಮತ್ತೊಂದು ರೀತಿಯಲ್ಲಿ ಲಿಂಗವನ್ನು ನಿರ್ವಚಿಸುತ್ತದೆ :

ಲ ಕಾರೋ ಲಯ ಬುದ್ಧಿಸ್ಸ್ಥೋ । ಬಿಂದುನಾ ಸ್ಥಿತಿರುಚ್ಯತೆ ।
ಹಕಾರಾತ್ ಸೃಷ್ಟಿರಿತ್ಯಕ್ತ್ವಾ। ಲಿಂಗಂ ಸೃಷ್ಟ್ಯಾದಿಕಾರಣಂ ॥

ಲೀನಂ ಪ್ರಪಂಚರೂಪಂ । ಹಿಸರ್ವಮೇತಚ್ಚರಾಚರಂ ।
ಸರ್ಗಾದೌಗಮ್ಯತೆ ಯಸ್ಮಾಂತ್ । ತಲ್ಲಿಂಗಮುದೀರಿತಂ ॥ (ಸೂಕ್ಷ್ಮಾಗಮ)

ಲಿಂಗ ಶಬ್ದದ 'ಲ' ಕಾರ, ಲಯಕ್ಕೂ, ೦ ಸೊನ್ನೆ ಸ್ಥಿತಿಗೂ, 'ಗ'ಕಾರ ಸೃಷ್ಟಿಗೂ ಸಂಕೇತವಾಗಿ ಲಿಂಗ ಸೃಷ್ಟಿ - ಸ್ಥಿತಿ - ಲಯಕ್ಕೆ ಕಾರಣವಾಗಿದೆ. ಮತ್ತು ಪ್ರಪಂಚದ ಉಗಮಕ್ಕೂ, ಪ್ರಪಂಚವನ್ನು ತನ್ನಲ್ಲಿ ವಿಲೀನಗೊಳಿಸಿಕೊಳ್ಳುವುದಕ್ಕೂ ಕಾರಣವಾದದ್ದೇ 'ಲಿಂಗ' ವೆಂದು ನಿರ್ವಚನವಿದೆ. ನಿಜಕ್ಕೂ ಆಗಮಗಳಲ್ಲಿ ಲಿಂಗದ ಪರಿಕಲ್ಪನೆ ವಿರಾಟ್ ಸ್ವರೂಪದ್ದಾಗಿದೆ.

ಆಗಮಕಾರರು ಲಿಂಗವನ್ನು ಪರಮಾತ್ಮನ ಏಕಮೇವ ಪ್ರತೀಕವೆನ್ನುತ್ತಾರೆ. ಲಿಂಗವು ಸಾಕ್ಷಾತ್ ಪರಬ್ರಹ್ಮ, ಸಾಕ್ಷಾತ್ ಶಿವ, ಪೂಜೆಗಾಗಿ, ಲಿಂಗರೂಪನಾಗಿರುವನು. ನಾದರೂಪ ಶಿವನು ಮತ್ತು ಬಿಂದುರೂಪ ಶಕ್ತಿ ಕೂಡಿ, ಶಿವಲಿಂಗವಾಗಿದೆ. ಶಿವ - ಶಕ್ತಿ ಉಭಯಾತ್ಮಕವಾಗಿದೆ. ಅದು ನಿರಾಕಾರ, ನಿರ್ಗುಣ, ನಿರಾಲಂಬ, ಕೇವಲ ಸಚ್ಚಿದಾನಂದ ಲಕ್ಷಣವಾಗಿದೆ. ಲಿಂಗಗಳಲ್ಲಿ ಮುಖ್ಯವಾಗಿ ಮೂರು ವಿಧ : ಇಷ್ಟ, ಪ್ರಾಣ, ಭಾವ ಎಂದು.

ಗುರುವು ಬಾಹ್ಯಪೂಜೆಗೆ ಕೊಟ್ಟ ಲಿಂಗ - ಇಷ್ಟಲಿಂಗ.
ಭಾವದಿಂದ ಪ್ರಾಣದಲ್ಲಿ ಪ್ರತಿಷ್ಠಾಪಿಸಿದ ಲಿಂಗ - ಪ್ರಾಣಲಿಂಗ
ಧ್ಯಾನಯೋಗದಿಂದ ಮಾಡುವ ಪೂಜೆ - ಭಾವಲಿಂಗ (ಸೂ.ಪ. ೬, ಶ್ಲೋ. ೫೪)

ಇಷ್ಟಲಿಂಗವನ್ನು ಧರಿಸುವ ಸ್ಥಾನವನ್ನು ಸೂಕ್ಷ್ಮಾಗಮ ನಿರ್ದೇಶಿಸುತ್ತದೆ :

ಉತ್ತಮಾಂಗ, ಕೊರಳು, ಕಕ್ಷ, ವಕ್ಷಸ್ಥಲಗಳಲ್ಲಿ ಲಿಂಗವನ್ನು ಧರಿಸಬೇಕು.
ಮತ್ತು ನನ್ನ ಲಿಂಗವನ್ನೇ ಧರಿಸುವುದರಿಂದ, ಭಕ್ತನು ನಾನೇ ಆಗುವೆನೆಂಬಲ್ಲಿ
ಸಂಶಯವಿಲ್ಲ ಎನ್ನುವ ಭರವಸೆಯನ್ನು ನೀಡುತ್ತದೆ. ಜೀವ ಹೋದರೂ
ಇಷ್ಟಲಿಂಗವನ್ನು ಬಿಡಕೂಡದು. ಅದರ ಪೂಜೆ ಬಿಡಕೂಡದು. ಅಷ್ಟೇ ಅಲ್ಲ
ಲಿಂಗವು ಕಳೆದುಹೋದರೆ, ಅದು ಸಿಕ್ಕದಿದ್ದರೆ, ಒಂದು ವೇಳೆ - ಭಿನ್ನವಾದರೆ,
ಪ್ರಾಣತ್ಯಾಗ ಮಾಡಬೇಕೆಂದು ಹಲವು ಕಡೆ ಉಲ್ಲೇಖವಿದೆ.

(ಪಾ.ಪ೨, ಶ್ಲೋ ೧೦೩; ಸೂ.ಪ. ೭, ಶ್ಲೋ ೬೨; ಪಾ.ಪ. ೧೬, ಶ್ಲೋ ೬೨)

ಇಷ್ಟಲಿಂಗ ಧಾರಣೆಯ ಅವಶ್ಯಕತೆಯನ್ನು ಕುರಿತು ಸಂಪ್ರಭೇದಾಗಮ ಮಾರ್ಮಿಕವಾಗಿ ತಿಳಿಸುತ್ತದೆ. ಮತ್ತೆ ಸೂಕ್ತವಾದ ದೃಷ್ಟಾಂತದೊಂದಿಗೆ ವಿಷಯವನ್ನು ಸಮರ್ಥಿಸುತ್ತದೆ.

ಗವಾಂಸರ್ಪಿಃ ಶರೀರಸ್ಥಂ ನಕರೋತ್ಯಾತ್ಮ ಮೋಷಣಂ
ನಿಃಸೃತಂ ಕರ್ಮರಚಿತಂ ಪುನಸ್ರಸಾಂತು ಭೇಷಜಂ ॥
ಏವಮಂತಃ ಶರೀರಸ್ಥಃ ಸರ್ಪಿವತ್ಪರಮೇಶ್ವರಃ
ವಿನಾ ಚೋಪಾಸನಂ ದೇವೋ ನಕರೋತಿ ಹಿತಂ ನೃಣಂ (ಸು.ಪ. ೭, ಶ್ಲೋ ೫೭-೫೮)

ಅಂದರೆ ಒಂದು ಹಸುವಿನ ಮೈಮೇಲೆ ಹುಣ್ಣಾಗಿದೆ. ಆಗ ಅಲ್ಲಿಗೆ ಒಬ್ಬ ಪಶುವೈದ್ಯ ಬಂದು ಔಷಧ ಕೊಟ್ಟು ಅದನ್ನು ಹಸುವಿನ ತುಪ್ಪದಲ್ಲಿ ಬೆರೆಸಿ ಹುಣ್ಣಾದ ಸ್ಥಳಕ್ಕೆ ಲೇಪಿಸಲು ಹೇಳುತ್ತಾನೆ. ಅದಕ್ಕೆ ಹಸುವಿನ ಯಜಮಾನ ಹೇಳುತ್ತಾನೆ : 'ಅದು ಕರೆವ ಹಸು' ಅದರ ಕೆಚ್ಚಲಲ್ಲಿ ಹಾಲಿದೆ. ಆ ಹಾಲಿನಲ್ಲಿ ತುಪ್ಪವಿದ್ದೇ ಇದೆ. ಆದ್ದರಿಂದ ಔಷಧವನ್ನು ಮಾತ್ರ ಹುಣ್ಣಿಗೆ ಹಚ್ಚಿದರೆ ಸಾಕು' ಎನ್ನುತ್ತಾನೆ. ಹೀಗೆ ಅಂದರೆ ಹುಣ್ಣು ವಾಸಿಯಾಗುತ್ತದೆಯೇ? ಇಲ್ಲ. ಅದಕ್ಕಾಗಿ ಹಸುವಿನ ಹಾಲು ಕರೆದು, ಕಾಯಿಸಿ, ಹೆಪ್ಪು ಹಾಕಿ, ಮೊಸರು ಕಡೆದು, ಬೆಣ್ಣೆ ತೆಗೆದು, ಅದನ್ನು ಕಾಯಿಸಿ ತುಪ್ಪ ಮಾಡಿ ಅದನ್ನು ಔಷಧಕ್ಕೆ ಬೆರೆಸಿ ಹುಣ್ಣಿಗೆ ಹಚ್ಚಿದಾಗಲೇ ಅದು ವಾಸಿಯಾಗುತ್ತದೆ. ಅದರಂತೆ ಮಾನವನ ಶರೀರದಲ್ಲಿ ಶಿವಕಲೆ ಇರುವುದು ನಿಜ. ಮಾನವನಿಗೆ ಬಂದಿರುವ ಹುಟ್ಟು - ಸಾವು ಎಂಬ 'ಭವರೋಗ' ವಾಸಿಯಾಗಬೇಕಾದರೆ 'ಸದ್ಗುರು' ಎಂಬ ಭವರೋಗ ವೈದ್ಯನು ಇಷ್ಟಲಿಂಗವೆಂಬ ಔಷಧಕ್ಕೆ ಅವನಲ್ಲಿಯೇ ಇರುವ ಶಿವಕಲೆಯನ್ನು ಆಕರ್ಷಿಸಿ ಇಷ್ಟಲಿಂಗದಲ್ಲಿ ಸ್ಥಾಪಿಸಿ, ಅದನ್ನು ಶಿಷ್ಯನಿಗೆ ಧರಿಸಿ, ವಿಧ್ಯುಕ್ತವಾಗಿ ಭಕ್ತಿಯಿಂದ ಆರಾಧಿಸಲು ಉಪದೇಶ ಮಾಡುತ್ತಾನೆ. ಗುರುವಿನ ಆದೇಶದಂತೆ ಶಿಷ್ಯನು ಲಿಂಗವನ್ನು ಪೂಜಿಸುತ್ತ ಅನುಸಂಧಾನ ಮಾಡುವುದರಿಂದ, ಸಾಧಕನು (ಶಿವಯೋಗಿ) ಭವರೋಗದಿಂದ ಮುಕ್ತನಾಗುತ್ತಾನೆ. ಇದು ಇಷ್ಟ ಲಿಂಗ ಧಾರಣದ ಅವಶ್ಯಕತೆ ಎಂದು ಆಗಮಕಾರರ ಅಭಿಪ್ರಾಯವಾಗಿದೆ.

ಲಿಂಗಪೂಜೆಯನ್ನು ಹೇಗೆ ಮಾಡಬೇಕೆಂದು ಸೂಕ್ಷ್ಮಾಗಮ ಸೂಚಿಸುತ್ತದೆ :

ಕರಸ್ಥಲಗತಂ ಲಿಂಗಂ ವಾಮತಃ ಕೃತ ಗೋಮುಖಂ
ಕನಿಷ್ಠಿ ಕಾನಾಮಿಕಾಗ್ರಾಭ್ಯಾಂ ಶಿವಲಿಂಗ ಚ ಗೋಮುಖಂ
ಅಂಗುಷ್ಠಾಗ್ರೇಣ ಜೈವಂಹಿ ಸಂಸ್ಪೃಶೇತ್ ಅರ್ಚನಾ ವಿಧೌ (ಸೂಕ್ಷ್ಮಾಗಮ)

ಅಂದರೆ ಇಷ್ಟಲಿಂಗದ ಗೋಮುಖವನ್ನು ಕರಸ್ಥಲದ ಎಡಗಡೆ ಹರಿಸಬೇಕು. ಮತ್ತು ಲಿಂಗವನ್ನು ಎಡಗೈ ಕಿರಿಬೆರಳು, ಉಂಗುರ ಬೆರಳು ಮತ್ತು ಹೆಬ್ಬೆರಳುಗಳಿಂದ ಹಿಡಿದು ಪೂಜಿಸಬೇಕು.

'ಯೋವಿನಾ ಗುರುಕಾರುಣ್ಯಮಿಚ್ಛಯಾ ಲಿಂಗಧಾರಣಂ' ಅಂದರೆ ಗುರುಕಾರುಣ್ಯವಿಲ್ಲದೆ ಲಿಂಗಧಾರಣೆ ಕೂಡದು ಎನ್ನುವ ಎಚ್ಚರಿಕೆಯ ಮಾತು ಇದೆ. ಮತ್ತು 'ಸ್ವೀಕರೋತಿಯದಾ ಲಿಂಗಂ ಗುರುಣಾ ದೀಕ್ಷಯಾ । ತದಾ ಪ್ರಭೃತಿ ಲಿಂಗೈಕ್ಯಂ ಅವಿನಾಭಾವ ಯೋಗತಃ ' (ವಾತುಲ).

ದೀಕ್ಷೆಯಲ್ಲಿ ಗುರುವಿನಿಂದ ಪಡೆದ ಲಿಂಗವನ್ನು ವೀರಶೈವನು ತಾನು ಲಿಂಗೈಕ್ಯನಾಗುವವರೆಗೂ ಅವಿನಾಭಾವದಿಂದ ಪೂಜಿಸಬೇಕೆಂದು ಆಗಮಕಾರರು ಆದೇಶವನ್ನು ನೀಡುತ್ತಾರೆ.

ಶಿವಭಕ್ತನು ಇಷ್ಟಲಿಂಗ ಪೂಜೆಯನ್ನು ಮಾಡಿದರೆ ಸಾಲದು. ಅದು ಪ್ರಾಣಲಿಂಗವೂ ಆಗಿರುವುದರಿಂದ ಅಂತರಂಗದಲ್ಲಿ ಪ್ರಾಣಲಿಂಗ ಪೂಜೆಯನ್ನು ಮಾಡಬೇಕೆಂದು ಆಗಮಗಳ ಅಭಿಪ್ರಾಯ.

ಲಿಂಗಂ ಪತಿ ಃ ಚಾಹಂ (ಅಂಗಂ) ಭಾವೋಯಂ ವೀರಶೈವಿನಾಂ (ಸೂ. ೭.೫.೬೧)

ಲಿಂಗವೇ ಪತಿ, ಭಕ್ತನೇ (ಶರಣ) ಸತಿ ಎಂಬ ಭಾವನೆ ಇರಬೇಕು. ಲಿಂಗಪೂಜೆಯ ಆಧ್ಯಾತ್ಮಿಕ ಧ್ಯೇಯವನ್ನು ವೀರಶೈವಾಗಮಚಾರರು ಸ್ಪಷ್ಟವಾಗಿ ತಿಳಿಸುತ್ತಾರೆ.

ಕರಕಮಲವನ್ನು ಪೀಠವನ್ನಾಗಿ ಮಾಡಿ, ಲಿಂಗವನ್ನು ನಿತ್ಯ ಪೂಜಿಸಬೇಕು. ಅಹಿಂಸೆ, ಬ್ರಹ್ಮಚರ್ಯ, ಸರ್ವಭೂತದಯೆ, ಕ್ಷಮೆ, ಧ್ಯಾನ, ತಪ, ಜ್ಞಾನ, ಸತ್ಯ ಎಂಬ ಎಂಟು ಹೂಗಳಿಂದ ಲಿಂಗಪೂಜೆ ಮಾಡಬೇಕೆಂದು ಅಭಿಪ್ರಾಯಪಡುತ್ತಾರೆ.

'ಸರ್ವದೇವಮಯಂ ಲಿಂಗಂ' 'ಪೃಥವ್ಯಾಂಯಾನಿ ತೀರ್ಥಾನಿ ಪುಣ್ಯಾನ್ಯಾಯತನಾನಿಚ' ಎಲ್ಲ ದೇವರ ಸ್ವರೂಪವಾದ, ಎಲ್ಲ ತೀರ್ಥಕ್ಷೇತ್ರಗಳಂತೆ ಪವಿತ್ರವಾದ ಮತ್ತು ಎಲ್ಲಾ ತೀರ್ಥಕ್ಷೇತ್ರಗಳನ್ನು ಒಳಗೊಂಡಿರುವ ಲಿಂಗವನ್ನು ಪೂಜಿಸಬೇಕು.

ವೀರಶೈವನು ಅನ್ಯದೈವವ ಪೂಜಿಸುವ ಅಗತ್ಯವಿಲ್ಲ. ತೀರ್ಥಕ್ಷೇತ್ರಗಳಿಗೆ ಹೋಗುವ ಅವಶ್ಯಕತೆ ಇಲ್ಲ - ಎನ್ನುವುದನ್ನು ಆಗಮಕಾರರು ಸ್ಪಷ್ಟಪಡಿಸಬಯಸುತ್ತಾರೆ. ಯಂತ್ರಗಳ ವಿಚಾರವನ್ನು ತಿಳಿಸುತ್ತಾ, ಆಗಮಕಾರರು ಪ್ರಣವ ಸಹಿತ, ಪ್ರಣವ ರಹಿತ ಮಂತ್ರಗಳ ಮಹತ್ವವನ್ನು ತಿಳಿಸುತ್ತಾ, ಷಡಾಕ್ಷರಿ (ಓಂ ನಮಃ ಶಿವಾಯ), ಪಂಚಾಕ್ಷರಿ (ನಮಃ ಶಿವಾಯ) ಈ ಮಂತ್ರಗಳು ಸಮಸ್ತ ಫಲದಾಯಕವಾಗಿವೆ ಎಂದು ಅಭಿಪ್ರಾಯಪಡುತ್ತಾರೆ ಮತ್ತು ನದಿಗಳಲ್ಲಿ ಗಂಗೆ, ಸ್ತ್ರೀಯರಲ್ಲಿ ಪಾರ್ವತಿ, ಕ್ಷೇತ್ರಗಳಲ್ಲಿ ಕಾಶಿ ಇದ್ದಂತೆ, ಮಂತ್ರಗಳಲ್ಲಿ ಪಂಚಾಕ್ಷರಿ, ಸ್ತ್ರೀ ಶೂದ್ರರಿಗೂ, ಪಂಚಾಕ್ಷರಿ ಮಂತ್ರವನ್ನು ಉಪದೇಶಿಸಬೇಕು ಎನ್ನುವ ಉದಾತ್ತ ವಿಚಾರವನ್ನು ಸೂಕ್ಷ್ಮಾಗಮ ವಿವರಿಸುತ್ತದೆ. ಅಲ್ಲದೆ ಮಂತ್ರಜಪದಲ್ಲಿ 'ವಾಚಕ', 'ಅಪಾಂಶು', 'ಮಾನಸ' ಎಂದು ಮೂರು ವಿಧ. ಇವುಗಳಲ್ಲಿ ಮಾನಸ ಜಪವೇ ಶ್ರೇಷ್ಠವೆಂದು ಅದು ನಿರ್ಣಯಿಸುತ್ತದೆ.

ವೀರಶೈವ ಧರ್ಮದಲ್ಲಿ ಅಷ್ಟಾವರಣವೇ ಲಿಂಗ. ಪಂಚಾಚಾರವೇ ಪ್ರಾಣ. ಷಟ್‌ಸ್ಥಲವೇ 'ಆತ್ಮ' ಎನ್ನುವ ಮಾತು ಇದೆ. ಇವುಗಳ ಕಲ್ಪನೆಯನ್ನು ಆಗಮಗಳಲ್ಲೇ ಕಾಣಬಹುದಾಗಿದೆ.

ಅಷ್ಟಾವರಣ ಕಲ್ಪನೆ

ಗುರುರ್ಲಿಂಗಂ ಜಂಗಮಶ್ಚ ತೀರ್ಥಂಚೈವ ಪ್ರಸಾದಕಃ ।
ಭಸ್ಮ ರುದ್ರಾಕ್ಷ ಮಂತ್ರಶ್ಚ ಅಷ್ಟಾವರಣ ಸಂಜ್ಞಿತಾಃ ॥

ಎಂದು - ಗುರು - ಲಿಂಗ - ಜಂಗಮ - ಪಾದೋದಕ - ಪ್ರಸಾದ - ಭಸ್ಮ - ರುದ್ರಾಕ್ಷ - ಮಂತ್ರ ಇವು ಅಷ್ಟಾವರಣಗಳು. ಇವುಗಳ ವಿಸ್ತಾರವಾದ ವಿವರಣೆಯನ್ನು ಚಂದ್ರಜ್ಞಾನಾಗಮ ಮತ್ತು ಪರಮೇಶ್ವರಾಗಮಗಳಲ್ಲಿ ಕಾಣುತ್ತೇವೆ.

ಪಂಚಾಚಾರ ಕಲ್ಪನೆ

ಪಂಚಾಚಾರದ ಕಲ್ಪನೆಗೆ ಚಂದ್ರಜ್ಞಾನಾಗಮ ಮೀಸಲಾಗಿದೆ. ಅಲ್ಲಿ ಪಂಚಾಚಾರಗಳ ತಾತ್ತ್ವಿಕ ವಿವರಣೆಯನ್ನು ಕಾಣುತ್ತೇವೆ.

ಲಿಂಗಾಚಾರಃ ಸದಾಚಾರಃ । ಶಿವಾಚಾರಸ್ತಥೈವಚ ।
ಗಣಾಚಾರೋ ಭೃತ್ಯಾಚಾರ। ಪಂಚಾಚಾರಃ । ಪ್ರಕೀರ್ತಿತಾಃ ॥ (ಚಂ.ಪ್ರ.೯, ಶ್ಲೋ ೧)

ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ, ಭೃತ್ಯಾಚಾರ ಈ ಐದು ಪಂಚಾಚಾರಗಳು.

೧. ಗುರು ಕರುಣಿಸಿದ ಲಿಂಗದ ಹೊರತು ಬೇರೆ ದೈವವಿಲ್ಲೆಂದು ಭಾವದಲ್ಲಿ ಅನುಸಂಧಾನ ಮಾಡುವುದೇ ಲಿಂಗಾಚಾರ.
೨. ಧರ್ಮದಿಂದ ಸಂಪಾದಿಸಿದ ಧನದಿಂದ, ಗುರು - ಲಿಂಗ - ಜಂಗಮರಿಗೆ ಸಂತರ್ಪಣೆ ಮಾಡುವುದೇ ಸದಾಚಾರ.
೩. ಶಿವನೇ ಪರಬ್ರಹ್ಮ ಆತನನ್ನು ಬಿಟ್ಟರೆ ಬೇರೆ ಗತಿಯಿಲ್ಲೆಂದರಿವುದೇ ಶಿವಾಚಾರ.
೪. ಶಿವನ, ಶಿವಭಕ್ತನ, ಶಿವಧರ್ಮದ, ಶಿವಮಂತ್ರ ಮೊದಲಾದುದರ ನಿಂದೆಯನ್ನು ಕೇಳದಿರುವುದೇ ಗಣಾಚಾರ.
೫. ಈ ಭೂಮಿಯಲ್ಲಿರುವ ಶಿವಭಕ್ತರು ಸರ್ವ ಶ್ರೇಷ್ಠರು. ಅವರ ಭೃತ್ಯನು ನಾನು ಎಂದರಿತು ಆಚರಿಸುವುದೇ ಭೃತ್ಯಾಚಾರ.

- ಹೀಗೆ ಪಂಚಾಚಾರಗಳ ಕಲ್ಪನೆ ಶಿವಾಗಮಗಳಲ್ಲಿ ವಿಸ್ತಾರವಾಗಿ ವಿವರಿಸಲಾಗಿದೆ.

ಷಟ್‌ಸ್ಥಲದ ಪರಿಕಲ್ಪನೆ

'ಶೈವ ದೀಕ್ಷಾ ಕಲ್ಪವೃಕ್ಷಂ । ತತ್ ಫಲಂ ಸ್ಥಲಷಟ್ಕಂ' ಅಂದರೆ ಶಿವದೀಕ್ಷೆ ಕಲ್ಪವೃಕ್ಷವಾದರೆ ಅದರ ಫಲವೇ ಷಟ್‌ಸ್ಥಲವೆಂದು ಸೊಗಸಾದ ದೃಷ್ಟಾಂತದೊಂದಿಗೆ ತಿಳಿಸುತ್ತದೆ.

ಪರಮೇಶ್ವರಾಗಮ ಮತ್ತು ಸೂಕ್ಷ್ಮಾಗಮಗಳಲ್ಲಿ ಷಟ್‌ಸ್ಥಲದ ವಿಚಾರ ವಿವರಣಾತ್ಮಕವಾಗಿ ಬರುತ್ತದೆ.

> ಭಕ್ತ ಮಹೇಶ್ವರಶ್ಚೈವ । ಪ್ರಸಾದೀ ಪ್ರಾಣಲಿಂಗಿಕಃ ।
> ಶರಣಃ ಶಿವಲಿಂಗೈಕ್ಯಃ । ಸ್ಥಲಘಟಕಂ ಮಮಪ್ರಿಯಂ ॥ (ಪ.ಪ. ೬, ಶ್ಲೋ. ೬)

ಭಕ್ತ, ಮಾಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ - ಎಂಬ ಆರು ಸ್ಥಲಗಳು. ಇವು ಅಂಗಸ್ಥಲಗಳು. ಗುರುಲಿಂಗ, ಆಚಾರಲಿಂಗ, ಪ್ರಸಾದಲಿಂಗ, ಚರಲಿಂಗ, ಶಿವಲಿಂಗ ಮತ್ತು ಮಹಾಲಿಂಗ ಇವು ಲಿಂಗಸ್ಥಲಗಳು. ಅಂಗಸ್ಥಲದೊಳಗಿನ ಒಂದೊಂದು ಲಿಂಗಸ್ಥಲದೊಳಗಿನ ಒಂದೊಂದನ್ನು ಕ್ರಮವಾಗಿ (೬ x ೬) ಕೂಡಿ ೩೬ ಸ್ಥಲಗಳ ಕಲ್ಪನೆ ಇದೆ. (ಸೂಕ್ಷ್ಮಾಗಮ). ಇದೇ ಸೂಕ್ಷ್ಮಾಗಮದಲ್ಲಿ ದೇಹಾದಿಗಳ ಅಭಿಮಾನ ಬಿಟ್ಟವನು ಭಕ್ತ. ಅಮಲಚಿತ್ತ ಉಳ್ಳವನು ಮಹೇಶ. ಶುದ್ಧ ಚಿತ್ತನಾದವನು ಪ್ರಸಾದಿ. ಜೀವಭ್ರಮೆ ಬಿಟ್ಟು ಲಿಂಗವೇ ಆತ್ಮವೆಂದು ತಿಳಿದವನು ಪ್ರಾಣಲಿಂಗಿ. ಶಿವನ ನಿತ್ಯತ್ವವನ್ನು ಅರಿತು ನಿಶ್ಚಿಂತನಾಗಿ, ಆನಂದದಿಂದಿರುವವನು ಶರಣನು. ಶಿವ - ಜೀವರ ಐಕ್ಯವನ್ನು ಅನುಭವಿಸುವವನು - ಐಕ್ಯನು ಎನ್ನುವ ವಿಶಿಷ್ಟ ವಿಚಾರವಿದೆ. ಪರಮೇಶ್ವರಾಗಮದಲ್ಲಿ ಇನ್ನೊಂದು ರೀತಿಯ ವಿವರಣೆ ಇದೆ. (ಪ.೬, ಶ್ಲೋ. ೩೨) ಸರ್ವಜ್ಞತ್ವವೇ ಭಕ್ತ; ತೃಪ್ತಿಯೇ ಮಹೇಶ್ವರ ; ನಿರಂಕುಶ ಬೋಧೆ ಪ್ರಸಾದಿ; ಸ್ವಾತಂತ್ರ್ಯ ಪ್ರಾಣಲಿಂಗಿ; ಅಲುಪ್ತಿ ಶಕ್ತಿ ಶರಣ; ಅನಂತ ಶಕ್ತಿ ಐಕ್ಯ ಮತ್ತು ಇದೇ ಆಗಮದಲ್ಲಿ ಷಟ್‌ಸ್ಥಲವನ್ನು ಕುರಿತು ಬೇರೊಂದು ರೀತಿಯಲ್ಲಿ ವಿವರಿಸಲಾಗಿದೆ. ಭಕ್ತಸ್ಥಲ ನಿರಹಂಕಾರಿ, ಮಹೇಶ ಸ್ಥಲದಲ್ಲಿ ಸುಚಿತ್ತ ; ಪ್ರಸಾದಿ ಸ್ಥಲದಲ್ಲಿ ಸುಬುದ್ಧಿ ; ಪ್ರಾಣಲಿಂಗ ಸ್ಥಲದಲ್ಲಿ ಸುಮನಸ್ಕ; ಶರಣ ಸ್ಥಲದಲ್ಲಿ ಸುಜ್ಞಾನಿ; ಐಕ್ಯಸ್ಥಲದಲ್ಲಿ ಶಿವೈಕ್ಯ ಭಾವದವನಾಗಿರಬೇಕೆಂದು ತಿಳಿಸುತ್ತದೆ. ಸೂಕ್ಷ್ಮಾಗಮದಲ್ಲಿ ಮತ್ತೊಂದು ವಿಶಿಷ್ಟ ರೀತಿಯ ಆಲೋಚನೆ ಇದೆ. ರುದ್ರಾಕ್ಷಧಾರಣ ಭಕ್ತಸ್ಥಲ, ಷಡಕ್ಷರ ಜಪ ಮಹೇಶ್ವರ ಸ್ಥಲ, ಲಿಂಗಪೂಜೆ ಪ್ರಸಾದಿ ಸ್ಥಲ, ಅನುಭವದಿಂದ ಆರಾಧಿಸುವುದು ಪ್ರಾಣಲಿಂಗಿ ಸ್ಥಲ, ಪ್ರಸಾದವನ್ನು ಸೇವಿಸುವುದು ಶರಣಸ್ಥಲ, ಪ್ರಸಾದ ಭೋಗದಿಂದ ತೃಪ್ತನಾಗುವುದು ಐಕ್ಯಸ್ಥಲ. ಹೀಗೆ ಆಗಮಗಳಲ್ಲಿ ಷಟ್‌ಸ್ಥಲದ ಕಲ್ಪನೆ ವೈವಿಧ್ಯಮಯವಾಗಿದೆ. ವೈಶಿಷ್ಟ್ಯಪೂರ್ಣವಾಗಿದೆ. ಷಟ್‌ಸ್ಥಲಗಳ ವಿವರಣೆ ವಿಭಿನ್ನವಾಗಿ ಕಂಡರೂ ತಾತ್ವಿಕವಾಗಿ ಷಟ್‌ಸ್ಥಲದ ಆಶಯ ಒಂದೇ ಆಗಿದೆ. ಆಗಮಗಳಲ್ಲಿ ೩೬ ಸ್ಥಲಗಳ ಕಲ್ಪನೆ ಇದೆ. ಸಿದ್ಧಾಂತಾಗಮವೆಂದೂ, ಶಿವಾಗಮಗಳ ಸಾರಸರ್ವಸ್ವವೆಂದೂ ಹೆಸರಾದ ಸಿದ್ಧಾಂತ ಶಿಖಾಮಣಿಯಲ್ಲಿ ಪ್ರಪ್ರಥಮವಾಗಿ ಏಕೋತ್ತರ (೧೦೧) ಸ್ಥಲಗಳ ಕಲ್ಪನೆ ಇದೆ. ಶಿವಾಗಮಗಳಲ್ಲಿ (ಈಗ ಉಪಲಬ್ಧವಿರುವ) ಎಲ್ಲೂ ಏಕೋತ್ತರ ಶತಸ್ಥಲಗಳ ವಿಚಾರ ಪ್ರಸ್ತಾಪವಾದಂತೆ ಕಂಡುಬರುವುದಿಲ್ಲ.

ದೀಕ್ಷೆಯ ಪರಿಕಲ್ಪನೆ

ಆಗಮಗಳಲ್ಲಿ ಗರ್ಭಾದಾನದಿಂದ ಅಂತ್ಯಸಂಸ್ಕಾರದವರೆಗೂ ಸಂಸ್ಕಾರಗಳು ಹೇಳಲ್ಪಟ್ಟಿವೆ. ಅವುಗಳಲ್ಲಿ ಪ್ರಮುಖವಾದ ದೀಕ್ಷಾ ಸಂಸ್ಕಾರವನ್ನು ಕುರಿತು ಆಗಮಗಳ ಪರಿಕಲ್ಪನೆಯನ್ನು ಗಮನಿಸಬಹುದು :

> ದೀಯತೇ ಲಿಂಗ ಸಂಬಂಧ ಃ । ಕ್ಷೀಯತೇ ಕರ್ಮಸಂಚಯಃ । (ಸೋ.ಪ.೮, ಶ್ಲೋ ೮)

ಲಿಂಗ ದೀಕ್ಷೆಯಿಂದ ಕರ್ಮತ್ರಯಗಳು ನಾಶವಾಗುತ್ತವೆ. ದೀಕ್ಷೆ ಇಲ್ಲದೆ ಲಿಂಗಧಾರಣೆ ಕೂಡದು ಎಂದು (ಪಾರಮೇಶ್ವರ ಆಗಮ, ಪ.೧, ಶ್ಲೋ ೭೪) ಎಚ್ಚರಿಸುತ್ತದೆ. ಇಷ್ಟ, ಪ್ರಾಣ, ಭಾವಲಿಂಗಗಳಿಗೆ ಅನ್ವಯಿಸುವಂತೆ ವೇಧಾ, ಕ್ರಿಯಾ, ಮಂತ್ರವೆಂದು ದೀಕ್ಷೆಗಳಲ್ಲಿ ಮೂರು ವಿಧ. ಸಾಧಕನ ಜೀವನದಲ್ಲಿ ದೀಕ್ಷೆ, ಶಿಕ್ಷೆ, ಅನುಭಾವ ಮೂರು ಮಹತ್ವದ

ಮೆಟ್ಟಿಲುಗಳು. ಗುರುವಿನಿಂದ ಪಡೆಯುವ ದೀಕ್ಷೆಯಿಂದ ಜೀವ - ಶಿವರ ಜ್ಞಾನ ಉಂಟಾಗುತ್ತದೆ. ಈ ಜ್ಞಾನವನ್ನು ಅನುಭವಿಸುವುದು 'ಅನುಭಾವ' (ಸೂ.ಪ.೮, ಶ್ಲೋ ೭-೧೦) ಇತ್ಯಾದಿ ವಿಚಾರಗಳು ಆಗಮಗಳಲ್ಲಿ ವಿವರವಾಗಿ ಪ್ರಸ್ತಾಪಿತವಾಗಿದೆ.

ಪರಮೇಶ್ವರ ಮತ್ತು ಸೂಕ್ಷ್ಮ ಆಗಮಗಳಲ್ಲಿ ಗುರುವಿನ ಮಹತ್ವ ವಿಸ್ತಾರವಾಗಿ ವರ್ಣಿತವಾಗಿದೆ. 'ಗು' ಅಂದರೆ ಅಂಧಕಾರ, 'ರ' ಎಂದರೆ ಅದನ್ನು ಕಳೆಯುವುದು ಎಂದು ನಿರ್ವಚನ ನೀಡಿ ಗುರುಕೃಪೆ ಪರಮಾತ್ಮನ ಕೃಪೆಯಷ್ಟೇ ಮಹತ್ವದ್ದು ಎಂದು ಘೋಷಿಸುತ್ತವೆ.

ದೀಕ್ಷಾ ಸಂಸ್ಕಾರ ಸ್ತ್ರೀ ಪುರುಷರಿಗೂ ಸಮಾನವಾಗಿದೆ. ಧಾರ್ಮಿಕ ಸ್ವಾತಂತ್ರ್ಯ ಸ್ತ್ರೀ ಪುರುಷರಿಗೂ ಸಮಾನ ಎನ್ನುವ ಉದಾತ್ತ ವಿಚಾರವನ್ನು ಆಗಮಗಳಲ್ಲೇ ನಾವು ಕಾಣುತ್ತೇವೆ.

ಅದೀಕ್ಷಾ ಸಂಸ್ಕೃತಾ ನಾರೀ । ದೀಕ್ಷಿತಸ್ಯ ನಿಜೇಶಿತುಃ ।
ನಯೋಗ್ಯ ಪರಿಚರ್ಯಾಯೈ । ದೀಕ್ಷಸೀಯಾ ಸತೀತತಃ ॥
ಅದೀಕ್ಷಾ ಸಂಸ್ಕೃತಾ ನಾರೀ । ಯಂಯಂ ಪಾಕಂ ಕರೋತಿ ಚ ।
ಸಸ ನೈವಾರ್ಹತಿ ಕಿಲ ಪಾಕೋಮಹ್ಯಂ ನಿವೇದಿತಂ ॥

ದೀಕ್ಷಾ ಸಂಸ್ಕಾರವಿಲ್ಲದ ಹೆಂಡತಿ, ದೀಕ್ಷಾ ಸಂಸ್ಕಾರವುಳ್ಳ ಗಂಡನ ಸೇವೆಗೆ ಯೋಗ್ಯಳಲ್ಲ. ಅಷ್ಟೇ ಅಲ್ಲ, ಅವಳ ಅಡಿಗೆ ನೈವೇದ್ಯಕ್ಕೆ ಸಲ್ಲದು ಎಂದು ಕಾರಣಾಗಮ ಸ್ತ್ರೀಯರಿಗೂ ದೀಕ್ಷೆಯ ಅಗತ್ಯವನ್ನು ತಿಳಿಸುತ್ತದೆ.

ವರ್ಣ - ಜಾತಿ ಪರಿಕಲ್ಪನೆ

ವೀರಶೈವರು ಪ್ರಾಕೃತ ವರ್ಣಾಶ್ರಮ ಧರ್ಮವನ್ನು ಮನ್ನಿಸುವುದಿಲ್ಲ. ಆದ್ದರಿಂದ ಅವರು ಅಪ್ರಾಕೃತರು. ವೈದಿಕ ಧರ್ಮದ ವರ್ಣಾಶ್ರಮ ಪದ್ಧತಿ ಇವರಿಗೆ ಅನ್ವಯವಾಗುವುದಿಲ್ಲ. ಆದ್ದರಿಂದ ಇವರು ಅತಿ ವರ್ಣಾಶ್ರಮಿಗಳು. ಅಂದರೆ ವರ್ಣಾಶ್ರಮ ಪದ್ಧತಿಯನ್ನು ಮೀರಿದವರು ಎಂದು ಆಗಮಗಳು ಪ್ರತಿಪಾದಿಸುತ್ತವೆ. 'ದೀಕ್ಷೆಯನ್ನು ಹೊಂದಿದ ವೀರಶೈವನು ಅಥವಾ ವೀರಶೈವಳು ಪೂರ್ವಜಾತಿಗಳನ್ನು ನೋಡಬಾರದು' (ಸೂ.ಪ.೫, ಶ್ಲೋ. ೬೩-೬೪)

"ವೀರಶೈವರಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಹಾಗೂ ಸ್ತ್ರೀ ಎಲ್ಲ ಜಾತಿಯವರೂ ಇದ್ದಾರೆ. ಲಿಂಗಧಾರಣೆ ಮಾಡಿದರೆ ಸಾಕು ಅವರೆಲ್ಲ ನನ್ನವರು". (ಪಾ.ಪ.೧, ಶ್ಲೋ. ೫೬-೫೯).

"ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರ - ಈ ಅಷ್ಟಾವರಣಗಳಿಂದ ಕೂಡಿದವರು ವೀರ ಮಾಹೇಶ್ವರರು. ಇವರಲ್ಲಿ ಜಾತಿಭೇದವಿಲ್ಲ. (ಪಾ.ಪ. ೭, ಶ್ಲೋ ೫೩-೫೫).

ಚಂಡಾಲ ವಾಟಕಾಯಂ ವಾ ಶಿವಭಕ್ತಃ ಸ್ಥಿತೋಯದಿ
.......ತದ್‌ಗೃಹಂ ಶಿವಮಂದಿರಂ (ಪಾರಮೇಶ್ವರ)

- ಲಿಂಗವಿದ್ದ ಭಕ್ತನ ಮನೆ ಕೈಲಾಸ, ಅದು ಹೀನಕುಲದವನ ಮನೆಯಾದರೂ.

"ವೀರಶೈವರ ಪೂರ್ವಾಶ್ರಮದ ಜಾತಿಯನ್ನು ಹೇಳಿದರೆ ಹಾಗೂ ಕೇಳಿದರೆ ಅವನು ಪರಮ ಪಾತಕಿ" (ಪರಮೇಶ್ವರಾಗಮ).

ನ ಬಾಲವೃದ್ಧೋ ಭೇದೋಸ್ತಿ । ನಮಸ್ಕಾರಾದಿ ಪೂಜನೇ ।
ಸರ್ವೇಪಿ ವಂದನೀಯಾಹಿ । ವಿಧವಾಃ ಪುಷ್ಪಿಣೀಯಥಾ ॥

ವೀರಶೈವ ದೀಕ್ಷೆಯನ್ನು ಹೊಂದಿದವರು ಸಣ್ಣವರಾಗಲಿ, ದೊಡ್ಡವರಾಗಲಿ, ವಿಧವಾ ಸ್ತ್ರೀಯಾಗಲಿ, ಮುತ್ತೈದೆಯರಾಗಲಿ ಎಲ್ಲರೂ ಸಮಾನ ಗೌರವಕ್ಕೆ ಪಾತ್ರರು.

ವೀರಶೈವ ಧರ್ಮದಲ್ಲಿ ಸ್ತ್ರೀ ಪುರುಷರಲ್ಲಿ ಭೇದವಿಲ್ಲ; ವರ್ಣಾಶ್ರಮದ ಭೇದವಿಲ್ಲ. ಎಲ್ಲರನ್ನು ಸಮಾನವಾಗಿ ಗೌರವದಿಂದ ಕಾಣುವುದೇ ಈ ಧರ್ಮದ ವೈಶಿಷ್ಟ್ಯ.

ಶಿವ ಸಂಸ್ಕಾರ ಯುಕ್ತೇಷು । ಜಾತಿ ಭೇದೋ ನವಿದ್ಯತೆ
ಕಾಷ್ಠೇಷು ವಹ್ನಿ ದಗ್ಧೇಷು । ಯಥಾರೂಪಂ ನವಿದ್ಯತೆ ॥ (ಪಾ.ಪ.೫, ಶ್ಲೋ ೪೧)

ಪರಮೇಶ್ವರಾಗಮದ ಈ ಶ್ಲೋಕ ಅರ್ಥಪೂರ್ಣವಾಗಿದೆ. ನಾನಾ ಜಾತಿಯ ಸೌದೆಗಳು ಅಗ್ನಿಗೆ ಬಿದ್ದು ಭಸ್ಮವಾಗಿ ತಮ್ಮ ನಾಮರೂಪಗಳನ್ನು ತ್ಯಜಿಸುವಂತೆ, ದೀಕ್ಷೆಯನ್ನು ಹೊಂದಿದ ವೀರಶೈವರು ತಮ್ಮ ಪೂರ್ವಾಶ್ರಮದ ಜಾತಿಗಳಿಂದ ಬಿಡುಗಡೆ ಹೊಂದುತ್ತಾರೆ. ಹಿಂದಿನ ಜಾತಿಗಳನ್ನು ಕಳೆದುಕೊಂಡು ಎಲ್ಲರೂ ವೀರಶೈವರಾಗುತ್ತಾರೆ. ವರ್ಣ ಜಾತಿಯನ್ನು ಕುರಿತು ಇಂತಹ ಪ್ರಗತಿಪರ, ವೈಚಾರಿಕ ವಿವೇಚನೆ, ಆಧುನಿಕರೂ ತಲೆದೂಗುವಂತೆ ಆಗಮಗಳಲ್ಲಿ ಪ್ರತಿಪಾದಿತವಾಗಿದೆ.

'ಭಕ್ತ'ನ ಪರಿಕಲ್ಪನೆ

ಭಕ್ತಾರಾಧ್ಬವ ಇತ್ಯುಕ್ತಃ ಕ ಕಾರಾತ್ಕಲುಷಂಭವೇತ್ ।
ತತಃ ಸಂತ್ರಾಯತೇ ತಸ್ಮಾತ್। 'ಭಕ್ತ' ಇತ್ಯುಚ್ಯತೆ ಬುಧೈ ॥ (ಸೂಕ್ಷ್ಮಾ)

'ಭ' ಎಂದರೆ ಭವ, 'ಕ' ಎಂದರೆ ಮಲ, 'ತ' ಎಂದರೆ ಭವದೋಷದಿಂದ ಬಿಡುಗಡೆ. ಜನನ, ಮರಣ, ಮಲತ್ರಯ ದೋಷಗಳಿಂದ ಬಿಡುಗಡೆ ಹೊಂದಿದವನು 'ಭಕ್ತ'. ಭಕ್ತ ಶಬ್ದದ ಈ ಅರ್ಥಪೂರ್ಣ ನಿರುಕ್ತಿ ಆಗಮಗಳಲ್ಲಿ ದೊರೆಯುತ್ತದೆ.

'ಭವಿ - ಭಕ್ತ' ಪರಿಕಲ್ಪನೆ

ಆಗಮಗಳಲ್ಲಿ, ವೀರಶೈವ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಲಿಂಗಧಾರಿಯಾಗಿ, ಸದಾಚಾರ ಸಂಪನ್ನನು 'ಭಕ್ತ' ಅಲಿಂಗಿಯಾಗಿ, ಅನಾಚಾರಿಯಾಗಿದ್ದರೆ ಅವನನ್ನು 'ಭವಿ' ಎಂದು ಕರೆಯುತ್ತಾರೆ.

ಚಾಂಡಾಲೇನಾಪಿ ದೇವೇಶಿ । ಸಂಸ್ಪೃಷ್ಟಂ ಧೃತಲಿಂಗಿನಾ ।
ಯೋಗ್ಯಂಸಾದನ್ನಪಾನಾದಿ । ನ ಶ್ರೇಷ್ಠೋ ನಾಪಿ ಲಿಂಗಿನಾ ॥ (ಸೂಕ್ಷ್ಮಾ)

ಹೀನಕುಲದವನಾದರೂ ಲಿಂಗಧಾರಿಯಾಗಿದ್ದರೆ, ಅನ್ನ - ಪಾನ (ಊಟೋಪಚಾರ)ಗಳನ್ನು ಮಾಡಬಹುದು. ಉಚ್ಚ ಜಾತಿಯವನಾದರೂ ಅಲಿಂಗಿಯಾದರೆ, ಅವರಲ್ಲಿ ಅನ್ನಪಾನಾದಿಗಳನ್ನು ಮಾಡಬಾರದೆಂದು ಆಗಮಗಳು ಶಾಸನ ಮಾಡುತ್ತವೆ. ಅಷ್ಟೇ ಅಲ್ಲ, ತಂದೆ - ತಾಯಿಗಳು ಭವಿಗಳಿದ್ದರೂ ಅವರ ಸಂಗ ಬಿಡಬೇಕೆಂದು ಆಜ್ಞಾಪಿಸುತ್ತದೆ.

ವೃತ್ತಿ (ಕಾಯಕ) ಕಲ್ಪನೆ

ಆಗಮಗಳಲ್ಲಿ ವೃತ್ತಿಗೂ ಗೌರವದ ಸ್ಥಾನವಿದೆ. ಸೂಕ್ಷ್ಮಾಗಮ ಇವನ್ನು ಅರ್ಥಪೂರ್ಣವಾಗಿ ಉಲ್ಲೇಖಿಸುತ್ತದೆ.

ಯೇನಕೇನಾಪಿ ಮಾರ್ಗೇಣ । ಯೇಕೇನಚ ಕರ್ಮಣಃ ।
ಶಿವೈಕನಿಷ್ಠ ಮನಸಃ ಭಕ್ತಾಸ್ತೇಜೋತ್ತಮೋತ್ತಮಾಃ ॥ (ಸೂಕ್ಷ್ಮಾ)

ಉದ್ಯೋಗಗಳು (ವೃತ್ತಿ) ಬೇರೆ ಬೇರೆಯಾದರೂ, ಅವುಗಳನ್ನು ದೈವಸಾಕ್ಷಿಯಾಗಿ (ಸತ್ಯ ಶುದ್ಧವಾಗಿ) ಮಾಡಬೇಕು. ಹಾಗೆ ನಿಷ್ಠೆಯಿಂದ ಉದ್ಯೋಗ ಮಾಡುವವರೇ 'ಉತ್ತಮೋತ್ತಮ ಭಕ್ತರು' ಎಂದು ವೃತ್ತಿ ಗೌರವವನ್ನು ಎತ್ತಿಹಿಡಿಯುತ್ತದೆ.

ದಾಸೋಹ ಕಲ್ಪನೆ

ಆಗಮಗಳಲ್ಲಿ ದಾಸೋಹ ಕಲ್ಪನೆ ಅಲ್ಲಲ್ಲಿ ವೈಶಿಷ್ಟ್ಯಪೂರ್ಣವಾಗಿ ಉಲ್ಲೇಖವಾಗಿದೆ. 'ವೀರಾಗಮ' ದಾಸೋಹ ಕಲ್ಪನೆಯನ್ನು ಅರ್ಥಪೂರ್ಣವಾಗಿ ಪ್ರತಿಪಾದಿಸುತ್ತದೆ.

ದಾಸೋಹಂ ಪ್ರಮಥಾಮೋಕ್ಷಂ
ವದಂತೀ ತೀ ನ ಸಂಶಯಃ ॥ (ವೀರಾಗಮ)

ಇಲ್ಲಿ 'ಪ್ರಮಥಾ' ಎಂದರೆ ಗುರು - ಲಿಂಗ - ಜಂಗಮರು ಎಂದು ಅರ್ಥವಿದೆ. ಗುರು ಲಿಂಗ ಜಂಗಮರಿಗೆ ಮಾಡುವ ದಾಸೋಹವು (ಗುರುವಿಗೆ ತನು, ಲಿಂಗಕ್ಕೆ ಮನ, ಜಂಗಮಕ್ಕೆ ಧನ) ಮೋಕ್ಷಕ್ಕೆ ಕಾರಣವಾಗುತ್ತದೆ. ಇದರಲ್ಲಿ ಸಂಶಯವಿಲ್ಲ ಎಂದು ದಾಸೋಹದ ಪಾವಿತ್ರ್ಯವನ್ನು ಮಾರ್ಮಿಕವಾಗಿ ಪ್ರತಿಪಾದಿಸುತ್ತದೆ.

ಗುರು - ಲಿಂಗ - ಜಂಗಮ

ಪರಿಕಲ್ಪನೆ

ಎಲ್ಲ ಆಗಮಗಳೂ ಗುರು - ಜಂಗಮ - ಲಿಂಗಗಳು ಸಮಾನವೆಂದೇ ಪರಿಭಾವಿಸುತ್ತವೆ. ಈ ವಿಚಾರದಲ್ಲಿ ಸೂಕ್ಷ್ಮಾಗಮದ ಅಭಿಪ್ರಾಯ ಹೀಗಿದೆ :

ಏಕಮೂರ್ತಿಸ್ತ್ರಯೋಭಾಗಃ ಗುರುರ್ಲಿಂಗಂತು ಜಂಗಮಃ ।
ಜಂಗಮಶ್ಚ ಗುರುರ್ಲಿಂಗಂ ತ್ರಿವಿಧಂ ಲಿಂಗಮುಚ್ಯತೇ ॥

ಗುರು - ಲಿಂಗ -ಜಂಗಮರು ಒಂದೇ ದೈವೀಶಕ್ತಿಯ ಮೂರು ರೂಪಗಳು ಮತ್ತು ಜಂಗಮ - ಗುರು - ಲಿಂಗ ಈ ಮೂರು ಲಿಂಗಸ್ವರೂಪ ಸಾಕ್ಷಾತ್ ದೈವ ಸ್ವರೂಪವೆಂದು ಎಲ್ಲ ಆಗಮಗಳೂ ಈ ತತ್ವವನ್ನು ಏಕಪ್ರಕಾರವಾಗಿ ಪ್ರತಿಪಾದಿಸುತ್ತವೆ. ಗುರುಗಳು - ಗುರುಗಳಲ್ಲೂ, ಜಂಗಮರು - ಜಂಗಮರಲ್ಲೂ, ಗುರು - ಜಂಗಮರಲ್ಲೂ ಭೇದವೆಣಿಸಬಾರದು. ಎಲ್ಲರೂ ಸಮಾನರು, ಪೂಜ್ಯರು ಎಂಬುದು ಆಗಮಕಾರರ ಮತ.

ಜಂಗಮೋ ಜಂಗಮಂ ದೃಷ್ಟ್ವಾ । ನ ಪ್ರಣಾಮಂ ಕರೋತಿಯಃ ।
ಸ ಏವ ಜಂಗಮ ದ್ರೋಹಿ । ಮದ್ರೋಹೀಚ ನ ಸಂಶಯಃ ॥ (ಸೂ. ೭, ಶ್ಲೋ ೮೯-೯೧)

ಒಬ್ಬ ಜಂಗಮ ಇನ್ನೊಬ್ಬ ಜಂಗಮನನ್ನು ಕಂಡಾಗ, ಪ್ರಣಾಮ ಮಾಡಿ ಗೌರವಿಸಬೇಕು. ಹೀಗೆ ಮಾಡದಿದ್ದಲ್ಲಿ ಅವನು ಜಂಗಮದ್ರೋಹಿ ಮತ್ತು ದೈವದ್ರೋಹಿಯಾಗುತ್ತಾನೆ. ಈ ಮಾತು ಗುರುವಿಗೂ ಅನ್ವಯವಾಗುತ್ತದೆ.

ಜ್ಞಾನ - ಕ್ರಿಯಾ

ಸಮುಚ್ಚಯ

ವೀರಶೈವ ಸಿದ್ಧಾಂತ ಜ್ಞಾನಕ್ರಿಯಾ ಸಮುಚ್ಚಯಾತ್ಮಕವಾದುದು. ಜ್ಞಾನವೆಂದರೆ 'ಅರಿಯುವುದು'. ಕ್ರಿಯೆ ಎಂದರೆ 'ಆಚರಿಸುವುದು'. ಎರಡೂ ಅನ್ಯೋನ್ಯಾಶ್ರಯಿಗಳು. ಪರಸ್ಪರ ಅವಲಂಬಿಗಳು. ಈ ವಿಚಾರವನ್ನು ಸುಂದರವಾದ ದೃಷ್ಟಾಂತದೊಂದಿಗೆ ಚಂದ್ರಜ್ಞಾನಾಗಮ ಪ್ರತಿಪಾದಿಸುತ್ತದೆ.

ಅಪಶನ್ ಅಂಧಕೋದಗ್ಧಃ ಪಶ್ಯನ್ ದಹತಿ ಪಂಗುಲಃ ।
ಅಂಧಪಂಗುವದನ್ಯೋನ್ಯ ಸಾಪೇಕ್ಷೇ ಜ್ಞಾನಕರ್ಮಣಿ ॥ (ಚಂದ್ರಜ್ಞಾನಾಗಮ)

ಕಣ್ಣು ಕಾಣದೆ ಸುಡಿಸಿಕೊಳ್ಳುವವನು ಕುರುಡ. ಕಣ್ಣು ಕಂಡರೂ ಸುಡಿಸಿಕೊಳ್ಳುವವನು ಹೆಳವ. ಕುರುಡನೂ ಒಬ್ಬನೇ ನಡೆಯಲಾರ. ಹೆಳವನೂ ಒಬ್ಬನೇ ಮುಂದೆ ಹೋಗಲಾರ. ಇಲ್ಲಿ ಜ್ಞಾನಿ ಹೆಳವ. ಕರ್ಮಿ ಕುರುಡ. ಎರಡೂ ಅನ್ಯೋನ್ಯಾಶ್ರಯಿಗಳು. ಜ್ಞಾನವಿಲ್ಲದ ಕ್ರಿಯೆ, ಕ್ರಿಯೆಯಿಲ್ಲದ ಜ್ಞಾನ ಎರಡೂ ವ್ಯರ್ಥ.

ವೈಚಾರಿಕತೆ

ಆಗಮಕಾರರು ಜಾತಿ ಪದ್ಧತಿಯನ್ನು ನಿರಾಕರಿಸಿ, ಎಲ್ಲರೂ ದೀಕ್ಷೆಯನ್ನು ಪಡೆದು ಶಿವಭಕ್ತರಾಗಲು ಅರ್ಹರು, ಎನ್ನುವ ವಿಚಾರವನ್ನು ಹಲವಾರು ದೃಷ್ಟಾಂತಗಳೊಂದಿಗೆ ವೈಚಾರಿಕ ನೆಲೆಯಲ್ಲಿ ಚರ್ಚಿಸಿ ಸಮರ್ಥಿಸಿದ್ದಾರೆ.

ಇದೇ ರೀತಿಯಾಗಿ ಲಿಂಗಧಾರಿಗಳಾದ ವೀರಶೈವ ಭಕ್ತರಿಗೆ :

> ನ ತಿಥಿರ್ನಚ ನಕ್ಷತ್ರಂ । ನ ಯೋಗ ಕರಣಾದಿಕಂ ।
> ಸಾಮುದ್ರಿಕಂಚ ಭಕ್ತಾನಾಂ । ನಾಸ್ತಿ ಲಿಂಗಾಂಗ ಸಂಗಿನಾಂ (ಸೂ.ಪ. ೭ : ೯೮-೯೯)

ತಿಥಿ, ನಕ್ಷತ್ರ, ಯೋಗ, ಕರಣಗಳಿಂದ ಕೂಡಿದ ಪಂಚಾಂಗದ ಹಾಗೂ ಹಸ್ತಸಾಮುದ್ರಿಕ ಶಾಸ್ತ್ರ, ಅಂದರೆ 'ಜ್ಯೋತಿಷ್ಯ ಶಾಸ್ತ್ರ'ದ ಅವಶ್ಯಕತೆ ಇಲ್ಲ. ಲಿಂಗಾಂಗಿಗಳು ಈ ಶಾಸ್ತ್ರವನ್ನು ನಂಬಬಾರದೆಂದು ಮಾರ್ಮಿಕವಾಗಿ ತಿಳಿಸುತ್ತಾರೆ. ಮತ್ತು ತೀರ್ಥಯಾತ್ರೆ, ಪುಣ್ಯ ಕ್ಷೇತ್ರ ದರ್ಶನ, ಕೈಲಾಸ ಪದವಿಯ ಆಕಾಂಕ್ಷೆಗಳನ್ನು ವೀರಶೈವರು ತ್ಯಜಿಸಬೇಕು ಎಂದು ತಿಳಿಸುತ್ತಾರೆ.

'ದೇಹೋ ದೇವಾಲಯಃ ಪ್ರೋಕ್ತೋ ಜೀವೋದೇವಃ ಸನಾತನಃ' (ಸೂಕ್ಷ್ಮಾಗಮ)

ಲಿಂಗಧಾರಿಯಾದ ವೀರಶೈವನು ತಾನೇ ಸ್ವತಃ ಚಲಿಸುವ ದೇವಾಲಯವಾದ್ದರಿಂದ ಪ್ರತಿಯೊಬ್ಬ ಮಾನವರ ದೇಹವೇ ದೇವಾಲಯವಾಗಿ, ದೇಹದಲ್ಲಿರುವ 'ಜೀವ' ವೇ ದೇವನಾಗಿರುವಾಗ ದೇವಾಲಯಗಳ ಅಗತ್ಯವಿಲ್ಲ. ದೇವಾಲಯಗಳಿಗೆ ಹೋಗಿ ಪೂಜೆ ಮಾಡಿಸುವುದು, ತೀರ್ಥ ಸೇವಿಸುವುದು ನಿಷಿದ್ಧವೆಂದು ಆಗಮಕಾರರ ಅಭಿಪ್ರಾಯ. ದೇವಾಲಯ ಸಂಸ್ಕೃತಿಯ ಬಗ್ಗೆ ಗೌರವವಿರಲಿ ಎಂದೂ ಸೂಚಿಸುತ್ತಾರೆ. ಸ್ವಧರ್ಮದಲ್ಲಿ ನಿಷ್ಠೆ, ಪರಧರ್ಮದಲ್ಲಿ ಸಹಿಷ್ಣುತೆಯನ್ನು ಆಗಮಕಾರರು ಎತ್ತಿಹಿಡಿಯುತ್ತಾರೆ. ಪರಮೇಶ್ವರಾಗಮದಲ್ಲಿ ಒಂದು ಕಡೆ (ಪಾ.ಪ.೨, ಶ್ಲೋ. ೮೬-೯೨) ಶುಭ ಮುಹೂರ್ತ ನೋಡಿ ದೀಕ್ಷೆ ಕೊಡಬೇಕು ಎನ್ನುವ ವಿಚಾರವಿದ್ದರೂ ಮೊದಲು ಮುಹೂರ್ತದ ಬಗ್ಗೆ ಶುಭ ಕಲ್ಪನೆ ಇದ್ದರೂ ನಂತರ ಅಧ್ಯಾತ್ಮದ ಹಂತದಲ್ಲಿ ಈ ಶಾಸ್ತ್ರದ ಅಗತ್ಯವಿಲ್ಲ ಎನಿಸಿರಬೇಕು. ವೀರಶೈವರಿಗೆ ಜನನ, ಮರಣ, ರಜ, ಉಚ್ಚಿಷ್ಠ ಇತ್ಯಾದಿ ಪಂಚಸೂತಕಗಳು ಅನ್ವಯಿಸುವುದಿಲ್ಲವೆಂದು ಅವುಗಳನ್ನು ಆಚರಣೆಯಲ್ಲಿ ತರಬಾರದೆಂದೂ ಕಠೋರವಾಗಿ ಆಗಮಕಾರರು ಆದೇಶ ನೀಡುತ್ತಾರೆ.

ಆಚರಣೆ

ಆಗಮಗಳಲ್ಲಿ, ವೀರಶೈವ ಆಚರಣೆಯಲ್ಲಿ ಅಳವಡಿಸಿಕೊಳ್ಳಬೇಕಾದ ನಿಯಮಗಳ ಚರ್ಚೆ ಇದೆ. ನಿರ್ಣಯವಿದೆ. ಇದು ಆಗಮಗಳ ವೈಶಿಷ್ಟ್ಯ.

ಲಿಂಗದ ಕರಡಿಗೆ ಹೇಗಿರಬೇಕು? ಎನ್ನುವ ವಿಚಾರ ಕಾರಣಾಗಮದಲ್ಲಿ ಪ್ರಸ್ತಾಪಿಸಲ್ಪಟ್ಟಿದೆ.

> ಚತುರಶ್ರಂ ಪಂಕಜಾಭಂ । ವರ್ತುಲಂ ಬಿಂಬಕೋಪಮಂ ।
> ಯಥಾ ಸಂದರ್ಶಿತಂ ದೇವಿ । ಗುರುಣಾ ತತ್ತದಾಚರೇತ್ ॥

ಚತುರಸ್ರಕ್ಕೆ ಚೌಕ, ಕಮಲ ಹಾಗೂ ಬಿಂಬದಂತೆ ಗುಂಡಾಗಿರುವುದು ಗುಂಡಗಡಿಗೆ. ಎಕ್ಕೆಕಾಯಿ, ಮಾವಿನಕಾಯಿ, ಬಿಲ್ವಕಾಯಿಗಳಂತೆ ಇರುವ ಕರಡಿಗೆಗೆ 'ಲಿಂಗದ ಕಾಯಿ' ಎಂದು ಕನ್ನಡದಲ್ಲಿ ಹೇಳುವ ರೂಢಿ ಇದೆ. ಭರಣಿ, ಪೆಟ್ಟಿಗೆಗಳಂತಿದ್ದರೆ

'ಕರಂಡಕ' ಎಂದು ಹೆಸರು. ಚಿನ್ನ, ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು, ತವರ ಹಾಗೂ ಬಟ್ಟೆಗಳಲ್ಲಿ ಸಜ್ಜ ಅಂದರೆ ಕರಡಿಗೆ ಮಾಡಬಹುದು ಎನ್ನುವ ಸೂಚನೆ ಆಗಮಗಳಲ್ಲಿದೆ. ಇಷ್ಟಲಿಂಗದ ಪರಿಕಲ್ಪನೆ ಪ್ರಾಚೀನವಾಗಿರುವಂತೆ. ಇಷ್ಟಲಿಂಗವನ್ನಿಡುವ 'ಕರಂಡಕ'ದ ಕಲ್ಪನೆಯೂ ಪ್ರಾಚೀನವಾಗಿದೆ. ಅದರ ಉಲ್ಲೇಖವನ್ನು ಆಗಮಗಳಲ್ಲಿ ಕಾಣಬಹುದಾಗಿದೆ.

ಕಾರಣಾಗಮದ ನವಮ ಹಾಗೂ ದಶಮ ಪಟಲದಲ್ಲಿ ವೀರಶೈವನು ಅನುಸರಿಸಬೇಕಾದ ನಿಯಮಗಳನ್ನು ಆಗಮಕಾರರು ಸೂಚಿಸಿದ್ದಾರೆ. ಅವು ಪ್ರಶ್ನೋತ್ತರ ರೂಪದಲ್ಲಿವೆ. ಧರ್ಮಸೂಕ್ಷ್ಮದ ಆಚರಣೆಯ ಬಗ್ಗೆ ಅವು ಬೆಳಕನ್ನು ಚೆಲ್ಲುತ್ತವೆ. ಕುತೂಹಲಕ್ಕಾಗಿ ಕೆಲವನ್ನು ಇಲ್ಲಿ ಕೊಟ್ಟಿದ್ದೇನೆ :

೧. ಪ್ರಶ್ನೆ : ದೀಕ್ಷೆಯನ್ನು ಪಡೆದ ವೀರಶೈವನು ಇತರ ದೇವತಾರ್ಚನೆ ಮಾಡಬಹುದೇ?

ಉತ್ತರ : ರಾಜಸೇವಕನು ರಾಜನ ಅಪ್ಪಣೆ ಪಡೆದು ಮಂತ್ರಿಗಳ ಸೇವೆ ಮಾಡುವಂತೆ ಅನಿವಾರ್ಯ ಪಕ್ಷದಲ್ಲಿ ಶಿವಾಜ್ಞೆ ಎಂದು ಭಾವಿಸಿ ಇತರ ದೇವತಾರಾಧನೆಯನ್ನು ಮಾಡಬಹುದು.

೨. ಪ್ರಶ್ನೆ : ವೀರಶೈವರು ಬೇರೆ ಜಾತಿಯ ಮಹಾತ್ಮರನ್ನು ಪೂಜಿಸಬಹುದೇ?

ಉತ್ತರ : ಮಾನಸಿಕವಾಗಿ ಪೂಜಿಸಬಹುದು. ದೈಹಿಕ ಹಾಗೂ ಬಾಹ್ಯಕ್ರಿಯೆಯಿಂದಲ್ಲ.

೩. ಪ್ರಶ್ನೆ : ದೇವತಾ ಪ್ರತಿಷ್ಠಾದಿಗಳಿಗೆ ಯಾರು ಅಧಿಕಾರಿ?

ಉತ್ತರ : ಲಿಂಗಧಾರಿಯೇ ಅರ್ಹನು.

೪. ಪ್ರಶ್ನೆ : ರಾತ್ರಿ ನಿದ್ರೆಯಲ್ಲಿ ಲಿಂಗದ ಕರಡಿಗೆ ನಮ್ಮ ಕೆಳಗೆ ಬೀಳುವುದು ದೋಷ ಅಲ್ಲವೇ?

ಉತ್ತರ : ನಿಜ. ರಾತ್ರಿ ಮಲಗಿದ್ದಾಗ ಹೆಂಡತಿಯ ಕೈ ಕಾಲುಗಳು ಪತಿಗೆ ಸೋಕಿದ ದೋಷ ಪರಿಹಾರಕ್ಕಾಗಿ ಅವಳು ಮುಂಜಾನೆ ಎದ್ದಕೂಡಲೆ ಪತಿಗೆ ವಂದಿಸುತ್ತಾಳೆ. ಅದರಂತೆ ವೀರಶೈವನು ಮುಂಜಾನೆ ಎದ್ದ ಕೂಡಲೇ ಕರಡಿಗೆ ಮುಟ್ಟಿ ಲಿಂಗಕ್ಕೆ ನಮಸ್ಕರಿಸಿ ಕ್ಷಮಾ ಯಾಚಿಸಬೇಕು.

೫. ಪ್ರಶ್ನೆ : ಕ್ಷೌರ ಮಾಡಿಸಿಕೊಳ್ಳುವಾಗ ಲಿಂಗಕ್ಕೆ ನಾಪಿತನ ಸ್ಪರ್ಶವಾಗುತ್ತದೆ. ಅದಕ್ಕೆ ಪರಿಹಾರ?

ಉತ್ತರ : ಲಿಂಗಕ್ಕೆ ನಾಪಿತನ ಸ್ಪರ್ಶವಾದರೆ ಪವಮಾನ ಸೂಕ್ತ ಹಾಗೂ ಶ್ರೀರುದ್ರ ಪಾರಾಯಣ ಮಾಡಬೇಕು.

೬. ಪ್ರಶ್ನೆ : ಶಿವಪೂಜೆಗೆ ಅನಾನುಕೂಲವಾಗಿ ಪತ್ರಪುಷ್ಪಾದಿಗಳು ದೊರೆಯದಿದ್ದರೆ ಅದಕ್ಕೆ ಪರಿಹಾರ?

ಉತ್ತರ : ಮೂಲಮಂತ್ರವನ್ನು ನೂರೆಂಟು ಸಲ ಜಪಿಸಬೇಕು.

೭. ಪ್ರಶ್ನೆ : ಇಷ್ಟಲಿಂಗವು ಕೆಳಗೆ ಬಿದ್ದರೆ ಏನು ಮಾಡಬೇಕು?

ಉತ್ತರ : ಆ ಲಿಂಗವನ್ನು ಎತ್ತಿಕೊಂಡು ಮೂಲಮಂತ್ರವನ್ನು ೧೦೮ ಸಲ ಜಪಿಸಬೇಕು. ಮುಂದೆ ಅಂತಹ ಸಂದರ್ಭ ಬರದಂತೆ ಎಚ್ಚರ ವಹಿಸಬೇಕು.

೮. ಪ್ರಶ್ನೆ : ಗುರು ಕೊಟ್ಟ ಲಿಂಗವು ಭಿನ್ನವಾದರೆ ಅಥವಾ ಕಳೆದುಹೋದರೆ?

ಉತ್ತರ : ಬೇರೆ ಸಜ್ಜರಸ (ಕಾಂತಿ) ಧರಿಸಿ ಕಲಾನ್ಯಾಸ ಮಾಡಿ ಮೂಲಮಂತ್ರವನ್ನು ೧೦೮ ಸಲ ಜಪಿಸಬೇಕು. ಗುರುಮುಖದಿಂದ ವಿಧ್ಯುಕ್ತವಾಗಿ ಲಿಂಗಧಾರಣೆ ಪಡೆಯಬೇಕು. ಲಿಂಗವು ಕಳೆದುಹೋದರೆ,

ಪ್ರಾಣವನ್ನೇ ಬಿಡಬೇಕು. ಇಲ್ಲದೆ ಹೋದರೆ, ೨೧ ದಿವಸ ನಿರಾಹಾರಿಯಾಗಿದ್ದು ಮಂತ್ರ ಜಪಿಸುತ್ತಾ ಗುರುಮುಖದಿಂದ ದೀಕ್ಷೆ ಪಡೆಯಬೇಕು.

೯. ಪ್ರಶ್ನೆ : ಹೊಸ ಲಿಂಗವನ್ನು ಧರಿಸಿದ ಮೇಲೆ ಕಳೆದು ಹೋದ ಲಿಂಗವು ದೊರೆತರೆ?

ಉತ್ತರ : ಕಳೆದ ಲಿಂಗವು ದೊರೆತರೆ ಹೊಸ ಲಿಂಗದಲ್ಲಿ, ಹಳೆಯ ಲಿಂಗದಲ್ಲಿನ ಕಳೆಗಳನ್ನು ಆಕರ್ಷಿಸಿ ಅದನ್ನು ನೀರಿಗೆ ಬಿಡಬೇಕು.

೧೦. ಪ್ರಶ್ನೆ : ಲಿಂಗವು ಕಳೆದ ಕೂಡಲೇ ಪ್ರಾಣ ಬಿಡಬೇಕು ಎಂದು ಹೇಳಲಾಗಿದೆ. ಆಗ ಆ ಅಲಿಂಗಿಯ ದೇಹ ಸಂಸ್ಕಾರ ಹೇಗೆ?

ಉತ್ತರ : ಲಿಂಗ ನಷ್ಟವಾದ ಕೂಡಲೇ ಪ್ರಾಣ ಬಿಡುವುದರಿಂದ ಅವನಿಗೆ ಮೋಕ್ಷ (ಕೈವಲ್ಯ) ಪ್ರಾಪ್ತಿಯಾಗುತ್ತದೆ. ಆದರೆ ಅವನ ಶರೀರ ಸಂಸ್ಕಾರ ಮಾಡುವಾಗ ಲಿಂಗದ ಕಳೆಗಳನ್ನು ಬೇರೆ ಲಿಂಗಕ್ಕೆ ಆಕರ್ಷಿಸಿ ವಿಧ್ಯುಕ್ತವಾಗಿ ಶವಸಂಸ್ಕಾರ ಮಾಡಬೇಕು. ಶವಸಂಸ್ಕಾರಕ್ಕಾಗಿ ಲಿಂಗ ಧರಿಸಬೇಕು.

ಪ್ರಾಣಕ್ಕೆ ಹಾನಿಯಿಲ್ಲ. ಅದು ಮುಕ್ತವಾಗಿರುತ್ತದೆ. ಆದ್ದರಿಂದ ಬಹು ಎಚ್ಚರದಿಂದ ಧರಿಸಬೇಕು.

ಹೀಗೆ ಆಗಮಗಳಲ್ಲಿ ವೀರಶೈವ ಧರ್ಮದ ಸ್ವರೂಪ ಸ್ಪಷ್ಟವಾಗಿ ಕಂಡುಬರುತ್ತದೆ. ವೀರಶೈವದ ನೆಲೆ - ಹಿನ್ನೆಲೆ, ತತ್ತ್ವ - ಸಿದ್ಧಾಂತ, ಸಂಸ್ಕಾರ, ಸಂಸ್ಕೃತಿಗಳನ್ನು ಆಗಮಗಳಲ್ಲಿ ನಾವು ವಿವರವಾಗಿ ಗುರುತಿಸಬಹುದಾಗಿದೆ. ಲೇಖನದ ಪರಿಮಿತಿಯನ್ನು ಅನುಲಕ್ಷಿಸಿ, 'ಕಡಲನ್ನು ಕೊಡದಲ್ಲಿ' ಹಿಡಿಯುವ ಪ್ರಯತ್ನ ಮಾಡಿದ್ದೇನೆ. ಆಗಮಗಳನ್ನು ಆಸಕ್ತಿಯಿಂದ ಅಧ್ಯಯನ ಮಾಡಬಯಸುವವರಿಗೆ ಈ ಲೇಖನ ದಿಕ್ಸೂಚಿಯಾಗಿದೆ.

ಧರ್ಮ ಎನ್ನವುದು ಒಂದು ವಸ್ತುವಲ್ಲ, ಪದಾರ್ಥವಲ್ಲ. ಅದಕ್ಕೆ ನಿರ್ದಿಷ್ಟವಾದ ಭೌತಿಕ ಸ್ವರೂಪವಿಲ್ಲ. ಅದು ಭಾವನೆಗಳ ಸಮುದಾಯ, ಕಲ್ಪನೆಗಳ ಕಟ್ಟು. ಆಚಾರ - ವಿಚಾರಗಳ ಮೂಟೆ. ಇದು ಎಲ್ಲ ಕಾಲಕ್ಕೂ ಒಂದೇ ರೀತಿಯಾಗಿ ಉಳಿಯುವುದಿಲ್ಲ. ಕಾಲಕಾಲಕ್ಕೆ ಬದಲಾಗುತ್ತ, ಸನ್ನಿವೇಶ, ಸಂದರ್ಭಕ್ಕನುಗುಣವಾಗಿ ಧರ್ಮಪರಿವರ್ತನಶೀಲವಾಗಿರುತ್ತದೆ. ಯಾವುದೇ ಒಂದು ಧರ್ಮಕ್ಕೆ ವ್ಯವಹಾರಿಕವಾಗಿಯೋ, ಅನ್ವರ್ಥಕವಾಗಿಯೋ, ಅಂಕಿತವಾಗಿಯೋ ಒಂದು ಹೆಸರು ಇರುತ್ತದೆ. ಎಷ್ಟೋ ಸಂದರ್ಭಗಳಲ್ಲಿ ಧರ್ಮದ ನೆಲೆ, ನಂಬಿಕೆ, ನಡವಳಿಕೆಗಳು ವಿಪರೀತವಾದಾಗಲೂ ಹೆಸರು ಮಾತ್ರ ಹಾಗೆ ಉಳಿಯುತ್ತದೆ. ಇದು ಜಗತ್ತಿನ ಎಲ್ಲ ಧರ್ಮಗಳಿಗೂ ಅನ್ವಯಿಸುವ ಮಾತು. ಇಲ್ಲಿ ಈ ವಿಚಾರವನ್ನು ಪ್ರಸ್ತಾಪಿಸಲು ಕಾರಣ, ನನ್ನ ಈ ಲೇಖನದಲ್ಲಿ ಆಗಮಗಳ ಕಾಲದ 'ವೀರಶೈವ ಪರಿಕಲ್ಪನೆ' ನಂಬಿಕೆ, ನಡವಳಿಕೆ, ಸಂಸ್ಕೃತಿಗಳ ಸ್ಥೂಲ ನೋಟದ ಚಿತ್ರವನ್ನು ಓದುಗರ ಮುಂದೆ ಸ್ಥೂಲವಾಗಿ ಇಟ್ಟಿದ್ದೇನೆ. ವೀರಶೈವ ಧರ್ಮದ ವಿವರಣಾತ್ಮಕ ಪರಿಚಯಕ್ಕೆ ಮೂಲ ಆಗಮ ಕೃತಿಗಳ ಅಧ್ಯಯನ ಅನಿವಾರ್ಯವಾಗಿದೆ.

ಬಸವಣ್ಣನವರ ಅನುಭಾವ ದರ್ಶನ

ಶ್ರೀ ಯೋಗೀಶ ಯಡ್ರಾವಿ

೧

ಮಹಾತ್ಮಾ ಬಸವಣ್ಣನವರನ್ನು 'ಯುಗಪುರುಷ', 'ಯುಗ ಪ್ರವರ್ತಕ', 'ಯುಗ ನಿರ್ಮಾಪಕ' (An epoch-maker) ಎಂದು ಕರೆದಿದ್ದಾರೆ. 'ಕಾಯಕಯೋಗಿ', 'ಕ್ರಾಂತಿಯೋಗಿ' 'ಕಾರಣಿಕ ಪುರುಷ', 'ಅವತಾರ ಪುರುಷ' ಎಂದು ವರ್ಣಿಸಿದ್ದಾರೆ. 'ವೀರಶೈವ ಮತೋದ್ಧಾರಕ' 'ವೀರಶೈವಧರ್ಮ ಪ್ರವರ್ತಕ', 'ವೀರಶೈವ ಧರ್ಮ ಸಂಸ್ಥಾಪಕ', 'ಮಹಾಮಾನವತಾವಾದಿ' ಎಂದು ಕೊಂಡಾಡಿದ್ದಾರೆ. ಹಾಗೆಯೆ, ಅವರನ್ನು 'ಮಹಾನುಭಾವಿ'ಯೆಂದೂ ಪ್ರಶಂಸಿಸಿದ್ದಾರೆ. ಈ ಎಲ್ಲ ಹೊಗಳಿಕೆ ಪ್ರಶಂಸೆ, ವರ್ಣನೆಗಳ ಹಿಂದೆ ಆಯಾ ಲೇಖಕರ ಆದರ, ಅಭಿಮಾನ, ಗೌರವ, ಭಕ್ತಿಗಳು ಇರುವಂತೆಯೇ, ಬಸವಣ್ಣನವರ ಬಹುಮುಖ ವ್ಯಕ್ತಿತ್ವ, ಲೋಕೋತ್ತರ ವ್ಯಕ್ತಿತ್ವಗಳೂ ಬಹುಸ್ಫುಟವಾಗಿ ಕಂಗೊಳಿಸುತ್ತಿವೆ. ಅವರ ಇಂತಹ ವ್ಯಕ್ತಿತ್ವದ ಹಿಂದೆ ಅವರ ಅದ್ಭುತ ಸ್ವಯಂ ಸಾಧನೆ - ಸಿದ್ಧಿಗಳಿರುವಂತೆಯೇ, ಅವರ ಅಗಾಧವಾದ ಗುರುಸೇವೆಯ ಪರಮಪವಿತ್ರ ಫಲವೂ ಇದೆ. ಎಂತಲೇ ಅವರು ಅನುಭಾವದ ಶಿಖರಕ್ಕೇರಿದವರು; ಅವರದು ನಿಜಕ್ಕೂ ಪುರುಷ ವ್ಯಕ್ತಿತ್ವ !

'ಬಸವಣ್ಣನವರ ಕಾಯಕ ದರ್ಶನ', 'ಸಮಾಜ ದರ್ಶನ' ಮೊದಲಾದ ಪದಪ್ರಯೋಗಗಳಂತೆಯೇ 'ಬಸವಣ್ಣನವರ ಅನುಭಾವ ದರ್ಶನ' ಎಂಬುದೂ ಒಂದಾಗಿರುತ್ತದೆ. ಅನುಭಾವ ಮತ್ತು ದರ್ಶನ ಎಂಬ ಪದಗಳು ನಮ್ಮ ಭಾರತೀಯ ತತ್ವಶಾಸ್ತ್ರದ ಹಾಗೂ ಧಾರ್ಮಿಕ ಪರಂಪರೆಗೆ ಹೊಸವೇನೂ ಅಲ್ಲ. ಅನುಭವ ಮತ್ತು ಅನುಭಾವ ಎಂಬೆರಡೂ ಶಬ್ದಗಳನ್ನು ಏಕಾರ್ಥದಲ್ಲಿಯೇ ಬಳಸಿರುವದನ್ನು ನಾವು

ಕಾಣುತ್ತೇವೆ. ಆದರೆ, ಇತ್ತಿತ್ತಲಾಗಿ ಇವೆರಡರಲ್ಲೂ ಅಂತರವನ್ನು ಗುರುತಿಸುವ ಪ್ರವೃತ್ತಿ ಬೆಳೆದು ಬಂದಿದೆ ಮತ್ತು ಅದು ಯೋಗ್ಯವೂ ಆಗಿದೆ. ಸಾಮಾನ್ಯ ಅನುಭವವನ್ನು 'ಅನುಭವ' ಎಂಬೀ ಪದದಿಂದಲೂ ಆಧ್ಯಾತ್ಮಿಕ ಅನುಭವವನ್ನು 'ಅನುಭಾವ' ಎಂಬ ಪದದಿಂದಲೂ ನಿರ್ದೇಶಿಸಲಾಗುತ್ತಿದೆ. 'ದರ್ಶನ' ಎಂಬುದಂತೂ ಈಗ ಅನೇಕ ತತ್ವಜ್ಞಾನಿಗಳ ಪ್ರೀತಿಯ ಶಬ್ದವಾಗಿದೆ. 'ದೃಶ್' ಎಂಬುದು ನೋಡು, ಕಾಣು, ಅವಲೋಕಿಸು ಮುಂತಾದ ಅರ್ಥಗಳನ್ನು ಕೊಡುವ ಸಂಸ್ಕೃತ ಮೂಲಧಾತು ಆಗಿದೆ. ಅದರಿಂದ 'ದರ್ಶನ' ಎಂಬ ಪದ ನಿಷ್ಪತ್ತಿಯಾಗಿದೆ. ದೃಶ್ಯತೇ ಅನೇನ ಇತಿ ದರ್ಶನಮ್। ಇದರಿಂದ ಕಾಣ್ಕೆ ನೋಡುವಿಕೆ ಸಾಧ್ಯವಾಗುವದರಿಂದ ಇದನ್ನು 'ದರ್ಶನ' ಎಂದೆನ್ನಲಾಗುತ್ತಿದೆ. ಆದ್ದರಿಂದ ಅದು 'ಕಾಣುವಿಕೆ' ಅಥವಾ 'ಕಾಣ್ಕೆ' ಎಂಬ ಅರ್ಥವನ್ನು ಕೊಡುತ್ತದೆ. ಈ 'ಕಾಣ್ಕೆ' ಅನುಭವದ ಭಿನ್ನ ಭಿನ್ನ ಸ್ತರಗಳಲ್ಲಿ ಭಿನ್ನ ಭಿನ್ನವಾಗಿರಬಹುದು. ನಾವು 'ದರ್ಶನ' ಎಂಬುದನ್ನು ವಿಭಿನ್ನ ಸಂದರ್ಭಗಳಲ್ಲಿ ಬಳಸುತ್ತೇವೆ. ಅದನ್ನೆಲ್ಲಾ ಮುಂದೆ ನೋಡಿಕೊಳ್ಳಬಹುದು.

ಈಗ 'ಅನುಭಾವ' ಶಬ್ದದ ಅರ್ಥವ್ಯಾಪ್ತಿ, ವಿಸ್ತಾರ - ವೈಭವಗಳನ್ನು ಸಂಕ್ಷಿಪ್ತವಾಗಿ ನೋಡಿಕೊಳ್ಳುವದು ಪ್ರಸ್ತುತವಾಗಿದೆ. 'ಭೂ-ಭವ' = ಆಗು, ಉಂಟಾಗು ಎಂಬರ್ಥದಲ್ಲಿ ಮೂಲಸಂಸ್ಕೃತ ಧಾತುವಿಗೆ 'ಅನು=ಅನಂತರ, ಅನುಸರಿಸಿ ಎಂಬರ್ಥವುಳ್ಳ ಉಪಸರ್ಗಾನ್ವಯ ಕೂಡಿ ಅನುಭವ ಹಾಗೂ ಅನುಭಾವ ಎಂಬ ಪದಗಳು ನಿಷ್ಪನ್ನವಾಗಿವೆ. ಆದರೆ, ಅವುಗಳ ಉತ್ಪತ್ತಿಯ ಪ್ರಕಾರವೂ ಕೂಡ ಅರ್ಥದಲ್ಲಿ ಭೇದವಿದೆ. 'ಭೂ-ಭವತಿ ಆಗು' ಎಂದಾದರೆ ಭೂ=ಭಾವಯತಿ=ಆಗಿಸು ಎಂದಾಗುತ್ತದೆ. ಅನುಸರಿಸಿಕೊಂಡು ಆಗುವಿಕೆ ಅನುಭವವೆಂದಾದರೆ, ಅನುಸರಿಸಿಕೊಂಡು ಆಗಿಸುವಿಕೆ ಅನುಭಾವ ಎಂದಾಗಬೇಕಾಗುತ್ತದೆ. ಆದರೆ ರೂಢಿಯಲಿ ಮಾತ್ರ ಅನೇಕ ದಾರ್ಶನಿಕರೇ ಇವುಗಳನ್ನು ಒಂದೇ ಅರ್ಥದವು ಎಂಬಂತೆ ಹಲವಾರು ಸಂದರ್ಭಗಳಲ್ಲಿ ಬಳಸಿರುವದುಂಟು. ವೀರಶೈವ ದರ್ಶನದ ಮಟ್ಟಿಗೇ ಹೇಳಬೇಕೆಂದಿದ್ದರೆ. ಪ್ರಾಣಲಿಂಗಿಸ್ಥಲದ ಭಕ್ತಿಯನ್ನು ನಿರ್ದೇಶಿಸುವಾಗ ಅನುಭವಭಕ್ತಿ ಎಂದೂ ಬಳಸಿದ್ದಾರೆ, ಅನುಭಾವಭಕ್ತಿ ಎಂದೂ ಉಪಯೋಗಿಸಿದ್ದಾರೆ. ಆದರೂ, ಮುಂದೆ ಬಂದ ವೀರಶೈವದ ಮೇಲಿನ ಲೇಖಕರೇ ಇವೆರಡೂ ಶಬ್ದಗಳ ಅರ್ಥದಲ್ಲಿ ಅಂತರವಿರುವುದನ್ನು ಎತ್ತಿ ಬರೆಯುತ್ತ ಬಂದಿದ್ದಾರೆ. ನಾವೂ ಸಹ, ಅವರ ವಾದವನ್ನು ಈ ಹಂತದಲ್ಲಿ ಒಪ್ಪಿಕೊಂಡು ಸಾಮಾನ್ಯ ಅನುಭವವನ್ನು ಅನುಭವವೆಂತಲೂ, ಅದಕ್ಕಿಂತಲೂ ಆಳವಾದ ಆಧ್ಯಾತ್ಮಿಕ ಅನುಭವವನ್ನು ಅನುಭಾವವೆಂತಲೂ ತಿಳಿದುಕೊಳ್ಳಲು ಯಾವದೇ ಅಭ್ಯಂತರವೂ ಇಲ್ಲ. ಇದು ವಿಷಯ ವಿವೇಚನೆಗೆ ಅನುಕೂಲವಾಗುತ್ತದೆ, ಸುಕರವಾಗುತ್ತದೆ.

ಪ್ರಾಮಾಣಿಕ ತತ್ವ ಚಿಂತಕರಲ್ಲೊಬ್ಬರಾದ ಡಾ॥ ಆರ್.ಆರ್.ದಿವಾಕರರು ತಮ್ಮದೊಂದು ಪುಸ್ತಕದ ಹೆಸರನ್ನೇ **'ಅನುಭವ-ಅನುಭಾವ-ಅನುಭೂತಿ'** ಎಂಬುದಾಗಿ ಇರಿಸಿಕೊಂಡಿದ್ದಾರೆ. ಅವರೂ ಸಹ ಅನುಭವ ಮತ್ತು ಅನುಭಾವಗಳ ಅರ್ಥ ವಿಸ್ತಾರದಲ್ಲಿ ನಾವು ಮೇಲೆ ಒಪ್ಪಿಕೊಂಡ ಅಂತರವನ್ನೇ ಎತ್ತಿತೋರಿಸುತ್ತಾರೆ. 'ಅನುಭೂತಿ' ಎಂಬ ಮೂರನೆಯ ಶಬ್ದದ ಅರ್ಥಕ್ಕೆ ಅವರು ಒಂದು ವಿಶಿಷ್ಟವಾದ ಅರ್ಥವನ್ನು ಕೊಟ್ಟಿದ್ದಾರೆ. ಅದೇನೆಂದರೆ, ತನ್ನ ಅಧ್ಯಾತ್ಮ ಸಾಧನೆಯ ಚರಮ ಘಟ್ಟದಲ್ಲಿ ತಾನು ಪಡೆದ ಪರಿಪಕ್ವಸ್ಥಿತಿಯಲ್ಲಿ ವಿರಾಜಮಾನನಾಗಿರುವ ಒಬ್ಬ ಮಹಾಪುರುಷನ ಹೃದಯಾಂತರಾಳದಲ್ಲಿ ಅನುಭಾವವು ಕರಿಗೊಂಡು, ಸ್ಥಿರಗೊಂಡು, ನೆಲೆಗೊಂಡು ನಿಂತಾಗ, ಅವನ ಆ ಪರಮ ದಿವ್ಯಸ್ಥಿತಿಯನ್ನು 'ಅನುಭೂತಿ' ಎಂದು ಕರೆಯಲು ಸಾಧ್ಯವಿದೆ ಎಂಬರ್ಥ ಬರುವಂತೆ ಬರೆದಿದ್ದಾರೆ. ಶ್ರೀ ಶಂಕರಾಚಾರ್ಯರೂ ಸಹ ತಮ್ಮ ಒಂದೆರಡು ಪ್ರಕರಣ ಗ್ರಂಥಗಳಿಗೆ 'ಆತ್ಮಾನುಭವ', 'ಅಪರೋಕ್ಷಾನುಭೂತಿಃ', 'ಅದ್ವೈತಾನುಭೂತಿಃ' ಮುಂತಾಗಿ ಹೆಸರು ಕೊಟ್ಟಿದ್ದಾರೆ. ಅಂತೂ, ನಾವು 'ಅನುಭೂತಿ' ಎಂಬುದರಿಂದ ಶರಣನ ಅಥವಾ ಜೀವನ್ಮುಕ್ತಜ್ಞಾನೀ ಮಹಾಪುರುಷನ ನಿಜದಿರವು ಇಲ್ಲವೆ ಸಾಕ್ಷಾತ್ಕಾರದ ಸ್ಥಿತಿ ಎಂದು ಅರ್ಥ ಮಾಡಿಕೊಂಡರೆ ಸಾಕೆಂದು ತೋರುತ್ತದೆ.

ಅದ್ವೈತ ವೇದಾಂತದಲ್ಲಿ ಅನುಭವವನ್ನು ಮೂರು ಹಂತಗಳಲ್ಲಿ ಗುರುತಿಸಿದ್ದಾರೆ. ಒಂದು ಇಂದ್ರಿಯ ಸನ್ನಿಕರ್ಷದಿಂದ ಉಂಟಾಗುವ ಅನುಭವ. ಅದನ್ನು 'ಪ್ರತ್ಯಯಾನುಭವ' ಎಂದು ಕರೆದಿದ್ದಾರೆ. ಮತ್ತೊಂದು ಮನಸ್ಸಿನಲ್ಲಿಯೇ ಉಂಟಾಗುವ ಅನುಭವ. ಅದನ್ನು 'ವೇದನಾನುಭವ' ಎಂದು ಹೆಸರಿಸಿದ್ದಾರೆ. ಮೂರನೆಯದೇ ಪರಿಶುದ್ಧ ಆತ್ಮಕ್ಕೆ ಅಥವಾ ನಿತ್ಯನಿರ್ವಿಕಾರ,

ಅಸಂಗ, ಕೂಟಸ್ಥ ಸಾಕ್ಷಿ ಸ್ವರೂಪಕ್ಕೆ ಸಂಬಂಧಿಸಿದ ಅನುಭವ. ಅದನ್ನು 'ಸಾಕ್ಷ್ಯನುಭವ' ಅಥವಾ 'ಆತ್ಮಾನುಭವ' ಎಂದು ಕರೆಯಲಾಗಿದೆ. ಇಲ್ಲಿ 'ಆತ್ಮಾನುಭವ'ದ ಪರಿಕಲ್ಪನೆಯನ್ನು ವಿವರಿಸುವಾಗ. 'ಆತ್ಮವೇ ಅನುಭವ, ಅನುಭವವೇ ಆತ್ಮ' ಎಂದು ಅದರ ಅರ್ಥ ಮಾಡಿಕೊಳ್ಳಬೇಕೇ ವಿನಾ 'ಆತ್ಮನ ಅನುಭವ' ಎಂದು ಅರ್ಥ ಮಾಡಬಾರದೆಂದು ಸೂಚ್ಯವಾಗಿ ಪ್ರತಿಪಾದಿಸಿದ್ದಾರೆ. ಈ ಕೊನೆಯದಾದ ಆತ್ಮಾನುಭವವೇ 'ಅನುಭಾವ' ಎಂದು ಕರೆಯಲ್ಪಡುತ್ತದೆಂದು ನಾವಿಲ್ಲಿ ಇಟ್ಟುಕೊಳ್ಳಬಹುದು. ಇಂತಹ ಅನುಭವವನ್ನೇ ಶ್ರೀ ನಿಜಗುಣರು 'ಪರಮಾನುಭವ' 'ಪರಮಾರ್ಥಾನುಭವ' 'ಅನುಭವಸಾರ' ಮುಂತಾಗಿ ಕರೆದಿದ್ದಾರೆ. ವಚನಕಾರರು ಇದನ್ನು 'ಶಿವಾನುಭವ' 'ಶಿವಯೋಗಾನುಭವ', 'ಷಟ್‌ಸ್ಥಲಾನುಭವ' ಎಂದು ಮುಂತಾಗಿ ಭಾವಿಸಿದ್ದಾರೆ. ಈ ಸಂದರ್ಭದಲ್ಲಿ ಶ್ರೀ ಚೆನ್ನಬಸವೇಶ್ವರರ ಈ ವಚನವನ್ನು ನೋಡಿಕೊಳ್ಳಬಹುದು.

ಕಾಯಾನುಭಾವಿಗಳು ಕಾಯದಲ್ಲೇ ಮುಕ್ತರು.
ಜೀವಾನುಭಾವಿಗಳು ಜೀವದಲ್ಲೇ ಮುಕ್ತರು.
ಪ್ರಾಣಾನುಭಾವಿಗಳು ಪ್ರಾಣದಲ್ಲೆ ಮುಕ್ತರು.
ಪವನಾನುಭಾವಿಗಳು ಪವನದಲ್ಲೆ ಮುಕ್ತರು.
ಲಿಂಗಾನುಭಾವಿಗಳಿಗೆಂತು ಸರಿಯೆಂಬೆ?
ನಿರವಯ ಸ್ವಯಂಜ್ಯೋತಿ ಪ್ರಕಾಶರಪ್ಪರು ಲಿಂಗದಲ್ಲಿ
ಕೂಡಲಚೆನ್ನಸಂಗಾ, ನಿಮ್ಮ ಶರಣರು.

ಇಲ್ಲಿಯೂ ಕೂಡ ಚನ್ನಬಸವಣ್ಣನವರು ಅನುಭವದ ವಿವಿಧ ಪ್ರಕಾರಗಳನ್ನು ಪ್ರಾಸಂಗಿಕವಾಗಿ ಗುರುತಿಸಿದ್ದಾರೆ. ಆ ಸಂದರ್ಭದಲ್ಲಿ 'ಅನುಭಾವವನ್ನು', 'ಲಿಂಗಾನುಭಾವ' ಎಂದು ಕರೆದಿದ್ದಾರೆ. ಹೀಗೆಯೆ, ಅನೇಕ ಶರಣರು ಶಿವಾನುಭಾವ, ಶಿವಯೋಗಾನುಭಾವ ಮುಂತಾಗಿ ಕರೆದುದೂ ವಚನಶಾಸ್ತ್ರದ ಅಭ್ಯಾಸಿಗಳಿಗೆ ಗೊತ್ತಿರಲು ಸಾಕು. ಇಷ್ಟೆಲ್ಲಾ ನೋಡಿಕೊಂಡ ಬಳಿಕ, ನಾವು ಅನುಭವ ಮತ್ತು ಅನುಭಾವ ಇವುಗಳ ಅಂತಿಮ ನಿಷ್ಕರ್ಷೆಯನ್ನು ಹೀಗೆ ಮಾಡಬಹುದು. - ಅನುಭವ ಎಂದರೆ ಸಾಮಾನ್ಯ ಅನುಭವ ಅಥವಾ ಲೌಕಿಕಾನುಭವ ಅಥವಾ ಲೋಕಾನುಭವ ಎಂದಿಷ್ಟೇ ಅರ್ಥಮಾಡದೆ, ಲೌಕಿಕದಿಂದ ಹಿಡಿದು ಅಲೌಕಿಕ, ಪಾರಲೌಕಿಕಗಳನ್ನೊಳಗೊಂಡು ಪಾರಮಾರ್ಥಿಕ ಇಲ್ಲವೆ ಆಧ್ಯಾತ್ಮಿಕದವರೆಗೂ ಮಾನವನಿಗೆ ಯಾವ ಯಾವ ಅನುಭವಗಳು ಬರುತ್ತವೆಯೋ, ಅವೆಲ್ಲವೂ ಕೂಡ 'ಅನುಭವ' ಎಂಬುದರಲ್ಲಿಯೇ ಬರುತ್ತವೆ ಎಂಬುದನ್ನು ಮನಗಾಣಬೇಕು. ಆ ವಿವಿಧ ಪ್ರಕಾರದ ಅನುಭವಗಳಲ್ಲಿ ಆಧ್ಯಾತ್ಮಿಕ ಅನುಭವವನ್ನು ಮಾತ್ರ ಅನುಭಾವ ಎಂಬ ಪದದಿಂದ ಅರಿತುಕೊಳ್ಳಬೇಕು. ಇದು ವಿಷಯ ವಿವೇಚನೆಗೆ ಹೆಚ್ಚು ಸೌಕರ್ಯವನ್ನೊದಗಿಸುವಲ್ಲಿ ಸಂದೇಹವಿಲ್ಲ.

ಇನ್ನು 'ದರ್ಶನ' ಎಂಬ ಪದದ ಅರ್ಥದ ಕಡೆಗೆ ಸ್ವಲ್ಪ ಗಮನ ಹರಿಸಬಹುದು. ಅದರ ವ್ಯುತ್ಪತ್ತಿ ಅರ್ಥವನ್ನು ನಾವು ಈಗಲೇ ನೋಡಿಕೊಂಡಿದ್ದೇವೆ. 'ಕಾಣ್ಕೆ' ಎಂಬುದು ಅದರ ಅರ್ಥವಾಗಿದೆ. ''ಆತ್ಮಾವಾಃರೇ ದೃಷ್ಟವ್ಯಃ....।'' ಎಂದು ಬೃಹದಾರಣ್ಯಕ ಉಪನಿಷತ್ತಿನಲ್ಲಿ ಒಂದು ಮಂತ್ರವಿದೆ. ಇಲ್ಲಿ ಆತ್ಮದರ್ಶನವೆಂದರೇನು? ಆತ್ಮನನ್ನು ನೋಡಲು ಶಕ್ಯವೆ? 'ಯತೋವಾಚೋ ನಿವರ್ತಂತೇ ಅಪ್ರಾಪ್ಯ ಮನಸಾಸಹ।', 'ಯನ್ಮನಸಾ ನ ಮನ್ಯುತೇ।' ಎಂಬುದಾಗಿಯೂ, 'ಮಾತು ಮನಂಗಳಿಂದತ್ತತ್ತ ಮೀರಿದ', 'ಅಪ್ರಮಾಣ ಅಗೋಚರ, ಅಗಮ್ಯ, ಅಪ್ರತಿಮಲಿಂಗ'ವಾಗಿಯೂ ಯಾವುದನ್ನು ಶ್ರುತಿ - ಸದ್ಗುರುಗಳು ಶಿವಯೋಗಿಗಳು ವರ್ಣಿಸುತ್ತಾರೋ ಅದನ್ನು ನೋಡುವದೆಂದರೇನು? ಹಾಗಾದರೆ, ಇಲ್ಲಿ 'ದರ್ಶನ' ಎಂದರೆ, ಸಾಮಾನ್ಯವಾಗಿ ನೇತ್ರಾದಿ ಕರಣದಿಂದ ನೋಡುವುದು (Perception) ಎಂದರ್ಥವಾಗದೆ, ಒಳಗಣ್ಣಿನಿಂದ ನೋಡುವುದು (Higher perception) ಎಂದು ಅರ್ಥ ಹೊರಡುತ್ತದೆ. ಸಾಮಾನ್ಯವಾಗಿ ನಮಗೆ ಚರ್ಮಚಕ್ಷುವಿನಿಂದ ನೋಡುವುದು ಮಾತ್ರ ರೂಢಿಯಾಗಿರುವದರಿಂದ ಅದು ಮಾತ್ರ ಅರ್ಥವಾಗುತ್ತದೆ. ಇದಕ್ಕಿಂತಲೂ ಭಿನ್ನಗಳಾದ, ಒಂದಕ್ಕಿಂತ ಒಂದು ಉತ್ತರೋತ್ತರ ಶ್ರೇಷ್ಠತರವಾದ ಜ್ಞಾನಚಕ್ಷು, ಶ್ರದ್ಧಾಚಕ್ಷು ಮತ್ತು ಅನುಭವಚಕ್ಷುಗಳೆಂದು ಬೇರೆ ಮೂರು ಕಣ್ಣುಗಳುಂಟು. ಇಲ್ಲಿ

ನಾವು ಜ್ಞಾನಚಕ್ಷುವಿನಿಂದ ನೋಡುವ ಕ್ರಿಯೆಯನ್ನೇ 'ದರ್ಶನ' ಎಂದು ಕರೆಯಬಹುದು ಇಲ್ಲವೆ, 'ಅನುಭಾವ'ಕ್ಕೆ ಸಮಾನಾರ್ಥಕ ಪದವಾಗಿ ಇದನ್ನು ಗ್ರಹಿಸಿ, ಇದು ಅನುಭಾವಚಕ್ಷುವಿನಿಂದ ನೋಡುವುದು ಎಂಬ ಅರ್ಥವನ್ನು ಕೊಡುತ್ತದೆಂದು ಭಾವಿಸಬಹುದು.

'ದರ್ಶನ' ಎಂಬುದು ಸಾಮಾನ್ಯವಾಗಿ ನಾವು ಮೂರು ಸಂದರ್ಭಗಳಲ್ಲಿ ಪ್ರಯೋಗವಾಗಿರುವದನ್ನು ಕಾಣಬಹುದು. ಒಂದು, ದೃಷ್ಟಾದರ್ಶನ - ದೃಶ್ಯ ಎಂಬ ತ್ರಿಪುಟಿಯಲ್ಲಿ; ಎರಡನೆಯದಾಗಿ, ನ್ಯಾಯದರ್ಶನ, ವೈಶೇಷಿಕ ದರ್ಶನ, ಯೋಗದರ್ಶನ, ಸಾಂಖ್ಯದರ್ಶನ, ವೀರಶೈವ ಅಥವಾ ಶೈವದರ್ಶನ ಮೊದಲಾದ ವಿಭಿನ್ನ ತತ್ವಜ್ಞಾನದ ಮಾರ್ಗಗಳನ್ನು ಸೂಚಿಸುವಲ್ಲಿ ಮತ್ತು ಮೂರನೆಯದಾಗಿ, ಆತ್ಮದರ್ಶನ ಮುಂತಾಗಿ ಹೇಳುವಲ್ಲಿ 'ದರ್ಶನ' ಶಬ್ದವು ಬಂದಿದೆ. ತ್ರಿಪುಟಿಯಲ್ಲಿ 'ದರ್ಶನ'ವು ಕರಣಾತ್ಮಕವಾಗಿಯೂ, ನ್ಯಾಯದರ್ಶನ ಮುಂತಾದೆಡೆಗಳಲ್ಲಿ ಸಿದ್ಧಾಂತವೆಂಬರ್ಥದಲ್ಲಿಯೂ, 'ಆತ್ಮದರ್ಶನ' ಎಂಬಲ್ಲಿ 'ಸಾಕ್ಷಾತ್ಕಾರ' ಎಂಬರ್ಥದಲ್ಲಿಯೂ ಬಳಕೆಯಾಗಿದೆ ಎಂಬುದು ತತ್ವಜ್ಞಾನದ ವಿದ್ಯಾರ್ಥಿಗಳಿಗೆಲ್ಲರಿಗೂ ಸುವಿದಿತವಾದ ಸಂಗತಿಯಾಗಿದೆ. 'ದರ್ಶನ'ದ ತಾತ್ವಿಕ ವಿವೇಚನೆಯಲ್ಲಿ 'ವಸ್ತು ಸ್ವಭಾವದರ್ಶನವೇ ಜ್ಞಾನ' ಎಂಬುದಾಗಿ ಪ್ರತಿಪಾದಿಸಿದೆ. ಇಲ್ಲಿ ಅದನ್ನು ನಾವು ಸೂಕ್ಷ್ಮವಾಗಿ ಗಮನಿಸಿದಾಗ 'ಬಸವಣ್ಣನವರ ಅನುಭಾವ ದರ್ಶನ' ಎಂಬಲ್ಲಿ ಅನುಭಾವದ ಸ್ವರೂಪ ನಿರ್ಣಾಯಕ ಜ್ಞಾನವೇ ಆ ದರ್ಶನವಾಗಿದೆ ಎಂಬುದನ್ನು ಊಹಿಸಬಹುದಾಗಿದೆ.

೨

'ಅನುಭಾವ' ಎಂಬುದು ಐತಿಹಾಸಿಕ ದೃಷ್ಟಿಯಿಂದ ಭಾರತೀಯ ಸಂಸ್ಕೃತಿ - ನಾಗರಿಕತೆಗಳಷ್ಟೇ ಪುರಾತನವಾಗಿದೆ. ಆದರೆ, ಅದರ ನಿಷ್ಕರ್ಷೆ ಮಾತ್ರ ಅರ್ವಾಚೀನವಾಗಿದೆ. ಆಧುನಿಕ ತತ್ವಚಿಂತಕರು ಅದರ ವಿವಿಧ ಅರ್ಥಸ್ತರಗಳನ್ನು ಗುರುತಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇಂದು 'ಅನುಭಾವ ಮಾರ್ಗ', 'ಅನುಭಾವ ಶಾಸ್ತ್ರ' ಎಂಬುದು ಪಾಶ್ಚಿಮಾತ್ಯರಲ್ಲಿ ಪ್ರಸಿದ್ಧವಾದ 'Mysticism'ದ ಸಂಪಾದಿಯಾಗಿ ಬಳಕೆಯಾಗುತ್ತಿದೆ. ಈ ಅನುಭಾವವು ದೇಶ - ಕಾಲ - ಪರಿಸ್ಥಿತಿಯ ಕೂಸಲ್ಲ. ಇದೇ ಅರ್ಥವು W. James ತಮ್ಮ ಉದ್ಗ್ರಂಥವಾದ 'Varieties of Religious Experience' ಎಂಬುದರಲ್ಲಿ ಹೇಳಿದ 'The mystic classics have neither birth-day, nor native land' ಎಂಬ ಮಾತಿನಲ್ಲಿ ಧ್ವನಿಸುತ್ತದೆ. ಇದನ್ನು ಮನಗಂಡ ಅನೇಕ ಅನುಭಾವಿಗಳು ಮತ್ತು ಅನುಭಾವ ಶಾಸ್ತ್ರವನ್ನು ಕುರಿತು ಬರೆದ ಮಹನೀಯರು, ಮೇಧಾವಿಗಳು ಹೇಳಿದ ಮಾತುಗಳನ್ನು ಈ ಸಂದರ್ಭದಲ್ಲಿ ನೋಡಿಕೊಳ್ಳುವದು ಪ್ರಸ್ತುತವೆನಿಸದಿರಲಾರದು. Miss Underhill ಅನ್ನುವವರು "The essentials of mysticism" ಎಂಬ ತಮ್ಮದೊಂದು ಗ್ರಂಥದಲ್ಲಿ "We cannot honestly say that there is any wide difference between Brahmana, Sufi or Christian mystics. At their best they are far more like each other than the average believer in their sacred creeds!" ಎಂದು ಬರೆದಿದ್ದಾರೆ. ಬ್ರಾಹ್ಮಣ, ಸೂಫಿ ಅಥವಾ ಕ್ರೈಸ್ತ ಅನುಭಾವಿಗಳಲ್ಲಿ ಯಾವುದೇ ಹೆಚ್ಚಿನ ಅಂತರವಿರುವುದಿಲ್ಲ. ಅವರು ತಮ್ಮ ಅನುಭಾವದ ತುತ್ತತುದಿಯಲ್ಲಿ ನಿಂತುಕೊಂಡಾಗ ತಮ್ಮ ತಮ್ಮ ಮತ-ಧರ್ಮಗಳಲ್ಲಿಯೇ ನಿಷ್ಠೆಯುಳ್ಳ ಇನ್ನೊಬ್ಬ ಧಾರ್ಮಿಕನಂತೆ ಇರುವದಕ್ಕಿಂತಲೂ ಹೆಚ್ಚಾಗಿಯೇ ಒಬ್ಬರೊಬ್ಬರಂತೆ ಇರುತ್ತಾರೆ! ಇದೇ ಮಾತನ್ನು ಶ್ರೀ ಗುರುದೇವ ರಾನಡೆಯವರು ಹೀಗೆ ಹೇಳುತ್ತಾರೆ : "And the kernel of mysticism is at bottom one, though Indian mystics may ring upon one chord, the christian mystics on a second and the Islamic yet on a third. All these mystics constitute a musical bond of God and each constitutes his note in such a way that the whole becomes a harmony and a symphony wonderful", ಪಿಟೀಲು ವಾದ್ಯದ ತಂತಿಗಳು ಭಿನ್ನಭಿನ್ನವಿದ್ದರೂ, ಅದರಿಂದ ಹೊರಹೊಮ್ಮುವ ರಾಗರಂಜನೆಯು ಒಂದೇ; ಅದರಿಂದಾಗುವ ಆನಂದವೂ ಒಂದೇ.

ಮಾನವ ತಾನಿರುವ ಸದ್ಯದ ಅನುಭವಕ್ಕೆ ವಿಮುಖನಾಗುವ ಒಂದು ಸಂದರ್ಭ ಅವನ ಜೀವನದಲ್ಲಿ ಯಾವಾಗಲೋ ಒಮ್ಮೆ ಬಂದೇ ಬರುತ್ತದೆ. ಈಗಿರುವ ತನ್ನ ಸ್ಥಿತಿಯಲ್ಲಿ ಅದಾವುದೋ ಕೊರತೆಯನ್ನು, ನ್ಯೂನತೆಯನ್ನು, ಅರ್ಥಪೂರ್ಣತೆಯನ್ನು, ಅಲ್ಪತೆಯನ್ನು, ವಿರೋಧಾಭಾಸವನ್ನು ಕಂಡು, ಅವನು ಅದರತ್ತ ತನ್ನ ಬೆನ್ನು ತಿರುವುತ್ತಾನೆ. ಅದರ ಪೂರ್ಣತೆಗಾಗಿ ಹಲುಬಿ ಹಂಬಲಿಸುತ್ತಾನೆ. 'ಕೂ.ಸಂ.ದೇವಾ ಎನಗಿದು ವಿಧಿಯೇ?' ಎಂದು ಪ್ರಶ್ನಿಸುತ್ತಾನೆ. 'ಅಕಟಕಟಾ! ಶಿವ ನಿನಗಿನಿತು ಕರುಣವಿಲ್ಲ; ಅಕಟಕಟಾ! ಶಿವ ನಿನಗಿನಿತು ಕೃಪೆಯಿಲ್ಲ. ಏಕೆ ಹುಟ್ಟಿಸಿದೆ ಇಹಲೋಕದುಃಖಿಯ? ಏಕೆ ಹುಟ್ಟಿಸಿದೆ ಪರಲೋಕದೂರನ? ಏಕೆ ಹುಟ್ಟಿಸಿದೆ. ಕೂ.ಸಂ. ದೇವಾ, ಎನಗಾಗಿ ಮತ್ತೊಂದು ತರುಮರನಿರಲಿಲ್ಲವೆ?' ಎಂದು ಮುಂತಾಗಿ ಅವನ ಹೃದಯಾಂತರಾಳದಿಂದ ಕರುಳು ಬಿರಿಯುವಂತಹ ಕೂಗೊಂದು ತೂರಿಕೊಂಡು ಬರುತ್ತದೆ. ಸಂಸಾರದ ದಂದುಗ ಹಿಂಗುವದಿನ್ನೆಂದೋ? ಮನದಲ್ಲಿ ಪರಿಣಾಮವಹುದೆನಗಿನ್ನೆಂದೋ? ಎಂದು ಅತೃಪ್ತಗೊಂಡ ಅಂತರಂಗದಿಂದ ಆತುರದ ಕರೆಯೊಂದು ಹೊರಹೊಮ್ಮಿ ಬರುತ್ತದೆ. ಬಹುಶಃ ಇದು ಮಾನವ ಸ್ವಭಾವಕ್ಕೆ ಅಂಟಿಕೊಂಡು ಬಂದ ಸಹಜಗುಣವೆಂದು ಕಾಣುತ್ತದೆ.

ಅನುಭಾವಿಗಳ ಜೀವನದ ಕಥೆಯೆಂದರೆ, ಅವರು ಅತೃಪ್ತಿಗೆ ಸಮಾಧಾನವನ್ನು ಹುಡುಕುವದರಲ್ಲಿ, ತಮ್ಮ ಸದ್ಯದ ಅಪೂರ್ಣತೆಯಲ್ಲಿ ಪೂರ್ಣತೆಯನ್ನು ಶೋಧಿಸುವಲ್ಲಿ ನಡೆಸಿಕೊಂಡು ಬಂದು ಎಡೆಬಿಡದ ಹೋರಾಟವೇ ಅದಾಗಿದೆಯೆಂದು ಹೇಳಲು ಯಾವ ಅಭ್ಯಂತರವೂ ಇಲ್ಲ. ಅಂತಲೇ ಸತ್ಯಶೋಧನೆಯೂ ಕೂಡ ಮಾನವನ ಮೂಲಭೂತ ಸ್ವಭಾವದಲ್ಲಿ ಅಡಕವಾಗಿದೆಯೆಂದೇ ಹೇಳಬೇಕಾಗುತ್ತದೆ. ಸುತ್ತಲಿನ ವಿಶ್ವದೊಡನೆ ಮಾನವನು ಸಂಪರ್ಕವನ್ನು ಹೊಂದಿದಾಗ, ಅವನ ಜ್ಞಾನೇಂದ್ರಿಯಗಳಿಗೆ, ಮನಸ್ಸಿಗೆ, ಬುದ್ಧಿಗೆ, ವಿಚಾರಶಕ್ತಿಗೆ, ತಕ್ಕ ಸಾಮರ್ಥ್ಯಕ್ಕೆ, ಭಾವಕ್ಕೆ ಯಾವ ಯಾವ ಮಾತು, ವಸ್ತು ಹೊಳೆದು ತೋರುತ್ತದೆಯೋ, ಅದು ಹಾಗೆ ಗೋಚರಿಸುವಂತೆಯೇ ಇದೆಯೋ, ಇಲ್ಲವೋ ಎಂಬುದರ ಸತ್ಯತೆಯನ್ನು ಖಚಿತಪಡಿಸಿಕೊಳ್ಳಲು ಅವನು ನಡೆಸಿರುವ ವಿಮರ್ಶೆ ವಿವೇಚನೆಗಳೇ ಆ ಸತ್ಯಶೋಧನೆಯಾಗಿವೆಯೆಂದು ಹೇಳಬಹುದು. ಆದರೆ, ಪ್ರಾಮಾಣಿಕನಾದ ಸತ್ಯಾರಾಧಕನು, ಸತ್ಯಶೋಧಕನು ತಾನೆಂದೂ ತನ್ನ ಆ ಪ್ರಯತ್ನವನ್ನು ಅರ್ಧಕ್ಕೆ ನಿಲ್ಲಿಸುವದಿಲ್ಲ. ಬುದ್ಧಿಗೆ ಗೋಚರಿಸಿದ್ದು, ಭಾವಕ್ಕೆ ಹೊಳೆದದ್ದು ತಾನು ಆಯಾ ರೂಪದಲ್ಲಿ ಸತ್ಯವೇ ಆಗಿದೆಯೆಂದು ಖಚಿತಪಟ್ಟಷ್ಟಕ್ಕೇ ಅವನು ತೃಪ್ತನಾಗುವದಿಲ್ಲ. ಯಾಕೆಂದರೆ, ಅವನಿಗೆ ಬುದ್ಧಿಯ ಕಾರ್ಯವೈಖರಿ, ಅದರ ಕಾರ್ಯಕ್ಷೇತ್ರದ ಪರಿಮಿತಿ, ಹಾಗೆಯೇ, ಪ್ರಬಲ ಯುಕ್ತಿ ತರ್ಕಗಳ ನೇಮಿತ ಕಾರ್ಯಕ್ಷಮತೆ ಇವುಗಳ ಬಗ್ಗೆ ಸಂಪೂರ್ಣ ತಿಳಿವಳಿಕೆ - ಇರುತ್ತದೆ. ಅಂತಲೇ, ಅವನು ಅವುಗಳಾಚೆಯ ವಸ್ತುಸ್ಥಿತಿಯನ್ನು ಅದರ ಸತ್ಯತೆಯನ್ನು ಅರಿತು ಅನುಭವಿಸಲು ಆತುರವುಳ್ಳವನಾಗುತ್ತಾನೆ. ಆಗ ಅವನಿಗೆ ಅವನಲ್ಲಿ ಆಗಿನ ಆ ಸಾಧನೆಯ ಹಂತದಲ್ಲಿ ಅರಳಿನಿಂತ ಅಂತಃಪ್ರಜ್ಞೆಯು ಸಹಾಯಕ್ಕೆ ಬರುತ್ತದೆ. ಅದು ಅವನನ್ನು ಸ್ವಾನುಭಾವದ ನಿಜ ನಿಲವಿನಲ್ಲಿ ನಿಲ್ಲಿಸುತ್ತದೆ.

ಮೇಲಿನ ಮಾತಿನ ಸಾರಾಂಶವೆಂಬಂತೆ, ಒಬ್ಬ ಅನುಭಾವಿ ಹೀಗೆ ಹೇಳುತ್ತಾನೆ. 'Man cannot but philosophize and this philosophizing has 'rest' for its objective. The mystic craves for 'rest'. This one word summarizes all his longing. It is eternity and not mortality that will usher into the region of place'.

ನಿಜವಾಗಿಯೂ ಅವನಿಗೆ ಈ ಮರ್ತ್ಯದ ಚಂಚಲತೆ, ಚಲನೆ, ಅಶಾಶ್ವತತೆ ಸೇರುವದಿಲ್ಲ. ಅವನು ಶಾಶ್ವತವಾದ ನಿಜವಾದ ನಿವಾಸದಲ್ಲಿ ಅಮರ್ತ್ಯವಾದ ಪರಂಧಾಮದಲ್ಲಿ ವಿಶ್ರಾಂತಿಯನ್ನು , ದ್ವಂದ್ವಾತೀತ ಪರಮ ಶಾಂತಿಯನ್ನು ಸವಿಯ ಬಯಸುತ್ತಾನೆ. ಇದೇ ಅವನ ಸತ್ಯಶೋಧನೆಯ ಹೋರಾಟದ ಹಿಂದೆ ಇರುವ ಪರಮೋಚ್ಚ ಉದ್ದೇಶವಾಗಿದೆ. ಇದು ನಿಜಕ್ಕೂ Shelley ಮಹಾಕವಿ ಹೇಳುವ ಹಾಗೆ -

The desire of the moth for the star,
Of the night for the morrow,
The devotion to something afar,
From the sphere of our sorrow.

ಅಂದರೆ, ಮಾನವನು ದುಃಖವಲಯದಿಂದ ದೂರ ಬಹುದೂರವಿರುವ ಅದಾವುದೋ ಒಂದು ದಿವ್ಯತೆಗೆ ಹಲುಬಿ ಹಂಬಲಿಸುವ ರೀತಿಯು ದೀಪದ (ಹೊನ್ನಿಯ) ಹುಳುವೊಂದು ದೂರದ ಗಗನದಲ್ಲಿ ಮಿನುಗುವ ನಕ್ಷತ್ರ ಮಂಡಲವನ್ನು ಚುಂಬಿಸಬೇಕೆಂಬ ಹುಚ್ಚು ಹಂಬಲಕ್ಕೆ ಸದೃಶವಾಗಿದೆ; ಕಾದು, ಕಾದು ಕಂಗಾಲಾದ ಕಾರ್ಗತ್ತಲೆಯು ಬೆಳಕಿನ ದೂತನಾದ ಮುಂಜಾವಿಗಾಗಿ ತೀವ್ರವಾಗಿ ಹಾರೈಸುವಂತೆ ಇದ! ಇದು ಮಾನವನ ತರ್ಕಬುದ್ಧಿಗೆ, ಶಾಸ್ತ್ರಕೌಶಲಕ್ಕೆ, ವ್ಯವಹಾರಿಕ ಚತುರತೆಗೆ, ಒಣ ಪಾಂಡಿತ್ಯಕ್ಕೆ ನಿಲುಕುವ ಅನುಭವವಲ್ಲ ; ಇದು ನಿಜಕ್ಕೂ ಬೇರೊಂದು ಸೂಕ್ಷ್ಮದೃಷ್ಟಿ (Higher perception) ಗೆ ಮಾತ್ರ ಅನುಭವ ವೇದ್ಯವಾಗುವ ವಿಷಯವಾಗಿದೆ.

ಈ ಒಂದು ಸೂಕ್ಷ್ಮ ಅಂತಃಪ್ರಜ್ಞೆಯನ್ನು "Intuition" ಎಂದು ಕರೆದಿದ್ದಾರೆ. ಡಾ. ರಾಧಾಕೃಷ್ಣನ್ "Intuition is the extension of perception to regions beyond senses" ಎಂದು ಹೇಳುತ್ತಾರೆ. ಈ ಅಂತಃಪ್ರಜ್ಞೆಯಲ್ಲಿ ಅಹಂಕಾರದ ಗಂಧವೂ ಸಹ ಉಳಿದಿರುವದಿಲ್ಲ. ಸ್ವಾಮಿ ರಾಮದಾಸರು. "It is not by calculation, affirmation, or intellectual acceptance we can attain that supreme realization. It is a state of super consciousness attained through continuous remembrance of God.....until the ego-sense totally disappears." ಹೌದು, ಪ್ರತಿಯೊಬ್ಬ ಅನುಭಾವಿಗೂ ಪರಮಾತ್ಮನ ನಿತ್ಯನಿರಂತರ ಧ್ಯಾನದಿಂದ, ತೈಲಧಾರಾವತ್ ಪ್ರವಹಿಸುವ ಧ್ಯಾನದಿಂದ ಇಂತಹ ಒಂದು ಪರಮಾನುಭಾವವು, ಶಿವಯೋಗಾನುಭಾವವು, ಬ್ರಹ್ಮಾತ್ಮಾನುಭಾವವು, ದಿವ್ಯಾನುಭಾವವು ಪ್ರಾಪ್ತವಾಗಿದೆ. ಆಗಲೇ ಅಹಂಕಾರವು ಸಂಪೂರ್ಣ ನಾಶಹೊಂದಿ ಅವರ ದೇವೋನ್ಮಾದದ ಪ್ರಶಾಂತ ವಿಶ್ರಾಂತಿಗೆ ಆ ದೇವರೊಡನೆ ಉಂಟಾಗುವ ಪೂರ್ಣ ಐಕ್ಯವೇ ಕಾರಣವಾಗಿದೆ. ''ಅಹಂಕಾರ ಮನವನಿಂಬುಗೊಂಡಲ್ಲಿ ಲಿಂಗ ತಾನೆಲ್ಲಿಪ್ಪುದೋ? ಅಹಂಕಾರಕ್ಕೆ ಎಡೆಗುಡದೆ ಲಿಂಗತನುವಾಗಿರಬೇಕು. ಅಹಂಕಾರ ರಹಿತವಾದಲ್ಲಿ ಸನ್ನಿಹಿತ ಕಾಣಾ ಕೂಡಲ ಸಂಗಮದೇವ'' ಇದು ಬಸವಣ್ಣನವರ ಅನುಭಾವದ ಅಗರು ಹೊಗರು, ಶಾಂತಿ - ಆನಂದ. "He seeks to win his Lord through Love. His aim is one, the union of his soul with God, and this he considers the highest achievement of human consciousness". ಇದು ನಿಜಕ್ಕೂ ಎಲ್ಲ ದೇಶಗಳಲ್ಲಿ, ಎಲ್ಲ ಕಾಲಗಳಲ್ಲಿ, ಎಲ್ಲ ಪರಿಸ್ಥಿತಿಗಳಲ್ಲಿ ಬಾಳಿ, ಬದುಕಿ, ಬೆಳಗಿ, ಲೋಕಕ್ಕೆ ಬೆಳಕಾಗಿ ಬೇಡಿದವರಿಗೆ ಬೆಳಕು ಬೀರಿಹೋದ ಎಲ್ಲ ಮಹಾನುಭಾವಿಗಳಿಗೂ ಸಮಾನವಾಗಿದೆ. "Neither his Lord nor the instrument Love - employed by him is the monopoly of any creed" ಸರಿ, ಅನುಭಾವ ಮತ್ತು ಅದಕ್ಕೆ ಕಾರಣವಾದ ದೈವೀಪ್ರೇಮ ಯಾರೊಬ್ಬರ ಸೊತ್ತೂ ಅಲ್ಲ ; ಗುತ್ತಿಗೆಯೂ ಅಲ್ಲ.

ಮಾನವನ ಚಿತ್ತವು ಅವಸ್ಥಾಂತರಗಳನ್ನು ಹೊಂದುತ್ತಲೇ ಇರುತ್ತದೆ. ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ - ರಾಗ - ದ್ವೇಷಗಳು ಚಿತ್ತದಲ್ಲಿ ಮಾರ್ಪಾಟುಗಳನ್ನು ಎಸಗುತ್ತಲೇ ಇರುತ್ತವೆ. ಒಮ್ಮೆ ಸುಖವಾದರೆ, ಮತ್ತೊಮ್ಮೆ ದುಃಖಾನುಭವವಾಗುತ್ತದೆ. ಇವೆಲ್ಲವುಗಳಿಲ್ಲದೆ ಸುಖದುಃಖಾನುಭವಗಳನ್ನು ದಾಟಿದ, ಬಾಹ್ಯಪ್ರಜ್ಞೆ, ವಾಚಿಕೆಯಾದ ಅಂತಃಪ್ರಜ್ಞೆಗಳ ಸುಳಿವೂ ಇಲ್ಲದ, ಆದರೂ ಸೂಕ್ಷ್ಮತರ ಅಂತಃಪ್ರಜ್ಞೆಗೆ, ಅಂತಃಸ್ಫುರಣಕ್ಕೆ ಹೊಳೆಯುವ ಅನುಭವ ಒಂದಿದೆ. ಅದನ್ನು ಮಾನವನು ತನ್ನ ಆತ್ಮಸರ್ವಸ್ವದಿಂದ, ಪರಿಪಕ್ವಾಂತಃಕರಣೈಕ ಲಭ್ಯ. ಸಂಪೂರ್ಣ ಏಕಾಗ್ರತೆಯಿಂದ ಸಮಾಧಿ ಅಥವಾ

ತುರೀಯಾವಸ್ಥೆಯಲ್ಲಿ ಜಾಗ್ರತ್, ಸ್ವಪ್ನ ಸುಷುಪ್ತಿಗಳ ಸೋಂಕಿಲ್ಲದ ಅತ್ಯಂತ ಸೂಕ್ಷ್ಮತಮ ಚಿದವಸ್ಥೆಯಲ್ಲಿ ಅನುಭವಿಸಬಲ್ಲನು. ಅದೇ ಅನುಭಾವವೆನಿಸುವದು. ವೇದೋಪನಿಷತ್ತು, ಆಗಮಾದಿಗಳ ಕಾಲದಿಂದಲೂ ಈ ಬಗೆಯ ಚಿದವಸ್ಥೆ, ಅರ್ಥಾತ್, ಅನುಭಾವ ಎಂಬುದು ಭಾರತೀಯ ಋಷಿಮುನಿಗಳಿಗೆ ಚಿರಪರಿಚಿತವಾದುದು. ಇದನ್ನು ಮಹಾಪುರುಷರು ನಿರೂಪಿಸಲು ಹೋಗಿ ನಿಷೇಧಾತ್ಮಕ ಭಾಷೆಯಲ್ಲಿ ಉದ್ಗಾರ ಮಾತ್ರ ತೆಗೆದಿದ್ದಾರೆ. " With Buddha he becomes silent : with Vedantist, he cries Neti Neti (not this, not this) and with Ruybroek, he chants, He is neither this nor that". ಆದರೆ, ಈ ಬಗೆಯ ಉದ್ಗಾರವು ಬಯಸಿದ ವಸ್ತು ಕೈಗೆಟುಕದಾಗ, ನಿರಾಶೆಯಿಂದ ಹೊರಹೊಮ್ಮಿದ ನಿಟ್ಟುಸಿರಲ್ಲ. ಇದು ನಮ್ಮ ಜ್ಞಾನೇಂದ್ರಿಯಗಳ, ವಾಣಿಯ, ಮನಸ್ಸಿನ ವಿಚಾರಶಕ್ತಿಯ, ಬುದ್ಧಿಯ, ಭಾವದ ಅಸಾಮರ್ಥ್ಯವನ್ನು ಸೂಚಿಸುತ್ತದೆ. ಇದು ಬಸವಾದಿ ಶರಣರ ಕಾಲಕ್ಕೆ ಶಿಖರವನ್ನೇ ಮುಟ್ಟಿತ್ತು.

ಅನುಭಾವದ ಆಳ - ಅಗಲಗಳನ್ನು ಎತ್ತರ - ಬಿತ್ತರಗಳನ್ನು ಕುರಿತು ಬಸವಾದಿ ಶರಣ - ಶರಣೆಯರು ನಿಜಕ್ಕೂ ಬಹು ಅಮೋಘವಾದ ಅಣಿಮುತ್ತುಗಳನ್ನೇ ಸೂರಾಡಿದ್ದಾರೆ. ಅನುಭಾವವೆಂಬುದು ನೆಲದ ಮರೆಯ ನಿಧಾನ, ಅನುಭಾವವೆಂಬುದು ಅಂತರಂಗದ ರತ್ನ ; ಅನುಭಾವವೆಂಬುದು ಶಿಶು ಕಂಡ ಕನಸು! ಅದನ್ನು ಪ್ರಮಾತೃ - ಪ್ರಮಾಣ - ಪ್ರಮೇಯ ರೂಪ ವ್ಯಾವಹಾರಿಕ ಕ್ಷೇತ್ರದಲ್ಲಿ ಮಾತ್ರ ವರ್ತಿಸುವ, ಕಾರ್ಯಗೈಯಬಲ್ಲ ಇಂದ್ರಿಯಗಳಾಗಲಿ, ವಾಣಿಯಾಗಲಿ, ಮನವಾಗಲಿ, ಬುದ್ಧಿಯಾಗಲಿ, ಭಾವವಾಗಲಿ ಗುರುತಿಸಲು ಸಾಧ್ಯವೆ? ಆ ಅನುಭವವೆಂಬುದು ರಜ್ಜೆಯ ಮಾತೇ? ಸಂತೆಯ ಸುದ್ದಿಯೋ? ಬೀದಿಯ ಪ್ರಸಾರವೋ? ಅಲ್ಲಲ್ಲ, ಇದು ಕುಂತಲ್ಲಿ , ನಿಂತಲ್ಲಿ , ಮಾಡುವ ಮಾತಿನ ಮಾಲೆಯಲ್ಲ ! ಮಾತಿನ ಮಾತಿನಲಪ್ಪುದೆ? ಸಾಧ್ಯವಿಲ್ಲ. ಅನುಭಾವವೆಂಬುದು ಆತ್ಮವಿದ್ಯೆ, ಅನುಭಾವವೆಂಬುದು ತಾನಾರೆಂಬುದ ತೋರುವದು, ಅನುಭಾವವೆಂಬುದು ನಿಜನಿವಾಸದಲ್ಲಿರಿಸುವದು! ಇದು ಶಾಸ್ತ್ರಜಾಲದ ಪ್ರಸಾರವನ್ನಿಕ್ಕುವದಲ್ಲ!! ಶ್ರೀ ಶಂಕರಾಚಾರ್ಯರೂ ಸಹ ''ಶಬ್ದಝರೀ, ವಾಗ್ವೈಖರೀ, ಶಾಸ್ತ್ರ ವ್ಯಾಖ್ಯಾನ ಕೌಶಲಂ'' ಅಲ್ಲ ಎಂದು ಸ್ಪಷ್ಟವಾಗಿ ಹೇಳುತ್ತಾರೆ. ಅನುಭಾವವೆಂಬುದು ಅವರ ಪ್ರಕಾರ ''ಬ್ರಹ್ಮಾಕಾರತಯಾ ವೃತ್ತಿಃ ನಿರ್ವಿಕಾರತಯಾ ಸ್ಥಿತಿಃ । ವೃತ್ತಿ ವಿಸ್ಮರಣಂ ಸಮ್ಯಕ್ ಸಮಾಧಿರ್ಜ್ಞಾನಸಂಜ್ಞಕಂ॥'' ಎಂಬ ಪರಮ ಪರಾಕಾಷ್ಠ, ಪರಿಪಕ್ವ ವೃತ್ತಿ ಸ್ಥಿತಿಯಾಗಿದೆ. ಪೂರ್ಣದರ್ಶನದಿಂದ ಪ್ರದೀಪ್ತವಾದ ಪರಮಾನುಭಾವವಾಗಿದೆ, ಇದೇ ನಿಜಗುಣ ಶಿವಯೋಗಿಗಳು ಹೇಳುವ ''ಸುಜ್ಞಾನ ನಿಯೋಗ'', ಶ್ರೀ ಗೌಡಪಾದರು ಸಾರುವ ''ಅಸ್ಪರ್ಶಯೋಗ'', ಪ್ರೊ.ದಾಸಗುಪ್ತರು ಪ್ರತಿಪಾದಿಸುವ "Immediate, intimate, intuitive experience", ಡಾ॥ ರಾಧಾಕೃಷ್ಣನ್‌ರು ನಿರೂಪಿಸುವ "Knowledge brought into personal acquaintence" ಇದು ನಿಜಕ್ಕೂ 'ತರ್ಕವ ನುಡಿವನೆ ತತ್ವವಿದನು?' ಹಾಗೆಯೇ, 'ಪುಸಿ ನಿಯಮವನು ಬೋಧಿಸುವನೆ ನಿಜಗುರು?' ಎಂಬೆರಡು ಮಾತುಗಳಿಂದ ನಿಜಗುಣರು ತಿಳಿಸುವ ಅನುಭಾವಿಯ ನಿಜ ನಿಲವು! ಇದರಲ್ಲಿ ತೇಲಿದ್ದೇ ಆನಂದ, ಮುಳುಗಿದ್ದೇ ಶಾಂತಿ! ಇದು ಸತ್ತ ಮೇಲೆ ಸಿಕ್ಕುವ ಸ್ವರ್ಗವಲ್ಲ. ಇದೊಂದು ಜೀವಂತ ಜ್ವಲಂತ ಅನುಭವದ ಪರಾಕಾಷ್ಠೆ!! ''ಸತ್ತು ಕೈವಲ್ಯವನೈದುವೆನೆಂದಡೆ ಕುರಿ ಕಬ್ಬಿನ ತುದಿಯ ಮೇಯ್ದಂತೆ, ಕೂಡಲ ಸಂಗಮ ದೇವಾ''.

೩

ಮಹಾತ್ಮಾ ಬಸವಣ್ಣನವರೂ ಕೂಡ ಅನುಭಾವದ ಪರಮೋಜ್ವಲವಾದ ದರ್ಶನ ದೀಪ್ತಿಯಿಂದ ತಮ್ಮ ವ್ಯಕ್ತಿತ್ವವನ್ನು ತೀರ ಎತ್ತರಕ್ಕೆ ಏರಿಸಿಕೊಂಡವರು. ಅವರು ಅನುಭಾವದ ಮಾರ್ಗವನ್ನು ಬಿತ್ತರಿಸುವ ಮೊದಲು ಅನುಭಾವದ ಬಗೆಗೆ ತಮ್ಮ ದರ್ಶನವೆಂತಹದಿತ್ತೆಂಬುದನ್ನು ತಮ್ಮ ವಚನಗಳಲ್ಲಿ ಅದೆಂತು ಪ್ರತಿಪಾದಿಸಿದ್ದಾರೆಂಬುದನ್ನು ನೋಡುವದು ಕ್ರಮಪ್ರಾಪ್ತವಾಗಿದೆ. ಅವರು ಸಮಾರು ೪೦ ವಚನಗಳಲ್ಲಿ ಅನುಭಾವ ಎಂಬ ಪದ ಪ್ರಯೋಗವನ್ನು ಮಾಡಿದ್ದಾರೆ ಮತ್ತು ಅವೆಲ್ಲಾ ಅವರು ಅದರ

ಸ್ವರೂಪ, ಫಲ, ಎತ್ತರ - ಬಿತ್ತರಗಳನ್ನು ಬಹು ಸೂಕ್ಷ್ಮವಾಗಿ ನಿರೂಪಿಸಿದ್ದಾರೆ. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ನೋಡಿಕೊಳ್ಳಲು ಶಕ್ಯ. 'ಅರುಹಿನ ತೃಪ್ತಿಗೆ ಅನುಭಾವವೇ ಆಶ್ರಯ. ಲಿಂಗದ ಅನುಭಾವದಿಂದ ನಿಮ್ಮ ಕಂಡೆನು. ನಿಮ್ಮ ಕಂಡೆನ್ನ ಮರೆದೆ, ಕಾಣಾ ಪ್ರಭುವೆ, ಕೂಡಲ ಸಂಗಮದೇವಾ॥' ಎಂಬುದು ಈ ವಿಷಯದಲ್ಲಿ ಬಹು ಪ್ರಸಿದ್ಧವಾದ ವಚನ. ಇದರಲ್ಲಿ ಮಹಾನುಭಾವಿಗಳಾದ ಬಸವಣ್ಣನವರು ಅನುಭಾವದ ಹಿರಿಮೆಯನ್ನು, ಅದರ ಸ್ವರೂಪವನ್ನು, ಅದರ ಪರಮ ಫಲವನ್ನೂ ಬಹು ಮಾರ್ಮಿಕವಾಗಿ ಸೂಚಿಸಿದ್ದಾರೆ. ಅರಿದ ಅರಿವು ತೃಪ್ತಿಯನ್ನು ತಂದುಕೊಡುವದರಲ್ಲಿಯೇ ತನ್ನ ಸಾರ್ಥಕತೆಯನ್ನು ಕಂಡುಕೊಳ್ಳುತ್ತದೆ. ಅಂತಹ ಅತ್ಯಮೂಲ್ಯವಾದ ತೃಪ್ತಿ ಪ್ರಾಪ್ತವಾಗಬೇಕಾದರೆ, ಅರುಹು ಬರಿಯ ಅರುಹಾಗಿ ಉಳಿಯದೆ ಅನುಭಾವದ ನಿಲವಿಗೆ ಬರಬೇಕು. ಯಾಕಂದರೆ, ಆ ತೃಪ್ತಿಗೆ ಇಂತಪ್ಪ ಅನುಭಾವವೇ ಆಶ್ರಯ. ಇದು ನಿಜಕ್ಕೂ ಅನುಭಾವದ ಹಿರಿಮೆ - ಗರಿಮೆಗಳನ್ನು ಎತ್ತಿ ತೋರಿಸುತ್ತದೆ. "I must try to convince myself by experience that my conclusion is correct" ಅಂದಾಗ, ನನಗೆ ತೃಪ್ತಿ, ನಿರಂಕುಶತೃಪ್ತಿ ಸಾಧ್ಯ, ಇಲ್ಲದಿದ್ದರೆ ಇಲ್ಲ. ಇಂತಹ ಅನುಭಾವದ ನೈಜಸ್ವರೂಪವೆಂದರೆ, ಅದರಲ್ಲಿ ಅಹಂಕಾರದ ಲೇಶಮಾತ್ರವೂ ಇರುವುದಿಲ್ಲ. 'ನಿಮ್ಮ ಕಂಡು ಎನ್ನ ಮರೆದೆ, ಕಾಣಾ॥' ಎಲ್ಲಿಯವರೆಗೆ ಅಹಮಿನ ಮಿಸುಕಾಟವಿರುತ್ತದೆಯೋ ಅಲ್ಲಿಯ ವರೆಗೆ ಅದು ಸಾಮಾನ್ಯ ಅನುಭವವಾದೀತೇ ವಿನಾ ಅನುಭಾವವಾಗಲಾರದು. ''ಲಿಂಗದ ಅನುಭಾವದಿಂದ ನಿಮ್ಮ ಕಂಡೆನು'' ಎಂಬ ಮಾತಿನಿಂದ ಬಸವಣ್ಣನವರು ಅನುಭಾವದ ಪರಮ ಫಲವನ್ನು ಎತ್ತಿ ಹೇಳಿದ್ದಾರೆ. ಆ ಪೂರ್ಣ ಸಾಕ್ಷಾತ್ಕಾರವೇ ಅದರ ಫಲ.

ಮಹಾತ್ಮಾ ಬಸವಣ್ಣನವರು ಅನುಭಾವದ ವಿವಿಧ ಸ್ತರಗಳನ್ನು ಗುರುತಿಸಿದ್ದು, ಅದನ್ನೆಲ್ಲಾ ತಮ್ಮ ಹತ್ತು ಹಲವು ವಚನಗಳಲ್ಲಿ ಬಹು ಸ್ವಾರಸ್ಯಪೂರ್ಣವಾಗಿ ಸೂಚಿಸಿದ್ದಾರೆ.

> ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯಾ;
> ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯಾ;
> ಸತ್ಯದ ಬಲದಿಂದ ಅಸತ್ಯದ ಕೇಡು ನೋಡಯ್ಯಾ;
> ಪರುಷದ ಬಲದಿಂದ ಅವಲೋಹದ ಕೇಡು ನೋಡಯ್ಯಾ;
> ಕೂಡಲ ಸಂಗನ ಶರಣರ ಅನುಭಾವದಿಂದ ಎನ್ನ ಭವದ ಕೇಡು ನೋಡಯ್ಯಾ.

ಜ್ಞಾನದ ಬಲದಿಂದ ಅಜ್ಞಾನವು ನಾಶವಾಗುತ್ತದೆ. ಇದಕ್ಕೆ ದೃಷ್ಟಾಂತ ಬೆಳಕಿನ ಬಲದಿಂದ ಕತ್ತಲೆ ನಾಶವಾದಂತೆ! ಸತ್ಯದ ಅಳವಡಿಕೆ ಅನುಭವದಿಂದ ಅಸತ್ಯ ಮಾಯವಾಗುವದು. ಇದಕ್ಕೆ ದೃಷ್ಟಾಂತ ಪರುಷ ಸೋಂಕಿದಾಗ ಅವಲೋಹತ್ವ ಅಂದರೆ ಕಬ್ಬಿಣತನವೇ ಅಳಿದಂತೆ. ಹಾಗೆಯೆ ಶರಣರ ಅನುಭಾವದ ಶ್ರವಣ - ಮನನ - ನಿದಿಧ್ಯಾಸನದಿಂದ ಸಂಸಾರ ದುಃಖಕ್ಕೆ ಜನ್ಮ-ಮರಣ ರೂಪ ಭವಚಕ್ರಕ್ಕೆ ಪೂರ್ಣ ವಿರಾಮ ಬೀಳುತ್ತದೆ! ಇದೇ ಧಾಟಿಯಲ್ಲಿ ಹೇಳಿದ 'ನಿಮ್ಮ ಅನುಭಾವದಿಂದ ಎನ್ನ ಭವಂ ನಾಸ್ತಿಯಾಯಿತ್ತು। ' ಎನ್ನುವಲ್ಲಿ 'ಕೂಡಲ ಸಂಗನ ಶರಣರ ಅನುಭಾವವಿಲ್ಲದವರು ಎಲ್ಲಿದ್ದರೇನು' ಎನ್ನುವಲ್ಲಿ, ಹಾಗೆಯೆ, ''ಗರುವರ ಗರುವತನ ಕೂಡಲ ಸಂಗಯ್ಯನ ಅನುಭಾವದಿಂದ ।'' ಎನ್ನುವಲ್ಲಿ - ಇನ್ನೂ ಹಲವೆಡೆಯಲ್ಲಿ ಇದೇ ಅರ್ಥಛಾಯೆ ಬರುತ್ತದೆ. ವಚನ ಪಿತಾಮಹ ಡಾ॥ ಫ.ಗು. ಹಳಕಟ್ಟಿಯವರು ತಮ್ಮ ''ಶಿವಾನುಭವ ಶಬ್ದಕೋಶ'' ಎಂಬ ಗ್ರಂಥದಲ್ಲಿ ಅನುಭಾವ ಗೋಷ್ಠಿ, ಶಿವಾನುಭವ ಸದ್ಗೋಷ್ಠಿ ಎಂಬೀ ಶಬ್ದಗಳಿಂದ ಸೂಚಿಸಬಯಸಿದ ಅರ್ಥವೇ ಬಸವಣ್ಣನವರ ಇಲ್ಲಿ ಉದಾಹರಿಸಿದ ವಚನಗಳಲ್ಲಿ ಬಂದಿದೆ. ಡಾ॥ ಹಳಕಟ್ಟಿಯವರು ''ಮನುಷ್ಯನು ತಾನು ಮೊದಲು ವಿಚಾರಿಸಬೇಕು, ವಿಚಾರ ಮಾಡಿದ ಬಳಿಕ ಅವನು ಅದರಂತೆ ಆಚರಿಸಬೇಕು. ಹೀಗೆ ಆಚರಿಸುವದೇ ಅನುಭಾವವು'' ಎಂದಿಷ್ಟೇ ಹೇಳಲಿಲ್ಲ. ಅವರು ಮುಂದುವರಿದು ''ಆದರೆ ಹೀಗೆ ಆಚರಿಸುವ ಪೂರ್ವದಲ್ಲಿ ಅವನು ಬಲ್ಲವರೊಡನೆ ತಾನು ತಿಳಿದಿದ್ದರ ಬಗ್ಗೆ ಚರ್ಚಿಸಬೇಕು, ಅಥವಾ ಅವರಿಂದ ಹೆಚ್ಚಿನ ವಿಷಯಗಳನ್ನು ತಿಳಿದುಕೊಳ್ಳಬೇಕು. ಹೀಗೆ ತಿಳಿದುಕೊಳ್ಳುವ ಕಾರ್ಯಕ್ಕೆ 'ಶಿವಾನುಭವ' ಎಂತಲೂ

ಹೆಸರಿದೆ'' ಎಂದೂ ಹೇಳುತ್ತಾರೆ. ಅದಕ್ಕೆ ಅವರು ಬಸವೇಶ್ವರರು ಅನುಭವ ಮಂಟಪದಲ್ಲಿ ನಡೆಸುತ್ತಿದ್ದ ಚರ್ಚೆಗಳ ಉದಾಹರಣೆಯನ್ನು ಎತ್ತಿ ಹೇಳುತ್ತಾರೆ. 'ಶೂನ್ಯ ಸಂಪಾದನೆ'ಯಲ್ಲಿ ಮಹಾನುಭಾವ ಪ್ರಸಂಗ, ಮಹಾನುಭಾವಗೋಷ್ಠಿ ಮುಂತಾದ ಹೆಸರುಗಳಿಂದ ಇದೇ ಅರ್ಥವನ್ನು ಪುಷ್ಟೀಕರಿಸುವ ಪದ ಪ್ರಯೋಗಗಳು ಬಂದಿವೆ. ''ಮನದ ಮೈಲಿಗೆ ತೊಳೆಯಬೇಕಾದರೆ, ಕೂಡಲ ಚನ್ನಸಂಗಯ್ಯನ ಶರಣರ ಅನುಭಾವವ ಮಾಡುವದು'' ಎಂದು ಚನ್ನಬಸವಣ್ಣನವರೂ ಹೇಳಿದ್ದಾರೆ. ಇರಲಿ,

ಮಹಾನುಭಾವಿ ಬಸವಣ್ಣನವರು ಈ ಅನುಭಾವವು ಸ್ವಾನುಭಾವವೂ ಆಗಿದೆ ಎಂಬ ಅರ್ಥದಲ್ಲಿ ಬೇಕಾದಷ್ಟು ವಚನಗಳಲ್ಲಿ ಪ್ರತಿಪಾದಿಸಿದ್ದಾರೆ. ಅವರೀ ಅನುಭವದ ಪೂರ್ಣವಚನವನ್ನು ನಾವು ನೋಡಿಕೊಳ್ಳಬಹುದು. ಅದರ ಅರ್ಥ ಹಿಂಜಿದಷ್ಟೂ ಅಗಾಧವಾಗಿದೆ :

ಆಚಾರ ಲಿಂಗವಿಡಿದು ಅನುಭಾವ ಲಿಂಗಸಿದ್ಧಿ ;
ಅನುಭಾವ ಲಿಂಗವಿಡಿದು ಮಾರ್ಗಕ್ರಿಯಾಲಿಂಗ ಸಿದ್ಧಿ ,
ಮಾರ್ಗಕ್ರಿಯಾ ಲಿಂಗವಿಡಿದು ಮೀರಿದ ಕ್ರಿಯಾಲಿಂಗ ಸಿದ್ಧಿ ;
ಮೀರಿದ ಕ್ರಿಯಾಲಿಂಗ ವಿಡಿದು ಕ್ರಿಯಾ ನಿಷ್ಪತ್ತಿಲಿಂಗ ಸಿದ್ಧಿ !
ಇದು ಕಾರಣ, ಕೂಡಲ ಸಂಗಮದೇವಾ, ಲಿಂಗವಿಡಿದು ಲಿಂಗಸಿದ್ಧಿ ॥

'ಲಿಂಗವಿಡಿದು ಲಿಂಗಸಿದ್ಧಿ!' ಎಂಬುದು ಅನುಭಾವ ಮಾರ್ಗದ ಸಾಧನವನ್ನೂ, ಅದರಿಂದ ಪ್ರಾಪ್ತವಾಗುವ ಪರಮಸಿದ್ಧಿಯನ್ನು ಎತ್ತಿ ತೋರಿಸುತ್ತದೆ. ಆ ಸಾಧನದ ಹಂತಗಳು ಹೀಗೆ ಇವೆ :

೧. ಆಚಾರ ಲಿಂಗದ ಅನುಸಂಧಾನ ;
೨. ಅನುಭಾವಲಿಂಗದ ಅನುಸಂಧಾನ ;
೩. ಮಾರ್ಗಕ್ರಿಯಾಲಿಂಗದ ಅನುಸಂಧಾನ
೪. ಮೀರಿದ ಕ್ರಿಯಾಲಿಂಗದ ಅನುಸಂಧಾನ ;
೫. ಕ್ರಿಯಾ ವಿಶ್ರಾಂತಿ ಲಿಂಗದ ಅನುಸಂಧಾನ ಮತ್ತು
೬. ಕ್ರಿಯಾನಿಷ್ಪತ್ತಿ ಲಿಂಗದ ಅನುಭಾವ

ಅನುಭಾವದ ಈ ಆರು ಹಂತಗಳ ವಿವೇಚನೆ - ವಿವರಣೆಗಳು ಇಲ್ಲಿ ಅಪ್ರಸ್ತುತ. ಆದರೆ, ಅವುಗಳ ಬಗೆಗೆ ಒಂದು ಮಾತನ್ನು ನಾವಿಲ್ಲಿ ತೀವ್ರವಾಗಿ ಗಮನಿಸಬೇಕು. ಅದೆಂದರೆ ಈ ಆರು ಹಂತಗಳು ಭಕ್ತಾದಿ ಐಕ್ಯಾಂತ ಆರು ಸ್ಥಲಗಳಿಗೆ ಹೊಂದಿಕೊಳ್ಳುತ್ತವೆ. ಆಚಾರ ಲಿಂಗವೆಂಬುದು ಭಕ್ತಸ್ಥಲವಾದರೆ, ಕ್ರಿಯಾ ನಿಷ್ಪತ್ತಿ ಲಿಂಗವೆಂಬುದು ಐಕ್ಯಸ್ಥಲವಾಗಿದೆ. ಹೀಗೆಯೇ ನಡುವಿನ ನಾಲ್ಕು ಸ್ಥಲಗಳನ್ನೂ ಅರಿತುಕೊಳ್ಳಬೇಕು. ಈ ಸಂದರ್ಭದಲ್ಲಿ ಶ್ರೀ ಗುರುದೇವ ರಾನಡೆಯವರು 'ಉಪನಿಷತ್ ರಹಸ್ಯ' ಅಥವಾ 'ಭಾರತೀಯ ಅಧ್ಯಾತ್ಮ ಶಾಸ್ತ್ರದ ಪೀಠಿಕೆ' (A constructive survey of upanishadic philosophy) ಎಂಬ ತಮ್ಮ ಅಭ್ಯಾಸಪೂರ್ಣ ಹಾಗೂ ಅನುಭವಪೂರ್ಣ ವಿವೇಚನೆಯಿಂದ ಕೂಡಿದ ಉದ್ಗ್ರಂಥದಲ್ಲಿ ಅನುಭಾವದ ಐದು ಸೋಪಾನಗಳನ್ನು ಗುರುತಿಸಿದ್ದಾರೆ. ಮೊದಲನೆಯ ಹಂತದಲ್ಲಿ ದೇವರು ಅಥವಾ ಆತ್ಮನು ತನ್ನಿಂದ ಬೇರೆ ಇದ್ದಾನೆಂದು ತಿಳಿದು ಉಪಾಸಿಸುವ ತವಕದಲ್ಲಿ ಸಾಧಕನಿರುತ್ತಾನೆ. ಆಗ ಅವನು ಪ್ರಾರ್ಥನೆ ಮುಂತಾದವುಗಳಲ್ಲಿ ತೊಡಗುತ್ತಾನೆ. ''ಆತ್ಮಾವಾ ಅರೇ ದ್ರಷ್ಟವ್ಯಃ'' ಎಂಬ ಉಪನಿಷನ್ಮಂತ್ರವೇ ಅವನಿಗೆ ಅತ್ಯಂತ ಮುಖ್ಯವಾಗಿರುತ್ತದೆ. ತನ್ನ ಆತ್ಮನ ದಿವ್ಯತೆಯನ್ನು ಈ ರೀತಿ ಭಿನ್ನವಿಟ್ಟರಸುವಾಗ, ಸಾಧಕನ ಸುಕೃತ ವಿಶೇಷದಿಂದ ಗುರು ದೊರಕುತ್ತಾನೆ. ಆಗ ಅವನು ಪುನರ್ಜಾತನಾಗುತ್ತಾನೆ, ಗುರುಕರಕಮಲಸಂಜಾತನಾಗುತ್ತಾನೆ : ''ತದ್ವಿದ್ಧಿ ದ್ವಿತೀಯಂ ಜನ್ಮ!'' ಇದೀಗ ಸಾಧಕನು ಅನುಭಾವದ ದ್ವಿತೀಯ

ಸೋಪಾನವನ್ನು ಏರುವ ಅರ್ಹತೆಯನ್ನು ಪಡೆದಿದ್ದಾನೆ. ಈಗ ಅವನು ಆತ್ಮನನ್ನು ಹೊರಗೆ ಕಾಣಲು ಶಕ್ಯವಿಲ್ಲ, ತನ್ನೊಳಗೇ ಕಂಡುಕೊಳ್ಳಬೇಕು ; ನಿಜವಾಗಿಯೂ, ಹೊರಗಿರುವದೆಲ್ಲವೂ ಜಡ, ಅಂತೆಯೇ ನಶ್ವರ ; ಆತ್ಮನಾದರೋ ಚೈತನ್ಯದ ಬುಗ್ಗೆ ಎಂದು ಮನಗಾಣುತ್ತಾನೆ. ಕೇನೋಪನಿಷತ್ತು ಅವನು ಕಣ್ಣಿಗೆ ಕಣ್ಣಾಗಿದ್ದಾನೆ, ಪ್ರಾಣಕ್ಕೆ ಪ್ರಾಣವಾಗಿದ್ದಾನೆ ಮನಸ್ಸಿಗೆ ಮನಸ್ಸಾಗಿದ್ದಾನೆ ಎಂದು ಮುಂತಾಗಿ ಆತ್ಮನ ಶುದ್ಧಚೈತನ್ಯವನ್ನು ಮನಂಬುಗುವ ಶೈಲಿಯಲ್ಲಿ ಪ್ರತಿಪಾದಿಸುತ್ತದೆ. ಇದು ಎರಡನೆಯ ಸೋಪಾನದಲ್ಲಿ ನಿಂತ ಸಾಧಕನ ನಿಜ ನಿಲವನ್ನು ಪುಷ್ಟೀಕರಿಸುತ್ತದೆ.

ಮೂರನೆಯ ಸೋಪಾನದಲ್ಲಿ ಸಾಧಕನು ಇನ್ನೂ ಮುಂದುವರಿಯುತ್ತಾನೆ. ತನ್ನೊಳಗಿರುವ ಆತ್ಮನೇ ಬಾಹ್ಯ ಜಗತ್ತಿನಲ್ಲಿ ಅದಕ್ಕೆ ಆಧಾರಭೂತನಾದ ಬ್ರಹ್ಮವಾಗಿದೆ ಎಂಬುದನ್ನು ಮನಗಾಣುತ್ತಾನೆ. ಅಂದರೆ, ಇದೀಗ ಅವನಿಗೆ ಆತ್ಮವೇ ಬ್ರಹ್ಮ, ಬ್ರಹ್ಮವೇ ಆತ್ಮ. ನಾಲ್ಕನೆಯ ಸೋಪಾನಕ್ಕೆ ಅವನು ತಲುಪಿದಾಗ, ತನ್ನೊಳಗಿನ ಆತ್ಮ ಸ್ವರೂಪವೇ ಬ್ರಹ್ಮವಾಗಿದೆಯೆಂಬುದು ನಿರ್ವಿವಾದದ ಸಿದ್ಧಾಂತವಾಗಿರುವಾಗ, ಸಹಜವೇ ತಾನೇ ಆ ಬ್ರಹ್ಮವಾಗಿದ್ದೇನೆಂಬ ದಿವ್ಯಾನುಭವಕ್ಕೆ ಪಾತ್ರನಾಗುತ್ತಾನೆ. ಇದು ಮುಂದೆ ''ಸರ್ವಂ ಖಲ್ವಿದಂ ಬ್ರಹ್ಮ'' ಎಂಬ ಪೂರ್ಣಾನುಭವದಲ್ಲಿ ಅಂದರೆ, ಐದನೆಯ ಸೋಪಾನದ ಪರಮಾನುಭವದಲ್ಲಿ ಪರ್ಯವಸಾನಗೊಳ್ಳುತ್ತದೆ. ಇದರಿಂದ ಒಂದು ದಿವ್ಯಸಮೀಕರಣವೇ ಸಿದ್ಧವಾಗುತ್ತದೆ. ಅಹಂ ಬ್ರಹ್ಮಾಸ್ಮಿ = ಸರ್ವಂ ಖಲ್ವಿದಂ ಬ್ರಹ್ಮ ॥ ಎರಡೂ ಕಡೆಗಳಲ್ಲಿ ಸಮಾನವಾಗಿದ್ದ 'ಬ್ರಹ್ಮ' ಎಂಬ ಪದವನ್ನು ತೊಡೆದು ಹಾಕಿದಾಗ, ''ಅಹಂ ಸರ್ವಂ ಖಲ್ವಿದಂ ಅಸ್ಮಿ!'' ಎಂಬ ಸರ್ವಶ್ರೇಷ್ಠ ಸರ್ವಾತ್ಮಕ ಭಾವವು ಈ ಹಂತದಲ್ಲಿ ಕೆನೆಗಟ್ಟಿ ನಿಲ್ಲುತ್ತದೆ. ಇದರ ಮುಂದೆ, ''ಲಿಂಗವೆನ್ನೆ ಲಿಂಗೈಕ್ಯವೆನ್ನೆ'' ಎಂಬಂತಹ ಒಂದು ಅಜಾತ ಸಿದ್ಧಾಂತವೇ ಅಂತಿಮ ನಿರ್ಣಯದ ರೂಪದಲ್ಲಿ ಕಂಗೊಳಿಸುತ್ತದೆ. ಇದನ್ನೇ ನಾವಿಲ್ಲಿ ಆರನೆಯ ಸೋಪಾನವೆಂದು ಕರೆಯಬಹುದಾಗಿದೆ. ಹೀಗೆ, ಶ್ರೀ ರಾನಡೆ ಮಹಾರಾಜರು ಹೇಳುವ ಈ ಅನುಭಾವದ ಸೋಪಾನಗಳನ್ನು ಹಾಗೂ ಮಹಾನುಭಾವಿ ಬಸವಣ್ಣನವರು ಸೂಚಿಸುವ ಮೇಲಿನ ವಚನದಲ್ಲಿ ಬಂದ ಅನುಭಾವದ ಹಂತಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಅವೆರಡರಲ್ಲೂ ಒಂದು ಅಪೂರ್ವವಾದ ಸಾಮ್ಯವಿರುವದನ್ನು ಯಾರಾದರೂ ಗುರುತಿಸಬಹುದು. ನಿಜವಾಗಿಯೂ, ಮತ್ತೊಮ್ಮೆ ನಾವು ಅನುಭಾವದ ಸಾರ್ವತ್ರಿಕತೆ - ಸಾರ್ವಕಾಲಿಕತೆಗಳನ್ನು ಇಲ್ಲಿ ಅವಲೋಕಿಸಿಕೊಳ್ಳಬಹುದು.

ಮಹಾತ್ಮಾ ಬಸವಣ್ಣನವರು ಕೆಳಗೆ ಕೊಟ್ಟ ತಮ್ಮ ವಚನದಲ್ಲಿ ಅನುಭಾವದ ಎರಡು ಮುಖ್ಯಸ್ತರಗಳನ್ನು ಬಹು ಮನೋಜ್ಞವಾಗಿ ನಿರೂಪಿಸಿದ್ದಾರೆ :

> ಅರಿವಿನ ಆಪ್ಯಾಯನಕ್ಕೆ ಅನುಭಾವವೇ ತೃಪ್ತಿ,
> ಅರಿವು ನೆರೆಕೂಡಿ, ಆಕಾರವೇ ಪ್ರಾಣವಾಗಿ ವಿಶ್ರಮಿಸಿದ ಬಳಿಕ !
> ಶ್ರೀ ಗುರು ಕೃಪೆಯ ಮಾಡಿದ ಪ್ರಾಣಲಿಂಗದ ಘನವೆಂತೆಂದಡೆ :
> ಮತ್ಸ್ಯ ನುಂಗಿದ ಮಾಣಿಕ್ಯದಂತೆ !
> ಮುತ್ತು ನುಂಗಿದ ನೀರಿನಂತೆ !
> ಕಣ್ಣಾಲಿ ನುಂಗಿದ ನೋಟದಂತೆ !
> ಬಯಲನೊಳಕೊಂಡ ಬ್ರಹ್ಮಾಂಡದೊಳಗಿಪ್ಪ
> ಸ್ವಯಾನುಭಾವಿಗಳ ಅನುಭಾವವ ತೋರಿ
> ಬದುಕಿಸಾ ಕೂಡಲ ಸಂಗಮದೇವಾ !

ಇಲ್ಲಿ 'ಅರಿವಿನ ಆಪ್ಯಾಯನಕ್ಕೆ ಅನುಭಾವವೇ ತೃಪ್ತಿ' ಎಂಬ ಮಾತಿನಲ್ಲಿ ಪುನಃ ಬಸವಣ್ಣನವರು ನಿಜವಾದ ಆಧ್ಯಾತ್ಮಿಕ ಸಾಕ್ಷಾತ್ಕಾರ ಶುದ್ಧಬುದ್ಧಿಯಿಂದಲೂ ಸಾಧ್ಯವಿಲ್ಲ. ಅದು ಪವಿತ್ರ, ಪರಿಪಕ್ವ ಹೃದಯಕ್ಕೆ ಮಾತ್ರ ವೇದ್ಯ ಎಂಬುದನ್ನು ಬಹು

ಚೆನ್ನಾಗಿ ಹೇಳುತ್ತಾರೆ. ''ಸ್ವಯಾನುಭಾವಿಗಳು'' ಎಂಬ ಮಾತಿನಿಂದ ಅನುಭಾವಿಗಳ ಯಥಾರ್ಥ ಸ್ಥಿತಿಯ ಸೂಚನೆಯನ್ನು ಮಾಡುತ್ತಾರೆ. ಮತ್ತೆ, ಅವರ ''ಅನುಭಾವವ ತೋರಿ ಬದುಕಿಸಾ'' ಎಂಬಲ್ಲಿ ಅನುಭಾವವೆಂಬುದನ್ನು ಅನುಭಾವಗೋಷ್ಠಿ ಎಂಬರ್ಥದಲ್ಲಿ ಬಳಸಿದ್ದಾರೆ. ಅಲ್ಲದೆ, ಇಲ್ಲಿ ಬರುವ ರೂಪಕ ಉಪಮಾನಗಳು ಬಹು ಅರ್ಥಪೂರ್ಣವಾಗಿವೆ. ಅನುಭಾವಿಯೋರ್ವ ತನ್ನ ಅನುಭಾವದ ಅಭಿವ್ಯಕ್ತಿಗೆ ಶಬ್ದ ಮಾಧ್ಯಮವನ್ನು ಉಪಯೋಗಿಸಿಕೊಳ್ಳುವಾಗ, ಇಂತಹ ರೂಪಕಾದಿಗಳು ಬರುವದು ಅನಿವಾರ್ಯ ಮತ್ತು ಸಹಜ. 'Hours with mystics Vol II' ಎಂಬ ಒಂದು ಸುಂದರವಾದ ಗ್ರಂಥದಲ್ಲಿ Mystic phraseology ಅಂದರೆ, ಅನುಭಾವದ ಪರಿಭಾಷೆ ಎಂತಹದಿರುತ್ತದೆ ಎಂಬುದನ್ನು ಹೀಗೆ ಹೇಳಿದೆ. 'Mysticism has always been accustomed to express the transports of divine passion by metaphors. But nowhere has metaphor branched so luxuriantly into allegory as in the East with such subtility and Freedom as among the Persian Mystics' ಹೌದು, ಅದು ಅನಿವಾರ್ಯವೆಂದೇ ಹೇಳಬೇಕು. ಮತ್ಸ್ಯ ನುಂಗಿದ ಮಾಣಿಕ್ಯದಂತೆ ! ಮುತ್ತು ನುಂಗಿದ ನೀರಿನಂತೆ ! ಕಣ್ಣಾಲಿ ನುಂಗಿದ ನೋಟದಂತೆ ! ಅಬ್ಬಾ ! ಎಂತಹ ಮಾತುಗಳಿವು ! ಇವುಗಳಿಂದ ಹೊರಹೊಮ್ಮುವ ಅರ್ಥದ ವೈಭವ ವಿಸ್ತಾರಗಳು ಎಂತಹ ಅದ್ಭುತ !

ಬಸವಣ್ಣನವರು ಅನುಭಾವದ ಮಹಿಮಾತಿಶಯವನ್ನು ಅದರ ಪ್ರಗಲ್ಭ ಪ್ರಭಾವವನ್ನು ತಮ್ಮ ಅನೇಕ ವಚನಗಳಲ್ಲಿ ಬಹು ಮನೋಜ್ಞವಾಗಿ ಚಿತ್ರಿಸಿದ್ದಾರೆ -

ಅನುಭಾವವಿಲ್ಲದ ಭಕ್ತಿ ಅನುವಿಂಗೆ ಬಾರದು ;
ಅನುಭಾವವಿಲ್ಲದ ಲಿಂಗ ಸಮರಸ ಸುಖಕ್ಕೆ ನಿಲುಕದು ;
ಅನುಭಾವವಿಲ್ಲದ ಪ್ರಸಾದ ಪರಿಣಾಮವ ಕೊಡದು ;
ಅನುಭಾವವಿಲ್ಲದೆ ಏನನೂ ಅರಿಯಬಾರದು.....
ನಿಮ್ಮ ಅನುಭಾವ ಮಾತಿನ ಮಥನವೆಂದು ನುಡಿಯಬಹುದೆ ಪ್ರಭುವೇ?

ಅಯ್ಯಾ, ನಿಮ್ಮ ಅನುಭಾವದಿಂದ ಎನ್ನ ತನು ಹಾಳಾಯಿತ್ತಯ್ಯಾ;
ಅಯ್ಯಾ ನಿಮ್ಮ ಅನುಭಾವದಿಂದ ಎನ್ನ ಮನ ಹಾಳಾಯಿತ್ತಯ್ಯಾ;
ಅಯ್ಯಾ ನಿಮ್ಮ ಅನುಭಾವದಿಂದ ಎನ್ನ ಕರ್ಮ ಛೇದನವಾಯಿತ್ತಯ್ಯಾ.....

ಭಕ್ತಿ, ಲಿಂಗ, ಪ್ರಸಾದ - ಏನೆಲ್ಲವೂ ಸಾಧಕನ ಜೀವನದಲ್ಲಿ ಅನುಭಾವದಿಂದಲೇ ಮೆರಗು ಪಡೆಯುತ್ತವೆ. ಒಂದೊಂದು ಸಾಧನದಿಂದ ಒಂದೊಂದೇ ಸೂತಕವಳಿದರೆ ''ನಾನಾ ಸೂತಕವಳಿಯಿತ್ತು - ನಿಮ್ಮ ಶರಣರ ಅನುಭಾವಿಯಾಗಿ!'' ಎಂದು ಹೇಳಿ ಅನುಭಾವದ ಹಿರಿಮೆಯನ್ನು ಬಸವಣ್ಣನವರು ಬಹು ಮಾರ್ಮಿಕವಾಗಿ ಸ್ಫುಟಗೊಳಿಸಿದ್ದಾರೆ.

೪

ಮಹಾನುಭಾವಿ ಬಸವಣ್ಣನವರ ಅನುಭಾವ ದರ್ಶನ ನಿಜವಾಗಿಯೂ ಬಹು ವೈಭವೋಪೇತವಾಗಿರುವಂತಹದು. ಅದರ ವಿವಿಧ ಆಯಾಮಗಳನ್ನು ಇನ್ನೂ ಹೆಚ್ಚು ವಿವರವಾಗಿ ವಿವೇಚಿಸಲು ಇನ್ನೂ ಹಲವಾರು ಪುಟಗಳಷ್ಟಾದರೂ ಬರೆಯಬೇಕಾಗಬಹುದು. ಆದರೆ, ಪ್ರಸ್ತುತ ಲೇಖನದಲ್ಲಿ ಅದರ ಕೆಲವು ಮುಖಗಳನ್ನು ಮಾತ್ರ ಸಂಕ್ಷಿಪ್ತವಾಗಿ ಹೇಳಿ ಮುಗಿಸಲಾಗಿದೆ. ಅವರು ಸಾಧಕನ ವಿವಿಧ ಹಂತಗಳನ್ನಂತೂ ಬಹು ಸುಂದರವಾಗಿ, ಅನುಭವ ಪೂರ್ಣವಾಗಿ ವಿವೇಚಿಸಿದ್ದಾರೆ.

ಇರಲಿ, ಅನುಭಾವದ ಪರಮೋತ್ಕೃಷ್ಟವಾದ ಪರಮಪ್ರಭಾವಿಯಾದ ಸಾಧನವೆಂದರೆ ಭಕ್ತಿ. ಅದು 'ವಿರಹ'ದ ಸ್ವರೂಪವನ್ನು ತಳೆದಾಗ, ಬಹು ಹೃದಯಸ್ಪರ್ಶಿಯಾದ ಮಟ್ಟಕ್ಕೆ ಬಂದು ಮುಟ್ಟುತ್ತದೆ. ಇದಕ್ಕೆ ಜಗತ್ತಿನ ಅನುಭಾವಿಗಳ, ಅದರಲ್ಲೂ ಭಾರತೀಯ, ಸೂಫಿ ಹಾಗೂ ಕ್ರೈಸ್ತ ಅನುಭಾವಿಗಳ ಜೀವನ ಚರಿತ್ರೆಗಳು ಇಂತಹ ಉದಾಹರಣೆಗಳಿಂದ ತುಂಬಿ ತುಳುಕುತ್ತವೆ. ಆ ವಿರಹದ ಬೇಗೆಯಿಂದ ಬೆಂದು ಬೆಂಡಾದ ಸಾಧಕಜೀವಿಗಳಿಗೆ ಆ ಹಾದಿಯಲ್ಲಿ ನಡೆದು ಹೋಗಿ ಗುರಿ ಮುಟ್ಟಿದ ಅನುಭಾವಿಗಳಿಂದಲೇ ಭರವಸೆ ಸಿಕ್ಕಬೇಕಲ್ಲವೆ? 'But the passage whether through the Dark Night of the soul or under the noon-day radiance of the Divine effulgence has never perturbed the tranquility of their soul....where unable to bear the burning pain of separation, they have cried out, 'how long more like this?' ಸಾಧಕನು ಅನೇಕ ಸಲ ತನ್ನ ಸಾಧನೆಯ ಮಹಾಯಾತ್ರೆಯಲ್ಲಿ ಕರಾಳ ಕತ್ತಲೆಯ ಅನುಭವವನ್ನು ಪಡೆದಾಗ ಹೌಹಾರುತ್ತಾನೆ, ಎದೆಗುಂದುತ್ತಾನೆ. ಆಗ ಅವನ ಹೃದಯಾಂತರಾಳದಿಂದ ಪ್ರಾಮಾಣಿಕ ಪ್ರಾರ್ಥನೆಯೊಂದು ಹೊರಹೊಮ್ಮುತ್ತದೆ - ಬಹುಶಃ ಉಪನಿಷತ್ತಿನ ಋಷಿಯು ಇದನ್ನೇ "ಅಸತೋ ಮಾ ಸದ್ಗಮಯ॥ ತಮಸೋ ಮಾ ಜ್ಯೋತಿರ್ಗಮಯ। ಮೃತ್ಯೋರ್ಮಾ ಅಮೃತಂಗಮಯ।" ಎನ್ನುವಲ್ಲಿ ನಿರ್ದೇಶಿಸಿದಂತೆ ಕಾಣುತ್ತದೆ ಅದು ಆರ್ತಭಕ್ತನ ಕರುಣಾಜನಕ ಕತೆಯಂತೆ ಹೃದಯವಿದ್ರಾವಕವಾಗಿರುತ್ತದೆ. ವಿರಹಿಯ ಬೆಂದ ಎದೆಯಿಂದ ಚಿಮ್ಮಿ ಬಂದ ಕರುಳಿರಿವ ಕೂಗಾಗಿರುತ್ತದೆ. ಆಗ ಅವನ ಸಹಾಯಕ್ಕೆ ಅವನನ್ನು ಮೇಲೆತ್ತುವದಕ್ಕೆ ಹಿರಿಯ ಅನುಭಾವಿಗಳು ಬರುತ್ತಾರೆ. ಅವನಿಗೆ ಧೈರ್ಯವನ್ನೂ, ಆತ್ಮವಿಶ್ವಾಸವನ್ನೂ ತಂದುಕೊಡುತ್ತಾರೆ. "ಅಭೀಹಿ। ಅಭೀಹಿ।" ಎಂದರೆ ಹೆದರಬೇಡ; ಅಂಜಬೇಡ ಎಂದು ಹೇಳಿ ಅಭಯವನ್ನು ನೀಡುತ್ತಾರೆ.

ಮೇಲಿನ ಅಭಿಪ್ರಾಯ ಬಸವಣ್ಣನವರ ವಚನಗಳಲ್ಲಿ ಬಂದಷ್ಟು ಸ್ಪಷ್ಟವಾಗಿ, ಸುಂದರವಾಗಿ, ಅನುಭವಿಗಳೊಲಿದು ಅಹುದಹುದೆನ್ನುವಂತೆ ಬೇರೆಲ್ಲಿಯೂ ಬಂದಿಲ್ಲ. ಇಲ್ಲಿ ಉದಾಹರಣೆಗಾಗಿ ಅವರ ಕೆಲವು ಸುಲಭವಾದ ವಚನಗಳನ್ನು ನೋಡಿಕೊಂಡು ಈ ಪ್ರಬಂಧವನ್ನು ಸಮಾಪ್ತಗೊಳಿಸಬೇಕಾಗಿದೆ. ಒಬ್ಬ ಪ್ರೇಯಸಿ ತನ್ನ ಪ್ರಾಣಕ್ಕಿಂತ ಹೆಚ್ಚು ಪ್ರಿಯನಾದ ತನ್ನ ಪ್ರಿಯಕರನಿಗೆ ಎಲ್ಲವನ್ನೂ ಒಪ್ಪಿಸಿದ ಮೇಲೆ, ಅಕಸ್ಮಾತಾಗಿ ಅವನಿಂದ ಅಗಲುವ ಪ್ರಸಂಗ ಬಂದಾಗ, ಹಾಗೆ ಅಗಲಿ ಅನೇಕ ದಿನಗಳ ಕಾಲ ಕೊರಗುವ ಪ್ರಸಂಗ ಬಂದಾಗ ಆ ವೇದನೆ ನಿಜಕ್ಕೂ ವರ್ಣನೆಗೆ ಸಿಕ್ಕಲಾರದು. ಮಹಾತ್ಮಾ ಬಸವಣ್ಣನವರ ಕೆಳಗಿನ ಕೆಲವು ವಚನಗಳನ್ನು ನೋಡಿದರೆ, ಇದರ ಮರ್ಮ ಸುಲಭವಾಗಿ ವೇದ್ಯವಾಗುತ್ತದೆ :

ಸಮುದ್ರದೊಳಗಣ ಸಿಂಪಿನಂತೆ ಬಾಯ ಬಿಡುತ್ತಿದ್ದೆನಯ್ಯ,
ನೀವಲ್ಲದೆ ಮತ್ತಾರೂ ಎನ್ನನರಿವರಿಲ್ಲ ನೋಡಯ್ಯ,
ಕೂಡಲ ಸಂಗಮದೇವಾ, ನೀನಲ್ಲದೊಳಕೊಂಬವರಿಲ್ಲವಯ್ಯ.

ನೀ ಹುಟ್ಟಿಸಿದಲ್ಲಿ ಹುಟ್ಟಿ ನೀ ಕೊಂದಲ್ಲಿ ಸಾಯದೆ
ಎನ್ನವಶವೇ ಅಯ್ಯಾ?
ನೀನಿರಿಸಿದಲ್ಲಿ ಇರದೆ ಎನ್ನ ವಶವೇ ಅಯ್ಯ?
ಅಕಟಕಟಾ! ಎನ್ನವನೆನ್ನವನೆನ್ನಯ್ಯ, ಕೂಡಲಸಂಗಮದೇವಯ್ಯ.

ಕೆಸರಿನಲ್ಲಿ ಬಿದ್ದ ಪಶುವಿನಂತೆ -
ಆನು ದೆಸೆ ದೆಸೆಗೆ ಬಾಯಿಬಿಡುತ್ತಿದ್ದೆನಯ್ಯಾ!
ಆರೈವರಿಲ್ಲ , ಅಕಟಕಟಾ ! ಪಶುವೆಂದೆನ್ನ
ಕೂಡಲ ಸಂಗಮದೇವ ಕೊಂಬ ಹಿಡಿದೆತ್ತುವನ್ನಕ್ಕ

ಅಡವಿಯೊಳಗೆ ಹೊಲಬುಗೆಟ್ಟ ಪಶುವಿನಂತೆ
'ಅಂಬೆ, ಅಂಬೆ', ಎಂದು ಕರೆಯುತ್ತಲಿದ್ದೇನೆ.
'ಅಂಬೆ, ಅಂಬೆ' ಎಂದು ಒರಲುತ್ತಲಿದ್ದೇನೆ.
ಕೂಡಲ ಸಂಗಮದೇವ ಬಾಳು ಬಾಳೆಂಬನ್ನಕ್ಕ !

ಈ ಎಲ್ಲ ವಚನಗಳಲ್ಲಿ ಬಸವಣ್ಣನವರು ತಮ್ಮ ಆರಾಧ್ಯ ದೇವತೆಯೆಂಬ ಪ್ರಿಯಕರನಲ್ಲಿ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡಿದ್ದಾರೆ. ಅಂತಲೇ, ಅವನ ವಿರಹವ ತಾಳಲಾರದೆ ಅನೇಕ ವಚನಗಳಲ್ಲಿ ತಮ್ಮ ಕೊರಗನ್ನು ಅಳಲನ್ನು ತೋಡಿ ಕೊಂಡಿದ್ದಾರೆ. ಉದಾಹರಣೆಗಾಗಿ ಇಲ್ಲಿ ಕೆಲವನ್ನು ನೋಡಿಕೊಳ್ಳೋಣ :

ಬಂದೆಹೆನೆಂದು ಬಾರದಿದ್ದರೆ ಬಟ್ಟೆಗಳ ನೋಡುತ್ತ ಇದ್ದೆನಯ್ಯ,
ಇನ್ನಾರನಟ್ಟುವೆ? ಇನ್ನಾರನಟ್ಟುವೆ? ಇನ್ನಾರ ಪಾದ ಹಿಡಿವೆನಯ್ಯ....?
ಕಂಡರೆ ಮನೋಹರವಯ್ಯ, ಕಾಣದಿದ್ದರೆ ಅವಸ್ಥೆ ನೋಡಯ್ಯಾ.
ಹಗಲಿರುಳಹುದು, ಇರುಳು ಹಗಲುಹುದು.... ಕೂಡಲಸಂಗನ
ಧಾವತಿಯಿಂದ ಮರಣವೇ ಲೇಸು ಕಂಡಯ್ಯ

ಭಕ್ತಿಯ ವಿಕಳತೆಯ ಯುಕುತಿಯ ಏನ ಬೆಸಗೊಂಬಿರಯ್ಯ?
ಕಾಮಿಗುಂಟೆ ಲಜ್ಜೆ ನಾಚಿಕೆ? ಕಾಮಿಗುಂಟೆ ಮಾನಾಪಮಾನ?
ಕೂಡಲಸಂಗನಿಗೊಲಿದ ಮರುಳನೇನ ಬೆಸಗೊಂಬಿರಯ್ಯ?

ಅಬ್ಬಾ ! ಇದೆಂತಹ ತೀವ್ರವಾದ ವಿರಹವೇದನೆ ! ಎಂತಹ ಕರಾಳ ಕಾರ್ಗತ್ತಲೆ? ಹೇಳತೀರದು ! ಇಂತಹ ವಿರಹದಲ್ಲಿದ್ದಾಗ ಗಂಡನು ಬರುವನೆಂಬ ಭರವಸೆ ಅನುಭಾವಿಗಳಿಂದ, ಶರಣರಿಂದ ಸಿಕ್ಕುತ್ತದೆ. 'ಕೂಡಲ ಸಂಗನ ಶರಣರು ಬಂದು ಹೋ, ಹೋ, ಅಂಜದಿರೆಂದಡಾನು ಬದುಕುವೆನು!' ಅವರ ಭರವಸೆಯಂತೆ ಒಂದು ಸುಂದರ ಸಂಜೆ ಗಂಡ ಬಂದೇ ಬಿಟ್ಟ! ಆಗ ಕೂಡುವ ತವಕ. ಆದರೆ....? ಮನೆಯ ಗಂಡನ ವಾರ್ತೆಯನೇನ ಹೇಳುವೆನವ್ವ ! ಅಂಗ ವಿದ್ಯೆಯನೊಲ್ಲ. ಕಂಗಳೊಳಗಿನ ಕಸವ ಕಳೆದಲ್ಲದೆ ನೋಡಲೀಯ, ಕೈಯ ತೊಳೆದಲ್ಲದೆ ಮುಟ್ಟಲೀಯ. ಕಾಲ ತೊಳೆದಲ್ಲದೆ ಹೊದ್ದಲೀಯ. ಇಂತು ಸರ್ವಾಂಗವ ತೊಳೆದ ಕಾರಣ ಕೂಡಲ ಸಂಗಮದೇವನೆನ್ನ ಕೂಡಿಕೊಂಡನವ್ವ!''.

ಇದು ಅನುಭಾವಿಯಾದ ಬಸವಣ್ಣನವರ ಸತಿ - ಪತಿ ಭಾವದ ಅತ್ಯುಜ್ವಲ ರೀತಿ ! ಆಗ ಅವರಿಗೆ ಆದ ಅನುಭವ ದಿವ್ಯೋನ್ಮಾದ! ''ಆಲಿಕಲ್ಲ ಹರಳಿನಂತೆ, ಅರಗಿನ ಪುತ್ಥಳಿಯಂತೆ ತನ್ನ ಕರಗಿ ನೆರೆದ ಸುಖವ ನಾನೇನೆಂಬೆ? ಕಡೆಗೋಡಿವರಿದವೆನಗಯ್ಯಾ ನಯನಸುಖ ಜಲಂಗಳು ! ನಮ್ಮ ಕೂಡಲಸಂಗಮ ದೇವರ ಮುಟ್ಟ ನೆರೆದ ಸುಖವ ನಾನಾರಿಗೇನೆಂಬೆ?'' ಅಬ್ಬಾ ! ಐಕ್ಯಾನುಭವದ ಅದ್ಭುತ ಚಿತ್ರ ! ಇದು ಹೀಗೇಕೆ? ಎಂದರೆ 'ಕೂಡಲ ಸಂಗಮದೇವ ತನ್ನಲ್ಲಿ ಬೈಚಿಟ್ಟನಾಗಿ !' ಇದು ಬಸವಣ್ಣನವರ ಅನುಭಾವದರ್ಶನದ ಕಳಸವೆಂದರೂ ಸಲ್ಲುವದು. ಇದು ಶಬ್ದಮುಗ್ಧ ಸ್ಥಿತಿ ! ನಿರುಪಮ ಪರಂಜ್ಯೋತಿ ! ನಿರತಿಶಯ ನಿರುಪಾಧಿಕ ವಿಮಲ ಪರಂಜ್ಯೋತಿ !

ಸಂದರ್ಭ ಗ್ರಂಥಗಳು

೧. ಹಿರೇಮಠ ಆರ್.ಸಿ., ಸಂ. ಭಕ್ತಿಭಂಡಾರಿ ಬಸವಣ್ಣನವರ ವಚನಗಳು, ಕ.ವಿ.ವಿ., ಧಾರವಾಡ, ೧೯೬೮.

೨. ಹಿರೇಮಠ ಆರ್.ಸಿ., ಸಂ. ಷಟ್‌ಸ್ಥಲ ಚಕ್ರವರ್ತಿ ಚನ್ನಬಸವಣ್ಣನವರ ವಚನಗಳು ಕ.ವಿ.ವಿ., ಧಾರವಾಡ ೧೯೭೧.

೩. ಕಲಬುರ್ಗಿ ಎಂ.ಎಂ., ಸಂ. ಚೆನ್ನಬಸವಣ್ಣನವರ ಷಟ್‌ಸ್ಥಲ ವಚನ ಮಹಾ ಸಂಪುಟ, ಶ್ರೀ ಜ. ತೋಂಟದಾರ್ಯ ಸಂಸ್ಥಾನಮಠ, ಗದಗ, ೧೯೯೦.

೪. ಹಿರೇಮಠ ಆರ್.ಸಿ. ಮತ್ತು ಸುಂಕಾಪುರ, ಎಂ.ಎಸ್., ಸಂ. ವ್ಯೋಮ ಮುರುತಿ ಅಲ್ಲಮ ಪ್ರಭು ದೇವರ ವಚನಗಳು, ಕ.ವಿ.ವಿ. ಧಾರವಾಡ, ೧೯೭೬.

೫. ಮಲ್ಲೇದೇವರು ಎಚ್.ಪಿ., ಸಂ. ಸ್ವತಂತ್ರ ಸಿದ್ಧಲಿಂಗೇಶ್ವರನ ವಚನಗಳು, ಕ.ವಿ.ವಿ., ಧಾರವಾಡ, ೧೯೭೫.

೬. ಶಾಂತಾನಂದ ಸ್ವಾಮಿಗಳು, ಸಂ. ಶ್ರೀ ನಿಜಗುಣ ಶಿವಯೋಗಿ ವಿರಚಿತ ವೇದಾಂತ ಗ್ರಂಥಾವಳಿ, ಸಿದ್ಧವಿಲಾಸ, ಬೆಂಗಳೂರು, ೧೯೭೬.

೭. ತಿಪ್ಪೇರುದ್ರಸ್ವಾಮಿ ಎಚ್. - ಶರಣರ ಅನುಭಾವ ಸಾಹಿತ್ಯ, ಮೈಸೂರು, ಡಿ.ವಿ.ಕೆ. ೧೯೭೮

೮. ತಿಪ್ಪೇರುದ್ರಸ್ವಾಮಿ ಎಚ್. - ವಚನಗಳಲ್ಲಿ ವೀರಶೈವ ಧರ್ಮ, ಮೈಸೂರು, ಡಿ.ವಿ.ಕೆ. ೧೯೬೯

೯. ಕುಲಕರಣಿ ದೇವರಾಯ : ಶ್ರೀ ಶಂಕರ ಸಿದ್ಧಾಂತ ಸಂಸ್ಮರಣ, ಭಾಗ - ೧. ಖೋಡೆ ಲಕ್ಷ್ಮಣಸಾ, ಬೆಂಗಳೂರು.

ವಚನಕಾರರ ದೃಷ್ಟಿಯಲ್ಲಿ ಮಹಿಳೆ

ಡಾ|| ಬಸವರಾಜ ಸಬರದ

ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆಗೆ ನೀಡಿರುವ ಸ್ಥಾನ - ಮಾನಗಳು ಕಾಲದಿಂದ ಕಾಲಕ್ಕೆ ಬದಲಾಗುತ್ತಲೇ ಬಂದಿದೆ. ವೇದಕಾಲದಿಂದ ಹಿಡಿದು ಹನ್ನೆರಡನೇ ಶತಮಾನದ ವಚನ ಚಳುವಳಿಯ ಅವಧಿಯವರೆಗೆ ಮಹಿಳೆಯ ಬದುಕಿನಲ್ಲಿ, ರೀತಿ - ನೀತಿಗಳಲ್ಲಿ ಅನೇಕ ಬದಲಾವಣೆಗಳನ್ನು ಕಾಣಬಹುದಾಗಿದೆ. ಅನೇಕ ಸಂದರ್ಭಗಳಲ್ಲಿ ಮಹಿಳೆ ಯಜಮಾನ ಸಂಸ್ಕೃತಿಯ ಪ್ರಭುತ್ವದಲ್ಲಿ ಸಿಕ್ಕು ಶೋಷಣೆಗೊಳಗಾಗಿದ್ದಾಳೆ. ಪಶು - ಪ್ರಾಣಿಗಳಿಗಿಂತಲೂ ಕೀಳಾಗಿ ಕಾಣಲ್ಪಟ್ಟಿದ್ದಾಳೆ. ಮಾತೃಪ್ರಧಾನ ಸಂಸ್ಕೃತಿಯಲ್ಲಿ ಮಾತೆಯೆಂದು ಗೌರವ ಹೊಂದಿದ್ದಾಳೆ, ಆದಿಶಕ್ತಿಯೆಂದು ವರ್ಣಿತಳಾಗಿದ್ದಾಳೆ, ದೇವತೆಯೆಂದು ಪೂಜಿಸಲ್ಪಟ್ಟಿದ್ದಾಳೆ.

'ಸ್ತ್ರೀ' ಎಂಬ ಪದ 'ಸೂತ್ರಿ' 'ಸೋತೃ' ಎಂಬ ಧಾತುವಿನಿಂದ ಬಂದಿದೆ. 'ಸೂತ್ರಿ' ಎಂದರೆ ಹೆರುವ ಪ್ರಾಣಿಯಾಗುತ್ತದೆ. ಹೆಣ್ಣು ಪ್ರಾಣಿಗಳಿಗೂ 'ಸ್ತ್ರೀ' ಎಂಬ ಹೆಸರಿದೆ. ಹೀಗೆ ಗರ್ಭದ ಅಸ್ತಿತ್ವದಿಂದಲೇ ವ್ಯಕ್ತಿತ್ವವನ್ನು ಪಡೆದುಕೊಂಡ ಹೆಣ್ಣಿಗೆ ಒಂದು ಸ್ವತಂತ್ರ ಹೆಸರೂ ಕೂಡ ಇಲ್ಲದ್ದನ್ನು ಗಮನಿಸಬಹುದಾಗಿದೆ. ಆದರೆ ಅದೇ 'ಪುರುಷ' ಪದ 'ಪುರ' ಧಾತುವಿನಿಂದ ಕೂಡಿದ್ದು, 'ಪುರ' ಎಂದರೆ ಶ್ರೇಷ್ಠ, ಸ್ವಯಂಪೂರ್ಣ ಎಂಬರ್ಥಗಳಿವೆ. ಹೀಗೆ ಸನಾತನ ಧರ್ಮದಲ್ಲಿ ಮಹಿಳೆಗೆ ಅವಳ ಹೆಸರಿನಿಂದಲೇ, ಅಂದರೆ 'ಸ್ತ್ರೀ' ಎಂದು ಕರೆಯುವ ಸಂಬೋಧನೆಯಿಂದಲೇ ಮೋಸ ನಡೆದಿರುವುದು ಗೊತ್ತಾಗುತ್ತದೆ. 'ಅಂಗನೆ' ಎಂಬ ಹೆಸರು ಸನಾತನ ಸಂಸ್ಕೃತಿಯಲ್ಲಿ ಹೆಣ್ಣಿಗೆ ಅನ್ವರ್ಥವಾದ ಹೆಸರಾಗಿದೆ. 'ಅಂಗನೆ' ಎಂದರೆ ದೇಹದವಳು. ದೇಹದವಳೆಂದರೆ ಭೋಗದವಳು. ಹೀಗೆ ಸ್ತ್ರೀ ಪದದಲ್ಲಿ 'ಹೆರುವುದರ' ಮೂಲಕ; 'ಅಂಗನೆ' ಪದದಲ್ಲಿ 'ಅಂಗ' ಅಥವಾ 'ಭೋಗ'ದ ಮೂಲಕ ಕರೆಯಿಸಿಕೊಳ್ಳುವ

ಮಹಿಳೆಗೆ ಒಂದು ಸ್ವತಂತ್ರ ಹೆಸರು ಕೂಡಾ ಇರದಷ್ಟು ಹೇಯ ಸ್ಥಿತಿಯಿತ್ತೆಂದು ಅನೇಕ ಆಧಾರಗಳಿಂದ ತಿಳಿದುಬರುತ್ತದೆ. ಈ ದೇಶದ ದಲಿತರಂತೆ ಮಹಿಳೆಯನ್ನೂ ಕೂಡ ಅಸ್ಪೃಶ್ಯಳನ್ನಾಗಿ, ಅದೃಶ್ಯಳನ್ನಾಗಿ ಕಾಣಲಾಗಿದೆ. ಅವಳು ಮೈನೆರೆದಾಗ, ಮುಟ್ಟಾದಾಗ, ಹೆತ್ತಾಗ ಅವಳನ್ನು ಅಸ್ಪೃಶ್ಯಳನ್ನಾಗಿ ಮಾಡಿದರೆ, ಅವಳು ವಿಧವೆಯಾದಾಗ 'ಅಮಂಗಲೆ' 'ಅಪಶಕುನ' ಎಂದು ಕರೆದು ಅವಳನ್ನು 'ಅದೃಶ್ಯ'ಳನ್ನಾಗಿ ಮಾಡಲಾಗಿದೆ.

ಆದರೆ ಪ್ರಾಚೀನ ಕಾಲದ ಮಹಿಳೆಯರ ಸ್ಥಾನ - ಮಾನಗಳು ಉನ್ನತ ಮಟ್ಟದವುಗಳಾಗಿದ್ದವೆಂದು ತಿಳಿದುಬರುತ್ತದೆ. ಪ್ರಾರಂಭದಲ್ಲಿ ಮಾತೃಪ್ರಧಾನ ಸಂಸ್ಕೃತಿ ಜಾರಿಯಲ್ಲಿದ್ದಾಗ ಮಹಿಳೆ ಅತ್ಯುನ್ನತವಾದ ಸ್ಥಾನವನ್ನು ಹೊಂದಿದ್ದಳೆಂದು ರಾಹುಲ ಸಾಂಕೃತ್ಯಾಯನನ 'ವೋಲ್ಗಾ - ಗಂಗಾ' ಕೃತಿಯಿಂದ ತಿಳಿದುಬರುತ್ತದೆ. ಯಾವಾಗ ಕೃಷಿ ಕೆಲಸವನ್ನು ಪುರುಷ ಮಹಿಳೆಯಿಂದ ಪಡೆದುಕೊಂಡನೋ, ಮಾತೃಪ್ರಧಾನ ಸಂಸ್ಕೃತಿ ಹೋಗಿ ಪಿತೃಪ್ರಧಾನ ಸಂಸ್ಕೃತಿ ಜಾರಿಗೆ ಬಂದಿತೋ ಅಂದಿನಿಂದಲೇ ಮಹಿಳಾ ಶೋಷಣೆ ಪ್ರಾರಂಭವಾದುದನ್ನು ಕಾಣಬಹುದಾಗಿದೆ.

ವೇದಕಾಲದ ಸಮಾಜದಲ್ಲಿ ಮಹಿಳೆಯರಿಗೆ ಪುರುಷನ ಸರಿಸಮಾನವಾದ ಸ್ಥಾನ - ಮಾನವಿದ್ದಿತೆಂದು ತಿಳಿದುಬರುತ್ತದೆ. ವೇದಕಾಲದ ಋಷಿಗಳಲ್ಲಿ ಮಹಿಳೆಯರೂ ಇದ್ದುದು ಕಂಡುಬರುತ್ತದೆ. ಯುದ್ಧದಲ್ಲಿ ಕಾದಾಡಿದ ಮಹಿಳೆಯರ ಉದಾಹರಣೆಗಳೂ ದೊರೆಯುತ್ತವೆ. ''ವೇದಕಾಲದಲ್ಲಿ ಸ್ತ್ರೀಯರು ಪುರುಷರಂತೆ ಸಾಹಿತ್ಯವನ್ನು ಅಭ್ಯಸಿಸುತ್ತಿದ್ದರು. ಮತ್ತು ಅವರಲ್ಲಿ ಕೆಲವರು ಲೋಪಾಮುದ್ರಾ, ಘೋಷಾ ಮತ್ತು ಸಿಕತಾ ನಿವಾವರೀ ಇವರು ವೈದಿಕ ಸೂಕ್ತ ಕರ್ತೃಗಳ ಮಧ್ಯೆ ಕಾಣಿಸಿಕೊಳ್ಳುತ್ತಾರೆ''[1] ಎಂದು ಶತಪಥ ಬ್ರಾಹ್ಮಣದಲ್ಲಿ ಹೇಳಲಾಗಿದೆ. ''ವೇದಕಾಲದ ಸಮಾಜದಲ್ಲಿ ಸ್ತ್ರೀಯರು ತಮ್ಮ ಗಂಡಂದಿರ ಅಥವಾ ಪ್ರೇಮಿಗಳ ಜೊತೆಯಲ್ಲಿ ನಿರಾತಂಕವಾಗಿ ವಿಹರಿಸಬಹುದಾಗಿತ್ತು. ಋಗ್ವೇದದಲ್ಲಿ ಗಾರ್ಗಿ ವಾಚಕ್ನವೀ, ವಡವಾ ಪ್ರಾಥಿದೇಯೀ ಹಾಗೂ ಸುಲಭಾ ಮೈತ್ರೇಯೀ ಈ ಮೂರು ಬ್ರಹ್ಮವಾದಿನಿಯರ ಹೆಸರು ಉಲ್ಲೇಖವಾಗಿದೆ''[2] ಎಂದು ಋಗ್ವೇದದಲ್ಲಿ ಹೇಳಲಾಗಿದೆ.

ಪುರಾಣ ಕಾಲದ ಸಮಾಜದಲ್ಲಿಯೂ ಮಹಿಳೆಗೆ ಪ್ರಾಮುಖ್ಯತೆ ಇದ್ದುದು ಕಂಡು ಬರುತ್ತದೆ. ಋತಧ್ವಜನ ಪತ್ನಿಯಾದ ಮದಾಲಸಾ ಪುರಾಣಕಾಲದ ಸ್ತ್ರೀಯರಲ್ಲಿ ಅತ್ಯಂತ ಪ್ರಸಿದ್ಧಳೂ, ಪಂಡಿತೆಯೂ ಆಗಿದ್ದಳೆಂದು ಮಾರ್ಕಂಡೇಯ ಪುರಾಣದಲ್ಲಿ ಹೇಳಲಾಗಿದೆ[3]. ಮಹಾ ಮುನಿವರ್ಯ ಕಪಿಲನ ತಾಯಿ ದೇವಹೂತಿ ಅಸಾಧಾರಣ ಆಧ್ಯಾತ್ಮಿಕ ಸಿದ್ಧಿ ಪಡೆದವಳಾಗಿದ್ದಳೆಂದು ತಿಳಿದುಬರುತ್ತದೆ[4]. ಇನ್ನು ಬೃಹದಾರಣ್ಯಕ ಉಪನಿಷತ್ತಿನಲ್ಲಿ ಭವಿಷ್ಯದಲ್ಲಿ ಒಂದು ಹೆಣ್ಣುಮಗುವನ್ನು ಪಡೆಯಬೇಕೆಂಬ ಉತ್ಕಟೇಚ್ಛೆಯಿಂದ ಆಚರಿಸುವ ಒಂದು ಆಚರಣೆಯ ಉಲ್ಲೇಖವಿದೆ[5].

ಪ್ರಾಚೀನ ಕಾಲದಲ್ಲಿ ಮಹಿಳೆಯರು ಆಧ್ಯಾತ್ಮದಲ್ಲಿ ಉನ್ನತ ಸಾಧನೆ ಮಾಡಿದ್ದರೆಂದು ತಿಳಿದುಬರುತ್ತದೆ. ಮದುವೆಯಾಗದೆ ಆಧ್ಯಾತ್ಮಿಕ ಜೀವನವನ್ನು ಅನುಸರಿಸಿ ಮಹಿಳೆಯರಿಗೆ 'ಬ್ರಹ್ಮವಾದಿನಿ'ಯರೆಂದು ಕರೆಯಲಾಗುತ್ತಿತ್ತೆಂದೂ ಗೃಹಜೀವನವನ್ನು ಸ್ವೀಕರಿಸಿದ ಮಹಿಳೆಯರಿಗೆ 'ಸದ್ಯೋವಧು'ಗಳೆಂದು ಕರೆಯುತ್ತಿದ್ದರೆಂದೂ ಹೇಳಲಾಗಿದೆ[6]. ಅವಿವಾಹಿತ ಹೆಣ್ಣು ಮಕ್ಕಳು ಮಕ್ಕಳಿಗೆ ಜನ್ಮ ನೀಡಬಹುದಾಗಿತ್ತೆಂದೂ, ಅಂತಹ ಹೆಣ್ಣು ಮಕ್ಕಳನ್ನು ಸಮಾಜ ತಿರಸ್ಕರಿಸುತ್ತಿರಲಿಲ್ಲವೆಂದೂ ತಿಳಿದು ಬರುತ್ತದೆ[7].

---

1. ಶತಪಥ ಬ್ರಾಹ್ಮಣ, XIV ೩. ೧. ೩೫.
2. ಋಗ್ವೇದ X ೮೫.೨೬
3. ಮಾರ್ಕಂಡೇಯ ಪುರಾಣ XX - XLIV
4. ಯುಗಯಾತ್ರೀ ಭಾರತೀಯ ಸಂಸ್ಕೃತಿ, ಸಂಪುಟ ೨, ಪುಟ ೪೬೧, ಮೈ.ವಿ.ವಿ., ಮೈಸೂರು.
5. ಬೃಹದಾರಣ್ಯಕ ಉಪನಿಷತ್ VI ೪.೧೭
6. ಹಿಂದೂ ಧರ್ಮ ಮತ್ತು ಮಹಿಳೆಯರು - ಮೀರಾ ಚಕ್ರವರ್ತಿ, 'ಸಂಕ್ರಮಣ' ಏಪ್ರಿಲ್ ೧೯೮೨, ಪು. ೭೩..
7. ಅದೇ, ಪು. ೭೪.

ವಿಧವಾ ವಿವಾಹವು ಪ್ರಾಚೀನ ಭಾರತದಲ್ಲಿ ಪ್ರಚಲಿತವಾಗಿತ್ತೆಂದು ಬೃಹತ್ಸಂಹಿತಾದಲ್ಲಿ ಹೇಳಲಾಗಿದೆ [8]. ಉಪನಿಷತ್ ಕಾಲದಲ್ಲಿ ಗಾರ್ಗಿ, ಮೈತ್ರೇಯಿ, ಕಾತ್ಯಾಯಿನಿ, ಸುಲಭಾ, ವಡಬಾ, ಪ್ರಾಚಿದೇಯಾ ಈ ಮುಂತಾದ ಮಹಿಳೆಯರು ಸಮಾಜದಲ್ಲಿ - ಆಧ್ಯಾತ್ಮದಲ್ಲಿ ಉನ್ನತ ಸ್ಥಾನ ಹೊಂದಿದ್ದುದು ತಿಳಿದುಬರುತ್ತದೆ.

ಉಪನಿಷತ್ತುಗಳ ಕೊನೆಯ ಭಾಗಗಳಾದ 'ಬ್ರಾಹ್ಮಣ'ಗಳಲ್ಲಿ ಮಹಿಳೆಯರ ಸ್ಥಾನ - ಮಾನಗಳು ಕಡೆಗಣಿಸಲ್ಪಟ್ಟ ವಿಷಯ ತಿಳಿದುಬರುತ್ತದೆ. ಈ ಬ್ರಾಹ್ಮಣಗಳಲ್ಲಿ ವ್ಯಕ್ತವಾಗಿರುವ ವಿಚಾರಗಳನ್ನು ಎ.ಬಿ.ಕೀತ್ ಅವರು ಹೀಗೆ ಹೇಳಿದ್ದಾರೆ [9] ''ಭಾರತದಲ್ಲಿ ಎಂದಿಗೂ ನಾರಿ ಧರ್ಮಗಳಿಂದ ತುಳಿತಕ್ಕೀಡಾಗಿದ್ದಾಳೆ... ಆದರೆ ಬ್ರಾಹ್ಮಣಗಳ ಕಾಲದ ಬ್ರಾಹ್ಮಣರಿಂದ ತಿರಸ್ಕೃತಳಾದಷ್ಟು ಬೇರೆ ಯಾರಿಂದಲೂ ಅಲ್ಲ'' ಎಂದಿದ್ದಾರೆ. ಸ್ಮೃತಿ ಕಾಲದಲ್ಲಿ ಮಹಿಳೆಯರ ಜೀವನದಲ್ಲಿ ತೀವ್ರ ಬದಲಾವಣೆಗಳಾದುದು ಕಾಣಿಸುತ್ತದೆ. 'ನ ಸ್ತ್ರೀ ಸ್ವಾತಂತ್ರ್ಯಮರ್ಹತೀ' [10] ಎಂದು ಹೇಳಿದ ಸ್ಮೃತಿಕಾರ ಮನು, ಮಹಿಳೆಯರ ಸಾಧನೆ - ಸ್ವಾತಂತ್ರ್ಯಗಳು ಧರ್ಮ ವಿರೋಧವೆಂದು ಸ್ಪಷ್ಟಪಡಿಸಿದ್ದಾನೆ. ಬಾಲ್ಯದಲ್ಲಿ ತಂದೆಯಿಂದ, ಯೌವನದಲ್ಲಿ ಪತಿಯಿಂದ, ವೃದ್ಧಾಪ್ಯದಲ್ಲಿ ಗಂಡುಮಕ್ಕಳಿಂದ ಸ್ತ್ರೀ ಪೋಷಿಸಲ್ಪಡುತ್ತಾಳೆ. ಹೀಗಾಗಿ ಅವಳಿಗೆ ಸ್ವತಂತ್ರವಾದ ವ್ಯಕ್ತಿತ್ವವಿಲ್ಲವೆಂದು ಮನು ವಿವರಿಸಿದ್ದಾನೆ.

ಭಾರತೀಯ ಸಂಸ್ಕೃತಿಯಲ್ಲಿ ಹೆಣ್ಣು ಮೂಲಭಯಳಾಗಿದ್ದಾಳೆಂದು ವಿವರಿಸುವ ದಿ॥ ಪೋಲಂಕಿ ರಾಮಮೂರ್ತಿಯವರು, ಋಗ್ವೇದದಲ್ಲಿ ಹೆಣ್ಣನ್ನು ಕಿರುಬನ ಹೃದಯದವಳೆಂದು ಕರೆಯಲಾಗಿದೆ, ಐತರೇಯ ಬ್ರಾಹ್ಮಣದಲ್ಲಿ ಹೆಣ್ಣನ್ನು ಹೃದಯ ಭೇದಿಸುವವಳು ಎಂದು ಹೇಳಲಾಗಿದೆ - ಎಂದು ವಿಶ್ಲೇಷಿಸಿದ್ದಾರೆ. 'ಒಳ್ಳೆಯ ಹೆಂಗಸು ಕೆಟ್ಟ ಗಂಡಸಿಗಿಂತ ಕಡೆ' ಎಂದು ತೈತ್ತರೀಯ ಸಂಹಿತೆ ಹೇಳಿದರೆ, 'ಹೆಣ್ಣು ಅಸಹ್ಯ' ವೆಂದು ಮೈತ್ರೇಯ ಸಂಹಿತೆ ಸಾರುತ್ತದೆ. 'ಹೆಣ್ಣು ಖಡ್ಗದ ಅಲಗಿಗಿಂತ ಹರಿತವಾದವಳು, ಚಂಚಲೆ' ಎಂದು ವಾಲ್ಮೀಕಿ ಹೇಳಿದರೆ, 'ಹೆಣ್ಣು ಎಲ್ಲಾ ಕೆಡುಕಿನ ಮೂಲ'ವೆಂದು ಮಹಾಭಾರತ ವಿವರಿಸುತ್ತದೆ. ಭಗವದ್ಗೀತೆಯಲ್ಲಿ ಹೆಣ್ಣನ್ನು ಪಾಪಿಗಳ, ಗುಲಾಮರ ಸಾಲಿಗೆ ಸೇರಿಸಲಾಗಿದೆಯೆಂದು ಪೋಲಂಕಿಯವರು ಆಧಾರ ಸಹಿತ ವಿವರಿಸಿದ್ದಾರೆ. [11]

ಹೀಗೆ ವೇದ ಉಪನಿಷತ್ತು - ಪುರಾಣ - ಬ್ರಾಹ್ಮಣಕ - ಸ್ಮೃತಿಗಳಲ್ಲಿ ಉಲ್ಲೇಖವಾಗಿರುವ ಮಹಿಳೆಯ ಸ್ಥಾನ - ಮಾನಗಳು ನಿರಾಶಾದಾಯಕವಾಗಿವೆ. ಮುಂದೆ ಬಂದ ಜೈನ - ಬೌದ್ಧ ಧರ್ಮಗಳಲ್ಲಿ ಮಹಿಳೆಯ ಸ್ಥಾನ - ಮಾನಗಳು ಸುಧಾರಿಸಿದರೂ ಕೂಡ ಅಷ್ಟೊಂದು ತೃಪ್ತಿಕರವಾಗಿ ಕಾಣುವುದಿಲ್ಲ. ಬೌದ್ಧ ಧರ್ಮಕ್ಕಿಂತ ತುಸು ಪ್ರಾಚೀನವಾದ ಜೈನ ಧರ್ಮದಲ್ಲಿ ಶ್ವೇತಾಂಬರರು ಮಹಿಳೆಗೆ ಧರ್ಮದಲ್ಲಿ ಅವಕಾಶ ನೀಡಿದರೆ, ದಿಗಂಬರರು ನಿರಾಕರಿಸುತ್ತಾರೆ. ಸ್ತ್ರೀ, ಪುರುಷನ ಜನ್ಮ ಪಡೆದು ಬಂದಾಗಲೇ ಆಕೆಗೆ ಮುಕ್ತಿ ಸಾಧ್ಯ ಎಂದು ದಿಗಂಬರರು ಸಾರಿದ್ದಾರೆ. ಸ್ತ್ರೀಗೆ ಈ ಜನ್ಮದಲ್ಲಿ ಮುಕ್ತಿ ಸಾಧ್ಯವಿಲ್ಲವೆಂಬುದಕ್ಕೆ ಅವರು ಅನೇಕ ಕಾರಣಗಳನ್ನು ಕೊಟ್ಟಿದ್ದಾರೆ. ಬೌದ್ಧಧರ್ಮ ಮಹಿಳಾ ವಿಮೋಚನೆ ದೃಷ್ಟಿಯಿಂದ ಜೈನಧರ್ಮಕ್ಕಿಂತ ಪ್ರಗತಿಪರವೆನಿಸುತ್ತದೆ. ನಿರ್ವಾಣ ಸಾಧನೆ ಸ್ತ್ರೀ ಪುರುಷರಿಬ್ಬರಿಗೂ ಸಾಧ್ಯವೆಂದು ಬುದ್ಧ ಹೇಳಿದ. ಆದರೆ ಪ್ರಾರಂಭದಲ್ಲಿ ತನ್ನ ಸಂಘದಲ್ಲಿ ಸ್ತ್ರೀಯನ್ನು ಬುದ್ಧ ಸೇರಿಸಿಕೊಳ್ಳಲಿಲ್ಲವೆಂದೂ, ಸ್ತ್ರೀ ಚೇತನದ ಬಗೆಗೆ ಆತನಿಗೆ ಶಂಕೆಯಿದ್ದಿತೆಂದೂ ತಿಳಿದುಬರುತ್ತದೆ. ಬೌದ್ಧಧರ್ಮ ಸ್ತ್ರೀಯರಿಗೆ ದೀಕ್ಷೆ - ಸಂಸ್ಕಾರಗಳಂತಹ ಅವಕಾಶಗಳನ್ನು ನೀಡಿದ್ದರೂ ಕೂಡ ಅವರಿಗಾಗಿ ಕೆಲವು ಪ್ರತ್ಯೇಕ ಕಟ್ಟಳೆಗಳನ್ನು ವಿಧಿಸಿದೆ.

---

8. ಬೃಹತ್ಸಂಹಿತಾ, LXXII ೧೩
9. A.B. Keith - APVU Vol. 31, P - 475.
10. Manu IX 3
11. ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀ - ಪೋಲಂಕಿ ರಾಮಮೂರ್ತಿ, 'ಸಂಕ್ರಮಣ' ಏಪ್ರಿಲ್ ೧೯೮೨, ಪು. ೨೭.

ವೇದ ಕಾಲದಿಂದ ಹಿಡಿದು ವಚನಕಾಲದವರೆಗೆ ಮಹಿಳೆಯರ ಸ್ಥಾನ - ಮಾನಗಳಲ್ಲಿ ಏರಿಳಿತಗಳಾಗಿರುವುದನ್ನು ಸ್ಪಷ್ಟವಾಗಿ ಕಾಣಬಹುದಾಗಿದೆ. ಕೇವಲ ಭಾರತೀಯ ಸಂಸ್ಕೃತಿಯಲ್ಲಿ ಮಾತ್ರ ಮಹಿಳೆ ಕಡೆಗಣಿಸಲ್ಪಟ್ಟಿದ್ದಾಳೆಂದಲ್ಲ, ಪಾಶ್ಚಾತ್ಯ ಸಂಸ್ಕೃತಿಯು ಅನೇಕ ಸಂದರ್ಭಗಳಲ್ಲಿ ಆಕೆಯನ್ನು ಕಡೆಗಣಿಸಲಾಗಿದೆ. 'ಜ್ಞಾನವು ಪುರುಷನ ಗೌರವವನ್ನು ಹೆಚ್ಚಿಸಿದರೆ, ಅಜ್ಞಾನವು ಸ್ತ್ರೀಯ ಸೌಂದರ್ಯವನ್ನು ಹೆಚ್ಚಿಸುವುದೆಂದು' ಚೀನೀ ಗಾದೆ ಹೇಳುತ್ತದೆ. 'ಸ್ತ್ರೀಯರು ತತ್ವಶಾಸ್ತ್ರವನ್ನೆಂದಿಗೂ ಅಭ್ಯಾಸಿಸಬಾರದು, ವೈವಾಹಿಕ ನಿಯಮಗಳನ್ನು ಪಾಲಿಸುವುದೇ ಅವರಿಗೆ ಹೆಚ್ಚಿನ ತತ್ವ' ವೆಂದು ಯುರೋಪಿನ ಧರ್ಮಬೋಧಕ ಬೋಧಿಸುತ್ತದೆ. 'ಸ್ತ್ರೀಯು ಪುರುಷನಿಗೆ ಏನನ್ನೂ ಕಲಿಸಲಾರಳು. ಜಗತ್ತಿನಲ್ಲಿ ಪಾಪವನ್ನು ತಂದವಳೇ ಹೆಣ್ಣು. ಆದ್ದರಿಂದ ಸ್ತ್ರೀಯರು ಕಠೋರ ನರಕಕ್ಕೆ ಹೋಗುತ್ತಾರೆ. ಅವರ ಮುಕ್ತಿಗೆ ಉಪಾಯವೇ ಇಲ್ಲ' ಎಂದು ಸೆಂಟ್‌ಪಾಲ್ ಹೇಳಿದರೆ, 'ಸ್ತ್ರೀ ಬುದ್ಧಿವಂತಳಾಗುವುದಕ್ಕೆ ಬಯಸುವುದೇ ಮಹಾಪರಾಧ' ಎಂದು ಮಾರ್ಟಿನ್ ಲೂಥರ್ ತಿಳಿಸಿದ್ದಾರೆ. ಇಂದಿಗೂ ಕೂಡ ಅನೇಕ ದೇಶಗಳಲ್ಲಿ ಮಹಿಳೆಯರಿಗೆ ಮತದಾನದ ಹಕ್ಕು ಕೂಡ ಇಲ್ಲದಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ.

ಹೀಗೆ ಶತಮಾನಗಳಿಂದ ಅಸ್ಪೃಶ್ಯಳಾದ - ಅದೃಶ್ಯಳಾದ ಹೆಣ್ಣನ್ನು ವಚನಕಾರರು ಮಾನವೀಯ ದೃಷ್ಟಿಯಿಂದ ಕಂಡಿದ್ದಾರೆ. ಸರಿಸಮಾನದ ಸ್ಥಾನ - ಮಾನಗಳನ್ನು ನೀಡಿದ್ದಾರೆ. ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ನಡೆದ ವಚನ ಚಳುವಳಿ ಮಹಿಳಾ ವಿಮೋಚನೆಯ ದೃಷ್ಟಿಯಿಂದ ಇಡೀ ಜಗತ್ತಿಗೇ ಮಾದರಿಯಾಗಿದೆಯೆಂಬುದಕ್ಕೆ ಅನೇಕ ಆಧಾರಗಳು ದೊರೆಯುತ್ತವೆ. ಪುರುಷ ವಚನಕಾರರಿಗೆ ಸರಿಸಮವಾಗಿ ವಚನಗಳನ್ನು ರಚಿಸಿದ ಮಹಿಳಾ ವಚನಕಾರರನ್ನು ಗಮನಿಸಿದರೇನೇ ಈ ಮಾತು ಸ್ಪಷ್ಟವಾಗುತ್ತದೆ. ಸಮುದಾಯ ಸಂಸ್ಕೃತಿಗೆ, ಸಮಾನ ಸಂಸ್ಕೃತಿಗೆ ಮಹತ್ವ ನೀಡಿದ ವಚನಕಾರರು ಮಹಿಳೆಯರಿಗೆ ಅತ್ಯುನ್ನತ ಸ್ಥಾನ - ಮಾನಗಳನ್ನು ಕಲ್ಪಿಸಿಕೊಟ್ಟಿದ್ದಾರೆ.

ವಚನ ಸಾಹಿತ್ಯ ಮತ್ತು ಮಹಿಳೆ ಎಂಬ ವಿಷಯದತ್ತ ನೋಡಿದಾಗ ಎರಡು ಅಂಶಗಳು ಗಮನಕ್ಕೆ ಬರುತ್ತವೆ. ವಚನಕಾರರು ಮಹಿಳೆಯರನ್ನು ನೋಡಿದ ದೃಷ್ಟಿಕೋನ, ವಚನಕಾರ್ತಿಯರು ಮಹಿಳೆಯರನ್ನು ಕಂಡ ಬಗೆ - ಹೀಗೆ ಎರಡು ರೀತಿಯ ವಿಂಗಡನೆ ಸಾಧ್ಯವಾಗುತ್ತದೆ. ಆದರೆ ತುಂಬ ಕುತೂಹಲದ ಸಂಗತಿಯೆಂದರೆ ವಚನ ಚಳುವಳಿಯಲ್ಲಿ ಮಹಿಳಾ ವಿಮೋಚನೆಯನ್ನು ಕುರಿತು, ಮಹಿಳೆಯ ಸಾಧ್ಯತೆಗಳನ್ನು ಕುರಿತು ಮಹಿಳಾ ವಚನಕಾರರಿಗಿಂತ, ಪುರುಷ ವಚನಕಾರರೇ ಮಾತನಾಡಿದ್ದಾರೆ. ಹೀಗಾಗಿ 'ವಚನ ಸಾಹಿತ್ಯದಲ್ಲಿ ಮಹಿಳೆ'ಯೆಂದರೆ ವಚನಕಾರರು ಕಂಡ ಮಹಿಳೆಯೇ ಆಗಿದ್ದಾಳೆ. ವಚನಕಾರರನ್ನೇ ಕುರಿತು ವಚನಕಾರ್ತಿಯರು, ವಚನಕಾರ್ತಿಯರನ್ನು ಕುರಿತು ವಚನಕಾರರು ಉಲ್ಲೇಖಿಸಿದ್ದಾರೆ. ವಚನಕಾರರು ವಚನಕಾರ್ತಿಯರ ಬಗೆಗೆ ಹೇಳುವಾಗ ಆಕೆ ಕೇವಲ ಮಹಿಳೆಯೆಂಬುದನ್ನು ಮಾತ್ರ ಮುಂದೆ ಮಾಡದೆ ಆಕೆ ಒಬ್ಬ ಸಾಧಕಿಯೆಂಬುದನ್ನು ಮನಗಂಡಿದ್ದಾರೆ. ವಚನಕಾರ್ತಿಯರೂ ಕೂಡ ಇಲ್ಲಿ ಕೇವಲ ಮಹಿಳೆಯರಾಗದೆ ಮಹತ್ವದ ಸಾಧ್ಯತೆಗಳನ್ನು ಪ್ರಕಟಿಸಿದ್ದಾರೆ. ಹೀಗಾಗಿ ವಚನ ಚಳುವಳಿಗೆ ಮಹಿಳೆ - ಪುರುಷ ಎಂಬುದು ಮುಖ್ಯವಾಗದೆ ಇಡೀ ಬದುಕಿನ ಹುಡುಕಾಟ ಮುಖ್ಯವಾಗುತ್ತದೆ. ಅಂತೆಯೇ ವಚನ ಚಳುವಳಿಯಲ್ಲಿ ದಲಿತ ವಚನಕಾರರು ದಲಿತರ ಬಗೆಗೆ ಮಾತನಾಡಲಿಲ್ಲ. ದಲಿತೇತರ ವಚನಕಾರರು ದಲಿತರ ಬಗ್ಗೆ ಮಾತನಾಡಿದರು. ಅದೇ ರೀತಿ ಮಹಿಳೆಯರ ಬಗೆಗೆ ವಚನಕಾರ್ತಿಯರು ಹೆಚ್ಚು ಹೇಳಲಿಲ್ಲ. ವಚನಕಾರರು ಅವಳ ಸಾಧ್ಯತೆಗಳನ್ನು ಹೆಚ್ಚು ವಿವರಿಸಿದರು. ಇಲ್ಲಿ ತನ್ನ ನೋವು - ಸಂಕಟಗಳನ್ನು ದೊಡ್ಡದನ್ನಾಗಿ ಮಾಡಿಕೊಂಡು ಹೇಳಲಾರದೆ, ಇತರರ ನೋವು ಸಂಕಟಗಳಿಗೆ ಸ್ಪಂದಿಸುವ ದಯಾಪ್ರದಾನವಾದ ಸಂಸ್ಕೃತಿ ಎದ್ದು ಕಾಣುತ್ತದೆ. ಒಬ್ಬರ ನೋವನ್ನು ಇನ್ನೊಬ್ಬರು ಅರ್ಥ ಮಾಡಿಕೊಳ್ಳುವ, ಒಬ್ಬರ ಮೌನಕ್ಕೆ ಇನ್ನೊಬ್ಬರು ಮಾತಾಗುವ ಸಹಕಾರ ಸಂಸ್ಕೃತಿಯನ್ನು ವಚನ ಚಳುವಳಿಯಲ್ಲಿ ಕಾಣಬಹುದಾಗಿದೆ. ಅಂತೆಯೇ ಇಲ್ಲಿ ತನ್ನ ಬಗೆಗೆ ವೈಭವೀಕರಣವಿರದೆ ಇನ್ನೊಬ್ಬರ ಬಗೆಗಿನ ಅಂತಃಕರಣ ಮುಖ್ಯವಾಗುತ್ತದೆ. ಇದು ವಚನ ಚಳುವಳಿಯ ಉದಾತ್ತ ಧ್ಯೇಯವಾಗಿದೆ.

ಪ್ರಾರಂಭದ ವಚನಕಾರನೆಂದು ಪ್ರಸಿದ್ಧನಾಗಿರುವ ಜೇಡರದಾಸಿಮಯ್ಯನ ವಚನವೊಂದರ ಮೂಲಕ ಈ ವಿಶ್ಲೇಷಣೆಯನ್ನು ಪ್ರಾರಂಭಿಸಬಹುದಾಗಿದೆ.

ಮೊಲೆ - ಮುಡಿ ಬಂದರೆ ಹೆಣ್ಣೆಂಬರು
ಗಡ್ಡ - ಮೀಸೆ ಬಂದರೆ ಗಂಡೆಂಬರು,
ನಡುವೆ ಸುಳಿವಾತ್ಮನು
ಗಂಡೂ ಅಲ್ಲ ಹೆಣ್ಣೂ ಅಲ್ಲ ಕಾಣಾ ರಾಮನಾಥ. - (ಜೇ.ದಾ.ವ. ೧೧೧)

ವಚನಕಾರರು ಕಂಡ ಹೆಣ್ಣು ಹೆಣ್ಣಾಗಿದ್ದಾಳೆಂಬುದನ್ನು ಈ ವಚನ ಸ್ಪಷ್ಟಗೊಳಿಸುತ್ತದೆ. ಅಂಗಾಂಗಗಳಲ್ಲಿ ಕೆಲವು ಬದಲಾವಣೆಗಳನ್ನು ಬಿಟ್ಟರೆ ಹೆಣ್ಣಿಗೂ ಗಂಡಿಗೂ ಯಾವ ಭೇದವಿಲ್ಲವೆಂಬುದನ್ನು ಸ್ಪಷ್ಟಪಡಿಸುವುದಕ್ಕಾಗಿಯೇ ದಾಸಿಮಯ್ಯ ನಂತಹ ಶರಣರು 'ನಡುವೆ ಸುಳಿವಾತ್ಮನು ಗಂಡೂ ಅಲ್ಲ ಹೆಣ್ಣೂ ಅಲ್ಲ'ವೆಂದು ವಿಶ್ಲೇಷಿಸಿದ್ದಾರೆ. ಆತ್ಮವೆಂಬುದು ಸನಾತನ ಧರ್ಮದಲ್ಲಿ ತಿಳಿಯಲಾರದ ನಿಗೂಢವಾಗಿದ್ದರೆ, ವಚನಕಾರರು ಅದರರ್ಥವನ್ನೂ ಸ್ಪಷ್ಟಪಡಿಸುತ್ತ ಸಮಾನತೆಯ ಸಂಕೇತವಾಗಿ ಬೆಳೆಸಿದ್ದಾರೆ. ಮೊಲೆ - ಮುಡಿ ಹಾಗೂ ಗಡ್ಡ - ಮೀಸೆಗಳಿಗಿರುವ ಭೇದ ಕೇವಲ ದೈಹಿಕವಾದದ್ದು. ಮನಸ್ಸು, ಆತ್ಮ, ಜೀವಗಳಿಗೆ ಹೆಣ್ಣು - ಗಂಡುಗಳೆಂಬ ಭೇದವಿಲ್ಲ. ದೇಹಕ್ಕಿಂತ ಜೀವ ದೊಡ್ಡದು. ಜೀವವಿಲ್ಲದ ದೇಹಕ್ಕೆ ಯಾವ ಬೆಲೆಯೂ ಇಲ್ಲ. ಹೀಗಾಗಿ ಜೀವದಲ್ಲಿ, ಆತ್ಮದಲ್ಲಿ ಭೇದವಿಲ್ಲದಿದ್ದಾಗ ಗಂಡು - ಹೆಣ್ಣು ಬೇರೆ ಬೇರೆ ಅಲ್ಲವೇ ಅಲ್ಲ. ಅವೆರಡು ಒಂದೇ ಎಂಬ ಸತ್ಯವನ್ನು ವಚನಕಾರರು ಅರ್ಥಪೂರ್ಣ ವಿಶ್ಲೇಷಣೆಯ ಮೂಲಕ ಸ್ಪಷ್ಟಪಡಿಸಿದ್ದಾರೆ;

ಇದನ್ನೇ ಮುಂದುವರಿಸಿ ಹೇಳಿದ ದಾಸಿಮಯ್ಯ ''ಮಡದಿಯ ಪ್ರಾಣಕ್ಕೆ ಮೊಲೆ - ಮುಡಿ ಇದ್ದಿತ್ತೆ? ಒಡೆಯರ ಪ್ರಾಣಕ್ಕೆ ಇದ್ದಿತ್ತೇ ಯಜ್ಞೋಪವೀತ?'' ಎಂದು ಪ್ರಶ್ನಿಸುತ್ತಾನೆ. ಈ ಅಸಮಾನತೆಯ ವ್ಯವಸ್ಥೆಯಲ್ಲಿ ವರ್ಣಭೇದ, ವರ್ಗಭೇದ, ಜಾತಿ ಭೇದಗಳ ಜತೆಯಲ್ಲಿ ಈ ಲಿಂಗಭೇದವೂ ಪ್ರಮುಖವಾಗಿತ್ತು. ಈ ಎಲ್ಲ ಭೇದಗಳನ್ನು ಆಧಾರ ಸಹಿತವಾಗಿ ಅಲ್ಲಗಳೆದ ವಚನಕಾರರು, ಲಿಂಗಭೇದವನ್ನೂ ಸ್ಪಷ್ಟವಾಗಿ ನಿರಾಕರಿಸಿದ್ದಾರೆ :

ಲಿಂಗಭೇದದ ಜೊತೆಗೆ ಸನಾತನ ಸಂಸ್ಕೃತಿ ಹೆಣ್ಣಿಗೆ ಮಾಯೆಯೆಂದು ಕರೆದು ಮೋಸ ಮಾಡಿದೆ. ಕೆಲವು ವಚನಕಾರರು ಈ ಮಾಯೆಯನ್ನು ಪೂರ್ಣವಾಗಿ ತಿರಸ್ಕರಿಸದೆ ಅದಕ್ಕೂ ಹೊಸ ಅರ್ಥ ನೀಡಿದ್ದಾರೆ. ಅಲ್ಲಮ ಪ್ರಭು ಇದನ್ನು ನೇರವಾಗಿ ತಿರಸ್ಕರಿಸಿದ್ದಾನೆ:

ಹೊನ್ನು ಮಾಯೆಯೆಂಬರು ಹೊನ್ನು ಮಾಯೆಯಲ್ಲ
ಹೆಣ್ಣು ಮಾಯೆಯೆಂಬರು ಹೆಣ್ಣು ಮಾಯೆಯಲ್ಲ.
ಮಣ್ಣು ಮಾಯೆಯೆಂಬರು ಮಣ್ಣು ಮಾಯೆಯಲ್ಲ
ಮನದಮುಂದಣ ಆಸೆಯೇ ಮಾಯೆ ಕಾಣಾ ಗುಹೇಶ್ವರ. (ಅ.ವ. ೫೦)

ಶತಮಾನಗಳಿಂದ ಹೆಣ್ಣು - ಹೊನ್ನು - ಮಣ್ಣುಗಳನ್ನು ಮಾಯೆಯೆಂದು ನಂಬಿದ ಜನತೆಗೆ ಅಲ್ಲಮ ಪ್ರಭು ಅವು ಮಾಯೆಯಲ್ಲವೆಂಬುದನ್ನು ಬಹಳ ತಾತ್ವಿಕವಾಗಿ ಸಮರ್ಥಿಸಿದ್ದಾರೆ. ಮಾಯೆಯೆಂಬುದು ನೋಡುವ ಕಣ್ಣಿಗೆ ಹೊರತು, ಕಾಣುವ ವಸ್ತುವಿಗಲ್ಲವೆಂಬುದನ್ನು ಸ್ಪಷ್ಟಪಡಿಸಿದ ಪ್ರಭು 'ಮನದ ಮುಂದಣ ಆಸೆಯೇ ಮಾಯೆ' ಎಂಬ ನಿರ್ಣಯಕ್ಕೆ ಬಂದಿರುವುದು ಹೆಚ್ಚು ವೈಜ್ಞಾನಿಕವೆನಿಸುತ್ತದೆ. ಆಸೆಯಿಂದಲೇ ಮೋಹ ಹೆಚ್ಚುತ್ತದೆ. ಅದೇ ಮೋಹ ಮಾಯೆಯಾಗಿ ಕಾಡುತ್ತದೆ. ತನ್ನೊಳಗಿನ ಆಸೆಯನ್ನು ಮಿತಿಗೊಳಿಸದೆ, ತನ್ನದಲ್ಲದ ವಸ್ತುವನ್ನು ಮಾಯೆಯೆಂದು ಕರೆಯುವುದು ಸೂಕ್ತವಲ್ಲವೆಂದು ಪ್ರಭು ಸೂಚ್ಯವಾಗಿ

ಹೇಳಿದ್ದಾನೆ. 'ಆಸೆಯೇ ದುಃಖಕ್ಕೆ ಮೂಲ ಕಾರಣ' ವೆಂದು ಹೇಳಿದ ಬುದ್ಧನ ನಿಲುವನ್ನು, ಪ್ರಭು ಸಾರ್ಥಕ ರೀತಿಯಲ್ಲಿ ವಿವರಿಸಿದ್ದಾನೆ. ಹೆಣ್ಣು ಮಾಯೆಯಲ್ಲವೆಂಬುದನ್ನು ಸ್ಪಷ್ಟಪಡಿಸಿ, ಆಸೆಯೇ ಮಾಯೆಯೆಂದು ಹೇಳಿ ಒಂದೇ ಮಾತಿನಲ್ಲಿ ಎರಡು ತತ್ವಗಳನ್ನು ಅಡಕಗೊಳಿಸಿದ್ದಾನೆ.

ಅಲ್ಲಮ ಪ್ರಭು ಹೆಣ್ಣನ್ನು ಮಾಯೆಯಲ್ಲವೆಂದು ಸ್ಪಷ್ಟಪಡಿಸಿದರೆ, ಬಸವಣ್ಣ ಹೆಣ್ಣನ್ನು ಮಾಯೆಯೆಂದು ಕರೆದಿದ್ದಾನೆ. ಆದರೆ ಸನಾತನರು ಹೆಣ್ಣನ್ನು ಮಾಯೆಯೆಂದು ಕರೆಯುವುದಕ್ಕೂ ಇದಕ್ಕೂ ತೀವ್ರತರವಾದ ವ್ಯತ್ಯಾಸವಿದೆ. ಬಸವಣ್ಣ 'ಮಾಯೆ' ಯೆಂಬುದನ್ನು ಶಕ್ತಿಯೆಂಬರ್ಥದಲ್ಲಿ ಬಳಸಿದ್ದಾನೆ.

''ಜನಿತಕ್ಕೆ ತಾಯಾಗಿ ಹೆತ್ತಳು ಮಾಯೆ, ಮೋಹಕ್ಕೆ ಮಗಳಾಗಿ ಹುಟ್ಟಿದಳು ಮಾಯೆ, ಕೂಟಕ್ಕೆ ಸ್ತ್ರೀಯಾಗಿ ಕೂಡಿದಳು ಮಾಯೆ...(ಬ.ವ. ೧೫೫) ಎಂಬ ನುಡಿಗಳಲ್ಲಿ ಮಾಯೆಯೆಂಬುದು ಶಕ್ತಿಯ ಸಂಕೇತವಾಗಿ, ಅದು ಭಕ್ತಿಯ ಭಾವನೆಯಲ್ಲಿ ವ್ಯಕ್ತವಾಗಿದೆ. ಈ ವಚನ ಭಕ್ತ ಸ್ಥಲದಲ್ಲಿ ಬರುತ್ತದೆ. ಸ್ತ್ರೀ - ಪುರುಷರ ಅನಾದಿ ಸಂಬಂಧವನ್ನು ಈ ವಚನ ವ್ಯಕ್ತಪಡಿಸುತ್ತದೆ. ತಾಯಿಯಾಗಿ, ಮಡದಿಯಾಗಿ, ಮಗಳಾಗಿ ತನ್ನ ಅಸ್ತಿತ್ವಕ್ಕೆ ಕಾರಣಳಾದ ಮಹಿಳೆಯನ್ನು ಬಸವಣ್ಣ ಮಾಯೆ - ತಾಯೆ - ಶಕ್ತಿ ಎಂಬರ್ಥದಲ್ಲಿ ಕರೆದಿದ್ದಾನೆ. ಭಕ್ತಿ ಭಾವದಲ್ಲಿ ಆಕೆಯನ್ನು ಮಾಯೆಯೆಂದು ಭಾವಿಸಿಕೊಂಡು ಜಗನ್ಮಾತೆಯೆಂದು ಕರೆದಿದ್ದಾನೆ. ಹೀಗೆ ಪ್ರಭುವಿನ 'ಮಾಯೆ' ಬಸವಣ್ಣನ 'ಮಾಯೆ' ಬೇರೆ ಬೇರೆಯಾಗಿದ್ದಾರೆ. ಪ್ರಭು ವೈಚಾರಿಕ ನೆಲೆಯಲ್ಲಿ 'ಮಾಯೆ' ಪದದ ಅರ್ಥವನ್ನು ಬಳಸಿದರೆ, ಬಸವಣ್ಣ ಭಕ್ತಿಯ ನೆಲೆಯಲ್ಲಿ ಅದನ್ನು ಬೆಳಸಿ ಆ ಪದಕ್ಕೆ ಅತ್ಯಂತ ಗೌರವಸ್ಥಾನವನ್ನು ತಂದುಕೊಡುತ್ತಾನೆ. 'ಈ ಮಾಯೆಯನ್ನರಿವಡೆ ನನ್ನಳವಲ್ಲ ಅದನ್ನು ನೀವೇ ಬಲ್ಲಿರಿ ಕೂಡಲಸಂಗಮದೇವ' ಎಂಬ ವಚನದ ಮುಂದಿನ ಭಾಗ ಈ ಮಾತನ್ನು ಸ್ಪಷ್ಟಪಡಿಸುತ್ತದೆ. ಬಸವಣ್ಣನಿಗೆ ಇಲ್ಲಿ ಹೆಣ್ಣು ಕೇವಲ ಹೆಣ್ಣಾಗಿ ಮಾತ್ರ ಕಾಣದೆ, ಆಕೆ ಅನಂತ ಸೃಷ್ಟಿಯ ಸಂಕೇತವಾಗಿದ್ದಾಳೆ, ಸೃಜನಶೀಲತೆಯ ಪ್ರತೀಕವಾಗಿದ್ದಾಳೆ. ಅಂತೆಯೇ ಆಕೆ ಸಾಮಾನ್ಯನಾದ ಪುರುಷನಿಗಿಂತ ಎತ್ತರದ ಸ್ಥಾನದಲ್ಲಿದ್ದಾಳೆ. ಅಂತೆಯೇ ಭಕ್ತಿಭಾವದಲ್ಲಿ ಬಸವಣ್ಣ ಆಕೆಯನ್ನು 'ತಾಯಿ'ಯೆಂದು, 'ಮಾಯೆ'ಯೆಂದು ಗೌರವದಿಂದ ಸ್ಮರಿಸಿದ್ದಾನೆಯೇ ಹೊರತು, ಮಾಯೆಯೆಂದರೆ 'ಚಂಚಲೆ' ಎಂಬರ್ಥದಲ್ಲಿ ಆ ಪದವನ್ನು ಬಳಸಿಲ್ಲವೆಂಬುದು ಸ್ಪಷ್ಟವಾಗುತ್ತದೆ.

ವಚನಕಾರರು ಮಹಿಳೆಗೆ ಸಮಾನಸ್ಥಾನ ನೀಡಿ, ಗೌರವದಿಂದ ಕಂಡಿದ್ದಾರೆನ್ನಲಿಕ್ಕೆ ಅನೇಕ ವಚನಗಳನ್ನು ಉಲ್ಲೇಖಿಸಬಹುದಾಗಿದೆ. ದಾಂಪತ್ಯ ಜೀವನದಲ್ಲಿ ಸತಿ - ಪತಿ ಒಂದಾಗಿರಬೇಕೆಂಬುದೇ ಅವರ ನಿಲುವಾಗಿದೆ. ಅಂತೆಯೇ ದಾಸಿಮಯ್ಯನಂತಹ ವಚನಕಾರನು 'ಸತಿ - ಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ' ಎಂದು ಹೇಳಿದರೆ, 'ದಾಸ - ದುಗ್ಗಳೆಯರಂತೆ, ಸಿರಿಯಾಳ - ಚಂಗಳೆಯರಂತೆ' ನೆರೆ ನಂಬೋ ನೆರೆ ನಂಬೋ ಎಂದು ಬಸವಣ್ಣ ಹೇಳಿದ್ದಾನೆ.

ಹೆಣ್ಣನ್ನು ತಾಯಿಯೆಂದು, ಅಕ್ಕನೆಂದು ಕರೆದು ಗೌರವಿಸುವ ಅವರ ರೀತಿ, ಭಾರತೀಯ ಸಂಸ್ಕೃತಿಯನ್ನು ನಿಜವಾದ ಅರ್ಥದಲ್ಲಿ ಪ್ರತಿಪಾದಿಸುತ್ತದೆ.

ಎಮ್ಮ ತಾಯಿ ನಿಂಬವ್ವೆ : ನೀರನೆರೆದುಂಬಳು.....
ಎಮ್ಮಕ್ಕ ಕಂಚಿಯಲ್ಲಿ ಬಾಣಸವ ಮಾಡುವಳು (ಬ.ವ. ೩೫೧)

ಎಂದು ಬಸವಣ್ಣನವರು ಮಹಿಳೆಯರನ್ನು ಕುರಿತು ಹೇಳಿದರೆ, ಸಿದ್ಧರಾಮನು -

ಹೆತ್ತ ತಾಯಿ ನೀನೆ ಅವ್ವಾ ;
ನನ್ನ ಹತ್ತರ ಬಂದಾಕೆ ನೀನೆ ಅವ್ವಾ,
ಲಿಂಗದ ಮೊತ್ತವಾದಾಕೆ ನೀನೆ ಅವ್ವಾ,
ನಮ್ಮ ಕಪಿಲಸಿದ್ಧ ಮಲ್ಲಿಕಾರ್ಜುನನ ರಾಣಿ ನೀನೆ ಅವ್ವಾ ಎಂದು (ಸಿ.ರಾ.ವ. ೧೦೦೮)

ಹೆಣ್ಣು - ತಾಯಿಯಾದ ಸಾಧ್ಯತೆಗಳನ್ನು ಸಿದ್ಧರಾಮನು ವಿವರಿಸಿದ್ದಾನೆ. ಎಮ್ಮಕ್ಕ ಮಹಾದೇವಿ ಎಮ್ಮಕ್ಕ ಗಂಗಾದೇವಿ'' ಎಂದು ಕೊಂಡಾಡಿದ್ದಾನೆ (ಸಿ.ರಾ.ವ. ೧೧೭೮). 'ಹೆಣ್ಣಳಿದ ಬಳಿಕ ಮಣ್ಣಿನ ಹಂಗೇಕಯ್ಯ' (ಸಿ.ರಾ.ವ. ೨೯೯) ಎಂದು ಪ್ರಶ್ನಿಸಿದ್ದಾನೆ. 'ಹೆಣ್ಣ ಹಿಡಿದು ಹೆಣ್ಣ ಭೋಗಿಸಬಾರದು' (ಸಿ.ರಾ.ವ. ೩೦೦) ಎಂದು ಸ್ಪಷ್ಟಪಡಿಸಿದ್ದಾನೆ. ಹೀಗೆ ಅನೇಕ ವಚನಕಾರರು ಹೆಣ್ಣನ್ನು ತಾಯಿಯೆಂದು ಕರೆದು ಗೌರವಿಸಿದ್ದಾರೆ. ಅಕ್ಕನೆಂದು ಹೇಳಿ ವಾತ್ಸಲ್ಯ ಪ್ರಕಟಿಸಿದ್ದಾರೆ. ತಂಗಿಯೆಂದು ಅಕ್ಕರೆಯಿಂದ ಕರೆದಿದ್ದಾರೆ. ಶತಮಾನಗಳಿಂದ ಹೆಣ್ಣನ್ನು ಅಸ್ಪೃಶ್ಯಳನ್ನಾಗಿ ಕಂಡ ಸಮಾಜವ್ಯವಸ್ಥೆಯಲ್ಲಿ ಶರಣರು ಹೆಣ್ಣಿಗೆ ಮಹತ್ವದ ಸ್ಥಾನ ನೀಡಿದ್ದಾರೆ.

ಶರಣರು ಹೆಣ್ಣನ್ನು ಮಾತೆಯೆಂದು ಒಪ್ಪಿಕೊಂಡು, ಸತಿಯೆಂದು ಅಪ್ಪಿಕೊಂಡಿದ್ದಾರೆ. ಅವರು ಸಂಸಾರವನ್ನು ತಿರಸ್ಕರಿಸಲಿಲ್ಲ. ಆಧ್ಯಾತ್ಮವನ್ನು ಕೈಬಿಡಲಿಲ್ಲ. ಈ ದೇಶದ ಧಾರ್ಮಿಕ ಪರಂಪರೆಯಲ್ಲಿ ಮೋಕ್ಷಸಾಧನೆಗೆ ಸಂಸಾರ - ಹೆಂಡತಿ - ಮಕ್ಕಳನ್ನು ತಿರಸ್ಕರಿಸಲಾಗಿದೆ. ಸಂಸಾರದಲ್ಲಿದ್ದುಕೊಂಡು ಸಾಧಿಸುವುದಾಗುವುದಿಲ್ಲವೆಂದೇ ಅನೇಕ ಧಾರ್ಮಿಕ ಮುಖಂಡರು ಹೇಳಿದ್ದಾರೆ. ಇನ್ನು ಕೆಲವರು ಸಂಸಾರದಲ್ಲಿಯೇ ಮುಳುಗಿ ಮೇಲೇಳದಂತೆ ಮರೆಯಾಗಿ ಹೋದವರಿದ್ದಾರೆ. ಇವೆರಡೂ ಅತಿಗಳನ್ನು (Extreems) ಕಂಡುಕೊಂಡ ಶರಣರು ಹೊಸ ಮಾರ್ಗವನ್ನು ಹುಡುಕಿದರು. ಅವರು ಇಹವನ್ನು ತಿರಸ್ಕರಿಸಲಿಲ್ಲ. ಪರವನ್ನು ನಿರಾಕರಿಸಲಿಲ್ಲ. ಇಹದ ಮೂಲಕವೇ ಪರವನ್ನು ಪರಿಚಯಿಸಿದರು. ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವವರೆಂದು ಸ್ಪಷ್ಟಪಡಿಸಿದರು. ಸ್ವರ್ಗಲೋಕ - ನರಕಲೋಕ ಬೇರಿಲ್ಲ ಕಾಣಿರೋ ಎಂದು ವಿವರಿಸಿ ಹೇಳಿದರು. ಇಹ - ಪರಗಳು ಒಂದಕ್ಕೊಂದು ಪೂರಕವೆಂಬುದನ್ನು ತಿಳಿಸಿ ಹೇಳಿದರು. ಹೀಗಾಗಿ ಶರಣರಿಗೆ ಆಧ್ಯಾತ್ಮ - ಅನುಭಾವದ ಕಡೆಗೆ ಲಕ್ಷ್ಯವಿರುವಂತೆ, ಸತಿ - ಸಂಸಾರದ ಬಗೆಗೆ ಒಲವಿದೆ. ಈ ಒಲವಿನಿಂದಲೇ ಆ ಗೆಲುವು ಸಾಧ್ಯವೆಂಬುದನ್ನವರು ನುಡಿದು ತೋರಿಸಿದ್ದಾರೆ, ನಡೆದು ಕಾಣಿಸಿದ್ದಾರೆ.

ಉದಕದೊಳಗೆ ಬಯ್ಚಿಟ್ಟ ಬಯ್ಕೆಯ ಕಿಚ್ಚಿನಂತಿದ್ದಿತ್ತು ;
ಸಸಿಯೊಳಗಣ ರಸದ ರುಚಿಯಂತಿದ್ದಿತ್ತು ;
ನನೆಯೊಳಗಣ ಪರಿಮಳದಂತಿದ್ದಿತ್ತು;
ಕೂಡಲ ಸಂಗಮದೇವರ ನಿಲವು
ಕನ್ನೆಯ ಸ್ನೇಹದಂತಿದ್ದಿತ್ತು''. (ಬ.ವ. : ೧)

ಬಸವಣ್ಣನವರ ಇದೊಂದು ವಚನ, ಶರಣರು ಹೆಣ್ಣನ್ನು ಯಾವ ರೀತಿಯಾಗಿ ಕಂಡಿದ್ದಾರೆಂಬುದಕ್ಕೆ ಸಾಕ್ಷಿಯಂತಿದೆ. ಯಾವ ಹೆಣ್ಣು ಆಧ್ಯಾತ್ಮ - ಧಾರ್ಮಿಕ ಕ್ಷೇತ್ರಕ್ಕೆ ಅಸ್ಪೃಶ್ಯಳಾಗಿದ್ದಳೋ, ಅವಳನ್ನೇ ದೇವರ ಸ್ವರೂಪದಲ್ಲಿ ಕಾಣುವುದು, ಯಾವ ಹೆಣ್ಣು ಅದೃಶ್ಯಳಾಗಿದ್ದಳೋ ಅವಳನ್ನೇ ಮುಂಚೂಣಿಯಲ್ಲಿ ನಿಲ್ಲಿಸಿ ಗುರುತಿಸುವುದು ಶರಣರ ಉದಾತ್ತ ನೀತಿಯನ್ನು, ಮಾನವೀಯ ಕಳಕಳಿಯನ್ನು ಸ್ಪಷ್ಟಪಡಿಸುತ್ತದೆ.

ದೇವರಿಗೂ - ಹೆಣ್ಣಿಗೂ ಅಜಗಜಾಂತರ ಅಂತರವಿರುವ ಈ ದೇಶದ ಧಾರ್ಮಿಕ ಪರಂಪರೆಯಲ್ಲಿ, ಬಸವಣ್ಣ ಕನ್ನೆಯ ಸ್ನೇಹದಲ್ಲಿ ಕೂಡಲಸಂಗಮದೇವನನ್ನು ಕಂಡದ್ದು ಅತಿ ಮಹತ್ವದ ಸಂಗತಿಯಾಗುತ್ತದೆ. ಇಲ್ಲಿ ಕೂಡಲಸಂಗಮದೇವರ ಮುಖಾಂತರ ಕನ್ನೆಯ ಸ್ನೇಹದ ಪರಿಚಯವಾಗದೆ, ಕನ್ನೆಯ ಸ್ನೇಹದ ಮೂಲಕ ಕೂಡಲಸಂಗಮ ದೇವರ ನಿಲುವನ್ನು ಕಾಣಿಸುವ ಸಾಧನವಾಗಿದೆ. ಹೀಗೆ ಇಹದಲ್ಲಿಯೇ ಪರವನ್ನು ಕಾಣುವ ಬಸವಣ್ಣ ಮುಂತಾದ ವಚನಕಾರರ ಅನುಭಾವ, ಆಧ್ಯಾತ್ಮ ಕ್ಷೇತ್ರಕ್ಕೆ ನೀಡಿದ ಹೊಸ ಆಯಾಮವಾಗಿದೆ. ಕನ್ನೆಯ ಸ್ನೇಹ ಕೇಡಿಗೆ ಕಾರಣವೆಂದು ಸನಾತನಿಗಳು ತಿಳಿದುಕೊಂಡಿದ್ದರೆ, ಆ ಕನ್ನೆಯ ಸ್ನೇಹದ ಮೂಲಕವೇ ಕೂಡಲಸಂಗಮದೇವರ ನಿಲವನ್ನು ಶರಣರು ಕಂಡುಕೊಂಡಿದ್ದಾರೆ.

ಇಂದ್ರಿಯ ನಿಗ್ರಹ ಮಾಡುವದನ್ನು, ಸತಿ ಸುಖವನ್ನು ಬಿಟ್ಟು ಓಡಿ ಹೋಗುವದನ್ನು ಶರಣರು ಅಲ್ಲಗಳೆದಿದ್ದಾರೆ.

ಇಂದ್ರಿಯ ನಿಗ್ರಹವ ಮಾಡಿದಡೆ ಹೊಂದುವುವು ದೋಷಂಗಳು :
ಮುಂದೆ ಬಂದು ಕಾಡುವುವು ಪಂಚೇಂದ್ರಿಯಂಗಳು
ಸತಿಪತಿ ರತಿಸುಖವ ಬಿಟ್ಟರೆ ಸಿರಿಯಾಳ ಚಂಗಳೆಯರು? (ಬ.ವ. ೬೩೮)

ಎಂದು ಬಸವಣ್ಣ, ಸಕಲ ಪುರಾತನರನ್ನು ಸಾಕ್ಷಿಯಾಗಿ ನಿಲ್ಲಿಸಿ ಪ್ರಶ್ನೆ ಕೇಳಿದರೆ, 'ಭಕ್ತನ ಮನ ಹೆಣ್ಣಿನೊಳಗಾದಡೆ ವಿವಾಹವಾಗಿ ಕೂಡುವುದು' ಎಂದು ಸಿದ್ಧರಾಮ ಸ್ಪಷ್ಟಪಡಿಸುತ್ತಾನೆ. (ಸಿ.ರಾ.ವ: ೨೯೨)

ದೇವ ಬಂದಡೆ ಈ ದೇವಿಯ ಸಂಭ್ರಮ ನೋಡಾ!
ಈ ದೇವಿ ಹೋದಡೆ ಆ ದೇವನ ಮನೋವ್ಯಾಕುಲ ನೋಡಾ! (ಸಿ.ರಾ.ವ : ೧೧೭೯)

ಎನ್ನುವ ಸಿದ್ಧರಾಮನ ವಚನದಲ್ಲಿ ಸತಿ - ಪತಿಗಳ ಸಮನ್ವಯ ಭಾವದ ಮೂಲಕ ಲಿಂಗಾಂಗದ ಸಾಮರಸ್ಯವಡಗಿರುವುದನ್ನು ಕಾಣಬಹುದಾಗಿದೆ.

ಈ ದೇವಿಯಿಲ್ಲದಿರ್ದಡೆ ಆ ದೇವ ಸೈರಿಸನು,
ಆ ದೇವನಿಲ್ಲದಿರೆ ಈ ದೇವಿ ಸೈರಿಸಳು. (ಸಿ.ರಾ.ವ.: ೧೧೭೯)

ಎಂಬಂತಹ ಆತನ ನುಡಿಯಲ್ಲಿ ಗಂಡು - ಹೆಣ್ಣಿನ ಸಾಮೀಪ್ಯದ ಮೂಲಕ ಲಿಂಗಾಂಗದ ಸಂಬಂಧವನ್ನು ವಿವರಿಸಲಾಗಿದೆ.

ಇದೇ ವಿಚಾರವನ್ನು ದಾಸಿಮಯ್ಯ ಮತ್ತು ನಗೆಯ ಮಾರಿತಂದೆಗಳು ತಮ್ಮ ವಚನಗಳಲ್ಲಿ ಇನ್ನೂ ಸ್ಪಷ್ಟವಾಗಿ ನಿರೂಪಿಸಿದ್ದಾರೆ :

ಹೆಣ್ಣ ಕಂಡು ಹೆಚ್ಚಿ ಹೆಕ್ಕಳಬಡುವಂತೆ
ಕಣ್ಣಿಟ್ಟು ನೋಡಿಕೋ ಶಿವಲಿಂಗದೇವನ (ಸ.ಪು.ವ.ಸಂ.॥, ಪು. ೩೨೮)

ಎಂದು ಹೇಳಿದ ದಾಸಿಮಯ್ಯ ಶಿವಲಿಂಗದೇವನ ಕಡೆ ಗಮನ ಸೆಳೆದರೆ, ನಗೆಯ ಮಾರಿ ತಂದೆಯು ಹೆಣ್ಣು - ಹೊನ್ನು - ಮಣ್ಣಿನ ಮೇಲಣ ಮೋಹ ಹಿಂಗಬೇಕಾದರೆ ಏನು ಮಾಡಬೇಕೆಂಬುದನ್ನು ವಿವರಿಸಿದ್ದಾನೆ :

ಹೆಣ್ಣಿನ ಮೇಲಿನ ಮೋಹ ಯೋನಿ ಕಂಡಾಗ ದಣಿಯಿತ್ತು
ಹೊನ್ನಿನ ಮೇಲಿನ ಮೋಹ ಕೂಡಿ ಭಿನ್ನವಾಗಲಾಗಿಯೆ ದಣಿಯಿತ್ತು
ಮಣ್ಣಿನ ಮೇಲಿನ ಮೋಹ ಅರಿಗಳ ಮುರಿದು
ಹರಿವರಿಯಾದಾಗಲೆ ದಣಿಯಿತ್ತು
ಇವನೊಂದುವ ಕಾಣದ ಮೋಹ ಎಂದಿಗೂ ಬಿಡದು
ಇದರ ಸಂದನಳಿದು ಹೇಳಾ, ಆತುರವೈರಿ ಮಾರೇಶ್ವರಾ (ಸ.ಪು.ವ.ಸಂ.॥, ಪು. ೪೨೭)

ತುಂಬಾ ಸರಳವಾದ ಮಾತುಗಳಲ್ಲಿ ನಗೆಯ ಮಾರಿತಂದೆ, ನೇರವಾಗಿಯೇ ಸತ್ಯ ಸಂಗತಿಯನ್ನು ಬಿಚ್ಚಿಟ್ಟಿದ್ದಾರೆ. ಹೆಣ್ಣು - ಹೊನ್ನು - ಮಣ್ಣುಗಳನ್ನು ಅನುಭವಿಸದೆ ಅದರ ಮೋಹ ಬಿಡದೆಂದು ಸ್ಪಷ್ಟವಾಗಿ ಹೇಳಿದ ಈ ವಚನಕಾರ, ಇವುಗಳನ್ನೆಲ್ಲ ಬಿಟ್ಟಿದ್ದೇವೆಂದು ಹೇಳಿ ವಿಕೃತ ಚಟುವಟಿಕೆಗಳಲ್ಲಿ ತೊಡಗುವ ಸನಾತನಿಗಳನ್ನು ಕಂಡು ಟೀಕಿಸಿದ್ದಾನೆ. ಇದೇ ಮಾತನ್ನು ಮುಂದುವರಿಸಿ ಮೋಳಿಗಯ್ಯನೆಂಬ ವಚನಕಾರ ಹೀಗೆ ಹೇಳುತ್ತಾನೆ :

ಹೆಣ್ಣು ಹೊರಗಣದೆಂದು, ಹೊನ್ನು ಹೊರಗಣದೆಂದು, ಮಣ್ಣು ಹೊರಗಣದೆಂದು
ಸುಬೋಧೆಯ ಇದಿರಿಗೆ ಹೇಳಿ, ದುರ್ಬೋಧೆಯಲ್ಲಿ ತಾವು ನಡೆವುತಿಹ
ದುರ್ಗುಣಗಳ ಕಂಡು ನಾಚಿಕೆಯಾಯಿತು ನಿಃಕಳಂಕ ಮಲ್ಲಿಕಾರ್ಜುನಾ (ಸ.ಪು.ವ.ಸಂ.I, ಪು. ೭೩೨)

ಇಂತಹ ವಚನಗಳ ಮೂಲಕ ಸ್ಪಷ್ಟವಾಗುವ ಅಂಶವೆಂದರೆ, ಸಹಜವಾದ ನೈಸರ್ಗಿಕ ಸುಖ - ಭೋಗಗಳನ್ನು ಸರಿಯಾದ ರೀತಿಯಲ್ಲಿ ಪಡೆಯಬೇಕೇ ಹೊರತು, ಅವುಗಳನ್ನು ತೊರೆದು ಬಿಟ್ಟಿದ್ದೇವೆಂದು ಹೇಳಿ ಮೋಸ ಮಾಡಬಾರದೆಂದು ತಿಳಿಸುವುದಾಗಿದೆ.

ಹೆಣ್ಣಿನ ಬಗೆಗಿರುವ ಗಂಡಿನ ವ್ಯಾಮೋಹ ಹಾಗೂ ಗಂಡಿನ ಬಗೆಗಿರುವ ಹೆಣ್ಣಿನ ವ್ಯಾಮೋಹ ಇವು ನೈಸರ್ಗಿಕ ಹಾಗೂ ಸಹಜವಾದವುಗಳಾಗಿವೆ. ಶರಣರು ಇಂತಹ ವ್ಯಾಮೋಹವನ್ನು ಅಲ್ಲಗಳೆಯಲಿಲ್ಲ. ಆದರೆ ಇವುಗಳಿಗಾಗಿ ಹೊಡೆದಾಡುವವರನ್ನು ಅವರು ಮನ್ನಿಸಲಿಲ್ಲ.

ಹೆಣ್ಣು, ಹೊನ್ನು ಮಣ್ಣಿಗೆ ಹೊಡೆದಾಡುವನ್ನಬರ
ಅವರು ಹಿರಿಯರು ಎಂತಪ್ಪರೋ? (ಸ.ಪು.ವ.ಸಂ. I ಪು. ೩೨೨)

ಎಂದು ಘಟ್ಟಿವಾಳಯ್ಯ ಪ್ರಶ್ನಿಸಿದರೆ, ಇದನ್ನೇ ಚೆನ್ನಬಸವಣ್ಣ ಮತ್ತೊಂದು ರೀತಿಯಲ್ಲಿ ಪ್ರಶ್ನಿಸುತ್ತಾನೆ.

ಹೆಣ್ಣು ಬಿಟ್ಟಡೇನು ಹೊನ್ನಿನಾಸೆ ಉಳ್ಳನ್ನಬರ?
ಅಲ್ಲಿಗೆ ಹಿರಿಯತನ ಸಾಲದು. (ಚೆ.ಬ.ವ. : ೧೩೦೭)

ಎಂದು ಹೇಳುವ ಚೆನ್ನಬಸವಣ್ಣ, ಪರಸ್ತ್ರೀಯರ ಬಗೆಗೆ ತುಂಬ ಗೌರವವುಳ್ಳ ವಚನಕಾರನಾಗಿದ್ದಾನೆ.

ಶಿವಲಿಂಗವ ನೋಡುವ ಕಣ್ಣಿನಲ್ಲಿ
ಪರಸ್ತ್ರೀಯ ನೋಡಿದಡೆ, ಅಲ್ಲಿ ಲಿಂಗವಿಲ್ಲ (ಚೆ.ಬ.ವ. : ೮೮)

ಎಂದು ಸ್ಪಷ್ಟಪಡಿಸಿದ್ದಾನೆ. ಇದನ್ನೇ ಬಸವಣ್ಣನು 'ಛಲಬೇಕು ಶರಣಂಗೆ ಪರಸತಿಯನೊಲ್ಲೆನೆಂಬ' ಎಂದು ವಿಶ್ಲೇಷಿಸಿದ್ದಾನೆ. ಹೀಗೆ ಶರಣರು ರತಿಸುಖವನ್ನು ತಿರಸ್ಕರಿಸುವುದಿಲ್ಲ, ಆದರೆ ಅದನ್ನು ಸತಿಯಲ್ಲಿ ಮಾತ್ರ ಕಂಡುಕೊಳ್ಳುತ್ತಾರೆ. ಭಾರತೀಯ ಕೌಟುಂಬಿಕ ಚೌಕಟ್ಟಿನೊಳಗಡೆ ಆ ಮೋಹ - ವ್ಯಾಮೋಹಗಳನ್ನು ಈಡೇರಿಸಬೇಕೆಂದು ಹೇಳಿದ್ದಾರೆ.

ರತಿಯಿಂದ ರತ್ನ ಗತಿಯಿಂದ ವಾದ್ಯ
ಸದ್ಗತಿಯಿಂದ ಮುಕ್ತಿ ನಿರ್ಗತಿಯಿಂದ ವಿರಕ್ತಿ.....

ಎಂದು ಹೇಳುವ ಅಂಬಿಗರ ಚೌಡಯ್ಯನ ವಚನದಲ್ಲಿಯೂ ಕೂಡ ರತಿಗೆ ಮಹತ್ವದ ಸ್ಥಾನ ದೊರಕಿದೆ. ಹೆಣ್ಣು - ಗಂಡು ಸರಿಸಮಾನರೆಂದು ಸಾರುವ ಚೌಡಯ್ಯ ಇನ್ನೊಂದು ವಚನದಲ್ಲಿ ಬಹು ಮುಖ್ಯವಾದ ಪ್ರಶ್ನೆಯನ್ನು ಎತ್ತುತ್ತಾನೆ :

ಶರಣಸತಿ ಲಿಂಗಪತಿ' ಎಂಬುದು
ಶರಣ ಹೆಣ್ಣಾದ ಪರಿ ಇನ್ನೆಂತು
ಲಿಂಗ ಗಂಡಾದ ಪರಿ ಇನ್ನೆಂತು?

ಎನ್ನುವ ಚೌಡಯ್ಯನ ಪ್ರಶ್ನೆ ತುಂಬ ಪ್ರಾಮುಖ್ಯವಾಗಿದೆ. ಎಲ್ಲರೂ 'ಶರಣಸತಿ ಲಿಂಗಪತಿ'ಯೆಂದು ಒಪ್ಪಿಕೊಂಡು ಬಂದರೆ, ಶರಣನೇ ಏಕೆ ಸತಿಯಾಗಬೇಕು, ಲಿಂಗವೇ ಏಕೆ ಪತಿಯಾಗಬೇಕು? ಮತ್ತೆ ಇವೆರಡೂ ಸತಿ - ಪತಿಗಳಾದದ್ದು ಯಾವಾಗ? ಎಂದು ಪ್ರಶ್ನಿಸುವ ಚೌಡಯ್ಯ 'ಶರಣಸತಿ ಲಿಂಗಪತಿ' ಎಂಬ ಮಾತು ಮೊದಲಿಗೆ ಮೋಸವೆಂದು

ಸ್ಪಷ್ಟಪಡಿಸುತ್ತಾನೆ. ಹೀಗೆ ಅನೇಕ ವಚನಕಾರರು ಆ ವಚನ ಚಳುವಳಿಯಲ್ಲಿದ್ದುಕೊಂಡೇ ಅಲ್ಲಿಯ ಕೆಲವು ಗೆರೆಗಳನ್ನು ದಾಟಲು ಪ್ರಯತ್ನಿಸುತ್ತಿದ್ದಾರೆ.

ವಚನಕಾರ್ತಿಯರ ಬಗೆಗೆ ಅದರಲ್ಲೂ ಅಕ್ಕಮಹಾದೇವಿಯನ್ನು ಕುರಿತು ಅನೇಕ ವಚನಕಾರರು ಗೌರವಯುತ ನುಡಿಗಳನ್ನಾಡಿದ್ದಾರೆ. 'ಎನ್ನ ಹೆತ್ತ ತಾಯಿ ಮಹಾದೇವಿಯಕ್ಕನ ನಿಲವು ನೋಡಯ್ಯ ಪ್ರಭುವೆ' ಎಂದು ಬಸವಣ್ಣ ಹೇಳಿದರೆ, 'ನಿಜಪದವನೈದಿದ ಮಹಾದೇವಿಯಕ್ಕನ ಶ್ರೀಪಾದಕ್ಕೆ ನಮೋ ನಮೋ ಎಂಬೆನು' ಎಂದು ಚೆನ್ನಬಸವಣ್ಣ ನಮಿಸಿದ್ದಾನೆ. 'ಮಹಾದೇವಿಯಕ್ಕನ ನಿಲವಿಂಗೆ ಶರಣೆಂದು ಶುದ್ಧನಾದೆನು' ಎಂದು ಸಿದ್ಧರಾಮ ಹೇಳಿದರೆ, 'ಗುಹೇಶ್ವರ ಲಿಂಗದಲ್ಲಿ ಸ್ವಯಲಿಂಗವಾದ ಮಹಾದೇವಿಯಕ್ಕಗಳ ನಿಲವಿಗೆ ಶರಣೆನುತಿರ್ದೆನು' ಎಂದು ಅಲ್ಲಮ ಪ್ರಭುವೇ ಶರಣೆಂದಿದ್ದಾನೆ.

ಹೀಗೆ ವಚನಕಾರರು ತಮ್ಮೊಂದಿಗಿದ್ದ ವಚನಕಾರ್ತಿಯರಿಗೆ ಹಾಗೂ ಇತರ ಮಹಿಳೆಯರಿಗೆ ಮಹತ್ವದ ಸ್ಥಾನ ನೀಡಿದ್ದಾರೆ. ಅವರು ಪ್ರಾರಂಭಿಸಿದ ಚಳುವಳಿಯಲ್ಲಿ ಅನೇಕ ವಚನಕಾರ್ತಿಯರು ಬೆಳೆದು ನಿಂತಿದ್ದಾರೆ. ಪುರುಷರಿಗೆ ಸರಿಸಮಾನವಾಗಿ ಅಷ್ಟೇ ಅಲ್ಲ, ಕೆಲವು ಸಂದರ್ಭಗಳಲ್ಲಿ ಅನೇಕ ಪುರುಷರಿಗೆ ಈ ಮಹಿಳೆಯರು ಮಾರ್ಗದರ್ಶನ ಮಾಡಿದ್ದಾರೆ. ಕೆಲವು ವಚನಕಾರ್ತಿಯರು ತುಂಬ ಮಹತ್ವದ ಪ್ರಶ್ನೆಗಳನ್ನೆತ್ತಿ ಅಂದಿನ ಚರ್ಚೆಗೆ ಅರ್ಥವಂತಿಕೆಯನ್ನು ತಂದುಕೊಟ್ಟಿದ್ದಾರೆ. ಆಯ್ದಕ್ಕಿ ಲಕ್ಕಮ್ಮ, ನೀಲಮ್ಮ, ಲಿಂಗಮ್ಮ ಈ ಮುಂತಾದ ವಚನಕಾರ್ತಿಯರು ತಮ್ಮ ಪತಿಗಳಿಗೆ ಮಾರ್ಗದರ್ಶನ ನೀಡಿದ್ದಾರೆ. ಕಾಳವ್ವೆ, ಗೊಗ್ಗವ್ವೆ, ಕದಿರರೆಮ್ಮವ್ವೆ, ರಾಮಮ್ಮ, ಅಕ್ಕಮ್ಮ ಈ ಮುಂತಾದವರೆಲ್ಲಾ ಬಹುಮುಖ್ಯವಾದ ಪ್ರಶ್ನೆಗಳನ್ನು ಕೇಳಿದ್ದಾರೆ. ಮುಕ್ತಾಯಕ್ಕ, ಮಹಾದೇವಿಯಕ್ಕ, ಸೂಳೆಸಂಕವ್ವೆಯಂತಹ ವಚನಕಾರ್ತಿಯರು ಸ್ವಾಭಿಮಾನವನ್ನು ಒಂದು ಮಹತ್ವದ ಮೌಲ್ಯವನ್ನಾಗಿಸಿದ್ದಾರೆ.

ಈ ವಚನಕಾರ್ತಿಯರು ಮಹಿಳೆಯರ ಬಗೆಗೆ ಹೆಚ್ಚು ಮಾತನಾಡದಿದ್ದರೂ, ಆಯಾ ಸಂದರ್ಭಗಳಲ್ಲಾಡಿದ ಕೆಲವು ನುಡಿಗಳು ತುಂಬ ಮುಖ್ಯವಾಗಿವೆ.

ಮಡದಿಯೆನಲಾಗದು ಬಸವಂಗೆ ಎನ್ನನು
ಪುರುಷನೆನಲಾಗದು ಬಸವನೆನಗೆ

ಎಂದು ಹೇಳುವ ಬಸವಣ್ಣನ ಸತಿ ನೀಲಲೋಚನೆ ಸತಿ - ಪತಿಗಳಿಗೆ ಸಂಬಂಧಿಸಿದ ಸಾಧ್ಯತೆಗಳನ್ನು ಹೆಚ್ಚು ವಿವರಿಸಿದ್ದಾಳೆ.

ಹೊನ್ನ ಬಿಟ್ಟು ಲಿಂಗವನೊಲಿಸಬೇಕೆಂಬರು
ಹೊನ್ನಿಂಗೆಯೂ ಲಿಂಗಕ್ಕೆಯೂ ವಿರುದ್ಧವೇ?
ಹೆಣ್ಣ ಬಿಟ್ಟು ಲಿಂಗವನೊಲಿಸಬೇಕೆಂಬರು
ಹೆಣ್ಣಿಂಗೆಯೂ ಲಿಂಗಕ್ಕೆಯೂ ವಿರುದ್ಧವೆ? (ಇ.ಶಿ.ವ. ಪು. ೯೩)

ಎಂದು ಪ್ರಶ್ನಿಸುವ ಗಜೇಶಮಸಣಯ್ಯಗಳ ಪುಣ್ಯಸ್ತ್ರೀಯ ಈ ವಚನದಲ್ಲಿ ಮಹಿಳೆಗೆ ಸಂಬಂಧಿಸಿದಂತೆ ಮುಖ್ಯವಾದ ವಿಷಯವಡಕವಾಗಿದೆ. ಹೆಣ್ಣು - ಹೊನ್ನು - ಮಣ್ಣುಗಳನ್ನು ಬಿಟ್ಟು ಲಿಂಗವನೊಲಿಸಬೇಕೆಂದು ಹೇಳುವವರನ್ನು ನೇರವಾಗಿ ಪ್ರಶ್ನಿಸಿದ ಈ ವಚನಕಾರ್ತಿ ಇವುಗಳನ್ನು ಬಿಟ್ಟರೆ ಲಿಂಗವೇ ಇಲ್ಲವೆಂದು ಸ್ಪಷ್ಟಪಡಿಸುವುದರ ಮೂಲಕ ಹೆಣ್ಣಿನ ಎತ್ತರವನ್ನು ಪ್ರಕಟಿಸುತ್ತಾಳೆ.

ಹೀಗೆ ಇಷ್ಟೆಲ್ಲಾ ವಚನಕಾರ್ತಿಯರು ಧಾರ್ಮಿಕ - ಸಾಮಾಜಿಕ ಕ್ಷೇತ್ರದಲ್ಲಿ ಇಷ್ಟೊಂದು ಎತ್ತರಕ್ಕೆ ಏರಲು ಆ ಕಾಲದ ಶರಣರು ಮುಖ್ಯ ಕಾರಣರಾಗಿದ್ದಾರೆ. ಬಸವಣ್ಣ ಮುಂತಾದ ವಚನಕಾರರು ಎಲ್ಲ ಕ್ಷೇತ್ರಗಳಲ್ಲೂ ಮಹಿಳೆ ಸ್ವತಂತ್ರವಾಗಿ

ಬೆಳೆಯುವ ಸಾಧ್ಯತೆಯನ್ನು ಕಲ್ಪಿಸಿದ್ದಾರೆ. ನಲವತ್ತು ವಚನಕಾರ್ತಿಯರು, ಚಳುವಳಿಯೊಂದರ ಮೂಲಕ ತಮ್ಮನ್ನು ಗುರುತಿಸಿಕೊಂಡು ಹೀಗೆ ಸಾಂಸ್ಕೃತಿಕವಾಗಿ ಬೆಳೆದು ನಿಂತಿರುವುದು ಚರಿತ್ರೆಯ ಬಹು ಮುಖ್ಯ ಸಂಗತಿಯಾಗುತ್ತದೆ.

ಹೀಗೆ ಹೆಣ್ಣನ್ನು ಭಾರತೀಯ ಸಂಸ್ಕೃತಿಯಲ್ಲಿ ಎರಡು ಅತಿಗಳ ಮೂಲಕ (Extreems) ಕಾಣಲಾಗಿದೆ. ಹೆಣ್ಣು ಇಲ್ಲಿ ದೇವತೆಯಾಗಿದ್ದಾಳೆ, ಇಲ್ಲವೆ ರಾಕ್ಷಸಿಯಾಗಿದ್ದಾಳೆ. ಇವೆರಡೂ ಭಯಕ್ಕೆ ಮೂಲವಾಗಿರುವುದರಿಂದ ಹೆಣ್ಣು ಇಲ್ಲಿ ಭಯ ಮೂಲವಾಗಿದ್ದಾಳೆ. ಇವೆರಡೂ ಅತಿಗಳನ್ನು ಮೀರಿ ಹೆಣ್ಣನ್ನು ಇಲ್ಲಿ ಹೆಣ್ಣಾಗಿ ಕಂಡಿರುವ ಸಂದರ್ಭಗಳು ತೀರ ಅಪರೂಪವಾಗಿವೆ. ಹನ್ನೆರಡನೇ ಶತಮಾನದ ವಚನಕಾರರು ಮಾತ್ರ ಹೆಣ್ಣನ್ನು ಚೆನ್ನಾಗಿ ಕಂಡಿದ್ದಾರೆ. ತಾಯಿಯೆಂದು ಗೌರವಿಸಿದ್ದಾರೆ. ಮಾತೆಯೆಂದು ನಮಿಸಿದ್ದಾರೆ, ಸತಿಯೆಂದು ಸಮಾನ ಸ್ಥಾನ ಕೊಟ್ಟಿದ್ದಾರೆ. ಸನಾತನ ಸಂಸ್ಕೃತಿಯಲ್ಲಿ ಹೆಣ್ಣು ಮನುಷ್ಯಳಾಗಿ ಎತ್ತರದ ಸ್ಥಾನವನ್ನು ತಲುಪಿದ್ದಾಳೆ. ಶತಮಾನಗಳಿಂದ ಆಧ್ಯಾತ್ಮ ಕ್ಷೇತ್ರಕ್ಕೆ ಅಪರಿಚಿತಳಾದ ಹೆಣ್ಣು ಇಲ್ಲಿ ಉನ್ನತ ಮಟ್ಟದ ಸಾಧಕಳಾಗಿದ್ದಾಳೆ. ಧಾರ್ಮಿಕ ಕ್ಷೇತ್ರದಿಂದ ಅಸ್ಪೃಶ್ಯಳಾದ ಹೆಣ್ಣು ಇಲ್ಲಿ ಅನುಭವಮಂಟಪದ ಪ್ರಮುಖ ಅಂಗವಾಗಿದ್ದಾಳೆ. ದಾಂಪತ್ಯಸುಖದಿಂದ ವಂಚಿತಳಾದ ಹೆಣ್ಣು ಇಲ್ಲಿ ಸಂತೃಪ್ತಿಯ ಜೀವನ ನಡೆಸಿದ್ದಾಳೆ. ಶತಮಾನಗಳಿಂದ ಅದೃಶ್ಯಳಾದ ಹೆಣ್ಣು ಇಲ್ಲಿ ಮುಂಚೂಣಿಯಲ್ಲಿ ನಿಂತಿದ್ದಾಳೆ. ಸಾಮಾಜಿಕವಾಗಿ ಮೌನವಾಗಿದ್ದ ಹೆಣ್ಣು ಇಲ್ಲಿ ಮನದೆರೆದು ಮಾತನಾಡಿದ್ದಾಳೆ. ಅಸಮಾನತೆಯ ವ್ಯವಸ್ಥೆಯನ್ನು ಪ್ರತಿಭಟಿಸಿದ್ದಾಳೆ. ಪತಿಯ ಗುಲಾಮಳಾಗಿದ್ದ ಹೆಣ್ಣು ಇಲ್ಲಿ ಪತಿ, ತಪ್ಪಿ ನಡೆದಾಗ ತಿದ್ದಿ ಮುನ್ನಡೆಸಿದ ಮಾರ್ಗದರ್ಶಕಳಾಗಿದ್ದಾಳೆ. ಹೀಗೆ ವಚನ ಸಂಸ್ಕೃತಿಯಲ್ಲಿ ಹೆಣ್ಣು ಮಾಯೆಗೆ ಬದಲಾಗಿ ಸಬಲೆಯಾಗಿದ್ದಾಳೆ; ಭವಿಗೆ ಬದಲಾಗಿ ಭಕ್ತೆಯಾಗಿದ್ದಾಳೆ. ಅಬಲೆಗೆ ಬದಲಾಗಿ ಸಬಲೆಯಾಗಿದ್ದಾಳೆ. ದಾಸಿಗೆ ಬದಲಾಗಿ ಸಂಗಾತಿಯಾಗಿದ್ದಾಳೆ. ಗುಲಾಮಳಿಗೆ ಬದಲಾಗಿ ಮಾನವಳಾಗಿದ್ದಾಳೆ. ಮಹಿಳೆಗೆ ಯಾವ ಧರ್ಮದಲ್ಲೂ ಸಿಗಲಾರದ ಸಮಾನ ಸ್ಥಾನ - ಮಾನಗಳು ಶರಣಧರ್ಮದಲ್ಲಿ ದೊರಕಿವೆ. ಯಾವ ಕಾಲಕ್ಕೂ ಸಿಕ್ಕಿರದ ಗೌರವ ಹನ್ನೆರಡನೇ ಶತಮಾನದ ವಚನ ಚಳುವಳಿಯ ಸಂದರ್ಭದಲ್ಲಿ ಸಿಕ್ಕಿದೆ. ಹೀಗಾಗಿ ವಚನ ಚಳುವಳಿ ಮಹಿಳೆಯರ ಬದುಕಿಗೆ ಒಂದು ಹೊಸ ಆಯಾಮ ನೀಡಿದೆ.

ಉಲ್ಲೇಖಿತ ವಿವರಗಳು

ದೇ.ದಾ.ವ.	-	ದೇವರ ದಾಸಿಮಯ್ಯನ ವಚನಗಳು, ಸಂ. ಡಾ. ಎಲ್. ಬಸವರಾಜು
ಅ.ವ.	-	ಅಲ್ಲಮನ ವಚನಗಳು, ಸಂ. ಡಾ|| ಎಲ್. ಬಸವರಾಜು
ಬ.ವ.	-	ಬಸವಣ್ಣನವರ ವಚನಗಳು, ಸಂ. ಡಾ|| ಆರ್.ಸಿ. ಹಿರೇಮಠ
ಸಿ.ರಾ.ವ.	-	ಶ್ರೀ ಸಿದ್ಧರಾಮೇಶ್ವರರ ವಚನಗಳು, ಸಂ. ಡಾ|| ಆರ್.ಸಿ. ಹಿರೇಮಠ
ಸ.ಪು.ವ.ಸಂ.I	-	ಸಕಲ ಪುರಾತನರ ವಚನಗಳು, ಸಂ. ಡಾ|| ಆರ್.ಸಿ. ಹಿರೇಮಠ, ಸಂಪುಟ I.
ಸ.ಪು.ವ.ಸಂ.II	-	ಸಕಲ ಪುರಾತನರ ವಚನಗಳು, ಸಂ. ಡಾ|| ಆರ್.ಸಿ. ಹಿರೇಮಠ, ಸಂಪುಟ II.
ಚೆ.ಬ.ವ.	-	ಚೆನ್ನಬಸವಣ್ಣನವರ ವಚನಗಳು, ಸಂ. ಡಾ|| ಆರ್.ಸಿ. ಹಿರೇಮಠ.
ಇ.ಶಿ.ವ.	-	ಇಪ್ಪತ್ತೇಳು ಶಿವಶರಣೆಯರ ವಚನಗಳು, ಸಂ. ಡಾ|| ಆರ್.ಸಿ. ಹಿರೇಮಠ.

ಅಮೃತಮತಿ : ಸ್ತ್ರೀವಾದಿ ನೆಲೆಯಲ್ಲಿ

ಡಾ॥ ಕಮಲಾ ಹಂಪನಾ

ಯಾವುದೇ ಸಾಹಿತ್ಯಕೃತಿ ಶೂನ್ಯದ ಸೃಷ್ಟಿಯಲ್ಲ, ಅದು ಒಂದು ಕಾಲದ, ಸಮಾಜದ, ಸಂಸ್ಕೃತಿಯ, ಸಂದರ್ಭದ ಸೃಷ್ಟಿ, ಅಂಥ ಕೃತಿ ಮಹತ್ವದ ರಚನೆಯೂ ಆಗಿದ್ದಾಗ ಅದು ಮತ್ತೆ ಮತ್ತೆ ಸಾಹಿತ್ಯಕ ವಾಗ್ವಾದಗಳಿಗೆ ಒಳಗಾಗುತ್ತಿರುತ್ತದೆ. ಒಂದು ಕೃತಿಯ ಮರುಪರಿಶೀಲನೆ, ಪುನರ್‌ಮೌಲ್ಯ (re-assessment) ಎಂಬ ವಿಮರ್ಶೆಯ ಪರಿಭಾಷೆಯನ್ನು ಬಳಸುವುದು ಈ ಅರ್ಥದಲ್ಲಿ.

ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಈಗಾಗಲೇ ಕೆಲವು ಮುಖ್ಯಕೃತಿಗಳನ್ನು ಸ್ತ್ರೀವಾದಿ ವಿಮರ್ಶೆಯ ನೆಲೆಯಲ್ಲಿ ಚರ್ಚಿಸುವ ಪ್ರಕ್ರಿಯೆ ಆರಂಭವಾಗಿದೆ. ದಾನ ಚಿಂತಾಮಣಿ ಅತ್ತಿಮಬ್ಬೆಯ ಪಾತ್ರವನ್ನು ಸ್ತ್ರೀವಾದಿ ದೃಷ್ಟಿಯಿಂದ ಚಿತ್ರಿಸಿದವನೂ, ಕನ್ನಡದಲ್ಲಿ ಸ್ತ್ರೀವಾದಿ ಚರ್ಚೆಯನ್ನು ಸಮರ್ಥವಾಗಿ ಆರಂಭಿಸಿದವನೂ ರನ್ನ ಕವಿಯೆಂದು ವಿಮರ್ಶಕರು ಇತ್ತೀಚೆಗೆ ಗುರುತಿಸಿದ್ದಾರೆ. (ನಾಗರಾಜಯ್ಯ, ಹಂಪ, ಪ್ರಥಮ ಸ್ತ್ರೀವಾದಿ ಕವಿ ರನ್ನ, 'ಉದಯವಾಣಿ', ದೀಪಾವಳಿ ವಿಶೇಷಾಂಕ, ೧೯೯೪). ಈ ಬಗೆಯ ಒಳನೋಟವನ್ನು ಕನ್ನಡದ ಇನ್ನೂ ಕೆಲವು ಮಹತ್ವದ ಕಾವ್ಯಗಳಿಗೆ ವಿಸ್ತರಿಸಿ, ಹೊಸ ಸಂವಾದಗಳಿಗೆ ಎಡೆ ಮಾಡುವುದು ಸಾಧ್ಯವಿದೆ. ಅಂಥದೊಂದು ಗ್ರಹಿಕೆಯಿಂದ, ಜನ್ನನ ಯಶೋಧರ ಚರಿತೆಯನ್ನು ಪರಾಮರ್ಶಿಸುವುದು ಈ ಲೇಖನದ ಆಶಯ.

ಜನ್ನ ಒಬ್ಬ 'ಜನಪ್ರಿಯ' ಕವಿಯಾದದ್ದು ವಿಚಿತ್ರವೆನಿಸಬಹುದು. ಏಕೆಂದರೆ ಅವನ ಯಶೋಧರ ಚರಿತೆ ಮತ್ತು ಅನಂತನಾಥ ಪುರಾಣ ಎಂಬ ಎರಡು ಚಂಪೂಕಾವ್ಯಗಳೂ ಧಾರ್ಮಿಕ ಕಾವ್ಯಗಳು ಹಾಗೂ ಪ್ರೌಢ ಕೃತಿಗಳು. ಧಾರ್ಮಿಕತೆ

ಮತ್ತು ಪ್ರೌಢತೆಯು ಜನಪ್ರಿಯತೆಯೊಂದಿಗೆ ತಳಕು ಹಾಕಿಕೊಂಡಿರುವುದು ಅಪರೂಪ. ಯಶೋಧರ ಕಾವ್ಯ ಹಲವು ಹಳೆಯ ಹಾಗೂ ಹೊಸ ವಿಮರ್ಶಕರನ್ನು ಕಾಡಿದೆ. ಓದುಗರನ್ನೂ ವಿಮರ್ಶಕರನ್ನೂ ಈ ಕಾವ್ಯದಲ್ಲಿ ಸೆಳೆದಿರುವುದು ಅಮೃತಮತಿ ಪಾತ್ರ. ತೀನಂಶ್ರೀ, ಡಿಎಲ್‌ಎನ್, ರಾಘವಾಚಾರ್, ಕುವೆಂಪು ಮೊದಲಾದ ಹಿಂದಿನ ತಲೆಮಾರಿನವರೂ, ಗಿರೀಶ್ ಕಾರ್ನಾಡ್, ಗಿರಡ್ಡಿ ಗೋವಿಂದರಾಜು ಮೊದಲಾದ ಹೊಸ ತಲೆಮಾರಿನವರೂ, ಜನ್ನ ಕವಿಯ ಯಶೋಧರ ಚರಿತೆಯನ್ನು ಮರು ವಿಮರ್ಶೆಯ ನಿಕಷಕ್ಕೆ ಒಡ್ಡಿ ಉಜ್ಜಿ ನೋಡಿದ್ದಾರೆ. ಅವರ ನಿಲುಮೆಗಳಲ್ಲಿ ಸಾದೃಶ್ಯಗಳಿರುವಂತೆ ವೈದೃಶ್ಯಗಳೂ ಇವೆ; ಆತ್ಯಂತಿಕವಾದ ಒಮ್ಮತಗಳಿಲ್ಲ. ಇವರೆಲ್ಲರ ಒಟ್ಟಾರೆಯಾದ ಅಭಿಪ್ರಾಯಗಳನ್ನು ಹೀಗೆ ಹರಳುಗೊಳಿಸಬಹುದು :

೧. ಎಲ್ಲ ಸಂವಾದಗಳ ಕೇಂದ್ರಬಿಂದು ಅಮೃತಮತಿ.

೨. ಎಲ್ಲ ಚರ್ಚೆಯ ಕೇಂದ್ರಪ್ರಜ್ಞೆ ಕಾಮ ಮತ್ತು ಹಿಂಸೆ.

೩. ಅಮೃತಮತಿಯದು ಜಾರ ಪ್ರೇಮ.

೪. ಅಮೃತಮತಿಗೆ ದೈಹಿಕ ಸಂಬಂಧ ಮುಖ್ಯ; ಆಕೆ ಇಂದ್ರಿಯಾನುಭವ ಸುಖಾಪೇಕ್ಷಿ.

೫. ಯಶೋಧರರಾಜನಂಥ ಗಂಡನನ್ನು ತೊರೆದು, ಅರಮನೆ ಆನೆಯ ಪರಿಚಾರಕನಾದ ಮಾವಟಿಗನನ್ನು ಆಕೆ ಕಾಮಿಸಿದ್ದು ವಿಧಿಯ ವಿಲಾಸ.

ಈ ರೀತಿಯಲ್ಲಿ, ಘಟನೆಗಳನ್ನು ವಿಧಿಯ ಮಡಿಲಿಗೆ ಹಾಕಿ, ಕೈತೊಳೆದುಕೊಳ್ಳುವ ವಿಮರ್ಶೆಯ ಕೆಲಸವನ್ನು ಬೆಂಬಲಿಸದೆ, ಇದನ್ನು ಪುನಃ ಚರ್ಚೆಗೆ ಎತ್ತಿಕೊಂಡು ಯಶೋಧರ ಚರಿತೆ ಕಾವ್ಯವನ್ನು ಇನ್ನಷ್ಟು ಅರ್ಥಪೂರ್ಣ ಸಾಹಿತ್ಯಿಕ ವಾಗ್ವಾದಗಳಿಗೆ ತೆರೆಯಲು ಸಾಧ್ಯವಿದೆ.

ಕವಿಜನ್ನನ ಆಶಯವೇನು? ಸಂಸ್ಕೃತ-ಪ್ರಾಕೃತದಲ್ಲಿ ಇದ್ದ ಈ ಕಾವ್ಯವನ್ನು ಕನ್ನಡದಲ್ಲಿ ಹೇಳಬೇಕಾದ ಒತ್ತಡ ಮತ್ತು ತುರ್ತುಗಳು ಯಾವುವು? ಅಮೃತಮತಿಯ ಪಾತ್ರದ ಮೂಲಕ ಸ್ಥಾಪಿತವಾಗುವ ಮುಖ್ಯ ನೆಲೆ ಯಾವುದು? - ಮುಂತಾದ ಇಂಥ ಪ್ರಶ್ನೆಗಳಿಂದಲೇ ಚರ್ಚೆಯ ಆರಂಭ ಮತ್ತು ಮುಂದುವರಿಕೆ ಹೆಚ್ಚು ಅರ್ಥಪೂರ್ಣವಾದುದು.

ಮೇಲು ಮೇಲಿನ ತೇಲುನೋಟಕ್ಕೆ ಯಶೋಧರ ಚರಿತೆ ಒಂದು ಧಾರ್ಮಿಕ ಕಾವ್ಯ ಮಾತ್ರ. ಈ ಕಾವ್ಯದ ಆತ್ಯಂತಿಕವಾದ ಗುರಿಯೆಂದರೆ, ಜೈನ ಧರ್ಮದ ತಿರುಳಾದ ಅಹಿಂಸೆಯ ಮೇಲ್ಮೆಯನ್ನು ಸ್ಥಾಪಿಸುವುದು. ಮಾರಿದತ್ತನು ಹಿಂಸೆಯ ಪ್ರತೀಕ. ಅಭಯರುಚಿ - ಅಭಯಮತಿಯರ ಮೂಲಕ ಮಾರಿದತ್ತನಲ್ಲಿ ಮಾನಸಿಕ ಪರಿವರ್ತನೆ ಉಂಟಾಗಿ, ಹಿಂಸೆಯ ಜಾಗದಲ್ಲಿ ಅಹಿಂಸೆಯನ್ನು ನಿಲ್ಲಿಸುವುದು ಕಾವ್ಯದ ಆಶಯ. ಹಿಟ್ಟಿನ ಕೋಳಿಯನ್ನು ಬಲಿ ಕೊಡುವ ಕೇವಲ ಸಂಕಲ್ಪ ಹಿಂಸೆಯೇ ಇಷ್ಟೊಂದು ಭವಾವಳಿಗಳ ಕೋಟಲೆಗೆ ಎಳೆದೊಯ್ಯಬೇಕಾದರೆ, ಇನ್ನು ದಿಟದ ಜೀವಹಿಂಸೆ ಮತ್ತು ಕೊಲೆ ಅದೆಷ್ಟು ಭಯಂಕರವೆಂಬ ಪರಿಕಲ್ಪನೆಯ ಭೀತಿಯಿಂದ ತತ್ತರಿಸುವಂಥ ಪ್ರಭಾವಶಾಲಿ ಕಥಾ ಸಂವಿಧಾನದ ಶಿಲ್ಪ ಈ ಕಾವ್ಯದ್ದು.

ಆದರೆ ಯಶೋಧರ ಚರಿತೆ ಬಿಚ್ಚುವ ಅರ್ಥಗಳು ಇಲ್ಲಿಗೆ ನಿಲ್ಲುವುದಿಲ್ಲ. ನವೋದಯ ವಿಮರ್ಶೆಯ, ಕ್ಲೀಷೆಯ ಪರಿಭಾಷೆಯನ್ನು ಬಳಸಿ ಹೇಳುವುದಾದರೆ, ಕಾವ್ಯ ಸತ್ಯ ಮತ್ತು ಕಾವ್ಯ ಧ್ವನಿ ಇದರ ಆಚೆಗೂ ಚಾಚಿಕೊಂಡಿದೆ. ಯಶೋಧರ ಚರಿತೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ, ಅದರಲ್ಲಿ ಮನುಷ್ಯ ಸ್ವಭಾವದ ವಿಚಿತ್ರಗತಿಯ ಚಲನಶೀಲತೆ ಗಮನ ಸೆಳೆಯುತ್ತದೆ. ಆದಿಮಾನವನನ್ನು ಹೇಗೋ ಹಾಗೆ, ಆಧುನಿಕನನ್ನೂ ಕಾಡುವ ಪ್ರಬಲ ಭಾವನೆಗಳಲ್ಲಿ ಕಾಮ ಮತ್ತು ಹಿಂಸೆ (Sex and Violence) ಇದ್ದೇ ಇದೆ. ಇಂದ್ರಿಯ ವ್ಯವಹಾರದ ನಿಗೂಢತೆಯನ್ನು ಯಶೋಧರ ಚರಿತೆ ಆನುಷಂಗಿಕವಾಗಿ

ಚರ್ಚಿಸಿದೆ. ಇಂದ್ರಿಯ - ವಿಷಯಾಸಕ್ತಿ ಸಂಬಂಧದ ದೈಹಿಕ ಆಕರ್ಷಣೆಯ ಜಿಜ್ಞಾಸೆಯಲ್ಲಿ ತನ್ನ ಆಸಕ್ತಿಯಿದೆ ಎಂದು ಜನ್ನ ವಾಚ್ಯವಾಗಿ ಪ್ರಕಟಿಸಿಲ್ಲ. ಹಾಗೆ ನೋಡುವುದಾದರೆ, ಕಾಮ - ಪ್ರೇಮ ಕುರಿತು ಕವಿ ಜನ್ನನ ಖಚಿತ ನಿಲವಾಗಲಿ ಒಲವಾಗಲಿ ನೇರವಾಗಿ ಸಂವಹನವಾಗುವುದಿಲ್ಲ. ಜನ್ನನ ಕಾವ್ಯಕ್ಕೆ ಮೂಲವಾದ ವಾದಿರಾಜನ ಸಂಸ್ಕೃತ ಯಶೋಧರ ಚರಿತದಲ್ಲಿ, ಯಶೋಧರನು ಲೈಂಗಿಕವಾಗಿ ಅಶಕ್ತನಾಗಿದ್ದು ಅಮೃತಮತಿಯ ಜಾರು ಪ್ರೇಮಕ್ಕೆ ಕಾರಣವಾಯಿತೆಂಬ ಸುಳಿವಾದರೂ ಸಿಗುತ್ತದೆ. ಜನ್ನನಲ್ಲಿ ಅಂತಹ ಸ್ಪಷ್ಟ ಸೂಚನೆಗಳ ಅಭಾವವಿದೆ ಎಂಬುದನ್ನು ಒಪ್ಪಿಕೊಳ್ಳಬೇಕು.

ಜನ್ನ ಕವಿಗೆ ಇರುವ ಕಾವ್ಯಸೂಕ್ಷ್ಮತೆ, ವಿಮರ್ಶನ ಶಕ್ತಿ, ಸೃಜನ ಸಾಮರ್ಥ್ಯ ಮತ್ತು ಮನೋವಿಜ್ಞಾನದ ಅರಿವು - ಇವುಗಳನ್ನು ಪ್ರಶ್ನಿಸುವ ಅಗತ್ಯವಿಲ್ಲ. ಆದರೆ ಅಮೃತಮತಿಯ ಪಾತ್ರವನ್ನು, ಜನ್ನನು ತನ್ನ ಕಾವ್ಯರಚನೆಗಿಂತ ಮೊದಲು ಅಂದುಕೊಂಡಂತೆ ಆಕಾರ ತಳೆದಿಲ್ಲ. ಕಾವ್ಯ ರಚನೆಯ ಸೃಷ್ಟಿ ಕ್ಷಣದಲ್ಲಿ ಅಮೃತಮತಿಯ ಪಾತ್ರ, ಕವಿ ಜನ್ನನ ಕೈ ಮೀರಿ ವಿಭಿನ್ನ ಆಯಾಮಗಳನ್ನು ಪಡೆಯುತ್ತ ಬೆಳೆದಿದೆ. ಅಂದರೆ, ಅಮೃತಮತಿಯು ಗಾನದ ಸವಿಗೆ ಸೋತ ದುರ್ಬಲ ಮನಸ್ಸಿನ ಹೆಣ್ಣು ಎಂದು ಚಿತ್ರಿಸಲು ಹೊರಟ ಜನ್ನನ ಸೃಷ್ಟಿಶಕ್ತಿ ಕ್ರಮೇಣ ಕವಿಯ ಹಿಡಿತದಿಂದ ನುಣುಚಿ ಸ್ವತಂತ್ರವಾಗಿ ಅಭಿವ್ಯಕ್ತಿ ಆಕಾರ ಪಡೆದಿದೆ.

ಆದರೆ ಇಲ್ಲಿ ಚರ್ಚಿಸಬಹುದಾದ ವಿಚಾರವೆಂದರೆ ಬದಗನ ಹಾಡುಗಾರಿಕೆ ಮತ್ತು ಅದಕ್ಕೆ ಅಮೃತಮತಿಯ ಪ್ರತಿಕ್ರಿಯೆ. ಹಾಡಿನ ಸವಿಗೆ ಆಕೆ ಸೋತಳೆಂಬ ಸಂಗತಿಯೂ ಚರ್ಚೆಗೆ ಕಾರಣವಾಗುತ್ತದೆ. ಅಮೃತಮತಿ ಸಂಗೀತದಲ್ಲಿ ಪರಿಣತಳಾಗಿದ್ದಳೆ? ಗಾನದ ರುಚಿಯು ಕಲಾಭಿರುಚಿ ಸಂಸ್ಕಾರದ್ಯೋತಕವಲ್ಲವೆ? ಹಾಡಿನ ಮಾಧುರ್ಯಕ್ಕೆ ಮೆಚ್ಚಿದ್ದು ಸಹಜವಾದರೂ, ಹಾಡುಗಾರನನ್ನೇ ಕೂಡಲು ಹೊರಟಿದ್ದು ಅಸಹಜವಲ್ಲವೆ? ಎಂಬ ಚರ್ಚೆಗಳು ನಡೆದಿವೆ. ಈ ಅಂಶವನ್ನು ಕವಿಜನ್ನನೂ ಇನ್ನಷ್ಟು ಸೂಕ್ಷ್ಮವಾಗಿ ವರ್ಣಿಸುವ ಅಗತ್ಯವಿತ್ತೆಂಬುದು ಆಲೋಚನೀಯವಾದದ್ದು.

ಮನುಷ್ಯ ಸಂಬಂಧಗಳಲ್ಲಿ ನೀತಿ - ಅನೀತಿಯ ಪ್ರಶ್ನೆ ಪುರಾತನವಾದದ್ದು. ಅಮೃತಮತಿ ಒಂದು ಶಿಷ್ಟ ಸುಸಂಸ್ಕೃತ ಪರಿಸರದಲ್ಲಿ ಬೆಳೆದು, ಅಂತಹುದೇ ಸಂವಾದಿ ಸಂದರ್ಭದಲ್ಲಿ ಬಾಳುತ್ತಿರುವವಳು. ಆದರೆ ಆಕೆ ಮಾವುತನನ್ನು ಬಯಸುವ ಕ್ಷಣದಲ್ಲಿ, ಒಳ್ಳೆಯದು - ಕೆಟ್ಟದ್ದು, ಧಾರ್ಮಿಕ - ಅಧಾರ್ಮಿಕ ಎಂಬ ವಿಚಾರದ ಸುಳಿಗೆ ಬೀಳುವುದಿಲ್ಲ. ಒಮ್ಮೆ ಮಾವಟಿಗನಿಗೆ ತನ್ನೆಲ್ಲವನ್ನು ಒಪ್ಪಿಸಿಕೊಂಡ ಮೇಲೆ, ಅವಳು ಮತ್ತೆ ಹಿಂತಿರುಗಿ ನೋಡುವುದಿಲ್ಲ. ವಿವಾಹ ಸಂಹಿತೆಯ ಸಂಪ್ರದಾಯವನ್ನು ಮೆಟ್ಟಿ ನಿಲ್ಲುವ ದಿಟ್ಟೆಯಾಗುತ್ತಾಳೆ. ಅವಳ ಧೃತಿಯನ್ನು, ದೃಢ ನಿರ್ಧಾರವನ್ನು ಯಾವ ವಿವೇಕ ಬೋಧೆಯೂ ಕದಲಿಸಲು ಆಗುವುದಿಲ್ಲ. ಅಷ್ಟೇಕೆ, ತಾನಾಗಿಯೇ ಅಮೃತಮತಿ ಒಲಿದು ಕೂಡಿದ ಮಾವಟಿಗನು ಕೊಡಲಾರಂಭಿಸಿದ ಹಿಂಸೆಯೂ ಆಕೆಯನ್ನು ತಳೆದ ತೀರ್ಮಾನದಿಂದ ಹಿಂದೆ ಹೋಗಲು ಪ್ರಚೋದಿಸುವುದಿಲ್ಲ ; ಆಕೆ ಅಷ್ಟು ದೂರ ಮುಂದೆ ಹೋಗಿದ್ದಾಳೆ.

ಹೀಗಾಗಿ ಅಮೃತಮತಿಯದು ಸಾಮಾಜಿಕ ಕಟ್ಟಳೆಯನ್ನು ಧಿಕ್ಕರಿಸಿದ ದಿಟ್ಟಗುಣ. ತನ್ನ ಮನಸ್ಸಿಗೆ ಸಂಪೂರ್ಣವಾಗಿ ಸರಿ ಎಂದು ಖಾತ್ರಿ ಆದದ್ದಕ್ಕೆ ಆಕೆ ಸಾಚಾ ಎಂಬಂತೆ ನಡೆದುಕೊಂಡಳು. ಕಟ್ಟಕಡೆಯವರೆಗೂ ಅದೇ ದಾರಿಗೆ, ನಿಲುಮೆಗೆ ಕಟ್ಟು ಬಿದ್ದಳು. ಪ್ರತಿಕೂಲ ಪರಿಸರದ ವಿರುದ್ಧ ಹೋರಾಡಿದಳು. ಈ ಹೋರಾಟದ ಹೆಜ್ಜೆಗಳನ್ನು ಇಡುವಾಗ, ಪ್ರತಿಭಟನೆಯನ್ನು ಸಾರ್ವಜನಿಕವಾಗಿಸುವಾಗ ಆಕೆ ನಡೆದುಕೊಂಡ ರೀತಿಯನ್ನು ಟೀಕಿಸಲೂ ಅವಕಾಶವಿದೆ. ಗಂಡ ಮತ್ತು ಅತ್ತೆಯ ವಿಚಾರದಲ್ಲಿ ತೋರಿದ ವಿಷಾಹಾರದ ವರ್ತನೆಯನ್ನು ಯಾರು ತಾನೆ ಅನುಮೋದಿಸುತ್ತಾರೆ? ಆದರೆ ಆಕೆ ಅಂಥದೊಂದು ಅಸಹಾಯಕ ಅನಿವಾರ್ಯ ಸ್ಥಿತಿಯ ಇಕ್ಕಟ್ಟಿಗೆ ಸಿಕ್ಕಿದ್ದಳೆ ಎಂದೂ ಪರಿಶೀಲಿಸಬಹುದು. ಈ ನಿಟ್ಟಿನಿಂದ ನೋಡಿದಾಗ ಅಮೃತಮತಿಯನ್ನು ಕುರಿತು ಚರ್ಚೆ ಹೊಸ ತಿರುವುಗಳಲ್ಲಿ ಚಲಿಸುತ್ತದೆ. ಯಶೋಧರ ಚರಿತೆ ಕಾವ್ಯವು ಒಂದು ಹೆಣ್ಣಿನ, ಪತಿತ ಸ್ತ್ರೀಯೊಬ್ಬಳ

ಹೋರಾಟದ ಕಾವ್ಯವಾಗಿ ಇಂದಿನ ಸಂದರ್ಭದಲ್ಲಿ ಮುಖ್ಯವೆನಿಸುತ್ತದೆ. ಆಕೆಯನ್ನು ಅರಮನೆಯ ರಾಣಿಯಾಗಿ ನೋಡದೆ, ಒಬ್ಬ ಸ್ತ್ರೀಯಾಗಿಯೇ ನೋಡಿ, ಆಕೆಯ ಭಾವನೆ - ಸಂವೇದನೆಗಳ ತುಡಿತಗಳನ್ನು ವಿಶ್ಲೇಷಿಸಬೇಕು.

ಏಕೆಂದರೆ, ಅಮೃತಮತಿಯ ಒಳತೋಟಿಗಳು ಏನಿದ್ದುವು ಎಂಬುದನ್ನು ಅರಿಯುವುದು ಆಕೆಯ ಪಾತ್ರಕ್ಕೆ ಸಲ್ಲಿಸುವ ಕಾವ್ಯನ್ಯಾಯ. ಅಮೃತಮತಿ ತಾನೇ ಇಷ್ಟಪಟ್ಟು, ಬಯಸಿ ಕೂಡಿದವನೊಂದಿಗೆ, ಅದೊಂದು ಹೊಸ ದಾಂಪತ್ಯವೆಂಬಂತೆ ಬಾಳಲು ಹೊರಟಳು. ಆತನಿಂದ ಬಾಸುಂಡೆ ಬರಿಸುವಂಥ ಚಾಟಿಏಟುಗಳು ಬಿದ್ದಾಗಲೂ ತಾನೇ ಹೊಂದಿಕೊಳ್ಳಲು ಪ್ರಯತ್ನಿಸಿದಳು. ಮದುವೆಯಾದವನೊಂದಿಗೆ ಬದುಕಿರುವವರೆಗೂ ಬಾಳುವೆ ಮಾಡಬೇಕೆಂಬ ಸ್ಥಾಪಿತ ಸಂಪ್ರದಾಯ ಸಂಸ್ಕೃತಿಯನ್ನು ಆಕೆ ಧಿಕ್ಕರಿಸಿದಳು. ಸ್ವಯಿಚ್ಛೆಯಿಂದ ಆಯ್ಕೆ ಮಾಡಿದ ಪರಪುರುಷನೊಂದಿಗೆ, ಇಟ್ಟುಕೊಂಡವನೊಂದಿಗೆ, ಮರೆದಾಂಪತ್ಯ ಮಾಡುವ ಪ್ರಬಲ ಕಾಂಕ್ಷೆಯೊಂದು ಅಮೃತಮತಿಗೆ ಪ್ರೇರಣೆಯಾಗಿ ಕ್ರಿಯಾಶೀಲವಾಗಿದೆ. ಹೊಸ ಸಂಬಂಧವನ್ನು ಮಡಿಲಲ್ಲಿಟ್ಟು ಆಕೆ ಸಾಮಾಜಿಕ, ಸಾಂಸಾರಿಕ ಸಂದರ್ಭದಲ್ಲಿ ಮುಖಾಮುಖಿಯಾಗಿ ನಿಂತಾಗ, ಅತ್ತೆ , ಗಂಡ ಮತ್ತು ಅಷ್ಟಾವಂಕರೊಂದಿಗೆ ಏರ್ಪಡುವ ಸಂಘರ್ಷಗಳಲ್ಲಿ ಅಮೃತಮತಿಯ ಮಾನಸಿಕ ತೊಳಲಾಟ ಮತ್ತು ಹಳವಂಡ ಚಿಂತನೀಯವೆನಿಸುತ್ತದೆ. ಅಮೃತಮತಿಯ ವರ್ತನೆಯನ್ನು ಸಮರ್ಥಿಸುವುದು ಅಥವಾ ಖಂಡಿಸುವುದು ಇಲ್ಲಿ ಗೌಣ. ಆಕೆ ಧೀರೆ ಎಂದಾಗಲೀ, ಜಾರೆ ಎಂದಾಗಲೀ ಕರೆಯುವುದು (ಎರಡೂ) ಸರಿಯಲ್ಲ. ಯಶೋಧರ ಚರಿತೆಯಲ್ಲಿ ಆಕೆ ಅತಿ ಮುಖ್ಯಳು ಎಂಬುದಷ್ಟೇ ಪ್ರಸ್ತುತ ವಾಗ್ವಾದದ ನೆಲೆ. ಯಶೋಧರ ಚರಿತೆಯ ಕಥಾನಾಯಕಿ ಯಾರು ಎಂದು ಪ್ರಶ್ನಿಸಿದರೆ, ಆ ಕಾವ್ಯಕ್ಕೆ ಅಮೃತಮತಿಯೇ ನಾಯಕಿ ಎಂದು ತಕ್ಷಣ ಉತ್ತರಿಸಬಹುದೇ ಹೊರತು, ಕಥಾನಾಯಕ ಯಾರು ಎಂದರೆ ಉತ್ತರಿಸಲು ಹಿಂದೆ ಮುಂದೆ ನೋಡಬೇಕಾಗುತ್ತದೆ. ವಾಸ್ತವವಾಗಿ ಯಶೋಧರ ಚರಿತೆ ಕಾವ್ಯಕ್ಕೆ ಕಥಾನಾಯಕಿ ಇದ್ದಾಳೆಯೇ ಹೊರತು ಕಥಾನಾಯಕ ಇಲ್ಲ.

ಈ ಹಂತದಲ್ಲಿ ಮತ್ತೆ ಕೆಲವು ಪ್ರಶ್ನೆಗಳು ಎದುರಾಗುತ್ತವೆ. ಜನ್ನಕವಿಗೆ ಈ ರೀತಿಯ ಸಾಂಸ್ಕೃತಿಕ ಸವಾಲುಗಳಿಗೆ ಉತ್ತರಿಸುವ ಆಶಯವಿತ್ತೆ? ಅಮೃತಮತಿಯ ಪಾತ್ರದ ಮುಖಾಂತರ ಇಷ್ಟೆಲ್ಲ ಸೂಕ್ಷ್ಮಗಳನ್ನು ಹೊರಡಿಸುವ ಆಲೋಚನೆಗಳಿದ್ದುವೆ? ಜನ್ನನು ಈ ಮುಖ್ಯ ಪ್ರಶ್ನೆ ಮತ್ತು ಸಮಸ್ಯೆಯನ್ನು ನೇರವಾಗಿ ಎತ್ತಿಕೊಂಡು, ಅದಕ್ಕೊಂದು ತಾತ್ವಿಕವಾದ ಸ್ವರೂಪಕೊಟ್ಟು, ಗಂಭೀರವಾಗಿ ಚರ್ಚಿಸದೆ ಕೈಬಿಟ್ಟಿದ್ದೇಕೆ? ಅಂದಿನ ಸಂಪ್ರದಾಯ ಶರಣರು ತನ್ನ ಮೇಲೆ ತಿರುಗಿ ಬೀಳುವರೆಂಬ ಭಯದಿಂದ ತೀರ ಮೊಗುಂ ಆದ ನಿರೂಪಣೆಗೆ ಸೀಮಿತನಾದನೆ? ಮುಂತಾದ ಪ್ರಶ್ನೆಗಳು ಏಳುತ್ತವೆ. ಇವೇನು ಯಕ್ಷ ಪ್ರಶ್ನೆಗಳಲ್ಲ , ಇವು ಸಾಹಿತ್ಯ ಕೃತಿ - ಸಂಬಂಧವಾದ ಪ್ರಶ್ನೆಗಳು. ಇದಕ್ಕೆ ತಕ್ಕ ಉತ್ತರ ಕೊಡುವ ಪ್ರಯತ್ನವನ್ನು ಜನ್ನಕವಿ, ಯಶೋಧರ ಚರಿತೆಯನ್ನು ರಚಿಸಿದ ಎರಡೂವರೆ ದಶಕಗಳ ತರುವಾಯ ರಚಿಸಿದ, ಅನಂತನಾಥ ಪುರಾಣದಲ್ಲಿ ಮಾಡಿದ್ದಾನೆ. ಅಲ್ಲಿನ ಚಂಡಶಾಸನ ಮತ್ತು ಸುನಂದೆಯರ ಪಾತ್ರಗಳನ್ನು, ಯಶೋಧರ ಚರಿತೆಯಲ್ಲಿ ಎತ್ತಿದ ಪ್ರೇಮ - ಕಾಮ - ಹಿಂಸೆಯ ಪ್ರಶ್ನೆಗಳ ಮುಂದುವರಿಕೆಯಾಗಿವೆ. ವಿವಾಹ ಸಂಹಿತೆಗೆ ಎಂಥ ಪ್ರಾಣಾಂತಕ ಗಂಡಾಂತರ ಒದಗಿದಾಗಲೂ ಬದ್ಧಳಾಗಿದ್ದ ಸುನಂದೆ, ಅಮೃತಮತಿಗೆ ಇದ್ದಂಥ ಪ್ರೇಮ - ಕಾಮಗಳ ಉತ್ಕಟೆಯಿದ್ದು ಪುರುಷ ಸಹಗಮನ ಮಾಡಿದ ಚಂಡಶಾಸನ - ಈ ಪಾತ್ರಗಳ ಕ್ರಿಯೆ - ಪ್ರತಿಕ್ರಿಯೆಗಳ ಸಂವಾದ ಭಿನ್ನಪಾತಳಿಯಲ್ಲಿ ಮುಂದುವರಿಯಬೇಕಾಗುತ್ತದೆ.

ಅಮೃತಮತಿಯ ಪಾತ್ರ ಸರಳವಾದುದಲ್ಲ, ಸಂಕೀರ್ಣವಾದುದು. ಅವಳ ಪಾತ್ರದಲ್ಲಿ ಕಾಣುವ ತೊಡಕುಗಳಿಗೆ, ಜಟಿಲತೆಗೆ ಕಾರಣ ಆಕೆಯೇ ಆರಿಸಿಕೊಂಡ ಇಕ್ಕಟ್ಟಿನ ಬದುಕಿನ ಹಾದಿಯಲ್ಲಿರುವ ಸವಾಲುಗಳು. ಒಲ್ಲದ ಗಂಡನೊಂದಿಗೆ ರತಿಸುಖ ಪರಾಙ್ಮುಖಳಾಗಿ, ಒಲಿದ ಮಿಂಡನೊಂದಿಗೆ ದೇಹಸುಖ ಹಿತವೆನಿಸಿದ್ದರ ಫಲವಾಗಿ, ಅಮೃತಮತಿಯು ಸಾಮಾಜಿಕ ಕಟ್ಟಳೆಗಳ ಸವಾಲನ್ನು ಎದುರಿಸಬೇಕಾದ ಅನಿವಾರ್ಯ ಪ್ರಮೇಯ ಉಂಟಾಯಿತು.

ಈ ಚರ್ಚೆಗೆ ಮೊನಚು ಬರಬೇಕಾದರೆ ಇಡೀ ಕಥೆಯ ಕೇಂದ್ರಕ್ರಿಯೆಯನ್ನು ಇನ್ನೊಂದು ಸಂದರ್ಭಕ್ಕೆ ಹೊರಳಿಸಬೇಕು. ಒಂದು ವೇಳೆ, ಅಮೃತಮತಿಯ ಬದಲು ಯಶೋಧರನೇ ಹೀಗೆ ಮಾಡಿದ್ದರೆ ಏನಾಗುತ್ತಿತ್ತು? ಅಂದರೆ, ಅರಮನೆಯ ಊಳಿಗದವಳೊಬ್ಬಳನ್ನು, ಗಾಯಕಿ ನರ್ತಕಿ ಸೇವಕಿ ಅಥವಾ ಮತ್ತೊಬ್ಬಳನ್ನು, ಆಕೆಗೆ ಮದುವೆಯಾಗಿ ಗಂಡನಿದ್ದೂ ಯಶೋಧರನೇ ಬಯಸಿ ದೈಹಿಕ ಸಂಬಂಧ ಮಾಡಿದ್ದರೆ ಯಾವ ಪ್ರತಿಕ್ರಿಯೆಗಳು ಉಂಟಾಗುತ್ತಿದ್ದುವು? ಬಹುಶಃ ಆಗ ಅದರಲ್ಲಿ ಸಾಮಾಜಿಕ ಘರ್ಷಣೆಗಳು ಬರುತ್ತಿರಲಿಲ್ಲ ; ಇಂತಹ ಮಾಮೂಲೀ ಕಥೆಗಳಿವೆ. ಪುರುಷ ಪ್ರಧಾನ ಸಾಮಾಜಿಕ ರಚನೆಯಲ್ಲಿ ಈ ಬಗೆಯ ಸ್ತ್ರೀ - ಪುರುಷ ಸಂಬಂಧಕ್ಕೆ ರಿಯಾಯಿತಿ ಕಲ್ಪಿತವಾಗಿದೆ. ಮದುವೆಯ ಆಚೆಗಿನ ಸಂಬಂಧವಾದರೂ ಅದಕ್ಕೆ ಅಂಗೀಕಾರದ ಮುದ್ರೆ ಬೀಳುತ್ತದೆ. ಆದರೆ ಅಮೃತಮತಿಯಂತಹವಳ ವರ್ತನೆಗೆ ತಿರಸ್ಕಾರ ಬರುತ್ತದೆ. ಇದರಲ್ಲಿ ಎದುರಾಗುವುದು ಆದರ್ಶವಲ್ಲ, ಸಂಘರ್ಷ.

ಅಮೃತಮತಿಯದು ಆದರ್ಶ ಪಾತ್ರವಲ್ಲ : ಅದು ಪ್ರತಿಕೂಲ ಪರಿಸರವನ್ನು ಎದುರಿಸುವ ಒಬ್ಬ ದಿಟ್ಟ ಹೆಣ್ಣಿನ ಹೋರಾಟದ ಪಾತ್ರ. ಇಂಥ ನಿರ್ದಿಷ್ಟ ಸ್ತ್ರೀವಾದಿ ನಿಲುವಿನಿಂದ ಅಮೃತಮತಿಯ ನಡೆವಳಿಕೆಯನ್ನು ವಿವರಿಸುವ ಪ್ರಯತ್ನಗಳು ನಡೆಯಬೇಕಾಗಿದೆ. ಅನಂತನಾಥ ಪುರಾಣದ ಸುನಂದೆಯ ಹೋರಾಟಕ್ಕೂ ಅಮೃತಮತಿಯ ಹೆಣಗಾಟಕ್ಕೂ ಇರುವ ವೈದೃಶ್ಯಗಳು ಗಮನಾರ್ಹವಾದುವು. ಈ ಪುಟ್ಟ ಲೇಖನಕ್ಕೆ ಇರುವುದು ಯಶೋಧರ ಚರಿತೆಯ ಒಳಪದರಗಳಿಗೆ ಸ್ತ್ರೀವಾದಿ ನೆಲೆಯ ಒಳನೋಟದ ವಿವರಣೆಯನ್ನು ಮತ್ತೆ ಚಾಲನೆಗೊಳಿಸುವ ಉದ್ದೇಶ.

ಮಲ್ಲಣಾರ್ಯರ ಉತ್ಪ್ರೇಕ್ಷೆ

ಪ್ರೊ. ಚ. ಸುಂದರೇಶನ್

ಉತ್ಪ್ರೇಕ್ಷೆಯು ಕವಿಕಲ್ಪನೆಯಿಂದ ಅರಳಿದ ಅಲಂಕಾರ. ರಸಿಕರಿಗೆ ಪ್ರಿಯವಾದ ಅಲಂಕಾರ. ಕವಿಗಳ ಹಿರಿತನವನ್ನು ಭಾವುಕರು ಉತ್ಪ್ರೇಕ್ಷೆಯಿಂದಲೂ ಗುರುತಿಸುತ್ತಾರೆ. ಉಪಮೆ - ರೂಪಕ - ದೀಪಕ - ದೃಷ್ಟಾಂತ - ಉತ್ಪ್ರೇಕ್ಷೆ - ಇವುಗಳೆಲ್ಲಾ ಅಲಂಕಾರ ಶಾಸ್ತ್ರದ ಸಂಗತಿಗಳು. ಇವುಗಳನ್ನು ಕುರಿತ ವಿಚಾರವೇ 'ಅಲಂಕಾರ' ಎಂಬ ಭಾವನೆಯೂ ಬೆಳೆದಿದೆ. ವಿಶಾಲವಾದ, ಸಂಕುಚಿತವಾದ ಅರ್ಥಗಳಲ್ಲಿ 'ಅಲಂಕಾರ' ಶಬ್ದವು ಬಳಕೆಗೆ ಬಂದಿದೆ. ಶಬ್ದಾರ್ಥಾಲಂಕಾರಗಳು ಪ್ರಸಿದ್ಧವಾದುವು. 'ಉಪಮೆ ರೂಪಕದ ಮುಂದೆ ಹಸುಳೆ' ವಿಷಯದ ಸುತ್ತ ಬೆಳಕನ್ನು ಉಪಮೆ ಚೆಲ್ಲುತ್ತದೆ. ನಟಿಯು ಲತೆಯಂತೆ ಬಳುಕುತ್ತಾಳೆ - ಎಂಬುದು ಪೂರ್ಣೋಪಮೆಯಾದರೆ, 'ಲತಾನಟಿ' - ಎಂಬುದು ರೂಪಕ. ಸಾದೃಶ್ಯ ಸಂಪತ್ತು ಉಪಮೆಯಲ್ಲಿದ್ದರೆ, ಭಾವದ ಬೆಸುಗೆ ರೂಪಕದಲ್ಲಿರುತ್ತದೆ. ಉಪಮೆ - ರೂಪಕಗಳಂತೆ ಉತ್ಪ್ರೇಕ್ಷೆಯು ಮುಖ್ಯವಾದ ಅಲಂಕಾರ. ಒಂದು ದೃಷ್ಟಿಯಿಂದ ಕವಿಶಕ್ತಿಯನ್ನು, ಕವಿತನವನ್ನು ಕಾಣಲು ನೆರವಾಗುವ ಅಲಂಕಾರ. ಆದರೆ ಉಪಮೆ - ಉತ್ಪ್ರೇಕ್ಷೆಗಳೇ ಕಾವ್ಯದ ತಿರುಳು ಎಂದು ಭಾವಿಸಬಾರದು. ಇವೆಲ್ಲ ಭಾವವನ್ನು ಪರಿಪೋಷಿಸುವ, ಪ್ರಕಟಗೊಳಿಸುವ ಸೌಂದರ್ಯ ಪ್ರಕಾರಗಳು. ವಿಶಾಲವಾದ ಅರ್ಥದಲ್ಲಿ ಸೌಂದರ್ಯವೇ ಅಲಂಕಾರ[1]. ಕಾವ್ಯವು ಅಲಂಕಾರದಿಂದ ಗ್ರಹಿಸುವುದಕ್ಕೆ ಯೋಗ್ಯವಾಗುತ್ತದೆ [2]. ಜೀವನದ ತಿರುಳು ಸೌಂದರ್ಯವೇ ಆಗಿದೆ. ಕಾವ್ಯ ಮತ್ತು ಜೀವನದಲ್ಲಿ ಬಹುಪ್ರಕಾರವಾಗಿ ಚೆಲುವು ಚಲ್ಲಿದೆ.

---

1. ಸೌಂದರ್ಯಂ ಅಲಂಕಾರಃ
2. ಕಾವ್ಯಂ ಗ್ರಾಹ್ಯಂ ಅಲಂಕಾರಾತ್ - ವಾಮನ.

ನಿಜವಾದ ಸೌಂದರ್ಯವನ್ನು ಕಾಣುವ ಕಣ್ಣು ಬೇಕು, ಅನುಭವಿಸುವ ಹೃದಯ ಬೇಕು. ಆಗ ಜಗವೆಲ್ಲ ರಸಪೂರ್ಣ, ಆನಂದಮಯ.

ಉಪಮೆಗೆ ಕಾಲಿದಾಸ, ರೂಪಕಕ್ಕೆ ಕುಮಾರವ್ಯಾಸ, ಅರ್ಥಾಂತರ ನ್ಯಾಸಕ್ಕೆ ನಾಗಚಂದ್ರ ಹೇಗೋ ಹಾಗೆ ಉತ್ಪ್ರೇಕ್ಷೆಗೆ ಮಲ್ಲಣಾರ್ಯ. ಒಂದು ವಸ್ತುವನ್ನು ಬೇರೊಂದಾಗಿ ಸಂಭಾವಿಸುವುದು ಉತ್ಪ್ರೇಕ್ಷೆ[3] ಎಂಬುದು ಸಂಪ್ರದಾಯದ ಅರ್ಥ. ನಿದರ್ಶನರೂಪವಾಗಿ ಈ ಪದ್ಯವನ್ನು ಗಮನಿಸಬಹುದು.

ತಳಿರ್ಗೊಯ್ವೆಳೆಯಳ ಚೆಂದುಟಿ
ದಳಿರಂ ತಳಿರ್ಗೆತ್ತು ಕರ್ದುಕಿದುದು ಪಿಕನಿ ಮಂ।
ಜುಳಪಲ್ಲವಮೆಲ್ಲಮನೀ
ಗಳೆ ಪಱಿದಪಳೆಂಬ ಮುನಿಸಿನಿಂ ಕರ್ದುಕುವವೊಲ್ ॥ [4]

ಹರೆಯದ ಚೆಲುವೆಯೊಬ್ಬಳು ಮರದ ತಳಿರನ್ನು ಬಿಡಿಸುತ್ತಿದ್ದಾಳೆ. ಆ ಚೆಲುವೆಯ ಚೆಂದುಟಿಯನ್ನೇ ಕೋಗಿಲೆಯು ಚಿಗುರು ಎಂದು ತಿಳಿದು ಕಚ್ಚಿದೆ - ಎಂದು ಕವಿಯು ಸಂಭಾವಿಸಿ ಇಲ್ಲಿ ವರ್ಣಿಸಿದ್ದಾನೆ. ಚಿಗುರು ಎಂದು ಭಾವಿಸಿ, ಕೋಗಿಲೆಯು ಚೆಲುವೆಯ ತುಟಿಯನ್ನೇ ಕಚ್ಚಿದೆ. ಮನೋಹರವಾದ ಚಿಗುರನ್ನು ಚೆಲುವೆಯು ಈಗಲೇ ಹರಿದು ಬಿಡುವಳು ಎಂದು ಆಕೆಯ ಚೆಂದುಟಿಯನ್ನು ಕೋಗಿಲೆ ಕಚ್ಚಿದೆ - ಎಂಬ ವರ್ಣನೆಯಲ್ಲಿ ಉತ್ಪ್ರೇಕ್ಷೆ ಮಿನುಗಿದೆ. ಒಂದು ರೂಪದಲ್ಲಿರುವ ವಸ್ತು ಇನ್ನೊಂದು ಬಗೆಯಲ್ಲಿ ಇರುವುದೆಂದು ತಿಳಿಸಿರುವ ಈ ಬಗೆಯ ಉತ್ಪ್ರೇಕ್ಷೆಗೆ ಕವಿಕಲ್ಪನೆಯೇ ಕಾರಣವಾಗಿದೆ.

ಮಲ್ಲಣಾರ್ಯರ ಉತ್ಪ್ರೇಕ್ಷೆಯು ವಿಶಿಷ್ಟವಾದುದು, ಬಹುಮುಖವಾದುದು. ಸಂಪ್ರದಾಯದ ಅರ್ಥದೃಷ್ಟಿಯನ್ನೂ ಕವಿ ತಳೆದಿರಬಹುದು. ಅದರ ಜೊತೆಗೆ ಉತ್ + ಪ್ರೇಕ್ಷ = ಮೇಲ್ನೋಟ, ಉತ್ತಮ ನೋಟ, ಶ್ರೇಷ್ಠ ದೃಷ್ಟಿ ಎಂಬ ಅಂತರಾರ್ಥವನ್ನೂ ಭಾವುಕರು ಲಕ್ಷಿಸಬೇಕು. **'ಕೃತಿಯೊಳುತ್ಪ್ರೇಕ್ಷೆಯಿಲ್ಲದುದೊಂದು ಪದವಿಲ್ಲ'** - ಕವಿಯ ಈ ಪ್ರತಿಜ್ಞೆಯನ್ನು ಶಬ್ದಶಃ ತೆಗೆದುಕೊಳ್ಳಬಾರದು - ಎಂಬ ಹಿರಿಯರ ಅಭಿಪ್ರಾಯವೇ ಸಮ್ಮತ. ಭಾವಚಿಂತಾರತ್ನವು ಉತ್ಪ್ರೇಕ್ಷೆಯಿಂದ ತುಂಬಿದ ಕಾವ್ಯ ಎಂಬುದಂತೂ ದಿಟ. ಕವಿಯ ವಿಶಿಷ್ಟವಾದ ವೀಕ್ಷಾಗತಿಯನ್ನು, ಭಾವ - ಕಲ್ಪನೆಗಳ ವಿಲಾಸವನ್ನು, ರಚನಾತಂತ್ರವನ್ನು, ಸಂಬಂಧ ಕಲ್ಪನೆ - ದರ್ಶನವನ್ನು ಈ ಕಾವ್ಯದ ಪದ್ಯಗಳು ನಿಚ್ಚಳವಾಗಿ ಕಾಣಿಸುತ್ತಿವೆ. ನಿದರ್ಶನ ರೂಪವಾಗಿ.

೧

ಹರುಷಜಲದಕ್ಷಿಗಳ ಮುನಿಗಳಿಂ ಮೈದೆಗೆದು
ಹರನೊಳೊಂದುವ ಪರಮಕಾಷ್ಠರಿಂ ಪರಿಯೆ ದೃ
ಕ್ಕಿರಣಂಗಳೊಡನೆ ಕಣ್ಮುಚ್ಚುವಾನಂದರಿಂ ಸಾಸಿರದಳಾಬ್ಜವೀವಾ ।
ಪರಮಯೋಗೀಶರಿಂ ಸದ್ವಾಸನಾಂಗರಿಂ
ಭರಿತ ಸುಜ್ಞಾನರಿಂ ಹರಣಾರ್ಪಣಾಢ್ಯರಿಂ
ಪರಮಾನುರಾಗಿಗಳೆಸೆವ ಸಭೆಯಷ್ಟವಿಧಪೂಜೆಯೆನೆ ಕಣ್ಗೆಸೆದುದು ॥ ೨-೫

---

3. ಸಂಭಾವನಾ ಸ್ಯಾದುತ್ಪ್ರೇಕ್ಷಾ ವಸ್ತು ಹೇತು ಫಲಾತ್ಮನಾ

4. ಕನ್ನಡ ಕೈಪಿಡಿ ಪುಟ : ೨೬೭.

ಇದೊಂದು ಉತ್ಪ್ರೇಕ್ಷೆ. ಅಷ್ಟವಿಧಪೂಜೆಯನ್ನು ಅಳವಡಿಸಿರುವ ಕವಿಯ ರಚನಾ ನೈಪುಣ್ಯವನ್ನು ಭಾವಸೌಂದರ್ಯವನ್ನು ಈ ಪದ್ಯದಲ್ಲಿ ನಾವು ಕಾಣಬಹುದು. ಶಿವನ ಸಭೆಯು ಆನಂದಜಲದಿಂದ ಕೂಡಿದ ಕಣ್ಣುಗಳನ್ನುಳ್ಳ ಮುನಿಗಳಿಂದಲೂ, ಕಾಯಭಾವ ಅಳಿದು ದೇವಭಾವವನ್ನು ತಳೆದ ಅತ್ಯುನ್ನತ ಸ್ಥಿತಿ ಉಳ್ಳವರಿಂದಲೂ, ದೃಷ್ಟಿ ಕಿರಣಗಳು ಹರಡಲಾಗಿ ಧ್ಯಾನಲೀನರಾಗುವ ಆನಂದ ಸ್ವರೂಪಿಗಳಿಂದಲೂ, ಸಹಸ್ರದಳ ಕಮಲವನ್ನು ಕೊಡುವ (ಸಹಸ್ರಾರದ ಅಮೃತಾನುಭವ) ಶ್ರೇಷ್ಠ ಯೋಗೀಶರಿಂದಲೂ, ಸುಸಂಸ್ಕೃತರಿಂದಲೂ, ಪರಮ ಪ್ರೇಮಿಗಳಿಂದಲೂ ಶೋಭಿಸುವ ಸಭೆ ಅಷ್ಟವಿಧಪೂಜೆ ಎನ್ನುವಂತಿದೆ ಎಂದು ಕವಿಯು ಕಲ್ಪಿಸಿರುವನು. ಸಂಭಾವನಾಚಾತುರ್ಯ, ಸಂಬಂಧ ವಿಶೇಷಾರ್ಥಕಲ್ಪನೆ ಈ ಕವಿಯ ಉತ್ಪ್ರೇಕ್ಷೆಯ ವೈಶಿಷ್ಟ್ಯವಾಗಿದೆ. ಅರ್ಥ ಚಮತ್ಕಾರ, ಭಾವಸಂಪತ್ತಿ ಮಲ್ಲಣಾರ್ಯರ ಕಾವ್ಯಸಂಗತಿಗಳಾಗಿವೆ.

ಹರುಷಜಲ	:	ಆನಂದಜಲ ; ಅಭಿಷೇಕ
ಮೈದೆಗೆದು	:	ಶರೀರದ ಅಭಿಮಾನವನ್ನು ಬಿಟ್ಟು ; ಶ್ರೀಗಂಧ.
ದೃಕ್ಕಿರಣ	:	ದೃಷ್ಟಿಕಿರಣ ; ಅಕ್ಷತೆ
ಸಾಸಿರದಳಾಬ್ಜ	:	ಸಹಸ್ರದಳ ಕಮಲ ; ಪುಷ್ಪ
ಸದ್ವಾಸನ	:	ಸುಸಂಸ್ಕಾರ ; ಧೂಪ
ಸುಜ್ಞಾನ	:	ಒಳ್ಳೆಯ ಜ್ಞಾನ ; ದೀಪ
ಅರ್ಪಣ	:	ಸಮರ್ಪಣಭಾವ ; ನೈವೇದ್ಯ
ಅನುರಾಗ	:	ಪ್ರೇಮ ; ತಾಂಬೂಲ

- ಹೀಗೆ ಅಷ್ಟವಿಧಪೂಜೆಯನ್ನು ಅರ್ಥಚಮತ್ಕೃತಿಯೊಡನೆ ಭಾವಪೂರ್ಣವಾಗಿ ಕಲ್ಪಿಸಿ ಕವಿಯು ಅಳವಡಿಸಿದ್ದಾನೆ. ಅರ್ಥ ವಿಶೇಷವನ್ನು ಕಾಣಿಸಿರುವ ರೀತಿಯಲ್ಲಿ ಸಹಜತೆಯಿದೆ ; ಸೌಂದರ್ಯವಿದೆ. ಕವಿಯ ಈ ಬಗೆಯ ಉತ್ತಮ ನೋಟ, ರಚನಾ ತಂತ್ರ, ಸವಿಗಾರಿಕೆ - ಸಂಸ್ಕಾರಶೀಲ ಸಹೃದಯರಿಗೆ ಮಾತ್ರ ಗೋಚರ ಎಂದು ತಿಳಿಸದೆ ವಿಧಿಯಿಲ್ಲ ! ಈ ತೆರನಾದ ರಚನಾತಂತ್ರ, ಕವಿಗೆ ತುಂಬ ಪ್ರಿಯವೆನಿಸಿರಬೇಕು. ಭೃಂಗಿರಿಟಿಯ ನರ್ತನ ಸನ್ನಿವೇಶದಲ್ಲಿಯೂ [5], ಚೋಳದೇಶವು ನವಗ್ರಹಾತ್ಮಕವಾಗಿತ್ತು[6] ಎಂದು ಬಣ್ಣಿಸುವಾಗಲೂ ನವರತ್ನ ಮಾಲೆಗಳ ಪಾಂಗಿನಿಂದ ಒಪ್ಪಿದ ಸ್ತ್ರೀಯರನ್ನು ಬಣ್ಣಿಸುವಾಗಲೂ [7] ಇಂಥದೇ ರಚನಾತಂತ್ರವನ್ನು ಕವಿ ಮಲ್ಲಣಾರ್ಯರು ಬಳಸಿದ್ದಾರೆ.

೨

ಮೂಡೆಗಟ್ಟಂ ಕಟ್ಟಿ ಹುಡುಕುನೀರೊಳ್ ಮೆಟ್ಟಿ
ಕಾಡುತಿಹ ಪಾಮರರ ಕೈವಿಡಿತೆಗೊಳಗಾಗಿ
ನಾಡೆ ಪಂಕವ ಪೊಗುತ್ತಿರ್ದೆಯೊಡೆದು ಪುಲ್ಗಚ್ಚಿ ಕಂಟಕಂಬಡೆದೆವಿನ್ನು ।
ರೂಢಿಸಿದ ಕಾವೇರಿಯಿರ್ಕೆಲನ ಸಾರ್ದು ಶಶಿ
ಚೂಡಂಗೆ ಸಲ್ವ ಪೇರೊಲ್ಮೆಯಿಂ ಪಿಡಿದವರ
ಕೂಡೆ ಬಾಯ್ದುಡಿಸದಿರೆವೆಂದು ರಾಗಿಸುವ ಕಳಮೆಯ ಮಡಿಯ ಸಾಲ್ಮೆಱೆದುವು॥

---

5. ಭಾವಚಿಂತಾರತ್ನ ೨-೭

6. ಅದೇ, ೩-೪

7. ಅದೇ, ೬-೨೧

ಈ ಪದ್ಯದಲ್ಲಿ ಬತ್ತದ ಸಾಲು ಶೋಭಿಸುವ ಬಗೆಯನ್ನು ಕವಿಯು ವರ್ಣಿಸಿದ್ದಾನೆ. ಬತ್ತದಿಂದಲೂ ಮಾತನಾಡಿಸಿದ್ದಾನೆ. ಬತ್ತದ ಆತ್ಮಕಥೆಯಿದು. ಮೂಡೆಯಲ್ಲಿ ಕಟ್ಟಿ, ಬಿಸಿ ನೀರಿನಲ್ಲಿ ಹಾಕಿ ಪಾಮರರು ನನ್ನನ್ನು ಕಾಡುವರು, ರೈತರ ಕೈ ಹಿಡಿತಕ್ಕೆ ಒಳಗಾಗಿ ಕೆಸರನ್ನು ಸೇರುವೆನು. ಅಲ್ಲಿ ಮೊಳಕೆ ಒಡೆದು ಹುಲ್ಲನ್ನು ಕಚ್ಚಿಕೊಂಡು ಇನ್ನೂ ಹಿಂಸೆ ಪಟ್ಟೆನು. ಇಷ್ಟೆಲ್ಲ ಆದ ಮೇಲೆ ನಮ್ಮನ್ನು ಹಸನುಗೊಳಿಸಿದ ಕಾವೇರಿ ನದಿಯ ಎರಡು ಬದಿಗಳ ಬಳಿ ಸಾರಿ ಶಂಕರನಿಗೆ ಸಲ್ಲುವಂತಾದೆನು. ಕುಯಿಲು ಆದ ಮೇಲೆ ಅಕ್ಕಿಯನ್ನಾಗಿ ಮಾಡಿದ ಬಳಿಕ, ಅನ್ನವನ್ನು ಶಿವನಿಗೆ ಹಿರಿದಾದ ಒಲುಮೆಯಿಂದ ನಿವೇದಿಸುವರು. ಹಾಗೆ ಶಿವನಿಗೆ ಸಲ್ಲಿಸಿ ಯಾರು ಊಟ ಮಾಡುತ್ತಾರೋ ಅಂಥವರ ಬಾಯನ್ನು ಬಿಡಿಸದೆ ಇರುವುದಿಲ್ಲ. ಯಾರ ಕೈಗೆ ನಾವು ತುತ್ತು ಆಗುತ್ತೇವೋ ಯಾರು ನಮ್ಮನ್ನು ಹಿಡಿಯುತ್ತಾರೋ ಅಂಥವರ ಬಾಯನ್ನು ಬಿಡಿಸದೆ ಇರುವುದಿಲ್ಲ - ಎಂದು ರಾಗಿಸುವ ಬತ್ತದ ಮಡಿಯ ಸಾಲು ಮೆರೆದುವು ಎಂದು ಬಣ್ಣಿಸಿದ್ದಾನೆ ಕವಿ. ಊಟ ಮಾಡುವವರು ಬಾಯಿ ಬಿಡಲೇಬೇಕು ತಾನೆ! ಈ ಬಗೆಗೆ ಸ್ವಭಾವ ಚಿತ್ರ ಇಲ್ಲಿದೆ. 'ಶಶಿಚೂಡಂಗೆ' - ಎಂಬ ಪ್ರಯೋಗವೂ ಅರ್ಥಪೂರ್ಣ; ಧ್ವನಿಪೂರ್ಣ! ಸಸ್ಯಾಧಿಪತಿಯಾದ ಚಂದ್ರ, ಆ ಚಂದ್ರನನ್ನು ತಲೆಯ ಆಭರಣವಾಗಿ ಪಡೆದ ಶಿವನ ನೆನಹು ಆನಂದಕರ. ಮಲ್ಲಣಾರ್ಯರ ಉತ್ಪ್ರೇಕ್ಷೆ ಈ ಪರಿಯಲ್ಲಿ ಬಹುಮುಖಿ; ಸವಿಸ್ತಾರ. ವಿಶಾಲವೂ ಪಾವನವೂ, ಗಂಭೀರವೂ ಆದ ಉತ್ತಮ ನೋಟ ಕವಿ ಮಲ್ಲಣಾರ್ಯರದಾಗಿದೆ.

೩

ಕೃತಿಯೆಂತಿದಕ್ಕೆ ಮೊದಲಾವುದೆಂದೆನೆ ಪತಿ
ವ್ರತೆಯಂತೆ ಕಾಂತಾನುಕೂಲದಿಂ ಕೌರವ
ಕ್ಷಿತಿಪರನ ಸೇನೆಯಂತಾ ದ್ರೌಣಿಯಿಂ ವೀಣೆಯಂತಾ ಪ್ರವಾಳದಿಂದೆ ।
ಕ್ರತುಭುಜರ ಸುಡಲು ಗರಳವನುಗುಳ್ದ ಲೋಚನ
ಶ್ರುತಿಪನಂತಚಲಾವೃತತ್ತ್ವದಿಂ ಕೃಷ್ಣಗಿರಿ
ಸುತರನೊಳಕೊಂಡು ತದ್ವೈರಿಗಳ ಗರ್ಜಿಸುವ ತೆರದೊಳೊಪ್ಪಿತು ಸಮುದ್ರಂ ॥ ೨-೧

ಸಮುದ್ರದರ್ಶನ ಪಡೆಯದೆ ವರ್ಣನೆ ಮಾಡಿರುವ ಕವಿಗಳನ್ನು ವಿಮರ್ಶಕರು ನಿಂದಿಸುವುದುಂಟು. ಕವಿಯ ಕಥೆ ಸಮುದ್ರ ವರ್ಣನೆಯನ್ನು ಒಳಗೊಳ್ಳದೆ ಮುಂದುವರಿಯುವುದಾದರೂ ಸಾಧ್ಯವೇ! ವರ್ಣನೆಯಲ್ಲಿ ಸಂಪ್ರದಾಯ ದೃಷ್ಟಿ ಕಂಡುಬಂದರೂ ಕವಿಯ ಸಂಭಾವನಾಜ್ಞಾನ, ಶಬ್ದಶ್ಲೇಷಾನೈಪುಣ್ಯವೈಖರಿ ಸಹೃದಯರನ್ನು ಸೋಜಿಗಗೊಳಿಸುತ್ತಿದೆ.

೧. (ಅ) ಪತಿವ್ರತೆಯು ಕಾಂತನಿಗೆ ಅನುಕೂಲಳಾಗಿರುತ್ತಾಳೆ.

(ಆ) ಸಮುದ್ರವು ರತ್ನಗಳಿಂದ ಕೂಡಿ ಅನುವಾದ ಕೂಲ ಪಡೆದಿರುತ್ತದೆ.

೨. (ಅ) ಕೌರವನ ಸೇನೆಯಲ್ಲಿ ಅಶ್ವತ್ಥಾಮನಿರುವನು.

(ಆ) ಸಮುದ್ರದಲ್ಲಿ ಹಡಗು ಇರುತ್ತದೆ.

೩. (ಅ) ವೀಣೆಗೆ ಹವಳ ಜೋಡಿಸುತ್ತಾರೆ.

(ಆ) ಸಮುದ್ರದಲ್ಲಿ ಹವಳದ ಬಳ್ಳಿಯಿರುತ್ತದೆ ಎಂಬುದು ಕವಿಸಮಯ.

೪. ದೇವತೆಗಳನ್ನು ಸುಡಲು ವಿಷವನ್ನು ಉಗುಳಿದ ಆದಿಶೇಷನಂತೆ ಬೆಟ್ಟದಿಂದ ಸಮುದ್ರವು ಸುತ್ತುವರಿದಿದೆ.

೫. ಸಮುದ್ರವು ಕರಿಯ ಆನೆಗಳನ್ನು ಒಳಗೊಂಡು ಆ ಆನೆಗಳ ವೈರಿಯಾದ ಸಿಂಹವನ್ನು (ಮೇಘಬಿಂಬವನ್ನು) ಕಂಡು ಪ್ರತಿಭಟಿಸಿ ಗರ್ಜಿಸುವ ರೀತಿಯಲ್ಲಿ ಸಮುದ್ರವು ಶೋಭಿಸಿತು.

- ಹಲವು ಸಂಗತಿಗಳನ್ನು ಹೀಗೆ ಒಂದು ಪದ್ಯದಲ್ಲಿ ಅಳವಡಿಸಿ, ಸಮುದ್ರ ಘೋಷಣೆ ಸಿಂಹಗರ್ಜನೆಯಂತಿತ್ತು - ಎಂದು ಉತ್ಪ್ರೇಕ್ಷಿಸಿದ್ದಾನೆ ಕವಿ.

ಮಲ್ಲಣಾರ್ಯರು ಬಳಸಿರುವ ಮಾಲೋಪಮೆ, ಬೆಳಸಿರುವ ಭಾವ, ಒದವಿಸಿರುವ ದೃಷ್ಟಾಂತ - ಕಾವ್ಯದ ಮೂಲ ಗುರಿಯಾದ ಉತ್ಪ್ರೇಕ್ಷೆಗೆ ಪರಿಪೋಷಕವಾಗಿವೆ. ಕವಿಭಾವವನ್ನು, ಶಬ್ದಪಾಂಡಿತ್ಯವನ್ನು, ಕಲ್ಪನಾ ಚಮತ್ಕೃತಿಯನ್ನು , ವಿಶಿಷ್ಟವಾದ ಪದ್ಧತಿಯನ್ನು ಕಾಣಿಸುತ್ತಿವೆ.

೪

ಕುಮುದದಿಂ ಪ್ರತಿಕೂಲದಿಂ ವಿಜಾತಿಗಳ ಸಂ
ಗಮದಿಂದೆ ಜಡಜೀವನೋಪಾಯದಿಂ ಭಂಗ
ಸಮಿತಿಯಿಂದಿರ್ಪ ತಾವರೆಗೊಳಂ ಪತಿಯ ಹರ್ಷಾನುಕೂಲೆಯ ಸತ್ಕುಲ ।
ರಮೆಯನುತ್ತಮ ಶಿವಪ್ರಾಣಿಯನಭಂಗದು
ತ್ತಮ ಪೂರ್ಣಚಂದ್ರವದನೆಯ ನಾಭಿಸರಸಿಯೊಂ
ದಮಲತ್ವಕ್ಕೆಣೆಯಲ್ಲವೆನಲೆಸೆದಳಾ ಚೆಲ್ವ ಪೆಣ್ಣು ಭೂಭುಜನ ಕಣ್ಣು ॥ ೪-೧೧

ಹೆಣ್ಣು ಗಂಡನ ಕಣ್ಣಾಗಬೇಕು; ಹುಣ್ಣಾಗಬಾರದು. ರಾಣಿ ಅಮೃತವತಿ ಸತ್ಯೇಂದ್ರನ ಕಣ್ಣಾಗಿ, ಕಣ್ಣನಲಿ ಕಣ್ಣಾಗಿ ಬಾಳಿದವಳು. ಪೂರ್ಣಚಂದ್ರವದನೆಯಾದ ಆ ಅಮೃತವತಿಯ ನಾಭಿಯು ತಾವರೆ ಕೊಳಕ್ಕಿಂತ ಶ್ರೇಷ್ಠ ಎಂದು ಉತ್ಪ್ರೇಕ್ಷಿಸಿರುವುದು ಕವಿಯ ಆಶಯವಾಗಿದೆ.

ಸ್ತ್ರೀಯರ ನಾಭಿಯನ್ನು ಸರೋವರಕ್ಕೆ ಹೋಲಿಸುವುದು ಕವಿಸಮಯ. (ಆದರೆ ಅವರ ನಾಭಿ ವಾಸ್ತವವಾಗಿ ಸರೋವರವೇ ಆಗಿಬಿಟ್ಟರೆ ಗತಿ ಏನು!) ಚೆಲುವೆಯರ ನಾಭಿಯಲ್ಲಿ ಸರೋವರ ಸೌಂದರ್ಯವನ್ನು ಸಂಪತ್ತನ್ನು ಕವಿಗಳು ಕಂಡು ಬಣ್ಣಿಸಿದ್ದಾರೆ. ಅಷ್ಟೆ ! ರಾಣಿಯ ನಾಭಿಸರೋವರದ ನಿರ್ಮಲತ್ವಕ್ಕೆ ತಾವರೆಯ ಕೊಳವೂ ಸಮಾನವಿಲ್ಲ ಎಂದಿದ್ದಾನೆ ಕವಿ. ಉತ್ಪ್ರೇಕ್ಷೆಯ ವಿಸ್ತಾರ, ಅರ್ಥ ಚಮತ್ಕಾರ - ಈ ಪದ್ಯದ ವೈಶಿಷ್ಟ್ಯ.

ಕುಮುದ, ದಡಗಳು, ಹಕ್ಕಿಗಳು, ಜಲ, ಜಲತರಂಗಗಳನ್ನು ತಾವರೆಕೊಳವು ಪಡೆದಿರುವುದು ಸಹಜ. ಆದರೆ ಕವಿ ತಿಳಿಸುತ್ತಾನೆ. ತಾವರೆಕೊಳವು ಕು-ಮುದದಿಂದಲೂ, ಪ್ರತಿ - ಕೂಲದಿಂದಲೂ, ವಿ - ಜಾತಿಗಳಿಂದಲೂ, ಜಡ - ಜೀವನದಿಂದಲೂ, ಭಂಗ - ಸಮಿತಿಗಳಿಂದಲೂ ಕೂಡಿದೆಯೆಂದು ಕವಿಯು ತಾವರೆಕೊಳವನ್ನು ಉಪೇಕ್ಷಿಸಿದ್ದಾನೆ. ಆದರೆ ರಾಣಿಯ ನಾಭಿಸರಸ್ಸು ಪತಿಯ ಹರ್ಷಭಾವಕ್ಕೆ ಅನುಕೂಲವಾಗಿತ್ತೆಂದೂ, ಸದ್ವಂಶಸ್ಥೆಯಾದ ಲಕ್ಷ್ಮಿಯನ್ನು ಪಡೆದಿತ್ತು - ಎಂದೂ, ಉತ್ತಮ ಶಿವಚೈತನ್ಯವನ್ನೂ ಪೂರ್ಣಸ್ಥಿತಿಯನ್ನೂ ಒಳಗೊಂಡಿತ್ತು ಎಂದೂ ಕವಿಯು ಬಣ್ಣಿಸಿದ್ದಾನೆ. ನಿರ್ಮಲತ್ವದ ದೃಷ್ಟಿಯಿಂದ ರಾಣಿಯ ನಾಭಿ ಸರೋವರವು ಮುದ - ಕೂಲ - ಜಾತಿ - ಜೀವನ - ಸಮಿತಿ : - ಈ ಎಲ್ಲ ಬಗೆಗಳಲ್ಲಿ ತಾವರೆಕೊಳವನ್ನೂ ಮೀರಿತ್ತು - ಎಂದೂ, ಅಂತಹ ಶ್ರೇಷ್ಠ ನಾಭಿಯ ಚೆಲುವೆ ಅಮೃತವತಿ ಸತ್ಯೇಂದ್ರನ ಕಣ್ಣಾಗಿ ಶೋಭಿಸಿದಳೆಂದು ಕವಿಯು ತಿಳಿಸಿರುವನು. ಕವಿಸಮಯಪ್ರಿಯತೆ, ಶ್ಲೇಷೆ, ಭಾವದ ಸಂಪತ್ತು - ಸತ್ವವನ್ನು ಇಲ್ಲಿ ಕಾಣಬಹುದು.

೫

ವಂಶವನ್ನು ಸಮುದ್ಧರಿಸುವ ಸುತನು ಹುಟ್ಟುವನು - ಎಂಬುದನ್ನು ಸೂಚಿಸುವಂತೆ ರಾಣಿ ಅಮೃತವತಿಯು ತನ್ನ ಸೌಂದರ್ಯ ಸ್ನಾನದಲ್ಲಿ ರಜಸ್ಸು ಕಂಡಳಂತೆ! ರಾಣಿಯ ಶುಭಸ್ನಾನ - ಅಲಂಕಾರಗಳನ್ನು ಸಾಲಂಕೃತ ಭಾಷೆಯಲ್ಲಿ ಹೃದಯಂಗಮವಾಗಿ ಕವಿಯು ಬಣ್ಣಿಸಿರುವನು; ಉತ್ಪ್ರೇಕ್ಷೆಯ ಹೆಚ್ಚಳವನ್ನು ಕಾಣಿಸಿರುವನು.

ಹಿಂಡದಿರು ಹಿಳಿಯದಿರು ಹಿಕ್ಕಿ ಕೂಡೊದಱದಿರು
ಪುಂಡರೀಕೇಕ್ಷಣೇ ನಾನಳುತ ನಿನ್ನ ಮಱಿ
ಗೊಂಡು ಪಾದಾಬ್ಜಮಂ ನೆಱಿ ಸಾರ್ದು ಬಾಳ್ವೆನೆಂದಿರ್ದೆನೆಲೆ ತಾಯೆ ಕೂರ್ತು ।
ಮಂಡೆಯೊಳ್ ಕೈಯಿಡಲು ನಂಬಿರ್ದೆನಕಟ! ಮುಂ
ಕೊಂಡು ಮುಡಿ ಮಾಡಿ ಪೆಡಗಟ್ಟುವಾ ಕೇಳ್ ನಿನ್ನ
ಗಂಡಂಗೆ ಲೇಸೆ ಪೇಳೆಂಬಳಕದಿಂ ಮಿಂದು ರಾಜಿಸಿದಳಾ ಮಾನಿನಿ ॥ ೪-೯

ಅಮೃತವತಿ ಮಿಂದು ರಾಜಿಸಿದಳೆಂದು ಕವಿ ತಿಳಿಸಬಯಸಿದ್ದಾನೆ. ಈ ಮೂಲ ಸಂಗತಿಯನ್ನು ಒಳಗೊಂಡ ಪದ್ಯದ ಭಾವವು ತುಂಬ ನವಿರಾಗಿದೆ. ಮುಂಗುರುಳಿನ ಮೂಲಕ ಕವಿಯು ಮಾತನಾಡಿಸಿದ್ದಾನೆ. ಇದು ಅಸಂಭವವೆಂದು ತೋರಬಹುದು. ಆದರೆ ಅಸಂಭವವನ್ನೂ ಸಂಭವವೋ ಎನ್ನುವಂತೆ ಚಿತ್ರಿಸುವುದರಲ್ಲಿ ಕವಿಗಳು ಶಕ್ತಿವಂತರಲ್ಲವೇ![8]

ಮೇಲಣ ಪದ್ಯದಲ್ಲಿ ಅಮೃತವತಿಯು ಸ್ನಾನ ಮಾಡಿ ಶೋಭಿಸಿದ ಸಂಗತಿಯಿದೆ. ರಾಣಿಯು ಸ್ನಾನ ಮಾಡಿ ಎಣೆಗಂಟು ಹಾಕಿದ್ದಾಳೆ. ಆಕೆಯ ಮುಂಗುರುಳು ಮನೋಹರವಾಗಿದೆ. ಮುಂಗುರುಳಿನ ಬಿನ್ನಹವೂ ಭಾವಪೂರ್ಣವಾಗಿದೆ. 'ಹಿಂಡದಿರು, ಹಿಳಿಯದಿರು, ಹಿಕ್ಕಿ ಕೂಡಿ ಒದರದಿರು ಕಮಲಾಕ್ಷಿಯೇ' - ಎಂಬುದು ಮುಂಗುರುಳಿನ ಕೋರಿಕೆ; ಬಿನ್ನಾಣದ ಬೇಡಿಕೆ ! ಎಲೆ ತಾಯೆ, ದುಃಖಪಡುತ್ತ, ನಾನು ನಿನ್ನ ಆಶ್ರಯವನ್ನು ಬಯಸಿ ನಿನ್ನ ಪದಕಮಲವನ್ನು ಮುಟ್ಟಿ ಬಾಳುವೆನು ಎಂದಿದ್ದೆನು. ಆಗ ಪ್ರೀತಿಯಿಂದ ನೀನು ನನ್ನ ತಲೆಗೂದಲಿನ ಮೇಲೆ ಅಭಯಹಸ್ತ ಇಡುವೆ ಎಂದು ನಂಬಿದ್ದೆನು. ಮುಂದಕ್ಕೆ ಎಳೆದು ಗಂಟು ಹಾಕಿ ಹಿಂದಕ್ಕೆ ಕಟ್ಟುವೆಯಾ? ಈ ಪರಿಯಲ್ಲಿ ನನ್ನನ್ನು ಹಿಕ್ಕಿ ಒದರಿ ಎಳೆದು ಕಟ್ಟಿ ನೋಯಿಸಿದರೆ 'ನಿನ್ನ ಗಂಡಂಗೆ ಲೇಸೆ ಪೇಳ್' - ಎಂಬ ಅಳಕದಿಂದ ರಾಣಿಯು ಸ್ನಾನಮಾಡಿ ಶೋಭಿಸಿದಳಂತೆ! ಕವಿಭಾವ ನವಿರು ; ಸುಂದರ. ಕಲ್ಪನೆ ನೂತನ, ಚಿತ್ರಮಯ!

ಮಿಂದು ರಾಜಿಸಿದ ರಾಣಿಯ ದೀರ್ಘಕೇಶವು ಬೆನ್ನಿನ ಹಿಂದೆ ನೀರಿನಿಂದ ತೊಯ್ದು ಹನಿಗಳನ್ನು ಉದುರಿಸುತ್ತಿತ್ತು - ಎಂಬ ಭಾವವನ್ನೂ ರಾಣಿಯ ಕೇಶರಾಶಿ ಪದತಲದವರೆಗೂ ಬೆಳೆದಿತ್ತು - ಎಂಬ ಭಾವವನ್ನೂ 'ನಾನಳುತ ನಿನ್ನ ಮಱಿಗೊಂಡು ಪಾದಾಬ್ಜಮಂ ನೆಱಿ ಸಾರ್ದು ಬಾಳ್ವೆನೆಂದಿರ್ದೆನೆಲೆ ತಾಯೆ' ಎಂಬ ಕವಿಸೂಕ್ತಿ ಸಚಿತ್ರವಾಗಿ ಧ್ವನಿಪೂರ್ಣವಾಗಿ ಕಾಣಿಸಿದೆ. ಉತ್ಪ್ರೇಕ್ಷೆಯಿಂದ ರಂಜಿಸಿರುವ ಈ ಪದ್ಯವು ಕವಿಕಲ್ಪನೆ - ಚಾತುರ್ಯ - ಚಿತ್ರಣಶಕ್ತಿ - ಧ್ವನಿರಮ್ಯತೆಗೂ ಸಾಕ್ಷಿಯಾಗಿದೆ.

ಮಲ್ಲಣಾರ್ಯನು ಸಾಧಾರಣ ಸವಿಗಾರರ ಕವಿಯಲ್ಲ. ಪ್ರಾಜ್ಞರ ಮಹಾಮನಸ್ಸಿಗೆ ಮಾತ್ರ ಸಂವೇದ್ಯವಾದುದು ಈ ಕವಿಯ ಭಾವ ಚಿಂತನ - ಉತ್ಪ್ರೇಕ್ಷೆ! ಸುಲಭವಾಗಿ ಬೇಗ ಅರ್ಥ ಮಾಡಿಕೊಳ್ಳಲು ಈ ಕವಿಯ ಕಾವ್ಯವು ಎಡೆಕೊಡುವುದಿಲ್ಲ.

---

8. ಕಟ್ಟುಗೆ ಕಟ್ಟದಿರ್ಕೆ ಕಡಲಂ ಕಪಿಸಂತತಿ, ವಾಮನ ಕ್ರಮಂ
ಮುಟ್ಟುಗೆ ಮುಟ್ಟದಿರ್ಕೆ ಮುಗಿಲಂ, ಹರನಂ ನರನೊತ್ತಿ ಗಂಟಲಂ ।
ಮೆಟ್ಟುಗೆ ಮೆಟ್ಟದಿರ್ಕೆ, ಕವಿಗಳ್ ಕೃತಿಬಂಧದೊಳಲ್ತೆ ಕಟ್ಟಿದರ್
ಮುಟ್ಟಿದರೊತ್ತಿ ಮೆಟ್ಟಿದರದೇನಳವಗ್ಗಳಮೋ ಕವೀಂದ್ರರಾ॥ - ನೇಮಿಚಂದ್ರನ ಲೀಲಾವತಿ ಆಶ್ವಾಸ ೧; ಪದ್ಯ ೧೧

ಕೆಲವೆಡೆಯಂತೂ ಬುದ್ಧಿಯೊಡನೆ ಗುದ್ದಾಡಿ ಕವಿಭಾವವನ್ನು ಅನ್ವೇಷಿಸಬೇಕಾಗುತ್ತದೆ. ಆಗ ಒದಗುವ ಆನಂದಕ್ಕೆ ಪಾರವಿಲ್ಲ! ಅದು ಪಾಂಡಿತ್ಯದಿಂದ ಬರುವ ಸಂತೋಷ.

ಒಟ್ಟಿನಲ್ಲಿ ಮಲ್ಲಣಾರ್ಯರ ಕಾವ್ಯವು ಭಾವನೆ - ಚಿಂತನೆ - ವರ್ಣನೆ - ಕಲ್ಪನೆಗಳಿಂದ ಕಮನೀಯವಾಗಿದೆ. ಚೆಲುವು - ಚಮತ್ಕೃತಿಯನ್ನು ಕಾಣಿಸಿದೆ. ಕವಿ ಪ್ರಿಯವಾದ ಉತ್ಪ್ರೇಕ್ಷೆಯ ಆಳ - ನೀಳ ; ರಂಗು - ಚುಂಗನ್ನು ಕೃತಿಯಲ್ಲಿ ನಾವು ಕಾಣಬಹುದಾಗಿದೆ. ಕವಿ ಭಾಷೆ : ಸಾಲಂಕೃತ. ಭಾವ : ಶಿವಭಾವ. ದೃಷ್ಟಿ : ದೇವದೃಷ್ಟಿ . ಚೇತನ : ಭಕ್ತಿಚೇತನ. ಕೃತಿ: ಭಕ್ತಿ - ಕರುಣರಸದಲ್ಲಿ ಮಿಂದು ಬಂದ ಕೃತಿ. ಕೃತಿಬಂಧದ ವೈಶಿಷ್ಟ್ಯ; ಉತ್ಪ್ರೇಕ್ಷೆ. ಕವಿಕೀರ್ತಿಗೂ ನೆರವಾದ ಅಲಂಕಾರವಿದು. ಉಳಿದ ಅಲಂಕಾರಗಳೂ ಉತ್ಪ್ರೇಕ್ಷೆಗೆ ಪೋಷಕವಾಗಿ ಈ ಕಾವ್ಯದಲ್ಲಿ ಬಂದಿವೆ. ಅಂತೂ ಉತ್ಪ್ರೇಕ್ಷೆಗೇ ಮೀಸಲಾದ ಕಾವ್ಯ ಈ ಭಾವಚಿಂತಾರತ್ನ!

ಮಲ್ಲಣಾರ್ಯರ ಉತ್ಪ್ರೇಕ್ಷೆ : ಕವಿಯ ವಿಶಿಷ್ಟವಾದ ವೀಕ್ಷಾಗತಿ ; ಪರಿಪ್ರೇಕ್ಷೆ (Perspective) ಉತ್ - ಪ್ರೇಕ್ಷೆ. ಸಂಭಾವನಾಜ್ಞಾನ; ಧರ್ಮಯೋಗ. ಈ ಉತ್ಪ್ರೇಕ್ಷೆಯಲ್ಲಿದ್ದ ಕವಿಯ ಹೃದಯಾನುರಾಗ; ಭಾವಯೋಗ.

ಮಿರ್ಜಿಯವರ ಸಣ್ಣಕಥೆಗಳ ಸ್ವರೂಪ

ಡಾ. ಶ್ರೀಕಂಠ ಕೂಡಿಗೆ

೧

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮಿರ್ಜಿ ಅಣ್ಣಾರಾಯರನ್ನು ಪ್ರಮುಖ ಕಾದಂಬರಿಕಾರರೆಂದು ಗುರುತಿಸುವ ಹಾಗೆ ಸಣ್ಣಕಥೆಗಾರರೆಂದು ಗುರುತಿಸುವುದು ಕಷ್ಟ. ಪ್ರಾಯಶಃ 'ನಿಸರ್ಗ'ದಂತಹ ಶ್ರೇಷ್ಠ ಕಾದಂಬರಿ ಯಶಸ್ಸಿನ ನಡುವೆ ಅವರ ಸಣ್ಣ ಕಥೆಗಳು ವಿಮರ್ಶಾಲೋಕಕ್ಕೆ ಮುಖ್ಯವಾಗಿ ತೋರಲಿಲ್ಲವೆಂದು ಅನಿಸುತ್ತದೆ. ಸಣ್ಣ ಕಥೆಗಳ ಮಾತಂತಿರಲಿ, ಅವರವೇ ಆದ 'ರಾಮಣ್ಣ ಮಾಸ್ತರು', 'ಅಶೋಕ ಚಕ್ರ', 'ಹದಗೆಟ್ಟ ಹಳ್ಳಿ' ಕಾದಂಬರಿಗಳು 'ನಿಸರ್ಗ'ದ ಸೃಷ್ಟಿಶೀಲ ಪ್ರೋಜ್ವಲತೆಯ ಎದುರು ಮಂಕಾಗಿ ತೋರಿದುವು. ಒಬ್ಬ ಲೇಖಕನಿಂದ ಶ್ರೇಷ್ಠಕೃತಿಯೊಂದು ಬಂದೊಡನೆ ಆತನ ಉಳಿದ ಕೃತಿಗಳ ಕಡೆಗೆ ವಿಮರ್ಶಕರ ಲಕ್ಷ್ಯ ಹೇಗೆ ಗೌಣವಾಗುತ್ತದೆಂಬುದಕ್ಕೆ ಮಿರ್ಜಿ ಅಣ್ಣಾರಾಯರ ಸಣ್ಣ ಕಥಾ ಸಾಹಿತ್ಯ ಉದಾಹರಣೆಯಾಗಿದೆ.

ಈವರೆಗೆ ಮಿರ್ಜಿಯವರ ಮೂರು ಕಥಾ ಸಂಕಲನಗಳು ಪ್ರಕಟಗೊಂಡಿವೆ. ೧. ಪ್ರಣಯ ಸಮಾಧಿ (೧೯೪೯), ೨. ವಿಜಯಶ್ರೀ (೧೯೫೦) ಮತ್ತು ೩. ಅಮರಕಥೆಗಳು (೧೯೫೯). ಈ ಸಂಕಲನಗಳಲ್ಲಿನ ಕಥೆಗಳಲ್ಲದೆ 'ಜಯಂತಿ' ಮತ್ತು 'ಸನ್ಮತಿ' ಪತ್ರಿಕೆಗಳಲ್ಲಿ ಅವರು ಕಥೆಗಳನ್ನು ಬರೆದು ಪ್ರಕಟಿಸಿದ್ದರೆಂಬುದು ತಿಳಿದುಬರುತ್ತದೆ. 'ಕನ್ನೆಯರು' ಎಂಬ ಹೆಸರಿನ ಅವರ ಆಯ್ದ ಕಥೆಗಳ ಸಂಕಲನವೊಂದು ಅರೆಮುದ್ರಿತವಾಗಿ ಉಳಿದಿರುವುದನ್ನು ಪ್ರೊ.ಎಚ್.ವಿ.ನಾಗೇಶ್ ಅವರು ಓದುಗರ ಗಮನಕ್ಕೆ ತಂದಿದ್ದಾರೆ. ಅವರು ಹೀಗೆ ಬರೆಯುತ್ತಾರೆ. ''ಆ ಹೆಸರಿನ ಒಂದು ಕಥೆ ೧೯೬೫ರಲ್ಲಿ 'ಶೇಡಬಾಳದ ಶತಮಾನ' ಸ್ಮಾರಕ ಸಂಪುಟದಲ್ಲಿ ಪ್ರಕಟವಾಯಿತು. ಈ ನಡುವೆ ಪ್ರಾತಿನಿಧಿಕವೆನ್ನಬಹುದಾದ ಅವರ ಸಣ್ಣ ಕಥೆಗಳನ್ನು

ಯಾರೋ ಅಚ್ಚು ಹಾಕಿಸುವ ಪ್ರಯತ್ನ ಮಾಡಿ ಸೋತಂತೆ ಕಾಣುತ್ತದೆ. 'ನಮ್ಮೂರ ನಾಯಕರು' ಕಥೆಯಿಂದ ಪ್ರಾರಂಭವಾಗುವ ಎಂಟು ಕಥೆಗಳ ಒಂದು ಸಂಕಲನದ ೧೧೦ ಮುದ್ರಿತ ಪುಟಗಳ ಒಂದೇ ಒಂದು ಕಂತೆ ಅಣ್ಣಾರಾಯರ ಮನೆಯಲ್ಲಿ ದೊರೆತಿದೆ. ಪ್ರಕಟಿತ ಗ್ರಂಥಕ್ಕೆ ಬೇಕಾದ ಯಾವ ಪರಿಕರಗಳೂ ಅಲ್ಲಿ ಸಿಗಲಿಲ್ಲ. 'ಅಮರ ಕಥೆಗಳು' (೧೯೫೫) ಸಂಕಲನದಲ್ಲಿ ಸೇರಿದ ಕಥೆಗಳು ಅಲ್ಲಿ ಇಲ್ಲದೇ ಇರುವುದರಿಂದ ಹಾಗೂ ೧೯೫೪ರಲ್ಲಿ 'ಜಯಂತಿ' ಪತ್ರಿಕೆಯಲ್ಲಿ ಪ್ರಕಟವಾದ 'ಸೇಡು' ಎಂಬ ಕಥೆ ಸೇರಿಕೊಂಡಿರುವುದರಿಂದ ಈ ಪ್ರಯತ್ನ ೧೯೫೪-೧೯೫೫ರಲ್ಲಿ ಆಗಿರಬೇಕು [1]. ಅಪ್ರಕಟಿತ ಆಯ್ದ ಕಥೆಗಳ ಸಂಕಲನ ನನಗೆ ಲಭ್ಯವಾಗದ ಕಾರಣ ಅಲ್ಲಿನ ಕಥೆಗಳನ್ನು ಪರಿಶೀಲನೆಗೆ ಎತ್ತಿಕೊಂಡಿಲ್ಲ. ಪ್ರಕಟಿತ ಮೂರು ಸಂಕಲನಗಳ ಮುಖ್ಯ ಕಥೆಗಳನ್ನು ಮಾತ್ರ ಸ್ವರೂಪ ಮತ್ತು ಆಶಯಗಳ ಹಿನ್ನೆಲೆಯಲ್ಲಿ ಅವಲೋಕಿಸಲಾಗಿದೆ.

೨

ನವೋದಯ ಪರಂಪರೆಯ ಉಬ್ಬರ ಕಾಲದ ಆಸುಪಾಸಿನಲ್ಲಿ ಬಂದ ಕಥೆಗಳು ಇವಾಗಿದ್ದರೂ ಯಾವುದೇ ವಿದೇಶಿ ಪ್ರಭಾವಗಳಿಲ್ಲದ ದೇಶೀಯ ರಚನೆಗಳು. ಹುಟ್ಟು ಹಳ್ಳಿಗನ ಅನುಭವ ನಿವೇದನೆಯಂತಿದ್ದು ಅಭಿಜಾತ ಕಲೆಯ ಸರ್ವಲಕ್ಷಣಗಳು ಅವುಗಳಲ್ಲಿ ಕಾಣಸುತ್ತವೆ. ಮಿರ್ಜಿಯವರ ಕಾದಂಬರಿಗಳಲ್ಲಿ ಬಂದಿರುವ ಅಗಾಧ ಗ್ರಾಮೀಣ ಲೋಕದ ನೈಜಚಿತ್ರಗಳು ಅವರ ಸಣ್ಣ ಕಥೆಗಳಲ್ಲಿ ಸಂಗ್ರಹ ರೂಪ (Miniature)ದಲ್ಲಿ ಬಂದಿವೆ ಎಂದರೆ ತಪ್ಪಾಗಲಾರದು. ಸಣ್ಣ ಕಥೆಯ ಸಣ್ಣ ಕ್ಯಾನ್‌ವಾಸಿನಲ್ಲಿ ಮೂಡಿದ ಚಿತ್ರಗಳು ಬೃಹತ್ತಾಗಿ ಅವರ ಕಾದಂಬರಿಗಳಲ್ಲಿ ರೂಪುಪಡೆದಿವೆ. ಒಂದು ಬಗೆಯಲ್ಲಿ ಅವರ ಕಾದಂಬರಿಗಳ ಬರವಣಿಗೆಯ ಪೂರ್ವಸಿದ್ಧತೆ ಸಣ್ಣಕಥೆಗಳಲ್ಲಿ ಆಗಿರುವಂತಿದೆ. ಇದು ಪ್ರತ್ಯೇಕ ಅಧ್ಯಯನಕ್ಕೆ ಯೋಗ್ಯವಾದುದಾಗಿದೆ.

ದೈನಂದಿನ ಸರಳ ಹಾಗೂ ಸಣ್ಣ ಸಣ್ಣ ಘಟನೆಗಳಿಗೆ ಕಥೆಯ ರೂಪ ಕೊಡುವ ಪ್ರಯತ್ನವನ್ನು ಮಿರ್ಜಿಯವರು ಮಾಡುತ್ತಾರೆ. ಅಲ್ಲಿ ಯಾವ ಭಾವಾವೇಶವಾಗಲಿ, ಕೃತಕತೆಯಾಗಲಿ ಕಾಣಸುವುದಿಲ್ಲ. ಹಳ್ಳಿಯ ಬಾಳಿನ ಒಡನಾಟದಿಂದಲೇ ರೂಪು ಪಡೆದ ಅವರ ಕಥಾ ಸಾಹಿತ್ಯ ಆ ಬದುಕನ್ನು ವೈಭವೀಕರಿಸುವುದಿಲ್ಲ. ಬದಲಾಗಿ ಅಲ್ಲಿರುವ ಮಾನವೀಯತೆ, ಅನುಕಂಪ, ಔದಾರ್ಯದೊಂದಿಗೆ ವಂಚನೆ, ದಬ್ಬಾಳಿಕೆ, ಸಣ್ಣತನ, ಶೋಷಣೆಯ ಮುಖಗಳನ್ನು ಚಿತ್ರಿಸುತ್ತದೆ. ಹೀಗೆ ಬದುಕನ್ನು ಅದರ ವಾಸ್ತವ ಲಯದಲ್ಲಿ ಸೆರೆಹಿಡಿಯುವ ಯತ್ನ ಮಿರ್ಜಿಯವರ ಕಥೆಗಳಲ್ಲಿ ಕಾಣಸುತ್ತದೆ.

ಮೇಲಿನ ಮಾತುಗಳಿಗೆ ನಿದರ್ಶನವಾಗಿ ಅವರ 'ಪ್ರಣಯ ಸಮಾಧಿ', 'ಈರ ಯಾಕೆ ಹೋದ', 'ಕಲಿತಕಳ್ಳ', 'ಆ ಕಣ್ಣೀರು' ಕಥೆಗಳನ್ನು ಉಲ್ಲೇಖಿಸಬಹುದು. 'ಪ್ರಣಯ ಸಮಾಧಿ' ಪ್ರೇಮಕಥೆಗಳ ಸಾಲಿಗೆ ಸೇರಿದರೂ ಯೌವನಸ್ಥ ಹೆಣ್ಣೊಬ್ಬಳ ಅತೃಪ್ತ ಬಯಕೆ, ಮುಗ್ಧ ಹುಡುಗನೊಬ್ಬನ ನಿಷ್ಕ್ರಿಯತೆಯ ಮುಖಾಮುಖಿಯಲ್ಲಿ ಸೋಲುವುದನ್ನು ವಿವರಿಸುತ್ತದೆ. ಒಲ್ಲದ ಹುಡುಗನೊಂದಿಗೆ ವಿವಾಹವಾಗಿ ಅತೃಪ್ತ ಬಯಕೆಯ ಪೂರೈಕೆಗಾಗಿ ಕಿರಿಯ ವಯಸ್ಸಿನ ಪಕ್ಕದ ಮನೆಯ ಹುಡುಗನಲ್ಲಿ ಅನುರಕ್ತಳಾಗುವ ವಸ್ತು ಈ ಕಥೆಯದು. ತಾನು ಬಯಿಸಿದ ಹುಡುಗ ತನ್ನನ್ನು ಅಕ್ಕನೆಂದು ಕರೆದು ವಿಸ್ಮಯಗೊಳಿಸುವುದರಲ್ಲಿ ಕಥೆಯ ಮುಕ್ತಾಯದ ತಂತ್ರವಿದೆ. ಈ ದೃಷ್ಟಿಕೋನ ನವೋದಯ ಕಾಲದ ಕಥೆಗಾರರ ನೈತಿಕ ದೃಷ್ಟಿಕೋನಕ್ಕೆ ಸಂಬಂಧಿಸಿದ್ದು ಕುವೆಂಪು ಅವರ 'ನನ್ನ ದೇವರು' ಕಥೆಯ ಮುಕ್ತಾಯವನ್ನು ನೆನಪಿಗೆ ತರುವಂತಿದೆ.

ಸ್ವಾಭಿಮಾನಿ ಬಡವನೊಬ್ಬ ಶ್ರೀಮಂತನೊಬ್ಬನ ಬರಡು ಭೂಮಿಯನ್ನು ಹಸನುಮಾಡಿ ಬೆಳೆ ತೆಗೆದುಕೊಡುತ್ತಿದ್ದ. ಫಸಲು ನಾಶಮಾಡುತ್ತಿದ್ದ ಹಂದಿಕಾಟ, ಹೆಂಡತಿಯ ದುರಂತ ಸಾವಿನ ನಡುವೆಯೂ ಆತ ಪ್ರಾಮಾಣಿಕವಾಗಿ ಒಡೆಯನಿಗೆ ಸಲ್ಲಿಸಬೇಕಾಗಿದ್ದುದನ್ನು ಸಲ್ಲಿಸಿದ ಮೇಲೂ ಬಾವಿಯಲ್ಲಿ ಕೆಸರು ತೆಗಿಸಿದ್ದೇಕೆಂಬ ಕುಂಟು ನೆವ ತೆಗೆದು ಅವಮಾನಗೊಳಿಸಿದ್ದು

---

1. 'ಪುನರಾವಲೋಕನ' (ವಿಮರ್ಶಾ ಲೇಖನಗಳು), ಎಚ್.ವಿ. ನಾಗೇಶ್, 'ಮಿರ್ಜಿ ಅಣ್ಣಾರಾಯರ ಕಥೆಗಳು : ವಿನ್ಯಾಸ ಮತ್ತು ಕಾಳಜಿ', ಪುಟ ೯-೧೦, ೧೯೯೧.

'ಯಾಕೆ ಹೋದ' ಕಥೆಯ ಪ್ರಮುಖ ಅಂಶ. ಆತ ಊರು ಬಿಟ್ಟು ಹೋಗಿದ್ದಕ್ಕೆ ಕಥೆಯಲ್ಲಿ ಕಾರಣ ಸ್ಪಷ್ಟವಾಗಿ ನಿರೂಪಿತವಾಗದಿದ್ದರೂ ಭೂ ಮಾಲಿಕನ ಸಮಯ ಸಾಧಕತನ ಹಾಗೂ ಈರನ ಸ್ವಾಭಿಮಾನವನ್ನು ಒಟ್ಟಿಗೇ ಧ್ವನಿಸುವ ಉದ್ದೇಶ ಕಥೆಗಾರರಿಗೆ ಇರುವಂತಿದೆ. ವಿದ್ಯಾವಂತ ನಿರುದ್ಯೋಗಿಯೊಬ್ಬ ಜವಳಿ ಅಂಗಡಿಯೊಂದರಲ್ಲಿ ಲೆಕ್ಕ ಬರೆಯುವ ಕೆಲಸ ಮಾಡುತ್ತಿರುತ್ತಾನೆ. ತುಂಬು ಸಂಸಾರದ ನಿರ್ವಹಣೆಯ ಜವಾಬ್ದಾರಿಗೆ ಆತನಿಗೆ ಬರುವ ಹಣ ಸಾಕಾಗುವುದಿಲ್ಲ. ಕಾಯಿಲೆ ಮಲಗಿದ ತಾಯಿಯ ಚಳಿಯನ್ನು ನಿವಾರಿಸುವ ಸಲುವಾಗಿ ತಾನು ಕೆಲಸ ಮಾಡುವ ಜವಳಿ ಅಂಗಡಿಯೊಂದರಿಂದ ರಗ್ಗೊಂದನ್ನು ಕದಿಯುವ ಕೃತ್ಯ ಮಾಡುವುದು 'ಕಲಿತ ಕಳ್ಳ' ಕಥೆಯಲ್ಲಿದೆ. ಕದಿಯುವ ಪ್ರವೃತ್ತಿ ಅವನದಾಗದಿದ್ದರೂ ಅಂತಃಕರಣದ ಒತ್ತಡ ಹೀಗೆ ಮಾಡಿಸಿತು, ಆದರೂ ಜನರು ನಂಬಲಿಲ್ಲ ಎನ್ನುವ ಅನುಕಂಪ ಪೂರಿತ ಧೋರಣೆ ಕಥೆಯ ಕೇಂದ್ರ ಆಶಯವಾಗಿದೆ. ಮಿರ್ಜಿಯವರ ಈ ಬಗೆಯ ಅನುಕಂಪಪೂರಿತ ಧೋರಣೆ ಹಾಗೂ ಓದುಗನ ಅಂತಃಕರಣವನ್ನು ದ್ರವಿಸುವಂತೆ ಮಾಡುವ ಗುಣ 'ಆ ಕಣ್ಣೀರು', 'ಬೀರನ ಬಾವಿ', 'ಎಂತಹ ಕಂಟ್ರೋಲು' ಮುಂತಾದ ಕಥೆಯಲ್ಲಿವೆ. ಹೀಗೆ 'ಅಂತಃಕರಣ ದ್ರವಿಸುವ ಗುಣ' ಕಥೆಗಳ ಶಕ್ತಿಯಾಗಿರುವಂತೆ ದೌರ್ಬಲ್ಯವೂ ಆಗಿರುವುದನ್ನು ಗಮನಿಸುವುದು ಅಗತ್ಯ.

ಸ್ವಾತಂತ್ರ್ಯ ಹೋರಾಟದ ಅನುಭವಗಳಿಗೆ ಅಣ್ಣಾರಾಯರ ಕಥೆಗಳು ಸ್ಪಂದಿಸಿವೆ. ೧೯೨೪ರಲ್ಲಿ ಗಾಂಧೀಜಿಯವರು ಬೆಳಗಾವಿ ಕಾಂಗ್ರೆಸ್ ಅಧಿವೇಶನಕ್ಕೆ ಬಂದದ್ದಾಗಲಿ, ಸ್ವಾತಂತ್ರ್ಯಹೋರಾಟದ ಒಳ ಹೊರಗನ್ನು ಕಥೆಗಾರರು ಅನುಭವಿಸಿ ಬರೆದದ್ದಾಗಲಿ ಕಲ್ಪಿತ ಅನುಭವವಾಗಿ ಅವರ ಕಥೆಗಳಲ್ಲಿ ಉಳಿದಿಲ್ಲ. ಅವು ಸ್ವಾತಂತ್ರ್ಯ ಹೋರಾಟದ ಒತ್ತಾಸೆಯ ಚಿತ್ರಗಳಾಗಿ ಮೂಡಿವೆ. ಮಿರ್ಜಿಯವರ ಕಥೆ, ಕಾದಂಬರಿಗಳು ಸೇರಿದಂತೆ ಒಟ್ಟಾರೆಯಾಗಿ ಆ ಕಾಲದ ಕಥಾ ಸಾಹಿತ್ಯದಲ್ಲಿ ಒಡಮೂಡಿದ ಸ್ವಾತಂತ್ರ್ಯದ ಆಸಕ್ತಿಯ ನೆಲೆಗಳನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡಲು ಸಾಧ್ಯವಿದೆ. ಮಿರ್ಜಿಯವರ ಪ್ರಸ್ತುತ ಸಂಕಲನದ ಕಥೆಗಳಿಗೆ ಸೀಮಿತ ಮಾಡಿಕೊಂಡು ಆಲೋಚಿಸುವುದಾದರೆ 'ಸೂರಸಿಂಗ', 'ವಿಜಯಶ್ರೀ', 'ದ್ರೋಹ' ಸ್ವಾತಂತ್ರ್ಯ ಹೋರಾಟದ ಬೇರೆ ಬೇರೆ ವಿನ್ಯಾಸವನ್ನೊಳಗೊಂಡ ಕಥೆಗಳಾಗಿವೆ.

'ಸೂರಸಿಂಗ' ಬ್ರಿಟಿಷರ ಮಿತ್ರಪಕ್ಷದಲ್ಲಿದ್ದರೂ ದೇಶಪ್ರೇಮಿ. ಸ್ವದೇಶದ ಜನತೆಯ ಮೇಲೆ ತನ್ನ ಹೋರಾಟ ಸಲ್ಲದೆಂದು ಭಾವಿಸಿ ಪ್ರತೀಕಾರ ಮಾಡಲು ನಿರ್ಧರಿಸುವನು. 'ವಿಜಯಶ್ರೀ'ಯ ಕಥಾನಾಯಕ ಯುದ್ಧಭೂಮಿಯಲ್ಲಿ ಭಾಗವಹಿಸದಿದ್ದರೂ ಶಾಲಾಮಾಸ್ತರನಾಗಿದ್ದುಕೊಂಡು ಭೂಗತ ಸ್ವಾತಂತ್ರ್ಯ ಹೋರಾಟಗಾರರಿಗೆ ನೆರವಾಗುವವನು. 'ದ್ರೋಹ' ಕಥೆಯ ಕಥಾನಾಯಕರಿಬ್ಬರು ಪರಸ್ಪರ ಸ್ನೇಹಿತರಾಗಿದ್ದು ಹೆಣ್ಣೊಬ್ಬಳ ಪ್ರೇಮದಲ್ಲಿ ಸಂಶಯಚಿತ್ತರಾಗಿ ದ್ರೋಹವೆಸಗಿಕೊಳ್ಳುವ ಆದರ ಸ್ವಾತಂತ್ರ್ಯಹೋರಾಟ ಹಿನ್ನೆಲೆಯಲ್ಲಿರುವ ಕಥೆ. ಈ ಮೂರು ಸಣ್ಣ ಕಥೆಗಳ ಕೇಂದ್ರ ಆಶಯ, ಭಾರತಕ್ಕೆ ಸ್ವಾತಂತ್ರ್ಯ ತಂದುಕೊಡುವ ಹಂಬಲಕ್ಕೆ ಸಂಬಂಧಿಸಿದ್ದಾಗಿದೆ. ಹಾಗಾಗಿ 'ಸೂರಸಿಂಗ' ಪ್ರತಿಸರಕಾರದ ಹಂಬಲಿಕೆಯನ್ನುಳ್ಳವನಾದರೆ, ವಿಜಯಶ್ರೀಯ ಸ್ಕೂಲುಮಾಸ್ತರರು ಪರೋಕ್ಷವಾಗಿ ಹೋರಾಟಕ್ಕೆ ಸಹಕರಿಸುವವರು. 'ದ್ರೋಹ' ಕಥೆಯಲ್ಲಿ ದೇಶಪ್ರೇಮಿ ಸ್ನೇಹಿತನನ್ನು ಪ್ರೀತಿಯ ಕಾರಣ ಕೊಲ್ಲುವ ದೇಶದ್ರೋಹಿ. ಸಬ್‌ಇನ್ಸ್‌ಪೆಕ್ಟರ ಚಿತ್ರವಿದೆ. ತನ್ನ ತಪ್ಪಿನ ಅರಿವಾಗಿ ಆತ ತನ್ನನ್ನೇ ಗುಂಡಿಟ್ಟು ಕೊಲ್ಲುವ ಯತ್ನದಲ್ಲಿ ದೇಶಪ್ರೇಮ ಮತ್ತು ಭಾರತದ ಸ್ವರಾಜ್ಯ ಸಂಘರ್ಷ ಪ್ರಶ್ನಾತೀತವಾದುದು ಎಂಬ ನಿಲುವು ಪ್ರತಿಪಾದಿತವಾಗಿದೆ.

ಮಿರ್ಜಿ ಅಣ್ಣಾರಾಯರ ಕಥೆಗಳಲ್ಲಿ ಶಾಲಾಮಾಸ್ತರರು ಪ್ರಮುಖ ಪಾತ್ರವಾಗಿ ಕಾಣಿಸಿಕೊಳ್ಳುತ್ತಾರೆ. ಆತ ಸುಧಾರಣೆಯ ಪ್ರತಿನಿಧಿಯಾಗಿ, ಜೀತದ ಶೋಷಣೆಯ ವಿರೋಧದ ಧ್ವನಿಯಾಗಿ ಕೆಲಸ ಮಾಡುತ್ತಾನೆ. ಹೃದಯವಂತಿಕೆ ಹಾಗೂ ಮಾನವತೆಯ ಪರ ಗಟ್ಟಿದನಿಯಾಗಿ ನಿಲ್ಲುವುದು ಲೇಖಕರ ನೈತಿಕ ಜವಾಬ್ದಾರಿ, ವೈಚಾರಿಕ ಪ್ರೀತಿಯ ಸಂಕೇತ ಸ್ವರೂಪದ್ದಾಗಿದೆ. ಸ್ವಾತಂತ್ರ್ಯ ಭಾರತದಲ್ಲೂ ಭೂಹೀನ ರೈತರ ಗುಲಾಮಗಿರಿ ಯಥಾಸ್ಥಿತಿಯಲ್ಲಿ ಮುಂದುವರಿಯುತ್ತಿರುವ ಫ್ಯೂಡಲ್ ವ್ಯವಸ್ಥೆ ಹಾಗೂ ಜೀತ ಪದ್ಧತಿಯ ಹಿನ್ನೆಲೆಗಿರುವ ಸೂಕ್ಷ್ಮಗಳನ್ನು ಕ್ರಮವಾಗಿ 'ಬಂಧನದಲ್ಲಿ' ಹಾಗೂ 'ನಮ್ಮೂರ ನಾಯಕರು' ಕಥೆಗಳು ಅನಾವರಣಗೊಳಿಸುತ್ತವೆ. ಗ್ರಾಮೀಣ ಬದುಕು ನಾವು ಅಂದುಕೊಂಡಂತೆ ಸರಳ ವ್ಯಾಖ್ಯೆಗೆ ಸಿಗುವಂಥದ್ದಲ್ಲ. ಅದರಲ್ಲಿ

ಶೋಷಣೆಯ ಸೂಕ್ಷ್ಮ ಎಳೆಗಳಿವೆ. ಜಮೀನ್ದಾರಿ ಉದಾತ್ತತೆ ಗಾಂಧಿ ಮಾರ್ಗದ ಆದರ್ಶದೊಳಗೆ ಒಳಗಿನ ಸರ್ವಾಧಿಕಾರತ್ವವನ್ನು ಉಳಿಸಿಕೊಂಡಿರುವ ಬಗೆ ಈ ಕಥೆಗಳಲ್ಲಿ ವ್ಯಕ್ತಗೊಂಡಿದೆ. 'ಬೀರನ ಬಾವಿ' ಕಥೆಯೂ ಇಂಥದೇ ಶೋಷಣೆಯ ವಸ್ತುವನ್ನುಳ್ಳದ್ದಾಗಿದೆ. ದಾವಲ ಎನ್ನುವನ ಐದು ಎಕರೆ ಹೊಲ ಪಡೆದು ಬಾವಿ ತೋಡಿ ಅದರಲ್ಲಿ ಹೆಚ್ಚು ಫಸಲು ಬೆಳೆಯಬೇಕು ಎನ್ನುವ ಬೀರನ ಕನಸಿಗೆ, ಸ್ವಾರ್ಥಿ ಪಂಥ ಮಾಡಿದ ಮೋಸ ಈ ಕಥೆಯಲ್ಲಿದೆ.

ಸ್ವಚ್ಛಂದತೆ ಹಾಗೂ ನೈತಿಕಮೌಲ್ಯಗಳ ಪತನ ಕುಟುಂಬಗಳ ನಡುವೆ ಆಗಿರುವಂತೆ ಸ್ವಾತಂತ್ರ್ಯ ಭಾರತದಲ್ಲೂ ಆಗಿದೆ ಎಂಬ ವಿಷಾದದ ಭಾವನೆಯನ್ನು ಧ್ವನಿಸುವ ಕಥೆ 'ಮಾತುಕತೆ'. ಕೂಡು ಕುಟುಂಬದ ಸಿದ್ದಪ್ಪ ನಿರ್ದಿಷ್ಟ ಮೌಲ್ಯಗಳ ಸಂರಕ್ಷಕನಾಗಿ ಗೌರವಯುತ ಬಾಳ್ವೆ ನಡೆಸುತ್ತಿದ್ದರೂ ಆತನ ಕಿರಿಯ ಸೊಸೆ ಸ್ವೇಚ್ಛೆಯಾಗಿ ಅನೈತಿಕ ಸಂಬಂಧವನ್ನು ಬೆಳೆಸುತ್ತಾಳೆ. ಎರಡು ತಲೆ ಮಾರುಗಳ ಮೌಲ್ಯ ಸಂಘರ್ಷದಲ್ಲಿ ಅವಮಾನಿತನಾಗುವ ಸಿದ್ದಪ್ಪ ಆತ್ಮಹತ್ಯೆ ಮಾಡಿಕೊಳ್ಳುವ ಕ್ರಿಯೆಯ ಹಿಂದೆ ಹಳೆಯ ಮೌಲ್ಯವೊಂದು ಹಿಂದೆ ಸರಿಯುತ್ತಿರುವುದರ ಸೂಚನೆ ಇದೆ. ವ್ಯಕ್ತಿಗತ ಮೌಲ್ಯಪತನವನ್ನು ರಾಷ್ಟ್ರೀಯ ಮೌಲ್ಯಪತನದ ವ್ಯಾಪ್ತಿಗೆ ತರುವ ಉದ್ದೇಶ ಲೇಖಕರಿಗೆ ಇರುವಂತಿದೆ. ಒಟ್ಟಾರೆ ನೈತಿಕ ಮೌಲ್ಯಗಳ ಸಂರಕ್ಷಣೆಯ ಅವಶ್ಯಕತೆಯನ್ನು ಈ ಕಥೆ ಪ್ರತಿಪಾದಿಸುತ್ತದೆ.

ಹಳ್ಳಿಯ ಬಾಳಿನ ವಾಸ್ತವಗಳನ್ನು ಪ್ರಾದೇಶಿಕ ವೈಶಿಷ್ಟ್ಯಗಳೊಂದಿಗೆ ಹೇಳುವ ಕಥೆಗಳು ಇವಾಗಿವೆ. ಮಾನವ ಸಮಾನತೆಯ ಕಡೆಗೆ ಕಥೆಗಳು ಒತ್ತುಕೊಡುವಂತೆ ಮಾನವೀಯತೆಯ ಸೆಲೆ ಬತ್ತಿ ಹೋಗದಂತೆ ಕಾಪಾಡಿಕೊಳ್ಳಬೇಕೆನ್ನುವ ಸದಾಶಯಗಳನ್ನು ಇವು ಧ್ವನಿಸುತ್ತವೆ. ಯಾವುದೇ ತಾಂತ್ರಿಕ ಕ್ಲಿಷ್ಟತೆಯನ್ನು ಆಹ್ವಾನಿಸಿಕೊಳ್ಳದೆ ಸರಳವಾಗಿ ನಿರೂಪಣೆಗೊಳ್ಳುತ್ತವೆ. ಈ ಬಗೆಯ ಸರಳತೆ ಸಾಹಿತ್ಯ ಅಭಿವ್ಯಕ್ತಿಯ ಸರ್ವೋತ್ಕೃಷ್ಟ ವಿಧಾನವೆಂದು ಹೇಳಲು ಬರುವುದಿಲ್ಲವಾದರೂ ಮಿರ್ಜಿಯವರ ಅನುಭವ ಹಾಗೂ ಅದರ ನಿರೂಪಣೆಯಲ್ಲಿ ವಿಶಿಷ್ಟವಾದುವು. ಆಶಯ ಹಾಗೂ ಧೋರಣೆಯ ದೃಷ್ಟಿಯಿಂದ 'ನಮ್ಮೂರ ನಾಯಕರು', 'ಸೂರಸಿಂಗ', 'ಮಾತುಕತೆ', 'ಬೀರನ ಬಾವಿ' ಒಳ್ಳೆಯ ಕಥೆಗಳು.

ಜಮೀನ್ದಾರಿ ದಬ್ಬಾಳಿಕೆ, ಮೋಸ, ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯ ವಸ್ತುವೇ ಕಥೆಗಳ ಕೇಂದ್ರಬಿಂದುವಾಗಿ ಇವರ ಕಥೆಗಳಲ್ಲಿ ವೈವಿಧ್ಯತೆಯ ಕೊರತೆ ಕಾಣಿಸುತ್ತದೆ. 'ಪ್ರಣಯ ಸಮಾಧಿ', 'ದ್ರೋಹ' ಮುಂತಾದ ಕಥೆಗಳ ಮೆಲೊಡ್ರಾಮಿಕ್ ಸನ್ನಿವೇಶಗಳು ಕಥೆಗಳ ವಾಸ್ತವಿಕತೆಗೆ ಭಂಗ ತರುವಂತಿವೆ. ಕೆಲವೊಮ್ಮೆ ತಾವು ಒಪ್ಪುವ ರಾಷ್ಟ್ರೀಯ ಹಿತದೃಷ್ಟಿಯನ್ನು ಲೇಖಕರು ಬೀರನಂಥ ಸಾಮಾನ್ಯ ಪಾತ್ರಗಳ ಮೇಲೆ ('ಬೀರನ ಬಾವಿ' - ಕಥೆ) ಒತ್ತಾಯದಿಂದ ಹಾಕಿ ಬಿಡುವಂತೆ ಕಾಣಿಸುತ್ತದೆ.

ಮಾನವ ಜೀವನದ ಮಹೋನ್ನತಿಯನ್ನು ರೂಪಿಸುವುದು ಮಿರ್ಜಿ ಅಣ್ಣಾರಾಯರ 'ಅಮರ ಕಥೆಗಳು' ಸಂಕಲನದ ಉದ್ದೇಶವಾಗಿದೆ. ಇದರಲ್ಲಿನ ಹತ್ತು ಕಥೆಗಳು ಮೇಲೆ ಚರ್ಚಿಸಿದ ಕಥೆಗಳಿಗಿಂತ ವಸ್ತು ಮತ್ತು ಉದ್ದೇಶದಲ್ಲಿ ಭಿನ್ನವಾದುವು. ಹಾಗೆ ನೋಡಿದರೆ ಇವುಗಳನ್ನು ಸಣ್ಣಕಥೆಗಳೆಂದು ಕರೆಯುವುದು ಕಷ್ಟವೇ. ಹೆಚ್ಚಿನವು ಜೈನ ಪ್ರಾಚೀನ ಆಗಮದ ಕಥೆಗಳಾಗಿವೆ. ಬೋಧಪರವಾದ ಈ ಕಥೆಗಳು ಧಾರ್ಮಿಕ ಉಪನ್ಯಾಸಗಳಂತೆ ಕಾಣಿಸುತ್ತವೆ. ಇವುಗಳಿಗೆ ಇವುಗಳದ್ದೇ ಆದ ಉದ್ದೇಶವಿರುವಂತಿದೆ.

ಮಿರ್ಜಿ ಅಣ್ಣಾರಾಯರ ಕಥೆಗಳಿಗೆ ಅವು ಹುಟ್ಟಬಂದ ಕಾಲದ, ಪರಿಸರದ ಮಿತಿ ಇದೆಯಾದರೂ ಅವುಗಳನ್ನು ಆಧುನಿಕ ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳೆಂದು ಕರೆಯುವುದು ಕಷ್ಟ. ಮಿರ್ಜಿಯವರ ಕೊಡುಗೆ ಅವರ ಸಣ್ಣಕಥೆಗಳಿಗಿಂತ ಕಾದಂಬರಿ ಕ್ಷೇತ್ರಕ್ಕೆ ದೊಡ್ಡದು ಎನಿಸುತ್ತದೆ.

ಬಸವಪ್ಪ ಶಾಸ್ತ್ರಿಗಳ ಕೃತಿಗಳ ಸಾಹಿತ್ಯಕ ಮೌಲ್ಯಗಳು

ಡಾ|| ಸಿ.ಪಿ. ಕೃಷ್ಣ ಕುಮಾರ್

೧

ಪ್ರಾಚೀನ ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದಂತೆ, ಶುದ್ಧ ಸಾಹಿತ್ಯಕ ಮೌಲ್ಯಗಳು ಎರಡು : ಪ್ರತಿಭೆ ಮತ್ತು ಪಾಂಡಿತ್ಯ. (ಹಳೆಯ ಸಾಹಿತ್ಯದ ವ್ಯಾಪ್ತಿ ಹತ್ತೊಂಬತ್ತನೆಯ ಶತಮಾನದವರೆಗೂ ಉಂಟು). ಈ ದೃಷ್ಟಿಯಿಂದ ನಮ್ಮ ಕವಿಗಳನ್ನು ಮೂರು ವರ್ಗ ಮಾಡಬಹುದೆಂದು ತೋರುತ್ತದೆ : ಪ್ರತಿಭೆ, ಪಾಂಡಿತ್ಯಗಳ ಸಮನ್ವಯವನ್ನುಳ್ಳ ಪಂಪ, ರನ್ನ, ಹರಿಹರ, ರಾಘವಾಂಕ, ಕುಮಾರವ್ಯಾಸರಂಥ ಕವಿಗಳದು ಒಂದು ; ರುದ್ರಭಟ್ಟ, ಷಡಕ್ಷರಿಯಂತಹ ಪಾಂಡಿತ್ಯ ಪ್ರಧಾನ ಕವಿಗಳದು ಇನ್ನೊಂದು; ಪ್ರತಿಭೆ , ಪಾಂಡಿತ್ಯ ಎರಡರ ಅಭಾವಕ್ಕೂ ನಿದರ್ಶನವಾಗುವಂಥವರದು ಮಗುದೊಂದು. ಬಸವಪ್ಪ ಶಾಸ್ತ್ರಿಗಳು ಬಹುಮಟ್ಟಿಗೆ ಎರಡನೆಯದಕ್ಕೆ ಸೇರುತ್ತಾರೆ. ಅವರಲ್ಲಿ ಪ್ರಕಾಂಡ ಪಾಂಡಿತ್ಯವಿದೆ ; ಪ್ರೌಢಿಮೆಯಿದೆ; ಗಾಢ ವಿಶಾಲ ವ್ಯುತ್ಪತ್ತಿಯಿದೆ. ಇದೆಲ್ಲ ನಮ್ಮನ್ನು ಬೆರಗುಗೊಳಿಸುತ್ತದೆ. ಶಾಸ್ತ್ರಿಗಳಲ್ಲಿ ಪ್ರತಿಭೆ ಇಲ್ಲವೆಂದಲ್ಲ; ಆದರೆ ಅದು ಅವರ ವಿದ್ವತ್ತಿನಷ್ಟು ಎತ್ತರದ್ದಲ್ಲ ಎಂಬುದಷ್ಟೆ ಅತೃಪ್ತಿಯ ಸಂಗತಿ. ಅವರನ್ನು ಸರಸ ಕವಿ ಎಂದು ಕರೆಯುವುದು ಕಷ್ಟ. ಷಡಕ್ಷರಿಯಂತೆ ಅವರು ವಿಶೇಷವಾಗಿ ಪಂಡಿತ ಕವಿ ; ಅವರದು ಮುಖ್ಯವಾಗಿ ವಿದ್ವತ್ಕವಿತೆ. (ಷಡಕ್ಷರಿಯ ಬಗೆಗೆ ಶಾಸ್ತ್ರಿಗಳಿಗೆ ಬಹಳ ಗೌರವ, ಮೆಚ್ಚುಗೆ ಎಂಬುದನ್ನು ಗಮನಿಸಬೇಕು). ಪ್ರತಿಭಾ ವಿಲಾಸ ಅವರ ಕೃತಿಗಳಲ್ಲಿ ಅನುಸ್ಯೂತವಾಗಿ ಗೋಚರಿಸುವುದಿಲ್ಲ ಎಂದರೆ ಅವರಿಗೆ ಅಗೌರವ ಸೂಚಿಸಿದಂತಾಗುವುದಿಲ್ಲ. ಶಾಸ್ತ್ರಿಗಳ ಘನ ವೈದುಷ್ಯ - ಅದರಲ್ಲೂ ಹತ್ತೊಂಬತ್ತನೆಯ ಶತಮಾನದಲ್ಲಿ ಆರ್ಜಿಸಿದ್ದು -

ಗೌರವಾಸ್ಪದವೇ ಸರಿ. ಆದರೆ ನಮ್ಮ ಸಾಹಿತ್ಯ ಪರಂಪರೆಯನ್ನು ಕುರಿತು ಮಾತನಾಡುವಾಗ, ಪಂಪನಂಥ ಕವಿಗಳು ಅದರಲ್ಲಿ ಪ್ರಮುಖರಾಗುತ್ತಾರೆ, ಪ್ರಮಾಣವಾಗಿ ನಿಲ್ಲುತ್ತಾರೆ ಎಂಬುದನ್ನು ಮರೆಯಬಾರದು. ಶಾಸ್ತ್ರಿಗಳು ಆದರ್ಶವಾಗಿಟ್ಟುಕೊಂಡುದು ಪಂಪನನ್ನಲ್ಲ, ಷಡಕ್ಷರದೇವನನ್ನು ಎಂಬುದು ದುರ್ದೈವ.

ಕನ್ನಡ ವಾಙ್ಮಯದಲ್ಲಿ ಬಸವಪ್ಪ ಶಾಸ್ತ್ರಿಗಳ ಸ್ಥಾನಮಾನಗಳನ್ನು ಕುರಿತು ಕುವೆಂಪು ಅವರ ಉಕ್ತಿ ಅರ್ಥವತ್ತಾಗಿದೆ : ''ಕನ್ನಡ ಸಾಹಿತ್ಯದ ನವೋದಯಕ್ಕೆ ಅಚಿರ ಪೂರ್ವದ ಉಷಃಕಾಲದಲ್ಲಿ ಅಥವಾ ಅರುಣೋದಯ ಸಮಯದಲ್ಲಿ, ಕನ್ನಡ ಸಾಹಿತ್ಯ ತನ್ನ ಏರುಂಜವ್ವನದ ವೈಭವದ ಔನ್ನತ್ಯದಿಂದ ಕ್ರಮೇಣ ಇಳಿಗಾಲಕ್ಕಿಳಿದು ಮರಣೋನ್ಮುಖವಾಗಿ ಏರುತ್ತಾ ಕೊನೆಯುಸಿರೆಳೆಯುತ್ತಿದೆಯೋ ಎಂಬಂತಿದ್ದ ದುರಂತ ಸಮಯದಲ್ಲಿ ಅದರ ಶ್ವಾಸಕೋಶಕ್ಕೆ ತಮ್ಮ ಆಮ್ಲಜನಕೋಪಮ ಅನಿಲವನ್ನೂದಿ ಪ್ರಾಣ ರಕ್ಷಣೆ ಮಾಡಿದ ಅಲ್ಪಸಂಖ್ಯೆಯ ಹಿರಿಯ ವ್ಯಕ್ತಿಗಳಲ್ಲಿ ಶ್ರೀ ಬಸವಪ್ಪ ಶಾಸ್ತ್ರಿಗಳೂ ಒಬ್ಬ ಅಗ್ರೇಸರ ಪಂಡಿತಮಾನ್ಯ ಸಾಹಿತಿಗಳಾಗಿದ್ದರು''[1] ಶಾಸ್ತ್ರಿಗಳು ಒಂದು ರೀತಿಯಲ್ಲಿ ಕನ್ನಡ ಸಾಹಿತ್ಯಕ್ಕೆ ಒದಗಿಸಿದ್ದು ಕೃತಕ ಉಸಿರಾಟವನ್ನು, ಅಂದಿಗೆ ಅದು ಅತ್ಯಗತ್ಯವಾಗಿ, ತುರ್ತಾಗಿ ಬೇಕಾಗಿತ್ತು. ಆದ್ದರಿಂದ ಶಾಸ್ತ್ರಿಗಳ ಕೃತಿಗಳಿಗೆ ಚಾರಿತ್ರಿಕ ಮಹತ್ತ್ವ, ಮೌಲ್ಯಗಳುಂಟು. ಅವರು ಕನ್ನಡ ನವೋದಯ ಹರಿಕಾರರಲ್ಲಿ ಒಬ್ಬರು. (ಅವರ ಅನುವಾದ ಕೃತಿಗಳನ್ನು ಅನುಲಕ್ಷಿಸಿದಾಗ ಈ ಮಾತು ಮತ್ತೂ ಸತ್ಯವೆನಿಸುತ್ತದೆ). ಅವರಲ್ಲಿ ತಕ್ಕಮಟ್ಟಿಗೆ ಹಳತು - ಹೊಸತರ ಸಂಘರ್ಷವಿದೆ ; ಸಹಜ ಕವಿತೆಯ ಉತ್ಕರ್ಷ ಅಷ್ಟಾಗಿಲ್ಲದಿರಬಹುದು.

ಬಸವಪ್ಪ ಶಾಸ್ತ್ರಿಗಳು 'ದಮಯಂತೀ ಸ್ವಯಂವರ', 'ರೇಣುಕ ವಿಜಯ' (ಅಪೂರ್ಣ) ಎಂಬ ಎರಡು ಚಂಪೂ ಕಾವ್ಯಗಳನ್ನೂ 'ಸಾವಿತ್ರೀ ಚರಿತ್ರೆ' ಎಂಬ ಭಾಮಿನೀ ಷಟ್ಪದೀ ಕಾವ್ಯವನ್ನೂ ರಚಿಸಿದ್ದಾರೆ. ಅವರ ಚಂಪೂ ಕೃತಿಗಳು ಬಹು ಪ್ರೌಢವಾದ, ಬಹುತೇಕ ಪೆಡಸಾದ ರಚನೆಗಳು. ಶಾಸ್ತ್ರಿಗಳ ಹಿಂದೆ ಒಂದು ಸಾವಿರ ವರ್ಷಗಳ ಕನ್ನಡ ಸಾಹಿತ್ಯ ಪರಂಪರೆಯಿದೆ ; ಅದು ಭಾಗಶಃ ಚಂಪೂ ಪರಂಪರೆಯೂ ಹೌದು. ಅದರ ತುದಿಯಲ್ಲಿ ನಿಂತು, ಚಂಪೂ ಪ್ರಕಾರದಲ್ಲಿ ಹೆಚ್ಚಿನ ನಾವೀನ್ಯವನ್ನಾಗಲಿ ವೈಶಿಷ್ಟ್ಯವನ್ನಾಗಲಿ ಸಾಧಿಸುವುದು ಶಾಸ್ತ್ರಿಗಳಿಗೆ ಶಕ್ಯವಿರಲಿಲ್ಲ. ಅವರು ಕೃತಿ ರಚನೆ ಮಾಡುವ ಹೊತ್ತಿಗೆ ಚಂಪೂ ಸಾಹಿತ್ಯದ ಸಾಧ್ಯತೆಗಳೆಲ್ಲ ಮುಗಿದು ಹೋಗಿದ್ದುವು. (ಹಾಗೆ ನೋಡಿದರೆ, ಆದಿಕವಿ ಪಂಪನೆ ಅವುಗಳಲ್ಲಿ ಬಹಳಷ್ಟನ್ನು ಬರಿದು ಮಾಡಿದ್ದ!) ಸಾರ ತೀರಿ, ನಾರು ಮಾತ್ರ ಉಳಿದಿತ್ತು. ಸಾಹಿತ್ಯದಲ್ಲಿ ಯಾವಾಗಲೂ ರೂಪ, ತಿರುಳುಗಳ ನಡುವೆ ಅವಿನಾಭಾವ ಸಂಬಂಧವಿರುತ್ತದೆ. ಹಳೆಯ ರೂಪದಲ್ಲೆ ಹೊಸ ಸಂವೇದನೆಗಳನ್ನು ಅಭಿವ್ಯಕ್ತಿಸುವುದು ಸುಲಭವಲ್ಲ. ಹೀಗಾಗಿ, ಬಸವಪ್ಪ ಶಾಸ್ತ್ರಿಗಳ ಚಂಪೂ ಕಾವ್ಯಗಳು ಬಹುಮಟ್ಟಿಗೆ ಸವೆದ ಜಾಡಿನಲ್ಲೆ ಸಾಗುವ ಸಂಪ್ರದಾಯಬದ್ಧ ಬಂಧಗಳಾಗಿವೆ. ಅಷ್ಟೇ ಅಲ್ಲ, ಅವುಗಳ ಮೇಲೆ ಪೂರ್ವಕವಿ ಪ್ರಭಾವ ಅವಿರಳವಾಗಿ ಆಗಿದೆ ; ಸ್ವಾಭಾವಿಕವೇ.

'ಸಾವಿತ್ರೀ ಚರಿತ್ರೆ' ಸರಳ ಸುಂದರವಾದ ಕಾವ್ಯ. (ಷಟ್ಪದಿಯಲ್ಲಿ ಸರಳತೆ ಅನಿವಾರ್ಯವೂ ಹೌದು. ಹೆಣ್ಣುಮಕ್ಕಳಿಗಾಗಿ ಬರೆದದ್ದರಿಂದಷ್ಟೆ ಅದು ಸುಕರವಾಗಿಲ್ಲ). ಅದರಲ್ಲಿ ಮೇಲಾದ ಕಲ್ಪನಾಶಕ್ತಿ ಎಲ್ಲೆಡೆ ಕಾಣದಿದ್ದರೂ, ಸಹೃದಯರನ್ನು ಅದು ಸೆರೆಹಿಡಿಯಬಲ್ಲುದು. ನಿದರ್ಶನಕ್ಕೆ ಈ ಪದ್ಯದ ನಿರಾಭರಣ ಹೃದ್ಯತೆಯನ್ನು ಪರಿಭಾವಿಸಬಹುದು :

ಕೇಳು ಸತಿಯಾಯಾಸದಿಂ ತಲೆ
ಶೂಲೆ ಸಮನಿಸಿತಕ್ಕಟಾ ಕೈ
ಕಾಲು ಸೋತುವು ನಿಲ್ಲಲಾರೆನು ಹೃದಯದೊಳಗೆನಗೆ
ಹೇಳಲರಿಯದ ಘೋರ ಕಳವಳ
ಮೇಳವಿಸಿದುದು ಮಲಗಿಕೊಳುವೆನು
ತಾಳಲಾರೆನು ತಾಪವನು ತಾನೆಂದನಂಗನೆಗೆ

---

1. ಸಂಪಾದಕರಿಗೆ ಪತ್ರ, 'ಬಸವಪ್ಪಶಾಸ್ತ್ರಿಗಳ ಸಮಗ್ರ ಕೃತಿಗಳು', ಸಂ.ಎಂ.ಜಿ. ನಂಜುಂಡಾರಾಧ್ಯ, ಪು. ೩.

ಯಮನ ಈ ಚಿತ್ರ ಸ್ವಲ್ಪ ಮಟ್ಟಿಗೆ ಪರಿಣಾಮಕಾರಿಯಾಗಿದೆ :

ಧರಿಸಿ ಪಾಶಾಯುಧವ ಕರದೊಳ
ಗರುಣವಸ್ತ್ರವ ಹೊದೆದು ಮಣಿಭಾ
ಸುರ ಕಿರೀಟವ ತಳೆದು ಶಿರದೊಳು ಬೇಸಗೆಯೊಳುರಿವ
ತರಣಿಯಂದದಿ ಮೆರೆಯುತಲಿ ದುರ
ದುರನೆ ನೋಡುತ ಸತ್ಯವಾನನ
ಪೊರೆಯೊಳಿರ್ದಾ ಕಾಲನನು....

'ಬೇಸಗೆಯೊಳುರಿವ ತರಣಿ'ಯ ಹೋಲಿಕೆ ಚೆನ್ನಾಗಿದೆ. ಯಮ ಸೂರ್ಯಪುತ್ರ ಎಂಬುದನ್ನು ನೆನೆಯಬೇಕು. 'ದುರುದುರನೆ ನೋಡುತ' ಎಂಬ ದೇಸಿ ನುಡಿ ಕಸುವುಳ್ಳದ್ದು.

'ದಮಯಂತೀ ಸ್ವಯಂವರ', 'ರೇಣುಕ ವಿಜಯ'ಗಳ ಮುಂದಿನ ಪದ್ಯಗಳು ಹಳೆಯ ಮಾದರಿಯ ಸರಕನ್ನೇ ತುಂಬಿಕೊಂಡು ಹೇಗೆ ನಿರ್ವಿಶಿಷ್ಟವಾಗಿವೆಯೆಂಬುದನ್ನು ಉದಾಹರಣಾರ್ಥವಾಗಿ ಗಮನಿಸಬಹುದು :

ಮಲೆಯೆಂಬುದರಣ್ಯದೆ ಕಾ
ದಲೆಯೆಂಬುದು ಕೂರ್ತ ಮಡದಿಯೋಳ್ಕಲಿಯೆಂಬೊಂ
ದುಲಿಪಭ್ಯಾಸದೊಳಲ್ಲದೆ
ತಲೆದೋರದು ನಲನ ನಾಡೊಳೆನಲೇನೆಂಬೆಂ

ನಗೆಮೊಗಮಿಂದುವಂ ನಗೆ ಕುರುಳ್ಮುಗಿಲಂ ನಗೆ ಶಂಖಮಂ ಗಳಂ
ನಗೆ ನಯನದ್ವಯಂ ಕುಮುದಮಂ ನಗೆ ಪುರ್ವುಗಳಿಕ್ಷುಚಾಪಮಂ
ನಗೆ ತುಟಿ ತೊಂಡೆಯಂ ನಗೆ ಸುನಾಸಿಕೆ ಚಂಪಕ ಪುಷ್ಪ ಕೋಶಮಂ
ನಗುವಳಮರ್ತ್ಯಕಾಂತೆಯರುಮಂ ದಮಯಂತಿಯದೊಂದು ಚೆಲ್ವಿನಿಂ

ಹರನೃತ್ಯಾರಂಭ ಸಂರಂಭದೆ ಕೆದರ್ದ ಜಪಾಗುಚ್ಛಮೋ ಮೇಣ್ವಿಯತ್ಸಿಂ
ಧುರ ಶೀರ್ಷೋಪಾತ್ತ ಸಿಂಧೂರಮೊ ರವಿತುರಗಕ್ಷುಣ್ಣ ಪೂರ್ವೇತರೋರ್ವೀ
ಧರ ಶೋಣ ಗ್ರಾವ ರೇಣು ವ್ರಜಮೊ ಬಗೆಯೆ ರಾಜಾಗಮಾಬದ್ಧ ಶೋಭಾ
ಕರ ಮಾಣಿಕ್ಯಾವಳೀ ತೋರಣಮೋ ಎನೆ ಬೆಡಂಗಾಯ್ತು ಸಂಧ್ಯಾಂಶುಜಾಲಂ

ಪ್ರಾಚೀ ಮಾಣಿಕ್ಯ ತಾಟಂಕಮೊ ದಿವಸರಮಾಪಾಣಿ ಪಂಕೇಜವ್ಯಾ
ಕೋಚ ಸ್ವರ್ಣಾಬ್ಜಮೋ ಪುಷ್ಕರ ಮುರಹರ ಹಸ್ತಾಬ್ಜ ವಿನ್ಯಸ್ತ ಚಂಚ
ದ್ರೋಚಿ ಶ್ರೀ ಚಕ್ರಮೋ ಮೇಣ್ಮಲಯ ಶಿಖರಿ ಬಂಧೂಕಮೊ ಪೇಳಿಮೆಂಬಂ
ತಾಚಾಂತ ಧ್ವಾಂತ ವಾರಾಕರಮೆಸೆದುದಳುಂಬಂ ದಿನಾಧೀಶಬಿಂಬ

ವಿಳಸನ್ಮಲ್ಲೀಮತಲ್ಲೀ ಸುಮಧುರ ಮದಿರಾಪಾನ ಪೀನದ್ವಿರೇಫಾ
ವಳಿ ಸಂಗೀತಾನುಷಂಗೀಕೃತ ಶುಕಪಿಕ ಕೇಕಿ ಪ್ರಿಯಾರಾವ ಪೂರ್ಣಂ
ತಿಲಕ ಶ್ರೀಖಂಡ ಜಂಬೂಕುಟಜ ಕುರುವಕಾಶೋಕ ಮಾಕಂದಮಂದಾ
ರಲತಾ ಸಂತಾನರಮ್ಯಂ ರಜತಗಿರಿ ತಟೋದ್ಯಾನಮಾನಂದ ಧಾನಂ

ಪ್ರಾಚೀನ ಚಂಪೂರಚನೆಗಳ ಚಮತ್ಕಾರ ಪ್ರಿಯತೆ, ಸಮಾನ ಭೂಯಿಷ್ಠತೆ, ಕ್ಲಿಷ್ಟತೆ, ಕವಿ ಸಮಯನಿಷ್ಠತೆ ಇತ್ಯಾದಿಗಳೆಲ್ಲ ಇಲ್ಲಿಯೂ ವಿಜೃಂಭಿಸಿವೆ. ಗದ್ಯಭಾಗಗಳಂತೂ 'ಮತ್ತಮಾರಜತ ಧರಣೀಧರಮಜಸ್ರ ಪರಿಸ್ಫುರತ್ಸಹಸ್ರಾರ ಕಮಲಕರ್ಣಿಕಾ ವಿಹರತ್ಕೋಟಿ ಸೂರ್ಯ ಪ್ರತೀಕಾಶಮಾನ ಶಿವಲಿಂಗದೊಳ್' ಎಂಬಂತೆ ಓಜಃಪೂರ್ಣವಾಗಿವೆ. ಬಸವಪ್ಪ ಶಾಸ್ತ್ರಿಗಳು ಸರಳ ಸುಲಭವಾಗಿ ಬರೆಯಲಾರರೆಂದಲ್ಲ. ಆದರೆ ಅಂಥ ಭಾಗಗಳಲ್ಲೂ ರಸವತ್ಕವಿತೆ ಕಡಮೆ. (ಅಲ್ಲದೆ, ರಾಜಾಸ್ಥಾನದಲ್ಲಿ ಪಾಂಡಿತ್ಯ ಪ್ರಖರತೆಗೆ ತಾನೆ ಮನ್ನಣೆ?)

ಕೆಲವು ಪದ್ಯಗಳು ಶಬ್ದಾಲಂಕಾರ ಸಮನ್ವಿತವಾಗಿ ಕರ್ಣಾಕರ್ಷವಾಗಿವೆ :

ನವಫಲಶಾಲಿ ಶಾಲಿವನದಿಂ ಜನನಂದನ ನಂದನಂಗಳಿಂ
ಕುವಲಯ ಸಾರಸಾರಸ ವಿರಾಜಿ ವಿರಾಜಿ ನದೀನದಂಗಳಿಂ
ಸುವಿಮಲ ರೂಪಶೀಲ ರಮಣೀ ರಮಣೀಯ ನರರ್ಕಳಿಂ ಸವೈ
ಭವ ಭವನಂಗಳಂ ಮೆರೆಗುಮಾ ನಿಷಧಂ ಜನಜೀವನೌಷಧಂ

ಆಕೆ ಮನೋಜರಾಜನ ಪತಾಕೆ ಮುಖದ್ಯುತಿ ದಿಕ್ಕೃತೇಂದು ನಾ
ಳೀಕೆ ಕುಚದ್ವಯೀ ಹಸಿತ ತೋಕೆ ನಿಜಾಧರಕಾಂತಿ ಧೂತ ಬಂ
ಧೂಕೆ ಪರಾಜಿತಾಮರ ವಧೂಕೆ ತಟಿತ್ತುಲಿತ ಪ್ರತೀಕೆ ಸಾ
ಲೋಕ ವಿಲೋಕೆಯಾದಿ ರಸಸೂತ್ರದ ಟೀಕೆ ವಿದರ್ಭ ಕನ್ಯಕೆ

ಕರಮೆಸೆದತ್ತು ಕಣ್ಗೆ ನಲವಿತ್ತು ಮನೋಜ್ಞತೆವೆತ್ತು ತಳ್ತ ಸಿರಿ
ಗರಗಳ ಬಿತ್ತು ವೈಭವದ ಗೊತ್ತುವಧರ್ಮದ ಮಿತ್ತು ಲೋಕವೇ
ಳರ ತಲೆಗುತ್ತು ಭೂವನಿತೆ ತಾಳಿದ ಮೂಗುತಿಯ ಮುತ್ತು ನೋಡಲ
ಚ್ಚರಿಯನೆ ತೆತ್ತು ಕುಂಡಿನಪುರಂ ಮಣಿಮಂಡನ ಭರ್ಮಗೋಪುರಂ

ಕಡೆಯ ಪದ್ಯ ಹರಿಹರನ ವೃತ್ತವೊಂದರ ಅನುಕರಣ. (ಎರಡನೆಯ ಪದ್ಯದಲ್ಲಿ 'ರಸ ಸೂತ್ರದ ಟೀಕೆ' ಎಂಬುದು ಸುತ್ತ್ಯ).

ಹಂಸಯಾನವನ್ನು ವರ್ಣಿಸುವ ಈ ಪದ್ಯ 'ಅಭಿಜ್ಞಾನ ಶಾಕುಂತಲ'ದ ಜಿಂಕೆಯ ವರ್ಣನೆಯಿಂದ ಪ್ರಭಾವಿತವಾಗಿದೆ :

ಕೊಡುಹುತ್ತೊರ್ಮೆ ಚೆಂಬೊಂನೆರಕೆಗಳನದೊರ್ಮೆ ಮುಂಬಾಯ್ದು ಬಾನೊ
ಳಡಗುತ್ತೊರ್ಮೆ ಕಾರ್ಮೋಡದೊಳೆ ಪೊಳೆವ ಬಲ್ಮಿಂಚಿದೆಂಬಂತಣಂ
ಕಣ್ಗೆಡೆಯಾಗೊರ್ಮೆ ಮಿಟ್ಟಂ ಮಿಡುಕದಿರೆ ಗರುದ್ಗುಚ್ಛಮಚ್ಚಾಂಶುಕಲ್ಪಂ
ನಡೆ ಪಾರಿತ್ತತ್ತಮೇಗಾಪ ಹಸಿತ ಸುಮರುದ್ರಂ ಹಸಂ ರಾಜಹಂಸಂ

ಕೆಳಗಿನ ಪದ್ಯ ಗುಣವರ್ಮನ 'ಹರಿವಂಶ'ದ 'ಎನಿತ್ತೆನಿತ್ತಂಬುಜಪತ್ರ ನೇತ್ರೆಯಾ-' ಎಂಬ ಪದ್ಯದ ಪಡಿನೆಳಲು ಎಂಬುದು ಸ್ಪಷ್ಟ :

ಎನಿತ್ತೆನಿತ್ತಾ ಅರಸಂಚೆಯಂ ಘನ
ಸ್ತನಂ ಕುಲುಂಕಲ್ಕುತ್ತುಕಲ್ಕೆ ಬರ್ಪಳಾ
ಜನೇಶ್ವರಾತ್ಮೋದ್ಭವೆ ಸಾರ್ಕೆಗೀಕ್ಷಿಸು
ತ್ತನಿತ್ತನಿತ್ತೈದಿದುದಂಚೆ ದೂರಮಂ

೨

ಒಟ್ಟಿನಲ್ಲಿ ಬಸವಪ್ಪಶಾಸ್ತ್ರಿಗಳ ಸ್ವತಂತ್ರ ಕೃತಿಗಳು ಸ್ವೋಪಜ್ಞತೆಗೆ ಸಾಕಷ್ಟು ಎರವಾಗಿವೆ ಎನ್ನಬೇಕು. ಅವರ ಉತ್ತಮವಾದ ಕೊಡುಗೆಯಿರತಕ್ಕದ್ದು ಭಾಷಾಂತರ ರಂಗದಲ್ಲಿ; ಅದರಲ್ಲೂ, 'ಅಭಿನವ ಕಾಳಿದಾಸ' ಬಿರುದು ತಂದುಕೊಟ್ಟ 'ಕರ್ಣಾಟಕ ಶಾಕುಂತಲ ನಾಟಕಂ' ಶಾಸ್ತ್ರಿಗಳ ಶ್ರೇಷ್ಠ ಕೃತಿ. ಅದರಲ್ಲಿ ಶಾಸ್ತ್ರಿಗಳ ಪ್ರತಿಭೆ ಶ್ಲಾಘ್ಯವಾಗಿ ಕೆಲಸ ಮೂಡಿದೆ. ಪ್ರತಿಭಾಶಾಲಿಗಳಲ್ಲದವರಿಗೆ ಭಾಷಾಂತರ ಕಾರ್ಯ ಸಾಧ್ಯವಿಲ್ಲವೆಂಬುದನ್ನು ನೆನಪಿಡಬೇಕು. ಅಲ್ಲದೆ, ಅನುವಾದ ಕೃತಿಗಳೂ ಒಂದರ್ಥದಲ್ಲಿ, ಕಡೆಯ ಪಕ್ಷ ಅರ್ಧಶಃ, ಅನುವಾದಕನ ಸ್ವಂತ ಕೃತಿಗಳೇ ಹೌದು, ಎಂದರೆ ತಪ್ಪಾಗದು. ಏಕೆಂದರೆ, ಭಾವಾಲೋಚನೆಗಳು ಕೆಲವೊಮ್ಮೆ ವಿಶ್ವ ಸಾಮಾನ್ಯ, ಭಾಷೆಯಾದರೊ ಸ್ಥಳೀಯ ಭಾಷಾಂತರಕಾರನ ಆಸ್ತಿ. ಸಾಹಿತ್ಯದಲ್ಲಿ, ಭಾಷೆಯ ಪಾತ್ರ ಬಹಳ ಮಹತ್ವದ್ದು ಎಂಬುದನ್ನು ಮರೆಯಬಾರದು. 'ರೀತಿರಾತ್ಮಾ ಕಾವ್ಯಸ್ಯ' ಎಂಬ ವಾಮನನ ಹೇಳಿಕೆಯಲ್ಲಿ ಹುರುಳಿಲ್ಲದಿಲ್ಲ.

ಪ್ರಾಚೀನ ಕನ್ನಡ ಸಾಹಿತ್ಯದ ಇತಿಹಾಸವನ್ನು ನೋಡಿದರೆ, ಅದರಲ್ಲಿ ಸ್ವತಂತ್ರ ನಾಟಕಗಳ ಸುಳಿವಿಲ್ಲ ಮಾತ್ರವಲ್ಲ. ಒಂದಾದರೂ ಸಂಸ್ಕೃತ ನಾಟಕ ಅನುವಾದಗೊಂಡದ್ದೂ ಕಂಡುಬರುವುದಿಲ್ಲ. ಹದಿನೇಳನೆಯ ಶತಮಾನದಲ್ಲಿ ಹುಟ್ಟಿದ ಸಿಂಗರಾರ್ಯನ 'ಮಿತ್ರವಿಂದಾ ಗೋವಿಂದ' ಹರ್ಷನ 'ರತ್ನಾವಳಿ'ಯ ಅಪ್ಪಟ ಅನುವಾದವಲ್ಲ , ಅಳವಡಿಕೆ. ಬಸವಪ್ಪ ಶಾಸ್ತ್ರಿಗಳಿಗೆ ಹಿಂದೆ ಚುರಮುರಿ ಶೇಷಗಿರಿರಾಯರು 'ಶಾಕುಂತಲ'ವನ್ನು ಭಾಷಾಂತರಿಸಿದ್ದರು. ಆದರೆ ಅದು ವ್ಯಾಖ್ಯಾನಾತ್ಮಕ ಅನುವಾದವೆ ಹೊರತು ಯಥಾವತ್ತಾದ ತರ್ಜುಮೆಯಲ್ಲ. ಹೀಗಾಗಿ, ಸಂಸ್ಕೃತ ನಾಟಕಗಳನ್ನು ಮೊತ್ತಮೊದಲು ಕನ್ನಡಿಸಿದವರು ಶಾಸ್ತ್ರಿಗಳೇ ಎನ್ನಬಹುದು. ಸ್ವತಂತ್ರ ನಿರ್ಮಿತಿಯಲ್ಲಿ ಇಲ್ಲದಿದ್ದ ಅವಕಾಶಗಳು ಅನುವಾದ ಕ್ಷೇತ್ರದಲ್ಲಿ ಅವರಿಗಾಗಿ ಕಾಯುತ್ತಿದ್ದುವು. ಅವುಗಳನ್ನು ಅವರು ಸಾರ್ಥಕವಾಗಿ ಸದುಪಯೋಗಪಡಿಸಿಕೊಂಡರು.

ಬಸವಪ್ಪಶಾಸ್ತ್ರಿಗಳ 'ಕರ್ಣಾಟಕ ಶಾಕುಂತಲ ನಾಟಕಂ' ತಕ್ಕಮಟ್ಟಿಗೆ ಒಂದು ಸೃಜನಾತ್ಮಕವಾದ ಭಾಷಾಂತರ. ಕಾಳಿದಾಸನನ್ನು ಕನ್ನಡಕ್ಕಿಳಿಸುವಲ್ಲಿ ಶಾಸ್ತ್ರಿಗಳು ಬಹುತೇಕ ಯಶಸ್ವಿಯಾಗಿದ್ದಾರೆ. ಕಾಳಿದಾಸನಿಗೆ ವಿಧೇಯರಾಗಿದ್ದುಕೊಂಡೆ, ಎಷ್ಟೋ ಕಡೆ ಮೂಲಕ್ಕಿಂತ ಪರಿಣಾಮಕಾರಿಯಾಗುವಂತೆ ಅನುವಾದವನ್ನು ನಿರ್ವಹಿಸಿದ್ದಾರೆ. ಒಂದೆರಡು ಪದ್ಯಗಳನ್ನು ಲಕ್ಷಿಸಬಹುದು :

ಮೂಲ -

ಯಾಸ್ಯತ್ಯದ್ಯ ಶಕುಂತಲೇತಿ ಹೃದಯಂ ಸಂಸ್ಪೃಷ್ಟ ಮುತ್ಕಂಠಯಾ
ಕಂಠಸ್ತಂಭಿತ ಬಾಷ್ಪವೃತ್ತಿ ಕಲುಷಶ್ಚಿಂತಾಜಡಂ ದರ್ಶನಮ್
ವೈಕ್ಲವ್ಯಂ ಮಮ ತಾವದೀದೃಶಮಿದಂ ಸ್ನೇಹಾದರಣ್ಯೌಕಸಃ
ಪೀಡ್ಯಂತೇ ಗೃಹಿಣಃ ಕಥಂನು ತನಯಾ ವಿಶ್ಲೇಷ ದುಃಖೈರ್ನವೈಃ ೪

ಅನು -

ಕಳವಳವಾಂತುದೆನ್ನರ್ದೆ ಶಕುಂತಳೆ ಪೋದಪಳೆಂದು ಕಂಠಮು
ಮ್ಮಳಿಸುವುದೊತ್ತುವಶ್ರುಭರದಿಂ ಜಡಮಾದುದು ದೃಷ್ಟಿ ಚಿಂತೆಯಿಂ

ದಳಲಿನಿತಾಗೆ ಕಾಡ ಮನುಜಂಗೆನಗಂ ಕಡುನೇಹದಿಂದಮಿ
ನ್ನುಳಿದ ಗೃಹಸ್ಥರಾತ್ಮಭವೆಯಂ ಕಳುಪುತ್ತಕಟೆಂತಳಲ್ವರೋ

ಮೂಲ -

ಪಾತುಂ ನ ಪ್ರಥಮಂ ವ್ಯವಸ್ಯತಿ ಜಲಂ ಯುಸ್ಮಾಸ್ವಪೀತೇಷು ಯಾ
ನಾಧತ್ತೇ ಪ್ರಿಯಮಂಡನಾಪಿ ಭವತಾಂ ಸ್ನೇಹೇನ ಯಾ ಪಲ್ಲವಮ್
ಅದ್ಯೇ ವಃ ಕುಸುಮಪ್ರಸೂತಿ ಸಮಯೇ ಯಸ್ಯಾ ಭವದ್ಯುತ್ಸವಃ
ಸೇಯಂ ಯಾಂತಿ ಶಕುಂತಲಾ ಪತಿಗೃಹಂ ಸರ್ವೈರನುಜ್ಞಾಯತಾಂ (೪)

ಅನು -

ಜಲವನದಾವಳೀಂಟಳೆರೆದಲ್ಲದೆ ನಿಮ್ಮಯ ಪಾತೆಗಂಬುವಂ
ತಳಿರ್ಗಳ ಕೊಯ್ಯಳಾವಳೊಲವಿಂ ಮಿಗೆ ಸಿಂಗರದಾಸೆಯುಳ್ಳೊಡಂ
ಅಲರ್ಗಳ ತಾಳೆ ನೀವು ಮೊದಲುತ್ಸವಮಾಂತಪ ಳಾವಳಾ ಶಕುಂ
ತಳೆ ಪತಿಸದ್ಮಕೈದಿದಪಳಾಕೆಗನುಜ್ಞೆಯನೀವುದೆಲ್ಲರುಂ

'ಯಾಸ್ಯತ್ಯದ್ಯ -' ಎಂಬ ಪದ್ಯದಲ್ಲಿರುವುದು ಒಂದು ಉತ್ಕಟ ಕರುಣ ಸಂದರ್ಭ. ಆದರೆ ಕಾಳಿದಾಸನ ಶೈಲಿ ಅದಕ್ಕೆ ಅನುರೂಪವಾಗಿರದೆ, ಮಹಾಪ್ರಾಣಾಕ್ಷರ, ಮೂರ್ಧನ್ಯಾಕ್ಷರ, ಸಂಯುಕ್ತಾಕ್ಷರಗಳಿಂದ ನಿಬಿಡವಾಗಿ ತುಸು ಕರ್ಕಶವಾಗಿದೆಯೆಂದೇ ಹೇಳಬೇಕು. ಆದರೆ ಬಸವಪ್ಪಶಾಸ್ತ್ರಿಗಳ ಅನುವಾದದ ಶೈಲಿ ಅಂತಿಲ್ಲದೆ, ಸಮಯೋಚಿತವಾಗಿ, ಮಾರ್ದವ ಲಾಲಿತ್ಯಗಳನ್ನೊಳಗೊಂಡಿದೆ. ಈ ಪದ್ಯದಲ್ಲಿ ಮತ್ತು 'ಜಲವನದಾವಳೀಂಟಳೆರೆದಲ್ಲದೆ - ' ಎಂಬ ಪದ್ಯದಲ್ಲಿ 'ಳ' ಕಾರ, 'ಲ'ಕಾರಗಳ ಪ್ರಾಚುರ್ಯಎದ್ದು ಕಾಣುತ್ತದೆ ಅಥವಾ ಕೇಳುತ್ತದೆ; ಅದು ಪ್ರಜ್ಞಾಪೂರ್ವಕ ಶಬ್ದಾಲಂಕಾರವಲ್ಲ, ತನ್ಮಯತೆಯ ಫಲ. ಈ ಶೈಲಿ ಕೋಮಲ ಭಾವ ವ್ಯಂಜಕವಾಗಿದ್ದು, ಪ್ರಸಾದ ಗುಣಗರ್ಭಿತವಾಗಿದೆ. ಅಂತೂ ಸಂದರ್ಭದ ಸ್ನಿಗ್ಧತೆಯನ್ನು ಬಸವಪ್ಪಶಾಸ್ತ್ರಿಗಳ ಭಾಷಾಂತರ ಮೂಲಕ್ಕಿಂತ ಸಮರ್ಥವಾಗಿ ಸಂವಹನಗೊಳಿಸುತ್ತದೆ. ಈ ಪದ್ಯಗಳ ಸರಳತೆಯೂ ಗಮನಾರ್ಹ. 'ದಮಯಂತೀ ಸ್ವಯಂವರ', 'ರೇಣುಕ ವಿಜಯ'ಗಳನ್ನು ಬರೆದ ಕೈಯೆ 'ಅಭಿಜ್ಞಾನ ಶಾಕುಂತಲ'ವನ್ನು ಅನುವಾದಿಸಿತೆ ಎಂದು ಅಚ್ಚರಿಯಾಗುತ್ತದೆ. ಅಲ್ಲಿ ಪೆಡಸು, ಇಲ್ಲಿ ಪ್ರಸನ್ನತೆ.

ಈಚೆಗೆ 'ಶಾಕುಂತಲ'ದ ಕನ್ನಡ ಅನುವಾದಗಳು ಹಲವು ಬಂದಿವೆ. ಆದರೆ ಶಾಸ್ತ್ರಿಗಳ ಅನುವಾದಕ್ಕೆ ಇಂದಿಗೂ ಅನನ್ಯ ಸ್ಥಾನವಿದೆ.

ಸಂಸ್ಕೃತ ನಾಟಕಗಳ ಕನ್ನಡ ಭಾಷಾಂತರಕ್ಕೆ ಬಸವಪ್ಪ ಶಾಸ್ತ್ರಿಗಳು ನಾಂದಿ ಹಾಡಿದರು; ಅಂತೆಯೆ, 'ಒಥೆಲೊ' ತರ್ಜುಮೆಯ ಮೂಲಕ ಇಂಗ್ಲಿಷ್ ನಾಟಕಗಳ ಭಾಷಾಂತರಕ್ಕೆ ಒತ್ತಾಸೆ ಕೊಟ್ಟರು. ತನ್ಮೂಲಕ, 'ಕನ್ನಡ ನಾಟಕ ಪಿತಾಮಹ' ರೆನಿಸಿ, ಕನ್ನಡ ನವೋದಯಕ್ಕೆ ತಮ್ಮವೇ ಆದ ಕೆಲವು ಕಿರಣಗಳನ್ನು ಬೀರಿಸಿದರು ; ತಮ್ಮ ಸಮಗ್ರ ವಾಙ್ಮಯದಲ್ಲಿ ಪ್ರತಿಭೆ. ಪಾಂಡಿತ್ಯಗಳನ್ನು ಮೆರೆಸಿದರು. ಅವರ ಕೃತಿಗಳ ಸಾಹಿತ್ಯಕ ಮೌಲ್ಯಗಳಲ್ಲಿ ಏನೇ ಏರು ಪೇರುಗಳಿದ್ದರೂ, ಅವರು ಮಾಡಿದ ದೊಡ್ಡ ಕೆಲಸ ಕನ್ನಡಿಗರ ಕೃತಜ್ಞತೆಗೆ ಯೋಗ್ಯವಾದುದು ಎಂಬುದು ಗಟ್ಟಿ ಸಂಗತಿ.

ಕಾರ್ನಾಡರ 'ತಲೆದಂಡ'

ಕ್ರಾಂತಿ ವೈಫಲ್ಯದ ಅನ್ವೇಷಣೆ

ಡಾ|| ಜಿ.ಎಸ್. ಆಮೂರ

ಕನ್ನಡ ನಾಟಕದಲ್ಲಿ ವಾಸ್ತವ ಮಾರ್ಗದ ಸಾಧ್ಯತೆಗಳು ಕ್ಷೀಣವಾಗಿ ಹೊಸ ಮಾರ್ಗಗಳ ಶೋಧ ನಡೆದ ಸಂದರ್ಭದಲ್ಲಿ ಗಿರೀಶ್ ಕಾರ್ನಾಡ ನಾಟ್ಯರಚನೆ ಪ್ರಾರಂಭಿಸಿದರು. ವಾಸ್ತವ ಮಾರ್ಗದ ಪ್ರಮುಖ ನಾಟಕಕಾರರಾಗಿದ್ದ ಶ್ರೀರಂಗರೇ ಈ ಮಾರ್ಗವನ್ನು ಕಟ್ಟಕೊಟ್ಟು 'ಕತ್ತಲೆ ಬೆಳಕು', 'ಕೇಳು ಜನಮೇಜಯ'ಗಳಂಥ ಕೃತಿಗಳನ್ನು ರಚಿಸಿದರು. ಕತ್ತಲೆ ಬೆಳಕು ನಾಟಕಕಾರನ ಅಸಹಾಯಕತೆಯ ರೂಪಕವಾಯಿತೇ ವಿನಾ ಹೊಸ ಮಾರ್ಗ ತೆರೆಯಲಿಲ್ಲ. ಕೇಳು ಜನಮೇಜಯದಲ್ಲಿ ಶ್ರೀರಂಗರು ರಾಜಕೀಯ ವ್ಯಾಖ್ಯಾನದತ್ತ ಪ್ರಯತ್ನಿಸಿದರಾದರೂ ಅವರ ಸಂವೇದನೆಯ ಸ್ವರೂಪ ಆಧುನಿಕವಾಗಿದ್ದರಿಂದ ಹಾಗೂ ನಾಟಕದ ಪೌರಾಣಿಕ ಮತ್ತು ವಾಸ್ತವ ನೆಲೆಗಳ ಸಂಬಂಧ ಕೃತ್ರಿಮವಾದುದರಿಂದ ಅದರ ಯಶಸ್ಸು ಸೀಮಿತವಾಯಿತು. ಶ್ರೀರಂಗರಂತೆ ಗಿರೀಶ್ ಕೂಡ ಕಂಪನಿ ನಾಟಕ, ಜಾನಪದ ರಂಗಭೂಮಿಗಳ ಪ್ರಭಾವದಲ್ಲಿಯೇ ಬೆಳೆದು ಬಂದರೂ ಮೊದಲಿನಿಂದಲೇ ಅವರು ಶ್ರೀರಂಗರಂತೆ ವಾಸ್ತವಮಾರ್ಗದತ್ತ ಆಕರ್ಷಿತರಾಗಲಿಲ್ಲ. ಶಾನ ನಾಟಕದ ಮಾದರಿಗಳು ಅವರಿಗೆ ರುಚಿಸಲಿಲ್ಲ. (ಆಶ್ಚರ್ಯದ ಸಂಗತಿಯೆಂದರೆ ನಾನು ಮೊದಲು ಗಿರೀಶ್‌ರನ್ನು ಕಂಡದ್ದು ಅವರು ಶಾನ ಮ್ಯಾನ್ ಆಫ್ ಡೆಸ್ಟಿನಿಯಲ್ಲಿ ನಟಸಿದಾಗ) ವಿದ್ಯಾರ್ಥಿಯಿದ್ದಾಗಲೇ ಅವರನ್ನು ತೀವ್ರವಾಗಿ ತಲುಪಿದ ನಾಟಕ ಅಲ್ಕಾಝಿ ನಿರ್ದೇಶಿಸಿದ ಸ್ಟ್ರಿಂಡ್‌ಬರ್ಗ್‌ನ ಲೇಡಿ ಜೂಲಿ. ಮುಂದೆ ಅವರು ಅನ್ವಿ, ಸಾರ್ತ್ರ, ಕಮ್ಯೂ ಮೊದಲಾದವರ ನಾಟಕಗಳತ್ತ ಆಕರ್ಷಿತರಾದರು. ಅವರ ಒಂದೇ ಒಂದು ವಾಸ್ತವ ಮಾರ್ಗದ ನಾಟಕವೆಂದರೆ

೧೯೭೭ರಲ್ಲಿ ಪ್ರಕಟವಾದ 'ಅಂಜುಮಲ್ಲಿಗೆ'. ಆದರೆ, ತೀರ ಇತ್ತೀಚೆಗೆ ಪ್ರಸನ್ನ ಹೊಸ ಪ್ರಯೋಗದಿಂದ ಅದರಲ್ಲಿ ಜೀವ ತುಂಬುವವರೆಗೆ, ಅದು ಕಾರ್ನಾಡ್ ಕ್ಯಾನನ್ ಹೊರಗೆಯೆ ಉಳಿದುಬಿಟ್ಟಿತು. ಬಹುಶಃ ನಿಷಿದ್ಧ ಲೈಂಗಿಕತೆಯನ್ನಾಧರಿಸಿದ ನಾಟಕದ ವಸ್ತು ಇದಕ್ಕೊಂದು ಕಾರಣವಾಗಿರಬೇಕು.

ಗಿರೀಶ್‌ರ ಮೊದಲ ನಾಟಕ 'ಯಯಾತಿಯೇ' ಅವರಿಗೆ ಸಾಕಷ್ಟು ಖ್ಯಾತಿ ತಂದುಕೊಟ್ಟಿತು. ಈ ನಾಟಕಕ್ಕೆ ತಮಗೆ ಸ್ಫೂರ್ತಿ ಆನ್ವಿಯ ಆ್ಯಂಟಿಗನಿ ನಾಟಕದಿಂದ ದೊರೆಯಿತೆಂದು ಗಿರೀಶರೇ ಹೇಳಿದ್ದಾರೆ. ಯಯಾತಿಯ ಕಥೆ ಮಹಾಭಾರತದದ್ದಾರೂ ಈ ನಾಟಕದ ಮೂಲಕ ತಮ್ಮ ವೈಯಕ್ತಿಕ ಸಮಸ್ಯೆಗೆ - ಇಂಗ್ಲೆಂಡಿಗೆ ಹೊರಟು ನಿಂತಾಗ ಮನೆಯಲ್ಲಿ ಹುಟ್ಟಿಕೊಂಡ ಆತಂಕಗಳಿಗೆ... ವಸ್ತು ಪ್ರತಿರೂಪವನ್ನು ಕೊಡುವಲ್ಲಿ ಗಿರೀಶ್ ಅಪೂರ್ವ ಯಶಸ್ಸು ಗಳಿಸಿದರು. ೧೯೬೪ರಲ್ಲಿ ಬಂದ ಅವರ ಪ್ರಸಿದ್ಧ ನಾಟಕ 'ತುಘಲಕ್' ಒಂದೆರಡು ಅಂಶಗಳಲ್ಲಿ ಪಾರ್ಸೀ ನಾಟಕಗಳನ್ನು ಹೋಲುತ್ತಿದ್ದರೂ ಕಮ್ಯೂ ಮೊದಲಾದವರ ನಾಟಕಗಳ ಪ್ರಭಾವವನ್ನು ಜೀರ್ಣಿಸಿಕೊಂಡೇ ಹುಟ್ಟಿಕೊಂಡಿತು. ಈ ವೇಳೆಗೆ ಸ್ವತಂತ್ರ ಭಾರತದಲ್ಲಿ ನಡೆದ ಸಾಂಸ್ಕೃತಿಕ ವಿವಾದದ ಪರಿಣಾಮವಾಗಿ ರಂಗಭೂಮಿಯೇ ಪಾರಂಪರಿಕ ಹಾಗೂ ದೇಶೀಯ ನಾಟ್ಯ ಮಾದರಿಗಳತ್ತ ಧ್ಯಾನ ಕೊಡುವಂತಾಯಿತು. ಶ್ರೀರಂಗರಂಥವರು ಸೂತ್ರಧಾರ ಮೊದಲಾದ ನಾಟ್ಯ ವಿಧಾನಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡರೂ ಸಂಸ್ಕೃತ ರಂಗಭೂಮಿಯನ್ನೂ ಆಧುನಿಕ ಅಭಿವ್ಯಕ್ತಿಗಾಗಿ ಬಳಸಿಕೊಳ್ಳುವುದು ಸಾಧ್ಯವಾಗಲಿಲ್ಲ. ಈ ಸಮಸ್ಯೆ ಇನ್ನೂ ಭಾರತೀಯ ನಾಟಕಕಾರರೆದುರಿಗಿದೆ ಎಂದು ಗಿರೀಶ್ ಹೇಳುತ್ತಾರೆ. ಯಕ್ಷಗಾನದ ತವರುಮನೆಯಲ್ಲಿಯೇ ಹುಟ್ಟಿ ಬೆಳೆದ ಗಿರೀಶ್‌ರಿಗೆ ಅದರ ಇಂಪ್ರೊವೈಸೇಷನ್ ಸಂಗೀತ ಹಾಗೂ ಫ್ಲೂಯಿಡಿಟಿ ತುಂಬ ಆಕರ್ಷಕವೆನಿಸಿದವು. ಈ ಅಂಶಗಳನ್ನು ಅಳವಡಿಸಿಕೊಂಡು ಅವರು ಬರೆದ 'ಹಯವದನ' (೧೯೭೧) ಕನ್ನಡ ರಂಗಭೂಮಿಯಲ್ಲಿ ಹೊಸ ಚೈತನ್ಯ ತುಂಬಿತಲ್ಲದೆ ಭಾರತೀಯ ನಾಟಕಕಾರರಿಗೆ ಹೊಸ ಮಾದರಿಯನ್ನೊದಗಿಸಿತು. ಇದು ಅವರ ಅತ್ಯಂತ ಜನಪ್ರಿಯ ನಾಟಕಗಳಲ್ಲೊಂದಾಗಿದೆ. ೧೯೮೭-೮೮ರಲ್ಲಿ ಗಿರೀಶ್ ಎ.ಕೆ. ರಾಮಾನುಜನ್ ಇದ್ದ ಚಿಕ್ಯಾಗೋ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿದ್ದರು. ತಮ್ಮ ಮೇಲೆ ಪ್ರಭಾವ ಬೀರಿದ ಇಬ್ಬರು ವ್ಯಕ್ತಿಗಳನ್ನು - ಕೆ.ಜೆ. ಶಹಾ ಹಾಗೂ ಎ.ಕೆ. ರಾಮಾನುಜನ್ - ಗಿರೀಶ್ ಯಾವಾಗಲೂ ನೆನೆಯುತ್ತಾರೆ. ರಾಮಾನುಜನ್ ಪ್ರಸಿದ್ಧ ಕವಿಯಾಗಿದ್ದಂತೆ ಹೊಸ ಒಳನೋಟಗಳುಳ್ಳ ಅಂತಾರಾಷ್ಟ್ರೀಯ ಖ್ಯಾತಿಯ ಜಾನಪದ ವಿದ್ವಾಂಸರೂ ಆಗಿದ್ದರು. ಜಾನಪದದ ಸಾಧ್ಯತೆಗಳನ್ನು - ಬ್ರೆಖ್ಟ್ ಹೇಳುವ ಕಾಂಪ್ಲೆಕ್ಸ್ ಸೀಯಿಂಗ್‌ದ ಸಾಮರ್ಥ್ಯವನ್ನೂ ಗಿರೀಶರಿಗೆ ತಿಳಿಸಿಕೊಟ್ಟವರು ರಾಮಾನುಜನ್. ಇತ್ತೀಚೆಗೆ ಅಮೇರಿಕೆಯ ಗೂಥ್ರೀ ಥಿಯೇಟರ್‌ನಿಂದ ಪ್ರದರ್ಶಿತವಾಗಿ ಗಿರೀಶರಿಗೆ ಅಪಾರ ಖ್ಯಾತಿ ತಂದುಕೊಟ್ಟ 'ನಾಗಮಂಡಲ' ಈ ಹೊಸ ಅರಿವಿನ ಫಲವಾಗಿದೆ. ವ್ಯಭಿಚಾರದ ವಸ್ತುವನ್ನಾಧರಿಸಿದ ಅವರ ನಾಟಕ 'ಹಿಟ್ಟಿನ ಹುಂಜ' ಕೂಡ 'ಅಂಜುಮಲ್ಲಿಗೆ'ಯಂತೆ ಅವರ ಕ್ಯಾನನ್ನಿಗೆ ಸೇರದೇ ಹೋದುದರ ಕಾರಣ ಬಹುಶಃ ನಾಗಮಂಡಲವನ್ನು ಬರೆಯುವಾಗ ಗಿರೀಶರಿಗೆ ಹೊಳೆದಿರಬೇಕು. ನಾಗಮಂಡಲದ ಮುಖ್ಯ ಕಥೆ ಗಿರೀಶರಿಗೆ ಜಾನಪದದಲ್ಲಿಯೇ ದೊರಕಿತು. ನಾಗಮಂಡಲದ ಯಶಸ್ಸು ಕೂಡ ಗಿರೀಶರ ಹೊಸ ಪ್ರಯೋಗಗಳಿಗೆ ಅಡ್ಡ ಬರಲಿಲ್ಲ. ಈ ವರ್ಷದ ಕೇಂದ್ರ ಸಾಹಿತ್ಯ ಅಕಾಡಮಿಯ ಪ್ರಶಸ್ತಿ ಗಳಿಸಿದ ತಲೆದಂಡದಲ್ಲಿ ಅವರು ಮತ್ತೆ ಥಿಯೇಟರಿನ ಕೇಂದ್ರ ಪರಂಪರೆಗೆಯೆ ಮರಳಿದ್ದಾರೆ. ಇನ್ನೂ ಪ್ರಕಟವಾಗದ ಅವರ ಅಗ್ನಿ ಮತ್ತು ಮಳೆಯಲ್ಲಿ ಮಹಾಭಾರತಕ್ಕೆ ಮತ್ತೆ ಮರಳಿದಂತೆ.

ಇತ್ತೀಚೆಗೆ ಹೆಗ್ಗೋಡಿನಲ್ಲಿ ನಡೆದ ಚರ್ಚೆಯೊಂದರಲ್ಲಿ ಭಾಗವಹಿಸಿದ ಪ್ರಸನ್ನ ಗಿರೀಶರು ಎಲ್ಲೋ ಕನ್ನಡದ ಜಾಯಮಾನದಿಂದ ಹೊರಗೆ ಉಳಿದು ಬಿಡುತ್ತಾರೆ. ಹಿ ಡಸ್‌ನ್ಟ್ ವಾಂಟ್ ಟು ಬಿ ಆ್ಯನ್ ಇನ್‌ಸೈಡರ್ ಇನ್ ಕನ್ನಡ ಎಂದು ಹೇಳಿದರಷ್ಟೇ ಅಲ್ಲದೆ ಆದು ನಿಜವೆಂದು ಒಪ್ಪಿಕೊಳ್ಳುವಂತೆ ಗಿರೀಶರನ್ನು ಪರ್ಸೂಡ್ ಕೂಡ ಮಾಡಿಬಿಟ್ಟರು. ಕನ್ನಡದಲ್ಲಿಯೂ ತಮ್ಮ ಸೃಜನಶೀಲತೆಯನ್ನು ಕಂಡುಕೊಂಡ ಹಾಗೂ ಶ್ರೀರಂಗರ ನಂತರದ ಕಾಲದ ಕನ್ನಡದ ಶ್ರೇಷ್ಠ ನಾಟಕಕಾರರಾದ ಗಿರೀಶರ ಬಗ್ಗೆ ಈ ಮಾತು ವಿಚಿತ್ರವೆನಿಸುತ್ತದೆ. ಅವರ ತಲೆದಂಡವನ್ನು ಓದಿದ ಯಾರೂ ಈ ಮಾತನ್ನು ಒಪ್ಪಲಾರರು. ಕನ್ನಡದ ಜಾಯಮಾನಕ್ಕೆ ಹೊಂದದ ಯಾರೂ ಅಂಥ ನಾಟಕಗಳನ್ನು ಬರೆಯುವುದು ಸಾಧ್ಯವಿರಲಿಲ್ಲ.

ತಲೆದಂಡದ ಇಂಗ್ಲೀಷ್ ಅನುವಾದಕ್ಕೆ ಬರೆದ ಮುನ್ನುಡಿಯಲ್ಲಿ ಗಿರೀಶರು ಈ ನಾಟಕದ ರಚನೆಗೆ ಕಾರಣವಾದ ಸಾಮಾಜಿಕ ಹಾಗೂ ರಾಜಕೀಯ ಪ್ರೇರಣೆಯನ್ನು ಸ್ಪಷ್ಟವಾಗಿ ಸೂಚಿಸಿದ್ದಾರೆ. ''ನಾನು ಈ ನಾಟಕವನ್ನು ಬರೆದದ್ದು ೧೯೮೯ರಲ್ಲಿ. ಅದು ಮಂದಿರ ಹಾಗೂ ಮಂಡಳ ಚಳವಳಿಗಳ ಕಾಲ. ಈ ಚಳವಳಿಗಳು (ಬಸವ - ಬಿಜ್ಜಳ ಯುಗದ) ಚಿಂತಕರು ಕೇಳಿದ ಪ್ರಶ್ನೆಗಳು ನಮ್ಮ ಕಾಲಕ್ಕೂ ಎಷ್ಟು ಪ್ರಸ್ತುತವಾಗಿವೆಯೆನ್ನುವುದನ್ನು ತೋರಿಸಿದವು. ನಂತರ ನಡೆದ ಭಯಾನಕ ಘಟನೆಗಳು ಹಾಗೂ ದೇಶದಲ್ಲಿ ಹಬ್ಬಿದ ಧಾರ್ಮಿಕ ಮತಾಂಧತೆ ಆ ಚಿಂತಕರು ಕಂಡುಹಿಡಿದ ಪರಿಹಾರ ಮಾರ್ಗಗಳನ್ನು ನಿರ್ಲಕ್ಷಿಸುವುದು ಎಷ್ಟು ಘಾತುಕವಾಗಬಲ್ಲುದು ಎನ್ನುವುದನ್ನು ಸಿದ್ಧಪಡಿಸಿದವು''. ೧೨ನೆಯ ಶತಮಾನದಲ್ಲಿ ನಡೆದ ವೀರಶೈವ ಕ್ರಾಂತಿ ಗಿರೀಶರಂತೆ ಹಲವಾರು ಕನ್ನಡ ಲೇಖಕರನ್ನು ಆಕರ್ಷಿಸಿದೆ. ಗಿರೀಶರೇ ಇನ್ನೊಂದು ಕಡೆ ಹೇಳಿದಂತೆ ''ನೋಯುವ ಹಲ್ಲಿಗೆ ನಾಲಿಗೆ ಮತ್ತೆ ಮತ್ತೆ ಹೊರಳುವಂತೆ ಪ್ರತಿಯೊಬ್ಬ ಕನ್ನಡಿಗ ಮತ್ತೆ ಮತ್ತೆ ಆ ಯುಗದ ಬೆರಗುಗೊಳಿಸುವ ಪ್ರತಿಭೆಗೆ, ಆ ಉತ್ಸಾಹಕ್ಕೆ ಮೌಲಿಕ ಪ್ರಶ್ನೆಗಳನ್ನು ಕೇಳುವ ಎದೆಗಾರಿಕೆಗೆ, ಗೆಲುವಿಗೆ, ನೋವಿಗೆ ಮರಳುವುದು, ಅದನ್ನು ಹೊಸ ಸಂದರ್ಭದಲ್ಲಿ ಅರ್ಥೈಸಲು ಯತ್ನಿಸುವುದು ಅನಿವಾರ್ಯ''.

ತಲೆದಂಡದ ನಿಜವಾದ ವಸ್ತು ಸಾಮಾಜಿಕ ಹಾಗೂ ರಾಜಕೀಯ ಕ್ರಾಂತಿ ಹಾಗೂ ಈ ಕ್ರಾಂತಿಯ ವೈಫಲ್ಯದ ಒಂದು ಸ್ಥಿತಿ. ನಿಜವಾದ ಕ್ರಾಂತಿ, ಕೊನೆಯಿಲ್ಲದ ಒಂದು ಪ್ರಕ್ರಿಯೆಯಾಗಿರುವುದರಿಂದ ಹಾಗೂ ಅದರ ಪರಿಣಾಮಗಳು ದೂರಗಾಮಿಯಾಗಿರುವುದರಿಂದ ಅದರ ಸೋಲು ಅದರ ಒಂದು ಅವಸ್ಥೆಯನ್ನು ಮಾತ್ರ ಸೂಚಿಸುತ್ತದೆ. ಈ ಮಾತು ವೀರಶೈವ ಶರಣರ ಕ್ರಾಂತಿಗೂ ಅನ್ವಯಿಸುವಂಥ ಮಾತು. ನಾಟಕ ಕ್ರಾಂತಿಯ ಸ್ವರೂಪ ಹಾಗೂ ಅದರ ಸೋಲು - ಗೆಲುವುಗಳಿಗೆ ಕಾರಣವಾದ ಸಾಮಾಜಿಕ ಹಾಗೂ ರಾಜಕೀಯ ಶಕ್ತಿಗಳ ಶೋಧವಾಗಿರುವುದರಿಂದ ಅದು ಸಾರ್ವತ್ರಿಕ ಪ್ರಸ್ತುತತೆಯನ್ನು ಪಡೆದುಕೊಳ್ಳುತ್ತದೆ.

ಸಂಘರ್ಷ

ತಲೆದಂಡದಲ್ಲಿ ಎರಡು ಪ್ರಬಲ ಸಾಮಾಜಿಕ ಹಾಗೂ ರಾಜಕೀಯ ಶಕ್ತಿಗಳ ಸಂಘರ್ಷವಿದೆ. ಸ್ಥೂಲವಾಗಿ ಈ ಶಕ್ತಿಗಳನ್ನು ಪ್ರತಿಗಾಮೀ ಹಾಗೂ ಪುರೋಗಾಮೀ ಶಕ್ತಿಗಳೆಂದು ಗುರುತಿಸಬಹುದು. ನಾಟಕದ ಪ್ರಾರಂಭದಲ್ಲಿ ತೆರೆಯ ಮರೆಯಲ್ಲಿ ನಡೆದಿರುವ ಈ ಸಂಘರ್ಷ ನಾಟಕದ ಕೊನೆಯಲ್ಲಿ ಬಹಿರಂಗ ಸ್ವರೂಪವನ್ನು ತಳೆದು ಪ್ರತಿಗಾಮೀ ಶಕ್ತಿಗಳ ವಿಜಯದಲ್ಲಿ ಕೊನೆಗೊಳ್ಳುತ್ತದೆ. ನಾಟಕದಲ್ಲಿಯ ಪಾತ್ರಗಳು ಒಂದಿಲ್ಲೊಂದು ರೀತಿಯಿಂದ ಈ ಎರಡು ಶಕ್ತಿಗಳನ್ನು ಪ್ರತಿನಿಧಿಸುತ್ತವೆ. ಪ್ರತಿಗಾಮೀ ಶಕ್ತಿಗಳನ್ನು ಪ್ರತಿನಿಧಿಸುವ - ಸಾಂಬಶಿವಶಾಸ್ತ್ರಿ ದಾಮೋದರ ಭಟ್ಟ ಮಂಚ್ಯಣಕ್ರಮಿತ ಪಾತ್ರಗಳನ್ನು ಸೃಷ್ಟಿಸುವುದು ಗಿರೀಶರಿಗೆ ಸುಲಭವೆನಿಸಿರಬೇಕು. ಯಾಕೆಂದರೆ ಅವರ ಸ್ವಭಾವ ಹಾಗೂ ಆಚರಣೆಗಳು ನಿರೀಕ್ಷಿತವಾದವುಗಳು. ಆದರೆ ಪುರೋಗಾಮೀ ಶಕ್ತಿಗಳ ಪ್ರತಿನಿಧಿಗಳ ಮಾತು ಹಾಗಿಲ್ಲ. ಇವರ ವಿಚಾರಗಳಾಗಲಿ, ಕೃತಿಗಳಾಗಲಿ ನಿರೀಕ್ಷಿತವಲ್ಲ ಹಾಗೂ ಸನಾತನ ಶಕ್ತಿಗಳ ಏಕರೂಪತೆ ಇವರಲ್ಲಿರಲಾರದು. ಬಸವಣ್ಣ, ಬಿಜ್ಜಳ, ಜಗದೇವ - ಇವರೆಲ್ಲರೂ ತಮ್ಮದೇ ಆದ ವಿಧಿ, ವಿಧಾನಗಳಲ್ಲಿ ಕ್ರಾಂತಿಯನ್ನು ಪುರಸ್ಕರಿಸುತ್ತಾರಾದರೂ ಅವರ ಸ್ವಭಾವ ಹಾಗೂ ಆಚರಣೆಗಳಲ್ಲಿ ಹೊಂದಾಣಿಕೆ ಕಾಣಲಾರದ ವಿರೋಧಗಳಿವೆ. ಈ ವಿರೋಧಗಳ ಮೂಲಗಳನ್ನು ಶೋಧಿಸುವ ಮಹತ್ವಾಕಾಂಕ್ಷೆಯೂ ಗಿರೀಶರ ನಾಟಕಕ್ಕಿದೆ.

ಗಿರೀಶರ ಎಲ್ಲ ನಾಟಕಗಳಲ್ಲಿಯೂ ಕತೆಗೆ ಮಹತ್ವವಿರುತ್ತದೆ. ಇದು ಇವುಗಳ ಆಕರ್ಷಣೆಯ ಬಲವಾದ ಅಂಶ. ತಲೆದಂಡ, ತುಘಲಕ್‌ದಂತೆ ತನ್ನ ಕತೆಯನ್ನು ಇತಿಹಾಸದಿಂದ ಆಯ್ದುಕೊಳ್ಳುತ್ತದೆ. ಆದರೆ ಅದನ್ನು ತನ್ನ ಉದ್ದೇಶಗಳಿಗೆ ಅನುರೂಪವಾಗಿ ಪುನರ್‌ರಚಿಸಿಗೊಳ್ಳುತ್ತದೆ. ಕತೆಯ ರಚನೆಯಲ್ಲಿಯೇ ಸಂಘರ್ಷದ ಸ್ವರೂಪ ಸ್ಪಷ್ಟವಾಗಿ ಮೂಡಿ ಬಂದಿರುವುದನ್ನು ನೋಡಬಹುದು. ಗಿರೀಶರು ಆಯ್ದುಕೊಳ್ಳುವ ಐತಿಹಾಸಿಕ ಘಟನೆಗಳು ಬಿಜ್ಜಳನ ಆಳ್ವಿಕೆಯ ಕೊನೆಯ ಹಂತದಲ್ಲಿ ನಡೆದವುಗಳು. ಬಿಜ್ಜಳ ಹಾಗೂ ಅವನ ಭಂಡಾರಿ ಬಸವಣ್ಣರಿಬ್ಬರೂ ಕಲ್ಯಾಣದಲ್ಲಿಲ್ಲದ ಸಂಧಿಯನ್ನು ಸಾಧಿಸಿ

ಯುವರಾಜ ಸೋವಿದೇವ ಭಂಡಾರದ ಮುದ್ರೆಯನ್ನೊಡೆಯುತ್ತಾನೆ. ಬಸವಣ್ಣ ರಾಜ್ಯದ ಧನವನ್ನು ಶರಣರ ಕಲ್ಯಾಣ ಕಾರ್ಯಗಳಿಗಾಗಿ ಸುರಿಯುತ್ತಿದ್ದಾನೆ ಎನ್ನುವ ದೂರು ಸೋವಿದೇವನ ಕೃತಿಯ ನೆವವಾಗಿರುತ್ತದೆ. ಆದರೆ ಇದು ನಿಜಕ್ಕೂ ಬಿಜ್ಜಳ - ಬಸವಣ್ಣರ ನಡುವೆ ಬಿರುಕುಂಟು ಮಾಡುವ ತಂತ್ರ ಎನ್ನುವುದು ನಂತರ ಸ್ಪಷ್ಟವಾಗುತ್ತದೆ. ಸಾವಿರಾರು ಸಂಖ್ಯೆಯಲ್ಲಿ ನೆರೆದ ಶರಣರು ಜಗದೇವನ ನೇತೃತ್ವದಲ್ಲಿ ಸೋವಿದೇವನನ್ನು ಭಂಡಾರದಲ್ಲಿ ಬಂಧಿಸಿಡುತ್ತಾರೆ. ಬಸವಣ್ಣ ಮರಳಿ ಬಂದ ನಂತರ ಲೆಕ್ಕದ ತಪಾಸಣೆ ನಡೆದು ಸೋವಿದೇವನನ್ನು ಮುಕ್ತಗೊಳಿಸಲಾಗುತ್ತದೆ. ಸೋವಿದೇವನ ಕೃತಿಯಿಂದ ಖತಿಗೊಂಡ ಬಸವಣ್ಣ ತನ್ನ ಅಧಿಕಾರವನ್ನು ಬಿಟ್ಟುಕೊಡುತ್ತಾನೆ. ಇದರಿಂದಾಗಿ ಬಿಜ್ಜಳ - ಬಸವಣ್ಣರ ನಡುವೆ ಬಿರುಕು ಹುಟ್ಟಿಸಿ ಅವರ ರಾಜಕೀಯ ಶಕ್ತಿಯನ್ನು ಕುಂಠಿಸಬೇಕೆನ್ನುವ ಅವರ ವೈರಿಗಳ ಉದ್ದೇಶ ಸಫಲವಾಗುತ್ತದೆ.

ಈ ಮಧ್ಯದಲ್ಲಿ ಬ್ರಾಹ್ಮಣ ಶರಣ ಮಧುವರಸ ಲಲಿತಾಂಬರ ಮಗಳು ಕಲ್ಯಾಣಿ ಹಾಗೂ ಸಮಗಾರ ಶರಣ ಹರಳಯ್ಯ - ಕಲ್ಯಾಣಿಯರ ಮಗ ಇಲ ಇವರ ಮದುವೆಯನ್ನು ಅವರ ಹಿರಿಯರು ಗೊತ್ತುಮಾಡುತ್ತಾರೆ. ಈ ಕೃತಿಯ ಕ್ರಾಂತಿಕಾರಕ ಪರಿಣಾಮಗಳ ಸ್ಪಷ್ಟ ಕಲ್ಪನೆಯಿದ್ದೂ ಬಸವಣ್ಣ ಮದುಮಕ್ಕಳನ್ನು ಹರಸುತ್ತಾನೆ. ಬಿಜ್ಜಳ ಮೊದಲು ಈ ಮದುವೆಯನ್ನು ವಿರೋಧಿಸಿದರೂ ನಂತರ ತನ್ನವೇ ಆದ ಕಾರಣಗಳಿಗಾಗಿ ಅದನ್ನು ಒಪ್ಪಿಕೊಳ್ಳುವುದರಿಂದ ಸನಾತನ ವರ್ಗಗಳಿಗೆ ಅದನ್ನು ತಡೆಯಲಾಗುವುದಿಲ್ಲ. ಆದರೆ ಅವರು ಕೈಕಟ್ಟಿ ಕೂತುಕೊಳ್ಳುವುದಿಲ್ಲ. ಯುವರಾಜ ಸೋವಿದೇವನನ್ನು ಮುಂದೆ ಮಾಡಿಕೊಂಡು ಬಿಜ್ಜಳನ ಅಧಿಕಾರವನ್ನು ಕಸಿದುಕೊಳ್ಳುತ್ತಾರೆ. ಅವನನ್ನು ಅರಮನೆಯಲ್ಲಿಯೇ ಬಂಧಿಸಿಡುತ್ತಾರೆ. ಬಿಜ್ಜಳನ ರಕ್ಷಣೆಗೆ ಬಸವಣ್ಣ ಮುಂದಾದಾಗ ಕೆಲವೇ ಜನ ಶರಣರು ಅವನ ಜೊತೆಗೆ ನಿಲ್ಲುತ್ತಾರೆ. ಇದರಿಂದ ಖಿನ್ನನಾದ ಬಸವಣ್ಣ ಬಿಜ್ಜಳನಿಗೆ ಶರಣು ಹೇಳಿ ಕಪ್ಪಡಿಸಂಗಮಕ್ಕೆ ಹೊರಡುತ್ತಾನೆ. ಆದರೆ ಶರಣರಲ್ಲಿಯ ಕೆಲ ಅತಿರೇಕಿಗಳು ಜಗದೇವನ ಮುಖಂಡತ್ವದಲ್ಲಿ ಸೋವಿದೇವನ ಕೊಲೆಯ ಹೊಂಚು ಹಾಕುತ್ತಾರೆ. ಕಲ್ಯಾಣದಿಂದ ತಲೆ ತಪ್ಪಿಸಿಕೊಂಡು ಹೋದ ಸೋವಿದೇವ ಅವರ ಕೈಗೆ ಸಿಗುವುದಿಲ್ಲ. ಸಿಕ್ಕ ಬಿಜ್ಜಳನನ್ನೇ ಕೊಂದು ಸೇಡು ತೀರಿಸಿಕೊಳ್ಳುತ್ತಾರೆ. ಸೋವಿದೇವ ಕಲ್ಯಾಣಕ್ಕೆ ಮರಳಿ ರಾಜ್ಯದ ಅಧಿಕಾರವನ್ನು ವಹಿಸಿಕೊಳ್ಳುತ್ತಾನೆ. ಧರ್ಮದ ಕಟ್ಟಳೆಗಳನ್ನು ಮುರಿದ ಅಪರಾಧಕ್ಕಾಗಿ ಮಧುವಯ್ಯ ಹರಳಯ್ಯರಿಗೆ ಕ್ರೂರಶಿಕ್ಷೆಯಾಗುತ್ತದೆ. ಹಿಂಸೆ, ಕೊಲೆಗಳಿಂದ ಕಲ್ಯಾಣ ಉರಿದೇಳುತ್ತದೆ. ಸೋವಿದೇವನ ರಾಜ್ಯಾಭಿಷೇಕದೊಂದಿಗೆ ಕತೆಯ ಮುಕ್ತಾಯವಾಗುತ್ತದೆ.

ಬಸವಣ್ಣನ ಪಾತ್ರ

ಬಹುಶಃ ಇಡಿಯ ನಾಟಕದಲ್ಲಿ ಗಿರೀಶರಿಗೆ ನಿಜವಾದ ಆಹ್ವಾನವಾಗಿ ನಿಂತ ಪಾತ್ರವೆಂದರೆ ಬಸವಣ್ಣನದು. ಬಸವಣ್ಣನ ಬಗ್ಗೆ ದೊರಕುವ ದಾಖಲೆಗಳು, ವಚನಗಳಲ್ಲಿ ತೆರೆದುಕೊಳ್ಳುವ ಅವನ ಅಂತರಂಗ ಹಾಗೂ ಈಗಾಗಲೇ ಅವನ ಜೀವನವನ್ನು ಕುರಿತು ಬಂದ ವಿಪುಲ ಸಾಹಿತ್ಯ ಗಿರೀಶರ ನೆರವಿಗೆ ಇದೆಯಾದರೂ ಅವನನ್ನು ಅತಿಯಾದ ಆದರ್ಶೀಕರಣದಿಂದ ಉಳಿಸಿಕೊಳ್ಳುವುದು ಸುಲಭ ಸಾಧ್ಯವಾಗಿರಲಿಲ್ಲ. ಅಪಚಾರದ ಹೆದರಿಕೆಯಂತೂ ಯಾವಾಗಲೂ ಇದ್ದದ್ದೇ. ಬಸವಣ್ಣ ಕೇವಲ ಐತಿಹಾಸಿಕ ವ್ಯಕ್ತಿಯಾಗಿರದೆ ಧಾರ್ಮಿಕ ಪ್ರತೀಕವೂ ಆಗಿರುವುದರಿಂದ ಇದು ಅನಿವಾರ್ಯ. ಇದೂ ಅಲ್ಲದೆ ಗಿರೀಶರೇ ಹೇಳಿದಂತೆ ಸಂತನ ಜೀವನವನ್ನು ನಾಟಕಕ್ಕೆ ಅಳವಡಿಸುವುದು ಕಠಿಣವಾದದ್ದು. ಯಾಕೆಂದರೆ ಸಂತರದು ದ್ವಂದ್ವಗಳನ್ನು ಮೀರಿದ ಬದುಕು. ಕೆಲವರಿಗೆ ತಲೆದಂಡದಲ್ಲಿ ಬಸವಣ್ಣನ ಭಕ್ತಿಯ ತೊಳಲಾಟ (ಟಾರ್ಚರ್ ಆಫ್ ಫೇತ್) ಕಂಡಿದೆ. ಇಂಥ ತೊಳಲಾಟ ಬಸವಣ್ಣನ ವಚನಗಳಲ್ಲಿ ಕಾಣುತ್ತದೆಯಾದರೂ ತಲೆದಂಡದಲ್ಲಿ ಅದು ಅಷ್ಟೊಂದು ಪ್ರಸ್ತುತವಾಗಿಲ್ಲ. ಇಲ್ಲಿ ಬಸವಣ್ಣನ ಭಕ್ತಿ ಅಖಂಡವಾಗಿಯೇ ಮೂಡಿ ಬಂದಿದೆ. ಈ ತೊಳಲಾಟ ತನ್ನ ದ್ವಂದ್ವಸ್ವರೂಪದಲ್ಲಿ ಕಾಣಿಸಿಕೊಳ್ಳುವುದು ಬಿಜ್ಜಳನಲ್ಲಿ, ಬಸವಣ್ಣನಲ್ಲಲ್ಲ. ತಲೆದಂಡದಲ್ಲಿ ಬಸವಣ್ಣನನ್ನು ಮುಖ್ಯವಾಗಿ ಕ್ರಾಂತಿಯ ನಾಯಕನೆಂದೇ ರೂಪಿಸಲಾಗಿದೆ. ಉಳಿದ ಅಂಶಗಳು ಈ ಮುಖ್ಯ ಕಲ್ಪನೆಗೆ ಹೊಂದಿಕೊಂಡು ಬಂದಿವೆ. ಒಬ್ಬ ಶ್ರೇಷ್ಠ ಕ್ರಾಂತಿವಾದಿಯಲ್ಲಿರಬೇಕಾದ ಎಲ್ಲ ಗುಣಗಳನ್ನೂ ಗಿರೀಶ್ ಬಸವಣ್ಣನಲ್ಲಿ ಕಂಡಿದ್ದಾರೆ. ಸಾಮಾಜಿಕ ಸಮಾನತೆಯ ಆದರದ, ಅಂತರಂಗ - ಬಹಿರಂಗ ಶುದ್ಧಿ, ಸ್ವಭಾವಗುಣವಾಗಿಯೇ ಬೆಳೆದ ವಿನಯ, ಅಲುಗಾಡದ ನಿಷ್ಠೆ - ಭಕ್ತಿಗಳು, ಸಾಮಾನ್ಯ ಜನರೊಡನೆ ಬೆರೆಯುವ, ಅವರ ಸುಖ

- ದುಃಖಗಳು ತನ್ನದೇ ಎಂದು ತಿಳಿಯುವ ಆತ್ಮೀಯತೆ. ಕ್ರಾಂತಿಯ ಪರಿಣಾಮಗಳ ಸಂಪೂರ್ಣ ಅರಿವು, ಅಧಿಕಾರದಲ್ಲಿ ಅನಾಸಕ್ತಿ, ಇವೆಲ್ಲವನ್ನೂ ಬಸವಣ್ಣನ ಕೃತಿಗಳಲ್ಲಿ, ಅವನ ಬಗ್ಗೆ ಉಳಿದವರು ತೋರುವ ಪ್ರತಿಕ್ರಿಯೆಗಳಲ್ಲಿ ಗಿರೀಶ್ ಹಿಡಿದಿದ್ದಾರೆ. ನಾಟಕದಲ್ಲಿ ಬಸವಣ್ಣನ ಪ್ರವೇಶದ ದೃಶ್ಯವೇ ಎಷ್ಟು ಮಾರ್ಮಿಕವಾಗಿದೆಯೆಂಬುದನ್ನು ನೋಡಬಹುದು. ಬಿಜ್ಜಳನನ್ನು ಭೆಟ್ಟಿಯಾಗ ಬಂದ ಬಸವಣ್ಣನನ್ನು ನಾವು ಮೊದಲು ನೋಡುವುದು ಬಿಜ್ಜಳನೊಡನಲ್ಲಿ, ಒಬ್ಬ ಮುದುಕಿಯೊಡನೆ, ಅವನಾಡುವ ಮೊದಲ ಮಾತುಗಳು ರಾಜಕೀಯಕ್ಕಾಗಲಿ. ತತ್ವ ಪ್ರಚಾರಕ್ಕಾಗಲಿ ಸಂಬಂಧಿಸಿದುವಲ್ಲ, ಹೃದಯದ ಮಾತುಗಳು. ''ಗುಡ್ಡವ್ವ, ನಿನ್ನ ಸೊಸೆ ಇನ್ನೂ ಸಣ್ಣಾಕಿ. ಅಂದಾಗ ನೀನೂ ಸ್ವಲ್ಪ ಸಂಭಾಳಿಸಿಕೋಬೇಕಬೇ''. ಗುಡ್ಡವ್ವನ ಮನೆಯಲ್ಲಿ ನಡೆದ ಸಾಮಾನ್ಯ ಸಂಗತಿಗಳೂ ಬಸವಣ್ಣನ ಆಸ್ಥೆಯ ವಿಷಯಗಳೇ. ಹೀಗಿದ್ದರೂ ಬಸವಣ್ಣನ ಕ್ರಾಂತಿಗೆ ಸೋಲೊದಗುತ್ತದೆ. ಕ್ರಾಂತಿಯನ್ನು ಪ್ರಾರಂಭಿಸಿದಷ್ಟು ಸುಲಭವಾಗಿ ಅದನ್ನು ನಿಯಂತ್ರಿಸಲಾಗುವುದಿಲ್ಲ ಎನ್ನುವುದನ್ನು ಬಸವಣ್ಣ ಅರಿತಂತೆ ಗಾಂಧೀಜಿಯವರೂ ಅರಿತಿದ್ದರು. ಬಸವಣ್ಣನ ಪಾತ್ರವನ್ನು ಕಲ್ಪಿಸಿಕೊಳ್ಳುವಾಗ ಗಿರೀಶರೆದುರು ಗಾಂಧೀಜಿಯವರಿದ್ದುದು ಸ್ಪಷ್ಟವಾಗಿದೆ.

ತಲೆದಂಡದಲ್ಲಿ ಅತ್ಯಂತ ಸೂಕ್ಷ್ಮವಾಗಿ ಬೆಳೆದು ಬರುವ ಸಂಬಂಧವೆಂದರೆ ಬಿಜ್ಜಳ - ಬಸವಣ್ಣ ಸಂಬಂಧ. ಬಸವಣ್ಣನ ಪಾತ್ರದಲ್ಲಿ ಸಂಘರ್ಷಕ್ಕೆ ಆಸ್ಪದವಿಲ್ಲ. ಆದರೆ, ಒಂದು ರೀತಿಯಿಂದ ಅವನಿಗೆ ವಿರುದ್ಧವೆನಿಸುವ ಬಿಜ್ಜಳನ ಪಾತ್ರದಲ್ಲಿ ಸಂಘರ್ಷ ನಡೆಯುತ್ತದೆ. ಅವನಲ್ಲಿ ಮಹತ್ವದ ಬದಲಾವಣೆಗಳಿಗೆ ಕಾರಣವಾಗುತ್ತದೆ. ''ಎಲ್ಲಿ ಅದಾನು ಆ ಭೋಸಡೀ ಮಗ!! ಎಂದು ಗರ್ಜಿಸುತ್ತಲೇ ಅವನು ನಾಟಕವನ್ನು ಪ್ರವೇಶಿಸುತ್ತಾನೆ. ಬಸವಣ್ಣನ ನಯ - ವಿನಯಗಳು ಅವನ ಸ್ವಭಾವಕ್ಕೆ ಹೊರಗಿನವುಗಳು. ಸನಾತನ ಧರ್ಮದೊಂದಿಗೆ ಅವನ ಹೊಂದಾಣಿಕೆ ಕೇವಲ ರಾಜಕೀಯವಾದದ್ದು. ಬಸವಣ್ಣನ ಆದರ್ಶ ಅವನನ್ನು ಆಕರ್ಷಿಸುತ್ತದೆ. ಇಂಥ ಕ್ರಾಂತಿ ತನ್ನ ರಾಜ್ಯದಲ್ಲಿಯೇ ನಡೆದುದರ ಬಗ್ಗೆ ಅವನು ಅಭಿಮಾನಪಡುತ್ತಾನೆ. ''ಜಾತಿ ಪದ್ಧತಿಯನ್ನು ಈ ನಾಡಿನಿಂದ ಸವರಿ ಬಿಡತೀನಿ ಅನ್ನತ್ತಾನ. ವರ್ಣಾಶ್ರಮಧರ್ಮ ಬೇರು ಸಹಿತ ಕಿತ್ತು ಹಾಕತೀನಿ ಅನ್ನತಾನ. ಎಂಥಾ ಕನಸದು! ಎಂಥಾ ಎದೆಗಾರಿಕೆ!... ಮತ್ತಿದನೆಲ್ಲಾ ಎಲ್ಲಿ ಮಾಡ್ಯಾನಂದಿ? ಬಿಜ್ಜಳನ ಕಲ್ಯಾಣದಾಗ'' ಇದರ ಜೊತೆಗೆಯೆ ಶರಣರ ಕಾಯಕ ನಿಷ್ಠೆಯಿಂದ ತನ್ನ ರಾಜಕ್ಕಾದ ಲಾಭವನ್ನು ಗುರುತಿಸುವ ವ್ಯವಹಾರ ಕುಶಲತೆಯೂ ಅವನಲ್ಲಿದೆ. ಬಸವಣ್ಣನ ಬಗ್ಗೆ ವೈಯಕ್ತಿಕ ಮೆಚ್ಚುಗೆ, ಶರಣರ ಬಗ್ಗೆ ಸಂದೇಹ ಹೆದರಿಕೆಗಳಿದ್ದರೂ ಅವರ ಉಪಯುಕ್ತತೆ - ಇವುಗಳಿಂದಾಗಿ ಬಿಜ್ಜಳ ಬಸವಣ್ಣನನ್ನು ಬೆಂಬಲಿಸುತ್ತಾನೆ. ಆದರೆ, ನಾಟಕದ ಮೊದಲ ದೃಶ್ಯಗಳಲ್ಲಿ ನಾವು ನೋಡುವ ಬಿಜ್ಜಳನಲ್ಲಿ ಭಕ್ತಿಗೆ ಸ್ಥಾನವಿಲ್ಲ... ''ಈ ಶರಣರ ನೀತಿಯದೆ ಆದೀತು. ಭಕ್ತಿ ಬ್ಯಾಡ....ನನ್ನ ಬಾಳಿನಾಗ ನಾ ಕಲಿತ ಒಂದು ಸತ್ಯ ಅದರಂತ ಇದೀನಿ, ದೇವರಿಲ್ಲ''. ಆದರೆ ಬಸವಣ್ಣನ ಸಂಬಂಧದಿಂದಾಗಿ ಅವನ ನಿಲುವಿನಲ್ಲಿ ಮಹತ್ವದ ಬದಲಾವಣೆಗಳಾಗುತ್ತವೆ. ಕೊನೆಯ ಸಲ ಬಸವಣ್ಣ ಅವನನ್ನು ಕಾಣಲು ಬಂದಾಗ ಇವರೀರ್ವರಲ್ಲಿ ನಡೆಯುವ ಮಾತುಗಳು ಈ ದೃಷ್ಟಿಯಿಂದ ತುಂಬ ಮಹತ್ವದವಾಗಿವೆ.

ಬಸವಣ್ಣ : ನಮ್ಮ ಬಯಕೆ - ಬೇಗುದಿಗೆ ಶಿವನ ಕರುಣೆಯನ್ನು ಒಗ್ಗಿಸೋದು ಬ್ಯಾಡ, ಧಣಿ. ಶಿವನಿಚ್ಛಾನ ನಮ್ಮ ಬಾಳಾಗಬೇಕು. ಅವ ಸೋಲಿಸ್ನೊದ್ದಲಿ, ಗೋಳ್ವಾಡಿಸಲಿ. ನಮ್ಮ ಕಡೆಗೆ ಲಕ್ಷ್ಯ ಕೊಡತಾನಲ್ಲ - ಅದು ನಮ್ಮ ಗೆಲುವು.

ಬಿಜ್ಜಳ : (ಕಂಗೆಟ್ಟು) - ನಿಂದು ಯಾವತ್ತು ಹೀಂಗ. ನೀ ಮಾತಾಡಿದ್ದು ಅರ್ಧಕ್ಕರ್ಧ ತಿಳಿಯೂದು ಇಲ್ಲ. ಹೇಳೋದನ್ನ ಒಂದು ಸಾಲಿನಾಗ ಹೇಳಬಾರದ.

ಬಸವಣ್ಣ : (ನಕ್ಕು) ಹೇಳತೇನೆ ಧಣಿ. ಏನಾದರೂ ಶಿವನನ್ನು ನಂಬು.

ಬಿಜ್ಜಳ : (ತಡೆದು) ಇಲ್ಲ, ಬಾಳ ಕಠಿಣ ಐತ್ಯದು. ನನ್ನ ಕೈಲಾಗೂದಿಲ್ಲ.

ಬಸವಣ್ಣ : ಆಗತದ ಧಣೀ. ನೀ ಮನಸ್ಸು ಮಾಡಿದರೆ ಸಾಕು. ಆಗತದ.

ನಾಟಕದ ಕೊನೆಯಲ್ಲಿ ರಾಜ್ಯ ಅಧಿಕಾರ, ಸಂಬಂಧಿಕರನ್ನು ಕಳೆದುಕೊಂಡು ಕೇವಲ ಮನುಷ್ಯನಾಗಿ ನಿಂತಾಗ ಬಿಜ್ಜಳನಿಗೆ ನಂಬುಗೆ ಕೆಲಮಟ್ಟಿಗಾದರೂ ಸಾಧ್ಯವಾಗುವುದು ಮುಂದಿನ ಬೆಳವಣಿಗೆ. ಬಿಜ್ಜಳನ ಮೊದಲ ಮಾತು ಆರ್ಭಟದ್ದಾದರೆ ಅವನ

ಕೊನೆಯ ಮಾತು ಪ್ರೀತಿಯದು. ತನ್ನನ್ನು ಇರಿದ ಜಗದೇವನನ್ನೇ ಬಿಜ್ಜಳ ಮಗನೆಂದು ಗಟ್ಟಿಯಾಗಿ ಹಿಡಿದುಕೊಳ್ಳುತ್ತಾನೆ. ಸೋಮೀ... ಮಗನ...'' ಎಂದು ಅಪ್ಪಿಕೊಳ್ಳುತ್ತಾನೆ.

ಜಗದೇವ

ತಲೆದಂಡದ ಜಗದೇವ ಬಸವಣ್ಣ ತಾತ್ಪೂರಿಕವಾಗಿ ಪ್ರಭಾವಿಸುವ ಆದರೆ ನಿಯಂತ್ರಿಸಲಾಗದ ಪಾತ್ರ. ಎಲ್ಲ ಕ್ರಾಂತಿಗಳಲ್ಲಿಯೂ ಅತಿರೇಕಿಗಳಾದ ಜಗದೇವನಂತವರು ಇದ್ದೇ ಇರುತ್ತಾರೆ. ''ಪಂಜಾಬಿನ ಆತಂಕವಾದಿಗಳ ಹಲವು ದೌರ್ಬಲ್ಯಗಳು ಜಗದೇವನಲ್ಲೂ ಇದೆ'' ಎಂದು ಗಿರೀಶರೇ ಹೇಳಿದ್ದಾರೆ. ಬಸವಣ್ಣ ಸರಿಯಾಗಿಯೇ ಗುರುತಿಸುವಂತೆ ಜಗದೇವನ ರೋಗ ಅವನ ಅಹಂಕಾರದಲ್ಲಿದೆ. ಈ ರೋಗವನ್ನು ಗುಣಪಡಿಸುವ ಉಪಾಯವೆಂದು ಅವನು ಅಲ್ಲಮನ ಕನಸೊಂದನ್ನು ಅವನಿಗೆ ವಿವರಿಸುತ್ತಾನೆ. ಆದರೆ ಜಗದೇವನಿಗೆ ಅದರ ಅರ್ಥ ಹೊಳೆಯುವುದು ಅವನ ಸಾವಿನಲ್ಲಿಯೇ... ಬಸವಣ್ಣನೊಡನೆ ಜಗದೇವನ ಸಂಬಂಧ ಇಬ್ಬಗೆಯದು. 'ನೀನು ಮಹಾಚೋರ, ಠಕ್ಕ, ಚತುರ ಆದರೆ ನೀಚ....' ಎಂದು ಆತ ಅವನನ್ನು ಹಳಿಯಬಲ್ಲ. ಅದೇ ಉಸಿರಿನಲ್ಲಿಯೇ ''ನೀ ಬಿಟ್ಟರ ಇನ್ಯಾರೂ ದಿಕ್ಕಿಲ್ಲ ನನಗ'' ಎಂದು ಗೋಗರೆಯಬಲ್ಲ, ಇಬ್ಬಂದಿತನ ಅವನ ಸ್ವಭಾವದಲ್ಲಿಯೇ ಇದೆ. ''ನಾನು ಜನಿವಾರನೂ ಕಳಕೊಂಡೆ. ಇಷ್ಟಲಿಂಗನೂ ಕಳಕೊಂಡೆ. ಇದಕ್ಕೆ ತಕ್ಕ ಪ್ರಾಯಶ್ಚಿತ್ತ ಯಾವುದು?'' ಬ್ರಾಹ್ಮಣನಾಗಿ ಹುಟ್ಟಿದರೂ ಬಸವಣ್ಣನಲ್ಲಿಲ್ಲದ ಎಲ್ಲ ಗೊಂದಲಗಳೂ ಜಗದೇಕನಲ್ಲಿವೆ. ಈ ದೃಷ್ಟಿಯಿಂದ ಅವನು ಬಸವಣ್ಣನಿಗೆ ideal foil ಅವನ ಎಲ್ಲ ಕೃತಿಗಳ ಹಿಂದೆಯೂ ಅಹಂಕಾರದ ಕೈವಾಡವನ್ನು ಸ್ಪಷ್ಟವಾಗಿ ಗುರುತಿಸಬಹುದು. ಕೊನೆಗೂ ಅವನು ಈ ತನ್ನ ಅಹಂಕಾರಕ್ಕೆಯೆ ಬಲಿಯಾಗುತ್ತಾನೆ. ಅದಕ್ಕಾಗಿ ಬಿಜ್ಜಳನಿಗೆ ಸುಳ್ಳು ಹೇಳುತ್ತಾನೆ. ವಿನಾಕಾರಣ ಅವನನ್ನು ಕೊಲೆ ಮಾಡುತ್ತಾನೆ. ''ಬರಿಗೈಲಿ ಹೋದರೆ ನಾವು ನಗ್ಗೀಡಾಗತೀವಿ, ಮಲ್ಲಿ, ಮಂದೀ ಬಾಯಾಗ ಚ್ಚಾಷ್ಟೀ ಮಾತಾಗಿ ಬಾಳತೀವಿ. ಭಾರೆ ಯಾರೂ ಅಲ್ಲಿ - ನಮ್ಮವರು ಅಣಕಸತಾರ'' ಇಂಥ ಅಹಂಕಾರದ ಕೊನೆ ಆತ್ಮ - ಹತ್ಯೆಯಲ್ಲಿಯೇ ಆಗುವುದು ಆಶ್ಚರ್ಯವನ್ನು ಹುಟ್ಟಿಸುವುದಿಲ್ಲ.

ತಲೆದಂಡದ ಐದನೆಯ ದೃಶ್ಯ ನಾಟ್ಯ ರಚನೆಯ ದೃಷ್ಟಿಯಿಂದ ಗಿರೀಶರ ಬಹುದೊಡ್ಡ ಸಾಧನೆಗಳಲ್ಲೊಂದು. ಬಸವಣ್ಣನ ಸಾಮಾಜಿಕ ಸಮಾನತೆಯ ಆದರ್ಶ ಇಡಿಯ ಸಮಾಜವನ್ನೇ ಅಲುಗಾಡಿಸುವ ಕ್ರಾಂತಿಕಾರಕ ಘಟನೆಯಾಗಿ ಪರಿಣಮಿಸುವುದು ಶೀಲ - ಕಲಾವತಿಯರ ಮದುವೆಯಲ್ಲಿ. ಈ ಘಟನೆಯನ್ನು ಗಿರೀಶ್ ನಿರ್ವಹಿಸುವ ವಿಧಾನದಲ್ಲಿ ಕ್ರಾಂತಿಯ ಬಗ್ಗೆ ಅವರಲ್ಲಿರುವ ಕಲ್ಪನೆ ಇಡಿಯಾಗಿಯೇ ಮೂಡಿ ಬಂದಿರುವುದು ಈ ದೃಶ್ಯದ ಯಶಸ್ಸಿಗೆ ಕಾರಣವಾಗಿದೆ. ದೃಶ್ಯವನ್ನು ಸ್ವಲ್ಪ ವಿವರವಾಗಿ ನೋಡುವ ಮೂಲಕ ಈ ಮಾತನ್ನು ಸ್ಪಷ್ಟಗೊಳಿಸಬಹುದು.

ಈ ದೃಶ್ಯದ ಕ್ರಿಯೆ ನಡೆಯುವುದು ಬಸವಣ್ಣನ ಮಹಾಮನೆಯಲ್ಲಿ. ನಿರಾಶ್ರಿತರಾಗಿ ಗುಳೇ ಬಂದ ಆಂಧ್ರದ ಕಾಡುಕುರುಬರ ಗುಂಪೊಂದರ ಯೋಗಕ್ಷೇಮದಲ್ಲಿ ಬಸವಣ್ಣ ಮಗ್ನನಾಗಿದ್ದಾನೆ. ಅವನಿಗೆ ಮಾನವೀಯತೆ ಮೊದಲು, ಆಧ್ಯಾತ್ಮ ನಂತರ, ''ಮೊದಲು ಇವರಿಗೆ ತಲೀ ಮ್ಯಾಲೊಂದು ಮಾಡು, ಚಾಪಿ ಹಾಸಲಿಕ್ಕೆಂದು ತುಂಡು ಜಮೀನು ಆಗಲಿ. ಅಧ್ಯಾತ್ಮದ ಮಾತು ಹಿಂದಾಗಡೆ'' ಇದು ಅವನು ತರುಣ ಶರಣರಿಗೆ ಹೇಳುವ ಮಾತು. ಇಷ್ಟರಲ್ಲಿ ಅಲ್ಲಿಗೆ ಮಧುವಯ್ಯ - ಲಲಿತಾ, ಹರಳಯ್ಯ - ಕಲ್ಯಾಣಿ ಹಾಗೂ ಶೀಲ - ಕಲಾವತಿಯರ ಆಗಮನವಾಗುತ್ತದೆ. ಶೀಲ - ಕಲಾವತಿಯರ ಮದುವೆಯ ನಿಶ್ಚಯಕ್ಕೆ ಬಸವಣ್ಣನ ಮೊದಲ ಪ್ರತಿಕ್ರಿಯೆ ಮಾತಿನಲ್ಲಿಲ್ಲ. ''ಒಮ್ಮೆಲೆ ಬಸವಣ್ಣನ ಕಣ್ಣಲ್ಲಿ ನೀರು ತುಂಬಿ ಬರುತ್ತದೆ. ಮಾತೊಡೆಯುವುದಿಲ್ಲ''. ನಂತರದ ಅವನ ಸಮಾಧಾನದ ಪ್ರತಿಕ್ರಿಯೆ ಮದುವಯ್ಯ - ಹರಳಯ್ಯರನ್ನು ರೇಗಿಸುತ್ತದೆ. ''ಹುಡುಗನ ಹರಸಾಕೂ ಕೈ ಏಳವಲ್ಲ'' ಎಂಬ ಹರಳಯ್ಯನ ಮಾತಿನಲ್ಲಿ, ''ಇನ್ನು ಹಾರವರ ಹುಡುಗಿ ಸಮಗಾರರ ಸೊಸಿ ಆಕ್ಕಾಳು ಅಂತ ಬ್ಯಾರೆ ಏವರ ಇದ್ದರ ನಮಗೊತ್ತಿಲ್ಲ'' ಎಂಬ ಕಲ್ಯಾಣಿಯ ಮೂದಲಿಕೆಯಲ್ಲಿ ಬಸವಣ್ಣ ತನ್ನ ಶರಣರಲ್ಲಿಯೇ ಎದುರಿಸಬೇಕಾದ ಸಮಸ್ಯೆಗಳ ಛಾಯೆಯಿದೆ. ಆದರೆ, ಕ್ರಾಂತಿಯ ಹುಮ್ಮಸ್ಸಿನಲ್ಲಿರುವ ಮಧುವಯ್ಯನಿಗಾಗಲಿ, ಗೆಲುವಿನ ಹುರುಪಿನಲ್ಲಿರುವ ಹರಳಯ್ಯನಲ್ಲಾಗಲಿ ತಮ್ಮ ಕೃತಿಯನ್ನು ಐತಿಹಾಸಿಕವಾಗಿ ನೋಡುವ ದೃಷ್ಟಿಯಿಲ್ಲ. ಈ ದೃಷ್ಟಿ

ಬಸವಣ್ಣನಲ್ಲೊಬ್ಬನಲ್ಲಿಯೇ ಇದೆ. ''ಹರಳಯ್ಯ, ಇಲ್ಲೀತನಕ ನಾವು ಮಾಡಿದ್ದೆಲ್ಲ ತತ್ವದ ಮಾತಾತು. ಒಡನಾಟದ ಮಾತಾತು. ಆದರೆ ಇದು -ಲಗ್ನ ! ವರ್ಣಾಶ್ರಮ ಧರ್ಮದ ಬೇರಿಗೂ ಕೊಡಲಿ ಏಟು. ಕಳೆದ ಎರಡು ಸಾವಿರ ವರ್ಷದಾಗ ಇಂಥ ಸಂಬಂಧ ಕೂಡಿಲ್ಲ. ಸನಾತನಿಗಳು ಕೂಡಗೊಟ್ಟಿಲ್ಲ, ಈ ಸುದ್ದಿ ಗೊತ್ತಾದರ ಎಂಥಾ ವಿಷ ಹೊರಹೊಮ್ಮತದ, ಎಂಥ ಜ್ವಾಲೆ ಭುಗಿಳೇಳತದ ಗೊತ್ತದ ನಿಮಗೆಲ್ಲಾ, ''ಮಧುವಯ್ಯನ ನಾಟಕೀಯ ವೀರಾವೇಶ, ಮಗಳನ್ನು ಧ್ಯೇಯಕ್ಕಾಗಿ ಬಲಿಕೊಡುವ ಅವನ ಬ್ರಾಹ್ಮಣ ಮಾತು ಬಸವಣ್ಣನನ್ನು ಕನಲಿಸುತ್ತವೆ. (ಬಸವಣ್ಣ ಸಿಟ್ಟಿಗೇಳುವುದಿಲ್ಲ ಎಂದು ಕೇಳಿದ ರಾಮಾನುಜನ್ ಈ ಸಂದರ್ಭವನ್ನು ಗಮನಿಸಿದಂತಿಲ್ಲ). ಬಸವಣ್ಣನಿಗೆ ಮೊದಲು ಕಾಣುವುದು ಮಾನವೀಯ ಸಮಸ್ಯೆ. ''ಇದು.... ನಮ್ಮ ಹೊಟ್ಟಾಗ ಹುಟ್ಟಿರೋ ಈ ಮಕ್ಕಳ ಬಾಳೇವಿನ ಮಾತದ''. ಈ ಮಾನವೀಯತೆ, ಬಸವಣ್ಣನನ್ನು ಕ್ರಾಂತಿಕಾರರ ಆದರ್ಶನಿಷ್ಠ ನಿರ್ಮಾನವೀಯತೆಯಿಂದ ಕಾಯುತ್ತದೆ. ಮದುವೆಗೆ ಶೀಲನ ಪ್ರತಿಕ್ರಿಯೆ, ಲಲಿತ - ಕಲ್ಯಾಣಿಯರ ಪ್ರತಿಕ್ರಿಯೆ ಬೇರೆ ರೀತಿಯವು. ''ನನಗ ಈ ಲಗ್ನ ಬ್ಯಾಡರಿ'' ಎಂದು ಹೇಳುವ ಶೀಲ ಕಲಾವತಿಯನ್ನು ನಿಜವಾಗಿ ಪ್ರೀತಿಸುತ್ತಿರುವುದರಿಂದ ತನ್ನನ್ನು ಮದುವೆಯಾಗುವುದರಿಂದ ಅವಳು ಅನುಭವಿಸಬಹುದಾದ ಸಾಮಾಜಿಕ ಅವಮಾನ ಅವನಿಗೆ ಮುಖ್ಯವಾಗುತ್ತದೆ. ಲಲಿತೆಯನ್ನು ಎದುರಿಸುವುದು ಸಾಂಸ್ಕೃತಿಕ ಸಮಸ್ಯೆ. ''ಮಡಿ - ಮಡಿ ಅಂತ ಬೆಳದಾಳೆ ಆಕಿ ನಾಳೆ ಎಮ್ಮೀ ಚರ್ಮ ಸುಲಿತಾಳ? ತೊಗಲು ಹದ ಮಾಡತಾಳು!''. ಕಲ್ಯಾಣಿಗೆ ಈ ಮದುವೆ ಬೇಕಾಗ್ಗಿದೆ. ''ಸತ್ತರ ಹೋಳೀ ಹರಿತಾದ'' ಎಂದು ಸಾರಿದ ಅವಳ ಅಪ್ಪನ ಕಾರಣಿಕವನ್ನು ಅವಳು ಲೆಕ್ಕಿಸುವುದಿಲ್ಲ.

ಗೊಂದಲ

ಉಳಿದ ಶರಣರ ಪ್ರತಿಕ್ರಿಯೆಗಳಲ್ಲಿಯೂ ಸಾಕಷ್ಟು ಗೊಂದಲವಿದೆ. ಬಸವಣ್ಣ ಆಶೀರ್ವಾದ ಕೊಡಲಿಲ್ಲಂತ ಎಂದು ಒಬ್ಬ ಶರಣನ ಆರೋಪ. ಇನ್ನೊಬ್ಬ ಶರಣನಿಗೆ ಬಸವಣ್ಣ ಅಂಜಿದಂತೆ ತೋರುತ್ತದೆ. ಮತ್ತೊಬ್ಬನಿಗೆ ಕ್ರಾಂತಿಗಾಗಿ ಕಾಯುವ ತಾಳ್ಮೆಯಿಲ್ಲ. ಮಗದೊಬ್ಬನಿಗೆ ಆಡಿದಂತೆ ನಡೆಯದಿದ್ದರೆ ಶರಣಗೋಷ್ಠಿಯೇ ನಗೆಗೀಡಾಗುತ್ತದೆ ಎಂಬ ಹೆದರಿಕೆ. ಅನುಭವ ಮಂಟಪ ತನ್ನ ನಿರ್ಧಾರ ಕೊಡಲಿ ಎನ್ನುವುದು ಬೇರೊಬ್ಬ ಶರಣನ democratic ಬೇಡಿಕೆ. ಕೆಳಗಿನ ಜಾತಿಯ ಹೆಣ್ಣಾಗಿದ್ದರೆ ಹರಳಯ್ಯ ಮದುವೆಗೆ ಒಪ್ಪುತ್ತಿದ್ದನೇ ಎಂದು ಶರಣೆಯೊಬ್ಬಳ ಸವಾಲು - ಎಲ್ಲರಿಗೂ ಬಸವಣ್ಣ ಸಮಾಧಾನ ಹೇಳುತ್ತಾನೆ. ಆದರೆ ಈ ಘಟನೆಯ ಸಂಬಂಧದಲ್ಲಿ ಶರಣ ಸಮುದಾಯದಲ್ಲಿಯೇ ಇದ್ದ ಸಂಶಯಗಳು ಇಲ್ಲಿ ಯಥಾವತ್ತಾಗಿ ಮಾತು ಪಡೆದಿವೆ.

ತನ್ನ ಶರಣರನ್ನು ಸಂಭಾಳಿಸುವುದಕ್ಕಿಂತ ಈ ಹಂತದಲ್ಲಿ ಮಹಾಮನೆಯನ್ನು ಪ್ರವೇಶಿಸುವ ಬಿಜ್ಜಳನನ್ನು ಸಂಭಾಳಿಸುವುದು ಬಸವಣ್ಣನಿಗೆ ಸುಲಭವೆನಿಸುತ್ತದೆ. ಮದುವೆಗೆ ಬಸವಣ್ಣ ಒಪ್ಪಲಿಲ್ಲ ಎಂದು ಕೇಳಿದಾಗ ಬಿಜ್ಜಳನಿಗೆ ಹಾಯೆನಿಸಿರುತ್ತದೆ. ಆಗ ''ಈ ಲಗ್ನ ಆಗೋದು - ಬಿಡೋದು ನನ್ನ ಕೈಯಾಗಿಲ್ಲ'' ಎಂಬ ಬಸವಣ್ಣನ ಮಾತು ಅವನನ್ನು ಮತ್ತೆ ಚಿಂತೆಗೆ ಹಚ್ಚುತ್ತದೆ. ರಾಜಾಜ್ಞೆ ಮಾಡಿ ಲಗ್ನವನ್ನು ನಿಲ್ಲಿಸುವ ಬೆದರಿಕೆಯೊಂದಿಗೆ ಪ್ರಾರಂಭವಾಗುವ ಬಸವಣ್ಣನೊಡನೆಯ ಅವನ ಸಂವಾದ ''ಆಗಲಿ. ನಾ ಈ ಲಗ್ನಕ್ಕೆ ಅಡ್ಡಿ ಮಾಡೂದಿಲ್ಲ'' ಎಂಬ ಒಪ್ಪಿಗೆಯಲ್ಲಿ ಕೊನೆಗೊಳ್ಳುತ್ತದೆ.

ದೃಶ್ಯದ ಕೊನೆಯ ಭಾಗದಲ್ಲಿ ಜಗದೇವ ಹಾಗೂ ಮಲ್ಲಿಬೊಮ್ಮರ ಪ್ರವೇಶವಾಗುತ್ತದೆ. ಯಾವ ಸನ್ನಿವೇಶಕ್ಕೂ over react ಮಾಡುವುದೇ ಜಗದೇವನ ಸ್ವಭಾವವಾದುದರಿಂದ ಈ ಪ್ರಸಂಗದಲ್ಲಿ ಅವನು ಕಾಲ್ಪನಿಕ ಆತಂಕಗಳನ್ನು ಕಾಣುತ್ತಾನೆ. ಬಿಜ್ಜಳ ಶೀಲ - ಕಲಾವತಿಯರ ಮದುವೆಗೆ ಒಪ್ಪಲಾರ ಎಂಬ ಪೂರ್ವಾಗ್ರಹದಿಂದ ಹೊರಟ ಜಗದೇವ ವೈರಿಗಳ ವಿರುದ್ಧ ಹೋಂಚುಹಾಕಲು ಸಿದ್ಧನಾಗಿಯೇ ಬಂದಿರುತ್ತಾನೆ. ಬಿಜ್ಜಳ ಒಪ್ಪಿದ ಎಂದಾಗ ಅದು ಮೋಸದ ಮಾತು ಎಂದು ಶಂಕಿಸುತ್ತಾನೆ. ಹಿಂಸೆ, ಪ್ರತಿಹಿಂಸೆಗಳ ಮಾತಾಡುತ್ತಾನೆ. ''ಹಿಂಸೆ ಆಟದ ವಸ್ತು ಅಲ್ಲ. ಎಲ್ಲಾ ಮೋಹಗಳಲ್ಲಿ ಆ ಮೋಹ ಕೆಟ್ಟ'' ಎಂದು ಬಸವಣ್ಣ ಅವನನ್ನು ಎಚ್ಚರಿಸಬೇಕಾಗುತ್ತದೆ.

ದೃಶ್ಯದ ಕೊನೆಗೆ ಬಸವಣ್ಣ ತನ್ನಷ್ಟಕ್ಕೆ ತಾನೇ ಹೇಳಿಕೊಳ್ಳುವ ವಚನ :

ಇವನಾರವ ಇವನಾರವ ಇವನಾರವ ಎಂದು ಅನಿಸದಿರಯ್ಯ,
ಇವ ನಮ್ಮವ ಇವ ನಮ್ಮವ ಇವ ನಮ್ಮವ ಎಂದೆನಿಸಯ್ಯ ಕೂಡಲ
ಸಂಗಮದೇವಯ್ಯ ನಿಮ್ಮ ಮನೆಯ ಮಗ ಎಂದೆನಿಸಯ್ಯ

ಅವನು ಈ ಹಂತದಲ್ಲಿ ಅನುಭವಿಸುವ ಪರಕೀಯತೆಯ ಭಕ್ತಿಯಲ್ಲಿ ಅದನ್ನು ನಿವಾರಿಸಿಕೊಳ್ಳುವ ಹಂಬಲದ ಮಾರ್ಮಿಕ ಅಭಿವ್ಯಕ್ತಿಯಾಗಿದೆ.

ಗಿರೀಶರ ನಾಟಕಗಳಲ್ಲಿ ತಲೆದಂಡ ನಿಕಟ ಸಂಪರ್ಕ ಹೊಂದಿದುದು ಮೂವತ್ತು ವರ್ಷಗಳ ಹಿಂದೆ ಪ್ರಕಟವಾದ ಅವರ ಎರಡನೆಯ ನಾಟಕ ತುಘಲಕ್‌ದೊಡನೆ. ಎರಡೂ ರಾಜಕೀಯ ನಾಟಕಗಳು. ಗಿರೀಶರೇ ಹೇಳಿದ ಹಾಗೆ ತುಘಲಕ್‌ದಲ್ಲಿ ರಾಜಕೀಯ, ಅಪರೋಕ್ಷವಾಗಿದ್ದರೆ, ತಲೆದಂಡದಲ್ಲಿ ಅದು ನೇರವಾಗಿಯೇ ಬಂದಿದೆ. ಎರಡೂ ನಾಟಕಗಳು ಇತಿಹಾಸದಿಂದಲೇ ತಮ್ಮ ವಸ್ತುವನ್ನು ಆಯ್ದುಕೊಂಡಿವೆ. ಧರ್ಮ, ರಾಜಕೀಯಗಳ ತಾಕಲಾಟ ಎರಡರಲ್ಲಿಯೂ ಇದೆ. ತುಘಲಕ್‌ದಲ್ಲಿ ಗಿರೀಶ ಸ್ವಾತಂತ್ರ್ಯದ ನಂತರದ ನೆಹರೂ ಯುಗದ ರಾಜಕೀಯ ಪ್ರಶ್ನೆಗಳನ್ನೆತ್ತಿಕೊಂಡು ಅದಕ್ಕೊಂದು ಅರ್ಥಪೂರ್ಣವಾದ ರೂಪಕವನ್ನು ಸೃಷ್ಟಿಸಿದರು. ಈಗ ಮತ್ತೊಮ್ಮೆ ತಲೆದಂಡದಲ್ಲಿ ಭಾರತದ ರಾಜಕೀಯವನ್ನು ದಿಕ್ಕೆಡಿಸುತ್ತಿರುವ ಧಾರ್ಮಿಕ ಮತಾಂಧತೆಯ ಸಂಭಾವ್ಯ ಪರಿಣಾಮಗಳ ಬಗ್ಗೆ ಎಚ್ಚರಿಕೆಯನ್ನಿತ್ತಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಸೃಜನಶೀಲ ಲೇಖಕನೊಬ್ಬ ಮೌನದಿಂದಿರುವುದೂ ಕೂಡ ಒಂದು ಬಗೆಯ ರಾಜಕೀಯ ನಿಲುವನ್ನು ತಳೆದಂತೆ ಎಂಬ ಅವರ ಅಭಿಪ್ರಾಯವನ್ನೂ ನಾವು ಗಮನಿಸಲೇಬೇಕು.

ಮೂರು ಮುಖ್ಯ ಕಾರಣಗಳಿಂದಾಗಿ ಗಿರೀಶರು ಇಂದಿನ ಭಾರತೀಯ ಸಂದರ್ಭದಲ್ಲಿ ಅತ್ಯಂತ ಮಹತ್ವದ ನಾಟಕಕಾರರಾಗುತ್ತಾರೆ. ಮೊದಲನೆಯದು, ತಮ್ಮ ನಾಟಕಗಳ ವಸ್ತುವಿನ ಆಯ್ಕೆಯಲ್ಲಿ ಅವರು ತೋರುವ ಧೈರ್ಯ ಹಾಗೂ ಸಂವೇದನಾಶೀಲತೆ. ತಲೆಮಾರುಗಳ ವೈಚಾರಿಕ ಅಂತರ, ಧರ್ಮ - ರಾಜಕೀಯಗಳ ಸಂಘರ್ಷ, ಲೈಂಗಿಕ ಸಮಸ್ಯೆಗಳು, ಕ್ರಾಂತಿಯ ಸೋಲು - ಗೆಲುವುಗಳು - ಇಂಥ ಜೀವಾಳದ ಪ್ರಶ್ನೆಗಳಿಗೆ ಅವರು ತೋರುವ ಸ್ಪಂದನ ಸೂಕ್ಷ್ಮ ಹಾಗೂ ವಿವೇಕ ಪೂರ್ಣವಾಗಿರುವುದರಿಂದ ಹಲವಾರು ಒಳನೋಟಗಳನ್ನು ಕೊಡಲು ಅವರು ಶಕ್ತರಾಗುತ್ತಾರೆ. ಎರಡನೆಯದು, ತಮ್ಮ ದರ್ಶನಗಳಿಗೆ ಅರ್ಥಪೂರ್ಣವಾದ ನಾಟ್ಯರೂಪಕಗಳನ್ನು ಸೃಷ್ಟಿಸುವುದರಲ್ಲಿ ಅವರು ದೊರಕಿಸುವ ಯಶಸ್ಸು. ಈ ರೂಪಕಗಳಿಗಾಗಿ ಅವರು ಇತಿಹಾಸ - ಪುರಾಣಗಳನ್ನು ಶೋಧಿಸುತ್ತಾರೆ, ಜಾನಪದ ಕಲೆಗಳನ್ನೂ ಜಾಲಾಡಿಸುತ್ತಾರೆ. ಅವರ ನಾಟಕಗಳಿಗೆ ವಸ್ತುನಿಷ್ಠತೆ ಹಾಗೂ ಸಾರ್ವತ್ರಿಕತೆಗಳು ಬರುವುದು ಈ ರೂಪಕಗಳಿಂದಲೇ. ಕೊನೆಯದು ಅವರ ರಂಗತಂತ್ರ ಪರಿಣತಿ. ರಂಗಭೂಮಿಯ ಹಲವಾರು ಪ್ರಕಾರಗಳ ಆಳವಾದ ಪರಿಚಯ, ವಿವಿಧ ಮಾಧ್ಯಮಗಳ ಸಾಧ್ಯತೆಗಳ ಅರಿವು, ನಟ - ನಿರ್ದೇಶಕರಾಗಿ ದೊರಕಿಸಿದ ಅಮೂಲ್ಯ ಅನುಭವ, ಪೌರ್ವಾತ್ಯ, ಪಾಶ್ಚಾತ್ಯ ಮಾದರಿಗಳ ಪರಿಜ್ಞಾನ - ಇಂಥ ಹಲವಾರು ಕಾರಣಗಳು ಈ ಪರಿಣತಿಯ ಹಿಂದಿರುವುದನ್ನು ಗುರುತಿಸಬಹುದು. ಸತತ ಪ್ರಯೋಗಶೀಲರಾದ ಗಿರೀಶರಿಂದ ಯಾವ ಮಟ್ಟದ ಸಾಧನೆಯನ್ನೂ ನಿರೀಕ್ಷಿಸಬಹುದಾಗಿದೆ.

●

ಎಂ.ಆರ್.ಶ್ರೀನಿವಾಸಮೂರ್ತಿ: ಬದುಕು, ಕನ್ನಡದ ಕೆಲಸ

ಡಾ॥ ಎನ್.ಎಸ್. ತಾರಾನಾಥ

೧

ಕನ್ನಡ ಭಾಷೆ - ಸಾಹಿತ್ಯಗಳ ಪುನರುಜ್ಜೀವನ ಕಾರ್ಯದಲ್ಲಿ ಶ್ರಮಿಸಿದ ಮಹನೀಯರು ಹಲವರು. ಅವರಲ್ಲಿ ಒಬ್ಬೊಬ್ಬರ ಶ್ರಮ ದುಡಿಮೆಗಳೂ ಒಂದೊಂದು ತೆರನಾದವು. ಪಂಜೆ ಮಂಗೇಶರಾವ್, ಎಸ್.ಜಿ. ನರಸಿಂಹಾಚಾರ್ ತಮ್ಮ ಸೃಜನಶೀಲ ಕೃತಿಗಳ ರಚನೆಯಿಂದ, ಆರ್.ನರಸಿಂಹಾಚಾರ್, ನಾ.ಶ್ರೀ. ರಾಜಪುರೋಹಿತ ತಮ್ಮ ಪಾಂಡಿತ್ಯದಿಂದ, ಎಂ.ಎ. ರಾಮಾನುಜೈಯಂಗಾರ್, ಫ.ಗು. ಹಳಕಟ್ಟಿ ತಮ್ಮ ಗ್ರಂಥ ಸಂಪಾದನೆಯಿಂದ, ಬೆಳ್ಳಾವೆ ವೆಂಕಟನಾರಣಪ್ಪ, ಎ.ಆರ್. ಕೃಷ್ಣಶಾಸ್ತ್ರಿ ತಮ್ಮ ಸಂಘ - ಸಂಸ್ಥೆಗಳ ಸ್ಥಾಪನೆ ಸೇವೆಗಳಿಂದ, ಆಲೂರು ವೆಂಕಟರಾವ್, ಮುದವೀಡು ಕೃಷ್ಣರಾವ್ ತಮ್ಮ ವಾಗ್ಮಿತೆಯಿಂದ ಕನ್ನಡದ ಕೆಲಸ ಮಾಡಿದರು; ಕನ್ನಡದ ಪ್ರತಿಷ್ಠೆಗೆ ಕಾರಣರಾದರು; ಕನ್ನಡ ಕಟ್ಟಿದರು. ಆದರೆ ಸೃಜನಶೀಲ ಕೃತಿರಚನೆ, ಪಾಂಡಿತ್ಯ, ಗ್ರಂಥಸಂಗ್ರಹ, ಸಂಘ ಸಂಸ್ಥೆಗಳಲ್ಲಿ ಸೇವೆ, ವಾಗ್ಮಿತೆಗಳಷ್ಟು ಸೇರಿದಂತೆ ಕೆಲಸ ಮಾಡಿದ ಗಣ್ಯರು ವಿರಳ. ಕೂಡಲೇ ನೆನಪಿಗೆ ಬರುವವರು ಆಚಾರ್ಯ ಬಿ.ಎಂ. ಶ್ರೀಕಂಠಯ್ಯನವರು. ಈ ವಿರಳರ ಪಂಕ್ತಿಗೆ ಸೇರುವವರು ಎಂ.ಆರ್. ಶ್ರೀನಿವಾಸಮೂರ್ತಿ ಅವರು.

ಎಂ.ಆರ್. ಶ್ರೀನಿವಾಸಮೂರ್ತಿ ಅವರು ಹೆಸರಿನಲ್ಲಿರುವ ಎಂ. ಎಂಬುದು ಮೈಸೂರನ್ನು ಆರ್. ಎಂಬುದು ಅವರ ತಂದೆ ರಾಮಚಂದ್ರರಾಯರನ್ನು ಸಂಕೇತಿಸುತ್ತದೆ. ಈ ಹಿನ್ನೆಲೆಯಲ್ಲಿಯೇ ಏನೋ ಅನೇಕರು ಶ್ರೀನಿವಾಸಮೂರ್ತಿಗಳು ಮೈಸೂರಿನಲ್ಲಿ ಹುಟ್ಟಿದರು ಎಂದು ಉಲ್ಲೇಖಿಸಿದ್ದಾರೆ [1]. ಆದರೆ ದಿಟವಾಗಿ

1. 'ಸಾಹಿತ್ಯಾಲೋಕ', ಮೈಸೂರು, ೧೯೭೮, ಮುನ್ನುಡಿ ಪು. ೫, ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ, ಮೈಸೂರು ೧೯೭೯, ಪು. ೧೪೫೧.

ಮೂರ್ತಿಗಳು ಹುಟ್ಟಿದ್ದು ಹಾಸನದಲ್ಲಿ ೧೮೯೨ರ ಆಗಸ್ಟ್ ೨೪ರಂದು . ಆಗ ಅವರ ತಂದೆ ರಾಮಚಂದ್ರರಾಯರು ಹಾಸನದ ಜಿಲ್ಲಾ ಕಛೇರಿಯಲ್ಲಿ ಗುಮಾಸ್ತರಾಗಿದ್ದರು. ಅವರದು ಸುಸಂಸ್ಕೃತ ಮಾಧ್ವಬ್ರಾಹ್ಮಣ ಮನೆತನ, ಆಂಧ್ರಪ್ರದೇಶದ ಗೋಲ್ಕೊಂಡಕ್ಕೆ ಸೇರಿದ್ದ ಪೂರ್ವಿಕ ಪರಂಪರೆ, ಅವರ ಕುಟುಂಬ ಎಂದರೆ ಎಂ.ಆರ್.ಶ್ರೀನಿವಾಸಮೂರ್ತಿಗಳ ತಾಯಿ - ಸಾವಿತ್ರಮ್ಮ ಮದರಾಸಿನ ಕೃಷ್ಣಗಿರಿಯವರು. ಎರಡು ಕುಟುಂಬಗಳಲ್ಲೂ ತೆಲುಗು ಮಾತಿನ ಬಳಕೆಯಿತ್ತು. ಇದೇ ಮುಂದೆ ಮೂರ್ತಿಗಳ ಮನೆಮಾತು ತೆಲುಗಾಗಲು ಕಾರಣವಾಯಿತು. ಶ್ರೀನಿವಾಸ ಮೂರ್ತಿಗಳ ತಂದೆ ಬಿ.ಎ. ಪದವೀಧರರು, ಸಂಸ್ಕೃತಭಾಷಾತಜ್ಞರು, ಸಾಹಿತ್ಯಾಸಕ್ತರು, ಅಮಲ್ದಾರರಾಗಿ ನಿವೃತ್ತರಾದರು. ಒಂಭತ್ತು ಮಕ್ಕಳ ದೊಡ್ಡ ಕುಟುಂಬದ ಆ ತಂದೆ ಮನೆಯಲ್ಲಿ ಸಾಹಿತ್ಯದ ವಾತಾವರಣ ತುಂಬಿದ್ದರು. ದಿನವೂ ರಾತ್ರೆ ಮಲಗುವ ಮುನ್ನ ಹಿರಿಯ ಮಗನಿಂದ ಕಾದಂಬರೀ ವಾಚನ, ಎರಡನೆಯ ಮಗನಿಂದ ಕಾವ್ಯವಾಚನ - ಆಶುಕವಿತ್ವ ರಚನೆ, ಮೂರನೆಯವನ ಕೃತಿ ರಚನೆಗೆ ಪ್ರೋತ್ಸಾಹ - ಈ ವಿಧಗಳಲ್ಲಿ ಮಕ್ಕಳಲ್ಲಿ ಸಾಹಿತ್ಯಾಸಕ್ತಿ ಅರಳಿಸುತ್ತಿದ್ದರು. ಮೂರ್ತಿಗಳ ಮುಂದಿನ ಸಾಹಿತ್ಯಜೀವನಕ್ಕೆ ಇದೇ ಸ್ಫೂರ್ತಿ ಮತ್ತು ಹಿನ್ನೆಲೆಯಾಯಿತು.

ಶ್ರೀನಿವಾಸಮೂರ್ತಿಗಳ ಪ್ರಾಥಮಿಕ - ಮಾಧ್ಯಮಿಕ ವಿದ್ಯಾಭ್ಯಾಸ ಅವರ ತಂದೆಯವರ ವರ್ಗಾವಣೆ ಕಾರಣವಾಗಿ ಹಲವು ಊರುಗಳಲ್ಲಿ ಜರುಗಿತು. ಅವರು ತರುವಾಯದ ವಿದ್ಯಾಭ್ಯಾಸವನ್ನು ಬೆಂಗಳೂರಿನಲ್ಲಿ ನಿಂತು ಮುಗಿಸಿದರು. ಬೆಂಗಳೂರಿನ ಸೆಂಟ್ರಲ್ ಕಾಲೇಜು ಕಟ್ಟಡದಲ್ಲೇ ಅವರ ಪ್ರೌಢಶಾಲೆ ಮತ್ತು ಕಾಲೇಜು ವಿದ್ಯಾಭ್ಯಾಸ ಮುಂದುವರಿಯಿತು. ಆಗ ಅವರು ಆರಿಸಿಕೊಂಡ ವಿಷಯ ವಿಜ್ಞಾನ. ಬೆಳ್ಳಾವೆ ವೆಂಕಟನಾರಣಪ್ಪನವರು ಅವರ ವಿಜ್ಞಾನದ ಅಧ್ಯಾಪಕರು, ಟೀಟ್ ಇಂಗ್ಲೀಷ್ ಪ್ರಾಧ್ಯಾಪಕರು. ಕಾಲೇಜು ದಿನಗಳಲ್ಲಿ ಅವರಿಗೆ ವೆಂಕಟರಾವ್ ತೆಲಂಗ್ ಎಂಬ ವಿದ್ಯಾರ್ಥಿಯ ಪರಿಚಯವಾಯಿತು. ಆತನ ಮೂಲಕ ಅವರು ಪ್ರಾಚೀನ, ಮಧ್ಯಕಾಲೀನ ಮತ್ತು ಆಧುನಿಕ ಕನ್ನಡ ಸಾಹಿತ್ಯ ಪರಿಚಯ ಮಾಡಿಕೊಂಡರು. ಈ ದೃಷ್ಟಿಯಿಂದ ಕನ್ನಡ ಸಾಹಿತ್ಯಾಭ್ಯಾಸಕ್ಕೆ ಮೂರ್ತಿಗಳು ತಮಗೆ ತಾವೇ ಗುರುಗಳಾಗಿದ್ದರು! ಎಫ್.ಎ. ಮಾಡಿದ ಅನಂತರ ೧೯೧೫ರಲ್ಲಿ ಬಿ.ಎ. ವ್ಯಾಸಂಗ ಮುಗಿಸಿ ಪದವೀಧರರಾದರು. 'ಲಾ' ವ್ಯಾಸಂಗಕ್ಕೆಂದು ಅವರು ಬೊಂಬಾಯಿಗೆ ತೆರಳಿದರಾದರೂ, ಸಾಂಸಾರಿಕ ತೊಂದರೆಗಳಿಂದ ಅದನ್ನು ಮುಗಿಸದೆ ಹಿಂದಿರುಗಿದರು. ಮುಂದೆ ತಮ್ಮ ವೃತ್ತಿಯಲ್ಲಿದ್ದಾಗ ೧೯೨೧-೨೨ರಲ್ಲಿ ಒಂದು ವರ್ಷದ ಸ್ನಾತಕೋತ್ತರ ಉಪಾಧ್ಯಾಯ ಶಿಕ್ಷಣ ತರಬೇತಿಯನ್ನು ಮೈಸೂರಿನಲ್ಲಿ ಪಡೆದರು.

ಶ್ರೀನಿವಾಸಮೂರ್ತಿಗಳು ೧೯೧೬ರಲ್ಲಿ ಬೋಧಕರಾಗಿ ತಮ್ಮ ವೃತ್ತಿಯನ್ನು ಆರಂಭಿಸಿದರು. ಶಿವಮೊಗ್ಗೆಯ ಪ್ರೌಢಶಾಲೆಯಲ್ಲಿ ರಜಾ ಜಾಗವೊಂದರಲ್ಲಿ (Leave Vacancy) ಮೂರು ತಿಂಗಳ ಕಾಲ ತಾತ್ಕಾಲಿಕ ಬೋಧಕರಾಗುವುದರೊಂದಿಗೆ ಅವರು ತಮ್ಮ ಶಿಕ್ಷಕವೃತ್ತಿಯನ್ನು ಮೊದಲು ಮಾಡಿದರು. ನಂತರ ೧೯೧೬ರ ನವೆಂಬರ್‌ನಲ್ಲಿ ತೀರ್ಥಹಳ್ಳಿಯ ಕನ್ನಡ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾಗಿ ಖಾಯಮ್ಮಾಗಿ ನೇಮಕಗೊಂಡರು. ಅಲ್ಲಿದ್ದದ್ದು ಕೇವಲ ಎಂಟು ತಿಂಗಳು! ೧೯೧೭ರ ಜುಲೈ ತಿಂಗಳಲ್ಲಿ ಮತ್ತೆ ಶಿವಮೊಗ್ಗೆಯ ಪ್ರೌಢಶಾಲೆಗೆ ವರ್ಗವಾಗಿ ಬಂದರು. ಆ ಅವಧಿಯ ಅವರ ಶಿಷ್ಯಪ್ರೀತಿ, ಕಾರ್ಯದಕ್ಷತೆ ಮನೆ ಮಾತಾದುವು. ಜೊತೆಗೆ ಅವರಿಗಿದ್ದ ಜ್ಞಾನ ವೈಶಾಲ್ಯ ಹಾಗೂ ಸಾಹಿತ್ಯಾಸಕ್ತಿಗಳು ಅವರ ಹೆಸರನ್ನು ಹರಡಿದುವು. ಇದನ್ನರಿತ ಆಗಿನ ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಎಜುಕೇಷನ್ ಆಗಿದ್ದ ಬೆಳವಾಡಿ ದಾಸಪ್ಪನವರು ೧೯೨೧ರಲ್ಲಿ ಅವರನ್ನು ವಿದ್ಯಾ ಇಲಾಖೆಯ ಗ್ರಂಥಾಲಯಕ್ಕೆ ಕನ್ನಡ ಸಹಾಯಕರಾಗಿ ತೆಗೆದುಕೊಂಡರು. ಇಲ್ಲಿ ಮೂರ್ತಿಗಳ ಸಾಹಿತ್ಯತೃಷೆಗೆ ಜ್ಞಾನವಾರಿಧಿಯೇ ದೊರೆಯಿತು. ಪುಸ್ತಕಗಳ ರೂಪದಲ್ಲಿ ಪ್ರಬುದ್ಧ ವಿದ್ವಾಂಸರ ಪರಿಚಯದ ರೂಪದಲ್ಲಿ ಬಳಿಕ ೧೯೨೩-೨೪ರಲ್ಲಿ ಚಿಕ್ಕಮಗಳೂರು, ೧೯೨೪-೨೬ರವರೆಗೆ ತುಮಕೂರು, ೧೯೨೭ರಲ್ಲಿ ಬೆಂಗಳೂರು ಪ್ರದೇಶಗಳ ನಾರ್ಮಲ್ ಸ್ಕೂಲಿನಲ್ಲಿ ಮುಖ್ಯೋಪಾಧ್ಯಾಯರಾಗಿದ್ದರು. ೧೯೨೭ರಲ್ಲಿಯೇ ಮಂಡ್ಯದಲ್ಲಿ ಸಹಾಯಕ

ವಿದ್ಯಾಪರೀಕ್ಷಕರಾಗಿ ನೇಮಕಗೊಂಡರು. ಈ ವೃತ್ತಿಯಲ್ಲೇ ಬೆಂಗಳೂರು, ದೊಡ್ಡಬಳ್ಳಾಪುರಗಳಲ್ಲಿ ೧೯೩೯ರವರೆಗೂ ಸೇವೆಸಲ್ಲಿಸಿದರು. ೧೯೪೭ರಲ್ಲಿ ಬಡ್ತಿಯ ಮೇಲೆ ಕೋಲಾರದಲ್ಲಿ ಆರು ತಿಂಗಳ ಕಾಲ ಜಿಲ್ಲಾ ವಿದ್ಯಾಧಿಕಾರಿಗಳಾಗಿ ನೇಮಕಗೊಂಡು ನಿವೃತ್ತರಾದರು. ಈ ನಡುವೆ ೧೯೩೯ ರಿಂದ ೧೯೪೬ರವರೆಗಿನ ಅರ್ಧ ದಶಕದ ಕಾಲ ಅವರು ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲೀಷ್ - ಕನ್ನಡ ನಿಘಂಟು ಯೋಜನೆಯಲ್ಲಿ ಸಹಾಯಕ ಸಂಪಾದಕರಾಗಿ, ಪ್ರಧಾನ ಸಂಪಾದಕರಾಗಿ ಸೇವೆ ಸಲ್ಲಿಸಿದರು. ಈ ದುಡಿಮೆ ಅವರ ಹೆಸರನ್ನು ಚಿರಸ್ಮರಣೀಯಗೊಳಿಸಿದೆ.

ಶ್ರೀನಿವಾಸಮೂರ್ತಿಗಳಿಗೆ ಹುಟ್ಟಿನಿಂದ ಬಂದುದೊ ಎನ್ನುವ ಮಟ್ಟಿಗೆ ಬೋಧನೆ ಒಲಿದಿತ್ತು. ಅವರು ಬೋಧಿಸುತ್ತಿದ್ದುದು ಸಾಹಿತ್ಯವನ್ನಲ್ಲ, ವಿಜ್ಞಾನವನ್ನು. ಸರಸತೆಯಿಂದ ಮಿಶ್ರಣವಾದ ಅವರ ಕಥಾರೂಪದ ಬೋಧನೆ ವಿಶಿಷ್ಟ ರೀತಿಯದಾಗಿತ್ತು. ವಿದ್ಯಾರ್ಥಿಗಳಿಗೆ ವಿಷಯ ಮನದಟ್ಟಾಗುವ ಎಲ್ಲ ಕ್ರಮಗಳನ್ನೂ ತಮ್ಮ ಬೋಧನೆಯಲ್ಲಿ ಅವರು ಅಳವಡಿಸಿಕೊಳ್ಳುತ್ತಿದ್ದರು. ಕ್ರೀಡಾಭ್ಯಾಸ, ಜಿಲ್ಲಾ ಪ್ರವಾಸ, ಭಾಷಣ ತಯಾರಿಕೆ, ವಿಜ್ಞಾನ ಸಂಘದ ಕಾರ್ಯಚಟುವಟಿಕೆಯೇ ಮುಂತಾದ ಪಠ್ಯೇತರ ವಿದ್ಯಾರ್ಥಿ ಚಟುವಟಿಕೆಗಳಲ್ಲಿ ಮೂರ್ತಿಗಳು ಸ್ವಸಂತೋಷದಿಂದ ಭಾಗವಹಿಸಿ ವಿದ್ಯಾರ್ಥಿಗಳೊಂದಿಗೆ ಬೆರೆಯುತ್ತಿದ್ದರು. ಈ ಸಂದರ್ಭಗಳಲ್ಲಿ ಅವರು ವಿದ್ಯಾರ್ಥಿಗಳಿಗೆ ಕೊಡುತ್ತಿದ್ದ ಪ್ರೋತ್ಸಾಹ, ನೀಡುತ್ತಿದ್ದ ಉತ್ತೇಜನ, ತೋರುತ್ತಿದ್ದ ಸಲುಗೆಗಳು ಅವರನ್ನು ವಿದ್ಯಾರ್ಥಿಪ್ರಿಯ ಅಧ್ಯಾಪಕರನ್ನಾಗಿಸಿತು. ಒಮ್ಮೆ ಇವರು ಬರೆದ 'ಕಂಠೀರವ ವಿಜಯ' ನಾಟಕಕ್ಕೆ ಮೈಸೂರು ಮಹಾರಾಜರಿಂದ ಒಂದು ನೂರ ಐವತ್ತು ರೂಪಾಯಿ ಪುರಸ್ಕಾರ ದೊರೆಯಿತು. ಆಗ ಬೆಂಗಳೂರಿನಲ್ಲಿ ಓದುತ್ತಿದ್ದ ತಮ್ಮ ಶಿವಮೊಗ್ಗೆಯ ಶಿಷ್ಯರನ್ನೆಲ್ಲ ಕರೆದು ಲಾಡು ಊಟ ಹಾಕಿಸಿ, ಲಾಲ್‌ಬಾಗ್‌ನಲ್ಲಿ ಅವರೊಂದಿಗೆ ಭಾವಚಿತ್ರ ತೆಗೆಸಿಕೊಂಡರು! ಇದು ಅವರ ಶಿಷ್ಯಪ್ರೀತಿಯ ಒಂದು ಮಾದರಿ. ಅವರ ಶಿಷ್ಯ ವರ್ಗವಾದರೂ ಪ್ರತಿಷ್ಠಿತವಾದುದೇ. ಎಲ್. ಗುಂಡಪ್ಪ , ನಿಟ್ಟೂರು ಶ್ರೀನಿವಾಸರಾವ್, ಎಸ್.ಜಿ. ಶಾಂತರಾಜಯ್ಯ ಮುಂತಾದವರಿದ್ದ ಬಳಗ ಅದು. ಎಲ್. ಗುಂಡಪ್ಪ, ಎಸ್.ಜಿ. ಶಾಂತರಾಜಯ್ಯ ಅವರ ಲೇಖನ, ಕತೆ, ಕವಿತೆಗಳನ್ನು ಮೊದಲಿಗೆ 'ಮೈಸೂರು ಸ್ಕೌಟ್' ಪತ್ರಿಕೆಯಲ್ಲಿ ಪ್ರಕಟಿಸಿ ಆ ಮೂಲಕ ಅವರನ್ನು ಮೂರ್ತಿಗಳು ಪ್ರೋತ್ಸಾಹಿಸಿದರು; ಅವರಿಗೆ ಸಾಹಿತ್ಯಲೋಕದ ದಾರಿ ತೋರಿಸಿದರು.

ಶ್ರೀನಿವಾಸಮೂರ್ತಿಗಳಲ್ಲಿ ಗತ್ತು, ಗಾಂಭೀರ್ಯಗಳಿತ್ತಾದರೂ ಅಧಿಕಾರದ ಮದ ಪ್ರತಿಷ್ಠೆಗಳಿರಲಿಲ್ಲ. ವಿದ್ಯಾ ಇಲಾಖೆಯ ಇನ್‌ಸ್ಪೆಕ್ಟರ್ ಆಗಿಯೂ ಅವರು ಜನಾನುರಾಗಿಯಾಗಿದ್ದರು. ತಮ್ಮ ಅಧಿಕಾರದಿಂದ ಅವರು ಉಪಾಧ್ಯಾಯರನ್ನು ಬೆದರಿಸಲಿಲ್ಲ. ಬದಲಿಗೆ ಅವರ ಕುಂದು ಕೊರತೆ ಅರಿತು ಅವನ್ನು ನಿವಾರಿಸಿದರು; ಉಪಾಧ್ಯಾಯರಿಗೆ ವೃತ್ತಿಯಲ್ಲಿ ನಿಸ್ವಾರ್ಥ ನಿಸ್ಪೃಹ ನಿರ್ಮಲ ಗುಣಗಳ ಅಳವಡಿಕೆ ಕುರಿತು ಒತ್ತಿ ಹೇಳುತ್ತಿದ್ದರು; ಪ್ರೀತಿ ವಾತ್ಸಲ್ಯಗಳಿಂದ ಅವರನ್ನು ನೋಡಿ ಅವರ ಕಷ್ಟ ಸುಖಗಳಲ್ಲಿ ಭಾಗಿಯಾಗುತ್ತಿದ್ದರು. ಕಟ್ಟಡವಿಲ್ಲದ ಶಾಲೆ, ಸಲಕರಣೆಗಳಿಲ್ಲದ ಬೋಧನೆ, ಮಕ್ಕಳೇ ಬರದ ಪರಿಸ್ಥಿತಿಗಳನ್ನು ಅರಿತುಕೊಂಡು ಶಿಕ್ಷಣದಲ್ಲಿ ಸುಧಾರಣೆ, ಪರಿವರ್ತನೆ ತರಲು ಅವರು ಪ್ರಯತ್ನಿಸಿದರು. ವಿನಾಕಾರಣ ಉಪಾಧ್ಯಾಯರಿಗೆ ದಂಡ, ವರ್ಗಾವಣೆ, ಕಿರುಕುಳ ಕೊಡುತ್ತಿರಲಿಲ್ಲ. ಇದು ಹೇಗಿದ್ದರೂ ಕೆಲಸದಲ್ಲಿ ಪ್ರಾಮಾಣಿಕತೆ, ನಿಸ್ಪೃಹತೆ, ದಕ್ಷತೆ, ಶಿಸ್ತು , ನಿಯಮ ನಿಷ್ಠುರತೆ ಇವುಗಳಿಗೇನೂ ಅವರಲ್ಲಿ ಕೊರತೆ ಇರಲಿಲ್ಲ. ಕರ್ತವ್ಯಭ್ರಷ್ಟನಾದ ಉಪಾಧ್ಯಾಯರನ್ನು ಅವರೆಂದೂ ಸಹಿಸುತ್ತಿರಲಿಲ್ಲ, ಒಪ್ಪುತ್ತಿರಲಿಲ್ಲ. ವಿ. ಸೀತಾರಾಮಯ್ಯ ಉಲ್ಲೇಖಿಸಿರುವ ಒಂದು ಸಂದರ್ಭ ಹೀಗಿದೆ [2] : ಪರಿಚಿತರೊಬ್ಬರ ಪರವಾಗಿ ವಿ.ಸೀ. ಶಿಫಾರಸ್ಸಿನ ಮಾತಾಡಿದರು. ಆತ ಶಾಲೆಯ ಬಾಗಿಲನ್ನೇ ತೆರೆಯದ ಅಧ್ಯಾಪಕ! ಮೂರ್ತಿಗಳು ಇದನ್ನು ವಿ.ಸೀ.ಯವರಿಗೆ ತಿಳಿಸಿದ್ದಲ್ಲದೆ ಆತನ ಬೋಧನಾಲಸ್ಯೆ, ಅನ್ಯಕಾರ್ಯ ಪ್ರವೃತ್ತಿ, ಸ್ಥಳೀಯ ರಾಜಕೀಯ, ಆತನ ಶಿಫಾರಸ್‌ಗಳ ಒತ್ತಡವನ್ನೂ ವಿವರಿಸಿದರು. ಸಂಬಂಧಿಸಿದ ವ್ಯಕ್ತಿಗೇ ಇದನ್ನು ತಿಳಿಸಿ ಆತನ ನಡತೆ ತಿದ್ದಿಕೊಳ್ಳಲೂ ಎಚ್ಚರಿಸಿದರು. ವಿ.ಸೀ.ಯವರಿಗೆ ಕೂಡ

2. ವಿ.ಸೀ. ಎಂ.ಆರ್. ಶ್ರೀನಿವಾಸಮೂರ್ತಿ, 'ಹಿರಿಯರು - ಗೆಳೆಯರು', ಮೈಸೂರು, ೧೯೮೦, ಪು. ೨೨೧-೨೨.

''ಈ ಬಾರಿ ಮನ್ನಿಸಿದ್ದೇವೆ, ಇನ್ನು ಮುಂದೆ ನೀವು ಇಂಥವರಿಗೆ ಇಂಥದಕ್ಕೇ ಶಿಫಾರಸ್ ಮಾಡಬೇಡಿ, ಸರಕಾರದಿಂದ ಅನ್ಯಾಯವಾಗಿದ್ದರೆ ಹೇಳಿ ಮೇಲಿನವರಲ್ಲಿ ಶಿಫಾರಸ್ ಮಾಡಿ ಸರಿಪಡಿಸೋಣ'' ಎಂದು ಸೂಚಿಸಿದರಂತೆ. ಈ ಪ್ರಸಂಗ ಮೂರ್ತಿಗಳ ವೃತ್ತಿಧರ್ಮಪಾಲನೆ, ನಿಯಮ ನಿಷ್ಠುರತೆಗಳಿಗೆ ಸಾಕ್ಷಿಯಾಗಿದೆ.

ಇಂಗ್ಲಿಷ್ - ಕನ್ನಡ ನಿಘಂಟು ಯೋಜನೆಯಲ್ಲಿ ಶ್ರೀನಿವಾಸಮೂರ್ತಿಗಳು ಸಲ್ಲಿಸಿದ ಸೇವೆ ಪ್ರತ್ಯೇಕ ಉಲ್ಲೇಖಕ್ಕೆ ಅರ್ಹವಾದದ್ದು. ೧೯೩೩ರ ನವೆಂಬರ್‌ನಲ್ಲಿ ಬೆಳ್ಳಾವೆ ವೆಂಕಟನಾರಣಪ್ಪನವರ ನೇತೃತ್ವದಲ್ಲಿ ಆರಂಭವಾದ ಈ ಯೋಜನೆಗೆ ೧೯೩೯ರಲ್ಲಿ ಮೂರ್ತಿಗಳು ಸಹಾಯಕ ಸಂಪಾದಕರಾಗಿ ಸೇರಿಕೊಂಡರು. ವೆಂಕಟನಾರಣಪ್ಪನವರ ಪ್ರಿಯಶಿಷ್ಯರಲ್ಲಿ ಮೂರ್ತಿಗಳೊಬ್ಬರು. ವೆಂಕಟನಾರಣಪ್ಪ ಸಮಯ ಪಾಲನೆ, ಕರ್ತವ್ಯ ನಿರ್ವಹಣೆ, ಕಛೇರಿ ಕೆಲಸಗಳಲ್ಲಿ ತುಂಬ ಬಿಗಿ ಹಾಗೂ ಶಿಸ್ತಿನ ಮನುಷ್ಯರು. ಅವರ ಮರ್ಜಿಯನ್ನನುಸರಿಸಿ ಕೆಲಸ ಮಾಡುವುದೇ ಕಠಿಣವಾಗಿತ್ತು. ಮೂರ್ತಿಗಳು ಅವರಿಗೂ ತೃಪ್ತಿಯಾಗುವಂತೆ ದುಡಿದರು. ೧೯೪೩ರಲ್ಲಿ ವೆಂಕಟನಾರಣಪ್ಪನವರು ತೀರಿಕೊಂಡ ಮೇಲೆ ಮೂರ್ತಿಗಳೇ ಪ್ರಧಾನ ಸಂಪಾದಕತ್ವ ವಹಿಸಿಕೊಂಡು ೧೯೪೬ರ ಡಿಸೆಂಬರ್ ಹೊತ್ತಿಗೆ ಯೋಜನೆಯನ್ನು ಪೂರಯಿಸಿ ಗ್ರಂಥ ಪ್ರಕಟಿಸಿದರು. ಪದಸಂಗ್ರಹಣೆ, ಅರ್ಥ ನಿಷ್ಕರ್ಷೆ, ನಕಲೆತ್ತುವುದು, ಕರಡು ತಿದ್ದುವುದು ಇತ್ಯಾದಿ ಕೆಲಸಗಳೆಲ್ಲದರಲ್ಲೂ ಪಾಲ್ಗೊಂಡು ಮೂರ್ತಿಗಳು ಗುರುಗಳ ಅಪೇಕ್ಷೆ ಪೂರಯಿಸಿದರು. ಈ ಕೆಲಸವೊಂದೇ ಮೂರ್ತಿಗಳ ಕರ್ತವ್ಯ ಶ್ರದ್ಧೆಯ ಜೀವಂತ ಸಾಕ್ಷಿ.

ಶ್ರೀನಿವಾಸಮೂರ್ತಿಗಳು ಹುಟ್ಟಿದ್ದು, ಬೆಳೆದದ್ದು, ಸಂಸಾರ ನಡೆಸಿದ್ದು ದೊಡ್ಡ ಕುಟುಂಬವೊಂದರಲ್ಲಿ. ತಂದೆಗೆ ಅವರು ಎರಡನೆಯ ಮಗ; ಅವರಿಗೆ ನಾಲ್ವರು ತಮ್ಮಂದಿರು, ಮೂವರು ತಂಗಿಯರು. ಆ ಕಾಲದ ಸಂಪ್ರದಾಯಕ್ಕನುಗುಣವಾಗಿ ಪ್ರೌಢಶಾಲೆಯ ಕೊನೆಯ ತರಗತಿಯಲ್ಲಿ ಓದುತ್ತಿದ್ದಾಗಲೇ ಚಿಕ್ಕ ವಯಸ್ಸಿನಲ್ಲೇ ಸೋದರಮಾವನ ಮಗಳಾದ ಲಕ್ಷ್ಮಮ್ಮನನ್ನು ಮೂರ್ತಿಗಳು ಮದುವೆಯಾದರು. ಮೂರ್ತಿಗಳ ಅಣ್ಣ ಕೃಷ್ಣಮೂರ್ತಿ ತಂದೆ ರಾಮಚಂದ್ರರಾಯರು ನಿವೃತ್ತರಾದ ವರ್ಷದಲ್ಲೇ ತೀರಿಕೊಂಡರು; ಅಣ್ಣನ ಹೆಂಡತಿ ಕೂಡ ಆ ತರುಣದಲ್ಲೇ ದೈವಾಧೀನರಾದರು. ಆತನ ಮಗನ ಪೋಷಣೆ, ಇಬ್ಬರು ತಮ್ಮಂದಿರ ಓದುಗಾರಿಕೆ, ಮದುವೆಯಾದ ತಂಗಿಯರ ಹೋಗಿ ಬರುವಿಕೆ, ಸಂಸಾರದ ಆರ್ಥಿಕ ಮುಗ್ಗಟ್ಟು, ತಂಗಿಯರ ಸಂಸಾರದಲ್ಲಿ ಉದ್ಭವಿಸಿದ ಆರ್ಥಿಕ - ಸಂಸಾರಿಕ ಸಮಸ್ಯೆಗಳ ನಿವಾರಣೆ - ಈ ಎಲ್ಲಕ್ಕೂ ಮೂರ್ತಿಗಳೇ ಹೆಗಲು ಕೊಡುತ್ತಿದ್ದರು. ಸಂಸಾರ ನಿರ್ವಹಣೆಯಲ್ಲಿ ಅವರು ತೋರಿದ ತ್ಯಾಗ, ಪ್ರೀತಿ, ಸಹನೆ, ಶ್ರದ್ಧೆಗಳು ಇತರರಿಗೆ ಮಾದರಿಯಾಗಿದ್ದವು. ಅವರ ಒಬ್ಬ ತಂಗಿ, ಒಬ್ಬ ತಮ್ಮನ ಸಂಸಾರ ಮೂರ್ತಿಗಳ ಸಂಸಾರದೊಂದಿಗೆ ಒಟ್ಟಿಗೆಯೇ ಇತ್ತು. ಬಂಧುವರ್ಗದಲ್ಲಿ ಅವರಿಗೆ 'ಧರ್ಮರಾಯ' ಎಂಬ ಅಡ್ಡ ಹೆಸರಿತ್ತು[3]. ಮೂರ್ತಿಗಳನ್ನೂ ಅವರ ಕುಟುಂಬ ಜೀವನವನ್ನೂ ತೀರ ನಿಕಟವಾಗಿ ನೋಡಿದ ಡಿವಿಜಿಯವರ ಅಭಿಪ್ರಾಯ ಹೀಗಿದೆ[4]. ''ಗೃಹಜೀವನದಲ್ಲಿಯೂ ಮೂರ್ತಿಗಳು ಸರಸಹೃದಯರು. ಅವರು ದೊಡ್ಡ ಕುಟುಂಬವನ್ನು ಅಕ್ಕರೆಯಿಂದ ಪೋಷಿಸುತ್ತಿದ್ದರು. ತಮ್ಮಂದಿರಲ್ಲಿಯೂ ತಂಗಿಯರ ವಿಷಯದಲ್ಲಿಯೂ ಅವರ ಕುಟುಂಬಗಳ ವಿಷಯದಲ್ಲಿಯೂ ನಿರತಿಶಯವಾದ ಮಮತೆಯನ್ನು ಇರಿಸಿಕೊಂಡು, ನಿರಾಶ್ರಯರಿಗೆ ಆಸರೆಯಾಗಿದ್ದರು. ಸಂಸಾರ ನಿರ್ವಹಣದಲ್ಲಿ ಸ್ವಾರ್ಥತ್ಯಾಗಿಗಳಾಗಿ ಕುಟುಂಬದ ಸಂತೋಷದಲ್ಲಿ ಸಂತೋಷಿಗಳಾಗಿದ್ದರು. ಬಂಧು ಬಳಗದ ಕಷ್ಟ ನಿಷ್ಠುರಗಳಲ್ಲಿ ಕನಿಕರ, ಅತಿಥಿಗಳ ವಿಷಯದಲ್ಲಿ ಸಂತೋಷಪೂರ್ವಕ ಆದರಣೆ, ಹೆಂಗಸರು ಮಕ್ಕಳುಗಳ ಗೋಷ್ಠಿಯಲ್ಲಿ ಮಧುರ ಹಾಸ್ಯಮಯವಾದ ಮಾತುಕಥೆ - ಇದು ಅವರ ಗೃಹ ಜೀವನ'' ಇಂಥ ಗೃಹಕೃತ್ಯ ಎಂಥ ಗೃಹಸ್ಥನಿಗೂ ಯಾವ ಕಾಲದಲ್ಲೂ ಕಷ್ಟವೇ.

---

3. ಹೊ.ರಾ. ಸತ್ಯನಾರಾಯಣರಾವ್ ಮತ್ತು ಪ್ರಸನ್ನ ವೆಂಕಟೇಶಮೂರ್ತಿ ರಾ.ಶಾ. 'ಎಂ.ಆರ್. ಶ್ರೀನಿವಾಸಮೂರ್ತಿ ಜೀವನ ಮತ್ತು ಕಾರ್ಯ', ಬೆಂಗಳೂರು, ೧೯೮೦, ಪು. ೨೧.
4. ಡಿ.ವಿ.ಜಿ. 'ಜ್ಞಾಪಕ ಚಿತ್ರಶಾಲೆ' ೧, ಮೈಸೂರು, ೧೯೬೯, ಪು. ೧೧೩.

೨

ಶ್ರೀನಿವಾಸಮೂರ್ತಿಗಳ ರೂಪ, ವ್ಯಕ್ತಿತ್ವ ಅತ್ಯಾಕರ್ಷಕವಾದುದಾಗಿತ್ತು. ಅವರ ಬಗ್ಗೆ ಪ್ರಸ್ತಾಪಿಸಿರುವ ಲೇಖಕರೆಲ್ಲ ಅವರೊಬ್ಬ ಸ್ಫುರದ್ರೂಪಿ ಗಂಡಸು ಎಂದು ಸಮಾನವಾಗಿ ಅಭಿಪ್ರಾಯಸಿದ್ದಾರೆ. ''ಎತ್ತರವಾದ ಆಳು, ಕೆಂಬಿಳುಪಿನ ಮೈಬಣ್ಣ, ನಗುಮುಖ, ಸರಿಗೆಯ ಪಂಚೆ, ಧೋರಣೆಯ ಮಾತು, ಕೈಯಲ್ಲಿ ಸಣ್ಣ ಬೆತ್ತ, ಠೀವಿಯ ನಡಿಗೆ'' - ಇದು ಡಿವಿಜಿಯವರ ವರ್ಣನೆ''[5], ''ಶ್ರೀನಿವಾಸಮೂರ್ತಿಗಳು ತಿರುಪತಿಯ ಶ್ರೀನಿವಾಸ ದೇವರಂತೆ ಭವ್ಯಮೂರ್ತಿ. ಬೇಲೂರಿನ ಚೆನ್ನಕೇಶವಮೂರ್ತಿಯಂತೆ ಸುಂದರಮೂರ್ತಿ. ಒಳ್ಳೆಯ ಸ್ಫುರದ್ರೂಪಿ. ಅವರನ್ನು ಒಂದು ಸಾರಿ ನೋಡಿದವರು ಮರೆಯುವಂತಿರಲಿಲ್ಲ'' - ಇದು ಎ.ಆರ್. ಕೃಷ್ಣಶಾಸ್ತ್ರಿಗಳ ಜ್ಞಾಪಕರೂಪ[6]. ''ಎತ್ತರದ ಸ್ಫುರದ್ರೂಪಿ ವ್ಯಕ್ತಿ ಮೂರ್ತಿ. ಮೈಚರ್ಮ ಬೆಳ್ಪು. ಆರೋಗ್ಯವಂತರೂ ಶಿಸ್ತಿನ ಜೀವನ ಮಾಡುತ್ತಿದ್ದವರೂ ಆದ್ದರಿಂದ ದೃಢಕಾಯರಾಗಿದ್ದರು. ಬೆಳ್ಪನ್ನು ರಂಜಿಸಿ ಒಂದು ಮೃದುವಾದ ಒಂದು ಬಗೆಯ ಗುಲಾಬಿ ಎನ್ನೋಣ - ಕೆಂಬಣ್ಣ ಅವರು ಉತ್ಸಾಹದಲ್ಲಿದ್ದಾಗ ಕಂಡುಬರುತ್ತಿತ್ತು. ಮುಖಭಾವ ಗಂಭೀರ. ಕೂತಿರಲಿ ನಿಂತಿರಲಿ ನಡೆಯುತ್ತಿರಲಿ - ಆಕೃತಿ ನೋಡುವಂಥದು'' - ಇದು ವಿ.ಸೀ.ಯವರ ನೆನಪಿನ ಚಿತ್ರ[7]. ತಲೆಗೆ ಜರೀಪೇಟ, ಕಿವಿಗೆ ಹತ್ತಕಡಕು, ಕಾಂತಿಯುಕ್ತ ಕಣ್ಣು, ವರ್ಚಸ್ವೀಮುಖದ ಈಗ ಪ್ರಚಲಿತವಾಗಿರುವ ಅವರ ಭಾವಚಿತ್ರವಾದರೂ ಇದನ್ನು ಸಮರ್ಥಿಸುವಂತೆಯೇ ಇದೆ, ಮರೆಯಲಾಗದ ಮುದ್ರೆಯೊತ್ತುವಷ್ಟು ಪರಿಣಾಮಕಾರಿಯಾಗಿದೆ. ಸಾಮಾಜಿಕ ಸಾಹಿತ್ಯಕ ಸಮಾರಂಭಗಳಿಗೆ ಮೂರ್ತಿಗಳು ಜರತಾರಿ ಪಂಚೆ, ಜರೀ ಉತ್ತರೀಯ, ಹೆಬ್ಬೆರಳಂಚಿನ ಜರೀ ರುಮಾಲು ಧರಿಸಿ ಸಂಪ್ರದಾಯ ಮೆರೆಯುತ್ತಿದ್ದರು; ಅಧಿಕಾರಿ ಸಮಾರಂಭಗಳಿಗೆ ಮುಚ್ಚು ಕೋಟು, ಸೂಟು ಧರಿಸುತ್ತಿದ್ದರು. ವರಪೂಜೆ ಗಂಡಿನಂತೆ ಸಿಂಗರಿಸಿಕೊಳ್ಳುವುದು ಅವರಿಗೆ ಆಪ್ಯಾಯಮಾನವಾಗಿತ್ತು; ಅದರಿಂದ ಅವರು ಇತರರಿಗೂ ಆಪ್ಯಾಯಮಾನವಾಗಿ ಕಾಣುತ್ತಿದ್ದರು. ಇದು ಶ್ರೀನಿವಾಸಮೂರ್ತಿಗಳ ವ್ಯಕ್ತಿತ್ವಕ್ಕೆ ಒಂದು ಶೋಭೆಯನ್ನೊದಗಿಸಿತ್ತು.

ಮೂರ್ತಿಗಳ ವ್ಯಕ್ತಿತ್ವವನ್ನು ಕುರಿತು ಮಾತನಾಡುವಾಗ ಅವರು ಪರಮ ಸಾತ್ವಿಕರೆಂದೂ ಅಂತರಂಗಭಕ್ತರೆಂದೂ ಮಾತಾಪಿತೃ ಪೂಜಕರೆಂದು ಗುರು ಹಿರಿಯರಲ್ಲಿ ನಮ್ರರೆಂದೂ ಡಿವಿಜಿ ವರ್ಣಿಸುತ್ತಾರೆ[8]. ಇದು ನಿಜವಾದದ್ದೇ. ಅವರು ಪ್ರತಿದಿನವೂ ಕೆಲಸಕ್ಕೆ ಹೋಗುವ ಮುನ್ನ ದೇವರಿಗೆ ನಮಸ್ಕರಿಸುವುದರ ಜೊತೆಗೆ ತಂದೆ - ತಾಯಿಗಳಿಗೂ ನಮಸ್ಕರಿಸುತ್ತಿದ್ದರು. ರಾತ್ರಿ ಅವರಿಗೆ ಹಾಸುಗೆ ಹಾಸಿಕೊಡುತ್ತಿದ್ದರು, ತಂದೆಯವರ ಕಾಲೊತ್ತುತ್ತಿದ್ದರು, ಮಲಗುವ ಮುನ್ನ ಮತ್ತೆ ತಂದೆ - ತಾಯಿಯರಿಗೆ ನಮಸ್ಕರಿಸಿ ಮಲಗುತ್ತಿದ್ದರು. ಈ ರೂಢಿಯನ್ನು ಕೊನೆಯತನಕ ನಡೆಸಿದರು[9]. ಇವರಿಗೆ ೧೦-೧೨ ವರ್ಷ ವಯಸ್ಸಾಗಿತ್ತು ತಾಯಿ ಸಾವಿತ್ರಮ್ಮ ಇಚ್ಛೆಪಟ್ಟು ಕಿವಿಗೆ ಹತ್ತಕಡಕು ಹಾಕಿದ್ದರು. ಕೆಲವು ದಿನಗಳ ನಂತರ ಮೂರ್ತಿಗಳಿಗೇನನ್ನಿಸಿತೋ ಹತ್ತಕಡಕು ಬಿಚ್ಚಿಟ್ಟರು. ಇದನ್ನು ಕಂಡ ತಾಯಿ ನೊಂದುಕೊಂಡು ಕಣ್ಣೀರು ತಂದುಕೊಂಡರು. ಒಡನೆಯೇ ಮೂರ್ತಿಗಳು ಅದನ್ನು ಧರಿಸಿಕೊಂಡು ''ಇನ್ನು ಮೇಲೆ ಎಂದೂ ಈ ಕಡಕು ಕಳಚುವೊಲ್ಲ'' ಎಂದು ಹೇಳಿ ಕಡೆ ಉಸಿರಿನವರೆಗೆ ಅದನ್ನು ಧರಿಸಿದ್ದರು. ತಾಯ ಬಗ್ಗೆ ಅಂಥ ಪ್ರೀತಿ, ಗೌರವ, ಭಕ್ತಿ.

---

5. ಡಿವಿಜಿ. ಪೂರ್ವೋಕ್ತ, ಪು. ೧೧೧
6. ಎ.ಆರ್.ಕೃಷ್ಣಶಾಸ್ತ್ರಿ ದಿವಂಗತ ಶ್ರೀಮಾನ್ ಎಂ.ಆರ್.ಶ್ರೀನಿವಾಸ ಮೂರ್ತಿಗಳು, 'ಭಾಷಣಗಳು ಮತ್ತು ಲೇಖನಗಳು', ಮೈಸೂರು, ೧೯೬೦, ಪು. ೧೬೦.
7. ವಿ.ಸೀ. ಪೂರ್ವೋಕ್ತ, ಪು. ೨೭೦.
8. ಡಿವಿಜಿ. ಪೂರ್ವೋಕ್ತ, ಪು. ೧೧೫.
9. ಹೊ.ರಾ. ಸತ್ಯನಾರಾಯಣರಾವ್ ಮತ್ತು ಪ್ರಸನ್ನ ವೆಂಕಟೇಶಮೂರ್ತಿ ರಾ.ಶಾ., ಪೂರ್ವೋಕ್ತ, ಪು. ೧೩. ಮತ್ತು ೮.

ಶ್ರೀನಿವಾಸಮೂರ್ತಿಗಳ ಬಗ್ಗೆ ಪ್ರಾಸ್ತಾಪಿಸುವವರೆಲ್ಲ ಅವರ ರೂಪವನ್ನು ಕುರಿತಿರುವಂತೆ ಅವರನ್ನು ರಸಿಕರೆಂದು ತಪ್ಪದೆ ಉಲ್ಲೇಖಿಸಿದ್ದಾರೆ. ದಿಟವಾಗಿ ಮೂರ್ತಿಗಳನ್ನು ಆಗರ್ಭರಸಿಕರೆಂದು ಕರೆಯಬಹುದು. ಅವರು ಜೀವನವನ್ನು ಅನುಭವಿಸಲೆಂದೇ ಹುಟ್ಟಿದವರು. ಉಡುವ ಉಡುಗೆ, ಉಣ್ಣುವ ಭೋಜನ, ಕೇಳುವ ಸಂಗೀತ, ಅಭ್ಯಸಿಸುವ ಸಾಹಿತ್ಯಗಳಲ್ಲೆಲ್ಲ ಅಭಿರುಚಿಯ ಸೊಗಸು ಹೊಂದಿದವರು. ರಸಿಕತೆಯನ್ನು ಸವಿಯುವ ಯಾವ ಅವಕಾಶದಿಂದಲೂ ಅವರು ವಂಚಿತರಾಗುತ್ತಿರಲಿಲ್ಲ. ತೀರ್ಥಹಳ್ಳಿಯ ಪ್ರೌಢಶಾಲಾ ಅಧ್ಯಾಪಕರಾಗಿ ಅವರು ವರ್ಗಾವಣೆಗೊಂಡರು. ಮೊದಲೇ ತುಂಗಾ ತೀರ ಹಾಗೂ ಮಲೆನಾಡಿನ ರಮ್ಯಪ್ರಕೃತಿ. ಆ ಹಳೇ ಕಾಲದಲ್ಲಿ ಕೂಡ ಮೂರ್ತಿಯವರು ತಮ್ಮ ಹೆಂಡತಿಯೊಂದಿಗೆ ನದೀ ದಡದಲ್ಲಿ ವಿಹರಿಸುತ್ತಿದ್ದರು; ತಾಯಿಯಾಗಲಿದ್ದ ಹೆಂಡತಿಯೊಂದಿಗೆ ಹುಣ್ಣಿಮೆಯ ಬೆಳುದಿಂಗಳಲ್ಲಿ ಅಡ್ಡಾಡುತ್ತಿದ್ದರು. ಇದರಿಂದ ತೀರ್ಥಹಳ್ಳಿ ಜನರ ಆಡಿಕೆಗೆ ಗುರಿಯಾಗಿದ್ದರೂ ಅವರು ಅದನ್ನು ಲೆಕ್ಕಿಸಿರಲಿಲ್ಲ. ಒಮ್ಮೆ ವೀರಶೈವ ಸಾಹಿತ್ಯ ವಿಷಯದಲ್ಲಿ ಭಾಷಣ ಮಾಡಿ ವ್ಯವಸ್ಥಾಪಕರಿಂದ ಗೌರವಾದರಗಳಿಗೆ ಪಾತ್ರರಾದರು. ಮನೆಗೆ ಬಂದ ಮೇಲೆ ಹೆಂಡತಿಯನ್ನು ಕರೆದು ನನ್ನ ಭಾಷಣ ಭರ್ಜರಿಯಾಗಿತ್ತಲ್ಲದೆ ಎಲ್ಲರಿಗೂ ಸಂತೋಷವುಂಟು ಮಾಡಿತು. ಅದರ ಒಂದು ಭಾಗ ನಿನಗಿರಲಿ ಎಂದು ಮನೆಮಂದಿಯ ಎದುರಿಗೆ ಸಮಾರಂಭದಲ್ಲಿ ತಮಗೆ ಹಾಕಿದ್ದ ಪುಷ್ಪಹಾರವನ್ನು ಹೆಂಡತಿಗೆ ಹಾಕಿ ಚಪ್ಪಾಳೆ ತಟ್ಟಿದರಂತೆ![10] ಅವರು ನಿತ್ಯ ಜೀವನದಲ್ಲಿ ಸೊಗಸನ್ನು ಅನುಭವಿಸುತ್ತಿದ್ದುದು ಹೀಗೆ. ಸಾಹಿತ್ಯದಲ್ಲಿ ಅವರಿಗೆ ಕವಿಕಾಮನ 'ಶೃಂಗಾರ ರತ್ನಾಕರ' ಸಮಗ್ರವಾಗಿ, 'ರಾಜಶೇಖರ ವಿಲಾಸ'ದ ನೂರಾರು ವೃತ್ತಗಳು ಕಂಠಸ್ಥವಾಗಿದ್ದುವೆಂದು ಎ.ಆರ್. ಕೃಷ್ಣಶಾಸ್ತ್ರಿ ಹೇಳುತ್ತಾರೆ. ಡಿ.ವಿ. ಗುಂಡಪ್ಪನವರು ವಿವರಿಸುವ ಒಂದು ಪ್ರಸಂಗ ಹೀಗಿದೆ [11] : ರನ್ನ ಕವಿಯ ಸಹಸ್ರ ವರ್ಷೋತ್ಸವ ಪರಿಷತ್ತಿನಲ್ಲಿ ಜರುಗಿತು. ರನ್ನನ ಗದಾಯುದ್ಧದ ಬಗ್ಗೆ ಮೂರ್ತಿಗಳ ಭಾಷಣ. ಅದು ಮಹಿಳೆಯರ ಗುಂಪು ದೊಡ್ಡದಾಗಿದ್ದ ಸಭೆ. ಅದರಲ್ಲಿ ದ್ರೌಪದಿ ಭೀಮಸೇನನ್ನು ಚುಚ್ಚಿ, ಉಬ್ಬಿಸಿ ಯುದ್ಧಕ್ಕೆ ಪ್ರೇರಿಸುವ ಪ್ರಸಂಗವನ್ನು ಮೂರ್ತಿಗಳು ಸೊಗಸಾಗಿ ಪ್ರಸ್ತಾಪಿಸಿದರು. ಹೆಂಗಸರು ತಮಗಿಷ್ಟವಾದ ಕಾರ್ಯಗಳಿಗೆ ಗಂಡಂದಿರನ್ನು ಪ್ರೇರಿಸುವ ವಿಧಾನ, ಉಪಾಯ ಹೇಗಿರಬೇಕು ಎಂಬುದನ್ನು ವಿವರಿಸಿದರು. ಆ ಸಂದರ್ಭದ ದ್ರೌಪದಿಯ ವಾಕ್ಯಗಳನ್ನು ಮನಮುಟ್ಟುವಂತೆ ವರ್ಣಿಸಿದರು. ಅಧ್ಯಕ್ಷತೆ ವಹಿಸಿದ್ದ ಡಿವಿಜಿ ತಮ್ಮ ಮಾತಿನಲ್ಲಿ ಮೂರ್ತಿಗಳ ಭಾಷಣ ಜಬ್ಬಾಗಿತ್ತು, ಸೊಗಸಾಗಿತ್ತು ಎಂದರು. ಮಗ್ಗುಲಲ್ಲಿದ್ದ ಮೂರ್ತಿಗಳು ಕೂಡಲೇ ಎದ್ದುನಿಂತು 'ಸಾರ್, ಅಲ್ಲಿ ನೋಡಿರಿ ಯಾರು ಕುಳಿತಿದ್ದಾರೆ. ಅವರು ಎದುರಿಗಿದ್ದರೆ ಭಾಷಣ ಸೊಗಸಾಗದೆ ಏನಾಗುತ್ತದೆ' ಎಂದರು. ಆ ಕಡೆ ತಿರುಗಿ ನೋಡಿದರೆ ಅಲ್ಲಿ ಕುಳಿತಿದ್ದವರು ಅವರ ಧರ್ಮಪತ್ನಿ! ಇಂಥ ಪ್ರಸಂಗಗಳು ಎಷ್ಟೋ.

ವಿನೋದಶೀಲತೆ ಮೂರ್ತಿಗಳ ಮತ್ತೊಂದು ಗುಣ. ತಮಾಷೆ ಅಥವಾ ಹಾಸ್ಯ ಚಿಮ್ಮಿಸುವ ಸಹಜಪ್ರವೃತ್ತಿ ಅವರಲ್ಲಿತ್ತು. ಈ ಗುಣ ಅವರಿಗೆ ಜನ್ಮಜಾತವಾಗಿ ಬಂದುದರಿಂದಲೇ ಅವರಿಗೆ 'ರಂಗಣ್ಣನ ಕನಸಿನ ದಿನಗಳು' ದಂಥ ಕೃತಿ ರಚಿಸಲು ಸಾಧ್ಯವಾಯಿತು. ಒಂದು ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಮೂರ್ತಿಗಳು, ಡಿವಿಜಿ, ಕೃಷ್ಣಶಾಸ್ತ್ರಿ ವೆಂಕಣ್ಣಯ್ಯ ಒಟ್ಟಿಗಿದ್ದರು. ಒಂದು ಬೆಳಗ್ಗೆ ಸ್ನಾನ ಮಾಡಲೆಂದು ಬಿಡುವಾಗದ ಬಚ್ಚಲು ಮನೆಯ ಹೊರಗೆ ಕಾದು ನಿಂತಿದ್ದರು. ಮೇಲಿನ ಷರಟನ್ನು ಕಳಚಿದ್ದರು. ಕೃಷ್ಣಶಾಸ್ತ್ರಿ , ಡಿವಿಜಿಯವರನ್ನು ತಿವಿದು ''ನೋಡಿದಿರಾ ಮೂರ್ತಿ ಎದೆಯನ್ನು'' ಎಂದರು. ಅವರು ಉತ್ತರಿಸುವ ಮುನ್ನವೇ ಮೂರ್ತಿಗಳೇ ''ಶಾಸ್ತ್ರೀ, ಏನು ಮಂಕು ಬಡಿಯಿತು ನಿಮಗೆ, ಭ್ರಮರಕೀಟ ನ್ಯಾಯ ಮರೆತು ಹೋಯಿತೆ?'' ಎಂದು ಪ್ರಶ್ನಿಸಿದರು. ಅಲ್ಲಿದ್ದವರೆಲ್ಲ ನಕ್ಕರು [12]. (ಭ್ರಮರ ಆಹಾರಕ್ಕಾಗಿ ಕೀಟವೊಂದನ್ನು ಹಿಡಿದು ತನ್ನ ಮುಂದಿಟ್ಟುಕೊಳ್ಳುತ್ತದೆ. ಬೆದರಿದ ಕೀಟ ಭ್ರಮರವನ್ನೇ ದಿಟ್ಟಿಸಿ ನೋಡುತ್ತದೆ. ಈ ಧ್ಯಾನ ದೃಷ್ಟಿ ಕಾರಣವಾಗಿ ಕೀಟವೇ ಭ್ರಮರವಾಗುತ್ತದೆಂಬುದು ಕವಿ

---

10. ಅದೇ, ಪು. ೨೩.

11. ಡಿವಿಜಿ, 'ಜ್ಞಾಪಕ ಚಿತ್ರಶಾಲೆ', ೨, ಮೈಸೂರು, ೧೯೭೦, ಪು. ೨೮೯.

12. ಅದೇ. ಪು. ೨೮೮

ಸಮಯ. ನಾವು ಯಾವುದನ್ನೂ ಕುರಿತು ಹೆಚ್ಚಾಗಿ ನೋಡುತ್ತೇವೋ, ಚಿಂತಿಸುತ್ತೇವೋ ಅದರಂತೆಯೇ ಆಗುತ್ತೇವೆ!) ಇಂಥ ವಿನೋದಶೀಲತೆಯನ್ನು ಮೂರ್ತಿಗಳು ತಮ್ಮ ವೃತ್ತಿಯಲ್ಲಿ ಕೂಡ ತೋರುತ್ತಿದ್ದರು. ತೀರ್ಥಹಳ್ಳಿಯಲ್ಲಿ ಮೂರ್ತಿಗಳು ಸ್ವಲ್ಪಕಾಲ ಅಧ್ಯಾಪಕರಾಗಿದ್ದರಷ್ಟೇ. ಆಗಿನ ವಿದ್ಯಾರ್ಥಿಗಳಿಗೆ ಮನೆಗೆಲಸ ಕೊಡುವುದು ಅಧ್ಯಾಪಕರ ಒಂದು ಪದ್ಧತಿ. ಇಂಥ ಒಂದು ಸಂದರ್ಭದಲ್ಲಿ ಕೆಲವು ವಿದ್ಯಾರ್ಥಿಗಳು ಕೊಟ್ಟಿದ್ದ ಮನೆಗೆಲಸ ಮಾಡಿ ತರಲಿಲ್ಲ. ಮೂರ್ತಿಗಳು ನೀಡಿದ ವಾಯಿದೆಯನ್ನೂ ಅವರು ಮೀರಿದರು. ಇದಕ್ಕೆ ಮೂರ್ತಿಗಳು ಆ ವಿದ್ಯಾರ್ಥಿಗಳಿಗೆ ನೀಡಿದ ಶಿಕ್ಷೆ : ಜವಾನನ್ನು ಕರೆದು ಸ್ವಲ್ಪ ದೂರದಲ್ಲಿದ್ದ ಹೆಣ್ಣು ಮಕ್ಕಳ ಶಾಲೆ ತೋರಿಸಿಕೊಂಡು ಬಾ ಎಂಬುದು.[13] ಇಂಥ ರಸಿಕತೆ ವಿನೋದಶೀಲತೆಗಳಿದ್ದುದರಿಂದಲೇ ಅರುವತ್ತಾಗಿದ್ದರೂ ದೇಹದಲ್ಲಿಯೂ ಮನಸ್ಸಿನಲ್ಲಿಯೂ ಮೂವತ್ತರ ಯುವಕರಂತಿದ್ದರು.

ಮೂರ್ತಿಗಳ ಸ್ಮೃತಿಶಕ್ತಿ ಮತ್ತು ವಾಗ್ಮಿತೆ ಅಸಾಧಾರಣವಾದುದು ''ಕನ್ನಡ ವಾಗ್ಮಿಗಳಲ್ಲಿ ಮೂರ್ತಿಗಳಿಗಿಂತ ಮೇಲ್ಮಟ್ಟದವರು ಯಾರಾದರೂ ಇದ್ದರೆ ಅವರು ನನಗೆ ತಿಳಿಯದವರು'' ಎಂದು ಡಿವಿಜಿ ಹೇಳುತ್ತಾರೆ[14]. ವಿಷಯ ಸುಷ್ಠು, ಪದಹೊಂದಾವಣೆ, ಕಂಠಸ್ವರ, ಅಭಿನಯಭಾವಗಳಿಂದ ಕೂಡಿದ ಅವರ ಭಾಷಣಗಳು ತುಂಬ ಪರಿಣಾಮಕಾರಿಯಾಗಿರುತ್ತಿದ್ದವು. ಅವರು ಉಪನ್ಯಾಸವನ್ನು ಬರೆದು ಓದಿದವರಲ್ಲ, ಭಾಷಣವನ್ನು ಟಿಪ್ಪಣಿಗಳನ್ನಾಧರಿಸಿ, ಪರಾಮರ್ಶಿಸಿ ನಿರ್ವಹಿಸಿದವರಲ್ಲ. ಭಾಷಣ ಸಂದರ್ಭದಲ್ಲಿ ಉಲ್ಲೇಖಿಸಬೇಕಾದ ವಚನಗಳಿಗೆ, ಪದ್ಯಗಳಿಗೆ ಅವರೆಂದೂ ತಡವರಿಸುತ್ತಿರಲಿಲ್ಲ. ಪದ್ಯದಂತೆಯೇ ಭಾಷಣವಸ್ತುವೂ ಅವರಿಗೆ ವಾಚೋವಿಧೇಯವಾಗಿತ್ತು. ಅವರ ಸ್ಮೃತಿ ಶಕ್ತಿ ಮೇಧಾಶಕ್ತಿಗಳೂ ಅದ್ಭುತವಾದದ್ದೇ. ಪಂಪ, ರನ್ನ, ನೇಮಿಚಂದ್ರ, ನಾರಣಪ್ಪ, ಷಡಕ್ಷರ, ಹರಿಹರ ಮುಂತಾದವರ ಕಾವ್ಯಗಳು ಮುಖಸ್ಥವಾಗಿದ್ದವು. ಅವರ ಸ್ಮರಣಶಕ್ತಿ ನಮ್ಮ ಗುಂಪಿನಲ್ಲಿ ಅಸಾಧಾರಣವಾದುದು. ವಾಚೋವಿಧೇಯವಾಗಿ ಕಾವ್ಯಗಳಲ್ಲಿನ ಹತ್ತಾರು ಪದ್ಯಗಳನ್ನು ಕುರಿತು ಭಾಷಣಗಳಲ್ಲಿ ಉದಾಹರಿಸಬಲ್ಲವರಾಗಿದ್ದರು'' ಎಂಬುದು ವಿಸೀಯವರ ಹೇಳಿಕೆ[15] ''ಅವರು ಕನ್ನಡ ಕಂದ ಪದ್ಯಗಳನ್ನೂ ಹಳಗನ್ನಡದ ದೀರ್ಘವೃತ್ತಗಳನ್ನೂ ನೀರು ಕುಡಿದಂತೆ ಹೇಳುತ್ತಿದ್ದರು. ಕವಿಕಾಮನ 'ಶೃಂಗಾರ ರತ್ನಾಕರ' ಪೂರ್ತಿಯಾಗಿ ಬಾಯಿಗೆ ಬರುತ್ತಿದ್ದಂತೆ ಕಾಣುತ್ತಿತ್ತು. 'ಗಿರಿಜಾ ಕಲ್ಯಾಣ', 'ರಾಜಶೇಖರ ವಿಲಾಸ'ಗಳಲ್ಲಿ ಹಲವು ವೃತ್ತಗಳು ಬಾಯಿಗೆ ಬರುತ್ತಿದ್ದವು'' ಎಂದು ಎ.ಆರ್. ಕೃಷ್ಣಶಾಸ್ತ್ರಿ ಹೇಳುತ್ತಾರೆ[16]. ಸಾವಿರಾರು ವಚನಗಳು ಅವರಿಗೆ ಮುಖಸ್ಥವಾಗಿದ್ದವು. ಅವರು ಇದುವರೆಗೆ ಅಚ್ಚಾಗಿರುವ ಎಲ್ಲ ಹಳೆಗನ್ನಡ ಕಾವ್ಯಗಳನ್ನೂ ಆಮೂಲಾಗ್ರವಾಗಿ ಓದಿದ್ದದ್ದು ಮಾತ್ರವಲ್ಲದೆ ಜ್ಞಾಪಕದಲ್ಲಿಯೂ ಇರಿಸಿಕೊಂಡಿದ್ದರು. ಆ ಗ್ರಂಥರಾಶಿಯ ಜೊತೆಗೆ ಇನ್ನೂ ಅಚ್ಚಾಗದಿರುವ ಎಷ್ಟೋ ತಾಳೆಯೋಲೆಯ ಗ್ರಂಥಗಳನ್ನು ನೋಡಿದ್ದರು'' ಎಂದು ಡಿವಿಜಿ ನುಡಿದಿದ್ದಾರೆ[17]. ಇವೆಲ್ಲವೂ ಅವರ ವಾಗ್ಮಿತೆ ಮತ್ತು ಅದಕ್ಕೆ ಪೂರಕವಾದ ಸ್ಮರಣಶಕ್ತಿಗಳ ಯಥಾರ್ಥತೆಯ ಕುರುಹಾಗಿವೆ. ಒಟ್ಟಿನಲ್ಲಿ ರೂಪು - ರಸಿಕತೆ, ವಿನೋದಶೀಲತೆ - ವಾಗ್ಮಿತೆಗಳಿಂದ ಕೂಡಿದ್ದ ಒಂದು ವರ್ಚಸ್ವೀ ವ್ಯಕ್ತಿತ್ವ ಮೂರ್ತಿಗಳದು.

೩

ಶ್ರೀನಿವಾಸಮೂರ್ತಿಗಳ ಕನ್ನಡದ ಕಾಯಕವೂ ಅವರ ವ್ಯಕ್ತಿತ್ವದಂತೆಯೇ ವಿಶಿಷ್ಟವಾದದ್ದು. ಅವರು ಕನ್ನಡವನ್ನು ತರಗತಿ ವಿದ್ಯಾರ್ಥಿಯಾಗಿ ಅಭ್ಯಾಸ ಮಾಡಿದವರಲ್ಲ. ಮನೆಯಲ್ಲಿದ್ದ ಸಾಹಿತ್ಯಕ ವಾತಾವರಣ, ಕಾಲೇಜು ಗೆಳೆಯರ ಹಾಗೂ ಇತರ

---

13. 'ಸಾಹಿತ್ಯಾಲೋಕ', ಮುನ್ನುಡಿ ಪು. VIII - IX.
14. 'ಜ್ಞಾಪಕ ಚಿತ್ರಶಾಲೆ', ೧, ಪು. ೧೧೪.
15. ವಿ.ಸೀ., ಪೂರ್ವೋಕ್ತ, ಪು. ೨೨೪.
16. ಎ.ಆರ್. ಕೃಷ್ಣಶಾಸ್ತ್ರೀ, ಪೂರ್ವೋಕ್ತ, ಪು. ೧೬೧.
17. ಡಿವಿಜಿ, 'ಜ್ಞಾಪಕ ಚಿತ್ರಶಾಲೆ', ೧, ಪು. ೧೧೫.

ಸ್ನೇಹಿತರ ಸಂಪರ್ಕದಿಂದ ಅವರು ಕನ್ನಡ ಸಾಹಿತ್ಯಕ್ಕೆ ದುಡಿದರು. ವಿಜ್ಞಾನವನ್ನೇ ಓದಿದ, ಬೋಧಿಸಿದ ಅವರಿಗೆ ಕನ್ನಡ ಸಾಹಿತ್ಯದ ಒಲವು ಸ್ವಯಂ ಪ್ರವೃತ್ತಿಯಾಗಿತ್ತು. ಬಿ.ಎ. ಓದುವಾಗಲೇ ಅನೇಕ ಹಳೆಗನ್ನಡ ಕಾವ್ಯಗಳನ್ನು ಸ್ವತಃ ಅಭ್ಯಸಿಸಿ ಬಾಯಿಪಾಠ ಮಾಡಿಕೊಂಡಿದ್ದರು. ವಿದ್ಯಾರ್ಥಿ ದೆಸೆಯಲ್ಲಿಯೇ ಅವರು ಬರೆದ 'ಸಾವಿತ್ರಿ' ಕಾದಂಬರಿಯ ಸಂವಾದವೊಂದರಲ್ಲಿ ಇದಕ್ಕೆ ಆಧಾರ ದೊರೆಯುತ್ತದೆ. ಸೃಜನಶೀಲ ಮತ್ತು ವಿಮರ್ಶನ ಸಾಹಿತ್ಯಗಳೆರಡರಲ್ಲೂ ಅವರು ಕೆಲಸ ಮಾಡಿದ್ದಾರೆ. 'ಶ್ಯಾಮೂ' ಎಂಬ ಕಥೆಯೊಂದರ ಮೂಲಕ ಅವರು ಸಾಹಿತ್ಯಕ್ಷೇತ್ರಕ್ಕೆ ಪದಾರ್ಪಣ ಮಾಡಿರಬೇಕೆಂದೂ ಅಥವಾ ಅದು ಇತರರ ಬರವಣಿಗೆಯಾಗಿರಬಹುದೆಂದೂ ಡಿವಿಜಿ ಅನುಮಾನಾಸ್ಪದವಾಗಿ ನುಡಿಯುತ್ತಾರೆ. ದಿಟಕ್ಕೂ ಅದು ಎಂ.ಆರ್.ಶ್ರೀ ಯವರ ತಮ್ಮ ಸುಬ್ಬರಾಯರ ಕೃತಿ. ತಮ್ಮನ ಆ ಕೃತಿ ಪ್ರಕಟಣೆಗೆ ಮೂರ್ತಿಗಳು ಓಡಾಡಿದರು ಅಷ್ಟೇ. ''ಶ್ರೀನಿವಾಸಮೂರ್ತಿಗಳ ಮೊಟ್ಟ ಮೊದಲ ಗ್ರಂಥ ಒಂದು ಪದ್ಯ ಕಾವ್ಯ ಎನ್ನುವುದು ಅನೇಕರಿಗೆ ಗೊತ್ತಿಲ್ಲ. ಅದು ಒಂದು ಶತಕ , ದೊಡ್ಡ ವೃತ್ತಗಳಲ್ಲಿ ಬರೆದದ್ದು , ಆಗ ಸರಳರಗಳೆಯೂ ಹೊಸಗನ್ನಡ ಛಂದಸ್ಸಿನ ಬಗೆಬಗೆಯ ಪ್ರಯೋಗಗಳೂ ಇನ್ನೂ ಬಂದಿರಲಿಲ್ಲ. ಅದನ್ನು ಅವರು ಬರೆದದ್ದು ಸ್ನೇಹಿತರ ಅವಲೋಕನಕ್ಕಾಗಿ ಮಾತ್ರ. ಇಂದಿಗೂ ಅದು ಹಸ್ತಪ್ರತಿಯಾಗಿಯೇ ಉಳಿದಿದೆ'' ಎಂದು ಎ.ಆರ್.ಕೃಷ್ಣಶಾಸ್ತ್ರಿ ಹೇಳುತ್ತಾರೆ [18]. ಇದು ಪ್ರಕಟವಾಗಿ ನಿರ್ಣಯ ಹೊರಬರಬೇಕಷ್ಟೇ.

ಒಂದು ಪಟ್ಟಿಯಂತೆ ಈವರೆಗೆ ಶ್ರೀನಿವಾಸಮೂರ್ತಿಗಳ ಇಪ್ಪತ್ತು ಕೃತಿಗಳು ಲೆಕ್ಕಕ್ಕೆ ಸಿಕ್ಕಿವೆ. ಇವುಗಳಲ್ಲಿ 'ಕಂಠೀರವ ವಿಜಯ', 'ನಾಗರಿಕ', 'ರೋಲ್ಸ್ ಮೇಷ್ಟ್ರು', 'ಧರ್ಮದುರಂತ' ನಾಟಕಗಳು; ಇದಕ್ಕೇ ಸೇರುವುದು 'ಯದುವಿಜಯ' ಎಂಬ ಅಪ್ರಕಟಿತ ನಾಟಕ. 'ಸಾವಿತ್ರಿ' 'ರಂಗಣ್ಣನ ಕನಸಿನ ದಿನಗಳು' ಮಹಾತ್ಯಾಗ (ಅಸಮಗ್ರ) ಅವರ ಕಾದಂಬರಿಗಳು, 'ಕವಿಯ ಸೋಲು' ಕವನ ಸಂಕಲನ, 'ಭಕ್ತಿ ಭಂಡಾರಿ ಬಸವಣ್ಣನವರು' ಜೀವನಚಿತ್ರವಾದರೆ, 'ವಚನಧರ್ಮಸಾರ', 'ಸಾಹಿತ್ಯಲೋಕ' - ವಿಮರ್ಶನ ಕೃತಿಗಳು. ಇದರೊಂದಿಗೆ ಚೆನ್ನಬಸವ ಪುರಾಣ ಹಾಗೂ ಪ್ರಭುಲಿಂಗಲೀಲೆಯ ಸಂಗ್ರಹಗಳನ್ನೂ ಅವರು ಸಿದ್ಧಪಡಿಸಿದ್ದರು. ಅಯಸ್ಕಾಂತತೆ ಮತ್ತು ವಿದ್ಯುಚ್ಛಕ್ತಿ' 'ಉಪಾಧ್ಯಾಯರ ಆರೋಗ್ಯಶಾಸ್ತ್ರ', 'ಸ್ಕೌಟುಗಳ ಕನ್ನಡ ಕೈಪಿಡಿ', 'ಹಳ್ಳಿಗಳ ಆರೋಗ್ಯಸ್ಥಿತಿ ಮತ್ತು ಸಮಾಜಶಾಸ್ತ್ರ' ಎಂಬುವು ಅವರ ವೃತ್ತಿ ಸಂಬಂಧವಾದ ಸಾಹಿತ್ಯೇತರ ಕಿರುಹೊತ್ತಿಗೆಗಳು. ಇವೆಲ್ಲ ಮೂರ್ತಿಗಳ ಬಹುಮುಖ ಸಾಹಿತ್ಯ ಸೃಷ್ಟಿ ಹಾಗೂ ಆಸಕ್ತಿಯನ್ನು ತೋರುವಂಥವಾಗಿವೆ. ಸೃಜನಶೀಲ ಕೃತಿಗಳಲ್ಲಿ ಅವರು ಬಳಸಿರುವ ಹಳಗನ್ನಡ, ಹೊಸಗನ್ನಡ ಛಂದಸ್ಸುಗಳೆರಡೂ ಅವರ ಸ್ವಯಂ ಕಲಿಕೆಯ ಪಾಂಡಿತ್ಯದ ಪಕ್ವತೆ, ಹರಹುಗಳಿಗೆ ನಿದರ್ಶನವಾಗಿದೆ. ಮೂರ್ತಿಗಳ ಈ ಸಾಹಿತ್ಯಸೃಷ್ಟಿಗೆ ಅವರ ಕನ್ನಡ ಸಾಹಿತ್ಯಾಸಕ್ತಿ ಹಾಗೂ ವೃತ್ತಿ ಸಂದರ್ಭಗಳೂ ಕಾರಣವಾಗಿವೆ. ಅವರ ಶಿಕ್ಷಣವೃತ್ತಿಯ ಹಿನ್ನೆಲೆಯಲ್ಲಿ ಮೂಡಿ ಬಂದ ರಮ್ಯ ಪುಸ್ತಕ 'ರಂಗಣ್ಣನ ಕನಸಿನ ದಿನಗಳು'. ಅನನುಭವಿ ಈ ಕೃತಿಯನ್ನು ಸೃಷ್ಟಿಸಲಾರ. 'ಕಂಠೀರವ ವಿಜಯ' ಸ್ಕೌಟ್ ಹುಡುಗರಿಗೆ ಸಿದ್ಧವಾದದ್ದು. ಹೀಗಿದ್ದೂ ಅವರ 'ಸಾವಿತ್ರಿ' ಮತ್ತಿತರ ಕೆಲವು ಕೃತಿಗಳಿಗೆ ಅವರ ಭಾಷಾಪ್ರೇಮವೇ ಕಾರಣವಾಗಿದೆ. 'ಸಾವಿತ್ರಿ'ಯ ಮುನ್ನುಡಿ ಭಾಗವೊಂದರಲ್ಲಿ ತಾವು ವಿದ್ಯಾರ್ಥಿದಶೆಯಲ್ಲಿದ್ದಾಗ ಇದ್ದ ಕನ್ನಡ ಸಾಹಿತ್ಯ ಸ್ಥಿತಿ ಹೇಳುತ್ತಾ ಆಗ ''ಬಂಗಾಳಿಯಿಂದ ಭಾಷಾಂತರವಾಗಿ ಬಂಕಿಮಚಂದ್ರರ ಕಾದಂಬರಿಗಳು, ವೆಂಕಟಾಚಾರ್ಯರ ಕಾದಂಬರಿಗಳೆಂದು ಹೆಸರುಗೊಂಡು ಬಹುಜನಪ್ರಿಯವಾಗಿದ್ದುವು. ಆಂಧ್ರ ಮತ್ತು ಮಹಾರಾಷ್ಟ್ರ ಭಾಷೆಗಳಿಂದಲೂ ತರ್ಜುಮೆಯಾಗಿ ಕನ್ನಡದಲ್ಲಿ ಕಾದಂಬರಿಗಳು ತಲೆದೋರಿದ್ದವು. ಕೆಲವು ಸ್ವತಂತ್ರವಾಗಿ ರಚಿತವಾಗಿದ್ದರೂ ಅವುಗಳಲ್ಲಿ ಬಂಗಾಳಿಗಳ ಹೆಸರುಗಳೂ, ಬಂಗಾಳದ ವಾತಾವರಣವೂ ಕಂಡು ಬರುತ್ತಿದ್ದವು. ನಮ್ಮ ಕನ್ನಡ ನಾಡಿನ ಜನಜೀವನವನ್ನು ಚಿತ್ರಿಸುವ ಕನ್ನಡಿಗರಾದ ಯುವಕ ಯುವತಿಯರನ್ನೂ ಕನ್ನಡಿಗರ ಪ್ರಣಯವನ್ನೂ ವರ್ಣಿಸುವ ಕಾದಂಬರಿಯನ್ನೇಕೆ ಬರೆಯಬಾರದು? ನಾವು ಯಾವಾಗಲೂ ನಿರ್ಮಲಕುಮಾರಿ, ಚಂಚಲಕುಮಾರಿ, ರಜನೀಕಾಂತ, ಸುರೇಂದ್ರನಾಥ ಮೊದಲಾದವರ ಪ್ರಣಯಕಥೆಗಳನ್ನೇ ಓದಿ ನಲಿಯುತ್ತಿರಬೇಕೇ? ಎಂಬುದಾಗಿ ನನ್ನಲ್ಲಿ ವಿಚಾರ ತರಂಗಗಳೆದ್ದು

---

18. ಎ.ಆರ್. ಕೃಷ್ಣಶಾಸ್ತ್ರೀ, ಪೂರ್ವೋಕ್ತ, ಪು. ೧೬೨-೬೩.

'ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಒಂದು ಕ್ರಾಂತಿ'ಯನ್ನುಂಟು ಮಾಡಬೇಕೆಂಬ ಒಂದು ಹೆಬ್ಬಯಕೆಯಿಂದ ಈ ಕಾದಂಬರಿಯ ರಚನೆಗೆ ಕೈ ಹಾಕಿದೆನು''[19] ಎಂದಿದ್ದಾರೆ. ಇದು ಕನ್ನಡದಲ್ಲಿ ಅವರು ಸೃಷ್ಟಿ ಕಾರ್ಯ ನಡೆಸಿದುದರ ಹಿನ್ನೆಲೆ ವಿವರಿಸುತ್ತದೆ.

ಶ್ರೀನಿವಾಸಮೂರ್ತಿಗಳು ಕನ್ನಡದಲ್ಲಿ ಇಂದಿಗೂ ಸ್ಮರಣೀಯರಾಗಿರುವುದು ತಮ್ಮ ವಚನಸಾಹಿತ್ಯ ವಿದ್ವತ್ತಿನಿಂದ. ವೀರಶೈವ ಕವಿಗಳು, ವಚನಕಾರರು ಉಪೇಕ್ಷಿತರಾಗಿದ್ದ ಕಾಲದಲ್ಲಿ ಅವರ ಬಗ್ಗೆ ಅಪಾರವಾಗಿ ಕೆಲಸ ಮಾಡಿದರು. ವಚನಗಳನ್ನಾಧರಿಸಿ ಅವರು ಮಾಡಿದ ಭಾಷಣಗಳಿಗೆ ಲೆಕ್ಕವಿಲ್ಲ. ಬಸವಣ್ಣನವರ ಜೀವನಚಿತ್ರ. ವಚನಗಳ ಧ್ಯೇಯೋದ್ದೇಶ ಕುರಿತು ಕೃತಿ ರಚಿಸಿದರು, ಹರಿಹರ ಷಡಕ್ಷರಿಗಳ ಕಾವ್ಯಗಳನ್ನು ಅನುಶೀಲಿಸಿ ಅವರ ಸ್ಥಾನ ನಿರ್ದೇಶದ ಬಗ್ಗೆ, ಶೂನ್ಯ ಸಂಪಾದನೆಯ ಸಂಖ್ಯೆಯ ಬಗ್ಗೆ, ವೀರಶೈವ ಪುರಾಣಗಳ ಲಕ್ಷಣಗಳ ಬಗ್ಗೆ, ಅಲ್ಲಮ ಶಬ್ದದ ಪ್ರಾಚೀನತೆಯ ಬಗ್ಗೆ ಹಲವಾರು ಲೇಖನಗಳನ್ನು ಬರೆದರು. ಅವರ ತಲಸ್ಪರ್ಶಿಯಾದ ವಿಷಯಜ್ಞಾನ, ಪಾಂಡಿತ್ಯ ಇಂಥ ಕೃತಿ ಲೇಖನಗಳಲ್ಲಿ ಚೆನ್ನಾಗಿ ವ್ಯಕ್ತಗೊಂಡಿದೆ. ಅವರು ಸಂಗ್ರಹಕಾರ್ಯಕ್ಕಾರಿಸಿಕೊಂಡ ಕೃತಿಗಳಾದರೂ ವೀರಶೈವ ಕವಿಗಳದೇ. ಕವಿಕಾಲಾನುಕ್ರಮಣಿಕೆಯಲ್ಲಿ ವೀರಶೈವ ಸಾಹಿತ್ಯಚರಿತ್ರೆಯನ್ನು ಅವರು ಬರೆಯಲು ಪ್ರಯತ್ನಿಸಿದ್ದರು. ೬೦೦-೭೦೦ ಪುಟಗಳ ವ್ಯಾಪ್ತಿಹೊಂದಿದ್ದ ಆ ಕೃತಿಯ ಹಸ್ತ ಪ್ರತಿಯ ಬೇರೆ ಬೇರೆ ಭಾಗಗಳನ್ನು ನಾನು ಕಣ್ಣಾರೆ ನೋಡಿದ್ದೇನೆ. ಅದು ಅತಿ ವ್ಯಾಪ್ತಿ ಹೊಂದಿತ್ತಾದ್ದರಿಂದ ಅದನ್ನು ಸಿದ್ಧಪಡಿಸಲು ಹೇಳಿದ್ದ ನಮ್ಮ ವಿಶ್ವವಿದ್ಯಾನಿಲಯ ಪ್ರಕಟಿಸಲಾಗದೆ ಹೋದದ್ದು ಒಂದು ದುರದೃಷ್ಟದ ಸಂಗತಿ.

ಪರಿಷತ್ತನ್ನು ಕಟ್ಟಿ ಬೆಳೆಸಿದ ಆದ್ಯ ಮಹನೀಯರಲ್ಲಿ ಶ್ರೀನಿವಾಸಮೂರ್ತಿಗಳು ಗಣ್ಯರು. ಅವರು ಬಹಳ ಹಿಂದೆಯೇ ಪರಿಷತ್ತಿನ ಸದಸ್ಯರಾಗಿದ್ದರಾದರೂ, ೧೯೩೪ ರಿಂದ ಅದರ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಪರಿಷತ್ತು ನಡೆಸುತ್ತಿದ್ದ ಸಾಹಿತ್ಯೋತ್ಸವ ಸಂದರ್ಭದಲ್ಲಿ ಆಧುನಿಕ ವಿಚಾರೋಪನ್ಯಾಸ ಮಾಲೆ, ಪುಸ್ತಕ ಪ್ರದರ್ಶನ ಏರ್ಪಾಡು ಮೂರ್ತಿಗಳ ಸಲಹೆಯ ಮೇರೆಗಾಯಿತು. ತರುವಾಯ ಇದೇ ವಸಂತ ಸಾಹಿತ್ಯೋತ್ಸವವಾಗಿ ಪರಿಷ್ಕೃತಗೊಂಡಿತು. ಅವರು ೨೦ ವರ್ಷಕಾಲ ಕಾರ್ಯಕಾರೀ ಸಮಿತಿ ಸದಸ್ಯರಾಗಿ, ಮೂರೂವರೆ ವರ್ಷಕಾಲ ಪರಿಷತ್ತಿನ ಅಧ್ಯಕ್ಷರಾಗಿ, ಕನ್ನಡ ನುಡಿ - ಪರಿಷತ್ಪತ್ರಿಕೆಗಳ ಸಂಪಾದಕರಾಗಿ, ಕೆಲಸ ಮಾಡಿದರು. ಅವರು ಅಧ್ಯಕ್ಷರಾದಾಗ ಪರಿಷತ್ತಿನ ಆರ್ಥಿಕ ಸ್ಥಿತಿ ತುಂಬ ಹದಗೆಟ್ಟಿತ್ತು. ಆಗ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಕೆಂಗಲ್ ಹನುಮಂತಯ್ಯ, ಹೈದರಾಬಾದಿನ ಮುಖ್ಯಮಂತ್ರಿಗಳಾಗಿದ್ದ ರಾಮಕೃಷ್ಣರಾವ್ ಅವರನ್ನು ಒಲಿಸಿ ಆರ್ಥಿಕ ನೆರವು ತಂದರು. ಕನ್ನಡ - ಕನ್ನಡ ನಿಘಂಟಿನ ಕಾರ್ಯ ಚುರುಕಾಗಲೂ ಅದಕ್ಕೊಬ್ಬ ಪೂರ್ಣಕಾಲಿಕ ಸಂಪಾದಕರು ಹಾಗೂ ಒಂದು ಪ್ರತ್ಯೇಕ ಕಛೇರಿಯನ್ನು ಸ್ಥಾಪಿಸಿದರು. ವಾರಪತ್ರಿಕೆ, ಪಕ್ಷಪತ್ರಿಕೆಯಾಗಿ ಪರಿಷತ್ತಿಗೆ ಹೊರೆಯಾಗಿದ್ದ 'ಕನ್ನಡನುಡಿ'ಯನ್ನು ಮಾಸಪತ್ರಿಕೆಯಾಗಿಸಿ ಪರಿಷ್ಕರಿಸಿದರು. ಗಮಕ ಕಲೆಯ ಪ್ರೋತ್ಸಾಹಕ್ಕೆ ಸರ್ಕಾರದ ವಿಶೇಷ ನೆರವು ಪಡೆದು ಪರಿಷತ್ತಿನಲ್ಲಿ ಗಮಕ ತರಗತಿ ತೆರೆದರು; ಗಮಕವಾಚನ ಕಾರ್ಯಕ್ರಮ ನಡೆಸಿದರು, ತಾವೇ ಅಧ್ಯಕ್ಷರಾಗಿ ಆಯ್ಕೆಯಾಗಿದ್ದ ಸೊಲ್ಲಾಪುರ ಮುಂಬಯಿ ಮತ್ತು ಬೇಲೂರುಗಳಲ್ಲಿ ಸಾಹಿತ್ಯ ಸಮ್ಮೇಳನ ನಡೆಸಿದರು. ಒಟ್ಟಿನಲ್ಲಿ ಪರಿಷತ್ತಿನ ಸರ್ವಾಂಗೀಣ ಅಭಿವೃದ್ಧಿಗೆ ಆ ಮೂಲಕ ಕನ್ನಡದ ಏಳಿಗೆಗೆ ಶ್ರಮಿಸಿದರು.

ಕನ್ನಡದ ಕೆಲಸಕ್ಕೆ ಮೂರ್ತಿಗಳು ಯಾವಾಗಲೂ ಟೊಂಕಕಟ್ಟಿ ನಿಂತಿರುತ್ತಿದ್ದರು. ಯಾರು ಎಲ್ಲೇ ಕರೆಯಲಿ ಅವರು ಹೋಗಿ ಭಾಷಣಮಾಡಿ ಬರುತ್ತಿದ್ದರು. ಕನಕಪುರದಲ್ಲಿ ತಾವು ಸ್ಥಾಪಿಸಿದ್ದ ಕನ್ನಡ ಸಂಘದ ಕಾರ್ಯಕ್ರಮಕ್ಕೆ ಬರಲು ಇತರರನೇಕರು ನಿರಾಕರಿಸಿದ್ದಾಗ ಮೂರ್ತಿಗಳು ಸಂತೋಷದಿಂದ ಒಪ್ಪಿಬಂದಿದ್ದನ್ನು ಈಗಲೂ ನನ್ನ ಗುರುಗಳಾದ ಟಿ.ವಿ.ವೆಂಕಟಾಚಲಶಾಸ್ತ್ರಿಗಳು ಹೇಳುತ್ತಿರುತ್ತಾರೆ. ನಮ್ಮ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿ ೧೯೫೦ರಲ್ಲಿ ಇಂಟರ್‌ವರೆಗೂ ಕನ್ನಡವನ್ನು ದ್ವಿತೀಯ ಭಾಷೆಯಾಗಿ ಆಯ್ದುಕೊಂಡವರು ಪದವಿ ತರಗತಿಗಳಲ್ಲಿ ಕನ್ನಡದ ಬದಲು ಬೇರೆ ಭಾಷೆ ಎಂದರೆ ಹಿಂದಿ ಮತ್ತಿತರ ಭಾಷೆಗಳನ್ನು

---

19. 'ಸಾವಿತ್ರಿ', ಬೆಂಗಳೂರು, ೧೯೪೯, ಮುನ್ನುಡಿ, ಪು.೧.

ಆಯ್ದುಕೊಳ್ಳಬಹುದು ಎಂಬ ನಿರ್ಣಯ ತಂದಾಗ ಅದನ್ನು ಭಾಷಣಗಳಲ್ಲಿ, ಕನ್ನಡನುಡಿಯ ಸಂಪಾದಕೀಯದಲ್ಲಿ ಉಗ್ರವಾಗಿ ಟೀಕಿಸಿದರು. ಪತ್ರಿಕಾಗೋಷ್ಠಿ ಕರೆದು ಖಂಡಿಸಿದರು. ''ಕನ್ನಡ ತಾಯಿಗೆ ದ್ರೋಹ ಮಾಡಬೇಡಿ; ಆಕೆಯನ್ನು ಕೈ ಹಿಡಿದು ಉದ್ಧಾರ ಮಾಡಿ'' ಎಂದು ಕರೆಕೊಟ್ಟರು. ಅಂತಿಮವಾಗಿ ಅದು ಬಿದ್ದು ಹೋಯಿತು. ಗಡಿನಾಡಿನ ಜನಗಣತಿಯಲ್ಲಿ ಮರಾಠಿಗರೇ ಇದ್ದುಕೊಂಡು ಅಲ್ಲಿನ ಕನ್ನಡಿಗರ ಆಧಿಕ್ಯವನ್ನು ಮುಚ್ಚಿಟ್ಟಾಗ ಅದನ್ನು ಕಂಠೋಕ್ತವಾಗಿ ಪ್ರತಿಭಟಿಸಿದರು. ಕನ್ನಡದ ಬಗ್ಗೆ ಸೊಲ್ಲಾಪುರದ ತಮ್ಮ ಅಧ್ಯಕ್ಷ ಭಾಷಣದಲ್ಲಿ ಅವರು ಆಡಿರುವ ಮಾತುಗಳು ಇಂದಿಗೂ ಮನನೀಯವಾಗಿವೆ. ಕನ್ನಡದ ಬಗೆಗಿನ ಇಂದಿನ ಅನೇಕರ ಧೋರಣೆ, ಆಲೋಚನೆಗಳು ಮೂರ್ತಿಗಳ ಅಧ್ಯಕ್ಷ ಭಾಷಣದ ಮಾತುಗಳಲ್ಲಿಯೇ ಹೊಳಹುಗೊಂಡಿದೆ. ಈ ಕೆಲವು ವಾಕ್ಯಗಳನ್ನು ನೋಡಬಹುದು.[20] : ''ನಮ್ಮ ಶಿಕ್ಷಣ ಪದ್ಧತಿಯಲ್ಲಿ ಕನ್ನಡವೇ ಎಲ್ಲ ದರ್ಜೆಗಳಲ್ಲಿಯೂ ಪ್ರಥಮ ಭಾಷೆಯಾಗಿರುವಂತೆಯೂ ಕನ್ನಡವೇ ಬೋಧಕ ಭಾಷೆಯಾಗಿರುವಂತೆಯೂ ಸುಧಾರಣೆಯಾಗಬೇಕು''. ''ಕನ್ನಡದ ಭದ್ರತೆಗೆ ಕುಂದುತರುವ ಯಾವ ಸಂಚನ್ನೇ ಆಗಲಿ ಯಾವ ನಿರೂಪವನ್ನೇ ಆಗಲಿ, ನಾವು ಸರ್ವಾತ್ಮನಾ ಸಂಪೂರ್ಣ ಶಕ್ತಿಯಿಂದ ಪ್ರತಿಭಟಿಸಬೇಕೆಂದು ನಾನು ಹೇಳುತ್ತೇನೆ. ತಿಮಿತಿಮಿಂಗಿಲ ನ್ಯಾಯವೆನ್ನುವುದು ಜಲಚರಗಳಲ್ಲಿ ಮಾತ್ರವಲ್ಲ. ಭೂಚರರಲ್ಲಿಯೂ ಕಂಡುಬರುತ್ತದೆ. ಸಾರ್ವಭೌಮೋಧಿಕಾರ ದಾಹವೆನ್ನುವುದು ರಾಜಕೀಯ ಕ್ಷೇತ್ರದಲ್ಲಿ ಮಾತ್ರವಲ್ಲ, ಭಾಷಾಕ್ಷೇತ್ರದಲ್ಲಿಯೂ ಕಂಡುಬರುತ್ತದೆ. ಆದ್ದರಿಂದ ಎಚ್ಚರಿಕೆ! ಎಚ್ಚರಿಕೆ! ಎಚ್ಚರಿಕೆ! ಎಂದು ಒತ್ತಿ ಒತ್ತಿ ಹೇಳುತ್ತೇನೆ. ಕನ್ನಡ ನಮಗೆ ಆಡಳಿತದ ಭಾಷೆಯಾಗಬೇಕು; ಕನ್ನಡ ನಮ್ಮ ಶಾಸನ ಸಭೆಗಳ ಭಾಷೆಯಾಗಬೇಕು; ಕನ್ನಡ ನಮ್ಮ ನ್ಯಾಯಸ್ಥಾನಗಳ ವ್ಯವಹಾರ ಭಾಷೆಯಾಗಬೇಕು. ಆ ನೆಲೆಯಿಂದ ನಾವು ಒಂದಂಗುಲವೂ ಹಿಮ್ಮೆಟ್ಟಕೂಡದು''. ''ಭಾಷೆಗೆ ಪ್ರಯೋಗಾವಕಾಶವೇ ಶಕ್ತಿವರ್ಧಕ. ಆದ್ದರಿಂದ ಕನ್ನಡಕ್ಕೆ ಪ್ರಯೋಗಾವಕಾಶಗಳ ಕ್ಷೇತ್ರಗಳನ್ನು ವಿಸ್ತಾರಪಡಿಸಿಕೊಳ್ಳುತ್ತ, ಪ್ರಯೋಗಾವಕಾಶಗಳ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುತ್ತ ಹೋಗಬೇಕಾದುದು ನಮ್ಮೆಲ್ಲರ ಕರ್ತವ್ಯ. ವಿಶ್ವವಿದ್ಯಾನಿಲಯಗಳಲ್ಲಿ ಸಹ ಕನ್ನಡವೇ ಜ್ಞಾನ ಸಾಹಿತ್ಯ ಬೋಧನೆಗೆ ವಾಹಕವಾಗಬೇಕು. ಕ್ಲಿಷ್ಟ ವಿಚಾರಗಳನ್ನು ಕನ್ನಡದಲ್ಲಿಯೇ ಆಲೋಚನೆ ಮಾಡುವ ಮತ್ತು ಕನ್ನಡದಲ್ಲಿಯೇ ವ್ಯಕ್ತಗೊಳಿಸುವ ರೂಢಿಯನ್ನು ನಾವು ಪಡೆಯಬೇಕು. ಆಗ ನಮ್ಮ ಮಿದುಳಿಗೆ ಆವಶ್ಯಕವಾದ ಸಾಧನೆ ದೊರೆಯುತ್ತದೆ. ಬಾಯಿ ಪಟುವಾಗುತ್ತದೆ. ಜ್ಞಾನ ಸಾಹಿತ್ಯವನ್ನು ಜನತೆಯಲ್ಲಿ ಹರಡುವ ಸಾಮರ್ಥ್ಯ ಸಿದ್ಧಿಸುತ್ತದೆ. ಜನತೆಯ ಉದ್ಧಾರವಾಗುತ್ತದೆ. ಯಾವ ಕಾರಣದಿಂದಲೇ ಆಗಲಿ ಕನ್ನಡಕ್ಕೆ ಹೀಗೆ ಪ್ರಮುಖ ಸ್ಥಾನ ದೊರೆಯದೇ ಹೋದರೆ ಅದು ಕುಂಠಿತವಾಗುತ್ತದೆ, ಜನತೆ ಕ್ಷೀಣಿಸುತ್ತದೆ. ಮುಂದಿನ ಕನ್ನಡ ಸಾಹಿತ್ಯವೆಲ್ಲ ಗಿಳಿ ಹಾಡು, ಅರ್ಜುನ ಜೋಗಿ ಹಾಡುಗಳಲ್ಲಿ ಮುಕ್ತಾಯವಾಗುತ್ತದೆ''. ''ನಿಮ್ಮ ಧೂಮಪಾನ, ಅಂಗರಾಗ, ಕೇಶ ಪ್ರಸಾದನಗಳಿಗೆ ವ್ಯಯ ಮಾಡುವ ಹಣದಲ್ಲಿ ಕಾಲುಭಾಗ, ಕಡೆಗೆ ಹತ್ತರಲ್ಲೊಂದು ಭಾಗವನ್ನು ಕನ್ನಡ ಪುಸ್ತಕಗಳನ್ನು ಕೊಂಡುಕೊಳ್ಳುವುದಕ್ಕೆ ವಿನಿಯೋಗಿಸಿ, ನಿಮ್ಮ ಕಾಫಿ ಕ್ಲಬ್ಬು ಸಿನಿಮಾ ವ್ಯಾಮೋಹಗಳಿಗಾಗಿಯೂ ನಟನಟಿಯರ ಭಾವಚಿತ್ರ ಸಂಗ್ರಹಣಕ್ಕಾಗಿಯೂ ವ್ಯಯ ಮಾಡುವ ಹಣದಲ್ಲಿ ಸ್ವಲ್ಪ ಭಾಗವನ್ನು ಕನ್ನಡದ ಪುಸ್ತಕಗಳಿಗಾಗಿ ವಿನಿಯೋಗಿಸಿ, ವಿವಾಹಕಾಲದಲ್ಲಿ ಮಾವನವರಿಂದ ಹಲವು ಉಡುಗೊರೆಗಳನ್ನು ತೆಗೆದುಕೊಳ್ಳುವಾಗ ಒಂದುನೂರು ರೂಪಾಯಿ ಬೆಲೆಯ ಕನ್ನಡ ಪುಸ್ತಕಗಳನ್ನು ರಿಸ್ಟ್‌ವಾಚ್‌ಗೆ ಬದಲಾಗಿ ಸ್ವೀಕರಿಸುವ ಸಂಕಲ್ಪವನ್ನು ಮಾಡಿಕೊಳ್ಳಿ, ನಿಮ್ಮ ಮೆಚ್ಚಿನ ಸ್ನೇಹಿತರಿಗೆ ಉಡುಗೊರೆಗಳನ್ನು ಕೊಡಬೇಕಾದರೆ ಕನ್ನಡ ಪುಸ್ತಕಗಳನ್ನು ಮೆಚ್ಚುಗಳನ್ನಾಗಿ ಕೊಡಿ.... ಆಗ ತಾನಾಗಿಯೇ ಕನ್ನಡ ಗ್ರಂಥಗಳಿಗೆ ವಾಚಕಲೋಕ ವಿಸ್ತಾರವಾಗುತ್ತದೆ; ಪಠ್ಯಪುಸ್ತಕಗಳಾಗಿ ಇಡದಿದ್ದರೂ ಗ್ರಂಥಗಳ ಮಾರಾಟ ಕೊಂಚವಾದರೂ ತೃಪ್ತಿಕರವಾಗಿ ನಡೆಯುತ್ತದೆ; ಕನ್ನಡದ ಕೋಟೆ ಬಲಪಡುತ್ತದೆ; ಕನ್ನಡದ ಕೀರ್ತಿಧ್ವಜ ಉನ್ನತವಾಗಿ ಹಾರಾಡುತ್ತದೆ''. ಈ ಬಗೆಯ ಚಿಂತನೆ ಹರಳುಗಟ್ಟಿದ ಮಾತುಗಳಿಂದ ಕನ್ನಡ ಉಳಿಯಲು ಅನುಸರಿಸಬೇಕಾದ ಹಾದಿಯನ್ನು ಮೂರ್ತಿಗಳು ತೋರಿದರು.

---

20. 'ಕನ್ನಡ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷರ ಭಾಷಣಗಳು', ೨, ಬೆಂಗಳೂರು, ೧೯೭೨, ಪು. ೪೬೯, ೪೭೨-೭೩, ೪೮೨.

೪

ಶ್ರೀನಿವಾಸಮೂರ್ತಿಗಳ 'ಕಂಠೀರವ ವಿಜಯ'ಕ್ಕೆ ಮಹಾರಾಜರ ಆರ್ಥಿಕ ಪ್ರೋತ್ಸಾಹ, 'ಭಕ್ತ ಭಂಡಾರಿ ಬಸವಣ್ಣನವರು', ಕೃತಿಗೆ ದೇವರಾಜ ಬಹದ್ದೂರ್ ಬಹುಮಾನ ಲಭಿಸಿವೆ. ಅವರ ನಾಗರಿಕ, ಧರ್ಮದುರಂತ, ರಂಗಣ್ಣನ ಕನಸಿನ ದಿನಗಳು, ವಚನಧರ್ಮಸಾರ ಅನೇಕ ಆವೃತ್ತಿಗಳನ್ನು ಕಂಡಿವೆ. ಅವರಿಗೆ ಬಾದಾಮಿಯ ಶಿವಯೋಗಿ ಮಂದಿರದ ಅಧ್ಯಕ್ಷರು ವಚನ ವಾಙ್ಮಯ ವಿಶಾರದ ಎಂಬ ಬಿರುದನ್ನಿತ್ತಿದ್ದರು. ಚಿತ್ರದುರ್ಗದಲ್ಲಿ, ಧರ್ಮಸ್ಥಳದಲ್ಲಿ ಅವರಿಗೆ ಅಭಿಮಾನಿಗಳು ಗೌರವ ಸಲ್ಲಿಸಿದರು. ಕನ್ನಡ ಜನ ಅವರನ್ನು ಸೊಲ್ಲಾಪುರದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿ ಆರಿಸಿದರು. ಅವರು ೧೯೫೩ರ ಸೆಪ್ಟೆಂಬರ್ ೧೬ರಂದು ಕಾಲರಾ ಬೇನೆಯಿಂದ ಅಕಾಲವಾಗಿ ವಿಧಿವಶರಾದರು. 'ಅವರ ಮರಣದಿಂದ ನನಗೆ ಜೀವನದ ಇಚ್ಛೆ ಅರ್ಧ ಕುಗ್ಗಿತು' ಎಂದು ಡಿವಿಜಿ ಹೇಳಿದರೆ, ''ಮೂರ್ತಿಯ ಕಥೆ ಎಷ್ಟು ಸಾರ್ಥಕವಾದದ್ದೊ ಅಷ್ಟೇ ರಮ್ಯವಾದದ್ದು. ಆ ಪ್ರೇಮಲತೆ, ಸಜ್ಜನತೆ, ನಿಷ್ಠೆ; ಮನಸ್ಸಿನ ಉದಾರತೆ ಸಂಸ್ಕೃತಿಯ ಸಾರಲಕ್ಷಣ, ಅದರ ಉನ್ನತಿಯನ್ನು ಕಾಣಿಸಬಲ್ಲದು'' ಎನ್ನುತ್ತಾರೆ. ವಿ.ಸೀ. ಈ ಮನೋಭಾವ ಮೂಡಿಸುವ ವರ್ಚಸ್ವೀ ಸಾಹಿತಿಗಳು ಇಂದು ಅಪರೂಪ.

' ಇಬ್ಬನಿಯವತಾರ '

ಶ್ರೀ ಚೆನ್ನವೀರ ಕಣವಿ

ಕುವೆಂಪು ಅವರ ಭಾವಗೀತಗಳಲ್ಲಿ ಪ್ರಮುಖವಾದವುಗಳೆಂದರೆ ಅವರ ಪ್ರಕೃತಿ ಸೌಂದರ್ಯಾನುಭವದ ಕವಿತೆಗಳೆಂದೇ ಹೇಳಬೇಕು. ನಮ್ಮ ಸುತ್ತು ಮುತ್ತು ಕಣ್ಣಿಗೊತ್ತುವಂತೆ ವಿವಿಧ ವಿನ್ಯಾಸದಲ್ಲಿ ಹರಡಿ ಹಬ್ಬಿದ್ದರೂ ಸಾಮಾನ್ಯವಾಗಿ ಅಲಕ್ಷಿತಗೊಂಡ ನಿಸರ್ಗದ ನೂರು ಬಗೆಯ ಚೆಲುವನ್ನು ಎತ್ತಿ ತೋರಿಸಿ, ಉದಾತ್ತೀಕರಿಸಿ, ಬಗೆಬಗೆಯಾಗಿ ಬಣ್ಣಿಸಿ, ಆಸ್ವಾದಿಸಿ, ಆರಾಧಿಸಿ, ಎಲ್ಲರೂ ಅದನ್ನು ಅನುಭವಿಸಿ ಬದುಕನ್ನು ಸಾರ್ಥಕಗೊಳಿಸಿಕೊಳ್ಳಬೇಕೆಂಬ ತೀವ್ರವಾದ ಹಂಬಲವನ್ನು ಅವರ ನಿಸರ್ಗಗೀತಗಳಲ್ಲಿ ನಾವು ಕಾಣುತ್ತೇವೆ. ಗುಡಿ ಗುಂಡಾರಗಳಲ್ಲಿ ಸಾಂಪ್ರದಾಯಕವಾಗಿ ನಡೆಸುವ ಪೂಜೆ ಪುನಸ್ಕಾರಗಳಿಗಿಂತ ವಿಶಾಲವಾದ ಪ್ರಕೃತಿಯ ಭವ್ಯಮಂದಿರದಲ್ಲಿ ಅದರ ಉಪಾಸನೆಯಿಂದ ದೊರಕುವ ಶಾಂತಿ ಹಾಗೂ ದೈವೀ ಸಾಕ್ಷಾತ್ಕಾರ ಮಿಗಿಲಾದದ್ದೆಂದು ಈ ಕವಿತೆಗಳು ಘೋಷಿಸುತ್ತವೆ. ಜೀವನದುದ್ದಕ್ಕೂ ಪ್ರಕೃತಿಯ ಉಪಾಸನೆಯಿಂದ ತಮಗಾದ ಗಾಢ ಅನುಭವವನ್ನು ವಿವಿಧ ಹಂತಗಳಲ್ಲಿ, ಕವಿ ನಿರೂಪಿಸಿದ್ದಾರೆ. ಈ ಅನುಭವದ ಅಭಿವ್ಯಕ್ತಿ ಅನೇಕ ಕವನಗಳಲ್ಲಿ ಪುನರಾವರ್ತನೆಗೊಳ್ಳುತ್ತದಾದರೂ ಕವಿಯ ಮಟ್ಟಿಗೆ ಆಯಾ ಅನುಭವ ಮತ್ತೆ ಮತ್ತೆ ಹೊಸತಾಗಿಯೇ ಆದಂತೆ, ಅದೇ ಸ್ಫೂರ್ತಿಯಿಂದ - ಕವಿತೆಯಾಗಿ ಅದರ ಸೋಲು ಗೆಲುವುಗಳನ್ನು ಗಮನಿಸದೆ - ರೂಪುಗೊಳ್ಳುತ್ತದೆ.

ಕುವೆಂಪು ಅವರ ಸೌಂದರ್ಯಾನುಭವದ ಸಮಗ್ರ ಶಕ್ತಿ, ವೈಭವಗಳು ಅವರ ಸೂರ್ಯೋದಯದ ಗೀತಗಳಲ್ಲಿ ಸಮುಜ್ವಲವಾಗಿ ಕಾಣಿಸಿಕೊಂಡಿವೆಯಾದರೂ 'ಇಬ್ಬನಿ'ಯಂಥ ಇತರ ಕವಿತೆಗಳಲ್ಲಿಯೂ ತನ್ನ ಮಣಿದೀಪವನ್ನು ಅದು ಹೊತ್ತಿಸದೆ ಬಿಟ್ಟಿಲ್ಲ. ಇವು ಒಂದು ರೀತಿಯಲ್ಲಿ ಅದಕ್ಕೆ ಉಪಷ್ಟಂಭಕಗಳೆಂದೇ ಹೇಳಬಹುದು.

ಪ್ರಕೃತಿಯಲ್ಲಿ ಯಾವುದನ್ನು ಸಾಮಾನ್ಯವೆಂದು ಇಲ್ಲವೆ ಕ್ಷುದ್ರವೆಂದು ಅರಸಿಕರು ಕಡೆಗಣಿಸಿ ಬಿಡಬಹುದೋ ಅಂಥದರ ಬಗ್ಗೆ ಕವಿ ಅವರನ್ನು ಎಚ್ಚರಿಸಿ, ಕೆಲಮಟ್ಟಿಗೆ ಒತ್ತಾಯಿಸಿ, ಅವರಿಗೆ ಸೌಂದರ್ಯದೃಷ್ಟಿಯನ್ನು ನೀಡಿ, ಅದರಲ್ಲಿ ತನ್ಮಯಗೊಳ್ಳುವಂತೆ ಮಾಡುವದು ಕುವೆಂಪು ಕಾವ್ಯದ ಒಂದು ರೀತಿ. 'ಇಬ್ಬನಿಯವತಾರ' ಕವಿತೆಯ ಪ್ರಾರಂಭದಲ್ಲಿಯೇ ಅದು ಎದ್ದು ಕಾಣುತ್ತದೆ:

> ಪ್ರೀತಿಸು, ಮುದ್ದಿಸು, ಒಲಿ, ಆಲಿಂಗಿಸು
> ಬರಿ ನೀರಿನ ಹನಿ ಎನಬೇಡ.

ಇಲ್ಲಿ ಪ್ರಯೋಗಿಸಿದ ಬಿಡಿ ಬಿಡಿ ಪದಗಳೇ ಪ್ರೀತಿಯ ಒತ್ತಾಯವನ್ನು ('ಮುದ್ದಿಸು' ಪದದ ಒತ್ತನ್ನು ಗಮನಿಸಿ) ಆತ್ಮೀಯವಾಗಿ, ಹಂತಹಂತವಾಗಿ ಮಾಡಿಕೊಡುತ್ತವಲ್ಲದೆ 'ಆಲಿಂಗಿಸು'ವಿನಲ್ಲಿ ಅದರ ಗಾಢತೆ ತಾನೇ ತಾನಾಗಿ ಪ್ರಕಟಗೊಳ್ಳುತ್ತದೆ. ಹಾಗೆ ನಮ್ಮ ಮನಸ್ಸನ್ನು ಒಲಿಸಿಕೊಂಡ ಮೇಲೆ ಅದರ ಸೌಂದರ್ಯ ದ್ವಾರವನ್ನು ತೆರೆದು ಜೀವಂತವಾದ ಶಬ್ದ ಚಿತ್ರಗಳ ಚೌಕಟ್ಟಿನಲ್ಲಿ ರಮ್ಯೋಜ್ವಲವಾದ ಇಬ್ಬನಿಯನ್ನು ಕವಿ ಕಡೆದು ನಿಲ್ಲಿಸುತ್ತಾರೆ :

> ಪಚ್ಚೆಯ ಪುಲಕವೆ ಎಚ್ಚತ್ತೋಲಿಹ
> ಆಶ್ವೀಜಾಂತ್ಯದ ಹಚ್ಚನೆ ಹಸುರಲಿ
> ಬೆಚ್ಚನೆ ಮಲಗಿಹ ಚೊಚ್ಚಲ್ ಬಿಸಿಲಲಿ
> ಮಿಣುಕಿದೆ ಕಿಡಿಯಿಬ್ಬನಿ ನೋಡ!

ಆಶ್ವೀಜ ಮಾಸದ ಕೊನೆಯಲ್ಲಿ ಹುಲುಸಾಗಿ ಬೆಳೆದು ನಳನಳಿಸುವ ಹುಲ್ಲುಗರುಕೆಯ ಹಸುರಿನಲ್ಲಿ ಮಿನುಗುವ ಇಬ್ಬನಿಯ ಕಿಡಿ ತಟ್ಟನೆ ನಮ್ಮ ಕಣ್ಣನ್ನು ಸೆಳೆಯುತ್ತದೆ. ಸೂರ್ಯನ ಕಿರಣಕ್ಕೆ ಇಬ್ಬನಿ ಮಾರ್ಪೊಳೆಯುವದರಿಂದ 'ಕಿಡಿಯಿಬ್ಬನಿ' ಎಂಬ ರೂಪಕದ ಔಚಿತ್ಯವನ್ನು ಇಲ್ಲಿ ಪರಿಭಾವಿಸಬಹುದು. 'ಪಚ್ಚೆಯ' 'ಎಚ್ಚತ್' 'ಹಚ್ಚನೆ' 'ಬೆಚ್ಚನೆ' 'ಚೊಚ್ಚಲ್' ಈ ಪದಗಳ ಅನುಪ್ರಾಸದಿಂದೊಡಗೂಡಿದ ನಾಲ್ಕು ಮಾತ್ರೆಯ ಇಲ್ಲಿಯ ಛಂದೋಲಯ ನಮ್ಮ ಕಿವಿಯನ್ನು ಕಣ್ಣನ್ನೂ ಕೂಡಿಯೆ ಸೆರೆ ಹಿಡಿದು, ಬೆಳಗಿನ ಉತ್ಸಾಹದ ವಾತಾವರಣವನ್ನು ಸಹಜವಾಗಿಯೆ ಸೃಷ್ಟಿಸಿ, ಅದರ ನಡುವೆ ಇಬ್ಬನಿ ಮೂರ್ತೀಕೃತ ವ್ಯಕ್ತಿಯಾಗಿ ಒಮ್ಮೆಲೆ ಕಂಗೊಳಿಸುವಂತೆ ಮಾಡುತ್ತದೆ.

ಇಬ್ಬನಿಗೆ ಇನ್ನಿಷ್ಟು ಖಚಿತವಾದ ಆಕಾರವನ್ನು ನೀಡುವ ಹಂಬಲದಲ್ಲಿ ಕವಿಯ ಕಲ್ಪನೆ ಗರಿಗೆದರಿ, ನಾಲ್ಕು ವಿವಿಧ ಉಪಮೆಗಳಿಂದ ಅದನ್ನು ಕೆತ್ತಿ ಸಿಂಗರಿಸುತ್ತದೆ :

> ಕಾರಿರುಳಿನ ಮಿಂಚುಂಬುಳುವಂತೆ,
> ಕರ್ದಿಂಗಳ ಬಾನಿನ ಅರಿಲಂತೆ,
> ಮುತ್ತಯ್ದೆಯ ಮೂಗುತಿ ಹರಳಂತೆ
> ಧ್ಯಾನಿಯ ಕಣ್ಣೆವೆಗೂದಲಿನಂಚೊಳ್
> ಹೊಂಚುವ ಬಾಷ್ಪದ ಬಿಂದುವಿನಂತೆ
> ಆಶಾ ಭಾವೋಜ್ವಲ ನೋಡ!

ದಟ್ಟವಾದ ಕತ್ತಲೆಯಲ್ಲಿ ಮಿಂಚುಹುಳದ ಕುಡಿಬೆಳಕು, ಅಮಾವಾಸ್ಯೆಯ ಆಗಸದಲ್ಲಿ ಹೊಳೆವ ನಕ್ಷತ್ರ, ಮುತ್ತಯ್ದೆಯ ಮೂಗುತಿಯಲ್ಲಿ ಲಕಲಕಿಸುವ ಹರಳು, ಧ್ಯಾನಿಯ ಕಣ್ಣೆವೆಯಲ್ಲಿ ಮೂಡುವ ಹರ್ಷಬಾಷ್ಪ - ಇವು ಒಂದೊಂದೂ ನಮ್ಮ ಮನಸ್ಸಿನಲ್ಲಿ ಆಶಾಜ್ಯೋತಿಯನ್ನು ಹೊತ್ತಿಸುವಂತೆ, ಈ ಉಪಮೆಗಳ ವೈವಿಧ್ಯ ಬೇರೆ ಬೇರೆ ಮಟ್ಟದಲ್ಲಿ, ಇಬ್ಬನಿಯ ಬಗ್ಗೆ ಕವಿ

ನಮ್ಮಲ್ಲಿ ಹುಟ್ಟಿಸಬೇಕಾದ ಪ್ರೀತಿಭಾವಕ್ಕೆ ಪೋಷಕವಾಗಿವೆ. ಮೊದಲಿನ ಎರಡು ಉಪಮೆಗಳು ಪ್ರಕೃತಿಯನ್ನೂ, ಮುಂದಿನ ಎರಡು ಉಪಮೆಗಳು ಮಾನವ ಜೀವನವನ್ನೂ ಪ್ರತಿನಿಧಿಸುತ್ತ 'ಆಶಾಭಾವೋಜ್ವಲ' ಎನ್ನುವ ಪದಪುಂಜ ಈ ಎಲ್ಲ ಉಪಮೆಗಳ ಜೀವಕಳೆಯಾಗಿ ಅವುಗಳನ್ನು ಸಾರ್ಥಕಗೊಳಿಸಿದೆ.

ಈ ರಸಾನುಭವದ ವರ್ಣನೆ ಈ ಭಾಗದ ಕೊನೆಯ ಎರಡು ಸಾಲುಗಳಲ್ಲಿ ಘನೀಭೂತವಾಗಿ ಒಂದು ತಾತ್ವಿಕ ದರ್ಶನವನ್ನು ಮೂಡಿಸುತ್ತದೆ.

ನಶ್ವರ ಲೀಲಾಸುಖಿ ಈ ಈಶ್ವರನನು ನೋಡ;
ನೋಡಿಯೆ ನಶ್ವರವನು ನೀನ್ ಅವಿನಶ್ವರ ಮಾಡ;

ಪ್ರಾತಃಕಾಲದ ಪ್ರಕೃತಿವ್ಯಾಪಾರದಿಂದ ಮೂಡಿ, ತನ್ನ ಸಕಲ ಸೌಂದರ್ಯವನ್ನೆಲ್ಲ ಸೂರೆಗೊಳಿಸಿ, ಕ್ಷಣಿಕವಾದರೂ ಸಾರ್ಥಕವಾಗಿ ಮರುಕ್ಷಣದಲ್ಲಿ ಇಲ್ಲದಂತಾಗುತ್ತದೆ ಇಬ್ಬನಿ. ಹೀಗೆ ನಶ್ವರದಲ್ಲಿಯೂ ತನ್ನ ತೇಜಸ್ಸಿನ ಅಂಶವನ್ನು ತೋರಿ ಮರೆಯಾಗುವ, ಅದೇ ಒಂದು ಲೀಲೆಯಾಗಿರುವ ಸೃಷ್ಟಿಕರ್ತನಾದ ಶಾಶ್ವತ ಬೆಳಕಿನ ಈಶ್ವರನತ್ತ ಕವಿ ನಮ್ಮ ಮನಸ್ಸನ್ನು ತಿರುಗಿಸುತ್ತಾನೆ. ಇಬ್ಬನಿ ನಶ್ವರವಾದರೂ ಅದರಿಂದ ಪಡೆದ ಸೌಂದರ್ಯಾನುಭವ ಮಾತ್ರ ಅವಿನಶ್ವರ; ನಮ್ಮ ಭಾವದೇಗುಲದಲ್ಲಿ ಅದು ನಂದಾದೀಪವಾಗಿ ಬೆಳಗುವಂಥದು. ಈ ಮಾತು ಹೊರಗಿನಿಂದ ಎಳೆದು ತಂದ ಉಪದೇಶವೆನಿಸದೆ, ರಸಾನುಭವದ ಹಿನ್ನೆಲೆಯಲ್ಲಿ ಪ್ರಾದುರ್ಭವಿಸಿ ಕವಿತೆಯೇ ಅದನ್ನು ಒಡನುಡಿಯುವಂತಿದೆ.

'ಇಬ್ಬನಿಯವತಾರ'ದ ಈ ಮೊದಲನೆಯ ಭಾಗ ಹೀಗೆ ಈ ಕವಿತೆಯ ಸಾರವತ್ತಾದ, ಒಂದು ದೃಷ್ಟಿಯಲ್ಲಿ ಸ್ವಯಂಪೂರ್ಣವಾದ ಭಾಗವಾಗಿದೆ.

೨

ಬೆಳಗಿನ ಈ ಇಬ್ಬನಿಯನ್ನು ನೋಡಿ ಅದರ ಸೌಂದರ್ಯಾನುಭವದಿಂದ ಮನಸ್ಸಿಗೆ ಒದಗುವ ಶಾಂತಿ ಹಾಗೂ ರಸಸಂಸ್ಕಾರ ಅತ್ಯಂತ ಶ್ರೇಷ್ಠವಾದದ್ದೆಂಬುದನ್ನು ಕವಿ ಸಮಕಾಲೀನ ಜಗತ್ತಿನ ವಿದ್ಯಮಾನಗಳ ಸಂದರ್ಭದೊಂದಿಗೆ ಎರಡನೆಯ ಭಾಗದಲ್ಲಿ ನಿರೂಪಿಸುತ್ತಾನೆ :

ಸ್ಟಾಲಿನ್ ಟ್ರೂಮನ್ ಭೇಟಿಗೆ ನೂರ್ಮಡಿ
ಮುಖ್ಯಂ ಭವ್ಯಂ ಕವಿಗೀ ನೀರ್ ಕಿಡಿ!
ಹಿಡಿದಿಲ್ಲೀ ಹನಿಗವರಾ ಕೀರ್ತಿಯ ಶನಿ;
ಗುಡಿ ಕಾಣಾ ಶಾಂತಿಯ ದೇವತೆಗೀ ಇಬ್ಬನಿ!

ಜಗತ್ತಿನ ಮುಂದುವರಿದ ರಾಷ್ಟ್ರಗಳ ನಾಯಕರಾದ (ರಾಜಕೀಯ ದೃಷ್ಟಿಯಿಂದ ಅವರೆಷ್ಟೇ ಮಹತ್ವದ ವ್ಯಕ್ತಿಗಳೆಂದು ಭಾವಿಸಲಾಗಿದ್ದರೂ) ಸ್ಟಾಲಿನ್, ಟ್ರೂಮನ್ ಅವರ ಭೆಟ್ಟಿಗಿಂತ ಈ ಇಬ್ಬನಿಯ ದರ್ಶನ ಕವಿಗೆ ನೂರು ಪಟ್ಟು ಮುಖ್ಯವಾದದ್ದು ಹಾಗೂ ಭವ್ಯವಾದದ್ದೆನಿಸಿದೆ. ಯಾಕೆಂದರೆ ಇದರ ಸೌಂದರ್ಯ ಮಹಿಮೆ ಅವರಂತೆ ರಾಜಕೀಯ ಕೀರ್ತಿಶನಿಗೆ ಒಳಗಾದದ್ದಲ್ಲ. ಯಾರ ಹೊಗಳಿಕೆ - ತೆಗಳಿಕೆಯೂ ಇದನ್ನು ಬಾಧಿಸದು. ಈ ಚೆಲುವಿನ ಹನಿ ಶಾಂತಿದೇವತೆಯ ಗುಡಿ. ಇದರ ಸೌಂದರ್ಯ ದರ್ಶನದಿಂದ ಮನಸ್ಸಿಗೆ ಒದಗುವ ಶಾಂತಿ ಅಪೂರ್ವವಾದದ್ದು. ಶಾಂತಿಗಾಗಿ ದುಡಿದು ಮಡಿದ ಗಾಂಧೀಜಿಯ ಸಂದೇಶವನ್ನೂ ಕವಿ ಈ ಸನ್ನಿವೇಶದಲ್ಲಿಯೇ ನೆನಪಿಗೆ ತಂದುಕೊಡುತ್ತಾನೆ. ಅಣುಬಾಂಬಿನ ಭೀತಿಯಲ್ಲಿರುವ ಜಗತ್ತಿನ ವೈರಭಾವವನ್ನು ಹೋಗಲಾಡಿಸಲು ಪ್ರಕೃತಿಸೌಂದರ್ಯದ ಆರಾಧನೆಯ ಹಾಗೂ ಸಾಮಾನ್ಯತಾ ಸುಖದ ಮಾರ್ಗವನ್ನೇ ಕವಿ ಸೂಚಿಸಬಯಸುತ್ತಾನೆ:

ಇಬ್ಬನಿಯಲಿ ಸುಖಿಸುವ ಹೃದಯವೆ ದೇವಗೆ ಗುಡಿ;
ಸಾಮಾನ್ಯದಿ ಸುಖಿಪುದೆ ಚಿರಶಾಂತಿಗೆ ಮುನ್ನುಡಿ.

'War begins in the minds of men'. ಯುದ್ಧ ಮೊದಲಾಗುವದು ಮನುಷ್ಯನ ಮನಸ್ಸಿನಲ್ಲಿ. ಆ ಮನಸ್ಸನ್ನು ಶುದ್ಧಗೊಳಿಸಿ ಅಲ್ಲಿ ಶಾಂತಿ ಸ್ಥಾಪಿತವಾಗುವದು ಮುಖ್ಯವಾಗಿ ಆಗಬೇಕಾದ ಕೆಲಸ. ಅದಕ್ಕಾಗಿ ರಾಜಕೀಯ ಮಹತ್ವಾಕಾಂಕ್ಷೆಯಿಂದ ಕೀರ್ತಿಶನಿಯ ಬೆನ್ನು ಹಿಡಿಯದೆ, ಇಬ್ಬನಿಯಂತಹ ಸಾಮಾನ್ಯದಲ್ಲಿ ಸುಖಿಸುವುದರಿಂದ ಮಾತ್ರ ಶಾಂತಿಯು ಸ್ಥಿರವಾಗಿ ನೆಲೆಗೊಳ್ಳುತ್ತದೆ ಎನ್ನುವುದು ಕವಿ ಕಂಡುಕೊಂಡ ಕಾಣ್ಕೆ.

'ಕೀರ್ತಿ ಸಪ್ತಮ ವೈರಿ' ಯೆಂದೂ ಆ ಭೂತಕ್ಕೆ ಮನುಷ್ಯ ನಿತ್ಯವೂ ಬಲಿಯಾಗುತ್ತಿದ್ದಾನೆಂದೂ ಕವಿ ಮೊದಲಿನಿಂದಲೂ ಪ್ರತಿಪಾದಿಸುತ್ತ ಬಂದಿದ್ದಾರೆ [1]. 'ಸಾಮಾನ್ಯತೆ ಭಗವಂತನ ರೀತಿ', 'ಸಾಮಾನ್ಯದ ಪೂಜೆಗೆ ದೀಕ್ಷೆಯ ಕೊಳ್ಳಿ' ಎಂದು ಆಡಂಬರ ಪ್ರಿಯವಾದ ಜಗತ್ತಿನ ದೃಷ್ಟಿಯನ್ನು ಆ ಕಡೆಗೆ ಹೊರಳಿಸಲು ಅವರ ಕಾವ್ಯ ದುಡಿದಿದೆ. [2] ನಿಸರ್ಗ ಸೌಂದರ್ಯಕ್ಕೆ ಅರಳುವ ಹೃದಯವೇ ದೇವರಿಗೆ ಗುಡಿ, ಆ ಸೌಂದರ್ಯವೇ ದೇವರು ಎನ್ನುವ ಕವಿಯ ಧೋರಣೆ ಅವರ ಹಲವಾರು ಕವನಗಳಲ್ಲಿ ಒಡಮೂಡುತ್ತ ಬಂದಿರುವುದನ್ನು ಕಾಣುತ್ತೇವೆ. [3]

ಈ ಕವಿತೆಯ ಮೊದಲನೆಯ ಭಾಗದಲ್ಲಿ ಕಾಣುವ ಅನುಭವ ಸಾಂದ್ರತೆ ಎರಡನೆಯ ಭಾಗದಲ್ಲಿ ವಾಚ್ಯಾಭಿವ್ಯಕ್ತಿಗೆ ಎಡೆಗೊಟ್ಟು ಧ್ವನಿರಮ್ಯತೆಯನ್ನು ಕೆಲಮಟ್ಟಿಗೆ ಕಳೆದುಕೊಳ್ಳುತ್ತದೆ. ಆದರೆ ಸ್ಟಾಲಿನ್, ಟ್ರೂಮನ್, ಗಾಂಧಿ - ಇವರ ಹೆಸರುಗಳ ಉಲ್ಲೇಖ, ಶಾಂತಿ, ಅಣುಬಾಂಬು ಇತ್ಯಾದಿ ಪದಗಳ ಪ್ರಯೋಗ - ಇವು ಶಾಂತಿಗಾಗಿ ನಡೆದ ಪ್ರಯತ್ನಗಳ ಆಗಿನ ಸಂದರ್ಭ ಸನ್ನಿವೇಶಕ್ಕೆ ಸೂಚನೆಯಾಗಿ, ಕವಿಯ ಸಮಕಾಲೀನ ಪ್ರಜ್ಞೆಯಿಂದ ವಸ್ತು ಪ್ರಕೃತಿಗಷ್ಟೆ ಸೀಮಿತವಾಗದೆ ನಮ್ಮ ಜೀವನಕ್ಕೆ ಇನ್ನಿಷ್ಟು ಸಮೀಪವಾಗುತ್ತದೆ.

ಮೂರನೆಯ ಭಾಗದಲ್ಲಿ ಕವಿಭಾವದಲ್ಲಿ ಹೆಚ್ಚಿನ ಬೆಳವಣಿಗೆಯೇನೂ ಕಾಣುವದಿಲ್ಲವಾದರೂ

ಬರಿಹನಿಯಲ್ಲಿದು: ಸ್ವರ್ಗಾದೇಶಂ!
ಬರಿ ಹೊಳಪಲ್ಲಿದು : ದಿವ್ಯಾವೇಶಂ!
ಅವತಾರಗಳಲಿ ಇದು ಒಂದೀ ಹಿಮಮಣಿ

ಎನ್ನುವ ಸಾಲುಗಳಲ್ಲಿ ಮೊದಲಿನ ಭಾವ ಮತ್ತೆ ಕಾವುಗೊಳ್ಳುತ್ತ, ಈ ಇಬ್ಬನಿ ಸ್ವರ್ಗದ ಆದೇಶವನ್ನು ಹೊತ್ತು, ದಿವ್ಯಾವೇಶದಿಂದ ಭೂಮಿಗಿಳಿದ ಅವತಾರವೆಂದು ಅದರ ಹಿರಿಮೆಯನ್ನು ನಮ್ಮ ಮನಸ್ಸಿಗೆ ಅಚ್ಚೊತ್ತುವಂತೆ ಮಾಡುತ್ತದೆ. ವಾಯುವಿನೊಳಗಿನ ನೀರಾವಿ, ಇಬ್ಬನಿ ರೂಪವನ್ನು ಪಡೆದು ನೆಲಕ್ಕಿಳಿಯುತ್ತದಲ್ಲವೆ? ಅದೂ ಒಂದು ನಿಸರ್ಗದ ಅವತಾರ.

---

1. 'ಕೀರ್ತಿಶನಿ' ಪುಟ : ೩೫, ಕೃತ್ತಿಕೆ, ೧೯೪೬.
2. 'ಸಾಮಾನ್ಯತೆ ಭಗವಂತನ ರೀತಿ' ಪುಟ ೧
   'ಶ್ರೀ ಸಾಮಾನ್ಯರ' ದೀಕ್ಷಾಗೀತೆ, ಇಕ್ಷುಗಂಗೋತ್ರಿ, ೧೯೫೭.
3. 'ಬಾ ಫಾಲ್ಗುಣ ರವಿ ದರ್ಶನಕೆ' ಪುಟ ೨೪, ಪಕ್ಷಿಕಾಶಿ ೧೯೪೬.
   'ಪ್ರಕೃತಿ ಉಪಾಸನೆ' ಪುಟ : ೨೮ ಪಕ್ಷಿಕಾಶಿ ೧೯೪೬
   'ಕ್ರೌಂಚ ಪಂಕ್ತಿ' ಪುಟ : ೭೭, ಪಕ್ಷಿಕಾಶಿ ೧೯೪೬.

ಧಾರ್ಮಿಕವಾಗಿ ನಾವು ದೇವರ ಅವತಾರಗಳಿಗೆ ಕೊಡುವ ಮಹತ್ವವನ್ನೇ ಕವಿ ಸೌಂದರ್ಯ ಮಹಿಮೆಯಿಂದ ಕೂಡಿದ ಇಬ್ಬನಿಗೂ ನೀಡಿ, ಸಾಂಪ್ರದಾಯಿಕ ಕಲ್ಪನೆಗೆ ಹೊಸ ತಿರುವನ್ನು ಕೊಡುತ್ತಾರೆ. 'ನಶ್ವರ ಲೀಲಾಸುಖಿ ಈ ಈಶ್ವರನನು ನೋಡ' ಎಂದು ಮೊದಲ ಭಾಗದಲ್ಲಿ ಕೋರಿದ ಕವಿ ಈ ಭಾಗದಲ್ಲಿ 'ನಶ್ವರ ಲೀಲೆಯ ಈ ಶಾಶ್ವತನಿಗೆ ಮಣಿ' ಎಂದು ಹೇಳುವದು ಔಚಿತ್ಯಪೂರ್ಣವಾಗಿದೆ. ಹಾಗೆಯೇ, 'ಪ್ರೀತಿಸು, ಮುದ್ದಿಸು', ಎಂದು ಪ್ರಾರಂಭವಾದ ಭಾವಾವೇಶ ಇಲ್ಲಿ 'ವಂದಿಸು, ಕೀರ್ತಿಸು' ಎಂಬ ಭಾವಶಾಂತಿಯಲ್ಲಿ ಕೊನೆಗೊಳ್ಳುತ್ತದೆ. ಈ ಹೊಸ ಅವತಾರಕ್ಕೆ ಮಣಿದದ್ದಾಯಿತು. ಆದರೆ ಅದಕ್ಕೆ ನಾವು ನೀಡಬೇಕಾದ ಕಾಣಿಕೆಯಾವುದು?

> ರಸಾನುಭವದೊಳೆಯೆ ಜಗತ್ ಶಾಂತಿಗೆ
> ಬೆಂಬಲವಾಗುವ ತಪೋರೂಪದೀ
> ಸಕ್ರಿಯ ಕಾಣಿಕೆಯನು ನೀಡ

ಯಾವುದೋ ಆಕರ್ಷಕವಾದ ಭೌತಿಕ ವಸ್ತುವನ್ನು ಕಾಣಿಕೆಯಾಗಿ ಅರ್ಪಿಸುವದಲ್ಲ ಇಲ್ಲಿ! ರಸಾನುಭವದಲ್ಲಿಯೇ ಜಗತ್ತಿನ ಶಾಂತಿಗೆ ಬೆಂಬಲವಾಗಿ ನಿಲುವ ತಪೋರೂಪದ ಸಕ್ರಿಯ ಕಾಣಿಕೆ ನಾವು ನೀಡಬೇಕಾದುದು. ವೈಜ್ಞಾನಿಕವಾಗಿ ಬಹಳಷ್ಟು ಮುಂದುವರಿದಿದ್ದರೂ ಅಣುಬಾಂಬಿನಂಥ ಅಸ್ತ್ರಗಳಿಂದ ವಿನಾಶದತ್ತ ಧಾವಿಸುತ್ತಿರುವ ಆಧುನಿಕ ಜಗತ್ತಿಗೆ ಭಾರತದ ಆರ್ಷೇಯ ಕಾಣಿಕೆಯಾದ 'ತಪೋರೂಪ' ಈ ಸಂದರ್ಭದಲ್ಲಿ ಹೆಚ್ಚಿನ ಮಹತ್ವವನ್ನು ಪಡೆಯುತ್ತದೆ. ಹೀಗೆ ಕವಿಯ ಸೌಂದರ್ಯಾನುಭವದ ಅಭಿವ್ಯಕ್ತಿಗೆ ಸ್ಫೂರ್ತಿಯ ಆವೇಗಕ್ಕೆ ಒಂದು ಸಹಜವಾದ ಆಧ್ಯಾತ್ಮಿಕ ನಿಲುಗಡೆ ಈ ಮೂರನೆಯ ಭಾಗದಲ್ಲಿ ದೊರೆತು ಒಟ್ಟಂದದಲ್ಲಿ ಕವಿತೆ ಓದುಗನಿಗೆ ತೃಪ್ತಿಯನ್ನು ನೀಡುತ್ತದೆ.

ಇದೇ ವಸ್ತುವನ್ನು ಕುರಿತ ಕವಿಯ ಇನ್ನಿತರ ಕವಿತೆಗಳು - 'ಪಕ್ಷಿಕಾಶಿ' ಯಲ್ಲಿಯ 'ಒಂದು ಪ್ರಾತಃಕಾಲ', 'ಹಿಮಮಣಿ' 'ಶರತ್ಕಾಲದ ಸೂರ್ಯೋದಯದಲಿ' 'ಇಬ್ಬನಿ' 'ಸ್ವರ್ಗವನ್ನು ಬೇಟೆಯಾಡಿದ' ರೀತಿಯಲ್ಲಿ, ಇಬ್ಬನಿಯ ಚೆಲುವನ್ನು ಸೂರೆಗೊಳ್ಳುವ ಶಬ್ದಚಿತ್ರಗಳ ಭಾವತೀವ್ರತೆಯಲ್ಲಿ, ರಮ್ಯವಾದ ವರ್ಣಶಿಲ್ಪದಲ್ಲಿ ಒಂದಕ್ಕಿಂತ ಒಂದು ಸ್ಪರ್ಧೆಗಿಳಿದಂತೆ ತೋರಿದರೂ ಅವು ಹೆಚ್ಚು - ಕಡಿಮೆ ಸೌಂದರ್ಯಾನುಭವದ ವರ್ಣನಾ ವೈಖರಿಯಲ್ಲಿಯೇ ಮುಗಿಯುತ್ತವೆ. ಆದರೆ 'ಇಬ್ಬನಿಯವತಾರ'ದಲ್ಲಿ ಕವಿ ಚೇತನಕ್ಕೊದಗಿದ ರಸಾನುಭವದ ಅತಿಶಯತೆ ಒಂದು ಭಗವಾನ್ ಕೃಪೆಯಾಗಿ ಸಮಕಾಲೀನ ಜಾಗತಿಕಪ್ರಜ್ಞೆಯನ್ನೂ ಒಡಹಾಯ್ದು ಅನುಭವವನ್ನು ಆಧ್ಯಾತ್ಮಿಕನೆಲೆಯಲ್ಲಿ ಪರಿಭಾವಿಸಲು ಸಹಾಯಕವಾಗಿದೆ. 'ರಸಾನುಭೂತಿಯ ರಸಪಥವಲ್ಲದೆ ಸತ್ಯಕ್ಕೆ ಗತಿಯಿಲ್ಲ' [4] ಎಂಬ ಕವಿಯ ಹಿಂದಿನ ನಿಲುವು ಇಲ್ಲಿ ಇನ್ನಿಷ್ಟು ಗಟ್ಟಿಗೊಳ್ಳುತ್ತದೆ. ಇದೇ ಮಾದರಿಯ ಹಿಂದಿನ ಕವಿತೆಗಳಲ್ಲಿಯ ಕೆಲವು ವರ್ಣನೆಗಳು ಪ್ರತಿಮೆಗಳು ಇಲ್ಲಿಯೂ ಪುನರಾವರ್ತನೆಗೊಂಡಿದ್ದರೂ ಆ ಕವಿತೆಗಳಿಗಿಂತ ಬೇರೆಯಾದ ಅನುಭವವನ್ನು ಈ ಕವಿತೆ ಹೇಳುತ್ತದೆ ಎನ್ನುವುದೇ ಇಲ್ಲಿಯ ವಿಶೇಷ.

ಕವಿಯ ಅನುಭವಕ್ಕೆ ಅಭಿವ್ಯಕ್ತಿ ನೀಡುವುದಕ್ಕೆ ಸಂಬಂಧಪಟ್ಟಂತೆ ಇಲ್ಲಿಯ ಭಾಷೆ ತಕ್ಕಮಟ್ಟಿಗೆ ಸಮರ್ಪಕವಾಗಿದೆಯೆಂದೇ ಹೇಳಬೇಕು. ಸಹಜವೆನಿಸುವ ಸಂಸ್ಕೃತ ಪದಗಳ ಪ್ರಯೋಗವಂತೂ ಸರಿಯೆ. ಜೊತೆಗೆ 'ಮಿಂಚುಂಬುಳು' 'ಕರ್ದಿಂಗಳ', 'ಅರಿಲು' - ಮುಂತಾದ ಹಳಗನ್ನಡ ಪದಗಳೂ 'ಮುಖ್ಯಂ, ಭವ್ಯಂ' ಎಂಬ ಶಬ್ದರೂಪಗಳೂ ಇಲ್ಲಿ ಸೇರಿಕೊಂಡಿವೆ. ಒಂದೆರಡು ಕಡೆ ಹಿತಕರವೆನಿಸದಿದ್ದರೂ ಅವೆರಡೂ ರೀತಿಯ ಭಾಷಾ - ಪ್ರಯೋಗಗಳ ವಿಶಿಷ್ಟ ರೀತಿಯ ಬೆಸುಗೆ ಇಲ್ಲಿ ಕಂಡುಬರುತ್ತದೆ.

---

4. 'ಇಂತಹ ಸುಂದರ ಪ್ರಾತಃ ಕಾಲದಿ'
   - ಪಕ್ಷಿಕಾಶಿ ೧೯೪೬.

ಆದರೆ ಕನ್ನಡ ಹಾಗೂ ಸಂಸ್ಕೃತ ಪದ, ಪದಪುಂಜಗಳನ್ನು ಮುಖಾಮುಖಿಯಾಗಿಟ್ಟು ಅಭಿವ್ಯಕ್ತಿಗೊಳಿಸಿದಾಗ ಕುವೆಂಪು ತಮ್ಮದೇ ಆದ ಶೈಲಿಯ ಚೆಲುವೊಂದನ್ನು ಸಾಧಿಸುತ್ತಾರೆಂಬುದಕ್ಕೆ ಮುಂದಿನ ಸಾಲುಗಳನ್ನು ನೋಡಬಹುದು :

ಬರಿ ಹನಿಯಲ್ಲಿದು ; ಸ್ವರ್ಗಾದೇಶಂ ;
ಬರಿ ಹೊಳಪಲ್ಲಿದು ; ದಿವ್ಯಾವೇಶಂ ;

ಕಥನಕವನಕ್ಕೆ ಹೆಚ್ಚು ಒಗ್ಗಬಹುದಾದ ನಾಲ್ಕು ಮಾತ್ರೆಯ ನಾಲ್ಕು ಗಣಗಳ ಸಾಲುಗಳನ್ನೇ ಇಲ್ಲಿಯ ಛಂದಸ್ಸು ಒಳಗೊಂಡಿದ್ದರೂ ಕವಿತೆಯ ಮೊದಲ ಭಾಗ ಭಾವ - ಭಾಷೆ - ಛಂದಗಳ ಹೊಂದಾಣಿಕೆಯಿಂದ ಕಡೆದ ಶಿಲ್ಪವಾಗಿ ಪರಿಣಮಿಸಿದೆ. ಮೊದಲ ಸಾಲಿನ ಪದಗಳ ನಡುವಿನ ಸಹಜ ವಿರಾಮ, (ಪ್ರೀತಿಸು, ಮುದ್ದಿಸು, ಒಲಿ, ಆಲಿಂಗಿಸು) ಮುಂದಿನ ಸಾಲುಗಳ (ಪಚ್ಚೆಯ ಪುಲಕವೆ ಎಚ್ಚತ್ತೋಲಿಹ) ಮೆಲ್ಲಗಿನ ಓಟ ತನ್ನದೆ ಆದ ಒಂದು ಸೊಗಸನ್ನು ತೋರ್ಪಡಿಸಿದೆ. ಎರಡನೆಯ ಭಾಗದಲ್ಲಿ ಭಾವದ ಕಾವು ಆರಿ, ಹೇಳಿಕೆಗಳೇ ಪ್ರಮುಖವಾಗಿ, ಕವಿತೆಯಾಗಿಯೂ ಕೆಲಮಟ್ಟಿಗೆ ಸೋಲುವುದರಿಂದ ಕವನದ ಬಂಧ ಸಡಿಲವಾಗುತ್ತದೆ. ಮೂರನೆಯ ಭಾಗದಲ್ಲಿ ಅದು ಮತ್ತೆ ಮೊದಲಿನಂತೆ ಸ್ವಸ್ವರೂಪವನ್ನು ಪಡೆದುಕೊಂಡು ಭಾವದ ಐಕ್ಯವನ್ನು ಸಾಧಿಸಲು ನೆರವಾಗಿದೆ.

ಈ ಕವಿತೆಯ ರಚನೆಯ ಮಾದರಿಯು (Pattern) ಮಾತ್ರ ಅವರ ಇನ್ನಿತರ ಪ್ರಕೃತಿಕವನಗಳ ಮಾದರಿಗಿಂತ ಭಿನ್ನವಾಗಿ ತೋರುವುದಿಲ್ಲ.[5]

---

5. ''ಮುಖ್ಯವಾಗಿ ಅವರ ಪ್ರಕೃತಿ ಕವನಗಳ ಮಾದರಿ ಇದು : ೧. ಕವಿ, ೨. ಕವಿ ಕಾಣುವ ನಿಸರ್ಗದ ವಸ್ತು ೩.. ಕವಿಗೂ ನಿಸರ್ಗಕ್ಕೂ ಏರ್ಪಡುವ ಸೌಂದರ್ಯಾನುಭವ ೪. ಈ ಸೌಂದರ್ಯಾನುಭವದಿಂದ ನಿಷ್ಪನ್ನವಾಗುವ ಒಂದು ತತ್ವ ಅಥವಾ ಕವಿಯ ತಾತ್ವಿಕ ನಿಲುವು'' - ಜಿ.ಎಸ್. ಶಿವರುದ್ರಪ್ಪ, 'ನವೋದಯ' ೧೯೭೬, ಪುಟ; ೧೭೭.

ವೀರಶೈವ ಓಲೆಮಠಗಳು ಮತ್ತು ಹಸ್ತಪ್ರತಿ ಕೇಂದ್ರಗಳು

ಡಾ॥ ವೀರಣ್ಣ ರಾಜೂರ

ವೀರಶೈವ ಧರ್ಮಪೀಠಗಳು, ಮಠಮಾನ್ಯಗಳು ನೆರವೇರಿಸುತ್ತ ಬಂದ ಮಣಿಹಗಳಲ್ಲಿ ಸಂಸ್ಕೃತಿ ಸೇವೆ ಅನನ್ಯವಾದುದು. ಧರ್ಮ ತತ್ವಪ್ರಸಾರದ ಜೊತೆಗೆ ಸಾಹಿತ್ಯ-ಕಲೆ - ಸಮಾಜ - ಸಂಸ್ಕೃತಿಗಳ ಉಜ್ವಲತೆಗಾಗಿ ಅವು ನಿರಂತರವಾಗಿ ಶ್ರಮಿಸುತ್ತ ಬಂದಿವೆ. ಇದು ಅವುಗಳ ಸಮಾಜ ಕಲ್ಯಾಣ, ಲೋಕ ಕಲ್ಯಾಣ ದೃಷ್ಟಿಗೆ, ಜನಪರ ನಿಲವಿಗೆ ನಿದರ್ಶನವೆನಿಸಿದೆ. ಅನ್ನದಾಸೋಹ, ಜ್ಞಾನದಾಸೋಹ ವೀರಶೈವ ಧರ್ಮಪೀಠಗಳ ಎರಡು ಕಣ್ಣುಗಳಿದ್ದಂತೆ. ಹಸ್ತಪ್ರತಿ ಸಂಗ್ರಹ - ಪರಿಷ್ಕರಣ - ಪ್ರಕಟಣೆ ಅವು ಮಾಡುತ್ತ ಬಂದ ಜ್ಞಾನದಾಸೋಹ ಕಾರ್ಯಗಳಲ್ಲಿ ಬಹುಮುಖ್ಯವಾದುವು.

'ಹಸ್ತಪ್ರತಿಗಳು' ನಮ್ಮ ನಾಡಿನ ಬಹುದೊಡ್ಡ ಆಸ್ತಿ. ನಮ್ಮ ಸಾಹಿತ್ಯ ಕಲೆ - ಧರ್ಮ - ಸಮಾಜ - ಸಂಸ್ಕೃತಿ - ಪರಂಪರೆಯನ್ನು ನಿರಂತರವಾಗಿ ನಿಷ್ಠೆಯಿಂದ ಕಾಯ್ದುಕೊಂಡು ಬಂದ ಅಮೂಲ್ಯ ಸಂಪತ್ತು. ನಮ್ಮ ಪೂರ್ವಜರ ಜ್ಞಾನ ನಿಧಿಯನ್ನು ತುಂಬ ಜವಾಬ್ದಾರಿಯಿಂದ ಸಾಗಿಸಿಕೊಂಡು ಬಂದ ಅಪೂರ್ವಭಂಡಾರ. ಒಂದು ವೇಳೆ ಈ ಜ್ಞಾನಭಂಡಾರ ಇಲ್ಲದೇ ಹೋಗಿದ್ದರೆ ನಾವು ಜ್ಞಾನಶೂನ್ಯರಾಗುತ್ತಿದ್ದೆವು. ಸಂಸ್ಕೃತಿ ಸಭ್ಯತೆ ವಿಹೀನರಾಗಿರುತ್ತಿದ್ದೆವು. ಪ್ರಾಣಿಲೋಕದಲ್ಲಿ ಶ್ರೇಷ್ಠರೆಂಬ ಉನ್ನತಸ್ಥಾನ ನಮಗೆ ಸಲ್ಲದೇ ಹೋಗುತ್ತಿತ್ತು. ಹೀಗಾಗಿ ಹಸ್ತಪ್ರತಿಗಳು ಮಾನವನ ಬೌದ್ಧಿಕ - ಸಾಮಾಜಿಕ ಮತ್ತು ಸಾಂಸ್ಕೃತಿಕ - ಬದುಕಿನ ಬೆಳವಣಿಗೆಯಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸಿವೆ. ಈ ಕಾರಣದಿಂದ ಅವುಗಳನ್ನು ಬರೆಯಿಸುವ, ಸಂಗ್ರಹಿಸಿಡುವ, ಪ್ರತಿ ಮಾಡಿಸಿ ಹಂಚುವ, ಪೂಜ್ಯಭಾವನೆಯಿಂದ ಕಂಡು ದೇವರ ಜಗುಲಿಯ ಮೇಲಿಟ್ಟು ಪೂಜಿಸುವ ಕಾರ್ಯಗಳು ಮೊದಲಿನಿಂದಲೂ ನಡೆದು ಬಂದಿವೆ.

ಕನ್ನಡ ನಾಡಿನಲ್ಲಿ ಹುಟ್ಟಿ - ಬೆಳೆದ ಎಲ್ಲ ಪ್ರಾಚೀನ ಮತ - ಧರ್ಮಗಳ ತತ್ವ - ಸಿದ್ಧಾಂತ - ಸಾಹಿತ್ಯ - ಶಾಸ್ತ್ರ - ಹಸ್ತಪ್ರತಿಗಳಲ್ಲಿ ಅಳವಟ್ಟಿರುವುದರಿಂದ ಆಯಾ ಧರ್ಮ ಪೀಠಗಳು ತಮ್ಮ ಮತಧರ್ಮಕ್ಕೆ ಸಂಬಂಧಿಸಿದ ಕೃತಿಗಳನ್ನು ಬರೆಯಿಸಲು, ಹಸ್ತಪ್ರತಿಗಳನ್ನು ಸಂಗ್ರಹಿಸಿಡಲು, ನಕಲು - ಪ್ರತಿ ನಕಲುಗೊಳಿಸಿ ಹಂಚಲು ಹಸ್ತಪ್ರತಿ ಭಂಡಾರಗಳನ್ನು ಸ್ಥಾಪಿಸುತ್ತ ಬಂದಿವೆ. ಹೀಗಾಗಿ ಕರ್ನಾಟಕದ ತುಂಬೆಲ್ಲ ಇಂತ ಹಸ್ತಪ್ರತಿ ಭಂಡಾರಗಳು - ಇಂದಿನ ಗ್ರಂಥಾಲಯಗಳ ಮಾದರಿಯಲ್ಲಿ ಇದ್ದುದು ಕಂಡುಬರುತ್ತದೆ.

ಹಸ್ತಪ್ರತಿಗಳನ್ನು ಬರೆಯಿಸುವ ಹಾಗೂ ಪೋಷಿಸುವ ಕಾರ್ಯ ವೈಯಕ್ತಿಕ, ಧಾರ್ಮಿಕ, ರಾಜಕೀಯ ಹಾಗೂ ಸಾರ್ವಜನಿಕ ಎಂಬ ನಾಲ್ಕುನೆಲೆಗಳಲ್ಲಿ ನಡೆದು ಬಂದುದು ಕಂಡುಬರುತ್ತದೆ. ವ್ಯಕ್ತಿಗಳು ತಮ್ಮ ಸ್ವ ಅಧ್ಯಯನಕ್ಕಾಗಿ ವೈಯಕ್ತಿಕ ಸಂಗ್ರಹ ಮಾಡಿಕೊಂಡರೆ, ಧರ್ಮಪೀಠಗಳು ಮತ ತತ್ವ ಪ್ರಚಾರಕ್ಕಾಗಿ, ಅರಸರು ತಮ್ಮ 'ಸಪ್ತ ಸಂತಾನ'ಗಳಲ್ಲಿ [1] ಅದು ಒಂದು ಮುಖ್ಯ ಕರ್ತವ್ಯವೆಂದು, ಸಾರ್ವಜನಿಕರು ಅದೊಂದು ಸಾಂಸ್ಕೃತಿಕ ಹೊಣೆಗಾರಿಕೆಯೆಂದು ಈ ಕಾರ್ಯ ಮಾಡುತ್ತ ಬಂದುದು ವೇದ್ಯವಾಗುತ್ತದೆ.

ಕರ್ನಾಟಕದಲ್ಲಿ ಹಸ್ತಪ್ರತಿ ಸಂರಕ್ಷಣೆಯ ಕಾರ್ಯವನ್ನು ತುಂಬ ಉತ್ಕಟವಾಗಿ ಮಾಡಿಕೊಂಡು ಬಂದ ಧರ್ಮಗಳಲ್ಲಿ ಜೈನ ಮತ್ತು ವೀರಶೈವ ಪ್ರಮುಖವೆನಿಸಿವೆ. ವೀರಶೈವ ಪೀಠಗಳು ಮಾಡುತ್ತ ಬಂದ ಹಸ್ತಪ್ರತಿ ಸಂಬಂಧಿ ಕಾರ್ಯ ಚಟುವಟಿಕೆಗಳು ಮತ್ತು ಅವು ಸ್ಥಾಪಿಸಿದ ಹಸ್ತ ಪ್ರತಿ - ಭಂಡಾರಗಳನ್ನು ಕುರಿತು ಸ್ಥೂಲವಾಗಿ ಸಮೀಕ್ಷಿಸಲು ಇಲ್ಲಿ ಪ್ರಯತ್ನಿಸಲಾಗಿದೆ.

ವೀರಶೈವ ಕನ್ನಡ ಹಸ್ತ ಪ್ರತಿಗಳ ಇತಿಹಾಸ ೧೨ನೆಯ ಶತಮಾನದಿಂದ ಆರಂಭವಾಗುತ್ತದೆ. ಶಿವಶರಣರು ರಚಿಸಿದ ವಚನ ಕೃತಿಗಳ ಪ್ರತಿಗಳೇ ಮೊದಲ ವೀರಶೈವ ಹಸ್ತಪ್ರತಿಗಳು. ಅವುಗಳನ್ನು ಸಂಗ್ರಹಿಸಿಡಲು ಅನುಭವ ಮಂಟಪದಲ್ಲಿ (ಕಲ್ಯಾಣದಲ್ಲಿ) ಸ್ಥಾಪಿಸಲಾಗಿದ್ದ 'ವಚನ ಭಂಡಾರ'ವೇ ಮೊದಲ ವೀರಶೈವ ಹಸ್ತಪ್ರತಿ ಭಂಡಾರ. ವಚನಭಂಡಾರಿ ಶಾಂತರಸನೇ ಮೊದಲ ವೀರಶೈವ ಹಸ್ತಪ್ರತಿ ಭಂಡಾರದ ಮೇಲ್ವಿಚಾರಕ (ಹಸ್ತಪ್ರತಿ ಭಂಡಾರಿ). ಇಲ್ಲಿ ಶರಣರು ರಚಿಸಿದ ವಚನಗಳನ್ನು ಹಸ್ತಪ್ರತಿ ಗಿಳಿಸುವ, ನಾಮ - ವಿಷಯ - ಸ್ಥಲಾನುಗುಣವಾಗಿ ವಿಂಗಡಿಸಿ ಜೋಡಿಸುವ, ಸಂಯೋಜಿಸುವ ಕಾರ್ಯ ತುಂಬ ವ್ಯವಸ್ಥಿತವಾಗಿ, ಅಷ್ಟೇ ವ್ಯಾಪಕವಾಗಿ ನಡೆದಿತ್ತೆಂದು ಕಾಣುತ್ತದೆ.

ಅಂದು ಹಸ್ತಪ್ರತಿಗಳಿಗೆ ಬೇಕಾಗುತ್ತಿದ್ದ ಓಲೆಗರಿಗಳನ್ನು ವ್ಯಾಪಾರ ಮಾಡುವದು ಒಂದು ಕಾಯಕವೇ ಆಗಿತ್ತೆಂದು ತೋರುತ್ತದೆ. ಓಲೆ ಶಾಂತಯ್ಯ, ಓಲೆ ರಾಮಯ್ಯ, ಓಲೆಯ ರಾಮಣಯ್ಯ, ಓಲೆಯ ತಮ್ಮಣ್ಣ, ಓಲೆಯ ತಿಪ್ಪಣ್ಣ ಎಂಬ ಹೆಸರುಗಳು ಓಲೆಕಾಯಕ ಮಾಡುತ್ತಿದ್ದ ಶರಣರನ್ನು (ವ್ಯಕ್ತಿಗಳನ್ನು) ಸೂಚಿಸುತ್ತವೆ. ಇಂದು ವಾಲಿ, ವಾಲಿಶೆಟ್ಟರ್ ಎಂಬ ಅಡ್ಡ ಹೆಸರಿನ ಮನೆತನಗಳ ಮೂಲ ವೃತ್ತಿ ಓಲೆ ಮಾರುವುದೇ ಆಗಿತ್ತೆಂದು ತೋರುತ್ತದೆ. [2]

---

1. ತಟಾಕ - ನಿರ್ಮಾಣ, ಧನ ನಿಕ್ಷೇಪ, ಅಗ್ರಹಾರ ಸ್ಥಾಪನೆ, ಶಿವಾಲಯ ನಿರ್ಮಾಣ, ವನರಾಜ ಪ್ರತಿಷ್ಠಾನ, ಸದ್ಗ್ರಂಥ ರಚನೆ, ಸುಪುತ್ರೋತ್ಪಾದನೆ - ಇವು ಏಳು ರಾಜನ ಕರ್ತವ್ಯಗಳಾಗಿದ್ದು, 'ಸಪ್ತ ಸಂತಾನಗಳು' ಎಂದು ಕರೆಸಿಕೊಳ್ಳುತ್ತವೆ. ಹೀಗಾಗಿ ಅರಸರು ಮೊದಲಿನಿಂದಲೂ ಗ್ರಂಥರಚನೆಗೆ ಗ್ರಂಥರಕ್ಷಣೆಗೆ ಪ್ರೋತ್ಸಾಹ ಕೊಡುತ್ತ ಬಂದಿದ್ದಾರೆ. ವೀರಶೈವ ಅರಸರಲ್ಲಿ ಪ್ರೌಢ ದೇವರಾಯ, ಆತನ ಮಂತ್ರಿ, ಲಕ್ಕಣ್ಣ ದಂಡೇಶ ಮತ್ತು ಕೆಳದಿ, ಸ್ವಾದಿ, ಹಗಲವಾಡಿ, ಸುಗಟೂರು, ಕಳಲೆ, ಉಮ್ಮತ್ತೂರು - ಮೊದಲಾದ ಸಣ್ಣಪುಟ್ಟ ಅರಸುಮನೆತನಗಳು ಸಾಹಿತ್ಯಪೋಷಣೆ ಕಾರ್ಯವನ್ನು ಮಾಡುತ್ತ ಬಂದಿರುವುದು ಇದಕ್ಕೆ ನಿದರ್ಶನವೆನಿಸಿದೆ.
2. ಇಂಥ ವೃತ್ತಿ ದಾಟ ಹೆಸರುಗಳಿಗೆ - ಕೋರಿ, ಕೋರಿಶೆಟ್ಟರ್, ಮೆಣಸಿನಕಾಯಿ, ಬೆಲ್ಲದ, ಅಕ್ಕಿ, ಸಕ್ರಿ, ಜೋಳದ, ಅಂಟಿನ, ಪವಾಡಶೆಟ್ಟಿ - ಮೊದಲಾದವುಗಳನ್ನು ಉದಾಹರಣೆಯಾಗಿ ಕೊಡಬಹುದು.

ಓಲೆ ಪ್ರತಿಗಳನ್ನು ಸಿದ್ಧಪಡಿಸುವ, ಸಂಗ್ರಹಿಸುವ ಮಠಗಳಿಗೆ 'ಓಲೆ ಮಠ'ಗಳೆಂದು ಕರೆಯುತ್ತಿದ್ದರೆಂದು ತಿಳಿದುಬರುತ್ತದೆ. ಇಂದು ಅಂಥ ಮೂರು ಮಠಗಳು ಮಾತ್ರ ಆ ಹೆಸರಿನಿಂದ ಉಳಿದುಬಂದಿವೆ. [3] ಜಮಖಂಡಿಯ ಓಲೆಮಠ, ಹುಬ್ಬಳ್ಳಿಯ (ಬೊಮ್ಮಪುರ ಓಣಿಯಲ್ಲಿರುವ) ಓಲಿ ಮಠ ಮತ್ತು ಸವದತ್ತಿ ತಾಲ್ಲೂಕು ಮುನವಳ್ಳಿಯಲ್ಲಿರುವ ಓಲೆಮಠ. ಇವು ಒಂದು ಕಾಲಕ್ಕೆ ವೀರಶೈವ ಹಸ್ತಪ್ರತಿ ಸಂಗ್ರಹದ ಬಹುದೊಡ್ಡ ಕೇಂದ್ರಗಳಾಗಿರಬೇಕು. ಆದರೆ ಈಗ ಅಲ್ಲಿ ಹಸ್ತಪ್ರತಿಗಳಿಲ್ಲ; ಕೇವಲ ಹೆಸರು ಮಾತ್ರ ಉಳಿದುಬಂದಿವೆ.

ಇನ್ನು ಕೆಲವು ಮಠಗಳು 'ಸಂಪಾದನೆಯಮಠ' [4]ಗಳೆಂದು ಕರೆಯಿಸಿಕೊಂಡಿರುವುದು ಕಂಡುಬರುತ್ತದೆ. ಅವು 'ಸಂಪಾದನ ಸಮಯ'ದವರ ಮಠಗಳಾಗಿರಬೇಕು. ತೋಂಟದ ಸಿದ್ಧಲಿಂಗರ ಶಿಷ್ಯ ಪರಂಪರೆಯಲ್ಲಿ ಕಟ್ಟಿಗೆಹಳ್ಳಿ ಸಿದ್ಧಲಿಂಗರ ಕಾಲಕ್ಕೆ ಐದು ಸಮಯಗಳು ಹುಟ್ಟಿಕೊಂಡವು. - ಮುರಿಗಾಸಮಯ, ಚೀಲಾಳ ಸಮಯ, ಕುಮಾರ ಸಮಯ, ಕೆಂಪಿನ ಸಮಯ ಮತ್ತು ಸಂಪಾದನ ಸಮಯ. ಸಂಪಾದನ ಸಮಯದವರ ಮುಖ್ಯ ಕಾರ್ಯ ಅಥವಾ ಕಾಯಕ ವಚನ, ಕಾವ್ಯಗಳ ಸಂಗ್ರಹ, ಸಂಕಲನ, ಸಂಪಾದನೆ ಮಾಡುವುದೇ ಆಗಿರುವುದರಿಂದ ಈ ಮಠಗಳು ಹಸ್ತಪ್ರತಿ ಕೇಂದ್ರಗಳೇ ಆಗಿದ್ದವೆಂಬುದರಲ್ಲಿ ಸಂಶಯವಿಲ್ಲ. ಈ ಹೆಸರಿನ ಮಠಗಳು ಸದ್ಯ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ (ಸಂಪಾದನಾ ಸಂಸ್ಥಾನ ಮಠ), ಗೋಕಾಕ (ಸಂಪಾದನೆಯ ಮಠ) ಮತ್ತು ಕಡೂರ ತಾಲ್ಲೂಕಿನ ಬಿರೂರಿನಲ್ಲಿವೆ (ಸಂಪಾದನೆಮಠ). ಆದರೆ ಇವಿಷ್ಟೇ ವೀರಶೈವ ಹಸ್ತಪ್ರತಿ ಕೇಂದ್ರಗಳಾಗಿದ್ದವೆಂದು ಹೇಳಲು ಬರುವುದಿಲ್ಲ. ಹಾಗೆ ನೋಡಿದರೆ ಒಂದು ದೃಷ್ಟಿಯಿಂದ ನಮ್ಮ ವೀರಶೈವ ಮಠಗಳೆಲ್ಲ ಹಸ್ತಪ್ರತಿ ಸಂಗ್ರಹಗಳನ್ನೊಳಗೊಂಡ ಓಲೆಮಠಗಳೇ ಆಗಿದ್ದವೆಂದು ಹೇಳಬೇಕಾಗುತ್ತದೆ.

ವೀರಶೈವ ಮಠಾಧೀಶರಿಗೆ ದೀಕ್ಷಾ ಪ್ರಸಂಗದಲ್ಲಿ ಕೆಲವು ಧಾರ್ಮಿಕ ಗ್ರಂಥಗಳನ್ನು ಕೊಡುವುದು ದೀಕ್ಷಾಚರಣೆಯ ಒಂದು ಭಾಗವಾಗಿದ್ದಿತೆಂದು 'ನಿರಂಜನ ವಂಶರತ್ನಾಕರ'ದ ಈ ಹೇಳಿಕೆ ಸ್ಪಷ್ಟಪಡಿಸುತ್ತದೆ.

''ಪ್ರಭು, ಚನ್ನಬಸವರಾಜೇಂದ್ರರು ಶಿವಮೂರ್ತಿಯಾದ ಸೊನ್ನಲಿಗೆಯ ಸಿದ್ಧರಾಮೇಶಂಗೆ ನಿರೂಪಿಸಿದ ಗುಹೇಶ್ವರ ವಚನ, ಕರಣಹಸಿಗೆ, ಮಿಶ್ರಾರ್ಪಣ, ಸಿದ್ಧರಾಮೇಶ್ವರ ಮಂತ್ರಗೋಪ್ಯ, ಅಕ್ಕಗಳ ಸೃಷ್ಟಿಯ ವಚನ, ಪ್ರಭುದೇವರ ಸೃಷ್ಟಿಯ ವಚನ, ಸಿದ್ಧರಾಮೇಶ್ವರ ವಚನ, ಹಿರಿಯ ಮಂತ್ರಗೋಪ್ಯ, ಶೂನ್ಯ ಸಂಪಾದನೆ ಮುಂತಾದವುಗಳ ಸಂಗ್ರಹಿಸಿದ ಪುಸ್ತಕವ, ಸಭಾಮಧ್ಯದಲ್ಲಿ ಆ ಶಿವಾನುಭವ ಚರಂತಿಗೆ ತೆಗೆದುಕೊಂಡು ಗುರುವರನ ಕಡೆಯಿಂದ ಆ ಶಾಸ್ತ್ರವಂ ಶಿಷ್ಯೋತ್ತಮನು ಶಿವಮಂತ್ರ, ಗುರುಪ್ರಸಾದ ಮುಖವಾಗಿ, ಅಂಗಲಿಂಗ ಸಾಮರಸ್ಯ ಮುಂತಾಗಿ ೩೬ ತತ್ವಂಗಳಂ ತಿಳಿದಾತನು ಶಾಸ್ತ್ರವಂ ಗುರುಗಳಿಂ ಶ್ರವಣಗೊಂಡಾತನಾದ ವಿರಕ್ತನು ಶಾಸ್ತ್ರದ ಕಟ್ಟು ಹಿಡಿಯಬೇಕು.... ಈತನಿಗೆ ಶಿವಾನುಭವ ಶಾಸ್ತ್ರವೇ ಆಗಲಿ, ಪುರಾಣ ಪುಸ್ತಕವೇ ಆಗಲಿ ಇವುಗಳನ್ನು ಗುರುಗಳಾದ ಚರಮೂರ್ತಿಗಳು ಸಭೆಯಲ್ಲಿ ಕೊಟ್ಟು ತಮ್ಮಾಸನದಲ್ಲಿ ಕುಳ್ಳಿರಿಸಿ ಕೊಳ್ಳಲು, ಆ ಗಣವರನೆ ಚರಮೂರ್ತಿ ಎನಿಸುವನು'' [5] - ಈ ಹೇಳಿಕೆಯಿಂದ ವೀರಶೈವ ಚರಪಟ್ಟಾಧಿಕಾರ ಸಂದರ್ಭದಲ್ಲಿ ಧರ್ಮಶಾಸ್ತ್ರ ಗ್ರಂಥಗಳನ್ನು (ವಚನ ಗ್ರಂಥಗಳನ್ನು) ಕೊಡುವುದು ನಿಯಮವಾಗಿತ್ತೆಂದು ತಿಳಿದುಬರುತ್ತದೆ. ಮೇಲೆ ಉಲ್ಲೇಖಿಸಿದ ಕೃತಿಗಳು ಈ ಕಾರಣದಿಂದಲೇ ಎಲ್ಲ ಮಠಗಳಲ್ಲಿ ಅಧಿಕಸಂಖ್ಯೆಯಲ್ಲಿ ದೊರೆಯುತ್ತಿರಬೇಕು. ಇದು ಪ್ರತಿಯೊಂದು ಮಠದಲ್ಲಿಯೂ ಹಸ್ತಪ್ರತಿಗಳು ಸಂಗ್ರಹವಾಗಿರುತ್ತಿದ್ದವು ಎಂಬುದಕ್ಕೆ ನಿದರ್ಶನವೆನಿಸಿದೆ. ಇಂದು ಬೇರೆ ಬೇರೆ ವಿಶ್ವವಿದ್ಯಾಲಯ, ಸರಕಾರಿ ಪ್ರಾಚ್ಯ ಸಂಶೋಧನ ಸಂಸ್ಥೆಗಳಲ್ಲಿ ಸಂಗ್ರಹಿಸಿದ ಹಸ್ತ ಪ್ರತಿಗಳ ಮೂಲ ಸ್ಥಾನವನ್ನು ನೋಡಿದಾಗ ಈ ಮಾತು ಇನ್ನಷ್ಟು

---

3. ಇವು ನನ್ನ ಗಮನಕ್ಕೆ ಬಂದವು ಮಾತ್ರ. ಇಂಥ ಇನ್ನೂ ಕೆಲವು ಮಠಗಳು ಇದ್ದಿರಬಹುದು.
4. 'ಶೂನ್ಯ ಸಂಪಾದನೆಯ ಮಠ' ವೆಂದೂ ಕೆಲವನ್ನು ಕರೆದಿದ್ದಾರೆ.
5. ಕನ್ನಡ ಹಸ್ತಪ್ರತಿ ಶಾಸ್ತ್ರ : ಡಾ|| ಎಂ.ಎಂ. ಕಲಬುರ್ಗಿ, ಪ್ರ. ಸ್ನೇಹ ಪ್ರಕಾಶನ ಬೆಂಗಳೂರು (೧೯೯೩) ಪು. ೪೮-೪೯.

ಸ್ಪಷ್ಟವಾಗುತ್ತದೆ; ಖಚಿತವೆನಿಸುತ್ತದೆ. ಉದಾಹರಣೆಗಾಗಿ ಕರ್ನಾಟಕ ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಭಂಡಾರಕ್ಕೆ ಬಂದು ಸೇರಿದ ಸುಮಾರು ಆರು ಸಾವಿರ ಹಸ್ತಪ್ರತಿ ಕಟ್ಟುಗಳು ಈ ಕೆಳಗಿನ ವೀರಶೈವ ಮಠಗಳಿಂದ ಕೊಡುಗೆಯಾಗಿ ತಂದುವಾಗಿವೆ :

ತೋಂಟದಾರ್ಯ ಮಠ ಗದಗ, ದುರದುಂಡೀಶ್ವರಮಠ ಅರಭಾವಿ, ಮಹಾಲಿಂಗೇಶ್ವರ ಮಠ ಮಹಾಲಿಂಗಪುರ, ಮುರಘಾಮಠ ಧಾರವಾಡ, ಗುರುಮಠಕಲ್ಲಮಠ ಗುರುಮಠಕಲ್ಲ, ಬಸವತೀರ್ಥಮಠ ಹುಮ್ನಾಬಾದ, ಚೌಕಿಮಠ ಉದ್ಗೀರ್ (ಜಿ.ಉಸ್ಮಾನಾಬಾದ), ಸಿದ್ಧರಾಮೇಶ್ವರಮಠ ಕಮಲಾಪುರ (ಜಿ.ಗುಲಬರ್ಗಾ), ವಿರಕ್ತಮಠ ಅಚಲೇರಾ, ಗದ್ದಗಿಮಠ ಕಲಬುರ್ಗಿ, ಪಟ್ಟದ ದೇವರಮಠ ಅಚಲೇರಾ, ಹಿರೇಮಠ ಆಳಂದ, ಮರುಘಾಮಠ ಗುಬ್ಬ, ಉರಗಾದ್ರಿಗವಿಮಠ ಉರವಕೊಂಡ (ಆಂಧ್ರ), ವಿಜಯ ಮಹಾಂತೇಶ್ವರ ಗ್ರಂಥಾಲಯ ಶಿವಯೋಗ ಮಂದಿರ, ಮುರುಘಾಮಠ ಹುಮ್ನಾಬಾದ, ಷಣ್ಮುಖ ಶಿವಯೋಗಿ ಮಠ ಜೇವರಗಿ, ಗುರುಶಾಂತೇಶ್ವರಮಠ ಶಲವಡಿ, ಕರಿಬಸಯ್ಯನಪುರಿಮಠ ಮುಳಗುಂದ, ವಿರಕ್ತಮಠ ಕಡಕೋಳ, ದುರುದುಂಡೀಶ್ವರಮಠ ಮುರಗೋಡ, ಗುರುಸಿದ್ದೇಶ್ವರಮಠ ಗುಳೇದ ಗುಡ್ಡ, ಮುರುಘಾಮಠ ಗುಳೇದಗುಡ್ಡ, ವಚನಮಂಟಪ ಬೆಳಗಾವಿ, ಬೂದಿಸ್ವಾಮಿಮಠ ಹೊಸಳ್ಳಿ, ಮೂರುಸಾವಿರಮಠ ಹುಬ್ಬಳ್ಳಿ, ಆನಂದಾಶ್ರಮ ಗದಗ, ಕುಂಟೋಜಿಮಠ ಕೊಲ್ಲಾಪೂರ, ಬೃಹನ್ಮಠ ಚಿತ್ರದುರ್ಗ, ಗೂಳೂರು ಸಂಸ್ಥಾನಮಠ ಗೂಳೂರು, ರಾಯಕೋಟಿಮಠ ಶಹಾಪೂರ, ರುದ್ರಾಕ್ಷಿಮಠ ಹುಬ್ಬಳ್ಳಿ, ಸಿದ್ಧಾಂತಿಮಠ ಸಿಂಧನೂರು, ನಾರದಗಡ್ಡಿಮಠ ರಾಯಚೂರು, ಕಲ್ಲುಮಠ ಗಂಗಾವತಿ, ಗವಿಮಠ ಕೊಪ್ಪಳ, ಕೊಟ್ಟೂರುಮಠ ಹೊಸಪೇಟೆ, ಮುದಗಲ್ ಭೋಗಿ ಒಡೆಯರಮಠ ಮುದೇನೂರು - ಮುಂತಾದವು.

ಈ ಒಂದೊಂದು ಮಠಗಳಿಂದ ಬಂದ ಹಸ್ತಪ್ರತಿಕಟ್ಟುಗಳ ಸಂಖ್ಯೆ ಕನಿಷ್ಠ ೫೦, ಗರಿಷ್ಠ ೩೦೦ರ ವರೆಗೆ ಇರುವುದನ್ನು ನೋಡಿದರೆ ಇವು ಒಂದೊಂದು ಸ್ವತಂತ್ರ ಹಸ್ತಪ್ರತಿ ಕೇಂದ್ರಗಳೇ ಆಗಿದ್ದವೆಂದು ಹೇಳಬೇಕಾಗುತ್ತದೆ.

ಕಲ್ಯಾಣದ ಕ್ರಾಂತಿಯ ನಂತರ ಶರಣರು ದಿಕ್ಕುಪಾಲಾದಾಗ ತಮ್ಮ ಜ್ಞಾನನಿಧಿಗಳೆನಿಸಿದ್ದ ವಚನಕಟ್ಟುಗಳನ್ನು ಕಟ್ಟಿಕೊಂಡು ಹೋದರು. ಆಗ ಅವರು ಎಲ್ಲಿ ನೆಲೆನಿಂತರೋ ಅಲ್ಲಿ ಅವು ಉಳಿದುಕೊಂಡವು. ಶರಣರ ನಾಶಕ್ಕಿಂತ ಅವರ ಉದಾತ್ತ ತತ್ವಗಳನ್ನು ಅಳವಡಿಸಿಕೊಂಡಿದ್ದ ವಚನ ಸಾಹಿತ್ಯವನ್ನು ನಾಶ ಮಾಡಬೇಕೆಂಬ ಉದ್ದೇಶ ಹೊಂದಿದ್ದ ದುಷ್ಟಶಕ್ತಿಗಳಿಂದ ಅವುಗಳನ್ನು ರಕ್ಷಿಸಲು ಅಲ್ಲಲ್ಲಿಯೇ ಬಚ್ಚಿಟ್ಟರು [6]. ಹೀಗಾಗಿ ಕಲ್ಯಾಣದ ವಚನಭಂಡಾರದ ಹಸ್ತಪ್ರತಿಗಳು ಈಗ ಹಂಪೆ, ಉಳಿವೆ, ಶ್ರೀಶೈಲ, ಹಳೇಬೀಡು ಮೊದಲಾದ ಸ್ಥಳಗಳಿಗೆ ಹಂಚಿಹೋದವು. ಅವು ಉಳಿದಲ್ಲಿಯೇ ಒಂದೊಂದು ಹಸ್ತಪ್ರತಿ ಭಂಡಾರಗಳು ಸ್ಥಾಪಿತವಾದವು. ವಿಜಯನಗರದ ಪ್ರೌಢ ದೇವರಾಯನ ಆಳ್ವಿಕೆಯ ಕಾಲದವರೆಗೆ ಅಲ್ಲಲ್ಲಿ ಅಡಗಿಕುಳಿತಿದ್ದ ಈ ಹಸ್ತಪ್ರತಿಗಳು ಅವನ ಕಾಲದ ನೂರೊಂದು ವಿರಕ್ತರಿಂದ ಮತ್ತೆ ಬೆಳಕಿಗೆ ಬಂದವು. ಪ್ರೌಢ ದೇವರಾಯ ಹಾಗೂ ಅವನ ಮಂತ್ರಿಗಳಾಗಿದ್ದ ಲಕ್ಕಣ್ಣ ದಂಡೇಶ, ಭಂಡಾರಿ ಜಕ್ಕಪ್ಪ, ಕಲ್ಲೆಹದ ಕೇತಿಶೆಟ್ಟಿ ಮೊದಲಾದವರು ವೀರಶೈವ ಸಾಹಿತ್ಯದ ಅಭಿವೃದ್ಧಿಗೆ ವಿಶೇಷ ಪ್ರೋತ್ಸಾಹವಿತ್ತರು. ಕಲ್ಯಾಣದ ವಚನಭಂಡಾರದ ಮಾದರಿಯಲ್ಲಿ 'ವಿಜಯಕಲ್ಯಾಣ'ವೆನಿಸಿದ ಹಂಪೆಯಲ್ಲಿ ಮತ್ತೊಂದು ಹಸ್ತಪ್ರತಿ ಭಂಡಾರ ನಿರ್ಮಾಣವಾಗಿರಬೇಕು. ಅಲ್ಲಿ ನಾಡಿನ ಉದ್ದಗಲಕ್ಕೂ ಚೆಲ್ಲವರಿದಿದ್ದ ವಚನ ಕಟ್ಟುಗಳನ್ನು ಸಂಗ್ರಹಿಸುವ, ಸ್ಥಲಾನುಗುಣವಾಗಿ ಜೋಡಿಸುವ, ಟೀಕೆ ಟಿಪ್ಪಣಿ ವ್ಯಾಖ್ಯಾನ ಬರೆಯುವ ಕಾರ್ಯ ತುಂಬ ವ್ಯಾಪಕವಾಗಿ ನಡೆಯಿತು. ಅದು ವೀರಶೈವದ ಇತಿಹಾಸದಲ್ಲಿಯೇ ಒಂದು ಅವಿಸ್ಮರಣೀಯ ಘಟನೆಯಾಗಿ ತೋರಿತು.

---

6. 'ವಾಲಿಯ ಭಂಡಾರವನ್ನು ರಕ್ಷಿಸಿಕೊಳ್ಳಿ' - ಎಂಬ ಕಾಲಜ್ಞಾನದ ಮಾತು - ರಾಮಾಯಣ ಕಾಲದ ವಾಲಿಯನ್ನು ಕುರಿತದ್ದಲ್ಲ ; ವೀರಶೈವ ಓಲೆ ಕಟ್ಟುಗಳ ಭಂಡಾರ ಕುರಿತದ್ದು.

ಮುಂದೆ ಹರದನಹಳ್ಳಿಯ ತೋಂಟದ ಸಿದ್ಧಲಿಂಗರ ಶಿಷ್ಯ - ಪ್ರಶಿಷ್ಯ ಪರಂಪರೆ ಈ ಕಾರ್ಯವನ್ನು ಒಂದು ಕಾಯಕದ ರೀತಿಯಲ್ಲಿ ಕೈಕೊಂಡಿತು. ಅದರಲ್ಲಿಯೇ 'ಸಂಪಾದನೆಯ ಸಮಯ' ಎಂಬುದೊಂದು ಹುಟ್ಟಿಕೊಂಡಿತು. ಅದರಲ್ಲಿ ಸಂಪಾದನೆಯ ಚೆನ್ನಂಜೇದೇವ, ಸಂಪಾದನೆಯ ಗುರುಶಾಂತದೇವ, ಸಂಪಾದನೆಯ ಸಿದ್ಧವೀರಣ್ಣ, ಸಂಪಾದನೆಯ ಪರ್ವತೇಂದ್ರ, ಸಂಪಾದನೆಯ ಬೋಳಬಸವ, ಸಂಪಾದನೆಯ ಗುರುಲಿಂಗದೇವ, ಸಂಪಾದನೆಯ ಪರ್ವತೇಶ ಮೊದಲಾದವರು ಸು. ೧೩೦ಕ್ಕೂ ಹೆಚ್ಚು ವಚನ ಸಂಪಾದನೆ ಕೃತಿಗಳನ್ನು, ಅನೇಕ ಕಾವ್ಯಗಳ ರಚನೆಯನ್ನು, ವ್ಯಾಖ್ಯಾನ ಟೀಕೆ ಟಿಪ್ಪಣಿ ಕಾರ್ಯವನ್ನು ತುಂಬ ಮುತುವರ್ಜಿಯಿಂದ ಮಾಡಿದರು. ಈ ಕಾರ್ಯಕ್ಕಾಗಿ ಅವರು ಅನೇಕ - ಹಸ್ತ ಪ್ರತಿಗಳನ್ನು ಸಂಗ್ರಹಿಸಿರಬೇಕು. ಈ ಕಾರಣದಿಂದ ಇವರ ಕಾರ್ಯ ಕ್ಷೇತ್ರದಲ್ಲಿ ಶ್ರೀಮಂತವಾದ ಹಸ್ತಪ್ರತಿ ಭಂಡಾರಗಳು ಇದ್ದಿರಲು ಸಾಕು.

ಹೀಗೆ ಪ್ರಾಚೀನ ಕಾಲದಲ್ಲಿ ಕಲ್ಯಾಣದಲ್ಲಿ ಆರಂಭವಾದ ವೀರಶೈವ ಹಸ್ತಪ್ರತಿ ಭಂಡಾರ ಪರಂಪರೆ ಮುಂದೆ ವಿಜಯನಗರ, ಎಡೆಯೂರು, ಗುಮ್ಮಾಳಪುರ, ಗುಬ್ಬಿ, ಗೂಳೂರು, ಶ್ರೀಶೈಲ, ಉಳಿವೆ ಮೊದಲಾದೆಡೆಯಲ್ಲಿ ನೆಲೆನಿಂತು, ತರುವಾಯದಲ್ಲಿ ಕರ್ನಾಟಕದ ತುಂಬ ಇರುವ ಧರ್ಮಪೀಠ, ಮನೆ - ಮಠಗಳಿಗೆಲ್ಲ ವ್ಯಾಪಿಸಿತೆಂದು ಹೇಳಬೇಕಾಗುತ್ತದೆ.

ಇಂದು ಆ ಎಲ್ಲ ಮಠಮಾನ್ಯಗಳ ಹಸ್ತಪ್ರತಿಗಳಲ್ಲಿ ಕೆಲವು - ವಿಶ್ವವಿದ್ಯಾಲಯ, ಪ್ರಾಚ್ಯ ಸಂಶೋಧನ ಕೇಂದ್ರಗಳಿಗೆ ಸೇರಿದ್ದರೆ, ಇನ್ನೂ ಕೆಲವು ಅಲ್ಲಿಯೇ ರಕ್ಷಣೆ ಇಲ್ಲದೆ ಉಳಿದಿವೆ. ಮತ್ತೆ ಕೆಲವು ನಾಶವಾಗಿ ಹೋಗಿವೆ. ಇಂದು ವೀರಶೈವ ಹಸ್ತಪ್ರತಿಗಳನ್ನು ಸಂಗ್ರಹಿಸುವಲ್ಲಿ, ಸಂಗ್ರಹಿಸಿದುವನ್ನು ವ್ಯವಸ್ಥಿತವಾಗಿ ಸಂರಕ್ಷಿಸುವಲ್ಲಿ ಪ್ರಮುಖವಾದುವುಗಳನ್ನು ಪರಿಷ್ಕರಿಸಿ ಪ್ರಕಟಿಸುವಲ್ಲಿ ಹೆಚ್ಚು ಆಸಕ್ತಿಯನ್ನು ವಹಿಸುತ್ತಿರುವ ಧರ್ಮಪೀಠಗಳಲ್ಲಿ ಗದುಗಿನ ತೋಂಟದಾರ್ಯಮಠ, ಚಿತ್ರದುರ್ಗದ ಬೃಹನ್ಮಠ, ಹುಬ್ಬಳ್ಳಿಯ ಮೂರುಸಾವಿರಮಠ, ಹೊಸಪೇಟೆಯ ಕೊಟ್ಟೂರುಮಠ, ನಿಡಸೋಸಿಯ ದುರದುಂಡೀಶ್ವರಮಠ, ಬೆಳಗಾವಿಯ ನಾಗನೂರುಮಠ ಮುಖ್ಯವೆನಿಸಿವೆ. ಇವುಗಳ ಚಟುವಟಿಕೆಗಳನ್ನು ಸ್ಥೂಲವಾಗಿ ಹೀಗೆ ವಿವರಿಸಬಹುದು.

ಆಧುನಿಕ ವೀರಶೈವ ಸಾಹಿತ್ಯೇತಿಹಾಸದಲ್ಲಿ ಗದುಗಿನ ತೋಂಟದಾರ್ಯಮಠದ ವೀರಶೈವ ಅಧ್ಯಯನ ಸಂಸ್ಥೆಗೆ ಒಂದು ವಿಶೇಷ ಮಹತ್ವದ ಸ್ಥಾನ ಮೀಸಲಾಗಿದೆ. ಅದು ಗ್ರಂಥ ಪ್ರಕಟನೆಯಲ್ಲಿ ಹಾಕಿಕೊಂಡ ಯೋಜನೆಗಳು, ಸಾಧಿಸಿದ ಸಿದ್ಧಿ ಅನನ್ಯವೆನಿಸಿದೆ. ಅದರ ಕಾರ್ಯಯೋಜನೆಗಳಲ್ಲಿ ಹಸ್ತಪ್ರತಿ ಸಂಗ್ರಹ ಕಾರ್ಯಕ್ಕೂ ಅಧಿಕ ಪ್ರಾಶಸ್ತ್ಯ ನೀಡಲಾಗಿದೆ.

ಹಿಂದಿನ ಸಂಗ್ರಹದ ಪ್ರತಿಗಳನ್ನು ಬೇರೆ ಬೇರೆ ಸಂಸ್ಥೆಗಳು ಒಯ್ದು ಸೊರಗಿ ಹೋಗಿದ್ದ ಭಂಡಾರವನ್ನು ಇಂದಿನ ಪೂಜ್ಯರು ಅಧಿಕಾರ ವಹಿಸಿಕೊಂಡ ಮೇಲೆ ಮತ್ತೆ ಪುನರುಜ್ಜೀವನಗೊಳಿಸಲು ಮುಂದಾದರು. ಹೀಗಾಗಿ ಸದ್ಯ ಸುಮಾರು ಒಂದು ಸಾವಿರ ಕಟ್ಟುಗಳು ಈ ಭಂಡಾರದಲ್ಲಿ ಸಂಗ್ರಹವಾಗಿವೆ. ಹಸ್ತಪ್ರತಿಗಳನ್ನು ಕುರಿತಂತೆ ಈ ಸಂಸ್ಥೆ ಮಾಡಿದ ಮಹತ್ವದ ಕಾರ್ಯಗಳೆಂದರೆ, ಸಂಗ್ರಹಿಸಿದ ಹಸ್ತಪ್ರತಿಗಳನ್ನು ವ್ಯವಸ್ಥಿತವಾಗಿ ಜೋಡಿಸಿದ್ದು, ಸೂಚಿ ಸಿದ್ಧಪಡಿಸಿ ಪ್ರಕಟಿಸಿದ್ದು, 'ಸಮಗ್ರ ವೀರಶೈವ ಅಪ್ರಕಟಿತ ಪ್ರಾಚೀನ ಸಾಹಿತ್ಯ ಪ್ರಕಟನಮಾಲೆ'ಯ ಅಡಿಯಲ್ಲಿ ಅಪ್ರಕಟಿತ ಗ್ರಂಥಗಳನ್ನು ಪರಿಷ್ಕರಿಸಿ ಪ್ರಕಟಿಸುತ್ತ ಬಂದುದು. ಜೊತೆಗೆ ವೀರಶೈವ ಅಪ್ರಕಟಿತ ಗ್ರಂಥಸೂಚಿ, ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು ಗ್ರಂಥಗಳನ್ನು ಪ್ರಕಟಿಸಿದ್ದು - ಇವು ಈ ಸಂಸ್ಥೆಯ ಅಪೂರ್ವ ಕಾರ್ಯಗಳೆನಿಸಿ, ಉಳಿದ ಸಂಸ್ಥೆಗಳಿಗೆ ಮಾದರಿಯಾಗಿವೆ. ಇಲ್ಲಿನ ವೀರಶೈವ ಹಸ್ತಪ್ರತಿ - ಸೂಚಿ ಪ್ರಕಟನೆಯಿಂದ ಪ್ರೇರಣೆಗೊಂಡು ಬೃಹನ್ಮಠ ಚಿತ್ರದುರ್ಗ, ಹುಬ್ಬಳ್ಳಿಯ ಮೂರು ಸಾವಿರಮಠ, ಬೆಳಗಾವಿಯ ರುದ್ರಾಕ್ಷಿಮಠಗಳಿಂದ ಅಲ್ಲಿನ ಹಸ್ತಪ್ರತಿ ಸೂಚಿಗಳು ಪ್ರಕಟಗೊಂಡಿವೆ.

ವೀರಶೈವ ಹಸ್ತಪ್ರತಿಗಳ ಮೊದಲ ಸೂಚಿಯೆಂಬ ಖ್ಯಾತಿ ಪಡೆದ 'ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠದ ಹಸ್ತಪ್ರತಿ ಸೂಚಿ'ಯಲ್ಲಿ ಒಟ್ಟು ೪೩೩ ಕಟ್ಟುಗಳಲ್ಲಿ ಅಳವಟ್ಟ ೧೫೩೭ ಕೃತಿಗಳ ವಿವರಗಳನ್ನು ಕೊಡಲಾಗಿದೆ. ಇದರಲ್ಲಿ ಕವಿಚರಿತ್ರೆಯಲ್ಲಿ ಉಲ್ಲೇಖಗೊಳ್ಳದ ೫೪ ಕೃತಿಗಳು ಮೊದಲಬಾರಿಗೆ ಬೆಳಕಿಗೆ ಬಂದುದು ವಿಶೇಷ.

ಹಸ್ತಪ್ರತಿ ಸಂಗ್ರಹಕಾರ್ಯದಲ್ಲಿ ಹೆಚ್ಚಿನ ಆಸಕ್ತಿ ವಹಿಸಿ, ತೋಂಟದಾರ್ಯ ಮಠಕ್ಕಿಂತಲೂ ಮೊದಲಿನಿಂದಲೇ ಅಧಿಕ ಸಂಖ್ಯೆಯ ಹಸ್ತಪ್ರತಿಗಳನ್ನು ಸಂಗ್ರಹಿಸಿದ ಶ್ರೀಮಂತ ಹಸ್ತಪ್ರತಿ ಭಂಡಾರ ಹೊಂದಿದ ಪೀಠ - ಚಿತ್ರದುರ್ಗದ ಬೃಹನ್ಮಠ, ವೀರಶೈವ ಮಠ ಪರಂಪರೆಯಲ್ಲಿ ವಿಶಿಷ್ಟ ಸ್ಥಾನಗಳಿಸಿದ ಈ ಮಠದ ಭಂಡಾರದಲ್ಲಿ ಮೂರು ಸಾವಿರಕ್ಕೂ ಮಿಕ್ಕಿ ಹಸ್ತಪ್ರತಿ ಕಟ್ಟುಗಳಿವೆ. ಅವುಗಳಲ್ಲಿ ೭೧೫ ಕಟ್ಟುಗಳನ್ನು ಒಳಗೊಂಡ 'ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದ ಹಸ್ತಪ್ರತಿ ಸೂಚಿ' ಎಂಬ ಮೊದಲ ಸಂಪುಟ ಈಗ ಪ್ರಕಟವಾಗಿದೆ. ಅದರಲ್ಲಿ ಒಟ್ಟು ೪೬೬೧ ಪ್ರತಿಗಳ ವಿವರವಿದೆ. ಕವಿಚರಿತೆಯಲ್ಲಿ ಉಕ್ತವಾಗದ ೬೫ ಜನ ಕವಿಕೃತಿಗಳು ಮೊದಲ ಬಾರಿಗೆ ಬೆಳಕು ಕಂಡುದು ಒಂದು ವಿಶೇಷ. ವ್ಯವಸ್ಥಿತ ಸಂರಕ್ಷಣೆ ಇರುವ ಈ ಹಸ್ತಪ್ರತಿ ಭಂಡಾರದ ಉಳಿದ ಹಸ್ತಪ್ರತಿಗಳ ಸೂಚಿ ಇಷ್ಟರಲ್ಲಿಯೇ ಬೆಳಕಿಗೆ ಬರುತ್ತವೆ ಎಂಬುದು ಸಂತಸದ ಸಂಗತಿ. ಈ ಎರಡೂ ಮಠಗಳ (ಗದಗ ಮತ್ತು ಚಿತ್ರದುರ್ಗ) ಸೂಚಿಗಳ ಕರ್ತರು ಎಸ್.ಶಿವಣ್ಣ' ಬೆಂಗಳೂರು ಅವರು.

ಹುಬ್ಬಳ್ಳಿಯ ಮೂರುಸಾವಿರ ಮಠ ಮತ್ತೊಂದು ಪ್ರತಿಷ್ಠಿತ ವೀರಶೈವ ಜಗದ್ಗುರು ಪೀಠ. ಇದೂ ಗ್ರಂಥ ಪ್ರಕಟನೆಯ ಕಾರ್ಯವನ್ನು ಮೊದಲಿನಿಂದಲೂ ನಡೆಸುತ್ತ ಬಂದಿದೆ. ಇಲ್ಲಿಯೂ ಅಧಿಕಸಂಖ್ಯೆಯ ಹಸ್ತಪ್ರತಿಗಳು ಸಂಗ್ರಹವಾಗಿದ್ದು, ಅವುಗಳ ವ್ಯವಸ್ಥಿತ ರಕ್ಷಣೆಗೆ ಅನುವು ದೊರೆತಿದೆ. 'ಶ್ರೀ ಜಗದ್ಗುರು ಮೂರು ಸಾವಿರ ಮಠದ ವರ್ಣನಾತ್ಮಕ ಹಸ್ತಪ್ರತಿ ಸೂಚಿ' ಎಂಬುದು ಪ್ರಕಟವಾಗಿದ್ದು, ಅದರಲ್ಲಿ ೨೨೪ ಕಟ್ಟುಗಳ ವಿವರಣಾತ್ಮಕ ಪರಿಚಯ ನೀಡಲಾಗಿದೆ. ಕೆಳದಿ ಗುಂಡಾ ಜೋಯಿಸರಿಂದ ಸಿದ್ಧವಾದ ಇದು ವೀರಶೈವ ಮಠಗಳು ಪ್ರಕಟಿಸಿದ ಮೊದಲ ವರ್ಣನಾತ್ಮಕ ಹಸ್ತಪ್ರತಿ ಸೂಚಿ ಎನಿಸಿದೆ.

ಹಸ್ತಪ್ರತಿ ಸಂಗ್ರಹ, ಸಂರಕ್ಷಣೆ ಕಾರ್ಯದಲ್ಲಿ ಈಚೆಗೆ ವಿಶೇಷ ಆಸಕ್ತಿ ವಹಿಸಿದ ಮತ್ತೊಂದು ಸಂಸ್ಥೆ ಬೆಳಗಾವಿಯ ನಾಗನೂರ ರುದ್ರಾಕ್ಷಿಮಠ, ಸಿದ್ಧರಾಮಸ್ವಾಮಿಗಳು ಅಧಿಕಾರ ವಹಿಸಿಕೊಂಡ ನಂತರ ಇದಕ್ಕೆ ಹೆಚ್ಚಿನ ತೀವ್ರತೆ ಉಂಟಾಯಿತು. ಸಾವಿರಕ್ಕೂ ಮಿಕ್ಕಿದ ಹಸ್ತಪ್ರತಿ ಕಟ್ಟುಗಳು ಈಗ ಸಂಗ್ರಹವಾಗಿ ವೈಜ್ಞಾನಿಕ ರೀತಿಯಲ್ಲಿ ಸಂರಕ್ಷಿಸಲ್ಪಟ್ಟಿವೆ. ಎರಡುನೂರು ಕಟ್ಟುಗಳ 'ನಾಗನೂರು ರುದ್ರಾಕ್ಷಿ ಮಠದ ಹಸ್ತಪ್ರತಿ ಸೂಚಿ'ಯೊಂದು ಈಗ ಪ್ರಕಟವಾಗಿದೆ. ಇದು ೫೮೭ ಕೃತಿಗಳ ವರ್ಣನಾತ್ಮಕ ಸೂಚಿ. ಇನ್ನುಳಿದ ಕಟ್ಟುಗಳ ಸೂಚೀಕಾರ್ಯ ಮುನ್ನಡೆದಿದೆ.

ಉಳಿದ ಮಠಗಳಲ್ಲಿ ಹಸ್ತಪ್ರತಿ ಸಂಗ್ರಹ ತಕ್ಕಮಟ್ಟಿಗೆ ನಡೆದಿದ್ದರೂ ಅವುಗಳ ಸೂಚೀಕರಣ ಇತ್ಯಾದಿ ಕಾರ್ಯಗಳತ್ತ ಹೆಚ್ಚಿನ ಗಮನ ಹರಿಸಿದಂತೆ ಕಾಣುವುದಿಲ್ಲ.

ಇದು ವೀರಶೈವ ಮಠಗಳಲ್ಲಿರುವ ಪ್ರಮುಖ ಹಸ್ತಪ್ರತಿಕೇಂದ್ರಗಳ ಸ್ಥೂಲ ಪರಿಚಯ. ಇನ್ನು ಮಠಗಳಲ್ಲದೆ ಬೆಂಗಳೂರಿನ ಬಸವ ಸಮಿತಿ ವೀರಶೈವ ಹಸ್ತಪ್ರತಿ ಸಂಗ್ರಹಕಾರ್ಯ ನಡೆಸಿದೆ. ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಭಂಡಾರ ಒಂದು ದೃಷ್ಟಿಯಿಂದ ವೀರಶೈವ ಹಸ್ತಪ್ರತಿ ಕೇಂದ್ರವೇ ಎನಿಸಿದೆ. ಇಲ್ಲಿರುವ ಹೆಚ್ಚಿನ ಹಸ್ತಪ್ರತಿಗಳು ವೀರಶೈವಕ್ಕೆ ಸಂಬಂಧಿಸಿದುವಾಗಿವೆ. ಅವುಗಳನ್ನು ಸಂಗ್ರಹಿಸಿದುದು ಬೇರೆ ಬೇರೆ ವೀರಶೈವ ಮಠಗಳಿಂದಲೇ ಎಂಬುದನ್ನು ಈ ಹಿಂದೆ ತಿಳಿಸಲಾಗಿದೆ. ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯಲ್ಲಿಯೂ ವೀರಶೈವ ಹಸ್ತಪ್ರತಿಗಳ ಸಂಗ್ರಹವಿದೆ.

ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ಹಸ್ತಪ್ರತಿ ಭಂಡಾರದಲ್ಲಿಯೂ ಅಧಿಕ ಸಂಖ್ಯೆಯಲ್ಲಿ ವೀರಶೈವ ಗ್ರಂಥಗಳಿವೆ ಎಂಬುದು ಅದು ಪ್ರಕಟಿಸಿದ ವರ್ಣನಾತ್ಮಕ ಸೂಚಿಯಲ್ಲಿ ಅಳವಟ್ಟ ೪೪೯ ಕೃತಿಗಳಲ್ಲಿ ೩೦೦ ವೀರಶೈವ ಕೃತಿಗಳಾಗಿರುವುದರಿಂದ ಸ್ಪಷ್ಟವಾಗುತ್ತದೆ.

ಧರ್ಮಸ್ಥಳದ ಶ್ರೀ ಮಂಜುನಾಥ ಸಂಸ್ಕೃತಿ ಸಂಶೋಧನ ಸಂಸ್ಥೆಯ ಹಸ್ತಪ್ರತಿ ಭಂಡಾರದಲ್ಲಿಯೂ ವೀರಶೈವ ಹಸ್ತಪ್ರತಿಗಳು ಹೆಚ್ಚಾಗಿವೆ. ಪ್ರೊ. ಗೌ.ಮ. ಉಮಾಪತಿ ಶಾಸ್ತ್ರಿಗಳವರಲ್ಲಿದ್ದ ವೈಯಕ್ತಿಕ ಸಂಗ್ರಹ ಈ ಭಂಡಾರದಲ್ಲಿ ಸೇರ್ಪಡೆಯಾಗಿದೆ. ಅವೆಲ್ಲ ವೀರಶೈವಕ್ಕೆ ಸಂಬಂಧಿಸಿದ ಕೃತಿಗಳೇ ಆಗಿವೆ.

ಮಠ ಹಾಗೂ ಇತರ ಸಂಸ್ಥೆಗಳಲ್ಲದೆ ಕೆಲವು ವ್ಯಕ್ತಿಗಳೂ ವೈಯಕ್ತಿಕವಾಗಿ ವೀರಶೈವ ಹಸ್ತಪ್ರತಿ ಸಂಗ್ರಹ ಹೊಂದಿದವರಾಗಿದ್ದಾರೆ. ಅವರಲ್ಲಿ ಫ.ಗು.ಹಳಕಟ್ಟಿ, ಬಿ.ಶಿವಮೂರ್ತಿಶಾಸ್ತ್ರಿ, ಗೌ.ಮ. ಉಮಾಪತಿ ಶಾಸ್ತ್ರಿ, ಚನ್ನಮಲ್ಲಿಕಾರ್ಜುನ ಮಾಸ್ತರರು, ಎಲ್. ಬಸವರಾಜು, ಸಿ.ಮಹಾದೇವಪ್ಪ, ಎಂ.ಎಸ್. ಬಸವರಾಜಯ್ಯ, ಪಿ.ಎಂ. ಗಿರಿರಾಜು ಮೊದಲಾದವರು ಪ್ರಮುಖರು.

ಇದು ವೀರೈವ ಹಸ್ತಪ್ರತಿ ಕೇಂದ್ರಗಳ ಒಂದು ಸ್ಥೂಲ ನೋಟ ಮಾತ್ರ. ಇದರ ಸಮಗ್ರ ವಿವರಣೆ ವ್ಯಾಪಕ ಕ್ಷೇತ್ರ ಕಾರ್ಯದಿಂದ ಮಾತ್ರ ಸಾಧ್ಯ. ಅದು ಇನ್ನು ಮುಂದೆ ಮಾಡಬೇಕಾದ ಕಾರ್ಯವಾಗಿದೆ.

ಕೊನೆಯ ಮಾತು : ಕರ್ನಾಟಕದಲ್ಲಿರುವ ಕನ್ನಡ ಹಸ್ತ ಪ್ರತಿಗಳಲ್ಲಿ ಅರ್ಧದಷ್ಟು ಮಾತ್ರ ಈಗ ಸಂಗ್ರಹವಾಗಿವೆ. ಇನ್ನೂ ಅರ್ಧದಷ್ಟು ಅಲ್ಲಲ್ಲಿ ಸಣ್ಣ ಪುಟ್ಟ ಮಠ - ಮನೆ - ವ್ಯಕ್ತಿಗಳ ವಶದಲ್ಲಿದ್ದು ಪೂಜೆಗೊಳ್ಳುತ್ತ, ಇಲ್ಲವೆ ಅಲಕ್ಷಿತವಾಗಿ ಮನೆಯ ಹಳೆಯ ಪೆಟ್ಟಿಗೆಯಲ್ಲಿ ಹುಳುಗಳ ಬಾಯಿಗೆ ತುತ್ತಾಗುತ್ತ ನಡೆದಿವೆ. ಮತ್ತೆ ಕೆಲವು ಅವುಗಳ ಮಹತ್ವ ಅರಿಯದ ಜನರಿಗೆ ಬೆಂಕಿಗೆ, ಇಲ್ಲವೆ ತಿಪ್ಪೆಗೆ ಎಸೆಯಲ್ಪಡುತ್ತಲಿವೆ. ಇಂಥ ದುಃಸ್ಥಿತಿಯಲ್ಲಿರುವ ಹಸ್ತಪ್ರತಿಗಳನ್ನು ಸಂಗ್ರಹಿಸಿ ವ್ಯವಸ್ಥಿತವಾಗಿ ರಕ್ಷಿಸುವ ಕಾರ್ಯ ಧರ್ಮಪೀಠಗಳಿಂದ ಆಗಬೇಕಾಗಿದೆ. ಹಾಗೆಯೆ ಈ ಇಲ್ಲಿನ ಸಂಪತ್ತನ್ನು ಉಳಿಸುವುದು ಪ್ರತಿಯೊಬ್ಬರ ಸಾಂಸ್ಕೃತಿಕ ಜವಾಬ್ದಾರಿಯಾಗಿದೆ.

ತುಳು ಕಾವ್ಯಗಳಲ್ಲಿ ರಾಷ್ಟ್ರೀಯತೆ

೦೦೦೦೦೦೦

ಸಾಹಿತ್ಯದಲ್ಲಿ ರಾಷ್ಟ್ರೀಯತೆ ಎನ್ನುವುದನ್ನು ವಿವೇಚಿಸುವಾಗ ಇಂದಿನ ಈ ಅಂತಾರಾಷ್ಟ್ರೀಯತೆಯ ದಿನಗಳಲ್ಲಿ ಹಲವು ತೊಡಕುಗಳು ಎದುರಾಗುತ್ತವೆ. ನಮ್ಮ ದೇಶದ ವಿವಿಧ ಭಾಷೆಗಳಲ್ಲಿ ಪ್ರಕಟಗೊಂಡ ಸಾಹಿತ್ಯಗಳಲ್ಲಿ ರಾಷ್ಟ್ರೀಯತೆ ಎಂಬ ಒಂದು ಪದ ಹೆಚ್ಚು ಒತ್ತು ಪಡೆದದ್ದೇ ಸ್ವಾತಂತ್ರ್ಯ ಚಳವಳಿಯ ಕಾಲದಲ್ಲಿ. ೧೯೪೭ರ ನಂತರ ಈ ಪದ ಮಾರುಕಟ್ಟೆಯಲ್ಲಿ ಚಲಾವಣೆಗೆ ಬಂದದ್ದು ಕೆಲವು ಸಂದರ್ಭಗಳಲ್ಲಿ ಮಾತ್ರ. ಆಗ, ರಾಷ್ಟ್ರೀಯತೆ ಎಂದರೆ ದೇಶಭಕ್ತಿ ಎಂಬ ಅರ್ಥ ಪಡೆಯುವುದನ್ನು ನಾವು ಇಂದಿಗೂ ಕಾಣುತ್ತೇವೆ. ಚೀನಾ ಮತ್ತು ಪಾಕಿಸ್ತಾನಗಳು ನಮ್ಮ ದೇಶದ ಮೇಲೆ ಆಕ್ರಮಣ ಮಾಡಿದ ಸಂದರ್ಭಗಳಲ್ಲಿ ದೇಶದ ಎಲ್ಲ ಭಾಷೆಗಳಲ್ಲೂ ಈ ವಸ್ತುವನ್ನು ಇಟ್ಟುಕೊಂಡು ಪ್ರಕಟಗೊಂಡ ಸಾಹಿತ್ಯವನ್ನು ದೇಶಭಕ್ತಿಯ ರಚನೆಗಳೆನ್ನಬಹುದು. ವಿದೇಶೀ ಆಕ್ರಮಣಗಳನ್ನು ಖಂಡಿಸಿ ಕವಿಗಳು ರಕ್ತತರ್ಪಣ ಕೊಡುತ್ತೇವೆ ಎನ್ನುವ ವೀರಗೀತೆಗಳನ್ನು ಬರೆದರು. ಲೇಖನಿಗಳೆಲ್ಲ ಕೋವಿಗಳಾಗಲೆಂದು ಹಾರೈಸಿದರು. ಮೊನ್ನೆ ನಡೆದ ಕಾರ್ಗಿಲ್‌ಯುದ್ಧದ ಸಂದರ್ಭದಲ್ಲಿ ಮೈನವಿರೇಳುವಂತೆ ಕವಿಗಳೆಲ್ಲ ಕವಿತೆಗಳನ್ನು ರಚಿಸಿದರು. ಇವುಗಳನ್ನು ರಾಷ್ಟ್ರೀಯತೆಯ ಪ್ರಭಾವಕ್ಕೊಳಗಾದ ಕವಿತೆಗಳೆನ್ನಬಹುದು.

ಮಹಾತ್ಮಾಗಾಂಧೀಜಿಯವರು ಈ ದೇಶದ ಸ್ವಾತಂತ್ರ್ಯಹೋರಾಟದ ಮುಂದಾಳತ್ವ ವಹಿಸಿದ ಮೇಲೆ ಅವರು ಬಹು ಬಾಹುವಾಗಿ ಅದನ್ನು ಬಹುಮುಖಗಳಲ್ಲಿ ನಡೆಸಿ ಅದು ದೇಶವಿಡೀ ವ್ಯಾಪಿಸಿತು. ಅವರು ಮುಟ್ಟದ ಸಮಸ್ಯೆಯಿಲ್ಲ. ಶಿಕ್ಷಣ, ಜಾತಿ, ಆರ್ಥಿಕ, ಭಾಷೆ, ಸಾಹಿತ್ಯ, ಅಸ್ಪೃಶ್ಯತೆ ನಿವಾರಣೆ, ಮಹಿಳೋದ್ಧಾರ, ಕುಷ್ಠರೋಗ ನಿವಾರಣೆ, ಉಪ್ಪಿನ ತೆರಿಗೆ ರದ್ದು - ಹೀಗೆ ನಾವು ಏನನ್ನೂ ಹೆಸರಿಸಿದರೂ ಅಲ್ಲಿ ಗಾಂಧಿಯವರು ಇರುತ್ತಾರೆ. ಮಾತೃಭಾಷೆಗೆ ಆದ್ಯಸ್ಥಾನ ನೀಡುವುದಕ್ಕೂ

ಗಾಂಧೀಜಿಯವರು ಬೇಕಾಯಿತು. ಭಾಷಾ ತಳಹದಿಯಲ್ಲಿ ರಾಜ್ಯ ನಿರ್ಮಾಣಕ್ಕೂ ಗಾಂಧೀಜಿಯವರ ಒಪ್ಪಿಗೆ ದೊರಕಿತು. ಇಂದು ಭಾಷಾವಾರು ಪ್ರಾಂತ್ಯಗಳಾಗಿದ್ದರೂ ಅವರ ಆಶಯ ಈ 'ವಾರ್'ಗಳ ವಿರುದ್ಧವಾಗಿತ್ತೆಂಬುದನ್ನು ನಾವು ಗಮನಿಸಬೇಕು.

ನಮ್ಮಲ್ಲಿ ಹಿಂದಿ ಭಾಷೆ ಕಲಿಯುವುದೇ ನಮ್ಮ ರಾಷ್ಟ್ರೀಯತೆ ಮತ್ತು ದೇಶಭಕ್ತಿಗಳನ್ನು ವ್ಯಕ್ತಪಡಿಸಲಿಕ್ಕಿರುವ ದಾರಿ ಎನ್ನುವ ಕಾಲ ಒಂದಿತ್ತು. ಸಂಸ್ಕೃತವಿಲ್ಲದೆ ಯಾವ ಭಾಷೆಗೂ ಮೋಕ್ಷ ಕೊಡುವುದೊಂದನ್ನು ಬಿಟ್ಟು ಬೇರೆಲ್ಲ ಆರೈಕೆ ಮಾಡಿದವಳು, ತಾಯಿಗಿಂತಲೂ ಹೆಚ್ಚು ಎನ್ನುವವರಿದ್ದಾರೆ. ಇರಬಹುದು ; ಹೆತ್ತ ತಾಯಿ ಯಾರೆಂದು ತಿಳಿಯದವರಿಗೆ ದಾದಿಯೇ ತಾಯಿ. ಆದರೆ ಕನ್ನಡ, ಮಲೆಯಾಳ, ತುಳು, ತಮಿಳು, ತೆಲುಗುಗಳೆಂಬ ಅನ್ಯ ಜಾತಿಯ, ಸಂಸ್ಕೃತ ಭಾಷೆಯ ಮನೋಧರ್ಮವಿಲ್ಲದ ದ್ರಾವಿಡ ಭಾಷೆಗಳಿಗೂ ಸಂಸ್ಕೃತವೇ ತಾಯಿ ಎನ್ನುವ ಮಾತು ಅಲಂಕಾರದ ಮಾತೆಂದು ಹೇಳಬೇಕಾಗಿದೆ.

ತುಳುಭಾಷೆಯಲ್ಲಿ ಕಾವ್ಯ ನಿರ್ಮಾಣವಾದುದು ಸುಮಾರು ೫೦೦ ವರ್ಷಗಳಿಗಿಂತಲೂ ಹಿಂದೆ. ಇತ್ತೀಚೆಗೆ ದೊರೆತ ಮಹಾಭಾರತ ಎಂಬ ಕಾವ್ಯ ಪರಿಶೋಧನೆ ನಡೆಸಿದ ಪಂಡಿತ ವೆಂಕಟರಾಜ ಪುಣಿಂಚತ್ತಾಯರ ಮಾತು ಇದಕ್ಕೆ ಆಧಾರ. ಆನಂತರ ರಚನೆಗೊಂಡ ಮೂರು ಪ್ರಾಚೀನ ಕಾವ್ಯಗಳು ಈ ಹಿಂದೆಯೇ ಪ್ರಕಟಗೊಂಡಿವೆ. ಈ ನಾಲ್ಕು ಹಳೆಯ ರಚನೆಗಳನ್ನು ಹೊರತು ಪಡಿಸಿದರೆ ನಮಗೆ ದೊರಕುವ ತುಳು ಭಾಷೆ, ಸಾಹಿತ್ಯ ರಚನೆಯಾದುದು ಸುಮಾರು ನೂರು ನೂರೈವತ್ತು ವರ್ಷಗಳ ಹಿಂದೆ.

ಕ್ರೈಸ್ತ ಮಿಶನರಿ, ಪಾದ್ರಿಗಳು ತುಳುಭಾಷೆಗೆ ಎರಡು ಬಗೆಯ ಸೇವೆ ನಡೆಸಿದರು. ಒಂದನೆಯದಾಗಿ, ತುಳುನಾಡಿನ ಜನರನ್ನು ಮತಾಂತರಗೊಳಿಸಿ ತಮ್ಮ ಮತವನ್ನು ಉನ್ನತಿಗೇರಿಸಲಿಕ್ಕಾಗಿ ಬೈಬಲ್, ಸುವಾರ್ತೆಗಳು ಮುಂತಾದ ಧಾರ್ಮಿಕ ಕೃತಿಗಳನ್ನು ಸರಳ ತುಳುಭಾಷಗೆ ಅನುವಾದಿಸಿ ಮತ್ತು ಕ್ರೈಸ್ತ ಮತದ ನಂಬುಗೆಗನುಸಾರವಾಗಿ ದೇವರನ್ನು ಸ್ತುತಿಸುವ ಕವನಗಳನ್ನು ರಚಿಸಿ ಹಾಡುವುದು. ಎರಡನೆಯದಾಗಿ, ತುಳುಭಾಷೆಯ ಎಷ್ಟೆಷ್ಟೋ ಪಾಡ್ದನಗಳನ್ನು ಸಂಗ್ರಹಿಸಿ ಪ್ರಕಟಿಸುವುದು ಮತ್ತು ಜತೆಜತೆಯಲ್ಲೇ ತುಳು-ಇಂಗ್ಲೀಷ್ ಮತ್ತು ಇಂಗ್ಲೀಷ್-ತುಳು ನಿಘಂಟುಗಳ ತುಳು ವ್ಯಾಕರಣಗಳನ್ನು ಬರೆದು ಬೆಳಕಿಗೆ ತರುವುದು. ಅವರ ಎರಡನೆಯ ಕೆಲಸಕ್ಕಾಗಿ ಬ್ರಿಗೆಲ್, ಮೇನರ್ಸ್ ಮುಂತಾದ ಪ್ರಾತಃಸ್ಮರಣೀಯರಾದ ಹಲವರಿಗೆ ತುಳುವರೂ ತುಳು ಭಾಷಾ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ವಿದ್ವಾಂಸರೂ ಋಣಿಯಾಗಬೇಕಾಗಿದೆ. ಇದರ ಜತೆಜತೆಯಲ್ಲಿ ನಮಗೆ ಎಂದೆಂದೂ ಸರಿಪಡಿಸಲಾಗದ ನಷ್ಟವೂ ಆಗಿದೆ. ಅದೆಂದರೆ, ತಮ್ಮ ಸೌಲಭ್ಯಕ್ಕಾಗಿ ಕ್ರೈಸ್ತ ಮಿಶನರಿಗಳು ತುಳು ಭಾಷೆಯ ಪುಸ್ತಕಗಳನ್ನು ಕನ್ನಡ ಲಿಪಿಯಲ್ಲಿ ಬರೆದು ಪ್ರಕಟಿಸಿದರು. ಇದರಿಂದಾಗಿ ತೀರಾ ವಿರಳವಾಗಿ ಬಳಕೆಯಲ್ಲಿದ್ದ ತುಳುಲಿಪಿ ಮಠಗಳ ಅಂತರ್ ವಲಯದಲ್ಲಿ ಅಡಗಿಕೂತಿತು. ತುಳು ಭಾಷೆಗೆ ಲಿಪಿಯೇ ಇಲ್ಲ ಎಂಬ ಮಾತು ಪ್ರಚಲಿತವಾಯಿತು. ಮಲೆಯಾಳ ಲಿಪಿಗೆ ಮಾತೃ ಸ್ಥಾನದಲ್ಲಿದ್ದ ತುಳು ಲಿಪಿಯನ್ನು ಮತ್ತೆ ಊರ್ಜಿತಕ್ಕೆ ತರಬೇಕೇ ಎನ್ನುವುದು ಬೇರೆಯೇ ಮಾತು. ನಮ್ಮ ಮಕ್ಕಳಿಗೆ ತುಳುವನ್ನು ಕನ್ನಡ ಲಿಪಿಯಲ್ಲೇ ತಿಳಿಸಿದರೆ ಸಾಕು. ಈಗಾಗಲೇ ಪ್ರಕಟಗೊಂಡ ತುಳು ಪುಸ್ತಕಗಳೆಲ್ಲ ಕನ್ನಡ ಲಿಪಿಯಲ್ಲಿರುವುದರಿಂದ ಮತ್ತೆ ಹಳೆ ಲಿಪಿಯನ್ನು ಸಾರ್ವತ್ರಿಕವಾಗಿ ಬಳಕೆಗೆ ತರಬೇಕೆಂದಿಲ್ಲ. ಆದರೆ ಭಾಷಾಭಿಮಾನಿಗಳೆನಿಸಿರುವವರಿಗೆ ತಮ್ಮದೇ ಒಂದು ಲಿಪಿ ಬೇಕೆಂದಿದ್ದರೆ ಅದನ್ನು ಹುಡುಕಬೇಕಾಗಿಲ್ಲ. ಇರುವುದನ್ನು ಕಲಿತರೆ ಸಾಕು. ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಪ್ರಕಟಿಸುತ್ತಿರುವ ಮದಿಪು ತ್ರೈಮಾಸಿಕದ ಇತ್ತೀಚೆಗಿನ ಸಂಚಿಕೆಗಳಲ್ಲಿ ನಾವು ಆ ಲಿಪಿಯ ರೂಪವನ್ನು ಸಾದರಪಡಿಸಿದ್ದೇವೆ. ಆಸಕ್ತರು ಅದನ್ನು ನೋಡಬಹುದು.

ಈ ಪೀಠಿಕೆಯನ್ನು ನಾನು ಹೇಳಲು ಮುಖ್ಯ ಕಾರಣವೇನೆಂದರೆ ತುಳು ಸಾಹಿತ್ಯದಲ್ಲಿ ರಾಷ್ಟ್ರೀಯತೆಯನ್ನು ನಾವು ಹಳೆಯ ಕೃತಿಗಳಲ್ಲಿ ಕಾಣಲು ಸಾಧ್ಯವಿಲ್ಲ. ವಾಲ್ಮೀಕಿ ರಾಮಾಯಣದಲ್ಲಿ ಶ್ರೀ ರಾಮನು ಹೇಳಿದ ಜನನೀ ಜನ್ಮಭೂಮಿಶ್ಚ ಸ್ವರ್ಗಾದಪೀ ಗರೀಯಸಿ ಆವನ ರಾಷ್ಟ್ರಭಕ್ತಿಯನ್ನು ತಿಳಿಸುತ್ತದೆ ಎನ್ನುತ್ತಾರೆ. ಅದು ರಾಷ್ಟ್ರಭಕ್ತಿಗೆ ದ್ಯೋತಕವಲ್ಲ. ಅವನು ಹೇಳಿದ ಮಾತು ಅವನ ಕೋಸಲಕ್ಕೂ ಅವನ ತಾಯಿಗೂ ಸಂಬಂಧಿಸಿದ ಮಾತು. ಅವನಿಗೆ ಇಂದು ನಾವು ಹೇಳುತ್ತಿರುವ ರಾಷ್ಟ್ರ ಎಂಬ ಶಬ್ದದ ಕಲ್ಪನೆ

ಖಂಡಿತ ಇರಲಿಲ್ಲ. ಅವನ ಜನ್ಮ ಭೂಮಿ ಅವನಿಗೆ ಸ್ವರ್ಗ ಸಮಾನ ಎನ್ನುವಾಗ ನಮಗೂ ನಮ್ಮ ಜನ್ಮಭೂಮಿ ಸ್ವರ್ಗ ಸಮಾನ ಎಂಬ ಕಲ್ಪನೆ ಮೂಡಲಿ ಎನ್ನುವುದು ಕವಿಯ ಆಶಯವಿರಬೇಕು. ಹಾಗಾದರೆ ರಾಷ್ಟ್ರೀಯತೆ ಎಲ್ಲಿಂದ ತೊಡಗುತ್ತದೆ. ಎಲ್ಲಿ ನಿಲ್ಲುತ್ತದೆ ಎನ್ನುವುದೇ ಒಂದು ವಿವಾದಾಸ್ಪದ ವಿಷಯವಾಗುತ್ತದೆ. ನನ್ನ ಜನ್ಮಭೂಮಿ ಯಾವುದು? ಪೊಳಲಿಯೇ? ತುಳು ನಾಡೇ? ಕರ್ನಾಟಕವೇ ಅಥವಾ ಭಾರತವೇ? ಮೊದಲಿನ ಮೂರೂ ಸಂಕುಚಿತ ಎನ್ನುವವರಿದ್ದಾರೆ. ಆದರೆ ಭಾರತವನ್ನು ನನ್ನ ಜನ್ಮ ಭೂಮಿ ಎನ್ನುವುದು ವಿಶಾಲತೆಯ ಸಂಕೇತವಾದರೆ ಜಗತ್ತೇ ನನ್ನ ಜನ್ಮಭೂಮಿ ಎನ್ನಲಾಗದೇ?

ನಮ್ಮ ಜಾನಪದ ಕೃತಿಗಳಾದ ಪಾಡ್ದನಗಳನ್ನು ಆಧುನಿಕ ವಿದ್ವಾಂಸರು ಸಂಗ್ರಹಿಸಿ ಕನ್ನಡ ಅಥವಾ ಇಂಗ್ಲೀಷ್ ಭಾಷಾಂತರಗಳ ಸಹಿತ ಪ್ರಕಟಿಸಿ ಜಗತ್ತಿನ ಮುಂದಿರಿಸುವ ಸುತ್ತ್ಯ ಪ್ರಯತ್ನದಲ್ಲಿ ತೊಡಗಿರುತ್ತಾರೆ. ಸಿರಿ ಪಾಡ್ದನವು ಜಗತ್ತಿನ ಮಹಾಕಾವ್ಯಗಳ ಜತೆಯಲ್ಲಿ ಪರಿಗಣಿಸಲ್ಪಡಬೇಕಾದ ಕಾವ್ಯವೆಂದು ಪಾಶ್ಚಾತ್ಯವಿದ್ವಾಂಸರು ಪರಿಗಣಿಸಿರುತ್ತಾರೆ. ಸ್ತ್ರೀ ಸ್ವಾತಂತ್ರ್ಯದ ಪರಮಾವಧಿ ಈ ಮಹಾಕಾವ್ಯದಲ್ಲಿ ಸ್ಪಷ್ಟವಾಗಿದೆ. ಊಳಿಗಮಾನ್ಯ ಪದ್ಧತಿಯ ವಿರುದ್ಧ ಹೋರಾಟ ನಡೆಸಿದ ಕೋಟಿ ಚೆನ್ನಯರ ಪಾಡ್ದನದಲ್ಲೂ ಇಂಥ ಒಂದು ಮಹಾಕಾವ್ಯದ ಗೌರವ ಪಡೆಯುವ ಎಲ್ಲ ಸಲ್ಲಕ್ಷಣಗಳೂ ಇವೆ. ಆದರೆ ಕೋಟಿಚೆನ್ನಯದಲ್ಲಿರುವ ರಾಷ್ಟ್ರೀಯತೆ ಇವತ್ತಿನ ದೃಷ್ಟಿಯಿಂದ ನೋಡಿದರೆ ತೀರಾ ಕನಿಷ್ಠ. ತಮಗೆ ಉದಾರಾಶ್ರಯವಿತ್ತ ಎಣ್ಮೂರಿನ ರಕ್ಷಣೆಗಾಗಿ ಪಂಜದವರ ವಿರುದ್ಧ ಹೋರಾಡಿ ಆತ್ಮಾರ್ಪಣೆ ಮಾಡುವಷ್ಟಕ್ಕೆ ಇದು ಸೀಮಿತಗೊಂಡಿದೆ. ಅಲ್ಲದೆ ಈ ಎರಡೂ ಕಥಾನಕಗಳಲ್ಲಿ ಸ್ವಾಭಿಮಾನ ಸ್ವಾತಂತ್ರ್ಯಾಪೇಕ್ಷೆಗಳೇ ಮುಖ್ಯ ಹೊರತು ಸೀಮೆಯ ಅಭಿಮಾನವಲ್ಲ. ಕೋಟಿ ಚೆನ್ನಯದಲ್ಲಿ ಅವರ ನಿಜವಾದ ಸೀಮೆ ಯಾವುದೆಂಬ ಪ್ರಶ್ನೆ ಉದ್ಭವಿಸಲು ಅವಕಾಶವಿದೆ.

ಹಲವು ಪಾಶ್ಚಿಮಾತ್ಯಮಹಾಕಾವ್ಯಗಳಲ್ಲಿ ನಾಯಕನ ರಾಷ್ಟ್ರಾಭಿಮಾನವೇ ಮುಖ್ಯವಸ್ತುವಾದರೂ ಇಲಿಯಡ್‌ನಲ್ಲಿ ಆತ್ಮಾಭಿಮಾನವೇ ಅದಕ್ಕಿಂತ ಪ್ರಾಧಾನ್ಯ ಪಡೆದುದನ್ನು ಕಾಣುತ್ತೇವೆ. ಹೀಗಾಗಿ ರಾಷ್ಟ್ರೀಯತೆ ಎಂಬ ವಿಷಯ ತುಂಬ ಸಂದಿಗ್ಧವಾದುದು ಎಂದು ನನ್ನ ಅಭಿಪ್ರಾಯ.

ಆಧುನಿಕ ಕಾಲದಲ್ಲೂ ತುಳು ಭಾಷೆಯಲ್ಲಿ ಬಂದ ಮಹಾಕಾವ್ಯವೆಂದರೆ ಮಂದಾರ ರಾಮಾಯಣ. ಇದು ತುಳುನಾಡಿನ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಒಂದು ಕಾವ್ಯ.

ಪ್ರಚಲಿತವಾಗಿರುವ ಅರ್ಥದಲ್ಲಿ ಇಲ್ಲಿ ರಾಷ್ಟ್ರೀಯತೆಯನ್ನು ಹುಡುಕುವುದು ಸರಿಯಲ್ಲ. ಪುರಾಣ ಕಥೆ ಯಾವುದೇ ಆದರೂ ಅದರಲ್ಲಿ ನಮ್ಮ ಸಂಸ್ಕೃತಿಯು ಹೇಗೆ ಪ್ರತಿಬಿಂಬಿತವಾಗಿದೆಯೆಂದು ನೋಡಬಹುದೇ ಹೊರತು ರಾಷ್ಟ್ರೀಯತೆಯನ್ನು ಅಲ್ಲಿ ಕಾಣ ಹೊರಡುವುದು ಸರಿಯಾಗಲಿಕ್ಕಿಲ್ಲ. ಒಂದು ಶಬ್ದಬಂಧವನ್ನೋ ವಾಕ್ಯಗಳನ್ನೊ, ಉಪಮೆಗಳನ್ನೋ ಹೆಕ್ಕಿ ಇದು ಕವಿಯ ರಾಷ್ಟ್ರೀಯ ಪ್ರಜ್ಞೆಗೆ ಸಾಕ್ಷಿ ಎಂದು ಹೇಳುವುದು ನಾನು ಈಗಾಗಲೇ ಹೇಳಿದ ರಾಮಾಯಣದ ಜನನೀ ಜನ್ಮ ಭೂಮಿಶ್ಚ... ಎಂಬ ಮಾತಿನಲ್ಲಿ ರಾಷ್ಟ್ರೀಯತೆಯನ್ನು ಎತ್ತಿ ತೋರಿಸುವಂಥ ವ್ಯರ್ಥ ಪ್ರಯತ್ನವಾಗುತ್ತದೆ.

ತುಳು ಭಾಷೆಯ ಕವಿತೆಗಳಲ್ಲಿ ರಾಷ್ಟ್ರೀಯತೆ ಹೇಗಿದೆ ಎನ್ನುವುದನ್ನು ಕೆಲವು ಮಾತುಗಳಲ್ಲಿ ಹೇಳುತ್ತೇನೆ.

೧೯೩೦ ರ ದಶಕದ ಆಸುಪಾಸಿನಲ್ಲಿ ರಾಷ್ಟ್ರಾದ್ಯಂತ ನಡೆದ ಸ್ವಾತಂತ್ರ್ಯಸಂಗ್ರಾಮದಲ್ಲಿ ತುಳುನಾಡಿಗರೂ ಉತ್ಸಾಹದಿಂದ ಪಾಲ್ಗೊಂಡರು. ಅವರಲ್ಲಿ ಕೆಲವರು ಪ್ರತಿಭಾವಂತರು. ದಿ.ಎಸ್.ಯು. ಪಣಿಯಾಡಿಯವರೆಂಬ ವಿದ್ವಾಂಸರು ತುಳು ಸಾಹಿತ್ಯದ ಮೂಲಕ ರಾಷ್ಟ್ರೀಯತೆಯನ್ನು ಪ್ರಚಾರಿಸುವ ಕಲ್ಪನೆ ಕಂಡವರು. ಆದರೆ ಅವರಿಗೆ ರಾಷ್ಟ್ರೀಯತೆಯ ಪ್ರಚಾರ ಆನುಷಂಗಿಕ. ತುಳುಭಾಷಾ ಜನರ ಒಗ್ಗಟ್ಟು ಹೆಗ್ಗಡೆ, ಎಸ್.ಎಸ್.ಕಿಲ್ಲೆ ಮುಂತಾದವರನ್ನು ಹುರಿದುಂಬಿಸಿ ಕೃತಿ ರಚನೆ ಮಾಡುವಂತೆ ಪ್ರೋತ್ಸಾಹಿಸಿದರು.

ಜೈಲಿಗೆ ಹೋಗದಿದ್ದರೂ ಸ್ವಾತಂತ್ರ್ಯ ಚಳುವಳಿಯಲ್ಲಿ ತೀರಾ ಆಸಕ್ತರಾಗಿದ್ದ ಬಡಕೆಬೈಲು ಪರಮೇಶ್ವರಯ್ಯ, ಹೊಗೆ ಬಜಾರ್ ಮೋನಪ್ಪ ತಿಂಗಳಾಯ, ಸತ್ಯಮಿತ್ರ ಬಂಗೇರ, ಆಗ ತರುಣರಾಗಿದ್ದ ಎಂ.ವಿ.ಹೆಗ್ಡೆ, ಪಾ.ವೆಂ. ಆಚಾರ್ಯ

ಮುಂತಾದವರೆಲ್ಲ ಈ ಚಳವಳಿಯಲ್ಲಿ ಪಾಲ್ಗೊಂಡರು. ಆ ಕಾಲದಲ್ಲಿ ಬಂದ ಸಾಹಿತ್ಯ ಕೃತಿಗಳಲ್ಲಿ ರಾಷ್ಟ್ರೀಯತೆಯನ್ನೂ ಸಾಮಾಜಿಕ ಅಭಿವೃದ್ಧಿಯ ಕಳಕಳಿಯನ್ನೂ ನಾವು ಕಾಣಬಹುದು.

ಬಡಕಬೈಲು ಪರಮೇಶ್ವರಯ್ಯನವರು ಬರೆದ ಕೃಷ್ಣ ಸಂಧಾನದ ತುಳು ಭಾಷಾಂತರದ ಮುನ್ನುಡಿಯ ಗದ್ಯವಾಗಲೀ ಪೊಳಲಿ ಶೀನಪ್ಪ ಹೆಗ್ಗಡೆಯವರು ಮಿತ್ರನಾರಾಯಣ ಕತೆ ಎಂಬ ಕಾದಂಬರಿಗೂ, ಎಸ್.ಎಸ್.ಕಿಲ್ಲೆಯವರು ಕಾನಿಗೆ ಎಂಬ ಕವಿತಾ ಗುಚ್ಛಕ್ಕೆ ಬರೆದ ಆರಂಭದ ಮಾತುಗಳಾಗಲೀ, ಕವಿತೆಗಳಲ್ಲವಾದರೂ ಪದ್ಯಗಂಧಿಯಾದ ಗದ್ಯ.

ಸ್ವಾತಂತ್ರ್ಯಾನಂತರ ರಾಷ್ಟ್ರೀಯತೆಯ ಪ್ರತಿಪಾದನೆಯಿರುವ ಕವಿತೆಗಳನ್ನು ಅಲ್ಲಲ್ಲಿ ತುಳುನಾಡ ವರ್ಣನೆಗೆ ಸೀಮಿತವಾಗಿರುವಂತೆ ಕಾಣುತ್ತದೆ. ಎರಡು ವರ್ಷಗಳ ಹಿಂದೆ ದೇಶವು ಸ್ವಾತಂತ್ರ್ಯದ ಸುವರ್ಣ ಮಹೋತ್ಸವ ಆಚರಿಸಿದಾಗ ಕೆಲವು ಕವಿಗಳಿಗೆ 'ಸ್ಫೂರ್ತಿ ಬಂತು'. ಇತ್ತೀಚೆಗೆ ನಡೆದ ಕಾರ್ಗಿಲ್ ಕದನದ ಸಂದರ್ಭದಲ್ಲಿ ಹಲವು ಕವಿಗಳು ರಕ್ತವನ್ನು ಮಸಿ ಮಾಡಿ ಕವಿತೆ ಬರೆದರು. ಇದು ಎಲ್ಲ ಭಾರತೀಯ ಕವಿಗಳೂ ಮಾಡಿದ ಕಾರ್ಯ ಎಂದು ಭಾವಿಸುತ್ತೇನೆ.

ನಾನು ಸಾಮಾನ್ಯವಾಗಿ ಗುರುತಿಸಿಕೊಂಡಂತೆ ಸ್ವಾತಂತ್ರ್ಯ ಬಂದು ಹತ್ತಿಪ್ಪತ್ತು ವರ್ಷಗಳಲಿ ಸ್ವರ್ಗವೇ ಧರೆಗಿಳಿಯುತ್ತದೆ ಎನ್ನುವ ಭ್ರಮೆ ನಿರಸನಗೊಂಡಿತು. ಪ್ರಜೆಗಳು ಸುಖಾಕಾಂಕ್ಷಿಗಳಾಗಿ ಹೊಣೆಯನ್ನರಿಯದೆ ಇದ್ದರೆ ಆಳುವವರು ಸ್ವಾರ್ಥಿಗಳಾಗಿ ತಮ್ಮ ಕುಲ ಬೆಳೆಸತೊಡಗಿದರೆ ಏನಾಗುತ್ತದೆ ಎನ್ನುವುದನ್ನು ಸ್ವತಂತ್ರ ಭಾರತದಲ್ಲಿ ಕಾಣುತ್ತಿದ್ದೇವೆ. ಇದು ಕವಿಗಳ ಮನಸ್ಸನ್ನೂ ತಟ್ಟಿತು. ಹೀಗಾಗಿ ಎಷ್ಟೆಷ್ಟೋ ರಾಷ್ಟ್ರೀಯ ವಿಚಾರದ ಕವಿತೆಗಳು ವ್ಯಂಗ್ಯವನ್ನೇ ಆತ್ಮವನ್ನಾಗಿ ಮಾಡಿಕೊಂಡುದನ್ನು ನಾವು ಇಂದು ಕಾಣುತ್ತೇವೆ.

ನನ್ನ ಈ ಪ್ರಬಂಧದಲ್ಲಿ ರಾಷ್ಟ್ರೀಯತೆ ಎನ್ನುವ ಮಿತಿಯಲ್ಲಿ ತುಳುನಾಡು ಕರ್ನಾಟಕ ದೇಶ ಮತ್ತು ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯಲ್ಲಿ ಬಂದ ಸಾಮಾಜಿಕ ಸುಧಾರಣೆಗಳಿಗೆ ಸಂಬಂಧಿಸಿದಂತೆ ಬಂದ ಕೆಲವು ಕವಿತೆಗಳನ್ನು ಪರಿಚಯಿಸುತ್ತೇನೆ.

ನವೋದಯ ಕಾಲದ ತುಳುಸಾಹಿತ್ಯ ಚಳವಳಿಯಲ್ಲಿ ಪಾಡ್ದನದ ಆಧಾರದಿಂದ ರಚಿತವಾಗಿ ಪ್ರಕಟಗೊಂಡ ಖಂಡ ಕಾವ್ಯ ತುಳುನಾಡ ಬಲಿಯೇಂದ್ರ ಪುರಾಣದ ವಾಮನಾವತಾರದ ಕಥೆ ಇದಕ್ಕೆ ಮೂಲ. ದಿ.ಎನ್.ಎ. ಶೀನಪ್ಪ ಹೆಗ್ಡೆಯವರು ಇದನ್ನು ಸುಂದರವಾಗಿ ಹೆಣೆದಿದ್ದಾರೆ. ಇಲ್ಲಿರುವ ದೈತ್ಯದಾನವರಿಗರಸನಾದ ಬಲಿ ತುಳುನಾಡಿನ ರಾಜ. ತುಳುನಾಡಿನ ಧಾರ್ಮಿಕ ವೈಶಿಷ್ಟ್ಯ. ಸಾಂಸ್ಕೃತಿಕ ವೈಶಿಷ್ಟ್ಯಗಳನ್ನೂ ಕಲಾ ಕೌಶಲವನ್ನೂ ಬಲೀಂದ್ರನ ರಾಷ್ಟ್ರ (ಇಲ್ಲಿ ರಾಷ್ಟ್ರ ಎಂದರೆ ಅವನು ಅಳುತ್ತಿದ್ದ ರಾಜ್ಯ ಎಂದು ಅರ್ಥ) ಪ್ರೇಮವನ್ನೂ ಅತಿಶಯವಾಗಿ ವರ್ಣಿಸಲಾಗಿದೆ. ತನ್ನ ರಾಜ್ಯವನ್ನು ಕಲಿ ಪ್ರವೇಶ ಮಾಡಿದಾಗ ಅವನನ್ನು ಕಟ್ಟಿ ಹಾಕಿ ಬಂಧಿಸಿ ದೇವತೆಗಳನ್ನು ಗಡಿಪಾರು ಮಾಡಿದ ವೀರನೇ ಬಲಿ ಚಕ್ರವರ್ತಿ. ವಾಮನನು ತ್ರಿವಿಕ್ರಮನಾಗಿ ಬೆಳೆದು ಭೂಮಿ ಪಾತಾಳಗಳನ್ನು ಅಳೆದು ಮೂರನೆಯ ಪಾದವನ್ನಿಡಲು ಜಾಗವಿಲ್ಲದಾಗ ಮಾತಿಗೆ ತಪ್ಪಿದ ಭ್ರಷ್ಟನೆಂದು ಬಲಿಯನ್ನು ಅಪಮಾನಿಸುತ್ತಾನೆ. ಆಗ ಬಲಿಯು, ಹೇಳಿದ ಮಾತಿಗೆ ಸತ್ಯಕ್ಕೆ ದಾರಿ ಎದೆಯಲ್ಲಿ ಕೊಡುವೆನೆಂದು ಅಂಗಾತ ಮಲಗಿ ತನ್ನ ಎದೆಯಿಂದ ಒಂದು ಹೆಜ್ಜೆ ಸ್ಥಳ ಕೊಳ್ಳಿರೆಂದು ಪ್ರಾರ್ಥಿಸುತ್ತಾನೆ.

ನಾರಾಯಣ ದೇವರು ಅವನನ್ನು ಪಾತಾಳ ಲೋಕದ ರಾಜ್ಯಭಾರ ನೋಡೆಂದು ಹೇಳುವಾಗ ಅವನು ತನ್ನ ರಾಜ್ಯವನ್ನು ದೇವರೇ ಬಂದು ಗಡಿ ರಕ್ಷಣೆ ಮಾಡಲಿ, ಬಾಗಿಲು ಕಾದು ಉರಿಸಿರಿಗೆ ತಾನಿದ್ದೇನೆಂದು ನಂಬುಗೆ ನೀಡಬೇಕೆಂದು ಬೇಡಿಕೊಂಡನಂತೆ. ಆದರೆ ಅವನಿಗೆ ತನ್ನ ರಾಜ್ಯದ ಮೇಲಿನ ಪ್ರೀತಿ ಇನ್ನೂ ಅಳಿಯಲಿಲ್ಲ. ಆದುದರಿಂದ ತಾನಿನ್ನು ಈ ರಾಜ್ಯವನ್ನು ನೋಡುವುದು ಯಾವಾಗ ಎಂದು ಕಣ್ಣಿನಿಂದ ನೀರಿಳಿಸಿ ಕೆಳಗೆ ನೋಡುತ್ತ ನಿಂತನಂತೆ. ಇದರ ಪರಿಣಾಮವಾಗಿ ವರ್ಷಕ್ಕೊಮ್ಮೆ ಬಂದು ರಾಜ್ಯ ನೋಡಿಕೊಂಡು ಹೋಗಲು ಅವನಿಗೆ ಅಪ್ಪಣೆ ಕೊಡುತ್ತಾರೆ ನಾರಾಯಣ ದೇವರು.

೧೯೨೯ನೇ ಇಸವಿಯಲ್ಲಿ ಪ್ರಕಟಗೊಂಡ ತುಳುವ ಮಹಾ ಸಭೆತ ವಾರ್ಷಿಕೊ ಎನ್ನುವ ಪುಸ್ತಕದಲ್ಲಿ ಕೊರಡ್ಕಲ್ ಶ್ರೀನಿವಾಸ ರಾವ್ ಮತ್ತು ಬಿ. ಮೋಹನಪ್ಪ ತಿಂಗಳಾಯರು ಬರೆದ ತುಳು ನಾಡಗೀತೆ ಎಂಬ ಹೆಸರಿನ ಎರಡು ಕವಿತೆಗಳಿವೆ.

ಶ್ರೀ ಕೊರಡ್ಕಲ್ ಶ್ರೀನಿವಾಸ ರಾಯರು ತುಳುವ ತಾಯಿಯ ಮಕ್ಕಳ ಕುರಿತು ಅಭಿಮಾನದಿಂದ 'ಛಪ್ಪನ್ನ ದೇಶೋಳೆಡೆ ಬೊಮ್ಮಣೊನಿ ಬೋಧಿತದ್ ಧರ್ಮ ರಕ್ಷಣೆ ಮಳಿ ಮಹಾತ್ಮರೆ' ಎಂದು ಹೊಗಳುತ್ತಾರೆ.

ಬೀರೆರಪ್ಪೆನೊ ಜೋಕುಳೆನ್‌ಪಿ ಮದಹದಮೀರ್ದ್ ಅಮಲೇರ್ದ್ ತರೆಗೀರ್ದ್ ನೆದ್ರೆಬೂಳ್ಡೊ ಎಂದು ಈ ಕವಿತೆಯಲ್ಲಿರುವುದು ತುಳುವರಿಗೆಂದಿದ್ದರೂ ಆ ಕಾಲದಲ್ಲಿ ಅದು ಇಡೀ ದೇಶಕ್ಕೆ ಅನ್ವಯವಾಗುವಂತಿತ್ತು.

ಮೋಹನಪ್ಪ ತಿಂಗಳಾಯರು ಬರೆದ ಗೀತೆ ಜಯ ಜಯ ಜಯ ತುಳುತ ಸೀಮೆ ಅಪ್ಪೆ ನಾಡೆಗೆ ಜಯತ ನಂಕ್ ಜನ್ಮ ಕೊರ್ತಿ ಪುಣ್ಯಭೂಮಿಗೆ ಎಂದಿದೆ. ಇದರಲ್ಲೂ ನಾವು ಜನ್ಮಭೂಮಿಯ ಅಗ್ಗಳಿಕೆಯನ್ನು ಕವಿ ಹೊಗಳಿದ ರೀತಿಯಲ್ಲಿ ಕಾಣಬಹುದು.

ಶ್ರೀ ಉಡುಪಿ ಶ್ರೀಕಾಂತಾಚಾರ್ಯರು ಬರೆದ ತುಳುವಪ್ಪೆ ಕವಿತೆಯಲ್ಲಿ 'ನಿನಕಾರ ಧೂಳ್‌ಡೆ ಕುಣಿ ತೊಂದುಯಿಪ್ಪಿ ಸುಖ ಏನಿಗೆಲ ಕೊಳ್ಳ ತುಳುತಪ್ಪೆ ದೇವಿ ಎಂದು ಪ್ರಾರ್ಥಿಸಿ ಜನ್ಮ ಜನ್ಮದಲ್ಲು ನಿನ್ನದುರದಿ ಜನಿಸಬೇಕೆಂಬ ಗೋವಿಂದ ಪೈ ಯವರು ಆಶಯಕ್ಕೆ ಸಮನಾದ ಆಶಯ ವ್ಯಕ್ತಪಡಿಸಿರುತ್ತಾರೆ.

ಭರತಮಾತೆಯಂತೆಯೇ ತುಳುವರಿಗೆ ತುಳುಮಾತೆಯ ಕಲ್ಪನೆ ಹಿಂದಿನ ತಲೆಮಾರಿನ ಕವಿಗಳಿಗೆ ಮುಖ್ಯವಾಗಿತ್ತು. ಕೆ.ಹೊನ್ನಯ್ಯ ಶೆಟ್ಟರು ಬರೆದ ತುಳುವಪ್ಪೆನ ಪಾತೆರ ಎಂಬ ಕವಿತೆಯಲ್ಲಿ 'ತುಳುವಪ್ಪೆ ತುಳುವಪ್ಪೆ ಯೇಪ ಯಿತರೆದೆರ್ಪುವ ಯೇಪ ಲೋಕದ ಮಾತಮಂದಿಗ್ ನಿನ್ನ ಮಹಿಮೆನೆ ತೆರಿಪವ' ಎಂದು ತುಳು ಬಾಲೆ ಪ್ರಶ್ನಿಸುತ್ತದೆ.

ಈ ಕವಿತೆಯನ್ನು ಕೇಳುವ ಪ್ರಶ್ನೆಗಳು ಸ್ವಾತಂತ್ರ್ಯ ಹೋರಾಟದ ಆ ದಿನಗಳಲ್ಲಿ ಭರತಮಾತೆಗೆ ಕೇಳುವ ಪ್ರಶ್ನೆಗಳೂ ಆಗಿದ್ದು, ಆ ತಾಯಿಯು ಕೊಡುವ ಉತ್ತರವೂ ಭಾರತೀಯರನ್ನು ಎಚ್ಚರಿಸುವಂತೆ ಇತ್ತು. ತುಳು ಬಾಲೆ ತುಳು ಬಾಲೆ ಯಾನ್ ದಿನಿ ಪನ್ಕೆ ಬಲಇಚ್ಚಿ ಒಲವಿಚ್ಚಿ ಯೆನ ನೆಂಪು ನಿಕ್ಲೆಗಿಚ್ಚಿ ಎಂದು ಹೇಳುತ್ತಾಳೆ.

ಒಂಜಿ ಬಂಜಿಡ್ ಬತ್ತಿ ಬಾಳುಳು ಇನ್ಪಿ ಬಾವೊನು ಮದಪಡ್
ಒಂಜಿ ಅವಂದೆ ಭಿನ್ನ ಬಾವೊಡು ಜಾತಿ ಭೇದೊಡು ತೆಟಿಯರ್
ಪರದೇಶಿಳೆಗೆ ಆಳಾಯರೆ ಪರಭಾಷೆಲೆಗೆ ಮರ್ಲಾಯರ್
ಪರವೂರ ವಸ್ತುಗಳಿಗೆ ಶಿಸ್ತುಳೆಗೆ ಬಲಿ ಬೂರ್ಯರ್

ಎಂದು ಹೇಳುವ ಮಾತುಗಳನ್ನು ತುಳುಮಾತ ಹೇಳಿದರೂ ಒಂದೇ ಭಾರತ ಮಾತೆ ಹೇಳಿದರೂ ಒಂದೇ. ಬರೆದ ಕವಿಯ ರಾಷ್ಟ್ರೀಯತೆಯನ್ನು ಇಲ್ಲಿ ವ್ಯಕ್ತಪಡಿಸಿದ್ದು ಸ್ಪಷ್ಟವಾಗಿ ಗೋಚರಿಸುತ್ತದೆ.

೧೯೩೭ರಲ್ಲಿ ತುಳುವ ಸಾಹಿತ್ಯ ಮಾಲೆಯಲ್ಲಿ ಪ್ರಕಟಗೊಂಡ ಕಾನಿಕ್ ಎಂಬ ಭಾವಗೀತೆಗಳ ಸಂಕಲನದ ಕವಿ ಎಸ್.ಎಸ್. ಕಿಲ್ಲೆಯವರು ಮುಂದೆ ದೇಶಭಕ್ತನೆಂಬ ಅನ್ವರ್ಥನಾಮ ಗಳಿಸಿದ ಅವರ ಕವಿತೆಗಳಿಗೆ ಮೂಲಪ್ರೇರಣೆಯೇ ದೇಶಪ್ರೇಮ.

ಈ ಕೃತಿಯ ಆರಂಭದಲ್ಲೇ ತುಳು ಕಡಲೆ ಮೀಮೊಂದು ದೆರ್ತಿತರೆ ತೋಜೊನುನ ತುಳು ಮಣ್ಣಡಾಪಿ ಪಲತಿನ್ಪಿನಿ ನಮಗೆ ಯಾನೆ ಎನ್ನುವುದರಲ್ಲಿ ಕವಿಗೆ ಜನ್ಮಭೂಮಿಯ ಬಗೆಗೆ ಇರುವ ಭಾವನೆ ಸ್ಪಷ್ಟಗೊಳ್ಳುತ್ತದೆ.

ಇನ್ನೊಂದು ಕವಿತೆಯಲ್ಲಿ ಬಾಂಧವರೆ ಭೇದ ಬುಡಿ ಸಮಸೋಟ ದೀದ್ ನಮ ಹಿಂದೀಯ ಬಂಧು ಭಾವೋನೇ ನಿತ್ಯ ಕಾತ್‌ದೆ ಎಂಬ ಮಾತುಗಳಿಂದ ಅವರಿಗಿರುವ ರಾಷ್ಟ್ರೀಯತೆಯ ಕಲ್ಪನೆಯನ್ನು ಎತ್ತಿ ಹೇಳಿದ್ದಾರೆ.

ತುಳುನಾಡ ರಾಣಿ ಎನ್ನುವ ಕವಿತೆಯಲ್ಲಿ ತುಳು ರಾಣಿಯ ಸ್ತುತಿ ಮಾಡುತ್ತ ಹೇಳಿದ ಈ ಕೆಳಗಿನ ಎರಡು ಕವಿತೆಗಳಲ್ಲಿ ಉಜ್ವಲ ರಾಷ್ಟ್ರೀಯತೆ ಪ್ರತಿಫಲನಗೊಳ್ಳುವುದನ್ನು ನೋಡಬಹುದು :

ಬಾಲೆಲೆಂಕುಲೆ ತುಳು, ಕನ್ನಡ ಮರಾಟಿ ಮಲೆ
ಯಾಲಿ ಕೊಂಕಣಿ, ಹಿಂದಿ, ಪಾತೆರದ ಮಾಲೆ
ಸಾಲಾಯಿ ಹಿಂದುಲೆನ ಮಹಮದೀ ಕ್ರಿಸ್ತ ಜನ
ಮೂಲೊಂಜೆ ನೇರೊನುನು ಕೊರು ಸೇವೆ ದಾನ.

ಪರವೇಷ ಪರದಾಸ್ಯ ಪರಬಾಸೆ ಪಾತೆರೊನು
ಪಿರಗಿಡದೆ ನಿಜ ಬಲೊಟು ಮಿಥ್ಯ ಪಶುಬಲೊನು
ತೊರಿತೊಂದು ಸತ್ಯೊಡೇ ಸ್ವತಂತ್ರ್ಯ ಸಮದರ್ಶಿ
ತರೆಯೋರ್ದ್ ತೋಜಾವು ಮಂಗಳದ ಕೀರ್ತಿ.

ಇಲ್ಲಿ ವರ್ಣಿತಳಾದ ತುಳುನಾಡ ರಾಣಿ ಭಾರತ ಮಾತೆಯಲ್ಲದೆ ಇನ್ನಾರು?

ತಲನಾಡೆ ಎನ್ನುವ ಇನ್ನೊಂದು ಕವಿತೆ ಮೇಲ್ಪದರದಲ್ಲಿ ತುಳು ನಾಡಿನ ವೈಭವ ಸಾರಿದರೂ ಇದರ ತಳಹದಿಯು ರಾಷ್ಟ್ರೀಯತೆಯ ಕಲ್ಪನೆಯಾಗಿದೆ.

ತಿಂದಿ ನಿನ ನುಪ್ಪುಪ್ಪಗುರ್ರೊನು ಮಂದ ಬುದ್ದಿಡೆ ಮದತಿನ
ಕುಂದುಕೊರತೆನೆ ಕಳೆದ ದುಂಬುದ ಸಂದ್ ಸಾವುಗುದರ್ತಿನ
ಗೆಂದಿ ಕತ್ತಿನ ಪತೆದ ಈ ಗೆಲವಂದ ಮಾಲೆನ ಪಾಡುವ
ಗಂದ ಪುರ್ರೊಡು ತರೆನೆ ಪೂಜಿಲ ಬಂಧನದ ಬಲಬಗ್ಗವ

ಮಂದಿ ಮಾತೆರೆ ಕೂಡುವ
ದೊಂದಿ ಮಂಗಳ ನಾಡೆದ
ಚಂದ ಈ ತಲನಾಡದ.

ತಲನಾಡ್‌ದ ಎಂಬುದನ್ನು ಬದಲಿಸಿ ಭಾರತ ದೇಶದ ಎಂದು ಬದಲಿಸಿದರೆ ಇದರಲ್ಲಿ ರಾಷ್ಟ್ರೀಯತೆ ಎದ್ದು ಕಾಣುತ್ತದೆ.

ಇಷ್ಟು ಕವಿತೆಗಳಿಗೆ ಮಂಗಳವೆನ್ನುವಂತೆ ೧೨ ದ್ವಿಪದಿಗಳ ಭಾರತಾಂಬೆ ಎಂಬ ಕವಿತೆ ಈ ಸಂಕಲನದಲ್ಲಿ ಕವಿಯ ರಾಷ್ಟ್ರಭಕ್ತಿಯನ್ನು ನಿಚ್ಚಳವಾಗಿ ಪ್ರಕಟಿಸುತ್ತದೆ.

ಆದಿಭೂಮಿ ಅಯ್ಯದಾಂತಿ ನಿನ್ನ ಪೂರ್ವ ಗಾಬುದ
ತಾದಿಕಟ್‌ದ ಪೊರ್ಲು ತರೆನ್ ತಿರ್ತ್ ದಾಯೆ ಪಾಡ್‌ದ?
ದೇವಿ ನಿನ್ನ ನೇವೆಗಾದ್ ಪಂತ ಪಾಡ್‌ದೆಂಕುಲು
ಸಾವು ನೋವು ಬರ್ಪಿ ಬಲಿಕ್ ಬತ್ತ್ ತೊಲ ಜೋಕುಲು.

ಈ ಕವಿತೆಗಳನ್ನು ರಚಿಸಿದ ಹಿನ್ನೆಲೆಯನ್ನು ಭಾಮಿನೀ ಷಟ್ಪದಿಯಲ್ಲಿ ಹೀಗೆಂದು ಬರೆದು ಕಿಲ್ಲೆಯವರು ಗಾಂಧೀಜಿಯ ಪ್ರಭಾವವನ್ನು ಒಂದು ಮಾತಿನಲ್ಲಿ ತಿಳಿಸಿದ್ದಾರೆ.

ಭಾರತಾಂಬೆನ್ ತರ್ತಿಪರಸರ -
ಕಾರಬಲತಗ್ಗಾದ್ ಮೆರೆಯಿನ
ಧೀರ ಗಾಂಧಿ ಮಹಾತ್ಮೆ ನಂಬುದು ಸೇರ್ತ್ ದುಂಬೆತುದು
ಸೇರಿ ಭಾಗ್ಯದ ಬಂಧನದ ತಿವೆ
ಲ್ಲೂರು ಜೈಲಿಡ್ ಮೆರೆಯಿ ಗುಣರಸ
ಸೇರಿ ಚಂದ್ರಡ್ ಕ್ರಿಸ್ತಶಕ ಕಡೆತಿಂಗೊಳುದ ಕೆಲಸ

ಕನ್ನಡದ ಹಿರಿಯ ಕವಿಗಳಾದ ಕಯ್ಯಾರ ಕಿಂಞ್ಞಣ್ಣ ರೈಯವರು ಸ್ವಾತಂತ್ರ್ಯಾಂದೋಲನದ ಮತ್ತು ತುಳು ಸಾಹಿತ್ಯ ಚಳುವಳಿಯ ಹಿನ್ನಲೆಯಲ್ಲಿ ಕೆಲವು ತುಳು ಕವಿತೆಗಳನ್ನು ಬರೆದಿದ್ದರು. ಅವುಗಳನ್ನು ಒಟ್ಟುಗೂಡಿಸಿ ೧೯೪೮ರಲ್ಲಿ ಎನ್ನಪ್ಪೆ ತುಳುವಪ್ಪೆ ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ.

ಮೊದಲನೆಯ ಕವಿತೆ ಲೆಪ್ಪುನ್ಯೇರ ಸ್ವಾತಂತ್ರ್ಯ ಹೋರಾಟದ ಕರೆಗೆ ಕೊಡುವ ಸಂದೇಶ ಸಾರುತ್ತದೆ :

ಜೆತ್ತಿದೆತ್ತಿ ಕರಿಕಾಲೊಡು ಇಲ್ಲಿದುಬಯಿ ನುರ್ಕ್ಯೆರ್
ಕಣ್ಣ ಬುಡುದು ಸರಿತೂವೊಡು ನಮ ಮಣ್ಣ್‌ಡ್ ಸೊರ್ಕ್ಯೆರ್
ನನಜೆಪ್ಪಡೆ ನಿದ್ರೆಡೆ ಎಚ್ಚರಿಗೆನೆ ಉಪ್ಪಡೆ.

ತುಳುಗೀತೆಯಲ್ಲಿ ತುಳು ತುದೆತ ಮೀನಾಡ್ ತುಳು ಕಡಲ್ ನೀಂದೊನುವೆ ಎನ್ನುವ ಕವಿ ತುಳುರಾಣಿ ಮಾರಾಣಿ ಭಾಗ್ಯೋದಾ ಭೂರಾಣಿ ಗೇರೊನಡೆ ಶುಭ್ರ ಕೀರ್ತಿ ಎಂದು ಹಾರೈಸುತ್ತಾರೆ. ಇಲ್ಲಿರುವ ತುಳುರಾಣಿ (೧೯೩೦) ಭಾರತ ಮಾತೆಯೂ ಹೌದು ಎಂದು ಮನವರಿಕೆಯಾಗುತ್ತದೆ.

೧೯೩೫ರಲ್ಲಿ ಬರೆದ ವಂದನೆ ಎಂಬ ಕವಿತೆಯಲ್ಲಿ ಎನ್ನ ತುಳುನಾಡಆಡ್‌ಲ ಎನ್ನ ತುಳು ಬಾಸೆಡ್‌ಲ ಎನ್ನ ಪಿರ್ತಿನ್ ಬರೆದ ಬರೆದಿಂತ ತೆರಿಪಾದೆ ಎಂದು ತುಳುವ ಸಾಹಿತ್ಯ ಸಾಮ್ರಾಜ್ಯಕ್ಕೆ ವಂದನೆಯ ಮೊದಲ ಸೇವೆ ಒಪ್ಪಿಸಿದ ಕವಿ ತನ್ನ ಮುಂದಿನ ವಂದನೆಯನ್ನು -

ಏರೇರ್ ಶ್ರೀ ಭಾರತಾಂಬೆ ಬಣ್ಣೆನುನುಗಿರೆದ
ಸೇರ್‌ದೆರ್‌ೊ ಸ್ವಾತಂತ್ರ್ಯದಾ ಭಾಗ್ಯಬಂಧನೊಗು
ಧೀರ ಗಾಂಧಿ ಮಹಾತ್ಮ ಪೂಜ್ಯ ಮೋಹನದಾಸ
ಸತ್ಯ ಶಕ್ತಿನೆ ನಂಬುದು
ಏರೇರ್ ನಮ ರಾಷ್ಟ್ರದಾ ಪತಾಕೆನ್ ಪತ್‌ದ್
ನೂರೊಂದು ನುರುಕೊಂದು ಕಡಲುಪ್ಪು ಕಡೆವೊಂದು
ಸಾರ್ಯೆರೋ ಶಾಂತ್ಯಮೃತ ಭಾರತೇಯೆರೆಗಕುಲೆ -
ಗಾವೀರೆರೆಗೆ ವಂದನೆ - ಎಂದು ರಾಷ್ಟ್ರ ಭಕ್ತಿಯನ್ನು ಮೆರೆದಿದ್ದಾರೆ.

ತುಳುವಪ್ಪೆಡ ಬಿಸುಕಡಿ, ತುಳುವೆರೆ ಮುಂತಾದ ಕವಿತೆಗಳು ಕೂಡಾ ಜನ್ಮಭೂಮಿಯ ಬಗೆಗಿರುವ ಭಕ್ತಿಯನ್ನು ಬಿತ್ತರಿಸುತ್ತದೆ.

ಪರಬನ ಮೋಕೆ ಎಂಬ ಕವನ ಸಂಕಲನದಲ್ಲಿ, ರಸಿಕ ಪುತ್ತಿಗೆಯವರು ಅರತಿ ಎಂಬ ಕವಿತೆಯಲ್ಲಿ ಸರ್ವಸಮತೆಯನ್ನು ಸಾರಿದ್ದಾರೆ :

ಭಾರತ ಮಾತೆನ ಪಾಕ ಜೋಕುಲೆಡ್ ತುಳುಮಾಡ್‌ಲ ಒರುತೀ
ಆ ನಾಡ್‌ದ ಸಿರಿ ದೇವಿನ ಮೋನೆಗೆ ಮೋಕೆಡೆತ್ತುವೆ ಆರತಿ.

ಆಧುನಿಕ ತುಳು ಸಾಹಿತ್ಯದ ಮಹಾಕವಿ ಮಂದಾರ ಕೇಶವ ಭಟ್ಟರು ತನ್ನ ಮಂದಾರ ರಾಮಾಯಣದಲ್ಲಿ ತುಳುನಾಡಿನ ಸಂಸ್ಕೃತಿಯನ್ನು ಅನನ್ಯವಾಗಿ ವರ್ಣಿಸಿರುತ್ತಾರೆ. ರಾಮಾಯಣ ನಡೆದ ಕೋಸಲ ರಾಜ್ಯ ಈ ತುಳುನಾಡೆಂಬ ರೀತಿಯಲ್ಲಿ ಅವರು ವಿವರಿಸಿದರು. ಇಡೀ ಭಾರತವನ್ನು ಒಂದೇ ಸಂಸ್ಕೃತಿಯ ಸೂತ್ರ ಎನ್ನುವ ತತ್ವ ಸಾರುತ್ತಾರೆ.

ಕಡಲ ತೊಟ್ಟಿಲೆಡ್ ನೀರ್ದೊದೆತ್ ಜೆಯಿದ್ನ ಬಾಲೆಗೆ ಎಂದು ತುಳು ನಾಡನ್ನು ವರ್ಣಿಸಿದ ಕವಿ ಕನ್ನಡ ನಾಡಿನ ಕೆಲವು ಊರುಗಳು ಬೇರೆ ರಾಜ್ಯಗಳಿಗೆ ಸೇರ್ಪಡೆಗೊಂಡುದಕ್ಕೆ ದುಃಖಿಸಿದ್ದನ್ನೂ ನೋಡಬಹುದು.

ನರ್ಕಳ ಮಾರಪ್ಪ ಶೆಟ್ಟರು ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಅತ್ಯಂತ ಜನಪ್ರಿಯರಾದ ಕವಿ. ರಾಷ್ಟ್ರೀಯತೆಯ ಜತೆಜತೆಯಲ್ಲಿ ಮದ್ಯಪಾನ ನಿಷೇಧ ಚಳವಳಿಯೂ ಮುಖ್ಯ ಹೋರಾಟವಾಗಿದ್ದು ನರ್ಕಳದವರು ಬರೆದ ಗಂಗಸರೋ ಗಂಗರೋ ಪರಡೆ ಕಲಿ ಗಂಗಸರೊ ಅತ್ಯಂತ ಜನಪ್ರಿಯವಾಗಿತ್ತು.

ಕೆಬಿತ್ತ ಮುರು ದೆತ್ತೆದೆ ಕೊರು ಪರ್‌ಂಡ ಕಲಿ ಗಂಗಸರೊ
ಅಟ್ಟೋದ ಬಿತ್ತೆ ದೆತ್ತದೆ ಕೊರು ಪರ್‌ಂಡ ಕಲಿ ಗಂಗಸರೊ

ಈ ದಾಟಿಯಲ್ಲಿ ೩೧ ಪದ್ಯಗಳಿವೆ. ನಾನು ಚಿಕ್ಕವನಿದ್ದಾಗ ಶಾಲಾ ಮಕ್ಕಳೆಲ್ಲ ಸಾಲಾಗಿ ಈ ಹಾಡನ್ನು ಹಾಡುತ್ತ ಹೋದ ನೆನಪು ನನಗೆ ಇನ್ನೂ ಇದೆ.

ಕಳುಜುಗಾರಿ ಕಳವುಲೆಗ್ ಈಟ್ ಏರ್‌ಗೆ
ಕಳಿ ಬಿರಾಂಡಿ ಗಂಗಸರೊ ಅಮಲ್ ಬೂತೊಗೆ

ಎಂಬ ೯ ಚತುಷ್ಪದಿಗಳ ಅಮಲ್ ಬೂತೊಗ್ ಕೂಡ ಇದೇ ಕಾಲದಲ್ಲಿ ರಚನೆಗೊಂಡ ಕವಿತೆ. ದಾಯೆಗೆಪಪ ಒಯ್ತಿರ್‌ಯ ಇಂಚಿ ಸಿಕ್‌ರೇಟ್ ಮತ್ತು ಬಂಗಿನ್ ಪನಿತ್ ತಿಂಗಳ್‌ರಡ ಎಂಬ ಎರಡು ತುಳುಕವಿಗಳು ಕೂಡ ಪ್ರಚಾರ ಘೋಷಣೆಗಳೆ. ಆದರೆ ಅವು ಉತ್ತಮ ಕವಿತೆಗಳಾಗಿಯೂ ಜನಪ್ರಿಯಗೊಂಡಿದ್ದವು ಮತ್ತು ಕವಿಗಿದ್ದ ರಾಷ್ಟ್ರಭಕ್ತಿಯೇ ಈ ಕವಿತೆಗಳ ರಚನೆಗೆ ಕಾರಣ ಎಂದು ನಾವು ಗಮನಿಸುತ್ತೇವೆ.

ತುಳುನಾಡಿನ ತುಡರ್ ತುಳುವಪ್ಪೆನ ಯೆತೆ, ತುಳುದೆಯ್ಯಾರೆ ಓಲೆಗೂ ಎಂಬ ಮೂರು ಕವಿತೆಗಳು ಅಮೃತ ಸೋಮೇಶ್ವರರ ತಂಬಿಲದಲ್ಲಿವೆ. ಇಲ್ಲಿ ವ್ಯಥೆ, ಸಂತೋಷ, ಅಭಿಮಾನಗಳು ಹಿಗ್ಗಿ ಕುಗ್ಗಿ ಕಾಣಿಸಿಕೊಳ್ಳುತ್ತವೆ. ಅವರ ರಂಗಿತ ಕವನ ಸಂಕಲನದಲ್ಲಿ ತುಳುನಾಡನ್ನು ಬಂಗಾರ್ದ ಕಂಗಣ ಈ ತುಳುನಾಡ್ ತೂಯೆರೆ ಸಾವಿರ ಕಣ್ಣುಳೆ ಬೋಡು ಎಂದು ವರ್ಣಿಸುತ್ತಾರೆ.

ಕವಿ ವೆಂಕಟರಾಜ ಪುಣಿಂಚತ್ತಾಯರು ತನ್ನ ನಾಡಿನ ಭಕ್ತಿಯನ್ನು ಜೋಕುಲು ಎಂಬ ಕವಿತೆಯಲ್ಲಿ ಜೋಕುಲೆಂಕುಲು ಜೋಕುಲೆಂಕುಲು ತುಳುವ ಮಣ್ಣದ ಜೋಕುಲು ಎಂದು ಹಾಡುತ್ತ ವಿವರಿಸಿದ್ದಾರೆ. ಸತ್ಯ ಧರ್ಮೊಗು ನ್ಯಾಯ ನೀತಿಗೆ ಮಾತ್ರ ಬಗ್ಗುವೊ ಎಂಕುಲು ಎಂದು ಹೇಳಿಕೊಂಡು ಕಷ್ಟ ಮಾರ್ಗೊಡು ಕಾರ್ಗಗೋಮೆಟಲೆಕ್ಕೊ ಉಂತುವೊ ಎಂಕುಲು ಭಾರೊ ತುಂಬ್ಯರೆ ಲಕ್ಕ್‌ದುಂತಿನ ಆಗೋಳಿ ಮಂಜಣೆರೆಂಕುಲು ಎಂದು ತುಳುವರ ಔನ್ನತ್ಯವನ್ನು ಸಾರಿದ್ದಾರೆ.

ಕವಯಿತ್ರಿ ಪ್ರಮೋದ ಸುವರ್ಣ ತನ್ನ ಪದರಂಗಿತ (೧೯೯೬) ಎಂಬ ಕವನ ಸಂಕಲನದಲ್ಲಿ ತುಳು ಮಾತೆಯನ್ನೂ ಸ್ತುತಿಸಿದ್ದಾರೆ. ನಿನ್ನ ರುಣ ಬಾರೊನು ಸಂದಾಯೆರಾವಂದೆ ನಿನಕಾರ ಮುದೆಲ್‌ತೇ ತರೆ ಕಂತ ದೀಪ ಎಂಬಲ್ಲಿ ಸಮರ್ಪಣ ಭಾವ ವ್ಯಕ್ತವಾಗುತ್ತದೆ.

ಗಣಪತಿ ದಿವಾಗೂ ಕೊಂಬುವಾದ್ಯೋದ ಮೊದಲನೆ ಪದ ತುಳುತ್ತ ತೇರೆ ಒಯ್ಯುಗೊ

ಕಡಲ್ ಕಡಪ್ಪುಂಡ್ ಮುಗಲ್ ಮುಟ್ಟುಡ್
ತುಳುತ ಕನ್ನಡ ಕೀರುತಿ
ತುಡರ್ ಬೆಳಗಡ್ ತೇರ್ ಸಾಗಡೆ
ತೆಳಿತೊಂದುಪ್ಪಡ್ ಭಾರತಿ
ಮಾಳ್ಪಿ ಮಂಗಳಾರತಿ.

ಎಂದು ಮುಕ್ತಾಯವಾಗುವ ಕವಿತೆಯಲ್ಲಿರುವ ರಾಷ್ಟ್ರೀಯ ಭಾವಕ್ಕೆ ಪ್ರತ್ಯೇಕ ವ್ಯಾಖ್ಯಾನ ಅಗತ್ಯವಿಲ್ಲ. ಬೂರೊಂಡೆ ಎನ್ನವ ಇನ್ನೊಂದು ಕವಿತೆಯಲ್ಲಿ ತುಳು ನಾಡಿನ ವರ್ಣನೆ ಮಾಡಿ ತನ್ನ ಗೌರವ ಸಲ್ಲಿಸಿದ್ದಾರೆ.

ಒಂಜ್ಯೇಜಾತಿ ಎಂಬ ಕವಿತೆಯಲ್ಲಿ ದಿವಾಣರು -
ಒಂಜಿ ಜಾತಿ ಒಂಜಿ ಜಾತಿ ಒಂಜ್ಯೇ ಜಾತಿ ಬಡಜನೊಕ್ಕುಲು ನಮೊ ಮಾಂತೂ

ಒಂಜ್ಯೇ ಜಾತಿ ಎಂದು ವಿಡಂಬನೆಯಿಂದ ಪ್ರಾರಂಭಿಸಿದರೂ ಕೊನೆಯಲ್ಲಿ ನಮ್ಮ ಶಕ್ತಿ ಸೂರ್ಯಶಕ್ತಿಗಿದ್ದಿ ಸೋಲು, ನಮ್ಮದಿಂದು ಐಕ್ಯಗಾನ, ಪನೊಮಾಲು ಎಂದು ಇಂದಿನ ರಾಷ್ಟ್ರೀಯ ಅಗತ್ಯವನ್ನು ಎತ್ತಿ ಹಾಡಿದ್ದಾರೆ. ದ್ವಾತವೀ ಸ್ವಾತಂತ್ರ್ಯ ಎಂಬ ಕವಿತೆ ಸ್ವಾತಂತ್ರ್ಯ ಹೋರಾಟದ ಹಿನ್ನೆಲೆ, ಬಲಿದಾನಗಳನ್ನು ವಿವರಿಸಿ ಇದನ್ನು ಅರಿತುಕೊಳ್ಳಲು ಈ ಪೀಳಿಗೆಯ ಜನರಿಗೆ ಕರೆ ನೀಡುತ್ತದೆ.

ತುಳುನಾಡ ಕಬಿತೆ ಬರೆದ ಡಾ. ವಾಮನ ನಂದಾವರ ಅವರು ಇಲ್ಲಿಯ ವರ್ಣನೆ ಮಾಡಿದ್ದಾರೆ : ಪ್ರಾಕೆದ ಕಟ್ಟಲೆನೊರಿತೊಂದು, ಧರ್ಮದ ತಾದಿಡೆ ನಡತೊಂದು ನೀತಿದ ನೇಮೊಗು ಬಾಳ್ವದೆ ಬೆಳಗುಂಡು ಮೊರ್ಲುದ ತುಳುನಾಡೆ ಇದನ್ನು ಭಾರತಕ್ಕೂ ಅನ್ವಯಿಸಬಹುದು. ಓ ತುಳುವರುಳ್ಳಾಲ್ತಿ ಎನ್ನನೆ ಸಾಂಕಿನ ಅಷ್ಟೆ ಎಂದು ಕವಿ ಪುಡಾರು ಮಹಾಬಲಭಟ್ಟು ತುಳು ಮಾತೆಗೆ ನಮಿಸುತ್ತಾರೆ. ಪಿಂಗಾರ ಎಂಬ ಕವನ ಸಂಗ್ರಹದಲ್ಲಿ. ನಮ್ಮ ತುಳುವೆರೆ, ತುಳು ನಾಡ್‌ಗೆ ಬಲ್ಲೆ ಎಂಬ ಇನ್ನೆರಡು ಕವಿತೆಗಳೂ ಹುಟ್ಟಿದ ನಾಡನ್ನು ವಂದಿಸುವ ಕವಿತೆಗಳೇ ಆಗಿವೆ.

ಜನ್ಮೊ ಜನ್ಮೊಗು ಪುಟ್ಟೊಡೇನೀ ತುಳು ನಾಡ್‌ದ ಮಣ್ಣ್‌ಡೇ ಎಂದು ತೊಡಗುವ ತುಳು ನಾಡ್ ಎಂಬ ಕವಿತೆಯಲ್ಲಿ ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್ ವ್ಯಕ್ತಪಡಿಸಿದ ಭಾವನೆ ಉಚ್ಚ ರಾಷ್ಟ್ರೀಯ ಭಾವನೆಯೇ ಆಗಿದೆ. ಗಾಂಧಿ ಬಾಬ ಅಂಬೇಡ್ಕರ್ ಎಂಬ ನಾಯಕರ ಕುರಿತು ಅವರು ಬರೆದ ಕವಿತೆಗಳೂ ಕವಿಯ ರಾಷ್ಟ್ರೀಯ ಮನೋಭಾವವನ್ನು ವ್ಯಕ್ತಪಡಿಸುತ್ತದೆ. ಅವರ ಇನ್ನೊಂದು ಕವನ ಸಂಕಲನ ಪಚ್ಚೆಕುರಲ್‌ನಲ್ಲಿ ತುಳುನಾಡಗೀತೆ, ಪಂಜೆಯವರ ಹುತ್ತರಿ ಹಾಡಿನ ದಾಟಿಯನ್ನು ನೆನಪಿಗೆ ತರುತ್ತದೆ. ಇದೂ ಅಷ್ಟೇ ಪ್ರಭಾವಶಾಲಿಯಾದ ಕವಿತೆ ಎನ್ನುವುದರಲ್ಲಿ ಅನುಮಾನವಿಲ್ಲ. ಪುಣ್ಯೊದ ಮಣ್ಣುಂದು ಈ ತುಳುಭೂಮಿ ಎಂಬ ಇನ್ನೊಂದು ಕವಿತೆಯೂ ಈ ನಾಡಿನ ವರ್ಣನೆಯನ್ನು ಮಾಡುತ್ತದೆ. ಉಲ್ಲಾಸ ಏಪಲಾ ಮುಲ್ಪದ ಜನೊಕೆ ಎಂದು ಈ ನಾಡಿನ ಜನರ ಚೇತನವನ್ನು ಪ್ರಶಂಸಿಸುತ್ತದೆ.

ಏತೊಂಜಿ ಪೊರುಲು ಈ ನಮ್ಮ ತುಳು ನಾಡೆ ಎಂಬ ಕವಿತೆಯಲ್ಲಿ ಶ್ರೀ ಕೆ.ಎಸ್. ವಾಸುದೇವ ನಾಯಕ್ ಸ್ತುತಿಸಿದರೆ ಪೊರ್ಲಪ್ಪ ಪೊರ್ಲ್ಲೊ ತುಳುನಾಡು ಎಂದು ಹಾಡಿ ಕುಣಿದವರು ವಿಶ್ವನಾಥ ಸಜಿಪ ಅವರು.

ಭಾರತದ ಸ್ವಾತಂತ್ರ್ಯದ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಪ್ರಕಟಿಸಿದ ಬಂಗಾರ್ ಪರ್ಬೊದ ಸಿಂಗಾರೆ ಪದೊಕುಲು ಎಂಬ ಕವನ ಸಂಗ್ರಹದಲ್ಲಿ ೫೦ ಕವಿತೆಗಳಿವೆ. ಇಲ್ಲಿಯೂ ದೇಶ ಎಂದರೆ ತುಳುನಾಡು ಎಂಬ ಕಲ್ಪನೆಗೆ ಅಗ್ರ ಪ್ರಾಶಸ್ತ್ಯ ದೊರಕಿದೆ.

ತುಡರೊಂಜಿ ಪೊತ್ತಾದ್ ಕೈಮುಗಿಪೆ ಎಂಬ ಕವಿತೆಯಲ್ಲಿ ಪೊರ್ಲುದ ತುಳುನಾಡ ಸಿರಿ ಗದ್ದಿಗ್‌ಡೆ ಓಲಗವಾಯಿನ ಓ ತುಳುವಪ್ಪೆ ಎಂದು ವರ್ಣಿಸುತ್ತಾರೆ. ತಿಗಲೆದ ಬೇನೆಗೆ ಉಡಲ್‌ದ ಪದ ಪನ್ಪುಂಡು ಪಕ್ಕಿ ನಡೀರ್ ಮುಟ್ಟ ಬುಲಿತೊಂದು ಎಂದು ಪಕ್ಕಿದ ಪದ ಎಂಬ ಕವಿತೆಯಲ್ಲಿ ಅತ್ರಾಡಿ ಅಮೃತಾ ಶೆಟ್ಟಿ ದೇಶದ ಸ್ಥಿತಿಗೆ ವ್ಯಾಖ್ಯೆ ಬರೆಯುತ್ತಾರೆ. ಶ್ರೀ ಕೆದಂಬಾಡಿ ಜತ್ತಪ್ಪರೈಗಳು ಭಾರತೀಯರ ಭ್ರಮೆ ನಿರಸನಗೊಂಡ ಸಂಕೇತವಾಗಿ ಪೊಸ್ತ ಅಂಗಿ ಬತ್ತ್ಂಡೆ ಎಂದು ಕೇಳುತ್ತಾರೆ. ಕೋಟಿ ತೀರ್ಥೊಮಿಯಿನ ಪುಣ್ಯಬೋಡು ಮೂಲು ಪುಟ್ಯೆರೆ ಎಂದು ಅಪ್ಪೆ ಭಾರತೀಯರನ್ನು ವಂದಿಸಿ ಕವಿ ರಮಣ ಧನ್ಯಭಾವದಿಂದ ಹಾಡುತ್ತಾರೆ.

ತುಳುನಾಡಿನ ಅತ್ಯಂತ ಹಿರಿಯ ಕವಿ ಪಾವೆಂ ತುಳುನಾಡ್‌ದ 'ನಿನೆಪು' ದೂರದ ಧಾರವಾಡದಲ್ಲಿ ಇದ್ದಾಗ ಮಾಡಿಕೊಂಡು,

ಪತ್ತ್ ಬಾಸೆಲೆನ್ ಕಲ್ತೆ ಬರೆಯೆ
ನೂದು ಗುವೆಲ್‌ದ ನೀರ್‌ನಿಪರಿಯೆ
ಸಾರಜಾಗುಲೆಡ್ ಮನನೆನಿ ನಡಿಯೆ
ಒಲ್ಪಲ ಬೇರ್ ಕೊಲ್ಪಂದೆ.

ಎಂಬ ದುಃಖವನ್ನು ತೋಡಿಕೊಂಡು,

ತುಳುನಾಡ್‌ಡ್ ಬದ್ಕೆರೆ ಅಜ್ಜಿಡಲಾ
ತುಳುನಾಡ್‌ಡ್ ನಲ್ಪೆರೆ ಅಜ್ಜಿಡಲಾ
ಕಡೆತ್ತ ಉಸುರುನಿ ಬುಡೆರೆಗಾಂಡಲಾ
ತುಳುನಾಡ್‌ಗೆ ಪೋವೊಡುಂದು ತೋಜುಂಡು.

ಎಂದು ಹೃದಯಸ್ಪರ್ಶಿಯಾಗಿ ಹೇಳಿ ತನ್ನ ಮಾತೃಭೂಮಿಯ ಬಗೆಗಿನ ಪ್ರೀತಿಯನ್ನು ವ್ಯಕ್ತಪಡಿಸಿದ್ದಾರೆ. ಅವರ ಈ ಮಾತು ದೇಶ ದೇಶಾಂತರಗಳಲ್ಲಿರುವ ತುಳುವರ ಹೃದಯದಲ್ಲೂ ಪ್ರತಿಫಲಿಸುತ್ತದೆ ಎಂದು ಭಾವಿಸಿ ನನ್ನ ಈ ಮಾತುಗಳನ್ನು ನಿಲ್ಲಿಸುತ್ತೇನೆ.

●

ನಂಬಿಕೆಯ ನೆಲೆಯಲ್ಲಿ ತುಳುವರು

ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವ

ಜಗತ್ತಿನ ಎಲ್ಲೆಡೆಗಳಂತೆ ತುಳು ಆದಿ ಮಾನವನು ಕಣ್ಣು ತೆರೆದಾಗ ಈ ಪ್ರಪಂಚದ ಮಹಾಶಕ್ತಿಗಳು - ಅಗ್ನಿ, ವಾಯು, ಸೂರ್ಯ, ಚಂದ್ರಾದಿ ಅದ್ಭುತಗಳು ಆತನನ್ನು ಎದುರುಗೊಂಡವು. ತನ್ನ ಎಟಕಿಗೆ ನಿಲುಕದ ಈ ಶಕ್ತಿವಿಶೇಷಗಳನ್ನು ದಿನದಿನವೂ ಎದುರುಗೊಂಡಾಗ ಆತನಿಗೆ ಅರ್ಥವಾಯಿತು. ಇವು ತನ್ನ ಅಳವಿಗೆ ಒಳಪಟ್ಟಿಲ್ಲ. ತಾನು ಎಷ್ಟು ಹೆಣಗಾಡಿದರೂ ಇವುಗಳ ಪ್ರಭಾವಲಯದಿಂದ ತಪ್ಪಿಸಿಕೊಳ್ಳಲಾರೆ. ಅವು ತನ್ನನ್ನು ಆಳುತ್ತವೆಯೇ ಹೊರತು ತಾನು ಅವುಗಳ ಮೇಲೆ ಕಿಂಚಿತ್ತೂ ಅಧಿಕಾರ ನಡೆಸಲಾರೆ. ಈ ಅನುಭವವಾದಾಗ ಆತ ಅವುಗಳಿಗೆ ಶರಣಾದ; ಹೆದರಿಕೊಂಡು ನಡೆಯ ಹತ್ತಿದ.

ಆದಿತುಳುವನಿಗೆ ಇವು ಮಹಾಶಕ್ತಿಗಳೆಂಬುದು ಅರಿವಾಯಿತೇನೋ ನಿಜ. ಆದರೆ ಆತನ ಬಾಲಿಶ ಬುದ್ಧಿಗೆ ಇವುಗಳನ್ನು 'ವಸ್ತು ರೂಪ'ದಲ್ಲಿ ಹಿಡಿದಿಟ್ಟುಕೊಳ್ಳಲಾಗಲಿಲ್ಲ. ವಸ್ತು ರೂಪದಲ್ಲಿ ಹಿಡಿಯಲಾಗದ್ದನ್ನು ಭಾವರೂಪದಲ್ಲಿ ಕಲ್ಪಿಸಿಕೊಳ್ಳುವುದು ಆತನ ಮನಸ್ಸಿಗೆ ಕಷ್ಟವಾಯಿತು. ಆದ್ದರಿಂದ ಅಗ್ನಿ, ವಾಯು, ಸೂರ್ಯ, ಚಂದ್ರಾದಿಗಳನ್ನು ಆತ ತನ್ನ ದಿನನಿತ್ಯದ ನಂಬಿಕೆಯ ನೆಲೆಯಾಗಿಸಿಕೊಳ್ಳಲಿಲ್ಲ. ಆರಾಧನಾ ವಸ್ತುವಾಗಿಸಿಕೊಳ್ಳಲಿಲ್ಲ. ದೂರದಿಂದ ವಂದಿಸಿ ಸಮಾಧಾನ ಪಟ್ಟುಕೊಂಡ.

ಯಾವುದೇ ಮಾನವ ತನ್ನ ನಂಬಿಕೆಯ ನೆಲೆಯಾಗಿ ಒಂದು ವಸ್ತುವನ್ನೋ, ವ್ಯಕ್ತಿಯನ್ನೋ, ವಿಚಾರವನ್ನೋ ಆಧರಿಸಿಕೊಂಡಿರದೆ ಜೀವನ ನಡೆಸುವುದು ಅಸಾಧ್ಯ ಎಂದು ಮನಶ್ಶಾಸ್ತ್ರಜ್ಞರ ಅಭಿಮತ. ವಿಚಾರವನ್ನು ತಬ್ಬಿಕೊಳ್ಳುವಷ್ಟು ಬೆಳೆಯದ ಮನಸ್ಸಿನ ತುಳುವ ತನ್ನ ಸುತ್ತು ಮುತ್ತಲಿನ ವಸ್ತುವಿಶೇಷಗಳನ್ನೆ ತನ್ನ ನಂಬಿಕೆಯ ನೆಲೆಯಾಗಿ ಆರಿಸಿಕೊಂಡ. ನೆಲದ ಮೇಲೆ ಸಣ್ಣ ಸಣ್ಣ ಶೃಂಗಗಳಾಗಿ ಸುಂದರವಾಗಿಯೂ, ಗಂಭೀರವಾಗಿಯೂ ಎದ್ದು ನಿಂತ ಹುತ್ತಗಳು, ರಂಬೆಕೊಂಬೆಗಳು

ವಿಶಾಲವಾಗಿ ಹಬ್ಬಿ ಭವ್ಯವಾಗಿ ಹರಡಿಕೊಂಡಿರುವ ವೃಕ್ಷಗಳು, ಅಲ್ಪಸ್ವಲ್ಪ ಆಕಾರದಿಂದ ಕೂಡಿದ ಆಕರ್ಷಕ ಕಲ್ಲುಗಳು ಅಥವಾ ಕೆಲವೊಮ್ಮೆ ವಿಚಿತ್ರವಾದ ಇನ್ನಾವುದೋ ವಸ್ತು ವಿಶೇಷಗಳು ಅವನ ಆರಾಧನಾ ಕೇಂದ್ರಗಳಾದುವು. ಅವು ಆತನ ಕಣ್ಣು, ಮನಗಳು ಅರಿಯುವಂತೆಯೂ ಇದ್ದವು; ಕಲ್ಪನೆಯನ್ನು ಕೆದಕುವಂತೆಯೂ ಇದ್ದವು. ಅಲ್ಲಿ ಆತ ತನಗೆ ನಿರ್ದಿಷ್ಟವಾಗಿ ತಿಳಿಯದ ಅಗೋಚರ ಶಕ್ತಿಯನ್ನು 'ಸ್ಥಾಪಿಸಿ' ಆರಾಧಿಸತೊಡಗಿದ.

ಇಂದು ಕೂಡಾ ತುಳುವರು ನಂಬಿ, ಆರಾಧಿಸುತ್ತಿರುವ ಎಷ್ಟೋ ಶಕ್ತಿಗಳು - ಭೂತಗಳು - ಇಂತಹ ಮರಗಳ ಬುಡದಲ್ಲೋ, ಕಲ್ಲುಗಳಲ್ಲೋ ಇವೆ. ತುಳುವರಲ್ಲಿ ಅತಿ ಹಿಂದುಳಿದ ಜನಾಂಗವಾದ ದಲಿತ ವರ್ಗಗಳು ನಂಬಿಕೊಂಡು ಬರುವ ಕೊರಗ - ಕೊರತಿ - ಇತ್ಯಾದಿ ಶಕ್ತಿಗಳ ಆರಾಧನೆಯ ಸ್ಥಳವನ್ನು ನೋಡಿದರೆ ನಮಗೆ ಹಿಂದಿನದರ ಕಲ್ಪನೆ ಅಷ್ಟೋ ಇಷ್ಟೋ ಆಗುತ್ತದೆ.

ಮುಂದೆ ಲೋಹದ ಆವಿಷ್ಕಾರವಾದಾಗ ಒಮ್ಮೆ ಅದರ ತುಂಡೊಂದು ಈತನ ಕೈಗೆ ಬಂತು. ಅವನಿಗೆ ಅದರ ಗುಣ ವಿಶೇಷಗಳನ್ನು ಕಂಡು ಅಚ್ಚರಿಯಾಯಿತು. ಅದನ್ನೂ ಆತ ಆರಾಧನಾ ಸ್ಥಳದಲ್ಲಿ ಇಟ್ಟು ಪೂಜಿಸತೊಡಗಿದ. ಅತಿ ಹಿಂದಿನಿಂದ ಆರಾಧಿಸಿಕೊಂಡು ಬರುತ್ತಿರುವ ಸ್ಥಳಗಳಲ್ಲಿ ಕೆಲವೆಡೆ ಕಬ್ಬಿಣದ ತುಂಡುಗಳು ಇರುವುದುಂಟು.

ಮುಂದೆ ನಾಗರಿಕತೆ ಬೆಳೆಯಿತು. ಕಲ್ಲು ಮರಗಳ ಜಾಗದಲ್ಲಿ ಗುಡಿ, ಮಾಡಗಳು ಎದ್ದು ನಿಂತವು. ಆರಾಧನೆಯ ವಿಧಾನದಲ್ಲಿ ಕೆಲವು ಬೆಡಗು, ಬಿನ್ನಾಣಗಳು ಬೆರೆತುಕೊಂಡವು. ಆದರೂ ಮೂಲವನ್ನೇ ಮರೆ ಮಾಡುವಷ್ಟು ಬದಲಾಗಲಿಲ್ಲ.

ತನ್ನ ಸುತ್ತ ಮುತ್ತಲಿನ ಕಾಡುಗಳಲ್ಲಿ ತಂಡತಂಡವಾಗಿ ವಾಸಿಸುತ್ತಿದ್ದು ಆತನ ಬೆಳೆಗಳಿಗೆ ತೊಂದರೆ ಕೊಡುತ್ತಿದ್ದ, ಆತನಿಗೆ ಭಯವನ್ನುಂಟುಮಾಡುತ್ತಿದ್ದ, ಪ್ರಾಣಿಗಳೂ ಆತನಿಂದ ಆರಾಧನೆಗೊಳ್ಳಹತ್ತಿದವು. ನಾಗಾರಾಧನೆ ಇಂತಹವುಗಳಲ್ಲಿ ಒಂದು. ಅದಲ್ಲದೆ ಪಿಲಿಚಾಂಡಿ, ಪಂಜುರ್ಲಿ, ಮೈಸಂದಾಯ, ಮರ್ಲ್‌ಮೈಸಂದಾಯ ಇತ್ಯಾದಿ ಭೂತಗಳು ಆಯಾ ಪ್ರಾಣಿಗಳನ್ನು ಶಕ್ತಿ ವಿಶೇಷಗಳಾಗಿ ಭಾವಿಸಿ ಆರಾಧಿಸಿದುದಕ್ಕೆ ಸಾಕ್ಷಿ. ಇಂದು ಕೂಡಾ ತುಳುನಾಡಿನಲ್ಲಿ ಈ ದೈವಗಳು ಅಲ್ಲಲ್ಲಿ ಆರಾಧನೆಗೊಳ್ಳುತ್ತಿರುವುದನ್ನು ಕಾಣಬಹುದು.

ತುಳುವರ ನಂಬಿಕೆಯ ಮುಂದಿನ ಬೆಳವಣಿಗೆಯನ್ನು ಮೃತಾತ್ಮಗಳ ಆರಾಧನೆಯಲ್ಲಿ ಕಾಣಬಹುದು. ನಿನ್ನೆ ಇದ್ದವ ಇಂದು ದೇಹವಿದ್ದರೂ ಹೇಗೆ ಇಲ್ಲದಾದ ಎಂಬ ಕೌತುಕವೂ, ತಮ್ಮವರ ಕುರಿತಾದ ಮೋಹವೂ ಸೇರಿ ಮೃತಾತ್ಮಗಳ ಆರಾಧನೆ ಮೊದಲಾಗಿರಬೇಕು. ಇಂದು ಕೂಡಾ ತುಳುವರು ಎಲ್ಲಾ ಮನೆಗಳಲ್ಲೂ ತಮ್ಮ ಕುಟುಂಬದ ಮೃತಾತ್ಮರಿಗೆ 'ಅಗೆಲು' ಬಡಿಸಿ ಪೂಜಿಸುವ ವಿಧಾನ ಸಾಮಾನ್ಯ.

ಊರಿನಲ್ಲಿ ಪ್ರತಾಪಶಾಲಿಯಾದವನನ್ನೋ, ಕುಶಲ ಕೆಲಸಗಾರನನ್ನೋ ಅಸಾಮಾನ್ಯ ಕೆಲಸ ಮಾಡಿದ ವೀರನನ್ನೋ ಶಕ್ತಿಯಾಗಿ - ಭೂತವಾಗಿಸಿ - ಆರಾಧಿಸುವಲ್ಲಿ ತುಳುವರ ನಂಬಿಕೆಯ ಮುಂದಿನ ಹಂತವನ್ನು ಗುರುತಿಸಬಹುದು. ಆ ಅಸಮಾನ್ಯ ಕುರಿತಾದ ಪ್ರೀತಿ ಭೀತಿಗಳು ಅವರ ಮರಣಾನಂತರ ಭಕ್ತಿಯಾಗಿ ರೂಪಾಂತರಗೊಂಡಿತು. ಆ ಭಕ್ತಿಯ ಭರದಲ್ಲಿ ಅವರ ಸುತ್ತ ಕಲ್ಪನೆಯ ಕಥೆಗಳ ಪ್ರಭಾವಲಯಗಳು ಬೆಳೆದು ನಿಂತುವು. ಮೆಲ್ಲಮೆಲ್ಲನೆ ಈ ಮೃತಾತ್ಮರು ಭೂತಗಳಾಗಿ ಮೈ ತುಂಬಿಕೊಂಡರು.

ಹೀಗೆ ಮೈತುಂಬಿಕೊಂಡು ಭೂತಗಳಾಗಿ ಬೆಳೆದು ನಿಂತ ಕೆಲವು ಮಹಾತ್ಮರುಗಳು, ಕೌಟುಂಬಿಕ ಪರಿಧಿಯನ್ನು ಉತ್ತರಿಸಿ, ಗ್ರಾಮದ ಮೇರೆಯನ್ನು ಕಳೆದು ಸೀಮೆಯ ಗಡಿಯನ್ನು ದಾಟಿ ತುಳುನಾಡಿನ ಉದ್ದಗಲಗಳನ್ನು ಗೆದ್ದು ಆರಾಧನೆಗೊಳ್ಳತೊಡಗಿದ ಕತೆ ಚೇತೋಹಾರಿಯಾದುದು. ಉದಾಹರಣೆಗೆ ಮೊನ್ನೆ ಮೊನ್ನೆಯ ಬಿಲ್ಲವ ಯುವಕರೀರ್ವರು - ಕೋಟಿಚೆನ್ನಯರು - ದಕ್ಷಿಣದ ಸುಳ್ಯ ತಾಲ್ಲೂಕಿನ ಗಟ್ಟದ ಬದಿಯ ಎಣ್ಮೂರು ಕಟ್ಟದಿಂದ ಉತ್ತರದ ಕುಂದಾಪುರದ ತನಕ ಗರಡಿಗಳಲ್ಲಿ

ಆರಾಧನೆಗೊಳ್ಳುತ್ತಿರುವುದು ವಿಸ್ಮಯದ ವಿಚಾರವಾಗಿದೆ. ಕಲ್ಲುರ್ಟಿ, ಕಲ್ಕುಡ, ಬೊಬ್ಬರ್ಯ, ನಿನ್ನೆ ಮೊನ್ನೆಯ ಆಲಿ - ಇವರೆಲ್ಲ ಈ ವರ್ಗಕ್ಕೆ ಸೇರಿದವರೇ.

ತುಳುನಾಡಿನಲ್ಲಿ ಆರಾಧನೆಗೊಳ್ಳುತ್ತಿರುವ ದೈವಗಳು ನೂರಾರು. ಅಪ್ಪಣ್ಣ, ಪಂಜುರ್ಲಿ, ಮೈಸಂದಾಯ, ಕೊಡಮಣ್ತಾಯ, ಜಾರಂದಾಯ, ಕನಪಡಿತ್ತಾಯ, ಮೂಡದಾಯ, ನಾಲ್ಕೈತ್ತಾಯ, ಮಲರಾಯ, ಜುಮಾದಿ, ಬಂಟ, ಲೆಕ್ಕೇಸಿರಿ, ಪಿಲಿ ಚಾಮುಂಡಿ, ಉಳ್ಳಾಲ್ತಿ, ಕಲ್ಲುರ್ಟಿ, ಕಲ್ಕುಡ, ಕೋರ್ದಬ್ಬು, ಕೋರತನಿಯ, ಕೋಟಿ - ಚೆನ್ನಯ್ಯ, ಕಾಂತ ಬಾರೆ, ಬೂದಬಾರೆ, ಬಬ್ಬರ್ಯ, ಆಲಿಭೂತ, ವಿಷ್ಣುಮೂರ್ತಿ, ಉಮ್ಮಲ್ತಿ, ಜಟ್ಟಿಗ - ಹೀಗೆ ಈ ಯಾದಿಯೇ ದೀರ್ಘವಾಗಬಹುದು.

ಆಯಾ ಭೂತಗಳ 'ಸ್ಥಳೀಯ ಯೋಗ್ಯತೆ' ಅವು ಆರಾಧನೆಗೊಳ್ಳುವ ಸ್ಥಳ ಇತ್ಯಾದಿಗಳನ್ನು ಹೊಂದಿಕೊಂಡು ಈ ದೈವಗಳನ್ನು ಸೀಮೆದೈವ, ಮನೆದೈವಗಳೆಂದು ವಿಂಗಡಿಸಿ ಹೇಳಬಹುದು. ಈ ಭೂತಗಳ ಆರಾಧನೆಯನ್ನು ಅವುಗಳ ಸ್ವರೂಪ ಮತ್ತು ಪ್ರದೇಶಗಳಿಗೆ ಹೊಂದಿಕೊಂಡು ನೇಮ, ಕೋಲ, ಆಯನ, ಬಂಡಿ, ಒಲಸರಿ, ತಂಬಿಲ, ಓಮ, ಆಗೆಲು - ಇತ್ಯಾದಿ ಹೆಸರುಗಳಿಂದ ಕರೆಯುತ್ತಾರೆ.

ಭೂತರಾಧನೆ ತುಳುವರ ಅಂತರಂಗದ ನಂಬಿಕೆಗೆ ಆಧಾರವಾದಂತೆ ಬಹಿರಂಗದ ನಡವಳಿಕೆಗಳಿಗೂ ಕೇಂದ್ರಬಿಂದುವಾಯಿತು. ತುಳುವರ ಎಲ್ಲಾ ಸಾಮಾಜಿಕ ಕೆಲಸ ಕಾರ್ಯಗಳೂ ಈ ಮೂಲವನ್ನೇ ಆಧರಿಸಿಕೊಂಡು ನಡೆಯುವಂತಾಯಿತು. ಹುಟ್ಟು, ಸಾವು, ಮದುವೆ, ನಿಷೇಖ, ಚವಲ, ಪ್ರಸೂತ - ಇತ್ಯಾದಿ ಶುಭಾಶುಭ ಕಟ್ಟುಗಳೆಲ್ಲಾ ಈ ಕೇಂದ್ರ ಬಿಂದುವನ್ನು ತೊರೆದು ನಡೆಯಲಾರದಾಯಿತು.

ಗ್ರಾಮದ ಎಲ್ಲಾ ಜನ ವರ್ಗಗಳೂ ಭೂತಾರಾಧನೆಯಲ್ಲಿ ಪಾಲುಗೊಳ್ಳುವಂತಹ ಕಟ್ಟುಪಾಡುಗಳಾದವು. ಇದರಿಂದಾಗಿ ಹೊರನೋಟಕ್ಕೆ ಬಂಟ, ಬಿಲ್ಲವ, ಗಾಣಿಗ, ಕುಲಾಲ, ಆಚಾರಿ, ಮಡಿವಾಳ, ಪಂಬದ, ಪರವ, ನಲ್ಕೆಯವ, ಹೊಲೆಯ - ಹೀಗೆ ಬೇರೆ ಬೇರೆ ಉಪವರ್ಗಗಳಾಗಿ ವಿಂಗಡಿಸಲ್ಪಟ್ಟಿದ್ದ ತುಳು ಸಮಾಜ ಆಂತರಿಕವಾಗಿ ಒಂದು ಸೂತ್ರದಿಂದ ಬಂಧಿಸಲ್ಪಟ್ಟಿತು. ಬೇಡವೆಂದರೂ ಒಬ್ಬನು ಇನ್ನೊಬ್ಬನಿಂದ ತಪ್ಪಿಸಿಕೊಳ್ಳಲಾಗದ ಸಾಮಾಜಿಕ ಬಂಧನ ಬೆಳೆದು ಇಡೀ ಗ್ರಾಮ ಒಂದು ಘಟಕವಾಗಿ ಬಾಳುವಂತಾಯಿತು.

ಭೂತಾಲಯಗಳಲ್ಲಿ ಮಾರಿ ಹೊಲೆಯರಿಂದ ಹಿಡಿದು, ಸಮಾಜದ ಅತ್ಯುನ್ನತ ವರ್ಗದವರೆಗಿನ ಎಲ್ಲರಿಗೂ ಒಂದೊಂದು ಕೆಲಸದ ಹೊಣೆ - ಅಧಿಕಾರದ - ಗುರಿಗಾರಿಕೆಯ ಹೆಸರಲ್ಲಿ ಕೆಲಸದ ಹೊಣೆ ಹೊರಿಸಲ್ಪಟ್ಟಿತು. ಇಲ್ಲಿ ಕೆಲಸದ ಹೊಣೆಯನ್ನು ಹೊತ್ತ ರೀತಿಯಲ್ಲೇ ಅವರು ಸಾಮಾಜಿಕ ಕೆಲಸ ಕಾರ್ಯಗಳನ್ನೂ ಹೊಣೆಯನ್ನು ವಹಿಸಬೇಕಾಗಿತ್ತು. ಇಲ್ಲಿ ಯಾರಾದರೂ ತಪ್ಪಿ ನಡೆದರೆ ಭೂತಾರಾಧನೆಯ ಹೊತ್ತಿನಲ್ಲಿ 'ಶಕ್ತಿಯ ಸಾನ್ನಿಧ್ಯ'ದಲ್ಲಿ ಇವರ ವಿಚಾರಣೆ ನಡೆಯುತ್ತಿತ್ತು. ನ್ಯಾಯ ತೀರ್ಮಾನವಾಗುತ್ತಿತ್ತು. ಜನರೆಲ್ಲ ಅದಕ್ಕೆ ತಲೆಬಾಗುತ್ತಿದ್ದರು. ಇಡೀ ಗ್ರಾಮ ಶಾಂತಿ ಸುವ್ಯವಸ್ಥೆಯಿಂದ ನಡೆಯಲು ಈ ಶಕ್ತಿಯೇ ಕಾರಣವಾಗಿತ್ತು.

ಮುಂದೆ ಸುಸಂಸ್ಕೃತ ದೇವರುಗಳನ್ನು ಕಟ್ಟಿಕೊಂಡ, ನಾಗರೀಕ ನಂಬಿಕೆ ನಡವಳಿಕೆಗಳನ್ನು ಬೆಳೆಸಿಕೊಂಡ ಜನವರ್ಗ ತುಳುನಾಡಿಗೆ ವಲಸೆ ಬಂದರು. ಆದರೆ ತುಳುನಾಡಿನ ಈ ಆರಾಧನಾ ವಿಶೇಷದ ಪ್ರಭಾವದಿಂದ ಇವರಿಗೂ ತಪ್ಪಿಸಿಕೊಳ್ಳಲಾಗಲಿಲ್ಲ. ಒಂದಲ್ಲ ಒಂದು ರೀತಿಯಿಂದ ಇವರೂ ಇದನ್ನು ಸ್ವೀಕರಿಸಿ ತಮ್ಮದಾಗಿಸಿಕೊಂಡರು ಅಥವಾ ಆ ಶಕ್ತಿ ವಿಶೇಷಗಳೇ ಇವರನ್ನು ತಮ್ಮ ವರನ್ನಾಗಿಸಿಕೊಂಡು ತಮ್ಮ ಪ್ರಭಾವಲಯದಲ್ಲಿ ಬದುಕಗೊಟ್ಟವು ಎನ್ನಬಹುದೇನೋ! ತುಳುನಾಡವರ ಈ ನಂಬಿಕೆಯ ಮೂಲನೆಲೆ ಅಷ್ಟುಶಕ್ತಿಶಾಲಿಯಾಗಿತ್ತು!

ಇಂದು ನಾಗರಿಕತೆ ನಾಗಾಲೋಟದಿಂದ 'ಮುಂದೆ' ಧಾವಿಸುತ್ತಿದೆ. ವಿಜ್ಞಾನ ತನ್ನ ವಿಶ್ವರೂಪದಲ್ಲಿ ಮೈದೋರಿದೆ. ಮಾನವ, ಶಂಕರನ ಜಟಾಜೂಟದ ಚಂದ್ರನನ್ನು ಮುಟ್ಟಿ, ಮೆಟ್ಟಿಯಾಯಿತು. ಇನ್ನು ಮುಂದಿನವು ಗ್ರಹ ಗ್ರಹಗಳಿಗೆ ವಿಜ್ಞಾನದ ಸೇತುಕಟ್ಟಿ ಸಾಗಿಹೋಗುವ ದಿನಗಳು. 'ಮಂಗಳ ಲೋಕದ ಅಂಗಳ'ದಲ್ಲಿ ಚೆಂಡಾಟವಾಡುವ ದಿನ ದೂರವಿಲ್ಲ. ಇಂತಹ ದಿನಗಳಲ್ಲೂ ತುಳುನಾಡವರ ಪ್ರಾಚೀನ ನಂಬಿಕೆಯ ನೆಲೆಗಳು ಅಲುಗಾಡದೆ ಭದ್ರವಾಗಿವೆ ಎನ್ನುವುದು ಸೋಜಿಗದ ಸಂಗತಿ. ತುಳುವರು ಇಂದು ಕೂಡಾ ಆ ಹಳೆಯ ನಂಬಿಕೆಯ ನೆರಳಲ್ಲಿ ಹಾಯಾಗಿ ಹೆಚ್ಚಿನ ಮಾನಸಿಕ ತೊಳಲಾಟವಿಲ್ಲದೆ ಸುಖವಾಗಿ ಬಾಳುತ್ತಿದ್ದಾರೆ!

ಇಷ್ಟು ದೀರ್ಘಕಾಲದಿಂದ ಒಂದು ಜನಸಮೂಹವನ್ನು ಒಂದಾಗಿ ಬೆಸೆದು, ಸುವ್ಯವಸ್ಥಿತವಾಗಿ ನಡಿಸಿಕೊಂಡು ಬಂದ ನಂಬಿಕೆಯ ನೆಲೆ - ಶಕ್ತಿ ಅದು ಎಷ್ಟೇ ಅನಾಗರಿಕವಾಗಿದ್ದರೂ ಅತ್ಯಂತ ಶ್ರೇಷ್ಠವಾದುದು ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಮುಂದೆ ವಿಜ್ಞಾನವೂ ಕೈಜೋಡಿಸಿ ಮುಗಿದುಕೊಂಡರೆ ಆಶ್ಚರ್ಯಪಡಬೇಕಾದುದೇನೂ ಇಲ್ಲ!

ಕಾವ್ಯ ಹುಟ್ಟುವ ಬಗೆ.....

ಡಾ|| ನಾ. ಮೊಗಸಾಲೆ

ಕಾವ್ಯ ಹೇಗೆ ಹುಟ್ಟುತ್ತದೆ ಎಂದು ಅನೇಕರಿಗೆ ಕುತೂಹಲ; ಇನ್ನು ಕೆಲವರಿಗೆ ಆಶ್ಚರ್ಯ! ಸ್ವತಃ ಕವಿಯಾದವರಿಗೆ ಸಹ ಒಳ್ಳೆ ಕಾವ್ಯ ಹೇಗೆ ಹುಟ್ಟುತ್ತದೆ ಎನ್ನವುದನ್ನು ಪ್ರಾಯಃ ಖಚಿತವಾಗಿ ಹೇಳುವುದು ಸಾಧ್ಯವಾಗದು. ಹಾಗಾಗಿಯೇ ಕವಿಗಳಿಗೂ, ಕಾವ್ಯ ಪ್ರಿಯರಿಗೂ ಕಾವ್ಯ ಅಂದರೆ ಜೀವನದಷ್ಟೇ ಮುಖ್ಯ. ಮನುಷ್ಯಜೀವನದೊಂದಿಗೆ ಕಾವ್ಯವು ಹುಟ್ಟಿದೆ. ಮನುಷ್ಯಜೀವನ ಈ ಜಗತ್ತಿನಲ್ಲಿ ಎಂದಿನ ತನಕ ಇರುತ್ತದೋ ಆ ತನಕವೂ ಅದು ಇರುತ್ತದೆ.

ಮನುಷ್ಯಜಗತ್ತಿನಲ್ಲಿ ಹೇಗೆ ಹುಟ್ಟಿದ ಎನ್ನುವುದು ವೈಜ್ಞಾನಿಕವಾಗಿ ತುಂಬ ಕುತೂಹಲದ ವಿಚಾರ. ಮನುಷ್ಯನ ಹುಟ್ಟಿಗಿಂತಲೂ ಈ ಜಗತ್ತಿನಲ್ಲಿ ಆಶ್ಚರ್ಯಕರವಾದದ್ದು ಇದ್ದರೆ ಅದು ಸಾಹಿತ್ಯ. ನಾಗರಿಕತೆಯ ತುತ್ತತುದಿಯಲ್ಲಿರುವ ನಮಗೆ ಇನ್ನೂ ಒಳ್ಳೆ ಸಾಹಿತ್ಯ ಏನು ಎಂದು ಖಚಿತ ನಿರ್ಧಾರಕ್ಕೆ ಬರಲು ಸಾಧ್ಯವಾಗದಿರುವುದರಿಂದಲೇ ಮನುಷ್ಯನ ಶ್ರೇಷ್ಠತೆಯ ಕಲ್ಪನೆ ಅವನ ಬದುಕಿಗಿಂತ ದೊಡ್ಡದು. ಯಾವಾಗ ಒಳ್ಳೆ ಸಾಹಿತ್ಯ / ಕಾವ್ಯ ಅಂದರೆ ಹೀಗೆ ಎಂದು ನಾವು ಒಂದು ಖಚಿತ ನಿರ್ಧಾರಕ್ಕೆ ಬರುತ್ತೇವೋ ಆಗ ಪ್ರಾಯಃ ಒಳ್ಳೆ ಸಾಹಿತ್ಯದ ಸೃಷ್ಟಿ ನಿಂತು ಹೋಗುತ್ತದೆ. ಆದ್ದರಿಂದಲೇ ಒಳ್ಳೆಕಾವ್ಯ / ಸಾಹಿತ್ಯದ ಕಡೆಯ ತುಡಿತ ಇರುವುದರಿಂದಲೇ ನಾವಿನ್ನೂ ಬರೆಯುತ್ತಿದ್ದೇವೆ; ನಿರೀಕ್ಷೆಯಲ್ಲಿದ್ದೇವೆ. ಈಗ ನಮ್ಮ ನಡುವೆ ಒಳ್ಳೆಯ ಸಾಹಿತ್ಯ /ಕಾವ್ಯ ಇಲ್ಲವೆಂದು ಇದರರ್ಥ ಅಲ್ಲ. ಈಗ ಇರುವುದಕ್ಕಿಂತಲೂ ಮೇಲ್ಮಟ್ಟದ ಸಾಹಿತ್ಯದ ಕಡೆಗೆ ನಮ್ಮ ಒಲವಿದೆ ಎಂದೇ ಈ ಮಾತಿನ ಅರ್ಥ. ಮಾತನಾಡಲು ಬಾರದವನಿಗೆ (ಮೂಕನಿಗೆ) ಭಾಷೆಯ ಸಾಧ್ಯತೆಗಳು ಹೇಗೆ ಅಸಾಧ್ಯವೋ ಹಾಗೆ ನಾವು ಮಾತು ಮಂತ್ರಕರಣಗಳಿಂದ ಕಾವ್ಯ /

ಸಾಹಿತ್ಯವನ್ನು ಮುಟ್ಟಲು ಪ್ರಯತ್ನಿಸುತ್ತಿದ್ದೇವೆ. ಆದ್ದರಿಂದಲೇ ಕಾವ್ಯ ಹುಟ್ಟುವ ಬಗ್ಗೆ ಕುತೂಹಲ ಹಿಂದೆಯೂ ಇತ್ತು; ಈಗಲೂ ಇದೆ.

ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಈ ಹಿಂದೆಯೂ ಈಗಲೂ ಕಾವ್ಯವೇ ಕೇಂದ್ರಬಿಂದು. ಈ ಅರ್ಥದಲ್ಲೇ ಇಡೀ ಸಾಹಿತ್ಯ ಜಗತ್ತನ್ನು ನಮ್ಮ ಹಿರಿಯರು ಕಾವ್ಯ ಎಂದೇ ಕರೆದರು. ಕಾವ್ಯದಲ್ಲೂ ನಾಟಕವೇ ಶ್ರೇಷ್ಠ ಎಂಬ ಪರಿಕಲ್ಪನೆ ಹಿಂದೆ ಇತ್ತು. ಮಹಾಕವಿ ಕಾಳಿದಾಸ, ಶೇಕ್ಸ್‌ಪಿಯರ್ ನಿಜವಾಗಿಯೂ ಕವಿಗಳಾಗಿದ್ದೂ ನಾಟಕಕಾರರೆಂದೇ ಮಾನ್ಯರಾದವರು. ಇಂದು ಈ ವಿಶಾಲಾರ್ಥದ ಕಾವ್ಯವನ್ನೇ ಸಣ್ಣಕತೆ, ಕಾದಂಬರಿ, ನಾಟಕ, ಲಲಿತ ಪ್ರಬಂಧ, ಪದ್ಯ ಎಂದೆಲ್ಲ ಪ್ರಾಯಃ ಅದರ ಬಾಹ್ಯ ಸ್ವರೂಪದಿಂದ ವಿಂಗಡಿಸಿದ್ದರೂ ಈ ಎಲ್ಲವುಗಳ ಓದಿನಿಂದ ಆಗುವ ಅನುಭವವನ್ನು ಈಗಲೂ ನಾವು ಕಾವ್ಯಾನುಭವವೆಂದೇ ಹೇಳುತ್ತೇವೆ. ಇಂದಿಗೂ ಸಾಹಿತ್ಯದ ಉಳಿದ ಪ್ರಕಾರಗಳಿಗಿಂತ ಕಾವ್ಯ ಪ್ರಕಾರಕ್ಕೇ ನಾವು ಹೆಚ್ಚು ಒಲವು ತೋರಿಸುತ್ತಿದ್ದೇವೆ. ಕವಿಗೆ ಇರುವಷ್ಟು ಗೌರವ - ಇಂದಿಗೂ ಸಣ್ಣಕಥೆಗಾರನಿಗಾಗಲೀ, ಕಾದಂಬರಿಕಾರನಿಗಾಗಲೀ ನಾವು ಕೊಡುತ್ತಿಲ್ಲ. ಕವಿಗೋಷ್ಠಿಯ ಆಕರ್ಷಣೆ ವಿಚಾರಗೋಷ್ಠಿಗಿಂತ ಕಥಾವಾಚನ ಗೋಷ್ಠಿಗಿಂತ ಈಗಲೂ ದೊಡ್ಡದೇ. ಇಂದಿನ ಕವಿಗೋಷ್ಠಿಗಳಲ್ಲಿ ಓದಲಾಗುವ ಅನೇಕ ಕವಿತೆಗಳು ಅರ್ಥವಾಗದೇ ಇದ್ದರೂ ಅಥವಾ ಅರ್ಥ ಇಲ್ಲದೇ ಇದ್ದರೂ ಅವುಗಳಲ್ಲಿ ಕೆಲವಕ್ಕೆ ನಿರೀಕ್ಷಿತ ಕಾವ್ಯದ ಆಕರ್ಷಣೆ ಇದೆ ಎಂದರೆ ನಾವು ಅರಸಿಕರಲ್ಲ ಎನ್ನುವುದು ಎಷ್ಟು ಸತ್ಯವೋ ಅಷ್ಟೇ ಕಾವ್ಯಕ್ಕೆ ಇನ್ನೂ ಜನಪ್ರಿಯತೆ ಇದೆ ಎಂದೇ ಅರ್ಥ.

ಕಾವ್ಯಕ್ಕಿರುವ ಈ ಆಕರ್ಷಣೆಯಿಂದಲೇ. ಜೀವನದಲ್ಲಿ ಒಮ್ಮೆಯಾದರೂ ಅದು ಅರೆಗಳಿಗೆ ಹೊತ್ತೇ ಆಗಿರಲಿ - ಕವಿಯಾಗದ ಮನುಷ್ಯರು ನಮ್ಮಲ್ಲಿ ಇರಲಿಕ್ಕಿಲ್ಲ. ನಾವೆಲ್ಲರೂ ವಿಶಾಲಾರ್ಥದಲ್ಲಿ ಕವಿಗಳೇ. ಕಾವ್ಯ ಬರೆಯದವ ಕವಿ ಅಲ್ಲ ಎಂಬ ತಪ್ಪು ಕಲ್ಪನೆ ನಮಗಿದೆ. ಕವಿ ಎಷ್ಟು ದೊಡ್ಡವನೆಂಬ ಭಾವನೆ ನಮಗಿದೆಯೋ - ಅಷ್ಟೇ ಕಾವ್ಯಪ್ರೇಮಿಯೂ ದೊಡ್ಡವನು ಎಂದು ನಂಬುವವನು ನಾನು. ಕಾವ್ಯಕ್ಕೆ ಹೊಸ ಸಾಧ್ಯತೆಗಳು, ಹೊಸ ಅರ್ಥಗಳು ತೆರೆದುಕೊಳ್ಳುವುದು ಕಾವ್ಯಪ್ರೇಮಿಯಿಂದ ಎನ್ನುವುದರಿಂದಲೇ - ಕವಿಯಷ್ಟೇ ಕಾವ್ಯಪ್ರೇಮಿಯೂ ನಮಗೆ ಮುಖ್ಯ.

ನಾವೆಲ್ಲರೂ ಕವಿಗಳು ಎಂದೆ ವಿಶಾಲಾರ್ಥದಲ್ಲಿ! ಹೇಗೆ ಎಂದು ಪ್ರಶ್ನಿಸುವುದು ತಪ್ಪಲ್ಲ. ನಮ್ಮ ತರುಣ ತರುಣಿಯರಲ್ಲಿ ಲೈಂಗಿಕ ಆಸಕ್ತಿ ಹುಟ್ಟುವ ದಿನಗಳಲ್ಲಿ ಅವರು ಸಹಜವಾಗಿಯೇ ಕವಿಗಳಾಗುತ್ತಾರೆ. ಇದು ವೈಜ್ಞಾನಿಕ ಸತ್ಯ. ಕನಸು ಕಾವ್ಯ ಶರೀರದ ಒಂದು ಭಾಗ. ಪ್ರೇಮಿಗಳಿಗಂತೂ ಕಾವ್ಯವೇ ಪ್ರೇಮಿಯಾಗಿ ಕಾಣಿಸಿಕೊಳ್ಳುತ್ತದೆ. ನಮ್ಮ ಸ್ತ್ರೀಯರ ನಾಚಿಕೆ ಎಂಬ ಭಾವ ವಿಶೇಷ ಕೂಡಾ - ಕಾವ್ಯದ ಒಂದು ಮುಖವೇ. ಪುರುಷ ಪೌರುಷದ ಹಿಂದಿರುವ ಅಹಂಕಾರ ಕೂಡಾ ಕಾವ್ಯ ಅಲ್ಲ ಎಂದು ಧಿಕ್ಕರಿಸಲಾಗುವುದಿಲ್ಲ. ವೃದ್ಧರಲ್ಲಿ ಉಳಿದಿರಬಹುದಾದ ಜೀವನೋತ್ಸಾಹವನ್ನು ನಾವು ಕಾವ್ಯ ಅನ್ನಬಹುದು. ಪರೋಕ್ಷವಾಗಿ ಕಾವ್ಯ ಮೌನವಾಗಿರಬಹುದು. ಎಂದರೆ ಅದು ಅವೈಜ್ಞಾನಿಕ ಅಥವಾ ಅಸಾಹಿತ್ಯಿಕ ವಿಚಾರ ಎಂದು ನಾನು ಹೇಳಲಾರೆ.

ಆದರೆ ಕಾವ್ಯ ಅಂದರೆ ನಮ್ಮ ಮೇಲ್ನೋಟದ ಕಲ್ಪನೆ ಏನಿದೆಯೋ ಅದು ಕಾವ್ಯ ಅಲ್ಲ. ಹೊರಮೈಯ ನೋಟದಿಂದ ಗದ್ಯಕ್ಕೆ ಭಿನ್ನವಾಗಿ ಅಂದರೆ ಸಣ್ಣ ಸಣ್ಣ ಸಾಲುಗಳನ್ನು ಅಥವಾ ಗದ್ಯದ ತುಣುಕಗಳನ್ನೇ ಒಂದರ ಕೆಳಗೊಂದು ಬರೆದರೆ ಅದು ಕಾವ್ಯ ಎಂದು ನಾವು ಒಪ್ಪಿಕೊಂಡಿದ್ದೇವೆ. ಪ್ರಾಯಃ ಇಂಥವು ಅತ್ತ ಗದ್ಯವೂ ಆಗದೆ ಇತ್ತ ಕಾವ್ಯವೂ ಆಗದೇ ಪದ್ಯವೇ ಆಗಿರಬಹುದು. (ಪದ್ಯವನ್ನೂ ಅವಮಾನಿಸುವ ಇಂತಹ ಪದ್ಯಗಳು ಇರಬಹುದು ಆ ಮಾತು ಬೇರೆ!) ಪದ್ಯ ಬೇರೆ ಕಾವ್ಯ ಬೇರೆ ಎಂಬುದನ್ನು ನಾವು ತಿಳಿದುಕೊಳ್ಳದೆ ಇದ್ದರೆ ನಮಗೆ ಕಾವ್ಯದ ಬಗ್ಗೆ ಮಾತನಾಡುವುದೇ ಕಷ್ಟ. ಸ್ವಲ್ಪ ಪರಿಶ್ರಮ ಮತ್ತು ಸಾಹಿತ್ಯದ ಅನುಭವ ಇದ್ದರೆ ಪದ್ಯವನ್ನು ಪ್ರಾಯಃ ಯಾರೂ ಬರೆಯಬಹುದೇನೋ? ಪದ್ಯ ಬರೆದ ಕವಿಗೆ ಕಾವ್ಯ ಬರೆಯಲು ಸಾಧ್ಯ ಎಂದು ನಾನು ಹೇಳಲಾರೆ. ನಿಜದ ಅರ್ಥದಲ್ಲಿ ಹೇಳುವುದಾದರೆ ಪದ್ಯದ ಸಾಧ್ಯತೆಗಳನ್ನು ಮೀರಿದ, ಶ್ರೇಷ್ಠತೆಯತ್ತ ವಾಲಿದ ಅಥವಾ ಶ್ರೇಷ್ಠವೇ ಆಗಿರುವ ಪದ್ಯವೇ(?) ಕಾವ್ಯ.

ಇದು ಹೇಗೆ? ಎಂದು ತಿಳಿಯಬೇಕಾದರೆ ಮೊದಲು 'ಕವಿ' ಎಂಬ ಕಲ್ಪನೆಯನ್ನು ನಾವು ಖಚಿತಪಡಿಸಿಕೊಳ್ಳಬೇಕು. ಒಂದು ವಸ್ತುವನ್ನು ನೋಡಿದಾಗ ಆ ವಸ್ತುವಿಗೆ ಭಾವನಾತ್ಮಕವಾಗಿ ಮಗುವಿನ ಹಾಗೆ ಪ್ರತಿಕ್ರಿಯೆ ತೋರುವವನೇ ಕವಿ ಎನ್ನುತ್ತಾರೆ. ಹಿರಿಯ ಕವಿ ಡಾ|| ಸುಮತೀಂದ್ರ ನಾಡಿಗ್ ಅವರು ಈ ಮುಗ್ಧಭಾವಸ್ಥಿತಿ ತರುಣರಲ್ಲಿ ಸಹಜ. ಆದರೆ ಜೀವಮಾನವಿಡೀ ಇದನ್ನು ಉಳಿಸಿಕೊಂಡರೆ ಮಾತ್ರ ಆತ ಕವಿಯಾಗಬಹುದು. ಇಂಥವರು ಯಾವತ್ತೂ ಪದ್ಯ ಬರೆಯಲು ಸಾಧ್ಯ. ಈ 'ಕವಿ ಹೃದಯ'ದೊಂದಿಗೆ ಅಸಾಧಾರಣವಾದ ಪ್ರತಿಭೆ, ಪ್ರತ್ಯುತ್ಪನ್ನಮತಿ, ಅಭ್ಯಾಸ, ಅನುಭವಗಳಿಂದ - ಯಾರು ಪದ್ಯ ಬರೆಯುತ್ತಾನೋ ಆತನ ಪದ್ಯಗಳು - ಪದ್ಯದ ಸಾಧ್ಯತೆಗಳಾಚೆ ಅರಳಿ ಕಾವ್ಯವಾಗುತ್ತದೆ. ದ.ರಾ.ಬೇಂದ್ರೆ, ಕುವೆಂಪು, ಗೋಪಾಲಕೃಷ್ಣ ಅಡಿಗ, ಪು.ತಿ.ನ., ಕೆ.ಎಸ್.ನರಸಿಂಹ ಸ್ವಾಮಿ ಮೊದಲಾದವರು ಈ ಅರ್ಥದಲ್ಲಿ ಕವಿಗಳು ಮತ್ತು ಅವರ ಪದ್ಯಗಳಲ್ಲಿ ಹಲವು ನಿಜಕ್ಕೂ ಕಾವ್ಯಗಳಾಗಿವೆ.

ಕವಿಗಳಿಗೆ ಕವಿಗಳಾಗದವರಿಗೂ (ಕಾವ್ಯಪ್ರೇಮಿಗಳಿಗೂ) ಈಗ ಏನು ವ್ಯತ್ಯಾಸ ಎಂಬ ಪ್ರಶ್ನೆ ನನ್ನ ಇದಿರಿಗಿದೆ. ಕವಿಯಾದವ ತನ್ನ ಅನುಭವವನ್ನು ಅಥವಾ ಭಾವಸ್ಥಿತಿಯನ್ನು ಹೇಗೆ ಅಭಿವ್ಯಕ್ತಪಡಿಸಿದರೆ ಕಾವ್ಯವಾಗುತ್ತದೆ ಎಂದು ತಿಳಿದಿರುತ್ತಾರೆ. ಉಳಿದವರಲ್ಲಿ ಈ ಅಭಿವ್ಯಕ್ತಿಯ ಸಾಧ್ಯತೆ ಇರುವುದಿಲ್ಲ. ಆದರೆ ಆ ಕಾವ್ಯದ ಮೂಲಕ ಇವರು ಕವಿ ಮುಟ್ಟಿದ ಭಾವಸ್ಥಿತಿಯನ್ನು ಅನುಭವವನ್ನು ಭಾವನಾತ್ಮಕವಾಗಿ ತಮ್ಮೊಳಗೆ ಆಹ್ವಾನಿಸಿಕೊಳ್ಳಬಲ್ಲರು. ಆದ್ದರಿಂದಲೇ ಆತ ಕಾವ್ಯಪ್ರೇಮಿ. ಹಾಗೇ ಕಾವ್ಯದೊಳಗೆ ಹೊಕ್ಕು ಅದರ ಹೊರನಿಂತು ಯೋಚಿಸಬಲ್ಲವ ಕಾವ್ಯಪ್ರೇಮಿಯಾಗಿದ್ದೂ ವಿಮರ್ಶಕ ಅನಿಸಿಕೊಳ್ಳುತ್ತಾನೆ. ಕಾವ್ಯ ಚಕ್ರದ ಯಶಸ್ಸಿಗೆ ಕವಿ, ಕಾವ್ಯಪ್ರೇಮಿ, ವಿಮರ್ಶಕ ಈ ಮೂವರೂ ಮುಖ್ಯ. ಬದುಕು - ಕಾವ್ಯಕ್ಕಿಂತ ಮುಖ್ಯ ಎಂದು ನಾವು ಒಪ್ಪಿಕೊಂಡಿದ್ದರೂ ಅನೇಕ ಸಲ ನಮಗೆ ಬದುಕಿಗಿಂತ ಕಾವ್ಯ ಮುಖ್ಯ ಅನಿಸುವುದು (ದ್ವಂದ್ವ ಇರುವುದು) ಕಾವ್ಯದ ಈ ಶ್ರೇಷ್ಠತೆಯಿಂದ.

ಪ್ರತಿಯೊಂದು ಕಾವ್ಯದಲ್ಲೂ ಒಬ್ಬ ಕಥಾನಾಯಕನಿರುತ್ತಾನೆ. ಒಂದಲ್ಲ ಒಂದು ಸಂದರ್ಭದಲ್ಲಿ ಪ್ರತಿಯೊಬ್ಬರೂ ತನಗೆ ಆದರ್ಶ ಎನ್ನುವಂತಹ ವ್ಯಕ್ತಿಯೊಂದಿಗೆ ತನ್ನ ಅಂತರಂಗವನ್ನು ತೆರೆದಿಡುತ್ತಾನೆ. ಕವಿಯೂ ಇದಕ್ಕೆ ಅಪವಾದವಲ್ಲ. ಕವಿಗೆ ಈ ಆದರ್ಶದ ವ್ಯಕ್ತಿ ಅಂದರೆ ಅವನ ಕಾವ್ಯದೊಳಗೆ ಮೂರ್ತ ಸ್ವರೂಪಿಯಾಗಿರುವ ಅಮೂರ್ತ ಕಥಾನಾಯಕನೇ. ಈ ಕಥಾನಾಯಕ ಕವಿಯ ಪ್ರತಿರೂಪವೂ ಹೌದು; ಅನುಭವವೂ ಹೌದು; ಅಮೂರ್ತಸ್ವರೂಪಿಯೂ ಹೌದು! ಈ ಅಮೂರ್ತ ಕಥಾನಾಯಕನೊಂದಿಗೆ ಮೂರ್ತಸ್ವರೂಪಿ ಕವಿ ನಡೆಸುವ ಸಂವಾದ, ಆ ಸಂವಾದದ ಹಿಂದೆ ಕವಿಯ ಓದು ಮತ್ತು ಅನುಭವದಿಂದ ಸಾಧ್ಯವಾದ ವಿಮರ್ಶಾಪ್ರಜ್ಞೆ, ಏಕಾಗ್ರತೆ, ಭಾಷಾ ಸಂಪತ್ತು - ಎಲ್ಲ ಸಂಮಿಶ್ರಗೊಂಡಾಗ - ಒಳ್ಳೆ ಕಾವ್ಯ ಸೃಷ್ಟಿಯಾಗುತ್ತದೆ. ಇಲ್ಲಿನ ಪಾಕಕ್ಕೆ ಮೇಲೆ ಹೇಳಿದ ದ್ರವ್ಯಗಳಲ್ಲಿ ಯಾವುದಾದರೊಂದು ಹೆಚ್ಚು ಅಥವಾ ಕಡಿಮೆಯಾದರೆ ಆಗ ಅದು ಕಾವ್ಯವಾಗದೆ ಪದ್ಯವಾಗಿ ಉಳಿಯುತ್ತದೆ. ಉದಾಹರಣೆ -

> ಸುಗ್ಗಿ ಬಂತು! ಸುಗ್ಗಿ ಬಂತು! ಸುಗ್ಗಿ ಮನದ ನಾಡಿಗೆ
> ಹಿಗ್ಗಿ ಆಯಿತಂತೆ ಪ್ರಕೃತಿ ದೇವರಂತೆ ಊರಿಗೆ

ಇಲ್ಲಿ ಕಾವ್ಯಾಂಶ ಇದೆ. ಸುಗ್ಗಿ ನಾಡಿಗೆ ಬಂತೆನ್ನುವುದೇ ಕವಿ ಕಲ್ಪನೆ. ಸುಗ್ಗಿ ಬರುವುದು ಸಹಜ ಮಾತ್ರವಲ್ಲ ಪ್ರಕೃತಿ ನಿಯಮವೂ ನಿಜ. ಆದರೆ ಕವಿ ಉಳಿದ ಋತುಗಳಿಗಿಂತ ಹೆಚ್ಚಿನ ಒತ್ತು ಸುಗ್ಗಿಗೆ ನೀಡುತ್ತಾನೆ. ಯಾಕೆಂದರೆ ಸುಗ್ಗಿಯ ಸಮೃದ್ಧಿ - ಕವಿಯ ಒಳಗೂ ಹೊರಗೂ ತುಂಬಿದೆ. ಹೀಗೆ ತುಂಬುವುದು ಪ್ರಕೃತಿಗೆ ಮಾತ್ರ ಸಾಧ್ಯ. ಈ ಪ್ರಕೃತಿಯೇ ಕವಿಗೆ ದೇವರು. ಆದರೂ ಇದು ಒಳ್ಳೆ ಕಾವ್ಯವಾಗಲಿಲ್ಲ. ಆದರೆ ಒಳ್ಳೆ ಪದ್ಯ ಹೌದು. ಕಾವ್ಯ (ಅಂದರೆ ಒಳ್ಳೆ ಪದ್ಯ) ಇದಕ್ಕಿಂತ ಹೇಗೆ ಭಿನ್ನ ಅನ್ನಲು ಹೊಸ ಪೀಳಿಗೆಯ ಬಹುಮುಖ್ಯ ಕವಿಯಾದ ಶ್ರೀ ಎಸ್. ಮಂಜುನಾಥ್ ಅವರ ನಾಲ್ಕೇ ಸಾಲಿನ ಕಾವ್ಯ (ಹನಿಗವನ) - ಓದಿ

ಕೊಂಬೆ ಮೇಲೋಡಿ ಅಳಿಲು
ಹಣ್ಣೆಲೆಗಳ ಉದುರಿಸಿದೆ
ತಾನೇ ಬರಲಾಗದ ಮಾಗಿ
ಅಳಿಲನ್ನು ಕಳುಹಿಸಿದ

ಮಾಗಿಯಲ್ಲಿ ಎಲೆಗಳು ಉದುರುವುದು ಸಹಜ. ಆದರೆ ಆ ಸಹಜಕ್ಕೆ ಮಾಗಿ ಬರುವುದೇ ಕಾರಣ ಎಂದು ನಾವೆಲ್ಲ ನಂಬಿದ್ದೇವೆ. ಆದರೆ ಕವಿ ಹೇಳುತ್ತಾನೆ ಮಾಗಿ ಬರುವುದು ನಮಗೆ ಯಾರಿಗೂ ತಿಳಿಯಲಿಲ್ಲ, ಅದು ಗೊತ್ತಾದದ್ದು ಅಳಿಲಿನಿಂದ! ಅಷ್ಟೇ ಆಗಿದ್ದರೆ ಅದೂ ಪದ್ಯವೇ. ಆದರೆ ಕವಿ ಆ ಪದ್ಯವನ್ನೇ ಹೇಗೆ ಕಾವ್ಯವಾಗಿಸುತ್ತಾನೆಂದರೆ, ಮಾಗಿ ಇನ್ನೂ ಬರಲಿಲ್ಲ, ಅದು ಬರುತ್ತದೆ ಎನ್ನುವುದಕ್ಕಾಗಿ ಅಳಿಲನ್ನು ಕಳುಹಿಸಿದ ಎಂದು. ಪ್ರಕೃತಿ ಹೇಗೆ ಸತ್ಯವೋ ಅಳಿಲೂ ಕೊಂಬೆಗಳೂ ಅಷ್ಟೇ ಸತ್ಯ ಅಥವಾ ಪ್ರಕೃತಿಯ ಒಂದು ಭಾಗ. ಆದರೆ ಕವಿ ಮಾತ್ರ ಕೊಂಬೆ ಮತ್ತು ಅಳಿಲನ್ನು ಪ್ರಕೃತಿಯಿಂದ ಭಿನ್ನವಾಗಿ ನೋಡುತ್ತಾನೆ. ಸಹಜವಾಗಿರುವುದನ್ನು ಅಸಹಜವಾಗಿ ನೋಡಿ ಆನಂದಿಸುತ್ತಾನೆ. ಮಾತ್ರವಲ್ಲ ನೀವೂ ಪ್ರಕೃತಿಯನ್ನು ಹೀಗೆ ನೋಡಿ ಎಂಬ ಹೊಸ ಒಳನೋಟವನ್ನು ಕೊಡುತ್ತಾನೆ. ಹಣ್ಣೆಲೆ ಮತ್ತು ಮಾಗಿ ಎಂಬ ಶಬ್ದಗಳು ಇಲ್ಲಿ ಶಬ್ದಗಳಾಗಿ ಮಾತ್ರ ಉಳಿಯದೇ ವಿಶೇಷ ಅರ್ಥಕ್ಕೆ ಕಾರಣವಾಗಿವೆ. ಹಣ್ಣೆಲೆ ಎಂದರೆ ಮಾಗಿದ ಎಲೆ ಎಂದೂ ಅರ್ಥವಾಗುತ್ತದೆ. ಮಾಗಿ ಬರುತ್ತದೆಂದರೆ ಮರವೂ ಮಾಗಿ ಅಂದರೆ ಪಕ್ವವಾಗಿ ಅದಕ್ಕೆ ಸಿದ್ಧವಾಗಿದೆ ಎಂದು ಹೇಳಿದ ಹಾಗಾಗುತ್ತದೆ. ಮರ ಮತ್ತು ಅಳಿಲಿಗೆ ಇರುವ ಸಂಬಂಧದ ಹಾಗೆ ಪ್ರಕೃತಿಗೆ ಮತ್ತು ಮಾಗಿಗೆ ಇರುವ ಸಂಬಂಧವೂ ಸಮಾನಾಂತರದಲ್ಲಿ ಚಲಿಸಿ - ವಾಚ್ಯವನ್ನು ಮೀರಿದ ಧ್ವನಿ ಹೊರಹೊಮ್ಮುತ್ತದೆ. ಪ್ರಾಯಃ ಕಾವ್ಯಶರೀರದಲ್ಲಿ ಇರಬೇಕಾದ ಪ್ರಾಣವಾಯು ಈ ಧ್ವನಿಯೇ!

ಮೇಲಿನ ಎರಡು ಕವನಗಳ ಉದಾಹರಣೆಯಿಂದ ಸರಳವಾದ ಅನುಭವವೊಂದನ್ನು ಹೇಗೆ ಸಂಕೀರ್ಣವಾಗಿ ಹೇಳಬಹುದು ಅಥವಾ ಸಂಕೀರ್ಣವಾದ ಅನುಭವವನ್ನು ಹೇಗೆ ಸರಳೀಕರಿಸಬಹುದು ಎಂದು ತಿಳಿಯುತ್ತದೆ. ಪದ್ಯ ಕಾವ್ಯವಾಗುವುದು ಇಲ್ಲವೇ ಕಾವ್ಯವಾಗದೇ ಉಳಿಯುವುದು ಪ್ರಾಯಃ ಹೀಗೇ.

ಆದರೆ ಈ ಎರಡೂ ಕವನಗಳನ್ನು ನೋಡಿದಾಗ ಒಂದು ಸಂಶಯ ಕಾಡಬಹುದು. ಮೊದಲಿನ ಪದ್ಯದಲ್ಲಿ ಪದ್ಯಗಂಧಿಗುಣ ಇತ್ತು, ಎರಡನೆಯದರಲ್ಲಿ ಗದ್ಯಗಳಲ್ಲಿ ಗುಣವೇ - ಪದ್ಯಗಂಧಿ ಗುಣಕ್ಕಿಂತ ಹೆಚ್ಚಿದ್ದೂ ಅದು ಕಾವ್ಯ (ಒಳ್ಳೆಯದು ಎಂಬ ಅರ್ಥದಲ್ಲಿ) ವಾದದ್ದು ಹೇಗೆ? ಎಂದು. ನಿಜ, ಇಂದಿನ ದಿನಗಳಲ್ಲಿ, ಪದ್ಯ ಯಾವುದು ಗದ್ಯ ಯಾವುದು ಎಂದು ತಿಳಿಯದ ಹಾಗೆ ಪದ್ಯ / ಕಾವ್ಯಗಳು ಬರುತ್ತಿರುವಾಗ ಗದ್ಯಕ್ಕೂ ಪದ್ಯಕ್ಕೂ ಏನು ವ್ಯತ್ಯಾಸ ಎಂಬ ಪ್ರಶ್ನೆ - ಕಾವ್ಯ ಕುತೂಹಲಿಗಳನ್ನು ಕಾಡುವುದು ಸಹಜ. ಚಿಕ್ಕ ಚಿಕ್ಕ ಸಾಲುಗಳನ್ನು ಒಂದರ ಕೆಳಗೆ ಒಂದರ ಹಾಗೆ ಬರೆದರೆ ಅದು ಪದ್ಯ / ಕಾವ್ಯ ಎಂಬ ತಪ್ಪು ತಿಳಿವಳಿಕೆ ನಮ್ಮಲ್ಲಿದೆ. ಇದು ನವ್ಯಕಾವ್ಯ ನಮ್ಮಲ್ಲಿ ಕಾಣಿಸಿಕೊಂಡ ಅನಂತರ ಆದ ಒಂದು ವಿಚಿತ್ರ (ವಿಶಿಷ್ಟ) ಬೆಳವಣಿಗೆ. ಪ್ರಾಯಃ ನವ್ಯಕಾವ್ಯಕ್ಕಿಂತ ಮೊದಲು ಗದ್ಯ ಪದ್ಯಗಳ ಪ್ರಭೇದಗಳ ಬಗ್ಗೆ ನಮಗೆ ಸ್ಪಷ್ಟ ಕಲ್ಪನೆ ಇತ್ತು. ಪದ್ಯಕ್ಕೆ ಆದಿ / ಅಂತ್ಯ ಪ್ರಾಸಬೇಕು, ಛಂದಸ್ಸೂ ಬೇಕು ಎಂದು ನಾವೆಲ್ಲ ಒಪ್ಪಿಕೊಂಡವರೂ ಆಗಿದ್ದೆವು. ನವ್ಯ ಕಾವ್ಯ - ಸಂಕೀರ್ಣತೆಯ ಹೆಸರಿನಲ್ಲಿ ಇದನ್ನೆಲ್ಲ ಬಡಿದೋಡಿಸಿತು ಎಂಬ ಆರೋಪದಲ್ಲಿ ಸತ್ಯವೂ ಇಲ್ಲದೆ ಇಲ್ಲ. ಆದರೆ ನಮ್ಮ ಬಹುಮುಖ್ಯ ಕವಿಗಳಾದ ಗೋಪಾಲಕೃಷ್ಣ ಅಡಿಗ, ಗಂಗಾಧರ ಚಿತ್ತಾಲ, ರಾಮಚಂದ್ರ ಶರ್ಮ, ಲಂಕೇಶ್ - ಮೊದಲಾದವರು ನಮ್ಮ ಹಿಂದಿನ ಕಾವ್ಯ ಧೋರಣೆಗಳನ್ನು ಮುರಿದರಾದರೂ ಅವರ ಕಾವ್ಯದಲ್ಲಿ ಕಾವ್ಯಕ್ಕೆ ಅದರದೇ ಆದ ಹೊಸ ಛಂದಸ್ಸಿನ ಹೊಸಲಯದ ಗತ್ತನ್ನೂ ತಂದರೆಂಬುದನ್ನು ಮರೆಯಬಾರದು. ಆದರೆ ಅವರ ನಂತರ ಬಂದ ಅವರ ಮಟ್ಟಕ್ಕೆ ಏರದ ಎರಡನೇ ದರ್ಜೆಯ ಕವಿಗಳು (ಎಲ್ಲರೂ ಅಲ್ಲ) ಗದ್ಯಪದ್ಯದ ಪ್ರಭೇದವನ್ನು ಅಳಿಸಿ ಹಾಕಿದರು. ಇದರಿಂದಾಗಿ ಕಾವ್ಯವು ಕುಲಗೆಟ್ಟಿತು ಅದರ ಜನ ಪ್ರಿಯತೆಯೂ ಮಂಕಾಯಿತು ಎಂಬುದನ್ನು ನಿಷ್ಠುರವಾಗಿಯೂ ನಾವೆಲ್ಲ ಒಪ್ಪಿಕೊಳ್ಳಲೇ ಬೇಕಾಗಿದೆ. (ಈಗ ಹಳಿತಪ್ಪಿದ ಕಾವ್ಯದ ಹೊರಮೈ - ಮತ್ತೆ ಹಳಿಯ ಮೇಲೆ ಬರಲು ಹವಣಿಸುತ್ತಿದೆ ಎನ್ನುವುದೇ ಈ ನನ್ನ ಆರೋಪಕ್ಕೆ ಸಾಕ್ಷಿ!)

ನಮ್ಮ ಬದ್ಧ ಸಾಹಿತ್ಯ ಪ್ರಕಾರಗಳಾಗಿರುವ ಮಂತ್ರಗಳು, ದಾಸರ ಪದಗಳು, ಯಕ್ಷಗಾನದ ಪ್ರಸಂಗಗಳು, (ಕೆಲವು ಅಪವಾದಗಳು ಇವೆ) ಅನುಭಾವೀ ಗೀತೆಗಳು, ಸಿನಿಮಾ ಪದ್ಯಗಳು - ನಿಜಕ್ಕೂ ಪದ್ಯಗಳೇ! ಇದರರ್ಥ ಅವು ಕಳಪೆಗಳೆಂದಲ್ಲ. ಅವು ಒಂದು 'ಉದ್ದೇಶ'ಕ್ಕಾಗಿಯೇ ರಚಿಸಲ್ಪಟ್ಟವು ಎಂದು ಅರ್ಥ. ಕಾವ್ಯದಲ್ಲಿ ಇಂಥ 'ಉದ್ದೇಶ' ಇರುವುದಿಲ್ಲ; ಇರುವುದು ಸಾಧ್ಯವೂ ಅಲ್ಲ. ಆದರೆ ಶಿವಶರಣರ ವಚನಗಳು ಇದಕ್ಕೆ ಅಪವಾದ. ಅವುಗಳು ಅನುಭಾವೀ ಸಾಹಿತ್ಯವಾಗಿದ್ದೂ (ಉದ್ದೇಶ ಇದ್ದೂ) ಕಾವ್ಯದ ಎಲ್ಲ ಸಾಧ್ಯತೆಗಳನ್ನು ಒಳಗೊಂಡಿರುವುದರಿಂದ ನಮ್ಮ ಶ್ರೇಷ್ಠ ಕಾವ್ಯ ಪರಂಪರೆಗೆ ಸೇರುತ್ತವೆ, ಮಾತ್ರವಲ್ಲ ಎಲ್ಲ ಅರ್ಥದಲ್ಲಿ ಕನ್ನಡದ ಮೊದಲ ನವ್ಯಕಾವ್ಯವೂ ಅವೇ ಆಗಿವೆ. ಇಂಥ ವಚನಗಳಲ್ಲಿರುವ ಪದ್ಯಗಂಧಿ ಗುಣದ ಲಯವನ್ನು ನಿಜವಾದ ನವ್ಯಕಾವ್ಯ ಕಡೆಗಣಿಸಿಲ್ಲ. ಲಯ ಅಂದರೆ ಶಬ್ದಗಳ ಕ್ರಮಬದ್ಧವಾದ ನಡಿಗೆ. ಅದು ನಮ್ಮ ಕನ್ನಡದಲ್ಲಿ ಮಾತ್ರ ಗಣಗಳಿಗೆ ಅನುಸಾರವಾಗಿ ಎರಡು, ಮೂರು, ನಾಲ್ಕು ಮತ್ತು ಐದು ಮಾತ್ರೆಗಳ ಗಣಗಳ ರೂಪದಲ್ಲಿದೆ. ಗದ್ಯದಲ್ಲಿ ಈ ಲಯಕ್ಕೆ ಪ್ರಾಶಸ್ತ್ಯ ಕಡಿಮೆ. ಪದ್ಯದಲ್ಲಿ ಲಯ ಇಲ್ಲವಾದರೆ ಪ್ರಾಯಃ ಅದು ಪದ್ಯವೇ ಆಗಲಾರದು. ಶಿಶುಗೀತೆಯಾದರೂ ಪಂಜೆ ಮಂಗೇಶರಾಯರ ತೆಂಕಣ ಗಾಳಿಯಾಟದ ಲಯವು ಲಯ ಹೇಗಿದ್ದರೆ ಚೆನ್ನ ಎಂಬುದಕ್ಕೆ ಮಾದರಿ.

> ಗಿಡಗಿಡದಿಂ ಚಿಲು ಗೊಂಚಲು ಮಿಂಚಲು
> ಮಿಡಿಯನು ಹಣ್ಣನು ಉದುರಿಸಿ ಕೆದರಿಸಿ
> ಎಡದಲಿ ಬಲದಲಿ ಕೆಲದಲಿ ನೆಲದಲಿ
> ಪಡುವಣ ಮೋಡವ ಬೆಟ್ಟಕೆ ಘಟ್ಟಕೆ

ಹೀಗೆ ಮುಂದುವರಿಯುವ ಈ ಪದ್ಯ ತನ್ನ ನಾಟಕೀಯ ಗುಣದಿಂದ ನಮ್ಮ ಕಣ್ಣೆದುರಿಗೆ ತೆಂಕಣ ಗಾಳಿಯ ಒಂದು ಅದ್ಭುತ ಭಯಾನಕ (ರುದ್ರ ರಮಣೀಯ) ಚಿತ್ರವನ್ನು ತೆರೆದಿಡುತ್ತದೆ. ಅಡಿಗರ ಲಯಸಿದ್ಧಿಯೂ ಇದೇ ತೆರನಾದದ್ದು - ಪ್ರಾರ್ಥನೆ ಕವನದ ಒಂದು ಭಾಗ ಹೀಗಿದೆ :

> ಕಳುಹಿಸಯ್ಯ ಬಳಿಗೆ ನಿಜದ ತೊಡೆಗಳ
> ಆತ್ಮ ಹೊಕ್ಕು ತಿಕ್ಕಲು ತಕ್ಕ ಸುಕ್ಕಿರದ ಹೊಸ ತೊಗಲುಗಳ

ಕಾವ್ಯದಲ್ಲಿ ಇರಬೇಕಾದ ಇನ್ನೊಂದು ಮುಖ್ಯಅಂಶ ಭಾವನೆ. ಭಾವನೆ ಅಂದರೆ ವಸ್ತುವಿಗೆ ಅಥವಾ ಕ್ರಿಯೆಗೆ ನಾವು ವ್ಯಕ್ತಪಡಿಸುವ ಪ್ರತಿಕ್ರಿಯೆ. ಇದು ಎಲ್ಲರಲ್ಲೂ ಒಂದೇ ರೀತಿಯಾಗಿ ಇರಬೇಕಾಗಿಲ್ಲ. ಒಂದು ಸುಂದರವಾದ ಹೂವನ್ನು ನೋಡಿದಾಗ ಒಬ್ಬ ತರುಣನಿಗೆ ಒಂದು ಸುಂದರಿಯಾದ ಹುಡುಗಿಯ ನೆನಪಾಗಬಹುದು. ವಿಧುರನಿಗೆ ಕಳಕೊಂಡ ತನ್ನ ಪತ್ನಿಯ ನೆನಪಿಗೆ ಕಾರಣವಾಗಬಹುದು. ವೃದ್ಧನಿಗೆ ಬದುಕು ನಶ್ವರ ಎಂದು ಅದು ಹೇಳಿದ ಹಾಗೆ ಅನಿಸಬಹುದು. ಕಾವ್ಯದಲ್ಲಿ ಬೇರೆ ಬೇರೆ ಭಾವನೆಗಳ ಒಂದು ಸಂಕೀರ್ಣ ಸ್ಥಿತಿಯನ್ನು ಪ್ರತಿಭಾವಂತ ಕವಿ ನಿರ್ಮಿಸಬಲ್ಲ. ಆದ್ದರಿಂದ ಅಲ್ಲಿನ ಕವಿಯ ನಿಲುವು ಅತಾರ್ಕಿಕವಾಗುತ್ತದೆ. ಅದು ಭಾವಾತಿರೇಕವನ್ನು ಮೀರಿ ಒಂದು ಮನುಷ್ಯಹೃದಯ ಹೀಗೂ ಯೋಚಿಸಲು ಸಾಧ್ಯ ಎಂಬುದನ್ನು ತೋರಿಸಿಕೊಡುವುದಲ್ಲದೆ, ಜಡಕಟ್ಟಿ ಹೋಗಿರಬಹುದಾದ ನಮ್ಮ ಬುದ್ಧಿ ಭಾವಗಳನ್ನು ಬಡಿದೆಬ್ಬಿಸಿ ತನ್ಮೂಲಕ ಚೈತನ್ಯ ತುಂಬಿ ನಮ್ಮ ಅರಿವನ್ನು ಹೆಚ್ಚಿಸಲು ಸಾಧ್ಯ.

ಒಳ್ಳೆ ಕಾವ್ಯಗಳಲ್ಲಿ ಪದ್ಯಗಳಲ್ಲಿ ಕಾಣಲಾರದ ಪ್ರತಿಮೆಗಳು ಇರಬೇಕಾಗುತ್ತದೆ. ಪ್ರತಿಮೆ ಅಂದರೆ ಮೂರ್ತಿ, ಹೋಲಿಕೆ, ಬೊಂಬೆ ಎನ್ನುವ ಅರ್ಥಗಳೂ ಇವೆ. ಅದನ್ನು ಡಾ|| ಸುಮತೀಂದ್ರ ನಾಡಿಗರು ಹೀಗೆ ವಿವರಿಸಿದ್ದಾರೆ : ''ಇಂದ್ರಿಯ ಗ್ರಾಹ್ಯವಾದ, ತಟ್ಟನೆ ನಮ್ಮ ಮನವನ್ನು ಸೆಳೆದು ನಮ್ಮ ಭಾವನೆ ಮತ್ತು ಬುದ್ಧಿಗೆ ರೆಕ್ಕೆಕೊಡುವ ಶಕ್ತಿಯುಳ್ಳ, ಕಾಲದೇಶಗಳನ್ನು ಮೀರುವ ಶಕ್ತಿಯನ್ನು ನಮಗೆ ಕೊಡುವ ಮತ್ತು ನಮ್ಮ ಆಂತರಿಕ ಶಕ್ತಿಗಳು ಹೆಚ್ಚಾದ ಹಾಗೆ ಅನಿಸುವಂತೆ ಮಾಡುವ ಶಬ್ದ ಚಿತ್ರ.''.

ಇದಕ್ಕೆ ಉದಾಹರಣೆಯಾಗಿ ನಾಡಿಗರು ಅಡಿಗರ 'ಕೂಪ ಮಂಡೂಕ' ಕವನದ ಈ ಕೆಳಗಿನ ಸಾಲನ್ನು ಉದ್ಧರಿಸುತ್ತಾರೆ.

ಗೊನೆ ಮಾಗಿ ಬಾಳೆ ಜೀವನ್ಮುಕ್ತ ಹಳಸುತಿದೆ
ಹಿಂಡು ಹಿಳ್ಳುಗಳಲ್ಲಿ ಪ್ರಾಣವೂರಿ

ಬಾಳೆಯ ಗಿಡ ಬಿಡುವುದು ಒಂದೇ ಗೊನೆ. ಗೊನೆ ಹಾಕುವುದೇ ಅದರ ಸಾರ್ಥಕತೆ. ಆದರೆ ಗೊನೆ ಹಣ್ಣಾಗುವಷ್ಟರಲ್ಲಿ ಅದು ನಾಲ್ಕು ಸಸಿಗಳನ್ನು ಹುಟ್ಟಿಸಿ ಅದರಲ್ಲಿ ಪ್ರಾಣ ಇಟ್ಟು ಸಾಯುತ್ತದೆ. ಮನುಷ್ಯ ಜೀವನವೂ ಹೀಗೆ. ಬಾಳೆಯೇ ಬಾಳುವೆ ಎನ್ನುವ ಆದರ್ಶ ಮತ್ತು ವಾಸ್ತವದ ಅಪರೂಪದ ಪ್ರತಿಮೆ ಇಲ್ಲಿದೆ. ಲಂಕೇಶರ 'ಅವ್ವ' ಕವನದ ಈ ಸಾಲುಗಳು ಹೀಗಿವೆ ನೋಡಿ :

ನನ್ನವ್ವ ಫಲವತ್ತಾದ ಕಪ್ಪು ನೆಲ
ಅಲ್ಲಿ ಹಸಿರು ಪತ್ರದ ಹರವು ಬಿಳಿಯ ಹೂ ಹಬ್ಬ
ಸುಟ್ಟಷ್ಟೂ ಕಸುವು ನೊಂದಷ್ಟು ಹೂ ಹಣ್ಣು
ಮಕ್ಕಳೊದರೆ ಅದರ ಅಂಗಾಂಗ ಪುಳಕ

ತಾನು ಒದ್ದು ಓಡಾಡಿದ, ಸುಟ್ಟಷ್ಟು ಕಸುವುಗೊಳ್ಳುವ ತನ್ನ ಪ್ರೀತಿಯ ಕಪ್ಪುನೆಲವನ್ನು ಅದು ಸಮೃದ್ಧಿಯನ್ನು ವರ್ಣಿಸುತ್ತಲೇ ತನ್ಮೂಲಕ ಕಪ್ಪಾಗಿದ್ದ ತನ್ನ ತಾಯಿಯ ಫಲವಂತಿಕೆಯನ್ನು ಶ್ರೀಮಂತಿಕೆಯನ್ನು ಲಂಕೇಶರು ಎಷ್ಟು ಸೊಗಸಾಗಿ ಹೇಳಬಹುದೆಂಬುದಕ್ಕೆ - ಇಲ್ಲಿನ ಪ್ರತಿಮೆ ಮೈದಾಳಿದ ರೀತಿ ಸಾಕ್ಷಿ.

ಹೀಗೆ ಕಾವ್ಯ ಹುಟ್ಟುವ ಬಗೆ ಇವತ್ತಿಗೂ ನನಗೆ ಇಷ್ಟ. ಮತ್ತೆ ಮತ್ತೆ ನಾನು ಬದುಕಿನ ನಂತರ ಪ್ರೀತಿಸುವ ವಸ್ತು (ವಿಚಾರ) ಇದ್ದರೆ ಅದು ಕಾವ್ಯ. ಯಾಕೆಂದರೆ ಕಾವ್ಯದ ಸ್ಥಾನವನ್ನು ಮತ್ತಾವುದೂ ತುಂಬಲು ಸಾಧ್ಯವಿಲ್ಲ ಮತ್ತು ತುಂಬುವುದಿದ್ದರೆ ಕಾವ್ಯ ಮಾತ್ರ.

ಪ್ರಸಾರ ಮಾಧ್ಯಮ ನಾಟಕಗಳ ಭಾಷೆ

(ಕ್ಯಾಮೆರಾ ಭಾಷೆ)

ಡಾ|| ಶ್ರೀನಿವಾಸ ಕುಲಕರ್ಣಿ

ಪ್ರಸಾರ ಮಾಧ್ಯಮ ನಾಟಕಗಳ ಭಾಷೆ - ಅದರಲ್ಲಿ ದೂರದರ್ಶನದ ಅಂದರೆ ದೃಶ್ಯಮಾಧ್ಯಮದ ಭಾಷೆಗೆ ಒತ್ತುಕೊಟ್ಟು ಇಲ್ಲಿ ನನ್ನ ಕೆಲ ವಿಚಾರಗಳನ್ನು ಮಂಡಿಸಬಯಸುತ್ತೇನೆ.

ಯಾವುದೇ ನಾಟಕದಲ್ಲಿಯಾಗಲಿ, ಅಂದರೆ ರಂಗಭೂಮಿ ನಾಟಕದಲ್ಲಿಯಾಗಲಿ, ಬಾನುಲಿ ನಾಟಕದಲ್ಲಿಯಾಗಲಿ ಅಥವಾ ದೂರದರ್ಶನ ನಾಟಕದಲ್ಲಿಯಾಗಲಿ - ಭಾಷೆ ಒಂದು ಪಾತ್ರದಿಂದ ಇನ್ನೊಂದು ಪಾತ್ರಕ್ಕೆ ಬರಿ ತನ್ನ ಅನಿಸಿಕೆಯನ್ನು ಮುಟ್ಟಿಸುವ ವಾಹಕವಲ್ಲ, ಅದು ನಾಟಕಕಾರನ ವಿಚಾರಗಳನ್ನು, ಪ್ರಚೋದನೆಗಳನ್ನು ಪಾತ್ರಗಳ ಮುಖಾಂತರ ಪ್ರೇಕ್ಷಕರ ಮನ ಮುಟ್ಟಿಸುವ ಸಂವಹನ ಶಕ್ತಿ. ಇಲ್ಲಿ ಭಾಷೆ ಬರೀ ಮಾತುಗಳ ಸರಪಳಿಯಾಗಲಾರದು. ಅದು ಅಂದರೆ ಭಾಷೆ - ಸಂಭಾಷಣೆ, ಅರ್ಥ ಸಂಪನ್ನವಾಗಿರಬೇಕಾಗುತ್ತದೆ. ಸನ್ನಿವೇಶ - ಪರಿಸರ, ಆಯಾ ಪಾತ್ರಗಳಿಗೆ ತಕ್ಕಂತೆ ಅದು ರೂಪುಗೊಂಡು ಸಶಕ್ತಿ ಹಾಗು ಸುಸಂಬದ್ಧವಾಗಿ ಮೂಡಿ ಬರಬೇಕಾಗುತ್ತದೆ. ಅದು ನಾಟಕಗಳ ನಿಜವಾದ ಭಾಷೆ.

ದೂರದರ್ಶನ ಅಥವ ದೃಶ್ಯ ಮಾಧ್ಯಮದ ನಾಟಕಗಳು - ಕಟೆದು ಕಟೆದು ಹದಗೊಳಿಸಿ ಕಟ್ಟಿದ ವಾಸ್ತುಶಿಲ್ಪದಂತೆ ಅಗತ್ಯವಿದ್ದಷ್ಟೆ ಇಟ್ಟಿಗೆ-ಗಾರೆ, ಚೂಪುಕಲ್ಲುಗಳನ್ನು ಕೂಡಿಸಿದಂತೆ ಒಂದು ಸ್ವಲ್ಪ ಹೆಚ್ಚು ಕಡಿಮೆಯಾದರೆ ಇಡೀ ಕಟ್ಟಡ ಶಿಥಿಲಗೊಳ್ಳುತ್ತದೆ. ಅಂತೆಯೇ ದೃಶ್ಯ ಮಾಧ್ಯಮದಲ್ಲಿ ವ್ಯರ್ಥವಾಗಿ ಪದಗಳನ್ನು ಬಳಸಲಿಕ್ಕಾಗದು. ಪ್ರತಿಯೊಂದು ಪದಕ್ಕೂ ಅರ್ಥವಿರಲೇಬೇಕು. ದೂರದರ್ಶನದಲ್ಲಿ ಪ್ರತಿಯೊಂದು ಸೆಕೆಂಡು ಬೆಲೆಯುಳ್ಳದ್ದು, ಚಲನಚಿತ್ರದಲ್ಲಿ ಅತ್ಯಂತ ತುಟ್ಟಿ.

ಇಲ್ಲಿ ನಿರ್ದೇಶಕ ತೂಗಿ ತೂಗಿ ಸಂಭಾಷಣೆಗಳನ್ನು ಉಪಯೋಗಿಸುತ್ತಾನೆ. ಎಷ್ಟು ಬೇಕು ಅಷ್ಟೇ. ಉದಾಹರಣೆಗೆ ರಂಜನಾ ಜಾಹೀರಾತು ಕಂಪನಿಯ ನಿರ್ದೇಶಕರನ್ನು ಕಾಣಲು ಬಂದವ್ಯಕ್ತಿ - 'ನಾನು ರಂಜನಾ ಜಾಹೀರಾತು ಕಂಪನಿ ನಿರ್ದೇಶಕರನ್ನು ಕಾಣಲು ಬಂದಿದ್ದೇನೆ' ಎಂದು ವ್ಯಕ್ತಿ ಹೇಳಿದಾಗ ಅದರ ಸತ್ವ ಹಿಂಗಿ ಹೋಗುತ್ತದೆ. ಈ ಭಾಷೆ - ಸಂಭಾಷಣೆಯಲ್ಲಿ ಲೇಖನ ದೂರದರ್ಶನಕ್ಕಿರುವ ವಿಶಿಷ್ಟ ಗುಣವನ್ನು ಮರೆತು ಬಿಡುತ್ತಾನೆ. ಇಲ್ಲಿ ಲೇಖಕ ವಾಚಾಳಿಯಾಗುವದಕ್ಕೆ ಅವಕಾಶವೇ ಇಲ್ಲ.

ದೂರದರ್ಶನಕ್ಕೆ, ಈ ದೃಶ್ಯ ಮಾಧ್ಯಮಕ್ಕೆ ಭಾಷೆಯನ್ನು ಒಪ್ಪಿಸುವಾಗ ಸಂಕೀರ್ಣತೆಯನ್ನು ಅನುಲಕ್ಷಿಸಬೇಕು. ಹೆಚ್ಚಿನ ಪದಗಳ ಅವಶ್ಯಕತೆ ಇಲ್ಲಿ ಇಲ್ಲ.

ದೂರದರ್ಶನದಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸುವ ವಸ್ತು ಕ್ಯಾಮೆರಾ. ಅದು ದಿವ್ಯ ದರ್ಶಿನಿ, ಅದರದೇ ಆದ ಭಾಷೆ ಅದಕ್ಕಿದೆ. ಅದು ಶಬ್ದಪುಂಜಗಳನ್ನು ಹಿಂದೆ ತಳ್ಳಿ ಭಾವನೆಗಳನ್ನು ಉದ್ದೀಪನಗೊಳಿಸುವ ಮೂಲಕ ಅತ್ಯಂತ ಸತ್ವ ಪೂರ್ಣವಾಗಿ ನಿವೇದಿಸಬಲ್ಲದು.

ಬಾನುಲಿ ನಾಟಕದ ಭಾಷೆ ಬಳಸುವ ನಾಟಕಕಾರ ಶ್ರೋತೃಗಳ ಮನದಲ್ಲಿ ಪಾತ್ರಗಳನ್ನು ಅಚ್ಚಳಿಯದಂತೆ ನಿಲ್ಲಿಸಲು ಶಬ್ದಗಳ ಶಿಲ್ಪವನ್ನು ನಿಲ್ಲಿಸುತ್ತಾನೆ. ಆದರೆ ದೃಶ್ಯಮಾಧ್ಯಮಕ್ಕೆ ಈ ಸೃಷ್ಟಿ ಅಗತ್ಯವಿಲ್ಲ.

ಉದಾಹರಣೆಗೆ ಒಂದು ಪ್ರೇಮದ ಸನ್ನಿವೇಶವನ್ನೇ ತೆಗೆದುಕೊಳ್ಳಿ -

ಬಾನುಲಿ ನಾಟಕಕಾರ ಶಬ್ದಗಳ ಮಾಲೆಯನ್ನೇ ಹೆಣೆಯುತ್ತಾನೆ :

'ಪ್ರಿಯೇ, ನಾನು ನಿನ್ನನ್ನು ಹೃದಯಾಂತರಾಳದಿಂದ ಪ್ರೀತಿಸುತ್ತೇನೆ. ಸದಾ ನಿನ್ನದೆ ಕನಸು, ಕನವರಿಕೆ, ನನ್ನ ಹೃದಯ ವೀಣೆ ನಿನ್ನ ಹೆಸರನ್ನೇ ಮಿಡಿಯುತ್ತದೆ. ನನ್ನ ಕಣ್ಣಲ್ಲಿ ಕಣ್ಣಿರಿಸಿ ನೋಡು ಪ್ರಿಯೆ....'

- ಎನ್ನುತ್ತಾನೆ ಯುವಕ.

ಈ ಮಾತು ರಂಗಭೂಮಿ ನಾಟಕಕಾರರಿಗೂ ಅನ್ವಯಿಸುತ್ತದೆ.

ಆದರೆ ದೃಶ್ಯ ಮಾಧ್ಯಮಕಾರ ಇದಷ್ಟಕ್ಕೂ ಕ್ಯಾಮೆರಾ ಭಾಷೆ ಬಳಸಿಕೊಳ್ಳುತ್ತಾನೆ. ಮೊದಲು ಪರಿಸರವನ್ನು ಕ್ಯಾಮೆರಾದಲ್ಲಿ ಸೆರೆ ಹಿಡಿಯುತ್ತಾನೆ. ಹರಿವ ನದಿ, ಕೋಗಿಲೆ ಸುಸ್ವರ, ತರುಲತೆ ಪುಷ್ಪಗಳ ಸೊಬಗು -

ನಾಯಕ - ನಾಯಕಿಯರ ಹತ್ತಿರ ಸುಳಿಯುತ್ತಾನೆ. ಅವನು ಉಸುರುವದಿಷ್ಟೆ. 'ನಾ ನಿನ್ನ ಪ್ರೀತಿಸ್ತೀನಿ'... ಅವಳು ಮುಖ ಎತ್ತುತ್ತಾಳೆ. ಕ್ಯಾಮೆರಾ ಕ್ಲೋಸಪ್ಪಿಗೆ ಸಾಗಿ ಅವಳ ಕಣ್ಣುಗಳನ್ನು ತೆರೆ ತುಂಬ ಹರಡುತ್ತಾನೆ. ಆ ಕಣ್ಣುಗಳ ಕಾರಂಜಿಯಲ್ಲಿ ಪ್ರೇಮದ ಬುಗ್ಗೆ ಚಿಮ್ಮಿಸುತ್ತಾನೆ. ಅಷ್ಟೇ! ರಂಗಭೂಮಿಯಲ್ಲಿ ಪಾತ್ರಗಳು ಜೀವಂತವಾಗಿದ್ದರೂ ಪ್ರೇಕ್ಷಕರ ಮೇಲೆ ಪರಿಣಾಮ ಬೀರ ಬೇಕಾದರೆ ಶಬ್ದಗಳಿಗೂ ಭಾಷೆಗೂ ಶರಣು ಹೋಗಲೇ ಬೇಕಾಗುತ್ತದೆ. ಏಕೆಂದರೆ ಪಾತ್ರಗಳು ಪ್ರೇಕ್ಷಕರಿಂದ ಸುಮಾರು ದೂರವಿರುತ್ತವೆ. ಮುಖದ ಹಾವಭಾವ ಚರ್ಯಗಳನ್ನು ಕ್ಯಾಮೆರಾ ಸೆರೆಹಿಡಿದು ಪ್ರೇಕ್ಷಕರಿಗೆ ತೋರಿಸುವಷ್ಟು, ನಟ ರಂಗಭೂಮಿ ಮೇಲೆ ಪ್ರದರ್ಶಿಸಲಾರ. ದೂರದರ್ಶನ 'ಕ್ಲೋಸ್‌ಅಪ್' ಮಾಧ್ಯಮ ಅತ್ಯಂತ ಪ್ರಭಾವಶಾಲಿ.

ಅನೇಕ ರೀತಿಯ ತಾಂತ್ರಿಕ ಸೌಲಭ್ಯಗಳು, ರೋಚಕ ತಂತ್ರ ವಿಧಾನದಿಂದ ಕ್ಯಾಮರಾ ಭಾಷೆಯಲ್ಲಿ ಸಮರ್ಥವಾಗಿ ಬಳಸಿಕೊಳ್ಳಲು ಸಾಧ್ಯವಾಗುತ್ತದೆ. ಕಾವ್ಯದಲ್ಲಿ ಪ್ರತಿಮೆಗಳನ್ನು ಬಳಸಿ ಅನುಭವಗಳನ್ನು, ಅವುಗಳ ಸಂಕೀರ್ಣತೆಯನ್ನು ನಿರೂಪಿಸುವಂತೆ, ಕ್ಯಾಮೆರಾ ಆ್ಯಂಗಲ್‌ಗಳು, ಕ್ಯಾಮೆರಾ ಪೊಸಿಷನ್ನುಗಳು ಈ ದೃಶ್ಯಮಾಧ್ಯಮದಲ್ಲಿ ಸಂಕೇತವಾಗಿ ಬಂದು ನಿಲ್ಲುತ್ತವೆ.

ಉದಾಹರಣೆಗಾಗಿ ಒಬ್ಬ ಪೋಲೀಸ್ ಅಧಿಕಾರಿಯ ಮುಂದೆ ಕಳ್ಳನನ್ನೋ, ದರೋಡೆಖೋರನನ್ನೋ, ಕಳ್ಳ ಸಾಗಾಣಿಕೆದಾರನನ್ನೋ, ತೋರಿಸುವಾಗ ಪೋಲೀಸ್ ಅಧಿಕಾರಿಯನ್ನು ಎತ್ತರದ ನಿಲುವಿನವನಾಗಿಯೂ ಅವನ ಮುಂದೆ ಕುಬ್ಜನನ್ನಾಗಿ ಅಪರಾಧಿಯನ್ನು 'ಲೋ' ಹಾಗು 'ಹೈ' ಆ್ಯಂಗಲ್ ಮುಖಾಂತರ ಪಾತ್ರದ ಗುಣ ಧರ್ಮಗಳನ್ನು ಕ್ಯಾಮೆರಾ ಭಾಷೆ ನಿರೂಪಿಸುತ್ತದೆ. ವ್ಯಕ್ತಿಯ ಮುಖವನ್ನು ತೋರಿಸದೆಯೇ ಬರೀ ಅವನ ಕೈ, ಬೆರಳುಗಳ ತುಂಬ ಇರುವ ಬೆಲೆಬಾಳುವ ಬಂಗಾರದ ಉಂಗುರಗಳು, ಕೈವರೆಗೆ ಹರಡಿದ ರೇಷ್ಮೆಬಟ್ಟೆ, ವ್ಯಕ್ತಿಯ ದರ್ಪ, ಶ್ರೀಮಂತಿಕೆ ಕುತಂತ್ರದ ಹೊಂಚು ಕ್ಯಾಮೆರಾ ಕಣ್ಣು ನಿವೇದಿಸುತ್ತದೆ. ದೃಶ್ಯ ಮಾಧ್ಯಮದ ಇನ್ನೂ ಅನೇಕ ಪಾರಿಭಾಷಿಕ ಶಬ್ದಗಳು ಆ್ಯಂಗಲ್ಸ್, ಕ್ಲೋಸಪ್, ಲಾಂಗ್‌ಷಾಟ್, ಟ್ರಾಲಿಷಾಟ್, 'ಝೂಮ್' ಇವೆಲ್ಲ ಕ್ಯಾಮೆರಾ ಭಾಷೆಯನ್ನು ಉದ್ದೀಪನಗೊಳಿಸುವ ಸಾಧನಗಳು. ಒಟ್ಟನಲ್ಲಿ ಹೇಳುವದಾದರೆ ದೂರದರ್ಶನ ದೃಶ್ಯ ಮಾಧ್ಯಮದ ಭಾಷೆಯನ್ನು ಹಿಗ್ಗಾ ಮುಗ್ಗಿಯಾಗಿ ಎಳೆದಾಡದೆ ಪ್ರೇಕ್ಷಕರನ್ನು ತನ್ನತ್ತ ಸೆಳೆದುಕೊಳ್ಳುವಷ್ಟು ದುಡಿಸಿಕೊಳ್ಳಬೇಕು. ನನ್ನ ಮಿನಿ ಕಥೆ 'ದಾಖಲೆ ಪತ್ರ'ವನ್ನು ದೂರದರ್ಶನಕ್ಕೆ ಅಳವಡಿಸಿದೆ. ಈ ೨೦ ನಿಮಿಷದ 'ಟೆಲಿ ಪ್ಲೇ'ದಲ್ಲಿ ಬರಿ ೫ ನಿಮಿಷ ಮಾತ್ರ ಸಂಭಾಷಣೆಗಳಿವೆ ಅದರಲ್ಲಿ ಬರೀ ದೃಶ್ಯಗಳೇ ತಮ್ಮದೇ ಆದ ಭಾಷೆಯಲ್ಲಿ ಸಂಭಾಷಿಸುತ್ತವೆ.

ಇಲ್ಲಿ ಅಂತಾರಾಷ್ಟ್ರೀಯ ಪ್ರಶಸ್ತಿ ಪಡೆದ, ಇನ್ನೊಂದು ಚಿತ್ರವನ್ನು ನಿಮ್ಮ ನೆನಪಿಗೆ ತರಬಯಸುತ್ತೇನೆ. ಇದು ಫ್ರೆಂಚ್ ಚಿತ್ರ 'Incident at owlcreek' ೩೦ ನಿಮಿಷದಲ್ಲಿ ಈ ಚಿತ್ರದಲ್ಲಿ ಬರೀ ಒಂದೇ ಒಂದು ಮಾತು ನುಸುಳುತ್ತದೆ 'Fire'. ಪ್ರಾರಂಭದಿಂದ ಕೊನೆಯವರೆಗೂ ಉಸಿರು ಬಿಗಿಹಿಡಿದು ವೀಕ್ಷಿಸುತ್ತಾ ಹೋಗುತ್ತಾರೆ. ಎಷ್ಟೋ ಶಬ್ದಗಳನ್ನು ಹೆಣೆದರೂ ಆ ದೃಶ್ಯ ಭಾಷೆಯಷ್ಟು ಸತ್ವ, ಮಾತಿಗೆ ಬಂದೀತೆ ಎನ್ನಿಸದೇ ಇರಲಾರದು. ಕಥೆ ಓಡಿದತ್ತ ಕ್ಯಾಮೆರಾದ ಭಾಷೆಯೂ ಓಡುತ್ತದೆ. ಅಮೇರಿಕೆಯಲ್ಲಿ ಅಂತರ್ಯುದ್ಧ ನಡೆಯುತ್ತಿದ್ದ ಸಮಯ. ಆಗ ಒಬ್ಬ ಸಾಮಾನ್ಯ ನಾಗರೀಕ ಒಂದು ಸೈನಿಕ ಶಿಬಿರದತ್ತ ಸುಳಿದಾಡುತ್ತಾನೆ. ಅವನನ್ನು ಗುಪ್ತಚರನೆಂದು ಸೈನಿಕರು ಭಾವಿಸಿ ಮರಣದಂಡನೆಗೆ ಗುರಿಪಡಿಸುತ್ತಾರೆ. ಮಂಜು ಆವರಿಸಿದ ಬೆಳಗಿನ ಜಾವದಲ್ಲಿ ಔಲ್ ಕ್ರೀಕ್ ಎಂಬಲ್ಲಿ ನದಿಯ ಸೇತುವೆಯ ಮೇಲೆ ಅವನಿಗಾಗಿ ನೇಣುಗಂಬ ಸಿದ್ಧವಾಗುತ್ತದೆ. ಸುತ್ತಲೂ ಬಂದೂಕಧಾರಿ ಸೈನಿಕರು, ಅವನ ಕಾಲು ಕೆಳಗಿನ ಹಲಿಗೆ ಸರಿದಾಗ ಅವನ ಕತ್ತಿಗೆ ನೇಣು ಬೀಳಬೇಕು. ಆದರೆ ಆಶ್ಚರ್ಯ ನೇಣು ಬೀಳದೆ ಹಗ್ಗ ಹರಿದು ಆತ ನದಿಗೆ ಬೀಳುತ್ತಾನೆ. ಅವನು ತಲೆ ಎತ್ತಿದೆಲ್ಲೆಲ್ಲ ಗುಂಡಿನ ಸುರಿಮಳೆ ಜೀವದ ರಕ್ಷಣೆಗಾಗಿ ವಿಷಜಂತುಗಳೊಂದಿಗೂ, ಗುಂಡಿನ ಸುರಿಮಳೆಯೊಳಗೂ ಹೋರಾಡಿ ಹೇಗೋ ಪಾರಾಗಿ ದಂಡೆಯನ್ನು ತಲುಪುತ್ತಾನೆ. ಅವನ ಸಂತಸಕ್ಕೆ ಪಾರವೇ ಇಲ್ಲ. ಮರಳಲ್ಲಿ ಹೊರಳಾಡುತ್ತಾನೆ. ಬೆಳುಕು ಬೀರಿದ ಪ್ರಕೃತಿಯಲ್ಲಿ ಓಡಿ ಹೋಗುತ್ತಾನೆ.

ತನ್ನ ಪ್ರೇಯಸಿಯನ್ನು ಕಾಣಲು ಹಂಬಲಿಸುತ್ತಾನೆ. ಓಡಿ ಓಡಿ ಪ್ರೇಯಸಿ ಬಳಿ ಬರುತ್ತಾನೆ. ಪ್ರೇಯಸಿ ಓಡಿ ಹೋಗಿ ತೋಳ ತೆಕ್ಕೆಯಲ್ಲಿ ಅವನನ್ನು ಬಂಧಿಸಿದಾಗ ಥಟ್ಟನೆ ದೃಶ್ಯ ಛೇದಿಸುತ್ತದೆ. ಅವನ ಕತ್ತಿಗೆ ನೇಣು ಬೀಳುತ್ತದೆ. ಇದು ಕಥೆ - ಇದು ದೃಶ್ಯ ಮಾಧ್ಯಮದ ಭಾಷೆ.

ಪ್ರೊ. ಭೂಸನೂರಮಠ : ವ್ಯಕ್ತಿ ಮತ್ತು ಸಾಹಿತ್ಯ

ಡಾ|| ಬಿ.ವ್ಹಿ. ಶಿರೂರ

''ಓದು ನನ್ನ ಹವ್ಯಾಸ. ಸದಾ ಓದುವದು ಬೇರೆಯಲ್ಲ, ಸದಾಶಿವನ ಪೂಜೆ ಬೇರೆಯಲ್ಲ ನನ್ನ ದೃಷ್ಟಿಯಲ್ಲಿ''[1] ಎಂಬ ಮಾತನ್ನು ಎಪ್ಪತ್ತೈದರ ಅಂಚಿನಲ್ಲಿಯೂ ಚಾಚೂ ತಪ್ಪದೇ ಪಾಲಿಸಿಕೊಂಡು ಬರುತ್ತಿರುವ ಪ್ರೊ. ಭೂಸನೂರಮಠ ಒಬ್ಬ ನಿಷ್ಠಾವಂತ ಪ್ರಾಧ್ಯಾಪಕರು. ವೃತ್ತಿಗೌರವ, ಪರಿಶ್ರಮ ಪ್ರವೃತ್ತಿ, ಚಿಕಿತ್ಸಕ ಬುದ್ಧಿ, ಚಿಂತನಶೀಲತೆ, ತೆರೆದ ಮನಸ್ಸು - ಇವನ್ನು ಸೇರಿಸಿ ಎರಕ ಹೊಯ್ದಂತಿರುವ ಪ್ರೊ. ಭೂಸನೂರಮಠ ಅವರ ಘನವ್ಯಕ್ತಿತ್ವದಿಂದ ಆ ಪ್ರಾಧ್ಯಾಪಕವೃತ್ತಿಗೆ ಹೆಚ್ಚಿನ ಕಳೆ ಮೂಡಿದೆ. ಅವರು ಯಾವಾಗಲೂ 'ಗಂಭೀರ ವಿಚಾರದಲ್ಲಿ ಮಗ್ನರಾದವರು.... ಒಮ್ಮೊಮ್ಮೆ ಅವರ ಪ್ರಾಮಾಣಿಕ ಅಭಿಪ್ರಾಯಗಳು ಕೆಲವರಿಗೆ ಅಪ್ರಿಯವೆನಿಸುತ್ತಿದ್ದವು... ಅವರ ಹೃದಯದಲ್ಲಿ ಯಾವ ರೀತಿಯಾದ ಕಲ್ಮಷ, ದ್ವೇಷ, ಅಸಹನೆ ಎಂದೂ ಇರಲಿಲ್ಲ. ಆದ್ದರಿಂದ ಎಲ್ಲರಲ್ಲಿಯೂ ಅವರ ಬಗೆಗೆ ಆದರಭಾವವಿತ್ತು. ಪ್ರೊ. ಭೂಸನೂರಮಠ ಮೇಲುನೋಟಕ್ಕೆ ತಮ್ಮ ಬೌದ್ಧಿಕ ಪ್ರಪಂಚದಲ್ಲಿಯೇ ತಲ್ಲೀನರಾದವರೆಂದೂ, ಸಾಮಾನ್ಯ ವ್ಯವಹಾರದಲ್ಲಿ ಅನಾಸಕ್ತರೆಂದೂ ಕಾಣುತ್ತಿದ್ದರೂ ಅವರಲ್ಲಿ ವ್ಯವಹಾರ ಕುಶಲತೆ ಸಾಕಷ್ಟು ಇದೆ'' ಎಂದು ಪ್ರೊ. ವಿ.ಜಿ. ಕುಲಕರ್ಣಿ ಅವರು ಹೇಳಿರುವ ಮಾತಿನಲ್ಲಿ ಸತ್ಯವೇ ಅಡಗಿದೆ[2].

---

1. ಗೌರವ : ಪ್ರೊ. ಭೂಸನೂರಮಠ ಅಭಿನಂದನ ಗ್ರಂಥ, ಪು. ೧೦೮ ಪ್ರಕಾಶಕರು ಜ. ತೋಂಟದಾರ್ಯ ಸಂಸ್ಥಾನಮಠ, ಗದಗ.
2. ಅದೇ, ಪು. ೬೩.

ಕಾಲೇಜಿನ, ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾಗಿ ೩೫ ವರ್ಷಕ್ಕೂ ಮೇಲ್ಪಟ್ಟು ಸೇವೆ ಸಲ್ಲಿಸಿ ನಿವೃತ್ತರಾದರೂ - ಮುಗ್ಧಭಾವ, ದೇಶಿನುಡಿ, ಆತ್ಮೀಯ ಭಾವಗಳಿಂದ ತುಂಬಿ ತುಳುಕುತ್ತಿದ್ದ ಅವರ ವ್ಯಕ್ತಿತ್ವ ಹಳ್ಳಿಯ ಬಾಳಿನಿಂದ ಅದ್ದಿ ತೆಗೆದಂತಿದ್ದಿತು. ೧೯೧೦ರಲ್ಲಿ ಧಾರವಾಡ ಜಿಲ್ಲೆಯ, ರೋಣ ತಾಲ್ಲೂಕಿನ, ನಿಡಗುಂದಿ ಗ್ರಾಮದಲ್ಲಿ ಜನಿಸಿದ ಇವರು ಕೊನೆಯವರೆಗೂ ಆ ಹಳ್ಳಿಯ ಬದುಕಿನೊಂದಿಗೆ ಹಾಸುಹೊಕ್ಕಾಗಿದ್ದುದನ್ನು ನೋಡಿದರೆ ಆ ಬದುಕು ಇವರ ಮೇಲೆ ಬೀರಿರುವ ಪ್ರಭಾವ ಸ್ಪಷ್ಟವಾಗುತ್ತಿದ್ದಿತು.

ಬಾಲ್ಯದಿಂದಲೂ ಕಲಿಸಿದರೆ ತಿಳಿದುಕೊಂಡು ಕಲಿವ ಸ್ವಭಾವ ಇವರದಲ್ಲ. ಒಳಗಿನಿಂದಲೇ ತಿಳುವಳಿಕೆ ಮೂಡಬೇಕು. ಇದು ಅವರ ಶಾಶ್ವತ ವಿಶ್ವಾಸ, ಏಕೈಕ ನಿಷ್ಠೆ. ಹೀಗಾಗಿ ಅಂದು 'ಮೈಹುಳೀ ಹಾಕ್ರಿ', ಅಂದ್ರ ಬುದ್ಧಿ ಬರತೈತಿ' ಎಂಬುದು ಶಿಕ್ಷಣ ನೀತಿಯಾಗಿದ್ದ ಕಾಲದಲ್ಲಿಯೂ, ಆ ಉಲ್ಬಣಾವಸ್ಥೆಯ ಸೆಕೆ ನೂರರಲ್ಲಿ ಒಂದಂಶವೂ ಇವರಿಗೆ ತಾಗಲಿಲ್ಲ. ಈ ಸಾಮರ್ಥ್ಯ ಅವರಲ್ಲಿ ಬಲವಾಗಿ ಬೇರೂರಿ ಬರಲು ಕಾರಣರಾದವರು ತಂದೆ ಶಿವಮೂರ್ತಯ್ಯ ಮತ್ತು ತಾಯಿ ರಾಚಮ್ಮನವರು. ತಂದೆಯವರು ವ್ಯವಹಾರ ಮಾಡುತ್ತಿದ್ದರೂ ಸ್ವಭಾವತಃ ಬೋಳೇ ಸ್ವಬಾವದವರು. ತಾಯಿ ರಾಚಮ್ಮ ಮಾತ್ರ ಕುಶಾಗ್ರಮತಿ. ಪ್ರೊ.ಭೂಸನೂರಮಠ ಅವರಲ್ಲಿ ಸ್ವಾಭಿಮಾನಕ್ಕೆ ತಕ್ಕ ಆತ್ಮತೇಜವನ್ನು ತಂದುಕೊಟ್ಟವರು ಅವರು. ಅಲ್ಲದೆ ಆ ಊರಿನ ಹಿರಿಯರಾದ ಹಿರೇಮಠ ಚೆನ್ನಯ್ಯ, ಸಿದ್ಧರಾಮಗೌಡ, ಶಿವಲಿಂಗಪ್ಪ ಮಾಸ್ತರ ಮೊದಲಾದವರು ಇವರ ಬುದ್ಧಿಮಾನಕ್ಕೆ ಬೇಕಾದ ಪರಿಸರವನ್ನು ಒದಗಿಸಿದರು.

ಬಾಲ್ಯದಿಂದಲೇ ಇವರಿಗೆ ಗಣಿತದಲ್ಲಿ ವಿಶೇಷ ಆಸಕ್ತಿ. ಇವರ ಆ ಚುರುಕುಬುದ್ಧಿ ಹಳ್ಳಿಗಳಲ್ಲಿ ನೆಲೆಗೊಂಡಿರುವ ಬಾಯಿಲೆಕ್ಕಗಳಿಗೆಲ್ಲ ಆಹ್ವಾನವನ್ನೇ ಒಡ್ಡಿತ್ತು. ಅದನ್ನು ಕಂಡು ಮೆಚ್ಚಿದವರು ಎಷ್ಟೋ ಜನ. ಗದಗಿನಲ್ಲಿ ಇಂಗ್ಲೀಷ್ ೫ನೆಯ ಇಯತ್ತೆ ಮುಗಿಸುತ್ತಿದ್ದಂತೆ, ಒಬ್ಬನೇ ಮಗನಾದ್ದರಿಂದ ಅಗಲಿರಲಾರದೆ ತಂದೆ ತಾಯಿಗಳ ವ್ಯಾಮೋಹ ಇವರನ್ನು ೨-೪ ವರ್ಷ ಮನೆಯಲ್ಲಿಯೇ ಕೂಡ್ರಿಸಿತು. ಆಗ ಅಲ್ಲಿ ಇದ್ದ ಚೆನ್ನಬಸವನಗೌಡ ಎಂಬುವವರಿಂದ ಮರಾಠಿ ಕಲಿತು 'ಗಡ ಆಲಾ ಪಣ ಸಿಂಹ ಗೇಲಾ' 'ಸುರ್ಯೋದಯ' ಮೊದಲಾದ ಪುಸ್ತಕಗಳನ್ನು ಓದಿದ್ದೇ ಓದಿದ್ದು. ಗಳಗನಾಥರ ಕಾದಂಬರಿಗಳಂತೂ ಸರಿಯೇ. ಜೈಮಿನಿಭಾರತ, ರಾಜಶೇಖರ ವಿಳಾಸ ಮೊದಲಾದವುಗಳನ್ನೂ ಓದಲು ಪ್ರಯತ್ನಿಸಿದರು. ೧೭ನೆಯ ವರ್ಷದಲ್ಲಿ ಕುಸೂಗಲ್ಲಿನ ಶ್ರೀಮತಿ ಪಾರ್ವತಿದೇವಿಯವರೊಂದಿಗೆ ವಿವಾಹವಾದಾಗ, ಸೋದರಮಾವ ಸಿದ್ಧರಾಮಯ್ಯ ಮೊದಲಾದವರ ಪ್ರೇರಣೆಯ ಮೇರೆಗೆ ಮತ್ತೆ ವಿದ್ಯಾಭ್ಯಾಸ ಮುಂದುವರಿಸಿದರು. ಮ್ಯಾಟ್ರಿಕ್‌ನಲ್ಲಿದ್ದಾಗಲೂ ಇವರದೇ ಮೇಲುಗೈ. ಹಿಂದಿನ ವರ್ಷದ ಪ್ರಶ್ನೆ ಪತ್ರಿಕೆಯನ್ನು ಬಿಡಿಸುವಲ್ಲಿ ತೋರಿದ ಜಾಣ್ಮೆ ಬೆರಳು ಕಚ್ಚುವಂತಿದೆ. ೧೯೩೧ರಲ್ಲಿ ಉಚ್ಚ ವರ್ಗದಲ್ಲಿ ಮ್ಯಾಟ್ರಿಕ್ ಪರೀಕ್ಷೆಯನ್ನು ಪಾಸಾದರು.

ಮ್ಯಾಟ್ರಿಕ್ ಪರೀಕ್ಷೆಯನ್ನು ಕೂಡಲೆಂದು ಹೋಗಿದ್ದ ಕರ್ನಾಟಕ ಕಾಲೇಜಿನ ಭವ್ಯಕಟ್ಟಡ - ಕಾಲೇಜು ಶಿಕ್ಷಣಕ್ಕಾಗಿ ಇವರನ್ನು ಕೈಮಾಡಿ ಕರೆಯಿತು. ಕಾಲೇಜ ಶಿಕ್ಷಣವನ್ನು ಮುಂದುವರಿಸಬೇಕು. ಅಲ್ಲಿಯೇ ಪ್ರಾಧ್ಯಾಪಕರಾಗಬೇಕು ಎಂಬ ಸಂಕಲ್ಪ ಆಗಲೇ ಮೂಡಿತು. ಗಣಿತದಲ್ಲಿ ಆಸಕ್ತಿ ಇದ್ದರೂ ದೃಷ್ಟಿದೋಷದಿಂದ ಅದನ್ನು ತೊರೆದು, ಆರ್ಟ್ಸ್ ವಿಷಯವನ್ನು ತೆಗೆದುಕೊಂಡರು. ಮೊದಲನೆಯ ವರ್ಷದ ಆರ್ಟ್ಸ್ ವಿದ್ಯಾರ್ಥಿಯಾಗಿದ್ದಾಗಲೇ ಕಾಳಿದಾಸನ ಮೇಘದೂತ ಮೊದಲಾದವುಗಳನ್ನು ವಿಶೇಷ ಪ್ರಯತ್ನದಿಂದ ಓದಿ ಅರಗಿಸಿಕೊಳ್ಳಲಾಯಿತು. ಮುಂದೆ ಬಿ.ಎ.ಕ್ಕೆ ಬರುತ್ತಲೇ ಅದೇ ತಾನೆ ಡಾ.ಎ.ಟಿ. ಸಾಸನೂರ ಅವರ ಮಾರ್ಗದರ್ಶನದಲ್ಲಿ ಉತ್ಸಾಹದಿಂದ ಅಡಿಯಿಡುತ್ತಿದ್ದ ಕನ್ನಡದ ಅಭ್ಯಾಸದತ್ತ ಆಕರ್ಷಿತರಾದರು. ಜ್ಯೂನಿಯರ್ ಬಿ.ಎ. ದಲ್ಲಿದ್ದಾಗಲೇ ಪಂಪಭಾರತವನ್ನು ಓದಿ ಮುಗಿಸಿದರು. ಕಾಲೇಜಿನಲ್ಲಿ ತಮಗೆ ಸಂಶಯಬಂದ ವಿಷಯವನ್ನು ನಿರ್ಭಿಡೆಯಿಂದ ಪ್ರಶ್ನಿಸುತ್ತಿದ್ದರು. ತಾವು ಒಪ್ಪದ ವಿಷಯಕ್ಕಾಗಿ ಪ್ರಾಧ್ಯಾಪಕರೊಂದಿಗೆ ವಾದಕ್ಕೂ ಇಳಿಯುತ್ತಿದ್ದರು. ಅದರಿಂದ ಆ ಪ್ರಾಧ್ಯಾಪಕರು ಇನ್ನೂ ಹೆಚ್ಚಿಗೆ ಇವರನ್ನು ಪ್ರೀತಿಸತೊಡಗಿದರು. ಹೀಗೆ ವಿದ್ಯಾರ್ಥಿ ದೆಸೆಯಲ್ಲಿಯೇ ಆತ್ಮವಿಶ್ವಾಸ,

ಸ್ವಾಭಿಮಾನ, ಪ್ರಯತ್ನಶೀಲತೆ, ವಿಚಾರಪರತೆ, ಕುಡಿಯೊಡೆದದ್ದನ್ನು ಕಾಣಬಹುದು. ೧೯೩೫ರಲ್ಲಿ ಮುಂಬೈ ವಿಶ್ವವಿದ್ಯಾನಿಲಯದಿಂದ ಬಿ.ಎ. ಆನರ್ಸ್‌ನ್ನು ಪ್ರಥಮ ಶ್ರೇಣಿಯಲ್ಲಿ ಪಾಸಾದರು. ಅದರ ಫಲವಾಗಿ ಕರ್ನಾಟಕ ಕಾಲೇಜಿನ ಅಂದಿನ ಪ್ರತಿಷ್ಠಿತ ಶಿಷ್ಯವೇತನವಾಗಿದ್ದ ದಕ್ಷಿಣಾ ಫೇಲೋಶಿಪ್‌ನ್ನು ಪಡೆದು ಎಂ.ಎ. ಅಭ್ಯಾಸವನ್ನು ಮುಂದುವರಿಸಿದರು. ೧೯೩೭ರಲ್ಲಿ ಪ್ರೊ. ಕುಂದಣಗಾರ ಅವರ ಮಾರ್ಗದರ್ಶನದಲ್ಲಿ ಎಂ.ಎ. ಪದವಿಯನ್ನು ಉಚ್ಚ ವರ್ಗದಲ್ಲಿ ಪಡೆದರು.

ಎರಡು ವರ್ಷ ನೌಕರಿ ಸಿಗದೆ ಅಲೆದಾಡಿ ಕೊನೆಗೆ ೧೯೩೯ರಲ್ಲಿ ಕರ್ನಾಟಕ ಕಾಲೇಜಿನಲ್ಲಿ ಅರೆ ಅವಧಿ ಅಧ್ಯಾಪಕರೆಂದು ಸೇರಿದರು. ಮೂರು ವರ್ಷ ಅವರು ಅಲ್ಲಿ ಸೇವೆ ಸಲ್ಲಿಸಿದರೂ ಕಾರಣಾಂತರದಿಂದ ಮುಂದೆ ಆ ಹುದ್ದೆ ಅವರಿಗೆ ದಕ್ಕದೆ ಇದ್ದಾಗ ವಿಷಯ ತಿಳಿದ ಹಾವೇರಿಯ ಶ್ರೀ ಮ.ನಿ.ಪ್ರ. ಶಿವಕುಮಾರಸ್ವಾಮಿಗಳು ಸ್ವತಃ ಬೆಳಗಾವಿಯ ಲಿಂಗರಾಜ ಕಾಲೇಜಿನ ಆಫೀಸಿಗೆ ಪಾದಚಾರಿಗಳಾಗಿ ದಯಮಾಡಿಸಿ ಪ್ರಿನ್ಸಿಪಾಲರಾಗಿದ್ದ ಡಾ. ನಂದಿಮಠ ಅವರಿಗೆ ಅಪ್ಪಣೆ ಮಾಡಲು, ಅವರು ಪ್ರೊ.ಭೂಸನೂರಮಠ ಅವರನ್ನು ಲಿಂಗರಾಜ ಕಾಲೇಜಿನಲ್ಲಿ ಪ್ರಾಧ್ಯಾಪಕರೆಂದು ನೇಮಿಸಿದರು. ಅಲ್ಲಿ ೨೩ ವರ್ಷ ಶಿಕ್ಷಕ ವೃತ್ತಿಗೆ ಗೌರವ ತರುವಂತೆ ಅಮೋಘ ಸೇವೆ ಸಲ್ಲಿಸಿ ನಿವೃತ್ತರಾದರು. ಆ ಕಾಲದಲ್ಲಿ ಅವರಿಂದ ಉಪಕೃತರಾದವರು ಎಷ್ಟೋ ಜನ. 'ಶಿಷ್ಯನನ್ನು ನೋಡಿ ಗುರುವನ್ನು ತಿಳಿ' ಎಂಬುದೊಂದು ಗಾದೆ. ಅದಕ್ಕೆ ತಕ್ಕಂತೆ ಪ್ರೊ. ಭೂಸನೂರಮಠ ಅವರು ಲಿಂಗರಾಜ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದ ವೇಳೆಯಲ್ಲಿ ಡಾ.ಆರ್.ಸಿ. ಹಿರೇಮಠ, ಡಾ.ಎಂ.ಎಸ್. ಸುಂಕಾಪುರ ಮೊದಲಾದವರು ಆ ಗರಡಿಗಳಲ್ಲಿ ಪಳಗಿದರು ಎಂಬುದನ್ನು ಕೇಳಿದರೇ ಎಷ್ಟೋ ಹೆಮ್ಮೆ ಎನ್ನಿಸುತ್ತದೆ.

ಲಿಂಗರಾಜ ಕಾಲೇಜಿನಿಂದ ನಿವೃತ್ತರಾಗುತ್ತಲೇ ೧೯೬೬ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ಪ್ರಾಧ್ಯಾಪಕರೆಂದು ನೇಮಕಗೊಂಡರು. ೧೯೭೩ರಿಂದ ಐದು ವರ್ಷ ಅಲ್ಲಿಯೇ ಯು.ಜಿ.ಸಿ. ಪ್ರಾಧ್ಯಾಪಕರೆಂದು ಸೇವೆ ಸಲ್ಲಿಸಿದರು. ಹೀಗೆ ಅವರು ಸೇವೆಯಿಂದ ನಿವೃತ್ತರಾದರೇ ಹೊರತು ಪ್ರವೃತ್ತಿಯಿಂದ ನಿವೃತ್ತಿಯಾಗಲಿಲ್ಲ. ಅಭ್ಯಾಸ ಇನ್ನೂ ಮುಂದುವರಿಯಿತು. ಅದರ ಫಲವಾಗಿ 'ಭವ್ಯ ಮಾನವ' ಮಹಾಕಾವ್ಯ (೧೯೮೩) ಮೂಡಿ ಬಂದಿತು. ವಿಶ್ವಮಾನವ ಸಂದೇಶವನ್ನು ಬೀರುತ್ತಿರುವ ಈ ಕಾವ್ಯ ಕನ್ನಡ ಸಾಹಿತ್ಯದಲ್ಲೊಂದು ಮೈಲುಗಲ್ಲು.

ಪ್ರೊ. ಭೂಸನೂರಮಠ ಅವರದು ಬಹುಮುಖ ವ್ಯಕ್ತಿತ್ವ. ಸಂಪಾದಕ, ವಿಮರ್ಶಕ, ಮೇಲಾದ ಚಿಂತಕರಾಗಿರುವದ ರೊಂದಿಗೆ ಅವರೊಬ್ಬ ದಾರ್ಶನಿಕ ಕವಿಯೂ ಹೌದು. ಅವರು ಆ ಘನವ್ಯಕ್ತಿತ್ವದಿಂದ ಮೂಡಿಬಂದ ಕೃತಿಗಳನ್ನು - ಸಂಪಾದಿತ, ಚಿಂತನಪರ, ಅನುವಾದಿತ ಮತ್ತು ಕಾವ್ಯ ಎಂದು ವಿಭಜಿಸಿ ಅವಲೋಕಿಸಬಹುದು. ಸಂಪಾದಿತ ಕೃತಿಗಳಲ್ಲಿ ಭಕ್ತಿ ಸುಧಾಸಾರ, ಮೋಳಿಗೆ ಮಾರಯ್ಯ ಮತ್ತು ರಾಣಿ ಮಹಾದೇವಿಯರ ವಚನಗಳು, ಮೋಳಿಗೆಯ್ಯನ ಪುರಾಣ. ಲಿಂಗಲೀಲಾ ವಿಲಾಸ ಚಾರಿತ್ರ, ಪ್ರಭುದೇವರ ಶೂನ್ಯ ಸಂಪಾದನೆ, ವಚನ ಸಾಹಿತ್ಯ ಸಂಗ್ರಹ, ಏಕೋತ್ತರ ಶತಸ್ಥಲ - ಇವುಗಳನ್ನೂ, ಚಿಂತನಪರ ಕೃತಿಗಳಲ್ಲಿ ಶೂನ್ಯ ಸಂಪಾದನೆಯ ಪರಾಮರ್ಶೆ, ಪರಾಮರ್ಶೆಯ ಸಂಗ್ರಹ, ಕಾಶ್ಮೀರದಿಂದ ಕಲ್ಯಾಣಕ್ಕೆ - ಕೃತಿಗಳನ್ನೂ, ಅನುವಾದಿತ ಕೃತಿಗಳಲ್ಲಿ Sunyasampadane Vol. II, III, IV ಗಳನ್ನು, ಕಾವ್ಯದಲ್ಲಿ 'ಭವ್ಯಮಾನವ'ವನ್ನೂ ಹೆಸರಿಸಬಹುದು.

ಗ್ರಂಥಸಂಪಾದಕ ಮುಳ್ಳು ತೆಗೆಯಲು ಹೋಗಿ ಮತ್ತೊಂದು ಮುಳ್ಳು ಮುರಿಯಬಾರದು. ಮೂಲಕ್ಕೆ ಹೆಚ್ಚು ನಿಷ್ಠನಾಗಿರವದು ಸರ್ವತ್ರ ಕ್ಷೇಮ. ಪಾಠ ಸ್ವೀಕಾರಕ್ಕಿಂತ ಗ್ರಂಥಪಾತ, ಅಕ್ಷರ ಸ್ಖಾಲಿತ್ಯ, ಪ್ರಕಟಿತ ಭಾಗಗಳೆಡೆಯಲ್ಲಿ ಸಂಪಾದಕ ಎಷ್ಟು ಎಚ್ಚರ ವಹಿಸಿದರೂ ಸಾಲದು''[3] ಎಂಬ ಆಧುನಿಕ ಸಂಪಾದನಾಶಾಸ್ತ್ರದ ಜೀವನಾಡಿಯನ್ನೇ ಅರಿತಿದ್ದ ಪ್ರೊ. ಭೂಸನೂರಮಠರವರು ೧೯೫೪ರಷ್ಟೊತ್ತಿಗೇ ಘನಮಠಾರ್‍ಯರ ತತ್ವಪದಗಳನ್ನು 'ಭಕ್ತಿಸುಧಾಸಾರ' ಎಂಬ ಹೆಸರಿನಲ್ಲಿ,

3. ಗೌರವ. ಪು. ೧೧೦-೧೧೧.

ಧಾರವಾಡದ ಶ್ರೀ ಮ.ನಿ.ಪ್ರ. ಮೃತ್ಯುಂಜಯಮಹಾಸ್ವಾಮಿಗಳವರ ಅಪೇಕ್ಷೆಯ ಮೇರೆಗೆ ಸಂಪಾದಿಸಿದರು[4]. ಆಳವಾದ ಸಂಗೀತಜ್ಞಾನ, ವ್ಯಾಕರಣಜ್ಞಾನದ ಹಿನ್ನೆಲೆಯಲ್ಲಿ ಸಂಪಾದಿತವಾಗಿರುವ ಈ ಕೃತಿಯಲ್ಲಿಯ ತೂಕಬದ್ಧವಾದ, ತರ್ಕಬದ್ಧವಾದ ಪ್ರಸ್ತಾವನೆ ಆಗಲೆ ಪ್ರೊ. ಭೂಸನೂರಮಠ ಅವರೊಬ್ಬ ಸಮರ್ಥ ಸಂಪಾದಕರು ಎಂಬುದನ್ನು ಸಾಬೀತುಪಡಿಸಿತು. ಅಲ್ಲಿ ಅವರು ಘನಮಠಾರ್ಯರ ಕಾಲ, ದೇಶ, ಚರಿತ್ರೆಗಳನ್ನು ವಿವಿಧ ಕೃತಿಗಳ ಮೂಲಕ ಆಧಾರಯುಕ್ತವಾಗಿ ನಿರ್ಧರಿಸಿದ್ದಾರೆ. ಈವರೆಗೆ 'ಕೃಷಿ ವಿಜ್ಞಾನ ಪ್ರದೀಪಿಕೆ' ಘನಮಠಾರ್ಯರದೇ ಎಂದಿದ್ದ ಭಾವನೆಯನ್ನು ಹೊಡೆದುಹಾಕಿ ಅದರ ಕರ್ತೃ ಕುನ್ನಾಳ ಸಿದ್ದಪ್ಪನೆಂದು ದೃಢಪಡಿಸಿದ್ದಾರೆ. ಆ ತತ್ವಪದಗಳಲ್ಲಿಯ ಕಾವ್ಯಸ್ವಾದವನ್ನೂ ಹಿಂಡಿ ಹಿಡಿದಿಟ್ಟಿದ್ದಾರೆ. ಕೊನೆಯಲ್ಲಿ ಬಾಲಲೀಲಾ ಮಹಾಂತಸ್ವಾಮಿಗಳಿಗೂ ಘನಮಠಾರ್ಯರಿಗೂ ಇರುವ ಸಾಮ್ಯವನ್ನು ಗುರುತಿಸಿದ್ದಾರೆ. ಇದರಿಂದ ಅವರ ಆಳವಾದ ಅಭ್ಯಾಸ, ಖಚಿತಜ್ಞಾನ, ಪ್ರಾಮಾಣಿಕ ತೌಲನಿಕಪ್ರಜ್ಞೆ ವ್ಯಕ್ತವಾಗಿದೆ. ಆದರೆ ಕನ್ನಡದಲ್ಲಿ ಸಂಪಾದನಾಶಾಸ್ತ್ರ ಅಷ್ಟಾಗಿ ಅಂದು ಬೆಳೆಯದಿದ್ದರಿಂದ ಪಾಠಾಂತರಗಳನ್ನು ಗುರುತಿಸಿ ಅಡಿಟಿಪ್ಪಣಿಯಲ್ಲಿ ಕೊಡುವ, ಅರ್ಥ ಸರಿಕಾಣದಲ್ಲಿ ಯಾವ ಸಂಕೇತವನ್ನೂ ಸೂಚಿಸದೆ ತಿದ್ದಿರುವ ದೋಷಗಳೂ ಇಲ್ಲಿವೆ.

ಕಾಯಕಜೀವಿ ಮೋಳಿಗೆ ಮಾರಯ್ಯನಲ್ಲಿ ಪ್ರೊ. ಭೂಸನೂರಮಠ ಅವರಿಗೆ ವಿಶೇಷ ಪ್ರೀತಿ. ಅದಕ್ಕಾಗಿ ಆತನಿಗೆ ಸಂಬಂಧಿಸಿದ ಮೋಳಿಗೆಯ ಮಾರಯ್ಯ ಮತ್ತು ರಾಣಿ ಮಹಾದೇವಿಯರ ವಚನಗಳು, ಮೋಳಿಗೆಯ್ಯನ ಪುರಾಣ ಎಂಬ ಸಂಪಾದಿತ ಕೃತಿಗಳೂ, ಕಾಶ್ಮೀರದಿಂದ ಕಲ್ಯಾಣಕ್ಕೆ ಎಂಬ ವಿಮರ್ಶಾತ್ಮಕ ಕೃತಿಯೂ[5] ಪ್ರೊ. ಭೂಸನೂರಮಠ ಅವರಿಂದ ಹೊರಹೊಮ್ಮಿವೆ. ಅವುಗಳಲ್ಲಿ ಗಮನಾರ್ಹವಾದುದು ಮೋಳಿಗೆಯ ಮಾರಯ್ಯ ಮತ್ತು ರಾಣಿ ಮಹಾದೇವಿಯರ ವಚನಗಳು.[6] ಇಲ್ಲಿಯ ವಚನಗಳನ್ನು ಶ್ರೀ ಚೆನ್ನಪ್ಪ ಉತ್ತಂಗಿ ಅವರು 'ಸಂಪೂರ್ಣ ಸಂಗ್ರಹ, ಶುದ್ಧೀಕರಣ, ಸಂಶೋಧನೆ'ಗಳ ಆಧಾರದ ಮೇಲೆ ಸಂಪಾದಿಸಿದ್ದಾರೆ. ಇದಕ್ಕೆ ಪ್ರೊ. ಭೂಸನೂರಮಠ ಅವರು ೧೫೫ ಪುಟದ ಸುದೀರ್ಘ ಪ್ರಸ್ತಾವನೆ ಬರೆದಿದ್ದಾರೆ. ಅದನ್ನು ಮಾತೆಂಬುದು ಜ್ಯೋತಿರ್ಲಿಂಗ, ಬಸವಣ್ಣನವರ ಕಲ್ಯಾಣ, ವಚನಕಾರರಲ್ಲಿ ಮಾರಯ್ಯನ ಸ್ಥಾನ, ಮುಂದಿನ ವಚನಕಾರರ ಮೇಲೆ ಮಾರಯ್ಯನವರ ಪ್ರಭಾವ, ಮಾರಯ್ಯನವರ ಜೀವನಚರಿತ್ರೆ, ಅಂತರಂಗ ಜೀವನ, ವಚನಗಳ ಶೈಲಿ - ಎಂದು ವಿಭಜಿಸಿ ವಿಶ್ಲೇಷಿಸಿದ್ದಾರೆ, ಮಾರಯ್ಯನ ಸಮಗ್ರಜೀವನವನ್ನು ಅವರ ವಚನಗಳು, ಬಸವ ಪುರಾಣ, ಮುಂತಾದ ೧೮ ಆಕರಗಳಿಂದ ಸಂಗ್ರಹಿಸಿ ಸಮಗ್ರ ವಿವೇಚನೆ ಮಾಡಿದ್ದಾರೆ. ಕೊನೆಯಲ್ಲಿ ''ಮಾರಯ್ಯನ ಜೀವನದಲ್ಲಿ ಎರಡು ತತ್ವಗಳನ್ನು ಸ್ಪಷ್ಟವಾಗಿ ಕಾಣುತ್ತೇವೆ. ಒಂದು ಪೂರ್ವಾಶ್ರಮ ಜೀವನ, ಮತ್ತೊಂದು ಪುನರ್ಜಾತ ಜೀವನ.... ಒಂದರ ರಂಗಸ್ಥಳ ಕಾಶ್ಮೀರ, ಮತ್ತೊಂದರ ಕ್ರೀಡಾಂಗಣ ಕಲ್ಯಾಣ. ಒಂದರಲ್ಲಿ ನಾಯಕ ಮಹಾದೇವಭೂಪಾಲ, ಮತ್ತೊಂದರಲ್ಲಿ ಲೀಲಾಪುರುಷ. ಮೋಳಿಗೆಯ ಮಾರಯ್ಯ ಭೂಪಾಲ ಕುಟ್ಮಲದಂತಿದ್ದ ಮಾರಯ್ಯ ನೆರೆಯರಳಿದ ಹೂವಿನಂತೆ. ಭೂಪಾಲ ನೆಲದಂತಿದ್ದರೆ ಮಾರಯ್ಯ ನೆಲದ ಮರೆಯ ನಿಧಾನದಂತೆ, ಭೂಪಾಲ ಎಣ್ಣೆ ಬತ್ತಿ ಇದ್ದ ಪಣತಿ. ಮಾರಯ್ಯ ಜ್ಯೋತಿ'' ಎಂದು ಮಾರಯ್ಯನ ಪೂರ್ವಾಶ್ರಮ ಮತ್ತು ಪುನರ್ಜಾತ ಜೀವನವನ್ನು ಬಹು ಮಾರ್ಮಿಕವಾಗಿ ಕಡೆದಿಟ್ಟಿದ್ದಾರೆ. ಆದರೆ ಆ ವಿವೇಚನೆಯಲ್ಲಿ ಅಲ್ಲಲ್ಲಿ ಬೈಬಲ್, ಚೀನಾದೇಶದ ಅನುಭಾವಿಯ ನುಡಿ, ಸೇಂಟ್ ಕ್ಯಾಥರಿನ್ನಳ ವಚನಗಳು ಮೊದಲಾದವು ಮೂಲ ವಿಷಯಕ್ಕೆ ಸಂಬಂಧಿಸಿ, ಎಷ್ಟೋ ವೇಳೆ ಸಂಬಂಧಿಸದೆ ಸೇರಿಕೊಂಡಿವೆ.

ಮೇಲಿನ ಗ್ರಂಥಕ್ಕೆ ಪೂರಕ ಸಾಹಿತ್ಯವನ್ನು ಹುಡುಕುತ್ತಿದ್ದಾಗ, ಕವಿಚರಿತೆಕಾರರ ಕಣ್ಣು ತಪ್ಪಿಸಿದ್ದ ಮೋಳಿಗೆಯ್ಯನ ಪುರಾಣದ ಅಸಮಗ್ರ ಪ್ರತಿ ೧೯೪೧ರಲ್ಲಿ ಶ್ರೀ ಹಾಲಬಾವಿ ಅವರಿಗೆ ಸಿಕ್ಕಿತು. ಅದರ ಪೂರ್ಣ ಪ್ರತಿಗಾಗಿ ನಾಡಿನ ಮೂಲೆ ಮೂಲೆಯಲ್ಲಿ

---

4. ಪ್ರಕಾಶಕರು : ಶ್ರೀ ಮ.ನಿ.ಪ್ರ. ಮೃತ್ಯುಂಜಯ ಮಹಾಸ್ವಾಮಿಗಳು, ಮುರುಘಾಮಠ, ಧಾರವಾಡ ೧೯೪೫.

5. ಇದು ನನಗೆ ನೋಡಲು ಸಿಗಲಿಲ್ಲವಾದ್ದರಿಂದ ಅದರ ಬಗ್ಗೆ ನಾನು ಇಲ್ಲಿ ಏನನ್ನೂ ಹೇಳಿಲ್ಲ.

6. ಪ್ರಕಾಶಕರು : ವೀರಭದ್ರಪ್ಪ ಹಾಲಬಾವಿ, ಕಲಾಭವನ, ಧಾರವಾಡ - ೧೯೫೦.

ಹುಡುಕಿಸಿ, ಕೊನೆಗೆ ಚಿತ್ರದುರ್ಗದ ಶ್ರೀ ಮಠದಲ್ಲಿ ಮತ್ತು ಧಾರವಾಡದ ಸಂಶೋಧನ ಸಂಸ್ಥೆಯಲ್ಲಿ ದೊರೆತ ಪ್ರತಿಗಳ ಸಹಾಯದಿಂದ ಇದನ್ನು ಸಂಸ್ಕರಿಸಲಾಗಿದೆ. [7] ಪ್ರಸ್ತಾವನೆಯಲ್ಲಿ ಪ್ರೊ. ಭೂಸರನೂಮಠ ಅವರು ಕವಿ (ಗೌರವಾಂಕ), ಕಾಲ (೧೫೨೬), ದೇಶ (ಮೈಸೂರು ಭಾಗ), ಕಥಾವಸ್ತು, ಪಾತ್ರ ನಿರೂಪಣೆ, ವರ್ಣನೆ ಶೈಲಿ, ಛಂದಸ್ಸು, ಪೂರ್ವಕವಿಗಳ ಪ್ರಭಾವ ಮೊದಲಾದವನ್ನು ೨೮ ಪುಟದ ಸುದೀರ್ಘ ಪ್ರಸ್ತಾವನೆಯಲ್ಲಿ ವಿವೇಚಿಸಿದ್ದಾರೆ. ಕವಿಯ ಜೀವನಚರಿತ್ರೆಗೆ ಸಂಬಂಧಿಸಿದ ಕೊಳಗುಂದ, ಹೊನ್ನಹಳ್ಳಿ, ಕರಿಸಿದ್ದೇಶ್ವರ ಮಠಗಳಿಂದಲೂ ಮಾಹಿತಿ ತರಿಸಲಾಗಿದೆ. ಸಂಗೀತದಲ್ಲಿ ವಿಶೇಷಗತಿಯುಳ್ಳ ಪ್ರೊ. ಭೂಸನೂರಮಠ ಅವರು ಸಾಂಗತ್ಯದ ಬಗೆಗೆ ಪ್ರಸ್ತಾವನೆಯಲ್ಲಿ ಹಲವಾರು ಉಪಯುಕ್ತ ಮಾತುಗಳನ್ನೂ ಹೇಳಿದ್ದಾರೆ. ಇಲ್ಲಿಯೂ ಕೂಡಾ ಶೈಲಿಯ ಗಹನತೆಯಲ್ಲಿ ವಿಷಯವಿವೇಚನೆ ಮುಳುಗಿಹೋಗಿದೆ.

೧೬ನೆಯ ಶತಮಾನದಲ್ಲಿ ಬೆಳಗಿಹೋದ ವಚನಸಾಹಿತ್ಯವನ್ನು ಉಳಿಸಿ ಬೆಳಸುವ ಪ್ರಯತ್ನ ೧೫ನೆಯ ಶತಮಾನದಲ್ಲಾಯಿತು. ವಚನ ರಚನೆಯೊಂದಿಗೆ ಪೂರ್ವದ ವಚನಗಳ ಸಂಕಲನ, ಸಂಯೋಜನೆ, ವಿವರಣೆ ಮೊದಲಾದ ಕಾರ್ಯಗಳೂ ಆ ವೇಳೆಯಲ್ಲಿ ಭರದಿಂದ ಸಾಗಿದವು. ಅದರ ಅಂಗವಾಗಿ ಮೂಡಿಬಂದ ಕೃತಿ ಲಿಂಗಲೀಲಾ ವಿಲಾಸ ಚಾರಿತ್ರದ [8] ಕರ್ತೃ ಕಲ್ಲುಮಠದ ಪ್ರಭುದೇವ. ೧೬ ಸ್ಥಲಗಳಲ್ಲಿ ೭೪೯ ವಚನಗಳನ್ನು ವಿಂಗಡಿಸಲಾಗಿದೆ. ಇಲ್ಲಿಯೂ ಕೂಡಾ ನಾಡಿನ ಬೇರೆ ಬೇರೆ ಭಾಗಗಳಿಂದ ಹಸ್ತಪ್ರತಿಗಳನ್ನು ಸಂಕಲಿಸಿ ಶುದ್ಧಪ್ರತಿಯನ್ನು ಸಿದ್ಧಗೊಳಿಸಲಾಗಿದೆ. ಮೂಲ ವಚನಕಾರರ ಆಶಯಕ್ಕೆ, ಕಲ್ಲುಮಠದ ಪ್ರಭುದೇವರ ಪ್ರಯತ್ನಕ್ಕೆ ಯಾವ ತರದ ಭಂಗ ಬರದ ಹಾಗೆ ಇದನ್ನು ಸಂಪಾದಿಸಲಾಗಿದೆ. ೨೪ ಪುಟದ ಪ್ರಸ್ತಾವನೆಯಲ್ಲಿ ಕವಿಯ ಕಾಲ, ದೇಶವನ್ನು ವಿವೇಚಿಸುವ ಭಾಗ ಮಾತ್ರ ಉಪಯುಕ್ತವಾಗಿದೆ. ಉಳಿದ ಭಾಗ ''ಜ್ಞಾನಸಿದ್ಧಿಗೆ ಅಜ್ಞಾನಸಿದ್ಧಿ ಪೂರ್ವರಂಗ. ಅಜ್ಞಾನದರಿವೇ ಜ್ಞಾನಸಾಮ್ರಾಜ್ಯದ ಮಹಾದ್ವಾರ'' (ಪ್ರಸ್ತಾವನೆ - ಪು. ೫) ಎಂಬುದನ್ನು ವಿವರಿಸುವಲ್ಲಿಯೇ ಮಗ್ನವಾಗಿದೆ. ಅದಕ್ಕಾಗಿ ಕೇನೋಪನಿಷತ್, ಕಠೋಪನಿಷತ್, ಭಗದ್ಗೀತೆ ಮೊದಲಾದವುಗಳನ್ನು ಉದ್ಧರಿಸಲಾಗಿದೆ. ಇದರಿಂದ ಪುಸ್ತಕಕ್ಕೆ ಸಂಬಂಧಿಸಿದ ವಿಷಯ ಮರೆಯಾಗಿಹೋಗಿದೆ.

೧೯೬೫ರಲ್ಲಿ ಮೈಸೂರು ಸರಕಾರದ ವಿದ್ಯಾಭ್ಯಾಸ ಇಲಾಖೆಯ (ಸಾಹಿತ್ಯ ಸಂಸ್ಕೃತಿ ಅಭಿವೃದ್ಧಿ ಶಾಖೆ, ಬೆಂಗಳೂರು) ಕೋರಿಕೆಯ ಮೇರೆಗೆ ೬೬ ಶರಣರ. ೨೧೩೪ ವಚನಗಳನ್ನು ಸಂಗ್ರಹಿಸಿ ಕೊಡಲಾಗಿದೆ. ಅವನ್ನು ವಿಶ್ವ ಪ್ರಪಂಚ, ಅಜ್ಞಾನ, ಮಾನವ ಜೀವನ ಮುಂತಾಗಿ ೨೧ ವಿಭಾಗಗಳಲ್ಲಿ ಹಂಚಲಾಗಿದೆ. ಈ ಕೃತಿಯನ್ನು ಕುರಿತು ''ವಚನಗಳಲ್ಲಿ ಹುದುಗಿರುವ ಜ್ವಲಂತ ಜೀವನದರ್ಶನವನ್ನು ವಚನಕಾರರ ವಚನಗಳ ಮುಖಾಂತರವೇ ಪ್ರಚುರಪಡಿಸಿದ ಕೀರ್ತಿ ಭೂಸನೂರಮಠರಿಗೆ ಸಲ್ಲುತ್ತದೆ..... ವಚನ ಸಾಹಿತ್ಯ ಸಂಗ್ರಹ ಶರಣರ ನುಡಿಮುತ್ತುಗಳ ಅಪೂರ್ವ ಸಂಗ್ರಹ. ದೇಶ, ಕಾಲ, ಭಾಷೆ ಮತ್ತು ಧರ್ಮವನ್ನು ಮೀರಿ ಇಡೀ ಮಾನವಕುಲವನ್ನೇ ಅನುಭಾವದೆಡೆಗೆ ಕೊಂಡೊಯ್ಯುವ ಸಾಮರ್ಥ್ಯ ಪಡೆದ ವಚನಗಳು ಇಲ್ಲಿ ಸಂಕಲನಗೊಂಡಿವೆ. ವೀರಶೈವ ಸ್ಥಲಕಟ್ಟನ್ನು ಮೀರಿ ನಿಂತಿರುವ ಈ ಗ್ರಂಥ ರಚನೆಗಳ ವಿಶಾಲವಾದ ವ್ಯಾಪಕಾರ್ಥ ವಿವರಿಸುವಂತಿದೆ. ಸಾಮಾನ್ಯ ಮನುಷ್ಯನನ್ನು ಹಂತ - ಹಂತವಾಗಿ ದಿವ್ಯಕ್ಕೆ ಭವ್ಯಕ್ಕೆ ಏರಿಸಬಲ್ಲ ಸಮರ್ಥಪೂರ್ಣ ಸಂಕಲನವಿದು [9]'' ಎಂಬ ಹೊಗಳಿಕೆಯ ಮಾತುಗಳೂ ಇವೆ. ೧೦೮ ಪುಟದ 'ಒಳಗೆ ಪ್ರವೇಶ' ಪ್ರೊ.ಭೂಸನೂರಮಠ ಅವರ ಪಾಂಡಿತ್ಯ ಪ್ರದರ್ಶನದ ವೇದಿಕೆಯಾಗಿದೆ. ಅಲ್ಲದೆ ಆಧ್ಯಾತ್ಮಕ್ಕೇ ಸಂಬಂಧಿಸಿದ ಬಹಳಷ್ಟು ವಚನಗಳ ಆಯ್ಕೆಯಿಂದ ಈ ಕೃತಿ ಜನಸಾಮಾನ್ಯರಿಂದ ದೂರ ಉಳಿಯುವಂತಾಗಿದೆ.

---

7. ಪ್ರಕಾಶಕರು : ಶ್ರೀ ವೀರಭದ್ರಪ್ಪ ಹಾಲಬಾವಿ, ಕಲಾಮಂದಿರ, ಧಾರವಾಡ ೧೯೫೧.
8. ಪ್ರಕಾಶಕರು : ಶ್ರೀ ಮ.ನಿ.ಪ್ರ. ಮೃತ್ಯುಂಜಯ ಮಹಾಸ್ವಾಮಿಗಳು, ಮುರುಘಾಮಠ, ಧಾರವಾಡ, ೧೯೫೬.
9. ಗೌರವ, ಪು. ೧೦೦

ಅದೃಶ್ಯ ಕವಿಯ ''ಪ್ರೌಢರಾಯನ ಕಾವ್ಯ'' [10] ಪ್ರೊ. ಭೂಸನೂರಮಠ ಅವರಿಂದ ಸಂಪಾದಿತವಾದ ಮತ್ತೊಂದು ಕೃತಿ. ೧೯೫೭ರಲ್ಲಿ ಪ್ರಕಟಗೊಂಡಿದೆ. ಇದರ ಮೂಲ ಪ್ರತಿ ಬರೆದವರು ನಾಗಶೆಟ್ಟಿ ಮಾಸ್ತರರು. ಗ್ರಂಥ ಸಂಸ್ಕರಣ ಕಾಲಕ್ಕೆ ಕಿತ್ತೂರ ಶ್ರೀಗಳು ಮೊದಲಾದವರು ನೆರವಾಗಿದ್ದಾರೆ. ಪ್ರಸ್ತಾವನೆ ಮತ್ತು ಕಥಾಸಾರ ಬರೆದವರು ಪ್ರೊ. ಭೂಸನೂರಮಠ ಅವರು. ಅದೃಶ್ಯಕವಿಯ ವಿವರವಾದ ಮಾಹಿತಿಗಾಗಿ ಪ್ರೌಢರಾಯನ ಕಾವ್ಯವನ್ನಲ್ಲದೆ, ಜನವದಂತಿ, ವಂಶಾವಳಿ, ಕಾಗದ ಪತ್ರಗಳು, ದೇಶಗತಿ, ಅವಶೇಷಗಳು ಮೊದಲಾದವನ್ನೆಲ್ಲ ವಿವರವಾಗಿ ಪರಿಶೀಲಿಸಿ, ಸೋಸಿ ನೋಡಿದ್ದಾರೆ. ಕವಿಯ ಕುಲಗುರು ಮಳೆಯ ಮಲ್ಲೇಶ್ವರನಿಗಾಗಿ ಕ್ಷೇತ್ರಕಾರ್ಯವನ್ನೂ ಕೈಕೊಂಡಿದ್ದಾರೆ. ಇದಕ್ಕೆ ಪೋಷಕವಾಗಿ ವೀರಶೈವಾಮೃತಪುರಾಣ, ಗುರುರಾಜಚಾರಿತ್ರ, ಚೆನ್ನಬಸವಪುರಾಣ ಮೊದಲಾದವುಗಳನ್ನೂ ಬಳಸಿಕೊಂಡಿದ್ದಾರೆ. ಕೊನೆಯಲ್ಲಿ ಅದೃಶ್ಯ ಕವಿಯ ಶೈಲಿ, ಪಾತ್ರಚಿತ್ರಣ ಮೊದಲಾದವುಗಳನ್ನು ನಿರ್ದುಷ್ಟವಾಗಿ ಗುರುತಿಸಿದ್ದಾರೆ. ಹೀಗಾಗಿ ಈ ಗ್ರಂಥ ಪ್ರೊ. ಭೂಸನೂರಮಠ ಅವರ ಸಂಪಾದನಾ ಸಾಮರ್ಥ್ಯಕ್ಕೆ ಒಳ್ಳೆಯ ಉದಾಹರಣೆ ಎನ್ನಿಸಿದೆ.

ಪ್ರೊ. ಭೂಸನೂರಮಠ ಅವರು ಸಂಪಾದಿಸಿದ ಇನ್ನೊಂದು ಮಹತ್ವದ ಕೃತಿ ''ಗುರುರಾಜ ಚಾರಿತ್ರ'' [11] (೧೯೫೦). ಇದನ್ನು ಮೈಸೂರಿನ ಓರಿಯಂಟಲ್ ಲೈಬ್ರರಿ, ಬಿ. ಶಿವಮೂರ್ತಿಶಾಸ್ತ್ರಿಗಳ ಬಳಿಯ ಪ್ರತಿ ಮೊದಲಾದ ನಾಲ್ಕು ಪ್ರತಿಗಳಿಂದ ಸಂಪಾದಿಸಲಾಗಿದೆ. ೧೬ ಸಂಧಿ ೧೨೭೭ ಪದ್ಯಗಳನ್ನೊಳಗೊಂಡಿದೆ. ಇಲ್ಲಿಯ ೨೬ ಪುಟದ ಪ್ರಸ್ತಾವನೆಯಲ್ಲಿ ಪ್ರೊ. ಭೂಸನೂರಮಠ ಅವರು ಕವಿಯ ಹೆಸರು, ಗುರು, ಸಂಪ್ರದಾಯ, ದೇಶ, ಕಾಲ ಮೊದಲಾದವನ್ನು ಗುರುತಿಸುವಲ್ಲಿ ವಿಶೇಷ ಪರಿಶ್ರಮ ವಹಿಸಿದ್ದಾರೆ. ಕವಿಚರಿತೆಯಿಂದ ಭಿನ್ನವಾದ ಹಲವಾರು ವಿಚಾರಗಳನ್ನು ಮಂಡಿಸಿದ್ದಾರೆ. ಕವಿಯು ಸಿದ್ಧನಂಜೇಶ ಎಂಬುದನ್ನು ಗುರುರಾಜಚಾರಿತ್ರ ಮತ್ತು ರಾಘವಾಂಕ ಚಾರಿತ್ರಗಳ ಆಧಾರದಿಂದ ಖಚಿತಪಡಿಸಿದ್ದಾರೆ. ಈ ಹಿಂದೆ ಕವಿಚರಿತೆಕಾರರು ಇವನ ಕಾಲವನ್ನು ೧೬೫೦ ಎಂದು ಗುರುತಿಸಿದ್ದರೆ ಪ್ರೊ. ಭೂಸನೂರಮಠ ಅವರು ಇವನ ಕಾಲವನ್ನು ೧೬ನೆಯ ಶತಮಾನದ ಉತ್ತರಾರ್ಧ ಎಂದು ಹಲವಾರು ಆಂತರಿಕ, ಬಾಹ್ಯ ಆಧಾರಗಳಿಂದ ನಿರ್ಧರಿಸಿದ್ದಾರೆ. ಇವನ ಇನ್ನೂ ನಾಲ್ಕು ಕೃತಿಗಳ ಉಲ್ಲೇಖವನ್ನೂ (ಭಾವರತ್ನಾಭರಣ, ಬಸವಶತಕ ಮೊ.) ಮಾಡಿದ್ದಾರೆ. ಹೀಗಾಗಿ ಈ ಪ್ರಸ್ತಾವನೆ ಸಿದ್ಧನಂಜೇಶನ ಮತ್ತು ಅವನ ಕೃತಿಗಳ ಮೇಲೆ ಹೊಸ ಬೆಳಕು ಚೆಲ್ಲುತ್ತಿದೆ. ಕೊನೆಯಲ್ಲಿ ಕವಿಯ ಉದ್ದೇಶವನ್ನು ''ರಸಿಕರಿಗೆ ರಸಾಯನದೂಟವನ್ನು ನೀಡುವದಕ್ಕಿಂತ, ಸದ್ಭಕ್ತ ಮಾಹೇಶ್ವರರ ಸಂತತಿಗೆ ಭಕ್ತಿರಸವನ್ನು ನೀಡಿ ಕೃತಕೃತ್ಯನಾಗಬೇಕೆಂದು ಕವಿ ಇಲ್ಲಿ ಬಗೆದಂತಿದೆ. (ಪ್ರಸ್ತಾವನೆ, ಪು. ೧೫) ಎಂದು ಹೇಳಿ ಕವಿ ಸಿದ್ಧನಂಜೇಶನ ಹೃದಯನ್ನೇ ಬಿಚ್ಚಿ ಇಟ್ಟಿದ್ದಾರೆ.

''ಬಸವಣ್ಣನವರ ಷಟ್‌ಸ್ಥಲದ ವಚನಗಳು'' ಕೃತಿಯ ಸಂಪಾದನೆಯಿಂದ ಪ್ರೊ.ಬಸವನಾಳರ ಹೆಸರು ಚಿರಸ್ಥಾಯಿಯಾಗಿರುವಂತೆ ''ಪ್ರಭುದೇವರ ಶೂನ್ಯ ಸಂಪಾದನೆ''ಯನ್ನು ಸಂಪಾದಿಸಿ ಪ್ರೊ. ಬೂಸನೂರಮಠ ಹೆಸರು ಪ್ರಖ್ಯಾತವಾಗಿದೆ [12]. ಗೂಳೂರು ಸಿದ್ಧವೀರಣ್ಣೊಡೆಯರ ಈ ಸಂಕಲನವನ್ನು ಈ ಪೂರ್ವದಲ್ಲಿ ಡಾ. ಹಳಕಟ್ಟಿ ಅವರು ಸಂಪಾದಿಸಿದ್ದರು. ಆದರೆ ಆ ಸಂಪಾದನೆ ಅಷ್ಟು ಸರಿ ಇಲ್ಲ ಎಂಬುದನ್ನು ಪ್ರೊ. ಭೂಸನೂರಮಠರವರು ಬಿ.ಎ. ಪ್ರಥಮ ತರಗತಿಯಲ್ಲಿ ಇದ್ದಾಗಲೇ ಕಂಡುಕೊಂಡರು. ಮುಂದೆ ನಾಡಿನ ಬೇರೆ ಬೇರೆ ಮೂಲೆಗಳಿಂದ ೨೧ ಹಸ್ತಪ್ರತಿಗಳನ್ನು ಸಂಗ್ರಹಿಸಿ, ವಿಭಜಿಸಿ, ಜೋಡಿಸಿ, ಅವುಗಳ ಆಧಾರದಿಂದ ನಿಷ್ಠೆ ಮತ್ತು ಪ್ರಾಮಾಣಿಕತೆಗಳನ್ನೇ ಬಂಡವಾಳವನ್ನಾಗಿ ಮಾಡಿಕೊಂಡು ''ಆ ದರ್ಶನಕೃತಿಗೆ ಎಲ್ಲೂ ದ್ರೋಹ ಬಗೆಯಬಾರದೆಂಬ ಅಚಲ ನಿರ್ಧಾರದಿಂದ'' ಸಂಪಾದಿಸಿದ್ದಾರೆ. ಈ ನಿರ್ಧಾರ ಬಹಳ ಮಟ್ಟಿಗೆ

---

10. ಪ್ರಕಾಶಕರು : ಶ್ರೀ ಮ.ನಿ.ಪ್ರ. ಮೃತ್ಯುಂಜಯ ಮಹಾಸ್ವಾಮಿಗಳು, ಮುರುಘಾಮಠ, ಧಾರವಾಡ.
11. ಅದೇ.
12. ಪ್ರಕಾಶಕರು : ರಾವೂರ ಶ್ರೀ ಸಿದ್ಧಲಿಂಗೇಶ್ವರ ಮತ್ತು ಆದವಾನಿಯ ಕಲ್ಲುಮಠದ ಅಧಿಪತಿಗಳು, ೧೯೫೮.

ಯಶಸ್ವಿಯೂ ಆಗಿದೆ. ಪ್ರೊ. ಭೂಸನೂರಮಠ ಅವರು ಸ್ವೀಕರಿಸಿರುವ ಪಾಠಾಂತರಗಳು ಡಾ. ಹಳಕಟ್ಟಿ ಅವರಿಂದ ಹೇಗೆ ಮತ್ತು ಏಕೆ ಭಿನ್ನವಾಗಿವೆ ಎಂಬುದು ಅವೆರಡರ ತೌಲನಿಕ ಅಭ್ಯಾಸದಿಂದ ಸ್ಪಷ್ಟವಾಗುತ್ತದೆ [13].

ಒಟ್ಟಾರೆ ಪ್ರೊ. ಭೂಸನೂರಮಠ ಅವರಿಂದ ಸಂಪಾದಿತವಾದ ಕೃತಿಗಳಲ್ಲಿ ಮೋಳಿಗೆಯ ಮಾರಯ್ಯ ಮತ್ತು ರಾಣಿ ಮಹಾದೇವಿಯರ ವಚನಗಳು, ಮೋಳಿಗೆಯ್ಯನ ಪುರಾಣ, ವಚನ ಸಾಹಿತ್ಯ ಸಂಗ್ರಹ ಮತ್ತು ಲಿಂಗಲೀಲಾವಿಲಾಸ ಚಾರಿತ್ರಗಳು ಪಠ್ಯಗಳ ಸಂಪಾದನೆಯ ದೃಷ್ಟಿಯಿಂದ ಮೌಲಿಕ ಕೃತಿಗಳೆನ್ನಿಸಿದರೂ, ಸಂಪಾದಕನ ಅಳತೆಗೋಲಾದ ಪ್ರಸ್ತಾವನೆ ಇವುಗಳಲ್ಲಿ ಅಷ್ಟು ಸಮರ್ಪಕವಾಗಿ ನಿರೂಪಿತವಾಗಿಲ್ಲ. ಗುರುರಾಜ ಚಾರಿತ್ರ, ಪ್ರೌಢರಾಯನ ಕಾವ್ಯಗಳು ಪಠ್ಯ ಮತ್ತು ಪ್ರಸ್ತಾವನೆಯ ದೃಷ್ಟಿಯಿಂದ ಶಾಸ್ತ್ರೀಯವಾಗಿವೆ. ಭಕ್ತಿ ಸುಧಾಸಾರದ ಪ್ರಸ್ತಾವನೆ ಮೌಲಿಕವಾಗಿದ್ದರೂ ಪಠ್ಯ ದೋಷ ಮತ್ತು ಪಾಠಾಂತರಗಳ ಕೊರತೆ ಹೊಂದಿದೆ. ಶೂನ್ಯ ಸಂಪಾದನೆಯ ಪಠ್ಯಭಾಗ ಒಳ್ಳೆಯ ಶಾಸ್ತ್ರೀಯ ರೀತಿಯಲ್ಲಿ ಸಂಪಾದಿತವಾಗಿದ್ದರೂ ಪ್ರಸ್ತಾವನೆ ಇಲ್ಲದ ದೊಡ್ಡ ಕೊರತೆ ಹೊಂದಿದೆ. ಆದರೂ ಒಂದು ಮೌಲಿಕ ಕೃತಿಯನ್ನು ಶಾಸ್ತ್ರೀಯ ದೃಷ್ಟಿಯಿಂದ ಸಂಪಾದಿಸಿದ ಶ್ರೇಯಸ್ಸನ್ನು ಇದು ತಂದಿದೆ. ಏನೇ ಆದರೂ ಕನ್ನಡ ಸಾಹಿತ್ಯದಲ್ಲಿ ಉತ್ಕೃಷ್ಟವಾದ, ಮೌಲಿಕವಾದ ಹಲವಾರು ಕೃತಿಗಳನ್ನು ಬೆಳಕಿಗೆ ತಂದ, ಅವುಗಳ ನಿರ್ದಿಷ್ಟ ನೆಲೆ ಬೆಲೆಗಳನ್ನು ಗುರುತಿಸಿದ ಶ್ರೇಯಸ್ಸು ಪ್ರೊ. ಭೂಸನೂರಮಠ ಅವರದೆಂದು ಹೇಳಬಹುದಾಗಿದೆ.

ಪ್ರೊ. ಭೂಸನೂರಮಠ ಅವರ ವೈಚಾರಿಕ ಕೃತಿಗಳಲ್ಲಿ 'ಶೂನ್ಯ ಸಂಪಾದನೆಯ ಪರಾಮರ್ಶೆ' ಮಹತ್ವದ್ದು. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಪಡೆದ ಮತ್ತು ಪ್ರಥಮ ವಿಶ್ವಕನ್ನಡ ಸಮ್ಮೇಳನದ ಸಾಹಿತ್ಯಮಾಲೆ(೭೭)ಯಲ್ಲಿ ಮರು ಮುದ್ರಣಗೊಂಡ ಕೃತಿ. ಜೇಡ ತನ್ನ ಸುತ್ತ ತಾನೇ ನೂಲು ಹೆಣೆದುಕೊಳ್ಳುವಂತೆ ಪ್ರೊ. ಭೂಸನೂರಮಠ ಅವರು ಆಧುನಿಕ ಯುಗದ ವಿಜ್ಞಾನದ ಹಿನ್ನೆಲೆಯಲ್ಲಿ ಶೂನ್ಯಸಂಪಾದನೆಯ ಅನುಭಾವದ ಬುತ್ತಿಯನ್ನು ಬಿಚ್ಚುತ್ತ ಹೊರಟಿದ್ದಾರೆ. ಸು. ೧೦೦೦ ಪುಟದ ಹರಹಿನಲ್ಲಿ ಹರಡಿಕೊಂಡ ಇದು ''ವಿಮರ್ಶೆಯೆಂದರೆ ವಿಮರ್ಶೆ, ಸಾಹಿತ್ಯವೆಂದರೆ ಸಾಹಿತ್ಯ. ಕನ್ನಡ ಗದ್ಯದ ಹೊಸ ಸೀಮೆಗಳನ್ನು ಹುಡುಕಿ ತೆಗೆದ ಶ್ರೇಯಸ್ಸು ಅವರಿಗೆ ಸಲ್ಲಬೇಕು'' ಎಂದಿರುವ ಪ್ರೊ. ಕುರ್ತಕೋಟಿ ಅವರ ಮಾತಿನಲ್ಲಿ ಸತ್ಯಾಂಶವಿದೆ [14]. ಇದನ್ನು ಕುರಿತು ಡಾ. ಕೆ. ಕೃಷ್ಣಮೂರ್ತಿ ಅವರು ''ಹೊರೆಯಿಲ್ಲದ ಪಾಂಡಿತ್ಯವನ್ನೂ, ಕೊರತೆಯಿಲ್ಲದ ಸಾಹಿತ್ಯ ಕಲೆಯನ್ನೂ ಸಂಗಮಿಸಿಕೊಂಡಿರುವ ಭೂಸನೂರಮಠರ ಪರಾಮರ್ಶೆ ಶರಣಯುಗದ ದೀಪಸ್ತಂಭ ಮಾತ್ರವಲ್ಲ, ಉಪನಿಷದ್ರಹಸ್ಯದ ಮಾನಸ್ತಂಭವೂ ಆಗಿದೆ; ಹೊಸಗನ್ನಡ ವೈಚಾರಿಕ ಗದ್ಯದ ಜಯಸ್ತಂಭವೂ ಆಗಿದೆ'' [15] ಎಂದಿದ್ದಾರೆ. ಈಗಾಗಲೇ ಈ ಕೃತಿಯನ್ನು ವಿಸ್ತೃತವಾಗಿ ವಿಶ್ಲೇಷಿಸಿದ 'ಪರಾಮರ್ಶೆ'ಯೂ ಬಂದಿದೆ [16]. ಆಮೇಲೆ ಪ್ರೊ. ಭೂಸನೂರಮಠ ಅವರೇ ''ಶೂನ್ಯ ಸಂಪಾದನೆಯ ಪರಾಮರ್ಶೆ ಸಂಗ್ರಹ''ವನ್ನೂ ತಂದಿದ್ದಾರೆ [17].

ಪ್ರೊ. ಭೂಸನೂರಮಠ ಅವರು ಕನ್ನಡ ಅಧ್ಯಯನ ಪೀಠದಲ್ಲಿ ಪ್ರಾಧ್ಯಾಪಕರೆಂದು ಬಂದ ಮೇಲೆ ಶೂನ್ಯಸಂಪಾದನೆಯ ಇಂಗ್ಲೀಷ್ ಅನುವಾದದ ಮೂರು ಸಂಪುಟಗಳು ಹೊರಬಂದವು [18]. ಐದನೆಯ ಸಂಪುಟಕ್ಕೆ ಅಸ್ತಿಭಾರ ಹಾಕಿದವರೂ ಇವರೇ.

---

13. ಹೆಚ್ಚಿನ ವಿವರಕ್ಕಾಗಿ 'ಗೌರವ'ದಲ್ಲಿಯ ಡಾ.ಸಾ.ಶಿ. ಮರುಳಯ್ಯ ಅವರ ಲೇಖನ ನೋಡಬಹುದು.
14. ''ಗೌರವ'' ಪು. ೭೭.
15. ಅದೇ ಪು. ೮೭.
16. ಪ್ರಕಾಶಕರು : ರಾವೂರ ಶ್ರೀ ಸಿದ್ಧಲಿಂಗೇಶ್ವರಮಠ ಮತ್ತು ಆದವಾನಿ ಕಲ್ಲುಮಠದ ಅಧಿಪತಿಗಳು, ೧೯೭೩.
17. ಪ್ರಕಾಶಕರು : ವ್ಯಾಸಂಗ ವಿಸ್ತರಣ ಪ್ರಕಟನ ವಿಭಾಗ, ಕ.ವಿ.ವಿ. ಧಾರವಾಡ ೧೯೭೮.
18. Sunya Sampadane Vol. II-1969, Vol. III-1969, Vol. IV-1970 - Karnataka University Publication.Dharwad.

ವಿದ್ಯಾರ್ಥಿಯಾಗಿದ್ದಾಗಲೇ ಇಂಗ್ಲೀಷ್ ಸಾಹಿತ್ಯವನ್ನೂ ತತ್ವಜ್ಞಾನವನ್ನೂ ಆಸಕ್ತಿಯಿಂದ ಓದಿದ್ದ ಪ್ರೊ.ಭೂಸನೂರಮಠ ಅವರಿಗೆ ಈ ಕಾರ್ಯ ಸುಲಭಸಾಧ್ಯವೆನ್ನಿಸಿತು. ಅವರಿಗೆ ಆ ಕಾರ್ಯದಲ್ಲಿ ಬಹಳಷ್ಟು ಸಹಕರಿಸಿದವರು ಪ್ರೊ.ಮೆನೆಝಿಸ್‌ರವರು. ಇಲ್ಲಿ ಪ್ರೊ. ಭೂಸನೂರಮಠ ಅವರ ಅಪಾರ ಶ್ರದ್ಧೆ, ನಿಷ್ಠೆ ಮತ್ತು ಭಾಷಾಪ್ರಭುತ್ವ ವ್ಯಕ್ತವಾಗಿವೆ. ಪ್ಲೇಟೋನ ಡೈಲಾಗನ್ನು ನೆನಪಿಗೆ ತರುವ ಶೂನ್ಯ ಸಂಪಾದನೆ ಇಂಗ್ಲೀಷಿಗೆ ಅನುವಾದವಾದುದು ಹೆಮ್ಮೆಯ ವಿಷಯ. ಇದರಿಂದ ಕನ್ನಡ ಸಾಹಿತ್ಯದ ಒಂದು ಉತ್ಕೃಷ್ಟ ಕೃತಿಯನ್ನು ಜಗತ್ತಿನ ಸಾಹಿತ್ಯ ವೇದಿಕೆಗೆ ತಂದು ನಿಲ್ಲಿಸಿದಂತಾಗಿದೆ.

೨೦ನೆಯ ಶತಮಾನದ ಮಹಾಕಾವ್ಯಗಳಲ್ಲಿ ಒಂದು ಎಂದು ಗಣಿಸಲ್ಪಡುತ್ತಿರುವ ೮೨೪ ಪುಟದ ''ಭವ್ಯಮಾನವ'' ಕಾವ್ಯವು[19] ಪ್ರೊ. ಭೂಸನೂರಮಠ ಅವರ ಅಪೂರ್ವ ಸೃಷ್ಟಿ. ಸಂಶೋಧಕ ಕವಿಯಾಗಲಾರ ಎಂಬುದು ಸಾಮಾನ್ಯ ನಂಬಿಕೆ. ಅದನ್ನು ಸುಳ್ಳು ಮಾಡುವಂತೆ ಮೂಡಿ ಬಂದಿದೆ ಈ ಕಾವ್ಯ. ಇಲ್ಲಿ ನೆಪಕ್ಕೊಂದು ಕಥೆ ಇದೆಯಾದರೂ ಕಥೆಯ ಹಂಗನ್ನು ಮೀರಿ ನಿಂತಿದೆ ಈ ಕಾವ್ಯ. ಈ ಕಾವ್ಯದ ಮೂಲ ಉದ್ದೇಶ ಮಾನವ - ಭವ್ಯಮಾನವನಾಗುವದು. ಇದನ್ನು ಕುರಿತು ಡಾ. ಪ್ರಭುಶಂಕರ ಅವರು ''ಇದೊಂದು ಅಪರೂಪದ ಮಹಾಕಾವ್ಯ. ಕನ್ನಡದಲ್ಲಿ ಇಂಥದು ಇನ್ನೊಂದಿಲ್ಲ ಎನ್ನುವ ಮಹಾಕಾವ್ಯ. ಕನ್ನಡದ ಗೌರವವನ್ನು ಹೆಚ್ಚಿಸಿರುವ ಮಹಾಕಾವ್ಯ''[20] ಎಂದಿರುವ ಮಾತುಗಳಲ್ಲಿ ಸತ್ಯ ಹುದುಗಿದೆ. ವಚನ ಸಾಹಿತ್ಯದ ಗಾಢ ಪ್ರಭಾವ, ಪುನರುಕ್ತಿದೋಷಗಳನ್ನು ಇಲ್ಲಿ ಕಾಣಬಹುದಾದರೂ ಅವೆಲ್ಲವನ್ನೂ ಮೀರಿ ಕವಿಯ ಅನುಭವ ಈ ಕಾವ್ಯವನ್ನು ತನ್ನಷ್ಟಕ್ಕೆ ತಾನೇ ಹಾಡಿಸಿಕೊಂಡು ಹೋಗುವಂತೆ ಮಾಡಿದೆ. ಗೇಯತೆ, ಭಾವತೀವ್ರತೆ ಇದರ ವಿಶೇಷ ಗುಣಗಳೆಂದು ಹೇಳಬಹುದು. ಇದಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿ ವಿಶೇಷ ಬಹುಮಾನವನ್ನಿತ್ತು ಸನ್ಮಾನಿಸಿದೆ. ಇತ್ತೀಚೆಗೆ ಕರ್ನಾಟಕ ಸರಕಾರ ತನ್ನ ಪ್ರತಿಷ್ಠಿತ ಬಹುಮಾನವಾದ 'ಪಂಪ ಪ್ರಶಸ್ತಿ'ಯನ್ನು ನೀಡಿ ಅವರನ್ನು ಗೌರವಿಸಿದೆ.

ಹೀಗೆ ಪ್ರೊ. ಭೂಸನೂರಮಠ ಅವರು ತಮ್ಮ ಸಾಹಿತ್ಯ ಸೇವೆಯ ಮೂಲಕ ಕನ್ನಡ ನಾಡು ನುಡಿಯ ಸೇವೆಯನ್ನು ಗೈದಿದ್ದಾರೆ. ಪ್ರತಿಯಾಗಿ ನಾಡೂ ಕೂಡ ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳನ್ನಿತ್ತು ಗೌರವಿಸಿದೆ. ಅಲ್ಲದೆ ಗದಗಿನಲ್ಲಿ ಸೇರಿದ ಕನ್ನಡ ಸಾಹಿತ್ಯ ಸಮ್ಮೇಳನದ ಸಾಹಿತ್ಯಗೋಷ್ಠಿಯ ಅಧ್ಯಕ್ಷ ಪದವಿಯನ್ನು ಇತ್ತು ಮನ್ನಿಸಿದೆ. ಇದಕ್ಕೆ ಕಳಸಪ್ರಾಯವೆನ್ನುವಂತೆ ಗದಗಿನ ಶ್ರೀ ಜಗದ್ಗುರು ತೋಂಟದಾರ್ಯಮಠವು ''ಗೌರವ'' ಗ್ರಂಥವನ್ನೂ ಅರ್ಪಿಸಿದೆ. ಹೀಗೆ ಅವರ ನಿಸ್ಪೃಹ ಸೇವೆಗೆ ಸಂದ ಗೌರವ ಹಲವು, ಸಲ್ಲಬೇಕಾದವು ಇನ್ನೂ ಇವೆ.

---

19. ಪ್ರಕಾಶಕರು : ರಾಪೂರು ಶ್ರೀ ಸಿದ್ಧಲಿಂಗೇಶ್ವರ ಮಠ ಮತ್ತು ಆದವಾನಿ ಮುಂಡರಗಿ ಕಲ್ಲುಮಠದ ಅಧಿಪತಿಗಳು, ೧೯೮೩.

20. ಗ್ರಂಥಲೋಕ ಸಂ. ೯, ಸಂ. ೬.

ಏಳುನೂರೊಂದು ವಿರಕ್ತೋತ್ತರ ಯುಗದ ವಚನ ಸಾಹಿತ್ಯ

ಡಾ॥ ಬಿ.ಆರ್. ಹಿರೇಮಠ

'ಬಸವೋತ್ತರ ಯುಗ'ದ ಪ್ರಮುಖ ವಚನಕಾರರ ವಚನ ಸಾಹಿತ್ಯದ ಪ್ರಕಟಣೆ ಮಾತ್ರ ತಕ್ಕಮಟ್ಟಿಗೆ ನಡೆದಿದೆ. ಆದರೆ ಈ ಯುಗದ ಪ್ರಮುಖ ವಚನಕಾರರ ವಚನಗಳ ಸಮಗ್ರ ಅಧ್ಯಯನ, ಸಂಶೋಧನೆ ಅಷ್ಟಾಗಿ ನೆರವೇರಿರುವುದಿಲ್ಲ. ಹೀಗಾಗಿ ಉಪೇಕ್ಷಿತ ಇತರ ಶರಣರ ವಚನಗಳ ಪ್ರಕಟಣೆ, ಅಧ್ಯಯನ, ಸಂಶೋಧನೆಯ ಮಾತು ದೂರೇ ಉಳಿಯುತ್ತದೆ. 'ಬಸವೋತ್ತರ ಯುಗದ ವಚನಸಾಹಿತ್ಯ'ದಲ್ಲಿ ''ಏಳು ನೂರೊಂದು ವಿರಕ್ತಯುಗ' ಅತ್ಯಂತ ಪ್ರಮುಖವಾದ ಘಟ್ಟವೆನಿಸಿದೆ. ಏಳುನೂರ ಎಪ್ಪತ್ತು ಅಮರ ಗಣಂಗಳು ಹನ್ನೆರಡನೆಯ ಶತಮಾನದವರು. ನೂರೊಂದು ವಿರಕ್ತರು ಪ್ರೌಢದೇವರಾಯನ ಕಾಲದವರು. ಏಳುನೂರೊಂದು ವಿರಕ್ತರು ತೋಂಟದ ಸಿದ್ಧಲಿಂಗ ಶಿವಯೋಗಿಗಳ ಸಮಯದವರು. ಈ ಏಳುನೂರೊಂದು ವಿರಕ್ತರ ನಾಯಕ ವ್ಯಕ್ತಿ ಶ್ರೀ ತೋಂಟದ ಸಿದ್ಧಲಿಂಗ ಶಿವಯೋಗಿ. ಈ ಶಿವಯೋಗಿ ಸೂರ್ಯನ ಪ್ರಭಾವಲಯದಲ್ಲಿ ಬೆಳಗಿದವರು ಅನಂತ ವ್ಯಕ್ತಿಗಳು. ಇವರ ಶಿಷ್ಯ-ಪ್ರಶಿಷ್ಯ ಪರಂಪರೆ ನಾಡಿನುದ್ದಕ್ಕೂ ಹಂದರದ ಬಳ್ಳಿಯಂತೆ ಹಬ್ಬಿ ವಚನ ರಚನೆ, ವಚನ ಸಂಗ್ರಹ-ಸಂಕಲನ ಸಂಪಾದನ-ವ್ಯಾಖ್ಯಾನ ಸಾಹಿತ್ಯವನ್ನು ಸೃಷ್ಟಿಸಿತು. ಇದರಿಂದ 'ಸಂಪಾದನ ಸಮಯ', 'ಟೀಕಿನ ಸಮಯ'ಗಳ ಪರಂಪರೆಯೇ ರೂಪಗೊಂಡಿತು. ನಾಯಕ ವ್ಯಕ್ತಿ ಶ್ರೀ ತೋಂಟದ ಸಿದ್ಧಲಿಂಗ ಶಿವಯೋಗಿಗಳೇ ಈ 'ಏಳುನೂರೊಂದು ವಿರಕ್ತ ಯುಗ'ದ ಆದ್ಯ ವಚನಕಾರರು. ಇವರ ಶಿಷ್ಯ-ಪ್ರಶಿಷ್ಯ ಪರಂಪರೆಯನ್ನು ಮುಂದುವರಿಸಿದವರು ಹದಿನಾರು ಹದಿನೇಳನೆಯ ಶತಮಾನದ ಏಳುನೂರೊಂದು ವಿರಕ್ತರು. ಆದುದರಿಂದ 'ಬಸವೋತ್ತರ ಯುಗದ ವಚನ ಸಾಹಿತ್ಯ'ದ ಘಟ್ಟವನ್ನು 'ಏಳುನೂರೊಂದು ವಿರಕ್ತಯುಗ'ವೆಂದು ಹೆಸರಿಸಬಹುದಾಗಿದೆ. ಹೀಗೆ ಬಸವೋತ್ತರ ಯುಗದ ವಚನ ಸಾಹಿತ್ಯ'ದಲ್ಲಿ ೧. ನೂರೊಂದು ವಿರಕ್ತ

ಪೂರ್ವಯುಗ ೨. ನೂರೊಂದು ವಿರಕ್ತಯುಗ, ೩. ಏಳುನೂರೊಂದು ವಿರಕ್ತಯುಗ, ೪. ಏಳುನೂರೊಂದು ವಿರಕ್ತೋತ್ತರ ಯುಗ ಹೀಗೆ ಮೂರು ಘಟ್ಟಗಳು ಕಂಡುಬರುತ್ತವೆ. ಇಲ್ಲಿ 'ಏಳುನೂರೊಂದು ವಿರಕ್ತೋತ್ತರ ಯುಗದ ವಚನ ಸಾಹಿತ್ಯ'ವನ್ನು ಮಾತ್ರ ವಿವರಿಸಲಾಗಿದೆ. ಇದರಿಂದ 'ಬಸವೋತ್ತರಯುಗ'ದ ವಚನ ಸಾಹಿತ್ಯದ ವಿಪುಲತೆ, ವೈವಿಧ್ಯತೆ, ಸತ್ವಗಳು ವಿಧಿತವಾಗುತ್ತದೆ. ಇಂಥ ಅಧ್ಯಯನದ ಮೂಲಕ ವಚನ ಸಾಹಿತ್ಯ ಪರಂಪರೆಯ ಪ್ರವಾಹದ ಮುನ್ನಡೆ, ಅದರ ಶ್ರೀಮಂತಿಕೆ, ಅದು ಕನ್ನಡ ಸಾಹಿತ್ಯದಲ್ಲಿ ಹೊಂದಿದ ಪ್ರಾಮುಖ್ಯತೆಗಳು ಪ್ರಕಟಣೆಗೊಳ್ಳುತ್ತವೆ.

ತೋಂಟದ ಸಿದ್ಧಲಿಂಗ ಶಿವಯೋಗಿ, ಇವರ ಶಿಷ್ಯ-ಪ್ರಶಿಷ್ಯ ಪರಂಪರೆಯವರು 'ಷಣ್ಮುಖ ಶಿವಯೋಗಿಗಳು ಹಾಗೂ ಕಾಡಸಿದ್ದೇಶ್ವರರು ಮೊದಲಾದವರು ರಚಿಸಿದ ವಚನ ಸಾಹಿತ್ಯವನ್ನು ಹೊರತುಪಡಿಸಿ, ಇತರ ವಚನಕಾರರು ಸೃಷ್ಟಿಸಿದ ವಚನ ಸಾಹಿತ್ಯದ ಪರಿಚಯ, ವಿವೇಚನೆಯನ್ನು ಈ 'ಏಳುನೂರೊಂದು ವಿರಕ್ತೋತ್ತರ ಯುಗ'ದಲ್ಲಿ ಕೈಗೊಳ್ಳಲಾಗಿದೆ.

ಕಡಕೋಳ ಮಡಿವಾಳೇಶ್ವರ, ಕುಷ್ಟಗಿ ಕರಿಬಸವೇಶ್ವರ, ಗುಪ್ತೇಶ್ವರಯ್ಯ, ಚೆನ್ನಯ್ಯ, ದೇಶಿಕೇಂದ್ರ ಸಂಗನ ಬಸವೇಶ್ವರ, ನಿರಾಲಂಬ ಪ್ರಭುದೇವ, ಪರಂಜ್ಯೋತಿ, ಭಿಕ್ಷದ ಸಂಗಯ್ಯ, ಮುಮ್ಮಡಿ ಕಾರ್ಯೇಂದ್ರ, ಮೂರು ಸಾವಿರ ಮುಕ್ತಿಮುನಿ, ಹೇಮಗಲ್ಲ ಹಂಪ - ಈ ೧೧ ಜನ ಶರಣರು ಹಾಗೂ ೫೪ ಜನ ಅಜ್ಞಾತ ವಚನಕಾರರು ಮಾತ್ರ ಏಳುನೂರೊಂದು ವಿರಕ್ತೋತ್ತರ ಯುಗದಲ್ಲಿ ರಚಿಸಿದ ವಚನ ಸಾಹಿತ್ಯದ ಸ್ಥೂಲಸಮೀಕ್ಷೆ ಹೀಗಿದೆ :

ಕಡಕೋಳ ಮಡಿವಾಳೇಶ್ವರ

ಈ ಶರಣ ಗುಲಬರ್ಗಾ ಜಿಲ್ಲೆಯ ಜೇವರಗಿ ತಾಲ್ಲೂಕಿನ ಕಡಕೋಳ ಗ್ರಾಮದವನು. ಈತನು ಬಿದನೂರು ಮಡಿವಾಳಾಖ್ಯನೆಂದು ಪ್ರಸಿದ್ಧಿ ಪಡೆದಿದ್ದ. ಅನುಭಾವಿ, ಮಹಾಪುರುಷ, ಶಿವಯೋಗಿಯಾದ ಮಡಿವಾಳೇಶ್ವರನು ಈ ಪ್ರದೇಶದ ಹಿರಿಯ ಶರಣ ; ಮಹಾಚೇತನ. ಇವರ ಕಾಲ ಕ್ರಿ.ಶ. ೧೭೮೦ ರಿಂದ ೧೮೫೫. ಗುಲಬರ್ಗಾ (ಅರಳಗುಂಡಗಿ)ದ ಶರಣಬಸವೇಶ್ವರರ ಸಮಕಾಲೀನರು. ತಾಯಿ ಗಂಗಮ್ಮ ; ತಂದೆ ವಿರೂಪಾಕ್ಷಸ್ವಾಮಿ. ಗುರು ಪಡುವಿಡಿ ಬಗೆಯ ಬಾಳೇಹಳ್ಳಿ ಸಿಂಹಾಸನದ ಮಹಾಂತ ಶಿವಯೋಗಿ. ದೀಕ್ಷಾಗುರು ಜಿಣಮಗೇರಿ ಗುಡ್ಡದ ಶ್ರೀಗುರು ಬಸವೇದೇವ, ವಚನ (''ಈ ಮೊಡವಿಯ ಮಡದಿಯ..........)ವೊಂದರಲ್ಲಿ ತನ್ನ ಗುರುಪರಂಪರೆಯನ್ನೇ ವಿವರವಾಗಿ ಕೊಟ್ಟಿದ್ದಾನೆ. ಅಪಾರ ಶಿಷ್ಯ ಬಳಗ ಹಿಂದಿದ್ದ ಇವರು ಅನುಭಾವಗೋಷ್ಠಿ ನಡೆಸುತ್ತಿದ್ದರು. ವಚನಾಂಕಿತ. ''ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ'', 'ಶಂಕರಪ್ರಿಯ ಚೆನ್ನ ಕದಂಬಲಿಂಗ ಮಹಾಂತಯೋಗಿ''. ಇಲ್ಲಿ ತನ್ನ ಗುರುವಿನ ಹೆಸರನ್ನೇ ವಚನಾಂಕಿತವನ್ನಾಗಿ ಇಟ್ಟುಕೊಂಡಿದ್ದಾನೆ. ಈತನ ವಚನಕೃತಿ 'ನಿಜಲೀಲಾಮೃತ'. ಇದರಲ್ಲಿ ಮಡಿವಾಳೇಶ್ವರರ ೭೮ ವಚನಗಳಿರುತ್ತವೆ. ಈ ವಚನ ಕೃತಿಯಲ್ಲಿ ನಿಜಲೀಲಾ, ಪರಬ್ರಹ್ಮಸ್ಥಲ ; ತ್ರಿವಿಧಾತ್ಮಸ್ಥಲ, ಗುರುಸ್ಥಲ, ಚಿದ್ಬೈಲು, ನಿಷ್ಕಾರಣ ಸ್ಥಲ, ಷಟ್‌ಸ್ಥಲ, ನಿಜ ಶರಣನ ಚರಿತ್ರ ; ಸತ್ಯ-ಸದಾಚಾರ-ಸಮ್ಯಕಜ್ಞಾನ, ತ್ರಿಕಾಲಜ್ಞಾನಪದ ; ಸೃಷ್ಟಿ - ಸ್ಥಿತಿ-ಲಯ, ನಿಜ ಶರಣನ ಅನುಭವ, ನಿಜ ಶರಣನ ನೀತಿ, ನಿಜ ಶರಣನ ಮುಕ್ತಿ, ಷಡಾವತಾರ ; ಸದ್ಯೋಜಾತ ಮೂರ್ತಿ ಚರಿತ್ರೆ (ಕೈಲಾಸನಿವಾಸ) - ವಾಮದೇವ ಚರಿತ್ರೆ, (ಭೂವಿಲಾಸ) ಅಘೋರ ಮೂರ್ತಿ ಚರಿತ್ರ (ಮದ್ವಿಲಾಸ) ತತ್ಪುರುಷಮೂರ್ತಿ ಚರಿತ್ರ (ಚಿದ್ವಿಲಾಸ) ಈಶಾನ್ಯಮೂರ್ತಿ ಚರಿತ್ರ (ಮುಕ್ತಿ ವಿಲಾಸ). ತ್ರಿಮುಖ ವಿನೋದ ; ಇಷ್ಟಾಲೀಲಾ ಪ್ರಾಣಲೀಲಾ- ಭಾವಲೀಲಾ). ಚಿದ್ಬಯಲ ಸ್ಥಲ ಮಹಾಬಯಲ ಸ್ಥಲ, ನಿರ್ಬಯಲ ಸ್ಥಲ, ಗಾಳಿಪೂಜೆ, ಭಾವ ನಿರ್ಬಯಲ ಸ್ಥಲ, ಗಾಳಿಪೂಜೆ, ಭಾವನಿರ್ಬಯಲ ಸ್ಥಲ ಹೀಗೆ ವಿಷಯ ವಿವರಣೆಯಿದೆ. ಈ ವಚನಕೃತಿಯ ಮಧ್ಯದಲ್ಲಿ ಇವರೇ ರಚಿಸಿದ ಸ್ವರವಚನಗಳಿರುತ್ತವೆ. ಇದಲ್ಲದೆ ವಚನಗಳ ನಡುವೆ ಅಲ್ಲಲ್ಲಿ ಸಂಸ್ಕೃತ ಶ್ಲೋಕಗಳಿರುತ್ತವೆ. ಈ ವಚನಗಳ ನಿರೂಪಣೆ ಅತ್ಯಂತ ಸರಳವಾಗಿದ್ದು ಆತ್ಮೀಯ ಭಾಷೆಯನ್ನು ಹೊಂದಿರುತ್ತವೆ. ದೀರ್ಘವೂ ಕಿರಿಯವೂ ಆದ ಗಾತ್ರ ಹೊಂದಿದ ಈ ವಚನಗಳಲ್ಲಿ ಹದಿನೆಂಟು - ಹತ್ತೊಂಭತ್ತನೆಯ ಶತಮಾನದ ಭಾಷಾ ಪ್ರಯೋಗಗಳನ್ನು ಕಾಣುತ್ತೇವೆ. ವಚನಶಿಲ್ಪ ಬಂಧುರವಾಗಿದ್ದು,

ವಚನಕಾರನ ಲೋಕಾನುಭವ, ಆತ್ಮಾನುಭವ ಹಾಗೂ ಶಿವಾನುಭವಗಳನ್ನು ತಿಳಿಸಿಕೊಡುತ್ತವೆ. ವೀರಶೈವ ತತ್ವಗಳಾದ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲ ವಿಷಯಗಳನ್ನು ಜನರಿಗೆ ತಿಳಿಯುವ ರೀತಿಯಲ್ಲಿ ವಿವರಿಸಿ, ಹೇಳಲಾಗಿದೆ. ನಿಜ ಶರಣನ ಆಚಾರಶುದ್ಧಿ ಸಮಾಜಶುದ್ಧಿಗಳ ಬಗೆಗೂ ಮೂಲಕ ಆತನು ಪಡೆಯಬೇಕಾದ ಬಯಲುಸ್ಥಿತಿಯ ಕುರಿತೂ ತನ್ನನ್ನು ತಾನು-ತಿಳಿಯುವ ರೀತಿಯನ್ನೂ ಈ ವಚನಗಳು ಅಧಿಕವಾಗಿ ಪ್ರತಿಪಾದಿಸುತ್ತವೆ. ಇದರಲ್ಲಿ ಅನೇಕ ಬೆಡಗಿನ ವಚನಗಳೂ ಇರುತ್ತವೆ. ಅಲ್ಲಲ್ಲಿ ೧೨ನೇ ಶತಮಾನದ ವಚನಕಾರರ ಪ್ರಭಾವ ತೋರಿಬಂದರೂ ಸ್ವತಂತ್ರ ಜಾಯಮಾನದ ಮಡಿವಾಳೇಶ್ವರರ ವಚನಗಳು ಸ್ವತಂತ್ರಶೈಲಿಯಲ್ಲಿರುತ್ತವೆ. ಇವರು ವಚನಗಳಲ್ಲದೆ 'ಮಹಾಂತೇಶ' ಅಂಕಿತದಲ್ಲಿ ಸ್ವರವಚನಗಳನ್ನೂ ರಚಿಸಿದ್ದಾರೆ. ಈ ಸ್ವರವಚನಗಳ ಸಂಖ್ಯೆ ೧೭೫೦ ಇದ್ದರೂ ಸಧ್ಯ ೧೫೪ (೧೩೩+೨೧) ಮಾತ್ರ ಸಿಗುತ್ತವೆ. ಮಡಿವಾಳೇಶ್ವರರ ವಚನಗಳು ನೀರಸವಾಗಿರದೆ, ಗೇಯಾಂಶ ಹಾಗೂ ಕಾವ್ಯಾಂಶಗಳಿಂದ ಕೂಡಿದವುಗಳಾಗಿವೆ. ಬಸವೋತ್ತರ ಯುಗದ ವಚನ ಸಾಹಿತ್ಯದಲ್ಲಿ ಇವುಗಳಿಗೆ ವಿಶೇಷ ಮನ್ನಣೆಯಿದೆ. ಅನುಭಾವ, ತತ್ವ, ನೀತಿಗಳನ್ನು ಬೋಧಿಸುವ ಈ ವಚನಗಳು ಸಾಮಾನ್ಯರಿಗೂ ಅರ್ಥವಾಗುವಂತಿವೆ. ಈ ಮಹತ್ವದ ವಚನಕಾರನ ಎರಡು ವಚನಗಳನ್ನು ಮಾದರಿಗಾಗಿ ಇಲ್ಲಿ ನೋಡಬಹುದು :

> ಕಸ್ತೂರಿ ಮೃಗವು ಕಸ್ತೂರಿಯ ಹುಡುಕುತ್ತ ಹೋದರೆ
> ಕಸ್ತೂರಿ ಮೃಗವು ತಾನಲ್ಲದೆ ಕಸ್ತೂರಿಯು ಸಿಗಲುಂಟೆ ?
> ಕನ್ನಡಿಯ ಮಹಲಿನೊಳಗೆ ಕುನ್ನಿ ತಾ ಕೂತು,
> ಸುತ್ತಲಿರ್ದ ಕನ್ನಡಿಯೊಳಗಿನ ಕುನ್ನಿಗಳ ಕಂಡು,
> ತನ್ನ ರೂಹೆಂದು ಅರಿಯದೆ, ಅನ್ಯವೆಂದು ಕೂಗಲು,
> ಆ ಕೂಗು ಎಂದಿಗೆ ಮಾಣ್ಬುದೋ ತನ್ನ ತಾ ತಿಳಿದಂದಿಗಲ್ಲದೆ,
> ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ.
> ಸುಳ್ಳಪ್ಪನ ಮಗ ಕಳ್ಳಪ್ಪ. ತಳ್ಳಿಗೆ ಹೋಗಿ ಕೊಳ್ಳಿಯ ಕೊಟ್ಟು
> ಹಾಳ ಹಳ್ಳಿಯ ಸುಲಿದು, ಬೆಳ್ಳಿ ಬಂಗಾರ ಎಳ್ಳಷ್ಟೂ ಕೊಡಲಿಲ್ಲ.
> ಕಳ್ಳಪ್ಪನ ಸುಳ್ಳಪ್ಪ ಕೇಳಲು, ಆ ಕಳ್ಳಪ್ಪ ಸುಳ್ಳಪ್ಪನಾದ.
> ಆ ಸುಳ್ಳಪ್ಪ ಮುಳ್ಳಪ್ಪನಾದ ;
> ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ.

ಕುಷ್ಟಗಿ ಕರಿಬಸವೇಶ್ವರ

ವಚನಕಾರ ಕರಿಬಸವೇಶ್ವರ, ರಾಯಚೂರು, ಜಿಲ್ಲೆಯ ಕುಷ್ಟಗಿಯವ. ತನ್ನನ್ನು ನಿರ್ವಾಣ ಕರಿಬಸವರಾಜದೇವನೆಂದು ಹೇಳಿಕೊಂಡ ಈತನ ವಚನಾಂಕಿತ 'ಅಖಂಡ ಪರಿಪೂರ್ಣ ಧನಲಿಂಗ ಗುರುಚೆನ್ನಬಸವೇಶ್ವರ ಶಿವ ಸಾಕ್ಷಿಯಾಗಿ'' ಗುರು-ಪಟ್ಟು ಕಂಥೆ ಚೆನ್ನಬಸವದೇವ. ಈ ಗುರುವಿನ ಹೆಸರನ್ನೇ ತನ್ನ ವಚನಗಳಿಗೆ ಅಂಕಿತವಾಗಿ ಇಟ್ಟುಕೊಂಡಿದ್ದಾನೆ. ಕಾಲ ಕ್ರಿ.ಶ.ಸು.೧೭೦೦. ವಚನ ಸಂಖ್ಯೆ ೯೯. ಈ ವಚನಗಳ ಮೇಲೆ ಬಸವಣ್ಣ , ತೋಂಟದ ಸಿದ್ಧಲಿಂಗ ಶಿವಯೋಗಿ, ಘನಲಿಂಗಿದೇವ, ಸರ್ವಜ್ಞರ ವಚನಗಳ ಪ್ರಭಾವವಾಗಿರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ. ಈ ವಚನಗಳನ್ನು 'ಚಿತ್ತ ಸದ್ಗತಿಯ ವಚನ'ಗಳೆಂದು ಕರೆಯಲಾಗಿದೆ. ಗುರು, ಲಿಂಗ, ಜಂಗಮ, ಪ್ರಸಾದ, ದಾಸೋಹ, ಭಸ್ಮ, ರುದ್ರಾಕ್ಷಿ, ಭಕ್ತ ಶಿವಾಚಾರಗಳ ಮಹತ್ವವೂ ಸಮಾಜದಲ್ಲಿಯ ಶುಷ್ಕಆಚರಣೆಗಳ ಖಂಡನೆಯೂ ಶಿವಭಕ್ತನಾದವನು ಅನ್ಯಸ್ತ್ರೀಯರಿಗೆ ಅಳುಪಬಾರದೆಂಬ ನೀತಿಬೋಧೆಯೂ ಇಲ್ಲಿದೆ. ಗುಂಡಬ್ರಹ್ಮಯ್ಯ, ಮಡಿವಾಳ ಮಾಚಿದೇವ, ಸಿರಿಯಾಳ, ಗೊಲ್ಲಾಳ, ಮಾದಾರ ಚೆನ್ನಯ್ಯ, ಮರುಳಶಂಕರದೇವ, ಅಕ್ಕಮಹಾದೇವಿ ಮುಂತಾದ ಶರಣಸ್ತುತಿ, ತನ್ನ ಗುರುಪಟ್ಟುಗಂಥೆ ಚೆನ್ನಬಸವನ ಸ್ತೋತ್ರ

ಈ ವಚನಗಳಿಲ್ಲಿದೆ. ವಚನಗಳು ಗಾತ್ರದಲ್ಲಿ ಚಿಕ್ಕವಾಗಿದ್ದು, ಸರಳತೆ, ಸಹಜತೆಗಳಿಂದ ಕೂಡಿರುತ್ತವೆ. ಈ ವಚನಗಳು ಸಾಂಸ್ಕೃತಿಕ ಅಧ್ಯಯನಕ್ಕೆ ಉಪಯುಕ್ತ ಮಾಹಿತಿ ಒದಗಿಸುತ್ತವೆ. ಕುಷ್ಟಗಿ ಕರಿಬಸವೇಶ್ವರರ ಮಾದರಿಯ ವಚನಗಳು ಹೀಗಿವೆ :

ಹಂದಿಗೆ ಅಂದಳವನಿಕ್ಕಿದರೆ, ಅರಸನಾಗಬಲ್ಲುದೆ ಅದು ?
ಕುನ್ನಿಗೆ ರನ್ನದ ಹಲ್ಲಣವ ಹಾಕಿದರೆ ಕುದುರೆಯಾಗಬಲ್ಲದೆ ಅದು ?
ಕನ್ನೆವೆಣ್ಣು ಕಲೆಯ ಸೂಳೆಯಾಗಬಲ್ಲುಳೆ ಅವಳು ?
ಹೊನ್ನು ಕಬ್ಬುನವಾಗಬಲ್ಲುದೆ ?
ಬಿನ್ನಣದ ಭಕ್ತಿಯ ಮಾಡಿ ತಪ್ಪುವ ಅನ್ಯಕಾರಿಗಳ ಮುಖವ ನೋಡಲಾಗದು,
ಅಖಂಡ ಪರಿಪೂರ್ಣ ಘನಲಿಂಗ ಗುರುಚನ್ನಬಸವೇಶ್ವರ ಶಿವಸಾಕ್ಷಿಯಾಗಿ
ಚಿತ್ರದ ಬೊಂಬೆ ರೂಪಾಗಿದ್ದರೇನು ?
ಚೈತನ್ಯವಿಲ್ಲದ ಕಾರಣ ಪ್ರಯೋಜನಕಾರ್ಯವಾದುದಿಲ್ಲ.
ಹಾವುಮೆಕ್ಕೆಯ ಹಣ್ಣು ನುಣ್ಣಾಗಿದ್ದರೇನು ?
ಕಹಿಬಿಡದ ಕಾರಣ ಪ್ರಯೋಜನವಾದುದಿಲ್ಲ.
ಹತ್ತಿಯ ಹಣ್ಣು ಕಳಿತಿದ್ದರೇನು ?
ಕ್ರಿಮಿ ಬಿಡದ ಕಾರಣ ಪ್ರಯೋಜನಕಾರ್ಯವಾದುದಿಲ್ಲ.
ತಿಪ್ಪೆಯ ಗುಂಡಿಯ ನೀರು ತಿಳಿದಿದ್ದರೇನು ?
ಅಮೇಧ್ಯ ಬೆರೆದ ಕಾರಣ ಪ್ರಯೋಜನಕಾರ್ಯವಾದುದಿಲ್ಲ
ಭಕ್ತನಾದೆನೆಂಬ ಸಂಗವ ತಾಳಿದರೇನು ?
ಹಿತ್ತಲಿಗೆ ತಳೆಯ ಹಿಡಿಸುವಂತೆ
ಕರ್ತೃ ಕ್ರಿಯಿಲ್ಲದವನ ಭಕ್ತಿ ಕತ್ತೆ ನಾಯಿಯಂತೆ
ಅವನಿಗೆ ಸತ್ಯವಿಲ್ಲ. ಕಾಣಾ,
ಅಖಂಡ ಪರಿಪೂರ್ಣ ಧನಲಿಂಗ ಗುರು ಚನ್ನಬಸವೇಶ್ವರ ಶಿವಸಾಕ್ಷಿಯಾಗಿ.

ವಚನಗಳ ಒಡಲಲ್ಲಿ ತುಂಬಿಕೊಂಡಿರುವ ಮಾಳಿಗೆಯ ಮಣ್ಣು ಮಂಟಪಕ್ಕೆ ಸರಿಯೇ? ಆಳಿಂಗೆ ಅರಸು ಸರಿಯೆ? ಸೂಳೆಗೆ ಪತಿವ್ರತೆ ಸರಿಯೆ? ಸಟ್ಟುಕ ಸವಿಯಬಲ್ಲುದೆ? ಅಟ್ಟ ಮಡಕೆ ಉಣಬಲ್ಲದೆ? ನೀರ ಮಡಿಯ ಕಟ್ಟಿ ಬಯಲಿಗೆ ಬಲಿಯ ಬೀಸಬಹುದೆ? ಕುರುಡಗೆ ಕನ್ನಡಿಯ ತೋರಿಸಿದರೆ ನೋಡಬಲ್ಲನೆ? ಏರಿಗೆ ಅರಗ ತೋರಿ ಗಾಳಿಗೆ ಸೊಡರ ಹಿಡಿಯಬಹುದೆ? ಕೊರಡು ಕೊನರಬಲ್ಲುದೆ? ಬರಡು ಹಯನಾಗಬಲ್ಲುದೆ? ಮೂಕರಿಗೆ ರಾಗವು ಹೊಳಿದರೆ ಹಾಡಬಲ್ಲನೆ? ಕೆರೆಯನೊಡೆದ ಬಳಿಕ ತೂಬು ತಡೆಯಬಹುದೆ? ಒಡಕ ಮಡಕೆಗೆ ಒತ್ತಿಮಣ್ಣ ಕೊಟ್ಟರೆ ನಿಲ್ಲಬಲ್ಲುದೆ? ಮುತ್ತೊಡೆದರೆ ಬೆಚ್ಚಬಲ್ಲುದೆ? ಜೇನು ತುಪ್ಪದೊಳು ಬಿದ್ದ ನೊಣವಿನಂತೆ, ಕಾನನದೊಳು ಕಣ್ಣುಕಟ್ಟಿ ಬಿಟ್ಟ ಮರುಳಿನಂತೆ, ಎಲುವ ಕಡಿದ ಶ್ವಾನನಂತೆ, ಮಲಿನ ಭುಂಜಿಸುವ ಸೂಕರನಂತೆ, ಒತ್ತೆಯ ಸೂಳೆ ಒತ್ತೆಯ ತೋರುವಂತೆ, ಹೆತ್ತ ತಾಯಿಗೆ ಮಲತಾಯ ತೋರುವಂತೆ ಇಂಥ ಸುಂದರ ವಾಕ್ಯಗಳು ಸಾಹಿತ್ಯದ ಸೊಗಸನ್ನು ಹೊರಸೂಸುತ್ತವೆ.

ಗುಹೇಶ್ವರಯ್ಯ

ಹಸ್ತಪ್ರತಿಯಲ್ಲಿ ''ಗುಹೇಶ್ವರಯ್ಯನ ವಚನ ಬರವುದಕ್ಕೆ ಶುಭಮಸ್ತು'' ಎಂದು ಸ್ಪಷ್ಟವಾಗಿ ಹೇಳಿರುವುದರಿಂದ 'ಗುಹೇಶ್ವರಪ್ರಿಯ ನಿರಾಳಲಿಂಗ' ಅಂಕಿತದ ವಚನಗಳ ವಚನಕಾರ 'ಗುಹೇಶ್ವರಯ್ಯ' ನೆಂಬುದು ವಿದಿತವಾಗುತ್ತದೆ. ಈತನ ಚರಿತ್ರೆಗೆ ಸಂಬಂಧಿಸಿದ ಯಾವ ವಿವರಗಳೂ ಗೊತ್ತಾಗುವುದಿಲ್ಲ. ಕ್ರಿ.ಶ.ಸು. ೧೭೦೦ರಲ್ಲಿ ಇದ್ದಿರಬಹುದಾದ ಈ ವಚನಕಾರನ

ವಚನಾಂಕಿತ "ಗುಹೇಶ್ವರಪ್ರಿಯ ನಿರಾಳಲಿಂಗ", ವಚನಸಂಖ್ಯೆ ೪೪. ಈತನ ವಚನಗಳಲ್ಲಿ ಹನ್ನೆರಡನೆಯ ಶತಮಾನದ ವಚನಕಾರರ ದಟ್ಟ ಪ್ರಭಾವವಿದ್ದರೂ ಅರ್ಥಸ್ಪಷ್ಟತೆ ಕಡಿಮೆಯೆಂದೇ ಹೇಳಬೇಕು. ವಚನಶಿಲ್ಪದಲ್ಲಿ ಶೈಥಿಲ್ಯ ಒಡೆದು ಕಾಣುತ್ತದೆ. ಗುಹೇಶ್ವರಯ್ಯನ ವಚನಗಳನ್ನು ಮಕರತರ್ಕದ ವಚನ, ಯೋಗಿತರ್ಕದ ಪ್ರಸ್ತಾವದ ವಚನ, ಗುರುಸ್ಥಲದ ವಚನ, ಪ್ರಾಣಲಿಂಗಿಸ್ಥಲದ ವಚನ, ಭಕ್ತಸ್ಥಲದ ವಚನ, ಕವಿಗಳ ತರ್ಕದ ಪ್ರಸ್ತಾವದ ವಚನ - ಎಂದು ವಿಂಗಡಿಸಲಾಗಿದೆ.

ವೀರಶೈವ ತತ್ವಗಳಾದ ಷಟ್‌ಸ್ಥಲ, ಪಂಚಾಚಾರ, ಅಷ್ಟಾವರಣ, ಯೋಗಗಳ ವಿವರಣೆ ಇಲ್ಲಿ ಪ್ರಮುಖವಾಗಿರುತ್ತದೆ. ಲಿಂಗದ್ರೋಹಿ, ನರಗುರಿ, ಹುಲುಮಾನವ ಹಾಗೂ ಕಪಟವೇಷದವರನ್ನು ಬಿರುನುಡಿಗಳಿಂದ ಹೀಯಾಳಿಸಲಾಗಿದೆ. ತಾನು ಭಕ್ತ, ಶರಣ, ಐಕ್ಯನೆಂದು ಹುಸಿಯ ನುಡಿಯಬಾರದು. ಗುರು-ಲಿಂಗ-ಜಂಗಮ-ಭಕ್ತರಲ್ಲಿ ಭೇದ ಕಲ್ಪಿಸಬಾರದು. ಲಿಂಗನಡೆ, ಲಿಂಗನುಡಿ, ಲಿಂಗಸಂಗವುಳ್ಳವ ಶರಣನೆನಿಸಿಕೊಳ್ಳುತ್ತಾನೆ. ಶರಣನಿಗೆ ದೇಹಸೂತಕವಳಿದು ಶರಣಸಂಗ, ಲಿಂಗಸಂಗದ ಸುಖ ಅಳವಡಬೇಕು. ಭಕ್ತನಾದವನು ಪುಣ್ಯ-ಪಾಪ, ಗಮನ-ನಿರ್ಗಮನವೆಂಬ ದ್ವಂದ್ವಗಳನ್ನು ಮೀರಿ ಪ್ರಾಣಲಿಂಗಿ, ಸ್ಥಲ ಸಂಬಂಧಗಳನ್ನು ಅರಿಯಬೇಕು. ತನ್ನ ತಾನರಿದ ಚಿತ್ತಸಮಾಧಾನವುಳ್ಳ ಶರಣನು ಮರ, ಪರ್ವತ, ಜನ, ನಿರ್ಜನ, ಹೊರಗಣ ಧ್ಯಾನ, ಮೌನ, ಜಪತಪ ನಿತ್ಯನೇಮಗಳೆಂಬ ಭಾವಗಳಿಂದ ಮುಕ್ತನಾಗಿರಬೇಕು. ಕಾಯ, ಕರಣ, ಜೀವ, ಪ್ರಾಣಸಮಾಧಿ ಯೋಗಕ್ಕಿಂತ ಸಹಜ ನಿಜಸಮಾಧಿಯೋಗವೇ ಶ್ರೇಷ್ಠವೆಂದು ಗುಹೇಶ್ವರಯ್ಯ ಹೇಳುತ್ತಾನೆ. ಈತನ ಬೆಡಗಿನ ಹಾಗೂ ಸಾಮಾನ್ಯ ವಚನಗಳನ್ನು ಹೀಗೆ ಉದಾಹರಿಸಬಹುದು :

ಪೃಥ್ವಿಯ ಮಧ್ಯದಲ್ಲೊಂದು ಬೀಜವಿಲ್ಲದ ವೃಕ್ಷ ಹುಟ್ಟಿತ್ತು.
ಆ ವೃಕ್ಷಕ್ಕೆ ಒಂದು ಪೂರ್ವಭಾಗವೆಂದು ಗೊನೆ ಹುಟ್ಟಿತ್ತು.
ಆ ಗೊನೆಗೆ ತಲೆಕೆಳಗಾಗಿ ಒಂದು ಕಮಲ ಹುಟ್ಟಿತ್ತು.
ಆ ಕಮಲದ ಎಸಳು ಮರ್ತ್ಯಮುಖ, ಅದರ ಪೂರ್ವಮುಖವೇ ಆಕಾಶ
ಆ ಕಮಲಕ್ಕೆ ನವಪರಿಕಾಯಿ ನಾಲ್ಕರಲ್ಲಿ ರಸ ತುಂಬಿ ಹಣ್ಣಾಯಿತ್ತು
ನಾಲ್ಕು ಆರು ಹತ್ತು ಹನ್ನೆರಡು ಹದಿನಾರು
ಇಂತೀ ನಲ್ವತ್ತೆಂಟು ಮಂದಿ ಆ ಹಣ್ಣಿನ ಗ್ರಾಹಕರು
ಆ ಹಣ್ಣ ಮಾರುವವರು ಸಾವಿರಾಳಿನ ನಾಯಕರು
ಆ ಹಣ್ಣಿನ ಗ್ರಾಹಕರು, ಆ ಹಣ್ಣ ಮೂರು ರತ್ನಕ್ಕೆ ಬೆಲೆಯನಿಟ್ಟರು.
ಮೂರು ರತ್ನಕ್ಕೆ ಕೊಡಬಹುದೆ? ಎಂದು ಆ ಸಾವಿರಾಳಿನ ನಾಯಕರು
ಆ ಹಣ್ಣ ಕೊಂಡು, ಮೇಲುಗಿರಿಯ ಕೈಲಾಸದ
ಅರಸನ ಸಂದರುಶನವ ಮಾಡಿದ
ಆ ಗಿರಿರಾಜನು ಆ ಹಣ್ಣ ಕಂಡು ಬೆರಗಾದ
ಆ ಹಣ್ಣಿನ ಸವಿಯ ಬಲ್ಲವರ ತೋರಿ ಸಲಹಯ್ಯ
ಗೊಹೇಶ್ವರಪ್ರಿಯ ನಿರಾಳಲಿಂಗಾ

ದಾಸಿಯಾದಡೇನು, ಅವನ ಬೇಡಿದಲ್ಲದೆ ಅರಿಯಬಾರದು.
ರಣರಂಗ ಧೀರನಾದಡೇನು, ಅಲಗು ಅಲಗು ಹಳಚಿದಲ್ಲದೆ ಅರಿಯಬಾರದು.
ಗೆಳೆಯನಾದಡೇನು, ಅಗದಲ್ಲದೆ ಅರಿಯಬಾರದು.
ಹೇಮವಾದಡೇನು, ಒರೆಗಲ್ಲುಯಿಲ್ಲದೆ ಅರಿಯಬಾರದು
ನಿನ್ನಸರಿಬಿಡಿನೆಂಬಡೆ ಸಂಸಾರ ಸಾಗರವ ದಾಟಿದಲ್ಲದೆ
ಅರಿಯಬಾರದು ಕಾಣಾ, ಗೊಹೇಶ್ವರ ಪ್ರಿಯ ನಿರಾಳಲಿಂಗಾ.

ಇಲ್ಲಿಯ ವಚನಗಳಲ್ಲಿ ದಟ್ಟವಾಗಿ ಹೆಣೆದುಕೊಂಡಿರುವ 'ಮನಹೀನ ಬಂಟನ ಕೈಯಲಿ ಬತ್ತೀಸಾಯುಧವಿದ್ದರೇನಯ್ಯ? ಚಾರಸ್ತ್ರೀ ಸರ್ವಾಭರಣವನ್ನಿಟ್ಟಿದ್ದರೇನಯ್ಯ? ಕುರುಡನ ಕೈಯಲ್ಲಿ ದರ್ಪಣವಿದ್ದರೇನಯ್ಯ? ಧರ್ಮವನರಿಯದನ ಕೈಯಲ್ಲಿ ಹಣವಿದ್ದರೇನಯ್ಯ? ಜ್ಞಾನಹೀನ ರೂಪ ಧರಿಸಿದ್ದರೇನಯ್ಯ? ಫಲವನಳಿದವರಿಗೆ ಕುಲದ ಹಂಗೇತಕಯ್ಯ? ಗುರುಭಕ್ತನಾದ ಮೇಲೆ ಜಂಗಮದ ಹಂಗೇತಕಯ್ಯಾ? ಪ್ರಾಣಲಿಂಗದ ಹೊಲಬನರಿತವಂಗೆ ಇಷ್ಟಲಿಂಗದ ಹಂಗೇತಕಯ್ಯ? ಮಣಿಯನೆಣಿಸಿ ದಿನವ ಕಳೆಯಲಿ ಬೇಡ, ಕಲ್ಲು ಕಣಿಯ ಪೂಜಿಸಿ ದಿನವ ಕಳೆಯಲಿ ಬೇಡ, ಬೆಂಕಿಯೊಳಗಣ ಗುಣ ಬಿಸಿನೀರಿನೊಳಗುಂಟೆ? ಕತ್ತಲ ಮನೆಯಲ್ಲಿ ಜ್ಯೋತಿಯ ನೆನೆದರೆ ಪ್ರಕಾಶವಾಗಬಲ್ಲುದೆ? ಕಾಮಜ್ವರದವರು ರಂಭೆಯ ನೆನೆದರೆ ಕಾಮಜ್ವರ ತಂಬಿಸಬಲ್ಲದೆ?' ಎಂಬಂತಹ ಸೂತ್ರರೂಪದ ವಾಕ್ಯಗಳು ಈ ವಚನಗಳ ಸಾಹಿತ್ಯಮೌಲ್ಯವನ್ನು ಸಾದರಪಡಿಸುತ್ತವೆ.

ಚೆನ್ನಯ್ಯ

ವಚನಕಾರರ ಚೆನ್ನಯ್ಯನ ಜೀವನಚರಿತ್ರೆಗೆ ಸಂಬಂಧಿಸಿದ ಯಾವ ವಿವರಗಳೂ ಗೊತ್ತಾಗುವುದಿಲ್ಲ. ವಚನಶಿಲ್ಪ ಹಾಗೂ ವಚನಭಾಷೆಗಳನ್ನು ಅನುಲಕ್ಷಿಸಿ, ಈತನು ಕ್ರಿ.ಶ.ಸು. ೧೭೦೦ರಲ್ಲಿ ಇದ್ದನೆಂದು ಭಾವಿಸಬಹುದಾಗಿದೆ. ಚೆನ್ನಯ್ಯನ ವಚನಾಂಕಿತ - ಚೆನ್ನಯ್ಯಪ್ರಿಯ ನಿರ್ಮಾಯಪ್ರಭುವೆ. ವಚನಸಂಖ್ಯೆ - ೪೩. ವಚನಾಂಕಿತವನ್ನು ಆಧರಿಸಿ, ಗುರುವಿನ ಹೆಸರು 'ನಿರ್ಮಾಯಪ್ರಭು'ವೆಂದು ಹೇಳಬಹುದಾಗಿದೆ. ಚೆನ್ನಯ್ಯನ ಈ ವಚನಗಳು 'ಖಂಡಿತದ ವಚನ'ಗಳೆಂದೇ ಪ್ರಸಿದ್ಧವಾಗಿವೆ. ವಚನಗಳ ಮಧ್ಯೆ ಸಂಸ್ಕೃತ ಶ್ಲೋಕಗಳಿರುತ್ತವೆ.

ಈ ವಚನಗಳಲ್ಲಿ ನಿರೂಪಿತವಾದ ವಿಷಯಗಳು ಹೀಗಿರುತ್ತವೆ. ಗುರುಲಿಂಗಜಂಗಮರಲ್ಲಿ ಭೇದವನೆಣಿಸಬಾರದು. ಇದರಂತೆ ಪಾದೋದಕ, ಪ್ರಸಾದಗಳಲ್ಲಿಯೂ ಶ್ರೇಷ್ಠ - ಕನಿಷ್ಠವೆಂಬ ತಾರತಮ್ಯ ಮಾಡಬಾರದು. ಈತನು ತನ್ನ ಈ ವಚನಗಳಲ್ಲಿ ಗುರು - ಲಿಂಗ - ಜಂಗಮ - ಪಾದೋದಕ ಹಾಗೂ ಪ್ರಸಾದ ಮೌಲ್ಯಗಳನ್ನೇ ಹೆಚ್ಚಾಗಿ ಪ್ರತಿಪಾದಿಸಿದ್ದಾನೆ. ಚತುರ್ವಿಧ ಪ್ರಸಾದದ ನಿರ್ಣಯವನ್ನು ಅರಿತು ಕೊಡಬಲ್ಲಾತ ಗುರು, ಪ್ರಸಾದವನ್ನು ತಿಳಿದುಕೊಳ್ಳಬಲ್ಲಾತ ಸದ್ಭಕ್ತ. ಪಾದೋದಕ ಪ್ರಸಾದ ಕೊಳ್ಳಬೇಕೆಂಬಾತ ಭಕ್ತನಲ್ಲ, ಬದ್ಧಭವಿ. ನಿತ್ಯಾನಿತ್ಯ ಹಸಿವು ತೃಷೆಗೆ ಕೊಂಬುದದು ಪಾದೋದಕ. ಪ್ರಸಾದವಲ್ಲ. ಪಾದೋದಕ, ಪ್ರಸಾದ ಸೋಂಕಿದ ಭಕ್ತನ ಕಾಯ ಪ್ರಸಾದಕಾಯವೆನಿಸುತ್ತದೆ. ಈ ಪ್ರಸಾದದಿಂದಲೇ ಷಡ್ವಿಧಲಿಂಗ ಉದ್ಭವಿಸಿದವು. ಸಚರಾಚರವೆಲ್ಲ ಪ್ರಸಾದ ರೂಪವಾಗಿದೆ. ಇಂಥ ಪ್ರಸಾದ ಕೊಂಡ ಶರಣನ ಸರ್ವಾಂಗ ಪ್ರಸಾದ ಕಾಯವಾಗುವುದು. ಅಂದರೆ ಮಾಂಸಪಿಂಡ ಮಂತ್ರಪಿಂಡ, ಚರ್ಮ ಚಿದ್ರೂಪ, ನಾಡಿ ನಿರಂಜನ, ರೋಮ ಓಂ ರೂಪ ಪಡೆದು, ಶರಣನ ಅಂಗಕ್ರಿಯೆಗಳೆಲ್ಲ ಲಿಂಗಕ್ರಿಯೆಗಳಾಗಿ ಪರಿಣಮಿಸುತ್ತವೆ. ಇದರಿಂದ ನರರೂಪ ಹರರೂಪ ಆಗುತ್ತದೆ. ಆಗ ಇಂಥ ಪ್ರಸಾದಿಗೆ ಇಹಲೋಕವೇನು, ಪರಾತ್ಪರಲೋಕವೇನು? ಸಗುಣವೇನು, ನಿರ್ಗುಣವೇನು? ನಿರಂಜನವೇನು, ನಿಷ್ಕಲವೇನು, ನಿರ್ಮಾಯವೇನು? ಪ್ರಸಾದದೇಹಿಯಾದ ಶರಣ ಮುಟ್ಟಿದುದೆಲ್ಲ ಪವಿತ್ರ, ನುಡಿದುದೆಲ್ಲ ಶಿವಮಂತ್ರ, ನೋಡಿದುದೆಲ್ಲ ಪಾವನ, ಸುಳಿದುದೆಲ್ಲ ಪುಣ್ಯಕ್ಷೇತ್ರ, ನಿಂತ ಭುವನ ಕೈಲಾಸ ಆಗುತ್ತದೆ. ಲಿಂಗ ಬೇರೆ, ಶರಣ ಬೇರೆ ಎನ್ನುವ ಭಂಗಿತರಿಗೆ - ಭ್ರಷ್ಟರಿಗೆ ಶಿವಲಿಂಗ ಸಾಧ್ಯವಿಲ್ಲ. ಲಿಂಗದಲ್ಲಿಯೇ ಶಿವಲಿಂಗವೀಯೆಂಬುದನ್ನು ಅರಿಯಬೇಕು. ಅಂಗ, ಲಿಂಗ ಭಿನ್ನವಲ್ಲ. ಮಲದೇಹಿಯ ಅಂಗದ ಮೇಲಿರುವ ಲಿಂಗ, ಲಿಂಗವಲ್ಲ. ಇಂಥವನ ಅಂಗದಲ್ಲಿ ಗುರುಲಿಂಗ ಜಂಗಮವಿರುವುದಿಲ್ಲ. ಈತನಿಗೆ ಪಾದೋದಕ, ಪ್ರಸಾದವಿಲ್ಲ. ಇಂಥವರನ್ನು ಪೂಜಿಸಿದವರಿಗೆ ರೌರವನರಕ ಉಂಟಾಗುತ್ತದೆ. ನಿಜನಿಲವನ್ನರಿಯದ ವೇಷಧಾರಿಗಳು ಲಿಂಗಾಂಗಿ, ಲಿಂಗಪ್ರಾಣಿಗಳನ್ನು ಭಿನ್ನವಿಟ್ಟು ನೋಡುವುದು ಸರಿಯಲ್ಲ. ಇಂಥ ವ್ಯಕ್ತಿಗಳು ಜಂಗಮರೆನಿಸಿಕೊಳ್ಳುವುದಿಲ್ಲ. ಶಿವಭಕ್ತ ಜನ್ಮದಲ್ಲಿ ಬಂದು ಶಿವಲಿಂಗೈಕ್ಯರ ನಿಂದೆಯ ಮಾಡಿ ಕೆಡಬಾರದು. ಅಂಗದ ಅಶುದ್ಧವ ಕಳೆಯಲಾರದೆಯೇ ಲಿಂಗಾಂಗಿ ಲಿಂಗಪ್ರಾಣಿಗಳೆಂದೆನಿಸುವವರು ಕಪಟ ವೇಷಧಾರಿಗಳೆನಿಸುತ್ತಾರೆ. ವೀರಶೈವ ಮೌಲ್ಯಗಳಾದ ಗುರು - ಲಿಂಗ - ಜಂಗಮ - ಪಾದೋದಕ - ಪ್ರಸಾದಗಳು ಕೇವಲ ಶುಷ್ಕ ಆಚರಣೆಗಳಾಗಿ ನಿಲ್ಲಬಾರದು.

ಚೆನ್ನಯ್ಯನ ವಚನಗಳಲ್ಲಿ ಹೊಳೆಯುತ್ತಿರುವ 'ಉರಿ ಉಂಡ ಕರ್ಪೂರ ಮರಳಿ ಸುಡುವರೆ? ಜ್ಯೋತಿ ಮುಟ್ಟಿದ ಮನೆಗೆ ಕತ್ತಲುಂಟೆ? ಲಿಂಗ ಸೋಂಕಿ ಲಿಂಗವಾಗದಿದ್ದರೆ ಅದು ಲಿಂಗವಲ್ಲ. ಪ್ರಸಾದ ಸೊಂಕಿ ಪ್ರಸಾದವಾಗದಿದ್ದರೆ ಅದು ಪ್ರಸಾದವಲ್ಲ. ಮಂತ್ರ ಸೋಂಕಿ ಮಂತ್ರಮೂರ್ತಿಯಾಗದಿದ್ದರೆ ಅದು ಮಂತ್ರವಲ್ಲ. ಕಂಡವರ ಕಂಡು ಕೌದಿಯ ಹೊಲಿಯ ಹೋದರೆ ಕುಂಟೆಳೆ ಬಿದ್ದಂತೆ, ನವಿಲು ಕುಣಿಯಿತ್ತೆಂದು ತಾಬತ್ತು ಕುಣಿದು ಪುಚ್ಚವ ಕಳಕೊಂಡಂತೆ, ಸಿಂಹ ಲಿಂಘಣಿಸಿತ್ತೆಂದು ಸೀಳನಾಯಿ ಲಿಂಘಣಿಸಿ ಸೊಂಟವ ಕಳಕೊಂಡಂತೆ, ಬಟ್ಟೆಗುರುಡುನ ಕೈಯ ಬಟ್ಟೆಗುರುಡ ಹಿಡಿದು ಹಳ್ಳವ ಬಿದ್ದಂತೆ, ಎಂಬಂತಹ ಸೂತ್ರರೂಪದ ವಾಕ್ಯಗಳು ಇಲ್ಲಿಯ ವಚನಗಳ ಸಾಹಿತ್ಯಕ ಬೆಲೆಯನ್ನು ಹೆಚ್ಚಿಸಿವೆ. ಇದರೊಂದಿಗೆ ಚೆನ್ನಯ್ಯನ ವಚನಗಳನ್ನು ಇಲ್ಲಿ ಉದಾಹರಿಸಬಹುದು :

ವೃಕ್ಷಕ್ಕೆ ಭೂಮಿ ಮುಖ್ಯವೋ? ಭೂಮಿಗೆ ವೃಕ್ಷ ಮುಖ್ಯವೋ?
ಶರಣಂಗೆ ಲಿಂಗ ಮುಖ್ಯವೋ? ಲಿಂಗಕ್ಕೆ ಶರಣ ಮುಖ್ಯವೋ?
ಈ ಭೇದವ ಬಲ್ಲರೆ ಹೇಳಿರಿ.
ವೃಕ್ಷಕ್ಕೆ ನೀರು ಎರೆದರೆ ಭೂಮಿಯಲ್ಲಿ ಫಲವಹುದು.
ಭೂಮಿಯಲ್ಲಿ ನೀರೆರೆದರೆ ವೃಕ್ಷಕ್ಕೆ ಫಲವಹುದು.
ಶರಣನ ಮುಖದಲ್ಲಿ ಲಿಂಗ ತೃಪ್ತಿಯಹುದು.
ಲಿಂಗದ ಮುಖದಲ್ಲಿ ಶರಣನ ತೃಪ್ತಿಯಹುದು.
ಆ ಲಿಂಗಮುಖಕ್ಕೆ ಶರಣನೆಂದು ಅರಿಯದ ಭಂಗಿತರಿಗೆ
ಶಿವಲಿಂಗ ಮುನ್ನವಿಲ್ಲವೆಂದಾತ ನಿಮ್ಮ ಶರಣ,
ಚೆನ್ನಯ್ಯಪ್ರಿಯ ನಿರ್ಮಾಯಪ್ರಭುವೆ.

ಶಿವಲಿಂಗಾಂಗಿ ಲಿಂಗಪ್ರೇಮಿ ನಡೆಲಿಂಗ ನುಡಿಲಿಂಗ
ಮುಖಲಿಂಗ ಭಾವಲಿಂಗ ಸರ್ವಾಂಗಲಿಂಗ ಚೈತನ್ಯಾತ್ಮಕ
ಶರಣನನರಿಯದೆ ವೇಷಧಾರಿಗಳು ನುಡಿವರು
ಲಿಂಗ ಬೇರೆ, ಅಂಗ ಬೇರೆ ಇಂತೆಂದು ನುಡಿವ ಚಾರ್ವಾಕರ
ಅಂಗದ ಮೇಲೆ ಹೊಂದಿದ ಲಿಂಗವೆಲ್ಲ ಶಿಲೆಯು
ಅವರು ನುಡಿಯುವ ಮಾತು ಹೆಂಡ ಕುಡಿದವರ ಬೊಗಳಾಟ.
ಅವರು ಕೊಂಬುದೆಲ್ಲ ಅಶುದ್ಧವಲ್ಲದೆ ಪ್ರಸಾದವಲ್ಲ.
ಅವರು ವಿಭೂತಿ ರುದ್ರಾಕ್ಷಿ ಲಿಂಗವ ಧರಿಸಿದರೇನು
ಯಮದರ್ಶನ, ಚೋರದರ್ಶನ.
ಲಿಂಗಾಂಗಿ ಲಿಂಗಪ್ರಾಣಿಗಳ ನಿಂದಿಸುವ ವೇಷಧಾರಿಗಳನು
ಜಂಗಮವೆಂದು ಪೂಜಿಸಿದ ಭಕ್ತಂಗೆ ಎಕ್ಕಲಜನ್ಮ ಬಿಡದೆಂದ
ನಿಮ್ಮ ಶರಣ ಚನ್ನಯ್ಯಪ್ರಿಯ ನಿರ್ಮಾಯಪ್ರಭುವೆ.

ದೇಶಿಕೇಂದ್ರ, ಸಂಗನ ಬಸವೇಶ್ವರ

ಇವರು ಈ ಸಮಯದ ಶ್ರೇಷ್ಠ ವಚನಕಾರರಾಗಿ ಕಂಡುಬರುತ್ತಾರೆ. ಶಿವಾನುಭಾವಿ ಹಾಗೂ ಮಠಾಧಿಪತಿಯಾಗಿದ್ದ ದೇಶಿ ಕೇಂದ್ರ, ಸಂಗನಬಸವೇಶ್ವರರ ವಚನಗಳನ್ನು 'ಷಟ್‌ಸ್ಥಲ ವಚನ'ಗಳೆಂದು ಕರೆಯಲಾಗಿದೆ. 'ಗುರು ನಿರಂಜನ ಚೆನ್ನಬಸವಲಿಂಗ:

ಮಹಾಘನ ಚೆನ್ನವೃಷಭಲಿಂಗ' ಅಂಕಿತದಲ್ಲಿರುವ ಇವರ ವಚನಗಳ ಸಂಖ್ಯೆ ೧೨೮೨. ವಚನಾಂಕಿತವನ್ನಾಧರಿಸಿ 'ಚೆನ್ನಬಸವಲಿಂಗ' ಇವರ ಗುರುವಿನ ಹೆಸರೆಂದು ಗುರುತಿಸಬಹುದಾಗಿದೆ. ಈ ವಚನಕಾರರ ಕಾಲ, ಕ್ರಿ.ಶ.ಸು. ೧೭೦೦ ಎಂದು ಹೇಳಬಹುದಾಗಿದೆ. ಇಷ್ಟನ್ನು ಬಿಟ್ಟರೆ ಇವರನ್ನು ಕುರಿತು ಉಳಿದ ಯಾವ ವಿವರಗಳೂ ತಿಳಿದುಬರುವುದಿಲ್ಲ. ಈ ವಚನಕಾರನ 'ಷಟ್‌ಸ್ಥಲ ವಚನ' ಕೃತಿಯಲ್ಲಿಯ ಸ್ಥಲಗಳು ಹೀಗಿವೆ : ಪಿಂಡಸ್ಥಳ, ಪಿಂಡಜ್ಞಾನಸ್ಥಲ, ಸಂಸಾರಹೇಯಸ್ಥಲ, ಗುರುಕರುಣಸ್ಥಲ, ಭಕ್ತಸ್ಥಲ : ಭಕ್ತನ ಪ್ರಸಾದಿಸ್ಥಲ, ಭಕ್ತನ ಪ್ರಾಣಲಿಂಗಸ್ಥಲ, ಭಕ್ತನ ಶರಣಸ್ಥಲ, ಭಕ್ತನ ಐಕ್ಯಸ್ಥಲ, ಮಾಹೇಶ್ವರಸ್ಥಲ : ಮಾಹೇಶ್ವರನ ಭಕ್ತಸ್ಥಲ, ಮಾಹೇಶ್ವರನ ಪ್ರಸಾದಿಸ್ಥಲ, ಮಾಹೇಶ್ವರನ ಪ್ರಾಣಲಿಂಗಿಸ್ಥಲ, ಮಾಹೇಶ್ವರನ ಶರಣಸ್ಥಲ, ಮಾಹೇಶ್ವರನ ಐಕ್ಯಸ್ಥಲ, ಪ್ರಸಾದಿ ಸ್ಥಲ : ಪ್ರಸಾದಿಯ ಭಕ್ತಸ್ಥಲ, ಪ್ರಸಾದಿಯ ಮಾಹೇಶ್ವರಸ್ಥಲ, ಪ್ರಸಾದಿಯ ಪ್ರಾಣಲಿಂಗಿಸ್ಥಲ, ಪ್ರಸಾದಿಯ ಶರಣಸ್ಥಲ, ಪ್ರಸಾದಿಯ. ಐಕ್ಯಸ್ಥಲ, ಪ್ರಾಣಲಿಂಗಿಸ್ಥಲ : ಪ್ರಾಣಲಿಂಗಿಯ ಭಕ್ತಸ್ಥಲ, ಪ್ರಾಣಲಿಂಗಿಯ ಮಾಹೇಶ್ವರಸ್ಥಲ, ಪ್ರಾಣಲಿಂಗಿಯ ಪ್ರಸಾದಿಸ್ಥಲ, ಪ್ರಾಣಲಿಂಗಿಯ ಶರಣಸ್ಥಲ, ಪ್ರಾಣಲಿಂಗಿಯ ಐಕ್ಯಸ್ಥಲ. ಶರಣಸ್ಥಲ : ಶರಣನ ಭಕ್ತಸ್ಥಲ, ಶರಣನ ಮಾಹೇಶ್ವರಸ್ಥಲ, ಶರಣನ ಪ್ರಸಾದಿಸ್ಥಲ, ಶರಣನ ಪ್ರಾಣಲಿಂಗಿಸ್ಥಲ, ಶರಣನ ಐಕ್ಯಸ್ಥಲ, ಐಕ್ಯಸ್ಥಲ : ಐಕ್ಯನ ಭಕ್ತಸ್ಥಲ, ಐಕ್ಯನ ಮಾಹೇಶ್ವರಸ್ಥಲ, ಐಕ್ಯನ ಪ್ರಸಾದಿಸ್ಥಲ, ಐಕ್ಯನ ಪ್ರಾಣಲಿಂಗಿಸ್ಥಲ, ಐಕ್ಯನ ಶರಣಸ್ಥಲ, ನಿರವಲಯಸ್ಥಲ, ಲಿಂಗಲೀಲಾ ಷಟ್‌ಸ್ಥಲ, ಆಚಾರಾಂಗಸ್ಥಲ, ಶಿವಾಂಗಸ್ಥಲ, ಭಕ್ತನ ಚರಾಂಗಸ್ಥಳ, ಶೇಷಾಂಗಸ್ಥಳ, ಮಹದಂಗಸ್ಥಲ.

ಇಲ್ಲಿಯ ಪ್ರತಿಯೊಂದು ಸ್ಥಲದ ಆದಿಯಲ್ಲಿ ಸೂತ್ರವಿದ್ದು, ಆಯಾ ಸ್ಥಲದ ವಿಷಯ ಆಶಯವನ್ನು ಗದ್ಯದಲ್ಲಿ ವಿವರಿಸಲಾಗಿದೆ. ಈ ವಚನಗಳಲ್ಲಿ 'ಷಟ್‌ಸ್ಥಲ' ವಿಭಜನೆ, 'ಮಿಶ್ರಷಟ್‌ಸ್ಥಲ' ವರ್ಗಕ್ಕೆ ಸೇರಿದುದಾಗಿದೆ. ವೀರಶೈವ ತತ್ತ್ವ ಸಿದ್ಧಾಂತಗಳ ವಿವೇಚನೆಯೇ ಇಲ್ಲಿ ಪ್ರಮುಖವಾಗಿ ಕಂಡುಬರುತ್ತದೆ. ಹೀಗಿದ್ದರೂ ಸಮಕಾಲೀನ ಸಮಾಜ ಜೀವನವನ್ನು ತಿಳಿಸುವ ಹಲವಾರು ಸಂಗತಿಗಳನ್ನು ವಚನಗಳಲ್ಲಿ ನಿರೂಪಿತವಾಗಿವೆ. ಈ ಕೃತಿಯಲ್ಲಿ ಬೆಡಗಿನ ವಚನಗಳ ಸಂಖ್ಯೆ ಅಧಿಕವಾಗಿದ್ದು, ಪ್ರತ್ಯೇಕ ಅಧ್ಯಯನ ಕೈಕೊಳ್ಳುವಷ್ಟು ಉತ್ತಮವಾಗಿವೆ. ವಚನಗಳು ಚೆನ್ನಾಗಿದ್ದು, ಕಾವ್ಯಾಂಶದಿಂದ ಕಂಗೊಳಿಸುತ್ತವೆ. ಈ ವಚನಗಳ ಮೇಲೆ ಹನ್ನೆರಡನೆಯ ಶತಮಾನದ ವಚನಕಾರರ ಗಾಢವಾದ ಪ್ರಭಾವ ಆಗಿರುವುದನ್ನು ಗುರುತಿಸಬಹುದಾಗಿದೆ.

ಉದಾರಣೆಗಾಗಿ ದೇಶಿಕೇಂದ್ರ ಸಂಗಮ ಬಸವೇಶ್ವರನ ಕೆಲವು ವಚನಗಳನ್ನು ಇಲ್ಲಿ ಉಲ್ಲೇಖಿಸಬಹುದು:

ವಲ್ಲಭನ ಒಲುಮೆಯ ವನಿತೆಯರು ಬನ್ನಿರವ್ವ.
ಸಲುಗೆಯ ಮಾತಿನ ಸವಿಯ ಕೇಳಿರವ್ವ.
ಬಿಚ್ಚಿ ಬೆರಗಾಗಿ ಹೇಳಿದಿರವ್ವ.
ಲಕ್ಷಪತಿ ಏನು ಕಾರಣ ಬಂದಿರ್ದನವ್ವ?
ನಲ್ಲನ ಹಾವುಗೆಯ ಬೆಳಗು ಭುವನಾದಿ ಆಕಾಶಕ್ಕೆ ಮುಸುಕಿತ್ತು.
ಮುಕುಟದ ಬೆಳಗು ಸಪ್ತದ್ವೀಪ ಸಮುದ್ರಂಗಳನ್ನೆಲ್ಲ ಮುಸುಕಿತ್ತು.
ಮುಕುಟದ ಬೆಳಗು ಸಪ್ತದ್ವೀಪ ಸಮುದ್ರಂಗಳನ್ನೆಲ್ಲ ಮುಸುಕಿತ್ತು.
ಹೇಮರಜತ ಮಂದರಾದ್ರಿಗಳ ಸುತ್ತಮುತ್ತಲಿರುವ
ಮನುಮುನಿ ದೇವತೆಗಳಾದಿ ಸಕಲ ಸಂದೋಹವೆಲ್ಲ ಬೆಳಗಿನೊಳು ನಿಂದು.
ಹರಹರ ಶಿವ ಶಿವ ಜಯಜಯವೆನಲಾನು
ಉಬ್ಬಿಕೊಬ್ಬಿ ಶರಣೆನ್ನಲಾರದೆ ಕೂಡಿ ನೆರೆಯಲು
ಅರಿಯದ ಸುಖವ ಕಂಡು ಮರೆದಿರ್ದೆ ಕಾಣರವ್ವ.
ಗುರುನಿರಂಜನ ಚೆನ್ನಬಸವಲಿಂಗದಲ್ಲಿ.

ಕೋಣನ ನೆರಳಲ್ಲಡಗಿರ್ದ ಕೋಳಿ ಮೆದ್ದು ಕೂಗಿತ್ತು.
ಸತ್ತವರೆದ್ದು ನಿತ್ಯಕ್ಕೆ ನಡೆದರೆ ಕೆರೆ ಬತ್ತಿ ಉರಿದವು ಮೂರು ಲೋಕವೆಲ್ಲ.
ಕೋಳಿ ಕೋಣನ ನುಂಗಿ ಬೋಳಕುಮ್ಮಟವ ಹೊಗಲು
ಸಾಲು ಮನೆಯ ಸೌರಭದ ಬೆಳಗು ಸಮರಸವನ್ನೈದಿ
ಸಹಜವಾಗಿರ್ದ ಶರಣ, ಗುರು ನಿರಂಜನ ಚೆನ್ನಬಸವ ಲಿಂಗವಾಗಿ.
ಅವ್ವಾ, ಬನ್ನಿರೆ ಚಿಕ್ಕ ಚಿಕ್ಕ ಚಿಕ್ಕ ಚಿಕ್ಕ ಮಕ್ಕಳೆಲ್ಲ
ನಮ್ಮಕ್ಕನ ಮನೆಯಲೊಕ್ಕುದನುಂಬುವ.
ಬನ್ನಿರೆ ಎಮ್ಮ ಸುಚಿತ್ತ ಕೈಯ ಪಿಡಿದು ನಿಂದ ನಲ್ಲನ
ಸುಗಂಧಭಾಜನದಲ್ಲಿ ಕೂಡಿ ಉಂಬುವ.
ಬನ್ನಿರೆ ಎಮ್ಮ ಸದ್ಬುದ್ಧಿಯ ಕೈಯ ಪಿಡಿದು ಬಂದ ನಲ್ಲನ
ಸುರಭಾಜನದಲ್ಲಿ ಕೂಡಿ ಉಂಬುವ.
ಬನ್ನಿರೆ ಎಮ್ಮ ಸಿರಹಂಕಾರ ಕೈಯ ಪಿಡಿದು ಬಂದ ನಲ್ಲನ
ಸುರೂಪಭಾಜನದಲ್ಲಿ ಕೂಡಿ ಉಂಬುವ.
ಬನ್ನಿರೆ ಎಮ್ಮ ಸುಮನ ಕೈಯ ಹಿಡಿದು ಬಂದ ನಲ್ಲನ
ಸುಸ್ಪರ್ಶ ಭಾಜನದಲ್ಲಿ ಕೂಡಿ ಉಂಬುವ.
ಬನ್ನಿರೆ ಎಮ್ಮ ಸುಜ್ಞಾನ ಕೈಯ ಪಿಡಿದು ಬಂದ ನಲ್ಲನ
ಸುಶಬ್ಧಭಾಜನದಲ್ಲಿ ಕೂಡಿ ಉಂಬುವ.
ಬನ್ನಿರೆ ಎಮ್ಮ ಸದ್ಭಾವ ಕೈಯ ಪಿಡಿದು ಬಂದ ನಲ್ಲನ
ಸುತೃಪ್ತಿ ಭಾಜನದಲ್ಲಿ ಕೂಡಿ ಉಂಬುವ.
ಬನ್ನಿರೆ ಎಮ್ಮ ಕೈಗಳಿಂದ ಗುರುನಿರಂಜನ ಚೆನ್ನಬಸವಲಿಂಗದ
ಬಿಡದೆ ಕೂಡಿ ಉಂಬುವ ಸುಖವ ಹೇಳುವರೆ ತೆರಹಿಲ್ಲ ಕಾಣಿರಮ್ಮಾ.

ವಚನಗಳ ಒಡಲಲ್ಲಿ ಆಗಾಗ ಕಂಡುಬರುವ 'ಸಿಂಹನ ಹಾಲು ಆನೆಯ ಮರಿ ಉಣಬಲ್ಲುದೇ? ಹುಲಿಯ ಹಾಲು ಹುಲ್ಲೆಯ ಮರಿ ಉಣಬಲ್ಲುದೆ? ಗರುಡನಿಂದ ಗುಟುಕ ಹಂದಿಯ ಮರಿ ಕೊಳಬಲ್ಲುದೆ ತಮ್ಮ ಮರಿಯಲ್ಲದೆ? ಕಸಗೂಡಿದ ಭೂಮಿಯಲ್ಲಿ ಸಸಿ ಪಲ್ಲೈಸುವದೆ? ಶ್ವಾನ ಬೊಗುಳುವುದೆ ಸುಳುಹು ಕಾಣದೆ? ಮುತ್ತುಂಡ ಉದಕವ ತಂದು ಕಾಣಲುಂಟೆ? ಉರಿಯುಂಬ ಕರ್ಪುರವ ತಂದು ಕಾಣಲುಂಟೆ?' ಎಂಬಂತಹ ಸೂತ್ರರೂಪದ ವಾಕ್ಯಗಳು ನಮ್ಮ ಗಮನ ಸೆಳೆಯುತ್ತವೆ.

ನಿರಾಲಂಬ ಪ್ರಭುದೇವ

ಈತ ಕ್ರಿ.ಶ ೧೭೦೦ರ ಕಾಲದ ವಚನಕಾರ. ವಚನಾಂಕಿತ - 'ನಿಸ್ಸಂಗ ನಿರಾಳ ನಿಜಲಿಂಗ ಪ್ರಭುವೆ'. ಈ ವಚನಾಂಕಿತವನ್ನು ಆಧರಿಸಿ, ಈತನ ಗುರುವಿನ ಹೆಸರು 'ನಿಜಲಿಂಗಪ್ರಭು' ಎಂದು ಹೇಳಬಹುದಾಗಿದೆ. ಈ ವಚನಕಾರನ ೧೪ ವಚನಗಳು ಮಾತ್ರ ಲಭಿಸುತ್ತಿದ್ದು, ಇವುಗಳನ್ನು 'ಶಿವಭಕ್ತಿ ಪಂಚಾಂಗದ ವಚನ'ಗಳೆಂದು ಕರೆಯುತ್ತಾರೆ. ಇಲ್ಲಿಯ ವಚನಗಳಲ್ಲಿ ಬರುವ ವಿಷಯಗಳನ್ನು ಹೀಗೆ ಸಂಗ್ರಹಿಸಿ ಹೇಳಬಹುದು: ವೀರಶೈವನಾದವನು ಪಂಚಾಂಗ ಕೇಳಬಾರದು. ಆತನಿಗೆ ಶುಭ ಅಶುಭಗಳ ಸೂತಕ ಇರುವುದಿಲ್ಲ. ವೀರಶೈವನು ಸೂತಕನಾದರೆ ಅವನ ಗುರು - ಲಿಂಗ - ಜಂಗಮ - ಪಾದೋದಕ - ಪ್ರಸಾದ - ವಿಭೂತಿ - ರುದ್ರಾಕ್ಷಿ - ಶಿವಮಂತ್ರಗಳೂ ಹೊಲೆಯೆನಿಸುತ್ತವೆ. ಹೀಗಾಗಿ ಸೂತಕ - ಪಾತಕಗಳು ವೀರಶೈವರಿಗೆ

ನಿಷೇಧ. ಶಿವಾಚಾರದ ಪಥವನರಿಯುವುದೇ ಶಿವಾಚಾರಿಯ ಕರ್ತವ್ಯ. ಪಂಚಾಂಗ ಹಾಗೂ ಪಂಚಾಂಗ ಹೇಳುವವರು ಶೋಷಣೆಯ ಪ್ರತೀಕವಾಗಿರುತ್ತಾರೆ. ಪಂಚಾಂಗ ಕೇಳಿದ ಫಲವಾಗಿ ದಕ್ಷಬ್ರಹ್ಮ, ಪಂಚಪಾಂಡವರು, ಶ್ರೀರಾಮ, ಇಂದ್ರ, ನಾರಾಯಣ, ಸರಸ್ವತಿ. ರಾಮರಿಗೂ ಕೇಡುಂಟಾಗಿದೆ. ಕಾರಣ ವೀರಶೈವರು ಪಂಚಾಂಗ ಕೇಳಬಾರದು. ಆದರೆ ಸತ್ವ ರಜ ತಮವೆಂಬ ಅಹಂಕಾರವ ತುಳಿಯವುದೆ ಪಂಚಾಂಗ, ಅಣವಮಲ ಮಾಯಾಮಲ ಕಾರ್ಮಿಕಮಲ ಮುಟ್ಟದಿರುವುದೆ ಪಂಚಾಂಗ, ಸ್ಥಾವರ ಪೂಜೆ ಮಾಡದಿರುವದೆ ಪಂಚಾಂಗ, ಸಜ್ಜನ ಶುದ್ಧ ಶಿವಾಚಾರದಲ್ಲಿ ಆಚರಿಸುವುದೆ ಪಂಚಾಂಗ - ಹೀಗೆ ಪಂಚಾಂಗಕ್ಕೆ ಹೊಸ ವ್ಯಾಖ್ಯಾನ ನೀಡಿ, ವಚನಕಾರ ನಿರಾಲಂಬ ಪ್ರಭುದೇವನು ಹೊಸತನ ಮೆರೆದಿದ್ದಾನೆ. ಉದಾಹರಣೆಗಾಗಿ ಈ ವಚನಕಾರನ ಒಂದೆರಡು ವಚನಗಳನ್ನು ಇಲ್ಲಿ ನೋಡಬಹುದು :

ಪಂಚಾಂಗವೆಂಬ ಶಬ್ದಕ್ಕೆ ಅರ್ಥ :
ಪಂಚವೆಂದರೆ ಐದು, ಅಂಗವೆಂದರೆ ದೇಹ.
ಈ ಉಭಯ ಕೂಡಿದರೆ ದೇಹವಾಯ್ತು.
ಈ ದೇಹವೇ ಪಂಚಾಂಗವೆನಿಸಿತು.
ಅದು ಹೇಗೆಂದಡೆ :
ನಕಾರ ಮಕಾರ ಶಿಕಾರ ವಕಾರ ಯಕಾರದ
ನಿಕ್ಷೇಪವನರಿವುದೇ ಪಂಚಾಂಗ.
ಕ್ರಿಯಾಜ್ಞಾನಇಚ್ಛಾ ಆದಿ ಪರಾ ಚಿಚ್ಛಕ್ತಿಯ
ಎಚ್ಚರವನರಿವುದೇ ಪಂಚಾಂಗ.
ಇಚ್ಛೆಯೊಳಗರಿವುದೇ ಪಂಚಾಂಗವಯ್ಯಾ,
ನಿಸ್ಸಂಗ ನಿರಾಳ ನಿಜಲಿಂಗಪ್ರಭುವೆ.

ಶ್ರೀಗುರುಸ್ವಾಮಿ ಕರುಣಿಸಿ ಕೊಟ್ಟ
ಇಷ್ಟಲಿಂಗ ಪ್ರಸಾದವ ಚೆಲ್ಲದಿರುವುದೇ ಪಂಚಾಂಗ.
ತನ್ನ ಲಿಂಗವಲ್ಲದೆ ಭೂ ದೇವರ ಅಲ್ಲಗಳೆವುದೇ ಪಂಚಾಂಗ.
ಎಲ್ಲ ಕಾಲ ವೇಳೆಯಲ್ಲಿ ನಿಲ್ಲದೆ ನೆನೆವುದೇ
ಶುಭದಿನ ಶುಭಲಗ್ನ ಶುಭ ಮುಹೂರ್ತ
ಗುರುಬಲ ಚಂದ್ರಬಲ ಸೂರ್ಯಬಲವೆನಿಸುವುದಯ್ಯ
ನಿಸ್ಸಂಗ ನಿರಾಳ ನಿಜಲಿಂಗಪ್ರಭುವೆ.

ಪರಂಜ್ಯೋತಿಯರು

'ವರನಾಗನ ಗುರು ವೀರನೆ ಪರಂಜ್ಯೋತಿ ಮಹಾವಿರಕ್ತಿ' ಅಂಕಿತದ ವಚನಗಳನ್ನು ಹಸ್ತಪ್ರತಿಯಲ್ಲಿ 'ಪರಂಜ್ಯೋತಿಯರ ವಚನ'ವೆಂದು ಹೇಳಿರುವುದರಿಂದ ಈ ವಚಕಾರನ ಹೆಸರು. ''ಪರಂಜ್ಯೋತಿ''ಯೆಂಬುದು ಸ್ಪಷ್ಟವಾಗುತ್ತದೆ. ಈ ವಚನಕಾರನ ಜೀವನಚರಿತ್ರೆಯ ಯಾವ ಸಂಗತಿಗಳೂ ಗೊತ್ತಾಗುವುದಿಲ್ಲ. ಕ್ರಿ.ಶ.ಸು. ೧೭೦೦ರ ಕಾಲಾವಧಿಯ ಪರಂಜ್ಯೋತಿಯ ೧೨ ವಚನಗಳು ಮಾತ್ರ ಸಧ್ಯ ಲಭಿಸುತ್ತಿವೆ. ಈ ವಚನಕಾರನ ವಚನಗಳು ಹೀಗಿರುತ್ತವೆ :

ಕಾಯವಿಡಿದು ಮಾಯೆ ಬಿಡಬೇಕೆಂಬ ಹೆಡ್ಡರಿಗೆ
ಮಾಯೆ ಬಿಡುವುದು ಹೇಂಗಯ್ಯ?
ದೇಹವಿಡಿದು ನೋಡಿ ಕಂಡು,
ಆ ಅಮೃತ ಉಂಡೆನೆಂದು ನುಡಿವರು ಹೇಳಾ.
ಆ ಅಮೃತ ಉಂಡ ಬಳಿಕ ಹಸಿವುಂಟೆ ಹೇಳಾ.
ಪ್ರಳಯವಿದ್ಯೆ ವಾತ ಪಿತ್ಥ ಶ್ಲೇಷ್ಮಂಗಳ ಕುಡಿದು
ಆ ಅಮೃತವ ಉಂಡೆನೆಂದು ನುಡಿವವರಿಗೆ
ಎಂದೆಂದಿಗೂ ದೊರಕದು ಕಾಣಾ
ಇಂತ ಭ್ರಾಂತಭ್ರಮಿತರು ಕೆಟ್ಟ ಕೇಡಿಂಗೆ ಕಡೆಯಿಲ್ಲ ಮೊದಲಿಲ್ಲ.
ಚಿತ್ತೇ ತಾನಾದ ಮಹಾತ್ಮರಿಗೆ ಲಯವಿಲ್ಲ ಭಯವಿಲ್ಲ ಅನುವಿಲ್ಲ.
ದೇಹದಿ ನೋಡುವ ಕಪಿಚೇಷ್ಟೆಯಗಳಿಗೆ ಎಂದೆಂದಿಗೂ ಇಲ್ಲ.
ಮಹತೋತ್ತಮನಾದ ವರ ನಾಗನ ಗುರು ವೀರನೆ ಪರಂಜ್ಯೋತಿ ಮಹಾವಿರಕ್ತಿ.

ಬಹಳ ಬಹಳ ಕಂಡೆನೆಂದು ನುಡಿವ,
ಬಿಸಿಲು ಮಧ್ಯಾಹ್ನದಲ್ಲಿ ಚಂದ್ರಬಿಂಬ ಉದಯವಾದ
ಪ್ರತ್ಯಕ್ಷವಾಯಿತ್ತೆಂದು ಹೊರಗೆ ಕಂಡು
ಒಳಗೆ ಕಂಡನಲ್ಲದೆ ಏನು ಅಪ್ಪುದು ಕಾಣಾ, ಎರಡೂ ಒಂದೇ.
ಮುಂದೆ ಮೀರಿ ಮನಸಮಾಧಿ ಮಾಡಿದಡೆ
ಮುಕ್ತಿಯೆಂದು ಹೇಳುವರು.
ಮನ ಮುಳುಗಿದರೆ ಲಿಂಗವೆಂದೆಂಬರು.
ಆ ಲಿಂಗ ಮುಳುಗುವುದು ಸಮಾಧಿ ಕಾಣಾ.
ತಾನಳಿದ ಮೇಲೆ ಮುಕ್ತಿ ಯಾರಿಗೆ ಹೇಳಾ?
ಲಿಂಗಕ್ಕೆ ಅಳಿವು ಬೆಳೆವುಂಟೆ ಕಾಣಾ?
ಚಿಂತಿಸಿ ಮುಳುಗಿದವರೆಲ್ಲ ಕಡೆಯಿಲ್ಲ ಮೊದಲಿಲ್ಲ ನೋಡಾ.
ಇನ್ನು ಉಳಿದದ್ದು ಘನವು, ಉಳಿಯೆ ಹೇಳಾ ನಿಜಕೆಲ್ಲ.
ಲಯವಿಲ್ಲ, ಭಯವಿಲ್ಲನಾಡಿದ ವಿದೇಹ ತಾನಾದ
ವರನಾಗನ ಗುರುವೀರನೆ ಪರಂಜ್ಯೋತಿ ಮಹಾವಿರಕ್ತಿ.

ಈತನ ವಚನಗಳಲ್ಲಿ ನಿಕ್ಷಿಪ್ತವಾಗಿರುವ ವಿಷಯಗಳು ಹೀಗಿರುತ್ತವೆ : ತನ್ನ ತಾನರಿದವನೆ ಜ್ಞಾನಿ. ಅಂಗದಲ್ಲಿಯೇ ಲಿಂಗವಿದೆ. ಶಿವಭಕ್ತನು ತಾನೇ ತಾನಾಗುವ ಸಕೀಲವನ್ನು ಅರಿಯಬೇಕು. ತಾನೇ ತಾನಾದ ಮಹಾತ್ಮನ ಸ್ವಾನುಭಾವವೇ ಸ್ವಯಂಭೂ. ತನ್ನ ತಾನರಿದು, ತಾನಾರೆಂದು ತಿಳಿದು, ತಮಮುಳಿದು ತಾನಾದವನೇ ಮಹಾತ್ಮನೆನಿಸಿಕೊಳ್ಳುತ್ತಾನೆ. ಚಿತ್ತೇ ತಾನಾದ ಮಹಾತ್ಮನಿಗೆ ಲಯ - ಭಯಗಳಿರುವುದಿಲ್ಲ. ದೇಹವಿಕಾರ - ಮನವಿಕಾರಗಳಿರುವುದಿಲ್ಲ. ದೇಹವಿಡಿದು ವಿದೇಹಿಯಾದ ಮಹಾತ್ಮನಿಗೆ ದೇಹವಿಲ್ಲ, ಮಾಯೆಯಿಲ್ಲ, ಕರಣವಿಲ್ಲ, ಜನನವಿಲ್ಲ, ಮರಣವಿಲ್ಲ. ನಿಃಕಳಂಕ ನಿರಾಭಾರಿ ನಿರ್ಗುಣನಾದ ಮಹಾತ್ಮನಿಗೆ ನೋಟವಿಲ್ಲ - ಕೂಟವಿಲ್ಲ - ಆಟವಿಲ್ಲ - ಪಾಠವಿಲ್ಲ - ಆರೋಗಣೆಯಿಲ್ಲ. ಗುರುವಾದವನು ಶಿವಭಕ್ತರಿಗೆ

ವಿದೇಹಿಯಾಗುವ ಸಕೀಲಸಂಜ್ಞೆಯನ್ನು ತಿಳಿಸಿಕೊಡುತ್ತಾನೆ. ಅಜ್ಞಾನಿ ಭ್ರಾಂತಯೋಗಿಗಳಿಗೆ ಸ್ವಯಂಭೂ ಸಾಧ್ಯವಿಲ್ಲ. ಶಿವನನ್ನು ಕಂಡೆವೆಂದು ನುಡಿದವರಿಗೆ ಶಿವದರ್ಶನ ಸಾಧ್ಯವಿಲ್ಲ. ಕರ್ಮಕಾಂಡಿಗಳು ಮಾಯಾಮೋಹಕ್ಕೆ ಸಿಲುಕಿ ಕೆಡುತ್ತಾರೆ. ಅನಾಚಾರಿ, ವೇಷಡಂಭಕ ಗುರುಗಳಾಗೆ ಸ್ವಯಂಭೂ ಸಾನಿಧ್ಯ ಎಂದೆಂದಿಗೂ ನಿಲುಕುವುದಿಲ್ಲ. ಇಂಥ ಹಲವಾರು ವಿಷಯಗಳೊಂದಿಗೆ ಷಟ್‌ಸ್ಥಲದ ವಿವರಣೆಯೂ ಇಲ್ಲಿ ನಿರೂಪಿತವಾಗಿದೆ. ಈ ವಚನಗಳು ದೀರ್ಘವಾಗಿದ್ದು ಹೆಚ್ಚು ಗದ್ಯಾತ್ಮಕವಾಗಿರುತ್ತವೆ. ಹೀಗಾಗಿ ಕಾವ್ಯಾಂಶ ಹಾಗೂ ಸಾಂಸ್ಕೃತಿಕ ಸಂಗತಿಗಳು ಇಲ್ಲಿ ಕಾಣಬರುವುದಿಲ್ಲ.

ಭಿಕ್ಷಕ ಸಂಗಯ್ಯ

ಈ ಶರಣನದು ಭಿಕ್ಷೆಯ ಕಾಯಕ. ಇವನ ಇನ್ನೊಂದು ಹೆಸರು ಬಾಲಸಂಗಯ್ಯ. ವಚನಾಂಕಿತ - 'ಬಸವಣ್ಣಪ್ರಿಯ ಚೆನ್ನಸಂಗಯ್ಯ'. ಗುರು - ಗುರುಸಿದ್ಧವೀರೇಶ. ಕಾಲ - ಕ್ರಿ.ಶ.ಸು. ೧೭೦೦. ಸದ್ಯ ಈ ವಚನಕಾರನ ಒಂದು ವಚನ ಮಾತ್ರ ದೊರೆತಿದ್ದು, ಅದು ಅತ್ಯಂತ ದೀರ್ಘವಾಗಿದೆ. ಗುರು ಉಪದೇಶಿಸಿದ ಜೀವ - ಪರಮರ ಐಕ್ಯ ಅಥವಾ ಲಿಂಗಾಂಗ ಸಂಬಂಧದ ಶಾಂಭವ ಶಿವಯೋಗ ಮಹಾಜ್ಞಾನದ ವಿವರ ಈ ವಚನದಲ್ಲಿದೆ. ವಚನ ಸರಳವಾಗಿದ್ದು, ವಚನಕಾರನ ಗುರುಪರಂಪರೆಯನ್ನು ಹೇಳುವುದರ ಮೂಲಕ ಚಾರಿತ್ರಿಕ ಮಹತ್ವ ಪಡೆದಿರುತ್ತದೆ. ಆ ಗುರುಪರಂಪರೆ ಹೀಗಿದೆ : ಹರದನಹಳ್ಳಿ ಪ್ರಭುಲಿಂಗಸ್ವಾಮಿ ನಿಜಾನಂದ ಗುರು ಚನ್ನಯ್ಯ ಗುರುಸಿದ್ಧವೀರೇಶ್ವರ ದೇವ ಬಾಲಸಂಗಯ್ಯ (ಭಿಕ್ಷದ ಸಂಗಯ್ಯ). ಈ ಶರಣನ ವಚನಗಳು ಇನ್ನೂ ಅಧಿಕವಾಗಿರುವ ಸಾಧ್ಯತೆಯಿದೆ.

ಹೋಗುವ ಬನ್ನಿರಯ್ಯ
ಶಕ್ತಿಪಾತವಾದ ಶಿವಯೋಗೀಶ್ವರರು ಶಿವಭಕ್ತರು
ಹೋಗುವ ಬನ್ನಿರಯ್ಯ.
ಸುಕ್ಷೇತ್ರದಲ್ಲಿರ್ಪ ಮಹಲಿಂಗ ದರುಶನಕೆ
ಹೋಗುವ ಬನ್ನಿರಯ್ಯ
ಜೀವಸಂಚಾರವೆಂಬ ಪ್ರಾಕೃತವೆನಿಸುವ
ಅಧೋಕುಂಡಲಿಸ್ವರೂಪಮಾದ
ಅಹಂ ಎಂಬ ಹೆಬ್ಬಟ್ಟೆಯಂ ಬಿಟ್ಟು,
ಸಜ್ಜೀವವೆಂಬ ವೈಕೃತವೆನಿಸುವ
ಮಧ್ಯಕುಂಡಲಿಸ್ವರೂಪಮಾದ
ಸೋಹಮೆಂಬ ಸಣ್ಣ ಬಟ್ಟೆಯ ಹಿಡಿದು
ಹೋಗುವ ಬನ್ನಿರಯ್ಯ ಮಹಲಿಂಗ ದರುಶನಕೆ.
ಕೇವಲ ಶಿವಯೋಗವೆಂಬ
ಏಕವೆನಿಸುವ ಊರ್ಧ್ವಕುಂಡಲಿಸ್ವರೂಪಮಾದ
ಓಂ ಎಂಬ ನುಸುಳುಗಂಡಿಯಂ ನುಸಿದು
ಹೋಗುವ ಬನ್ನಿರಯ್ಯ ಮಹಲಿಂಗದರುಶನಕೆ.
ದ್ವಯಮಂಡಲವ ಭ್ರೂಮಧ್ಯವೆಂಬ ಮಹಾಮೇರುವ
ಮಧ್ಯದಲ್ಲಿ ಏಕಮಂಡಲಾಕಾರ ಮಾಡಿ,
ಆ ಕಮಲಮಧ್ಯದಲ್ಲಿ ಮೂರ್ತಿಗೊಂಡಿಪ್ಪ ಮಹಾಲಿಂಗದಲ್ಲಿ

ಜೀವಪರಮರಿಬ್ಬರನೇಕಾರ್ಥವಂ ಮಾಡಿ,
ಶಾಂಭವೀಮುದ್ರಾನುಸಂಧಾನದಿಂದೆ
ಅಧೋಮುಖಕಮಲವೆಲ್ಲ ಊರ್ಧ್ವಮುಖವಾಗಿ,
ಆ ಮಹಾಲಿಂಗವ ನೋಡುತಿರಲು
ಆ ಕಮಲಸೂತ್ರವಿಡಿದಿಹ ಷಡಾಧಾರಚಕ್ರಂಗಳ
ಊರ್ಧ್ವಮುಖವಾಗಿ ಆ ಕಮಲದಲ್ಲಿ ಅಡಗಿ,
ಆ ಕಮಲದ ಎಸಳು ಐವತ್ತೆರಡಾಗಿ ಎಸೆವ
ಪರಿಪೂರ್ಣ ಜ್ಞಾನದೃಷ್ಟಿಯಿಂದ ಆ ಮಹಾಲಿಂಗಮಂ ನಿರೀಕ್ಷಿಸಲು
ಆ ಕಮಲದಲ್ಲಿ ಮಹಾಲಿಂಗಸ್ವರೂಪವಾಗಿ
ಸಕಲ ಕರಣೇಂದ್ರಿಯಂಗಳು ಆ ಮಹಾಲಿಂಗದಲ್ಲಿಯೆ ಅಡಗಿ,
ಸುನಾದಬ್ರಹ್ಮವೆಂಬ ಇಷ್ಟವೆ ಮಹಾಲಿಂಗವೆಂದರಿದು ನೋಡುತ್ತಿರಲು,
ಜ್ಯೋತಿರ್ಮಯವಾಗಿ ಕಾಣಿಸುತಿಪ್ಪುದು.
ಅದೇ ಜೀವಪರಮರೈಕ್ಯವು: ಅದೇ ಲಿಂಗಾಂಗಸಂಬಂಧವು
ಆ ಮಹಾಲಿಂಗದ ಕಿರಣಂಗಳೆ ಕರಣಂಗಳಾಗಿ
ಆ ಕಮಲವು ಅಧೋಮುಖವಾಗಿ
ಆ ಮಹಾಲಿಂಗವು ತನ್ನ ನಿಜನಿವಾಸವೆನಿಸುವ
'ಅಂತರೇಣ ತಾಲುಕೇ' ಎಂಬ ಶ್ರುತಿ ಪ್ರಮಾಣದಿ
ತಾಲುಮೂಲದ್ವಾದಶಾಂತವೆಂಬ ಬ್ರಹ್ಮರಂಧ್ರದ ಮಧ್ಯದಲ್ಲಿ
ಪ್ರಕಾಶಿಸುತ್ತಿರ್ಪದೊಂದು ಶಿವಚಕ್ರವು.
ಆ ಶಿವಲೋಕವೆ ಶಾಂಭವಲೋಕವೆನಿಸುವುದು.
ಶಾಂಭವಲೋಕವೆ ಶಾಂಭವಚಕ್ರವೆನಿಸುವುದು.
ಆ ಶಾಂಭವಚಕ್ರದಲ್ಲಿ ಆಧಾರವಾದಿ ಪಶ್ಚಿಮಾಂತ್ಯವಾದ
ನವಚಕ್ರಂಗಳು ಸಂಬಂಧವಾಗಿರುತಿರ್ಪವು
ಅದು ಹೇಗೆಂದೊಡೆ :
ಆ ಶಾಂಭವಚಕ್ರಮಧ್ಯದ ಚತುರ್ದಳಾಗ್ರದಲ್ಲಿ
ಅಗ್ನಿಮಂಡಲವಿರ್ಪುದು.
ಅಗ್ನಿಮಂಡಲದಲ್ಲಿ ಅಷ್ಟದಳ ಇರ್ಪುವು.
ಆ ಅಷ್ಟದಳ ಚತುರ್ದಳದಲ್ಲಿ
'ವಶಷಸ' ಎಂಬ ನಾಲ್ಕಕ್ಷರಯುಕ್ತವಾದ
ಆಧಾರಚಕ್ರ ಸಂಬಂಧವಾಗಿರ್ಪುದು.
ಆ ಚಕ್ರದ ಕರ್ಣಿಕಾಮಧ್ಯದಲ್ಲಿ 'ನ' ಕಾರವು
ಆ ಮಹಾಲಿಂಗಸ್ವರೂಪವಾದ ಪ್ರಣವದ
ತಾರಕಾಕೃತಿಯಲ್ಲಿ ಸಂಬಂಧವಾಗಿರ್ಪುದು.
ಆ ಅಗ್ನಿಮಂಡಲದ ಚತುರ್ದಳದ ಈಶಾನ್ಯ ದಳದಲ್ಲಿ

'ಬ ಭ ಮ ಯ ರ ಲ' ಎಂಬ ಅರಕ್ಷರಯುಕ್ತವಾದ
ಸ್ವಾಧಿಷ್ಠಾನ ಚಕ್ರ ಸಂಬಂಧವಾಗಿರ್ಪುದು.
ಆ ಚಕ್ರದ ಕರ್ಣಿಕಾಮಧ್ಯದಲ್ಲಿರ್ಪ 'ಮ' ಕಾರವು
ಆ ಮಹಾಲಿಂಗ ಸ್ವರೂಪವಾದ ಪ್ರಣಾದ
ದಂಡಕಾಕೃತಿಯಲ್ಲಿ ಸಂಬಂಧವಾಗಿರ್ಪುದು
ಆ ಅಷ್ಟದಳಾಗ್ರದಲ್ಲಿ ಸೂರ್ಯಮಂಡಲವಿರ್ಪುದು.
ಆ ಸೂರ್ಯಮಂಡಲದಲ್ಲಿ 'ಡಢಣ ತಥದಧನ ಪಫ' ಎಂಬ
ದಶಾಕ್ಷರಯುಕ್ತವಾದ ಮಣಿಪೂರಕಚಕ್ರ ಸಂಬಂಧವಾಗಿರ್ಪುದು.
ಆ ಚಕ್ರದ ಕರ್ಣಿಕಾಮಧ್ಯದಲ್ಲಿರ್ಪ 'ಶಿ' ಕಾರವು
ಆ ಮಹಾಲಿಂಗಸ್ವರೂಪವಾದ ಪ್ರಣವದ
ಕುಂಡಲಾಕೃತಿಯಲ್ಲಿ ಸಂಬಂಧವಾಗಿರ್ಪುದು
'ಕಖಗಘಙ' ಚಛಜಝಞ' ಟಠ ಎಂಬ
ದ್ವಾದಶಾಕ್ಷರಯುಕ್ತವಾದ ಅನಾಹತಚಕ್ರವು
ಸೂರ್ಯಮಂಡಲದಲ್ಲಿ ಸಂಬಂಧವಾಗಿರ್ಪುದು.
ಆ ಚಕ್ರದ ಕರ್ಣಿಕಾಮಧ್ಯದಲ್ಲಿರ್ಪ 'ವ' ಕಾರವು
ಆ ಮಹಾಲಿಂಗಸ್ವರೂಪವಾದ ಪ್ರಣವದ
ಅರ್ಧಚಂದ್ರಾಕೃತಿಯಲ್ಲಿ ಸಂಬಂಧವಾಗಿರ್ಪುದು.
ಆ ಅಷ್ಟದಳದ ಮಧ್ಯದಲ್ಲಿ ಚಂದ್ರಮಂಡಲವಿರ್ಪುದು.
ಆ ಚಂದ್ರಮಂಡಲದಲ್ಲಿ -
'ಅ ಆ ಇ ಈ ಉ ಊ ಋ ೠ ಌ ೡ ಏ ಐ ಓ ಔ ಅಂ ಅಃ'
ಎಂಬ ಷೋಡಶಾಕ್ಷರಯುಕ್ತವಾದ ವಿಶುದ್ಧಿ ಚಕ್ರ ಸಂಬಂಧವಾಗಿರ್ಪುದು.
ಆ ಚಕ್ರದ ಕರ್ಣಿಕಾಮಧ್ಯದಲ್ಲಿರ್ಪ 'ಯ' ಕಾರವು
ಆ ಮಹಾಲಿಂಗಸ್ವರೂಪವಾದ ಪ್ರಣವದ
ದರ್ಪಣಾಕೃತಿಯಲ್ಲಿ ಸಂಬಂಧನಾಗಿರ್ಪುದು.
ಆ ಮಹಾಲಿಂಗಕ್ಕೆ ಪೀಠಮಾಗಿರ್ದ ಬಿಂದುಯುಕ್ತವಾದ ಪ್ರಣವವು
ಆ ಮಹಾಲಿಂಗದ ಮುಂದಿರ್ದ
'ಹಂ ಳಂ ಹಂ ಕ್ಷಂ' ಎಂಬ ಚತುವರ್ಣಾಕ್ಷರಯುಕ್ತವಾದ
ಅಜ್ಞಾಚಕ್ರ ಸಂಬಂಧವಾಗಿರ್ಪುದು.
ಆ ಚಕ್ರದ ಕರ್ಣಿಕಾಮಧ್ಯದಲ್ಲಿರ್ಪ ಓಂಕಾರವು
ಆ ಮಹಾಲಿಂಗಸ್ವರೂಪವಾದ ಪ್ರಣವದ
ಜ್ಯೋತಿಕಾಕೃತಿಯಲ್ಲಿ ಸಂಬಂಧವಾಗಿರ್ಪುದು.
ಚತುರ್ದಳವು ತ್ರಿದಳದಲ್ಲಿ ಕ್ಷ ಉ ಸ ಎಂಬ ತ್ರಯಕರಯುಕ್ತವಾದ
ಶಿಖಾಚಕ್ರ ಸಂಬಂಧವಾಗಿರ್ಪುದು.
ಆ ಚಕ್ರದ ಕರ್ಣಿಕಾ ಮಧ್ಯದಲ್ಲಿ 'ಕ್ಷ' ಕಾರವು

ಆ ಮಹಾಲಿಂಗ ಸ್ವರೂಪವಾದ ಕುಂಡಲಾಕೃತಿ
ಅರ್ಧಚಂದ್ರಾಕೃತಿಗಳಲ್ಲಿ ಸಂಬಂಧವಾಗಿರ್ಪುದು.
ಆ ಚಕ್ರದ ಕರ್ಣಿಕಾಮಧ್ಯದಲ್ಲಿರ್ಪ 'ಹ್ರಾಂ' ಕಾರವು
ಆ ಮಹಾಲಿಂಗಸ್ವರೂಪವಾದ ಪ್ರಣವದ
ದರ್ಪಣಾಕೃತಿ ಜ್ಯೋತಿರಾಕೃತಿಗಳಲ್ಲಿ ಸಂಬಂಧವಾಗಿರ್ಪುದು.
ಹೀಂಗೆ ಅಷ್ಟಚಕ್ರಂಗಳ ತನ್ನೊಳಗೆ ಗರ್ಭೀಕರಿಸಿಕೊಂಡು
ಬೆಳಗುತ್ತಿರ್ಪುದೊಂದು ಬ್ರಹ್ಮರಂಧ್ರಚಕ್ರವು.
ಆ ಚಕ್ರದ ಕರ್ಣಿಕಾಮಧ್ಯದಲ್ಲಿರ್ಪ ಹ್ರೀಂಕಾರಗಳು.
ಆ ಹರದನಹಳ್ಳಿಯ ಪ್ರಭುಲಿಂಗ ಗುರುಸ್ವಾಮಿಯ ಶಿಷ್ಯರು
ನಿಜಾನಂದ ಗುರುಚೆನ್ನಯ್ಯನವರು.
ಆ ನಿಜಾನಂದ ಗುರುವಿನ (ಶಿಷ್ಯರು)
ಗುರುಸಿದ್ಧವೀರೇಶ್ವರದೇವರು.
ಆ ಸಿದ್ಧವೀರೇಶ್ವರದೇವರ ಕರಕಮಲದಲ್ಲಿ ಉದಯವಾದ
ಬಾಲಸಂಗಯ್ಯನು ನಾನು.
ಆ ನಿರಂಜನ ಗುರುವೆ ತಮ್ಮ ಕೃಪೆಯಿಂದ
ತಮ್ಮಂತರಂಗದಲ್ಲಿರ್ದ ಅತಿರಹಸ್ಯವಾದ
ಶಾಂಭವಶಿವಯೋಗವೆಂಬ ಮಹಾಜ್ಞಾನೋಪದೇಶಮಂ
ಹರಗುರು ವಾಕ್ಯ ಪ್ರಮಾಣಿನಿಂ ಎನ್ನ ಹೃದಯಕಮಲದಲ್ಲಿ
ಕರತಳಾಮಳದಂತೆ ತೋರಿ,
ಆ ಹೃದಯಕಮಲಕರ್ಣಿಕಾ ಮಧ್ಯದಲ್ಲಿರ್ಪ
ನಿರಂಜನಗುರುವೆ ನಿರಂಜನ ಮಹಾಲಿಂಗವೆಂದರಿದು
ಆ ನಿರಂಜನಮಹಾಲಿಂಗವೆ ಕರಸ್ಥಲದಲ್ಲಿರ್ಪ
ಸುನಾದಬ್ರಹ್ಮವೆಂಬ ಇಷ್ಟಲಿಂಗವೆಂದರಿದು,
ಆ ಕರಸ್ಥಳದಲ್ಲಿರ್ಪ ಇಷ್ಟಲಿಂಗವೆ ತಾನೆಂದರಿದು
''ಮಂತ್ರಮಧ್ಯೇ ಭವೇತ್‌ಲಿಂಗ । ಲಿಂಗಮಧ್ಯೇ ಭವೇತ್‌ಮಂತ್ರಂ ।
ಮಂತ್ರಲಿಂಗದ್ವಯಾದೇಕಂ । ಇಷ್ಟಲಿಂಗಂತು ಶಾಂಕರೀ॥''
ಎಂದುದಾಗಿ, ಎನ್ನ ಹೃತ್ಕಮಲಕರ್ಣಿಕಾಮಧ್ಯದಲ್ಲಿ
ಶಾಂಭವೀಮುದ್ರಾನುಸಂಧಾನದಿಂದ
ಆ ಲಿಂಗವೆ ಮಂತ್ರ, ಮಂತ್ರವೆ ಲಿಂಗವೆಂದರಿದು
ಓಂ ಓಂ ಎಂದು ಶಿವಸಮಾಧಿಯ ಜಪಮಂ ಜಪಿಸುತ್ತ
ಜ್ಯೋತಿರ್ಲಿಂಗಮಂ ಕೇಳುತ, ಜ್ಯೋತಿರ್ಲಿಂಗದೊಳು
ಮುಳುಗಾಡುತ್ತಿರ್ದೆನಯ್ಯಾ ಬಸವಣ್ಣಪ್ರಿಯ ಚೆನ್ನಸಂಗಯ್ಯನೆಂಬ
ಗುರುವಿನ ಕೃಪೆಯಿಂದ, ನಿಮ್ಮ ಶರಣರ ಪಡುಗ ಪಾದರಕ್ಷೆಯ
ಹಿಡಿವುದಕ್ಕೆ ಯೋಗ್ಯನಾದೆನಯ್ಯ ನಿಮ್ಮ ಕೃಪೆಯಿಂದ.

ಮುಮ್ಮಡಿ ಕಾರ್ಯೇಂದ್ರ

ಅರಸುವರ್ಗದ ವಚನಕಾರ ಮುಮ್ಮಡಿ ಕಾರ್ಯೇಂದ್ರನ ತಂದೆಯ ಹೆಸರು (ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ) ಕಾರ್ಯ (ಗ್ರಾಮ) ಸಂಸ್ಥಾನದ ಮಾಸ್ತಿ ಸತ್ಕುಲ ಪ್ರದೀಪ ಇಮ್ಮಡಿ ಕಾರ್ಯೇಂದ್ರ, ತಾಯಿಯ ಹೆಸರು ಕುಪ್ಪಮಾಂಬಾ. ಕಾಲ ಕ್ರಿ.ಶ.ಸು.೧೭೦೦. ಗುರುವಿನ ಹೆಸರು - ದೊಡ್ಡದೇಶಿಕಾರ್ಯ. ವಚನಾಂಕಿತ - 'ಮಹಾಘನ ದೊಡ್ಡ ದೇಶಿಕಾರ್ಯ ಗುರುಪ್ರಭುವೆ'. ವಚನ ಸಂಖ್ಯೆ - ೧೦೯. 'ವೇದ ಸಂಜೀವಿನಿ' ಈತನ ವಚನಕೃತಿಯ ಹೆಸರಾಗಿದೆ. ''ಕನಸಿನಲ್ಲಿ ಬಂದು ಮನಸ್ಸಂತುಷ್ಟಯಂ ಮಾಡಿ, ಅಕ್ಷಯ ಮೋಕ್ಷಪ್ರದಮಪ್ಪ ದೀಕ್ಷೆಯಂ ಕೊಟ್ಟು, ತತ್ತ್ವೋಪದೇಶಮಂ ಪಾಲಿಸಿ, ದಯೆಯಿಂ ಲಾಲಿಸಿ ಲಾಲಿಸಿ, ತನ್ಮಹಿಮೆ ಪ್ರಕಟನವಾಗುವಂತು ಜೀವರ ಭವಪಾಪಮಂ ನೀಗುವಂತು ಪರತತ್ತ್ವ ವಚನ ಷೋಡಶೋತ್ತರಶತಮಂ ರಚಿಸೆಂದು ನಿರೂಪಿಸಲಾ ದೇಶಿಕನಾಜ್ಞೆಯಂ ಶಿರಸಾವಹಿಸಿ' ಈ ಕೃತಿ ರಚಿಸಿದುದಾಗಿ ಮುಮ್ಮಡಿ ಕಾರ್ಯೇಂದ್ರ ಹೇಳಿಕೊಂಡಿದ್ದಾನೆ. ಮೂಲತಃ ಈ ಕೃತಿಯಲ್ಲಿರುವ ವಚನ ಸಂಖ್ಯೆ - ೧೧೬. ಆದರೆ ಈಗ ೧೦೯ ವಚನಗಳು ಮಾತ್ರ ಸಿಗುತ್ತಿವೆ. ಈ ವಚನ ಕೃತಿಯಲ್ಲಿ ೧೦ ಅಧ್ಯಾಯಗಳಿದ್ದು, ವಿಷಯ ವಿಭಜನೆಯನ್ನಾಗಲೀ, ಸ್ಥಲ ನಿರ್ದೇಶವನ್ನಾಗಲೀ ಹೊಂದಿರುವುದಿಲ್ಲ. ತನ್ನ ಈ ಕೃತಿ ''ರೇವಣಸಿದ್ದೇಶ್ವರ ಮರುಳ ಸಿದ್ದೇಶ್ವರೈ ಕೋರಾಮಪಂಡಿತಾರ್ಯಾಲ್ಲಮಪ್ರಭು ಚೆನ್ನಬಸವೇಶ್ವರಾದಿ ಪೂಜ್ಯಪಾದ ವಿರಚಿತ ಸಕಲಗ್ರಂಥ ಸಾರಭೂತಮಾದ ವೀರಶೈವ ಸಿದ್ಧಾಂತರೂಪ'' ಆಗಿದೆಯೆಂದು ಕಾರ್ಯೇಂದ್ರ ಸ್ಪಷ್ಟಪಡಿಸಿದ್ದಾನೆ. ಹೀಗಾಗಿ ಈ ವಚನಕೃತಿಯಲ್ಲಿ ವೀರಶೈವ ಸಿದ್ಧಾಂತ ಬೋಧನೆಯೇ ಪ್ರಧಾನವಾಗಿ ನಿರೂಪಿತವಾಗಿದೆ. ವಚನಗಳು ಹೆಚ್ಚಾಗಿ ದೀರ್ಘವಾಗಿದ್ದು ಗಂಭೀರ ಹಾಗೂ ಸುಲಭ ಶೈಲಿಗಳಿಂದ ಕೂಡಿಕೊಂಡಿರುತ್ತವೆ. ತಾತ್ವಿಕ ವಿವೇಚನೆಯಿಂದಾಗಿ ವಚನಗಳ ನಿರೂಪಣೆಯಲ್ಲಿ ನೀರಸತೆ ಎದ್ದು ಕಾಣುತ್ತದೆ. ಈ ವಚನ ಕೃತಿಯಲ್ಲಿಯ ಎರಡು ವಚನಗಳನ್ನು ಇಲ್ಲಿ ಉದಾಹರಿಸಬಹುದಾಗಿದೆ :

ಹಗಲಿದ್ದಲ್ಲಿ ಕತ್ತಲೆಯಿರ್ಪುದೆ?
ಕತ್ತಲೆಯಿದ್ದಲ್ಲಿ ಹಗಲಿರ್ಪುದೇ?
ಜಾಗ್ರತವಿದ್ದಲ್ಲಿ ಸ್ವಪ್ನವಿರ್ಪುದೆ?
ದುಃಖವಿದ್ದಲ್ಲಿ ಆನಂದವಿರ್ಪುದೆ?
ನೀನು ಪ್ರಸನ್ನಮಾದಲ್ಲಿ ನಾನಿರ್ಪೆನೆ?
ನಾನು ಪ್ರಸನ್ನಮಾದಲ್ಲಿ ನೀನಿರ್ಪೆಯಾ?
ನೀನಿದ್ದಲ್ಲಿ ನಾನಿಲ್ಲ, ನಾನಿದ್ದಲ್ಲಿ ನೀನಿಲ್ಲ.
ಮಹಾಘನ ದೊಡ್ಡ ದೇಶಿಕಾರ್ಯ ಗುರುಪ್ರಭುವೆ.

ಬೀಜದೊಳಗಿಹ ವೃಕ್ಷ ಫಲವ ಸವಿಯಬಹುದೆ?
ಬಿಂದುವಿನಲಿರ್ಪ ಸತಿಯ ಸಂಭೋಗವು ಸಂಘಟಿಸುವುದೆ?
ಮಳೆಹನಿಯೊಳಿರ್ಪ ಹುರುಮಂಜಿ ಮುತ್ತುಗಳಂ
ಸರಗೊಳಿಸಿ ಕೊರಳೊಳು ಧರಿಸಬಹುದೆ?
ಹಾಲೊಳಗಿರ್ಪ ತುಪ್ಪವು ಅರಸಿದರೆ ಸಿಕ್ಕುವುದೆ?
ಕಬ್ಬಿನೊಳಗಿರ್ಪ ಬೆಲ್ಲವು ಕಣ್ಣಿಗೆ ಕಾಣಿಸುವುದೆ?
ತನ್ನೊಳಗಿರ್ಪ ಶಿವತತ್ವವು ನೆನೆದಾಕ್ಷಣವೆ ಅನುಭವಕ್ಕೆ ಬರ್ಪುದೆ?
ಭಾವಿಸಿ ತಿಳಿದು ಮಥಿಸಿ ಪ್ರಯೋಗಾಂತರದಿಂ ಪ್ರಸನ್ನಮಂ ಮಾಡಿಕೊಂಡು,

ತದನುಭವಸುಖದೊಳೋಲಾಡುವುದು
ಅತಿಚತುರನಾದ ಶಿವಶರಣಂಗಲ್ಲದುಳಿದರ್ಗುಂಟೆ,
ಮಹಾಘನ ದೊಡ್ಡದೇಶಿಕಾರ್ಯ ಗುರುಪ್ರಭುವೆ.

ಮೂರುಸಾವಿರ ಮುಕ್ತಿಮುನಿ

'ಚೆನ್ನಬಸವಪುರಾಣ'ದ ರುದ್ರಮುನಿಯ ಶಿಷ್ಯ ಮುಕ್ತಿಮುನಿ ೧೬ನೆಯ ಶತಮಾನದವನಾಗಿದ್ದು, ಪ್ರಸ್ತುತ ವಚನಕಾರ ಮೂರುಸಾವಿರ ಮುಕ್ತಿಮುನಿಯಿಂದ ಬೇರೆಯೆನಿಸುತ್ತಾನೆ. ಕೆಳದಿ ಪ್ರದೇಶ ಭುವನಗಿರಿ (ಕವಲೇ) ದುರ್ಗದ ಮಹಾಮಹಂತಿನಮಠದ ಪರಂಪರೆಯ ಮೂರುಸಾವಿರ ಮುಕ್ತಿಮುನಿ ೧೮ನೆಯ ಶತಮಾನದವನು. ಈತನೇ 'ಸರ್ವಾಚಾರ ಸಾರಾಮೃತ ಸುಧೆ' ವಚನಕೃತಿಯ ಕರ್ತೃವಾಗಿದ್ದಾನೆ. 'ನಿರಾಳ ಚಿತ್ತ್ರಣವಮೂರ್ತಿ ಶ್ರೀಗುರುಲಿಂಗಜಂಗಮಸ್ವರೂಪನಾಗಿದ್ದ ಮುಕ್ತಿಮುನಿ' ತನ್ನ ಚಿದ್ಗರ್ಭೋದಯರಾದ ರೇವಣಸಿದ್ದ ದೇಶಿಕನೆಂಬ ಚರಗುರುವರೆಗೆ ಹರಗುರು ವಾಕ್ಯ ಪ್ರಮಾಣವಾಗಿ ನಿಜಾನುಭವ ಸೂತ್ರಗಳಿಂದ' ಹೇಳಿದ ಫಲವಾಗಿ 'ಸರ್ವಾಚಾರ ಸಾರಾಮೃತ ಸುಧೆ' ಹುಟ್ಟಿಕೊಂಡಿದೆ. ಇದರಲ್ಲಿ ೧೦೧ ವಚನಗಳಿದ್ದು, ಇವು ಹೆಚ್ಚಾಗಿ ದೀರ್ಘವಾಗಿರುತ್ತವೆ. ವಚನಗಳು ಗದ್ಯಮಯವಾಗಿದ್ದು, ವಿಷಯವನ್ನು ಸರಳವಾಗಿ ನಿರೂಪಿಸುತ್ತವೆ. ಕೆಲವು ಸಲ ಅಲ್ಲಿ ಅರ್ಥಕ್ಲಿಷ್ಟತೆ ಕಂಡುಬರುತ್ತದೆ. ವಚನಗಳ ಮಧ್ಯೆ ಸಂಸ್ಕೃತ ಶ್ಲೋಕಗಳೂ ಸ್ಥಾನ ಪಡೆದಿವೆ. ಈ ವಚನಕಾರನ ವಚನಾಂಕಿತ - 'ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನ ಲಿಂಗೇಶ್ವರ'. ವೀರಶೈವರು ಆಚರಿಸಬೇಕಾದ ಆಚಾರಗಳನ್ನು ಷಟ್‌ಸ್ಥಲ ಸಮ್ಮತವಾಗಿ ಇಲ್ಲಿ ವಿವರಿಸಲಾಗಿದೆ. ಈ ಆಚಾರಗಳಲ್ಲಿ ಭೃತ್ಯಾಚಾರ, ಕ್ರಿಯಾಚಾರಗಳಿಗೇ ಅದ್ಯತೆ ನೀಡಲಾಗಿದೆ. ಧರ್ಮತತ್ವಗಳು ಸ್ಥಾವರವಾಗಿ ಉಳಿಯದೆ, ಜಂಗಮವಾಗಿ ಸಮಾಜದಲ್ಲಿ ಪ್ರವಹಿಸುವುದು ಆಚರಣೆಗಳ ಮೂಲಕ. ಹೀಗಾಗಿ ಸಮಾಜದಲ್ಲಿ ವ್ಯಕ್ತಿಯ ಆಚಾರ - ಆಚರಣೆಗಳಿಗೆ ಹೆಚ್ಚು ಪ್ರಾಶಸ್ತ್ಯವಿರುತ್ತದೆ. ಆದುದರಿಂದ ಈ ವಚನಕೃತಿ ವ್ಯಕ್ತಿ ಮತ್ತು ಸಮಾಜಗಳ ದೃಷ್ಟಿಯಿಂದ ಹೆಚ್ಚು ಬೆಲೆಯುಳ್ಳದ್ದಾಗಿ ಕಂಡುಬರುತ್ತದೆ. ಮೂರುಸಾವಿರ ಮುಕ್ತಿಮುನಿಯ ವಚನಗಳನ್ನು ಮಾದರಿಗಾಗಿ ಇಲ್ಲಿ ಉದಾಹರಿಸಬಹುದು :

ಅಯ್ಯಾ, ನಿಜವೀರಶೈವೋದ್ಧಾರಕ ವಿಶೇಷ ಭಕ್ತಮಾಹೇಶ್ವರರು,
ಮಹಾಲಿಂಗೋದಯವಾದಿಯಾಗಿ ನಿರವಯಲಿಂಗವಂತ್ಯವಾದ ಪರಿಯಂತರವು
ಸತ್ತುಚಿತ್ತಾನಂದ ರೂಪ ಧರಿಸಿ, ನಿತ್ಯ ಗುರುಲಿಂಗಜಂಗಮ ಕಲ್ಯಾಣೋತ್ಸಹರಾಗಿ,
ಮಾರ್ಗಾವತಾರಂಗಳಲ್ಲಿ ಸತ್ಕ್ರಿಯಾವಧಾನ, ಮೀರಿದಾಚಾರಂಗಳಲ್ಲಿ ಸಮ್ಯಜ್ಞಾನಾವಧಾನ.
ಸಂಪೂರ್ಣಾನಂದಭರಿತಾಚಾರಂಗಳಲ್ಲಿ
ಸ್ವಾನುಭಾವದ ಸದ್ಧರ್ಮ ನಡೆ - ನುಡಿಯೊಳಕೊಂಡು ಬೆಳಗುವ
ಪರತತ್ವ ಶಿವಯೋಗಾನುಸಂಧಾನದ ನಿಜಾವಧಾನದಲ್ಲಿ ಸಂತೃಪ್ತರಾಗಿ
ಬೆಳಗಿಂಗೆ ಮಹಾಬೆಳಗಾಗಿ, ತನ್ನ ತಾನೇ ಮುಕ್ತಿ ಸ್ವರೂಪ
ನಿರವಯಪ್ರಭು ಮಹಾಂತ ತಾನೇ ನೋಡಾ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರಾ.

ಅನಾದಿ ಪ್ರಮಥಗಣದಿರವನರಿದು,
ಸತ್ಯಶುದ್ಧ ನಡೆ ನುಡಿ ದೃಢಚಿತ್ತರಾಗಿ,
ಇಹಪರ ಭೋಗಯೋಗದ ಬಯಕೆಯ ನೀಗಿ,
ನಿರವಯಲ ಸೇರಿ, ನಿತ್ಯಮುಕ್ತರಾಗಬೇಕಾದ
ಭಕ್ತಜಂಗಮ ಗುರುಲಿಂಗಕ್ಕೆ

ಆಚಾರವೇ ಗುರು, ಆಚಾರವೇ ಲಿಂಗ, ಆಚಾರವೇ ಜಂಗಮ,
ಆಚಾರವೇ ಪಾದೋದಕ ಪ್ರಸಾದ ವಿಭೂತಿ ರುದ್ರಾಕ್ಷಿ ಮಂತ್ರ.
ಭಕ್ತಗಣಪ್ರಸಾದಿ ಶರಣೈಕ್ಯರೆಂದುದು ಗುರುವಚನ.
ಅದು ಕಾರಣವಾಗಿ, ಆಚಾರದ ಕುರುಹ ತಿಳಿದು,
ಆಚರಿಸಿ, ಸಂಬಂಧವಿಟ್ಟು, ತನ್ನ ತಾನಾಗಬಹುದಲ್ಲದೆ
ಆಚಾರವನ್ನುಲ್ಲಂಘಿಸಿ, ಆಚಾರವ ಬಿಟ್ಟು,
ಅನಾಚಾರಸಂಗ ಸಮರತಿಯ ಬಳಸಿದಡೆ
ತನ್ನ ತಾನಾಗಬಾರದೆಂದುದು ಹರಗುರುವಾಕ್ಯವು,
ಇದು ತಿಳಿದ ಮಹಾಂತರು, ಆಚಾರವನಾಚರಿಸಬೇಕು ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರಾ.

ಹೇಮಗಲ್ಲ ಹಂಪ

ಈ ಯುಗದ ಗಮನಾರ್ಹ ವಚನಕಾರನಾದ ಹಂಪನು ಹೇಮಗಲ್ಲ ಗ್ರಾಮದವ. ಕರ್ನಾಟಕದ ಈ ಗ್ರಾಮವನ್ನು ಶೋಧಿಸುವ ಕಾರ್ಯ ಇನ್ನೂ ಆಗಬೇಕಾಗಿದೆ. ಹಂಪನ ವಚನಾಂಕಿತ - 'ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥ ಪ್ರಭುವೇ?' ಈ ವಚನಕಾರ ವಚನವೊಂದರಲ್ಲಿ ತನ್ನ ಗುರು ಪರಂಪರೆಯನ್ನು ಹೀಗೆ ಹೇಳಿಕೊಂಡಿದ್ದಾನೆ. ಪರಶಿವ ಆದಿಶಂಭು ಆದಿಗಣೇಶ್ವರ ನಿರಂಜನ ಶಿವಸಿದ್ಧ ಷಡುವಿಡಿಯ ಪ್ರಭು ಮಹಾಂತಮಲ್ಲಿಕಾರ್ಜುನ ಜಾಲಿಹಳ್ಳಿಯ ಶಾಂತಿದೇವ ಸಿದ್ಧಮಲ್ಲಿನಾಥೇಶ್ವರ ಪಡುವಿಡಿಯ ರಾಜೇಶ್ವರ ಹೇಮಗಲ್ಲ ಹಂಪ. ಇದರಲ್ಲಿ ಆರಂಭದ ನಾಲ್ಕು ಹೆಸರು ಕಾಲ್ಪನಿಕವಾದವುಗಳಾಗಿವೆ. ಈ ಗುರುಪರಂಪರೆಯಂತೆ ಹೇಮಗಲ್ಲ ಹಂಪ ಅರನೆಯವನಾಗುತ್ತಾನೆ. ಪಡುವಿಡಿ ಬಗೆ (ಬಾಳೇಹಳ್ಳಿ ಸಿಂಹಾಸನ)ಯ ರಾಜೇಶ್ವರ ಈತನ ಗುರು. ವಚನಾಂಕಿತದಲ್ಲಿಯ ಪಡುವಿಡಿ ಬಗೆಯ ಪರಮಗುರು ಸಿದ್ಧಮಲ್ಲಿನಾಥ ಈತನ ಗುರುವಿನ ಗುರು. ತನ್ನ ಗುರುವಿನ ಹೆಸರನ್ನೇ 'ವಚನಾಂಕಿತ'ವನ್ನಾಗಿ ಇಟ್ಟುಕೊಂಡಿದ್ದರೂ ಹಂಪನು ಉಭಯತರನ್ನೂ ಗುರುಗಳನ್ನಾಗಿ ಮಾಡಿಕೊಂಡಿರುವ ಸಾಧ್ಯತೆಯಿದೆ. ಈ ವಚನಕಾರನ ವಚನಕೃತಿಯ ಹೆಸರು ''ಹೇಮಗಲ್ಲ ಷಟ್‌ಸ್ಥಲ'' ಸದ್ಯ ಈ ಕೃತಿ ಅಪೂರ್ಣವಾಗಿದ್ದು, ಭಕ್ತಸ್ಥಲದವರೆಗಿನ ೩೦೨ ವಚನಗಳು ಮಾತ್ರ ಲಭಿಸುತ್ತಿವೆ. ಈ ವಚನ ಕೃತಿಯಲ್ಲಿ ವಿವಿಧ ಸ್ಥಲಗಳಿದ್ದು, ಪ್ರತಿಯೊಂದು ಸ್ಥಲದ ಅಂತ್ಯದಲ್ಲಿ ಇದೇ ವಚನಕಾರನ ಒಂದು ಸ್ವರವಚನವಿರುತ್ತದೆ. ವಚನಗಳ ಮಧ್ಯದಲ್ಲಿ ಸಂಸ್ಕೃತ ಶ್ಲೋಕ, ಕಂದಪದ್ಯ, ರಗಳೆಗಳೂ ಕಂಡುಬರುತ್ತವೆ. ಈ ವಚನ ಕೃತಿಯಲ್ಲಿಯ ಸ್ಥಲ ವಿಭಜನೆ ಹೀಗಿದೆ : ಶಿವಸ್ತೋತ್ರ ಸ್ಥಲ, ಪಿಂಡ ಸ್ಥಲ, ಪಿಂಡಜ್ಞಾನ ಸ್ಥಲ, ಮಾಯಾವಿಡಂಬನ ಸ್ಥಲ, ಮಾಯಾತಮ ನಿರಸನಸ್ಥಲ, ದಶವಾಯು ನಿರಸನಸ್ಥಲ, ಅಂತರಂಗದ ಅಷ್ಟಮದ ನಿರಸನಸ್ಥಲ, ಬಹಿರಂಗದ ಅಷ್ಟಮದ ನಿರಸನಸ್ಥಲ, ಅರಿಷಡ್ವರ್ಗ ನಿರಸನಸ್ಥಲ, ಬಹಿರಂಗದ ಅಷ್ಟಮದ ನಿರಸನಸ್ಥಲ, ಅರಿಷಡ್ವರ್ಗ ನಿರಸನಸ್ಥಲ, ಸಪ್ತವ್ಯಸನ ನಿರಸನಸ್ಥಲ, ಪಂಚೇಂದ್ರಿಯ ನಿರಸನಸ್ಥಲ, ಮನೋವಿಕಾರ ನಿರಸನಸ್ಥಲ, ಆಶಾಬದ್ಧ ನಿರಸನಸ್ಥಲ, ಶಿವನಧಿಕಾಂಕ್ಷಸ್ಥಲ, ಸಂಸಾರಹೇಯಸ್ಥಲ, ಗುರುಕರುಣಸ್ಥಲ, ಲಿಂಗಧಾರಣಸ್ಥಲ, ಅನ್ಯದೈವ ನಿರಸನಸ್ಥಲ, ವಿಭೂತಿಯ ಸ್ಥಲ, ರುದ್ರಾಕ್ಷಿಯ ಸ್ಥಲ, ಪಂಚಾಕ್ಷರಿಯ ಸ್ಥಲ, ಅಷ್ಟಾವರಣ ಮಹಾತ್ಮೆಯಸ್ಥಲ, ಭಕ್ತಸ್ಥಲ, ಮಹೇಶ್ವರಸ್ಥಲದಿಂದ ಐಕ್ಯಸ್ಥಲದವರೆಗಿನ ವಚನಗಳು ಅನುಪಲಬ್ಧವಾಗಿರುತ್ತದೆ. ಇವುಗಳನ್ನು ಶೋಧಿಸುವ ಕಾರ್ಯ ಅಗತ್ಯವಾಗಿ ನಡೆಯಬೇಕಾಗಿದೆ. ಈ ವಚನಕಾರನ ವಚನಗಳು ಸುಂದರಶಿಲ್ಪ ಹೊಂದಿದ್ದು, ಹನ್ನೆರಡನೆಯ ಶತಮಾನದ ವಚನಗಳಂತೆ ಗಟ್ಟಿಯಾಗಿರುತ್ತವೆ. ಸರಳ ನಿರೂಪಣೆ, ಕಾವ್ಯಾಂಶಗಳಿಂದ ಕೂಡಿರುವ ಈ ವಚನಗಳ ಮೇಲೆ ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ. ಮಡಿವಾಳ ಮಾಚಿದೇವರ ದಟ್ಟಪ್ರಭಾವ ಆಗಿರುವುದನ್ನು ಗುರುತಿಸಬಹುದಾಗಿದೆ. ತಾತ್ವಿಕ ವಚನಗಳಿಗಿಂತ ಸಾಮಾಜಿಕ ವಚನಗಳೇ ಅಧಿಕವಾಗಿರುವುದರಿಂದ, ಈ ವಚನಗಳು ಆ ಕಾಲದ ಸಾಮಾಜಿಕ

ಅಧ್ಯಯನಕ್ಕೆ ಉತ್ತಮ ಅಕ್ಷರ ಸಾಮಗ್ರಿಗಳಾಗಿ ನಿಲ್ಲುತ್ತವೆ. ಇಲ್ಲಿ ಬೆಡಗಿನ ಸಂಖ್ಯೆ ಅಧಿಕವಾಗಿದ್ದು, ಇವುಗಳನ್ನು ಕುರಿತು ಪ್ರತ್ಯೇಕ ಅಧ್ಯಯನ ಮಾಡುವ ಆವಶ್ಯಕತೆಯಿದೆ. ವಚನಕಾರ ಹೇಮಗಲ್ ಹಂಪನ ವಚನಗಳಲ್ಲಿ ಕಂಡುಬರುವ ಸೂತ್ರರೂಪದ ವಾಕ್ಯಗಳು ಹೀಗಿರುತ್ತವೆ : ಜ್ಯೋತಿ ಇದ್ದ ಗೃಹಕೆ ತಮವುಂಟೇನಯ್ಯಾ, ಹೆಳವನಿದ್ದೆಸೆಗೆ ಜಲನಿಧಿ ನಡೆತಂದಂತೆ, ರೋಗಿಯಲ್ಲಿಗೆ ಅಮೃತವೆ ಮೈಯಾಗಿ ನಡೆತಂದಂತೆ, ಬಿಡದೆ ಅರಸುವ ಬಳ್ಳಿ ಕಾಲ ತೊಡಗಿ ಬಂದಂತೆ, ಪಂಕದಲ್ಲಿ ಬಿದ್ದ ಪಶುವಿನಂತೆ, ಗರುಡನ ಮುಂದಿನ ಸರ್ಪದಂತೆ, ದೀಪದ ಮುಂದಣ ಪತಂಗನಂತೆ, ಪಶುವಿನ ಮುಂದೆ ಮುರವು ಹಾಕಿ ಅಮೃತವಂ ಕರಕೊಂಬಂತೆ, ಒರಳೊನಕಿಯ ನಡುವಿನ ಸಿಹಿಧಾನ್ಯದಂತೆ, ಅಗ್ನಿಕುಂಭದ ನಡುವಿನ ಜೀವಸಾರದಂತೆ, ಕಟುಕಗೆ ಮಾರಿದ ಕುರಿಯಂತೆ, ಜ್ಯೋತಿ ಇಲ್ಲದ ಕತ್ತಲೆ ಮನೆಯಂತೆ, ಸೂರ್ಯನಿಲ್ಲದ ಗಗನದ ಕಾಳದಂತೆ, ಸ್ಫಟಿಕದ ಘಟದೊಳಗಣ ಜ್ಯೋತಿಯಂತೆ, ಮೋಡದ ಮರೆಯ ಸೂರ್ಯನಂತೆ, ಕರಿಯ ಕಾಲೊಳಗೆ ಸಿಕ್ಕಿದ ಮರಿಯ ನಾಯಿಯಂತೆ, ಹುಚ್ಚಾನೆಯ ಮುಂದಣ ಭಿತ್ತಿಯಂತೆ, ಕರಿಗಳ ಹೊಯಿದಾಟದ ನಡುವಿನ ಮರ ಮುರಿವಂತೆ, ಮಲ್ಲರ ಕಾಳಗದ ನಡುವಿನ ಶಿಶುವಿನಂತೆ, ವಜ್ರಾಂಗಿಯ ತೊಟ್ಟಿಪ್ಪಾತಂಗೆ ಬಾಣದ ಭಯ ಉಂಟೇನಯ್ಯಾ?, ಹಾಳೂರ ಹೊಕ್ಕರೆ ನಾಯ ಜಗಳವ ಕಂಡಂತೆ, ಮೇಷನ ದನಿಗೇಳಿ ಹುಲಿ ಬಲೆಯ ಬೀಟ್ವಂತೆ, ಮೊಲನ ಕಂಡರೆ ಶ್ವಾನಗಳು ತುಡುಕುವಂತೆ, ಕ್ಷೀರವನೊಲ್ಲದ ಹಂಸ ನೀರಿಂಗೆ ಹರಿವಂತೆ, ಕಮಲದ ಪರಿಮಳವನೊಲ್ಲದ ತುಂಬಿ ದತ್ತೂರ ಕುಸುಮಕ್ಕೆ ಹರಿವಂತೆ, ಕೆಚ್ಚಲ ಕಚ್ಚಿದ ಉಣ್ಣೆ ನಿಚ್ಚಾಮೃತದ ಸವಿಯನೆತ್ತಬಲ್ಲುದಯ್ಯಾ, ತೆರಣಿಯ ಹುಳು ತನ್ನ ಮನೆಯೊಳು ತಾನೆ ನುಲಿ ಸುತ್ತಿಕೊಂಡು ಸಾವಂತೆ, ಅತ್ತಿಯ ಹಣ್ಣಾಗಿ ಬಂದು ಸಿಕ್ಕಿದ ಪಿರಳಿಯಂತೆ, ಭಿತ್ತಿಯ ಮೇಲಣ ಚಿತ್ರಕ್ಕೆ ಚೈತನ್ಯವುಂಟೇನಯ್ಯಾ? ಪಟ್ಟವ ಕಟ್ಟಿದ ಮೇಲೆ ಲಕ್ಷಣವನರಸಲುಂಟೇನಯ್ಯಾ?

ಹೇಮಗಲ್ಲ ಹಂಪನ ಎರಡು ವಚನಗಳನ್ನು ಮಾದರಿಗಾಗಿ ಇಲ್ಲಿ ಉದಾಹರಿಸಬಹುದಾಗಿದೆ :

ನಡೆಯಲಾರದ ಹೆಳವಂಗೆ ಅಂಧ ಹೆಂಡತಿ ದೊರೆತರೆ,
ನಡೆವುದೇನಯ್ಯಾ ಅವರ ಜೀವಿತರೂಪ?
ನುಡಿಯಿಲ್ಲದ ಮೂಕಮಾನವಂಗೆ ಅರಸುಪಟ್ಟ ಬಂದರೆ
ಪ್ರಜೆ ಪರಿವಾರ ರಾಜ್ಯವ ನಡೆಸಿಕೊಳ್ಳಬಲ್ಲನೇನಯ್ಯಾ?
ಅಜ್ಞಾನಗುಣ ಮಾಯಕ ಹರಿವನಕ
ಸುಜ್ಞಾನ ಸಂಸಾರವುಂಟೇನಯ್ಯಾ?
ಜೀವನ ಬುದ್ಧಿಗುಣವುಳ್ಳನಕ್ಕ ಪರಮಾತ್ಮನ ಬೋಧೆಗೆ ಹರಿಯೆ
ಸ್ವಸ್ಥಿರ ಚಿತ್ತನಯ್ಯಾ।
ಸಂಸಾರ ಮಾಯೆ ಪ್ರಾಣವಾಗಿಪ್ಪವಂಗೆ ನಿಃಸಂಸಾರವುಂಟೇನಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥ ಪ್ರಭುವೆ.

ತನುವೆಂಬ ಹೊಲದೊಳು ಜೀವವೆಂಬ ಒಕ್ಕಲಿಗ,
ಅಜ್ಞಾನವೆಂಬ ಕೂರಿಗೆ ಪಂಚೇಂದ್ರಿಯವೆಂಬ ತಾಳುಗಳಿಗೆ
ಪಂಚವಿಷಯವೆಂಬ ಸೆಡ್ಡಿಯ ಕೋಲನಿಕ್ಕಿ,
ಚಿತ್ತವೆಂಬ ಸೆಡ್ಡಿಯ ಬಟ್ಟಲಿಗೆ ಬುದ್ಧಿಯೆಂಬ ಹಸ್ತದಿಂದ
ದಶವಾಯುಗಳೆಂಬ ಬೀಜವ ಬಿತ್ತಿ,
ಕರುಣಾ ದಿಗುಣವೆಂಬ ಬೆಳೆಯ ಬೆಳೆಯುತ್ತಿರೆ,
ಮನವಿಕಾರಭ್ರಮೆಯಿಂ ಮೂಷಕನ ಹಿಂಡು ಕವಿಯೆ,

ಅದಕ್ಕೆ ರೋಷವೆಂಬ ಬಡಿಗಲ್ಲನೊಡ್ಡಿ,
ಆಶೆಯೆಂಬ ಜಂಪವಿಟ್ಟು,
ಕೋಪವೆಂಬ ಬಡಿಗಲ್ಲು ಮೇಲೆಬೀಳೆ,
ಒದ್ದಾಡಿ ಒರಲೊರಲಿ ಸಾಯುತಿರೆ,
ತನುವೆಂಬ ಹೊಲನ ಕೆಡಿಸಿ, ಜೀವವೆಂಬ ಒಕ್ಕಲಿಗನ ಕೊಂದು,
ಅಜ್ಞಾನವೆಂಬ ಕೂರಿಗೆಯನುರುಹಿ,
ಪಂಚೇಂದ್ರಿಯವೆಂಬ ತಾಳ ಮುರಿದು,
ಪಂಚವಿಷಯವೆಂಬ ಸೆಡ್ಡಿಯ ಕೋಲ ಸೀಳಿಬಿಟ್ಟು,
ಚಿತ್ತವೆಂಬ ಸೆಡ್ಡಿಯ ಬಟ್ಟಲನೊಡೆದು,
ಬುದ್ಧಿಯೆಂಬ ಹಸ್ತದ ಸಂದ ತಪ್ಪಿಸಿ,
ದಶವಾಯುಗಳೆಂಬ ಬೀಜವ ಹುರಿದು
ಕರಣೇಂದ್ರಿಯವೆಂಬ ಬೆಳೆಯ ಕೊಯಿದು ಕೆಡಿಸಿ,
ನಿಃಕರಣಾಗಿ ನಿಜಲಿಂಗಪಡವ ಸಾರಿಪ್ಪ ಶರಣಂಗೆ
ನಮೋ ನಮೋ ಎಂಬೆನಯ್ಯಾ,
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥ ಪ್ರಭುವೆ.

ಈ ವಚನಕಾರರಲ್ಲದೆ ಕೇವಲ ಅಂಕಿತವಿರುವ ಅಧಿಕೃತ 'ಅಜ್ಞಾತ ಶರಣರು' ಹೆಚ್ಚಾಗಿ ಈ ಯುಗಕ್ಕೆ ಸೇರಿದವರಾಗಿದ್ದಾರೆ. ಹೀಗಾಗಿ ಇವರ ವಚನಗಳನ್ನೂ ಇಲ್ಲಿ ಸಮಾವೇಶಗೊಳಿಸಬೇಕಾಗುತ್ತದೆ. ಸದ್ಯ ಉಪಲಬ್ಧವಿರುವ ಇಂತ ಅಜ್ಞಾತ ಶರಣರ ಅಂಕಿತ ಹಾಗೂ ವಚನ ಸಂಖ್ಯೆಗಳು ಹೀಗಿರುತ್ತವೆ : ಅಖಂಡ ಮಂಡಲೇಶ್ವರ - ೧, ಅನುಗಣೇಶ್ವರ - ೧, ಅಪ್ರಮಾಣ ಗುಹೇಶ್ವರ - ೧, ಅಶ್ವಥರಾಮ - ೧, ಆನಂದ ಸಿದ್ಧೇಶ್ವರ - ೨, ಈಶ್ವರೀಯ ವರದ ಚೆನ್ನರಾಮ - ೧, ಏಕಾಂತವೀರ ಸೊಡ್ಡಳ -೨, ಏಕೋರಾಮೇಶ್ವರಲಿಂಗ - ೧, ಕಲ್ಲಯ್ಯದೇವರು - ೧, ಕುರುಂಗಲಿಂಗ - ೨, ಗಾರ್ಗೇಶ್ವರಲಿಂಗ - ೧, ಗುರುವರದ ವಿರೂಪಾಕ್ಷ - ೧, ಗುಹೇಶ್ವರಲಿಂಗದಲ್ಲಿ ಪ್ರಭುವೆ ಸಾಕ್ಷಿಯಾಗಿ ಬಸವಪ್ರಿಯ ಕೂಡಲಸಂಗಮದೇವ - ೬, ಚೆನ್ನರಾಮೇಶ್ವರಲಿಂಗ-೧, ಜಂಗಮಲಿಂಗ ಪ್ರಭುವೆ - ೧೮, ಜ್ಯೋತಿ ಸಿದ್ದೇಶ್ವರ - ೧, ತುಂಬೆಯಾಚಲಿಯ ಮನಃಪ್ರಿಯ ಚೆನ್ನಬಂಕೇಶ್ವರ-೧, ತ್ರೈಲೋಚನ ಮನೋಹರ ಮಾಣಿಕೇಶ್ವರಲಿಂಗ - ೭, ತ್ರಿಲೋಚನ ಶಂಕರ - ೧, ನಂಜುಂಡ ಶಿವ - ೨೪, ನಾಚೇಶ್ವರ - ೧, ನಿಃಕಳಂಕ ಚೆನ್ನಮಲ್ಲಿಕಾರ್ಜುನ ಪ್ರಭುವೆ - ೧, ನಿಜಗುರು ನಿರಾಲಂಬ ಪ್ರಭುವೆ - ೪೧, ನಿಜಗುರು ಶಾಂತಮಲ್ಲಿಕಾರ್ಜುನ - ೨, ನಿಜಮುಕ್ತಿ ರಾಮೇಶ್ವರ - ೧, ನಿಧನಪ್ರಿಯ ರಾಮೇಶ್ವರ - ೧, ನಿರಾಲಯ ನಿಜಗುರು - ೧, ಶಾಂತೇಶ್ವರ - ೧, ನಿಃಕಳಂಕ ಚೆನ್ನಸೋಮೇಶ್ವರ - ೧, ಬಸವಣ್ಣಪ್ರಿಯ ಧರ್ಮೇಶ್ವರ - ೧, ಬಸವೇಶ್ವರ - ೧, ಭೀಮಬಂಕೇಶ್ವರ - ೧, ಮರ್ಕಟೇಶ್ವರ - ೧, ಮಹಾಮಹಿಮ ವೀರೇಶ್ವರ - ೧, ಮಹಾಘನ ಪ್ರಸಿದ್ಧ ಪ್ರಸನ್ನ ಸಂಗಮೇಶ್ವರ - ೧, ಮಹಾಲಿಂಗ ವೀರರಾಮೇಶ್ವರ - ೧, ಮಹಾಲಿಂಗ ಶಶಿಮೌಳಿ ಸದಾಶಿವ - ೯, ವರದ ಸೋಮನಾಥ - ೧, ವಿಶ್ವಪತಿ - ವಿಶ್ವನಾಥ - ೧, ವೈನಿಪುರದ ಸಂಗಮೇಶ್ವರ - ೧, ವೈದ್ಯನಾಥೇಶ್ವರ - ೧, ಶಂಭು ಮಹೇಶ್ವರ - ೧, ಶ್ರೀಗುರು ಪ್ರಭುಸ್ವಾನೀಶ್ವರ - ೨, ಶ್ರೀ ಮುಕ್ತಿರಾಮೇಶ್ವರ - ೧, ಶ್ರೀ ಬಸವಲಿಂಗ - ೨, ಶಾಂತವೀರೇಶ್ವರ - ೮೮, ಸಂಗಮನಾಥ - ೧, ಸತ್ಯಕರಂಡಮೂರ್ತಿ ಸದಾಶಿವಲಿಂಗ - ೧, ಸದ್ಗುರು ಚೆನ್ನಮಲ್ಲಿಕಾರ್ಜುನ - ೨, ಸದ್ಗುರು ಶಂಭು ಸೋಮೇಶ್ವರ - ೧, ಸದ್ಗುರು ಪ್ರಿಯ ಶಿವಸಿದ್ಧರಾಮೇಶ್ವರ - ೧, ಸರ್ವೇಶ್ವರಲಿಂಗ - ೧, ಸೋಮಭೀಮೇಶ್ವರಲಿಂಗ - ೧, ಸೋಲಗುರುರಾಯ - ೧, ಹಾಟಕೇಶ್ವರಲಿಂಗ - ೧.

ಈ ಐವತ್ತುನಾಲ್ಕು ಜನ 'ಅಜ್ಞಾತ ಶರಣ'ರ ೧೯೦ ವಚನಗಳು ಸದ್ಯ ಲಭಿಸುತ್ತಿವೆ. ವಚನಶಿಲ್ಪ, ವಿಷಯ. ವಿವೇಚನೆಗಳ ದೃಷ್ಟಿಯಿಂದ ಇವು ಮಹತ್ವದವುಗಳಾಗಿರುತ್ತವೆ.

ಒಟ್ಟಿನಲ್ಲಿ ಏಳುನೂರೊಂದು ವಿರಕ್ತೋತ್ತರ ಯುಗದ ಈ ಶರಣರು ಹಾಗೂ ಇವರ ವಚನಗಳ ವಿವೇಚನೆಯಿಂದ ವ್ಯಕ್ತವಾಗುವ ಸಂಗತಿಗಳನ್ನು ಹೀಗೆ ಸಂಗ್ರಹಿಸಿ ಹೇಳಬಹುದಾಗಿದೆ :

- ಹನ್ನೆರಡನೆಯ ಶತಮಾನದ ವಚನ ರಚನಾ ಪರಂಪರೆ ಮುಂದುವರಿದಿದೆ.
- ಬಸವೋತ್ತರ ಯುಗದ ವಚನ ಸಾಹಿತ್ಯದ ವ್ಯಾಪ್ತಿ ತೋಂಟದ ಸಿದ್ಧಲಿಂಗ ಶಿವಯೋಗಿಗಳಿಂದ ಹರ್ಡೇಕರ ಮಂಜಪ್ಪನವರವರೆಗೆ ಹರಡಿಕೊಂಡಿದ್ದರೂ ಈ ಯುಗದ ವಚನ ಸಾಹಿತ್ಯದ ಘಟ್ಟವನ್ನು -

  ೧) ನೂರೊಂದು ವಿರಕ್ತರ ಯುಗ

  ೨) ಏಳುನ್ನೂರೊಂದು ವಿರಕ್ತರ ಯುಗ

  ೩) ಏಳುನೂರೊಂದು ವಿರಕ್ತೋತ್ತರ ಯುಗವೆಂದು ಕರೆಯಬಹುದಾಗಿದೆ.
- 'ಏಳುನೂರೊಂದು ವಿರಕ್ತೋತ್ತರ ಯುಗ'ದಲ್ಲಿ ಇಲ್ಲಿಯ ವಚನಕಾರರನ್ನು ಪರಿಗಣಿಸಿರುವುದು ಸೂಕ್ತ ಹಾಗೂ ನ್ಯಾಯಸಮ್ಮತವೆನಿಸುತ್ತದೆ.
- ಈ ಸಮೀಕ್ಷೆಯಲ್ಲಿ ೧೭ ರಿಂದ ೧೯ನೆಯ ಶತಮಾನದ ವಚನಕಾರರಿದ್ದಾರೆ.
- ಹದಿನಾರನೆಯ ಶತಮಾನದ ತೋಂಟದ ಸಿದ್ಧಲಿಂಗ ಶಿವಯೋಗಿಗಳಂತೆ ನಾಯಕ ವ್ಯಕ್ತಿ. ಶಿಷ್ಯ ಪರಂಪರೆಯ ವಚನಕಾರರು ತೀರ ಕಡಿಮೆ.
- ವಚನಕಾರರು ಅನುಭಾವಿಗಳೂ ಶಿವಯೋಗಿಗಳೂ ಆಗಿದ್ದುದರಿಂದ ಅಂದಿನ ಕಾಲದ ಪ್ರತಿಯೊಂದು ಗ್ರಾಮವೂ ಕಲ್ಯಾಣ, ವಿಜಯಕಲ್ಯಾಣ, ಧರ್ಮ ಕಲ್ಯಾಣ, ಕಡೆಯ ಕಲ್ಯಾಣವೆನಿಸಿದ್ದವು.
- ಸಾಂಘಿಕ ನಾಯಕತ್ವ, ಅನುಭವ ಮಂಟಪದಂಥ ಸಾಮೂಹಿಕ ವೇದಿಕೆ ಅತ್ಯಂತ ಕಡಿಮೆ.
- ಇಲ್ಲಿಯ ವಚನಗಳಲ್ಲಿ ವೀರಶೈವ ತತ್ವಗಳ ಪ್ರತಿಪಾದನೆ ಅಧಿಕವಿದೆ.
- ಹೆಚ್ಚಿನ ಸಂಖ್ಯೆಯ ವಚನಕಾರರ ವಚನಗಳಲ್ಲಿ 'ಸ್ಥಲ ಸಂಯೋಜನೆ' ಕಂಡುಬರುವುದಿಲ್ಲ.
- ವಚನಸಂಗ್ರಹ - ಸಂಕಲನ - ಸಂಪಾದನೆಗಳು ಕಾಣಿಸುವುದಿಲ್ಲ.
- ಆಯಾ ಪ್ರದೇಶದ ಅನುಭಾವಿ, ಶಿವಯೋಗಿ, ಶರಣ, ಮಠಾಧಿಪತಿ, ಮಹಾತ್ಮರಿಂದ ವಚನ ರಚನೆ ಕಾರ್ಯ ನಡೆದಿದೆ.
- ಬಸವೋತ್ತರ ಯುಗದಲ್ಲಿ ವಿಶೇಷವಾಗಿ ಏಳುನೂರೊಂದು ವಿರಕ್ತೋತ್ತರಯುಗ'ದಲ್ಲಿ ಇಷ್ಟದೈವಕ್ಕಿಂತ ಗುರುವಿನ ಹೆಸರೇ ವಚನಾಂಕಿತಗಳಾಗಿರುತ್ತವೆ.
- ವಚನಗಳು ಹೆಚ್ಚಾಗಿ ಸಂಬೋಧನೆ ರೂಪದಲ್ಲಿರುತ್ತವೆ.
- ಷಟ್‌ಸ್ಥಲ ವಿವೇಚನೆಗಿಂತ ಅಷ್ಟಾವರಣ, ಪಂಚಾಚಾರ ಹಾಗೂ ನೀತಿಬೋಧೆಯ ನಿರೂಪಣೆಗೆ ಅಧಿಕ ಪ್ರಾಶಸ್ತ್ಯ ಪ್ರಾಪ್ತವಾಗಿದೆ.
- ಕಡಕೋಳ ಮಡಿವಾಳೇಶ್ವರ, ಕುಷ್ಟಗಿ ಕರಿಬಸವೇಶ್ವರ, ಹೇಮಗಲ್ ಹಂಪ, ದೇಶಿಕೇಂದ್ರ, ಸಂಗನ ಬಸವೇಶ್ವರರ ವಚನಗಳು ಚೆನ್ನಾಗಿದ್ದು, ಹನ್ನೆರಡನೆಯ ಶತಮಾನದ ವಚನಕಾರರನ್ನು - ವಚನ ಶಿಲ್ಪವನ್ನು ಹೋಲುತ್ತವೆ.
- ಧರ್ಮ, ತತ್ವ, ವ್ಯಕ್ತಿಗಳು ಅರ್ಥ ಕಳೆದುಕೊಳ್ಳುತ್ತಿದ್ದ ಕಾಲವಿದಾಗಿದ್ದಿತು.
- ಹೆಚ್ಚಿನ ವಚನಗಳಲ್ಲಿ ಸಮಕಾಲೀನ ಸಾಮಾಜಿಕ ಅಂಶಗಳು ಇಲ್ಲವೆನ್ನುವಷ್ಟು ಕಡಿಮೆ ಪ್ರಮಾಣದಲ್ಲಿರುತ್ತದೆ.
- ಕೆಲವು ವಚನಕಾರರ ವಚನಗಳ ಮೇಲೆ ಹನ್ನೆರಡನೆಯ ಶತಮಾನದ ವಚನಕಾರರ ದಟ್ಟ ಪ್ರಭಾವ ಆಗಿರುವುದು ಕಂಡುಬರುತ್ತದೆ.

- ಹೆಚ್ಚಿನ ವಚನಗಳಲ್ಲಿ ಕಾವ್ಯಾಂಶ, ಗೇಯಾಂಶ ಇರುವುದು.
- ವಚನಗಳಲ್ಲಿ ಸರಳ ಹಾಗೂ ಗದ್ಯಾತ್ಮಕವಾದ ನೀರಸ ನಿರೂಪಣೆ, ನೇರ ಅಭಿವ್ಯಕ್ತಿ, ಸಮಕಾಲೀನ ಆತ್ಮೀಯ ಭಾಷೆ ಕಾಣುತ್ತೇವೆ.
- ಅರ್ಥ ಸಂದಿಗ್ಧತೆ, ವಾಕ್ಯ ಸಂಯೋಜನ ಕ್ಲಿಷ್ಟತೆ ಆಗಾಗ ಕಾಣಿಸಿಕೊಳ್ಳುತ್ತವೆ. ಬಹಳಷ್ಟು ವಚನಗಳ ಶಿಲ್ಪ ಬಂಧುರವಾಗಿರುವುದಿಲ್ಲ. ಶೈಥಿಲ್ಯ, ಗದ್ಯಾತ್ಮಕ ವಿವರಣೆ ಇವುಗಳ ಪ್ರಧಾನ ಲಕ್ಷಣ.
- ಹನ್ನೆರಡನೆಯ ಶತಮಾನದ ಶಿವಶರಣರ ಸ್ತೋತ್ರವಿದ್ದರೂ ಸಮಕಾಲೀನ ಶರಣರ ಉಲ್ಲೇಖವಿರುವುದಿಲ್ಲ.
- ಈ ವಚನಕಾರರ ವಚನಗಳ ಹಸ್ತಪ್ರತಿ ಸಂಖ್ಯೆ ತೀರ ಕಡಿಮೆ, ಏಕೈಕ ಹಸ್ತಪ್ರತಿಗಳೇ ಹೆಚ್ಚಾಗಿರುತ್ತವೆ.
- ಬೆಡಗಿನ ವಚನಗಳ ಸಂಖ್ಯೆಯೂ ಅಧಿಕವಾಗಿದ್ದು, ಇವುಗಳ ವೈಶಿಷ್ಟ್ಯವನ್ನು ಗುರುತಿಸಬೇಕಾಗಿದೆ.
- ಸಮಾಜಮುಖಿ ಧೋರಣೆ, ಸಾಮಾಜಿಕ ಚಿಂತನೆಗಳಿರುತ್ತವೆ.
- ಧಾರ್ಮಿಕ, ನೈತಿಕ ತಳಹದಿಯ ಸಮಾಜ ನಿರ್ಮಾಣದ ಉದ್ದೇಶವಿದೆ.
- ವ್ಯಕ್ತಿ - ವ್ಯಕ್ತಿತ್ವಗಳ ವಿಕಾಸದಿಂದ ಸಮಾಜ ವಿಕಾಸ ಸಾಧ್ಯ.
- ಈ ವಚನಕಾರರ ವ್ಯಕ್ತಿತ್ವ ವಿಕಾಸ ಚಿಂತನೆ, ಸಾಮಾಜಿಕ - ಧಾರ್ಮಿಕ - ನೈತಿಕ ಕಾಳಜಿ ಗಮನಿಸುವಂಥವುಗಳಾಗಿವೆ.
- ಅಂತರಂಗ - ಬಹಿರಂಗ ಶುದ್ಧಿಗಳಿಂದ ಬದುಕು - ಸಮಾಜ ಜೀವನಗಳ ಸಾಫಲ್ಯ ಸಾಧ್ಯ.
- ಸಾಮಾಜಿಕ ಪಿಡುಗು ಹಬ್ಬಿಸುವ ಕಪಟ ವ್ಯಕ್ತಿಗಳ ಕಟುವಾದ ದೂಷಣೆ ಇದೆ.
- ವಚನಕಾರ್ತಿಯರು ಕಂಡುಬರುವುದಿಲ್ಲ.
- ಇವು ನಮ್ಮ ಪ್ರಾಚೀನ ಸಂಸ್ಕೃತಿಯ ಜೀವಂತ ಪಳೆಯುಳಿಕೆಗಳಾಗಿವೆ.
- ವಚನಗಳ ಭಾಷಿಕ, ಸಾಹಿತ್ಯಕ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಅಧ್ಯಯನ, ಪದಕೋಶ ರಚನೆ ಕಾರ್ಯ ನೆರವೇರಬೇಕು.
- ಈ ವಚನಕಾರರ ಇತರ ಸಾಹಿತ್ಯ (ಸ್ವರವಚನ ಇತ್ಯಾದಿ) ಪ್ರಕಾರಗಳನ್ನೂ ಗುರುತಿಸಬೇಕಾಗಿದೆ.
- ಕೆಲವು ವಚನಕಾರರ ಇನ್ನೂ ಹೆಚ್ಚಿನ ವಚನಗಳು ಲಭಿಸುವ ಸಾಧ್ಯತೆ ಇದೆ.
- ಇಲ್ಲಿಯ ವಚನಕಾರರ ಕಾರ್ಯಕ್ಷೇತ್ರದಲ್ಲಿ ಸಂಚರಿಸಿ, ಇನ್ನೂ ಹೆಚ್ಚಿನ ಮಾಹಿತಿ ಪಡೆಯಬಹುದು. ಇವರ ಹೆಸರಿನಲ್ಲಿರುವ ಸ್ಮಾರಕ, ಹಸ್ತ ಪ್ರತಿಶೋಧ ಸಂರಕ್ಷಣೆ ಕೆಲಸ ಕೈಕೊಳ್ಳುವಂತಾಗಬೇಕು.
- ಈ ಯುಗದ ಇನ್ನೂ ಅನಾಮಧೇಯ, ಅಪ್ರಕಟಿತವಾಗಿರುವ ವಚನಗಳು ಬೆಳಕಿಗೆ ಬರುವಂತಾಗಬೇಕು.

ವಿದ್ವಾಂಸರಿಂದ, ಸಾಹಿತ್ಯ ಕ್ಷೇತ್ರದಲ್ಲಿ ತೀರ ಅಲಕ್ಷಿತರಾದ ಈ ವಚನಕಾರರ ವಚನಗಳ ಸಮಗ್ರ ಅಧ್ಯಯನದತ್ತ ಈ ಮೂಲಕ ತೀವ್ರ ಗಮನ ಸೆಳೆದಿರುವುದು ಸಕಾಲಿಕ ಹಾಗೂ ಸೂಕ್ತವೆನಿಸುತ್ತದೆ. ಹೀಗೆ ಏಳುನೂರೊಂದು ವಿರಕ್ತೋತ್ತರಯುಗದ ಶರಣರು ಹಾಗೂ ವಚನಸಾಹಿತ್ಯದ ವಿವೇಚನೆಯ ಮೂಲಕ ಇಲ್ಲಿ ಹದಿನೇಳು - ಹದಿನೆಂಟು - ಹತ್ತೊಂಭತ್ತನೆಯ ಶತಮಾನದ ವಚನಕಾರರು ಮತ್ತು ವಚನಗಳ ಸ್ಥೂಲವಾದ ಪರಿಚಯ ಮಾಡಿಕೊಡಲಾಗಿದೆ. ಈ ದಿಶೆಯಲ್ಲಿ ತಲಸ್ಪರ್ಶಿಯಾದ ಅಧ್ಯಯನ ಇನ್ನೂ ನಡೆಯುವ ಅವಶ್ಯಕತೆಯಿದೆಯೆಂದು ಸೂಚಿಸಬಯಸುತ್ತೇನೆ.

ಚಂದ್ರವೀಥಿ : ಒಂದು ನೋಟ

೦೦೦೦೦೦೦೦

'ಸಂಸಾರದ ಸರಸ ವಿರಸಗಳು ಇಷ್ಟು ದೊಡ್ಡ ಪ್ರಮಾಣದಲ್ಲಿ ಇಂಥದೊಂದೇ ಒಂದು ಛಂದೋರೂಪದಲ್ಲಿ ಕೇವಲ ಚಿತ್ತವೃತ್ತಿಯ ಚಿತ್ರವಿಚಿತ್ರಗಳ ವ್ಯಾಪಾರ ವಿಶೇಷಗಳಾಗಿ ಒಬ್ಬ ಕವಿಯ ನಿರೂಪಣಗಳಾಗಿ ಚಿತ್ರತವಾಗಿರುವುದು ಗಮನಾರ್ಹ ವಿಷಯವಾದೀತು' ಎಂದು ಪರಮೇಶ್ವರ ಭಟ್ಟರು ಚಂದ್ರವೀಥಿಯ ಮುನ್ನುಡಿಯಲ್ಲಿ ಹೇಳಿರುವುದು ಚಂದ್ರವೀಥಿಯನ್ನು ಅರ್ಥಮಾಡಿಕೊಳ್ಳುವಲ್ಲಿ ಸಹಾಯಕವಾಗುವಂತಹ ವಿಷಯ. ಸಂಸ್ಕೃತದ ಗಾಥಾಸಪ್ತಶತಿಯಂತಿರುವ ಚಂದ್ರವೀಥಿಯಲ್ಲಿ ಕವಿಯೇ ಹೇಳಿರುವಂತೆ 'ಈ ಶತಮಾನದ ಗಾಳಿ ನೀರು ಬೆಳಕುಗಳ ನೆರವಿನಿಂದ ಬದುಕಿ ಬಾಳುತ್ತಿರುವ ಕವಿ ಕಂಡುಂಡ ಗತಿಗಳು, ಸಂಗತಿಗಳು' ಇದ್ದು ಇವು ಈ ಮುಕ್ತಕಮಾಲೆಯನ್ನು ವಿಶಿಷ್ಟವಾದ ಕವನ ಸಮುಚ್ಚಯವನ್ನಾಗಿ ಮಾಡುವುದರಲ್ಲಿ ಸಮರ್ಥವಾಗಿವೆ.

ಚಂದ್ರವೀಥಿಯಲ್ಲಿ ನಾವು ಕಾಣುವ ಜನರು ನಮ್ಮ ಸಮಕಾಲೀನರು. 'ಈ ಚಂದ್ರವೀಥಿಗೆ ರಸಿಕರೆ ವಿಬುಧರೆ ಬನ್ನಿರಿ ಕವಿಸಹೃದಯರೆ ನಲ್ಲನಲ್ಲೆಯರಿಲ್ಲಿ ವಿಹರಿಸುತ್ತಿರುವರು ನಮ್ಮ ಸಮಕಾಲೀನರಿವರು' ಎಂಬ ಸಾಲುಗಳು ಈ ವಿಷಯವನ್ನು ಹೇಳಿ ಕಾವ್ಯವನ್ನು ನಮಗೆ ಹತ್ತಿರವಾಗಿಸುತ್ತವೆ. ಈ ಕಾವ್ಯ 'ಹಿತವಿದು ಸತಿಪತಿಯರಿಗೆ'. ಆದ್ದರಿಂದ ಕವಿಯು 'ಸತಿಪತಿಯರು ಬನ್ನಿರೀ ಬನದಂಚಿಗೆ ಕಾವ್ಯಕಾಸಾರದ ಕರೆಗೆ' ಎಂದು ಕರೆಯುವುದು ವಿಹಿತವಾಗಿದೆ. ಈ ಕಾವ್ಯದಲ್ಲಿ 'ಮನ್ಮನೋರಂಗದೊಳಾಗಾಗ ಸುಳಿದರು ಇವರು ನಾಯಕ ನಾಯಿಕೆಯರು. ಇವರಾಟಪಾಟಗಳಿಗೆ ನುಡಿಗನ್ನಡಿ ಹಿಡಿದಿರುವೆನು ಬನ್ನಿ ನೋಡಿ' ಎಂದು ಕವಿಯು ಕರೆಯುವುದನ್ನು ನೋಡಿದಾಗ ಕಾವ್ಯ ವಸ್ತುವು ಸ್ಫುಟವಾಗುತ್ತದೆ.

AF

ಈ ಮೇಲಿನ ಸಾಲುಗಳೆಲ್ಲ ಕಾವ್ಯ ಪೀಠಿಕೆಯಾಗಿ ಚಂದ್ರವೀಧಿಯನ್ನು ನಮಗಾಗಿ ತೆರೆಯುತ್ತವೆ.

ಕಾವ್ಯದ ಪ್ರಾರಂಭದಲ್ಲಿ, ಕಾಳಿದಾಸನು ಕ್ವಸೂರ್ಯ ಪ್ರಭವೋ ವಂಶಃಕ್ವಚಾಲ್ಪ ವಿಷಯಾ ಮತಿಃ ಎನ್ನುವಂತೆ 'ಆ ಹಾಲನವನೆಲ್ಲಿ ಈ ಬಾಲನಿವನೆಲ್ಲಿ' ಎಂದೂ ಆನೆ ಆಡಿಗೆ ಸಮನೆ ಎಂದೂ ಭಟ್ಟರೇ ಹೇಳಿ ತಮ್ಮ ವಿನಯಶೀಲತೆಯನ್ನು ತೋರಿಸಿಕೊಳ್ಳುತ್ತಾರೆ. ಹಿಂದಿನ ಕವಿಗಳ ವಿನಯಶೀಲತೆಯ ಪರಂಪರೆ ಇಲ್ಲಿ ಮುಂದುವರೆದಿದೆ.

ಚಂದ್ರವೀಧಿಯ ಪ್ರತಿಯೊಂದು ಮುಕ್ತಕವೂ ಅಲಂಕಾರಭೂಯಿಷ್ಠ. ವಕ್ರೋಕ್ತಿ, ಧ್ವನಿಗಳು ತುಂಬಿರುವ ಈ ಕಾವ್ಯದಲ್ಲಿ ವಿಹರಿಸಿದರೆ ನಿಜವಾದ ಚಂದ್ರವೀಧೀವಿಹಾರ ಮಾಡಿದಂತೆಯೇ. ಆಗಸದ ನಡುವೆ ಚಂದ್ರ, ಸುತ್ತ ಸಹಸ್ರಾರು ನಕ್ಷತ್ರಗಳು, ಎಲ್ಲೆಲ್ಲೂ ಒಂದು ರೋಮಾಂಚಕರವಾದ ರಹಸ್ಯಮಯ, ಕನಸಿನ ಲೋಕ.

ಇದು ಚಂದ್ರವೀಧಿಯಾದರೂ ಇದು ನಮ್ಮ ನೆಲದ ಬೀದಿಯೇ, ಆಕಾಶಗಂಗೆಯ ನೀಹಾರಿಕಾ ಮಾರ್ಗವಲ್ಲ. ಜೀವನಾನುಭವದ ಸಂಗತಿಗಳ ಸರಸ ಅಭಿವ್ಯಕ್ತಿಯು ಇಲ್ಲಿದ್ದು ನಮಗೆ ತೀರ ಹತ್ತಿರವಾಗಿದೆ. ನಮ್ಮದೇ ನೆಲದಲ್ಲಿ ಈ ಕಾವ್ಯಮೆರವಣಿಗೆ ಸಾಗುತ್ತದೆ. ಇದರಲ್ಲಿ ಎಲ್ಲೂ ಭಾವವನ್ನು ಉನ್ಮಾದದ ಘಟ್ಟಕ್ಕೆ ಕೊಂಡೊಯ್ಯದೆ, ನೆಲದ ಸ್ಪರ್ಶವನ್ನು ಬಾರಿಬಾರಿಗೂ ಜ್ಞಾಪಿಸುತ್ತಾ ಎಲ್ಲದರಲ್ಲೂ ಸಂತೋಷವನ್ನು ಕೊಡುತ್ತಾ ಪದ್ಯಗಳು ಸಾಗುತ್ತವೆ. ನಮ್ಮೊಳಗೇ, ನಮ್ಮ ಮನೆಯೊಳಗೇ ಓಡಾಡಿಕೊಂಡಿರುವ ಆಮೋದವಿನೋದಗಳ ಭಾವಗಳು, ನಮ್ಮನ್ನು ಚಕಿತಗೊಳಿಸುತ್ತಾ ಇಲ್ಲಿ ಸಾಗುತ್ತವೆ.

ಈ ಕಾವ್ಯದಲ್ಲಿ -

ನಗುವಂತೆ ತೋರಿದಳಾದರು ನಗಲಿಲ್ಲ
ಹಾಗೆಯೆ ಹೋದಳು ಮನೆಗೆ
ನಕ್ಕರೆ ಹೇಗಿರುವಳೊ ಕಾಣೆ ಅದನೆಲ್ಲ
ಊಹೆಗೆ ಬಿಟ್ಟಳು ನನಗೆ

ಎಂದು ಮತ್ತಕಾಶಿನಿಯೊಬ್ಬಳ ಬಗ್ಗೆ ಹೇಳುವ ಭಟ್ಟರು ಹಲವಾರು ಕಡೆ ತಮ್ಮ ಮುಕ್ತಕಗಳಲ್ಲಿ ಎಷ್ಟೋ ವಿಷಯಗಳನ್ನು ನಮ್ಮ ಊಹೆಗೇ ಬಿಟ್ಟು ನಗುತ್ತಾ ಮುಂದೆ ಹೋಗುತ್ತಾರೆ. ನಾವು ಸುಂದರವಾದ ಅರ್ಥದ ಬೆಚ್ಚಗಿನ ಹೊದಿಕೆಯಲ್ಲಿ ರೋಮಾಂಚಗೊಳ್ಳುವ ಅವಕಾಶ ಕೊಡುತ್ತಾರೆ.

ಈ ಕಾವ್ಯ ನಭದಿಂದ ಇಳೆಗಿಳಿದು, ನಮ್ಮ ಬೀದಿಯ ನಮ್ಮ ಮನೆಗೂ ಬಂದು ನಮ್ಮ ಜೀವನದ ಭಾಗವಾಗಿ ಬಿಡುವುದು ಇಂಥ ಮುಕ್ತಕಗಳಲ್ಲಿ -

ಬಸ್ಸಿನಿಂದಿಳಿಯುವಂದೂರಾವುದೆಂದೆನು
ನುಡಿದಳು ಮುತ್ತಿನ ಕೊಪ್ಪ
ಇದೆ ಊರ ಹೆಸರಾದರೀಕೆಯ ಹೆಸರೇನು
ಕೇಳದ ನಾನೆಂಥ ಬೆಪ್ಪ

ಬಸ್ಸು ಇಂದಿನದು. ನಮ್ಮ ಜೀವನದ ಅನಿವಾರ್ಯ ಅಂಗ ಇದು. ಇಂದೂ ಕೂಡ ಮುಕ್ತಕದೊಳಗೆ ತೂರಿಕೊಂಡಾಗ ಕಾವ್ಯವಸ್ತುವಿನೊಳಗೆ ಅಂತರ್ಗತವಾಗುತ್ತದೆ.

ಬಸ್ಸು ಮಾತ್ರವಲ್ಲ, ಕಾಫಿ ಕೂಡ ರಸಪರಿಪೋಷಕವಾಗಬಲ್ಲುದು. ಕಾಫಿ, ಸಿಹಿಕಹಿಗಳು ಸಮ್ಮಿಳಿತವಾದ, ನಮ್ಮ ಜೀವನದ ಅನಿವಾರ್ಯ ಅಂಗವಾಗಿರುವ ಪೇಯ. ನಮಗೆ ಉಪಾಯ, ಉಪೇಯ, ಎಲ್ಲವೂ ಆಗಿರುವ, ಚಟವಾಗಿಬಿಡುವ ಅಪಾಯವಿರುವ

ಪಾನೀಯ. ಸೂರ್ಯೋದಯದ ಸಮಯದಲ್ಲಿ ನಮಗೆ ನಾವೇ ಕೊಟ್ಟುಕೊಳ್ಳುವ ಒಂದು ರೀತಿಯ ಅರ್ಘ್ಯ, ಒಂದು ರೀತಿಯ ಸೋಮರಸ ಸದೃಶವಾದ ಅಮೃತ.

ಕಾಫಿಗೆ ಸಕ್ಕರೆ ಹೆಚ್ಚಾಯಿತೆಂದೆನು
ಅಷ್ಟಕೆ ಇಷ್ಟೇಕೆ ಸಿಟ್ಟೆ
ನಾಲಗೆ ಸಿಹಿಯಾಯಿತಾದರು ಮನವನು
ಸುಮ್ಮನೆ ಕಹಿ ಮಾಡಿಬಿಟ್ಟೆ

ಶೃಂಗಾರಕ್ಕೆ ಕಲ್ಪನೆಯ ಲೋಕಗಳು ಬೇಕಾಗಿಲ್ಲ. ಚಂದ್ರ ನಕ್ಷತ್ರಾದಿಗಳು ಬೇಕಾಗಿಲ್ಲ. ಬಸ್ಸು ಕಾಫಿಗಳನ್ನೇ ಉಪಯೋಗಿಸಿ ಶೃಂಗಾರಸ್ವಾರಸ್ಯಗಳನ್ನು ಸೃಷ್ಟಿಸಬಹುದು. ಯಾವುದೇ ರಸವು ಚಿತ್ತವೃತ್ತಿಗೆ ಸಂಬಂಧಪಟ್ಟಿರುವ ವಿಷಯವಾದ್ದರಿಂದ ಅದರ ಪೋಷಕವಾದ ಬಾಹ್ಯ ಪರಿಕರಗಳು ನಮಗೇ ತೀರಪರಿಚಿತವಾದಾಗ ನಮ್ಮ ಕುತೂಹಲ ಇಮ್ಮಡಿಗೊಳ್ಳುತ್ತದೆ. ಸ್ವಾರಸ್ಯವೂ ಹೆಚ್ಚಾಗುತ್ತದೆ. ಆದರೆ ಈ ಆಧುನಿಕ ಪೋಷಕಪರಿಕರಗಳಿಂದ ಕಾವ್ಯಸೌಂದರ್ಯಕ್ಕೆ ಲೋಪವಾಗದ ಹಾಗೆ ಕವಿಯು ನೋಡಿಕೊಳ್ಳುತ್ತಾ ಹೋಗಿರುವುದೊಂದು ವಿಶೇಷ.

ಉಪಮೆಗೆ, ಉತ್ಪ್ರೇಕ್ಷೆಗೆ ಒಟ್ಟಿನಲ್ಲಿ ಎಲ್ಲ ಅಲಂಕಾರಗಳಿಗೂ ಮೂಲವಾದ ಹೋಲಿಕೆಗೆ ಇಂದಿನ ಸನ್ನಿವೇಶಗಳು, ಕಾವ್ಯಕ್ಕೆ ಪೂರಕವಾಗಲು ಸಾಧ್ಯವೇ ಇಲ್ಲ ಎನ್ನಿಸುವ ವಸ್ತುಗಳು ಚಂದ್ರವೀಧಿಯಲ್ಲಿ ಕಾವ್ಯತ್ವವನ್ನು ಕಳೆದುಕೊಳ್ಳದೆ ಪುಷ್ಟಿಕೊಡಬಲ್ಲವು. ಈ ಮುಕ್ತಕ ನೋಡಿ,

ಕೈಯೊಳಗಿದ್ದಿತು ಶಾಲೆ ಹೊತ್ತಗೆ
ಓದುತ್ತಿದ್ದಳು ಈಕೆ ಆಗ
ರೇಷನ್ನಿನಕ್ಕಿಯ ಚೀಲ ಬಂದಿತು ಕೈಗೆ
ಮದುವೆಯಾಗಿಹಳೀಕೆ ಈಗ

ನಲ್ಲನಲ್ಲೆಯರ ಶೃಂಗಾರದಿಂದ ಜೀವನದ ಸತ್ಯಕ್ಕೆ ರಸಿಕರ ಮನವನ್ನು ರೇಷನ್ನಿನಕ್ಕಿ ಥಟ್ಟನೆ ತರುತ್ತದೆ. ಪ್ರೇಮದ ಕನಸಿನ ಲೋಕದಿಂದ ಮದುವೆಯು ಇನಿಯರಿಬ್ಬರನ್ನೂ ವಾಸ್ತವದ ಪ್ರಪಂಚಕ್ಕೆ ತಂದಾಗ ಎದುರಾಗುವುದು ರೇಷನ್ನಿನಕ್ಕಿಯ ಚೀಲ, ಓಡಿ ನುಗ್ಗಿ ಹತ್ತಬೇಕಾದ ಬಸ್ಸು ಮುಂತಾದುವೇ, ಆದರೆ ಅವು ಭಟ್ಟರ ಕಾವ್ಯದಲ್ಲಿ ಸ್ವಾರಸ್ಯವನ್ನು ಹೆಚ್ಚಿಸಲು ಆಗಾಗ ಉಪಯುಕ್ತವಾಗುವುದೊಂದು ಸ್ವಾರಸ್ಯ.

ಬಸ್ಸನು ಬೇಗನೆ ಹತ್ತುವೆನೆಂದೋಡಿ
ಬರುತಿಹ ತರುಣಿಯ ನೋಡಿ
ತರುಣ ಕಂಡಕ್ಟರು ಬೇಗನೆ ಬರಲಾಕೆ
ಎನ್ನುತ ರೈಟೆನ್ನಬೇಕೆ

ಬಸ್ಸೊಳಗೆ ಕುಳಿತು ಅಥವಾ ಹೊರಗೆ ಕ್ಯೂನಲ್ಲಿ ನಿಂತು ಕವಿಯು ಗಮನಿಸಿರುವ ಈ ಅಂಶ ಮನುಷ್ಯನ ಪ್ರವೃತ್ತಿಯೊಂದನ್ನು ಸ್ವಾರಸ್ಯವಾಗಿ ಬಿಂಬಿಸಿ ನಮ್ಮ ಜೀವನಕ್ಕೆ ತೀರ ಹತ್ತಿರವಾಗುತ್ತದೆ. ಸ್ವಪರಾನುಭವವನ್ನು ಹೇಳುತ್ತಲೆ ಇದು ಅಕಾವ್ಯವಸ್ತುವೊಂದನ್ನು ಕಾವ್ಯವಸ್ತುವಾಗಿಸಿಬಿಡುತ್ತದೆ.

ವಿಪ್ರಲಂಭಕ್ಕೆ ಕೋಗಿಲೆ, ಕಮಲ, ಮಂದಮಾರುತ, ವಸಂತ ಕಾಲಗಳ ಸಹಾಯ ಬೇಕಾಗಿಲ್ಲ, ವಿದ್ಯುತ್ತಿನ ಪಂಕವೇ ಸಾಕು,

ವಿದ್ಯುತ್ತಿನಪಂಕವಾಡುತಲಿದ್ದರು
ತಣಿಯದು ವಿರಹದ ಬೇಗೆ.

ಇಲ್ಲಿ ಮಂದಮಾರುತದ ಹಾಗೂ ಕಮಲದಳಗಳ ಶೀತಸ್ಪರ್ಶದ ಕೆಲಸವನ್ನು ವಿದ್ಯುತ್ತಿನ ಪಂಕವೇ ಮಾಡುತ್ತದೆ. ಹಾಗೆಯೇ 'ಸ್ವೆಟ್ಟರು, ಮಫ್ಲರು ಚಳಿಗೊಂದು ರಕ್ಷೆಯೇ, ತೌರಿಗೆ ಸತಿ ಹೋದ ನಿನಗೆ' ಎಂಬುದರಲ್ಲೂ ನಾವು ಉಪಯೋಗಿಸುವ ಸ್ವೆಟ್ಟರು ಮಫ್ಲರುಗಳೆಲ್ಲ ನಮಗೆ ವಿಪ್ರಲಂಭದ ಸನ್ನಿವೇಶಕ್ಕೆ ಪೂರಕವಸ್ತುಗಳಾಗಿ ಆಪ್ತವಾಗಿ ಬಿಡುತ್ತವೆ, ಸ್ವಾರಸ್ಯವನ್ನು ಹೆಚ್ಚಿಸುತ್ತವೆ.

ಕವಿಯ ನಲ್ಲನು ನಲ್ಲೆಯನ್ನು ಎಲ್ಲೆಡೆಯಲ್ಲೂ ಕಾಣುವುದು ಹೀಗೆ-

ರೈಲೊಳು ಬಸ್ಸೊಳು ಹೋಟಲು ಮನೆಯೊಳು
ಅಂಗಡಿಯೊಳು ಮಹಡಿಯೊಳು
ನಿನ್ನನೆ ಕಾಣುತಲಿರುವೆನೆಲ್ಲೆಡೆಯೊಳು
ಅದ್ವೈತ ಸುಖದ ಸಿದ್ಧಿಯೊಳು

ಆಧುನಿಕ ಸೌಲಭ್ಯಗಳ ಜಗತ್ತನ್ನು ಕಾವ್ಯದೊಳಕ್ಕೆ ತಂದ ಕವಿಯು ಪರಂಪರೆಯನ್ನೂ ಮರೆಯುವುದಿಲ್ಲ. ಈ ಮಣ್ಣಿನಲ್ಲಿ ಬೆಳೆದ ಸಂಸ್ಕೃತಿಯನ್ನು ಹಿನ್ನಲೆಯಲ್ಲಿಟ್ಟುಕೊಂಡು ಅದರ ಮೇಲೆ ಇಂದಿನ ಹೊಸಪ್ರಭಾವದ ಛಾಯೆ ಬಿದ್ದಾಗ ಅದರ ಮೇಲೆ ವ್ಯಾಖ್ಯೆ ಮಾಡಲು ಮರೆಯುವುದಿಲ್ಲ. ಇಲ್ಲಿ ಕವಿಯ ವಿಡಂಬನೆಯು ಸಮಥವಾಗಿ, ಕಾವ್ಯಮಯವಾಗಿಯೇ ಹಾಸ್ಯದ ತೆಳುಹೊದಿಕೆಯೊಡನೆ ಹೊರಹೊಮ್ಮುವುದನ್ನು ಗಮನಿಸಬೇಕು.

ಬಳೆಯಿಲ್ಲ ಕೈಯೊಳು ಹೂವಿಲ್ಲ ಮುಡಿಯೊಳು
ಕುಂಕುಮವಿಲ್ಲ ಹಣೆಯೊಳು
ಚೆಲುವಿಲ್ಲ ತನುವೊಳು ಗೆಲುವಿಲ್ಲ ಮನದೊಳು
ಓದಿದ ನಮ್ಮ ಹೆಣ್ಣವಳು

ಇಲ್ಲಿ ಕವಿಯ ಕೋಪ ಹೆಣ್ಣಿನ ಓದಿನ ಮೇಲಲ್ಲ. ಓದಿದ ಹೆಣ್ಣಿನ ಮಾನಸಿಕ ದಾಸ್ಯದ ಮೇಲೆ, ಹೊಸ ಪ್ರಭಾವಗಳ ಅಂಧಾನುಕರಣದ ಮೇಲೆ. ಆದರೆ 'ಅಜಂತೆಯ ಚಿತ್ರದ ಕನ್ಯೆಯದಾಗಿ ಜಡೆಗಟ್ಟುವ ಪರಿಯ ಕಲಿಯಿಸಿದ ಆ ಕಲೆಯೋಜಳ ಗರಿಮೆಯ ನೆನೆದು ಕೈಮುಗಿಯುತ್ತೇನೆ' ಎನ್ನುವ ಕವಿಯ ದೃಷ್ಟಿ, ಬದಲಾವಣೆಗಳನ್ನು ಗುರುತಿಸುತ್ತ ಅದನ್ನು ಸಮಭಾವದಿಂದ ನೋಡಿ ಅದನ್ನು ಜೀವನದ ಒಂದು ಭಾಗವೆಂಬ ನಿರ್ಲಿಪ್ತತೆಯಿಂದ ನೋಡಿದರೂ, ಅದರ ಬಗ್ಗೆ ಅಸಮ್ಮತಿಯನ್ನು ತೋರಿಸುವ ದೃಷ್ಟಿ, ಆದರೆ ಆ ಬದಲಾವಣೆಗಳೇ ಇಲ್ಲಿ ಕಾವ್ಯಕ್ಕೆ ವಸ್ತುವಾಗಿವೆ.

ಈ ಕೆಳಗಿನ ಮುಕ್ತಕಗಳನ್ನು ಅವುಗಳು ತೆರೆದಿಡುವ ನಮ್ಮದೇ ಜೀವನದ ಸತ್ಯಗಳಿಗಾಗಿ ನೋಡಬೇಕು.

ದೇವರ ನಾಮವ ಹಾಡುವಳಿವಳಾರು
ಮಕ್ಕಳಿಗೆರೆದವಳಾರು
ಮನೆಯನು ಓರಣಗೊಳಿಸಿರುವಿವಳಾರು
ನನ್ನವಳಲ್ಲದಿನ್ನಾರು

ಈ ಮುಕ್ತಕದಲ್ಲಿ ಹೆಮ್ಮೆಪಡುವ ಗಂಡನಾಗಿ ತೋರುವ ಗೃಹಸ್ಥನು ಈ ಮುಂದಿನದರಲ್ಲಿ ಹಣವನ್ನೆಲ್ಲ ಹೆಂಡತಿಯ ಕೈಗೆ ಕೊಟ್ಟು, ವಿಲವಿಲನೆ ಒದ್ದಾಡುವ ಗಂಡನಾಗಿ ತೋರುತ್ತಾನೆ.

ತಿಂಗಳ ಸಂಬಳವೆಲ್ಲವನಿತ್ತನು
ಮುದ್ದಿನ ರಾಣಿಯ ಕೈಗೆ
ಕಾಸುಕಾಸಿಗೆ ಅಂಗಲಾಚುತಿದ್ದನು
ಮುಂದಿನ ತಿಂಗಳವರೆಗೆ

ಎಲ್ಲ ಸಂಸಾರಿಗಳಿಗೂ ಅನ್ವಯಿಸುವ ಸಾಧಾರಣೀಕೃತ ಸನ್ನಿವೇಶ ಇಲ್ಲಿ ಧ್ವನಿತವಾದರೂ ಇದರಲ್ಲಿ ಸೂಕ್ಷ್ಮವಾದ ಹಾಸ್ಯರಸನೆಯಿದೆ. ದಾಂಪತ್ಯದಲ್ಲಿ ಸಾಧಾರಣವಾಗಿ ಗಂಡಂದಿರ ದೂರು ಇದಾದರೂ ಇದು ಸ್ವಯಂಕೃತವಾದ ನ್ಯಾಸವಾದ್ದರಿಂದ ಇದರಲ್ಲಿ ನೋವಿಲ್ಲ. ಈ ದೂರಿನಲ್ಲಿ ಅವಿಶ್ವಾಸದ ದೂರವಿಲ್ಲ. ವಿಶ್ವಾಸದ ನಿಕಟತೆಯೇ ಇಲ್ಲಿ ಕಾಣಿಸುತ್ತದೆ. ಇವೆಲ್ಲ ಪ್ರೀತಿಯ ದೂರುಗಳು. ಇದೇ ಮನೋಭಾವ ಈ ಮುಕ್ತಕದಲ್ಲೂ ಇದೆ :

ಹತ್ತು ವರ್ಷದ ಹಿಂದೆ ಇವಳಾಡುತಿದ್ದುದು
ನೂರು ಮಾತಿಗೆ ಒಂದು ಮಾತು
ನನ್ನೊಂದು ಮಾತಿಗೆ ನೂರನು ತನ್ನದು
ಆಡುವಳಿಂದು ಮುಂದೆಂತು

ಮದುವೆಗೆ ಮುಂಚೆ ಮಾತೆಲ್ಲ ಇವನದು ಮದುವೆಯ ನಂತರ ಮಾತು ಅವಳದು. ಇದೊಂದು ತೆಳು ಹಾಸ್ಯ ಮಾತ್ರ. ವಿವಾಹ ಬಂಧನದಲ್ಲಿ ಕಳೆದುಕೊಳ್ಳುವ ಹಲವು ಸ್ವಾತಂತ್ರ್ಯಗಳ ಬಗ್ಗೆ ಎಲ್ಲರೂ ದೂರಿಕೊಂಡು ಹೇಳುವ ಮಾತುಗಳಿವು. ವಾಸ್ತವವಾಗಿ ನೋಡಿದರೆ ಅವಳಾಡುವ ನೂರಾರು ಮಾತುಗಳನ್ನು ಕೇಳುವುದೇ ಇವನಿಗಿಷ್ಟ. ಅವಳೇ ಮಾತನಾಡುವುದು ಎಂದು ದೂರಿಕೊಳ್ಳುವುದೂ ಅವನಿಗಿಷ್ಟವೇ.

ಏನೇ ಜಗಳವಾದರೂ ಒಬ್ಬರನ್ನೊಬ್ಬರು ಬಿಡುವುದಾಗುವುದಿಲ್ಲ. ದಾಂಪತ್ಯದ ಬೆಸುಗೆಯೇ ಹೀಗೆ. ಜೀವನದ ಕಛೇರಿಯಲ್ಲಿ ಶ್ರುತಿ ಕೆಟ್ಟರೆ ಅದನ್ನು ಸರಿ ಮಾಡಿಕೊಂಡು ಸಮನ್ವಯ ಮಾಡಿಕೊಳ್ಳಬೇಕೇ ವಿನಾ ಶ್ರುತಿಯನ್ನು ಬಿಡುವುದಾಗುವುದಿಲ್ಲ. ಜಗಳ ಮಾಡಿಕೊಂಡು ಬೇರೆಯಾದಾಗ ಆ ವಿರಹ ಅಸಹನೀಯವಾಗಿಬಿಡುವುದು ಪ್ರಕೃತಿಯ ವೈಚಿತ್ರ್ಯ.

ನೀ ಜತೆಗಿದ್ದಾಗ ಬೆಳಗಾಯಿತೆಂದಾಗ
ಏನಿಷ್ಟು ಮುಂಚೆಯೆ ಎಂದೆ
ನೀನಿಲ್ಲದಿದ್ದಾಗ ಬೆಳಗಾಯಿತೆಂದಾಗ
ಏನಿಷ್ಟು ತಡವಾಯಿತೆಂದೆ

ಬಿಟ್ಟಿರಲಾರದ ಬಂಧನ ಇದು. ಬೆಳಗಾಗುವ ಒಂದು ನಿತ್ಯದ ಘಟನೆಯನ್ನೇ ಆಧರಿಸಿ ಅದನ್ನು ಹೇಳುವ ರೀತಿ ಸ್ವಾರಸ್ಯಕರ.

ದಾಂಪತ್ಯದಲ್ಲಿ ಹೆಂಡತಿಯ ಕೋಪ ಒಂದೆಡೆಯಾದರೆ ಗಂಡನ ಕೋಪವೇ ಒಂದು ಕಡೆ, ಹೆಂಡತಿಯ ಮೇಲೆ ಏನಾದರೊಂದು ದೂರು ಇದ್ದೇ ಇದೆ. ಇದು ಸಾರ್ವತ್ರಿಕವಾದ ಪ್ರವೃತ್ತಿ.

ಮಂದಿಗೆ ನೀ ನಗುಮೊಗವನೆ ತೋರುವೆ
ನನಗುರಿಮೋರೆಯ ಮೆರೆವೆ
ಅವರೆಸಗಿದ ಪುಣ್ಯವತಿಶಯವಾದರೆ
ನಾನೇನು ಪಾಪಿಯೆ ನೀರೆ

ಇದು ಗಂಡನ ದೂರಾದರೆ ಹೆಂಡತಿಯ ದೂರನ್ನು ಕೇಳಿ :

ಅರಳು ಹುರಿದ ಹಾಗೆ ಗೆಳೆಯರ ಜತೆಯೊಳು
ಮಾತಾಡುತಿರುವಂಥ ನೀವು
ಮುತ್ತುದುರುವ ಹಾಗೆ ಆಡುವಿರೆಮ್ಮೊಳು
ಬಹು ಪುಣ್ಯವಂತರು ನಾವು

ಇವು ಆರೋಪ ಪ್ರತ್ಯರೋಪಗಳು, ಪರಸ್ಪರ ಸಂಪೂರ್ಣ ಲಕ್ಷ್ಯವನ್ನು ಬಯಸುವ ಜೀವಗಳೇ ಹೀಗೆ. ಪ್ರೀತಿಯಲ್ಲಿ ಎಲ್ಲರ ಚರ್ಯೆಗಳಲ್ಲೂ ಏನಾದರೂ ಅಪರ್ಯಾಪ್ತತೆ ಕಾಣುತ್ತದೆ. ಇದಕ್ಕೆ ಇನ್ನೊಂದು ಆಯಾಮವೂ ಇದೆ. ವೈವಿಧ್ಯವನ್ನರಸುವ ಗಂಡಸಿನ ದುರ್ಬುದ್ಧಿಯಿಂದ ಹಿತ್ತಲಗಿಡ ಮದ್ದಲ್ಲ ಎಂಬಂತೆ ಅವನಿಗೆ ಹೆಂಡತಿಯ ಯೋಗ್ಯತೆ ಗೊತ್ತಾಗುವುದಿಲ್ಲ. ಪಕ್ಕದ ಮನೆಯ ಕಾಫಿ ಯಾವಾಗಲೂ ರುಚಿ, ಈ ದೌರ್ಬಲ್ಯವನ್ನು ಗುರುತಿಸಿ ಹೆಂಡತಿ ದೂರಿದರೆ ಅದರಲ್ಲಿ ಅರ್ಥವಿರುತ್ತದೆ. ಆದರೆ ಒಲವಿನ ಹಿನ್ನೆಲೆಯಲ್ಲಿ ಮಾಡುವ ದೂರುಗಳೇ ಬೇರೆ. ಒಲವು ಸಂಪೂರ್ಣವಾಗಿ ತನ್ನತ್ತಲೇ ಇರಬೇಕೆಂದು ಅಪೇಕ್ಷಿಸುವ ಜೀವದ ದೂರು ಅದು :

ಗಂಡ ಹೆಂಡತಿಯನ್ನು ಛೇಡಿಸುವ ಈ ಹಾಸ್ಯದ ಸನ್ನಿವೇಶ ನೋಡಿ :

ಮತ್ತೊಬ್ಬಳನ್ನು ನೀವು ನಾ ಸತ್ತು ಹೋದರೆ
ಮದುವೆಯಾಗುವಿರೇನು ಮತ್ತೆ
ಅನುಭವ ಕಲಿಸಿದ ಪಾಠವ ಮರೆವರೆ
ಅಲ್ಲವೆ ನಾನಂಥ ಕತ್ತೆ

ಸ್ವಾನುಭವ ಪರಾನುಭವಗಳನ್ನು ಸುಂದರವಾದ ಒಲವಿನ ಭೂಮಿಕೆಯಲ್ಲಿ ಚಿತ್ರಿಸಿರುವ ಕವಿಯ ಮುಕ್ತಕಗಳು ಭಾವದಿಂದ ಭಾವಕ್ಕೆ ಧಾವಿಸುತ್ತವೆ. ನಡುನಡುವೆ ನಮಗೆ ಹತ್ತಿರವಿರುವ ಜೀವನಚಿತ್ರಗಳನ್ನು ಆರಿಸಿಕೊಂಡು ಮನೋಭಾವಗಳ ಚಿತ್ರಣಕ್ಕೆ ಬಳಸಿಕೊಳ್ಳುತ್ತವೆ. ಭಟ್ಟರೇ ತಮ್ಮ ಅನುಭವಗಳಲ್ಲೇ ಮತ್ತೆ ಮತ್ತೆ ತಾವು ಓಡಾಡುವುದನ್ನು ಸುಂದರವಾಗಿ ಹೀಗೆ ಹೇಳಿಕೊಂಡಿದ್ದಾರೆ :

ಪಂಕ ವಿದ್ಯುತ್ತಿನದೊಳಗಿರುವೆಲರನೆ
ಮತ್ತೆ ಮತ್ತಾಡಿಸುವಂತೆ
ನನ್ನಿತಿಮಿತಿಯೊಳಗಿನ ಅನುಭವವನೆ
ಮತ್ತೆ ಮತ್ತರೆವೆನೋರಂತೆ

ಪಂಕವು ಇರುವ ಗಾಳಿಯನ್ನೇ ಮತ್ತೆ ಮತ್ತೆ ಸುತ್ತಿಸಿದರೂ ಅದರಲ್ಲಿ ಹಿತವಿರುತ್ತದೆ. ಪ್ರತಿಯೊಂದು ಚಲನೆಯಲ್ಲೂ ಒಂದು ಹೊಸ ಹಿತವಿರುತ್ತದೆ. ಹಾಗೆಯೇ ಮುಕ್ತಕಗಳೂ ಹೊಸ ಹೊಸ ಸ್ವಾರಸ್ಯದ ಹಿತವನ್ನು ಕೊಡುತ್ತವೆ. ಇದರರ್ಥ ಕವಿಯು ಭಾವದಿಂದ ಭಾವಕ್ಕೆ, ಅನುಭವದಿಂದ ಅನುಭವಕ್ಕೆ ಹೋಗುವುದಿಲ್ಲವೆಂಬಲ್ಲ. ಭಿತ್ತಿ ಒಂದೇ ಆದರೂ ಅನುಭವ ನೂರಾರಿಬಹುದು. ಒಂದೇ ಕ್ಷೇತ್ರದ ಅನುಭವಗಳೇ ಭಿನ್ನಭಿನ್ನವಿರಬಹುದು. ಅದೇ ಅಕ್ಷರಗಳನ್ನು ಬೇರೆ ಬೇರೆ ರೀತಿ ಇರಿಸಿ ಬೇರೆ ಬೇರೆ ಪದಗಳನ್ನೂ, ಅದರಿಂದ ಕಾವ್ಯಗಳನ್ನೂ ಮಾಡಿದಂತೆಯೇ ಇದು. ಸಹನಶೀಲತೆಯಿರುವುದು ಇಲ್ಲೇ. ಆದರೆ ಭಟ್ಟರು ಹೇಳುವ ಈ ಮಾತಿನಲ್ಲಿ ತನಗೊಂದು ಮಿತಿಯನ್ನು ತಾನೇ ಹಾಕಿಕೊಳ್ಳುತ್ತಾರೇನು ಕಾಣುತ್ತದೆ. ವಿವಕ್ಷಿತವಾದ ಚೌಕಟ್ಟಿನ ಹೊರಗೆ ನಿರೀಕ್ಷೆಗಳಿದ್ದು ಆ ದೃಷ್ಟಿಯಿಂದ ಈ ಕಾವ್ಯವನ್ನು ನೋಡುವುದಾಗಬಾರದೆಂದು ಪ್ರಾಯಶಃ ತನ್ನ ಚೌಕಟ್ಟನ್ನೇ ತಾನೇ ಹೇಳಿಕೊಂಡು ಅದರೊಳಗೆ ತನ್ನ ಭಾವಪ್ರಯಾಣವನ್ನು ಭಟ್ಟರು ಮಾಡುತ್ತಾರೆ. ಇದು ಮತ್ತೆ ಪಾರಂಪರಿಕ

ವಿನಯಶೀಲತೆಯ ಪ್ರಭಾವವೆನ್ನಿಸುತ್ತದೆ. ಸಹೃದಯರನ್ನು ನಿಸ್ಸಂದಿಗ್ಧತೆಯಲ್ಲಿರಿಸುವ ಪ್ರಾಮಾಣಿಕ ಉದ್ದೇಶದಿಂದ ಕೂಡಿದ ಈ ಮಾತುಗಳು ಕಾವ್ಯದ ಆಸ್ವಾದವನ್ನು ಸುಲಭವಾಗಿ ಮಾಡುತ್ತವೆ. ಇಲ್ಲಿ ಹೇಳಿರುವ ಮಿತಿಯು ಕವಿಯು ವಿನಯದಿಂದ ಹೇಳಿಕೊಂಡಿರುವ ಮಿತಿಯೇ ವಿನಾ, ಕಾವ್ಯದೊಳಗೇ ಇರುವ ಮಿತಿಯಲ್ಲ.

ಚಂದ್ರವೀಥಿಯ ಮುಕ್ತಕಗಳು ಸ್ವಾರಸ್ಯದಿಂದ ಸ್ವಾರಸ್ಯಕ್ಕೆ ಸಾಗುತ್ತವೆ. ಗುಡುಗಿಗೆ ಬೆದರಿ ಇನಿಯನನ್ನು ಹಿಡಿದುಕೊಳ್ಳುವ ಅಂದಿನ ಕಾವ್ಯದ ನಾಯಿಕೆಯರನ್ನು ನೆನಸಿಕೊಂಡು ಇಂದಿನ ತರುಣಿಯರನ್ನು ಬಣ್ಣಿಸುವ ಈ ಮುಕ್ತಕವನ್ನು ಓದಿದಾಗ ಮನಸ್ಸು ಉಲ್ಲಾಸಗೊಳ್ಳುತ್ತದೆ :

ಸ್ಕೂಟರು ಸದ್ದಾಯಿತಿದು ಗುಡುಗಲ್ಲವು
    ಏತಕೆ ಬೆಚ್ಚುವೆ ಭೀರು
ಅಮರು ಹಾಲರ ಕಾವ್ಯಕನ್ನಿಕೆಯರೆ ನೀವು
    ಇಂದಿನ ನವತರುಣಿಯರು

ಇದರಲ್ಲಿ ಒಂದು ರೀತಿಯ ವಿಡಂಬನೆಯಿದೆ. ಪ್ರಕೃತಿಯನ್ನು ಬಿಟ್ಟು ದೂರ ಇರುವ ಇಂದಿನ ತರುಣಿಯರಿಗೆ ವರ್ಷಾಕಾಲದ ಗುಡುಗಿನ ಅನುಭವ ಹೇಗೆ ಸಿಗಬೇಕು? ಅವರಿಗೆ ಕೇಳಿಸುವುದು ಕೇವಲ ಸ್ಕೂಟರಿನ ಶಬ್ದ. ಇವರೇನು ಅಮರುಕವಿಯ ಅಥವಾ ಹಾಲನ ಕಾವ್ಯಕನ್ನಿಕೆಯರೇ, ಗುಡುಗಿನ ಶಬ್ದ ಕೇಳಿ ಬೆಚ್ಚಿಬೀಳಲು? ಈ ಮುಕ್ತಕದಲ್ಲಿ ಮೊದಲರ್ಥ ಇನಿಯನು ಹೇಳುವ ಮಾತಾದರೆ ಎರಡನೆಯ ಅರ್ಥದಲ್ಲಿ ಕವಿಯು ಹಠಾತ್ತನೆ ಪ್ರವೇಶಿಸಿ ತನ್ನ ಅಭಿಪ್ರಾಯ ಹೇಳುವುದು, ವೈದೃಶ್ಯವನ್ನು ತೋರಿಸಿ ವಿಡಂಬನೆ ಮಾಡುವುದು ಒಂದು ವಿಶೇಷ.

ಪ್ರೋಷಿತಭರ್ತೃಕಾ ನಾಯಿಕೆಯ ಮನಃಸ್ಥಿತಿಯನ್ನು ವರ್ಣಿಸುವಲ್ಲಿ ವಿಪ್ರಲಂಭದ ಪ್ರಾರಂಭದ ಘಟ್ಟವನ್ನು ಹೇಳಲು ಭಟ್ಟರಿಗೆ ರೈಲುಗಾಡಿಯೂ ಸಾಕು. ಕವಿಗೆ ಒಮ್ಮೆ ಸ್ಕೂಟರಾದರೆ, ಒಮ್ಮೆ ರೈಲು ಉಪಯೋಗಕ್ಕೆ ಬರುತ್ತದೆ.

ಹಸಿರುದೀಪವನದೊ ಗಾರ್ಡು ತೋರಿಸಿದರು
    ಗಾಡಿ ಮೆಲ್ಲನೆ ಚಲಿಸಿಹುದು
ಪ್ರಣಯಿಗಳಿಬ್ಬರುಮೊಬ್ಬರನೊಬ್ಬರು
    ಬೀಳ್ಕೊಳ್ಳುವುದು ಕಷ್ಟವಹುದು

ಇದರಲ್ಲಿ ಪ್ರಣಯಿಗಳು ಬೇರೆ ಬೇರೆಯಾಗಲು ರೈಲುಗಾಡಿ ಕಾರಣವಾಗುತ್ತದೆ. ಇಂದಿನ ಪರಿಸರಕ್ಕೆ ಅನ್ವಯಿಸುವ ಸಹಜವಾದ ಸನ್ನಿವೇಶ ವರ್ಣನೆಯಿದು. ಮುಂದಿನ ಮುಕ್ತಕ ನಾಯಿಕೆಯ ವಿರಹವನ್ನು ಚಿತ್ರಿಸುತ್ತದೆ :

ಕಾಫಿಗೆಂದೊಲೆಯನು ಹೊತ್ತಿಸಿದಿನಿಯಳು
    ಇನಿಯನ ನೆನೆದಳುವಳು
ಬಂದು ನೋಡುವರೆಂದು ಮುದ್ದಿನ ಮಕ್ಕಳು
    ಕಣ್ಣನು ಒರಸಿಕೊಳ್ಳುವಳು

ಈ ಭಾವಪ್ರಪಂಚದಲ್ಲಿ ಸಹಜತೆಯಿದೆ. ಕಾಫಿ, ರೈಲುಗಳು, ವಿಪ್ರಲಂಭವನ್ನು ಕೈಗೆಟುಕದ ಕಾವ್ಯ ಘಟನೆಯಾಗಿಸದೆ ನಮ್ಮ ಸಂಸಾರದೊಳಗೇ ಇರುವ ಸನ್ನಿವೇಶವನ್ನು ಹೊರತರುತ್ತವೆ. ಇಲ್ಲಿ ವಿರಹವನ್ನು ಅನುಭವಿಸುವ ಗೃಹಿಣಿಗೆ ಕಾಫಿಯೇ ವಿರಹೋದ್ದೀಪನಕ್ಕೆ ಸಾಕು. ಇಲ್ಲಿ ಕೋಗಿಲೆಯಾಗಲಿ, ಸುಂದರ ವನಾಂತವಾಗಲಿ, ಮಧುಮಾಸವಾಗಲಿ, ಶರತ್ಕಾಲದ ಚಂದ್ರನಾಗಲಿ ಬೇಕಾಗಿಲ್ಲ.

ಈ ಪ್ರಸ್ತುತ ವಸ್ತು ವಿಶೇಷಗಳಿಂದ ಕೂಡಿದ ವಾಸ್ತವಿಕ ವರ್ಣನೆಯನ್ನು ನೋಡಿದಾಗ ಇದ್ದಕ್ಕಿದ್ದಂತೆ ಕಾವ್ಯವು ತನ್ನ ಗಂಭೀರತೆಯನ್ನು ಕಳೆದುಕೊಂಡುಬಿಡುತ್ತದೆಯೋ ಎಂಬ ಆತಂಕ ಬಂದರೂ ಪ್ರಸ್ತುತತೆಯ ಶಕ್ತಿಯನ್ನು ಗಮನಿಸಿದಾಗ ಅಂತಹ ಆತಂಕಕ್ಕೆ ಕಾರಣವಿಲ್ಲವೆನ್ನುವುದು ಸ್ಪಷ್ಟವಾಗುತ್ತದೆ. ಸಾವಧಿಕವಾದ, ಅಂದರೆ, ಒಂದು ಕಾಲಾವಧಿಯಲ್ಲಿ ಅರ್ಥಮಾಡಿಕೊಳ್ಳ ಬಹುದಾದ ಶಬ್ದಗಳನ್ನೂ, ವಸ್ತುಗಳನ್ನೂ ಉಪಯೋಗಿಸಿದಾಗ ಕಾವ್ಯದಲ್ಲಿ ಅದೇ ಕಾರಣಕ್ಕಾಗಿ ಬರುವ ಸಹಜತೆ, ನಿಕಟತೆಗಳು ಹಾಗೂ ಪ್ರಸ್ತುತತೆಯ ಕಾವ್ಯವನ್ನು ಸಹೃದಯರಿಗೆ ಆಪ್ತವಾಗಿಸುತ್ತವೆ. ಇಂದಿನ ಪರಿಸರವು ಕೂಡ ಕಾವ್ಯಕ್ಕೆ ಪ್ರೇರಕವಾಗ ಬಹುದೆಂಬುಕ್ಕೆ ಇದು ಸಾಕ್ಷಿಯಾಗುತ್ತದೆ. ಅದಕ್ಕೆ ವಸ್ತುವಾಗಿಸಿ ಅದೇ ಸ್ವಾರಸ್ಯವನ್ನು ಉಳಿಸಿಕೊಂಡಿರುವುದೇ ಭಟ್ಟರ ಚಂದ್ರವೀಥಿಯ ವಿಶೇಷವೆಂದು ಹೇಳಿದರೆ ಮೇಲಿನ ಆತಂಕಗಳಿಗೆ ಸರಿಯಾದ ಉತ್ತರ ಹೇಳಿದಂತಾಗುತ್ತದೆ. ಇಲ್ಲಿ ಕಾವ್ಯವಸ್ತುವಿಗೆ ಒಂದು ಹೊಸ ನೆಲಗಟ್ಟನ್ನೂ, ನಾವಿನ್ಯವನ್ನು ಒದಗಿಸಿಕೊಟ್ಟಿರುವ ಹಿರಿಮೆಯನ್ನೂ, ಪ್ರಯೋಗಶೀಲತೆಯನ್ನೂ ನೋಡಬಹುದಾಗಿದೆ.

ಈ ಪ್ರಯೋಗವನ್ನು ಈ ಸಂದರ್ಭದಲ್ಲಿ ನೋಡಬಹುದಾಗಿದೆ :

ಆಕಾಶವಾಣಿಯ ಹವೆಯ ಮುನ್ಸೂಚನೆ
ಕೇಳಿಯೆ ಬೆಚ್ಚುವರೇನೆ
ಹಿಂದಿನ ಕಾವ್ಯದ ಪಥಿಕನಾರಿಯರಂತೆ
ನಡುಗುವುದುಚಿತವೇನಂತೆ

ಅಂದಿನ ಮತ್ತು ಇಂದಿನ ಸನ್ನಿವೇಶಗಳು ಕವಿಯ ಮುಂದೆ ಹಾದುಹೋಗುತ್ತಲೇ ಇದ್ದು ಭಟ್ಟರ ಮನಸ್ಸು ಅದನ್ನು ತೌಲನಿಕವಾಗಿ ಅಳೆಯುತ್ತಲೇ ಇರುತ್ತದೆ. ಅಂದಿನ ಸನ್ನಿವೇಶ ಕಾವ್ಯಸಹಜವಾದದ್ದು ಎಂಬುದು ಕವಿಯ ಮನಸ್ಸಿನಲ್ಲಿ ಒಂದು ಕಡೆ ಇದ್ದು ಅದನ್ನು ಇಂದಿನದೊಡನೆ ತುಲನೆಮಾಡಿ ಅದರಿಂದ ಹೊರಬರುವ ಸ್ವಾರಸ್ಯವೇ ಇಂತಹ ಮುಕ್ತಕಗಳ ಜೀವಾಳವಾಗುತ್ತದೆ. ಹೆಚ್ಚಾಗಿ ಪ್ರಯೋಗಗಳಲ್ಲಿ ಭಟ್ಟರ ಹಾಸ್ಯಪ್ರಜ್ಞೆ ಪ್ರಕಟವಾಗುತ್ತದೆ. ಇದನ್ನು ಹಾಸ್ಯವೆಂದು ಹೇಳುವುದರ ಜತೆಗೆ ಸರಸತೆಯೆಂದು ಹೇಳಬಹುದು.

ಮೇಲಿನ ಮುಕ್ತಕದಲ್ಲಿ ಗುಡುಗನ್ನು ಕೇಳಿ ಹಿಂದಿನ ಕಾವ್ಯಗಳಲ್ಲಿ ಪಥಿಕನಾರಿಯರು ನಡುಗುತ್ತಿದ್ದ ವರ್ಣನೆ ಬರುವುದನ್ನು ಕಾವ್ಯಕ್ಷೇತ್ರದ ವಿಸ್ತಾರ ಜ್ಞಾನವಿರುವ ಕವಿಯ ಮನಸ್ಸು ನೆನಪಿಸಿಕೊಂಡು ಅದಕ್ಕೆ ಸದೃಶವಾದ ಇಂದಿನ ಸನ್ನಿವೇಶವನ್ನು ಹುಡುಕುತ್ತದೆ. ಇಂದು ಮುಂದಿನ ಹವೆಯ ಬಗ್ಗೆ ನಮಗೆ ಗೊತ್ತಾಗುವುದು ಆಕಾಶವಾಣಿಯ ಹವೆಯ ಮುನ್ಸೂಚನೆಯಿಂದ, ಅದನ್ನೇ ಉಪಯೋಗಿಸಿಕೊಂಡು ನಾಯಿಕೆಯ ಸಂಚಾರಿಭಾವವೊಂದನ್ನು ಚಿತ್ರಿಸುವ ಕವಿಯ ಪ್ರಯತ್ನ ಇಲ್ಲಿ ಬಹಳ ಕುತೂಹಲಕಾರಿ, ಅದೇ ಇಲ್ಲಿರುವ ಚಮತ್ಕಾರ, ಆ ಕ್ಷಣದಲ್ಲಿ ಆಗುವ ರಸಾನುಭವ 'ಸದ್ಯಃಪರನಿರ್ವೃತಯೇ' ಎಂಬ ಕಾವ್ಯಪ್ರಯೋಜನವನ್ನು ತಕ್ಷಣ ಕೊಟ್ಟುಬಿಡುತ್ತದೆ.

ಆದರೆ ಎಲ್ಲ ಕಡೆಯೂ ಈ ತಂತ್ರವೇ ಇರುತ್ತದೆಯೆಂದಲ್ಲ. ಈ ತಂತ್ರ ಪೂರಕವಾಗಿ ಮಾತ್ರ ಬರುತ್ತದೆ. ಅನೇಕ ಮುಕ್ತಕಗಳಲ್ಲಿ ಪ್ರೇಮತತ್ತ್ವವನ್ನರಸುವ ಭಾವುಕತೆ, ಚಿಂತನಶೀಲತೆಗಳು ರಸಮಯ ಕಾವ್ಯವೈಭವದೊಡನೆ ಹೊರಬರುತ್ತವೆ.

ತಾತ್ವಿಕರರಸುವ ಪರತತ್ವದಿರವನು
ಕಾಂಬಂತೆ ಈ ಸೃಷ್ಟಿಯೊಳಗೆ
ಪ್ರೇಮದ ತತ್ವವನರಿತೆನು ನಲಿದೆನು
ತವಹೃದಯದ ಭಾವದೊಳಗೆ

ಭೂಮಿಯಿಂದ ಕವಿಯು ಬಾನಿಗೇರಿದಾಗ ಸುಂದರವಾದ ವರ್ಣನೆಯು ತನ್ನ ಮಾಂತ್ರಿಕ ಮಾಯಾಲೋಕವನ್ನು ನಮ್ಮೆದುರು ತೆರೆದಿಡುತ್ತದೆ. ಚಂದ್ರತಾರೆಗಳಿರುವ ಆಕಾಶದಲ್ಲಿ -

ನಂದನದರಳನು ತರುತ್ತಿದ್ದ ಚಂದ್ರನು
    ಬಿದ್ದನು ಎಡವಿ ಮೋಡವನು
ಸುತ್ತಲು ಬುಟ್ಟಿಯ ಹೂಗಳು ಬಿದ್ದವು
    ಎಂಬಂತೆ ತಾರೆಗಳಿಹವು

ಎಂದು ಹೇಳುವಾಗ ಕವಿಯ ಕಲ್ಪನಾವೈಭವ ಪ್ರಕಟಗೊಳ್ಳುತ್ತದೆ.

ಋತುವಿನ ಬಗ್ಗೆ ಹೇಳುವಾಗಲೂ-

ಶಿಶಿರನು ಬಿದ್ದನು, ಚೈತ್ರನು ಗೆದ್ದನು ಚಳಿಗಾಲಕಳಿಗಾಲ ಬಂತು
ವಿಜಯದ ಗೀತೆಯ ನುಡಿದನು ಮಧುಪನು ತಲೆದೂಗಿದನು ಕೇಳಿ ಕಂತು,
ಎನ್ನುವಾಗ ಋತುವಿನ ಸಂಕ್ರಮಣ ಸರಸವಾಗಿ ಕಣ್ಣಮುಂದೆ ಸುಳಿಯುತ್ತದೆ.

ಈ ಕಾವ್ಯದಲ್ಲಿ ಎಷ್ಟೇ ಗಂಭೀರವಾಗಿ ಬಾಳ ಹೊತ್ತಗೆಯೊಳು ಬೇಟದ ಪುಟಗಳು ಹತ್ತಾರು ಹರಿದು ಹೋಗಿಹವು ಎಂದು ಕವಿಯು ಹೇಳುತ್ತಿದ್ದರೂ ಇದ್ದಕ್ಕಿದ್ದಂತೆ ಕವಿಯ ಮನಸ್ಸಿನೊಳಗಿರುವ ತುಂಟತನ ಹೊರಬಂದು ಇಣಿಕಿ ನೋಡಿಬಿಡುತ್ತದೆ. ಈ ಇಣಿಕಿನಲ್ಲೇ ಇರುವುದು ಹತ್ತು ಹಲವಾರು ಜೀವನ ಸ್ವಾರಸ್ಯಗಳು.

ಈ ಯಜಮಾನಿಯ ಕೈಯೊಂದು ಬರಿಬೋಳು
    ಗಡಿಯಾರ ಮತ್ತೊಂದು ಕೈಗೆ
ಒಕ್ಕಲುಗಿತ್ತಿಯ ಕೈ ಬಳೆಯುಲಿಗಳು
    ಕವಿಗಿನಿದಾದುವು ದಣಿಗೆ

ಇದರಲ್ಲಿ ಆಧುನಿಕತೆಯ ಸ್ವಾರಸ್ಯಹೀನತೆಯಲ್ಲಿ ಮನಸ್ಸು ಸಾಂಪ್ರದಾಯಿಕತೆಯ ಗ್ರಾಮೀಣ ಸೊಬಗಿಗೆ ಮೈಮರೆಯುತ್ತದೆ. ಅಷ್ಟು ಮಾತ್ರವಲ್ಲದೆ, ಧಣಿ ಮನಸ್ಸು ದಾರಿತಪ್ಪುವುದನ್ನು ಇದು ತೋರಿಸುತ್ತ ಮನುಷ್ಯನ ದೌರ್ಬಲ್ಯವೊಂದನ್ನು ತುಂಟತನದಿಂದ ತೋರಿಸುತ್ತದೆ.

ಹಾಗೆಯೇ ಈ ತುಂಟತನದ ಸ್ವಾರಸ್ಯ ನೋಡಿ
    ಮಗುವಳುತಿದ್ದರೆ ನಿದ್ರಿಸುವುದು ಹೇಗೆ
    ಮಲಗಿಸು ತೊಟ್ಟಿಲಿನೊಳಗೆ
ನೀವು ತೂಗುವಿರೇನು ತೊಟ್ಟಿಲೊಳಿಟ್ಟರೆ
    ನಿಮ್ಮ ಈ ಅರ್ಥವೆ ಬೇರೆ

ಸತಿಪತಿಯರ ಮಾತುಗಳು ಇವು. ಗಂಡನ ಮಾತಿಗೆ ಹೆಂಡತಿಯ ಮರುಮಾತು. ಇದೊಂದು ಸರಸ ಸನ್ನಿವೇಶ. ದಾಂಪತ್ಯ ಜೀವನದ ತುಂಟತನದ ಒಂದು ಮುಖ. ನಿತ್ಯಜೀವನದ ಸನ್ನಿವೇಶಗಳಿಂದ ಶೃಂಗಾರ ಭಾವಗಳನ್ನು ಹೆಕ್ಕಿ ತೆಗೆದು ಹೇಳುವ ಕವಿಯ ಸಾಮರ್ಥ್ಯ ಇಲ್ಲಿ ವ್ಯಕ್ತ.

ತೆಳುಹಾಸ್ಯ, ಆಲಂಕಾರಿಕ ಸ್ವಾರಸ್ಯಗಳು ಭಟ್ಟರ ಮುಕ್ತಕಗಳ ಜೀವಾಳ.

ನಿಮ್ಮದೆ ಮಾತೂವೆ ನಿಮ್ಮದೆ ಖರ್ಚೂವೆ
ಎಂದ ಭವಿಷ್ಯವು ದಿಟವೆ
ಖರ್ಚೆನೊ ನನ್ನದೆ ಮಾತೆಲ್ಲ ಅವಳದೆ
ಜ್ಯೋತಿಷಿ ಇನ್ನೂವೆ ವಟುವೆ

ಇಲ್ಲಿ ಖರ್ಚೂವೆ ಎಂಬಲ್ಲಿರುವ ಆಡುಮಾತಿನ ಸೊಗಡು, ವಟುವೆ ಎಂಬಲ್ಲಿಯ ಪರಂಪರೆಯ ಪದಪ್ರಯೋಗ ಹಾಗೂ ಅದರ ಧ್ವನಿ, ಇವೆರಡೂ ಮತ್ತೆ ಮತ್ತೆ ಕವಿಯ ಪ್ರಾಚೀನ ಅರ್ವಾಚೀನ ಅನುಭವಗಳ ನಡುವಣ ಸೇತುವಾಗಿರುವುದನ್ನು ತೋರಿಸುತ್ತವೆಯಲ್ಲದೆ ನಿತ್ಯಜೀವನವನ್ನು ಹಾಸ್ಯದ ಕಣ್ಣುಗಳಿಂದ ನೋಡಿ ಸಂತೋಷಪಡುವ ಮನೋಭಾವವು ವ್ಯಕ್ತವಾಗುತ್ತದೆ.

ದಂಪತಿಗಳ ಸಂವಾದ ಅಥವಾ ನಲ್ಲನಲ್ಲೆಯರ ಸಂವಾದಗಳು ಇಂದಿನ ಪರಿಸರದಲ್ಲಿ ಅಂದರೆ ನಮ್ಮದೇ ಮನೆಯ ಅಂಗಳದಲ್ಲಿ ತೆರೆದುಕೊಂಡಾಗ ಕವಿಯ ಅನುಭವ ನಮಗೂ ಆಗುತ್ತದೆ.

ನಲ್ಲನಲ್ಲೆಯರ ನಡುವೆ ನಡೆಯುವ ಕೀಟಲೆ, ಸಹಜವಾದ ಒಂದು ಕ್ರಿಯೆ. ನಲ್ಲನು ನಲ್ಲೆಯನ್ನು ಕೋಪಗೊಳಿಸಿ ಸಂತೋಷಪಡುವುದು ಸಹಜವಾದ ಅನುಭವ. ಕಾಳಿದಾಸನು ತನ್ನ ಹೆಂಡತಿಯನ್ನು ವರ್ಣಿಸಿದನೆಂದು ಹೇಳುವ ಹಾಸ್ಯೋಕ್ತಿಯನ್ನು ಹೋಲುವ 'ಕಣ್ಣುಗಳೆರಡನು ಕುಂಬಳಕಾಯಿಗೆ ಅತ್ತಿತ್ತ ಬಿಡಿಸಿಟ್ಟ ಹಾಗೆ ನಿನ್ನ ಈ ಮುಖವಿಹುದೆಂದ ಕಬ್ಬಿಗನಿಗೆ ಮುನಿವುದೆ ಕಡು ನನ್ನಿಗನಿಗೆ' ಎಂಬುದರಲ್ಲಿ ಕಾಳಿದಾಸನದೆಂದು ಹೇಳಲಾಗುವ 'ತಿಂತ್ರಿಣೀದಲರಸಮಾನ ಲೋಚನಾಂ' ಎಂಬುದು ನೆನಪಾಗುತ್ತದೆ.

ಕವಿಯನ್ನು ಮೊದಲು ಬೆರಗುಗೊಳಿಸಿ ಮೋಸಗೊಳಿಸಿದ ಈ ಸನ್ನಿವೇಶ ತತ್ಸಮ ಪದಗಳ ಗೊಂದಲದ ಸನ್ನಿವೇಶವಾಗಿ ಮನಸೆಳೆಯುತ್ತದೆ.

ಅವಳೋ ಆರನೋ ಏ ಮೌನ ಬಾರೆಂದು
ಕರೆದಾಗ ಬಹು ಬೆರಗಾದೆ
ಮೌನವು ಮೋಹನ ಪದದ ತದ್ಭವವೆಂದು
ತಿಳಿದಾಗ ನಾ ಮೌನಿಯಾದೆ

ಇದರಲ್ಲಿ ಹೆಂಗಳೆಯರ ಮಾತುಗಾರಿಕೆಯ ಬಗೆಗೆ ಇರುವ ಧ್ವನಿ ಗಮನಿಸಬೇಕಾದುದು. ಈ ಮುಕ್ತಕದ ಕೊನೆಯಲ್ಲಿ ಸ್ವಾರಸ್ಯ ಇದ್ದಕ್ಕಿದ್ದಂತೆ ಆಸ್ಫೋಟಿಸುತ್ತದೆ.

ಇನಿಯನಿಗೆ ಪ್ರೇಮದ ಕಾಗುಣಿತವನ್ನು ನಲ್ಲೆ ಹೇಳಿಕೊಡುವುದು ಚಿತ್ರಿತವಾಗಿರುವುದು ಈ ಮುಕ್ತಕದಲ್ಲಿ.

ಪಕೆತ್ವ ರವತ್ತು ದೀರ್ಘವು ಎಂದಳು
ಪ್ರೇ ಮೊದಲಕ್ಷರವೆಂದೆ
ಹೀಗೆ ನಾವಾಡಿದವಾಗಿನ ದಿನದ ಳು
ಇದು ಹತ್ತು ವರುಷದ ಂದೆ

ಕಾಗುಣಿತ ಮತ್ರವಲ್ಲ, ಗಣಿತ ನ್ನೂ ಉಪಯೋಗಿಸಿ, ಅಂದರೆ ಕಳೆಯುವ ಲೆಕ್ಕವನ್ನು ಉಪಯೋಗಿಸಿ ಸ್ವಾರಸ್ಯವೊಂದನ್ನು ಹೊರತರುವ ಜಾಣ್ಮೆ ಈ ಮುಕ್ತಕದಲ್ಲಿದೆ.

ಕಾಡಿಗೆ ತೊಡೆದರೆ ಚೌರಿಯ ಕಳೆದರೆ
ಆ ಪಲ್ಲಗಳನು ಕಳಚಿದರೆ
ಉಳಿಯುವುದನೇನೆಂದು ಕೇಳಿದನಾತನು
ನನ್ನ ಹೆಂಡತಿಯೆಂದೆ ನಾನು

ತಲೆಗೂದಲು, ಹಲ್ಲುಗಳು, ಹೀಗೆ ಎಲ್ಲವನ್ನೂ ಹಾಕಿಸಿಕೊಳ್ಳುವ ಇಂದಿನ ಬಿಡಿಭಾಗಗಳ ಸಂಸ್ಕೃತಿಯ ವಿಡಂಬನೆ ಇದು. ಈ ವಿಡಂಬನೆಯಲ್ಲಿ ಒಂದು ಚಮತ್ಕಾರ.

ಸಂಸಾರದ ಸರಸವಿರಸಗಳು ಏನೇ ಇದ್ದರೂ, ಅದು ಕೊನೆಗೆ ಸುಖಕರವಾಗಿರುತ್ತದೆಯೆಂಬುದು ಕವಿಯ ಅಭಿಮತ. ಇದನ್ನು ಕವಿಯು ಸೂಚಿಸುವುದು ಹೀಗೆ :

ಆದಿಯು ಕಷ್ಟವು ಮಧ್ಯವು ಸುಲಭವು
ಅಂತ್ಯವು ಬಹು ಸುಖಕರವು
ಭಾವಿಪೊಡದರಂತೆ ನಮ್ಮ ಸಂಸಾರವು
ಆದಿ ಕಷ್ಟವು ಕೊನೆ ಸುಖವು

ಆಶಾವಾದಿಯ ಮಾತುಗಳಿವು. ಕಷ್ಟಗಳ ಕೊನೆಯಲ್ಲಿ ಸುಖವನ್ನು ಕಾಣುವ ಜೀವನೋತ್ಸಾಹಿಯ ಈ ಮಾತುಗಳು ಎಷ್ಟೋ ಮನಸ್ಸುಗಳನ್ನು ಸಮಾಧಾನಪಡಿಸಬಹುದು.

ಒಂದು ಹೆಣ್ಣೂ ಒಂದು ಗಂಡೂ ಕೂಡಿ ಬಾಳಿದಾಗ ಅದೇ ಸಂಸಾರ. ಆದರೆ ಗಂಡು ಹೆಣ್ಣನ್ನು ಒಪ್ಪಿಕೊಳ್ಳುವ ಆ ರಹಸ್ಯದ ಬಗ್ಗೆ ಕವಿಮನಸ್ಸು ಯೋಚಿಸುತ್ತದೆ. ಯಾರನ್ನೂ ಒಪ್ಪದೆ ಗಂಡು ಕೊನೆಗೆ ಯಾರನ್ನೋ ಒಪ್ಪಿ ಬಿಡುವ ರಹಸ್ಯದ ಬಗ್ಗೆ ಕವಿಯು ಆಶ್ಚರ್ಯಪಡುವುದು ಈ ಮುಕ್ತಕದಲ್ಲಿ ಕಾಣುತ್ತದೆ :

ಆ ಹೆಣ್ಣು ಹಾಗೆಂದು ಈ ಹೆಣ್ಣ ಹೀಗೆಂದು
ದೂಷಿಸಿ ಮರಳಿದ ನೀನು
ಈ ಮೆಳ್ಳಿ ಮಳ್ಳಿಯನೊಪ್ಪಿದೆ ಹೇಗೆಂದು
ಯೋಚಿಸಿ ಮುದಿಯಾದೆ ನಾನು

ಎಲ್ಲರನ್ನೂ ಬೇಡವೆಂದವನು ಈ ಹೆಣ್ಣನ್ನು ಹೇಗೆ ಒಪ್ಪಿದ ಎಂಬ ಪ್ರಶ್ನೆಗೆ ಉತ್ತರವೇ ಇಲ್ಲ. ಆ ಆಕರ್ಷಣೆಗೆ ವಿವರಣೆಯೇ ಇಲ್ಲ. ಯೋಚಿಸಿ ಮುದಿಯಾಗಬೇಕಷ್ಟೆ.

ಆದರೆ ಹೆಣ್ಣನ್ನು ಹುಡುಕಬೇಕಾದರೆ ಅವಳನ್ನು ಸಾಕುವ ಜೀವಿಕೆಯ ಮಾರ್ಗವಿದ್ದರೆ ಮಾತ್ರ ಎಂಬ ಕಿವಿಮಾತು ಹೇಳು ಕವಿಯು ಮರೆಯುವುದಿಲ್ಲ :

ಹಿಟ್ಟಿನ ಹಾದಿಯ ಹುಡುಕಿದ ಮೇಲೆಯೆ
ಹೆಣ್ಣಿನ ಹಾದಿಯ ನೋಡು
ಜುಟ್ಟನು ಬಾಚಿ ಗಂಟಿಕ್ಕಿದ ಮೇಲೆಯೆ
ಹೂವಿನ ಕುಚ್ಚನು ಬೇಡು

'ಹೊಟ್ಟೆಗೆ ಹಿಟ್ಟಿಲ್ಲ, ಜುಟ್ಟಿಗ ಮಲ್ಲಿಗೆ ಹೂವು' ಎಂಬ ಗಾದೆಯೇ ಇಲ್ಲಿ ಈ ಕವನದ ರೂಪವನ್ನು ತಳೆದಿದೆ. ಈ ಕವನ, ನೀತಿ ವಾಕ್ಯ, ಗಾದೆ ಎರಡರ ಕೆಲಸವನ್ನೂ ಮಾಡುತ್ತದೆ.

ಹೆಣ್ಣನ್ನು ಸರಿಯಾಗಿ ನೋಡಿಕೊಳ್ಳಬೇಕು. 'ಪುಸ್ತಕಂ ವನಿತಾ ವಿತ್ತಂ ಪರಹಸ್ತಗತಂ ಗತಂ' ಎಂದು ಹೇಳುವುದನ್ನು ಭಟ್ಟರು ಬಹಳ ಸ್ವಾರಸ್ಯವಾಗಿ ಹೇಳುತ್ತಾರೆ.

ಮನೆಬಿಟ್ಟ ಹೆಣ್ಣನು ನೆಲೆಬಿಟ್ಟ ಬಸ್ಸನು
        ಹಿಡಿಯುವನೆಂದೋಡಬೇಡ
ಮತ್ತೊಂದು ಮಾರಿಯ ಮತ್ತೊಂದು ಲಾರಿಯ
        ಬಾಯಿಗೆ ಸಿಕ್ಕೀಯೆ ನೋಡ

ಕವಿಯ ಮುಕ್ತಕಗಳಲ್ಲಿ ಎಲ್ಲ ಕಡೆಯೂ ಹಾಸ್ಯದ ಒಂದು ಅಂತರ್ವಾಹಿನಿ ಹರಿಯುವುದನ್ನು ನಾವು ಕಾಣಬಹುದು. ಒಂದೆಡೆ ತನ್ನ ಕಾವ್ಯವನ್ನೇ ಹಾಸ್ಯವಸ್ತುವನ್ನಾಗಿ ಮಾಡಿಕೊಂಡು ನಕ್ಕು ನಗಿಸುವ ಪ್ರವೃತ್ತಿಯನ್ನೂ ಕಾಣಬಹುದು.

ನಿಮ್ಮ ಕಾವ್ಯವನೋದಿ ಕಣ್ಣೀರು ಕರೆದೆನು
        ಎಂದಿದ್ದಾಳೆನ್ನಾಕೆ ಹಿಂದೆ
ನಿನ್ನ ಪಾಡನೆ ಹಾಡು ಮಾಡಿ ಹಾಡಿರುವೆನು
        ಅತ್ತಾರು ನಿನ್ನನ್ನರೆಂದೆ

ಇದೊಂದು ಸಂವಾದ ಹಾಗೂ ಸ್ಪರ್ಧಾತ್ಮಕವಾದ ಚತುರೋಕ್ತಿ. ಹೆಂಡತಿ ತನ್ನ ಕಾವ್ಯವನ್ನು ಹಾಸ್ಯ ಮಾಡಿ ಹೇಳಿದಾಗ ಅವಳಿಗೆ ಗಂಡನ ಸ್ವಾರಸ್ಯವಾದ ಪ್ರತ್ಯುತ್ತರ :

ಆದರೆ ಹೆಂಡತಿಯೊಡನೆ ಜಗಳ ಮಾತಿನ ಮಟ್ಟದಲ್ಲೇ ಇರಬೇಕು. ಗುದ್ದಾಡಿದರೆ ಏನಾಗುತ್ತದೆ ಗೊತ್ತೆ?

ಹಾಗೆ ಗುದ್ದಾಡಿದೆ ಹೆಂಡತಿಯೊಂದಿಗೆ
        ಲಾಭವೇನಾಯಿತು ನಿನಗೆ
ಮುಂದಿನ ಸಾಲಿನ ಹುಳುಕು ಹಲ್ಲೊಂದನು
        ತೆಗೆಸುವ ಹಣ ಮಿಕ್ಕಿತೆನಗೆ

ಇದು ತೆಳು ಹಾಸ್ಯ. ಗುದ್ದಾಡಿದರೆ ಗಂಡನ ಹಲ್ಲೇ ಮುರಿಯುತ್ತದೆ ಎಂಬುದನ್ನು ಧ್ವನಿಸಿ ನಗುವಂತೆ ಮಾಡುವ ಉತ್ಪ್ರೇಕ್ಷಿತ ಕಲ್ಪನೆ. ಒಲವಿನ ಹೆಂಡತಿಯಿದ್ದರೂ ಬೇರೊಬ್ಬಳೊಡನೆ ಮಾತನಾಡುವ ಚಪಲ ಹೊತ್ತ ಗಂಡನನ್ನು ಛೇಡಿಸುವ ಮುಕ್ತಕವೊಂದು, ಸ್ವಾರಸ್ಯ ಚಮತ್ಕಾರಗಳೊಡನೆಯೇ ಅಂತಹ ಚಾಪಲ್ಯಕ್ಕೆ ಚಾಟಿಯೇಟು ಕೊಡುತ್ತದೆ :

ಯಾರನೊ ನೆನೆದನು ಫೋನನು ಹಿಡಿದನು
        ಒಲವನು ಸುರಿದನು ಭೂಪ
ತನ್ನಾಕೆಯಾಕಡೆ ನುಡಿದಳೆನ್ನುವುದನು
        ಕೇಳಿ ಫೋನಿಟ್ಟನು ಪಾಪ

ಪಕ್ಕದ ಮನೆಯೆಡೆ ನೋಡುವ ಎಂಜಲು ಬುದ್ಧಿಯು ಪ್ರಪಂಚದಲ್ಲಿ ಕಾಣುವ ಒಂದು ಹೇಯಪ್ರವೃತ್ತಿ. ಅದರ ವಿಡಂಬನೆಯನ್ನು ಮಾಡುವಾಗಲೂ ಸ್ವಾರಸ್ಯವು ಕೊನೆಗೆ ರೂಪುಗೊಳ್ಳುವ ವಿಧಾನವನ್ನು ಕವಿ ಮರೆಯುವುದಿಲ್ಲ. ಇಷ್ಟೆಲ್ಲ ಹೇಳಿ-

ಅರಿತೆವು ಪೇಟೆಯ ಮಕ್ಕಳ ಬೇಟವ
ನುರಿತೆವು ಹಳ್ಳಿಗರೊಲವ
ಸರಸದ ವಿರಸದ ಸಮರಸಭಾವದ
ಲಂಪಿನೊಳಾಯಿತು ಬಿನದ

ಎನ್ನುವ ಕವಿಯ ಮಾತಿನಲ್ಲಿ ವಿನೋದವು ಕಾವ್ಯಪ್ರಯೋಜನಗಳಲ್ಲಿ ಒಂದಾಗಿ ವಿವಕ್ಷಿತಾರ್ಥದ ಕಡೆಗೆ ಆಕರ್ಷಿಸುವ ಉಪಕರಣವಾಗಿ ಕಾವ್ಯಶಾಸ್ತ್ರವಿನೋದೇನ ಎಂಬ ಮಾತಿಗನುಸಾರವಾಗಿ ರಸಾಸ್ವಾದವನ್ನುಂಟುಮಾಡುತ್ತಾ, ಮುಕ್ತಕಗಳು ಸಾಗುವ ರೀತಿಯನ್ನು ಹೇಳುತ್ತದೆ.

ಒಟ್ಟಿನಲ್ಲಿ ಚಂದ್ರವೀಧಿಯು ಸರಸವಿರಸಗಳ ಸನ್ನಿವೇಶಗಳ ಸ್ವಾರಸ್ಯಗಳ ಒಂದು ಗುಂಫನ. ಅದೊಂದು ವಿನೋದ ವಿಹಾರ. 'ಬಹು ಜನರು ಕಂಡು ಬಹುಜನರು ಕೇಳಿ ನಡೆದಿರುವ ಈ ವೈಹಾಳಿ, ಓದುಗನಿಗೆ ಪಾಠ ಕಲಿಸುತ್ತಲೇ ಅವನನ್ನು ಮೈಮರೆಸುತ್ತದೆ. ಇದೊಂದು ಚಮತ್ಕಾರ ಪ್ರಯಾಣ.

ಭಟ್ಟರ ಏಳುನೂರು ಮುಕ್ತಕಗಳನ್ನು ನೋಡುವಾಗ, ಭಾವದಿಂದ ಭಾವಕ್ಕೆ ಚಮತ್ಕಾರದಿಂದ ಚಮತ್ಕಾರಕ್ಕೆ, ವಿನೋದದಿಂದ ವಿನೋದಕ್ಕೆ, ಅನುಭವದಿಂದ ಅನುಭವಕ್ಕೆ ಕವಿಯು ಧಾವಿಸುವುದನ್ನು ನೋಡುತ್ತೇವೆ. ಬದುಕಿನ ಸನ್ನಿವೇಶಗಳನ್ನು ಗ್ರಹಿಸಿ ಅವುಗಳನ್ನು ಸ್ವಾರಸ್ಯವಾದ ಸಂಪುಟಗಳಲ್ಲಿ ಹಾಕಿ ಬದುಕನ್ನು ಕವಿಯು ಪರಿಭಾವಿಸುವ ದೃಷ್ಟಿಯನ್ನು ಸೂಚಿಸುವ ಈ ಮುಕ್ತಕಗಳು ಸಂಸ್ಕೃತದ ಗಾಥಾಸಪ್ತಶತಿಯಂತೆ ಚಮತ್ಕಾರ ಹೃದಯಗಳಾದ ಹಾಗೂ ಪ್ರೇಮಜೀವನದ ಮತ್ತು ದಾಂಪತ್ಯಜೀವನದ ಸರಸವಿರಸ ವಿಪ್ರಲಂಭಗಳ ಸುತ್ತ ಸುತ್ತುತ್ತ, ನಡುವೆ ಇತರ ಅನುಭವಗಳನ್ನೂ ಸೇರಿಸಿಕೊಳ್ಳುತ್ತ, ಅವನ್ನು ಚಿತ್ರಿಸಲು ನಮ್ಮ ಸುತ್ತಮುತ್ತ ಸಿಗುವ ನಮ್ಮ ಜೀವನದ ಅಂಗಗಳಾದ ವಸ್ತುಗಳನ್ನೇ ಅವಲಂಬಿಸಿಕೊಂಡು ಹೋಗುತ್ತಾ ಒಂದು ಹೊಸ ಆಯಾಮವನ್ನು ಪಡೆಯುತ್ತವೆ.

ಭಟ್ಟರ ಈ ಸಪ್ತಶತಿಯನ್ನು ಅನೇಕ ದೃಷ್ಟಿಯಿಂದ ವಿಮರ್ಶಿಸಬಹುದಾಗಿದೆ. ಪ್ರೇಮ ಸಂಬಂಧದ ವಿಶ್ಲೇಷಣೆಯ ದೃಷ್ಟಿ, ಅದರಲ್ಲೇ ಅಂತರ್ಗತವಾದ ವಿಪ್ರಲಂಭ ಶೃಂಗಾರ, ದಾಂಪತ್ಯ ಸರಸವಿರಸಗಳು, ಜೀವನದರ್ಶನ, ನೀತಿ, ಮನುಷ್ಯನ ಮನೋವಿಕಾರಗಳು, ಅವನ ಮುಖವಾಡಗಳು - ಹೀಗೆ ವಿವಿಧ ದೃಷ್ಟಿಗಳಿಂದ ವಿಷಯಗಳನ್ನು ನೋಡಬಹುದಾದರೂ, ಮುಖ್ಯವಾಗಿ ಭಟ್ಟನೇ ಹೇಳುವಂತೆ ಚಂದ್ರವೀಧಿಯ ಮಾಟಗಳು, ಬೇಟಗಳು, ಚಾಟುಗಳು, ನಾಟುಗಳು ಗಾಥಾಸಪ್ತಶತಿಯ ಮಾದರಿಯವು. ಆಂಗ್ಲ ಹಾಸ್ಯೋಕ್ತಿಯ ಸ್ಫೂರ್ತಿ ಕೆಲವು ಕಡೆ ಕಂಡರೂ ಹೆಚ್ಚು ಸ್ಫೂರ್ತಿ ಬಂದಿರುವುದು ಗಾಥಾ ಸಪ್ತಶತಿಯಿಂದ ಎಂಬುದು ಕವಿಯ ಮಾತಿನಿಂದಲೇ ಸ್ಪಷ್ಟವಾಗುತ್ತದೆ. ಹೀಗಾಗಿ ಇದು ಒಂದು ಪರಂಪರೆಯ ಮುಂದುವರಿಕೆಯಾಗಿ ಮುಖ್ಯತ್ವವನ್ನು ಪಡೆದುಕೊಳ್ಳುತ್ತದೆ. ಇದರಲ್ಲಿ ಅನುಭವವು ಕಾವ್ಯಾಭಿವ್ಯಕ್ತಿಯಾಗಿ ಜೀವನದ ಆಸೆ ನಿರಾಸೆಗಳನ್ನು ಹೇಳಿಕೊಳ್ಳುತ್ತಲೇ ಅಂತರ್ಗತವಾದ ತುಂಟತನದ ವಿನೋದಪ್ರಿಯತೆಯಿಂದ ಜೀವನೋತ್ಸಾಹವನ್ನು ಕಳೆದುಕೊಳ್ಳದೆ ಕಾವ್ಯಾಲಾಪಕ್ಕೆ ವಸ್ತುವಾಗುವ ಯೋಗ್ಯತೆಯನ್ನು ಪಡೆದುಕೊಂಡು ಸಾಗುತ್ತದೆ.

ಭರ್ತೃಹರಿ ಮುಂತಾದವರ ಮುಕ್ತಕಗಳನ್ನು ನೋಡಿದಾಗ, ಅವುಗಳಲ್ಲಿ ಕವಿಗಳು ಶೃಂಗಾರದಿಂದ ನೀತಿ, ವೈರಾಗ್ಯಗಳಿಗೆ ಸೋಗಿ ಮನುಷ್ಯನ ಮನಃಸ್ಥಿತಿಯ ಮೂರು ಹಂತಗಳನ್ನು ತೋರಿಸುವುದು ಕಂಡುಬರುತ್ತದೆ. ಆದರೆ ಭಟ್ಟರ ಉದ್ದೇಶ ಈ ನೀತಿಯದಲ್ಲ. ಒಂದು ಘಟ್ಟದ, ಅಂದರೆ ಸಾಹಜಿಕವಾದ ಶೃಂಗಾರದ, ಪ್ರೇಮಜೀವನದ, ಅದರ ಸೋಲು-ಗೆಲುವುಗಳ, ನಂತರ ಕೌಟುಂಬಿಕ ಜೀವನದ ಸರಸವಿರಸಗಳ ಘಟ್ಟವನ್ನೇ ಕವಿಯು ಸ್ವಾರಸ್ಯವಾಗಿ ಸೆರೆಹಿಡಿದಿರುವುದು ಇಲ್ಲಿಯ ವ್ಯಾಪ್ತಿ. ಇದರಲ್ಲಿ ಕವಿಯ ಮನೋಭೂಮಿಕೆಯ ಹೆಜ್ಜೆಗಳನ್ನು ಕಾಣಲು ಪ್ರಯತ್ನಪಡುವುದಕ್ಕಿಂತ ಜೀವನದ ಒಂದು ಘಟ್ಟದ

ಜೀವನೋತ್ಸಾಹದ ಸ್ವಪರಾನುಭವಗಳ ಸಂಪುಟೀಕರಣ ಹಾಗೂ ಸ್ವಾನುಭವಗಳ ಸಾಧಾರಣೀಕರಣದ ಅಂಶವನ್ನೇ ಮುಖ್ಯವಾಗಿ ನಾವು ನೋಡಬೇಕಾಗಿದೆ. ಅದರಿಂದಲೇ ಇದು ಆಧುನಿಕ ಗಾಥಾಸಪ್ತಶತಿಯೆಂದೆನಿಸಿಕೊಳ್ಳುವುದು. ಈ ದೃಷ್ಟಿಯಿಂದ ಇಂದು ಇದು ಎಲ್ಲರ ಅನುಭವವಾಗಿ, ಎಲ್ಲರಿಗೂ ಆಪ್ತವಾಗುತ್ತದೆ.

ಒಟ್ಟಿನಲ್ಲಿ ಓದುಗರ ಮನಸ್ಸನ್ನು ಯಾವುದೇ ಕಷ್ಟಕ್ಕೊಳಪಡಿಸದೆ ಸ್ವಾರಸ್ಯದ ಸ್ರೋತಸ್ಸಿನಲ್ಲೇ ಮೀಯಿಸುತ್ತ, ಮೈಮರೆಸುತ್ತ ತನ್ನೊಡನೆ ರಸಿಕ ಹೃದಯವನ್ನು ಕೊಂಡೊಯ್ಯುವ ಕಾಂತಶಕ್ತಿ ಇರುವ ಚಂದ್ರವೀಧಿಯು, ತನ್ನ ರಸಿಕ ಮನಸ್ಸಿನ ತುಂಟತನದಿಂದ ಸಹೃದಯರನ್ನು ರೋಮಾಂಚನಗೊಳಿಸುತ್ತದೆ ಹಾಗೂ ಅವರನ್ನು ಯೌವ್ವನದ ಹುರುಪಿನಲ್ಲೇ ಇರಿಸುತ್ತ, ಅವರನ್ನು ಜೀವನೋತ್ಸಾಹದ ವೀಧಿಯಲ್ಲಿ ಓಡಾಡಿಸುವ ಒಂದು ಸರಸಕಾವ್ಯವಾಗಿ ಯಶಸ್ಸನ್ನು ಸಾಧಿಸುತ್ತದೆ.

●

ವರ್ತಮಾನ ಕಾಲ

ವಿದ್ವಾನ್ ಎನ್.ರಂಗನಾಥಶರ್ಮ

ನಮ್ಮ ಸರ್ವ ವ್ಯವಹಾರವೂ ಕಾಲವನ್ನಾಶ್ರಯಿಸಿಕೊಂಡಿದೆ. ಹಗಲು, ರಾತ್ರಿ, ದಿನ, ವಾರ, ತಿಂಗಳು, ವರ್ಷ - ಇವೆಲ್ಲವೂ ಕಾಲ ವಿಭಾಗಗಳು. ಇಂದು, ನಾಳೆ, ನಾಡಿದ್ದುಗಳೂ ಕಾಲವಿಭಾಗಗಳು. ಹತ್ತಿರ, ದೂರ, ಮೆಲ್ಲಗೆ, ಬೇಗನೆ - ಇವನ್ನೂ ಕಾಲದ ಗಣನೆಯಿಂದಲೇ ವಿಂಗಡಿಸಬೇಕಾಗುತ್ತದೆ. ಆತನ ವಯಸ್ಸು ೩೦ ವರ್ಷ ಎನ್ನುತ್ತೇವೆ. ವಯಸ್ಸು ಎಂದರೇನು? ದೇಹಕ್ಕೆ ಅವಸ್ಥಾ ವಿಶೇಷವನ್ನುಂಟು ಮಾಡುವ ಕಾಲಪರಿಮಾಣವೇ ವಯಸ್ಸು. ಬಾಲ್ಯ, ತಾರುಣ್ಯ, ಮುಪ್ಪು - ಇವು ಕಾಲ ಪರಿಣಾಮ ದಿಂದ ಆದ ಅವಸ್ಥಾ ವಿಶೇಷಗಳು. ಸಮಸ್ತ ಪದಾರ್ಥಗಳ ಉತ್ಪತ್ತಿ ಸ್ಥಿತಿ ನಾಶಗಳಿಗೆ ಕಾರಣವಾದದ್ದು ಕಾಲ. ಬೀಜ ಮೊಳೆಯಿತು, ಬಳ್ಳಿ ಚಿಗುರಿತು, ಹೂವಾಯಿತು, ಹಣ್ಣಾಯಿತು - ಎಂಬಲ್ಲಿ ಒಂದು ಕ್ರಮವು ಕಂಡುಬರುತ್ತದೆ. ಹಾಗೆಯೇ ಮಗು ಹುಟ್ಟಿತು, ಬೆಳೆಯಿತು, ಯೌವನ ಬಂದಿತು - ಇತ್ಯಾದಿ ವ್ಯವಹಾರಗಳಲ್ಲಿಯೂ ಕ್ರಮ ಉಂಟು. ಈ ಕ್ರಮವು ಕಾಲಕೃತವಾದದ್ದು ಕ್ರಮರಹಿತವಾದ ಲೋಕಕ್ಕೆ ಒಂದು ಕ್ರಮವನ್ನು ಕಲ್ಪಿಸಿಕೊಡುವುದೇ ಕಾಲ. ವಾಕ್ಯಪದೀಯದಲ್ಲಿ ಭರ್ತೃಹರಿ ಹೇಳುತ್ತಾನೆ -

ನಿರ್ಭಾಸೋಪಗಮೇ ಯೋಽಯಂ ಕ್ರಮವಾನಿವ ದೃಶ್ಯತೇ ।
ಅಕ್ರಮಸ್ಯಾಪಿ ವಿಶ್ವಸ್ಯ ತತ್‌ಕಾಲಸ್ಯ ವಿಚೇಷ್ಟಿತಮ್ ॥ - ಕಾಲ. ೪೬.

''ವಿಶ್ವದ ಪ್ರತಿಯೊಂದು ವಸ್ತುವೂ ಪ್ರಕಾಶಕ್ಕೆ ಬಂದು ತನ್ನ ಸ್ವರೂಪವನ್ನು ಕಾಣಿಸಿಕೊಂಡಾಗ ಸರ್ವವೂ ಒಂದು ಕ್ರಮಕ್ಕೆ ಒಳಪಟ್ಟಿರುವಂತೆ ಕಾಣುತ್ತದೆ. ಕ್ರಮವಿರುವಂತೆ ತೋರಿಸಿಕೊಡುವುದು ಕಾಲದ ಚೇಷ್ಟೆ.''

ಈ ಕಾಲವು ಶರತ್ಕಾಲಾದಿ ರೂಪದಿಂದ ವಿಭಿನ್ನ ತರುಲತೆಗಳ ಫಲಪುಷ್ಪಾದಿ ಪ್ರಸವಶಕ್ತಿಯನ್ನು ತಡೆಯುತ್ತದೆ. ವಸಂತಾದಿ ರೂಪದಿಂದ ಅವನ್ನು ಚಿಗುರಿಸಿ

ಅವುಗಳಲ್ಲಿರುವ ಶಕ್ತಿಯನ್ನು ಅನುಗ್ರಹಿಸುತ್ತದೆ. ಬಾಲ್ಯದಲ್ಲಿ ಪ್ರಾಣಿಗಳ ಕಾಮವಾಸನೆಯು ಪ್ರಬುದ್ಧವಾಗದಂತೆ ತಡೆಯುತ್ತದೆ. ಯೌವನದಲ್ಲಿ ಅದನ್ನು ಕೆರಳಿಸುತ್ತದೆ. ಮುಪ್ಪಿನಲ್ಲಿ ಅದುಮುತ್ತದೆ. ಸಕಲ ಸ್ಥಾವರ ಜಂಗಮಗಳ ಆಕೃತಿ, ಶಕ್ತಿ, ಅಧಿಕಾರಗಳ ಉತ್ಪತ್ತಿ, ಸ್ಥಿತಿ, ವೃದ್ಧಿ, ಕ್ಷಯ, ನಾಶಗಳು ಕಾಲಕ್ಕೆ ಅಧೀನವಾದವು. 'ಕಲಯತೀತಿ ಕಾಲಃ' ಸಕಲ ಪದಾರ್ಥಗಳನ್ನು ತನ್ನ ಸಾಮರ್ಥ್ಯದಿಂದ ಪರಿಣಾಮಗೊಳಿಸತಕ್ಕದ್ದು ಕಾಲ. ಶಾಸ್ತ್ರಕಾರರು 'ಸರ್ವಾಧಾರಃ ಕಾಲಃ' ಎನ್ನುತ್ತಾರೆ. ಪದಾರ್ಥ ಮಾತ್ರಕ್ಕೆ ಆಧಾರವಾದದ್ದು ಕಾಲ.

ಹೀಗೆ ನಮ್ಮ ವ್ಯವಹಾರದಲ್ಲಿ ಕಾಲವು ಹಾಸುಹೊಕ್ಕಾಗಿ ಸೇರಿಕೊಂಡು ಬಿಟ್ಟಿದೆ. ಇಷ್ಟು ಪರಿಚಿತವಾಗಿದ್ದರೂ ಕಾಲವೆಂದರೆ ಯಾವುದು? ಅದರ ಸ್ವರೂಪವೇನು? ಎಂಬ ಪ್ರಶ್ನೆಗೆ ಉತ್ತರ ಹೇಳುವುದು ಕಠಿಣ! ಮನಸ್ಸಿಗೆ ತಿಳಿಯುತ್ತದೆ, ಮಾತಿನಿಂದ ಹೇಳಲು ಬರುವುದಿಲ್ಲ - ಎಂಬಂತಾಗಿದೆ. ಕಣ್ಣು - ಮುಂತಾದ ಇಂದ್ರಿಯಗಳಿಗೆ ಗೋಚರವಲ್ಲವಾದ್ದರಿಂದ ಕಾಲವನ್ನು ಪ್ರತ್ಯಕ್ಷವೆನ್ನಲಾಗುವುದಿಲ್ಲ. ನೈಯಾಯಿಕರು ಹೇಳುವುದೇನೆಂದರೆ -

ಅತೀತಾದಿ ವ್ಯವಹಾರ ಹೇತುಃ ಕಾಲ । ಸ ಚೈಕೋ ವಿಭುರ್ನಿತ್ಯಶ್ಚ । - ತರ್ಕಸಂಗ್ರಹ

'ಅತೀತ - ಆಗಾಮಿ - ವರ್ತಮಾನ ಮುಂತಾದ ವ್ಯವಹಾರಕ್ಕೆ ಯಾವುದು ಕಾರಣವೋ ಅದು ಕಾಲ. ಕಾಲವಿರುವುದು ಒಂದೇ. ಅದು ವಿಭವೂ ನಿತ್ಯವೂ ಆಗಿದೆ.

ಒಂದು ಕ್ರಿಯೆ ನಡೆದು ಹೋಯಿತು, ಮುಂದೆ ನಡೆಯುವುದು, ಈಗ ನಡೆಯುತ್ತಿದೆ ಎಂದು ಜನರು ಹೇಳುತ್ತಾರಲ್ಲವೆ? ಈ ರೀತಿಯಲ್ಲಿ ಭೂತ ಭವಿಷ್ಯದ್ ವರ್ತಮಾನಗಳ ವ್ಯವಹಾರಕ್ಕೆ ನಿಮಿತ್ತವೇನು? ನಿಮಿತ್ತವಿಲ್ಲದೆ ವ್ಯವಹಾರವು ಬರಲು ಶಕ್ಯವಿಲ್ಲ. ಇದಕ್ಕೆ ಮೂಲಭೂತವಾದ ನಿಮಿತ್ತ ಯಾವುದೋ ಅದು ಕಾಲ. ಅದು ಅಖಂಡವಾದ ಒಂದು ವಸ್ತು. ಸರ್ವವ್ಯಾಪಿಯಾದ್ದರಿಂದ ವಿಭು. ಅಂತ್ಯವೇ ಇಲ್ಲವಾದ್ದರಿಂದ ನಿತ್ಯವೆಂದು ಒಪ್ಪಬೇಕು.

ಕಾಲವು ವಿಭುವೆಂದೂ ನಿತ್ಯವೆಂದೂ ಒಪ್ಪಬಹುದು. ಆದರೆ ಅದು ಅಖಂಡವಾದ ಒಂದೇ ವಸ್ತುವೆಂದು ಹೇಳುವುದು ಹೇಗೆ? ಅದು ಅಖಂಡವಾದಲ್ಲಿ ಭೂತ ಭವಿಷ್ಯದ್ ವರ್ತಮಾನಗಳೆಂಬ ಭೇದವಿರುವುದು ಹೇಗೆ? ಇಂದು ನಾಳೆ - ಮುಂತಾದ ವ್ಯವಹಾರವೂ ಕೂಡದೆ ಹೋಗುತ್ತವೆಯೆಂಬ ಆಕ್ಷೇಪ ಮೊದಲಿನಂತೆ ಉಳಿದುಕೊಳ್ಳುತ್ತದೆ. ಇದಕ್ಕಾಗಿ ದಾರ್ಶನಿಕರು ಹೇಳುವುದೇನೆಂದರೆ - ಉಪಾಧಿಭೇದದಿಂದ ಕಾಲವೂ ಸಖಂಡವಾಗಿ ಬೇರೆ ಬೇರೆ ಇರುವಂತೆ ತೋರುತ್ತದೆ. ವ್ಯವಹಾರಕ್ಕೆ ಉಪಾಧಿಭೇದವೇ ನಿಮಿತ್ತ ಎಂದು. ಉಪಾಧಿ ಎಂದರೇನು? ಉಪ = ಸಮೀಪದಲ್ಲಿದ್ದುಕೊಂಡು, ಆಧಿ = ತನ್ನ ಸ್ವರೂಪವನ್ನು ಇನ್ನೊಂದರಲ್ಲಿ ಆಧಾನ ಮಾಡತಕ್ಕದ್ದು ಉಪಾಧಿ. ಗಾಜಿನ ಹಲಗೆಯ ಕೆಳಗಿರುವ ಕೆಂಪುಬಣ್ಣದ ಕಾಗದ ಗಾಜಿಗೆ ಉಪಾಧಿ. ಅದು ತನ್ನ ಕೆಂಪುಬಣ್ಣವನ್ನು ಗಾಜಿನ ಹಲಗೆಯಲ್ಲಿರುವಂತೆ ಮಾಡುತ್ತದೆ. ಹಳದಿಯ ಕಾಗದದಿಂದ ಗಾಜು ಹಳದಿಯಾಗುವಂತೆಯೂ ಕಪ್ಪುಕಾಗದದಿಂದ ಗಾಜು ಕಪ್ಪಾಗಿರುವಂತೆಯೂ ಕಾಣುತ್ತದೆ. ಕಾಗದವು ಗಾಜಿಗೆ ಉಪಾಧಿ. ತನ್ನ ಧರ್ಮವನ್ನು ಇನ್ನೊಂದರಲ್ಲಿ ಅಭಿವ್ಯಂಜಿಸತಕ್ಕದ್ದು ಅದಕ್ಕೆ ಉಪಾಧಿ. ಹಾಗಾದರೆ ಕಾಲಕ್ಕೆ ಉಪಾಧಿ ಯಾವುದು?

ಕ್ರಿಯೆಯೇ ಕಾಲಕ್ಕೆ ಉಪಾಧಿ. ಇದು ನಾವು ಮಾಡುವ ಯಾವುದೇ ಕ್ರಿಯೆಯಾದರೂ ಆಗಬಹುದು. ಆದರೆ ಸರ್ವದಾ ಸರ್ವತ್ರ ಇದ್ದು ಸರ್ವಜನರ ವ್ಯವಹಾರಕ್ಕೂ ಕಾರಣವಾದ ಒಂದು ಕ್ರಿಯೆಯನ್ನು ಆಶ್ರಯಿಸುವುದು ಉತ್ತಮ. ಅದೇ ಸೂರ್ಯನ ಕ್ರಿಯೆ, ಸೂರ್ಯಗತಿ, ಸೂರ್ಯಸ್ಪಂದ. ಭೂಮಿಯು ತಿರುಗುತ್ತದೆಯೆಂಬ ವೈಜ್ಞಾನಿಕ ಸಿದ್ಧಾಂತದಲ್ಲಿಯೂ ಸೂರ್ಯನಿಗೆ ಚಲನೆಯುಂಟು[1]. ಒಂದು ವೇಳೆ ಆತನಿಗೆ ಚಲನೆಯಿಲ್ಲದಿದ್ದರೂ ಚಲನೆಯಿರುವಂತೆ ನಮಗೆ ಕಾಣುವುದರಿಂದ ಲೋಕ

---

1. It is found that the SUN is travelling, with reference to the stars in its neighbourhood, with a speed of approximately 12 miles per second nearly in the direction of the bright star VEGA.- The origin of the earth by W.M. Smart (Page 181)

ವ್ಯವಹಾರವು ನಡೆಯಲೇನೂ ಅಡ್ಡಿಯಿಲ್ಲ. ವಿಜ್ಞಾನಿಗಳೂ ವ್ಯವಹಾರಕ್ಕಾಗಿ ಸೂರ್ಯೋದಯ, ಸೂರ್ಯಾಸ್ತಗಳನ್ನೊಪ್ಪುತ್ತಾರಲ್ಲವೆ? ಸೂರ್ಯನ ಚಲನಕ್ರಿಯೆಯಲ್ಲಿ ಅನಂತ ಸ್ಪಂದಗಳು ನಡೆಯುತ್ತಲೇ ಇರುತ್ತವೆ. ದರ್ಶನಯೋಗ್ಯನಾದ ಸೂರ್ಯನ ಸ್ಪಂದಗಳಿಗೆ ಆಶ್ರಯವಾದ ಕಾಲ ರಾತ್ರಿ. ಹಗಲು ರಾತ್ರಿಗಳ ಸಮುದಾಯ ಒಂದು ದಿನ. ಹೀಗೆಯೇ ದಿನಗಳ ಸಮುದಾಯವನ್ನು ವಾರ, ಪಕ್ಷ, ತಿಂಗಳು, ವರ್ಷಗಳೆಂದು ವಿಂಗಡಿಸಿಕೊಳ್ಳಬಹುದು. ದಿನದ ಅಂತರ್ವಿಭಾಗವನ್ನು ಪೂರ್ವಾಹ್ಣ, ಅಪರಾಹ್ಣ, ಘಂಟೆ, ನಿಮಿಷ, ಸೆಕೆಂಡ್ ಇತ್ಯಾದಿಯಾಗಿ ವಿಭಜಿಸಿಕೊಳ್ಳಬಹುದು. ಸಾರ್ವತ್ರಿಕವಾದ ಲೋಕವ್ಯವಹಾರಕ್ಕೆ ಸೂರ್ಯಸ್ಪಂದವು ಕಾಲೋಪಾಧಿಯಾಗುತ್ತದೆ. ವೈಯಕ್ತಿಕವಾದ ವ್ಯವಹಾರಕ್ಕೆ ನಮ್ಮ ನಮ್ಮ ಕ್ರಿಯೆಯೂ ಉಪಾಧಿಯಾಗಬಹುದು. 'ನಾನು ಬರೆಯುವಾಗ ಮಾತನಾಡಿಸಬಾರದು' ಎಂಬಲ್ಲಿ ಬರೆಯುವ ಕ್ರಿಯೆಯೇ ಕಾಲೋಪಾಧಿಯಾಗಬಹುದು. ದೈಹಿಕವಾದ ಯಾವ ಚೇಷ್ಟೆಯನ್ನೂ ಮಾಡದೆ ಸುಮ್ಮನೆ ಕುಳಿತಿದ್ದಾಗ ಉಸಿರಾಟದ ಕ್ರಿಯೆಯಿಂದ ಅಥವಾ ಮಾನಸ ಕ್ರಿಯೆಯಿಂದ ಕಾಲವನ್ನು ಸಖಂಡವಾಗಿ ಮಾಡಿಕೊಳ್ಳುತ್ತೇವೆ. ಗಡಿಯಾರದ ಮುಳ್ಳಿನ ಚಲನೆಯೂ ಕಾಲಕ್ಕೆ ಉಪಾಧಿಯಾಗುತ್ತದೆ. ಸಾರಾಂಶವೇನೆಂದರೆ : ಕಾಲವು ಸಖಂಡವಾಗಿ ಅಳತೆಗೆ ಸಿಕ್ಕುವುದು ಕ್ರಿಯೆಯಿಂದ ಮಾತ್ರ. ಹೀಗೆ ಕ್ರಿಯೆಯಿಂದ ಪರಿಚ್ಛಿನ್ನವಾದ ಕಾಲವು ಇನ್ನೊಂದು ಕ್ರಿಯೆಗೆ ನೇರವಾಗಿ ಅನ್ವಯಿಸುತ್ತದೆ. ಆದ್ದರಿಂದ ಕಾಲವಾಚಕ ಶಬ್ದಗಳು ಕ್ರಿಯೆಗೆ ವಿಶೇಷಣವಾಗಿರುವುದು ಸಹಜ. ಕ್ರಿಯೆಯ ಮೂಲಕ ಇತರ ದ್ರವ್ಯಗಳಿಗೆ ವಿಶೇಷಣವಾಗಬಹುದು. ಉದಾಹರಣೆಗೆ, 'ರಾಮನು ಹಗಲು ಊಟ ಮಾಡುತ್ತಾನೆ' - ಎಂಬ ವಾಕ್ಯವನ್ನು ಪರಿಶೀಲಿಸಬಹುದು. ಸೂರ್ಯಕ್ರಿಯಾಪರಿಚ್ಛಿನ್ನವಾದ ಕಾಲ ಹಗಲು. ಇದು ಭೋಜನಕ್ರಿಯೆಗೆ ಆಧಾರವಾಗಿ ವಿಶೇಷಣವಾಗಿದೆ. ಭೋಜನಕ್ರಿಯೆಯ ಮೂಲಕ ರಾಮನಿಗೂ ಆಧಾರವಾಗಿದೆ. ಆದ್ದರಿಂದ ಕಾಲವನ್ನು ಸರ್ವಾಧಾರವೆಂದೂ ಸರ್ವಕ್ರಿಯೆಗಳಿಗೆ ನಿಮಿತ್ತ ಕಾರಣವೆಂದೂ ಹೇಳುತ್ತಾರೆ. ಕ್ರಿಯೆಯೊಡನೆ ಕಾಲಕ್ಕೆ ನಿಕಟವಾದ ಸಂಬಂಧ ಉಂಟು. ಕ್ರಿಯೆಯಿಂದ ಅಳತೆಗೊಳಪಟ್ಟು ಸಖಂಡವಾದ ಕಾಲವು ಕ್ರಿಯೆಗೂ ವಿಶೇಷಣವಾಗಿ ಭೇದಕವಾಗಬಲ್ಲುದು. ಭರ್ತೃಹರಿಯು ವಾಕ್ಯ.ಪದೀಯದಲ್ಲಿ -

ಕ್ರಿಯಾಭೇದಾಯ ಕಾಲಸ್ತು ಸಂಖ್ಯಾ ಸರ್ವಸ್ಯ ಭೇದಿಕಾ ॥ - ಕಾಲಸಮುದ್ದೇಶ-೨.

ಎಂದು ಹೇಳಿದ್ದಾನೆ. ಕಾಲವು ಕ್ರಿಯೆಗೆ ವಿಶೇಷಣ. ಸಂಖ್ಯೆಯು ಸರ್ವ ಪದಾರ್ಥಗಳಿಗೂ ವಿಶೇಷಣ. ವಿಶೇಷಣವೆಂದರೆ ಭೇದಕ. ಒಂದನ್ನು ಇನ್ನೊಂದರಿಂದ ವ್ಯಾವೃತ್ತಿಗೊಳಿಸತಕ್ಕದ್ದು ಭೇದಕ. ಪಕ್ಷ ಮಾಸ, ಸಂವತ್ಸರ - ಮೊದಲಾದ ಕಾಲವಾಚಕಗಳು ಸೂರ್ಯಕ್ರಿಯೆಗಳನ್ನು ಅಳತೆ ಮಾಡುವುದರಿಂದ ಭೇದಕಗಳಾಗುತ್ತವೆ. ಸಂಖ್ಯೆಯು ಕ್ರಿಯೆಗೂ ಸಹ ವಿಶೇಷಣವಾಗಿ ಭೇದಕವೆನಿಸಬಲ್ಲದು. ಎರಡು ಕ್ರಿಯೆ, ಮೂರು ಕ್ರಿಯೆ ಎಂದು ವ್ಯವಹಾರ ಉಂಟಷ್ಟೆ.

ಪ್ರತಿಯೊಂದು ಪದಾರ್ಥದಲ್ಲಿರುವ ಸ್ವಾಭಾವಿಕ ಶಕ್ತಿಯನ್ನು ಅರಳಿಸಿ, ಉಳಿಸಿ, ಅಳಿಸಿ ಹಾಕತಕ್ಕದ್ದು ಕಾಲ. ಚಿಗುರೆಲೆ ಹಸಿರು ಬಣ್ಣಕ್ಕೆ ತಿರುಗುವುದು ಕಾಲದ ಮಹಿಮೆಯಿಂದ. ಕೆಲವು ಸಮಯ ಅದೇ ಹಸಿರನ್ನು ಉಳಿಸಿಕೊಳ್ಳುವುದು. ಅನಂತರ ಬಾಡಿ ಬಣ್ಣಗೆಟ್ಟು ಉದುರಿಹೋಗುವುದೂ ಕಾಲದ ಮಹಿಮೆಯಿಂದ. ಬೀಜಗಳಿಗೆ ಮಣ್ಣು, ನೀರು, ಗಾಳಿಗಳನ್ನು ಒದಗಿಸಿದರೂ ಕೂಡಲೇ ಮೊಳಕೆಯಾಗುವುದಿಲ್ಲ. ಅದಕ್ಕೆ ಗೊತ್ತಾದ ಕಾಲವು ಬಂದು ನೆರವು ನೀಡದ ಹೊರತು ಮೊಳೆಯುವುದಿಲ್ಲ. ಕಾಲದಲ್ಲಿ ಅಸಾಧಾರಣವಾದ ಸಾಮರ್ಥ್ಯ ಉಂಟು. ಕಾಲಕ್ಕೆ ಅನುಗ್ರಹ, ಪ್ರತಿಬಂಧ - ಎಂಬ ಎರಡು ಶಕ್ತಿಗಳಿವೆಯೆಂದೂ ಸಮಸ್ತವಿಶ್ವದ ಸೂತ್ರಧಾರನೇ ಕಾಲವೆಂದೂ ಭರ್ತೃಹರಿ ಹೇಳಿದ್ದಾನೆ - ''ಕಾಲಯತಿ ಸಮಸ್ತಭೂತಾನೀತಿ ಕಾಲಃ'' ಸಮಸ್ತ ಪದಾರ್ಥಗಳನ್ನೂ ಅನುಗ್ರಹ ಪ್ರತಿಬಂಧಗಳಿಂದ ನಿಯಮಿಸತಕ್ಕದ್ದು ಕಾಲವೆಂದು ಕಾಲ ಶಬ್ದಕ್ಕೆ ಇನ್ನೊಂದು ವ್ಯುತ್ಪತ್ತಿಯನ್ನು ಆತನು ಹೇಳಿದ್ದಾನೆ. ಮಾವಿನ ಮರವು ಚಿಗುರುವಂತೆ ವಸಂತಕಾಲವು ಅನುಗ್ರಹಿಸುತ್ತದೆ. ಹಲಸಿನ ಮರವು ಫಲವನ್ನು ನೀಡದಂತೆ ಚಳಿಗಾಲವು ಪ್ರತಿಬಂಧಿಸುತ್ತದೆ.

ಕಾಲವು ಈಶ್ವರನ ಒಂದು ಸ್ವಾತಂತ್ರ್ಯ ಶಕ್ತಿಯೆಂದು ಭರ್ತೃಹರಿಯ ಸಿದ್ಧಾಂತವಿದೆ. ಇದರ ವಿವರವನ್ನೂ ಇತರ ಪಕ್ಷಭೇದಗಳನ್ನು ವಾಕ್ಯಪದೀಯದ ಬ್ರಹ್ಮಕಾಂಡದಲ್ಲಿಯೂ ಪ್ರಕೀರ್ಣಕಾಂಡದ ಕಾಲಸಮುದ್ದೇಶದಲ್ಲಿಯೂ ನೋಡಬಹುದು.

ಕಾಲವು ಪರಬ್ರಹ್ಮದ ಅವಿದ್ಯಾಶಕ್ತಿಯೆಂದೂ ಮಾಯೆಯೆಂದೂ, ವ್ಯಾಖ್ಯಾನಕಾರನಾದ ಹೇಲಾರಾಜನು ವಿವರಿಸಿದ್ದಾನೆ. (ನೋಡಿ: ಕಾಲಸಮುದ್ದೇಶ, ಶ್ಲೋಕ ೧೪-೪೬-೭೨). ಈ ಸಂದರ್ಭದಲ್ಲಿ ವಾಲ್ಮೀಕಿ ರಾಮಾಯಣದ ಈ ಶ್ಲೋಕವು ಗಮನಾರ್ಹವಾದದ್ದು. ಕಾಲಪುರುಷನು ಶ್ರೀರಾಮನಿಗೆ ಹೇಳುತ್ತಾನೆ -

> ತವಾಹಂ ಪೂರ್ವಸದ್ಭಾವೇ ಪುತ್ರಃ ಪರಪುರಂಜಯ ।
> ಮಾಯಾಸಂಭಾವಿತೋ ವೀರ ಕಾಲಃ ಸರ್ವಸಮಾಹರಃ ॥ - ಉತ್ತರಕಾಂಡ, ೧೦೪-೨.

''ಹೇ ವೀರಾಗ್ರಣಿ, ನಿನ್ನ ಪೂರ್ವಾವಸ್ಥೆಯಲ್ಲಿ - ನೀನು ಪರಬ್ರಹ್ಮವೆನಿಸಿ ಸತ್ತಾ ಮಾತ್ರ ಸ್ಥಿತಿಯಲ್ಲಿದ್ದಾಗ - ನಿನ್ನ ಮಾಯೆಯಿಂದ ಜನಿಸಿದ ನಿನ್ನ ಪುತ್ರನು ನಾನು! ಸರ್ವಕೃತ್ಯ ನಿರ್ವಾಹಕನಾದ ಕಾಲಪುರುಷನೇ ನಾನು!''

ಬೆಂಗಳೂರಿಗೆ ಮೈಸೂರು ಹತ್ತಿರ, ಡೆಲ್ಲಿ ದೂರ - ಎನ್ನುತ್ತೇವೆ. ಹತ್ತಿರ, ದೂರ ಎಂದರೇನು? ಅಲ್ಪಕ್ರಿಯಾಧಾರವಾದ ಕಾಲದಲ್ಲಿ ಸೇರಬಹುದಾದ ಸ್ಥಳ ಹತ್ತಿರ. ಬಹು ಕ್ರಿಯಾಧಾರವಾದ ಕಾಲದಲ್ಲಿ ಸೇರಬಹುದಾದ ಸ್ಥಳ ದೂರ. ಒಳ್ಳೆಯದು ; ರೈಲು ಪ್ರಯಾಣಕ್ಕೆ ಡೆಲ್ಲಿ ದೂರ, ವಿಮಾನ ಪ್ರಯಾಣಕ್ಕೆ ಹತ್ತಿರ - ಇಲ್ಲಿ ಹೇಗೆ? ಇಲ್ಲಿಯೂ ಕ್ರಿಯಾಧಾರ ಕಾಲದಿಂದಲೇ ವ್ಯವಸ್ಥೆಯನ್ನು ಹೇಳಬೇಕು. ಗಡಿಯಾರದ ಮುಳ್ಳಿನ ಅಲ್ಪಕ್ರಿಯೆಗೆ ಆಧಾರವಾದ ಕಾಲದಲ್ಲಿ ಸೇರಬಹುದಾದ್ದರಿಂದ ವಿಮಾನ ಪ್ರಯಾಣಕ್ಕೆ ಡೆಲ್ಲಿ ಹತ್ತಿರ. ಅದರ ಬಹುಕ್ರಿಯೆಗೆ ಆಧಾರವಾದ ಕಾಲದಲ್ಲಿ ಸೇರಬೇಕಾದ್ದರಿಂದ ರೈಲು ಪ್ರಯಾಣಕ್ಕೆ ದೂರ. ಸೂರ್ಯಸ್ಪಂದನವನ್ನು ಇಲ್ಲಿ ಪರಿಚ್ಛೇದಕವಾಗಿ ಹೇಳಬಹುದು. ಇದೇ ರೀತಿಯಲ್ಲಿ ಬೇಗನೆ - ತಡವಾಗಿ, ಹಿಂದೆ - ಮುಂದೆ, ಬಾಲಕ -ಯುವಕ - ಮುದುಕ ಇತ್ಯಾದಿ ವ್ಯವಹಾರಗಳೆಲ್ಲವೂ ಕ್ರಿಯಾಧಾರವಾದ ಕಾಲದಿಂದಲೇ ನಡೆಯುತ್ತವೆಯೆಂದು ತಿಳಿಯಬಹುದು.

ಅಖಂಡವಾದ ಕಾಲದಿಂದ ವ್ಯವಹಾರ ನಡೆಯುವುದಿಲ್ಲ. ಅದು ಉಪಾಧಿಯಿಂದ ಸಖಂಡವಾದಾಗ ಮಾತ್ರ ವ್ಯವಹಾರ ನಡೆಯುತ್ತದೆ. ಕಾಲವನ್ನು ಸಖಂಡವಾಗಿ ಮಾಡತಕ್ಕ ಉಪಾಧಿ ಕ್ರಿಯೆಯೆಂದು ಸಿದ್ಧವಾಗುತ್ತದೆ. ಹಾಗಿದ್ದರೆ ಅವಶ್ಯವಾದ ಕ್ರಿಯೆಗಳಿಂದಲೇ ವ್ಯವಹಾರವನ್ನು ಸಾಗಿಸಬಹುದಲ್ಲವೇ? ಕಾಲವನ್ನೇಕೆ ಒಪ್ಪಬೇಕು? ಎಂಬ ಪ್ರಶ್ನೆಯೂ ಹುಟ್ಟುತ್ತದೆ. ಆದ್ದರಿಂದಲೇ ಕೆಲವು ದಾರ್ಶನಿಕರು ಕಾಲವೆಂಬ ಪದಾರ್ಥವನ್ನೊಪ್ಪುವುದಿಲ್ಲ. ಜಯಂತಭಟ್ಟನ ನ್ಯಾಯಮಂಜರಿ, ಕುಮಾರುಭಟ್ಟರ ಶ್ಲೋಕವಾರ್ತಿಕ - ಮೊದಲಾದ ಗ್ರಂಥಗಳಲ್ಲಿ ಈ ವಿಷಯದಲ್ಲಿ ವಿಪುಲವಾದ ಚರ್ಚೆ ಇದೆ. ಒಟ್ಟು ಮಥಿತಾರ್ಥ ಇಷ್ಟು -

೧. ಪರಬ್ರಹ್ಮದ ಒಂದು ಸ್ವಾತಂತ್ರ್ಯಶಕ್ತಿಯೇ ಕಾಲ. ಇದನ್ನು ಅವಿದ್ಯೆ ಎನ್ನಬಹುದು. ಪ್ರಕೃತಿಪರಿಣಾಮವೂ ವಿಭುವೂ ಅವಿಚ್ಛಿನ್ನಕ್ಷಣಧಾರಾ ರೂಪವೂ ಆಗಿದೆ. - ವೈಯಾಕರಣರು

೨. ವಿಭುವೂ ನಿತ್ಯವೂ ಏಕವೂ ಅಖಂಡವೂ ಆಗಿದ್ದು ಅತೀತಾದಿ ವ್ಯವಹಾರಕ್ಕೆ ಹೇತುವಾದ ದ್ರವ್ಯವೇ ಕಾಲ. - ನೈಯಾಯಿಕರು

೩. ಶಬ್ದತನ್ಮಾತ್ರದ ಪರಿಣಾಮವೇ ಕಾಲ. ಇದು ಕ್ರಿಯೋಪಾಧಿಯುಳ್ಳ ಆಕಾಶವೇ ಹೊರತು ಬೇರೊಂದು ವಸ್ತುವಲ್ಲ ಅಥವಾ ಸೂರ್ಯಕ್ರಿಯೆಯೇ ಕಾಲ - ಸಾಂಖ್ಯರು

೪. ಕ್ರಿಯೋಪಾಧಿಯುಳ್ಳ ಆಕಾಶವೇ ಕಾಲ. - ಮೀಮಾಂಸಕರು

೫. ಪ್ರತಿಯೊಂದು ವಸ್ತುವಿನ ಪರಿವರ್ತನೆಗೆ ಸಹಾಯಕರಾಗಿ ಅದರ ರೂಪಾಂತರಕ್ಕೆ ನೆರವಾಗತಕ್ಕದ್ದು ಕಾಲದ್ರವ್ಯ. ಇದು ಅನಾದಿ ಅನಂತ. ಇದು ಪ್ರದೇಶವನ್ನು ವ್ಯಾಪಿಸದೇ ಇರುವುದರಿಂದ ಅಸ್ತಿಕಾಯವಲ್ಲ. ಇದು ಅಮೂರ್ತದ್ರವ್ಯ. -ಜೈನ ಸಿದ್ಧಾಂತ.

೬. ವ್ಯವಹಾರಕ್ಕಾಗಿ ಕಲ್ಪಿತವಾದ ಸಾಪೇಕ್ಷಜ್ಞಾನವೇ ಕಾಲ. - ಬೌದ್ಧ ಸಿದ್ಧಾಂತ.

ಸಮಸ್ತ ಪದಾರ್ಥಗಳಿಗೂ ಕಾಲವು ಆಧಾರವಾಗಿರುವುದು ಕಾಲಿಕ ಸಂಬಂಧದಿಂದ. ಅದು ಕ್ರಿಯೆಯಿಂದ ಅಳತೆಗೆ ಸಿಗುತ್ತದೆ. ಕ್ರಿಯಾಪರಿಚ್ಛಿನ್ನವಾಗುತ್ತದೆ. ಸ್ವತಃ ಕಾಲದಲ್ಲಿ ಯಾವ ಕ್ರಿಯೆಯೂ ಇಲ್ಲ. ವರ್ತಮಾನ, ಭೂತ, ಭವಿಷ್ಯತ್ತುಗಳು ಕ್ರಿಯಾ ಸಂಬಂಧದಿಂದ ಆಗತಕ್ಕವು. ಇವುಗಳಲ್ಲಿ ವರ್ತಮಾನಕಾಲವು ಪರಿಶೀಲನಾರ್ಹವಾದದ್ದು.

ವರ್ತಮಾನ ಕಾಲವೆಂದರೇನು? ಈಗ ನಡೆಯುತ್ತಿರುವ ಕಾಲ ವರ್ತಮಾನ ಕಾಲ ಎಂದು ಸಾಮಾನ್ಯವಾಗಿ ಹೇಳುವುದುಂಟು. ಬಾಲಕರಿಗೆ ಸ್ಥೂಲವಾದ ಪರಿಚಯವನ್ನು ಮಾಡಿಕೊಡುವುದಕ್ಕಾಗಿ ಹೇಳುವ ಮಾತೇ ಹೊರತು, ಇದು ಶಾಸ್ತ್ರೀಯವಾದ ಹೇಳಿಕೆಯಲ್ಲ. ಕಾಲವು ಕಣ್ಣಿಗೆ ಕಾಣದು. ಅದರಲ್ಲಿ ಯಾವ ಕ್ರಿಯೆಯೂ ಇಲ್ಲ. ಈಗ ನಡೆಯುತ್ತಿರುವ ವಿವಕ್ಷಿತವಾದ ಯಾವ ಕ್ರಿಯೆಯುಂಟೋ ಅದಕ್ಕೆ ಆಧಾರವಾದ ಕಾಲವನ್ನು ವರ್ತಮಾನ ಕಾಲವೆನ್ನಬಹುದು. ಈಗ ಎಂದರೆ ಕ್ರಿಯಾಪದವನ್ನು ಒಬ್ಬನು ಪ್ರಯೋಗಿಸುವ ಕಾಲದಲ್ಲಿ ಎಂದರ್ಥ. ಏವಂ ಚ ಶಬ್ದ ಪ್ರಯೋಗಾಧಿಕಾರಣಕಾಲದಲ್ಲಿ ವಿವಕ್ಷಿತವಾದ ಕ್ರಿಯೆಗೆ ಅಧಿಕರಣವಾದ ಕಾಲ ವರ್ತಮಾನ ಕಾಲವೆನಿಸುತ್ತದೆ. ಉದಾ : ಹುಡುಗನು ಓದುತ್ತಾನೆ. ಈ ವಾಕ್ಯವನ್ನು ಪ್ರಯೋಗಿಸುವ ಕಾಲದಲ್ಲಿ ಹುಡುಗನ ಓದುವ ಕ್ರಿಯೆ ನಡೆಯುತ್ತಿದೆಯೆಂದು ಇದರಿಂದ ತಿಳಿದುಬರುತ್ತದೆ. ಈ ಸಂದರ್ಭದಲ್ಲಿ ಕ್ರಿಯೆಯೆಂದರೆ ಯಾವುದೆಂದು ಪರಿಶೀಲಿಸಬೇಕಾಗಿದೆ. ಕ್ರಿಯೆಯನ್ನು ಬಿಟ್ಟು ಉಳಿದ ಸಮಸ್ತ ಪದಾರ್ಥಗಳೂ ಸಿದ್ಧಸ್ವರೂಪದಲ್ಲಿರುತ್ತವೆ. ಕ್ರಿಯೆಯು ಮಾತ್ರ ಸಾಧ್ಯಸ್ವರೂಪದಲ್ಲಿ ಪ್ರತೀತವಾಗುತ್ತದೆ. ಸಾಧ್ಯವೆಂದರೆ ಕ್ರಮಜನ್ಯವೆಂದರ್ಥ. ಓದುವ ಕ್ರಿಯೆ ಮಾತ್ರ ಕ್ರಮವಾಗಿ ಜರುಗುತ್ತಿದೆ ಎಂದು ಭೂತಕಾಲವನ್ನು ಪ್ರಯೋಗಿಸಿದಾಗಲೂ ಓದುವ ಕ್ರಿಯೆ ಕ್ರಮವಾಗಿ ಕೆಲವು ಕಾಲದವರೆಗೆ ಜರುಗಿತು ಎಂದೇ ಪ್ರತೀತವಾಗುತ್ತದೆ. ಇದಕ್ಕೆ ಕಾರಣವೇನೆಂದರೆ, ಕ್ರಿಯೆಯು ಘಟಪಟಗಳಂತೆ ಸಿದ್ಧವಸ್ತುವಲ್ಲ. ಹಲವಾರು ಕ್ರಿಯಾವಯವಗಳ ಸಂತಾನವನ್ನೇ ನಾವು ಒಂದು ಕ್ರಿಯೆಯೆಂದು ಕರೆಯುತ್ತಿದ್ದೇವೆ. ಘಟಪಟಗಳಲ್ಲಿಯೂ ಸೂಕ್ಷ್ಮಾವಯವಗಳು ಅದೆಲ್ಲವೂ ಘಟದಲ್ಲಿ ಸಿದ್ಧವಾಗಿ ಕುಳಿತಿರುತ್ತವೆ. ಕ್ರಿಯಾವಲಯಗಳು ಹಾಗಲ್ಲ. ಒಂದೊಂದು ಅವಯವವೂ ಹುಟ್ಟಿನಾಶವಾಗಿಬಿಡುತ್ತದೆ. ಕ್ರಿಯಾವಯವಗಳ ಸಮುದಾಯ ಒಟ್ಟಿಗೆ ಇರುವುದೇ ಇಲ್ಲ.

ಮನೆಯಿಂದ ಪೇಟೆಗೆ ಹೋಗುತ್ತಾನೆ - ಎಂಬಲ್ಲಿ ಹೋಗುವುದೆಂದರೇನು? ಮನೆಯ ಹೊರಗೆ ಮೊದಲನೆಯ ಹಜ್ಜೆಯಿಡುವುದನ್ನಾರಂಭಿಸಿ ಕಾಡನ್ನು ಮುಟ್ಟುವ ಕಡೆಯ ಹಜ್ಜೆಯನ್ನಿಡುವುದೇ ಹೋಗುವುದು. ಅಲ್ಲಿಯವರೆಗೆ ಸಾವಿರಾರು ಹೆಜ್ಜೆಗಳನ್ನಿಡುವುದು ಹೋಗುವ ಕ್ರಿಯೆಯ ಅವಯವಗಳು. ಒಂದು ಹೆಜ್ಜೆಯನ್ನಿಡುವುದರಲ್ಲಿ ಸಹ ಕಾಲನ್ನೆತ್ತುವುದೇ ಮೊದಲಾದ ಅವಾಂತರ ಕ್ರಿಯೆಗಳಿರುತ್ತವೆ. ಈ ಎಲ್ಲ ಕ್ರಿಯೆಗಳ ಸಮುದಾಯವೇ ಹೋಗುವ ಕ್ರಿಯೆ.

ಪಾಠವನ್ನು ಓದುತ್ತಾನೆ - ಎಂದಾಗ ಹಲವಾರು ಅಕ್ಷರಗಳ ಹಲವಾರು ಉಚ್ಚಾರಣ ಕ್ರಿಯೆಗಳ ಸಂತತಿ ಇರುತ್ತದೆ. ಈ ಕ್ರಿಯೆಗಳು ಕ್ರಮಜನ್ಯವಾದವು. ಯಾವ ಅಕ್ಷರದ ಉಚ್ಚಾರಣ ಕ್ರಿಯೆಯನ್ನು ಗಮನಿಸಿ ಓದುತ್ತಾನೆ ಎಂಬ ಶಬ್ದವನ್ನು ಪ್ರಯೋಗಿಸುತ್ತೇವೋ ಆ ಸಮಯದಲ್ಲಿ ಆ ಕ್ರಿಯೆಯು ಭೂತವಾಗಿರುತ್ತದೆ! ಉಳಿದ ಕ್ರಿಯೆಗಳು ಭವಿಷ್ಯತ್ತಿಗೆ ಸೇರತಕ್ಕವು! ವರ್ತಮಾನ ಕ್ರಿಯೆ ಯಾವುದು? ಈ ವಿಚಾರವನ್ನು ಕುರಿತು ಪತಂಜಲಿಯ ವ್ಯಾಕರಣ ಮಹಾಭಾಷ್ಯದಲ್ಲಿ ರೋಚಕವಾದ ವಿಚಾರವು ಪ್ರವೃತ್ತವಾಗಿದೆ. 'ವರ್ತಮಾನೇ ಲಟ್' ಎಂಬ ಪಾಣಿನಿಸೂತ್ರವನ್ನು ವ್ಯಾಖ್ಯಾನಿಸುವಾಗ ವರ್ತಮಾನ ಕಾಲವೇ ಇಲ್ಲವೆಂದು ಪೂರ್ವಪಕ್ಷಿ ಹೇಳುತ್ತಾನೆ -

> ಮೀಮಾಂಸಕಂ ಮನ್ಯಮಾನೋ ಯವಾ ಮೇಧಾವಿಸಂಮತಃ ।
> ಕಾಕಂ ಸ್ಮೇಹಾನು ಪೃಚ್ಛತಿ ಕಿಂ ತೇ ಪತಿತ ಲಕ್ಷಣಮ್ ॥
> ಅನಾಗತೇ ನ ಪತಸಿ ಅತಿಕ್ರಾಂತೇ ಚ ಕಾಕ ನ ।
> ಯದಿ ಸಂಪ್ರತಿ ಪತಸಿ ಸರ್ವೋ ಲೋಕಃ ಪತತ್ಯಯಮ್ ॥
> ಹಿಮವಾನಪಿ ಗಚ್ಛತಿ ॥

ತಾನು ವಿಚಾರಶೀಲನೆಂದು ತಿಳಿದುಕೊಂಡಿರತಕ್ಕವನೂ ವಿದ್ವನ್ಮಾನ್ಯನೂ ಆದ ಒಬ್ಬ ಯುವಕನು ಕಾಗೆಯನ್ನು ಕುರಿತು ಹೀಗೆ ಪ್ರಶ್ನೆ ಮಾಡಿದನಂತೆ "ಎಲೈ ಕಾಗೆ, ನೀನು ಹಾರುತ್ತೀಯೆ - ಎನ್ನುತ್ತಾರಲ್ಲ, ಅದು ಹೇಗೆ? ಭವಿಷ್ಯತ್ಕಾಲದಲ್ಲಿ 'ಹಾರುತ್ತೀಯೆ' ಎನ್ನಲಾಗುವುದಿಲ್ಲ. ಭೂತಕಾಲದಲ್ಲಿಯೂ ಹಾಗೆ ಹೇಳಲಾಗುವುದಿಲ್ಲ. ಹೀಗಿದ್ದರೂ ನೀನು 'ಈಗ ಹಾರುತ್ತೀಯೆ' ಎಂದು ಹೇಳಬಹುದಾದರೆ, 'ಸಮಸ್ತ ಜನರೂ ಹಾರುತ್ತಿದ್ದಾರೆ' ಎಂದು ಹೇಳಬಹುದು. 'ಹಿಮಾಲಯ ಪರ್ವತವೂ ಹೋಗುತ್ತಿದೆ' ಎಂದು ಹೇಳಬಹುದು!

ವಿವರಣೆ : ಈ ಶ್ಲೋಕದಲ್ಲಿ 'ಪತ' ಧಾತು ಹಾರು ಎಂಬ ಅರ್ಥದಲ್ಲಿ ಪ್ರಯುಕ್ತವಾಗಿದೆ. 'ಪತಿತ' = ಹಾರುವ ಕ್ರಿಯೆ. 'ಕಾಗೆ ಹಾರುತ್ತದೆ' - ಎಂಬ ಪ್ರಯೋಗ ಉಂಟಷ್ಟೆ. ಈ ಹಾರುವ ಕ್ರಿಯೆ ಅಸಂಖ್ಯಾತ ಹಾರುವ ಕ್ರಿಯೆಗಳ ಸಮುದಾಯ. ಯಾವ ಕ್ರಿಯೆಯನ್ನು ವಕ್ತಾರನು ಗುರುತಿಸಿ ಶಬ್ದ ಪ್ರಯೋಗ ಮಾಡುತ್ತಾನೋ ಆ ಕ್ರಿಯೆಯು 'ಕಾಗೆ ಹಾರುತ್ತದೆ' ಎಂದು ಪ್ರಯೋಗ ಮಾಡುವಷ್ಟರಲ್ಲಿ ಗತಿಸಿ ಹೋಗಿರುತ್ತದೆ. ಆದ್ದರಿಂದ ಅದನ್ನು ಕುರಿತು ಹೇಳುವುದಾದರೆ 'ಹಾರಿತು' ಎಂದು ಭೂತಕಾಲವನ್ನು ಬಳಸಬೇಕು. ಮುಂದೆ ನಡೆಯುವ ಕ್ರಿಯೆಯನ್ನು ಗಮನಿಸಿ ಹೇಳುವುದಾದರೆ 'ಹಾರುವುದು' ಎಂಬ ಭವಿಷ್ಯತ್ಕಾಲದಲ್ಲಿ ನಿರ್ದೇಶಿಸಬೇಕು. ಆದ್ದರಿಂದ 'ಹಾರುತ್ತದೆ' ಎಂಬ ವರ್ತಮಾನಕಾಲದ ಪ್ರಯೋಗಕ್ಕೆ ಅವಕಾಶವೇ ಇಲ್ಲ. ಹಾರುವ ಕ್ರಿಯೆ ವರ್ತಮಾನವಲ್ಲದಿದ್ದರೂ 'ಹಾರುತ್ತದೆ' ಎಂದು ಪ್ರಯೋಗಿಸಬಹುದಾದರೆ, 'ಸಮಸ್ತ ಜನರೂ ಹಾರುತ್ತಿದ್ದಾರೆ, ಹಿಮಾಲಯವು ನಡೆಯುತ್ತಿದೆ' - ಎಂದೂ ಪ್ರಯೋಗಿಸಬಹುದಷ್ಟೇ! - ಎಂದು ಆಕ್ಷೇಪ. ನಿಷ್ಪನ್ನವಾದದ್ದು ಭೂತಕಾಲಕ್ಕೆ ಸೇರುತ್ತದೆ. ಅನಿಷ್ಪನ್ನವಾದದ್ದು ಭವಿಷ್ಯತ್ ಕಾಲಕ್ಕೆ ಸೇರುತ್ತದೆ. ನಿಷ್ಪನ್ನ - ಅನಿಷ್ಪನ್ನಗಳಿಗೆ ವ್ಯತಿರಿಕ್ತವಾದ ಕ್ರಿಯೆ ಇಲ್ಲ - ಎಂದು ಅಭಿಪ್ರಾಯ.

ಈ ಆಕ್ಷೇಪಕ್ಕೆ ಸಮಾಧಾನ ಹೀಗೆ : - 'ಓದು' ಎಂಬ ಧಾತುವಿನಿಂದ ವಾಚ್ಯವಾದ ಎಲ್ಲ ವರ್ಣೋಚ್ಚಾರಣಗಳ ಕ್ರಿಯೆಗಳ ಸಮುದಾಯವನ್ನು ಇಲ್ಲಿ ಓದುವ ಕ್ರಿಯೆಯೆಂದು ತಿಳಿಯಬೇಕು. ಈ ಕ್ರಿಯೆಗಳು ಕ್ರಮಜನ್ಯಗಳೂ ಶೀಘ್ರವಿನಾಶಿಗಳೂ ಆದ್ದರಿಂದ ಅವುಗಳ ಸಮುದಾಯವೇ ಇಲ್ಲವೆಂಬುದೇನೋ ದಿಟ. ಆದರೆ ಸಂಕಲನಾತ್ಮಕ ಬುದ್ಧಿಯಿಂದ ಈ ಕ್ರಿಯೆಗಳೆಲ್ಲವನ್ನೂ ಸೇರಿಸಿ ಸಮುದಾಯವನ್ನು ಕಲ್ಪಿಸಿಕೊಳ್ಳಲು ಸಾಧ್ಯವಿದೆ. ಈ ಕಲ್ಪಿತ ಸಮುದಾಯವೇ 'ಓದು' ಧಾತುವಿನ ಅರ್ಥ. ಭರ್ತೃಹರಿ ಹೀಗೆ ವಿವರಿಸಿದ್ದಾನೆ -

> ಗುಣಭೂತೈರವಯವೈಃ ಸಮೂಹಃ ಕ್ರಮಜನ್ಮನಾಂ ।
> ಬುದ್ಧ್ಯಾ ಪ್ರಕಲ್ಪಿತಾಭೇದಃ ಕ್ರಿಯೇತಿ ವ್ಯಪದಿಶ್ಯತೇ ॥ - ವಾಕ್ಯಪದೀಯ, ಕ್ರಿಯಾಸಮುದ್ದೇಶ - ೪.

ಕ್ರಮಜನ್ಯವಾದ ವ್ಯಾಪಾರಗಳ (ಸ್ಪಂದಗಳ) ಸಮುದಾಯವೇ ಕ್ರಿಯೆಯೆನಿಸುತ್ತದೆ. ಸಮುದಾಯದಿಂದ ಉಂಟಾಗುವ ಫಲಕ್ಕೆ ಅದರ ಅವಯವ ಕ್ರಿಯೆಗಳು ನೆರವು ನೀಡುವುದರಿಂದ ಗುಣಭೂತಗಳೆನಿಸುತ್ತವೆ. ಗುಣಭೂತಗಳಾದ್ದರಿಂದ ಅವುಗಳಿಗೆ ಪ್ರಾಧಾನ್ಯವಿಲ್ಲ, ಸಮುದಾಯಕ್ಕೆ ಮಾತ್ರ ಪ್ರಾಧಾನ್ಯವಿರುತ್ತದೆ. ಸಮುದಾಯವು ಒಂದೆಂದು ಸಂಕಲನಾತ್ಮಕ ಬುದ್ಧಿಯಿಂದ ಕಲ್ಪಿತವಾಗಿರುತ್ತದೆ.

ಈ ಸಮೂಹದ ಅವಯವ ಕ್ರಿಯೆಗಳಲ್ಲಿ ಮೊದಲನೆಯ ಆರಂಭವಾಗಿ, ಕಡೆಯದು ಮುಗಿಯದೆ ಇದ್ದಾಗ ವರ್ತಮಾನಕಾಲ - ಪ್ರಾರಬ್ಧ + ಅಪರಿಸಮಾಪ್ತತ್ವಂ ವರ್ತಮಾನತ್ವಮ್ ಈ ಅವಯವ ಕ್ರಿಯೆಗಳಲ್ಲಿ ಅಂತ್ಯವಾದ ಕ್ರಿಯೆಯು ಮುಗಿದಾಗ ಭೂತಕಾಲ. ಆದಿಕ್ರಿಯೆಯು ಆರಂಭವಾಗದಿದ್ದಾಗ ಭವಿಷ್ಯತ್ಕಾಲ ಎಲ್ಲ ಕ್ರಿಯಾಪದಗಳಲ್ಲಿಯೂ ಈ ಲಕ್ಷಣಗಳನ್ನು ಅನುಗತವಾಗಿ ಕಂಡುಕೊಳ್ಳಬಹುದು.

ಈ ಪ್ರಯೋಗಗಳನ್ನು ನೋಡಿ : 'ದೇವರು ಹಿಂದೆ ಇದ್ದನು, ಮುಂದೆಯೂ ಇರುವನು, ಈಗಲೂ ಇದ್ದಾನೆ. ಹಿಮಾಲಯವು ಹಿಂದೆ ಇದ್ದಿತು, ಮುಂದೆಯೂ ಇರುವುದು, ಈಗಲೂ ಇದೆ. ಬೆಂಕಿಯಲ್ಲಿ ಸುಡುವ ಶಕ್ತಿ ಹಿಂದೆ ಇದ್ದಿತು,

ಮುಂದೆಯೂ ಇರುವುದು, ಈಗಲೂ ಇದೆ''. ಇಲ್ಲಿ ಇರುವ ಕ್ರಿಯೆ ನಿತ್ಯಪ್ರವೃತ್ತವಾದದ್ದು. ಇದಕ್ಕೆ ಪ್ರಾರಂಭವೂ ಇಲ್ಲ, ಪರಿಸಮಾಪ್ತಿಯೂ ಇಲ್ಲ. ಆದರೆ ಮೂರು ಕಾಲಗಳಲ್ಲಿಯೂ 'ಇರು' ಧಾತುವಿಗೆ ಪ್ರಯೋಗ ಬಂದಿದೆ. ಇರುವಿಕೆ ಎಂಬ ಕ್ರಿಯೆ ಪರಿಸಮಾಪ್ತವಾಗಿಲ್ಲವಾದ್ದರಿಂದ ಭೂತಕಾಲ ಹೇಗೆ? ಈ 'ಇರುವ' ಕ್ರಿಯೆ ಈಗಲೂ ನಡೆಯುತ್ತಿರುವಾಗ ಭವಿಷ್ಯತ್ಕಾಲ ಹೇಗೆ? ವರ್ತಮಾನ ಕಾಲವು ಭವಿಷ್ಯತ್ತುಗಳಿಗೆ ಪ್ರತಿದ್ವಂದ್ವಿಯಾದದ್ದು. ಯಾವುದಕ್ಕೆ ಭೂತಭವಿಷ್ಯತ್ತುಗಳಿಲ್ಲವೊ ಅದನ್ನು ವರ್ತಮಾನವೆನ್ನಲಾಗದು. ಏಕೆಂದರೆ, ಇದು ಸಾಪೇಕ್ಷವಾದದ್ದು. ದೊಡ್ಡದು ಇದ್ದಾಗ ಚಿಕ್ಕದು ಎಂಬ ಪ್ರಯೋಗ ಸಾಧ್ಯ. ದೊಡ್ಡದೇ ಇಲ್ಲದಾಗ ಚಿಕ್ಕದು ಎಂಬುದು ಅರ್ಥಶೂನ್ಯವಾಗುತ್ತದೆ. ಅಲ್ಲದೆ ಅವಯವ ಕ್ರಿಯೆಗಳಲ್ಲಿ ಮೊದಲನೆಯದು ಪ್ರಾರಂಭವಾದಾಗ ವರ್ತಮಾನ ಕಾಲ ಎಂದು ಹೇಳಿದ್ದೇವೆ. ಮೇಲ್ಕಂಡ ಉದಾಹರಣೆಗಳಲ್ಲಿ ಇರುವ ಕ್ರಿಯೆ ನಿತ್ಯ ಪ್ರವೃತ್ತವಾದ್ದರಿಂದ ಅವಯವ ಕ್ರಿಯೆಯ ಪ್ರಾರಂಭವೇ ಇಲ್ಲ. ಆದಕಾರಣ ವರ್ತಮಾನಕಾಲದ ಪ್ರಯೋಗವೂ ಸಾಧುವಾಗಲಾರದು.

ಈ ಆಕ್ಷೇಪಗಳಿಗೆ ಸಮಾಧಾನ ಹೀಗೆ : ಸಮಸ್ತ ಭಾವಪದಾರ್ಥಗಳು ಅನ್ಯೋಪಾಧಿಯಿಂದ ಭೇದವನ್ನು ತಳೆಯುತ್ತವೆ. ಸ್ವತಃ ಅವುಗಳಲ್ಲಿ ಯಾವ ಭೇದವೂ ಗೋಚರಿಸಲಾರದು. ನಮ್ಮ ವ್ಯವಹಾರವೆಲ್ಲವೂ ಸಾಪೇಕ್ಷವಾಗಿಯೇ ಪ್ರವೃತ್ತವಾಗಿರುತ್ತವೆ. ಹೇಗೆಂದರೆ, 'ಚಿನ್ನವು ಬೆಲೆಬಾಳುವ ಲೋಹ' ಈ ವಾಕ್ಯದಲ್ಲಿ ಇತರ ಲೋಹಗಳಿರುವುದರಿಂದ ಚಿನ್ನದ ಪೃಥಕ್ಕರಣ ಸಾಧ್ಯವಾಗಿದೆ. ಕಡಿಮೆ ಬೆಲೆಯ ಲೋಹವಿರುವುದರಿಂದಲೇ 'ಬೆಲೆ ಬಾಳುವ' ಎಂಬ ವಿಶೇಷಣವು ಸಾರ್ಥಕವಾಗುತ್ತದೆ. ಲೋಹೇತರ ವಸ್ತುವಿರುವುದರಿಂದಲೇ ಚಿನ್ನವನ್ನು ಲೋಹವೆಂದು ಹೇಳಬೇಕಾಗಿದೆ. ಅವನು ಓದುತ್ತಿದ್ದಾನೆ - ಎಂಬ ವಾಕ್ಯದಲ್ಲಿ ಓದಿಗಿಂತ ಇತರ ಕ್ರಿಯೆ ಸಾಧ್ಯವಾದ್ದರಿಂದಲೇ ಆ ಕ್ರಿಯೆಯಲ್ಲದ ಓದುವ ಕ್ರಿಯೆ ನಡೆಯುತ್ತಿದೆ - ಎಂದು ಹೇಳಲು ಸಾಧ್ಯ. ಹಿಂದೆ ಈ ವಿಚಾರವನ್ನು ಪ್ರಸ್ತಾವಿಸಿದ್ದಾಗಿದೆ. ಭರ್ತೃಹರಿ ಹೇಳುತ್ತಾನೆ -

> ಪರತೋ ಭಿದ್ಯತೇ ಸರ್ವಮಾತ್ಮಾ ತು ನ ವಿಕಲ್ಪ್ಯತೇ ।
> ಪರ್ವತಾದಿಸ್ಥಿತಿಸ್ತಸ್ಮಾತ್ ಪರರೂಪೇಣ ಭಿದ್ಯತೇ ॥ - ವಾಕ್ಯ, ಕಾಲಸಮುದ್ದೇಶ - ೮೦.

'ಸಮಸ್ತ ಭಾವಪದಾರ್ಥವೂ ಅನ್ಯನಿಮಿತ್ತದಿಂದ ನಾನಾಭೇದವನ್ನು ಪಡೆಯುತ್ತದೆ. ಸ್ವಯಂ ತಾನಾದರೋ (ಅನ್ಯೋಪಾಧಿ ಇಲ್ಲದಿದ್ದಾಗ) ಯಾವ ಭೇದ ವಿಕಲ್ಪವನ್ನು ಪಡೆಯುವುದಿಲ್ಲ. ಆದ್ದರಿಂದ ಪರ್ವತಾದಿ ನಿತ್ಯವಸ್ತುಗಳ ಸತ್ತೆಯೂ ಅನ್ಯಸತ್ತಾರೂಪನಿಮಿತ್ತದಿಂದ ಭೇದವನ್ನು ಪಡೆಯುತ್ತದೆ'.

ಪ್ರಕೃತಿ, ನಿತ್ಯವಸ್ತುಗಳಾದ ದೇವರು, ಹಿಮಾಲಯ - ಮೊದಲಾದವುಗಳ ಇರುವಿಕೆಯೇ ಸತ್ತಾ. ಈ ಸತ್ತೆಗೆ ಸ್ವತಃ ಕಾಲಭೇದವಿಲ್ಲವಾದರೂ ಸಹಚರಿತವಾದ ಇತರ ವಸ್ತುಗಳಾದ ಅನಿತ್ಯಸತ್ತಾನಿಮಿತ್ತದಿಂದ ಕಾಲಭೇದವು ಬರುತ್ತದೆ. ದೇವರು ಹಿಂದೆಯೂ ಇದ್ದನು - ಎಂಬ ವಾಕ್ಯವನ್ನು ತೆಗೆದುಕೊಳ್ಳೋಣ. ಈ ವಾಕ್ಯದಲ್ಲಿ 'ಹಿಂದೆಯೂ' ಎಂದರೆ ಯಾವಾಗ? 'ಲಕ್ಷವರ್ಷಗಳ ಹಿಂದೆ' ಎನ್ನಬಹುದು. ಲಕ್ಷವರ್ಷಗಳ ಹಿಂದೆ ಎಂಬುದನ್ನು ಅನ್ಯೋಪಾಧಿಯಿಂದಲೇ ಹೇಳಬೇಕಾಗುತ್ತದೆಯೆಂದು ಪೂರ್ವದಲ್ಲಿಯೇ ತೋರಿಸಿಕೊಟ್ಟಿದ್ದೇವೆ. ಲಕ್ಷವರ್ಷಗಳ ಹಿಂದೆ ಇದ್ದ ಮಾನವನ ಸತ್ತಾ ಕಾಲದಲ್ಲಿ ಅಥವಾ ಲಕ್ಷವರ್ಷಗಳ ಹಿಂದೆ ಸೂರ್ಯನು ಸಂಚರಿಸುತ್ತಿದ್ದ ಕಾಲದಲ್ಲಿ - ಎಂದೇ ಹಿಂದೆಯೂ ಎಂಬುದರ ಅರ್ಥವನ್ನು ವಿವರಿಸಬೇಕು. ಇಲ್ಲಿ ಆ ಮಾನವನ ಸತ್ತೆ, ಸೂರ್ಯನ ಆ ಸಂಚಾರ ಭೂತವಾಗಿದೆ. ಈ ಬಗೆಯ ಭೂತತ್ವ ವಿಶಿಷ್ಟ ಕಾಲದಲ್ಲಿ ದೇವರು ಇದ್ದನು - ಎಂದು ಹಿಂದೆ ಹೇಳಿದ ವಾಕ್ಯದ ಅರ್ಥ. ಈ ಭೂತತ್ವವು ದೇವರ ಸತ್ತೆಗೆ ಉಪಾಧಿ - ವಿಶೇಷಣ. ವಿಶೇಷಣಗತವಾದ ಭೂತತ್ವವನ್ನು ದೇವರ ಸತ್ತೆಯಲ್ಲಿ ಆರೋಪಿಸಿ 'ದೇವರು ಹಿಂದೆಯೂ ಇದ್ದನು' ಎಂದು ಭೂತಕಾಲದ ನಿರ್ದೇಶನ ಬಂದಿದೆ. ಚೀನ ಯಾತ್ರಿಕನು ಭಾರತ ದೇಶಕ್ಕೆ ಬರುವಾಗ ಹಿಮಾಲಯ ಪರ್ವತವು ನಡುವೆ ಇದ್ದಿತು. ಇಲ್ಲಿ ಚೀನ ಯಾತ್ರಿಕನ ಆಗಮನವು ಭೂತವಾದದ್ದು. ಈ ಭೂತತ್ವವನ್ನು ಹಿಮಾಲಯದ ಸತ್ತೆಯಲ್ಲಿಯೂ ಆರೋಪಿಸಿದ್ದೇವೆ. ಲೋಕವ್ಯವಹಾರವಿರುವುದೆಲ್ಲವೂ ಹೀಗೆಯೇ. ಶ್ರೀರಾಮನಿದ್ದಾಗ ರಾಜನಾದ ವಿಶ್ವಾಮಿತ್ರನಿರಲಿಲ್ಲ - ಎಂದು

ಹೇಳಬಹುದಷ್ಟೇ? ವಿಶ್ವಾಮಿತ್ರ ಮುನಿಯಿದ್ದಾಗ ಈ ಮಾತು ಹೇಗೆ ಯುಕ್ತವಾಗುತ್ತದೆ? ರಾಜತ್ವ ವಿಶಿಷ್ಟನಾದ ವಿಶ್ವಾಮಿತ್ರ ಮುನಿಯಿದ್ದಾಗ ಈ ಮಾತು ಹೇಗೆ ಯುಕ್ತವಾಗುತ್ತದೆ? ರಾಜತ್ವ ವಿಶಿಷ್ಟನಾದ ವಿಶ್ವಾಮಿತ್ರನಿರಲಿಲ್ಲ ಎಂದರೆ ವಿಶ್ವಾಮಿತ್ರನಲ್ಲಿ ಆಗ ರಾಜತ್ವ ಇರಲಿಲ್ಲ. ರಾಜತ್ವದ ಅಭಾವವನ್ನು ವಿಶ್ವಾಮಿತ್ರ ಮುನಿಯ ಸತ್ತೆಯಲ್ಲಿ ಆರೋಪಿಸಿ 'ವಿಶ್ವಾಮಿತ್ರನಿರಲಿಲ್ಲ' ಎಂದು ಪ್ರಯೋಗಿಸಿದ್ದೇವೆ. ವಿಶೇಷಣಾಭಾವ ಪ್ರಯುಕ್ತವಾಗಿ ವಿಶಿಷ್ಟಾಭಾವವನ್ನು ಹೇಳಬಹುದೆಂದು ಶಾಸ್ತ್ರೀಯ ಸಿದ್ಧಾಂತವಿದೆ. ನಮ್ಮ ಬಳಿ ಹತ್ತಿಯ ಬಟ್ಟೆಯೊಂದೇ ಇದ್ದಾಗ ರೇಷ್ಮೆಯ ಬಟ್ಟೆ ಇಲ್ಲ ಎನ್ನಬಹುದಷ್ಟೆ? ಮರ್ಫಿ ರೇಡಿಯೋ ಇದ್ದಾಗ ಫಿಲಿಪ್ಸ್ ರೇಡಿಯೋ ಇಲ್ಲ - ಎನ್ನಬಹುದಷ್ಟೆ? ನಮ್ಮ ಬಳಿ ಬಟ್ಟೆಯೂ ಇದೆ, ರೇಡಿಯೋ ಕೂಡ ಇದೆ. ವಿಶೇಷಣಾಭಾವಪ್ರಯುಕ್ತ ವಿಶಿಷ್ಟಾಭಾವ - ಎನ್ನುವುದಕ್ಕೆ ಇದು ಉದಾಹರಣೆ. ಇದೇ ರೀತಿಯಲ್ಲಿ ನಿತ್ಯಪ್ರವೃತ್ತ ಕ್ರಿಯಾಸ್ಥಳದಲ್ಲಿ ಭವಿಷ್ಯತ್ಕಾಲವನ್ನೂ ವರ್ತಮಾನಕಾಲವನ್ನೂ ಊಹಿಸಿಕೊಳ್ಳಬಹುದು.

ಕನ್ನಡದಲ್ಲಿ ವರ್ತಮಾನಕಾಲ

ವ್ಯವಹಾರದಲ್ಲಿ ಈ ಮೂರು ಕಾಲಗಳನ್ನು ಸೂಚಿಸುವ ಅವಶ್ಯಕತೆ ಇರುವುದರಿಂದ ಕ್ರಿಯಾಪದಗಳಲ್ಲಿ ಮೂರು ಬಗೆಯ ರೂಪಗಳಿರುವುದು ಸಹಜವಾಗಿದೆ. ಇದು ಎಲ್ಲಾ ಭಾಷೆಗಳಿಗೂ ಅನ್ವಯಿಸುತ್ತದೆಯಾದ್ದರಿಂದ ಕನ್ನಡದಲ್ಲಿಯೂ ಕಾಲತ್ರಯದ ರೂಪಗಳುಂಟು.

ಕೇಶಿರಾಜನು -

ದ ದಪ ವಕಾರಂಗಳ್ ತ
ಪ್ಪದೆ ಕಾಲತ್ರಯವಿಭಕ್ತಿ ಮೂಲದೊಳಕ್ಕುಂ ॥ - ಶಬ್ದ ೨೩೨

ಎಂದು ಸೂತ್ರಿಸಿದ್ದಾನೆ. ಉದಾಹರಣೆಯಾಗಿ,

ಭೂತಕಾಲಕ್ಕೆ - ಪಡೆದಂ, ಪಿಡಿದಂ, ಗೆಲ್ದಂ
ವರ್ತಮಾನಕಾಲಕ್ಕೆ - ಎತ್ತಿದಪಂ, ಒತ್ತಿದಪಂ, ಮಾಡಿದಪಂ
ಭವಿಷ್ಯತ್ಕಾಲಕ್ಕೆ - ಕುಡುವಂ, ಉಡುವಂ, ಮಾಡುವಂ

ಎಂದು ವಿಭಿನ್ನ ರೂಪಗಳನ್ನು ವೃತ್ತಿಯಲ್ಲಿ ತೋರಿಸಲಾಗಿದೆ. ಹೀಗೆಯೇ ನಾಗವರ್ಮನೂ ಭಟ್ಟಾಕಳಂಕನೂ ಕಾಲತ್ರಯವನ್ನೂ ವಿಭಿನ್ನ ಕ್ರಿಯಾರೂಪಗಳನ್ನೂ ಒಪ್ಪಿದ್ದಾರೆ. ಆಧುನಿಕ ಭಾಷಾವಿಜ್ಞಾನಿಗಳು ಮಾತ್ರ ಕನ್ನಡದಲ್ಲಿ ವರ್ತಮಾನಕಾಲವಿಲ್ಲ - ಎಂದು ಹೇಳಿದ್ದಾರೆ. ವರ್ತಮಾನಕಾಲ ಮತ್ತು ಭವಿಷ್ಯತ್ಕಾಲದ ಕ್ರಿಯಾ ರೂಪಗಳು ಒಂದೇ ಬಗೆಯವಾದ್ದರಿಂದ ಭೂತ - ಅಭೂತ ಎಂದು ಕಾಲದ್ವಯವನ್ನು ಮಾತ್ರ ಒಪ್ಪಬೇಕೆಂದು ಅವರ ಅಭಿಪ್ರಾಯವಿರುತ್ತದೆ. ಆದರೆ ಕೇಶಿರಾಜನೇ ಮೊದಲಾದ ಸುಪ್ರಸಿದ್ಧ ವೈಯಾಕರಣರ ನಿರೂಪಣೆಯನ್ನು ಒಪ್ಪದಿರಲು ಸಾಕಷ್ಟು ಆಧಾರಗಳಿವೆಯೆ? ಈ ವೈಯಾಕರಣರು ವಿಪುಲವಾಗಿ ಪ್ರಾಚೀನ ಕಾವ್ಯಗಳನ್ನು ಅಭ್ಯಾಸಮಾಡಿದವರು ತಮ್ಮ ಕಾಲದಲ್ಲಿದ್ದ ಶಿಷ್ಟಪ್ರಯೋಗಗಳನ್ನು ಸೂಕ್ಷ್ಮವಾಗಿ ಗಮನಿಸಿದವರು. ಅರೆಬರೆಯ ಭಾಷಾಜ್ಞಾನವಿದ್ದವರು ವ್ಯಾಕರಣಶಾಸ್ತ್ರವನ್ನು ರಚಿಸಲು ಎಂದಿಗೂ ಕೈ ಹಾಕಲಾರರು. ವರ್ತಮಾನಕಾಲ - ಭವಿಷ್ಯತ್ಕಾಲಗಳ ರೂಪಗಳನ್ನು ಸ್ಪಷ್ಟವಾಗಿ ತೋರಿಸಿರುವಾಗ, ಸಾರಾಸಗಟಾಗಿ ಅದೆಲ್ಲವನ್ನು ತಳ್ಳಿಹಾಕುವುದು ಸಾಹಸಕಾರ್ಯವೇ ಸರಿ. ಆ ವೈಯಾಕರಣರ ಕಾಲದಲ್ಲಿ ಆ ರೂಪಗಳಿಗೆ ಸಾಂಕರ್ಯವಿಲ್ಲದೆ ಪೃಥಕ್ ಪ್ರಯೋಗವಿದ್ದೇ ಇರಬೇಕು.

ಹೊಸಗನ್ನಡದಲ್ಲಿ 'ಹೋಗುತ್ತಾನೆ, ಬರುತ್ತಾಳೆ' ಮೊದಲಾದವು ವರ್ತಮಾನ ಕಾಲವನ್ನೂ 'ಹೋಗುವನು, ಬರುವನು' ಮೊದಲಾದವು ಭವಿಷ್ಯತ್ಕಾಲವನ್ನೂ ಸೂಚಿಸುತ್ತವೆಯೆಂದು ಹೊಸಗನ್ನಡ ವ್ಯಾಕರಣದಲ್ಲಿ ಹೇಳಿದ್ದುಂಟು. 'ಹೋಗುವನು, ಬರುವಳು' ಮುಂತಾದ ಪ್ರಯೋಗಗಳು ಈಗ ಆಡುಮಾತಿನಲ್ಲಿ ಲುಪ್ತವಾಗಿದ್ದರೂ ಬರೆವಣಿಗೆಯ ಭಾಷೆಯಲ್ಲಿ

ವಿಪುಲವಾಗಿಯೇ ಕಂಡುಬರುತ್ತಿವೆ. ಆದರೆ ವರ್ತಮಾನಕಾಲದ 'ಹೋಗುತ್ತಾನೆ, ಬರುತ್ತಾಳೆ' ಮೊದಲಾದವನ್ನು ಭವಿಷ್ಯತ್ಕಾಲದಲ್ಲಿಯೂ ಪ್ರಯೋಗಿಸುತ್ತಿದ್ದೇವೆ. ಈ ಬಗೆಯ ಕ್ರಿಯಾಪದಗಳನ್ನು ಉಭಯ ಕಾಲಗಳಲ್ಲಿಯೂ ಪ್ರಯೋಗಿಸುತ್ತಿರುವುದೇ ಭಾಷಾವಿಜ್ಞಾನಿಗಳ ಮೇಲ್ಕಂಡ ಹೇಳಿಕೆಗೆ ಕಾರಣವಾಗಿರಬಹುದು. ಆದರೆ 'ಹೋಗುತ್ತಿದ್ದಾನೆ, ಹೇಳುತ್ತಿದ್ದಾಳೆ' ಎಂಬ ಕ್ರಿಯಾಪದಗಳಲ್ಲಿಯೂ ಇದ್ದಾನೆ, ಇದ್ದಾಳೆ, ಇದೆ ಎಂಬ ಕ್ರಿಯಾಪದಗಳಲ್ಲಿಯೂ ಭವಿಷ್ಯತ್ಕಾಲದ ಸೂಚನೆ ಲೇಶವೂ ಇಲ್ಲ. ಈ ವಿಷಯವನ್ನು ಡಾ॥ ಸಿ.ಓಂಕಾರಪ್ಪನವರು 'ಕನ್ನಡದಲ್ಲಿ ವರ್ತಮಾನಕಾಲ ಇದೆ' - ಎಂಬ ಲೇಖನದಲ್ಲಿ ದೀರ್ಘವಾಗಿ ವಿವರಿಸಿ, ಕನ್ನಡದಲ್ಲಿ ವರ್ತಮಾನಕಾಲವೂ ಇದೆಯೆಂಬುದನ್ನು ಸಮರ್ಥವಾಗಿ ಪ್ರತಿಪಾದಿಸಿದ್ದಾರೆ. (ನೋಡಿ : ಲೋಚನ, ಸಂಪುಟ ೨ - ಜೂನ್ ೧೯೪೯ - ಸಂಚಿಕೆ ೨). 'ಇರು' ಎಂಬ ಧಾತುವಿನ ಮೇಲ್ಕಂಡ ಪ್ರಯೋಗಗಳ ಆಧಾರದಿಂದ ಭಾಷಾವಿಜ್ಞಾನಿಗಳ ಅಭಿಪ್ರಾಯವನ್ನು ವಿವರವಾಗಿ ಆ ಲೇಖನದಲ್ಲಿ ನಿರಾಕರಿಸಿರುವುದರಿಂದ ಇಲ್ಲಿ ಮತ್ತೆ ಅದನ್ನು ಬರೆಯಬೇಕಿದ್ದಿಲ್ಲ. ಅವರ ನಿರೂಪಣೆಗೆ ಪೋಷಕವಾಗಿ ಮಾತ್ರ ಈ ಇನ್ನೊಂದು ಅಂಶವನ್ನು ಸೇರಿಸಿಕೊಳ್ಳಬಹುದು. ಏನೆಂದರೆ ಉಂಟು, ಬಲ್ಲನು - ಎಂಬ ಕ್ರಿಯಾಪದಗಳೂ ವರ್ತಮಾನ ಕಾಲವನ್ನೇ ಬೋಧಿಸುತ್ತವೆ ಮತ್ತು ಈಗ, ಇಂದು - ಎಂಬ ಕ್ರಿಯಾವಿಶೇಷಣಗಳೂ ಸಹ ವರ್ತಮಾನಕಾಲವನ್ನು ಮಾತ್ರ ಬೋಧಿಸುತ್ತವೆ. ಆದ್ದರಿಂದ ಭೂತ - ಅಭೂತ ಎಂದು ಕಾಲವನ್ನು ವಿಂಗಡಿಸುವುದು ಶಾಸ್ತ್ರೀಯವಾಗುವುದಿಲ್ಲ.

ಇಂದು ವರ್ತಮಾನಕಾಲದ ಕ್ರಿಯಾಪದಗಳನ್ನು ಭವಿಷ್ಯತ್ಕಾಲದಲ್ಲಿಯೂ ಪ್ರಯೋಗಿಸುತ್ತಿರುವುದು ದಿಟ. ಭವಿಷ್ಯತ್ಕಾಲದ ಕ್ರಿಯಾರೂಪಗಳು ಆಡುಮಾತಿನಲ್ಲಿ ಲುಪ್ತವಾಗಿರುವುದೂ ದಿಟ. ಇದು ಪ್ರಯೋಗಸಾಂಕರ್ಯ. ಈ ಬಗೆಯ ಸಾಂಕರ್ಯ ಎಲ್ಲ ಭಾಷೆಗಳಲ್ಲಿಯೂ ಕಂಡುಬರುತ್ತದೆ. ವ್ಯವಸ್ಥಿತವಾದ ಸಂಸ್ಕೃತ ಭಾಷೆಯಲ್ಲಿಯೂ ಉಂಟು. ಪಾಣಿನಿಯೇ ಇದನ್ನು ಮನಗಂಡು ''ವರ್ತಮಾನ ಸಾಮೀಪ್ಯೇ ವರ್ತಮಾನವದ್ವಾ'' (ಅಷ್ಟಾ. ೩-೩-೧೩೧) ಎಂಬ ಸೂತ್ರವನ್ನು ರಚಿಸಿ, ಸಮೀಪದ ಭವಿಷ್ಯತ್ತಿನಲ್ಲಿ ವರ್ತಮಾನಕಾಲದ ಪ್ರತ್ಯಯಗಳನ್ನು ವಿಧಿಸಿದ್ದಾನೆ. ಹೀಗಿರುವಾಗ ಜನಸಾಮಾನ್ಯರೂ ಬಳಸತಕ್ಕ ಕನ್ನಡದಲ್ಲಿ ಪ್ರಯೋಗ ಸಾಂಕರ್ಯ ಉಂಟಾಗುವುದರಲ್ಲಿ ಆಶ್ಚರ್ಯವಿಲ್ಲ. ಇದಕ್ಕೆ ಪ್ರಾಚೀನ ವೈಯಾಕರಣರು ಹೊಣೆಯಲ್ಲ. ಯಾವ ಕ್ರಿಯಾಪದಗಳು ವರ್ತಮಾನಕಾಲವನ್ನು ಮಾತ್ರ ಬೋಧಿಸುತ್ತವೆಯೆಂದೂ ಭವಿಷ್ಯತ್ಕಾಲದ ಸೂಚನೆಯ ಲೇಶವೂ ಅವುಗಳಲ್ಲಿಲ್ಲವೆಂದೂ ತಿಳಿದಿದ್ದೆವೋ ಅವನ್ನು ಸಹ ಭವಿಷ್ಯತ್ಕಾಲದಲ್ಲಿ ಪ್ರಯೋಗಿಸಲಾಗುತ್ತಿದೆ! ಈ ಪ್ರಯೋಗಗಳನ್ನು ನೋಡಿ - ''ಈ ಛತ್ರದಲ್ಲಿ ನಾಳೆ ಮದುವೆ ಉಂಟು, ಮುಂದಿನ ತಿಂಗಳು ರಥೋತ್ಸವ ಇದೆ, (ಬೆಂಗಳೂರಿಗೆ ಬರುವವನು ಹೇಳುತ್ತಾನೆ) ಮುಂದಿನ ವಾರ ನಾನು ಬೆಂಗಳೂರಲ್ಲಿದ್ದೇನೆ!''

ಈ ಉದಾಹರಣೆಗಳನ್ನು ನೋಡಿ :

೧. ಭವಿಷ್ಯತ್ಕಾಲದಲ್ಲಿ ಭೂತಕಾಲದ ರೂಪ ಬರುತ್ತದೆ.
ನಾನು ಎದ್ದು ಬಂದೆನೆಂದರೆ ನೀನು ಸತ್ತೆ! ನೀವು ಹೋಗಿ, ನಾನೀಗ ಬಂದೆ.
ಮುಂದಿನ ಮಳೆಗಾಲ ಚೆನ್ನಾಗಿ ನಡೆದರೆ ಒಳ್ಳೆಯ ಬೆಳೆ ಬರುತ್ತಿತ್ತು.

೨. ಭೂತಕಾಲದಲ್ಲಿ ವರ್ತಮಾನಕಾಲದ ರೂಪ ಬರುತ್ತದೆ.
ಭೀಮನು ಅರ್ಜುನನಿಗೆ ಹೇಳುತ್ತಾನೆ - ''ದುರ್ಯೋಧನನು ಶಾಂತಿಗೆ ಒಪ್ಪುವುದಿಲ್ಲ''. ''ದಮನಕನು ಪಿಂಗಳಕನ ಬಳಿಗೆ ಹೋಗುತ್ತಾನೆ''. ''ಅದಕ್ಕೆ ಗಾಂಧೀಜಿ ಉತ್ತರ ಕೊಡುತ್ತಾರೆ''.

ಇವುಗಳಿಗೆಲ್ಲ ಉಪಪತ್ತಿಯುಂಟು. ಶಾಸ್ತ್ರದ ನೆರಳಲ್ಲಿ ಉಪಪತ್ತಿ ಮಾರ್ಗವನ್ನು ಚಿಂತಿಸಬೇಕೇ ಹೊರತು, ಜನಸಾಮಾನ್ಯರ ಪ್ರಯೋಗವನ್ನು ಕಂಡು ಶಾಸ್ತ್ರದ ತಾತ್ತ್ವಿಕ ಸಿದ್ಧಾಂತವನ್ನೇ ಅಲ್ಲಗಳೆಯುವುದು ಯುಕ್ತವಲ್ಲ.

ಸೇವೆ ಬದುಕಿನ ದಿನಚರಿಯ ಮಾರ್ಗ

ಡಾ॥ ಡಿ.ಎಂ. ನಂಜುಂಡಪ್ಪ

ಬಡತನ, ರಾಷ್ಟ್ರೀಯ ಸಂಪತ್ತು ಮತ್ತು ಸೇವೆಯ ಮೌಲ್ಯ :

ಭಾರತದಲ್ಲಿ ಅಪಾರ ಪ್ರಕೃತಿದತ್ತವಾಗಿ ಬಂದ ಸಂಪತ್ತು, ಪುರಾತನ ಕಾಲದಿಂದ ಬಂದಿರುವ ಸಾಂಸ್ಕೃತಿಕ ಹಿನ್ನೆಲೆ ಮತ್ತು ದೊಡ್ಡ ಜನಸಂಖ್ಯೆಯಲ್ಲಿ ವಿರಳವಾಗಿ ದೊರೆಯುವ ಕೌಶಲ್ಯವಿದೆ. ಸ್ವಾತಂತ್ರ ಬಂದ ನಂತರ ಬಡತನ, ಅನಕ್ಷರತೆ, ನಿರುದ್ಯೋಗ ನಿವಾರಣೆ ಹಾಗೂ ದಿಕ್ಕಿಲ್ಲದ ಕೋಟ್ಯಾಂತರ ಜನರ ಕಲ್ಯಾಣಕ್ಕಾಗಿ ಪಂಚವಾರ್ಷಿಕ ಯೋಜನೆಗಳ ಮುಖಾಂತರ ಯೋಜಿತ ಅಭಿವೃದ್ಧಿ ಕಾರ್ಯವನ್ನು ರಾಷ್ಟ್ರ ಕೈಗೊಂಡಿದೆ. ಹಿಂದೆ ನಮ್ಮ ರಾಷ್ಟ್ರ ವಸಾಹತು ರಾಷ್ಟ್ರವಾದದ್ದರಿಂದ ಮತ್ತು ಆಂಗ್ಲರ ಆಳ್ವಿಕೆಯಲ್ಲಿ ನಡೆದು ಬಂದ 'ಒಡೆಯ - ಆಳು' ಇವರ ಅಮಾನುಷ ಸಂಬಂಧದಿಂದ ಇಷ್ಟೊಂದು ಸಮಸ್ಯೆಗಳನ್ನು ಎದುರಿಸಬೇಕಾಯಿತು. ನಮ್ಮ ರಾಷ್ಟ್ರದ ಸಮಸ್ಯೆಯನ್ನು ಅರಿತುಕೊಳ್ಳುವುದಕ್ಕೆ ಬಹಳ ಕಾಲ ಬೇಕಾಯಿತೆ? ನೂರಾರು ವರ್ಷಕ್ಕೂ ಹಿಂದೆ ಶ್ರೀ ಸ್ವಾಮಿ ವಿವೇಕಾನಂದರು ನಮ್ಮ ದೇಶ ಎದುರಿಸುತ್ತಿರುವ ಸಮಸ್ಯೆಗಳು ಬಡತನ, ಅನಕ್ಷರತೆ ಮತ್ತು ಶೋಷಣೆ ಎಂಬುದಾಗಿ ಸ್ಪಷ್ಟವಾಗಿ ಹೇಳಿದ್ದರು. ಸ್ವಾಮೀಜಿಯವರು ನಮ್ಮ ರಾಷ್ಟ್ರದ ಸ್ಥಿತಿಯನ್ನು ದುಃಖಪೂರಿತವಾಗಿ ವಿವರಿಸಿ ಹೇಳಿದ ಮಾತು, ''ಉಪನಿಷತ್ತುಗಳ ಹಿರಿಮೆ ಇದ್ದಾಗ್ಯೂ, ಬೇರೆ ಜನಗಳಿಗೆ ಹೋಲಿಸಿದರೆ ನಮ್ಮ ದೇಶದಲ್ಲಿ ಹೆಮ್ಮೆಪಡುವಂತಹ ಸಾಧು - ಸಂತ ಪರಂಪರೆ ಇದ್ದಾಗ್ಯೂ, 'ಭಾರತೀಯರು ನಿಶ್ಶಕ್ತರು, ಬಹಳ ನಿಶ್ಶಕ್ತರು'' ಎಂದು ಒತ್ತಿ ಹೇಳಿದ್ದರು. ಮೊದಲನೆಯದಾಗಿ, 'ನಮ್ಮ ದೈಹಿಕ ಆಸಕ್ತಿ ನಿಜವಾಗಿಯೂ ನಮ್ಮ ದೀನದಲಿತರ ನೋವಿಗೆ ಅತಿ ಮುಖ್ಯ ಕಾರಣ. ನಾವು ಸೋಮಾರಿಗಳು, ಕೆಲಸ ಮಾಡಲಾಗದವರು, ನಾವು ಕೂಡಿ ಕೆಲಸ ಮಾಡದವರು, ಪರಸ್ಪರ ಪ್ರೀತಿ ವಿಶ್ವಾಸ ಇಲ್ಲದವರು, ಬಹಳ ಸ್ವಾರ್ಥಿಗಳು, ನಮ್ಮಲ್ಲಿ

ಮೂವರು ಒಬ್ಬರನ್ನೊಬ್ಬರು ದೂಷಿಸದೆ ಕೂಡಲಾರರು. ಅವರು ಒಬ್ಬರನ್ನೊಬ್ಬರು ಹೊಟ್ಟೆಕಿಚ್ಚಿನಿಂದ ಹೀಯಾಳಿಸದಿರರು.

ಬಡತನ ನಿರ್ಮೂಲಲವನ್ನು ಗುರಿಯಾಗಿಟ್ಟುಕೊಂಡು ನಮ್ಮ ದೇಶದಲ್ಲಿ ವೈಜ್ಞಾನಿಕವಾಗಿ ಯೋಜನೆಗಳ ಮುಖೇನ ನಮ್ಮ ಪ್ರಕೃತಿ ಸಂಪತನ್ನು ಹಾಗೂ ಮಾನವ ಸಂಪತ್ತನ್ನು, ಎಲ್ಲರ ಕಲ್ಯಾಣಕ್ಕಾಗಿ ಅಭಿವೃದ್ಧಿ ಪಡಿಸಲು ಪ್ರಯತ್ನ ನಡೆದಿದೆ. ಆದರೆ ಈ ಕಾರ್ಯವನ್ನು ಮಾಡುವಾಗ ಕಾರ್ಯದಲ್ಲಿ ವಸ್ತು ಅಭಿವೃದ್ಧಿ ಭರದಿಂದ ನಡೆದಿದ್ದರೂ ಅದರ ವೇಗ, ಹೆಚ್ಚಿನ ಉತ್ಪಾದನೆಯನ್ನು ತೋರಿಸುವ ಶಕ್ತಿ, ಅದರ ಸಮಾನ ಹಂಚಿಕೆ ಮತ್ತು ಅಭಿವೃದ್ಧಿ ಪಥದಲ್ಲಿ ಜನ ಸಾಮಾನ್ಯರ ಪಾತ್ರ ಇವೆಲ್ಲವೂ ಕಾರ್ಯಕರ್ತ ವ್ಯಕ್ತಿಗಳು ಈ ಬೃಹತ್ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ತಮ್ಮ ಕಾರ್ಯವನ್ನು ತೃಪ್ತಿಕರವಾಗಿ ಮಾಡದೆ ಹೋದುದರಿಂದ ನಾವು ಕಾಣಬಹುದಾಗಿದ್ದ ಯಶಸ್ಸಿನ ಮಟ್ಟವನ್ನು ಮುಟ್ಟಲ್ಲ. ಎಲ್ಲಿ ನೋಡಿದರೂ, ತಮ್ಮ ಕೆಲಸಕ್ಕೆ ಒಂದು ರೀತಿಯ ತಿರಸ್ಕಾರ ಭಾವನೆ, ಬಡವರನ್ನು ದೂರ ಮಾಡುವುದು, ಅವ್ಯಾಹತವಾಗಿ ಹೆಚ್ಚುತ್ತಿರುವ ಲಂಚಗುಳಿತನ, ಕಡಿಮೆ ಉತ್ಪಾದಕತೆ, ಹೆಚ್ಚುತ್ತಿರುವ ನಿರುದ್ಯೋಗ, ಅತೃಪ್ತಿಕರ ಸ್ವಚ್ಛತೆ ಮತ್ತು ನಮ್ಮ ದೇಶದ ಸಮಸ್ಯೆಗಳಿಗೆ ತೃಪ್ತಿಕರವಾಗಿ ಉತ್ತರಗಳನ್ನು ಸಮರ್ಪಣಾ ಭಾವದಿಂದ ನೀಡದಿರುವುದು ಮುಖ ಕಾರಣಗಳಾಗಿ ಕಾಣುತ್ತಿವೆ.

ಭಾರತದ ಈಗಿರುವ ಸಂಪತ್ತನ್ನು ಒಂದು ರೂಪಾಯಿಯ ಹೆಚ್ಚು ಬಂಡವಾಳವನ್ನು ಹಾಕದೆಯೇ ಶೇ. ೧೦ ರಿಂದ ೧೫ರವರೆಗೆ ಹೆಚ್ಚಿಸಬಹುದು. ಅದನ್ನು ಮಾಡುವ ರೀತಿ ಏನು? ಅದನ್ನು ಸಾಧಿಸಬೇಕಾದರೆ, ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಸ್ವಾರ್ಥರಹಿತ ಸೇವೆಯನ್ನು ಮಾಡಬೇಕು.

ಮಿಲ್ಲಿನ ಮ್ಯಾನೇಜರ್, ಯಂತ್ರಗಳನ್ನು ನಡೆಸುವ ಕಾರ್ಮಿಕ, ಶಾಲೆ ಅಥವಾ ಕಾಲೇಜುಗಳಲ್ಲಿ ಯುವಕರಿಗೆ ಶಿಕ್ಷಣವನ್ನು ಕೊಡುತ್ತಿರುವ ಶಿಕ್ಷಕ, ಸರ್ಕಾರದಲ್ಲಾಗಲೀ ಅಥವಾ ಅದಕ್ಕೆ ಸಂಬಂಧಿಸಿದ ಸಂಸ್ಥೆಗಳಲ್ಲಿ ದುಡಿಯುತ್ತಿರುವ ಸಾಮಾನ್ಯ ನೌಕರ, ಮುಖ್ಯಮಂತ್ರಿ ಅಥವಾ ಮಂತ್ರಿ, ಪ್ರಾಯೋಗಿಕ ಶಾಲೆಯಲ್ಲಿ ಕೆಲಸದಲ್ಲಿ ತೊಡಗಿರುವ ವಿಜ್ಞಾನಿ, ಕೈಗಾರಿಕಾ ಸ್ವತ್ತು ಮತ್ತು ಉತ್ಪಾದನೆಯಲ್ಲಿ ತೊಡಗಿರುವ ಕೈಗಾರಿಕೋದ್ಯಮಿ, ಜಮೀನಿನಲ್ಲಿ ಉಳುವ ರೈತ, ದೀನದಲಿತರ ಕಲ್ಯಾಣಕ್ಕಾಗಿ ದುಡಿಯುತ್ತಿರುವ ಸಾಮಾಜಿಕ ಕಾರ್ಯಕರ್ತ, ರೋಗಕ್ಕೆ ಚಿಕಿತ್ಸೆ ನೀಡುವ ವೈದ್ಯ, ವಿಶ್ವವಿದ್ಯಾನಿಲಯದ ಆಡಳಿತ ನಡೆಸುತ್ತಿರುವ ಕುಲಪತಿ, ಕಟ್ಟಡಗಳ ನಿರ್ಮಾಣದಲ್ಲಿ ತೊಡಗಿರುವ ಇಂಜಿನಿಯರ್, ರೋಗಿಗೆ ನೆರವಾಗುತ್ತಿರುವ ಆಯಾ, ಚಿಕಿತ್ಸೆಗೆಂದು ಬಂದಿರುವ ರೋಗಿಗಳಿಗೆ ಮಾರ್ಗದರ್ಶನ ನೀಡುವ ಸ್ವಾಗತಕಾರ, ರಸ್ತೆ ಅಥವಾ ಯಾವುದೇ ಆವರಣವನ್ನು ಸ್ವಚ್ಛಗೊಳಿಸುವ ಪೌರಕಾರ್ಮಿಕ, ಸಂಸ್ಥೆಗಳಲ್ಲಿ ಗರಿಷ್ಠ ಉತ್ಪಾದನೆಯನ್ನು ಸಾಧಿಸಲು ಮಾರ್ಗದರ್ಶನ ಮಾಡುವ ಮುಖ್ಯಾಧಿಕಾರಿ - ಇವರೆಲ್ಲರೂ ಮೇಲ್ನೋಟಕ್ಕೆ ಜನರ ಕಲ್ಯಾಣಕ್ಕಾಗಿ ತಮ್ಮ ಸೇವೆಯನ್ನು ಸಲ್ಲಿಸುತ್ತಿದ್ದಾರೆ ಎಂಬುದು ತೋರಿ ಬರುತ್ತದೆ. ಆದಾಗ್ಯೂ ಈ ಎಲ್ಲಾ ಮಟ್ಟಗಳಲ್ಲೂ ಹಾಗೂ ವಿವಿಧ ಹಂತಗಳಲ್ಲೂ ಕೆಲಸ ಮಾಡುತ್ತಿರುವವರೆಲ್ಲರೂ ಯಂತ್ರಗಳಂತೆ ಕೆಲಸ ಮಾಡುತ್ತಿದ್ದಾರೆಯೇ ವಿನಃ ಅವರು ತಮ್ಮ ಹೃದಯ - ಆತ್ಮವನ್ನು ಸಂಪೂರ್ಣವಾಗಿ ತಮ್ಮ ಕೆಲಸದಲ್ಲಿ ತೊಡಗಿಸಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಹಣಕ್ಕಾಗಿ ಅಥವಾ ಸಂಬಳಕ್ಕಾಗಿ ದುಡಿಯುವುದಾದರೂ, ಆ ಹಣದ ಮೌಲ್ಯಕ್ಕೆ ಅನುಗುಣವಾಗಿ ಅವಶ್ಯಕವಾಗುವ ಸಂಪೂರ್ಣ ಕೆಲಸವನ್ನು ಮಾಡುವವರು ವಿರಳ. ತಮ್ಮ ಕೆಲಸದಲ್ಲಿ ಪ್ರೀತಿ, ವಿಶ್ವಾಸ, ನ್ಯಾಯ, ಸಮಾನತೆ, ಹೊಂದಾಣಿಕೆ, ವಿಶಾಲ ಹೃದಯ, ಜನಸಾಮಾನ್ಯರ ಬಗ್ಗೆ ಕಳಕಳಿ ಮತ್ತು ಭ್ರಷ್ಟಾಚಾರವಿಲ್ಲದ ಪ್ರಾಮಾಣಿಕತೆ, ಸಂಬಳಕ್ಕೆ ಪ್ರತಿಯಾಗಿ ಮಾಡುವ ಸೇವೆಯಲ್ಲಿ ಕಂಡು ಬರುವುದಿಲ್ಲ. ಈಗ ನಾವು ಸಮಾಜದಲ್ಲಿ ಕಾಣುತ್ತಿರುವ ಎಲ್ಲಾ ದೋಷಗಳೂ ಇದರ ಪರಿಣಾಮ ಎಂಬುದನ್ನು ಅರಿಯಬೇಕು.

ಅಧಿಕಾರ ಸೇವೆಗಾಗಿ ಇರುವುದೇ ವಿನಃ ಆಳುವುದಕ್ಕಲ್ಲ :

ರಾಜಕಾರಣಿಗಳು ಮತ್ತು ನೌಕರರು ಅಧಿಕಾರ ದಾಹದಿಂದ ಹುಚ್ಚೆದ್ದಿದ್ದಾರೆ. ಅವರು ಸೇವೆಯ ಪ್ರಮುಖ ಸೂತ್ರವನ್ನು ಧಿಕ್ಕರಿಸಿದ್ದಾರೆ. ಅಧಿಕಾರ ಇರುವುದು ಸೇವೆ ಮಾಡುವುದಕ್ಕಾಗಿ, ಆಳುವುದಕ್ಕಲ್ಲ, ಗ್ರಾಮಗಳ ಮತ್ತು ಬಡ ಜನರ ಏಳ್ಗೆಗಾಗಿ ತೀರ್ಮಾನಗಳನ್ನು ಕೈಗೊಳ್ಳುವಂತೆ ಮನಸ್ಸನ್ನು ತಿದ್ದುವುದು, ಆ ಮುಖೇನ ನಗರ - ಗ್ರಾಮೀಣ ಪ್ರದೇಶಗಳಿಗೆ ಇರುವ ಅಂತರ

ಮತ್ತು ಬಡವ - ಶ್ರೀಮಂತರ ಮಧ್ಯೆ ಬೆಳೆದಿರುವ ಅಸಮಾನತೆ ಇವುಗಳು ಹೆಚ್ಚಾಗದಂತೆ ನೋಡಿಕೊಳ್ಳಲು ಅಧಿಕಾರ ಇದೆಯೇ ವಿನಃ ಅಸಮಾಧಾನವನ್ನು ಗರಿಷ್ಠ ಮಟ್ಟಕ್ಕೆ ಒಯ್ಯುವುದಕ್ಕಲ್ಲ. ಒಟ್ಟಾರೆ ಜನಗಳ ಕಲ್ಯಾಣವನ್ನು ಹೆಚ್ಚಿಸುವುದಕ್ಕೆ ಅಧಿಕಾರ ಇದೆಯೇ ವಿನಃ ಸ್ವಾರ್ಥಕ್ಕೆ ಬಲಿಯಾಗಿ ತನ್ನ ಸ್ವಂತ ಆಸ್ತಿ ಅಭಿವೃದ್ಧಿಗಲ್ಲ. ತನಗೇ ಅಲ್ಲದಿದ್ದರೂ ತನ್ನ ಸಂಬಂಧಿ ಬಳಗದವರಿಗೆ ಆಸ್ತಿ ಮಾಡುವಂತೆ ನೆರವಾಗವುದಕ್ಕಲ್ಲ. ಅಧಿಕಾರ ಇರುವುದು ಮೌಲ್ಯ ರಹಿತ ಸಮಾಜವನ್ನು ಸೃಷ್ಟಿಸುವುದಕ್ಕಂತೂ ಅಲ್ಲ. ಮೌಲ್ಯ ಭರಿತ, ಚೇತನಕಾರಿ ಮತ್ತು ಹೆಚ್ಚು ದುಂದುಭಿಸುವ ರಾಷ್ಟ್ರ ಮತ್ತು ಜನಗಳನ್ನು ಬೆಳೆಸುವುದಕ್ಕಾಗಿ ಇರುವುದು ಅಧಿಕಾರ.

ಅಯ್ಯೋ! ಇದರ ತದ್ವಿರುದ್ಧವೇ ಎಲ್ಲ ನಡೆಯುತ್ತಿದೆಯಲ್ಲ, ಎಲ್ಲೆಲ್ಲೂ ಅನೈತಿಕತೆಯು ತುಂಬಿದೆ, ಲಂಚಗುಳಿತನ ತಾಂಡವಾಡುತ್ತಿದೆ, ನೈತಿಕ ಮೌಲ್ಯಗಳು ಸಂಪೂರ್ಣವಾಗಿ ನಶಿಸಿ ಹೋಗಿವೆ, ದೇಶದ ಮುಂದಾಳುಗಳು ಅನ್ನಿಸಿಕೊಂಡಿರುವವರು ಜನರ ಸೇವಕರೆಂದು ನಟಿಸುತ್ತಿದ್ದು ಕೇವಲ ಬಾಯಿಮಾತಿನಲ್ಲಿಯೇ ಸೇವೆ ನಡೆಸುವವರಾಗಿದ್ದಾರೆ. ನೈತಿಕತೆ, ಪ್ರಾಮಾಣಿಕತೆ ಕಣ್ಮರೆಯಾಗಿರುವುದು ಮತ್ತು ಆತ್ಮಸಾಕ್ಷಿಯಾಗಿ ಸಮರ್ಪಣಾ ಭಾವನೆಯಿಂದ ಕೆಲಸ ಮಾಡದೇ ಇರುವುದು ನಮ್ಮ ದೇಶದ ಪ್ರಸಕ್ತ ಪರಿಸ್ಥಿತಿಗೆ ಏಕೈಕ ಕಾರಣವೆನ್ನಬಹುದು.

ಕೂಲಿ - ಆತ್ಮ ಸಾಕ್ಷಾತ್ಕಾರ :

ಸೇವೆ ಹಣಕ್ಕೆ ಪ್ರತಿಯಾಗಿ ಇರಬಹುದು ; ಇಲ್ಲವೇ ಆತ್ಮಸಾಕ್ಷಾತ್ಕಾರಕ್ಕೆ ಇರಬಹುದು. ಮನೆತನದ ಜವಾಬ್ದಾರಿ ಇರುವುದರಿಂದ ಯಾರೂ ತಮ್ಮ ಸೇವೆಗೆ ಹಣವನ್ನು ಅಥವಾ ಸಂಬಳ, ಕೂಲಿಯನ್ನು ಪಡೆಯುವುದರಲ್ಲಿ ತಪ್ಪೇನೂ ಇಲ್ಲ. ಆದರೆ ಹಾಗೆ ಮಾಡುವಾಗ ಸೇವೆಯನ್ನು ಪ್ರೀತಿಯೊಂದಿಗೆ ಗುರುತುಪಡಿಸಿ, ಜನರ ಆಶೋತ್ತರಗಳಿಗೆ ಸ್ಪಂದಿಸಿ, ತನ್ನ ಆಶೆಯನ್ನು ಹತ್ತಿಕ್ಕಿ, ಯಾವ ವಿಧವಾದ ಪ್ರತಿಫಲಕ್ಕೂ ಹಾತೊರೆಯದಂತೆ ಮಾಡಿದಲ್ಲಿ ಅದಕ್ಕೆ ಮಾನ್ಯತೆ ಉಂಟು. ಈಗಲೂ ಅನೇಕರು, ಅವರ ಸಂಖ್ಯೆ ಕಡಿಮೆ ಇದ್ದಾಗ್ಯೂ, ತಮ್ಮ ಸೇವೆಯನ್ನು ಸಂಸಾರದ ಖರ್ಚನ್ನು ನಿಭಾಯಿಸಲು ಮತ್ತು ರಾಷ್ಟ್ರಕ್ಕೆ ನೀಡಬೇಕಾಗದ ಕರ್ತವ್ಯವನ್ನು ಅರಿತು ಮಾಡುವವರಿದ್ದಾರೆ. ಆದರೆ ಇದು ಮೂರ್ಛೆರೋಗದಂತೆ ಯಾವಾಗಲೊ ಒಮ್ಮೊಮ್ಮೆ ಕಾಣಿಸಿಕೊಂಡು ನಿಂತು ಹೋಗಬಾರದು. ಅದು ಪ್ರತಿದಿನ ಅವಿಚ್ಛಿನ್ನವಾಗಿ ನಡೆಯಬೇಕು. ಒಂದು ರೀತಿಯಲ್ಲಿ ಆಂತರಿಕವಾಗಿ ತನ್ನಷ್ಟಕ್ಕೇ ತಾನೇ ಉದ್ಭವಿಸುವ ಸೇವೆಯ ಆಸೆ ಮತ್ತು ತಮ್ಮನ್ನು ತಾವೇ ಸಮರ್ಪಣೆ ಮಾಡಿಕೊಂಡಿರುವಂತೆ ಇರಬೇಕು. ಈ ರೀತಿಯಾದಲ್ಲಿ ಮಾತ್ರ ಸೇವೆಯು ಬಾಳಿನಲ್ಲಿ ದಿನಚರಿಯ ಒಂದು ಮಾರ್ಗವಾಗುತ್ತದೆ. ಒಮ್ಮೆ ಹೀಗಾದಲ್ಲಿ, ಅದರ ಮಹತ್ವ ಮತ್ತು ಜನರ ಕಲ್ಯಾಣಕ್ಕಾಗಿ ಮಾಡಿದ ಕಾರ್ಯಕ್ಕೆ ಮೌಲ್ಯವನ್ನು ಕಟ್ಟಲಾಗುವುದಿಲ್ಲ. ಸೇವೆಯ ಈ ಹಿರಿಮೆಯನ್ನು ಸ್ವಾಮೀಜಿಯವರು ಪದೇ ಪದೇ ಒತ್ತಿ ಹೇಳುತ್ತಿದ್ದರು. ಅವರ ಜೀವನವು ಸೇವೆ ದಿನಚರಿಯ ಮಾರ್ಗಗಳಲ್ಲಿ ಒಂದು ಎಂಬ ಸಂದೇಶವನ್ನು ಬೀರುತ್ತದೆ. ಇದರ ಕುರುಹಿನಂತೆ ರಾಮಕೃಷ್ಣ ಮಠ ಸಲ್ಲಿಸುತ್ತಿರುವ ಸೇವೆ ಇಡೀ ವಿಶ್ವದ ಮಾನವೀಯತೆಗೆ ಕೊಟ್ಟಿರುವ ಮತ್ತು ಎಲ್ಲೆಲ್ಲೂ ಪ್ರಸರಿಸಿರುವ ಮಹಾ ಸಾಧನೆಯ ಚಿಹ್ನೆ.

ಸ್ವಾರ್ಥರಹಿತ ಸೇವೆ :

ಅನೇಕ ಸಂದರ್ಭಗಳಲ್ಲಿ ಒಂದು ದೊಡ್ಡ ಕೆಲಸವನ್ನು ಮಾಡುವಾಗ ಸಹಸ್ರಾರು ಜನರು ಅದನ್ನು ವೀಕ್ಷಿಸುತ್ತಾರೆ ಎಂಬ ಕಾರಣಕ್ಕಾಗಿ ಅನೇಕರು ವೀರರಂತೆ ಮುಂದೆ ಬರುತ್ತಾರೆ. ಎಲ್ಲಿ ಜನ ಸಮುದಾಯವು ಅದನ್ನು ಮೆಚ್ಚಿ ಹೊಗಳುತ್ತಾರೋ ಹಾಗೂ ಉತ್ಸಾಹವನ್ನು ತುಂಬುತ್ತಾರೋ ಅಂತಹ ಸಂದರ್ಭಗಳಲ್ಲಿ ಒಬ್ಬ ಹೇಡಿಯೂ ಕೂಡ ಅತಿ ಸುಲಭವಾಗಿ ತನ್ನ ಜೀವವನ್ನು ಪಣಕ್ಕಿಡಲು ಹಿಂಜರಿಯುವುದಿಲ್ಲ. ಆದರೆ ಅಂತಹವರು ನಿಜವಾಗಿ ದೇಶದ ವೀರರು ಅನ್ನಿಸಿಕೊಳ್ಳಲಾರರು. ಸ್ವಾಮಿ ವಿವೇಕಾನಂದರು ಯಾರನ್ನು ನಿಜವಾಗಿ ವೀರರು ಹಾಗೂ ಮುಂದಾಳುಗಳು ಎಂದು ಹೇಳಬಹುದು ಎಂಬ ವಿಷಯದಲ್ಲಿ ಎಂದೆಂದಿಗೂ ಮರೆಯಲಾರದಂತಹ ಮಾತನ್ನು ಹೇಳಿದ್ದಾರೆ. ಅದು ಹೀಗಿದೆ : ''ಎಂತಹ ಚಿಕ್ಕ ಕೆಲಸವಾದರೂ ಹಾಗೂ ಅದರ ಕಡೆ ಯಾರೂ ಗಮನ ಕೊಡದೇ ಇದ್ದಾಗ್ಯೂ ಅಂತಹ ಚಿಕ್ಕಕೆಲಸವನ್ನು ಸ್ವಾರ್ಥರಹಿತವಾಗಿ ಮತ್ತು ಕರ್ತವ್ಯನಿಷ್ಠೆಯಿಂದ

ಮಾಡುತ್ತಾರೋ ಅಂತಹವರು ಪುಣ್ಯಾತ್ಮರು. ಇಂತಹ ಕೆಲಸವನ್ನು ಸದಾ ತುಳಿಯಲ್ಪಟ್ಟ ಹಾಗೂ ಶೋಷಣೆಗೊಳಪಟ್ಟ ಕಾರ್ಮಿಕ ವರ್ಗದವರು ಭಾರತದಲ್ಲಿ ಮಾಡುತ್ತಿದ್ದಾರೆ. ಅವರಿಗೆ ನಾನು ವಂದಿಸುತ್ತೇನೆ''.

ಸೇವೆಯು ಜನಸ್ತೋಮವನ್ನು ಎಚ್ಚರಿಸುವುದಲ್ಲದೆ ಅವರಿಗೆ ನೈತಿಕ ಹಾಗೂ ಬೌದ್ಧಿಕ ಕೆಲಸವನ್ನು ಮಾಡಲು ಸ್ಫೂರ್ತಿ ಕೊಡುವಂತದ್ದಾಗಿರಬೇಕು. ನಮ್ಮ ಸೇವೆಯ ಗುರಿ ದೀನದಲಿತರಿಗೆ, ದಿಕ್ಕಿಲ್ಲದವರಿಗೆ, ಅನಕ್ಷರಸ್ಥರಿಗೆ, ರೈತಾಪಿ ಜನರು ಮತ್ತು ಕೂಲಿಕಾರರಿಗೆ, ಇರಬೇಕು. ದಿನವಿಡೀ ಬೆವರು ಸುರಿಸಿ ದುಡಿಯುವ ಜನರನ್ನು ಪ್ರೀತಿ ವಿಶ್ವಾಸದಿಂದ ಗೆದ್ದುಕೊಳ್ಳಬೇಕು. ಇದಕ್ಕೆ ಒಬ್ಬ ವ್ಯಕ್ತಿ ತನ್ನ ಸ್ವಂತ ಶ್ರಮದಿಂದ ಈ ಕಾರ್ಯವನ್ನು ಮಾಡಬೇಕು. ಈ ಮಾತು ಎಲ್ಲಾ ಕ್ಷೇತ್ರಗಳಿಗೂ ಅನ್ವಯಿಸುತ್ತದೆ.

ರಾಷ್ಟ್ರೀಯ ವಿಧಾನಗಳು :

ರಾಷ್ಟ್ರೀಯ ವಿಧಾನಗಳು ಮತ್ತು ರಾಷ್ಟ್ರ ಮಾದರಿಯ ಮುಖೇನ ಸೇವೆಯನ್ನು ಸಲ್ಲಿಸುವುದು ಸೂಕ್ತ. ಸೇವೆ ಮಾಡುವ ಹಂಬಲ ವ್ಯಕ್ತಿಯ ಅಂತರಂಗದಿಂದ ಉತ್ಪಾದಿಸಬೇಕು. ಪರರ ಕಲ್ಯಾಣಕ್ಕಾಗಿ ತನ್ನನ್ನು ತಾನೇ ಮರೆತು ಸ್ವಯಂ ಇಚ್ಛೆಯಿಂದ ತ್ಯಾಗದಿಂದ ಕೂಡಿದ ಸೇವೆಯಾಗಿರಬೇಕು. ಈ ಸಂದರ್ಭದಲ್ಲಿ ಶ್ರೀ ಸ್ವಾಮಿ ವಿವೇಕಾನಂದರು ಹೇಳಿದ ಅರ್ಥಗರ್ಭಿತ ಮಾತನ್ನು ಜ್ಞಾಪಿಸಿಕೊಳ್ಳಿ. ''ಯಾರು ಇತರರಿಗಾಗಿ ಬದುಕುತ್ತಾರೋ ಅಂತಹವರು ಮಾತ್ರ ಬದುಕಿದ್ದಂತೆ, ಮಿಕ್ಕವರು ಬದುಕಿದ್ದರೂ ಸತ್ತವರಂತೆ''.

ಸೇವೆಯನ್ನು ದಿನಚರಿಯಲ್ಲಿ ಅನುಸರಿಸಬೇಕಾದ ಒಂದು ಜೀವನದ ಮಾರ್ಗ ಎನ್ನುವುದಾದರೆ ಪ್ರಪ್ರಥಮವಾಗಿ ನಾವು ಉಪನಿಷತ್ತುಗಳಲ್ಲಿ ಹೇಳಿರುವ ಸಿದ್ಧಾಂತದ ಬಗ್ಗೆ ನಂಬಿಕೆಯನ್ನು ಬೆಳೆಸಿಕೊಳ್ಳಬೇಕು ಮತ್ತು ಅದನ್ನು ಎತ್ತಿ ಹಿಡಿಯಲು ಅವಶ್ಯಕವಾಗಿ ಬೇಕಾದ ಶಕ್ತಿಯನ್ನು ಬೆಳೆಸಿಕೊಳ್ಳಬೇಕು. ಸೂಕ್ಷ್ಮವಾಗಿ ''ನನ್ನಲ್ಲಿ ಆತ್ಮನ್ ಇದ್ದಾನೆ, ತಾನೇ ಆತ್ಮನ್'' ಎಂಬುದರಲ್ಲಿ ಅಚಲವಾದ ನಂಬಿಕೆ ಅಗತ್ಯ. ಆಗ ಇಡೀ ವಿಶ್ವವನ್ನು ಚೈತನ್ಯಪೂರ್ಣವಾಗಿ ಮಾಡುವ ಶಕ್ತಿಯೆಲ್ಲಾ ಬರುತ್ತದೆ. ಹಲವಾರು ಶತಮಾನಗಳಿಂದ ನಮ್ಮ ಜನರಿಗೆ ತುಳಿತ - ತಿರಸ್ಕೃತ ಸಿದ್ಧಾಂತವನ್ನು ಹೇಳಿಕೊಂಡು ಬಂದಿದ್ದಾರೆ. ಅವರು ಈಗ ಹುಟ್ಟು-ಸಾವನ್ನು ಅರಿಯದ ಮತ್ತು ತನ್ನಲ್ಲೇ ಅಡಕವಾಗಿರುವ 'ಆತ್ಮನ್' ಇರುವುದನ್ನು ಕೇಳಲಿ. ಜನ್ಮಸಿದ್ಧವಾದ 'ಆತ್ಮನ್' ಎಲ್ಲರಲ್ಲಿಯೂ ಇದೆ. ಪ್ರತಿಯೊಬ್ಬರೂ ಸೇವೆಯನ್ನು ಜೀವನ ಪರ್ಯಂತ ನಡೆಯುವ ಮಾರ್ಗವನ್ನಾಗಿ ಅನುಸರಿಸವುದಾದರೆ ಕೆಲವು ಷರತ್ತುಗಳಿವೆ. ಅವುಗಳಲ್ಲಿ ನಾಲ್ಕನ್ನು ಇಲ್ಲಿ ಸ್ಮರಿಸಬಹುದು. (೧) ಹೊಸ ಕಾರ್ಯದ ಸಂಸ್ಕೃತಿ (೨) ಒಳ್ಳೆಯತನದ ಶಕ್ತಿಯಲ್ಲಿ ಸಂಪೂರ್ಣ ನಂಬಿಕೆ (೩) ಹೊಟ್ಟೆಕಿಚ್ಚು ಮತ್ತು ಅನುಮಾನ ಕೂಡದು (೪) ಒಳ್ಳೆಯದನ್ನು ಮಾಡುವವರಿಗೆಲ್ಲರಿಗೂ ಹಾಗೂ ಒಳ್ಳೆಯದನ್ನು ಮಾಡುವುದಕ್ಕೆ ಪ್ರಯತ್ನಿಸುವವರೆಲ್ಲರಿಗೂ ಎಲ್ಲಾ ನೆರವು ನೀಡಬೇಕು. ಇದನ್ನೇ ಸ್ವಾಮಿ ವಿವೇಕಾನಂದರ ಮಾತಿನಲ್ಲಿ ಹೇಳುವುದಾದರೆ : ''ವಿಶಾಲ ಮನಸ್ಸಿನವರು ಆಗಬೇಕಾದರೆ, ಬಾಹ್ಯಪ್ರಪಂಚಕ್ಕೆ ಹೋಗಲು ಇಚ್ಛಿಸಿದರೆ, ಸಮನ್ವತೆಯನ್ನು ತರಬೇಕಾದರೆ, ವಿಶ್ವಮಾನವನಾಗಬೇಕಾದರೆ, ನಿಮ್ಮ ಜೀವನದ ಗುರಿ ಪ್ರೀತಿ, ಸೌಹಾರ್ದತೆ, ಪ್ರಾಮಾಣಿಕತೆ ಮತ್ತು ತಾಳ್ಮೆ ಇರಬೇಕು. ಇಷ್ಟನ್ನು ಬಿಟ್ಟು ಏನೂ ಬೇಕಾಗಿಲ್ಲ''. ದೇಶ ಸೇವೆಗಾಗಿ ಸ್ವಾಮೀಜಿಯವರು ಎಚ್ಚರಿಕೆ ಗಂಟೆಯನ್ನು ಬಾರಿಸಿ ''ಎಲ್ಲಿಯ ತನಕ ಲಕ್ಷೋಪಲಕ್ಷ ಜನಗಳು ಹಸಿವಿನಿಂದ ಮತ್ತು ಅಜ್ಞಾನದಿಂದ ಇರುತ್ತಾರೋ ಎಲ್ಲಿಯ ತನಕ ಸಮಾಜದ ವೆಚ್ಚದಲ್ಲಿ ಶಿಕ್ಷಣ ಪಡೆದಿರುತ್ತಾರೋ ಅಂತಹವರು ಜನರಿಗೆ ಅತ್ಯಲ್ಪ ಸಹಾನುಭೂತಿ ನೀಡುವುದಿಲ್ಲವೋ ಅಲ್ಲಿಯವರೆಗೆ ಪ್ರತಿಯೊಬ್ಬ ವ್ಯಕ್ತಿಯನ್ನು ದೇಶದ್ರೋಹಿಯೆಂದು ನಾನು ಕರೆಯುತ್ತೇನೆ'' ಎಂದು ಘೋಷಿಸಿದರು.

ಸೇವೆ ನೈತಿಕ ಕಾರ್ಯದ ಪ್ರತಿಬಿಂಬ - ಅದು ಪೂಜೆ :

ದಿನಚರಿಯ ಕಾರ್ಯಕ್ರಮದಲ್ಲಿ ಸೇವೆ ಕೆಲಸದ ನೈತಿಕತೆಯನ್ನು ಹಾಗೂ ಮಾನವಿಯತೆಯನ್ನು ಪ್ರತಿಬಿಂಬಿಸುತ್ತದೆ. ಪ್ರತಿನಿತ್ಯ ಬೇಸರಗೊಳ್ಳದೆ ವ್ಯಕ್ತಿ ತಾನು ಮಾಡುವ ಪ್ರತಿಯೊಂದು ಕಾರ್ಯದಲ್ಲಿಯೂ ವ್ಯಕ್ತಿಯ ಕಾರ್ಯ ಮತ್ತು ದೇಶದ ಹಿರಿಮೆಯನ್ನು ಪಾಲಿಸುತ್ತಿದ್ದೇನೆ ಎಂಬ ಭಾವನೆಯಿಂದ ಸತತವಾಗಿ ಕಾರ್ಯನಿರತವಾಗಬೇಕು. ವ್ಯಕ್ತಿಗಳು ತಮ್ಮ ದೈಹಿಕ

ಅಂಗವಾಗಿರುವ ವಿಕಾಸದ ವ್ಯಕ್ತಿತ್ವವನ್ನು ದಾಟಿ ಮನಸಾಕ್ಷಿಯಾಗಿ ಸಮಾಜದ ಆಗುಹೋಗುಗಳಲ್ಲಿ ಪಾಲ್ಗೊಂಡು ಆ ಮುಖೇನ ತನ್ನ ವಿಕಾಸದ ವ್ಯಕ್ತಿತ್ವಕ್ಕೆ ಹೆಚ್ಚು ಮೆರುಗನ್ನು ಕೊಡಬೇಕು. ಶ್ರೀ ರಾಮಕೃಷ್ಣ ಪರಮಹಂಸರು ಹೇಳಿದಂತೆ ''ಅಪರಿಪಕ್ವದ ಒಣ ಜಂಭ'' ಇರುವವರು ''ಮಾಗಿದ'' ಅಥವಾ ''ಪರಿಪಕ್ವವಾದ 'ತಾನು ಎಂಬ' ಪರಿವರ್ತನೆಗೆ ಪ್ರಯತ್ನ ಅವಶ್ಯಕ''. ಇದಕ್ಕಾಗಿ ವ್ಯಕ್ತಿ ದುಡಿಯಲು : ಇತರರ ದುಡಿಮೆಯಲ್ಲಿ ಹಾಗೂ ಅವರ ಸ್ವಂತ ಜೀವನದಲ್ಲಿ ಅಭಿವೃದ್ಧಿ ಬಯಸಬೇಕಾದ ಕೌಶಲ್ಯತೆ ಅವಶ್ಯಕ. ಕೆಲಸ ಮಾಡುವಾಗ ದಿನದ ಒಂದು ನಿಮಿಷವನ್ನೂ ವ್ಯಥಾ ಕಳೆಯಬಾರದು. ಸೇವೆ, ಶಿಸ್ತು, ಸಮರ್ಪಣೆ, ಪ್ರಾಮಾಣಿಕತೆ, ನಂಬಿಕೆಯ ಧೈರ್ಯದ ಪ್ರದರ್ಶನ ಇರಬೇಕು. ಕೆಲಸ ಮಾಡದೆ ಸುಮ್ಮನೆ ತುಕ್ಕು ಹಿಡಿಯುವ ಬದಲು ತಾಯ್ನಾಡಿನ ಸೇವೆಯಲ್ಲಿ ಗಂಧದ ಲೇಪನಕ್ಕಾಗಿ ಸಂಪೂರ್ಣ ಗಂಧವೇ ಸವೆಯುವಂತೆ ದುಡಿಯುತ್ತಾ ಮಡಿಯುವುದು ಮೇಲು.

ಹೀಗಾದಲ್ಲಿ ಸೇವೆ ದೇವರ ಪೂಜೆಯಾಗುತ್ತದೆ. ನೈತಿಕ ಬೆಂಬಲ ಹೊಂದಿರುವ ಕೆಲಸ ಮಾನವೀಯತೆಯ ಮಿಡಿತವನ್ನು ಬೇಡುತ್ತದೆ. ಮಾನವೀಯತೆ ಸೇವೆಗಾಗಿ ವೇದಾಂತದ ಮೇರು ಮಾರ್ಗದರ್ಶನಗಳು ಅಂದರೆ ದಮನ (ಮನಸ್ಸನ್ನು ನಿಯಂತ್ರಣದಲ್ಲಿಡುವುದು) ದಯೆ (ಅನುಕಂಪ) ಮತ್ತು ದಾನ (ದೇಣಿಗೆ) ಬಲವಾದ ಬುನಾದಿಯಾಗುತ್ತದೆ.

ಸೇವೆಯು ಬರೀ ಬುದ್ಧಿಶಕ್ತಿಯಲ್ಲಿ ಕೊನೆಗಾಣಬಾರದು. ಅದು ನೈತಿಕವಾಗಿ ಬೆಲೆ ಹೊಂದುವಂತೆಯೂ ಇರಬೇಕು. ಅದನ್ನು ದಿನಚರಿ ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದರೆ ಸ್ಥಳೀಯ ಉತ್ಪಾದನೆಯನ್ನು ಹೆಚ್ಚಿಸುವುದಕ್ಕೆ ಬೇಕಾದ ವಾತಾವರಣದಿಂದ ಕೂಡಿದರೆ ಅಷ್ಟೇ ಸಾಲದು. ಅದು ವ್ಯಕ್ತಿಯನ್ನು ಶಕ್ತಿಮೀರಿ ದುಡಿಯುವಂತೆ ಪ್ರಚೋದಿಸಬೇಕು. ಸ್ವಾರ್ಥವನ್ನು ಸಂಪೂರ್ಣವಾಗಿ ತ್ಯಜಿಸಬೇಕು. ಶ್ರೀ ಸ್ವಾಮಿ ವಿವೇಕಾನಂದರು ಈ ಸಂದರ್ಭದಲ್ಲಿ ಹೇಳಿದ ಮಾತು ಬಹಳ ಮಾರ್ಮಿಕ. ''ಪ್ರಪಂಚದ ಮಾನವ ಕಲ್ಯಾಣಕ್ಕಾಗಿ ನೀವು ನಿಮ್ಮ ದೇಹ, ಮನಸ್ಸು ಮತ್ತು ನುಡಿಯನ್ನು ಮುಡಿಪಾಗಿಡಬೇಕು. ನೀವು ತಾಯಿಯನ್ನು ದೇವರಂತೆ ಕಾಣಿ, ತಂದೆಯನ್ನು ದೇವರಂತೆ ಕಾಣಿ ಎಂದು ಓದಿರಬೇಕು. ಆದರೆ ನಾನು ಇಚ್ಛಿಸುವುದು ಏನೆಂದರೆ ''ದೀನದಲಿತರು, ಅನಕ್ಷರಸ್ಥರು, ಅಜ್ಞಾನಿಗಳು, ಶೋಷಿತರಾದವರು, ನಿಮ್ಮ ದೇವರಾಗಲಿ. ಅಂತಹವರ ಸೇವೆಯೇ ಅತ್ಯುತ್ತಮ ಧರ್ಮ ಎಂದು ತಿಳಿಯಿರಿ. ಅದು ನಿಮ್ಮ ಜೀವನಕ್ಕೆ ಮತ್ತು ಸೇವೆಗೆ ಶಿಸ್ತನ್ನು ಕೊಡುವುದು''.

ಯುವಕರನ್ನು ಸಂಘಟಿಸಿ :

ಸೇವೆ ಮಾಡಬೇಕೆಂದು ಹಂಬಲಿಸುವುದು ಅನೇಕ ಕಾರ್ಯಗಳಲ್ಲಿ ಒಂದಾದ ಯುವಕರನ್ನು ಸಂಘಟಿಸಬೇಕು. ಸ್ವಾಮೀಜಿಯವರೆ ಬಲವಾಗಿ ಪ್ರತಿಪಾದಿಸಿದಂತೆ ''ನಾನು ಜನ್ಮ ತಾಳಿರುವುದು ಈ ಯುವಕರನ್ನು ಸಂಘಟಿಸುವುದಕ್ಕಾಗಿ - ನೂರಾರು ಯುವಕರು ಪ್ರತಿಯೊಂದು ಪಟ್ಟಣದಲ್ಲಿಯೂ ಅಥವಾ ನಗರದಲ್ಲಿಯೂ ಬಂದು ಸೇರಿಕೊಳ್ಳುವಂತೆ ಮಾಡಲು ಜನ್ಮ ತಾಳಿದ್ದೇನೆ. ಈ ಸಂಘಟಿಸಿದ ಯುವಕರನ್ನು ದೇಶದಾದ್ಯಂತ ಕಳುಹಿಸುವೆನು. ಅವರು ದೇಶದಲ್ಲಿರುವಂತಹ ಸಂಪ್ರದಾಯಸ್ಥರ, ದೀನದಲಿತರ ಮತ್ತು ತುಳಿತಕ್ಕೆ ಒಳಗಾಗಿರುವ ಜನರ ಮನೆಯ ಬಾಗಿಲಿಗೆ ಹೋಗಿ ಅವರಿಗೆ ಸಮಾಧಾನವನ್ನು, ನೈತಿಕತೆಯನ್ನು, ಧರ್ಮವನ್ನು, ಶಿಕ್ಷಣವನ್ನು, ಕೊಡುವಂತೆ ಮಾಡುತ್ತೇನೆ. ನಾನು ಇದನ್ನು ಸಾಧಿಸುತ್ತೇನೆ. ಇಲ್ಲವಾದಲ್ಲಿ ಮರಣವನ್ನು ಅಪ್ಪುತ್ತೇನೆ''.

ಮಾನವೀಯತೆಗೆ, ಅದರಲ್ಲೂ ಕಡುಬಡವರಿಗೆ, ಅಜ್ಞಾನಿಗಳಿಗೆ ಮತ್ತು ಶೋಷಣೆಗೆ ಒಳಗಾದವರಿಗೆ ಸೇವೆ ಮಾಡುವುದರಿಂದ ಆತ್ಮ ಸಾಕ್ಷಾತ್ಕಾರ ಸಾಧ್ಯ. ಶ್ರೀ ಸ್ವಾಮಿ ವಿವೇಕಾನಂದರು ಯುವಕ - ಯುವತಿಯರಿಗೆ ಉಡುಗೊರೆಯಾಗಿ ಕೊಟ್ಟಿರುವ ಆಸ್ತಿ ಅಂದರೆ ಅನುಕಂಪ, ದಯೆ ಮತ್ತು ಬಡತನ ನಿರ್ಮೂಲನಕ್ಕಾಗಿ ಅವಿರತ ದುಡಿತ. ಆದ್ದರಿಂದ ದಿನೇ ದಿನೇ ಲಕ್ಷಾಂತರ ಜನಗಳು ಹೆಚ್ಚು ಹೆಚ್ಚು ತುಳಿತಕ್ಕೆ ಒಳಗಾಗುತ್ತಿದ್ದು ಅಂತಹವರನ್ನು ಮೇಲೆ ಎತ್ತುತ್ತೇವೆ ಎಂಬ ಸಮರ್ಪಣಾ ಭಾವನೆಯಿಂದ ಅವರ ಸೇವೆಗಾಗಿ ಜೀವನವನ್ನು ಮುಡಿಪಾಗಿಡಬೇಕು. ''ಒಬ್ಬ ವ್ಯಕ್ತಿ, ಸೇವೆಗಾಗಿ ಸಮರ್ಪಣೆ ಮಾಡಿಕೊಂಡಿದ್ದಲ್ಲಿ ಆತ ಯಾರಿಗೂ ಹೆದರಬೇಕಾಗಿಲ್ಲ. ಜಗತ್ತಿನ ಯಾವ ಶಕ್ತಿಯೂ ಆತನ ಸೇವೆಯನ್ನು ನಿಲ್ಲಿಸಲಾರದು. ಯಾರು ಸೇವೆಯನ್ನು ದಿನಚರಿ ಜೀವನದ ಮಾರ್ಗವನ್ನಾಗಿ ಮಾಡಿಕೊಳ್ಳುತ್ತಾರೋ ಅಂತಹವರು 'ಸಿಂಹಗಳಂತೆ' ಇರುವುದಲ್ಲದೆ,

ಇಡೀ ಭಾರತವನ್ನು, ಅದು ಏಕೆ ಇಡೀ ವಿಶ್ವವನ್ನು ಹುರಿದುಂಬಿಸಬಲ್ಲರು. ಇತರರಿಗಾಗಿ ಮಾಡಿದ ಅತ್ಯಲ್ಪ ಸೇವೆಯು ವ್ಯಕ್ತಿಯಲ್ಲಿ ಅಂತರ್ಗತವಾಗಿರುವ ಶಕ್ತಿಯನ್ನು ಎಚ್ಚರಗೊಳಿಸುತ್ತದೆ. ಇತರರಿಗಾಗಿ ಅತ್ಯಲ್ಪ ಒಳಿತನ್ನು ಮಾಡುವ ಚಿಂತನೆ ಬಂದಲ್ಲಿ ಅದು ಕ್ರಮೇಣ ವ್ಯಕ್ತಿಯ ಹೃದಯಕ್ಕೆ ಸಿಂಹದ ಶಕ್ತಿಯನ್ನು ತುಂಬುತ್ತದೆ. ಆದ್ದರಿಂದ, ನಿಮ್ಮೆಲ್ಲರನ್ನೂ ನಾನು ಬಹಳವಾಗಿ ಪ್ರೀತಿಸುತ್ತಿದ್ದರೂ, ಇತರರಿಗಾಗಿ ನೀವೆಲ್ಲರೂ ದುಡಿದು ಮಡಿಯಿರಿ ಎಂದು ಇಚ್ಛಿಸುತ್ತೇನೆ......ದುಡಿಮೆ, ದುಡಿಮೆ ಮತ್ತು ದುಡಿಮೆ. ಆನಂತರ ಮರಣ. ಈ ಶ್ರಮದಲ್ಲಿ ನಾವು ನಮ್ಮ ಎಲ್ಲಾ ಆಸ್ತಿಯನ್ನು ಹಾಗೂ ಬೆಳೆಸಿಕೊಂಡ ಗೌರವ ಮತ್ತು ಹೆಸರನ್ನು ಕಳೆದುಕೊಳ್ಳುವುದಾದರೆ ಅಂತಹವರು ಮೂರು ಬಾರಿ ಆಶೀರ್ವದಿಸಲ್ಪಟ್ಟವರೆಂದು ತಿಳಿಯಬೇಕು''. ಸ್ವಾಮೀಜಿಯವರು ಒಮ್ಮೆ ಪ್ರಚಂಡ ದೃಶ್ಯವನ್ನು ಕಂಡಿರುವಂತೆ ''ಇತರರಿಗಾಗಿ ಮೋಕ್ಷವನ್ನು ಪಡೆಯಲು ನೀವೇ ನರಕಕ್ಕೆ ಹೋಗಿ'' ಎಂದು ಹೇಳಿದ್ದುಂಟು.

ಸಹಾಯ ಎಂಬ ಪದಕ್ಕೆ ಸ್ಥಾನವಿಲ್ಲ :

ಸೇವೆಯ ದಿನಚರಿಯ ಜೀವನದ ಒಂದು ಅವಿಭಾಜ್ಯವಾಗಬೇಕಾದರೆ ಕೆಲವು ಪೂರ್ವಭಾವಿ ನಿಯಮಗಳು ಅವಶ್ಯಕ. (೧) ಬೇರೆಯವರಿಗೆ ಸಹಾಯ ಮಾಡುತ್ತೇವೆ ಎಂಬ ಭಾವನೆ ಇರಕೂಡದು ಎಂಬುದನ್ನು ತಿಳಿಯಬೇಕು. ನಮ್ಮ ಮನಸ್ಸಿನಿಂದ 'ಸಹಾಯ' ಎಂಬ ಭಾವನೆಯನ್ನು ಕಿತ್ತೊಗೆಯಬೇಕು. 'ಸಹಾಯ' ಎಂಬ ಮಾತೇ ಆಡಬಾರದು. ಸೇವೆಯನ್ನು ಅಥವಾ ನೆರವನ್ನು ನೀಡಬೇಕೆ ವಿನಃ ಸಹಾಯ ಮಾಡುತ್ತೇನೆ ಎಂಬ ಆಹಂಭಾವ ಬೇಡ. ''ನಿಮ್ಮನ್ನು ನೀವೇ ಒಂದು ರೀತಿಯಲ್ಲಿ ಮರೆತುಕೊಳ್ಳಬೇಕು''. ನಿಮ್ಮ ಕಾರ್ಯವನ್ನು ಶೀಘ್ರವಾಗಿ, ದಕ್ಷತೆಯಿಂದ ಮತ್ತು ನ್ಯಾಯ ಸಮ್ಮತವಾಗಿ ಪರಿಪಾಲಿಸಬೇಕು. ನಾವು 'ಕೊಡುವವರು' ಎಂಬ ಮನೋಭಾವನೆಯನ್ನು ಬಿಟ್ಟು ಅಧಿಕಾರದಲ್ಲಿರುವವರು ಸೇವೆಮಾಡುವುದಕ್ಕೆ ಒಂದು ವಿಶೇಷ ಅವಕಾಶ ದೊರೆತಿದೆ ಎಂದು ಚಿಂತಿಸಬೇಕು. ನಮ್ಮೆಲ್ಲಾ ಆಸೆ ಆಕಾಂಕ್ಷೆಗಳನ್ನು ಮತ್ತು ಸ್ವಂತ ಸುಖವನ್ನು ಸಮಾಜದ ಕಲ್ಯಾಣಕ್ಕಾಗಿ ತ್ಯಾಗ ಮಾಡುವುದಕ್ಕೆ ಸಿದ್ಧವಾದಾಗ ಮಾತ್ರ ಇದು ಸಾಧ್ಯ. ಜನರ ಸಾಮೂಹಿಕ ಕಲ್ಯಾಣದಲ್ಲಿ ನಮ್ಮ ಕಲ್ಯಾಣವನ್ನು ಕಂಡುಕೊಳ್ಳಬೇಕು. (೨) ಸೇವೆ ಮಾಡಬೇಕು ಎಂಬ ಮನೋಭಾವ ನಮ್ಮ ಹೃದಯದಿಂದ ಜನಿಸಬೇಕು. ನಮ್ಮ ದೇಶದಲ್ಲಿ ಲಕ್ಷಾಂತರ ಜನರು ಅನ್ನವಿಲ್ಲದೆ ನರಳುತ್ತಿರುವುದು, ಬಡತನದ ಬೆಂಕಿಯಲ್ಲಿ ಬೇಯುತ್ತಿರುವುದು, ಶೋಷಣೆಗೆ ಒಳಗಾದವರು ನಮ್ಮನ್ನು ಆಶಾವಂತರನ್ನಾಗಿ ಮಾಡುವುದಲ್ಲದೆ ಅವಿಶ್ರಾಂತರನ್ನಾಗಿಯೂ ಮಾಡಬೇಕು. ಈ ಭಾವನೆ ನಮ್ಮ ರಕ್ತಕಣಗಳಲ್ಲಿ ಹರಿಯಬೇಕು. ಶ್ರೀ ಸ್ವಾಮಿ ವಿವೇಕಾನಂದರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ''ಹೆಸರು, ಸಂಸಾರ, ಮಕ್ಕಳು, ಆಸ್ತಿ ಇವು ಯಾವುದಕ್ಕೂ ಆಸ್ಪದವಿಲ್ಲ. ನೀವು ನಿಮ್ಮ ದೇಹವನ್ನೂ ಕೂಡ ಮರೆತು ಬಿಡಬೇಕು'' ಎಂದು ಹೇಳಿದರು. (೩) ನರಳುತ್ತಿರುವವರಿಗೆ ಸಾಂತ್ವನ ಕೊಡಬೇಕು. ನಮ್ಮ ಹೃದಯ ಅಂತಹವರಿಗೆ ಬಡಿಯುತ್ತಿರಬೇಕು. ಅವರ ತಾಪತ್ರಯಗಳಿಗೆ ಅವರ ಕರ್ಮವೇ ಕಾರಣವೆಂದು ಹೇಳುವುದನ್ನು ಬಿಟ್ಟು ಅವರಿಗೆ ಸಮಾಧಾನ ಮಾಡಿ ಅವರ ಸುಖ-ದುಃಖದಲ್ಲಿ ಭಾಗಿಯಾಗುವುದಾದರೆ ನಾವು ಅವರಿಗೆ ಸುಖವನ್ನು ಕೊಡುವ ಪ್ರಯತ್ನದಲ್ಲಿ ಯಶಸ್ವಿಯಾಗಬಲ್ಲೆವು. (೪) ಹಿಮಾಲಯದಂತಹ ಅಡ್ಡಿ ಆತಂಕಗಳು ಬಂದಲ್ಲಿಯೂ ಅವನ್ನು ಪರಿಹರಿಸಿಕೊಳ್ಳುವ ಮಾನಸಿಕ ಸ್ಥೈರ್ಯ ಹೊಂದಿರಬೇಕು. ಒಂದು ಸಂದರ್ಭದಲ್ಲಿ ಸ್ವಾಮೀಜಿಯವರು ಪ್ರಶ್ನಿಸುತ್ತಾರೆ : ''ಇಡೀ ಪ್ರಪಂಚವೇ ನಿನಗೆ ವಿರುದ್ಧವಾಗಿ ನಿಂತು ನಿನ್ನ ಶಿರಚ್ಛೇದನಕ್ಕಾಗಿ ಖಡ್ಗವನ್ನು ಹಿಡಿದಾಗ್ಯೂ, ನೀನು ನಿನಗೆ ಯಾವುದು ಸರಿಯೆಂದು ತೋಚುತ್ತದೊ ಅದನ್ನು ಮಾಡಲು ನೀನು ಸಿದ್ಧವಿರುವೆಯಾ?'' ಸೇವೆ ನಿನ್ನ ಹಂಬಲವಾಗಿದ್ದಲ್ಲಿ, ಆ ಗುರಿಯನ್ನು ಮುಟ್ಟಲು ಮಿತಿಯಿಲ್ಲದ ತಾಳ್ಮೆಯಿಂದ ಅದರ ಪ್ರತಿಪಾದನೆಗೆ ಮುನ್ನುಗ್ಗಬೇಕು. ''ಮನುಷ್ಯಕುಲಕ್ಕೆ ಸೇವೆಯನ್ನು ಮಾಡಬೇಕೆಂಬ ಹಂಬಲ ಇರುವವರು ಯಾರೂ ಹಿಂದೆ ತಿರುಗಿ ನೋಡುವುದಕ್ಕೆ ನಿಲ್ಲಲು ಅಸಾಧ್ಯ''. ಒಮ್ಮೆ ಸ್ವಾರ್ಥವನ್ನು ಮನಸ್ಸಿನಿಂದ ಕಿತ್ತೊಕಿದಾಗ, ರಾಜರೀವಿಯಿಂದ ಅಡೆತಡೆಗಳಿಲ್ಲದೆ ಹರಿಯುವ ಗಂಗಾ ನದಿಯಂತೆ ನಿಮ್ಮ ಸೇವೆ ತನ್ನಷ್ಟಕ್ಕೇ ತಾನೇ ನಡೆಯುತ್ತದೆ. ಇಂತಹ ನ್ಯಾಯಕ್ಕೆ ಮಿತಿಯಿಲ್ಲದ ಪ್ರಯತ್ನ, ಶಕ್ತಿ, ಹುಮ್ಮಸ್ಸು, ಧೈರ್ಯ, ಛಲ ಅವಶ್ಯಕ. (೫) ನಿನ್ನ ಸೇವೆಗೆ ಯಾವ ತರಹೆಯ ಪ್ರತಿಫಲವನ್ನು ಅಪೇಕ್ಷಿಸಬೇಡ - ನಿನ್ನ ಕೆಲಸವೇ ನಿನ್ನ ಪ್ರತಿಫಲವೆಂದು ತಿಳಿ. ಗೀತ ರಹಸ್ಯ ಎಂದೆಂದಿಗೂ ಮರೆಯಲಾರದಂತಹ ಸಂದೇಶವನ್ನು ಮಾನವಕುಲಕ್ಕೆ ನೀಡಿದೆ. ಇದೇ ನಾವು ಪದೇ ಪದೇ ಕೇಳುವ ''ಯಾವ ಫಲವನ್ನೂ ಅಪೇಕ್ಷಿಸದೆ ನಿನ್ನ

ಕಾರ್ಯವನ್ನು ಮಾಡು'' ಎಂಬ ಭಗವದ್ಗೀತೆಯ ಸಾರಾಂಶ. ಕೊನೆಯದಾಗಿ, (೬) ನಿಮ್ಮಲ್ಲಿ ನಿಮಗೆ ನಂಬಿಕೆ ಮತ್ತು ಆತ್ಮ ಶಕ್ತಿಯನ್ನು ಬೆಳೆಸಿಕೊಳ್ಳಬೇಕು. ಇದು ಆಗಬೇಕಾದರೆ ನಾವು ನೈತಿಕವಾಗಿ ಸರಿಯಾಗಿ ಇರುವುದಲ್ಲದೇ ಧೈರ್ಯದಿಂದಲೂ ಮುನ್ನುಗ್ಗಿ ಅತ್ಯಾವಶ್ಯಕವಾಗಿ ನೆರವು ಬೇಕಾಗಿರುವವರಿಗೆ ನಿಮ್ಮ ಹೃದಯ ಕರಗಬೇಕು. ಸಂಪೂರ್ಣ ಸಮರ್ಪಣೆ ಮಾತ್ರ ಸೇವೆಯನ್ನು ಬದುಕಿನ ಒಂದು ಅನಿವಾರ್ಯ ಮಾರ್ಗವಾಗಿ ಪರಿವರ್ತಿಸಬಹುದು. ಅದೇ ಜೀನವದಲ್ಲಿ ನಿಮ್ಮ ಸಂಪೂರ್ಣ ಧ್ಯೇಯವಾಗಬೇಕು.

ಬಡವರ ಸೇವೆ ದೇವರ ಸೇವೆ :

ದಿನಚರಿಯ ಅವಿಭಾಜ್ಯ ಅಂಗವಾಗಿರುವ ಸೇವೆ ಆತ್ಮಸಾಕ್ಷಾತ್ಕಾರವನ್ನು ತಂದುಕೊಡುವ ಹುದುಗಿದ ಶಕ್ತಿಯನ್ನು ಹೊಂದಿದೆ. ಇದಕ್ಕಾಗಿ ನಾವು ಪ್ರಕೃತಿಯಿಂದ ಹಿಂದೆ ಸರಿಯಬೇಕಾಗಿಲ್ಲ ನಮ್ಮ ಸಂಸಾರಗಳನ್ನು ತ್ಯಜಿಸಬೇಕಾಗಿಲ್ಲ. ಈ ಪ್ರಪಂಚವನ್ನು ತ್ಯಜಿಸಬೇಕಾಗಿಲ್ಲ ಮತ್ತು ಯಾವ ಧಾರ್ಮಿಕ ಸಂಪ್ರದಾಯಗಳನ್ನು ಆಚರಿಸಬೇಕಾಗಿಲ್ಲ. ಏಕೆಂದರೆ ದೈವಾಂಶ ಎಲ್ಲೆಲ್ಲಿಯೂ ಇದೆ ಮತ್ತು ಅದು ಎಲ್ಲಾ ಜನಗಳಲ್ಲಿಯೂ ಇದೆ. ಶ್ರೀಮಂತರು, ಬಡವರು ಎಂಬ ಭೇದವಿಲ್ಲದೆ ಜಾತಿ ಸಂಪ್ರದಾಯಗಳನ್ನು ಲೆಕ್ಕಿಸದೆ ದೈವಾಂಶವು ಎಲ್ಲರಲ್ಲಿಯೂ ಇದೆ. ಬಹುತೇಕ ಜನರು ದೇವರ ಬಗ್ಗೆ ಅರಿಯಲಾರದಂತಹ ಚಿಂತನೆಯಲ್ಲಿ ತೊಡಗುತ್ತಾರೆ. ಅಲ್ಲದೆ ಭಗವಂತನನ್ನು ನೆನಸಿಕೊಂಡಾಗಲ್ಲೆಲ್ಲ ಪೂಜೆಗೆ ಮತ್ತು ಹೊಗಳಿಕೆಗೆ ಮೂಲವಾದದ್ದು ತನಗೆ ಬೇಕಾದ ಲಾಭ ಮತ್ತು ಸ್ವಂತ ಕಲ್ಯಾಣ. ಈ ವಿಷಯವನ್ನು ಪ್ರಸ್ತಾಪಿಸುತ್ತಾ ಶ್ರೀ ಸ್ವಾಮಿ ವಿವೇಕಾನಂದರು ಹೀಗೆ ಹೇಳಿದರು ''ನಾನು ನಂಬುವ ಒಬ್ಬನೇ ಒಬ್ಬ ಭಗವಂತ ಅಂದರೆ ಎಲ್ಲಾ ಜೀವಾತ್ಮಗಳ ಸಂಕಲನ. ನನ್ನ ದೇವರು ಕೆಟ್ಟವರು, ನೀಚರು, ತೊಂದರೆಗೆ ಗುರಿಯಾಗಿರುವವರು ಎಲ್ಲಾ ಜನಾಂಗದ ಬಡವರು. ಭಿನ್ನವಾಗಿ ಬೆಳೆದು ಬಂದಿರುವ ಜಾತಿ ಮತಗಳ ಹಿಡಿತಕ್ಕೆ ಸಿಕ್ಕಿ ತತ್ತರಿಸಿರುವವರು. ಇವರನ್ನೆಲ್ಲ ನಾನು ಪೂಜಿಸುತ್ತೇನೆ. ಇವರೇ ನನ್ನ ದೇವರು. ಅವರ ಸೇವೆಗಾಗಿ ನಾನು ಎಷ್ಟು ಜನ್ಮಗಳನ್ನಾದರೂ ತಾಳುವುದಕ್ಕೆ ಸಿದ್ಧ. ಹಾಗೂ ಸಹಸ್ರಾರು ತೊಂದರೆಗಳನ್ನು ಅನುಭವಿಸುವುದಕ್ಕೆ ಸಿದ್ಧನಾಗಿದ್ದೇನೆ''. ಈ ಉದ್ಗಾರದಲ್ಲಿ ಬಡತನ ನಿರ್ಮೂಲನಕ್ಕಾಗಿ ನಮ್ಮ ದೇಶದಲ್ಲಿ ಸರ್ಕಾರ ಮತ್ತು ಪಂಚಾಯತ್ ರಾಜ್ಯ ಮುಖೇಣ ಯೋಜನೆಗಳನ್ನು ಹಾಕಿಕೊಂಡು ಅವರ ಅಭಿವೃದ್ಧಿ ಸಾಧಿಸಬೇಕು ಎನ್ನುವವರಿಗೆ ಸ್ವಾಮೀಜಿಯವರ ಮಾತುಗಳು ಸೇವೆಯನ್ನು ದಿನಚರಿಯ ಅವಿಭಾಜ್ಯ ಅಂಗವನ್ನಾಗಿ ಮಾಡಿಕೊಳ್ಳಲು ಬೇಕಾದ ಸ್ಫೂರ್ತಿಯನ್ನು ಕೊಡಬಲ್ಲದು.

ಕೊನೆಯಿಲ್ಲದ ಕರೆ :

ಸೇವೆ ಯಾವುದಾದರೂ ಒಂದು ನಿಗದಿತ ವೇಳೆಗೆ ಅನ್ವಯಿಸುವ ಘಟನೆ ಇಲ್ಲ. ಅದು ವೇಳಾ ರಹಿತ ಗುರಿ. ಒಮ್ಮೆ ನೀವು ನಿಮ್ಮ ಮನಸ್ಸನ್ನು ಮತ್ತು ಆತ್ಮವನ್ನು ಭಗವಂತನ ಕಡೆಗೆ ತೊಡಗಿಸಿದರೆ, ನಿಮ್ಮ ಅನಿವಾರ್ಯ ಮರಣ ಜೀವನ, ಆಮರಣಾಂತ ಜೀವನದ ಯೋಜನಾ ಚೌಕಟ್ಟಾಗಿ ಪರಿವರ್ತನೆಗೊಳ್ಳುವುದು. ಶ್ರೀ ಅರವಿಂರು ಅಂಥವರು ಸಂತರ ಮಾತುಗಳಲ್ಲಿ ಹೇಳುವುದಾದರೆ ''ಈ ಪ್ರಪಂಚವನ್ನು ಆಕಸ್ಮಿಕವಾಗಿ ಆರಿಸಿಕೊಡ ಇಟ್ಟಿಗೆಗಳಿಂದ ಕಟ್ಟಿದ್ದಲ್ಲ. ದೈವ ನಿಯಮದ ವಿನ್ಯಾಸಕರಾದ ಕುರುಡು ದೇವರು ಅಲ್ಲ. ಸಂಪೂರ್ಣ ಪ್ರಜ್ಞೆ ಇರುವ ಪ್ರಚಂಡ ಶಕ್ತಿಯೊಂದು ಜೀವನದ ಯೋಜನೆಯನ್ನು ತಯಾರಿಸಿದೆ''. ಇಂತಹ ಪ್ರಪಂಚದಲ್ಲಿ ಬದುಕಿ ಬಾಳುತ್ತಿರುವ ನಮಗೆ ಸೇವೆಯನ್ನು ದಿನಚರಿಯ ಭಾಗವನ್ನಾಗಿ ಮಾಡಿಕೊಳ್ಳಲು ಎಂತಹ ಅಪೂರ್ವ ಅವಕಾಶ!

ಈ ಸದವಕಾಶವನ್ನು ಉಪಯೋಗಿಸಿಕೊಳ್ಳಬೇಕಾದರೆ ನಿಮ್ಮ ನಂಬಿಕೆ, ನಿಮ್ಮ ದೃಢ ನಂಬಿಕೆ, ಅಚಲವಾದ ನಂಬಿಕೆ ಅತ್ಯಾವಶ್ಯಕ. ನರಳುವುದರಿಂದ ಮಾತ್ರ ಕಲಿಕೆ ಸಾಧ್ಯ. ಅಲ್ಲದೆ ನಾವು ಸೇವೆ ಮಾಡಬೇಕೆಂದಿರುವ ಸ್ಪಷ್ಟ ತಿಳುವಳಿಕೆ ನಮಗೆ ಅತ್ಯಂತ ಕ್ಲಿಷ್ಟ ಕಾಲದಲ್ಲಿ ಮತ್ತು ಸೋತು ಬಿದ್ದ ಕಾಲದಲ್ಲಿ ನಮ್ಮ ನೆರವಿಗೆ ಬರುತ್ತದೆ. ಈ ಜ್ಞಾನದ ಯೋಜನೆಯನ್ನು ವಿವರಿಸುವುದಕ್ಕೆ ಮಾತುಗಳು ಸಾಕಾಗುವುದಿಲ್ಲ. ಅದರ ಬದಲಿಗೆ ಪವಿತ್ರವಾದ ಮತ್ತು ಕಾರ್ಯದ ಏಳಿಗೆಯಾಗಿ ವಿಜೃಂಭಿಸಿದ

ರಾಷ್ಟ್ರಪ್ರೇಮಿ ಶ್ರೀ ಬಾಲಗಂಗಾಧರ ತಿಲಕ ಅವರಿಗೆ ಮರಣದಂಡನೆ ವಿಧಿಸುವ ಸಂದರ್ಭದಲ್ಲಿ ನ್ಯಾಯಾಲಯದ ಕಟಾಂಜನದೊಳಗೆ ನಿಂತು ಅವರು ಹೇಳಿದ ಮಾತು ಎಂದೆಂದಿಗೂ ಬಾರಿಸುವ ಡಿಂಡಿಮ. ೧೯೦೮ರಲ್ಲಿ ನಡೆದ ವಿಚಾರಣೆಯಲ್ಲಿ ಅದರ ಬರಹ ದಂಗೆಯನ್ನು ಪ್ರಚೋದಿಸಿದೆ ಎಂಬ ಆಪಾದನೆಯನ್ನು ಅವರ ಮೇಲೆ ಅನ್ಯಾಯವಾಗಿ ಹೊರಿಸಿ, ನ್ಯಾಯಾಲಯವು ಮರಣದಂಡನೆಯನ್ನು ವಿಧಿಸಿದೆ ಎಂದು ಪ್ರಕಟಗೊಳಿಸಿದಾಗ ಅವರು ಹೇಳಿದ ಮಾತುಗಳನ್ನು ಬಲ್ಲಿರಾ? ಅವರು ಶಾಂತಚಿತ್ತದಿಂದ ಹೇಳಿದರು. ''ನ್ಯಾಯದರ್ಶಿಗಳು ಏನೇ ಅಭಿಪ್ರಾಯಕ್ಕೆ ಬಂದಿದ್ದರೂ ನಾನು ಹೇಳಬೇಕೆಂದಿರುವುದು ನಾನು ಈ ಬಗ್ಗೆ ನಿರಪರಾಧಿ ಎಂದು, ನ್ಯಾಯದರ್ಶಿಗಳಿಗಿಂತ ಹೆಚ್ಚಿನ ಶಕ್ತಿ ದೇಶದ ಹಾಗೂ ಜನರ ಭವಿಷ್ಯವನ್ನು ನಿರ್ಧರಿಸುತ್ತದೆ. ಆದ್ದರಿಂದ ಭಗವಂತನ ಇಚ್ಛೆ ನಾನು ಭಾರತದ ಯಾವ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವೆನೋ ಅದು ನಾನು ಮರಣ ದಂಡನೆಯನ್ನು ಅನುಭವಿಸುವುದರಿಂದ ಸಾಧಿಸಬಲ್ಲೆನಾದರೆ ನಾನು ಸ್ವತಂತ್ರನಾಗಿ ಹೊರಬರುವುದಕ್ಕಿಂತ, ಗಲ್ಲಿಗೇರಿಸಿಕೊಳ್ಳಲು ಸಂತೋಷಪಡುತ್ತೇನೆ''.

ಶ್ರೀ ಬಾಲ ಗಂಗಾಧರ ತಿಲಕ ಅವರ ಮಾತುಗಳು ತಾಯ್ನಾಡಿಗೆ ಸಲ್ಲಿಸಿದ ಸೇವೆಯ ಸಾರಾಂಶ, ಇದು ಅವರ ಜೀವನದ ದಿನಚರಿಯಲ್ಲಿ ಅಳವಡಿಸಿಕೊಂಡ ಸೇವೆಯ ಮಾರ್ಗ; ಇದು ರಾಷ್ಟ್ರಧರ್ಮ; ಸಾಯುತ್ತಿರುವ ಸಂದರ್ಭದಲ್ಲಿಯೂ ಪ್ರಜ್ವಲಿಸುವ ತ್ಯಾಗಮಯ ಸೇವೆ; ಇದು ಎಲ್ಲರಿಗೂ ಪ್ರತಿಫಲವನ್ನು ಅಪೇಕ್ಷಿಸದೆ ಸೇವೆಮಾಡುವುದಕ್ಕೆ ಸ್ಫೂರ್ತಿ ಕೊಡುವುದಲ್ಲದೆ ಸೇವೆಯ ಮಾರ್ಗವನ್ನು ನಾವೆಲ್ಲರೂ ಅನುಸರಿಸುವಂತೆ ಪ್ರಚೋದಿಸುತ್ತದೆ. ಇದು ಕರ್ಮಯೋಗ.

ಸಾರಾಂಶ ಇಷ್ಟೆ : ಸೇವೆ ದಿನಚರಿಯ ಮಾರ್ಗವಾಗಿರಬೇಕಾದರೆ ಅದು ಪಾಂಡಿತ್ಯದ ಭಾವನೆ ಅಲ್ಲ; ಅದು ಸಂಪ್ರದಾಯಗಳ ಸಮಾರಂಭದ ಉತ್ಸಹವೂ ಅಲ್ಲ; ಅದು ಅಸ್ಪಷ್ಟವಾದ ಸಾಮಾಜಿಕ ಮಾದರಿವಾದವೂ ಅಲ್ಲ; ಅದು ಆಧ್ಯಾತ್ಮಿಕ ಸತ್ಯ. ನಮ್ಮ ಬಾಳಿಗೆ ಅರ್ಥ ಮತ್ತು ವಸ್ತುಸ್ಥಿತಿಯನ್ನು ಒದಗಿಸುತ್ತದೆ. ಅದು ನಮ್ಮ ತೀವ್ರದುಃಖದ ಪರಿಸ್ಥಿತಿಯಲ್ಲಿ ಹಾಗೂ ನಮ್ಮ ಅಗ್ನಿ ಪರೀಕ್ಷೆಯ ಕಾಲದಲ್ಲಿ ನಮಗೆ ಸಾಂತ್ವನವನ್ನು ಕೊಡುವ ಶಕ್ತಿ. ಸೃಷ್ಟಿಯ ಗರ್ಭದಲ್ಲಿ ಅಡಗಿರುವ ಪ್ರೀತಿ, ನ್ಯಾಯ, ಗಾಢ ನಂಬಿಕೆ. ಮಾನವ ಅಭಿವೃದ್ಧಿಗೆ ಕಾರಣವಾದ ಈ ಶಕ್ತಿ ಆತನ ಪರಿಪಕ್ವತೆಗೆ ಸದಾ ಪ್ರಯತ್ನಿಸುವ ನಂಬಿಕೆಗೆ ಅರ್ಹವಾದ ಚೇತನ. ಈಗಿನ ಸನ್ನಿವೇಶದಲ್ಲಿ ಚುನಾಯಿತ ಪ್ರತಿನಿಧಿಗಳು, ಸರ್ಕಾರಿ ನೌಕರರು, ವಿವಿಧ ಕ್ಷೇತ್ರಗಳಲ್ಲಿ ದುಡಿಯುತ್ತಿರುವವರೆಲ್ಲರೂ ಇಂತಹ ಸೇವೆಯನ್ನು ಬಾಳಿನ ದಿನಚರಿಯ ಮಾರ್ಗವಾಗಿ ಸಲ್ಲಿಸಲು ಪಣ ತೊಡುತ್ತಾರೆಂದು ನಂಬಬಹುದೆ?

ರವೀಂದ್ರರ ಸಾಹಿತ್ಯ ವಿಚಾರಗಳು

ಪ್ರೊ. ಕೆ.ಎಸ್. ನಿಸಾರ್ ಅಹಮದ್

ಸಾಹಿತ್ಯಲೋಕದಲ್ಲಿ ಕೆಲವು ಲೇಖಕರ ಸ್ಫೂರ್ತಿಶೀಲ ಪ್ರಭಾವ ಎಣೆಯಿಲ್ಲದ್ದು. ಕಾಲದಿಂದ ಅವರ ಸತ್ವ ತೆಳ್ಳಗಾಗದು, ಇಂಗದು. ಕೆರೆಕುಂಟೆಗಳಿಗಲ್ಲದೆ ಅಂತರ್ಜಲ ಪ್ರೇರಿತ ಚಿಲುಮೆಗಳಿಗೆ ಬತ್ತುವಿಕೆಯ ಭೀತಿಯೆಲ್ಲಿ? ಅವರ ಕೃತಿಗಳು ಅನಂತರ ಬರುವ ಲೇಖಕರ ಪಾಲಿಗೆ ಚಿರ ವರ್ತಮಾನಿಗಳು, ಅಕ್ಷಯ ಜಾಯಮಾನಿಗಳು. ಭುವನದ ಭಾಗ್ಯದ ಫಲಸ್ವರೂಪಿಗಳಾದ ಅವರಿಂದ ಸ್ವಭಾಷೆ. ದೇಶ ಜನಾಂಗಗಳಿಗೆ ಮಾತ್ರ ಕೀರ್ತಿಯ ಕೋಡು ಕೊನರುವುದಿಲ್ಲ; ವಿಶ್ವದ ಸಮಸ್ತ ಸಭ್ಯ ಭಾಷೆಗಳ ರಸಜ್ಞರಿಗೂ ಅವರು ವಂದ್ಯರೆನ್ನಿಸುತ್ತಾರೆ. ಲೋಕಸಾಹಿತ್ಯಕರ್ತರ ಅಮರ ಯಶೋಮಾಲೆಯಲ್ಲಿ ಅವರ ಹೆಸರಿನ ಶೋಭಾಯಮಾನ ರತ್ನ ಥಳಥಳಿಸಿರುತ್ತದೆ. ಜನಸ್ಮೃತಿಯ ಸಿಂಹಾಸನದಲ್ಲಿ ವಿರಾಜಮಾನರಾದ ಅವರಿಗೆ ಅಬ್ಬರವಿಲ್ಲದೇ ನಿತ್ಯೋತ್ಸವದ ಗೌರವ ಸಲ್ಲುತ್ತಿರುತ್ತದೆ.

ಕಾಲಾನುಸಾರಿಯಾದ ಫ್ಯಾಷನ್ನಿನ ದೆಸೆಯಿಂದ ಅವರ ಪ್ರಾಶಸ್ತ್ಯ ತತ್ಕಾಲಕ್ಕೆ ಕಾರ್ಮೋಡ ಆವರಿಸಿದಂತೆ ತೋರುತ್ತದೆ. ಆಗ ಮಿಂಚುಹುಳುಗಳದೇ, ಚೊಗಟೆ ಗಿಡಗಳದೇ ವಿಜಯಾಟ್ಟಹಾಸ. ತಕ್ಕಡಿಯ ತುಂಬ ಗುಲಗಂಜಿಗಳದೇ ಗೌಜುಗದ್ದಲ. ಗಲ್ಲಿಗಳ ಕಿಕ್ಕಿರಿಕೆ ರಾಜಾರಸ್ತೆಯನ್ನು ಕಣ್ಮರೆಗೊಳಿಸಬಹುದು. ಆದರೆ ತುಂಬು ಚಂದ್ರನ ಕಾಂತಿ ಕಾರ್ಮುಗಿಲಿನ ದೆಸೆಯಿಂದ ಮರೆಗೊಳ್ಳುವುದು ಸ್ವಲ್ಪ ಸಮಯದ ವರಸೆಯಷ್ಟೆ. ಮೇಘ - ವಿಮೋಚಕ ಚಂದ್ರ ಅಧಿಕ ಪ್ರಕಾಶಶೀಲವಾಗಿ ತೋರುವಂತೆ, ಆ ಮಹಾಲೇಖಕರ ತೇಜೋಜ್ವಲ ಪ್ರಭಾವ ದ್ವಿಗುಣಿಸುತ್ತದೆ. ಕಾಲ ಏನೆಲ್ಲವನ್ನೂ ಕೊಲ್ಲುತ್ತದೆ ಮುಲಾಜಿಲ್ಲದೆ, ಪಕ್ಷಪಾತವಿಲ್ಲದೆ. ಆದರೆ ಅದು ಬಲಿಸುತ್ತ ಬೆಳೆಸುವುದು

ಸತ್ಕೀರ್ತಿಕರ ಕೃತಾರ್ಥ ಕೃತಿಗಳನ್ನೇ; ಆ ಮೂಲಕ ಅವರ ಭಾವಾಲೋಚನೆಗಳನ್ನೇ; ಅದರ ಧವಳ ಸ್ಮೃತಿಯನ್ನೇ. ಅಂಥ ವಿರಳತರ ಯುಗಸಾಹಿತಿಗಳಲ್ಲಿ ರವೀಂದ್ರನಾಥ ಠಾಕೂರರು ಒಬ್ಬರು.

ರವೀಂದ್ರರ ಸಾಹಿತ್ಯದ ಕಡೆ ಮನಸ್ಸು ಹಾಯಿಸುವುದು ವರ್ತಮಾನಸ್ಥ ಆರಂಭಿಕ ಬರಹಗಾರರ ಪಾಲಿಗೆ ಅತ್ಯಂತ ಲಾಭಪ್ರದವಾದೀತು. ಅವರಿಂದ ನವೋದಯ ಮಾರ್ಗದ ಭಾರತೀಯ ಭಾಷೆಗಳ ಮಹತ್ವದ ಲೇಖಕರು ಪ್ರಭಾವಿತವಾದದ್ದು ಎಲ್ಲ ಬಲ್ಲ ಸಂಗತಿ. ಸ್ವಾತಂತ್ರ್ಯಪೂರ್ವ ಭಾರತೀಯ ಬರವಣಿಗೆಯ ಮೇಲೆ ಆಂಗ್ಲ ಕವಿ ಸಾಹಿತಿಗಳ ಜೊತೆಯಲ್ಲೇ ಠಾಕೂರರ ವರ್ಚಸ್ಸಿನ ಛಾಪು ಹಚ್ಚೆಯಂತೆ, ಉತ್ತ ಸಾಲಿನ ಗೆರೆಯಂತೆ ಸುಸ್ಫುಟ. ಆದರೆ ನವ್ಯಮಾರ್ಗದ ಕವಿಗಳಿಗೆ ರವೀಂದ್ರರಿಗಿಂತ ಪಾಶ್ಚಾತ್ಯ ಕವಿ, ಸಾಹಿತ್ಯ ವಿಚಾರಕರು ನಿಕಟವರ್ತಿಗಳಾದವರು. ಕಾವ್ಯ, ಭಾವದಲ್ಲಿ ಬಡಕಲಾಗಿ ವೈಚಾರಿಕತೆಯ ಬೊಜ್ಜಿನಿಂದ ಜಡವಾದದ್ದು ಅದರ ಫಲಪರಿಣಾಮಗಳಲ್ಲಿ ಒಂದು.

ಇನ್ನು ಪ್ರಸಕ್ತ ಕಾಲದ ಸಾಮಾಜಿಕ ಕಳಕಳಿಯುಳ್ಳ ಕನ್ನಡದ ಯುವ ಕವಿ, ಲೇಖಕರಿಗೆ ಠಾಕೂರರ ಬಗೆಗಿನ ಅಕ್ಕರಾಸ್ಥೆ ಅಷ್ಟಕಷ್ಟೆ. ಅವರ ವಿಶ್ವೋದಾರ ನಿಲವುಗಳಾಗಲಿ ರಾಷ್ಟ್ರೀಯತೆಯ ಬಗೆಗಿನ ಸಮಚಿತ್ತದ ಉಚಿತ ಸಮಯೋಕ್ತಿಗಳಾಗಲಿ ಸಾಹಿತ್ಯಕರ್ಮಿಗಳಿಗೆ ತಿಳಿದಂತೆ ತೋರುವುದಿಲ್ಲ. ಇನ್ನು ಅವುಗಳ ಸತ್ವಭಾವಕ್ಕೆ ಒಳಗಾಗುವುದು ದೂರದ ಮಾತೇ ಸರಿ. ಇಂಥವರ ಮನಸ್ಸಿಗೆ ರವೀಂದ್ರನಾಥ ಠಾಕೂರರು ಚಾರಿತ್ರಿಕ ಮಹತ್ವವುಳ್ಳ ಪಳೆಯುಳಿಕೆಯಾಗಿ ಭಾಸವಾದರೆ ಆಶ್ಚರ್ಯವೇನಿದೆ? ವರ್ತಮಾನದ ಊಳಿಗಸ್ಥರಿಗೆ ಭವಿಷ್ಯೋನ್ಮುಖತೆಯ, ದೂರದರ್ಶಿತ್ವದ ಕಲ್ಪನೆಯಾಗುವುದು ಅಶಕ್ಯ. ರವೀಂದ್ರರ ರಚನಾರೀತಿ, ಭಾಷೆ ಬಳಕೆಯ ಕ್ರಮದಲ್ಲಿ ತಂಗಳನ್ನು ಕಾಣಬಯಸುವ ಸಂದೇಹವಾದಿಗಳು ಇದ್ದಾರು. ಅವರನ್ನು ಚೆನ್ನಾಗಿ ಓದಿಕೊಳ್ಳದೆಯೇ ಸಿಕ್ಕಿದ ಹಾಗೆ ಗಳಪುತ್ತ ತಮ್ಮ ಅತ್ಯಾಧುನಿಕತೆಯನ್ನು ಪ್ರವರಿಸಿಕೊಳ್ಳುವ ಚಾಳಿಯ ಮಂದಿಗೂ ಕೊರತೆಯಿಲ್ಲ. ಅವರಿಗೆ ಠಾಕೂರರ ನೈಜ ಅಂತಃಸತ್ವ, ಪ್ರಸ್ತುತತೆಗಳನ್ನು ಮನದಟ್ಟಾಗಿಸುವ ಕೆಲಸ ನಡೆಯಬೇಕಾದದ್ದು ಅಗತ್ಯವೆಂದು ನನಗ್ನಿಸುತ್ತದೆ. ಅಂಥವರಿಗೆ ರವೀಂದ್ರರ ಸಮಕಾಲೀನವೂ ಸರ್ವ ಮಾನವ ಸಾಧಾರಣವೂ ಮೂಲಭೂತವೂ ಆದ ಮನುಷ್ಯ ಸ್ವಭಾವದ ರಾಗಭಾವಗಳ ಅಮೋಘ ಚಿತ್ರಣ, ಚಿರಂತನವಾದದ್ದರ ಬಗೆಗಿನ ಅದಮ್ಯ ಕಳಕಳಿ, ಅವುಗಳ ಅಭಿವ್ಯಕ್ತಿಯಲ್ಲಿ ಸಮತೂಕದ ನಿಷ್ಪಾಕ್ಷಿಕ ದೃಷ್ಟಿ, ಅನುಭವ ಪ್ರಮಾಣಿಕ ಅನಿಸಿಕೆಗಳು ಶಿಕ್ಷಣಯೋಗ್ಯವೆನಿಸಿಯಾವು. ಮನುಷ್ಯ ಜೀವಿತದ ಬಾಹ್ಯಂತರಿಕವಾದ ಸಮಸ್ತ ಸಂಗತಿಗಳೂ ಅವರ ಗಂಭೀರ ವಿವೇಚನೆಗೆ ಒಳಗಾಗಿವೆ. ಅವನ್ನು ಕುರಿತ ಭಾವನೆಗಳು ಅತ್ಯನನ್ಯವೆನ್ನಿಸುವ ವೇಳೆಯಲ್ಲೇ, ಪರಂಪರೆಯ ಭದ್ರ ತಳಹದಿಯನ್ನು ಹೊಂದಿರುವುದೂ ನಮ್ಮ ಗಮನಕ್ಕೆ ಬರುತ್ತದೆ.

ಮನೋಗ್ರಾಹ್ಯವಾಗಲು ತೊಡಕೆನ್ನಿಸುವ, ಅಷ್ಟೇ ಏಕೆ, ಕೆಲವೊಮ್ಮೆ ಸಾಧ್ಯವಾಗದೆನ್ನುವ ಗುರುತರವೂ ಗಹನವೂ ಆದ ಚಿಂತನಗಳನ್ನು ಅವರು ತಮ್ಮ ಮಾತಿನ ಜಾಣನಿಂದ, ವಿದಗ್ಧ ಹಾಸ್ಯತೆಯ ಚಳಕದಿಂದ ಹೂವೆತ್ತಿದಂತೆ ಸುಲಭವಾಗಿಸ ಬಲ್ಲರು. ಅಂತಃಸಾಮಂಜಸ್ಯ, ಬಾಹ್ಯಸೌಂದರ್ಯಗಳು ಪರಮಪ್ರಮಾಣದಲ್ಲಿ, ಪೂರ್ಣಹದದಲ್ಲಿ ಪರಸ್ಪರ ಏಕಾತ್ಮತೆಯಲ್ಲಿ ದಾಂಪತ್ಯಗೊಂಡಿರುವ ವೈಖರಿಯನ್ನು ಮನಗಾಣಬೇಕೆ? ಹಾಗಾದರೆ, ಠಾಕೂರರ ಸಾಹಿತ್ಯದ ಅಧ್ಯಯನವನ್ನು ಕೈಗೊಳ್ಳಿ, ಮನವಿಟ್ಟು ಮನನ ಮಾಡಿ. ಅವರ ಬಹುಮುಖಿ ವಿರಾಟ್ ಪ್ರತಿಭೆಯ ವೈವಿಧ್ಯ ವಿಲಾಸ ಬೆರಗಾಗಿಸದಿದ್ರೆ, ಹೇಳಿ. ಅನೇಕ ವರ್ಷಗಳ ಗಂಭೀರಾಧ್ಯಯನ, ಚಿಂತನಗಳನ್ನು ನಡೆಸಿದವರೂ ಸಹ ಠಾಕೂರರ ಸೃಜನಶಕ್ತಿಯ ಅಮೇಯತೆ, ಗೂಢತೆಗಳನ್ನು ಪೂರ್ತಿ ಅರ್ಥಮಾಡಿಕೊಂಡಿಲ್ಲವೆಂಬ ವಿನಯೋಕ್ತಿಯನ್ನು ವ್ಯಕ್ತಪಡಿಸಿದ್ದಾರೆ. ಇತರ ಬಹುಸಂಖ್ಯೆಯ ರಚನಕಾರರಿಗೂ ರವೀಂದ್ರರಿಗೂ ಇರುವ ವ್ಯತ್ಯಾಸ ಇದೇನೇ. ಅವರೇ ಬೇರೊಂದು ಸಂದರ್ಭದಲ್ಲಿ ನುಡಿದಂತೆ ಅದು ಗೋಧಿ, ಯವೆ, ಭತ್ತ ಬೆಳೆಯುವ ಹುನ್ನಾರವಲ್ಲ; ಮಹಾರಣ್ಯ ಪ್ರಾಪ್ತಿಗಾಗಿ ವನಸ್ಪತಿಗಳ ಶ್ರದ್ಧಾಪೂರ್ಣ ಬೀಜಾನ್ವೇಷಣ.

ಸಮಕಾಲಿಕ ಸಾಮಾಜಿಕ, ರಾಜಕೀಯ ಸಮಸ್ಯೆಗಳಿಗೆ ಮೊದಲ ಮಾಲೆಹಾಕುವ ಪ್ರವೃತ್ತಿಯ ಹಾಲಿ ಕಾಲದ ಬರಹಗಾರರಿಗೆ ರವೀಂದ್ರನಾಥ ಠಾಕೂರರ ಬದುಕು ಬರಹಗಳು - ಅದರಲ್ಲೂ ಸೃಜನಶೀಲ ಕೃತಿಗಳು ಮತ್ತು ವಿಮರ್ಶಾತ್ಮಕ

ವಿಚಾರಗಳು - ಹಲವು ಬೆಲೆಯುಳ್ಳ ಒಳನೋಟಗಳನ್ನು ಒದಗಿಸಿಯಾವು; ಬಾಳಿನ ಅನೇಕಮುಖಿಯಾದ ಅಗಾಧತೆಯ, ಕಾಲದ ಅಖಂಡತೆಯ ಅಚ್ಚಳಿಯದ ದರ್ಶನ ಮಾಡಿಸಿಯಾವು.

ವಿಚಾರಭಾರದಿಂದ ಪೆಡಸುಗೊಳ್ಳದ, ಕರಟಾಗದ ಸಂತೋಷಕರ ಲವಲವಿಕೆ, ಭಾವ ತದೇಕತ್ವ, ರಸಸ್ಪೃಶ್ಯತೆಗಳನ್ನು ಮೈಗೂಡಿಸಿಕೊಂಡ ಗದ್ಯ ಪದ್ಯರೂಪದ ಅವರ ಬರಹಗಳು ಇಂದು ಬರೆಯುತ್ತಿರುವ ಯೌವನವಂತ ಅಕ್ಷರಕಾರರಿಗೆ ಆದರ್ಶವಾಗಬೇಕು. ವಿಷಯದ ವಿಶದತೆಗೆ ಅವರು ಹೇರಳವಾಗಿ ಉಪಯೋಗಿಸುವ ಉಪಮಾನಗಳದೇ ಒಂದು ವೈವಿಧ್ಯಪೂರ್ಣ ಆಹ್ಲಾದಕರ ಜಗತ್ತು. ಅರ್ಥ ಸ್ಪಷ್ಟತೆಯಲ್ಲೇ ಉಪಮೆಗಳ ಕರ್ತವ್ಯ ಮುಗಿದು ಹೋಗುವುದಿಲ್ಲ. ತಿಳಿವಳಿಕೆಯ ವಿಸ್ತರಣ, ರಸಾಸ್ವಾದನಗಳ ಹಂತಕ್ಕೂ ಅದು ಹಾಯುತ್ತದೆ. ಈ ವಿಚಾರದಲ್ಲಿ ಯಾರೇ ವಿಶ್ವಕವಿಗೆ ರವೀಂದ್ರರು ಸರಿಮಿಗಿಲೆನ್ನಿಸುತ್ತಾರೆ.

ಸಾಹಿತ್ಯದ ಬಗ್ಗೆ ಅವರಿಗಿದ್ದ ಗಂಭೀರ ಹಾಗೂ ಅಚಲ ತಾತ್ವಿಕ ದೃಷ್ಟಿಯನ್ನು ಅವರ ಯಾವುದೇ ಕೃತಿ ಅನಾಯಾಸವಾಗಿ ಮನವರಿಕೆ ಮಾಡಿಕೊಡುತ್ತದೆ. ಹಲವೊಮ್ಮೆ ನವೀನ ಪ್ರತಿಪಾದನೆಗಳು, ಅಪೂರ್ವ ಸೈದ್ಧಾಂತಿಕ ಸಂಗತಿಗಳು ವಿರಳವೆನ್ನಿಸಬಹುದು; ಪಾರಂಪರಿಕ ವಿಚಾರಗಳೇ ಸಮಕಾಲೀನ ಪರಿಕ್ಷೇತ್ರದ ಸುತ್ತ ಉಪಗ್ರಹಿಸುತ್ತಿರುವಂತೆ ತೋರಬಹುದು. ಆದರೆ ಅವುಗಳನ್ನು ಪುನರ್ನವಗೊಳಿಸುವ, ಹೊಚ್ಚಹೊಸದಾಗಿ ಸಂವೇದಿಸುವಂತೆ ಮಾರ್ಪಡಿಸುವ ಪ್ರತಿಭಾ ಕೌಶಲ ಅಸ್ವಾದ್ಯಶವೆನಿಸದಿರದು. ಅವರ ಭಾವನಾಲೋಚನೆಗಳಿಗೆ ಬುದ್ಧಿಯ ಮರ್ಜಿ ಹಿಡಿಯದೆಯೇ ನೇರ ಹೃದಯ ಪ್ರವೇಶ ಮಾಡುವ ಸಾಮರ್ಥ್ಯವಿದೆ; ಮನಸ್ಸನ್ನು ಒಮ್ಮೆಗೇ ಅನುನಯಿಸಿ ಸೆರೆಗೊಳ್ಳುವ ಗುಣವಿದೆ. ಪರಿಣಾಮದ ಮೇಲೆ ಸದಾ ಗಮನವಿಟ್ಟು, ವಿಚಾರ ಕ್ರಮದ ಬೆಳವಣಿಗೆಯ ಮಟ್ಟದಲ್ಲಿ ಸ್ವಚ್ಛಂದ ವಿಹಾರವಿಲಾಸಗಳನ್ನು, ರೋಚಕತ್ವ ಚಮತ್ಕೃತಿಗಳನ್ನು ಒಳಕೊಳ್ಳುವ ಅವರ ಅಪ್ರತಿಮ ಮೇಧಾಶಕ್ತಿ, ಹಲವು ಸುಳಿಗಳ ಆಳ ಮಡುಗಳುಳ್ಳ ಸಾಗರಾಭಿಮುಖಿಯಾದ ತುಂಬು ನದಿಯನ್ನು ನೆನಪಿಸುತ್ತದೆ. ಠಾಕೂರರು ಏನೇ ಆಲೋಚಿಸಲಿ, ಬರೆಯಲಿ ಅದಕ್ಕೆ ನಿರಾಯಾಸವಾಗಿ ಸ್ಪೃಹಣೀಯ ಕಾವ್ಯತೆಯೊದಗಿಬಿಡುತ್ತದೆ. ಮನಸ್ಸಿನ ದುರೂಹ್ಯ ತತ್ವವಿಚಾರಗಳ ಏರುತಗ್ಗಿನ ಭೂದೃಶ್ಯದ ಮೇಲೆ ಹೃದ್ಯತೆಯ ಮಂಜಿನ ಆಪ್ಯಾಯಮಾನ ಸಮಾಚ್ಛಾದನ ಮೂಡಿಬಿಡುತ್ತದೆ.

ಠಾಕೂರರ ಭಾವೋದ್ದೀಪಕ ಸೃಜನಶಕ್ತಿ ಹೇಗೆ ಸಮೃದ್ಧಿಶೀಲವೋ ಹಾಗೆಯೇ ಅವರ ವೈಚಾರಿಕ ಪ್ರವೃತ್ತಿ ಸಹ ಪ್ರಬಲಶಾಲಿ, ಇವೆರಡರ ಮೇಳೈಕೆಯ ಫಲಶ್ರುತಿ ರೂಪದ ಕೃತಿಗಳು ಸಮಾನ ಎಣಿಕೆಗೆ ಅರ್ಹವಾಗುವ ಹಿರಿಮೆಯುಳ್ಳವು; ಆ ಪ್ರಕಾರಗಳಲ್ಲಿ ಮಹೋದ್ಧಾಮವೆನ್ನಿಸುವಂಥವು. ಅವರ ವಿಮರ್ಶೆಗೆ ಒಳಪಟ್ಟ ಗ್ರಂಥ ಒಂದು ನಿಮಿತ್ತವೂ ಪ್ರೇರಣೆಯೂ ಆಗಿ, ಅದರಿಂದ ಹೊಮ್ಮುವ ಚಿಂತನಗಳು ಸಾಹಿತ್ಯ ಮತ್ತು ಕಲಾಸ್ವರೂಪದ ಸಾರ್ವತ್ರಿಕ ವ್ಯಾಖ್ಯೆಗಳಾಗಿ ಮಾರ್ಪಡುವ ಸಂಭವವುಂಟು. ವಿಭಾವನೆಯ ವಿಲಾಸಮಯತೆ, ನುಡಿಮೆಯ ನವಿರುತನ ಮತ್ತು ನಿಗೂಢತ ದರ್ಶಿತ್ವಗಳ ದೆಸೆಯಿಂದ ಅವರ ವಿಮರ್ಶೆ ಒಂದು ಸರ್ವ ಸ್ವತಂತ್ರ ಸೃಜನಾತ್ಮಕ ಸಾಹಿತ್ಯ ರಚನೆಯ ಮೇಲ್ಮೆಯನ್ನು ಮೆರೆಸುತ್ತದೆ. ಈ ಪ್ರಕ್ರಿಯೆಯಲ್ಲಿ ರವೀಂದ್ರರ ಗ್ರಹಿಕೆಯ ವಿಸ್ತಾರ, ಸಂಸ್ಕಾರದ ಆಳ, ಸಂವೇದನೆಯ ಸೂಕ್ಷ್ಮತೆಗಳು ಓದುಗನನ್ನು ನಿಬ್ಬೆರಗಾಗಿಸುತ್ತವೆ.

ಅವರ ''ಸಾಧನಾ''ದಂತಹ ಗಹನ ವಸ್ತುವಿವೇಚಕ ಕೃತಿಯ ಆದ್ಯಂತ ಹಬ್ಬಿರುವ ಆಧ್ಯಾತ್ಮಿಕತೆಯ ದೀಪ್ತಿಮಂತ ಪ್ರಭೆಯೊಂದರ ಅನುಭವ ಮನಸ್ಸಿಗೆ ತತ್‌ಕ್ಷಣ ಮನವರಿಕೆಯಾಗುತ್ತದೆ. ಭಾರತೀಯ ದರ್ಶನ ಶಾಸ್ತ್ರದ ರಸಪೂರ್ಣ ವ್ಯಾಖ್ಯಾನದಂತಿರುವ ಈ ಗ್ರಂಥ, ಬಿಸಿಲು ಬೆಳಕುಗಳನ್ನು ಏಕತ್ರ ಸಂಯೋಗಿಸಿ ಕಾಣಿಸುವ ಕುಶಲತೆಯಿಂದ ಕೂಡಿದ.ಎ ಅವರ ಅನುಭಾವಿಕ ಚಿಂತನಗಳು ಮೇಲ್ಮಟ್ಟದ ಮೇಧಾವಿಗಳಿಗೆ ಮಾತ್ರ ಮೀಸಲಾಗದೆ ಸಕಲ ಶಿಷ್ಟ ಜನ ಸಂಸ್ಕಾರ ಸಾಧ್ಯವಾದ ಸಂಯೋಗವನ್ನು ಪ್ರತಿಪಾದಿಸುತ್ತವೆ. ಸಂಸ್ಕೃತಿ ಮತ್ತು ನಾಗರೀಕತೆಗಳ ನಡುವಣ ವಿಸದೃಶತೆ, ವಿಸಂಗತಿಗಳನ್ನು ಠಾಕೂರರು ಅನೇಕ ಬಾರಿ ಪ್ರಸ್ತಾಪಿಸುತ್ತಾರೆ; ಆಧುನಿಕ ಬಾಳ್ವೆಯ ಭೋಗಲೋಲುಪ್ತತೆಯ ಆಳದ ಅರಕೆಯನ್ನು ಮನದಟ್ಟಾಗುವಂತೆ ವಿಡಂಬಿಸುತ್ತಾರೆ.

ಇಂದಿನ ಸಾಮಾಜಿಕ ವ್ಯಕ್ತಿ ತನ್ನ ಅಂತಃಸಂಸ್ಕೃತಿಯನ್ನು, ನಯಸಂಪನ್ನ ಸುಸಭ್ಯತೆಯನ್ನು ಆರ್ಜಿಸಿ ಕಾಪಾಡಿಕೊಳ್ಳುವ ವಿದ್ಯೆಗಿಂತ, ಹಣ ಗಳಿಕೆ ಮತ್ತು ಬಾಹ್ಯ ಸಮೃದ್ಧಿಗಳ ಕೈಗೂಡಿಕೆಯ ತರಾತುರಿಯಲ್ಲಿದ್ದಾನೆ. ಇದು ಬದುಕಿನ ವಿಕಾರಗತಿಗೆ ಕಾರಣವಾಗಿದೆ. ಭಗವತ್ಕೃಪೆಯಿಂದ ಲಭ್ಯವಾಗಿರುವ ಸೊಗಸಾದ ಪಾದಗಳ ಆಕಾರ ಮನುಷ್ಯನಿಗೆ ಮುಖ್ಯವೆನಿಸಿಲ್ಲ. ಅದನ್ನು ಮರೆಯಾಗಿಸಿ ಮುಚ್ಚಲು ದುಬಾರಿ ಹಣ ಕೊಟ್ಟು ಖರೀದಿಸಿದ ಹೈಹೀಲ್ಡ್ ಜೋಡುಗಳು ಅಚ್ಚುಮೆಚ್ಚಾಗಿ ಬಿಟ್ಟಿವೆ. ಇವೊತ್ತಿನ ಅಸಾಮರಸ್ಯ ಅಡ್ಡಾದಿಡ್ಡಿತನಗಳಿಗೆ ಮದ್ದಿರುವುದು ನಾಗರಿಕತೆ - ಸಂಸ್ಕೃತಿ, ಭೋಗ - ಸಂಯಮಗಳ ನಡುವೆ ಸಮತೆಯುತ ಧೋರಣೆಯನ್ನು ಬೆಳೆಸಿಕೊಳ್ಳುವುದರಲ್ಲಿ; ಭಾರತೀಯ ಆರ್ಷದೃಷ್ಟಿಯನ್ನು ಪ್ರಚಲಿತ ಸಮಸ್ಯೆಗಳ ಸ್ವರೂಪಕ್ಕೆ ಅನುಗುಣವಾಗಿ ಹೊಂದಿಸಿಕೊಂಡು ಬಾಳುವುದರಲ್ಲಿ. ಸರ್ವೋದ್ಧಾರದ ಸೂತ್ರವಿರುವುದು ಈ ಸಮನ್ವಯದಲ್ಲಿ; ಯುಗಧರ್ಮವೆಂದರೆ ಇದೇನೇ - ಎಂದು ಠಾಕೂರರು ದೃಢವಾಗಿ ನಂಬಿದ್ದರು.

ಜೀವನವನ್ನು ಆಂಶಿಕ ದೃಷ್ಟಿಯಿಂದ ಪೃಥಕ್ಕರಿಸಿ ನೋಡುವ ವೈಜ್ಞಾನಿಕದೃಷ್ಟಿಗೆ ಪರ್ಯಾಯವಾಗಿ ಅದನ್ನು ಏಕಾಂಗಿ ನಿಲವಿನಿಂದ ದರ್ಶಿಸುವ ನೋಟ ಬಲಿಯಬೇಕು. ಅದರಲ್ಲಿ ಧರ್ಮ ರಾಜಕಾರಣ ವಸ್ತುಜ್ಞಾನ ದರ್ಶನಾದಿಗಳ ಸಮಪಾಕ ಸಿದ್ಧಗೊಳ್ಳಬೇಕು. ಇವೆಲ್ಲವೂ ಒಂದು ಔನ್ನತ್ಯದಲ್ಲಿದ್ದು ವಿಶ್ವಮಾನವತೆಯ ಧ್ಯೇಯದಿಂದ ಆವಿಷ್ಟವಾಗಬೇಕು. ವ್ಯಕ್ತಿ ಎಲ್ಲಿಯೇ ಇರಲಿ, ಯಾವುದೇ ಧರ್ಮೀಯನಾಗಲಿ ಅವನು ವಿಶ್ವ ಸ್ವರ ಸಮ್ಮೇಳಗಾನದ ಬೃಹತ್ ಗೋಷ್ಠಿಯ ಒಂದು ದನಿ; ಸೃಷ್ಟಿಯ ಮಹಾ ಮಗ್ಗದ ವರ್ಣಮಯ ಬಿಡಿ ಎಳೆ. ಈ ಮಹೋದಾತ್ತ ಲೀಲಾವಿಲಾಸದಲ್ಲಿ ರಾಷ್ಟ್ರೀಯತೆ ಸ್ವಮತ ಸ್ವಭಾಷೆಗಳ ಗೊಗ್ಗರು, ಗೋಜಲು ಎದುರು ಹಾಯಬಾರದು - ಇಂಥ ಉದಾರ ತತ್ತ್ವಗಳನ್ನು ತಮ್ಮ ಲೇಖನ, ಭಾಷಣಗಳಲ್ಲಿ ಸಾರಿದ್ದು ಮಾತ್ರವಲ್ಲದೆ ಬಾಳಿನಲ್ಲಿ ಅವನ್ನು ವಾಸ್ತವವಾಗಿಸಲು ಸಹ ರವೀಂದ್ರರು ಪ್ರಯತ್ನಿಸಿದರು. ಅದರ ಸಾಕಾರ ರೂಪ ವಿಶ್ವಭಾರತಿ, ಶಾಂತಿನಿಕೇತನ.

ಜೀವನವನ್ನು ಸಕಲ ಶಾಖೆ ಪ್ರಶಾಖೆಗಳಲ್ಲಿ ದರ್ಶಿಸುವ, ಅಂತರನುಭವಿಸುವ, ಅದನ್ನು ಕುರಿತಂತೆ ಸ್ವೋಪಜ್ಞ ವಿಚಾರ ತಳೆಯುವ; ಹಾಗೆ ತಳೆದದ್ದನ್ನು ಹಾರ್ದವಾಗಿ ನಾನಾ ವಾಙ್ಮಯ ಪ್ರಭೇದಗಳ ಮೂಲಕ ಪ್ರಕಾಶಗೊಳಿಸುವ ಕಾರ್ಯ ಅಪ್ರತಿಹತವಾಗಿ ಅವರ ಜೀವನ ಪರ್ಯಂತ ಮುಂಬರಿಯಿತು. ರವೀಂದ್ರರ ಎಂಬತ್ತು ವರ್ಷಗಳ ಸಾರ್ಥಕ ಬದುಕಿನ ಕೊನೆಯ ಹತ್ತು ವರ್ಷಗಳು ಅವರು ಲೇಖನಿಗಿಂತ ಕುಂಚಕ್ಕೆ ಆದ್ಯತೆ ನೀಡಿದ್ದು ಕುತೂಹಲಕಾರಿಯಾಗಿದೆ. ಮಾತಿನ ಸಾಧ್ಯತೆ ತೀರಿತೆಂಬ ಭಾವನೆಯೊ? ಇಳಿ ವಯಸ್ಸಿಗೆ ಅನುಗುಣವಾದ ಅಮೂರ್ತ ಮತ್ತು ಅಸಂಗತ ಮನೋಮುದ್ರಿಕೆಗಳನ್ನು ಬಣ್ಣಗಳಿಂದ ಮಾತ್ರ ರೇಖಿಸುವುದು ಸಾಧ್ಯವೆಂಬ ನಂಬಿಕೆಯೊ!

ಏನೇ ಇರಲಿ, ಆ ಅಂತ್ಯಾವಧಿಯಲ್ಲಿ ಅವರು ವಿನೂತನ ಬಗೆಯ ಅಸಾಂಪ್ರದಾಯಿಕವಾದ ಮೂರು ಸಹಸ್ರದಷ್ಟು ಕಲಾಕೃತಿಗಳನ್ನು ರಚಿಸಿದರು. ಮನುಷ್ಯನ ಅಪ್ರಕಾಶಿತ ಮನದಾಳದ ಆಕಾರರಹಿತ ವಿಲಕ್ಷಣ ಭಾವನೆಗಳನ್ನು ರವೀಂದ್ರರು ಈ ಚಿತ್ರಗಳಲ್ಲಿ ಸಾಂಕೇತಿಕವಾಗಿ ಮೂಡಿಸಿ ಚಿರಗೊಳಿಸಿದ್ದಾರೆ.

ಪ್ರಸ್ತುತ, ಈ ಬರಹದಲ್ಲಿ ರವೀಂದ್ರನಾಥ ಠಾಕೂರರ ಅನೇಕ ಮುಖಿ ವಜ್ರಸಮ ವ್ಯಕ್ತಿತ್ವದ ಒಂದು ಕೋನವನ್ನು ಮಾತ್ರ - ಅದರ ವಿಚಾರ ಪ್ರಭೆಯನ್ನು ಮಾತ್ರ ಕಾಣಿಸ ಬಯಸುವೆ. ಹಲವು ವರ್ಣಶೋಭೆಗಳಲ್ಲಿ ಈ ಪ್ರಭೆಯೂ ಒಂದೆಂಬುದು ದಿಟವಾದರೂ ಕವಿವರ್ಯರಿಗೆ ಅತಿ ಪ್ರಿಯವಾದ ತೇಜೋದೀಪ್ತಿ ಆದಾಗಿತ್ತೆಂಬುದನ್ನು ನೆನಪಿಡಬೇಕು.

ರವೀಂದ್ರರ ಹಲವಾರು ಕೃತಿಗಳು ಕನ್ನಡಕ್ಕೆ ಭಾಷಾಂತರವಾಗಿವೆ. ಕವಿತೆ, ಕಥೆ, ಕಾದಂಬರಿ, ನಾಟಕ, ಜೀವನ ಚರಿತ್ರೆ ಇತ್ಯಾದಿಗಳು ಹಿಂದೆಯೇ ಬಂದಿವೆ. ಸಂಸ್ಕೃತದ ಅಭಿಜಾತ ಕೃತಿಗಳಾದ ರಾಮಾಯಣ, ಮೇಘದೂತ, ಕುಮಾರಸಂಭವ, ಶಾಕುಂತಲ ಮುಂತಾದವುಗಳ ರಸಪೂರ್ಣ ವಿಮರ್ಶೆಯನ್ನೊಳಗೊಂಡ 'ಪ್ರಾಚೀನ ಸಾಹಿತ್ಯ' ಕೃತಿಯನ್ನು ಟಿ.ಎಸ್.ವೆಂಕಣ್ಣಯ್ಯನವರು ೧೯೨೭ರಲ್ಲೇ ಕನ್ನಡಿಸಿ ಪ್ರಚುರಪಡಿಸಿದರು. ಸಾಹಿತ್ಯದ ಲಕ್ಷಣವಿವರಣೆ, ವಸ್ತು, ಸೃಷ್ಟಿಕ್ರಿಯೆ,

ವಿಶ್ವಸಾಹಿತ್ಯ, ಸೌಂದರ್ಯ ಮತ್ತು ಸಾಹಿತ್ಯಕ್ಕಿರುವ ಒಳನಂಟು ಮೊದಲಾದ ವಿಚಾರಗಳನ್ನು ಅಡಗಿಸಿಕೊಂಡಿರುವ 'ಸಾಹಿತ್ಯ' ಹೆಸರಿನ ಪುಸ್ತಕವನ್ನು ಅಗರಂ ನರಸಿಂಹಯ್ಯನವರು ೧೯೪೦ರಲ್ಲಿ ತರ್ಜುಮೆ ಮಾಡಿ ಹೊರತಂದರು. ಠಾಕೂರರ ಸಾಹಿತ್ಯ ವಿಷಯಕ ಸ್ವೋಪಜ್ಞ ಚಿಂತನಗಳಿಗೆ ಈ ಪುಸ್ತಕ ಕೈಗನ್ನಡಿಯಂತಿದೆ. ಇವೆರಡು ಕೃತಿಗಳ ಪ್ರಭಾವವನ್ನು ಅನೇಕ ನವೋದಯ ಮಾರ್ಗದ ಕವಿಗಳ ಕೃತಿಗಳಲ್ಲಿ ಗುರುತಿಸಬಹುದಾಗಿದೆ. ಇಲ್ಲಿನ ಕೆಲ ಚಿಂತನಗಳು ಮರುವಿಮರ್ಶೆಗೆ ತಕ್ಕನಾಗಿದ್ದರೂ ಒಟ್ಟಿನಲ್ಲಿ ಠಾಕೂರರ ಕಾವ್ಯ ಜಾಯಮಾನದ ಬಗ್ಗೆ, ಅನನ್ಯ ಆಲೋಚನೆಗಳ ಬಗ್ಗೆ ಬೆಳಕು ಚೆಲ್ಲುವಂತಿವೆ. ಈ ಎರಡೂ ಪುಸ್ತಕಗಳು ಇಂಗ್ಲೀಷಿನ ಮೂಲಕವಲ್ಲದೆ ನೇರವಾಗಿ ಬಂಗಾಳಿಯಿಂದ ಕನ್ನಡಕ್ಕೆ ಬಂದಿರುವುದರಿಂದ ಅವು ಮೂಲಕ್ಕೆ ಅತಿ ನಿಕಟವಾಗಿವೆಯೆಂದು ಭಾವಿಸಬಹುದು. 'ಸಾಹಿತ್ಯ'ದ ಹಲವು ಭಾವನೆಗಳು ವಿಚಾರಯೋಗ್ಯವಾಗಿವೆ.

ಹೊರಗಿನ ಲೋಕವನ್ನು ಹೃದಯವೃತ್ತಿಯ ರಸದ ಮುಖೇನ ಆಂತರಿಕ ಮಾನವ ಜಗತ್ತನ್ನಾಗಿ ಪರಿವರ್ತಿಸಿಕೊಳ್ಳುವುದು ಎಲ್ಲರಿಗೂ ಸಾಧ್ಯವಿಲ್ಲ. ಹಾಗೆಯೇ ಈ ಸ್ವಕೀಯಗೊಳಿಸಿಕೊಂಡ ಜಗತ್ತನ್ನು ಮತ್ತೆ ಅನೇಕರ ಅನುಭವಕ್ಕೆ ದಕ್ಕುವ ಆತ್ಮೀಯ ಲೋಕವನ್ನಾಗಿ ಮಾರ್ಪಡಿಸಿ ಹೊರಹೊಮ್ಮಿಸುವುದು ಸಹ ಸರ್ವಜನ ಸುಲಭ ಕಾರ್ಯವಲ್ಲ. ಈ ಎರಡು ಪ್ರಕ್ರಿಯೆಗಳಿಗೆ ಮನುಷ್ಯನಲ್ಲಿ ಒಂದು ವಿಶೇಷ ಶಕ್ತಿಯಿರಬೇಕು. ಅದನ್ನು ಬೇಕಾದರೆ ಪ್ರತಿಭೆಯಿಂದ ಹೆಸರಿಸಬಹುದು. ಇಂಥ ಒಂದು ಮನೋವ್ಯಾಪಾರಕ್ಕೆ ಬಾಹ್ಯವನ್ನು ಆಂತರ್ಯದ್ದನ್ನಾಗಿ ಮತ್ತು ಅದನ್ನು ಮರಳಿ ಅನೇಕರಿಗೆ ನೀಡುವ ಸಲುವಾಗಿ ಬಾಹ್ಯದ್ದನ್ನಾಗಿ ಪರಿವರ್ತಿಸುವ ಕ್ರಿಯೆಗೆ ಮುಖ್ಯಕಾರಣ ಇದು : ಮಾನವ ಮನಸ್ಸು ತನ್ನನ್ನು ಅನೇಕ ಮನಸ್ಸುಗಳಲ್ಲಿ ಅನುಭೂತಗೊಳಿಸಿಕೊಳ್ಳಲು ಸದಾ ತುಡಿಯುವ ಸಹಜ ಪ್ರವೃತ್ತಿ. ಇದು ಕೇವಲ ಕಲೆ ಸಾಹಿತ್ಯಗಳಿಗೇ ಸೀಮಿತವಲ್ಲ. ಬದುಕಿನ ಬಹುತೇಕ ಚಟುವಟಿಕೆಗಳಿಗೆ ಅನ್ವಯಿಸುವ ಮಾತು. ಬಹುಕಾಲದ ತನಕ ಅನೇಕ ಮನಸ್ಸುಗಳನ್ನು ವಶಮಾಡಿಕೊಂಡು ತನ್ನದಾಗಿಸಿಕೊಳ್ಳುವುದು ಯಾರೇ ವ್ಯಕ್ತಿಯ ಮನಸ್ಸಿನ ಪ್ರಯತ್ನ. ಮನುಷ್ಯನ ಮನೋಹೃದಯಗಳು ಇತರರ ಆಂತರ್ಯದಲ್ಲಿ ತಮ್ಮ ಅಮರತ್ವವನ್ನು, ಅಸ್ತಿತ್ವದ ಚಿರಂತನತೆಯನ್ನು ಹಾರೈಸುತ್ತಿರುತ್ತವೆ ಮತ್ತು ಆ ದಿಸೆಯಲ್ಲಿ ಪ್ರಯತ್ನಶೀಲವಾಗುತ್ತಿರುತ್ತವೆ. ಈ ಹಾರೈಕೆ ಮತ್ತು ಪ್ರಯತ್ನದ ಫಲಶ್ರುತಿಯೇ ಸಾಹಿತ್ಯ ಕಲೆಗಳು.

ನಾನಾ ಜನರಲ್ಲಿ ಪ್ರಮಾಣಿತವಾಗದಿದ್ದರೆ ಭಾವಸತ್ಯತೆ ಪ್ರತಿಷ್ಠಿತವಾಗದು. ನಮ್ಮ ಹೃದಯದ ನಲಿವು ನೋವುಗಳಲ್ಲಿ ಜಗತ್ತಿನ ಎಷ್ಟು ಜನ ಸಂವೇದನೆಯನ್ನು ಸಮವೇದನೆಯನ್ನು ಸ್ವಾನುಭವಿಸುತ್ತಾರೋ ಅಷ್ಟು ಹೆಚ್ಚಾಗಿ ಅವುಗಳ ಸತ್ಯತೆ ಸ್ಥಾಪಿತವಾಗುತ್ತದೆ. ಭಾವವನ್ನು, ಜನಸಾಮಾನ್ಯರಿಗೂ ಎಟುಕುವ ವಸ್ತುವಾಗಿ ವಿಶೇಷ ರೀತಿಯಲ್ಲಿ ಮೊದಲು ತನ್ನದನ್ನಾಗಿ, ಸ್ವಂತದ್ದನ್ನಾಗಿ ಮಾಡಿಕೊಂಡು, ಅದೇ ಕುಶಲೋಪಾಯದಿಂದ ವಿಶೇಷ ಬಗೆಯಲ್ಲಿ ಜನಸಾಮಾನ್ಯರದ್ದನ್ನಾಗಿ ಮಾರ್ಪಡಿಸುವುದೇ ಸಾಹಿತ್ಯದ ಕೆಲಸ ಮತ್ತು ಉದ್ದೇಶ. ಬೇರೆಯವರ ಹೃನ್ಮನಗಳಲ್ಲಿ ಪ್ರವೇಶ ದಕ್ಕಿಸಿಕೊಂಡು ಚಲನೆ ಪಡೆಯುವುದಕ್ಕೋಸ್ಕರ ಪ್ರತಿಭಾಸಮೃದ್ಧ ಅಂತಃಕರಣದಿಂದ ಯಾವ ವಸ್ತು ಸಂಗೀತ ಬಣ್ಣ ಇಂಗಿತವನ್ನು ಅಪೇಕ್ಷಿಸುವುದೋ; ಯಾವುದು ನಮ್ಮ ಹೃದಯದ ಮೂಲಕ ಸೃಷ್ಟಿಗೊಳ್ಳದಿದ್ದರೆ ಇತರರ ಹೃದಯವನ್ನು ಪ್ರವೇಶಿಸಿ ಪ್ರತಿಷ್ಠಿತವಾಗದೋ, ಅದೇ ಸಾಹಿತ್ಯದ ಸಾಮಗ್ರಿ.

ಮನಸ್ಸು ಪ್ರಕೃತಿಯ ವಸ್ತುವನ್ನು ಸ್ವಕೀಯಗೊಳಿಸಿಕೊಂಡರೆ, ಸಾಹಿತ್ಯ ಆ ಮಾನಸಿಕ ಸಾಮಗ್ರಿಯನ್ನು ಸಾಹಿತ್ಯದ ವಸ್ತುವನ್ನಾಗಿ ಪರಿವರ್ತನೆ ಮಾಡಿಕೊಳ್ಳುತ್ತದೆ. ಮನಸ್ಸು ಬಾಹ್ಯದ ಸಾಮಗ್ರಿಯನ್ನು ಗ್ರಹಣಮಾಡಿಕೊಳ್ಳುವುದು ತನ್ನ ಸ್ವಂತ ಅಗತ್ಯಗಳಿಗಾದರೆ, ಸಾಹಿತ್ಯದ ವಸ್ತು ಸರ್ವರ ಉಪಯೋಗ, ಆನಂದಕ್ಕಾಗಿ ಸೃಷ್ಟಿಗೊಳ್ಳುತ್ತದೆ. ಮಾನಸಿಕ ಸಾಮಗ್ರಿಯನ್ನು ಹೊರಗಿನದನ್ನಾಗಿ, ಭಾವದ್ದನ್ನು ಭಾಷೆಯನ್ನಾಗಿ, ತನ್ನದಾದ ವಸ್ತುವನ್ನು ವಿಶ್ವಮಾನವರದ್ದನ್ನಾಗಿ, ಕ್ಷಣಿಕ ವಸ್ತುವನ್ನು ಶಾಶ್ವತ ಕಾಲದ್ದನ್ನಾಗಿ ಮಾಡುವುದೇ ಸಾಹಿತ್ಯದ ಸಾರ್ಥಕ ಕಾರ್ಯ. ಅಂದರೆ, ಲೋಕದ ಮೇಲೆ ಸಾಹಿತ್ಯಕಾರನ ಮನಸ್ಸಿನ ಕಾರ್ಯಸ್ಥಾನ ನಿಂತಿದೆ; ಮನಸ್ಸಿನ ಮೇಲೆ ವಿಶ್ವಮನಸ್ಸಿನ ಕಾರ್ಯಾಲಯವಿದೆ. ಸಾಹಿತ್ಯಸೃಷ್ಟಿಗೆ ಮನಸ್ಸಿನ ಅಥವಾ ಮಾನವ್ಯದ ಕಾರ್ಯಾಚರಣೆಯೇ ಅಡಿಪಾಯ.

ಸಾಹಿತ್ಯಕಾರನ ಸೃಷ್ಟಿಯ ಶ್ರೇಷ್ಠಪ್ರಯತ್ನ ಬರೀ ಇಂದಿನ ಕಾಲದ ತುರ್ತುಗಳನ್ನು ಪೂರೈಸುವುದರಲ್ಲಿ ಪರಿತೃಪ್ತವಾಗುವುದಿಲ್ಲ; ಭವಿಷ್ಯತ್ತಿನ ಮಾನವ ಸಮಾಜ ಅದರ ಪರಮ ಗುರಿ. ಇದು ನಮ್ಮ ಅಂತಃಕರಣ ವೃತ್ತಿಯ ಉದ್ದೇಶಕ್ಕೆ ಅನುಗುಣವಾಗಿದೆ. ಆ ಉದ್ದೇಶ ಸರ್ವರೊಂದಿಗೆ ನಮಗಿರುವ ಸಜೀವ ಸಂಬಂಧವನ್ನು ಗುರುತಿಸಿಕೊಳ್ಳುವುದೇ, ಸ್ಥಾಪಿಸುವುದೇ ಆಗಿದೆ. ಈ ಸಂಬಂಧದ ಮೂಲಕವಷ್ಟೇ ನಮ್ಮ ಇರುವಿಕೆ ಸತ್ಯಗೊಳ್ಳುವುದು, ಬಾಹ್ಯದ ಪ್ರತಿಯೊಂದರಲ್ಲೂ ಸತ್ಯವನ್ನು ಮನಗಾಣಲು ನಮ್ಮ ಶಕ್ಯವಾಗುವುದು. ಜಗತ್ತಿನೊಂದಿಗೆ ನಮಗಿರುವ ಬುದ್ಧಿಯ, ಪ್ರಯೋಜನದ, ಆನಂದದ ಮೂರು ಮುಖ್ಯ ಸಂಬಂಧಗಳಲ್ಲಿ ಕೊನೆಯದೇ, ಅಂದರೆ ಆನಂದ ಅಥವಾ ಸೌಂದರ್ಯ ಸಂಬಂಧವೇ ನಮ್ಮ ಎಲ್ಲ ಸೃಷ್ಟಿಕ್ರಿಯೆಗಳಿಗೂ ತಳಹದಿ, ಮೂಲ. ಏಕೆಂದರೆ ಮೊದಲ ಎರಡರಲ್ಲಿ ವ್ಯಾವಹಾರಿಕತೆ ಸ್ವಾರ್ಥ ಅಹಂಭಾವಗಳ ಕಾರ್ಯಾಚರಣೆಯಿದ್ದರೆ, ಕೊನೆಯದಾದ ಆನಂದದಲ್ಲಿ ಜಗತ್ತಿನೊಡನೆ ಲೇವಾದೇವಿಯ ನಂಟಿರದು; ಅದ್ವೈತಭಾವವಿರುತ್ತದೆ; ಎಲ್ಲದರಲ್ಲೂ ನಮ್ಮನ್ನು ಅನುಭವ ಮಾಡುವ ಅವಸ್ಥೆ ನಮಗೊದಗಿರುತ್ತದೆ. ಲೋಕ ಸಮಸ್ತದಲ್ಲಿ ಸಂಪೂರ್ಣವಾಗಿ ತನ್ನ ಮಾನವತ್ವದ ಮಿಲನವನ್ನು ಕಂಡುಕೊಳ್ಳದೇ ಮನುಷ್ಯ ಹೃದಯದ ಸಹಜ ಧರ್ಮ. ಆದ್ದರಿಂದಲೇ ಮನುಷ್ಯ ತನ್ನ ಭಾವಗಳನ್ನು, ಹೃದಯದ ಆವೇಗವನ್ನು ಹೊರ ಜಗತ್ತಿನೊಂದಿಗೆ ಸಂಗತಗೊಳಿಸಲು ಪ್ರಯತ್ನಿಸುವುದು. ಮಾನವ ಹೃದಯದ ಅನುಭವಗಳು ತಮಗೆ ತಾವೇ ಪೂರ್ಣವಲ್ಲ. ಅವುಗಳ ಆಂತರಿಕ ಸತ್ಯ ಯಾವ ವಿಧಾನದಿಂದಲಾದರೂ ಹೊರಲೋಕದ ಸತ್ಯವೆಂದು ಸ್ಥಾಪಿತವಾದಾಗಲೇ ಅವುಗಳ ಅಸ್ತಿತ್ವ, ನೆಲೆಬೆಲೆ. ನಮಗೆ ಯಾವುದೇ ಮನುಷ್ಯನ ಪರಿಚಯ ಪೂರ್ಣವಾಗಿ ಆಗುವುದು ಅವನಿಗೆ ಏನು ಗೊತ್ತಿದೆ ಎಂಬುದರಿಂದಲ್ಲ; ಅವನು ಯಾವುದರಲ್ಲಿ ಯಾವ ಪ್ರಮಾಣದಲ್ಲಿ ಆನಂದವನ್ನು ಅನುಭವಿಸಬಲ್ಲ ಎಂಬುದರಿಂದ.

ಸಾಹಿತ್ಯ ನಮಲ್ಲಿ ಆನಂದಕ್ಕೆ ಕಾರಣವಾಗುವುದು ಇಬ್ಬಗೆಯಲ್ಲಿ : ಸತ್ಯವನ್ನು ಸುಂದರತರವಾದ ರೂಪದಲ್ಲಿ ನಮಗೆ ತೋರಿಸುವುದರಿಂದ ಮತ್ತು ಅದನ್ನು ನಮಗೆ ಕಾಣಿಸುವಂತೆ, ಅನುಭವ ಸಾಧ್ಯವಾಗುವಂತೆ ಮಾಡುವುದರಿಂದ. ಸತ್ಯವನ್ನು ಸುಗೋಚರವಾಗುವಂತೆ ಮಾಡುವುದು ಸುಲಭದ ಕೆಲಸವಲ್ಲ. ಹಿಮಾಲಯದ ಶಿಖರದ ಎತ್ತರ, ಅಲ್ಲಿರುವ ನೀರ್ಗಲ್ಲಿನ ಪ್ರಮಾಣ ಇತ್ಯಾದಿಗಳ ಸೂಕ್ಷ್ಮವಾದ ಪರಿಶೀಲನೆಯ ದ್ವಾರಾ ಹಿಮಾಲಯವನ್ನು ನಮ್ಮ ಅಂತಃಚಕ್ಷುವಿನ ಎದುರು ತದ್ವತ್ತಾಗಿ ನಿಲ್ಲಿಸಲಾಗುದು. ಕೆಲವೇ ಮಾತುಗಳಲ್ಲಿ ಅದು ನಮಗೆ ಅನುಭವ ಗೋಚರವಾಗುವಂತೆ ಮಾಡುವುದೇ ಕಾವ್ಯದ ಕೆಲಸ. ಇಂಥ ಅನುಭವದಲ್ಲಿ ನಮಗೆ ಆಗುವ ಆನಂದ, ಸಾಕ್ಷಾತ್ ಹಿಮಾಲಯ ದರ್ಶನದಿಂದ ಆಗದೇ ಹೋಗಬಹುದು. ಸರೋವರವನ್ನು ನಾವು ಎಷ್ಟೋ ಬಾರಿ ನೋಡಿರಬಹುದು. ಅದನ್ನು ಮಾತು, ಇಂದ್ರಿಯ ಸ್ವರೂಪವಾಗಿ ತೋರಿಸುವಂತಾದರೆ ಅದರಿಂದ ನಮ್ಮ ಮನಸ್ಸಿಗೆ ಒಂದು ಉಲ್ಲಾಸ, ಹೊಸ ರಸ ಲಾಭವಾಗಬಹುದು. ಈ ರೀತಿ ಸಾಹಿತ್ಯ ನಮಗೆ ಒಂದು ಹೊಸ ಇಂದ್ರಿಯವಾಗಿ, ಲೋಕವನ್ನು ನಮಗೆ ನವನವೋನ್ಮೇಷವಾಗಿ ಕಾಣಿಸುತ್ತದೆ.

ಹೃದಯದ ಜಗತ್ತನ್ನು ಬಹಿಃಪ್ರಕಟಗೊಳಿಸುವುದಕ್ಕೆ ಇರುವ ಉಪಾಯವೆಂದರೆ ಹೃದಯ ಭಾವವನ್ನು ಉದ್ರೇಕಿಸುವುದರ ಮೂಲಕ. ಅದು ಸ್ವಯಂ ತಂತಾನೆ ಹೊರಹೊಮ್ಮದು. ಸಾಹಿತ್ಯದ ಅಭಿವ್ಯಕ್ತಿಯ ಕ್ರಿಯೆ ಸ್ತ್ರೀಯನ್ನು ಹೋಲುತ್ತದೆ. ಆಕೆ ಪುರುಷನಂತೆ ಸರಳವಾಗಿದ್ದರೆ ಸಾಲದು. ಆಕೆಯದು ಹೃದಯವನ್ನು ನೀಡಿ, ಹೃದಯವನ್ನು ಆಕರ್ಷಿಸುವ ಕಾರ್ಯ ಎಂದೇ ಅವಳಿಗೆ ವಿಶೇಷತರವಾದ ಉಡಿಗೆತೊಡಿಗೆ, ಲಜ್ಜೆ, ವಿನಯ, ಭಾವಭಂಗಿಗಳಿರಬೇಕಾಗುತ್ತದೆ. ಆಕೆಯ ವ್ಯವಹಾರ, ಗಂಡಸಿನಂತೆ ಮುಕ್ತವಾಗಿರದೆ ಅನೇಕ ಆವರಣಗಳಿಂದ, ಸೂಕ್ಷ್ಮವಾದ ಆಭಾಸ ಇಂಗಿತಗಳಿಂದ ಕೂಡಿರಬೇಕಾಗುತ್ತದೆ. ಇದೇ ರೀತಿ ಸಾಹಿತ್ಯ ಕೂಡ ತನ್ನ ಆಶಯಪೂರ್ತಿಗಾಗಿ ರೂಪಕ, ಉಪಮೆ, ಛಂದಸ್ಸು ಸೂಕ್ಷ್ಮೇಂಗಿತಗಳ ಸಹಕಾರವನ್ನು ಬಯಸುತ್ತದೆ.

ಠಾಕೂರರು ಹೇಳುತ್ತಾರೆ. ''ಅರೂಪವಾದದ್ದು ರೂಪದ ಮೂಲಕ ವ್ಯಕ್ತವಾಗಬೇಕಾದರೆ ಮಾತಿನಲ್ಲಿ ಅನಿರ್ವಚನೀಯತೆಯನ್ನು ಉಳಿಸಬೇಕಾಗುತ್ತದೆ. ಸಾಹಿತ್ಯದ ಅನಿರ್ವಚನೀಯತೆ ಸ್ತ್ರೀಯರ ಶ್ರೀ, ಹ್ರೀಗಳಂತೆ (ಸೌಂದರ್ಯ, ಲಜ್ಜೆ). ಅದು ಅನುಕರಣಕ್ಕೆ ಮೀರಿದುದು. ಅಲಂಕಾರವನ್ನು ಅತಿಕ್ರಮಿಸಿರುತ್ತದೆ. ಅಲಂಕಾರದಿಂದ ಅಚ್ಛನ್ನವಾಗುವುದಿಲ್ಲ.''

ಅಂದರೆ, ಸಾಹಿತ್ಯದಲ್ಲಿ ಶಬ್ದಗಳು ವ್ಯಕ್ತಪಡಿಸುವುದಕ್ಕಿಂತ, ಅವ್ಯಕ್ತವಾಗಿ ಉಳಿಸುವ ಭಾವ ಮುಖ್ಯ. ಅದೇ ಧ್ವನಿ. ಎಲ್ಲವನ್ನೂ ಬಿಚ್ಚಿ ವಿವರಿಸಿ ನುಡಿಯುವುದರಿಂದ ಸಾಹಿತ್ಯ ಪರಿಣಾಮಕಾರಿಯಾಗದು. ಸನ್ನೆ ಸೂಕ್ಷ್ಮಗಳೇ ಅದರ ಜೀವಾಳ.

ಮಾತಿನಲ್ಲಿ ಅನಿರ್ವಾಚ್ಯವನ್ನು ಭಾಷೆಯಲ್ಲಿ ಭಾಷಾತೀತವನ್ನು ಪ್ರತಿಷ್ಠಿಸುವುದರ ಸಲುವಾಗಿ ಸಾಹಿತ್ಯ ಎರಡು ಸಮರ್ಥ ಸಾಧನಗಳನ್ನು ಬಳಸುತ್ತದೆ : ಚಿತ್ರ ಮತ್ತು ಸಂಗೀತ. ಶಬ್ದಗಳು ವ್ಯಕ್ತಗೊಳಿಸಲು ಅಸಾಧ್ಯವಾದದ್ದನ್ನು ಒಂದು ಸಣ್ಣ ಚಿತ್ರದ ಮೂಲಕ ವೇದ್ಯವಾಗಿಸಬಹುದು. ಹಾಗೆಯೇ ಮಾತನ್ನು ಹೇಗೆ ಬಳಸಿದರೂ, ಎಷ್ಟು ಬಳಸಿದರೂ ಯಾವುದನ್ನು ಹೇಳುವುದು ದುಸ್ಸಾಧ್ಯವೊ ಅಂಥದ್ದನ್ನು ಸಂಗೀತದಿಂದ ಹೃದ್ಗೋಚರಗೊಳಿಸಬಹುದು. ಅತಿ ಮಾಮೂಲಿಯಾದ ಮಾತು ಸಹ ಸಂಗೀತದ ಸ್ಪರ್ಶದಿಂದ ಅಸಾಧಾರಣವಾಗಿ, ಮಹತ್ವದ್ದಾಗಿ ಪರಿವರ್ತಿತವಾಗಬಲ್ಲದು; ಸರಾಗವಾಗಿ ಸಂವೇದನೆಯ ಸಂಚಾರವನ್ನು ಮಾಡಿಸಬಲ್ಲದು. ಚಿತ್ರ ಭಾವಕ್ಕೆ ಆಕೃತಿ ನೀಡಿದರೆ, ಸಂಗೀತ ಚಲನಶೀಲತೆಯನ್ನು ದಯಪಾಲಿಸುತ್ತದೆ. ಸಾಹಿತ್ಯದಲ್ಲಿ ಚಿತ್ರ ದೇಹ ಸದೃಶವಾದರೆ, ಸಂಗೀತ ಪ್ರಾಣಪ್ರಾಯ.

ರವೀಂದ್ರರ ಪ್ರಕಾರ ಸಾಹಿತ್ಯದ ಮುಖ್ಯ ವಿಷಯ ಮಾವನ ಹೃದಯ ಮತ್ತು ಮಾನವ ಚರಿತ್ರ ಅಥವಾ ಶೀಲ. ಇವು ತಮ್ಮನ್ನು ತಾವೇ ಸೃಷ್ಟಿಸಿಕೊಳ್ಳಲು, ವ್ಯಕ್ತವಾಗಲು ಸದಾ ಪ್ರಯತ್ನಿಸುತ್ತಿರುತ್ತವೆ. ಈ ಪ್ರಯತ್ನಕ್ಕೆ ಅಂತ್ಯವೆಂಬುದೇ ಇಲ್ಲ. ವಾಙ್ಮಯಕಾರರು, ಮಾನವ ಹೃದಯ ಮತ್ತು ಚರಿತ್ರದ ಈ ಚಿರಂತನ ಪ್ರಯತ್ನ ಉಪಲಕ್ಷ್ಯ ಮಾತ್ರ. ಈ ಕಾರಣದಿಂದ ಸಾಹಿತ್ಯ ಒಬ್ಬ ವ್ಯಕ್ತಿಯದಲ್ಲ. ಬಾಹ್ಯಸೃಷ್ಟಿ ಹೇಗೆ ತನ್ನ ಒಳಿತು ಕೆಡುಕುಗಳಿಂದ, ತನ್ನ ಸಮೃದ್ಧಿ ಅರಕೆಗಳಿಂದ ಅನುಗಾಲವೂ ವ್ಯಕ್ತಗೊಳ್ಳಲು ಪ್ರಯತ್ನಿಸುತ್ತಿದೆಯೋ ಹಾಗೆಯೇ ಸಾಹಿತ್ಯವೂ ಸಹ ದೇಶದೇಶಗಳಲ್ಲಿ ಭಾಷೆಭಾಷೆಗಳಲ್ಲಿ ನಮ್ಮ ಹೃದಯಾಂತರಾಳದಿಂದ ಹೊರಹೊಮ್ಮಲು ನಿಯತವಾಗಿ ತವಕಿಸುತ್ತಿರುತ್ತದೆ.

ಸಾಹಿತ್ಯವನ್ನು ದೇಶಕಾಲಗಳ ಪಾತ್ರದಲ್ಲಿ ಕಿರಿದುಗೊಳಿಸಿ ವೀಕ್ಷಿಸಿದಾಗ, ಅದರ ಸಮಂಜಸವಾದ ಚಿತ್ರ ನಮಗೆ ಸಿಕ್ಕದು. ಅದರ ಸರಿಯಾದ ಸ್ವರೂಪ ಗ್ರಾಹ್ಯವಾಗದು. ಸಾಹಿತ್ಯದಲ್ಲಿ ಲೇಖಕ ಕೇವಲ ಉಪಲಕ್ಷ್ಯ ಮಾತ್ರ. ಎಲ್ಲಿ ಲೇಖಕ ತನ್ನ ಭಾವನೆಯಲ್ಲಿ ಸಮಗ್ರ ಮಾನವ ಭಾವನೆಯನ್ನು ಅನುಭವ ಮಾಡಿದ್ದಾನೋ, ತನ್ನ ಬರಹದಲ್ಲಿ ಸರ್ವಮಾನವನ ಸಂವೇದನೆಯನ್ನು ಪ್ರಚುರಪಡಿಸಿದ್ದಾನೋ ಅಲ್ಲಿ ಮಾತ್ರ ಅವನ ಪ್ರಯತ್ನ ಸಾಹಿತ್ಯದಲ್ಲಿ ಸ್ಥಾನ ದಕ್ಕಿಸಿಕೊಳ್ಳಲು ಸಮರ್ಥವಾಗುತ್ತದೆ. ಸಾಹಿತ್ಯದಲ್ಲಿ ವಿಶ್ವಮಾನವ ತನ್ನನ್ನು ಪ್ರಕಾಶಪಡಿಸುತ್ತಾನೆ ಎಂದು ತಿಳಿದುಕೊಂಡ ಪಕ್ಷದಲ್ಲಿ ಸಾಹಿತ್ಯದಲ್ಲಿ ಅರ್ಥಪೂರ್ಣವಾದದ್ದನ್ನು ದರ್ಶಿಸಲು ಸಮರ್ಥರಾಗುತ್ತೇವೆ. ವಿಶ್ವಮಾನವ ಒಬ್ಬ ರಾಜಶಿಲ್ಪಿ. ಅವನು ಸಾಹಿತ್ಯದ ಬೃಹದ್ಭವನದ ನಿರ್ಮಾಣ ಕಾರ್ಯವನ್ನು ಕೈಗೊಂಡಿದ್ದಾನೆ. ನಾನಾ ದೇಶದ ಲೇಖಕರು ಶ್ರಮಿಕರಾಗಿ ಅವನ ನಿರ್ದೇಶನದಲ್ಲಿ ಕೆಲಸಕ್ಕೆ ತೊಡಗಿದ್ದಾರೆ. ಪ್ರತಿಯೊಬ್ಬರೂ ತಮ್ಮ ಸ್ವಂತ ಸ್ವಭಾವಿಕ ಸಾಮರ್ಥ್ಯವನ್ನೆಲ್ಲ ವಿನಿಯೋಗಿಸಿ ತಮ್ಮ ಕಾರ್ಯವನ್ನು ಸಮಗ್ರ ಕಟ್ಟಡಕ್ಕೆ ಸಂಗತವಾಗುವಂಥ ಅದೃಶ್ಯವಾದ ನಕ್ಷೆಗೆ ಸರಿಹೊಂದಿಸಬೇಕಾಗುತ್ತದೆ. ಪ್ರತಿ ಲೇಖಕನ ಪ್ರಾವೀಣ್ಯ, ಮೇಧಾಶಕ್ತಿ, ಅರ್ಹತೆಗಳು ಪ್ರಕಟವಾಗುವುದು ಅವನ ಇಂಥ ಕಾರ್ಯದ ಮುಖೇನವೇ. ಅವನಿಗೆ ದೊರಕುವ ಕೀರ್ತಿ, ಗೌರವಗಳೂ ಇದನ್ನೇ ಅವಲಂಬಿಸಿರುತ್ತವೆ. ಲೇಖಕನೊಬ್ಬನನ್ನು ನಾವು ತೀರ ಸಮೀಪದಿಂದ ನೇರವಾಗಿ ಕಂಡಾಗ, ಅವನೊಡನೆ ಅವನ ಬರಹಕ್ಕಿರುವ ಬಾಂಧವ್ಯ ಪ್ರಬಲತರವಾಗಿ ಭಾಸವಾಗುತ್ತದೆ. ಸ್ವತಃ ಗಂಗೋತ್ರಿಯೇ ಗಂಗೆಯನ್ನು ಸೃಷ್ಟಿಸಿದಂತೆ ಭಾವಿಸುತ್ತೇವೆ. ಹೀಗಾಗಿ ಸಕಲ ಕಾವ್ಯಗಳ ಮಹಾಲೇಖಕ, ಅರ್ಥಾತ್ ವಿಶ್ವಮಾನವ ಯಾರೋ ಅವನು ನಮಗೆ ಹೊಳೆಯುವುದೇ ಇಲ್ಲ. ಸಕಲ ಕಾವ್ಯವೂ ತನ್ನನ್ನು ತಾನೇ ಸೃಷ್ಟಿಸಿಕೊಳ್ಳುತ್ತದೆ; ಲೇಖಕ ನಿಮಿತ್ತ ಮಾತ್ರ.

ವೃಷ್ಟಿ ಚೇತನ ಸಮಷ್ಟಿಯ ಮೂಲಕ ತನ್ನನ್ನು ಅಭಿವ್ಯಕ್ತಿಸಲು, ಮನುಷ್ಯ ವಿಶ್ವಮಾನವನಲ್ಲಿ ತನ್ನನ್ನು ಹೊಮ್ಮಿಸಿಕೊಳ್ಳಲು, ನಿರ್ಮಾಣ ಕ್ರಿಯೆಯಲ್ಲಿ ತೊಡಗಿರುವಂತೆ ಯಾರಿಗೆ ಭಾಸವಾಗುವುದೊ ಅವನಿಗೆ ಮನುಷ್ಯೇತಿಹಾಸದ ಯಾವ ವ್ಯಕ್ತಿಯ ಲಕ್ಷ್ಯವೂ ಇರುವುದಿಲ್ಲ. ನಿತ್ಯ ಮಾನವನತ್ತ ಅವನ ಗಮನ ಕೇಂದ್ರೀಕೃತವಾಗಿರುತ್ತದೆ. ಅವನಿಗೆ ಯಾತ್ರಾರ್ಥಿಗಳ ನೋಟಕ್ಕಿಂತ ಭಗವದ್ದರ್ಶನ ಮುಖ್ಯವಾಗುತ್ತದೆ.

ಭೂಮಿಯನ್ನು ಯಾರೊಬ್ಬರೂ ಖಾಯಮ್ಮಾಗಿ ತನ್ನದೆಂದು ಭಾವಿಸುವುದು ಹೇಗೆ ಮೊದ್ದುತನವಾಗುತ್ತದೆಯೋ ಹಾಗೆಯೇ ಸಾಹಿತ್ಯ ರಚನೆಗೆ ವೈಯಕ್ತಿಕತೆಯ ಲೇಪ ಹಚ್ಚುವುದೂ ಅವಿವೇಕವೆನ್ನಿಸುತ್ತದೆ. ವಿಶಾಲಾರ್ಥದಲ್ಲಿ ಸಾಹಿತ್ಯ ಯಾರೊಬ್ಬರ ಖಾಸಗಿ ಸೃಷ್ಟಿಯೂ ಅಲ್ಲ. ಅದರ ಹಿನ್ನೆಲೆಯಲ್ಲಿ ವಿಶ್ವಮಾನವನ ಕೈವಾಡವಿರುತ್ತದೆ. ಹಾಗಾಗಿ ಅದು ವಿಶ್ವಸಾಹಿತ್ಯ. ಪ್ರತ್ಯೇಕ ಕೃತಿಗಳಲ್ಲಿ ಒಂದು ಸಮಗ್ರತಾದರ್ಶನವನ್ನು ಪಡೆಯುವಂತಾಗಬೇಕು. ಜೊತೆಗೇ ಆ ಸಮಗ್ರತೆ, ಸಾರ್ವತ್ರಿಕತೆಯಲ್ಲಿ ಸಮಸ್ತ ಮಾನವನ ಪ್ರಕಾಶ ಪ್ರಯತ್ನದ ನಂಟನ್ನು ಗುರುತಿಸಿಕೊಳ್ಳಬೇಕು.

ಸಾಹಿತ್ಯದ್ದು ಸಾರತಃ ಭಾವಲೋಕ; ಜ್ಞಾನದ್ದಲ್ಲ. ಜ್ಞಾನವೇನಿದ್ದರೂ ಗೌಣ; ಆನಂದದ ಅಡಿಯಾಳು. ಜ್ಞಾನದ ವಿಷಯ ಸೀಮಿತ ವ್ಯಾಪ್ತಿಯುಳ್ಳದ್ದು. ಅದು ಪ್ರಚುರವಾದೊಡನೆ ಅದರ ಧ್ಯೇಯ ಪೂರ್ಣಗೊಳ್ಳುತ್ತದೆ; ಆಶಯ ಮುಗಿಯುತ್ತದೆ. ಒಂದು ಹೊಸ ಸಂಶೋಧನೆ, ಸತ್ಯದ ಒಂದು ಆವಿಷ್ಕಾರ ಜನರೆದುರು ಮೂಡಿದಾಗ ಕುತೂಹಲ, ಬೆರಗುಗಳಿಗೆ ಕಾರಣವಾಗುತ್ತದೆ, ನಿಜ. ಆದರೆ ಮತ್ತೊಂದು ಸಂಶೋಧನೆ, ಆವಿಷ್ಕಾರ ಹೊರಹೊಮ್ಮಿದಾಗ ಹಳೆಯದರ ಪ್ರಾಶಸ್ತ್ಯತಗ್ಗುತ್ತದೆ; ಮುಂಚಿನ ಹೊಳಪು ಉಳಿಯುವುದಿಲ್ಲ. ಹಿಂದೆ ಧೀಮಂತರಿಗೂ ಅಗಮ್ಯವೊ, ನವೋನ್ಮೇಷಶಾಲಿಯೊ ಅನ್ನಿಸಿದ್ದ ಆವಿಷ್ಕಾರ ಇಂದು ಶಾಲಾ ವಿದ್ಯಾರ್ಥಿಗಳಿಗೂ ಕ್ಲಿಷ್ಟವೆಂದೊ, ವಿನೂತನವೆಂದೊ ಅನ್ನಿಸದು. ಬೆಳ್ದಿಂಗಳ ಮಾಯೆಯನ್ನು ಚಂದ್ರಪ್ರತಿಫಲಿತ ಸೂರ್ಯ ಪ್ರಭೆಯೆಂದಾಗಲಿ, ಚಂದ್ರ ಬರೀ ಕಲ್ಲುಮಣ್ಣುಗಳ ನಿರ್ಜೀವ ಕೊಂಪೆಯೆಂದಾಗಲಿ ಹೇಳಿದಾಗ ನಾವು ತಿಳಿವಿನ, ಜ್ಞಾನದ ಮಾತನಾಡುತ್ತಿದ್ದೇವೆಂದು ಅರ್ಥ. ಅದನ್ನು ಒಂದೆರಡು ಸಲ ಹೇಳಿದ ಮೇಲೆ ಆ ಸತ್ಯ ಪುನರುಕ್ತಿಯನ್ನು ಬಯಸುವುದಿಲ್ಲ. ಆದರೆ ಚಂದ್ರಿಕೆ ಮತ್ತು ಶಶಿಗಳ ಭಾವಸ್ವರೂಪವೇ ಬೇರೆ. ಅದು ಶತಮಾನಗಳಿಂದ ಒಬ್ಬೊಬ್ಬರಿಗೆ ಒಂದೊಂದು ಬಗೆಯ ಅನುಭವಕ್ಕೆ ಕಾರಣವಾಗಿದೆ; ಆನಂದೋದ್ದೀಪಕವಾಗಿದೆ. ಇನ್ನು ಮುಂದೆಯೂ ಅದರ ಆ ಭಾವಚರ್ಯೆ, ಮನುಷ್ಯ ಈ ಭೂಮಿಯ ಮೇಲಿರುವ ತನಕ ಅಕ್ಷತವಾಗಿ ಉಳಿಯುತ್ತದೆ.

ಮನುಷ್ಯ ತನ್ನ ಯಾವುದೇ ಆಲೋಚನೆಯನ್ನು ವಸ್ತುವನ್ನು ದೀರ್ಘಕಾಲ ಉಳಿಸಬೇಕೆಂದು ಅಪೇಕ್ಷಿಸಿದರೆ ಅದಕ್ಕೆ ಭಾವದ ಅವಲಂಬನ, ಆಶ್ರಯಗಳು ಅಗತ್ಯವಾಗುತ್ತವೆ. ಜ್ಞಾನದಿಂದ ಇದು ಶಕ್ಯವಲ್ಲ. ಜ್ಞಾನದ ವಿಷಯಕ್ಕೆ ಪ್ರಮಾಣ ಅವಶ್ಯಕ. ಭಾವದ್ದಾದರೋ ಗತಿಶೀಲತೆಯನ್ನು, ಸಂಚಾರಾಪೇಕ್ಷೆಯನ್ನು ಆಶಿಸುತ್ತದೆ. ಅದು ಈ ಕಾರಣಕ್ಕಾಗಿ ಬುದ್ಧಿಯನ್ನು ಹಿಂಬಾಲಿಸದೆ ಹೃದಯದ ಮರ್ಜಿಯನ್ನು ಹಿಡಿಯುತ್ತದೆ. ಆದ್ದರಿಂದಲೇ ಅದಕ್ಕೆ ನಾನಾ ಬಗೆಯ ಉಪಕರಣಗಳ ಅವಶ್ಯಕತೆ. ಹೀಗಾಗಿ ಚಿತ್ರತ್ವ, ಛಂದೋಲಯ, ನಾನಾ ಅಲಂಕಾರಗಳು ಆಭಾಸ ಇಂಗಿತಗಳು ಭಾವದ ಅಭಿವ್ಯಕ್ತಿಗೆ ತಕ್ಕ ಸಾಧನಗಳಾಗುತ್ತವೆ. ಅದನ್ನು ವಿಜ್ಞಾನ, ದರ್ಶನಶಾಸ್ತ್ರಗಳಂತೆ, ಕೇವಲ ತಿಳಿಸಿದಂತೆ ವಖ್ಖಾಣಿಸಿದರೆ ಸಾಲದು; ಸೃಷ್ಟಿ ಮಾಡಿಯೇ ತೋರಿಸಬೇಕು.

ಜ್ಞಾನದ ವಸ್ತುವನ್ನು ಭಾಷೆಯಿಂದ ಭಾಷೆಗೆ ಸ್ಥಾನಾಂತರಗೊಳಿಸಿ ರವಾನಿಸಬಹುದು. ಇಲ್ಲಿ ಭಾಷೆ, ಜ್ಞಾನಕ್ಕೆ ನೀರನ್ನು ಹಾಯಿಸುವ ನಳಿಗೆಯಂತಿರುತ್ತದೆ. ಭಾವವನ್ನು ಹೀಗೆ ಬೇರ್ಪಡಿಸಬಹುದಾದ ಪ್ರಣಾಳಿಯ ಮೂಲಕ ಸಾಗಿಸಲಾಗದು. ಭಾಷೆ ಮತ್ತು ಅದರ ಸಂಬಂಧ, ದೇಹ - ಪ್ರಾಣಗಳ ಸಂಬಂಧ. ಅವೆರಡೂ ಸರ್ವತ್ರ ಏಕಾತ್ಮತೆಯಿಂದ ಇರತಕ್ಕವು.

ಭಾವ, ವಿಷಯ, ತತ್ವಗಳು ಎಲ್ಲ ಮಾನವರಿಗೂ ಸಾಧಾರಣವಾಗಿರುವಂಥವು; ಅವುಗಳ ಸ್ವರೂಪ ಸಾರ್ವತ್ರಿಕ. ಅವುಗಳನ್ನು ಇಂದು ಒಬ್ಬ ಮನುಷ್ಯ ವ್ಯಕ್ತಗೊಳಿಸದಿದ್ದರೆ ಮುಂದೆ ಯಾರಾದರೊಬ್ಬ ಅಭಿವ್ಯಕ್ತಿಸಬಲ್ಲ. ಆದರೆ ಅವುಗಳು ಯಾವುದರ ಮೂಲಕ ಹೊರಹೊಮ್ಮಿ ಲೋಕದಲ್ಲಿ ಪ್ರಚಾರ ಪಡೆಯುತ್ತವೆಯೊ, ಆ ಸಾಧನ, ಸಲಕರಣೆ ಮುಖ್ಯ.

ಅಂದರೆ ವಸ್ತುವಿಗಿಂತ ರಚನೆ ಮುಖ್ಯ - ಮನುಷ್ಯನ ಸ್ವಂತಿಕೆ, ಯಥಾರ್ಥತೆ, ವೈಶಿಷ್ಟ್ಯ ಸ್ಥಾಪಿತವಾಗುವುದು ರಚನೆಯ ಕೌಶಲದ ಮೂಲಕವೇ, ಅನ್ಯಥಾ ಅಲ್ಲ. ರಚನಾಕ್ರಮ ಆದ್ಯಂತ ಲೇಖಕನ ಸ್ವಂತದ್ದು. ಅದರಲ್ಲಿ ಒಂದು ಅವಿನಾಭಾವದ ಪರಿಕಲ್ಪನೆಯಿದೆ. ಅದು ಸಾಹಿತ್ಯದಲ್ಲಿ ಹಿರಿಯ ಅರ್ಥದಲ್ಲಿ ಬಳಕೆಯಾಗುತ್ತದೆ. 'ರಚನೆ' ಎಂಬಲ್ಲಿ ಭಾವ ಪ್ರಕಾಶನ ವಿಧಾನವೆಂಬುದೇ ಅಡಕವಾಗಿಲ್ಲ, ಅದರಲ್ಲಿ ಭಾವದ ವಿಷಯವೂ ಸೇರ್ಪಡೆಯಾಗಿದೆ. ಹೀಗಾಗಿ, ರಚನೆಯೆಂದರೆ, ಭಾವ

ಮತ್ತು ಭಾವಾಭಿವ್ಯಕ್ತಿ - ಈ ಎರಡೂ ಕೂಡಿಕೊಂಡಿರುವ ಒಂದು ಪ್ರಕ್ರಿಯೆ. ಹೇಗೆ ಬಾವಿಯೆಂದರೆ ನೀರು ಮಾತ್ರ ಅಲ್ಲ, ಅದರ ಶೇಖರಣೆಗಾಗಿ ಅಗೆದು, ತೋಡಿ ಮಾಡಿರುವ ಆಶ್ರಯವೂ ಹೌದೋ, ಹಾಗೆ. ನೀರು ಮನುಷ್ಯ ಸೃಷ್ಟಿಯಲ್ಲ, ಅದು ಚಿರಂತನ ಸ್ವರೂಪಿ. ಅದು ಎಲ್ಲೆಲ್ಲೂ ಇರಬಹುದು. ಆದರೆ ಅದನ್ನು ಒಂದು ವಿಶೇಷ ರೀತಿಯಲ್ಲಿ ಜನೋಪಯೋಗಿಯಾಗಿ ಮಾಡಲು ಬಾವಿಯ ನಿರ್ಮಾಣವಾಗಿರುತ್ತದೆ. ಹಾಗಾಗಿ ಬಾವಿ ಮನುಷ್ಯ ಕೃತ. ನಿತ್ಯವಾದದ್ದನ್ನು ಬಹುಕಾಲ ಉಳಿಯುವಂತೆ ತನಗೆ ಕೈವಶವಾದ ಸಾಮಗ್ರಿಯಿಂದ ಮಾಡುವುದೇ ಸಾಹಿತ್ಯದಲ್ಲಿ ಯಶಸ್ಸಿಗೆ ಕಾರಣವಾಗುವಂಥದು. ಅಂದರೆ, ಭಾವವನ್ನು ಒಂದು ವಿಶೇಷ ಆಕೃತಿಗೆ ಒಳಪಡಿಸಿ, ಅದರ ಮೂಲಕ ಆನಂದವನ್ನು ಹೊಮ್ಮಿಸುವ ಚಾತುರ್ಯವೇ ಲೇಖಕನ ಪಾಲಿನದು; ಕೀರ್ತಿದಾಯಕವಾದದ್ದು.

ಹೀಗೆ, ಭಾವವನ್ನು ಅಭಿವ್ಯಕ್ತಿ ಕ್ರಮವೊಂದಕ್ಕೆ, ರಚನೆಯ ವಿಧಾನವೊಂದಕ್ಕೆ ಅಳವಡಿಸುವಾಗ ಲೇಖಕ ಮುಖ್ಯವಾಗಿ ಲಕ್ಷ್ಯದಲ್ಲಿಡಬೇಕಾದ ಸಂಗತಿಯೊಂದಿದೆ : ಯಾವುದನ್ನು ಹೃದಯವೇದ್ಯವಾಗಿಸಬೇಕೋ, ಮನದಟ್ಟುಗೊಳಿಸಬೇಕೋ ಅದನ್ನು ಔಚಿತ್ಯಪೂರ್ಣವಾಗಿ, ಪೂರ್ಣ ಸ್ವರೂಪದರ್ಶನವಾಗುವಂತೆ ಅಭಿವ್ಯಕ್ತಿಸುವುದು. ಅಂದರೆ ಭಾವಾಲೋಚನೆಗಳನ್ನು ವಸ್ತುವನ್ನು ಮಾತಿನಲ್ಲಿ ಪೂರ್ಣವಾಗಿ ಮೂಲ ಸ್ವರೂಪದಲ್ಲಿ ರಕ್ಷಿಸುವುದರ ಜೊತೆಗೆ ಅದು ಮನೋಗ್ರಾಹ್ಯವಾಗುವಂತೆ ದೊಡ್ಡದನ್ನಾಗಿ ತೋರಿಸುವುದು. ಇದು ಲೇಖನ ಸಾಮರ್ಥ್ಯಕ್ಕೆ ಸವಾಲನ್ನು ಒಡ್ಡುವಂಥದ್ದು. ಇದರಲ್ಲಿ ಯಶಸ್ವಿಯಾದ ಲೇಖಕ ಮಾನ್ಯನಾಗುತ್ತಾನೆ; ಅವನ ಪ್ರತಿಭೆ ಶ್ಲಾಘ್ಯವೆನ್ನಿಸುತ್ತದೆ. ತನ್ನ ಮನಸ್ಸಿನ ಭಾವ ಪ್ರಕಾಶಿತಗೊಂಡರೆ ಸಾಲದು, ಅದು ತನ್ನ ಅನುಭವಕ್ಕೆ ಹೇಗೆ ಯಥಾರ್ಥವೆಂದು, ಸಮಂಜಸವೆಂದು ತೋರಿತ್ತೋ ಹಾಗೆಯೇ ಅದನ್ನು ಇತರರೂ ಅನುಭವಿಸುವಂತೆ ಮಾಡುವುದು ಕಷ್ಟದ ಕೆಲಸ. ಯಾವುದಾದರೂ ವಸ್ತುವನ್ನು ತೋರಿಸಿ ಅದರ ಬಣ್ಣ, ಆಕಾರ ಮತ್ತಿತರ ಗುಣಗಳನ್ನು ಬಣ್ಣಿಸಿ, ಅದರ ಕಲ್ಪನೆಯನ್ನು ಬೇರೆಯವರಲ್ಲಿ ಉಂಟು ಮಾಡುವುದು ಅಷ್ಟು ತೊಡಕಿನ ಸಂಗತಿಯಲ್ಲ. ಆದರೆ ನೋವನ್ನಾಗಲಿ, ನಲಿವನ್ನಾಗಲಿ, ಶುಭವನ್ನಾಗಲಿ, ಅಶುಭವನ್ನಾಗಲಿ ಹಾಗೆ ತದ್ವತ್ತಾಗಿ ಒಂದು ತೀವ್ರತೆ, ಪ್ರಮಾಣಗಳಲ್ಲಿ ಇತರರಿಗೆ ಮನೋವೇದ್ಯವಾಗಿಸುವುದು ಸುಲಭವಲ್ಲ. ನಮಗೂ ಇತರರಿಗೂ ಒಂದು ದೂರತೆಯಿರುತ್ತದೆ. ಹಾಗಾಗಿ, ದೂರದಿಂದ ಯಾವುದಾದರೂ ವಿಷಯವನ್ನೊ ವಸ್ತುವನ್ನೊ ತೋರಿಸಬೇಕಾದರೆ ಅದು ಸ್ಪಷ್ಟ ಗೋಚರವಾಗುವಂತೆ ಕಾಣಿಸುವುದು ಮುಖ್ಯ. ಇದರಿಂದ ವಾಸ್ತವತೆಗೆ ಧಕ್ಕೆ ಬರುವುದಿಲ್ಲ. ಅದರ ಸಹಜ ಸ್ವರೂಪವನ್ನು ತಿಳಿಯಲೆಂದೇ, ಅದರ ಅನುಮೋದನೆಯಿಂದಲೇ ಹೀಗೆ ದೊಡ್ಡದನ್ನಾಗಿ ಮಾಡಿ ತೋರಿಸಬೇಕಾಗುತ್ತದೆ. ಇಲ್ಲದಿದ್ದರೆ, ಆ ವಿಷಯ, ವಸ್ತುಗಳನ್ನು ಮಿಥ್ಯೆಯಾಗಿ ಅಭಿವ್ಯಕ್ತಪಡಿಸಿದಂತಾಗುತ್ತದೆ. ಸಾಹಿತ್ಯದಲ್ಲಿ ವ್ಯಕ್ತಪಡಿಸುವುದು ಬಾಹ್ಯಜಗತ್ತಿನ ಸಂಗತಿಯೇ ಆದರೂ, ಅದು ಪ್ರತ್ಯಕ್ಷವಲ್ಲ. ಈ ಪ್ರತ್ಯಕ್ಷತೆಯ ಅಭಾವವನ್ನು ಪೂರ್ಣಗೊಳಿಸದಿದ್ದರೆ ಗೊಂದಲ, ದುರವಗಾಹತೆಗಳು ತಲೆಹಾಕುತ್ತವೆ. ಎಂದೇ, ನಾನಾ ತೆರನಾದ ಕೃತಕ ಶಬ್ದ ವಿನ್ಯಾಸ ಕೌಶಲವನ್ನು ಸಾಹಿತಿಯಾದವ ಬಳಸುವುದು. ಒಮ್ಮೆ ಯಾವುದೇ ವಿಷಯ, ಸಾಹಿತ್ಯದಲ್ಲಿ ಅಭಿವ್ಯಕ್ತವಾದರೆ ಅದು ತನ್ನ ಮೂಲಸ್ವರೂಪಕ್ಕಿಂತ ಬಹುಮಟ್ಟಿನ ಭಿನ್ನತೆಯನ್ನು ತೋರಿಸುತ್ತದೆ. ನಮ್ಮ ಅತ್ಯಂತ ಪರಿಚಿತ ಗೆಳೆಯ ಕೂಡ ನಮಗೆ ಬೇರೆಯಾಗಿ ವ್ಯಕ್ತಗೊಳ್ಳುತ್ತಾನೆ. ಅವನ ಬಗ್ಗೆ ನಮ್ಮ ಜ್ಞಾನವೇನಿದ್ದರೂ ಬಾಹ್ಯಸ್ವರೂಪದ್ದು. ಅವನ ಬದುಕಿನ ಅಧಿಕಾಂಶ ನಮಗೆ ಅಗೋಚರ, ಕೂಡ. ಅವನ ಬದುಕಿನಲ್ಲಿ ಎಷ್ಟೆಲ್ಲ ತಿಳಿಯಲಾಗದ ವಿಷಯಗಳಿವೆಯೊ? ಹೀಗಾಗಿ ಜಗತ್ತಿನ ಅನೇಕ ಜನರು ನಮ್ಮ ಪಾಲಿಗೆ ಕೇವಲ ಛಾಯೆಗಳು. ಅವರನ್ನು ನಾವು ತಿಳಿದಿರುವುದು ಮೇಲು ಮೇಲಿನ ಮಟ್ಟದಲ್ಲಿ ಮಾತ್ರ; ಅಂದರೆ ವಕೀಲರೋ, ವೈದ್ಯರೋ, ಉಪಾಧ್ಯಾಯರೋ, ಕಾರಕೂನರೋ ಆಗಿ. ಅವರು ಮನುಷ್ಯರೆಂದಲ್ಲ. ಅವರೊಡನೆ ನಮ್ಮ ಸಂಬಂಧ ವ್ಯವಹಾರ ವಿಷಯಕವೇ ಹೊರತು ಆತ್ಮೀಯವಲ್ಲ. ವ್ಯಕ್ತಿಗಳ ಬಗೆಗಿನ ನಮ್ಮ ಅರಕೆ, ಅಜ್ಞಾನ, ಪ್ರತ್ಯಕ್ಷತಾ ಅಭಾವವೆಲ್ಲಿದೆಯೋ ಅಲ್ಲಿ ನಮ್ಮ ಬುದ್ಧಿ ಕೆಲಸಕ್ಕೆ ತೊಡಗಬೇಕಾಗುತ್ತದೆ; ನಮ್ಮ ಪ್ರತಿಭೆ ತನ್ನ ಮಂತ್ರದಂಡವನ್ನು ಆಡಿಸಬೇಕಾಗುತ್ತದೆ. ಆ ಶೂನ್ಯತೆ, ಕಂದರಗಳೇ ಸಾಹಿತಿಯ ಲೀಲಾ ವಿಲಾಸದ, ಕ್ರಿಯಾಶೀಲತೆಯ ಕ್ಷೇತ್ರಗಳು. ಅಲ್ಲಿ ಪೂರ್ಣಗೊಳ್ಳುವ ನಮ್ಮ ಪ್ರತಿಭಾ ಕಾರ್ಯದ ಸಮಗ್ರ ಚಿತ್ರಕ್ಕೆ ಹೋಲಿಸಿದರೆ, ಮೂಲವ್ಯಕ್ತಿ ಸ್ವಾರಸ್ಯಹೀನ ಎನ್ನಿಸುತ್ತಾನೆ. ಅತ್ಯಂತ ಭಿನ್ನನೂ, ನಮಗೆ ಆತ್ಮಾಪ್ತನೂ ಆದ ಹೊಸ ವ್ಯಕ್ತಿಯ ಸೃಷ್ಟಿಯಾಗುತ್ತದೆ.

ಬಾಹ್ಯಪ್ರಕೃತಿಯಲ್ಲಿ ನಾವು ಎಲ್ಲಿ ಲೆಕ್ಕಾಚಾರವಿಲ್ಲವೆಂದು ಭಾವಿಸುವೆವೊ, ಎಲ್ಲಿ ನಿಷ್ಪ್ರಯೋಜಕವಾದ ಖರ್ಚು ವೆಚ್ಚಗಳಿವೆಯೆಂದು ತಿಳಿದಿರುವೆವೊ, ಅಲ್ಲಿಯೇ ಸೌಂದರ್ಯ ಕೇಂದ್ರೀಕರಿಸಿರುವುದು ನಮ್ಮ ದೃಷ್ಟಿಗೆ ಬೀಳುತ್ತದೆ. ಹೂವಿನ ಗುರಿ, ಅಂತಿಮವಾಗಿ ಸಂತಾನ ಸಾತತ್ಯಕ್ಕೋಸ್ಕರ ಬೀಜೋತ್ಪಾದನೆಯಿಂದ ವೈಜ್ಞಾನಿಕವಾಗಿ ನಾವು ಅರಿತಿದ್ದರೂ, ಅದು ಆ ಗುರಿಯತ್ತ ಸಾಗಲು ಆತುರಪಡುವುದಿಲ್ಲ. ಆ ಪ್ರಯೋಜನದ ಆಶಯವನ್ನು ಮರೆಗೊಳಿಸಿ ಚೆಲುವಾಗಿ ವಿಕಸಿತಗೊಂಡು ರಂಗು, ಗಂಧಗಳಿಂದ ಮೈ ತುಂಬಿಕೊಂಡು ನಲಿಯುತ್ತದೆ. ಇಂಥ ಎಷ್ಟೊಂದು ರೂಪು, ಅಲಂಕಾರ, ಹಾವಭಾವ, ಆಭಾಸ ಇಂಗಿತಗಳು - ಪದೇ ಪದೇ ಪ್ರಯೋಜಕತೆಗಳನ್ನು ಗೋಪ್ಯಗೊಳಿಸಿ ತಂತಾನೆ ಮೆರೆಯುತ್ತಿವೆಯೊ? ಇದು ಕರ್ತವ್ಯಕ್ಕೆ ಕಟ್ಟುಬಿದ್ದ ನಿಯಮ ಸೀಮಿತ ಕ್ರಿಯೆಯಿಂದ, ಕೇವಲ ರಕ್ಷಣೆಯ ಪ್ರಯೋಜನದ ನಿಮಿತ್ತ ಮೂಡುವಂಥದ್ದಲ್ಲ; ಆನಂದಮೂಲವಾದ ಆತ್ಮಶಕ್ತಿಯ ಪೂರ್ಣಪ್ರಕಾಶನ ಪ್ರಕ್ರಿಯೆಯಿಂದ ಸ್ಪಷ್ಟವಾಗುವಂಥದ್ದು. ಮನುಷ್ಯ ತನ್ನ ದಿನನಿತ್ಯದ ಸಾಂಸಾರಿಕ ಪ್ರಯೋಜನದ ಚೌಕಟ್ಟಿಗೆ ಬದ್ಧವಾಗಿರುವುದರ ಜೊತೆಗೆ, ಅದರ ಪಕ್ಕದಲ್ಲೇ, ಪ್ರಯೋಜನ ನಿರಪೇಕ್ಷಿಯಾದ ಸಾಹಿತ್ಯ ಕಲಾ ಸಂಸಾರವನ್ನೂ ನಿಭಾಯಿಸುತ್ತ ಬಂದಿದ್ದಾನೆ. ಇಲ್ಲಿ ಅವನು ಮುಕ್ತ ಹಾಗೂ ಸ್ವಚ್ಛಂದವಾಗಿ ತಂತಾನೆ ವಿರಾಜಿಸಬಲ್ಲ. ಇಲ್ಲಿರುವುದು ಮನುಷ್ಯನ ಐಹಿಕ ಪ್ರಾಚುರ್ಯವಲ್ಲ, ಐಶ್ವರ್ಯವಲ್ಲ; ಅಖಂಡ ಸ್ವರೂಪದ ಆನಂದಾನುಭವ. ಇಲ್ಲಿ ಪದಾತಿ, ಅಶ್ವದಳ ಬರಕಂದಾಜ ಸೈನ್ಯವಿಲ್ಲ; ಸಾಕ್ಷಾತ್ ಸಾಮ್ರಾಟನೇ ಎದುರಾಗುತ್ತಾನೆ.

ಯಾವುದು ನಿತ್ಯಸ್ವರೂಪಿಯೊ; ಮನುಷ್ಯನ ಚಟುವಟಿಕೆ, ಕಾರ್ಯಕಲಾಪಗಳಲ್ಲಿ ಸಮಾಪ್ತವಾಗದೋ ಅದು ಸಾಹಿತ್ಯದಲ್ಲಿ ಹಕ್ಕೆ ಪಡೆದು, ಅಲ್ಲಿ ಊರ್ಜಿತಗೊಂಡು ಮಾನವನ ಮಹತ್ವವನ್ನು, ವಿರಾಡ್ರೂಪವನ್ನು, ಅವನ ಶಕ್ತಿ ಸಾಮರ್ಥ್ಯ ಸಾಹಸಗಳ ದರ್ಶನವನ್ನು ಸಾರುತ್ತದೆ.

ರವೀಂದ್ರನಾಥ ಠಾಕೂರರ ಈ ತೆರನಾದ ವಿಚಾರಗಳು ಒಬ್ಬ ಶ್ರೇಷ್ಠ ಸಾಹಿತ್ಯ ವಿವೇಚಕ ಮತ್ತು ದ್ರಷ್ಟಾರ ಮಾತ್ರ ಬರೆಯಲು ಶಕ್ಯ. ಅವರ ಪ್ರತಿಭೆಯ ವ್ಯಾಪ್ತಿಗೆ ಬಂದ ಸಾಮಾನ್ಯ ಸಂಗತಿಗಳೂ ಪರುಷಮಣಿಯ ಸ್ಪರ್ಶಕ್ಕೆ ಸಂದ ಲೋಹದಂತಾಗುತ್ತವೆ. ಅವಕ್ಕೆ ಅತ್ಯಪೂರ್ವವಾದ ಕಾಂತಿ ಬೆಲೆಗಳು ಲಭಿಸಿಬಿಡುತ್ತವೆ. ಅವರು ಪ್ರಾಚೀನ ಸಾಹಿತ್ಯವನ್ನು ಕುರಿತು ನಡೆಸಿರುವ ಚಿಂತನ, ಅದರಲ್ಲೂ ಕಾಳಿದಾಸನ ಕೃತಿಗಳಾದ ಶಾಕುಂತಲ, ಕುಮಾರಸಂಭವ, ಮೇಘದೂತಗಳನ್ನು ತೌಲನಿಕವಾಗಿ ವಿವೇಚಿಸುವ ಪರಿ ಅನೇಕ ಒಳ ಹೊಳಹುಗಳನ್ನು, ಕಾಣ್ಕೆಗಳನ್ನು ಒಳಗೊಂಡು ಮೌಲಿಕವೆನ್ನಿಸುತ್ತದೆ. ಅನೇಕ ದಶಕಗಳ ಹಿಂದೆ ಅವರು ದಾಖಲಿಸಿದ ಈ ವಿಚಾರಗಳು ವಿವಿಧ ಭಾಷೆಗಳ ಅಸಂಖ್ಯಾತ ಬರಹಗಾರರ ಸಾಹಿತ್ಯದ ಮೇಲೆ ಪ್ರಭಾವ ಬೀರಿವೆ. ಅತಿ ಪರಿಚಯತೆಯಿಂದ ಅವು ತಮ್ಮ ವರ್ಣಕಾಂತಿಯನ್ನು ಮಸುಳಿಸಿಕೊಂಡಿಲ್ಲ. ಕೋಹಿನೂರ್ ವಜ್ರ ಶತಮಾನಗಳ ಹಿಂದಿನದ್ದಾದರೂ ಅದರ ಕಳೆ ಬೆಲೆಗಳು ಹಳಸಿಲ್ಲ, ತಗ್ಗಿಲ್ಲ. ಬಹುಶಃ ಭಾರತದ ಪ್ರಾಚೀನ ಸಂಸ್ಕೃತ ಕವಿಗಳಾದ ಮೇಲೆ ವಿಶ್ವಕವಿ ಎನ್ನಿಸಿಕೊಳ್ಳುವ ಅರ್ಹತೆಯಿರುವ ಏಕೈಕರೆಂದರೆ ರವೀಂದ್ರನಾಥ ಠಾಕೂರರೆಂದು ನಿಸ್ಸಂಶಯವಾಗಿ ಘೋಷಿಸಬಹುದು.

ಸಿದ್ಧರಾಮಣ್ಣನ ವಚನಗಳಲ್ಲಿ ಹೆಣ್ಣು

ಡಾ|| ಕೆ.ಆರ್. ಸಿದ್ದಗಂಗಮ್ಮ

ಜನ ಸಾಮಾನ್ಯನ ಮಾತಿನಲ್ಲಿ, ಜನ ಸಾಮಾನ್ಯನಿಗಾಗಿ, ಜನ ಸಾಮಾನ್ಯನಿಂದ ಹನ್ನೆರಡನೇ ಶತಮಾನದಲ್ಲಿ ರೂಪುಗೊಂಡಿದ್ದು ವಚನಸಾಹಿತ್ಯ. 'ವಚನ ಸಾಹಿತ್ಯವು ಎರವಲು ತಂದದ್ದಲ್ಲ, ಅದು ಕನ್ನಡದ ಸ್ವಯೋಜನಿತ ವಸ್ತು. ವಚನಕಾರರು ಸಂಸ್ಕೃತ ಆಚಾರ್ಯರಲ್ಲ. ಅವರು ಅಚ್ಚಕನ್ನಡದ ಬೇಸಾಯಗಾರರು' ಎಂದು ಎಂ.ಆರ್.ಶ್ರೀಯವರು ಔಚಿತ್ಯಪೂರ್ಣವಾಗಿ ನುಡಿದಿದ್ದಾರೆ. ವಚನ ರಚನೆಯಲ್ಲಿ ತೊಡಗಿದ ಸು. ೩೫೦ ಶರಣರಲ್ಲಿ ಮೂವತ್ತಕ್ಕೂ ಹೆಚ್ಚು ವಚನಕಾರ್ತಿಯರಿದ್ದಾರೆ ಎಂಬುದೂ ಇನ್ನೊಂದು ಮುಖ್ಯ ವಿಚಾರ. ಆದರೆ ಇವರಾರಿಗೂ ತಾವು ಜಗತ್ತಿನ ಶ್ರೇಷ್ಠ ಸಾಹಿತ್ಯ ರಚನೆಯಲ್ಲಿ ತೊಡಗಿದ್ದೇವೆ ಎಂಬ ಅರಿವೇ ಇರಲಿಲ್ಲ. ಬದುಕು-ಬರಹ, ನಡೆ-ನುಡಿ ಒಂದಾದ ಕ್ಷಣಗಳಲ್ಲಿ ರೂಪುಗೊಂಡದ್ದು ವಚನ ಸಾಹಿತ್ಯ.

ಪಿತೃ ಪ್ರಧಾನ ಸಮಾಜಗಳಲ್ಲಿ ಪುರುಷನೇ ಕೇಂದ್ರ ಮತ್ತು ನಿಯಂತ್ರಿಕನಾಗಿ ರುವುದು ಸಾಮಾನ್ಯವಾದದ್ದು ಸಮಾಜದ ಎಲ್ಲ ಚಟುವಟಿಕೆಗಳಲ್ಲಿ ಕೌಟುಂಬಿಕ, ಧಾರ್ಮಿಕ, ರಾಜಕೀಯ, ಆರ್ಥಿಕ, ಕಲಾತ್ಮಕ...... ವಿಷಯಗಳಲ್ಲಿ ಗಂಡಿಗೆ ಅಧೀನವಾಗಿಯೇ ಹೆಣ್ಣು ಬದುಕಬೇಕಾಗಿತ್ತು. ಇಂತಹ ಸಂಪ್ರದಾಯ ಬುದ್ಧಿ ಸಮಾಜದ idealogy ಯನ್ನು ಒಡೆಯುವ ಪ್ರಯತ್ನವನ್ನು ಹನ್ನೆರಡನೇ ಶತಮಾನದಲ್ಲಿ ನೋಡುತ್ತೇವೆ. ಹೆಣ್ಣು ತನ್ನ ಬಗ್ಗೆ ತಾನೇ ಕೀಳರಿಮೆಯನ್ನು ಬೆಳೆಸಿಕೊಂಡು ತಾನು ಹೆಣ್ಣಾಗಿ ಪುರುಷನಿಗಿಂತ ಕಡಿಮೆ ಎಂದು ಭಾವಿಸುವಂತೆ ತನ್ನ ಅಧೀನತೆಗೆ ತಾನೇ ಸಹಕರಿಸುವಂತೆ ಮಾಡಲಾಗಿತ್ತು. ಇಂತಹ ಕವಚದಿಂದ ಗಂಡಷ್ಟೇ ಅಲ್ಲ ಹೆಣ್ಣೂ ಹೊರಬರಬೇಕಾದ ಅನಿವಾರ್ಯತೆ ಇತ್ತು. ಅಂತಹ ಸಂದರ್ಭದಲ್ಲಿ ವಚನಕಾರರು ಹುಡುಕಿಕೊಂಡ ಆದರ್ಶ ಜಗತ್ತು ವಚನಗಳಲ್ಲಿವೆ.

ಸಮಾನತೆ, ಕಾಯಕಶ್ರದ್ಧೆ, ನಿಸ್ವಾರ್ಥ, ವೈಚಾರಿಕತೆ, ಗುರು-ಮೌಲ್ಯಗಳ ಲಿಂಗ-ಜಂಗಮಕ್ಕೆ ತನು-ಮನ-ಧನಗಳನ್ನು ಒಪ್ಪಿಸುವಿಕೆ....... ಮುಂತಾದ ಸಿದ್ದರಾಮಣ್ಣನ ಕೆಲವು ವಚನಗಳಲ್ಲಿ ವ್ಯಕ್ತಗೊಂಡಿರುವ ಹೆಣ್ಣಿನ ಸ್ವರೂಪವನ್ನು ಕುರಿತಾದ ಚರ್ಚೆ ಇಲ್ಲಿದೆ. ಸಿದ್ಧರಾಮಣ್ಣ ಕಂಡುಕೊಂಡ, ಕಟ್ಟಿಕೊಂಡ ಆದರ್ಶದ ರಾಜ್ಯದಲ್ಲಿ 'ಹೆಣ್ಣಿನ ಸ್ವರೂಪ' ಎಂತಹುದು ಎಂಬುದನ್ನು ಹೇಳಲು ಈ ಪ್ರಬಂಧ ಪ್ರಯತ್ನಿದೆ.

ಸಿದ್ಧರಾಮಣ್ಣನ ವಚನಗಳಲ್ಲಿ ಸ್ತ್ರೀಯನ್ನು ನೋಡುವ ದೃಷ್ಟಿ ಮೂರು ಬಗೆಯದಾಗಿದೆ. ೧. ಸಂಪ್ರದಾಯಿಕ ದೃಷ್ಟಿಕೋನ. ೨. ಸಹಜ ಸ್ವೀಕರಣದ ದೃಷ್ಟಿ ೩. ಸಂಪ್ರದಾಯದ ದೃಷ್ಟಿಯನ್ನು ಮುರಿದು ಕಟ್ಟಿದ ಆದರ್ಶಕರಣ.

ಮೊದಲನೆಯದು, ಸಿದ್ದರಾಮಣ್ಣನ ವಚನಗಳಲ್ಲಿ ಕಂಡು ಬರುವ ಸಂಪ್ರದಾಯಿಕ ದೃಷ್ಟಿಯನ್ನು ಕುರಿತದ್ದಾಗಿದೆ. ಈ ವಚನಗಳಲ್ಲಿ ಹೆಣ್ಣನ್ನು ನಿರ್ಜೀವ ವಸ್ತುಗಳ ಜೊತೆ ಇಟ್ಟು ನೋಡಲಾಗಿದೆ. ಅಂದರೆ ಇಲ್ಲಿ ಹೆಣ್ಣು, ಹೊನ್ನು ಮತ್ತು ಮಣ್ಣಿನಂತೆ ಇರುವ ವಸ್ತುವಾಗಿದ್ದಾಳೆ, ಒಡವೆಯಾಗಿದ್ದಾಳೆ.

'ತಾನು ಭಕ್ತನಾಗಿ, ಹೊನ್ನು, ಹೆಣ್ಣು , ಮಣ್ಣು ಈ ಮೂರು ಶಿವನ ಒಡವೆಯೆಂದು
(ಶುದ್ಧಿ) ಸಿದ್ಧ ಪ್ರಸಿದ್ಧವೆಂಬುದನಿಱಿದು
ಶಿವದ್ರವ್ಯವ ಶಿವಶರಣರಿಗೆ ನೀಡಿ ಮುಕ್ತಿಯ ಪಡೆಯಲೊಲ್ಲದೆ
ಅನ್ಯದೈವಕ್ಕೆ ಮಾಡಿ, ನೀಡಿ, ಎಂಜಲ ತಿಂಬವಗೆಲ್ಲಿಯದೋ
ಅವನಿಗೆ ರವಿಚಂದ್ರರುಳ್ಳನ್ನಕ್ಕೆ ನರಕ ತಪ್ಪದು
ಸದ್ಗುರು ಮಲ್ಲಿಕಾರ್ಜುನ ದೇವಯ್ಯ ? (ಪುಟ ೧೩೧೬, ಪುಟ ೪೦೮)

ಈ ಮೇಲಿನ ವಚನ ಕಂಡಕಂಡ ದೈವಗಳಿಗೆ ತನ್ನನ್ನೊಪ್ಪಿಸಿಕೊಳ್ಳುವ ಶರಣನಿಗೆ ಬುದ್ಧಿ ಹೇಳುತ್ತಿದೆ. ಈ ವಚನ ಹೆಣ್ಣಿನ ಸ್ಥಾನ ನಿರ್ಜೀವದ್ದಾಗಿದೆ. ಹೊನ್ನು ಮತ್ತು ಮಣ್ಣಿನಂತೆ ಹೆಣ್ಣು ಶಿವನ ಒಡವೆ ಅಷ್ಟೆ.

ಮತ್ತೊಂದು ಸಿದ್ದರಾಮಣ್ಣನ ವಚನ ಹೀಗನ್ನುತ್ತದೆ.

ಉದಕವೆಲ್ಲಾ ಒಂದೆ,
ಈಚಲನ ಆಶ್ರಯಿಸಿ ಮದ್ಯಪಾನವೆನಿಸಿತು,
ಸುರತರುವ ಆಶ್ರಯಿಸಿ ಅಮೃತವೆನಿಸಿತ್ತು
ದೇಹವೆಲ್ಲ ಒಂದೆ ;
ಅಂಗನೆಯರ ಆಶ್ರಯಿಸಿ ಭವಕ್ಕೆ ಬೀಜವಾಯಿತು
ಲಿಂಗವ ಆಶ್ರಯಿಸಿ ಭವಾರಣ್ಯಕ್ಕೆ ದಾವಾನಲನೆಸಿತು ನೊಡಾ
ಕಪಿಲ ಸಿದ್ದ ಮಲ್ಲಿಕಾರ್ಜುನಾ

(ಪುಟ ೧೪ ಸಿದ್ದರಾಮೇಶ್ವರ ವಚನಗಳು (ಸಂ.) ಎಂ. ಎಂ. ಕಲಬುರ್ಗಿ ಮತ್ತು ಸಾ.ಶಿ. ಮರುಳಯ್ಯ)

ಇಲ್ಲಿ 'ಅಂಗನೆಯರು' ಲೌಕಿಕ ಬದುಕಿನ ಬೀಜ ಎಂಬರ್ಥವಿದೆ. 'ಸಂಸಾರವನ್ನು' ಪುರಸ್ಕರಿಸುವ ವಚನಕಾರ ಸ್ತ್ರೀಯ ವ್ಯಾಮೋಹಕ್ಕೆ ಸಿಲುಕಿ ಪುರುಷ ಕೊಳೆತು ಹೋಗಬಾರದು ಎಂದು ಹೇಳಿದ್ದಾನೆ. ಹೀಗೆ ಹೇಳುವಾಗ ಸ್ತ್ರೀ ಆಧ್ಯಾತ್ಮಿಕ ಬೆಳವಣಿಗೆಗೆ ಅಡ್ಡಿ , ಅಂತಂತಕಾರಿ ಎಂಬ ಸಂಪ್ರದಾಯಿಕ ನಿಲುವೇ ವ್ಯಕ್ತಗೊಂಡಿದೆ.

ಹೆಣ್ಣನ್ನು ವಸ್ತುವನ್ನಾಗಿ ನೋಡುವ ಕ್ರಮವಾಗಲಿ, ಹೆಣ್ಣನ್ನು ಪುರುಷನ ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಕಂಟಕ ಪ್ರಾಯಳು ಎನ್ನುವುದಾಗಲಿ, ಮೂಲತಃ ಪಿತೃಪ್ರಧಾನ ಸಂಸ್ಕೃತಿಯ ಸಾಂಪ್ರದಾಯಿಕ ದೃಷ್ಟಿಗಳೇ ಆಗಿವೆ. ಹೆಣ್ಣಿನ ಜೈವಿಕ ರೂಪಕ್ಕಷ್ಟೆ ಗಮನ

ನೀಡಿ, 'ಭವಕ್ಕೆ ಬೀಜ' ಎಂಬ ಸಂಪ್ರದಾಯಿಕ ದೃಷ್ಟಿಯನ್ನು, ವ್ಯಕ್ತಪಡಿಸಿದ ಸಿದ್ದರಾಮಣ್ಣ ಅದರಿಂದ ಬಿಡಿಸಿಕೊಂಡ ಬಗೆ ಅನನ್ಯ. ಸಿದ್ದರಾಮಣ್ಣನಿಗೆ ಅಂಗನೆಯರ ಅಂಗಾಂಗಗಳ ವ್ಯಾಮೋಹಕ್ಕೆ ಬಿದ್ದ ಭವಿಯ ಬಗ್ಗೆ ತಿರಸ್ಕಾರವಿದೆ. ಜೊತೆಗೇ ಹೆಣ್ಣಿನ ಜೊತೆ ಶರಣನೊಬ್ಬ ಇಟ್ಟುಕ್ಕೊಳ್ಳಬೇಕಾದ ಸೂಕ್ಷ್ಮ ಸಂಬಂಧದ ಅರಿವೂ ಇದೆ.

ಹೆಣ್ಣ ಹಿಡಿದು ಹೆಣ್ಣ ಭೋಗಿಸಬಾರದು
ಮಣ್ಣ ಹಿಡಿದು ಮಣ್ಣ ಭೋಗಿಸಬಾರದು
ಈ ಅಣಕದ ಭೇದವನಾರೂ ಅರಿಯರು
ಅದೆಂತು ಭಕ್ತಿಸ್ಥಲವಳಪಡವುದು ಕಪಿಲಸಿದ್ಧ ಮಲ್ಲಿಕಾರ್ಜುನ
(ಪುಟ ೯೦, ಶ್ರೀ ಸಿದ್ದರಾಮೇಶ್ವರ ವಚನಗಳು ಸಂಪುಟ ೩೦೦)

ಇಲ್ಲಿ ಹೆಣ್ಣು, ಮಣ್ಣು ಹಾಗೂ ಹೊನ್ನು-ಇವು ಕೇವಲ ಭೋಗ್ಯದ ವಸ್ತುಗಳಲ್ಲ. ಇವುಗಳ ಜೊತೆಯಿದ್ದೂ, ಇವುಗಳ ಜೊತೆ ಅಂಟಿಕೊಳ್ಳದೆ ಬದುಕಿ ಅನನ್ಯತೆ ಸಾಧಿಸಿದವ ಭಕ್ತನಾಗುತ್ತಾನೆ. ಇದು ಸಿದ್ದರಾಮಣ್ಣನ ನಿಲುವು. ಈ ಗಂಟಿನಿಂದ ಬಿಡಿಸಿಕೊಳ್ಳಲು ಸಿದ್ದರಾಮಣ್ಣ ಹುಡುಕಿದ್ದು 'ಸಹಜ ಸ್ವೀಕಾರದ ಮಾರ್ಗ'

ಭಕ್ತನ ಮನ ಹೆಣ್ಣಿನೊಳಗಾದಡೆ ವಿವಾಹವಾಗಿ ಕೂಡುವುದು
ಭಕ್ತನ ಮನ ಮಣ್ಣಿನೊಳಗಾದಡೆ ಕೊಂಡು ಆಲಯವ ಮಾಡುವುದು
ಭಕ್ತನ ಮನ ಹೊನ್ನಿನೊಳಗಾದಡೆ ಬಳಲಿ ದೊರಕಿಸುವುದು ನೋಡ
ಕಪಿಲ ಸಿದ್ದ ಮಲ್ಲಿಕಾರ್ಜುನಾ.

ಬದುಕಿನ ಸಹಜತೆಯನ್ನು ಸಹಜವಾಗಿಯೇ ಒಪ್ಪಿಕೊಳ್ಳುವ ಸಾಮಾನ್ಯತೆಯಲ್ಲಿ ಸಿದ್ದರಾಮಣ್ಣನ ಘನತೆ ಹೆಚ್ಚುತ್ತಿದೆ. ಭಕ್ತನ ಮನ ಹೆಣ್ಣಿನೊಳಗಾದರೆ ವಿವಾಹವಾಗುವುದು, ಮಣ್ಣಿನೊಳಗಾದಡೆ ಮನೆ ಕಟ್ಟಿಬಿಡುವುದು, ಹೊನ್ನಿನೊಳಗಾದರೆ ಕಷ್ಟವಾದರೂ ಗಳಿಸಿ ಧರಿಸಿಬಿಡುವುದು- ಎನ್ನುವ ಸಿದ್ದರಾಮಣ್ಣ ಅತ್ಯಂತ ಸರಳ ಸಾಮಾನ್ಯತೆಯಲ್ಲಿ ತನ್ನತನವನ್ನು ಮೆರೆದಿದ್ದಾನೆ. ಇಂತಹ ಪ್ರಾಮಾಣಿಕ ಅನಿಸಿಕೆಯಿಂದಲೇ ಸಿದ್ದರಾಮಣ್ಣನ ಜನಸಾಮಾನ್ಯನ ಅಂತರಂಗವನ್ನು ಗೆಲ್ಲುತ್ತಾನೆ. ಶರಣರು ವೈದಿಕ ಸಂಪ್ರದಾಯ ರೂಪಿಸಿದ ಅನೇಕ ಮೌಲ್ಯಗಳನ್ನು ಮುರಿಯುತ್ತಾ ಪ್ರತಿಯಾಗಿ ತಮ್ಮದೇ ನಿಲುವುಗಳ ಆದರ್ಶವನ್ನು ಕಟ್ಟುತ್ತಾ ಬಂದರು. ಅದರಲ್ಲಿಯೂ ಸ್ತ್ರೀಯರ ಬಗ್ಗೆ ಪ್ರತಿಪಾದಿಸುತ್ತಿದ್ದ ಸಾಂಪ್ರದಾಯಿಕ ಮೌಲ್ಯಗಳ ಜಗತ್ತನ್ನು ಮುರಿದು ಹೊಸ ಆತ್ಮಶ್ರದ್ಧೆಯ ಬೆಳಕು ಸ್ತ್ರೀಯರಲ್ಲಿ ಕಾಣಿಸಿದ ಯುಗ ಹನ್ನೆರಡನೇ ಶತಮಾನ. ಆ ಸಂದರ್ಭದಲ್ಲಿಯೇ ವಚನಕಾರರು ಇಟ್ಟುಕೊಂಡ ಬಹುದೊಡ್ಡ ಆದರ್ಶ 'ಶರಣ ಸತಿ - ಲಿಂಗ ಪತಿ' ಎಂಬುದಾಗಿದೆ. ಇಲ್ಲಿ ತನ್ನನ್ನು ಶರಣರು ಸತಿಯರೆಂದು ಒಪ್ಪಿಕೊಳ್ಳುವುದು ಮತ್ತು ಲಿಂಗಕ್ಕೆ ಒಪ್ಪಿಸಿಕೊಳ್ಳುವುದು ಎರಡೂ ಮುಖ್ಯವಾಗಿವೆ. ಈ ವೈಚಾರಿಕತೆ ಸಿದ್ದರಾಮಣ್ಣನಲ್ಲಿ ಒಡಮೂಡಿರುವ ಬಗೆ ಹೀಗೆ :

ಶರಣನಾದಡೆ ಸತಿಯರ ಗೊಡ್ಡಾಟವೇಕೆ ಅಯ್ಯಾ ?
ಇಂದ್ರಿಯಂಗಳ ಹರಿಯಲೇಕೆ
ತಾನೆ ಸತಿ ಲಿಂಗ ಪತಿಯಾದ ಬಳಿಕ
ಸರ್ವ ಸಂಯೋಗಕ್ಕೆ ಅಯ್ಯನೇ ಪತಿ
ತಾನೇ ಸತಿಯಾದಾತ ಅನ್ಯಸತಿಯರಿಗೆರಗ
ಕರಣಂಗಳ ಹರಿಯಲೀಯ,

ಕಾರ್ಪಣ್ಯಕ್ಕೊದಗ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯನ
ಒಡಗೂಡಿದ ಶರಣರ ಪರಿಯಿಂತು (ವ. ೧೬೪)

ಇಲ್ಲಿ ವಚನಕಾರ ತಾನೇ ಸತಿ ಎಂದು ಹೇಳುವ ಮುಖಾಂತರ, ಅನ್ಯಪತಿಯರೆಡೆಗೆ ಎರಗುವ ಕರಣಂಗಳನ್ನು ಹಿಡಿದಿಡಲು ಭದ್ರನಾದ ಬೇಲಿ ಕಟ್ಟಿಕೊಂಡಿದ್ದಾನೆ. ಈ ಮಾನಿಸಿಕ ಬೇಲಿಯ ಒಡೆಯ - ಪತಿ ಕಪಿಲಸಿದ್ಧ ಮಲ್ಲಿನಾಥನಾಗಿದ್ದಾನೆ. ಈ ವಚನದ ಪ್ರಾರಂಭದಿಂದಲೂ ಆತ್ಮವಿಮರ್ಶೆಯ ಒಂದು ಧ್ವನಿ ಇದೆ. ಇದೇ ಮುಖ್ಯವಾದುದು. ಇಲ್ಲಿ ಗಂಡಿನ ಸಂವೇದನೆಯೇ ಹೆಣ್ಣಾಗಿ ಪರಿವರ್ತನೆಯಾಗುವುದು ಆ ವ್ಯಕ್ತಿಯ ಅಂತಿಮ ಆತ್ಮವಿಮರ್ಶಾ ಕ್ರಮವೇ ಆಗಿದೆ.

ಈ ಪ್ರಬಂಧದ ಮುಖ್ಯಧ್ವನಿ ಇರುವುದೇ ಇಲ್ಲ. ಸಿದ್ದರಾಮಣ್ಣನ ವಚನಗಳಲ್ಲಿ ಸ್ತ್ರೀಯನ್ನೂ ಕುರಿತಾದ ವಿಶೇಷ ದೃಷ್ಟಿಕೋನವೊಂದು ಇಲ್ಲಿ ಸಿಗುತ್ತದೆ. ಇಪ್ಪತ್ತನೇ ಶತಮಾನದ ಧ್ವನಿಗಳು ಕೇಳಿಬರುತ್ತವೆ. ಯಾವ ವ್ಯಕ್ತಿ ಪೂರ್ಣವಾಗಿ 'ಶರಣ ಸತಿ'ಯಾಗಿ ಪರಿವರ್ತನೆಯಾಗುತ್ತಾನೋ, ಆಗಷ್ಟೆ ಅವನಲ್ಲಿ ಸ್ತ್ರೀತ್ವ' ಎಂಬುದು ಅಭಿವ್ಯಕ್ತಿ ಪಡೆಯಲಾರಂಭಿಸುತ್ತದೆ. ಇಲ್ಲಿ ಸ್ತ್ರೀ (ಅಥವಾ ಹೆಣ್ಣು) ಜೈವಿಕ (ಸ್ತ್ರೀ)ತನವನ್ನು ಕಳಚಿಕೊಂಡು ಹೊಸ ವ್ಯಾಖ್ಯೆಗೆ ಸಿಗುತ್ತಾಳೆ. 'ಸ್ತ್ರೀತ್ವ' ಎಂಬುದು ಶಾರೀರಿಕ ಸತ್ಯ ಮಾತ್ರವಾಗದೆ ದೊಡ್ಡ ಮೌಲ್ಯಗಳ ಜೊತೆ ಅನಿವಾರ್ಯ ನಂಟನ್ನು ಸಂಪಾದಿಸುತ್ತದೆ.

ಈ ತಿಳಿವು ಸಿದ್ದರಾಮಣ್ಣನಲ್ಲಿ ಮೂಡಿರುವ ವಿಶೇಷತೆಯನ್ನು ಅವನ ವಚನವೇ ಹೇಳುತ್ತದೆ :

ತಾ ಮಾಡಿದ ಹೆಣ್ಣು ತನ್ನ ತಲೆಯನೇರಿತ್ತು
ತಾ ಮಾಡಿದ ಹೆಣ್ಣು ತನ್ನ ತೊಡೆಯನೇರಿತ್ತು
ತಾ ಮಾಡಿದ ಹೆಣ್ಣು ಬ್ರಹ್ಮನ ನಾಲಗೆಯನೇರಿತ್ತು
ತಾ ಮಾಡಿದ ಹೆಣ್ಣು ನಾರಾಯಣನ ಎದೆಯನೇರಿತ್ತು
ಅದು ಕಾರಣ
ಹೆಣ್ಣು ಹೆಣ್ಣಲ್ಲ, ಹೆಣ್ಣು ರಾಕ್ಷಸಿಯಲ್ಲ
ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧಮಲ್ಲಿಕಾರ್ಜುನ

ಈ ಮೇಲಿನ ವಚನದಲ್ಲಿ 'ತಾ ಮಾಡಿದ ಹೆಣ್ಣು' - ಎಂಬುದು ಮತ್ತೆ ಮತ್ತೆ ಬಂದಿದೆ. ತಾ ಮಾಡಿದ್ದು ಎಂದರೆ ಯಾರು ಮಾಡಿದ್ದು. ಅಂದರೆ 'ನಾನು' - ಎಂಬುದನ್ನು ಇನ್ನಷ್ಟು ಸ್ಪಷ್ಟಪಡಿಸುವುದಾದರೆ ನನ್ನ ಕೈಯಿಂದ ಮಾಡಿದ, ನನ್ನ ದೃಷ್ಟಿಯಿಂದ ರೂಪುಗೊಂಡ ನನ್ನ ಮನಸ್ಸಿನಿಂದ ಕಲ್ಪಿಸಿಕೊಂಡ, ನನ್ನ ಆಲೋಚನೆಗಳಿಂದ ಹಾಗೆಂದಾಗ ಅದು ಒಂದು ಶಕ್ತಿ ಇರಬಹುದು, ರೂಪ ಇರಬಹುದು, ಆಕಾರ ಇರಬಹುದು, ಆಲೋಚನೆ ಇರಬಹುದು, ಜ್ಞಾನ ಇರಬಹುದು, ಸುಖವಿರಬಹುದು, ಆತ್ಮವೂ ಇರಬಹುದು ಈಗ ಮತ್ತೆ ವಚನದತ್ತ ಹೋದರೆ,

ತಾ ಮಾಡಿದ ಹೆಣ್ಣು 'ತಲೆಯನೇರಿ' .... ಗಂಗೆಯಾಗುತ್ತಿದ್ದಾಳೆ
'ತೊಡೆಯನೇರಿ. .... ಪಾರ್ವತಿಯಾಗುತ್ತಿದ್ದಾಳೆ
'ನಾಲಗೆಯನೇರಿ .... ಸರಸ್ವತಿಯಾಗುತ್ತಿದ್ದಾಳೆ
'ಎದೆಯನೇರಿ .... ಲಕ್ಷ್ಮಿಯಾಗುತ್ತಿದ್ದಾಳೆ

ಗಂಗೆ, ಗೌರಿ, ಸರಸ್ವತಿ, ಲಕ್ಷ್ಮಿಯೆಂಬ ಪುರಾಣದ ಪಾತ್ರಗಳು ವಚನಕಾರನ ಆಶಯಕ್ಕೆ ಶಕ್ತಿ ತುಂಬುತ್ತಿವೆಯೇ ? ಈ ಸಂಕೇತಗಳು ಆಗುವುದು / ಬಿಡುವುದು ಒಬ್ಬ ವ್ಯಕ್ತಿಯ ಮೈಯಲ್ಲಿ ಮತ್ತು ಮನಸ್ಸಿನಲ್ಲಿಯೇ ಇದೆ ಎಂದು ಹೇಳುತ್ತಿವೆಯಲ್ಲವೆ ಅಂದರೆ ಒಂದರ್ಥದಲ್ಲಿ 'ನಾನು' - ಎಂಬುದು ಇಪ್ಪತ್ತನೇ ಶತಮಾನದ ಅಸ್ತಿತ್ವವಾದಿ ಸಾಹಿತ್ಯದ ಓಂಕಾರವಾಗಿದೆ. ''ಮಾನವ ತನ್ನ ಮನುಷ್ಯತ್ವವನ್ನು ತಾನೇ ಸೃಷ್ಟಿಸಿಕೊಳ್ಳಬೇಕು. ತನ್ನ ಗುಣ ಸ್ವಭಾವಕ್ಕೆ ತಾನೇ ಸಂಪೂರ್ಣ ಹೊಣೆಗಾರ ಅವನಿಗೆ ಸ್ವತಂತ್ರವಾದ ಮನಸ್ಸು ಇಚ್ಛಾಶಕ್ತಿ ಇದೆ. ಆದ್ದರಿಂದಲೇ ಅವನಿಗೆ ಜವಾಬ್ದಾರಿಗಳಿವೆ. ಒಂದು ವೇಳೆ ತಾನು ಏನು ಆಗಬೇಕು? ಎಂಬುದನ್ನು ಆಯ್ಕೆ ಮಾಡದಿದ್ದರೆ ಅಥವಾ ಹೊರಗಿನ ಶಕ್ತಿಗಳಿಗೆ ಆಯ್ಕೆ ಮಾಡಲು ಅವಕಾಶ ನೀಡಿದರೆ ಆತ ತಿರಸ್ಕಾರಕ್ಕೆ ಯೋಗ್ಯನಾಗುತ್ತಾನೆ. ತೀರ್ಮಾನ ತೆಗೆದುಕೊಳ್ಳುವುದೂ, ಆಯ್ಕೆ ಮಾಡಿಕೊಳ್ಳುವುದೂ ಇದರಲ್ಲಿ ಸೇರುತ್ತದೆ. ಬದುಕಿನಲ್ಲಿ ಕ್ರಿಯಾತ್ಮಕವಾಗಿ ಮತ್ತು ಖಚಿತವಾಗಿ ತೊಡಗಿಕೊಳ್ಳುವುದರಿಂದ ಮಾತ್ರವೇ ನೈತಿಕತೆ ದೊರೆಯುತ್ತದೆ ಎಂಬ ನಂಬಿಕೆ ಇಲ್ಲಿದೆ''[1] ಇದು ಅಸ್ತಿತ್ವವಾದಿ ಲೇಖಕರು ಹೇಳುವ Being ಇರುವುದು - Encomposing ಒಳಗೊಳ್ಳುವುದು ಎಂಬುದು ವಿಶ್ಲೇಷಣೆಯಾಗಿದೆ.

ಈ ಶತಮಾನದ ಈ ವೈಚಾರಿಕತೆಯು ವ್ಯಕ್ತಿಯ ಅಸ್ತಿತ್ವವನ್ನೂ, ಬೆಳೆಸಿಕೊಂಡ ವ್ಯಕ್ತಿತ್ವದಲ್ಲಿ ಗುರುತಿಸುತ್ತದೆ.

ಈಗ ಮತ್ತೊಮ್ಮೆ ಸಿದ್ದರಾಮಣ್ಣನ ವಚನವನ್ನು ಗಮನಿಸೋಣವೇ-

ಇಲ್ಲಿ 'ತಾ ಮಾಡಿದ ಹೆಣ್ಣು' - ಬೇರೆಯವರದ್ದು ಅಲ್ಲ, ಬೇರೆಯವರಿಂದ ರೂಪುಗೊಂಡಿದ್ದೂ ಅಲ್ಲ. ತಾನೇ ರೂಪಿಸಿದ, ಕಲ್ಪಿಸಿದ, ಪ್ರಜ್ಞಾಪೂರ್ವಕವಾಗಿ ಕಟ್ಟಿದ ಸ್ವರೂಪ 'ಹೆಣ್ಣು' ಎಂಬುದನ್ನು ಸಿದ್ದರಾಮಣ್ಣ ಸ್ಪಷ್ಟಪಡಿಸಿದ್ದಾನೆ. ಹೆಣ್ಣು ಕೆಟ್ಟವಳೂ ಅಲ್ಲ, ಒಳ್ಳೆಯವಳೂ ಅಲ್ಲ, ಅದು ವ್ಯಕ್ತಿಯ ಪರಿಭಾವನೆಯಲ್ಲಿದೆ. ಸಿದ್ದರಾಮಣ್ಣನಿಗೆ 'ಹೆಣ್ಣು ಹೆಣ್ಣು' ಜೈವಿಕವಾಗಿ ಹೆಣ್ಣಲ್ಲ, ಹಾಗಾದರೆ ಹೆಣ್ಣು ಏನಾಗಿದ್ದಾಳೆ? ಹೆಣ್ಣು ರಾಕ್ಷಸಿಯೂ ಅಲ್ಲ - ಖಚಿತವಾದ ದೃಷ್ಟಿ ಇದೆ. ಇಲ್ಲಿ ಸಂಶಯಕ್ಕೆಡೆ ಇಲ್ಲ. ಹೆಣ್ಣು =ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನ- ಅವನ ಇಷ್ಟದೈವವಾಗಿದೆ. ಇಲ್ಲಿ ಹೆಣ್ಣನ್ನು ಸಿದ್ದರಾಮಣ್ಣ ಗೌರವ, ಪ್ರೀತಿಯಿಂದ, ಭಕ್ತಿಯಿಂದ ದೃಷ್ಟಿಸಿದ್ದಾನೆ. ಹೆಣ್ಣಿಗೆ ಗೌರವ ನೀಡಿ ಗೌರವವನ್ನೂ ಪಡೆದುಕೊಂಡಿದ್ದಾನೆ. ಕೊನೆಗೆ ಈ ವಚನದಿಂದ ಸ್ಪಷ್ಟವಾಗುವ ವಿಚಾರಗಳೆಂದರೆ ೧. 'ಹೆಣ್ಣು' ಎಂದು ವಿವರಣೆ ಕೊಡುವ ವ್ಯಕ್ತಿ ಹೆಣ್ಣನ್ನು ವಿವರಿಸುತ್ತಾ ಹೋಗುವುದಿಲ್ಲ. ಬದಲಿಗೇ ಅವನಿಗೆ ಅರಿವಿಲ್ಲದೆ ಅವನ ವ್ಯಕ್ತಿತ್ವದ ವಿವರಣೆಯನ್ನು ನೀಡುತ್ತಿರುತ್ತಾನೆ. ೨. ಹೆಣ್ಣು = ಕಪಿಲಸಿದ್ದಮಲ್ಲಿನಾಥನೇ ಆಗಿದ್ದಾನೆ ಎಂಬ ಸಿದ್ದರಾಮಣ್ಣನ ಸ್ಪಷ್ಟ ನಿಲುವು ವ್ಯಕ್ತವಾಗುತ್ತದೆ.

ಒಟ್ಟಾರೆಯಾಗಿ ಸಿದ್ದರಾಮಣ್ಣನ ವಚನಗಳಲ್ಲಿ ಸ್ತ್ರೀಯನ್ನು ನೋಡುವ ದೃಷ್ಟಿ ಮೂರು ಬಗೆಯದಾಗಿದೆ : ಮೊದಲನೆಯದು ಹೆಣ್ಣನ್ನು ಹೊನ್ನು, ಮಣ್ಣಿನೊಂದಿಗೆ ನೋಡುವ ಸಂಪ್ರದಾಯಿಕ ನಿಲುವು. ಜೊತೆಗೆ ಸಿದ್ದರಾಮಣ್ಣನು ಸಾಂಪ್ರದಾಯಿಕ ನಿಲುವನ್ನು ಹೊಡೆದು ಕಟ್ಟಲು ಎರಡು ಆದರ್ಶದ ರೀತಿಗಳನ್ನು ಹುಡುಕಿಕೊಂಡಿದ್ದಾನೆ. ಸಹಜವಾಗಿ ಹೆಣ್ಣನ್ನು ಸ್ವೀಕರಿಸುವ ಕ್ರಮ ಒಂದಾದರೆ, ಇನ್ನೊಂದು ತಾನು 'ಸತಿಯಾಗಿ' ಒಪ್ಪಿಕೊಳ್ಳುವ ಮುಖಾಂತರ 'ಸ್ತ್ರೀತ್ವಕ್ಕೆ ಹೊಸ ಅರ್ಥ ನೀಡಿದ್ದಾನೆ.

---

1. ಓ.ಎಲ್. ನಾಗಭೂಷಣ ಸ್ವಾಮಿ, ವಿಮರ್ಶೆಯ ಪರಿಭಾಷೆ , ಪು. ೩೦. (೧೯೯೮).

ಜನಪದ ಸಾಹಿತ್ಯದಲ್ಲಿ ಮಕ್ಕಳು

ಡಾ|| ಬಸವರಾಜ ಜಗಜಂಪಿ

ಭಾಷೆ ಯಾವುದೇ ಇರಲಿ, ಸಾಹಿತ್ಯದ ಮೂಲದ್ರವ್ಯ ಇರುವುದೇ ಜನಪದ ಸಾಹಿತ್ಯದಲ್ಲಿ. ಒಂದು ಜನಾಂಗದ ಸಮಷ್ಟಿ ಮನಸ್ಸಿನ ಚಿತ್ರ, ಸಂಸ್ಕೃತಿಯ ಕುರುಹು ಅಲ್ಲಿ ಸಿಗುತ್ತವೆ. ಶ್ರೇಷ್ಠಸಾಹಿತ್ಯಕ್ಕಿಂತ ಮೊದಲು ಮೂಡಿಬಂದ ಜನಪದ ಸಾಹಿತ್ಯವನ್ನು ಮೊದಮೊದಲು ಕಡೆಗಣಿಸಿದುದು ದುರ್ದೈವದ ಸಂಗತಿ. ಜನಪದರು ಸ್ವಾರ್ಥ ಸಾಧನೆಗೆ ಅನ್ಯರನ್ನು ಹೊಗಳೆ, ತಮ್ಮ ನಿತ್ಯಜೀವನದಲ್ಲಿ ಅನುಭಕ್ಕೆ ಬಂದ ಕಷ್ಟ-ಸುಖ, ಏರು-ಪೇರು, ನೋವು-ನಲಿವುಗಳನ್ನು ಮನದುಂಬಿ ಹಾಡಿದ್ದಾರೆ. ಜನಪದ ಸಾಹಿತ್ಯ ನಮ್ಮ ಜನಜೀವನದ ಉಸಿರು. ಮಣ್ಣಿನ ಗುಣ ಈ ಪದಗಳ ವಿಶೇಷ ಲಕ್ಷಣ. ಅನುಭವದ ಆಳದಿಂದ ಮೂಡಿಬಂದ ಜನಪದ ಸಾಹಿತ್ಯದ ಝರಿ ಎಂದೂ ಬತ್ತದ ಜೀವಂತ ತೊರೆಯಾಗಿ ಹರಿಯುತ್ತಿದೆ. ಮೊಗೆದಷ್ಟೂ ಬಸಿಯುವ ಕೊರತೆಗಾಣದ ಒರತೆಯ ನೀರಿನ ಚಿಲುಮೆಯಾಗಿದೆ. ಅತ್ಯಂತ ಸರಳ ಸಹಜ ಸುಂದರ ಶೈಲಿಯಲ್ಲಿರುವ ಈ ಸಾಹಿತ್ಯದಲ್ಲಿ ಕನ್ನಡತನದ ಶುದ್ಧರಕ್ತ - ತಿರುಳ್ಗನ್ನಡದ ಭಾವಬೆಡಗುಗಳು ಒಡಮೂಡಿವೆ.

ಕನ್ನಡ ಸಾಹಿತ್ಯ ದೇವಿಯ ಚೊಚ್ಚಲ ಕೂಸು ಜನಪದ ಸಾಹಿತ್ಯ. ಚೊಚ್ಚಲ ಕೂಸು ತುಂಬ ಅಚ್ಚೆಯದಾಗಿರುತ್ತದೆ. ಅಂತೆಯೇ ಅವಿದ್ಯಾವಂತರ ಸಾಹಿತ್ಯವೆಂದು ಮೂಗು ಮುರಿಯುತ್ತಿದ್ದ ದೊಡ್ಡ ದೊಡ್ಡ ಪದವೀಧರರು ಕೂಡ ಜನಪದ ಸಾಹಿತ್ಯದ ಬೆಡಗು-ಬಿನ್ನಾಣ ಹಾಗೂ ಅದರ ಅಪರೂಪದ ಶ್ರೀಮಂತಿಕೆಯನ್ನು ಕಂಡು ಬೆರಗಾಗಿದ್ದಾರೆ ; ಓದಿ, ಸವೆದು ಅದರ ಸಹಜಾಕರ್ಷಕ ಗುಣಕ್ಕೆ ಮರುಳಾಗಿದ್ದಾರೆ. ಅದಕ್ಕೆ ಕಾರಣ ಹೃದಯದಿಂದ ಹೃದಯಕ್ಕೆ ನೇರವಾಗಿ ಹರಿಯುವ ಅದರ ಅನುಭವ.

ಸಾಲಿಗೆಯ ತುದಿಯಲ್ಲಿ ಯಾವ ಯತ್ನವೂ ಇಲ್ಲದೆ ಹುಟ್ಟಿದ ರಾಶಿರಾಶಿಯಾದ ಈ ಅಭಿಜಾತ ಬಂದಿರುವುದು ಅಯತ್ನಪೂರ್ವಕವಾಗಿಯೇ ಎಂಬುದು ಗಮನಾರ್ಹ.

ಇಂದು ಜನಪದ ಸಾಹಿತ್ಯದ ಅಧ್ಯಯನ ಕೇವಲ ಕಲೆಯ ಅಭ್ಯಾಸವಾಗಿ ಉಳಿದಿಲ್ಲ, ಅದು ತನ್ನ ಪರಿಧಿಯನ್ನು ಸಮಾಜ ವಿಜ್ಞಾನ ಕ್ಷೇತ್ರಕ್ಕೂ ವಿಸ್ತರಿಸಿಕೊಂಡಿದೆ. ಇದೀಗ ಬೆಳೆಸಿಕೊಂಡಿರುವ ಸಾಮಾಜಿಕ ವೈಜ್ಞಾನಿಕ ದೃಷ್ಟಿಯ ಫಲವಾಗಿ ಜನಪದದ ವೈವಿಧ್ಯಮಯ ಮುಖಗಳ ಅಭ್ಯಾಸ ಶಾಸ್ತ್ರೀಯವಾಗಿ ಆರಂಭಗೊಂಡಿದೆ. ಅಂತೆಯೇ ಜನಪದ ಅಧ್ಯಯನದಲ್ಲಿ ಬೇರಾವ ರಾಜ್ಯಗಳಿಗಿಂತಲೂ ಕರ್ನಾಟಕದ ಸಾಧನೆ ಗಮನಾರ್ಹವಾಗಿದೆ.

ಜೀವನದ ಹಲವಾರು ಪ್ರಮುಖ ಮುಖಗಳನ್ನು ಪರಿಚಯಿಸುವ ಜನಪದ ಸಾಹಿತ್ಯದಲ್ಲಿ ತಾಯಿ-ಮಗುವಿನ ಸಂಬಂಧ ತುಂಬ ಸವಿರಾಗಿ ಚಿತ್ರಣಗೊಂಡಿದೆ. ವಿಶೇಷವಾಗಿ ಮಕ್ಕಳ ಬದುಕಿನ ಹಲವು ಹಂತಗಳ ಬಗೆಗೆ ಮೂಡಿಬಂದಿರುವ ತ್ರಿಪದಿಗಳು ಹೃದಯಂಗಮವಾಗಿವೆ. ಮಕ್ಕಳನ್ನು ಕುರಿತು ಪ್ರಕಟಗೊಂಡ ತಾಯಿಯ ಪ್ರೀತಿ - ವಾತ್ಸಲ್ಯ-ಸ್ನೇಹ ಭಾವಗಳು ಚೇತೋಹಾರಿಯಾಗಿವೆ.

ಮದುವೆಯಾದ ಒಂದು ವರ್ಷದಲ್ಲೇ ಹೆಣ್ಣು ಮಗಳು ತಾಯಿಯಾಗಬೇಕು. ತಡವಾದರೆ ತೊಟ್ಟಿಲು ಮುಂದೆ ಹೋಯಿತೆನ್ನುವ ಚಿಂತೆ. ಮಕ್ಕಳನ್ನು ಹೆರದ ಆ ಹೆಣ್ಣಿಗೆ 'ಬಂಜೆ' ಎಂಬ ಆರೋಪ ಹೊರುವ ಭಯಂಕರ ಭಯ ಬೇರೆ. ಮನೆಯವರ ನೆರೆಯವರ ಚುಚ್ಚು ನುಡಿಗಳು, ಈ ಮೊದಲೇ ಗಾಯಗೊಂಡ ಅವಳ ಕೋಮಲ ಅಂತಃಕರಣದ ಮೇಲೆ ತೀವ್ರ ಬರೆ ಎಳೆಯುತ್ತವೆ. ಅದೇ, ತಾನು 'ಬಸರಿ' ಎಂದು ತಿಳಿಯುತ್ತಲೇ ಅವಳ ಸಂತೋಷಕ್ಕೆ ಪಾರವೇ ಇಲ್ಲದಾಗುತ್ತದೆ. ತಾಯ್ತನದ ಹಿಗ್ಗು, ತಾಯಿಯಾಗುವ ಹೆಣ್ಣಿನ ಆ ಸಂಭ್ರಮ ಹೇಳಲಸದಳ. ಮನೆಯ ಎಲ್ಲರೂ ಅವಳ ಕಾಳಜಿ ಮಾಡುವರು. ಹೆಚ್ಚಿನ ಭಾರ ಬೀಳದಂತೆ ಎಚ್ಚರ ವಹಿಸುವರು. ಓಣಿಯಿಂದ ಹಿಡಿದು ಊರಿನ ಪರಿಚಿತರು - ಆತ್ಮೀಯರು, ಹತ್ತಿದವರು - ಹೊಂದಿದವರು ಮನೆಗೆ ಕರೆಸಿ ಬಗೆಬಗೆಯ ಬಯಕೆಯ ತಿಂಡಿ - ತಿನಿಸುಗಳನ್ನು, ಊಟ - ಉಣಿಸುಗಳನ್ನು ಮಾಡಿ ಉಣಿಸುವರು. ಹಿರಿಯರು ಭಾವೀ ತಾಯಿಯನ್ನು 'ಅಷ್ಟಪುತ್ರ ಸೌಭಾಗ್ಯವತಿಯಾಗು' ಎಂದು ಹರಸುವರು. ಈ ಬಗೆಯ ಗ್ರಾಮೀಣ ಸಂಭ್ರಮದ ವಾತಾವರಣ ನಾಗರೀಕತೆಯ ನೆಲೆವನೆಯೆನಿಸಿದ ನಗರ ಪಟ್ಟಣಗಳಲ್ಲಿ ಕಾಣಸಿಗದು, ಕಂಡರೂ ಅಪರೂಪವೆನ್ನಬೇಕು.

ಮಕ್ಕಳಿಲ್ಲದವರ ಮನೆ - ಮನಗಳೆರಡೂ ಶೂನ್ಯ. ಮಕ್ಕಳಿಲ್ಲದವರು ಮಕ್ಕಳನ್ನು ಬೇಡುವುದು, ತಳಮಳಿಸುವುದು ಸಹಜ. ಅಂತೆಯೇ,

ಕಂದನ ಕೊಡು ಶಿವನೆ ಬಂಧನ ಪಡಲಾರೆ
ಹಂಗೀನ ಬಾನ ಉಣಲಾರೆ । ಮರ್ತ್ಯದಾಗ
ಬಂಜೆಂಬ ಶಬುದ ಹೊರಲಾರೆ

ಎನ್ನುವಳು. ಅಷ್ಟೇ ಅಲ್ಲ,

''ಹೊತ್ತಾರೆ ನೀನಿತ್ತು ಸಂಜೆಗೆ ಕೊಳ್ಳಯ್ಯ, ಬಂಜೆಂಬ ಶಬ್ದ ಬಿಡಿಸಯ್ಯ'' ಎಂದು ದೈನ್ಯತೆಯಿಂದ ಪ್ರಾರ್ಥಿಸುವಳು. ಹೆಣ್ಣಿನ ಜನ್ಮ ಸಾರ್ಥಕವಾಗಬೇಕಾದರೆ ಮಕ್ಕಳು ಬೇಕೇ ಬೇಕು. ಇಲ್ಲವಾದರೆ -

ಬಾಲಕರಿಲ್ಲದ ಬಾಲಿದ್ಯಾತರ ಜನ್ಮ
ಬಾಡಿಗಿ ಎತ್ತು ದುಡಿಧಂಗ । ಬಾಳೆಲೆಯ
ಹಾಸ್ಯುಂಡು ಬೀಸಿ ಒಗೆಧಂಗ

ಅವಳ ಬದುಕು ವ್ಯರ್ಥವಾಗುತ್ತದೆ. ಅಂತೆಯೇ ಮಕ್ಕಳಿಗಾಗಿ ಹಾತೊರೆಯುತ್ತಾಳೆ. ಹೆಣ್ಣು ಹಡೆದವರು ಗಂಡನ್ನು, ಗಂಡು ಹಡೆದವರು ಹೆಣ್ಣನ್ನು ಬಯಸುವುದು ಸಹಜ. ಆದರೆ ಚೊಚ್ಚಲ ಗಂಡು ಮಗುವನ್ನು ನಿರೀಕ್ಷಿಸಿ, ಹೆಣ್ಣು ಹಡೆದು ಆಘಾತಕ್ಕೊಳಗಾಗಿ ಅಳುವ ತಾಯಿಯನ್ನು -

ಹೆಣ್ಣು ಹುಟ್ಟೇತಂತ ಕಣ್ಣೀರ ಕರಿಬ್ಯಾಡ
ಸಣ್ಣಾಗಬ್ಯಾಡ ಮನದಾಗ । ಹಡೆದವ್ವ
ಹೆಣ್ಣೀನ ಜಗದ ಕಣ್ಣೀನ

ಎಂದು ಹಿರಿಯ ಹೆಣ್ಣುಮಗಳೊಬ್ಬಳು ಸಮಾಧಾನ ಹೇಳಿ ಸಂತೈಸುತ್ತಾಳೆ, ಹೆಣ್ಣು ಜಗದ ಕಣ್ಣು ಎಂದು ಹೊಗಳುತ್ತಾಳೆ. ಆದರೂ ಸಮಾಧಾನವಾಗದೆ -

ಹೆಣ್ಣು ಹುಟ್ಟೇತಂತ ನಡುಗಂಬ ನಡುಗಿತ್ತ
ಗಂಡಸ ಮಗ ಗಜಭೀಮ । ಹುಟ್ಟಿದರ
ಚಿಲಕ ಬೋದಗಳೆಲ್ಲ ನಡಗ್ಯಾವ

ಎಂದು ಚಿಂತಿಸುತ್ತ ಗಂಡಿಗಾಗಿ ಹಂಬಲಿಸುತ್ತಾಳೆ. ಸ್ವತಃ ಹೆಣ್ಣಾದ ಅವಳಿಗೆ ಸಮಾಜದಲ್ಲಿ ಸಣ್ಣಾದ ಅನುಭವ ಸಾಕಷ್ಟಿದೆ. ಆದರೆ ಅದೇ ಗಂಡುಮಗ ಹುಟ್ಟಿದಾಗ ಗಜಭೀಮನೇ ಹುಟ್ಟಿಬಂದ ಸಡಗರ - ಸಂಭ್ರಮ.

ಈಗಿನವರು ಒಂದೋ ಎರಡೋ ಎಣಿಸಿ ಹಡೆದರೂ ನಮ್ಮ ಹಿರಿಯರಿಗೆ ಹೆಚ್ಚು ಮಕ್ಕಳಿದ್ದಷ್ಟೂ ಸಂತೋಷ :

ಬಡತನ ನನಗಿರಿಲಿ ಭಾಳ ಮಕ್ಕಳಿರಲಿ
ಮ್ಯಾಗ ಗುರುವಿನ ದಯವಿರಲಿ । ನನ ಕಂದ
ಬಡತನದ ಚಿಂತೆ ನನಗಿಲ್ಲ

ಮಕ್ಕಳೇ ಅವರ ಮನೆಯ ಮಾಣಿಕ್ಯ. ಅಂತೆಯೇ ಬಡತನ, ಅದರ ಹಿಂದೆಯೇ ಬರುವ ಕಷ್ಟನಷ್ಟಗಳಿಗೆ ಬೇಸತ್ತು ಮಕ್ಕಳನ್ನು ಹಡೆಯುವುದೂ ಬೇಡವೆನ್ನುತ್ತಾರೆ :

ಬಡತನ ಬಂದರ ಬಡಿವ್ಯಾಡ ಮಕ್ಕಳನ
ಆಡ್ಯಾಡಿ ಬಂದು ತೊಡಿ ಮ್ಯಾಗ । ಕುಂತರ
ಬಂದ ಬಡತನ ಬಯಲಾಗೆ

ಎನ್ನುವ ತಾಯಿ, ಅಂಥ ಸುಪುತ್ರ ತನ್ನ ತೊಡೆಯ ಮೇಲಿದ್ದರಾಯ್ತು, ಬಂದ ಬಡತನವೂ ದೂರಾಗುತ್ತದೆಂದು ಭಾವಿಸುತ್ತಾಳೆ.

ತೊಟ್ಟಿಲದಾಗೊಂದು ತೊಳೆದ ಮುತ್ತನು ಕಂಡೆ
ಹೊಟ್ಟೆ ಅಕ್ಕಳಿಸಿ ನಗುವೋನ । ನನ್ನಯ್ಯ
ನೆತ್ತೀಲಿ ಕಂಡೆ ಹರಳೆಲೆ

ಎಂದು ತೊಳೆದ ಮುತ್ತಿನಂತಿರುವ ಮಗುವನ್ನು ಕಂಡು ಆನಂದಿಸುತ್ತಾಳೆ. ''ಹಣ್ಣುಳ್ಳ ಮರಕ್ಕೆ ಗಿಣಿ ಮುದ್ದಾದಂತೆ, ಕಂದ ನೀ ಮದ್ದು ನನ್ನ ಬಳಗಕ್ಕೆ'' ಎನ್ನುತ್ತಾಳೆ.

DAF

ಆಡಿ ಬಾ ನನ ಕಂದ ಅಂಗಾಲ ತೊಳದೇನ
ತೆಂಗಿನಕಾಯ ಎಳೆನೀರ । ತಕ್ಕೊಂಡು
ಬಂಗಾರ ಮೋರೆ ತೊಳದೇನ

ಎನ್ನುವ ತಾಯಿ, ಆಡಲು ಹೊರಗೆ ಹೋದ ತನ್ನ ಮಗುವಿನ ಧೂಳು ಹಿಡಿದ ಮುಖವನ್ನು ತೊಳೆಯಲು ತೆಂಗಿನಕಾಯಿ ಎಳನೀರನಷ್ಟು ಶುದ್ಧ ನೀರನ್ನೇ ಕೊಳ್ಳುತ್ತಾಳೆ. ಸುಮ್ಮನೆ ಮುಖ ತೊಳೆಸಿಕೊಳ್ಳದ ಮಗು ಅಳತೊಡಗುತ್ತದೆ.

ಅಳುವ ಕಂದನ ತುಟಿಯು ಹವಳದ ಕುಡಿಯ್ಹಂಗ
ಕುಡಿಹುಬ್ಬು ಬೇವಿನೆಸಳ್ಹಂಗ । ಕಣ್ಣೋಟ
ಶಿವನ ಕೈಯಲಗು ಹೊಳೆಧಾಂಗ

ಎಂಬಲ್ಲಿ ಹವಳದ ಕುಡಿಯನ್ನು ಹೋಲುವ ತನ್ನ ಕಂದನ ತುಟಿ, ಬೇವಿನೆಸಳಿನಂತಿರುವ ವಕ್ರವಾದ ಹುಬ್ಬು, ಶಿವನ ಕೈಯ ತ್ರಿಶೂಲದಂತೆ ತಳತಳ ಹೊಳೆವ ಕಣ್ಣೋಟ - ಎಂದು ನೀಡುವ ಉಪಮೆಗಳಲ್ಲಿನ ಕಲ್ಪನೆ, ತೋರಿದ ಪ್ರತಿಭೆ, ಕಾವ್ಯಪ್ರಜ್ಞೆ, ಸಹಜಸ್ವಾನುಭವ - ಮೊದಲಾದವು ಗರತಿಯ ಅನುಭವದ ವಿವಿಧ ಮುಖಗಳನ್ನು ಪ್ರಕಟಿಸುತ್ತವೆ.

ಅದರಂತೆ ಹಟ ಕಟ್ಟಿ ಅಳುವ, ತಾಯಿಯನ್ನು ಕಾಡುವ ಮಗುವಿನ ವಿಭಿನ್ನ ಚಿತ್ರಗಳೂ ಅಷ್ಟೇ ಮನೋಹರವಾಗಿವೆ :

ಹಾಲ ಬೇಡ್ಯತ್ತಾನ ಕೋಲ ಬೇಡಿ ಕುಣಿದಾನ
ಮಸರ ಬೇಡಿ ಕೆಸರ ತುಳದಾನ । ಕಂದಯ್ಯನ
ಕುಸುಲದ ಗೆಜ್ಜಿ ಕೆಸರಾಯ್ತು

ಹಾಗೂ

ಯಾಕ ಅಳತಾನಂತ ಎಲ್ಲಾರು ಕೇಳ್ಯಾರ
ಕಾಯದ ಹಾಲ ಕೆನಿ ಬೇಡಿ । ಅತ್ತರ
ನಾ ಎಲ್ಲಿ ತರಲೇ ಹಡೆದವ್ವ

ಹಾಲು ಕಾಯ್ದಾಗಲೇ ಕೆನೆಗಟ್ಟುವುದು, ಆದರೆ ಕಾಯದ ಹಾಲಿನ ಕೆನೆ ಬೇಡಿ ಹಟ ಹಿಡಿಯುವುದು ಮಕ್ಕಳ ಸಹಜ ಸ್ವಭಾವ. 'ಅದನ್ನು ಎಲ್ಲಿಂದ ತರಲಿ' ಎನ್ನುವಲ್ಲಿ ತಾಯಿಯ ಅಸಹಾಯಕತೆ ವ್ಯಕ್ತವಾಗಿರುವುದೂ ಅಷ್ಟೇ ಸಹಜವಾಗಿದೆ. ಹೀಗೆ ರಂಪ ಹಿಡಿದ ಮಗನನ್ನು ಎರೆದು ಮಲಗಿಸಬೇಕೆನ್ನುತ್ತಾಳೆ :

ಕಿರಿಕಿರಿ ಕಂದಗ ಬೆರಕೀಗ ನೀರಿಲ್ಲ
ಸರಕಾರದ ಅಗಸಿ ತೆರೆದಿಲ್ಲ । ನನ ಕಂದ
ಅಗಸಿ ಬಾಗಿಲು ತೆರೆದಾವೊ

ಎನ್ನುವ ತಾಯಿಯ ಪ್ರೀತಿ ಹೊನಲಾಗಿ ಹರಿಯುತ್ತದೆ.

ಅತ್ತರ ಅಳಲೆವ್ವ ಈ ಕೂಸು ನನಗಿರಲಿ
ಕೆಟ್ಟರ ಕೆಡಲಿ ಮನಿಗೆಲಸ । ಕಂದನಂಥ
ಮಕ್ಕಳಿರಲೆವ್ವ ಮನಿತುಂಬ

ಮೊದಲಿನ ಜನ ಎಣಿಸಿ ಹಡೆಯುವವರಲ್ಲ, ಎಣಿಸಿ ಬಡಿಯುವವರಲ್ಲ. ಹಡೆವ ಕೈಲಿ ಹತ್ತು ಹಡೆದು, ರೊಟ್ಟಿ ಬಡಿವ ಕೈಲಿ ಹತ್ತು ಹೆಚ್ಚಿಗೆ ಬಡಿದು ಬಿಡುವವರು. ಮಗು ಆಡಿದರೂ ಆಯ್ತು, ಕಾಡಿದರೂ ಆಯ್ತು, ಅಳುವ ಕಂದನೇ ಅವಳಿಗಿಷ್ಟ. ಮನೆಕೆಲಸ ಕೆಟ್ಟರೂ ಚಿಂತೆ ಇಲ್ಲ, ಮಗು ಮಲಗಿದಾಗ ಕೆಲಸ ಮಾಡಬಹುದಷ್ಟೆ. ಮಕ್ಕಳನ್ನು ಅಳಿಸುತ್ತ ಏನೂ ಮಾಡಬಾರದು. ಅವು ಸದಾಕಾಲ ನಗುತ್ತ ಕೆಲೆಯುತ್ತ ಸಂತೋಷವಾಗಿರಬೇಕೆಂಬುದೇ ತಾಯ ಆಶಯ. ತಾನು ನಿರಕ್ಷರಿಯಾದರೂ ತನ್ನ ಮಗ ಓದು ಬರಹ ಕಲಿಯಬೇಕೆಂಬ ಆಕಾಂಕ್ಷೆ ತಾಯಿಯದು. ಅಂತೆಯೇ ಅವನು ಹಾಲು ಕುಡಿದು, ಬೇಗ ಬೇಗ ದೊಡ್ಡವನಾಗಿ ತನ್ನ ಬಾಳಿನಾಧಾರವಾಗಬೇಕು. ಅಂಥ ಮಗುವನ್ನು ರೂಪಿಸುವ ತಾಯಿ,

ಬಾರಯ್ಯ ಬಾ ನನ್ನ ಬಾಲ ಚಕ್ರವರ್ತಿ
ನಾಲಿಗೆ ಮ್ಯಾಲೆ ಸರಸ್ವತಿ । ಇರುವಂಥ
ನನ ಬಾಲ ಹಾಲ ಕುಡಿ ಬಾರೋ.

ಎಂದು ಕರೆಕರೆದು ಮುದ್ದಿಸಿ, ಹಾಲು ಕುಡಿಸುತ್ತಾಳೆ. ಹೊತ್ತು ಹೊತ್ತು ಸಾಕಿ ಸಲಹಿದ ಕಂದಮ್ಮನೇ ಆಕೆಯ ಬಾಳಿನ ಸರ್ವಸ್ವ. ತನ್ನ ಮುದ್ದುಮಗನನ್ನು ಮುದ್ದಾಡಿದಷ್ಟು ಆಕೆಗೆ ದಣಿವಿಲ್ಲ, ಕೊಂಡಾಡಿದಷ್ಟು ತೃಪ್ತಿಯಿಲ್ಲ. 'ಚಿನ್ನಾ', 'ರನ್ನಾ' ಎಂದು ಮನಸಾರೆ ಮುದ್ದಿಸುತ್ತಾಳೆ. ಮಗು 'ಅವ್ವಾ' ಎಂದರಾಯಿತು. ತಾಯಿಯ ಪಾಲಿಗೆ ಸ್ವರ್ಗ ಮೂರೇ ಗೇಣು. ಆದರೆ ಪಾಶ್ಚಾತ್ಯ ಸಂಸ್ಕೃತಿಯ ಪ್ರಬಲ ಪ್ರಭಾವಕ್ಕೊಳಗಾಗಿರುವ ಇಂದಿನ ದಂಪತಿಗಳಿಗೆ ತಮ್ಮ ಮಕ್ಕಳು 'ಮಮ್ಮಿ' 'ಡ್ಯಾಡಿ' ಎಂದು ಕರೆದರೆ ತುಂಬ ಖುಷಿ. Flying Kiss ಕೊಟ್ಟರಂತೂ ಹೆಚ್ಚಿನ ಹೆಮ್ಮೆ. ಎತ್ತಿಕೊಂಡರೆ ಬಟ್ಟೆ ಹೊಲಸಾದೀತೆಂದೂ ಮುದ್ದಿಸಿದರೆ ಸೋಂಕು ತಗಲುತ್ತಿತೆಂದೂ ಭಾವಿಸುವ ಇಂದಿನವರಿಗೆ ಮಕ್ಕಳನ್ನು ಪ್ರೀತಿಸುವುದೂ ಒಂದು ಔಪಚಾರಿಕತೆಯಾಗಿಬಿಟ್ಟಿದೆ. ತಾಯಿ ತಂದೆಗಳ ಸಹಜ ಪ್ರೀತಿಯಿಂದ ವಂಚಿತರಾಗಿ ಇಂಥ ಕೃತ್ರಿಮ ವಾತಾವರಣದಲ್ಲಿ ಬೆಳೆದ ಮಕ್ಕಳು ನಮ್ಮ ಸಂಸ್ಕೃತಿಯಿಂದ ದೂರ ಸರಿಯುತ್ತಿರುವುದು ವ್ಯಸನಕರ. ಆದರೆ ಜನಪದ ತಾಯಿ, ಮಾತು ಬರದ ಮಗುವಿನೊಂದಿಗೆ ಮಗುವಾಗಿ ಮಾತನಾಡುತ್ತಾಳೆ. ಮುದ್ದುಮಾತಿನ ಲಲ್ಲೆಗರೆಯುತ್ತಾಳೆ. ಸಹಜ ಪ್ರೀತಿಯ ಹೊನಲನ್ನೇ ಹರಿಸುತ್ತಾಳೆ.

ಅಳದಿರೋ ಅಣ್ಣಯ್ಯ ನಿನಗೊಂದು ಹೇಳುವೆ
ಅಮರಾವತಿಯೆಂಬ ಎಳೆದೋಟ । ದೊಳಗಿನ
ಅರಗಿಳಿಯ ತಂದುಕೊಡುವೆನು

ಎಂದು ರಂಜನೀಯ ಕಥೆಗಳನ್ನು ಹೇಳಿ, ಲಾಲಿ ಹಾಡಿ ಬಾಲನನ್ನು ರಮಿಸುತ್ತಾಳೆ. ತನ್ನ ಮಗ ಮನೆಯ ಮಂದಾರ. ಅಂತೆಯೇ ಮಗನನ್ನು ಒಮ್ಮೆ 'ಬಂಗಾರ' ಎಂದು, ಒಮ್ಮೆ 'ಸಿಂಗಾರ' ಎಂದು, ಮತ್ತೊಮ್ಮೆ 'ಬಂಗಾರದ ಗಿಣಿ' ಎಂದು ತರತರದ ಹೆಸರಿನಲ್ಲಿ ಕರೆಕರೆದು ಹಾಡಿ ಮಲಗಿಸುತ್ತಾಳೆ. ಅದು ಮಲಗಿ ನಿದ್ರೆ ಮಾಡತೊಡಗಿದರೂ ಅವಳ ಹಾಡು ಹಾಗೆಯೇ ಮುಂದುವರಿಯುತ್ತದೆ.

ಜನಪದ ಜೋಗುಳಪದಗಳಿಗೆ ತನ್ನದೇ ಆದ ಆಕರ್ಷಣೆ ಇದೆ. ತಾಯಿ ಹಾರೈಸುವ ಜೋಗುಳದ ಹರಕೆ ಕಂದನ ಪಾಲಿಗೆ ಅಮೃತ ಸಿಂಚನದಂತೆ.

ನನ್ನಯ್ಯ ನೀ ಬಾಳು ಇನ್ನೂ ಸಾವಿರ ಕಾಲ
ಹೊನ್ನೆಯ ಗಿಡದ ಗರಿಕೆಯ । ಬೇರ್ಹಂಗ
ಮೊಮ್ಮಕ್ಕಳೆತ್ತಿ ಸುಖಿಯಾಗು

ಎಂದು ಹಾಡಿ ಹರಸುತ್ತಾಳೆ. ತೊಟ್ಟಿಲಲ್ಲಿದ್ದಾಗಲೇ ಮಗುವಿಗೆ ಒಳ್ಳೆಯ ಸಂಸ್ಕಾರವನ್ನು ನೀಡುತ್ತಾಳೆ.

ಆಚಾರಕ್ಕರಸಾಗು ನೀತಿಗೆ ಪ್ರಭುವಾಗು
ಮಾತಿನಲಿ ಚೂಡಾಮಣಿಯಾಗು । ನನ ಕಂದ
ಜ್ಯೋತಿಯೇ ಆಗು ಜಗಕೆಲ್ಲ

ಸದಾಚಾರಕ್ಕೆ ಅರಸನಾಗಿ, ನೀತಿಗೆ ಪ್ರಭುವಾಗಿ, ಚನ್ನ ಮನೆಗಷ್ಟೇ ಅಲ್ಲ, ಜಗತ್ತಿಗೇ ಜ್ಯೋತಿ ಸ್ವರೂಪನಾಗುವಂತೆ ಹರಸುವಲ್ಲಿ ಜನಪದ ತಾಯಿಯ ಉದಾತ್ತ ದೃಷ್ಟಿಯನ್ನು, ಸಾಮಾಜಿಕ ಕಾಳಜಿ - ಕಳಕಳಿಗಳನ್ನು ಕಾಣುತ್ತೇವೆ. ಕಣ್ಣೆದುರು ಇಂಥ ಮಗನಿದ್ದರಾಯ್ತು, ಮಹಾರಾಯರಂಥ ಪತಿದೇವರ ನೆನಪು ಕೂಡ ಅವಳಿಗಾಗದು.

ತೋಳುದ್ದ ತಲೆದಿಂಬು ಮಾರುದ್ದ ಹಾಸೀಗೆ
ಮಾಣಿಕದಂಥ ಮಗ ಮುಂದ । ಮಲಗಿದರ
ಮಾರಾಯರ ಗೊಡವಿ ನನಗಿಲ್ಲ.

ಮಗುವಿನ ಹಾಸಿಗೆ ಮಾರುದ್ದ, ಇಟ್ಟ ತಲೆದಿಂಬು ತೋಳುದ್ದ. ಮಲಗಿದ ಮಗು ಅಸಲು ಮಾಣಿಕ್ಯ. ಅಂಥ ಮಗ ಕಣ್ಣೆದುರು ಮಲಗಿದಾಗ ಮಾರಾಯರ ಗೊಡವೆ ಬೇಕಾದರೂ ಏಕೆ?

ಕೂಸು ಅಂಬೆಗಾಲಿಕ್ಕುವುದನ್ನೂ ಬಿಟ್ಟು, ತಪ್ಪು ಹೆಜ್ಜೆಯಿಡುತ್ತ ಮನೆತುಂಬ ಓಡಾಡತೊಡಗಿದಾಗ ಅವಳ ಸಂಭ್ರಮ ಹೆಚ್ಚಿ, ಕಲ್ಪನೆ ಗರಿಗೆದರುತ್ತದೆ.

ಕೂಸು ಇದ್ದ ಮನಿಗೆ ಬೀಸಣಿಗಿ ಯಾತಕ
ಕೂಸು ಕಂದಯ್ಯ ಒಳ ಹೊರಗ । ಆಡಿದರ
ಬೀಸಣಿಗಿ ಗಾಳಿ ಸುಳಿದಾವ

ಅದೇ ಆಗ ಕಾಲು ಬಂದು ಓಡಾಡತೊಡಗಿದ ಕೂಸು, ಹಾಲ್‌ಗಡಗ ಹಾಕಿಕೊಂಡು, ಗೆಜ್ಜೆ ಕಟ್ಟಿಕೊಂಡು ಹೊರಗೆ ಹೋಗುತ್ತಲೆ ಒಳಗಿನ ಗಾಳಿ ಹೊರಗೆ, ಒಳಗೆ ಬರುತ್ತಲೆ ಹೊರಗಿನ ಶುದ್ಧ ತಾಜಾ ಗಾಳಿ ಒಳಗೆ ಬರುತ್ತದೆಂದಾಗ ಬೀಸಣಿಗೆಯ ಅಗತ್ಯವಾದರೂ ಏನಿದೆ?

ಹೊಲಮನೆ ಕೆಲಸಕ್ಕೆ ಹೋಗುವ ತಾಯಿ, ಬೆಳೆಯುತ್ತಿರುವ ತನ್ನ ಮಗುವನ್ನು ಮನೆಯಲ್ಲೇ ಬಿಟ್ಟು ಹೋಗ ತೊಡಗುತ್ತಾಳೆ. ಹಸುಗೂಸು ಇದ್ದಂದಿನಿಂದ ತಾಯ ತೊಡೆ, ಎದೆ, ಬಗಲುಗಳಲ್ಲಿ ಬೆಳೆದ ಮಗು, ಓಡಾಡತೊಡಗಿದರೂ ತಾಯಿಯಿಂದ ಸ್ವಲ್ಪ ದೂರವಾದರೂ ಆಕಳನ್ನು ಹಿಂಬಾಲಿಸುವ ಕರುವಿನಂತೆ ಅವಳ ಹಿಂದೆಯೇ ಸುತ್ತುತ್ತಿರುತ್ತದೆ. ತಾನೂ ಹೊಲಕ್ಕೆ ಬರುವುದಾಗಿ ಹಟ ಹಿಡಿಯುತ್ತದೆ. ಆದರೆ ತಾಯಿ ಮಗುವನ್ನು ಕರೆದೊಯ್ಯುವಂತಿಲ್ಲ.

ಒಂದೊಂದು ಹಂತದಲ್ಲಿ ತನ್ನ ಮಗುವಿನ ಬೆಳವಣಿಗೆಯ ಒಂದೊಂದು ರೀತಿಯನ್ನೂ ಕಂಡಾಗ ತಾಯಿಗೆ ಅಚ್ಚರಿಯೆನಿಸುತ್ತದೆ. ಮೊದಮೊದಲು ಸಮೀಪದ ಹನುಮಂತದೇವರ ಗುಡಿಗೆ ಮಗನನ್ನು ಕರೆದೊಯ್ಯುವ ತಾಯಿ,

ಬಾಲ ಹನುಮನ ಮುಂದ ಬಾಗಿ ಚೆಂಡಾಡ್ಯಾನ
ಬಾವುಲಿಗಿವಿಯ ನನ್ನ ಬಾಲ । ಕಂಡಾರ
ಬಾಲೇರು ಬಸಿರ ಬಯಸ್ಯಾರು

ಎನ್ನುತ್ತಾಳೆ. ಬಾವುಲಿ ಹಾಕಿಕೊಂಡ ಮಗನ ಚೆಂಡಾಟದ ಚೆಂದವನ್ನು ಕಂಡು ಹದಿಹರಯದ ಬಾಲೆಯರು ಕೂಡ ಬಸಿರು ಬಯಸ್ಯಾರೆಂದು ಹೇಳಿದ್ದು ಅತ್ಯಂತ ಧ್ವನಿಪೂರ್ಣ.

ಗುಜ್ಜಿ ನನ್ನ ಕಂದಯ್ಯನ ಗೆಜ್ಜಿನಯ ಸಪ್ಪಳಕ
ನಿಬ್ಬಣದ ಎತ್ತು ಬೆದರ್‍ಯಾವ । ಬೆಟ್ಟಸೇರಿ
ಮದ್ಯಾಣದ ಮೇವು ಮರತಾವ

ಮಗನ ಅಂದ ಚೆಂದಗಳನ್ನು ಎಷ್ಟು ವರ್ಣಿಸಿದರೂ ಅವಳಿಗೆ ತೃಪ್ತಿಯಿಲ್ಲ. ಮಗು ಗೆಜ್ಜೆ ಕಟ್ಟಿಕೊಂಡು ಆನಂದದಿಂದ ಓಡಾಡತೊಡಗಿದಾಗ ಮನೆಮುಂದೆ ಸಾಗುವ ನಿಬ್ಬಣದ ಬಂಡಿಯ ಎತ್ತು ಬೆದರುವುದು, ಬೆದರಿ ಬೆಟ್ಟ ಸೇರುವುದು, ಮಧ್ಯಾಹ್ನದ ಮೇವು ಮರೆವುದಂತೂ ತುಂಬ ಅದ್ಭುತ.

ಹಸರಂಗಿ ತೊಡಸೇನಿ ಹಾಲ್ಗಡಗ ಇಡಸೇನಿ
ಹಳ್ಳಕ ನೀನು ಬರಬ್ಯಾಡ । ಕಂದಯ್ಯ
ಬೆಳ್ಳಕ್ಕಿ ಹಿಂಡು ಬೆದರ್‍ಯಾವ

ಹಸರಂಗಿ ಹಾಲ್ಗಡಗಗಳಿಂದ ಸಿಂಗಾರಗೊಂಡ ಮಗು ತಾಯೊಡನೆ ಹಳ್ಳಕ್ಕೂ ಬೆನ್ನು ಹತ್ತುತ್ತದೆ. ಹಳ್ಳದ ದಂಡೆಯಲ್ಲಿದ್ದ ಬೆಳಕ್ಕಿ ಹಿಂಡು ತನ್ನ ಮಗನನ್ನು ಕಂಡು ಬೆದರಬಾರದೆಂಬುದೇ ತಾಯಿಯ ಭಾವನೆ.

ಹೀಗೆ ಜನಪದ ಸಾಹಿತ್ಯ ಜನಜೀವನದ ಅನುಭವಗಳ ಕನ್ನಡಿಯಾಗಿ ನಿಂತಿದೆ. ತನ್ನ ನಿಕಟ ಪರಿಸರದಿಂದ ಪಡೆದ ಅನುಭವವನ್ನು ಗ್ರಾಮೀಣ ಹೆಣ್ಣಗಳು ಹದವಾಗಿ ಬಳಸಿಕೊಂಡ ಬಗೆ, ಸಂದರ್ಭೋಚಿತವಾಗಿ ಬರುವ ಉಪಮೆ - ರೂಪಕಗಳು ಓದಿದವರಿಗೂ ಮೂಗಿನ ಮೇಲೆ ಬೆರಳಿಡುವಂತೆ ಮಾಡುತ್ತವೆ. ಅಂತೆಯೇ ಗರತಿಯ ಪ್ರತಿಭಾದೃಷ್ಟಿ ಬಿದ್ದ ಮಣ್ಣು ಕೂಡ ಚಿನ್ನವಾಗಿದೆ. ಜನಪದ ಬದುಕಿನ ಮುಗ್ಧತೆಯೇ ಈ ತ್ರಿಪದಿಗಳಲ್ಲಿ ಕೆನೆಗಟ್ಟಿ ನಿಂತಿದ್ದು, ಜನಪದರ ಬದುಕಿನಷ್ಟೇ ಅವು ವಿಶಾಲವೂ ವಿಶಿಷ್ಟವೂ ವೈವಿಧ್ಯಪೂರ್ಣವೂ ಆಗಿವೆ. ಹೀಗೆ ವಸ್ತು, ಅನುಭವ, ಅಭಿವ್ಯಕ್ತಿಗಳಲ್ಲಿ ತೋರಿದ ಕಲಾವಂತಿಕೆಯಿಂದ ಮಕ್ಕಳನ್ನು ಕುರಿತ ಹಾಡುಗಳಿಗೆ ತನ್ನದೇ ಆದ ಮೆರುಗು ಬಂದಿದೆ; ವಿಶೇಷ ಆಕರ್ಷಣೆ ಒದಗಿದೆ. ಒಟ್ಟಿನಲ್ಲಿ ಜನಪದ ಸಾಹಿತ್ಯದಲ್ಲಿ ಚಿತ್ರಣಗೊಂಡ ಮಕ್ಕಳ ಬದುಕಿನ ವಿವಿಧ ಹಂತಗಳ ಅನುಭವ ರೋಮಾಂಚಕಾರಿ, ಅದೊಂದು ಅದ್ಭುತ ಅಧ್ಯಾಯ.

ಪ್ರವಾಸ ಸಾಹಿತ್ಯ

ಶ್ರೀ ಎಚ್.ಎಲ್. ನಾಗೇಗೌಡ

ಇದ್ದೆಡೆಯೇ ಇದ್ದುಬಿಡುವುದು ಮನುಷ್ಯನ ಮನಸ್ಸಿಗೆ ಹಿಡಿಸುವುದಿಲ್ಲ. ತನ್ನ ಊರು ಕೇರಿಗಳನ್ನು ನೋಡಿದ ಮೇಲೆ, ತನ್ನ ಸುತ್ತಮುತ್ತ ಏನಿದೆ ಎಂದು ನೋಡಲು ಆತ ಆಸೆಪಡುತ್ತಾನೆ. ಆ ಮೇಲೆ ತನ್ನ ದೇಶದಲ್ಲಿ ಏನಿದೆ ಎಂದು ನೋಡುವ ಆಸಕ್ತಿ. ದೇಶವನ್ನೆಲ್ಲ ನೋಡಿದ ಮೇಲೆ ವಿದೇಶಗಳನ್ನು ನೋಡುವ ಆತುರ ಇರುತ್ತದೆ. ಹೀಗೆ ಮನುಷ್ಯ ಅವಕಾಶ ಸಿಕ್ಕಿದರೆ ನೋಡಬಹುದಾದುದನ್ನೆಲ್ಲ ನೋಡಲು ಆಸೆಪಡುತ್ತಾನೆ.

ಸರಳ ಜೀವನದ ಹಳ್ಳಿಯವನೂ ತನ್ನ ನಿತ್ಯಜೀವನದ ಬೇಜಾರಿನಿಂದ ಬಿಡುವು ಪಡೆಯಲು ಪ್ರಯತ್ನಪಡುತ್ತಾನೆ. ಆತ ಅಕ್ಕಪಕ್ಕದ ಮನೆಗೋ, ನೆಂಟರಿಷ್ಟರ ಬಳಿಗೋ, ಜಾತ್ರೆ ಪರಿಷೆ ರಥೋತ್ಸವಗಳಿಗೋ, ಮದುವೆ ಮುಂಜಿಗಳಿಗೋ, ಹಬ್ಬ ಹರಿದಿನಗಳಿಗೋ ಹೋಗಿ ಬಂದು ತನ್ನ ಬೇಜಾರನ್ನು ಕಳೆದುಕೊಳ್ಳಲು ಯತ್ನಿಸುತ್ತಾನೆ. ಹೀಗೆ, ಅಡ್ಡಾಡುವುದು, ಹೊಸ ಹೊಸದನ್ನು ನೋಡುವುದು, ಹೊಸ ತಿಳುವಳಿಕೆಯನ್ನು ಪಡೆಯುವುದು - ಇವು ಮನುಷ್ಯನಿಗೆ ಬಂದ ಹುಟ್ಟುಗುಣಗಳು.

ಪ್ರವಾಸ ಮಾಡುವ ಚಟ ಇಂದಿನದಲ್ಲ; ಬಹಳ ಹಿಂದಿನದು. ರಾಮಾಯಣ, ಮಹಾಭಾರತಗಳು ಒಂದು ದೃಷ್ಟಿಯಲ್ಲಿ ಈ ಪ್ರವಾಸ ಚಟದ ಪರಿಣಾಮಗಳೆಂದು ಹೇಳಿದರೆ ತಪ್ಪಾಗಲಾರದು. ರಾಮನು ಹದಿನಾಲ್ಕು ವರ್ಷಗಳ ವನವಾಸ ಮಾಡಲು ಒಪ್ಪಿಕೊಂಡದ್ದು, ಪಿತೃವಾಕ್ಯ ಪರಿಪಾಲನೆಗಾದರೂ, ಕಾಡಿನಲ್ಲಿ ಅಲೆದು ದೇಶದ ವಿವಿಧ ಭಾಗಗಳನ್ನು ನೋಡುವ ಅಂತರಿಕ ಆಸಕ್ತಿ ಆತನಿಗೆ ಇರಲಿಲ್ಲವೆಂದು ಹೇಳಲಿಕ್ಕಾಗುವುದಿಲ್ಲ. ಸೀತೆ ರಾಮನೊಡನೆ ಹೊರಟದ್ದರ ಕಾರಣಗಳಲ್ಲಿ ಪ್ರವಾಸ

ಮಾಡುವ ಹಿರಿಯಾಸೆಯೂ ಒಂದಾಗಿರಬಾರದೇಕೆ? ಆಮೇಲೆ ಸೀತೆ ಗರ್ಭಿಣಿಯಾದಾಗ ಕಾಡಿನಲ್ಲಿ ಋಷಿಪತ್ನಿಯರ ಬಳಿಯಲ್ಲಿರಬೇಕೆಂದು ಆಸೆಪಟ್ಟದ್ದು ಮನುಷ್ಯನ ಪ್ರವಾಸದ ಗುಣದ ಆಂತರಿಕ ಇಚ್ಛೆಯ ಹಾಗೂ ಚೊಚ್ಚಲು ಬಸಿರಿನ ಬಯಕೆಯ ಬಹಿರಂಗ ಪ್ರಕಟಣೆಯೆಂಬುದು ಸ್ಪಷ್ಟ.

ಪಾಂಡವರು ಹನ್ನೆರಡು ವರ್ಷಗಳ ವನವಾಸವನ್ನು, ಒಂದು ವರ್ಷದ ಅಜ್ಞಾತವಾಸವನ್ನು ಒಂದು ರೀತಿಯ ಸಂತೋಷದಿಂದಲೇ ಸ್ವೀಕರಿಸಿದರೆಂದು ಹೇಳಬಹುದು. ಅರ್ಜುನನ ತೀರ್ಥಯಾತ್ರೆಯಂತೂ ಅಪ್ಪಟ ಪ್ರವಾಸವೆನ್ನುವುದರಲ್ಲಿ ಸಂದೇಹವಿಲ್ಲ. ಆತನ ಪ್ರವಾಸದ ಪರಿಣಾಮವಾಗಿ ಎಂತೆಂಥ ಪ್ರಸಂಗಗಳು ಜರುಗಿದುವು ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ.

ಇದ್ದೆಡೆಯೇ ಇದ್ದರೆ ಮನುಷ್ಯ ಕೆಡುತ್ತಾನೆ ಎಂಬುದಕ್ಕೆ ಹಳ್ಳಿಯ ಕಡೆ ಒಂದು ಗಾದೆ ಇದೆ. 'ಗಂಡಸು ಕೂತು ಕೆಟ್ಟ, ಹೆಂಗಸು ತಿರುಗಿ ಕೆಟ್ಟಳು' ಎಂದು. ಮನುಷ್ಯನಿಗೆ ಬುದ್ಧಿ, ವಿವೇಕ, ಅನುಭವ - ಇವೆಲ್ಲ ಬರುವುದು ಹತ್ತಾರು ಜನರ ಸಂಪರ್ಕ, ನಾಲ್ಕಾರು ಕಡೆ ತಿರುಗುವುದರಿಂದ. ಅದಕ್ಕೋಸ್ಕರವೇ ಹೇಳುವುದು ಮೀಸೆ ಬರದವನೂ ದೇಶ ನೋಡದವನೂ ಒಂದೇ ಎಂದು. ಒಂದು ಪ್ರವಾಸ ಹತ್ತು ಗ್ರಂಥಗಳ ಪಠಣೆಗೆ ಸಮಾನ. ತನಗಿಂತ ಭಿನ್ನರಾದ, ತನ್ನ ಜಾತಿ ಮತಗಳಿಂದ ಬೇರೆಯಾದ ತನ್ನ ಆಚಾರ ವ್ಯವಹಾರಗಳಿಂದ ತೀರ ವಿರುದ್ಧವಾದ ಜನರನ್ನು ನೋಡಿದಾಗ, ಮನುಷ್ಯ ಅವರೊಡನೆ ವ್ಯವಹರಿಸಿದಾಗ ತನ್ನ ಓರೆ ಕೋರೆಗಳನ್ನು ಅನಿವಾರ್ಯವಾಗಿ ತಿದ್ದಿಕೊಳ್ಳಲೇಬೇಕು. ಇದಕ್ಕೇ ಹೇಳುವುದು 'ಕೋಶ (ಅಮರ ಕೋಶ) ಓದುವುದಕ್ಕಿಂತ ದೇಶ ನೋಡುವುದು ಮೇಲು' ಎಂದು.

ಥಾಮಸ್ ಕಾರಿಯಟ್ ಎಂಬ ಪ್ರವಾಸಿ ಹೇಳಿದಂತೆ, ಈ ಪ್ರಪಂಚದ ಆನಂದಗಳನ್ನೆಲ್ಲಾ ಪ್ರವಾಸ ಬಹು ಅಪ್ಯಾಯಮಾನವಾದದ್ದು ಮತ್ತು ಅತ್ಯಂತ ಆನಂದದಾಯಕವಾದದ್ದು. ಸುಂದರ ನಗರಗಳನ್ನೂ, ರಾಜಮಹಾರಾಜರುಗಳ ಆಸ್ಥಾನಗಳನ್ನೂ, ಅಭೇದ್ಯ ಕೋಟೆ ಕೊತ್ತಲಗಳನ್ನೂ, ಮುಗಿಲುಮಟ್ಟುವ ಶಿಖರಗಳನ್ನೂ, ಅವನ್ನು ಒದಗಿಸುವ ಫಲವತ್ತಾದ ಪ್ರದೇಶಗಳನ್ನೂ, ಒಟ್ಟಿನಲ್ಲಿ ಮಾನವನ ಹೃದಯ ಬೇಡುವುದನ್ನೆಲ್ಲ ನೀಡುವ ಪ್ರವಾಸಕ್ಕಿಂತ ಹೆಚ್ಚಿನದು ಯಾವುದಿದೆ?

ಈಗಿನ ಕಾಲದಲ್ಲಿ ಪ್ರವಾಸ ಸುಲಭ ಹಾಗೂ ಕ್ಷಿಪ್ರ. ಇಡೀ ಪ್ರಪಂಚವನ್ನು ಕೆಲವೇ ಗಂಟೆಗಳಲ್ಲಿ ಸುತ್ತಿಬರಬಹುದು. ಬಾಹ್ಯಾಕಾಶದ ಪ್ರವಾಸವೂ ಸಾಮಾನ್ಯವಾಗಿಬಿಟ್ಟಿದೆ. ಆದರೆ ಇಂಥ ಕ್ಷಿಪ್ರಪ್ರವಾಸಗಳಿಂದ ಹೆಚ್ಚು ಪ್ರಯೋಜನವಾಗಲಾರದು. ಆಳವಾಗಿ ಅಭ್ಯಾಸ ಮಾಡುವುದಕ್ಕೆ ಇಂಥ ಪ್ರವಾಸಗಳಿಂದ ಉಪಯೋಗವೇ ಇಲ್ಲ. ಹತ್ತು ಸಲ ವಿಮಾನದಲ್ಲಿ ಇಂಗ್ಲೇಂಡಿಗೋ, ಅಮೇರಿಕಾಕ್ಕೋ ಹೋಗಿ ಬಂದರೂ ಹೇಳುವುದು ಒಂದೇ ಕಥೆ. ಏಕೆಂದರೆ, ನೋಡುವುದು ಕೇಳುವುದು ಒಂದೇ. ಕೆಳಗಡೆ ಸಮುದ್ರ ಕಾಣುವುದಿಲ್ಲ, ಮೇಲೆ ಆಕಾಶ ಕಾಣುವುದಿಲ್ಲ.

ಆದರೆ ಹಿಂದೆ ಪ್ರವಾಸ ಬಹಳ ಕಷ್ಟವಾಗಿತ್ತು. ಕಾಲುನಡಗೆಯಲ್ಲಿ, ಕುದುರೆ, ಒಂಟೆಗಳ ಮೇಲೆ, ಹೇರೆತ್ತುಗಳ ಸಂಗಡ ನಿಧಾನವಾಗಿ ಪ್ರವಾಸ ಮಾಡಬೇಕಾಗಿತ್ತು. ಆಗ ನೋಡಬೇಕಾದದ್ದನ್ನು ನೋಡುತ್ತ, ಜನರ ನಡೆನುಡಿಗಳನ್ನು ಆಚಾರ ವ್ಯವಹಾರಗಳನ್ನು ಸೂಕ್ಷ್ಮವಾಗಿ ಪರಿಶೀಲಿಸುತ್ತ ಸ್ಥಳದ ಇತಿಹಾಸಗಳನ್ನು ಕೇಳುವ ಅವಕಾಶ ದೊರೆಯುತ್ತಿತ್ತು. ಹೀಗೆ ಕಂಡು ಕೇಳಿದ್ದನ್ನು ಬರೆದಿಡುವ ಮನಸ್ಸಿತ್ತು. ಮನಸ್ಸಷ್ಟೇ ಅಲ್ಲ, ಅವಕಾಶವೂ ಇತ್ತು. ಅಗಾಧವಾದ ಸಮುದ್ರಗಳನ್ನು ದಾಟುವಾಗ, ಬೆಟ್ಟಗುಡ್ಡಗಳನ್ನು ಏರಿಳಿಯುವಾಗ, ಹೊಸ ನಗರಗಳು ಮತ್ತು ಪಟ್ಟಣಗಳನ್ನೂ, ಊರು ಕೇರಿಗಳನ್ನೂ ಕಂಡಾಗ, ತಮಗಿಂತ

ಭಿನ್ನವಾದ ಜನರ ನಡೆನುಡಿ ಆಚಾರ ವ್ಯವಹಾರಗಳನ್ನು ನೋಡಿದಾಗ ಪ್ರವಾಸಿಗಳು ತಮಗಾದ ಅನುಭವಗಳನ್ನು ಬರೆದಿಟ್ಟರು. ಇದೇ ಪ್ರವಾಸ ಸಾಹಿತ್ಯವಾಗಿದೆ.

ಪ್ರವಾಸ ಸಾಹಿತ್ಯದಲ್ಲಿ ಮೂರು ತರ ಉಂಟು : ಒಂದು, ಪ್ರವಾಸಿಗಳು ತಮ್ಮ ಅನುಭವಗಳನ್ನು, ತಾವು ಕಂಡುಂಡುದನ್ನು ಸರಳವಾಗಿ ನೇರವಾಗಿ ಹೇಳಿರುವುದು. ಇವು ಬಹಳ ಕುತೂಹಲಕಾರಿಯಾಗಿಯೂ, ಉಪಯುಕ್ತವಾಗಿಯೂ ಇರುವ ಪ್ರವಾಸ ಸಾಹಿತ್ಯವಾಗಿದೆ.

ಎರಡನೆಯದು, ಬಹು ಮೇಧಾವಿಗಳಾದಂಥ ಪ್ರವಾಸಿಗಳು ತಾವು ಕಂಡುದನ್ನು ತಮ್ಮದೇ ಆದ ರೀತಿಯಲ್ಲಿ ಬಿತ್ತರಿಸಿರುವುದು. ಇಂಥ ಕಥನಗಳಲ್ಲಿ ಕಲ್ಪನೆಗೆ ಅಷ್ಟಿಷ್ಟು ಅವಕಾಶವುಂಟು. ಕಥನಕರ್ತ ತನ್ನದೇ ಆದ ರೀತಿಯಲ್ಲಿ ಅಷ್ಟಿಷ್ಟು ಉಪ್ಪು ಕಾರ ಸೇರಿಸಿ ಓದುಗರಿಗೆ ರುಚಿಯಾಗುವಂತೆ ಮಾಡುತ್ತಾನೆ. ಇಂಥ ಪ್ರವಾಸ ಸಾಹಿತ್ಯ ಓದುವುದಕ್ಕೆ ರುಚಿಯಾದರೂ, ಕಾವ್ಯದ ಗುಣಗಳನ್ನು ಹೊರಪಡಿಸುವುದಾದರೂ ವಾಸ್ತವಾಂಶಗಳಿಂದ ಬೇರೆಯಾಗುವ ಸಂಭವವುಂಟು. ಅಂತೂ ಇದೂ ಉತ್ತಮ ಪ್ರವಾಸ ಸಾಹಿತ್ಯವೆ.

ಮೂರನೆಯದು, ತರಬೇತಾದ ವಿಜ್ಞಾನಿಗಳು ತಮ್ಮ ಪ್ರವಾಸಗಳನ್ನು, ತಾವು ಕಂಡುದನ್ನು ಹೇಳಿರುವುದು. ಇದು ನವೀನ ಕಾಲಕ್ಕೆ ಸೇರಿದಂಥದು. ಇಂಥ ಪ್ರವಾಸಗಳಲ್ಲಿ ಸಾಹಿತ್ಯದ ಸೊಗಸಾಗಲೀ ಅಥವಾ ಶಕ್ತಿಯಾಗಲೀ ಇರಬಹುದು ಅಥವಾ ಇಲ್ಲದಿರಬಹುದು.

ಪ್ರಪಂಚದ ನಾನಾ ಭಾಗಗಳನ್ನು ಕಂಡುಹಿಡಿದ ಮೇಲೆ ಪ್ರವಾಸದ ರೋಮಾಂಚನ ಹೋಗುತ್ತದೆ. ಪ್ರವಾಸಿ ಹೋಗಿ ಅವನ ಬದಲು ವಿಹಾರಿ ಮತ್ತು ತಾಂತ್ರಿಕರು ಬಂದಿದ್ದಾರೆ. ಒಂಟೆ ಕುದುರೆಗಳಿಗೆ ಬದಲು ವಿಮಾನಗಳಲ್ಲಿ ಪ್ರಯಾಣ. ಅಪರಿಚಿತವಾದದ್ದು ಅತಿ ಪರಿಚಯವಾಗಿಬಿಡುತ್ತಿದೆ. ಮೊದಲಿಗಿಂತಲೂ ಹೆಚ್ಚು ಗ್ರಂಥಗಳು ಹೊರಬೀಳಬಹುದು. ಆದರೆ ಅವು ಪ್ರವಾಸ ಗ್ರಂಥಗಳಾಗವುದಿಲ್ಲ. ಅಥವಾ ಪ್ರವಾಸ ಸಾಹಿತ್ಯವಾಗುವುದಿಲ್ಲ.

ಪ್ರವಾಸ ಸಾಹಿತ್ಯದಷ್ಟು ಶ್ರೀಮಂತವಾದ, ವೈವಿಧ್ಯವಾದ, ಮಾನವನ ಹೃದಯವನ್ನು ಕಲಕಿ ವಿಧ ವಿಧ ಭಾವನೆಗಳನ್ನು ಎಬ್ಬಿಸುವುದಾದ ಸಾಹಿತ್ಯ ಬೇರೊಂದಿಲ್ಲ ಎಂದು ಒಬ್ಬರು ಹೇಳಿದ್ದಾರೆ. ಪ್ರವಾಸ ಸಾಹಿತ್ಯಕ್ಕೆ ರಾಷ್ಟ್ರದ ಇತಿ ಮಿತಿಗಳಿಲ್ಲ : ಅದು ಅಂತರರಾಷ್ಟ್ರೀಯ ಸಾಹಿತ್ಯ.

ಆದರೆ ಅದರ ಅಭ್ಯಾಸಮಾಡುವವರು ಬಹಳ ಕಡಿಮೆ. ಪ್ರವಾಸ ಸಾಹಿತ್ಯವನ್ನು ಕಡೆಗಣಿಸಿದ್ದಾರೆಂತಲೇ ಹೇಳಬಹುದು. ಆದರೆ ಅದರ ಅಭ್ಯಾಸದಲ್ಲಿ ತೊಡಗಿದರೆ ಆಗ ಅರಿವಾಗುವುದು ಅಂದು ಎಂಥಹ ಸಾಹಿತ್ಯ, ಅದರಿಂದ ಎಂತೆಂಥ ಕಾದಂಬರಿಗಳು, ಕಥೆಗಳು, ಕಾವ್ಯಗಳು, ನಾಟಕಗಳು ಮುಂತಾದ ಹೊಸ ಸಾಹಿತ್ಯವನ್ನು ಸೃಷ್ಟಿಮಾಡಬಹುದು ಎಂದು. ಪಾಶ್ಚಿಮಾತ್ಯ ಕವಿಗಳಾದ ಷೇಕ್ಸ್‌ಪಿಯರ್ ಮತ್ತು ಮಿಲ್ಟನ್ ಈ ಪ್ರವಾಸ ಕಥೆನಗಳನ್ನು ತಮ್ಮ ಕಾವ್ಯಗಳಲ್ಲಿ ಹಾಗೂ ನಾಟಕಗಳಲ್ಲಿ ಬಳಸಿಕೊಂಡಿದ್ದಾರೆ.

ಪ್ರವಾಸ ಸಾಹಿತ್ಯ ನಮ್ಮ ದೇಶದ್ದಾಗಿರಬಹುದು, ಪರದೇಶದ್ದಾಗಿರಬಹುದು. ನಮ್ಮವರು ಹೊರಗೆ ಹೋಗಿ ಅಲ್ಲಿ ಕಂಡುದನ್ನು ಬರೆದಿಟ್ಟಿರುವುದು ಬಹಳ ಕಡಿಮೆ. ಸಾವಿರಾರು ವರ್ಷಗಳಿಂದ ನಮ್ಮ ಪೂರ್ವಿಕರು ದೇಶ ವಿದೇಶಗಳಿಗೆ

ಹೋಗಿಬರುತ್ತಿದ್ದರೂ ಏಕೋ ತಮ್ಮ ಅನುಭವಗಳನ್ನು ಬರೆದಿಡಲಿಲ್ಲ. ಬರೆದಿಟ್ಟಿದ್ದರೂ ಅವು ಈಗ ಇಲ್ಲ. ಈಚಿನ ಒಂದಿಷ್ಟು ಸಾಹಿತ್ಯವಿದೆ. ಆದರೆ ಅದು ಅಷ್ಟು ಗಮನೀಯವಾಗಿಲ್ಲ. ಆದರೆ ಪರದೇಶದವರು ನಮ್ಮ ದೇಶಕ್ಕೂ ಇತರ ದೇಶಗಳಿಗೂ ಹೋದಾಗ ಬರೆದಿಟ್ಟ ಪ್ರವಾಸ ಕಥನಗಳು ಹೇರಳವಾಗಿವೆ. ಅವೇ ಈಗ ಉತ್ಕೃಷ್ಟವಾದ ಪ್ರವಾಸ ಸಾಹಿತ್ಯವಾಗಿರುವುದು.

ಪ್ರವಾಸ ಸಾಹಿತ್ಯದಷ್ಟು ಶ್ರೀಮಂತವಾದ, ವೈವಿಧ್ಯವಾದ, ಮಾನವನ ಹೃದಯವನ್ನು ಕಲಕಿ ವಿಧ ವಿಧ ಭಾವನೆಗಳನ್ನು ಎಬ್ಬಿಸುವುದಾದ ಸಾಹಿತ್ಯ ಬೇರೊಂದಿಲ್ಲ ಎಂದು ಒಬ್ಬರು ಹೇಳಿದ್ದಾರೆ. ಪ್ರವಾಸ ಸಾಹಿತ್ಯಕ್ಕೆ ರಾಷ್ಟ್ರದ ಇತಿ ಮಿತಿಗಳಿಲ್ಲ; ಅದು ಅಂತರರಾಷ್ಟ್ರೀಯ ಸಾಹಿತ್ಯ.

ನಮ್ಮ ದೇಶಕ್ಕೆ ನೂರಾರು ಪ್ರವಾಸಿಗಳು ಕ್ರಿಸ್ತಪೂರ್ವ ಐದನೆಯ ಶತಮಾನದಿಂದಲೂ ಬಂದು ಹೋದರು. ಮೊಟ್ಟ ಮೊದಲು ಗ್ರೀಕರು, ಆಮೇಲೆ ಚೀನಿಯರು, ಅರಬ್ಬರು ಮತ್ತು ಯುರೋಪಿಯನರು - ಹೀಗೆ ಪ್ರಪಂಚದ ನಾನಾ ಭಾಗಗಳಿಂದ, ನಾನಾ ಮತಾಚರಣೆಯ, ನಾನಾ ಭಾಷೆಯ, ನಾನಾ ಜನಾಂಗಗಳ ಪ್ರವಾಸಿಗಳು ಇಂಡಿಯಾಕ್ಕೆ ನಾನಾ ಕಾಲಗಳಲ್ಲಿ ಬಂದು ತಾವು ಕಂಡು ಹೇಳಿದ್ದನ್ನು ಬರೆದಿಟ್ಟು ಮಹೋಪಕಾರ ಮಾಡಿ ಹೋಗಿದ್ದಾರೆ.

ಈ ಪ್ರವಾಸ ಕಥನಗಳಲ್ಲಿ ತಪ್ಪು ಕಲ್ಪನೆಗಳೂ, ವೈಯಕ್ತಿಕ ದೃಷ್ಟಿ ದೋಷಗಳೂ ಇರಬಹುದು; ಇವೆ. ಆದರೆ ಆ ಕಥನಗಳಲ್ಲಿ ಹೇಳಿರುವುದು ಬಹುಮಟ್ಟಿಗೆ ಸತ್ಯ. ಒಂದನ್ನು ನೋಡಿ ಎಲ್ಲವೂ ಹಾಗೆಯೇ ಎಂಬ ನಿರ್ಧಾರಕ್ಕೆ ಬಂದಿರುವ ದೋಷಗಳನ್ನೂ ಕಾಣಬಹುದು. ಆದರೆ ಹೇಳಿರುವ ಒಂದಂಶವಾದರೂ ಸತ್ಯ. ಈ ಲೋಪದೋಷಗಳನ್ನು ಬಿಟ್ಟರೆ ಪ್ರವಾಸ ಕಥನಗಳು ನಮ್ಮ ದೇಶದ ಇತಿಹಾಸ ರಚನೆಗೆ, ಆಯಾ ಕಾಲದ ಆಚಾರ ವ್ಯವಹಾರಗಳನ್ನು ಅರಿಯುವುದಕ್ಕೆ ಬಹಳ ಸಹಾಯಕವಾಗಿವೆ. ಅವುಗಳಿಲ್ಲದಿದ್ದರೆ ನಮ್ಮ ದೇಶದ ರಾಜಕೀಯ ಹಾಗೂ ಸಾಂಸ್ಕೃತಿಕ ಇತಿಹಾಸ ರಚನೆ ಅಸಂಪೂರ್ಣವಾಗುತ್ತಿತ್ತು. ಏಕೆಂದರೆ, ನಮ್ಮವರು ಅಂಥ ಇತಿಹಾಸವನ್ನು ಬರೆದಿಡುವ ಗೋಜಿಗೆ ಹೋಗಲಿಲ್ಲ. ಕಲ್ಪನೆಯ ಸಾಮ್ರಾಜ್ಯದಲ್ಲಿ ಹೆಚ್ಚು ವಿಹರಿಸಿದರೇ ಹೊರತು ವಾಸ್ತವವಾದುದನ್ನು ಬರೆದಿಡುವ ಹವ್ಯಾಸಕ್ಕೆ ಕೈ ಹಾಕಲಿಲ್ಲ.

ಇಂಥ ಪ್ರವಾಸ ಕಥನಗಳನ್ನು, ಅವುಗಳಲ್ಲಿರುವ ಸಾಹಿತ್ಯವನ್ನು, ಕನ್ನಡಿಗರ ಮುಂದಿಡುವ ಕೆಲಸ ಈಗೀಗ ನಡೆಯುತ್ತಿದೆ. 'ಚೀನಾದೇಶದ ಬೌದ್ಧ ಯಾತ್ರಿಕರು' ಎಂಬ ಗ್ರಂಥ ಜ.ಪಿ. ರಾಜರತ್ನಂ ಅವರು ಪ್ರವಾಸ ಸಾಹಿತ್ಯದಲ್ಲಿ ಬರೆದ ಮೊದಲ ಗ್ರಂಥ. ಹಾಗೆಯೇ ತರಾಸು ಅವರ 'ಬಾರ್ಬೊಸಾ ಕಂಡ ವಿಜಯನಗರ' ಇನ್ನೊಂದು ಗ್ರಂಥ. ಇವನ್ನು ಬಿಟ್ಟರೆ ಶ್ರೀ ಎಚ್.ಎಲ್.ನಾಗೇಗೌಡರ ೮ ಸಂಪುಟಗಳ 'ಪ್ರವಾಸಿ ಕಂಡ ಇಂಡಿಯಾ' ಎಂಬ ಕೃತಿಶ್ರೇಣಿ ಇಂಡಿಯಾಕ್ಕೆ ಬಂದ ಇಡೀ ಪ್ರವಾಸಿಗಳ ಕಥನಗಳನ್ನು ನೀಡುವ ಬೃಹದ್ಗ್ರಂಥ. ಈ ದಿಶೆಯಲ್ಲಿ ಇಟ್ಟ ಮೊದಲ ಹೆಜ್ಜೆಗಳು. ಸಾಹಿತ್ಯದಲ್ಲಿ ಈ ಪ್ರವಾಸ ಕಥನಗಳಿಗೆ ಒಂದು ಉಚ್ಚ ಸ್ಥಾನವಿದೆ. ಅವು ವಾಸ್ತವಿಕ ವಿಚಾರ ಸರಳ ಕಥೆಗಳಾದರೂ ಓದುಗರ ಮನಸ್ಸನ್ನು ಬೇರೊಂದು ಕಲ್ಪನಾ ಸಾಮ್ರಾಜ್ಯಕ್ಕೆ ಕೊಂಡೊಯ್ಯುವ ವಿಶಿಷ್ಟ ಸಾಹಿತ್ಯಕ್ಷೇತ್ರಗಳಾಗಿವೆ. ಒಬ್ಬೊಬ್ಬ ಪ್ರವಾಸಿಯ ಕಥನ ಒಂದೊಂದು ಕಾದಂಬರಿಯಂತೆ, ಒಂದೊಂದು ಸಣ್ಣ ಕಥೆಯಂತೆ, ಒಂದೊಂದು ಆತ್ಮಚರಿತ್ರೆಯಂತೆ ಮನೋಜ್ಞವಾಗಿವೆ. ಜನಜೀವನವನ್ನು ಬಿಟ್ಟು ಸಾಹಿತ್ಯ ಸೃಷ್ಟಿಯಾಗಲಾರದು. ಅಂಥ ಜನಜೀವನವನ್ನು, ಸಾವಿರಾರು ವರ್ಷಗಳ ಹಿಂದಿನ ಜನಜೀವನವನ್ನು ಹೇಳಿಯೇ ಉತ್ಕೃಷ್ಟ ಸಾಹಿತ್ಯ ಸೃಷ್ಟಿಯಾಗಿರುವಾಗ, ಹಿಂದಿನ ಜನಜೀವನವನ್ನು ಹೇಳುವ ಪ್ರವಾಸ ಕಥನಗಳು ನಮ್ಮನ್ನು ಎಂತಹ ಕಲ್ಪನಾ ಲೋಕಕ್ಕೆ ಕೊಂಡೊಯ್ಯುತ್ತವೆ ಎಂಬುದನ್ನು ಅವುಗಳನ್ನು ಓದಿಯೇ ಅನುಭವಿಸಬೇಕು.

ಕೇವಲ ಕಲ್ಪನಾಸಾಹಿತ್ಯ ಮಾತ್ರದಿಂದಲೇ ಅಥವಾ 'ಶುದ್ಧ'ಸಾಹಿತ್ಯ ಮಾತ್ರದಿಂದಲೇ ಭಾಷಾಸಂಪತ್ತಾಗಲೀ ಜನಜೀವಿತವಾಗಲೀ ಮೇಲ್ಮಟ್ಟಕ್ಕೆ ಏರಲಾರದು. ಸಹಸ್ರಮುಖವಾಗುತ್ತಿರುವ ಜನಜೀವನಕ್ಕೆ ಅವಶ್ಯವಾದ ಎಲ್ಲ ಜ್ಞಾನ ಸಾಮಗ್ರಿಯೂ ಕನ್ನಡದಲ್ಲಿ ದೊರೆಯುವಂತಾಗಬೇಕು. ಇಂಥದನ್ನು ಒದಗಿಸಿಕೊಡುತ್ತವೆ ಪ್ರವಾಸ ಕಥನಗಳು.

ಕನ್ನಡ ಸಾಹಿತ್ಯದ ಕಡಲಿಗೆ ಪ್ರವಾಸ ಸಾಹಿತ್ಯದ ಒಂದು ಹೊಸ ಹೊಳೆ ಈಗ ಸೇರಲಾರಂಭಿಸಿದೆ. ಹಾಗೆ ಸೇರುವುದರಿಂದ ಕನ್ನಡ ಸಾಹಿತ್ಯದಲ್ಲಿ ಮುಂದೆ ಹೊಸ ಪ್ರಕಾರಗಳು ಸೃಷ್ಟಿಯಾಗುವುದರಲ್ಲಿ ಸಂದೇಹವಿಲ್ಲ.

ಹೊಸ ಸಹಸ್ರಮಾನದಲ್ಲಿ ಸೃಜನಶೀಲ ಸಾಹಿತ್ಯ

ಶ್ರೀ ವ್ಯಾಸರಾಯ ಬಲ್ಲಾಳ

ಮಾನವನ ಮನಸ್ಸು ಬದುಕಿಗೆ, ಬದುಕು ಧ್ವನಿಸುವ ಸತ್ಯಗಳಿಗೆ, ಸೌಂದರ್ಯಕ್ಕೆ ಕಾಲಾತೀತವೆನಿಸುವ ದಾರ್ಶನಿಕ ಕಾಣ್ಕೆಗೆ ತೆರೆದುಕೊಳ್ಳುವ ರೀತಿಯಲ್ಲೆ ಸಾಹಿತ್ಯದ ಸೃಜನಶೀಲತೆಯ ಹುಟ್ಟನ್ನು ನಾವು ಗುರುತಿಸುತ್ತೇವೆ. ಸಾಹಿತ್ಯದ ಸೃಜನಶೀಲ ಪ್ರಕ್ರಿಯೆ ಸಾಧ್ಯವಾಗುವುದು ವಿಸ್ತೃತ ಜೀವನಾನುಭವವುಳ್ಳ ಭೂತ, ವರ್ತಮಾನ, ಭವಿಷ್ಯತ್‌ಗಳನ್ನು ಬೆಸೆಯುವ ಕೊಂಡಿಗಳ ಐತಿಹಾಸಿಕವೆನಿಸುವ ಗತಿಗೆ ಸ್ಪಂದಿಸುವ ಪ್ರಜ್ಞೆಯುಳ್ಳ, ಪ್ರಕೃತಿಚೇತನಗಳ ಅವಿನಾಭಾವ ಸಂಬಂಧದ ಪರಿಜ್ಞಾನವುಳ್ಳ, ಎಲ್ಲದಕ್ಕೂ ಹೆಚ್ಚು, ನೋವು - ಚೆಲುವುಗಳ ವೈರುಧ್ಯದಲ್ಲಿ ಒಂದು ಸೃಜನಶೀಲ ಮನಸ್ಸು ಸಮಗ್ರತೆಯ ಕಲ್ಪನೆಯನ್ನು ತಂದುಕೊಂಡು ಇಡಿಯ ಮಾನವಕುಲಕ್ಕೆ ಸಂಬಂಧಿಸಿರುವ ಸತ್ಯಗಳಲ್ಲವೆ ಇವು ಎಂಬ ಆಶ್ಚರ್ಯದ ಪುಳಕ ತರುವ ಬೆಳಕಿನಲ್ಲಿ ಸೃಜನಶೀಲ ತುಡಿತ ಮಾನವ ಕುಲಕ್ಕೇ ಅನಿವಾರ್ಯವೆನಿಸುವ ಕ್ರಿಯೆ. ಜೆ. ಬ್ರನೌಸ್ಕಿ ಎಂಬ ಸುಪ್ರಸಿದ್ಧ ಜೀವವಿಜ್ಞಾನಿ ತನ್ನ "A sense of the future" ಎಂಬ ಗ್ರಂಥದಲ್ಲಿ ಎಲ್ಲ ಸೃಜನಶೀಲ ಕ್ರಿಯೆಗೆ ಸಂಬಂಧಿಸಿದಂತೆ ಹೇಳಿರುವ ಎರಡು ಮಾತುಗಳು ಹೀಗಿವೆ :

.....There is a physiological need, in living matter to create. The laws of nature are such that nature is running down all the time, things are becoming disorderly all the time and living matter is constantly opposed to this. It is constantly trying to create order. The word "creation" means the creation of order, the finding in nature of links, of

likenesses of hidden patterns which the living thing the plant, the animal, the human mind-picks out and arranges.

ಎಲ್ಲ ಸೃಜನಶೀಲ ತುಡಿತದ ಮೂಲದಲ್ಲಿರುವುದು, ಹೊಸದೆನಿಸುವ ಸತ್ಯಗಳನ್ನು ಚೆಲುವನ್ನು ಅರಸುವ ನೋವು. ವ್ಯವಸ್ಥಿತವೆಂದು ಕಾಣುವ ಆದರೆ ಅವ್ಯವಸ್ಥೆಯ ಬಿರುಕುಗಳನ್ನು ತನ್ನಲ್ಲಿ ಹುದುಗಿಸಿಕೊಂಡಿರುವ ಬದುಕು, ಚೆಲುವಿಗೆ, ಸೌಂದರ್ಯಪ್ರಜ್ಞೆಗೆ ಹೊಂದಿಕೊಳ್ಳು ಬಗೆ ಹೇಗೆ ಎಂಬ ನೋವು. ಎಲ್ಲ ಅನ್ವೇಷಣೆಗಳ ಮೂಲದಲ್ಲಿರುವ ವೈಜ್ಞಾನಿಕ ಕುತೂಹಲಕ್ಕೆ ಸತ್ಯದ ಬೆಳಕನ್ನು, ಅದು ತೋರಿಸಬಹುದಾದ ಹೊಸ ದಾರಿಯನ್ನು ಗುರುತಿಸಬಹುದು ಎಂಬ ಸಂತೋಷವಿದೆಯೋ ಹಾಗೆಯೇ ಸಾಹಿತ್ಯಿಕವೆನಿಸುವ ಸೃಜನಶೀಲ ಬದುಕಿನಲ್ಲಿ ಕಾಣುವ ಅವ್ಯವಸ್ಥೆಯನ್ನು ಅದು ಸಾಮಾಜಿಕವಾಗಿ ತನ್ನ ಗತಿ, ಪ್ರಗತಿಗಳಿಗೆಂದು ತಂದುಕೊಳ್ಳುವ ಮೌಲ್ಯಪ್ರಜ್ಞೆಯ ಬಿರುಕುಗಳನ್ನು ಹೇಗೆ ವ್ಯವಸ್ಥಿತವಾಗಿಸಬಹುದು ಎಂಬ ಕಾಣ್ಕೆಯ ಎಚ್ಚರದಿಂದ ತನ್ನ ಕ್ರಿಯಾಶೀಲ ಸಂತೋಷವನ್ನು ಕಂಡುಕೊಳ್ಳುತ್ತದೆ. ಹೊಸ ಸಹಸ್ರಮಾನದಲ್ಲಿ ಸೃಜನಶೀಲ ಸಾಹಿತ್ಯ ಯಾವ ರೀತಿಯದಿರಬಹುದು ಎಂದು ನಾವು ಯೋಚಿಸುವಾಗ ಈ ಸಹಸ್ರಮಾನದಲ್ಲಿ ಸಾಹಿತ್ಯದ ಇತಿಹಾಸ ಮುಂದುವರಿದ ಬಗೆ, ಸಾಹಿತಿ ಸ್ಪಂದಿಸಲೇ ಬೇಕಾಗಿ ಬಂದ ಸಾಮಾಜಿಕ ಒತ್ತಡಗಳು, ಈ ಒತ್ತಡಗಳನ್ನು ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಪ್ರಚೋದಿಸಿದ ಆಧುನಿಕ ನಾಗರಿಕತೆಯ ಪ್ರಧಾನ ಲಕ್ಷಣಗಳೆನಿಸುವ ವೈಜ್ಞಾನಿಕ, ತಾಂತ್ರಿಕ ಹಾಗೂ ಇವುಗಳ ಪ್ರಗತಿಯಲ್ಲಿ ನಾವು ಕಾಣುತ್ತ ಬಂದಿರುವ ಮೌಲ್ಯಪ್ರಜ್ಞೆಯ ಬದಲಾವಣೆಗಳು, ಸಮಾಜಿಕ ನಡವಳಿಕೆಯ ಪರಿಕಲ್ಪನೆಗಳು ಇವನ್ನೆಲ್ಲ ಗಮನಿಸಬೇಕಾಗುತ್ತದೆ.

ನಮ್ಮ ಇಂದಿನ ಸೃಜನಶೀಲ ಸಾಹಿತ್ಯಕ್ಕೆ ಸಂಬಂಧಿಸಿದ ಪರಿಕಲ್ಪನೆಗಳೆಲ್ಲ ಪಾಶ್ಚಾತ್ಯ ವೈಚಾರಿಕತೆಯ. ಮಾನದಂಡಗಳನ್ನೂ ಇಂಗ್ಲೀಷ್ ಭಾಷೆಯ ಸಾಹಿತ್ಯದ ಕುರಿತ ಪರಿಕಲ್ಪನೆಗಳನ್ನೂ ಬಹಳ ಮಟ್ಟಿಗೆ ಆಶ್ರಯಿಸಿರುವಂಥವು. ಇಂದು ಸಾಹಿತ್ಯದ ಜಾಗತೀಕರಣಕ್ಕೆ ಕಾರಣವಾಗಿರುವುದು ಇಂಗ್ಲಿಷೇ ಆದ ಕಾರಣ ಇದರಲ್ಲಿ ಆಶ್ಚರ್ಯವೇನೂ ಇಲ್ಲ. ಈ ಸಹಸ್ರಮಾನದ ಉತ್ತರಾರ್ಧದ ಅದೂ ಕೊನೆ ಕೊನೆಯ ಶತಮಾನಗಳ ವೈಚಾರಿಕತೆಯ ಬೇರೆ ಬೇರೆ ಮುಖಗಳು ಪಾಶ್ಚಾತ್ಯ ವಿಚಾರ ಸರಣಿಗೆ ಅನುಗುಣವಾಗಿಯೇ ಬಂದಿರುವುದರಿಂದ ಹೊಸ ಸಹಸ್ರಮಾನದಲ್ಲಿ ಸೃಜನಶೀಲ ಸಾಹಿತ್ಯದ ಕುರಿತು ಯೋಚಿಸುವಾಗ ಈಗ ಕೊನೆಗೊಳ್ಳುತ್ತಿರುವ ಸಹಸ್ರಮಾನದ ಸಾಹಿತ್ಯಿಕ ಸಾಧನೆಯ ಸ್ಪಷ್ಟಚಿತ್ರವನ್ನೂ ತಂದುಕೊಳ್ಳಬೇಕಾಗುತ್ತದೆ. ಹಾಗೆ ನೋಡಿದಾಗ ಭೂತ, ವರ್ತಮಾನ, ಭವಿಷ್ಯತ್‌ಗಳನ್ನು ಬೆಸೆಯುವ ಸಾಹಿತ್ಯಿಕ ಕೊಂಡಿಗಳು ನಮ್ಮ ಸಾಹಿತ್ಯದ ಇತಿಹಾಸದಲ್ಲಿ ಹೇಗೆ ಕಾಣಿಸಿಕೊಂಡಿವೆ ಎಂದು ನೋಡುವ ಕುತೂಹಲವೂ ಉಂಟಾಗುತ್ತದೆ.

ಇತ್ತೀಚೆಗೆ ಇಂಗ್ಲೀಷಿಗೆ ಸಂಬಂಧಿಸಿದಂತೆ ಸಹಸ್ರಮಾನದ ಸಾಹಿತಿ ಶೇಕ್ಸ್‌ಪಿಯರ್ ಎಂದು ಒಂದು ಸಮೀಕ್ಷೆ ತಿಳಿಸಿದೆಯೆಂಬ ವರದಿಯೊಂದು ಪ್ರಕಟವಾಗಿದೆ. ಇದು ಸಹಜವೇ. ಯೂರೋಪಿನ ಸಾಹಿತ್ಯವಲಯಗಳಲ್ಲಿ ಸಾಹಿತ್ಯದ ಸಂವಹನದ ಧಾರಣಶಕ್ತಿಯನ್ನು ಸೂಚಿಸಲು, ಕೃತಿಯ ಅಮರತ್ವವನ್ನು ಸಂಕೇತಿಸಲು, ಗ್ರೀಕ್‌ಕವಿ ಹೋಮರ್‌ನ ಉದಾಹರಣೆ ಕೊಡುವುದಿದೆ. ಯಾವುದಾದರೊಂದು ಕೃತಿ ಮೂರು ಸಾವಿರ ವರ್ಷಕಾಲ ಜನಮನದಲ್ಲಿದ್ದು ಕೃತಿಯ ಅಮರತ್ವವನ್ನು ತೋರಿಸಬಹುದಾದರೆ ಹೋಮರ್ ಕವಿಯ 'ಈಲಿಯಡ್' ಎಂದು ಹೇಳುವುದಿದೆ. ಕ್ರಿಸ್ತಪೂರ್ವ ೭೦೦ಗಿಂತ ಹಿಂದಿನವನೆಂದು ತಿಳಿಯಲಾಗಿರುವ ಕವಿ ಹೋಮರ್ ಕಳೆದೈದು ಶತಮಾನಗಳಿಂದ ಶೇಕ್ಸ್‌ಪಿಯರ್‌ನ ವರ್ಚಸ್ಸು ಇಂಗ್ಲೀಷ್ ಸಾಹಿತ್ಯದ ಮೇಲೆ ಬಿದ್ದಿರುವುದರಲ್ಲಿ ಅನುಮಾನವಿಲ್ಲವಾದರೂ ಯುರೋಪಿನ ಹಿರಿಮೆಯನ್ನು ಅವು ಕಾಲಾತೀತವೆನಿಸಬಹುದಾದ ಸತ್ಯಗಳ ತಿಳಿವಳಿಕೆ ನೀಡುವ ಕೃತಿಗಳೆಂದು ನೆನಪಿಸಿಕೊಳ್ಳುವ ಯೋಜನೆಯನ್ನು ಮಾಡದೆ ಹೊಸ ಸಹಸ್ರಮಾನದ ಭಾರತೀಯ ಭಾಷೆಗಳ ಸೃಜನಶೀಲ ಸಾಹಿತ್ಯದ ಕುರಿತು ಮಾತನಾಡುವುದು ಸರಿಯೆನಿಸದು.

ಇವೆರಡು ಮಹಾಕೃತಿಗಳ ಹುಟ್ಟನ್ನು ಸಾಹಿತ್ಯಿಕವಾಗಿ ನಾವು ನೋವಿನಲ್ಲೆ ಗುರುತಿಸಬಹುದು. 'ರಾಮಾಯಣ'ದ್ದು ಕ್ರೌಂಚ ಪಕ್ಷಿಗಳ ಜೋಡಿಗೆ ಒದಗಿದ ಸಾವಿನ ಅಗಲಿಕೆಯ ನೋವು. 'ಮಹಾಭಾರತ'ಕ್ಕೆ ದಾಯಾದಿ ಮತ್ಸರ, ದ್ವೇಷ ಕ್ರೌರ್ಯವಾಗಿ ಹಿಂಸೆಯಾಗಿ ಯುದ್ಧದ ಸಾವು ನೋವುಗಳಿಗೆ ಕಾರಣವಾದ ನೋವು, 'ರಾಮಾಯಣ'ದ ಸಾಹಿತ್ಯಿಕ ಪ್ರಸ್ತುತತೆ ಈಗ ಕೊನೆಗೊಂಡ ಶತಮಾನದ ಕೊನೆಗೆ ಹೆಚ್ಚು ಹೆಚ್ಚು ಪ್ರಸಿದ್ಧಿಗೆ ಬರತೊಡಗಿರುವ ಸ್ತ್ರೀ ಸಂವೇದನೆಯ ಚಳವಳದ ಹಿನ್ನೆಲೆಯಲ್ಲಿ ಸಂದೇಹಕ್ಕೊಳಗಾಗಬಹುದಾದರೂ ಮಹಾಭಾರತದ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ವರ್ಚಸ್ಸು ಕಾಲದ ದೇಶಗಳ ಸೀಮಾ ರೇಖೆಯನ್ನು ದಾಟಿದಂಥದು. ಭಾರತದ ಎಲ್ಲ ಭಾಗಗಳ ಜಾನಪದ ಸಂಸ್ಕಾರಗಳನ್ನು ಪ್ರಭಾವಿಸಿದ ಹಿರಿಮೆ ಈ ಕೃತಿಗಿದೆ. ಅಮೆರಿಕ ಬ್ರಾಡ್‌ವೇ ರಂಗ ಭೂಮಿಯಲ್ಲಿ 'ಮಹಾಭಾರತ'ದ ನಾಟಕ ರೂಪ ಪ್ರದರ್ಶನಗೊಂಡುದು ಇದರ ಸಾಹಿತ್ಯಿಕ ಸತ್ವಕ್ಕೂ ಒಂದು ಉದಾಹರಣೆ. 'ಮಹಾಭಾರತ'ದ ಉಲ್ಲೇಖ ಮಾಡಲು ಕಾರಣವಿಷ್ಟೇ. ಹೊಸ ಸಹಸ್ರಮಾನದ ಸೃಜನಶೀಲ ಸಾಹಿತ್ಯದ ಕುರಿತು ಯೋಚಿಸುವಾಗ ಎಷ್ಟೆಲ್ಲ ಶತಮಾನಗಳು ಸಾಮಾಜಿಕ ಪರಿವರ್ತನೆಗಳನ್ನೂ ಮೌಲ್ಯಪ್ರಜ್ಞೆಯಲ್ಲಾಗುತ್ತಲೇ ಬಂದ ಏರಿಳಿತಗಳನ್ನೂ ದಾಟಿಕೊಂಡು ಅತ್ಯಂತ ತೀವ್ರಗತಿಯಿಂದ ಬದಲಾಗುತ್ತಿರುವ ಸಂಕೀರ್ಣ ಜೀವನಕ್ರಮದ ನಡುವೆಯೂ 'ಮಹಾಭಾರತ'ದ ಪ್ರಸ್ತುತತೆ ಮಾಸಿಲ್ಲವಾದರೆ ಹೊಸ ಸಹಸ್ರಮಾನದಲ್ಲಿ ಅಂತಹ ಮೇರು ಕೃತಿ ಹೊರಬರುವಂತಹ ಪರಿಸರ ಬರಬಹುದೇ, ಸಾಮಾಜಿಕ ಸಂದರ್ಭ ಇರುವುದೇ ಎಂಬ ಕುತೂಹಲ ಸಹಜವೇ.

ಇಂದು ಸಾಹಿತ್ಯದ ಸೃಜನಶೀಲತೆ ಒಂದು ಭಾಷೆಯ, ಒಂದು ಪ್ರದೇಶದ ಅಥವಾ ಒಂದು ದೇಶದ ಸೀಮಿತ ಪರಿಧಿಯಲ್ಲೆ ಇರಬಹುದಾದರೂ ಅದು ಇಂಗ್ಲೀಷ್ ಭಾಷೆಯ ಪ್ರಭಾವದ ಜಾಗತೀಕರಣದ ವರ್ಚಸ್ಸಿನಿಂದ ಹೊರಗುಳಿಯಲು ಸಾಧ್ಯವಿಲ್ಲ. ರಾಮಾಯಣ, ಮಹಾಭಾರತಗಳು ಶತಶತಮಾನಗಳ ಕಾಲ ಭಾರತದ ಎಲ್ಲ ಭಾಷೆಗಳ ಸೃಜನಶೀಲ ಪ್ರಕ್ರಿಯೆಯ ಮೇಲೆ ತಮ್ಮ ವರ್ಚಸ್ಸನ್ನು ಕೆಡವಿದೆ ಎಂದು ನಾವು ಹೆಮ್ಮೆಪಟ್ಟುಕೊಳ್ಳಬಹುದಾದರೂ ಪಾಶ್ಚಾತ್ಯ ಸಾಹಿತ್ಯಿಕ ಚಿಂತನೆಯಿಂದ ಬಿಡಿಸಿಕೊಳ್ಳಲಾಗದ ನಮ್ಮ ಸಾಹಿತ್ಯಿಕ ಪ್ರಜ್ಞೆ, ಆಧುನಿಕತೆ ವಿಶ್ವವ್ಯಾಪಿ ಸಮುದಾಯವನ್ನು ಅತ್ಯಂತ ವೇಗದಿಂದ ಪರಿವರ್ತಿಸುತ್ತಿರುವ ರೀತಿ, ವಿಜ್ಞಾನ ಹಾಗೂ ತಂತ್ರಜ್ಞಾನ ನಮ್ಮೆಲ್ಲರ ಜೀವನದಲ್ಲಿ, ನಮ್ಮ ಮೌಲ್ಯಪ್ರಜ್ಞೆಯಲ್ಲಿ ತರುತ್ತಲೇ ಇರುವ ಬದಲಾವಣೆಗಳು, ಅಲುಗಾಡಿಸುತ್ತಿರುವ ಪರಂಪರಾಗತ ನಂಬಿಕೆಗಳು, ಇವುಗಳಿಗೆಲ್ಲ, ಮುಂದಿನ ಸಹಸ್ರಮಾನದ ಸಾಹಿತ್ಯಿಕ ಸೃಜನಶೀಲತೆ ಸ್ಪಂದಿಸದೆ ಇರಲಾಗುವುದಿಲ್ಲ. ಹೀಗಾಗಿ 'ರಾಮಾಯಣ', 'ಮಹಾಭಾರತ'ಗಳು ನಮ್ಮ ಸಾಹಿತ್ಯಿಕ ಪರಂಪರೆಯ ಮೇರುಕೃತಿಗಳಾಗಿ ಭಾರತೀಯವೆನಿಸುವ ಸಾಹಿತ್ಯಿಕ ಸೃಜನಶೀಲತೆಗೆ ಇನ್ನೂ ಪರಿಕರಗಳನ್ನು ಒದಗಿಸುತ್ತಿವೆಯಾದರೂ ನಮ್ಮ ಕಥಾ ಪರಂಪರೆ 'ಪಂಚತಂತ್ರ'ದ ಕತೆಗಳಿಂದ, 'ಕಥಾಸರಿತ್ಸಾಗರ', 'ಬೇತಾಳ ಪಂಚವಿಂಶತಿ ಕತೆ'ಗಳಂತಹ ಕತೆಗಳಿಂದ ಹಾಗೆಯೇ ಮೌಖಿಕ ಹಾಗೂ ಲಿಖಿತ ಜಾನಪದ ಸಾಹಿತ್ಯ ಪರಂಪರೆಯಿಂದ ಪ್ರಭಾವಿತವಾಗಿರುವ ವಸ್ತು ಹಾಗೂ ಅಭಿವ್ಯಕ್ತಿ ಮಾಧ್ಯಮಗಳನ್ನು ಶೋಧಿಸುತ್ತಿವೆಯಾದರೂ ಮುಂದೆ ಇವುಗಳಿಂದ ಪ್ರಭಾವಿತವಾಗಲೀ ಆಗಿರದೆ ಇರಲಿ, ನಮ್ಮ ಸೃಜನಶೀಲ ಕ್ರಿಯೆ ಪ್ರಕಟವಾಗುವುದು ಇವುಗಳ ಎಚ್ಚರ ತಂದುಕೊಂಡೆ. ಇಲ್ಲಿ ಅಭಿಮಾನದ ಮಾತೆಂದರೆ ನಾವು ಭಾರತೀಯ ಪರಿಸರದಲ್ಲಿ ನಮ್ಮ ಸಾಹಿತ್ಯಿಕ ಪರಂಪರೆಯನ್ನು ಸಾರಾ ಸಗಟಾಗಿ ತಿರಸ್ಕರಿಸಿಲ್ಲ. ನಮ್ಮ ಸಾಹಿತ್ಯದ ಇತಿಹಾಸವನ್ನು ಆಧುನಿಕ ಮೌಲ್ಯಪ್ರಜ್ಞೆಯ ಒರೆಗಲ್ಲಿಗೆ ಹಚ್ಚಿ ನೋಡಿ ವಸ್ತು ವಿಚಾರಗಳನ್ನು ವರ್ತಮಾನದ ಸಾಮಾಜಿಕ ಬದುಕಿಗೆ ಅನ್ವಯಿಸಿ ನೋಡಬಯಸುವ ವಿಧಾನವನ್ನು ಕೈಬಿಟ್ಟಿಲ್ಲ. ಹಲವಾರು ಸಹಸ್ರಮಾನಗಳ ಸಾಹಿತ್ಯಿಕ ಪರಂಪರೆ ನಮ್ಮದು. ಹೀಗಿದ್ದೂ ನಮ್ಮ ಸಾಹಿತ್ಯಿಕ ಪರಿಕಲ್ಪನೆಗಳನ್ನು ಬದಲಾಗುತ್ತಲೇ ಇರುವ ಪರಿಸರದಲ್ಲಿ ಸೃಜನಶೀಲ ಚಿಂತನೆಗೆ ಹೊಂದಿಸಿಕೊಳ್ಳುತ್ತಿರುವುದು ಅಭಿಮಾನದ ಸಂಗತಿ.

ಇಂದು ವಿಜ್ಞಾನ ತಂತ್ರಜ್ಞಾನಗಳು ಹಾಗೂ ಇವುಗಳ ಪರಿಣಾಮ ಸ್ವರೂಪದ ಸಾಮಾಜಿಕ ನಿಲುವುಗಳು, ಮೌಲ್ಯ ಪ್ರಜ್ಞೆ, ಇಂದು ವರ್ತಮಾನಕ್ಕಷ್ಟೆ ಸ್ಪಂದಿಸುವ ಮಧ್ಯಮ ವರ್ಗದ ಓದುಗರ / ಸೃಜನಶೀಲ ಸಾಹಿತ್ಯ ಕೃತಿಗಳಿಗೆ ಪೋಷಕ ವರ್ಗವೆನಿಸುವ

ಅಂಶಗಳನ್ನು ಗಮನಿಸಿದಾಗ ಹೊಸ ಸಹಸ್ರಮಾನದ ಸಾಹಿತ್ಯದ ಸೃಜನಶೀಲತೆಯ ಅಭಿವ್ಯಕ್ತಿ ಸ್ವರೂಪವನ್ನು ಇಡಿಯ ವಿಶ್ವಕ್ಕೆ ಅನ್ವಯಿಸಿ ಹೇಳುವುದು ಧಾರ್ಷ್ಟ್ಯದ ಮಾತಾಗಬಹುದು. ಮನುಷ್ಯನ ಅಸ್ತಿತ್ವಕ್ಕೆ ಅರ್ಥ ಹಚ್ಚುವ ಸೃಜನಶೀಲ ಚಿಂತನೆ ಮುಂದಿನ ಸಹಸ್ರಮಾನದಲ್ಲೂ ಮುಂದುವರಿಯುವುದಾದರೂ ವಿಜ್ಞಾನ ತರುತ್ತಲೇ ಇರುವ ಪರಿವರ್ತನೆಗಳಿಂದಾಗಿ ಹುಟ್ಟು ಮತ್ತು ಸಾವು ಇವುಗಳ ಕುರಿತ ದಾರ್ಶನಿಕ ಪರಿಕಲ್ಪನೆಗಳೂ ಬದಲಾಗಬಹುದಾದಂತಹ ಸನ್ನಿವೇಶದಲ್ಲಿ ಸಾಹಿತ್ಯಿಕ ಸೃಜನಶೀಲತೆ ಹೆಚ್ಚು ಹೆಚ್ಚು ವಾಸ್ತವ ಮತ್ತು ಭ್ರಮೆಗಳ ನಡುವಿನ ಕಂದರವನ್ನು ಗಮನಿಸುತ್ತ ವ್ಯಕ್ತಿಯ ಅಂತರಂಗದ ಅನಾಥಪ್ರಜ್ಞೆಯನ್ನೆ ಶೋಧಿಸುವ ಕೆಲಸದಲ್ಲಿ ಸಾಹಿತ್ಯದ ದಾರ್ಶನಿಕ ಆಯಾಮಗಳನ್ನು ಕಲ್ಪಿಸಿಕೊಳ್ಳಬಹುದು. ಡಾರ್ವಿನ್ನನ ವಿಕಾಸವಾದ, ಮಾರ್ಕ್ಸ್‌ನ ಸಮತಾವಾದ, ಫ್ರಾಯಡನ ಮನೋವಿಶ್ಲೇಷಣೆಯ ಸಿದ್ಧಾಂತಗಳು, ಕರ್ಕೆಗಾರ್ಡನ ಅಸ್ತಿತ್ವವಾದಿ ಚಿಂತನೆ - ಇವೆಲ್ಲವುಗಳಿಂದ ಪ್ರಭಾವಿತವಾದ ವೈಚಾರಿಕ ಚಿಂತನೆಯಲ್ಲಿ ಈ ಸಹಸ್ರಮಾನದ ಸಾಹಿತ್ಯಿಕ ಚಿಂತನೆಯ ಪ್ರಗತಿಯನ್ನು ನಾವು ಗುರುತಿಸುತ್ತೇವೆ. ಇಂದು ಸೃಜನಶೀಲ ಸಾಹಿತ್ಯ ವಿರಾಮಕಾಲದ ಓದುಗರ ಮನರಂಜನೆಯ ಸಾಧನವಾಗಿ ಉಳಿದಿಲ್ಲ. ಅದು ಬದುಕಿಗೆ, ಬದುಕು ಸಂಧಿಸಲೇಬೇಕಾದ ಎಲ್ಲ ಸಂಭವಗಳಿಗೆ ಭಾಷ್ಯ ಬರೆಯುವ ಸಾಧನವಾಗಿ ಮುಂದುವರಿದಿದೆ. ಮಾನವೀಯವೆನಿಸುವ ಸಂವೇದನೆಗಳಿಂದ ರೂಪುಗೊಳ್ಳುವ ಸೌಂದರ್ಯಪ್ರಜ್ಞೆಯ ಎಚ್ಚರ ತಂದುಕೊಂಡೆ ಸೃಜನಶೀಲ ಕ್ರಿಯೆ ತನ್ನ ಅರ್ಥವಂತಿಕೆಯನ್ನು ಕಂಡುಕೊಳ್ಳುತ್ತದೆ. ಪಶ್ಚಿಮದಲ್ಲಿ ಸಾಹಿತ್ಯಕ್ಷೇತ್ರದಲ್ಲಿ ದೈತ್ಯ ಪ್ರತಿಭೆಗಳೆನಿಸಿರುವ ಶೇಕ್ಸ್‌ಪಿಯರ್, ದೊಸ್ತೊವಸ್ಕಿ, ಟಾಲ್‌ಸ್ಟಾಯ್, ಜಾಯ್ಸ್ ಮುಂತಾದವರ ಸೃಜನಶೀಲ ಶಕ್ತಿಯ ಹುಟ್ಟು ವಿಕಾಸಗಳನ್ನು ನಾವು ಕುತೂಹಲದಿಂದಷ್ಟೆ ಊಹಿಸಿಕೊಳ್ಳಬಹುದು. ಅದರ ಬಗೆಗೆ ವೈಜ್ಞಾನಿಕವೆನಿಸುವ ಸಾಧ್ಯತೆಗಳನ್ನು ಕೊಡುವುದು ಸರಿಯೆನಿಸದು. ಭಾರತದಲ್ಲಿ ನಾವು ವಾಲ್ಮೀಕಿ, ವ್ಯಾಸ, ಕಾಳಿದಾಸ ಮೊದಲಾದವರನ್ನು ನೆನೆಸಿಕೊಳ್ಳುವಾಗಲೂ ಇವರು ದೃಷ್ಟಾರರಂತೆ ನಮ್ಮ ಸಾಹಿತ್ಯಕ ಪರಂಪರೆಯನ್ನು ಮುಂದುವರಿಸಲು ಕಾರಣರಾಗಿದ್ದಾರೆ ಎನ್ನಬಹುದಷ್ಟೇ ಹೊರತು ಅವರ ಪ್ರತಿಭೆಯನ್ನು ಸಾಮಾನ್ಯ ತಿಳಿವಳಿಕೆಯ ಮಾನದಂಡದಿಂದ ನಿರ್ವಚಿಸ ಹೊರಡುವುದು ಸರಿಯಾಗದು. ಸಾಹಿತ್ಯದ ಸೃಜನಶೀಲ ತುಡಿತಕ್ಕೆ ಕಾರಣವಾಗುವುದು ಸಾಹಿತಿಯ ಸೌಂದರ್ಯಜಿಜ್ಞಾಸೆಗೆ ಸಂಬಂಧಿಸಿದ ನೋವೆ. ತನ್ನ ಸೌಂದರ್ಯದ ಕಾಣ್ಕೆಗೆ ತಡೆ ತರುವ ಬದುಕಿನ ಬಿರುಕುಗಳ ಕುರಿತ ನೋವು ಅಭಿವ್ಯಕ್ತಿಗೆ ಹಾತೊರೆಯುವ ನೋವು ಒಂದು ಸೃಜನಶೀಲ ಕೃತಿಯ ಯೋಗ್ಯತೆಯನ್ನು ನಿರ್ಧರಿಸುತ್ತದೆ. ಮೇಲೆ ಸೂಚಿಸಿದಂತಹ ವಿಶಿಷ್ಟ ಪ್ರತಿಭೆ ಮಾರ್ಗ ದರ್ಶನ ಪ್ರತಿಭೆಯಾಗುತ್ತದೆ. ಇಂಥ ನೋವನ್ನು ಅದರ ಸಮಗ್ರತೆಯಲ್ಲಿ ಕಂಡುಕೊಳ್ಳಬೇಕಾದ ಜೀವನಾನುಭವ ಮುಂದಿನ ಸಹಸ್ರಮಾನದಲ್ಲೂ ಮುಂದುವರಿಯುವುದೆಂದು ಭವಿಷ್ಯ ಹೇಳಬೇಕಾಗಿಲ್ಲ. ಎಂಥ ವೈಜ್ಞಾನಿಕ ಪ್ರಗತಿಯೂ ತಾಂತ್ರಿಕ ಪರಿಣತಿಯೂ ಮಾನವ ಸಮಾಜದ ಎಲ್ಲ ನೋವನ್ನು ನಿವಾರಿಸುವ ಶಕ್ತಿ ಪಡೆದುಕೊಳ್ಳುವುದು ಎಂದು ನಿರ್ಧಾರದ ಮಾತನ್ನು ಹೇಳುವುದು ಯಾರಿಗೂ ಸಾಧ್ಯವಿಲ್ಲ. ಇಂದು ವಿಜ್ಞಾನಿಗಳೂ ನೈತಿಕತೆಯ ಎಚ್ಚರ ತಂದುಕೊಳ್ಳಬೇಕಾಗಿದೆಯೆಂದು ಹೇಳುತ್ತಿರುವುದನ್ನೂ ಸಾಹಿತ್ಯಕ್ಷೇತ್ರದಲ್ಲಿ ಸೃಜನಶೀಲ ಕ್ರಿಯೆಯಲ್ಲಿ ತೊಡಗಿರುವವರೂ ಬದುಕಿನ ಸಮಸ್ಯೆಗಳ ವಿಶ್ಲೇಷಣೆಯಲ್ಲಿ ದಾರ್ಶನಿಕ ಆಯಾಮಗಳನ್ನು ತಂದುಕೊಳ್ಳಲು ಪ್ರಯತ್ನಿಸುವುದನ್ನೂ ನಾವು ನೆನಪಿಗೆ ತಂದುಕೊಳ್ಳಬೇಕಾಗಿದೆ. ಎಲ್ಲ ಸಂಶೋಧನೆಗಳ ಮೂಲದಲ್ಲಿರುವ ಚಿಕಿತ್ಸಕ ಪ್ರವೃತ್ತಿ ಬದುಕಿನ ಬಿರುಕುಗಳು ಉಂಟುಮಾಡುವ ನೋವನ್ನು ಗುರುತಿಸಬಯಸುವ ಸೃಜನಶೀಲ ಸಾಹಿತಿಯಲ್ಲೂ ಇದೆಯಾದ ಕಾರಣ ನೋವು ಚೆಲುವುಗಳ ವೈರುಧ್ಯ ಸಾಹಿತ್ಯಿಕ ಅಭಿವ್ಯಕ್ತಿಗೆ ವಸ್ತುವನ್ನು ನಿರಂತರ ಒದಗಿಸುವುದರಲ್ಲಿ ಸಂದೇಹವಿಲ್ಲ. ಇಲ್ಲಿ ನನಗೆ ನೆನಪಾಗುವುದು ಸುಪ್ರಸಿದ್ಧ ಇಟಾಲಿಯನ್ ನಾಟಕಕಾರ ಪಿರಂಡೆಲ್ಲೊ ಅವರ ಒಂದು ಮಾತು. Ask the poet what is the saddest sight, it is the laughter on the face of man". ಈಗ ಕೊನೆಗೊಂಡ ಶತಮಾನದ ಸಾಹಿತ್ಯಿಕ ಜಿಜ್ಞಾಸೆ ಸಹಜವಾಗಿಯೇ ಹೆಚ್ಚು ಹೆಚ್ಚು ಆಸಕ್ತಿ ವಹಿಸಿದ್ದು, ವ್ಯಕ್ತಿಯ ಅಂತರಂಗ-ಬಹಿರಂಗಗಳ ಸಂಘರ್ಷದಿಂದಾಗಿ ಸಾಮಾಜಿಕವಾಗಿ ಬದುಕಬೇಕಾದಾಗ

ಮಾಡಲೇ ಬೇಕಾಗಿ ಬರುವ ಆಯ್ಕೆಗಳ ಕುರಿತು. ಹಾಗೆಯೇ ಸಮುದಾಯ ಜೀವನ ಹೊರತರುವ ಒತ್ತಡಗಳು ವ್ಯಕ್ತಿಯ ಆಂತರಂಗಿಕ ಪ್ರವೃತ್ತಿ ಹಾಗೂ ಸಾಮಾಜಿಕ ನಡವಳಿಕೆ ಇವುಗಳ ವೈರುಧ್ಯದ ನೋವಿನ ಕುರಿತು. ನೈತಿಕತೆಯ ಸಾಪೇಕ್ಷವೆನಿಸುವ ಮೌಲ್ಯಪ್ರಜ್ಞೆಯ ಕುರಿತು. ಇವೆಲ್ಲವನ್ನು ಸಾಹಿತ್ಯಿಕ ಅಭಿವ್ಯಕ್ತಿಗೆ ಒಳಪಡಿಸುವ ಸೃಜನಶೀಲ ತುಡಿತಕ್ಕೆ ನೋವೇ ಮೂಲ - ಅದನ್ನು ಅಳಿಸಬಹುದಾದ, ಸರಿಪಡಿಸಬಹುದಾದ ಚೆಲುವಿನ, ಸೌಂದರ್ಯದ ವ್ಯವಸ್ಥಿತ ಬದುಕಿನ ಆದರ್ಶದ ಹಿನ್ನೆಲೆಯಲ್ಲಿ.

ಈಗ ಮುಗಿಯುತ್ತಿರುವ ಸಹಸ್ರಮಾನದ ಇಪ್ಪತ್ತನೆಯ ಶತಮಾನವಂತೂ ವಿಶ್ವದ ಎಲ್ಲ ಭಾಗಗಳ ಮಾನವ ಸಮಾಜಗಳನ್ನು ತಟ್ಟಿದೆ, ವಿಜ್ಞಾನದ ಅದ್ಭುತವೆನಿಸುವ ಮುನ್ನಡೆಯ ಶತಮಾನ, ನ್ಯೂಟನ್‌ನ ಅನಂತರ ವಿಜ್ಞಾನ ಪ್ರಪಂಚಕ್ಕೆ ಅದ್ಭುತಕೊಡುಗೆಯನ್ನಿತ್ತ ಐನ್‌ಸ್ಟೈನ್ ಅವರ ಶತಮಾನ. ಅಣುಸ್ಫೋಟದ ಶತಮಾನ, ಮನುಷ್ಯನ ಅಂತರಂಗದ ಕಣಕಣಗಳನ್ನು ಶೋಧಿಸಲೆತ್ನಿಸಿದ ಶತಮಾನ. ಜೀವ ವಾಹಿ ಡಿಎನ್‌ಎಯ ಶತಮಾನ. ಅಷ್ಟೆಯೇ ಕುರಿ, ಮಂಗಗಳ ಅದ್ಭುತವೆನಿಸುವ ಪ್ರತಿಸೃಷ್ಟಿಯ ಶತಮಾನ. ಪ್ಲಾಸ್ಟಿಕ್, ರಾಡಾರ್, ಸಿಲಿಕಾನ್ ಚಿಪ್ಸ್ ಇವುಗಳ ಶೋಧನೆಯ ಶತಮಾನ, ಪಾರಂಪರಿಕವೆನಿಸುವ ತರ್ಕ, ಭಾಷೆ, ಅಧ್ಯಯನ, ಗಣಿತ, ಅರ್ಥಶಾಸ್ತ್ರ ಬಾಹ್ಯಾಕಾಶ ಮೊದಲಾದವುಗಳ ಕುರಿತ ತಿಳಿವಳಿಕೆಯನ್ನು ಬುಡಮೇಲು ಮಾಡಿದ ಶತಮಾನ, ಮಾನವನ ಪ್ರಗತಿಗೆ ಹಾಗೂ ವಿನಾಶಕ್ಕೂ ಸಹಕರಿಸಬಹುದಾದ ವೈಜ್ಞಾನಿಕ, ಬೌದ್ಧಿಕ ಶೋಧನೆ, ಸಂಶೋಧನೆಗಳ ಹಿಂದೆ ಸೃಜನಶೀಲ ಆಸಕ್ತಿ ಕೆಲಸ ಮಾಡಿದ್ದು ವಿಶಿಷ್ಟ ಪ್ರತಿಭೆಯಿರುವ ಮಾನವನ ಮನಸ್ಸು. ಇಂದಿನ ಸಾಹಿತ್ಯ ಇವೆಲ್ಲವುಗಳಿಂದ ಪ್ರಭಾವಿತವಾಗಿದೆ. ಹೊಸ ಸಹಸ್ರಮಾನದ ಆರಂಭದ ಶತಮಾನಗಳಲ್ಲಿ ಇಂತಹ ಚಿಂತನೆ ವೈಜ್ಞಾನಿಕ ಹಾಗೂ ತಾಂತ್ರಿಕ ಜ್ಞಾನ ಬದುಕನ್ನು ತಟ್ಟುವ ಸತ್ಯಗಳನ್ನು ಅನ್ವೇಷಿಸುತ್ತ ಮುಂದುವರಿಯಬಹುದಾದುದು ಸಹಜವೇ. ಆದರೆ ಒಂದು ಶತಮಾನದ ಕಾಲಾವಧಿಯ ಸಾಮಾಜಿಕ ಬದುಕು ಸಹಸ್ರಮಾನದ ಕೊನೆಯ ತನಕವೂ ಹಾಗೆಯೇ ಮುಂದುವರಿಯಬಹುದು, ಸಾಮಾಜಿಕಪ್ರಜ್ಞೆಯಾಗಲೀ ಸಾಮಾಜಿಕ ಬದುಕು ನೆಚ್ಚಿಕೊಳ್ಳಬಹುದಾದ ನೈತಿಕತೆಯ ಪರಿಕಲ್ಪನೆಗಳಾಗಲಿ, ಹಾಗೆಯೇ ಮುಂದುವರಿಯಬಹುದು ಎಂದು ಹೇಳುವುದು ಮಾತ್ರ ಸರಿಯೆನಿಸದು. ಭಾರತದ ಸಾಮಾಜಿಕ ಬದುಕು ಕಳೆದ ಸಹಸ್ರಮಾನದ ಆದಿಯಲ್ಲಿ ಹೇಗಿತ್ತು, ಇಂದು ಹೇಗಾಗಿದೆ ಎಂಬುದನ್ನು ಸ್ಥೂಲವಾದ ಐತಿಹಾಸಿಕ ದೃಷ್ಟಿಯಿಂದ ನೋಡಿದರೂ ಕಂಡು ಬರುವ ಅಗಾಧವೆನಿಸುವ ಅಂತರ ನಮಗೆ ಆಶ್ಚರ್ಯವನ್ನುಂಟು ಮಾಡುವುದಿಲ್ಲ. ಆದರೆ ನಾನು ಹಿಂದೆ ಹೇಳಿದಂತೆ ನೋವನ್ನು ತಿರಸ್ಕರಿಸಬೇಕು ಅಥವಾ ಅಳಿಸಬೇಕು. ಎನ್ನುವ ಆದರ್ಶದ ಸೌಂದರ್ಯಪ್ರಜ್ಞೆ ಪರಿವರ್ತನೆಗೊಳ್ಳುತ್ತಲೇ ಇರುವ ಸಾಮಾಜಿಕ ರೀತಿ ನೀತಿಗಳು, ಮೌಲ್ಯಪ್ರಜ್ಞೆ ಇವುಗಳ ನಡುವೆಯೂ ನೋವೇ ಚಿರಕಾಲ ಶೋಧಿಸಬೇಕಾದ ಸತ್ಯವಾಗಿ ಉಳಿಯುವ ವಿಸ್ಮಯವನ್ನು ನಾವು ವಿಶ್ವದಾದ್ಯಂತ ಕಾಣುತ್ತೇವೆ. ಇದರ ಪರಿಣಾಮವಾದ ಸೃಜನಶೀಲ ತುಡಿತವನ್ನೂ ಕಾಣುತ್ತಲೇ ಇರುತ್ತೇವೆ. ಒಂದು ಸಣ್ಣ ಉದಾಹರಣೆ ಇಂದಿನ ಗ್ರಾಹಕ ಸಂಸ್ಕೃತಿ. ಸುಖದ ಪರಿಕಲ್ಪನೆಗಳಿಗೆ ಹೊಂದಿಕೊಂಡು ಮುಂದುವರಿಯುತ್ತಿರುವ ಈ ಗ್ರಾಹಕ ಸಂಸ್ಕೃತಿ ಮುಂದ ಎಂಥವೆಲ್ಲ ನೋವಿಗೆ ಕಾರಣವಾಗಬಹುದು ಎಂಬುದನ್ನು ಹೇಳಲು ತ್ರಿಕಾಲ ಜ್ಞಾನ ಅಗತ್ಯವಿಲ್ಲ.

ಬಂಗಾಳ, ಶರತ್‌ಚಂದ್ರ ಚಟರ್ಜಿ ಅವರನ್ನು ಯುಗ ಪ್ರವರ್ತಕ ಲೇಖಕನೆಂದು ಗೌರವಿಸಿದೆ. ಇತ್ತೀಚೆಗೆ ಶತಮಾನದ ಅತ್ಯಂತ ಮಹತ್ವದ ಲೇಖಕನೆಂದೂ ಒಂದು ಸಮೀಕ್ಷೆ ತಿಳಿಸಿದೆ ಎಂದು ವರದಿಯಾಗಿದೆ. ಪ್ರಾಯಶಃ ಭಾರತದ ಇತರ ಭಾಷಾ ವಲಯಗಳಲ್ಲೂ ಇಂತಹ ಸಮೀಕ್ಷೆ ನಡೆದಿರಬಹುದು. ತಮ್ಮ ತಮ್ಮ ಭಾಷಾವಲಯಗಳಲ್ಲಿ ಶತಮಾನದ ಮಹತ್ವದ ಲೇಖಕರೆನಿಸಿಕೊಂಡವರ ಆಯ್ಕೆಯೂ ನಡೆದಿರಬಹುದು. ಆದರೆ ಶರತ್‌ಚಂದ್ರರ ಆಯ್ಕೆಗೆ ಭಾರತದಾದ್ಯಂತ ಅವರ ಕೃತಿಗಳನ್ನು ಓದಿದವರು ಸೈಗುಟ್ಟಬಹುದಾದಂತಹ ಬೇರೆ ಬೇರೆ ಭಾಷಾವಲಯಗಳ ಲೇಖಕರಿಗೆ ಇತರ ಭಾಷಾವಲಯಗಳವರು ಸ್ಪಂದಿಸುವುದು ಸಂದೇಹದ ಮಾತು. ಹೊಸ ಸಹಸ್ರಮಾನದ ಸೃಜನಶೀಲ ಸಾಹಿತ್ಯದ ಕುರಿತು ಮಾತನಾಡುವಾಗ ಶರತ್ ಚಂದ್ರರ ವಿಚಾರ ಪ್ರಸ್ತುತವಾಗುವುದು ಅವರು ತನ್ನ ಕೃತಿಗಳ ಯೋಗ್ಯತೆಯಿಂದಲೇ ಅನುವಾದದ ಪರಂಪರೆ ವಿಶೇಷವಾಗಿ

ಬೆಳೆದಿದ್ದ ಕಾಲದಲ್ಲೂ ರಾಷ್ಟ್ರದಾದ್ಯಂತ ಓದುಗರ ವರ್ಗವನ್ನು ಸಂಪಾದಿಸಲು ಶಕ್ತರಾದವರೆಂದು. ಅಂತಹ ವಿಶಿಷ್ಟ ಜನಪ್ರಿಯತೆಯ ಲೇಖಕರನ್ನು ಕಳೆದ ಶತಮಾನದಲ್ಲಿ ಬೆರಳೆಣಿಕೆಯಲ್ಲೆ ಗುರುತಿಸಬೇಕು. ಈ ಆಯ್ಕೆಗೆ ವಿಮರ್ಶಕರನೇಕರ ಸಹಮತವಿರಲಾರದೆಂದು ನನಗೆ ತಿಳಿದಿದೆ. ಬಂಕಿಂ ಹಾಗೂ ರವೀಂದ್ರನಾಥ ಠಾಕೂರರ ಮಟ್ಟಕ್ಕೆ ಬಾರದ ಭಾವುಕ ಲೇಖಕರೆಂದು ಶರತ್ ಟೀಕೆಗೊಳಗಾಗಿದ್ದುದಿದೆ. ಆದರೆ ಶರತ್ ದೇಶದಾದ್ಯಂತ ಗಳಿಸಿಕೊಂಡ ಜನಕೋಟಿಯ ಅಭಿಮಾನಕ್ಕೆ ಕಾರಣಗಳೇನು? ಭಾರತೀಯ ಪರಿಸರದಲ್ಲಿ, ಭಾರತೀಯ ಸಾಂಸ್ಕೃತಿಕ ನೆಲೆಯಲ್ಲಿ ಅವರ ಸಾಹಿತ್ಯದಲ್ಲಿ ಸ್ತ್ರೀ ಶೋಷಣೆಯ ಕುರಿತ ನಿಲುವು, ಸ್ತ್ರೀಪರ ದೃಷ್ಟಿಕೋನ ಈ ಶತಮಾನದ ಸೃಜನಶೀಲ ತುಡಿತಕ್ಕೆ ಕಾರಣವಾದ ಸಾಮಾಜಿಕ ಪರಿಸ್ಥಿತಿಯನ್ನೂ ಶೋಷಣೆ ಅನ್ಯಾಯಗಳಿಗೊಳಗಾದ ಸ್ತ್ರೀಯ ಮೂಕವೇದನೆಯನ್ನೂ ಸ್ಪಷ್ಟವಾಗಿ ಅಭಿವ್ಯಕ್ತಿಸಿದೆ. ಅವರ ಸ್ತ್ರೀ ಪಾತ್ರಗಳೆಲ್ಲ ಕಾಲದ ಗತಿಯನ್ನೂ ನೆನಪಿನ ಮಿತಿಯನ್ನೂ ದಾಟಿ ಮನಸ್ಸಿನಲ್ಲಿ ಅಚ್ಚಳಿಯದೆ ನಿಂತಿರುವುದರಿಂದ ''ಚರಿತ್ರಹೀನ'ದ ಸಾವಿತ್ರಿ, ಕಿರಣ್ಮಯಿ, ಶ್ರೀಕಾಂತದ ರಾಜಲಕ್ಷ್ಮೀ ಮುಂತಾದವು ಸ್ತ್ರೀ ಸಂವೇದನೆಯ ಸಾರ್ವಕಾಲಿಕ ಆಯಾಮಗಳನ್ನು ಸಾರುವ ಪಾತ್ರಗಳಾಗಿ ನಿಂತಿವೆ.

ಈ ಶತಮಾನದ ಸ್ತ್ರೀ ಸಂವೇದನೆಯ ಕುರಿತ ಸೃಜನಶೀಲ ತುಡಿತ ಈಗ ಕೊನೆಗೊಳ್ಳುತ್ತಿರುವ ಶತಮಾನದ ಅಂತ್ಯದಲ್ಲಿ ಗಮನಾರ್ಹ ರೀತಿಯಲ್ಲಿ ಕನ್ನಡದ ಸಾಹಿತ್ಯ ಕ್ಷೇತ್ರದಲ್ಲಿ ಕಾಣಿಸಿಕೊಂಡಿರುವುದನ್ನು ಗಮನಿಸಿ ಶರತ್‌ಚಂದ್ರರ ಕೃತಿಗಳ ಪ್ರಸ್ತಾಪ ಮಾಡುವುದು ಪ್ರಸ್ತುತವೆನಿಸುತ್ತದೆ. ನಮ್ಮ ಸಾಮಾಜಿಕ ಪರಿಸರದಲ್ಲಿ ಸ್ತ್ರೀ ಅನುಭವಿಸುತ್ತಲೇ ಇರುವ ನೋವು ಮುಂದಿನ ಸಹಸ್ರಮಾನದಲ್ಲೂ ಶತಮಾನಗಳ ಕಾಲ ಮುಂದುವರಿಯುವ ಲಕ್ಷಣಗಳು ಕಂಡುಬರುತ್ತಿರುವುದರಿಂದ ಈ ಸ್ತ್ರೀ ಶೋಷಣೆಯ ನೋವಿನಲ್ಲಿ ನಾನು ಹಿಂದೆ ಸೂಚಿಸಿದ ಸಾಹಿತ್ಯ, ಭೂತ, ವರ್ತಮಾನಗಳನ್ನು ಬೆಸೆಯುವ ಕೊಂಡಿಯೆಂಬ ಮಾತಿಗೆ ಸ್ಪಷ್ಟೀಕರಣವೂ ಇದೆ. ಕನ್ನಡದ ಸಂದರ್ಭದಲ್ಲಿ ಸ್ತ್ರೀ ಸಂವೇದನೆ ವೈಚಾರಿಕ ನೆಲೆಯಲ್ಲೂ ಸಾಹಿತ್ಯಿಕವಾಗಿ ಮಹತ್ವದ ವಿವೇಚನೆಗೆ ಒಳಗಾಗುತ್ತಿರುವ ಅಂಶ, ಎಂಬ ತಿಳಿವಳಿಕೆ ಹರಡುತ್ತಿರುವಾಗ ತುಂಬ ಕುತೂಹಲವಾದ, ಸಹಸ್ರಮಾನಗಳಿಗೆ ಅನ್ವಯಿಸುವ ಸಾಹಿತ್ಯಿಕ ಸತ್ಯಗಳೂ ಬೆಳಕಿಗೆ ಬಂದಿವೆ. ನಮ್ಮ ಮಹಾಕಾವ್ಯಗಳಾದ 'ರಾಮಾಯಣ', 'ಮಹಾಭಾರತ'ಗಳ ಪ್ರಮುಖ ಸ್ತ್ರೀ ಪಾತ್ರಗಳನ್ನು ಸ್ತ್ರೀ ಸಂವೇದನೆಯ ದೃಷ್ಟಿಯಿಂದ ಪರಿಶೀಲಿಸುವ ಸಾಹಿತ್ಯ ಕೃತಿಗಳು ಪ್ರಕಟವಾಗಿವೆ. ಅಹಲ್ಯಾ, ಕುಂತಿ, ದ್ರೌಪದಿ ಮುಂತಾದ ಪಾತ್ರಗಳನ್ನು ಆಧುನಿಕ ಸಂದರ್ಭದ ಸ್ತ್ರೀ ಸಂವೇದನೆಯ ತಿಳಿವಳಿಕೆಯ ಹಿನ್ನೆಲೆಯಲ್ಲಿ ಪುನರ್‌ಮೌಲ್ಯಮಾಪನ ಮಾಡಿದ ಕೃತಿಗಳು ಬಂದಿವೆ / ಬರುತ್ತಿವೆ. ಇಲ್ಲಿ ನಾನು ಮುಖ್ಯವಾಗಿ ಹೇಳಬಯಸುವುದಿಷ್ಟೆ. ಸಾಮಾನ್ಯವಾಗಿ ದುರ್ಬಲಳು, ಪುರುಷನಿಗೆ ಅಧೀನಳಾಗಿಯೇ ಇರಬೇಕಾದವಳು ಎಂದು ಐತಿಹಾಸಿಕವಾಗಿ ಪರಿಗಣಿಸಲ್ಪಟ್ಟಿರುವ ಸ್ತ್ರೀ ಸಹಸ್ರಮಾನಗಳ ಕಾಲ ಗಣನೆಯಲ್ಲೂ ಆಕೆ ಅನುಭವಿಸುತ್ತಲೇ ಬಂದಿರುವ ನೋವು ಸಾರ್ವಕಾಲಿಕ ಮಹತ್ವ ಪಡೆದು ಸೃಜನಶೀಲ ತುಡಿತಕ್ಕೆ ಕಾರಣವಾಗುತ್ತಿರುವುದರಿಂದ ಹೊಸ ಸಹಸ್ರಮಾನದ ಸಾಮಾಜಿಕ ಪರಿವರ್ತನೆಗಳು ಏನೆ ಇರಲಿ, ಸ್ತ್ರೀಯ ವ್ಯಕ್ತಿತ್ವ ಸೃಜನಶೀಲ ತುಡಿತಕ್ಕೆ ಕಾರಣವಾಗಿಯೇ ಮುಂದುವರಿಯುವುದೆಂದು ಹೇಳಲು ಅನುಮಾನಿಸಬೇಕಾಗಿಲ್ಲ.

ಭಾರತದ ಸಂದರ್ಭದಲ್ಲಂತೂ ನಮ್ಮ ಪುರಾಣ ಪ್ರತಿಮೆಗಳು, ಅವು ಆಧುನಿಕತೆ ತರುತ್ತಲೇ ಇರುವ ಪರಿವರ್ತನೆಗಳಿಗೆ ಮುಖಾಮುಖಿಯಾಗುವ ರೀತಿ, ಇವೆಲ್ಲವುಗಳ ಮೂಲದಲ್ಲಿರುವ ಅತೃಪ್ತಿ, ನೋವು ಸ್ಥಾಯಿರೂಪದಲ್ಲಿ ಬದುಕಿನಲ್ಲಿ ಚೆಲುವನ್ನು ಅರಸುವ ಈ ತೆರನಾದ ಸಾಹಿತ್ಯಕ್ರಿಯೆ ಪಾಶ್ಚಾತ್ಯಸಾಹಿತ್ಯವನ್ನು ಯಾವ ರೀತಿ ಪ್ರಭಾವಿಸಿದೆಯೆಂದು ಕುತೂಹಲ ನಮಗಿರುವುದು ಸಹಜವೇ, ಅಲ್ಲಿ ಪರಂಪರೆಯ ಮಾತನ್ನು ಬದಿಗಿಟ್ಟು ವರ್ತಮಾನದ ಸಂವೇದನೆಗಳೇ ಸೃಜನಶೀಲತೆಗೆ ಒತ್ತು ಕೊಡುತ್ತಿರುವುದಕ್ಕೆ ಉದಾಹರಣೆಗಳನ್ನು ಕೊಡಬಹುದು. ನೋವು - ಮಾನಸಿಕವಿರಲಿ, ಬಾಹ್ಯ ಪರಿಸರಕ್ಕೆ ಸಂಬಂಧಿಸಿದ್ದಿರಲಿ, ಅಭಿವೃದ್ಧಿ ಪಡೆದ ರಾಷ್ಟ್ರಗಳಿಗಿಂತ ಇತರ ರಾಜ್ಯಗಳಲ್ಲಿ, ಎಂದರೆ ಬಡತನ, ಸಾಮಾಜಿಕ ಅಸಮಾನತೆ, ಶಿಕ್ಷಣದ ಸಂಸ್ಕಾರ ಪಡೆಯದ ಜನ ಸಮುದಾಯ ಇರುವಲ್ಲಿ ಹೆಚ್ಚು ಎನ್ನುವುದನ್ನು ಸಾಹಿತ್ಯ ಕೃತಿಗಳಿಂದ ಪ್ರತಿಪಾದಿಸಲು, ಇತ್ತೀಚೆಗಿನ ಕೆಲವು ವರ್ಷಗಳಲ್ಲಿ

ನೋಬೆಲ್ ಸಾಹಿತ್ಯ ಪಾರಿತೋಷಕವನ್ನು ಗೆದ್ದುಕೊಂಡ ಆಫ್ರಿಕಾ, ದಕ್ಷಿಣ ಅಮೆರಿಕ, ಪೋರ್ಚುಗಲ್ ಈ ರಾಜ್ಯಗಳ ಲೇಖಕರ ಬಳಗವೇ ಸಾಕ್ಷಿ. ಬಡತನ, ಅಸಮಾನತೆ ತಂದೊಡ್ಡುವ ಸಾಮಾಜಿಕ ವಿಷಮತೆ, ಸ್ವಾತಂತ್ರ್ಯಹರಣ, ಸರ್ವಾಧಿಕಾರದ ದಬ್ಬಾಳಿಕೆ, ಯುದ್ಧ, ಮತೀಯ ಮೂಲಭೂತವಾದ, ಜನಾಂಗಿಕ ಹಾಗೂ ವರ್ಣದ್ವೇಷ ಇವೆಲ್ಲ ಹೊರಡಿಸುವ ನೋವಿನ ಹಿನ್ನೆಲೆಯಲ್ಲಿ ಸೃಜನಶೀಲ ಪ್ರತಿಭೆ ಅರಳಲು ಅವಕಾಶಗಳು ಹೆಚ್ಚು.

ಈ ಸಹಸ್ರಮಾನದ ಕೊನೆಯಲ್ಲಿ, ಅದ್ಭುತವೆನಿಸುವ ವೈಜ್ಞಾನಿಕ ಮುನ್ನಡೆಯ ನಡುವೆಯೂ ಪರಿಪೂರ್ಣವೂ ಸುಂದರವಾದುದೂ ಎನ್ನುವ ಸಾಮಾಜಿಕ ಪರಿಕಲ್ಪನೆ ದೂರದ ನಕ್ಷತ್ರವೇನೋ ಎನಿಸುವಂತಹ ಸಂದರ್ಭದಲ್ಲಿ ಹೊಸ ಸಹಸ್ರಮಾನದಲ್ಲೂ ನೋವೇ ಸಾಹಿತ್ಯಕ ಆಕೃತಿ ಪಡೆಯುವುದೆನ್ನಲು ಹೆಚ್ಚು ಸಂದೇಹ ಪಡಬೇಕಾಗಿಲ್ಲ. ಇದು ವಿಶ್ವಕ್ಕೆ ಅನ್ವಯಿಸುವ ಮಾತಾದರೂ ಬಡತನ, ಆರ್ಥಿಕ ಅಸಮಾನತೆ, ನಿಯಂತ್ರಣಕ್ಕೊಳಗಾಗದ ಜನಸಂಖ್ಯೆಯ ಹೆಚ್ಚಳ, ನಿರಕ್ಷರತೆಯ ವೈಯಕ್ತಿಕ ಹಾಗೂ ಸಾಮಾಜಿಕ ನೋವು, ಮತಾಂಧತೆಯ ನೋವು, ನಿರಂಕುಶ ಸರ್ವಾಧಿಕಾರದ ಆಡಳಿತೆಯ ನೋವು, ಇಂಥವೆಲ್ಲ ಹೆಚ್ಚಿರುವಲ್ಲಿ ಮಹತ್ವದ ಸೃಜನಶೀಲ ಕೃತಿಗಳು ಹೊರಬರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಇದಕ್ಕೆ ಅನುಕೂಲ ಪರಿಸರವನ್ನು ಒದಗಿಸುವ ಆಫ್ರಿಕಾ, ದಕ್ಷಿಣ ಅಮೆರಿಕ, ಪೂರ್ವ ಪ್ರಾಚ್ಯದ ದೇಶಗಳು ಭಾರತ, ಇಂಥ ರಾಷ್ಟ್ರಗಳೇ ಪ್ರಾಯಶಃ ಹೊಸ ಸಹಸ್ರಮಾನದ ವಿಶ್ವಮಾನ್ಯ ಸಾಹಿತ್ಯ ಕೃತಿಗಳನ್ನು ಒದಗಿಸಲು ಸಮರ್ಥವಾಗಬಹುದು. ಆದರೂ ಈ ಸಹಸ್ರಮಾನದಲ್ಲಿ ವಿಜ್ಞಾನ ತಂತ್ರಜ್ಞಾನಗಳು ಸಾಧಿಸಿರುವ ಪ್ರಗತಿಯನ್ನು ಗಣನೆಗೆ ತಂದು ಕೊಳ್ಳುವಾಗ, ಸಾಹಿತ್ಯಕ್ಕಷ್ಟೇ ಅಲ್ಲ ಮಾನವ ಕುಲದ ಸಮಾಜ ಜೀವನ ಪರಿವರ್ತನೆಗೊಳ್ಳುತ್ತ ಬಂದ ಬಗೆಯನ್ನು ಗಮನಿಸಿದಾಗ, ಮುಂದೆ ಬರಬಹುದಾದ ಸಮಾಜಜೀವನವನ್ನು ಎಚ್ಚರಿಕೆಯೆಂದೇ ಕಲ್ಪಿಸಿಕೊಳ್ಳಬೇಕು ಎಂದು ಹೇಳದಿರಲಾಗುವುದಿಲ್ಲ. ಈ ಸಹಸ್ರಮಾನದ ಕೊನೆಯಲ್ಲಿ ನಾವು ಸಾಧಿಸಿರುವ ವೈಜ್ಞಾನಿಕ ಪ್ರಗತಿ ಇಂದಿನ ಅದ್ಭುತ ಸಾಧನೆಗಳೆಂದು ತಿಳಿಯಲಾಗುತ್ತಿರುವ ಡಿಎನ್‌ಎ, ಜೀವವಾಹಿ ವೈಜ್ಞಾನಿಕ ಸಾಧನೆ, ಜೆನೆಟಿಕ್ ಇಂಜಿನಿಯರಿಂಗ್ ಹಾಗೂ ಕ್ಲೋನಿಂಗ್ ಪ್ರತಿರೂಪ ಸೃಷ್ಟಿ, ಕುರಿಗಳನ್ನೂ ಮಂಗಗಳನ್ನೂ ಪ್ರತಿರೂಪಗಳಾಗಿ ಸೃಷ್ಟಿಸಲು ಸಾಧ್ಯವಾಗುತ್ತಿರುವಾಗ, ಗಣಕ ಯಂತ್ರಗಳ ಬೆರಗುಗೊಳಿಸುವ ಸಾಧನೆ, ಮಾಹಿತಿ ತಂತ್ರಜ್ಞಾನದ ಬಳಕೆ ವಿಶ್ವವನ್ನೇ ಒಂದು ಹಳ್ಳಿಯ ಪರಿಮಿತಿಗೆ ತರುವಂತಿರುವಾಗ ಹೊಸ ಸಹಸ್ರಮಾನದ ಸಮಾಜಜೀವನವನ್ನು ಕಲ್ಪಿಸಿಕೊಳ್ಳುವುದೂ ಕಷ್ಟವೆಂದೆ ತೋರುತ್ತಿವೆ. ಗಣಕಯಂತ್ರಗಳ ಸಾಧನೆಯಿಂದಾಗಿ ಜನಪ್ರಿಯವೆನಿಸುವ ಸಾಹಿತ್ಯಸೃಷ್ಟಿಗೆ ಮಾನವನ ಸೃಜನಶೀಲ ಮನಸ್ಸು ಕೆಲಸ ಮಾಡುವ ಅಗತ್ಯವಿದೆಯೇ? ಗಣಕಯಂತ್ರಜ್ಞಾನದಿಂದಾಗಿ ಆಡಳಿತೆ, ರಾಜಕೀಯ ಸಾಮಾಜಿಕ, ಧಾರ್ಮಿಕ ಹಿತದ ಪರಿಕಲ್ಪನೆಗಳೆಲ್ಲ ಹೇಗೆ ಬದಲಾಗಬಹುದು, ಮನುಷ್ಯನ ಏಕಾಂತ ಚಿಂತನೆ, ಓದುವ ಪ್ರವೃತ್ತಿ ಗಣಕಯಂತ್ರಗಳೇ ಎಲ್ಲವನ್ನು ನಿರ್ಧರಿಸುವ ಸಾಮಾಜಿಕ ಪರಿಸ್ಥಿತಿಗೆ ಹೇಗೆ ಸ್ಪಂದಿಸಬೇಕಾಗಬಹುದು, ಆಲಸ್ಯಕ್ಕೇ ಹೆಚ್ಚು ಅವಕಾಶ ದೊರಕಬಹುದಾದ ಸಾಮಾಜಿಕ ವಾತಾವರಣದಲ್ಲಿ ಸೌಂದರ್ಯಪ್ರಜ್ಞೆ ಬದಲಾಗುವುದೇ ನೈತಿಕವೆನಿಸುವ ಮೌಲ್ಯಗಳಲ್ಲಿ ಯಾವ ರೀತಿಯ ಬದಲಾವಣೆಗಳು ಬರಬಹುದು ಎಂಬೆಲ್ಲ ಪ್ರಶ್ನೆಗಳಿಗೆ ಸಮಾಧಾನ ಹೇಳುವುದು ಕಷ್ಟ. ಆದರೆ ಒಂದು ಮಾತು ಮಾತ್ರ ನಿಜ. ಇಂತಹ ಚಿಂತನೆ ಹೊಸ ಸಹಸ್ರಮಾನದ ಸೃಜನಶೀಲ ಚಿಂತನೆಯನ್ನು ಪ್ರಭಾವಿಸದೆ ಇರುವಂತಿಲ್ಲ. ಪ್ರಕೃತಿಯ ಚೆಲುವಿಗೆ ಸ್ಪಂದಿಸುತ್ತಲೇ ಇರಬೇಕಾದ ಮಾನವನ ಮನಸ್ಸು ಪರಿಸರದ ಕುರಿತ ಕಾಳಜಿಯಲ್ಲಿ ತೃಪ್ತಿ ಪಟ್ಟುಕೊಳ್ಳಬೇಕೇ. ಗಣಕ ಯಂತ್ರಗಳು ದೊರಕಿಸಿ ಕೊಡಬಹುದಾದ ಬಿಡುವು ಪಲಾಯನವಾದಿ ದೃಶ್ಯ ಮಾಧ್ಯಮಗಳನ್ನು ನೆಚ್ಚಿಕೊಳ್ಳುವ ಪ್ರವೃತ್ತಿಯನ್ನು ಪ್ರೋತ್ಸಾಹಿಸಿ, ಸಾಹಿತ್ಯಕಲೆಗಳಿಗೆ ಸಂಬಂಧಿಸಿದ ವಿಚಾರಗಳನ್ನು ಪರೋಕ್ಷವಾಗಿ ದೃಶ್ಯಮಾಧ್ಯಮಗಳ ಮೂಲಕ ತರುವ ಅಭಿರುಚಿಯನ್ನು ತನ್ನದಾಗಿಸಿಕೊಳ್ಳಬೇಕೇ ಜೀವವಾಹಿ ತಂತ್ರಜ್ಞಾನ ಮನುಷ್ಯನ ಅಸ್ತಿತ್ವಕ್ಕೆ ಅರ್ಥವಿಲ್ಲವೆನ್ನುವ ಸಾಮಾಜಿಕ ಸಂದರ್ಭವನ್ನು ತಂದು ಬದುಕಿಗೆ ಅರ್ಥವಿಲ್ಲವೆನ್ನುವ ಸಿನಿಕತನವನ್ನು ಬೆಳೆಸಬಹುದೇ ಎಂಬೆಲ್ಲ ಪ್ರಶ್ನೆಗಳನ್ನು ಹೊಸ ಸಹಸ್ರಮಾನದಲ್ಲಿ

ಇದಿರಿಸಬೇಕಾಗುವುದೇ ಎಂಬ ಯೋಚನೆಗಳು ಕಾಡಲೂ ಬಹುದು. ಆದರೆ ಇವೆಲ್ಲವುಗಳ ಹಿಂದಿರುವ ಅತೃಪ್ತಿಯ ನೋವು ಸೃಜನಶೀಲ ತುಡಿತವನ್ನು ಜಾಗೃತಗೊಳಿಸುವಂಥದ್ದು....

ಇಂಥ ಚಿಂತನೆಯ ಹಿನ್ನೆಲೆಯಲ್ಲಿ ಅಸ್ತಿತ್ವವಾದಿ ತತ್ವಜ್ಞಾನದ ಕಾರಣ ಪುರುಷನೆಂದು ತಿಳಿಯಲಾಗುತ್ತಿರುವ ಕರ್ಕೆಗಾರ್ಡನ Either/or ಗ್ರಂಥದಲ್ಲಿ "The aesthetic in a man is that by which he is immediately what he is, the ethical is that whereby he becomes what he becomes" ಎಂಬ ಮಾತು ನೆನಪಾಗುತ್ತಿದೆ.

ವ್ಯಕ್ತಿಯ ಸೌಂದರ್ಯ ಜಿಜ್ಞಾಸೆ ನೈತಿಕವಾಗುವ ಪ್ರಕ್ರಿಯೆ ಹೊಸ ಸಹಸ್ರಮಾನದಲ್ಲಿ ನಮ್ಮ ಇಂದಿನ ನೈತಿಕತೆಯ ಮಾನದಂಡದ ಸಂವೇದನೆಗಳನ್ನು ತಂದುಕೊಳ್ಳಬಹುದು ಎಂದು ಹೇಳುವುದು ಕಷ್ಟ. ಯಾಕೆಂದರೆ ಸಾಮಾಜಿಕ ನೈತಿಕತೆಯ ಸ್ವರೂಪವೇ ಬದಲಾಗಬಹುದು. ಆದರೆ ಇದು ಹೊರಡಿಸಬಹುದಾದುದೂ ಸೃಜನಶೀಲ ತುಡಿತದ ನೋವನ್ನೇ.

●

ಕನ್ನಡೇತರರಿಗೆ ಕನ್ನಡ ಕಲಿಸುವ ಕ್ರಮ *

ಡಾ. ಶಾಂತಾದೇವಿ ಸಣ್ಣೆಲ್ಲಪ್ಪನವರ

ಕನ್ನಡ ಭಾಷೆಯ ಅಕ್ಷರಗಳು ಇತರ ಭಾಷೆಯ ಅಕ್ಷರಗಳಿಗಿಂತ ನೋಡಲು ದುಂಡು ದುಂಡಾಗಿದ್ದು, ತುಂಬಾ ಸುಂದರವಾಗಿವೆ [1]. ಇದಕ್ಕೆ ಕಾರಣವೆಂದರೆ ಹೆಚ್ಚು ಅಕ್ಷರಗಳ ಆಕಾರ ಗೋಲಾಕಾರದಲ್ಲಿದ್ದು ಇವುಗಳನ್ನು ಬರೆಯುವಾಗ ಬೆರಳುಗಳನ್ನು ಮೇಲಿಂದ ಮೇಲೆ ವೃತ್ತಾಕಾರದಲ್ಲಿ ತಿರುಗಿಸುವುದಾಗಿದೆ [2]. (ಇಂಗ್ಲೀಷ್ ಅಕ್ಷರಗಳನ್ನು ಬರೆಯುವಾಗ ಬೆರಳುಗಳು ಹೆಚ್ಚಾಗಿ ಮೇಲೆ ಕೆಳಗೆ ಮತ್ತು ಅಡ್ಡವಾಗಿ ಚಲಿಸುವುದನ್ನು ಗಮನಿಸಬಹುದು).

ಪ್ರಥಮವಾಗಿ, ದ್ವಿತೀಯ ಭಾಷಾ ಅಧ್ಯಾಪಕರು ಕನ್ನಡೇತರರಿಗೆ ಕನ್ನಡ ವರ್ಣಮಾಲೆಯನ್ನು ಕಲಿಸುವ ಪೂರ್ವದಲ್ಲಿ ಅವರಿಗೆ ಕನ್ನಡ ಭಾಷೆಯ ಬಗೆಗೆ ಆಸಕ್ತಿಯನ್ನು ಹುಟ್ಟಿಸುವ ಸಲುವಾಗಿ ಕನ್ನಡದ ಸಂಕ್ಷಿಪ್ತ ಪರಿಚಯವನ್ನು ಇಂಗ್ಲೀಷಿನ ಮೂಲಕ ಮಾಡಿಕೊಡಬೇಕಾದುದು ಅವಶ್ಯವಾಗಿದೆ. ಆದ್ದರಿಂದ ಇಲ್ಲಿ ಮಾದರಿಗಾಗಿ

---

* ಈ ಲೇಖನಕ್ಕೆ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿಯ 'ಸರ್ಟಿಫಿಕೇಟ್ ಕೋರ್ಸ್ ಇನ್ ಕನ್ನಡ' ಕೋರ್ಸಿನ ವಿದ್ಯಾರ್ಥಿಗಳಿಗೆ ಹಾಗೂ ಮಾಸ್ಕೋ (USSR) ದ 'Progress Publication ದ ಕನ್ನಡ ವಿಭಾಗದ ಸಂಪಾದಕ ಮಂಡಲಿಯ ಸದಸ್ಯರಿಗೆ ಕನ್ನಡ ಕಲಿಸಿದ ಅನುಭವವೇ ಆಧಾರ.

1. ಕನ್ನಡ ಲಿಪಿಯನ್ನು ಇತರ ಭಾಷಾಲಿಪಿಗಳೊಡನೆ ಹೋಲಿಸಿ ನೋಡಿದಾಗ ಈ ವಿಚಾರವು ಸ್ಪಷ್ಟವಾಗುವುದು.
2. ಈ ಅಭಿಪ್ರಾಯವು ಕನ್ನಡೇತರ ವಿದ್ಯಾರ್ಥಿಗಳಿಂದಲೂ ವ್ಯಕ್ತವಾಗಿದೆ. ಬೆರಳುಗಳನ್ನು ಮೇಲಿಂದ ಮೇಲೆ ವರ್ತುಲಾಕಾರದಲ್ಲಿ ತಿರಗಿಸುವುದು ಸ್ವಲ್ಪ ಕಷ್ಟವೂ ಆಗುವುದೆನ್ನುತ್ತಾರೆ.


ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ರೂವಾರಿಗಳಾದ ಡಾ.ಆರ್.ಸಿ.ಹಿರೇಮಠರವರು ಕನ್ನಡವನ್ನು ಪರಿಚಯಿಸಿದ ಕೆಲವು ಮಾತುಗಳನ್ನು ನೋಡಬಹುದು :

"Kannada is one of the fourteen major languages of India that have been recognised by the Indian Constitution. From the point of view of antiquity and reichness of literature, Kannada comes third in number, the first two being Sanskrit and Tamil repsectively. Kannada literature dates back from the 5th Century. A.D. and possess several indigenous forms. Vachana literature is an outstanding feature of Kannada literature and it may be claimed that it is one of the unique forms of literature in the world on account of the higher values of life, the Vachanas advocate......Linguistically Kannada is one of the major languages of Dravidian family...........etc.[3]

ಮುಂತಾದ ವಿಷಯಗಳ ಮೂಲಕ ಅಧ್ಯಾಪಕರು ವಿವರಣೆ ನೀಡಿ ಕನ್ನಡದ ಬಗೆಗೆ ಕನ್ನಡೇತರರಲ್ಲಿ ಅಭಿರುಚಿ ಮೂಡಿಸಬೇಕು.


ಒಂದು ಭಾಷೆಯನ್ನು ಕಲಿಯುವುದೆಂದರೆ ಕೆಲವರು ಕೇವಲ ಆ ಭಾಷೆಯ ಅಕ್ಷರಗಳನ್ನು ಕಲಿಯುವದೆಂದು, ಮತ್ತೆ ಕೆಲವರು ಶಬ್ದ ಸಂಗ್ರಹವೆಂದು, ಇನ್ನು ಕೆಲವರು ವ್ಯಾಕರಣದ ಅಭ್ಯಾಸವೆಂದು, ಕೆಲವರು ಕೇವಲ ಓದಲು, ಬರೆಯಲು ಕಲಿಯುವುದೆಂದು ಮುಂತಾಗಿ ತಿಳಿದಿರುತ್ತಾರೆ. ಆದರೆ ಇವೆಲ್ಲ ಭಾಷೆಯ ವಿವಿಧ ಅಂಗಗಳು. ಒಂದು ಭಾಷೆಯನ್ನು ಪೂರ್ಣವಾಗಿ ತಿಳಿಯಬೇಕಾದರೆ ಕೆಳಗೆ ವಿಂಗಡಿಸಿ ತೋರಿಸಿದ ಎಲ್ಲ ಅಂಶಗಳನ್ನು ಕಲಿಯುವದು ಅನಿವಾರ್ಯ. ಕಾರಣ ಕನ್ನಡ ಅಧ್ಯಾಪಕರು ಕನ್ನಡೇತರರಿಗೆ ಕನ್ನಡ ಕಲಿಸುವಾಗ ಅದರ ಎಲ್ಲ ಭಾಗಗಳನ್ನು ಅನುಕ್ರಮವಾಗಿ ಕಲಿಸಬೇಕಾಗುವದು.

ಇಲ್ಲಿ ಕಲಿಸುವ ಅನುಕೂಲತೆಗಾಗಿ ಈ ವಿಷಯವನ್ನು ಕೆಳಗಿನಂತೆ ವಿಭಾಗಿಸಲಾಗಿದೆ :



---

3. Dr. R.C. Hiremath - The Structure of Kannada.



ಈ ಎಲ್ಲ ಅಂಶಗಳನ್ನು ಹಂತ ಹಂತವಾಗಿ ಕಲಿಸಬೇಕು. ಇದಕ್ಕಾಗಿ ಅಧ್ಯಾಪಕರು ಕೈಕೊಳ್ಳಬೇಕಾದ ಮೊದಲನೆಯ ಕ್ರಮವೆಂದರೆ ಕನ್ನಡದ ಮೂಲಾಕ್ಷರಗಳ (ವರ್ಣಮಾಲೆ) ಬೋಧನೆ.

೧. **ಒಟ್ಟು ಮೂಲಾಕ್ಷರಗಳು ೫೨. (ಇವುಗಳನ್ನು ಮುಂದೆ ಹೇಳಲಾಗಿದೆ.) ಇವುಗಳನ್ನು ಕನ್ನಡೇತರರಿಗೆ ಆರು ಪ್ರಕಾರವಾಗಿ ಪರಿಚಯ ಮಾಡಿಕೊಡಲು ಸಾಧ್ಯವಿದೆ.**

೧. ಕಪ್ಪು ಹಲಗೆ (black board) ಯ ಮೇಲೆ ಬರೆಯುವ ಮೂಲಕ.
೨. ಮೌಖಿಕ (Oral) ವಾಗಿ ಹೇಳುವ ಮೂಲಕ.
೩. ವಿವಿಧ ಚಿತ್ರಪಟ (chart) ಗಳನ್ನು ತೋರಿಸುವ ಮೂಲಕ.
೪. ಕನ್ನಡ ಪ್ರಾರಂಭಿಕ ಪುಸ್ತಕಗಳ ಮೂಲಕ.
೫. ದರ್ಶಿನಿಯ (Slide show) ಯ ಯಂತ್ರದ ಮುಖಾಂತರ
೬. ಭಾಷಾ ಪ್ರಯೋಗ ಶಾಲೆಯ (language laboratory) ಮೂಲಕ.

೨. **ಕನ್ನಡದ ಮೂಲಾಕ್ಷರಗಳು ಈ ಕೆಳಗಿನಂತಿವೆ :**

ಸ್ವರಗಳು (Vowels) -

ಅ	ಆ	ಇ	ಈ	ಉ	ಊ	ಋ	ೠ	
a	a	i	i	u	u	r	r	
ಎ	ಏ	ಐ	ಒ	ಓ	ಔ	ಅಂ	ಅಃ	
e	e	ai	o	o	au	am	ah	= 16

ವ್ಯಂಜನಗಳು (Consonats) -

ಕ	ಖ	ಗ	ಘ	ಙ
k	kha	ga	gha	na

ಚ	ಛ	ಜ	ಝ	ಞ							
ca	cha	ja	jha	na							
ಟ	ಠ	ಡ	ಢ	ಣ							
ta	tha	da	dha	na							
ತ	ಥ	ದ	ಧ	ನ							
ta	tha	da	dah	na							
ಪ	ಫ	ಬ	ಭ	ಮ							= 25
pa	pha	ba	bha	ma							
ಯ	ರ	ಲ	ವ	ಶ	ಷ	ಸ	ಹ	ಳ	ಕ್ಷ	ಜ್ಞ	= 11
ya	ra	la	va	sa	sha	sa	ha	la	ksa	jna	
											ಒಟ್ಟು = 52

೩. **ಈ ಮೂಲಾಕ್ಷರಗಳನ್ನು ರೂಪದಲ್ಲಿ ಸಾಮ್ಯವಿರುವ ವರ್ಣಗಳ ಬೇರೆ ಬೇರೆ ಗುಂಪು ಮಾಡಿಯೂ ಕಲಿಸಬಹುದು. ಉದಾ : ರ, ಠ, ಈ, ಕ ಮುಂತಾಗಿ.**

೪. **ಒಟ್ಟು ೫೨ ಅಕ್ಷರಗಳಲ್ಲಿ ಪುನಃ ಒಳ ವಿಭಜನೆಗಳಿವೆ**

೧) ೧೬ ಸ್ವರಗಳಲ್ಲಿ

೧. ಹ್ರಸ್ವಸ್ವರ (Short vowel)ಗಳು — ೬
ಅವು - ಅ, ಇ, ಉ, ಋ, ಎ, ಒ.

೨. ದೀರ್ಘಸ್ವರಗಳು (Long vowel) — ೬
ಅವು - ಆ, ಈ, ಊ, ೠ, ಏ, ಓ

೩. ಸಂಯುಕ್ತಸ್ವರಗಳು (Joint vowel) — ೨
ಅವು - ಐ. ಔ.

೪. ಯೋಗಾವಾಹಗಳು — ೨
ಅವು - ಅಂ, ಅಃ.

೨) ೩೬ ವ್ಯಂಜನಗಳಲ್ಲಿ

೧. ವರ್ಗೀಯ ವ್ಯಂಜನಗಳು (Classified consonants) — ೨೫
(ಮೇಲೆ ಕೊಟ್ಟಿದೆ)

೨. ಅವರ್ಗೀಯ ವ್ಯಂಜನಗಳು (Unclassified consonants) — ೧೧
(ಮೇಲೆ ಕೊಟ್ಟಿದೆ)

೨೫ ವರ್ಗೀಯ ವ್ಯಂಜನಗಳಲ್ಲಿ

೧. ಅಲ್ಪ ಪ್ರಾಣಗಳು — ೧೦
ಅವು - ಕ, ಗ, ಚ, ಜ, ಟ, ಡ, ತ, ದ, ಪ, ಬ

೨. ಮಹಾ ಪ್ರಾಣಗಳು ೧೦

ಅವು - ಖ, ಘ, ಛ, ಝ, ಠ, ಢ, ಥ, ಧ, ಫ, ಭ.

೩. ಅನುನಾಸಿಕಗಳು ೫

ಅವು - ಙ, ಞ, ಣ, ನ, ಮ.

೧೧ ಅವರ್ಗೀಯ ವ್ಯಂಜನಗಳಲ್ಲಿ

೧. ಸರಳ ವ್ಯಂಜನಗಳು ೯

ಅವು - ಯ, ರ, ಲ, ವ, ಶ, ಷ, ಹ, ಳ.

೨. ಸಂಯುಕ್ತ ವ್ಯಂಜನಗಳು ೨

ಅವು - ಕ್ಷ, ಜ್ಞ.

ಸ್ವರಗಳಿಗೆ ವಿವರಣೆ :-

೧. ಹ್ರಸ್ವಸ್ವರಗಳನ್ನು ಉಚ್ಚರಿಸಲು ಅಲ್ಪ ಸಮಯ ಬೇಕಾಗುವುದರಿಂದ ಇವುಗಳಿಗೆ ಹೃಸ್ವರಗಳೆಂದು ಹಾಗೂ

೨. ದೀರ್ಘಸ್ವರಗಳನ್ನು ಉಚ್ಚರಿಸಲು ಹೃಸ್ವರಕ್ಕಿಂತ ಹೆಚ್ಚು ಸಮಯ ಹಿಡಿಯುವುದರಿಂದ ದೀರ್ಘಸ್ವರಗಳೆಂದು,

೩. ಸಂಯುಕ್ತ ಸ್ವರಗಳಾದ 'ಐ' ದಲ್ಲಿ ಅ+ಇ ಮತ್ತು 'ಔ' ದಲ್ಲಿ ಅ+ಉ ಗಳು ಕೂಡಿರುವುದರಿಂದ ಸಂಯುಕ್ತ ಸ್ವರಗಳೆಂದು.

೪. ಯೋಗವಾಹಗಳಲ್ಲಿಯ 'ಂ' ಇದಕ್ಕೆ ಅನುನಾಸಿಕ ಹಾಗೂ 'ಃ' ಇದಕ್ಕೆ ವಿಸರ್ಗ ಎಂದು, ಇವು ಸ್ವತಂತ್ರವಾಗಿ ಬಳಕೆಗೆ ಬರುವದಿಲ್ಲವಾದ್ದರಿಂದ ಪರಾವಲಂಬಿ. ಅಂದರೆ ಮತ್ತೊಂದು ಅಕ್ಷರದೊಡನೆ ಸೇರಿಯೇ ಉಪಯೋಗದಲ್ಲಿರುವುದರಿಂದ ಇವುಗಳಿಗೆ ಯೋಗವಾಹ (join)ಗಳೆಂದು ಕರೆಯಲಾಗಿದೆ.

ವ್ಯಂಜನಗಳಿಗೆ ವಿವರಣೆ :

ವರ್ಗೀಯ ವ್ಯಂಜನಗಳನ್ನು ೩ ರೀತಿಯಲ್ಲಿ ವಿಭಜಿಸಲು ಬರುವುದರಿಂದ ಇವುಗಳಿಗೆ ವರ್ಗೀಯ ವ್ಯಂಜನಗಳೆಂದು ಹಾಗೂ ಅವರ್ಗೀಯ ವ್ಯಂಜನಗಳಲ್ಲಿ ವರ್ಗೀಯ ವ್ಯಂಜನಗಳಂತೆ ವಿಭಾಗ ಮಾಡಲು ಬರುವದಿಲ್ಲವಾದ್ದರಿಂದ ಅವರ್ಗೀಯ ವ್ಯಂಜನಗಳೆಂದು ಹೆಸರು.

೧. ಅಲ್ಪ ಪ್ರಾಣಗಳನ್ನು ಹಗುರವಾಗಿ ಉಚ್ಚರಿಸುವುದರಿಂದ ಅಲ್ಪಪ್ರಾಣವೆಂದು ಹಾಗೂ

೨. ಮಹಾಪ್ರಾಣಗಳನ್ನು ಗಟ್ಟಿಯಾಗಿ ಉಚ್ಚರಿಸುವುದರಿಂದ ಇವುಗಳನ್ನು ಮಹಾಪ್ರಾಣಗಳೆಂದು

೩. ಙ, ಞ, ಣ, ನ, ಮ ಗಳನ್ನು ಮೂಗಿನಿಂದ ಉಚ್ಚರಿಸುವುದರಿಂದ ಅನುಸಾಸಿಕಗಳೆಂದು ಹೇಳಲಾಗಿದೆ.

ಅವರ್ಗೀಯ ವ್ಯಂಜನಗಳು

೧. ಯ, ರ, ಲ ಇತ್ಯಾದಿ ೯ ವ್ಯಂಜನಗಳಲ್ಲಿ ಯಾವುದೇ ಸಂಕೀರ್ಣತೆ ಇಲ್ಲದಿರುವುದರಿಂದ ಇವುಗಳಿಗೆ ಸರಳ ವ್ಯಂಜನಗಳೆಂದು,

೨. ಸಂಯುಕ್ತ ವ್ಯಂಜನಗಳಾದ 'ಕ್ಷ'ದಲ್ಲಿ ಕ್+ಷ್+ಅ ಮತ್ತು 'ಜ್ಞ'ದಲ್ಲಿ ಜ್+ಞ+ಅ ಗಳು ಸೇರಿರುವುದರಿಂದ ಸಂಯುಕ್ತ ವ್ಯಂಜನಗಳೆಂದು ಹೆಸರಿಸಲಾಗಿದೆ.

೫. **ಇವುಗಳ ನಂತರ ಗುಣಿತಾಕ್ಷರಗಳನ್ನು ಕಲಿಸಬೇಕು.**


ಕ	ಕಾ	ಕಿ	ಕೀ	ಕು	ಕೂ	ಕೃ	ಕೄ
ka	ka	ki	ki	ku	ku	kr	kr̄
ಕೆ	ಕೇ	ಕೈ	ಕೊ	ಕೋ	ಕೌ	ಕಂ	ಕಃ
ke	kē	kai	ko	k⁀	kau	kam	kah

ಮೂಲ ವ್ಯಂಜನಾಕ್ಷರಗಳಿಗೆ ಗುಣಿತಾಕ್ಷರ ಸಂಜ್ಞೆಗಳಾದ :-

್ ಾ ಿ ೀ ು ೂ ೆ ೇ ೈ ೊ ೋ ೌ ಂ ಃ ಇವುಗಳನ್ನು ಸೇರಿಸಿ ಎಲ್ಲ ಗುಣಿತಾಕ್ಷರಗಳನ್ನು ಬರೆಯುವ ಪದ್ಧತಿಯನ್ನು ಹಾಗೂ ಸ್ವರ ಮತ್ತು ವ್ಯಂಜನ ಸೇರಿ ಪೂರ್ಣಾಕ್ಷರ ಆಗುವ ರೀತಿಯನ್ನು ತಿಳಿಸಬೇಕು. ಉದಾ : ಕ್ + ಅ = ಕ ಅಲ್ಲದೆ ಈ ಗುಣಿತಾಕ್ಷರಗಳ ಉಪಯೋಗವನ್ನು ಶಬ್ದಗಳ ಮೂಲಕ ತೋರಿಸಿ ಮನನ ಮಾಡಿಸಬೇಕು. ಪ್ರತ್ಯಕ್ಷವಾಗಿ ಕಲಿಸುವಾಗ ಇನ್ನೂ ಹೆಚ್ಚಿನ ಅಂಶಗಳು ಗಮನಕ್ಕೆ ಬರುತ್ತವೆ.

೬. ಇವುಗಳಲ್ಲಿ ಕೆಲವು ಅಕ್ಷರಗಳು ಕೈ ಬರಹದಲ್ಲಿ ಒಂದು ರೀತಿಯಾಗಿದ್ದರೆ ಮುದ್ರಣದಲ್ಲಿ ಅಲ್ಪ ಬದಲಾವಣೆಯೊಂದಿಗೆ ಸ್ವಲ್ಪ ವ್ಯತ್ಯಾಸದ ರೂಪವನ್ನು ಪಡೆಯುತ್ತವೆ.[4] ಆದ್ದರಿಂದ ವಿದ್ಯಾರ್ಥಿಗಳು ಈ ಎರಡೂ ಅಕ್ಷರಗಳನ್ನು ಬೇರೆ ಬೇರೆಯೆಂದೇ ತಿಳಿಯುವ ಸಂಭವವುಂಟು. ಕಾರಣ ಇಂತಹ ಒಂದೇ ಅಕ್ಷರದ ಎರಡು ರೂಪಗಳ ಬಗ್ಗೆ ಅಧ್ಯಾಪಕರು ಆರಂಭದಲ್ಲಿಯೇ ಸ್ಪಷ್ಟ ತಿಳಿವಳಿಕೆ ನೀಡಬೇಕು. ಇದು ಒಂದು ಸೂಕ್ಷ್ಮವಾದ ಅಂಶವಾಗಿದೆ.

ಉದಾ :-



ಮೇಲಿನ ಉದಾಹರಣೆಯಲ್ಲಿ ಮೊದಲನೆಯ ಸಾಲು ಕೈ ಬರಹದ ರೂಪವಾಗಿದ್ದರೆ, ಎರಡನೆಯ ಸಾಲು ಮುದ್ರಣದ ರೂಪ [5]ವಾಗಿದೆ.

೭. **ಒತ್ತಕ್ಷರಗಳು :**

ವಿದ್ಯಾರ್ಥಿಗಳಿಗೆ ಮೂರು ಪ್ರಕಾರದ ಒಟ್ಟು ಒತ್ತಕ್ಷರಗಳನ್ನು ವಿವಿಧ ಶಬ್ದಗಳ ಉದಾಹರಣೆ ಕೊಟ್ಟು ಸ್ಪಷ್ಟವಾಗುವಂತೆ ಪುನಃ ಪುನಃ ರೂಢಿಸಬೇಕು ಉದಾ -

ಅ) ಮೂಲಾಕ್ಷರದಂತಿರುವ ಒತ್ತಕ್ಷರಗಳು - ್ಬ, ್ಜ, - ಹಬ್ಬ, ಅಜ್ಜ.
ಆ) ತಲೆಕಟ್ಟು ಇಲ್ಲದ ಒತ್ತಕ್ಷರಗಳು - ್ಗ, ್ಪ, - ಹಗ್ಗ, ಅಪ್ಪ.
ಇ) ವಿಕಾರ ಹೊಂದುವ ಒತ್ತಕ್ಷರಗಳು - ್ಮ, ್ನ, - ಅಮ್ಮ, ಅನ್ನ.

---

4. ಮುದ್ರಣದ ಅಕ್ಷರಗಳನ್ನು ಗಮನಿಸಿರಿ. (ಈ ವ್ಯತ್ಯಾಸವನ್ನು ಹೋಗಲಾಡಿಸಿ ಮುದ್ರಣದ ಅಕ್ಷರಗಳೂ ಕೈಬರಹದಂತೆ ಆಗಲು ಪ್ರಯತ್ನಿಸಬೇಕು)
5. ಹಲವು ಮುದ್ರಣದ ಪುಸ್ತಕಗಳ ಮತ್ತು ವಿದ್ಯಾರ್ಥಿಗಳು ತಿಳಿಸಿದ ತೊಡಕಿನ ಆಧಾರ.

೮. ಸಂಯುಕ್ತಾಕ್ಷರಗಳನ್ನು ಬಿಡಿಸಿ ಬೇರೆ ಬೇರೆಯಾಗಿ ಬರೆದು ತೋರಿಸಬೇಕು.
ಉದಾ : - ಕ್ + ಷ್ + ಅ = ಕ್ಷ

೯. ಕನ್ನಡ ಅಕ್ಷರಗಳು ದುಂಡಾಗಿರುವುದರಿಂದ ಸಾಮಾನ್ಯವಾಗಿ ಹೆಚ್ಚು ಅಕ್ಷರಗಳು ವೃತ್ತಾಕಾರವನ್ನು ಒಳಗೊಂಡಿವೆ. ಇನ್ನು ಕೆಲವು ಅಕ್ಷರಗಳು ಅರ್ಧವರ್ತುಲಾಕಾರವನ್ನು ಹೋಲುವಂತೆ ಇವೆ. ೧ ರಿಂದ ೧೦ ರವರೆಗಿನ ಎಲ್ಲ ಅಂಕೆಗಳು ಸಹ ದುಂಡಗಿನ ವೃತ್ತದಿಂದಲೇ ಆರಂಭವಾಗುತ್ತವೆ. ಈ ಸಂಗತಿಯನ್ನು ಅವರ ಗಮನಕ್ಕೆ ತಂದಲ್ಲಿ, ನೆನಪಿನಲ್ಲಿಟ್ಟುಕೊಂಡು ಅಕ್ಷರಗಳನ್ನು, ಅಂಕೆಗಳನ್ನು ಕಲಿಯಲು ಸುಲಭವಾಗುವದು.

ಅಂಕೆಗಳು :

೧	೨	೩	೪	೫	೬	೭	೮	೯	೧೦
1	2	3	4	5	6	7	8	9	10


ಹತ್ತರ ನಂತರದವುಗಳನ್ನು ಇಂಗ್ಲೀಷ್ ಅಂಕೆಗಳನ್ನು ಬೆಳಸಿಕೊಳ್ಳುವಂತೆ ಬೆಳೆಸಿಕೊಳ್ಳಬೇಕು.

ಉದಾ : 11 >೧೧, 12 >೧೨, 100 >೧೦೦ 101 >೧೦೧

1000 >೧೦೦೦, 1001 >೧೦೦೧, 2000 >೨೦೦೦

ಇದಲ್ಲದೆ ಪ್ರಾರಂಭದಲ್ಲಿ ಮೂಲಾಕ್ಷರಗಳನ್ನು ಕಲಿಸುವಾಗ ಅಧ್ಯಾಪಕರು ವಿದ್ಯಾರ್ಥಿಗಳಿಗೆ ಬೆರಳಿನ ಚಲನವಲನೆಯನ್ನು ಸೂಕ್ಷ್ಮವಾಗಿ ಗಮನಿಸಲು ತಿಳಿಸಬೇಕು. ಅಕ್ಷರಗಳು ಗೋಲಾಕಾರವಾಗಿರುವುದರಿಂದ ಬರೆಯುವಾಗ ಬೆರಳುಗಳು ಕ್ಷಣ - ಕ್ಷಣಕ್ಕೆ ದಿಕ್ಕನ್ನು ಬದಲಾಯಿಸುತ್ತಿರುತ್ತದೆ. ವಿದ್ಯಾರ್ಥಿಗಳು ಅಕ್ಷರದ ಒಟ್ಟು ಆಕಾರವನ್ನು ಹೇಗಾದರೂ ತಪ್ಪು ರೀತಿಯಿಂದ ಬರೆಯಲು ಕಲಿಯುವದಕ್ಕಿಂತ ಹಂತ - ಹಂತವಾಗಿ ಪದ್ಧತಿಪೂರ್ವಕವಾಗಿ ಕಲಿಯುವುದು ತುಂಬಾ ಮುಖ್ಯವಾಗಿದೆ. ಆದ್ದರಿಂದ ಅಧ್ಯಾಪಕರು ಬರೆಯುವಾಗ ಅವರ ಬೆರಳುಗಳ ಚಲನೆಯನ್ನು ವಿದ್ಯಾರ್ಥಿಗಳು ತಾವು ಕಲಿಯುವದಕ್ಕಾಗಿ ಗಮನಿಸುವುದು ಮತ್ತು ವಿದ್ಯಾರ್ಥಿಗಳು ಬರೆಯುವಾಗ ಅವರಿಗೆ ಕಲಿಸುವದಕ್ಕಾಗಿ, ತಿದ್ದುವದಕ್ಕಾಗಿ ಅವರ ಬೆರಳುಗಳ ಚಲನೆಯನ್ನು ಅಧ್ಯಾಪಕರು ನಿರೀಕ್ಷಿಸುವುದು ಅತ್ಯಗತ್ಯವಾಗಿದೆ. ಇರದಿದ್ದರೆ ವಿದ್ಯಾರ್ಥಿಗಳು ತಪ್ಪುಕ್ರಮದಿಂದ ಅಕ್ಷರಗಳನ್ನು ಬರೆಯಲು ಕಲಿಯುವ ಸಾಧ್ಯತೆಯಿದೆ. ಕನ್ನಡೇತರರು ಸೌಲಭ್ಯಾಕಾಂಕ್ಷೆಯಿಂದ ಪ್ರತಿಯೊಂದು ಅಕ್ಷರವನ್ನು ಸಾಧ್ಯವಾದಷ್ಟು ಭಾಗಗಳಲ್ಲಿ ಬಿಡಿಸಿ ಬರೆಯುವುದು. ಅವರು ಹೀಗೆ ಬಿಡಿಸಿ ಬರೆಯುವ ಪದ್ಧತಿಯನ್ನು ಉದಾಹರಣೆಗಾಗಿ ಕೆಳಗೆ ಎರಡು ಅಕ್ಷರಗಳನ್ನು ವಿಂಗಡಿಸಿ ತೋರಿಸಲಾಗಿದೆ.

ಉದಾ :-



೧೦. ಅಕ್ಷರಗಳನ್ನು ಬರೆಯುವಾಗ ಮಧ್ಯ ಮಧ್ಯ ಸಿಕ್ಕಲ್ಲಿ ಬರವಣಿಗೆಯ ದಿಕ್ಕನ್ನು ಬದಲಿಸುವುದು ಹಾಗೂ ಅವುಗಳನ್ನು ಬಹು ಭಾಗಗಳಲ್ಲಿ ಬಿಡಿಸುವುದು ಸರಿಯಲ್ಲ. ಆದರೆ ಕನ್ನಡೇತರರಿಗೆ ಬರೆಯುವ ಅನುಕೂಲ ಮತ್ತು ರೂಢಿಗಾಗಿ ಅಕ್ಷರಗಳನ್ನು 'ಕೇವಲ ಮುಖ್ಯ ಅಂಗ', 'ಉಪಅಂಗ'ಗಳಾಗಿ ಮಾಡಿ, ನಡುವೆ ಒಂದು ಅಥವಾ ಎರಡು ಸಲ ಮಾತ್ರ ಬೆರಳನ್ನು ನಿಲ್ಲಿಸಿ ಪುನಃ ಮುಂದುವರೆಸಿ ಬರೆಯುವ ಸರಿಯಾದ ಪದ್ಧತಿಯನ್ನು ಕಲಿಸಬೇಕು. ಅಕ್ಷರಗಳ ಆರಂಭದ ಸ್ಥಾನವನ್ನು, ಬರೆಯುವಾಗ ಬದಲಾಗುವ ತಿರುವುಗಳನ್ನು ಮತ್ತು ಕೊನೆಯ ಸ್ಥಾನವನ್ನು ವಿವಿಧ ಚಿನ್ಹೆಗಳೊಂದಿಗೆ ತೋರಿಸಬೇಕು ಹಾಗೂ ಕನ್ನಡ ಅಕ್ಷರ ಮತ್ತು ಅಂಕಿಗಳು ಎಡಗಡೆಯಿಂದ ಆರಂಭವಾಗಿ ಬಲಗಡೆಗೆ ಮುಂದುವರಿದು ಅಂತ್ಯಗೊಳ್ಳುವುವು ಎಂಬುದನ್ನೂ ತಿಳಿಸಬೇಕು.

ಉದಾ : ೧. ಅ

ಮೊದಲು 'ಅ' 'ದ' 'ಮುಖ್ಯಅಂಗ' 'ಅ' ಇದರ ನಂತರ 'ಉಪಅಂಗ'ವಾದ ಅದರೊಳಗಿನ ಅಡ್ಡಗೆರೆ (-)ಯನ್ನು ಬರೆಯಿಸಬೇಕು.

ಬಾಣದ ಗುರುತುಗಳು ಬರೆಯುವ ದಿಕ್ಕನ್ನು ಸೂಚಿಸುತ್ತವೆ.

೧. 'ಅ' ಅಕ್ಷರದ ಆರಂಭದ ಮತ್ತು ಮುಕ್ತಾಯದ ಸ್ಥಾನ, (ಮುಖ್ಯ ಅಂಗ 'ಅ')

೨. 'ಮುಖ್ಯಅಂಗ'ವನ್ನು ಬರೆದ ನಂತರ 'ಉಪಅಂಗ'ವನ್ನು (ಅಡ್ಡಗೆರೆ '-') ಪ್ರಾರಂಭಿಸುವ ಸ್ಥಾನ. ಈ ಅಡ್ಡಗೆರೆಯನ್ನು ಬಲಗಡೆಯಿಂದ ಎಡಗಡೆಗೆ ಎಳೆದು 'ಮುಖ್ಯ ಅಂಗ'ವನ್ನು ಆರಂಭಿಸಿದ (೧) ಸ್ಥಾನಕ್ಕೆ ಕೂಡಿಸಬೇಕು.

ಉದಾ : ೨. ಈ

ಮೊದಲು 'ಈ' ಅಕ್ಷರದ 'ಮುಖ್ಯ ಅಂಗ' ವಾದ ದೊಡ್ಡ ಸೊನ್ನೆ (ಇಂಗ್ಲೀಷಿನ 'O'ದಂತೆ ಬರೆಯಿಸಿ, ಆ ಮೇಲೆ ಅದರ ಎರಡು 'ಉಪ ಅಂಗ'ಗಳಾದ ತಲೆಕಟ್ಟು (-) ಹಾಗೂ ಮಧ್ಯದ ಅಡ್ಡಗೆರೆ (-) ಯನ್ನು ಬರೆಯಿಸಬೇಕು.


ಬಾಣದ ಚಿಹ್ನೆಗಳು ಅಕ್ಷರವನ್ನು ಬರೆಯುವ ಮಾರ್ಗವನ್ನು ತೋರಿಸುತ್ತವೆ.

೧. 'ಈ' ಇದರ ಮುಖ್ಯ ಅಂಗವನ್ನು ಬರೆಯಲು ಪ್ರಾರಂಭಿಸುವ ಹಾಗೂ ಮುಕ್ತಾಯದ ಸ್ಥಾನ('ಮುಖ್ಯ ಅಂಗ' '-' '೦')

೨. 'ಉಪಅಂಗ'ದ ಆರಂಭದ ಸ್ಥಾನ (ತಲೆಕಟ್ಟು '-')

೩. ಎರಡನೆಯ 'ಉಪಅಂಗ' ವನ್ನು ಪ್ರಾರಂಭಿಸುವ ಸ್ಥಾನ (ಮಧ್ಯದ ಅಡ್ಡಗೆರೆ '-')

೧೧. ಇನ್ನೊಂದು ಮಹತ್ವದ ಅಂಶವೆಂದರೆ ಅಕ್ಷರಗಳು ಅಂದ ಮತ್ತು ಆಕರ್ಷಕವಾಗಿರಬೇಕಾದರೆ ಅಧ್ಯಾಪಕರು ಅವುಗಳ ಒಟ್ಟು ಆಕಾರದ ಸಮಪ್ರಮಾಣ(proportion)ದ ಕಲ್ಪನೆಯನ್ನು ವಿದ್ಯಾರ್ಥಿಗಳಿಗೆ ಸ್ಪಷ್ಟಪಡಿಸಬೇಕು. ಪ್ರತಿಯೊಂದು ಅಕ್ಷರಗಳಿಗೆ ಮುಖ್ಯ ಅಂಗ. ಉಪ ಅಂಗಗಳಿದ್ದು, ಅವುಗಳಿಗೆ ತಮ್ಮದೇ ಆದ ಸಮಪ್ರಮಾಣದ ಪರಿಮಿತಿಯೂ ಇದೆ. ಕಾರಣ ಇದನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಇರದಿದ್ದರೆ ಅಕ್ಷರಗಳು ಸೌಂದರ್ಯವನ್ನು ಕಳೆದುಕೊಂಡು ಕೈಕಾಲು ಸಣ್ಣ ಹೊಟ್ಟೆ ಡುಮ್ಮ ಆಗಿ ರಿಕೆಟ್ಸ್ ರೋಗದಿಂದ ಬಳಲುವ ಮಕ್ಕಳಂತೆ ಅಂದಗೇಡಿಯಾಗಿ ಕಾಣುವವು. ಆದು :



ವಿದ್ಯಾರ್ಥಿಗಳ ಅಕ್ಷರ ಬರವಣಿಗೆಯ ಈ ದೋಷವನ್ನು ನಿವಾರಿಸಲು ಅಧ್ಯಾಪಕರು ಅವರಿಗೆ ಮೂರು ಗೆರೆಯ ಎಕ್ಸರ್‌ಸಾಯಿಜ್ (Three lines exercise note book) ಪುಸ್ತಕಗಳಲ್ಲಿ ಪ್ರಮಾಣಬದ್ಧ (ಸಮ ಪ್ರಮಾಣ -proportion)ವಾದ ಅಕ್ಷರಗಳನ್ನು ರೂಢಿ (practice) ಮಾಡಿಸುವ ಅವಶ್ಯಕತೆಯಿದೆ.

೧೨. **ಇನ್ನು ಕೆಲವು ಅಕ್ಷರಗಳು ತಮ್ಮ ರೂಪ ಸಾಮ್ಯದಿಂದ ಕನ್ನಡೇತರರಿಗೆ ಗೊಂದಲವನ್ನುಂಟು ಮಾಡುತ್ತವೆ. ಆದ್ದರಿಂದ ಅಧ್ಯಾಪಕರು ಸಾಕಷ್ಟು ಉದಾಹರಣೆ ಹಾಗೂ ರೂಢಿಯ ಮೂಲಕ ಈ ಗೊಂದಲವನ್ನು ಪರಿಹರಿಸಲು ಸಾಧ್ಯವಿದೆ. ಸಂಶಯಕ್ಕೆ ಆಸ್ಪದವಾಗುವ ವರ್ಣಗಳು ಕೆಳಗಿನಂತಿವೆ.**

ಅ - ಆ । ಉ - ಊ । ಋ - ೠ ।
ಎ - ಏ । ಒ - ಓ । ಅಂ - ಅಃ ।
ಒ - ಬ । ಯ - ಝ । ವ - ಛ ।
ವು - ಮ । ಟ - ಣ । ಖ - ಋ ।
ಪ - ಷ । ಪು - ಮ । ಡ - ದ ।
ದ - ಧ । ಪ - ಫ । ಬ - ಭ ।
ಚ - ತ । ಇ - ಈ । ಲ - ಅ । ಲ - ಳ ।

ವಿದ್ಯಾರ್ಥಿಗಳು ಈ ಅಕ್ಷರಗಳನ್ನು ಬರೆಯುವಾಗ, ಓದುವಾಗ, ತಪ್ಪುವ ಸಾಧ್ಯತೆಯಿದೆ. ಇದನ್ನು ಅಧ್ಯಾಪಕರು ಸೂಕ್ಷ್ಮವಾಗಿ ಗಮನಿಸಿ, ಆ ಅಕ್ಷರಗಳ ನಡುವಿನ ವ್ಯತ್ಯಾಸವನ್ನು ಅವರಿಗೆ ಮನನವಾಗುವಂತೆ ಸ್ಪಷ್ಟವಾಗಿ ರೂಢಿಸಬೇಕು.

೧೩. ಮೇಲಿನದು ಲಿಪಿಯ ಸಾಮ್ಯದಿಂದಾಗುವ ತೊಡಕಾದರೆ, ಉಚ್ಚಾರದ ಸಾಮ್ಯದಿಂದ ಕೇಳಿ ಬರೆಯುವಾಗ ಅಥವಾ ಕೇಳುವಾಗ ಉಂಟಾಗಬಹುದಾದ ದೋಷಗಳನ್ನು ಕೆಳಗಿನ ಶಬ್ದಗಳಲ್ಲಿ ಗುರುತಿಸಬಹುದು :

ಉದಾ : ತಾಯಿ - ತಾಇ, ಅಣ್ಣ - ಅನ್ನ, ಋಣ - ರುಣ, ಸೀತೆ - ಶೀತೆ, ಔಷಧ - ಆವುಸದ, ದನ - ಧನ, ಧರ್ಮ - ಧರಮ, ಚಂದ್ರ - ಚಂದರ, ಕರ್ನಾಟಕ - ಕರನಾಟಕ, ಮಳೆ - ಮಲೆ, ಸರ್ವೋದಯ - ಸರ್ಓದಯ, ಒಣ - ವಣ, ಔರಂಗಬಾದ - ಅವುರಂಗಾಬಾದ, ಹೌದು - ಹವುದು, ಗೃಹ - ಗ್ರಹ, ಮಾತೃ - ಮಾತ್ರು ಮುಂತಾದುವು.

ಕನ್ನಡೇತರ ವಿದ್ಯಾರ್ಥಿಗಳಿಗೆ ಅಧ್ಯಾಪಕರು 'ಶುದ್ಧಬರಹ' (dictation) ಬರೆಯಲು ಹೇಳಿದಾಗ ಮೇಲಿನಂತಹ ದೋಷಗಳು ಸಾಕಷ್ಟು ಕಂಡುಬರುತ್ತವೆ. ಇದು ಉಚ್ಚಾರದ ಸಾಮ್ಯತೆಯ ತೊಡಕಾಗಿದೆ. ಇಂತಹವುಗಳನ್ನು ಮೇಲಿಂದ ಮೇಲೆ ಬರೆಯಿಸುವ ರೂಢಿಯಿಂದ ಮತ್ತು ಸ್ಪಷ್ಟವಾದ ತಿಳುವಳಿಕೆಯಿಂದ ನಿವಾರಿಸಬಹುದು.

ಉಚ್ಚಾರಣೆಯ ಅಭ್ಯಾಸದ ಕುರಿತಾದ ಎರಡು ಮಾತುಗಳು ಹೀಗಿವೆ :

"Drills play a vital role in the acquisition and testing of listening and speaking skills and exercise in reading and writing skills" [6]

---

6. ಕನ್ನಡ ನುಡಿ ಘಟ್ಟ - ೨. ಲೇಖಕರು : ಶ್ರೀ ಕೆ.ಪಿ. ಆಚಾರ್ಯ

"The teacher must be very attentive in administering the drills and exercise in view of their vital role in the language acquisiton" [7]

ವಿದ್ಯಾರ್ಥಿಗಳ ಮಾತನಾಡುವಿಕೆ, ಓದುವಿಕೆ ಮತ್ತು ಕೇಳುವಿಕೆಯನ್ನು ಪರೀಕ್ಷಿಸಲು ರೂಢೀಕರಣ(ಡ್ರಿಲ್ಲಿಂಗ್) ಉತ್ತಮ ಮಾಧ್ಯಮವಾಗಿದೆ. ಡ್ರಿಲ್ಲಿಂಗ್ ಮಾಡಿಸುವಾಗ ಅಧ್ಯಾಪಕರು ಅವರತ್ತ ಸಂಪೂರ್ಣ ಗಮನವನ್ನಿತ್ತು ಮಾರ್ಗದರ್ಶನ ಮಾಡಬೇಕು. ಇದರ ವಿವಿಧ ಪ್ರಕಾರಗಳ ಅಭ್ಯಾಸದಿಂದ ವಿದ್ಯಾರ್ಥಿಗಳನ್ನು ಪಳಗಿಸಬೇಕು.

೧೪. 'ಒ' ಈ ಸ್ವರಾಕ್ಷರದ ಸಮಸ್ಯೆ ಇನ್ನೊಂದು ರೀತಿಯಾಗಿದೆ. ಇದು ಸ್ವರಗಳ ಗುಂಪಿನಲ್ಲಿ ಬಂದಾಗ ಸ್ವತಂತ್ರವಾಗಿರುವ ಇಂಗ್ಲೀಷಿನ 'o'ದಂತೆ ಉಚ್ಚಾರವಾದರೆ, ಶಬ್ದಗಳ ಆದಿಯಲ್ಲಿ ಬಂದಾಗ 'ವ' ದ ಛಾಯೆ ಕೂಡಿಕೊಂಡು ಇಂಗ್ಲೀಷಿನ 'W'(va) ದಂತೆ ಉಚ್ಚರಿಸಲ್ಪಡುವುದು.

ಉದಾ : ಒಟ್ಟು, ಒಬ್ಬ, ಒಪ್ಪು, ಒನಕೆ ಒಣ, ಒಂದು, ಒಂಟೆ ಮುಂತಾದ ಕಡೆಗಳಲ್ಲಿ 'ಒ'ನ್ನು ಸಹಜವಾಗಿ 'ವ' ಎಂದು ಓದಲಾಗುವುದು.

ಇದರಂತೆ 'ಎ' ಸ್ವರಗಳ ಸಾಲಿನಲ್ಲಿ 'e'ದಂತೆ ಉಚ್ಚರಿಸಲ್ಪಟ್ಟರೆ ಶಬ್ದಗಳ ಪ್ರಾರಂಭದಲ್ಲಿ ಬಂದಾಗ ಯ - 'ya'ದಂತೆ ಉಚ್ಚರಿಸ್ಪಡುವುದು.

ಉದಾ : ಎಂಟು, ಎಲ್ಲಿ, ಎಂದು.

೧೫. ಅಧ್ಯಾಪಕರಿಗೆ ಎದುರಾಗುವ ಇನ್ನೊಂದು ಮುಖ್ಯಸಮಸ್ಯೆಯೆಂದರೆ ಕನ್ನಡೇತರರಿಗೆ ಕನ್ನಡ ಕಲಿಸುವಾಗ ಮಾಧ್ಯಮವಾಗಿ ಮತ್ತೊಂದು ಭಾಷೆ (medium language)ಯನ್ನು ಉಪಯೋಗಿಸಬೇಕೋ ಉಪಯೋಗಿಸಬಾರದೋ ಎಂಬುದಾಗಿದೆ.[8] ಆದರೆ ಬಳಸುವದು ಅವಶ್ಯವೆನಿಸುತ್ತದೆ. ಬಹುಜನ ವಿದ್ಯಾರ್ಥಿಗಳಿಗೆ ಪರಿಚಯವಿರುವ ಮತ್ತೊಂದು ಭಾಷೆಯ (ಉದಾ : ಇಂಗ್ಲೀಷ್, ಹಿಂದಿ) ನೆರವು ಇಲ್ಲದೆ ಸರಿಯಾಗಿ ಕಲಿಸಲು ಸಾಧ್ಯವಿಲ್ಲ. ಮಾಧ್ಯಮ ಭಾಷೆಯೊಂದನ್ನು ಬಳಸುವುದರಿಂದ ಅವರಿಗೆ ಕನ್ನಡವು ಹೆಚ್ಚಿನ ಮಟ್ಟದಲ್ಲಿ ಅರ್ಥವಾಗುವದಲ್ಲದೆ ಬೇಗನೆ ಗ್ರಹಿಸಲು ಸಹಾಯಕವಾಗುವುದು. ಆದ್ದರಿಂದ ದ್ವಿತೀಯ ಭಾಷಾ ಅಧ್ಯಾಪಕರು ಮಾಧ್ಯಮ ಭಾಷೆಯಾಗಿ ಇಂಗ್ಲೀಷ್, ಹಿಂದಿಯನ್ನು ಉಪಯೋಗಿಸುವುದು ಅವಶ್ಯಕವಾಗಿದೆ.

ಅಕ್ಷರಗಳ ಕ್ರಮವನ್ನು ಅಧ್ಯಾಪಕರು ಹಲವು ಬಾರಿ ವಿದ್ಯಾರ್ಥಿಗಳಿಗೆ ಹೇಳಿದರೂ ಅವರಿಂದ ಸರಿಯಾದ, ತೃಪ್ತಿದಾಯಕ ಉಚ್ಚಾರವನ್ನು ಹೊರಡಿಸುವುದು ಕಷ್ಟವಾಗುತ್ತದೆ. ಅವರ ತಾಯ್ನುಡಿಯ ಪ್ರಭಾವವೂ ಇದಕ್ಕೆ ಕಾರಣವೆನ್ನಬಹುದು. ಉಚ್ಚಾರದ ಧ್ವನಿಯು ಅವರ ಬಾಯಿಯ ಅಂತರ್ಭಾಗದಲ್ಲಿ ಹೊರಡಬೇಕಾದ ಸರಿಯಾದ ಸ್ಥಳದಿಂದ ಹೊರಡಲಾರದು. ಇಂತಹ ಪ್ರಸಂಗ ದಲ್ಲಿ ಮಾಧ್ಯಮ ಭಾಷೆಯ ಸಹಾಯ ಅನಿವಾರ್ಯವಾಗುತ್ತದೆ.

ಉದಾ : 'ಅ' ಇದನ್ನು ಸರಿಯಾಗಿ ಉಚ್ಚರಿಸದೆ ಒಮ್ಮೊಮ್ಮೆ 'ಆ'ದ ಧ್ವನಿಯನ್ನೋ ಅಥವಾ ಅದನ್ನು ಹೋಲುವ ಬೇರೆ ಇನ್ನಾವುದೋ ಧ್ವನಿಯನ್ನು ತಪ್ಪಾಗಿ ಉಚ್ಚರಿಸುವುದುಂಟು. ಆಗ 'ಅ'ದ ಸರಿಯಾದ ಉಚ್ಚಾರವನ್ನು ಕಲಿಸುವುದಕ್ಕಾಗಿ about,

---

7. ಕನ್ನಡ ನುಡಿ ಘಟ್ಟ - ೨. ಲೇಖಕರು : ಶ್ರೀ ಕೆ.ಪಿ. ಆಚಾರ್ಯ

8. ಇದರ ಕುರಿತು ಭಿನ್ನಾಭಿಪ್ರಾಯಗಳಿವೆ.

apart, arrange, around ಈ ಶಬ್ದಗಳ ಉಚ್ಚಾರಣೆಯ ಮೊದಲ ಅಕ್ಷರದ ಉಚ್ಚಾರವೇ 'ಅ'ದ ಉಚ್ಚಾರಣೆಯೆಂದು ಸ್ಪಷ್ಟ ಪಡಿಸಬೇಕು.

'ಅ' ಕ್ಕೆ are, car, bar
'ಇ' ಕ್ಕೆ in, it, if, ink
'ಈ' ಕ್ಕೆ eagle, eager, easy, east
'ಗ' ಕ್ಕೆ gun, gum, gutter

ಹೀಗೆ ಕನ್ನಡದ ವಿವಿಧ ಅಕ್ಷರಗಳಿಗೆ ಮಾಧ್ಯಮ ಭಾಷೆಯ ಸಮವಾದ ಉಚ್ಚಾರಣೆಯ ಅಕ್ಷರಗಳನ್ನು ಬರೆದು ತಿಳಿಸಬೇಕು. ಇಂತಹ ಸಮಸ್ಯೆ ಹೆಚ್ಚಾಗಿ ಒತ್ತಕ್ಷರ, ಸಂಯುಕ್ತಾಕ್ಷರ ಮುಂತಾದೆಡೆಗೆ ಕಾಣುವದು. ಆಗಲೂ ಇದೇ ಪದ್ಧತಿಯನ್ನು ಬಳಸುವುದು ಸೂಕ್ತವಾಗಿದೆ.

೧೬. ಕನ್ನಡದ ಶಬ್ದಗಳಲ್ಲಿ ಕನ್ನಡೇತರರಿಗೆ ಮುಖ್ಯವಾಗಿ ತೊಡಕಾಗುವವುಗಳೆಂದರೆ ಶ, ಷ, ಸ ಹಾಗೂ ಮಹಾಪ್ರಾಣ ಅಕ್ಷರಗಳ ಉಚ್ಚಾರ ಮತ್ತು ಬರವಣಿಗೆ. ಇವುಗಳನ್ನು ಸಹ

Shephered	ಶೇಪರ್ಡ	Shed	ಶೆಡ್
Shallot	ಷಲಾಟ್	Shutter	ಷಟರ್
Sun	ಸನ್	Subject	ಸಬ್ಜೆಕ್ಟ್

ಮುಂತಾದ ಶಬ್ದಗಳ ಉದಾಹರಣೆಯಿಂದ ಕಲಿಸಬೇಕಾಗುವದು. ಆಗ ಕೆಳಗೆ ಗೆರೆ ಹಾಕಿದ ಅಕ್ಷರಗಳ ಉಚ್ಚಾರವನ್ನು ಗಮನಿಸಲು ತಿಳಿಸಬೇಕು. ಇದಲ್ಲದೆ ಅವರಿಗೆ ಕಲಿಸುವ ಪ್ರತಿಯೊಂದು ಶಬ್ದಗಳಿಗೆ ಕೆಳಗಿನ ಕ್ರಮವನ್ನು ಅನುಸರಿಸಿದರೆ ಸುಲಭವಾಗುತ್ತದೆ :-

ಮನೆ	(mane)	-	home, house
ಶಾಲೆ	(shale)	-	school
ಭಾಷೆ	(bhase)	-	language
ಮರ	(mara)	-	tree
ನದಿ	(nadi)	-	river
ಮಳೆ	(male)	-	rain
ಚಿಕ್ಕ	(chikka)	-	small
ದೊಡ್ಡ	(dodda)	-	big
ತಿಂಗಳು	(tingalu)	-	month
ತಂದೆ	(tande)	-	father
ಆಟ	(ata)	-	play
ಊಟ	(uta)	-	meal
ಜಗ್ಗು	(jaggu)	-	pull

ಹೋಗು	(hogu)	-	go
ಬಾ	(ba)	-	come

ಇದೇ ರೀತಿ ಮಾದರಿಗಾಗಿ ಒಂದೆರಡು ವಾಕ್ಯಗಳನ್ನು ಕೆಳಗೆ ಕೊಡಲಾಗಿದೆ.

ನಿನ್ನ ಹೆಸರು ಏನು?	ninna hesaru enu?	What is your name?
ನನ್ನ ಹೆಸರು ರಾಮ.	nanna hesaru Rama.	My name is Rama.
ನಾನು ಶಾಲೆಗೆ ಹೋಗುವೆನು	nanu shalege hoguvenu.	I go to school.
ಇದು ಸುಂದರವಾದ ಹೂ ತೋಟ.	idu sundarawada hu tota	This is beautiful flower garden.

ಈ ವಾಕ್ಯದಲ್ಲಿಯ 'ಇದು' ಇದನ್ನು 'ಇಡು' ಎಂದು ಹಾಗೂ 'ತೋಟ' ಇದನ್ನು 'ಟೋಟ' ಎಂದು ಉಚ್ಚರಿಸುವ ಸಂಭವವಿದೆ. ಕಾರಣ ಅಧ್ಯಾಪಕರು ಅವರ ಧ್ವನಿಯನ್ನು ಸೂಕ್ಷ್ಮವಾಗಿ ಗಮನಿಸಬೇಕು. ಕನ್ನಡವನ್ನು ಕಲಿಸುವಲ್ಲಿ ಇದು ಉಪಯುಕ್ತ ಹಾಗೂ ಸುಲಭ ಗ್ರಾಹ್ಯ ಕ್ರಮವಾಗಿದೆ.

ಹೀಗೆ ಅಧ್ಯಾಪಕರು ನಿತ್ಯವೂ ವ್ಯವಹಾರದಲ್ಲಿ ಬಳಕೆಯಾಗುವ ಹಾಗೂ ಪಠ್ಯಪುಸ್ತಕದಲ್ಲಿ ಬರುವ ಶಬ್ದಗಳನ್ನು ಇಂಗ್ಲೀಷ್ ಅರ್ಥಗಳ ಮೂಲಕ ಮತ್ತು ಕನ್ನಡ ಉಚ್ಚಾರವನ್ನು ಇಂಗ್ಲಿಷ ಲಿಪಿಯ ಸಹಾಯದಿಂದ ಕಲಿಸುವುದು ಹೆಚ್ಚು ಪರಿಣಾಮಕಾರಿಯಾಗಿದೆ. ಅಲ್ಲದೆ ಸಾಂದರ್ಭಿಕವಾಗಿ ಬರುವ ಕನ್ನಡದ ಕೆಲವು ಒಂದೇ ಶಬ್ದಗಳಿಗಿರುವ ಬೇರೆ ಬೇರೆ ಅರ್ಥಗಳನ್ನೂ ಮತ್ತು ಒಂದೇ ಅರ್ಥಕೊಡುವ ಇತರ ಶಬ್ದಗಳನ್ನೂ ತಿಳಿಸಬೇಕು.

೧೭. **ಅಧ್ಯಾಪಕರ ಕಲಿಸುವ ಕ್ರಮದ ಕುರಿತು ಒಂದು ಮಾತು ಇಂತಿದೆ: "The teacher is expressed to read the leasson carefully and understand it and the structures used therein before attempting to teach it in the class".** [9]

೧೮. ಕನ್ನಡೇತರರಿಗೆ ಕಲಿಸುವ ಅಕ್ಷರ ಅಭ್ಯಾಸವಾಗಲಿ, ಶಬ್ದ ಸಂಗ್ರಹವಾಗಲಿ, ಪಾಠ ಭೋದನೆಯಾಗಲಿ ಅದು ಕ್ರಮೇಣವಾಗಿ, ನಿಧಾನವಾಗಿ, ಹಂತ ಹಂತವಾಗಿ ಮುಂದುವರೆಯಬೇಕು. ಇಂತಹ ಉಪಕ್ರಮ ಸ್ಪಷ್ಟವಾಗಿದ್ದು, ಸರಳತೆಯಿಂದ ಕಠಿಣದತ್ತ ಸಾಗಬೇಕು. ಕಲಿಸುವ ಎಲ್ಲ ಅಂಶಗಳು ಒಂದಕ್ಕೊಂದು ಪೂರಕವಾಗಿರಬೇಕು. ಒಮ್ಮೆ ಕಲಿಸಿದ ಅಕ್ಷರ, ಶಬ್ದ ಮುಂತಾದವುಗಳನ್ನು ಅವರಿಗೆ ಮರೆಯಗೊಡಬಾರದು. ಆ ಜ್ಞಾನ ಅವರ ಸ್ಮೃತಿಪಟಲದಿಂದ ಅಳಿಸಿ ಹೋಗದೆ, ಸದಾ ನೆನಪಿನಲ್ಲಿ ಉಳಿಯುವದಕ್ಕಾಗಿ ಅವರಿಗೆ ಆಗಾಗ ರೂಢಿ (ಡ್ರಿಲ್ಲಿಂಗ್) ಮಾಡಿಸಬೇಕು. ಶುದ್ಧ ಮತ್ತು ಸ್ಪಷ್ಟವಾದ ಬರವಣಿಗೆ ಹಾಗೂ ಉಚ್ಚಾರಣೆಗಳಿಗಾಗಿ ತುಂಬಾ ರೂಢಿ ಮಾಡಿಸುವದು ಅವಶ್ಯವಾಗಿದೆ. ಇದಕ್ಕಾಗಿ ಅಧ್ಯಾಪಕರು ಅವರನ್ನು ಕನ್ನಡ ಮಾತನಾಡುವ ಜನರು, ಸ್ಥಳ (ಪೇಟೆ, ದೇವಾಲಯ, ಜಾತ್ರೆ, ಇತ್ಯಾದಿ), ವಿಚಾರಗೋಷ್ಠಿ, ನಾಟಕ ಮುಂತಾದ ಕಡೆಗೆ ಕರೆದುಕೊಂಡು ಹೋಗಬೇಕು. ಇದರಿಂದ ಅವರಿಗೆ ಪ್ರಾಯೋಗಿಕ ಜ್ಞಾನ, ಅನುಭವ (practical knowledge, experience)ವೂ ಒದಗುವುದಲ್ಲದೆ, ಸುತ್ತಲೂ ಕನ್ನಡ ವಾತಾವರಣವಿರುವದರಿಂದ ಕನ್ನಡ ಭಾಷಾಗ್ರಹಣ ಶಕ್ತಿಯು ತೀವ್ರತರವಾಗುವುದು.

---

9. ಕನ್ನಡ ನುಡಿಘಟ್ಟ - ೧, ಲೇಖಕರು : ಶ್ರೀ ಭ. ಮಲ್ಲಿಕಾರ್ಜುನ

೧೯. ಒಟ್ಟಿನಲ್ಲಿ ಹೇಳುವುದಾದರೆ ಕನ್ನಡೇತರರು ಕನ್ನಡದ ಈ ಕೋರ್ಸನ್ನು ಮುಗಿಸಿದಾಗ ಅವರು ಕೆಳಗೆ ತಿಳಿಸಿದ ಸಾಮರ್ಥ್ಯವನ್ನು ಹೊಂದಿರಬೇಕು :

೧. ಕನ್ನಡಿಗರು ಆಡಿದ ಮಾತು ಇವರಿಗೆ ಅರ್ಥವಾಗಬೇಕು ಹಾಗೂ ಇವರು ಕನ್ನಡಿಗರೊಡನೆ ಯಾವ ಅಡೆತಡೆಯಿಲ್ಲದೆ ಮಾತನಾಡಬೇಕು.

೨. ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಡಬೇಕು.

೩. ಕನ್ನಡವನ್ನು ಯಾವ ತೊಂದರೆಯಿಲ್ಲದೆ ಸರಿಯಾಗಿ ಓದಬೇಕು, ಬರೆಯಬೇಕು.

೪. ಗದ್ಯ ಖಂಡಗಳನ್ನು, ಸರಳವಾದ ಸಣ್ಣ ಸಣ್ಣ ಕಥೆಗಳನ್ನು ತಾಯ್ನುಡಿಯಿಂದ ಕನ್ನಡಕ್ಕೆ, ಕನ್ನಡದಿಂದ ತಾಯ್ನುಡಿಗೆ ಅನುವಾದಿಸಬೇಕು.

೫. ಯಾವುದಾದರೂ ವಿಷಯದ ಮೇಲೆ ಸ್ವತಃ ಬರೆಯಬೇಕು, ಇತ್ಯಾದಿ.

೨೦. ದ್ವಿತೀಯ ಭಾಷಾ ಅಧ್ಯಾಪಕರು ಕನ್ನಡೇತರರಿಗೆ ಸರಿಯಾಗಿ ಕನ್ನಡವನ್ನು ಕಲಿಸಲು ಅವರಿಗೆ ಕೆಳಗಿನ ತರಬೇತಿ ಹಾಗೂ ಸಾಮಗ್ರಿಗಳ ಅವಶ್ಯಕತೆಯಿದೆ :

೧. ಮೊದಲು ಅಧ್ಯಾಪಕರಿಗೇ ತರಬೇತಿಯ ವ್ಯವಸ್ಥೆ.

೨. ಸರಿಯಾದ ಪಠ್ಯಪುಸ್ತಕಗಳು

೩. ಸುಸಜ್ಜಿತವಾದ ಪ್ರಯೋಗಾಲಯ

೪. ಚಿತ್ರಪಟ ಮುಂತಾದ ಸಾಧನಗಳು.

೨೧. ಈ ಲೇಖನವನ್ನು ಮುಗಿಸುವ ಮೊದಲು ಒಂದು ಮಾತು. ಹಿಂದೊಮ್ಮೆ ಕರ್ನಾಟಕ ವಿಶ್ವವಿದ್ಯಾನಿಲಯದ ಭೌತಶಾಸ್ತ್ರದ ಪ್ರಾಧ್ಯಾಪಕರಾದ ಡಾ. ಉಮಾಕಾಂತರವರು ಕನ್ನಡಲಿಪಿಯನ್ನು ಕುರಿತು ಕನ್ನಡ ಅಧ್ಯಯನ ಪೀಠದಲ್ಲಿ ನೀಡಿದ ಉಪನ್ಯಾಸದ ವಿಚಾರವೊಂದನ್ನು ಇಲ್ಲಿನ ತಿಳಿಸಬಯಸುವೆನು. ಅದು ಹೀಗಿದೆ - ಕನ್ನಡ ವರ್ಣಮಾಲೆಯ ಖ, ಘ, ಛ, ಝ, ಠ, ಥ, ಈ ಮಹಾಪ್ರಾಣಗಳನ್ನು ಬದಲಿಸಿ, ಢ, ಧ, ಫ, ಭ ಇವುಗಳಂತೆ ಖ ಮುಂತಾದ ಆರು ಅಕ್ಷರಗಳ ಮಹಾಪ್ರಾಣಗಳಾದ ಕ, ಗ, ಚ, ಜ, ಟ, ತ ಇವುಗಳಿಗೂ ಕೇವಲ ಕೆಳಗೆ ಸಣ್ಣ ಗೆರೆಯನ್ನು ಎಳೆದು (ಕ, ಗ, ಚ, ಜ, ಟ, ತ) ಮಹಾಪ್ರಾಣಗಳಂತೆ ಬಳಸಿದರೆ ಕನ್ನಡ ಮೂಲಾಕ್ಷರಗಳನ್ನು ಕಲಿಯಲು ಸುಲಭವಾಗಲು ಸಾಧ್ಯವಿದೆ ಎಂಬುದಾಗಿದೆ.

೨೨. **ಕೊನೆಯದಾಗಿ ಕನ್ನಡೇತರರಿಗೆ ಕನ್ನಡವನ್ನು ಕಲಿಸುವ ಅಧ್ಯಾಪಕರು ತಿಳಿದಿರಬೇಕಾದ ಕೆಲವು ಮಾತುಗಳು ಕೆಳಗಿನಂತಿವೆ :**

ಪರಭಾಷೆಯವರಿಗೆ ನಮ್ಮ ಭಾಷೆಯನ್ನು ತಿಳಿಯುವಂತೆ ಕಲಿಸುವದು ಒಂದು ಕಲೆಯಾಗಿದೆ. ಇಂತಹ ಅಧ್ಯಾಪಕರಲ್ಲಿರಬೇಕಾದ ಮುಖ್ಯ ಗುಣಗಳೆಂದರೆ ತನ್ನ ಭಾಷೆಯ ಬಗ್ಗೆ ಗೌರವ, ಪರಿಪೂರ್ಣ ಜ್ಞಾನ, ಸೂಕ್ಷ್ಮ ಬುದ್ಧಿ, ನಿರೀಕ್ಷೆ, ಪರೀಕ್ಷೆಯ ಚತುರತೆ, ಸದಾ ಜಾಗೃತ ಸ್ಥಿತಿ (ವಿದ್ಯಾರ್ಥಿಗಳು ಬರೆಯುವಾಗ, ಓದುವಾಗ ಪೂರ್ಣ ಲಕ್ಷ ಕೊಡವದು) ಸಹನೆ (ಅವರು ಒಮ್ಮೊಮ್ಮೆ ಅಪಾರ್ಥವಾಗುವಂತೆ ಓದಬಹುದು, ಅಂತಹ ಸಮಯದಲ್ಲಿ ನಗು, ಕೋಪ ಸರಿಯಲ್ಲ) ಹಾಗೂ ಕಲಿಸುವಲ್ಲಿ ಶ್ರದ್ಧೆಯಿರಬೇಕು.

ಅಧ್ಯಾಪಕರಲ್ಲಿ ತಾವು ಕಲಿಸುತ್ತಿರುವದು ಕನ್ನಡೇತರರಿಗೆ ಮತ್ತು ಅವರು ಕನ್ನಡವನ್ನು ಕಲಿಯುವಾಗ ತಮ್ಮ ತಾಯ್ನುಡಿಯ ಪ್ರಭಾವಕ್ಕೆ ಒಳಗಾಗುವದೂ ಸಹಜ ಎಂಬ ಪ್ರಜ್ಞೆಯೂ ಇರಬೇಕು. ಕಲಿಸುವ ಕ್ರಮವು ಪ್ರೇರಣಾತ್ಮಕವೂ, ಪ್ರೋತ್ಸಾಹದಾಯಕವೂ, ಆಸಕ್ತಿಯುತವೂ ಹಾಗೂ ಸರಳವೂ, ಸ್ಪಷ್ಟವೂ ಆಗಿರಬೇಕು. ಕಲಿಸುವ ಈ ಪದ್ಧತಿಯು ಕನ್ನಡೇತರರ ಮಾತೃಭಾಷೆ, ಶಿಕ್ಷಣ, ಉದ್ಯೋಗ, ವಯಸ್ಸಿಗೆ ತಕ್ಕಂತೆ ಸ್ವಲ್ಪ ಬದಲಾವಣೆಯಾಗುವದು. ಕನ್ನಡೇತರರಿಗೆ ಕನ್ನಡ ಕಲಿಸುವ ಕ್ರಮ ಬೇರೆ, ಅಶಿಕ್ಷಿತ ಕನ್ನಡಿಗರಿಗೆ ಕನ್ನಡ ಕಲಿಸುವ ಕ್ರಮ ಬೇರೆ. ಕಲಿಯುವ ವಿದ್ಯಾರ್ಥಿಗಳ ಪ್ರಶ್ನೆ, ಸಂದೇಹಗಳಿಗೆ ಶಿಕ್ಷಕರೊಡನೆ ಮುಕ್ತ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಅಧ್ಯಾಪಕರು ಪರಭಾಷೆಯವರ ಎದುರಿಗೆ 'ತಾಯ್ನುಡಿ'ಯ ಪ್ರತಿನಿಧಿಯಾಗಿ ನಿಲ್ಲಬೇಕಾಗುವದರಿಂದ ಅವರ ಕರ್ತವ್ಯ ಬಹು ಜವಾಬ್ದಾರಿಯದಾಗಿರುತ್ತದೆ. ವಿದ್ಯಾರ್ಥಿಗಳಿಗೆ ತಾವು ಕಲಿಯಲಿರುವ ಭಾಷೆಯ ಬಗ್ಗೆ ಏನೂ ಗೊತ್ತಿರುವದಿಲ್ಲ. ಕಾರಣ ಈ ಅಧ್ಯಾಪಕರು ಕಲಿಸುವುದೆಲ್ಲ 'ವೇದ ವಾಕ್ಯ' ವೆಂದೇ ತಿಳಿದು ಅದನ್ನು ಅವರು ತಮ್ಮ ತಲೆ ಮತ್ತು ಕಾಗದಗಳಲ್ಲಿ ತುಂಬಿಕೊಳ್ಳುತ್ತಾರೆ. ಆದ್ದರಿಂದ ಅಧ್ಯಾಪಕರು ಅತ್ಯಂತ ಜಾಗರೂಕರಾಗಿರಬೇಕು. ಕನ್ನಡ ಭಾಷೆಯ ಪ್ರತಿಯೊಂದು ಅಕ್ಷರವನ್ನು ಬಾಯಿಯಿಂದ ಹೊರಗೆ ಬಿಡುವ ಹಾಗೂ ಕೈಯಿಂದ ಬರೆಯುವ ಮೊದಲು ಸರಿಯಾಗಿ ಯೋಚಿಸಬೇಕು. ಇಲ್ಲಿ "Every letter is science, use them cautiously' ಎಂಬಂತೆ ಅಧ್ಯಾಪನ ಮಾಡಬೇಕು. ಒಮ್ಮೊಮ್ಮೆ ಅಕ್ಷರಗಳ ಅತ್ಯಲ್ಪ ತಪ್ಪುಗಳು ಅಪಾರ್ಥಕ್ಕೆಡೆಯಾಗುವ ಸಂಭವವಿದ್ದು, ಅದರಿಂದ ಕನ್ನಡಕ್ಕೆ ದ್ರೋಹ ಬಗೆದಂತಾಗುವುದು. ಆದ್ದರಿಂದ ಕನ್ನಡೇತರರಿಗೆ ಕನ್ನಡ ಕಲಿಸುವ ಅಧ್ಯಾಪಕರ ಬಗ್ಗೆ ಹೇಳಿರುವ "The teacher should come to class well prepared for this purpose" [9] ಎಂಬ ಮಾತು ಸೂಕ್ತವಾಗಿದೆ.

10. ಕನ್ನಡ ನುಡಿ ಘಟ್ಟ - ೨, ಲೇಖಕರು : ಶ್ರೀ ಕೆ.ಪಿ. ಆಚಾರ್ಯ.

ದೇವಾಲಯ : ಆಡಳಿತ ವ್ಯವಸ್ಥೆ

ಡಾ. ಜಿ.ಎಂ. ನಾಗಯ್ಯ

ಸಾಂಸ್ಕೃತಿಕ ಕೇಂದ್ರಗಳೆನಿಸಿದ್ದ ಪ್ರಾಚೀನ ಕರ್ನಾಟಕದ ದೇವಾಲಯಗಳು ಆಗಿನ ಸಾಮಾಜಿಕ, ಆರ್ಥಿಕ, ಧಾರ್ಮಿಕ ಮೊದಲಾದ ಕ್ಷೇತ್ರಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದುವು. ಇವು ನ್ಯಾಯಾಲಯ, ವಿದ್ಯಾಲಯ, ಚಿಕಿತ್ಸಾಲಯವಾಗಿ ಕಾರ್ಯ ನಿರ್ವಹಿಸಿದಂತೆ ಮೂರ್ತಿ, ಶಿಲ್ಪ, ಚಿತ್ರಕಲೆ, ಸಂಗೀತ, ನೃತ್ಯ ಮೊದಲಾದ ಲಲಿತ ಕಲೆಗಳ ತಾಣವಾಗಿದ್ದವು. ಅತ್ಯಂತ ವೈಭವದಿಂದ ತಮ್ಮ ಗತವೈಭವವನ್ನು ಸಾರಲು ಇಂದಿಗೂ ಮೂಕಸಾಕ್ಷಿಗಳಾಗಿ ನಿಂತಿವೆ. ದೇವಾಲಯಗಳು ಹಲವಾರು ಜನರಿಗೆ ಉದ್ಯೋಗ ಕೊಟ್ಟು ಅವರ ಕುಟುಂಬಗಳನ್ನು ಪೋಷಿಸಿವೆ. ಅಪಾರ ಸ್ಥಿರ ಮತ್ತು ಚರಾಸ್ಥಿಯನ್ನು ಹೊಂದಿ ಬೃಹತ್‌ಸಂಸ್ಥೆಗಳಾಗಿ ಬೆಳೆದು ಜನರ ಬದುಕಿನ ಕೇಂದ್ರ ಬಿಂದುಗಳಾಗಿದ್ದವು.

ಪ್ರಾಚೀನ ಕರ್ನಾಟಕದ ಧರ್ಮಗಳಿಗನುಗುಣವಾಗಿ ದೇವಾಲಯಗಳನ್ನು ಜೈನ ಧರ್ಮದ ಜಿನಾಲಯಗಳು, ಶೈವಧರ್ಮದ ಶಿವಾಲಯಗಳು, ವೈಷ್ಣವ ಧರ್ಮದ ದೇವಾಲಯಗಳೆಂದು ವರ್ಗೀಕರಿಸಬಹುದು. ಬೌದ್ಧಧರ್ಮದ ಚೈತ್ಯಾಲಯಗಳು ಕರ್ನಾಟಕದಲ್ಲಿದ್ದುದು ಸ್ವಚಿತ್ತಾಗಿ ಶಾಸನಗಳಿಂದ ತಿಳಿದು ಬರುವುದಾದರೂ ಅವುಗಳ ಆಡಳಿತ ರೀತಿ ಪರಿಚಾರಕ ವರ್ಗದ ಬಗ್ಗೆ ಮಾಹಿತಿ ತಿಳಿದು ಬರುವುದಿಲ್ಲ. ಈ ಮಾತು ಶಾಕ್ತಧರ್ಮದ ದೇವಾಲಯಗಳಿಗೂ ಅನ್ವಯಿಸುತ್ತದೆ. ಜೈನ, ಶೈವ, ವೈಷ್ಣವ ದೇವಾಲಯಗಳ ಆಡಳಿತದ ಬಗ್ಗೆ ಶಾಸನಗಳು ಮಾಹಿತಿ ಒದಗಿಸುತ್ತಿದ್ದು ಅದನ್ನು ಹೀಗೆ ವಿವರಿಸಬಹುದು :

ದೇವಾಲಯಗಳ ಆಡಳಿತ :

ಧರ್ಮವನ್ನು ಅವಲಂಬಿಸಿ ದೇವಾಲಯಗಳು, ದೇವಾಲಯಗಳನ್ನು ಆಶ್ರಯಿಸಿ ಮಠಗಳು ಬೆಳೆದು ಬಂದುವು. ಹೀಗಾಗಿ ಧರ್ಮಗುರುಗಳಿಗೂ ಮತ್ತು ದೇವಾಲಯದ

ಆಡಳಿತಕ್ಕೂ ಪರಸ್ಪರ ಸಂಬಂಧವಿದ್ದುದು ಕಂಡುಬರುತ್ತದೆ. ಸಾಮ್ರಾಜ್ಯಕ್ಕೊಬ್ಬ, ಮಂಡಲಕ್ಕೊಬ್ಬ ಮತ್ತು ಗ್ರಾಮ ಅಥವಾ ನಗರಗಳಲ್ಲೊಬ್ಬ ಧರ್ಮಗುರುವಿರುತ್ತಿದ್ದು, ಇವರು ತಮ್ಮ ವ್ಯಾಪ್ತಿಗೊಳಪಟ್ಟ ದೇವಾಲಯಗಳ ಸ್ಥಾನಪತಿಗಳಾಗಿ ಆಡಳಿತ ನೋಡುತ್ತಿದ್ದುದು ಕೆಲವು ಶಾಸನಗಳು ತಿಳಿಸುತ್ತವೆ. ಈ ಪದ್ಧತಿ ಜೈನ, ಶೈವ ದೇವಾಲಯಗಳಲ್ಲಿ ಕಂಡುಬಂದರೆ ವೈಷ್ಣವ ದೇವಾಲಯಗಳಿಗೆ ಈ ಕ್ರಮ ಇದ್ದ ಬಗ್ಗೆ ಸ್ಪಷ್ಟವಾಗಿ ತಿಳಿದುಬರುವುದಿಲ್ಲ. ಗ್ರಾಮ, ನಗರಗಳಲ್ಲಿದ್ದ ಜಿನಾಲಯಗಳ ಆಡಳಿತ ಹೊಣೆ ಆಯಾ ಜಿನಾಲಯದ ಜೈನ ಆಚಾರ್ಯರದಾಗಿತ್ತು. ಇಂಥ ಜೈನ ಆಚಾರ್ಯರ ಮೇಲೆ ಮಂಡಲಕ್ಕೆ ಒಬ್ಬ ಹಿರಿಯ ಜೈನ ಆಚಾರ್ಯರು ಇರುತ್ತಿದ್ದುದು ತಿಳಿದು ಬರುತ್ತದೆ. ಇವರು ಸಾಮಾನ್ಯವಾಗಿ ಜೈನಧರ್ಮದಲ್ಲಿ ಪ್ರಾವೀಣ್ಯತೆ ಪಡೆದ ಮತ್ತು ತಪಸ್ವಿಗಳಾದ ಹಿರಿಯ ಆಚಾರ್ಯರಾಗಿರುತ್ತಿದ್ದರು. ತೇರದಾಳದ [1] ಶಾಸನದಿಂದ ಕೊಲ್ಲಾಪುರ ರೂಪನಾರಾಯಣ ಬಸದಿಗೆ ಮಾಘಣಂದಿ ಸೈದ್ಧಾಂತಿಕ ದೇವರು ಆಚಾರ್ಯರಾಗಿರುವುದರ ಜೊತೆಗೆ 'ಮಂಡಳದ ಆಚಾರ್ಯರೂ' ಆಗಿದ್ದರೆಂದು ತಿಳಿದುಬರುತ್ತದೆ. ಮಹಾಮಂಡಳೇಶ್ವರ ಗೊಂಕಿದೇವರಸನು 'ತೇರದಾಳ'ದಲ್ಲಿ 'ಗೊಂಕಜಿನಾಯಲ' ನಿರ್ಮಿಸಿ ಅದರಲ್ಲಿ ನೇಮಿ ಜಿನನ ಪ್ರತಿಷ್ಠಾಪನೆಯ ಸಮಾರಂಭಕ್ಕೆ ರಾಷ್ಟ್ರಕೂಟಾನ್ವಯದ ಕಾರ್ತವೀರ್ಯ ಮಹಾಮಂಡಳೇಶ್ವರನನ್ನು ಮತ್ತು ಭಕ್ತಿಯಿಂದ ಮಾಘಂದಿ ಸೈದ್ಧಾಂತಿಕ ದೇವರನ್ನು ಬರಮಾಡಿಕೊಂಡು ದಾನಾದಿ ಕಾರ್ಯಗಳನ್ನು ಮಾಡುತ್ತಾನೆ. ಈ ಅಂಶವು ಶಾಸನದಲ್ಲಿ ''ತಜ್ಜಿನಮುನಿ ಪ್ರಧಾನರಪ್ಪ ದೇಸಿಗಗಣ ಪುಸ್ತಕಗಚ್ಛದ ಶ್ರೀಕೊಣ್ಡಕುನ್ದಾಚಾರ್ಯ್ಯಾನ್ವಯದ ಕೊಲ್ಲಾಪುರದ ಶ್ರೀ ರೂಪ ನಾರಾಯಣ ಬಸದಿಯಾಚಾರ್ಯರು ಮಣ್ಡಳಾಚಾರ್ಯ್ಯರುಮೆನಿಪ್ಪ ಶ್ರೀ ಮಾಘಣಂದಿ ಸೈದ್ಧಾನ್ತಿಕ ದೇವರ ಬರಿಸಿ ಸಕ ವರ್ಷ ೧೦೪೫ನೆಯ ಶುಭಕ್ರಿತ್ಸಂವತ್ಸರದ ವೈಶಾಖದ ಪುಣ್ಣಮಿ ಬ್ರಿಹಸ್ಪತಿವಾರದಲು ಗೊಂಕಜಿನಾಲಯಕ್ಕೆ ಪನ್ನಿರ್ವ್ವರ್ಗ್ರಾವುಂಡುಗಳುಮಂ ಸಮಸ್ತ ಪರಿವಾರ ಪ್ರಜೆಗಳುಮಂ ಆ ಸೆಟ್ಟಿಗುತ್ತ ಮುಖ್ಯ ಸಮಸ್ತ ನಕರಂಗಳುಮಂ ಬರಿಸಿ ನೇಮಿ ತೀರ್ತ್ಥೇಶ್ವರನ ಬಸದಿಯ ರಿಷಿಯರಾಹಾರದಾನಕ್ಕಂ ದೇವರಷ್ಟವಿಧಾರ್ಚನೆಗಂ ಖಣ್ಡಸ್ಫುಟಿತ ಜೀರ್ಣೋದ್ಧಾರಕ್ಕಂ ಪೆಸರ್ಗ್ಗೊಣ್ಡು ತನ್ಮುನೀಶ್ವರರ ದಿವ್ಯಶ್ರೀ ಪಾದಪದ್ಮಂಗಳಂ ದಿವ್ಯತೀರ್ತಜಳಂಗಳಿಂ ತೊಳೆದು'' ಭೂಮಿ, ತೋಟಗಳನ್ನು ದತ್ತಿಕೊಟ್ಟನೆಂದು ಬರುತ್ತದೆ.

ಮಾಘಣಂದಿ ಸೈದ್ಧಾನ್ತಿಕ ದೇವರು ಮಣ್ಡಳಾಚಾರ್ಯರಾಗಿದ್ದುದರಿಂದ ಅವರನ್ನು ಕೊಲ್ಲಾಪುರದಿಂದ ತೇರದಾಳಕ್ಕೆ ಬರಮಾಡಿಕೊಂಡು ಅದರ ಸಮ್ಮುಖದಲ್ಲಿ ಪ್ರತಿಷ್ಠಾಪನೆ ನೆರವೇರಿಸಿ ಈ ಬಸದಿಗೆ ಬಿಟ್ಟ ದಾನವನ್ನು ಅವರು ಸ್ವೀಕರಿಸುತ್ತಾರೆ. ಇದರಿಂದ ಮಂಡಲಕ್ಕೊಬ್ಬ ಮಂಡಳಾಚಾರ್ಯರು ಇರುತ್ತಿದ್ದು ತಮ್ಮ ಮಂಡಲದ ಜೈನಧರ್ಮದ ಸಮಸ್ತ ಆಗುಹೋಗುಗಳನ್ನು ನೋಡಿಕೊಳ್ಳುವುದರ ಜೊತೆಗೆ ಇಡೀ ಮಂಡಲದಲ್ಲಿನ ಜಿನಾಲಯಗಳ ಆಡಳಿತದ ಮೇಲ್ವಿಚಾರಕರಾಗಿದ್ದರು. ತಮಗಿಂತ ಕಿರಿಯರಾಗಿರಬಹುದಾದ ಇತರ ಗ್ರಾಮ, ನಗರ ಬಸದಿಗಳ ಜೈನ ಆಚಾರ್ಯರಿಗೆ ಧಾರ್ಮಿಕ ವಿಷಯದಲ್ಲಿ ಮಾರ್ಗದರ್ಶನ ನೀಡುತ್ತಿದ್ದರೆಂದು ಊಹಿಸಬಹುದು. ಈ ಆಚಾರ್ಯರು ತಮ್ಮ ತಮ್ಮ ಬಸದಿಗಳ ಆಡಳಿತವನ್ನು ಸ್ವತಂತ್ರವಾಗಿ ನಿರ್ವಹಿಸಿಕೊಂಡು ಹೋಗುತ್ತಿದ್ದರು. ದೇವಾಲಯದ ಸುಗಮ ಆಡಳಿತಕ್ಕಾಗಿ ಅಲ್ಲಿ ಕೆಲಸ ನಿರ್ವಹಿಸಲು ಪರಿಚಾರಕ ವರ್ಗದವರನ್ನು ನೇಮಿಸಿಕೊಂಡಿದ್ದುದು ಕಂಡುಬರುತ್ತದೆ. ಈ ಪರಿಚಾರಕರು ಬಸದಿಯ ಆಚಾರ್ಯರ ಆಜ್ಞಾನುವರ್ತಿಗಳಾಗಿದ್ದರು.

ಜಿನಾಲಯಗಳ ಆಡಳಿತದಂತೆಯೇ ಶಿವಾಲಯಗಳ ಆಡಳಿತ ನಡೆಯುತ್ತಿತ್ತು. ಶಿವಾಲಯಗಳ ಆಡಳಿತವನ್ನು ಆಯಾ ದೇವಾಲಯದ ಕಾಳಾಮುಖ ಶೈವಧರ್ಮದ 'ಸ್ಥಾನಾಚಾರ್ಯರು' ನೋಡಿಕೊಳ್ಳುತ್ತಿದ್ದರು. ಇವರನ್ನು 'ಸ್ಥಾನಿಕ', 'ಸ್ಥಾನಪತಿ', 'ಸ್ಥಾನಾಚಾರ್ಯ' 'ಮಠಾಧಿಪತಿ' [2] ಎಂದು ಶಾಸನಗಳಲ್ಲಿ ಕರೆಯಲಾಗಿದೆ. ಈ ಸ್ಥಾನಪತಿಗಳಿಗೆ ಮೇಲೆ ಮಂಡಳಕ್ಕೆ ಒಬ್ಬ ಹಿರಿಯ ಸ್ಥಾನಪತಿ ಮತ್ತು ಇವರ ಮೇಲೆ ಸಾಮ್ರಾಜ್ಯಕ್ಕೆ ಒಬ್ಬ ಹಿರಿಯ ಸ್ಥಾನಪತಿ ಮತ್ತು ಇವರ ಮೇಲೆ ಸಾಮ್ರಾಜ್ಯಕ್ಕೆ ಒಬ್ಬ ಸ್ಥಾನಪತಿ ಇರುತ್ತಿದ್ದುದು ತಿಳಿದು ಬರುತ್ತದೆ. ದೇವಾಲಯದ ಸ್ಥಾನಪತಿಗಳು ತಮ್ಮ ದೇವಾಲಯದ ಆಡಳಿತ ನಡೆಸಲು ಸ್ವತಂತ್ರರಾಗಿದ್ದರೂ ಧಾರ್ಮಿಕ ವಿಷಯಗಳಿಗೆ ಸಂಬಂಧಿಸಿದಂತೆ ಮಂಡಳದ ಹಿರಿಯ ಸ್ಥಾನಾಚಾರ್ಯರಿಂದ ಮಾರ್ಗದರ್ಶನ

ಪಡೆದುಕೊಳ್ಳುತ್ತಿದ್ದುದು ಊಹಿಸಬಹುದು. ಮಲೆಯಾಳ ಪಂಡಿತದೇವನು ಕೋಗಳಿ ೫೦೦ ವಿಭಾಗದ ಮಠಾಧಿಪತಿಯಾಗಿದ್ದನು. ಈ ಅಂಶವನ್ನು ಮೋರಿಗೆರೆ [3] ಶಾಸನ ''ಶ್ರೀ ಮಲ್ಲಕುಳೀಶ ಮುಖಕಮಳ ವಿನಿರ್ಗತ ಶಕಳ ಶಾಸ್ತ್ರಾರ್ಥ ಸದ್ಭಾವಾಭಿಜ್ಞರ್ ಯಮನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನಧಾರಣ ಜಪಸಮಾಧಿ ಸಂಪನ್ನರಪ್ಪ ಕೋಗಳಿಯಯ್ನೂಱಱ ಮಠಾಧಿಪತಿಗಳಪ್ಪ ಸಿಂಹಪರ್ಷೆಯ ಶ್ರೀ ಮನ್ಮಲೆಯಾಳ ಪಂಡಿತದೇವರ'' ಎಂದು ಹೇಳುತ್ತದೆ. ಇಲ್ಲಿ ಮಲೆಯಾಳ ಪಂಡಿತನನ್ನು 'ಕೋಗಳಿಯಯ್ನೂಱಱ ಮಠಾಧಿಪತಿ ಎಂದು ಕರೆದಿರುವುದರಿಂದ ಇವನು ಕೋಗಳಿ ೫೦೦ ವಿಭಾಗದ ಸ್ಥಾನಪತಿಯಾಗಿದ್ದನೆಂಬುದು ಸ್ಪಷ್ಟ. ಹಾಗೆಯೇ ಬೆಣ್ಣೆಕಲ್ಲಿನ [4] ಕ್ರಿ.ಶ.೧೨೨೮ರ ಶಾಸನದಲ್ಲಿ ಕಳೇಶ್ವರ ದೇವರನ್ನು ''ಕೋಗಳಿಯೈನೂಱಱ ತಪಚಕ್ರವರ್ತಿ ರಾಜಗುರು ಕಳೇಶ್ವರದೇವರ' ಎಂದು ಕರೆಯಲಾಗಿದೆ. ಅಮಿತಯ್ಯ ದಂಡನಾಯಕ ಮಾಡಿಸಿದ ವಿವಿಧ ದೇವಾಲಯಗಳಿಗೆ ಹೊಯ್ಸಳ ದೊರೆ ನರಸಿಂಹನು ಕಳೇಶ್ವರ ಬ್ರತಿಯ ಪಾದಪೂಜೆ ಮಾಡಿ ದಾನ ಬಿಡುತ್ತಾನೆ. ಈ ಕಳೇಶ್ವರನು ಕೋಗಳಿನಾಡಿನ (ಮಂಡಳದ) ಸ್ಥಾನಪತಿಯಾಗಿದ್ದನು.

ಕುಂತಳದ ಅಂದರೆ ಸಪಾದಲಕ್ಷದ ಸ್ಥಾನಾಚಾರ್ಯರಾಗಿ ಇಂದ್ರಶಿವದೇವಾಚಾರ್ಯನು ಇದ್ದುದನ್ನು ಕಣವ ಶಾಸನ ಸ್ಪಷ್ಟವಾಗಿ ನಿರೂಪಿಸುತ್ತದೆ. ಕಲ್ಯಾಣದ ಚಾಲುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ ರಾಜಗುರುವಾದ ಇಂದ್ರಶಿವದೇವಾಚಾರ್ಯರನ್ನು ಕಣವಿ [5] ಶಾಸನದಲ್ಲಿ ''ಚಾಳುಕ್ಯ ಚಕ್ರವರ್ತಿ ಪೆರ್ಮಾಡಿರಾಯ ಪೂಜಿತ ಚರಣ ಸರೋರುಂ ವಿಬುಧ ಜನಕಳ್ಪರುಮೆನಿಸಿ ರಾಜಗುರುಗಳಪ್ಪಿಂದ್ರ ಶಿವದೇವಾಚಾರ್ಯ್ಯ ಮ್ಮುಳುಗುಂದದ ಸೋಭನೇಶ್ವರ ಸ್ಥಾನವಾ(ದಿ) (ಸ್ಥಾನಪತಿ)ಯಾಗಿ (ಸವ)ಲಕ್ಷೆಯ ಶಿವಲಿಂಗ ದೇವರಸ್ಥಾನಂಗಳಂ ಸುಖದಿನಾಳುತ್ತಿರ್ದ್ದರು'' ಎಂದು ಹೇಳಿರುವುದರಿಂದ ಇವರು ಕುಂತಳನಾಡಿನ ಶಿವಲಿಂಗ ದೇವಸ್ಥಾನಗಳನ್ನು ಆಳುವ ಕುಂತಳದ ಸ್ಥಾನಪತಿಗಳಾಗಿದ್ದರೆಂಬುದು ಸ್ಪಷ್ಟ. ಮೇಲಿನ ಆಧಾರಗಳಿಂದ ದೇವಾಲಯಕ್ಕೆ ಒಬ್ಬ, ಮಂಡಲಕ್ಕೆ ಒಬ್ಬ, ಸಾಮ್ರಾಜ್ಯಕ್ಕೆ ಒಬ್ಬ 'ಸ್ಥಾನಪತಿ' ಇರುತ್ತಿದ್ದುದು ಗೊತ್ತಾಗುತ್ತದೆ.

ವೈಷ್ಣವ ಧರ್ಮದ ದೇವಾಲಯಗಳ ಆಡಳಿತವನ್ನು ವೇದ, ಆಗಮಶಾಸ್ತ್ರಗಳನ್ನು ಬಲ್ಲಂಥ ಬ್ರಾಹ್ಮಣೋತ್ತಮನು ನೋಡಿಕೊಳ್ಳುತ್ತಿದ್ದು ಇವನನ್ನು 'ಆಚಾರ್ಯ' 'ಸ್ಥಾನವಾಚಾರ್ಯ' ಎಂದು ಶಾಸನಗಳು ಕರೆದಿವೆ. ಅಗ್ರಹಾರದಲ್ಲಿನ ದೇವಾಲಯಗಳನ್ನು ಆಡಳಿತವನ್ನು ಪಂಡಿತನಾದ ಊರೊಡೆಯನೇ ನೋಡಿಕೊಳ್ಳುತ್ತಿದ್ದನು. ಶ್ರೀ ವೈಷ್ಣವ ಧರ್ಮಕ್ಕೆ, ಸಂಬಂಧಿಸಿದ ದೇವಾಲಯಗಳ ಆಳ್ವಿಕೆಯನ್ನು ಆಳ್ವಾರರು ಮಾಡುತ್ತಿದ್ದರು. 'ಆಲ್ವಾರ್' ಎಂದರೆ ಭಗವಂತನ ಅನಂತಗುಣಗಳ ಧ್ಯಾನದ ಮಡುವಿನಲ್ಲಿರತಕ್ಕವರು' ಎಂದು ಡಾ॥ ಎಂ. ಚಿದಾನಂದಮೂರ್ತಿಯವರು [6] ಅರ್ಥ ಹೇಳುತ್ತಾರೆ. ವಿಣ್ಣಕರ್ ಆಳ್ವಾರ್ ಅವರಿಗೆ ದತ್ತಿಕೊಟ್ಟ ವಿಷಯವನ್ನು ತಿರುಮಕೂಡಲು ನರಸೀಪುರ ತಾಲ್ಲೂಕಿನ ಕ್ರಿ. ಶ. ೧೯೯೦ರ ಶಾಸನ ಹೇಳುತ್ತದೆ. ವೈಷ್ಣವ ದೇವಾಲಯಗಳಿಗೆ ಸಂಬಂಧಿಸಿದಂತೆ ಮಂಡಲಕ್ಕೊಬ್ಬ ಆಚಾರ್ಯರು ಇದ್ದ ಬಗ್ಗೆ ತಿಳಿದು ಬರುವುದಿಲ್ಲ.

ಜೈನ ಆಚಾರ್ಯರು, ಸ್ಥಾನಪತಿಗಳು, ಬ್ರಾಹ್ಮಣ ಆಚಾರ್ಯರು ತಮ್ಮ ತಮ್ಮ ದೇವಾಲಯಗಳ ಆಡಳಿತದ ಸಮಸ್ತ ಹೊಣೆಯನ್ನು ಹೊತ್ತಿದ್ದರು. ಇವರು ಅಧಿಕಾರ ಹೊಂದಿದ್ದರೂ ಸ್ವೇಚ್ಛೆಯಿಂದ ವರ್ತಿಸುವಂತಿಲ್ಲ. ದೇವಾಲಯದ ಆಸ್ತಿಯನ್ನು ದುರ್ಬಳಕೆ ಮಾಡುವಂತಿಲ್ಲ. ಬಿಟ್ಟ ದಾನವು ಆಯಾ ಉದ್ದೇಶಕ್ಕೆ ವಿನಿಯೋಗವಾಗಬೇಕು. ಇವರು ಕರ್ತವ್ಯ ಚ್ಯುತರಾದರೆ ಅರಸರು, ಮಹಾಸಾಮಂತನು ಪ್ರಭುಗಾವುಂಡುಗಳು, ಗಾವುಂಡರು ವಿವಿಧ ಸಂಘ-ಸಂಸ್ಥೆಗಳವರು ಪ್ರಜೆಗಳು ಸೇರಿ ಅವರನ್ನು ಹೊರಗೆ ಹಾಕಬೇಕು. ಧರ್ಮವನ್ನು ರಕ್ಷಿಸಬೇಕು ಎಂದು ಶಾಸನಗಳು ನಿರೂಪಿಸುತ್ತವೆ. ಇದರಿಂದ ಸ್ಥಾನಾಚಾರ್ಯರ ಆಡಳಿತವನ್ನು ರಾಜಕೀಯ ಪ್ರಭುವರ್ಗದವರು, ಪ್ರಜೆಗಳು ಗಮನಿಸುತ್ತಿದ್ದುದು ಗೊತ್ತಾಗುತ್ತದೆ. ಧಾರ್ಮಿಕ ಮತ್ತು ತಾತ್ವಿಕ ಹಿನ್ನೆಲೆಯುಳ್ಳ ಸ್ಥಾನಾಚಾರ್ಯರು ತಪ್ಪು ಮಾಡುವುದು ಬಹಳ ಕ್ವಚಿತ್ತಾಗಿತ್ತು. ಒಳ್ಳೆಯ ನಡತೆಗೆ, ನೈತಿಕ ಬದುಕಿಗೆ ಇವರು ಆ ಕಾಲದಲ್ಲಿ ಮಾದರಿಯಾಗಿದ್ದರು.

ಪರಿಚಾರಕರು :

ದೇವಾಲಯ ಒಂದು ದೊಡ್ಡ ಸಂಸ್ಥೆಯಾಗಿದ್ದು ಅಲ್ಲಿ ನಡೆಯುವ ತ್ರಿಕಾಲ ಪೂಜೆ, ನೈವೇದ್ಯ, ಗಂಧ, ಪುಷ್ಪ, ದೀಪ, ಧೂಪ, ಅಲಂಕಾರ ಮೊದಲಾದ ಅಂಗಭೋಗದ, ನಾಟ್ಯ, ಸಂಗೀತ, ವಾದ್ಯ ಮೊದಲಾದ ರಂಗಭೋಗಗಳ ಕಾರ್ಯಗಳನ್ನು ಮಾಡಲು, ದೇವಾಲಯದ ಅಂಗಸಂಸ್ಥೆಗಳಾದ ಮಠ, ಶಾಲೆ, ಛತ್ರ, ಘಳಿಗೆ, ಅಗ್ಗಷ್ಟಿಕೆ ಮೊದಲಾದವುಗಳ ಕಾರ್ಯ ನಿರ್ವಹಿಸಲು, ದೇವಾಲಯದಲ್ಲಿ ಆಗಾಗ ಜರುಗುವ ಹಬ್ಬ, ಹುಣ್ಣಿಮೆ, ಉತ್ಸವಗಳನ್ನು ನೆರವೇರಿಸಲು ಅಪಾರ ನೌಕರರನ್ನು ನೇಮಿಸಿಕೊಂಡಿದ್ದುದು ತಿಳಿದುಬರುತ್ತದೆ. ಸ್ಥಾನಾಚಾರ್ಯರ ಆಜ್ಞಾನುವರ್ತಿಗಳಾದ ಈ ನೌಕರ ವರ್ಗದವರನ್ನೇ ಶಾಸನಗಳು 'ಪರಿಚಾರಕರು' 'ಪರಿಚಾರಕ ವರ್ಗ' ಪಾದಮೂಲ ಪರಿವಾರ [7] ಎಂದು ಮುಂತಾಗಿ ಕರೆದಿವೆ. ಆಂಧ್ರ, ಕೇರಳ, ತಮಿಳುನಾಡಿನ ದೇವಾಲಯಗಳಲ್ಲೂ ಕರ್ನಾಟಕದ ದೇವಾಲಯಗಳಲ್ಲಿರುವಂತೆಯೇ ಪರಿಚಾರಕ ವರ್ಗದವರು ಇರುತ್ತಿದ್ದರು. ತಮಿಳು ಶಾಸನಗಳು [8] ಇವರನ್ನು 'ಕೋಯಿಲ್ ಪರಿದಾರವ್' 'ಕೋಯಿಲ್ ಪಣಿಸೇಯುವಾರ್ಗಳ್' 'ಕೋಯಿಲ್ ಪಣಿನೇಣ ಮಕ್ಕಳ್' ಎಂದು ಮುಂತಾಗಿ ಕರೆದಿವೆ. ದೇವಾಲಯಗಳ ಈ ಪರಿಚಾರಕರು ಭಕ್ತಿ ಮತ್ತು ನಿಷ್ಠೆಯಿಂದ ತಮ್ಮ ಕೆಲಸವನ್ನು ನಿರ್ವಹಿಸುತ್ತಿದ್ದರು.

ಪರಿಚಾರಕರ ವೇತನ :

ಪರಿಚಾಕರಿಗೆ ವೇತನ ರೂಪದಲ್ಲಿ ಭೂಮಿ, ಗದ್ದೆ ದತ್ತಿ ಬಿಟ್ಟುಕೊಟ್ಟಿರುವುದನ್ನು ಶಾಸನಗಳನ್ನು ನಿರೂಪಿಸುತ್ತವೆ. ಅಲ್ಲದೆ ವಾಸಕ್ಕಾಗಿ ಮನೆಯನ್ನೂ ಮತ್ತು ವರ್ಷಕ್ಕೆ ಇಂತಿಷ್ಟು ಪಣ; ಗದ್ಯಾಣವೆಂದು ಹಣ ನಿಗದಿಪಡಿಸಿರುವುದೂ ಕಂಡುಬರುತ್ತದೆ. ಕೆಲವೊಮ್ಮೆ ವಸ್ತುವಿನ ರೂಪದಲ್ಲಿ ಅಂದರೆ ವರ್ಷಕ್ಕೆ ಇಂತಿಷ್ಟು ಜೋಳ, ಅಕ್ಕಿ ಮೊದಲಾದ ಧಾನ್ಯಗಳನ್ನು ಬಟ್ಟೆ, ಎಣ್ಣೆಗಾಣಗಳನ್ನು ಬಿಟ್ಟುದು ತಿಳಿದುಬರುತ್ತದೆ. ಹೀಗೆ ಬಿಡುವ ದತ್ತಿ ಇಂತಿಷ್ಟೇ ಎಂಬ ನಿಯಮವಿದ್ದಿಲ್ಲ. ಕೆಲವು ದೇವಾಲಯಗಳಲ್ಲಿ ಒಂದು ವೃತ್ತಿಯಲ್ಲಿ ಹೆಚ್ಚು ಭೂಮಿ ಬಿಟ್ಟಿದ್ದರೆ ಅದೇ ವೃತ್ತಿಯವರಿಗೆ ಬೇರೆಯ ದೇವಾಲಯಗಳಲ್ಲಿ ಕಡಿಮೆ ಭೂಮಿ ಬಿಟ್ಟುದು ಕಂಡು ಬರುತ್ತದೆ. ಹೀಗೆ ಪರಿಚಾರಕರಿಗೆ (ವೃತ್ತಿಯವರಿಗೆ) ಬಿಡುವ ದತ್ತಿಯನ್ನು 'ವ್ರಿತ್ತ' ಎಂದು ಶಾಸನಗಳಲ್ಲಿ ಕರೆಯಲಾಗಿದೆ.

ಪರಿಚಾರಕರ ಅವಧಿ :

ದೇವಾಲಯಗಳಿಗೆ ನೇಮಿಸಿಕೊಂಡ ಪರಿಚಾರಕರ ಅವಧಿ ಸಾಮಾನ್ಯವಾಗಿ ಜೀವಿತಾವಧಿವರೆಗೆ ಆಗಿದ್ದು ಅವರ ನಂತರ ಅವರ ವಂಶದವರಿಗೇ ಆ ಉದ್ಯೋಗ ಮುಂದುವರಿದುಕೊಂಡು ಹೋಗುತ್ತಿತ್ತು. ಅಂದರೆ ವಂಶಪಾರಂಪರ್ಯವಾಗಿ ಅವರು ಕೆಲಸ ನಿರ್ವಹಿಸುತ್ತಿದ್ದರು. ಆ ವಂಶದವರು ಇರದಿದ್ದರೆ ಆ ಕೆಲಸ ಬೇರೆಯವರ ಪಾಲಾಗುತ್ತಿತ್ತು. ಉದಾಹರಣೆ : ಪೂಜಾರಿಗಳ ಸೇವೆ ವಂಶಪಾರಂಪರ್ಯದಿಂದ ಬಂದುದಾಗಿದೆ. ಅದೇ ವಂಶದಲ್ಲಿ ಅಣ್ಣ -ತಮ್ಮಂದಿರು ಹೆಚ್ಚು ಹೆಚ್ಚು ಕುಟುಂಬಗಳಾದಾಗ ಇಂತಿಷ್ಟು ವರ್ಷ ಒಬ್ಬೊಬ್ಬರು ಪೂಜಾರಿಕೆ ಮಾಡಬೇಕೆಂದು ಅವಧಿಯನ್ನು ನಿರ್ಧರಿಸಲಾಗುತ್ತಿತ್ತು. ಉತ್ತರ ಮೇರೂರು [9] ಶಾಸನದಲ್ಲಿ ಗ್ರಾಮ ಸಭೆಯವರು ಮೂರು ವರ್ಷಗಳ ಅವಧಿಯನ್ನು ಪ್ರತಿಯೊಬ್ಬ ಬ್ರಹ್ಮಚಾರಿ ಬ್ರಾಹ್ಮಣನಿಗೆ ನಿಗದಿಪಡಿಸಿ ದತ್ತಿಯ ಭೂಮಿಯಿಂದ ಬರುವ ಉತ್ಪನ್ನವನ್ನು ವೇತನವಾಗಿ ಪಡೆದುಕೊಳ್ಳಬೇಕೆಂದು ನಿರ್ಧರಿಸಿ ಕೊಟ್ಟುದು ತಿಳಿದುಬರುತ್ತದೆ.

ಪರಿಚಾರಕರ ಸಂಖ್ಯೆ :

ಆರಂಭ ಕಾಲದ ದೇವಾಲಯಗಳು ಗಾತ್ರದಲ್ಲಿ ಕಿರಿದಾಗಿದ್ದು ಹೆಚ್ಚು ಪರಿಚಾರಕ ವರ್ಗವನ್ನು ಹೊಂದಿದ್ದಿಲ್ಲ. ೮-೯ನೆಯ ಶತಮಾನಗಳಿಂದ ದೇವಾಲಯಗಳು ಬೃಹತ್ ಗಾತ್ರದಲ್ಲಿ ಬೆಳೆಯಲು ಪ್ರಾರಂಭಿಸಿದುವು. ಕಲ್ಯಾಣ ಚಾಲುಕ್ಯ, ಹೊಯ್ಸಳ ಮತ್ತು ವಿಜಯನಗರ ಅರಸರ ಕಾಲದಲ್ಲಿ ಇವು ಉತ್ತರೋತ್ತರವಾಗಿ ಬೆಳೆದು ಹೆಮ್ಮರವಾಗಿ ನಿಂತವು. ಅರಸರು, ಅಧಿಕಾರಿಗಳು, ಶ್ರೀಮಂತರು, ಸಾಮಾನ್ಯ ಜನರು ಭಕ್ತಿಯಿಂದ ದೇವಾಲಯದ ಖರ್ಚಿಗಾಗಿ ಹೇರಳ ದತ್ತಿದಾನಗಳನ್ನು ಕಾಲಕಾಲಕ್ಕೆ ಬಿಟ್ಟದ್ದಾರೆ. ಇಲ್ಲಿಯ ವಿವಿಧ ಕೆಲಸಗಳನ್ನು ನಿರ್ವಹಿಸಲು ಅನೇಕ ಪರಿಚಾರಕರು ನೇಮಕಗೊಂಡರು. ಇವರ ಸಂಖ್ಯೆ ಇಂತಿಷ್ಟೇ ಇರಬೇಕೆಂಬ

ನಿಯಮವಿದ್ದಿಲ್ಲ. ದೊಡ್ಡ ಮತ್ತು ಪ್ರಸಿದ್ಧ ದೇವಾಲಯಗಳಲ್ಲಿ ಹೆಚ್ಚಿನ ಸಂಖ್ಯೆಯ ಪರಿಚಾರಕರು ಇದ್ದರೆ ಚಿಕ್ಕ ದೇವಾಲಯಗಳಲ್ಲಿ ಇವರ ಸಂಖ್ಯೆ ಕಡಿಮೆ ಇರುತ್ತಿತ್ತು.

ಧಾರವಾಡ ಜಿಲ್ಲೆಯ ರೋಣ ತಾಲ್ಲೂಕಿನ ಸೂಡಿ ಅಕ್ಕೇಶ್ವರ ದೇವಾಲಯದಲ್ಲಿ ಒಂದು ಸಾವಿರ ಪಾದಮೂಲ ಪರಿವಾರದವರು ಇದ್ದರೆಂದು ಹೇಳುತ್ತದೆ.[10] ''ಪೆರ್ಗಡೆ ನಾಯಕ ಪ್ರಮುಖ ಕಾರಣವಿಟ್ಟು ಶಕವರ್ಷ ೯೮೦ನೇಯ ವಿಳಂಬಿ ಸಂವತ್ಸರದ ಜ್ಯೇಷ್ಠದ ಪುಣ್ಣಮೆ ಆದಿತ್ಯವಾರದೆಂದು ಸೂಣ್ಡಿಯಕ್ಕೇಶ್ವರ ದೇವರ್ಗ್ಗವಲ್ಲಿಯ ಸಾಸಿರ್ಬ್ಬರ್ಗಂ ಪಾದಮೂಲ ಪರಿವಾರಕ್ಕಂ ಕೊಟ್ಟ ಶಾಸನ ಮರ್ಯ್ಯಾದೆಯೆನ್ತೆನ್ದೊಡೆ'' ಎಂದು ಶಾಸನದಲ್ಲಿ ಬರುತ್ತದೆ. ಇಲ್ಲಿಯ ಸಾವಿರ ಪಾದಮೂಲ ಪರಿವಾರವು ದೇವಾಲಯವನ್ನು ಆಶ್ರಯಿಸಿ ಸೇವೆಗೈಯುತ್ತಿರುವ ಪರಿಚಾರಕರಾಗಿರಬೇಕು. ಇತಿಹಾಸದ ಪ್ರಸಿದ್ಧ ಗುಜರಾತಿನ ಸೋಮನಾಥ ದೇವಾಲಯದಲ್ಲಿ ೩೦೦೦ ಪರಿಚಾರಕರು ಇದ್ದು ಅವರಲ್ಲಿ ೨೦೦೦ ಪೂಜಾರಿಗಳು ೫೦೦ ನೃತ್ಯದವರು ೩೦೦ ಜನ ಸಂಗೀತಗಾರರು ಮತ್ತು ಹಡಪದವರು ಇದ್ದುದು ತಿಳಿದುಬರುತ್ತದೆ. ತಂಜಾವೂರಿನ ರಾಜರಾಜೇಶ್ವರ ದೇವಾಲಯದಲ್ಲಿ ೩೫೦ ಪರಿಚಾರಕರು ಇದ್ದರೆ, ಕಂಚಿಯ ಮುಕ್ತೇಶ್ವರ ದೇವಾಲಯದಲ್ಲಿ ೬೬ಜನ ಪರಿಚಾರಕರಿದ್ದರು. ಈ ೬೬ ಜನರಲ್ಲಿ ೪೪ ನೃತ್ಯ ಸೇವೆಗೆ ೩ ಬ್ರಾಹ್ಮಣ ಪೂಜಾರಿಗಳು ೨ ಸಂಗೀತಗಾರರು ೫ ಮಂತ್ರಾಚಾರ್ಯರು ೧೨ ವಿಳಕ್ಕುಸ್ತವಾಸಿಗಳ್ ಇದ್ದುದು ತಿಳಿದುಬರುತ್ತದೆ.[11] ಸೋಮನಾಥಪುರದ ಕೇಶವ ದೇವಾಲಯದಲ್ಲಿ ೧೦೦ಕ್ಕೂ ಮೇಲ್ಪಟ್ಟು ಮತ್ತು ಶಿವಾಲಯದಲ್ಲಿ ೮೩ಕ್ಕೂ ಮೇಲ್ಪಟ್ಟು ಪರಿಚಾರಕರಿದ್ದು ಇವರ ವೇತನ ಮತ್ತು ಅಂಗ ರಂಗಭೋಗಗಳಿಗೆ 'ಹೊಯ್ಸಳ' ಮೂರನೆಯ ನರಸಿಂಹನು ೩೩೮೭ ಗದ್ಯಾಣ, ಮೂರು ಹಣ ದತ್ತಿ ನೀಡುತ್ತಾನೆ. ಹೀಗೆ ಪರಿಚಾರಕರ ಸಂಖ್ಯೆ ನಿರ್ಧಿಷ್ಟವಿದ್ದಿಲ್ಲ. ದೇವಾಲಯಗಳಿಂದ ದೇವಾಲಯಕ್ಕೆ ಭಿನ್ನವಾಗುತ್ತಿತ್ತು.

ಪರಿಚಾರಕ ವಿಧಗಳು :

ದೇವಾಲಯಗಳಲ್ಲಿ ಸೇವೆ ಸಲ್ಲಿಸುತ್ತಿರುವ ಪರಿಚಾರಕರನ್ನು ಡಾ|| ದಯಮಾಳನ್[12] ಅವರು ೧. ಆಧ್ಯಾತ್ಮಿಕ ಸೇವೆಯಲ್ಲಿರುವವರು ೨. ಆಡಳಿತದಲ್ಲಿ ಭಾಗಿಯಾದವರು ೩. ಇತರೆ ಭಿನ್ನ ಸೇವೆಗಳಿಗೆ ನೇಮಕವಾದವರು ಎಂದು ಮೂರು ತೆರನಾಗಿ ವಿಂಗಡಿಸುತ್ತಾರೆ. ವಿವಿಧ ವೃತ್ತಿಯ, ವಿವಿಧ ಜಾತಿಯ ಈ ಪರಿಚಾರಕರಲ್ಲಿ ಸ್ತ್ರೀ-ಪುರುಷರೀರ್ವರೂ ನೇಮಕವಾಗಿದ್ದರು. ಇವರು ನಿರ್ವಹಿಸುತ್ತಿರುವ ಕೆಲಸವನ್ನು ಆಧಾರವಾಗಿಟ್ಟುಕೊಂಡು ಇವರನ್ನು ನಾಲ್ಕು ವಿಧವಾಗಿ ವಿಂಗಡಿಸಬಹುದು :

೧. ಗುರುವರ್ಗದ ಪರಿಚಾರಕರು
೨. ಅಂಗಭೋಗದ ಪರಿಚಾರಕರು
೩. ರಂಗಭೋಗದ ಪರಿಚಾರಕರು
೪. ಸೇವಾವರ್ಗದ ಪರಿಚಾರಕರು

ಗುರುವರ್ಗದ ಪರಿಚಾರಕರು :

ಸ್ಥಾನಪತಿ, ಸ್ಥಾನಾಚಾರ್ಯರು, ಜೈನ ಆಚಾರ್ಯರು ಮತ್ತು ದೇವಾಲಯದ ಶಾಲೆಯ ಉಪಾಧ್ಯಾಯರು ಗುರುವರ್ಗದ ಪರಿಚಾರಕರೆನಿಸುತ್ತಾರೆ. ಸ್ಥಾನಪತಿ, ಸ್ಥಾನಾಚಾರ್ಯ ಮತ್ತು ಜೈನ ಆಚಾರ್ಯರು ಮೊದಲ ಸ್ಥಾನದಲ್ಲಿ ನಿಲ್ಲುತ್ತಾರೆಂಬುದನ್ನು ಈ ಹಿಂದೆ ನೋಡಲಾಗಿದೆ. ಇತರೆ ಗುರುವರ್ಗದವರು ಇಂತಿದ್ದಾರೆ :

ಉಪಾಧ್ಯಾಯರು : ದೇವಾಲಯಕ್ಕೆ ಹೊಂದಿಕೊಂಡು ಇರುವ ಶಾಲೆಯಲ್ಲಿ ಬೋಧನೆಯ ಕಾರ್ಯವನ್ನು ಮಾಡುವವರು ಇವರಾಗಿದ್ದಾರೆ. ಶಾಸನಗಳಲ್ಲಿ 'ಓಝ' 'ಉಪಾಧ್ಯಾಯ' ಭಟ್ಟೋಪಧ್ಯಾಯ' ಎಂದು ಮುಂತಾಗಿ ಇವರನ್ನು

ಕರೆಯಲಾಗಿದೆ. ಬಾಗಳಿಯ [13] ಶ್ರೀ ಲಕ್ಷ್ಮೀನಾರಾಯಣ ದೇವರ ಶಾಲೆಯಲ್ಲಿ ವ್ಯಾಖ್ಯಾನ, ಪುರಾಣವನ್ನು ಹೇಳಲು ಧರ್ಮೆಯ ಷಡಂಗಿಯ ಮಗ ಪದ್ಮಣ್ಣನ ಮಗಳು ಧರ್ಮಿಯಕ್ಕ ಒಬ್ಬೊಬ್ಬ ಉಪಾಧ್ಯಾಯರಿಗೆ ವರ್ಷವರ್ಷಕ್ಕೆ ಬಾಗುಳಿಯೇಳು ಗದ್ಯಾಣ ಪೊನ್ನನ್ನು ಜೀವನೋಪಾಯಕ್ಕಾಗಿ ಬಿಡುತ್ತಾಳೆ. ಇದರಿಂದ ಪುರಾಣಕ್ಕೊಬ್ಬ, ವ್ಯಾಖ್ಯಾನಕ್ಕೊಬ್ಬ ಉಪಾಧ್ಯಾಯರು ಇದ್ದುದು ಗೊತ್ತಾಗುತ್ತದೆ. ಮಾವಾಳ [14] ಶಾಸನದಲ್ಲಿ ವ್ಯಾಖ್ಯಾನ ಪುರಾಣಕ್ಕೆ ೧೮ ಮತ್ತರು, ಋಗ್ವೇದದ ಖಂಡಿಕೆಗೆ ಪ್ರಭಾಕರ ವ್ಯಾಖ್ಯಾನಕ್ಕೆ ೨೦ ಮತ್ತರು, ನ್ಯಾಸ ವ್ಯಾಖ್ಯಾನಕ್ಕೆ, ಪುರಾಣಕ್ಕೆ ಬಾಲಶಿಕ್ಷೆಗೆ ೨೦ ಮತ್ತರು, ಯಜುರ್ವೇದದ ಖಂಡಿಕೆಗೆ ೧೦ ಮತ್ತರು ಭೂಮಿ ಬಿಟ್ಟುದನ್ನು ಹೇಳಿರುವುದರಿಂದ ಪುರಾಣ, ಋಗ್ವೇದದ ಖಂಡಿಕೆ, ಪ್ರಭಾಕರ ವ್ಯಾಖ್ಯಾನ, ನ್ಯಾಸ ವ್ಯಾಖ್ಯಾನ, ಯಜುರ್ವೇದ ಖಂಡಿಕ ಈ ವಿಷಯಗಳನ್ನು ಬೋಧಿಸಲು ಒಬ್ಬೊಬ್ಬ ಉಪಾಧ್ಯಾಯರಿದ್ದುದು ಗೊತ್ತಾಗುತ್ತದೆ. ನಾಗದೇವನು[15] ಸೂಡಿಯಲ್ಲಿ ನಾಗೇಶ್ವರಾಲಯ ನಿರ್ಮಿಸಿ ಅಲ್ಲಿ ವಿದ್ಯಾದಾನ ಮಾಡುವುದಕ್ಕೆ ದಾನ ಬಿಡುತ್ತಾನೆ. ಶಾಸನದಲ್ಲಿ ತಪೋಧನರ್ಗೆ ವಕ್ಖಾಣಿಸುತಮಿರ್ಪ್ಪ ಭಟ್ಟರ್ಗೆ, ಮತ್ತರ್ ಮೂವತ್ತು । ಮಠದ ಮಾಣಿಯರನೋದಿಸುವೋಝುಗ್ಗೆ ಮತ್ತರೆಂಟು ಎಂದು ಹೇಳಲಾಗಿದೆ. ಕೇದಾರೇಶ್ವರ ಮಠದಲ್ಲಿ ನಡೆಯುತ್ತಿದ್ದ ಪಾಠಕ್ರಮಗಳನ್ನು ಡಾ॥ಎಂ. ಚಿದಾನಂದಮೂರ್ತಿಯವರು [16] ಶಾಸನಾಧಾರದಿಂದ ಹೀಗೆ ನಿರೂಪಿಸುತ್ತಾರೆ: 'ಋಗ್ವೇದ, ಯುಜುರ್ವೇದ ಮುಂತಾದ ವೇದಗಳ, ಕೌಮಾರ ಪಾಣನೀಯ ಮುಂತಾದ ವ್ಯಾಕರಣಗಳ, ಷಡ್ದರ್ಶನಗಳ, ಲಾಕುಳ ಸಿದ್ಧಾಂತ ಪಾತಂಜಳ ಯೋಗ ಶಾಸ್ತ್ರ ಮುಂತಾದ ಯೋಗಶಾಸ್ತ್ರ ಮತ್ತು ಪುರಾಣ ಕಾವ್ಯ ನಾಟಕ ಮುಂತಾದವುಗಳ ಅಧ್ಯಯನ ಅಲ್ಲಿ ನಡೆಯುತ್ತಿತ್ತು. ಅದು ದೇಶದ ಎಲ್ಲೆಡೆಗಳಿಂದ ಬಂದ ಸನ್ಯಾಸಿಗಳ, ಭಿಕ್ಷುಕರ, ರೋಗಿಗಳ, ಕಲಾವಿದರ ಆಶ್ರಯ ಸ್ಥಾನವಾಗಿತ್ತು. ಈ ಎಲ್ಲ ವಿಷಯಗಳ ಬೋಧಿಸಲು ಉಪಾಧ್ಯಾಯರಿದ್ದುದು ಸ್ಪಷ್ಟ. ಕನ್ನಡ ಅಕ್ಷರ, ಭಾಷೆ, ವ್ಯಾಕರಣ, ಸಾಹಿತ್ಯ ಕಲಿಸಲು ಕನ್ನಡ ಉಪಾಧ್ಯಾಯರನ್ನು ನೇಮಿಸಲಾಗುತ್ತಿತ್ತು. ಹಂದರ್ಕಿ [17] ಶಾಸನದಲ್ಲಿ ''ಕನ್ನಡಕ್ಕರ ಓದುವ ವಿದ್ಯಾರ್ಥಿಮಣಿಗಳಿಗಂ ಪೋದಿಸುವ ಉಪಾಧ್ಯಾಯಗ್ಗೆ'' ದಾನ ಬಿಟ್ಟುದನ್ನು ಹೇಳಲಾಗಿದೆ.

ಪುರಾಣಿಕ : ದೇವಾಲಯಗಳಲ್ಲಿ ಪುರಾಣ ಹೇಳು ಮತ್ತು ಬೋಧಿಸಲು ಪುರಾಣಿಕರನ್ನು ನೇಮಿಸಿಕೊಳ್ಳುತ್ತಿದ್ದರು. ಇವರ ಜೀವನಕ್ಕೆ ಬಿಟ್ಟ ದತ್ತಿಯನ್ನು 'ಪುರಾಣ ವೃತ್ತಿಗಾಗಿ' ಎಂದು ಶಾಸನಗಳು ಕರೆದಿವೆ. ಭಟ್ಟರ ಮಾದಿಮಯ್ಯನು [18] ಸೋಮಯಾಜಿಗಳ ದೇವಾಲಯಕ್ಕೆ ಪುರಾಣ ವೃತ್ತಿಗಾಗಿ ೫೦ ಗದ್ಯಾಣ ಬಿಡುತ್ತಾನೆ. ಹಂಪಿಯ ತಿರುವೇಂಗಳನಾಥ ದೇವಾಲಯದಲ್ಲಿ ಇಬ್ಬರು ಪುರಾಣಿಕರು ಇದ್ದುದು ತಿಳಿದುಬರುತ್ತದೆ.[19] ಬಿಜಾಪುರದ [20] ಶಾಸನದಲ್ಲಿ ಪುರಾಣದ ಭಟ್ಟವ್ರಿತ್ತಿಗೆ ರೇವದಾಸಭಟ್ಟ ಭೂಮಿ, ಮನೆಯ ನಿವೇಶನ ಪಡೆದುಕೊಳ್ಳುತ್ತಾನೆ. ಗುಜ್ಜರ ಸಾಂತಿಕಬ್ಬೆ, ಬಾಗಳಿಯ [21] ಕಲಿದೇವಸ್ವಾಮಿಗೆ ತೋಟ, ಹೊಲಬಿಟ್ಟು 'ಸಿಙಲಗೇರಿ'ಯ ತನ್ನ ಮನೆಯಲ್ಲಿ ತನ್ನಿಂದ ಪರೋಕ್ಷದಲ್ಲಿ ದೇವರ ಮನೆಯಲ್ಲಿ ಪುರಾಣ ಹೇಳುವ ಉಪಾಧ್ಯಾಯರು ಇರಲು ಬಿಟ್ಟುಕೊಡುತ್ತಾಳೆ. ಬಾಗಳಿಯ [22] ಇನ್ನೊಂದು ಶಾಸನದಲ್ಲಿ ಪುರಾಣದ ಈಶ್ವರಭಟ್ಟೋಪಾಧ್ಯಾಯ ರಿಗೆ ತೋಟ, ಬಿಟ್ಟುದು ಹೇಳಲಾಗಿದೆ.

ಜ್ಯೋತಿಷ್ಯ : ದೇವಾಲಯಗಳಲ್ಲಿ ಜ್ಯೋತಿಶಾಸ್ತ್ರ ಬೋಧಿಸಲು ಮತ್ತು ಪಂಚಾಂಗವನ್ನು ಹಿಡಿದು ದೇವರ ಕಾರ್ಯ, ಉತ್ಸವ, ಹಬ್ಬ ಮೊದಲಾದವುಗಳನ್ನು ಆಚರಿಸಲು ವಾರ, ತಿಥಿ, ನಕ್ಷತ್ರಗಳನ್ನು ನೋಡಿ ಮುಹೂರ್ತಗಳನ್ನು ನಿಶ್ಚಯಿಸಿಕೊಡುವ ಕಾರ್ಯಕ್ಕಾಗಿ ಜ್ಯೋತಿಷಿಗಳನ್ನು ನೇಮಕ ಮಾಡಿಕೊಳ್ಳಲಾಗುತ್ತಿತ್ತು. ಸಾಮಾನ್ಯವಾಗಿ ಇವರು ಬ್ರಾಹ್ಮಣರೇ ಆಗಿರುತ್ತಿದ್ದು, ಇವರ ಜೀವನ ನಿರ್ವಹಣೆಗೆ ಭೂಮಿ ದತ್ತಿ ಕೊಡುತ್ತಿದ್ದರು. ದೊಡ್ಡಿ ಮಾಕಾಳದ [23] ಶಾಸನ ಜ್ಯೋತಿಷಿ ಚಾವುಂಡಯ್ಯನಿಗೆ ನಾಲ್ಕು ಮತ್ತರು ಭೂಮಿ ಬಿಟ್ಟುದನ್ನು ತಿಳಿಸುತ್ತದೆ.

೨. ಅಂಗಭೋಗದ ಪರಿಚಾರಕರು

ಪ್ರಾಚೀನ ಕಾಲದಲ್ಲಿ ದೇವರಿಗೆ ಎರಡು ತೆರನಾದ ಭೋಗಗಳು ನಡೆಯುತ್ತಿದ್ದವು. ೧. ಅಂಗಭೋಗ ೨. ರಂಗಭೋಗ, ಅಂಗಭೋಗವು ದೇವರಿಗೆ ಸಲ್ಲುವ ಪೂಜೆ, ದೀಪ, ಧೂಪ, ಶ್ರೀಗಂಧ, ಅಭಿಷೇಕ, ಅಲಂಕಾರ, ಮಂತ್ರೋಚ್ಚಾರಣೆ,

ಮೊದಲಾದ ಸೇವೆಗಳಾಗಿವೆ. ಈ ಕಾರ್ಯಗಳನ್ನು ಮಾಡಲು ಹಲವರನ್ನು ನೇಮಕ ಮಾಡಿಕೊಂಡುದು ಶಾಸನಗಳಿಂದ ತಿಳಿದುಬರುತ್ತಿದ್ದು, ಅವರು ಇಂತಿದ್ದಾರೆ :

೧. **ಪೂಜಾರಿ:** ದೇವರಿಗೆ ತ್ರಿಕಾಲ ಪೂಜೆ ಸಲ್ಲಿಸುವವನು ಪೂಜಾರಿ, ದೇವರಿಗೂ ಭಕ್ತರಿಗೂ ಮಧ್ಯವರ್ತಿಯಾಗಿ ಕೆಲಸ ನಿರ್ವಹಿಸುವ ಪೂಜಾರಿ. ಅಂಗ, ರಂಗ, ಭೋಗ ಮತ್ತು ಇತರ ಪರಿಚಾರಕರಲ್ಲಿ ಉನ್ನತಸ್ಥಾನ ಪಡೆದಿದ್ದಾನೆ, ಶೈವ ವೈಷ್ಣವ ದೇವಾಲಯಗಳಲ್ಲಿ ಈ ಕಾರ್ಯಗೈಯುವವರು ಬ್ರಾಹ್ಮಣರೇ ಆಗಿದ್ದಾರೆ. ಇವರು ವೇದ, ಆಗಮ, ಶಾಸ್ತ್ರಗಳನ್ನು ಬಲ್ಲಂಥ ಪಂಡಿತರಾಗಿದ್ದಾರೆ. ಶಿವದೇವಾಲಯಗಳಲ್ಲಿ ಪೂಜೆಯ ಕಾರ್ಯ ಮಾಡುವವರನ್ನು ಶಿವಬ್ರಾಹ್ಮಣರೆಂದು ಶಾಸನಗಳು ಕರೆದಿವೆ. ಇವರು ಶಿವಾಗಮ ಬಲ್ಲಂಥ ಪಂಡಿತರಾಗಿದ್ದರು. ವೈಷ್ಣವ ಪೂಜಾರಿಗಳು ವೈಖಾನಸ ಮತ್ತು ಪಾಂಚರಾತ್ರಾಗಮಗಳನ್ನೂ ಬಲ್ಲಂಥವರಾಗಿದ್ದರು. ಮಹಾಮಂಡಲೇಶ್ವರ ಹಿರಿಯ ತಿರುಮಲರಾಜ ಒಡೆಯರು ತುಂಗಭದ್ರಾ ತೀರದಲ್ಲಿ ತಿರುವೇಂಗಳನಾಥನ ಪ್ರತಿಷ್ಠೆ ಮಾಡಿಸ್ದು ಅದರ ಆಚಾರ್ಯತ್ವಕ್ಕೆ ವೈಖಾನಸ ಸೂತ್ರದ ಗೌತಮ ಗೋತ್ರ ರಾಮಣಾಚಾರ್ಯರಿಗೆ ವಿಜಯನಗರದ ಅರಸ ಅಚ್ಯುತದೇವರಾಯ ದಾನಬಿಡುತ್ತಾನೆ[24]. ಕುಳೇಕುಮಟಗಿಯ[25] ತ್ರಿಕೂಟಾಚಲದಲ್ಲಿ ಚಂಡೇಶ್ವರನನ್ನು ಮೂರು ಹೊತ್ತು ಪೂಜಿಸುವ ಮಾಣಿಗೆ ೨ ಮತ್ತರು, ವಿನಾಯಕ ದೇವರ ಪೂಜಿಸುವ ಮಾಣಿಗೆ ೧ ಮತ್ತರು, ಆದಿತ್ಯ ದೇವರ ಪೂಜಿಸುವ ಮಾಣಿಗೆ ೧ ಮತ್ತರು ಭೂಮಿ ಬಿಟ್ಟುದು ಶಾಸನದಿಂದ ತಿಳಿದುಬರುತ್ತದೆ. ಈ ಪೂಜಾರಿಗಳು ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಾಗಿದ್ದುದರಿಂದ ಅವರನ್ನು 'ಮಾಣಿ'ಗಳೆಂದು ಶಾಸನ ಕರೆದಿದೆ. ಕೇಶವ ದೇವರನ್ನು[26] ಪೂಜಿಸುವ ಬ್ರಾಹ್ಮಣನ ಜೀವಿತಕ್ಕೆ ಗದ್ದೆ ತೆರಿಗೆ, ಮಾನೆಣ್ಣೆಯನ್ನು ಬಿಡುತ್ತಾರೆ. ಹನ್ನೆರಡು ಹಿಟ್ಟು ಸಹಿತವಾಗಿ ಪೂಜಾರಿ ನಾಗಯ್ಯನ ಕರೆದು ಕಾಲು ತೊಳೆದು ಧಾರಾಪೂರ್ವಕವಾಗಿ ಹಿಟ್ಟು ಹಾಸಿಕೊಟ್ಟುದನ್ನು ತಲವಾಗಲು[27] ಶಾಸನ ತಿಳಿಸುತ್ತದೆ. ಹಾಗೆಯೇ ಹಿರೇಮೇಗಳಗೇರಿಯಲ್ಲಿಯ[28] ಸ್ವಯಂಭುದೇವರಿಗೆ ಸಂತತಂ ಪತ್ರೆ ಪುಷ್ಪಗಳಿಂ ಪೂಜೆಗಟ್ಟುವ ಪೂಜಾರಿಗಲ್ಲಿ ಸ್ಥಾನಾಧಿಪತಿ ಚಂದ್ರಭೂಷಣ ಪಂಡಿತರ ಕಾಲು ತೊಳೆದು ಗದ್ದೆ ದಾನ ಬಿಟ್ಟುದು ತಿಳಿದು ಬರುತ್ತದೆ. ಪೂಜಾರಿಗಳು ಶ್ರದ್ಧೆ ಭಕ್ತಿಯಿಂದ ದೇವರಿಗೆ ತ್ರಿಕಾಲ ಪೂಜೆ ಸಲ್ಲಿಸುತ್ತಿದ್ದರು.

ಅಭಿಷೇಕದ ಜನರು : ದೇವರಿಗೆ ಅಭಿಷೇಕ ಮಾಡಲು ಇವರನ್ನು ನೇಮಿಸಿಕೊಳ್ಳಲಾಗುತ್ತಿತ್ತು. ಇವರು ವೇದ ಶಾಸ್ತ್ರಗಳನ್ನು ಬಲ್ಲಂಥ ಬ್ರಾಹ್ಮಣರಾಗಿದ್ದಾರೆ. ಹಂಪಿಯ ತಿರುವೇಂಗಳನಾಥನ ದೇವಾಲಯದಲ್ಲಿ ಇಬ್ಬರು ಅಭಿಷೇಕದ ಜನರಿದ್ದು, ಅವರಿಗೆ ದಾನಬಿಟ್ಟುದನ್ನು ಅಲ್ಲಿಯ ಶಾಸನ ನಿರೂಪಿಸುತ್ತದೆ.[29]

ಮಂತ್ರಪುಷ್ಪದ ಜನರು : ದೇವರಿಗೆ ಪೂಜೆ, ಅಭಿಷೇಕ ಮಾಡುವಾಗ ಮಂತ್ರೋಚ್ಚಾರಣೆ ಮಾಡುವ ಸಂಪ್ರದಾಯ ಇಂದಿಗೂ ಇದೆ. ಹೀಗೆ ಮಂತ್ರಗಳನ್ನು ಹೇಳುವುದಕ್ಕಾಗಿಯೇ ಕೆಲವರು ಬ್ರಾಹ್ಮಣರನ್ನು ನೇಮಕ ಮಾಡಲಾಗುತ್ತಿತ್ತು. ಸಾಮಾನ್ಯವಾಗಿ ಇವರು ವೇದ ಆಗಮ ಪುರಾಣ ಶಾಸ್ತ್ರಗಳನ್ನು ಬಲ್ಲಂಥ ಬ್ರಾಹ್ಮಣರಾಗಿರುತ್ತಿದ್ದರು. ಮಹಾಮಂಡಳೇಶ್ವರ ತಿರುಮಲರಾಜವೊಡೆಯರು - ತುಂಗಭದ್ರ ತೀರದ ದಂಡೆ ಮೇಲೆ ಶ್ರೀ ತಿರುವೇಂಗಳನಾಥನ ಪ್ರತಿಷ್ಠೆ ಮಾಡಿ ಅದಕ್ಕೆ ನವರತ್ನ ಖಚಿತ ಆಭರಣ, ಬಂಗಾರ ಬೆಳ್ಳಿಗಳಿಂದ ಮಾಡಿದ ಉಪಕರಣಗಳನ್ನು ಕೊಡುತ್ತಾನೆ ಮತ್ತು ಮಂತ್ರ ಉಚ್ಚರಿಸಲು ಇಬ್ಬರನ್ನು ನೇಮಕ ಮಾಡಿಕೊಂಡಿದ್ದು ಇವರಿಗೆ ಅಚ್ಚುತದೇವರಾಯ ದಾನ ಬಿಡುತ್ತಾನೆ.[30]

ಇತಿಹಾಸದ ಜನರು : ದೇವಾಲಯಗಳಲ್ಲಿ ಇತಿಹಾಸ (ಮಹಾಭಾರತ, ರಾಮಾಯಣ) ಹೇಳಲು ಪಂಡಿತ ಬ್ರಾಹ್ಮಣರನ್ನು ನೇಮಿಸಿಕೊಳ್ಳಲಾಗುತ್ತಿತ್ತು. ಹಂಪಿಯ ತಿರುವೇಂಗಳನಾಥ ದೇವಾಲಯದಲ್ಲಿ ಇತಿಹಾಸ ಹೇಳಲು ಒಬ್ಬನನ್ನು ನೇಮಕಮಾಡಿಕೊಂಡಿದ್ದು ಅಚ್ಯುತದೇವರಾಯ ಅವನಿಗೆ ದಾನಬಿಟ್ಟುದು ಶಾಸನದಿಂದ ತಿಳಿದುಬರುತ್ತದೆ.[31]

ಹೋಮದ ಬ್ರಾಹ್ಮಣರು : ದೇವಾಲಯಗಳಲ್ಲಿ ಆಗಾಗ ನಡೆಯುವ ಪವಿತ್ರ ಕಾರ್ಯಗಳಲ್ಲಿ ಯಜ್ಞ ಹೋಮಗಳು. ಹೋಮವನ್ನು ಸಾಂಗೋಪಾಂಗವಾಗಿ ನೆರವೇರಿಸಲು ಇಬ್ಬರು ಬ್ರಾಹ್ಮಣರನ್ನು ಸೂಡಿಯ ನಾಗೇಶ್ವರದೇವಾಲಯ ನೇಮಿಸಿದ್ದು

ತಿಳಿದುಬರುತ್ತದೆ. ಅವರಿಗೆ ಎಂಟು ಮತ್ತರು ಭೂಮಿಯನ್ನು ಬಿಟ್ಟುದು ತಿಳಿದು ಬರುತ್ತದೆ. (ಹೋಮಂಗೆಯ್ವ ಬ್ರಾಹ್ಮಣರಿಬ್ಬರ್ಗ್ಗಂ ಮತ್ತರೆಂಟು).

ಭಾಗವತ ಜನರು : ಭಾಗವತರನ್ನು ದೇವಾಲಯಕ್ಕೆ ನೇಮಕ ಮಾಡಿಕೊಳ್ಳಲಾಗುತ್ತಿತ್ತು. ಭಾಗವತರು ಎಂದರೆ ಭಗವಂತನಿಗೆ ಸಂಬಂಧಿಸಿದ ಹರಿದಾಸ, ವಿಷ್ಣು ಭಕ್ತ ಎಂದೂ ಅರ್ಥವಿದೆ ಹಾಗೂ ಬಯಲಾಟ ಅಥವಾ ಯಕ್ಷಗಾನ ಕಲಿಸುವವನನ್ನು, ಅದರ ಸೂತ್ರದಾರನನ್ನು ಭಾಗವತರೆಂದು ಕರೆಯಲಾಗುತ್ತದೆ. ಹಂಪಿಯ ತಿರುವೇಂಗಳನಾಥನ ದೇವಾಲಯದಲ್ಲಿ ಭಾಗವತದ ಇಬ್ಬರು ಜನರು ಇದ್ದರು. ಹರಿಕೀರ್ತನೆ ಮಾಡಲು ಇವರನ್ನು ನೇಮಕ ಮಾಡಿರಬೇಕು.[32]

ನಂದಾದೀವಿಗೆಯ ಮಾಣಿಗಳು : ದೇವರ ಸಮ್ಮುಖದಲ್ಲಿ ನಂದಾದೀಪ ಸದಾಕಾಲ ಉರಿಯುತ್ತಿರಬೇಕು. ಇದಕ್ಕೆ ಕಾಲಕಾಲಕ್ಕೆ ಎಣ್ಣೆಯನ್ನು ಹಾಕುತ್ತಾ ದೀಪ ಆರದಂತೆ ನೋಡಿಕೊಳ್ಳಲು ಕೆಲವರನ್ನು ನೇಮಕ ಮಾಡಲಾಗುತ್ತಿತ್ತು. ರೂಗಿ[33] ಶಾಸನದಲ್ಲಿ ತೆಲ್ಲಿಗರಯ್ವತ್ತೊಕ್ಕಲಿಂದ ಎಣ್ಣೆ ತಂದು ಕೇದಾರದೇವರಿಗೆ ನಂದಾದೀವಿಗೆ ಹಚ್ಚುವ ಮಾಣಿಗೆ ವರ್ಷಕ್ಕೆ ಒಂದು ಗಾಣ ಮತ್ತು ಒಂದು ಹಾಗ ಬಿಟ್ಟುದನ್ನು ಹೇಳಲಾಗಿದೆ. ರುದ್ರಚಟ್ಟೋಪಾಧ್ಯಾಯರ ಬ್ರಾಹ್ಮಿಣಿ ಮಾಚಿಯಬ್ಬೆಯು[34] ತಮ್ಮ ಸೋಮಯಾಜಿಗಳ ದೇವಾಲಯದ ನಂದಾದೀವಿಗೆಗೆ ೫೦ ಗದ್ಯಾಣ ಬಿಡುತ್ತಾಳೆ. ಉತ್ಸವಗಳ ಸಂದರ್ಭದಲ್ಲಿ ದೀವಿಗೆಗಳನ್ನು ಬಳಸುತ್ತಿದ್ದರು. ಈ ದೀವಟಿಗೆಗಳ ಬೆಳಕಿನಲ್ಲಿ ಕಾರ್ಯಕ್ರಮಗಳು ಜರುಗುತ್ತಿದ್ದವು. ಇದಕ್ಕೆ ಎಣ್ಣೆ ಸಾಕಷ್ಟು ಬೇಕಾಗುತ್ತಿತ್ತು. ಹೀಗಾಗಿ ನಂದಾದೀವಿಗೆ ಮತ್ತು ದೀವಿಗೆಗಳು ಗಾಣಗಳನ್ನೇ ದಾನವಾಗಿ ಕೊಡುತ್ತಿದ್ದರು. ಸ್ವಯಂಭುದೇವರಿಗೆ ದೀವಿಗೆಗಾಗಿ ಎರಡೆತ್ತು ಗಾಣವನ್ನು, ಕಂಬದ ನಾಲ್ವರ್ ಸೂಳೆಯ ಮನೆವಣವನ್ನು, ಕನ್ನಡಿವಣವನ್ನು ಬಿಟ್ಟುದು ತಿಳಿದುಬರುತ್ತದೆ.[35]

ಘಳಿಗೆಯ ಮಾಣಿಗಳು : ದೇವಾಲಯಗಳಲ್ಲಿ ಸಮಯವನ್ನು ಅಳೆಯಲು ಘಳಿಗೆಯ ಬಟ್ಟಲನ್ನು ಇಟ್ಟಿರುತ್ತಿದ್ದರು. ಇವುಗಳನ್ನು ನೋಡಿಕೊಳ್ಳಲು ವಿದ್ಯಾರ್ಥಿ ಮಾಣಿಗಳನ್ನೋ ಅಥವಾ ಬೇರೆ ಕೆಲವರನ್ನು ನೇಮಕ ಮಾಡಿಕೊಳ್ಳುತ್ತಿದ್ದರು. ಇವರಿಗೆ ದತ್ತಿ ದಾನ ಬಿಟ್ಟುದನ್ನು ಶಾಸನಗಳು ತಿಳಿಸುತ್ತವೆ. ಮೋರಿಗೇರಿಯ ದೇವಾಲಯದಲ್ಲಿ ಇಂಥ ಘಳಿಗೆ ಬಟ್ಟಲು ಇದ್ದು ಇದನ್ನು ನೋಡಿಕೊಳ್ಳಲು ನಾಲ್ಕು ಜನರು ಮಾಣಿಗಳನ್ನು ನೇಮಿಸಿಕೊಂಡಿದ್ದು ಪ್ರತಿಯೊಬ್ಬರಿಗೆ ಎಂಟು ಮತ್ತರಿನಂತೆ ಒಟ್ಟು ಮೂವತ್ತೆರಡು ಮತ್ತರು ಭೂಮಿ ದಾನ ಬಿಡಲಾಗಿದೆ.[36] ಹಂಪಿಯ[37] ತಿರುವೇಂಗಳನಾಥ ದೇವಾಲಯದಲ್ಲಿ ಇಂಥ ಘಳಿಗೆ ಬಟ್ಟಲು ಇದ್ದು ಇದನ್ನು ನೋಡಿಕೊಳ್ಳಲು ಒಬ್ಬನನ್ನು ನೇಮಿಸಿದ್ದು ಅವನನ್ನು 'ಘಳಿಯಾರದ ಜನ' ಎಂದು ಕರೆಯಲಾಗಿದ್ದು ಅವನಿಗೆ ದಾನ ಬಿಟ್ಟುದು ತಿಳಿದುಬರುತ್ತದೆ. ನಾಲ್ಕು ಜನರನ್ನು 'ಘಳಿಗೆ ಬಟ್ಟಲ'ನ್ನು ನೋಡಿಕೊಳ್ಳಲು ನೇಮಿಸಿದ್ದರಿಂದ ಪ್ರತಿ ಆರು ತಾಸಿಗೊಬ್ಬರಂತೆ ಕೆಲಸ ನಿರ್ವಹಿಸುತ್ತಿದ್ದರೆಂದು ಹೇಳಬಹುದು.

ಅಡಿಗೆಯವರು : ದೇವರ ನೈವೇದ್ಯಕ್ಕೆ ಮತ್ತು ದೇವಾಲಯದ ಛತ್ರದಲ್ಲಿ ಅಡಿಗೆ ಮಾಡಲು ಅಡಿಗಯವರನ್ನು ನೇಮಿಸಿಕೊಳ್ಳಲಾಗುತ್ತಿತ್ತು. ಶ್ರೀ ಕೋಟಿನಾಥ ದೇವರ ದರುಶನಕ್ಕೆ ಬಂದ ಭಂಡಾರದ ಗುರುರಾಜ ಒಡೆಯರು ಮಠದಲ್ಲಿ ಛತ್ರ ಮಾಡಿಸುತ್ತಾರೆ. ಅಲ್ಲಿ ೧೦ ಜನ ಬ್ರಾಹ್ಮಣರು ಊಟ ಮಾಡುವುದಕ್ಕೆ ವ್ಯವಸ್ಥೆ ಮಾಡಿದ್ದು, ಅಲ್ಲಿ ಅಡಿಗೆ ಮಾಡಲು ಒಬ್ಬ ಬ್ರಾಹ್ಮಣನು ಇದ್ದುದು ತಿಳಿದುಬರುತ್ತದೆ.[38] ಮಹಾಮಂಡಳೇಶ್ವರ ವೀರಬುಕ್ಕಣ್ಣ ಒಡೆಯರ ನಿರೂಪದ ಮೇರೆಗೆ ಮಲ್ಲೆಯ ದಂಣಾಯಕನು ಬಾರಕೂರ ರಾಜವನಾಳುವ ಕಾಲದಲ್ಲಿ ಮದ್ದೆಯ ನಾಗಪ್ಪನವರ ಮಕ್ಕಳಾದ ಧರಣಿದೇವಂಗಳು ಕೋಟೇಶ್ರ ದೇವರಲ್ಲಿ ಅಯಿವರು ಬ್ರಾಹ್ಮಣರು ಅಡಿಗೆಯ ಮಾಡುವನೊಬ್ಬ ಒಟ್ಟು ಆರು ಜನ ಬ್ರಾಹ್ಮಣರ ಭೋಜನಕ್ಕೆ ನಾಲ್ಕು ನಿವೇಶನ ೧೨೪ ಮುಡಿ ಬತ್ತದ ಗದ್ದೆ, ೧೮ ಹೊನ್ನುಗಳನ್ನು ಬಿಡುತ್ತಾನೆ.[39]

ರಂಗಭೋಗದ ಪರಿಚಾರಕರು : ದೇವಾಲಯದ ರಂಗಮಂಟಪದಲ್ಲಿ ನಡೆಯುವ ನಾಟ್ಯ, ನೃತ್ಯ, ನಾಟಕ, ಸಂಗೀತ ಹಾಡುವಿಕೆ ಮೊದಲಾದ ಭೋಗಗಳು ರಂಗಭೋಗಗಳೆನಿಸುತ್ತವೆ. ಇದಕ್ಕೆ ಸಂಬಂಧಪಟ್ಟ ಹಾಗೆ ಹಲವು ನೌಕರರನ್ನು ನೇಮಕ ಮಾಡಿಕೊಳ್ಳಲಾಗುತ್ತಿತ್ತು. ಇಲ್ಲಿ ಸ್ತ್ರೀ ಪುರುಷರೀರ್ವರು ಸೇವೆ ಸಲ್ಲಿಸುತ್ತಿದ್ದರು.

ಪಾತ್ರ : ನರ್ತನ ನೃತ್ಯಾದಿ ಕಾರ್ಯಗಳನ್ನು ಮಾಡುವ ಸೂಳೆಯನ್ನು 'ಪಾತ್ರ' ಎಂದು ಶಾಸನಗಳು ಕರೆದಿವೆ. ಸೂಡಿಯ [40] ಅಕ್ಕೇಶ್ವರ ದೇವಾಲಯದಲ್ಲಿದ್ದ ಪಾತ್ರದವರ ವಿವರಗಳನ್ನು ಶಾಸನದಲ್ಲಿ 'ಬಲದ ದೆಸೆಯ ಪಾತ್ರ ಸೂಳೆ ವಕಬ್ಬೆಗೆ ಮತ್ತರುಂ ೧೨ ಎಡದ ದೆಸೆಯ ಪಾತ್ರಂ ಸೂಳೆಬ್ಬೆಗೆ ಮತ್ತರುಂ ೧೩ ಬಲದ ಮಾಡದ ಪಾತ್ರಂ ಸೂಳೆ ಗಾರ್ಗಬ್ಬೆಗೆ ಮತ್ತರುಂ ೧೨'' ಎಂದು ಕೊಡಲಾಗಿದೆ. ಇಲ್ಲಿ ಮೂವರು ಪಾತ್ರದವರು ಇದ್ದು ಅವರು ನರ್ತಿಸುತ್ತಿದ್ದ ಜಾಗೆಯನ್ನು ಕೂಡ ನಿರ್ದೇಶಿಸಲಾಗಿದೆ. ಶ್ರೀ ಅನಂತದಂಡಾಧೀಶನು [41] ಸೋಮೇಶ್ವರ ದೇವರ ಮುಂದೆ ಭಕ್ತಿಯಿಂದ ಎಲ್ಲರೂ ಅಚ್ಚರಿ ಪಡುವ ಹಾಗೆ ಸೂಳೆಕೇರಿಯನ್ನು ಮಾಡಿಸಿ ಅಲ್ಲಿ 'ಪಾತ್ರಪಾವುಳಕ್ಕೆ' ಬಂದ ಸೂಳೆಯರಿಗೆ ಭೂಮಿದಾನ ಬಿಡುತ್ತಾನೆ. ಕೋಳಿವಾಡದ [42] ಅಗ್ರಹಾರದ ಯಜಮಾನ ಆನೆಯ ದೇವಪ್ಪಯ್ಯಗಳ ಮಗ ಸೂರಪ್ಪಯ್ಯನು ಶ್ರೀ ಮಾಧವ ಜನಾರ್ಧನ ಸ್ವಾಮಿಯ ಗುಡಿಯ ಪಾತ್ರಕ್ಕೆ ಪುಣ್ಯಕಾಲದಲ್ಲಿ ತಿರುಮಲಬೋವನ ಮಗಳು ಸೂರಿಯ ಮಾಣಿಕಿ ಎಂಬ ಹೆಣ್ಣನ್ನು ಕಾಣಾಚಿಯ ಪಾತ್ರವಾಗಿ ಸಮರ್ಪಿಸುತ್ತಾನೆ. ಆಕೆಗೆ ಜೀವನೋಪಾಯಕ್ಕಾಗಿ 'ವರುಷಕ್ಕೆ ಘಟ್ಟಿವರಹ ಆಯಿನಂನಾ ಕ್ಷೇತ್ರಗಳ ಹಸಿಗೆಯಲಿ ಮೇಟಿಗೆ ವೊಂಮನದ ಕಟ್ಟಳೆಯಲ್ಲೂ ಧಾಂನ್ಯವನು ಬಿಟ್ಟುಕೊಟ್ಟನು ಎಂದು ಶಾಸನ ತಿಳಿಸುತ್ತದೆ.

ನಟುವರು : ದೇವಾಲಯದಲ್ಲಿ ಮನೋರಂಜನೆಗಾಗಿ ಮತ್ತು ನೀತಿಬೋಧನೆಯ, ಪೌರಾಣಿಕ ನಾಟಕಗಳನ್ನು ಅಭಿನಯಿಸುತ್ತಿದ್ದರು. ಇಂಥ ನಾಟಕಗಳಲ್ಲಿ ಪಾತ್ರ ವಹಿಸುವವರನ್ನು 'ಪಾತ್ರಿ' 'ನಟ್ಟುವ' 'ನಟುವ'ರೆಂದು ಕರೆಯಲಾಗಿದೆ. ಇಂಥ ನಟರು ದೇವಾಲಯದ ಪರಿಚಾರಕರಾಗಿದ್ದು, ಇವರಿಗೆ ದತ್ತಿದಾನ ಬಿಟ್ಟಿದ್ದು - ಶಾಸನಗಳಿಂದ ತಿಳಿದುಬರುತ್ತದೆ. ಚಿರುವ ಬೆಳಗಲ್ಲು [43] ಶಾಸನವು ಜಲಸಿಂಗದೇವರ ಸನ್ನಿಧಿಯಲ್ಲಿ ಸೋಮರಸಯ್ಯನವರ ಮಕ್ಕಳು ಕರಣಿಕ ಬಸವಯ್ಯನು ಪೋತವರದ ನಟ್ಟುವ ತಿಂಮನ ಮಗಳು. ಪಾತ್ರಿಗೂ ತಾಯಿಕುಂಡ ನಾಟಕದ ಚಾಗಯ್ಯನ ಮಗ ನಟ್ಟುವ ನಾಗಯ್ಯನವರಿಗೆ ಕೃಷ್ಣದೇವರಾಯನಿಗೆ ಪುಣ್ಯವಾಗಬೇಕೆಂದು ಕೃಷ್ಣಭೂಮಿ ದಾನ ಬಿಟ್ಟುದನ್ನು ತಿಳಿಸುತ್ತದೆ. 'ತಾಯಿಕುಂಡ' ಎಂಬ ನಾಟಕ ಆ ಕಾಲದಲ್ಲಿ ಪ್ರಸಿದ್ಧವಾಗಿದ್ದು. ಚಾಗಯ್ಯ ಮತ್ತು ನಾಗಯ್ಯ ಇಬ್ಬರೂ ಜನಪ್ರಿಯ ನಟರಾಗಿದ್ದರು. ಸದಾಶಿವ ಮಹಾರಾಯ ಶ್ರೀವಿಠಲದೇವ ಅಮೃತಪಡಿಗೆಂದು ದಾನಬಿಟ್ಟು ಆದರಲ್ಲಿ 'ನಟುವರಂಗ್ಯ ಪಾಲ್ಗು' ಎಂದು ಶಾಸನದಿಂದ [44] ತಿಳಿದುಬರುತ್ತದೆ. ಮೋರಿಗೇರಿಯ [45] ಶಾಸನದಲ್ಲಿ 'ನಟ್ಟವಂಗೆ ಮತ್ತರ್ಪ್ಪನ್ನೆರಡು' ದಾನಬಿಟ್ಟುದು ತಿಳಿದುಬರುತ್ತದೆ.

ಕಂಬದ ಸೂಳೆಯರು : ದೇವಾಲಯಗಳಲ್ಲಿ ರಂಗಮಂಟಪದ ಕಂಭಕ್ಕೆ ಅಲಂಕಾರ ಮಾಡಿಕೊಂಡು ಒಬ್ಬೊಬ್ಬ ಸೂಳೆಯರು ನಿಲ್ಲುತ್ತಿದ್ದರು. ಕಲಾ ವೈಭವದಿಂದ ಕೂಡಿ ದೇವಾಲಯದ ಕಂಭಕ್ಕೊಬ್ಬರಂತೆ ಸರ್ವಾಲಂಕೃತಗೊಂಡ ಒಬ್ಬೊಬ್ಬ ಸೂಳೆಯನ್ನು ನಿಲ್ಲಿಸಿ ಅದರ ಸೌಂದರ್ಯ ಇಮ್ಮಡಿಗೊಳಿಸಿ ಸಂತೋಷಿಸುವ ಪ್ರಾಚೀನರ ಸೌಂದರ್ಯಪ್ರಜ್ಞೆ, ರಸಿಕತೆಗಳು ಮೆಚ್ಚುವಂಥದ್ದು. ವಡ್ಡಾರಾಧನೆಯ ಸುಕೌಶಳಸ್ವಾಮಿ ಕಥೆಯಲ್ಲಿ ಸುಂದರ ತರುಣಿ ಸುಕೇಶಿನಿ ಬಸದಿಗೆ ಅರ್ಚನೆಗೆ ಹೋದಾಗ ಆ ಸಮಯಕ್ಕೆ ಗಂಧಭಾಜನ ಅರಸನೂ ಹೋಗುತ್ತಾನೆ. ಅರಸ ಬಂದುದಕ್ಕೆ ನಾಚಿ ಆಕೆ ಅಲ್ಲಿಯ ಕಂಭದ ಮೇರೆಗೆ ನಿಲ್ಲುತ್ತಾಳೆ. ಆಕೆಯನ್ನು ನೋಡಿದ ಅರಸು ಗೊಂಬೆಯೆಂದು ಭಾವಿಸಿ ಅದರ ಸೌಂದರ್ಯ ವರ್ಣಿಸಿದಾಗ ಅಲ್ಲಿದ್ದ ದೇವದತ್ತನು ಆಕೆ ಕನ್ಯೆ ಇದ್ದಾಳೆ, ಗೊಂಬೆಯಲ್ಲ ಎಂದು ಹೇಳುತ್ತಾನೆ. ಯಾರೋ ಒಬ್ಬ ಅರಸ ಇಂಥದೇ ಸನ್ನಿವೇಶದಿಂದ ಪ್ರಭಾವಿತನಾಗಿ ಕಂಭಕ್ಕೆ ಸೂಳೆಯರನ್ನು ನಿಲ್ಲಿಸುವ ಪರಿಪಾಠ ಹಾಕಿದನೆಂದು ಊಹಿಸಬಹುದು. ಈ ಕಂಭದ ಸೂಳೆಯರಿಗೆ ಜೀವನ ನಿರ್ವಹಣೆಗೆ ದತ್ತಿದಾನ ಬಿಡಲಾಗುತ್ತಿತ್ತು. ಕೂಡಿಯ ಅಕ್ಕೇಶ್ವರ ದೇವಾಲಯದಲ್ಲಿದ್ದ ಕಂಭದ ಸೂಳೆಯರು ನಿಲ್ಲುತ್ತಿದ್ದ ಸ್ಥಳ ಮತ್ತು ಅವರಿಗೆ ಬಿಟ್ಟ ದತ್ತಿಯನ್ನು ಶಾಸನದಲ್ಲಿ [46] ಹೀಗೆ ಕೊಡಲಾಗಿದೆ. ''ಬಲದ ದೆಸೆಯ ಮೊದಲ ಕಂಭದ ಸೂಳೆXXಬ್ಬೆಗೆ ಮತ್ತರುಂ ೧೫ ಅಲ್ಲಿಯ ಕಂಭದ ಸೂಳೆ ಅಸಗಬ್ಬೆಗೆ ಮತ್ತರುಂ ೧೩ ಎಡದ ದೆಸೆಯ ಮೊದಲ ಕಂಭದ ಸೂಳೆ ಶೀವಕಬ್ಬೆಗೆ ಮತ್ತರು ೧೩ ಅಲ್ಲಿಯ ಕಂಭದ ಸೂಳೆ ಗುಬ್ಬಿಯ ಚಾವುಣ್ಣಬ್ಬೆಗೆ ಮತ್ತರ್'' ಎಂದು ಶಾಸನದಲ್ಲಿ ಕೊಡಲಾಗಿದೆ. ಸೂಡಿಯ [47] ನಾಗೇಶ್ವರ ದೇವಾಲಯದಲ್ಲಿ ನಾಲ್ಕು ಜನ ಕಂಭದ ಸೂಳೆಯರಿದ್ದು ಅವರಿಗೆ ದಾನ ಬಿಟ್ಟುದನ್ನು 'ಬಲವಕ್ಕದೆಡವಕ್ಕದ ಕಂಬದ ಸೂಳೆಯರ್ನ್ನಾಲ್ವರ್ಗ್ಗಂ ಮತ್ತರ್ನ್ನಾಲ್ವತ್ತೆಣ್ಟು' ಎಂದು ಶಾಸನದಲ್ಲಿ ಹೇಳಲಾಗಿದೆ.

ಚಾಮರದ ಸೂಳೆಯರು : ದೇವರಿಗೆ ಚಾಮರ ಬೀಸುವ ಸಲುವಾಗಿ ಸೂಳೆಯರನ್ನು ನೇಮಕ ಮಾಡಿ ದತ್ತಿ ಬಿಟ್ಟಿರುವುದನ್ನು ಶಾಸನಗಳು ನಿರೂಪಿಸುತ್ತವೆ. ಇವರನ್ನು 'ಚಾಮರದ ಸೂಳೆ'ಯರು ಎಂದು ಕರೆಯಲಾಗಿದೆ. ಸೂಡಿಯ [48] ಅಕ್ಕೇಶ್ವರ ದೇವಾಲಯದಲ್ಲಿದ್ದ ಚಾಮರದ ಸೂಳೆಯರನ್ನು ಎಡವಕ್ಕದ ಕೇರಿಯ ಮೊದಲ ದೆಸೆಯ ಬಿಟ್ಟಿಯ ಚಾಮರದ ಸೂಳೆಬ್ಬೆಗೆ ಮತ್ತರುಂ ೧೧ ಎಂದೂ ''ಬಲದ ದೆಸೆಯ ಬಿಟ್ಟಿಯ ಚಾಮರದ ಸೂಳೆಬ್ಬೆಗೆ ಮತ್ತರುಂ ೧೨ ಅಲ್ಲಿಯ ಕೇರಿಯ ಚಾಮರದ ಸೂಳೆ ಚಿಟ್ಟಿಯಬ್ಬೆಗೆ ಮತ್ತರುಂ ೧೨, ಎಡದ ದೆಸೆಯ ಕೇರಿಯ ಚಾಮರದ ಸೂಳೆ ಗುಬ್ಬಿಯ ಕೇತಬ್ಬೆಗೆ ಮತ್ತರುಂ ೧೨'' ಎಂದು ಹೇಳುತ್ತಾ ಅವರು ಸೇವೆ ಗೈಯುತ್ತಿದ್ದ ಸ್ಥಳ ನಿರ್ದೇಶನವನ್ನು ಶಾಸನ ನಿರೂಪಿಸುತ್ತದೆ. ನಾಗೇಶ್ವರ ದೇವಾಲಯದಲ್ಲೂ ನಾಲ್ಕು ಜನರ ಚಾಮರದ ಸೂಳೆಯರನ್ನು ನೇಮಕ ಮಾಡಿಕೊಂಡಿದ್ದು ಅವರಿಗೆ ದಾನ ಬಿಟ್ಟದನ್ನು 'ಬಲವಕ್ಕದೆಡವಕ್ಕದ ಚಾಮರದ ಸೂಳೆಯರ್ನಾಲ್ವರ್ಗ್ಗಂ ಮತ್ತು ನ್ನಾಲ್ವತ್ತೆಣ್ಬು' ಎಂದು ಹೇಳಲಾಗಿದೆ. [49]

ಪಿರಿಯವಾಳ ಸೂಳೆ ಮತ್ತು ಪೆರ್ಗಡೆವಾಳ ಸೂಳೆ : ಇವರಿಬ್ಬರ ಪ್ರಸ್ತಾಪ ಸೂಡಿಯ [50] ಶಾಸನದಲ್ಲಿ ಬರುತ್ತದೆ. ಅಲ್ಲಿ ದೇವರ ಭೋಗಕ್ಕೆ ನಡೆವ 'ಪಿರಿಯವಾಳ ಸೂಳೆ'ಗೆ ಇಪ್ಪತ್ತು ಮತ್ತರನ್ನು ಹೆರ್ಗಡೆವಾಳ ಸೂಳೆ ೧೫ ಮತ್ತರನ್ನು ದಾನ ಬಿಟ್ಟುದು ತಿಳಿದುಬರುತ್ತದೆ.

ಭೋಗದ ಸೂಳೆಯರು : ಸೂಡಿಯ [51] ಶಾಸನದಲ್ಲಿ 'ಭೋಗದ ಸೂಳೆಯರಿಬ್ಬರ್ಗ್ಗಂ' ೨೪ ಮತ್ತರು ಭೂಮಿ ದಾನ ಬಿಡಲಾಗಿದೆ. ಇವರು ನಿರ್ವಹಿಸುತ್ತಿದ್ದ ಕಾರ್ಯಗಳು ಸ್ಪಷ್ಟವಾಗಿ ತಿಳಿದುಬರುವುದಿಲ್ಲ.

ಕೇರಿಯ ಸೂಳೆಯರು : ಸೂಡಿಯ ಶಾಸನದಲ್ಲಿಯೇ [52] ಕೇರಿಯ ಸೂಳೆಯರ ಪ್ರಸ್ತಾಪ ಬಂದಿದ್ದು ಅಲ್ಲಿ 'ಎಡವಕ್ಕದ ಕೇರಿಯ ಸೂಳೆ ಮೈಲಬ್ಬೆಗೆ' ಹನ್ನೆರಡು ಮತ್ತರನ್ನು 'ಬಲವಕ್ಕದ ಕೇರಿಯ ಸೂಳೆ ಜಕ್ಕಬ್ಬೆಗೆ' ಹನ್ನೆರಡು ಮತ್ತರು ಭೂಮಿ ದಾನಬಿಟ್ಟುದನ್ನು ಹೇಳಲಾಗಿದೆ. ಇವರ ಕಾರ್ಯ ಸ್ಪಷ್ಟವಾಗಿ ತಿಳಿದು ಬರುವುದಿಲ್ಲವಾದರೂ ದೇವಾಲಯದ ಸೂಳೆಗೇರಿಗೆ ಸಂಬಂಧಿಸಿದವರು ಇವರಾಗಿದ್ದಾರೆ.

ಸೂಳೆವಾಳ : ಸೂಳೆಯರ ಮುಖಂಡ ಅಥವಾ ಮೇಲ್ವಿಚಾರಕನೇ ಸೂಳೆವಾಳನಾಗಿದ್ದಾನೆ. ಇವರ ಜೀವನ ನಿರ್ವಹಣೆಗೆ ದತ್ತಿಗಳನ್ನು ಕೊಡುತ್ತಿದ್ದರು. ನಾಗೇಶ್ವರ ದೇವಾಲಯದಲ್ಲಿನ 'ಸೂಳೆವಾಳಂಗೆ' ೧೨ ಮತ್ತರು ಭೂಮಿ ಕೊಟ್ಟುದನ್ನು ಶಾಸನ ಹೇಳುತ್ತದೆ. [53] ಹೊಳಗುಂದಿ [54] ಶಾಸನ 'ಸೂಳೆವಳಂಗೆ' ಮೂರು ಮತ್ತರು ಭೂಮಿ ಕೊಟ್ಟುದನ್ನು ಹೇಳುತ್ತದೆ. ಮೋರಿಗೆರೆಯ [55] ಶಾಸನದಲ್ಲಿ 'ಸೂಳೆವಾಳಂಗೆ' ೧೨ ಮತ್ತರು ಭೂಮಿ ಕೊಟ್ಟಿದ್ದರು.

ಹಾಡುವವರು : ರಂಗಭೋಗದಲ್ಲಿ ಹಾಡುವ ಸೇವೆಯೂ ಒಂದು. ಸುಶ್ರಾವ್ಯ ಮತ್ತು ರಾಗಬದ್ಧವಾಗಿ ದೇವಸ್ತುತಿಗಳನ್ನು ಹಾಡುತ್ತಿದ್ದರು. ಈ ಹಾಡುವರಲ್ಲಿ ಸ್ತ್ರೀ ಪುರುಷರೀರ್ವರೂ ಇದ್ದರು. ಕುರುಗೋಡಿನ [56] ದೇವಾಲಯದಲ್ಲಿ ಪುರುಷ ಹಾಡುಗಾರನಿದ್ದು ಆತನಿಗೆ ಕಂಬ ೨೫ ಭೂಮಿ ದಾನಕೊಟ್ಟುದು ತಿಳಿದುಬರುತ್ತದೆ. ರಾಗಿಮಸಲವಾಡ [57] ಶಾಸನದಲ್ಲಿ 'ಪಾಡಾವಿಗಂಗೆ ಪಾತ್ರಕ್ಕೆ ಮದ್ದಳೆಯವಂಗೆ ಯಾ ಕೋಲ ಮ೨೦' ಎಂದು ಬರುತ್ತಿದ್ದು ಇಲ್ಲಿಯೂ ಪುರುಷ ಹಾಡುಗಾರನಿದ್ದುದು ಗೊತ್ತಾಗುತ್ತದೆ. ಬಾಗಳಿಯ ಕಲಿದೇವಸ್ವಾಮಿ ದೇವಾಲಯದಲ್ಲಿ ಹಾಡುವ ಸ್ತ್ರೀಯರು ಇದ್ದರು. ಶಾಸನದಲ್ಲಿ [58] ಹಾಡುವ ಕಾಮವೆ ನಾಗವೆಯ ಮಗಳುಂ ಶ್ರೀಕಲಿದೇವರ ತೊತ್ತು ಪಾತ್ರದ ಸಿರಿಯವೆ'ಯು ಕಲ್ಲಕೇರಿಯ ತನ್ನ ಮನೆಯನ್ನೇ ದೇವರಿಗೆ ಬಿಟ್ಟುಕೊಟ್ಟು. ಆ ಮನೆಯಲ್ಲಿ ತಾನಾಗಲಿ - ತನ್ನ ವಂಶದವರು ಯಾರೇ ಆಗಲಿ ಇದ್ದರೆ ವರ್ಷಕ್ಕೆ ಎರಡು ಪಣವನ್ನು ದೇವರಿಗೆ ಕೊಟ್ಟು ಇರಬೇಕು. ಈ ಹಣವನ್ನು ದೇವರ ನಂದಾದೀವಿಗೆಗೆ ಬಳಸಬೇಕು ಎಂದು ಹೇಳುತ್ತಾಳೆ. ಕೆಲವು ದೇವಾಲಯಗಳಲ್ಲಿ ಒಬ್ಬರಿಗಿಂತ ಹೆಚ್ಚು ಜನರು ಹಾಡುವವರಿದ್ದು ಅವರಿಗೆ ದಾನಬಿಟ್ಟುದುದನ್ನು ಚಿನ್ನತುಂಬಳಂ [59] ಶಾಸನ 'ಹಾಡುವರ್ಗ್ಗ ಮತ್ತರು೧೦' ಎಂದೂ 'ಪಾಡುವರ್ಗೆ ಗದ್ದೆ ಮತ್ತರೊನ್ದು' ಎಂದು ತಲವಾಗಲ [60] ಶಾಸನ ಹೇಳುತ್ತದೆ.

ಸಂಗೀತ ವಾದ್ಯಗಾರರು :

ದೇವಾಲಯದಲ್ಲಿ ಸಂಗೀತ ವಾದ್ಯಗಳನ್ನು ನುಡಿಸಲು ಕೆಲವರನ್ನು ನೇಮಕ ಮಾಡಿಕೊಳ್ಳಲಾಗುತ್ತಿತ್ತು. ಒಂದೊಂದು ಭಾಗದಲ್ಲಿ ಒಂದೊಂದು ವಾದ್ಯ ವಿಶೇಷ ಬಳಕೆಯಲ್ಲಿದ್ದುದು ಶಾಸನಗಳನ್ನು ಅಧ್ಯಯನ ಮಾಡಿದಾಗ ಕಂಡುಬರುತ್ತದೆ. ಇವರು ನೃತ್ಯದವರಿಗೂ ಸಂಗೀತ ಒದಗಿಸುತ್ತಿದ್ದರು. ಅಂದು ಬಳಕೆಯಲ್ಲಿದ್ದ ವಾದ್ಯಕಾರರನ್ನು ಹೀಗೆ ಹೆಸರಿಸಬಹುದು :

ವಂಶಿಗ : ದೇವರ ಸಮ್ಮುಖದಲ್ಲಿ ಕೊಳಲು ನುಡಿಸುವವನನ್ನು 'ವಂಶಿಗ', 'ವಂಚಿಗ', 'ವಂಸಕಾರ' ಎಂದು ಮೊದಲಾಗಿ ಶಾಸನಗಳು ಕರೆದಿವೆ. ಪಾತ್ರದವರ ನರ್ತನಕ್ಕೂ ನಾಟಕಾದಿಗಳಲ್ಲೂ ಇವನು ಸೇವೆ ಸಲ್ಲಿಸುತ್ತಿದ್ದನು. ಇವನಿಗೆ ದತ್ತಿ ಬಿಟ್ಟುದು ಹಲವಾರು ಶಾಸನಗಳು ನಿರೂಪಿಸುತ್ತವೆ. ಸೂಡಿಯ ಅಕ್ಕೇಶ್ವರ ದೇವರ [61] 'ವಂಶಿಗ'ನಿಗೆ ೧೨ ಮತ್ತರು ಭೂಮಿ ಬಿಟ್ಟರೆ ಇದೇ ಸೂಡಿಯ [62] ನಾಗೇಶ್ವರ ದೇವರ ವಂಶಿಗನಿಗೆ ಹನ್ನೆರಡು ಮತ್ತರು ಭೂಮಿ ದಾನ ಬಿಡಲಾಗಿದೆ. ಮೋರಿಗೇರಿಯ [63] ನೊಳಂಬೇಶ್ವರ ದೇವಾಲಯದಲ್ಲಿ ಇಬ್ಬರು ಪಂಶಿಗರು ಇದ್ದರು. ಇವರಿಗೆ ೨೪ ಮತ್ತರು ಭೂಮಿ ದಾನ ಬಿಟ್ಟುದನ್ನು ಶಾಸನದಲ್ಲಿ ಹೇಳಲಾಗಿದೆ.

ಪರೆಕಾರ : 'ಪರೆ' ಎಂಬುದು 'ಚರ್ಮವಾದ್ಯ'. ಇದನ್ನು ತಮಟೆ ಎಂದೂ ಬಳ್ಳಾರಿ ಪ್ರದೇಶದಲ್ಲಿ 'ಹಲಗಿ' ಎಂದೂ ಕರೆಯುತ್ತಾರೆ. ಇದನ್ನು ನುಡಿಸುವವನು ಪರೆಕಾರನಾಗಿದ್ದಾನೆ. ಬಳ್ಳಾರಿ ಪ್ರದೇಶದಲ್ಲಿ ಈಗಲೂ ದೇವಾಲಯಗಳ ಉತ್ಸವಗಳಲ್ಲಿ ಹಲಗೆಗಳನ್ನು ಬಾರಿಸಲಾಗುತ್ತದೆ. ಈ ಪರೆಕಾರರನ್ನು ದೇವಾಲಯಗಳಲ್ಲಿ ಸೇವೆ ಸಲ್ಲಿಸಲು ನೇಮಿಸಲಾಗುತ್ತಿತ್ತು. ಇವರ ಜೀವನ ನಿರ್ವಹಣೆಗೆ ಗದ್ದೆ, ಭೂಮಿದಾನ ಬಿಟ್ಟುದನ್ನು ಶಾಸನಗಳನ್ನು ನಿರೂಪಿಸುತ್ತವೆ. ಸೂಡಿಯ ನಾಗೇಶ್ವರ [64] ದೇವರ ಪರೆಕಾರನಿಗೆ ೨೪ ಮತ್ತರು ಭೂಮಿ ಬಿಡಲಾಗಿದೆ. ಮೋರಿಗೇರಿಯ [65] ನೊಳಂಬೇಶ್ವರ ದೇವರ 'ಪಱೆಕಾರಂಗೆ' ೨೪ ಮತ್ತರು ಭೂಮಿಯನ್ನು ತಲವಗೆಯ [66] ಭೋಗೇಶ್ವರ ದೇವರ ಪಱೆಕಾಱರ್ಗೆ ಒಂದು ಮತ್ತರು ಭೂಮಿ ಮತ್ತು ನೀರ್ಗುಂದದ ಹಾದಿಯಲ್ಲಿ ಎಂಟು ಮತ್ತರು ಭೂಮಿ ಕೊಡಲಾಗಿದೆ.

ನಾಗಸ್ವರ : ನಾಗಸ್ವರ ಒಂದು ವಾದ್ಯ ವಿಶೇಷವಾಗಿದ್ದು ಇದನ್ನು ನುಡಿಸಲು ದೇವಾಲಯಗಳಲ್ಲಿ ಕೆಲವರನ್ನು ನೇಮಕ ಮಾಡಿಕೊಳ್ಳಲಾಗುತ್ತಿತ್ತು. ದೇವಾಲಪುರದ ವಸಂತ ಮಲ್ಲಿಕಾರ್ಜುನ ದೇವರಿಗೆ ಎರಡು ನಾಗಸ್ವರಗಳನ್ನು ನುಡಿಸಲು ಸದಾಶಿವರಾಯನ ಆಜ್ಞೆಯ ಮೇರೆಗೆ ದಾನ ಬಿಟ್ಟುದು ತಿಳಿದುಬರುತ್ತದೆ. [67]

ಡೊಳ್ಳು : ಡೊಳ್ಳುಗಳನ್ನು ದೇವಾಲಯದ ಸಮ್ಮುಖದಲ್ಲಿ ಬಾರಿಸುವುದು ಇಂದಿಗೂ ನಡೆದುಕೊಂಡು ಬಂದಿದೆ. ಡೊಳ್ಳು ಬಾರಿಸಲು ಕೆಲವರನ್ನು ದೇವಾಲಯದಲ್ಲಿ ನೇಮಕ ಮಾಡಿಕೊಂಡು ಅವರಿಗೆ ದತ್ತಿ ಬಿಡುತ್ತಿದ್ದುದು ತಿಳಿದುಬರುತ್ತದೆ. ದೇವಲಾಪುರದ ವಸಂತ ಮಲ್ಲಿಕಾರ್ಜುನ ದೇವರಿಗೆ ಎರಡು ಡೊಳ್ಳು ಎರಡು ನಾಗಸ್ವರಗಳನ್ನು ನುಡಿಸಲು ಸದಾಶಿವರಾಯನು ಒಂದ ಗ್ರಾಮ ದಾನ ಬಿಟ್ಟುದು ತಿಳಿದು ಬರುತ್ತದೆ. [68]

ದಂಡಿಗೆ ವಾದ್ಯ : ವಿಜಾಪುರದ [69] ನರಸಿಂಹ ದೇವರಿಗೆ ತ್ರಿಕಾಲ ಪೂಜೆಯ ಸಮಯದಲ್ಲಿ ನಡೆಯುವ ತ್ರಿಕಾಲಭೋಗವಾಗಿ ದಂಡಿಗೆ ವಾದ್ಯ ನುಡಿಸಲು ಮದ್ದಳೆಯ ಕಲ್ಲಯ್ಯನಿಗೆ ದಾನ ಬಿಟ್ಟುದು ಶಾಸನದಿಂದ ತಿಳಿದು ಬರುತ್ತದೆ.

ತಾಳ ಮತ್ತು ಮದ್ದಳೆ : ತಾಳ, ಮದ್ದಳೆಗಳನ್ನು ನುಡಿಸಲೂ ದೇವಾಲಯದಲ್ಲಿ ಕೆಲವರನ್ನು ನೇಮಕ ಮಾಡಿಕೊಳ್ಳಲಾಗುತ್ತಿತ್ತು. ಅವರ ಜೀವನ ನಿರ್ವಹಣೆಗೆ ಭೂಮಿ ದತ್ತಿಯನ್ನು ಕೊಡಲಾಗುತ್ತಿತ್ತು. ಕುರುಗೋಡು ಸೀಮೆಯಲ್ಲಿಯ ಸೋಮ ಸಮುದ್ರವೆಂಬ ಅಗ್ರಹಾರದಲ್ಲಿ ಲಕ್ಷ್ಮಿನಾರಾಯಣ ದೇವರನ್ನು ಪ್ರತಿಷ್ಠೆ ಮಾಡಿ 'ಯೇಕಾದಶೀಜಾಗರ' ಸಂದರ್ಭದಲ್ಲಿ ತಾಳ, ಮದ್ದಳೆಗಳನ್ನು ಬಾರಿಸುವುದಕ್ಕೆ ಮಹಾಜನರು ಹೊಲವನ್ನು ದಾನ ಬಿಡುತ್ತಾರೆ. [70]

ಜಗಳೆ ಜಾಗಟೆ : ಪೂಜಾ ಸಮಯದಲ್ಲಿ ದೇವರಿಗೆ ಜಗಳೆ ಜಾಗಟೆಗಳನ್ನು ಬಾರಿಸುವುದು ಇಂದಿಗೂ ನಡೆದುಕೊಂಡು ಬಂದ ಸಂಪ್ರದಾಯವಾಗಿದೆ. ಜಗಳೆಗಳೆಂದರೆ ಕಂಚಿನ ತಾಳ, ಕಂಸಾಳವೆಂದು ಅರ್ಥ. ಜಾಗಟೆ ಜಗಳೆ ಬಾರಿಸುವುದಕ್ಕೆ ಐದು ಮತ್ತರು ಭೂಮಿ ದಾನ ಬಿಟ್ಟುದನ್ನು ಮಾಶಾಳ ಶಾಸನ ಹೇಳುತ್ತದೆ.

ಶಂಖ : ದೇವರಿಗೆ ಪೂಜಾದಿ ಸಮಯದಲ್ಲಿ ಶಂಖ ಊದುವುದು ಇಂದಿಗೂ ಆಚರಣೆಯಲ್ಲಿದೆ. ಶಂಖ ಊದಲೂ ದೇವಾಲಯಕ್ಕೆ ಕೆಲವರನ್ನು ನೇಮಕ ಮಾಡಿಕೊಳ್ಳುತ್ತಿದ್ದರು. ಮಾಶಾಳದ [72] ಶಾಸನದಲ್ಲಿ ಶಂಖ ಊದುವವನಿಗೂ ಎರಡು ಮತ್ತರು ಭೂಮಿ ದಾನ ಬಿಟ್ಟುದನ್ನು ಹೇಳಲಾಗಿದೆ.

ಸೇವಾ ವರ್ಗದ ಪರಿಚಾರಕರು :

ದೇವಾಲಯದಲ್ಲಿ ಇತರ ಬೇರೆ ಬೇರೆ ಕೆಲಸ ನಿರ್ವಹಿಸುವವರನ್ನು ಇತರ ಸೇವಾ ವರ್ಗದ ಪರಿಚಾರಕರೆಂದು ಹೇಳಬಹುದು. ದೇವರ ಧ್ವಜ ಹೊರುವವರು, ಪಲ್ಲಕ್ಕಿ ಸೇವೆ ಮಾಡುವವರು, ಕಟ್ಟಿಗೆ, ಮಾಲೆ ಮೊದಲಾದ ಕಾರ್ಯ ಮಾಡುವವರು ಶಿಲ್ಪ, ಬಡಗಿ, ಕುಂಬಾರ ಮೊದಲಾದವರನ್ನು ಸೇವಾವರ್ಗದ ಪರಿಚಾರಕರಲ್ಲಿ ಸಮೀಕರಿಸಬಹುದು. ಈ ವಿವಿಧ ಕಾರ್ಯ ಮಾಡಲು ಕೆಲವರನ್ನು ನೇಮಿಸಿಕೊಂಡು ಅವರಿಗೆ ಜೀವನೋಪಾಯಕ್ಕೆ ಭೂಮಿ, ಹಣ ದತ್ತಿ ಬಿಟ್ಟುದನ್ನು ಶಾಸನಗಳು ನಿರೂಪಿಸುತ್ತವೆ. ಈ ವಿವಿಧ ಸೇವಾ ವರ್ಗದ ಪರಿಚಾರಕರು ಇಂತಿದ್ದಾರೆ :

ಪಳವಿಗ : ಚಿನ್ನತುಂಬಳಂ [73] ಶಾಸನದಲ್ಲಿ 'ಪಾಳವಿಗಂಗೆ' ೧೨ ಮತ್ತರು ಭೂಮಿ ದಾನಬಿಟ್ಟುದು ಹೇಳಲಾಗಿದೆ.

ಕಬ್ಬಿಲ : ಕಬ್ಬಿಲರೆಂದರೆ ಬೆಸ್ತರು, ಗಂಗಾಮತಸ್ಥರೆಂದೂ ಅರ್ಥ. ಇವರನ್ನು ದೇಪಾಲಯದಲ್ಲಿ ಸೇವೆ ಸಲ್ಲಿಸಲು ನೇಮಿಸಿಕೊಳ್ಳಲಾಗುತ್ತಿತ್ತು. ಇವರ ಕೆಲಸ ಏನಿತ್ತೆಂಬುದು ತಿಳಿದುಬರುವುದಿಲ್ಲ. ಮಾಶಾಳ [74] ಶಾಸನದಲ್ಲಿ 'ಕಬ್ಬಿಲ'ಗೆ ಒಂದು ಮತ್ತರು ದಾನ ಬಿಟ್ಟುದನ್ನು ಹೇಳಲಾಗಿದೆ.

ಕಟ್ಟಿಗೆಯ ಜನ : ದೇವಾಲಯದ ಛತ್ರಕ್ಕೆ ಅಡಿಗೆ ಮಾಚಲು ಮತ್ತು ಹೋಮಕ್ಕೆ ಬೇಕಾದ ಕಟ್ಟಿಗೆಯನ್ನು ವ್ಯವಸ್ಥೆ ಮಾಡಲು ಕಟ್ಟಿಗೆಯವರನ್ನು ನೇಮಿಸಿಕೊಳ್ಳಲಾಗುತ್ತಿತ್ತು. ಹಂಪಿಯ ತಿರುವೇಂಗಳನಾಥ ದೇವಾಲಯದಲ್ಲಿ ಇಬ್ಬರು 'ಕಟ್ಟಿಗೆಯ ಜನ'ರನ್ನು ನೇಮಕ ಮಾಡಿಕೊಂಡಿದ್ದುದನ್ನು ಅಲ್ಲಿಯ ಶಾಸನ ತಿಳಿಸುತ್ತದೆ. [75]

ಮಾಲೆಕಾರ ಮತ್ತು ಬಾಸಿಗಕಾರ : ದೇವರಿಗೆ ಹೂಮಾಲೆ ಮತ್ತು ಬಾಸಿಂಗ ಕಟ್ಟಿಕೊಡುವವರೇ 'ಮಾಲೆಕಾರ' ಮತ್ತು 'ಬಾಸಿಗಕಾರ'ರಾಗಿದ್ದಾರೆ. ಇವರಿಗೆ ದಾನ ಬಿಟ್ಟುದನ್ನು ಬಾಗೆವಾಡಿ [76] ಶಾಸನ ತಿಳಿಸುತ್ತದೆ. ಚಿನ್ನತುಂಬಳಂ ಶಾಸನದಲ್ಲಿ 'ಮಾಲೆಗಾರಂಗೆ ಮತ್ತ ೩' ದಾನ ಬಿಟ್ಟುದನ್ನು ಹೇಳಲಾಗಿದೆ.

ಪಲ್ಲಕ್ಕಿ ಸೇವೆಯವರು : ಹಬ್ಬ, ಉತ್ಸವ ಮತ್ತು ವಿಶೇಷ ದಿನಗಳ ಸಮಯದಲ್ಲಿ ದೇವರನ್ನು ಪಲ್ಲಕ್ಕಿಯಲ್ಲಿಟ್ಟು ಊರಲ್ಲಿ ಮೆರೆಸುವುದು ಸಂಪ್ರದಾಯ. ಇಂಥ ಸಂದರ್ಭದಲ್ಲಿ ಪಲ್ಲಕ್ಕಿ ಹೊರುವುದಕ್ಕೆ ಜನರನ್ನು ನೇಮಿಸಿಕೊಳ್ಳುತ್ತಿದ್ದರು. ಕುರುಗೋಡು ಸೀಮೆಯಲ್ಲಿನ ಸೋಮಸಮುದ್ರವೆಂಬ ಅಗ್ರಹಾರದಲ್ಲಿನ ಲಕ್ಷ್ಮಿನಾರಾಯಣದೇವರಿಗೆ ಅಲ್ಲಿಯ ಮಹಾಜನರು 'ಯೇಕಾದಶೀ ಜಾಗರ ಪಲ್ಲಕ್ಕಿ ಸೇವೆಗೆ' ಹೊಲ ದಾನ ಬಿಡುತ್ತಾರೆ. [78]

ಸೋತೆ ಸುಣ್ಣದವರು : ದೇವಾಲಯದಲ್ಲಿ ಸುಣ್ಣ ಬಳಿಯುವುದಕ್ಕೆ ದತ್ತಿ ಬಿಟ್ಟುದನ್ನು ಹೇಳಲಾಗಿದ್ದು, ಅದನ್ನು 'ಸೋತೆ ಸುಣ್ಣಕ್ಕೆ' ಎಂದು ಕರೆಯಲಾಗಿದೆ. ಇಂಥ ಸುಣ್ಣ ಬಳಿಯುವವರಿಗೆ ದಾನ ಬಿಟ್ಟುದನ್ನು ಮಾಶಾಳ [79] ಶಾಸನದಲ್ಲಿ ಹೇಳಲಾಗಿದ.

ಅರವಟ್ಟಿಗೆಯ ಸಿಬ್ಬಂದಿ : ದೇವಾಲಯದ ವತಿಯಿಂದ ಅರವಟ್ಟಿಗೆ ನಡೆಸಲಾಗುತ್ತಿದ್ದು, ಆ ಕಾರ್ಯ ಮಾಡುವವರಿಗೆ ಎರಡು ಮತ್ತರು ಭೂಮಿ ದಾನ ಬಿಟ್ಟುದು ಮಾಶಾಳ [80] ಶಾಸನದಿಂದ ತಿಳಿದುಬರುತ್ತದೆ.

ಅಗ್ನಿಷ್ಟಗೆ : ಅಗ್ನಿಷ್ಟಗೆಯನ್ನು ಮಠ ಇಲ್ಲವೆ ಛತ್ರದಲ್ಲಿ ಸ್ಥಾಪಿಸಿ ಅದನ್ನು ನೋಡಿಕೊಂಡು ಹೋಗಲು ಪರಿಚಾರಕರನ್ನು ನೇಮಿಸಿಕೊಂಡು ಅದಕ್ಕೆ ದತ್ತಿ ಬಿಟ್ಟುದು ಶಾಸನಗಳಿಂದ ತಿಳಿದು ಬರುತ್ತದೆ. ದಂಡನಾಯಕ ಗೋವಿಂದಮಯ್ಯನು ತ್ರಿಕೂಟ ದೇವಾಲಯವನ್ನು ಮಾಡಿಸಿ ಅಲ್ಲಿ ಅಗ್ನಿಷ್ಟಗೆಯನ್ನು ಸ್ಥಾಪಿಸುತ್ತಾನೆ. ಇದಕ್ಕೆ ಯುವರಾಜ ಮಲ್ಲಿಕಾರ್ಜುನನು ದಾನ ಮಾಡುತ್ತಾನೆ. ಶಾಸನದಲ್ಲಿ 'ಅಗ್ನಿಷ್ಟಗೆಗಂ ಮತ್ತರಾರು' ಎಂದು ಹೇಳಲಾಗಿದೆ.

ದಿಗ್ಗಿಗೆ, ಕೊಂಡ ಮತ್ತು ಧರ್ಮದ ಏತ :

ದೇವಾಲಯದ ಮುಂಭಾಗದಲ್ಲಿ ಕೊಂಡ, ದಿಗ್ಗಿಗೆಗಳನ್ನು ನಿರ್ಮಾಣ ಮಾಡುತ್ತಿದ್ದರು. ದೇವಾಲಯಕ್ಕೆ ಬೇಕಾಗುವ ನೀರನ್ನು ಇಲ್ಲಿಂದ ಪೂರೈಸಲಾಗುತ್ತಿತ್ತು. ದಿಗ್ಗಿಗೆ ಕೊಂಡಕ್ಕಿಂತ ದೊಡ್ಡದು. ಪಂಪಭಾರತದಲ್ಲಿ ಯುದ್ಧಮಲ್ಲನು ಇಂಥ ದೀರ್ಘಿಕೆಗಳಲ್ಲಿ ಎಣ್ಣೆ ತುಂಬಿ ಆನೆಗಳನ್ನು ಮೀಯಿಸುತ್ತಿದ್ದನೆಂದು ವರ್ಣಿಸಿರುವುದನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು. ಭಾವಿಗಳಿಗಿಂತ ದೊಡ್ಡವು ಕೊಂಡಗಳು. ಇವುಗಳನ್ನು ನಿರ್ಮಿಸಿ ದೇವಕಾರ್ಯಕ್ಕೆ ಮತ್ತು ಜನಕಾರ್ಯಕ್ಕೆ ನೀರಿನ ವ್ಯವಸ್ಥೆ ಮಾಡುತ್ತಿದ್ದರು. ಇವುಗಳಿಂದ ನೀರು ಎತ್ತಲು 'ಏತ'ಗಳನ್ನು ಬಳಸುತ್ತಿದ್ದರು. ಕೊಂಡ, ದಿಗ್ಗಿಗೆ ಮತ್ತು ಧರ್ಮದ ಏತಗಳು ಸುಸ್ಥಿತಿಯಲ್ಲಿ ಕಾರ್ಯನಿರ್ವಹಿಸಲು ಜನರನ್ನು ನೇಮಿಸಿ ಅವರಿಗೆ ದತ್ತಿಕೊಡಲಾಗುತ್ತಿತ್ತು. ಮಾಶಾಳ [81] ಶಾಸನದಲ್ಲಿ 'ದಿಗ್ಗಿಗೆಯ ಮೂರು ಧರ್ಮದ ಏತಕ್ಕೆ ಹದಿನೆಂಟು ಮತ್ತರು ಭೂಮಿ ದಾನ ಬಿಟ್ಟುದು ಹೇಳಲಾಗಿದೆ. ಸೂಡಿಯಲ್ಲಿ [82] ನಾಗದೇವನು ನಾಗೇಶ್ವರ ದೇವಾಲಯಕ್ಕೆ ನಾಗಕೊಣ್ಡವನ್ನು ಮಾಡಿಸಿ ಅದಕ್ಕೆ ಇಪ್ಪತ್ತು ಮತ್ತರು ಭೂಮಿ ಬಿಡುತ್ತಾನೆ. ಧರ್ಮದ ಏತದಾಳಿನ ಜೀವಿತಕ್ಕೆ ವ್ರಿತ್ತಿ ಬಿಟ್ಟುದನ್ನು ಮಲಘಾಣ ಶಾಸನ ಕರೆದಿದೆ. [83]

ಶಿಲ್ಪಿಗಳು (ಕಲ್ಕುಟಿಗರು) :

ದೇವಾಲಯ ಜೀರ್ಣಗೊಂಡರೆ ಜೀರ್ಣೋದ್ಧಾರದ ಕಾಯಕ ಶಿಲ್ಪಿಗಳದು. ಇವರನ್ನು ಶಾಸನಗಳಲ್ಲಿ 'ಕಲ್ಕುಟಿಕರು' 'ರೂವಾರಿಗಳು' ಎಂದು ಶಾಸನ ಕರೆದಿವೆ. ಇವರಿಗೆ ವೃತ್ತಿಯಾಗಿ ದತ್ತಿ ಕೊಡಲಾಗಿತ್ತು. ಸೂಡಿ [84] ಶಾಸನದಲ್ಲಿ 'ಕಲ್ಕುಟಿಕ ಚಂಡೋಜನಿಗೆ' ಮೂವತ್ತು ಮತ್ತರು ಭೂಮಿ ಬಿಡಲಾಗಿದೆ. ಮೋರನೇರಿಯ [85] ಶಾಸನ ''ಖಣ್ಡಸ್ಫುಟಿತಂ ಮೊದಲಾಗೆಲ್ಲಾ ಬೆಸನುಮಂ ನಡೆಯಿಸುವ ರೂವಾರಿ ಮಚ್ಚೋಜಂಗೆ ಮತ್ತರ್ಪನ್ನೆರಡು'' ಎಂದು ಹೇಳಿರುವುದರಿಂದ ದೇವಾಲಯದ ದುರಸ್ತಿ ಮೊದಲಾದ ಕಾರ್ಯಗಳನ್ನು ಇವರು ಮಾಡುತ್ತಿದ್ದರೆಂಬುದು ಸ್ಪಷ್ಟ. ಕಲಕೇರಿಯ [86] ಶಾಸನ ದೇವಾಲಯದ ಕೆಲಸಕ್ಕೆ 'ಕಲ್ಕುಟಿಗ ರೇವೋಜ' ಮುಖ್ಯಸ್ಥನಾಗಿದ್ದು ಇವನಿಗೆ ಒಂದು ಮತ್ತರು ಗದ್ದೆ ಒಂದು ಮನೆಯನ್ನು ಬಿಟ್ಟುದು ತಿಳಿದುಬರುತ್ತದೆ.

ಬಡಗಿ : ಕಟ್ಟಿಗೆಯಿಂದ ಬಾಗಿಲು, ಕದ, ಮೂರ್ತಿ, ರಥ ಮೊದಲಾದವುಗಳನ್ನು ನಿರ್ಮಿಸುವವನು ಬಡಗಿ. ಈ ಕೆಲಸಕ್ಕಾಗಿ ದೇವಾಲಯಗಳು ಬಡಗಿಯನ್ನು ನೇಮಿಸಿಕೊಳ್ಳುತ್ತಿದ್ದವು. ಸೇನಬೋವ ಸಂಕಣ್ಣ ನೀಲೇಶ್ವರ ದೇವಾಲಯದ ಬಡಗಿ ರೆಟ್ಟೋಜನಿಗೆ ಕಂಚವ್ವೆ ಕೆರೆಯ ಗದ್ದೆಯಲ್ಲಿ 'ಬಡಗಿ ಗದ್ದೆಯಾಗಿ ೫೦ ಕಮ್ಮ ಗದ್ದೆಯನ್ನು ಅಲ್ಲಿಯ ಸ್ಥಾನಪತಿ ನಾಗರಾಶಿಪಂಡಿತರ ಕಾಲು ತೊಳೆದು ದಾನ ಬಿಡುತ್ತಾನೆ. [87]

ಭಟ್ಟರ ಗುತ್ತ : ಗೋವಿಂದ ದಂಡನಾಯಕ ಮಾಡಿಸಿದ ತ್ರಿಕೂಟ ದೇವಾಲಯಕ್ಕೆ ಬಿಟ್ಟ ಪತ್ತಿಗಳಲ್ಲಿ 'ಭಟ್ಟರ ಗುತ್ತಗೆ' ಎಂಟು ಮತ್ತರು ಭೂಮಿಬಿಟ್ಟುದು ಮಾಶಾಳ [88] ಶಾಸನ ತಿಳಿಸುತ್ತದೆ.

ಸೇನಬೋವ : ದೇವಾಲಯ ಪ್ರಸಿದ್ಧವಾಯಿತೆಂದರೆ ಅದಕ್ಕೆ ಭಕ್ತರ ಪ್ರವಾಹ ಹರಿದು ಬರುತ್ತದೆ. ಈ ಭಕ್ತರು ಭೂಮಿ, ಹಣ, ವಸ್ತು, ಆಭರಣಗಳನ್ನು ದೇವರಿಗೆ ದತ್ತಿ ಬಿಡಲು ಪ್ರಾರಂಭಿಸುತ್ತಾರೆ. ಅಲ್ಲದೆ ದೇವಸ್ಥಾನ ದೊಡ್ಡದಾಯಿತೆಂದರೆ ಅದು ಬಹು ದೊಡ್ಡ ಉಪಭೋಗಿಯೂ ಹೌದು. ದೇವಾಲಯದ ಸುತ್ತ ವ್ಯಾಪಾರಿ ಮಳಿಗೆಗಳು ತಲೆಯೆತ್ತಿ ಅದು ಒಂದು 'ಪೇಟೆ'ಯ ಸ್ವರೂಪ ತಾಳುತ್ತದೆ. ಹೀಗಾಗಿ ದೇವಸ್ಥಾನದ ಮತ್ತು ಅದರ ಪೇಟೆಯ ಲೆಕ್ಕಪತ್ರವನ್ನಿಡಲು ಸೇನಬೋವನನ್ನು ನೇಮಿಸಿಕೊಳ್ಳಲಾಗುತ್ತಿತ್ತು. ಅವನಿಗೆ ಸಂಬಳವಾಗಿ ದತ್ತಿ ಬಿಡುತ್ತಿದ್ದರು. ಹಂಪಿ [89] ಶಾಸನದಲ್ಲಿ 'ಯೀ ದೇವಸ್ಥಾನ ಪೇಟೆ ಗ್ರಾಮ ಸೀಮೆದ ಸ್ಥಳದ ಸೇನಭೋವ ಮೌದ್ಗಲ ಗೋತ್ರದ ಆಶ್ವಾಯನ ಸೂತ್ರದ ಆದಪಾನಿಯ ಕರಣಿಕ ಹಬರಸರಮೊಂದು ಸಾತರಸನ ಜ೧ಕ ಜೀವಿತ ಪ್ರಸಾದ ಅಷ್ಟ ತೇಜಸ್ವಾಮ್ಯ ಪೇಟೆ ಮೂಲ ವೀಸಸ್ಥಳದ ಸೇನಬೋಯಿಕೆಯನೂ ಶ್ರೀ ತಿರುವೆಂಗಳನಾಥನ ಸನ್ನಿಧಿಯಲು ಪ್ರತಿಷ್ಠಾ ಕಾಲದಲು ಧಾರೆಯ ನೆರೆದು ಕೊಟರಾಗಿ'' ಎಂದು ಬರುತ್ತದೆ.

ಭಂಡಾರದವರು : ದೇವಾಲಯದಲ್ಲಿ 'ದೇವರ ಬೊಕ್ಕಸ' ಅಂದರೆ ಖಜಾನೆ ಇರುತ್ತಿದ್ದು ಅದನ್ನು ನೋಡಿಕೊಳ್ಳಲು 'ಭಂಡಾರದವರು' ಇರುತ್ತಿದ್ದರು. ಹಂಪಿಯ[90] ಶಾಸನದಲ್ಲಿ ಸದಾಶಿವ ಮಹಾರಾಯನು ಶ್ರೀ ವಿಠಲ ದೇವರ ಅಮ್ರುತಪಡಿಗೆಂದು ತಿರುವೆಂಗಳ ಆಚಾರ್ಯರಿಗೆ ನಿಟ್ಟೂರ ಗ್ರಾಮ, ಆನೆಗೊಂದಿ ಅಡವಿಗೆರೆಯಲ್ಲಿ ೩ ಖಂಡುಗ ಗದ್ದೆ ತೆಂಗಿನ ತೋಟ ಬಿಟ್ಟು ಅದರಲ್ಲಿ ಒಂದು ಪಾಲು 'ದೇವರ ಬೊಕ್ಕಕೆ' ಸಲ್ಲಬೇಕೆಂದು ಹೇಳಲಾಗಿದೆ. ಇದನ್ನು ನೋಡಿಕೊಳ್ಳುವ 'ಭಂಡಾರದವರಿಗೆ' ಒಂದು ಪಾಲು ದಾನ ಬಿಡಲಾಗಿದೆ.

ರವಾಳವಃ (ಟಂಕಶಾಲೆ) : ಕೆಲವು ದೇವಾಲಯದಲ್ಲಿ ತಮ್ಮದೇ ಆದ ಟಂಕಶಾಲೆ ಹೊಂದಿದ್ದು ಅಲ್ಲಿ ನಾಣ್ಯಗಳನ್ನು ಟಂಕಿಸಲಾಗುತ್ತಿತ್ತು. ಕುಡುತನಿಯಲ್ಲಿ (ಕುಮಾರಸ್ವಾಮಿ) ಮತ್ತು ಲಕ್ಕುಂಡಿಯಲ್ಲಿ ಟಂಕಶಾಲೆಯಿದ್ದುದು ಇತಿಹಾಸ ಪ್ರಸಿದ್ಧ. ಸೂಡಿಯ[91] ಅಕ್ಕೇಶ್ವರ ದೇವಾಲಯದಲ್ಲಿ ದೇವರಿಗೆ ಬಿಟ್ಟ ೫೦೦ ಮತ್ತರು ದತ್ತಿಯಲ್ಲಿ 'ರವಾಳವಳ ಸಿಂಗಯ್ಯಂಗೆ ಮತ್ತರು ೧೫ ಬರಿಯ ರವಾಳವಳಗೆ ಮತ್ತಜಂ ೧೮' ಎಂದು ಹೇಳಲಾಗಿದೆ. ಇವರು ಟಂಕಶಾಲೆಯ ಅಕ್ಕಸಾಲಿಗರಾಗಿದ್ದು ಅವರಿಗೆ ದತ್ತಿ ಕೊಡಲಾಗಿದೆ. ಬಾನೆಟ್[92] ಅವರು 'ರವಾಳ'ವೆಂದರೆ ಅಕ್ಕಸಾಲೆಯ ಟಂಕಶಾಲೆ ಎಂದು ಅರ್ಥೈಸುತ್ತಾರೆ. ಬರಿಯ 'ರವಾಳ'ವೆಂದರೆ ಎರಡನೆಯ ಟಂಕಶಾಲೆಯೆಂದು ಅರ್ಥೈಸುತ್ತಾರೆ. ರವಾಳವಳವೆಂದರೆ ಟಂಕಶಾಲೆಯ ಮುಖ್ಯಸ್ಥ ಎಂದು ಅರ್ಥ ಹೇಳಬಹುದು. ದೊಡ್ಡಿ ಮಾಕಾಳ[93] ಶಾಸನದಲ್ಲಿ 'ಕಾಸಿಗಂಗೆ' ಆರು ಮತ್ತರು ಎರೆ ಭೂಮಿ ಹಾಗೂ ಆರು ಮತ್ತರು ಕೆಂಪು ಭೂಮಿಯನ್ನು ಬಿಟ್ಟುದು ಹೇಳಲಾಗಿದೆ.

ತೋಟಿಗರು : ದೇವಾಲಯಗಳು ತಮ್ಮದೇ ಆದ ಹೂವಿನ ತೋಟಗಳನ್ನು ಹೊಂದಿರುತ್ತಿದ್ದುವು, ಅಲ್ಲದೆ ಭಕ್ತರು ತೋಟಗಳನ್ನು ದತ್ತಿಯಾಗಿ ಬಿಟ್ಟುಕೊಡುತ್ತಿದ್ದರು. ಈ ತೋಟಗಳನ್ನು ನೋಡಿಕೊಂಡು ಹೋಗುವವರೇ 'ತೋಟಿಗರು'. ರಂಗಾಪುರ[94] ಶಾಸನದಲ್ಲಿ ೫ ಜನ ತೋಟಿಗರಿಗೆ ದಾನ ಬಿಟ್ಟುದು ತಿಳಿದುಬರುತ್ತದೆ. ಮಹಾವಡ್ಡ ವ್ಯವಹಾರಿ ವಾಸುದೇವನಾಯಕರು ಶ್ರೀ ಗೋಪಾಳದೇವರ ಹೂದೋಟಕ್ಕೆ 'ಹೂಗಿಡವನ್ನಿಕ್ಕಿ ಪುಜ್ಜವನು ದೇವರಿಗೆ ನಡೆಯಿಸಲು ಎರಡು ಗದ್ಯಾಣವನ್ನು ಭೂತರ ಕಲ್ಲಯ್ಯನಿಗೆ ಕೊಡುತ್ತಾನೆ.[95] ರಾಷ್ಟ್ರಕೂಟ ಚಕ್ರವರ್ತಿ ನಾಲ್ಕನೆ ಗೋವಿಂದನ ದೊಡ್ಡಿಮಾಕಾಳ[96] ಶಾಸನದಲ್ಲಿ 'ತೋಣ್ಟಿಗಳ್ಗೆ' ನಾಲ್ಕು ಮತ್ತರು ಭೂಮಿ ದಾನ ಬಿಟ್ಟುದನ್ನು ಹೇಳಲಾಗಿದೆ.

ಕುಂಬಾರರು : ದೇವಾಲಯಗಳಲ್ಲಿ ನಡೆಯುವ 'ಲಕ್ಕಗಡುಗೆ' ಕುಂಭಾಭಿಷೇಕ ಮೊದಲಾದ ಸಂದರ್ಭದಲ್ಲಿ ಬಿಂದಿಗೆ, ಮೊಗೆ ಮೊದಲಾದ ಗಡಿಗೆಗಳನ್ನು ಇವರು ಒದಗಿಸುತ್ತಿದ್ದರು. ಈ ಕಾರ್ಯಕ್ಕೆ ನಿಯುಕ್ತರಾದ ಕುಂಬಾರರಿಗೆ ದತ್ತಿ ಬಿಟ್ಟುಕೊಡುತ್ತಿದ್ದರು. ಚಿನ್ನತುಂಬಳಂ[97] ಶಾಸನ 'ಕುಂಬಾಱಂಗೆ' ಮತ್ತರು ಎರಡನ್ನು ದತ್ತಿ ಬಿಟ್ಟುದನ್ನು ತಿಳಿಸುತ್ತದೆ.

ಪಡಿಯರರು ಅಥವಾ ಕಾವಲುಗಾರರು :

ದೇವಾಲಯ ಬೃಹತ್ ಸಂಸ್ಥೆಯಾಗಿ ಬೆಳೆದು ಅಪಾರ ಧನ, ಕನಕ, ಆಭರಣಗಳನ್ನು ಹೊಂದಿರುತ್ತಿದ್ದುದರಿಂದ ಅದರ ರಕ್ಷಣೆಗಾಗಿ ಮತ್ತು ಶಾಂತಿ ಸುವ್ಯವಸ್ಥೆ ಕಾಪಾಡಲು ಕಾವಲುಗಾರರನ್ನು ನೇಮಿಸಲಾಗುತ್ತಿತ್ತು. ಇವರನ್ನು 'ಪಡಿಯರ'ರು 'ಕಾಪಿನಂಗರಕ್ಕೆಯವರು' 'ಪ್ರಹಾರಿ'ಗಳು ಎಂದು ಕರೆಯಲಾಗಿದೆ. ಚಿನ್ನತುಂಬಳಂ[98] ಶಾಸನ 'ಪಡಿಯರಂಗೆ' ಐದು ಮತ್ತರು ಭೂಮಿ ದಾನ ಬಿಟ್ಟುದನ್ನು ಹೇಳುತ್ತದೆ. ಮೋರಿಗೇರಿಯ[99] ನೊಳಂಬೇಶ್ವರ ದೇವಾಲಯದಲ್ಲಿ ಐದು ಜನರು ರಕ್ಷಕರು ಇದ್ದು ಅವರಿಗೆ ನಾಲ್ವತ್ತು ಮತ್ತರು ಭೂಮಿಯನ್ನು ಬಿಡಲಾಗಿದೆ. ಇದನ್ನು 'ಕಲಿಸಿಂದನೊಳಗಾಗಿ ಕಾಹಿನಾಡಯ್ವರ್ಗೆ ಮತ್ತರ್ನಾಲ್ವತ್ತು' ಎಂದು ಶಾಸನದಲ್ಲಿ ಹೇಳಲಾಗಿದೆ. ಈ ಐದು ಜನರಲ್ಲಿ ಕಲಿಸಿಂದ ಮುಖ್ಯಸ್ಥನಾಗಿದ್ದು ಇವನು ಶ್ರೇಷ್ಠವೀರನಾಗಿದ್ದಾನೆ. ಮಾಶಾಳ[100]ದ ಶಾಸನದಲ್ಲಿ ಯುವರಾಜ ಮಲ್ಲಿಕಾರ್ಜುನ 'ಕಾಪಿನಂಗರಕ್ಕೆಗೆ' ಎಂಟು ಮತ್ತರು ಭೂಮಿದಾನ ಬಿಟ್ಟುದನ್ನು ಹೇಳಲಾಗಿದೆ. ಹಾಗೆಯೇ ಇದೇ ಶಾಸನದಲ್ಲಿ ಮಹಾಮಂಡಳೇಶ್ವರ ಇಂದರಸನು 'ಪನ್ನಗನಾಥ ದಾರಿಗ ಪ್ರಹಾರಿಗೆ' ಮತ್ತು ಪೂಜೆಗೆ ದಾನ ಬಿಡುತ್ತಾನೆ. ಬಾವಿ ಮತ್ತು ದೇಗುಲವನ್ನು ಕಾಯುವ ಆಳಿಗೆ ೧೦ ಮತ್ತರು ಭೂಮಿ ಬಿಟ್ಟ ಉಲ್ಲೇಖ.

ಮಲಘಾಣ [101] ಶಾಸನದಲ್ಲಿ ಬರುತ್ತವೆ. ಮಹಾ ಹಂಪೆಯ ವಿರೂಪಾಕ್ಷ ತೀರ್ಥದ ರಕ್ಷಣಾರ್ಥವಾಗಿ ಸಾಮಂತ ಮಾದೆಯ ನಾಯಕ ಮತಂಗಪರ್ವತದಿಂದ ಆಳುತ್ತಿದ್ದುದೆಂದು ಹಂಪೆಯ [102] ಶಾಸನ ಹೇಳುತ್ತದೆ.

ತೊತ್ತು : ದೇವಾಲಯದ ಸ್ವಚ್ಛತೆ, ಸಾರಿಸುವುದು ಮೊದಲಾದ ಕೆಲಸಗಳನ್ನು ನಿರ್ವಹಿಸಲು ತೊತ್ತುಗಳನ್ನು ನೇಮಿಸಲಾಗುತ್ತಿತ್ತು. ಚಿಮ್ಮಲಗಿ ಶಾಸನದಲ್ಲಿ ಸಕಳೇಶ್ವರದೇವರಿಗೆ ರೆಬ್ಬಕಟ್ಟಿ ಎಂಬುವವಳು ತನ್ನ ತೊತ್ತು ಮಾಚಬ್ಬೆಯನ್ನು ಬಿಟ್ಟುದನ್ನು ಶಾಸನ ತಿಳಿಸುತ್ತದೆ. [103]

ಒಂದು ಸುವ್ಯಸ್ಥಿತವಾದ ದೇವಾಲಯದಲ್ಲಿರುತ್ತಿದ್ದ ಸಮಸ್ತ ಪರಿಚಾರಕರನ್ನು ಸೋಮನಾಥಪುರದ ಕೇಶವದೇವಾಲಯದ ಶಾಸನ [104] ಹೀಗೆ ವಿವರಿಸುತ್ತದೆ. ''ಆ ಜೀವಿತವರ್ಗ ವೈಷ್ಣವರು ವೊಂದಕ್ಕೆ ಗದ್ಯಾಣಂ ಹದಿನೈದಱ ಲೆಕ್ಕದೆ ವೈಷ್ಣವರು ಯಿಪ್ಪತ್ತಕ್ಕಂ ಗದ್ಯಾಣಂ ಮುನೂಱು॥ ಆಚಾರ್ಯರಿಗೆ ಗದ್ಯಾಣಂವಿಪ್ಪತ್ತು । ಪುರಾಣಕ್ಕೆಯೂ ವಾಚಕಕ್ಕೆಯೂ ಗದ್ಯಾಣಂ ಹದಿನಾಱು ನಂಬಿಯರು ವೊಂದಕ್ಕೆ ಗದ್ಯಾಣಂ ಹನ್ನೆರಡಱ ಲೆಕ್ಕದೆ ನಂಬಿಯರು ಹತ್ತೂವರ್ದ್ಧಕ್ಕಂ ಗದ್ಯಾಣಂ ನೂಱ ಇಪ್ಪತ್ತ ಆಱು ಯೋಗನಾರಾಯಣದೇವರ ನಂಬಿಗೆ ಗದ್ಯಾಣಂ ನಾಲ್ಕು ಹಿರಿಯದೇವರ ಶ್ರಿಂಗಾರದವರೈದಕ್ಕಂ ಗದ್ಯಾಣಂ ಮೂವತ್ತು ಪರಿಚಾರಕವೊಂದಕ್ಕೆ ಗದ್ಯಾಣಂ ನಾಲ್ಕಱ ಲೆಕ್ಕದೆ ಪರಿಚಾರಕರು ಹತ್ತೂವರ್ದಕ್ಕಂ ಗದ್ಯಾಣಂ ನಾಲ್ವತ್ತ ಎರಡು ಅಪ್ಪಣೆಯವರು ಹತ್ತೂವರ್ದ್ಧಕ್ಕಂ ಗದ್ಯಾಣಂ ನಾಲ್ವತ್ತ ಎರಡು । ಹಡಪದೋಲಕ್ಕೆ ಗದ್ಯಾಣವಾಱು ಕುಡಿನೀರವೋಲಗಕ್ಕೆ ಗದ್ಯಾಣಂ ಆಯಿ ಶ್ರೀಗಂಧದೋಲಗಕ್ಕೆ ಗದ್ಯಾಣಂ ಆಱು ಸೀಗುರಿಚಾಮರದೋಲಗಕ್ಕೆ ಗದ್ಯಾಣಂ ಆಱು ಸೇನಬೋಕೆವೊಂದಕ್ಕಂ ಗದ್ಯಾಣಂ ಹನ್ನೆರಡು ಮುದ್ರೆಯವೋಲಗಕ್ಕೆ ಗದ್ಯಾಣಂ ಹನ್ನೆರಡು ಭಂಡಾರದೋಲಗಕ್ಕೆ ಗದ್ಯಾಣಂ ಹನ್ನೆರಡು ಭಟ್ಟಗುತ್ತರು ಎರಡಕ್ಕಂ ಗದ್ಯಾಣಂ ಇಪ್ಪತ್ತು ಕರ್ಪೂರದಾರತಿಯವರು ಎರಡಕ್ಕಂ ಗದ್ಯಾಣಂ ಹದಿನಾಱು ರಂಗವಾಲೆಹಿಟ್ಟಿನಾರತಿಗೆ ವೋಲಗ ನಾಲ್ಕಕ್ಕಂ ಗದ್ಯಾಣಂ ಹದಿನಾಱು ಬಾಣಸಿಗರು ಹತ್ತೂವರ್ದ್ಧಕ್ಕಂ ಗದ್ಯಾಣಂ ನಾಲ್ವತ್ತೆರಡು। ಬಾಣಸದ ಅಪ್ಪಣೆ ಐದಕ್ಕಂ ಗದ್ಯಾಣಂ ಇಪ್ಪತ್ತು ಬಾಹಿಯವರು ಐದಕ್ಕಂ ಗದ್ಯಾಣಂ ಇಪ್ಪತ್ತು ಮಾಲೆಗಾಱರು ಹತ್ತು ಅರ್ಧಕ್ಕಂ ಗದ್ಯಾಣಂ ನಾಲ್ವತ್ತ ಎರಡು। ಆಳು ಮಾಲೆಯವರು ಐದಕ್ಕಂ ಗದ್ಯಾಣಂ ಇಪ್ಪತ್ತು ದವಸಿಗರು ಆಳು ಹತ್ತಕ್ಕಂ ಗದ್ಯಾಣಂ ನಾಲ್ವತ್ತು । ಕೊತ್ತಿಯಂಮೇಗೆ ಗದ್ಯಾಣಂವೊಂದು ಹಣವೆರಡು ನಾಗವಾಸಕ್ಕೆ ಗದ್ಯಾಣಂ ಮೂನೂಱು ಅಂಗರಕ್ಕನಾಯಕಂಗೆ ಗದ್ಯಾಣ ಹತ್ತು ಆಳುವೊಂದಕ್ಕೆ ಗದ್ಯಾಣಂ ನಾಲ್ಕಱಲೆಕ್ಕಡಿ ಆಳು ಹದಿನೇಳಕ್ಕಂ ಗದ್ಯಾಣಂ ಅಱುವತ್ತ ಎಂಟು। ಲಕ್ಷ್ಮೀನರಸಿಂಹದೇವರ ಅಂಗರಕ್ಕನಾಯಕಂಗೆ ಗದ್ಯಾಣಂ ಆಱು ।

ಆಳು ಮೂಱಕ್ಕಂ ಗದ್ಯಾಣಂ ಹಂನೆರಡು ಮಳವಳ್ಳಿಯ ಶಾರಂಗಪಾಣಿದೇವರ ಅಂಗರಕ್ಕರು ಆಳು ಎರಡಕ್ಕೆ ಗದ್ಯಾಣಂ ಎಂಟು। ಕೇಶವದೇವರ ತಿರುನಾಳಹಬ್ಬಕ್ಕೆ ಗದ್ಯಾಣಂ ಎಪ್ಪತ್ತು । ಸತ್ರಕ್ಕೆ ಗದ್ಯಾಣಂ ಇಂನೂಱು ಅಕ್ಕಸಾಲೆಗೆ ಗದ್ಯಾಣಂ ನಾಲ್ಕು ಕುಂಬಾಱರು ಮೂವರಿಗೆ ಗದ್ಯಾಣಂ ಹನ್ನೆರಡು। ಅಸಗಂಗೆ ಗದ್ಯಾಣಂ ನಾಲ್ಕು। ನಾವಿದಂಗೆ ಗದ್ಯಾಣಂ ನಾಲ್ಕು ಅಸ್ತುಗದ್ಯಾಣಂ ಮೂಱುಸಾಸಿರದ ನಾನೂಱ ಎರಡೂ ಹಣ ಮೂಱು ಇಂತೀ ದೇವದಾನದ ಸ್ಥಲಂಗಳ ಆಯಕ್ಕೆ ಬೆಯಸರಿ । ಇ ಧರ್ಮವ ಮಾಡಿದ ಸೋಮಯ ದಣ್ನಾಯಕರ ಸೋದರಳಿಯರು ಮಾರೂರ ಚಿಕ್ಕಕೇತಯ್ಯ ದಣ್ನಾಯಕರ ಶ್ರೀ ಹಸ್ತದ ವೊಪ್ಪ''.

ಹೀಗೆ ದೇವಾಲಯಗಳ ಆಡಳಿತ ಸ್ಥಾನಾಚಾರ್ಯರ ನೇತೃತ್ವದಲ್ಲಿ ಅಲ್ಲಿನ ವಿವಿಧ ನೌಕರ ವರ್ಗದವರ ನೆರವಿನಿಂದ ವ್ಯವಸ್ಥಿತವಾಗಿ ನಡೆದುಕೊಂಡು ಹೋಗುತ್ತಿತ್ತು. ಪರಿಚಾರಕರು ಕೂಡ ಸ್ಥಾನಾಚಾರ್ಯರು ಹೇಳಿದ ಕೆಲಸ ನಿರ್ವಹಿಸಿ ತಮಗೆ ಕೊಟ್ಟ ದತ್ತಿಯಿಂದ ಊಟ ಮಾಡುತ್ತಿದ್ದರು. ಪ್ರಾಚೀನ ಕಾಲದಲ್ಲಿ ದೇವರ ಮೇಲೆ ಭಯ ಭಕ್ತಿ ಇದ್ದುದರಿಂದ ಹಾಗೂ ಸ್ಥಾನಾಚಾರ್ಯರ ಯೋಗಿಕ ಮತ್ತು ತಪಶ್ಯಕ್ತಿಗೆ ಹೆದರಿ ಎಲ್ಲ ಪರಿಚಾರಕರು ಶ್ರದ್ಧೆ ಭಕ್ತಿಯಿಂದ ಕಾರ್ಯ ನಿರ್ವಹಿಸುತ್ತಿದ್ದರು. ಹೀಗಾಗಿ ಆಡಳಿತಾತ್ಮಕ ಸಮಸ್ಯೆಗಳು ಉಂಟಾಗುತ್ತಿದ್ದಿಲ್ಲವೆನ್ನಬಹುದು.

ಅಡಿ ಟಿಪ್ಪಣಿಗಳು

1. K.I. V No.21, 1125, ತೇರದಾಳ, ಜಮಖಂಡಿ (ತಾ) ಬಿಜಾಪುರ (ಜಿ)
2. SII IX(i) 101, 1045, ಅಕ್ಟೋಬರ್ ೨೮, ಮೇರಗೇರಿ, ಹಗರಿಬೊಮ್ಮನಹಳ್ಳಿ (ತಾ), ಬಳ್ಳಾರಿ.
3. Ibid.
4. SII IX (i)343, 1226, ಮಾರ್ಚ್ ೧೧, ಬೆಣ್ಣೆಕಲ್ಲು, ಹಗರಿಬೊಮ್ಮನಹಳ್ಳಿ (ತಾ), ಬಳ್ಳಾರಿ.
5. SII XI (ii), ೧೧೦೫ ಡಿಸೆಂಬರ್ ೧೦ ಕಣವಿ, ಗದಗ (ತಾ), ಧಾರವಾಡ (ಜಿ)
6. ಚಿದಾನಂದಮೂರ್ತಿ ಎಂ. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಮೈಸೂರು : ಮೈಸೂರು ವಿಶ್ವವಿದ್ಯಾಲಯ, ೧೯೭೯ ಪು. ೧೬೫.
7. E I XV No. E 1058 ಮೇ ೧೦ ಸೂಡಿ, ರೋಣ (ತಾ) ಧಾರವಾಡ.
8. DAYALAN (D) : Early Temples of Tamilnadu : Their role in socio Economic life 550-925 New Delhi, Harman pub. House, 1992, p. 102.
9. Ibid P.
10. E.I. XV No E, 1058 ಮೇ ೧೦ ಸೂಡಿ, ರೋಣ (ತಾ) ಧಾರವಾಡ (ಜಿ)
11. DAYALAN (D) : Early Temples of Tamilnadu : Their role in socio Economic life 550-925 New Delhi, Harman pub. House, 1992, p. 163.
12. DAYALAN (D) : Early Temples of Tamilnadu : Their role in socio Economic life 550-925 New Delhi, Harman pub. House, 1992, p. 163.
13. SII IX (i) 267, 1160 ಆಗಸ್ಟ್ ೧೮, ಬಾಗಳಿ ಹರಪನಹಳ್ಳಿ (ತಾ) ಬಳ್ಳಾರಿ (ಜಿ)
14. H & C No. 54, 1119, ಡಿಸೆಂಬರ್ ೨೮, ಮಾಶಾಳ, ಅಪ್ಜಲಪುರ (ತಾ) ಗುಲಬರ್ಗಾ (ಜಿ)
15. EI XV NOF, 1060 ಜನೇವರಿ ೨೦, ಸೂಡಿ, ರೋಣ (ತಾ) ಧಾರವಾಡ (ಜಿ)
16. ಚಿದಾನಂದಮೂರ್ತಿ ಎಂ. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಮೈಸೂರು : ಮೈಸೂರು ವಿಶ್ವವಿದ್ಯಾಲಯ, ೧೯೭೯ ಪು. ೨೨೩.
17. H & C 52, 1118, ಜೂನ್ ೩ ಹಂದರ್ಕಿ, ಸೇಡಂ ಗುಲಬರ್ಗ.
18. K.I. V 17, 1118, ತಿಳವಳ್ಳಿ, ಹಾನಗಲ್ಲ (ತಾ) ಹಾವೇರಿ.
19. SII IX (ii) 564, 1534 ಏಪ್ರಿಲ್ ೨೬, ಹಂಪಿ, ಹೊಸಪೇಟೆ (ತಾ) ಬಳ್ಳಾರಿ (ಜಿ).
20. SII XX 72, 1111 ಏಪ್ರಿಲ್ ೨೪, ಬಿಜಾಪುರ, ಬಿಜಾಪುರ (ತಾ/ಜಿ)
21. SII IX (i) 211, 1126, ಜೂನ್ ೨೨, ಬಾಗಳಿ, ಹರಪನಹಳ್ಳಿ (ತಾ) ಬಳ್ಳಾರಿ (ಜಿ).
22. Ibid, 192, 1115 ಫೆಬ್ರುವರಿ ೧೦ ಬಾಗಳಿ, ಹರಪನಹಳ್ಳಿ (ತಾ) ಬಳ್ಳಾರಿ.
23. SII IX (i) 60, ಕ್ರಿ.ಶ. ೯೩೧ ಫೆಬ್ರುವರಿ ೨೫ ದೊಡ್ಡಿಮಾಕಾಳ, ಆದೋನಿ (ತಾ) ಅನಂತಪುರ.
24. SII IX (ii) 504, 1534, ಏಪ್ರಿಲ್ ೨೬, ಹಂಪಿ, ಹೊಸಪೇಟೆ (ತಾ) ಬಳ್ಳಾರಿ (ಜಿ).
25. SII XX (i) No.51, 1077, ಕುಳೇಕುಮಟಗಿ, ಸಿಂದಗಿ (ತಾ) ಬಿಜಾಪುರ (ಜಿ)
26. SII IX (i) 200, 1121, ಡಿಸೆಂಬರ್ ೨೫, ಸೋಗಿ, ಹಡಗಲಿ (ತಾ) ಬಳ್ಳಾರಿ (ಜಿ)
27. SII IX (i) 86, 1093, ಮಾರ್ಚ್ ೭ ತಲುವಾಗಲು, ಹರಪನಹಳ್ಳಿ (ತಾ) ಬಳ್ಳಾರಿ (ಜಿ)

28. Ibid. 113, 1054, ಜೂನ್ ೨೬ ಹಿರೇಮೇಗಳಗೇರಿ, ಹರಪನಹಳ್ಳಿ (ತಾ) ಬಳ್ಳಾರಿ (ಜಿ)
29. SII IX (i) 564, 1534, ಏಪ್ರಿಲ್ ೨೬, ಹಂಪಿ, ಹೊಸಪೇಟೆ (ತಾ) ಬಳ್ಳಾರಿ (ಜಿ)
30. Ibid
31. Ibid
32. SII IX (ii) 564, 1534, ಏಪ್ರಿಲ್ ೨೬, ಹಂಪಿ, ಹೊಸಪೇಟೆ (ತಾ) ಬಳ್ಳಾರಿ (ಜಿ)
33. SII XX (i) 44, 1069, ರೂಗಿ, ಇಂಡಿ (ತಾ) ಬಿಜಾಪುರ (ಜಿ)
34. K.I. V 17, 1118 ತಿಳವಳ್ಳಿ ಹಾನಗಲ್ಲು (ತಾ) ಬಳ್ಳಾರಿ (ಜಿ)
35. SII IX (i) 113, 1054 ಜೂನ್ ೨೬, ಹಿರೇಮೇಗಳಗೇರಿ, ಹರಪನಹಳ್ಳಿ (ತಾ) ಬಳ್ಳಾರಿ (ಜಿ)
36. SII IX (ii) 564, 1534, ಏಪ್ರಿಲ್ ೨೬, ಹಂಪಿ, ಹೊಸಪೇಟೆ (ತಾ) ಬಳ್ಳಾರಿ (ಜಿ)
37. EI XV NOF, 1060 ಜನೇವರಿ ೨೦, ಸೂಡಿ, ರೋಣ (ತಾ) ಧಾರವಾಡ (ಜಿ)
38. SII IX (ii) 451, 1447 ಏಪ್ರಿಲ್ ३೦, ಕುಂದಾಪುರ, ಕುಂದಾಪುರ (ತಾ) ಮಂಗಳೂರು (ಜಿ.)
39. SII IX (ii) 409, 1365 ಅಕ್ಟೋಬರ್ ೨ ಕೋಟೇಶ್ವರ, ಕುಂದಾಪುರ (ತಾ), ಮಂಗಳೂರು ((ಜಿ.)
40. EI XV NOE, 1054 ಮೇ ೧೦ ಸೂಡಿ, ರೋಣ (ತಾ), ಧಾರವಾಡ (ಜಿ).
41. SII XX 74, 1112 ನವೆಂಬರ್ ೪ ಲಕ್ಷ್ಮೇಶ್ವರ, ಶಿರಹಟ್ಟಿ ತಾ।।
42. KI V No. 123, 1563, ಕೋಳಿವಾಡ, ಹುಬ್ಬಳ್ಳಿ (ತಾ) ಧಾರವಾಡ.
43. SII IX (ii) 498, 1514 ಮೇ ೪ ಚಿರುವ ಬೆಳಗಲ್ಲು, ಕರ್ನೂಲು (ಜಿ)
44. SII IX (ii) 607, ಹಂಪಿ, ಹೊಸಪೇಟೆ (ತಾ) ಬಳ್ಳಾರಿ (ಜಿ)
45. SII IX (i) 101, 1045 ಅಕ್ಟೋಬರ್ ೨೮ ಮೋರಿಗೇರೆ, ಹಗರಿಬೊಮ್ಮನಹಳ್ಳಿ (ತಾ) ಬಳ್ಳಾರಿ (ಜಿ)
46. EI XV NOE, 1054 ಮೇ ೧೦ ಸೂಡಿ, ರೋಣ (ತಾ), ಧಾರವಾಡ (ಜಿ).
47. EI XV NO F, 1060 ಜನೇವರಿ ೨೦ ಸೂಡಿ, ರೋಣ (ತಾ), ಧಾರವಾಡ (ಜಿ).
48. EI XV NO E, 1054 ಮೇ ೧೦ ಸೂಡಿ, ರೋಣ (ತಾ), ಧಾರವಾಡ (ಜಿ).
49. EI XV NO F, 1060 ಜನೇವರಿ ೨೦ ಸೂಡಿ, ರೋಣ (ತಾ), ಧಾರವಾಡ (ಜಿ).
50. Ibid
51. Ibid
52. EI XV NO E, 1054 ಮೇ ೧೦ ಸೂಡಿ, ರೋಣ (ತಾ) ಧಾರವಾಡ.
53. EI XV NO F, 1060 ಜನೇವರಿ ೨೦ ಸೂಡಿ, ರೋಣ (ತಾ), ಧಾರವಾಡ (ಜಿ).
54. SII IX (i) 163, 1093, ಸೆಪ್ಟಂಬರ್ ೨೩, ಹೊಳಗುಂದಿ, ಹಡಗಲಿ (ತಾ) ಬಳ್ಳಾರಿ (ಜಿ).
55. SII IX (i) 101, 1045, ಅಕ್ಟೋಬರ್ ೨೮, ಮೋರಿಗೆರಿ, ಹಡಗಲಿ (ತಾ) ಬಳ್ಳಾರಿ (ಜಿ.)
56. SII IX (i) 296, ಕುರಗೋಡು, ಬಳ್ಳಾರಿ (ತಾ/ಜಿ)
57. Ibid 155, ೧೦೮೬ ಡಿಸೆಂಬರ್ ೨೫ ರಾಗಿಮಸಲವಾಡ, ಹರಪನಹಳ್ಳಿ (ತಾ) ಬಳ್ಳಾರಿ (ಜಿ.)
58. SII IX (i) 89, 1035 ಡಿಸೆಂಬರ್ ೨೫ ಬಾಗಳಿ, ಹರಪನಹಳ್ಳಿ (ತಾ), ಬಳ್ಳಾರಿ (ಜಿ)
59. Ibid 133, ೧೦೬೮ ನವೆಂಬರ್ ೧೨, ಚಿನ್ನತುಂಬಳಂ ಆದೋನಿ (ತಾ) ಅನಂತಪುರ(ಜಿ)
60. Ibid 87, 1034, ಡಿಸೆಂಬರ್ ೨ ತಲವಾಗಲು, ಹರಪನಹಳ್ಳಿ (ತಾ) ಬಳ್ಳಾರಿ (ಜಿ)
61. EI XV NO E, 1054 ಮೇ ೧೦ ಸೂಡಿ, ರೋಣ (ತಾ) ಧಾರವಾಡ.

62. EI XV NO F, 1060 ಜನೇವರಿ ೨೦ ಸೂಡಿ, ರೋಣ (ತಾ) ಧಾರವಾಡ (ಜಿ)
63. SII IX (i) 1045 ಅಕ್ಟೋಬರ್ ೨೮, ಮೋರಿಗೇರಿ, ಹಗರಿಬೊಮ್ಮನಹಳ್ಳಿ (ತಾ), ಬಳ್ಳಾರಿ (ಜಿ).
64. EI XV NO F, 1060 ಜನೇವರಿ ೨೦ ಸೂಡಿ, ರೋಣ (ತಾ) ಧಾರವಾಡ (ಜಿ)
65. SII IX (i) 101, 1045 ಅಕ್ಟೋಬರ್ ೨೮, ಮೋರಿಗೇರಿ, ಹಗರಿಬೊಮ್ಮನಹಳ್ಳಿ (ತಾ), ಬಳ್ಳಾರಿ (ಜಿ).
66. Iboid 87, 1034, ಡಿಸೆಂಬರ್ ೨ ತಲವಾಗಲು, ಹರಪನಹಳ್ಳಿ (ತಾ) ಬಳ್ಳಾರಿ.
67. SII IX (ii) 647, ಗಜಾಪುರ, ಕೂಡ್ಲಿಗಿ (ತಾ) ಬಳ್ಳಾರಿ.
68. Ibid
69. SII XVIII 271, 1304, ವಿಜಾಪುರ.
70. SII IX (ii) 662, 1556 ಜೂನ್ ೧೮ ಸೋಮಸಮುದ್ರ, ಬಳ್ಳಾರಿ (ತಾ / ಜಿ)
71. H & C No. 54, 1119 ಡಿಸೆಂಬರ್ ೨೮ ಮಾಶಾಳ, ಅಫ್ಜಲಪುರ (ತಾ) ಗುಲಬರ್ಗ (ಜಿ)
72. Ibid
73. SII IX (i) 133, 1068 ನವೆಂಬರ್ ೧೨, ಚಿನ್ನತುಂಬಳಂ, ಆದೋನಿ (ತಾ) ಅನಂತಪುರ (ಜಿ)
74. H & C No. 54, 1119, ಡಿಸೆಂಬರ್ ೨೮, ಮಾಶಾಳ, ಅಫ್ಜಲಪುರ (ತಾ) ಗುಲಬರ್ಗ (ಜಿ)
75. SII IX (ii) 564, 1534 ಏಪ್ರಿಲ್ ೨೬, ಹಂಪಿ, ಹೊಸಪೇಟೆ (ತಾ) ಬಳ್ಳಾರಿ (ಜಿ)
76. SII XV 112, ಬಾಗೆವಾಡಿ, ಬಿಜಾಪುರ (ಜಿ)
77. SII IX (i) 133, ೧೦೬೮ ನವೆಂಬರ್ ೧೨ ಚಿನ್ನತುಂಬಳಂ, ಆದೋನಿ (ತಾ) ಅನಂತಪುರ (ಜಿ)
78. SII IX (ii) 662, 1556 ಜೂನ್ ೧೮ ಸೋಮಸಮುದ್ರ, ಬಳ್ಳಾರಿ (ತಾ / ಜಿ)
79. H & C 54, 1119 ಡಿಸೆಂಬರ್ ೨೮, ಮಾಶಾಳ, ಅಫ್ಜಲಪುರ (ತಾ) ಗುಲಬರ್ಗಾ (ಜಿ)
80. Ibid.
81. H & C No. 54, 1119 ಡಿಸೆಂಬರ್ ೨೮ ಮಾಶಾಳ, ಅಫ್ಜಲಪುರ (ತಾ) ಗುಲಬರ್ಗ (ಜಿ)
82. EI XV No F 1060 ಜನವರಿ ೨೦ ಸೂಡಿ, ರೋಣ (ತಾ) ಧಾರವಾಡ (ಜಿ)
83. SII XX No. 93 ಮಲಘಾಣ, ಸಿಂದಗಿ (ತಾ), ಬಿಜಾಪುರ (ಜಿ)
84. EI XV No F 1060 ಜನೇವರಿ ೨೦ ಸೂಡಿ, ರೋಣ (ತಾ), ಧಾರವಾಡ (ಜಿ)
85. SII IX (i) 101, 1045 ಅಕ್ಟೋಬರ್ ೨೮, ಮೋರಿಗೇರಿ, ಹಗರಿಬೊಮ್ಮನಹಳ್ಳಿ (ತಾ), ಬಳ್ಳಾರಿ (ಜಿ).
86. SII XX 49, 1071 ಕಲಕೇರಿ, ಹಾನಗಲ್ಲು (ತಾ) ಹಾವೇರಿ (ಜಿ)
87. SII IX (i) 178, 1108 ಡಿಸೆಂಬರ್ ೨೮, ಬಾಗಳಿ, ಹರಪನಹಳ್ಳಿ (ತಾ) ಬಳ್ಳಾರಿ (ಜಿ)
88. H & C 54, 1119 ಡಿಸೆಂಬರ್ ೨೮ ಮಾಶಾಳ, ಅಫ್ಜಲಪುರ (ತಾ) ಗುಲಬರ್ಗ (ಜಿ)
89. SII IX (ii) 564, 1534 ಏಪ್ರಿಲ್ ೨೬ ಹಂಪಿ, ಹೊಸಪೇಟೆ (ತಾ) ಬಳ್ಳಾರಿ (ಜಿ)
90. SII IX (ii) 607, ಹಂಪಿ, ಹೊಸಪೇಟೆ (ತಾ) ಬಳ್ಳಾರಿ (ಜಿ)
91. EI XV No E, 1054 ಮೇ ೧೦ ಸೂಡಿ, ರೋಣ (ತಾ) ಧಾರವಾಡ (ಜಿ)
92. Ibid P.N. 81.
93. SII IX (i) 60, 931 ಫೆಬ್ರವರಿ ೨೫ ದೊಡ್ಡ ಮಾಶಾಳ, ಆದೋನಿ (ತಾ), ಅನಂತಪುರ (ಜಿ).
94. SII IX (i) 195, 1116 ಡಿಸೆಂಬರ್ ೨೪ ರಂಗಾಪುರಂ, ಹಡಗಲಿ (ತಾ) ಬಳ್ಳಾರಿ (ಜಿ)
95. Ibid 345, 1233-34 ಮಾಗಳ, ಹಡಗಲಿ (ತಾ) ಬಳ್ಳಾರಿ (ಜಿ)

96. SII IX (i) 60, 931 ಫೆಬ್ರುವರಿ ೨೫ ದೊಡ್ಡಿಮಾಶಾಳ, ಆದೋನಿ (ತಾ) ಅನಂತಪುರ (ಜಿ)

97. SII IX (i) 133, 1068 ನವೆಂಬರ್ ೧೨, ಚಿನ್ನತುಂಬಳಂ, ಆದೋನಿ (ತಾ) ಅನಂತಪುರ (ಜಿ)

98. Ibid

99. SII IX (ii) 101, 1045 ಅಕ್ಟೋಬರ್ ೨೮, ಮೋರಿಗೇರಿ, ಹಗರಿಬೊಮ್ಮನಹಳ್ಳಿ (ತಾ), ಬಳ್ಳಾರಿ (ಜಿ).

100. H & C No. 54, 1119 ಡಿಸೆಂಬರ್ ೨೮, ಮಾಶಾಳ, ಅಫ್ಜಲಪುರ (ತಾ) ಗುಲ್ಬರ್ಗಾ (ಜಿ)

101. SII XX 93, ಮಲಘಾಣ, ಸಿಂದಗಿ (ತಾ) ಬಿಜಾಪುರ (ಜಿ)

102. SII IV No. 260 ಹಂಪಿ, ಹೊಸಪೇಟೆ (ತಾ) ಬಳ್ಳಾರಿ (ಜಿ)

103. SII IX (i) 133, 1068 ನವೆಂಬರ್ ೧೨, ಚಿನ್ನತುಂಬಳಂ, ಆದೋನಿಯ ಅನಂತಪುರ (ಜಿ)

104. EC V ಟಿ. ನರಸೀಪುರ ೪೪, ೧೨೭೬ ಸೋಮನಾಥಪುರ, ಟಿ. ನರಸೀಪುರ, ಮೈಸೂರು.

ಶ್ರೀ ಸಿದ್ಧರಾಮೇಶ್ವರ ಪುರಾಣ

ಡಾ. ಬಿ.ಆರ್. ಹಿರೇಮಠ

ಮೃತ್ಯುವನ್ನು ಗೆದ್ದು ಮೃತ್ಯುಂಜಯನನ್ನು ಕಂಡ ಶಿವಯೋಗಿ ಸಿದ್ಧರಾಮನನ್ನು ಕುರಿತ ರೂಪಗೊಂಡ ಕೃತಿ ಶ್ರೀ ಸಿದ್ಧರಾಮೇಶ್ವರ ಪುರಾಣ. ಭೀಮ ಕವಿಯ 'ಬಸವಪುರಾಣ', ಲಕ್ಕಣ್ಣ ದಂಡೇಶನ 'ಶಿವತತ್ವ ಚಿಂತಾಮಣಿ', ಗುಬ್ಬಿಯ ಮಲ್ಲಣಾರ್ಯನ 'ವೀರಶೈವಾಮೃತ ಪುರಾಣ', 'ವಿರೂಪಾಕ್ಷ ಪಂಡಿತನ 'ಚೆನ್ನಬಸವತತ್ವಪುರಾಣ', ಚಾಮರಸನ 'ಪ್ರಭುಲಿಂಗಲೀಲೆ', ಚೆನ್ನಬಸವಾಂಕನ 'ಮಹಾದೇವಿಯಕ್ಕನ ಪುರಾಣ', ವಿರಕ್ತ ತೋಂಟದಾರ್ಯನ 'ಸಿದ್ದೇಶ್ವರ ಪುರಾಣ' ಇವೇ ಮೊದಲಾದ ವೀರಶೈವ ಕಾವ್ಯಗಳು ಕನ್ನಡನಾಡಿನಲ್ಲಿ ಬಾಳಿ ಬೆಳಗಿದ ಪುಣ್ಯ ಪುರುಷರ ಚರಿತ್ರೆ, ಪವಾಡ ವೀರಶೈವ ತತ್ವಸಿದ್ಧಾಂತಗಳನ್ನು ವ್ಯಕ್ತಪಡಿಸಿವೆ. ಇಲ್ಲಿಯ ಎಲ್ಲ ಮಹಾಪುರುಷರೂ ನಡೆದುದು ರಾಜಮಾರ್ಗ. ಅದು ವೀರಶೈವ ಚಂಪೂ, ಷಟ್ಪದಿ ಮಾಧ್ಯಮದಲ್ಲಿ ಪಂಡಿತರು ಪಂಡಿತರಿಗಾಗಿ, ಪಾಂಡಿತ್ಯ ಪ್ರದರ್ಶನಕ್ಕಾಗಿ ರಚಿತವಾದ ಕೃತಿಗಳಿವು. ಆದರೆ ಜನಸಾಮಾನ್ಯರಿಗೆ ತಿಳಿವ ಸರಳಮಾರ್ಗಲ್ಲಿ ತ್ರಿಪದಿಯ ಸಹಜ ಮಾಧ್ಯಮದಲ್ಲಿ ಪ್ರಪ್ರಥಮ ಬಾರಿಗೆ ರಚಿಸಿದ ಅಮೂಲ್ಯ ಕೃತಿರತ್ನ 'ಸಿದ್ಧರಾಮೇಶ್ವರ ಪುರಾಣ'. ೨೦ನೆಯ ಶತಮಾನದ ಮೇರುಕೃತಿ. ಇಂಥ ಮಹಾಕೃತಿಯ ನಿರ್ಮಾಣದ ಮೊದಲ ಶ್ರೇಯಸ್ಸು ಶಿವಶರಣೆಯರೂ ತತ್ವನಿಷ್ಠರೂ, ಅನುಭಾವಿಗಳೂ ಆದ ಶ್ರೀಮತಿ ಜಯದೇವಿತಾಯಿ ಲಿಗಾಡೆಯವರಿಗೆ ಸಲ್ಲುತ್ತದೆ. ಬದುಕಿನ ಅನುಭಾವ ಪೂರ್ಣ ಮಹಾಕಾವ್ಯವಿದು. ತಾಯಿಯವರ ಅನುಭಾವ ತಾನೇ ತಾನಾಗಿ, ಬಚ್ಚಿಟ್ಟ ಬಯಕೆ ಫಲವಾದ ಕೃತಿ ಇದು. ಕನ್ನಡ ತಾಯಂದಿರು ಪ್ರಾಚೀನ ಕಾಲದಿಂದ ಉಳಿಸಿಕೊಂಡು ಬಂದ ತ್ರಿಪದಿಯ ಸಹಜ ಮಾಧುರ್ಯ ಇಲ್ಲಿದೆ. ಹಾಡಿನ ಬಂಧ, ಸತ್ವ, ಛಂದ ಬೆಡಗು ಲಯಗತಿ ಥಾಟ ಎಲ್ಲವೂ ಕನ್ನಡದ ಪರಿಪಾಠ. ಕನ್ನಡ ಸಂಸ್ಕೃತಿಯ

ರಸಘಟ್ಟಿ ಇಲ್ಲಿ ಘನೀಭೂತಗೊಂಡಿದೆ. ಪ್ರಜ್ಞಾಪೂರ್ವ ಹೃದಯದ ರಸಾನುಭಾವ ತನ್ನ ಸಂಪತ್ತನ್ನು ಇಲ್ಲಿ ಸೂರೆಗೊಂಡಿದೆ. ಭಾವಬುದ್ಧಿ ಪ್ರೇರಣೆಗಳು ಇಲ್ಲಿ ಸಮರಸಗೊಂಡು ಆನಂದವೇ ಆನಂದವಾಗಿ ಹೊರಹೊಮ್ಮಿವೆ. ಇಂಥ ಮಹಾಕಾವ್ಯದ ಹಿಂದೆ ಚಾರಿತ್ರ್ಯಪೂರ್ಣವಾದ ಘನತರವಾದ ಮಹಾಬದುಕೊಂದಿದೆ. ಮಹಾಚೇತನವೊಂದಿದೆ. ಅದೇ ಜಯದೇವಿ ತಾಯಿ ಲಿಗಾಡೆ.

ಈ ಕೃತಿಯಲ್ಲಿ ಭಕ್ತಿ ಇದೆ. ತಾಯಿಯವರ ಪ್ರಸಾದವಾಣಿ ಇದೆ. ಬದುಕಿನ ಸಿಹಿಕಹಿಗಳ ರಸಪಾಕವಿದೆ. ಶಿವಯೋಗಿ ಸಿದ್ಧರಾಮನಿಗೆ ಎಡೆ ಮಾಡಿದ ಪವಿತ್ರಹೃದಯದ ಬಂಧನವಿದೆ. ಮೃತ್ಯುವನ್ನು ಗೆದ್ದ ಮಹದೇವನ ಮಹಿಮಾಪೂರ್ಣ ದರ್ಶನವಿದೆ. ಭಾಷೆಯಲ್ಲಿ ಜಾನಪದ ಗತ್ತು, ಅನುಭಾವದ ಪ್ರೌಢಿಮೆ, ಕೆಚ್ಚು ಮಡುಗಟ್ಟಿ ನಿಂತಿವೆ. ರಸವಿದೆ, ತತ್ವವಿದೆ, ಶರಣ ಸಂದೇಶವಿದೆ. ಅನುಭಾವದ ಆಳ, ರಸಾನುಭೂತಿಯ ಗಾಢತೆ, ಭಾಷೆಯ ಹದ, ಭಾವತಲ್ಲೀನತೆ ಕಾವ್ಯಕ್ಕೆ ಸಮೃದ್ಧಿಯನ್ನೊದಗಿಸಿದೆ. ತಾಯಿ ಹಾಡುಗಬ್ಬದ ಮೂಲಕ ಶಿವತತ್ವವನ್ನು ಶಿವತೇಜವನ್ನು ಬಿತ್ತಿ ಬೆಳೆದು ಅನುಭವದ ಅಡುಗೆ ಮಾಡಿ ಉಣಬಡಿಸಿರುವರು. ಅಂತೆಯೆ ಇದು ಹೊಸ ಯುಗಕ್ಕೆ ನಾಂದಿ. ೪೧ ಸಂಧಿಗಳ ೪೦೦ ಪದ್ಯಗಳ ೧೦ ವರ್ಷಗಳ ವಾಙ್ಮಯ ತಪಸ್ಸಿನ ಫಲ ಈ ಕೃತಿಯಾಗಿದೆ.

ಒಂದೆರಡು ದಶಕಗಳ ದೀರ್ಘ ತಪಸ್ಸಿನ ಫಲವಾಗಿ ಮೂರ್ತಿವೆತ್ತಿರುವ ಈ ಮಹಾಪುರಾಣ ರಚಿತವಾದುದರ ಸನ್ನಿವೇಶವೂ ವಿಚಿತ್ರವಾದುದು. ೧೯೫೫ಕ್ಕೂ ಹಿಂದೆ ಹಮ್ಮಿಕೊಂಡಿದ್ದ ವಿಚಾರವೊಂದು ಇಂಥ ಮಹತ್ವದ ಕೃತಿಯಾಗಿ ನಿಲ್ಲುವಲ್ಲಿ ಅದರ ಹಿನ್ನೆಲೆಯನ್ನರಿಯಬೇಕು.

''ಕಲಬುರ್ಗಿಯ ಶ್ರೀ ಶರಣಬಸವೇಶ್ವರ ಸಾನ್ನಿಧ್ಯದಲ್ಲಿ ೩೮ನೆಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಉತ್ತಂಗಿ ಚೆನ್ನಪ್ಪನವರು ಸಿದ್ಧರಾಮ ಸಾಹಿತ್ಯ ಸಂಗ್ರಹವನ್ನು ಸಂಪಾದಿಸಿಕೊಡುವ ಹೊಣೆ ಹೊತ್ತರು. ಅನೇಕ ಅಡೆತಡೆಗಳನ್ನು ಸಹಿಸಿಕೊಂಡರೂ ೧೯೫೫ರಲ್ಲಿ ಆ ಕೃತಿಯನ್ನು ಪೂರೈಸಿದರು. ಅದೇ ವರುಷ ಸಿದ್ಧರಾಮನ ಮನೆಯ ತೊತ್ತಿನ ಮಗಳಾದ ನನಗೆ ಬಂದುದು ಅದೇ ಒಂದು ದಿವ್ಯ ಎಂದುಕೊಂಡಿದ್ದೆ. ಈ ಕಾರ್ಯಕ್ರಮದಲ್ಲಿ ಶ್ರೀಮಾನ್ ನಿರಂಜನ ಪ್ರಣವ ಸ್ವರೂಪಿಗಳಾದ ತ್ರಿವಿಧ ದಾಸೋಹ ಮೂರ್ತಿಗಳಾದ ಶ್ರೀ ಮೃತ್ಯುಂಜಯಪ್ಪಗಳವರ ಕೃಪಾಛತ್ರದಲ್ಲಿ ಪ್ರಕಟನಾ ಸಮಾರಂಭ ನೆರವೇರಿತು. ಅನುಭಾವಿಗಳ ಮಾತು ಕೇಳುತ್ತ ಮನಸ್ಸು ಅಂತರ್ಮುಖಿಯಾಯಿತು. ನೆತ್ತಿಯ ತುತ್ತತುದಿಯಲ್ಲಿ ಒಂದು ವಿಶಿಷ್ಟವಾದ ಭಾವ ಗಟ್ಟಿಗೊಂಡಿತು. ಗುಬ್ಬಿಯೊಂದು ಬಂದು ನೆತ್ತಿಯ ಮೇಲೆ ಕುಳಿತು ಗಟ್ಟಿಗೊಂಡ ಭಾವಕ್ಕೆ ಕಾವು ಕೊಟ್ಟಿತು. ಮುಂದೆ ಏನಾಯಿತೆಂದು ಹೇಳಲು ಮಾತು ಸಾಲದು. ತಂದೆ ತಾಯಿ ರೂಪದಲ್ಲಿ ಶಿವಯೋಗಿ ಸಿದ್ಧನು ನೆತ್ತಿಯನ್ನು ತಟ್ಟಿ ಹೋದಂತಿತ್ತು. ಅಂದಿನಿಂದ ಸಿದ್ಧರಾಮನ ಕುರಿತು ಚಿಂತನೆ ಬಲಗೊಂಡಿತು'' ಎಂದು ಹೇಳಿದುದು ಮುಂದೆ ಹುಟ್ಟಲಿರುವ ಮಹಾಕಾವ್ಯಕ್ಕೆ ಮಹತ್ ಕಾವ್ಯಕ್ಕೆ ಮುನ್ಸೂಚನೆ ಎಂಬಂತೆ ಮೂಡಿ ಬಂದಿದೆ. ಮಹಾಪುರುಷರ ಜೀವನವೂ ಅಲೌಕಿಕವೇ. ಮಹಾಕಾವ್ಯದ ಜನನವು ಅಲೌಕಿಕವೇ, ಈ ಸಂದರ್ಭದಲ್ಲಿ ಅವರ ಬದುಕಿನಲ್ಲಿ ನಡೆದ ಘಟನೆಯೊಂದು ಸಿದ್ಧರಾಮಪುರಾಣದ ಮೊದಲನೆಯ ಆವೃತ್ತಿಯಲ್ಲಿ ಹೀಗಿದೆ : ಒಂದು ಬಾರಿ ಅವರು ಅನಾರೋಗ್ಯದಿಂದ ತತ್ತರಿಸುತ್ತಿರುವಾಗ ಭಾರತದ ಸುಪ್ರಸಿದ್ಧ ಶಸ್ತ್ರಚಿಕಿತ್ಸಕರಾಗಿದ್ದ ದಿ. ಡಾ|| ಎ.ಎ.ಬಾಳಿಗ ಅವರು ತಾಯಿಯವರ ಆರೋಗ್ಯದ ಬಗೆಗೆ ನಿರಾಶಾದಾಯಕ ಉತ್ತರ ಕೊಟ್ಟಿದ್ದರು. ಇಂಥ ಸಂದರ್ಭದಲ್ಲಿ ತಾಯಿಯವರು ಬರೆದ ಎಷ್ಟೇ ಪದ್ಯಗಳಿದ್ದರೂ ಅವನ್ನು ಪ್ರಕಟಿಸುವ ಹಂಬಲ ಹೊತ್ತ ಕನ್ನಡಕೋಟೆಯ ಮಕ್ಕಳು ಬೆಂಗಳೂರಿನಲ್ಲಿ ಕೂಡಿದರು. ಮಕ್ಕಳ ಮನದ ಈ ಆಕಾಂಕ್ಷೆ ಕೇಳಿದ ತಾಯಿ 'ಸಿದ್ಧರಾಮನ ಹೋಮ ಮಾಡಿ, ಎಲ್ಲವನ್ನೂ ಶುದ್ಧಗೊಳಿಸುತ್ತಾನೆ. ಇಲ್ಲಿ ಕಳವಳಕ್ಕೆ ಕಾರಣವಿಲ್ಲ' ಎಂದು ಸಾಂತ್ವನ ನೀಡಿ ಅವರನ್ನು ಹುರಿದುಂಬಿಸಿದರು. ಇದರ ಪರಿಣಾಮವಾಗಿ ಆ ಸಿದ್ಧರಾಮನ ಕರುಣಕಟಾಕ್ಷದಿಂದ ದಿನೇ ದಿನೇ ಚೈತನ್ಯಭರಿತರಾಗಿ ಕಂಗೊಳಿಸತೊಡಗಿದರು.

ಒಮ್ಮೆ ಶ್ರೀಶೈಲದಲ್ಲಿ 'ಸಿದ್ಧರಾಮ ಪುರಾಣ' ಕೇಳಿದ ಶ್ರೀ ಜಗದ್ಗುರು ವಾಗೀಶ ಪಂಡಿತಾರಾಧ್ಯರು ಆನಂದಚಿತ್ತರಾಗಿ ತ್ರಿಪದಿಯ ರಚನೆಗೆ ಬೆಂಬಲ ನೀಡಿದರು. ಕಾಲ ಗತಿಸಿದಂತೆ ಸಿದ್ಧನ ದಿವ್ಯಜೀವನದ ಪದರು ಪದರುಗಳು ತಾಯಿಯವರ

ಮನದಲ್ಲಿ ಮೂಡಹತ್ತಿದವು. ಸಿದ್ಧರಾಮನನ್ನು ಕುರಿತಾದ ಕಥೆ ಬೃಹತ್ ಆಕಾರ ತಾಳಿ ಭಾವದುಂಬಿ ಮಾರ್ಪಾಡುಗೊಳ್ಳತೊಡಗಿತು. ಇದೇ ಸಂದರ್ಭದಲ್ಲಿ ಮಹಾಕವಿ ರಾಘವಾಂಕನ ಸಿದ್ಧರಾಮ ಚಾರಿತ್ರ್ಯ. ಶರಣರ ಸತ್ಕಥಾ ಶ್ರವಣಗೋಷ್ಠಿಗಳು, ಮಹಾನುಭಾವರ ಅನುಭವದ ಸುಳುಹು ಇವು. ಪ್ರಚೋದಕ ಶಕ್ತಿಗಳಾಗಿ ನಿಂತು ಈ ಕೃತಿ ರಚನೆಗೆ ಕಾರಣವಾಗಿವೆ. ಸಿದ್ಧರಾಮನ ಚರಿತ್ರೆ ಬರೆಯಬೇಕೆಂಬ ಹಂಬಲ ಏನೆಲ್ಲವನ್ನು ಸಹಿಸಿಕೊಂಡಿದೆ. ಅನಾರೋಗ್ಯದಲ್ಲಿ ಆಸ್ಪತ್ರೆಯಲ್ಲಿ ಸೂಜಿಯ ಮದ್ದು ಚುಚ್ಚಿದಾಗೊಮ್ಮೆ ಸಿದ್ಧರಾಮಯ್ಯನ ನೆನಪುಮಾಡಿಕೊಟ್ಟಿವೆ.

ಮೀಸಲಿದ್ದ ಕೈಗೆ ಏಸೊಂದು ಸೂಜಿಯು
ಸೋಸಿ ನೋಡುವಿ ತನುಮನವನು । ಸಿದ್ಧರಾಮ
ನಸುನಗುತ ನಿನ್ನನೆ ನೆನೆಯುವೆ ॥

ಎಂಬ ಹಠ ಅವರದು.

ಮೌನವಿದ್ದ ದಿನವು । ತನುವೀಗೆ ಸೂಜಿಯು
ಮನವ ನೋಡಲು ಬಯಸಿದೆಯ ಸಿದ್ಧರಾಮ
ನನ್ನದಲ್ಲಿದು ಎಲ್ಲ ನಿನ್ನದು ॥

ಎಂಬ ಆತ್ಮ ಸಮರ್ಪಣಾ ಮನೋಭಾವ ಎಂಥ ಸಂದರ್ಭದಲ್ಲಿಯೂ ತಾಯಿಯವರ ಅಭಿಮಾನ ರಕ್ಷಣೆ ಮಾಡಿದೆ. ಇಂಥ ಸಮಸ್ಯೆಯ ಘಳಿಗೆಯಲ್ಲಿಯೂ ಏಸುಕ್ರಿಸ್ತನ ಬದುಕು ತಾಯಿಯವರ ಪಾಲಿಸಿದ ಆದರ್ಶವಾಗಿದೆ.

ಏಸುವಿಗೆ ಮೊಳೆಗಳು ಏಸೊಂದು ಹೊಡೆದರೂ
ಸೋಸಿದನು ಘೋರಯಾತನೆ । ಲೋಕದಿ
ಈಶನ ಕರುಣೆಯ ಸಾರಿದನು ॥

ಅಂತೆಯೇ ಈ ಭಾವ ತುಂಬಿಕೊಂಡ ತಾಯಿ ಅದೇ ಮಾರ್ಗ ಅವಲಂಬಿಸಿ ಮಹತ್ತರ ಕೃತಿಗೆ ಕಾರಣವಾಗಿರುವರು. ಕಾಲಕಳೆದಂತೆ 'ಸ್ವಾನುಭಾವದ ನೆಲೆಯ ನಾನೇನು ಬಲ್ಲೆನೈ' ಎಂಬಂತೆ ಸ್ವಾನುಭಾವದ ಹುಡುಕಾಟಕ್ಕೆ ಪ್ರಾರಂಭವಾಗಿದೆ. ಶಿವಸಿದ್ಧರಾಮನ ದಿವ್ಯಲೀಲೆ ವೇದನೆಯಿಂದ ಬಳಲಿದ ಜೀವಕ್ಕೆ ಅಪಾರ ಕರುಣೆಯನ್ನಿತ್ತು ಮರುಹುಟ್ಟು ಕೊಟ್ಟು ತನ್ನ ಶಕ್ತಿ ಮೆರೆದಿದೆ.

ಬಂದೇನ ಸಿದ್ಧರಾಮ । ತಂದೇನ ಹೊಸಬೆಳಕು
ಚಂದಾದ ರೂಪ ತೋರ್ಯಾನ । ಈ ನನ್ನ
ಬೆಂದ ಮನಕ ತಂಪ ನೀಡ್ಯಾನ॥

ಎಂದು ಹಾಡಿಕೊಂಡಿರುವ ತಾಯಿಯವರು ತಮ್ಮ ಜೀವನವನ್ನು ಅವನಿಗಾಗಿ ಮೀಸಲಾಗಿಟ್ಟಿರುವರು.

ಹಗಲಿರುಳು ಸಿದ್ಧನ ಚಿಂತೆಯಲ್ಲಿ, ಅವನ ಮುಗ್ಧ ವೈಭವದಲ್ಲಿ, ನವಣಿಯ ಹೊಲದ ರಸದ ತೆನೆಗಳಲ್ಲಿ, ಕರಿಯ ಕಂಬಳಿಯ ಯೋಗಿಯ ನೆನಹಿನಲ್ಲಿ ರುದ್ರಗಮ್ಮರಿಯ ಹೃದಯಾಕ್ರಂದನದಲ್ಲಿ, ಮಲ್ಲಯ್ಯನ ತೋಳತೊಟ್ಟಲಿನಲ್ಲಿ ಹೀಗೆ ಸಿದ್ಧರಾಮನ ಸಮಗ್ರ ಜೀವನದ ಘಟನೆಗಳು ದಿವ್ಯಕಾವ್ಯದಲ್ಲಿ ಮಿಂದು ಹೊಸತನ ಪಡೆದಿವೆ. ಅನುಭವದ ಪರಿಪಕ್ವಗೊಂಡ ಸಂಪ್ರದಾಯದ ಚೌಕಟ್ಟಿನಲ್ಲಿ ತನ್ನತನ ಉಳಿಸಿಕೊಂಡು ಬೆಳೆದು ಬಂದ ಈ ಮಹಿಳಾ ಹೃದಯದ ರಸಾನುಭವ ತನ್ನ ಸಂಪತ್ತನ್ನೆಲ್ಲ ಈ ಕೃತಿಯಲ್ಲಿ ಸೂರೆ ಮಾಡಿಕೊಂಡಿದೆ. ಈ ನೂತನ ಸಿದ್ಧರಾಮಪುರಾಣದ ರಚನೆಗೆ ಆಚರಿಸಿಕೊಂಡ ಆಕರಗಳು ವಿಭಿನ್ನ

ರಾಘವಾಂಕನ 'ಸಿದ್ಧರಾಮಪುರಾಣ' ಶೂನ್ಯಸಂಪಾದನೆಯಲ್ಲಿರುವ 'ಸಿದ್ಧರಾಮನ ಪ್ರಸಂಗ', ಚಾಮರಸನ 'ಪ್ರಭುಲಿಂಗ ಲೀಲೆ', ಸಿದ್ಧರಾಮನ 'ಷಟ್ಸ್ಥಲ ವಚನ' ಕಾಲಜ್ಞಾನ ವಚನ, ಮಂತ್ರಗೋಪ್ಯ, ಅಷ್ಟಾವರಣ ಸ್ತೋತ್ರ ತ್ರಿವಿಧಿಗಳ ಸಾರ ಈ ಕೃತಿಯಲ್ಲಿ ಮಡುಗಟ್ಟಿ ನಿಂತಿವೆ.

ನಿಷ್ಠೆಯ ಎಚ್ಚರ, ಅನುಭಾವದ ಹಿನ್ನೆಲೆ ಈ ಕಾವ್ಯಕೃತಿಗೆ ಇದ್ದುದೊಂದು ಇದಕ್ಕೆ ವಿಶೇಷ. ಆಗಿನ ಮಾನಸಿಕ ತಳಮಳ, ಭಕ್ತಿಯ ನಿರ್ಭರತೆ ಹಾಡಿಗೆ ಸೊಗಸು ತಂದಿವೆ. ಸಿದ್ಧರಾಮೇಶ್ವರ ಪುರಾಣದಲ್ಲಿ ಕಾಣಬರುವುದು ನಿರಾಭರಣ ಕಾವ್ಯ ಸೌಂದರ್ಯ. ಜಾನಪದ ಧಾಟಿಯ ಸೊಗಸು, ಸರ್ವಜ್ಞ ಸಿದ್ಧರಾಮರ ಅನುಭಾವ, ನಿಜಗುಣರ ಲಾಲಿತ್ಯ ದೇಸಿಯ ಚಲುವು, ವೀರಶೈವದ ಅಂಗ - ಪ್ರಾಣ ಆತ್ಮದಂತಿರುವ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲಗಳ ಸೊಬಗು ಪುರಾಣದುದ್ದಕ್ಕೂ ಚಲ್ಲುವರಿದಿವೆ. ಶರಣ ತತ್ವಗಳಾದ ಕಾಯಕ, ದಾಸೋಹ, ಪ್ರಸಾದ ದಯೆ ಮುಂತಾದ ಮೌಲ್ಯಾನುಭವಗಳ ತತ್ವವನ್ನು ಕಾವ್ಯದುದ್ದಕ್ಕೂ ಉಣಬಡಿಸಿರುವರು. ಹೀಗಾಗಿ ಈ ಮಹಾ ಕೃತಿಯ ಒಂದು ಅನುಭಾವದಡಿಗೆ.

ತಾಯಿಯವರಿಗೂ ಸಿದ್ಧರಾಮನಿಗೂ ತುಂಬ ಅನ್ಯೋನ್ಯವಾದ ಭಾವ. ಅವರು ಅವನೊಂದಿಗೆ ಸಂಪಾದಿಸಿದುದು ತಾದಾತ್ಮ್ಯ ಭಾವ. ನಿಸರ್ಗದ ಚೆಲುವು ಹಬ್ಬ ಹುಣ್ಣಿಮೆ, ಜಾತ್ರೆ, ಕ್ಷೇತ್ರಗಳ ಪರಿಚಯ, ನೆಂಟರಿಷ್ಟರ ಸಡಗರ, ಕಾಯಕ ನಿಷ್ಠೆ, ಭೂತದಯೆ, ಮದುವೆ ಮಂಗಲ ಇವೇ ತಾಯಿಯವರ ಒಲವಿನ ಸಂದರ್ಭಗಳು ಇಂತಹ ಅಣುರೇಣು ತೃಣಕಾಷ್ಟಗಳಲ್ಲಿಯೇ ಸಿದ್ಧರಾಮನನ್ನು ಮನದುಂಬಿ ಅರಸಿದವರು ಅವರು. ಈ ಜೀವನದಲ್ಲೇ, ಈ ದೇಹದಲ್ಲೇ, ಈ ಲೌಕಿಕ ಬದುಕಿನಲ್ಲಿಯೇ ದಿವ್ಯತೆಯನ್ನು ಮೈಗೂಡಿಸಿಕೊಳ್ಳುವುದೇ ಬದುಕಿನ ಸಾರ್ಥಕತೆ ಎಂದು ಅರಿತುಕೊಂಡವರು ಸಿದ್ಧರಾಮನ ಬದುಕನ್ನು ಜೀವನದುದ್ದಕ್ಕೂ ಸ್ಮರಿಸಿ ಧನ್ಯತೆಗೊಂಡವರು. ಯಾವಾಗಲೂ ಧನ್ಯತೆಗಿಂತ ಪುಣ್ಯಕ್ಕೆ ಹೆಚ್ಚಿನ ಸ್ಥಾನಮಾನ. ಈ ಧನ್ಯತೆ, ಪುಣ್ಯತೆ ಎರಡನ್ನೂ ಮಿಕ್ಕಿ ನಿಂತಿದು ಈ ಕಾವ್ಯ.

ತಾಯಿಯವರ ಯೋಗಿಸಿದ್ಧಿ ಎಂದರೆ ಕಾವ್ಯಯೋಗ ಸಿದ್ಧಿ. ಭಕ್ತಿ ಎಂದರೆ ಭಕ್ತಿ ಭಂಡಾರಿ ಬಸವಣ್ಣನ ದಿವ್ಯಭಕ್ತಿ. ಜೀವನವೆಂದರೆ ಶಿವಶರಣರು ಅರಿತು ಆಚರಿಸಿದ ಶರಣ ಜೀವನ. ಅರ್ಪಣವೆಂದರೆ ತನು ಮನ ಧನಗಳ ಸರ್ವಾರ್ಪಣ. ಸಿದ್ಧರಾಮನಿಗೆ ತಮ್ಮನ್ನು ತಾವು ಮಾರಿಕೊಂಡು ಭಕ್ತಿಪೂರ್ಣ ಸಮರ್ಪಣೆಯ ಹಿನ್ನೆಲೆಯಲ್ಲಿ ಹುಟ್ಟಿದಂದಿನಿಂದ ಧರಿಸಿದ ಚಿನ್ನದ ಕಂಕಣಗಳನ್ನು ತ್ಯಜಿಸಿ, ರುದ್ರಾಕ್ಷಿ ಕಂಕಣಗಳನ್ನು ಕಟ್ಟಿ ಸಿದ್ಧರಾಮ ಪುರಾಣವನ್ನು ರಚಿಸಿದುದು. ಆ ಕಾಲದಲ್ಲಿ ಬಂದು ಮನೆಯ ಬಾಗಿಲ ಬಡಿದ ಯಮನನ್ನು ಹೊಸ್ತಿಲಾಚೆ ನಿಲ್ಲಿಸಿ ಅಪೂರ್ಣಗೊಂಡ ಪುರಾಣವನ್ನು ಪೂರ್ಣಗೊಳಿಸಿದ್ದು ಅವರ ಮಹತಿ.

ಸಿದ್ಧರಾಮನೇ ಅವ್ಯಕ್ತರೂಪದಿ ಬಂದು ತಾಯಿಯವರ ಮನದಾಳದಲ್ಲಿ ನೆಲೆಗೊಂಡು ತನ್ನ ರೂಪದ ಅಭಿವ್ಯಕ್ತಿಗೆ ಜಯದೇವಿ ತಾಯಿಯನ್ನು ನಿಮಿತ್ತಳನ್ನಾಗಿ ಮಾಡಿಕೊಂಡುದು ಇಲ್ಲಿ ಸುವೇದ್ಯ. ಅದನ್ನು ತಾಯಿಯವರ ಸವಿನುಡಿಯಲ್ಲಿಯೆ ಕೇಳಬೇಕು :

> ''ಏನು ಹೇಳಲಿ, ಸಿದ್ಧ ನಿನ್ನ ವೈಚಿತ್ರವ
> ಮುನ್ನಿನ ಜನನವ ಹರಸೀದಿ - ಹೇ ತಂದೆ
> ಜನುಮವ ಹೊಸದಾಗಿ ನೀಡಿರುವಿ''

ಅವರು ಪಡೆದ ಮರುಹುಟ್ಟು ಸಿದ್ಧರಾಮನಿಗಾಗಿಯೇ ಎಂಬುದು ಇಲ್ಲಿ ಶತಸಿದ್ಧ.

ಶಿವಾನುಭವದ ರಸಘಟ್ಟಿಯೋಪಾದಿಯಲ್ಲಿ ರೂಪಿತಗೊಂಡ ಈ ಪುರಾಣ ಬೃಹತ್ತಾಗಿದೆ, ಸವಿಸ್ತಾರವಾಗಿದೆ. ಅವರಿಗೆ ಸಿದ್ಧನ ಜೀವನ ಶಿವನ ಜೀವನ.

ಸಾವಿಲ್ಲದ ಸಡಗರ ಭಾವದಲಿ ಕಾಣುವೆನು
ದೇವನ ಕೈಯ ಹಿಡಿದಾಗ ಈ ಭವ
ಭವದ ಮಾಲೆ ಬಯಲಾಯಿತ್ತು

ಸಾವಿಲ್ಲದ ಸಡಗರ ಬಂದಾಗ, ದೇವದೇವನ ಕೈಯ ಹಿಡಿದಾಗ, ಮೃತ್ಯುವನ್ನು ಗೆದ್ದು ಮೃತ್ಯುಂಜಯನ ಕಂಡಾಗ ಅವರುಂಡ ಅನುಭಾವಕ್ಕೆ ಕೊರತೆಯೇ? ಜೀವನದ ಸಾರಸರ್ವಸ್ವವೇ ಇಲ್ಲಿದೆ.

ಭಾವದ ಬಳ್ಳಿಗೆ ದೇವನ ಹೂಗಳು
ಶಿವಸಿದ್ಧರಾಮ ಪುರಾಣ ಕಾಯಾಗಿ
ಭಾವ ಬಯಲೊಳು ಫಲಿಸಿವೆ

ಹೊಸಯುಗಗಳು ಸೃಷ್ಟಿಗೆ ಕಾರಣವಾದ ಈ ಮಹಾಕಾವ್ಯ ಕನ್ನಡ ಸಾಹಿತ್ಯಕ್ಕೆ ಮೇರುಕೃತಿಯೇ ಸರಿ.

'ಮಣ್ಣಿನ ಮೂರುತಿ, ಹೆಣ್ಣಿನ ಪಾಶದಿ ಸಣ್ಣಗಾದರೆ ಏನು ಫಲ ।
ಬಣ್ಣವರಿತು ಒಳಗಣ್ಣು ತೆರೆಯದೆ ಮಣ್ಣಿಗೆ ಹೋದರೆ ಏನು ಫಲ ॥'

ತಾಯಿಯ ದಿವ್ಯಸಂದೇಶ. ನಮ್ಮ ಜೀವನದ ಒಳಗಣ್ಣು ತೆರೆಯದೆ ಹೆಣ್ಣು ಹೊನ್ನು ಮಣ್ಣಿನ ಮುಪ್ಪುರಿಯ ಭವಬಂಧನದಲ್ಲಿ ಸಿಲುಕಿ, ಸೃಷ್ಟಿಸಿ ಭುವಿಗೆ ದಬ್ಬಿದ ಸೃಷ್ಟಿಕರ್ತನನ್ನೇ ಕಾಣದೆ ಮಣ್ಣಲ್ಲಿ ಸೇರಿ ಮಣ್ಣಾಗಿ ಹೋಗುವ ನಮಗೆ ಆ ಸಿದ್ಧರಾಮನ ನಾಮಸ್ಮರಣೆ ಒಂದೇ ತಾರಕಮಂತ್ರ ಎಂದು ನಂಬಿದವರು. ಆತನ ಕರುಣೆಯ ಕಂದನಾಗಿ ಸದಾ ಅವನನ್ನು ತನ್ನ ಸುಪ್ತಮನಸ್ಸಿನಿಂದ ಎಬ್ಬಿಸುತ್ತ

'ಪ್ರಾಣ ಪ್ರಣತಿಯಲಿ ಅನುವರಿತು ಪ್ರಣವಜ್ಯೋತಿಯ ಹೊತ್ತಿಸಿ ಅವಿರಳ ।
ಮಣಿಯುತ ಚರಣಕ್ಕೆ ಬೆಳಗಲು ತಂದಿರುವೆ ತ್ರಿಣಯನೆ ಏಳಯ್ಯ ಶಂಭುವೆ' ॥

ಎಂದು ಕರುಳು ಕರಗುವಂತೆ ಆತನಿಗಾಗಿ ಪರಿತಪಿಸುವ ತಾಯಿ ಈ ಮಹಾಕಾವ್ಯವನ್ನು ಓದುವ ನಾಸ್ತಿಕನನ್ನು ಆಸ್ತಿಕನನ್ನಾಗಿ, ಭೋಗಿಯನ್ನು ಯೋಗಿಯನ್ನಾಗಿಸಿದ್ದಾಳೆ.

ಪುರಾಣದ ಪಕ್ಷಿನೋಟ :

ಕರ್ಮಯೋಗಿ ಸಿದ್ಧರಾಮನ ಶಿವಯೋಗದ ನಿಲುವನ್ನು ಜಗತ್ತಿಗೆ ತಿಳಿಯಪಡಿಸುವ ಮಣಿಹ ಹೊತ್ತ ತಾಯಿಯವರು ಈ ಮಹಾಕೃತಿಯ ರಚಿಸಿ ಕೃತಕೃತ್ಯರಾಗಿರುವರು. ಕನ್ನಡ ಸಾಹಿತ್ಯದಲ್ಲಿ ರಚಿತವಾದ ಮಹಾಪುರಾಣಗಳೋಪಾದಿಯಲ್ಲಿ ಸಿದ್ಧರಾಮೇಶ್ವರ ಪುರಾಣ ಕೈಲಾಸ ವರ್ಣನೆಯಿಂದ ಪ್ರಾರಂಭಗೊಂಡಿದೆ. ಅಷ್ಟಾದಶವರ್ಣನೆಗಳಲ್ಲಿ ಬರುವ ಸಮುದ್ರ, ಪರ್ವತಶ್ರೇಣಿ, ಕೈಲಾಸ, ಶಿವನ ಸನ್ನಿಧಾನದ ಪ್ರಸ್ತಾಪಗಳಿವೆ. ಅಲ್ಲಿ ಜರುಗಿದ ಅದ್ಧೂರಿಯ ಭೃಂಗಿಯ ನಾಟ್ಯ ಗಂಧರ್ವರ ಕುಹಕನಗೆಗೆ ಬೇಸತ್ತ ಭಂಗಿಯಿಂದ 'ಭೂಲೋಕದಲ್ಲಿ ಮನುಷ್ಯರಾಗಿ ಹುಟ್ಟಿ' ಎಂಬ ಶಾಪ ಕಥೆಗೆ ಹೊಸ ತಿರುವು ಕೊಡುತ್ತದೆ. ಗಂಧರ್ವತನವಳಿದು ಮುದ್ದುಗೌಡ ಸುಗ್ಗವ್ವೆಯರು ಭೂಲೋಕದಲ್ಲಿ ಜನಿಸಿ ಈ ಕಾರಣಪುರುಷನ ಬರವಿಗೆ ಕಾರಣರಾಗುತ್ತಾರೆ. ಉಶ್ಶಾಪದಿಂದ ಈ ದಂಪತಿಗಳು 'ದೇಹವಿಕಾರ ವಿಷಯಂಗಳಜಿತ ಬಳಿಕ' ಎವೆಯಿಕ್ಕದುಣ್ಣದ ಜಿತೇಂದ್ರಿಯತ್ತ್ವವ ತಳೆದ ನಿರ್ಮಾಯನೆನಿಸುವ ಶಿವಜ್ಞಾನಿ' ಮಗನಾಗಿ ಹುಟ್ಟುತ್ತಾನೆ. ಸಿದ್ಧರಾಮ ಚರಿತ್ರೆಯ ರಾಘವಾಂಕನ ಉವಾಚ ಇಂತಾದರೆ, ಜಯದೇವಿತಾಯಿಯವರು ಈ ಮಹಿಮಾಪುರುಷನ ಉದಯದ ಬಗ್ಗೆ ತಿಳಿದಿರುವುದೇ ಭವ್ಯ. 'ಭುವಿಯೊಳ್ ನಿಮ್ಮುದರದಿ ಶಿವಯೋಗಿ ನಾನಾಗಿ ಭವ ಪರಿಹರಿಸಲು ಜನಿಸುವೆ, ಸೊನ್ನಲಿಗೆ ಅವಿಮುಕ್ತಕ್ಷೇತ್ರವೆನಿಸುವೆ, ನನ್ನಧಿಕ ನನ್ನವರು' ಎಂಬುದನ್ನು ಶಿವನಿಗೊರೆದು ಒಪ್ಪಿಸುವೆನೆಂಬ ಅಲೌಕಿಕ ಉವಾಚ ತಾಯಿಯ ವಾದ.

ಜಯದೇವಿ ತಾಯಿಯವರಿಗೆ ಸಿದ್ಧರಾಮ ಜೀವದ ಜೀವ, ಆತ್ಮದ ಆತ್ಮ. ತಾನು ನಂಬಿ ಹಾಡಿ ಹರಸಬಯಸಿದ ಆ ಪುಣ್ಯಪುರುಷನೇ ತನ್ನ ಮಹಾಕಾವ್ಯದ ಕಥಾನಾಯಕನಾಗುವನೆಂದರೆ ತಾಯಿಯವರ ಮೈಮನದಲ್ಲಿ ಭಕ್ತಿಯ ಆವೇಶ ತುಂಬಿ ದೊರಕಿದೆ. ಅವನಿಗೆ ಸೊನ್ನಲಿಗೆ ಅವಿಮುಕ್ತ ಕ್ಷೇತ್ರವಾಗಿ ಮೆರೆಯಲಿದೆ ಎಂಬ ಭಾವವೇ ತಮ್ಮನ್ನು ತಾವೇ ಮರೆಯುವಂತೆ ಮಾಡಿದೆ.

ಶಿವಸಿದ್ಧಕುಲ ಚಕ್ರವರ್ತಿ ಪರಮಗುರು ರೇವಣಸಿದ್ದರು ಸೊನ್ನಲಾಪುರದ ಪುಣ್ಯದ ಭೂಯಿಲ್ಲಿ ಕಾಲಿಟ್ಟೊಡನೆ ದಂಡಿಗೆಯನ್ನಿಳಿದು ಹಾವುಗೆ ಕಳೆದು ಮೈಯಿಕ್ಕಿ ನೆಲದಡಿಗೆ ತಾಗದಂತೆ ನಡೆದು ಪುಳುಕಿಸುತ್ತ, ಭಾವಿಸುತ್ತ ಕಂಪಿಸುತ್ತ ನಡೆದು ಬರತೊಡಗಿದರು. ಗುರುಗಳ ಈ ಸ್ಥಿತಿಯನ್ನು ಕಂಡ ಶಿಷ್ಯರಿಗೆ ಅಚ್ಚರಿಯೇ ಅಚ್ಚರಿ. ಸಮೀಪದಲ್ಲಿ ಯಾವ ಪುಣ್ಯಸ್ಥಳಗಳಿಲ್ಲ. ಯಾವ ಪುಣ್ಯಪುರುಷರಿಲ್ಲದಿರುವಾಗ... ರೇವಣಸಿದ್ದರು ನೇರವಾಗಿ ಶಿಷ್ಯರಿಂದೊಡಗೂಡಿ ಮೊರಡಿಯ ಮುದ್ದುಗೌಡನ ಮನೆಗೆ ದಯಮಾಡಿಸಿದರು. ಒಳಗಿದ್ದ ಸುಗ್ಗವ್ವೆ ಮನದಲ್ಲಿಯೆ ,

> ಸನ್ನುತ ಗುರುವಿಗೆ ಬಿನ್ನಹವ ಮಾಡಿಲ್ಲ ।
> ತನ್ನಿಂದ ತಾನೆ ನಮ್ಮನಿಗೆ - ಬಂದರೆಂತು
> ಏನು ಹಾಸಲವ್ವ ಯೋಗಿಗೆ ॥

ಎಂದು ಯೋಜನಾಪರಳಾಗಿರುವಲ್ಲಿ 'ಸುಗ್ಗವ್ವೆಯ ಮುಂದೆ ಬಾಗಿಹರು ಶಿವಯೋಗಿ, ತಾಯೆ, ನಿನ್ನುದರದಿ ಘನ ಶಿವಯೋಗಿ ಉದಿಸುವನು' ಎಂದಾಗ ವೃದ್ಧಾಪ್ಯದಲ್ಲಿ ಕಾಲ ಕಳೆಯುತ್ತಲಿದ್ದ ಅವಳಿಗೆ ಹೇಗಾಗಿರಬೇಡ.

'ತಾಯಿ ಈ ಮಗು ಸಾಮಾನ್ಯ ಶಿಶುವಾಗಿದ್ದರೆ ಹಿಂದೆ ಎಂದೋ ಹುಟ್ಟಬೇಕಿತ್ತು. ಆದರೆ ಇದು ಕಾರಣಿಕಶಿಶು. ತಾರುಣ್ಯದ ರಾಗದ್ವೇಷ ಕಾಮ ಕಲುಷಿತವಾದ ಶರೀರದಲ್ಲಿ ಹುಟ್ಟಿದೆ. ಆ ಕಾಮದ ಕಾವೆಲ್ಲವೂ ಅರಿ ಪ್ರೇಮದಿಂದ ಪಕ್ವವಾಗಿರುವ ಈ ಮುಪ್ಪಿನ ವಯಸ್ಸಿನಲ್ಲಿ ಹುಟ್ಟುವ ಆತ ಸಾಮಾನ್ಯನಲ್ಲ ತಾಯಿ, ಆ ಪರಶಿವನ ಅವತಾರ' ಎಂದು ಸಾರಿ, ದಿವ್ಯಸಂದೇಶವಿತ್ತು ರೇವಣಸಿದ್ದರು ಹೊರಟುಹೋದರು.

ಅಂತೂ ಗುರುವರ್ಯರ ನುಡಿ ನಿಜವಾಯಿತು. ಅರವತ್ತು ವರ್ಷಕ್ಕೆ ಅರುಹು ಮರುಹಿನ ತೊಡಕ ಬಿಡಿಸುವ ಕುರುಹು ಎಂಬಂತೆ ಸಿದ್ಧರಾಮ ಜನಿಸಿ ಬಂದ. 'ಯೋಗಿ ತಾ ಎಚ್ಚತ್ತು ತಾಯಿತನವ ಬಗಿದು ಚಂದಿರನ ಬೆಳಗಿನಲಿ' ಮೂಡಿ ಬಂದ ದೈವೀ ಶಿಶುವಿಗೆ ಎಷ್ಟೊಂದು ಸಡಗರ. 'ಕಮಳಮಧ್ಯದಿಂದ ಹಂಸಶಿಶು, ಮೇಘದೊಳಗಿಂದ ತರುಣಶಶಿ ಹೊರಹೊಮ್ಮುವಂತೆ ಹೊರಬಂದ ಸಿದ್ಧರಾಮನನ್ನು 'ಮುಕುತಿವನಿತೆಯ ನೆಚ್ಚಿದ ನಲ್ಲನನ್ನು' ದೇವತೆಗಳು ಸ್ವಾಗತಿಸಿದ್ದಾರೆ. ಪಾರ್ವತಿ ಮೊದಲಾಗಿ ಅನೇಕ ದೇವತೆಯರು ಜೊತೆಗೂಡಿ ಮಗುವನ್ನು ತೊಟ್ಟಿಲ್ಲಿಟ್ಟು ತೂಗಿ ಜೋಗುಳ ಹಾಡಿ 'ಸಿದ್ಧರಾಮಾ' ಎಂದು ಹೆಸರಿಟ್ಟು ಕರೆದಿದ್ದಾರೆ.

ಕಡುಸುಖದ ಜೊಮ್ಮು ತಿಳಿದು ಮೈಮುರಿದು ಮೇಲೆದ್ದ ತನ್ನ ಗರ್ಭವನ್ನು ಮುಟ್ಟಿ ನೋಡಿಕೊಂಡು ಗಾಬರಿಕೊಂಡು ಸುಗ್ಗವ್ವೆ ಮಗ್ಗುಲಲ್ಲಿ ಮಲಗಿದ ಕಂದನ ಮೊಗ ನೋಡಿ 'ಬೆಸಲಾದೆ'ನೆಂದು ಹಿಗ್ಗಿ ಅಪ್ರತಿಮನ ದಿವ್ಯರೂಪ ಕಂಡು ಅಚ್ಚರಿ ಪಟ್ಟಿದ್ದಾಳೆ. ಮಗನಿಗೆ ಹೆಸರಿಡುವ ಪ್ರಸ್ತಾಪ ಬಂದಾಗ ಅಲ್ಲಿದ್ದ ಐದೆಯರಿಗೆ -

> 'ಮುನಿದೇವ ಕೊಟ್ಟನು ।
> ಮನ್ನಿಸಿ ಹೆಸರಿಡು ತಾಯವ್ವ ॥ ಕಂದಗೆ
> ಮನಿದೇವ ಧೂಳಿಮಾಕಾಳ ॥

ಎಂದು ಸುಗ್ಗವ್ವೆ ತಿಳಿಸಲು, ಮಗುವಿಗೆ ಮನೆದೇವರ ಹೆಸರು 'ಧೂಳಿಮಾಕಾಳ'ನೆಂದು ನಾಮಕರಣ ಮಾಡಿದರು.

ಏಸು ಜನುಮದ ಪುಣ್ಯ :

ಮೂರು ವಸಂತಗಳು ಕಳೆದವು. ಪ್ರಕೃತಿಯ ಗಿಡಮರಗಳೆಲ್ಲ ಚೈತನ್ಯದಿಂದ ತುಂಬಿ ರಮ್ಯ ವಾತಾವರಣ ನಿರ್ಮಿತವಾಯಿತು. ಆದರೂ ತಾಯಿಯ ಕಡೆಗೆ ಧೂಳಿಮಾಕಾಳ ಓಗೊಡಲಿಲ್ಲ. ಮಾತುಕತೆ ಇಲ್ಲ. ಮಕ್ಕಳಂತೆ ಸಹಜವಾದ ಚಾಕಚಕ್ಯತೆ ಇಲ್ಲ, ಮಗನ ಮುಗ್ಧತೆ 'ಚೊಚ್ಚಿಲ ಮಗ ಮಂಕೇನ' ಎಂಬ ಭಾವ ಸುಳಿಯದೇ ಇರಲಿಲ್ಲ. ಮಗುವನ್ನು ಬೇರೆ ಮಕ್ಕಳೊಂದಿಗೆ ಹೊಲಕ್ಕೆ ಆಕಳು ಕಾಯಲು ಕಳುಹಿಸಿಕೊಡು. ಬೇರೆ ಮಕ್ಕಳ ಜೊತೆ ಆಟ ಆಡಿಕೊಂಡಿದ್ದರೆ ಮಾತು ಬಂದೀತು' ಎಂದು ಕೆಲವರು ಸಲಹೆ ಕೊಡಲು ಆಸೆಯ ಭರವಸೆ ಹೊತ್ತ ಸುಗ್ಗವ್ವೆ ಧೂಳಿಮಾಕಾಳನನ್ನು ಹೊಲಕ್ಕೆ ಕಳಿಸತೊಡಗಿದಳು.

ಗೌಡರ ನವಣೆಯ ಹೊಲ, ಹೊಲ ತುಂಬಿ ಬೆಳೆದ ನವಣೆ ಮಾಗಿ ನಿಂತಿದೆ. ಒಂದು ದಿನ ಹೊಲದಲ್ಲಿಯ ಮಲ್ಲಿಗೆಯ ಮಂಟಪದಲ್ಲಿ ದನ ಕಾಯುತ್ತಿರಲು ಶಿವಲಿಂಗವೊಂದು ಗೋಚರಿಸುತ್ತದೆ. ಆ 'ಶಿವಲಿಂಗ ನೋಡುತ ಜೀವಭಾವವಳಿದನು, ಭಾವ ಶಿವನಲ್ಲಿ ಬೆರಸಿಹನು'. ಎಲ್ಲವೂ ಮಲ್ಲಿಕಾರ್ಜುನನ ಲೀಲೆ. ನವಣೆಯ ಹೊಲದಲ್ಲಿ ಹವಣಿಸಿ ಬಂದಿದ್ದ ದೇವ ಮಲ್ಲಿನಾಥ ಧೂಳಿಮಾಕಾಳನ ಭಕ್ತಿಯನ್ನು ಹೆಚ್ಚಿಸಲು 'ಸಿದ್ಧ' ಎಂದು ಕರೆಯುತ್ತಾನೆ. ಆ ಪ್ರಕಾರ ಪುಂಗಿಯ ನಾದಕ್ಕೆ ಮಾರುಹೋದ ಸಿದ್ಧರಾಮ -

'ಮುಚ್ಚಿದ ಕಣ್ ತೆರದು । ಬೆಚ್ಚಬೆರಗಿನಿಂದ
ಸಚ್ಚಿದಾನಂದ ಮನೋಹರ - ಮೂರುತಿಗೆ
ಹಚ್ಚಿದ ಪುಸ್ತಕ ಶಿರ ಬಾಗಿ ॥

ಸಚ್ಚಿದಾನಂದನಿಗೆ ಭಕ್ತಿಯಿಂದ ಶಿರ ಬಾಗಿ ನಮಸ್ಕರಿಸುತ್ತಾನೆ. ಹುಟ್ಟು ಮೌನಿಯಾಗಿದ್ದ ಮಾಕಳ, ದೇವನ ಪಾದಸ್ಪರ್ಶ ಮಾಡಿದಾಗಲೆ ಅವನ ಮೌನ ಮುರಿದು ಹೋಗಿತ್ತು. ದರ್ಶನ ಸ್ಪರ್ಶಗಳಾದವು. ದೇವ ದೇವನ ಭವ್ಯರೂಪಕ್ಕೆ ಮಾಕಾಳನ ಮುಖದ ಚರ್ಯೆಯ ಬದಲಾಯಿತು. ಕುಲುಕುಲು ನಗೆ ಚಿಮ್ಮಿ ಬಂತು. ತುಂಬಿ ಬಂದ ಮನದ ಆನಂದವನ್ನು ಎಷ್ಟು ಸಲ್ಲಿಸಿದ್ದರೂ ಕಡಿಮೆಯೆ. ಬಾಲನ ಹರುಷ ಕಂಡ ಮಲ್ಲಯ್ಯ ಅವನನ್ನು ಮೈದಡವಿ ಎತ್ತಿಕೊಂಡು ತಲೆಯ ಮುಂಗುರುಳು ಸವರಿ, ಮುದ್ದಾಡಿದ ತಟ್ಟನೆ,

ಕೂಸು ಸಿದ್ದೇಶನೆ । ಲೇಸಾಗಲಿ ಎನ ಕಂದ
ಹಾಸಿ ಹಸಿದೀದೆ ನನ್ನ ಹೊಟ್ಟೆಯು - ಏಳೇಳು
ರಸವೀಸಿ ನಮಗೆ ಬಹಳೆಂದ ॥

ಪರಶಿವನ ಮುಖದ ಮೇಲಿನ ಹಸಿವಿನ ಛಾಯೆ ಮನಗಂಡ ಬಾಲಕ ಸಿದ್ಧ ತನ್ನ ಹೆಗಲ ಮೇಲಿದ್ದ ಕರಿಕಂಬಳಿಯನ್ನು ಹಾಸಿ 'ಕುಳಿತುಕೊಳ್ಳುವಂತೆ ಬೇಡಿಕೊಂಡ' 'ನನ ದೇವ ಸುರ್ಗಿಯಲಿ ಹಸಿವೀನ ಕೊರಗೇಕೆ' ಎಂದವನೆ ಗಡಿಬಿಡಿಯಿಂದ ಹೊಲದ ತುಂಬ ತಿರುಗಾಡಿ ಎಳೆ ಎಳೆಯ ಸಿಹಿತೆನೆಗಳನ್ನು ಕರಿಯ ಕಂಬಳಿಯ ಮೇಲೆ ಸಂಗ್ರಹಿಸಿದ. 'ಕಿಚ್ಚು ಮಾಡಿದಾಗ'... ಪುಟ್ಟಾದ ಕೈಯಿಂದ ಸುಟ್ಟು ಕೊಡುವನು ಬೆಳಸಿಯ', ಆಗ ಮಾಕಾಳಾನ ಕೈ ಸುಟ್ಟರೂ ಅವನ ಗಮನಕ್ಕಿಲ್ಲ. ಬಾಲಕನ ಭಕ್ತಿಯನ್ನು ಕಂಡು ಸಂತೋಷಿಸಿದನು ಮಲ್ಲಯ್ಯ. ಸಿದ್ಧರಾಮ ಅವನನ್ನು 'ನಿಮ್ಮ ಹೆಸರೇನು', ವಾಸಿಪ ಸ್ಥಳವೆಲ್ಲಿ ' ಎಂದು ಹೇಳಿದ ಮಲ್ಲಯ್ಯ ವಿವರಿಸುತ್ತಾನೆ. ಧೂಳಿಮಾಕಾಳನಿತ್ತ ಸಿಹಿತೆನೆಯಿಂದ ಅವನ ಹಸಿವು ಹಂಗಿರಲಿಲ್ಲ.

''ಏಳೇಳು ಸಿದ್ದೇಶ । ವೇಳೆ ಬಹಳವಾಯ್ತು
ಎಳೆಯ ಬೆಳಸಿಯಿಂದ ನನ್ನೊಡಲು - ತುಂಬಿಲ್ಲ
ಹುಳಿ ಮೊಸರು ಅನ್ನ ಉಣನೀಡು ॥

ಎನ್ನುತ್ತಾನೆ. ಅವರ ಹಸಿವಿಗೆ ಬೇಗನೆ ವ್ಯವಸ್ಥೆ ಮಾಡಲಿಚ್ಛಿಸಿದ ಮಾಕಾಳ ತಾನು ತಂದಿದ್ದ ಕರಿಯ ಕಂಬಳಿಯ ಮೇಲೆ ಕುಳಿತಿರುವಂತೆ ಮಲ್ಲಯ್ಯ ಹೇಳಿ ಮನೆಯ ಕಡೆಗೆ ಓಡಿ ಬರುತ್ತಾನೆ.

'ಅವ್ವ ಅವ್ವ ಎಂಬಿ' ಮವ್ವನ ದನಿ ಕೇಳಿ
ಹವ್ವ ಹಾರಿ ನಿಂತಳು ತಾಯವ್ವ ಕಂದನ
ಆವರಿಸಿ ಹಿಡಿದಳು ಹೊಟ್ಟೀಗೆ ॥

ಸುಗ್ಗವ್ವೆಗೆ ಸ್ವರ್ಗದ ಬಾಗಿಲೇ ತೆರೆದಂತಾಯಿತು. ಎಂದೆಂದೂ ಬಾಯಿಬಿಟ್ಟು ತಾನಾಗಿ ತಿಂಡಿ ತೀರ್ಥ ಕೇಳದೆ ಇದ್ದ ಮೂಗ ಮಗ, ಕಡೆಗೂ ಬುತ್ತಿ ಬೇಕೆಂದು ಕೇಳಿದನಲ್ಲ! ಹೌದು ನಿಜವಾಗಿಯೂ ಕೇಳಿದ! ಸುಗ್ಗವ್ವೆಗೆ ಎಂದೆಂದು ಒದಗಿರಲಿಲ್ಲ. ಈ ಸಂತೋಷ. ತಾಯಿಯ ಆನಂದಕ್ಕೆ ಎಣೆಯುಂಟೆ? ಮಗ ಕೇಳಿದ್ದೇ ಸಾಕು ಎಂದುಕೊಂಡು ಬುತ್ತಿಯನ್ನೇಕೆ ಸೊಗಸಾದ ಪರಮಾನ್ನವನ್ನೇ ಆ ತಾಯಿ ಮಾಡಿಕೊಡಲು ಸಿದ್ಧಳಾದಳು.

ಮಗನನ್ನು ಹಡೆದು ಎಂಟು ವರುಷಗಳಾಗಿತ್ತು. ಒಮ್ಮೆಯೂ ಆತ 'ಅದು ಬೇಕು, ಇದು ಬೇಕು' ಎಂದು ಬೇಡಿದವನಲ್ಲ, ಕಾಡಿದವನಲ್ಲ. ಅದೇ ಹಿಗ್ಗಿನಲ್ಲಿ ಮೈಮರೆತ ಸುಗ್ಗವ್ವೆ ಸರಸರನೆ ಅನ್ನ ಮಾಡಿ ನಕ್ಷತ್ರದ ಹಳಕಿನಂತಹ ಅನ್ನಕ್ಕೆ ಬೆಳದಿಂಗಳಂತಹ ಮೊಸರು ಹಾಕಿ ಬುತ್ತಿಗಂಟು ಕಟ್ಟಿ 'ಕಂದ ಕೋ' ಎಂದು ಮಗನ ಕೈಗೆ ಕೊಡುತ್ತಾಳೆ. ಸಿದ್ಧರಾಮನ ಮೊಗದಲ್ಲಿ ಮುಗುಳನಗೆ ತುಳುಕಿತು. ಆ ಒಂದು ಮಂದಹಾಸಕ್ಕಾಗಿ ಆತನ ಮುದ್ದುಮೂತಿಗಾಗಿ ಎಷ್ಟೊಂದು ವರ್ಷ ಕಾದಿದ್ದಳು ಆ ತಾಯಿ!

ಕಡೆಗೂ ಒಂದು ದಿನ ತಾಯಿಯ ಬಯಕೆ ಸಫಲವಾಯಿತು. ಇನ್ನೇನು ಮಗನಿಗೆ ಬಾಯಿ ಬಂದಿದೆ, ಇಷ್ಟು ದಿನ ಕವಿದ ಮಂಕಿನ ಮೋಡ ಚದುರಿ ಸದಾ ಕುಲುಕುಲು ನಗೆಯ ಮಂದಹಾಸ ಈ ಮನೆಯಂಗಳವನ್ನು ಬೆಳಗುತ್ತದೆ ಎಂದು ಹರ್ಷಗೊಂಡಳು ಆಕೆ. ತಾಯಿ ಕೊಟ್ಟ ಪ್ರೀತಿಯ ಬುತ್ತಿಯನ್ನು ಕೈಯಲ್ಲಿ ಹಿಡಿದು ಅವಳನ್ನು ಕೃತಜ್ಞತೆ ತುಳುಕುವ ಕಣ್ಣುಗಳಿಂದ ನೋಡಿದನು ಸಿದ್ಧರಾಮ. ವಾತ್ಸಲ್ಯಮಯಿಯಾದ ತಾಯಿಯ ಅಕ್ಕರೆಯನ್ನು ನೆನೆದು ಮೈ ರೋಮಾಂಚನಗೊಂಡಂತಾಯಿತು. ಮರುಕ್ಷಣವೇ ಮಿಂಚಿತ್ತು ನವಣಿಯ ಹೊಲದಡೆಯಲ್ಲಿ ಕುಳಿತು ಕಾಯುವ ಜಂಗಮಮೂರ್ತಿಯ ಚಿತ್ರ. 'ಅಮ್ಮ' ಮಲ್ಲಯ್ಯ ನನಗಾಗಿ ಕಾದಿರುವನು, ಎಂದು ಹೇಳಿದವನೆ ಮಾಕಾಳ ಹೊಲದೆಡೆಗೆ ಓಡಿದ.

ಅವನಿಗಿಂತ ಮೊದಲೇ ಅವನ ಮನ ಹೊಲದೆಡೆಗೆ ಓಡಿತ್ತು. ತಾನು ಹೊಲದಲ್ಲಿ ಜಂಗಮರೊಬ್ಬರನ್ನೇ ಬಿಟ್ಟು ಬಂದೆನಲ್ಲವೇ. ಅವರು ನನಗಾಗಿ ಕಾಯುತ್ತಿರಬಹುದೇ? ಅವರು ದಾರಿತಪ್ಪಿಸಿಕೊಂಡು ಎಲ್ಲಿಯಾದರೂ ಹೋಗಿಬಿಟ್ಟದ್ದರೆ? ಕಳ್ಳರು ಕಾಕರು, ಕಾಡುಪ್ರಾಣಿಗಳೇನಾದರೂ... ಛೇ, ಛೇ ಹಾಗಾಗಿರಲಾರದು. ಒಳಗೊಳಗೆ ಇನ್ನೊಂದು ಧ್ವನಿ ಮಾರ್ನುಡಿಯುತ್ತಿತ್ತು.

ಮೂಡಿತು ಶಿವಭಾವ :

ಧೂಳಿಮಾಕಾಳ ಹೊಲಕ್ಕೆ ಬಂದ. ಆದರೆ ಅಲ್ಲಿ ಅವನು ಕಂಡುದೇನು? ಹಾಸಿದ ಕಂಬಳಿ ಹಾಸಿದಂತೆಯೆ ಇದೆ. ಬಿಟ್ಟು ಹೋದ ಸ್ಥಳದಲ್ಲಿ ಮಲ್ಲಯ್ಯನ ಸುಳಿವೇ ಇಲ್ಲ. ಸಿದ್ಧರಾಮ ದಿಙ್ಮೂಢನಾಗಿ ಶಿಲಾಪ್ರತಿಮೆಯಂತೆ ನಿಂತ. ಉತ್ಸಾಹ ತುಂಬಿ ಕಂಗೊಳಿಸಿದ ಮುಗ್ಧ ಮುಖ ಈಗ ಬಿಸಿಲಿನ ತಾಪಕ್ಕೆ ಸಿಕ್ಕು ಬಾಡಿದಂತಾಗಿತ್ತು. ಮಾಕಾಳಿನ ಕಳವಳಕ್ಕೆ ಕೊನೆ ಮೊದಲಿಲ್ಲ. ನಿನಗಾಗಿ ತಂದ ಬುತ್ತಿ ಇನ್ನೇನು ಮಾಡಲಿ ಎಂದು ಪರಿತಪಿಸಿದ. ದಿನನಿತ್ಯದಂತೆ ಉಣಲಿತ್ತ ಬುತ್ತಿಯ ತ್ರಿಣಯಂಗೆ ಎಡೆಮಾಡಿ ದನಕಾಯುವ ಹುಡುಗರಿಗೆ ಹಂಚುವ ನೇಮವೂ ಮನದಾಳದಲ್ಲಿಯೇ ಉಳಿಯಿತು. ಬಹುಶಃ ಇಲ್ಲೆಲ್ಲೋ ಹೋಗಿರಬೇಕು ಎಂದುಕೊಂಡು 'ಮಲ್ಲಯ್ಯ ಮಲ್ಲಯ್ಯ' ಎಂದು ಕೂಗಿದ. ಆತನ ಅಳಿಲಿನ ಕೂಗೇ ಆತನಿಗುತ್ತರವಾಯಿತು. ಸಿದ್ಧರಾಮ ಆ ಹೊಲದ ಪರಿಸರವನ್ನೆಲ್ಲ ಸುತ್ತಿದ. ಮರಳಿ ಹೊಲದೆಡೆಗೆ ಬಂದು ನೋಡಿದ. ಎಲ್ಲಿಯೂ ಆ ಮಲ್ಲಯ್ಯನ ಸುಳಿವಿಲ್ಲ.

ಇರುತ್ತೇನೆಂದು ಮಾತುಕೊಟ್ಟು ಬುತ್ತಿ ತರುವುದರೊಳಗಾಗಿ ಮರೆಯಾಗಬಹುದೇ? ಕಣ್ಣೀರು ಧಾರೆ ಧಾರೆಯಾಗಿ ಇಳಿಯಿತು. ಮಲ್ಲಯ್ಯನಿಲ್ಲದ ಆ ತಾಣ ಸಿದ್ಧರಾಮನ ಪಾಲಿಗೆ ಸೆರೆಮನೆಯಂತಾಯಿತು.

ಹೌದು । ನಾನು ಹೇಗಿದ್ದರೂ ಆ ಮಲ್ಲಯ್ಯನನ್ನು ಕಾಣಲೇಬೇಕು. ಅವನು ಎಲ್ಲಿದ್ದರೂ ಹುಡುಕಬೇಕು. ಎಂಟು ವರ್ಷದ ಬಾಲಕ ಗಿರಿಮಲ್ಲನನ್ನು ಹುಡುಕುತ್ತ ಹೊರಟ. ಎಲ್ಲಿಗೆ ಹೋಗುತ್ತಿದ್ದೇನೆಂಬ ಪರಿವೆಯೂ ಆತನಿಗಿರದೇ ಶ್ರೀಶೈಲವೊಂದೇ ಕಣ್ಣೆದುರು ಕಾಣುತ್ತಿತ್ತು.

ಇತ್ತ ತಾಯಿ ಸುಗ್ಗವ್ವೆ ತಂದೆ ಮುದ್ದುಗೌಡರಿಗೆ ಮಗ ಮಾತನಾಡಿದ ಸಂಗತಿ ಹಿಡಿಸಲಾರದಷ್ಟು ಸಂತೋಷ ತಂದಿದೆ. ಕ್ಷಣ ಕಾಲದಲ್ಲಿ ಇಡೀ ಊರಿಗೆ ಈ ಸುದ್ಧಿ ತಲುಪಿ ಎಲ್ಲ ಜನಗಳೂ ಅಚ್ಚರಿಗೊಂಡರು. ಈ ಸಂತೋಷದ ಸಂಭ್ರಮದಲ್ಲಿ ಮೈಮರೆತಾಗ ಕತ್ತಲೆ ಮುತ್ತಿಕೊಂಡಿತು. ಬುತ್ತಿ ಒಯ್ದು ಮುದ್ದುಮಗ ಕತ್ತಲಾದರೂ ಮನೆಗೆ ಬಾರದೇ ಹೋದುದು ಸುಗ್ಗವ್ವೆಗೆ ಕಸಿವಿಸಿಯನ್ನುಂಟು ಮಾಡಿತು. ಮಗನಿಗಾಗಿ ಕಣ್ಣೀರು ಹರಿಯತೊಡಗಿತು. ತಂದೆ ಮುದ್ದುಗೌಡ ಹತ್ತು ಕಡೆಗೆ ಮಗನ ಶೋಧನೆಯ ಪ್ರಯತ್ನ ಮಾಡುತ್ತಾನೆ ಆದರೆ ಸಿದ್ಧನ ಸುಳಿವಿಲ್ಲ.

ಮಗನನ್ನು ನೆನೆನೆನೆದು ಅತ್ತ ಸುಗ್ಗವ್ವೆ 'ಬೇಡದಲಿ ಕೊಟ್ಟು ಓಡಿಸಿ ಒಯ್ದು ಕಾಡಿನೊಳು ಜೋಡ ಅವಣ್ಯಾರು, ನಿನ್ನೊರತು ಒಡೆಯ ರೇವಣಸಿದ್ಧ ಕಾಪಾಡ' ಎಂದು ಮಗುವನ್ನು ದಯೆಗೈದು ಅರ್ಥಿಯಿಂದ ಕರುಣಿಸಿದ ಗುರುಗಳ ಮೇಲೆ ಭಾರಹಾಕಿ ಮನಸ್ಸಿಗೆ ಸಮಾಧಾನ ಮಾಡಿಕೊಂಡಿದ್ದಾಳೆ. ಇಷ್ಟಾದರೂ,

ಏಸೂ ಜನುಮದ ಪುಣ್ಯ, ಕೂಸಾಗಿ ಹುಟ್ಟಿ ನೀ
ಮೋಸ ಮಾಡಿ ಮನೆ ಬಿಟ್ಟೋದಿ - ಮಾಕಾಳ
ಕಸಿವಿಸಿ ಎನ್ನ ಒಡಲಾಗ ॥

ಸಿದ್ಧರಾಮ ಮಲ್ಲಯ್ಯನನ್ನು ಹುಡುಕುತ್ತ ಕಲ್ಲು ಮುಳ್ಳಿನ ದಾರಿಯಲ್ಲಿ ಮುನ್ನಡೆಯುತ್ತಾನೆ. ಗುಡ್ಡ ಗವ್ವರಗಳಲ್ಲಿ ಅವನನ್ನು ಹುಡುಕಿದ್ದಾಯಿತು. ನಿಸರ್ಗದ ಪಶು - ಪಕ್ಷಿಗಳಲ್ಲಿ , ವನದ ಮರಗಳಲ್ಲಿ 'ನನ್ನ ಮಲ್ಲಯ್ಯನನ್ನು ನೋಡಿದ್ದೀರಾ' ಎಂದು ಕೇಳುತ್ತಾ ಮುಂದುವರೆದ. ಅದೇ ವೇಳೆಗೆ,

ಜಾತರಿ ನೋಡಲು ಆತುರದಿ ಹೊರಟಿಹವು
ಕ್ಷೇತ್ರಪಾಲ ಚೆನ್ನಮಲ್ಲನ ದರುಶನಕೆ
ಅತಿ ದೂರದಿಂದ ಪರಸಿಗಳು ॥

ಅವರೊಂದಿಗೆ ಸೇರಿ ಶ್ರೀಶೈಲಕ್ಕೆ ಹೊರಟ. ಆತನ ದೃಷ್ಟಿಯಿಂದ ಆ ಶ್ರೀಶೈಲ ಹೌದು.. ಅದೇ ಮಲ್ಲಯ್ಯನ ವಾಸದ ತಾಣ. ಯಾವುದನ್ನು ಕಾಣಬೇಕೆಂದು ಎಳೆಯಂದಿನಿಂದ ಹಂಬಲಿಸಿದ್ದನೋ, ಯಾವುದರ ಹೆಸರು ಅವನ ಶರೀರದಲ್ಲಿ ಮಿಂಚಿನ ಹೊಳೆ ಹರಿಯಿಸುತ್ತಿತ್ತೋ, ಯಾವುದು ಸೊನ್ನಲಿಗೆಯವರೆಗೂ ತನ್ನ ಶರೀರ ಸೂತ್ರವನ್ನೆಸೆದು ತನ್ನ ಹೃದಯವನ್ನು ಆಕರ್ಷಿಸುತ್ತಿತ್ತೋ ಅದೇ ಪರ್ವತ ಈಗ ತನ್ನ ಎದುರಿಗೆ ಭವ್ಯವಾಗಿ ನಿಂತುಕೊಂಡಿದೆ. ಅವನನ್ನು ಶ್ರೀಶೈಲದೆಡೆಗ ಕರತಂದ ಪರಿಸೆಯವರು

ಭವ್ಯ ಗುಡಿಯೊಳಗಿನ ತೋರಿದರು । ಸಿದ್ಧಗೆ
ಅವ್ವ । ಕರೆದೊಯ್ದು ತೋರಿದರು । ಸಿದ್ಧಗೆ
ದೇವಮಲ್ಲಯ್ಯನು ಈತನೇ ॥

ಎಂದು ಮಲ್ಲಿಕಾರ್ಜುನ ಲಿಂಗವನ್ನು ತೋರಿಸಿದರು. ಸಿದ್ಧರಾಮನಿಗೆ ಕಂಬನಿ ಚಿಮ್ಮಿತು. ಕಾವಿಯನ್ನು ತೊಟ್ಟು ಮಂದಹಾಸದಿಂದ ನವಣೆಯ ಹೊಲದ ಬಳಿ ಮಾತನಾಡಿದ ಆ ಮಲ್ಲಯ್ಯನೆಲ್ಲಿ, ದೇವಸ್ಥಾನದಲ್ಲಿ ಕುಳಿತು ಅಲ್ಲಾಡದವ ಈ

ಶಿವಲಿಂಗದ ಮಲ್ಲಯ್ಯನೆಲ್ಲಿ? ಕೂಡಲೇ ಆತ ಜನಜಂಗುಳಿಯನ್ನುಳಿದು ಮಹಾದ್ವಾರದಿಂದ ಹೊರಗೆ ನುಗ್ಗಿದ. ಮುಂದೇನಿದೆ ಎನ್ನುವುದರ ಅರಿವೂ ಆತನಿಗಿರಲಿಲ್ಲ. ಕ್ಷಣಾರ್ಧದಲ್ಲಿ ಸಿದ್ಧರಾಮ ದಟ್ಟವಾದ ಕಾಡಿನ ಗಿಡಮರಗಳ ಹಾದಿಯಲ್ಲಿ ಮರೆಯಾದ.

ದಾರಿಯಲ್ಲಿ ದೊರೆಯುವ ಎಲ್ಲ ಪುಣ್ಯಸ್ಥಳಗಳಲ್ಲಿಯೂ ಮಲ್ಲಯ್ಯನನ್ನು ಹುಡುಕಿದ. ಗಿಡ ಗಿಡಗಳ ನಡುವೆ ಹೊಕ್ಕು 'ಮಲ್ಲಯ್ಯ ಮಲ್ಲಯ್ಯ' ಎಂದು ಗೋಗರೆದ. ಕಾಡನ್ನು ಸೀಳಿಕೊಂಡು ಅವನ ಧ್ವನಿ ಹೊರಹೊಮ್ಮಿತು. ಅವನ ಗೋಳುಧ್ವನಿಗೆ ಸಮಸ್ತ ಕಾನನವೇ ನಿಟ್ಟುಸಿರು ಬಿಡುವಂತಿತ್ತು. ಎಲ್ಲೆಲ್ಲಿಯೂ ದೇವನ ದರ್ಶನವಿಲ್ಲ. ನಿರಾಶೆಗೊಂಡ ಸಿದ್ಧರಾಮನ ಸ್ಥಿತಿಯನ್ನು ಹೇಳತೀರದು. ಮಲ್ಲಯ್ಯನನ್ನು ಕಾಣದಿದ್ದ ಮೇಲೆ ಬದುಕಿದ್ದೇನು ಪ್ರಯೋಜನ? ಯಾರನ್ನು ಹುಡುಕಿಕೊಂಡು ನಾನಿತ್ತ ಬಂದೆನೋ ಆ ಮೂರ್ತಿ ದೊರೆಯದಿದ್ದ ಮೇಲೆ ಈ ಜೀವವಿದ್ದೂ ಏನು ಉಪಯೋಗ? ಮಲ್ಲಯ್ಯನನ್ನು ಕಾಣಬೇಕು; ಇಲ್ಲವೇ ಈ ಪ್ರಯತ್ನದಲ್ಲಿ ಬಾಳು ಮುಗಿಯಬೇಕು ಎನ್ನುವ ನಿರ್ಧಾರಕ್ಕೆ ಬಂದಿದ್ದನು ಸಿದ್ಧರಾಮ. ಮನಸ್ಸು ವಜ್ರಕ್ಕಿಂತ ಕಠಿಣವಾಗಿತ್ತು. ದೃಢನಿರ್ಧಾರ ಮನದಲ್ಲಿ ಗಟ್ಟಿಗೊಂಡಿತ್ತು. ಇನ್ನು ನನಗೆ ಇರುವುದೊಂದೇ ಮಾರ್ಗ.

ಘೋರ ಅಪರಂಪಾರ । ಪರವುತ ಕಮರಿಗೆ ।
ಸಾರಿಹೋದನು ಶಿವಸಿದ್ಧ - ಕಣ್ಣೀರು
ಧಾರೆಗಟ್ಟಿಹವು ಕೊಳತುಂಬಿ ॥

ಹರಿಹರ ಮಹದೇವ । ಪರಿಹರಿಸು ಜನುಮವ
ಗುರುವೆ ಮಲ್ಲಯ್ಯ - ಸುಕುಮಾರ
ಹಾರಿದನು ಘೋರ ಕಮರಿಯ ॥

ನಿರಾಶೆಗೊಂಡ ಸಿದ್ಧರಾಮ ಕಮರಿಗೆ ಹಾರಿಯೇ ಬಿಟ್ಟ. ಎಳೆಯ ಕಂದನ ಕೂಗು ಬಾಳಚಂದ್ರನಿಗೆ ಕೇಳಿಸಿತು. ಆಗ ಮಲ್ಲಿಕಾರ್ಜುನನು ಪ್ರತ್ಯಕ್ಷನಾಗಿ ಸಿದ್ಧರಾಮನನ್ನು ಕರುಣಿಸುತ್ತಾನೆ, ಸಿದ್ಧರಾಮನ ತಲೆ ಸವರಿ ಮುದ್ದಿಸಿ.

ಕಿವಿಯಲಿ ಇಡಿಸಿದನು ನವ ವಜ್ರಕುಂಡಲ
ಭವಭಯ ಹರಿಯಲು ಲಾಕೋಳ ಕೊಟ್ಟನು
ದೇವ ಸಿದ್ಧರಾಮಗೆ ಮಲ್ಲಯ್ಯ ॥

ಅಲ್ಲಿಯೇ ಸಿದ್ಧರಾಮನಿಗೆ ಪಾರ್ವತಿಯ ದರ್ಶನ ದೊರೆಯುತ್ತದೆ. ಭೈರವನ ಜೊತೆಯಲ್ಲಿ ಶ್ರೀಶೈಲವನ್ನು ಸುತ್ತಿ ನೋಡುತ್ತಾನೆ. ಮಲ್ಲಯ್ಯನನ್ನು ಕಂಡು ತೃಪ್ತಿಯಿಂದ ಹರನ ಪಾದಕ್ಕೆ ಬಿದ್ದು 'ಸಕಲ ಸಂಪತ್ತಿನಿಂದ ಬಂದು ಸೊನ್ನಲಿಗೆಯಲ್ಲಿ ನೆಲೆಸುವಂತೆ ಬೇಡಿಕೊಳ್ಳುತ್ತಾನೆ. ಅವನ ಮಾತಿಗೆ ಮನ್ನಣೆಯಿತ್ತು ಪಗಶಿವ 'ಚಿಂತೇಕೆ ಮಾಡುವಿ ಶಾಂತ ಸುಕುಮಾರನೆ, ಹತ್ತಿರ ನಾನಿರುವೆ ನೀನಿನ್ನು ಸಂತಸದಿ ಸೇರು ಸೊನ್ನಲಪುರದೊಳು' ಎಂದರುಹಿದ ನಂತರ ಸಿದ್ಧ ಸೊನ್ನಲಿಗೆ ಮರಳಿ ಬಂದ. ಪರಶಿವ ಅವನಿಗೆ ಸೊನ್ನಲಿಗೆಯನ್ನು ಶಿವಗಿರಿಯನ್ನಾಗಿಸುವ ಯೋಜನೆಯಿಂದ,

ಕೆರೆಬಾವಿಗಳ ಕಟ್ಟು ಅರವಟ್ಟಿಗೆಯನಿಟ್ಟು
ಊರ ಸುತ್ತಮುತ್ತ ಲಿಂಗವ ಮುದ್ರಿಸಿ
ನಿರಮಿಸು ನವ ಸಿರಿಗಿರಿಯ ॥
ಅರವತ್ತೆಂಟು ತೀರ್ಥ ವರಲಿಂಗಗಳನ್ನೆಲ್ಲ
ಗುರುವೇಸಿ ಅಲ್ಲಿ ನೆಡಬೇಕು ಸಿದ್ಧರಸ ಮರ್ತ್ಯಾ ಕೈಲಾಸ ಮಾಡಯ್ಯ ॥

ಎಂದು ಹೇಳಿದ ಸಂದೇಶವನ್ನು ಹೊತ್ತು ಸೊನ್ನಲಿಗೆ ಮರಳಿ ಆಗಮಿಸಿ ತನ್ನ ಕರ್ಮಯೋಗದಲ್ಲಿ ತಲ್ಲೀನನಾದ.

ಮರಳಿಬಂದ ಪುಣ್ಯಫಲ :

ಸೋದರ ಬೊಮ್ಮಯ್ಯ ಸಿದ್ಧರಾಮನನ್ನು ಮರಳಿ ಸೊನ್ನಲಾಪುರಕ್ಕೆ ಕರೆತಂದ ಸುದ್ಧಿ ದೂರ ದೂರದವರೆಗೆ ಹರಡುತ್ತದೆ. ರಾಣಿ ಚಾಮಲದೇವಿಯು ಸಿದ್ಧರಾಮನ ದರ್ಶನ ಪಡೆದು ಪುನೀತಳಾಗುತ್ತಾಳೆ. ಸಿದ್ಧರಾಮನಿಗಾದರೋ ಸದಾಕಾಲ ಸೊನ್ನಲಿಗೆಗೆ ಬರಲು ವಚನವಿತ್ತ ಗಿರಿಮಲ್ಲಯ್ಯನ ಬರುವಿಕೆಯ ಹಾದಿಯೆ.

ಒಂದು ದಿನ ಬೊಮ್ಮಣ್ಣನೊಡನೆ ಹೊಲದೆಡೆಗೆ ಹೊರಟಾಗ ಮಂದಾರದ ಕೆಳಗೆ ಲಿಂಗ ಉದ್ಭವವಾದುದನ್ನು ಕಂಡು ಸಂತೋಷಭರಿತನಾದ. ಇತ್ತ 'ಮಗಳೆ ಚಾಮುದೇವಿ ಅಗಣಿತ ಮಹಿಮಂಗೆ ಜಾಗೆ ಕೊಡು' ಎಂಬಂತೆ ಕನಸು ಕಂಡ ಚಾಮಲದೇವಿ ಗುಡಿ ಕಟ್ಟಲು ನೆಲದ ವ್ಯವಸ್ಥೆ ಮಾಡಿದಳು. ಈ ಭೂಮಿಯನ್ನು ಅಗೆಯುವಾಗ ದೊರೆತ ಹೊನ್ನ ಕೊಪ್ಪರಿಗೆಯಿಂದ ಲಿಂಗಸ್ಥಾಪನೆ, ಅರವಟ್ಟಿಗೆ ಕಟ್ಟಿಸುವುದು ಅನ್ನ - ಅರಿವೆ ಔಷಧ ಭೂಮಿ ಗೋವು ಹೊನ್ನು ಕನ್ಯೆ ಜ್ಞಾನ ಮೊದಲಾದ ಜ್ಞಾನಗಳನ್ನು ಮಾಡುವುದರಲ್ಲಿ ಸಿದ್ಧರಾಮ ತೊಡಗಿದ. ಕಪಿಲಸಿದ್ಧ ಮಲ್ಲಿಕಾರ್ಜುನ ಸೊನ್ನಲಾಪುರದ ಪುಣ್ಯಭೂಮಿಯಲ್ಲಿ ಪ್ರತಿಷ್ಠೆಗೊಂಡ.

ಮಲ್ಲಯ್ಯನಲ್ಲಿ ಶಿವಸ್ವರೂಪ ಕಂಡು ಪೂಜೆ ಸಲ್ಲಿಸುತ್ತಾರೆ. ಈ ಪೂಜೆಗೆ ಮೆಚ್ಚಿ ಶಿವಗಣರು ಭೈರವ ಮುಂತಾದ ದೇವತೆಗಳು ಪ್ರತ್ಯಕ್ಷರಾಗುತ್ತಾರೆ. ಸಿದ್ಧರಾಮನು ಅವರನ್ನು ದಿಕ್ಕುದಿಕ್ಕುಗಳಿಗೆ ರಕ್ಷೆ ನೀಡುವಂತೆ ಕೇಳಿಕೊಳ್ಳುತ್ತಾನೆ. ಜಯದೇವಿ ತಾಯಿಯವರು ಇಲ್ಲಿ ಮಾಡುವ ವರ್ಣನೆ ಬಸವನ ಕಲ್ಯಾಣಕ್ಕಿಂತ ಸಿದ್ಧರಾಮನ ಸೊನ್ನಲಿಗೆಯು ಹೆಚ್ಚು ಪ್ರಸಿದ್ಧಿ ಪಡೆಯಬೇಕು. ತಾನು ಹುಟ್ಟಿದ ಊರಿನ ಅಭಿಮಾನ ಮೆರೆಯಬೇಕೆಂಬ ಭಾವವಲ್ಲದೇ ಬೇರೊಂದಿಲ್ಲ.

ಈ ಬಯಲುನಾಡಿಗೊಂದು ನೀರಿನ ಆಸರೆಯ ಆವಶ್ಯಕತೆ ಇದೆ. ಬಿರುಬಿಸಿಲಿನಿಂದ ಬೇಯುವ ಈ ಕರಿನೆಲದಲ್ಲಿ ದನಕರುಗಳು, ಪಶುಪಕ್ಷಿಗಳು, ಗಿಡಮರಗಳು ನೀರಿಲ್ಲದೆ ಕರಿದು ಕರಿದಾಗಿ ಹೋಗುತ್ತವೆ. ತಾನು ಎಳೆಯಂದಿನಲ್ಲಿ ದನ ಕಾಯಲು ಹೋಗುತ್ತಿದ್ದಾಗ ನೀರಿಗಾಗಿ ಎಳೆಯ ಕರುಗಳು ಪಡುತ್ತಿದ್ದ ಬವಣೆ ಸಿದ್ಧರಾಮನ ಕಣ್ಣು ಕಟ್ಟಿದಂತಾಗಿತ್ತು. ಊರ ಜನಕ್ಕಾದರೂ ಎಷ್ಟೊಂದು ತೊಂದರೆ! ಕೆರಕಲು ನೀರನ್ನು ಜನ ತಂದು ಕುಡಿಯಬೇಕಿತ್ತು. ಅದಕ್ಕೂ ಮಿಗಿಲಾಗಿ ಮೊನ್ನೆ ಮಲ್ಲಿಕಾರ್ಜುನ ಲಿಂಗದ ಪ್ರತಿಷ್ಠೆಯ ಕಾಲದಲ್ಲಿ ಉತ್ಸವಕ್ಕೆ ನೆರೆದ ಸಹಸ್ರಾರು ಮಂದಿ ಊಟಕ್ಕೆ ಕುಳಿತಾಗ ನೀರಿನ ಕೊರತೆಯಾಗಿ ತುಂಬ ತೊಂದರೆಯಾಯಿತು. ಈ ಬೆಂಗಾಡಿನಲ್ಲಿ ಎಂದೆಂದೂ ಬತ್ತದಿರುವ ಒಂದು ತಟಾಕ ನಿರ್ಮಿಸಬೇಕು. ಆ ನೀರು ಜನರ ಬಾಯಾರಿಕೆಯನ್ನು ಪರಿಹರಿಸುವುದು ಮಾತ್ರ ಆಗದೆ ಪಶುಪಕ್ಷಿ ಕ್ರಿಮಿಕೀಟಾದಿ ಸಕಲ ಜೀವಕ್ಕೂ ಪಾಪ ಪರಿಹಾರಕವಾದ ಪುಣ್ಯತೀರ್ಥವಾಗಬೇಕು. ಮಲ್ಲಿಕಾರ್ಜುನ ದೇಗುಲದ ಸುತ್ತ ಅಂತಹ ಒಂದು ದಿವ್ಯ ತಟಾಕ ನಿರ್ಮಿಸಲೇಬೇಕೆಂಬ ಆಲೋಚನೆ ಸಿದ್ದರಾಮನ ತಲೆಯಲ್ಲಿ ಸುತ್ತತೊಡಗಿತು.

ಒಂದು ಶುಭ ಮುಹೂರ್ತದಲ್ಲಿ ಸ್ವತಃ ಸಿದ್ಧರಾಮನೇ ತನ್ನ ಕರ್ಮಯೋಗಿಗಳ ಸೈನ್ಯದೊಂದಿಗೆ ಹಾರಿ ಗುದ್ದಲಿ ಹಿಡಿದು ಮುನ್ನಡೆದ. ಮಲ್ಲಿಕಾರ್ಜುನನ ದೇಗುಲದ ಮುನ್ನ ವಿಸ್ತಾರವಾದ ಪ್ರದೇಶದಲ್ಲಿ ಗಂಗಾಪೂಜೆಯಾಯಿತು. ಸಿದ್ಧರಾಮ ಜೀವರೆಲ್ಲರ ದುರಿತ ಕರಿಗೆ ಅಂಕುಶಗೊಂಬ ಮಾವಟಿಗನಂತೆ ಗುದ್ದಲಿ ಹಿಡಿದು ಈ ಭವದ ಬೇರನ್ನಗೆಯುವಂತೆ ಮೊದಲು ನೆಲವನ್ನು ಅಗೆಯತೊಡಗಿದ. ಅವನ ಪ್ರಯತ್ನಕ್ಕೆ ತಕ್ಕ ಪ್ರತಿಫಲವೆನ್ನುವಂತೆ ಲೋಕದ ಅಗ್ರನದಿಗಳು, ಪುಣ್ಯತೀರ್ಥದ ಶಕ್ತಿ ದೇವತೆಯರಾದ ಅರುವತ್ತೆಂಟು ಗಂಗೆಯರು ಪ್ರತ್ಯಕ್ಷವಾಗಿ ಕೆರೆಯಲ್ಲಿ ಬಂದು ನೆಲಸಲಿಚ್ಛಿಸಿದರು, ಸಿದ್ಧರಾಮನಲ್ಲಿ :

ನಿನ್ನ ಊರಲಿ ನಾವು ಸನ್ನಿಧಿಯಲ್ಲಿ ಇರುವೆವು
ಸ್ಥಾನ ಸುಕ್ಷೇತ್ರವಾಗಿದೆ - ಕೆರೆಯಲ್ಲಿ
ಪುಣ್ಯ ನದಿಗಳು ನೆಲಿಸುವೆವು

ಎಂದು ವಿನಂತಿಸಿಕೊಂಡು ಕೆರೆಗೆ ಬಂದು ಸೇರಿದರು. ಶಿವಯೋಗಿಯಾದರೂ ಆತನ ಶರೀರ ವೃಥಾ ಸವೆಯಾಲಾಗದು. ಅವನಿಂದಲೂ ಸಾಧ್ಯವಾದಷ್ಟು ಕಾಯಕ ನಡೆಯಲೇಬೇಕು ಎಂಬುದಕ್ಕೆ ಸಿದ್ಧರಾಮ ತಾನೇ ಮಾದರಿಯಾದ.

ಸತ್ವ ಪರೀಕ್ಷೆಯ ಪವಾಡಗಳು :

ಈ ಸಂದರ್ಭದಲ್ಲಿ ಜಯದೇವಿತಾಯಿಯವರು ಸಿದ್ಧರಾಮ ಕೈಕೊಂಡ ಅನೇಕ ಪವಾಡಗಳ ಪಟ್ಟಿಯನ್ನು ನೀಡಿರುವರು. ಮೇಘಚೂಡ ಗಂಧರ್ವನೊಬ್ಬ ಚಿಗರೆಯ ರೂಪದಲ್ಲಿ ಬಂದು ಸಿದ್ಧನ ಕರುಣಾಕಟಾಕ್ಷದಿಂದ ವಿಮೋಚನೆ ಹೊಂದಿ ಮತ್ತೆ ಗಂಧರ್ವರೂಪ ಪಡೆದ. ಸಿದ್ಧರಾಮ ಒಂದು ದಿನ ಹೂವು ಕೊಯ್ಯುತ್ತಿರುವಾಗ ಬಂದ ಯೋಗಿಯೊಬ್ಬ 'ಇಲ್ಲಿ ಇರಲೋ... ಇಲ್ಲಾ ಹೊರಟು ಹೋಗಲೋ' ಎಂದು ಕೇಳಲು ಸಿದ್ಧರಾಮ 'ನಿನ್ನ ಇಷ್ಟ ಬಂದಂತೆ ಮಾಡು' ಎನ್ನಲು ಆ ಯೋಗಿಯ ಶರೀರ ಅಲ್ಲಿಯೇ ಸತ್ತು ಬೀಳುತ್ತದೆ. ಶಿವನ ಆಜ್ಞೆಯಂತೆ ಸತ್ತ ಯೋಗಿಯ ಶರೀರವನ್ನು ಸಿದ್ಧರಾಮ ಗಂಗೆಯ ದಂಡೆಯಲ್ಲಿ ಇಟ್ಟು ಕಾಯುತ್ತಾನೆ.

ಅತಿಹಂಸನೆಂಬ ಯತಿ ಅತಿಕಾಮಿಯಾಗಿದ್ದರಿಂದ ಶಾಪಕ್ಕೊಳಗಾಗಿದ್ದು ಸಿದ್ಧರಾಮ ಆತನಿಗೆ ವಿಮೋಚನೆ ನೀಡುತ್ತಾನೆ. ಮೂಲಸ್ವಾಮಿಯಾಗಿ ನಾಗಾರ್ಜುನರನ್ನು ಶಿಷ್ಯರನ್ನಾಗಿಸುವ ವಿಷಯ ಮಲ್ಲಿಕಾರ್ಜುನನಿಂದ ತಿಳಿದು ಸಮಾಧಾನಗೊಳ್ಳುತ್ತಾನೆ. ಇದರಂತೆ ಮಯೂರಿಕೆ, ಕುಮುದಶೇಖರ ಮೊದಲಾದ ಗಂಧರ್ವರ ವಿಮೋಚನೆಯಾಗುತ್ತದೆ. ಮಲ್ಲಯ್ಯನ ಕರುಣಾಕಟಾಕ್ಷದಿಂದ ಬೊಮ್ಮಣ್ಣರಿಗೆ ಕಣ್ಣು ಬರುತ್ತವೆ. ಕೈಲಾಸದಲ್ಲಿ ಪರಮಾತ್ಮನಿಗೂ ನಾರದನಿಗೂ ಮಾತುಕತೆಯಾಗುತ್ತದೆ. ಉತ್ತಾರಕಮುನಿಯ ಪ್ರೇರಣೆಯಂತೆ ಕಾಮನು ಸಿದ್ಧರಾಮನನ್ನು ಪರೀಕ್ಷಿಸಿ ಅದರಲ್ಲಿ ಸೋಲೊಪ್ಪಿಕೊಳ್ಳುತ್ತಾನೆ.

ಒಮ್ಮೆ ಮೊರಬ ಗ್ರಾಮದ ಬ್ರಾಹ್ಮಣರು ನೀರಿಗೆ ಸಂಸ್ಕಾರವಿಲ್ಲವೆಂದು ಸ್ನಾನಕ್ಕೆ ಬಂದು ಸ್ನಾನ ಮಾಡುವಾಗ ಕಾಗೆ ಹಾರಿ ಬಂದು ಮುಟ್ಟಿ ಮೈಲಿಗೆ ಮಾಡುತ್ತದೆ.

ಕಾಗೆ ಮುಟ್ಟಿದೆ ಎಂದು ಮೂಗವ ಹಿಡಕೊಂಡು
ಬೇಗನೆ ಮತ್ತೆ ಮುಳುಗುವ ಪಾರ್ವರನು
ಕಾಗೆ ಕಾ ಕಾ ಎಂದು ಮುಟ್ಟುವುದು ॥

ಹೀಗೆ ಬೆಳಗಿನಲ್ಲಿ ಸ್ನಾನಕ್ಕೆ ಬಂದವರು ಸಂಜೆಯಾಗುವವರೆಗೂ ಕಾಗೆಯ ಉಪಟಳದಿಂದ ತಪ್ಪಿಸಿಕೊಳ್ಳಲಾಗಲಿಲ್ಲ. ಸಿದ್ಧರಾಮನ ಪವಿತ್ರತೀರ್ಥವನ್ನು ಅಪವಿತ್ರವೆಂದು ಪರಿಗಣಿಸಿದ್ದರಿಂದ ಹೀನ ಕಾಗೆ ಹಸ್ತಮಾನದವರೆಗೆ ಮುಟ್ಟಿದ ದೋಷ ತಮಗೆ ಬಂದಿದೆ ಎಂಬುದು ಅವರಿಗೆ ತಿಳಿಯಿತು. ತಮ್ಮ ತಪ್ಪು ತಮಗೆ ಅರಿವಾಗಿ ಸಿದ್ಧರಾಮನ ಮಹಿಮೆಯನ್ನರಿತು ಅವನಲ್ಲಿ ಕ್ಷಮೆ ಯಾಚಿಸಿದರು.

ಮತ್ತೊಂದು ದಿನ ಸಿದ್ಧರಾಮ ಊರ ಪ್ರದಕ್ಷಿಣೆ ಹಾಕುತ್ತಿದ್ದಾಗ
ನೆಲೆ ಊರು ಸೇಳಿಗೆಯ ವರ ಗಣಪತಿ ನಾನು
ಗುರುವೆ ನಿನ್ನ ಈ ಕ್ಷೇತ್ರದಿ ಎನಗೆ
ಇರಲು ಜಾಗೆ ಕೊಡು ಎಂದನು ॥
ಅವನ ಮಾತಿಗೆ ಒಪ್ಪಿಕೊಂಡ ಸಿದ್ಧರಾಮ ಆತನಿಗೆ ಈಶಾನ್ಯ ದಿಕ್ಕಿನಲ್ಲಿ
ಚನ್ನಮಲ್ಲನಡಿಯ ಸಾನ್ನಿಧ್ಯದೊಳು ನೀನು
ಅನುದಿನ ಅರ್ಚನೆಗೈಯುತ ನೆಲಿಸಲು
ಜಿನಕಗೆ ಅಣತಿ ಮಾಡಿದನು ॥

ಗಿರಿಮಲ್ಲಯ್ಯನ ವರಕೃಪೆಯಿಂದ ಸಿದ್ಧರಾಮನಿಗೆ ಹದಿನಾಲ್ಕು ಲೋಕಗಳ ದರ್ಶನವಾಗುತ್ತದೆ. ಸಿದ್ಧರಾಮ ಕೈಕೊಂಡ ಪವಾಡಗಳ ಪ್ರಭಾವ ಎಲ್ಲೆಡೆ ಸುದ್ಧಿಯಾಗುತ್ತದೆ. ಮಲ್ಲಯ್ಯನ ಮಹಿಮೆಯನ್ನರಿತು ಆತನ ಕೃಪೆಗೆ ಪಾತ್ರರಾಗಿ ಸುತ್ತಲಿನ ಊರಿನ ಭಕ್ತಾದಿಗಳು ಬಂದು ನೆರೆಯುತ್ತಾರೆ. ಈ ಸಮಯದಲ್ಲಿ ಕುಟಲ ವಿದ್ಯಾಸಾಗರ ಕರ್ತರ ಜೋಗಿಯು ಹದಿನೆಂಟು ಜೋಗಿಣಿಯರ ಜೊತೆ ಬಂದು ಭಯಾನಕವಾದ ಮಾಟಮಂತ್ರಗಳಿಂದ ಸಿದ್ಧರಾಮನ ಹೋಮದ ನಿಷ್ಠೆಗೆ ಅಡ್ಡಿ ತರುವ ಪ್ರಯತ್ನ ಮಾಡುತ್ತಾನೆ. ಆತನು ಯಜ್ಞಕ್ಕೆ ಹಾಕಿದ ತುಪ್ಪವೆಲ್ಲ ನೀರಾಗಿ ಆವಿಯಾಗಿ ಹೋಗುತ್ತದೆ. ಆಗ ಖರ್ಪರಜೋಗಿಯ ಕಾರಸ್ಥಾನ ವಿಫಲವಾಗುತ್ತದೆ. ದರ್ಪನ ಕಪಟವನ್ನು ಅರಿತ ಸಿದ್ಧರಾಮ ಉರಿಗಣ್ಣು ತೆರೆಯುತ್ತಾನೆ. ಅಗ್ನಿಯ ಉರಿನಾಲಿಗೆ ಚಾಚುತ್ತದೆ.

ಕೊನೆಗೆ ಅವರು ಪಶ್ಚಾತ್ತಾಪಗೊಂಡು ಶರಣಗತರಾಗಿದ್ದಕ್ಕೆ ಕರುಣೆ ತೋರಿ ಸಿದ್ಧರಾಮ ಅವರೆಲ್ಲರನ್ನು ಕಾಪಾಡುತ್ತಾನೆ. ಕೊನೆಯಲ್ಲಿ ಎಲ್ಲ ಜೋಗಿ - ಜೋಗಿಣಿಯರು ಸಿದ್ಧರಾಮನನ್ನು ಹೊಗಳುತ್ತ ಹರಸುತ್ತ ಮರಳಿ ಹೋಗುತ್ತಾರೆ.

ಒಂದು ದಿನ ಶಿಷ್ಯ ಕಲ್ಲಯ್ಯ ಅಣ್ಣನವರ ಬಳಿಗೆ ಹೋಗಿ ಈ ಜನಕ್ಕೆ ತಮ್ಮ ಕ್ಷೇತ್ರದ ಸಾಮರ್ಥ್ಯ ತೋರುವಂತೆ ಏನಾದರೂ ಒಂದು ಮಹಿಮೆಯನ್ನು ತಾವು ತೋರಬೇಕೆಂದು ವಿನಂತಿಸಿಕೊಂಡ. ಅದಕ್ಕೆ ತಕ್ಕಂತೆ ಸಿದ್ಧರಾಮ ತಕ್ಕ ಸಿದ್ಧತೆ ಮಾಡಿ,

ಪಂಚಲೋಹದ ಗುಂಡು ಕಿಚ್ಚಿನೊಳು ಇಕ್ಕಿ
ಎಚ್ಚರದಿ ತನ್ನಿರಿ ಕಮ್ಮಾರರೆ ನೀವೀಗ
ಕಿಂಚಿತು ಹೆದರದೆ ಇಕ್ಕಳದಿ ॥

ಎಂದು ಆಜ್ಞೆ ಮಾಡಿದ.

ನಾಲ್ಕೈದು ಮಂದಿ ಕಬ್ಬಿಣದ ದೊಡ್ಡ ಇಕ್ಕಳದಲ್ಲಿ ಕೆಂಪಗೆ ಕಾದ ಪಂಚಲೋಹದ ಗುಂಡನ್ನು ತಂದರು. ಸಿದ್ಧರಾಮ ಮಲ್ಲಿಕಾರ್ಜುನನಿಗೆ ಕೈ ಮುಗಿದು - ನೆರೆದ ಜನಸ್ತೋಮಕ್ಕೆ ಗಂಭೀರ ಧ್ವನಿಯಲ್ಲಿ ನುಡಿದನು : 'ಈ ಸೊನ್ನಲಿಗೆಗೆ ಕಾಶಿ ಶ್ರೀಶೈಲಾದಿ ಕ್ಷೇತ್ರಗಳ ಮಹಿಮೆ ಇರುವುದಾದರೆ ನಾನೂ ನನ್ನ ಶಿಷ್ಯರೂ ನಿಸ್ವಾರ್ಥವಾದ ಕರ್ಮಯೋಗದಲ್ಲಿ ತೊಡಗಿರುವುದೇ ಸತ್ಯವಾದರೆ ಈ ಲೋಹದ ಗುಂಡು ನನ್ನ ಕೈಯನ್ನು ಸುಡದಿರಲಿ' ಎಂದವನೆ ಸಿದ್ಧರಾಮನು ಗಂಭೀರವಾಗಿ ಬಲಗೈಯನ್ನು ಚಾಚಿ ಅಂಗೈಯನ್ನು ವಿಸ್ತರಿಸಿದನು. ಪಂಚಲೋಹದ ಗುಂಡು ಇಕ್ಕಳದ ನಡುವೆ ಪ್ರಜ್ವಲಿಸುತ್ತಿತ್ತು. ಸಿದ್ಧರಾಮನ ಸೂಚನೆಯಂತೆ ಅತ್ತಿತ್ತ ಇಬ್ಬರು ಇಕ್ಕಳದಲ್ಲಿ ಹಿಡಿದ ಆ ಲೋಹದ ಗುಂಡನ್ನು ಸಿದ್ಧರಾಮಯ್ಯನ ಅಂಗೈ ಮೇಲೆ ಇರಿಸಿದರು. ಜಾಜ್ವಲ್ಯಮಯವಾದ ಆ ಗುಂಡು ಸಿದ್ಧರಾಮನ ನೀಳವಾದ ಕೈಯ ತುದಿಯಲ್ಲಿ, ತೆರೆದ ಅಂಗೈ ಮೇಲೆ, ಆದಿಶೇಷನ ಹೆಡೆಯ ಮೇಲಿನ ಮಣಿಯಂತೆ ಗಂಭೀರವಾಗಿ ಕಾಣಿಸುತ್ತಿತ್ತು. ಜನರೆಲ್ಲ ಬೆರಗಾಗಿ ಅಣ್ಣನವರಲ್ಲಿ ಕ್ಷಮೆ ಕೇಳಿಕೊಳ್ಳಲು ಸಿದ್ಧರಾಮ ನಸುನಗುತ್ತ ಗುಂಡನ್ನು ಒಂದು ಪಕ್ಕಕ್ಕೆ ಎಸೆದ.

ಧಾರುಣಿಗೆ ಗುಂಡು ಒಗೆದಾಗ - ಆ ಚಣ
ಉರಿ ಎದ್ದು ಪೃಥ್ವಿ ಸುಟ್ಟಿತು ॥

ಹೀಗಾಗಿ ಪರವಾದಿಗಳು ಉಡುಗಿ ಹೋದರು. ಇದೇ ಸಂದರ್ಭದಲ್ಲಿ ಬಿಲ್ಲೇಶ ಬೊಮ್ಮಯ್ಯನ ದಾರುಣ ಪ್ರಸಂಗ ಘಟಿಸಿತು.

ಜ್ಯೋತಿ ಮುಟ್ಟಿದ ಜ್ಯೋತಿ :

ಸಿದ್ಧನ ಮಹಿಮೆ ಊರಿಂದ ಊರಿಗೆ ಹಬ್ಬತೊಡಗಿತು. ಆತನ ಕರುಣಾಕಟಾಕ್ಷಕ್ಕಾಗಿ ನೋಚಿಸಿ ಭವರೋಗಿಗಳು ಬಂದು ದರ್ಶನ ಪಡೆಯತೊಡಗಿದರು.

ಕೆರೆದಡದಲಿ ನಿಂತು ದೊರೆ ಅಲ್ಲಮಪ್ರಭು
ಕರೆದು ಹೇಳಿದ ಗುಡ್ಡರನು ನಿಮ್ಮಾತ
ಹಿರಿ ಒಡ್ಡನೆಲ್ಲಿ ಹೇಳಿರೋ ॥

ಎಂದು ಕಲ್ಲಯ್ಯನನ್ನು ಕೇಳಿದ. ಯಾರು ಈ ಜಂಗಮಮೂರ್ತಿ. ತಮ್ಮ ಅಣ್ಣನವರನ್ನು 'ವಡ್ಡರಾಮ' ಎಂದು ಹಾಸ್ಯ ಮಾಡುವ ಈ ಮಹಾವ್ಯಕ್ತಿ ಯಾರು? ಕೂಡಲೇ ಕಲ್ಲಯ್ಯ ಕೇಳಿದ 'ಏಕೆ ಸ್ವಾಮಿ ಕೆರೆ ಕಟ್ಟಿಸುವುದು ದೇವಾಲಯ ಕಟ್ಟಿಸುವುದು ಪವಿತ್ರ ಕಾರ್ಯವಲ್ಲವೇ' ಎಂದು. ಅದಕ್ಕೆ ಅಲ್ಲಮಪ್ರಭು -

ಹೇಳಿರೋ ಗುಡ್ಡರಿರಾ ಒಳಗೆ ತೊಳೆದು ಜಲವ
ತಿಳಿ ತುಂಬಲರಿಯದ ಅರೆಮರುಳ ಎಲ್ಲಿಹನು
ಕೇಳಿರೋ ಸಿದ್ಧರಾಮನಿಗೆ ॥

ಜಲದ ಸಂಗವನು ಸಲೆ ತೊಳೆಯಲರಿಯದೆ
ಜಲವ ಬಯಸುವನು ಎಂಥವನು ಹೇಳಿರೊ
ನಿಲವನರಿಯದ ಮರುಳೆಲ್ಲಿ ॥

ನೆಲವ ಹುಡುಕೂತ ನೆಲೆಯನರಿಯದ ತಾ
ಜಲಕಾಗಿ ಕೆರೆ ಕಟ್ಟುವ ಯೋಗಿಯು
ಎಲ್ಲಿರುವ ನಿಮ್ಮ ಒಡ್ಡರಾಯ ॥

ತಮ್ಮ ಗುರುವನ್ನು ಮೇಲಿಂದ ಮೇಲೆ ಅಸಹ್ಯಮಾಡಿ ಮಾತನಾಡುತ್ತಿದ್ದ ಈ ಜೋಗಿಯ ಗುರುವಿನ ಮಾತು ಅವರಿಗೆ ಸಿಟ್ಟು ಬರಿಸತೊಡಗಿತು. ಒಡನೆ ಅಲ್ಲಿದ್ದ ಒಡ್ಡರು ಸಿದ್ಧರಾಮನನ್ನು ಜರಿದುದಕ್ಕೆ ಅಲ್ಲಮಪ್ರಭುವಿನ ಮೇಲೆ ಸಲಾಕೆಗಳನ್ನು ಎಸೆಯುತ್ತಾರೆ. ಎಸೆದ ಎಲ್ಲ ಸಲಾಕೆಗಳು ಮರಳಿ ಒಡ್ಡರಿಗೆ ಬಡಿಯುತ್ತವೆ. ಈ ದುಃಖ ತೋಡಿಕೊಳ್ಳಲು ಒಡ್ಡರು ಸಿದ್ಧರಾಮನಲ್ಲಿಗೆ ಬರುತ್ತಾರೆ. ಸಿದ್ಧರಾಮ ಕೋಪಗೊಂಡು ಕೆರಳಿ ಹಣೆಗಣ್ಣು ತೆರೆಯುತ್ತಾನೆ.

ಉರಿವ ಜ್ವಾಲೆಯ ಕಂಡು ಮರುಗಿದ ಅಲ್ಲಮನು
ಉರಿಗಣ್ಣಿನ ಸಿದ್ಧರಾಮಂಗೆ ಅಕಟಕಟ
ಅರುವಿಲ್ಲ ಗರುವಿನ ತವರಿಗೆ ॥

ಹಣೆಗಣ್ಣಿನ ಈ ಕಿಚ್ಚಿನಿಂದ ಏನೂ ಪ್ರಯೋಜನವಾಗಲಿಲ್ಲ. ಇದಕ್ಕೆ ಪ್ರತಿಯಾಗಿ ಅಲ್ಲಮಪ್ರಭು ಅಂಗಾಲಗಣ್ಣು ತೆರೆಯುತ್ತಾನೆ. ಅಂಗಾಲಗಣ್ಣಿನ ಕಾಂತಿ ಕ್ಷಣಕ್ಷಣಕ್ಕೆ ಹೆಚ್ಚಿ ಅಖಿಲ ಬ್ರಹ್ಮಾಂಡವನ್ನು ಆವರಿಸುತ್ತದೆ. ಸಿದ್ಧರಾಮನ ಹಣೆಗಣ್ಣ ಕಾಂತಿ ಕುಗ್ಗುತ್ತದೆ. ಇದರಿಂದ ಸಿದ್ಧರಾಮನಿಗೆ ಬಹುವಾಗಿ ಪಶ್ಚಾತ್ತಾಪವಾಗಿ ಆ ಘಟನೆಯಿಂದ ಒಮ್ಮೆಲೇ ಹೃದಯ ಪರಿವರ್ತನೆಯಾಗುತ್ತದೆ.

ಸಿದ್ಧರಾಮನು ಪ್ರಭುವಿನ ಮಹತಿಯನ್ನು ಮನಗಂಡು ಆತನ ಮಹಿಮೆಯನ್ನು ಹೃದಯಾರೆ ಸ್ತುತಿಸುತ್ತಾರೆ. ಮಾಡಿದ ತಪ್ಪಿಗೆ ಬಗೆ ಬಗೆಯಾಗಿ ಪಶ್ಚಾತ್ತಾಪಪಟ್ಟುಕೊಂಡು ಕಾಪಾಡಬೇಕೆಂದು ತಪ್ತಹೃದಯದಿಂದ ಪ್ರಭುವನ್ನು ಅಂಗಲಾಚಿ ಬೇಡಿಕೊಳ್ಳುತ್ತಾನೆ. ಅತ್ಯಂತ ಕರುಣಾಮಯನಾದ ಅಲ್ಲಮಪ್ರಭು ಮೊರೆಹೊಕ್ಕು ಸಿದ್ಧರಾಮನನ್ನು ಮೇಲಕ್ಕೆತ್ತಿ ಅವನು ಇಲ್ಲಿಯವರೆಗೆ ಮೆರೆದ ಘನತೆ ಮಹಿಮೆಯನ್ನು ಮನದುಂಬಿಕೊಂಡಾಡುತ್ತಾನೆ. ಸಿದ್ಧರಾಮನಿಗೆ ಮುಂದೆ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕಾದ ಮಹಾಲಿಂಗ ವರ್ಣನೆಯನ್ನೂ, ಗಣನಾಥ ಪರಂಪರೆಯ ವಿವರಣೆಯನ್ನು ನೀಡುತ್ತಾನೆ. ಇಷ್ಟರಿಂದಲೇ ಸಂತೃಪ್ತಿಗೊಳ್ಳದ ಸಿದ್ಧರಾಮ ಆತನಿಗೆ

ಅರುಹಿನ ಕುರುಹನ್ನು, ಇಷ್ಟಲಿಂಗವನ್ನು ದಯಪಾಲಿಸುವಂತೆ ಬಿನ್ನವಿಸಿಕೊಳ್ಳುತ್ತಾನೆ. ಅದಕ್ಕೆ ಪ್ರಭು ಈ ತನುವೇ ಪೀಠ, ಪ್ರಾಣವೇ ಲಿಂಗವಾಗಿರುವಾಗ ಬೇರೆ ಕುರುಹು ಏಕೆ ಎಂದು ಉಪದೇಶಿಸಿ ಭಕ್ತಿಭಂಡಾರಿ ಬಸವ, ಷಟ್‌ಸ್ಥಲಜ್ಞಾನಿ ಚನ್ನಬಸವರ ಹಿರಿಮೆಯನ್ನು ತಿಳಿಸಿ ಕಲ್ಯಾಣದತ್ತ ಹೊರಡಲು ಆದೇಶವೀಯುತ್ತಾನೆ.

ಪ್ರಭುದೇವನು ಸಿದ್ಧರಾಮನನ್ನೊಳಗೊಂಡು ಕಲ್ಯಾಣಕ್ಕೆ ದಯಮಾಡಿಸುತ್ತಾನೆ. ಅಲ್ಲಿಯ ದಾಸೋಹದ ಮಠಗಳು, ನಂದಿಧ್ವಜ, ದೇಗುಲ, ಸರೋವರಗಳು; ಅಲ್ಲಿರುವ ಪ್ರಮಥರು, ಅನುಭಾವಿಗಳು, ಮಹಂತರು, ಮಹಿಮಾಪುರುಷರು ಇವರೆಲ್ಲರನ್ನು ಮನಗಂಡು ಹರ್ಷಗೊಂಡು ಸಿದ್ಧರಾಮ ನಿನ್ನ ಮಹಿಮೆಯಿಂದ ಕಲ್ಯಾಣದ ಮಹಾದರ್ಶನ ಪಡೆದ ಶರಣರ ಸಾನ್ನಿಧ್ಯ ಪಡೆದೆ' ಎಂದು ಪ್ರಭುದೇವನನ್ನು ಮನದುಂಬಿ ಕೊಂಡಾಡುತ್ತಾನೆ. ಕಲ್ಯಾಣ ಕಂಡು ಸಿದ್ಧರಾಮನ ಜೀವನ ಪಾವನವಾಗಿದೆ.

ಕಲ್ಯಾಣ ದರುಶನ ಕಲ್ಯಾಣವ ನೆನೆದರೆ
ಕಲ್ಯಾಣದ ಮಹಾತ್ಮೆ ಕೇಳಲು ಕರ್ಮಕ್ಷಯ
ಕಲ್ಯಾಣವೇ ಕೈಲಾಸವಾಗಿಹುದು ॥

ಎಂದು ಕೊಂಡಾಡುತ್ತಾನೆ. ಪ್ರಭುದೇವರ ಕಲ್ಯಾಣದ ದ್ವಾರದಲ್ಲಿದ್ದ -

ಬರೆದ ಶಾಸನವದು ಪರಮ ಅಲ್ಲಮನೋದಿ
ಹರುಷಗೊಂಡರು ಮನದುಂಬಿ ಮಹಿಮೆ
ಅರಿತೇನೋ ಸಿದ್ಧೇಶ ಬಸವನ ॥

ಎಂದು ಕೇಳಿದರು. ಸಿದ್ಧರಾಮನ ದೃಷ್ಟಿಯಲ್ಲಿ ಬಸವೇಶ ಸದ್ಯೋನ್ಮುಕ್ತ, ಶಿವಾಚಾರದ ಘನತೆ ಭುವಿ ಜೀವಿಗಳಿಗರುಹಿ ದೇವಲೋಕ ಅನ್ಯವಿಲ್ಲೆಂದು ತೋರುವ ದೇವರ ದೇವ' ಸರ್ವಕ್ಕೆ ಕಾರಣ ಕರ್ತ.

ಕುವೆಂಪು ದೃಷ್ಟಿಯಲ್ಲಿ ಕಾವ್ಯ ಮತ್ತು ಭಾಷೆ

ಪ್ರೊ. ಜಿ.ಎಸ್. ಸಿದ್ದಲಿಂಗಯ್ಯ

ಪರಿಮಿತ ಸೃಷ್ಟಿಯ ಕವಿಯ ಭಾಷೆ ಮತ್ತು ಜೀವನ ದೃಷ್ಟಿಗಳನ್ನು ವಿಶ್ಲೇಷಿಸುವುದು ಸುಲಭ, ದೈತ್ಯಪ್ರತಿಭೆಯ ಕವಿಗಳ ಭಾಷೆ ಮತ್ತು ಜೀವನದ ದೃಷ್ಟಿಗಳನ್ನು ವಿಶ್ಲೇಷಿಸುವುದಕ್ಕಿಂತ. ಏಕೆಂದರೆ ದೈತ್ಯಪ್ರತಿಭೆ ಒಂದು ಸಾಹಿತ್ಯ ಪ್ರಕಾರದಲ್ಲಿ ಒಂದು ಭಾಷೆಯ ಒಂದು ಹಂತದಲ್ಲಿ ಕೆಲಸ ಮಾಡಿ ವಿರಮಿಸುವುದಿಲ್ಲ; ಬದುಕನ್ನು ಅದರ ಅನಂತತೆಯಲ್ಲಿ, ವಿಸ್ತಾರದಲ್ಲಿ ಹಾಗೂ ಭಿನ್ನ ಭಿನ್ನ ಸ್ತರಗಳಲ್ಲಿಯೇ ಕಂಡು ಅಭಿವ್ಯಕ್ತಿ ರೀತಿಯನ್ನು ವಿಶ್ಲೇಷಣೆಗೊಳಪಡಿಸುವುದು ತುಂಬ ಸಂಕೀರ್ಣಕ್ರಿಯೆಯಾಗುತ್ತದೆ.

೧

ಕುವೆಂಪು ಅವರ ಕಾವ್ಯಭಾಷೆ ಮತ್ತು ಜೀವನ ದೃಷ್ಟಿಗಳನ್ನು ಈ ದೃಷ್ಟಿಯಿಂದಲೇ ವಿಶ್ಲೇಷಿಸ ಹೊರಟಾಗ ಮೊದಲು ನಿಚ್ಚಳವಾಗಿ ಕಾಣುವುದು ಕವಿಯ ವಿಶೇಷಾಸಕ್ತಿ ಸಾತ್ವಿಕಾಂಶಗಳನ್ನು ಕುರಿತು ಈ ಎರಡು ಸುನೀತಗಳನ್ನು ನೋಡಿ !

೧. ಹೋಮರ್ ನಿನ್ನ ಕಲೆ ಪಿರಿದಾದೊಡಂ ನಿನ್ನ
ಕಥೆ ಪಿರಿದಲ್ತು ಲೋಕಸುಂದರಿ ನಿನ್ನ ಹೆಲೆನ್
ಚೆಲುವೆ ದಲ್ ; ಮತ್ತೇನುಮಲ್ತು ; ನಾಂ ಪೇಸುವೆನ್
ನಾಡುಮನೆ ಅಣ್ಣ ತಮ್ಮಂದಿರಂ ಮೇಣ್ ತನ್ನ
ಪತಿಯುಮಂ ಪೆಣ್ಗೂಸುಮಂ ತ್ಯಜಿಸಿ, ತನುರುಚಿಗೆ
ಸೋತು, ಪಾಣ್ಬಂಬೆರಸುತೋಡಿಹೋದಾ ಪೆಣ್ಗೆ !
ಈಲಿಯಡ್ಡಿನ ಮಹಾಕಲೆಯ ನೆತ್ತರ್‌ಗಣ್ಗೆ
ಬೆಲೆವೆಣ್ಣೆ ಗುರಿಯಾಯ್ತೆ ? ಕ್ಷಮಿಸು ಸೀತೆಯ ಶುಚಿಗೆ
ರಾಮಾಯಣವನೊರೆವನಾದಿ ಕವಿ ವಾಲ್ಮೀಕಿ.

ಆ ಶುಚಿಯ ಗಂಗೆಯೊಳ್ ಮಿಂದೆನಗೆ ಸಹಿಸದಯ್
ಕೆಸರಿನೋಕುಳಿಯ ನಿನ್ನದ್ಭುತ ರಣಕ್ರೀಡೆ
ದಿವ್ಯಕಲೆಗಿರವೇಳ್ಕು ಭವ್ಯವಿಷಯಂ ; ಪಿನಾಕಿ
ಬಿಲ್ಲೆ ಳೆವೆನೇನಲ್ಪ ಗುರಿಗಾಗಿ ? ಸಿಡಿಲೆಸಯ್
ಠಂಕಾರಮಾದೊಡೇಂ, ನಾಣ್ಚುವೆ ಗುರಿಯ ನೋಡೆ ಹೋಮರ್

೨. ಆಂಗ್ಲ ಕವಿಗಳಲಿ ನೀನೆನ್ನೆದೆಯ ಸೆಳೆದಂತೆ
ಉಳಿದವರು ಸೆಳೆದಿಲ್ಲ ನರನಾಟಕವ ನೋಡಿ
ರಂಗದಲಿ ಚಿತ್ರಿಸಿದ ಷೇಕ್ಸ್‌ಪಿಯರನುಂ ಕೂಡಿ
ನೀನೊಂದು ಪರ್ಣಕುಟಿ ; ಆತನೊಪಿರಿಯ ಸಂತೆ
ಶಾಂತಿಯಲಿ ಕೊನೆಗಾಣುವುದು ನಿನ್ನಮಲ ಚಿಂತೆ,
ಆತನದೊ ಕ್ರಾಂತಿಯುಲಿ ವನದ ಪಕ್ಷಿಯು ಹಾಡಿ,
ಪ್ರಕೃತಿ ಸಂಸರ್ಗದಲಿ ದಿವ್ಯಭಾವವು ಮೂಡಿ
ಆತ್ಮವು ವಿರಾಟದಲಿ ಎಂದು ವಿಹರಿಸುವಂತೆ
ಮೂಡುವುದೊ ಕಾವ್ಯರ್ಷಿ, ನಿನ್ನ ವಾಣಿಯ ರೀತಿ
ಅಂತಿಹುದು. ಭಿನ್ನಾಭಿಪ್ರಾಯವನು ಜಗವೆಲ್ಲ,
ಪಂಡಿತರ ಗುಂಪೆಲ್ಲ ಘೋಷಿಸಲಿ, ನೀನೆನಗೆ
ಸಹೃದಯನು, ಕವಿವರನನ್ನು ; ನನ್ನೊಲ್ಮೆ ಇದೊ ನಿನಗೆ
ನಿನ್ನ ಋಷಿ ಜೀವನಕ್ಕೆ ನಿನ್ನ ನಿರ್ಮಲ ನೀತಿ.
ಜನರೊಲ್ಮೆ, ಶಾಂತಿ, ಕನಿಕರ, ದಯೆಗೆ-ಎಣೆಯಿಲ್ಲ.

ಮೇಲಿನ ಎರಡು ಸುನೀತಿಗಳಲ್ಲಿ ಕುವೆಂಪು ಅವರ ಒಲವರ ಏನು ಎಂಬುದು ತುಂಬ ವಿಶದವಾಗಿಯೇ ಮೂಡಿವೆ. 'ನಿನ್ನ ಕಲೆ ಪಿರಿದಾದೊಡಂ' ಎನ್ನುವ ಮತ್ತು 'ಈಲಿಯಡ್ಡಿನ ಮಹಾಕಲೆಯ ನೆತ್ತರ್‌ಗಣ್ಗೆ' ಎನ್ನುವ ಮಾತುಗಳಲ್ಲಿ ಹೋಮರನ ಮಹಾಕಲೆಯ ಬಗೆಗಾಗಲಿ ಅಥವಾ ಕಲೆಯ ಹಿರಿಮೆಯ ಬಗೆಗಾಗಲಿ ಕಣ್ಮುಚ್ಚುವುದಿಲ್ಲ. ಆದರೆ ತಾವು ಮೆಚ್ಚುವ ಸೀತೆಯ ಶುಚಿಯ ರಾಮಾಯಣದ ಜೊತೆಯಲ್ಲಿ ಇದನ್ನು ಅದೇ ಮಟ್ಟದಲ್ಲಿ ನೋಡಲು ಒಲವು ಮೂಡುವುದಿಲ್ಲ. ಅಷ್ಟೆ ಅಲ್ಲ 'ದಿವ್ಯ ಕಲೆ ಗಿರವೇಳ್ಕು ಭವ್ಯವಿಷಯಂ' ಎಂಬ ಮಾತು ಕುವೆಂಪು ಅವರ ಕಾವ್ಯವನ್ನು ಕುರಿತು ದೃಷ್ಟಿಯೇನೆಂಬುದನ್ನು ವಿಶದೀಕರಿಸುತ್ತದೆ. ಅವರ ಒಲವಿರುವುದು ಕಾವ್ಯ ಅಥವಾ ಕಲೆಯ ಕಡೆ ಮಾತ್ರ ಅಲ್ಲ ; ದಿವ್ಯವಾದ ಕಲೆ ಮತ್ತು ಕಾವ್ಯಗಳ ಕಡೆಗೆ, ಭವ್ಯವಿಷಯದ ಕಡೆಗೆ.

ವರ್ಡ್ಸ್‌ವರ್ತನನ್ನು ಕುರಿತು ಬರೆದ ಸುನೀತ ಈ ಒಲವರವನ್ನು ಇನ್ನಷ್ಟು ಖಚಿತಪಡಿಸುತ್ತದೆ. ನರನಾಟಕವ ನೋಡಿ ರಂಗದಲಿ ಚಿತ್ರಿಸಿದ ಷೇಕ್ಸ್‌ಪಿಯರನೂ ವರ್ಡ್ಸ್‌ವರ್ತನಂತೆ ತಮ್ಮನ್ನು ಸೆಳೆದಿಲ್ಲ ಎಂಬುವಾಗ ಈ ಒಲವರ ಇನ್ನಷ್ಟು ಖಚಿತವಾದದ್ದಾಗಿ ತೋರುತ್ತದೆ. ಅವರಿಬ್ಬರನ್ನು ತುಲನೆ ಮಾಡುವ ಈ ಮಾತುಗಳನ್ನು ; 'ನೀನೊಂದು ಪರ್ಣಕುಟ ; ಆತನೋ ಪಿರಿಯ ಸಂತೆ', ನನ್ನೊಲ್ಮೆ ಇದೊ ನಿನಗೆ ನಿನ್ನ ಋಷಿಜೀವನಕೆ ನಿನ್ನ ನಿರ್ಮಲ ನೀತಿ, ಜನರೊಲ್ಮೆ, ಶಾಂತಿ, ಕನಿಕರ, ದಯೆಗೆ ಎಣೆಯಿಲ್ಲ, ಎಂಬ ಸುನೀತದ ಕೊನೆಯ ಮಾತುಗಳು ತಮಗೆ ತಾವೇ ಸ್ಪಷ್ಟವಾಗಿ ಖಚಿತಗೊಳಿಸುತ್ತವೆ. ಕುವೆಂಪು ಅವರ ದೃಷ್ಟಿಯನ್ನು ಈ ಎರಡು ಸುನೀತಗಳಲ್ಲಿರುವ ಕುವೆಂಪು ಅವರ ಒಲವರಗಳನ್ನು ಹೀಗೆ ಸಂಗ್ರಹಿಸಬಹುದು :

ಅ) ಕುವೆಂಪು ಅವರು ಷೇಕ್ಸ್‌ಪಿಯರ್ ಹಾಗೂ ಹೋಮರರ ಕಲೆಗಳನ್ನು ಕಿರಿಯದೆಂದು ಹೇಳಿಲ್ಲ ; ಮಹಾಕಲೆಗಳೆಂದು ಒಪ್ಪಿಕೊಳ್ಳುತ್ತಾರೆ.

ಆ) ಅವರ ಒಲವರ ಭವ್ಯ ವಿಷಯದ ಬಗ್ಗೆ ; ದಿವ್ಯಕಲೆಯ ಬಗ್ಗೆ.

ಇ) ಈ ದಿವ್ಯಕಲೆ ಹಾಗೂ ಭವ್ಯ ವಿಷಯಗಳು ಹಿಂಸೆ, ಕ್ರೌರ್ಯ, ವ್ಯಭಿಚಾರಗಳಿಂದ ದೂರವಾದ ಶುಚಿಯ ಬದುಕಿನಲ್ಲಿ ಸಮೃದ್ಧವೆಂದೂ, ಹಾಗಾಗಿಯೇ ಹಿರಿಯ ಸಂತೆಯಂತಿರುವ ಷೇಕ್ಸ್‌ಪಿಯರ್ ಮತ್ತು ಹೋಮರರ ಕಾವ್ಯಗಳಿಗಿಂತ ಶುಚಿಯ ಸೀತೆಯ ರಾಮಾಯಣ ಹಾಗೂ ಕಾವ್ಯರ್ಷಿ ವರ್ಡ್ಸ್‌ವರ್ತ್‌ನ ಪರ್ಣಕುಟಿಯ ಪ್ರಶಾಂತತೆಯ ಕಡೆಗೆ ಗುರಿಯಿಡುತ್ತದೆ.

೨

ಮೇಲಿನ ಎರಡು ಸುನೀತಗಳಲ್ಲಿ ಭಾಷೆಯನ್ನು ಕುರಿತು ಏನೆಂದು ಕವಿದೃಷ್ಟಿ ನೇರವಾಗಿ ಏನೂ ತಿಳಿಯದಿದ್ದರೂ ಕವಿಯ ಒಲವರ ಎತ್ತ ಕಡೆ ಎಂಬುದು ಖಚಿತವಾಗಿ ಸೂಚಿತವಾಗುತ್ತದೆ. 'ನೆನಪಿನ ದೋಣಿ'ಯಲ್ಲಿ ಗ್ರಂಥದ ಈ ಉಲ್ಲೇಖನಗಳನ್ನು ನೋಡಿ ;

೧) ''ಏಕೆಂದರೆ ಕವಿತೆ ಒಂದು ಸರಳ ಸಾಮಾನ್ಯ ಸತ್ಯದ ಮೇಲೆ ವೈಭವಯುಕ್ತ ರಾಜಸಿಂಹಾಸನವನ್ನೇ ಸ್ಥಾಪಿಸಬಲ್ಲುದು''. (Verse can build a princely throne on humble Truth). ಪು. ೨೫೮.

೨) ಕಾದಂಬರಿಗಳ ವಿಚಾರವಾಗಿ ಮೊದಲಿಂದಲೂ ನಾನು ಅಶ್ರದ್ಧ. ಇಂಗ್ಲಿಷ್ ಸಾಹಿತ್ಯದಲ್ಲಿಯೂ ನಾನು ಕವಿತೆ ಮತ್ತು ನಾಟಕಗಳಿಂದ ಆಕರ್ಷಿತನಾದಂತೆ ಇತರ ಸಾಹಿತ್ಯ ಪ್ರಕಾರಗಳಿಂದ ಮೋಹಿತನಾಗಿರಲಿಲ್ಲ. ಕಾದಂಬರಿ ಎಂದರಂತೂ ಒಂದು ವಿಧವಾದ ತಿರಸ್ಕಾರವಿತ್ತು. ಅವುಗಳಲ್ಲಿ ಏನೂ ಗಾಂಭೀರ್ಯ ಗುರುತ್ವಗಳಿಲ್ಲ ಎಂಬ ಭಾವನೆಯಿಂದಾಗಿ ಆ ಭಾವನೆಯಿಂದ ನನ್ನನ್ನು ಪಾರು ಮಾಡಿ ಕಾದಂಬರಿಗಳಲ್ಲಿಯೂ ಓದಲು ಅರ್ಹವಾದ ಗಂಭೀರ ಸತ್ವವು ಇವೆ ಎಂಬುದನ್ನು ತೋರಿಸಿಕೊಟ್ಟವನು ಟಾಲ್‌ಸ್ಟಾಯ್. 'ರಿಸರಕ್ಷನ್', 'ಅನ್ನಾ ಕರಿನಿನಾ' ಮತ್ತು 'ವಾರ್ ಅಂಡ್ ಪೀಸ್'- ಇವುಗಳಲ್ಲಿ ಆತನ ಇತರೆ ಗಂಭೀರ ಬರವಣಿಗೆಗಳನ್ನು ಓದಿ, ಆತನಲ್ಲಿ ಗುರುಗೌರವ ಉಂಟಾಗಿದ್ದ ನನಗೆ ಆತ ಕಾದಂಬರಿಗಳನ್ನು ಬರೆದಿದ್ದಾನೆ ಎಂಬುದನ್ನು ಕೇಳಿದಾಗ ತುಂಬಾ ಅಸಮಾಧಾನಪಟ್ಟುಕೊಂಡೆ ಅಂಥಾ ಮಹತ್ ವ್ಯಕ್ತಿಯೂ ಕೂಡ ಕಾದಂಬರಿ ಬರೆಯುವಂಥಾ ಕೀಳುಗೆಯ್ಮೆಗೆ ಕೈಹಾಕಿದನೆ ಎಂದು ; ಆದರೂ ಆತನಲ್ಲಿ ಗೌರವ ಬೆಳೆದುಬಿಟ್ಟಿತ್ತಾದ್ದರಿಂದ ನೋಡೋಣ ಎಂದು 'ರಿಸರಕ್ಷನ್' (ಅವನ್ನು ಈಗ ಕನ್ನಡಕ್ಕೆ ಪುನರುತ್ಥಾನ ಎಂದು ಹೆಸರಿಟ್ಟು ಅನುವಾದ ಮಾಡಿದ್ದಾರೆ ದೇ. ಜ. ಗೌ. ಅವರು) ಎಂಬ ಶೀರ್ಷಿಕೆಯ ಆತನ ಕಾದಂಬರಿಗಳಲ್ಲಿಯ ಕಿರಿಯ ಗಾತ್ರದ್ದನ್ನು ಓದಲು ಆರಿಸಿಕೊಂಡೆ. ಓದಿ ಮೊದಲನೆಯ ಕಾದಂಬರಿಗಳ ಮೇಲಿದ್ದ ನನ್ನ ಪೂರ್ವಾಗ್ರಹ ಸ್ವರೂಪದ ಜಿಗುಪ್ಸೆ ತಿರಸ್ಕಾರಗಳು ತಿರೋಹಿತವಾಗಿ, ಬರೆಯುವವನಲ್ಲಿ ಮಹತ್ತೂ, ಮಹದ್ದರ್ಶನವೂ ಇರುವ ಪಕ್ಷದಲ್ಲಿ ಕಾದಂಬರಿಯೂ ಗುರುಗಂಭೀರವಾದ ಪೂಜ್ಯಕೃತಿಯೆ ಆಗಿಬಿಡಬಹುದು ಎಂಬುದು ಮನವರಿಕೆಯಾಯಿತು. ಪು. ೬೪೦-೬೪೧.

ಈ ಎರಡು ವಿವರಗಳನ್ನು ನೋಡುವಾಗಲೂ ಕೆಳಗಿನ ಅಂಶಗಳು ಮುಖ್ಯವಾದವು :

ಅ) ಕುವೆಂಪು ಅವರ ಮೊದಲ ಒಲವು ಕವಿತೆ ಮತ್ತು ನಾಟಕ ಪ್ರಕಾರಗಳ ಕಡೆಗೇ.

ಆ) ಕಾದಂಬರಿ ಪ್ರಕಾರದ ಮೇಲೆ ಮೊದಮೊದಲು ತಾತ್ಸಾರವಿದ್ದರೂ ಟಾಲ್‌ಸ್ಟಾಯ್‌ರವರ ಕಾದಂಬರಿಗಳನ್ನು ಓದಿದ ಮೇಲೆ ಕಾದಂಬರಿ ಪ್ರಕಾರದ ಮೇಲೂ ಗೌರವ ಹುಟ್ಟಿತು.

ಇ) ಏನೇ ಆದರೂ ಕವಿತೆ ಕುವೆಂಪು ಅವರ ಮೊದಲೊಲವು ಇದ್ದಂತೆ. ಏಕೆಂದರೆ ಅವರೇ ಹೇಳುವಂತೆ ಕವಿತೆ ಸರಳ ಸಾಮಾನ್ಯ ಸತ್ಯದ ಮೇಲೆ ವೈಭವಯುಕ್ತ ರಾಜ ಸಿಂಹಾಸನವನ್ನೆ ಸ್ಥಾಪಿಸಬಲ್ಲುದು.

ಕೆಳಗಿನ ಈ ಎರಡು ಉದಾಹರಣೆಗಳನ್ನು ನೋಡಿ ;

೧) ಹಿಮಾಲಯ ಪರ್ವತವನ್ನು ತೇನಸಿಂಗ್ ಹತ್ತಿ ನಿಂತ. ಆತನ ಸಾಹಸವನ್ನು ಕಂಡು; ಇನ್ನೊಂದು ಹಿಮಾಲಯ ಪರ್ವತವನ್ನು ಕಂಡು; ಇನ್ನೊಂದು ಹಿಮಾಲಯ ಪರ್ವತವನ್ನು ಹತ್ತು ಎಂದರೆ ಸಾಧ್ಯವೆ? ಹಿಮಾಲಯ ಪರ್ವತವಿರುವುದೂ ಒಂದೆ; ಹತ್ತುವುದೂ ಒಬ್ಬನಿಂದ ಒಂದೇ ಸಾರಿ ಸಾಧ್ಯ. ಹಾಗೆಯೇ 'ಇನ್ನೊಂದು ಮಹಾಕಾವ್ಯವನ್ನು ಬರೆಯಿರಿ ಎಂದರೆ' ಹೇಗೆ ಸಾಧ್ಯ?

೨) ಆದರ್ಶಲೋಕ ಸಂಚಾರಿಯಾದ ಕವಿಗಲ್ಲದಿದ್ದರೂ ವಾಸ್ತವ ಪ್ರಪಂಚ ಪ್ರವಾಸಿಯಾಗುವ ಕಾದಂಬರಿಕಾರನಾಗುವ ವನಿಗೆ ಬದುಕಿನ ಆ ಕೃಷ್ಣಪಕ್ಷದ ಅವಶ್ಯಕತೆಯನ್ನರಿತು ನಿನ್ನ ಸಾಹಿತ್ಯ ವಿಧಿ ನನಗೆ ಆ ಅನುಭವಗಳನ್ನು ದಯಪಾಲಿಸಿತೆಂದು ತೋರುತ್ತದೆ ! ಪು. ೧೫೩ 'ನೆನಪಿನ ದೋಣಿ'ಯಲ್ಲಿ

೩) 'ಕವಿಯ ಜೀವನ ಚರಿತ್ರೆ ಎಂದರೆ ಅವನ ಕವನಗಳೆ ; ಉಳಿದುವೆಲ್ಲವೂ ಬರಿಯ ಅಡಿಯ ಟಿಪ್ಪಣಿ!'

ಮೇಲಿನ ಮೂರು ಹೇಳಿಕೆಗಳನ್ನು ಗಮನಿಸಿದರೆ ಸ್ಪಷ್ಟವಾಗುತ್ತದೆ, ಕುವೆಂಪು ಅವರು ಪ್ರಧಾನತಃ ಕವಿಗಳು ಎಂದು. ಮೂರನೆಯ ಉದಾಹರಣೆಯ ಮಾತು ಇದನ್ನು ವ್ಯಂಜಿಸುತ್ತದೆ. ಎರಡನೆಯ ಉದಾಹರಣೆಯಲ್ಲಿ ಕುವೆಂಪು ಅವರ ಪ್ರತಿಭೆ ಆದರ್ಶಲೋಕ ಸಂಚಾರಿಯಾಗುವ ಕೃತಿಯಾಗಿರುವ ಕನಸಿನ ಒಲವರನ್ನು ಧ್ವನಿಸುತ್ತದೆ. ಆಶ್ಚರ್ಯ ಎಂದರೆ ಬದುಕಿನ ಕೃಷ್ಣಪಕ್ಷವೆನ್ನಬಹುದಾದ ಬಹುಮುಖತೆಯನ್ನೂ ಈ ಪ್ರತಿಭೆ ತನ್ನೆರಡು ಮಹಾ ಕಾದಂಬರಿಗಳಲ್ಲಿ ಸೃಷ್ಟಿಸಿ ಸಮೃದ್ಧವಾಗಿದೆ. ಅಲ್ಲಿಯ ಗದ್ಯವನ್ನು ನೋಡುತ್ತ ಹೋದಂತೆ ಅಲ್ಲಿ ತೆರೆದುಕೊಳ್ಳುವ ಬದುಕಿನ ವಿವಿಧ ಸ್ತರಗಳ ವ್ಯಾಪಕ ಚಿತ್ರ ಕವಿಯ ಮಹಾ ಸೃಷ್ಟಿಗೆ ದ್ಯೋತಕವಾಗಿದೆ.

ಮೊದಲ ಉದಾಹರಣೆಯಲ್ಲಿ ಮಹಾಕಾವ್ಯವನ್ನು ಕುರಿತು ಸೂಚಿತವಾಗುವ ಹಿಮಾಲಯದ ಸಂಕೇತ ಮಹಾ ಕಾವ್ಯವನ್ನು ಕುರಿತ ಕುವೆಂಪು ಅವರ ಖಚಿತ ದೃಷ್ಟಿಯ ಸಂಕೇತವೂ ಹೌದೆಂದು ತೋರುತ್ತದೆ.

'ಕವಿತೆ ಒಂದು ಸರಳ ಸಾಮಾನ್ಯ ಸತ್ಯದ ಮೇಲೆ ವೈಭವಯುಕ್ತ ರಾಜಸಿಂಹಾಸನವನ್ನೇ ಸ್ಥಾಪಿಸಬಲ್ಲುದು' ಎಂಬ ಅವರ ಉಕ್ತಿ ಗದ್ಯಕ್ಕಿಂತ ಪದ್ಯಕ್ಕಿರುವ ವ್ಯಂಗ್ಯಶಕ್ತಿಯನ್ನು ಕುರಿತ ಅವರ ಖಚಿತಾಭಿಪ್ರಾಯ ಇದ್ದಂತೆ ತೋರುತ್ತದೆ. ಹೀಗಾಗಿಯೇ ಅವರ ಪ್ರತಿಭಾದೃಷ್ಟಿಯನ್ನು ಕುರಿತ ವಿಶ್ಲೇಷಣೆಯನ್ನು ಸೂಕ್ಷ್ಮವಾಗಿ ಕಣ್ಣಿಟ್ಟು ನೋಡಿದರೆ ಭಾಷೆಯನ್ನು ಕುರಿತ ಅವರ ದೃಷ್ಟಿಯೂ ವಿಶದವಾಗುತ್ತದೆ. ಬರೆದಿರುವ ಎರಡು ಕಾದಂಬರಿಗಳೂ ಮಹತ್ವದ ಕೃತಿಗಳೇ ಆಗಿದ್ದರೂ ಅವರ ಒಲವು ಕವಿತೆಯತ್ತ; ಮಹಾಕವಿತೆಯತ್ತ - ಮಹಾಕಾವ್ಯದತ್ತ, ಹಾಗೆಯೇ ಅವರ ಭಾಷೆಯೂ ಕವಿತೆಯತ್ತಲೇ ಒಲೆಯುತ್ತದೆ ; ಏಕೆಂದರೆ ಅವರ ಭಾಷೆಯು ಇಲ್ಲಿ 'ಸರಳ ಸಾಮಾನ್ಯ ಸತ್ಯದ ಮೇಲೆ ವೈಭವಯುಕ್ತ ರಾಜಸಿಂಹಾಸನವನ್ನೇ ಸ್ಥಾಪಿಸುವ' ಇಂಗಿತ ಉಳ್ಳದ್ದು. 'ಆದರ್ಶ ಸಂಚಾರಿಯಾಗ ಬಯಸುವುದು. ಅವರ ಸೃಷ್ಟಿ 'ಸಂತೆಯದಲ್ಲ ಪರ್ಣಕುಟಿ ಶಾಂತಿಯಲ್ಲಿ ಮುಳುಗುವಂಥದ್ದು. ಹಾಗಾಗಿಯೇ ಅವರ ಕಾವ್ಯದ ಭಾಷೆ 'ಕರಿಸಿದ್ದ' ದಂಥ ಮೊದಲ ಕಥನಕವನದಲ್ಲಿ ತೀರ ಸರಳವಾಗಿದ್ದರೂ ಮುಂದೆ ಬರುಬರುತ್ತ ಸಂಕೀರ್ಣವೂ ವಕ್ರೋಕ್ತಿ ಮಾರ್ಗ ಉಳ್ಳದ್ದೂ ಆಗಿ ನಡೆದಿದೆ.

ಅವರ ಕಾವ್ಯಭಾಷೆಯಲ್ಲಿ ಬರುವ ಸಂಸ್ಕೃತ ಶಬ್ದಗಳ ವಿಪುಲತೆಗೆ ಕಾರಣವೇನೆಂಬುದನ್ನು ಗ್ರಹಿಸಬಹುದು. ಮೇಲಿನ ಎಲ್ಲ ಉದಾಹರಣೆಗಳನ್ನೇ ಅಲ್ಲದೆ ಈ ಒಂದು ಹೃದ್ಯ ಘಟನೆಯ ವಾಕ್ಯವೃಂದವನ್ನು ಗಮನಿಸಿ.

''ಪರಿಣಾಮ ; ನೆತ್ತರು ತೊಟ್ಟಿಕ್ಕಿತು !

ಹೌದು ಹೊರಗಣ್ಣಿಗೆ ಕಂಡದ್ದು ಅಷ್ಟೆ ; ನೆತ್ತರು ತೊಟ್ಟಿಕ್ಕಿ, ಹಣೆ ಊದಿಕೊಂಡದ್ದು ! ಆದರೆ ಅತೀಂದ್ರಿಯ ಪ್ರಜ್ಞೆಯ ಶ್ರದ್ಧಾ ಚಕ್ಷುಸ್ಸಿಗೆ ? ಕಲ್ಲು ವಿಕಂಪಿಸಿ ಭಗವಚ್ಚರಣವಾಗಿ, ದೇವದೇವನ ಹೃದಯಕಮಲದಲ್ಲಿ ಕರುಣಾನುಕಂಪನವಾಗಿ

ಮಾತೃಭಕ್ತಿಯ ಚಿತ್ತಪಶಕ್ತಿಗೆ ಜಾಗ್ರತವಾದ ಈಶ್ವರೀ ಕೃಪೆ ಅತೀತದಿಂದ ಇಳಿದುಬಂದು ನನ್ನ ಶಿರಸ್ಸಿನ ಮೇಲೆ ಆಶೀರ್ವಾದ ಮುದ್ರೆಯಾಗಿ ನಿಂತದ್ದು, ಅಂದಿನಿಂದ ಇಂದಿನವರೆಗೂ ಬಿಡದೆ ಕೈಹಿಡಿದು ನಡೆಸಿ ಕಾಯುತ್ತಿದೆ ! ನನ್ನ ಅವ್ವನ ಲಲಾಟಾಘಾತಕ್ಕೆ ಕರಗಿದ ವಿಧಿ ಅವರ ಕಂದನ ಲಲಾಟಲಿಪಿಯನ್ನು ತನ್ನ ಸುಭದ್ರ ವಶಕ್ಕೆ ತೆಗೆದುಕೊಂಡಿತೆಂದು ತೋರುತ್ತದೆ. ಅನಿರೀಕ್ಷಿತವಾದ ಚಿತ್ರವಿಚಿತ್ರ ರೀತಿಗಳಲ್ಲಿ ನನ್ನ ಬದುಕಿನ ಅಡಚಣೆಗಳನ್ನು ನಿವಾರಿಸಿ, ನನ್ನನ್ನು ಬಾಳಿನ ಸಂದುಗೊಂದುಗಳಲ್ಲಿ ನುಗ್ಗಿಸಿಕೊಂಡು ಬಂದು, ಜೀವನ ದೇಗುಲದ ಗೋಪುರಾಗ್ರಸ್ಥಾನದಲ್ಲಿ ನಿಲ್ಲಿಸಿದ !

ಮೊದಲ ಮೂರು ವಾಕ್ಯಗಳಲ್ಲೂ ಅಚ್ಚಗನ್ನಡ ಶಬ್ಧಗಳೇ ವಿಪುಲ. ಪರಿಣಾಮ ಎನ್ನುವ ಒಂದೇ ಒಂದು ಸಂಸ್ಕೃತ ಶಬ್ಧವಿದೆ. ಮುಂದಿನ ವಾಕ್ಯದಲ್ಲಿ ಮೊದಲ ಪದ ಮತ್ತು ಕೊನೆಯ ಪದದಂತ್ಯದಲ್ಲಿ ಬರುವ ವಿಭಕ್ತಿ ಪ್ರತ್ಯಯ ಬಿಟ್ಟರೆ ಉಳಿದ ಮೂರು ಶಬ್ಧಗಳೂ ಸಂಸ್ಕೃತದವು. ಇಲ್ಲಿ ನೋವಿನ ಮೂಲವನ್ನು ವಿಶ್ಲೇಷಿಸುವ ಯತ್ನವಿದೆ. ಮುಂದಿನ ವಾಕ್ಯ ದೀರ್ಘವೂ ಸಂಸ್ಕೃತ ಪದಪುಂಜಯುತವೂ ಆಗಿ ಬೆಳೆಯುತ್ತ ಕೊನೆಯ ಆರು ಪದಗಳು ಮತ್ತೆ ಕನ್ನಡದವಾಗುತ್ತವೆ. ಕಮಲದಲ್ಲಿ ಆ ವಾಕ್ಯದ ಮೊದಲ ಭಾಗ ಕಲ್ಲು ಭಗವಂತನ ಪಾದವಾಗುವುದನ್ನೂ ಅನಂತರ ಆ ದೇವದೇವನ ಹೃದಯಕಮಲದಲ್ಲಿ ಕರುಣಾನುಕಂಪನವಾಗುವ ಹಂತದಲ್ಲಿ ತತ್‌ಕ್ಷಣವೇ ಆ ಪಾದದ ಕೃಪೆಗೆ ಕರುಣೆಯ ಅನುಕಂಪವಾಗುವುದನ್ನು ಆ ಕರುಣೆಗೆ ಕಾರಣವಾಗಿ ಮಾತೃಭಕ್ತಿಯ ಚಿತ್ತಪಶಕ್ತಿ ಜಾಗ್ರತವಾಗಿ ಈಶ್ವರೀ ಕೃಪೆಯನ್ನು ಭಗೀರಥನಂತೆ ಕವಿಯ ಶಿರದ ಮೇಲಿಳಿಯುವಂತೆ ಮಾಡಿದ ತಪಶ್ಯಕ್ತಿ ಕ್ರಿಯೆಯನ್ನೂ ವ್ಯಂಜಿಸುತ್ತದೆ. ಒಂದು ಕಡೆ ಭಗವತ್ಕೃಪೆ, ಇನ್ನೊಂದು ಕಡೆ ಮಾತೃತ್ವದ ಆಶೀರ್ವಾದ ಇವೆರಡೂ ಕಾಪಾಡಿ ಕುಳಿತ ಅನುಭವಕ್ಕೆ ಅಭಿವ್ಯಕ್ತಿಯಾಗಿದೆ ಈ ವಾಕ್ಯ. ಇಲ್ಲಿ ಸಂಸ್ಕೃತ ಶಬ್ಧಗಳು ಹಾಗೂ ಶಬ್ದದಪುಂಜಗಳು ದೈವೀಕೃಪೆ ಮತ್ತು ತಪಶ್ಯಕ್ತಿಗಳ ಅವಾಹನೆ ಇಡುತ್ತ ಹೊರಟಿರುವ ಯತ್ನದಲ್ಲಿರುವುದನ್ನು ಗಮನಿಸಬಹುದು.

ಮುಂದಿನ ವಾಕ್ಯದಲ್ಲೂ ಹಾಗೆಯೇ. ಅವ್ವನ ಲಲಾಟಾಘಾತಕ್ಕೆ ಕರಗಿದ 'ವಿಷ' ಅದರ ಕಂಪನ ಲಲಾಟಲಿಪಿಯನ್ನು ತನ್ನ ಸುಭದ್ರ ವಶಕ್ಕೆ ತೆಗೆದುಕೊಂಡಿತೆಂದು ತೋರುತ್ತದೆ ಎಂಬ ಕಾವ್ಯವನ್ನು ಗಮನಿಸಬೇಕು. ಅವ್ವನ ಎನ್ನುವ ಕನ್ನಡ ಶಬ್ಧದ ಜೊತೆಗೆ 'ಲಲಾಟಾಘಾತ' ಎಂಬ ಸವರ್ಣ ದೀರ್ಘಸಂಧಿಪದ ಬಿಟ್ಟು ಪೆಟ್ಟಿನ ತೀವ್ರತೆಯನ್ನು ವ್ಯಂಜಿಸಿದರೆ ಕರಗಿದ ವಿಧಿ ಎನ್ನುವ ಶಬ್ಧಗಳಲ್ಲಿ ವಿಧಿಯ ನಿಷ್ಠುರ ನಿಯಮಗಳು ಕರಗಿಹೋಗುವ ಮಾಂತ್ರಿಕ ಕ್ರಿಯೆ ಕರಗಿದ ಶಬ್ಧದಲ್ಲಿ ವ್ಯಂಜಿತವಾಗಿದೆ. ಲಲಾಟಲಿಪಿ ಸುಭದ್ರವಶ ಎನ್ನುವ ಮುಂದಿನ ಸಂಸ್ಕೃತ ಶಬ್ಧಗಳನ್ನು ಅಷ್ಟೇ ಧ್ವನಿತ್ವಗಳು ಎಂದು ಹೇಳಲಾಗದೆನ್ನಿಸುತ್ತದೆ. ಮುಂದಿನ ವಾಕ್ಯ ತನ್ನಲ್ಲಿರುವ ಲಯದ ವೈವಿಧ್ಯದಿಂದ ಮತ್ತೆ ಬದುಕಿನ ವಿವಿಧ ಬಿಂದುಗಳಲ್ಲಿ ಕವಿಯನ್ನೊಯ್ದು ಎತ್ತಿ ಇಳಿಸಿ ಮೇಲೇರಿಸಿರುವ ಐತಿಹಾಸಿಕ ಸತ್ಯಸಂಗತಿಯನ್ನು ಕಾವ್ಯಮಯವಾಗಿ ಧ್ವನಿಸುವ ಅಭಿವ್ಯಕ್ತವಾಗಿದೆ. ಜೀವನದೇಗುಲದ ಗೋಪುರಾಗ್ರಸ್ಥಾನದಲ್ಲಿ ನಿಲ್ಲಿಸಿದೆ ಎನ್ನುವ ಮುಗಿತಾಯವಂತೂ ವಾಕ್ಯರಚನೆಯ ವೈವಿಧ್ಯಕ್ಕೂ ಉದಾಹರಣೆಯಾಗಿದೆ. ಕುವೆಂಪು ಅವರ ವಾಕ್ಯರಚನೆಯ ಒಂದು ಮಾದರಿ ಇದು.

ಭಾಷೆಯ ಇನ್ನೊಂದು ಮಾದರಿಯನ್ನು ನೋಡಿ

ಒಲೆಗಳ ಸಾಲಿನಂತಿದ್ದ ಕಕ್ಕಸ್ಸಿನ ವರ್ಣನಾ ರೂಪದಲ್ಲಿ : ಮೂಗು ಮುಚ್ಚಿಕೊಂಡರೆ ಅದನ್ನು ಸಮೀಪಿಸಬೇಕಾಗಿತ್ತು. ಕೆಲವರು ನಾತವನ್ನು ಎದುರಿಸಲು ಸಿಗರೇಟು ಹೊತ್ತಿಸಿಕೊಂಡು ಹೋಗುತ್ತಿದ್ದರು. ಆದರೆ ಅವರೂ ಮೂಗು ಮುಚ್ಚಿಕೊಳ್ಳದೆ ಇರುವುದು ಅಸಾಧ್ಯವಾಗುತ್ತಿತ್ತು. ಕೂತು ಬಾಧೆ ಪರಿಹರಿಸಿಕೊಳ್ಳಲು ಒಳಗೆ ಒಲೆಗಳಿದ್ದರೂ ಅಲ್ಲಿಗೆ ಹೋಗಲು ಹೇಗೆ ಅಂಜಿ ರಾತ್ರಿ ಕತ್ತಲೆಯಲ್ಲಿ ಕೆಲವರು ಕಕ್ಕಸ್ಸಿನ ಹೊರಗಡೆಯೆ ಎರಡೂ ಬಾಧೆಗಳನ್ನು ತೀರಿಸಿಕೊಳ್ಳುತ್ತಿದ್ದುದರಿಂದ ಬೆಳಿಗ್ಗೆ ಇತರರಿಗಿಂತ ಮೊದಲು ಸ್ಥಳಾಕ್ರಮಣ ಮಾಡಲು ಪ್ರಯತ್ನಿಸುತ್ತಿದ್ದರು. ತುದಿಗಾಲಿನ ಮೇಲೆ ಸರ್ಕಸ್ಸು ಮಾಡುತ್ತಾ ಹೋಗಿ ಒಲೆ ಹತ್ತುತ್ತಿದ್ದರು. ಹಗಲಿನಲ್ಲಿ ಹೊರಗೆ ಕೂರಲಾಗುತ್ತಿರಲಿಲ್ಲವಾದ್ದರಿಂದಷ್ಟೆ. ಬೆಳಿಗ್ಗೆ ಮುಂಚೆ ಹೋದರೆ ಒಲೆ ಖಾಲಿಯಾಗಿರಬಹುದೆಂಬ ಭ್ರಾಂತಿ

ಅವರಿಗೆ. ಹಿಂದಿನ ಸಂಜೆ ಜಲಗಾರನು ಬಂದು ತನ್ನ ಕರ್ತವ್ಯ ನಿರ್ವಹಣೆ ಮಾಡಿರುತ್ತಾನೆಂದು ನಂಬಿ. ಆದರೆ ಒಲೆಗಳು ಖಾಲಿಯಾದುದನ್ನೆ ಕಂಡರಿಯರು. ಅವು ಅಷ್ಟರ ಮಟ್ಟಿಗೆ ಭರ್ತಿಯಾಗಿರುತ್ತಿದ್ದವು. ಎಂದರೆ ಒಲೆಯ ತೋಳಿನ ಮೇಲೆ ಕುಕ್ಕರುಗಾಲಿನಲ್ಲಿ ಕೂತರೆ ಹೇಲಿನ ಕುತ್ತುರೆ ಅಂಡಿಗೆ ತಗುಲುತಿತ್ತು'. ಆದ್ದರಿಂದ ಅಲ್ಲಿಯೂ ಶಾಲೆಯ ಹುಡುಗರೂ ಕುರ್ಚಿ ಕೂರುವಂತಹ ಶಿಕ್ಷೆಯನ್ನನುಭವಿಸಬೇಕಾಗುತ್ತಿತ್ತು. ಅಮೇಧ್ಯ ಸ್ಪರ್ಶವಾಗದೆ ಇರಬೇಕಾಗಿದ್ದರೆ ಬರಿಯ ಹೇಸಿಗೆಯ ದೃಷ್ಟಿಯಿಂದ ಮಾತ್ರವಲ್ಲ; ರೋಗ ಅಂಟಿಕೊಳ್ಳುವ ಭಯವೂ ಇರುತ್ತಿತ್ತು. ಆ ಹೇಲಿನ ರಾಶಿಯ ಮೇಲೆ ತರತರದ ಬಣ್ಣದ ರಕ್ತಗಳೂ ಬಿದ್ದಿರುತ್ತಿದ್ದವು; ನೆತ್ತರೊಡನೆ ಔಷಧಿಯ ಹತ್ತಿಯ ಚೂರುಗಳೂ ರೋಗಗಳ ವೈವಿಧ್ಯವನ್ನು ಸಾರುತ್ತಾ ಬಿದ್ದಿರುತ್ತಿದ್ದವು; ಆಮಶಂಕೆಯೋ? ಮೂಲವ್ಯಾಧಿಯೊ? ಮೇಹರೋಗದ ವ್ರಣಗಳೋ? ಕ್ಷಯದ ಕಫದ ಕಲೆಯೊ? ಕಡೆಗೆ, ಎಲೆಯಡಕೆಯ ಉಗುಳೋ? ಸ್ಪರ್ಶದಿಂದ ತಪ್ಪಿಸಿಕೊಂಡರಾದರೂ ಕ್ಷೇಮ ಉಂಟೇ? ನೊಣಗಳು! ನೊಣಗಳು! ನಾನಾ ಗಾತ್ರದವೂ! ನಾನಾ ಬಣ್ಣದವು. ನಾನಾ ವಿಕಾರದ ಮೀಸೆಯ ಕಣ್ಣಿನ ರೆಕ್ಕೆಯ ನೊಣದ ಹಿಂಡು ದಂಡುಗೊಂಡು ಆ ಸ್ಥಳ ಈ ಸ್ಥಳ ಎಂದು ನೋಡದೆ ಮುತ್ತಿ ಮೈಮೇಲೆ ಮುಖದ ಮೇಲೆ ಕೆನ್ನೆ ತುಟಿಗಳ ಮೇಲೆಯೂ ಕೂರುತ್ತಿದ್ದವು. ಅವುಗಳ ಸೋಂಕು ತರಬಹುದಾದ ರೋಗಗಳನ್ನು ನೆನೆದೇ ಜೀವ ಹಾರುವಂತಾಗುತ್ತಿತ್ತು. ಅದಕ್ಕಾಗಿ ಎರಡು ಕೈಗಳೂ ದನಗಳು ಬಾಲ ಬೀಸಿಕೊಳ್ಳುವಂತೆ ನಿರಂತರವಾಗಿ ವ್ಯಾಯಾಮ ಪ್ರದರ್ಶನ ಕಾರ್ಯದಲ್ಲಿ ತೊಡಗಬೇಕಾಗುತ್ತಿತ್ತು. ಅಂತೂ ಬಾಧೆ ತೀರಿಸಿಕೊಳ್ಳುವ ಆ ಕ್ರೂರಶಿಕ್ಷೆಯಿಂದ ಪಾರಾಗಿ ಬರುವಷ್ಟರಲ್ಲಿ ಮೈ ಬೆವರಿ, ದುರ್ವಾಸನೆಗೆ ಮೂಗು ಮುಚ್ಚಿಕೊಂಡು ಹೋಗಿದ್ದ ಅಸಾಮಿ ಸರ್ಕಸ್ಸು ಮಾಡಿದ ಆಯಾಸದಿಂದ ಶ್ವಾಸಕೋಶವೆಲ್ಲ ಭರ್ತಿಯಾಗುವಂತೆ ದೀರ್ಘವಾಗಿ ಉಸಿರೆಳೆದು ಏದುತ್ತಾ, ದುರ್ವಾಸನೆಯ ಆ ಕಕ್ಕಸಿಗೆ ದಿನವೂ ಹೋಗಿಬರುವ ಭಯಂಕರತೆಯಿಂದ ತಪ್ಪಿಸಿಕೊಳ್ಳಲು ಮಲಬದ್ಧತೆಯಂತಹ ರೋಗವನ್ನು ರಕ್ಷಣೆಗೆ ಕರೆದು ಆಶ್ರಯಿಸುವ ಹಂಬಲಾಗುತ್ತಿತ್ತು. ಪುಟ ೧೫೧-೧೫೨ 'ನೆನಪಿನ ದೋಣಿ'ಯಲ್ಲಿ.

ಮೇಲಿನ ವರ್ಣನೆ ಕುವೆಂಪು ಅವರ ಭಾಷೆಯ ಸತ್ವಯುತವಾದ ಬಳಕೆಗೆ ಒಂದು ಉತ್ತಮ ಉದಾಹರಣೆ. ಕುವೆಂಪು ಅವರೇ ಮುಂದೆ ಹೇಳುವಂತೆ ಬದುಕಿನ ಕೃಷ್ಣಪಕ್ಷದ ಸಮೃದ್ಧಿ ಇಲ್ಲಿದೆ. ಅವರ ಒಲವರ ಬೇರೆಯೇ ಇದ್ದರೂ, ಇಲ್ಲಂತೂ ಸಂಸ್ಕೃತ ಶಬ್ದಗಳು ಅನಿವಾರ್ಯವೆಂಬಂತೆ (ಸಂಖ್ಯೆಯಲ್ಲಿ ಅವು ನಲವತ್ತೈದಾದರೂ ವಿಶೇಷತಃ ಕನ್ನಡದಲ್ಲಿ ತೀರ ಬಳಕೆಯಾಗಿ ಹೋಗಿರುವ ಪದಗಳು) ಇವೆ. ಕವಿ ಇಚ್ಛೆ ಪಡುವ ಲೋಕದ ಸೃಷ್ಟಿ ಈ ಬರವಣಿಗೆಯಲ್ಲಿ ಮೈತಾಳಿರುವುದನ್ನು ನೋಡಿದರೆ ಕುವೆಂಪು ಅವರ ಭಾಷೆಯ ಇನ್ನೊಂದು ಮುಖವೂ ನಮಗೆ ಪರಿಚಿತವಾಗಿದೆ.

ಮೇಲಿನ ಉದಾಹರಣೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತ ಹೋದಂತೆ ಕುವೆಂಪು ಅವರ ಕಾವ್ಯ - ಮಹಾಕಾವ್ಯವನ್ನು ಮತ್ತು ಅದರ ಭಾಷೆಯನ್ನು ಕುರಿತು ದೃಷ್ಟಿ ವಿಶದವಾಗುತ್ತ ಹೋಗುತ್ತದೆ.

ಇಷ್ಟೆಲ್ಲ ಇದ್ದರೂ ಕುವೆಂಪು ಅವರು ಪ್ರಜ್ಞಾಪೂರ್ಣವಾಗಿ ಹೇಳಿರುವುದಕ್ಕಿಂತ ಭಿನ್ನರೀತಿಯಲ್ಲಿ ಅವರ ಕಾದಂಬರಿಗಳು ಮಹತ್ವಪೂರ್ಣವಾಗಿ ಮಹಾಕಾವ್ಯ - ಮಟ್ಟಕ್ಕೇರುವುದೂ ಅಲ್ಲದೆ ಅವರ ಅಲ್ಲಿನ ಗದ್ಯ ಅತ್ಯಾಶ್ಚರ್ಯಕರವಾದ ರೀತಿಯಲ್ಲಿ ಜೀವನದ ಎಲ್ಲ ಮುಖಗಳು ಮತ್ತು ಸ್ತರಗಳಿಗೆ ಮೈತೆರೆದುಕೊಂಡು ಸಮೃದ್ಧವಾಗುವುದೂ ಆಶ್ಚರ್ಯಕರವಾಗಿರುವಂತೆಯೇ ಅಭ್ಯಾಸ ಯೋಗ್ಯವೂ ಆಗಿದೆ.

●

ಶಿವರಾಮಕಾರಂತರು ಮತ್ತು ಬಂಡಾಯ

ಶ್ರೀ ಪಾ. ಚಂದ್ರಶೇಖರ ಚಡಗ

ಆಡು ಮುಟ್ಟದ ಸೊಪ್ಪಿಲ್ಲ, ಕಾರಂತರು ಕೈಯಾಡಿಸದ ಸಾಹಿತ್ಯ ಪ್ರಕಾರವಿಲ್ಲ ಎಂದು ವಿ.ಸೀ. ಹೇಳಿದ ಮಾತು ಎಲ್ಲರಿಗೂ ಪರಿಚಿತ. ಕೋಟ ಶಿವರಾಮಕಾರಂತರನ್ನು ಕಡಲತಡಿಯ ಭಾರ್ಗವ ಎಂದೂ ಕರೆಯುತ್ತಾರೆ. ಕಾರಂತರ ಕಾರ್ಯವ್ಯಾಪ್ತಿ ಕಡಲಿನಷ್ಟು ಅಗಾಧವೂ, ಅನಂತವೂ ಆಗಿದೆ.

ಸಾಹಿತ್ಯವನ್ನು, ಸಾಹಿತಿಗಳನ್ನು ಜಾತಿಯ ಆಧಾರದ ಮೇಲೆ ಅಥವಾ ಅವರ ಸಾಹಿತ್ಯದಲ್ಲಿ ಕಂಡುಬರುವ ಧೋರಣೆಗಳ ಮೇಲೆ ವರ್ಗೀಕರಿಸುವ ಕಾರ್ಯ ಕನ್ನಡದಲ್ಲಿ ಬಹುದಿನಗಳಿಂದ ನಡೆಯುತ್ತಿದೆ. ದಲಿತ, ಬಂಡಾಯ ಹಣೆಪಟ್ಟಿಗಳನ್ನು ಹೊತ್ತು ಸಾಹಿತಿಗಳು ಕೃತಿರಚನೆ ಮಾಡಲು ತೊಡಗುವ ಮುನ್ನವೇ ಕಾರಂತರು ಒಂದು ತುಂಡು ಭೂಮಿಗೆ ಒಡೆಯನಾಗಬೇಕೆಂಬ ಆಸೆಗಾಗಿ ಹೋರಾಡಿದ ದಲಿತ ಚೋಮನ ದಾರುಣ ಕಥೆಯನ್ನು ಹೇಳುವ 'ಚೋಮನ ದುಡಿ'ಯನ್ನು ಬರೆದಿದ್ದರು. ಆದರೆ ಇತ್ತೀಚೆಗೆ ವಿಮರ್ಶಕರೊಬ್ಬರು ಕಾರಂತರ ಈ ಕೃತಿಯಲ್ಲಿ ಚೋಮ ಸೋಲುತ್ತಾನೆ. ಜಮೀನುದಾರ ಸಂಕಪ್ಪಯ್ಯ ಗೆಲ್ಲುತ್ತಾನೆ. ಆದುದರಿಂದ ಕಾರಂತರ ಸಾಹಿತ್ಯ ಜನಪರವಾದುದಲ್ಲ ಎನ್ನುವ ವಿಚಿತ್ರ ವಾದವನ್ನು ಎತ್ತಿದ್ದಾರೆ. ಚೋಮನ ದುಡಿಯನ್ನು ಮೆಚ್ಚಿದ ವಿಮರ್ಶಕರೂ ಅವರ ಮುಂದಿನ ಬರವಣಿಗೆಯಲ್ಲಿ ಕಾರಂತರು ಕ್ಯಾಪಿಟಲಿಸ್ಟ್ ಪರ ಧೋರಣೆಯನ್ನು ಅಭಿವ್ಯಕ್ತಿಸಿದ್ದಾರೆ ಎನ್ನುತ್ತಾರೆ. ಏಕೆಂದರೆ ಮೈಗಳ್ಳ ಕೂಲಿಗಳನ್ನು ಕಾರಂತರು ಟೀಕಿಸುತ್ತಾರೆ. ಸಂಪತ್ತಿನ ಸೃಷ್ಟಿಯ ಬಗ್ಗೆ ಕಾಳಜಿ ತೋರದೆ ಅದರ ವಿಭಜನೆಯಲ್ಲಿಯೇ ಆಸಕ್ತಿ ತೋರುವವರ ಬಗ್ಗೆ ಕಾರಂತರಿಗೆ ಗೌರವವಿಲ್ಲ.

ಸೋಷಲಿಸ್ಟ್, ಕ್ಯಾಪಿಟಲಿಸ್ಟ್ ಅಥವಾ ಇನ್ನಾವುದೇ ಹಣೆಪಟ್ಟಿಯನ್ನು ಹಚ್ಚಿ ಕಾರಂತರಂತಹ ಮಹಾಪುರುಷರನ್ನು ಹೆಸರಿಸುವುದು ಅಸಮಂಜಸ. ಕಾರಂತರ

ಜೀವನದ ದೃಷ್ಟಿ, ಅವರು ತಮ್ಮ ಬಾಳ್ವೆಯ ಮೂಸೆಯಲ್ಲಿ ಬೆಂದು, ಪಕ್ವವಾಗಿ, ಹೊಸ ಹೊಸ ಅನುಭವಗಳನ್ನು ಪಡೆದುಕೊಂಡಂತೆ ವಿಕಾಸವಾಗುತ್ತ ಹೋಗಿ ಇದೀಗ ಕಾರಂತರು ಒಬ್ಬ ಮಹಾನ್‌ದಾರ್ಶನಿಕರಾಗಿದ್ದಾರೆ. ಅವರು ಪಂಡಿತರಂತೆ ಇತರರು ಹೇಳಿದ್ದನ್ನು ಸುಮ್ಮನೆ ಒಪ್ಪುವುದಿಲ್ಲ. ಅವರ ಭಾಷಣಗಳಲ್ಲಿ, ಲೇಖನಗಳಲ್ಲಿ ಅವರು ಯಾರ ಹೇಳಿಕೆಗಳನ್ನೂ ಉದ್ಧರಿಸುವುದಿಲ್ಲ. ಬಾಲ್ಯದಲ್ಲಿ, ಗಾಂಧೀಜಿಯವರಿಂದ ಪ್ರಭಾವಿತರಾಗಿ ತಮ್ಮ ಕಾಲೇಜು ಶಿಕ್ಷಣಕ್ಕೆ ಶರಣು ಹೊಡೆದ ಕಾರಂತರು, ಸ್ವಲ್ಪ ಸಮಯದಲ್ಲೇ ''ಬ್ರಹ್ಮಚರ್ಯವೇ ಜೀವನ, ವೀರ್ಯ ನಾಶವೇ ಮೃತ್ಯು'' ಎನ್ನುವ ನಂಬಿಕೆಯ ಔಚಿತ್ಯವನ್ನು ಪ್ರಶ್ನಿಸಿದರು. ಕಾರಂತರು ಬಾಳಿನಲ್ಲಿ ಯಾರ ಅನುಯಾಯಿಯಾಗಿಯೂ ಬಾಳಿದವರಲ್ಲ. ಇನ್ನೊಬ್ಬರು ತಮ್ಮ ಅನುಯಾಯಿಯಾಗಿ ಬದುಕಬೇಕು ಎನ್ನುವ ಅಪೇಕ್ಷೆ ಕಾರಂತರಿಗಿಲ್ಲ. ಯಾವುದೇ ಒಂದು ಸಿದ್ಧಾಂತಕ್ಕೆ Fanatic ಆಗಿ ಪಕ್ಷವನ್ನು, ಮತವನ್ನು ಕಟ್ಟುವುದನ್ನು ಕಾರಂತರು ಒಪ್ಪುವುದಿಲ್ಲ.

ಇಂದಿಗೆ ಅರವತ್ತು ವರ್ಷಗಳ ಹಿಂದೆಯೇ ನಮ್ಮ ಸಮಾಜಕ್ಕೆ ಅಂಟಿದ್ದ ಜಾತಿಜಾಡ್ಯವನ್ನು ತಮ್ಮ ಕೃತಿ ಮತ್ತು ಜೀವನಗಳಿಂದ ಓಡಿಸಲು ಪ್ರಯತ್ನಿಸಿದ ಕಾರಂತರು ಅಸಾಮಾನ್ಯ ವ್ಯಕ್ತಿತ್ವವುಳ್ಳವರು. ಅವರ ಕೃತಿ ಮತ್ತು ಜೀವನದಲ್ಲಿ ಸಂಪೂರ್ಣ ಸಾಮರಸ್ಯವನ್ನು ನಾವು ಕಾಣುತ್ತೇವೆ. ಅಪ್ರಿಯವಾದ ಸತ್ಯವನ್ನು ಜನರ ಮುಖದ ನೇರಕ್ಕೆ ಹೇಳಿ ಈ ವ್ಯಕ್ತಿ 'ಖಾರಂತ' ಎನ್ನುವ ಅಡ್ಡಹೆಸರನ್ನೇ ಪಡೆದಿದ್ದಾರೆ. ಕಾರಂತರ ಸಾಹಿತ್ಯದಲ್ಲಿ ಸಿನಿಕತನವಿಲ್ಲ. ಜೀವನದ ಅಂಕುಡೊಂಕುಗಳನ್ನು ವಿಡಂಬನೆಯಿಂದ ಕಂಡಿದ್ದರೂ, ಬಾಳಿನ ಮೌಲ್ಯಗಳ ಬಗ್ಗೆ, ಮಾನವನ ಮೂಲಭೂತ ಸದ್ಗುಣಗಳ ಬಗ್ಗೆ ಕಾರಂತರಿಗೆ ಅಪಾರವಾದ ನಂಬಿಕೆಯಿದೆ. ಅವರ ಕಾದಂಬರಿಗಳಲ್ಲಿ ಎಷ್ಟೋ ನಿರಕ್ಷರಕುಕ್ಷಿಗಳಾದ ವ್ಯಕ್ತಿಗಳ ಉದಾತ್ತ ಜೀವನದ ಚಿತ್ರಣವನ್ನು ನಾವು ಕಾಣುತ್ತೇವೆ. All literate Persons are not educated ಎನ್ನುವ ಮಾತಿನಂತೆ ಕಾರಂತರ ಪಾತ್ರಗಳಲ್ಲಿ ವಿದ್ಯಾವಂತರಲ್ಲಿ ಎಷ್ಟೋ ಮಂದಿ ಮೋಸಗಾರರನ್ನು ಕಾಣುತ್ತೇವೆ. ಆದರೆ ನಿರಕ್ಷರಕುಕ್ಷಿಗಳಲ್ಲಿ ಅಪ್ಪಟ ಬಂಗಾರದಂತಹ ವ್ಯಕ್ತಿಗಳು ಎಷ್ಟೋ ಮಂದಿ ಇದ್ದಾರೆ. ಕಾರಂತರಿಗೆ ಬದುಕಿನ ಪರೀಕ್ಷೆಯಲ್ಲಿ ತೇರ್ಗಡೆಯಾದ ವ್ಯಕ್ತಿಗಳ ಬಗ್ಗೆ ಮಾತ್ರ ಗೌರವವಿದೆ. ಮನುಷ್ಯ ತನ್ನ ಸುತ್ತಮುತ್ತಲಿನ ಜೀವಿಗಳಿಗೆ-ಅದು ಮನುಷ್ಯನೇ ಇರಲಿ, ಪ್ರಾಣಿಯೇ ಇರಲಿ, ಸಸ್ಯ ಸಂಪತ್ತೇ ಇರಲಿ - ಹೊರೆಯಾಗಿ ಬಾಳಬಾರದು ಎನ್ನುವ ಜೀವನ ದೃಷ್ಟಿಯನ್ನು ಕಾಣುತ್ತೇವೆ. ನಿನ್ನಿಂದಾದರೆ ಪರರಿಗೆ ಉಪಕಾರ ಮಾಡು. ಆಗದಿದ್ದರೆ ಅಪಕಾರವನ್ನು ಮಾಡಬೇಡ ಎನ್ನುತ್ತಾರೆ ಕಾರಂತರು. ಅವರ ''ಕೇವಲ ಮನುಷ್ಯರು'', ''ಕಣ್ಣಿದ್ದೂ ಕಾಣರು'', ''ಆಳ ನಿರಾಳ'', ''ಅಳಿದ ಮೇಲೆ'' ಮತ್ತು ''ಮೂಕಜ್ಜಿಯ ಕನಸುಗಳು'' ಕಾದಂಬರಿಯಲ್ಲಿ ಕಾರಂತರ ಕಲ್ಪನೆಯಲ್ಲಿ ಧರ್ಮ, ದೇವರು, ಮೋಕ್ಷ ಮುಂತಾದ ವಿಚಾರಗಳ ಬಗ್ಗೆ ಕೆಲವು ಪಾತ್ರಗಳ ಬಾಯಿಯಿಂದ ಬಂದಿರುವ ಉಕ್ತಿಗಳನ್ನು ನಾವಿಲ್ಲಿ ಗಮನಿಸಬೇಕು.

''ನನ್ನ ಪಾಲಿಗೆ ಧರ್ಮವೆಂಬುದು ಒಂದು ಪ್ರತ್ಯೇಕ ಖಾಸಗಿ ವ್ಯವಹಾರ ಅಲ್ಲ, ಸಂಕಟ ಬಂದಾಗ ಹರಕೆಯನ್ನು ಹೊರುವುದೂ ಅಲ್ಲ, ದೇವರಿದ್ದಾರೋ ಇಲ್ಲವೋ ಎಂಬ ವಿಚಾರವೂ ಅಲ್ಲಿರುತ್ತದೆ. ಇದ್ದುದನ್ನು ನಾನು ಕಂಡಿಲ್ಲ. ಈ ಸೃಷ್ಟಿಯೆಲ್ಲವೂ ಒಂದೇ ಒಬ್ಬನದ್ದೇ, ಎನ್ನುವ ನೀವು ಅದು ನಿಜಕ್ಕೂ ಒಂದೆಂದು ತೋರಿಸುವ ರೀತಿಯಲ್ಲಿ ಜೀವನ ಮಾಡುವುದೇ ಧರ್ಮ ಎಂದು ನನಗನಿಸುತ್ತದೆ. ಅಂಥ ಜೀವನದಲ್ಲಿ ರಾಜಕೀಯವೇ ಬೇರೆ, ಮತವೇ ಮೇರೆ ಎಂದು ನನಗನಿಸುವುದಿಲ್ಲ. ಅಸಂಖ್ಯ ಜೀವ ಕೋಟಿಗಳ ಎಡೆಯಲ್ಲಿ ವ್ಯವಹರಿಸುವ ನನ್ನಂಥ ಒಂದು ಜೀವ ಹೇಗೆ ವರ್ತಿಸಬೇಕು ? ಅದೊಂದೇ ನನಗೆ ಮುಖ್ಯವಾಗಿ ಕಾಣಿಸುವ ವಿಷಯ''. (ಆಳನಿರಾಳ - ಪುಟ ೧೮೨)

''ಕಾಲಮಾನದ ದೃಷ್ಟಿಯಿಂದ ಈ ಇಪ್ಪತ್ತನೆಯ ಶತಮಾನದ ಈಗಿನ ದಿನಗಳಲ್ಲಿ ಇಂಥ ನಂಬಿಕೆಗಳಿಂದ ಪ್ರೇರಿತರಾಗಿ ಧರ್ಮಶ್ರದ್ಧೆಯನ್ನು ಬೆಳೆಯಿಸಿಕೊಂಡವರ ಸಂಖ್ಯೆ ಅಥವಾ ಬೆಳೆಯಿಸಿಕೊಂಡಿದ್ದೇವೆ ಎನ್ನುವವರ ಸಂಖ್ಯೆ ಹೆಚ್ಚುತ್ತಲೇ ಇದೆ. ಅದೇ ಮಾನದಿಂದ ನಮ್ಮ ಸಾಮಾಜಿಕ ಜೀವನವನ್ನು ನೋಡಿದ್ದಾದರೆ, 'ಪರರಿಗೆ ಏನಾದರೂ ಚಿಂತೆಯಿಲ್ಲ. ಸ್ವಂತಕ್ಕೆ ಸುಖ

ಸಿಗಲಿ'' ಎನ್ನುವ ವರ್ತನೆಯೇ ಹೆಚ್ಚುತ್ತಿದೆ. ಹೀಗೇಕಾಗುತ್ತಿದೆ ಎಂಬುದು ಒಂದು ದೊಡ್ಡ ಸಮಸ್ಯೆ. ಹೆಚ್ಚಿನ ಮತಗಳು ಈ ವಿಶ್ವ ಸೃಷ್ಟಿ ಮತ್ತು ಅದರೊಳಗಿನ ಜೀವಕೋಟಿಯ ದೇವರೆಂಬ ವ್ಯಕ್ತಿಯಿಂದಲೋ, ಶಕ್ತಿಯಿಂದಲೋ ಉಂಟಾಯಿತೆಂದರೂ, ವರ್ತನೆಯಲ್ಲಿ ಮಾತ್ರ. ನಾವೆಲ್ಲರೂ ಒಂದೇ ತಾಯಿಯ, ಇಲ್ಲವೆ ಬದುಕಿನ ಮಕ್ಕಳು ಎಂಬ ಭಾವನೆ ಕಾಣುತ್ತಿಲ್ಲ.

(ಕಣ್ಣಿದ್ದೂ ಕಾಣರು - ಮುನ್ನುಡಿಯಿಂದ)

''ಈ ವಿಶ್ವ ಸೃಷ್ಟಿಯನ್ನು ಆ ಬ್ರಹ್ಮ ಯಾಕೆ ಮಾಡಿದ್ದಾನು ?
''ಸೃಷ್ಟಿಯಿಂದ ಬೇರೆಯಾದ ಒಬ್ಬ ಬ್ರಹ್ಮನ ಕಲ್ಪನೆ ಬೇಕೆ?''
''ಸೃಷ್ಟಿ ಮಾಡುವುದಕ್ಕೆ ಮುಗಿಸುವುದಕ್ಕೆ ಒಬ್ಬ ಬೇಡವೇ ?''

''ಆಗ ಅವನನ್ನು ಸೃಷ್ಟಿಸುವ ಒಬ್ಬ ಬೇಕಾದೀತಲ್ಲ. ಇದೇ ಸೃಷ್ಟಿ. ಇದ್ದೇವೆ ನಾವು. ಇರುವಷ್ಟು ಕಾಲ, ಅದರೊಡನೆ ನಮ್ಮ ಸಂಬಂಧವನ್ನು ತಿಳಿದು ಒಳ್ಳೇ ರೀತಿಯಿಂದ ಬಾಳಿದರೆ ಸಾಲದೇ ? ಯಾವುದು ನಮ್ಮ ತಿಳಿವಿಗೆ ಮೀರಿದ್ದೋ, ಅದನ್ನು ಕುರಿತು ಊಹಾಪೋಹ ಮಾಡಿದರೆ, ಹಾಗೆ ಮಾಡಿದ್ದು ಸತ್ಯ ಅನಿಸೀತೆ? ಅದು ನಮ್ಮ ಇನ್ನೊಂದು ಸೃಷ್ಟಿ ಆದೀತು. ಇರುವಷ್ಟು ಕಾಲ ನಮ್ಮ ಎಲ್ಲ ಶಕ್ತಿಗಳನ್ನು ಎಷ್ಟು ಅರಳಿಸಲು ಸಾಧ್ಯವೋ ಅರಳಿಸಿ ಸೂಕ್ಷ್ಮವಾಗಿ ಎಲ್ಲವನ್ನೂ ನೋಡುತ್ತ ಬಾಳುತ್ತಾ ಇರುವುದಕ್ಕಿಂತ ಹೆಚ್ಚಿನ ಸುಖ, ಆನಂದ ಮತ್ತೊಂದಿದೆ ಎಂದು ನನಗನಿಸುವುದಿಲ್ಲ. (ಕೇವಲ ಮನುಷ್ಯರು - ಪುಟ ೩೧೯)

''ನಾನು ಇಷ್ಟು ವರ್ಷವೂ ಇಲ್ಲಿ ಮಾಡಿಕೊಂಡಿದ್ದದ್ದು ಏನು ? ಮಕ್ಕಳು ಮರಿಗಳು ನನಗೇನು ಮಾಡಿದುವಂತೆ ? ಮತ್ತೊಂದು ನೋಡು-ಒಂದು ನಾಲ್ಕುಗಳಿಗೆ ಯಾವುದನ್ನೇ ನೆನೆದು ಒಂದೇ ಸಮನೆ ಯೋಚನೆ ಮಾಡುತ್ತ ಕುಳಿತರೆ, ಅಲ್ಲಿಗೇ ನಿದ್ರೆ ಬರುತ್ತದೆ. ಆಗ ತಪಸ್ಸೂ ಇಲ್ಲ, ಒಂದೂ ಇಲ್ಲ. ವರ್ಷ ವರ್ಷವೂ ಕುಳಿತು ತಪಸ್ಸು ಮಾಡಿಕೊಂಡಿದ್ದವರ ಕತೆಯೂ ಅಷ್ಟೆಯೋ ಏನೋ.'' (ಮೂಕಜ್ಜಿಯ ಕನಸುಗಳು - ೭೦) (೨ನೇ ಮುದ್ರಣ)

ಆದರೆ ನಮ್ಮ ಅಜ್ಜಿಗೆ ದೇವರಲ್ಲಿ ''ಅದನ್ನು ಕೊಡು'' ''ಇದನ್ನು ಕೊಡು'' ಎಂದು ಬೇಡುವ ಜನಗಳ ಮೇಲೆಯೇ ಗೌರವವಿರಲಿಲ್ಲ. ಅಂಥ ಕಲ್ಪನೆಯಲ್ಲೂ ಗೌರವವಿರಲಿಲ್ಲ. ಒಂದು ಬಾರಿ ನಾನು ಅವರೊಡನೆ ಪುರಂದರದಾಸರ ಮಾತನ್ನೆತ್ತಿದಾಗ ಅವರೆಂದ ವಾದ ನೆನಪಿಗೆ ಬರುತ್ತದೆ. ಇನ್ನೊಮ್ಮೆ ಹೀಗೆ ಅಂದಿದ್ದರು ; ''ಹೌದು, ಹೌದು, ಅವಳಿಗೆ ಗೊತ್ತಿಲ್ಲ.-ಯಾರ ಕಷ್ಟ, ಎಷ್ಟೆಷ್ಟು ಎಂತ. ನೀನು ಹೋಗಿ ಅರ್ಜಿ ಹಾಕಿಕೊಳ್ಳಬೇಕು ; ಅದರ ಮೇಲೆಯೇ ಅವಳಿಗೆ ಗೊತ್ತಾಗಬೇಕು ; ಅಲ್ಲವೇ ?'' ಎಂದು. (ಮೂಕಜ್ಜಿಯ ಕನಸುಗಳು - ೨೫೧) (೨ನೇ ಮುದ್ರಣ)

''ದೇವರೆಂಬ ಮಾತು ಅಷ್ಟಕ್ಕೇನೆ ಬರುತ್ತದೆ ಅನ್ನು. ಹುಟ್ಟಿಸಿದವನು ದೇವರು ; ಹೊಟ್ಟೆಗೆ ಹಾಕುವವನೂ ದೇವರು. ಯಾವುದೋ ಒಂದು ದಿವಸ ಅವರ ಊರಿನ ಸುತ್ತುಮುತ್ತಲೂ ಮೈಲಿಗೆ ರೋಗ ಹಬ್ಬಿಕೊಂಡಿತು. ಅವರ ಕುಲದ ಒಂದೇ ಒಂದು ಪಿಳ್ಳೆ ಇಲ್ಲದ ಹಾಗೆಯೂ ಮಾಡಿತು. ಆಗ ಎಷ್ಟು ಜನರು ಸತ್ತರು ಮೈಲಿಗೆಯಿಂದ ಅನ್ನುವುದಕ್ಕಿಲ್ಲ. ಊರಿನ ಅಮ್ಮನವರಿಗೆ ಕುರಿ, ಕೋಳಿ, ಹೇಳಿಕೊಂಡರು. ಶಿರ್ಸಿಯ ಅಮ್ಮನಿಗೂ ಹರಕೆ ಹೊತ್ತರು. ವರ್ಷ ಕಳೆದರೂ ಊರಲ್ಲಿ ಬೇನೆ ಕಳೆಯಲಿಲ್ಲ. ಆ ಕಾಲದಲ್ಲಿ ಬೇರೆ ಉಪಾಯವೇ ಕಾಣದೆ, ಅಳಿದುಳಿದ ಗಂಡಸರೂ, ಹೆಂಗಸರೂ ಮುಂದಿನ ಊರಿಗೆ ಹೊರಟುಬಂದರು. ಆ ಕಾಲಕ್ಕೆ ನಮ್ಮ ಈ ಊರು ದೊಡ್ಡ ಪಟ್ಟಣ, ಸಾವಿರಾರು ಮನೆಗಳಿದ್ದ ಒಂದು ಊರಾಗಿತ್ತು. ಅದೇ ಕಾಲಕ್ಕೆ ಹಿಂಡುಗಾನ ಅಮ್ಮ ಕೊಲ್ಲೂರು ಮೂಕಾಂಬಿಕೆಯಷ್ಟೇ ಪ್ರಸಿದ್ಧಿಯಾದವಳು. ಅಂತು ಅವರೆಲ್ಲ ಈ ಊರಿಗೆ ಓಡಿ ಬಂದರು. ಇಲ್ಲೊಬ್ಬ ಪಾಳೆಯಗಾರನಿದ್ದ, ಯಾವುದೋ ಅರಸನ ಕೆಳಗೆ. ಆಗಿನ ಕಾಲಕ್ಕೆ ನೋಡು, ಮಾಣಿ ಎಂಟು ಗ್ರಾಮಗಳಿಗೆ ಒಬ್ಬ ಅರಸು ಅನ್ನು. ಇಡಿಯ ಅರಸು ; ತುಂಡರಸು. ಮೂಡೂರಿನ ಅರಸು ಒಬ್ಬ ತುಂಡರಸು. ಅವನ ದಂಡಿಗೆ ಸೇರುವ ಜನರು ಬೇಕಾಗಿತ್ತು, ಅವನ ದಂಡನ್ನು ಹೊರಗಿಂದ ಮಂದ ಈ ಗಟ್ಟಿಮುಟ್ಟಿನ ಜನ ಸೇರಿಕೊಂಡರು.

ಹಾಗೆಯೇ ವರ್ಷಗಳು ಕಳೆದವು. ಅವರೆಲ್ಲ ಸ್ವಂತ ಊರನ್ನು ಬಿಟ್ಟು ಬಂದರೂ ಆ ಊರಿನ ದೇವರನ್ನು ಮರೆಯಲಾರರು. ಕಡಲ ದೇವರನ್ನು ಹೇಗೆ ಮರೆತಾರು ? ಈ ಕಪಾಲೇಶ್ವರನ ಗುಡಿ ಆಗ ಭೈರವನ ಗುಡಿಯೂ ಆಗಿರಲಿಲ್ಲ. ಬರಿ ಈಶ್ವರನ ಗುಡಿಯಾಗಿ ಹಾಳುಬಿದ್ದತ್ತು. ಅದರ ಸುತ್ತಮುತ್ತೆಲ್ಲ ಈ ದಂಡಿದವರ ಕುಲದ ಜನರ ಬಿಡಾರ. ಇಲ್ಲಿಗೆ ಬಂದವರು ಕಡಲದೇವರಿಗೂ ಒಂದು ದಿವಸ ಅದಕ್ಕೆ ನೀರನ್ನು ಹೊತ್ತು ಎದುರಿಗೆ ಒಂದು ದೊಡ್ಡ ಹೊಂಡವನ್ನು ಅಗೆದರು. ವರ್ಷದಲ್ಲಿ ಒಂದು ದಿವಸ ಅದಕ್ಕೆ ನೀರನ್ನು ಹೊತ್ತು ತಂದು ತುಂಬಿಸಿ, ಅದಕ್ಕೆ ಪೂಜೆಮಾಡಿ, ಹಾಡಿ ಕುಣಿದು, ಆಡಿದರು. ಓಕುಳಿ ಹೊಂಡದ ಮೂಲ ಅದು. ಅವರ ದೇವರ ಹೆಸರು 'ಹೌಂದ್ರಾಯ' ಅಂತ, ಅವರ ಹಿಂದಿನವರು ಸಮುದ್ರ ಪೂಜೆ ಮಾಡಿ, ಮಳೆಗಾಲದ ಕೊನೆಗೆ ಬಲೆ ಬೀಸಲಿಕ್ಕೆ ಕಡಲಿಗೆ ಹೋಗುತ್ತಿದ್ದರು. ಇಲ್ಲೀಗ ಕಡಲು ಹತ್ತಿರ ಇಲ್ಲವಲ್ಲ. ಇಲ್ಲೇ ಒಂದು ಹೊಂಡ ಮಾಡಿ ಅದನ್ನೇ ಸಮುದ್ರ ಎಂದು ಕರೆದರು. ''ಹೌಂದ್ರಾಯ'' ಅವರಿಗೆ ಒಬ್ಬ ದೇವರಾದ.

(ಮೂಕಜ್ಜಿಯ ಕನಸುಗಳು - ೨೬೨)

ಕಾರಂತರಿಗೆ ಅವತಾರವಾದದಲ್ಲಿ ನಂಬಿಕೆ ಇಲ್ಲ, ಅವರು ಮೂಕಜ್ಜಿಯ ಬಾಯಿಯಿಂದ ತಮ್ಮ ವಾದವನ್ನು ಹೀಗೆ ಮಂಡಿಸಿದ್ದಾರೆ ಅನ್ನಿಸುತ್ತೆ :

''ಒಂದು ಎಲೆ ಉದುರಿಸಿಕೊಳ್ಳಲಿಕ್ಕೆ ಮರಕ್ಕೆ ಮರವೇ ಕುಣಿದಾಡುವುದನ್ನು ಕಂಡಿದ್ದೀಯಾ? ಅಲ್ಲದೆ ಹೋದರೂ, ನೋಡು ಮಗು, ಈ ಪಾಟಿ ಅವತಾರ ಯಾಕೆ ಅನ್ನುತ್ತೇನೆ? ಅವನಿಗೆ ಬೇರೆ ಕೆಲಸವೇ ಇಲ್ಲವೆಂತಲೇ? ದೇವರು ಎಷ್ಟು ಮಂದಿ? ಇದ್ದಾನಾದರೆ ಲೋಕಕ್ಕೆಲ್ಲಾ ಒಬ್ಬ ಸಾಲದೋ?''

''ಒಬ್ಬನೇ ಇರುವುದು: ಆದರೂ, ವಿಪ್ರರು ಬಹುದಾಃ ಅನ್ನುವುದು ಎನ್ನುತ್ತಾರಲ್ಲ.''

''ವಿಪ್ರರು ಅಂದುಕೊಳ್ಳಲಿ : ಬಾಧಕವಿಲ್ಲ. ಜನ ಏನೂ ಅನ್ನಲಿ. ಒಂದು ದೇವರು ಅವತಾರವನ್ನೆತ್ತುವುದೇ ಮಸ್ತಾಯಿತು. ಅದನ್ನು ಬಿಟ್ಟು, ವಿಷ್ಣುವೂ ಅವತಾರ ಹೊರಡಿಸುವುದೇ, ಶಿವನೂ ಹೊರಡಿಸುವುದೇ, ದುರ್ಗೆಯೂ ಹೊರಡಿಸುವುದೇ, ಪುಣ್ಯಕ್ಕೆ ಬ್ರಹ್ಮನಿಂದ ಹೆಚ್ಚು ಗಲಾಟೆಯಿಲ್ಲ. ಈ ಲೆಕ್ಕಾಚಾರದಲ್ಲಿ ನಮ್ಮ ತಲೆಗೆ ಬಂದಷ್ಟು ದೇವರು, ತಲೆಗೆ ಹಿಡಿಸದಷ್ಟು ಅವತಾರಗಳು ಎಂದಾಗುತ್ತದೆ''.

''ಮತ್ತೂ ನೋಡು, ಅವನೇ ಹುಟ್ಟಿಸಿದಂಥ ಒಂದು ಹುಳುವನು ಕೊಲ್ಲಲಿಕ್ಕೆ ಒಂದು ಅವತಾರ ಬೇಕೋ? ಎಷ್ಟು ಕೆಟ್ಟ ಮನುಷ್ಯನೇ ಇರಲಿ, ರಾಕ್ಷಸನೇ ಇರಲಿ-ದೇವರ ಮುಂದೆ ಒಂದು ಹುಳು ; ಅದಕ್ಕಿಂತಲೂ ಕಡಿಮೆ ; ಅದನ್ನು ಕೊಲ್ಲುವುದಕ್ಕೆ ಅವತಾರವೇ? ರಾವಣನನ್ನು ಕೊಲ್ಲುವುದಕ್ಕೆ ರಾಮನ ಅವತಾರ ಎಂದಿಟ್ಟುಕೋ. ದುಷ್ಟರ ಉಪದ್ರ ಶುರುವಾಯಿತು-ಎಂದು ದೂರು ಬಂದದ್ದು ಯಾವಾಗ? ಇವನು ದಶರಥರಾಯನ ಹೊಟ್ಟೆಯಲ್ಲಿ ಹುಟ್ಟಿ ಹದಿನಾರೋ, ಹದಿನೆಂಟೋ ವರ್ಷಕಾಲ ಬೆಳೆದು, ಮತ್ತು ಹದಿನಾಲ್ಕು ವರ್ಷ ಕಾಲ ವನವಾಸ ಮಾಡಿ, ರಾವಣನನ್ನು ಕೊಲ್ಲುತ್ತಾನೆ. ''ರಾವಣನ ದುಷ್ಟತನ ಹೆಚ್ಚಾಯಿತು ಎಂದು ದೂರು ಕೊಟ್ಟರೆ-ಥಟ್ಟನೆ ಹೊರಟು, ಕೊಂದು ಬಂದ. ಮೂವತ್ತೆರಡು ವರ್ಷಗಳ ಕಾಲ ಸಿಕ್ಕಿದ ಅನ್ಯಾಯ ಮಾಡಲಿಕ್ಕೆ ಅವನಿಗೆ ಪುರುಸೊತ್ತು ಕೊಡಬೇಕೇ? ಅಲ್ಲಿಯವರೆಗೆ, ಅವನನ್ನು ನಂಬಿದ ಶಿಷ್ಟರ ಗತಿಯೇನು? ಇದಂತು ನನ್ನ ಬುದ್ಧಿಗೆ ಯದ್ವಾತದ್ವಾ ಕಾಣಿಸುತ್ತದೆ''.

''ಅಲ್ಲದೆ ಮಗು, ಅವನು ಯಾರನ್ನೇ ನಾಶಮಾಡಲಿಕ್ಕೂ, ಈ ಮನುಷ್ಯ ರೂಪವನ್ನೋ, ಮತ್ತೊಂದನ್ನೊ, ತಾಳಬೇಕು ಯಾಕೆ? ಒಂದು ಸಿಡಿಲೆರಗಿಸಿದರೆ ಬೇಕಾದ್ದನ್ನು ಸುಡಬಹುದು. ಅದಕ್ಕೊಂದು ನಾಟಕ ಬೇಕೋ?''

''ಹಾಗಿದ್ದರೆ, ಇಷ್ಟೆಲ್ಲ ದೇವರು, ಅವತಾರ - ಎಲ್ಲವೂ ಸುಳ್ಳು ಅಂತೀರಾ ಅಜ್ಜಿ? ನೀವೇ ಹಾಗೆ ಹೇಳಿದರೆ?''

''ಇದೆಲ್ಲ ಅವನನ್ನು ಕಾಣುವ ನಾವು ಸಾವಿರ ಮಂದಿ ಸಾವಿರ ಬುದ್ಧಿಯವರಾದುದರಿಂದ ಅವನು ಒಬ್ಬನೇ. ಸಾವಿರ ಆದದ್ದು ನಮ್ಮಿಂದ. ಸಾವಿರ ಜನರ ಕಣ್ಣು ಕಂಡ ಮಾತ್ರಕ್ಕೆ ಒಂದು ಆಕಾಶ ಸಾವಿರ ಆಗುತ್ತದೆಯೇ? ಅಷ್ಟೇ ಹುಚ್ಚು ಇದು.''.

(ಮೂಕಜ್ಜಿಯ ಕನಸುಗಳು - ೧೩೨, ೧೩೩)

''ಒಂದು ಮಾತು ನೋಡಿ, ನಮ್ಮ ಪೂರ್ವಜರಾದ ಹಲವು ಋಷಿಗಳು ಜಗತ್ತು ಮತ್ತು ಸೃಷ್ಟಿಗಳ ವಿಚಾರದಲ್ಲಿ, ಇದು ಹೀಗೆ, ಇದೇ ಸತ್ಯ. ಇದೇ ಕೊನೆಯ ಮಾತು-ಎಂಬಂತೆ ಹೇಳಿದ್ದಾರಲ್ಲ. ಅವುಗಳನ್ನು ನೀವು, ವೇದಗಳೆನ್ನಿ, ಉಪನಿಷತ್ತುಗಳೆನ್ನಿ, ಏನೇ ಅನ್ನಿ. ತಪಸ್ಸಿನಿಂದ ತಿಳಿದುಕೊಂಡದ್ದೆನ್ನಿ ದೇವರೇ ಬಂದು ಕಿವಿಯಲ್ಲಿ ಉಸುರಿದ್ದೆನ್ನಿ. ನನಗೊಂದು ಸಂಶಯ. ಈ ವಿಶ್ವ, ಸೃಷ್ಟಿ ಇವುಗಳ ವಿಚಾರದಲ್ಲಿ ಅಲ್ಪಸ್ವಲ್ಪ ನಾನೂ ಓದಿ ತಿಳಿದುಕೊಂಡಿದ್ದೇನೆ. ಜೀವಕೋಟಿಯ ಈ ಯಾತ್ರೆಯು ಎಂದೋ ತೊಡಗಿದ್ದು ಎಲ್ಲಿಗೋ ಹೋಗುತ್ತಿದೆ. ಪಯಣ ತೊಡಗಿದೆ. ಎಷ್ಟೋ ಎಷ್ಟೋ ಕಾಲದ ಮೇಲೆ ದಾರಿಯ ರೈಲು ನಿಲ್ದಾಣದಲ್ಲಿ ಬಂಡಿಯನ್ನೇರುವ ಪಯಣಿಗನಂತೆ. ಮನುಷ್ಯ ಎಂಬ ಪ್ರಾಣಿ ಒಳಗೆ ಹೊಕ್ಕ ; ಹೊಕ್ಕವನು ಹೊಕ್ಕಂತೆ ತಿಳಿದು ಹೋಗಿಯೊ ಆಯಿತು. ಜೀವನ ಪಯಣವಂತು ಇನ್ನೂ ಮುಂದಕ್ಕೆ ಸಾಗಿದೆ ; ಅದರ ಗುರಿ ಇಂದಿನವರೆಗೂ ತಿಳಿದಿಲ್ಲ ; ಮುಂದಿನ ದಾರಿ ಎಣಿಸಲಾರದಷ್ಟು ದೂರದ್ದಾಗಿದೆ. ಅಂಥ ವೇಳೆಯಲ್ಲಿ ಯಾವನೇ ಇರಲಿ, ನಾನಿದರ ರಹಸ್ಯ ತಿಳಿದಿದ್ದೇನೆ 'ಇದೇ ಸತ್ಯ' ಎಂದು ಘಂಟಾಘೋಷವಾಗಿ ಸಾರಿದರೆ, ನಗೆಪಾಟಿಕೆಯ ಮಾತಾಗುವುದಿಲ್ಲವೆ?'' (ಅಳಿದ ಮೇಲೆ- ಪುಟ ೧೬ -೨ನೇ ಮುದ್ರಣ)

'ವ್ಯಕ್ತಿ' ಚಿಹ್ನೆ ಉಳಿಯುವುದೂ ಅಳಿಯುವುದೂ ಅವನ ಚರಿತ್ರೆಯಿಂದ. ಆ ಚರಿತ್ರೆ ನಮ್ಮ ನಮ್ಮ ಸ್ಮರಣೆಗಳನ್ನು ಚೇತನಗೊಳಿಸಿ, ನಮ್ಮ ಬದುಕಿನ ಮೂಲಕ ಜೀವಂತವಾಗಿ ಉಳಿದರೆ, ಬೆಳೆದರೆ, ಮುಂದೆ ಸಾಗಿದರೆ, ಅದೇ ಪುನರ್ಜನ್ಮ ನನಗೆ ಎನಿಸಿತು''. (ಅಳಿದ ಮೇಲೆ - ಪುಟ ೨೫)

''ಒಟ್ಟಿನಿಂದ ನನ್ನ ಮನಸ್ಸನ್ನು ಈ ಕೆಲವು ಸಮಯದಿಂದ ಕಾಡುತ್ತಿದ್ದ ಒಂದೇ ಒಂದು ಸಂಗತಿಯೆಂದರೆ- ಬದುಕಿನ ಲೆಕ್ಕಾಚಾರದಲ್ಲಿ ನಾನು ಕೊಂಡುದಕ್ಕಿಂತಲೂ ಕೊಟ್ಟದ್ದು ಕಡಿಮೆಯಾಗಬಾರದು ಎಂಬ ಭಾವನೆ. ಇದು ಬರಿಯ ಹಣದ ಲೆಕ್ಕಾಚಾರವಲ್ಲ. ಮಾನವ ಜೀವನದ ಲೆಕ್ಕಾಚಾರ ಮನುಷ್ಯಸಮಾಜದ ಋಣವನ್ನು ಹೊತ್ತುಕೊಂಡು ಬಂದಿದ್ದಾನೆ. ಅದರ ಋಣದಿಂದಲೇ ಬೆಳೆಯುತ್ತಾನೆ. ನಾಳೆ ದಿನ ಸಾಯುವಾಗ ತಾನು ಪಡೆದುದಕ್ಕಿಂತಲೂ ಹೆಚ್ಚಿನ ಋಣವನ್ನು ಸಲ್ಲಿಸಿ ಹೋದರೆ ಆತ ಹುಟ್ಟಿದಕ್ಕೊಂದು ಸಾರ್ಥಕ. ಇಲ್ಲವಾದರೆ ಅವನ ಜನ್ಮದಿಂದ ಸಮಾಜಕ್ಕೆ ನಷ್ಟ-ಎಂಬ ಭಾವನೆ ನನಗೆ.''

(ಅಳಿದ ಮೇಲೆ -ಪುಟ ೩೩)

''ಬಾಳ್ವೆಯೇ ಬೆಳಕು'' ಪ್ರಬಂಧದಲ್ಲಿ ಕಾರಂತರು ಮಂಡಿಸಿರುವ ಮುಖ್ಯ ವಿಚಾರಗಳು ಹೀಗಿವೆ :-

ಸಾವನ್ನು ಕುರಿತು ಇರುವ ಹೆದರಿಕೆಯು ಈ ಜೀವನ ಕೊನೆಗಾಣುತ್ತದೆಯೆಲ್ಲ ಎಂಬುದರಿಂದ ಅದರ ಜೊತೆಗೆ ಇರುವ ಇನ್ನೊಂದು ಭೀತಿಯೆಂದರೆ, ಸಾವಿನ ಆಚೆಗೆ ಏನಿದೆಯೋ, ಏನಾದೀತೋ ಎಂಬುದರಿಂದ ಬರುವುದು, ಹಗಲೆಲ್ಲ ಸುಖವಾಗಿ ಅಲೆದಾಡಿದ ವ್ಯಕ್ತಿ, ರಾತ್ರಿ ನಿದ್ರೆಯಲ್ಲಿ ತನಗೇನಾದೀತೋ ಎಂದು ಅಂಜಿದಂತಲ್ಲವೆ? ಈ ಎರಡನೆಯ ತೆರನ ಭೀತಿ ಇರುವಲ್ಲಿಯ ತನಕ, ಸಾವು ಸುಖಕರವೆನಿಸಲಾರದು. ನಿಜವಾಗಿ ದಿನದಲ್ಲಿ ದುಡಿದ ವ್ಯಕ್ತಿ, ರಾತ್ರಿ ನಿದ್ರೆಯನ್ನು ಎಷ್ಟು ಸುಖ, ಏನು ಸ್ವಾನಾವಿಕ ಎಂದು ತಿಳಿಯುತ್ತಾನೋ, ಅಷ್ಟೇ ಹಿತದೃಷ್ಟಿಯಿಂದ ಬದುಕಿರುವ ವ್ಯಕ್ತಿ ಸಾವನ್ನು ಕುರಿತು ತಿಳಿಯಬೇಕು. ಆದರೆ ಸಾವಿನ ಆಚೆಗೆ ಏನಿದೆಯೋ ಎಂಬ ಭೀತಿಯಿಂದ ಆ ಶಾಂತಿ ತಪ್ಪುತ್ತದೆ. ಈ ಪರಿಚಿತ ಜಗತ್ತಿನಿಂದ ಇನ್ನಾವ ಅಪರಿಚಿತ ನಾಡಿಗೆ ಹೋಗುತ್ತೇನೋ ಎಂಬ ಭೀತಿ''.

ಕಾರಂತರು ಸ್ಪಷ್ಟವಾದ ಶಬ್ದಗಳಲ್ಲಿ ಹೇಳಿದ್ದಾರೆ - ''ಸ್ವರ್ಗ ನರಕಗಳ ಆಚೆಗಿರುವ ಮೋಕ್ಷವೆಂಬುದು ಇಂಥದೇ ತರ್ಕಸರಣಿಯ ಕೂಸು. ಸಾವು-ಹುಟ್ಟುಗಳ ಅಂಜಿಕೆಗಳು ಹೆತ್ತಂತ ಕೂಸು ಅದು. ಇಂದಿನ ದಿನ ಚೆನ್ನಾಗಿ ಬಾಳಿ ಎಂದು ನುಡಿದು

ನಾಳಿನ ಗೊಡವೆಗೆ ಹೋಗದ ಧರ್ಮಗಳು ವಿರಳ. ಚಾರ್ವಾಕ ಹಾಗೆಂದನು ; ಬುದ್ಧನು ಹಾಗೆಂದ. ಚಾರ್ವಾಕನ ರೀತಿ ಬೇರೆ. ಅವನು ವ್ಯಕ್ತಿಯ ಸ್ವಾರ್ಥವನ್ನು ಬೆಳೆಯಿಸುವ ಸರಣಿಗೆ ಬೆಂಬಲವಿತ್ತಂತಿದೆ. ಬುದ್ಧ ನಾಳಿನದನ್ನು ಹೇಳದೇನೆ. ಇಂದಿನದನ್ನು ಚೆನ್ನಾಗಿ ತಿಳಿದು ಬಾಳು' ಎಂದ. ಆದರೂ ಅವನ ಕಾಲದ ನಂತರ ಹುಟ್ಟಿದ ಪುರಾಣಗಳು - ತಿರುಗಿ ಸಾವು, ಜನನ ಮರಣಗಳನ್ನು ಭೂತಾಕಾರವಾಗಿ ಮಾಡಿಟ್ಟವು. ಬುದ್ಧನನ್ನೇ ಆ ಜಂಜಾಟದಲ್ಲಿ ಅವನ ಶಿಷ್ಯರು ತೊಡಕಿಸದೆ ಬಿಡಲಿಲ್ಲ''.

ಬೌದ್ಧ ಧರ್ಮವು ನಮ್ಮ ಸಂಸ್ಕೃತಿಗೆ ಸಲ್ಲಿಸಿದ ದೊಡ್ಡ ಒಂದು ಕಾಣಿಕೆಯೆಂದರೆ- ದೇವರ ಗೊಡವೆಗೆ ಹೋಗದೆ ಜೀವನವನ್ನೆದುರಿಸಲು ಹೇಳಿದ ಪಾಠ. ನಾವು ದೇವರನ್ನು ಒಪ್ಪುತ್ತೇವೆ ಇಲ್ಲವೆ ನಿರಾಕರಿಸುತ್ತೇವೆ - ಎಂಬುದರ ಮೇಲೆ ಜೀವನದ ಧೋರಣೆ ನಿರ್ಣಯವಾಗುವುದು ಅವಶ್ಯವೆ? ಜನರು ಒಮ್ಮೆಗೆ ನಾಸ್ತಿಕವಾದವನ್ನೂ, ಆಸ್ತಿಕವಾದವನ್ನೂ ನೀತಿಯನ್ನೂ, ಜತೆಗೂಳಿಸುವಂತೆ ಕಾಣುತ್ತದೆ. ಆದರೆ ಆಸ್ತಿಕರ ಸಂಖ್ಯೆ ಬಹುವಾಗಿರುವ ಪ್ರಪಂಚದಲ್ಲಿ 'ಅನೀತಿಯ ಕುಣಿದಾಟ' ಏನೂ ಕಡಿಮೆಯಾಗಿಲ್ಲ ಎಂಬುದನ್ನು ಕಂಡರೆ, ಅಂಥ ನಂಬಿಕೆಗೆ ತಿಳಿವಿಲ್ಲೆಂದು ತೋರುತ್ತದೆ. ನಮ್ಮ ಮನಸ್ಸಿನದೇ ಪ್ರತೀಕವಾಗಿರುವ ದೇವರು ಇದ್ದರೂ, ಇಲ್ಲವಾದರೂ, ಜೀವನದ ಬದಲಾವಣೆ ಅದರಿಂದಾಗದು.''

ಬಂಡಾಯ ಸಾಹಿತಿಗಳೂ, ವಿಮರ್ಶಕರೂ, ಒಪ್ಪಲಿ ಬಿಡಲಿ, ಕಾರಂತರು ನಿಜವಾದ ಬಂಡಾಯ ಸಾಹಿತ್ಯವನ್ನು ಬರೆದವರಲ್ಲಿ ಮೊದಲಿಗರಾಗಿದ್ದಾರೆಂದು ನನ್ನ ಅನಿಸಿಕೆ. ಅವರು ನಮ್ಮ ಸಮಾಜದ ಲೋಪದೋಷಗಳನ್ನು ತಮ್ಮ ಕೃತಿಯಲ್ಲಿ ಎತ್ತಿ ಹೇಳಿದ್ದಾರೆ. ವಿಡಂಬನೆ ಮಾಡಿ ತೋರಿಸಿದ್ದಾರೆ. ತಲತಲಾಂತರಗಳಿಂದ ಧಾರ್ಮಿಕ ನಂಬಿಕೆಗಳನ್ನು ಪ್ರಶ್ನಿಸಿದ್ದಾರೆ. ನಮ್ಮ ದೇವರುಗಳು ಭೀತಿಜನ್ಯವೆಂದು ಸಾರಿದ್ದಾರೆ. ಇದು ಬಂಡಾಯ ಅಲ್ಲವೇ? ನಮ್ಮ ಪರಂಪರೆಯ ಒಳ್ಳೆಯ ಅಂಶಗಳನ್ನು ಅವರು ಗಮನಿಸಿದ್ದಾರೆ. ತಾನು ನಂಬಿದ ಧರ್ಮಕ್ಕೆ ಅನುಗುಣವಾಗಿ ಪ್ರಾಮಾಣಿಕವಾಗಿ ಬದುಕುವವರ ಬಗ್ಗೆ ಕಾರಂತರಿಗೆ ಗೌರವವಿದೆ. ಅವರ ನಂಬಿಕೆಗಳನ್ನು ಕಾರಂತರು ಒಪ್ಪದಿದ್ದರೂ, ಇಷ್ಟು ಮಾತ್ರಕ್ಕೆ ಕಾರಂತರನ್ನು ಸಂಪ್ರದಾಯವಾದಿ ಅಥವಾ ಪ್ರತಿಗಾಮಿ ಎನ್ನುವುದು ಸರಿಯಲ್ಲ.

ಬಂಡಾಯ ವಾದಿಗಳ ಮೂಲಶಕ್ತಿ ಸಂಪ್ರದಾಯವನ್ನು ವಿರೋಧಿಸುವುದು. ಕಮ್ಯುನಿಸ್ಟ್ ಕ್ರಾಂತಿಯ ಮೂಲ ಬಂಡವಾಳವೇ ಬಂಡವಾಳಶಾಹಿಗಳನ್ನು ವಿರೋಧಿಸುವುದು. The Handbook for the positive revoluton ಲೇಖಕ ಎಡ್ವರ್ಡ್ ಡಿ. ಬೋನೋ ಹೇಳಿದಂತೆ ಯಾವುದೇ ದ್ವೇಷ ತಿರಸ್ಕಾರಗಳಿಲ್ಲದೆ ಏನನ್ನಾದರೂ ವಿರೋಧಿಸದೆ ಕ್ರಾಂತಿಯನ್ನು ಮಾಡಲು ಸಾಧ್ಯ. ಈ ಹೊಸಕ್ರಾಂತಿಯು ರಚನಾತ್ಮಕವಾಗಿದೆ. ಬರಿಯ ವಿರೋಧದಿಂದ ಸಂತೃಪ್ತಿಯನ್ನು ಹೊಂದುವ ಮಾನಸಿಕ ಸ್ಥಿತಿಗೆ ಇಲ್ಲಿ ಸ್ಥಾನವಿಲ್ಲ. ಈ ಕ್ರಾಂತಿಯ ಅನುಷ್ಠಾನಕ್ಕೆ ಯಾವುದೇ ಒಂದು ವ್ಯವಸ್ಥಿತ ಸಂಸ್ಥೆಯ ಅಗತ್ಯವಿಲ್ಲ. ಇದು ತನ್ನಿಂದ ತಾನೇ ನಿರ್ಮಾಣಗೊಳ್ಳಬಲ್ಲ ವ್ಯವಸ್ಥೆಯಾಗಿದೆ. ಕಾರಂತರು ತಮಗೆ ಒಪ್ಪಿಗೆ ಆಗದ ವಿಷಯಗಳನ್ನು ನಿರ್ದಾಕ್ಷಿಣ್ಯವಾಗಿ ಟೀಕಿಸುತ್ತಿದ್ದರು. ಈ ವಿಷಯದಲ್ಲಿ ಎಡ್ವರ್ಡ್.ಡಿ.ಬೋನೋಗಿಂತ ಕಾರಂತರ ವಿಚಾರ ಬೇರೆಯಾಗಿದೆಯೆಂದು ಅನ್ನಿಸಬಹುದು. ಆದರೆ ಕಾರಂತರು ಬರಿಯ ಟೀಕೆ ಮಾಡಿ ಸುಮ್ಮನಾಗದೆ. ಪರಿಸ್ಥಿತಿಯ ಬದಲಾವಣೆಗೆ ತಮ್ಮ ಕೈಯಿಂದ ಸಾಧ್ಯವಾದಷ್ಟು ಹೆಣಗಾಡುತ್ತಿದ್ದರು. ಪರಿಸರ ನಾಶದಿಂದ ಕ್ರುದ್ಧರಾದ ಕಾರಂತರು ಸರ್ವೋಚ್ಚ ನ್ಯಾಯಾಲಯದ ಬಾಗಿಲನ್ನು ತಟ್ಟಿದ್ದರು - ತಮ್ಮ ಇಳಿ ವಯಸ್ಸಿನಲ್ಲಿಯೂ.

ಬಂಡಾಯದ, ವಿದ್ರೋಹದ ಮಾತನಾಡುವ ಎಷ್ಟೋ ಜನ ಸಾಹಿತಿಗಳ, ವಿಮರ್ಶಕರ ನಿಜ ಜೀವನಕ್ಕೂ ಕಾರಂತರು ಬಾಳುತ್ತಿರುವ ರೀತಿಗೂ ಹೋಲಿಕೆ ಮಾಡಿದರೆ ಹತ್ತಾರು ಸಂದರ್ಭಗಳಲ್ಲಿ ಕಾರಂತರನ್ನು ಗೇಲಿ ಮಾಡಿದ, ಟೀಕಿಸಿದ ಈ ವ್ಯಕ್ತಿಗಳ ಬಾಳು ಜೊಳ್ಳು ಎನ್ನುವುದು ವ್ಯಕ್ತವಾಗುತ್ತದೆ. ದಲಿತರ ಬಗ್ಗೆ ಮೊಸಳೆ ಕಣ್ಣೀರು ಸುರಿಸುವವರೆಲ್ಲಾ ದೊಡ್ಡ ಸಾಹಿತಿಗಳಾಗಲಾರರು, ಬ್ರಾಹ್ಮಣರನ್ನು ಬೈದೊಡನೆ ಅದು ಶ್ರೇಷ್ಠ ದಲಿತಸಾಹಿತ್ಯವಾಗುತ್ತದೆ ಎನ್ನುವ ಭ್ರಮೆ ಬಹಳ ಜನರಲ್ಲಿದೆ. ನುಡಿದಂತೆ ನಡೆ ಎನ್ನುವ ನಾಣ್ಣುಡಿಯನ್ನು ಅಕ್ಷರಶಃ ಪಾಲಿಸುವ ಕೆಲವೇ ಸಾಹಿತಿಗಳಲ್ಲಿ ಕಾರಂತರಿಗೆ ಅಗ್ರಪಟ್ಟ ಸಲ್ಲುತ್ತದೆ.

ವೇದಾಂತದ ಶಬ್ದಗಳನ್ನು ಬಾಯಿಪಾಠ ಮಾಡಿ, ಬ್ರಹ್ಮನ ವಿಷಯದಲ್ಲಿ, ಜ್ಞಾನಭಕ್ತಿಗಳ ವಿಷಯದಲ್ಲಿ, ಮೋಕ್ಷಸಾಧನೆಯ ವಿಷಯದಲ್ಲಿ ಉದ್ದುದ್ದ ಮಾತನಾಡುವವರು ಚಪಾತಿ ಚೆನ್ನಾಗಿಲ್ಲ ಎಂದು ರೇಗಾಡಿದ ಕತೆಯನ್ನು ''ಅಳನಿರಾಳ'' ಕಾದಂಬರಿಯಲ್ಲಿ ಕಾರಂತರು ಹೇಳಿದ್ದಾರೆ. ಎಲ್ಲರೂ ತಮ್ಮಷ್ಟೇ ಪ್ರಾಮಾಣಿಕರಾಗಬೇಕೆಂದು ಕಾರಂತರು ಅಪೇಕ್ಷಿಸುತ್ತಾರೆ.

ವರ್ಗ ವರ್ಗಗಳೊಳಗೆ, ಜಾತಿ ಜಾತಿಗಳೊಳಗೆ ಘರ್ಷಣೆಯನ್ನು ಉಂಟುಮಾಡಿ ಸಮಾಜದ ಶಾಂತಿಯನ್ನು ಕೆಡಿಸಿ ಬಡವರ ಜೀವನಮಟ್ಟದಲ್ಲಿ ಯಾವುದೇ ಸುಧಾರಣೆಯನ್ನು ಮಾಡಲಾಗದೆ ಕ್ಷೀಣಿಸುತ್ತಿರುವ ಕ್ರಾಂತಿಯ ದಿನಗಳು ಮುಗಿದುವು. ಕಾರಂತರು ತೋರಿಸಿದ ಪಥದಲ್ಲಿ ಭಾರತವನ್ನು ಕೊಂಡೊಯ್ದಲ್ಲಿ, ನೋವಿಲ್ಲದ ಶಸ್ತ್ರಕ್ರಿಯೆಯಂತೆ ನವಭಾರತ ನಿರ್ಮಾಣವು ಯಶಸ್ವಿಯೂ ಕ್ಲೇಶರಹಿತವೂ ಆಗುವುದರಲ್ಲಿ ಸಂದೇಹವಿಲ್ಲ.

●

ಶೂನ್ಯ ಸಂಪಾದನೆಯ ಅಧ್ಯಯನ : ಒಂದು ನೋಟ

ಪ್ರೊ॥ ಸಾ.ಕೃ. ರಾಮಚಂದ್ರರಾವ್

ಪ್ರಪಂಚದ ಮೇರುಕೃತಿಗಳಲ್ಲಿ 'ಪ್ರಭುದೇವರ ಶೂನ್ಯಸಂಪಾನೆ' ಒಂದು. ಅದು ಜಗತ್ತಿನಲ್ಲಿ ಹರಡಿಕೊಂಡ ಯಾವುದಾದರೊಂದು ನುಡಿಯಲ್ಲಿದ್ದರೆ. ವಿಶ್ವವಿಖ್ಯಾತ ವಾಗುತ್ತಿದ್ದಿತು. ಅಧ್ಯಾತ್ಮಸಾಹಿತ್ಯದಲ್ಲಿ ಅನರ್ಘ್ಯರತ್ನವಾಗಿ ಸಾಧಕರಿಗೆ ಕೈದೀವಿಗೆಯಾಗುತ್ತಿದ್ದಿತು. ಆದರೇನು ಮಾಡುವುದು? ಅದು ಕನ್ನಡದಲ್ಲಿದೆ. ಮತೀಯ ಚೌಕಟ್ಟಿನೊಳಗೆ ನುಸುಳಿಕೊಂಡು ಬಿಟ್ಟಿದೆ. ಕನ್ನಡಿಗರ ನಿರುತ್ಸಾಹದಿಂದಾಗಿ ಅದು ವಿಶ್ವಮಾನ್ಯತೆಯಿಂದ ವಂಚಿತವಾಗಿದೆ. ಕನ್ನಡಿಗರಿಗಾದರೂ ಅದು ರುಚಿಸಿದೆಯೇ, ಉಪಯುಕ್ತವಾಗಿಯೇ ಎಂದರೆ ಹೌದೆನ್ನುವುದು ಅಷ್ಟು ಸುಲಭವಲ್ಲ. ಇಂಥ ಪರಿಸ್ಥಿತಿಯಲ್ಲಿ ಶೂನ್ಯಸಂಪಾದನೆಯ ಅಧ್ಯಯನಕ್ಕೆ ಸೊಗಸಾದ ಭೂಮಿಕೆಯೊಂದ ನ್ನೊದಗಿಸಿ ನಮ್ಮ ಮರುಳಯ್ಯನವರು ಉಪಕರಿಸಿದ್ದಾರೆ. ಇದನ್ನು ಓದುತ್ತ ಓದುತ್ತ ನಾನು ಮೈಮರೆತಿದ್ದೇನೆ. ಅದರ ಭಾವ ಬಂಧುರತೆಯಲ್ಲಿ ಲೀಯಗೊಂಡಿದ್ದೇನೆ. ಮರುಳಯ್ಯನವರು ಸಜ್ಜನರು, ಸುಸಂಸ್ಕೃತರು, ಸೌಜನ್ಯಮೂರ್ತಿಗಳು ಎಂಬುದನ್ನು ನಾನು ಅರಿತಿದ್ದೆ; ಆಧ್ಯಾತ್ಮಿಕವಾದ ಆಳದಲ್ಲಿಯೂ ಇಳಿದಿದ್ದಾರೆ ಏಂಬುದು ಈ ಪುಸ್ತಕವನ್ನೋದುವಾಗ ತಿಳಿದುಕೊಂಡೆ. ಅವರ ಮೇಲಿದ್ದ ಗೌರವ ಇಮ್ಮಡಿಯಾಯಿತು.

ಋಗ್ವೇದದ ಹರವಿನಲ್ಲಿ 'ನಾಸದೀಯಸೂಕ್ತ' ವೆಂಬುದೊಂದು ಭಾಗ ಇದೆಯಲ್ಲವೆ? ಅದೊಂದು ಭಾವಗರ್ಭಿತವಾದ, ಉದಾತ್ತ ಚಿಂತನೆಯ, ರಹಸ್ಯತಾತ್ಪರ್ಯದ ಸೂಕ್ತ. ಅದರ ವಿಸ್ತೃತ ವಿವರಣೆಯೇ ಶೂನ್ಯ ಸಂಪಾದನೆಯ ಸಾರಭಾಗವೆನ್ನಬಹುದು. ಹೀಗೆಂದ ಮಾತ್ರಕ್ಕೆ ಅದರದ್ದೇ ಪ್ರೇರಣೆಯೆಂದಾಗಲಿ, ಅದರ ಜಾಡನ್ನೇ ಹಿಡಿದು ಇದು ಮೈದಳೆದಿದೆಯೆಂದಾಗಲಿ ಅರ್ಥವಲ್ಲ. ಆ ಸೂತ್ರವನ್ನು ಕಂಡುಕೊಂಡ ಋಷಿಯ ಕಾಣ್ಕೆ ಅವನಿಗೆ ಮಾತ್ರ ಮೀಸಲಿಲ್ಲ. ಅಲ್ಲಮರೂ ಋಷಿಗಳೇ. ಅವರ ಕಾಣ್ಕೆಯೂ ಲೋಕೋತ್ತರವಾದದ್ದು, ಅತಿ ಕ್ರಾಂತವಾದದ್ದು. ಅಂಗವನ್ನು ಮೀರಿ

ಲಿಂಗವನ್ನು ಕಂಡುಕೊಂಡದ್ದು ಆ ಕಾಣ್ಕೆ. ಅರಸುತ್ತಲರಸುತ್ತ ಬಂದು ಭಾವಕ್ಕೆ ಅಗಮ್ಯನಾದ, ಮಣ್ಣ ಮರೆಯ ದೇಗುಲದೊಳಗಣ ಮಾಣಿಕ್ಯದಂತೆ ಬೆಳಗುತ್ತಿದ್ದ ಅನಿಮಿಷಯ್ಯನನ್ನು ಕಂಡು ಕೊಂಡಾಗ -

'ಎನ್ನ ಅರಿವಿನ ಹರವ ಕಂಡೆನಯ್ಯ
ಎನ್ನ ಒಳ ಹೊರಗೆ ಸರ್ವಾಂಗ ಪರಮ ಪ್ರಕಾಶದೊಳು
ಬೆಳಗುವ ಜ್ಯೋತಿಯ ಕಂಡೆನಯ್ಯ ।'

ಈ ಬೆಳಕು ಎಂಥದು? ಎತ್ತೆತ್ತಲೂ ಇರುವಂಥದು, 'ಸರ್ವಾಂಗ ಪರಮಪ್ರಕಾಶ'. ಅದು ಇರದೆಡೆ ಇಲ್ಲ, ಅದು ಬೆಳಗದ ವಸ್ತುವಿಲ್ಲ. ಒಳ ಹೊರಗೆ ಬೆಳಗುವಂಥದ್ದು. ಕತ್ತಲೆಯಾಚೆ ಇರುವ ಬೆಳಕು ಅದು, ಕತ್ತಲೆಯನ್ನು ಬಡಿದೋಡಿಸುವ ಬೆಳಕು. ಅದು ಇದ್ದಲ್ಲಿ ಕತ್ತಲೆಗೆ ಠಾವಿರದು. ಅದನ್ನು ಪ್ರಭುದೇವರು ಅರಿವಿನ ಹರವು ಎಂದು ಗುರುತಿಸುತ್ತಾರೆ. ಇದು, ಅದು ಎಂಬ ಅರಿವಿದ್ದರೆ ಅದು ಅರಿವಿಗೆ ಮೇರೆ. ಸಂಸಾರದೊಳಗಣ ಅರಿವು ಎಂದರೆ ಅದಕ್ಕೆ ಹರವು ಇರುವುದಾಗದು. ಅರಿವಿನ ಹರವಾದರೆ ಸಂಸಾರದ ನಂಟು ಇಲ್ಲದ್ದು. ಸಂಸಾರದಲ್ಲಿ ಅರಿವುಂಟು, ಹರವಿಲ್ಲ. ಅದರಾಚೆ ಹರವು ಉಂಟು, ಅದರ ಅರಿವಿಲ್ಲ. ಅರಿವನ್ನು ಮರೆತು ಹರವಿನಲ್ಲಿ ಬಯಲಾಗುವುದು ಶೂನ್ಯ. ನಾಸದೀಯಸೂಕ್ತದ ಒಕ್ಕಣೆಯಲ್ಲಿಯೂ ಧ್ವನಿಸುವುದು ಇದೇ ನಿಃಶಬ್ದದ ಶಬ್ದ.

ಅಲ್ಲಮಪ್ರಭುದೇವರ ಕಾಣ್ಕೆ ನಮಗೆ ಇನ್ನಷ್ಟು ಹತ್ತಿರವಾದುದು. ಇಹವನ್ನು ಬಿಡದೆ ಪರವನ್ನು ಮರೆಯದಿರುವ ಕಾಣ್ಕೆ ಅದು. ಎಲ್ಲೆಲ್ಲಿಯೂ ಇದ್ದರೂ 'ಅಲ್ಲಿ' ಎಂದಾದುದನ್ನು 'ಇಲ್ಲಿ'ಯೇ ಪಡೆದುಕೊಳ್ಳಲು ಎಲ್ಲರಿಗೆ ನೆರವಾಗುವ ಕಾಣ್ಕೆ. ಅವರದೊಂದು ನುಡಿ ನಾಸದೀಯ ಸೂಕ್ತದ ಮೊದಲ ಸಾಲುಗಳನ್ನೆ ನೆನಪಿಗೆ ತರುತ್ತದೆ; ಅಲ್ಲಿನ ಒಗಟನ್ನು ಬಿಡಿಸುತ್ತದೆ ಕೂಡ -

'ಇಲ್ಲದಲ್ಲಿ ಇಲ್ಲವಿದ್ದಿತ್ತು
ಇಲ್ಲವೆಂಬುದು ಉಂಟು ನೋಡಾ ।
ಉಂಟೆಂದಲ್ಲಿ ಇಲ್ಲ ಉಂಟಾಯಿತ್ತು
ಉಂಟೆಂದು ತಿಳಿದರೆ ಆ ಇದೆ ಇಲ್ಲ ।'

ಇಲ್ಲವೆಂದರೆ ಅಸತ್ತು; ಅಸತ್ತೆಂಬುದು ಉಂಟು ಎಂದರೆ ಅದು ಅಸತ್ತು ಹೇಗೆ? 'ನ ಅಸದ್ ಆಸೀತ್, ನೋಸದ್ ಆಸೀತ್' (ಅಸತ್ತೂ ಇರಲಿಲ್ಲ, ಸತ್ತೂ ಇರಲಿಲ್ಲ). ಶೂನ್ಯವೆಂದರೆ ಇಲ್ಲದುದು, ಬಯಲು, ಯಾವುದೂ ಅಲ್ಲದ್ದು, ಏನನ್ನೂ ಒಲ್ಲದ್ದು. ಅದೇ ಇಲ್ಲವೆಂದರೆ ಬೇರೆಲ್ಲವೂ ಇದೆ ಎಂದಾಯಿತಲ್ಲವೆ? ಬೇರೆಲ್ಲವೂ ಇದೆಯೆಂದಾಗ ಇಲ್ಲವೆಂಬುದು ಇಲ್ಲವಾಯಿತಲ್ಲ? ಅಸತ್ತು ಅಸತ್ತಾದಾಗ ಸತ್ತು ಸ್ಪಷ್ಟವಾಯಿತಲ್ಲ? ಅಸತ್ತಿನಿಂದ ಸತ್ತಿಗೆ ಸರಿಯುವುದು ಋಷಿಯ ಬಯಕೆ. ಇಲ್ಲವೆಂಬುದನ್ನು ಹಿಡಿಯುವುದು ಹೇಗೆ? ಪಡೆದುಕೊಳ್ಳುವುದು ಹೇಗೆ? ಇಲ್ಲವೆಂಬುದರಲ್ಲಿ ಅಡಗಿರುವ ಉಂಟೆಂಬುದನ್ನಾದರೆ ಹಿಡಿಯಬಹುದು, ಪಡೆದುಕೊಳ್ಳಲಾದೀತು, ಅನುಭವದಲ್ಲಿ ತಂದುಕೊಳ್ಳಬಹುದು.

'ಇಲ್ಲದಲ್ಲಿ ಇಲ್ಲವಿದ್ದಿತ್ತು' ಎನ್ನುವಾಗ ಮೊದಲನೆಯ ಇಲ್ಲವೆಂಬುದು ಶೂನ್ಯ, ನಿರ್ಗುಣ. ತೋರಿಯಡಗುವ ವ್ಯವಹಾರದ ಸಾಮಗ್ರಿಯೆಲ್ಲವೂ ದಿಟವಾಗಿ ಇಲ್ಲದ್ದೇ. ದೃಶ್ಯ ಪ್ರಪಂಚವೆಲ್ಲ ಇಲ್ಲದ್ದೇ. ಎಂದರೆ, ಮೊದಲಿಗೆ ಇರದೆ, ಈಗ ಇರುವಂತೆ ತೋರಿಕೊಂಡು, ಮುಂದೆ ಮರೆಯಾಗುವಂಥದೇ ಯಾವುದು ಮೊದಲು ಇರದೆ, ಮುಂದೆಯೂ ಇರಲಾರದೋ ಅದು ಈಗಲೂ ಇರದೆಂದೇ ತಾತ್ಪರ್ಯ. ('ಆದಾವಂತೇ ಚ ಯನ್ನಾಸ್ತಿ ವರ್ತಮಾನೇಽಪಿ ತತ್‌ತಥಾ'). ಇದ್ದಂತೆ ತೋರಿಕೊಂಡ ಮಾತ್ರಕ್ಕೆ ಅದು ಇದ್ದಂತಾಯಿತೆ? ಇಲ್ಲದ್ದು ಇರುವಂತೆ ತೋರಿಕೊಳ್ಳುವುದೇ ಮಾಯೆ. ಇಲ್ಲ, ಉಂಟು ಎಂಬೆರಡರ ನಡುವೆ ಇದ್ದುಕೊಂಡು ಎರಡನ್ನೂ ಬೇರ್ಪಡಿಸುವುದು ಮಾಯೆಯೇ.

ಅದೊಂದು ಅಡ್ಡಗೋಡೆ. ಈ ತಡೆಗೆ ಮಾಯಾಸಕ್ತರು, ಆ ಕಡೆಗೆ ಮಾಯಾಶಕ್ತರು. ಮಾಯೆಯೆಂಬುದನ್ನರಿಯದೆ ಇಲ್ಲದ್ದರಲ್ಲಿ ತೊಡಗಿದವರು ಈ ಕಡೆಯವರು; ನಾವೆಲ್ಲ. ಅಲ್ಲಮರಂಥವರು ಮಾಯೆಯನ್ನರಿತುಕೊಂಡು ನಿರ್ಮಾಯರಾದವರು, ಮಾಯೆಯನ್ನು ಮೆಟ್ಟಿನಿಂತವರು ಮಾಯಾಶಕ್ತರು. ಆಸಕ್ತಿಯೊಂದಿದ್ದರೆ ದಿಟವಾಗಿ ಇರದುದೂ ಇರುವಂತೆ ತೋರಿಕೊಳ್ಳುತ್ತದೆ. ಆಸಕ್ತಿಯ ಏರುಪೇರಿನಿಂದಾಗಿ ಇಲ್ಲ - ಉಂಟುಗಳೂ ತೋರಿಯಡಗುತ್ತವೆ. ವ್ಯವಹಾರದ ಉಂಟೆಂಬುದಾಗಲಿ ಇಲ್ಲವೆಂಬುದಾಗಲಿ, ಅವೆರಡನ್ನೂ ಮೀರಿ ನಿಂತ ಉಂಟೆಂಬುದರ ನೆಲೆಗಟ್ಟಿನಲ್ಲೇ ನಿಲ್ಲುವುವು. ಆಚೆಯ ಉಂಟು ಎಂಬುದು ಈಚೆಯ ಇಲ್ಲ - ಉಂಟು ಎರಡನ್ನೂ ಮೀರಿದ್ದು. ಈ ಕಡೆಯಿಂದ ನೋಡಿದಾಗ ಅದು ಇರದು; ಆ ಕಡೆಯಿಂದ ನೋಡಿದಾಗ ಇದು ಎರಡೂ ಕಡೆ ಇರುವಂಥದು, ಈ ಕಡೆ ಮಾತ್ರ ಇರುವುದು ದಿಟವಾಗಿ ಇಲ್ಲದ್ದು.

ಅಲ್ಲಮರ ಅನುಭವವನ್ನು ನೋಡಿ -

'ಅಡವಿಯ ಸುಟ್ಟು ಆಕಾಶವ ಹೊಕ್ಕು
ಗೊಹೇಶ್ವರ ಲಿಂಗದಲ್ಲಿ
ಗುರುಕಾರುಣ್ಯ ಪಡೆದೆನು'.

ಈ ಕಡೆ ಇರುವುದು ಅಡವಿ ; ಆ ಕಡೆಯದು ಆಕಾಶ. ಅಡವಿಯನ್ನು ಸುಟ್ಟ ಮೇಲೆ ಇರುವುದು ಬಯಲೇ, ಎಂದರೆ ಆಕಾಶ. ಅಡವಿಯನ್ನಾದರೆ ಸುಡಬಹುದು; ಆಕಾಶವನ್ನು ಸುಡುವುದು ಹೇಗೆ? ಸುಡುವುದೆಂದರೆ ಉಂಟು ಎಂಬುದನ್ನು ಇಲ್ಲವಾಗಿಸುವುದು. ಈ ಕಡೆಯಲ್ಲಿನ 'ಉಂಟು' ದಿಟವಾಗಿ ಇಲ್ಲದ್ದೇ. ದಿಟವಾಗಿ ಇಲ್ಲದೆ, ಇರುವಂತೆ ತೋರಿಕೊಳ್ಳುವುದನ್ನು ಅಡಗಿಸಬಹುದು, ಮರೆಸಬಹುದು. ಸುಡುವುದರ ತಾತ್ಪರ್ಯ ಇದೇ. ಮತ್ತೆ ಅಲ್ಲಮರ ಅಡವಿಯೆನ್ನುವುದು ನಾಸದೀಯ ಸೂಕ್ತದ 'ಗಹನಂ ಗಭೀರಂ' ಎಂಬ ಮಾತನ್ನೇ ನೆನಪಿಗೆ ತರುತ್ತದೆ. ಅಡವಿಯಲ್ಲಿ ದಿಟ್ಟವಾದ ಕತ್ತಲೆ; ಬೆಳಕಿನ ಸುಳಿವಿಲ್ಲ. ನಾಸದೀಯ ಸೂಕ್ತ ಹೇಳುವಂತೆ, ಕತ್ತಲೆಯನ್ನೂ ಅಡಗಿಸಿ ಮುಚ್ಚುವ ಕಗ್ಗತ್ತಲೆ ('ತಮ ಆಸೀತ್ ತಮಸಾ ಗೂಢಂ ಅಗ್ರೇ') ಕತ್ತಲೆಯೆಂಬುದನ್ನೂ ಅರಿಯಲಾರದಷ್ಟು ಕುರುಡು ಕತ್ತಲೆ; ಇನ್ನು ಕವಿದಿರುವ ಕತ್ತಲೆಯನ್ನು ಕಳೆದುಕೊಳ್ಳುವುದು ಹೇಗೆ?

'ಅಡವಿಯನ್ನು ಸುಡುವ' ಮಾತಿಗೆ ಸಂವಾದಿಯಾಗಿ 'ಕರ್ಪೂರದ ಪುತ್ಥಳಿಗೆ ಅಗ್ನಿಯ ಸಿಂಹಾಸನವನಿಕ್ಕುವ' ಇನ್ನೊಂದು ಮಾತು ಇದೆ. ಕಣ್ಣನ್ನು ಸೆಳೆಯುವ, ಮನಸ್ಸನ್ನು ಸಂತೋಷಗೊಳಿಸುವ ಪುತ್ಥಳಿ ತಾನೇ ಆದದ್ದಲ್ಲ; ಮಾಯೆಯೆಂಬ ಶಿಲ್ಪಿಯಿಂದ ಆದುದು. ಹುಟ್ಟಿಕೊಂಡದ್ದು ತೀರಿಕೊಳ್ಳದೆ ಇರಲಾದೀತೆ? ಪುತ್ಥಳಿಯ ದ್ರವ್ಯ ಏನಾದರಾಗಲಿ ವಿಕಾರಗೊಳ್ಳುವುದೇ; ಎಂದು ಒಂದೇ ತೆರನಾಗಿ ಇರುವುದಲ್ಲ. ಅದು ಕರ್ಪೂರದಿಂದಲೇ ಮಾಡಿದ ಪುತ್ಥಳಿ ಎಂದ ಮೇಲೆ ಅದರ ಅಸ್ಥಿರತೆಯನ್ನು ಹೇಳುವುದೇನು? ಗಾಳಿಗೇ ಇಂಗಿ ಹೋಗುವುದು ಕರ್ಪೂರ; ತೋರಿಕೊಂಡೊಡನೆ ಮರೆಯಾಗುವುದು. ಅದಕ್ಕೆ ಸೊಡರು ಸೋಕಿದರಂತೂ ಮುಗಿಯಿತಲ್ಲ ಅದರ ಕತೆ? ಅಲ್ಲಮರ ಅರಿವು ಬೆಂಕಿಯಂಥದು. ಅದರ ಹೊಳಹು, ಬೆಳಕು, ಸೊಬಗು, ಸೊಗಸು ಎಲ್ಲವನ್ನೂ ಸೂಚಿಸುವ ಮಾತು 'ಅಗ್ನಿಯ ಸಿಂಹಾಸನ'ವೆನ್ನುವುದು. ಈ ಸಿಂಹಾಸನದ ಮೇಲೆ ಕುಳಿತ ಕರ್ಪೂರವು ಉಳಿಯುವುದಿಲ್ಲ, ಬೆಳಗುತ್ತದೆ; ಇರುವುದಿಲ್ಲ, ಇಲ್ಲವಾಗುತ್ತದೆ. ಇದೇ ಶೂನ್ಯದ ಸಂಪಾದನೆ.

'ಅಂಗ', 'ಲಿಂಗ' ಎರಡೂ ಕೂಡಿ ಒಂದು ಸ್ಥಳ; ಅದೇ ತತ್ತ್ವ. ಎರಡು ಒಂದಾಗುವಂತೆಯೇ, ಒಂದು ಎರಡಾಗುತ್ತದೆ. ಅಂಗವೆಂಬುದು ಇಲ್ಲಿ, ಲಿಂಗವೆಂಬುದು ಅಲ್ಲಿ. ಇಲ್ಲಿ ಪಿಂಡ, ಅಲ್ಲಿ ಆತ್ಮ, ಇಲ್ಲಿ ಸುರಾಳ, ಅಲ್ಲಿ ನಿರಾಳ, ಇಲ್ಲಿ ಶೂನ್ಯ, ಅಲ್ಲಿ ನಿಃಶೂನ್ಯ ಎರಡರ ನಡುವೆ ಇರುವ ನಂಟು ಎಂಥದೆಂಬುದೂ ಅವರ ಮಾತುಗಳಲ್ಲಿ ತಿಳಿಯುತ್ತದೆ.

'ನೀರಬೊಂಬೆಗೆ
    ನಿರಾಳದ ಗೆಜ್ಜೆಕಟ್ಟಿ
ಬಯಲಗೊಂಬೆಯ
    ಕೈಯಲಿ ಕೊಟ್ಟು
ಮುದ್ದಾಡಿಸುವ ತೆರ'

ಗುಪ್ತಯೋಗದ ಅಜಗಣ್ಣಗಳ ವಿಚಾರವಾಗಿ ಆಡಿದ ಮಾತುಗಳಿವು. ನೀರಿನಿಂದ ಬೊಂಬೆ ಮಾಡುವುದು. ಮಾಯೆಯ ಕೈಚಳಕ. ಆದರೆ ಅದು ಆಡುವಾಗ ನಿರಾಳದ ಗೆಜ್ಜೆ ಬೇಕು. ಮಾಯೆಗೊಂದು ನೆಲೆ ಬೇಡವೆ? ನೀರಗೊಂಬೆ ಅಂಗಸ್ಥಳ; ಬಯಲಗೊಂಬೆ ಲಿಂಗಸ್ಥಳ. ಮೊದಲನೆಯದು ಜೀವ, ಎರಡನೆಯದು ಅದಕ್ಕಾಸರೆಯಾದ ಶಿವ. 'ಕಲ್ಲೊಳಗಣ ಪಾವಕ', 'ಬೀಜದೊಳಗಣ ವೃಕ್ಷ', 'ಶಬ್ದದೊಳಗಣ ನಿಃಶಬ್ದ' ಎಂದು ಮುಂತಾಗಿ ಉಪಮೆಗಳನ್ನು ಗಮನಿಸಿದಾಗ ಅವೆರಡರ ನಡುವಣ ನಂಟು ಸ್ಪಷ್ಟವಾಗುತ್ತದೆ. 'ಅಂಗವು ಲಿಂಗದಲ್ಲಿ ಲೀಯವಾಯಿತು', 'ಪ್ರಾಣವು ಅರಿವಿನಲ್ಲಿ ಬೆರೆಯಿತು' ಎಂದೆಲ್ಲ ಅನುಭವದ ಮಾತುಗಳು.

ಅಲ್ಲಮರ ಎಣಿಕೆಯಲ್ಲಿ 'ಅರಿವು', 'ಮರೆವು' ಮುಖ್ಯವಾದ ನೆಲೆಗಳು. ಉಂಟು ಎಂಬುದನ್ನು ಅನುಭವಕ್ಕೆ ತಂದುಕೊಳ್ಳುವುದು ಅರಿವು; ಉಂಟು ಎಂಬುದನ್ನು ಅನುಭವಕ್ಕೆ ತಂದುಕೊಳ್ಳದೆ, ಅದರತ್ತ ಗಮನವನ್ನೂ ಹರಿಸದಿದ್ದರೆ ಅದು ಮರೆವು. ಮರೆವು ಮರೆಯಾದಾಗ ಅರಿವು. ಆದರೆ ಅರಿವನ್ನೂ ಮರೆತಲ್ಲದೆ ಶಿವಯೋಗವಿರದು. 'ಅರಿವರತು ಮರೆವು ನಷ್ಟವಾದರೆ', 'ಅರಿವಿನೊಳಗಣ ಮರಹಿದೇನು ಹೇಳಾ' ಈ ಮೊದಲಾದ ನುಡಿಗಳನ್ನೂ ನೋಡಬೇಕು. ಒಂದು ಹಂತದಲ್ಲಿ ಅರಿವು ಜ್ಞಾನ, ಮರೆವು ಮಾಯೆ :

'ತನ್ನ ತಾನರಿದಡೆ ನುಡಿಯೆಲ್ಲ ತತ್ತ್ವ ನೋಡಾ
ತನ್ನ ತಾ ಮರೆದೆಡೆ ನುಡಿಯೆಲ್ಲ ಮಾಯೆ ನೋಡಾ ।'

ತನ್ನ ತಾನರಿಯುವುದೊಂದು ತೆರ; ತನ್ನೊಳಗಿರುವ ಗೊಹೇಶ್ವರನೆಂಬ ಅರಿವು ಇನ್ನೊಂದು ತೆರ. ಎರಡೂ ಅರಿವುಗಳೇ. ಆದರೆ ಗೊಹೇಶ್ವರನನ್ನು ಅರಿತಾಗ ತನ್ನ ಅರಿವು ಮರೆವೆಗೆ ಪಕ್ಕಾಗುತ್ತದೆ. ತಾನರಿಯವುದು ಮೊದಲ ನೆಲೆ. ಸ್ವಾನುಭವವನ್ನು ಎತ್ತಿ ಹಿಡಿದ ಸಿದ್ಧರಾಮನ ಮಾತು -

'ಗೊಹೇಶ್ವರನೆಂಬ ಲಿಂಗವನಱಿಯಲು
ನಿನ್ನೊಳಗೆ ತಿಳಿದು ನೋಡಾ ಸಿದ್ಧರಾಮಯ್ಯ।'

ಸಾಧಕರಿಗೆ ಅವನದ್ದೇ ಕಿವಿ ಮಾತು -

'ದೇಹಭಾವವಳಿದಲ್ಲದೆ ಜೀವಭಾವವಳಿಯದು
ಜೀವಭಾವವಳಿದಲ್ಲದೆ ಭಕ್ತಿಭಾವವಳವಡದು
ಭಕ್ತಿ ಭಾವವಳವಟ್ಟಲ್ಲದೆ ಅರಿವು ತಲೆದೋರದು
ಅರಿವು ತಲೆದೋರಿದಲ್ಲದೆ ಕುರುಹು ನಷ್ಟವಾಗದು
ಕುರುಹು ನಷ್ಟವಾದಲ್ಲದೆ ಮಾಯೆ ಹಿಂಗದು'

ಇನ್ನು ಅಲ್ಲಮರ ನಿಲುವು ಸ್ಪಷ್ಟವಾಗಿಯೇ ಇದೆ -

'ಅರಿದೆನೆಂಬುದು ತಾ ಬಯಲು
ಅರಿಯೆನೆಂಬುದು ತಾ ಬಯಲು
ಮರೆದೆನೆಂಬುದು ತಾ ಬಯಲು
ಅರುಹಿನ ಕುರುಹಿನ ಮರಹಿನೊಳು
ಗುಹೇಶ್ವರನೆಂಬುದು ತಾ ಬಯಲು'

ಗೊಹೇಶ್ವರನೇ ಶೂನ್ಯ ('ಇಲ್ಲವೆಂಬುದು ಉಂಟು') ಸಾಧಕರ ಗುರಿ ಅದೇ. ಅದನ್ನು ಮುಟ್ಟಲು ಅರಿವು ಮೊದಲ ಹೆಜ್ಜೆ. ಅದರಿಂದ ಸಂಸಾರದ ಕುರುಹು. ತನ್ನ ತಾನರಿತ ಕುರುಹು ಎರಡೂ ಇಲ್ಲವಾಗಬೇಕು. ಇದು ಎರಡನೆಯ ಹೆಜ್ಜೆ. ಇದೇ

ಕುರುಹಿನ ಮರೆವು. ಎರಡೂ ಶೂನ್ಯದ ನೆಲೆಗಳೇ, ಬಯಲುಗಳೇ, ಈ ಬಯಲುಗಳನ್ನು ದಾಟಿ ತಾನೂ ದಾರಿಯೂ ಬಯಲಾದಾಗಲೇ ಗೊಹೇಶ್ವರನೆಂಬ ಬಯಲು. ಅದು ಬಟ್ಟಬಯಲು; ಜೀವವೇ ಶಿವವಾದ ಬಯಲು. ಇಂಥ 'ಬಯಲಿಂಗೆ ಭ್ರಮೆಯುಂಟೆ?' ಎಂದು ಕೇಳುತ್ತಾರೆ ಅಲ್ಲಮರು.

'ನಿನ್ನೊಳಗೆ ನಿನ್ನ ತಿಳಿದು ನೋಡಲು ಭಿನ್ನವುಂಟೆ?
ಗೊಹೇಶ್ವರ ಲಿಂಗವನರಿವಡೆ
ನೀನೆಂದು ತಿಳಿದು ನೋಡಾ ಮರುಳೆ ।'

ತಿಳಿಯುವುದೊಂದು ಹೆಜ್ಜೆ; ನೋಡುವುದು ಇನ್ನೊಂದು. 'ತಿಳಿದು ನೋಡಲು' ಎನ್ನುವಾಗ ತಿಳಿಯುವುದು ಮೊದಲು, ನೋಡುವುದು ಅನಂತರ. ತಿಳಿಯಿವುದು ಒಳಗಿನದನ್ನು; ನೋಡುವುದು ಆ ಒಳಗಿನ ಒಳಗಿರುವುದನ್ನು, ಒಳಗಿನೊಳಗೆ ಇರುವುದೇ ಗುಹೆಯೊಳಗಿರುವ ಗೊಹೇಶ್ವರ. ಅದನ್ನು ಕಾಣುವುದು ತಿಳಿವಳಿಕೆಯ ಮಾತಲ್ಲ; ಅನುಭವದ್ದು.

ಗುಹೇಶ್ವರನಿರುವೆಡೆ ಮತ್ತೇನಿರಬಲ್ಲದು? ಬಟ್ಟಬಯಲು ಅದು, ಗಾಳಿಯೂ ಸುಳಿದಾಡದು. ಬೆಳಕೊಂದು ಬೆಳಗುತ್ತ ಸುಳಿದಾಡುವುದಷ್ಟೆ. ನಾಸದೀಯ ಸೂಕ್ತದಲ್ಲೂ ಇದರ ಉಲ್ಲೇಖವಿದೆ. ಹೊರೆಯಾಗುವ ಎಲ್ಲವನ್ನೂ ಕಳೆದುಕೊಂಡು, ಹಗುರವಾಗಿ, ಒಳಗಿನ ಬಯಲಲ್ಲಿ ಬೆರೆತುಕೊಂಡಾಗ, ಬಯಲೇ ಆದಾಗ, ಒದಗುವ ಆನಂದವನ್ನೇ ಶೂನ್ಯ ಸಂಪಾದನೆಯೆಂದಿದ್ದಾರೆ. ಸಂಪಾದನೆಯೆಂದರೆ ಪಡೆದುಕೊಳ್ಳವುದು; ಶೂನ್ಯವನ್ನು ಪಡೆದುಕೊಳ್ಳುವುದೆಂದರೇನು? ಶೂನ್ಯದಲ್ಲಿಯಾದರೂ ಪಡೆದುಕೊಳ್ಳುವುದೇನಿದೆ? ಶೂನ್ಯವಾಗುವುದೇ ಇಲ್ಲಿ ನಡೆಯುವ ಕೆಲಸ. ಶೂನ್ಯ ಸಂಪಾದನೆಯೆಂದರೆ ಬಯಲಾದ ಆನಂದವನ್ನು ಅನುಭವಿಸುವುದೇ. ಇರುವುದನ್ನು ಗುರುತಿಸಿದರಾಯಿತು, ಆವರೆಗೆ ಇಲ್ಲವೆಂದಾದುದನ್ನು ಪಡೆದುಕೊಂಡಂತೆಯೇ ತಾನೇ?

ಈ ಆನಂದದ ಮಾತಿನ ಮೂಲ 'ಮಂಡ' ಎಂಬುದು. 'ಮಂಡ' ಎಂದರೆ ಸಾರ, ಗಟ್ಟಿ, ವೃತ್ತದ ಕೇಂದ್ರಬಿಂದು ಅದು. ಅದರಿಂದ ಹೊರಹೊಮ್ಮಿದ ಹರವು ಮಂಡಪ (ಇದೇ ಸರಿಯಾದ ರೂಪ, ಮಂಟಪವೆಂಬುದು ಅದರ ರೂಪಾಂತರ). ಇಲ್ಲಿ ಮಂಟಪ ಎಂದರೆ ಎಲ್ಲವನ್ನೂ ಒಳಗೊಳ್ಳುವ ವೃತ್ತ; ಬ್ರಹ್ಮಾಂಡ - ಪಿಂಡಾಂಡಗಳ ಸಮಷ್ಟಿ. ಅದನ್ನೆಲ್ಲ ಅನುಭವಿಸುವಾಗ ಅವಕ್ಕೆಲ್ಲ ಸಾರಭೂತವಾದ ಶೂನ್ಯವನ್ನು ಕಂಡುಕೊಂಡಾಗ, ಆಲಯದೊಳಗಿನ ಬಯಲನ್ನು ನೋಡುವುದಾದಾಗ, ಆ ಬಯಲೊಳಗಣ ಆಲಯವನ್ನು ಅನುಭವಿಸುವುದಾಗುತ್ತದೆ. ಅದು ಗುಹೇಶ್ವರನ ದರ್ಶನ. ಅದೇ ಅನುಭವದ ಮಂಡಪ, ಅನುಭವವೇ ಮಂಡಪವಾದದ್ದು, ಮಂಡಪವನ್ನೆ ಅನುಭವಕ್ಕೆ ತಂದುಕೊಂಡದ್ದು. ಅಲ್ಲಮರ ಗೊಹೇಶ್ವರನಿಗೇ ಅನುಭವ ಮಂಟಪವಾದದ್ದು. ಸಾಧಕನ ಅನುಭವದಲ್ಲಿಯೇ ಸಿದ್ಧವಾದದ್ದು ಈ ಮಂಟಪ. ಮಂಟಪದ ಹೊರಗೆ ಅನುಭವವೆಂಬುದಿಲ್ಲ. ಅನುಭವದ ಹೊರಗೆ ಮಂಟಪವೆಂಬುದಿಲ್ಲ. ಅನುಭವವೇ ಮಂಟಪವೆಂದರೂ ಸರಿಯೇ.

'ಗೊಹೇಶ್ವರ ಲಿಂಗವು ತಾನೆ ಎಂಬುದನ್ನು
ನಿನ್ನಿಂದ ನೀನೆ ಅರಿಯಬೇಕು ನೋಡಾ । '

ಎಂದರು ಅಲ್ಲಮರು. ಎಲ್ಲ ಅನುಭವದ ಒಳಗಿರುವ ಬೆಳಕನ್ನು ಸಾಧಕನು ತಾನು ತನ್ನ ಒಳಗೇ ಕಾಣಬೇಕಲ್ಲದೆ ಬೇರೆ ಬಗೆಯುಂಟೆ? ಬೇರೆ ಯಾರು ತಾನೆ ಅದನ್ನು ಬೆಳಗಿಸಬಲ್ಲರು? ತಾನೇ ಬೆಳಕಾಗಿ ತನ್ನೊಳಗೆ ಬೆಳಕನ್ನು ಕಾಣುವುದಾದರೆ ಅದು ಶೂನ್ಯ ಸಂಪಾದನೆ, ಅದೇ ಅನುಭವ ಮಂಟಪ. ಶೂನ್ಯವನ್ನು ಅನುಭವಿಸುವುದೇ ಅದರ ಸಂಪಾದನೆ; ಅದರಲ್ಲಿ ನಿಃಶೂನ್ಯವನ್ನು ಕಂಡುಕೊಳ್ಳುವುದೇ ಅನುಭವಕ್ಕೆ ಕಟ್ಟುವ ಮಂಟಪ, ಮಂಟಪವಾಗುವ ಅನುಭವ.

ಕನ್ನಡ ಸಾಹಿತ್ಯಕ್ಕೆ ಕನಕದಾಸರ ಕೊಡುಗೆ

ಶ್ರೀಮತಿ ಪ್ರೇಮಾ ಭಟ್

ಸಂತ ಕನಕದಾಸರು ಕನ್ನಡ ಸಾಹಿತ್ಯಕ್ಕೆ ಕೊಟ್ಟ ಕೊಡುಗೆ ಅಪೂರ್ವವಾದುವು. ಸಾರ್ವಕಾಲಿಕ ಮೌಲ್ಯವುಳ್ಳವು. ಹರಿದಾಸರ ಪರಂಪರೆಯಲ್ಲಿ ಪುರಂದರದಾಸರ ಸಮಕಾಲೀನರಾಗಿ ಕಾಣಿಸಿಕೊಳ್ಳುವ ಕನಕದಾಸರು ಸರ್ವಶ್ರೇಷ್ಠ ಕವಿಯೂ ಹೌದು. ಆದಿಕೇಶವ ಅಂಕಿತದಲ್ಲಿ ರಚನೆಗೊಂಡಿರುವ ಅವರ ಕೀರ್ತನೆಗಳು ಸರ್ವ ಕಾಲಕ್ಕೂ ಪ್ರಸ್ತುತ. ಕನಕದಾಸರು ಹದಿನೆಂಟನೆಯ ಶತಮಾನದಲ್ಲಿ ಕಾಲೂರಿ ನಿಂತ ಧೀಮಂತ ಶಕ್ತಿ. ಬೆಳಕಿನೆಡೆಗೆ ಭಕ್ತರನ್ನು ಕೊಂಡೊಯ್ಯಲು ಪಣತೊಟ್ಟು ಬಂದವರು. ಆಗ ದೇಶದ ಅನೇಕ ಭಾಗಗಳಲ್ಲಿ ಅರಾಜಕತೆ, ಅಶಾಂತಿ ತಾಂಡವಾಡುತ್ತಿತ್ತು. ಇದಕ್ಕೆ ಕಾರಣ ಒಂದು ಕಡೆ ಮೊಗಲರ ಪಥನ. ಮತ್ತೊಂದು ಕಡೆ ಮಠಾಧಿಪತಿಗಳಲ್ಲಿದ್ದ ಒಳಜಗಳದಿಂದಾಗಿ ಜನತೆ ತತ್ತರಿಸುತ್ತಿತ್ತು. ಇಂಥ ಸಂದರ್ಭದಲ್ಲಿ ಜನತೆಯನ್ನು ಸನ್ಮಾರ್ಗಕ್ಕೆ ಕೊಂಡೊಯ್ಯಲು ಬೋಧಕರ ಅವಶ್ಯಕತೆ ತೀವ್ರವಾಗಿತ್ತು. ಇದನ್ನು ಮನಗಂಡ ಹರಿದಾಸರು ಬದುಕಿಗೊಂದು ಅರ್ಥವನ್ನು ವಿಶಿಷ್ಟತೆಯನ್ನು ತಂದುಕೊಡುವ ಧಾರ್ಮಿಕ ಸಾಹಿತ್ಯವನ್ನು ಜನತೆಗೆ ಕೊಡುಗೆಯಾಗಿ ಇತ್ತರು. ಅಂದಿನ ವ್ಯವಸ್ಥೆಯನ್ನು ಪರಿವರ್ತಿಸುವ ಯುಗಪುರುಷರಾದರು ಹರಿದಾಸರು. ಅವರಲ್ಲಿ ಕನಕದಾಸರು ಅಗ್ರಮಾನ್ಯ ಪಂಕ್ತಿಗೆ ಸೇರುತ್ತಾರೆ.

ಕನಕದಾಸರು, ವಿಜಯನಗರ ಸಾಮ್ರಾಜ್ಯದ ಅರಸೊತ್ತಿಗೆಯಲ್ಲಿದ್ದಂತಹ ವ್ಯಾಸತೀರ್ಥರು ಕಟ್ಟಿ ಬೆಳೆಸಿದ 'ದಾಸಕೂಟ'ಕ್ಕೆ ನಿಷ್ಠರಾಗಿದ್ದವರು. ಅಂದು ಸಂಸ್ಕೃತ ಭೂಯಿಷ್ಠವಾಗಿ ಮೆರೆಯುತ್ತಿದ್ದುದರಿಂದ ವ್ಯಾಸತೀರ್ಥರು ಪಂಡಿತವರ್ಗಕ್ಕಾಗಿ 'ವ್ಯಾಸಕೂಟ'ವನ್ನು ಹರಿದಾಸ ನಿಷ್ಠರಿಗಾಗಿ 'ದಾಸಕೂಟ'ವನ್ನು ಕಟ್ಟಿ ಬೆಳೆಸಿದರು. ಹರಿದಾಸರೆಲ್ಲರ ದೃಷ್ಟಿ ಮೊದಲೆ ಹೇಳಿದಂತೆ ಕೇವಲ ಕಾವ್ಯ ಸೃಷ್ಟಿಯಾಗಿರಲಿಲ್ಲ. ಭೋಗ

ಜೀವನಕ್ಕಿಂತ ಮಿಗಿಲಾದದ್ದು ಆಧಾತ್ಮ ಜೀವನ ಎನ್ನವುದು ಅವರ ತತ್ವ ಸಿದ್ಧಾಂತವಾಗಿತ್ತು. ಪಾರಮಾರ್ಥಿಕ ಬುತ್ತಿಗೆ ಅವರು ಬೀಜ ಬಿತ್ತಿದರು. ಲೋಕದ ಅಂಕು ಡೊಂಕನ್ನು ತಿದ್ದಿ ತೀಡಲು ಬೇಕಾದ ತತ್ವ ಸಿದ್ಧಾಂತ ಅವರ ಬೋಧನೆಗಳಾದುವು.

ವ್ಯಾಸತೀರ್ಥರ ಸ್ಫೂರ್ತಿಗೆ ಮೂಲ ಕಾರಣರು ಶ್ರೀಪಾದರಾಜರು, ಭಾಗವತ ಧರ್ಮಪ್ರಚಾರದಿಂದ ಸಮಾಜೋದ್ಧಾರ ಸಾಧ್ಯವಾದೀತಲ್ಲದೆ ಪಾಂಡಿತ್ಯ ಪ್ರದರ್ಶನದಿಂದಲ್ಲ ಎಂದು ನಂಬಿದ್ದ ಶ್ರೀಪಾದರಾಜರು, ಅನೇಕ ಕಡೆ ತಿರುಗಿ ಅನುಭವ ಸಂಪಾದಿಸಿಕೊಂಡವರಾಗಿದ್ದರು. ತಮಿಳುನಾಡಿನ ಜನರಿಗೆ ತಮಿಳಿನಲ್ಲಿದ್ದ ಗೌರವ ಅಭಿಮಾನವನ್ನು ಬಲ್ಲವರಾಗಿದ್ದ ಶ್ರೀಪಾದರಾಜರು. ಕನ್ನಡ ಭಾಷೆಯ ಉತ್ಕರ್ಷಕ್ಕೆ ಕಾರಣರಾದರು. ಕನ್ನಡ ಸಂಸ್ಕೃತಿಯನ್ನು ಬೆಳೆಸಲು ಪಣತೊಟ್ಟ ಶ್ರೀ ಪಾದರಾಜರು ಅದುವರೆಗೆ ಪೂಜಾಕಾರ್ಯದಲ್ಲಿ ಪಂಡಿತರಿಂದ ವೇದ ಪಾರಾಯಣ ಮಾಡಿಸುತ್ತಿದ್ದಂತೆ, ಭಾಗವತರಿಂದ ಕನ್ನಡ ದೇವರ ನಾಮವನ್ನು ಹೇಳಿಸ ತೊಡಗಿದರು. ಅಷ್ಟೇ ಅಲ್ಲ ತಾವೇ ಸ್ವತಃ ದೇವರ ನಾಮವನ್ನು ರಚಿಸಿ ದೇವರ ಪೂಜೆಯ ವೇಳೆಯಲ್ಲಿ ನರ್ತನ ಸೇವೆಗೈಯುತ್ತ ಕೀರ್ತನೆಯನ್ನು ಹಾಡುತ್ತಿದ್ದರು. ಹತ್ತಿರದಿಂದ ಇದನ್ನು ನೋಡುತ್ತಿದ್ದ ವ್ಯಾಸತೀರ್ಥರಿಗೆ ಇದು ಸ್ಫೂರ್ತಿ ನೀಡಿತು. ಇದರಿಂದಾಗಿ ವ್ಯಾಸತೀರ್ಥರು ಪಂಡಿತವರ್ಗಕ್ಕಾಗಿ ಕಟ್ಟಿದ ವ್ಯಾಸಕೂಟವನ್ನು ಕೈಬಿಟ್ಟು ಪಾಮರರಿಗಾಗಿ ನಿರ್ಮಿಸಿದ ದಾಸ ಕೂಟದ ಕಡೆಗೆ ಹೆಚ್ಚು ಮನಸ್ಸು ಕೊಟ್ಟರು.

ದಾಸಕೂಟ ಆಧ್ಯಾತ್ಮ ಹೊನ್ನಬೀಜವನ್ನು ಬಿತ್ತಿತ್ತು. ಅಲ್ಲಿ ನಿಷ್ಠೆ ಅದ್ಭುತವಾಗಿತ್ತು. ಮತಭೇದವಿರಲಿಲ್ಲ. ನೀತಿ ನಿಯಮ ಪರಮಗುರಿಯಾಗಿತ್ತು. ಮಡಿವಂತಿಕೆ ಇರಬೇಕೆಂಬ ಕೆಟ್ಟ ಹಟವಿರಲಿಲ್ಲ. ಆಚಾರ ವಿಚಾರಕ್ಕೆ ಮಾನ್ಯತೆ ಇತ್ತಾದರೂ ಅದು ಕೇವಲ ಸುಗಮದಾರಿಗೆ ಮಾತ್ರವಾಗಿತ್ತೆ ಹೊರತು ಅದನ್ನೇ ಗುರಿ ಎಂದು ಭಾವಿಸಿರಲಿಲ್ಲ. ದಾಸಕೂಟದಲ್ಲಿ ಎಲ್ಲಾ ಮತ ಪಂಥದವರೂ ಇದ್ದರು. ಅವರಲ್ಲಿ ಅಂಡೆ ಕುರುಬರಾದ ಕನಕದಾಸರು ಒಬ್ಬರು. ವ್ಯಾಸತೀರ್ಥರ ಅಮೋಘ ಪ್ರಯತ್ನ ಅದ್ಭುತವನ್ನು ಸಾಧಿಸಿತು. ದಾಸಕೂಟ ಹರಿದಾಸರ ಪರಂಪರೆಯನ್ನೇ ಬೆಳೆಸಿತು. ಹರಿದಾಸರೆಲ್ಲರೂ ಕನ್ನಡಿಗರು ಕನ್ನಡ ನಾಡಿಗೆ ಕೀರ್ತಿ ತಂದುಕೊಟ್ಟವರು. ಅವರಲ್ಲಿ ಕನಕದಾಸರು ಒಬ್ಬ ಅಪರೂಪದ ಅಪೂರ್ವ ಸಂತಕವಿ. ಜಾತಿಯಲ್ಲಿ ಅಂಡೆ ಕುರುಬರಾದರೂ ಪೂರ್ವಪುಣ್ಯ ವಿಶೇಷದಿಂದ ದಾಸವರೇಣ್ಯರಾದರು. ಕನಕದಾಸರದ್ದು ದೂರದೃಷ್ಟಿತ್ವ. ಕವಿಯಾದವನು ಸಮಾಜಕ್ಕೆ ತೆರೆದುಕೊಳ್ಳಬೇಕೆಂಬ ಅಮರವಾಣಿಯನ್ನು ಅರಿತಿರಬೇಕು. ಅವನು ಸಮಾಜಕ್ಕೆ ಸ್ಪಂದಿಸದಿದ್ದರೆ ಅವನ ಕೃಷಿ ಬರಡಾಗುತ್ತದೆ ಎನ್ನುವುದನ್ನು ಸಂತಕವಿ ಅರಿತಿದ್ದರು. ಸಾಮಾಜಿಕ ಶಾಂತಿಯನ್ನು ಅಭದ್ರಗೊಳಿಸುವ ಜಾತೀಯತೆಯ ಬಗ್ಗೆ ಅವರಿಗೆ ಅಪಾರ ನೋವು. ಸಾಲದ್ದಕ್ಕೆ ಮೇಲ್ವರ್ಗದವರೊಂದಿಗೆ ದಾಸಕೂಟದಲ್ಲಿದ್ದ ಕನಕದಾಸರು ಶೋಷಣೆಗೊಳಗಾಗಿದ್ದರು ಎನ್ನವುದಕ್ಕೆ ಅನೇಕ ದೃಷ್ಟಾಂತಕಥೆಗಳಿವೆ. ''ಕನಕದಾಸನ ಮೇಲೆ ದಯಮಾಡಲು ವ್ಯಾಸಮುನಿಮಠದವರೆಲ್ಲ ದೂರಿಕೊಂಬರು'' ಎಂಬ ಮಾತಿನಲ್ಲು ಇದು ಸ್ಪಷ್ಟಪಡುತ್ತದೆ. ಮಾನವಕುಲವನ್ನು ಬಲಿತೆಗೆದುಕೊಳ್ಳುವ ಜಾತೀಯತೆಯ ಕುರಿತು ಖೇದದಿಂದ ಕನಕದಾಸರ ''ಕುಲಕುಲಕುಲವೆನ್ನತಿಹರೋ, ಕುಲವಾವುದು ಸತ್ಯ ಸುಜನರಿಗೆ? ಆತ್ಮನಾವ ಕುಲ? ಜೀವನಾವಕುಲ? ಕುಲಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ?'' ಎಂದು ಮೇಲ್ವರ್ಗದ ಜನರನ್ನು ಮೂದಲಿಸಿದ್ದಾರೆ.

ನಿರಾಕಾರನೂ, ನಿರ್ಗುಣ ಸ್ವರೂಪನೂ ಆದ ಪರಮಾತ್ಮನ ಆತ್ಮ ಸಾಕ್ಷಾತ್ಕಾರವಾಗಬೇಕಾದರೆ 'ನಾನು' ಎನ್ನುವ ಅಹಂ ಅಳಿಸಿ ಹೋಗಬೇಕು ಎನ್ನುವುದಕ್ಕೆ 'ದಾರಿಯಾವುದಯ್ಯ ವೈಕುಂಠಕೆ' ಎಂದು ಹೇಳಿದ ದಾರಿಗನೊಬ್ಬನಿಗೆ ಕನಕದಾಸರು ಕೊಡುವ ಉತ್ತರ 'ನಾನು ಹೋದರೆ ಹೋದೇನು' ಅಂದರೆ ತಾನು ಸ್ವರ್ಗಕ್ಕೆ ಹೋಗುತ್ತೇನೆ ಎಂದಲ್ಲ. ಮೇಲೆ ಹೇಳಿದಂತೆ 'ನಾನು' ಎನ್ನುವ ಅಹಂ ತೊಲಗಬೇಕು ಎನ್ನುವುದೆ ಆಗಿದೆ. ಏಕ ಕಾಲದಲ್ಲಿ ಕವಿ ಹಾಗೂ ಕೀರ್ತನಕಾರರಾಗಿಯೂ ವಿಜೃಂಭಿಸುವ ಕನಕದಾಸರಂತ ಸಂತ ಕವಿ ಬೇರೊಬ್ಬರಿಲ್ಲ.

ರಾಮಾಧಾನ್ಯ ಚರಿತ್ರೆ, ಮೋಹನ ತರಂಗಿಣಿ, ನಳಚರಿತ್ರೆ, ಹರಿಭಕ್ತಿಸಾರಗಳೆಂಬ ಕಾವ್ಯ ಕೃತಿಗಳನ್ನು ರಚಿಸಿದ ಕನಕದಾಸರ ನಳಚರಿತ್ರೆ ಅತ್ಯಂತ ಜನಪ್ರಿಯ ಕೃತಿ. ನಳದಮಯಂತಿಯರ ತ್ಯಾಗಮಯ ಬದುಕು ದೈವೀಗುಣವನ್ನು ಅಪ್ರತಿಮವಾಗಿ ವರ್ಣಿಸಿದ್ದಾರೆ. ಕವಿಯ ಕಾವ್ಯ ಶೈಲಿಯಲ್ಲಿರುವ ಸೋಪಜ್ಞತೆ ಮನಮುಟ್ಟುವಂತದ್ದು. ಸರಳ ಸುಂದರವಾದ ದೇಶೀ ಶೈಲಿ ಕಾವ್ಯ ಶೈಲಿಗೆ ಕಲಶಪ್ರಾಯವಾಗಿದೆ.

ನಳ ಚರಿತ್ರೆಯಷ್ಟೇ ಸರ್ವ ಶ್ರೇಷ್ಠವಾದ ಮತ್ತೊಂದು ಕೃತಿ ಎಂದರೆ ಹರಿಭಕ್ತಿಸಾರ. ರಾಮಾಯಣ, ಭಾರತ, ಭಾಗವತದ ಸಾರಾಂಶವನ್ನು ಹೊತ್ತು ನಿರೂಪಿತಗೊಂಡಿರುವ ಈ ಕೃತಿಯಲ್ಲಿ ಭಕ್ತಿಯೇ ಪ್ರಧಾನವಾಗಿ ವಿಜೃಂಭಿಸುತ್ತದೆ. ಭಕ್ತ ಮತ್ತು ಪರಮಾತ್ಮನ ನಡುವೆ ಇರಬೇಕಾದ ಭಾವಬಂಧುರ, ಸಾಧಕನಾದವನಿಗೆ ಪರಮಾತ್ಮನಲ್ಲಿರಬೇಕಾದ ಸರ್ವ ಸಮರ್ಪಣಾ ಭಾವ, ಸಂಸಾರ ನಿರಸನದಿಂದ ಉದಿಸುವ ವೈರಾಗ್ಯ ಇತ್ಯಾದಿಗಳ ಕುರಿತು ಹರಿಭಕ್ತಿಸಾರ ಸಾಧಕನಾದವನಿಗೆ ತಿಳಿಸಿಕೊಡುತ್ತದೆ.

ಕನ್ನಡಿಗರ ಭಾವದಲ್ಲಿ ಜೀವಸೆಲೆ ಪುಟಿಯುವಂತೆ ಮಾಡಿದವರು ಕನಕದಾಸರು. ಪುರಂದರ ದಾಸರಿಗೆ ಸಮತೂಕವಾಗಿ ತೂಗಬಲ್ಲವರು ಎಂದರೆ ಕನಕದಾಸರು. ಗುರು ವ್ಯಾಸರು ಒಡ್ಡಿದ ಪರೀಕ್ಷೆಗಳಲ್ಲಿ ಗೆದ್ದು ಬಂದ ಮಹನೀಯರು. ಸರ್ವಶ್ರೇಷ್ಠ ಕಾವ್ಯಮುನಿ.

ಯಾವುದೇ, ಒಂದು ಕಲಾಮಾಧ್ಯಮ ಸೋಪಜ್ಞವಾಗಿರಬೇಕಾದರೆ, ಅದು ಚಿತ್ರವಾಗಿರಬಹುದು, ಶಿಲ್ಪವಾಗಿರಬಹುದು. ಕಾವ್ಯವಾಗಿರಬಹುದು, ಅದರಲ್ಲಿ ಸ್ವಂತಿಕೆ ಇರಬೇಕಾಗುತ್ತದೆ. ಅನುಭವದ ಜೊತೆಗೆ ನಾವೀನ್ಯ, ಸ್ವಂತ ಪ್ರತಿಭೆ ಅಭಿವ್ಯಕ್ತಿಗೊಳ್ಳಬೇಕಾಗುತ್ತದೆ. ಇವೆಲ್ಲವೂ ಕನಕದಾಸರ ಕಾವ್ಯಗಳಲ್ಲಿ ಅಭಿವ್ಯಕ್ತಿಗೊಂಡಿರುವುದನ್ನು ನಾವು ಕಾಣುತ್ತೇವೆ. ಹರಿದಾಸರ ಪಂಥಕ್ಕೆ ಸೇರಿದ ಕನಕದಾಸರು ವಿಶಾಲದೃಷ್ಟಿಯುಳ್ಳವರಾಗಿದ್ದರು. ಹರಿಕೀರ್ತನೆಯ ಜೊತೆಗೆ ಉಳಿದ ದೇವರನ್ನು ಬಿಟ್ಟಿಲ್ಲ. ಕಾವ ದೇವ ಹರಿಯಾದರೇನು? ಹರನಾದರೇನು ಎಲ್ಲರೂ ಒಂದೇ, ಎಂಬುದನ್ನು ಕನಕದಾಸರು ಸರ್ವದೇವ ಸಹಿಷ್ಣುತಾ ದೃಷ್ಟಿ ವಿಶ್ವಮಾನವ ಕಲ್ಯಾಣ ದೃಷ್ಟಿಯೊಂದಿಗೆ ಬೆಸೆದಿದ್ದಾರೆ.

ಶಿವ ಶಿವ ಎನ್ನಿರೋ ಮೂಜಗದವರೆಲ್ಲ
ಶಿವ ಶಿವ ಎನ್ನಿರೋ,
ಆಗಮ ಸಿದ್ಧಾಂತ ಮೂಲದ ಜಪವಿದು ಶಿವನಿನ್ನು
ರೋಗದ ಮೂಲವ ಕೆಡಿಪ ಔಷಧವಿದು ಶಿವ.......

ಎನ್ನುತ್ತಾರೆ. ಸರಳವಾಗಿ ಮನಮುಟ್ಟುವಂತೆ ಬಣ್ಣಿಸಬಲ್ಲ ಚತುರ ಶೈಲಿ ಕನಕದಾಸರದ್ದು, ಒಪ್ಪ ಓರಣದ ನುಡಿಗಟ್ಟು.

ಪರಂಪರೆಯ ಬಳುವಳಿಯನ್ನು ಸ್ವೀಕರಿಸಿ ಬೆಳೆಯಲು ಪ್ರತಿಭೆ, ತನ್ನದಾದ ವೈಶಿಷ್ಟ್ಯತೆಯನ್ನು ಪಡೆಯುವುದು ವಾಸ್ತವ. ವೈಶಿಷ್ಟ್ಯತೆ ಇಲ್ಲದ ಕಾವ್ಯ ಕಾವ್ಯವೇ ಅಲ್ಲ. ಕನಕದಾಸರ ಕಾವ್ಯದಲ್ಲಿ ವೈಶಿಷ್ಟ್ಯತೆ ಇದೆ. ಪರಂಪರೆಯನ್ನು ದತ್ತವಾಗಿಸಿಕೊಂಡು, ಕನಕದಾಸರು ತಮ್ಮದೇ ಆದ ವೈಶಿಷ್ಟ್ಯತೆಯನ್ನು ಮೆರೆದಿದ್ದಾರೆ. ಹರಿದಾಸ ಪರಂಪರೆಯಲ್ಲಿ ಬಂದ ಅವರು ಸರ್ವದೇವ ಸಹಿಷ್ಣುತಾದೃಷ್ಟಿ ಇಟ್ಟುಕೊಂಡವರು. ಆದ್ದರಿಂದ ಅವರಿಗೆ ಎಲ್ಲಾ ದೇವರು ಒಂದೇ, ದೇವನೊಬ್ಬ ನಾಮ ಹಲವು ಎಂಬ ಭಾವ. ಸೀತೆಯನ್ನು ಕಂಡು ಬಂದ ಹನುಮನಲ್ಲಿ ರಾಮ ಪ್ರಶ್ನಿಸುವ ಪರಿ, ಸತಿ ಸೀತೆಯ ಬಗೆಗೆ ರಾಮನಲ್ಲಿರುವ ಅನುಕಂಪ, ಸೀತೆಯಲ್ಲಿ ರಾಮ ಹರಿಸುವ ಕರುಣೆ ಪ್ರೀತಿಯನ್ನು ಹೃದ್ಯವಾಗಿ ಕನಕದಾಸರು ಚಿತ್ರಿಸಿದ್ದಾರೆ :

ಏನಂದಳೇನಂದಳೋ
ನಿನ್ನೊಳು ಸೀತೆ ಹನುಮಯ್ಯ
ಜನಕನ ಮನೆಯಲ್ಲಿ ಜನಿಸಿ ಸುಖದಲ್ಲಿರೆ

ಧನುಸು ಮುರಿದು ತರಲು ಘನ ತನ್ನ ಪದವಿ ಬಿಟ್ಟು
ವನವ ಸೇರಿದನೆಂದು ಘನ ತಪದಿಂದಲಿ
ವನಿತೆ ಮನದಿ ನೊಂದು
ಕುರುಹಿನುಂಗುರವಾ ತರಳಾಕ್ಷಿಗೆ ಕೊಡೆ
ಬಿರಿದುಮಹಾವೆಂದು ಬೇಸರದಿ
ಬೀರಿದಳೆ ಸೀತಾ ಅಶೋಕವನದಿಂದ
ನಿರುತ ಸಂತಾಪದಿಂದಲಿ ಮನದಿ ನೊಂದು.....

ಜಗತ್ತಿನಲ್ಲಿರುವ ಪ್ರೇಮ, ಪ್ರೀತಿ, ರಾಗದ್ವೇಷ ಇವೆಲ್ಲ ಅಮೂರ್ತ ಸ್ವರೂಪದವು. ತಂದೆ ತಾಯಿ, ಪತಿ ಪತ್ನಿ, ಮಗ ಮಗಳು, ಅಣ್ಣ ತಮ್ಮ ಇತ್ಯಾದಿ ಬಂಧುತ್ವದೊಳಗೆ ಪರಸ್ಪರ ಪ್ರೀತಿಸುವುದನ್ನು ಆಗದವರನ್ನು ದ್ವೇಷಿಸುವುದನ್ನು ಕಾಣಸುತ್ತೇವೆ. ಕಂಡದ್ದಕ್ಕೆ ಸ್ವರೂಪವಿಲ್ಲ. ವಾಸ್ತವದಲ್ಲಿ ಪ್ರೀತಿಸುವ - ದ್ವೇಷಿಸುವ ಕ್ರಿಯೆ ಇದೆ. ಪ್ರೀತಿಸುವುದು ಎಂದರೆ ಒಬ್ಬ ವ್ಯಕ್ತಿ ವಸ್ತು ಅಥವಾ ಅದೆಲ್ಲವನ್ನು ಮೀರಿದ ದೇವರನ್ನು ಅರಿಯುವುದು; ಆನಂದಿಸುವುದು. ಪ್ರೀತಿಗೆ ಪ್ರತಿಕ್ರಿಯಿಸುವುದು. ಕಾವ್ಯದ ಮೂಲಕ ಕನಕದಾಸರು ಹರಿಯನ್ನು ಅಪಾರವಾಗಿ ಪ್ರೀತಿಸಿದರು. ಪ್ರೀತಿಯ ಪುನರ್ನವೀಕರಣವು ಕಾವ್ಯದ ಮೂಲಕ ಆಯಿತು. ಕನಕದಾಸರ ಮಹಿಮೆಯ ಸಂಕೇತವಾಗಿ ಉಡುಪಿಯಲ್ಲಿ ಕನಕನ ಕಿಂಡಿ ಪ್ರಸಿದ್ಧಿಯಾಯಿತು.

ದೈವದ ಬಗ್ಗೆ ಅನನ್ಯಭಕ್ತಿ ಶ್ರದ್ಧೆಯನ್ನು ಹೊಂದಿದ ಕನಕದಾಸರಿಗೆ ಎಲ್ಲವೂ ದೈವಮಯ. ಹುಟ್ಟು ಸಾವು ನಿರಂತರ ಕ್ರಿಯೆಯಲ್ಲಿ ನಮ್ಮದೆನ್ನುವುದು ಏನೂ ಇಲ್ಲ. ಎಲ್ಲವೂ, ಎಲ್ಲದರ ರಕ್ಷಣೆಯನ್ನು ಹೊತ್ತಿರುವ ಅವನಿಗೆ ಶರಣಾಗುವುದೆ, ನಮ್ಮ ಗುರಿ ಎಂಬುದನ್ನು 'ತಲ್ಲಣಿಸದಿರು ತಾಳು ಮನವೆ ಎಲ್ಲರನ್ನು ಸಲಹುವನು ಇದಕೆ ಸಂಶಯವಿಲ್ಲ' ಎನ್ನುವ ಮಾತಿನಲ್ಲಿ ಅಭಿವ್ಯಕ್ತಿಗೊಂಡಿದೆ. ಮುಂದುವರಿದು ಅವರು ಹೇಳುತ್ತಾರೆ.

ಬೆಟ್ಟದಾ ತುದಿಯಲ್ಲಿ ಹುಟ್ಟಿದಾ ವೃಕ್ಷಕ್ಕೆ
ಕಟ್ಟೆಯನು ಕಟ್ಟಿ ನೀರೆರೆದವರು ಯಾರೋ
ಹುಟ್ಟಿಸಿದ ದೇವ ತಾ ಹೊಣೆಗಾರನಾಗಲು
ಗಟ್ಯಾಗಿ ರಕ್ಷಿಪನು ಇದಕೆ ಸಂಶಯವಿಲ್ಲ - ಎಂದಿದ್ದಾರೆ.

ಗೊಡ್ಡು ಸಂಪ್ರದಾಯವಾದಿಗಳ ನಡುವೆ ಬೆಳೆದ ಕನಕದಾಸರಲ್ಲಿ ವೈಚಾರಿಕಪ್ರಜ್ಞೆ ಇತ್ತು. ಅವರೊಬ್ಬ ಸಾಮಾನ್ಯ ಸಂತರಾಗಿರದೆ ಚಿಂತಕರಾಗಿದ್ದರು ಎನ್ನುವುದಕ್ಕೆ ಅವರ ಕಾವ್ಯದ ಸಾಲುಗಳಲ್ಲಿ ಬರುವ ನುಡಿಗಟ್ಟುಗಳನ್ನು ಗಮನಿಸಬಹುದು. 'ಕುರುಡನಿಗೆ ದಾರಿಯನು ತೋರದೆ ಆತಗೆ ಮುನಿದು ದರಿಗೆ ನೂಕಿದಡೆ ಅವನು ಏನು ಮಾಡುವನು' ಎನ್ನುವ ಮಾತಿನಲ್ಲಿ ''ನೀನಿರಲು ದೇಹದೊಳು ಹೊಲೆಯುಂಟೆ' ಎಂದು ಪ್ರಶ್ನಿಸುವ ಪರಿಯಲಿ. ಎಂಜಲೆಂಜರೆಂಬರಾ ನುಡಿ ಎಂಜಲಲ್ಲವೇ? ಎಂಬ ಮೊನಚು ಮಾತಿನಲ್ಲಿ 'ಗಳಗಳನೆ ನುಡಿವ ನಾಲಗೆ ಗಂಟೆಯುಲಿವಂತೆ ಎಂಬ ಗೇಲಿಯ ಮಾತು ಕನಕದಾಸರ ಕಾವ್ಯದ ಸೊಗಡನ್ನು ಹೆಚ್ಚಿಸುತ್ತದೆ.

ದಾಸರ ನಡೆಯಂತೆ ನುಡಿಯೂ ಚೆನ್ನ. ಕನ್ನಡ ಕಾವ್ಯಕನ್ನಿಕೆಗೆ ಕನಕ ವೃಷ್ಟಿ ಕರೆದವರು ಕನಕದಾಸರು ಉಪಮಾರೂಪದಲ್ಲಿ ಅಭಿವ್ಯಕ್ತಿಗೊಳ್ಳುವ ಅವರ ಕಾವ್ಯಾಲಂಕಾರ ಶೈಲಿಯು ಅದ್ಭುತವಾದದ್ದು. ''ಅಡಿಗಡಿಗೆ ಶೋಕದಲಿ ಅವರಿವರಿಗುಸುರಿದರೆ, ಬಡತನವು ತಾ ಬಿಟ್ಟು ಕಡೆಗೆ ಕದಲುವುದೆ' 'ದೆಸೆಗೆಟ್ಟು ನಾಡದೈವಂಗಳಿಗೆ ಎರಗಿದರೆ ನೊಸಲ ಬರಹವ ತೊಡೆದು ತಿದ್ದಲಳವೆ? ಮೂಢರಂದದೊಳು ಗುದ್ದಲಿಯನು ಕೊಂಡು ನಾಡ ಕಾಲುವೆಯ ತಿದ್ದುವರೆ, ಇಂಥ ಉಪಮೆಗಳೂ ಕನಕದಾಸ ಕಾವ್ಯದ ಸೌಂದರ್ಯವನ್ನು ಇಮ್ಮಡಿಗೊಳಿಸುತ್ತವೆ.

ಕನ್ನಡ ಕಾವ್ಯಕ್ಕೆ ಜೀವಸೆಲೆಯನ್ನು ಕೊಟ್ಟ ಕನಕದಾಸರ ಕಲ್ಪನೆ ಅಸಾದೃಶ್ಯವಾದುದು. ಅವರ ಕಲ್ಪನೆಯ ಮೂಸೆಯಲ್ಲಿ ಕನ್ನಡ ಎರಕಗೊಂಡು ವಿಶಿಷ್ಟ ರಸಪಾಕವನ್ನು ಕನ್ನಡ ಜನತೆಗೆ ನೀಡಿದೆ. ಅವರ ಊಹೆಯ ತಳಹದಿಯಲ್ಲಿ ವಿಸ್ತಾರಗೊಂಡ ಶಬ್ದಸಾಮರ್ಥ್ಯದ ಜಾಲ ಇನ್ನೊಬ್ಬ ಕವಿಯ ಹಿಡಿತಕ್ಕೆ ಸಿಕ್ಕಿಲ್ಲ ಎಂದರೂ ಸರಿಯೆ. ವಿದ್ವಾಂಸರ ಅಭಿಪ್ರಾಯದಂತೆ 'ಬ್ರಹ್ಮ' ಅವರ ಮಾತಿನಲ್ಲಿ ಬಾಯೊಳಗಿಹ ಗಂಡನಾದ. 'ಮನ್ಮಥ' ಕಮ್ಮಲಗೋಲನಾದ. 'ದ್ರೌಪದಿ' ಉತ್ಕಚದ ಬಾಲೆಯಾದಳು. 'ವಾಲ್ಮೀಕಿ' ವಲಮೀಕಿಯಾದ ಇಂಥ ಶಬ್ದಾರ್ಥಗಳ ನಡುವೆ ಕಾವ್ಯ ಹರಿದು ಕನ್ನಡಕ್ಕೊಂದು ಹೊಸಬಗೆಯ ದರ್ಪಣವನ್ನು ನೀಡಿವೆ. ಇದಕ್ಕಾಗಿ ಕನಕದಾಸರು ಕನ್ನಡ ಸಾಹಿತ್ಯದಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಪಡೆದಿದ್ದಾರೆ. ಕನಕದಾಸರ ಕಾವ್ಯದಲ್ಲಿ ಕಾವ್ಯಧರ್ಮ, ಹೇಯಗುಣ ಎರಡೂ ಸಮರಸಗೊಂಡು ವಿಜೃಂಭಿಸುತ್ತವೆ.

ಆತ್ಮಸಾಕ್ಷಾತ್ಕಾರ ಮಾಡಿಕೊಂಡ ಜಿಜ್ಞಾಸು, ದೇವರನ್ನು ಎಲ್ಲೆಲ್ಲು ಕಾಣುತ್ತಾನೆ ಎನ್ನುವುದಕ್ಕೆ ಕನಕದಾಸರೆ ಪ್ರತ್ಯಕ್ಷ ನಿದರ್ಶನ. ತಮ್ಮ ಅನುಭವವನ್ನು ಸುಂದರವಾದ ಕಥಾನಕದೊಂದಿಗೆ ನಿರೂಪಿಸಿದ್ದಾರೆ. ಅದು ವ್ಯಾಸತೀರ್ಥರು ಕೊಡುವ ಕದಳೀ ಫಲದ ಕತೆ, ರಮ್ಯವಾಗಿ ನಿರೂಪಿತಗೊಂಡಿದೆ.

ಜನಜೀವನದ ಆಶೋತ್ತರಗಳಿಗೆ ಸ್ಪಂದಿಸುತ್ತಾ ನಡೆದ ಕನಕದಾಸರು ಅದನ್ನೇ ಸಂಗೀತವನ್ನಾಗಿ ಮಾಡಿ, ನಾಡಿಗೆ ನೀಡಿದ್ದಾರೆ. ಸಂಗೀತವನ್ನು ಭಕ್ತಿ ಸಾಹಿತ್ಯದೊಂದಿಗೆ ಮಿಳಿತಗೊಳಿಸಿ ಪ್ರಭಾವಶಾಲಿ ಮಾಧ್ಯಮವನ್ನಾಗಿ ಮಾಡಿಕೊಂಡ ಕನಕದಾಸರದ್ದು ಅದ್ಭುತ ಯಶಸ್ಸು. ಕನ್ನಡ ಕಾವ್ಯ ಸಂಪದವನ್ನು ಉಜ್ವಲವಾಗಿ ಬೆಳಗಿದ ದಾಸಪಂಥದ ಕೀರ್ತನಕಾರರಲ್ಲಿ ಕನಕದಾಸರು ಅಗ್ರಮಾನ್ಯ ಪಂಕ್ತಿಗೆ ಸೇರುತ್ತಾರೆ.

ಮುಂಡಿಗೆಗಳು

ಪ್ರೊ॥ ಅರಳುಮಲ್ಲಿಗೆ ಪಾರ್ಥಸಾರಥಿ

ಮಂಡೆ ಬಿಸಿಮಾಡಿ, ಬುದ್ಧಿಶಕ್ತಿಗೆ ಸವಾಲಾಗುವ ಅನೇಕ ಹಾಡುಗಳನ್ನು ಹರಿದಾಸರು ರಚಿಸಿದ್ದಾರೆ. ಅಂತಹ ಬುದ್ಧಿಗೆ ಕಸರತ್ತು ನೀಡುವ, ರಹಸ್ಯಾರ್ಥ ಹೊಂದಿರುವ ಕೃತಿಗಳಿಗೆ ಮುಂಡಿಗೆಗಳು ಎಂದು ಹೆಸರು. ಯಕ್ಷಪ್ರಶ್ನೆಯ ಮಾದರಿಯ, ಬೇತಾಳನ ಪ್ರಶ್ನೆಗಳ ಮಾದರಿಯ ಈ ಹಾಡುಗಳಿಗೆ ಒಗಟುಗಳು, ಬೆಡಗಿನ ಹಾಡುಗಳು, ಒಡಸು, ಭಾರೂಡ ಮುಂತಾದ ಹೆಸರುಗಳೂ ಇವೆ. ಬುರ್ಲಿಬಿಂದು ಮಾಧವಾಚಾರ್ಯರು ಮುಂಡಿಗೆಯೆಂದರೆ ಕಟ್ಟಿಗೆಯ ದೊಡ್ಡ ತಲೆಯ ಭಾರವನ್ನು ಎತ್ತುವುದು ಹೇಗೆ ಸುಲಭವಲ್ಲವೋ, ಹಾಗೆಯೇ ಕನಕದಾಸರ ಈ ಜಾತಿಯ ಹಾಡುಗಳನ್ನು ಅರ್ಥಮಾಡಿಕೊಳ್ಳಲು ಆಗುವುದಿಲ್ಲ, ಅಂತೆಯೇ. ಇವನ್ನು ಮುಂಡಿಗೆ ಎನ್ನುತ್ತಾರೆ, ಎಂದಿದ್ದಾರೆ. ಚಿದಾನಂದಮೂರ್ತಿಯವರು ಮುಂಡಿಗೆ ಅಥವ ಮುಡಿಗೆ ಎಂದರೆ ಸವಾಲಿನ ಸೂಚಕ ಎಂದರು. ಏನೇ ಆಗಲಿ ಮುಂಡಿಗೆ ದ್ವಂದ್ವಾರ್ಥ ಸೂಚಕ ಪದ. ವಚನಸಾಹಿತ್ಯದಲ್ಲೂ ಈ ಬಗೆಯ ದ್ವಂದ್ವಾರ್ಥ ಸೂಚಕ ಪದ್ಯಗಳು ಬಹಳಷ್ಟಿವೆ. ಮಾತೇ ಜ್ಯೋತಿರ್ಲಿಂಗವೆನ್ನುವ ವಚನ ಸಾಹಿತ್ಯ ಈ ಬೆಡಗಿನ ವಚನಗಳಿಂದಲೂ ಸಮೃದ್ಧವಾಗಿದೆ. ಸುತ್ತೂರು ವೀರಸಿಂಹಾಸನಾಧೀಶ್ವರರಾಗಿದ್ದ, ಹದಿನೈದನೆಯ ಶತಮಾನದಲ್ಲಿ ನಡೆದ ಪುನರುತ್ಥಾನದ ನೇತಾರರಾದ ತೋಂಟದ ಸಿದ್ಧಲಿಂಗೇಶ್ವರರ ಸಾಕ್ಷಾತ್ ಶಿಷ್ಯರಾಗಿ ಆ ಗುರುಪರಂಪರೆಯಲ್ಲಿ ಹನ್ನೊಂದನೆಯವರಾಗಿದ್ದ ಶ್ರೀಘನಲಿಂಗದೇವರು 'ಘನಲಿಂಗಿಯ ಮೋಹದ ಮಲ್ಲಿಕಾರ್ಜುನ' ಅಂಕಿತದಲ್ಲಿ ಬರೆದಿರುವ ಕೆಲವು ಮುಂಡಿಗೆಗಳು ನನ್ನನ್ನಿನ್ನೂ ಕಾಡುತ್ತಿವೆ. ಅವುಗಳಲ್ಲಿ ಎರಡು ಹೀಗಿವೆ:

ಎನ್ನ ತಂದೆಯ ಬಸುರಲ್ಲಿ ಬಂದಳೆಮ್ಮವ್ವೆ
ಎನ್ನ ತಂಗಿಯರಿಬ್ಬರೂ ಹೆಂಡಿರಾದರೆನಗೆ
ಎನ್ನ ಪತಿಯರು ಎನ್ನ ಮದವಳಗಿತ್ತಿಯ ಮಾಡಿ
ಎಮ್ಮಪ್ಪಗೆ ಮದುವೆಯ ಮಾಡಿದರು
ಎನ್ನ ಗಂಡನ ಮನೆಯೊಡವೆಯನ್ನೆನ್ನ ಉಗುರು ಕಣ್ಣಿನಲೆತ್ತಿ
ಒಗೆತನವ ಮಾಡುವೆನು
ಎಮ್ಮಕ್ಕಳ ಕೈಯಿಂದ ಎನ್ನ ಗಂಡನ ಹೆಂಡತಿಯೆನಿಸಿಕೊಂಬೆನು
ಎನ್ನ ಗಂಡ ಆಳಲಿ ಆಳದೆ ಹೋಗಲಿ
ಪತಿಭಕ್ತಿಯ ನಾ ಬಿಡೆ ಕಣಾ। ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ.

ಅವರ ಇನ್ನೊಂದು ವಚನ :

ಮಣ್ಣು ಹಿಡಿದವರೆಲ್ಲರೂ ಬ್ರಹ್ಮನ ಸೃಷ್ಟಿಗೊಳಗಾದರು
ಹೊನ್ನ ಹಿಡಿದವರೆಲ್ಲರೂ ವಿಷ್ಣುವಿನ ಸ್ಥಿತಿಗೊಳಗಾದರು
ಹೆಣ್ಣ ಹಿಡಿದವರೆಲ್ಲರೂ ರುದ್ರನ ಸಂಹಾರಕ್ಕೊಳಗಾದರು
ಹೆಣ್ಣು ಹೊನ್ನು ಮಣ್ಣು ಬಿಟ್ಟು, ಲಿಂಗಾಂಗ ಸಂಯೋಗವರಿಯದೆ
ಸದಾಚಾರದಲ್ಲಿ ತಿರಿದುಂಡು ಆತ್ಮಸುಖಿಯಾದವರೆಲ್ಲರೂ
ಫಲಭೋಗಕ್ಕೊಳಗಾದರು
ನಾನು ಮೂರಬಿಟ್ಟು, ಆರ ಕಂಡು, ಮೂದೇವರ ಗೆಲಿದೆ
ಆರ ಬಿಟ್ಟು, ಮೂರ ಕಂಡು, ಮನಮುಳುಗಿ
ಮೂರೊಂದು ಪದವ ದಾಂಟಿ ಶಿವನೊಳಗಾದೆನಯ್ಯಾ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ

ಪುರಂದರದಾಸರು, ಗೋಪಾಲದಾಸರು, ಪ್ರಾಣೇಶದಾಸರು ಮುಂತಾದ ಅನೇಕ ಹರಿದಾಸರು ದ್ವಂದಾರ್ಥಸೂಚಕ ಹಾಡುಗಳನ್ನು ರಚಿಸಿದ್ದರೂ, ಮುಂಡಿಗೆ ದಾಸರೆಂಬ ಖ್ಯಾತಿಗೆ, ಜನಪ್ರೀತಿಗೆ ಪಾತ್ರರಾದವರು ಕನಕದಾಸರು. ಎಂತಹ ವಿದ್ವಾಂಸರಾದರೂ ತಲೆಕೆರೆದು ಯೋಚನೆ ಮಾಡಿ, ಬೌದ್ಧಿಕ ಕಸರತ್ತಿನಲ್ಲಿ ತೊಡಗಬೇಕಾದ ಕನಕದಾಸರ ಹಾಡುಗಳು ಬಿಡಿಸುವವರೆಗೂ ಮುಂಡಿಗೆ, ಬಿಡಿಸಿದ ಮೇಲೆ ಮಂಡಿಗೆ.

ಕನಕದಾಸರ ಒಂದು ಮುಂಡಿಗೆ

ಬಾಯೊಳಗಿಹ [1] ಗಂಡನ [2] ನಿಜ ತಮ್ಮನ [3]
ತಾಯಿ [4] ಪಿತನ [5] ಮಡದಿಯ [6] ಧರಿಸಿದನ [7]
ಸ್ತ್ರೀಯ [8] ಸುತನ [9] ಕೈಯಲಿ ಶಾಪ ಪಡೆದನ [10]
ದಾಯಾದ್ಯ [11] ಮಗನ [12]

---

1. ಸರಸ್ವತಿ, 2. ಬ್ರಹ್ಮ, 3. ಕಾಮ, 4. ಲಕ್ಷ್ಮಿ, 5. ಸಮುದ್ರರಾಜ, 6. ಗಂಗೆ, 7. ಈಶ್ವರ, 8. ಪಾರ್ವತಿ, 9. ವಿಘ್ನೇಶ್ವರ, 10. ಚಂದ್ರ, 11. ರವಿ, 12. ಕರ್ಣ,

ಸಾಯಕವದು [13] ತೀವ್ರದ ಬರುತಿರೆ ಕಂಡು
ಮಾಯಾಪತಿ [14] ಭೂಮಿಯನ್ನೊತ್ತಿ ತನ್ನಯ
ಬೀಯಗನ [15] ತಲೆಗಾಯುವಂಥ
ರಾಯನ ಕರೆದು ತೋರೆ ॥
ನಾಲಗೆ ಎರಡರವನ [16] ಭುಂಜಿಸುವನು [17]
ಮೇಲೇರಿಬಹನ [18] ತಂದೆಯ [19] ಇಹ ಗಿರಿಯನು [20]
ಲೀಲೆಯಿಂದಲಿ ಕಿತ್ತೆತ್ತಿದ ಧೀರನ [21]
ಕಾಳಗದಲ್ಲಿ ಕೊಂದನ [22]
ಲೋಲ ಲೋಚನೆಯ [23] ಮಾತೆಯ [24] ಪುತ್ರ [25] ನಣುಗನ [26]
ಮೇಲುಶಕ್ತಿಗೆ [27] ಉರವಾಂತು ತನ್ನವರನ್ನು [28]
ಪಾಲಿಸಿದಂಥ ದಾತನಹ ದೇವನ [29] ಲೋಲೆ ನೀ ಕರೆದು ತೋರೆ

13. ನಾಗಾಸ್ತ್ರ 14. ಕೃಷ್ಣ, 15. ಪಾರ್ಥ, 16. ಸರ್ಪ, 17. ಮಯೂರ, 18. ಷಣ್ಮುಖ, 19. ಈಶ್ವರ, 20. ಕೈಲಾಸಾದ್ರಿ, 21. ರಾವಣ, 22. ರಾಮಚಂದ್ರ, 23. ಜಾನಕಿ, 24. ಭೂದೇವಿ , 25. ನರಕಾಸುರ, 26. ಭಗದತ್ತ 27. ದಾರಾಹಾಸ್ತ್ರ 28. ಪಾಂಡವರು, 29. ಕೃಷ್ಣ.

ವ್ಯಾಸರಾಜರ ಒಂದು ಮುಂಡಿಗೆ

[1]ವಾರ ಕೋಟಿ ಪ್ರಭಾ ಕಿರಣ
[2]ವಾರ ಸೋದರಿ ರಮಣ ಪೂರ್ಣ
[3]ವಾರದಾಯಕ ಅಮಿತಕರುಣ
[4]ವಾರಜನ ಸದ್ವಿನುತ ಚರಣ
[5]ವಾರನೀ ಬ್ರಹ್ಮಾದಿ ಸುರಗಣ
[6]ವಾರನೀ ಜನ್ಮಾಧಿಕಾರಣ
[7]ವಾರಸ್ಮಿತ ಮಣಿಮುಕುಟ ಧಾರಣ ವಾರಣಾಧಿಪ ವರದ ಶ್ರೀ ಕೃಷ್ಣಾ
ವಾರವಾರಕೆ ನಿನ್ನಯ ಪರಿ
ವಾರದೊಳಗಿಡು ಸುಗುಣ ಪಾರಾ
ವಾರ ಕುದುರೆ ಸವಾರ ದುರಿತನಿ
ವಾರ ಧೃತಜನಿವಾರ ಗೋಪೀಜಾರ ನೀನೈ
ವಾರನಾರೀ ಪೋರ ಗಂಭೀರ.

1. (ಭಾನು)ವಾರ, 2. ಸೋಮ, 3. ಮಂಗಳ, 4. ಬುಧ, 5. ಗುರು, 6. ಶುಕ್ರ, 7. ಮಂದ

[1]ವಾರದ ಪೆಸರೊತ್ತ [2]ವಾರದ ವಂಶಜನೇ
[3]ವಾರ ದೋಷವ ಕಳೆದು ಎನ್ನ [4]ವಾರ ಬುದ್ಧಿಯನ್ನು
ಎಣಿಸದೆ, [5]ವಾರದ ಪೂಜೆಯ ಸ್ವೀಕರಿಸಿ
[6]ವಾರನಾದ [7]ವಾರವನ್ನು ಕರುಣಿಸು ಹೇ ಪ್ರಭೋ ॥

ಅರ್ಥ : ಭಾರ್ಗವ ರಾಮನೆಂಬ ಹೆಸರುಳ್ಳ, ಆದಿತ್ಯ ವಂಶಜನೇ ಅಂಗಾರಕ ದೋಷವ ಕಳೆದು, ಎನ್ನ ಮಂದಬುದ್ಧಿಯನ್ನು ಎಣಿಸದೆ, ಇಂದು ಪೂಜೆಯ ಸ್ವೀಕರಿಸಿ, ಸೌಮ್ಯನಾದ ಬೃಹಸ್ಪತಿ (ಗುರು)ಯನ್ನು ಕರುಣಿಸು ಹೇ ಪ್ರಭುವೇ ॥

---

1. ಭಾರ್ಗವ - ಶುಕ್ರವಾರ, 2. ಆದಿತ್ಯ - ರವಿ - ಭಾನುವಾರ, 3. ಅಂಗಾರಕ - ಕುಜ - ಮಂಗಳವಾರ, 4. ಮಂದ - ಶನಿವಾರ, 5. ಇಂದು - ಸೋಮವಾರ, 6. ಸೌಮ್ಯ - ಬುಧವಾರ, 7. ಬೃಹಸ್ಪತಿ - ಗುರುವಾರ.

ನಕ್ಷತ್ರಮಾಲಿಕಾಸ್ತೋತ್ರ

[1]ನಕ್ಷತ್ರಸುತನನಜು ನವನೀತ ಭಾಂಡಮಂಡ
[2]ನಕ್ಷತ್ರದಿಂ ಪಿಡಿದು ಕದ್ದೊಯ್ಯುತಿರಲೋರ್ವ
[3]ನಕ್ಷತ್ರರಾಜಮುಖಿ ಕಂಡು ಬೆನ್ನಟ್ಟಲವ ನೋಡಿ ನಸುನಗುತ ತನ್ನ
[4]ನಕ್ಷತ್ರ ಬಂದಂತೆ ಬೆಣ್ಣೆಯಂ ಸವಿವುದಂ
[5]ನಕ್ಷತ್ರದಿಂ ಕೇಳಿ ಗೋಪಿ ಬರಲಂಜುತಾ
[6]ನಕ್ಷತ್ರ ಕೊಡಲಾರದೋಡಿ ನಿಜಮಂದಿರದ
[7]ನಕ್ಷತ್ರದೊಳಡಗಿದ ॥

---

1. ರೋಹಿಣಿ, 2. ಹಸ್ತ 3. ಚಂದ್ರ, 4. ಚಿತ್ರ, 5. ಶ್ರವಣ, 6. ಉತ್ತರ, 7. ಮೂಲ

ಇನ್ನೊಂದು ಮುಂಡಿಗೆ

[1]ಸುರಪನ ಸುತನ [2] ಸುತ [3] ಸುತ [4] ಸುತನ [5] ಯಾಗಾಗ್ನಿಯಲಿ [6]
ಉರುಳುವನ ತಲೆಗಾಯ್ದವನ [7] ನಂದನನ [8] ಸತಿಶಿರೋಮಣಿ [9]
ಗಳುಪಿದನ [10] ಸೋದರಿಯ [11] ಸುತೆಯನು [12] ಕರಪಿಡಿದವನ [13]
ತಾಯಿಯ [15] ಅಗ್ರಜನಿಗೆರಗುವೆನು [15].

---

1. ಇಂದ್ರನ, 2. ಅರ್ಜುನನ, 3. ಅಭಿಮನ್ಯು, 4. ಪರೀಕ್ಷಿತ, 5. ಜನಮೇಜಯ, 6. ತಕ್ಷಕನ, 7. ಇಂದ್ರನ, 8. ಅರ್ಜುನನ, 9. ದ್ರೌಪದಿಗೆ, 10. ಕೀಚಕನ, 11. ಸುದೇಷ್ಣೆಯ, 12. ಉತ್ತರೆಯನು, 13. ಅಭಿಮನ್ಯು, 14. ಸುಭದ್ರೆಯ, 15. ಕೃಷ್ಣನಿಗೆರಗುವೆನು.

ವಿಜಯದಾಸರ ಮುಂಡಿಗೆ

ಹರಿದಾಸನಾಗಿ ಸಂಚರಿಸು ಸಂತೋಷದಲಿ ।
ಗುರುಹಿರಿಯರ ಪಾದಕೆರಗು ಬಿಡದೆ

ಮೂರೊಂದು ಯುಗದಲ್ಲಿ, ಮೂರೊಂದು ವರ್ಣದ,
ಮೂರೊಂದು ಕಡೆ ಬಿಂಬ, ಮೂರೊಂದು ಆಗಿ ಭಜಿಸು,
ಮೂರೊಂದು ಪುರುಷಾರ್ಥ, ಮೂರೊಂದ್ವಾದಿ ಬೇಡು;
ಮೂರೊಂದು ಮೊಗನಯ್ಯ ವಿಜಯವಿಠಲರೇಯನ
ಮೂರೊಂದುಪಾಯದಲಿ ಮೂರೊಂದು ಪ್ರಳಯ ಮಾಳ್ಪನ್ನ

೧) ಮೂರೊಂದು ಯುಗದಲ್ಲಿ : ಕೃತ, ತ್ರೇತಾ, ದ್ವಾಪರ, ಕಲಿಯುಗ.

೨) ಮೂರೊಂದು ವರ್ಣದ : ಬಿಳುಪು, ಕೆಂಪು, ಪೀತ, ನೀಲವರ್ಣ,

೩) ಮೂರೊಂದು ಕಡೆ ಬಿಂಬ : ಸ್ವರೂಪ, ಲಿಂಗ, ಅನಿರುದ್ಧ, ಸ್ಥೂಲ ದೇಹಗಳಲ್ಲಿ

೪) ಮೂರೊಂದು ಆಗಿ ಭಜಿಸು : ಸತ್, ಚಿತ್, ಆನಂದ, ಆತ್ಮ ಎಂದು.

೫) ಮೂರೊಂದು ಪುರುಷಾರ್ಥ : ಧರ್ಮ, ಅರ್ಥ, ಕಾಮ, ಮೋಕ್ಷ.

೬) ಮೂರೊಂದ್ಹಾದಿ ಬೇಡು : ಸಾಯುಜ್ಯ, ಸಾರೋಪ್ಯ, ಸಾಲೋಕ್ಯ, ಸಾಮೀಪ್ಯ. (ಎಂಬ ನಾಲ್ಕು ವಿಧ ಮುಕ್ತಿ)

೭) ಮೂರೊಂದು ಮೊಗನಯ್ಯ : ಚತುರ್ಮುಖ ಬ್ರಹ್ಮದೇವರ ತಂದೆಯಾದ.

೮) ವಿಜಯವಿಠಲರೇಯನ : ಶ್ರೀನಾರಾಯಣ ದೇವರನ್ನು

೯) ಮೂರೊಂದುಪಾಯದಲಿ : ಸಾಮ ದಾನ, ಭೇದ, ದಂಡ.

೧೦) ಮೂರೊಂದು ಪ್ರಳಯ ಮಾಳ್ಪನ್ನ : ದಿನ ಪ್ರಳಯ, ಯುಗ ಪ್ರಳಯ, ಮನು ಪ್ರಳಯ, ಮಹಾ ಪ್ರಳಯ.

ಕನಕದಾಸರ ಮುಂಡಿಗೆ

ಶೇಷಶಯನ ನಿಮ್ಮ ಪರಮಭಾಗವತರ ಸಹ
ವಾಸದೊಳಿರಿಸು ಕಂಡ್ಯ ಎನ್ನನು
ಬೇಸರದೆ ನಿನ್ನ ಹೃದಯಾಬ್ಜದೊಳಗಿರುವ
ದಾಸರೊಳಿರಿಸು ಕಂಡ್ಯ ಎನ್ನನು
[1]ತಂದೆಯೊಡಲನು ಸೀಳಿಸಿದವರೊಳು [2]ದೇ
ವೇಂದ್ರನ ತಲೆಗೆ ತಂದವನೊಳು [3]ದು
ರ್ಗಂಧ ಪೆಣ್ಣಿಗೆ ಚಂದನದ ಕಂಪನಿತ್ತಂಥ
ಬಾಂಧವರೊಳಗಿರಿಸು ಕಂಡ್ಯ ಎನ್ನನು
[4]ತೋಯಜವೆಂಬ ಪುಷ್ಪದ ಪೆಸರವರೊಳು
[5]ತಾಯ ಸೊಸೆಗೆ ಮಕ್ಕಳಿತ್ತವರೊಳು
[6]ಆಯದಿ ದ್ವಾದಶಿ ವ್ರತವ ಸಾಧಿಸಿದಂಥ
ರಾಯರೊಳಿರಿಸು ಕಂಡ್ಯ ಎನ್ನನು
[7]ಗಿಳಿ [8]ನಾಯಿ ಪೆಸರಿನವರೊಳು [9]ಮುಗಿಲ
ಹೊಳೆಯ ಹೊಟ್ಟೆಲಿ [10]ಹುಟ್ಟಿದವರೊಳು
[11]ಕೆಳದಿಯ ಜರಿದು [12]ಶ್ರೀ ಹರಿದಿನ ಗೆದ್ದಂಥ

---

1. ಪ್ರಹ್ಲಾದ, 2. ನಾರದ, 3. ಪರಾಶರ, 4. ಪುಂಡರೀಕ, 5. ವ್ಯಾಸ, 6. ಅಂಬರೀಷ, 7. ಶುಕ, 8. ಶೌನಕ, 9. ಗಂಗೆ, 10. ಭೀಷ್ಮ, 11. ಮೋಹಿನಿ, 12. ರುಕ್ಮಾಂಗದ,

[13]ಹಳಬರೊಳಿರಿಸು ಕಂಡ್ಯ ಎನ್ನನು
[14]ಅಂಕಕ್ಕೆ ರಥವ ನಡೆಸಿದವರೊಳು ನಿ
[15]ಶ್ಯಂಕೆ ಧರ್ಮವ ಗೆದ್ದ ಹಿರಿಯರೊಳು
[16]ಲಂಕೆಯ ಅನುದಿನ ಸ್ಥಿರ ರಾಜ್ಯವಾಳಿದ
ಕಿಂಕರರೊಳಿರಿಸು ಕಂಡ್ಯ ಎನ್ನನು
[17]ಕಾಟಿಗೆ ಕಾಸುಕೊಟ್ಟವರು ರಾಯರ ಪಂಕ್ತಿ
ಊಟವ ಬಯಸಿದಂತೆ ನಾಡ ಬೇಡಿದೆ
ನಾಟಕಧರ ನೆಲೆಯಾದಿಕೇಶವ ನಿ
ನ್ನಾಟದೊಳಿರಿಸು ಕಂಡ್ಯ ಎನ್ನನು

---

13. ಬಕದಾಲ್ಭ್ಯ, 14. ಅರ್ಜುನ, 15. ವಸಿಷ್ಠ, 16. ವಿಭೀಷಣ, 17. ಗಂಜಿಗೆ,

ಗೋಪಾಲದಾಸರ ಹಾಡು

ಒಗೆತನದೊಳು ಸುಖವಿಲ್ಲ ಇದ
ಒಲ್ಲೆನೆಂದರೆ ನೀ ಬಿಡೆಯೆಲ್ಲಾ
ಜಗದೊಳು ಹಗರಣ ಮಿಗಿಲಾಯಿತುಪ
ನ್ನಗನಗ ನಗರ ನಿವಾಸ

[1]ಮೂರು ಬಣ್ಣಿಗೆಯ ಮನೆಗೆ [2]ಮೂರೆರಡು ಭೂತಗಳು
[3]ಮೂರು ನಾಲ್ಕು ಪ್ರಕಾರಕ್ಕೆ [4]ಮೂರಾರು ಛಿದ್ರಗಳು
[5]ಮೂರು ಅವಸ್ಥೆಯು ದಿನಕೆ [6]ಮೂರು ನೂರಾರು ಹತ್ತರಲಿ
[7]ಮೂರು ವಿಧದನ್ನದಿಂದ [8]ಮೂರು ತಾಪಕ್ಕಾದೆ

[9]ಐದು ಮಂದಿ ಭಾವನವರು [10]ಐದು ಮೈದುನರು ಕೂಡಿ
[11]ಐದು ಪರಿ ತಾವಾಗಿ ಮಾವ [12]ನೈದು ಕತ್ತಲೆ ಕೋಣೆ
[13]ಗೈದುವಂತೆ ಮಾಡುವರು ಐದು ತಂದು ಬೆಚ್ಚಿಸುವರು
[14]ಐದನೆ ಬೊಕ್ಕಸದ ಮನೆಯಲ್ಲಿದೆಯೋ ನಾ ಕಾಣೆ

---

1. ಸತ್ವ ರಜೋತಮೋ ಗುಣಗಳಿಂದ ಹಿಡಿದ ಶರೀರ, 2. ಪಂಚಭೂತಗಳು, 3. ತ್ವಕ್ಕು, ಚರ್ಮ, ಮಾಂಸ, ರುಧಿರ, ಮೇಧ, ಮಜ್ಜ, ಅಸ್ತಿ ಎನ್ನುವ ಪ್ರಕಾರಗಳು. 4. ನವರಂಧ್ರಗಳು (೨ ಕಿವಿ, ೨ ಕಣ್ಣು.೨ ಮೂಗಿನ ಹೊಳ್ಳೆ, ಬಾಯಿ, ಗುದ, ಉಪಸ್ಥಾ), 5. ಜಾಗ್ರತ್, ಸ್ವಪ್ನ, ಸುಷುಪ್ತಿ, 6. ೩೬೦ ದಿನಗಳಲ್ಲಿಯೂ, 7. ಸಂಚಿತ, ಆಗಾಮಿ, ಪ್ರಾರಬ್ಧವೆನ್ನುವ ೩ ವಿಧದ ಕರ್ಮಫಲ, 8. ತಾಪತ್ರಯ, (ಆಧ್ಯಾತ್ಮಿಕ, ಆದಿದೈವಿಕ, ಆದಿಭೌತಿಕ), 9. ಪಂಚಜ್ಞಾನೇಂದ್ರಿಯಗಳು, 10. ಪಂಚಕರ್ಮೇಂದ್ರಿಯಗಳು, 11. ಮನಸ್ಸು, ಬುದ್ಧಿ, ಚಿತ್ತ, ಅಹಂಕಾರ, ಚೇತನವೆಂಬ ಪಂಚವೃತ್ತಿಯ ಮನಸ್ಸೆಂಬ ಮಾವ, 12. ೫ ಕತ್ತಲೆಕೋಣೆ ತಾಮಿಸ್ರ, ಅಂಧತಾಮಿಸ್ರ, ಮೋಹ, ಮಹಾಮೋಹ, ನಿಧಾನ (ಅವಿದ್ಯಾಪಂಚಕರು), 13. ಸ್ಪರ್ಶ, ರಸ ರೂಪಗಂಧ ಶಬ್ದಗಳೆಂಬ ಪಂಚತನ್ಮಾತ್ರಗಳು, 14. ೫ ಬೊಕ್ಕಸದ ಮನೆಗಳು ಅನ್ನಮಯ ಪ್ರಾಣಮಯ, ಮನೋಮಯ ವಿಜ್ಞಾನಮಯ, ಆನಂದಮಯ ಕೋಶಗಳು,

[15]ಆರಾರು ಎರಡು ಸಾವಿರ ದಾರಿಯಲಿ ಹೋಗಿ ಬರುವರು
[16]ಆರು ಮೂರು ಮೂರು ಸಾವಿರದಾರು ನೂರು ನಿತ್ಯದಿ
[17]ಆರು ನಾಲ್ಕು ಮಂದಿ ಹಿರಿಯ ಪಾರುಪತ್ಯಗಾರರಿದಕೆ
[18]ಆರು ಎರಡು ವಿಧದಲೆನ್ನಗಾರು ಮಾಡುತ್ತಿಪ್ಪರೋ

[19]ಒಬ್ಬ ಬೆಳಕು ಮಾಡುವ [20]ಮತ್ತೊಬ್ಬ ಕತ್ತಲೆಗೈದಿಸುವ
[21]ಒಬ್ಬ ಎರಡೂ ಮಾಡುವ [22]ಮೇಲೊಬ್ಬ ನಿಂತು ನೋಡುವ
[23]ಒಬ್ಬ ಮೂವರ ಒಳಒಳಗೆ ಹಬ್ಬಿಕೊಂಡಿಪ್ಪವರಂತೆ
[24]ಒಬ್ಬನ ಕಾಣದೆ ತಾ ತಬ್ಬಿಬ್ಬುಗೊಳಗಾದೆ

[25]ಆರು ಹತ್ತರ ಮೂಲದಿ [26]ಆರು ಮಂದಿ ಬಿಡದೆ ಎನ್ನ
ಘೋರೈಸುವರೊ ಮರುಳೊಂದು ವಿಚಾರ ಮಾಡಲೀಸರೋ
[27]ಆರು ಮೂರು ವಿಧದ ಸೋಪಸ್ಕರ ಒಂದಾದರೂ ಇಲ್ಲ
[28]ಆರೆ ಇಬ್ಬರೂ ಸವತಿಯರ ಹೋರಾಟವೆನೆಂಬೆ

[29]ಹಡೆದ ತಾಯಿ ಮಾಯದಿ ಹಿಡಿದು ಬದುಕು ಮಾಡಿಸುವಳು
[30]ಒಡಹುಟ್ಟಿದೈವರು ಎನ್ನ ಕಡೆಗಣ್ಣಿಂದೀಕ್ಷಿಪರೋ
[31]ಬಿಡದೆ ಹತ್ತಿರ ಕಾದಿಪ್ಪನುದಿಸನು ಹಿರಿಯಣ್ಣನವನ
[32]ಮಡದಿಯ ತ್ಯಾಗಕ್ಕೇನೆಂಬೆ ತನ್ನ [33]ಒಡವೆ ಲೇಶವೀಯಳೋ

[34]ಅತ್ತೆ ಅತ್ತಿಗೆಯು ಎನ್ನ ಸುತ್ತಮುತ್ತ ಕಾದು ಕಟ್ಟಿ
ಎತ್ತ ಹೋಗಲೀಸರೋ ತೋರಲೀಸರೋ ನಿ
ನ್ನತ್ತ ಬಾರಲೀಸರೋ ಹೊತ್ತಿಗೆ ಬಂದೊದಗಿ [35]ನೃಪನ
ಭೃತ್ಯರು ಎಳೆದೊಯ್ಯುವಾಗ ಹೆತ್ತಯ್ಯ ನೀ ಬಿಡಿಸದಿರಲು
ಮತ್ತಾರು ಗತಿ ಪೇಳು

---

19. ವಿಶ್ವನಾಮಕ ಪರಮಾತ್ಮ, 20. ಪ್ರಾಜ್ಞನಾಮಕ ಪರಮಾತ್ಮ, 21. ತೈಜಸನಾಮಕ ಪರಮಾತ್ಮ, 22. ತೂರ್ಯನಾಮಕ ಪರಮಾತ್ಮ (ಶಿರಸ್ಸಿನ ೧೨ ಅಂಗುಲದ ಮೇಲೆ ಇರುತ್ತಾನೆ), 23. ಒಬ್ಬ ಪರಮಾತ್ಮನೇ ಆತ್ಮ, ಅಂತರಾತ್ಮ, ಜ್ಞಾನಾತ್ಮ ರೂಪಗಳಲ್ಲಿ ಒಳಒಳಗೇ ವ್ಯಾಪಿಸಿದ್ದಾನೆ, 24. ಪರಮಾತ್ಮ. 25. ೬+೧೦=೧೬ (ಕಳೆಗಳುಳ್ಳ ಲಿಂಗ ಶರೀರವನ್ನೇ ಮೂಲಾಧಾರ ಮಾಡಿಕೊಂಡು (ಪಂಚಭೂತ, ಪಂಚತನ್ಮಾತ್ರ, ಪಂಚಜ್ಞಾನೇಂದ್ರಿಯ ಮನಸ್ಸು). 26. ಅರಿಷಡ್ವರ್ಗಗಳು, 27. ನವವಿಧ ಭಕ್ತಿ, 28. ಆಶಾ, ಲಜ್ಜಾ, 29. ಮೂಲ ಪ್ರಕೃತಿ ಮಾಯಾದೇವಿ, 30. ಪಂಚಪ್ರಾಣ (ಪ್ರಾಣ ,ಆಪಾನ, ವ್ಯಾನ, ಉದಾನ, ಸಮಾನ), 31. ಮುಖ್ಯ ಪ್ರಾಣವೆಂಬ ಹಿರಿಯಣ್ಣ, 32. ಭಾರತೀದೇವಿಯ, 33. ಒಡವೆ - ಜ್ಞಾನ ಭಕ್ತಿ ವೈರಾಗ್ಯ, 34. ಸಂಶಯ, ವಿಪರ್ಯಾಸ, 35. ಯಮಭಟರು,

ಮನೆಯೊಳು [36]ನಾಳಿನ ಗ್ರಾಸಕ್ಕನುವಿಲ್ಲ
[37]ಋಣದಿಂದ ಕಡೆಹಾಯ್ಯುವ ಮಾರ್ಗ ಲೇಶು ಸಾಕಾಣೆ
ಗುಣಿಸಲು ಈ [38]ಕಾಳಪುರುಷನ ಬಂಧನದಿಂದ ನಾನಿನ್ನು
ದಣಿದೆನು ಇನ್ನೇನು ನಿನ್ನಣಿಗರೊಳಾಡಿಸೋ

ನಿನ್ನ ಹೊಂದಿ ಇಷ್ಟು ಬವಣೆಯನ್ನು ಬಡಲೀ ಜನರು
ನಿನ್ನ ದೂರಿ ಜರಿವರೋ ನಾನಿನ್ನು ತಾಳಲಾರೆ
ಘನ್ನಕರುಣಾ ಸೌಭಾಗ್ಯ ಸಂಪನ್ನ ಗೋಪಾಲ ವಿಠ್ಠಲ
ಬಿನ್ನಪವ ಚಿತ್ತೈಸಿ ಮನ್ನಿಸೈಯ್ಯ ಮಾಧವ.

---

36. ಸಾಧನೆ, 37. ದೇವ, ಋಷಿ ಹಾಗೂ ಪಿತೃ ಋಣ, 38. ಕಲಿ ಪುರುಷ.

ಗೋಪಾಲದಾಸರ ಮುಂಡಿಗೆ

[1]ಐದನೇ ತಿಂಗಳಲಿ ನಿಶ್ಚೈಸಿದೆ ।ಪ।
[2]ಐದು ವರುಷದವನು ಮುಂದಾಹ ಶುಭಚರಿತೆ ।ಅ.ಪ.।

[3]ಐದರೊಳಗೊಂದರ ತನಯನೆನಿಸಿಕೊಂಡು
[4]ಐದರೊಳಗೊಂದು ಮಾರ್ಗವನೆ ಪಿಡಿದು
[5]ಐದರೊಳಗೊಂದು ರಾಶಿಯ ಹಾರಿ ರಕ್ಕಸರ
[6]ಐದೆರಡು ವರುಷಗಳ ಮ್ಲಾನಮಾಡಿದನೆಂದು

[7]ಐದರೊಳಗೊಂದರ ತನಯಳಿಗೆ ನಮಿಸಿ ಮ
[8]ತ್ತೈದೆರಡು ಮುಖದವನ [9]ಸುತವೀರನ
[10]ಐದತ್ವವೈದಿಸಿ ಅರಿಯವರ ಪುರವನ್ನು
[11]ಐದರೊಳಗೊಬ್ಬನ ಮುಖಕೆ ನೀಡಿದನೆಂದು

[12]ಐದು ಇಂದ್ರಿಯಗಳೊಳಗೊಂದರಧಿಪನ [13]ಸುತನ
[14]ಐದು ಪ್ರಾಣವನು [15]ಸೆಳೆದವನ ರಥಕೆ
[16]ಐದು ನಾಲ್ಕು ಗ್ರಹಗಳೊಳಗೆ [17]ಕಡೆಯವನೆನಿಸಿ
[18]ಐದು ರೂಪದಿ ನಮ್ಮೊಳಿದ್ದು ಸಲಹುವನೆಂದು

---

1. ಶ್ರವಣದ, 2. ಪ್ರಜೋತ್ಪತ್ತಿ ಬ್ರಹ್ಮ, 3. ಪಂಚಭೂತಗಳಲ್ಲೊಂದಾದ ವಾಯುವಿನ ಪುತ್ರ ಹನುಮಂತ, 4. ಆಕಾಶಮಾರ್ಗ, 5. ಸಮುದ್ರ, 6. ಧಾತು, 7. ಭೂಪುತ್ರಿ ಸೀತೆ, 8. ರಾವಣ, 9. ರಾವಣಪುತ್ರ, 10. ಮೃತ್ಯು, 11. ಅಗ್ನಿಮುಖ, 12. ಚಕ್ಷುರಭಿಮಾನಿಯಾದ ಸೂರ್ಯಪುತ್ರ, 13. ಕರ್ಣನ, 14. ಮಂಚಪ್ರಾಣಗಳನ್ನ, 15. ಅರ್ಜುನನ, 16. ನವಗ್ರಹ, 17. ಕೇತು ಧ್ವಜ, 18. ಪ್ರಾಣೋಪಾನ ವ್ಯಾನ ಉದಾನ ಸಮಾನರೂಪಗಳಿಂದ,

[19]ಐವರೊಳು ನೋಡಲು ಅತಿ ಬಲನೆಂದೆನಿಸಿ
[20]ಐದೊಂದು ರಥಿಕರೊಳು ಅಧಿಕವೆನಿಸಿ
[21]ಐದು ಪುರ ಬೇಡೆ ಕೊಡದಿರಲವನ ಮಡದಿಯರ
[22]ಐದು ಮುತ್ತುಳ್ಳತನ ದೂರಮಾಡಿದನೆಂದು

[23]ಐದುಬಾಣನ ಗೆಲಿದ ಆಶ್ರಮವ ಕೈಗೊಂಡು
[24]ಐದೊಂದು ಅರಿಗಳನು ಮುರಿದು ಮೆಟ್ಟಿ
[25]ಐದು ಪ್ರಾಣರಿಗೆ ಗುರುಗೋಪಾಲವಿಠಲನ
[26]ಐದೆರಡು ನಾಮಗಳಿಂದ ಭಜಿಸುವೆನೆಂದು

---

19. ಭೀಮ, 20. ೬ ರಥಿಕರು, 21. ೫ ಊರುಗಳನ್ನು ಬೇಡಲು, 22. ದುರ್ಯೋಧನನ, 23. ಹರಿದ್ರಾ, ಕುಂಕುಮ, ಬಳೆ, ಬಿಚ್ಚೋಲೆ, ಮಾಂಗಲ್ಯ, 24. ಮನ್ಮಥ, 25. ಸನ್ಯಾಸಾಶ್ರಮ, 26. ಷಡ್ರಿಪುಗಳು , 27. ಮುಖ್ಯ ಪ್ರಾಣ, 28. ದಶಾವತಾರಗಳಿಂದ.

ಕನಕದಾಸರ ಮುಂಡಿಗೆ

ಅಂಧಕನನುಜನ ಕಂದನ ತಂದೆಯ
ಕೊಂದನ ಶಿರದಲಿ ನಿಂದವನ
ಚಂದದಿ ಪಡೆದನ ನಂದನೆಯಳ ನಲ
ವಿಂದ ಧರಿಸಿದ ಮುಕುಂದನಿಗೆ

ಅಂಧಕ - ಧೃತ ರಾಷ್ಟ್ರ, ಅನುಜ - ಪಾಂಡು, ಕಂದನ - ಧರ್ಮರಾಯ, ತಂದೆ - ಯಮಧರ್ಮ, ಕೊಂದನ - ಈಶ್ವರ, ಶಿರದಲಿ ನಿಂದನವ - ಚಂದ್ರನ, ಚಂದದಿ ಪಡೆದನ - ಸಮುದ್ರ, ನಂದನೆಯ - ಲಕ್ಷ್ಮಿ, ನಲವಿಂದಧರಿಸಿದ ಮುಕುಂದ - ವಿಷ್ಣು.

ರಥವನಡರಿ ಸುರಪಥದಿ ತಿರುಗುವ
ಸುತನಿಗೆ ಶಾಪವನಿತ್ತವನ
ಖತಿಯನು ಪಡೆದನ ಸತಿಯ ಜನನಿಸುತ
ಸತಿಯರನಾಳಿದ ಚತುರನಿಗೆ

ರಥವನಡರಿ - ಸೂರ್ಯ, ಸುತನಿಗೆ - ಕರ್ಣ, ಶಾಪವನಿತ್ತವನ - ಪರಶುರಾಮ, ಖತಿಯನು ಪಡೆದನ - ರಾಮನ, ಸತಿಯ - ಸೀತೆ, ಜನನಿ - ಭೂದೇವಿ, ಸುತ - ನರಕಾಸುರ, ಸತಿಯರು - ಗೋಪಸ್ತ್ರೀಯರು, ಚತುರ - ಕೃಷ್ಣ.

ಹರಿಯ ಮಗನ ಶಿರತರಿದನ ತಂದೆಯ
ಹಿರಿಯಮಗನ ತಮ್ಮನ ಪಿತನ
ಭರದಿ ಭಜಿಸಿದನ ಶಿರದಲಿ ನಟಿಸಿದ
ವರಕಾಗಿನೆಲೆಯಾದಿಕೇಶವಗೆ

ಹರಿ - ಸೂರ್ಯ, ಮಗ - ಕರ್ಣ, ಶಿರತರಿದನ - ಅರ್ಜುನ, ತಂದೆ - ಪಾಂಡು, ಹಿರಿಮಗ - ಧರ್ಮರಾಯ, ತಮ್ಮ - ಭೀಮ, ಪಿತನ - ವಾಯುದೇವರ, ಭರದಿ ಭುಜಿಸಿದನ - ಸರ್ಪ, ಶಿರದಲಿ ನಟಿಸಿದವನ - ಕೃಷ್ಣ.

ಕನಕದಾಸರ ಹಾಡು

ಬಲ್ಲವರು ಪೇಳಿರಿ ಲೋಕದ ಈ ಪದವನು
ಪುಲ್ಲಶರನನು ರಂಗ ಪೆತ್ತಿ ಮಹಿಮೆಯನು ||ಪ||

[1]ಗರಿಯುಂಟು ನೋಡಿದರೆ ಪಕ್ಷಿಕುಲ ತಾನಲ್ಲ
[2]ಧರೆಯ ಬೆನ್ನಲಿ ಶಿರವ ಮಡಗಿಕೊಂಡಿಹುದು
[3]ಬರಿಗಾಲ ಭಾರದಲಿ ನಡೆಯಲೊಲ್ಲದು ಮುಂದೆ
[4]ಎರಡು ಮೈ ಒಂದಾಗಿ ಕೂಡಿಕೊಂಡಿಹುದು

[5]ಇಳೆಯಲ್ಲಿ ಒಂದು ಪದ, ಗಗನದಲಿ ಒಂದು ಪದ
[6]ಕುಲವೈರಿಗಳ ಕೊಂದು ನಲಿದಾಡುತಿಹುದು
[7]ಹೊಲದೊಳಗೆ ಜೋಡಿಯಗಲಿ ತಿರುಗುತಿಹುದು ಅದು
[8]ಕಳದೊಳಗೆ ಕಂಬುಗಳ ಹರಡಿಕೊಂಡಿಹುದು
[9]ಜನಿಸಿದಾ ಬಳಿಯಲ್ಲಿ ತಾ ಲಜ್ಜೆದೊರೆದಿಹುದು
[10]ಕುಣಿಕುಣಿದಾಡುತಿದೆ ಹರಿಯತಲೆ ತುರಗವನೇರಿ
ಕನಕನೊಡೆಯನು ಕಾಗಿನೆಲೆಯಾದಿ ಕೇಶವನ
ಜನಕೆ ನಿತ್ಯವು ಪ್ರಸಾದವನು ಕೊಡುತಿಹುದು.

---

1. ಮತ್ಸ್ಯಾವತಾರ, 2. ಕೂರ್ಮಾವತಾರ, 3. ವರಾಹಾವತಾರ, 4. ನರಸಿಂಹಾವತಾರ, 5. ತ್ರಿವಿಕ್ರಮಾವತಾರ, 6. ಪರಶುರಾಮಾವತಾರ, 7. ರಾಮಾವತಾರ, 8. ಕೃಷ್ಣಾವತಾರ, 9. ಬೌದ್ಧಾವತಾರ, 10. ಕಲ್ಕ್ಯಾವತಾರ.

ಕನಕದಾಸರ ಹಾಡು

ಮಗುವಿನ ಮರುಳಿದು ಬಿಡದಲ್ಲ ||ಪ||
ಈ ಜಗದೊಳು ಪಂಡಿತರಿಂದ ಬಿಡಿಸಿ ||ಅ.ಪ||

[1]ನೀರನು ಕಂಡರೆ ಮುಳುಗುತಿದೆ, ತನ್ನ
[2]ಮೋರೆಯ ತೋರದೆ ಓಡುತಿದೆ
[3]ದಾರಿಗೆ ಅಲ್ಲಲ್ಲಿ ಅಳೆಯುತ್ತಿದೆ ದೊಡ್ಡ
[4]ಭೈರವಾಕಾರದಿ ಅದು ಕೂಗುತಿದೆ

---

1. ಮತ್ಸ್ಯಾವತಾರ, 2. ಕೂರ್ಮಾವತಾರ, 3. ವರಾಹಾವತಾರ, 4. ನರಸಿಂಹಾವತಾರ,

[5]ಪೊಡವಿಯ ಕೊಟ್ಟರೆ ಬಿಸುಡುತಿದೆ ತನ್ನ
[6]ಕೊಡಲಿಯೊಳ್ ಭೂಪರ ಕಡಿಯುತಿದೆ
[7]ಅಡವಿ ಕೋತಿಗಳ ಕೂಡುತಿದೆ ಚೆಲ್ವ
[8]ಮಡದಿಯರನ್ನು ಹಿಡಿದೆಳೆಯುತಿದೆ

[9]ಉಟ್ಟಿದ್ದ ವಸ್ತ್ರವ ಬಿಸುಡುತಿದೆ ತನ್ನ
[10]ದಿಟ್ಟ ತೇಜಿಯನೇರಿ ನಲಿಯುತಿದೆ
ಸೃಷ್ಟಿಯೊಳು ಭೂಸುರರ ಪೊರೆವ ಜಗ
ಜಟ್ಟಿಯಾದಿ ಕೇಶವರಾಯನಂತೆ

---

5. ವಾಮನವತಾರ, 6. ಪರಶುರಾಮಾವತಾರ, 7. ರಾಮಾವತಾರ, 8. ಕೃಷ್ಣಾವತಾರ, 9. ಬೌದ್ಧಾವತಾರ, 10. ಕಲ್ಕ್ಯವತಾರ.

ಗೋಪಾಲದಾಸರ ಒಂದು ಹಾಡು

"[1]ಉರಗನಂದದಿ ಗುಣವುಳ್ಳ ಪುರುಷ ನೀನು
ಹರಿಯೇ ನೀ [2]ಮಾರ್ಜಾಲನಂದದಿ ಗುಣದವ
ಸರಿ ಬಿಡು [3]ಮೂಷಕ ಗುಣವುಳ್ಳವ ನೀನು
[4]ಗರುಡನಂಥವ ನೀನು ವರ [5]ಕಪಿ ಗುಣದವ
[6]ಕರಿಯಂಥವ ನೀನು [7]ಕಪ್ಪೆಯಂಥವ ನೋಡು
ಪರಿಪೂರ್ಣ ನಿರ್ದೋಷ ಗೋಪಾಲ ವಿಠ್ಠಲ
[8]ಸರಿಹೋದಂತಾಡುವೆ ಸಲಿಗೆಯಿಂದಲಿ ನಾ"

---

1. ತಾನಿಟ್ಟ ಮೊಟ್ಟೆಗಳನ್ನು ತಾನೇ ಭಕ್ಷಿಸುವ ಸರ್ಪದಂತೆ, ಶ್ರೀ ಹರಿಯೇ ಜೀವರನ್ನು ನೀನೇ ಸೃಷ್ಟಿಸಿ, ನೀನೇ ಅವರನ್ನು ಉದರದಲ್ಲಿಟ್ಟು ಕೊಳ್ಳುತ್ತೀಯಾ (ಜಗದುದರನ)
2. ಬೆಕ್ಕು ಹೊಂಚು ಹಾಕಿ ಬೇಟೆಯಾಡುವಂತೆ ನೀನೂ ಸಮಯ ಕಾದು ಜಗತ್ತನ್ನು ಲಯಗೊಳಿಸುವ ಬೇಟೆಯಾಡಬಲ್ಲವನ್ನು.
3. ಇಲಿಯು ಸಾಮಾನ್ಯವಾದ ಹಗ್ಗ ಕಡಿದರೆ ನೀನು ದೋಷ ಪಾಶವನ್ನೇ ಕಡಿಯುವಿ.
4. ಗರುಡನು ವೇಗವಾಗಿ ಹಾರುವಂತೆ ನೀನು ಧ್ಯಾನಿಗಳ ಧ್ಯಾನಕ್ಕೆ ಸಿಲುಕದೆ ಹಾರುವಿ.
5. ಹಂಗಿಸಿ ಹಂಗಿಸಿ, ಭಂಗಿಸಿ ಭಂಗಿಸಿ ಕಡೆಗೆ ಕೈ ಹಿಡಿಯುವ ಗುಣ ನಿನ್ನದು.
6. ನಿನ್ನ ಭಕ್ತರ ಭಾರವನ್ನು ಹೊರುವುದರಲ್ಲಿ ನೀನು ಆನೆಯಂತೆ.
7. ಜಲವಿದ್ದಲ್ಲಿ ವಾಸಿಸುವ ಕಪ್ಪೆಯಿದ್ದಂತೆ, ಹರಿಯೇ ಭಕ್ತಿರಸದ ಮಡುವಿನಲ್ಲಿ ನೀನು ನಿಲ್ಲುವಿ.
8. ನಿನ್ನ ಮೇಲಣ ಭಕ್ತಿಯ ಸಲಿಗೆಯಿಂದ ನಾನು ಈ ರೀತಿ ಮಾತಾಡಿದ್ದೇವೆ. ಪರಿಪೂರ್ಣನಾದ, ನಿರ್ದೋಷನಾದ ಗೋಪಾಲವಿಠಲ ನಿನಗೆ ನಮಸ್ಕಾರಗಳು.

ಕನಕದಾಸರ ಇನ್ನೊಂದು ಮುಂಡಿಗೆ

ಕೆಂಪುಮೂಗಿನ ಪಕ್ಷಿ [1]ತಂಪಿನೊಳಿರುವುದು [2]
ನೆಂಪು ಬಲ್ಲವರು ಪೇಳಿ
ಹಂಪೆಯ ವಿರೂಪಾಕ್ಷ ಲಿಂಗನಲ್ಲಿ
ಝುಂಪಿಯನಾಡುತ್ತಿದೆ [3]

ಆರು ತಲೆಯು [4]ಹದಿನಾರು [5]ಕಣ್ಣುಗಳುಂಟು
ಮೂರು ಮೂರು ನಾಲಿಗೆ [6]
ಬೇರೆ ಹನ್ನೆರಡು ಕಣ್ಣು ಕಿವಿಗಳುಂಟು [7]
ಸೇರಿತು ತೊಂಕಲಾಗೆ [8]
ಬಲೆಯ ಬೀಸಿದರು ಸಿಕ್ಕದು ಆ ಮೃಗ
ಜಲದೊಳು ತಾನಿಲ್ಲದು
ನೆಲನ ಮೇಲಿರುವುದು [9] ನಿಂತರೆ ಸಾವುದು [10] ದೇಹದಲ್ಲಿ
ಕುಲದೊಳಗಾಡುತಿದೆ [11]
ಸಕಲಕಲೆಯು [12] ಬಲ್ಲ ಸೀತಾಳ ಮಲ್ಲಿಗೆ
ಬೇರೆ ಬೇರೆನ ಬಹುದು [13]
ಚೆನ್ನಕೇಶವನಲ್ಲಿ ಕೃಪೆಯು ಉಂಟಾದರೆ
ಅಲ್ಲುಂಟು ಇಲ್ಲಿಲ್ಲವೇ

---

1. ರಜೋಗುಣದಲ್ಲಿ ತೊಡಗಿದ ಮನಸ್ಸು, 2. ಉಲ್ಲಾಸದಲ್ಲಿದೆ, 3. ರುದ್ರದೇವರ ಸುತ್ತಲೂ ಝೇಂಕರಿಸುತ್ತಿದೆ (ರುದ್ರದೇವರು ಮನೋನಿಯಾಮಕರು), 4. ಪಂಚೇಂದ್ರಿಯ + ಮನಸ್ಸು, 5. ಪಂಚಜ್ಞಾನೇಂದ್ರಿಯ + ಪಂಚಕರ್ಮೇಂದ್ರಿಯ + ಪಂಚತನಾತ್ರ ಆತ್ಮ+= ೧ ಹದಿನಾರು ಕಣ್ಣುಗಳು, 6. ಸಾತ್ವಿಕ ರಾಜಸ ತಾಮಸಗುಣಗಳ ತ್ರಿಪುಟಿಯಿಂದ ಆಗುವರ್ ವಿಧ ವ್ಯಾಪಾರ. 7. ೧೪ ವೇದ + ೬ ಶಾಸ್ತ್ರದ, ಇತಿಹಾಸ ಪುರಾಣದ ೧೨ ಕಣ್ಣುಗಳು, 8. ಪರಮಾತ್ಮನಲ್ಲಿ ಶಾಂತವಾಗುವುದು, 10. ಭಗವನ್ನಿಷ್ಠವಾದರೆ ಅಹಂಕಾರ ನಾಶ, 11. ದೇಹ, 12. ಅನೇಕ ಜನ್ಮ ಸಂಸ್ಕಾರಗಳ ಉತ್ತಮ ಮನಸ್ಸು.

ಕುಮಾರವ್ಯಾಸನ ಜನಪ್ರಿಯ ಭಾರತ ಮುಂಡಿಗೆ

[1]ವೇದಪುರುಷನ [2]ಸುತನ [3]ಸುತನ [4]ಸಹೋದರನ
[5]ಮೊಮ್ಮಗನ [6]ಮಗನ [7]ತಳೋದರಿಯ [8]ಮಾತುಳನ
[9]ಮಾವನ ಅತುಳಭುಜಬಲನ
[10]ಕಾದಿ ಗೆಲಿದನ [11]ಅಣ್ಣನ [12]ವೈಯ
[13]ನಾದಿನಿಯ ಜಠರದಲಿ ಜನಿಸಿದ [14]ಆದಿ
ಮೂರುತಿ ಸಲಹೋ ಗದುಗಿನ ವೀರನಾರಾಯಣ

---

1. ನಾರಾಯಣ, 2. ಬ್ರಹ್ಮ, 3. ನಾರದ, 4. ಮರೀಚಿ, 5. ಇಂದ್ರ, 6. ಅರ್ಜುನ, 7. ಸುಭದ್ರ, 8. ಕಂಸ, 9. ಜರಾಸಂಧ, 10. ಭೀಮ, 11. ಧರ್ಮರಾಜ, 12. ಕುಂತಿ, 13. ದೇವಕಿ, 14. ಶ್ರೀಕೃಷ್ಣ.

ಕನಕದಾಸರ ಹಾಡು

ತೋರೆ ಬೇಗನೇ ತೋರೇ ಮುತ್ತಿನ ಹಾರ
ಭಾರವಾಗಿದೆ ಎನಗೆ ॥ಪ॥
ಈರೇಳು ಲೋಕವ ಪೊರೆವ ದಯಾನಿದೆ ಬಾರನಿನ್ಯಾತಕೆ
ಮನೆಗೆ ಓ ಸಖಿಯೇ ॥ಅ.ಪ.॥

[1]ತರಣಿತನಯನ [2]ಸುತನ ಬಾಯೊಳನೃತವ ಭರದಿಂದ [3]ನುಡಿಸಿದನ
[4]ತರಣಿಸುತನ ಬಾಣವೆರಗದಂದದಿ ರಥವ ಧರೆಗೆ ಒತ್ತಿದ ದೇವನ
[5]ತರಣಿಯ ಮಾರೆಮಾಡಿ [6]ಶಿರವ ತರಿಯುವಂತೆ [7]ನರಗೆ [8]ಸೂಚಿಸಿದಾತನ
[9]ತರಣಿಯೊಡನೆ ಪಂಥವಾಗಿ ತಿರುಗಿದನ [10]ತನಯಳಾಳಿದನ
[11]ತೋರಿಸೇ ಓ ಸಖಿಯೆ

---

1. ಯಮಧರ್ಮ, 2. ಧರ್ಮರಾಜ, 3. ಕೃಷ್ಣ 4. ಕರ್ಣ, 5. ಸೂರ್ಯ, 6. ಸೈಂಧನ, 7. ಅರ್ಜುನ, 8. ಕೃಷ್ಣ 9. ತ್ರಿವಿಕ್ರಮ ರೂಪವನ್ನು ಪ್ರದಕ್ಷಿಣೆ ಮಾಡಲು ಸೂರ್ಯನ ಜೊತೆಯಲ್ಲಿ ಜಾಂಬವಂತನು ಪ್ರವೃತ್ತನಾದನು, 10. ಅವನ ಮಗಳಾದ ಜಾಂಬವತಿಯನ್ನು, 11. ಆಳಿದ ಕೃಷ್ಣ.

[1]ಗೋತ್ರಭೇದಿಯ [2]ಸುತನ [3]ಹೆಂಡಿರ [4]ಮಗನ [5]ಮಾತುಳನಾದವನ
[6]ಕತ್ತಲೆಯಲಿ ಪೋಗಿ ಕುತ್ತಿಟ್ಟವನ ನಮ್ಮೆಯ್ಯ ಸುತ್ತಿ ಬಾಧಿಸುತಿಪ್ಪನ
[7]ತತ್ವವನರಿತು ಸುತತ್ವವ ಬೋಧಿಸಿ ಉತ್ತರವಿತ್ತವನ [8]ಮುತ್ತಯ್ಯನ
[9]ತಾಯಪೆತ್ತ [10]ದೇವನ ಎನ್ನತ್ತ ಕರೆದು ತಾರೇ ಓ ಸಖಿಯೇ

---

1. ಇಂದ್ರ, 2. ಅರ್ಜುನ, 3. ಸುಭದ್ರೆ, 4. ಅಭಿಮನ್ಯು, 5. ಶ್ರೀಕೃಷ್ಣ 6. ಅಶ್ವತ್ಥಾಮ, 7. ವೇದವ್ಯಾಸರು, 8. ಭೀಷ್ಮನ, 9. ಗಂಗಾ, 10. ಶ್ರೀ ಕೃಷ್ಣ.

ವರಮುನಿಗಳು ಕೂಡಿ ಸರ್ವೋತ್ತಮನಾರೆಂದು ಸಂಶೋಧಿಸಬೇಕೆಂದು
ಭರದಿಂದ ಭೃಗುಮುನಿ ಬರಲು ತೋರಿಸೆ ಬೇಗ ಚರಣವನೊತ್ತಿದನ
ಪರಿಪರಿಯಲಿ ದೇವ ಪರಮಭಕ್ತರ ಕಾವ ಸುರರಿಗಭಯವಿತ್ತವನ
ವರದ ವೇಲಾಪುರದಾದಿ ಕೇಶವನ ಮರೆಯಲಾರೆನೆ ಮನದಿ ಓ ಸಖಿಯೇ ॥

ಪುರಂದರ ದಾಸರ ಹಾಡು

ಏನಾಯ್ತು ರಂಗಗೆ ನೋಡಿರಮ್ಮ ॥ಪ॥
ನಿಧಾನಿಸಿ ಎನಗೊಂದು ಪೇಳಿರಮ್ಮಾ ॥ಅ.ಪ.॥

[1]ಪುಟ್ಟಿದಾರಭ್ಯ ಕಣ್ಣು ಮುಚ್ಚನಮ್ಮಾ
[2]ಎಷ್ಟಾದರೂ ಮೊಲೆ ಉಣ್ಣನಮ್ಮಾ

---

1. ಮತ್ಸ್ಯಾವರ, 2. ಕೂರ್ಮಾವತಾರ,

[3]ತುಟುಕುಮುಖ ಮೇಲಕ್ಕೆ ಎತ್ತನಮ್ಮಾ - ಹೀಗೆ
[4]ಎಷ್ಟೇಳಲೀ ಬಾಯಿ ಮುಚ್ಚನಮ್ಮಾ

[5]ಕಾಯ ಇದ್ದಾಗಿದ್ದು ಹೆಚ್ಚಿತಮ್ಮಾ ಹೆತ್ತ
[6]ತಾಯಿ ನೆಲೆ ಇಲ್ಲದಾಯಿತಮ್ಮ
[7]ನೋಯ ನೋಟದಿ ಅಬ್ಧಿ ಬತ್ತಿತಮ್ಮಾ - ಇವನ
[8]ಬಾಯೊಳಗೆ ವಿಶ್ವ ತೋರಿತಮ್ಮಾ

[9]ಅತ್ಯಂತ ಮಾತುಗಳ ಆಡುವನಮ್ಮಾ - ಮುಂದೆ
[10]ಸತ್ಯಾಗಿ ಕುದುರೆ ಏರುವನಮ್ಮಾ
ನಿತ್ಯಾನಿರ್ದೋಷ ಶ್ರೀ ಪುರಂದರ ವಿಠ್ಠಲನು - ತನ್ನ
ಭಕ್ತರ ಸಲಹುವ ದೇವನಮ್ಮಾ

---

3. ವರಾಹಾವತಾರ, 4. ನರಸಿಂಹಾವತಾರ, 5. ವಾಮನಾವತಾರ, 6. ಪರಶುರಾಮಾವತಾರ, 7. ರಾಮಾವತಾರ 8. ಕೃಷ್ಣಾವತಾರ, 9. ಬೌದ್ಧಾವತಾರ, 10. ಕಲ್ಕ್ಯಾವತಾರ

ಮನೋಹರ ವಿಠಲದಾಸರ ಒಂದು ಮುಂಡಿಗೆ

ಭೇರಿ ನಾಮದ ಖಳನ ಕೊಂದವನ ಕೊಂದವನ ।
ನಾರಿಯಂ ಪಡೆದವಳ ತನುಭವನ ತನುಭವನ ।
ವಾರಣವ ತರಿದವನ ಸಂಭವನ ಸಂಭವನ ಮಾತುಳನ ಮಾತುಳನನು ॥
ಅರಜನಿಯೋಳ ಸೀಳ್ದವನ ಸತಿಯ ಪತಿವ್ರತೆಯ ।
ಚೌರುಚರಣಾಬ್ಜಮಂ ಭಕ್ತಿಯಿಂ ಮುಕ್ತಿಯಿಂ ।
ದಾರಾಧಿಸುತ ಸತತ ಸದ್ಗತಿಯ ಸನ್ಮತಿಯ ನಿಶ್ಚೈಸುವೆನು ಮನದೊಳು ॥

ಅರ್ಥ

ಭೇರಿ ನಾಮದ ಖಳನ	...	ದುಂದುಭಿ ರಕ್ಕಸನ
ಕೊಂದವನ, ಕೊಂದವನ	...	ವಾಲಿ, ರಾಮನ
ನಾರಿಯಂ	...	ಸೀತಾದೇವಿಯನ್ನು
ಪಡೆದವಳ	...	ಭೂದೇವಿಯ
ತನುಭವನ	...	ನರಕಾಸುರನ
ತನುಭವನ	...	ಭಗದತ್ತನ
ವಾರಣಂ	...	ಸುಪ್ರತೀಕವೆಂಬ ಆನೆಯನ್ನು
ತರಿದವನ	...	ಅರ್ಜುನನ
ಸಂಭವನ	...	ಅಭಿಮನ್ಯುವಿನ
ಸಂಭವನ	...	ಪರೀಕ್ಷಿತನ

ಮಾತುಳನ	...	ಉತ್ತರನ
ಮಾತುಳನ	...	ಕೀಚಕನನ್ನು ರಾತ್ರಿ ಕಾಲದಲ್ಲಿ ಸಂಹರಿಸಿದ
ಸೀಳ್ದವನ	...	ಶ್ರೀ ಭೀಮಸೇನದೇವರ
ಸತಿಯ ಪತಿವ್ರತೆಯ	...	ದ್ರೌಪದೀದೇವಿಯರು ಅರ್ಥಾತ್ ಭಾರತೀ ದೇವಿಯರ
ಚಾರುಚರಣಾಬ್ಜಮಂ ಭಕ್ತಿಯಂ	...	ಮನೋಹರವಾದ ಪಾದಕಮಲಗಳನ್ನು ಪೂಜಿಸುವೆ
ಮುಕ್ತಿಯಿಂ	...	ಒಳ್ಳೆಯ ಭಕ್ತಿಯಿಂದಲೇ ಮುಕ್ತಿ ಕಾರಣ.

ಪುರಂದರದಾಸರ ಮುಂಡಿಗೆ

ಇಲ್ಲಿಯೆ ಕುಳಿತಿದ್ದ ಭೂತವು ಒಂದು
[1]ಹಲ್ಲಿಯು ನುಂಗಿತು ಹದಿನಾಲ್ಕು ಲೋಕವ ॥

ಸೂಳಿಯ [2] ಮನೆಯಲ್ಲಿ ಇದೆಯೊಂದು ಕೋಳಿ [3]
ಕೋಳಿಯ ನಾಲಿಗೆ ಏಳು [4] ತಾಳುದ್ದ
ಕೋಳಿ ನುಂಗಿತು ಏಳು [5] ಕಾಳಿಂಗ ನಾಗನ
ಮೇಲೊಂದು ಬೇಡಿತು ಸಿಂಹದ ಮರಿಯ [6] ॥೧॥

ಕಾನನದೊಳಗೊಂದು ಇರುವುದು ಕೋಣ [7]
ಕೋಣದ ಕೊರಳಿಗೆ ಮುನ್ನೂರು ಬಾವಿ [8]
ಕೊಣ ನೀರಿಗೆ ಹೋಗಿ ಕ್ಷೋಣಿ ಕಪಿಯ ಕೊಂದು ॥೨॥
ಟೊಣ್ಣನ ಮನೆಯೊಳಗೌತಣವಯ್ಯ

ವೃಕ್ಷದ ಮೇಲೊಂದು ಸೂಕ್ಷ್ಮದ [10] ಪಕ್ಷಿ
ಪಕ್ಷಿ ಭಕ್ಷಣವಾದ ಅಮೃತದ ಹಣ್ಣು [11]
ಪಕ್ಷಿ ನೋಡಲು ಬಂದ ರಾಕ್ಷಸ [12] ಬ್ರಾಹ್ಮಣ
ಶಿಕ್ಷೆಯ ಮಾಡಿದ ಪುರಂದರ ವಿಠಲ ॥೩॥

1. ಹಲ್ಲಿ, 2. ಮಂಥರ (ಅಪ್ಸರೆ), 3. ಕೈಕೆ, 4. ೭೦೦ ವರ್ಷದ ಹಿಂದಿನ ವಚನ, 5. ಸಪ್ತಾಂಗಗಳಿಂದ ಕೂಡಿದ ರಾಜ್ಯದೊಡೆಯ ದಶರಥ, 6. ಭರತ ಅಥವಾ ಪಾದುಕೆ, 7. ವಾಲಿ, 8. ಯುದ್ಧರಂಗ, 9. ಸುಗ್ರೀವ (ರಾಮಕಾರ್ಯವನ್ನು ಮರೆತದ್ದರಿಂದ), 10. ಶಿಂಶುಪ ವೃಕ್ಷದ ಮೇಲೆ ಹನುಮಂತ, 11. ರಾಮವೃತ್ತಾಂತ, 12. ರಾವಣ.

ಕನಕದಾಸರ ಒಂದು ಮುಂಡಿಗೆ

ಸುರದ ವಾದ್ಯದ ಪೆಸರನೆ [1]
ಬಸುರಲಿ ಬಂದ ಉರಗನ [2]

1. ವಸುದೇವ (ಆನಕ ದುಂದುಭಿ), 2. ಬಲರಾಮ,

[3]ಅತ್ತೆಯ [4]ಮಗನ ಹಿರಿಯ ತಮ್ಮನ [5]
ಸುತ್ತಿ ಬಾಧಿಸಲಾಗದೆ [6] ಅವರಪ್ಪನ ತಿಂದವನ [7]
[8]ಧುರದೊಳ್ ಧ್ವಜದೋಳ್ ಕೀಲಿಸಿದಾತನ [9]
[10]ವರ ಕುಮಾರರೆಲ್ಲರನು ಕೊಂದವನ [11] ನಿಜ
[12]ಮಾತೆಯ ಕೊಡೆ ಪುಟ್ಟಿದವನ [13] ವೇಲಾಪುರದ
ಆದಿಕೇಶವ ನಿನಗೆ ಶರಣು

---

3. ಕುಂತಿ, 4. ಧರ್ಮರಾಯ, 5. ಭೀಮಸೇನ, 6. ನಹುಷಸರ್ಪ, 7. ವಾಯು, 8. ಯುದ್ಧದಲ್ಲಿ, 9. ದುರ್ಯೋಧನ (ಸರ್ಪಧ್ವಜ), 10. ಉಪಕೌರವರು, 11. ಅಭಿಮನ್ಯು, 12. ಸುಭದ್ರೆ, 13. ಕೃಷ್ಣ.

ಇನ್ನಷ್ಟು ಮುಂಡಿಗೆಗಳು

[1]ಬೆಟ್ಟವನು ತನ್ನ ಹೊಟ್ಟೆಯಲ್ಲಿಟ್ಟು
[2]ಗುಟ್ಟಾಗಿ ಸಲಹಿದನ, ಹೊಟ್ಟೆಯಲಿ [3]ಪುಟ್ಟಿದ
[4]ಇಷ್ಟದೇವನ, ನಟ್ಟ ನಡುವಿನಲಿ ಪುಟ್ಟಿದನ [5]
[6]ನೆತ್ತಿಯನೊಂದನು ಕಿತ್ತಿದನ ಸತಿ [7]
[8]ಸೃಷ್ಟಿಯಲಿ ಪುಟ್ಟಿ ಲೋಕದೊಳು
ಮೊಟ್ಟ ಮೊದಲನೆಯ ಪೂಜೆಗೊಂಬ
[9]ಇಷ್ಟ ಮೂರುತಿ ಸಲಹೋ ಶ್ರೇಷ್ಠ ವರಗಳನು.

---

1. ಮೈನಾಕ ಪರ್ವತ, 2. ಸಮುದ್ರ ರಾಜ, 3. ಲಕ್ಷ್ಮೀ, 4. ನಾರಾಯಣ, 5. ಬ್ರಹ್ಮ, 6. ಈಶ್ವರ, 7. ಪಾರ್ವತಿ, 8-9. ಗಣೇಶ.

ರಾಶಿ ಮಾಲಿಕಾ ಸ್ತೋತ್ರ

[1]ರಾಶಿ ಧ್ವಜನ ರಣದೋಳ್ ಮೆಚ್ಚಿಸಿದ ವೀರನಂ ।
[2]ರಾಶಿ ವಿದ್ಯೆಗಳೋಳ್ ಅಧಿಕನಂ ಮಡಿದಾ ।
[3]ರಾಶಿ ಹಳವಿದೆಯ ಶಿವಸುತನ ಮಹಾಸ್ತ್ರಕ್ಕೆ ಬಾರದನ ಜನನಿಯ ।
[4]ರಾಶಿಯಾವಸ್ಥೆಯಲಿ ಪುಟ್ಟಿದನ ನಿಜಪಿತನ ।
[5]ರಾಶಿ ಮಧ್ಯದೊಳೊಪ್ಪುವ ಸುತೆಯ ವಲ್ಲಭನಾದ ಕಾಳಿಂದಿ
[6]ರಾಶಿ ಕೇತನ ಜನರನಂಘ್ರಿಯ ದಂಡಮಂ ಧೇನಿಪೆನನುದಿನವು ॥

---

1. ವೃಷಭ, 2. ಧನುಸ್ಸು, 3. ಕುಂಭ, 4. ಕನ್ಯಾ, 5. ಸಿಂಹ, 6. ಮೀನ

ನಕ್ಷತ್ರ ಮಾಲಿಕಾ ಸ್ತೋತ್ರ

[1]ನಕ್ಷತ್ರ ಸುತನನುಜನೊಂದು ದಿನ [2]ನಕ್ಷತ್ರದೊಳಿರ್ಪ ನವನೀತಮಂ ।
[3]ನಕ್ಷತ್ರದಿಂ ತೆಗೆದು । [4]ನಕ್ಷತ್ರ ಬಂದಂತೆ ಎಸೆಯುತಿರಲ್ ।

---

1. ರೋಹಿಣಿ, 2. ಮುಖ, 3. ಹಸ್ತ 4. ಚಿತ್ತ

ಆ ಸಪ್ಪಳಮಂ [5]ನಕ್ಷತ್ರವಂ ಪಿಡಿದಿರ್ದ । ನಕ್ಷತ್ರಾಖ್ಯೆ [6]
[7]ನಕ್ಷತ್ರರಾಜಮುಖಿಯೋರ್ವಳ್ [8]ನಕ್ಷತ್ರದಿಂ ಕೇಳಿ । ಬೆನ್ನಟ್ಟಿ
ಬರಲ್ । [9]ನಕ್ಷತ್ರ ಶಯನಂ [10]ನಕ್ಷತ್ರಮಂ ಕೊಡದೆ ತನ್ನ ।
ನಿಜಮಂದಿರವ ಬೇಕೆಂದು [11]ನಕ್ಷತ್ರದೊಳ್ ಪೋಗಿ ನಿಂದು ॥

5. ಭರಣಿ, 6. ವಿಶಾಖ ಅನುರಾಧ ಸ್ವಾತಿ, 7. ಚಂದ್ರ, 8. ಶ್ರವಣ, 9. ಆಶ್ಲೇಷ, 10. ಉತ್ತರ, 11. ಮೂಲ.

ಸಂವತ್ಸರ ಮಾಲಿಕಾ ಸ್ತುತಿ

ಪಾಹಿ ನಾರಾಯಣನೆ । ಪಾಹಿ ವಾಸುಕಿಶಯನಾ ।
ಪಾಹಿ ಗರುಡಧ್ವಜನೆ । ಪಾಹಿ ಕಮಲಾಕ್ಷಾ ॥ಪ॥

[1]ಸಂವತ್ಸರಾಂಬರಧರಾ । ನತಜನ ಪರಿಪಾಲಾ।
[2]ಸಂವತ್ಸರಾ ಹರೇ ಕಾರುಣ್ಯ ನಿಧಿಯೇ ॥
[3]ಸಂವತ್ಸರಕೆ ನಿನ್ನ ಸಮರಾರು ತ್ರಿಜಗದೀ ।
[4]ಸಂವತ್ಸರ ಜಲ ಜರೇ । ಸಂವತ್ಸರುಪಮಾ ॥೧॥

[6]ಸಂವತ್ಸರಾಕ್ಷನುತ ಗಜವೈರಿ ಸಂಹರನು।
[7]ಸಂವತ್ಸರಾದಿ ಸಂವತ್ಸರ [8]ರಿಪು॥
[9]ಸಂವತ್ಸರ ಕುವರನೇ । ಸಂವತ್ಸರನೇ [10]ನಿನ್ನ
[11]ಸಂವತ್ಸರವಳಿದು ಕೊಡು । [12]ಸಂವತ್ಸರ ಮತಿ ॥೨॥

[13]ಸಂವತ್ಸರ ಸಮಗ್ರ ಪ್ರಾಣೇಶ ವಿಠ್ಠಲನೇ ।
[14]ಸಂವತ್ಸರತ ಸ್ವಾಮಿ ದೋಷದೂರ ॥
[15]ಸಂವತ್ಸರ ಪಿತ । ಸಿರಿ ಸಂವತ್ಸರ
ಸಂವತ್ಸರ ಮಾಡು । ದೀನ ಕಲ್ಪತರೋ ॥೩॥

1. ಶುಕ್ಲ, 2. ಪ್ರಜೋತ್ಪತ್ತಿ, 3. ವಿಕ್ರಮ, 4-5. ಚಿತ್ರಭಾನು, 6. ಪಿಂಗಳ, 7. ಖರ, 8. ರಾಕ್ಷಸ, 9. ನಂದನ, 10. ಈಶ್ವರ, 11. ದುರ್ಮತಿ, 12. ಸೌಮ್ಯ, 13. ಆನಂದ, 14. ಸರ್ವಜಿತ, 15. ಮನ್ಮಥ, 16. ವಿಭವ, 17. ಕ್ಷಯ

[1]ವಾರದ ಪೆಸರೊತ್ತ [2]ವಾರದ ವಂಶಜನೇ
[3]ವಾರ ದೋಷವ ಕಳೆದು ಎನ್ನ [4]ವಾರ ಬುದ್ಧಿಯನ್ನು
ಎಣಿಸದೆ, [5]ವಾರದ ಪೂಜೆಯ ಸ್ವೀಕರಿಸಿ
[6]ವಾರನಾದ [7]ವಾರವನ್ನು ಕರುಣಿಸು ಹೇ ಪ್ರಭೋ ॥

ಅರ್ಥ : ಭಾರ್ಗವ ರಾಮನೆಂಬ ಹೆಸರುಳ್ಳ, ಆದಿತ್ಯ ವಂಶಜನೇ ಅಂಗಾರಕ ದೋಷವ ಕಳೆದು, ಎನ್ನ ಮಂದ ಬುದ್ಧಿಯನ್ನು ಎಣಿಸದೆ, ಇಂದು ಪೂಜೆಯ ಸ್ವೀಕರಿಸಿ, ಸೌಮ್ಯನಾದ ಬೃಹಸ್ಪತಿ (ಗುರು)ಯನ್ನು ಕರುಣಿಸು ಹೇ ಪ್ರಭುವೇ.

---

1. ಭಾರ್ಗವ - ಶುಕ್ರವಾರ, 2. ಆದಿತ್ಯ - ರವಿ - ಭಾನುವಾರ, 3. ಅಂಗಾರಕ - ಕುಜ - ಮಂಗಳವಾರ, 4. ಮಂದ - ಶನಿವಾರ, 5. ಇಂದು - ಸೋಮವಾರ, 6. ಸೌಮ್ಯ - ಬುಧವಾರ, 7. ಬೃಹಸ್ಪತಿ - ಗುರುವಾರ.

ನಕ್ಷತ್ರಮಾಲಿಕಾಸ್ತೋತ್ರ

[1]ನಕ್ಷತ್ರಸುತನನುಜ ನವನೀತ ಭಾಂಡಮಂ
[2]ನಕ್ಷತ್ರದಿಂ ಪಿಡಿದು ಕದ್ದೊಯ್ಯುತಿರಲೋರ್ವ
[3]ನಕ್ಷತ್ರರಾಜಮುಖಿ ಕಂಡು ಬೆನ್ನಟ್ಟಲವ ನೋಡಿ ನಸುನಗುತ ತನ್ನ
[4]ನಕ್ಷತ್ರಬಂದಂತೆ ಬೆಣ್ಣೆಯಂ ಸವಿವುದಂ
[5]ನಕ್ಷತ್ರದಿಂ ಕೇಳಿ ಗೋಪಿ ಬರಲಂಜುತಾ
[6]ನಕ್ಷತ್ರ ಕೊಡಲಾರದೋಡಿ ನಿಜಮಂದಿರದ
[7]ನಕ್ಷತ್ರದೊಳಡಗಿದ

---

1. ರೋಹಿಣಿ, 2. ಹಸ್ತ 3. ಚಂದ್ರ, 4. ಚಿತ್ರ, 5. ಶ್ರವಣ, 6. ಉತ್ತರ, 7. ಮೂಲ.

ಇನ್ನೊಂದು ಮುಂಡಿಗೆ

[1]ಸುರಪನ ಸುತನ [2] ಸುತ [3] ಸುತ [4] ಸುತನ [5] ಯಾಗಾಗ್ನಿಯಲಿ [6]
ಉರುಳುವನ ತಲೆಗಾಯ್ದವನ [7] ನಂದನನ [8] ಸತಿಶಿರೋಮಣಿ [9]
ಗಳುಪಿದನ [10] ಸೋದರಿಯ [11] ಸುತೆಯನು [12] ಕರಪಿಡಿದವನ [13]
ತಾಯಿಯ [14] ಅಗ್ರಜನಿಗೆರಗುವೆನು [15]

---

1. ಇಂದ್ರನ, 2. ಅರ್ಜುನನ, 3. ಅಭಿಮನ್ಯು, 4. ಪರೀಕ್ಷಿತ, 5. ಜನಮೇಜಯ, 6. ತಕ್ಷಕನ, 7. ಇಂದ್ರನ, 8. ಅರ್ಜುನನ, 9. ದ್ರೌಪದಿಗೆ, 10. ಕೀಚಕನ, 11. ಸುದೇಷ್ಣೆಯ, 12. ಉತ್ತರೆಯನು, 13. ಅಭಿಮನ್ಯು, 14. ಸುಭದ್ರೆಯ, 15. ಕೃಷ್ಣನಿಗೆರಗುವೆನು.

ಮಹಾರಾಷ್ಟ್ರದ ಭಕ್ತಿಪಂಥ, ವಾರಕರಿ ಸಂಪ್ರದಾಯ

ಶ್ರೀ ಸಂತೋಷಕುಮಾರ ಗುಲ್ವಾಡಿ

ಭಾರತದಲ್ಲಿ ಭಕ್ತಿಪಂಥಗಳು ನೂರಾರು. ಎಲ್ಲ ನದಿಗಳೂ ಮಳೆಯ ನೀರೂ ಕೊನೆಗೆ ಹೋಗಿ ಸಾಗರವನ್ನು ಸೇರುವಂತೆ ಭಕ್ತಿಪ್ರವಾಹವೆಲ್ಲ ಭಗವಂತನೊಂದಿಗೆ ಐಕ್ಯ. ವೈವಿಧ್ಯವೇ ಭಾರತದ ಶಕ್ತಿ. ಭಕ್ತಿಯಲ್ಲೂ ಅದು ಪ್ರಕಟ. ವೈಷ್ಣವ, ಶೈವ, ಶಾಕ್ತ, ಗಾಣಪತ್ಯ.... ಪಂಥಗಳು, ಪಥಗಳು ನೂರಾರು; ಹೃದಯ, ಗುರಿ ಒಂದೇ.

ಭಕ್ತಿಪಂಥದಲ್ಲಿ ಮಹಾರಾಷ್ಟ್ರದ ಕೊಡುಗೆ ಅನನ್ಯ. ವಿಶಿಷ್ಟ, ಮಹತ್ವದ್ದು. ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ರಂಗಗಳಲ್ಲಿ ಅದು ಭಾರಿ ದೊಡ್ಡ ಕ್ರಾಂತಿಯನ್ನೇ ಮಾಡಿತು. ಅದೊಂದು ಹೃದಯಸ್ಪರ್ಶಿ ಇತಿಹಾಸ, ಪರಂಪರೆ. ಅಷ್ಟೇ ರೋಚಕ. ಬದುಕಿನ ಎಲ್ಲ ಕಷ್ಟ-ಸುಖ, ನೋವು-ನಲಿವು, ಹಿಂಸೆ-ಹೊಗಳುವಿಕೆ, ಅವಮಾನ - ಕೀರ್ತಿ - ಎಲ್ಲವನ್ನೂ ಮೀರಿ ಈ ಪರಂಪರೆ ಬೆಳೆಯಿತು. ಜನರು-ಜನರುಗಳನ್ನು ಬೆಸೆಯಿತು. ಉಚ್ಚ - ನೀಚ ತಾರತಮ್ಯಗಳನ್ನು ಕೆಡವಿ ಸಮಾನತೆಯ ಪಾಠ ಕಲಿಸಿತು. ಜಾತಿ, ಭಾಷೆ, ಗಡಿಗಳನ್ನೆಲ್ಲ ದಾಟಿ ವಿಸ್ತರಿಸಿತು. ಮಹಾರಾಷ್ಟ್ರದ ಅಂಥ ಸುಂದರ ಸಂತ ಪರಂಪರೆಯನ್ನು ಕಣ್ಣಿಗೆ ಕಟ್ಟುವಂತೆ ಸಂತ ಬಹಿಣಾಬಾಯಿ ತನ್ನ ಅಭಂಗದಲ್ಲಿ ವರ್ಣಿಸಿದ ರೀತಿಯಿದು. ಮಹಾರಾಷ್ಟ್ರದ ಈ ಭಕ್ತ ಮಂದಿರ ಹೇಗಿದೆ ?

ಸಂತಕೃಪಾ ಝಾಲಿ/ ಇಮಾರತ ಫಳಾ ಆಲಿ ॥
ಜ್ಞಾನದೇವೆ ರಚಿಲಾ ಪಾಯಾ? ಉಭಾರಿಲೆ'' ದೇವಾಲಯಾ ॥
ನಾಮಾ ತಯಾಜಾ ಕಿಂಕರ । ತೇಣೆ ಕೇಲೆ ಹಾ ವಿಸ್ತಾರ ॥
ಜನಾರ್ಧನ ಏಕನಾಥ । ಬಾಂಬ ದಿಲಾ ನಾಗದತ ॥
ಶುಕಾ ಝಾಲಾಸೆ ಕಳಸ । ಭಜನ ಕರಾ ಸಾವಕಾಶ ॥

(ಈ ಭಕ್ತಿ ಮಂದಿರಕ್ಕೆ ಜ್ಞಾನದೇವ ಪಂಚಾಂಗ ರಚಿಸಿ, ಅದನ್ನು ಎದ್ದು ನಿಲ್ಲಿಸಿದರು. ನಾಮದೇವ ಅದನ್ನು ವಿಸ್ತರಿಸಿದರು. ಏಕನಾಥ ತನ್ನ ಭಾಗವತದಿಂದ ಅದಕ್ಕೆ ಆಧಾರ ಸ್ತಂಭ ಕೊಟ್ಟರು. ತುಕಾರಾಮ ಅದರ ಮೇಲಿನ ಕಳಶವಾದರು.) ಎಷ್ಟು ಸುಂದರ ರೂಪಕ ! ಕರ್ನಾಟಕ - ಮಹಾರಾಷ್ಟ್ರ - ಆಂಧ್ರಗಳಲ್ಲಿ ಪ್ರಚಲಿತವಿರುವ ವೈಷ್ಣವ ಭಕ್ತಿ ಚಳವಳಿಯೇ ವಾರಕರಿ ಸಂಪ್ರದಾಯ ಭಾರತೀಯ ಭಕ್ತಿ ಪಂಥಗಳಲ್ಲೇ ವಿಶಿಷ್ಟ, ಪ್ರಮುಖ ಹಾಗೂ ಪರಿಣಾಮಕಾರಿ.

ಮಾನವ ಜೀವನದಲ್ಲಿ ಈಶ್ವರನ ಪ್ರೇಮದ ಅನುಭೂತಿ ಪಡೆಯುವುದೇ ವಾರಕರಿ. ಇದು ಭಾಗವತ ಧರ್ಮದ ಅತ್ಯಂತ ಪರಿಪಕ್ವ, ಮಧುರ ಫಲ. ವಾರಕರಿ ಸಂಪ್ರದಾಯದ ಸುಮಾರು ಹತ್ತು ಲಕ್ಷ ಪಂಥಾನುಯಾಯಿಗಳಿಗೆ ಪಂಢರಪುರದ ವಿಠೋಬಾ ಉಪಾಸ್ಯ ದೈವತ. ಜ್ಞಾನೇಶ್ವರನಿಂದ ತುಕಾರಾಮನವರೆಗೆ ೧೩ನೇ ಶತಮಾನದಿಂದ ೧೭ನೇ ಶತಮಾನದವರೆಗೆ ಎಲ್ಲ ಮರಾಠಿ, ಕನ್ನಡ ಸಂತರು ಗೌರವ, ಪ್ರಸಿದ್ಧಿ ತಂದರು. ಅದಕ್ಕೆ ತತ್ವಜ್ಞಾನದ ಅಧಿಷ್ಠಾನ ಮಾಡಿದರು. ಈ ಪರಂಪರೆ ಈಗಲೂ ಅವಿಚ್ಛಿನ್ನವಾಗಿ ಮುಂದುವರೆದಿದೆ. ವಾರ, ವಾರಿ ಅಂದರೆ ತಿರುಗಾಟ, ಸವಾರಿ, ಯಾತ್ರೆ, ನಿಯಮಬದ್ಧವಾಗಿ ಪುಣ್ಯಕ್ಷೇತ್ರಗಳಿಗೆ ಹೋಗುವುದು, ಸುತ್ತುವುದು ಎಂದರ್ಥ. ವಾರಕರಿಯ ಪುಣ್ಯಯಾತ್ರೆ ವರ್ಷಕ್ಕೆ ನಾಲ್ಕು ಬಾರಿ ಆಷಾಢ, ಕಾರ್ತಿಕ, ಮಾಘ ಹಾಗು ಚೈತ್ರ. ಆಷಾಢ-ಕಾರ್ತಿಕ ಏಕಾದಶಿಗಳು ಹೆಚ್ಚು ಜನಪ್ರಿಯ. ಆಷಾಢ - ಏಕಾದಶಿಯಂತೂ ಪರಮೋಚ್ಚ ಎಂಬ ನಂಬಿಕೆ. ಅಂದು ಪಂಢರಪುರದಲ್ಲಿ ಮಹಾಯಾತ್ರೋತ್ಸವ, ಭಜನೋತ್ಸವ. ಕುತ್ತಿಗೆಗೆ ತುಳಸೀ ಮಾಲೆ ಹಾಕಿಕೊಂಡು, ಪ್ರತಿ ಭಜನಾಮಂಡಳಿಯಲ್ಲಿ ಒಬ್ಬರು ದಿಂಡಿ (ಕೇಸರಿ, ಭಗವಾ ಪತಾಕೆ) ಹಿಡಿದುಕೊಂಡು, ನಾಮಸ್ಮರಣೆ ಮಾಡುತ್ತ, ಹಾಡುತ್ತ, ತಾಳಕ್ಕೆ ತಕ್ಕಂತೆ ಹೆಜ್ಜೆಯ ಮೇಲೆ ಹೆಜ್ಜೆಯನ್ನು ಹಾಕುತ್ತ, ದೇಹಂಭಾವ ಮರೆತು ಕುಣಿದು ಕುಣಿದು ಪಂಢರಪುರಕ್ಕೆ ಹೋಗುವ ಈ ದೃಶ್ಯವೇ ರೋಮಾಂಚಕಾರಿ. ನೋಡುವವರಿಗೂ, ಕೇಳುವವರಿಗೂ, ಭಾಗವಹಿಸುವವರಿಗೂ. ಆ ತನ್ಮಯೇ, ಆ ಭಾವಶುದ್ಧಿ, ಭಕ್ತಿಯ ಪರಾಕಾಷ್ಠೆ ಅದ್ವಿತೀಯ, ಅವರ್ಣನೀಯ, ಆದರೆ ಅಷ್ಟೇ ಸಾಂಕ್ರಾಮಿಕ, ಇಷ್ಟೆಲ್ಲ ಸ್ವಯಂಪ್ರೇರಿತ, ಸಾಲುಗಟ್ಟಿದ ವಾರಕರಿ ಸುಸೂತ್ರ. ಸಾಮೂಹಿಕವಾಗಿ ಅದು ವಿಚಿತ್ರ ಗುಂಗು ಬರಿಸುತ್ತದೆ. ನಮ್ಮನ್ನೇ ನಾವು ಮರೆಯುವಂಥ ವಾತಾವರಣ ನಿರ್ಮಿಸುತ್ತದೆ; ನೋಡುವವರನ್ನು ದಂಗು ಬಡಿಸುತ್ತದೆ.

''ಪುಂಡಲೀ (ರೀ) ವರದೇ ಹರಿ ವಿಠ್ಠಲ್ ''
''ಜೈ ವಿಠ್ಠಲ್ ಹರಿ ವಿಠ್ಠಲ್''
''ಹರಿ ಮುಖೆ ಮ್ಹಣಾ, ಹರಿ ಮುಖೆ ಮ್ಹಣಾ''
''ಜೈ ಜೈ ರಾಮಕೃಷ್ಣ ಹರಿ''
''ವಿಠ್ಠಲ ವಿಠ್ಠಲ ಜೈ ಹರಿ ವಿಠ್ಠಲ ''
''ಜ್ಞಾನಬಾ - ತುಕೋಬಾ.....''

(ಮಹಾರಾಷ್ಟ್ರದ ಮಹಾಮಂತ್ರ)

ಇವೇ ಮೊದಲಾದ ಉದ್ಘೋಷಗಳು, ನಾಮಸ್ಮರಣೆಗಳು, ಅಭಂಗಗಳು. ಇವನ್ನು ವಾರಕರಿಗೇ ವಿಶಿಷ್ಟವಾಗಿರುವ ಲಯ ಮತ್ತು ಛಂದದಲ್ಲಿ ತಿರುವು-ಮುರುವಾಗಿ ತಾಳ ಹಾಕುತ್ತ, ಕಾಲುಗಳನ್ನು ಮೀಟುತ್ತ, ಪಖಾವಜ ಢೋಲಿನ ಲಯದಲ್ಲಿ ಹಾಡುವಾಗ ಭಜನೆಯ ಸಾಲುಗಳು ಸಾಮೂಹಿಕ ಶಕ್ತಿಯ ಉತ್ತುಂಗ ಶಿಖರ ಮುಟ್ಟುತ್ತವೆ. ನಾಮಸ್ಮರಣೆಯ ಪ್ರಚಂಡ ಶಕ್ತಿ ಸ್ಫೋಟವಾಗುತ್ತದೆ. ಮಾನವನಲ್ಲಿ ದೈವಿಕ ಸಂಚಾರವಾಗುತ್ತದೆ. ದಿಗಂತದಲ್ಲಿ ದಿಂಗಣ ಹೊಡೆಯುತ್ತ, ತಾಳಕ್ಕೆ ತಕ್ಕಂತೆ ಕುಣಿಯುತ್ತ ಹಾಡುತ್ತ ಮೈಮರೆಯುವ ಈ ಅನುಭವ ಅಸದೃಶ.

ಜ್ಞಾನೇಶ್ವರನ ಸಮಕಾಲೀನ ಮಿತ್ರ ಸಂತ ನಾಮದೇವ ವಾರಕರಿಯ ಪ್ರತ್ಯಕ್ಷ ವರ್ಣನೆಯನ್ನು ಮಾಡುವ ಅಭಂಗವನ್ನೇ ರಚಿಸಿದ್ದಾನೆ :

ಆಜಿ ಮಹಾ ಸುಖ ಸೃಷ್ಟಿ ಭರಲಿ ಭಾಗ್ಯವಂತಿ ।
ಜಾಲಿಸೆ ವಿಕೃತಿ ಪಾಪತಾಪ ॥
ಜಾಲಿಲೆ ದೇಖೋನಿ ವೈಷ್ಣವ ಜಗಜೋಡಿ ।
ಉಭವಿತಿ ಜೈಕುಂಠಿ ಗುಡಿಯಾ ದೇವ ॥
ಆಲೆ ಆಲೆ ರೆ ಹರೀಚೆ ಡಿಂಗರ ।
ವೀರ ವಾರೀಕರ ಪಂಢರೀಚೆ ॥
ಜ್ಯಾಂಚೆ ಚರಣ ಧೂಳಿ ಉಧಳೆ ಗಗನ ಪಂಥೆ ।
ಬ್ರಹ್ಮಾದಿಕಾಂ ತೇಥೆ ಝಾಲಿ ದಾಟಿ ॥
ಏಕಮೇಕಾ ಪುಢೆ ಲವವಿತಿ ಮಾಥೆ ।
ಮ್ಹಣತಿ ಅಮ್ಹಾತೆ ಲಾಗೊ ರಜ ॥
ಭಕ್ತಿಪ್ರೇಮ ಭಾವ ಭರಲೆ ಜ್ಯಾಚಾ ಅಂಗಿ ॥
ನಾಚತಿ ರಹಿರಂಗಿ ನೇಣತಿ ಲಾಗು ॥

ಈ ವೀರ ವಾರಿಕರದ ಚರಣಧೂಳಿಯೇ ಪವಿತ್ರ ಎನ್ನುತ್ತಾರೆ ಸಂತ ನಾಮದೇವ. ಅದು ನಮ್ಮೆಲ್ಲರ ತಲೆಯ ಮೇಲೆಯೂ ಬೀಳಲಿ, ಭಕ್ತಿ ಪ್ರೇಮಭಾವ ತುಂಬಲಿ, ಆನಂದದಿಂದ ಕುಣಿಯಲಿ ಎಂದು ಹಾರೈಸುತ್ತಾರೆ. ವಾರಕರಿ ಸಂಪ್ರದಾಯದಲ್ಲಿ ಎಲ್ಲ ದಾರಿಗಳ ಸಂಗಮ ಪಂಢರಿ, ಪಂಢರಪುರ ವಿಠ್ಠಲನ ಪಾದಪದ್ಮ - ಅದೇ ನಿತ್ಯಸುಖ. ಪಂಢರಪುರ ಈ ಭಕ್ತರಿಗೆ ಮಾಹೇರ ತವರೂರು. ಅಷ್ಟೇ ಅಲ್ಲ , ಭೂವೈಕುಂಠ. ವೈಷ್ಣವಕ್ಷೇತ್ರಗಳಲ್ಲಿ ಪ್ರಮುಖ. ಪಂಢರಪುರದಲ್ಲಿ ಭಕ್ತರ ಸಂಗಮ. ಸಾಂಸ್ಕೃತಿಕ ಸಮನ್ವಯ ಕೇಂದ್ರ. ಮಹಾರಾಷ್ಟ್ರದ ವಾರಕರಿಯವರು, ಕರ್ನಾಟಕದ ಹರಿದಾಸರು, ಮಾಧ್ವ ಸಂಪ್ರದಾಯದ ವಿಠ್ಠಲ ಉಪಾಸಕರು ಭಾರತದ ಮೂಲೆ ಮೂಲೆಗಳಿಂದ ಬರುವ ಭಕ್ತ ಭಜಕರು, ಬೇರೆ ಬೇರೆ ಪಂಥಗಳ ಉಪಾಸಕರು, ಯಾತ್ರಿಕರು ಇಲ್ಲಿಗೆ ಜೀವನದಲ್ಲಿ ಒಮ್ಮೆಯಾದರೂ ಬಂದೇ ಬರುತ್ತಾರೆ.

ಪ್ರತಿ ಬಾರಿ ವ್ರತನಿಷ್ಠೆಯಿಂದ ಬರುವವರೂ ಇದ್ದಾರೆ. ಒಂದು ಕಾಲಕ್ಕೆ ಕರ್ನಾಟಕದ್ದೇ ಭಾಗವಾಗಿದ್ದ, ಇಂದು ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆಯಲ್ಲಿರುವ ಪಂಢರಪುರಕ್ಕೆ ಹಲವು ಹೆಸರುಗಳಿವೆ. ಪಾಂಡುರಂಗಪುರ, ಪಂಢರಿ, ಪಂಢರೀಪುರ, ಫಾಗನೀಪುರ, ಪಂಡರಂಗೇ, ಪೌಂಡರೀಕ ಕ್ಷೇತ್ರ, ಪಾಂಡುರಂಗಪಲ್ಲಿ ಪಂಡರಿಗೆ, ಪುಂಡರೀಕಪುರ, ಪಾಂಡುಪುರ ಇತ್ಯಾದಿ. ಪಂಢರಪುರ ಮತ್ತು ಪಾಂಡುರಂಗ ವಿಠ್ಠಲ ಶಬ್ದಗಳ ಬಗ್ಗೆ ಪಂಡಿತರಲ್ಲಿ ಬಹಳ ಕಾಲದಿಂದ ಜಿಜ್ಞಾಸೆ, ವಾದ ವಿವಾದ, ತರ್ಕಗಳು ನಡೆದೇ ಇವೆ. ಭಕ್ತಜನರಿಗೆ ಈ ಚರ್ಚೆ ಅನಗತ್ಯ. ಆದರೆ ಅದರ ಹಿನ್ನೆಲೆಯನ್ನು ತಿಳಿಯುವ ಕುತೂಹಲವಿರುವವರಿಗಾಗಿ ಕೆಲವು ಪೂರಕ ವಿವರಗಳನ್ನು ಕೊಟ್ಟಿದ್ದೇನೆ. ಬೆಂಗಳೂರು ಜಿಲ್ಲೆ ಮಾಗಡಿ ತಾಲ್ಲೂಕಿನ ಸಾತನೂರಿನ ಪುಂಡರೀಕ ವಿಠ್ಠಲ ಅಥವಾ ಪಂಡರೀ ವಿಠ್ಠಲ ಎಂಬ ಹೊಯ್ಸಳ ಕರ್ನಾಟಕ ಭಕ್ತ ಪಂಢರಪುರದಲ್ಲಿ ವಿಠೋಬನನ್ನು ಸ್ಥಾಪಿಸಿದನೆಂಬುದು ಐತಿಹ್ಯ. ಪಂಡರೀ ಇದ್ದದ್ದು ಪುಂಡರೀಕ, ಮರಾಠಿಯಲ್ಲಿ ಪುಂಡಲೀಕ ಎನ್ನುತ್ತಾರೆ. ಅದು ಭಕ್ತನ ಹೆಸರು. ಪಾಂಡುರಂಗ, ಪಂಡರಿ (ಮರಾಠಿಯಲ್ಲಿ ಪಂಢರಿ, ಪಂಢರಪುರ) ಎನ್ನುವುದು ಕ್ಷೇತ್ರದ ಹೆಸರು. ಪುಂಡರೀಕ ಎಂದರೆ ಕಮಲದ ಹೂ. ತಾನು ಕರ್ನಾಟಕ ಜಾತಿಯವನೆಂದು ಬಹಳ ಹೆಮ್ಮೆಯಿಂದ ಹೇಳಿಕೊಂಡಿರುವ ಪುಂಡರೀಕ ಪುರಂದರ ದಾಸರ ಸಮಕಾಲೀನ ಎನ್ನುತ್ತಾರೆ. ಪಂಢರಪುರದಲ್ಲಿ ವಿಠೋಬನ ಪ್ರತಿಷ್ಠೆ ಮಾಡಿದ್ದಷ್ಟೇ ಅಲ್ಲ. ಪುಂಡರೀಕ ಮಹಾ ಸಂಗೀತ ಶಾಸ್ತ್ರಜ್ಞ, ಕರ್ನಾಟಕ, ಹಿಂದೂಸ್ಥಾನೀ, ಪರ್ಶಿಯನ್ ಸಂಗೀತ, ನಾಟ್ಯ, ನಾಟಕ ಕಲೆ, ಅಲಂಕಾರ, ಕೋಶ, ರಾಗ ಇವುಗಳ ಬಗ್ಗೆ ಹಲವು ಕೃತಿಗಳನ್ನು ರಚಿಸಿದ ಆದ್ಯ ಪ್ರವರ್ತಕ. ಪುರಂದರದಾಸರನ್ನು ಕರ್ನಾಟಕ ಸಂಗೀತ ಪಿತಾಮಹ ಎನ್ನುವುದಾದರೆ ಪಂಡರೀ ವಿಠ್ಠಲನನ್ನು ಕರ್ನಾಟಕ ಸಂಗೀತ ನೃತ್ಯಗಳ ಲಕ್ಷಣ ಭಾಗಗಳ ಪಿತಾಮಹನೆನ್ನಬಹುದು ಎಂಬುದಾಗಿ ಸಂಗೀತ ಸಂಶೋಧಕ,

ಶಾಸ್ತ್ರಜ್ಞ ಡಾ. ರಾ. ಸತ್ಯನಾರಾಯಣರ ಅಭಿಪ್ರಾಯ. ಪುಂಡರೀಕನ ಕತೆ ಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿದ್ದುದೇ. ಅವನು ಹೆಂಡತಿಯ ವ್ಯಾಮೋಹದಲ್ಲಿ ವೃದ್ಧ ತಂದೆ-ತಾಯಿರನ್ನು ಕಡೆಗಣಿಸುತ್ತಾನೆ. ರೋಹಿದಾಸನೆಂಬ ಚಮ್ಮಾರನು ತನ್ನ ಮಾತಾ-ಪಿತೃರ ಸೇವೆಯನ್ನು ಸಂಪೂರ್ಣ ತಲ್ಲೀನವಾಗಿ ಮಾಡುವುದನ್ನು ಕಂಡು ಬದಲಾಗುತ್ತಾನೆ. ರೋಹಿದಾಸನ ಮಾತಾ-ಪಿತೃ ಭಕ್ತಿಯನ್ನು ಮೆಚ್ಚಿ ಗಂಗಾ-ಯಮುನಾ-ಸರಸ್ವತಿಯರು ಮಾನವ ರೂಪತಾಳಿ ಅವನ ಮನೆಗೆಲಸ ಮಾಡುತ್ತಿರುತ್ತಾರೆ. ಪುಂಡರೀಕನ ಹೃದಯ ಪರಿವರ್ತನೆಯಾಗಿ ಅವನು ಸಂಪೂರ್ಣವಾಗಿ ತನ್ನ ತಂದೆ-ತಾಯಿಯರ ಸೇವೆಯಲ್ಲಿ ತೊಡಗಿಸಿಕೊಂಡಾಗ ಸ್ವತಃ ವಿಷ್ಣುವು ಪರೀಕ್ಷಿಸಲು ಅವನಲ್ಲಿಗೇ ಬರುತ್ತಾನೆ. ಅವನನ್ನು ಕಾದು ನಿಲ್ಲುವಂತೆ ಇಟ್ಟಿಗೆಯನ್ನು ಬಿಸಾಡುತ್ತಾನೆ ಪುಂಡರೀಕ. ಮಾತಾ-ಪಿತರಿಗಿಂತ ಹಿರಿಯ ದೇವರಿದ್ದಾರೆಯೇ ? ಪಾಪ, ವಿಠೋಬ ಸೊಂಟಕ್ಕೆ ಕೈಕೊಟ್ಟು ಚಿರಸ್ಥಾಯಿಯಾಗಿ ಭಕ್ತನಿಗಾಗಿ ಕಾಯುತ್ತ ನಿಂತ, ವಿಠಲನು 'ಪುಂಡರೀಕವರದ ವಿಠಲ'ನಾದದ್ದು ಹೀಗೆ, ಪಂಡರಂಗೇ ಎಂಬುದು ಶುದ್ಧ ಕನ್ನಡ ಶಬ್ದ. ಭಕ್ತ ಪರಾಧೀನನಾದ ವಿಠ್ಠಲ ೨೮ ಯುಗಗಳಿಂದಲೂ ಹಾಗೆಯೇ ಸ್ಥಾಯಿಯಾಗಿ ಸೊಂಟಕ್ಕೆ ಕೈಕೊಟ್ಟು ಕಾದಿದ್ದಾನೆ ಎಂದು ಸಂತರೆಲ್ಲ ಹಾಡಿದ್ದಾರೆ. ವಿಠೋಬ ನಿಂತ ಇಟ್ಟಿಗೆಯ ಬಹುಭಾಗ ನೆಲದಲ್ಲಿ ಹೂತುಹೋಗಿದೆ. ಆದರೆ ಭಕ್ತರು ಆ ಇಟ್ಟಿಗೆಯನ್ನು ದೈವತ್ವಕ್ಕೇರಿಸಿದ್ದಾರೆ. ತುಕಾರಾಮನು ವಿಠಾಯಿಮಾವುಲಿ ಎಂದು ಹಾಡಿದ್ದಾನೆ. ವಿಠಲನು ನಿಂತುಕೊಂಡ ಇಟ್ಟಿಗೆ, ಇಟ್ಟ, ವಿಟ್ಟ, ವಿಡುಗಳಿಂದಲೆ ವಿಠಲ, ವಿಟ್ಠಲ, ವಿಠ್ಠಲ ಶಬ್ದ ಬಂದದ್ದು ಎಂಬ ಅಭಿಪ್ರಾಯವೂ ಇದೆ. ಕ್ರಿ.ಶ. ಆರನೆಯ ಶತಮಾನದಲ್ಲಿ ರಾಷ್ಟ್ರಕೂಟರ ಆಳ್ವಿಕೆಯ ಕಾಲ. ಪಂಡರಪುರವು ಕನ್ನಡನಾಡಿನ ಭಾಗವಾಗಿಯೇಇತ್ತು. ರಾಷ್ಟ್ರಕೂಟದ ಅರಸರು ಈ ದೇವಾಲಯಕ್ಕೆ ದತ್ತಿ ಬಿಟ್ಟು ಕೊಟ್ಟ ಶಾಸನ ಇದೆ, ರಾಷ್ಟ್ರಕೂಟ ಅವಿಧೇಯ, ಅಮೋಘವರ್ಷ ಮೊದಲಾದವರು ಈ ಊರಲ್ಲಿ ಅಗ್ರಹಾರ ಕಟ್ಟಿಸಿ, ಅಭಿವೃದ್ಧಿಪಡಿಸಿದ ಉಲ್ಲೇಖಗಳೂ ದೊರೆತಿವೆ. ಪುಂಡಲೀ(ರೀ)ಕನ ಬಗ್ಗೆ ಮರಾಠಿ ಸಂತ ಶ್ರೇಷ್ಠರೆಲ್ಲ ಹಾಡಿ ಹೊಗಳಿದ್ದಾರೆ :

> ಪುಂಡಲೀಕ ಭಕ್ತರಾಜ । ತೇಣೆ ಸಾಧಿಯಲೆ ಕಾಜ ॥
> ವೈಕುಂಠೀಚೆ ನಿಜ । ಪರಬ್ರಹ್ಮ ಆಣಿಲೆಂ ॥

ಎಂದು ತುಕಾರಾಮನೇ ಹಾಡಿದ್ದಾನೆ. ಮೂರು ಪ್ರತ್ಯೇಕ ಸಂಗಮಗಳಿರುವ ಭೀಮಾ (ಭಿವರಾ) ನದಿಯೇ ಪಂಢರಪುರ ಕ್ಷೇತ್ರ. ಅರ್ಧಚಂದ್ರಾಕೃತಿಯಲ್ಲಿ ಹರಿಯುವುದರಿಂದ ಚಂದ್ರಭಾಗ ಎಂದು ಸಂತರು ಉದ್ಗರಿಸಿದರು. ಚಂದ್ರಭಾಗ ದರ್ಶನ, ಸ್ನಾನ ಎಲ್ಲವೂ ಪವಿತ್ರವಾಗಿ ಚಂದ್ರಭಾಗಾ ಕೂಡ ದೈವತ್ವಕ್ಕೆ ಏರಿದಳು. ಪೂರ್ವದ್ವಾರದಲ್ಲಿ ಭೀಮಾ-ಶಿಶುಮಾಲಾ ಸಂಗಮ, ಅಲ್ಲಿ ಸಂಧ್ಯಾವಳಿ ದೇವಸ್ಥಾನ. ಭೀಮಾ - ಪುಷ್ಪವತೀ ಸಂಗಮವೇ ಭುವನೇಶ್ವರೀ ಸ್ಥಾನ. ಉತ್ತರ ಭಾಗದ ಭೀಮಾ - ಭರಣಿ ಸಂಗಮ ದುರ್ಗಾದೇವಿಯ ಸ್ಥಾನ. ಮಾನಸುರ ದಕ್ಷಿಣ ದ್ವಾರದಲ್ಲಿ ಸಿದ್ದೇಶ್ವರ ಶಿವಲಿಂಗ. ಹೀಗೆ ಇದು ಶಿವ - ಶಕ್ತಿ - ವಿಷ್ಣು ಸಂಗಮ. 'ಸ್ಕಂದಪುರಾಣ'ದಲ್ಲೂ 'ಪಂಢರೀ ಮಾಹಾತ್ಮ್ಯ'ವಿದೆ.

> ಪೌಂಡರೀಕಮಿತಿ ಖ್ಯಾತಂ ತೀರ್ಥಂ ಕ್ಷೇತ್ರಂ ಚ ಪೂಜಿತಮ್ ।
> ಪಾಂಡುರಂಗಶ್ಚ ಶತ್ರಾಸ್ಥೆ ಮೂರ್ತಿಮಾನ್ ದೇವತೋತ್ತಮಃ ॥
> ಅರ್ಧಯೋಜನ ವಿಸ್ತೀಣಂ ತದರ್ಧಾಯಾಮ ಸಮ್ಮಿತಮ್ ॥

(ಭೀಮಾ ನದಿಯ ದಡದಲ್ಲಿ ಪೌಂಡರೀಕ ಎಂಬ ಹೆಸರಿನ ತೀರ್ಥ ಕ್ಷೇತ್ರವಿದೆ. ಈ ಕ್ಷೇತ್ರದಲ್ಲಿ ಸರ್ವಶ್ರೇಷ್ಠ ದೇವ ಮೂರ್ತಿರೂಪದಲ್ಲಿ ನಿಂತಿದ್ದಾನೆ. ಈ ಕ್ಷೇತ್ರ ಅರ್ಧಯೋಜನ ಉದ್ದ, ಒಂದು ಕೋಸ ಅಗಲವಿದೆ.) ಪಂಢರಪುರದ ಅತಿ ಪ್ರಾಚೀನ ಉಲ್ಲೇಖ ಕ್ರಿ. ಶ. ೫೧೬ರ ತಾಮ್ರಪಟ ಶಾಸನದಲ್ಲಿದೆ. ಅದರಂತೆ ಈ ಊರಿನ ಹೆಸರು ಪಾಂಡುರಂಗಪಲ್ಲಿ. ಪಂಢರಪುರದ ಮಹಿಮೆಯನ್ನು ಪ್ರತಿಯೊಬ್ಬ ಸಂತ, ಹರಿದಾಸರೂ ಹಾಡಿದ್ದಾರೆ. ಜ್ಞಾನೇಶ್ವರನು ಹೇಳುತ್ತಾನೆ :

ಮಾಝೆ ಜೀವಿಚೆ ಆವಡಿ ।
ಪಂಢರಪುರಾ ನೇಯಿನ ಗುಡಿ ॥
ಜಾಯೀನ ಗೆ ಮಾಯ ತಯಾ ಪಂಢರಪುರಾ ।
ಭೇಟೀನ ಮಾಹೇರ ಆಪುಲೀಯಾ ॥

ತನ್ನ ಜೀವನದ ಅತ್ಯಂತ ಪ್ರೀತಿಯ ತವರುಮನೆಯೇ ಪಂಢರಪುರ ಎಂದು ಜ್ಞಾನೇಶ್ವರ ಆತ್ಮೀಯತೆಯಿಂದ ಉದ್ಗರಿಸಿದ್ದಾನೆ. ಕನ್ನಡದ ಚೌಂಡರಸರ ತನ್ನ 'ಅಭಿನವ ದಶಕುಮಾರ ಚರಿತೆ'ಯಲ್ಲಿ ಇಡೀ ಪಂಢರಪುರದ ವರ್ಣನೆಯನ್ನು ಮಾಡಿದ್ದಾನೆ. ಪುಂಡಲೀಕನ ಬಹಳ ವರ್ಷಗಳ ಪ್ರಾರ್ಥನೆಯನ್ನು ಮನ್ನಿಸಿ -

ಯೇವೂನಿಯಾ ಶ್ರೀಹರಿ ಭೀಮೇಚ್ಯಾ ತೀರಿ ।
ಸುದರ್ಶನಾವರಿ ಪಂಢರೀ ಉಭವಿಲಿ ॥
ಧನ್ಯ ಪಂಢರೀನಗರಿ ಥಾವಲಿ ಚರಾಚರಿ ।
ಧನ್ಯ ಜೋ ಭೂಮಿವರಿ ದೃಷ್ಟಿಭರಿ ಹರಿದೇಖೆ ॥

ಎಂದು ಜ್ಞಾನೇಶ್ವರನು ಹೃದಯಂಗಮವಾಗಿ ಹಾಡಿದ್ದಾನೆ. 'ಎಲ್ಲರನುದ್ಧರಿಸಿದ್ಯೋ ಪುರಂದರ ವಿಠಲ ನೀ ಯಾಕೆ ಎನ್ನನು ಮರೆತ್ಯೋ ಜಯ ಪಾಂಡುರಂಗ' ಹೀಗೆ ನೂರಾರು ಪರಿಯಲ್ಲಿ ಹರಿದಾಸರು, ಸಂತರು ಪಾಂಡರಂಗನನ್ನೂ ಪಂಢರಪುರವನ್ನೂ ಹೊಗಳಿ ಹಾಡಿದ್ದೇ ಹಾಡಿದ್ದು, ಪಂಢರಪುರದ ಮಹಾತ್ಮ ಆರನೆಯ ಶತಮಾನದ ಆರಂಭದಿಂದಲೇ ಜನಜನಿತ. ಕನ್ನಡದ ಹರಿದಾಸರು, ಮರಾಠಿಯ ಸಂತರು, ಭಕ್ತರು ಅಲ್ಲಿ ಯಾತ್ರೆಗೆ ಹೋಗುತ್ತಿದ್ದರು. ಅವರ ಹಾಡುಗಳಲ್ಲೆಲ್ಲ ಇರುತ್ತಿದ್ದುದು ಪಂಢರಪುರ - ವಿಠ್ಠಲ ಮತ್ತು ಭಕ್ತಿಯ ತಾದಾತ್ಮ್ಯ. ಸಂತ ಬಹಿಣಾಬಾಯಿ ಮಾಡಿದ ಪಂಢರಪುರದ ವರ್ಣನೇ ಎಷ್ಟು ಆತ್ಮೀಯ ನೋಡಿ :

ಉದಂಡ ಏಕಿಲಾ - ಉದಂಡ ಗಾಯಿಲಾ ।
ಉದಂಡ ದೇಖಿಲಾ । ಕ್ಷೇತ್ರ ಮಹಿಮಾ ॥
ಪಂಢರಿ ಸಾರಖೆ । ನಾಹಿ ಕ್ಷೇತ್ರ ಕೋಠೆ ।
ಜರಿ ತೆ ವೈಕುಂಠ । ದಾಖವಿಲೆ ॥
ಏಸಿ ಚಂದ್ರಭಾಗಾ । ಏಸೆ ಭೀಮಾ ತೀರ ।
ಏಸಾ ವಿಟೇ ವರ । ದೇವ ಕೋಠೆ ?॥
ಏಸೆ ವಾಳುವಂಟ । ಏಸಿ ಹರಿಕಥಾ ।
ಠಾಯಿ ಠಾಯಿ ದೇಖಾ । ದಿಂಡಿ ಭಾರ ॥
ಏಸೆ ಹರಿದಾಸ । ಪ್ರೇಮ ಸುಖ ।
ಏಸಾ ನಾಮ ಘೋಷ। ಸಾಂಗಾ ಕೋಠೆ ॥
ಬಹಿಣೆ ಮ್ಹಣಾ ಅಮ್ಹಾ । ಅನಾಥಾ ಕಾರಣ ।
ಪಂಢರಿ ನಿರ್ಮಾಣ। ಕೇಲಿ ದೇವೆ ॥

(ವೈಕುಂಠವನ್ನು ತೋರಿಸಿದರೂ ಅದಕ್ಕಿಂತ ಮಿಗಿಲಾಗಿದೆ ಈ ಪುಣ್ಯಕ್ಷೇತ್ರ. ಈ ಚಂದ್ರಭಾಗಾ, ಈ ಭೀಮಾ, ಇಟ್ಟಿಗೆಯ ಮೇಲೆ ನಿಂತ ಈ ದೇವ, ಈ ಬಗೆಯ ಹರಿಕಥೆ, ನಾಮಘೋಷ, ಪ್ರೇಮ ಸುಖ ಇನ್ನೆಲ್ಲಿದೆ ಹೇಳಿ? ನಮ್ಮಂಥ ಅನಾಥರಿಗಾಗಿಯೇ ದೇವರು ಈ ಪಂಢರಿಯನ್ನು ನಿರ್ಮಿಸಿದನು.)

ಪಂಢರಪುರಕ್ಕೆ ಬಂದ ಪ್ರಮುಖ ಭಕ್ತರು, ಸಂತರು ತಮ್ಮದೊಂದು ಗುರುತನ್ನು ಅಲ್ಲಿ ಬಿಟ್ಟು ಹೋಗಿದ್ದಾರೆ. ವಾರಕರಿಗೆ ಹೋದ ಅನೇಕ ಸಂತರು, ಭಕ್ತರು ಪಂಢರಪುರದಲ್ಲೇ ಕೊನೆಯುಸಿರೆಳೆದರು. ಅದೇ ಅವರ ಕೊನೆಯ ಆಸೆಯೂ ಆಗಿತ್ತು. ವಿಠಲಮಂದಿರದ ಹೊರಗೆಯೇ ಜ್ಞಾನೇಶ್ವರನ ಸ್ನೇಹಿತ ಹರಿಜನ ಚೋಖಾಮೇಳಾನ ಸಮಾಧಿಯಿದೆ. ಮಂದಿರದ ಮುಖ್ಯದ್ವಾರದ ಹೆಸರೇ ನಾಮದೇವ ದರವಾಝಾ. ಅದರ ಮೊದಲ ಪಾಯರಿ (ಮೆಟ್ಟಿಲನ್ನು) ನಾಮದೇವನ ಹೆಸರಲ್ಲಿ ಕರೆಯುತ್ತಾರೆ. ಭಕ್ತರ ಪಾದಧೂಳಿಯೇ ಪರಮ ಪವಿತ್ರ ಪ್ರಸಾದ ಎಂದು ಭಾವಿಸಿದ ಸಂಕೇತವಿದು. ಈ ಮೆಟ್ಟಿಲನ್ನು ಭಕ್ತರು ಮೆಟ್ಟುವುದಿಲ್ಲ. ಎಚ್ಚರಿಕೆಯಿಂದ, ಗೌರವದಿಂದ ದಾಟುತ್ತಾರೆ. ಸಂತ ಪ್ರಹ್ಲಾದ ಬುವಾ ಮತ್ತು ಕಾನ್ಹೋಬಾ ಹರಿದಾಸರ ಸಮಾಧಿಗಳೂ ಅಲ್ಲೇ ಇವೆ. ಇಲ್ಲಿ ಸಮರ್ಥ ರಾಮದಾಸರು ಸ್ಥಾಪನೆ ಮಾಡಿದ ಮಾರುತಿ ಇದ್ದಾನೆ. ಪುರಂದರದಾಸರ ಕಂಬವಂತೂ ಇಲ್ಲಿಯ ಮಹತ್ವದ ಸಂಕೇತ. ಪ್ರತಿಯೊಬ್ಬರೂ ಈ ಕಂಬಕ್ಕೆ ಆಲಿಂಗನ ಮಾಡಿಯೇ ಮುಂದೆ ಹೋಗುತ್ತಾರೆ. ಸಂತ ದಾಮಾಜಿ ಪಂತನ ನೆನಪಿಗಾಗಿ ಇಲ್ಲಿ ಪಾಂಡುರಂಗನ ಪಾದುಕೆಗಳಿವೆ. ಈ ಸಂತನು ತನ್ನ ಮನೋಬಲ, ಭಕ್ತಿ ಹಾಗೂ ಇಚ್ಛಾಶಕ್ತಿಯ ಬಲದಿಂದ ಪಾಂಡುರಂಗನನ್ನು ಮಹಾರ (ಹೊಲೆಯನ) ವೇಷದಲ್ಲಿ ಬಾದಷಹನಿಗೆ ಇಲ್ಲಿ ತೋರಿಸಿದನು ಎಂಬ ದಂತಕತೆಯಿದೆ. ವಿಠಲನ ದರ್ಶನ ಮಾಡಿ ಹೊರ ಬರುವಾಗ ಸಂತ ಕಾನ್ಹೋಪಾತ್ರಾಳ ಸಮಾಧಿಯಿದೆ. ಆಕೆ ವೇಶ್ಯೆಯಾಗಿದ್ದಳು. ಪುಂಡಲೀ(ರೀ)ಕನ ಪ್ರತ್ಯೇಕ ಮಂದಿರವೇ ಇಲ್ಲಿದೆ. ಮೀನುಗಾರರೇ ಇದರ ಪೂಜಾರಿಗಳು. ಪಂಢರಪುರ ಯಾವ ಕಾಲಕ್ಕೂ ಒಂದು ಸಾರ್ವಜನಿಕ ಕ್ಷೇತ್ರ. ಅಲ್ಲಿ ಯಾವ ಜಾತಿ ಮತ-ಪಂಥ-ಕುಲಗಳ-ಭೇದವಿಲ್ಲ. ಹಿಂದೆಯೂ ಇರಲಿಲ್ಲ. ಪತಿತರಿಗೂ ದಲಿತರಿಗೂ ಪಂಢರಪುರ ಕ್ಷೇತ್ರ ತೆರೆದ ಹೃದಯದ ಸ್ವಾಗತ ನೀಡುತ್ತಲೇ ಬಂದಿದೆ. ಭಕ್ತವತ್ಸಲನಾದ ವಿಠಲ ಇಲ್ಲಿ ಹಲವು ಬಾರಿ ಅನೇಕರಿಗೆ ದರ್ಶನ ಕೊಟ್ಟಿದ್ದಾನೆ. ಪುಂಡಲೀಕನಿಗಾಗಿ ಶ್ರೀ ಕೃಷ್ಣ ರೂಪದಲ್ಲಿ ಬಂದು ತನ್ನ ದನವನ್ನು ಇಲ್ಲಿ ತಂದಿದ್ದ ಕತೆಯೊಂದಿದೆ. ಅದರ ನೆನಪಿಗಾಗಿ ಶ್ರೀ ಕೃಷ್ಣನ ಸಮಚರಣ ಮತ್ತು ದೇಹುಡಾ ಚರಣಗಳಿವೆ. ಅಲ್ಲೇ ದನದ ಗೊರಸುಗಳ ಚಿಹ್ನೆಯೂ ಇದೆ. ಜನಾಬಾಯಿಯ ಗುಹೆಯಲ್ಲಿ ವಿಠಲನು ಬಂದು ಅವಳೊಂದಿಗೆ ಕೂತು ಗೋಧಿ ಬೀಸಿ ಕೊಟ್ಟ ಕತೆಯನ್ನೂ ಕಣ್ಣಿಗೆಕಟ್ಟುವಂತೆ ವರ್ಣಿಸುತ್ತಾರೆ. ಜ್ಞಾನೇಶ್ವರ - ನಾಮದೇವರನ್ನು ಬೀಳ್ಕೊಡಲು ಸ್ವತಃ ವಿಠೋಬನೇ ಬರುತ್ತಿದ್ದನಂತೆ, ಅವರಿಬ್ಬರ ಕೈ-ಕೈಗಳನ್ನು ಹಿಡಿದು, ಒಬ್ಬರ ಕೈಯನ್ನು ಇನ್ನೊಬ್ಬರ ಕೈಯಲ್ಲಿಟ್ಟು ಜೋಡಿಸಿದ ಪ್ರಸ್ತಾಪವೂ ಒಂದು ಅಭಂಗದಲ್ಲಿ ಬರುತ್ತದೆ. ವಾರಕರಿ ಸಂಪ್ರದಾಯದ ನಿಯಮದಂತೆ ಭಜನಾ ಮಂಡಳಿಗಳು ಪಂಢರಪುರಕ್ಕೆ ಬಂದ ಬಳಿಕ ಚಂದ್ರಭಾಗೆಯಲ್ಲಿ ಸ್ನಾನ ಮಾಡುತ್ತಾರೆ. (ಅದಕ್ಕಾಗಿ ಹನ್ನೊಂದು ಘಾಟ್‌ಗಳಿವೆ.) ಕ್ಷೇತ್ರ, ಪ್ರದಕ್ಷಿಣೆ, ಪಾಂಡುರಂಗನ ದರ್ಶನ, ಹರಿಕೀರ್ತನ - ಇವು ಚತುರ್ವಿಧ ಯಾತ್ರಾ' ವಿಧಿಗಳು. ಕ್ಷೇತ್ರ ಪ್ರದಕ್ಷಿಣೆಯಲ್ಲಿ ಜ್ಞಾನೇಶ್ವರನ ಮಂದಿರ, ರುಕ್ಮಿಣಿ ಮಂದಿರ, ಏಕನಾಥ ಮಂದಿರ, ಭಜನದಾಸ ಮಠ, ತಾಂಬಡಾ (ಕೆಂಪು) ಮಾರುತಿ, ಉದ್ಧವ ಮಂದಿರ, ಪಂಚಮುಖಿ ಮಾರುತಿ, ಕಾಳಿಕಾ ಮಂದಿರ, ವೆಂಕಟಸ್ವಾಮಿಯ ಮಠ, ರೋಹಿದಾಸ, ಸೇನಾನ್ಹಾವಿ, ಬೇರಿಚಾ ಮಹದೇವಾ, ಕಾಳಾ (ಕಪ್ಪು) ಮಾರುತಿ, ಚೌಫಾಳಾ, ದಾಮೂ ಶೇಟ್ ಮಂದಿರ, ಗುಂಡಾಮಹಾರಾಜ ಮಠ, ನಿವೃತ್ತಿನಾಥ ಮಂದಿರ - ಕಡಿಮೆಯೆಂದರೂ ಇಷ್ಟು ಪ್ರದೇಶಗಳನ್ನು ಸಂದರ್ಶಿಸಿಯೇ ಮುಂದುವರಿಯುತ್ತಾರೆ. ಪಂಢರಪುರದ ಕುರಿತು ಎಲ್ಲ ಸಂತರ ಮನಸ್ಸನ್ನು ತುಕಾರಾಮ ಎಷ್ಟು ಚೆನ್ನಾಗಿ, ಅರ್ಥಪೂರ್ಣವಾಗಿ ಹೇಳಿದ್ದಾನೆ ನೋಡಿ -

> ಪಂಢರಿ ಪುಣ್ಯಭೂಮಿ ಭೀಮಾ ದಕ್ಷಿಣ ವಾಹಿನಿ ।
> ತೀರ್ಥ ಹೆ ಚಂದ್ರಭಾಗಾ ಮಹಾ ಪಾತಕಾ ಧುನಿ ।
> ಉತರಲೆ ವೈಕುಂಠ ಮಹಾಸುಖ ಮೇದಿನಿ ॥

ಪಂಢರಪುರಕ್ಕೆ ಹೋಗಿ ಬಂದ ವಾರಿಗಳು ತಮ್ಮ ಮನೆಗೆ ಬಂದರೂ ಸಾಕು, ಜನ್ಮ ಸಾರ್ಥಕವಾಯಿತು ಎಂದು ತುಕಾರಾಮ ಹೇಳುತ್ತಾನೆ.

ಪಂಡರೀಚಿ ವಾರಿ ಆಹೆ ಮಾಝೆ ಘರಿ।
ಅಣಿಕ ನ ಕರೀಂ ತೀರ್ಥವ್ರತ ॥

ಬೇರೆಲ್ಲೂ ಇನ್ನು ತೀರ್ಥವ್ರತ ಮಾಡಲು ಹೋಗುವುದಿಲ್ಲ ಎನ್ನುತ್ತಾನೆ. ಪಂಢರಪುರಕ್ಕೆ ವಾರಕರಿ ಹೋದವರಿಗೆ ಏನಾಗುತ್ತದೆ ? ಅಂಥ ಪ್ರಾಣಿಗಳೆಲ್ಲ ಧನ್ಯರು. ಬಾಯಲಿ ಅಮೃತ, ದಿವ್ಯದೇಹ. ಮೂಢ, ಮತಿಹೀನ, ದುಷ್ಟ, ಅವಿಚಾರಿಗಳು ಇಲ್ಲಿ ದಯಾರೂಪರಾಗುತ್ತಾರೆ. ಶಾಂತಿ, ಕ್ಷಮೆಗಳಿಂದ ಅವರು ವಿರಕ್ತಿಯನ್ನೂ ಅನುಭವಿಸುತ್ತಾನೆ. ಇಲ್ಲಿ ವರ್ಣ, ಅಭಿಮಾನ ಇರುವುದಿಲ್ಲ. ಎಲ್ಲರೂ ಜೀವನ್ಮುಕ್ತರಾಗುತ್ತಾರೆ - ಇದು ತುಕಾರಾಮನ ಒಂದು ಅಭಂಗದ ಸಾರ.

ತುಕಾರಾಮನು ಪಂಢರಪುರದ ಭೂತ ಹಿಡಿದ ಕುರಿತು ಒಂದು ಹಾಸ್ಯ ಅಭಂಗವನ್ನೂ ಬರೆದಿದ್ದಾನೆ.

ಪಂಢರೀಚೆ ಭೂತ ಮೋಠೆ ।
ಆಲ್ಯಾ ಗೇಲ್ಯಾ ಝುಡಪಿ ವಾಟೆ ॥ ೧ ॥
ಬಹು ಖೇಚರೀಚೆ ರಾನ ।
ಜಾತಾ ವೇಡೆ ಹೋಯ ಮನ ॥ ೨ ॥
ತೇಥೆ ಜಾವೂ ನಕಾ ಕೋಣಿ ।
ಗೇಲೆ ನಾಹಿ ಅಲೆ ಪರತೋನಿಂ ॥ ೩ ॥
ತುಕಾ ಪಂಢರೀಸಿ ಗೇಲಾ।
ಪುನ್ಹಾ ಜನ್ಮಾ ನಾಹಿ ಅಲಾ ॥ ೪ ॥

(ಈ ಪಂಢರಿ ಭೂತ ಬಲು ದೊಡ್ಡದು - ಬಂದು ಹೋಗುವವರಿಗೆ ಬಲು ಪೀಡೆ ಕೊಡುತ್ತದೆ. ದಾರಿ ಬಲು ದುರ್ಗಮ, ವನ್ಯಮೃಗಗಳಿಂದ ತುಂಬಿದೆ. ಹೋಗುವವರ ಮನಸ್ಸನ್ನು ಹುಚ್ಚೆಬ್ಬಿಸಿ ಬಿಡುತ್ತದೆ. ಅಲ್ಲಿ ಹೋಗಬೇಡಿ. ಒಮ್ಮೆ ಅಲ್ಲಿ ಹೋದವರು ಮರಳಿ ಬರುವುದಿಲ್ಲ. ತುಕಾರಾಮ ಪಂಢರಿಗೆ ಹೋದ. ಮತ್ತೆ ಹುಟ್ಟಿ ಬರಲೇ ಇಲ್ಲ!)

ಪಂಢರಪುರಕ್ಕೆ ಹೋದ ವಾರಕರಿಗಳು ನೇರವಾಗಿ ಮೋಕ್ಷಕ್ಕೇ ಹೋಗುತ್ತಾರೆ ಎನ್ನುತ್ತಾನೆ ತುಕಾರಾಮ. ಇದು ಪುಂಡಲೀಕನಿಗೆ ವಿಠಲನು ಕೊಟ್ಟ ವರದಾನ-

ಪಂಢರೀಚೆ ವಾರಕರಿ । ತೆ ಅಧಿಕಾರಿ ಮೋಕ್ಷಾಚೆ ।
ಪುಂಢಲಿಕಾ ದಿಲಾ ವರ । ಕರುಣಾಕರೆ ವಿಠಲೆ ।

ಪಂಢರಿ ಪಂಢರಿ ಎನ್ನುತ್ತ ಇದ್ದರೆ ಪಾಪವೆಲ್ಲಾ ಕರಗಿ ಹೋಗುತ್ತದೆ ಎಂಬುದು ಎಲ್ಲ ಸಂತರ ಆಶ್ವಾಸನೆ, ತಂದೆ - ತಾಯಿ, ಬಂಧು -ಬಳಗ, ಕಷ್ಟ - ಸುಖ ಎಲ್ಲವೂ ಮರೆತು ಹೋಗುತ್ತದೆ ಎಂಬುದು ಈ ಸಂತರ ಅನುಭವ ವರ್ಣನೆ. ಪಂಢರಿಗೆ ವಾರಕರಿಗೆ ಹೋಗುವುದೇ ಒಂದು ವ್ರತ, ಹರಕೆ, ಸಂಕಲ್ಪ, ಗುರಿ. ಅವರಿಗೆ ಪುಂಡರೀಕ ವಿಠಲನ ಮೇಲೆ ಅಧಿಕಾರ ಬರುತ್ತದೆ ಎಂದು ಸಂತ ನಾಮದೇವ ಹೇಳುತ್ತಾನೆ. ಪಂಢರಿಲಾ ಸವಾರಿ, ಪ್ರೇಮ ಸೂತ್ರ ದೋರಿ, ಭಕ್ತಿಯ-ಪ್ರೇಮದ ಹಗ್ಗದಿಂದ ಕಟ್ಟಿ ಹಾಕಿ ವಿಠೋಬನೆಡೆಗೆ, ಪಂಢರಪುರಕ್ಕೆ ಹೋಗುತ್ತಾರೆ. ವಾರಕರಿ ಸಂಪ್ರದಾಯಕ್ಕೆ ಒಂದುವರೆ ಸಾವಿರ ವರ್ಷಗಳಿಗೂ ಹಿಂದಿನ ಇತಿಹಾಸವಿದೆ. ಕ್ರಿ. ಶ. ನಾಲ್ಕನೆಯ ಶತಮಾನದ ಸುಮಾರಿಗೆ ಈ ಪದ್ಧತಿ ಬೆಳೆದಿರಬಹುದು ಎಂಬುದು ಒಂದು ಅಂದಾಜು. ಸಂತ ಜ್ಞಾನೇಶ್ವರನ ಕಾಲಕ್ಕೆ - ೧೩. ನೆಯ ಶತಮಾನದಲ್ಲಿ ಇದಕ್ಕೆ ತಾತ್ವಿಕ ಹಾಗೂ ಆಧ್ಯಾತ್ಮಿಕ ಗೌರವ ದೊರಕಿತು. ಜ್ಞಾನೇಶ್ವರನ ಸಂತ ಮಂಡಳಿಯಲ್ಲಿ ಸಂತ ನಾಮದೇವ ಅಲ್ಲದೇ ಗೋರಾ ಕುಂಬಾರ, ಸಾವತಾ ಮಾಳಿ, ನರಹರಿ ಸೋನಾರ, ಸೇನಾ ನ್ಹಾವಿ, ಪರಿಸಾ ಭಾಗವತ, ಜನಾ ಬಾಯಿ, ಚೋಖಾ ಮೇಳಾ - ಹೀಗೆ ಬೇರೆ ಬೇರೆ ಜಾತಿಯ ಭಕ್ತರೂ ಸೇರಿದ್ದರು.

ದೇವರ ದ್ವಾರದಲ್ಲಿ ಉಚ್ಚ - ನೀಚ ಯಾರೂ ಇಲ್ಲ ಎಂದು ಜ್ಞಾನೇಶ್ವರನೇ ಸಾರಿದ. ವಾರಕರಿಗೆ ಸಾರ್ವತ್ರಿಕ, ಸಾರ್ವಜನಿಕ ಸ್ವರೂಪ ಬಂತು.

ಹರಿ ಆಲಾ ರೆ । ಹರಿ ಆಲಾ ರೆ ।
ಸಂತ ಸಂಗೆ ಬ್ರಹ್ಮಾನಂದು ಝೂಲಾರೆ ॥೧॥
ಹರಿ ಯೇಥೆರೆ । ಹರಿ ತೇಥೆ ರೆ ।
ಹರಿವಾಂಚುನಿ ನ ದಿಸೆ ರಿತಂ ರೆ ॥೨॥
ಹರಿ ಪಾಹಿ ರೆ । ಹರಿ ಧ್ಯಾಯಿ ರೆ ।
ಹರಿ ವಾಂಚುನಿ ದುಜೆ ನಾಹಿ ರೆ । ॥೩॥
ಹರಿ ವಾಚೆ ರೆ । ಹರಿ ನಾಚೆ ರೆ ।
ಹರಿಪಾಹಾತಾಂ ಆನಂದರು ಸಾಚೆರೆ ॥೪॥
ಹರಿ ಆದಿ ರೆ ಹರಿ ಅಂತಿ ರೆ ।
ಹರಿ ವ್ಯಾಪಕು ಸರ್ವಾಂಭೂತಿ ರೆ ॥೫॥
ಹರಿ ಜಾಣಾ ಹರಿ ವಾನಾ ರೆ ।
ಬಾಪರಖುಮಾ ದೇವಿವರೂ ರಾಣಾ ರೆ ॥೬॥

ವಾರಕರಿಯ ಈ ಬಗೆಯ ಕುಣಿತದ ಲಯವಿರುವ ಹಾಡುಗಳ ಪ್ರಾಸಾದಿಕ ರಚನೆಯೊಂದಿಗೆ ಯಾತ್ರೆಗೆ ಒಂದು ವಿಶೇಷ ರಂಗು ಮತ್ತು ಅರ್ಥ ಬಂತು. ಇಂಥ ಭಕ್ತಿ ಗೀತೆಗಳನ್ನು ಆಶುಕವಿಯಾಗಿಯೇ ಸಂತರು ಸ್ವಯಂಸ್ಫೂರ್ತಿಯಿಂದ ರಚಿಸಿದರು. ವಾರಕರಿ ಪದ್ಧತಿಯೊಂದಿಗೆ ಮರಾಠಿ ಭಕ್ತಿ ಸಾಹಿತ್ಯ ವಿಪುಲವಾಯಿತು. ಅಲ್ಲಿ ಆಧ್ಯಾತ್ಮ, ತತ್ತ್ವಜ್ಞಾನ, ಸಾಹಿತ್ಯ, ಸಂಗೀತ ಎಲ್ಲವೂ ಸಮನ್ವಯಗೊಂಡವು. ಮರಾಠಿ ಭಾಷೆಯೂ ವಿಕಾಸಗೊಂಡಿತು.

ರಸೋ ವೈ ಸಃ ಎಂಬಂತೆ ಭಕ್ತಿರಸ ಎಲ್ಲವನ್ನೂ ಸಮರಸ ಮಾಡಿ ಅವಿನಾಭಾವ ಸಂಬಂಧ ಬೆಳೆಯಿಸಿತು. ನಾಮ ಸಂಕೀರ್ತನ, ನಾಮ ಸ್ಮರಣ, ನಾಮ ಮಹಾತ್ಮ್ಯ, ಸಮೂಹ ವೃಂದಗಾನ, ಜನಮಿಲನ, ಮನಮಿಲನ, ತಾಳ ವಾದ್ಯ ಸಂಗಮ - ವ್ಯಷ್ಟಿಯಿಂದ ಸಮಷ್ಟಿಗೆ ವಿಶ್ವಾತ್ಮಕ ಅನುಭೂತಿ ದರ್ಶನ.

ದೇವರು ಮತ್ತು ಭಕ್ತನ ಸಂಬಂಧ ಏನು? ವಸಿಷ್ಠರು ರಾಮನಿಗೆ ಹೇಳಿದ ಆಧ್ಯಾತ್ಮ ರಾಮಾಯಣದಲ್ಲಿ ಹನುಮಂತನೂ ತನ್ನ ಮತ್ತು ರಾಮನ ಸಂಬಂಧ ಹೇಳುವ ಈ ಶ್ಲೋಕ ಅದನ್ನು ಸ್ಪಷ್ಟವಾಗಿ ವಿವರಿಸುತ್ತದೆ :

ದೇಹ ಬುದ್ಧ್ಯಾಸ್ಮಿ ದಾಸೋಽ ಹಂ ।
ಜೀವ ಬುದ್ಧ್ಯಾತ್ವದಂಶಕಃ ।
ಆತ್ಮ ಬುದ್ಧ್ಯಾತ್ವಮೇವಾಹಂ ।
ಯಥೇಚ್ಛಸಿ ತಥಾ ಕುರು ॥

ದೇಹಬುದ್ಧಿಯಿಂದ ನೋಡಿದರೆ ಯಜಮಾನ - ದಾಸನ ಸಂಬಂಧ. ಜೀವಬುದ್ಧಿಯಿಂದ ಕಂಡರೆ ತಾನು ಒಂದು ಅಂಶ. ಆತ್ಮದ ದೃಷ್ಟಿಯಿಂದ ನೋಡಿದರೆ ನೀನೇ ನಾನು - ನಾನೇ ನೀನು ಎಂಬ ಅದ್ವೈತ ಭಾವ. ಇದನ್ನೂ ದಾಸೋಹಂ, ಸೋಹಂ ಓಂ ಎಂಬುದಾಗಿ ಭಾವ ವಿಶ್ಲೇಷಣೆ ಮಾಡಿದ್ದಾರೆ. ಮರಾಠಿ ಸಂತ ಸಂಪ್ರದಾಯದಲ್ಲಿ ವಾರಕರಿಯ ಇತಿಹಾಸವನ್ನು ಅಭಂಗ ರೂಪದಲ್ಲಿ ನೋಡಿದರೆ ಬೆಳವಣಿಗೆಯ ಐದು ಮುಖ್ಯ ಹಂತಗಳನ್ನು ಕಾಣಬಹುದು :

೧. ಪುಂಡಲೀಕ - ಜ್ಞಾನದೇವ

೨. ಜ್ಞಾನದೇವ - ನಾಮದೇವ

೩. ಭಾನುದಾಸ - ಏಕನಾಥ

೪. ತುಕಾರಾಮ

೫. ತುಕಾರಾಮನ ಆನಂತರ ವಾರಕರಿ ಒಂದು ಸಾಮೂಹಿಕ ಚಳವಳಿಯಾಗಿ ಬೆಳೆದು ಬಂತು. ಪ್ರೇಮಭಕ್ತಿಯ ಪರಾಕಾಷ್ಠೆ ತೋರಿಸಿದ ಸಂತ ಜ್ಞಾನೇಶ್ವರನು ಈ ಸಂಪ್ರದಾಯ ಸಂಘಟನೆಯಿಂದ ಬಹಳಷ್ಟನ್ನು ಸಾಧಿಸಿದನು.

೧. ಈ ಸಂಪ್ರದಾಯಕ್ಕೆ ಸುಸಂಗತ ಮತ್ತು ತರ್ಕಶುದ್ಧ ತತ್ತ್ವಜ್ಞಾನ ಕೊಟ್ಟನು.

೨. ಅದರಲ್ಲಿ ಸೂಕ್ಷ್ಮ ನೀತಿಮೀಮಾಂಸೆ ಮಾಡಿದನು.

೩. ಧಾರ್ಮಿಕ, ಶಾಸ್ತ್ರೀಯ ಹಾಗೂ ರೂಢಿಗತ ಪೂರ್ವಗ್ರಹಗಳನ್ನು ತೊಡೆದು ಹಾಕಿ ಹೊಸ ಬಗೆಯಲ್ಲಿ ಚಿಂತನೆ ಮಾಡಲು ಉಜ್ವಲ, ಲವಲವಿಕೆಯ, ನಿರ್ಮಲ ವಾತಾವರಣ ನಿರ್ಮಿಸಿದನು. ಇದರಿಂದ ಅನೇಕ ರೂಢಿಗತ ವಿಷಯಗಳ ಸ್ವ-ಮೌಲ್ಯಮಾಪನ, ಪರಿವರ್ತನೆ ಸಾಧ್ಯವಾಯಿತು.

೪. ಲೋಕಜಾಗೃತಿ ಉಂಟಾಗಿ ಸಾಮರಸ್ಯದ ಸಂಘಟನೆ ರೂಪುಗೊಂಡಿತು. ಸಂಪ್ರದಾಯ ಹಾಗೂ ಆಧುನಿಕ ಸಂಗಮವಾಯಿತು. ದೀನದಲಿತರೂ ಮಹಿಳೆಯರೂ ಇದರಲ್ಲಿ ಸೇರಿದರು.

೫. ದೇವರು ಎಂದರೆ ಭಯದ ಕಲ್ಪನೆಯೇ ದಟ್ಟವಾಗಿತ್ತು. ಆ ತೆರೆಯನ್ನು ವಾರಕರಿ ಪದ್ಧತಿಯ ಭಕ್ತಿ ಚಳವಳಿಯು ಸರಿಸಿ ಹಾಕಿತು. ಭಕ್ತಿ ಎಂಬುದು ಶುದ್ಧ ಪ್ರೇಮ ಎಂದಾಯಿತು. ಸಗುಣ - ನಿರ್ಗುಣ - ನಿರಾಕಾರ ಭಕ್ತಿ ಮಿಶ್ರವಾಯಿತು.

ತುಜ ಸಗುಣ ಮ್ಹಣೊ ಕಿ ನಿರ್ಗುಣ ರೇ ।
ಸಗುಣ ನಿರ್ಗುಣ ಏಕ ಗೋವಿಂದು ರೇ ॥

ಎಂದ ಜ್ಞಾನೇಶ್ವರ ದೇವರೊಂದಿಗೆ ಪ್ರೀತಿಯಿಂದ ಮಾತನಾಡಲು, ಭಾಂಡಣ (ಜಗಳ) ಮಾಡಲು, ಸ್ನೇಹಿತನಂತೆ ಕಾಣಲು ಕಲಿಸಿದನು. ದೇವರೊಂದಿಗೆ ಆಟವಾಡಿದರು. ದೇವರು - ಭಕ್ತ ತುಂಬ ಹತ್ತಿರ ಹತ್ತಿರ ಬಂದರು. ಅತ್ಯಂತ ನಿಕಟವಾದರು. (ಕರ್ನಾಟಕದ ಹರಿದಾಸರೂ ವಿಠ್ಠಲನೊಂದಿಗೆ ಆಣೆ - ಭಾಷೆ ಹಾಕಲಿಲ್ಲವೆ? ಮುಯ್ಯಿಗೆ ಮುಯ್ಯಿ ತೀರಿಸಲಿಲ್ಲವೇ?) ದೇವರಲ್ಲಿ ಮನುಷ್ಯತ್ವಾರೋಪಣ - ಮನುಷ್ಯ ರೂಪದಲ್ಲೇ ದೇವರನ್ನು ಕಾಣುವ ದೃಷ್ಟಿ ಬೆಳೆಯಿತು. (ANTHROMORPHIC)

ದೇವರ ಕಲ್ಪನೆಗೆ ಹೊಸ ಆಯಾಮ ಕೊಟ್ಟ ಈ ಪರಂಪರೆಯಲ್ಲೇ ಕೆಲವು ಕಡೆ ತುಕಾರಾಮನು ತನ್ನನ್ನು ನಾಸ್ತಿಕ ಎಂದು ಕರೆದುಕೊಂಡದ್ದುಂಟು! ಜ್ಞಾನೇಶ್ವರ ಒಂದು ಕಡೆ ಹೀಗೆ ಹೇಳುತ್ತಾನೆ -

ವಾಚೆ ಬರವೆ ಕವಿತ್ವ । ಕವಿಚೆ ರಸಿಕತ್ವ ।
ರಸಿಕತ್ವ ಪರತತ್ವ । ಸ್ಪರ್ಶು ಜೈಸಾ ॥

ಹೀಗೆ ಕಾವ್ಯ ಸಾಹಿತ್ಯದಿಂದ ಆಧ್ಯಾತ್ಮಕ್ಕೆ ಅನ್ವೇಷಣೆ. ಸಂಸಾರದಲ್ಲಿದ್ದೂ ಲೌಕಿಕ ಕರ್ತವ್ಯಗಳನ್ನು ಮಾಡುತ್ತಲೇ ಒಂದು ಬಗೆಯ ನಿರ್ಲಿಪ್ತತೆಯನ್ನು ಬೆಳೆಸಿಕೊಂಡು ಭಕ್ತಿಯೋಗ ಅನುಷ್ಠಾನ ಮಾಡಲು ಮನುಷ್ಯನನ್ನು ಹದಗೊಳಿಸಿ, ನಿಯಂತ್ರಿಸಿದ್ದು ಈ ಸಂಪ್ರದಾಯದ ಒಟ್ಟು ಅಮೋಘ ಫಲಶ್ರುತಿ. ಸಗುಣ ಭಕ್ತಿಯಿಂದ ನಿರ್ವಿಕಾರ, ನಿರ್ಗುಣ, ಭಾವಾತೀತ ಯಾತ್ರೆ, ವಾರಕರಿಯ ಪರಮೋಚ್ಚ ಉದ್ದೇಶ ಸಾಧನೆ.

ಜೀವನದಿಂದ ಪಲಾಯನ ಮಾಡದೆ, ಜೀವನ ವಿಮುಖವಾಗದೆ ಸಮತತ್ತ್ವ ದೃಷ್ಟಿಯನ್ನು ಬೆಳೆಸುವ ಪ್ರಬುದ್ಧತೆಯನ್ನು ಈ ಪರಂಪರೆ ಕಲ್ಪಿಸಿಕೊಟ್ಟಿತು. ವಾರಕರಿ ಸಂಪ್ರದಾಯದ ಕೆಲವು ನಿಯಮ - ನಿಷ್ಠೆಗಳು

೧. ಸತ್ಯವನ್ನೇ ಮಾತನಾಡಬೇಕು.

೨. ಪರಸ್ತ್ರೀ ರುಕ್ಮಿಣಿಯಂತೆ ಮಾತೃಸ್ವರೂಪಿ.

೩. ಅಪರಾಧ ಮಾಡಿದ್ದರೆ ಭಗವಂತನಲ್ಲಿ ಕ್ಷಮೆಯಾಚಿಸಿ ಪ್ರಾರ್ಥಿಸಬೇಕು.

೪. ನಿಯಮಬದ್ಧ, ಅಲ್ಪ ಆಹಾರ ಸೇವನೆ.

೫. ಏಕಾದಶಿ ವ್ರತ - ಉಪವಾಸ, ಪಂಢರಪುರ ಹಾಗೂ ಸಂತ ಜ್ಞಾನೇಶ್ವರನ ಸಮಾಧಿ ಇರುವ ಆಳಂದಿಗೆ ಪ್ರತಿ ವರ್ಷ ವಾರಿ ಹೋಗುವ ವ್ರತ.

೬. ಪ್ರತಿದಿನ ಭಗವಂತನ ನಾಮಸ್ಮರಣೆಯಲ್ಲಿ ಸಾಧ್ಯವಿದ್ದಷ್ಟು ಹೆಚ್ಚು ಹೊತ್ತು ಕಳೆಯಬೇಕು.

೭. ಜ್ಞಾನೇಶ್ವರಿ, ಹರಿಪಾಠ, ಏಕನಾಥರ ಭಾವಾರ್ಥ ರಾಮಾಯಣ, ಭಾಗವತರ ಪಾರಾಯಣ, ಅಭಂಗಗಳ ಹಾಡುಗಾರಿಕೆ, ಚಿಂತನ, ಮನನ.

೮. ಎಲ್ಲ ಪ್ರಾಪಂಚಿಕ ಕರ್ತವ್ಯಗಳನ್ನು ಈಶ್ವರಾರ್ಪಣ ಬುದ್ಧಿಯಿಂದ ಮಾಡುವುದು.

ಪಂಢರಪುರದ ಆಷಾಢ ಏಕಾದಶಿ, ಆಳಂದಿಯ ಕಾರ್ತಿಕ ಏಕಾದಶಿ, ವಾರಕರಿ ಪ್ರಸಿದ್ಧ. ಆಗ ಭಜನ, ಕೀರ್ತನ, ಹರಿಜಾಗರ ಪೈಠಣ, ದೇಹೂ, ತ್ರ್ಯಂಬಕೇಶವ, ನಾಸವಡ ಮತ್ತು ಇತರ ಸಂತಕ್ಷೇತ್ರಗಳಿಗೂ ವಾರಕರಿ ಭಕ್ತರ ಯಾತ್ರೆ ನಡೆದೇ ಇರುತ್ತದೆ.

ವಾರಕರಿಯ ಕೆಲವು ಉಪಸಂಪ್ರದಾಯಗಳು :

೧. **ಚೈತನ್ಯ ಸಂಪ್ರದಾಯ** - ರಾಮಕೃಷ್ಣಹರಿ - ಷಡಕ್ಷರಿ ಮಂತ್ರ. ಓಂ ನಮೋ ಭಗವತೆ ವಾಸುದೇವಾಯ - ದ್ವಾದಶಾಕ್ಷರಿ ಮಂತ್ರ ಸ್ಮರಣೆ.

೨. **ಸ್ವರೂಪ ಸಂಪ್ರದಾಯ** - ಶ್ರೀರಾಮ ಜಯ ರಾಮ ಜಯ ಜಯ ರಾಮ - ತ್ರಯೋದಶಾಕ್ಷರೀ ಮಂತ್ರ (ಇದರಲ್ಲೂ ರಾಮಾನುಜೀಯ ಹಾಗೂ ರಾಮಾನಂದಿ ಎಂಬ ಎರಡು ಕ್ರಮಗಳಿವೆ).

೩. **ಆನಂದ ಸಂಪ್ರದಾಯ** - ಶ್ರೀ ರಾಮ - ತ್ರ್ಯಕ್ಷರಿ ಅಥವಾ ಬರೀ ರಾಮ - ದ್ವಯಾಕ್ಷರಿ.

೪. **ಪ್ರಕಾಶ ಸಂಪ್ರದಾಯ** - ಓಂ ನಮೋ ನಾರಾಯಣಾಯ.

ಪಂಢರಪುರದ ಈ ವಿಠ್ಠಲನ ಕಥೆ ಬಲು ರಮ್ಯ. ಕರ್ನಾಟಕ ಹಾಗೂ ಮಹಾರಾಷ್ಟ್ರದ ಭಕ್ತರೆಲ್ಲರಿಗೂ ತಂದೆ, ತಾಯಿ, ಬಂಧು, ಬಳಗ ಎಲ್ಲವೂ ಆಗಿಬಿಟ್ಟಿರುವ ಈ ವಿಠಲ ಅನೇಕ ದಾಸರ ಹಾಗೂ ಭಕ್ತರ ಅಂಕಿತಕ್ಕೂ ಒಳಪಟ್ಟಿದ್ದಾನೆ. ಈ ಪಾಂಡುರಂಗನ ಕುರಿತು ಮರಾಠಿಯ ಸಂತರೆಲ್ಲ ಸಾವಿರಾರು ಅಭಂಗಗಳನ್ನು ಬರೆದಿದ್ದಾರೆ. ತುಕಾರಾಮನು ಸುಮಾರು ೫,೦೦೦, ನಾಮದೇವನು ೨,೫೦೦, ಜ್ಞಾನೇಶ್ವರನು ಒಂದು ಸಾವಿರ ಅಭಂಗ ರಚನೆ ಮಾಡುವಷ್ಟು ಜನಪ್ರಿಯ ಈ ವಿಠ್ಠಲ. ಮರಾಠಿ ಸಂತ ಪರಂಪರೆಯ ಮೂಲ ಪುರುಷನೆಂದು ಪೂಜೆಗೊಳ್ಳುತ್ತಿರುವ ಜ್ಞಾನದೇವ 'ಬಾಪರಖುಮಾಯಿ' ಎಂದೇ ಅಂಕಿತ (ಮುದ್ರಿಕೆ) ಹಾಕಿಕೊಂಡಿದ್ದಾನೆ. (ಅವನ ತಂದೆಯ ಹೆಸರೂ ವಿಠ್ಠಲ ಪಂತ. ತಾಯಿ ರಖುಮಾಯಿ) ನಮ್ಮ ದಾಸರಲ್ಲಿ ಪುರಂದರ, ಶ್ರೀಪಾದರಾಜರಾದಿಯಾಗಿ ಹಲವರು ವಿಠಲನನ್ನೇ ಅಂಕಿತ ನಾಮವನ್ನಾಗಿ ಬಳಸಿದ್ದಾರೆ. ಹೀಗೆ ಕರ್ನಾಟಕ - ಮಹಾರಾಷ್ಟ್ರದ ಸಾಂಸ್ಕೃತಿಕ ಜೀವನದಲ್ಲಿ ವಿಠೋಬನದು ಮಹತ್ತ್ವದ ಪಾತ್ರ.

ವಿಠಲ ಮೂಲತಃ ಕರ್ನಾಟಕದವನು. ಆನಂತರ ಪಂಢರಪುರಕ್ಕೆ ಹೋದನು ಎಂದು ಮರಾಠಿ ಸಂತರಾದಿಯಾಗಿ ಎಲ್ಲರೂ ಹಾಡಿದ್ದಾರೆ. 'ಪಾಂಡುರಂಗ ಕಾಂತಿ ದಿವ್ಯತೇಜ ಝುಳಕತಿ' ಎಂಬ ಸಂತ ಜ್ಞಾನೇಶ್ವರನ ಅಭಂಗದಲ್ಲಿ -

ಕಾನಡಾ ಹೋ ವಿಠ್ಠಲು ಕರ್ನಾಟಕೂ ।
ತ್ಯಾನೆ ಮಜ ಲಾವಿಲಾ ವೇಧು ॥

ಎಂದು ಸ್ಪಷ್ಟವಾಗಿ ಕನ್ನಡದ ವಿಠ್ಠಲ ತನ್ನ ಮನಸ್ಸನ್ನು ಸೆಳೆದುಕೊಂಡನು ಎಂದು ಹೇಳಿದ್ದಾನೆ. ಫಂಡರಿರಾಯ ವಿಠ್ಠಲನಿಗೆ ಮನಸೋತ ಜ್ಞಾನೇಶ್ವರನು ಕನ್ನಡದಲ್ಲೂ ಒಂದು ಚಿಕ್ಕ ಹಾಡನ್ನು ರಚಿಸಿದ್ದಾನೆ.

ಆ ಆ ನೀ ಕೇಳಿ ಮಾತು ಕೇಳಿಲೆ ಘನಿಗೆ ಮರುಳಾದನೆ॥೧॥
ಚೆಲುವನೇ ಚೆಲುವನೇ ಪಂಢರಿರಾಯ ಚೆಲುವನೇ
ಎಲ್ಲೆ ದೊರಕ್ಯಾನೆ ಎಲ್ಲೆ ಬಾ ರನ್ನೆ ॥
ಪುಂಡಲೀಕನ ಭಕ್ತಿಗೆ ಬಂದಾ
ರಖುಮಾದೇವಿ ವರ ವಿಠ್ಠಲನೆ ॥೨॥

ಸಂತ ಏಕನಾಥನ ಈ ಅಭಂಗದಲ್ಲಿ ಕನ್ನಡದ ವಿಠಲನ ಬಗ್ಗೆ ಕೊಟ್ಟಿರುವ ವರ್ಣನೆ ನೋಡಿ -

ತೀರ್ಥ ಕಾನಡೆ, ದೇವ ಕಾಡನೆ ।
ಕ್ಷೇಮ ಕಾನಡೆ, ಪಂಢರಿಯೆ ।
ವಿಠ್ಠಲ ಕಾನಡೆ, ಭಕ್ತ ಕಾನಡೆ ।
ಪುಂಡಲೀಕ ಉಘಡೆ, ಉಭೆ ಕೇಲೆ ॥
ಏಕ ಜನಾರ್ದನಿ ಭಕ್ತಾಚಿಯಾ ಚಾಡಾ ।
ವಿಠಲು ಕಾನಡಾ ವಿಠೇವರಿ ॥

ವಿಠಲ ಮೂಲ ಕನ್ನಡ - ಕರ್ನಾಟಕವೆಂದು ಇನ್ನೊಂದೆಡೆ ಹೀಗಿದೆ -

ಕಾಶೀಯೆ ಕನೋಜು, ದ್ವಾರಕಾ ಗುಜರು ।
ಕಾನಡಾ ವಿಠ್ಠಲ ಪಂಢರೀಯೆ॥

ಕಾಶಿ, ದ್ವಾರಕೆಗಳೊಂದಿಗೆ ಪಂಢರಪುರವನ್ನು ಒಂದು ಮಹಾಕ್ಷೇತ್ರವೆಂದು ಆಗಲೇ ಪರಿಗಣಿಸಿದ್ದರು. ಪಂಢರಪುರದ ವಿಠಲನ ಗುಡಿಯಲ್ಲಿ ಕ್ರಿ.ಶ. ೧೧೫೯ರ ನಿರ್ಣಾಯಕ ಶಿಲಾಲೇಖ ಸಂಸ್ಕೃತ ಮತ್ತು ಕನ್ನಡದಲ್ಲಿದೆ. ಈ ಪಾಂಡುರಂಗ ವಿಠಲ ಕನ್ನಡ ನಾಡಿನವನು ಎಂದು ಇದರಲ್ಲಿದೆ. ಇದರಲ್ಲಿ ಕರ್ನಾಟಕದ ಯಾದವವಂಶದ ದೇವಗಿರಿಯ ರಾಮದೇವರಾಯನ ಹೆಸರೇ ಇದೆ. ಇದಕ್ಕೂ ಹಿಂದಿನ ಕ್ರಿ.ಶ ೧೧೧೦ನೆಯ ಇಸವಿಯ ಶಿಲಾಶಾಸನವೂ ಇದನ್ನೇ ದೃಢೀಕರಿಸುತ್ತದೆ. ಭೌಗೋಲಿಕ, ರಾಜಕೀಯ ಹಾಗೂ ಭಾಷಾ ಗಡಿಗಳು ಇಲ್ಲಿ ಮುಖ್ಯವಲ್ಲ. ಭಕ್ತಿ - ಭಕ್ತ - ದೇವರು ಇರುವುದೇ ಈ ಅಂತರಗಳನ್ನು ದಾಟಲಿಕ್ಕಾಗಿ.

ಯಾರು ಈ ವಿಠಲ, ವಿಠ್ಠಲ, ವಿಠೋಬ ? ವಿಷ್ಣುವೇ ವಿಠ್ಠಲನಾದದ್ದು ಎಂಬುದು ಒಂದು ಅಭಿಪ್ರಾಯ, ವಿಷ್ಣು ಹಾಗೂ ಕೃಷ್ಣರ ಸಮನ್ವಯ ರೂಪವೇ ವಿಠಲ ಎಂಬ ಅನಿಸಿಕೆಯೂ ಇದೆ. ಇವನೊಬ್ಬ ಆದಿವಾಸಿಗಳ ದೇವ ಎಂದವರೂ ಇದ್ದಾರೆ. ವಿಠಲ, ವಿಠ್ಠಲ, ವಿಟ್ಠಲ, ವಿಠು, ವಿಟ್ಟಪ್ಪ, ವಿಠ್ಠದ್ವಿಜ, ಬಿಟ್ಟಿದೇವ, ವಿಣ್ಣು, ವಿಣ್ಹು, ವೆಣ್ಹು, ವೆಠ, ಬಿಟ್ಟ, ಬಿಟ್ಟಗ, ವಿಟ್ಟ - ಹೀಗೆ ವಿದ್ವಾಂಸರಲ್ಲೇ ಹಲವು ಅಭಿಪ್ರಾಯಗಳು. ರಾಷ್ಟ್ರಕೂಟ ಮೂರನೆಯ ಗೋವಿಂದನ ಕಾಲದ (ಕ್ರಿ.ಶ.೮೦೮) ದಾನಪತ್ರದಲ್ಲಿ 'ವಿಠ್ಠದ್ವಿಜ' ಮತ್ತು 'ವಿಠ್ಠಪು' ಹೆಸರುಗಳ ಉಲ್ಲೇಖವೇ ಅತಿ ಪ್ರಾಚೀನ. ವಿಷ್ಣು - ಕೃಷ್ಣರಿಗೆ ಪ್ರಿಯವಾದ ತುಳಸೀ

ವಿಠೋಬನಿಗೂ ಮೆಚ್ಚಿಕೆಯದು. ತುಳಸಿಮಾಲೆ ಹಾಗೂ ತುಳಸೀ ಕಾಷ್ಠಮಾಲೆ ವಿಠ್ಠಲನಿಗೆ ಬೇಕೇ ಬೇಕು. ಅದೊಂದು ಅಭಿಜ್ಞಾನ ಚಿಹ್ನೆ. ವಾರಕರಿಯವರಿಗೂ ತುಳಿಸೀ ಮಾಲೆ ಅತ್ಯಗತ್ಯ. ವಿಷ್ಣುವಿನ ಹೃದಯದ ಮೇಲಿನ ಶ್ರೀವತ್ಸ ಲಾಂಛನ ವಿಠಲನ ಹೃದಯದ ಮೇಲೂ ಶೋಭಿಸುತ್ತದೆ. ಕೃಷ್ಣನ ಹಾಗೆಯೇ ವಿಠಲನಿಗೂ ಮೊಸರವಲಕ್ಕಿ (ಕಾಲಾ) ಬಲು ಪ್ರೀತಿ.

ಇಂದು ಹಂಪಿಗೆ ಹೋದರೆ ಅಲ್ಲಿರುವ ವಿಜಯವಿಠಲ ಮಂದಿರದಲ್ಲಿ ವಿಠಲನ ವಿಗ್ರಹ ಇಲ್ಲ. ಈ ಪ್ರತಿಮೆಯನ್ನು ಫಂಡರಪುರಕ್ಕೆ ಒಯ್ದರು ಎನ್ನವವರೂ ಇದ್ದಾರೆ. ಪಂಢರಪುರದಲ್ಲಿದ್ದ ಮೂರ್ತಿಯನ್ನೇ ವಿಜಯನಗರಕ್ಕೆ ತಂದಿದ್ದರು ಎನ್ನುವ ವಾದವೂ ಇದೆ. ಮಧ್ವಾಚಾರ್ಯರು ಉಡುಪಿಯ ಅಷ್ಟಮಠಗಳಲ್ಲಿ ಮೂವರು ಯತಿಗಳಿಗೆ ವಿಠಲನ ಮೂರ್ತಿ ಕೊಟ್ಟು ಪೂಜೆ ಮಾಡಲು ಹೇಳಿದ್ದರು. ಈ ಮೂರ್ತಿಗಳು ಮೂಲ ಪುರುಷರ ಹೆಸರಿನೊಂದಿಗೇ ಇಂದಿಗೂ ಪೂಜೆಗೊಳ್ಳುತ್ತಿವೆ -

೧. ಪೇಜಾವರ ಮಠ - ಅಧೋಕ್ಷಜ (ತೀರ್ಥ) ವಿಠಲ

೨. ಪುತ್ತಿಗೆ ಮಠ - ಉಪೇಂದ್ರ (ತೀರ್ಥ) ವಿಠಲ

೩. ಶಿರೂರು ಮಠ - ವಾಮನ (ತೀರ್ಥ) ವಿಠಲ

ವಾದಿರಾಜರ 'ತೀರ್ಥಪ್ರಬಂಧ'ದಲ್ಲಿ (ಕ್ರಿ.ಶ.೧೪೫೩) ವಿಠಲ ಸ್ತುತಿಪರ ಶ್ಲೋಕಗಳಿದ್ದು, ವಿಠಲನು ತುಂಗಾತೀರಕ್ಕೆ ಹೋದ ಉಲ್ಲೇಖವಿದೆ. ಉತ್ತರಾದಿ ಮಠದಲ್ಲಿಯೂ ಮೂಲ ರಾಮದೇವರ ಜತೆ ವಿಠಲಮೂರ್ತಿಯ ಪೂಜೆ ನಡೆಯುತ್ತದೆ. ಪದ್ಮಪುರಾಣ, ಸ್ಕಂದಪುರಾಣಗಳಲ್ಲೂ ವಿಠಲ ಉಲ್ಲೇಖವಿದೆ.

ಕನ್ನಡ ಕವಿ ಚೌಂಡರಸ ವಿಠ್ಠಲನನ್ನು ವಿಶೇಷವಾಗಿ ವರ್ಣಿಸಿದ್ದಾನೆ. ಅವನ ಸುಂದರ ವದನಾರವಿಂದ, ಮುಗುಳು ನಗೆ, ಮುಂಗುರುಳು, ಹೆಗಲಲ್ಲಿ ಪದಕ, ಎಡಗೈಯಲ್ಲಿ ಶಂಖ, ಬಲಗೈಯಲ್ಲಿ ದಂಡ (ಅಥವಾ ಚಕ್ರ)ವಿದ್ದು ಗೋಪಾಲಕನಾಗಿದ್ದು, ಅವನ ಕಾಲುಗಳು ಕಮಲದಂತಿವೆ ಎಂಬ ವಿವರಗಳು ದೊರೆಯುತ್ತವೆ. ಸೊಂಟದ ಮೇಲೆ ಕೈಗಳನ್ನಿಟ್ಟು ಅಭಂಗ ಸ್ಥಿತಿಯಲ್ಲಿ ಇಟ್ಟಿಗೆಯ ಮೇಲೆ ನಿಂತು ಈ ವಿಠೋಬನನ್ನು ಭಕ್ತರೆಲ್ಲರೂ ಭಾರೀ ಶ್ಲಾಘಿಸಿದ್ದಾರೆ. ವಿಷ್ಠಲದಿಂದ ವಿಠ್ಠಲ ಶಬ್ದ ಉಗಮ ಎಂಬುದು ಇನ್ನೂ ಕೆಲವು ವಿದ್ವಾಂಸರ ಅಭಿಪ್ರಾಯ. ಹಾಗೆಂದರೆ ದೂರದ ಕಾಡು ಎಂದರ್ಥ. ಬಹುಶಃ ಮೂಲತಃ ವಿಠ್ಠಲನು ವನದೇವನೇ ಆಗಿರಬಹುದು. ಸಂಸ್ಕೃತದ ವಿಷ್ಣುವಿನ ಕನ್ನಡ ಅಪಭ್ರಂಶ ಬಿಟ್ಟಿ ಇದ್ದುದು ವಿಟ್ಠಳ, ವಿಟ್ಟಲ ಆಗಿರಬೇಕು ಎಂಬ ತರ್ಕವೂ ಇದೆ.

ತುಕಾರಾಮನಂಥ ಭೋಳೆ ಭಾವುಕ ಸಂತರು ಈ ಇಟ್ಟಿಗೆಯನ್ನೇ 'ವಿಠಾಯಿ', 'ವಿಠಾಯಿ ಮಾವುಲಿ' ಎಂದು ಕರೆದು ಅದಕ್ಕೆ ಮಾತೃಸ್ಥಾನದ ಪಾವಿತ್ರ್ಯಕೊಟ್ಟರು. ವಿಠೋಬಾ ಅಂದರೆ ವಿ=ಜ್ಞಾನ, ಠೋಬಾ=ಮೂರ್ತಿ ಎಂಬ ಅರ್ಥವನ್ನು ತುಕಾರಾಮನ 'ವೀಟಾ ಕೇಲಾ ಠೋಬಾ' ಎಂಬುದರಿಂದ ಅರ್ಥೈಸಿದ್ದೂ ಇದೆ. ವಿಠ್ಠಲ ಶಬ್ದ ಪ್ರಾಕೃತದಿಂದ ಬಂದುದೋ, ದ್ರಾವಿಡ ಮೂಲದಿಂದ ಹುಟ್ಟಿದ್ದೋ ಎಂಬುದು ಇನ್ನೂ ತೀರ್ಮಾನವಾಗಿಲ್ಲ. ಸಾಲಿಗ್ರಾಮ ಶಿಲೆಯ ಅಪ್ಪಟ ಕಪ್ಪು ಮೂರ್ತಿಯನ್ನು ಪಾಂಡುರಂಗ (ಬಿಳಿ ಬಣ್ಣದವ, ಗೌರಾಂಗ) ಎಂದು ಕರೆದುದೂ ಒಂದು ವೈಶಿಷ್ಟ್ಯವೆ.

ಪಂಢರಪುರದ ವಿಠ್ಠಲ ಮೂರ್ತಿಯು ಸುಮಾರು ಕ್ರಿ.ಶ. ನಾಲ್ಕು ಐದನೆಯ ಶತಮಾನದ ಗುಪ್ತರ ಕಾಲದಿದ್ದಿರಬಹುದು ಎಂಬ ಊಹೆಯೂ ಇದೆ. ಈ ವಿಠ್ಠಲ 'ಅಂಗಭೋಗ' ಮತ್ತು 'ರಂಗಭೋಗ'ಗಳಿಗಾಗಿ ಹೊಯ್ಸಳ ಯಾದವ ವೀರ ಸೋಮೇಶ್ವರನು ಒಂದು ಊರನ್ನೇ ದತ್ತಿ ಕೊಟ್ಟಿದ್ದಾನೆ. ಪಂಢರಪುರದ ವಿಠ್ಠಲನ ಪೂಜೆ, ಅರ್ಚನೆಗಳಿಗಾಗಿ ದೇಣಿಗೆ ಕೊಟ್ಟದ್ದು ಕರ್ನಾಟಕ ಭಾಗದಿಂದಲೆ. ಇತಿಹಾಸ, ಅಧ್ಯಯನ, ಸಂಶೋಧನೆಗಳ ದೃಷ್ಟಿ ಒಂದಾದರೆ ಸಂತರ, ಭಕ್ತರ ದೃಷ್ಟಿಯೇ ಬೇರೆ. ಭಕ್ತರು ವಿಠ್ಠಲನನ್ನು - ತ್ರಿಗುಣರಹಿತ, ಭಾವಾತೀತ ವಿಠೋಬನನ್ನೇ ಅನಂತ ಬಗೆಗಳಲ್ಲಿ ಅನುಭವಿಸಿ ಗುಣಗಾನ ಮಾಡಿ ಹಾಡಿದ್ದಾರೆ. ವಿಠ್ಠಲನ ಈ ಸಮಗ್ರ ದೃಷ್ಟಿಯೊಂದಿಗೇ ವಾರಕರಿ ಸಂಪ್ರದಾಯವೂ ಪುಷ್ಟಿದಾಯಕವಾಗಿ ಅರಳಿತು. ಪುರಂದರದಾಸರು 'ಪಂಢರಪುರದಲ್ಲಿ ನೆಲಸಿತ್ತು ಕೂಸು' ಎಂದು ಹಾಡಿದ ಈ ವಿಠ್ಠಲ ವಿಶ್ವವ್ಯಾಪ್ತಿ ಪಡೆದುದಂತೂ ಭಕ್ತರ ಕೃಪೆಯಿಂದಲೆ.

'ಅಮುಚಿ ಹೃದಯೀಂಚಿ ಶ್ರೀಮೂರ್ತಿ' ಎಂದು ಜ್ಞಾನೇಶ್ವರನೊಂದಿಗೆ ಮಹಾರಾಷ್ಟ್ರದ ಇಡೀ ಸಂತ ಪರಂಪರೆ ಹಾಗೂ ಮನೆ ಮನೆಗಳಲ್ಲಿ ವಿಠೋಬ ಅತ್ಯಂತ ಪ್ರಿಯಕರನಾದ. ಈ ಭಾವನೆಗೆ ಕಿರೀಟವಿಟ್ಟಂತೆ ಇವೆ ತುಕಾರಾಮನ ಭಾವಪೂರ್ಣ ಅಭಂಗಗಳು -

ಸುಂದರ ತೆಂ ಧ್ಯಾನ ಉಭೆ ವಿಟೆವರಿ ।
ಕರ ಕಟಾವರಿ ಠೇವೂನೀಯಾ ॥೧॥
ತುಳಸೀಹಾರ ಗಳಾ ಕಾಸೆ ಪೀತಾಂಬರ ।
ಆವಡೆ ನಿರಂತರ ಹೇಚಿ ಧ್ಯಾನ ॥೨॥
ಮಕರ ಕುಂಡಲೆ ತಳಪತಿ ಶ್ರವಣಿ ।
ಕಂಠೀ ಕೌಸ್ತುಭ ಮಣಿ ವಿರಾಜಿತ ॥೩॥
ತುಕಾಮ್ಹಣೆ ಮಾಝೆ ಹೇಂಚಿ ಸರ್ವ ಸುಖ।
ಪಾಹೀನ ಶ್ರೀ ಮುಖ ಆವಡೀನೆ ॥೪॥

ಸದಾ ಮಾಝೆ ಡೋಳೆ ಜಡೊ ತುಝೆ ಮೂರ್ತಿ ।
ರಖುಮಾಯಿಚಾ ಪತಿ ಸೋಯರಿಯಾ ॥೧॥
ಗೋಡ ತುಝೆ ರೂಪ, ಗೋಡ ತುಝೆ ನಾಮ ।
ದೇಹಿ ಮಜ ಪ್ರೇಮ ಸರ್ವ ಕಾಳ ॥೨॥
ವಿಠೊ ಮಾವುಲಿಯೆ ಹಾಚಿ ವರ ದೇಯಿ ।
ಸಂಚರೋನಿ ರಾಹಿ ಹೃದಯಾ ಮಾಜಿ ॥೩॥
ತುಕಾ ಮ್ಹಣೆ ಕಾಹಿಂ ನ ಮಾಗೆ ಆಣಿಕ ।
ತುಝೆ ಪಾಯಿ ಸುಖ ಸರ್ವ ಆಹೆ ॥೪॥

ಜಾಗೃತ, ಸ್ವಪ್ನ, ಸುಷುಪ್ತಿಗಳಲ್ಲೂ ಪಾಂಡುರಂಗ ವಿಠಲನೇ ಸರ್ವಸ್ವ. ಅವನ ಧ್ಯಾನವೇ ಪ್ರೀತಿ. ಅವನು ನಿಂತ ಇಟ್ಟಿಗೆಯಲ್ಲೇ ಧ್ಯಾನ ತಟಸ್ಥ. ಅವನ ಕಾಲುಗಳಲ್ಲೇ ಸರ್ವಸುಖ. ಸರ್ವಾರ್ಪಣ ಶರಣಾಗತಿಯ ಪರಮೋಚ್ಚ ದೃಶ್ಯವಿದು.

ವಾರಕರಿ ಸಂಪ್ರದಾಯಗಳೊಂದಿಗೆ ಮರಾಠಿ ಭಕ್ತಿ ಕಾವ್ಯ ಸಮೃದ್ಧವಾಗಿ ಅರಳಿತು. ಮರಾಠಿ ಸಾಹಿತ್ಯಕ್ಕೆ ಶ್ರೀಕಾರ ಹಾಕಿದ್ದೇ ಸಂತ ಜ್ಞಾನೇಶ್ವರ. ಅವನು ಸಾಹಿತ್ಯ, ಕಾವ್ಯ, ಜ್ಞಾನ, ಆಧ್ಯಾತ್ಮ, ಸಮಾಜ ಪರಿವರ್ತನ ಎಲ್ಲವನ್ನೂ ೨೧ ವರ್ಷಗಳೊಳಗೆ ಸಾಧಿಸಿದ್ದೇ ಒಂದು ಪವಾಡ.

ಓವಿ ಮತ್ತು ಅಭಂಗ ಮರಾಠಿಯ ಖಾಸ ಲೌಕಿಕ ಛಂದಸ್ಸುಗಳು. ಅವುಗಳಿಗೆ ಪ್ರತ್ಯೇಕ ಸೌಂದರ್ಯ, ಆಕರ್ಷಣೆ. ಮರಾಠಿ ಭಕ್ತರು ರಚಿಸಿ, ಹಾಡಿದ ಕೀರ್ತನೆಗಳೆಲ್ಲ ಅಭಂಗ ಎನ್ನುವಷ್ಟು ಅದರ ವ್ಯಾಪ್ತಿ ಬೆಳೆಯಿತು. ಈ ಚತುಷ್ಪದಿ ಅಲೌಕಿಕವಾಗಿಯೇ ಉಳಿಯಿತು. ಅಭಂಗ ಎಂದರೆ ತುಂಡಾಗದ್ದು, ಅವಿಚ್ಛಿನ್ನ, ನಿರಂತರ ಎಂಬುದು ಒಂದು ಅರ್ಥ. ಅಖಂಡ, ಅನಂತ, ಆದಿ - ಅಂತ್ಯವಿಲ್ಲದ್ದು ಎಂಬಷ್ಟು ಅದರ ವಿಸ್ತಾರ. ಅಭಂಗ ಎಂದರೆ ಬ್ರಹ್ಮನ ಇನ್ನೊಂದು ಹೆಸರು. ಓಲಿಯ ಮೂಲಾತ್ಮಕ ರೂಪವೇ ಅಭಂಗ. ಅದೇ ಸಮಾಪ್ತಿ ಮುದ್ರೆ.

ಕನ್ನಡ ಕವಿ ಚೌಂಡರಸ (೧೩ನೆಯ ಶತಮಾನ) ಅಭಂಗ ಎಂದರೆ ವಿಠ್ಠಲನೇ ಎನ್ನುತ್ತಾನೆ. ವಿಠ್ಠಲನಿಂದಲೇ ಈ ಛಂದಸ್ಸು ರೂಪುಗೊಂಡಿತು. ಅವನ ಸುಮಭಂಗ ಸ್ವರೂಪವೇ ಅಭಂಗಕ್ಕೂ ಸ್ಫೂರ್ತಿ. ಏಕನಾಥನೂ ಅದನ್ನೇ ಹೇಳುತ್ತಾನೆ -

ಅಭಂಗ ವಿಠ್ಠಲ ಪರಿ । ಮನಾ ಸಾಂಡಿ ವಿಷಯ ಸೋಡಿ ।
ಸಿಂಧು ತೋ ಅಭಂಗ ವಿಠ್ಠಲ ॥

ಶಿಲ್ಪಕ್ಕೂ ಕಾವ್ಯಕ್ಕೂ ಏನು ಸಂಬಂಧ? ವಿಠ್ಠಲ ಎಂಬ ಓವಿ ಪ್ರಬಂಧವೇ ಅಭಂಗವಾಯಿತು. ಪುರಂದರ ವಿಠ್ಠಲ ವೃಂದಾವನದ ಶ್ರೀ ಕೃಷ್ಣನಂತೆ ತ್ರಿಭಂಗನಲ್ಲ. ಪಂಢರಪುರ ವಿಠ್ಠಲ ಸಮಭಂಗ - ಸಮಚರಣ - ಅಭಂಗ. ಅವನು ನಿಂತ ಭಂಗಿ attention. ಅದನ್ನೇ ನಾಮದೇವ ಹೇಳುತ್ತಾನೆ -

ಸಮಚರಣಿ ಅಭಂಗ ।
ನವ್ಹೆ ತಾನ - ಛಂದೋ ಭಂಗ ॥

ಸಮಚರಣಗಳಲ್ಲಿ ನಿಂತ ವಿಠ್ಠಲನನ್ನು ಅಭಂಗ ಛಂದಸ್ಸಿನಿಂದ ಜೋಡಿಸಲಾಯಿತು. ವಿಠ್ಠಲನ ರೂಪ ವಿಶೇಷದೊಂದಿಗೆ ಅಭಂಗದ ಸಂಬಂಧ - ಅಭೇದ. ಅಭಂಗ ೨೨ ಅಕ್ಷರಗಳ ದೀರ್ಘ ರಚನೆ. ಓವಿಯಿಂದ ಪರಮಾರ್ಥ ವಿಚಾರ ಮಂಡನೆ. ಅಭಂಗದಿಂದ ಪರಮಾರ್ಥಾನುಭವ ಅಭಿವ್ಯಕ್ತ. ಅಭಂಗ ವಾಙ್ಮಯ ಅಂದರೆ ಮರಾಠಿ ಭಕ್ತ ಸಂತರ ಆತ್ಮಚರಿತ್ರೆಯ ಮಹಾಸಾಗರ. ಅಭಂಗ ಮಹಾರಾಷ್ಟ್ರ ಜೀವನದ ಸೂತ್ರ. ವಾರಕರಿ ಹಾಡುವಾಗ, ಹಿಟ್ಟು ಬೀಸುವಾಗ, ಅಕ್ಕಿ ಕುಟ್ಟುವಾಗ, ಪುಗಡಿ ಆಡುವಾಗ ಜೀವನದ ಎಲ್ಲ ಆಟಗಳ ಅವಿನಾಭಾವ ಸಂಬಂಧ.

ಅಭಂಗದಲ್ಲಿ ಏನಿದೆ? ಏನಿಲ್ಲ? ಜ್ಞಾನೇಶ್ವರನ ಅನುಭೂತಿಯ ಮಲ್ಲಿಗೆಯ ಕಂಪು. ನಾಮದೇವನ ವಾತ್ಸಲ್ಯಭಾವದ ಕ್ಷೀರಗಂಗೆ. ಏಕನಾಥನ ಸಮಚಿತ್ತದ ಶಾಂತಿ. ಸಮರ್ಥ ರಾಮದಾಸರ ಸಾಮರ್ಥ್ಯ. ತುಕಾರಾಮನ ದೇದೀಪ್ಯಮಾನ ಪರಮಾರ್ಥ ಪ್ರಾಪ್ತಿ. ಅಭಂಗದ ವ್ಯಾಕರಣ ಲೆಕ್ಕಾಚಾರವನ್ನೂ ಒಂದಿಷ್ಟು ತಿಳಿದುಕೊಳ್ಳಬೇಕಲ್ಲವೇ? ಸಂತ ನಾಮದೇವ ಅಭಂಗದ ಕುರಿತಾಗಿಯೇ ಒಂದು ಅಭಂಗ ರಚಿಸಿದ್ದಾನೆ. ಅದೊಂದು ಕಲೆ ಎಂದು ಕರೆದಿದ್ದಾನೆ. ಮೋಠಾ ಅಭಂಗ (ದೊಡ್ಡದು) ೨೨ ಅಕ್ಷರಗಳ ಮೂರುವರೆ (ಚರಣ) ಭಾಗಗಳಿಂದ ಕೂಡಿರುತ್ತದೆ.

ಅಭಂಗಾಚಿ ಕಳಾ ನಾಹಿ ಮಿ ನೇಣತ ।
ತ್ವರಾ ಕೇಲಿ ಪ್ರೀತ ಕೇಶೀರಾಜೇ ॥೧॥
ಅಕ್ಷರಾಂಚಿ ಸಂಖ್ಯಾ ಬೋಲಿಲೆ ಉದಂಡ ।
ಮೇರೂ ಸುಪ್ರಚಂಡ ಶರ ಆದಿ ॥೨॥
ಸಹಾ ಸಾಡೆತೀನ ಚರಣ ಆಣಾವೆ ।
ಅಕ್ಷರೇ ಮೋಜಾವಿ ಚೌಕ ಚಾರಿ ॥೩॥
ಪಹಿಲ್ಯಾ ಪಾಸೋನಿ ತಿಸರ್ಯಾಪರ್ಯಂತ ।
ಅಠರಾ ಗಣಿತ ಮೋಜ ಆಲೆ ॥೪॥
ಚೌಕ ಚಾರಿಆಧಿ ಭೋಲಿಲೊಂ ಮಾತೃಕಾ।
ಬಾವಿಸಾಚಿ ಸಂಖ್ಯಾ ಶೇವಟೀಲ ॥೫॥
ದೀಡ ಚರಣಾಂಚೆ ದೀರ್ಘ ತೆಂ ಅಕ್ಷರ ।
ಮುಮುಕ್ಷ ವಿಚಾರ ಬೋಧ ಕೇಲಾ ॥೬॥
ನಾಮಾಮ್ಹಣೆ ಮಜ ಸ್ವಪ್ನ ದಿಲೆ ಹರಿ ।
ಪ್ರೀತಿನೆ ಖೇಚರಿ ಆಜ್ಞಾ ಕೇಲಿ ॥

ಮೂರು ಭಾಗದ ೧೮ ಅಕ್ಷರಗಳು + ೪ ಇವು ಒಂದು ಚೌಕದಲ್ಲಿರುತ್ತವೆ.

ಈಗ ಸಣ್ಣ (ಲಹಾನ) ಅಭಂಗದ ಕುರಿತು ಲೆಕ್ಕಾಚಾರ.

ಮುಖ್ಯ ಮಾತೃಕಾಂಚಿ ಸಂಖ್ಯಾ । ಸೋಳಾ ಅಕ್ಷರೆಂ ನೇಟಕ್ಯಾ॥
ಸಮಚರಣಿ ಅಭಂಗ । ನಂವ್ಹೆ ತಾಲ - ಛಂದೋ ಭಂಗ ॥
ಚೌಕಪುಲಿತಾ (?) ವಿಸರ್ಗ । ಗಣ ಯತಿ ಲಘು ದೀರ್ಘ ॥
ಜಾಣೆ ಏಖಾದಾ ನಿರಾಳಾ । ನಾಮಾ ಮ್ಹಣೆ ತೋ ವಿರಾಳ ॥

ಹದಿನಾರು ಅಕ್ಷರಗಳ ಮೇಲೆ ನಿಂತ ಅಭಂಗ ಎಂದೂ ತಾಲ - ಛಂದಸ್ಸುಗಳಿಂದ ಭಂಗಗೊಳ್ಳುವುದಿಲ್ಲ. ಇತರ ರಚನೆಗಳಲ್ಲಿ ಗಣ, ಯತಿ, ಲಘು, ದೀರ್ಘ, ವಿಸರ್ಗಗಳಿದ್ದು ಇಲ್ಲಿ ಇದು ನಿರಾಳವಾಗಿರುತ್ತದೆ. ಅಭಂಗಗಳಲ್ಲಿ ನಾಲ್ಕು ಬಗೆಯ ಛಂದಸ್ಸುಗಳಿವೆ :

೧. **ದೇವದ್ವಾರ** : ತುಕಾರಾಮನ ಹೆಚ್ಚಿನ ಅಭಂಗಗಳು ಈ ಛಂದಸ್ಸಿನಲ್ಲಿವೆ. ಇತರ ಕೆಲವು ಸಂತರೂ ಈ ಛಂದಸ್ಸಿನಲ್ಲಿ ರಚನೆ ಮಾಡಿದ್ದಾರೆ. ಇಲ್ಲಿ ಆರು ಅಕ್ಷರಗಳ ಮೂರು ಚರಣ. ನಾಲ್ಕನೆಯ ಚರಣದಲ್ಲಿ ನಾಲ್ಕು ಅಕ್ಷರ.

೨. **ಪಾದಾಕುಲಕ** : ಅಷ್ಟಾಕ್ಷರಿ, ಮೊದಲಿನಿಂದ ಹೇಳಿ ಎರಡೆರಡು ಅಕ್ಷರ ಬಿಟ್ಟು ಆವರ್ತನ.

೩. **ದೇವಿವರ** : ಇದು ಪಾದಾಕುಲಕದಲ್ಲೇ ಒಂದಿಷ್ಟು ಭಿನ್ನ. ಅರ್ಧ ತಾಲ ಬಾಕಿ ಇಟ್ಟು ಮುಂದೆ ಹೋಗಬೇಕು.

೪. **ಷಡಕ್ಷರಿ / ಅಷ್ಟಾಕ್ಷರಿ** : ಇಂಥವು ತುಂಬ ಸಾಮಾನ್ಯ.

ಕಾವ್ಯವೂ ಒಂದು ಕ್ರೀಡೆಯಾದಾಗ ಅಭಂಗ ರಚನೆ ಒಂದು ಮನೋರಂಜನೆಯಾಗಿತ್ತು, ಹವ್ಯಾಸವಾಗಿತ್ತು. ಅಂಥ ಆಶು ಕವಿತೆಯ ಅಭಂಗಗಳಲ್ಲಿ ಹಲವು ವಿಧ -

೧. ಪ್ರತಿಷ್ಠಾ	೨. ಸುಪ್ರತಿಷ್ಠಾ	೩. ಉಷ್ಣಿಕ್	೪. ಅನುಷ್ಟುಪ್
೫. ಬೃಹತಿ	೬. ಪಂಕ್ತಿ	೭. ತ್ರಿಷ್ಟುಪ್	೮. ಜಗತಿ

ಒಟ್ಟಿನಲ್ಲಿ ಆಭಂಗವೆಂದರೆ ಗಣವಿಹೀನ ವೃತ್ತಾತ್ಮಕ ಸಮಚರಣ ಅಥವಾ ವಿಷಮ ಚರಣ ಛಂದ. ಛಂದೋ ಲಕ್ಷಣಕಾರರು ಅಭಂಗವನ್ನು 'ಲಗತ್ವಭೇದಾತೀತ ಅಕ್ಷರ ಸಂಖ್ಯಾಕ ಪದ್ಯ ಪ್ರಕಾರ' ಎಂದಿದ್ದಾರೆ. ಮರಾಠಿ ಭಾಷೆ ಓವಿ, ಅಭಂಗಗಳಿಗೆ ಹೇಳಿದ ಅಭಿವ್ಯಕ್ತಿ. ಹಾಸ್ಯ ಮಿಶ್ರಿತ, ನವಿರಾದ ಮಧುರಭಾಷೆಯ ಸೌಂದರ್ಯ ಓವಿ, ಅಭಂಗಗಳಿಂದ ಸರ್ವಪ್ರಿಯವಾಯಿತು. ಜಾನಪದ ಮೂಲದ ಓವಿ ಹಾಗೂ ಅಭಂಗ ಛಂದಸ್ಸುಗಳು ಮರಾಠಿಯ ಭಕ್ತಿ ವಿಚಾರ ಮತ್ತು ಅನುಭವಗಳನ್ನು ಕಲಾತ್ಮಕವಾಗಿ ಸಾದರ ಪಡಿಸಿದ ಸೂತ್ರಗಳು. ವಾರಕರಿಗೆ ಇವು ಜೀವಾಳ. ವಾರಕರಿ ಸಂಪ್ರದಾಯದ ಮೇಲೆ ಶ್ರೀ ಮದ್ಭಾಗವತದ ಅಚ್ಚಳಿಯದ ಪ್ರಭಾವ. ಮಹಾರಾಷ್ಟ್ರದ ಸಂತರು ಭಾಗವತ ಧರ್ಮದ ನವವಿಧ ಭಕ್ತಿಯನ್ನೇ ಅನುಷ್ಠಾನಕ್ಕೆ ತಂದರು. ಈ ಮಾತು ಇಡೀ ಭಾರತಕ್ಕೆ ಸಲ್ಲುತ್ತದೆ.

ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಂ
ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮ ನಿವೇದನಂ।

ಮೊದಲಿನ ಮೂರರಿಂದ ಶ್ರದ್ಧೆ ಉತ್ಪನ್ನ. ಅನಂತರದ ಮೂರರಿಂದ ಸಗುಣ ರೂಪ ಸಂಬಂಧ. ಪ್ರೇಮದ ಹೆಚ್ಚಳ. ನಿಕಟ ಸಾನ್ನಿಧ್ಯ. ಕೊನೆಯ ಮೂರರಿಂದ ಆಂತರಿಕ ಭಾವ ಜಾಗೃತಿ ಶರಣಾಗತಿ. ವಾರಕರಿ ಪದ್ಧತಿಯಲ್ಲಿ ನಾಮಸ್ಮರಣ ಮತ್ತು ನಾಮ ಸಂಕೀರ್ತನ ಗಾಢವಾಗಿ ಬೆಳೆದುವು. ಶ್ರೀ ಮದ್ಭಾಗವತದಲ್ಲಿ ಬರೆದ ಈ ಮಾತು ಅಕ್ಷರಶಃ ಭವಿಷ್ಯ ವಾಣಿಯೇ -

ಕಲೌದೋರ್ಷನಿಧೇ ರಾಜನ್ನಸ್ತಿ ಹ್ಯೇಕೋ ಮಹಾನ್ ಗುಣಃ ।
ಕೀರ್ತನಾದೇವ ಕೃಷ್ಣಸ್ಯ ಮುಕ್ತಸಂಗ । ಪರಂ ವ್ರಜೇತ್ ॥

(ಎಲೈ ಅರಸನೇ, ಕಲಿಯುಗ ಎಂಬುದೇ ದೋಷಗಳ ಭಂಡಾರ. ಆದರೆ ಇದರಲ್ಲಿ ಒಂದು ಒಳ್ಳೆಯ ಗುಣವೂ ಇದೆ. ಈ ಯುಗದಲ್ಲಿ ಕೇವಲ ಶ್ರೀ ಕೃಷ್ಣನ ನಾಮ ಸಂಕೀರ್ತನ ಭಕ್ತಿಯಿಂದಲೇ ಮನುಷ್ಯನು ಸಂಗ ರಹಿತವಾಗಿ ಪರಮ ಪದ ಪಡೆಯಬಹುದು)

ಭಗವಂತನ ನಾಮ ಸಂಕೀರ್ತನದಿಂದ ಏನಾಗುತ್ತದೆ ಎಂದು ಸಂತ ಏಕನಾಥರೇ ಮನೋಜ್ಞವಾಗಿ ಹೇಳಿದ್ದಾರೆ.

ಮಹಾಪಾಪ ರಾಶಿ ತರಲೆ ಕೀರ್ತನಿಂ ।
ಪ್ರತ್ಯಕ್ಷ ಪುರಾಣಿಂ ವಂದ್ಯ ಝಾಲೆ ॥

(ನಾಮ ಸಂಕೀರ್ತನದಿಂದ ಪಾಪರಾಶಿಯೆಲ್ಲವೂ ಕರಗಿ ಹೋಗುತ್ತದೆ. ಪುರಾಣಗಳಲ್ಲಿ ಹೇಳಿದುದು ಪ್ರತ್ಯಕ್ಷ ಅನುಭವಕ್ಕೆ ಬಂದು ಅವು ವಂದ್ಯವಾದುವು)

ಭಾಷಣ, ಉಪನ್ಯಾಸ, ಪ್ರವಚನ ಇವು ಕೇವಲ ಬುದ್ಧಿಯ ಕಸರತ್ತು. ಅಧ್ಯಾತ್ಮದತ್ತ ಮನಸ್ಸು ವಾಲ ಬೇಕಾದರೆ ಕೀರ್ತನ ವಿಸ್ತಾರವೇ ಬೇಕು. ಕೀರ್ತನದಿಂದ ಸಾಮಾನ್ಯ ಅಸಾಮಾನ್ಯನಾಗುತ್ತಾನೆ. ಮುಗ್ಧರಿಗೂ ಭೋಳೆ ಸ್ವಭಾವದವರಿಗೂ ನಾಮಸ್ಮರಣೆಯಿಂದಲೇ ಉತ್ತುಂಗ ಪ್ರವೃತ್ತಿ. ಶೀಘ್ರ ಮುಕ್ತಿ. ಭಕ್ತಿಯಲ್ಲಿ ಭಯ ಇರುವುದಿಲ್ಲ. ಲವಲೇಶವೂ ಇಲ್ಲ. ಅಲ್ಲಿ ಬರೀ ಪ್ರೇಮ ತುಂಬಿರುತ್ತದೆ. ಭಕ್ತ ನಿರ್ಭಯದಿಂದಿರುತ್ತಾನೆ. ಭಕ್ತಿಯ ಬಲ ಅದ್ಭುತ. ಅದು ಎಲ್ಲಿಂದ ಎಲ್ಲಿಗೂ ಹೋಗಬಲ್ಲುದು. ಅದಕ್ಕೆ ಯಾವ ಅಡೆ ತಡೆಗಳೂ ಇಲ್ಲ.

ಸಂತ ನಾಮದೇವನ ಜೀವನವೂ ಒಂದು ದೃಷ್ಟಾಂತ. ಭಕ್ತಿಯ ಬಲದಿಂದ ಸಂತ ನಾಮದೇವ ಪಂಜಾಬದವರೆಗೂ ಹೋಗುತ್ತಾನೆ. ಬಾಲ್ಯದಲ್ಲೇ ನಾಮದೇವನಿಗೆ ಭಕ್ತಿಯ ರುಚಿ ಹತ್ತಿತ್ತು. ತಂದೆ ದಾಮಾಶೇಟಿ ಪ್ರತಿ ದಿನ ಪಂಢರಪುರದ ವಿಠಲನಿಗೆ ನೈವೇದ್ಯಕ್ಕೆ ಅನ್ನ ತೆಗೆದುಕೊಂಡು ಹೋಗುತ್ತಿದ್ದನು. ಅದೊಂದು ದಿನ ತಂದೆ ಪರ ಊರಿಗೆ ಹೋದಾಗ ನೈವೇದ್ಯ ತೆಗೆದುಕೊಂಡು ಹೋಗುವ ಕೆಲಸ ನಾಮದೇವನ ಪಾಲಿಗೆ ಬಂತು.

ತಂದೆ ತೆಗೆದುಕೊಂಡು ಹೋದ ನೈವೇದ್ಯವನ್ನು ಪಾಂಡುರಂಗ ಸ್ವೀಕರಿಸುತ್ತಾನೆ ಎಂದು ಬಾಲಕ ನಾಮದೇವ ನಂಬಿದ್ದ. ಇಂದು ತಾನು ತಂದ ನೈವೇದ್ಯವನ್ನು ಪಾಂಡುರಂಗನು ಸ್ವೀಕರಿಸದಿದ್ದಾಗ ನಾಮದೇವ ನಿರಾಶನಾಗುತ್ತಾನೆ. ಕೊನೆಗೆ ನೈವೇದ್ಯ ಸ್ವೀಕರಿಸದಿದ್ದರೆ ತಾನು ಪಾಂಡುರಂಗನ ಪಾದಗಳಿಗೆ ತಲೆ ಬಡಿದು ಸಾಯುತ್ತೇನೆ ಎಂದು ಆರ್ತನಾದ ಮಾಡಿ ಹೇಳಿದಾಗ, ಪಾಂಡುರಂಗ ಅದನ್ನು ಸ್ವೀಕರಿಸಿದ ಎಂಬ ಏಕನಿಷ್ಠೆಯ ಕತೆ ಭಕ್ತಿಯ ಸಂಕಲ್ಪ ಶಕ್ತಿಯನ್ನೇ ಹೇಳುತ್ತದೆ. ಜ್ಞಾನೇಶ್ವರ ಹಾಗೂ ವಿಠೋಬಾ ಖೇಚರನಿಂದಾಗಿ ನಾಮದೇವನ ಭಕ್ತಿಯಲ್ಲಿ ಜ್ಞಾನೋದಯ ದೃಷ್ಟಿ ಬಂತು. ಅವನು ವಾರಕರಿ ಸಂಪ್ರದಾಯದಲ್ಲಿ ಅಗ್ರಗಣ್ಯ ಭಕ್ತನೆನಿಸಿದ. ಕೀರ್ತನೆ ಮಾಡುವುದರಲ್ಲಿ ನಾಮದೇವ ಪ್ರಸಿದ್ಧಿ ಪಡೆದನು. ಸಾವಿರಾರು ಅಭಂಗಗಳ ರಚನೆಯನ್ನು ಮಾಡಿದನು. ಅವನ ಕೀರ್ತನೆಯ ಪ್ರಭಾವ ಎಷ್ಟಿತ್ತೆಂದರೆ -

ನಾಮದೇವ ಕೀರ್ತನ ಕರಿ ।
ಕೀರ್ತನಿ ನಾಚೆ ಪಾಂಡುರಂಗ ॥

ಸ್ವತಃ ಪಾಂಡುರಂಗನೇ ಬಂದು ಕೀರ್ತನದಲ್ಲಿ ಕುಣಿಯುತ್ತಿದ್ದನಂತೆ ।

ನಾಮದೇವ ಸುಮಾರು ಎರಡೂವರೆ ಸಾವಿರ ಅಭಂಗಗಳ ರಚನೆ ಮಾಡಿದನು. ಭಾಗವತ ಧರ್ಮದ ಪ್ರಚಾರ ಮಾಡಿದನು. ಪಂಜಾಬದವರೆಗೂ ಹೋದನು. ಅಲ್ಲಿ ಅವನನ್ನು ಪ್ರತ್ಯಕ್ಷ ಭಗವಂತನೆಂದೇ ಜನರು ಕೊಂಡಾಡಿದರು. ಅವನ ಹೆಸರಲ್ಲಿ ಪಟ್ಟಶಿಷ್ಯ ಬಹೋರದಾಸ 'ದೇಹೂರಾ ಸಾಹೇಬ' ಸ್ಮೃತಿಮಂದಿರ ನಿರ್ಮಿಸಿದರು. ನಾಮದೇವ ಹಿಂದಿ ಭಕ್ತಿ ಗೀತೆಗಳನ್ನೂ ರಚಿಸಿದ. ಅವನ ೬೧ ಹಾಡುಗಳು ಸಿಖ್ಖರಗುರು ಗ್ರಂಥಸಾಹೇಬರಲ್ಲಿ ಅಳವಡಿಸಿಕೊಂಡರು.

ಗುರುನಾನಕ, ಕಬೀರ ಮೊದಲಾದವರು ನಾಮದೇವನನ್ನು, ಅವನ ನಿರ್ಗುಣ ಉಪಾಸನೆಯನ್ನು ತುಂಬ ಗೌರವಿಸಿದರು. ವಾರಕರಿ ಸಂಪ್ರದಾಯದಲ್ಲಿ ಜನ ಸಾಮಾನ್ಯರು, ದಲಿತರು, ನಿಮ್ನ ವರ್ಗದವರು ಎಲ್ಲರೂ ಪಾಲ್ಗೊಂಡರು. ಅದು ನಿಜವಾದ ಅರ್ಥದಲ್ಲಿ ಜನತೆಯ ಜಾತ್ರೆ, ಉತ್ಸವ, ಮೇಲಾ. ಸಮಾಜದಲ್ಲಿ ಅತ್ಯಂತ ಉಪೇಕ್ಷಿತವಾದವರು ಈ ಸಮೂಹದಲ್ಲಿ ಬಲು ಎತ್ತರಕ್ಕೆ ಏರಿದರು. ಆರಂಭದಲ್ಲಿ ತುಕಾರಾಮನಿಗೆ ತುಂಬ ಅವಮಾನ ಮಾಡಿ ತೊಂದರೆ ಕೊಟ್ಟ ರಾಮೇಶ್ವರ ಭಟ್ಟನು ಕಡೆಗೆ ಕ್ಷಮೆ ಬೇಡಿ ಅವನ ಶಿಷ್ಯನಾಗುತ್ತಾನೆ. ಅವನು ಬರೆದ ಒಂದು ಅಭಂಗ ಹೀಗಿದೆ -

ಉಚ್ಚ ನೀಚ ವರ್ಣ ನ ಮ್ಹಣೂ ಕೋಣಿ ।
ಜೆ ಕಾ ನಾರಾಯಣಿ ಪ್ರಿಯ ಝಾಲೆ ॥

ಮೇಲಿನವರು, ಕೆಳಗಿನವರು ಎಂಬ ಭೇದ ಭಾವ ಅಳಿದು ಹೋಯಿತು. 'ಅಹಂ' ಕರಗಿತು. ಎಲ್ಲರೂ ದೇವರಿಗೆ ಪ್ರಿಯರಾದರು. ವಾರಕರಿ ಸಂಪ್ರದಾಯದ, ಅಷ್ಟೇ ಅಲ್ಲ, ಇಡೀ ಭಾರತದ ಭಕ್ತಿ ಪಂಥದ ಅತ್ಯಂತ ದೊಡ್ಡ ಕೊಡುಗೆ ಹಾಗೂ ಸಾಧನೆ ಎಂದರೆ - ಜನಗಳ ಸಮನ್ವಯ, ಸಾಮರಸ್ಯ ಹಾಗೂ ಸೌಮನಸ್ಯ.

ವಾರಕರಿ ಮಂಡಳಿಯಲ್ಲಿ ಚೋಖಾ ಮೇಳಾನಂಥ ಹರಿಜನನಿದ್ದ, ಗೋರಾ ಕುಂಭಾರ, ನರಹರಿ ಸೋನಾರ, ಸಾವತಾ ಮಾಳಿ, ಸೇನಾ ನ್ಹಾವಿ ಮೊದಲಾದವರು ಜ್ಞಾನದೇವನೊಂದಿಗೆ ಒಟ್ಟಿಗೆ ಕೂತು ಊಟ ತಿಂಡಿ ಮಾಡುತ್ತಿದ್ದರು. ತುಕಾರಾಮನು ಕೂಡ ಹಿಂದುಳಿದ ವರ್ಗದವನೇ ಆಗಿದ್ದ.

ಈ ಸಂತರು ಸಾಮಾಜಿಕವಾಗಿ ತಮಗೆ ಆಗಿದ್ದ ಅನ್ಯಾಯ, ತಮ್ಮ ಮೇಲಿನ ಶೋಷಣೆ, ಅವಮಾನಗಳಿಗೆ ಪ್ರತೀಕಾರ ಮಾಡಿದ ರೀತಿ ಅಪ್ರತಿಮ. ಅವರು ಬಂಡಾಯ ಏಳಲಿಲ್ಲ. ಬಡಾಯಿ ಮಾಡಲಿಲ್ಲ. ಸೇಡು ತೀರಿಸಿಕೊಳ್ಳಲಿಲ್ಲ. ಯಾರ ಬಗ್ಗೆಯೂ ಮತ್ಸರ ಪಡಲಿಲ್ಲ. ಕೋಪಗೊಳ್ಳಲಿಲ್ಲ. ಬಿರುನುಡಿಯಲಿಲ್ಲ. ಕ್ರಾಂತಿಯ ಬಗ್ಗೆ ಮಾತನಾಡಲಿಲ್ಲ (wholistic, positive approach) ಇವರೆಲ್ಲ ತಮ್ಮ ಅಂತಸ್ಸತ್ವವನ್ನು, ಅಂತಃಶಕ್ತಿಯನ್ನು ಉದ್ದೀಪನಗೊಳಿಸಿಕೊಂಡರು. ಎಲ್ಲವನ್ನು ಸಹಿಸಿಕೊಂಡರು. ಅವರ ತಾಳ್ಮೆಯೇ ಗೆದ್ದಿತು. ಸಮಾಜವನ್ನು ತಿದ್ದುವ ಉಪದ್ವ್ಯಾಪಕ್ಕೆ ಅವರು ಇಳಿಯಲಿಲ್ಲ. ತಮ್ಮದೇ ದಾರಿ ಹಿಡಿದರು - ನೈತಿಕ ಪಥ. ಭಕ್ತಿಯೇ ಅವರ ಬಂಡವಾಳ, ಭಂಡಾರ.

ಭಗವಂತನಲ್ಲಿ ಸಂಪೂರ್ಣ ಶರಣಾಗತಿ, ಶ್ರದ್ಧೆ, ನಂಬಿಕೆ. ಇದು ಅವರು ಹಿಡಿದ ನೇರ ಮಾರ್ಗ. ಅವರ ಸಾತ್ವಿಕ ಶಕ್ತಿ, ತಾಳ್ಮೆ, ಶಾಂತಿಗಳೇ ಗೆದ್ದು ಅಮರರಾದರು. ಅವರು ತಾವೂ ಬದಲಾದರು. ಸಮಾಜವನ್ನೂ ಪರಿವರ್ತಿಸಿದರು. ಶೇಕ್ ಮಹಮ್ಮದನಂಥ ಅಪ್ಪಟ ಮುಸ್ಲಿಂ ಕೂಡ ವಾರಕರಿ ಅಭಂಗ ರಚತಿಸಿದನು. ಅವನು ಮತ - ಸಿದ್ಧಾಂತಗಳನ್ನು ಮೀರಿ ಬೆಳೆದಿದ್ದನು.

ಐಸೆ ಕೆಲೆ ಯಾ ಗೋಪಾಳೆ
ನಾಹಿ ಸೋಹನೆ ನಾಹಿ ಓವಳೆ
ಕಾಂಟೆ ಕೇತಕಿ ಚಾ ಝೂಡ್ಯಾ
ಅಂತ ಜನ್ಮ ಲಾ ಕೇವಡಾ
ಫಣಸಾ ಅಂಗಿ ಕಾಂಟೆ
ಅಂತ ಅಮೃತಾಚೆ ಸಾಠೆ
ನಾರಳ ವರುತಾ ಕಠಿಣ ಪರಿ ಅಂತರಿ ಜೀವನ
ಶೇಖ ಮಹಮ್ಮದ ಅವಿಂದ ತ್ಯಾಚೆ ಹೃದಯೀ ಗೋವಿಂದ

ಭಾಗವತ ಧರ್ಮದ ಮೂಲ ಗುಣಗಳು ಎರಡು -

ಪರಮೇಶ್ವರನ ಭಕ್ತರು ಯಾರನ್ನೂ ದ್ವೇಷಿಸಬಾರದು. ಭಕ್ತರೊಳಗೆ ಯಾವ ಭೇದ ಭಾವ, ಅಂತರವೂ ಇರಕೊಡದು. ಸಮಾನತೆಯ ತತ್ವದ ಮೇಲೆಯೇ ಭಕ್ತಿ ಪಂಥದ ಇಡೀ ಇಮಾರತ ನಿಂತಿದೆ. ಆ ಗೋಪಾಳ ಎಂಥವನು? ಏನು ಮಾಡಿದ? ಕೇದಗೆಗೆ ಮುಳ್ಳು ಕೊಟ್ಟ, ಜತೆಯಲ್ಲಿ ಸುಮಧುರ ಪರಿಮಳವನ್ನೂ ಕೊಟ್ಟ. ಹಲಸಿನ ಹಣ್ಣಿನ ಹೊರಗಡೆ ಇರುವ ಮುಳ್ಳುಗಳೇನು? ಒಳಗೆ ಇರುವ ಅಮೃತದಂಥ ಸವಿಯೇನು? ತೆಂಗಿನ ಚಿಪ್ಪು ಎಷ್ಟು ಗಟ್ಟಿ? ಒಳಗಿನ ಜೀವನ ಸವಿ. ಕಿವಿಯನ್ನು ಚುಚ್ಚಿಸಿಕೊಳ್ಳದ (ಅವಿಂದ) ಶೇಖ ಮಹಮ್ಮದನ ಹೃದಯದೊಳಗೆ ತುಂಬಿದ್ದಾನೆ ಗೋವಿಂದ.

ಅದೇ ರೀತಿ ಚೋಖಾ ಮೇಳಾ ಎಂಬ ಅಂತ್ಯಜ ಸಂತ

ಉಂಬರತ್ಯಾಸೀ ಕೈಸೆ ಶಿವೂ, ಆಮ್ಹಿ ಜಾತಿ ಹೀನ ।
ವಿಠ್ಠಲಾಚೆ ನಾಮ ಘೇವೂ ಹೋವೂನಿ ನಿಸ್ಸಂಗ ॥

ಎಂದು ಹೃದಯಪೂರ್ವಕ ಹಾಡಿದ್ದಾನೆ. (ಸತ್ಸಂಗತ್ವೇ ನಿಸ್ಸಂಗತ್ವಂ)

ಎಲ್ಲರ ದೇವರು ಒಬ್ಬನೇ - ಏಕದೇವ ತತ್ತ್ವ.

ಇದು ವಾರಕರಿಯ ಇನ್ನೊಂದು ಕೊಡುಗೆ.

ಭಕ್ತಿಯಲ್ಲಿ ವರ್ಣ, ಜಾತಿ, ಸ್ಪೃಶ್ಯಾಸ್ಪೃಶ್ಯ - ಯಾವ ಭೇದಗಳೂ ಇರಬಾರದು ಎಂದು ಜ್ಞಾನೇಶ್ವರಿಯಲ್ಲಿದೆ. ಅದರ ಅನುಷ್ಠಾನದ ಒಂದು ರೂಪವೇ ವಾರಕರಿ. ಸಮದರ್ಶಿತ್ವ, ಸ್ಥಿತಪ್ರಜ್ಞತ್ವ, ಜ್ಞಾನ, ವಿವೇಕ, ವೈರಾಗ್ಯ, ದಯೆ, ಆನಂದ ಇವುಗಳ ತರಬೇತಿಯನ್ನು ವಾರಕರಿ ಸಂಪ್ರದಾಯ ಎಲ್ಲರಿಗೂ ತಿಳಿಸಿತು. ಅಲ್ಲಿ ಘೋಷಣೆ, ಪ್ರಚಾರ ಇರಲಿಲ್ಲ. ಅನುಷ್ಠಾನವೇ ಚಳವಳಿ ರೂಪ ಪಡೆಯಿತು. ಆಚರಣೆಯ ಮೂಲಕವೇ ಎಲ್ಲವನ್ನೂ ತೋರಿಸಿದರು.

ಜ್ಞಾನೇಶ್ವರ ಪದೇ ಪದೇ ಹೇಳುತ್ತಾನೆ.

ಏಕತತ್ತ್ವ ನಾಮ ದೃಢ ಧರಿ ಮನಾ ।
ಹರಿಸಿ ಕರುಣಾ ಯೇಯಿಲ ತುಝಿ ॥

ನಾಮಸ್ಮರಣೆಯಿಂದ ಮನಾ - ಮನಸ್ಸು ಪರಿವರ್ತನವಾಗುವ ಈ ಅದ್ಭುತ ಶಕ್ತಿಯನ್ನು ಈ ಸಂತರು ತೋರಿಸಿಕೊಟ್ಟರು. ಹೊರಗಿನ ಶಕ್ತಿಯಲ್ಲ. ತನ್ನೊಳಗಿನ ಶಕ್ತಿಯನ್ನೇ ಬಳಸಿಕೊಳ್ಳುವ ಈ ತಂತ್ರ ನಿಜಕ್ಕೂ ಅದ್ಭುತ. ಜ್ಞಾನೇಶ್ವರನು ನಾಥಪಂಥದವನು. ಅಲ್ಲಿ ಯೋಗಮಾರ್ಗವೇ ಮಾರ್ಗದರ್ಶಿ. ಆದರೆ ಅವನು ಅದನ್ನು ತನಗಾಗಿ ಇಟ್ಟುಕೊಂಡು, ನಾಮಸಂಕೀರ್ತನ, ವಾರಕರಿ ಅಭಂಗಗಳನ್ನು ಲೋಕಕಲ್ಯಾಣಾರ್ಥ ಬಳಸಿದ ಬಗೆ ಅತ್ಯಂತ ಜಾಣತನದ್ದು.

ವಾರಕರಿ ಭಕ್ತರ ಮಾನಸಿಕ ಸ್ಥಿತಿ ಹೇಗಿರುತ್ತದೆ?

ಭಕ್ತರು ಅನುಭವಿಸುವ ಕೆಲವು ಸ್ಥಿತಿಗಳಿವು - ಭಕ್ತಿ ಎಂದರೆ ಸಿದ್ಧ ಪಂಥ. ಅದು ದೇವರ ಪ್ರಸಾದ. ಎಂದೂ ತುಂಡಾಗದ ಸ್ನೇಹ ಗ್ರಂಥಿ. ಜೀವನದ ಶ್ರೇಷ್ಠ ಅವಸ್ಥೆ. ನೈತಿಕ ವಿಕಾಸ. ಈಶ್ವರನ ಪ್ರೇಮ. ಸರ್ವಾಂಗ ಸುಂದರ ಜೀವನ. ಶೂರನಿಷ್ಠೆ (ವೀರ ವಾರಕರಿ). ಪರಮಲಾಭ. ಪರಮಕಲ್ಯಾಣ. ಅಲ್ಲಿ ಜೀವ - ಜಗತ್ತು - ಪರಮಾತ್ಮ ಸಂಬಂಧ ಹೊಸ ಬಗೆಯಲ್ಲಿ ರೂಪುಗೊಳ್ಳುತ್ತದೆ. ಅದನ್ನೇ ಜ್ಞಾನೇಶ್ವರನು 'ಚಿದ್ವಿಲಾಸ್' ಎಂದನು.

ಆ ಜೀವನದೃಷ್ಟಿ ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಕೇವಲಾದ್ವೈತಗಳೆಲ್ಲವನ್ನೂ ಮೀರಿ ಅತ್ಯಂತ ಉದಾತ್ತವಾಗುತ್ತದೆ. ಅದನ್ನೇ ಸಂತ ಏಕನಾಥ ಬಹಳ ಮಾರ್ಮಿಕವಾಗಿ ಹೇಳಿದ್ದಾನೆ -

ಭಕ್ತಿ ಚೆ ಉದರಿ ಜನ್ಮಲೆ ಜ್ಞಾನ ।
ಭಕ್ತಿನೆ ಜ್ಞಾನಾಸಿ ದಿಧಲೆ ಮಹಿಮಾನ ॥
ಭಕ್ತಿ ತೇ ಮೂಳ, ಜ್ಞಾನ ತೆ ಫಳ ।
ವೈರಾಗ್ಯ ಕೇವಳ ತೇಥಿಚೆ ಫೂಲ ॥

(ಭಕ್ತಿಯ ಉದರದಲ್ಲಿ ಜ್ಞಾನ ಹುಟ್ಟುತ್ತದೆ. ಭಕ್ತಿಯೇ ಜ್ಞಾನಕ್ಕೆ ಗೌರವ ಕೊಟ್ಟಿತು. ಭಕ್ತಿಯೇ ಬೇರು. ಜ್ಞಾನವೇ ಫಲ. ವೈರಾಗ್ಯ ಕೇವಲ ಹೂ) ಎಂದೇ ತುಕಾರಾಮ ಬೇಡಿಕೊಳ್ಳುವುದು -

''ಹೇ ದೇವರೇ ನಿನ್ನನ್ನು ಮರೆಯದಂತೆ ಮಾಡು.
ಅದೇ ನೀನು ನನಗೆ ಕೊಡುವ ವರದಾನ''

ಉರುಳು ಸೇವೆ (ಲೋಟಾಂಗಣ) ಮಾಡುತ್ತ ಅತ್ಯಂತ ದೈನ್ಯದಿಂದ ಶರಣಾಗತರಾಗಿ ದೇವರಲ್ಲಿ ಬೇಡುವ ಈ ಪರಿ ನೋಡಿ -

ಘಾಲಿನ ಲೋಟಾಂಗಣ ವಂದೀನ ಚರಣ ।
ಡೋಳ್ಯಾನಿಂ ಪಾಹೀನ ರೂಪ ತುಝೆ ॥
ಪ್ರೇಮೆ ಆಲಿಂಗಿನ ಆನಂದೆ ಪೂಜಿನ ।
ಭಾವೆ ಓವಾಳಿನ ಮ್ಹಣೆ ನಾಮಾ ॥

(ಉರುಳು ಸೇವೆ ಮಾಡುತ್ತಿರುವಾಗ ನಿನ್ನ ಚರಣಕ್ಕೆ ವಂದಿಪೆ. ಕಣ್ಣಲ್ಲಿ ನಿನ್ನ ರೂಪ ತುಂಬಿಕೊಳ್ಳುವೆ. ಪ್ರೇಮದಿಂದ ಆಲಿಂಗನ ಮಾಡಿ, ಆನಂದದಿಂದ ಪೂಜಿಸುವೆ. ಭಾವ - ಭಕ್ತಿಯಿಂದ ನನ್ನನ್ನೇ ನಿವಾಳಿಸಿಕೊಳ್ಳುತ್ತೇನೆ)

ಭಕ್ತಿಯ ತುರೀಯಾವಸ್ಥೆಯ ಹೃದಯಸ್ಪರ್ಶಿ ಚಿತ್ರಣವಿದು. ಪ್ರತಿಯೊಬ್ಬ ಭಕ್ತ ಅದನ್ನೇ ಆಸೆ ಪಡುತ್ತಾನೆ. ಆ ಐಕ್ಯ ಭಾವವೇ ಭಕ್ತಿಯ ಪರಮ ಗುರಿ. ಆತ್ಮ ಸಾಕ್ಷಾತ್ಕಾರ.

ಅನುಬಂಧ

ಮಹಾರಾಷ್ಟ್ರ ವಾರಕರಿ ಸಂಪ್ರದಾಯ
ಸಂತ ಪರಂಪರೆಯ ಕೆಲವರು

(ಇಸವಿ ಕ್ರಿ.ಶ. ಅಥವಾ ಶತಮಾನದಲ್ಲಿ)

- ಜ್ಞಾನೇಶ್ವರ (೧೨೭೫-೧೨೯೬)
- ನಿವೃತ್ತಿನಾಥ (೧೨೭೩-೧೨೯೭)
  (ಜ್ಞಾನೇಶ್ವರನ ಅಣ್ಣ ಮತ್ತು ಗುರು)
- ಸೋಪಾನ (೧೨೭೪-೧೨೯೬)
  (ಜ್ಞಾನೇಶ್ವರನ ಇನ್ನೊಬ್ಬ ಸಹೋದರ)

- ಮುಕ್ತಾಬಾಯಿ (ಜ್ಞಾನೇಶ್ವರನ ತಂಗಿ) (೧೨೭೬-೧೨೯೭)
- ನಾಮದೇವ (೧೨೭೦-೧೩೫೦)
- ಗೋರಾ ಕುಂಬಾರ (೧೨೬೭-೧೩೧೭)
- ನರಹರಿ ಸೋನಾರ (೧೩ನೆಯ ಶತಮಾನ)
- ಸೇನಾ ನ್ಹಾವಿ (೧೩ನೆಯ ಶತಮಾನ)
- ಪರಿಸಾ ಭಾಗವತ (?)
- ಜನಾಬಾಯಿ (?)
- ಚೋಖಾ ಮೇಳಾ (೧೩೩೮-?)
- ಭಾನುದಾಸ (?)
- ಏಕನಾಥ (೧೫೩೩-೧೫೯೯)
- ಕಾನ್ಹೋಪಾತ್ರಾ (?)
- ಬಹಿಣಾ ಬಾಯಿ ಸೀಯೂರಕರ್ (೧೬೨೯-೧೭೦೦)
- ತುಕಾರಾಮ (೧೬೦೮-೧೬೪೯)
- ಸಂತಾಜಿ ತೇಲಿ ಜನನದೆ (ತುಕಾರಮನ ಸ್ನೇಹಿತ)
- ದಾಮಾಜಿ ಪಂತ (೧೫ನೆಯ ಶತಮಾನ)
- ನಿಳೋಬಾ (೧೭-೧೮ ಶತಮಾನ)
- ರಮಾವಲ್ಲಭದಾಸ (೧೬೭೯-೧೬೬೮)

ಗ್ರಂಥ ಋಣ

ಮರಾಠಿ

೧. ಜ್ಞಾನೇಶ್ವರೀ

೨. ಶ್ರೀ ಜ್ಞಾನೇಶ್ವರಾಂಚಿ ಗಾಥಾ (ಸಮಗ್ರ ಅಭಂಗ ರಚನೆಗಳು)

೩. ಜ್ಞಾನೇಶ್ವರ ಮಹಾರಾಜ್ - ಚರಿತ್ರ ಆಣಿ ಗ್ರಂಥ ವಿವೇಚನ
ಹ.ಭ.ಪ.ಲ.ರಾ. ಪಾಂಗಾಕರ

೪. ಭಕ್ತನಾಮದೇವ ಚರಿತ್ರ + ಅಭಂಗ

೫. ತುಕಾರಮ ಗಾಥಾ (ಸಾಂಪ್ರದಾಯಿಕ - ಸಮಗ್ರ)
ಸಂಪಾದಕ - ವೈ. ಬಾಬುರಾವ್ ಹರಿ ದೇವಡೀಕರ

೬. ಭಾರತೀಯ ಸಂಸ್ಕೃತಿ ಕೋಶ (ಹತ್ತು ಸಂಪುಟಗಳು)
ಸಂಪಾದಕ - ಪಂ. ಮಹಾದೇವ ಶಾಸ್ತ್ರಿ ಜೋಶಿ

೭. ಶ್ರೀ ತುಕಾರಾಮ ಚರಿತ್ರ - ಆನಂತ ಏಕನಾಥ ಪೈಠಣಕರ

೮. ಶ್ರೀ ಮನಾಚೆ ಶ್ಲೋಕ - ಸಮರ್ಥ ರಾಮದಾಸ

೯. ಶ್ರೀ ಏಕನಾಥೀ ಭಾಗವತ + ಅಭಂಗ

೧೦. ವಾರಕರಿ ಸಂಪ್ರದಾಯದ ಅಧ್ವರ್ಯು - ಬಾಬಾ ಮಹಾರಾಜ ಸಾತಾಕರ ಅವರ ಅಭಂಗಗಳು,
ಹರಿಕಥೆಯ ಕ್ಯಾಸೆಟ್‌ಗಳು (ಕೃಪೆ - ಶೋಭಾ ಮೋನೆ)

ಕನ್ನಡ

೧. ಪುರಂದರ ಸಾಹಿತ್ಯದರ್ಶನ (ನಾಲ್ಕು ಸಂಪುಟಗಳು)
ಸಂಪಾದಕರು - ಪ್ರೊ. ಸಾ.ಕೃ. ರಾಮಚಂದ್ರರಾವ್

೨. ಪುಂಡರೀಕರಮಾಲಾ - ಡಾ. ರಾ. ಸತ್ಯನಾರಾಯಣ

೩. ಸಾಂಖ್ಯಿಕ ಶಬ್ದ ಮಂಜರೀ - ಡಾ. ಐ.ಕೆ.ಪಿ. ಶರ್ಮಾ

೪. ಶ್ರೀ ಹರಿಕಥಾಮೃತ ಸಿಂಧು (೨ ಭಾಗಗಳು)
ಸಂತ ಭದ್ರಗಿರಿ ಅಚ್ಯುತದಾಸರು

ಇಂಗ್ಲೀಷ್

TUKARAM Says Tuka By Dillip chitre

ವೈಯ್ಯಾಕರಣ ಸೇಡಿಯಾಪು ಕೃಷ್ಣ ಭಟ್ಟರು

ಪ್ರೊ|| ಜಿ. ವೆಂಕಟಸುಬ್ಬಯ್ಯ

ಸುಮಾರು ಅರುವತ್ತು ವರುಷಗಳ ಹಿಂದೆ ಮೈಸೂರಿನ ಮಹಾರಾಜರ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ನನಗೆ ಮೊದಲನೆಯ ಸಲ ಸೇಡಿಯಾಪು ಕೃಷ್ಣ ಭಟ್ಟರ ಹೆಸರನ್ನು ಕೇಳುವ ಅವಕಾಶವುಂಟಾಯಿತು. ಕನ್ನಡ ಸಾಹಿತ್ಯ ಚರಿತ್ರೆಯನ್ನು ನಮಗೆ ಬೋಧಿಸುತ್ತಿದ್ದ ಪ್ರೊ|| ಟಿ.ಎಸ್.ವೆಂಕಣ್ಣಯ್ಯನವರು ಪ್ರಾಸಂಗಿಕವಾಗಿ ಪಿರಿಯಕ್ಕರ ವೃತ್ತವೊಂದರ ಸ್ವಾರಸ್ಯವನ್ನು ವಿವರಿಸುತ್ತಿದ್ದರು. ಆಗ ಆ ಪದ್ಯವನ್ನು ಓದುವ ರೀತಿಯನ್ನು ಶ್ರೀ ಸೇಡಿಯಾಪು ಅವರು ಮಡಿಕೇರಿಯ ಸಾಹಿತ್ಯ ಸಮ್ಮೇಳನದಲ್ಲಿ ವಿವರಿಸಿದ್ದುದನ್ನು ಹೇಳಿದರು. ಅಷ್ಟೇ ಅಲ್ಲದೆ ಅದು ಅಂಶಗಣಗಳಿಂದ ನಿರ್ಮಿತವಾದ ವೃತ್ತ, ಅಚ್ಚಕನ್ನಡ ಮೂಲದ್ದು ಎಂಬುದನ್ನು ಸಾಧಾರವಾಗಿ ನಿರೂಪಿಸಿದರು. ಅಂದಿನಿಂದ ಕನ್ನಡ ವಿದ್ವಾಂಸರ ಪೈಕಿ ಸೇಡಿಯಾಪು ಅವರನ್ನು ಎಣಿಸುವುದು ನಮ್ಮ ಸಂಪ್ರದಾಯವಾಯಿತು. ಸುಮಾರು ೧೯೪೪ರಲ್ಲಿ ಅವರು ಪಂಚಮೀ ವಿಭಕ್ತಿಯ ಬಗ್ಗೆ ಒಂದು ದೀರ್ಘ ಲೇಖನವನ್ನು ರಚಿಸಿದರು. ಆಗ ಅವರಿಗೆ ವ್ಯಾಕರಣ ವಿಷಯದಲ್ಲಿ ಇದ್ದ ಗಾಢವಾದ ಆಸಕ್ತಿ ಪ್ರಕಟವಾಯಿತು. ಅಲ್ಲಿಂದ ಮುಂದೆ ಮೈಸೂರಿನ ಕಡೆಯ ವಿದ್ವಾಂಸರಿಗೆಲ್ಲ ಅವರ ಲೇಖನಗಳ ಬಗ್ಗೆ ಆಸಕ್ತಿ ಬೆಳೆದು ಬಂತು. ನಾವೆಲ್ಲ ಸೇಡಿಯಾಪು ಅವರು ಬರೆದ ಎಲ್ಲ ಲೇಖನಗಳನ್ನೂ, ಗ್ರಂಥಗಳನ್ನೂ ವಿಶೇಷವಾದ ದೃಷ್ಟಿಯಿಂದ ಅವಲೋಕಿಸಲು ಉತ್ಸುಕರಾಗಿದ್ದೆವು.

ಈಗ ಅವರಿಗೆ ಮರಣೋತ್ತರವಾಗಿ ಪಂಪ ಪ್ರಶಸ್ತಿ ದೊರಕಿರುವಾಗ ಅವರ ಸಾಹಿತ್ಯ ಕೃತಿಗಳನ್ನೂ, ಶಾಸ್ತ್ರ ಕೃತಿಗಳನ್ನು ಒಟ್ಟಾಗಿ ಅಭ್ಯಾಸ ಮಾಡಿ ಕನ್ನಡಕ್ಕೆ ಅವರಿಂದ ಸಂದ ಸೇವೆಯನ್ನೂ ಒಟ್ಟಾರೆ ತೂಗಿ ನೋಡುವುದು ಒಂದು ಅಗತ್ಯವಾದ ಕಾರ್ಯವಾಗಿದೆ.

ಗ್ರಾಮೀಣ ಪ್ರದೇಶದಲ್ಲಿ ಜನಿಸಿ ಶಾಲೆಗಳಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸುವ ಅವಕಾಶ ತಪ್ಪಿದರೂ ಸೇಡಿಯಾಪು ಅವರ ಸ್ವಂತ ವಿದ್ಯಾಭ್ಯಾಸದ ಕಾರಣಗಳು ಎರಡು. ಒಂದು, ಪರಂಪರೆಯಿಂದ ಮನೆತನದಲ್ಲಿ ಬಂದಿದ್ದ ಬಡತನ. ಎರಡು, ಓದಿನಲ್ಲಿ ಅಪಾರವಾದ ಆಸಕ್ತಿ. ಯಾವ ಮುದ್ರಿತ ಪುಸ್ತಕ ದೊರೆತರೂ ಅದನ್ನು ಆಮೂಲಾಗ್ರವಾಗಿ ಓದಿ ಬಿಡುವುದು ಅವರ ಅಭ್ಯಾಸವಾಗಿದ್ದಿತೆಂಬುದನ್ನು ಅವರೇ ಹೇಳಿಕೊಂಡಿದ್ದಾರೆ. ಹೀಗೆ ಬೆಳೆದ ಜ್ಞಾನದಾಹ ಅವರನ್ನು ಉತ್ತಮ ವಿದ್ವಾಂಸರನ್ನಾಗಿಯೂ ಸಾಹಿತಿಯನ್ನಾಗಿಯೂ ರೂಪಿಸಿಬಿಟ್ಟಿತು.

ಈಗ ಅವರ ಲೇಖನ ವ್ಯವಸಾಯವನ್ನು ಆರು ಬೇರೆ ಬೇರೆ ನಿಟ್ಟಿನಿಂದ ವಿಮರ್ಶಿಸಬಹುದು.

೧. ಕವಿಯಾಗಿ, ಸಾಹಿತಿಯಾಗಿ

೨. ವ್ಯಾಕರಣಶಾಸ್ತ್ರಸಂಶೋಧಕರಾಗಿ

೩. ನಿಘಂಟುಕಾರರಾಗಿ

೪. ಛಂದಶ್ಯಾಸ್ತ್ರಸಂಶೋಧಕರಾಗಿ

೫. ಸಾಹಿತ್ಯ ವಿಮರ್ಶಕರಾಗಿ

೬. ವ್ಯಕ್ತಿಯಾಗಿ

ಅನೇಕ ಸಲ ನಾನು ಅವರೊಡನೆ ನಡೆಸಿದ ಸಂಭಾಷಣೆಯ ಪರಿಣಾಮವಾಗಿ ನನಗೆ ಅವರ ಆಲೋಚನೆಯ ಮಾರ್ಗ ಮನದಟ್ಟಾಗಿದೆ. ಅವರ ಚಿಂತನೆಯನ್ನು ಕುರಿತು ನಾನು ಕಂಡ ಕೆಲವಂಶಗಳನ್ನು ಸಂಗ್ರಹವಾಗಿ ನಿರೂಪಿಸಲು ಈ ಲೇಖನದಲ್ಲಿ ಪ್ರಯತ್ನವನ್ನು ಮಾಡಿದ್ದೇನೆ.

ಕಾವ್ಯಕ್ಷೇತ್ರ ಅವರಿಗೆ ತಿಳಿದಿದ್ದಂತೆ ರಮ್ಯತೆಯ ನಿರ್ಮಾಣ ಕ್ಷೇತ್ರ. ಸಂಶೋಧನ ಕ್ಷೇತ್ರವೂ ಅಷ್ಟೇ ಆಕರ್ಷಕವಾದ ಪ್ರದೇಶವಾಗಿತ್ತು. 'ಮೊರೆ' ಎಂಬ ಒಂದು ಕವನದಲ್ಲಿ ಅವರೇ ಈ ವಿಷಯವನ್ನು ಸ್ಪಷ್ಟವಾಗಿ ನಿರೂಪಿಸಿದ್ದಾರೆ :-

ತೆರೆಗೈಗಳಲಿ ಕರೆಯುತಿಹುದಾಗಮ ಸಾಗರ
ಮಿರಮಿರುಗಿ ಮತಿಯ ಚಮಕಿಸುತಿದೆ
ಗವೇಷಣದ ಮಣಿಯಾಗರ
ನೆಳಳನೀತಿಸುತ ಕೋಕಿಲಿಸುತಿದೆ
ಬಗೆಯ ಪಲ್ಲವಿತ ಕವಿತಾ ಕಾನನ
ಮೆಯ್ಯೊಂದು ನರಳುತಿದೆ
ಏತರಲಿ ನೆರೆಯಲಿಹುದೋ ಜೀವನ.

ಇದೇ ಅವರ ತೊಳಲಾಟ. ಆಗಮ ಸಾಗರ, ವೇದ ವಿದ್ಯಾಸಮೃದ್ಧಿ ಕರೆಯುತ್ತಿದೆ. ಸಂಶೋಧನೆಯ ಅಂದರೆ ಗವೇಷಣದ ಸಾಗರ ಕಣ್ಮುಂದೆ ಪ್ರಕಾಶಿಸುತ್ತದೆ. ಕವಿತಾಕಾನನ ಪಲ್ಲವಿಸಿ ಕೋಗಿಲೆಯ ಗಾನದಿಂದ ಆಕರ್ಷಕವಾಗಿದೆ. ಇವುಗಳಲ್ಲಿ ಯಾವುದನ್ನು ತನ್ನ ಕ್ಷೇತ್ರವನ್ನಾಗಿ ಆರಿಸಿಕೊಳ್ಳಬೇಕು ಎಂದು ಸಂದೇಹದಲ್ಲಿ ಓಲಾಡುತ್ತಿದ್ದ ಕಾಲದಲ್ಲಿ ಆ ತೊಳಲಾಟವನ್ನು ಪದ್ಯದ ಮೂಲಕ ತೋಡಿಕೊಂಡ ಅಭಿವ್ಯಕ್ತಿ ಇಲ್ಲಿದೆ.

ಈ ವ್ಯಕ್ತಿ ಸಂದಿಗ್ಧತೆಯಲ್ಲಿ ತೊಳಲಾಡುತ್ತಿದ್ದ ಕಾಲದಲ್ಲಿ ರಚಿಸಿದ ಕೆಲವು ಕವನಗಳಲ್ಲಿ ಕವಿಹೃದಯ ಎಷ್ಟು ಪ್ರಖರವಾಗಿ ಕಾರ್ಯಮುಖವಾಗಿತ್ತು ಎಂಬುದನ್ನು ಗುರುತಿಸಬಹುದು. ಬೆಳಗಿನ ತಂಗಾಳಿ ಎಂಬ ಕವನದಲ್ಲಿ ಬರುವ ಕೆಲವು ಸಾಲುಗಳನ್ನು ನೋಡಿ :

ಬೆಳಗಿನ ತಂಗಾಳಿ - ಮುಂಬೆಳ
ಗೇರಿಹ ಜೋಕಾಲಿ
ಗೆಲುವಿನ ತಂಗಾಳಿ - ಬಿಚ್ಚಿದ
ಸುಖನೌಕೆಯ ಹಾಯಿ

ಇಂಥ ಸುಂದರ ಚಿತ್ರಗಳನ್ನು ನೀಡುವ ಲೇಖಕ ಕವಿಯಲ್ಲದೆ ಇನ್ನೇನು! ಸೇಡಿಯಾಪು ಅವರು ರಚಿಸಿರುವ ತರುಣಧಮನಿ, ಶ್ವಮೇಧ, ಶಬರಿ ಎಂಬ ಕವನಗಳು ತುಂಬ ಸುಂದರವಾಗಿವೆ. ತರುಣಧಮನಿ ಚಮತ್ಕಾರ ನಿರ್ವಾಣಕ್ಕೆ ಪ್ರಾಧಾನ್ಯವನ್ನು ಕೊಟ್ಟರೆ ಶ್ವಮೇಧ ಒಂದು ಜಾನಪದ ಕಥೆಯನ್ನೊಳಗೊಂಡ ಕಥನಕಾವ್ಯ. ಶಬರಿಯು ಪಿರಿಯಕ್ಕರವೆಂಬ ಪ್ರಾಚೀನವಾದ ಕನ್ನಡ ಛಂದೋರೂಪದಲ್ಲಿ ರಚಿತವಾಗಿರುವ ಕಥನ. ಈ ಕವನವು ಎರಡು ಕಾರಣಗಳಿಂದ ಬಹುಬೇಗ ಹೃದಯವನ್ನು ಸೂರೆಗೊಳ್ಳುತ್ತದೆ. ಮೊದಲನೆಯ ಆ ಛಂದಸ್ಸಿನ ಇಂಪು. ಎರಡನೆಯ ಸೌಂದರ್ಯದಿಂದ ತುಂಬಿದ ಭಾವನಿರ್ಭರತೆ. ಈ ಎಲ್ಲ ಕವಿತೆಗಳಲ್ಲಿ ಸೇಡಿಯಾಪು ಅವರ ಕವಿಶಕ್ತಿ ಗಾಢವಾಗಿ ತುಂಬಿದೆ.

ಈ ವೇಳೆಗಾಗಲೇ ಸೇಡಿಯಾಪು ಅವರು ತಮ್ಮ ಜೀವನಕ್ಕೆ ಒಂದು ರಾಜಮಾರ್ಗವನ್ನು ಸಮೆದುದಾಗಿತ್ತು. ಆ ಮಾರ್ಗದ ಚಿತ್ರ ಅವರ ಮಾತುಗಳಲ್ಲಿಯೇ ಹೀಗೆ ವರ್ಣಿತವಾಗಿದೆ :

ಮನದೊಳೊಂದೆ ಮಾತಿನೊಳಗೊಂದೆ ನಡೆವಳಿಯೊಳೊಂದೆ ಎಂದೆಂಬುದೇ
ಭವದರಣ್ಯದಲಿ ನಿನಗೆ ರಾಜಪಥ ಜೀವನದ ಗೆಲವಿನೊಳು ಶ್ರದ್ಧೆಯೇ
ತಮಕೆ ದೀಪ, ಸತ್ಪುರುಷರಮಲ ಚಾರಿತ್ರಮನನ ಪಾಥೇಯಕ,
ಮೊಗವನೆತ್ತಿ ನಡೆ, ಭಯವನೊತ್ತಿ ನಡೆ, ಸಫಲತಾ ತೀರ್ಥಯಾತ್ರಿಕ.

ಹೀಗೆ ನಿರ್ಧಾರ ಮಾಡಿದ್ದ ಕವಿ ತನ್ನ ಕಾವ್ಯದ ನಿಜವಾದ ಯೋಗ್ಯತೆ ಏನು ಎಂಬುದನ್ನು ಸ್ಪಷ್ಟವಾಗಿ ಅರಿತುಕೊಂಡಿದ್ದರು. ಆ ಆತ್ಮವಿಶ್ವಾಸವನ್ನು ಹೇಳುವ ಅವರ ಮತ್ತೊಂದು ಕವನವನ್ನು ಇಲ್ಲಿ ಉಲ್ಲೇಖಿಸುತ್ತೇನೆ.

ಓ ಎನ್ನ ಕವಿತೆ

ಎಲೆ ಕಳಚಿ ಗಿಡವಿಲ್ಲವೆಂದಾದ ಮೇಲೆಯೇ
ನೆಲದಿಂದೇಳ್ವ ನೆಲಸಂಪಗೆಯ ಹೂವಂತೆ
ನೆಗೆದು ಗಮಗಮಿಸಲಿಹೆ ನಾನಳಿದ ಮೇಲೆ ನೀ
ನಿದರೊಳಗೆ ಸಂದೇಹ ಲೇಶವೂ ಬೇಡ !

ಈ ಮಾತುಗಳನ್ನು ಓದಿದಾಗ ನಮಗೆ ಭವಭೂತಿಯ ಬಹು ಪ್ರಸಿದ್ಧ ವಾಕ್ಯ ನೆನಪಿಗೆ ಬರುತ್ತದೆ :

ಉತ್ಪತ್ಸ್ಯತೇಸ್ತಿ ಮಮ ಕೋಪಿ ಸಮಾನ ಧರ್ಮಾ
ಕಾಲೋಹ್ಯಯಂ ನಿರವಧಿಃ ವಿಪುಲಾಚ ಪೃಥ್ವೀ

ಇಂಥ ಆತ್ಮಪ್ರತ್ಯಯವಿರುವ ವ್ಯಕ್ತಿಯಿಂದ ರಚಿತವಾಗಿರುವ ಕಾವ್ಯಭಾಗಗಳಲ್ಲಿ ಸೊಗಸು ಸಂಚರಿಸದೆ ಇರುವುದಿಲ್ಲ. ಈ ಮಾತು ಅವರ ಕಾವ್ಯಗಳನ್ನು ಓದಿದವರಿಗೆ ಮನದಟ್ಟಾಗುತ್ತದೆ.

'ಪಳಮೆಗಳು' ಎಂಬ ಕಥಾಸಂಕಲನದಲ್ಲಿ ಆರು ಸಣ್ಣ ಕಥೆಗಳಿವೆ. ಈ ಎಲ್ಲ ಕಥೆಗಳಲ್ಲಿಯೂ ಸೇಡಿಯಾಪು ಅವರ ಕಥನಕಲೆ ಸುವ್ಯಕ್ತವಾಗಿದ್ದರೂ 'ನಾಗಬೆತ್ತ' ಎಂಬುದು ವಿಶಿಷ್ಟವಾದ ಕಥೆ ಎಂದು ಹೆಸರು ಪಡೆದಿದೆ. ನಾಗಬೆತ್ತ ನಾಗರ ಹಾವಿನ ಹೆಡೆಯುಳ್ಳ ಬೆತ್ತ. ದಕ್ಷಿಣ ಕನ್ನಡದಲ್ಲಿ ನಾಗನಿಗೆ ಇರುವ ಪ್ರಾಧಾನ್ಯ ಬಹುವ್ಯಾಪಿ. ಅದರ ವೈಶಿಷ್ಟ್ಯ ಈ ಕತೆಯಲ್ಲಿ ಚೆನ್ನಾಗಿ ಮೂಡಿ ಬಂದಿದೆ.

ವ್ಯಾಕರಣ ಶಾಸ್ತ್ರವು ಸೇಡಿಯಾಪು ಅವರ ಮತ್ತೊಂದು ವ್ಯಾಸಂಗ ಕ್ಷೇತ್ರ. ಈ ವಿಭಾಗದಲ್ಲಿ ಕನ್ನಡ ಭಾಷೆಗೆ ಸಂಬಂಧಿಸಿದ ಕೆಲವು ವಿಷಯಗಳನ್ನು ಅವರು ಆಳವಾದ ಪರಿಶೀಲನೆಗೆ ಒಳಗು ಮಾಡಿದ್ದಾರೆ.

ಅವುಗಳಲ್ಲಿ ಪಂಚಮೀ ವಿಭಕ್ತಿಯ ವಿಷಯ ಮೊದಲನೆಯದು. ಈ ವ್ಯಾಕರಣ ಪ್ರಬಂಧದಲ್ಲಿ ಸೇಡಿಯಾಪು ಅವರು ಇಂ ಎಂಬುದು ಪಂಚಮೀವಿಭಕ್ತಿಯ ಪ್ರತ್ಯಯವೆಂದೂ ಅದೇ ತೃತೀಯಾ ಮತ್ತು ಸಪ್ತಮೀವಿಭಕ್ತಿಗಳಲ್ಲಿ ಪ್ರಯೋಗವಾಗುತ್ತದೆಂದೂ ಸಾಧಾರವಾಗಿ ತೋರಿಸಿಕೊಟ್ಟಿದ್ದಾರೆ. ಇದೊಂದು ಪ್ರೌಢ ಸಂಶೋಧನೆ.

ಗಮಕಸಮಾಸವನ್ನು ಕುರಿತ ಮತ್ತೊಂದು ದೀರ್ಘ ಲೇಖನವಿದೆ. ಇದರಲ್ಲಿ ಲೇಖಕರು ಉಪಪದವೆಂಬ ಬೇರೊಂದು ಪದಭೇದವನ್ನು ಸೃಷ್ಟಿ ಮಾಡಿದರೆ, ಗಮಕಸಮಾಸದ ಸಮಸ್ಯೆ ಪರಿಹಾರವಾಗುತ್ತದೆ ಎಂದು ಅಭಿಪ್ರಾಯಪಡುತ್ತಾರೆ. ಗಮಕಸಮಾಸದಲ್ಲಿ ಪೂರ್ವಪದಗಳು ಯಾವಾಗಲೂ ಪೂರ್ವಪದಗಳಾಗಿಯೇ ಪ್ರಯೋಗವಾಗುವುದರಿಂದ ಈ ಸೂಚನೆ ಸೂಕ್ತವೆಂದು ಅವರ ಅಭಿಪ್ರಾಯ. ಕೇಶಿರಾಜನು ಈ ಸಮಾಸವನ್ನು ಏಕೆ ಹೆಸರಿಸಿದನು ಎಂಬ ಪ್ರಶ್ನೆ ಇದರಿಂದ ಪರಿಹಾರವಾಗುವುದಿಲ್ಲ.

ಹೀಗೆಯೇ ಋ ೠ ಎಂಬ ವರ್ಣಗಳಲ್ಲಿ ವ್ಯಂಜನತ್ವವಿದೆಯೆಂದೂ ಅವುಗಳಲ್ಲಿ ಹ್ರಸ್ವ ಉಕಾರವು ಸೇರಿಕೊಂಡಿದೆಯೆಂದೂ ದೃಷ್ಟಾಂತಪೂರ್ವಕವಾಗಿ ನಿರೂಪಿಸುತ್ತಾರೆ. ಱ ಕುಳಗಳ ಮತ್ತು ಕ್ಷಳದ ಬಗ್ಗೆ ಆ ಹೆಸರುಗಳು ಬಂದುದನ್ನು ವಿವರಿಸಿ ಱ ೞ ಎಂಬುವಕ್ಕೆ ಲಿಪಿ ಸಾಮ್ಯದಿಂದ ಆ ಹೆಸರು ಬಂದಿರಬಹುದೆಂದು ಸೂಚಿಸಿ ೞಯನ್ನು ೞ ಎಂದು ಕರೆಯಬೇಕೆಂದು ಹೇಳುತ್ತಾರೆ. ಈ ವಿವರಣೆ ಸಾಧುವಾದರೂ ಶತಮಾನಗಳಿಂದ ಪ್ರಚಾರದಲ್ಲಿರುವ ೞ, ಱ ಎಂಬುವುದನ್ನು ಬದಲಾಯಿಸುವುದರಿಂದ ಯಾವ ಹೊಸ ಉದ್ದೇಶವನ್ನೂ ಸಾಧಿಸಿದಂತೆ ಆಗುವುದಿಲ್ಲ. ಅವು ಹಾಗೆಯೇ ಇರಬಹುದು. ಆದರೆ ಅವರ ತರ್ಕ ಮಾತ್ರ ಸಾಧುವಾಗಿದೆ. ಅಕ್ಷರ ಮತ್ತು ವರ್ಣ ಎಂಬ ಎರಡು ಶಬ್ದಗಳನ್ನೂ ಏಕಾರ್ಥದಲ್ಲಿ ಪ್ರಯೋಗಿಸುವುದು ಅಷ್ಟು ಸಾಧುವಲ್ಲ ಎಂಬ ಅಭಿಪ್ರಾಯವನ್ನು ತಿಳಿಸಿ ಸ್ವರಕ್ಕೆ ಅಕ್ಷರಗಳೆಂದೂ ವ್ಯಂಜನಗಳಿಗೆ ವರ್ಣವೆಂದೂ ಕರೆಯಬೇಕೆಂದು ಅರ್ಥವತ್ತಾದ ಕಾರಣಗಳನ್ನು ನಿರೂಪಿಸಿದ್ದಾರೆ. ಇಂಥ ಚರ್ಚೆಗಳೂ, ವಿವರಣೆಗಳೂ ಆಳವಾಗಿ ಅಭ್ಯಾಸ ಮಾಡಿ ತಾರ್ಕಿಕವಾಗಿ ಚಿಂತನೆ ಮಾಡುವವರಿಗೆ ಮಾತ್ರ ಸಾಧ್ಯ. ವ್ಯಾಕರಣದ ವಿಷಯದಲ್ಲಿ ಸೇಡಿಯಾಪು ಅವರ ಜ್ಞಾನ ಸಂಪೂರ್ಣವಾಗಿತ್ತು. ಸಂಸ್ಕೃತದಲ್ಲಿ ಅಷ್ಟಾಧ್ಯಾಯಿಯ ಪಾಣಿನಿಯಾಗಲಿ ಕನ್ನಡದ ಕೇಶಿರಾಜ, ಭಟ್ಟಾಕಳಂಕರಾಗಲಿ ಅವರಿಗೆ ದಿನನಿತ್ಯದ ಸ್ನೇಹಿತರಾಗಿದ್ದರು. ಈ ವಿಚಾರಗಳಲ್ಲಿ ಅವರೊಡನೆ ಚರ್ಚೆಗೆ ಕುಳಿತರೆ ಕಾಲ ಕಳೆದದ್ದೇ ಗೊತ್ತಾಗುತ್ತಿರಲಿಲ್ಲ. ಸೂತ್ರಪಾಠಗಳೂ ದೃಷ್ಟಾಂತ ವಾಕ್ಯಭಾಗಗಳೂ ಅವರಿಗೆ ಪಾಚೋವಿಧೇಯಗಳಾಗಿದ್ದವು. ಅಂಥ ಇತರ ವಿದ್ವಾಂಸರನ್ನು ನಾನು ಕಂಡಿಲ್ಲ.

ನಿಘಂಟು ಕ್ಷೇತ್ರದಲ್ಲಿ ಅವರು ಬಹು ಖ್ಯಾತರಾಗಿದ್ದರು. ೧೯೫೫ರಲ್ಲಿಯೇ ಇಬ್ಬರು ಸ್ನೇಹಿತರೊಡಗೂಡಿ ಕನ್ನಡ ನಿಘಂಟು ಎಂಬ ಸುಮಾರು ೨೦,೦೦೦ ಶಬ್ದಗಳ ನಿಘಂಟನ್ನು ಪ್ರಕಟಪಡಿಸಿದ್ದರು. ಈ ಕಾರ್ಯಕ್ಕೆ ಅನೇಕ ವರ್ಷಗಳು ಹಿಡಿದಿರುವುದನ್ನು ಅವರು ತಮ್ಮ ಪ್ರಸ್ತಾವನೆಯಲ್ಲಿ ತಿಳಿಸಿದ್ದಾರೆ. ನಿಘಂಟಿನ ಕೆಲಸವೆಂಥದು, ಎಷ್ಟು ಬಗೆಯ ನಿಘಂಟುಗಳು ಇರಬಹುದು ಮುಂತಾದ ವಿಷಯಗಳಲ್ಲಿ ಅವರ ವಿಚಾರವು ಖಚಿತವಾಗಿತ್ತು. ಆದುದರಿಂದ ತಮ್ಮಿಂದ ಸಿದ್ಧವಾದ ಕನ್ನಡ ನಿಘಂಟು ಬಗ್ಗೆ ಅವರು ಹೇಳಿರುವ ಮಾತುಗಳು ಗಮನಾರ್ಹವಾಗಿವೆ.

"ಇದು ಕನ್ನಡದಲ್ಲಿ ಬಳಕೆಗೆ ಬಂದ ಸಮಗ್ರ ಶಬ್ದಗಳ ಕೋಶವಲ್ಲ, ಯಾವಾಗಲೂ ತಾವು ಆಡುತ್ತಿರುವ ಭಾಷೆಯ ಸುಲಭ ಶಬ್ದಗಳ ಅರ್ಥಕ್ಕಾಗಿ ನಿಘಂಟನ್ನು ನಿರೀಕ್ಷಿಸುವ ಪ್ರಸಂಗವು, ಶಾಬ್ದಿಕರ ಹೊರತು ಉಳಿದವರಿಗೆ ಸಾಧಾರಣವಾಗಿ ಬರುವುದಿಲ್ಲ. ಆದುದರಿಂದ ಜನರ ಬಾಯ ಬಳಕೆಯಲ್ಲಿದ್ದು, ಸಾಮಾನ್ಯರಿಗೂ ಸುಲಭವೆನಿಸುವ ಮನೆ, ಮರ, ಅಕ್ಕಿ, ಗೋಧಿ ಎಂಬಿವೇ ಮೊದಲಾದ ಶಬ್ದಗಳನ್ನೆಲ್ಲ ಈ ಸಂಗ್ರಹದಲ್ಲಿ ಬಿಟ್ಟುಬಿಟ್ಟಿರುತ್ತೇವೆ. ಅಲ್ಲದೆ, ಸಾಧಾರಣವಾಗಿ ರೂಢವಾಗಿರುವ ಸಾಹಿತ್ಯ ರಚನೆಯಲ್ಲಿ ದೊರೆಯದಿರುವ ಅಥವಾ ಎಲ್ಲಿಯೋ ಒಂದೆರಡು ಕಡೆಯಲ್ಲಿ ಮಾತ್ರ ಪ್ರಯೋಗದಲ್ಲಿರುವ ಕಠಿಣ ಶಬ್ದಗಳನ್ನು

ಅದೇ ಕಾರಣದಿಂದ ಇದರೊಳಗೆ ಸೇರಿಸಿರುವುದಿಲ್ಲ. ಅಲ್ಲದೆ ಇಂದಿನ ಮತ್ತು ಹಿಂದಿನ ರಾಜಕೀಯ, ಸಾಮಾಜಿಕ, ಧಾರ್ಮಿಕ ಆರ್ಥಿಕ ವಿಚಾರಗಳಿಗೂ, ಗಣಿತ, ಭೂಗೋಲ, ವಿಜ್ಞಾನ, ತತ್ವಜ್ಞಾನ ಮೊದಲಾದ ಶಾಸ್ತ್ರಗಳಿಗೂ, ಉದ್ಯೋಗ, ವ್ಯಾಪಾರ ವ್ಯವಹಾರಗಳಿಗೂ ಸಂಬಂಧಿಸಿದ ಅನೇಕಾನೇಕ ಶಬ್ದಗಳು ಯಾವುದೊಂದು ಭಾಷೆಯ ಸಮಗ್ರವಾದ ಮತ್ತು ಸಕಲ ವ್ಯವಹಾರಗಳಿಗೆ ಉಪಯುಕ್ತವಾದ ಕೋಶದಲ್ಲಿ ಇರಲೇಬೇಕಾದ ಶಬ್ದಗಳು - ಈ ನಮ್ಮ ನಿಘಂಟಿನಲ್ಲಿ ದೊರೆಯಲಾರವು. ಆದರೆ ಅವುಗಳನ್ನೆಲ್ಲ ಸಂಗ್ರಹಿಸಿ ಅರ್ಥನಿರ್ವಚನ ಮಾಡುವದು, ಆಯಾ ವಿಷಯದಲ್ಲಿ ತಜ್ಞರಾದ ಹಲವು ಮಂದಿ ವಿದ್ವಾಂಸರ ಸಹಾಯದಿಂದಲೇ ಸಾಧ್ಯ, ಹೊರತು ಬೇರೆ ಬೇರೆ ವೃತ್ತಿಗಳಲ್ಲಿ ವ್ಯಾವೃತರಾಗಿ ಸಂಪೂರ್ಣಸಮಯವನ್ನು ನಿಘಂಟು ರಚನೆಯಲ್ಲಿ ಕಳೆಯಲಾರದ ಇಬ್ಬರು ಮೂವರು ಗೆಳೆಯರ ಪ್ರಯತ್ನದಿಂದ ಸಾಧ್ಯವಾಗುವಂತಹದಲ್ಲ. ಅಲ್ಲದೆ ಪ್ರಾದೇಶಿಕವಾದ ಕೆಲವು ರೂಢ ಶಬ್ದಗಳನ್ನು ನಿಜವಾಗಿಯೂ ಕನ್ನಡನಾಡಿನ ಇನ್ನೊಂದು ಭಾಗದವರಿಗೆ ಅಪರಿಚಿತವಾದ ಶಬ್ದಗಳನ್ನು - ಅನುಕೂಲ್ಯದ ಅಭಾವದಿಂದ ಸಂಗ್ರಹಿಸಲಾಗಲಿಲ್ಲ. ಕನ್ನಡಿಗರು ಕೈಗೊಟ್ಟು ಪ್ರೋತ್ಸಾಹಿಸಿದರೆ ಮುಂದಿನ ಆವೃತ್ತಿಯಲ್ಲಿ ಈ ನಿಘಂಟುವಿನ ಕ್ಷೇತ್ರವನ್ನು ವಿಸ್ತಾರಪಡಿಸಬೇಕೆಂದಿದ್ದೇವೆ. ಇದೀಗ ಮುಖ್ಯವಾಗಿ ಸಾಧಾರಣ ಸಾಹಿತ್ಯಾಭ್ಯಾಸಕ್ಕಾಗಿಯೇ ನಿರ್ಮಿತವಾಗಿದೆ. ಹೀಗೆ ಇದೊಂದು ಪರಿಮಿತ ಪ್ರಯೋಜನವುಳ್ಳ ಶಬ್ದಾರ್ಥ ಸಂಗ್ರಹವಾಗಿರುವುದರಿಂದ ಪ್ರಾಯಶಃ ಕೋಶ ಎಂಬುದಕ್ಕಿಂತ ಅರ್ಥ ವ್ಯಾಪ್ತಿಯಲ್ಲಿ ಕಿರಿದಾದ ನಿಘಂಟು ಎಂಬ ಹೆಸರನ್ನು ಈ ರಚನೆಗೆ ಇಟ್ಟಿರುತ್ತೇವೆ.'' ಈ ಪೀಠಿಕೆಯ ಕೊನೆಯಲ್ಲಿ ಸಂಪಾದಕರು ಎಂದು ಇದ್ದರೂ ಈ ಭಾಗದ ವಾಕ್ಯರಚನೆಯ ಶೈಲಿಯಿಂದಲೂ ತರ್ಕಶುದ್ಧತೆಯಿಂದಲೂ ಇದನ್ನು ಸೇಡಿಯಾಪು ಅವರೇ ರಚಿಸಿದರೆಂದು ಯಾರಾದರೂ ಸುಲಭವಾಗಿ ಹೇಳಿಯಾರು!

ಇದು ಪ್ರಕಟವಾದ ಸರಿಸುಮಾರಿನಲ್ಲಿಯೇ ಕನ್ನಡ ಸಾಹಿತ್ಯ ಪರಿಷತ್ತಿನ ಬೃಹತ್ ಕನ್ನಡ - ಕನ್ನಡ ನಿಘಂಟು ಎಂಬ ಯೋಜನೆಯ ಕಾರ್ಯ ಪ್ರಾರಂಭವಾಗಿತ್ತು. ಪ್ರೊ। ಎ.ಆರ್. ಕೃಷ್ಣಶಾಸ್ತ್ರಿಗಳು ಅದರ ಸಮಿತಿಗೆ ಅಧ್ಯಕ್ಷರಾಗಿದ್ದರು. ಕನ್ನಡನಾಡಿನ ಬಹು ಪ್ರಸಿದ್ಧರಾದ ವಿದ್ವಾಸಂರೂ ದಕ್ಷ ಆಡಳಿತಗಾರರೂ ಆಗಿದ್ದ ಅವರ ನೇತೃತ್ವದಲ್ಲಿ ಆ ಕೆಲಸ ನಡೆಯುತ್ತಿತ್ತು. ಒಟ್ಟು ಕರ್ನಾಟಕ ರಾಜ್ಯದ ಪರವಾಗಿ ಸಿದ್ದವಾಗುತ್ತಿದ್ದ ಆ ನಿಘಂಟು ನಾಡಿನ ಎಲ್ಲ ವಿದ್ವಾಂಸರ ಅಭಿಪ್ರಾಯವನ್ನೂ ಕ್ರೋಢೀಕರಿಸಿ ಅದಕ್ಕೆ ಸಂಪೂರ್ಣ ಸ್ವರೂಪವನ್ನು ತಂದುಕೊಡಬೇಕೆಂಬುದು ಪ್ರೊ॥ ಕೃಷ್ಣಶಾಸ್ತ್ರಿಗಳ ಅಭಿಪ್ರಾಯವಾಗಿತ್ತು. ಆದುದರಿಂದ ನಿಘಂಟು ಪಡೆಯುತ್ತಿದ್ದ ಸ್ವರೂಪದ ಒಂದು ಕರಡು ಪ್ರತಿಯನ್ನು ಸಿದ್ಧಪಡಿಸಿ, ಅದನ್ನು ಮುದ್ರಿಸಿ, ನಾಡಿನ ಎಲ್ಲ ಪ್ರಸಿದ್ಧ ವಿದ್ವಾಂಸರಿಗೂ ಕಳಿಸಲಾಗಿತ್ತು. ಸೇಡಿಯಾಪು ಅವರು ಆ ಕರಡಚ್ಚನ್ನು ಪರಿಶೀಲಿಸಿ ಕನ್ನಡ ಸಾಹಿತ್ಯ ಪರಿಷತ್ತಿಗೆ ತಮ್ಮ ಸೂಚನೆಗಳನ್ನು ಕಳುಹಿಸಿದ್ದರು. ಆ ಸಂದರ್ಭದಲ್ಲಿ ನಾನು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿದ್ದೆ. ಆದುದರಿಂದ ಸೇಡಿಯಾಪು ಅವರ ಪತ್ರಗಳನ್ನು ಪರಿಶೀಲಿಸುವ ಅವಕಾಶ ನನಗೆ ಸಿಕ್ಕಿತ್ತು. ನಿಘಂಟಿನ ಸಂಪಾದಕರಾಗಿ ಪ್ರೊ॥ ಡಿ.ಎಲ್.ನರಸಿಂಹಾಚಾರ್ಯರು ಕಾರ್ಯವನ್ನು ನಿರ್ವಹಿಸುತ್ತಿದ್ದರು. ಪರಿಷತ್ತು ಕಳುಹಿಸಿದ ಮಾದರಿ ಪುಟಗಳನ್ನು ಪರಿಶೀಲಿಸಿದ ಪರಿಣಾಮವಾಗಿ ಸೇಡಿಯಾಪು ಅವರು ಕಳುಹಿಸಿದ್ದ ಅನೇಕ ಸೂಚನೆಗಳು ಸಮಿತಿಗೆ ಅರ್ಹವಾಗಿ ಕಂಡುಬಂದುವು. ಅವುಗಳನ್ನು ಒಪ್ಪಿಕೊಳ್ಳಲಾಗಿದೆ. ದೃಷ್ಟಾಂತವಾಗಿ ಎರಡು ವಿಷಯಗಳನ್ನು ತಿಳಿಸುತ್ತೇನೆ.

೧. 'ಕನ್ನಡ ವರ್ಣಮಾಲೆಯ ನಾಲ್ಕನೆಯ ಅಕ್ಷರ' ಎಂದು ಹೇಳುವುದಕ್ಕಿಂತ 'ನಾಲ್ಕನೆಯ ವರ್ಣ' ಎಂದು ತಿಳಿಸುವುದು ಉತ್ತಮ.

೨. ಸಂಪಾದಕರು (ಧಾ) ಮತ್ತು (ಕ್ರಿ) ಎಂದು ಎರಡು ವಿಧವಾಗಿ ನಿರ್ದೇಶಿಸಿದ ಶಬ್ದರೂಪಗಳೂ ಕ್ರಿಯಾ ಪ್ರಕೃತಿಗಳೇ ಆದುದರಿಂದ ಎಲ್ಲವನ್ನೂ (ಕ್ರಿ) ಎಂಬ ಒಂದೇ ಸಂಕೇತದಿಂದ ನಿರ್ದೇಶಿಸಿದರೆ ಸಾಕಾಗುವುದು.

ಈ ಎರಡು ಸೂಚನೆಗಳನ್ನೂ ಸಮಿತಿಯಲ್ಲಿ ಸರ್ವಾನುಮತದಿಂದ ಒಪ್ಪಿಗೆ ಪಡೆದು ಮುಂದೆ ಹಾಗೆಯೇ ನಿಘಂಟಿನಲ್ಲಿ ದಾಖಲು ಮಾಡಲಾಗಿದೆ. 'ಅತ್ತಿಗೆ' ಎಂಬ ಶಬ್ದದ ಬಗ್ಗೆ ಸೇಡಿಯಾಪು ಅವರು ಮತ್ತೊಂದು ಪತ್ರವನ್ನೂ ಬರೆದಿದ್ದರು.

ಈ ಪತ್ರವೂ ಪ್ರೊ॥ ಕೃಷ್ಣಶಾಸ್ತ್ರಿಗಳಿಗೆ ಒಪ್ಪಿಗೆಯಾಗಿದ್ದಿತೆಂಬುದನ್ನು ನಾನು ಬಲ್ಲೆ. ಆ ಬಳಿಕ ಸಮಿತಿಯಲ್ಲಿ ಚರ್ಚೆಯಾದಾಗ ಪಂಪ ಭಾರತದ ಪ್ರಯೋಗದ ಆಧಾರದ ಮೇಲೆ ಅದಕ್ಕೆ 'ಪ್ರೀತಿಪಾತ್ರಳು' ಎಂಬ ಅರ್ಥವನ್ನು ಕೊಡಬಹುದು, ಅದು ಪ್ರಯೋಗದ ವಿಶದೀಕರಣಕ್ಕೆ ಸರಿಯಾಗುತ್ತದೆ ಎಂಬ ಅಭಿಪ್ರಾಯಕ್ಕೆ, ಹೆಚ್ಚು ಬೆಂಬಲ ದೊರೆಯಿತು. ನಿಘಂಟು ಸಮಿತಿಯ ಎಲ್ಲ ಸದಸ್ಯರಿಗೂ ಸೇಡಿಯಾಪು ಅವರ ಬಗ್ಗೆ ಅಪಾರ ಗೌರವವಿದ್ದುದನ್ನು ನಾನು ಆ ಸಮಿತಿಯ ಸದಸ್ಯನಾಗಿ ಚೆನ್ನಾಗಿ ಬಲ್ಲೆ.

ಈ ಸಮಯದಲ್ಲಿ ಮತ್ತೊಂದು ವಿಷಯವನ್ನು ಸ್ಪಷ್ಟಪಡಿಸಬೇಕು. ಪರಿಷತ್ತಿನ ಮಾದರಿ ಪುಟಗಳ ಪರಿಶೀಲನೆಗೆ ಗಮನವಿತ್ತು ಉತ್ತರ ಬರೆದವರಲ್ಲಿ ಕಡೆಂಗೋಡ್ಲು ಶಂಕರಭಟ್ಟರೂ ಸೇಡಿಯಾಪು ಕೃಷ್ಣಭಟ್ಟರೂ ಪ್ರಧಾನರಾಗಿದ್ದರು ಎಂಬುದು.

ಕೆಲವು ದೇಶನಾಮಗಳು ಎಂಬ ಉಪನ್ಯಾಸದಲ್ಲಿ ತುಳು - ಪಾಂಡ್ಯ, ದ್ರಾವಿಡ - ಗೌಡ ಎಂಬ ಶಬ್ದಗಳ ಆಳವಾದ ವ್ಯಾಸಂಗವನ್ನು ನಾನು ಉದಾಹರಿಸಬೇಕು. ಪ್ರಾಕೃತದಲ್ಲಿ ಅನುಪ ಎಂದು ಹೇಳುವುದೇ ನನ್ನ ತುಳುನಾಡು ಎಂಬ ತೀರ್ಮಾನಕ್ಕೆ ಬರಲು ಸೇಡಿಯಾಪು ಅವರು ಎಷ್ಟು ಪ್ರಯಾಸಪಟ್ಟಿದ್ದಾರೆಂಬುದು ನನಗೆ ಆಶ್ಚರ್ಯವಾಗುತ್ತದೆ. ಹಾಗೆಯೇ ಪಾಂಡಿಯ ಶಬ್ದವು ಸಂಸ್ಕೃತ ಭಾಂಡ=ವ್ಯಾಪಾರದ ಸರಕು (Merchandise) ಎಂಬುದರಿಂದ ಉತ್ಪನ್ನವಾಗಿರಬೇಕು ಎಂದು ಸಾಧಾರವಾಗಿ ನಿರೂಪಿಸಿದ್ದಾರೆ.

ಇಡ್ಲಿ ಎಂಬ ಶಬ್ದವು ಸಂಸ್ಕೃತದ ಇಂಡರಿ - ಇಂಡ್ರಂ ಎಂಬ ಶಬ್ದದಿಂದ ಬಂದಿರಬೇಕು ಎನ್ನುವುದಕ್ಕೆ ಹತ್ತನೆಯ ಶತಮಾನದ ಚಕ್ರದತ್ತಾ ಸಂಹಿತೆ ಎಂಬ ಗ್ರಂಥದ ಒಂದು ಶ್ಲೋಕವನ್ನು ಆಧಾರವಾಗಿ ನೀಡುತ್ತಾರೆ. ಆ ಶ್ಲೋಕ ಹೀಗಿದೆ :

> ಗೋಧಾಪದೀ ಮೂಲಯಕ್ತಾಂ ಖಾದೇತ್ ಮಾಷೇಂಡರೀಂ ನರಃ
> ಜಯೇತ್ ಶ್ಲೀಪದ ರೋಗೋತ್ಥಂ ಜ್ವರಂ ಘೋರಂ ನಸಂಶಯಃ

ಹೀಗೆ ಶಬ್ದಪ್ರಪಂಚದಲ್ಲಿ ತಲ್ಲೀನರಾಗಿ ಅನೇಕ ಶಬ್ದಗಳ ಬಗ್ಗೆ, ಅವುಗಳ ಮೂಲದ ಬಗ್ಗೆ ಅವರು ಸಂಶೋಧನೆಯಲ್ಲಿ ತೊಡಗಿರುತ್ತಿದ್ದರು. ಇತ್ತೀಚೆಗೆ ಅವರನ್ನು ಕಾಣಲು ನಾನು ಹೋಗಿದ್ದಾಗ ಯಾವುದೋ ಮಾತು ಯಾಸ್ಕನ ನಿರುಕ್ತಿಯ ಬಗ್ಗೆ ತಲೆದೋರಿದಾಗ ದೇವರ ಶಬ್ದದ ವ್ಯುತ್ಪತ್ತಿಯನ್ನು ಕುರಿತು ನನ್ನೊಡನೆ ಬಹು ಹೊತ್ತು ಚರ್ಚೆ ಮಾಡಿದರು. ಆ ಸಮಯದಲ್ಲಿ ಶ್ರೀ ಪಾದೇಕಲ್ಲು ವಿಷ್ಣು ಭಟ್ಟರೂ ನನ್ನ ಜೊತೆ ಇದ್ದುದು ನನ್ನ ನೆನಪಿಗೆ ಬರುತ್ತದೆ. ಅವರ ಸ್ಮರಣ ಶಕ್ತಿಯನ್ನು ಕುರಿತು ನನಗೆ ಆಶ್ಚರ್ಯವಾಯ್ತು.

ಛಂದಸ್ಸು ಅವರ ಪ್ರಿಯವಾದ ಶಾಸ್ತ್ರ. ಈ ಶಾಸ್ತ್ರದಲ್ಲಿ ಮೊದಲು ಅವರು ರಚಿಸಿದ ಪ್ರಬಂಧವನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಮಡಿಕೇರಿ ಸಮ್ಮೇಳನದಲ್ಲಿ ಓದಿದರು. ಅದರ ಪ್ರಭಾವ ಎಲ್ಲ ವಿದ್ವಾಂಸರ ಮೇಲೆಯೂ ಆಯಿತು. ಅಕ್ಕರ ವೃತ್ತಗಳನ್ನು ಓದುವುದು ಹೇಗೆ ಎಂಬ ಬಗ್ಗೆ ಅವರ ಸಂಶೋಧನೆಯ ಪರಿಣಾಮವಾಗಿ ಹೊಸ ರೀತಿಯೇ ಗೋಚರವಾಯಿತು. ಅಂಶಗಣ ಯೋಜಿತ ಅಕ್ಕರ ವೃತ್ತಗಳ ಬಗ್ಗೆ ಸೇಡಿಯಾಪು ಅವರು ದೀರ್ಘಕಾಲ ಸಂಶೋಧನೆ ಮಾಡಿ ತಮ್ಮ ತೀರ್ಮಾನವನ್ನು ತಿಳಿಸಿದರು. ಅಲ್ಲದೆ ಆ ಬಳಿಕ ತ್ರಿಪದಿ, ಗೀತಿಕೆ, ಛಂದೋವತಂಸ ಎಂಬ ಲೇಖನಗಳನ್ನೂ ರಚಿಸಿದ್ದರು. ಇವೆಲ್ಲವನ್ನೂ ಒಟ್ಟು ಸೇರಿಸಿದ ಪರಿಷ್ಕೃತ ರೂಪದ ಗ್ರಂಥ ಕನ್ನಡ ಛಂದಸ್ಸು. ಈ ಗ್ರಂಥವನ್ನು ಬಿಡುಗಡೆ ಮಾಡಿ ಅದನ್ನು ಕುರಿತು ಮಾತನಾಡಲು ಸೇಡಿಯಾಪು ಅವರು ನನ್ನನ್ನು ಕರೆದು ಗೌರವಿಸಿದರು. ನನ್ನ ಬಾಳಿನ ಸಂತೋಷದ ದಿನಗಳಲ್ಲಿ ಅದು ಒಂದೆಂದು ನಾನು ಬಗೆದಿದ್ದೇನೆ. ಅಂದು ನಾನು ಆ ಗ್ರಂಥದಲ್ಲಿ ವಿವೃತವಾಗಿರುವ ಗತಿ, ಸಮಗತಿ, ವಿಷಮಗತಿ, ತಾಳಖಂಡ, ಆವರ್ತ ಎಂಬ ಪಾರಿಭಾಷಿಕ ಶಬ್ದಗಳನ್ನು ವಿವರಿಸುವಾಗ ಸೇಡಿಯಾಪು ಅವರ ಭಾಷೆ ಸೂತ್ರರೂಪವಾಗಿರುವುದನ್ನು ಉಲ್ಲೇಖಿಸಿ ಅವರು ತ್ರಿಪದಿ, ಅಕ್ಕರಿಕೆ, ಮದನವತಿ, ಉತ್ಸಾಹ, ಷಟ್ಪದಿ, ಸಾಂಗತ್ಯ ಇವುಗಳ ಲಕ್ಷಣಗಳ ನಿರೂಪಣೆಯಲ್ಲಿ ತೋರಿರುವ ಸ್ವಂತಿಕೆಯನ್ನೂ ವೈದುಷ್ಯವನ್ನೂ ಮನಸಾರೆ ಮೆಚ್ಚಿಕೊಂಡೆ. ಅವರ ವಿವರಣೆಯ ಸೊಗಸನ್ನು ತಿಳಿಸಲು ಅವರ ವಾಕ್ಯಗಳನ್ನೇ ಉದ್ಧರಿಸಿದ್ದೇನೆ :

''ಸಂಗೀತಕ್ಕೂ ಛಂದಸ್ಸಿಗೂ ಮೂಲ ಒಂದೇ ; ಗಾನೋಪಯುಕ್ತತೆಯೇ ಪದ್ಯದ ಪ್ರಯೋಜನ; ಬಂಧಗಳು ಪ್ರಕೃತಿ ಪ್ರೇರಿತವಾದ ಗತಿರೂಪಗಳಲ್ಲಿ ಹುಟ್ಟಿಬರುತ್ತವೆಯೇ ಹೊರತು ಗಣಿತಕ್ರಿಯೆಯ ಫಲವಾಗಿ ಅಲ್ಲ; ಕನ್ನಡಕ್ಕೆ ವಿಶಿಷ್ಟ ಸ್ವತಂತ್ರ ಛಂದಸ್ಸಿದೆ; ಪ್ರಥಮ ಲಘ್ವನಂತರ ಗುರು ನಿಷೇಧವು ಕನ್ನಡ ಗಣಗಳ ವೈಶಿಷ್ಟ್ಯ; ತ್ರಿಮೂರ್ತಿಗಣಗಳೇ ಕನ್ನಡ ಆದಿಯ ಛಂದೋ ಗಣಗಳು; ಇವುಗಳಿಂದಲೇ ಷಟ್ಪದಿ ಮೊದಲಾದುವುಗಳ ಮಾತ್ರಾಗಣಗಳು ಹುಟ್ಟಿದುವು; ಕನ್ನಡದ ಹಾಡುಗಳಲ್ಲಿ ಇಂದಿನವರೆಗೂ ಅಂದಿನ ಲಕ್ಷಣಗಳು ಗೋಚರಿಸುತ್ತಿವೆ; ಕನ್ನಡಕ್ಕೆ ಯತಿ ಬೇಡವೆಂಬ ಮಾತಿನಲ್ಲಿ ಹುರುಳಿಲ್ಲ.''

ಈ ಬರಹದ ರೀತಿಯನ್ನು ನೋಡಿದರೆ ಸೂತ್ರದ ಬಗ್ಗೆ ಇರುವ ಬಹುಪ್ರಸಿದ್ಧ ಪದ್ಯವು ನೆನಪಿಗೆ ಬರುತ್ತದೆ.

ಅಲ್ಪಾಕ್ಷರಂ ಅಸಂದಿಗ್ಧಂ ಸಾರವದ್ವಿಶ್ವತೋಮುಖಂ
ಅಸ್ತೋಭಮನವದ್ಯಂಚ ಸೂತ್ರಂ ಸೂತ್ರವಿದೋ ವಿದುಃ ॥

ಸೂತ್ರದ ಈ ಶ್ಲೋಕದಲ್ಲಿ ಹೇಗೆ ಸೋದಾಹರಣವಾಗಿರುವ ಗುಣವಿದೆಯೋ ಸೇಡಿಯಾಪು ಅವರ ಬರಹದಲ್ಲಿಯೂ ಅಂಥ ಗುಣವಿರುವುದನ್ನು ನಾನು ಉಲ್ಲೇಖಿಸಿರುವ ವಾಕ್ಯಗಳಲ್ಲಿ ಕಾಣಬಹುದು. ಈ ಕನ್ನಡ ಛಂದಸ್ಸು ಎಂಬ ಗ್ರಂಥದ ಬಗ್ಗೆ ವಿಶೇಷವಾದ ಮತ್ತೊಂದು ಮಾತನ್ನೂ ಹೇಳಬೇಕು. ಅದರಲ್ಲಿರುವ ಅಡಿಟಿಪ್ಪಣಿಗಳ ಸಂಖ್ಯೆ ಅಪಾರವಾಗಿದೆ. ತಮ್ಮ ಯಾವ ಒಂದು ಮಾತೂ ಅನ್ಯಥಾ ಅರ್ಥವಾಗದಂತೆ ತುಂಬ ಎಚ್ಚರಿಕೆಯಿಂದ ಈ ಟಿಪ್ಪಣಿಗಳನ್ನು ಸಿದ್ಧಮಾಡಿದ್ದಾರೆ ಲೇಖಕರು. ಶಾಸ್ತ್ರದ ಭಾಷೆ ಸಾಮಾನ್ಯವಾಗಿ ಕ್ಲಿಷ್ಟವಾಗಿರುತ್ತದೆ. ಒಮ್ಮೊಮ್ಮೆ ಒಂದೊಂದು ವಾಕ್ಯವನ್ನು ಎರಡು ಮೂರು ಬಾರಿ ಓದಬೇಕು. ಹಾಗೆ ಮಾಡಿದರೆ ಈ ಗ್ರಂಥದಲ್ಲಿ ಅಡಗಿರುವ ಛಂದಶಾಸ್ತ್ರದ ಮೂಲ ವಿಷಯಗಳು ನಮ್ಮ ಗಮನಕ್ಕೆ ನಿಚ್ಚಳವಾಗಿ ಮೂಡುತ್ತವೆ.

ಇಂಥದೇ ಮತ್ತೊಂದು ಕಿರುವಾಕ್ಯವೃಂದವನ್ನು ಉದಾಹರಿಸುತ್ತೇನೆ. ವಿವಿಧ ಛಂದೋರೂಪಗಳ ಬಗ್ಗೆ ಅವರು ಹೇಳುವ ಕೊನೆಯ ಮಾತು ಇದು.

''ಈ ನಾನಾ ಬಗೆಗಳನ್ನೆಲ್ಲ ನಿರ್ಮಿಸಿದವರು ಕವಿಗಳು, ಕಲಾಕಾರರು ಹೊರತು ಛಂದಃಶಾಸ್ತ್ರಕಾರರಲ್ಲ. ಶಾಸ್ತ್ರಕಾರನು ಛಂದಃಶಿಶುವಿನ ತಾಯಿಯಲ್ಲ; ತಂದೆಯೂ ಅಲ್ಲ; ಕವಿಯೇ ತಾಯಿ, ನವನವೋನ್ಮೇಷಶಾಲಿಯಾದ ಪ್ರತಿಭೆಯೇ ತಂದೆ. ಶಾಸ್ತ್ರಕಾರನ ಸ್ಥಾನ ಅಕ್ಕರೆಯಿಂದ ಶಿಶುವನ್ನು ನೋಡಿಕೊಳ್ಳುವ ದಾದಿಯದು; ನಾಮಕರಣ ಮಾಡಿ ಆಶೀರ್ವದಿಸುವ ಪುರೋಹಿತನದು, ಅಷ್ಟೇ!''

ಇಂಗ್ಲೀಷ್ ಭಾಷೆಯಲ್ಲಿ ಪ್ರಯೋಗವಾಗುವ Rhythm ಎಂಬುದನ್ನು ಲಯ ಎಂಬ ಶಬ್ದದೊಂದಿಗೆ ಸಮಾನಾರ್ಥಕವಾಗಿ ಉಪಯೋಗಿಸಲು ಸೇಡಿಯಾಪು ಅವರು ಒಪ್ಪುವುದಿಲ್ಲ. ಗತಿ ಎಂಬ ಶಬ್ದ ಹೆಚ್ಚು ಉಚಿತ ಎನ್ನುತ್ತಾರೆ. ಛಂದಸ್ಸಿನ ಬಗ್ಗೆ ಬರೆಯುವ ಮುಂಚೆ ಅವರು ಹಿಂದೀ, ತಮಿಳು, ಇಂಗ್ಲಿಷ್, ಸಂಸ್ಕೃತ ಭಾಷೆಗಳ ಛಂದಸ್ಸನ್ನು ಸಂಪೂರ್ಣವಾಗಿ ಅಭ್ಯಾಸ ಮಾಡಿ ತುಂಬ ಆಧಾರಭೂತವಾದ ಕನ್ನಡ ಚಂದಸ್ಸನ್ನು ರಚಿಸಿದ್ದಾರೆ. ನಮ್ಮ ಛಂದಸ್ಸಿನ ತಿಳಿವಳಿಕೆಗೆ ಈಗ ಇದೊಂದು ಓದಲೇಬೇಕಾದ ಗ್ರಂಥವಾಗಿ ಪರಿಣಮಿಸಿದೆ.

ಛಂದೋಗತಿ ಇನ್ನೊಂದು ಗ್ರಂಥ. ಈ ಗ್ರಂಥದ ರಚನೆಗೆ ಕಾರಣರಾದ ವಿಷಯಗಳನ್ನು ಸೇಡಿಯಾಪು ಅವರೇ ಆ ಗ್ರಂಥದ ಆರಂಭದಲ್ಲಿ ಓದುಗರಿಗೆ ನಿವೇದಿಸಿದ್ದಾರೆ :

'' 'ಛಂದೋಗತಿ' ಎಂಬ ಹೆಸರಿನಲ್ಲಿ ಈಗ ಪುಸ್ತಕರೂಪವನ್ನು ಪಡೆದಿರುವ ಈ ಬರವಣಿಗೆಯನ್ನು ತೊಡಗಿದಾಗ ನನ್ನ ಉದ್ದೇಶವು ಈಗೀಗ ಕನ್ನಡದಲ್ಲಿ ನಡೆಯುವ ಛಂದೋವಿಚಾರಗಳಲ್ಲಿ ಅಸ್ಪಷ್ಟವೂ ನೈಕರೂಪವೂ ಆದ ಅರ್ಥಗಳಲ್ಲಿ ಪ್ರಯೋಗವಾಗುತ್ತಿರುವ 'ಲಯ' ಎಂಬ ಸಂಜ್ಞೆಯ ನಿಜಾರ್ಥವನ್ನು ಸಪ್ರಮಾಣವಾಗಿ ವಿಶದೀಕರಿಸುವುದು ಮಾತ್ರವೇ ಆಗಿತ್ತು. ಆದರೆ ಬರೆಯುತ್ತಾ ಹೋದಂತೆ ವಿಚಾರಕ್ಷೇತ್ರವು ಅನಿವಾರ್ಯವಾಗಿ ವಿಸ್ತರಿಸುತ್ತಾ ಹೋಗಿ ಮೊದಲು ಕಲ್ಪಿಸಿ ಕೊಂಡಂತೆ, ಇದು ಹತ್ತಿಪ್ಪತ್ತು ಪುಟಗಳದೊಂದು ಸಣ್ಣ ನಿಬಂಧವಾಗಿ ಕೊನೆಗೊಳ್ಳದೆ ಅಷ್ಟೊಂದು ಸಣ್ಣದೇನೂ ಅಲ್ಲವೆಂದು ಹೇಳಬಹುದಾದ

ಒಂದು ಗ್ರಂಥವೇ ಆಗಿಬಿಟ್ಟಿತು. ನನ್ನ ಈ ವಯಸ್ಸಿನಲ್ಲಿ, ಈ ದೇಹಸ್ಥಿತಿಯಲ್ಲಿ ಇಂತಹದೊಂದು ಬರವಣಿಗೆಗೆ ಕೈಯಿಕ್ಕುವ ಧೈರ್ಯವೇ ನನ್ನಲ್ಲಿದ್ದಿಲ್ಲ. ಈ ಪುಸ್ತಕದಲ್ಲಿ ಪ್ರಕಟವಾಗಿರುವ ವಿಚಾರಗಳಲ್ಲಿ ಹೆಚ್ಚಿನವೆಲ್ಲ ಎಷ್ಟೋ ವರ್ಷಗಳ ಹಿಂದೆಯೇ ನನ್ನ ಅಂತರಂಗದಲ್ಲಿ ತಲೆಯೆತ್ತಿದವುಗಳಾದರೂ ಹಲವಾರು ವರ್ಷಗಳಿಂದ ಹಾಸಿಗೆಯಲ್ಲಿಯೇ ದಿನಗಳೆಯುತ್ತಿರುವ ನನ್ನೊಳಗಿಂದ ಅವು ಹೊರಟು ಬರಲಾರದೆ ಅಲ್ಲಲ್ಲಿ ಮಡುಗಟ್ಟಿ ಗುಳುಗುಳಿಸುತ್ತಾ ಆಗಾಗ ನನ್ನನ್ನು ಪೀಡಿಸುತ್ತಿದ್ದುವು. ಆದರೆ ಒಂದು ದಿನ ಯಾವುದೋ ಕಾರಣದಿಂದ ಚಿಮ್ಮಿದ ಉತ್ಸಾಹಕ್ಕೆ ವಶನಾಗಿ ನಾನು ಲೇಖನಿ ಹಿಡಿದಾಗ, ಅವು ಒಂದರ ಹಿಂದೊಂದು ಹೊರಹೊಮ್ಮಿ ಬಂದು ಸ್ರೋತೋರೂಪವಾಗಿ ಹರಿಯತೊಡಗಿ, ನನ್ನನ್ನು ತಳ್ಳಿಕೊಂಡು ಬಹುದೂರಕ್ಕೆ ಸಾಗಿ, ಇಷ್ಟೆಲ್ಲ ಪುಟಗಳನ್ನು ತುಂಬಿದವು. ನನ್ನ ಬಹುಕಾಲದ ಚಿಂತನಧಾರೆ ಈ ಅಪರ ವಯಸ್ಸಿನಲ್ಲಾದರೂ ನನ್ನ ಕನ್ನಡತಾಯ ಪಾದಾಭಿಷೇಚನಕ್ಕೆ ಒದಗುವಂತೆಸಗಿದ ವಿಶ್ವನಿಯಾಮಕನ ಕೃಪೆಯನ್ನೀಗ ನೆನಸಿ ನೆನಸಿ ವಿನಮ್ರನಾಗುತ್ತಿದ್ದೇನೆ.''

ಈ ಗ್ರಂಥದಲ್ಲಿ 'ಲಯ' ಶಬ್ದವಿವೇಚನೆ, 'ಛಂದಸ್' ಶಬ್ದ ವಿವೇಚನೆ, 'ಅಕ್ಷಗತಿ', 'ಪದ್ಯದ ಗತಿ'ಗೂ 'ಗದ್ಯದ ಗತಿ'ಗೂ ಇರುವ ಭೇದ ಇವುಗಳು ನಿರೂಪಿತವಾಗಿವೆ.

ಕೊನೆಯ ಭಾಗದಲ್ಲಿ ಅನುಷ್ಟುಪ್ ಶ್ಲೋಕದ ಗತಿಸೌಂದರ್ಯ, ಕೆಲವು ವೃತ್ತಗಳ ಗತಿಸೌಂದರ್ಯ, ವೈದಿಕ ಮಂತ್ರಗಳ ಗತಿಸೌಂದರ್ಯ ಇವುಗಳನ್ನು ವಿವೇಚಿಸಲಾಗಿದೆ. ವೇದ ಭಾಷೆಯ ಸಹಜಗಾಂಭೀರ್ಯವು ಲೌಕಿಕ ಸಂಸ್ಕೃತಿಯಲ್ಲಿ ಕಾಣಬರುವುದಿಲ್ಲವೆಂದು ಸ್ಪಷ್ಟವಾಗಿ ವಿವರಿಸಲಾಗಿದೆ.

ಈ ಗ್ರಂಥದಲ್ಲಿರುವ ಅನೇಕ ಟಿಪ್ಪಣಿಗಳು (ಸುಮಾರು ನೂರು) ಸೇಡಿಯಾಪು ಅವರ ಬರವಣಿಗೆಯ ಸತ್ವವನ್ನು ಬಿಂಬಿಸುತ್ತವೆ.

ಕನ್ನಡಕ್ಕೆ ಇದೊಂದು ಅತ್ಯಪೂರ್ವವಾದ ಕೊಡುಗೆಯೆಂದು ಯಾರಾದರೂ ಒಪ್ಪಿಕೊಳ್ಳುತ್ತಾರೆ.

ಸಾಹಿತ್ಯ ವಿಮರ್ಶೆಯಲ್ಲಿಯೂ ಸೇಡಿಯಾಪು ಅವರ ಕಾರ್ಯ ಶ್ಲಾಘನೀಯವಾಗಿದೆ. ರತ್ನಾಕರವರ್ಣಿ, ಮುದ್ದಣರ ಗ್ರಂಥಗಳ ಬಗ್ಗೆ ಬೆಲೆಯುಳ್ಳ ಲೇಖನಗಳನ್ನು ಪ್ರಕಟಿಸಿದ್ದಾರೆ. ಆಧುನಿಕರ ಬಗ್ಗೆಯೂ ಒಂದು ಲೇಖನವಿದೆ. ಆದರೆ ಅವರ ಕಾವ್ಯ ವಿಮರ್ಶೆಯ ಮಾರ್ಗ ಎಷ್ಟು ಗಾಢವಾಗಿರುತ್ತಿತ್ತು ಎನ್ನುವುದಕ್ಕೆ ಅವರ ಭಾನುಮತಿಯ ನೆತ್ತ ಎಂಬ ಲೇಖನ ಸೊಗಸಾದ ದೃಷ್ಟಾಂತವಾಗುತ್ತದೆ.

ಈ ಲೇಖನವು ಪ್ರಬುದ್ಧ ಕರ್ಣಾಟಕ ಪತ್ರಿಕೆಯಲ್ಲಿ ಮೊದಲು ಪ್ರಕಟವಾಯಿತು. (೧೯೭೬ ಮೂರನೆಯ ಸಂಚಿಕೆ). ಈಗ ಅದು ಸೇಡಿಯಾಪು ಅವರ ಸಮಗ್ರ ಲೇಖನಗಳ ಸಂಪುಟವಾದ 'ವಿಚಾರ ಪ್ರಪಂಚ'ದಲ್ಲಿ ಸೇರ್ಪಡೆಯಾಗಿದೆ, ಒಂದೆರಡು ಸಣ್ಣಪುಟ್ಟ ಸೇರ್ಪಡೆಗಳೊಡನೆ. ಈ ಲೇಖನವು ಪಂಪನ ಒಂದು ಪದ್ಯವನ್ನು ಕುರಿತು ವಿದ್ವಾಂಸರು ಜಯಕರ್ಣಾಟಕದಲ್ಲಿಯೂ, ಪ್ರಬುದ್ಧ ಕರ್ಣಾಟಕದಲ್ಲಿಯೂ ಲೇಖನಗಳನ್ನು ಬರೆದಿದ್ದರು. ಹಿಂದೆ ಬರೆದಿದ್ದ ಎಲ್ಲರ ಅಭಿಪ್ರಾಯಗಳನ್ನೂ ವಿಮರ್ಶಿಸಿ ಪ್ರೊ. ತೆಕ್ಕುಂಜೆ ಗೋಪಾಲಕೃಷ್ಣ ಭಟ್ಟರು ಪ್ರಬುದ್ಧ ಕರ್ಣಾಟಕದ ೫೬ನೆಯ ಸಂಪುಟದ ೧ನೆಯ ಸಂಚಿಕೆಯಲ್ಲಿ ಒಂದು ದೀರ್ಘ ಲೇಖನವನ್ನೂ ಬರೆದಿದ್ದರು. ಅದನ್ನು ಓದಿ ನೋಡಿದ ಮೇಲೆ ಸೇಡಿಯಾಪು ಅವರು ಅದೇ ಪ್ರಬುದ್ಧ ಕರ್ಣಾಟಕದಲ್ಲಿ ಪ್ರಕಟಿಸಿದ ಲೇಖನ ಇದು.

ಈ ರೀತಿಯಲ್ಲಿ ಅನೇಕ ವಿದ್ವಾಂಸರ ಗಮನವನ್ನು ಸೆಳೆದ ಪಂಪನ ಪದ್ಯ ಹೀಗಿದೆ :

ನೆತ್ತಮನಾಡಿ ಭಾನುಮತಿ ಸೋಲ್ತೊಡೆ ಸೋಲಮನೀವುದೆಂದು ಕಾ
ಡುತ್ತಿರೆ ಲಂಬಣಂ ಪಱಿಯೆ ಮುತ್ತಿನ ಕೇಡನೆ ನೋಡಿ ನೋಡಿ ಬ
ಳ್ಕುತ್ತಿರೆ ಯೇವಮಿಲ್ಲದಿವನಾವುದೊ ತಪ್ಪದೆ ಪೇೞಿಮೆಂಬ ಭೂ
ಪೋತ್ತಮನಂ ಬಿಸುಟ್ಟಿರದ ನಿಮ್ಮೊಳೆ ಪೊಕ್ಕೊಡೆ ಬೇಡನಲ್ಲನೇ (ಆಶ್ವಾಸ ೯, ಪದ್ಯ ೬೯)

ಈ ಪದ್ಯದಲ್ಲಿ ಕವಿಯು ಸ್ಪಷ್ಟವಾಗಿ ಹೇಳದೆ ಬಿಟ್ಟಿರುವ ಅಂಶಗಳು ಬಹಳವಾಗಿವೆ. ಆದುದರಿಂದಲೇ ವಾಚಕರು ಅದಕ್ಕೆ ಬೇರೆ ಬೇರೆ ಅರ್ಥಗಳನ್ನು ಹೇಳುವುದು ಸಾಧ್ಯವಾಗಿದೆ. ಈ ಪದ್ಯದಲ್ಲಿ ಇರುವ ಸಮಸ್ಯೆ ಮೂರು ಅಂಶಗಳಿಗೆ ಸಂಬಂಧಿಸಿದುದು:

೧. ನೆತ್ತಮನಾಡಿ -
ಯಾರು ಯಾರು ನೆತ್ತವನ್ನಾಡುತ್ತಿದ್ದರು?

೨. ಸೋಲಮನೀವುದೆಂದು ಕಾಡುತ್ತಿರೆ -
ಯಾರು ಕಾಡಿದವರು?

೩. ಮುತ್ತಿನ ಕೇಡನೆ ನೋಡಿ ನೋಡಿ ಬಳ್ಕುತ್ತಿರೆ -
ಬಳ್ಕುತ್ತಿದ್ದವರು ಯಾರು?

ಈ ಮೂರು ಸಮಸ್ಯೆಗಳಿಗೆ ಉತ್ತರವನ್ನು ಸ್ಪಷ್ಟವಾಗಿ ನೀಡಿ ಪದ್ಯದ ಅರ್ಥವನ್ನು ಸರಳಗೊಳಿಸಿ ಸಮಸ್ಯೆಯನ್ನು ಇಲ್ಲವಾಗಿಸಿದವರು ಸೇಡಿಯಾಪು. ಸಮಸ್ಯೆಗಳಿಗೆ ಉತ್ತರ ಹೀಗಿದೆ : ೧. ನೆತ್ತವನ್ನು ಆಡಿದವರು ಭಾನುಮತಿ ಮತ್ತು ದುರ್ಯೋಧನರು. ೨. ಸೋಲಮನೀವುದೆಂದು ಕಾಡಿದವರು - ದುರ್ಯೋಧನ. ೩. ಮುತ್ತಿನ ಕೇಡನ್ನು ನೋಡಿ ಬಳ್ಕಿದವರು - ಭಾನುಮತಿ.

ಇಷ್ಟೇ ಅಲ್ಲದೆ ಇಲ್ಲಿ ನೆತ್ತಮನಾಡಿದಾಗ ಇಟ್ಟ ಪಣವೇನು? ಎಂಬ ಪ್ರಶ್ನೆಯೂ ಇದೆ. ಅದಕ್ಕೆ ಸೇಡಿಯಾಪು ಅವರು ಮುತ್ತು = ಚುಂಬನವೇ ಇಲ್ಲಿ ಆಟದ ಪಣವಾಗಿತ್ತು ಎಂದು ತೀರ್ಮಾನಿಸಿದ್ದಾರೆ. ಅಲ್ಲದೆ ಆಟ ಪ್ರಾರಂಭವಾಗಿ ಎಷ್ಟೋ ಮುಂದುವರಿದಿದ್ದಾಗ ಅಲ್ಲಿಗೆ ಕರ್ಣನು ಬಂದಿರಬೇಕೆಂಬ ಸೂಕ್ತವಾದ ಊಹೆಯನ್ನೂ ಸೂಚಿಸುತ್ತಾರೆ.

ಪತಿ - ಪತ್ನಿಯರು ನೆತ್ತವನ್ನು ಆಡುವಾಗ ಮುತ್ತನ್ನು ಪಣವಾಗಿಡುವುದು ಹಿಂದಿನ ಸಂಪ್ರದಾಯವೆಂಬುದು ಸೇಡಿಯಾಪು ಅವರ ನಿರ್ಧಾರ. ಈ ನಿರ್ಧಾರವನ್ನು ಸ್ಥಾಪಿಸುವಂತೆ ಕೆಲವು ಆಧಾರಗಳನ್ನು ಸೇಡಿಯಾಪು ಅವರಿಗೆ ಒದಗಿಸಿದವರು ಬೆಂಗಳೂರಿನ ಪ್ರಸಿದ್ಧ ತರುಣ ವಿದ್ವಾಂಸರಾದ ಶ್ರೀ ರಾ. ಗಣೇಶ ಅವರು. ಶ್ರೀ ಗಣೇಶ ಅವರು ಅಮರುಕ ಶತಕದ ೪೯ನೆಯ ಪದ್ಯವನ್ನೂ ಶಾರ್ಙ್ಗಧರ ಪದ್ಧತಿಯ ಎರಡು ಶ್ಲೋಕಗಳನ್ನೂ ವಿಶ್ವನಾಥನ ಸಾಹಿತ್ಯ ದರ್ಪಣದ ಒಂದು ಪದ್ಯವನ್ನೂ ಆಧಾರವಾಗಿ ಸೂಚಿಸಿದ್ದಾರೆ. ಅಮರುಕನ ಕಾಲ ಎಂಟನೆಯ ಶತಮಾನವಾದುದರಿಂದ ನೆತ್ತದಾಟದಲ್ಲಿ ಮುತ್ತನ್ನು = ಚುಂಬನವನ್ನು ಪಣವಾಗಿಡುವ ಸಂಪ್ರದಾಯ ಬಹಳ ಪ್ರಾಚೀನವಾದುದೆಂದು ಸಾಧಿತವಾಯಿತು. ಈಗ ಮಿಕ್ಕೆಲ್ಲ ವಿಷಯವೂ ಸರಳವಾಗಿ, ಪದ್ಯದ ಅರ್ಥ ಸ್ಪಷ್ಟವಾಗುತ್ತದೆ.

ಈ ಸಂದರ್ಭದಲ್ಲಿ ಸೇಡಿಯಾಪು ಅವರು ನೀಡುವ ಅರ್ಥ ವಿವರಣೆಯನ್ನು ಅವರ ಮಾತುಗಳಲ್ಲೇ ಪರಿಚಯ ಮಾಡಿಕೊಳ್ಳುವುದು ಒಳ್ಳೆಯದು :

''ಲಂಬಣದ ಮುತ್ತುಗಳು ನೆತ್ತದ ಪಣವಾಗಿರಲಿಲ್ಲವೆಂಬುದನ್ನು ಸ್ಪಷ್ಟೀಕರಿಸುವುದರೊಡನೆ, ಪಣವಾಗಿಟ್ಟದ್ದು ಇವಕ್ಕಿಂತ ಎಷ್ಟೋ ಮೇಲಾದ ಮುತ್ತು (ಅಥವಾ ಮುತ್ತುಗಳು) ಎಂಬುದನ್ನು ವ್ಯಂಜಿಸುತ್ತದೆ. ಹಾಗಾದರೆ, ಪಣವಾಗಿದ್ದ ಆ ಶ್ರೇಷ್ಠಕರವಾದ ಮುತ್ತು ಯಾವುದಾಗಿದ್ದಿರಬಹುದು. ಆಲೋಚಿಸುತ್ತ ಹೊತ್ತು ಕಳೆಯುವುದಕ್ಕೆ ಇಲ್ಲಿ ಅವಕಾಶವಿಲ್ಲ; 'ಮುತ್ತು' ಎಂಬ ಪದದ ಶಬ್ದ ಶಕ್ತಿ ಥಟ್ಟನೆ ಅದರ ಸ್ವರೂಪವನ್ನು ನಮ್ಮ ಮುಂದೆ ತಂದು ನಿಲ್ಲಿಸುತ್ತದೆ! ಅದೇ ಪಣವಾಗಿದ್ದ ಅಮೂಲ್ಯವಾದ 'ಮುತ್ತು' (ಚುಂಬನ), ನೆತ್ತದಲ್ಲಿ ಸೋತ ಭಾನುಮತಿ ಕ್ರೀಡಾನಿಯಮದಂತೆ ಅದನ್ನು ಕೊಡಲೇಬೇಕಾಗಿದ್ದರೂ ಕಣ್ಣ ಮುಂದೆ ಬೇರೊಂದು ಗಂಡು ಉಪಸ್ಥಿತವಾಗಿರುವಾಗ, ಅದನ್ನು ಆಗಲೇ ಅಲ್ಲಿಯೇ ಅವಳು ಹೇಗೆ ಕೊಡಲಾಪಳು? ಎಷ್ಟಾದರೂ ಅವಳು (ಹಿಂದಿನ ಕಾಲದ!) ಹೆಣ್ಣಲ್ಲವೇ? ಸೋತ ವ್ಯಕ್ತಿ ಗಂಡಾಗಿರುತ್ತಿದ್ದರೆ ಆ ಪಣವನ್ನು ಅಲ್ಲಿಯೇ ಸಂದಾಯ ಮಾಡಲು ಹಿಂಜರಿಯುತ್ತಿರಲಿಲ್ಲ. ಹೆಣ್ಣಿನ ಲಜ್ಜೆಯನ್ನು ತೊಡೆಯುವುದೇ ಗಂಡಿನ ಉತ್ಸವ! ಇಲ್ಲಿ ಗೆದ್ದ ಗಂಡಿಗೆ ನೆತ್ತದ ಗೆಲವಿನ

ಮದೋಲ್ಲಾಸದೊಡನೆ ಆ ವಿಜಯೋತ್ಸವವನ್ನು ನೆರವೇರಿಸುವ ಉತ್ಸಾಹ. ಈ ಕಾರಣದಿಂದ ''ಸೋಲಮನೀವುದು'' ಎಂಬ ಕಾಟ, ಭಾನುಮತಿಯ ಒಲೆದಾಟ, ಗಂಡನ ಎಳೆದಾಟ. ಇದರ ಪರಿಣಾಮವಾಗಿ ಲಂಬಣ ಹರಿದು ನೆಲದ ಮೇಲೆ ಮುತ್ತುಗಳ ಚೆಲ್ಲಾಟ. ಎಷ್ಟು ಕಾಡಿದರೂ ಮೊಗ ಕೊಡದ ಭಾನುಮತಿ ಮುತ್ತುಗಳು ಬಿದ್ದುರುಳುವುದನ್ನೇ ನೋಡುತ್ತಾ ಲಜ್ಜೆಯಿಂದ ತಲೆ ಎತ್ತಲಾರದೆ ಬಾಗಿಯೇ ಇರುತ್ತಿದ್ದಾಗ, ನೆತ್ತದಲ್ಲಿ ಗೆದ್ದರೂ ಪಣಕ್ಕಾಗಿ ಮಾಡಿದ ಸಾಹಸದಲ್ಲಿ ಗೆಲವು ದೊರೆಯದೆ ಇದ್ದ ಗಂಡು ತನಗೆ ಲಭ್ಯವಾಗಬೇಕಾಗಿದ್ದ, ಆದರೆ ಲಬ್ಧವಾಗದಿದ್ದ ಆ ಅನರ್ಘವಾದ 'ಮುತ್ತಿ'ಗೆ ಲಂಬಣದ ಈ ಮುತ್ತುಗಳು ತುಲ್ಯವಲ್ಲದಿದ್ದರೂ (ಹೆಸರಿನಲ್ಲಿ ತುಲ್ಯವೇ ಆಗಿದ್ದು, ಇವೂ 'ಭಾನುಮತಿಯ ಮುತ್ತು'ಗಳೇ ಆಗಿರುವ ಕಾರಣ) ಇವನ್ನೇ ಪಣವಾಗಿ ಎತ್ತಿಕೊಂಡು ತನ್ನ 'ವಿಜಯ'ವನ್ನು ಘೋಷಿಸಿಕೊಳ್ಳುವ ವಿನೋದಕ್ಕೆಳಸಿತು! ಅಲ್ಲಿ ನಡೆದುದು ಇಷ್ಟೇ.''

ಇಷ್ಟು ಸ್ಪಷ್ಟವಾದ ವಿವರಣೆಯನ್ನು ನೀಡಿದ ಮೇಲೆಯೂ ಇಲ್ಲಿನ ಚಿತ್ರದ ಅರ್ಥವನ್ನು ಕಾವ್ಯಭಾಷೆಯಲ್ಲಿ ನಿರೂಪಿಸುವುದಕ್ಕಾಗಿ ಸೇಡಿಯಾಪು ಅವರು ಒಂದು ಅಡಿಟಿಪ್ಪಣಿಯನ್ನು ಸೇರಿಸಿದ್ದಾರೆ. ಅದೂ ಅರ್ಥವತ್ತಾಗಿರುವುದರಿಂದ ಅದನ್ನೂ ಇಲ್ಲಿ ದಾಖಲಿಸುತ್ತಿದ್ದೇನೆ.

''ಈ ಪದ್ಯದ ಅನುಕಾರ್ತ್ಥ ಪೇಟಕೆಯ ಬೀಗದ ಕೈಯಾಗಿರುವ ''ಏವಮಿಲ್ಲದಿವನಾವುದೊ ತಪ್ಪದೆ ಪೇೞಿಂ'' ಎಂಬೀ ವಾಕ್ಯವನ್ನು ಇಲ್ಲಿ ಪೋಣಿಸಿದುದರ ಪ್ರಯೋಜನಗಳು ಹಲವು; ಗೆದ್ದ ವ್ಯಕ್ತಿಗೆ - ನಿಜವಾದ ಪಣ ಲಭಿಸದಿದ್ದರೂ - 'ಪಣವನ್ನು ಪಡೆದೇ ಬಿಟ್ಟೆನು' ಎಂದು ಹರ್ಷ ಪ್ರದರ್ಶನ ಮಾಡುವ ಅವಕಾಶ ಒದಗಿದ್ದು ಒಂದು; ಪುರುಷಾಂತರ ಸಮ್ಮುಖದಲ್ಲಿ ಅನರ್ಘ್ಯವಾದ 'ಆ ವಸ್ತು'ವನ್ನು ಕೊಡಲಾರದೆ ಆ ಮಾನಿನಿಯ ಮಾನ ಉಳಿದುದು ಇನ್ನೊಂದು; ಅಸಹ್ಯವಾದ ಅವಳ ಲಜ್ಜಾಭಾರ ಇಳಿದುಹೋಗಿ, ಅಲ್ಲಿದ್ದ ಉಳಿದಿಬ್ಬರ ಹಸನ್ಮುಖಗಳೊಡನೆ ಅವಳ ಮುಖವೂ ದರಹಸಿತವಾಗಿ ಪ್ರಸನ್ನವಾಗುವಂತಾದುದು ಮತ್ತೊಂದು; ನೆತ್ತದಲ್ಲಿ ಸೋತರೂ ಆ ಶೀಲವತಿ ಗೆದ್ದವಳೇ ಆದಂತಾದುದು ಮಗುಳೊಂದು; ವಿರಸದಲ್ಲಿ ಪರ್ಯವಸಾನವಾಗುವ ಹಾಗಿದ್ದ ಆ ಕ್ರೀಡಾ ಪ್ರಸಂಗವನ್ನು, ಈ ವಾಕ್ಯವನ್ನಾಡುವ ಮೂಲಕ ವಿನೋದ ಪರ್ಯವಸಾಯಿಯಾಗಿ ಮಾರ್ಪಡಿಸಿದ ಆ ಪುರುಷ ವ್ಯಕ್ತಿಯ ಸರಸವೂ, ಉದಾರವೂ, ಶ್ಲಾಘ್ಯವೂ ಆದ ಮನೋಧರ್ಮವು ಪ್ರಕಾಶಿತವಾದುದು ಬೇರೊಂದು! ಪ್ರತಿಭಾವಿಲಾಸದ ಪ್ರಗಲ್ಭಕವಿತ್ವದ, ರಚನಾಚಾತುರ್ಯದ ಒಂದು ಉತ್ಕರ್ಷ ನಿದರ್ಶನವನ್ನು ನಾವಿಲ್ಲಿ ಕಾಣುತ್ತೇವೆ.''

ಈ ಸುಂದರ ವಿಮರ್ಶೆಯನ್ನು ಓದಿದ ಕನ್ನಡದ ಹಿರಿಯ ಕವಿ ವಿ. ಸೀತಾರಾಮಯ್ಯನವರು ಸೇಡಿಯಾಪು ಅವರಿಗೆ ಬರೆದ ಪತ್ರದಲ್ಲಿ ಹೀಗೆ ತಿಳಿಸಿದರು : ''ನಿಮ್ಮ ಲೇಖನವನ್ನು ಮುಂಚೆಯೇ ಓದಿದ್ದೆ. ಪುನಃ ಇನ್ನೊಂದು ಸಲ ಓದಿದ್ದೇನೆ. ಇಷ್ಟು ವಿದ್ವತ್ತೆಯಿಂದಲೂ ಅಂತರ್‌ದೃಷ್ಟಿಯಿಂದಲೂ ರಸಿಕತೆಯಿಂದಲೂ ಬರೆಯಬಲ್ಲ ನೀವು ನಿಜವಾಗಿ ಸಾಹಿತ್ಯ ಕೃತಿ ವಿಮರ್ಶೆಗೆ ಮಾಡಿರುವ ಸೇವೆ ದೊಡ್ಡದು. ಇಂಥ ವ್ಯಾಖ್ಯಾನದಿಂದ, ಅರ್ಥಗ್ರಹಣದಿಂದ ನಿಜವಾಗಿ ಒಂದು ವಿಶೇಷವಾದ ದೃಷ್ಟಿರೀತಿಯೇ, ವಿಚಕ್ಷಣೆಯೇ ಬರುತ್ತಿದೆ. ನಾವು ಉಪಕೃತರು''.

ಇಂಥ ಮೆಚ್ಚಿಕೆಗೆ ಈ ''ಭಾನುಮತಿಯ ನೆತ್ತ'' ಸ್ವಾಭಾವಿಕವಾಗಿಯೇ ಉಚಿತವಾಗಿದೆ ಎಂಬುದನ್ನು ಮತ್ತೆ ಹೇಳಬೇಕಾಗಿಲ್ಲ.

ಸಾಹಿತ್ಯ ವಿಚಾರವಾಗಿ ಬರೆದ ಇತರ ಅನೇಕ ಲೇಖನಗಳಲ್ಲಿಯೂ ಸೇಡಿಯಾಪು ಅವರ ಖಚಿತತೆಯೂ ವೈದುಷ್ಯವೂ ತಾರ್ಕಿಕ ಜಾಗರೂಕತೆಯೂ ಸದಾ ಎಚ್ಚರವಾಗಿರುವುದನ್ನು ಎಲ್ಲರೂ ಕಾಣಬಹುದು.

ಸೇಡಿಯಾಪು ಅವರು ಬಹಳ ಸ್ನೇಹಪರರಾಗಿದ್ದರು. ಅವರ ಹಿರಿಯರ ವಿಶ್ವಾಸವನ್ನು ಗಳಿಸಿದ್ದರು. ಪಂಜೆ ಮಂಗೇಶರಾಯರು, ಮುಳಿಯ ತಿಮ್ಮಪ್ಪಯ್ಯನವರು, ಗೋವಿಂದ ಪೈಗಳು ಮುಂತಾದವರಿಂದ ಕನ್ನಡದ ದೀಕ್ಷೆಯನ್ನು ಪಡೆದವರು. ಕಡೆಂಗೋಡ್ಲು ಶಂಕರಭಟ್ಟರು, ತೆಕ್ಕುಂಜೆ ಗೋಪಾಲಕೃಷ್ಣ ಭಟ್ಟರು, ಕುಕ್ಕಿಲ ಕೃಷ್ಣ ಭಟ್ಟರು, ಶಿವರಾಮ ಕಾರಂತರು,

ಅಮ್ಮೆಂಬಳ ಶಂಕರ ನಾರಾಯಣ ನಾವಡ ಮುಂತಾದ ಸಾಹಿತಿ ಗೆಳೆಯರು ಅವರಿಗಿದ್ದರು. ಮೈಸೂರಿನ ಕಡೆ ಡಿ.ವಿ.ಜಿ., ವಿ.ಸೀ. ಮುಂತಾದವರ ಸ್ನೇಹವಿತ್ತು. ಇತ್ತೀಚಿನವರಾದ ಸಾಹಿತ್ಯ ಕ್ಷೇತ್ರದಲ್ಲಿ ಪ್ರಸಿದ್ಧರಾದ ಕು.ಶಿ.ಹರಿದಾಸ ಭಟ್ಟರು, ಎಂ.ರಾಮಚಂದ್ರ, ಅಮೃತ ಸೋಮೇಶ್ವರ ಮುಂತಾದ ಶಿಷ್ಯರು ಅಲ್ಲದೆ ಅನೇಕ ಅಭಿಮಾನಿಗಳು ಅವರಿಗೆ ದೇಶದಾದ್ಯಂತ ಇದ್ದಾರೆ.

ಉಪಾಧ್ಯಾಯರಾಗಿ ಅವರು ಗಳಿಸಿದ ಗೌರವ ಅಭಿಮಾನಗಳು ಮರೆಯಲಾರದ ಒಂದು ವ್ಯಕ್ತಿತ್ವವನ್ನು ಚಿತ್ರಿಸುತ್ತವೆ. ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವರಂಥ ಸಾರ್ವಜನಿಕ ಮುಂದಾಳುಗಳು ಅವರನ್ನು ಗುರುಗಳೆಂದು ಸ್ಮರಿಸುತ್ತಾರೆ.

ಇಂಥ ಹಿರಿಯ ಚೇತನದ ಬಾಳಿನ ಕೆಲವು ವಿವರಗಳನ್ನು ಅವರಿಂದಲೇ ತಿಳಿದು ಶ್ರೀಮತಿ ವೈದೇಹಿ ಅವರು 'ಸೇಡಿಯಾಪು ನೆನಪುಗಳು' ಎಂಬ ಗ್ರಂಥವನ್ನು ಪ್ರಕಟಿಸಿದ್ದಾರೆ. ಅವರ ನಿಕಟವರ್ತಿಗಳಾಗಿದ್ದು ಅವರ ಈಚಿನ ಅನೇಕ ಲೇಖನಗಳಿಗೆ ಲಿಪಿರೂಪವನ್ನು ನೀಡಿ ನಾಡಿನ ಕೃತಜ್ಞತೆಗೆ ಪಾತ್ರರಾಗಿರುವ ಶ್ರೀ ಪಾದೇಕಲ್ಲು ವಿಷ್ಣುಭಟ್ಟರು 'ಸೇಡಿಯಾಪು' ಎಂಬ ಪುಸ್ತಕವನ್ನು ಪ್ರಕಟಿಸಿ ಅವರ ಜೀವನದ ಮತ್ತು ಸಾಹಿತ್ಯದ ವಿವರಗಳನ್ನು ದಾಖಲಿಸಿದ್ದಾರೆ.

'ಸೇಡಿಯಾಪು ನೆನಪುಗಳು' ಎಂಬ ಪುಸ್ತಿಕೆಯಲ್ಲಿ ಬರುವ ಒಂದು ಸನ್ನಿವೇಶ ನನಗೆ ಬಹು ಪ್ರಧಾನವಾದ ಅಂಶವಾಗಿ ಕಂಡಿತು. ಸೇಡಿಯಾಪು ಅವರು ತಮ್ಮ ಯೌವನದ ದಿನಗಳಲ್ಲಿ ಒಂದು ಅಂಗಡಿಯವನಿಗೆ ಎರಡು ರೂಪಾಯಿಗಳನ್ನು ಸಾಲವಾಗಿ ತೀರಿಸಬೇಕಾಗಿತ್ತಂತೆ. ಅಂಗಡಿಯ ಪಾಲುದಾರರು ಬೇರೆಯಾಗಿ ಇವರ ಸಾಲದ ದುಡ್ಡು ಯಾರಿಗೆ ಹೋಗಬೇಕೆಂಬುದು ಸಮಸ್ಯೆಯಾಗಿ ಇವರು ಅದನ್ನು ತೀರಿಸಲಾಗಲಿಲ್ಲವಂತೆ. ಇದನ್ನು ತಮ್ಮ ಆರ್ಥಿಕ ವ್ಯವಹಾರದ ಒಂದು ಕಳಂಕವೆಂಬಂತೆ ಅವರು ಹೇಳಿಕೊಂಡಿದ್ದಾರೆ. ಅದು ಅವರ ನೆನಪಿನಲ್ಲಿ ಉಳಿದಿರುವುದೇ ದೊಡ್ಡ ವಿಷಯ. ಇದನ್ನು ಓದಿದಾಗ ನನಗೆ ಸಾಕ್ರೆಟೀಸನ ನೆನಪು ಬಂತು. ಅವನು ಅಪರಾಧಿಯೆಂದು ತೀರ್ಮಾನವಾಗಿ ಅವನಿಗೆ ಹೆಮ್‌ಲಾಕ್ ಎಂಬ ವಿಷವನ್ನು ಕುಡಿಸಿ ಸಾಯಿಸುವುದು ನಿರ್ಧಾರವಾದ ಮೇಲೆ ಅವನು ಆ ತೀರ್ಮಾನಕ್ಕೆ ತಲೆಬಾಗಿದನು. ಆ ಸಂದರ್ಭದಲ್ಲಿ ಅವನು ತನ್ನ ಸಾಲಸೋಲಗಳನ್ನು ನೆನೆದು ತನ್ನ ಶಿಷ್ಯರಿಗೆ ಹೇಳಿದನಂತೆ : ''ನಾನೀಗ ಯಾರಿಗೂ ಏನನ್ನೂ ಹಿಂದಿರುಗಿಸಬೇಕಾಗಿಲ್ಲ. ಆದರೆ ಕೇಟೋ ಎಂಬುವನ ಬಳಿ ಒಂದು ಕೋಳಿಯನ್ನು ಸಾಲವಾಗಿ ಪಡೆದಿದ್ದೆ. ಅದನ್ನು ತೀರಿಸಿಲ್ಲ. ಅದನ್ನು ಅವನಿಗೆ ನನ್ನ ಪರವಾಗಿ ಹಿಂದಿರುಗಿಸಿ ಬಿಡಿ''. ಈ ಸನ್ನಿವೇಶ ನೆನಪಿಗೆ ಬಂದು ನನಗೆ ನಾನೇ ನಕ್ಕೆ.

ಸೇಡಿಯಾಪು ಅವರ ಪತ್ರಲೇಖನಕ್ಕೆ ಸಂಬಂಧಿಸಿದಂತೆ ಇಬ್ಬರು ಲೇಖಕರು ಎರಡು ಪತ್ರ ಸಂಕಲನಗಳನ್ನು ತಂದಿದ್ದಾರೆ. ೧. ಶ್ರೀ ಎಂ. ರಾಮಚಂದ್ರ ಅವರದು. ೨. ಶ್ರೀ ಏರ್ಯ ಲಕ್ಷ್ಮೀ ನಾರಾಯಣ ಆಳ್ವ ಅವರದು. ಕಿರಿಯರ ಜೀವನಕ್ಕೆ ಸೇಡಿಯಾಪು ಅವರು ಯಾವ ನಿಟ್ಟಿನಲ್ಲಿ ನಿಂತು ಮಾರ್ಗದರ್ಶನ ಮಾಡುತ್ತಿದ್ದರು ಎಂಬುದಕ್ಕೆ ಇವೆರಡೂ ಪುಸ್ತಿಕೆಗಳು ನಿದರ್ಶನಗಳಾಗಿವೆ. ಗುರುಶಿಷ್ಯ ಸಂಬಂಧದ ಆತ್ಮೀಯತೆಯನ್ನೂ ಹಿರಿಮೆಯನ್ನೂ ದೃಢಪಡಿಸುವ ಈ ಎರಡು ಗ್ರಂಥಗಳು ಕನ್ನಡದಲ್ಲಿಯೇ ವಿಶಿಷ್ಟವಾದವು. ಪತ್ರಗಳನ್ನೊಳಗೊಂಡ ಮತ್ತೆ ಕೆಲವು ಗ್ರಂಥಗಳಿರುವುದು ನಿಜವಾದರೂ ಹೀಗೆ ಗುರುಶಿಷ್ಯ ಸಂಬಂಧವನ್ನು ಪರಿಣಾಮದಲ್ಲಿ ಸೊಗಸುಗೊಳಿಸುವ ಇಂಥ ಪ್ರಕಟಣೆಗಳು ಬೇರೆ ಯಾವುದೂ ಇಲ್ಲ.

ಈಚೆಗೆ ಪ್ರಕಟವಾದ ಸೇಡಿಯಾಪು ಅವರ ತಥ್ಯದರ್ಶನವನ್ನೂ ಅದರ ಇಂಗ್ಲಿಷ್ ಅನುವಾದ ವಾದ DISCOVERY OF FACTS ಎಂಬುದನ್ನೂ ನಾನು ಈಚೆಗೆ ಓದಿದ್ದೇನೆ. ಇದರಲ್ಲಿ ಅವರು ಆರ್ಯ, ವರ್ಣ, ಜಾತಿ, ಲಿಂಗ ಎಂಬ ನಾಲ್ಕು ಪದಗಳ ಅರ್ಥವ್ಯಾಪ್ತಿಯನ್ನು ಹೊಸ ನೋಟಕ್ಕೆ ಒಳಪಡಿಸಿದ್ದಾರೆ. ವೇದಾರ್ಥಗ್ರಹಣವು ಕ್ಲಿಷ್ಟವಾದುದು. ಸಾಯಣನ ಭಾಷ್ಯಕ್ಕಿಂತ ಯಾಸ್ಕನ ನಿರುಕ್ತವೇ ಹೆಚ್ಚು ಸಹಾಯವನ್ನು ನೀಡುತ್ತದೆ. ವೇದವು ಭೌತಿಕ ವಸ್ತುಗಳ ಸ್ತೋತ್ರವಲ್ಲವೆಂದೂ ಭೌತಿಕ ವಸ್ತುಗಳ ಹಾಗೆ ಇಂದ್ರಿಯ ಗೋಚರವಾಗುವ ವಿಶ್ವನಿಯಮಿತ ಶಕ್ತಿ ಎಂಬುದೇ ಆ ಸ್ತೋತ್ರಗಳ ವಸ್ತುವೆಂದೂ ಹೊಸ ಅರ್ಥವನ್ನು ಹುಡುಕಿ ವಿವರಿಸಿದ್ದಾರೆ. ಈ ಗ್ರಂಥದ ಬರಹ ತುಂಬ ಅರ್ಥಗರ್ಭಿತವಾಗಿದ್ದು ಓದುಗನನ್ನು ಚಿಂತನೆಗೆ ದೂಡುತ್ತದೆ.

ನಾಡಿನ ಹಿರಿಯ ವಿದ್ವಾಂಸರಾದ ಸೇಡಿಯಾಪು ಅವರು ನಿಧನ ಹೊಂದಿದ ಎರಡು ತಿಂಗಳುಗಳೊಳಗಾಗಿ ಅವರಿಗೆ ಪಂಪ ಪ್ರಶಸ್ತಿಯನ್ನು ಪ್ರಕಟಿಸಲಾಯಿತು. ಆ ಪ್ರಶಸ್ತಿ ಮರಣೋತ್ತರ ಪ್ರಶಸ್ತಿಯಾಯಿತು. ಯಾವ ಪ್ರಶಸ್ತಿಗೂ, ಹೊಗಳಿಕೆಗೂ, ಅಧಿಕಾರಕ್ಕೂ ಹಾತೊರೆಯದ ಅವರ ಆತ್ಮಕ್ಕೆ ಈ ಪ್ರಶಸ್ತಿ ಎಂತು ಕಾಣುತ್ತದೋ ನಾನರಿಯೆ !

ಆದರೆ ಸೇಡಿಯಾಪು ಅವರ ಅಭಿಮಾನಿಗಳೂ ಶಿಷ್ಯರೂ ಬಂಟ್ವಾಳದಲ್ಲಿ ಸಮದರ್ಶಿ ಸೇಡಿಯಾಪು ಅವರ ಸಂಸ್ಮರಣ ಎಂಬ ಸಾಹಿತ್ಯೋತ್ಸವವನ್ನು ತುಂಬ ವಿಜೃಂಭಣೆಯಿಂದ ಏರ್ಪಡಿಸಿದ್ದರು. ದಕ್ಷಿಣ ಕನ್ನಡದ ಹಿರಿಯ ಸಾಹಿತ್ಯಪ್ರೇಮಿ ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವರ ನೇತೃತ್ವದಲ್ಲಿ ನಡೆದ ಆ ಉತ್ಸವದ ಅಚ್ಚುಕಟ್ಟನ್ನೂ ಔಚಿತ್ಯವನ್ನೂ ಎಲ್ಲರೂ ಮೆಚ್ಚಿಕೊಂಡರು.

ಈ ಸಂದರ್ಭದಲ್ಲಿ ಆ ಉತ್ಸವದಲ್ಲಿ ಮಾತನಾಡಿದವರೆಲ್ಲ ವಿಶೇಷವಾಗಿ ಉಲ್ಲೇಖಿಸಿದ ವಿಷಯ ನನಗೆ ಬಹಳ ಹಿಡಿಸಿತು. ಸೇಡಿಯಾಪು ಅವರ ವಾರ್ಧಕ್ಯದಲ್ಲಿ ಅವರಿಗೆ ದೃಷ್ಟಿಪಾಟವ ಇಲ್ಲದೇ ಇದ್ದಾಗ ಅವರ ಆರೈಕೆಯನ್ನು ಮಾಡಿದ ಅವರ ಮಗ ಶ್ರೀ ಜಯರಾಮ ಭಟ್ಟರನ್ನೂ ಅವರ ಪತ್ನಿಯನ್ನೂ ಎಲ್ಲರೂ ಗೌರವದಿಂದ ಅಭಿನಂದಿಸಿದರು. ನಾಡಿನ ಸಾಹಿತ್ಯಾಭಿಮಾನಿಗಳ ಪರವಾಗಿ ಅಧ್ಯಕ್ಷ ಸ್ಥಾನದಿಂದ ನಾನು ನನ್ನ ಹೃತ್ಪೂರ್ವಕವಾದ ಗೌರವವನ್ನು ಸಲ್ಲಿಸಿ ಅವರ ಕುಟುಂಬಕ್ಕೆ ಶುಭವನ್ನು ಹಾರೈಸಿದೆ.

ಅನುಬಂಧ

ಸೇಡಿಯಾಪು ಕೃಷ್ಣಭಟ್ಟರ ಕೃತಿಗಳು

೧.	ಕನ್ನಡ ನಿಘಂಟು (ಇತರರೊಡನೆ)	೧೯೫೧
೨.	ಕನ್ನಡ ವರ್ಣಗಳು	೧೯೫೫
೩.	ಚಂದ್ರಖಂಡ ಮತ್ತು ಕೆಲವು ಸಣ್ಣ ಕಾವ್ಯಗಳು	೧೯೬೯
೪.	ಪಳಮೆಗಳು ಮತ್ತು ಎರಡು ಕಥನಗಳು	೧೯೬೯
೫.	ಕೆಲವು ದೇಶನಾಮಗಳು	೧೯೭೫
೬.	ಛಂದೋಗತಿ	೧೯೮೫
೭.	ಕನ್ನಡ ಛಂದಸ್ಸು	೧೯೮೮
೮.	ತಥ್ಯದರ್ಶನ	೧೯೯೧
೯.	ಗಮಕ ಸಮಾಸ	೧೯೯೧
೧೦.	ವಿಚಾರ ಪ್ರಪಂಚ	೧೯೯೨
೧೧.	DISCOVERY OF FACTS	೧೯೯೯
೧೨.	ಈಶ್ವರ ಸಂಕಲ್ಪ ಅಥವಾ ದೈವಲೀಲೆ	೧೯೯೬

ಶ್ರೀ ರಾಮಾಯಣ ದರ್ಶನದಲ್ಲಿ ಪ್ರಾದೇಶಿಕತೆ

ಶ್ರೀ ಕೋ. ಚೆನ್ನಬಸಪ್ಪ

ಒಂದು ಕಲೆ, ಆ ಕಲೆಗಾರನು ಹಡೆದ ಕೂಸು. ಕಲೆಗಾರ ತಾಯಿ, ಅವನ ಕಲೆ ತನ್ನ ಒಡಲಿನ ಶಿಶು. ತಾಯಿಯಂತೆ ಮಗು ಎಂಬುದು ಎಷ್ಟು ಸತ್ಯವೋ, ಕಲೆಗಾರನಂತೆ ಕಲೆ ಎಂಬುದೂ ಅಷ್ಟೇ ಸತ್ಯ. ಸಕಲ ಕಲೆಗೂ ಅನ್ವಯಿಸುವ ಈ ಮಾತು ಕಾವ್ಯಕಲೆಗೂ ಅನ್ವಯಿಸುತ್ತದೆ. ಅಂದರೆ ಕವಿಯಂತೆ ಕಾವ್ಯ ಎಂದಂತಾಯಿತು. ''ಸ ಯತ್ಸ್ವಭಾವಃ ಕವಿಃ ತದನು ರೂಪಂ ಕಾವ್ಯಂ.''

ಕಲೆ ಎಂದರೆ ಕಲೆಗಾರನ ಮನಸ್ಸಿನ ಪಡಿನೆಳಲು. ಚಿತ್ರಕಾರನ ಮನಸ್ಸು ಚಿತ್ರದಲ್ಲಿ ಮೂಡುತ್ತದೆ, ಶಿಲ್ಪಿಯ ಮನಸ್ಸು ಶಿಲ್ಪದಲ್ಲಿ. ಹಾಗೆಯೇ ಕವಿಯ ಮನಸ್ಸು ತನ್ನ ಕಾವ್ಯದಲ್ಲಿ ಮೂಡುತ್ತದೆ. ಚಿತ್ರಕಾರ ತನ್ನ ಮನಸ್ಸನ್ನು ಬಣ್ಣದಲ್ಲಿ ಮೂಡಿಸಿ ಕಣ್ಣಿಗೆ ಕಾಣುವಂತೆ ಮಾಡುತ್ತಾನೆ. ಹಾಗೆ ಕವಿ ತನ್ನ ಮನಸ್ಸನ್ನು ಮಾತು ಎಂಬ ಬಣ್ಣದಿಂದ ಅಕ್ಷರದಲ್ಲಿ ಬಿಡಿಸುತ್ತಾನೆ. ಶಿಲ್ಪಿಗೆ ಕಲ್ಲು ಹೇಗೋ, ಕವಿಗೆ ಮಾತು ಹಾಗೆ.

ಹಾಗಾದರೆ ಕವಿಯ ಮನಸ್ಸು ಹೇಗೆ ಸಿದ್ಧವಾಗುತ್ತದೆ? ಮತ್ತು ಅದು ಹೇಗೆ ಮಾತಿನ ಮೈ ತಾಳುತ್ತದೆ? ಶ್ರೀ ರಾಮಕೃಷ್ಣ ಪರಮ ಹಂಸರು, ಮನಸ್ಸು ತಾ ಪಡೆಯುವ ಸಂಸ್ಕಾರದಂತೆ ರೂಪು ತಾಳುತ್ತದೆ ಎಂಬುದಕ್ಕೆ ಒಂದು ದೃಷ್ಟಾಂತ ಹೇಳುತ್ತಿದ್ದರು. ನೇಕಾರ ತಾನು ನೇಯಲಿರುವ ದಾರದ ಲಡಿಗಳನ್ನು ತನಗೆ ಬೇಕಾದ ಬಣ್ಣದ ತೊಟ್ಟಿಯಲ್ಲಿ ಅದ್ದಿ ತೆಗೆದು ಬಣ್ಣ ಕೊಟ್ಟು ಒಣಗಿಸುತ್ತಾನೆ. ಮೊದಲು ಬಿಳಿಯದಾಗಿದ್ದ ದಾರದ ಲಡಿ, ಅದ್ದಿದ ಬಣ್ಣವನ್ನು ಪಡೆಯುವಂತೆ, ಈ ಮನಸ್ಸೂ ಕೂಡ, ಯಾವ ಯಾವ ಸಂಸ್ಕಾರ ಪಡೆಯುತ್ತದೆಯೋ ಆ ಬಣ್ಣವನ್ನೇ ತಾಳುತ್ತದೆ. ಅದೇ ಮಾತನ್ನು ಸಂತ ಜ್ಞಾನದೇವ ತನ್ನ ಜ್ಞಾನೇಶ್ವರಿಯಲ್ಲಿ ಇನ್ನೊಂದು ರೀತಿಯಲ್ಲಿ ಹೇಳಿದ್ದಾನೆ. ಒಂದೇ ಬಾವಿಯ ನೀರು, ಕಬ್ಬಿನ ತೋಟಕ್ಕೆ ಹರಿದರೆ ಸಿಹಿಯಾಗುತ್ತೆ. ಅದೇ ನೀರು

ಮೆಣಸಿನಕಾಯಿ ಗಿಡಕ್ಕೆ ಹಾಯ್ದರೆ ಖಾರವಾಗುತ್ತದೆ; ಹುಣಸೆಯ ಮರದ ಬುಡಕ್ಕೆ ಹೋಗಿ ಹುಳಿಯಾಗುತ್ತದೆ. ನೀರು ಕಾದ ಕಬ್ಬಿಣದ ನಳಿಗೆಯಲ್ಲಿ ಹರಿದು ಬಂದರೆ ಬಿಸಿ ನೀರಾಗುತ್ತದೆ; ಸಕ್ಕರೆಯ ನಳಿಗೆಯಲ್ಲಿ ಹಾಯ್ದು ಬಂದರೆ ಸಿಹಿಯಾಗುತ್ತದೆ. ಒಟ್ಟು ಎಲ್ಲರ ಮನಸ್ಸು ಅದು ಹೊಂದುವ ಸಂಸ್ಕಾರವನ್ನು ಅವಲಂಬಿಸಿ ರೂಪುಗೊಳ್ಳುತ್ತದೆ. ಕವಿಯ ಮನಸ್ಸಾದರೂ ಅಷ್ಟೇ.

ಸಂಸ್ಕಾರ ಎಂದರೇನು?

''ಸಂಸ್ಕಾರವೆಂದರೆ ಮೇಲ್ಪಾಡು, ತಿದ್ದುಪಾಡು, ಯೋಗ್ಯತೆ ಅಥವಾ ಅಧಿಕಾರ ಸಂಪಾದನೆ. ದೋಷ ಕಳಿದು ಗುಣ ಸಂಪಾದನೆ ಮಾಡಿಕೊಂಡು ಶುದ್ಧವಾಗುವುದು ಎಂಬುದು ಇನ್ನೊಂದು ಅರ್ಥ. ಪ್ರತಿ ದಿನವೂ ಪ್ರತಿ ಸಂಬಂಧದಲ್ಲಿಯೂ ಮನುಷ್ಯನ ಮನಸ್ಸು ಶುದ್ಧವಾಗಿ ಮೃದುವಾಗಿ ಲೋಕಹಿತಕ್ಕೆ ಸಜ್ಜಾಗಬೇಕು ಎಂಬುದು ತತ್ವ... ಶಿಲ್ಪಿಯ ಉಳಿಯ ಪೆಟ್ಟು ಬಿದ್ದಂತೆಲ್ಲ ಕಲ್ಲಿನಲ್ಲಿ ಮೂರ್ತಿ ಹೇಗೆ ಕಡೆದು ರೂಪುಗೊಂಡು ಚೆಲುವಾಗುವುದೋ ಹಾಗೆ ಈ ಸಂಸ್ಕಾರಗಳು ಮನುಷ್ಯನ ಜೀವವನ್ನು ರೂಪಿಸುವುವು.''[1]

ಮನಸ್ಸಿಗೆ ಹೇಗೆ ಸಂಸ್ಕಾರವುಂಟಾಗುತ್ತದೆ?

'ಮನುಷ್ಯ ಏನನ್ನು ತಿನ್ನುತ್ತಾನೋ ಅದನ್ನೇ ತೇಗುತ್ತಾನೆ' ಎನ್ನುತ್ತಾರೆ ಶ್ರೀ ರಾಮ ಕೃಷ್ಣ ಪರಮಹಂಸರು. ಹಾಗೆಯೇ ಕವಿಯ ಮನಸ್ಸು ಏನನ್ನು 'ತಿನ್ನುತ್ತದೆಯೋ' ಅದರಂತೆಯೇ ಆಗುತ್ತದೆ. ಕವಿಯ ಮನಸ್ಸಿಗೆ ಏನೇನು ಆಹಾರವಾಗಬಹುದು? ಅದಕ್ಕೆ ಇತಿ, ಮಿತಿ ಎಂಬುದೇ ಇಲ್ಲ. ಕವಿ ಹುಟ್ಟಿದಂದಿನಿಂದ - ಅಷ್ಟೇಕೆ? ಹುಟ್ಟುವ ಮೊದಲೇ ತಾಯ ಗರ್ಭದಲ್ಲಿದ್ದಾಗ, ಬಹುಶಃ ಅದಕ್ಕಿಂತಲೂ ಹಿಂದೆ ಪೂರ್ವಜನ್ಮದಲ್ಲಿ ಪಡೆದ ಸಂಸ್ಕಾರದಿಂದ ಹಿಡಿದು ಅವನು ಸಾಯುವವರೆಗೆ, ಅವನ ಪಂಚೇಂದ್ರಿಯಗಳಿಗೆ ವೇದ್ಯವಾಗುವ ಸಮಸ್ತ ವಸ್ತು ಸಂಗತಿಗಳೂ, ಅವನ ಮನಸ್ಸಿಗೆ ಆಹಾರವಾಗುತ್ತವೆ. ಅವನು ತಾಯ ಗರ್ಭದಲ್ಲಿದ್ದಾಗ ಅವನ ತಾಯಿ ತಿಂದುಂಡ ಅನ್ನ ಹೇಗೆ ಅವನ ಭೌತಿಕ ದೇಹಕ್ಕೆ ಆಹಾರವಾಗುವುದೋ ಹಾಗೆಯೇ ಭ್ರೂಣಸ್ಥಿತಿಯಲ್ಲಿ ಇದ್ದಾಗಲೂ ರೂಪುಗೊಳ್ಳುತ್ತಿರುವ ಅವನ ಮನಸ್ಸಿಗೆ, ಅವನ ತಾಯಿ ಕೇಳುವ ಮಾತುಗಳು, ಕತೆಗಳು, ಪುರಾಣ ಪುಣ್ಯ ಪ್ರವಚನೆಗಳು, ಕೆಟ್ಟಬೈಯ್ಗುಳು, ಸುಮಧುರ ಸಂಗೀತವೂ ಎಲ್ಲವೂ ಆಹಾರವಾಗುತ್ತವೆ. ಆ ತರುವಾಯ ಅವನು ಬುವಿಯ ಬೆಳಕು ಕಂಡ ಮೇಲೆ ತೊಟ್ಟಿಲಲ್ಲಿ ಇದ್ದಾಗ ತಾಯಿ ಹಾಡುವ ಜೋಗುಳ ಪದ, ಅಪ್ಪ ಸಿಟ್ಟಾಗಿ ಬೈಯ್ದಾಡುವ ಅಶ್ಲೀಲ ಶಬ್ದಗಳು, ಎತ್ತಿನ ಕೊರಳ ಗಂಟೆ, ಮನೆಯಲ್ಲಿ ಕೊಯ್ಯುವ ಕೋಳಿಯ ಆರ್ತಧ್ವನಿ, ಹಕ್ಕಿಗಳ ಉರಿ, ಎಲ್ಲವೂ ಅವನ ಮನಸ್ಸಿಗೆ ಆಹಾರವಾಗುತ್ತದೆ. ಆ ತರುವಾಯ ತಾನು ಬೆಳೆಯುವ ಸನ್ನಿವೇಶ, ಓದಿದ ಓದು, ಕಲಿತ ಬುದ್ಧಿ, ಕೇಳಿದ ಮಾತು, ಮಾಡಿದ ಸಾಧನೆ - ಅಂಗ ಸಾಧನೆ ಮತ್ತು ಆತ್ಮ ಸಾಧನೆ - ಪಡೆದ ಅನುಭವ, ಉಂಡ ಸಿಹಿಕಹಿ, ಕಂಡ ಸುಖ, ದುಃಖ, ಇವೂ ಕವಿಯ ಮನಸ್ಸಿಗೆ ಆಹಾರವಾಗುತ್ತವೆ. ಮೊಟ್ಟೆ ಮಾಂಸ ತಿಂದವರ ಮೈಉಬ್ಬುವಂತೆ, ಹೆಂಡ ಕುಡಿದಾಗ ಅಮಲು ಬರುವಂತೆ, ಮನಸ್ಸೂ ಕೆಲವು ಆಹಾರದಿಂದ ಉಬ್ಬಿ ಕೊಬ್ಬುತ್ತದೆ. ಕೆಲವು ಬಗೆಯ ಆಹಾರದಿಂದ ಮನಸ್ಸಿಗೂ ಅಮಲೇರುತ್ತದೆ. ಹೀಗೆ ಅವನ ಮನಸ್ಸಿನ ಆಹಾರಕ್ಕೆ ಕೊನೆ ಮೊದಲೇಯಿಲ್ಲ.

ಹೀಗೆ ಎಲ್ಲ ಮನಸ್ಸುಗಳಿಗೂ ಸಂಸ್ಕಾರವುಂಟಾಗುತ್ತದೆ. ಆದರೆ ಎಲ್ಲ ಮನಸ್ಸುಗಳೂ ಕಾವ್ಯರಚನೆ ಮಾಡಲಾರವು. ಕಾವ್ಯ ರಚನೆಗೆ ''ದೇಹ ಮನಸ್ಸುಗಳ ಸ್ವಸ್ಥತೆ, ಪ್ರತಿಭೆ, ಅಭ್ಯಾಸ, ಭಕ್ತಿ ವಿದ್ವಾಂಸರೊಡನೆ ಮಾತುಕತೆ, ಪಾಂಡಿತ್ಯ, ದೃಢವಾದ ಜ್ಞಾಪಕಶಕ್ತಿ ಉತ್ಸಾಹ ಇವೆಂದೂ ಕವಿತ್ವಕ್ಕೆ ತಾಯಂದಿರು ಎಂದು ಪಟ್ಟಿ ಹಾಕುತ್ತಾನೆ'' ರಾಜಶೇಖರ ಈ ಮಾತೃಗಣದಲ್ಲಿ ಕವಿತೆಗೆ

---

1. ಧರ್ಮಶಾಸ್ತ್ರ - ಶ್ರೀ ವಿ.ಸಿ. ಅವರ ಗ್ರಂಥ.

ಹೆತ್ತತಾಯಿ ಪ್ರತಿಭೆಯೊಂದೇ.... ಇವುಗಳಲ್ಲೆಲ್ಲಾ ಅತಿಮುಖ್ಯವಾದದ್ದು ವ್ಯುತ್ಪತ್ತಿ... ಅನೇಕ ವಿಷಯಗಳನ್ನು ತಿಳಿದಿರುವುದೇ ವ್ಯುತ್ಪತ್ತಿ. ''ಇದರ ತಿಳಿವು ನನಗೆ ಅನಾವಶ್ಯಕ'' ಎಂದು ಕವಿ ನಿರಾಕರಿಸಬಹುದಾದ ವಿಷಯವೇ ಜಗತ್ತಿನಲ್ಲಿ ಇಲ್ಲ.'' [2]

ಕವಿಯ ಮನಸ್ಸು ಕ್ಯಾಮೆರಾದ ಫಿಲ್ಮ್‌ನಂತೆ ತನ್ನ ಮುಂದೆ ಬರುವ ಪ್ರತಿಯೊಂದು ವಸ್ತು ಸಂಗತಿಯನ್ನೂ ಗ್ರಹಿಸುತ್ತದೆ ಹಾಗೂ ತನ್ನ ಗರ್ಭದಲ್ಲಿ ಧರಿಸುತ್ತದೆ. ಕೃತಿ ರಚನೆಯ ಕಾಲಕ್ಕೆ ತನ್ನ ಗರ್ಭದಲ್ಲಿದ್ದ ಅನುಭವ ಸಾರವನ್ನು ಕವಿ ಮಾತಿನ ಮೂಲಕ ಹೊರಚೆಲ್ಲುತ್ತದೆ. ಆದ್ದರಿಂದ ಕಾವ್ಯ ಕವಿಯ ಮನಸ್ಸಿನ ಪ್ರತಿಚ್ಛಾಯೆ ಎಂಬುದು.

ಅಷ್ಟು ಮಾತ್ರವೇ ಅಲ್ಲ. 'ವ್ಯುತ್ಪತ್ತಿ' ಕವಿಯ ಬಹು ದೊಡ್ಡ ಬಂಡವಾಳ. ಆದರೆ ಅಷ್ಟರಿಂದಲೇ ಕವಿಗೆ ಪೂರ್ಣ ಅರ್ಹತೆ ದೊರೆಯದು. ''ದರ್ಶನ ಮತ್ತು ವರ್ಣನೆ ಇವೆರಡೂ ಇದ್ದರೇ ಲೋಕದಲ್ಲಿ ಕವಿಯೆಂದು ಕರೆಯುವುದು'' [3]. ''ಜಗತ್ತಿನ ವಿವಿಧ ವಸ್ತುಗಳ ಧರ್ಮಾಂಶದ ತತ್ತ್ವವನ್ನು ಕಾಣುತ್ತದೆ ದರ್ಶನ. ತತ್ತ್ವದರ್ಶನವನ್ನು ಹೊಂದಿರುವಷ್ಟಕ್ಕೇ ಒಬ್ಬನಿಗೆ 'ಕವಿ' ಎಂಬ ಹೆಸರು ಶಾಸ್ತ್ರಗಳಲ್ಲಿ ಉಕ್ತವಾಗಿದೆ. (ಕವಿರ್ಮನೀಷೀ ಪರಿಭೂಃ ಈಶಾವಾಸ್ಯ)'' ಹೀಗೆ, ಸಂಸ್ಕಾರಗೊಂಡ ಸುಸಂಸ್ಕೃತ ಕವಿಯ ಮನಸ್ಸು, ದರ್ಶನದೀಪ್ತವಾಗಿ ಪ್ರತಿಭೆಯ ಮೂಲದಿಂದ ಕಾವ್ಯದಲ್ಲಿ ಮೂಡುತ್ತದೆ.

ಕವಿಗೆ ಅನ್ವಯಿಸುವ ಮೇಲಿನ ಮಾತುಗಳು ಮಹಾಕವಿಗೂ ಇನ್ನೂ ಅಧಿಕತರವಾಗಿ ಅನ್ವಯಿಸುತ್ತವೆ. ಸಾಧಾರಣ ಕವಿ ತನ್ನ ಸಾಧಾರಣ ಕಾವ್ಯದಲ್ಲಿ ತನ್ನೋರ್ವನ ಅನುಭವ ಸಾರವನ್ನು ಕಾಣಿಸಿದರೆ, ಮಹಾಕವಿ ತನ್ನ ಮಹಾಕಾವ್ಯದಲ್ಲಿ ಇಡೀ ಒಂದು ಜನಾಂಗದ - ಅಷ್ಟೇಕೆ ಇಡೀ ಮಾನವ ಜನಾಂಗದ ಮನಸ್ಸನ್ನೇ ಪ್ರತಿಬಿಂಬಿಸುತ್ತಾನೆ ಎನ್ನಬಹುದು. ತಾನು ಬಾಳಿ ಬದುಕಿದ ಕಾಲ ದೇಶದ, ನಾಡುನುಡಿಯ, ಜಾತಿ ಜನಾಂಗದ ಸಮಸ್ತ ವಸ್ತು ಸಂಗತಿಗಳನ್ನೇ ಮಾತ್ರವಲ್ಲದೆ 'ಕಾಲದೇಶದ ನುಡಿಯ ಜಾತಿಯ ವಿಭೇದಂ ಲೆಕ್ಕಿಸದೆ' ಇಡೀ ಮಾನವಕೋಟಿಯ ಹೃದಯಾನುಭವಕ್ಕೆ ಮಹಾಕವಿ ನಾಲಗೆಯಾಗುತ್ತಾನೆ. ಅವನ ಮಹಾಕಾವ್ಯದಲ್ಲಿ ತಾನು ಬದುಕಿದ ಕಾಲ, ದೇಶ, ನಾಡು, ನುಡಿ, ದರ್ಶನಗಳು ಮಾತ್ರವೇ ಅಲ್ಲದೆ, ಇಡೀ ವಿಶ್ವವನ್ನೇ - ಲೋಕ ಲೋಕಾಂತರಗಳನ್ನೇ - ಲೋಕ ಲೋಕೋತ್ತೀರ್ಣ ವಸ್ತು ಸಂಗತಿಗಳನ್ನೇ ತನ್ನ ಕಾವ್ಯದಲ್ಲಿ ಮೂಡಿಸುತ್ತಾನೆ. ಮಹಾಕವಿಯ ಮನಸ್ಸು 'ಜಗದಗಲ ಮುಗಿಲಗಲ'. ಅದನು ಜಗಚ್ಚಕ್ಷು.

ಹೀಗಿರುವಾಗ ಮಹಾಕಾವ್ಯಕರ್ತೃ ಕುವೆಂಪು ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯದಲ್ಲಿ, ಮಹಾಕವಿ ಮನೋಧರ್ಮಕ್ಕೆ ಅನುಗುಣವಾಗಿ ಇಡೀ ವಿಶ್ವಾನುಭವವನ್ನು ಮೂಡಿಸಿದ್ದಾರೆ. ಅದರಲ್ಲಿ ಭೂತ ಕಾಲದ ಜನಾಂಗ ಜೀವನದ ಛಾಯೆ ಇದೆ. ವರ್ತಮಾನವಂತೂ ಘನೀಭೂತವಾಗಿ ಮೈದೋರಿದೆ. ಭವಿಷತ್ ಬಾಳಿನ ಅರುಣೋದಯವೂ ಅಲ್ಲಿ ಮೂಡಿದೆ. ಕರ್ನಾಟಕದ, ಭರತ ಖಂಡದ, ಪೌರ್ವಾತ್ಯ ಪಾಶ್ಚಾತ್ಯ ಪ್ರಪಂಚದ ಲೋಕವೃತ್ತಾಂತವೂ, ಪ್ರಾದೇಶಿಕತೆಯೂ ಇದೆ. ಪ್ರಸ್ತುತ ಇಲ್ಲಿ ಗಮನಿಸುತ್ತಿರುವುದು ಶ್ರೀ ರಾಮಾಯಣದರ್ಶನದಲ್ಲಿ ಅವರು ಹುಟ್ಟಿ ಬೆಳೆದ ಮಲೆನಾಡು, ಅದರ ಪ್ರಕೃತಿ ಸೌಂದರ್ಯ, ರುದ್ರರಮಣೀಯತೆ, ಘೋರ ಭೀಷಣತೆ ಹೇಗೆ ಮೂಡಿದೆ ಎಂಬುದನ್ನು.

ಕವಿ ಕುವೆಂಪು ಅವರಿಗೆ ಮಲೆನಾಡು ಎಂದರೆ ಹುಚ್ಚು! ಬರೀ ಹುಚ್ಚು! ಕೇವಲ ಹುಚ್ಚು! ಲೋಭಿಗೆ ಧನದ ಮೇಲಿರುವ ಹುಚ್ಚಿಗಿಂತ - ಹುಚ್ಚು! ವ್ಯಸನಿಗೆ ವ್ಯಸನದ ಮೇಲಿರುವ ಹುಚ್ಚಿಗಿಂತಲೂ ಹುಚ್ಚು! ಇಷ್ಟೆಲ್ಲ ಹೇಳಿದರೂ ಕವಿಕುವೆಂಪು ಅವರಿಗೆ ಮಲೆನಾಡಿನ ಮೇಲಿರುವ ಆ ಅನಿರ್ವಚನೀಯ ಉನ್ಮಾದವನ್ನು ಹೇಳಿದಂತಾಗಲಿಲ್ಲ. ಕಣ್ಣಿದ್ದ, ಹೃದಯವಿದ್ದ, ರಸದೃಷ್ಟಿಯಿದ್ದ ಯಾರಿಗಾದರೂ ಮನೆನಾಡು ಹುಚ್ಚು ಹಿಡಿಸುವಂಥಾದ್ದೇ! ಕವಿ ಹೃದಯವಿಲ್ಲದವನಿಗೂ ಮಲೆನಾಡಿನ ಪ್ರಕೃತಿ ಸೌಂದರ್ಯ, ಅದರ

---

2. ಭಾರತೀಯ ಕಾವ್ಯ ಮೀಮಾಂಸೆ - ಶ್ರೀ ತೀನಂಶ್ರೀ ಪು. ೧೬೫.

3. ಅದೇ.

ರುದ್ರಭಿಷಣತೆ, ಕೋಮಲ ರಮಣೀಯಂತೆ, ಮೃಗ ಪಕ್ಷಿಗಳ ಸೌಂದರ್ಯ.... ಸುಮ್ಮನೆ ಮನವನ್ನು ಸೂರೆಗೊಳ್ಳುತ್ತವೆ; ಹೃದಯವನ್ನು ಆಕ್ರಮಿಸುತ್ತವೆ. ಆ ಪ್ರಕೃತಿದೇವಿಯ ಅಖಂಡ ಚೈತನ್ಯ ಪ್ರವಾಹದಿಂದ ಪ್ರಭಾವಿತವಾಗದಿರುವುದು ಕಗ್ಗಲ್ಲಿಗೂ ಸಾಧ್ಯವಿಲ್ಲ! ಅಂದ ಮೇಲೆ ಸಚೇತನ ಮಾನವನನಿಗೆ? ಅದರಲ್ಲೂ ರಸಿಕನಿಗೆ? ರಸಋಷಿ ಕವಿಗೆ? ಅದನ್ನು ಕೇಳುವುದೇ ಬೇಡ.

ಬಹುಶಃ ಕುವೆಂಪು ಅವರ ಕವಿಚೇತನ ಮಲೆನಾಡಿನ ಪ್ರಕೃತಿಯಿಂದ ಪಡೆದಷ್ಟು ಪುಷ್ಟಿ, ತುಷ್ಟಿಯನ್ನು ಈ ಲೋಕದ ಮತ್ತಾವ ಭೌತಿಕ ವಸ್ತು ಸಂಗತಿಯಿಂದಲೂ ಪಡೆದಿಲ್ಲವೆಂದು ಧಾರಾಳವಾಗಿ ಹೇಳಬಹುದು. ಶ್ರೀ ರಾಮಕೃಷ್ಣ ವಿವೇಕಾನಂದರು, ಅವರ ಅಂತರಂಗವನ್ನು ಬೆಳಗಿಸುವುದರಲ್ಲಿ, ಬೆಳೆಸುವುದರಲ್ಲಿ ಯಾವ ಮಹೋನ್ನತ ಪಾತ್ರವನ್ನು ವಹಿಸಿದರೋ ಅಷ್ಟೇ ಮಹತ್ವದ ಪಾತ್ರವನ್ನು ಮಲೆನಾಡು ಅವರ ಭಾವಕೋಶವನ್ನು ಬೆಳೆಸುವುದರಲ್ಲೂ ವಹಿಸಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ಅಂದ ಮೇಲೆ ಚೆನ್ನಾಗಿ ಬೆಳೆದ ಪೈರು, ಹಸಿರನ್ನೇ ಕಕ್ಕುವಂತೆ, ಅವರ ಕಾವ್ಯ ಮಲೆನಾಡನ್ನೇ ಕಕ್ಕುತ್ತಿದ್ದರೆ ಆಶ್ಚರ್ಯವಿಲ್ಲ. ಹಾಗೆ, ಅದರ ಇಡೀ ಕಾವ್ಯರಾಶಿಯಲ್ಲಿ ಮಲೆನಾಡು ಸೃಷ್ಟಿಯಲ್ಲಿರುವ ರಸದಂತೆ ಓತಪ್ರೋತವಾಗಿದೆ. ಆದರೆ ಇಲ್ಲಿ ಪ್ರಸ್ತಾವಿಸಬೇಕೆಂದಿರುವುದು, 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯದಲ್ಲಿ ಮೈವೆತ್ತ ಮಲೆನಾಡನ್ನು.

೩

ಮಹಾಕವಿ ಕುವೆಂಪು ಅವರ ಮಲೆನಾಡ ಪ್ರೇಮ, ಯಾವಾಗ ಹೊರ ನುಗ್ಗಿ ಕಾವ್ಯ ಪ್ರವಾಹದಲ್ಲಿ ಮೈದೋರೇನೋ ಎಂದು ತುದಿಗಾಲ ಮೇಲೆಯೇ ನಿಂತಿರುವುದನ್ನು ಶ್ರೀ ರಾಮಾಯಣ ದರ್ಶನಂ ಮಹಾ ಕಾವ್ಯದುದ್ದಕ್ಕೂ ಕಾಣುತ್ತೇವೆ. ಯಾವುದೇ ನೆವ ಸಿಕ್ಕರೂ ಮಲೆನಾಡನ್ನು ಯಾವುದೇ ರೂಪದಿಂದಲಾದರೂ ತಂದು ''ತುರುಕುವ'' ಈ ಕವಿಗೆ, ರಾಮಾಯಣದಲ್ಲಿ ತರುವುದೇನು ಕಷ್ಟವೇ? ಸೋಜಿಗವೆ? ಹದಿಮೂರು ವರ್ಷ ಸೀತಾರಾಮ ಲಕ್ಷ್ಮಣರು ದಂಡಕಾರಣ್ಯದಲ್ಲಿಯೇ ಕಳೆದರು! ಸೀತಾಪಹರಣವಾದ ಮೇಲೆ ಕರ್ನಾಟಕಕ್ಕೂ ಬಂದರು. ಕಿಷ್ಕಿಂಧೆಯಲ್ಲಿಯೇ ಇದ್ದರು. ಬಹುಶಃ ಮಲೆನಾಡಿನ ಮಾರ್ಗವಾಗಿಯೇ ಅದರ ಅಕ್ಕಪಕ್ಕದಲ್ಲೇ ದಾಟಿ ರಾಮೇಶ್ವರಕ್ಕೆ ಹೋಗಿದ್ದಿರಬಹುದು. ಆದ್ದರಿಂದ ಅವರ ವನವಾಸ ಜೀವನವನ್ನು ಕುರಿತು ಬರೆಯುವಾಗ ಅನಿವಾರ್ಯವಾಗಿ ಮತ್ತು ಅಗತ್ಯವಾಗಿಯೂ ಅರಣ್ಯದ ಸಂಗತಿ ಬಂದೇ ಬರಬೇಕು. ಕವಿಯ ಈ ಪ್ರವೃತ್ತಿ ಸೀತಾರಾಮ ಲಕ್ಷ್ಮಣರು ಕಾಡು ಸೇರಿದ ಹೊಸತರಲ್ಲೇ ವ್ಯಕ್ತವಾಗುತ್ತದೆ. ಭರತ ಅಣ್ಣನನ್ನು ಕರೆತರಲು ಹೊರಡುತ್ತಾನೆ. ಆಗ ಕವಿಗೂ ಕಾತರ ಅವರೊಡನೆ ಅರಣ್ಯಕ್ಕೆ ಹೋಗಲು :

'ಕೈಕೆ ಭರತರಿಗಿರ್ಮಡಿಯ ಕಾತರತೆ, ಕೇಳ್, ಕವಿಗೆ
ಗಿರಿವನ ಪ್ರಿಯರಾಮ ಸಂದರ್ಶನಂ ಗೈಯೆ
ಕಾನನಾಂತರದಿ; ಕರೆತರಲಲ್ತು ಸಾಕೇತ
ಪುರಿಗೆ ಮರಳಿಸಲಲ್ತು ಮಣಿಮಕುಟ ಧಾರಣೆಗೆ' [4]

ಹಾಗಾದರೆ ಏತಕ್ಕೆ ಈ ಕಾತರ? ಲಕ್ಷ್ಮಣನಿಗೆ ಹೇಗೆ ಸೀತಾರಾಮರ ಸಂಗದ ಆಸೆಯೋ ಹಾಗೆಯೇ ಕವಿಗೂ ಸೀತಾರಾಮನ ಸಂಗಲಾಭಕ್ಕಾಗಿ ಆಸೆ. ಅಥವಾ, ಲಕ್ಷ್ಮಣನಿಗೆ ಸೀತಾರಾಮರ ಸಂಗದ ಆಸೆ ಹೇಗೋ ಹಾಗೆ ಕವಿಗೆ ಕಾಡಿನ ಆಸೆ. ''ಮಂಗಲ ತುಂಗ ಶೃಂಗ ವನರಂಗಮಂ ಚರಿಸಲಾನುತ್ಕಂಠಿತಂ!'' ಏಕೆಂದರೆ,

...ಮಲೆಯನಾಡೆನಗೆ
ತಾಯಿಮನೆ, ಕಾಡುದೇವರ ಬೀಡು. ಗಿರಿಯ ಮುಡಿ

---

4. ಶ್ರೀ ರಾ.ದ. ಸಂಚಿಕೆ ೭, ಚಿತ್ರಕೂಟಕೆ ಸಾಲು ೧ ರಿಂದ. ಪು. ೧೩೭. (ಇನ್ನು ಮುಂದೆ ಕೊಡುವ ಪುಟ ಸಂಖ್ಯೆ. ಪ್ರಸಾರಾಂಗವು ಪ್ರಕಟಿಸಿದ ಸುಲಭ ಬೆಲೆಯ ಆವೃತ್ತಿಯದು).

ಶಿವನ ಗುಡಿ. ಬನವೆಣ್ಣೆ ಮೊದಲಿಗಾ ಮನದನ್ನೆ.
ಕವಿ ರಾಮಚಂದ್ರನೀ ಸೀತಾ ಕಲಾಕಾಂತೆ
ನಿತ್ಯವನವಾಸಿಯಾದರಿಂದಮೀ ಕಬ್ಬಿಗಂ
ಗಿರಿವನ ಪ್ರೇಮ ಸಾದೃಶ್ಯದಿಂ ಸಮರಸಂ
ಸಮಹೃದಯಿ ರಾಮ ರಸಋಷಿಗೆ ವನದೇಶಮಂ
ಸವಿದಪೆನ್ ಸೀತಾರಮಣನೊಡನೆ....'' [5]

ಈ ಕವಿಗೆ ಮಲೆನಾಡು ತಾಯಿಮನೆಯಂತೆ! ಕಾಡುದೇವರ ಬೀಡಂತೆ! ಬೆಟ್ಟದ ನೆತ್ತಿ ಶಿವನ ಗುಡಿಯಂತೆ! ವನಸ್ತ್ರೀಯೇ ಮನದನ್ನೆಯಂತೆ! ಇದೇನಿದು ಹುಚ್ಚು ಎನಿಸೀತು, ಮಲೆನಾಡನ್ನು ನೋಡದವರಿಗೆ, ನೋಡಿದರೂ 'ನೋಡುವ' ಕಣ್ಣಿಲ್ಲದವರಿಗೆ, ಕಣ್ಣಿದ್ದರೂ ಕಾಣಲಾರದ ಅರಸಿಕರಿಗೆ ಕವಿಯ ಈ ಮಲೆನಾಡ ಮೋಹ ಬರೀ ಅರ್ಥವಿಲ್ಲದ ಬಡಬಡಿಕೆ ಎನಿಸೀತು. ಆದರೆ, ಮಲೆನಾಡಿನ ಸೃಷ್ಟಿಸೊಬಗನ್ನು ಕಾಣುವ ರಸಿಕಹೃದಯದ ಎಂಥವರಿಗೂ ಈ ಮಾತುಗಳು ಒಂದು ಅನಿರ್ವಚನೀಯ ಸಂತೋಷದ ಬುಗ್ಗೆಯನ್ನೇ ಹುಟ್ಟಿಸುತ್ತದೆ. ನಿಜವಾದ ಕವಿಯ ಆಸೆಯೇ ಅದು. ತನ್ನ ಕೃತಿ ಸಹೃದಯನ ರಸಿಕನ ಕೈ ಸೇರಬೇಕೆಂಬುದೇ ಆಸೆ. ಏಕೆಂದರೆ, ಕಲೆ ಎಂಬ ವಧುವಿನ ಮುತ್ತೈದೆತನಕ್ಕೆ ಸಹೃದಯವೆಂಬ ರಮಣನಿರಲೇಬೇಕು. ಯಾರು ಪ್ರಕೃತಿಯಾತ್ರೆಯಲ್ಲಿ 'ಕಾನನಾದೇಶಮಂ' ಪಡೆಯಲು ಶಕ್ತರೋ ಅವರೇ ಸಹೃದಯರು. ರಾಮನ ಸಾನ್ನಿಧ್ಯದಲ್ಲಿಪ್ಪ ಸೀತೆಯಂತೆ ಕೃತಿಕನ್ಯೆಯೂ ಧನ್ಯೆ.

ಕವಿ ಈ ರಸಾವೇಶದ ಸೆಳವಿಗೆ ಓದುಗನನ್ನು ಸೆಳೆದುಕೊಂಡು ಮಲೆನಾಡಿಗೆ ಸೀತಾರಾಮರೊಡನೆ ಕರೆದೊಯ್ಯುತ್ತಾರೆ. ಅಲ್ಲಿ - ಮಲೆನಾಡಿನಲ್ಲಿ - ಪ್ರಕೃತಿ ಸೌಂದರ್ಯದ ರಸಸಮಾಧಿಯನ್ನು ಪಡೆಯಬೇಕೆಂಬುದು ಕವಿಯ ಹಂಬಲ. ಈ ಹಂಬಲ ಎಷ್ಟು ಗಾಢ ಮತ್ತು ಪ್ರಾಮುಖ್ಯವೆಂದರೆ, ಶ್ರೀ ರಾಮನ ಬಗ್ಗೆ ತಮಗಿರುವ ಗೌರವ ಪೂಜ್ಯ ಬುದ್ಧಿ ಅವನು ರಸಸಮಾಧಿಯ ಮಹಿಮೆಗಾಗಿ,

''.....ಮಣಿಯುವೆನು ರಾಮನಡಿದಾದರೆಗೆ :
ದಶಶಿರನ ವಧೆಗಾಗಿಯಲ್ತು, ಮಂದಾಕಿನಿಯ
ತಿಳಿವೊನಲ ಮೀಯುತಿರಲೊರ್‌ದಿನಂ ತಾಂ ಕಂಡ
ರಸಸಮಾಧಿಯ ಮಹಿಮೆಗಾಗಿ! [6]

ಒಂದು ದಿನ ಸೂರ್ಯೋದಯಾನಂತರ ಗಿರಿವನ ಪ್ರಿಯ ರಾಮನು,

''ತಾನೊರ್ವನೆಯೆ
ಹೊಂಬಿಸಿಲ ಚುಂಬನದ ಹಸುರು ಕಾಡಿನ ನಡುವೆ
ಪಿಕಲಾರ ಕಾಜಾಣ ಕಾಮಳ್ಳಿ ಕೋಗಿಲೆಯ
ಗಿರಿಯ ಕೊರಲಿನ ದನಿಯ ಜೇನೀಂಟುತ್ತೈತಂದು
ನೋಡಿದನ್, ಮಂದಾಕಿನಿಯ ಸಿರಿಯ ಕಣ್‌ಸೆಳೆದು
ಪೊನ್ ನೋಟಮಂ [7]

---

5. ಅದೇ, ಪು. ೧೩೩, ಸಾ. ೭ ರಿಂದ ೧೪ ರವರೆಗೆ.
6. ಶ್ರೀ ರಾ.ದ. ಕುಣಿದಳುರಿಯ ಊರ್ವಶಿ ಪುಟ. ೧೬೧, ಸಾಲು ೨೦೨ ರಿಂದ
7. ಅದೇ, ಸಾಲು ೨೦೮ ರಿಂದ ೨೧೩

ಆ ಪೂರ್ಣ ನೋಟವನ್ನು ಮಾತಿನ ಬಣ್ಣದಿಂದ ಚಿತ್ರಿಸುತ್ತಾರೆ. ನದಿ ; ನದಿಯ ಪಾತ್ರ ; ಬಿಳಿ ಹಳದಿ ಮರಳು ; ನದೀ ತೀರದಲ್ಲಿ ಗಿಡ ಬಳ್ಳಿ ಮರಗಳು. ಅವುಗಳಲ್ಲಿ ಫಲಪುಷ್ಪ ತುಂಬಿವೆ. ಅವುಗಳ ಭಾರದಿಂದ ಬಗ್ಗಿವೆ. ಆ ಬಗ್ಗಿದ ಗಿಡಮರ ಬಳ್ಳಿಗಳ ನೆರಳು ನದಿಯ ಸ್ವಚ್ಛ ನೀರಿನಲ್ಲಿ ಬಿದ್ದಿದೆ. ಹಾಗೆ ಪ್ರತಿಬಿಂಬಿಸುವ ಆ ಫಲಪುಷ್ಪಗಳು ನದಿಯ ನೀರಿನ ಪ್ರತಿಯೊಂದು ತೆರೆಯ ಮೇಲೂ ಕಾಣುತ್ತವೆ. ಆ ತರುತಿಲೋತ್ತಮೆ,

> ''ಕೊಂಬೆಗೈಗಳಿಂ ಪೂವಲಿಯ
> ಚೆಲ್ಲಿ ನಾನಾವರ್ಣ ಸ್ವರ್ಣ ಶೃಂಗಾರದಿಂ
> ಮೆರೆದು, ಗಾಳಿಗೆ ತೊನೆದು, ಹಕ್ಕಿಯಿಂಚರದುಲಿಯ
> ಕಾಲ್ಗೆಜ್ಜೆ ಕಿಂಕಿಣಿಯವೊಲಾಗೆ ನರ್ತಿಸುವ
> ತರುತಿಲೋತ್ತಮೆ ಸೃಷ್ಟಿಸಿದಳಿಂದ್ರ ಲೋಕಮಂ
> ಚಿತ್ರಕೂಟದೊಳಿ ಆ ರಸಋಷಿ ರಘೂದ್ವಹಂಗೆ. [8]

ಇದನ್ನು ಕಂಡ ಶ್ರೀ ರಾಮಚಂದ್ರ 'ತಾನೆ ಹೊಳೆಯಾದಂತೆ, ತಾನಡವಿಯಾದಂತೆ, ತಾನೆ ಗಿರಿಯಾದಂತೆ, ತಾನೆ ಬಾನಾದಂತೆ, ತಾನೆಲ್ಲಮಾದಂತೆ,' ಭಾಸವಾಯಿತು.

ಇಲ್ಲಿ ಬರುವ ಈ ವರ್ಣನೆಯೆಲ್ಲ ತದ್ರೂಪು ಮಲೆನಾಡಿನಲ್ಲಿ ಹರಿಯುವ ಯಾವುದೋ ಒಂದು ಹೆಸರಿಲ್ಲದ ಹೊಳೆ, ಆ ಹೊಳೆಯ ಬದಿಯಲ್ಲಿರುವ ತರುಲತೆ, ಗಿರಿವನಗಳೆಂಬುದನ್ನು ಮಲೆನಾಡಿನಲ್ಲಿ ಕಾಲಾಡಿಸಿದ ಎಂಥವರಿಗೂ ಕೂಡಲೇ ಗೊತ್ತಾಗುತ್ತದೆ.

---

8. ಅದೇ, ಸಾಲು ೨೨೬ ರಿಂದ ೨೩೧.

ಕಾವ್ಯದಲ್ಲಿ ಕಾಲದ ಕಲ್ಪನೆ

ಡಾ॥ ಎಚ್.ಎಸ್. ವೆಂಕಟೇಶ ಮೂರ್ತಿ

ಕುಮಾರವ್ಯಾಸ ಭಾರತದ ಪ್ರಾರಂಭದಲ್ಲೇ ತುಂಬಾ ಕುತೂಹಲಕಾರಿಯಾದ ಒಂದು ಷಟ್ಪದಿ ಬರುತ್ತದೆ. ಕಾವ್ಯದಲ್ಲಿ ಕಾಲದ ಕಲ್ಪನೆ ಎಷ್ಟು ಸಂಕೀರ್ಣವಾದುದು ಎಂಬುದನ್ನು ಈ ಪದ್ಯ ಅತ್ಯಂತ ಸಮರ್ಥವಾಗಿ ಸೂಚಿಸುತ್ತದೆ. ಮೇಲ್ನೋಟಕ್ಕೆ ಇದೊಂದು ಚಮತ್ಕಾರದ ಪದ್ಯದಂತೆ ಕಾಣಬಹುದು. ಆದರೆ ಪದ್ಯದ ರಚನೆಗೆ ಚಮತ್ಕಾರಕ್ಕಿಂತ ಘನವಾದ ಉದ್ದೇಶವಿದೆ. ಅನಾದಿ ಮೂರುತಿಯ ಆದಿಯನ್ನು ಹುಡುಕುವ ಪದ್ಯವದು. ವೇದಪುರುಷನ ಸುತನ ಸುತನ ಸಹೋದರ ಹೆಮ್ಮಗನ ಮಗನ - ಎಂಬುದಾಗಿ ಸಂಬಂಧದ ಕೊಂಡಿ ಹಿಡಿದುಕೊಂಡು ಹೊರಡುವ ಪದ್ಯ, ಕೊನೆಗೆ ಮುಟ್ಟುವುದು ದೇವಕಿಯ ಹೊಟ್ಟೆಯಲ್ಲಿ ಹುಟ್ಟಿದ ಅನಾದಿಮೂರುತಿ ಗದುಗಿನ ವೀರನಾರಾಯಣನನ್ನೇ! ಹುಟ್ಟಿದಲ್ಲಿಗೇ ಮುಟ್ಟುವ ಈ ರಚನೆಯ ಪ್ರಾರಂಭದ 'ವೇದ ಪುರುಷ' ಮತ್ತು ಕೊನೆಯ 'ಗದುಗಿನ ವೀರನಾರಾಯಣ' ಎಂಬ ಎರಡು ಪದಗಳ ನಡುವೆ ಹೆಣೆದುಕೊಳ್ಳುವ ಸಂಬಂಧದ ಸೂತ್ರ ಅನಂತಕಾಲವನ್ನು ಮುಷ್ಟಿಗ್ರಾಹ್ಯ ಮಾಡಿಕೊಳ್ಳುವ ಪ್ರಯತ್ನಮಾಡುತ್ತದೆ. ಅಮೂರ್ತವು ಈ ಹಾದಿಯಲ್ಲಿ ಮೂರ್ತವಾಗುತ್ತದೆ; ಅನಂತವು ಸಾಂತವಾಗುತ್ತದೆ; ಬ್ರಹ್ಮಾಂಡವು ಗದುಗಿಗೆ ಬಂದು ನಿಲ್ಲುತ್ತದೆ. ಕುಮಾರವ್ಯಾಸ ಹೀಗೆ ಅನಂತವನ್ನು ತನ್ನ ಕಾಲಕ್ಕೆ ತನ್ನ ದೇಶಕ್ಕೆ ತನ್ನ ಭಾಷೆಗೆ ಆಹ್ವಾನಿಸುತ್ತಿದ್ದಾನೆ!

ತತ್ಕಾಲ ಮತ್ತು ಅನಂತ ಕಾಲಗಳ ಮುಖಾಮುಖಿಗೆ ಕಾವ್ಯಕ್ಕಿಂತ ಯುಕ್ತವಾದ ಸ್ಥಳ ಯಾವುದು? ಕುಮಾರವ್ಯಾಸನ ಕಾವ್ಯದ ಒಂದು ಸಂದರ್ಭದಿಂದಲೇ ಕಾಲದ ಈ ಮುಖಾಮುಖಿಯ ಸ್ವರೂಪವನ್ನು ವಿವರಿಸಲು ಯತ್ನಿಸುತ್ತೇನೆ.

ಕುಮಾರವ್ಯಾಸನ ಅರಣ್ಯಪರ್ವದಲ್ಲಿ ಒಂದು ವಿಲಕ್ಷಣ ಪ್ರಸಂಗದ ಚಿತ್ರಣವಿದೆ. ಪಾಶುಪತ ಪ್ರಾಪ್ತಿಯ ನಂತರ ಅರ್ಜುನನನ್ನು ಇಂದ್ರ, ದೇವಲೋಕಕ್ಕೆ ಕರೆದುಕೊಂಡು ಹೋಗುತ್ತಾನಷ್ಟೇ? ಅಲ್ಲಿ ಅರ್ಜುನ, ದೇವೇಂದ್ರನ ಆಸ್ಥಾನದಲ್ಲಿ ಊರ್ವಶಿಯ ನೃತ್ಯವನ್ನು ನೋಡುತ್ತಾನೆ. ಅವಳ ಅಪೂರ್ವಸೌಂದರ್ಯವನ್ನು ಎವೆಯಿಕ್ಕದೆ ನೋಡುತ್ತಾ 'ಈ ಯುವತಿ ತಾನಾವಳೋ, ಕುಸುಮಾಯುಧನ ಖಂಡೆಯವಲಾ, ಮುಝು ಮಾಯೆ!' ಎಂದು ಉದ್ಗಾರ ತೆಗೆಯುತ್ತಾನೆ. ಅರ್ಜುನ 'ಅನಿಮಿಷ' ದೃಷ್ಟಿಯಿಂದ ಊರ್ವಶಿಯನ್ನು ನೋಡುತ್ತಿರುವುದನ್ನು ಗ್ರಹಿಸಿದ ಇಂದ್ರ ಅಂದು ರಾತ್ರಿ ಆಕೆಯನ್ನು ಅರ್ಜುನನ ಬಿಡಾರಕ್ಕೆ ಕಳುಹಿಸಿಕೊಡುತ್ತಾನೆ.

ಊರ್ವಶಿಯಾದರೋ ಜರಾಮರಣಗಳಿಂದ ಅಬಂಧಿತಳಾದ, ಚಿರಯುವತಿಯಾದ, ಅಮರಸುಂದರಿ. ಅರ್ಜುನನಾದರೋ ಜರಾಮರಬಾಧಿತನಾದ ಮಾನುಷ. ತನ್ನ ವಂಶದ ಆದಿಪುರುಷರಲ್ಲಿ ಒಬ್ಬನಾದ ಪುರೂರವನಿಗೆ ಸತಿಯಾಗಿದ್ದವಳು ಇದೇ ಊರ್ವಶಿ. ಊರ್ವಶಿ - ಪುರೂರವರ ಮಗ, ಆಯು. ಅವನ ಮಗ ನಹುಷ. ಆ ವಂಶ ಪರಂಪರೆಯಲ್ಲಿ ಜನಿಸಿದವನು ಈ ಅರ್ಜುನ. ಅರ್ಜುನನಿಗೆ ಇದೆಲ್ಲವೂ ಗೊತ್ತು. ತನ್ನ ಸೀಮಿತ ಆಯುಷ್ಯ ಪರಿಮಿತಿಯಲ್ಲಿ, ಪುರಾಣ ನೂತನೆಯಾದ ಚಿರಯೌವನವಂತೆ ಊರ್ವಶಿಯನ್ನು ಕಾಲದ ಒಂದು ಅಪೂರ್ವ ಬಿಂದುವಿನಲ್ಲಿ ಅರ್ಜುನ ಸಂಧಿಸುತ್ತಿದ್ದಾನೆ. ಸಾಂತ ಮತ್ತು ಅನಂತಗಳ ಸಂಧಿಕಾಲ ಅದು. ಈ ಕಾಲವು ಶುದ್ಧಾಂಗ ಒಂದು ಅಮೂರ್ತ ಕಲ್ಪನೆಯಲ್ಲ. ಕಾಲವೆಂಬುದು ಒಂದು ನಿರ್ಧಿಷ್ಟ ಸಮಯ, ಸಂದರ್ಭ, ಸಮಾಜದ ತೇಲುವ ಆವರಣ. ಒಂದೊಂದು ಕಾಲಕ್ಕೂ ಅದರದ್ದೇ ಆಚಾರ ವಿಚಾರಗಳು, ವಿಧಿ ನಿಯಮಗಳು, ದೈವಗಳು, ಇತಿಮಿತಿಗಳು ಇವೆ. ಅರ್ಜುನ ಹೀಗೆ ಒಂದು ನಿಶ್ಚಿತ ಕಾಲದ, ನಿಶ್ಚಿತ ಪ್ರದೇಶದ, ನಿಶ್ಚಿತ ಸಮಾಜದ ಪ್ರತಿನಿಧಿ, ಆ ಕಟ್ಟುಗಳನ್ನು ಅವನು ಮೀರುವುದು ಕಷ್ಟ. ಭೂಮಿಯ ಸೆಳೆತವನ್ನು ಮೀರಿ ಅವನು ಸಶರೀರನಾಗಿ ಸ್ವರ್ಗಕ್ಕೆ ಹಾರಿಬಂದಿದ್ದರೂ, ಆ ದೇಹ ಮಣ್ಣಿನದು. ಅದು ಭೂಮಿಯ ಕಡೆ ಅವನನ್ನು ಎಳೆಯುತ್ತದೆ. ಭೂಮಿಯ ನೆನಪುಗಳಿಂದ ಅವನ ಮನೋಭೂಮಿಕೆ ತುಂಬಿದೆ. ಇಂಡಿಯಾದ ತರುಣನೊಬ್ಬ ಅಮೆರಿಕೆಗೆ ಹೋದಾಗ ಎದುರಿಸಬಹುದಾದ ಮನೋವಿಪ್ಲವಕ್ಕೆ ಅರ್ಜುನನ ಮನೋವಿಪ್ಲವ ಸಂವಾದಿಯದದ್ದು. ಊರ್ವಶಿಯ ನರ್ತನವನ್ನು ಅರ್ಜುನ 'ಅನಿಮಿಷ'ನಾಗಿ ನೋಡಿದ್ದು ಒಂದು ಕ್ಷಣ ಮಾತ್ರ. ಅನಿಮೇಷ ದೃಷ್ಟಿ ಅವನಿಗೆ ಸಹಜವಾದುದಲ್ಲ. ಅದಕ್ಕೆ ಅವನು ಊರ್ವಶಿ ನೇರವಾಗಿ ತನ್ನ ಖಾಸಗೀ ಸೀಮೆಗೇ ಧಾಳಿ ಇಟ್ಟಾಗ ತನ್ನ ತತ್ಕಾಲದ ಮಣ್ಣಿನ ನಿಯಮಗಳನ್ನು ಸಾವರಿಸಿಕೊಳ್ಳುತ್ತಾ, ತನ್ನನ್ನು ತಾನು ಸಾಂತದ ಪರಿಮಿತಿಯಲ್ಲಿ ವ್ಯಾಖ್ಯೆ ಮಾಡಿಕೊಳ್ಳುತ್ತಾನೆ.

> ನಾರಿ ನೀ ಪೂರ್ವದಲಿ ನಮ್ಮ ಪು
> ರೂರವನ ಸತಿ ನಿನಗೆ ಬಳಿಕ ಕು
> ಮಾರ ಜನಿಸಿದ ನಾಯುವಾತನೊಳುದಿಸಿದನು ನಹುಷ
> ವೀರ ರಾಜ ಪರಂಪರೆಯ ಬರ
> ಲಾರಿಗಾವುದಿಸಿದೆವು ನಮ್ಮ ವಿ
> ಚಾರಿಸಿದುದಿಲ್ಲಾ ಯೆನುತ ವಿನಯದಲಿ ನರ ನುಡಿದ.

ನರ ನುಡಿದ - ಎಂಬ ಮಾತಿನ ಅವಧಾರಣೆಯನ್ನು ಗಮನಿಸಿ. ನುಡಿದವನು ಇಂದ್ರನೂನು ಅಲ್ಲ, ನರ. ಆದರೆ ಅಮಾನವಳಾದ ಊರ್ವಶಿಯ ನಿಲುವೇ ಬೇರೆ. ಕಾಲದ ಮಿತಿಯಲ್ಲಿ ಮಾತ್ರ ಸಂಬಂಧಗಳ ಚೌಕಟ್ಟು. ಊರ್ವಶಿಗೆ ಅರ್ಜುನನ ಮಾತು ನಗೆ ತರಿಸುತ್ತದೆ. ಅನಂತಕ್ಕೆ ಆಚ್ಛಾದನ ಎಂಬುದಿಲ್ಲ. ಬೆಟ್ಟಕ್ಕೆ ಚಳಿಯಾದಡೆ ಏನ ಹೊದಿಸುವಿರಯ್ಯ? ಬಯಲು ಬೆತ್ತಲೆ ನಿಂದಡೆ ಏನನುಡಿಸುವರಯ್ಯ? ಎನ್ನುವ ವಚನಕಾರರ ಮಾತು ಅನಂತದ ಪರಿಪ್ರೇಕ್ಷ್ಯದಲ್ಲಿ ಹುಟ್ಟಿದ ಮಾತು.

ಮರ್ಯಾದೆ ಎಂಬ ಮಾತಿಗೇ ಎರಡು ಅರ್ಥಗಳಿವೆ. ಒಂದು ಸಾಮಾಜಿಕ ನಡಾವಳಿ. ಇನ್ನೊಂದು ಸೀಮಿತತೆ. ಅನಂತವು ಮಾತ್ರ ಅದನ್ನು ದಾಟಿಕೊಳ್ಳಬಲ್ಲದು. ಕಾರಣ ಎಲ್ಲ ಕಾಲಗಳನ್ನೂ ಅದು ಒಳಗೊಂಡಿದೆ. ಎಲ್ಲ ಆಚಾರಗಳೂ ಅದರಲ್ಲಿ ಗರ್ಭೀಭೂತವಾಗಿವೆ. ಆದುದರಿಂದಲೇ ಅದು ಯಾವ ನಿರ್ದಿಷ್ಟ ಮಿತಿಗೂ ಬದ್ಧವಾಗಿಲ್ಲ. ಅದಕ್ಕಾಗಿಯೇ ಅರ್ಜುನನ ಮಾತು ಊರ್ವಶಿಗೆ ನಗೆ ತರಿಸುತ್ತದೆ :

ಅಯ್ಯನಯ್ಯನ ನಿಮ್ಮವರ ಮು
ತ್ತಯ್ಯನಾತನ ಭಾವ ಮೈದುನ
ನಯ್ಯನಗ್ರಜರನುಜರೆಂಬೀ ಜ್ಞಾತಿ ಬಾಂಧವರ
ಕೈಯಲರಿಗಳ ಹೊಯ್ದು ಶಿರನರಿ
ದುಯ್ಯಲಾಡಿದವರ್ಗೆ ಮೇಣ್ ಮಖ
ದಯ್ಯಗಳಿಗಾನೊಬ್ಬಳೆಂದಳು ನಗುತ ನಳಿನಾಕ್ಷಿ.

ತುಂಬಾ ವಿಲಕ್ಷಣವಾದ ಪ್ರಸಂಗ ಇದು. ಮಾನುಷ ಪರಿವಲಯದಿಂದ ಎತ್ತಿ ನೋಡಿದಾಗ ಅರ್ಜುನ - ಉರ್ವಶಿಯರ ಪ್ರಸಂಗ, ತತ್ಕಾಲವು ಅನಂತಕಾಲವನ್ನು ಕಣ್ಣಿಟ್ಟು ನೋಡಲಾಗದ, ಎದುರಿಸಲಾಗದ ಮಾದರಿಯನ್ನು ರೂಪಕ ಭಾಷೆಯಲ್ಲಿ ನಮ್ಮ ಮುಂದೆ ಮಂಡಿಸುತ್ತಿದೆ. ಅರ್ಜುನ ತನ್ನ ದೇಹಧರ್ಮಕ್ಕೆ ಕಾಲಧರ್ಮಕ್ಕೆ ಕಟ್ಟು ಬಿದ್ದಿದ್ದಾನೆ. ಅನಂತದ ದರ್ಶನದಿಂದ ಸಾಂತವು ತಬ್ಬಿಬ್ಬಾಗುವುದು ಸಹಜ; ಅಧೀರವಾಗುವುದು, ಮುದುಡಿಕೊಳ್ಳುವುದು ಸಹಜ. ಆದರೆ ಕನ್ನಡದ ಎಲ್ಲ ಸಮರ್ಥಕವಿಗಳೂ ನಾನಾ ಬಗೆಯಲ್ಲಿ, ಹದದಲ್ಲಿ ಅನಂತ ಮತ್ತು ಸಾಂತಗಳನ್ನು (ಅಂದರೆ Time ಮತ್ತು Time eternal ಗಳನ್ನು) ಮುಖಾಮುಖಿಗೊಳಿಸದೆ ತೃಪ್ತರಾಗುವುದಿಲ್ಲ. ಕಾರಣ, ಅನಂತದ ಪರಿಪ್ರೇಕ್ಷ್ಯದಲ್ಲಿ ಮಾತ್ರವೇ ಸಾಂತದ ಅರ್ಥಪೂರ್ಣ ಅಭಿವ್ಯಕ್ತಿ ಮತ್ತು ಶೋಧನೆ ಸಾಧ್ಯ. ಕಾವ್ಯವೆಂಬುದು ಕಾಲದ ಮೂರು ಕಾಲುಗಳೂ ಏಕತ್ರ ಸಂಧಿಸುವ ಸನ್ನಿಧಿ. ತ್ರಿವಿಕ್ರಮನ ಒಂದು ಕಾಲು ಅನಂತ ಆಕಾಶವನ್ನು ವ್ಯಾಪಿಸಿದೆ. ಒಂದು ಕಾಲು ಸಾಂತ ಭೂಮಿಯನ್ನು ವ್ಯಾಪಿಸಿದೆ. ಇನ್ನೊಂದು ವರ್ತಮಾನದ ಗ್ರಹಿಕೆಯ ನೆಲೆಯಾದ ಬಲಿಯ ತಲೆಯ ಮೇಲೆ ಇದೆ. ಭಾಷೆಯ ಸ್ವರೂಪದಲ್ಲೇ ಈ ಅನಂತತೆಯು ಅಡಕವಾಗಿದೆ. ಪ್ರತಿಯೊಂದು ಕ್ರಿಯಾಪದಕ್ಕೂ ಭೂತ ಕಾಲ, ವರ್ತಮಾನ ಕಾಲ, ಭವಿಷ್ಯತ್ ಕಾಲವಿದೆ. ಅಂದರೆ ಭಾಷೆಯು ನೆನ್ನೆಯನ್ನು, ಇಂದನ್ನು, ನಾಳೆಯನ್ನು ಕುರಿತು ಮಾತಾಡುವ ಅರ್ಹತೆಯನ್ನು ತನ್ನ ನಿರ್ವಚನದ ನೆಲೆಯಲ್ಲೇ ಪಡೆದಿದೆ. 'ನಾಳೆ ಸೂರ್ಯ ಹುಟ್ಟುತ್ತಾನೆ' ಎಂಬ ವಾಕ್ಯ ರಚನೆಯ ಸಾಧ್ಯತೆ ಇಲ್ಲದಿದ್ದರೆ ನಾವು ಭವಿಷ್ಯದ ಬಗ್ಗೆ ಹೇಗೆ ಕನಸು ಕಟ್ಟಬಹುದಾಗಿತ್ತು? ಭಾಷೆಯೇ ಒಂದು ಕಾಲಯಂತ್ರ (Time machine). ಅದನ್ನೇರಿ ನಾವು ಭೂತ - ವರ್ತಮಾನ - ಭವಿಷ್ಯಗಳ ನಡುವೆ ಜೋಲಿಯಾಡುತ್ತಿದ್ದೇವೆ. ಇಂಥ ಆಂದೋಲನದಲ್ಲಿ ಅತ್ಯಂತ ದೂರಗಳನ್ನು ಮುಟ್ಟಬಲ್ಲವರು ಭಾಷೆಯನ್ನು ಸೃಷ್ಟಿಶೀಲವಾಗಿ ಬಳಸಬಲ್ಲ ಲೇಖಕರು, ವರ್ತಮಾನವನ್ನು, ನೆನ್ನೆಯ ನೆನಪುಗಳು (ಅದನ್ನು ಪರಂಪರೆ Tradition ಎನ್ನೋಣ), ನಾಳೆಯ ಕನಸುಗಳು (ಅದನ್ನು Aspirations ಎನ್ನೋಣ) ಇವುಗಳನ್ನು ಜೊತೆಯಲ್ಲಿ ಇಟ್ಟುಕೊಂಡೇ ವ್ಯಾಖ್ಯಾನಿಸಬಲ್ಲವರು ಲೇಖಕರು. ನಿಜವಾದ ಕಾವ್ಯದಲ್ಲಿ ಹೀಗೆ ತ್ರಿಕಾಲ ಚಕ್ರಗಳು ಹಠಾತ್ತನೆ ತಾಗುತ್ತವೆ. ಸಾಂತವನ್ನು ಅನಂತವು ನಿರ್ಭಾವದಿಂದ ನೋಡುತ್ತದೆ. ಅನಂತವನ್ನು ಸಾಂತವು ಆಗಾಗಲಾದರೂ ದರ್ಶಿಸಿ ವಿಭ್ರಮೆಗೊಳ್ಳುತ್ತದೆ. ಎಲ್ಲ ಕಾಲಗಳೂ ಅಲ್ಲಿ ಸಹಬಾಳ್ವೆ ಮಾಡುತ್ತವೆ.

ಎಲ್ಲ ಕಾಲಗಳೂ ಕಾವ್ಯದ ನೆಲೆಯಲ್ಲಿ ಸಹಬಾಳ್ವೆ ಮಾಡುವುದನ್ನು ಮಹಾಕವಿ ಕುಮಾರವ್ಯಾಸ ತನ್ನ ರೂಪಕ ಭಾಷೆಯಲ್ಲಿ ಹೇಗೆ ಹಿಡಿದಿಡುತ್ತಾನೆ ಎಂಬುದನ್ನು ಗ್ರಹಿಸಬೇಕಾದರೆ ಕೃಷ್ಣನ ವಿಶ್ವರೂಪದ ವರ್ಣನೆಯನ್ನು ನಾವು ಗಮನಿಸಬೇಕು.

ಆದಡರ್ಜುನ ನೋಡೆನುತ ಕಮ
ಲೋದರನು ಕೈಕೊಂಡನಗ್ಗದ
ನಾದಿ ಪುರುಷ ಶ್ರೀ ನಿಜವ ವಿಶ್ವಾತ್ಮಕಾಕೃತಿಯ
ವಾದಿಸುವ ಷಟ್ತರ್ಕಗಿರ್ಕದ
ಭೇದಕೊಳ್ಳದ ಸಕಲ ಲೋಕದ
ಬೀದಿ ವಿಸಟಂಬರಿವ ವಿಮಲವಿರಾಟ ರೂಪವನು

ಎಲ್ಲ ಕಾಲವನ್ನೂ, ಎಲ್ಲ ದೇಶವನ್ನೂ, ಏಕತ್ರಗೊಳಿಸುವ ಕಲ್ಪನೆ ಇದು. ಪ್ರಾರಂಭದಲ್ಲಿ ಬರುವ ಆದಿಪುರುಷನ ಸುತನ ಸುತನ ಎಂಬ ಪದ್ಯದ ಕೃಷ್ಣನಾಗಿ ಒಂದು ಕಾಲ ದೇಶ ವ್ಯಾಪ್ತಿಗೆ ಮನುಷ್ಯ ಶರೀರದಲ್ಲಿ ತನ್ನನ್ನು ಅಳವಡಿಸಿಕೊಂಡರೆ, ಇಲ್ಲಿ ಅದೇ ಕೃಷ್ಣನು ಅನಂತ ಕಾಲ ಮತ್ತು ಸರ್ವವ್ಯಾಪಕತ್ವಕ್ಕೆ ತನ್ನನ್ನು ಹಿಗ್ಗಿಸಿಕೊಳ್ಳುತ್ತಾನೆ. ಅಂತಃಶಕ್ತಿ ಇದೇ ಅದರ ಹೊರಮುಖೀ ಮತ್ತು ಒಳಮುಖೀ ಅಭಿವ್ಯಕ್ತಿಗಳನ್ನು ಈ ಎರಡು ಪದ್ಯಗಳು ಸೂಚಿಸುತ್ತವೆ. ಆಧುನಿಕ ಪರಿಭಾಷೆಯಲ್ಲಿ ಇದನ್ನು ಕೇಂದ್ರಾಪಗಾಮಿ (Centrifugal) ಮತ್ತು ಕೇಂದ್ರಾಭಿಗಾಮಿ (Centripetal) ಅಭಿವ್ಯಕ್ತಿಗಳೆಂದು ಕರೆಯಬಹುದು. ವಿಶ್ವದ ಸ್ವರೂಪ ಕೂಡ ಇಂಥ ಸಂಕುಚನ ಮತ್ತು ವಿಕಸನ ಪ್ರಕ್ರಿಯೆಗೆ ಬದ್ಧವಾದುದು ಎಂಬುದು ಆಧುನಿಕ ವಿಜ್ಞಾನದ ಅಭಿಮತ.

ತನ್ನ ವಿಶ್ವರೂಪದ 'ಮಹಾದರ್ಶನವನ್ನು' 'ನೋಡು'ವುದು ಕಷ್ಟ ಎಂಬುದು ಕೃಷ್ಣನಿಗೂ ಗೊತ್ತು. ಅದಕ್ಕೇ ಅವನು 'ಆದಡರ್ಜುನ ನೋಡು' ಎನ್ನುವುದು. ಕೃಷ್ಣನ ವಿಶ್ವರೂಪವನ್ನು ಅರ್ಜುನ ನೋಡುವ ಕ್ರಮ ಕೂಡ ಅಷ್ಟೇ ವಿಶೇಷವಾದದ್ದು.

ಇದೆ ನಿರಂಜನ ತತ್ವ ಸಾಮ್ರಾ
ಜ್ಯದ ಸಘಾಟಿಕೆ ನಾವು ಕಡು ಮೂ
ರ್ಖದಲಿ ಮೈಮರೆದೆವು ಶರೀರದ ಬಂಧುಕೃತ್ಯದಲಿ
ಯದುಗಳನ್ವಯದಾತ ನಮಗೊ
ಳ್ಳಿದನು ಸೋದರಭಾವನೆಂದೇ
ಮದಮುಖದಿ ಕಡುಗೇಡ ಕೆಟ್ಟೆನು ಶಿವಶಿವಾಯೆಂದ

ಇಲ್ಲಿ ಅರ್ಜುನ ತನ್ನ ಕಾಲ ಮತ್ತು ಶರೀರ ಸಂಬಂಧವಾದ ಬಂಧುಕೃತ್ಯದ ಇತಿಮಿತಿಗಳನ್ನು ನಿಧಾನವಾಗಿ ದಾಟಿಕೊಳ್ಳುತ್ತಿದ್ದಾನೆ. ಎಲ್ಲವನ್ನೂ ಒಟ್ಟಿಗೇ ನೋಡಿದಾಗ ಅವನಿಗೆ ಜೀವನದ ಬಗ್ಗೆ ಹೊಸ ಅರಿವು ಉಂಟಾಗುತ್ತದೆ. ಅನಂತವಾದ ಕಾಲದ ಆಟದಲ್ಲಿ ಮನುಷ್ಯ ಸಂಬಂಧಗಳು ಅರ್ಥಹೀನ ಎಂಬುದನ್ನು ಅಥವಾ ಆಳದಲ್ಲಿ ಹೇಗೆ ಪರಸ್ಪರ ಪೂರಕ ಸಂಬಂಧಗಳು ಎಂಬುದನ್ನು ಅವನು ಗ್ರಹಿಸುತ್ತಾನೆ. ಧರ್ಮವೊಂದೇ ನಿಲ್ಲತಕ್ಕದ್ದು. ಅದಕ್ಕಾಗಿ ತಾನು ತನ್ನ ಜ್ಞಾತಿಗಳನ್ನು ಎದುರಿಸಿದರೆ ತಪ್ಪಲ್ಲ ಎಂದು ಗ್ರಹಿಸಿ ಕಾರ್ಯೋನ್ಮುಖನಾಗುತ್ತಾನೆ.

'ಬಿಡಿ'ಯನ್ನು 'ಇಡಿ'ಯ ಪರಿಪ್ರೇಕ್ಷ್ಯದಲ್ಲಿ ತೋರಿಸುವುದೇ ಕೃಷ್ಣನ ವಿಶ್ವರೂಪದ ಉದ್ದೇಶ. ಅನಂತದ ಹಾಸಿನಲ್ಲಿ ವರ್ತಮಾನದ ಪರಿವೀಕ್ಷಣೆ ನಡೆದಾಗ, ಅನುಭವ ತನ್ನ ಎಲ್ಲ ಸಂಕೀರ್ಣತೆಯಲ್ಲಿ ಸಮಗ್ರತೆಯಲ್ಲಿ ತನಗೆ ತಾನೇ ಪಡಿ ಮೂಡುತ್ತದೆ. ಕನ್ನಡದ ಮಹಾಕವಿಗಳು ನಿರಂತರವಾಗಿ ಆ ಸಾಧನೆ ಮಾಡುತ್ತಾ ಬಂದಿದ್ದಾರೆ. ಪಂಪನು ವಿಕ್ರಮಾರ್ಜುನ ವಿಜಯದಲ್ಲಿ ಪುರಾಣ - ಇತಿಹಾಸಗಳನ್ನು ಹಾಳತವಾಗಿ ಬೆರೆಸುವಾಗ, ಆದಿಪುರಾಣದಲ್ಲಿ ಅನಂತಕಾಲದ ಅಖಂಡ ಸ್ರೋತದಲ್ಲಿ ಜೀವನ ವಾಹಿನಿಯ ಏರಿಳಿತಗಳನ್ನು ಪ್ರತಿಮೀಕರಿಸುವಾಗ, ಹರಿಹರ ತನ್ನ ಕಾವ್ಯಗಳನ್ನು ಭಗವಂತ ಮತ್ತು ಭಕ್ತರನ್ನು

ಈ ಮರ್ತ್ಯದ ನೆಲೆಯಲ್ಲಿ ಮತ್ತೆ ಮತ್ತೆ ಮುಖಾಮುಖಿಗೊಳಿಸುವ ನೆಲೆಯಲ್ಲಿ ಇದೇ ಸಾಧನೆಯ ನೆಲೆಗಳನ್ನು ನಾವು ನೋಡುತ್ತೇವೆ. ಬೇಂದ್ರೆಯವರ 'ಹಕ್ಕಿ ಹಾರುತಿದೆ ನೋಡಿದಿರಾ?' ಅಡಿಗರ 'ತನ್ನ ಅವತಾರ' 'ಶ್ರೀ ರಾಮನವಮಿಯ ದಿವಸ' ಮೊದಲಾದ ಪದ್ಯಗಳನ್ನು ಈ ದೃಷ್ಟಿಯಿಂದ ವಿಶ್ಲೇಷಿಸುವುದು ಕುತೂಹಲಕಾರಿ ಅಭ್ಯಾಸವಾಗಬಹುದು.

ಬೇಂದ್ರೆಯವರ 'ಹಕ್ಕಿ ಹಾಕುತಿದೆ ನೋಡಿದಿರಾ?' ಪದ್ಯವನ್ನೇ ನೋಡಿ. ಇಲ್ಲಿ ಬರುವ ಹಕ್ಕಿ ಕಾಲದ ಪ್ರತೀಕವೆಂಬುದೇನೋ ಸರಿ. ಆದರೆ ಆ ಕಾಲದ ಸ್ವರೂಪ ಏನು? ಅದು ಭೌಗೋಳಿಕ ಸಮಯವೇ? ಕಾಸ್ಮಿಕ್ ಸಮಯವೇ? ಇತಿಹಾಸದ ಏಕಮುಖೀ ಸಮಯವೇ? ಪದ್ಯದ ರಚನೆಯಲ್ಲಿ ಈ ಹಕ್ಕಿ ಎಲ್ಲ ಬಗೆಯ ಕಾಲದ ಕಲ್ಪನೆಯನ್ನೂ ಪ್ರತಿಮೀಕರಿಸುವಂತಿದೆ.

ಇರುಳಿರುಳಳಿದು ದಿನ ದಿನ ಬೆಳಗೆ
ಸುತ್ತುಮುತ್ತಲೂ ಮೇಲಕೆ ಕೆಳಗೆ
ಗಾವುದ ಗಾವುದ ಗಾವುದ ಮುಂದೆ
ಎವೆತೆರೆದಿಕ್ಕುವ ಹೊತ್ತಿನ ಒಳಗೆ
ಹಕ್ಕಿ ಹಾರುತಿದೆ ನೋಡಿದಿರಾ?

ಇರುಳು, ಬೆಳಗುಗಳ ಕಲ್ಪನೆಯಿಂದ ಈ ಕಾಲದ ಕಲ್ಪನೆ ಪ್ರಾರಂಭವಾಗಿದೆ. ಇದು ನಿಮಿಷಗಳ ಮೂಲಮಾನಕ್ಕೆ ಸಿಕ್ಕುವಂಥದ್ದೇನೋ ಎಂದು ಅನ್ನಿಸುತ್ತಿರುವ ಒಳಗೇ - ಎವೆತೆರೆದಿಕ್ಕುವ ಹೊತ್ತಿನ ಒಳಗೆ - ಎಂಬ ಸಾಲು ಬಂದು, ಈ ಕಲ್ಪನೆಗೆ ಈ ಕಾಲದ ಹಕ್ಕಿ ಅತೀತವೆನ್ನುವುದು ಸೂಚಿತವಾಗುತ್ತದೆ.

ರಾಜ್ಯ ಸಾಮ್ರಾಜ್ಯದ ತೆನೆ ಒಕ್ಕಿ
ಮಂಡಲಗಿಂಡಲಗಳ ಗಡ ಮುಕ್ಕಿ
ತೇಲಿಸಿ ಮುಳುಗಿಸಿ ಖಂಡ ಖಂಡಗಳ
ಸಾರ್ವಭೌಮರಾ ನೆತ್ತಿಯ ಕುಕ್ಕಿ
ಹಕ್ಕಿ ಹಾರುತಿದೆ ನೋಡಿದಿರಾ?

- ಎಂಬ ಪಂಕ್ತಿಗಳಲ್ಲಿ ಕಾಲವು ಲೀನಿಯರ್ ಆದ ಇತಿಹಾಸದ ಕಾಲ ಎಂಬಂತೆ ಒಂದು ಕ್ಷಣ ಭಾಸವಾಗುತ್ತದೆ ಅಷ್ಟೆ. ಸಾರ್ವಭೌಮರಾ ನೆತ್ತಿಯ ಕುಕ್ಕಿ ಹಕ್ಕಿ ಹಾರಿಹೋಯಿತು ಎಂದಾಗ ಇತಿಹಾಸಕ್ಕೂ ಅತೀತವಾದ ಕಾಲದ ಕಲ್ಪನೆ ನಮ್ಮ ಸಂವೇದನೆಗೆ ಬರುತ್ತದೆ. ಸಾಮ್ರಾಜ್ಯಗಳನ್ನು ಕಟ್ಟುವ ಸಾಹಸೋದ್ಯಮ ಅನಂತಕಾಲದ ಪರಿಪ್ರೇಕ್ಷ್ಯದಲ್ಲಿ ಹೇಗೆ ಮಕ್ಕಳಾಟದಂತೆ ಅರ್ಥಹೀನ ಕಾರ್ಯಪ್ರವೃತ್ತಿಯಾಗುವುದೆಂಬುದು ಹೊಳೆದಾಗ 'ಇಡಿ'ಯಾದ ನೋಟದಿಂದ 'ಬಿಡಿ'ಗೆ ತಕ್ಕ ಬೆಲೆ ದೊರೆಯುವುದನ್ನು ನೋಡಬಹುದು. ಸಾರ್ವಭೌಮರ ನೆತ್ತಿಯ ಕುಕ್ಕಿ ಹೊಸಗಾಲದ ಹಸುಮಕ್ಕಳನ್ನು ಹರಸುವ ಈ ಹಕ್ಕಿ ಬ್ರಿಟಿಷ್ ಸಾರ್ವಭೌಮರು ಮತ್ತು ಇಂಡಿಯಾದ ಪ್ರಜಾಪ್ರಭುತ್ವದ ಸಂಬಂಧವನ್ನೂ ವರ್ತಮಾನದ ನೆಲೆಯಲ್ಲಿ ಸೂಚಿಸುವ ಸಾಧ್ಯತೆ ಇದೆ. ನಮ್ಮ ಸಮಯ ನಮ್ಮ ಸೂರ್ಯನಿಂದ ನಿರ್ದೇಶಿತವಾಗುವುದರಿಂದ, ದಿಗ್ಮಂಡಲಗಳ ಅಂಚನ್ನು ಮುಟ್ಟಿ ಅದರ ಆಚೆಗೆ ಚುಂಚ ಚಾಚಿ, ಬ್ರಹಾಂಡಗಳನ್ನು (ಬಹುವಚನ ಗಮನಿಸಿ) ಒಡೆಯಲು ಈ ಹಕ್ಕಿ ಹೊಂಚುತ್ತಿರಬಹುದೇ ಎನ್ನುವಾಗ ಹಕ್ಕಿ ಕಾಸ್ಮಿಕ್ ಸಮಯದ ಪ್ರತೀಕವೂ ಆಗಿ ಪರಿಣಮಿಸುತ್ತದೆ. ಅಂಡ ಮತ್ತು ಹಕ್ಕಿಗಳ ರೂಪಕ ಬಂದಿರುವುದರಿಂದ, ಹಕ್ಕಿ ಅಂಡ

ಅಂದರೆ ಮೊಟ್ಟೆಗಳನ್ನು ಒಡೆಯುವುದು ನಾಶವೋ, ಹೊಸ ಸೃಷ್ಟಿಯ ಸೂಚನೆಯೋ ಎಂಬುದು ಸಂದಿಗ್ಧದಲ್ಲೇ ನಿಂತು, ಕಾವ್ಯದ ಧ್ವನಿಪೂರ್ಣತೆ ಮತ್ತಷ್ಟು ಗಹನವಾಗುತ್ತದೆ. ಹಕ್ಕಿ ಮೊಟ್ಟೆಯನ್ನು ಒಡೆದಾಗ ತಾನೆ ಹೊಸ ಸೃಷ್ಟಿಯ ಉದ್ಭವ?

ನಾವು ನಮ್ಮ ಕಾಲದ ಮಿತಿಯಲ್ಲಿ ಬದ್ಧರಾಗಿದ್ದೇವೆ! ಅನಂತಕಾಲದ ಗರ್ಭದಲ್ಲಿ ಏನೇನು ಹುದುಗಿದೆಯೋ? ಹಿಂದೆ ಅಪಾರವಾದ ಭೂತ. ಮುಂದೆ ಅನಂತವಾದ ಭವಿಷ್ಯ. ನಡುವೆ ನಾವು ಕುಮಾರವ್ಯಾಸನ ಅರ್ಜುನನಂತೆ ದಿಗ್ಭ್ರಾಂತರಾಗಿದ್ದೇವೆ.

ಅಡಿಗಡಿಗೆ ಕಣ್ದೆರೆದು ಮುಚ್ಚುವ
ನಡಿಗಡಿಗೆ ಮೈಬೆವರಿ ಬೆರಗಹ
ನಡಿಗಡಿಗೆ ಮೆಯ್ಯೊಲೆವನುಬ್ಬಿದ ರೋಮ ಪುಲಕದಲಿ
ಅಡಿಗಡಿಗೆ ಮನ ನಲಿದು ಹೊಂಗುವ
ನಡಿಗಡಿಗೆ ಭಯಗೊಂಡು ಕರಗುವ
ನೊಡಲನವನಿಗೆ ಹರಹಿ ನಿಡುದೋಳುಗಳ ನೀಡಿದನು.

ವಿಶ್ವರೂಪಧಾರಿಯಾದ ಕೃಷ್ಣನ ಎದುರಿಗೆ ನಿಂತ ಅರ್ಜುನನ ಚಿತ್ರ ಇದು. ಮಣ್ಣಿಗೆ ಹತ್ತಿಕೊಂಡು, ಒಂದು ಕಾಲ, ಒಂದು ಸ್ಥಳಕ್ಕೆ ಬದ್ಧನಾದ ಅರ್ಜುನ, ಆಕಾಶಕ್ಕೆ ತೋಳುಗಳನ್ನು ಚಾಚುತ್ತಾ ಅನಂತವನ್ನು ಅಪರಿಮಿತವನ್ನು ಗ್ರಹಿಸುವ ಪ್ರಯತ್ನ ಮಾಡುತ್ತಿದ್ದಾನೆ. ಅನಂತದ ಮುಂದೆ ಸಾಂತದ ಪ್ರತಿನಿಧಿಯಾಗಿ, ಅನಂತವನ್ನು ತಬ್ಬಿಕೊಳ್ಳುವ ದುಸ್ಸಾಹಸದಿಂದ ಕೈಚಾಚಿ ನಿಂತ ಅರ್ಜುನ, ಮಹತ್ವಾಕಾಂಕ್ಷೆಯುಳ್ಳ ಕಾವ್ಯಕರ್ಮದ ಪ್ರತೀಕವೆಂಬಂತೆ ನನಗೆ ಕಾಣುತ್ತಿದ್ದಾನೆ.

ದೇವಸ್ಥಾನ ನಿರಾಕರಣೆ : ಒಂದು ದಿಟ್ಟ ಹೆಜ್ಜೆ

ಡಾ|| ಜಿ.ಎಸ್. ಶಿವರುದ್ರಪ್ಪ

ದೇವಸ್ಥಾನಗಳು ಭಾರತೀಯರ ಸಾಮಾಜಿಕ - ಧಾರ್ಮಿಕ - ಆಧ್ಯಾತ್ಮಿಕ ಜೀವನದ ಕೇಂದ್ರವಾಗುತ್ತ ಶತಶತಮಾನಗಳಿಂದ ವಿವಿಧಧರ್ಮಗಳವರ ಸಾಮುದಾಯಿಕ ಬದುಕನ್ನು ನಿಯಂತ್ರಿಸುವ ಹಾಗೂ ರೂಪಿಸುವ ಸತ್ವಗಳಂತೆ ವರ್ತಿಸಿವೆ. ಜನತೆಗೆ ಕಾವ್ಯ, ಚಿತ್ರ, ಶಿಲ್ಪ, ಸಂಗೀತ, ನೃತ್ಯ ಇತ್ಯಾದಿ ಸೃಜನಾತ್ಮಕ ಚಟುವಟಿಕೆಗಳಿಗೆ ನೆಲೆಯೂ ಆಗುತ್ತ ಸಂಸ್ಕೃತಿಯ ಸಂವರ್ಧನೆಯಲ್ಲಿ ಇವುಗಳು ವಹಿಸುತ್ತ ಬಂದಿರುವ ಪಾತ್ರವು ಗಣನೀಯವಾದದ್ದು. ಪ್ರಾಚೀನ ಕರ್ನಾಟಕದಲ್ಲಂತೂ ಇವುಗಳ ನಿಯೋಗವು ಬಹುಮುಖವಾದದ್ದು. ಅವು ವಿದ್ಯಾಕೇಂದ್ರಗಳಾಗಿದ್ದವು. ಕೆಲವು ವೇಳೆ ಯತಿಗಳ ಹಾಗೂ ಧರ್ಮಗುರುಗಳ ಮಠಗಳಾಗಿದ್ದವು. ಜನರ ಧಾರ್ಮಿಕ ಅವಶ್ಯಕತೆಯ ಅರವಟ್ಟಿಗೆಗಳಾಗಿದ್ದವು; ಸಮಾಜದ ಸಂಪತ್ತಿನ ಸಂಚಯನ ಹಾಗೂ ವಿತರಣೆಯ ಭಂಡಾರಗಳಾಗಿದ್ದವು; ನ್ಯಾಯಾಲಯಗಳಂತೆ ಕಾರ್ಯ ನಿರ್ವಹಿಸುತ್ತಿದ್ದವು; ವಿವಿಧ ಕಲಾ ಚಟುವಟಿಕೆಗಳ ಆಶ್ರಯ ಸ್ಥಾನವಾಗಿದ್ದವು; ಬಹುಜನಕ್ಕೆ ಉದ್ಯೋಗವನ್ನು ಕಲ್ಪಿಸುವ ಸಾಧನಗಳೂ ಆಗಿದ್ದವು. ಇಂಥ ಮಹತ್ವದ 'ಸಂಸ್ಥೆ'ಗಳನ್ನು, ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರ ವ್ಯಕ್ತಿ ಕೇಂದ್ರದಲ್ಲಿ ಪ್ರಕರ್ಷಗೊಂಡ ''ವೀರಶೈವ'' ವೆಂಬ ಸಾಮಾಜಿಕ - ಧಾರ್ಮಿಕ ಚಳುವಳಿಯೊಂದು ಮೊಟ್ಟ ಮೊದಲನೆ ಬಾರಿಗೆ ನಿರಾಕರಿಸಿತೆಂಬುದು ಅತ್ಯಂತ ಮಹತ್ವದ ಹಾಗೂ ಆಶ್ಚರ್ಯದ ಒಂದು ಘಟನೆಯಾಗಿದೆ. ಪರಂಪರಾಗತವಾಗಿ ಜನರ ಬದುಕಿನೊಂದಿಗೆ ಬೆಸೆದುಕೊಂಡು ಬಂದ ದೇವಸ್ಥಾನವೆಂಬ ಸಂಸ್ಥೆಯನ್ನು, ನಿಜವಾದ ದೈವಭಕ್ತರೂ, ಧರ್ಮಶ್ರದ್ಧೆಯುಳ್ಳವರೂ ಆದ ಈ ಶಿವಶರಣರು ಮೊಟ್ಟಮೊದಲು ವೈಚಾರಿಕ ಚಿಕಿತ್ಸೆಗೆ ಒಳಪಡಿಸಿ ಅದನ್ನು ಆಧ್ಯಾತ್ಮಿಕ ನೆಲೆಯಲ್ಲಿ ಪುನರ್ ವ್ಯಾಖ್ಯಾನಿಸಿದ ರೀತಿ, ಭಾರತೀಯ ಧಾರ್ಮಿಕ

ಇತಿಹಾಸದಲ್ಲಿಯೇ ಒಂದು ದಿಟ್ಟ ಹೆಜ್ಜೆಯಾಗಿದೆ. ಒಂದು ರೀತಿಯಲ್ಲಿ ಇದು ಮೇಲುನೋಟಕ್ಕೆ ದೇವರನ್ನು ಧರ್ಮವನ್ನು ಒಪ್ಪಿಕೊಂಡು 'ದೇವಸ್ಥಾನ'ವನ್ನು ನಿರಾಕರಿಸುವ ನಿಲುವಿನಂತೆ ತೋರಿದರೂ, ಮೂಲತಃ 'ದೇವಾಲಯ'ದ ಕಲ್ಪನೆಯನ್ನು ಈ ಶರಣ ಧರ್ಮ, ತಾನು ಕಟ್ಟಿದ ಹೊಸ ಧರ್ಮದ ತಾತ್ವಿಕ ನೆಲೆಯಲ್ಲಿ ಪುನಾರಚನೆಗೊಳಿಸಿದ ಕ್ರಮ ಅತ್ಯಂತ ವೈಚಾರಿಕವಾದುದಾಗಿದೆ ಹಾಗೂ ಅದರ ಸಾಮಾಜಿಕ ಕ್ರಾಂತಿಯ ಆಶಯಕ್ಕೆ ಉಚಿತವಾದುದಾಗಿದೆ.

ಹಾಗೆ ನೋಡಿದರೆ ವಚನಕಾರರಿಗೆ ಹಿನ್ನೆಲೆಯಾದ ಭಾರತೀಯ ಶೈವ ಧರ್ಮವಾಗಲಿ, ಅವರಿಗೆ ಮನೋಧರ್ಮದಲ್ಲಿ ಹತ್ತಿರವಾದ ತಮಿಳುನಾಡಿನ ಅರವತ್ತು ಮೂವರು ಪುರಾತನರ ನಿಲುವಾಗಲೀ ದೇವಸ್ಥಾನ ಕೇಂದ್ರಿತವಾದದ್ದು. ವಚನಕಾರರು ಅತ್ಯಂತ ಗೌರವದಿಂದ ಸ್ಮರಿಸುವ ತಮಿಳುನಾಡಿನ ಈ ಶಿವಭಕ್ತರು ಮುಖ್ಯವಾಗಿ ಸ್ಥಾವರಲಿಂಗದ ಆರಾಧಕರು. ಹೀಗಾಗಿ ಅವರ ಭಕ್ತ ಜೀವನಕ್ಕೆ ದೇವಸ್ಥಾನಗಳು ಅನಿವಾರ್ಯವಾದವುಗಳು. ಆದರೆ ವಚನಕಾರರು ಅಥವಾ ಶಿವಶರಣರು, ದೇವರನ್ನೂ, ಭಕ್ತಿಯನ್ನೂ ಒಪ್ಪಿಕೊಂಡು, ದೇವಸ್ಥಾನವನ್ನು ನಿರಾಕರಿಸಿದ್ದು ಯಾಕೆ? ಅದಕ್ಕೆ ಮುಖ್ಯವಾದ ಕಾರಣ, ಈಗಾಗಲೇ ಎಲ್ಲರೂ ಬಲ್ಲಂತೆ, ವೀರಶೈವವು ದೇವರ ಕಲ್ಪನೆಯನ್ನು ದೇವಸ್ಥಾನದಿಂದ ಮನುಷ್ಯನ ಶರೀರಕ್ಕೆ, ಸ್ಥಾವರಲಿಂಗದಿಂದ ಇಷ್ಟಲಿಂಗಕ್ಕೆ ಸ್ಥಳಾಂತರಗೊಳಿಸಿದ್ದೇ ಆಗಿದೆ. ಇದು ನಿಜಕ್ಕೂ ಮಹತ್ವದ ಬದಲಾವಣೆಯೇ. ದೇವರು ಎಲ್ಲೆಲ್ಲಿಯೂ ಇದ್ದಾನೆ, ಆತ ಸರ್ವಾಂತರ್ಯಾಮಿ ಎಂಬ ಭಾವನೆಗೆ, ದೇವರು ದೇವಸ್ಥಾನದಲ್ಲಿ ಇದ್ದಾನೆ ಎಂದು ತಿಳಿಯುವ ಹಾಗೂ ನಡೆದುಕೊಳ್ಳುವ ಕ್ರಮ ಒಂದು ವಿರೋಧಾಭಾಸದಂತೆ ತೋರಿರಬೇಕು. ಆದರೆ ಕೊಂಚ ವಿಚಾರ ಮಾಡಿ ನೋಡಿದರೆ, ದೇವರು ಎಲ್ಲೆಲ್ಲಿಯೂ ಇದ್ದಾನೆ ಎಂಬ ಭಾವನೆಗೆ, ದೇವಸ್ಥಾನಗಳ ಅಸ್ತಿತ್ವ ಯಾವ ರೀತಿಯಲ್ಲಿಯೂ ಅಸಂಬದ್ಧವಾಗುವುದಿಲ್ಲ. ಯಾಕೆಂದರೆ ಎಲ್ಲೆಲ್ಲಿಯೂ ಇರುವ ದೇವರು ದೇವಸ್ಥಾನದಲ್ಲಿಯೂ ಇದ್ದಾನೆ ಎಂದು ತರ್ಕಿಸಲು ಸಾಧ್ಯ. ಆದರೆ 'ದೇವರು ಎಲ್ಲೆಲ್ಲಿಯೂ ಇದ್ದಾನೆ' ಎಂಬ ಕಲ್ಪನೆ ಅಮೂರ್ತವಾದದ್ದು, ದೇವರು ದೇವಸ್ಥಾನದಲ್ಲಿಯೂ ಇದ್ದಾನೆ ಎಂಬ ಕಲ್ಪನೆ ಮೂರ್ತವಾದದ್ದು. ದೇವರ ಅಮೂರ್ತವಾದ ಕಲ್ಪನೆ ಎಲ್ಲರಿಗೂ ಅನುಭವಕ್ಕೆ ಸುಲಭ ಸಾಧ್ಯವಲ್ಲದ ಕಾರಣ, ಸಾಮಾನ್ಯ ಬಹುಸಂಖ್ಯಾತರಿಗೆ ದೇವಸ್ಥಾನಗಳು ಅತ್ಯಂತ ಅಗತ್ಯವಾದವುಗಳು - ಅವರ ಧರ್ಮಶ್ರದ್ಧೆಗೆ. ನಿಜವಾದ ಅನುಭಾವಿಗಳು ದೇವರನ್ನು ಮೂರ್ತದಲ್ಲಿ ಎಂತೋ, ಹಾಗೆಯೆ ಅಮೂರ್ತದಲ್ಲೂ ಅನುಭವಿಸಬಲ್ಲರು. ಅವರ ಪಾಲಿಗೆ ದೇವರ ಆಕಾರ ಎಷ್ಟು ಸತ್ಯವೋ, ಅದರ ನಿರಾಕಾರವೂ ಅಷ್ಟೇ ಸತ್ಯ. ಇದನ್ನು ವಚನಕಾರರು ಬಲ್ಲರು. ಆದರೆ ಎಲ್ಲರೂ ಮೂರ್ತಾಮೂರ್ತಗಳ ನೆಲೆಯಲ್ಲಿ ಸಂಚರಿಸಬಲ್ಲ ಅನುಭಾವಿಗಳಲ್ಲ. ಕೇವಲ ಭಕ್ತಿಯ ನೆಲೆಯಲ್ಲಿ ಬದುಕುವ ಬಹುಸಂಖ್ಯಾತ ಭಕ್ತ ಜನರ ಪಾಲಿಗೆ, ತಮಗೆ 'ಇಷ್ಟ'ವಾದ ದೈವದ ಆಕಾರದಲ್ಲಿ ಪೂಜಿಸಲು ದೇವಸ್ಥಾನವೆಂಬ ಒಂದು ನೆಲೆ ಬೇಕೇ ಬೇಕು. ಆದರೆ ವಚನಕಾರರು ಮಾಡಿದ್ದೆಂದರೆ, ಬಹುಸಂಖ್ಯಾತರ ಭಕ್ತಿಗೆ, ಅದುವರೆಗೂ ಆಲಂಬನದ ನೆಲೆಯಾಗಿದ್ದ ದೇವಸ್ಥಾನವನ್ನು, ನಿರಾಕರಿಸಿ, ದೇವರ ಹಾಗೂ ದೇವಸ್ಥಾನದ ಕಲ್ಪನೆಯನ್ನು ಪುನರ್ ವ್ಯಾಖ್ಯಾನಿಸಿದ್ದಲ್ಲದೆ, ಅದನ್ನು ಒಪ್ಪಿಕೊಳ್ಳುವಂತಹ ಒಂದು ಮನಃಸ್ಥಿತಿಯನ್ನೂ ನಿರ್ಮಾಣ ಮಾಡಿದ್ದು.

ವೀರಶೈವದ 'ದೇವರ ಕಲ್ಪನೆ' ಮೂಲತಃ ಪರಂಪರಾಗತವಾದ 'ದೇವರ' ಕಲ್ಪನೆಯಿಂದ ಭಿನ್ನವಾದದ್ದು. ಒಂದೆಡೆ ಪುರಾಣೋಕ್ತವಾದ ಶಿವನ ಮೂರ್ತಿಪೂಜೆ ಮತ್ತು ಶಿವನ ಸಂಕೇತವಾದ ಲಿಂಗ (ಸ್ಥಾವರಲಿಂಗ) ಪೂಜೆ ಈ ಎರಡೂ ರೂಢಿಯಲ್ಲಿ ಇದ್ದವುಗಳು. ಆದರೆ ವಚನಕಾರರು, ದೇವಸ್ಥಾನ ಕೇಂದ್ರಿತವಾದ ಈ ಎರಡು 'ರೂಪ'ಗಳನ್ನು ದೇವಸ್ಥಾನದ ಸಮೇತ ನಿರಾಕರಿಸಿ, ದೈವತ್ವ ಕಲ್ಪನೆಯ ಸಾಂಕೇತಿಕ ರೂಪವನ್ನಾಗಿ ಇಷ್ಟಲಿಂಗವನ್ನು ಸ್ವೀಕರಿಸಿ ತಮ್ಮ ಕೊರಳಲ್ಲಿ ಕಟ್ಟಿಕೊಂಡರು. ಈ ಅರ್ಥದಲ್ಲಿ ಇಷ್ಟಲಿಂಗ ರೂಪವೂ ಅಲ್ಲ, ಅರೂಪವೂ ಅಲ್ಲ; ಅದರ ಬದಲು ಅದು ನಿರಾಕಾರಕ್ಕೆ ಅತ್ಯಂತ ಸಮೀಪವಾದ ಒಂದು ಸಂಕೇತ ಮಾತ್ರ. ಹೀಗೆ ದೇವರ ಕಲ್ಪನೆಯನ್ನು ದೇವಾಲಯದಿಂದ ಮತ್ತು ಅದರ ಪೌರಾಣಿಕ ಹಿನ್ನೆಲೆಗಳಿಂದ ಬಿಡಿಸಿ ಮನುಷ್ಯನ ಶರೀರಕ್ಕೆ ಸ್ಥಳಾಂತರ ಮಾಡುವುದರ ಮೂಲಕ, ಮನುಷ್ಯನ ಶರೀರವನ್ನೇ ದೇವಸ್ಥಾನವನ್ನಾಗಿ ಮಾಡಿದ್ದಲ್ಲದೆ ಆ ಕಾರಣದಿಂದ ಮನುಷ್ಯತ್ವಕ್ಕೆ ಒಂದು ಘನತೆ - ಗೌರವವನ್ನು ವಚನಕಾರರು ತಂದುಕೊಟ್ಟರೆಂಬುದು ತೀರ ಮಹತ್ವದ ಸಂಗತಿಯಿದೆ.

ದೇಹವೇ ದೇವಾಲಯವೆಂಬ ಕಲ್ಪನೆಯನ್ನು ಹಾಗೂ ಇಷ್ಟಲಿಂಗ ನಿಷ್ಠೆಯನ್ನು ಗಟ್ಟಿಗೊಳಿಸುವ ಉದ್ದೇಶದಿಂದ ವಚನಕಾರರು ದೇವಸ್ಥಾನಗಳನ್ನೂ, ಅದಕ್ಕೆ ಸಂಬಂಧಿಸಿದ ವಿವಿಧ ವಿಧಿಗಳನ್ನೂ, ಆಚರಣೆಗಳನ್ನೂ, ಅತ್ಯಂತ ತೀವ್ರವಾಗಿ ನಿರಾಕರಿಸಿದ್ದರೆ ಹಿಂದೆ [1] ಇರುವ ಉದ್ದೇಶಗಳೂ ಹಾಗೂ ಅದರ ಪರಿಣಾಮಗಳೂ ಬಹುಮುಖವಾದವುಗಳಾಗಿವೆ. ಮೊದಲನೆಯದಾಗಿ ಕರ್ನಾಟಕದ ಅಂದಿನ ಪರಿಸರದಲ್ಲಿ ಹಲವು ಧಾರ್ಮಿಕ ಸೆಳೆತಗಳೂ, ಬಹುದೇವತಾರಾಧನೆಯ ಪದ್ಧತಿಗಳೂ, ಸಾಮಾಜಿಕವಾದ ತರತಮಗಳೂ, ಜನರ ಬದುಕನ್ನು ಒಂದು ರೀತಿಯಲ್ಲಿ ವಿಘಟನೆಗೆ ಒಳಪಡಿಸಿದ ಸಂಗತಿಗಳಾಗಿದ್ದವು. ಹೀಗೆ ವಿಘಟನೆಗೊಂಡ ಬದುಕನ್ನೂ ಹಾಗೂ ಮನಃಸ್ಥಿತಿಯನ್ನು ಒಂದು ಸಂಘಟನೆಯ ಕೇಂದ್ರಕ್ಕೆ ತರುವ ಪ್ರಯತ್ನದಲ್ಲಿ ಬಹುದೇವತಾರಾಧನೆಯನ್ನೂ ಹಾಗೂ ದೇವಸ್ಥಾನಗಳನ್ನೂ ನಿರಾಕರಿಸುವುದು ಹೊಸ ಶರಣಧರ್ಮದ ಅವಶ್ಯಕತೆಯಾಗಿತ್ತು. ಆದ ಕಾರಣ ವಚನಕಾರರು ಹಾಳುಮೊರಡಿಗಳಲ್ಲಿ, ಊರದಾರಿಗಳಲ್ಲಿ ಕೆರೆ ಬಾವಿ ಹೊಂಗಿಡು ಮರಗಳಲ್ಲಿ, ಗ್ರಾಮ ಮಧ್ಯಗಳಲ್ಲಿ, ಚೌಪಥ ಪಟ್ಟಣ ಪ್ರದೇಶಗಳಲ್ಲಿ ಹಿರಿಯಾಲದ ಮರದಲ್ಲಿ ಮನೆಯ ಮಾಡಿ (ವ. ೫೫೫ ಬಸವ) ಜನರ ನಂಬಿಕೆಗಳನ್ನು ಹಿಡಿದು ಪೂಜೆಗೊಳ್ಳುತ್ತಿದ್ದ ಬಹುಸಂಖ್ಯಾತ ಕ್ಷುದ್ರ ದೇವತೆಗಳನ್ನು ''ಮಡಕೆ ದೈವ, ಮೊರ ದೈವ, ಬೀದಿಯ ಕಲ್ಲು ದೈವ'' (ವ ೫೬೧ ಬಸವ) ಎಂದು ಪೂಜಿಸುವ ಪ್ರವೃತ್ತಿಗಳನ್ನೂ, ಅಲ್ಲೇ ನೆಲೆನಿಂತ ದೇವಾಲಯಗಳಿಗೆ ದಾನ - ದತ್ತಿಗಳನ್ನು ಬಿಡುವ, ಹೊಸ ದೇವಸ್ಥಾನಗಳನ್ನು ಕಟ್ಟಿಸಿಲಿಂಗ ಪ್ರತಿಷ್ಠೆ ಮಾಡಿಸುವ 'ಉಳ್ಳವರ' ಧಾರ್ಮಿಕ ಕಾರ್ಯಗಳನ್ನು - ಖಂಡಿಸಿ [2] ಸಮಾಜದ ಮನಸ್ಸನ್ನು 'ಏಕದೈವ' ಕೇಂದ್ರಕ್ಕೆ ತಂದರೆಂಬುದು, ಸಾಮಾಜಿಕವಾಗಿ ಮಾತ್ರವಲ್ಲ ಧಾರ್ಮಿಕವಾಗಿಯೂ ಕೂಡ ಸಂಘಟನೆಯ ದೃಷ್ಟಿಯಿಂದ ಬಹುಮುಖ್ಯವಾದ ಹೆಜ್ಜೆಯಾಗಿದೆ ಮತ್ತು 'ಏಕದೈವ'ವಾದ 'ಶಿವ' - 'ಇಷ್ಟಲಿಂಗ' ರೂಪದಿಂದ ತನ್ನ ಕರಸ್ಥಲ ಹಾಗೂ ಉರಸ್ಥಲಗಳಲ್ಲಿಯೆ ಇದ್ದಾನೆ ಮತ್ತು ಆ ಮೂಲಕ ತನ್ನ ದೇಹವೇ ದೇಗುಲವಾಗಿದೆ. ಈ ರೀತಿ ದೇಹವನ್ನು ದೇಗುಲವನ್ನಾಗಿ ಮಾಡಿಕೊಂಡ ತಾವೆಲ್ಲರೂ ವರ್ಣವರ್ಗಗಳ ತರತಮವಿಲ್ಲದೆ ಆಧ್ಯಾತ್ಮಿಕವಾಗಿ ಸಮಾನರು ಎಂಬ ಧರ್ಮಶ್ರದ್ಧೆ ಹಾಗೂ ಸಮಾನತೆಯ ಭಾವನೆಯನ್ನು ಮತ್ತು ಆತ್ಮಪ್ರತ್ಯಯವನ್ನು ಮೂಡಿಸಿದ್ದು ದೇವಾಲಯ ನಿರಾಕರಣೆಯ ನಿಲುವಿನ ಪರಿಣಾಮವಾಗಿದೆ. ದೇವಾಲಯ ನಿರಾಕರಣೆಯಿಂದ ಇಷ್ಟಲಿಂಗದ ನಿಷ್ಠೆಯನ್ನು ದೃಢಗೊಳಿಸುವ ಈ ವಿಧಾನದಿಂದ, ಭಕ್ತನಿಗೂ ದೇವರಿಗೂ ದೇವಾಲಯದ ಕಾರಣದಿಂದ ನಡುವೆ ಸ್ಥಾಪಿತವಾದ 'ಪೂಜಾರಿ'ಯ ಮಾಧ್ಯಮವನ್ನು ನಿರಾಕರಿಸಿ, ಭಕ್ತಿ ಎನ್ನುವುದು ಭಕ್ತ ಹಾಗೂ ಭಗವಂತನ ನಡುವಣ ಆತ್ಮೀಯ ಹಾಗೂ ವ್ಯಕ್ತಿನಿಷ್ಠ ಅನುಸಂಧಾನ - ಎನ್ನುವ ಭಾವನೆಯನ್ನು ಪ್ರತಿಪಾದಿಸುತ್ತದೆ.

---

1. ಈ ಕುರಿತು ಇರುವ ವಚನಗಳ ಒಟ್ಟು ಸಂಖ್ಯೆ ಆರು ಅಥವಾ ಏಳಕ್ಕಿಂತ ಹೆಚ್ಚಾಗಿಲ್ಲ. ಬಸವಣ್ಣನವರ ಎರಡು ವಚನ (೨೨೦, ೨೨೫ ಬಸವನಾಳ) ಅಲ್ಲಮ ಪ್ರಭುಗಳ ಮೂರು ವಚನ (೧೯೫, ೨೧೨, ೨೧೩ ಅಲ್ಲಮನ ವಚನ ಚಂದ್ರಿಕೆ ಬಸವರಾಜು) ಮತ್ತು ಅಂಬಿಗರ ಚೌಡಯ್ಯನ ಒಂದು ವಚನ (ಹಳಕಟ್ಟಿಯವರ ಸಂಪಾದನೆ) 'ಕಟ್ಟಿದ ಲಿಂಗವ ಬಿಟ್ಟು' - ಇವಿಷ್ಟೆ. ಆದರೂ ವೀರಶೈವ ಧರ್ಮದ ಮುಖ್ಯ ತಾತ್ವಿಕ ನೆಲೆಯನ್ನು ಇವು ಪ್ರತಿಪಾದಿಸುತ್ತವೆ.
2. ಕಲ್ಲು ಮನೆಯ ಮಾಡಿ, ಕಲ್ಲು ದೇವರ ಮಾಡಿ
   ಆ ಕಲ್ಲು ಕಲ್ಲ ಮೇಲೆ ಕೆಡೆದರೆ ದೇವರೆತ್ತ ಹೋದರೋ
   ಲಿಂಗ ಪ್ರತಿಷ್ಠೆಯ ಮಾಡಿಸಿದವರಿಗೆ ನಾಯಕ ನರಕ ಗುಹೇಶ್ವರಾ (ಅವಚಂ ೨೧೨)

   ಹತ್ತು ಮತ್ತರದ ಭೂಮಿ, ಬತ್ತುವ ಹಯನು
   ನಂದಾದೀವಿಗೆ ಮಾಡಿಹೆವೆಂಬವರ ಮುಖವ
   ನೋಡಲಾಗದು (ಬ.ವ. ೨೨೫ - ಬಸವನಾಳ)

ಎರಡನೆಯದಾಗಿ, ಶರಣ ಧರ್ಮದ ಪರಿಸರದಲ್ಲಿ ಆಗಲೇ ನೆಲೆನಿಂತ ದೇವಾಲಯ ಸಂಸ್ಕೃತಿ ಮುಖ್ಯವಾಗಿ 'ಉಳ್ಳವರ' ಹಾಗೂ ಉಚ್ಚವರ್ಗದವರ ಸ್ವತ್ತಾಗಿದ್ದು ಜನರ ಧಾರ್ಮಿಕ ಭಾವನೆಗಳನ್ನು ಬಂಡವಾಳವನ್ನಾಗಿ ಮಾಡಿಕೊಂಡು ಅವರನ್ನು ಶೋಷಣೆಗೆ ಗುರಿಪಡಿಸುವ ಸಾಧನವಾಗಿತ್ತು. ದೇವದಾಸಿ ಪದ್ಧತಿಯನ್ನು ಪೋಷಿಸಿಕೊಂಡು ಬರುವ ಉಪಾಯದ ನೆಲೆಯಾಗಿತ್ತು. ಅದಕ್ಕೂ ಮಿಗಿಲಾಗಿ ಸಮಾಜದ ಕೆಳವರ್ಗದ ಬಹುಸಂಖ್ಯಾತರಿಗೆ, ದೇವಾಲಯ ಪ್ರವೇಶವನ್ನು ನಿರಾಕರಿಸಲಾಗಿತ್ತು. ವಚನಕಾರರು ಈ ಪ್ರವೃತ್ತಿಯನ್ನು 'ದೇವಾಲಯ ನಿರಾಕರಣೆ'ಯ ಮೂಲಕ ಪ್ರತಿಭಟಿಸಿದ ಕ್ರಮ ತೀರಾ ವಿಶಿಷ್ಟವಾಗಿದೆ. ಈ ಹೊತ್ತು ಕೆಲವರಿಗೆ ಅನ್ನಿಸಬಹುದು : ಹೀಗೆ ದೇವಾಲಯವನ್ನು ನಿರಾಕರಣೆ ಮಾಡದೆ ವಚನಕಾರರು, ಸಂಘಟಿತವಾಗಿ ದೇವಾಲಯ ಪ್ರವೇಶವನ್ನೆ ಒಂದು ಚಳುವಳಿಯನ್ನಾಗಿ ಮಾಡಿಕೊಂಡು ಅದರ ಮೂಲಕ ಒಂದು ಸಾಮಾಜಿಕ ಕ್ರಾಂತಿಯನ್ನೆ ಮಾಡಬಹುದಾಗಿತ್ತಲ್ಲ ಎಂದು. ಆದರೆ ಕೊಂಚ ವಿಚಾರ ಮಾಡಿ ನೋಡಿದರೆ, ದೇವಾಲಯ ಪ್ರವೇಶಕ್ಕೆ ಚಳುವಳಿ ಮಾಡುವುದಕ್ಕಿಂತ, ದೇವಾಲಯವನ್ನು ನಿರಾಕರಿಸುವುದು ಹೆಚ್ಚು ದಿಟ್ಟತನದ ಹಾಗೂ ವೈಚಾರಿಕ ನಿಲುವಿನ ಕ್ರಾಂತಿಯಾಗಿದೆ ಮತ್ತು ಈ ಹೊತ್ತಿಗೂ ಇದು ಅತ್ಯಂತ ಪ್ರಸ್ತುತವಾದ ಸಂಗತಿಯಾಗಿದೆ. ಯಾಕೆಂದರೆ ದೇವಾಲಯ ಪ್ರವೇಶಕ್ಕೆ ಹೊಡೆದಾಡಿ ಪ್ರವೇಶ ಗಿಟ್ಟಿಸುವುದರಿಂದಾಗುವ ಪರಿಣಾಮಗಳಿಗಿಂತ, ದೇವಸ್ಥಾನವನ್ನೆ ನಿರಾಕರಿಸುವುದರಿಂದ ಆಗುವ ಪರಿಣಾಮಗಳು - ತೀರಾ ವ್ಯಾಪಕವೂ ನಿಜವಾದ ಅರ್ಥದಲ್ಲಿ ಕ್ರಾಂತಿಕಾರವೂ ಆಗಿವೆ ಮತ್ತು ಆಗುತ್ತವೆ ಎಂಬುದನ್ನು ಗುರುತಿಸಿಕೊಳ್ಳಬೇಕಾಗಿದೆ.

ಈ ಹಿನ್ನೆಲೆಯಿಂದ ನೋಡಿದರೆ 'ದೇವಸ್ಥಾನದ ನಿರಾಕರಣೆ' ಮುಖ್ಯವಾಗಿ ಪುರೋಹಿತಷಾಹೀ ಪ್ರವೃತ್ತಿಗೆ ಹಾಗೂ ಅಧಿಕಾರಷಾಹೀ ವ್ಯವಸ್ಥೆಗೆ ತೋರಿದ - ಮೊದಲ ಪ್ರತಿಕ್ರಿಯೆಗಳಾಗಿವೆ. ಹಾಗೆ ನೋಡಿದರೆ ಈ ದೇಶದ ಚರಿತ್ರೆಯಲ್ಲಿ ಪುರೋಹಿತಷಾಹಿ ಮತ್ತು ಅಧಿಕಾರಷಾಹಿಗಳನ್ನು ಬೇರ್ಪಡಿಸಿ ನೋಡುವುದು ಕಷ್ಟ. ಅವೆರಡೂ ಒಂದೇ ನಾಟ್ಯದ ಎರಡು ಮುಖಗಳೊ, ಒಂದೇ ಖಡ್ಗದ ಎರಡು ಬಾಯಿಗಳೋ - ಎಂದು ಹೇಳಬಹುದು. ದೇವಸ್ಥಾನ - ಮಠ ಹಾಗೂ ಅರಮನೆಗಳು, ಅವುಗಳ ಕೇಂದ್ರಗಳು. ರಿಚರ್ಡ್ ಲಾನೋಯ್ ಗುರುತಿಸಿರುವಂತೆ ವಾಸ್ತವವಾಗಿ ದೇವಾಲಯಗಳು ಅಭಿವೃದ್ಧಿ ಹೊಂದಿದ್ದು ಬ್ರಾಹ್ಮಣ, ಕ್ಷತ್ರಿಯ, ಪುರೋಹಿತಷಾಹಿ ಹಾಗೂ ರಾಜರ ಪರಸ್ಪರ ಸಹಕಾರ ಸಹಯೋಗಗಳಿಂದ ಮತ್ತು ಈ ವರ್ಗದವರ ರುಚಿ ಅಭಿರುಚಿಗಳೇ ದೇವಾಲಯಗಳ ವ್ಯವಸ್ಥೆಯನ್ನೂ ಅದರ ರಚನೆಯನ್ನೂ ನಿಯಂತ್ರಿಸಿದವುಗಳು. ದೇವಾಲಯಗಳ ಜೀವನ ವಿಧಾನದ ಮಾದರಿಗಳ ಮೇಲೆ ರೂಪುಗೊಂಡದ್ದಾಗಿದೆ. ದಕ್ಷಿಣ ಭಾರತದ ಹಲವು ದೇವಾಲಯಗಳಂತೂ ಅವುಗಳ ವಿಸ್ತಾರ - ವೈಭವಗಳಲ್ಲಿ ಅರಮನೆಗಳನ್ನು ನೆನಪಿಗೆ ತರುವಂತಿವೆ. ದೇವಾಲಯದ ಗೋಪುರವು ರಾಜತ್ವದ ಶಕ್ತಿಯ ಪ್ರತೀಕವಾಗಿದೆ. ದೇವಸ್ಥಾನಗಳು ಒಂದು ರೀತಿಯಲ್ಲಿ ನಾಟ್ಯಶಾಲೆಗಳಂತೆ ಭಾಸವಾಗುತ್ತವೆ. ದೇವತಾ ವಿಗ್ರಹಗಳು ಹಾರ - ಕಿರೀಟ - ಕುಂಡಲಾದಿ ರಾಜೋಚಿತ ವೇಷಣಭೂಣಗಳಿಂದ ರಾರಾಜಿಸುತ್ತವೆ. ದೇವಸ್ಥಾನಗಳ ಶಿಲ್ಪಗಳೂ, ರಾಜರ ವಿರಾಮದ ವೇಳೆಯ ಚಟುವಟಿಕೆಗಳಾದ ಗಾಯನ, ನರ್ತನ, ಮಲ್ಲಯುದ್ಧ, ಕುದುರೆ ಸವಾರಿ, ಶೃಂಗಾರಿ - ಇತ್ಯಾದಿಗಳನ್ನು ಬಿಂಬಿಸುತ್ತವೆ. ಈ ಎಲ್ಲವೂ ದೇವಸ್ಥಾನಗಳು ಹೇಗೆ ಆಳುವ ವರ್ಗದ ಅಭಿರುಚಿಯಿಂದ ನಿಯಂತ್ರಿತವಾಗಿವೆ ಎಂಬುದನ್ನು ಸೂಚಿಸುತ್ತವೆ.[3] ಇದು ದೇವಸ್ಥಾನದ ಒಂದು ಮುಖವಾದರೆ, ಅದರ ಇನ್ನೊಂದು ಮುಖ ಅದರ ಒಳಗಿನ ವ್ಯವಸ್ಥೆಗೆ ಸಂಬಂಧಪಟ್ಟದ್ದು. ಇದರ ಸಂಪೂರ್ಣ ನಿಯಂತ್ರಣ ಪುರೋಹಿತಷಾಹಿಯದು. ಅರಲ್ಲಿಯೂ ಮುಖ್ಯವಾಗಿ ಬ್ರಾಹ್ಮಣ ವರ್ಗದ್ದು. ಅರ್ಚನೆ-ಉತ್ಸವ-ದಾನ-ದಕ್ಷಿಣೆ-ವ್ರತ-ನೇಮ ಇತ್ಯಾದಿಗಳ ಹೆಸರಿನಲ್ಲಿ ಜನರ ಧರ್ಮ ಶ್ರದ್ಧೆಯ ಉಪಯೋಗಗಳನ್ನು ಬಲ್ಲವರು ಇವರು. ಇವರ ಜತೆಗೆ 'ಉಳ್ಳವರು' - ಹಣ ಉಳ್ಳ ಶ್ರೀಮಂತರು. ದೇವಾಲಯಾದಿ ನಿರ್ಮಾಣ ಕಾರ್ಯಗಳನ್ನು ಒಂದು ಪುಣ್ಯ ಕರ್ಮವೆಂದು ಭಾವಿಸಿದವರು, ದೇವಸ್ಥಾನಗಳಿಗೆ ದಾನ - ದತ್ತಿಗಳನ್ನು ಬಿಟ್ಟು ಶಾಸನಗಳನ್ನು ಬರೆಯಿಸಿದವರು, ಈ ಪಟ್ಟಿಗೆ ರಾಜರೂ ಸೇರುತ್ತಾರೆ. ತಮ್ಮ ಸಂಪತ್ತಿನ ಒಂದಷ್ಟು ಭಾಗ ದೇವಕಾರ್ಯಕ್ಕೆ ವಿನಿಯೋಗವಾಗಲಿ ಎಂಬ ಶ್ರದ್ಧೆಯುಳ್ಳವರು ಮತ್ತು

3. Richard Lannoy : The speaking Tree, Chap IV The Hindu Temple - p 62-63.

ತಮ್ಮ ಸಂಪತ್ತಿನ ಗಳಿಕೆಯ ಪಾಪಪ್ರಜ್ಞೆಯನ್ನು ಈ ಪುಣ್ಯಕಾರ್ಯಗಳ ಮೂಲಕ ತೊಳೆದುಕೊಳ್ಳಲು ಬಯಸುವವರು. ಈ ಎಲ್ಲ ಕಾರಣಗಳಿಂದ ವಚನ ಚಳುವಳಿಗೆ ಹಿನ್ನೆಲೆಯಾದ ಅಂದಿನ ಕರ್ನಾಟಕ ಪರಿಸರದಲ್ಲಿ ಲಕುಲೀಶ ಪಾಶುಪತ ಸಂಪ್ರದಾಯದ ಶೈವರಿಂದ ಬಹುಸಂಖ್ಯೆಯ ದೇವಾಲಯಗಳು ನಿರ್ಮಾಣಗೊಂಡಿದ್ದವು. ಇದು ''ಮಧ್ಯಕಾಲೀನ ಯುಗದ ದಕ್ಷಿಣದ ತಪ್ಪಲಿನ ಭೂಮಿಯಲ್ಲಿ ದೇವಮಂದಿರಗಳ ನಿರ್ಮಾಣಕ್ಕೆ ಉಕ್ಕುಬಂದ ಕಾಲ. ಐದರಿಂದ ಏಳನೆಯ ಶತಮಾನಗಳ ಅವಧಿಯಲ್ಲಿ ಬಾದಾಮಿಯ ಚಾಳುಕ್ಯರು ತಮ್ಮ ರಾಜಧಾನಿಯಾದ ಐಹೊಳೆ ಒಂದರಲ್ಲಿಯೇ ಎಪ್ಪತ್ತರಷ್ಟು ದೇವಾಲಯಗಳನ್ನು ಕಟ್ಟಿಸಿದ್ದಾರೆ. ಎರಡನೆಯ ಚಾಳುಕ್ಯ ವಿಕ್ರಮಾದಿತ್ಯನು ಎಂಟನೆಯ ಶತಮಾನದಲ್ಲಿ ಈಗಿನ ವಿಜಾಪುರ ಜಿಲ್ಲೆಯ ಪಟ್ಟದ ಕಲ್ಲಿನಲ್ಲಿ ತನ್ನ ರಾಜ ವೈಭವವನ್ನು ವ್ಯಕ್ತಪಡಿಸುವುದಕ್ಕೆ ಮೂರು ಬೃಹದ್ ದೇವಸ್ಥಾನಗಳನ್ನು ಕಟ್ಟಿಸಿದನು... ಕ್ರಿ.ಶ. ೧೧೫೦ ರಿಂದ ೧೩೫೦ರ ವರೆಗಿನ ಎರಡು ನೂರು ವರ್ಷಗಳಲ್ಲಿ ಶೈವರು ಏನಿಲ್ಲೆಂದರೂ ನಾನೂರು ಐವತ್ತು ಶಿವದೇವಾಲಯಗಳನ್ನೂ, ವೈಷ್ಣವರು ಒಂದುನೂರು ದೇವಾಲಯಗಳನ್ನು, ಕಟ್ಟಿರುವುದು ಆ ಕಾಲದಲ್ಲಿ ದೇವಮಂದಿರಗಳ ನಿರ್ಮಾಣ ಕಾರ್ಯದಲ್ಲಿ ಧರ್ಮಗಳು ನಡೆಸಿದ ಸ್ಪರ್ಧೆಯ ದ್ಯೋತಕಗಳಾಗಿವೆ [4]. ಇಂಥ ಪರಿಸರದಲ್ಲಿ ದೇವಾಲಯಗಳನ್ನು ನಿರಾಕರಿಸುವುದರ ಮೂಲಕ ಸೂಕ್ಷ್ಮವಾಗಿ ರಾಜಷಾಹಿಯನ್ನೂ, ಸ್ಪಷ್ಟವಾಗಿ ಪುರೋಹಿತಷಾಹಿಯನ್ನೂ ವಿರೋಧಿಸಿದ ಶರಣ ಧರ್ಮದ ವೈಚಾರಿಕತೆಯನ್ನೂ ಕ್ರಿಯಾಶೀಲತೆಯನ್ನೂ ಅರ್ಥಮಾಡಿಕೊಳ್ಳಬಹುದು.

ಹಾಗೆ ನೋಡಿದರೆ ಶರಣರ ದೇವಾಲಯ ವಿರೋಧ - ದೇವಸ್ಥಾನಗಳನ್ನು ಕುರಿತ ಅಗೌರವದಿಂದ ಹುಟ್ಟಿಕೊಂಡ ಕ್ರಿಯೆ ಅಲ್ಲ. ವಾಸ್ತವವಾಗಿ ಈ ಶರಣಚಳುವಳಿಯ ಮುಖ್ಯ ವಚನಕಾರರು ಒಂದಲ್ಲ ಒಂದು ರೀತಿಯಲ್ಲಿ 'ದೇವಾಲಯಗೋತ್ರ'ಕ್ಕೆ ಸೇರಿದವರೇ. ಅವರವರ ಅಂಕಿತಗಳಂತೂ ಸ್ಪಷ್ಟವಾಗಿ ಸ್ಥಾವರಲಿಂಗದ ದೇವಸ್ಥಾನಗಳನ್ನು ಸೂಚಿಸುತ್ತದೆ. ಬಸವಣ್ಣನವರ ಅಂಕಿತವಾದ 'ಕೂಡಲಸಂಗಮದೇವ' ಈ ಹೊತ್ತಿಗೂ ಇರುವ ಕೂಡಲ ಸಂಗಮದ ದೇವಸ್ಥಾನವನ್ನು, ಅಕ್ಕಮಹಾದೇವಿ ಹಾಗೂ ಸಿದ್ಧರಾಮನ ಅಂಕಿತಗಳು ಶ್ರೀ ಶೈಲದ ಮಲ್ಲಿಕಾರ್ಜುನ ದೇವಸ್ಥಾನವನ್ನೂ, ಅಲ್ಲಮಪ್ರಭುವಿನ 'ಗುಹೇಶ್ವರ' ಎನ್ನುವುದು ಬಳ್ಳಿಗಾವೆಯ ಗೊಗೇಶ್ವರ ದೇವಾಲಯವನ್ನೂ - ಹೀಗೆ ಇನ್ನೂ ಕೆಲವು ವಚನಕಾರರ ಅಂಕಿತಗಳು ಅವರವರು ಬಂದ ಪರಿಸರದ ದೇವಾಲಯಗಳನ್ನು ಬೆರಳಿಟ್ಟು ತೋರಿಸುತ್ತವೆ. ಈ ಶರಣರಲ್ಲಿ, ಮುಖ್ಯವಾಗಿ ಸಿದ್ಧರಾಮನು ದೇವಾಲಯ ನಿರ್ಮಾಣದ ವಿಚಾರದಲ್ಲಿ ವಿಶೇಷವಾದ ಕಾಳಜಿ ವಹಿಸಿದವನು. ಅವನ ಲೋಕಕಲ್ಯಾಣ ರೂಪವಾದ ಸಾಧನೆಯಲ್ಲಿ ಕೆರೆ ಬಾವಿ ದೇವಾಲಯಗಳ ನಿರ್ಮಾಣವೂ ಸೇರುತ್ತದೆ. ಈ ಕೆಲವು ಶರಣರ ಅಂಕಿತಗಳ ನಡುವೆ, ಅಲ್ಲಮಪ್ರಭುವಿನ ಅಂಕಿತ ಬಳ್ಳಿಗಾವೆಯ ಗೊಗ್ಗೇಶ್ವರನನ್ನು ಸೂಚಿಸಿದರೂ, 'ಗುಹೇಶ್ವರ' ಎಂಬ ಅಂಕಿತವು ದೇವಾಲಯ ಸಂಸ್ಕೃತಿಯ ಇತಿಹಾಸದಲ್ಲಿ ದೇವಾಲಯ ರಚನೆಗಳ ಪೂರ್ವಾವಸ್ಥೆಯಾದ 'ಗುಹೆಯನ್ನು ಅಥವಾ ಗುಹಾಲಯ ಶಿಲ್ಪಗಳ' ಪರಂಪರೆಯನ್ನು ಸೂಚಿಸುವಂತೆ ತೋರುತ್ತದೆ. ಯಾಕಂದರೆ ''ದೇವಸ್ಥಾನಗಳ ಬೆಳವಣಿಗೆಯ ಚರಿತ್ರೆಯಲ್ಲಿ ಗುಹಾಲಯಗಳ ನಿರ್ಮಿತಿಯೆ ಅತ್ಯಂತ ಪ್ರಾಚೀನವಾದದ್ದು. ಭಾರತೀಯ ವಾಸ್ತುಶಿಲ್ಪದ ಸುಮಾರು ಒಂದು ಸಾವಿರ ವರ್ಷಗಳ ಕಾಲಮಾನದಲ್ಲಿ ನಿಜವಾದ ಸ್ಮಾರಕಗಳೆಂದರೆ ಗುಹಾಲಯಗಳೇ. ಭಾರತದ ದೇವಾಲಯ ಶಿಲ್ಪಕ್ಕೆ ಇದು ವಿಶಿಷ್ಟವಾದ ಲಕ್ಷಣವಾಗಿದೆ. ಕ್ರಿ.ಪೂ. ೩ನೆಯ ಶತಮಾನದಿಂದ ಕ್ರಿ.ಶ. ೧೦ನೆಯ ಶತಮಾನದ ಅವಧಿಯಲ್ಲಿ ನಿರ್ಮಾಣಗೊಂಡ ಗುಹಾಲಯಗಳ ಸಂಖ್ಯೆ ಒಂದು ಸಾವಿರದ ಇನ್ನೂರಕ್ಕೂ ಮಿಗಿಲಾಗಿವೆ. [5] ಉಪನಿಷತ್ತುಗಳಲ್ಲಾಗಲೀ ಧರ್ಮಶಾಸ್ತ್ರಗಳಲ್ಲಾಗಲಿ ದೇವಸ್ಥಾನಗಳ ವಿಷಯವು ಪ್ರಸ್ತಾಪಿತವಾದಂತೆ ತೋರುವುದಿಲ್ಲ. ಆಗ ಅರಣ್ಯದ ಏಕಾಂತಕ್ಕೆ ಸರಿದು ಗುರುವಿನ ಮಾರ್ಗದರ್ಶನದಲ್ಲಿ ಸಾಧಕನು ಜಿಜ್ಞಾಸೆಗೆ ತೊಡಗುವುದು ಮುಖ್ಯವಾಗಿತ್ತು. ''ದಟ್ಟವಾದ ಕಾಡಿನ ಕತ್ತಲೆಯನ್ನು ಪ್ರವೇಶಿಸುವ ಸಾಧನಕ ಕ್ರಿಯೆ, ಅಂತರಂಗವನ್ನು ಧ್ಯಾನದ ಮೂಲಕ ಪ್ರವೇಶಿಸುವುದರ ಸಂಕೇತವಾಗಿದೆ. ಮುಂದಿನ ಹಂತವಾದ ಗುಹಾಲಯಗಳು ಈ ಸಂಕೇತದ ಸಮರ್ಥನೆಯಾಗಿವೆ.

---

4. ಡಾ. ಹಿರೇಮಲ್ಲೂರು ಈಶ್ವರನ್ : ಲಿಂಗಾಯತ ಧರ್ಮ - ಸಂಸ್ಕೃತಿ ಮತ್ತು ಸಮಾಜ (೧೯೭೧) ಪು. ೩೫.

5. Richar Lannoy : The Speaking Tree (Chap III. The Art of Cave Sancturles) P. 31.

ಜೈನ, ಬೌದ್ಧ ಹಿಂದೂ ಗುಹಾಲಯಗಳೂ ಏಕಾಂತಕ್ಕೆ ಒಂದಿರುಗುವ ಸಾಧಕನ ಮನಃಸ್ಥಿತಿಯ ಹಳಹಳಿಕೆಯನ್ನು ಸೂಚಿಸುತ್ತವೆ.''[6] ಸಾಧು ಸನ್ಯಾಸಿಗಳಿಗೆ ಹಾಗೂ ಆಧ್ಯಾತ್ಮ ಸಾಧಕರಿಗೆ ಮತ್ತು ಅದೇ ಬಗೆಯ ಪ್ರವೃತ್ತಿಯವರಿಗೆ ಗುಹೆಗಳು ಏಕಾಂತದ ಧ್ಯಾನಕ್ಕೆ ಅನುಕೂಲವಾದ ನೆಲೆಗಳಾಗಿದ್ದುದೇನೋ ನಿಜ. ಆದರೆ ಭಕ್ತರಿಗೆ ಬೇಕಾದದ್ದು ದೇವಸ್ಥಾನಗಳು. ಯಾವಾಗ ಶಿವ, ವಿಷ್ಣು, ರಾಮ, ಕೃಷ್ಣ ಪಂಥಗಳು ವ್ಯಾಪಕವಾದುವೋ ಆಗ ಮತ್ತು ಭಕ್ತಿಪಂಥದ ಪ್ರಭಾವದಿಂದ, ದೇವಾಲಯಗಳ ನಿರ್ಮಾಣದಲ್ಲಿ ಹೆಚ್ಚಿನ ಆಸಕ್ತಿ ಬೆಳೆಯಿತೆಂದು ತೋರುತ್ತದೆ. ಹೀಗಾಗಿ ದೇವಾಲಯ ನಿರ್ಮಿತಿ ಒಂದು ಪರಂಪರೆಯಾಗಿ ರೂಪುಗೊಂಡಿತು.[7] ಅಲ್ಲಮನ ಅಂಕಿತವಾದ 'ಗುಹೇಶ್ವರ' ಎನ್ನುವುದು, ದೇವಾಲಯ ನಿರ್ಮಿತಿಯ ಪ್ರಾಚೀನ ರೂಪವನ್ನು ಸೂಚಿಸಿದರೆ, ಇತರ ಕೆಲವು ವಚನಕಾರರ ಅಂಕಿತಗಳು ದೇವಾಲಯಗಳನ್ನೆ ಸೂಚಿಸುತ್ತವೆ ಮತ್ತು ಎಲ್ಲ ವಚನಕಾರರ ಧೋರಣೆ ಮತ್ತೆ ದೇವಾಲಯವನ್ನು ನಿರಾಕರಿಸುವ ಹಾಗೂ ಮೀರುವ ನೆಲೆಯನ್ನು ನಿರ್ದೇಶಿಸುತ್ತವೆ. ಹಾಗೆ ನಿರಾಕರಿಸುವ ಮತ್ತು ಮೀರುವ ನೆಲೆಯನ್ನು ನಿರ್ದೇಶಿಸುತ್ತವೆ. ಹಾಗೆ ನಿರಾಕರಿಸುವ ಮತ್ತು ಮೀರುವ ಮನಃಸ್ಥಿತಿಯ ಮೂಲಕ, ವಚನಕಾರರು ದೇವಾಲಯದ ಪ್ರಾಚೀನ ಮಾದರಿಗೆ, ಅಂದರೆ 'ದೇಹವೇ ದೇವಾಲಯ' ಎಂಬ ಕಲ್ಪನೆಗೆ ಹಿಂದಿರುಗುತ್ತಾರೆ. ಈ ಪ್ರಾಚೀನ ಮಾದರಿ, ದೇವಸ್ಥಾನಗಳ ಎಲ್ಲ ಬಗೆಯ 'ಮೂರ್ತ' ರೂಪಗಳಿಗೆ ಬಹುಶಃ ಮೊದಲನೆಯದು.

ದೇವಾಲಯ ಸಂಸ್ಕೃತಿಯಲ್ಲಿ ಬೆಳೆದು ಬಂದ ಸಮಾಜದ ಮನಸ್ಸಿಗೆ ದೇವಾಲಯದ ನಿರಾಕರಣೆಯಿಂದ ಉಂಟಾಗುವ ಶೂನ್ಯವನ್ನು ತುಂಬಲು 'ದೇಹವೇ ದೇವಾಲಯ' ಎಂಬ ಪರ್ಯಾಯವನ್ನು ವಚನಕಾರರು ಸೂಚಿಸಿದರಷ್ಟೇ? ಹಾಗೆ ನೋಡಿದರೆ, ಈ ಸೂಚನೆಯೂ ಹೊಸದೇನಲ್ಲ. 'ದೇಹೋ ದೇವಾಲಯಃ ಪ್ರೋಕ್ತಃ ಜೀವೋ ದೇವಃ ಸನಾತನಃ'' ಎಂಬ ಉಕ್ತಿಯೊಂದಿದೆ. ಇದು ಎಷ್ಟು ಪ್ರಾಚೀನವೋ, ತಿಳಿಯದು. ಆದರೂ ಅದು ಕೇವಲ ಒಂದು ಕಲ್ಪನೆಯೋ, ಆಶಯವೋ ಆಗಿದೆಯೆ ಹೊರತು ಶಿವಶರಣರಲ್ಲಿಯಂತೆ ಒಂದು ಪ್ರಾಯೋಗಿಕ ತಾತ್ವಿಕ ನಿಲುವಾಗಿ ಎಂದಾದರೂ ಅನುಭೂತವಾಗಿತ್ತೆಂದು ಹೇಳಲು ಬಾರದು. ಆದರೆ ಭಾರತೀಯ ವಾಸ್ತುಶಿಲ್ಪದ ಪ್ರಕಾರ ದೇಹಕ್ಕೂ ದೇವಾಲಯಕ್ಕೂ ಇರುವ ಸಂಬಂಧ ಅತ್ಯಂತ ಅರ್ಥಪೂರ್ಣ ವಾದುದಾಗಿದೆ. ಸಾಮಾನ್ಯವಾಗಿ ಭಾರತೀಯ ದೇವಸ್ಥಾನಗಳು ಮನುಷ್ಯ ಶರೀರದ ನೀಲನಕ್ಷೆಯನ್ನೇ ಅವಲಂಬಿಸಿ ರಚಿತವಾಗಿವೆ. ಗುಡಿಯನ್ನು ಕಟ್ಟುವ ಮೊದಲು 'ಗರ್ಭ ವಿನ್ಯಾಸ' ಎಂಬ ವಿಧಿಯನ್ನು, ನೆರವೇರಿಸುವುದರ ಮೂಲಕ, ದೇವಸ್ಥಾನವು, ಭ್ರೂಣದಿಂದ ಶರೀರವು ರೂಪುತಾಳುವಂತೆ ಏಳುವುದೆಂದು ಕಲ್ಪಿಸಿಕೊಳ್ಳಲಾಗಿದೆ ಮತ್ತು ದೇವಸ್ಥಾನದ ವಿವಿಧ ಭಾಗಗಳನ್ನು ಮನುಷ್ಯ ಶರೀರದ ಇತರ ಅವಯವಗಳೊಂದಿಗೆ ಸಮೀಕರಿಸಲಾಗಿದೆ. ವಾಸ್ತುಶಾಸ್ತ್ರದ ಪ್ರಕಾರ, ದೇವಾಲಯದ ಎರಡೂ ಬದಿಗಳನ್ನು ಹಸ್ತ ಅಥವಾ ಪಾರ್ಶ್ವವೆಂದೂ, ಕಂಬಗಳನ್ನು ಪಾದಗಳೆಂದೂ, ಗೋಪುರವನ್ನು ಶಿಖರ ಅಥವಾ ಶಿರಸ್ಸೆಂದೂ, ಮೂರ್ತಿಯನ್ನು ಒಳಗೊಳ್ಳುವ ಭಾಗಕ್ಕೆ ಗರ್ಭಗುಡಿಯೆಂದೂ ಹೇಳಲಾಗಿದೆ. ಹೀಗೆ ಮೂಲತಃ ದೇವಸ್ಥಾನವೇ ಮನುಷ್ಯ ಶರೀರ, ಮನುಷ್ಯ ಶರೀರವೇ ದೇವಸ್ಥಾನ - ಎಂಬ ಸಮೀಕರಣವೊಂದು ಸಾಧಿತವಾಗಿದೆ. ಬಸವಣ್ಣನವರ ಸುಪ್ರಸಿದ್ಧವಾದ -

ಉಳ್ಳವರು ಶಿವಾಲಯ ಮಾಡುವರು
ನಾನೇನು ಮಾಡುವೆ ಬಡವನಯ್ಯ
ಎನ್ನ ಕಾಲೇ ಕಂಭ, ದೇಹವೇ ದೇಗುಲ,
ಶಿರವೆ ಹೊನ್ನ ಕಳಸವಯ್ಯ
ಕೂಡಲ ಸಂಗಮದೇವ ಕೇಳಯ್ಯ
ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ

---

6. ಅಲ್ಲೇ, ಪು. ೩೮

7. ಭಾರತದಲ್ಲಿ ಈಗೀಗ ನಮಗೆ ಕಾಣಲು ದೊರಕುವ ಪ್ರಾಚೀನ ದೇವಾಲಯಗಳು ಗುಪ್ತರ ಕಾಲಕ್ಕೆ ಸೇರಿದವುಗಳು.

ಎಂಬ ವಚನ ಈಗ ಉಲ್ಲೇಖಿಸಿದ ವಾಸ್ತುಶಾಸ್ತ್ರದ ನೆನಪನ್ನು ತರುವುದಲ್ಲದೆ, ಶರಣರ ದೇವಾಲಯದ ಪರಿಕಲ್ಪನೆಯನ್ನು ಕುರಿತ ಅತ್ಯುತ್ತಮ ವ್ಯಾಖ್ಯಾನವೂ ಆಗಿದೆ. 'ಉಳ್ಳವರು' ಮಾಡುವ ದೇವಸ್ಥಾನದೊಂದಿಗೆ 'ಬಸವ'ನಾದ ತಾನು ಮಾಡುವ ದೇವಸ್ಥಾನವನ್ನು ಮುಖಾಮುಖಿಯಾಗಿರಿಸಿ, ಹೇಗೆ ಒಂದು ಕಾಲಕ್ಕೆ ಸಾಂಸ್ಕೃತಿಕವಾಗಿ ಅರ್ಥಪೂರ್ಣವಾಗಿದ್ದ ದೇವಾಲಯ, ಈಗ ಅರ್ಥವನ್ನು ಕಳೆದುಕೊಂಡು 'ಸ್ಥಾವರ'ವಾಗಿದೆ ಎಂಬುದನ್ನೂ ಸೂಚಿಸುತ್ತ, ಮತ್ತೆ ಪರ್ಯಾಯವಾಗಿ 'ದೇಹವೇ ದೇಗುಲ'ವೆಂಬ 'ಜಂಗಮ' ಅಥವಾ ಚಲನಶೀಲ ಸ್ಥಿತಿಗೆ ಹಿಂದಿರುಗುವ ಆಶಯವನ್ನು ಅಭಿವ್ಯಕ್ತಿಪಡಿಸುವ ಕ್ರಮ ಅನನ್ಯವಾಗಿದೆ. ಈ ವಚನ ಮುಖ್ಯವಾಗಿ ಪ್ರತಿಪಾದಿಸುವುದು ಶಿವಾಲಯವನ್ನು ''ಮಾಡುವ'' ಕ್ರಿಯೆಯನ್ನಲ್ಲ, ವ್ಯಕ್ತಿ ತಾನೇ ಶಿವಾಲಯ ''ಆಗುವ'' ಕ್ರಿಯೆಯನ್ನು. [8]

---

8. ಈ ವಚನವನ್ನು ಕುರಿತು, ಶ್ರೀ ಎ.ಕೆ. ರಾಮಾನುಜನ್ Speaking of Shiva ಎಂಬ ಕೃತಿಯ ಮುನ್ನುಡಿಯಲ್ಲಿ ಅತ್ಯಂತ ಸೊಗಸಾಗಿ ವ್ಯಾಖ್ಯಾನಿಸಿದ್ದಾರೆ. ವಿವರಗಳಿಗೆ ಅದನ್ನು ನೋಡಬಹುದು.

(ಎ) ಬಸವಣ್ಣನವರ ವಚನದ ಇದೇ ಭಾವ ಅಲ್ಲಮಪ್ರಭುಗಳ ಎರಡು ವಚನಗಳಲ್ಲಿ ವ್ಯಕ್ತವಾಗಿದೆ.

(೧) 'ಕಾಲೇ ಕಂಭಗಳಾದುವೆನ್ನ । ದೇಹವೇ ದೇಗುಲವಾಯಿತಯ್ಯ । ಎನ್ನ ನಾಲಗೆಯೆ ಘಂಟೆ । ಶಿರ ಸುವರ್ಣದ ಕಳಸ - ಇದೇನಯ್ಯ (ಅ.ವ.ಚಂ. ೧೯೩೧).

(೨) ದೇಹದೊಳಗೆ ದೇವಾಲಯವಿದ್ದು ಮತ್ತೆ ಬೇರೆ ದೇವಾಲಯವೇಕೆ? (ಅವಚಂ. ೨೧೩) ''ಸ್ಥಾವರ'' ದೇವಾಲಯಗಳ ನಿರಾಕರಣೆಯ ಈ ವೈಚಾರಿಕತೆ ಕಲ್ಯಾಣಕ್ರಾಂತಿಯ ಅನಂತರ ತನ್ನ ಅರ್ಥವನ್ನು ಕಳೆದುಕೊಂಡಂತೆ ತೋರುತ್ತದೆ. ಬಸವಾದಿಗಳ ಕಾಲಕ್ಕೆ, ಅನಂತರದ ಅರ್ಧಶತಮಾನದ ವೇಳೆಗೆ, ಹರಿಹರ ರಾಘವಾಂಕರ ಕೃತಿಗಳಲ್ಲಿ ಸ್ಥಾವರಲಿಂಗಾರ್ಚನೆಯ ಹಾಗೂ ದೇವಾಲಯ ಸಂಸ್ಕೃತಿಯ ವೈಭವ ಕಾಣಿಸಿಕೊಂಡಿದೆ ಎನ್ನುವುದನ್ನು ಗಮನಿಸಬಹುದು. ಎಂಥ ಉಜ್ವಲವಾದ ವೈಚಾರಿಕತೆಯೂ ತನ್ನ ಮೊದಲಿನ ಬೆಳಕನ್ನು ಕಳೆದುಕೊಂಡು ಸಂಪ್ರದಾಯದ ಕಿಡಿ ಬೂದಿಯಾಗುವುದು ಬಹುಶಃ ಎಲ್ಲ ಧರ್ಮಗಳ ಚರಿತ್ರೆಯ ಗತಿಯಲ್ಲಿ ಕಂಡುಬರುವ ಸಾಮಾನ್ಯ ಲಕ್ಷಣವಾಗಿದೆ. ವಚನಕಾರರು ದೇವಸ್ಥಾನದ ಬಗ್ಗೆ ತಾಳಿದ ನಿಲುವು, ಯಾಕೆ ಒಂದು ನಿಜವಾದ ಪರಂಪರೆಯಾಗಿ ಉಳಿಯಲಿಲ್ಲ ಎನ್ನುವುದನ್ನು ಚರ್ಚಿಸುವುದು ಈ ಲೇಖನದ ವ್ಯಾಪ್ತಿಗೆ ಮೀರಿದ ವಿಷಯವಾಗಿದೆ.

ಶಿಷ್ಯ ವಾತ್ಸಲ್ಯಕ್ಕೊಂದು ಅನನ್ಯ ನಿದರ್ಶನ : ತ.ಸು.ಶಾಮರಾಯ

ಡಾ॥ ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ

ಬೇರೆಯವರಿಂದ ತಾನು ಏನು ಪಡೆದೇನು ಎಂದು ಚಿಂತಿಸುವವರೇ ಎಲ್ಲ. ಆದರೆ ಬೇರೆಯವರಿಗೆ ಏನಾದರೂ ಕೊಡಬಲ್ಲೇನೇ ಎಂದು ತಳಮಳಿಸುವ ಜನರೂ ಇರುತ್ತಾರೆ. ವಿರಳವಾಗಿ, ಇಂಥವರು ಶ್ರೀಮಂತರಾಗಿದ್ದರೂ ಸಹ ಅದು ಒಂದು ವಿಶೇಷವೇ. ಹಾಗಲ್ಲದೆ ಹಾಗಲ್ಲದೆ ತಿಂಗಳ ಸಂಬಳ ತಂದೆ ರಥ ಸಾಗಿಸಬೇಕಾದ ಜನವಾಗಿದ್ದರೆ ಅದು ಖಂಡಿತವಾಗಿ ಅಸಾಧಾರಣ ಸಂಗತಿ. ತನ್ನ ಮೇಲೆ ಬಿದ್ದ ನೀರನ್ನೆಲ್ಲ ತಪ್ಪಲಿಗೆ ಸಲ್ಲಿಸಿ ಬೆಳೆ ಎಬ್ಬಿಸುವ ಬೆಟ್ಟದಂತೆ ಈ ಜನ. ಸಮತಟ್ಟಾದ ನೆಲ ಎತ್ತರವಾಗುವ ಹಂಬಲದಿಂದ ಮೇಲೆ ಸಾಗುತ್ತ ಇಂಥ ಬೆಟ್ಟ ಸೃಷ್ಟಿಯಾಗುತ್ತದೆ; ಆಕಾಶದಲ್ಲಿ ತಲೆಯೆತ್ತಿ ನಿಲ್ಲುತ್ತವೆ. ಏರುತ್ತ ಏರುತ್ತ ಶಿಖರವಾಗಿ ಕೊನೆಗೆ ಸಾರ್ಥಕವಾಗಿ ಮುಗಿದುಬಿಡುತ್ತವೆ.

ಡಾ. ತ.ಸು.ಶಾಮರಾಯ ಇಂಥ ಒಂದು ಎತ್ತರದ ಅಭಿವ್ಯಕ್ತಿ. ಕೊಟ್ಟು ಸಂತೋಷಪಡೆಯುವ ಬುದ್ಧಿ ಅವರಿಗೆ ಜನ್ಮಜಾತವಾಗಿ ಬಂದದ್ದು ಮಾತ್ರವಲ್ಲ, ಕುಟುಂಬದಿಂದಲೂ ದತ್ತವಾದದ್ದು. ಶಾಮರಾಯ ಪ್ರೊ. ಟಿ.ಎಸ್.ವೆಂಕಣ್ಣಯ್ಯನರ ತಮ್ಮ. ವೆಂಕಣ್ಣಯ್ಯನವರು ಕುವೆಂಪುರವರಂಥ ಒಂದು ಹಿರಿಯ ಚೇತನದ ಕೃತಜ್ಞತೆಗೆ ಪಾತ್ರರಾದವರು; ಒಬ್ಬ ದೇವತಾಮನುಷ್ಯ ಎಂದು ಕರೆಸಿಕೊಂಡವರು. ಅಂಥ ಅಣ್ಣ ಶಾಮರಾಯರಿಗೆ ಎಲ್ಲ ಆದರ್ಶ.

ಸಾವಿರದ ಒಂಬೈನೂರ ಐವತ್ತೈದು. ನಾನು ಕನ್ನಡ ಆನರ್ಸ್ ಮೊದಲ ವರ್ಷದಲ್ಲಿದ್ದೆ. ಒಂದು ದಿನ ಬೆಳಿಗ್ಗೆ ವಾರದೂಟಕ್ಕಾಗಿ ಹೋಗಿದ್ದ ನಾನು ಶಾಮರಾಯರ ಮನೆಯ ಹಾಲಿನಲ್ಲಿ ಕೂತಿದ್ದೇನು. ಸುಮಾರು ಒಂಬತ್ತೂವರೆ ಗಂಟೆ. ಒಳಗೆ ಪೂಜೆ ನಡೆಯುತ್ತಿದೆ. ಗಂಟೆಯ ಶಬ್ದ ಶುರುವಾಯಿತು. ಮಂಗಳಾರತಿ ಸಮಯ. ಇನ್ನೇನು ಪೂಜೆ ಮುಗಿಯುವ ಹೊತ್ತು. ಇದ್ದಕ್ಕಿದ್ದಂತೆ ಗಂಟೆಯ ಶಬ್ದ ನನ್ನ ಕಡೆಗೇ ಬರುತ್ತಿದೆ ಎನ್ನಿಸಿತು. ಎಡಗೈಯಲ್ಲಿ ಗಂಟೆ, ಬಲಗೈಯಲ್ಲಿ ಬೆಳಗುತ್ತಿರುವ ಮಂಗಳಾರತಿ ಹಿಡಿದು

ಶಾಮರಾಯರು ದೇವರ ಮನೆಯಿಂದ ಹಾಲಿಗೇ ಬಂದರು. ಗೋಡೆಯ ಮೇಲೆ ಎತ್ತರದಲ್ಲಿ ನಿಲ್ಲಿಸಿದ್ದ ವೆಂಕಣ್ಣಯ್ಯನವರ ಭವ್ಯ ಚಿತ್ರಕ್ಕೆ ಮಂಗಳಾರತಿ ಎತ್ತಿ ತಲೆಬಾಗಿದರು. ನಾನು ಅವಾಕ್ಕಾಗಿ ಹೋದೆ. ದೇವವಿಗ್ರಹಗಳಿಗೆ ಮಂತ್ರಪೂರ್ವಕ ಎತ್ತಿದ ಆರತಿಯನ್ನು ತನ್ನ ಅಣ್ಣನ ಚಿತ್ರಕ್ಕೂ ಎತ್ತುತ್ತಿದ್ದಾನೆ ತಮ್ಮ. ಇಂಥ ದೃಶ್ಯವನ್ನು ನಾನು ಆವರೆಗೂ ನೋಡಿರಲಿಲ್ಲ, ಈವರೆಗೂ ಬೇರೆ ನೋಡಿಲ್ಲ. ಅನೇಕ ವರ್ಷ ಜೊತೆಯಲ್ಲೇ ಬಾಳಿದ ಅಣ್ಣನನ್ನು ದೇವರ ನೆಲೆಯಲ್ಲಿ ಕೂರಿಸಬೇಕಾದರೆ ಆ ಅಣ್ಣನ ಎತ್ತರ ಎಂಥದು! ಅದನ್ನು ಗ್ರಹಿಸಿದ ಈ ತಮ್ಮನ ಸಂಸ್ಕಾರ ಎಂಥದು!

ಅನೇಕ ವರ್ಷಗಳ ನಂತರ ನಾನು ಅವರ ಬಳಿ ಈ ಘಟನೆಯನ್ನು ಪ್ರಸ್ತಾಪಿಸಿ ಹಾಸ್ಯಕ್ಕಾಗಿ ರೇಗಿಸಿದೆ. ಆದರೆ ಶಾಮರಾಯರು ಭಾವಪರವಶರಾಗಿ ಹೇಳಿದರು: ''ಅಯ್ಯೋ ಪೆದ್ದು ಮುಂಡೇದೇ! ವೆಂಕಣ್ಣಯ್ಯ ನನ್ನ ಅಣ್ಣ ಅಂತ ಹೇಳಿದವರು ಯಾರು? ಅದು ನಮ್ಮ ರೂಪನ್ನೇ ಹೊತ್ತು, ನಮ್ಮ ಸುತ್ತಮುತ್ತಲೇ ಓಡಾಡುತ್ತ ನಿಜ ಮರೆಸಿಕೊಂಡಿದ್ದ ದೇವತೆ. ಗುರುತಿಸುತ್ತಾರೋ ಹೇಗೋ ನೋಡೋಣ ಅಂತ ಇಂಥ ಪರೀಕ್ಷೆ. ನಾನು ಗುರುತಿಸಿಬಿಟ್ಟೆ, ಅಷ್ಟೇ'' ಎಂದರು!

ಶಾಮರಾಯರು ಇಂಥ ರೋಮಾಂಚಕ ಭಾವಸಮೃದ್ಧಿಯಲ್ಲಿ ಬದುಕಿದ ಜೀವ. ಅವರು ಕಾವ್ಯ ಪಾಠಹೇಳಿದರು. ಮಾತ್ರವಲ್ಲ, ಕಾವ್ಯದಂಥ ಬಾಳು ನಡೆಸಿ ಕೃತಕೃತ್ಯರಾದರು. ಆಕರ್ಷಕ ಮಾತುಗಾರಿಕೆಯ ಪ್ರಾಧ್ಯಾಪಕರಾಗಿ, ಸಮನಿಲ್ಲದ ಶಿಷ್ಯವತ್ಸಲರಾಗಿ, ಪರೋಪಕಾರಿಗಳಾಗಿ, ಗ್ರಂಥಕರ್ತರಾಗಿ ಅವರು ಹಳೆಮೈಸೂರಿನ ಸಾಹಿತ್ಯವಲಯದಲ್ಲೆಲ್ಲ ತೀರ ಪರಿಚಿತರಾದವರು. ತಾವು ವಿದ್ಯಾರ್ಥಿಗಳಾಗಿದ್ದಾಗ ಅವರು ತೋರಿದ ವಾತ್ಸಲ್ಯಕ್ಕಾಗಿ ಇಂದಿಗೂ ಅವರನ್ನು ಪ್ರಾಮಾಣಿಕವಾಗಿ ನೆನೆಯುವ ಅನೇಕ ಕನ್ನಡ ಅಧ್ಯಾಪಕರು, ಲೇಖಕರು ಮತ್ತು ಇತರ ಅಧಿಕಾರಿಗಳಿದ್ದಾರೆ. ಮನೆಗೆ ಹೋಗಿ ಅವರೆದುರು ನಮ್ರರಾಗಿ ಕೂತು ಮಾತಾಡಿ ಕೃತಜ್ಞತೆಯಿಂದ ನಮಸ್ಕರಿಸಿ ಬಂದ ಮಂತ್ರಿ, ಮುಖ್ಯಮಂತ್ರಿಗಳಿದ್ದಾರೆ. ಅನ್ಯರಿಗೆ ತಾನು ನೀಡಿದರೂ, ತನಗಾಗಿ ಯಾರನ್ನೂ ಕೇಳದ, ಕೇಳಿದರೂ ಅದು ತನಗಾಗಿರದ ಇಂಥ ಜೀವಗಳ ಬಗ್ಗೆ ಮಾತಾಡಲು ಹೊರಟಾಗ ಆಡುವವನಿಗೆ ಒಂದು ಅನುಮಾನ ಹುಟ್ಟಿಬಿಡುತ್ತದೆ - ಈ ಮನುಷ್ಯನ ಬಗ್ಗೆ ನಾನು ಹೇಳುತ್ತಿರುವ ಈ ಸಂಗತಿಗಳನ್ನೆಲ್ಲ ಕೇಳುವವರು ನಂಬುತ್ತಾರೋ ಹೇಗೆ?

ಶಾಮರಾಯರು ಸಮೃದ್ಧಸತ್ವದ ಮನೆತನದಿಂದ ಬಂದವರು. ಅದನ್ನು ನೆನೆಯುವಾಗ ಕರ್ನಾಟಕದಲ್ಲಿ, ಹದಿಮೂರನೆಯ ಶತಮಾನದಲ್ಲಿ ಆಗಿ ಹೋದ ಉಜ್ವಲ ಜೈನಸಾಹಿತ್ಯವಂಶವೊಂದರ ನೆನಪಾಗುತ್ತದೆ. ಹೊಯ್ಸಳ ನಾರಸಿಂಹನಲ್ಲಿ ಕಟಕೋಪಾಧ್ಯಾಯನಾಗಿದ್ದ ಸುಮನೋಬಾಣನ ಕುಟುಂಬ ಅದು. ಸುಮನೋಬಾಣ ಹೊಯ್ಸಳ ಚಕ್ರವರ್ತಿಯ ಆಸ್ಥಾನದಲ್ಲಿ ಬೆಳಗಿದ ಕವಿ. ಅವನ ಮಗ ಕನ್ನಡದ ಕೀರ್ತಿವಂತ ಕವಿಗಳಲ್ಲಿ ಒಬ್ಬನಾದ ಜನ್ನ. ಜನ್ನನ ವಿದ್ಯಾಗುರು ಪಂಡಿತ ಕವಿಯಾದ ಎರಡನೆಯ ನಾಗವರ್ಮ. ಜನ್ನನ ತಂಗಿ ಸೂಕ್ತಿಸುಧಾರ್ಣವದ ಕರ್ತೃವಾದ ಮಲ್ಲಿಕಾರ್ಜುನನ ಮಡದಿ. ಅವಳ ಮಗ ಹಳಗನ್ನಡದ ಪ್ರಸಿದ್ಧ ವರ್ಣನಾತ್ಮಕ ವ್ಯಾಕರಣವನ್ನು ಬರೆದ ಕೇಶಿರಾಜ. ಶಾಮರಾಯರು ಹುಟ್ಟಿಬಂದ ತಳುಕಿನ ಮನೆತನವೂ ಇಂಥದೇ. ಶಾಮರಾಯರ ತಂದೆ ಹಲವು ನಾಟಕಗಳನ್ನು, ಹಾಡುಗಳನ್ನು ಬರೆದು, ಆಡಿಸಿ ಹಾಡಿಸಿದ ಗ್ರಾಮಕವಿ ತಳುಕಿನ ಸುಬ್ಬಣ್ಣ. ಅವರ ಹಿರಿಯ ಮಗ ಹೊಸಗನ್ನಡದ ಅಶ್ವಿನೀದೇವತೆಗಳಲ್ಲಿ ಒಬ್ಬರೆಂದು ಕರೆಸಿಕೊಂಡ ಪ್ರೊ. ಟಿ.ಎಸ್.ವೆಂಕಣ್ಣಯ್ಯ, ಆ ವೆಂಕಣ್ಣಯ್ಯನವರ ತಮ್ಮ ಶಾಮರಾಯರು. ಅವರ ಅಣ್ಣನ ಮಗ ತರಾಸು. ಶಾಮರಾಯರ ಭಾವ ಕ್ಷೀರಸಾಗರ. ಕ್ಷೀರಸಾಗರರ ತಂದೆ ಸಮರ್ಥ ಆಶುಕವಿ ಚಂದ್ರಶೇಖರ ಶಾಸ್ತ್ರಿಗಳು. ಅವರ ಮಗಳು ಬೆಳಗೆರೆ ಜಾನಕಮ್ಮ ಬೇಂದ್ರೆಯವರ ಒಂದು ಕವಿತೆಗೆ ವಸ್ತುವಾದ ಕವಯಿತ್ರಿ. ಈಗಲೂ ಸಾಹಿತ್ಯದ ಹುಚ್ಚು ತಲೆಗೆ ಹಚ್ಚಿಕೊಂಡು ಅಲೆಯುವ ಜನಾನುರಾಗಿ ಬೆಳಗೆರೆ ಕೃಷ್ಣಶಾಸ್ತ್ರಿ ಆಕೆಯ ಅಣ್ಣ. ಹೀಗೆ ಶಾಮರಾಯರ ವಂಶ ಮತ್ತು ಅವರ ಜೊತೆ ಕೊಡುಕೊಳುಗೆ ನಡೆಸಿದ ವಂಶ ಎರಡೂ ಸತ್ವಸಂಪನ್ನವಾದ ಮನೆತನಗಳು.

ಶಾಮರಾಯರ ತಂದೆ ಸುಬ್ಬಣ್ಣ ಪರೋಪಕಾರಿಗಳಾಗಿ ಬಡತನವನ್ನು ಕಷ್ಟಪಟ್ಟು ಉಳಿಸಿಕೊಂಡು ಬಂದವರು. ವೆಂಕಣ್ಣಯ್ಯನವರ ಕಾಲದಲ್ಲಿ ಅವರ ಮನೆಗೆ ಅಗಡಿ ಆನಂದವನದ ಸಾಧುಗಳ ಜೊತೆ ಆಪ್ತತೆ ಪ್ರಾಪ್ತವಾಯಿತು. ದೈವಶ್ರದ್ಧೆ

ಸಾಧುಸಂತರ ಬಗ್ಗೆ ಗೌರವ, ಸಾಹಿತ್ಯಪ್ರೇಮ, ಪರೋಪಕಾರ ಪ್ರವೃತ್ತಿ - ಇವು ಅಂದಿನಿಂದ ಇಂದಿನವರೆಗೂ ಆ ಮನೆತನದ ಲಕ್ಷಣಗಳಾಗಿ ಬೆಳೆದುಬಂದಿವೆ.

ಕುಟುಂಬದ ಬಡತನ ಎಷ್ಟಿತ್ತೆಂದರೆ ಶಾಮರಾಯರು ಲೋಯರ್ ಸೆಕಂಡರಿ ಮುಗಿದ ಕೂಡಲೇ ಹದಿಮೂರನೆಯ ವಯಸ್ಸಿನಲ್ಲಿ ಪ್ರೈಮರಿಶಾಲೆಯ ಅಧ್ಯಾಪಕರಾಗಿ ಕೆಲಸಕ್ಕೆ ಸೇರಿದರು. ಹಿರಿಯರ ಆಸೆ ಪೂರೈಸಲು ಹದಿನಾರಕ್ಕೇ ಅವರಿಗೆ ಮದುವೆಯೂ ಆಯಿತು. ಆದರೆ ಅಣ್ಣ ವೆಂಕಣ್ಣಯ್ಯನವರಂತೆ ತಾನೂ ಕಾಲೇಜು ಅಧ್ಯಾಪಕನಾಗಬೇಕೆಂದು ಅವರ ಅದಮ್ಯ ಆಸೆ. ಅದನ್ನು ಅವರು ಪಟ್ಟುಹಿಡಿದು ಸಾಧಿಸಿದರು. ಪ್ರೈಮರಿ ಶಾಲೆಯಿಂದ ಮಾಧ್ಯಮಿಕ ಶಾಲೆಯ ಉಪಾಧ್ಯಾಯರಾಗಿ ದುಡಿಮೆ ಅನಂತರ ಕೆಲಸವನ್ನೇ ಬಿಟ್ಟು ಆನರ್ಸ್ ಪದವಿಗೆ ಓದಿದರು. ಎಲ್ಲ ಆನರ್ಸ್ ತರಗತಿಗಳಿಗೂ ಪ್ರಪ್ರಥಮರಾಗಿ ರ್‍ಯಾಂಕು ಗಳಿಸಿ ಕಾಲೇಜು ಅಧ್ಯಾಪಕರೂ ಆದರು.

ಶಾಮರಾಯರ ಉಪನ್ಯಾಸದ ವೈಖರಿಯೇ ವೈಖರಿ. ಅವರು ಮಹಾರಾಜಾ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದ ದಿನಗಳಲ್ಲಿ ನಾನು ಆನರ್ಸ್ ವಿದ್ಯಾರ್ಥಿಯಾಗಿದ್ದೆ. ಆಗ ಆರೇಳು ಆನರ್ಸ್ ತರಗತಿಗಳ ವಿದ್ಯಾರ್ಥಿಗಳು ಕನ್ನಡ, ಇಂಗ್ಲೀಷ್ ಪಾಠಗಳಿಗೆ ಒಟ್ಟಾಗಿ ಒಂದೇ ತರಗತಿಯಲ್ಲಿ ಕೂರುವ ಪದ್ಧತಿ ಇತ್ತು. ಎಷ್ಟೋ ಸಲ ಬಹಳ ಬಡಕಲಾಗಿ ಕಾಣುತ್ತಿದ್ದ ಈ ತರಗತಿ ಶಾಮರಾಯರ ಪಾಠವಿದ್ದ ಪಿರಿಯಡ್ಡಿನಲ್ಲಿ ವಿದ್ಯಾರ್ಥಿಗಳಿಂದ ಕಿಕ್ಕಿರಿದು ಹೋಗುತ್ತಿತ್ತು. ಬೇರೆ ವಿದ್ಯಾರ್ಥಿಗಳೂ ಆ ತರಗತಿಗೆ ಬಂದುಬಿಡುತ್ತಿದ್ದರು. ಕೂರಲು ಜಾಗವಿಲ್ಲದೆ ವಿದ್ಯಾರ್ಥಿಗಳು ಗೋಡೆ ಬದಿಯಲ್ಲಿ, ಬಾಗಿಲ ಬಳಿಯಲ್ಲಿ ನಿಂತಿರುತ್ತಿದ್ದದೂ ಉಂಟು. ಅವರ ಪಾಠ ಆರಂಭವಾದರೆ ಮುಗಿಯಿತು. ವಿದ್ಯಾರ್ಥಿಗಳಿಗೆ ತಾವು ಕೂತಿದ್ದೇವೆ, ನಿಂತಿದ್ದೇವೆ ಎಂಬ ಪರಿವೆ ಹಾರಿಹೋಗುತ್ತಿತ್ತು. ಮೊದಲ ದಿನ ಅವರ ಭಾವಪೂರ್ಣವಾದ ಉಪನ್ಯಾಸವನ್ನು ಪರವಶರಾಗಿ ಕೇಳಿದ ನಾವೆಲ್ಲ ಅವರ ಮಾತಿನ ಸಮ್ಮೋಹಕ ಆಕ್ರಮಣಕ್ಕೆ ದಂಗುಬಡಿದು ಹೋದೆವು. ಮಡಿಕೇರಿಯಿಂದ ಬಂದಿದ್ದ ಕರುಣಾಕರನ್ ಎಂಬ ನನ್ನ ಸಹಪಾಠಿ ತರಗತಿ ಮುಗಿಸಿ ಹೊರಬಂದವನೆ ಬೆರಗಿನಿಂದ ನನ್ನ ಕಡೆ ತಿರುಗಿ ''ಏನಯ್ಯಾ ಇದು? ಈತ ಎಷ್ಟು ಅದ್ಭುತವಾಗಿ ಮಾತಾಡ್ತಾರೆ. ಇಂಥ ಉಪನ್ಯಾಸ ನಾನು ಕೇಳಿದ್ದು ಇದೇ ಮೊದಲು. ಕನ್ನಡ ಆನರ್ಸ್ ತೆಗೆದುಕೊಂಡದ್ದಕ್ಕೆ ನನಗೆ ಕೊಂಚ ಅಳುಕು ಇತ್ತು. ಈಗ ಎಲ್ಲ ನಿರಾಳವಾಗಿ ಹೋಯ್ತು. ಇನ್ನು ಮೂರು ನಾಲ್ಕು ವರ್ಷ ಇವರ ಪಾಠ ಕೇಳ್ತೀವಲ್ಲ, ನಮ್ಮ ಅದೃಷ್ಟ'' ಎಂದ.

ಶಾಮರಾಯರ ಶಿಷ್ಯವಾತ್ಸಲ್ಯಕ್ಕೆ ಮೇರೆಯೇ ಇರಲಿಲ್ಲ. ಡಾ. ಜಿ.ಎಸ್.ಶಿವರುದ್ರಪ್ಪನವರು ಅವರ ವಿದ್ಯಾರ್ಥಿ. ಆನರ್ಸ್ ಓದಲು ಹೋದಾಗ ಅವರು ತುಂಬ ತೊಂದರೆಯಲ್ಲಿದ್ದರು. ಅವರಿಗೆ ಸುತ್ತೂರು ಹಾಸ್ಟೆಲಿನಲ್ಲಿ ಊಟದ ಏರ್ಪಾಡು ಮಾಡಿದವರು ಶಾಮರಾಯರು. ಅವರಿಗೆ ಫೀಜು ಕಟ್ಟಲು ಸಾಧ್ಯವಾಗದೆ ತರಗತಿಗಳಿಗೆ ಗೈರು ಹಾಜರಾದಾಗ ತಾನೇ ಫೀಜು ಕಟ್ಟಿ ವಿದ್ಯಾರ್ಥಿ ತರಗತಿಗೆ ಬರುವಂತೆ ಮಾಡಿದವರೂ ಅವರೇ. ಶಿವರುದ್ರಪ್ಪ ಬರೆಯುತ್ತಿದ್ದ ಕವಿಗಳನ್ನೆಲ್ಲ ಹೊರತೆಗೆಸಿ, ಓದಿಸಿ ಕೇಳಿ ಮೆಚ್ಚಿಗೆಯ ಮಾತಾಡಿದ್ದಲ್ಲದೆ ಅವುಗಳಲ್ಲಿ ಕೆಲವನ್ನು ಆಯ್ದು, ಪುಟ್ಟಪ್ಪನವರಿಂದ ಮುನ್ನುಡಿ ಬರೆಸಿ ತಾವೇ ಪ್ರಕಟಿಸಿದ ವ್ಯಕ್ತಿ ಅವರು. ಬರೆಹದ ಹಾದಿಗೆ ಹೊರಳಿದ ಜೀವಕ್ಕೆ ಇದು ಎಂಥ ದೊಡ್ಡ ಪ್ರೋತ್ಸಾಹ ಎಂದು ವಿವರಿಸಬೇಕಾಗಿಲ್ಲ. ಮುಂದೆ ಒಮ್ಮೆ ಜಿ.ಎಸ್.ಎಸ್. ನನ್ನ ಬಳಿ ಮಾತಾಡುತ್ತಿದ್ದಾಗ ''ನಾನು ಚಿಕ್ಕವಯಸ್ಸಿನಲ್ಲೇ ತಾಯಿಯನ್ನು ಕಳೆದುಕೊಂಡೆ. ಆದರೆ ಶಾಮರಾಯರು ತಾಯಿ ವಾತ್ಸಲ್ಯ ಎಂಥದೆಂಬುದರ ರುಚಿ ತೋರಿಸಿ ಅವರ ಕೊರತೆಯನ್ನು ಬಹುಮಟ್ಟಿಗೆ ಕಳೆದರು'' ಎಂದು ಹೇಳಿದ್ದುಂಟು. ಆ ವಾತ್ಸಲ್ಯದ ಮಳೆ ಎಲ್ಲರಿಗಿಂತ ಹೆಚ್ಚಾಗಿ ಸುರಿದದ್ದು ನನ್ನ ಮೇಲೆ ಎನ್ನಬೇಕು. ಓದುವ ಹುಚ್ಚು ಹತ್ತಿ, ಹಿಂದು ಮುಂದು ನೋಡದೆ, ಜೇಬಲ್ಲಿ ಕಾಸಿಲ್ಲದೆ ಮೈಸೂರಿಗೆ ಹೋದ ನನ್ನನ್ನು ಕಂಡ ಕ್ಷಣವೇ ಆದರಿಸಿ, ಧೈರ್ಯ ನೀಡಿ, ಅನ್ನ ಹಾಕಿ ಪಾಠ ಹೇಳಿ ನನ್ನ ಬದುಕಿಗೆ ಒಂದು ರೂಪಕೊಟ್ಟ ಹಿರಿಯರು ಅವರು.

ಯಾವ ವಿದ್ಯಾರ್ಥಿಯೇ ಆಗಲಿ, ಶಾಮರಾಯರು ಅವನನ್ನು ಕರೆಯುತ್ತಿದ್ದುದು ಏಕ ವಚನದಲ್ಲಿಯೇ. ಅದು ನಮಗೆ ಬಹಳ ಪ್ರಿಯವೂ ಆಗಿರುತ್ತಿತ್ತು. ಅವರು ಅಪರೂಪವಾಗಿ ಬಹುವಚನ ಬಳಸಿದರೆ ಮೇಸ್ಟರಿಗೆ ಕೋಪ ಬಂದಿದೆ ಅಂತ ನಮಗೆ ಥಟ್ಟನೆ ಗೊತ್ತಾಗುತ್ತಿತ್ತು. ''ಏನು ಮಗೂ, ಹೇಗಿದೀಯ? ಯಾವಾಗ ಬಂದೆ? ಊಟ ಆಯ್ತ?'' ಇದು ಅವರ ಮಾತಾಡಿಸುವ

ರೀತಿ. ಅವರ ಸಹಾಯ ಪಡೆಯಲು ನಾವೇನಾದರೂ ಸಂಕೋಚಪಟ್ಟರೆ ''ಅಯ್ಯೋ ಮುಂಡೇದೇ, ಯಾಕೆ ಹೀಗಾಡ್ತಿದೀಯ ಇವತ್ತು? ಸಂಕೋಚ ಬೇರೆ ಕೇಡು ನಿನಗೆ. ತಪ್ಪಗೆ ಹೇಳಿದ ಹಾಗೆ ಕೇಳು'' ಅಂತ ಹೇಳಿ ತಮ್ಮ ದಾರಿಗೆ ಎಳೆದುಕೊಂಡು ಬಿಡುತ್ತಿದ್ದರು. ಹಾ.ಮಾ. ನಾಯಕ, ತಿಪ್ಪೇರುದ್ರಸ್ವಾಮಿ, ಪ್ರಭುಶಂಕರ, ಸುಬ್ರಹ್ಮಣ್ಯಂ, ಚಿದಾನಂದಮೂರ್ತಿ, ಸುಜನಾ, ಸಿಪಿಕೆ, ಸಾ.ಶಿ.ಮರುಳಯ್ಯ, ಬ್ರಹ್ಮಪ್ಪ ಇವರೆಲ್ಲ ಶಾಮರಾಯರ ವಾತ್ಸಲ್ಯದ ಸವಿಯನ್ನು ಬಲ್ಲವರು. ಅವರ ಪ್ರೀತಿ ನಿರ್ಮಲ ಗಂಗೆಯಂತೆ. ಅದಕ್ಕೆ ಜಾತಿಮತಗಳ ಸೋಂಕೇ ಇರಲಿಲ್ಲ. ಅವರ ಔದಾರ್ಯ ಯಾವ ಬಗೆಯದೆಂದರೆ ಅವರ ಮನೆಯಲ್ಲಿ ವಾರಾನ್ನ ಮಾಡಿಕೊಂಡು ಓದಿದವರ ಲೆಕ್ಕ ಅವರಿಗೇ ಹತ್ತಿರಲಾರದು. ಆ ಮನೆ ವಾಸ್ತವವಾಗಿ ಒಂದು ಅನ್ನ ಸತ್ರ ಎಂದು ಎಷ್ಟೋ ಸಲ ನನಗೆ ಅನ್ನಿಸಿದ್ದುಂಟು. ಶಾಮರಾಯರೇನೋ ಯಾವುದರ ಸರಿವೆಯೂ ಇಲ್ಲದೆ ಬಯಸಿದವರಿಗೆಲ್ಲ ತಮ್ಮ ಪ್ರೀತಿಯ ಸಹಾಯಹಸ್ತ ಚಾಚಿಬಿಡುತ್ತಿದ್ದರು. ಆದರೆ ಇಪ್ಪತ್ತೈದು ಮೂವತ್ತು ವರ್ಷ ಕಾಲ ಹೀಗೆ ಬಂದು ಹೋಗುವ ಜನರನ್ನೆಲ್ಲ, ಒಂದು ಸಲವೂ ಹುಬ್ಬುಗಂಟುಹಾಕದೆ ಉಪಚರಿಸಿ ಕಳಿಸುವುದಿದೆಯಲ್ಲ, ಅದು ಅಸಾಮಾನ್ಯವಾದದ್ದು. ಅದನ್ನು ನಿರ್ವಹಿಸಿದವರು ಅವರ ಸಧರ್ಮಿಣಿ ಶ್ರೀಮತಿ ಸುಬ್ಬಮ್ಮನವರು. ಶಾಮರಾಯರ ಪ್ರೀತಿ ಎಷ್ಟು ದೊಡ್ಡದೋ, ಅಷ್ಟೇ ದೊಡ್ಡದು ಸುಬ್ಬಮ್ಮನವರ ತಾಯಿಹೃದಯ.

ಮಹಾರಾಜಾ ಕಾಲೇಜಿನ ಉಪಾಧ್ಯಾಯರಲ್ಲೆಲ್ಲ ಕುವೆಂಪು ಅವರಿಗೆ ಬಹಳ ಆಪ್ತರಾಗಿದ್ದವರು ಶಾಮರಾಯರು. ಅವರು ಪುಟ್ಟಪ್ಪನವರ ಶಿಷ್ಯರೂ ಹೌದು. 'ರಾಮಾಯಣ ದರ್ಶನ'ದ ಮೊದಲ ಓದುಗ ಶಾಮರಾಯರೇ. ಅದನ್ನು ಬರೆಬರೆದಂತೆ ಕುವೆಂಪು ಶಿಷ್ಯನಿಗೆ ಓದಿ ಹೇಳುತ್ತಿದ್ದರು. ಅವರಿಬ್ಬರೂ ಕೂಡಿ ಗಂಟೆಗಟ್ಟಲೇ ವಾಕಿಂಗ್ ಹೋಗುತ್ತಿದ್ದುದುಂಟು. ಈ ಪ್ರೀತಿಗೆ ಒಂದು ಹಿನ್ನೆಲೆಯೂ ಇತ್ತು. ಕುವೆಂಪು ಅವರಿಗೆ ಅತ್ಯಂತ ಪ್ರಿಯರಾದ ಗುರುಗಳೆಂದರೆ ಟಿ.ಎಸ್. ವೆಂಕಣ್ಣಯ್ಯನವರು. ಅವರು ತಮ್ಮ ಬಾಳಿನಲ್ಲಿ ಹಾದು ಹೋದ ಒಂದು ದಿವ್ಯಶಕ್ತಿ ಎಂದು ಕುವೆಂಪು ಭಾವಿಸಿದ್ದರು. ಶಾಮರಾಯರು ಆ ವೆಂಕಣ್ಣಯ್ಯನವರ ತಮ್ಮ, ಅಣ್ಣನ ಗುಣಗಳನ್ನು ಭಟ್ಟಿ ಇಳಿಸಿಕೊಂಡವರು. ಶಾಮರಾಯರಿಗಂತೂ ಪುಟ್ಟಪ್ಪನವರು ತಮ್ಮ ಹಿರಿಯಣ್ಣನೆಂಬಷ್ಟೇ ಪ್ರೀತಿ ಗೌರವ, ಈ ನಂಟು ಒಂದು ಘಟ್ಟದಲ್ಲಿ ಎಷ್ಟು ಗಾಢವಾಗಿತ್ತೆಂದರೆ ಶಾಮರಾಯರು ಕುವೆಂಪು ಬರೆಹವನ್ನು ಕಟುವಾಗಿ ಟೀಕಿಸಿಯೂ ಆ ನಂಟು ಮಿಸುಕಾಡದೆ ಹಾಗೇ ಉಳಿದದ್ದುಂಟು.

ಪುಟ್ಟಪ್ಪನವರು ಬರೆದಿದ್ದ ಹಲವು ಕಥೆಗಳಲ್ಲಿ ತಮಗೆ ಕಂಡ ಅವಾಸ್ತವಿಕ ಅಂಶಗಳ ಬಗ್ಗೆ ಒಮ್ಮೆ ಶಾಮರಾಯರು ಒಂದು ಲೇಖನದಲ್ಲಿ ಪ್ರಸ್ತಾಪಿಸಿದ್ದರು. ಈ ವಿಷಯ ಅವರಿಬ್ಬರ ಮಧ್ಯೆ ಮತ್ತೆ ಚರ್ಚೆಗೆ ಬಂದಾಗ ಶಾಮರಾಯರು ಆಖೈರಾಗಿ ಹೇಳಿದರು ''ಮಾಸ್ತಿಯವರು ಕವನಗಳನ್ನು ಬರೆಯದಿದ್ದರೆ ಕಾವ್ಯಜಗತ್ತಿಗೆ ಯಾವ ಅನ್ಯಾಯವೂ ಆಗುವುದಿಲ್ಲ. ನೀವು ಕಥೆಗಳನ್ನು ಬರೆಯದಿದ್ದರೂ ಅಷ್ಟೇ, ಕಥಾಲೋಕಕ್ಕೇನೂ ನಷ್ಟವಿಲ್ಲ. ಕನ್ನಡದಲ್ಲಿ ಕಥೆಗಳಿಗೆ ಮಾಸ್ತಿ, ಕವನಗಳಿಗೆ ಕುವೆಂಪು ಅಗ್ರಗಣ್ಯರು''. ಪುಟ್ಟಪ್ಪನವರು ಇದನ್ನು ಮಾತಿಲ್ಲದೆ ಒಪ್ಪಿಕೊಂಡರು. ಇನ್ನೊಂದು ಸಲ ಶಾಮರಾಯರು ಕುವೆಂಪು ಅವರಿಗೆ ಹೇಳಿದರು : ''ನೀವು ನಿಮ್ಮ ಬರವಣಿಗೆಯಷ್ಟು ದೊಡ್ಡವರಾಗಿಲ್ಲ. ಅಷ್ಟು ದೊಡ್ಡವರೇ ಆಗಬೇಕು''. ಪುಟ್ಟಪ್ಪನವರ ವಿಮರ್ಶಾ ಸ್ವೀಕಾರದ ವಿಧಾನ ಎಷ್ಟು ಎತ್ತರದ ನೆಲೆಯದಾಗಿತ್ತೆಂದರೆ ಅವರು ಸ್ವಲ್ಪವೂ ಕೋಪಿಸಿಕೊಳ್ಳದೆ ''ಹೌದು, ಅದು ನಿಮಗಿಂತ ಚೆನ್ನಾಗಿ ನನಗೇ ಗೊತ್ತಿದೆ'' ಎಂದು ಬಿಟ್ಟರು.

ಶಾಮರಾಯರು ಹತ್ತಾರು ವರ್ಷಗಳ ಕಾಲ ಕೇವಲ ಹಂಗಾಮಿ ಅಧ್ಯಾಪಕರಾಗಿದ್ದರು. ಲೌಕಿಕ ವ್ಯವಹಾರಗಳ ಕಡೆ ಅಷ್ಟಾಗಿ ಗಮನವಿರದ ಕುವೆಂಪು ಲಕ್ಷ್ಯಕ್ಕೆ ಇದ್ದು ಅಷ್ಟಾಗಿ ಬಂದಿರಲೇ ಇಲ್ಲ. ಒಮ್ಮೆ ಶಾಮರಾಯರನ್ನು ಕಂಡರೆ ಆಗದ ಒಬ್ಬ ಅಧ್ಯಾಪಕರು ತರಗತಿಯಲ್ಲಿ ಹುಡುಗರೆದುರು ಅವರನ್ನು ಪರೋಕ್ಷವಾಗಿ ನಿಂದಿಸಿದರು. ''ಹೇಳಿ ಕೇಳಿ ಆತ ಒಬ್ಬ ಹಂಗಾಮಿ ಅಧ್ಯಾಪಕ, ನಾನು ಆತನಿಗಿಂತ ಸೀನಿಯರ್. ಆತ ನನ್ನ ಕೈಕೆಳಗಿನವರು'' ಅಂದರು. ರೇಗಿದ ಹುಡುಗರು ಈ ವಿಷಯವನ್ನು ಕುವೆಂಪು ತನಕ ಒಯ್ದರು. ಶಾಮರಾಯರನ್ನು ಕರೆಸಿ ಕೇಳಿದಾಗ ಅವರಿನ್ನೂ ಹಂಗಾಮಿ ಅಧ್ಯಾಪಕರೆಂದೂ, ಸಂಬಳ ಕೇವಲ ಎಪ್ಪತ್ತೈದು ರೂಪಾಯಿ ಎಂದೂ ತಿಳಿದು ಕುವೆಂಪು ಹೌಹಾರಿದರು. ಅವತ್ತೇ ಉಪಕುಲಪತಿಗಳನ್ನು ಕಂಡು

ಶಾಮರಾಯರಿಗಾಗಿರುವ ಅನ್ಯಾಯದ ಬಗ್ಗೆ ಗಂಭೀರವಾಗಿ ಚರ್ಚಿಸಿದರು. ಅದರ ಫಲವಾಗಿ ಶಾಮರಾಯರ ಸಂಬಳ ಒಂದೇ ಸಲಕ್ಕೆ ನೂರ ಎಪ್ಪತ್ತೈದು ರೂಪಾಯಿಗಳಿಗೆ ಜಿಗಿಯಿತು!

ಅಧ್ಯಾಪಕರೇ ಅಲ್ಲದೆ ಶಾಮರಾಯರು ಮೈಸೂರು ವಿಶ್ವವಿದ್ಯಾಲಯದ ಪ್ರಕಟನ ವಿಭಾಗದ ಮುಖ್ಯಸ್ಥರಾಗಿ ಮತ್ತು ಪುಸ್ತಕ ಭಂಡಾರದ ಗ್ರಂಥಪಾಲರಾಗಿ ತುಂಬ ಕೆಲಸ ಮಾಡಿದರು. ನಿವೃತ್ತರಾದ ಮೇಲೆ ಗುಬ್ಬಿಯ ಚಿದಂಬರಾಶ್ರಮಕ್ಕೆ ಹೋಗಿ ಅಲ್ಲಿಯ ಹೈಸ್ಕೂಲನ್ನು ಒಂದು ಸ್ವರೂಪಕ್ಕೆ ತಿದ್ದಿ, ಹುಡುಗರಿಗೆ ಹಾಸ್ಟೆಲು ಸೌಕರ್ಯ, ಅಧ್ಯಾಪಕರಿಗೆ ವಸತಿ ಸೌಕರ್ಯ ಕಲ್ಪಿಸಿ ಬಂದರು.

'ಊರ ಉಸಾಬರಿ ಕಟ್ಟಿಕೊಂಡು ಕಾಸಿಂ ಸಾಬ ಕಂಗೆಟ್ಟ' ಅಂತ ಒಂದು ಗಾದೆ ಇದೆ. ಆದರೆ ಶಾಮರಾಯರ ವಿಷಯದಲ್ಲಿ ಈ ಗಾದೆ ಸುಳ್ಳಾಯಿತು. ತಮ್ಮ ಅವಿರತ ಜನಸಂಪರ್ಕ ಸ್ನೇಹಗಳ ನಡುವೆಯೂ ಅವರು ಸಾಕಷ್ಟು ಗ್ರಂಥ ರಚನೆ ಮಾಡಿದ್ದಾರೆ. ಅವರು ರಚಿಸಿರುವ 'ಶಿವಶರಣ ಕಥಾರತ್ನಕೋಶ' ಒಂದು ಬೃಹತ್ತಾದ, ಉಪಯುಕ್ತವಾದ ರೆಫರೆನ್ಸ್‌ಗ್ರಂಥ. ತಮ್ಮ ಎಂ.ಎ.ಪದವಿ ಪಡೆಯಲು ಅವರು ಬರೆದ 'ಕನ್ನಡ ನಾಟಕ' ಎಂಬ ಮಹಾಪ್ರಬಂಧ ನಾಟಕವಿಮರ್ಶೆಯ ಕ್ಷೇತ್ರದಲ್ಲಿ ಆ ಬಗೆಯ ಮೊದಲ ಕೃತಿ. ಒಂದು ಮನೆತನದ ಮೂರು ಪೀಳಿಗೆಗಳ ಸಂಸ್ಕೃತಿ ಜೀವನ ವಿಧಾನಗಳನ್ನು ಕಾದಂಬರಿಯಂತೆ ರಸವತ್ತಾಗಿ ನಿರೂಪಿಸುವ 'ಮೂರು ತಲೆಮಾರು' ಎಂಬ ಗ್ರಂಥ ರಾಜ್ಯ ಸಾಹಿತ್ಯ ಅಕಾಡೆಮಿಯ ವರ್ಷದ ಅತ್ಯುತ್ತಮ ಪುಸ್ತಕ ಪ್ರಶಸ್ತಿ ಪಡೆದಿದೆ. ಡಿ.ಎಲ್.ಎನ್.ರವರ 'ಪಂಪಭಾರತ ದೀಪಿಕೆ'ಯ ಮಾದರಿಯಲ್ಲಿ ಹಂಪ ನಾಗರಾಜಯ್ಯನವರ ಜೊತೆಗೂಡಿ ಹೊರತಂದಿರುವ 'ಆದಿ ಪುರಾಣದೀಪಿಕೆ' ಒಂದು ವಿಶಿಷ್ಟ ವಿದ್ವದ್ಗ್ರಂಥ. ಅವರ 'ವಚನ ರಾಮಾಯಣ ವಚನ ಭಾಗವತ'ಗಳು ಎ.ಆರ್.ಕೃಷ್ಣಶಾಸ್ತ್ರಿಗಳ ವಚನ ಭಾರತದಂತೆ ಮನೋಜ್ಞವಾದ ಗದ್ಯಕೃತಿಗಳು. ಇದಲ್ಲದೆ ಮುದ್ದಣ, ಗುರುನಾನಕ್ ಟಿ.ಎಸ್.ವೆಂಕಣ್ಣಯ್ಯ ಎಂಬ ಪುಸ್ತಕಗಳನ್ನು ಅವರು ಬರೆದಿದ್ದಾರೆ. ಶಬ್ದವರ್ಗೀಕರಣಕ್ಕೆ ವ್ಯಾಖ್ಯಾನ ಮಾಡಿದ್ದಾರೆ. ಕುಮಾರವ್ಯಾಸ ಭಾರತದ ಹಲವು ಪರ್ವಗಳನ್ನು ಉಪಯುಕ್ತ ಮುನ್ನುಡಿಗಳ ಸಹಿತ ಸಂಪಾದಿಸಿ ಸಂಗ್ರಹಿಸಿದ್ದಾರೆ. ತಮ್ಮ ಅಣ್ಣ ವೆಂಕಣ್ಣಯ್ಯನವರಿಗೆ ಅವರು ಒಂದು ಸಂಭಾವನಾ ಗ್ರಂಥ ಹೊರತಂದು ಅದನ್ನು ಮಾರಿಬಂದ ಲಾಭವನ್ನು ವಿದ್ಯಾರ್ಥಿಗಳ ಕಲ್ಯಾಣಕ್ಕಾಗಿ ಮುಡುಪು ಮಾಡಿದ್ದಾರೆ. ತಮ್ಮ ಮನೆತನದ ತವರಾದ ತಳುಕಿನಲ್ಲಿ ಅಣ್ಣನ ಹೆಸರಿನಲ್ಲಿ ಒಂದು ಪುಸ್ತಕ ಭಂಡಾರವನ್ನು ರೂಪಿಸಿದ್ದಾರೆ.

ಮೈಸೂರು ವಿಶ್ವವಿದ್ಯಾಲಯ ಶಾಮರಾಯರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಅಭಿನಂದಿಸಿದೆ. ಸ್ನೇಹಿತರು, ಶಿಷ್ಯರು ಮತ್ತು ಇತರ ಸಾಹಿತಿಗಳು ಬರೆದ ಮೌಲಿಕ ಲೇಖನಗಳಿರುವ 'ಸ್ವಸ್ತಿ' ಎಂಬ ಅಭಿನಂದನಾ ಗ್ರಂಥವನ್ನು ಅವರಿಗೆ ಅರ್ಪಿಸಲಾಗಿದೆ. ಜೈನ ಸಾಹಿತ್ಯಕ್ಕೆ ಅವರು ನೀಡಿ ಕೊಡುಗೆಗಳು ಚಾವುಂಡರಾಯ ಪ್ರಶಸ್ತಿ' ನೀಡಿ ಅವರನ್ನು ಗೌರವಿಸಲಾಗಿದೆ.

ಪರರಿಗೆ ಇಷ್ಟೊಂದು ಸಹಾಯವಾಗಿ ಬಾಳಿದ ಶಾಮರಾಯರು ಒಂದು ಹಂತದಲ್ಲಿ ತಾವು ಕೊಂಡು ವಾಸವಾಗಿದ್ದ ಮನೆಯನ್ನು ಮಾರಿದರು, ಬಾಡಿಗೆ ಮನೆಯಲ್ಲಿ ವಾಸ ನಿಂತರು. ಆದರೂ ಅವರ ಮನಸ್ಥಿತಿ ಕದಡಲಿಲ್ಲ.

ನಜೀರ ಸಾಬರಂಥ ಪ್ರಿಯಶಿಷ್ಯ, ಬಂಗಾರಪ್ಪನವರಂಥ ಭಾವುಕ ವಿದ್ಯಾರ್ಥಿ ತಮಗೆ ಸಹಾಯ ನೀಡಲು ಮುಂದೆ ಬಂದಾಗ ಅವರು ಕಷ್ಟದಲ್ಲಿದ್ದ ಇತರರಿಗೆ ಅವರಿಂದ ನೆರವು ಕೊಡಿಸಿದರು. ಇದು ಶಾಮರಾಯರು ತಮ್ಮ ಪರಿಚಿತ ಅಧಿಕಾರವರ್ಗವನ್ನು ಬಳಸಿದ ರೀತಿ.

ಶಾಮರಾಯರು ಹುಟ್ಟಿದ್ದು ಗೋಕುಲಾಷ್ಟಮಿಯ ದಿನ. ಅದಕ್ಕೇ ಅವರಿಗೆ 'ಶ್ಯಾಮ' ಎಂಬ ಹೆಸರು. ಒಂದು ವಾರದ ಹಿಂದೆ ಅವರಿಗೆ ತೊಂಬತ್ತನಾಲ್ಕು ತುಂಬಿತು. ಹುಟ್ಟಿದ ಹಬ್ಬದ ದಿನ ಅವರು ಆಪ್ತೇಷ್ಟರನ್ನೆಲ್ಲ ಬರಮಾಡಿಕೊಂಡು ಸಿಹಿಯೂಟ ಹಾಕಿಸಿದ್ದರು. ಹುಟ್ಟುಹಬ್ಬ ಎನ್ನುವುದು ನೆಪ, ಕಡೆಯ ಸಲ ಎಲ್ಲರ ಜೊತೆ ಮಾತಾಡಿ ಸಿಹಿ ಕೊಡುವುದಕ್ಕೆ ಅದೆಲ್ಲ ಅಂತ ಯಾರಿಗೆ ತಾನೆ ಗೊತ್ತಿತ್ತು?

●

ಅನ್ನಾ ಕರೇನಿನಾ - ಒಂದು ವಿವೇಚನೆ

ಶ್ರೀಮತಿ ಕೆ. ರಾಜೇಶ್ವರಿ ಗೌಡ

ಜಗತ್ತಿನ ಪ್ರಭಾವಶಾಲಿ ಲೇಖಕನಾದ ಟಾಲ್‌ಸ್ಟಾಯ್‌ನ 'ಅನ್ನಾ ಕರೇನಿನಾ' ಹತ್ತೊಂಬತ್ತನೆ ಶತಮಾನದ ರಷ್ಯನ್ ಸಮಾಜದ ವಾಸ್ತವ ಚಿತ್ರಗಳನ್ನು ನೀಡಿರುವ ಕಲಾತ್ಮಕ ಕೃತಿ. ವಸ್ತು, ಆಶಯ, ಅಭಿವ್ಯಕ್ತಿಯ ದೃಷ್ಟಿಯಿಂದ ನೋಡಿದಾಗ ಪ್ರಗತಿಪರ ಮನೋಧರ್ಮದ ನೆಲೆಯಲ್ಲಿಯೇ ಒಂದು ಹೆಣ್ಣಿನ ದುರಂತ ಪ್ರೇಮಕಥೆಯನ್ನು ಹೇಳುವಲ್ಲಿ, ಅನೇಕ ತಾಕಲಾಟಗಳನ್ನು ಎಡತಾಕುವಲ್ಲಿ ವಾಸ್ತವತಾ ವಾದ ಹಾಗೂ ರೋಮ್ಯಾಂಟಿಕ್ ಪ್ರಜ್ಞೆಗಳೆರಡನ್ನೂ ಮೈಗೂಡಿಸಿಕೊಂಡಿರುವುದನ್ನು ಕಾಣುತ್ತೇವೆ.

ಸ್ಫುರದ್ರೂಪಿ, ಶ್ರೀಮಂತೆ 'ಅನ್ನಾ' ಇಲ್ಲಿನ ನಾಯಕಿ. ಈಕೆಯ ಪತಿ ಅಲೆಕ್ಸಿ ಕರೇನಿನಾ, ಮಗ ಸಿರಾಯ. ಒಮ್ಮೆ ಅಣ್ಣ - ಅತ್ತಿಗೆಯರ ನಡುವೆ ವಿರಸ ತಲೆದೋರಿದಾಗ ಅದನ್ನು ನಿವಾರಿಸಲೆಂದು ಮಾಸ್ಕೋಗೆ ಬಂದವಳು ಸುಂದರಾಂಗನೂ ತರುಣನೂ ಆದ ದರೌನ್‌ಸ್ಕೀಗ್ ಮನಸೋಲುತ್ತಾಳೆ. ಸಹಜವಾಗಿಯೇ ಅವಳ ಮನಸ್ಸಿಗೆ ಕರೆನೀನಾ ತನಗಿಂತಲೂ ಹೆಚ್ಚು ವಯಸ್ಸಾದವನೆಂಬ ಭಾವನೆ ಮೂಡುತ್ತದೆ. ಅವನಲ್ಲಿನ ಆಕರ್ಷಣೆ ಕಡಿಮೆಯಾಗುತ್ತದೆ. ಕೊನೆಗೊಮ್ಮೆ ಗಂಡ ಮಗನನ್ನು ಬಿಟ್ಟು ಪ್ರೇಮಿ ನ್ರೌನ್‌ಸ್ಕಿಯೊಂದಿಗೆ ಬಾಳಲಾರಂಭಿಸುತ್ತಾಳೆ. ಆಗ ಆಕೆಗೆ ಜಗತ್ತೆಲ್ಲಾ ಸುಂದರ ಸ್ವಪ್ನವಾಗೇ ತೋರುತ್ತದೆ. ಪ್ರೇಮದ ಅಮಲು ಕಡಿಮೆಯಾದಂತೆ 'ತಾನು ಮಾಡಿದ್ದು ತಪ್ಪು' ಎಂಬ ಪಾಪಪ್ರಜ್ಞೆ ಕಾಡತೊಡಗಿ 'ಪಾಪಯುಕ್ತ ಬದುಕಿನ ಅಂತ್ಯ ಒಂದೇ ತನಗುಳಿದ ದಾರಿ' ಎಂಬ ಮಾನಸಿಕ ಭ್ರಾಂತಿಗೆ ಒಳಗಾಗಿ ಸಾಯುತ್ತಾಳೆ - ಹೀಗೆ ಕಾದಂಬರಿ ವ್ಯವಸ್ಥೆಯನ್ನು ಅತಿಕ್ರಮಿಸಿದ ಹೆಣ್ಣು ಹಾಗೂ ವ್ಯವಸ್ಥೆಯನ್ನು ಹದ್ದುಬಸ್ಸಿನಲ್ಲಿಟ್ಟಿರುವ ನೈತಿಕ ಮೌಲ್ಯ ಇವುಗಳ ಘರ್ಷಣೆಯಲ್ಲಿ ವ್ಯವಸ್ಥೆಯನ್ನೆದುರಿಸಿದ ಹೆಣ್ಣಿನ ಅವಸಾನದೊಡನೆ ಪ್ರಗತಿಪರ ಧೋರಣೆಯ ಒಂದು ಸೋಲಿನ ಚಿತ್ರಣವೂ ಆಗಿದೆ.

ಅಭಿವ್ಯಕ್ತಿಯಲ್ಲಿ ವಾಸ್ತವತಾ ವಾದದ ಹೊಸತಂತ್ರ ಬಳಸಿದ ಟಾಲ್‌ಸ್ಟಾಯ್ ಆಶಯದಲ್ಲಿ ರೊಮ್ಯಾಂಟಿಕ್ ಮನೋಧರ್ಮದವನು ಎಂಬುದು ಇಲ್ಲಿ ಸ್ಪಷ್ಟವಾಗಿದೆ. ರೋಸೋನ ತಾತ್ವಿಕ ಧೋರಣೆಗಳ ಪ್ರಭಾವದಿಂದಾಗಿ ಕಾದಂಬರಿಕಾರನ ಚಿಂತನೆಗಳೆಲ್ಲವೂ 'ಲೆವಿನ್' ಪಾತ್ರದಲ್ಲಿ ಸಾಕಾರಗೊಂಡಿದೆ. ಈ ಕಾದಂಬರಿ ರಚನೆಯ ಸಂದರ್ಭದಲ್ಲಿ ಟಾಲ್‌ಸ್ಟಾಯ್‌ನ ಮನಸ್ಸು ಧಾರ್ಮಿಕ ಆವರಣದೊಳಗಿದ್ದು ಅಭಿವ್ಯಕ್ತಿಯಲ್ಲಷ್ಟೇ ಪ್ರಗತಿಪರತೆ ಕಂಡುಬಂದಿದ್ದು ಅದೇಸಿದ್ದರೂ ಕಾದಂಬರಿಯ ಒಳದನಿಯಾಗಿಲ್ಲದಿರುವುದು ಅನ್ನಾಳ ಮಾನಸಿಕ ಗೊಂದಲ, ಪಾಪಪ್ರಜ್ಞೆಯ ತೊಳಲಾಟ, ತನ್ಮೂಲಕ ಅವಳನ್ನು ಕಾಡುವ ಕೀಳರಿಮೆ, ಸಾವಿನಲ್ಲೇ ಸಮಾಧಾನ ಎಂಬ ಅವಳ ನಿಲುವು ಹೆಜ್ಜೆ ಹೆಜ್ಜೆಗೂ ಅದನ್ನೇ ಸಾರುವಂತಿದೆ. ಮೇಲ್ನೋಟಕ್ಕೆ ಈ ಕಾದಂಬರಿ ಹೆಣ್ಣೊಬ್ಬಳ ದುರಂತ ಬದುಕಿನ ಕಥೆಯಾದರೂ ಬೇರೊಬ್ಬನನ್ನು ಪ್ರೇಮಿಸಿ ಪತಿಗೆ ದ್ರೋಹ ಬಗೆದೆನೆಂಬ ಪಶ್ಚಾತ್ತಾಪ, ಪ್ರಾಯಶ್ಚಿತ್ತಗಳು ಸ್ತ್ರೀವಾದಿ ನೆಲೆಯಿಂದ ನೋಡಿದಾಗ ಟಾಲ್‌ಸ್ಟಾಯ್‌ನಂತಹ ಲೇಖಕನ ಮಹತ್ವವಾಗಬಹುದಾಗಿದ್ದ ಆಶಯವೊಂದು ದುರ್ಬಲವಾಯಿತೆಂದೇ ಅನಿಸುತ್ತದೆ.

ಇಲ್ಲಿ ಬರುವ ಅಲೆಕ್ಸಿ ಕರೇನಿನ್, ಲೆವಿನ್, ಡಾಲಿ, ಕಿಟಿ - ಈ ಎಲ್ಲ ಪಾತ್ರಗಳೂ ತಮ್ಮ ತಮ್ಮ ಪರಿಮಿತಿಯಲ್ಲೇ ಬದುಕಿನ ವಿವಿಧ ಸ್ತರಗಳ, ಮನೋಧರ್ಮಗಳ ಪ್ರತಿನಿಧಿಗಳಾಗಿವೆ. ಕರೇನಿನ್ ಪತ್ನಿಯ ಬಯಕೆಯನ್ನು ಹತ್ತಿಕ್ಕಲು ಪ್ರಯತ್ನಿಸದ ಒಂದು ರೀತಿಯಲ್ಲಿ ಅರ್ಥ ಮಾಡಿಕೊಳ್ಳುವ ಗೋಜಿಗೇ ಹೋಗದ 'ಅವಳ ಪಾಪ ಪುಣ್ಯಗಳಿಗೆ ಅವಳೇ ಕಾರಣಳಾಗಲು ಬಿಡುವ' ಧಾರ್ಮಿಕವಾದಿ, ಸಂಪ್ರದಾಯಸ್ಥ. ಪೌರುಷಮಯ ಪ್ರತಿಕ್ರಿಯೆಗಳು ಇವನು ಅತಿಯಾಗಿ ನಂಬುವ ಧಾರ್ಮಿಕ ಪ್ರಜ್ಞೆಯೆದುರು ಕುಸಿದುಬಿಡುತ್ತವೆ. ತನ್ನ ಬದುಕಿಗೆ ವೈಚಾರಿಕ ಧೋರಣೆಗಳನ್ನು ಅಳವಡಿಸಿಕೊಂಡವ. ಆದರೂ ಧರ್ಮಬಿಟ್ಟು ಕದಲದ 'ಸೃಷ್ಟಿಗೊಬ್ಬ ಸೃಷ್ಟಿಕರ್ತನಿರಲೇಬೇಕೆಂದು' ವಾದಿಸುವವನಂತೆ ಕಾಣುತ್ತಾನೆ ಲೆನಿನ್ ಮೊದಮೊದಲು ಇವನ ವಿಚಾರ ಲಹರಿಗಳು ಕ್ರಾಂತಿಕಾರಕ ಚಿಂತನೆಗಳೆನಿಸಿದರೂ ಕೊನೆಗೆ ಪ್ರತಿಷ್ಠಿತ ಪರಿಸ್ಥಿತಿಯೊಡನೆ ಶಾಂತ ರೀತಿಯಲ್ಲಿ ಘರ್ಷಿಸುವಂತೆನಿಸುವ ಸರ್ವೋದಯ ವಾದಿಯಂತೆ ಕಾಣಬರುತ್ತಾನೆ.

ಡಾಲಿ, ಕಿಟಿಯರಂತೂ ಸಾಮಾಜಿಕ ವಿಧಿ ವಿಡಂಬನೆಗಳಿಗೆ ಚಾಚೂ ತಪ್ಪದೆ ವಿಧೇಯರಾಗಿರುವ, ಪ್ರಶ್ನೆಗಳಾಗಲೀ, ಪ್ರತಿಕ್ರಿಯೆಗಳಾಗಲೀ ಇಲ್ಲದ ವ್ಯವಸ್ಥೆಯೊಂದಿಗೇ ಗಂಭೀರವಾಗಿ ಸಾಗುವ ಮೂಲಕ 'ಹೀಗೆ ಬಂದು ಹಾಗೆ ಹೋಗುವ' ಕಾದಂಬರಿಯ ಕ್ರಿಯೆಗೆ ಒಂದಿಷ್ಟು ಇಂಬಾಗುವ ಸಾಧಾರಣ ಪಾತ್ರಗಳಾಗಿವೆ.

ಇವರೆಲ್ಲರ ನಡುವೆ ತನ್ನ ವಿವಾಹಾನಂತರದ ಪ್ರೇಮದಿಂದಾಗಿ ಸಾಮಾಜಿಕ ಕೋಟಲೆಗಳನ್ನು ಮುರಿದು ಮುಂದುವರಿದ ಅನ್ನಾ ಮೊದಲ ನೋಟಕ್ಕೆ ಸ್ವಂತಿಕೆಯನ್ನುಳ್ಳ, ತನಗನಿಸಿದ್ದನ್ನು ನಿರ್ಭಯವಾಗಿ ಮಾಡುವ ಮೂಲಕ ಸಾಮಾಜಿಕ ವ್ಯವಸ್ಥೆಯನ್ನು ದಾಟಿ ಬಂದ ಗಂಭೀರ ಆಲೋಚನೆಗಳ ವಿಚಾರವಂತೆಯಾಗಿ ಕಾಣಬರುತ್ತಾಳೆ. ಇದು ಅವಳ ಬಾಳಿನ ಒಂದು ಘಟ್ಟ, ಅವಳ ವ್ಯಕ್ತಿತ್ವದ ಒಂದು ಮುಖ ಅಷ್ಟೇ. ತನ್ನ ಗಂಡ, ಮಗನನ್ನು ಬಿಟ್ಟು ಪ್ರೌನ್‌ಸ್ಕಿಯೊಂದಿಗೆ ಒಂದಾಗಲು ಮಾಡುವ ಅವಳ ಪ್ರಯತ್ನ, ಗಂಡನೊಡನೆ ಆ ಬಗ್ಗೆ ಅವಳು ಧೈರ್ಯವಾಗಿ ತನ್ನ ಮನವನ್ನು ಬಿಚ್ಚಿಡುವ ಪ್ರಾಮಾಣಿಕತೆ ತನಗಿಷ್ಟ ಬಂದ ಬದುಕಿನತ್ತ ಹೆಜ್ಜೆ ಹಾಕುವ ದಿಟ್ಟತನ - ಇಲ್ಲೆಲ್ಲಾ ಅವಳ ನೇರ ನಡೆ, ದಿಟ್ಟತನ ಅವಳಿಗೆ ವೈಚಾರಿಕ, ಸ್ವೋಪಜ್ಞತೆಯ ಛಾಪನ್ನು ನೀಡಿದರೂ ಇದೇ ಅವಳಲ್ಲಿ ಕೊನೆತನಕ ಉಳಿಯುವ ಗುಣಗಳಾಗದೆ ಹೋದುದು ಕಾದಂಬರಿಯಲ್ಲಿನ ಒಂದು ನೇತ್ಯಾತ್ಮಕ ಅಂಶವಾಗಿದೆ.

ತಾನೇ ಆರಿಸಿಕೊಂಡ ಬದುಕು ಅವಳಿಗೆ ಮುಳುವಾದ ಧಾರ್ಮಿಕ ಮೂಲದ ಪಾಪಪ್ರಜ್ಞೆಯಿಂದಾಗಿ ಅನ್ನಾಳ ಬಗ್ಗೆ ಓದುಗರಿಗೆ ಮೂಡಿದ ವೈಚಾರಿಕ ಧೋರಣೆಗಳು ದಿಢೀರನೆ ಕಳಚಿ ಬೀಳುತ್ತದೆ. ಅವಳ ಸ್ಥೈರ್ಯಯುಕ್ತ ವಿಚಾರವಂತಿಕೆಗಳೆಲ್ಲವೂ ಬುಡಮೇಲಾಗಿ ಸಮಾಜದ ನೀತಿ ನಿಯಮ ಮೀರಿದ ಭ್ರಷ್ಟೆ ತಾನೆಂಬ ಮಾನಸಿಕ ಹೊಯ್ದಾಟಕ್ಕೆ ಒಳಗಾಗಿ 'ಅನೀತಿಯುತ ಬದುಕಿನವರಿಗೆ ಭೂಮಿಯ ಮೇಲೆ ಸ್ಥಾನವಿಲ್ಲ' ಎಂಬಂತೆ ಕಡೆತನಕ ಪಾಪದ ವಿಷ ತಲೆಗೇರಿ

'ಅಪರಾಧಿನಿ' ಎಂಬ ಕೀಳರಿಮೆ ಅವಳ ಬಾಳನ್ನು ಮುಳ್ಳಿನ ಹಾಸಿಗೆಯಂತೆ ಅಸಹನೀಯಗೊಳಿಸುವಲ್ಲಿ ಅವಳ ಅತೃಪ್ತ ಬಯಕೆಗೆ ಒಂದು ಸಾಕಾರ ದೊರಕೊಂಡು ಅದು ಮಧ್ಯದಲ್ಲೇ ನಿಲುಗಡೆಯ ನೆಮ್ಮದಿ ಕಾಣದೆ ಬಿಡುಗಡೆ ಪಡೆದಳೆಂದುಕೊಳ್ಳುವಷ್ಟರಲ್ಲೇ ಖಿನ್ನತೆಯ ಬಂಧನಕ್ಕೊಳಗಾಗುವುದು ಅನ್ನಾಳ ಪಾತ್ರದ ಮೂಲಕ ಮುನ್ನಡೆಯಿರಿಸಿದ್ದ ವ್ಯವಸ್ಥೆಯೊಂದರ ಹಿನ್ನೆಡೆಯೂ ಹೌದು.

''ತಕ್ಕಡಿಯೊಂದರಲ್ಲಿ ಒಂದೆಡೆ ಅನ್ನಾಳ ವೈಚಾರಿಕ ಪ್ರಜ್ಞೆ, ಇನ್ನೊಂದೆಡೆ ಧಾರ್ಮಿಕ ಪ್ರಜ್ಞೆಯನ್ನು ಇರಿಸಿ ತೂಗುವುದಾದರೆ ಧಾರ್ಮಿಕ ಪ್ರಜ್ಞೆ ಅತಿಯಾಗಿ ಅನ್ನಾ ಹಗುರಾಗಿ ಬಿಡುತ್ತಾಳೆ'' ಎಂಬುದು ಹಲವು ಇಂಗ್ಲೀಷ್ ವಿಮರ್ಶಕರ ವಾದವಾಗಿದೆ. ಕೊನೆ ಕೊನೆಗೆ ನಾಯಕಿಯ ವರ್ತನೆ, ಅವಳ ಅಂತ್ಯ - ಈ ಎಲ್ಲವನ್ನೂ ಕಂಡಾಗ ಟಾಲ್‌ಸ್ಟಾಯ್ ಅನ್ನಾಳ ಬದುಕುವ ಹಕ್ಕನ್ನು ಕಿತ್ತುಕೊಂಡಂತೆ ಕಾಣಿಸುತ್ತದೆ. ಇಲ್ಲಿ ಕೃತಿಕಾರನ ಘರ್ಷಣೆಗಳಿಲ್ಲದ ಸಮನ್ವಯ ದೃಷ್ಟಿಯನ್ನು ಕಾಣಬಹುದು. ಅಂದಿನ ಕೌಂಟ್ (ಶ್ರೀಮಂತ) ಮನೆತನಗಳ ಪುರುಷಪ್ರಧಾನ ವ್ಯವಸ್ಥೆ, ಕೌಟುಂಬಿಕ ನೆಲೆಯಲ್ಲಿ ಸಂಪ್ರದಾಯದ ಚೌಕಟ್ಟಿನಲ್ಲಿ ತನ್ನೆಲ್ಲಾ ಭಾವನೆಗಳನ್ನು ಒತ್ತಿ ಹಿಡಿದು ಸಂಯಮದಿಂದ ಗಂಭೀರವಾಗಿ ಬದುಕುವುದೇ ಪ್ರತಿಷ್ಠಿತ ಮನೆತನಗಳ ಸ್ತ್ರೀ ಧರ್ಮ. ಅದನ್ನು ಮೀರುವುದು ಪಾಪ; ಮೀರಿದವರಿಗೆ ಕೆಡುಕು ಎಂಬ ನಂಬಿಕೆಯೊಂದು ಒಡೆದು ಸ್ಥಿರವಾಗದೆ ವಿಫಲಗೊಳ್ಳುವಲ್ಲಿ ಅಂದಿನ ರಷ್ಯನ್ ಸಾಂಪ್ರದಾಯಿಕ ನಂಬಿಕೆ ನಡವಳಿಕೆಗಳ ವಾಸ್ತವಚಿತ್ರಣವಿದೆ ಹಾಗೂ ಪರಂಪರಾಗತ ನೀತಿಯನ್ನು ಅತೀತಗೊಳಿಸ ಹೋದಲ್ಲಿ ಉಂಟಾಗುವ ವಿಕೃತ ಪರಿಣಾಮವಿದ್ದು 'ಮಾಡಿದ್ದುಣ್ಣೋ ಮಹರಾಯ' ಎಂಬ ಸಿದ್ಧಾಂತಕ್ಕೆ ಬದ್ಧವಾಗಿದೆ.

ಟಾಲ್‌ಸ್ಟಾಯ್‌ನ ಕಲಾವಂತಿಕೆಯ ಶ್ರೇಷ್ಠತೆ ಇರುವುದೇ ಅವನ ವ್ಯಕ್ತಿಚಿತ್ರಣಗಳಲ್ಲಿ. ಸುಸಂಬದ್ಧ ಸನ್ನಿವೇಶ ನಿರ್ಮಾಣ ಮಾಡಿ ಇತರ ವ್ಯಕ್ತಿಗಳನ್ನು ಸಂವಾದಕ್ಕೆ ಅಣಿಗೊಳಿಸಿ ಅಲ್ಲಿ ತಾನು ಚಿತ್ರಿಸಬೇಕಾದ ವ್ಯಕ್ತಿಯ ನಡತೆಯನ್ನು ಆಳವಾಗಿ, ವಿವರವಾಗಿ ಕೊಡುತ್ತಾನೆ. ಮನದ ಭಾವನೆಗಳನ್ನು, ಕಥೆಯ ಬೆಳವಣಿಗೆಗೆ ಪೂರಕವಾಗುವ ಸನ್ನಿವೇಶಗಳನ್ನು ಅರ್ಥಪೂರ್ಣ ಸಂಕೇತವಾಗಿಸುತ್ತಾನೆ. ಉದಾ : ಅನ್ನಾ ತನ್ನ ಅಣ್ಣನಾದ ಅಬ್ಲಾಂಸ್ಕಿಯ ಮನೆಗೆಂದು ಮಾಸ್ಕೋಗೆ ಹೋದಾಗ ರೈಲಿನಿಂದ ಇಳಿದೊಡನೆ ಅನಾಮಿಕನಾರೋ ರೈಲಿಗೆ ಸಿಕ್ಕಿ ಸತ್ತ ಚಿತ್ರ. ಮುಂದೆ ಆಕೆ ಮಾಸ್ಕೋದಿಂದ ಮರಳಿ ಲೆನಿನ್ ಗ್ರಾಡ್‌ಗೆ ಬಂದಾಗ ಆ ವೇಳೆಗಾಗಲೇ ಬ್ರೌನ್‌ಸ್ಕಿಗೆ ಮೋಹಪರವಶವಾಗಿದ್ದ ಅವಳ ಮನಸ್ಸಿಗೆ ಅದುವರೆಗೂ ಕಾಣದಿದ್ದ ಕರೇನಿನ್ನನ ಅಗಲ ಕಿವಿಗಳ ವಿಕೃತತೆ ಕಾಣುತ್ತದೆ. ಇವೆಲ್ಲ ಅವಳ ಮಾನಸಿಕ ಸ್ಥಿತ್ಯಂತರ ಹಾಗೂ ಅವಳ ದುರಂತ ಬದುಕಿನ ಸೂಚನೆಯಂತಿದೆ. ವ್ಯಕ್ತಿಯ ಆಂತರಿಕ ಬದುಕಿನ ಪದರಗಳನ್ನು ಬಿಡಿಸುವಲ್ಲಿ, ಪೂರಕ ರೂಪಕಗಳ ನಿರ್ಮಾಣದಲ್ಲಿ, ಕೃತಿಕಾರ ತೋರಿದ ಸೂಕ್ಷ್ಮತೆ ಮೆಚ್ಚುವಂತಹುದು. ಆದರೆ ವಿಚಾರವಂತಿಕೆಯ ನೆಲೆಗಟ್ಟಿನಲ್ಲಿ ನಿಲ್ಲುವಂತೆ ನಂಬಿಸುತ್ತಾ ಸಾಗುವ ಅನ್ನಾ ಮಾನಸಿಕ ವಿಭ್ರಮೆಗಳಿಂದ ತಲ್ಲಣಿಸಿ ಆತ್ಮಹತ್ಯೆ ಮಾಡಿಕೊಳ್ಳುವುದು ಆಶಯದ ಸೋಲಾಗಿ ಓದುಗರಿಗೆ ಒಂದು ರೀತಿಯ ಆಘಾತವೇ ಆಗಿಬಿಡುತ್ತದೆ.

ನೂತನ ವಿಚಾರಧಾರೆಗಳಿಂದ ಸ್ತ್ರೀಯರಿಗೇ ವಿಶಿಷ್ಟವಾದ ಚಿಂತನೆಗಳಿಂದ ನೆನಪಿನಲ್ಲಿ ಕಾಡುವ ಕವಯಿತ್ರಿ ಸ್ಯಾಫೋ, ಸಾಫೋಕ್ಲಿಸನ ಅಂತಿಗೊನೆ, ಯುರಿಪಿಡೀಸನ ಮೀಡಿಯಾ, ಇಬ್ಸನ್ನನ ನೋರಾಳ ಸಾಲಿಗೆ ಸೇರಬಹುದಾಗಿದ್ದ ಅನ್ನಾಳನ್ನು ಟಾಲ್‌ಸ್ಟಾಯ್ ದೂರ ಸರಿಸಿದ್ದಾನೆನ್ನಬಹುದು.

ಒಟ್ಟಾರೆ ಈ ಕೃತಿ ಪ್ರೇಮ - ಧರ್ಮ - ವ್ಯವಸ್ಥೆಗಳ ತ್ರಿಕೋನ ತಿಕ್ಕಾಟದಲ್ಲಿ ತೋರಿಕೆ - ಆಂತರಿಕ ದ್ವಂದ್ವಗಳಲ್ಲಿ ಸಿಲುಕಿದ ಹೆಣ್ಣೊಬ್ಬಳ ದುರಂತ ಸ್ಥಾಪಿತವಾಗಬಹುದಾಗಿದ್ದ ಸಿದ್ಧಾಂತವೊಂದು ಪೂರ್ವ ಪ್ರತಿಷ್ಠಿತ ಮೌಲ್ಯಗಳೆದುರು ತತ್ತರಿಸಿ ಹೋಗಿರುವ ಸತ್ಯವನ್ನು ನಿಚ್ಚಳವಾಗಿಸಿದೆ. ಇದರಿಂದಾಗಿ ಕಾದಂಬರಿಗೆ ದೊರಕೊಳ್ಳಬಹುದಾಗಿದ್ದ ಹೊಸ ಆಯಾಮವೊಂದು ದಕ್ಕದೆ ಹೋಗಿದೆ ಎನ್ನಬಹುದು.

ಕೈ ಬಿಟ್ಟು ಹೋದ ದಿಗಂತ

ಶ್ರೀಮತಿ ವನಮಾಲಾ ಆಚಾರ್

ಡಾ॥ ಸಾ.ಶಿ. ಮರುಳಯ್ಯನವರು ಹಾಗೂ ಅವರ ಧರ್ಮಪತ್ನಿ ಶ್ರೀಮತಿ ವೀಣಾ ಅವರು ನಮಗೆ ಆತ್ಮೀಯ ದಂಪತಿ. ನನ್ನವರ ಜೊತೆ ಪ್ರೊ. ಮರುಳಯ್ಯನವರಿಗಂತೂ 'ನೀನು - ತಾನು, ಬಾ - ಹೋಗು' ಎನ್ನುವಂತಹ ಸಲಿಗೆಯಿತ್ತು. ಅವರ ೭೦ನೆಯ ಹುಟ್ಟುಹಬ್ಬದ ಸಂಭ್ರಮದ ಶುಭದಿನದ ನೆನಪಿನ ಕಾಣಿಕೆಯಾಗಿ ಹಿತೈಷಿಗಳಾದ ಸ್ನೇಹಿತರೆಲ್ಲ ಸೇರಿ ಹೊರತರುವ ಅಭಿನಂದನಾ ಗ್ರಂಥಕ್ಕೆ ಒಂದು ಲೇಖನ ಬರೆದುಕೊಡಿ ಎಂದು ಕೇಳಿದವರು ಸಹ ಆತ್ಮೀಯರಾದ ಶ್ರೀ ಎ.ಎಸ್.ಭಟ್ ಹಾಗೂ ಶ್ರೀಮತಿ ಪ್ರೇಮಾ ಭಟ್ ಅವರು ಒಪ್ಪಿಕೊಂಡೆನಾದರೂ ಬರೆಯಲು ಮನಸ್ಸು ಮಾಡಿ ಕುಳಿತುಕೊಳ್ಳಲಾಗಲಿಲ್ಲ. ಮನಸ್ಸಿನ ನೆಮ್ಮದಿ, ಏಕಾಗ್ರತೆ ಏಕೆ ಸಾಧ್ಯವಾಗುತ್ತಿಲ್ಲ, ಸಾಮಾನ್ಯವಾಗಿ ನಾನು ಮನಸ್ಸಿನ ನೆಮ್ಮದಿ ಕಳೆದುಕೊಳ್ಳುವದಿಲ್ಲವಲ್ಲ ಎಂದು ಯೋಚಿಸಿದಾಗ ಕಾರಣ ಹೊಳೆಯಿತು. ಇಂದೇ ಲೇಖನವನ್ನು ಬರೆಯಲು ಆರಂಭಿಸಿದೆ.

ಇಂದು ನವೆಂಬರ್ ಹದಿನಾರು ಕಳೆದ ಒಂದು ನೂರಾ ಎಂಟು ದಿನಗಳಿಂದ ನಮ್ಮ ನಚ್ಚಿನ ವರನಟ ಡಾ. ರಾಜ್‌ಕುಮಾರ ಕಾಡಿನಲ್ಲಿ ಬಂಧನದಲ್ಲಿದ್ದು ಇಂದು ಬಿಡುಗಡೆ ಹೊಂದಿ ಸಂಭ್ರಮದ ಸ್ವಾಗತ ಕೋರುವ ಜನರ ಮುಂದೆ ನಿಂತಿದ್ದಾರೆ. ಇದೊಂದು ಅಪೂರ್ವ ಘಟನೆ. ಪವಾಡ ಸದೃಶ್ಯವಾದುದು! ಪ್ರತಿನಿತ್ಯ ಪ್ರತಿಯೊಂದು ಸುದ್ದಿ - ಸಮಾಚಾರಗಳ ಬಿತ್ತರ ಕೇಳುವದರಲ್ಲಿ ನಾನು ಬಹುಕಾಲ ಕಳೆಯುತ್ತಿದ್ದೆ. ಅದಕ್ಕೆ ಈ ವಿಳಂಬ.

ಹಾಗೆಂದು ಚಿಕ್ಕವಯಸ್ಸಿನವರಂತೆ ನಾನೇನೂ ರಾಜಕುಮಾರರನ್ನು ಆರಾಧ್ಯ ದೈವವಾಗಿಟ್ಟುಕೊಂಡಿಲ್ಲ. ಅವರ ಎಲ್ಲ ಸಿನಿಮಾಗಳನ್ನೂ ನೋಡಿಲ್ಲ. ಆದರೂ ಅವರ

ಬಗ್ಗೆ ನನಗೆ ಅಭಿಮಾನವಿರುವುದು ಆತನ ನೀತಿ ನಿಯತ್ತಿನ ಬಗೆಗೆ. ವೃತ್ತಿಯ ಬಗೆಗೆ ಇರುವ ಗೌರವದ ಬಗೆಗೆ, ಸಾಧನೆ, ಶ್ರದ್ಧೆಯ ಬಗೆಗೆ. ಸ್ವಾಮಿ ವಿವೇಕಾನಂದರು ಹೇಳುವ ಹಾಗೆ, ''ಜೀವನದಲ್ಲಿ ನಾವು ಮಾಡಿರುವ ತಪ್ಪೆಂದರೆ ಗುರಿಯ ಎಡೆಗೇ ಹೆಚ್ಚು ಆಕರ್ಷಿತರಾಗಿರುವುದು. ಗುರಿ ಎಡೆಗೆ ಕೊಡುವಷ್ಟೇ ಗಮನವನ್ನು ಮಾರ್ಗಕ್ಕೂ ಕೊಡಬೇಕು'' ನಮ್ಮ ಹಿರಿಯ ನಟ ಈ ಸೂತ್ರವನ್ನು ಚೆನ್ನಾಗಿ ಪಾಲಿಸಿದ್ದರಿಂದಲೇ ಇಂದು ಅವರು ನಾಡಿನ ಜನತೆಯ ಹೃನ್ಮನಗಳನ್ನು ಗೆದ್ದಿದ್ದಾರೆ. ಇಂಥ ಸಾಧನೆಗೆ ಮನುಷ್ಯನಲ್ಲಿ ಅಚ್ಚಳಿಯದ ಮನೋಬಲವಿರಬೇಕು. ಮನಸ್ಸಿನ ಮೇಲಿರುವ ಪ್ರಭುತ್ವವೇ ಈ ವಯಸ್ಸಿನಲ್ಲಿ ಇತ್ತೀಚೆಗೆ ಎದುರಿಸಿದ ಸಂಕಷ್ಟಗಳ ವಿರುದ್ಧ ಅವರನ್ನು ದೈಹಿಕವಾಗಿ ಕಾಪಾಡಿದೆ! ಎಂತಹ ಹುಚ್ಚು ಹಿಡಿಯಬಹುದಾದಂಥ ಅನುಭವ ಅದು!

ಮಾನಸಿಕ ಆರೋಗ್ಯವನ್ನು ಕಾಯ್ದುಕೊಂಡ ವ್ಯಕ್ತಿ ದೈಹಿಕವಾಗಿಯೂ ಬಲಶಾಲಿಯಾಗಿರುತ್ತಾನೆ. ಇದು ನಾನು ಬಾಳಿನಲ್ಲಿ ಮೈಗೂಡಿಸಿಕೊಂಡ, ಬಲವಾಗಿ ನಂಬಿದ ತಾರಕಮಂತ್ರ. ಅದಕ್ಕೆಂದೇ ನನ್ನ ಪತಿ ಸಾವಿನಂಚಿನಲ್ಲಿದ್ದಾಗ, ಐದು ಸಲ ಆಸ್ಪತ್ರೆಯ Intensive Care Unit ನಲ್ಲಿ ಇದ್ದಾಗ ನನ್ನ ವಿದ್ಯಾರ್ಥಿಗಳಿಗೆ ಅದರಲ್ಲೂ ದ್ವಿತೀಯ ಪಿ.ಯು.ಸಿ. ಮಕ್ಕಳಿಗೆ ಅನ್ಯಾಯವಾಗಬಾರದು ಎಂದು ನಾನು ರಜೆ ಹಾಕದೆ ಪಾಠ ಮಾಡಿದ್ದು ನನ್ನ ಸಹೋದ್ಯೋಗಿಗಳಲ್ಲಿ ಕೆಲವರಿಗಾದರೂ ನೆನಪಿರಬೇಕು. ಇಂಥ ಒಂದು ಅಮೂಲ್ಯ ಸೂತ್ರ ಎಲ್ಲ ಧಾರ್ಮಿಕ ಗ್ರಂಥಗಳಲ್ಲಿದೆ, ಸ್ವಾಮಿ ವಿವೇಕಾನಂದವಾಣಿಯಲ್ಲಿದೆ, ಶ್ರೇಷ್ಠ ಪುರುಷರ ಜೀವನ ಚರಿತ್ರೆಗಳಲ್ಲದೆ. ಆದರೂ, ನನ್ನ ಮೇಲೆ ಈ ಮೌಲ್ಯದ ಪ್ರಭಾವ ಬೀರಿರುವದು ಜೇಮ್ಸ್ ಹಿಲ್ಟನ್‌ನ Lost Horizon ಎಂಬ ಕಾದಂಬರಿ. ಅದರ ಬಗೆಗೆ ಓದುಗರಿಗೆ ಪುಟ್ಟದಾಗಿ ನೆನಪು ಮಾಡಿಕೊಡೋಣ ಎಂದಿದ್ದೇನೆ.

ನಮ್ಮ ಪ್ರೊಫೆಸರರ ಅಭಿನಂದನಾ ಸಮಾರಂಭದ ಹೊತ್ತಿಗೆ ಈ ಮಾತನ್ನು ಏಕೆ ಹೇಳುತ್ತಿದ್ದೇನೆ ಎಂದರೆ ಡಾ.ಮರುಳಯ್ಯನವರನ್ನು ಅವರ ಪತ್ನಿಯನ್ನ ನೋಡಿದಾಗ ಈ ಕಾದಂಬರಿಯ ಮೂಲ ಸೂತ್ರ ನನಗೆ ಅಡಿಗಡಿಗೆ ನೆನಪಾಗುತ್ತದೆ. ತುಂಬುಜೀವನ ನಡೆಸಿದ ಈ ದಂಪತಿಯ ಪರಿಚಯವಿರುವವರಿಗೆ ಅವರ ವಯಸ್ಸಿನ ನಿಜವಾದ ಕಲ್ಪನೆ ಬರುವದೇ ಇಲ್ಲ ಅಲ್ಲವೆ? ಖಂಡಿತವಾಗಿಯೂ ಅವರ ಜನ್ಮದಿನಾಂಕದ ದಾಖಲೆಗಳನ್ನು ಮತ್ತೆ ಮತ್ತೆ ನೋಡಿಯೇ ಅವರ ಅಭಿಮಾನಿಗಳು ಈ ಸಮಾರಂಭವನ್ನು ನಿಯೋಜಿಸಿದ್ದಾರೆ ಎಂದುಕೊಳ್ಳುತ್ತೇನೆ. ಜೀವನದಲ್ಲಿ ಏನೇ ಕಷ್ಟ ಕಾರ್ಪಣ್ಯಗಳು ಬಂದಿದ್ದರೂ, ನೋವಿನ ಸಂದರ್ಭಗಳು ಎದೆಗುಂದಿಸಿದ್ದರೂ ಆ ಎಲ್ಲ ನೋವಿನ ಸಂದರ್ಭಗಳನ್ನು ಎದೆಗಾರಿಕೆಯಿಂದ ಸ್ವೀಕರಿಸಿ ಹಸನ್ಮುಖಿಗಳಾಗಿರುವ, ಸಜ್ಜನಿಕೆಯ ಸಾಕಾರ ಮೂರ್ತಿಗಳಾದ ಸಹೃದಯ ಪ್ರೊ. ಮರುಳಯ್ಯನವರಿಗೂ - ವೀಣಾ ಅವರಿಗೂ ಈ ಪುಟ್ಟ ಲೇಖನದ ಮೂಲಕ ಹಾರ್ದಿಕವಾಗಿ ಶುಭವನ್ನು ಕೋರುತ್ತೇನೆ.

ಕನ್ನಡದ ಶ್ರೇಷ್ಠ ಕಾದಂಬರಿಗಳ ಬಗೆಗೆ ಉತ್ಕೃಷ್ಟವಾದ ವಿಮರ್ಶೆಗಳನ್ನು ಬರೆದ ದಿಗ್ಗಜಗಳಿದ್ದಾರೆ. ಯಾವ ದುರಭಿಮಾನವೂ ಇಲ್ಲದೆ, ವೃತ್ತಿಯಲ್ಲಿ ಆಂಗ್ಲಭಾಷೆಯುತ ಅಧ್ಯಾಪಕಿಯಾಗಿದ್ದುದರಿಂದ ಇಂಗ್ಲೀಷ್ ಭಾಷೆಯಲ್ಲಿರುವ ನನ್ನ ನಚ್ಚಿನ ಕಾದಂಬರಿಯ ಬಗೆಗೆ ಬರೆಯುತ್ತಿದ್ದೇನೆ. ಥಾಮಸ್ ಹಾರ್ಡಿಯ ಕಾದಂಬರಿಗಳ ನಂತರ ನಾನು ಅತಿಯಾಗಿ ಮೆಚ್ಚಿಕೊಂಡಿರುವ ಕಾದಂಬರಿ ಜೇಮ್ಸ್ ಹಿಲ್ಟನ್‌ನ ಲಾಸ್ಟ್ ಹೊರಾಯಿಝುನ್ (Lost Horizon) ಅಥವಾ ಕಳೆದು ಹೋದ ಕ್ಷಿತಿಜ ಅಥವಾ ಕೈಬಿಟ್ಟು ಹೋದ ದಿಗಂತ.

ಈ ಸುಂದರವಾದ, ಜನಪ್ರಿಯ ಕಾದಂಬರಿ ಲಾಸ್ಟ್ ಹೊರಾಯಿಝುನ್‌ನ್ನು ಬಹಳಷ್ಟು ಜನ ಓದಿರುತ್ತೀರಿ. ಅಕಸ್ಮಾತ್ ಓದಿಲ್ಲದಿದ್ದರೆ ಇಲ್ಲಿ ಈ ಸಂಕ್ಷಿಪ್ತವಾದ ಕಥೆ ಓದಿ ಮೂಲ ಕಾದಂಬರಿಯನ್ನು ಓದಿ ನೋಡಿ. ಇದನ್ನು ಓದಿದ ಯಾರಿಗೇ ಆಗಲಿ ಕೆಲಕಾಲ ಕನಸಿನ ಗುಂಗು ಹಿಡಿದಂತಾಗುತ್ತದೆ. ಇದರಲ್ಲಿಯ ಕಥಾವಸ್ತು, ಸಾಂಕೇತಿಕತೆ, ಪಾತ್ರವರ್ಗ, ಕಥೆಯ ನಿರೂಪಣಾ ತಂತ್ರ ಎಲ್ಲ ತುಂಬಾ ಸುಂದರವಾಗಿವೆ. ಅಲ್ಲಿನ 'ನೀಲೀ ಚಂದ್ರ ಕೊಳ್ಳ' (Valley of the Blue Moon) ದ ವರ್ಣನೆ, ಶಾಂಗ್ರಿಲಾ Shangri - La ಮಠದ ಚಿತ್ರ, ಕಾರಾಕಲ್ ಪರ್ವತದ ಭವ್ಯತೆ ಎಷ್ಟು ಹುಚ್ಚು ಹಿಡಿಸುವ ಹಾಗಿವೆ ಎಂದರೆ, ಹಲವಾರು ಸಾಹಸಿಗಳು ಆ ಒಂದು ಪ್ರದೇಶ ವಾಸ್ತವವಾಗಿ ಇದ್ದಿರಲೇ ಬೇಕೆಂದು ಅದನ್ನು ಕಂಡು ಹಿಡಿಯಲು ಈಗಲೂ

ದುರ್ಗಮವಾದ ಟಿಬೇಟನತ್ತ ಹೋಗುತ್ತಲೇ ಇದ್ದಾರಂತೆ! ಈವರೆಗೂ ಯಾರಿಗೂ ಆ ಅದ್ವಿತೀಯವಾದ, ಅವಿರತವಾಗಿ ಐವತ್ತು ವರುಷ ಅಖಂಡ ಯೌವನ ಕೊಡುವ ಆ ತಾಣ ಸಿಕ್ಕಿಯೇ ಇಲ್ಲ! ಆ ಕೊಳ್ಳದಲ್ಲಿ ಕಾಲಿಟ್ಟ ಇಪ್ಪತ್ತೈದರ ತರುಣ ಅಲ್ಲಿಯ ಹವೆ ಒಗ್ಗುವವರೆಗೆ ಐದು ವರುಷ ಬೆಳೆಯುತ್ತಾನೆ. ಆತನಿಗೆ ಮೂವತ್ತು ವರುಷವಾಗಿ ಮುಂದಿನ ಐವತ್ತು ವರುಷಗಳ ಕಾಲ ಮೂವತ್ತು ವರುಷದವನಾಗಿಯೇ ಉಳಿಯುತ್ತಾನೆ, ಎಂಬತ್ತು ವರುಷವಾದಾಗ ಮುವ್ವತ್ತೊಂದರಿಂದ ಬೆಳೆಯುತ್ತಾನೆ ಹಾಗೂ ದೀರ್ಘಾಯುಷಿಯಾಗಿ ಶತಮಾನಗಳ ಕಾಲ ಬಾಳಬಲ್ಲ! ಆ ಶಾಂಘ್ರಿಲಾ ಬೇರೆ ಎಲ್ಲಿಯೂ ಇಲ್ಲ, ನಮ್ಮೊಳಗೇ ಇದೆ ಎನ್ನುವ ಸತ್ಯವನ್ನು ಅರಿತವರು ಎಷ್ಟು ಜನವೋ! ಕೋಪ - ತಾಪ, ಅಸೂಯೆ, ಮದ - ಮತ್ಸರಗಳನ್ನು ಬಿಟ್ಟು, ಮಾನಸಿಕ ಸಮತೋಲ ಕಾಯ್ದುಕೊಂಡು, ನಾಲಿಗೆಯ ಮೇಲೆ ನಿಯಂತ್ರಣ ಸಾಧಿಸಿ, ಹೃದಯವಂತಿಕೆ ಬೆಳೆಸಿಕೊಂಡರೆ, ಮಾನಸಿಕವಾಗಿ ಜರ್ಝರಿತನಾಗದ ಮನುಷ್ಯ ದೈಹಿಕವಾಗಿಯೂ ಬಲಹೀನನಾಗಲಾರ!

ಕಾದಂಬರಿಕಾರ ಜೇಮ್ಸ್ ಹಿಲ್ಟನ್ ಶಾಲಾ ಮಾಸ್ತರನೊಬ್ಬ ಪುತ್ರನಾಗಿ ೧೯೦೦ರಲ್ಲಿ ಜನಿಸಿದ. ಹದಿನೇಳು ವರುಷಕ್ಕೆ ಕ್ಯಾಥರೀನ್ ಹರ್‌ಸೆಲ್ಫ ಎಂಬ ಕಾದಂಬರಿಯನ್ನು ಬರೆದ 'ಗುಡ್ ಬಾಯ್ ಮಿ. ಚಿಪ್ಸ್ (Good-Bye Mr. Chips) ಮತ್ತು ಲಾಸ್ಟ್ ಹೊರಾಯಿಝನ್ (Lost Horizon) ಇವನ ಅತ್ಯಂತ ಹೆಸರಾಂತ ಕೃತಿಗಳು. ಇದಲ್ಲದೆ ಇನ್ನೂ ಹದಿಮೂರು ಕೃತಿಗಳಿವೆ! ಈ ಕಾದಂಬರಿಯಲ್ಲಿ ಒಂದು ಸಾಂಕೇತಿಕವಾದ ಅರ್ಥವಿದೆ. ಮನುಷ್ಯ ದೈಹಿಕವಾಗಿ ಮಾನಸಿಕವಾಗಿ ಬೆಳೆಯುತ್ತಾನೆ. ಬೌದ್ಧಿಕ ಬೆಳವಣಿಗೆ ಸಾಧಿಸಲು ಆತನ ಜೀವಿತದ ಅಲ್ಪಾವಧಿ ಸಾಲದು. ಬೌದ್ಧಿಕಜ್ಞಾನ ಸಿಕ್ಕದಿದ್ದಾಗ ಆತ್ಮದ ಬೆಳವಣಿಗೆಗೆ ಅವಕಾಶವೇ ಇಲ್ಲ. ಅದರಿಂದಾಗಿ ಮನಸ್ಸಿನ ಸಂಸ್ಕಾರ ಹೊಂದದೇ ಮನುಷ್ಯ ಪ್ರಾಪಂಚಿಕ ಮೌಲ್ಯಗಳಿಗೆ - ಅಧಿಕಾರ, ಹಣ, ಮಮಕಾರಗಳ ಬೆನ್ನುಹತ್ತಿ ತೀರಾ ಕೆಳಮಟ್ಟದ ಪ್ರಾಣಿಯಾಗಿ ಉಳಿಯುತ್ತಾನೆ. ಅವನ ಈ ಅಪರಿಪಕ್ವ ಮನಸ್ಸಿನಿಂದಾಗಿ ಜಗತ್ತಿನಲ್ಲಿ ಯುದ್ಧ, ರಕ್ತಪಾತಗಳಾಗಿ ಜಗತ್ತಿನಲ್ಲೆಲ್ಲಾ ಒಂದು ತರಹದ ಬೇಗುದಿ ಇದ್ದೇ ಇದೆ. ಕತೆಗೆ ಇದು ಮೂಲಭೂತವಾದ ತಳಹದಿ. ಇದಲ್ಲದೆ ಶಾಂಗ್ರಿಲಾ ಸುತ್ತಲಿರುವ ಇನ್ನೊಂದು ಸಾಂಕೇತಿಕ ಅರ್ಥವನ್ನು ಕಾದಂಬರಿಯನ್ನು ಓದಿಯೇ ತಿಳಿಯಬೇಕು.

ಕಥಾ ವಸ್ತು :

ಕಥೆ ಪ್ರಾರಂಭವಾಗುವದು ಬರ್ಲಿನ್ನಿನ ಒಂದು ರೇಲ್ವೆ ಉಪಹಾರಗೃಹದಲ್ಲಿ. ಅಲ್ಲಿ ರೂದರ್‌ಫೋರ್ಡ್ ಎಂಬ ಕಾದಂಬರಿಕಾರ, ವೈಲ್ಯಾಂಡ್ ಎಂಬ ರಾಯಭಾರಿ ಕಛೇರಿಯ ಸೆಕ್ರೆಟರಿ ಹಾಗೂ ಒಬ್ಬ ನರರೋಗ ತಜ್ಞ - ಅವನೂ ಬರೆಹಗಾರನೇ - ಎಲ್ಲ ಸೇರಿರುತ್ತಾರೆ. ಮೂವರು ಬ್ರಹ್ಮಚಾರಿಗಳು, ಒಂದು ಕಾಲಕ್ಕೆ ಸಹಪಾಠಿಗಳಾಗಿದ್ದವರು.

ಅವರು ಆತ್ಮೀಯವಾಗಿ ಮಾತನಾಡುತ್ತಿದ್ದಾಗ ಅಲ್ಲಿ ಸ್ಯಾಂಡರ್ಸ್ ಎಂಬ ತರುಣ ವೈಮಾನಿಕ ಬರುತ್ತಾನೆ. ಮಾತಿಗೆ ಮಾತು ಬಂದು ಬಾಸ್ಕುಲಿನಿಂದ ಹೊರಟ ಬ್ರಿಟಿಶ್ ವಿಮಾನವನ್ನು ಯಾರೋ ಅಪಹರಿಸಿಕೊಂಡು ಹೋದದ್ದನ್ನು ಹೇಳುತ್ತಾನೆ. ಬ್ರಿಟಿಶ್ ಸರಕಾರ ಈ ಸಂಗತಿಯನ್ನು ಗುಟ್ಟಾಗಿಟ್ಟಿರುತ್ತದೆ. ಆದರೆ ಅದರಲ್ಲಿದ್ದ ಕಾನ್‌ವೇ ಸತ್ತಿಲ್ಲ ಎಂಬುದು ರೂದರ್‌ಫೋರ್ಡ್‌ಗೆ ಗೊತ್ತಿರುತ್ತದೆ. ಕಾನ್‌ವೇ ಇವರೆಲ್ಲರ ಜೊತೆ ಓದಿದ್ದ ಒಬ್ಬ ಮೇಧಾವಿ ಸಹಪಾಠಿ! ಕಾನ್‌ವೇಯ ವಿಷಯ ಹೇಳಲು ನರರೋಗ ತಜ್ಞರನ್ನು ತನ್ನ ಹೋಟೆಲ್ಲಿಗೆ ರೂದರ್‌ಫೋರ್ಡ್ ಕರೆದೊಯ್ಯುತ್ತಾನೆ.

'ಇವರೆಲ್ಲ ತಿಳಿದ ಹಾಗೆ ಕಾನ್‌ವೇ ಸತ್ತಿಲ್ಲ. ನಾನೊಮ್ಮೆ ಚುಂಗ್‌ಕಿಯಾಂಗನಲ್ಲಿ ಪ್ರಯಾಣಿಸುತ್ತಿದ್ದಾಗ ಒಬ್ಬ ಫ್ರೆಂಚ್ ಮಿಶನರಿ ಹೆಣ್ಣುಮಗಳು ತಮ್ಮ ಆಸ್ಪತ್ರೆಯಲ್ಲಿ 'ಮರೆವಿನ ರೋಗ (Ammmesia) ದಿಂದ ಬಳಲುವ ರೋಗಿಯೊಬ್ಬನನ್ನು ನೋಡಲು ಕರೆದುಕೊಂಡು ಹೋದಳು. ಅವನನ್ನು ನೋಡಿ ನಾನು ಅವನು ಕಾನ್‌ವೇ ಎಂದು ಗುರುತಿಸಿದೆ. ಆದರೆ, ಅವನಿಗೆ ತನ್ನ ಹೆಸರು ಸಹ ಮರೆತುಹೋಗಿತ್ತು ! ಅವನನ್ನು ನಾನು ಹದಿನೈದು ದಿನಗಳ ನಂತರ ಸ್ಯಾನ್‌ಫ್ರಾನ್ಸಿಸ್ಕೋಗೆ ಹೋಗುವ ಜಪಾನಿಸ ಹಡಗಿನಲ್ಲಿ ಕರೆದುಕೊಂಡು ಹೊರಟೆ. ಪ್ರಯಾಣದಲ್ಲಿ ಒಬ್ಬ ಜರ್ಮನ್ ಜೋಪಿನ್‌ನ ಕೃತಿಗಳನ್ನು ಬಾರಿಸಿದ. ಅವುಗಳನ್ನು ಕೇಳಿದಾಗ ಕಾನ್‌ವೇ ಇದುವರೆಗೂ ಪ್ರಕಟವಾಗದ ಜೋಪಿನ್‌ನ ಕೃತಿಗಳನ್ನು ಬಾರಿಸಿದ. ಅವುಗಳನ್ನು ಚೋಪಿನ್ನಿನ

ಒಬ್ಬ ವಿದ್ಯಾರ್ಥಿ ಕೊಟ್ಟಿದ್ದನಂತೆ. ಚೋಪಿನ್ ಸತ್ತದ್ದು ೧೮೪೯ರಲ್ಲಿ ! ಈ ಘಟನೆಯಿಂದ ಕಾನ್‌ವೇಗೆ ನೆನಪು ಮರಳಿಬಂತು. ಹಿಂದೆ ನಡೆದದ್ದನ್ನೆಲ್ಲ ರಾತ್ರಿ ಪೂರ್ತಿ, ಮತ್ತೆ ಮರುದಿನ ಮಧ್ಯಾಹ್ನದವರೆಗೆ ಹೇಳಿದ. ಮರುದಿನ ಎಲ್ಲಿಯೋ ಹೋಗಿಬಿಟ್ಟ. ಅವನು ಹೇಳಿದ್ದನ್ನೆಲ್ಲ ನಾನು ಬರೆದಿಟ್ಟಿದ್ದೇನೆ. ಎಂಥ ವಿಚಿತ್ರ ಘಟನೆ ಓದಿ ನೋಡು'' ಎಂದು ತಾನು ಬರೆದಿದ್ದನ್ನು ಅವನು ಓದಿದ. ಕಥೆ ಹೀಗಿದೆ :

೧೯೩೧ರ ಮೇ ೨೦ರಂದು ಬಾಸ್ಕುಲಿನಿಂದ ಒಂದು ವಿಶೇಷ ವಿಮಾನ ಹೊರಟಿತು. ಅದರಲ್ಲಿ ನಾಲ್ವರು ಪ್ರಯಾಣಿಕರು ಹ್ಯೂ ಕಾನ್‌ವೇ, ಚಾರ್ಲ್ಸ್ ಮ್ಯಾಲಿನ್‌ಸನ್, ಹೆನ್ರಿ ಬರ್ನಾರ್ಡ್ ಮತ್ತು ಮಿಸ್ ರಾಬರ್ಟಾ ಬ್ರಿಂಕಲೋ ಎಂಬ ಕ್ರಿಶ್ಚಿಯನ್ ಮಿಶನರಿ. ಅವರನ್ನು ದಂಗೆಯಾದಾಗ ಸಂರಕ್ಷಿತ ಸ್ಥಳಕ್ಕೆಂದು ಸರಕಾರ ಬಾಸ್ಕುಲಿನಿಂದ ಪೇಶಾವರಕ್ಕೆ ಸಾಗಿಸಬೇಕಾಗಿರುತ್ತದೆ.

ಈ ಕಾದಂಬರಿಯಲ್ಲಿ ಕಾನ್‌ವೇ ತುಂಬ ಆಕರ್ಷಕ ವ್ಯಕ್ತಿತ್ವದ ಪಾತ್ರ. ಮುವ್ವತ್ತೇಳು ವರುಷದ, ಕಂದುಬಣ್ಣದ ಕೂದಲಿನ, ನೀಲೀ ಕಣ್ಣಿನ ಕಾನ್‌ವೇ ಬಹುಭಾಷಾ ವಿಶಾರದೆ, ಆಳವಾದ ಜ್ಞಾನಪುಳ್ಳ ಈತ ಆಕ್ಸಫರ್ಡಿನ ಪ್ರಾಧ್ಯಾಪಕನಾಗಿದ್ದವ. ಶ್ರೀಮಂತ ಹೃದಯದ ಪರಿಪೂರ್ಣವ್ಯಕ್ತಿತ್ವದ ಈ ಪಾತ್ರ ಓದುಗರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯುತ್ತದೆ ಮ್ಯಾಲಿನ್‌ಸನ್ ಇಪ್ಪತ್ತು ವರುಷದ ಬಿಸಿರಕ್ತದ ತರುಣ, ಮುಂಗೋಪಿ. ಕಾನ್‌ವೇ ಎಂಥ ಸನ್ನಿವೇಶದಲ್ಲೂ ಮನಸ್ಥೈರ್ಯ ಕಳೆದುಕೊಳ್ಳುವದಿಲ್ಲ.

ಪೇಶಾವರದ ಕಡೆಗೆ ಹೊರಟ ವಿಮಾನ ಅತ್ತ ಹೋಗದೆ ಎಲ್ಲೆಲ್ಲೋ ಹಾರಾಡಿ ಕಾರಾಕೋರಮ್ ಪರ್ವತ ಸಾಲುಗಳನ್ನು ದಾಟಿಹೋಗುತ್ತದೆ. ಚಾಲಕ ಸಹ ಯಾರೋ ಬೇರೆ, ವಿಮಾನಪಡೆಯವನಲ್ಲ. ಪ್ರಯಾಣಿಕರಿಗೆ ತಮ್ಮ ವಿಮಾನ ಅಪಹೃತವಾದದ್ದು ಗೊತ್ತಾಗುತ್ತದೆ. ಆದರವರು ನಿಸ್ಸಹಾಯಕರು. ಅವರ ಹತ್ತಿರ ಯಾವ ಆಯುಧವೂ ಇಲ್ಲ. ಕೊನೆಗೊಮ್ಮೆ ವಿಮಾನ ಹಾರಾಟ ನಿಲ್ಲಿಸಿ ನಿಲ್ಲುತ್ತದೆ. ಚಾಲಕನಿಗೆ ಮೂರ್ಛೆ ಬಂದಿರುತ್ತದೆ. ಕೊನೆಗೊಮ್ಮೆ ಆತ ಕಣ್ತೆರೆದು, ''ಇಲ್ಲಿ ಶಾಂಗ್ರಿಲಾ ಎಂಬ ಬೌದ್ಧಮಠವಿದೆ. ಅಲ್ಲಿಗೆ ಹೋಗಿ'' ಎಂದು ಹೇಳಿ ಸತ್ತುಹೋಗುತ್ತಾನೆ. ಆಗ ರಾತ್ರಿ ಒಂದು ಗಂಟೆಯ ಸಮಯ. ಅವನು ಹೇಳಿದ್ದು ಕಾನವೇಗೆ ಮಾತ್ರ ಅರ್ಥವಾಗುತ್ತದೆ.

ಮರುದಿನ ಎತ್ತರವಾದ ಪರ್ವತದ ಕಡೆಯಿಂದ ಒಂದು ನಿಡಿದಾದ ಹಾದಿಯಲ್ಲಿ ಚಾಂಗ್ ಎಂಬ ಬೌದ್ಧಭಿಕ್ಷು ಬಂದು ಇವರನ್ನು ಶಾಂಗ್ರಿಲಾಗೆ ಕರೆದೊಯ್ಯುತ್ತಾನೆ. ಆ ಪರ್ವತ ೨೮೦೦೦ ಅಡಿ ಎತ್ತರವಿರುತ್ತದೆ. ಅದರ ಹೆಸರು ಕಾರಾಕಲ್ (Karkal) ಅಥವಾ ನೀಲೀಚಂದ್ರ. ಅಲ್ಲಿನ ಶಾಂಗ್ರಿಲಾ ಮಠದಲ್ಲಿ ಹಲವಾರು ಉತ್ಕೃಷ್ಟ ಗ್ರಂಥಗಳಿರುತ್ತವೆ; ಆಧುನಿಕ ಸಾಧನೆಗಳಿರುತ್ತವೆ. ಸ್ನಾನದ ತೊಟ್ಟಿ ಅಮೇರಿಕಾದಿಂದ ಬಂದಿರುತ್ತದೆ. ಅವೆಲ್ಲ ಅಲ್ಲಿಗೆ ಹೇಗೆ ಬಂದವು? ಇನ್ನು ಆ ದುರ್ಗಮವಾದ ಹಾದಿಯಿಂದ ಮರುಳುವದು ಹೇಗೆ? ಅದಕ್ಕೆ ಚಾಂಗ್ - 'ಪ್ರತಿ ವರುಷ ಹೊರ ಜಗತ್ತಿನಿಂದ ಪೋರ್ಟರುಗಳು ನಮಗೆ ಬೇಕಾದ ಸರಕುಗಳನ್ನು ತರುತ್ತಾರೆ. ಅವರು ಬಂದಾಗ ಅವರ ಜತೆ ನೀವು ಬೇಕಿದ್ದರೆ ಹೋಗಬಹುದು. ಆದರೆ ಅದು ಎರಡು ತಿಂಗಳಾದರೂ ಆದೀತು' ಎನ್ನುತ್ತಾನೆ. ಅಲ್ಲಿಂದ ಬೇಗ ಹೋಗಬೇಕು ಎಂದು ಮ್ಯಾಲಿನ್‌ಸನ್ ಚಡಪಡಿಸುತ್ತಾನೆ. ಯುದ್ಧದ ಕ್ರೂರ ವಾತಾವರಣ ನೋಡಿದ ಕಾನ್‌ವೇ ಈ ಪ್ರಶಾಂತವಾದ ಪರಿಸ್ಥಿತಿ ಬಹಳ ಹಿಡಿಸುತ್ತದೆ. 'ದೊಡ್ಡವರ ಆದೇಶದ ಮೇರೆಗೆ ಇವರನ್ನು ಟಾಲೂ ಕರೆತಂದಿದ್ದಾನೆ' ಎಂಬ ಮಾತನ್ನು ಕಾನ್‌ವೇ ಸೇವಕರ ಮಾತಿನಿಂದ ತಿಳಿದುಕೊಳ್ಳುತ್ತಾನೆ. ಹತ್ತು ವರುಷ ಪೌರ್ವಾತ್ಯ ರಾಷ್ಟ್ರಗಳಲ್ಲಿ ಕೆಲಸ ಮಾಡಿದ ಕಾನ್‌ವೇಗೆ ಅವರ ಭಾಷೆ ಅರ್ಥವಾಗುತ್ತದೆ. ಆದರೆ, ತಮ್ಮನ್ನು ಕರೆತಂದದ್ದು ಏತಕ್ಕಾಗಿ? ಯಾವ ಉದ್ದೇಶಕ್ಕಾಗಿ?

ಮರುದಿನ ಚಾಂಗ್ ಅವರನ್ನು ಚಹ ಕುಡಿಯಲು ಒಂದು ಉದ್ಯಾನಕ್ಕೆ ಕರೆದುಕೊಂಡು ಹೋಗುತ್ತಾನೆ. ಅಲ್ಲಿ ಲೋ - ತ್ಸೆ (Lo-Tsen) ಎಂಬ ಸುಂದರ ತರುಣಿ ವಾದ್ಯ ನುಡಿಸುತ್ತಿರುತ್ತಾಳೆ. ಅವಳ ದಂತದ ಬಣ್ಣ, ನೀಳ ಬೆರಳುಗಳು, ಹೂವಿನ ಪಕಳೆಯಂತೆ ತುಟಿಗಳ ಬೆಡಗಿಗೆ ಮ್ಯಾಲಿನ್‌ಸನ್ ಮರುಳಾಗಿ ಅವಳಲ್ಲಿ ಅನುರಕ್ತನಾಗುತ್ತಾನೆ. ಆದರೆ ಅವಳು ಮಾತ್ರ ಒಂದು ಮಾತನ್ನೂ ಆಡುವದಿಲ್ಲ. (ಅಧ್ಯಾಯ ೫)

ಒಂದು ವಾರದಲ್ಲಿ ಈ ನಾಲ್ಕೂ ಜನ ಎಲ್ಲವನ್ನೂ ವೀಕ್ಷಿಸುತ್ತಾರೆ. ಆ ಕೊಳ್ಳದಲ್ಲಿ ಅಪರಾಧಗಳಿಲ್ಲ, ಕಾಯ್ದೆಗಳಿಲ್ಲ, ಪೋಲೀಸರೂ ಇಲ್ಲ! ಯಾವ ಕೊರತೆಯೂ ಇಲ್ಲದ ಅವರಿಗೆ ಅಪರಾಧಕ್ಕೆ ಅವಕಾಶವಿಲ್ಲ.

ಒಮ್ಮೆ ಅಕಸ್ಮಾತ್ ಮ್ಯಾಲಿನ್‌ಸನ್ ಕೈಗೆ ಬರ್ನಾರ್ಡನ ಕೆಲ ಪತ್ರಗಳು, ದಿನಚರಿ ಸಿಕ್ಕು ಆತ ಶಾರ್ಲ್ಮರ್ಸ ಟ್ರಾಯಂಟ್ ಎಂಬ ಕುಪ್ರಸಿದ್ಧ ಅಪರಾಧಿ ಎಂದು ಗೊತ್ತಾಗುತ್ತದೆ. ಜನರಿಂದ ಠೇವಣಿ ಸಂಗ್ರಹಿಸಿ, ದಿವಾಳಿ ತೆಗೆದು, ಹಣ ಮರಳಿಸಲಾಗದೇ ತಲೆ ಮರೆಸಿಕೊಂಡು ಸುಳ್ಳು ಹೆಸರಿನ ಪಾಸ್‌ಪೋರ್ಟ ಮೇಲೆ ಪ್ರಯಾಣಕ್ಕೆಂದು ಈ ವಿಮಾನದಲ್ಲಿ ಬಂದಿರುತ್ತಾನೆ. ಇಲ್ಲಿ ಅವನು ಸುರಕ್ಷಿತ.

ಬಂದ ಹದಿನೈದು ದಿನಕ್ಕೇ ಮುಖ್ಯ ಲಾಮಾ ಕಾನ್‌ವೇಯನ್ನು ಕರೆಯಿಸಿಕೊಂಡು ಶಾಂಗ್ರಿಲಾದ ಕತೆ ಹೇಳುತ್ತಾನೆ :

೧೭೧೯ರಲ್ಲಿ ಪೀಕಿಂಗ್ ಕಡೆಯಿಂದ ನಾಲ್ಕು ಜನ ಪಾದ್ರಿಗಳು ಇತ್ತ ಬಂದು, ಎಲ್ಲ ಸತ್ತು ಒಬ್ಬ ಮಾತ್ರ ಉಳಿಯುತ್ತಾನೆ. ಅಲ್ಲಿಂದ ಆತ ಮರಳಿ ಹೋಗದೆ ಇಲ್ಲಿ ಉಳಿದುಬಿಡುತ್ತಾನೆ. ಆತನೇ ಫಾದರ್ ಪೆರಾಲ್ಟ. ಆದರೆ, ಆತ ನೂರಾರು ವರುಷಗಳಾದರೂ ಸಾಯುವದೇ ಇಲ್ಲ. ಯೋಗಾಭ್ಯಾಸದಿಂದ ಮತ್ತು ತ್ಯಾಂಗತ್ಸೆ ಎಂಬ ಕಾಯಿಯನ್ನು ತಿನ್ನುವದರಿಂದ ಚಿರಯೌವನ ಪಡೆಯುತ್ತಾನೆ. ಅವನಿಗೆ ಅತೀಂದ್ರಿಯ ಜ್ಞಾನ ಲಭಿಸಿ ಭವಿಷ್ಯದ ದಾರುಣ ಚಿತ್ರ ಕಣ್ಣಿಗೆ ಕಾಣುತ್ತದೆ. ಸುದೀರ್ಘ ಯೌವನದಿಂದ ಮನುಷ್ಯ ಹೆಚ್ಚು ಓದಿ ಜ್ಞಾನ ಪಡೆದು ಆತ್ಮೋನ್ನತಿ ಸಾಧಿಸಬಹುದು, ಅದು ಶಾಂಗ್ರಿಲಾದಲ್ಲಿ ಮಾತ್ರ ಸಾಧ್ಯ. ಅಲ್ಲಿ ಉಳಿದುಕೊಂಡಿದ್ದ ಪಾದ್ರಿ, ಈ ಒಂದು ಶ್ರೇಷ್ಠ ಸಂಸ್ಕೃತಿಯನ್ನು ಬೆಳೆಸಬೇಕೆನ್ನುತ್ತಾನೆ. ಅದಕ್ಕೆ ಸರಿಯಾಗಿ ೧೮೦೩ರಲ್ಲಿ ಹೆನ್‌ಶೆಲ್ ಎಂಬ ಆಸ್ಟ್ರಿಯಾದ ತರುಣನೊಬ್ಬ ಬಂದು ಸೇರಿಕೊಳ್ಳುತ್ತಾನೆ. ಕೊಳ್ಳದಲ್ಲಿಯ ಚಿನ್ನದ ಗಟ್ಟಿಗಳ ಉಪಯೋಗ ಪಡೆದುಕೊಂಡು ಹೊರಗಿನ ಜಗತ್ತಿನಿಂದ ವಸ್ತುಗಳನ್ನು ತರಿಸುವ ವ್ಯವಸ್ಥೆ ಮಾಡುತ್ತಾನೆ. ದೂರದಲ್ಲಿಯೇ ವಾಹಕರು ಆ ವಸ್ತುಗಳನ್ನು ಇಡಬೇಕು. ಇಲ್ಲಿಯ ಜನ ಹೋಗಿ ಅವುಗಳನ್ನು ತರಬೇಕು. ಮರು ವರುಷದ ವಸ್ತುಗಳ ಪಟ್ಟಿಯನ್ನು ಆಗಲೇ ಕೊಡುತ್ತಿದ್ದರು. ಅಂತೆಯೇ ಅಲ್ಲಿ ಆ ಎಲ್ಲ ಆಧುನಿಕ ವಸ್ತುಗಳ ಸಂಗ್ರಹವಾಗಿತ್ತು. ಆದರೆ, ೧೮೫೭ರಲ್ಲಿ ಹೆನ್‌ಶೆಲ್‌ನನ್ನು ಒಬ್ಬ ಆಂಗ್ಲ ಯುವಕ ಕೊಂದುಬಿಡುತ್ತಾನೆ. ಏಕೆಂದರೆ, ಅಲ್ಲಿಂದ ಮರಳುವ ಅವಕಾಶವಿಲ್ಲ ಎಂದು ಹೆನೆಶೆಲ್ ಆತನಿಗೆ ಹೇಳಿದ್ದೇ ಕಾರಣವಾಗುತ್ತದೆ. ಅವನು ಸಾಯುವ ಮೊದಲಿನ ತೈಲಚಿತ್ರವನ್ನು ಕಾನ್‌ವೇಗೆ ಲಾಮಾ ತೋರಿಸುತ್ತಾನೆ. ಎಪ್ಪತ್ತೂರು ವರುಷದ ಮುದುಕನ ಬದಲು ತರುಣನ ಚಿತ್ರವಿರುತ್ತದೆ! ಈಗ ಕಾನ್‌ವೇಗೆ ಮುಖ್ಯ ಲಾಮಾನೇ ಫಾದರ್ ಪೆರಾಲ್ಟ ಎಂದು ಗೊತ್ತಾಗಿಬಿಡುತ್ತದೆ. ಅವನಿಗೆ ೨೫೦ ವರುಷಗಳು! (ಅಧ್ಯಾಯ ೭ - ೮).

ಕಾನ್‌ವೇ ಮತ್ತು ಫಾದರ್ ಪೆರಾಲ್ಟರ ಭೇಟಿ ಭಾಗ ಈ ಕಾದಂಬರಿಯಲ್ಲಿಯ ಸತ್ತ್ವವುಳ್ಳ ಭಾಗ. ಅಲ್ಲಿ ಮುಪ್ಪಿಲ್ಲ ಆದರೆ ಸಾವು ಇದೆ. ಹಲವಾರು ಜನ, ಸಾಮಾನ್ಯ ಬುದ್ಧಿಮತ್ತೆಯ ಜನ ಅಲ್ಲಿ ಹಾದಿ ತಪ್ಪಿಯೋ, ಅಪಹರಿಸಲ್ಪಟ್ಟು ಬಂದವರೋ ಇದ್ದಾರೆ. ಆದರೆ ಅವರೆಲ್ಲ ಶ್ರೇಷ್ಠಮಟ್ಟದ ವ್ಯಕ್ತಿತ್ವ ಇಲ್ಲದವರು. ಕೆಲವರು ಸತ್ತು ಕೂಡ ಹೇಗಿದ್ದರೂ ಫಾದರ ಪೆರಾಲ್ಟನಿಗೆ ತನ್ನ ಸಾವು ಸನ್ನಿಹಿತವಾಗಿದೆ ಎಂದು ಗೊತ್ತಾಗಿ, ಆ ಉಚ್ಚ ಸಂಸ್ಕೃತಿಯನ್ನು ಉಳಿಸಲು ಒಬ್ಬ ವಾರಸುದಾರನನ್ನು ಹುಡುಕುತ್ತಿದ್ದಾನೆ.ತ ಸ್ವಾಸ್ಥ್ಯ ಚಿತ್ತದ ಕಾನ್‌ವೇ ತನ್ನ ಉತ್ತರಾಧಿಕಾರಿಯಾಗಲು ಆದರ್ಶ ಪುರುಷ ಎಂದು ಅರಿತ ಫಾದರ್ ಪೆರಾಲ್ಟ ಅವರನ್ನು ಅಪಹರಿಸಿ ತರಲು ಆದೇಶ ನೀಡಿರುತ್ತಾನೆ. ಅವರ ಹಿರಿಮೆಯನ್ನು ಅತೀಂದ್ರಿಯ ಜ್ಞಾನದಿಂದ ಕಂಡಿದ್ದಾನೆ.

ಕಾನ್‌ವೇಗೆ ಈಗ ಆ ಕೊಳ್ಳದ ರಹಸ್ಯ ರಹಸ್ಯವಾಗಿ ಉಳಿಯಲಿಲ್ಲ. ಇದಾದ ನಂತರ ಚಾಂಗ್ ಯಾವ ಮುಚ್ಚುಮರೆಯೂ ಇಲ್ಲದೇ ಕೊಳ್ಳದ ವಿಷಯ ಪೂರ್ಣ ಹೇಳುತ್ತಾನೆ.

ಅಲ್ಲಿ ಬಂದವರು ಮೊದಲ ಐದು ವರುಷ ಬೆಳೆಯುತ್ತಾರೆ. ನಂತರದ ಐವತ್ತು ವರುಷ ಅವರಿಗೆ ಕಾಲ ಸ್ಥಗಿತವಾಗುತ್ತದೆ. ಎಂದರೆ ಇಪ್ಪತ್ತರ ತರುಣ ಇಪ್ಪತ್ತೈದರ ನಂತರ ಎಪ್ಪತ್ತೈದರವರೆಗೆ ಯುವಕನಾಗಿಯೇ ಉಳಿಯುತ್ತಾನೆ. ನಂತರ ಒಂದೊಂದೇ ವರುಷ ಬೆಳೆಯುತ್ತಾನೆ. ಈ ಅಖಂಡ ಯೌವನದಿಂದ ಆತ ಓದಿ, ಜ್ಞಾನ ಪಡೆದು, ಆತ್ಮೋನ್ನತಿ ಸಾಧಿಸಬಹುದು.

ಚಾಂಗ್ ಅಲ್ಲಿಗೆ ಬಂದಾಗ ಇಪ್ಪತ್ತರ ತರುಣ ಈಗವನಿಗೆ ತೊಂಬತ್ತು ವರುಷ. ಲೋತ್ಸೆ ಮಂಚೂರಿಯಾದಿಂದ ಚರ್ಕಿಯ ರಾಜಕುಮಾರರನ್ನು ಮದುವೆಯಾಗಲು ದಿಬ್ಬಣದಲ್ಲಿ ಹೊರಟವಳು ದಾರಿ ತಪ್ಪಿ ಇಲ್ಲಿಗೆ ಬಂದಿರುತ್ತಾಳೆ. ಈಗವಳಿಗೆ ಅರವತ್ಮೂರು ವರುಷ!

ಹಾಗೆಯೇ ಕಾನ್‌ವೇಗೆ ಇನ್ನೂ ಬೇರೆ ಬೇರೆ ಜನ ಸಿಕ್ಕಿರುತ್ತಾರೆ. ಅವರೆಲ್ಲ ತರುಣರು! ಒಂದು ಉಚ್ಚ ಸಂಸ್ಕೃತಿಯನ್ನು ಬೆಳೆಸುವದಕ್ಕಾಗಿ ಜನರನ್ನು ಅಪಹರಿಸಿ ತಂದದ್ದೂ ಇದೆ. ಹಾಗೆ ಬಂದವರೇ ಕಾನ್‌ವೇ ಹಾಗೂ ಅವರ ಸಂಗಾತಿಗಳು.

ದಿನಗಳುರುಳುತ್ತಿವೆ ಮತ್ತೊಂದು ದಿನ ಲಾಮಾ ಕಾನ್‌ವೇಯನ್ನು ಕರೆದು, "ಮಗೂ, ನಾನಿಲ್ಲಿಯೇ ಕುಳಿತು ಬರುವವರನ್ನು ಗಮನಿಸಿದ್ದೇನೆ. ನಿನಗಿರುವ ಸ್ಥೈರ್ಯ, ಸೌಜನ್ಯ, ಮಾನವೀಯತೆ, ನಿರ್ಮೋಹ, ಜ್ಞಾನದಾಹ, ಹೃದಯದ ಸಿರಿವಂತಿಕೆಗಳನ್ನು ಯಾರಲ್ಲಿಯೂ ಕಾಣಲಿಲ್ಲ. ನೀನು ನನ್ನ ವಾರಸುದಾರ. ಶಾಂಗ್ರಿಲಾವನ್ನು ನಿನ್ನ ಉಡಿಯಲ್ಲಿ ಹಾಕುತ್ತೇನೆ. ಇದನ್ನು ಉಳಿಸು" ಎಂದು ಹೇಳಿ ಸತ್ತು ಹೋಗುತ್ತಾನೆ. ಆಗ ರಾತ್ರಿ ಹನ್ನೆರಡೂಕಾಲು! (ಅಧ್ಯಾಯ ೧೦).

ದಿಗ್ಭ್ರಮೆಗೊಂಡ ಕಾನ್‌ವೇ ಹೊರಗೆ ಬಂದಾಗ ಮ್ಯಾಲಿನ್‌ಸನ್ ಕಾಯುತ್ತಿರುತ್ತಾನೆ. "ಪೋರ್ಟರರು ಬಂದಿದ್ದಾರೆ. ಲೋತ್ಸೆ ನಮ್ಮ ನಿರ್ಗಮನಕ್ಕೆ ಅಣಿ ಮಾಡಿ ಅವರೊಡನೆ ಕಾಯುತ್ತಿದ್ದಾಳೆ, ಹೊರಡು ಎನ್ನುತ್ತಾನೆ. ಬರ್ನಾರ್ಡ, ಬ್ರಿಂಕ್‌ಲೋ ಇಬ್ಬರೂ ಹೊರಡಲು ಒಪ್ಪಿರುವದಿಲ್ಲ, ಕಾನ್‌ವೇಗೆ ಆಶ್ಚರ್ಯ. ಅಲ್ಲಿಂದ ಹೊರಹೋದರೆ ತಾನು ಮುದುಕಿಯಾಗುತ್ತೇನೆ ಎಂದು ಗೊತ್ತಿದ್ದರೂ ಅವಳು ಅದು ಹೇಗೆ ಒಪ್ಪಿದಳು? ಲಾಮಾ ಹೇಳಿದ್ದನ್ನೆಲ್ಲ ಮ್ಯಾಲಿನ್‌ಸನ್‌ಗೆ ಹೇಳಲು ಕಾನ್‌ವೇ ನೋಡುತ್ತಾನೆ. ಆದರೆ ಮ್ಯಾಲಿನ್‌ಸನ್, "ನಿನಗೆ ತಲೆ ಸರಿಯಿಲ್ಲ ಎಂದು ಜನ ಎಂದೋ ಹೇಳಿದ್ದರು ಬಿಡು" ಎನ್ನುತ್ತಾನೆ. ತಾನೊಬ್ಬನೇ ಹೋಗುತ್ತೇನೆ ಎಂದು ಹೊರಟ ಮ್ಯಾಲಿನ್‌ಸನ್ ಭಯದಿಂದ ಮರಳಿ ಬರುತ್ತಾನೆ. ಅವನ ಮೇಲಿನ ಮರುಕದಿಂದ ಕಾನ್‌ವೇ ಶಾಂಗ್ರಿಲಾ ತ್ಯಜಿಸಿ ಹೊರಬರುತ್ತಾನೆ. ಅವನದು ಮಹಾತ್ಯಾಗ.

ಇಲ್ಲಿಗೆ ಕಥೆ ಮುಗಿಯುತ್ತದೆ. ನರರೋಗ ತಜ್ಞ ಮತ್ತೆ ರೂದರ್‌ಫೋರ್ಡ್‌ನನ್ನು ಭೆಟ್ಟಿಯಾಗಿ ಹಸ್ತಪ್ರತಿಯನ್ನು ಮರಳಿಕೊಡುತ್ತಾನೆ. ಅಂದು ತಪ್ಪಿಸಿಕೊಂಡವ ಎಷ್ಟು ಹುಡುಕಿದರೂ ಮತ್ತೆ ರೂದರ್‌ಫೋರ್ಡ್ ಕೈಗೆ ಕಾನ್‌ವೇ ಸಿಕ್ಕಿರುವದಿಲ್ಲ. ಮರಳಿ ಶಾಂಗ್ರಿಲಾಗೆ ಹೋಗಿರಲು ಸಾಧ್ಯವೇ? ಒಬ್ಬ ಹಣ್ಣು ಹಣ್ಣು ಮುದುಕಿ ಕಾನ್‌ವೇಯನ್ನು ಚುಂಗ್‌ಕಿಯಾಂಗ್‌ಗೆ ತಂದಿದ್ದು ಮಾತ್ರ ಗೊತ್ತಿತ್ತು. ಅವಳು ಲೋತ್ಸೆ ಇರಬೇಕು ಎಂದು ಕಾನ್‌ವೇಯ ಸ್ನೇಹಿತರು ಉದ್ಗರಿಸುತ್ತಾರೆ.

ಜಗತ್ತಿನಲ್ಲಿ ನಡೆಯುತ್ತಿರುವ ಅಮಾನುಷ ಕೃತ್ಯಗಳಿಗೆ ಬೇಸತ್ತ ಶ್ರೀ ಸಾಮಾನ್ಯನಿಗೆ ಇಂದು ಸುಂದರ ತಾಣ. ಶಾಂಗ್ರಿಲಾದ ಸಂಕೇತವೆಂದರೆ, ನಮ್ಮನ್ನು ನಾವು ಅರಿಯದಿದ್ದರೆ, ಅರಿತು ಬದಲಿಸಕೊಳ್ಳದಿದ್ದರೆ, ನೆಮ್ಮದಿ ಬರೀ ಕನಸೇ ಆದೀತು. ಶಾಂಗ್ರಿಲಾ ನಮ್ಮೊಳಗೇ ಇದೆ. ಕೋಪ, ತಾಪ, ದ್ವೇಷ, ಅಸೂಯೆ ಅಹಂಕಾರಗಳನ್ನು ತ್ಯಜಿಸಿ ಹೃದಯದ ಸಿರಿವಂತಿಕೆ, ಪ್ರೇಮ, ಮಮತೆ ಹಾಗೂ ಪ್ರಾಂಜಲತೆಗಳನ್ನು ಬೆಳೆಸಿಕೊಂಡರೆ, ಆಹಾರದಲ್ಲಿ, ಮಾತಿನಲ್ಲಿ, ಭಾವೋದ್ವೇಗದಲ್ಲಿ ಸಮತೋಲವನ್ನು ಕಾಯ್ದುಕೊಂಡರೆ, ದೇಹ - ಮನಸ್ಸುಗಳ ಮೇಲೆ ಹತೋಟಿ ಇಟ್ಟುಕೊಂಡರೆ ಮುಪ್ಪನ್ನು ಕನಿಷ್ಟ ಪಕ್ಷ ಹತ್ತು ವರುಷವಾದರೂ ಮುಂದೂಡಲಾರವೆ? ಇದೇ ಈ ಕಾದಂಬರಿಯ ಸಂದೇಶ.

ಕಾನ್‌ವೇ ಹೊರಬರುವದು ತ್ಯಾಗಕ್ಕಾಗಿ. ಲೋತ್ಸೆ ಸಹ ಪರಮಪದ ಸೋಪಾನ ಪದವಿ ಬಿಟ್ಟು, ಮರುಕದಿಂದ ಮ್ಯಾಲಿನ್‌ಸನ್‌ಗೆ ಸಹಾಯ ಮಾಡಲು ತ್ಯಾಗ ಮಾಡುತ್ತಾಳೆ. ಮನುಷ್ಯ ತನ್ನ ಭವಿಷ್ಯವನ್ನು ತಾನೇ ಹಾಳು ಮಾಡಿಕೊಳ್ಳುತ್ತಾನೆ ಎಂಬುದನ್ನು ಕಾನ್‌ವೇ ಹೊರಗೆ ಬರುವದು ಸೂಚಿಸುತ್ತದೆಯಲ್ಲವೇ?

ಮೊದಲ ಮಹಾಯುದ್ಧದ ದುರಂತವನ್ನು ಕಂಡ ಜೇಮ್ಸ್ ಹಿಲ್ಟನ್ ಈ ಸುಂದರ ಬದಲಾವಣೆಯಿಂದ ಸೂಚಿಸಿದ್ದಾನೆ. ಯುದ್ಧಗಳು ಬವಣೆಯನ್ನು, ಹಿರಿಯ ರಾಷ್ಟ್ರಗಳ ಕಚ್ಚಾಟವನ್ನು ನೋಡಿ ನೋಡಿ ಬೇಸತ್ತಿದ್ದ. ಓದುಗನ ಮನಸ್ಸಿನಲ್ಲಿ ಈ ಕಾದಂಬರಿ ಅಳಿಸಲಾಗದ ಮುದ್ರೆಯೊತ್ತಿ ನಿಲ್ಲುತ್ತದೆ!

ಕೊನೆಯದಾಗಿ, ಓದುಗರಲ್ಲಿ ಒಂದು ಅರಿಕೆ. ನಾನಿಲ್ಲಿ ಈ ಕಾದಂಬರಿಯನ್ನು ಕುರಿತು ವಿಮರ್ಶಾತ್ಮಕ ವಿಶ್ಲೇಷಣೆ ಮಾಡಬಯಸಿಲ್ಲ. ಹಾಗೆ ನೋಡಿದರೆ ಹಿಲ್ಟನ್‌ನ ಮೇಲೆ ಡನ್ (Dunne) ಹಾಗೂ ಬರ್ನಾರ್ಡ್ ಶಾ (Bernard Shaw) ಅವರ ಪ್ರಭಾವದ ಬಗ್ಗೆ ಷೇಕ್ಸ್‌ಪಿಯರನ ತರಹ ಆತ ನಾಂದಿ (Prologue) ಹಾಗೂ ಉಪಸಂಹಾರ ಅಥವಾ ಭರತವಾಕ್ಯ (Epilogue) ಗಳನ್ನು ಉಪಯೋಗಿಸಿ ನಾಯಕನ ಬಗೆಗೆ ಚರ್ಚಿಸಿರುವದನ್ನೂ ಹೇಳಬೇಕಿತ್ತು. ಬರ್ನಾರ್ಡ್, ಚಾಂಗ್, ಮಿಸ್ ಬ್ರಿಂಕಲೋ, ಮ್ಯಾಲಿನ್‌ಸನ್ ಎಂಬ ಉಳಿದ ಪಾತ್ರಗಳ ಬಗೆಗೂ, ಆತನ ವಿಶಿಷ್ಟವಾದ ಶೈಲಿಯ ಬಗೆಗೂ ಹಾಗೂ ಮತ್ತಿತರ ಎಷ್ಟೊಂದು ವಿಷಯಗಳ ಬಗೆಗೆ ಹೇಳಬಹುದಿತ್ತು. ಆದರೆ ನನ್ನ ಉದ್ದೇಶ, ಈ ಪುಸ್ತಕದ ಕಥೆ ಮತ್ತು ತಾತ್ವಿಕ ವಿವೇಚನೆಯ ಬಗೆಗೆ ಹೇಳುತ್ತ ಸಾಹಿತ್ಯದ ರಮ್ಯ ಭಾವನಾ ಲೋಕದಲ್ಲಿ ಬರುವಂಥ ಪರಿಪಕ್ವ ಪಾತ್ರಗಳಂಥ ಅಪರೂಪದ ವ್ಯಕ್ತಿಗಳು ನಮ್ಮ ನಡುವೆ, ವಾಸ್ತವ ಲೋಕದಲ್ಲಿ ಕೆಲವೊಂದು ಜನ ಸಿಕ್ಕುತ್ತಾರಲ್ಲ ಅವರ ಒಡನಾಟ ನಮಗೆ ಹೆಮ್ಮೆಯ ವಿಷಯ ಎಂದಷ್ಟೇ ಹೇಳಬೇಕೆಂದಿತ್ತು.

ರಸವೆಂದರೇನು ?

ಪ್ರೊ॥ ಸುಮತೀಂದ್ರನಾಡಿಗ

ಬಡ ಪಶು ಪಂಕದಲ್ಲಿ ಬಿದ್ದಡೆ
ಕಾಲ ಬಡಿವುದುಲ್ಲದೆ ಬೇರೆ ಗತಿಯುಂಟೆ?
ಶಿವ ಶಿವ ! ಹೋದಹೆ ಹೋದಹೆನಯ್ಯಾ
ನಿಮ್ಮ ಮನದತ್ತಲೆನ್ನ ತೆಗೆಯಯ್ಯಾ
ಪಶು ನಾನು ಪಶುಪತಿ ನೀನು
ತುಡುಗುಣಿಯೆಂದು ಎನ್ನ ಹಿಡಿದು ಬಡಿಯದ ಮುನ್ನ
ಒಡೆಯ ನಿಮ್ಮ ಬಯ್ಯದಂತೆ ಮಾಡು
ಕೂಡಲ ಸಂಗಮದೇವಾ.

ಒಂದು ಹಸು ಕೆಸರಲ್ಲಿ ಬಿದ್ದಿರುವ ಚಿತ್ರದ ಮೂಲಕ ಈ ಕವಿತೆ ಆರಂಭವಾಗುತ್ತದೆ. ಕೆಸರಿನಲ್ಲಿ ಬಿದ್ದಾಗ ಅದರ ಅಸಹಾಯಕತೆಯನ್ನು, ಕಾಲನ್ನು ಬಡಿಯುವ ಚಿತ್ರ ಪೋಷಿಸುತ್ತದೆ. ವಾಗ್ಮಿತ್ವದ ಪ್ರಶ್ನೆಯ ಧಾಟಿ ಅದರ ಅಸಹಾಯ ಪರಿಸ್ಥಿತಿಯನ್ನು ಸಮರ್ಥಿಸುತ್ತದೆ. ಬಡಪಶುವಿಗೆ ಕಾಲನ್ನು ಬಡಿಯುವುದನ್ನು ಬಿಟ್ಟು ಬೇರೆ ದಾರಿಯೇ ಇಲ್ಲ ಎನ್ನುವುದನ್ನು ನಾವು ಒಪ್ಪಿಕೊಂಡು ಬಿಡುತ್ತೇವೆ. ಹೀಗೆ ಪಶುವಿನ ದೀನಸ್ಥಿತಿಯಲ್ಲಿ ನಮ್ಮ ಮನಸ್ಸು ಸಿಕ್ಕಿಕೊಂಡಾಗ 'ಶಿವ ಶಿವ' ಎನ್ನುವ ಅಸಹಾಯ ದನಿ ನಮ್ಮನ್ನು ಚಕಿತಗೊಳಿಸುತ್ತದೆ. 'ಹೋದಹೆ ಹೋದಹೆನಯ್ಯಾ' ಎನ್ನುವಲ್ಲಿಗೆ ಮುಟ್ಟಿದ್ದಾಗ, ಕೆಸರಲ್ಲಿ ಬಿದ್ದ ಪಶುವಿನ ಸ್ಥಿತಿ ಈ ಕವನದ ನಾಯಕನ ಸ್ಥಿತಿಯಾಗಿ ಮಾರ್ಪಡುತ್ತದೆ. 'ನಿಮ್ಮ ಮನದತ್ತಲೆನ್ನ ತೆಗೆಯಯ್ಯ' ಎನ್ನುವ ಬೇಡಿಕೆಯಲ್ಲಿ ಅಸಹಾಯ ಸ್ಥಿತಿಗೆ ಕಾರಣ ಶಿವನಲ್ಲಿ ಮನಸ್ಸು ನೆಟ್ಟಿಲ್ಲದಿರುವುದೇ ಎನ್ನುವುದು ಸ್ಪಷ್ಟವಾಗುತ್ತದೆ; ಶಿವನಲ್ಲಿ ಮನಸ್ಸು ನಡಬೇಕು ಎನ್ನುವ ಭಾವನೆ ಅಸಹಾಯ ಸ್ಥಿತಿಗೆ

ಉತ್ತರವಾಗುತ್ತದೆ. ಇಲ್ಲಿಯವರೆಗೂ ಸೂಚಿಸಿದ ಪಶುವಿನ ಚಿತ್ರ, ನಾಯಕನ ಪರಿಸ್ಥಿತಿಯ ಚಿತ್ರಣವಾಗಿತ್ತು. ಪಶುವಿಗೆ ಹೋಲಿಕೆ ಇಲ್ಲಿಯವರೆಗೂ ಅಂತರ್ಗತವಾಗಿತ್ತು. ಈಗ 'ಪಶು ನಾನು ಪಶುಪತಿ ನೀನು' ಎಂದ ಕೂಡಲೆ ಅಸಹಾಯ ಪರಿಸ್ಥಿತಿಗೆ ಸಮಾಧಾನ ಸೂಚಿತವಾಗಿದ್ದರೂ ಪಶು ನಾನು ಎನ್ನುವಲ್ಲಿನ ಪಶು ಮತ್ತು ನಾಯಕನ ಸಮೀಕರಣ ಹೋಲಿಕೆಗಿಂತ ಗಂಭೀರವಾದದ್ದಾಗುತ್ತದೆ. ಪಶುಪತಿ ನೀನು ಎಂದ ಕೂಡಲೇ ಪಶುವಿಗೂ ಪಶುಪತಿಗೂ ಇರುವ ಸಂಬಂಧದ ಕಡೆಗೆ ಕವನದ ಕ್ರಿಯೆ ತಿರುಗುತ್ತದೆ. ಮೊದಲಿನಲ್ಲಿ ಕಂಡ ಅಸಹಾಯ ಪಶುವಿಗೂ ಒಬ್ಬ ಪಶುಪತಿ ಇದ್ದಾನೆ ಎನ್ನುವುದರ ಮೂಲಕ ಅಸಹಾಯಕತೆಯನ್ನು ಅಳಿಸಿ ಹಾಕುವ ಸಮಾಧಾನದ ದಿಕ್ಕು ಸ್ಪಷ್ಟವಾಗುತ್ತದೆ. ಆದರೆ ಮೊದಲಿಗೆ ಕಂಡ ಅಸಹಾಯಕತೆ ಸಂಪೂರ್ಣವಾಗಿ ಮಾಯವಾಗಬೇಕಾದರೆ ಪಶುವಿಗೂ ಮತ್ತು ಪಶುಪತಿಗೂ ಪ್ರೀತಿಯ, ಜವಾಬ್ದಾರಿಯ ಸಂಬಂಧ ಬೇಕು ಎನ್ನುವ ವಿಚಾರ ಕಾಣಿಸಿಕೊಳ್ಳುತ್ತದೆ. ಈ ಸಂಬಂಧ ಜವಾಬ್ದಾರಿಯ ಸಂಬಂಧವಾಗದಿದ್ದರೆ, ಪಶುವನ್ನು ತುಂಟಹಸುವೆಂದು, ಕಳ್ಳಹೋರಿಯೆಂದೂ ಸಾಮಾಜಿಕರು ಅದನ್ನು ಶಿಕ್ಷಿಸುತ್ತಾರೆ. ಅಷ್ಟೇ ಅಲ್ಲ ಒಡೆಯನನ್ನು ಬೈಯುತ್ತಾರೆ. ಒಡೆಯ ಬೈಸಿಕೊಳ್ಳದಿರಬೇಕಾದರೆ ತುಡುಗುಣಿಯ ಜವಾಬ್ದಾರಿಯನ್ನು ಅವನೇ ವಹಿಸಿಕೊಳ್ಳಬೇಕಾಗುತ್ತದೆ. ಹಾಗೆ ಜವಾಬ್ದಾರಿಯನ್ನು ವಹಿಸಿಕೊಂಡಾಗ ಪಶುವಿನ ಮತ್ತು ಪಶುಪತಿಯ ಸಂಬಂಧ ಅರ್ಥಪೂರ್ಣವಾದದ್ದೂ, ನ್ಯಾಯವಾದದ್ದೂ ಆಗುತ್ತದೆ. ಹೀಗೆ ಈ ಕವನದ ನಾಯಕ ತನ್ನ ಅಸಹಾಯ ಪರಿಸ್ಥಿತಿಯನ್ನು ವಿವರಿಸುತ್ತ, ಅದಕ್ಕೆ ಪರಿಹಾರವನ್ನು ಬಯಸುತ್ತಾನೆ. ಆ ಪರಿಹಾರ ತಾನಾಗಿ ಒದಗದೇ ಹೋಗಬಹುದು. ಆದ್ದರಿಂದ, ತನ್ನ ಜವಾಬ್ದಾರಿಯನ್ನು ಒಡೆಯ ತೆಗೆದುಕೊಳ್ಳಬೇಕೆನ್ನುವ ವಿಚಾರಕ್ಕೆ ಪಶುವಿನ ಸಂಕೇತದ ಮೂಲಕ, ಪಶುವಿನ ಮತ್ತು ತನ್ನ ನೋವಿನ ಚಿತ್ರಣದ ಮೂಲಕ ಒಲಿಸಿಕೊಳ್ಳಲಿಕ್ಕೆ ಪ್ರಯತ್ನಿಸುತ್ತಾನೆ.

ನಾವು ಹಂತ ಹಂತವಾಗಿ ಈ ನಾಯಕನ ಮನಃಸ್ಥಿತಿಯನ್ನು ಪ್ರವೇಶಿಸುತ್ತೇವೆ. ಮೊದಲ ಎರಡು ಸಾಲುಗಳ ಪಶುವಿನ ಚಿತ್ರಣದಲ್ಲಿ ಬಡಪಶು ಎನ್ನುವ ಸಂಯುಕ್ತ ಪದದಲ್ಲಿ ಬಡ ಎನ್ನುವ ವಿಶೇಷಣ, ಪಶುವಿನ ಬಗ್ಗೆ ನಮ್ಮಲ್ಲಿ ಸಹಾನುಭೂತಿಯನ್ನು ಹುಟ್ಟಿಸುತ್ತದೆ. ಪಂಕ ಎನ್ನುವ ಸಂಸ್ಕೃತ ಪದ (ಕೆಸರು ಎನ್ನುವುದಕ್ಕೆ ಪರ್ಯಾಯವಾಗಿ ಬಂದದ್ದು) ಈ ಕೆಸರು ಒಂದು ವಿಶೇಷವಾದ ಕೆಸರು ಎನ್ನುವ ಭಾವಾರ್ಥಕ್ಕೆ ನಮ್ಮನ್ನು ಸಿದ್ಧಪಡಿಸುತ್ತದೆ 'ಬಿದ್ದಡೆ' ಎನ್ನುವ ಪದ, ಮುಂದೆ ಆಗಬಹುದಾದ ಕ್ರಿಯೆಯನ್ನು ಸೂಚಿಸುತ್ತದೆ. 'ಶಿವ ಶಿವ' ಎನ್ನುವ ಅಸಹಾಯ ಕೂಗು ತುರ್ತನ್ನೂ ಅಸಹಾಯತೆಯನ್ನೂ ಸೂಚಿಸುತ್ತದೆ. 'ಹೋದಹೆ ಹೋದಹೆ' ಎನ್ನುವ ದ್ವಿರುಕ್ತಿ ತರಾತುರಿಯನ್ನೂ, ಪ್ರಾಣಭಯವನ್ನೂ, ಸಹಾಯದ ಅತ್ಯಗತ್ಯತೆಯನ್ನೂ ಹೇಳುತ್ತದೆ. ಇಲ್ಲಿ ಅಸಹಾಯಕತೆಯ ಧಾಟಿಯೊಂದೇ ಪ್ರಾಮುಖ್ಯವಾಗುತ್ತದೆ. ನಿಮ್ಮ ಮನದತ್ತಲೆನ್ನ ತೆಗೆಯಯ್ಯ ಎನ್ನುವಲ್ಲಿ, ತೆಗೆಯಬೇಕಾದದ್ದು ಪಂಕದಿಂದ ಅಥವಾ ಕೆಸರಿನಿಂದ ಎನ್ನುವುದಕ್ಕಿಂತ ಹೆಚ್ಚಾಗಿ ವಿಷಯಸುಖಗಳಲ್ಲಿ ಸಿಕ್ಕಿಕೊಂಡ ಮನಸ್ಸನ್ನು ಎನ್ನುವ ವಿಶೇಷ ಅರ್ಥವನ್ನು ಥಟ್ಟನೆ ಮೂಡಿಸುತ್ತದೆ. ಇಂಥ ವಿಶೇಷ ಅರ್ಥವನ್ನು 'ಧ್ವನಿ' ಯೆಂದು ಕರೆಯುತ್ತೇವೆ. 'ಪಶು ನಾನು ಪಶುಪತಿ ನೀನು' ಎನ್ನುವಲ್ಲಿ ಪಶು ಪದದ ಪುನರಾವೃತ್ತಿಯಿಂದ ಸಾಕು ಪ್ರಾಣಿ ಮತ್ತು ಒಡೆಯನ ಸಂಬಂಧ ಸೂಚಿತವಾಗುತ್ತದೆ. 'ತುಡುಗಣಿ' ಎನ್ನುವ ಪದ, ಹತೋಟಿಯನ್ನು ಮೀರಿದ ಸ್ಥಿತಿಯನ್ನೂ, ಮೌಲ್ಯವೊಂದರ ಅತಿಕ್ರಮಣವನ್ನೂ ಸೂಚಿಸುತ್ತದೆ. ತುಡುಗುಣಿಯಾಗಿರುವುದು ತಪ್ಪು ಎನ್ನುವ ಮೌಲ್ಯಪ್ರಜ್ಞೆ ಇಲ್ಲಿ ಕಾಣಿಸಿಕೊಳ್ಳುತ್ತದೆ. ತುಡುಗುಣಿಯಾಗಿದ್ದರೆ ಒದೆ ತಿನ್ನಬೇಕಾಗುತ್ತದೆ ಎನ್ನುವ ಶಿಕ್ಷೆಯ ಅರಿವೂ ಇಲ್ಲಿದೆ. ಅದಕ್ಕಿಂತ ಹೆಚ್ಚಾಗಿ ತಾನು ಒದೆ ತಿಂದರೂ ಪರವಾಗಿಲ್ಲ, ತನ್ನ ಯಜಮಾನನಿಗೆ ಬಯ್ಗುಳು ಸಲ್ಲಬಾರದು ಎನ್ನುವ ಕಾತರ ಪ್ರಧಾನವಾಗುತ್ತದೆ. 'ತುಡುಗಣಿ'ಯಾಗಿರುವುದು ಕೆಸರಿನಲ್ಲಿ ಬಿದ್ದ ಪಶುವಿನಷ್ಟೇ ಅಸಹಾಯ ಸ್ಥಿತಿ; ಈ ಅಸಹಾಯಸ್ಥಿತಿಗೆ ತಾನು ಜವಾಬ್ದಾರ ಎನ್ನಿಸಿದರೂ ತಾನು ಜವಾಬ್ದಾರನಲ್ಲ; ತಾನು ಸರಿಯಾಗಲಿಕ್ಕೆ ತನ್ನ ಒಡೆಯನ ಸಹಾಯಬೇಕು. ಒಡೆಯನಿಗೆ ಅದು ಅರ್ಥವಾದರೆ ತನ್ನ ಸಂಕಟಕ್ಕೆ ಪರಿಹಾರ ಒದಗಿದಂತೆ ಎನ್ನುವ ವಿಚಾರ, 'ತುಡುಗಣಿ'ಯಾದದ್ದರಿಂದ ಬಂದ ಸಂಕಟದಿಂದ ಪಾರು ಮಾಡುವ ಸಾಧನವಾಗುತ್ತದೆ. ಪಾರು ಮಾಡುವವನು ಪಶುಪತಿ, ಅವನೇ ಕೂಡಲಸಂಗಮದೇವ, ಅವನಿಗೆ ತನ್ನನ್ನು ಒಪ್ಪಿಸಿಕೊಂಡದ್ದಾಯಿತು. ಈ ಸಮರ್ಪಣಭಾವದಲ್ಲಿ ಮನಸ್ಸು ಒಂದು ನೆಲೆಗೆ ಮುಟ್ಟುತ್ತದೆ.

ವೀರಶೈವ ಧರ್ಮ ಚಿಂತನೆಯಲ್ಲಿ ಪತಿ, ಪಶು ಮತ್ತು ಪಾಶವೆಂಬ ನಿತ್ಯವಾದ ಮೂರು ಪದಾರ್ಥಗಳಿವೆ. ಶಿವನೇ ಪತಿ. ಇವನು ಸರ್ವಶಕ್ತ. ಇವನು ಅನುಗ್ರಹವನ್ನು ಮಾಡುವವನು. ಜೀವಾತ್ಮನೇ ಪಶು. ಪಾಶ ಹರಿದ ನಂತರ ಜೀವನು ಶಿವಸ್ವರೂಪವನ್ನು ಹೊಂದುವನು. ಈ ರೀತಿಯಾದ ದೈವ ಸಂಬಂಧವಾದ ಜ್ಞಾನದಿಂದಲೂ, ಪಶು ಮತ್ತು ಪಶುಪತಿ ಎನ್ನುವ ಪದಗಳು ಅರ್ಥವ್ಯಾಪ್ತಿಯನ್ನು ಪಡೆಯುತ್ತವೆ.

ಇಲ್ಲಿ ಅಸಹಾಯಕತೆಯ ಒಂದು ವಿಚಾರದಿಂದ ಆರಂಭವಾದ ಭಾವ, ಅಸಹಾಯ ಕೂಗಿನಲ್ಲಿ ಪರಾಕಾಷ್ಠೆಯನ್ನು ಮುಟ್ಟಿ, ಸಹಾಯಕ್ಕೆ ಮೊರೆಯಾಗಿ ಮಾರ್ಪಟ್ಟು ಸಾಕುಪ್ರಾಣಿ ಮತ್ತು ಒಡೆಯನ ಮೇಲಿನ ಕಾಳಜಿಯಿಂದ, ಅವನ ಸಹಾಯದ ನಂಬಿಕೆಯಲ್ಲಿ ನಿಲುಗಡೆಗೆ ಬರುತ್ತದೆ. ಭಾವದ ಈ ವಿನ್ಯಾಸದಲ್ಲಿ, ಪಶುವಿನ ಪದ ಪಡೆಯುವ ಅರ್ಥವ್ಯಾಪ್ತಿಯಲ್ಲಿ, ಪಶುವಿನ ಸ್ಥಿತಿಗೂ ನಾಯಕನ ಸ್ಥಿತಿಗೂ ಇರುವ ಸಾದೃಶ್ಯ ಮತ್ತು ವೈದೃಶ್ಯದಲ್ಲಿ, ಕಣ್ಣೆದುರಿಗೆ ನಡೆಯುವ ಭಕ್ತ ಮತ್ತು ದೇವರ ನಡುವಿನ ಈ ನಾಟಕದಲ್ಲಿ , ಪ್ರಶ್ನೆ, ಅಸಹಾಯ ಕೂಗು, ಸಂಬಂಧ ಸ್ಪಷ್ಟನೆಯ ಹೇಳಿಕೆ, ಶಿಕ್ಷೆಯ ಅಂಜಿಕೆ, ತಪ್ಪಿನ ಬಗ್ಗೆ ಪಾಪಪ್ರಜ್ಞೆ, ಒಡೆಯನ ಬಗ್ಗೆ ಕಾಳಜಿ, ಸಹಾಯಕ್ಕೆ ಮೊರೆ ಮೊದಲಾದ ಕ್ರಿಯೆಗಳಲ್ಲಿ ಭಾಗವಹಿಸುವುದರಲ್ಲಿ, ಬಡ, ಬಡಿ, ತುಡು, ಹಿಡಿ, ಬಡಿ, ಬಡೆ ಎನ್ನುವಲ್ಲಿನ ಶಬ್ದ ವಿನ್ಯಾಸದಲ್ಲಿ, ವಾಕ್ಯಗಳ ಸಮಾನಾಂತರ ರಚನೆಯಿಂದ ಮೂಡುವ ಲಯದಲ್ಲಿ, ಪಶು, ಪಂಕ, ಪಶುಪತಿ, ಸಂಗಮದೇವಾ ಎನ್ನುವ ಸಂಸ್ಕೃತ ಪದಗಳ ಔಚಿತ್ಯದಲ್ಲಿ, ಪ್ರಶ್ನೆ, ಕೂಗು, ಹೇಳಿಕೆ, ಪ್ರಾರ್ಥನೆಗಳ ಧಾಟಿಗಳ ಏರಿಳಿವಿನಲ್ಲಿ - ಈ ಎಲ್ಲದರ ಸಮುದಾಯದಿಂದ ಉತ್ಪನ್ನವಾಗುವ ಮನಃಸ್ಥಿತಿಯಲ್ಲಿ ನಾವು ಅನುಭವಿಸುವುದನ್ನೇ ರಸವೆಂದು ಕರೆಯುತ್ತೇವೆ. ಮೇಲೆ ಪಟ್ಟಿ ಮಾಡಿದ ಅಂಶಗಳೆಲ್ಲದರಲ್ಲೂ ನಮ್ಮ ಮನಸ್ಸು ಏಕಕಾಲದಲ್ಲಿ ಹರಿಯುವುದರಿಂದ, ನಮ್ಮ ಸ್ವಂತ ಸುಖ ದುಃಖಗಳಿಂದ ಬಿಡುಗಡೆಯಾಗಿ, ಕದಡಿದ ಬಸವಣ್ಣನ ಮನಸ್ಸು ತಿಳಿಯಾದ ಹಾಗೆ ನಮ್ಮ ಮನಸ್ಸೂ ತಿಳಿಯಾಗುತ್ತದೆ. ಕಾವ್ಯ ಪ್ರಯೋಜನಗಳಲ್ಲಿ ಇದೂ ಒಂದು ಪ್ರಯೋಜನ.

ಕವನವನ್ನು ರಚಿಸುವುದಕ್ಕೆ ಮುಂಚೆ ಬಸವಣ್ಣನ ಮನಸ್ಸಿನಲ್ಲಿ ವ್ಯಗ್ರತೆ ಮಾತ್ರ ಕಾಣಿಸಿಕೊಂಡಿರಬೇಕು. ಬಸವಣ್ಣನ ಮನಸ್ಸು ಕೂಡಲಸಂಗಮನ ನಿಕಟಸಂಪರ್ಕಕ್ಕೆ ಹಾತೊರೆಯುತ್ತಿದ್ದದ್ದು ಆಗಾಗ ವಿಷಯಸುಖಕ್ಕೆ ಹರಿದಾಗ, ಆತನಿಗೆ ಒಂದು ರೀತಿಯ ಹೆದರಿಕೆಯಾಗುತ್ತಿತ್ತು. ಏನೂ ಮಾಡಲು ತೋಚದ ವಿಷಾದ ಅಸಹಾಯಕತೆ ಮನಸ್ಸನ್ನು ತುಂಬುತ್ತಿತ್ತು. ಮನಸ್ಸು ಕದಡಿ ಕಸಿವಿಸಿಯಾಗುತ್ತಿತ್ತು. ಈ ಸ್ಥಿತಿಯಲ್ಲಿ ಬಸವಣ್ಣ ವಚನಗಳನ್ನು ರಚಿಸಿರಬೇಕು. ಈ ವಚನವನ್ನು ರಚಿಸುವಾಗ ತಾನು ಒದ್ದಾಡುವುದು ಸ್ಪಷ್ಟವಾಗಿ ಕಾಣಿಸಿರಬೇಕು. ಒದ್ದಾಟ ಎನ್ನುವ ಪದದಲ್ಲೆ ಒದೆಯುವುದು ಎನ್ನುವ ಪದ ಕಾಲಿಗೆ ಸಂಬಂಧಿಸಿದ್ದು. 'ಒದ್ದಾಟ' ಎಂದರೆ ಅಸಹಾಯಕನಾಗಿ ಕಾಲನ್ನು ಬಡಿಯುವುದು, ಎಂದು ಅನ್ನಿಸುವಷ್ಟರಲ್ಲೇ, ಎಂದೋ ಕಂಡು ಕೆಸರಿನಲ್ಲಿ ಸಿಕ್ಕ ಪ್ರಾಣಿಯೊಂದರ ಚಿತ್ರ ಕಣ್ಣೆದುರು ಸುಳಿದಿರಬೇಕು. ಮೊದಲ ಸಾಲು ಸಿದ್ಧವಾಯಿತು. ಎರಡನೆಯ ಸಾಲು ಬಂತು. ತಲೆಯಲ್ಲಿ ಒಂದು ರೀತಿಯ ಕಾವಿನ ಅನುಭವ, ಮೈಯಲ್ಲೆಲ್ಲಾ ಏನೋ ಒಂದ ಬಿಸಿ. ಅಸ್ಪಷ್ಟವಾದದ್ದು ಸ್ಪಷ್ಟವಾಗುತ್ತಿರುವುದರ ಕಡೆಗೆ ನೆಟ್ಟ ಮನಸ್ಸು, ಪಶು ತನ್ನ ಮನಸ್ಸಿನ ಹೊರಗೇ ಇದೆ. ಅದು ಕೆಸರಿಗೆ ಬಿದ್ದರೆ ಅಸಹಾಯವಾಗುತ್ತದೆ. ಆದರೆ ತಾನು? ಕೆಸರಿನಲ್ಲೇ ಬಿದ್ದಿದ್ದೇನೆ. ಏನೋ ಒಂದು ರೀತಿಯ ವಿಚಿತ್ರ ಸಂತೋಷ. ನೋವು, ಥಟ್ಟನೆ 'ಶಿವ ಶಿವ' ಎನ್ನುವ ಉದ್ಗಾರದಲ್ಲಿ ಬಸವಣ್ಣ ತಾನೇ ಪಶು ಎನ್ನುವುದನ್ನು ಥಟ್ಟನೆ ತೀವ್ರವಾಗಿ ಕಾಣಿಸಿದ ಶಕ್ತಿಯೇ ಪ್ರತಿಭೆ. ಪಶುವಿಗೂ ತನಗೂ ಇರುವ ಸಾದೃಶ್ಯದ ಜೊತೆಗೆ, ತಾನು ವಿಶೇಷ ರೀತಿಯ ಪಶು - ಪದಾರ್ಥ ಎನ್ನುವುದೂ ಹೊಳೆದೊಡನೆ, ಭಾವಸಾಹಚರ್ಯದಿಂದ ಪಶುವಿಗೂ ಪಶುಪತಿಗೂ ಸಂಬಂಧವೇರ್ಪಟ್ಟಿತು. ತನ್ನ ಜವಾಬ್ದಾರಿ ಪಶುಪತಿಯದು ಎನ್ನುವುದು ಹೊಳೆದಾಗ ಬಸವಣ್ಣನಿಗೆ ಎತ್ತರದ ಅಲೆ ತನ್ನನ್ನು ಮುಳುಗಿಸುತ್ತಿದೆ ಎನ್ನುವ ಭೀತಿಯ ಜೊತೆಯಲ್ಲೇ ತಾನು ಎಷ್ಟು ಎತ್ತರದಲ್ಲಿದ್ದೇನೆ ಎನ್ನುವ ಸಂತೋಷ. ಮುಂದೇನಾಗುತ್ತದೋ ಎನ್ನುವ ಭಯ ಮತ್ತು ಕುತೂಹಲ. ಅಲೆ ತನ್ನನ್ನು ಕೆಳಗೆ ತಂದಿದೆ. ದಡ ಹತ್ತಿರವಾಯಿತು. ಸದ್ಯ ತನಗೇನೂ ಆಗಿಲ್ಲ. ಅಲೆಗೂ ಏನೂ ಆಗಿಲ್ಲ. ಕೂಡಲಸಂಗಮನೇ ಈ ಅಲೆ. ತನಗೇನಾದರೂ ಅಡ್ಡಿಯಿಲ್ಲ. ಕೂಡಲ ಸಂಗಮನಿಗೆ ಏನೂ ಆಗಬಾರದು ಅವನಿಗೆ ಏನೂ ಆಗುವುದಿಲ್ಲ. ಆದರೂ ನೋಡಿದವರು ಏನಂದಾರು? ತನಗೇನು ಹುಚ್ಚೆ?

ತಾನು ಪಶು, ಎತ್ತೆತ್ತಲೂ ಮನಸ್ಸು ಹರಿಯುತ್ತಿದೆ. ಇದನ್ನು ಕಟ್ಟಿ ಹಾಕಬೇಕು. ಕಟ್ಟಿ ಹಾಕುವುದಕ್ಕೆ ನಾನು ಯಾರು? ಕಟ್ಟಬೇಕಾದದ್ದು ಅವನು. ಅವನು ಕಟ್ಟಿ ಹಾಕಲಿ. ಕಟ್ಟಿ ಹಾಕಿ ಅವನಿಗೆ ಕೆಟ್ಟ ಹೆಸರು ಬರುವುದನ್ನು ತಪ್ಪಿಸಿಕೊಳ್ಳಲಿ. ಅಯ್ಯಾ ನನ್ನಪ್ಪ, ನನ್ನ ಕೂಡಲಸಂಗಮ, ನನ್ನಿಂದ ನಿನಗೆ ಕೆಟ್ಟ ಹೆಸರು ಬರದಿರಲಿ. ಲೆಕ್ಕಣಿಕೆ ಅಲ್ಲಿ ಇಲ್ಲಿ ತಡೆಯುತ್ತದೆ. ಮತ್ತೆ ಸರಿಯಾದ ಪದ, ಸರಿಯಾದ ಧಾಟಿ, ಸರಿಯಾದ ಲಯ ಸಿಕ್ಕಿತು ಎನ್ನುವ ಸಂತೋಷದ ಜೊತೆಯಲ್ಲಿ ಮನಸ್ಸು ಹಗುರವಾಗುತ್ತದೆ. ಲೆಕ್ಕಣಿಕೆಗೆ ವಿಶ್ರಾಂತಿಯ ಜೊತೆಗೆ ಮನಸ್ಸಿಗೂ ವಿಶ್ರಾಂತಿ ಸಿಗುತ್ತದೆ. ಒಂದು ರೀತಿಯಾದ ಏನನ್ನೋ ಪಡೆದ ಸಂಭ್ರಮದ ಜೊತೆಯಲ್ಲಿ, ಸುಸ್ತಿನ ಅನುಭವ. ದೇಹಕ್ಕೆ ಸುಸ್ತು, ಆದರೆ ಮನಸ್ಸಿನಲ್ಲಿ ಉಲ್ಲಾಸ. ತನಗೂ ಮತ್ತು ಪಶುಪತಿಗೂ ಇರುವ ಸಂಬಂಧದ ರೂಪರೇಷೆಗಳು ಸ್ಪಷ್ಟವಾದವು.

ಇಲ್ಲಿ ಮೂಲಭಾವನೆ ಯಾವುದು? ವ್ಯಗ್ರತೆಯೊಂದೇ. ವ್ಯಗ್ರವಾದ ಮನಸ್ಸು ಭಯ, ಅಸಹಾಯಕತೆ, ಪ್ರೀತಿ, ಅನುಮಾನಗಳ ಮೂಲಕ ಹಾಯುವಾಗ, ಸಮಾಧಾನಕ್ಕೆ ಬರುತ್ತದೆ. ವ್ಯಗ್ರತೆಯಿಂದ ಸಮಸ್ಥಿತಿಗೆ ಬರುವಲ್ಲಿನ ಕಾಲಾಂತರದಲ್ಲಿ ಕಣ್ಣಿಗೆ ಕಂಡದ್ದು, ಕಿವಿ ಕೇಳಿದ್ದು, ಮೈಗೆ ತಾಕಿದ್ದು, ಮೈ ಬಿಸಿಯಾದದ್ದು - ಇದೇ ಅನುಭವ ವ್ಯಗ್ರತೆಯ ಮೂಲಭಾವಕ್ಕೆ ಏನೇನೋ ಬಂದು ಸೇರುತ್ತವೆ. ಹೀಗೆ ಬಂದದ್ದೆಲ್ಲಾ ಸಂಯೋಜಿತವಾಗುತ್ತವೆ. ಕೊನೆಯಲ್ಲಿ ಉಳಿಯುವ ಭಾವ ಮಿಕ್ಕೆಲ್ಲದರ 'ಪಾಕ'ದಿಂದ, ಎಲ್ಲ ಅಂಶಗಳ ಹದವಾದ ಹೊಂದಾಣಿಕೆಯಿಂದ ಬಂದದ್ದು. ಇದರ ರುಚಿಗೂ ಆರಂಭದಲ್ಲಿದ್ದದ್ದಕ್ಕೂ ಎಷ್ಟು ವ್ಯತ್ಯಾಸ! ಆರಂಭದಲ್ಲಿ ಬಹುಶಃ ಈ ರುಚಿಯನ್ನು ಕವಿ ಮನಸ್ಸು ಹುಡುಕುತ್ತಿತ್ತು ಅನಿಸುತ್ತದೆ. ಆದರೆ ಈಗ ಇದನ್ನು ಎಲ್ಲರೂ ರುಚಿ ನೋಡಬಹುದು. ಹೀಗೆ ವೈಯುಕ್ತಿಕವಾದ ಒಂದು ಭಾವ ಕಾವ್ಯಕ್ರಿಯೆಯಲ್ಲಿ ರಸವಾಗಿ ಪರಿಣಮಿಸುತ್ತದೆ.

ಈ ವಚನವನ್ನು ನಾನು ಹಲವಾರು ಬಾರಿ ಓದಿದ್ದೇನೆ. ಪ್ರತಿಯೊಂದು ಬಾರಿಯೂ ಓದಿ ಸಂತೋಷಪಟ್ಟಿದ್ದೇನೆ. ಒಮ್ಮೆ ಓದಿದಾಗ ''ಪಶು ನಾನು ಪಶುಪತಿ ನೀನು'' ಎನ್ನುವ ಮಾತು ಮನಸ್ಸಿಗೆ ಹಿಡಿಸಿತು. ಇನ್ನೊಮ್ಮೆ ''ಬಡಪಶು ಪಂಕದಲ್ಲಿ ಬಿದ್ದಡೆ'' ಎನ್ನುವುದನ್ನು ಓದಿದಾಗ ಜಡವಾಗಿದ್ದ ಮನಸ್ಸು ''ಕಾಲ ಬಡಿವುದಲ್ಲದೆ ಬೇರೆ ಗತಿಯುಂಟೆ?'' ಎನ್ನುವುದನ್ನು ಓದಿದಾಗ ಲವಲವಿಕೆಯಿಂದ ಕೂಡಿಕೊಂಡಿತು. 'ಶಿವ ಶಿವ' ಎನ್ನುವುದು ಶಿವನಾಮಸ್ಮರಣೆ ಅಂತ ಒಮ್ಮೆ ಅನಿಸಿದ್ದು, ಈ ಸಾರಿ ಓದುವಾಗ ಅಸಹಾಯ ಉದ್ಗಾರವಾಗಿ ಕಾಣಿಸಿತು. ''ಹೋದಹೆ ಹೋದಹೆನಯ್ಯ'' ಎನ್ನುವುದಕ್ಕೆ ಎಷ್ಟೋ ಸಾರಿ ಗಮನವೇ ಹೋಗಿರಲಿಲ್ಲ. ಇನ್ನೊಮ್ಮೆ ಆರ್ತನಾದವಾಗಿ ಕೇಳಿಸಿತು. ಈ ಬಾರಿ ಓದುವಾಗ 'ಅಯ್ಯಾ' ಎನ್ನುವಲ್ಲಿನ ಒತ್ತಕ್ಷರ ಎಷ್ಟು ಸಮರ್ಪಕವಾಗಿದೆ ಅನಿಸಿತು. ಬಸವಣ್ಣ ಕೆಲವೊಮ್ಮೆ ಕೂಡಲ ಸಂಗಮನನ್ನು ಏಕವಚನದಲ್ಲಿ ಸಂಬೋಧಿಸುವುದು ಉಂಟು. ಇಲ್ಲಿ ನಿಮ್ಮ ಎನ್ನುವ ಬಹುವಚನ ಅನಿವಾರ್ಯ ಅನ್ನಿಸಿತು. 'ತುಡುಗುಣಿ' ಎನ್ನುವ ಪದದ ಸ್ವಾರಸ್ಯವನ್ನು ಮತ್ತೆ ಮತ್ತೆ ಮೆಲುಕು ಹಾಕಿದ್ದೇನೆ. 'ಎನ್ನ ಹಿಡಿದು' ಎನ್ನುವಲ್ಲಿನ ಸೆರೆ ಸಿಕ್ಕ ಭಾವನೆ, 'ಬಡಿಯದ ಮುನ್ನ' ಎನ್ನುವಲ್ಲಿ ಆ ಸ್ಥಿತಿ ಬಂದಿಲ್ಲ. ಈಗಲೋ ಆಗಲೋ ಬರುವುದು, ನಿಶ್ಚಿತ ಎನ್ನುವ ಭಾವನೆಯನ್ನು ಹುಟ್ಟಿಸುತ್ತದೆ. ಎದುರಿಗೆ ಬಾಂಬಿದೆ, ಈಗಲೋ ಆಗಲೋ ಸಿಡಿಯಬಹುದು, ಎಂದು ಕೈಕಾಲು ಕಟ್ಟಿ ಹಾಕಿರುವ ವ್ಯಕ್ತಿಯೊಬ್ಬ ಕಾಯುವ ಆತಂಕವನ್ನು ಮನಸ್ಸಿಗೆ ತರುತ್ತದೆ. 'ಒಡೆಯ' ಎನ್ನುವುದು ಆತ್ಮೀಯತೆಯನ್ನು, ಪ್ರೀತಿಪೂರ್ವಕ ಗೌರವವನ್ನು ಸೂಚಿಸುತ್ತದೆ. ಹೀಗೆಯೇ ಈ ವಚನದಲ್ಲಿನ ಒತ್ತಕ್ಷರ, ದೀರ್ಘಾಕ್ಷರ, ಅನುಸ್ವಾರ, ಹ್ರಸ್ವಗಳ ಹಂಚಿಕೆಯ ಕಡೆ ಒಮ್ಮೊಮ್ಮೆ ಗಮನ ಹೋಗುತ್ತದೆ. ಈ ವಚನವನ್ನೋದಿದಾಗ ಬಸವಣ್ಣನ ಪಶುವಿನ ಪ್ರತಿಮೆ ಬಂದ ಇನ್ನಿತರ ವಚನಗಳೂ ನೆನಪಾಗುತ್ತವೆ :

> ಕೆಸರಿನಲ್ಲಿ ಬಿದ್ದ ಬಡಪಶುವಿನಂತೆ
> ಅನು ದೆಸೆದೆಸೆಗೆ ಬಾಯಿ ಬಿಡುತ್ತಿದ್ದನಯ್ಯಾ
> ಅರಯ್ವರಿಲ್ಲ - ಅಕಟಕಟ ಪಶುವೆಂದೆನ್ನ
> ಕೂಡಲಸಂಗಮದೇವ ಕೊಂಬ ಹಿಡಿದೆತ್ತುವನ್ನಕ್ಕ

ಎನ್ನುವಲ್ಲಿ 'ಪಂಕ' ಎನ್ನುವ ಬದಲು 'ಕೆಸರು' ಎನ್ನುವ ಪದವೇ ಅನಿವಾರ್ಯವೆನ್ನಿಸುತ್ತದೆ. 'ಕೆಸರಲ್ಲಿ ಬಿದ್ದ ಪಶುವಿನಂತೆ' ಎನ್ನುವ ಉಪಮಾನ 'ಪಶುವೆಂದನ್ನ ಕೊಂಬ ಹಿಡಿದೆತ್ತುವನ್ನಕ್ಕ' ಎನ್ನುವಲ್ಲಿ ರೂಪಕಕ್ಕೆ, ಸಂಕೇತಕ್ಕೆ ತಿರುಗುವ ಪರಿಯನ್ನು ನೋಡಿ ಮೈ ಜುಮ್ಮೆನ್ನುತ್ತದೆ. ಪಶುವಾದರೆ ಕೊಂಬಿರಬೇಡವೆ? ಬಸವಣ್ಣನಿಗೆ ಕೊಂಬೂ ಸಹ ಕಾಣಿಸಿಕೊಳ್ಳುವ ರೂಪಾಂತರ ವಿಸ್ಮಯಕರವಾಗಿದೆ. ಮೈಯೆಲ್ಲ ಕೆಸರಲ್ಲಿ ಹೂತು, ತಲೆಯನ್ನು ಮಾತ್ರ ಮೇಲೆತ್ತಿಕೊಂಡು ಅರಚುತ್ತಿರುವ ಪಶುವಿನ ಚಿತ್ರ, ನಾನು ಅಸಹಾಯ ಸ್ಥಿತಿಯಲ್ಲಿದ್ದು ಓದಿದಾಗ, ಇದು ನನ್ನ ಭಾವಕ್ಕೆ 'ವಸ್ತು ಪ್ರತಿರೂಪ' ಅನ್ನಿಸಿದೆ. ಹಾಗೆಯೇ ಇನ್ನೊಂದು ವಚನ ನೆನಪಾಗುತ್ತದೆ :

> ವಿಷಯವೆಂಬ ಹಸುರನೆನ್ನ ಮುಂದೆ ತಂದು ಪಸರಿಸದಿರಯ್ಯಾ
> ಪಶುವೇನ ಬಲ್ಲುದು ಹಸುರೆಂದೆಳಸುವುದಲ್ಲದೆ?
> ವಿಷಯ ರಹಿತನ ಮಾಡಿ ಭಕ್ತಿರಸವ ದಣಿಯ ಮೇಯಿಸಿ
> ಸುಬುದ್ಧಿಯೆಂಬ ಉದಕವನೆರೆದು ನೋಡಿ ಸಲಹಯ್ಯ
> ಕೂಡಲಸಂಗಮದೇವಾ.

ಈ ವಚನ ವಿವರಣಾತ್ಮಕವಾಗುತ್ತ ಹೋಗುವುದರಿಂದ ನನಗೆ ಹಿಡಿಸಿಲ್ಲ. ಆದರೆ ಈ ಮೂರು ವಚನಗಳಲ್ಲಿ 'ಪಶು' ಪದ ಬಸವಣ್ಣನಲ್ಲಿ ಹುಟ್ಟಿಸುತ್ತಿದ್ದ ಅರ್ಥದ ವಲಯಗಳು, ಭಾವಸಾಹಚರ್ಯಗಳು, ಅಸಹಾಯಭಾವನೆ, ಮರುಕ, ತಾದಾತ್ಮ್ಯ, ಆತ್ಮೀಯ ಭಾವನೆಗಳು ಆತನ ಮನಸ್ಸಿನಲ್ಲಿ ಎಷ್ಟು ಆಳವಾಗಿ ಬೇರೂರಿದ್ದವು ಎನ್ನುವುದನ್ನು ಸೂಚಿಸುತ್ತದೆ. ಆ ಒಂದು ಪದಕ್ಕೆ ಆತನ ಭಾವನೆಗಳು ಯಾವಾಗಲೂ ಸುತ್ತಿಕೊಂಡಿದ್ದವು ಎನ್ನಿಸುತ್ತದೆ. ಬಸವಣ್ಣ ಚಿಕ್ಕವನಿದ್ದಾಗ, ಮನೆಯಲ್ಲಿ ಹಸು ಕರುಗಳಿದ್ದಿರಬೇಕು. ಆತ ಅವುಗಳನ್ನು ಪ್ರೀತಿಸಿರಬೇಕು. ಅದರಿಂದ 'ಪಶು' ಪದದ ಸುತ್ತ ಅವನದೇ ಆದ ಭಾವಕೋಶವೊಂದು, ಅರ್ಥದ ಕೋಶವೊಂದು ಬೆಳೆದಿರಬೇಕು ಅನ್ನಿಸುತ್ತದೆ. ಅವನ ಮನಸ್ಸು ವ್ಯಗ್ರವಾದಾಗ ಕೆಲವೊಮ್ಮೆ ಅವನ ಪ್ರತಿಭೆಗೆ ಬಿಡುಗಡೆ ಸಿಕ್ಕು ಅವನದೇ ಆದ ಭಾವಕೋಶ ಮತ್ತು ಅರ್ಥಕೋಶಗಳಲ್ಲಿದ್ದ ಪದಗಳು ಧಿಗ್ಗನೆ ಹೊತ್ತಿಕೊಂಡು ಕಾವ್ಯದ ಬೆಳಕಾದವೋ ಏನೋ. ಆ ಅನುಪಮ ಬೆಳಕಿನ ಅನುಭವವನ್ನೇ 'ರಸ'ವೆನ್ನುತ್ತೇವೆ.

ಸಂತೋಷ ಜೀವನದ ಗುಟ್ಟೇನು ?

ಪ್ರೊ॥ ಬಿ.ಎಂ. ಹೆಗಡೆ

ಆಧುನಿಕ ವೈದ್ಯಕೀಯ ಜಗತ್ತಿನಲ್ಲಿ ಕಳೆದ ಮೂರು ಶತಮಾನಗಳಿಂದ ಬರೇ ಜೀವಶಾಸ್ತ್ರವನ್ನು ಹೊಂದಿಕೊಂಡು ವೈದ್ಯಕೀಯ ಶಾಸ್ತ್ರಗಳನ್ನು ರಚಿಸಲಾಗಿದೆ. ಆದರೆ ನಮ್ಮ ಹಳೆಯ ವೈದ್ಯ ವಿಜ್ಞಾನಗಳಾದ ಆಯುರ್ವೇದ ಅಥವಾ ಇನ್ಯಾವುದೇ ವೈದ್ಯ ವಿಧಾನದಲ್ಲಿ ಅದು ಹೋಮಿಯೋಪತಿ ಇರಲಿ ಅಥವಾ ಚೀನಾದವರ ವೈದ್ಯಕೀಯ ಪದ್ಧತಿ ಇರಲಿ, ಟಿಬೇಟಿನ ಪದ್ಧತಿ ಇರಲಿ, ಇವರೆಲ್ಲರಲ್ಲಿಯೂ ಜೀವಶಾಸ್ತ್ರವನ್ನು ಮಾತ್ರ ಹೊಂದಿಕೊಂಡು ವೈದ್ಯಕೀಯವನ್ನು ಹೆಣೆಯಲಾಗಲಿಲ್ಲ.

ಜೀವಶಾಸ್ತ್ರಕ್ಕಿಂತ (Biology) ಮುಖ್ಯವಾದ ವಿಷಯ ಅಂದರೆ ಮನೋಶಾಸ್ತ್ರ. ಮನುಷ್ಯ ಪ್ರಾಣಿಗೆ ತನ್ನ ಎಲ್ಲಾ ಚಟುವಟಿಕೆಗಳ ಬೆಳವಣಿಗೆಗೆ ಮುಖ್ಯ ಆಧಾರ ಹಾಗೂ ಯಜಮಾನ, ಮನುಷ್ಯನ ಮನಸ್ಸು. ಆದರೆ ೧೫೪೨ರ ನಂತರ ಫ್ರಾನ್ಸ್‌ನಲ್ಲಿ ಒಬ್ಬ ಚಿಕ್ಕ ವಯಸ್ಸಿನ ಹುಡುಗ ರೈನೀ ಡಕಾರ್ಟಿಸ್ ಎಂಬುವವನ ಉಲ್ಲೇಖವನ್ನು ಆಧರಿಸಿ, ಆಧುನಿಕ ವಿಜ್ಞಾನ, ವೈದ್ಯವಿಜ್ಞಾನ ಮಾತ್ರವಲ್ಲಾ ಎಲ್ಲಾ ವಿಜ್ಞಾನದ ಬೇರೆ ಬೇರೆ ಅಂಗಗಳಾದ ಭೌತಶಾಸ್ತ್ರ, ರಾಸಾಯನಿಕ ಶಾಸ್ತ್ರ, ಜೀವಶಾಸ್ತ್ರ ಹಾಗೂ ಪ್ರಾಣಿಶಾಸ್ತ್ರ ಇತ್ಯಾದಿ, ಬರೇ ಈ ದೇಹವನ್ನು ಅವಲಂಬಿಸಿ ತಮ್ಮ ವಿಚಾರಧಾರೆಗಳನ್ನು ಬೆಳೆಸಿ ಬಂದಿವೆ. ರೈನೀ ಡಕಾರ್ಟಿಸ್, ಮನುಷ್ಯನನ್ನು ಎರಡು ಹೋಳಾಗಿ ತುಂಡರಿಸಿದನು. ರೆಸ್ ಕೋಜಿಟಾನ್ಸ್, ಆಲೋಚನೆ ಮಾಡುವ ಭಾಗ ಮತ್ತು ರೆಸ್ ಎಕ್ಸಟಾನ್ಸ್, ಬಾಕಿ ಉಳಿದ ಭಾಗಗಳು ಎಂದು ಎರಡು ಹೋಳಾಗಿಸಿ ಮನಸ್ಸಿಗೂ ದೇಹಕ್ಕೂ ಇರತಕ್ಕಂತಹ ಆ ಅಮೂಲ್ಯ ಹಾಗೂ ಅಸಾಧಾರಣ ಹಾಗೂ ತುಂಡರಿಸಲಾರದಂತಹ ಸಂಬಂಧವನ್ನು ಒಮ್ಮೆಗೆ ಕತ್ತರಿಸಿ ಹಾಕಿಬಿಟ್ಟ. ಆತನ ವಯಸ್ಸು ಆಗ ಬರೇ ಹದಿನೇಳು ವರ್ಷ. ಸ್ವಲ್ಪ ವಯಸ್ಸಿನ ಅಂತರ ಆತನಿಗೆ ಸ್ವಲ್ಪ ಜ್ಞಾನ ಬಂದಿರಬೇಕು. ತನ್ನ ಮೂವತ್ತೈದನೇ

ವಯಸ್ಸಿನಲ್ಲಿ, ಆತ ಸ್ಪೈನಿನ ಮಹಾರಾಣಿಗೆ ಬರೆದ ಪತ್ರವೊಂದರಲ್ಲಿ ಆಕೆಯ ದೇಹದ ಕಾಯಿಲೆಗೆ ಆಕೆಯ ಮನಸ್ಸು ಕಾರಣ ಎಂಬುದನ್ನು ತಿಳಿಯಪಡಿಸಿದ್ದ. ಆದರೆ ನಮ್ಮ ವೈದ್ಯ ಜಗತ್ತು ಯಾ ವಿಜ್ಞಾನ ಜಗತ್ತು ಆತನ ಪರಿವರ್ತನೆಯನ್ನು ಗಮನಿಸಲೇ ಇಲ್ಲ.

ಅದಂತಿರಲಿ, ಈಗ ನಾವು ನಮ್ಮ ವೈದ್ಯ ಶಾಸ್ತ್ರ ಮನುಷ್ಯನ ಬದುಕು, ಮನುಷ್ಯನ ಆರೋಗ್ಯ, ಎಲ್ಲಕ್ಕಿಂತ ಮೇಲಾಗಿ ಮನಸ್ಸಿನ ಸಂತೋಷ ಜೀವನದ ಗುಟ್ಟುಗಳೇನೆಂದು ತಿಳಿಯುವ ಪ್ರಯತ್ನ ಮಾಡುವ, ವೈದ್ಯ ವಿಜ್ಞಾನವು ಕಳೆದು ಐವತ್ತು ವರ್ಷಗಳಿಂದ ತಂತ್ರಜ್ಞಾನವನ್ನು ಅಳವಡಿಸಿ ಮುಂದುವರಿದಿರುವುದು ಇನ್ನೊಂದು ಮನುಷ್ಯನಿಗೆ ಶಾಪ. ತಂತ್ರಜ್ಞಾನ ಬರೇ ಕಾಯಿಲೆಗಳ ಯಾ ಈ ನಿಸರ್ಗದ ಗುಟ್ಟುಗಳನ್ನು ತಿಳಿದುಕೊಳ್ಳುವುದಕ್ಕಾಗಿ ಮಾತ್ರ ಮೀಸಲಾಗಿರಬೇಕೆಂದು ಬಹಳ ಮೇಧಾವಿ ವೈದ್ಯನೊಬ್ಬ ೧೯೭೪ರ ಶತಕದಲ್ಲಿ ಬರೆದಿಟ್ಟಿದ್ದ. ಆತನೇ ಸರ್ ಥೋಮಸ್ ಲೂಯಿಸ್. ಆತನು ಬರೆದ ವಿಚಾರ ಅವನ ಅನುಯಾಯಿಗಳು ಅರಿತು ಕೊಂಡಿರಲಿಲ್ಲ. ಯಾಕೆಂದರೆ ತಂತ್ರಜ್ಞಾನ ಹುಟ್ಟಿಕೊಂಡ ನಂತರ ದೊಡ್ಡ ರೂಪದ ಹಣ ವೈದ್ಯ ಜಗತ್ತಿಗೆ ಬರತೊಡಗಿತು. ಅದನ್ನು ಅವಲಂಬಿಸಿ ವೈದ್ಯವಿಜ್ಞಾನದ ಪ್ರತಿಯೊಂದು ಹೆಜ್ಜೆ ಕೂಡ ಹಣವನ್ನೇ ಅನುಸರಿಸಿ ಹೋಗುವುದನ್ನು ನಾವು ಈಗ ನೋಡುತ್ತೇವೆ. ಹಣಕ್ಕಾಗಿ ಸ್ವಲ್ಪದರಲ್ಲಿಯೇ ತಿಳಿದುಕೊಳ್ಳುವಂತಹ ಚಿಕ್ಕ ಪುಟ್ಟ ಸಮೀಕ್ಷೆಗಳನ್ನು ನಡೆಸಿ, ಜನ ಕಾಯಿಲೆಯ ಕಾರಣಗಳನ್ನು ಹೇಳುವ ಹಾಗೂ ಕಾಯಿಲೆಯಿಂದ ನರಳುವವರ ಭವಿಷ್ಯ ಹೇಳುವ ಹೊಸದೊಂದು ವಿಜ್ಞಾನವನ್ನೇ ಹುಟ್ಟಿಸಿಕೊಂಡಿದ್ದಾರೆ. ಈ ದಿಸೆಯಲ್ಲಿ ಮನುಷ್ಯನ ಕಾಯಿಲೆಗಳಿಗೆ ನಾನಾ ಕಾರಣಗಳನ್ನು ಅವರು ಈಗಾಗಲೇ ಹೇಳಿಕೊಂಡಿದ್ದಾರೆ. ಕ್ರಿಮಿಗಳಿಂದ ಬರುವಂತಹ ಕಾಯಿಲೆಗಳ ಭಯಾನಕ ದೃಶ್ಯಗಳನ್ನು ಸೃಷ್ಟಿಸಿ ಕ್ರಿಮಿಗಳನ್ನು ಮನುಷ್ಯನ ವೈರಿಗಳೆಂದು ನಾವು ನೋಡುವಂತಹ ಪ್ರಸಂಗ ಈಗ ಬಂದಿದೆ. ಸತ್ಯ ವಿಚಾರವೇನೆಂದರೆ, ನಮ್ಮ ಜಗತ್ತು, ನಮ್ಮ ದೇಹ, ನಮ್ಮ ಪರಿಸರ ಕ್ರಿಮಿಗಳಿಂದಲೇ ಕೂಡಿದೆ. ಈ ಕ್ರಿಮಿಗಳು ಇಲ್ಲದಿದ್ದರೆ ಮನುಷ್ಯನ ಬದುಕು ಅಸಾಧ್ಯ. ಅದೇಕೆ, ಮನುಷ್ಯನ ದೇಹದ ಒಳಗೆ ಅಡಗಿರುವಂತಹ ಶಕ್ತಿಯನ್ನು ಕೊಡುವ ಪ್ರತಿ ಕಣದಲ್ಲಿಯೂ ಇರುವ ನಮ್ಮ ಬ್ಯಾಟರಿ ಸೆಲ್ ಕೂಡ ನಮ್ಮದಲ್ಲ. ಒಂದು ಬೇರೆ ಜಾತಿಯ ಕ್ರಿಮಿಯದೆಂದು ಹೇಳಿದರೆ ಬೆಚ್ಚಿ ಬೀಳಬೇಡಿ!

ಆದರೆ ಈಗಿನ ತಂತ್ರಜ್ಞಾನಾಧಾರಿತ ವೈದ್ಯಕೀಯದಲ್ಲಿ ಈ ಕ್ರಿಮಿಗಳನ್ನು ಮನುಷ್ಯ ಜೀವನದ ವೈರಿಗಳಾಗಿ ದೈತ್ಯಾಕಾರ ತಾಳಿ ಬೆಳೆಯುವುದಕ್ಕೆ ಮುಖ್ಯ ಕಾರಣಗಳೆಂದರೆ ಕ್ರಿಮಿನಾಶಕಗಳು, ಕ್ರಿಮಿನಾಶಕ ಸಾಬೂನುಗಳಂತಹ ವಸ್ತುಗಳು ಹಾಗೂ ಕ್ರಿಮಿಗಳನ್ನು ಕೊಲ್ಲುವಂತಹ ಔಷಧಿಗಳು "Antibiotics" ಈಗ ದೊಡ್ಡ ವ್ಯಾಪಾರವನ್ನು ಕುದುರಿಸಿರುವುದು ಇದಕ್ಕೆ ಮುಖ್ಯ ಕಾರಣ. ದಿನಾ ಬೆಳಗಾದರೆ ಹೊಸ ಹೊಸ ಕ್ರಿಮಿಯನ್ನು ಸೃಷ್ಟಿಸಿ (ಆದರೆ ಈಗ ಇವರಿಗೆ ಅದು ಸ್ವಲ್ಪ ಕಷ್ಟ ಆಗಿದೆಯೆಂದರೆ ಇದು ಒಂದು ಕ್ರಿಮಿ ಅಲ್ಲ, ಬಹಳ ತರಹದ ಕ್ರಿಮಿಗಳಿವೆ ಎಂದು ತಿಳಿದುಬಂದಿದೆ). ಏಡ್ಸ್ ಎಂಬ ಒಂದು ಹೊಸ ಭಯವನ್ನು ಮನುಷ್ಯನಲ್ಲಿ ಹುಟ್ಟಿಸಿ, ಈ ಒಂದು ಏಡ್ಸ್ ಎಂಬ ರಣರಂಗದಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ವೈಜ್ಞಾನಿಕ ಸಮೀಕ್ಷೆಗಳಿಗಾಗಿ ಗಿಟ್ಟಿಸಿಕೊಂಡು ಶ್ರೀಮಂತರಾದ ಜನರು ಬಹಳಷ್ಟು . ಆದರೆ ವಿವೇಚಿಸಿ ನೋಡಿದರೆ ಏಡ್ಸ್ ನಂತಹ ಕಾಯಿಲೆ ಮುಂಚಿನ ಕಾಲದಿಂದಲೂ ಇದ್ದದ್ದೆ. ನಾವು ತಿಳಿದುಕೊಂಡಂತೆ, ೧೯೮೧ರಲ್ಲಿ ಸ್ಯಾನ್‌ಫ್ರಾನ್ಸಿಸ್‌ಕೋ ನಗರದಲ್ಲಿ ಈ ಕಾಯಿಲೆ ಹೊಸದಾಗಿ ಹುಟ್ಟಿಕೊಂಡದ್ದಲ್ಲ. ಇತ್ತೀಚೆಗೆ ಬಹಳ ಹಿಂದಿನ ರೋಗಿಗಳಿಂದ ತೆಗೆದ ಶೇಖರಿಸಿಟ್ಟ ರಕ್ತವನ್ನು ಪರಿಶೀಲಿಸಿ ನೋಡಿದಾಗ ಏಡ್ಸ್ ಕಾಯಿಲೆ ಬಹಳ ಹಿಂದಿನ ಕಾಲದಿಂದಲೂ ಇತ್ತು ಎಂಬುದು ನಮಗೆ ತಿಳಿಯುತ್ತದೆ. ಇದಕ್ಕೆ ಕ್ರಿಮಿ ಕಾರಣವೋ ಯಾ ನಾನಾ ರೀತಿಯಲ್ಲಿ ನಾವು ನಮ್ಮ ದೇಹದ ರೋಗ ನಿರೋಧಕ ಶಕ್ತಿಯನ್ನು ಕಡಿಮೆ ಮಾಡಿಕೊಂಡಿದ್ದರಿಂದ ಬಂದಂತಹ ಹೊಸ ಕಾಯಿಲೆಯೋ ದೇವರಿಗೇ ಗೊತ್ತು. ಅದು ಈ ದಿನದ ನಮ್ಮ ವಿಚಾರಧಾರೆಗೆ ಸರಿಹೊಂದಿಕೊಳ್ಳುವುದಿಲ್ಲ. ಇನ್ನು ಕ್ರಿಮಿಗಳ ಜಗತ್ತನ್ನು ಬಿಟ್ಟುಕೊಂಡರೆ, ಇನ್ನು cholestrol, ಇನ್ನೇನೊ ಮಹಾಕಾರಣಗಳನ್ನು ಹುಡುಕಿ, ಕಾಯಿಲೆಗಳನ್ನು ಈ ಕಾರಣಗಳಿಗೆ ಹೊಂದಿಕೆಹಾಕಿ ತಂತ್ರಜ್ಞಾನವನ್ನು ಉಪಯೋಗಿಸಿ ಕೋಟ್ಯಾಂತರ ರೂಪಾಯಿ ವ್ಯಾಪಾರ ಮಾಡುವಂತಹ ಪರಿಸ್ಥಿತಿ ಈಗ

ಬಂದುಬಿಟ್ಟಿದೆ. ಅದು ಮಾತ್ರವಲ್ಲ, ಇತ್ತೀಚಿನ ಒಂದು ಇಪ್ಪತ್ತು ವರ್ಷದಲ್ಲಿ ಪ್ರತಿ ಕಾಯಿಲೆಗೂ ಒಂದು ರೀತಿಯ ಶಸ್ತ್ರಚಿಕಿತ್ಸೆಯಿಂದ ಬರೆ ಕಾಯಿಲೆಯನ್ನು ಗುಣಪಡಿಸುವುದು ಮಾತ್ರವಲ್ಲ, ಪ್ರತಿ ಕಾಯಿಲೆಗೂ ಆಗತಕ್ಕಂತಹ ಅನಾಹುತಗಳನ್ನು ಕೂಡ ಕಡಿಮೆ ಮಾಡಿಕೊಳ್ಳಬಹುದೆಂಬ ಹೊಸ ವಿಚಾರ ಹುಟ್ಟುಹಾಕಿ ಈ ದಿಸೆಯಲ್ಲಿಯೂ ಹಣ ಮಾಡುವ ವ್ಯಾಪಾರ ಕುದುರಿದೆ.

ಆದರೆ ಇತ್ತೀಚಿನ ದಿನಗಳಲ್ಲಿ ಇದ್ಯಾವುದೂ ಸರಿಯಲ್ಲವೆಂಬ ವಿಚಾರವು ವೈದ್ಯ ಜನಾಂಗಕ್ಕೆ ತಿಳಿದಿದೆ. ಪಾಶ್ಚಾತ್ಯರು ಕೂಡ ಈಗ ಮನಸ್ಸಿನ ಜಿಗುಪ್ಸೆ, ಅಹಂಕಾರ, ಕೋಪ, ಗರ್ವ ಇತ್ಯಾದಿಗಳು ಕಾಯಿಲೆಗಳ ಮೂಲ ಎಂಬುದಕ್ಕೆ ಹೊಸ ಪುರಾವೆಗಳನ್ನು ಎತ್ತಿ ಹಿಡಿಯುತ್ತಾರೆ. ದಿನ ಬೆಳಗಾದರೆ ಬರುವ ಹೊಸ ಸ್ಕ್ಯಾನರುಗಳ ಸಾಲಿನಲ್ಲಿ ಮನಸ್ಸನ್ನು ಸ್ಕ್ಯಾನ್ ಮಾಡುವ ಒಂದು ಸ್ಕ್ಯಾನರನ್ನು ಯಾರಾದರು ಹುಟ್ಟು ಹಾಕಿದರೆ ಆತ ನಿಮಿಷದಲ್ಲಿ ಕೋಟ್ಯಾಧಿಪತಿ ಆಗುವುದಕ್ಕೆ ಸಂಶಯ ಬೇಡ. ಈ ಮನಸ್ಸಿನ ಸ್ಕೋಪ್, ಮೈಂಡೋಸ್ಕೋಪ್ ಈಗ ನಮಗೆ ಬಹಳ ಅಗತ್ಯ ಎಂದು ಕಂಡುಬಂದಿದೆ.

ಮನುಷ್ಯ ಈಗ ತುಂಬಾ ಕಷ್ಟ ಪರಿಸ್ಥಿತಿಯಲ್ಲಿ ಇದ್ದಾನೆ. ಹಣವನ್ನು ಹುಟ್ಟುಹಾಕಿದ ನಂತರ ಮನುಷ್ಯನ ಕಷ್ಟಗಳು ದಿನದಿಂದ ದಿನಕ್ಕೆ ಬೆಳೆಯುತ್ತಾ ಬಂದದ್ದು ಸತ್ಯ. ಈಗ ಹಣವೇ ಎಲ್ಲಾ ಕಷ್ಟದ ಮೂಲ ಎನ್ನುವ ವಾದ ಬೇರೆ ಹುಟ್ಟಿಕೊಂಡಿದೆ. ಹಣ ಮಾಡಬೇಕೆಂಬ ಒಂದು ಏಕಮಾತ್ರ ಧ್ಯೇಯದಿಂದ ನಮ್ಮ ರಾಜಕಾರಿಣಿಗಳು, ಬುದ್ಧಿಜೀವಿಗಳು ಹಾಗೂ ಕರ್ಮಜೀವಿಗಳೆಲ್ಲಾ ಒಬ್ಬರೊಡನೊಬ್ಬರು ಪೈಪೋಟಿಗೆ ಹೊರಟು ಹಣದಿಂದಾಗಿ ಜೀವನ ನಡೆಯುವಂತಹ ಪರಿಸ್ಥಿತಿ ಬಂದು ಹಣವಿಲ್ಲದವರಿಗೆ ಜೀವನ ಕಷ್ಟಪ್ರಾಯವಾಗಿದೆ. ಸಂತೋಷವೆಂಬುದು ಈ ಎರಡೂ ವರ್ಗದವರಿಗೆ ಸುಖ ಸಂತೋಷವೆಂಬುದು ಈಗ ಬರೇ ಕನಸಾಗಿ ಬಿಟ್ಟಿದೆ. ಹಾಗಿದ್ದರೆ ಮನುಷ್ಯನಿಗೆ ಸುಖ ಜೀವನ ನಡೆಸಲು ಇನ್ನು ಮುಂದೆ ಸಾಧ್ಯವಿಲ್ಲವೇ?

ಇಂತಹ ಆಧುನಿಕ ತಂತ್ರಜ್ಞಾನ ಯುಗದಲ್ಲಿ ಹೃದಯವನ್ನೇ ಕಸಿ ಮಾಡುವಂತಹ ವೈದ್ಯಪುಢಾರಿಗಳಿರುವಾಗ, ಮನುಷ್ಯ ಯಾತಕ್ಕಾಗಿ ಹೆದರಬೇಕು? ಈಗ ಕೆಲವರು, ಮನುಷ್ಯರು ಸಾಯಲಿಕ್ಕೇ ಇಲ್ಲ, ಯಾಕೆಂದರೆ ಪ್ರತಿ ಅಂಗವನ್ನೇ ಕಸಿ ಮಾಡುವಂತಹ ಪರಿಸ್ಥಿತಿ ಬರಬಹುದೆಂಬ ಭವಿಷ್ಯವಾಣಿಯನ್ನು ಬೇರೆ ಹೇಳುತ್ತಾರೆ. ಈ ಭವಿಷ್ಯವಾಣಿ ಹೇಳುವವರಿಗೂ, ಪದ್ಯ ಬರೆಯುವ ಕವಿಗಳಿಗೂ ಇಂಗ್ಲೀಷಿನಲ್ಲಿ ಒಂದು ಗಾದೆಯಿದೆ. ಅವರ ಕೆಲಸ ಪಾರ್ಟ್ ಟೈಮ್ ಕೆಲಸ ಅಂತ. ಅಂದರೆ ಉಳಿದ ಸಮಯದಲ್ಲಿ ಅವರ ಹೇಳಿದ ತಪ್ಪುಗಳನ್ನು ಸರಿ ಮಾಡುವ ಕೆಲಸ ಬೇರೆ ಇರುತ್ತದೆ. ಅದು ಹಾಗಿರಲಿ. ನಾವು ಮನುಷ್ಯನ ಭವಿಷ್ಯ ಜೀವನದಲ್ಲಿ ಸುಖ ಸಂತೋಷ ಬರಬಹುದೇ ಎಂಬುದನ್ನು ಪರೀಕ್ಷಿಸುವ. ಸುಖ ಸಂತೋಷ ಜೀವನ ನಡೆಸಿದವ ಚಿರಂಜೀವಿಯಾಗುವನೆಂದಾಗಲಿ ಅಥವಾ ಮೃತ್ಯುವನ್ನು ಗೆಲ್ಲುವನೆಂದಾಗಲಿ ಯಾರಾದರೂ ಎಣಿಸುವುದಾಗಲೀ ಯಾರಿಂದಲೂ ಸಾಧ್ಯವಿಲ್ಲ. ದೇವರಿಂದ ಮಾತ್ರ ಸಾಧ್ಯ. ಹಾಗಿದ್ದರೆ ಸಂತೋಷ ಜೀವನದ ಗುಟ್ಟೇನು? ಇದನ್ನು ನಮ್ಮ ಋಷಿ ಮುನಿಗಳು ಸಹಸ್ರಾರು ವರ್ಷಗಳ ಹಿಂದೆಯೇ ಹೇಳಿ ಮುಗಿಸಿದ್ದಾರೆ. ಅದೇಕೆ, ಯಾವುದೇ ಹೊಸ ಧರ್ಮ ಬಂದಿರಲಿ ಈ ಲೋಕದಲ್ಲಿ, ಸಂತೋಷದ ಬೀಜವನ್ನು ಈ ಧರ್ಮಗಳು ಜಗಕ್ಕೇ ಸಾರಿದರೂ ಅದನ್ನು ತಿಳಿದುಕೊಳ್ಳದೇ ಕಷ್ಟ ಪಡುತ್ತಿದ್ದಾರೆ.

ಎಲ್ಲಾ ಸಂತೋಷ, ಎಲ್ಲಾ ಕಷ್ಟ , ಎಲ್ಲಾ ಕಾರ್ಪಣ್ಯಗಳಿಗೆ ಹೇತು ಮುಖ್ಯವಾದದ್ದು ಮನುಷ್ಯನ ಮನಸ್ಸು. ಈ ಮನಸ್ಸನ್ನು ಸಂತೋಷದಲ್ಲಿರಿಸಲಿಕ್ಕೆ ಅಥವಾ ಮನಸ್ಸನ್ನು ಸಂತೋಷದಲ್ಲಿಡುವ ಗುಟ್ಟನ್ನು ನಾವು ಕಂಡು ಹುಡುಕಿದರೆ ಮನುಷ್ಯ ಸಂತೋಷ ಜೀವನ ನಡೆಸಲಿಕ್ಕೆ ಏನೂ ಕಷ್ಟ ಇಲ್ಲ. ಸಂತೋಷ ಮನಸ್ಸಿಗೆ ಉಂಟಾಗುವುದು ಹೇಗೆ? ಕೂಡಲೇ ನಿಮ್ಮ ಮನಸ್ಸಿಗೆ ಬರುವ ವಿಷಯವೆಂದರೆ ತುಂಬಾ ಹಣ ಮಾಡಿದರೆ ಸಂತೋಷ; ಹೆಂಡತಿ ಮಕ್ಕಳೆಲ್ಲಾ ನಮಗೆ ಬೇಕಾದವರಾದರೆ ಸಂತೋಷ; ದೊಡ್ಡ ಕೆಲಸ ಸಿಕ್ಕಿದರೆ ಸಂತೋಷ; ಅಥವಾ ಸರ್ಕಾರದಿಂದ ಬಹುಮಾನ ಬಂದರೆ ಸಂತೋಷ; ಅಥವಾ ಸ್ಥಾನಮಾನ ಸಿಕ್ಕಿದರೆ

ಸಂತೋಷ; ಇನ್ಯಾರಾದರೂ ನಮ್ಮನ್ನು ಕರೆಸಿ ಶಾಲು ಹೊದಿಸಿ ಸಂಭ್ರಮ ಮಾಡಿದರೆ ಸಂತೋಷ, ಅಂತ ನೀವು ಎಣಿಸಿಕೊಂಡಿರಬಹುದು, ಇದ್ಯಾವುದರಲ್ಲಿಯೂ ಸಂತೋಷ ಬರುವ ಬದಲು ದುಃಖ ಹೆಚ್ಚಾಗುತ್ತದೆ. ಏನಾದರೂ ನಮಗೆ ಜೀವನದಲ್ಲಿ ಸಿಕ್ಕರೆ ಅದು ಇನ್ನೂ ಹೆಚ್ಚಾಗಿ ಸಿಕ್ಕಬೇಕೆಂಬಂತಹ ದುಃಖ ನಮ್ಮನ್ನು ಕಾಡುತ್ತಾ ಇರುತ್ತದೆ. ಆದರೆ ಜೀವನದಲ್ಲಿ ನಾವು ಇನ್ನೊಬ್ಬರಿಗೆ ಏನಾದರೂ ಒಂದು ಸುಖ ಕೊಡುವಂತಹ ಪ್ರಯತ್ನ ಮಾಡಿದರೆ, ನಮ್ಮಲ್ಲಿ ಅದು ಧನವಿರಲಿ, ಹಣವಿರಲಿ ಅಥವಾ ಬುದ್ಧಿವಂತಿಕೆ ಇರಲಿ, ಅದನ್ನು ಇನ್ನೊಬ್ಬರಿಗಾಗಿ ನಾವು ಉಪಯೋಗಿಸಿದ ದಿವಸ ನಮ್ಮ ಮನಸ್ಸಿಗೆ ತಾನಾಗಿ ಸಂತೋಷ ಹುಟ್ಟಿಕೊಳ್ಳುತ್ತದೆ. ಈ ಸಂತೋಷವನ್ನು ಹಂಚಿಕೊಂಡರೆ, ಆ ಸಂತೋಷ ಹೆಚ್ಚಾಗುತ್ತಾ ಹೋಗುತ್ತದೆ. ಹಾಗಿದ್ದರೆ ಬಹಳ ಸುಲಭದಲ್ಲಿ ಮಾಡಬಹುದಲ್ಲವೇ? ಬೆಳಗ್ಗೆ ಎದ್ದು, ನಾವ್ಯಾರಾದರೂ, ಬೇರೆಯರಿಗಾದರೂ ಸಹಾಯ ಮಾಡುತ್ತೇನಂತ ಎಣಿಸಿಕೊಂಡು ಮಾಡಲಿಕ್ಕೆ ಪ್ರಯತ್ನ ಮಾಡಿದರೆ ಕಷ್ಟ ಎಲ್ಲಿದೆ ಅಂತ ನೀವು ಎಣಿಸಬಹುದು. ಅದು ಹಾಗಿರುವುದಿಲ್ಲ. ಅಷ್ಟು ಸುಲಭ ಇಲ್ಲ. ನಾವು ಅದನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಪ್ರೀತಿ ವಾತ್ಸಲ್ಯ ಎಂಬುದನ್ನು ನಾವು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಆ ಪರಿಸ್ಥಿತಿ ಬಂದಾಗ ನಮ್ಮ ಮನಸ್ಸಿನಲ್ಲಿ ಸಂತೋಷ ಇರುತ್ತದೆ. ಹಾಗಿದ್ದರೆ ಮನಸ್ಸು ಎಲ್ಲಿದೆ ಅಂತ ನಾವು ತಿಳಿದುಕೊಳ್ಳಬೇಡವೇ? ಹೆಚ್ಚಿನವರ ಅಭಿಪ್ರಾಯ ಮನಸ್ಸು ಮೆದುಳಿನಲ್ಲಿದೆ ಅಂತ. ಮನಸ್ಸು ಯಾವ ಅಂಗದಲ್ಲಿಯೂ ಇರಲಿಕ್ಕೆ ಸಾಧ್ಯವೇ ಇಲ್ಲ. ಆದರೆ ಪ್ರತಿ ಅಂಗದಲ್ಲಿಯೂ ಇರಬೇಕು. ಮನಸ್ಸು ಒಂದು ಅಂಗವಾಗಿ ಇರಲಿಕ್ಕೆ ಸಾಧ್ಯವಿಲ್ಲ. ಮನಸ್ಸು ಒಂದು ಚರವಾದ ವಸ್ತು ಆಗಿರಲಿಕ್ಕೆ ಸಾಧ್ಯ. ಮನಸ್ಸೆಂಬುದು ಒಂದು ಅಂಗಕ್ಕೆ ಸೀಮಿತವಾಗಿರಲಿಕ್ಕೆ ಸಾಧ್ಯವೇ ಇಲ್ಲ. ಉದಾಹರಣೆಗೆ, ನಮ್ಮ ಮೆದುಳಿನಲ್ಲಿ ಒಂದು ಬಿಲಿಯ ಕಣಗಳಿವೆ. ಮನಸ್ಸು ಈ ಒಂದು ಬಿಲಿಯ ಕಣಗಳಿಗೆ ಮೀಸಲಾಗಿರಲಿಕ್ಕೆ ಸಾಧ್ಯವಾಗಿದ್ದರೆ ನಮಗೆ ಬರೇ ಒಂದು ಉಪ್ಪಿನ ಕಾಳನ್ನೂ ಕೂಡ ತಿಳಿದುಕೊಳ್ಳುವ ಶಕ್ತಿ ಇರುವುದಿಲ್ಲ. ಯಾಕೆಂದರೆ ಒಂದು ಕಾಳು ಉಪ್ಪಿನಲ್ಲಿ ಹತ್ತು ಬಿಲಿಯ ಕಣಗಳಿವೆ (atoms). ಹಾಗಿದ್ದರೆ ಮನಸ್ಸೆಂಬುದು ಒಂದು ಅಂಗ ಅಥವ ಜೀವಶಾಸ್ತ್ರವನ್ನು ಒಪ್ಪಿಕೊಂಡಂತಹ ಪರಿಸ್ಥಿತಿ ಅಲ್ಲ. ಒಂದು ಭಾವನೆ ಅಲ್ಲ. ಮನಸ್ಸೆಂಬುದು ನಮ್ಮ ದೇಹದ ಪ್ರತಿ ಕಣದಲ್ಲಿಯೂ, ಅದರ ಸೂಕ್ಷ್ಮಾಣು (atom)ಗಿಂತಲೂ ಕೆಳಗೆ, ಪ್ರತಿಯೊಬ್ಬನ ಪ್ರತಿ ಒಂದು ಅಂಗದಲ್ಲಿಯೂ ಮನಸ್ಸೆಂಬುದಿದೆ. ಈ ಮನಸ್ಸೆಂಬುದು ಒಂದು ಸ್ಥಿರವಾದ ವಸ್ತುವಲ್ಲ. ಇದು ಸ್ಥಿರವಾಗಿಯೂ ಅಸ್ಥಿರವಾಗಿಯೂ ನಶಿಸದಂತಹ ಒಂದು quantum concept ಅಂತ ಇಂಗ್ಲೀಷಿನಲ್ಲಿ ಹೇಳುತ್ತಾರೆ. ಈ ಒಂದು ವಿಚಾರಕ್ಕೆ, ಮನುಷ್ಯನ ಮನಸ್ಸು ಅಂತ ಹೇಳುವುದು. ಅರ್ಥ ಆಗಲಿಕ್ಕೆ ನಿಮಗೊಂದು ಸಣ್ಣ ವಿಚಾರ ಹೇಳುತ್ತೇನೆ :

ಫಕ್ಕನೆ ಯಾರಾದರೂ ನಿಮ್ಮೆದುರಿಗೆ ಬಂದು ಚೂರಿ ತೋರಿಸಿದರೆ, ನಿಮ್ಮ ಮೈಯ ಎಲ್ಲಾ ಭಾಗದಲ್ಲಿ ಬೆವರುತ್ತದೆ. ನಿಮ್ಮ ಎಲ್ಲಾ ರೋಮಗಳೂ ರೋಮಾಂಚಕ ಪರಿಸ್ಥಿತಿಗೆ ಬರುತ್ತದೆ. ನಿಮಗೆ ಕೆಲವು ಸಲ ಹೆದರಿ ಮೂತ್ರ ಕೂಡ ಬರಬಹುದು. ಹಾಗಿದ್ದರೆ ಮನಸ್ಸೆಂಬುದು ಒಂದು ಮೆದುಳಿನಲ್ಲಿಯ ಅಂಗದಲ್ಲಿ ಇದ್ದರೆ ಆ ಮನಸ್ಸಿಗೆ ಹೆದರಿಕೆಯಾದ ನಂತರ ಅದು ದೇಹದ ಬೇರೆ ಬೇರೆ ಅಂಗಗಳಿಗೆ ಅದರ ವಿಚಾರವನ್ನು ತಿಳಿಸಿ ಅಲ್ಲಿ ಹೆದರಿಕೆ ಬರುವಂತಹ ಪರಿಸ್ಥಿತಿಗೆ ಸ್ವಲ್ಪವಾದರೂ ಸಮಯಾವಕಾಶ ಬೇಡವೇ? ಆದರೆ ಏನೂ ಸಮಯಾವಕಾಶವಿಲ್ಲದೆ ಚೂರಿಯನ್ನು ನೋಡಿದ ಕೂಡಲೇ ಕಾಲಿನಲ್ಲಿ ಕೂಡ ಬೆವರು ಬರುವಂತಹ ಪರಿಸ್ಥಿತಿ ಇರಬೇಕಿದ್ದರೆ ಕಾಲಿನಲ್ಲಿ ಕೂಡ ಮನಸ್ಸಿರಬೇಕು ಅಂತ ಅರ್ಥವಾಯಿತು. ಈ ಮನಸ್ಸೆಂಬುದು ಪ್ರತೀ ಕಣದ ಅದರ (atom) ಅಣುವಿನಿಂದ ಕೆಳಗಿದೆ. ಇದನ್ನೇ ನಮ್ಮ ಪೂರ್ವಜರು ಭಗವದ್ಗೀತೆಯಲ್ಲಿ ಹೇಳಿದ್ದಾರೆ. ''ಬಹಿರ್ ಅಂತಸ್ಚಃ ಭೂತನಾಂ ಚರಂ ಅಚರಮೇವ ಚ ಸೂಕ್ಷ್ಮಾ ತ್ವತೇತ್ ಅಭಿಜ್ಞೇಯಂ ದೂರಸ್ತಂ ಚ ಅನಿಕೇತಚ ತತ್'' ಅಂತ ಹೇಳಿದ್ದಾರೆ. ಎಲ್ಲಾ ಪ್ರಾಣಿಯಲ್ಲಿಯೂ ಹೊರಗೂ ಒಳಗೂ ಇರತಕ್ಕಂತಹ ಬಹಳ ಸೂಕ್ಷ್ಮವಾದ ಈ ವಿಚಾರದ ಪ್ರಕಾರ ಇದು ನಮ್ಮ ಕಣದ

ಅಣುವಿಗಿಂತ ಬಹಳ ಕೆಳಗಿರತಕ್ಕಂತಹ ವಿಷಯ. ಅಣುವನ್ನು ನಾವು ಸ್ಫೋಟಿಸಿದರೆ ಸೂಕ್ಷ್ಮಾಣು ಸಿಗುತ್ತದೆ. (electrons, protons, neutrons, hydrons) ಈ ಸೂಕ್ಷ್ಮಾಣುವನ್ನು ಸ್ಫೋಟಿಸಿದರೆ ಅತೀ ಸೂಕ್ಷ್ಮಾಣು ಸಿಗುತ್ತದೆ, Leptoquarks ಅಂತ ಹೇಳುವಂತಹುದು. ಈ Leptoquarks ಎಂಬುದು ಎಲ್ಲಾ ಪ್ರಾಣಿಗಳಲ್ಲಿಯೂ ಇದು ಎಲ್ಲಾ ರೀತಿಯಲ್ಲಿಯೂ ಮನುಷ್ಯನ ಒಳಗೂ ಹೊರಗೂ ಇದೆ. ಅದು ಚಲಿಸುತ್ತದೆ; ಅಥವಾ ಚಲಿಸದೇ ಇರುತ್ತದೆ. ಅದು ಬಹಳ ಸೂಕ್ಷ್ಮವಾದದ್ದು. ಆದ್ದರಿಂದ ಯಾವ ವಿಜ್ಞಾನಕ್ಕೂ ಅದು ತಿಳಿಯುವುದಿಲ್ಲ. ಅದರ ವಿಚಾರ ತಿಳಿಯದವರಿಗೆ ಅದರ ಅಸ್ಥಿರ ಗೊತ್ತಿಲ್ಲ. ಅದನ್ನು ತಿಳಿದವರಿಗೆ ಅದು ಬಹಳ ಹತ್ತಿರದಲ್ಲಿದೆ ಅಂತ ಹೇಳುತ್ತದೆ ಈ ಶ್ಲೋಕ. ಇದರ ಅರ್ಥ ಏನೆಂದರೆ, ಮನುಷ್ಯನ ಮನಸ್ಸೆಂಬುದು ಒಂದು ಬಹಳ ಸೂಕ್ಷ್ಮವಾದ ವಿಚಾರ. ಅದು ಎಲ್ಲಾ ಕಾರ್ಯಗಳನ್ನು ನಡೆಸುತ್ತದೆ. ದೇಹದ ಎಲ್ಲಾ ಅಂಗಾಂಗಗಳನ್ನು ನಡೆಸುತ್ತದೆ. ದೇಹದ ಎಲ್ಲಾ ವಿಚಾರಗಳನ್ನು ನಡೆಸುತ್ತದೆ ಅಂತ ಹೇಳಿದರೆ ದೇಹಕ್ಕೆ ಏನಾದರೂ ಕಷ್ಟ, ಕಾಯಿಲೆ ಬರಬೇಕಾದರೆ ಈ ಮನಸ್ಸು ಕಾರಣ ಅಂತ ಹೇಳಿದರೆ ಬಹಳ ಸುಲಭದಲ್ಲಿ ಅರ್ಥ ಆಗುತ್ತದೆ. ಈ ಮನಸ್ಸನ್ನು ಹತೋಟಿಯಲ್ಲಿಡಲಿಕ್ಕೆ ನಮ್ಮ ಪೂರ್ವಜರು ನಾನಾ ರೀತಿಯ ಔಷಧಿಗಳನ್ನು ನಮಗೆ ಹೇಳಿದ್ದಾರೆ. ಇದರಲ್ಲಿ ಮುಖ್ಯವಾದದ್ದು, ಯೋಗಶಾಸ್ತ್ರ ಅಲ್ಲಿ ಮನಸ್ಸನ್ನು ಹತೋಟಿಯಲ್ಲಿ ಇಟ್ಟುಕೊಂಡು ಇನ್ನೊಬ್ಬರನ್ನು ಪ್ರೀತಿ ಮಾಡಿ ತಮ್ಮ ಆರೋಗ್ಯವನ್ನು ವೃದ್ಧಿ ಮಾಡುವುದು ಹೇಗೆ ಎಂಬ ವಿಚಾರ ಕೂಲಂಕಷವಾಗಿ ತಿಳಿಸಲಾಗಿದೆ. ಆದರೆ, ಮನಸ್ಸಿನಲ್ಲಿ ಅಲ್ಲೋಲಕಲ್ಲೋಲ, ಅಸ್ಥಿರತೆ, ತುಮುಲ, ಜಿಗುಪ್ಸೆ - ಇಂತಹ ಪರಿಸ್ಥಿತಿ ಬಂದರೆ ಅದನ್ನು ನಿಭಾಯಿಸುವುದು ಹೇಗೆ ಎಂಬುದಕ್ಕೆ ಒಂದು ದೊಡ್ಡ ಶಾಸ್ತ್ರವನ್ನೇ ನಮ್ಮ ಪೂರ್ವಜನರು ನಮಗೆ ಕೊಟ್ಟಿದ್ದಾರೆ. ಅದನ್ನೇ ನಾವು ಭಗವದ್ಗೀತೆ ಅಂತ ತಿಳಿದುಕೊಂಡಿದ್ದೇವೆ. ಈ ಭಗವದ್ಗೀತೆ ಎಂಬ ಒಂದು ಮುತ್ತಿನ ಸರವನ್ನು ನಾನಾ ವೇದ ಹಾಗೂ ಉಪನಿಷತ್ತುಗಳಿಂದ ಆರಿಸಿದ ತಿಳುವಳಿಕೆಗಳನ್ನು, ಆ ಮುತ್ತುಗಳನ್ನು ಬೆರೆಸಿ ಸೇರಿಸಿ ಸಾಮಾನ್ಯರಿಗಾಗಿ ಇದನ್ನು ಒಂದು ಮುತ್ತಿನ ಹಾರವಾಗಿ ಮನುಷ್ಯನಿಗೆ ನಮ್ಮ ಪೂರ್ವಜರು ಅರ್ಪಿಸಿದ್ದಾರೆ.

ಆದರೆ ಅದೃಶ್ಟವಶಾತ್ ಇದರ ಭಾಷೆ ಕ್ಲಿಷ್ಟ. ಇದರ ಅರ್ಥ ಪಂಡಿತರಿಗೆ ಮಾತ್ರ ಆಗುವುದಲ್ಲದೆ ಪಾಮರರಿಗೆ ಆಗುವುದು ಕಷ್ಟ. ಈ ಭಗವದ್ಗೀತೆಗೆ ಕಳೆದ ಹಲವಾರು ಶತಮಾನಗಳಲ್ಲಿ ತಿಳಿದವರು ಬುದ್ಧಿಜೀವಿಗಳು, ಪಂಡಿತರು ಹಾಗೂ ನಮ್ಮ ಸನ್ಯಾಸಿಗಳು ಬೇರೆ ಬೇರೆ ಟಿಪ್ಪಣಿಗಳನ್ನು ಬರೆದಿದ್ದಾರೆ. ಈ ಟಿಪ್ಪಣಿಗಳು ಕ್ಲಿಷ್ಟ ಸಾಧ್ಯ. ನಮ್ಮಂತಹ ಪಾಮರರಿಗೆ ಇದನ್ನು ತಿಳಿದುಕೊಳ್ಳುವುದು ಬಹಳ ಕಷ್ಟ. ಆದರೆ ಇತ್ತೀಚಿಗೆ ನಾನೊಂದು ಬಹಳ ಸುಲಭದ, ಮಕ್ಕಳೂ ತಿಳಿದುಕೊಳ್ಳುವಂತಹ ಕನ್ನಡ ಭಾಷೆಯಲ್ಲಿ, ಅದೂ ಸರಳ ಭಾಷೆಯಲ್ಲಿ ವಿರಚಿತ, ಗೀತಾಮೃತವಾಹಿನಿ ಎಂಬ ಕವನ ಸಂಕಲನವನ್ನು ನೋಡಿದೆ. ಅದೇ ದಿವಸ ನನಗೆ, ಈ ನಮ್ಮ ಮನಸ್ಸಿನ ಸಂತೋಷದ ವಿಚಾರ ಬರೆದು ಸಾಮಾನ್ಯ ಜನರಿಗೆ ತಿಳಿಸಬೇಕು ಎಂಬ ಹಂಬಲ ನನ್ನಲ್ಲಿ ಉಂಟಾಯಿತು. ಯಾಕೆಂದರೆ ಈ ಚಿಕ್ಕ ಗ್ರಂಥ ಬರೇ ೧೫೦ ಪುಟಗಳ ಈ ಗ್ರಂಥವನ್ನು ರಚಿಸಿದವರು ಒಬ್ಬ ಸಾಮಾನ್ಯ ವೈದ್ಯ; MBBS ಪದವೀದರರ, ಮೈಸೂರಿನಲ್ಲಿ ಕುಟುಂಬ ವೈದ್ಯನಾಗಿ ಬಹಳ ವರ್ಷ ಸೇವೆ ಸಲ್ಲಿಸಿದ್ದು, ಇವರ ಜೀವನದ ಕರ್ತವ್ಯ. ಇವರಿಗೆ ಈ ಒಂದು ಗ್ರಂಥವನ್ನು ರಚಿಸಿದ್ದಕ್ಕಾಗಿ ರಾಷ್ಟ್ರಪತಿಗಳಿಂದ ಪ್ರಶಸ್ತಿ ಬೇರೆ ಬಂದಿದೆ. ಈ ಗ್ರಂಥವನ್ನು ರಚಿಸಿದವರು. ಡಾ. ಬೆಳ್ಳಿಪಡೆ ಸತೀಶ ರೈಯವರು. ನಿಜವಾಗಿಯೂ ಈ ಗ್ರಂಥ ಬಹಳ ಚಿಕ್ಕದಾದರೂ ಇದನ್ನು ಚಿನ್ನದಲ್ಲಿ ತುಲಾಭಾರ ಮಾಡಿದರೂ ಇದರ ಬೆಲೆ ಬರಲಿಕ್ಕಿಲ್ಲ. ಗೀತೆಯಂತಹ ಮಹಾನ್ ಗ್ರಂಥವನ್ನು ನನ್ನಂತಹ ಪಾಮರರಿಗೂ ತಿಳಿಯುವಂತಹ ಸುಲಭ ಕನ್ನಡದಲ್ಲಿ, ಬಹಳ ದೊಡ್ಡ ಕನ್ನಡದಲ್ಲಿ ಅಲ್ಲ, ಸುಲಭ ಕನ್ನಡದಲ್ಲಿ, ಕವನ ರೂಪದಲ್ಲಿ ಸೃಷ್ಟಿಸಿದ ಮಹಾನ್ ವೈದ್ಯ, ಸತೀಶ್ ರೈಯವರು. ಇದು ಸಾಮಾನ್ಯ ಜನರು ಓದಿ, ಇದರ ಅರ್ಥವನ್ನು ತಿಳಿದುಕೊಂಡು ಜೀವನದಲ್ಲಿ ಅದನ್ನು ಅಳವಡಿಸಿ ಮನಸ್ಸಿನ ಕಷ್ಟಗಳನ್ನು ನಿವಾರಿಸಿ ದೇಹದ ರೋಗವನ್ನೂ ನಿವಾರಿಸುವಂತಹ ಒಂದು ಸುಲಭ ಗ್ರಂಥ ಇದು.

ಇನ್ನು ಪಂಡಿತರು ಇದನ್ನು ಓದಿದರೆ ಇದರಲ್ಲಿ ಛಂದಸ್ಸು ಸರಿ ಇಲ್ಲವೋ ಅಥವಾ ವ್ಯಾಕರಣ ಸರಿ ಇಲ್ಲವೋ ಎಂಬ ಜಿಜ್ಞಾಸೆಗೆ ಹೋಗಬಹುದು. ನಾನಾದರೊ, ಹೆಚ್ಚು ಕನ್ನಡ ತಿಳಿಯದವನು. ನನಗೇನೋ ಇಂದು ಬಹಳ ಒಳ್ಳೆಯದು ಅಂತ

ತೋರುತ್ತದೆ. ಇದರಲ್ಲಿ ನಿಜವಾಗಿಯೂ ವ್ಯಾಕರಣ ಸರಿ ಇಲ್ಲದಿದ್ದರೆ ಅಥವಾ ಛಂದಸ್ಸು ಸರಿ ಇಲ್ಲದಿದ್ದರೆ ಅದು ಹಾಗೆಯೇ ಇರಲಿ ಅಂತ ನಾನು ಪ್ರಾರ್ಥಿಸುತ್ತೇನೆ. ಯಾಕೆಂದರೆ ಅದನ್ನು ಸರಿ ಇಲ್ಲದೇ ಇಂದು ಬಹಳ ಜನರಿಗೆ ಅರ್ಥ ಆಗುವಂತಹ ಪರಿಸ್ಥಿತಿಯಲ್ಲಿದೆ. ಅದನ್ನೆಲ್ಲಾ ಸರಿ ಮಾಡಿ ನಮಗೆ ಅರ್ಥ ಆಗದಂತಹ ಪರಿಸ್ಥಿತಿ ತರುವುದು ಬೇಡ ಅಂತ ನನ್ನ ಕಳಕಳಿಯ ವಿನಂತಿ. ಈ ಚಿಕ್ಕಪುಸ್ತಕವನ್ನು ಎಲ್ಲರಿಗೂ ಮುಟ್ಟುವಂತೆ ಕಮ್ಮಿ ಕ್ರಯದಲ್ಲಿ ಯಾರಾದರೂ ತಯಾರಿಸಿ ಜನಸಾಮಾನ್ಯರಿಗೆ ಮುಟ್ಟುವಂತೆ ಮಾಡಿದರೆ ಅವರು ದೇವರ ಕೆಲಸ ಮಾಡಿದಂತಾಗುತ್ತದೆ ಅಂತ ನಾನು ಧೈರ್ಯದಿಂದ ಹೇಳಬಲ್ಲೆ.

ಮುಂದಿನ ಶತಮಾನದಲ್ಲಿಯಾದರೂ ವೈದ್ಯವಿಜ್ಞಾನ ಮನುಷ್ಯನ ಕಷ್ಟದ ನಿಜವಾದ ಗುಟ್ಟನ್ನು ಅರಿತು ಮನುಷ್ಯನ ಮನಸ್ಸಿಗೆ ಬೇಕಾಗುವಂತಹ ಉಪಚಾರಗಳನ್ನು ಮಾಡುವ ತಂತ್ರಜ್ಞಾನವನ್ನು ಆಧರಿಸಿದ ವೈದ್ಯವಿಜ್ಞಾನವನ್ನು ಹೊರ ತಂದರೆ ಈ ಲೋಕದ ಆರು ಬಿಲಿಯ ಜನ ಸುಖ ಸಂತೋಷದಲ್ಲಿರಬಹುದು ಅಂತ ನಾನು ಆಶಿಸಿ ಇದನ್ನು ಮುಗಿಸುತ್ತಾ ಇದ್ದೇನೆ.

ಶಾಸನ ಮತ್ತು ಕಾವ್ಯಗಳಲ್ಲಿ ಪರಿಸರ ಪ್ರಜ್ಞೆ

ಡಾ|| ಸಿ.ಯು. ಮಂಜುನಾಥ್

ಇತ್ತೀಚಿನ ದಶಕಗಳಲ್ಲಿ ಭಾರತೀಯರಿಗೆ ಪರಿಸರದ ವಿಷಯ ಒಂದು ಸಾಮಾಜಿಕ ಎಚ್ಚರವಾಗಿ, ಆಂದೋಲನವಾಗಿ ಬೆಳೆಯುತ್ತಿರುವುದು ಆಶಾದಾಯಕ ಹಾಗೂ ಸಮಾಧಾನಕರ ಸಂಗತಿಯಾಗಿದೆ. ಬಹಳಷ್ಟನ್ನು ಕಳೆದುಕೊಂಡ ಮೇಲೆ ತಡವಾಗಿಯಾದರೂ ನಷ್ಟದ ಪ್ರಮಾಣ ಮತ್ತು ಪರಿಣಾಮಗಳು ಅರಿವಿಗೆ ಬಂದಿರುವುದು ಸ್ವಾಗತಾರ್ಹ. 'ಬಾರದಿರುವುದಕ್ಕಿಂತ ತಡ ಲೇಸು' (Better late than never) ಎಂದು ತೃಪ್ತಿ ಪಟ್ಟುಕೊಳ್ಳುವಂತಾಗಿದೆ. ಹಾಗೆ ನೋಡಿದರೆ ಪರಿಸರದ ಅರಿವು ಭಾರತೀಯರಿಗೆ ಬಹು ಪ್ರಾಚೀನ ಕಾಲದಿಂದಲೂ ತಿಳಿದದ್ದೇ ಆಗಿದ್ದಿತು. ಪರಿಸರಪ್ರಜ್ಞೆ ಬದುಕಿನ ಒಂದು ಅವಿಭಾಜ್ಯ ಅಂಗವಾಗಿ ಇದ್ದುದು ಕಂಡುಬರುತ್ತದೆ. ಉಪನಿಷತ್ತಿನ ಶಾಂತಿಮಂತ್ರಗಳಲ್ಲಿ ಜಗತ್ತಿನ ಸರ್ವವಸ್ತು ವಿಷಯಗಳೂ 'ಶಾಂತ'ವಾಗಿರಲೆಂಬ ಆಶಯದಲ್ಲಿ ಈ ಭಾವ ಸುವ್ಯಕ್ತವಾಗಿದೆ. ಗುಡ್ಡಗಾಡು ಜನಾಂಗಗಳು ತಮ್ಮ ಬದುಕಿನ ವಿಧಾನದಲ್ಲೇ ಪರಿಸರ ರಕ್ಷಣೆಗೆ ಬೇಕಾದ ಪರಿಕ್ರಮಗಳನ್ನು ಅಳವಡಿಸಿಕೊಂಡಿರುವುದು ಗಮನಾರ್ಹ ಸಂಗತಿಯಾಗಿದೆ. ಗ್ರಾಮೀಣ ಸಂಸ್ಕೃತಿಯಲ್ಲೂ ಪರಿಸರ ರಕ್ಷಣೆಗೆ ಅಗತ್ಯವಾದ ದೃಷ್ಟಿಕೋನ ಕಂಡು ಬರುತ್ತದೆ. ಅದನ್ನು 'ದೇವರ ಬನ' ದಂತಹ ಪರಿಕಲ್ಪನೆಯಲ್ಲಿ ಹಾಗೂ ವೃಕ್ಷಪೂಜೆ, ಬನ್ನಿಪೂಜೆ, ಬನದಹಬ್ಬ ಮುಂತಾದವುಗಳಲ್ಲಿ ಕಾಣಬಹುದು. ಆದರೆ ನಾಗರೀಕತೆಯ ಒಂದು ಹಂತದಲ್ಲಿ ಮನುಷ್ಯನ ಸ್ವಾರ್ಥ ಹಾಗೂ ಹಣ ಮಾಡುವ ವ್ಯಾಪಾರೀ ಮನೋಭಾವ ಪರಿಸರ ನಾಶಕ್ಕೆ ನಾಂದಿ ಹಾಡಿದಂತೆ ಕಂಡು ಬರುತ್ತದೆ. 'ಭಾರತ ಜನನಿಯ ತನುಜಾತೆ'ಯಾದ ಕರ್ನಾಟಕವೂ ಪರಿಸರ ಸಂರಕ್ಷಣೆಯಲ್ಲಿ ಉನ್ನತ ಪರಂಪರೆಯನ್ನು ಅನುಸರಿಸಿಕೊಂಡು ಬಂದಿರುವುದು ಸಹಜವಾಗಿಯೇ ಇದೆ.

ಪ್ರಾಚೀನ ಶಾಸನ ಮತ್ತು ಕಾವ್ಯಗಳಲ್ಲಿ ಪ್ರಕೃತಿಯ ರಮ್ಯ ಪರಿಸರವನ್ನು ವಿವರವಾಗಿ ವರ್ಣಿಸುವುದರ ಮೂಲಕ ಅವರು ತಮ್ಮ ಪರಿಸರಪ್ರೀತಿಯನ್ನು ಅಭಿವ್ಯಕ್ತಿ ಮಾಡಿದ್ದಾರೆ. ವಿನೂತನ ರೀತಿಯಲ್ಲಿರಬಹುದು, ಅಷ್ಟಾದಶ ವರ್ಣನೆಗಳ ಕಾವ್ಯ ಪರಂಪರೆಯ ಸಾಂಪ್ರದಾಯಿಕ ಭಾಗವಾಗಿರಬಹುದು ಒಟ್ಟಿನಲ್ಲಿ ನಿಸರ್ಗದ ಸುಂದರಚಿತ್ರಗಳನ್ನು ಅನನ್ಯವಾಗಿ ನೀಡಿದ್ದಾರೆ. ಪ್ರಕೃತಿಯ ಮಡಿಲಲ್ಲಿ ಬೆಳೆದ ಮಾನವ ಅದನ್ನು ದೈವವಾಗಿ, ಧರ್ಮದ ಭಾಗವಾಗಿ, ಆರಾಧನೆಯ ಅಂಶವಾಗಿ ಮಾಡಿಕೊಂಡು ಬದುಕುತ್ತಿದ್ದಾನೆ. ಮಾನವನ ಉತ್ತಮ ಬದುಕಿಗೆ ಪರಿಸರದೊಂದಿಗೆ ಉತ್ತಮ ಸಹಬಾಳ್ವೆ ಮುಖ್ಯವಾದುದು. ಅನೇಕ ಸಸ್ಯಗಳು ಪೂಜಾರ್ಹವಾಗಿರುವಂತೆ ಪ್ರಾಣಿ ಪಕ್ಷಿಗಳು ಭಾರತೀಯರಿಗೆ ಪೂಜಾರ್ಹವಾಗಿವೆ. ಹೀಗೆ ಇವೆಲ್ಲವೂ ಧರ್ಮದ ಭಾಗವಾಗಿ ಸಾಂಸ್ಕೃತಿಕ ಬದುಕಿನ ಅಂಶಗಳಾಗಿ ಜೀವನದಲ್ಲಿ ಬೆರೆತು ಹೋಗಿವೆ.

ಪ್ರಾಚೀನ ಕರ್ನಾಟಕದ ಅನೇಕ ಶಾಸನ ಮತ್ತು ಕಾವ್ಯಗಳಲ್ಲಿ ಊರುಗಳ ಹೊರಗೆ ಬಹಿರ್ವನ ಅಥವಾ ಬಹಿರುದ್ಯಾನಗಳಿದ್ದ ಉಲ್ಲೇಖಗಳು ಸಾಕಷ್ಟು ಕಂಡುಬರುತ್ತವೆ [1]. ಇವು ಬಹುಮಟ್ಟಿಗೆ ಸಾರ್ವಜನಿಕ ಉಪಯೋಗಕ್ಕಾಗಿ ನಿರ್ಮಿಸಿದ್ದ ವಿಹಾರೋದ್ಯಾನಗಳು. ಇವುಗಳನ್ನು ಆರವೆಗಳೆಂದು ಶಾಸನಗಳು ಕರೆಯುತ್ತವೆ. ಕೆರೆ, ಬಾವಿ, ದೇಗುಲ ಮುಂತಾದವುಗಳನ್ನು ಮಾಡಿಸುವುದರ ಜೊತೆಯಲ್ಲಿ ಆರವೆಗಳನ್ನು ಮಾಡಿಸುವುದು ಒಂದು ಧರ್ಮಕಾರ್ಯವೆಂಬ ನಂಬಿಕೆ ಇದ್ದಿತು.

ಕಲಿದೇವ ಸೆಟ್ಟಿ ಎಂಬುವವನು ಮಾಡಿದ ಧರ್ಮಗಳನ್ನು ಹೇಳುತ್ತ ಒಂದು ಶಾಸನ ಹೀಗೆ ನಿರೂಪಿಸುತ್ತದೆ.

> ಕಟ್ಟಿಸಿದ ಕೆಱೆ ಮನೋಮುದ
> ದಿಟ್ಟಾರವೆ ಪಸಿಯಲೀಯದಿಕ್ಕುವ ಸತ್ರ
> ಬಿಟ್ಟ ಬೆಳಗೆಯ್ಗಳೆಱೆವಱ
> ವಟ್ಟಿಗೆ ಕಲಿದೇವ ಸೆಟ್ಟಿ ಮಾಡಿದ ಧರ್ಮಂ ॥ (ಎಸ್.ಐ.ಐ. IX(I) ಬಳ್ಳಾರಿ ೨೪೬ ಕ್ರಿ.ಶ. ೧೨೪೬)

ಕವಿದೇವ ಸೆಟ್ಟಿಯು ಕಟ್ಟಿಸಿದ ಕೆರೆಗಳು, ನಿರ್ಮಿಸಿದ ಉದ್ಯಾನವನಗಳು, ಹಸಿಯಲು ಅವಕಾಶವೀಯದಂತೆ ಆಹಾರವನ್ನು ನೀಡುವ ಛತ್ರಗಳು, ಚೆನ್ನಾಗಿ ಬೆಳೆಯುವ ಜಮೀನುಗಳು , ನೀರು ಪಾನೀಯಗಳನ್ನು ಎರೆಯುವ ಅರವಟ್ಟಿಗೆಗಳೇ ಅವನು ಮಾಡಿದ ಧರ್ಮಗಳಾಗಿವೆ. ಇಂಥ ಕಡೆ ಧರ್ಮ ಎಂಬ ಪದ ಸಾರ್ವಜನಿಕ ಉಪಯುಕ್ತ ಕಾರ್ಯ, ಒಂದು ರೀತಿಯ ಸೇವೆ ಎಂಬ ಅರ್ಥವನ್ನು ಪಡೆಯುತ್ತದೆ.

ವೃಕ್ಷಗಳನ್ನು ಪ್ರಯತ್ನ ಪೂರ್ವಕವಾಗಿ ನೆಟ್ಟು ಬೆಳೆಸುವ ಉಲ್ಲೇಖ ಕ್ರಿ.ಪೂ. ಮೂರನೆಯ ಶತಮಾನದಲ್ಲೇ ಅಶೋಕನ ಪ್ರಾಕೃತ ಭಾಷೆಯ ಶಾಸನದಲ್ಲಿ ಕಂಡುಬರುತ್ತದೆ. ಮಾರ್ಗಗಳಲ್ಲಿ ಪಶುಗಳ ಮತ್ತು ಮಾನವರ ಪರಿಭೋಗಕ್ಕಾಗಿ ಬಾವಿಗಳನ್ನು ತೋಡಿಸಿದ ಮತ್ತು ಮರಗಳನ್ನು ನಡಿಸಿದ ವಿಷಯ ನಿರೂಪಿತವಾಗಿದೆ. ಪಂಪ ಕವಿಯ ತಮ್ಮ ಜಿನವಲ್ಲಭ ಬರೆಯಿಸಿದ ಶಾಸನದಲ್ಲಿ ತನ್ನ ಅಣ್ಣನ ಹೆಸರಿನಲ್ಲಿ 'ಕವಿತಾ ಗುಣಾರ್ಣವ' ತಟಾಕವನ್ನು ಹಾಗೂ 'ಮದನವಿಲಾಸ'ವೆಂಬ ಮನವನ್ನು ಮೂಡಿಸಿದ ಉಲ್ಲೇಖವಿರುವುದನ್ನು ಕಾಣಬಹುದಾಗಿದೆ.

ಮರಗಿಡಗಳು ಮಾನವ ಜೀವಿಗಳಿಗೆ, ಬದುಕಿಗೆ ಎಷ್ಟು ಅತ್ಯಗತ್ಯ ಎಂಬುದನ್ನು ಆ ಕಾಲದವರು ಚೆನ್ನಾಗಿ ಮನಗಂಡಿದ್ದರು. ಪ್ರಾಚೀನರಿಗೆ ಸಸ್ಯಗಳನ್ನು ಕುರಿತ ವಿಶೇಷ ಜ್ಞಾನವಿದ್ದಿತು. ಚಾವುಂಡರಾಯನ ಲೋಕೋಪಕಾರದಲ್ಲಿ (ಕ್ರಿ.ಶ. ೧೦೨೫) 'ವೃಕ್ಷಾಯುರ್ವೇದಂ' ಎಂಬ ಆರನೆಯ ಅಧ್ಯಾಯದಲ್ಲಿ ಸಸ್ಯಗಳಿಗೆ ಸಂಬಂಧಿಸಿದ ಮಹತ್ವದ ಸಂಗತಿಗಳನ್ನು ತಿಳಿಸಲಾಗಿದೆ. ಮರಗಳಿಗೆ ಬರುವ ರೋಗಗಳು, ಮರಗಳನ್ನು ಕಿತ್ತು ನೆಡುವ ವಿಧಾನ, ವಿವಿಧ ಫಲವೃಕ್ಷಗಳಿಂದ ಅಧಿಕ ಫಲಗಳನ್ನು ಪಡೆಯಲು ಅನುಸರಿಸಬೇಕಾದ ವಿಧಾನ ಮುಂತಾದ ವಿಷಯಗಳನ್ನು ನಿರೂಪಿಸಲಾಗಿದೆ.

---

1. ಎಂ. ಚಿದಾನಂದಮೂರ್ತಿ : 'ಪ್ರಾಚೀನ ಕರ್ನಾಟಕದಲ್ಲಿ ವೃಕ್ಷಾರೋಪಣ ' ಸಾಧನೆ ೬-೪-ಪು. ೩೯-೪೪.

ತೋಪನ್ನು ನಾಶಪಡಿಸುವುದು ಕಾಶಿ, ಹಸು, ಕೆರೆಗಳನ್ನು ನಾಶಪಡಿಸಿದ ಪಾಪಕ್ಕೆ ಸಮಾನವಾದುದೆಂದು ಶಾಸನವೊಂದು ನಿರೂಪಿಸುತ್ತದೆ [2]. ಮರವನ್ನು ಕಡಿಯುವುದು ಕೆಟ್ಟ ಸಾಹಸವೆಂದೂ ಅದು ಬ್ರಹ್ಮಹತ್ಯಾ ದೋಷಕ್ಕೆ ಸಮವೆಂದು ಸ್ಮೃತಿಕಾರರು ಹೇಳಿದ್ದಾರೆ. ತಮಿಳು ನಾಡಿನಲ್ಲಿ 'ತೋಟವಾರಿಯಂ' ಎಂಬ ಸಂಪುಟವಿತ್ತು. ಇದು ಊರಿನ ಮಹಾಜನ ಪ್ರತಿನಿಧಿಗಳನ್ನು ಸರ್ಕಾರದ ಪ್ರತಿನಿಧಿಗಳನ್ನು ಒಳಗೊಂಡಿತ್ತು. ತೋಟದ ಮೇಲ್ವಿಚಾರಣೆ ಇದರ ಕರ್ತವ್ಯವಾಗಿದ್ದಿತು. ಕರ್ನಾಟಕದಲ್ಲಿ ಇಂಥ ಪ್ರತ್ಯೇಕ ವ್ಯವಸ್ಥೆ ಇದ್ದಂತಿಲ್ಲ.

ಮರಗಳನ್ನು ನಡುವ ವಿಷಯದಲ್ಲಿ ಹಿರೇಬೇವಿನೂರಿನ ಶಾಸನ [3] ಅತ್ಯಂತ ಉಪಯುಕ್ತ ಮಾಹಿತಿಯನ್ನು ನೀಡುತ್ತದೆ. ಆ ಪ್ರದೇಶದ ಮೂವತ್ತಾರು ಹಳ್ಳಿಗಳಿಗೆ ಬೊಪ್ಪಣಯ್ಯ ಒಡೆಯ. ಅವನ ಹೆಂಡತಿ ಸಿರಿದೇವಿ. ಅವಳು ವ್ರತಸಾರ ಸಮುಚ್ಚಯದಲ್ಲಿ, ಸ್ಮೃತಿಯಲ್ಲಿ ಹೇಳಿದ ಎಲ್ಲ ವ್ರತಗಳನ್ನು ಮಾಡಿ ಮುಗಿಸಿದಳು. ಆದರೆ 'ಕ್ಷಿತಿರುಹ ನೋಂಪಿ'ಯನ್ನು ಮಾಡಿಲ್ಲವೆಂದು ತಿಳಿದು ಅದನ್ನು ಮಾಡುತ್ತಾಳೆ. ಅದರ ಅಂಗವಾಗಿ ಮಾವು, ನೇರಿಳೆ, ಈಳೆ, ಹಲಸು, ಖರ್ಜೂರ, ತೆಂಗು, ಅಡಕೆ ಮುಂತಾದ ಎಷ್ಟೋ ಮರಗಳನ್ನು ಮತ್ತು ಅನೇಕ ವನಸ್ಪತಿಗಳನ್ನು ನಡಿಸುತ್ತಾನೆ. ಅದರ ನೆರಳಲ್ಲಿ ಸಂತೆ ಸೇರುತ್ತಿತ್ತು. ಆ ಸಂತೆಯ ತೋಪಿನ ಮರಗಳನ್ನು ರಕ್ಷಿಸಲು ವ್ಯವಸ್ಥೆಯನ್ನೂ ಅವನು ಮಾಡಿಸುತ್ತಾನೆ. ನೋಂಪಿಯಂತಹ ಧಾರ್ಮಿಕ ವಿಧಿಯ ಮುಖಾಂತರವಾಗಲಿ ಫಲವೃಕ್ಷಗಳನ್ನು ನಡೆಸುವ ಧರ್ಮ ಕಾರ್ಯ ನಡೆಯುತ್ತಿತ್ತು. ಹೀಗೆ ಪರಿಸರವನ್ನು ಅಭಿವೃದ್ಧಿ ಪಡಿಸುವ ಮತ್ತು ಸಂರಕ್ಷಿಸುವ ಕಾರ್ಯ ಸತತವಾಗಿ ನಡೆಯುತ್ತಿತ್ತು.

ನರಸರಾಜನೆಂಬುವನು ಶ್ರೀ ಪರಮೇಶ್ವರ ಪ್ರೀತಿಯಾಗಿ ಬಾವಿಯನ್ನು ಅಗೆಸಿ ಮಾವಿನ ತೋಪನ್ನು ನಡಿಸಿದ್ದನ್ನು ಶಾಸನವೊಂದು ನಿರೂಪಿಸುತ್ತದೆ.[4] ವನಗಳನ್ನು ನೋಡಿಕೊಳ್ಳಲೆಂದೇ ನಿಯೋಜಿತರಾದ ಕೆಲವು ವೃತ್ತಿಗಳ ಉಲ್ಲೇಖಗಳು ಕೆಲವು ಕಾವ್ಯಗಳಲ್ಲಿ ದೊರೆಯುತ್ತವೆ. ವನಪಾಲ, [5] ವನಮಹತ್ತರ [6] ಅಂತಹ ಹುದ್ದೆಗಳಾಗಿವೆ.

ಪ್ರಾಚೀನ ಕಾಲದ ಪಟ್ಟಣಗಳ ವಿಸ್ತಾರ ಮತ್ತು ರಚನೆಗಳ ಬಗ್ಗೆ ನಮಗೆ ಹೆಚ್ಚು ವಿಷಯಗಳು ತಿಳಿದು ಬರುವುದಿಲ್ಲ. ಪಟ್ಟಣಗಳಿಗೆ ಪ್ರಾಕಾರಗಳು (ಕೋಟೆಗಳು) ಇರುತ್ತಿದ್ದುವು. ಜಯಗೊಂಡಪುರದ ವರ್ಣನೆ ಶಾಸನವೊಂದರಲ್ಲಿ ಹೀಗೆ ನಿರೂಪಿತವಾಗಿದೆ :

ತುಱುಗಿದ ನಂದನಂ ಪರಿವ ಕಾಲ್ವೆ ಕಡಲ್ಗಿವೆ ತೋಡೆನಿಪ್ಪ
ಗ್ಗ್ಱಱ್ ಬಳಸಿರ್ದ ಪೆರ್ವಳಸು ಸಂದಣಿವೆತ್ತಜನಂ ವಿಳಾಸದಿಂ
ಮೆಱೆವಮರಾಲಯಂ ಬಹುಗೃಹಂಗಳ ಗುಣ್ಪವಱಿಂದೆ ಚೆಲ್ವುಕ
ಣ್ದೆಱೆದವೊಲು ಜಗಕ್ಕೆ ಜಯಂಗೊಂಡ ಪುರಂ ನಿಸದಂ ವಿರಾಜಿಕುಂ ॥ [7]

ಜಯಗೊಂಡಪುರದಲ್ಲಿ ದಟ್ಟವಾಗಿ ಬೆಳೆದ ಉದ್ಯಾನವನ, ಹರಿಯುವ ಕಾಲುವೆ, ದೊಡ್ಡಕೆರೆ, ಕೋಟೆ, ಜನಸಂದಣಿ, ದೇವಾಲಯ, ಅನೇಕ ಮನೆಗಳು ಇವುಗಳಿಂದ ಚೆಲುವೇ ಕಣ್ಣುಗಳನ್ನು ತೆರೆದಂತೆ ಆ ಪುರವು ವಿರಾಜಿಸುತ್ತಿದ್ದಿತು.

---

2. ಎಕ III ಶ್ರೀರಂಗಪಟ್ಟಣ ೧೪೭ ಕ್ರಿ.ಶ. ೯೦೦
3. ಎಸ್ ಐ ಐ XX 175 ಬಿಜಾಪುರ ಕ್ರಿ.ಶ. ೧೧೯೦
4. ಎಸ್ ಐ ಐ XX(ii) 477 ಕ್ರಿ.ಶ. ೧೫೦೯
5. ಮಲ್ಲಿನಾಥ ಪುರಾಣ ೫-೬೦
6. ಅದೇ, ೪-೩೪
7. ಎ ಕ V ಅರಸಿಕೆರೆ ೧೧೭೧.

ಪಟ್ಟಣಗಳಿಗೆ ಅನೇಕ ಕೇರಿಗಳು ಇರುತ್ತಿದ್ದವು. ಕೇರಿಗಳಿಗೆ ಬೇರೆ ಬೇರೆ ಹೆಸರುಗಳು ಇರುತ್ತಿದ್ದವು. ಉದಾಹರಣೆಗೆ ಬಾರಕೂರಿನಲ್ಲಿ ಮೂಜುಕೇರಿ, ಚೌಳಿಕೇರಿ, ಮಣಿಗರಕೇರಿ, ಹತ್ತು ಕೇರಿ, ಕೋಟ ಕೇರಿ ಮತ್ತು ಪಡುವ ಕೇರಿ ಇದ್ದದ್ದು ತಿಳಿದು ಬರುತ್ತದೆ. [8] ಅನೇಕ ಶಾಸನಗಳನ್ನು ಗಮನಿಸಿದರೆ ಆಯಾ ವೃತ್ತಿ ಬಾಂಧವರು ತಮ್ಮ ತಮ್ಮ ಕೇರಿಗಳಲ್ಲಿ ವಾಸಿಸುತ್ತಿದ್ದರೆಂದು ಭಾವಿಸಲು ಅವಕಾಶವಿದೆ.

ಉದ್ಯಾನವನ, ಕೋಟೆ, ದೇಗುಲ, ಗೃಹಗಳು, ಜನಸಂಚಾರ, ಅನೇಕ ಕೇರಿಗಳ ವಿಂಗಡಣೆಯಿಂದ ರಮ್ಯವಾಗಿ ಕಾಣುತ್ತಿದ್ದುದು ವಿವಿಧ ಶಾಸನಗಳಲ್ಲಿ ಉಲ್ಲೇಖವಾಗಿದೆ. ಈ ವರ್ಣನೆಗಳು ಬಹುತೇಕ ವಾಸ್ತವ ಸ್ಥಿತಿಯನ್ನು ನಿರೂಪಿಸುತ್ತವೆ.

ಪ್ರಾಚೀನ ಕಾವ್ಯಗಳ ಅನೇಕ ಭಾಗಗಳಲ್ಲಿ ಕನ್ನಡ ಕವಿಗಳು ಪ್ರಕೃತಿಯ ರಮ್ಯ ಪರಿಸರ ಚಿತ್ರವನ್ನು ವಿವರವಾಗಿ ವರ್ಣಿಸುವುದರ ಮೂಲಕ ತಮ್ಮ ಪರಿಸರ ಪ್ರೀತಿಯನ್ನು ಅಭಿವ್ಯಕ್ತಿ ಮಾಡಿದ್ದಾರೆ. ಪಂಪ ಕವಿಯ ಬನವಾಸಿಯ ವರ್ಣನೆ ಬಹು ಪ್ರಸಿದ್ಧವಾದುದು. ಪಂಪನ ಎರಡೂ ಕೃತಿಗಳಲ್ಲಿ ಸಾಂದರ್ಭಿಕವಾಗಿ ಬರುವ ಅರಣ್ಯ ವರ್ಣನೆಗಳು, ಉದ್ಯಾನವನಗಳ ವರ್ಣನೆಗಳು ಸ್ವಾನುಭವ ಅಭಿವ್ಯಕ್ತಿಗಳಾಗಿವೆ. ಪ್ರಕೃತಿ ವರ್ಣನೆಗಳು ನೈಜವೂ ಸ್ವಾನುಭವ ನಿಷ್ಠವೂ ಆಗಿರುವುದು ಕಂಡುಬರುತ್ತದೆ.

ಆದಿ ಪುರಾಣದಲ್ಲಿ ಬರುವ ಒಂದು ಪ್ರಸಂಗ ಪಂಪನ ಅನನ್ಯ ಪರಿಸರಪ್ರಜ್ಞೆಯನ್ನು ಪ್ರಕಟಗೊಳಿಸುವುದನ್ನು ಕಾಣಬಹುದಾಗಿದೆ. ಹನ್ನೊಂದನೆಯ ಆಶ್ವಾಸದಲ್ಲಿ ಬರುವ ಭರತ ಚಕ್ರಿಯ ದಿಗ್ವಿಜಯ ಯಾತ್ರೆಯಲ್ಲಿ ಅವನ ಚತುರಂಗ ಬಲದ ಜೊತೆಗೆ ಅಂತಃಪುರ ಸ್ತ್ರೀಯರೂ, ಸಕಲ ಪರಿವಾರದವರೂ ಪಾಲ್ಗೊಳ್ಳುತ್ತಾರೆ. ಈ ಚೈತ್ರಯಾತ್ರೆಯ ಕಾಲದಲ್ಲಿ ಅವರು ಭೂ ಲೋಕದ ಸರ್ವಋತು ನಂದನವನವನ್ನು ಪ್ರವೇಶಿಸುತ್ತಾರೆ. ಮಾರ್ಗಾಯಾಸದಿಂದ ಬಳಲಿದ ಭರತೇಶನ ರಮಣಿಯರಿಗೆ ಈ ಪುಷ್ಪೋದ್ಯಾನ ಒಂದು ಕ್ರೀಡಾಕ್ಷೇತ್ರವಾಗಿ ಪರಿಣಮಿಸುತ್ತದೆ. ತಮ್ಮ ನಾನಾ ವಿಧವಾದ ಕ್ರೀಡೆಗಳಿಂದ ಆ ವನವನ್ನೆಲ್ಲ ಸುತ್ತಿ ಸುಳಿದು ಆನಂದ ಪಡೆದರು. ತಮ್ಮ ಶೃಂಗಾರ ಬಯಕೆಯಿಂದ ಹೂಗಿಡ ಮರ ಬಳ್ಳಿಗಳನ್ನು ಆಕ್ರಮಣ ಮಾಡಿ ಕಾಡಿಸಿ, ನೋಯಿಸಿ, ಹಿಂಸಿಸಿ ವನದ ಚೆಲುವನ್ನು ಸೂರೆ ಮಾಡುತ್ತಾರೆ. ಅಲ್ಲಿಂದ ತೆರಳುವ ಸಂದರ್ಭದಲ್ಲಿ ತಮ್ಮ ತಪ್ಪಿನ ಅರಿವಾಗಿ ಪಶ್ಚಾತ್ತಾಪಗೊಂಡು ಕ್ಷಮಾ ಯಾಚನೆಯನ್ನು ಅವರು ಕೇಳುತ್ತಾರೆ. ಈ ಸಂದರ್ಭವನ್ನು ಪಂಪನು ತುಂಬ ಮಾರ್ಮಿಕವಾಗಿ ಚಿತ್ರಿಸಿದ್ದಾನೆ.

ಅಂತಃ ಪುರದ ಪರಿವಾರ ಸ್ತ್ರೀಯರಲ್ಲಿ ಕೆಲವರು ಬಹು ಅತಿರೇಕದಿಂದ ನಡೆದುಕೊಳ್ಳುವರು.

> ಪೊಸ ಮಾವಿನ ಮಿಡಿಯೊಳ್ ಪ
> ಚ್ಚೆಸಾರಮಂ ಮಾಡುವಟ್ಟಿಯಿಂ ಮತ್ತೋರ್ವಳ್
> ಪಸದನದ ಬಸನಿ ನಿಜಕರ
> ಕಿಸಲಯ ರುಚಿ ಪಸುರೊಳಸೆಯ ಮಿಡಿಯಂ ಕೊಯ್ದಳ್ ॥ (ಆದಿಪುರಾಣ ೧೧-೯೮)

ಒಬ್ಬಳು ಹೊಸ ಮಾವಿನ ಮಿಡಿಗಾಯಿಯಲ್ಲಿ ಪಚ್ಚೆಬಣ್ಣದ ಸರವನ್ನು ಮಾಡಿಕೊಳ್ಳುವ ಅಭಿಲಾಷೆಯಿಂದ ಅಲಂಕಾರ ಪ್ರಿಯೆ ಮಿಡಿಗಾಯಿಗಳನ್ನು ಕಿತ್ತಳು. ಇನ್ನೊಬ್ಬಳು ಅಲಂಕಾರಕ್ಕಾಗಿ ಮಾವಿನ ಎಲೆಯ ಚಿಗುರುಗಳನ್ನು ಚಾಚಿದ ಕೊಂಬೆಯಿಂದ ಕಿತ್ತಳು. ಹೊಸ ಮುತ್ತಿನ ಸರದಲ್ಲಿ ಸುರಗಿಯ ಮೊಗ್ಗುಗಳನ್ನು ದಟ್ಟವಾಗಿ ತುಂಬಿರುವಂತೆ ಕಾಣಿಸಬೇಕೆಂಬ ಉದ್ದೇಶದಿಂದ ತನ್ನ ಹಾರ ಮತ್ತು ಸರಿಗೆಗಾಗಿ ಪ್ರೀತಿಯಿಂದ ಸುರಗಿ ಮೊಗ್ಗುಗಳನ್ನು ಮತ್ತೊಬ್ಬಳು ಕಿತ್ತಳು. ಹೀಗೆಯೇ ಮಲ್ಲಿಗೆ, ಜಾಜಿ, ಮಾಧವಿ, ಸುರಹೊನ್ನೆ, ಕರ್ಣಿಕಾರ, ಸಂಪಗೆ, ಕೇದಗೆ, ಬಕುಳ, ಸೇವಂತಿಗೆ, ಗೊಜ್ಜಗೆ ಮುಂತಾದ ಎಲ್ಲ ಹೂ ಮೊಗ್ಗುಗಳನ್ನು ಕಿತ್ತು

8. ಕೆ.ವಿ. ರಮೇಶ್ : ಹಿಸ್ಟರಿ ಆಫ್ ಸೌತ್ ಕೆನರ ಪು. ೨೬೨.

ಹೂವಿನ ತೊಡಿಗೆಗಳ್ನು ಮಾಡಿಕೊಂಡು ಧರಿಸಿ ಆನಂದಿಸಿದರು. ಮನಸ್ಸಿಗೆ ಬಂದಂತೆ ಆ ವನದ ಎಲೆಯ ಚಿಗುರು ಮತ್ತು ಪುಷ್ಪಗಳನ್ನು ಕಿತ್ತು ಹೂವಿನ ತೊಡುಗೆ ಮಾಡಿಕೊಂಡು ಧರಿಸಿ ವಸಂತಕಾಂತೆಯರಂತೆ ಶೋಭಿಸಿದರು. ಹೀಗೆ ಆವನದ ಚಿಗುರು, ಅಂಕುರ, ಮೊಗ್ಗು, ದಪ್ಪಮೊಗ್ಗು, ಬಿರಿಮುಗುಳು, ಹೂಗೊಂಚಲುಗಳು, ಮಿಡಿಕಾಯಿಗಳು ಆ ಸ್ತ್ರೀಯರ ಹೂವಿನ ತೊಡುಗೆಗಳಿಗೆ ಹೊಂದಿಕೆಯಾದವು. ಅವರು ತಮ್ಮ ಎಡಪಾದದಿಂದ ಒದೆದು ಅಶೋಕವೃಕ್ಷಗಳನ್ನು ಹೂ ಬಿಡುವಂತೆ ಮಾಡಿದರು. ಮುಖಕಮಲದ ಮದ್ಯದ ಅಭಿಷೇಕದಿಂದ ವಕುಲ ಪುಷ್ಪಗಳು ಅರಳುವಂತೆ ಮಾಡುತ್ತಾ, ಕ್ಷೀರಗಂಡೂಷ ಸೇಚನದಿಂದ ಸಂಪಗೆ ಅರಳುವಂತೆ ಮಾಡಿ ತಮ್ಮ ಉನ್ನತ ವಕ್ಷಗಳ ಅಪ್ಪುವಿಕೆಯಿಂದ ಕುರವಕಗಳು ಅರಳುವಂತೆ ಮಾಡುತ್ತಾ ಆ ವನದಲ್ಲಿ ಮುಕ್ತರೀತಿಯಲ್ಲಿ ಕ್ರೀಡಿಸಿದರು. ಹೀಗೆ ಅತಿರೇಕದಿಂದ ಆ ವನದಲ್ಲಿ ನಡೆದುಕೊಂಡ ಆ ಸ್ತ್ರೀಯರಿಗೆ ತಮ್ಮ ತಪ್ಪಿನ ಅರಿವಾಗುತ್ತದೆ. ಆಗ ಪಶ್ಚಾತ್ತಾಪದಿಂದ ಅವರ ಮನಸ್ಸು ವ್ಯಥೆಪಡುತ್ತದೆ.

'ನೀವು ನಮ್ಮನ್ನು ನೆನೆಯುತ್ತಿರಿ ಎಂದು ಹೇಳುವುದಕ್ಕೂ ನಾವು ಸಂಕೋಚ ಮಾಡಿಕೊಳ್ಳುವಂತಾಗಿದೆ. ತಮ್ಮಲ್ಲಿ ಯಾವ ಗುಣವಿದೆಯೆಂದು ತಮ್ಮನ್ನು ನೆನಪಿಟ್ಟುಕೊಳ್ಳಲು ಸಾಧ್ಯ. ಅಶೋಕ ವೃಕ್ಷಗಳನ್ನು ಎಡಗಾಲಿನಿಂದ ಒದೆದದ್ದೊ, ಕೇಸರ ವೃಕ್ಷವನ್ನು ಎಂಜಲಿನಿಂದ ಪ್ರೋಕ್ಷಿಸಿದ್ದೊ, ತಮ್ಮ ಮದೋತ್ಕಟ ಚೇಷ್ಟೆಗಳಿಂದ ನಡೆದುಕೊಂಡದ್ದನ್ನು ಮರೆಯಿರಿ' ಎಂದು ಅಶೋಕ ವೃಕ್ಷ ಮತ್ತು ವಕುಳವನ್ನು ಬೀಳ್ಕೊಂಡರು. ಒಬ್ಬಳು ಮಾವಿನ ಮರವನ್ನು ಬೀಳ್ಕೊಳ್ಳುವಾಗ 'ತಾನು ಮತ್ತು ನೀನು ಕೆಲಕಾಲ ಒಟ್ಟಿಗೆ ಇದ್ದುದನ್ನಾದರೂ ನೆನಪಿಟ್ಟುಕೋ' ಎಂದು ಹೇಳುತ್ತಾಳೆ. ತಮ್ಮ ತಪ್ಪಿಗಾಗಿ ಬಳ್ಳಿಗಳನ್ನು ಕ್ಷಮೆಯಾಚಿಸಿ ವನವೃಕ್ಷಗಳನ್ನು ಪ್ರದಕ್ಷಿಣೆ ಮಾಡಿ ನಮಸ್ಕರಿಸಿ ಹೊರಡುತ್ತಾರೆ.

ಕೋಗಿಲೆಗಳನ್ನು, ತುಂಬಿಗಳನ್ನು, ರಾಜ ಹಂಸಗಳನ್ನು ಬೀಳ್ಕೊಂಡು ಹೊರಡುತ್ತಾರೆ. ಅಂತಃಪುರದ ಸ್ತ್ರೀಯರು ತಮ್ಮ ಬಿಗುಮಾನವನ್ನು ಬಿಟ್ಟು ಈ ಎಲ್ಲವುಗಳಿಗೆ ಕ್ಷಮೆಯಾಚಿಸುವುದು ಅರ್ಥಪೂರ್ಣವಾಗಿದೆ.

ಪಂಪನ ಆದಿಪುರಾಣಕ್ಕೆ ಜಿನಸೇನಾಚಾರ್ಯರ ಸಂಸ್ಕೃತದ ಮಹಾಪುರಾಣ ಆಧಾರವೆಂದು ವಿದ್ವಾಂಸರು ನಿರ್ದೇಶಿಸಿದ್ದಾರೆ. ಮೂಲದಲ್ಲಿ ಅಂತಃಪುರ ಸ್ತ್ರೀಯರು ವಿಹಾರಮಾಡಿದರೆಂದು ಮಾತ್ರ ಉಲ್ಲೇಖವಿದೆ. ಪಂಪನು ಮಹಾಪುರಾಣದ ಕೆಲಭಾಗಗಳನ್ನು ಸಂಗ್ರಹಿಸಿಯೂ ಕೆಲಭಾಗಗಳನ್ನು ವಿಸ್ತರಿಸಿಯೂ ರಚಿಸಿದ್ದಾನೆಂದು ವಿದ್ವಾಂಸರು ಈಗಾಗಲೇ ಗುರುತಿಸಿದ್ದಾರೆ. ವಿಸ್ತರಿಸಿದ ಭಾಗಗಳಲ್ಲಿ ಪುಷ್ಪೋದ್ಯಾನ ಭಾಗವೊಂದು ಎಂದು ಆದಿಪುರಾಣವನ್ನು ಸಂಪಾದಿಸಿರುವ ಡಾ.ಟಿ.ವಿ. ವೆಂಕಟಾಚಲ ಶಾಸ್ತ್ರೀ ಅವರು ಅಭಿಪ್ರಾಯಪಟ್ಟಿದ್ದಾರೆ. ಇಲ್ಲಿ ಪಂಪನು ವನವಿಹಾರ ವರ್ಣನೆಯನ್ನು ಮಾಡಿರುವುದಷ್ಟೇ ಅಲ್ಲ ಪಂಪನ ಪರಿಸರ ಪ್ರೀತಿ ಅತ್ಯುತ್ತಮವಾಗಿ ಪ್ರಕಟವಾಗಿರುವುದನ್ನು ಕಾಣಬಹುದಾಗಿದೆ.

ಮಾನವರು ತಿಳಿದೋ ತಿಳಿಯದೆಯೋ ಕೆಲವು ಸಾರಿ ನಿಸರ್ಗದೊಡನೆ ಒರಟಾಗಿ ವರ್ತಿಸಿ ಅಪಚಾರ ಮಾಡುವುದರ ಮೂಲಕ ಪರಿಸರದ ಸಮೃದ್ಧಿಯನ್ನು ಹಾಳುಮಾಡುತ್ತಾರೆ. ತಪ್ಪಿನ ಅರಿವಾದ ತಕ್ಷಣ, ವಿವೇಕ ಮೂಡಿದ ತಕ್ಷಣ ತನ್ನ ಅಪಚಾರಕ್ಕಾಗಿ, ಅತಿವರ್ತನೆಗಾಗಿ ಕ್ಷಮೆಯಾಚನೆ ಮಾಡುವ ಮನಃಸ್ಥಿತಿ ಉಂಟಾಗುತ್ತದೆ. ಆ ಅತಿವರ್ತನೆ ಪುನರಾವರ್ತನೆಯಾಗದಂತೆ ನೋಡಿಕೊಳ್ಳುವ ಎಚ್ಚರವಹಿಸುವುದು ಮಾನವರ ಸನ್ನಡತೆಯಾಗಿದೆ. ಮಾನವ ಮತ್ತು ನಿಸರ್ಗದ ಸಂಬಂಧ ಕುರಿತ ಪಂಪನ ಈ ಸೂಕ್ಷ್ಮದೃಷ್ಟಿಕೋನ ಅವನ ಅನನ್ಯ ಸೂಕ್ಷ್ಮಸಂವೇದನೆಯನ್ನು, ಅಸಾಧಾರಣ ಪರಿಸರ ಪ್ರೀತಿಯನ್ನು ಸಮರ್ಥ ರೀತಿಯಲ್ಲಿ ಪ್ರಕಟಪಡಿಸುತ್ತದೆ.

ಮಹಾಭಾರತದಲ್ಲಿ ಬರುವ ಖಾಂಡವ ದಹನ ಪ್ರಸಂಗವನ್ನು ಪಂಪನು ವಿಕ್ರಮಾರ್ಜುನ ವಿಜಯದಲ್ಲಿ ನಿರ್ವಹಿಸಿದ್ದಾನೆ. ಸುತ್ತಣ ಪರಿಸರವನ್ನು ಹಾಳುಮಾಡಿದರೆ. ಉಂಟಾಗುವ ಭವಿಷ್ಯದ ಘೋರ ಪರಿಣಾಮವನ್ನು ವನದಹನದ ಪ್ರಸಂಗದ ಮೂಲಕ ನಿರೂಪಿಸಿದ್ದಾನೆ. ನೂರು ಯೋಜನ ಉದ್ದಗಲದ ವಿಸ್ತಾರ ವನ ವೈವಿಧ್ಯಮಯ ಸಸ್ಯ ಮತ್ತು ಸಕಲ ಜೀವ ಸಂಕುಲದಿಂದ

ಕೂಡಿದ ಕಿನ್ನರ, ಪನ್ನಗ ಮುಂತಾದ ವನಚರರಿಂದ ಸಕಲಕ್ಕೂ ಆಧಾರವಾಗಿದ್ದಿತು. ಇಂಥ ವನವನ್ನು ಅಗ್ನಿಯ ಕೋರಿಕೆಯಂತೆ ಅರ್ಜುನನು ಅದಕ್ಕೆ ಆಹಾರವಾಗಿ ಅರ್ಪಿಸಿದನು.

ವರುಣ ಲೋಕದಲ್ಲಿ ಹನ್ನೆರಡು ವರ್ಷಗಳವರೆಗೆ ಒಂದು ಯಜ್ಞನಡೆದುದರಿಂದ ಅಗ್ನಿದೇವನ ಜೀರ್ಣಶಕ್ತಿಯು ಕುಗ್ಗಿತು. ದೇವವೈದ್ಯರಾದ ಅಶ್ವಿನೀ ದೇವತೆಗಳು ಇಂದ್ರನ ಖಾಂಡವ ವನದಲ್ಲಿ ಅಜೀರ್ಣವನ್ನು ಹೋಗಲಾಡಿಸುವ ಉತ್ತಮ ಮೂಲಿಕೆಗಳಿರುವುದೆಂದೂ ಅವುಗಳನ್ನು ಸೇವಿಸಿದರೆ ಅಗ್ನಿಮಾಂದ್ಯಮಾಯವಾಗುವುದೆಂದು ತಿಳಿಸಿದರು. ಅಗ್ನಿಯು ಕೃಷ್ಣಾರ್ಜುನರಲ್ಲಿಗೆ ಹೋಗಿ ಅವರಿಂದ ಅಭಯ ಪಡೆದು ಖಾಂಡವನವನ್ನು ಭಕ್ಷಿಸತೊಡಗಿದ. ದೇವೇಂದ್ರನು ಯುದ್ಧಕ್ಕೆ ಬಂದಾಗ ಅರ್ಜುನನು ಅವನನ್ನು ಸೋಲಿಸಿದನು. ಅಗ್ನಿಯನ್ನು ಶಾಂತಗೊಳಿಸಲು ಮಳೆಯನ್ನು ಸುರಿಸಿದಾಗ ಅರ್ಜುನ ಶರಪಂಜರದಿಂದ ಮಳೆ ಅಗ್ನಿಯ ಮೇಲೆ ಬೀಳದಂತೆ ಮಾಡಿದ.

ಖಾಂಡವ ವನದ ಪ್ರಸಂಗವನ್ನು ಪಠ್ಯವಾಗಿ ಆಯ್ಕೆ ಮಾಡಿ ಟಿಪ್ಪಣಿ ಬರೆದ ಸಂಪಾದಕರು ಹೀಗೆ ಅಭಿಪ್ರಾಯಪಟ್ಟಿದ್ದಾರೆ: 'ನಾಗರಿಕ ಜಗತ್ತು ಯಾವತ್ತೂ ತಲೆ ತಗ್ಗಿಸಬೇಕಾದ ಉದಾಹರಣೆಗೆ ಖಾಂಡವದಹನದ ಪ್ರಸಂಗ ಸ್ಮಾರಕವಾಗಿದೆ. ಇಲ್ಲಿರುವ ಮತ್ತೊಂದು ಮಾರ್ಮಿಕ ಸಂಗತಿಯೆಂದರೆ ಇಂದ್ರನ ಕುಲ ಪಕ್ಷಪಾತ ಕಾಡನ್ನು ಸುಡುವ ಅಕ್ಷಮ್ಯ ಅಪರಾಧವನ್ನು ಮಾಡಿದವರು ಬೇರೆ ಯಾರೂ ಅಲ್ಲ ತನ್ನ ವರದಿಂದಲೇ ಹುಟ್ಟಿದ ಅರ್ಜುನ ಎಂಬ ಸಂಗತಿಯನ್ನು ದೇವೇಂದ್ರ ತಿಳಿದ ಮೇಲೆ ಅರ್ಜುನನನ್ನು ಆಶೀರ್ವದಿಸಿ ಸನ್ಮಾನಿಸುತ್ತಾನೆ. ಮಕ್ಕಳ ಇಂಥ ಅವಿವೇಕದ ಆಟಗಳಿಗೆ ಕುಮ್ಮಕ್ಕು ಕೊಡುವ ಪ್ರಕೃತಿ ವಿರೋಧಿಗಳು ಎಲ್ಲ ಕಾಲದಲ್ಲೂ ಇರುತ್ತಾರೆ ಎಂಬುದನ್ನು ಈ ಪ್ರಸಂಗ ಧ್ವನಿಸುತ್ತದೆ'.[9]

ಪಂಪನೇ ಉಲ್ಲೇಖಿಸಿದಂತೆ ಆ ವನ ಇಂದ್ರನಿಗೆ ಎಷ್ಟೊಂದು ಪ್ರೀತಿಪಾತ್ರವಾಗಿದ್ದಿತೆಂದರೆ ಒಂದು ಸಾರಿ ಅವನು ಶಚಿಯೊಂದಿಗೆ ಆ ಉದ್ಯಾನವನದಲ್ಲಿ ವಿಹರಿಸುತ್ತಿರುವಾಗ ಚೂತವೃಕ್ಷವನ್ನು ಆಧರಿಸಿದ ಅಶೋಕೆಯ ಚಿಗುರನ್ನು ಅವಳು ಕಿತ್ತು ಪ್ರೀತಿಯಿಂದ ತನ್ನ ಜೋಲು ಮುಡಿಯಲ್ಲಿ ಮುಡಿದುಕೊಳ್ಳಲು ಅದನ್ನು ಇಂದ್ರ ಗದರಿ ತಡೆದದ್ದು ಉಂಟು. ಹೀಗಿರುವಾಗ ಇಂದ್ರ ಮಗನ ವಿಷಯದಲ್ಲಿ ತೋರಿದ ಅತಿ ಪುತ್ರ ವ್ಯಾಮೋಹ ವಿಚಿತ್ರವಾದುದೇ ಆಗಿದೆ.

ಖಾಂಡವನ ವನವಿದ್ದ ಸ್ಥಳದಲ್ಲಿಯೇ ಮುಂದೆ ಶ್ರೀ ಕೃಷ್ಣ ದೇವಶಿಲ್ಪಿಯಾದ ವಿಶ್ವಕರ್ಮನಿಂದ ಇಂದ್ರಪ್ರಸ್ಥವನ್ನು ನಿರ್ಮಿಸಿದ. ಕಾಡನ್ನು ನಾಶಪಡಿಸಿ ನಗರವನ್ನು ನಿರ್ಮಿಸುವ 'ನಾಗರಿಕ' ಕಥೆಯ ಪ್ರಥಮ ಉಲ್ಲೇಖ ಬಹುಶಃ ಇದೇ ಆಗಿರುಪಂತೆ ತೋರುತ್ತದೆ. ಮುಂದೆ ನಾಗರೀಕತೆ ಬೆಳೆದಂತೆ ಕಾಡನ್ನು ಸವರಿ ಊರುಗಳನ್ನು, ಅಗ್ರಹಾರಗಳನ್ನು ನಿರ್ಮಿಸುವ ಪರಿಪಾಠ ವ್ಯಾಪಿಸುತ್ತಾ ಹೋದಂತಿದೆ.

ಖಾಂಡವನ ದಹನ ಪ್ರಸಂಗವನ್ನು ಕುಮಾರವ್ಯಾಸನೂ ವಿವರವಾಗಿ ನಿರೂಪಿಸಿದ್ದಾನೆ. (ಅರವತ್ತೊಂಬತ್ತು ಷಟ್ಪದಿಗಳಲ್ಲಿ ಈ ಪ್ರಸಂಗವನ್ನು ರಚಿಸಿದ್ದಾನೆ). ಖಾಂಡವನ ವನ ವಿವಿಧ ಸಸ್ಯಗಳ ಜೊತೆ ವೈವಿಧ್ಯಮಯ ಖಗಮೃಗ ನಾಗ ಸುರ ದನುಜಾದಿ ಜೀವಗಳಿಂದ ತುಂಬಿತ್ತು. ಅದೆಲ್ಲದರ ಸಹಿತ ಭಕ್ಷಿಸಲು ಅಗ್ನಿಗೆ ಅರ್ಜುನನು ಅವಕಾಶ ಕಲ್ಪಿಸಿ ಕೊಡುತ್ತಾನೆ.

> ತೂಗಿ ಬಾಣವ ಹೂಡಿ ಕಿವಿವರೆ
> ಗಾಗಿ ಬರಸೆಳೆದಾರಿ ಬೊಬ್ಬಿರಿ
> ದಾಗಲಿಂತೆಂದನು ಧನಂಜಯನಾಧನಂಜಯಗೆ
> ಈಗಲೀವನದೊಳಗೆ ಖಗಮೃಗ
> ನಾಗ ಸುರದನುಜಾದಿ ಜೀವರ
> ಹೋಗಲೀಯದೆ ತರುಬಿ ಶರದಲಿ ಕಾಯಬೇಕೆಂದ ॥ (ಆದಿಪರ್ವ ೨೦-೨೪)

---

9. ಪ್ರಾಚೀನ ಕಾವ್ಯಮಾರ್ಗ-೪ (ಸಂ) ಶಿವರಾಮಯ್ಯ, ಡಿ.ಲಿಂಗಯ್ಯ ಪು. ೭೭-೭೮.

ಹೈ ಸಮಗ್ರಾತಿಥ್ಯದಲಿ ನಿಮ
ಗೀ ಸಮಸ್ತ ಪ್ರಾಣಿ ಸಹಿತ ಸು
ರೇಶನುದ್ಯಾನವನು ಕೊಟ್ಟೆನು ಬಾಣಧಾರೆಯಲಿ
ನೀ ಸಮಾಧಾನದಲಿ ಸುಪುರೋ
ಡಾಶವಿದೆ ಸಮಿದಾಜ್ಯ ಸಹಿತ ಮ
ಹಾಸುವಿಸ್ತಾರದಲಿ ಕೊಂಬುದು ಭೀತಿ ಬೇಡೆಂದ (ಆದಿ ಪರ್ವ ೨೦-೨೫)

ಅಗ್ನಿ ಸ್ವಾಹಾ ಮಾಡಿದ ವೃಕ್ಷಗಳ, ಪ್ರಾಣಿ - ಪಕ್ಷಿಗಳ ವಿವರವಾದ ಪಟ್ಟಿಯನ್ನು ಕುಮಾರ ವ್ಯಾಸನು ನೀಡುತ್ತಾನೆ. ಜಂಬು, ಚೂತ, ಪಲಾಶ, ವಟ, ದಾಳಿಂಬ, ಬಿಲ್ವ, ತಮಾಲ, ಚಂಪಕ, ನಿಂಬೆ, ಬಕುಳ, ಕಪಿತ್ಥ, ಕುಟಜ, ಅಶೋಕ, ಪುನ್ನಾಗ, ತುಂಬುರ, ಅರಳಿ, ಲವಂಗ, ಪೂಗ, ಕದಂಬ, ಗುಗ್ಗುಲ, ಸಾಲ, ತಿಲಕ, ಔದುಂಬರ ಮುಂತಾದ ವೃಕ್ಷಗಳನ್ನು ಅಗ್ನಿ ಸ್ವಾಹಾ ಮಾಡಿತು. ಹಾಗೆಯೇ ಶರಭ, ಸಿಂಹ, ಶಾರ್ದೂಲ, ಕರಡಿ, ಸೂಕರ, ಮೊಲ ಮುಂತಾದ ಪ್ರಾಣಿಗಳನ್ನು ಮುಗಿಸಿತು. ಮುಂದಿನ ಎರಡು ಪದ್ಯಗಳಲ್ಲಿ ಅಗ್ನಿಗೆ ಆಹುತಿಯಾದ ಪಕ್ಷಿಗಳ ಪಟ್ಟಿಯನ್ನು ಕೊಟ್ಟಿದ್ದಾನೆ :

ಶುಕ ಮರಾಳ ಮಯೂರ ಟಿಟ್ಟಿಭ
ಪಿಕ ಚಕೋರ ಕಪೋತ ವಾಯಸ
ಬಕ ಪದಾಯುಧ ಚಕ್ರವಾಕ ಕಳಿಂಗ ಕಲವಿಂಕ
ಕುಕಿಲ ಸಾರಸ ಕಾಕರಿಪು ಚಾ
ತಕ ಭರದ್ವಾಜಾದಿ ಪಕ್ಷಿ
ಪ್ರಕರ ಬಿದ್ದುದು ಬಿಗಿದ ಕೇಸುರಿ ಕಣ್ಣವಲೆಗಳಲಿ ॥ (ಆದಿಪರ್ವ ೨೦-೨೫)

ಹರಡೆ ಗೀಜಗ ಮರಗೊಡೆಲೆ ಕಾ
ಬುರುಲೆ ಲಾವುಗೆ ಗೌಜು ಪಾರಿವ
ನಿರಿಲೆ ಸಾಳುವ ಚಿಲಿಮಿಲಿಗ ಚೆಂಬೋತ ಮೀನ್ಬುಲಿಗ
ಮರಕುಟಿಗ ಕಬ್ಬಿಕ್ಕಿ ಕೊಟ್ಟುಗ
ವರಲೆ ಕೊಂಚ ಕಪಿಂಜ ಗಿಂಚಲು
ಗರಿಗ ಮೊದಲಾಖಿಳ ಖಗಕುಲ ಬಿದ್ದುದುರಿಯೊಳಗೆ ॥ (ಆದಿಪರ್ವ ೨೦-೫೩)

ಈ ಪರಿಸರ ನಾಶದ ಕಥೆಯನ್ನು ಇಂದ್ರಪ್ರಸ್ಥಕ್ಕೆ ಬಂದು 'ಧರಣಿಪತಿಗಾ ಖಾಂಡವದ ದಳ್ಳುರಿಯ ಹೋಮದ ಹೊಸ ಕಥೆಯ ವಿಸ್ತರಿಸಿ ಹೇಳಿದನಸುರರಿಪು ಭೀಮಾದಿಗಳು ನಲಿಯೆ' ಎಂದು ಈ ಪ್ರಸಂಗವನ್ನು ಕುಮಾರವ್ಯಾಸನು ಮುಗಿಸುತ್ತಾನೆ. ಇದು ಪೌರಾಣಿಕ ಹಿನ್ನೆಲೆಯ ಕಥೆಯಾದರೂ ಶ್ರೀ ಕೃಷ್ಣ - ಅರ್ಜುನರಂತಹ ಉದಾತ್ತ ಪಾತ್ರಗಳಿದ್ದು ಅವರ ನೇತೃತ್ವದಲ್ಲಿ ಈ ಭಯಂಕರ ವನನಾಶ, ಜೀವಹತ್ಯೆ ತುಂಬ ಆತಂಕಕಾರಿಯಾದುದಾಗಿದೆ.

ಕರ್ಣಾಟಕ ಕಾಂದಬರಿಯಲ್ಲಿ ಬರುವ ಚಂದ್ರಾಪೀಡನು ಕಿನ್ನರ ಮಿಥುನವನ್ನು ಬೆನ್ನಟ್ಟಿ ಹೋಗುವ ಪ್ರಸಂಗದಲ್ಲಿ ದಟ್ಟ ಅರಣ್ಯ ವರ್ಣನೆ, ಆಚ್ಛೋದ ಸರೋವರ ಮತ್ತು ಆ ಪರಿಸರ ಅದ್ಭುತವಾದ ಚಿತ್ರಕಶೈಲಿಯಿಂದ ನಿರೂಪಿತವಾಗಿದೆ. ಬಾಣಭಟ್ಟನ ಮೂಲಕೃತಿಗೆ ಎಷ್ಟೇ ಋಣಿಯಾಗಿದ್ದರೂ ನಾಗವರ್ಮನ ಶುಭ್ರತೇಜದ ಇಡೀ ಪರಿಸರದ ವರ್ಣನೆ ಕನ್ನಡ ಸಾಹಿತ್ಯದಲ್ಲಿಯೇ ಅನನ್ಯವಾದದ್ದು.

ಊರುಗಳ ಹೊರಗೆ ಉದ್ಯಾನವನಗಳನ್ನು (ಬಹಿರುದ್ಯಾನ) ನಿರ್ಮಿಸುತ್ತಿದ್ದುದು ಪ್ರಾಚೀನ ಕಾಲದಲ್ಲಿ ಒಂದು ರೂಢಿಯಾಗಿದ್ದಿತು. ಶಾಸನಗಳ ಉಲ್ಲೇಖಗಳನ್ನು ಈಗಾಗಲೇ ಗಮನಿಸಲಾಗಿದೆ. ನಂಬಿಯಣ್ಣನ ರಗಳೆಯಲ್ಲಿ ನಂಬಿಯಣ್ಣ ಮದುವೆಗೆ ಬಂದಾಗ ಬಹಿರುದ್ಯಾನದಲ್ಲಿ ವಿಶ್ರಾಂತಿ ಪಡೆಯುವ ಚಿತ್ರವಿದೆ. ಆ ಉದ್ಯಾನವನಕ್ಕೆ ಬಂದು 'ವೃದ್ಧ ಮಾಹೇಶ್ವರ' ನಂಬಿಯನ್ನು ಪ್ರಶ್ನಿಸುವ ಸನ್ನಿವೇಶವನ್ನು ಸ್ಮರಿಸಿಕೊಳ್ಳಬಹುದು.

ಹರಿಹರನ ಪುಷ್ಪರಗಳೆ ಕನ್ನಡ ಸಾಹಿತ್ಯದಲ್ಲಿಯೇ ಅದ್ಭುತವಾದ ಒಂದು ಕೃತಿ. ಹಂಪೆಯ ಪರಿಸರದಲ್ಲಿದ್ದ ಒಂದು ಸುಂದರ ಪುಷ್ಪೋದ್ಯಾನವನ್ನು ಈ ಕೃತಿ ಅನಾವರಣಗೊಳಿಸುತ್ತದೆ. ಹರಿಹರನ ಭಕ್ತಿಮನೋಭಾವಕ್ಕೆ ಕನ್ನಡಿಯಂತೆ ಕಂಗೊಳಿಸುವ ಪುಷ್ಪ ವೈವಿಧ್ಯ ಪುಷ್ಪಗಳ ಒಂದು ಜಗತ್ತನ್ನು ಕಣ್ಣುಗಳ ಮುಂದೆ ಹಾಯಿಸುತ್ತದೆ.

'ನಾಗರಿಕ' ಜನ ಆಶ್ರಮಸ್ಥಳ ಹಾಗೂ ವನಪ್ರದೇಶಕ್ಕೆ ಬಂದು ಉಪಟಳ ಮಾಡುವ ಪ್ರಸಂಗವೊಂದು ಮಹಾಭಾರತದಲ್ಲಿ ಬರುತ್ತದೆ. ವನವಾಸ ಕಾಲದಲ್ಲಿ ಪಾಂಡವರು ದ್ವೈತ್ವ ವನದಲ್ಲಿ ಬೀಡು ಬಿಟ್ಟಿದ್ದಾಗ ಅವರ ಕಾರ್ಪಣ್ಯ ಕಂಡು ಹಂಗಿಸುವ ತಮ್ಮ ವೈಭವವನ್ನು ಮೆರೆಯುವ ಉದ್ದೇಶದಿಂದ ಅಲ್ಲಿಗೆ ಬಂದು ದುರ್ಯೋಧನ ಮತ್ತು ಅಪಾರ ಪರಿವಾರ ಭಂಗಿತರಾಗಿ ಹಿಂತಿರುಗುವ ಪ್ರಸಂಗವನ್ನು ಕಾಣಬಹುದು. ಪಂಪನು ಈ ಪ್ರಸಂಗವನ್ನು ತುಂಬ ಸಂಕ್ಷಿಪ್ತವಾಗಿ ನಿರೂಪಿಸಿದ್ದಾನೆ. ಆದಿಪುರಾಣದಲ್ಲಿ ಭರತನ ಪರಿವಾರದ ಸ್ತ್ರೀಯರು ನಿಸರ್ಗಕ್ಕೆ ಎಸಗಿದ ಅಪಚಾರವನ್ನು ಪರಿಣಾಮಕಾರಿಯಾಗಿ ನಿರೂಪಿಸಿದ್ದ ಪಂಪ ಇಲ್ಲಿ ಅಂಥದೇ ಪ್ರಸಂಗ ರಚನೆಗೆ ಮತ್ತೆ ಕೈ ಹಾಕದೇ ಅಡಕಗೊಳಿಸಿದ್ದಾನೆ. ಕುಮಾರವ್ಯಾಸನು ಈ ಪ್ರಸಂಗವನ್ನು ವಿವರವಾಗಿ ನಿರೂಪಿಸಿದ್ದಾನೆ.

ದುರ್ಯೋಧನನು ಗುರು ಹಿರಿಯರ ವಿರೋಧದ ಮಧ್ಯೆಯೂ ಪಾಂಡವರ ಮೇಲಿನ ಅಸೂಯೆಯಿಂದ ತಮ್ಮ ವೈಭವ ಮೆರೆಯುವ ಉದ್ದೇಶದಿಂದ ಘೋಷಯಾತ್ರೆ ಕೈಗೊಳ್ಳುತ್ತಾನೆ. ಕೌರವನು 'ಅರಸಿಯರ ಲೀಲೆಯಲಿ ಶತ ಸಾವಿರ ಸಖೀಜನ ಸಹಿತ' ಬಂದು ದ್ವೈತವನದಲ್ಲಿ ಬೀಡು ಬಿಟ್ಟ ನಂತರ ಆಶ್ರಮದಲ್ಲಿ ನಾನಾ ರೀತಿಯ ಉಪಟಳವನ್ನು ಪರಿವಾರದವರು ಮಾಡುತ್ತಾರೆ.

ಕೆಲರು ಹೊಂದಾವರೆಯ ಹಂತಿಯ
ಕೊಳನ ಹೊಕ್ಕರು ಬಿಲ್ವ ಫಲಗಳ
ನಿಲುಕಿ ಕೊಯಿದರು ಕೊಡಹಿ ಮೊಲೆಗಳ ಮೇಲುದಿನ ನಿರಿಯ
ಕೆಲರು ಹೂಗೊಂಚಲಿನ ತುಂಬಿಯ
ಬಳಗವನು ಬೆಂಕೊಂಡರುಲಿವರೆ
ಗಿಳಿಗೆ ಹಾರದ ಬಲೆಗಳನು ಹಾಯ್ಕಿದರು ಕೊಂಬಿನಲಿ (ಅರಣ್ಯ ಪರ್ವ ೧೮-೪)

ನೇವುರದ ದನಿ ದಟ್ಟಿಸಿತು ವೇ
ದಾವಳಿಯ ನಿರ್ಘೋಷವನು ನಾ
ನಾ ವಿಭೂಷಣ ಕಾಂತಿ ಕೆಣಕಿತು ಮುನಿ ಸಮಾಧಿಗಳ
ಆ ವಧೂಜನದಂಗ ಗಂಧ
ಪ್ರಾವರಣ ಹುತ ಚರು ಪುರೋಡಾ
ಶಾವಳಿಯ ಸೌರಭವ ಮುಸುಕಿತು ವನದ ವಳಯದಲಿ (ಅರಣ್ಯ ಪರ್ವ ೧೮-೬)

ರಾಯರೆಂಬವರಿಲ್ಲಲಾ ಸ್ವಾ
ಧ್ಯಾಯ ಕೆಟ್ಟುದು ಮುಟ್ಟಿದರುಪಾ
ಧ್ಯಾಯರನು ಶೂದ್ರಿಯರು ಸೆಳೆದರು ಮೌಂಜಿ ಮೇಖಲೆಯ
ಹಾಯಿದರು ಯಜ್ಞೋಪವೀತಕೆ
ಬಾಯಲೆಂಜಲಗಿಡಿಯ ಬರುವರ
ಲಾಯನುತ ಬಿಟ್ಟೋಡಿದರು ಸುಬ್ರಹ್ಮಚಾರಿಗಳು (ಅರಣ್ಯ ಪರ್ವ ೧೮-೯)

ಈ ರೀತಿಯಲ್ಲಿ ಆಶ್ರಮದಲ್ಲಿ ನಾನಾ ವಿನೋದಗಳನ್ನು ಮಾಡಿ ಅಲ್ಲಿಂದ ಅವರು ಇಂದ್ರನ ಉದ್ಯಾನವನದ ಬಳಿಗೆ ಬರುವರು. ಈ ಪರಿವಾರದವರಿಗೆ ವನಪಾಲಕರು ಪ್ರವೇಶ ನಿರಾಕರಿಸಿದಾಗ ಒತ್ತಾಯ ಪೂರ್ವಕವಾಗಿ ಒಳನುಗ್ಗಿದರು. ಆಗ ವನಪಾಲಕರು ರಕ್ಷಣೆಗೆ ಹೋರಾಡಿ ಕೈ ಸಾಗದೆ ಗಂಧರ್ವರನ್ನು ಸಹಾಯಕ್ಕೆ ಕರೆದರು. ಒಂದು ಚಿಕ್ಕ ಪ್ರಮಾಣದ ಯುದ್ಧವೇ ಆ ಪರಿಸರದಲ್ಲಿ ನಡೆದು ಹೋಯಿತು.

ಬಲದ ಪದಘಟ್ಟಣೆಗೆ ಹೆಮ್ಮರ
ನುಲಿದು ಬಿದ್ದವು ಸಾಲ ಪೂಗಾ
ವಳಿ ಕಪಿತ್ಥ ಲವಂಗ ತುಂಬುರ ನಿಂಬ ದಾಳಿಂಬ
ಫಲ ಪಲಾಶರ ಸಾಲ ಶಮಿ ಗು
ಗ್ಗುಳ ಮಧೂಕಾಶೋಕ ಬಿಲ್ವಾ
ಮಲಕ ಜಂಬೀರಾದಿಗಳು ನುಗ್ಗಾಯ್ತು ನಿಮಿಷದಲಿ (ಅರಣ್ಯ ಪರ್ವ ೧೮-೩೬)

ಕದಡಿದವು ಸರಸಿಗಳು ಕೆಡೆದವು
ಕದಳಿಗಳು ಗೊನೆ ಸಹಿತ ಮುಂಡಿಗೆ
ಮುದುಡಿ ನೆಲಕೊರಗಿದವು ಮಿರುಗುವ ನಾಗವಲ್ಲಿಗಳು
ತುದಿಗೊನೆಯ ಚೆಂದೆಂಗು ಖರ್ಜೂ
ರದಲಿ ಕಾಣೆನು ಹುರುಳ ನಾರಂ
ಗದ ವಿರಾಮವನೇನನೆಂಬೆನು ನಿಮಿಷ ಮಾತ್ರದಲಿ (ಅರಣ್ಯ ಪರ್ವ ೧೮-೩೭)

ಈ ಹೋರಾಟದ ಫಲವಾಗಿ 'ತೋಟ ಹುಡಿ ಹುಡಿಯಾಯ್ತು' ಎಂದು ಕವಿ ನಿರೂಪಿಸಿದ್ದಾನೆ. ಕೌರವನ ಪರಿವಾರದ ವೈಭವ ಮೆರೆಯುವ ಮನೋಭಾವ ದ್ವೈತವನದ ಪ್ರಶಾಂತ ಆಶ್ರಮದ ಬದುಕನ್ನು ಹಾಳುಗೆಡವಿದ್ದೇ ಅಲ್ಲದೇ ಇಂದ್ರನ ವನವನ್ನು ಅತಿಕ್ರಮ ಪ್ರವೇಶಿಸುವ ಮೂಲಕ ಯುದ್ಧ ಪ್ರಚೋದನೆ ಕೈಗೊಂಡು ವನನಾಶಕ್ಕೆ ಕಾರಣರಾಗುತ್ತಾರೆ. ದುರ್ಯೋಧನ, ದುಶ್ಶಾಸನ ಮುಂತಾದವರು ಚಿತ್ರಸೇನನಿಗೆ ಸೆರೆಯಾಗುವ ಸನ್ನಿವೇಶದ ಜೊತೆಯೇ ಪಾಂಡವರಿಂದಲೇ ಬಿಡುಗಡೆಯಾಗಿ ಮುಖಭಂಗಿತರಾಗುವ ಪ್ರಸಂಗ ಮನೋಜ್ಞವಾಗಿ ನಿರೂಪಿತವಾಗಿದೆ.

ತೊರವೆ ರಾಮಾಯಣದಲ್ಲಿ ಹನುಮಂತನು ಅಶೋಕವನವನ್ನು ಧ್ವಂಸಮಾಡುವ ಪ್ರಸಂಗ ಸುಂದರ ಕಾಂಡದಲ್ಲಿ ಬರುತ್ತದೆ. ಹತ್ತು ಪದ್ಯಗಳಲ್ಲಿ ಅಶೋಕವನವನ್ನು ಹಾಳುಗೆಡಹುವ ಚಿತ್ರ ಬರುವುದಾದರೂ ತನ್ನ ಈ ಅಕಾರ್ಯಕ್ಕೆ ಹನುಮಂತನು ಪಶ್ಚಾತ್ತಾಪಪಟ್ಟು 'ಅನುಚಿತವು ವನಭಂಗವು' ಎಂಬ ಮಾತನಾಡುವುದನ್ನು ಕಾಣಬಹುದಾಗಿದೆ. ವ್ಯಕ್ತಿ ತನ್ನಿಂದ ತಪ್ಪಾಯಿತು ಎಂದು ತಿಳಿದಾಗ ಪಶ್ಚಾತ್ತಾಪಪಟ್ಟರೆ, ಪುನರಾವರ್ತನೆ ಮಾಡದಿದ್ದರೆ ಅದು ಉತ್ತಮ ನಡವಳಿಕೆಯಾಗುತ್ತದೆ.

ನಂಜುಂಡ ಕವಿ ಕನ್ನಡ ನಾಡಿನ ಚೆಲುವಿನ್ನು ಮೋಹಕವಾಗಿ ವರ್ಣಿಸಿರುವ ಕವಿಗಳಲ್ಲಿ ಒಬ್ಬನಾಗಿದ್ದಾನೆ. 'ಮೇರುಗಿರಿಯ ದಕ್ಷಿಣ ಭಾಗದಲ್ಲಿ ಸೊಗಸಿನಿಂದ ಕೂಡಿದ ಭೂ ಭಾಗ ಕರ್ಣಾಟ ಮಹೀಮಂಡಲವಿದೆ.' ಕಾವೇರಿಯಿಂದ ಗೋದಾವರಿವರೆಗೆ ಹರಡಿರುವ ವಿಶಾಲ ಪ್ರದೇಶ ಮತ್ತು ಜನಪದವನ್ನು ಯಾರು ತಾನೆ ವರ್ಣಿಸಲು ಸಾಧ್ಯವೆಂದು ಹೇಳುತ್ತಾ ಈ ನಾಡಿನ ನದಿ, ಉದ್ಯಾನವನ, ಫಲ ವೃಕ್ಷಗಳು, ಸಸ್ಯ ಸಮೃದ್ಧಿ, ಪಕ್ಷಿ ಸಮೂಹ, ಬೃಹತ್ ಕೆರೆಗಳು, ಗದ್ದೆಗಳು, ಅರವಟ್ಟಿಗೆಗಳು, ಈ ನಾಡಿನ ಜನಪದ ಎಲ್ಲವನ್ನು ಮನೋಜ್ಞವಾಗಿ ವರ್ಣಿಸಿದ್ದಾನೆ.

ಭೂರಮೆಯುಟ್ಟೊಪ್ಪಲ್ದಿಟ್ಟದುಕೂಲದ
ಸೀರೆಗಳಂತೆ ಕಂಗೊಳಿಪ
ಭೂರಿ ನದಿಗಳಾ ಕರ್ನಾಟ ಭೂಮಿಯೊ
ಳೋರಂತೆ ಪರಿದೆಸೆದಿಹವು
ಶರದಿಯನೊಲಿದಮರ್ದಪ್ಪಲಾ ತೊಳಿವೆಣ್ಗ
ಳಿರದೆ ನೀಡಿದ ಕೈಗಳಂತೆ
ಕರಮೆಸೆದಿಪ್ಪವು ಪರಿಕಾಲ್ಗಳಾ ನಾಡ
ಸಿರಿಯನದೇನ ಬಣ್ಣಿಪೆನು.

ಏಕಾವಲಿ ಅಲಂಕಾರದಿಂದ ಶೋಭಿಸುವ ಮುಂದಿನ ಪದ್ಯ ಕನ್ನಡನಾಡಿನ ಹಳ್ಳಿಗಳ ಸೌಂದರ್ಯವನ್ನು ಬಿತ್ತರಿಸುತ್ತದೆ :

ಅಳಿಯಿಲ್ಲದಂಬುಜ ಅಂಬುಜವಿಲ್ಲದ
ಕೊಳ ಕೊಳ ನಿಲ್ಲದಾರಾಮ
ವಿಲಸಿತಾರಾಮವಿಲ್ಲದ ಕಾಲೂರ್ಗಳಾ
ಇಳೆಯೊಳೆಲ್ಲೆಲ್ಲಿ ನೋಡಿದರು

ನಾಡಿನ ಜಲ ಸಮೃದ್ಧಿಯ ಉತ್ಕರ್ಷವನ್ನು ಕವಿ ಸೊಗಸಾಗಿ ನಿರೂಪಿಸಿದ್ದಾನೆ :

ಕಡಲುಗಳಾ ನಾಡ ಸಿರಿಯ ನೋಡೆ
ಬಿಡದೆಯ್ತಂದುವೆಂಬಂತೆ
ಕಡೆಗೋಡಿಗಳಿಂದ ಮೆಱೆವ ಬಲ್ಗೆಱೆಗಳಾ
ಪೊಡವಿಯೊಳೆಸೆದಿರುತಿಹವು

ನಾವು ಜೀವಿಸುವ ಪರಿಸರ ಶುಚಿ ಸಮೃದ್ಧಿಗಳಿಂದ ಕೂಡಿ ಚೇತೋಹಾರಿಯಾಗಿರಬೇಕೆಂಬ ಅರಿವು ನಮ್ಮ ಪ್ರಾಚೀನರಿಗೆ ಚೆನ್ನಾಗಿ ಇದ್ದಿತು.

ಮಾನವನಿಂದ ನಿಸರ್ಗದ ಮೇಲೆ ಆಕ್ರಮಣ ನಡೆಯುತ್ತಿದ್ದಂತೆ ಪ್ರಕೃತಿಸಹಜ ಚಟುವಟಿಕೆಯಿಂದಲೂ ಕೆಲವು ಸಾರಿ ಪರಿಸರದ ನಾಶವಾಗುತ್ತಿತ್ತು. ಇಂಥ ಒಂದು ಚಿತ್ರ ಕನಕದಾಸರ ನಳಚರಿತೆಯಲ್ಲಿ ದೊರೆಯುತ್ತದೆ. ದಮಯಂತಿ ಕಾಡಿನಲ್ಲಿ ನಿದ್ರಿಸುತ್ತಿರುವಾಗ ಅಸಹಾಯಕ ಸ್ಥಿತಿಯ ನಳ ಅವಳನ್ನು ತ್ಯಜಿಸಿ ಹೋಗುತ್ತಿರುವಾಗ ಭಯಂಕರ ಕಾಡ್ಗಿಚ್ಚನ್ನು ಕಾಣುತ್ತಾನೆ. ಕಾಡ್ಗಿಚ್ಚು ಹಬ್ಬುವ, ಸಸ್ಯ, ಖಗಮೃಗ ಜೀವಕುಲ ಭಸ್ಮವಾಗುವ ದಳ್ಳುರಿಯ ಚಿತ್ರವನ್ನು ಕನಕದಾಸರು ಈ ಭಾಗದಲ್ಲಿ ನೀಡಿದ್ದಾರೆ. ಇದು ಪ್ರಕೃತಿಯ ಸಹಜ ಪರಿಸರ ನಾಶವಾದರೂ ಪ್ರಕೃತಿ ತನ್ನ ಸಮತೋಲನವನ್ನು ಕಂಡುಕೊಳ್ಳಲು ತಾನೇ ಏರ್ಪಡಿಸಿಕೊಳ್ಳುವ ಒಂದು ತಂತ್ರವೆಂದು ಭಾವಿಸುವುದುಂಟು.

ಕನ್ನಡ ನಾಡಿನ ಪರಿಸರವೆಂದರೆ ಅದು ಕೇವಲ ಭೌಗೋಳಿಕ ಪ್ರದೇಶವಲ್ಲ, ನಾಡಿನ ಬೆಟ್ಟ ಗುಡ್ಡ ನದಿ ಕಣಿವೆ ಸಸ್ಯ ಪ್ರಪಂಚ ಪ್ರಾಣಿಪ್ರಪಂಚ ಮಾತ್ರವಲ್ಲ. ಅಲ್ಲಿಯ ಜನರ ವ್ಯಕ್ತಿತ್ವ ಮತ್ತು ಸಾಧನೆ, ಪರಂಪರೆ ಸಂಸ್ಕೃತಿ ಎಲ್ಲದರ ಸಮಷ್ಟಿ ಅಂತಸ್ಸತ್ವವಾಗಿವೆ. ಕನ್ನಡದ ಉಪಲಬ್ಧ ಮೊದಲ ಕೃತಿ ಕವಿರಾಜಮಾರ್ಗಕಾರ ನಾಡಿನ ಗಡಿಗಳನ್ನು ಮಾತ್ರ ಹೇಳದೆ ಈ ಜನರ ವಿಶಿಷ್ಟ ವ್ಯಕ್ತಿತ್ವವನ್ನು ಹೀಗೆ ನಿರೂಪಿಸಿದ್ದಾನೆ :

ಪದನರಿದು ನುಡಿಯಲುಂ ನುಡಿ
ದುದನರಿದಾರಯಲುಮಾರ್ಪರಾ ನಾಡವರ್ಗಳ್
ಚದುರರ್ ನಿಜದಿಂ ಕುರಿತೋ
ದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್

ಸುಭಟರ್ಕಳ್ ಕವಿಗಳ್ ಸು
ಪ್ರಭುಗಳ್ ಚೆಲ್ವರ್ಕಳಭಿಜನರ್ಕಳ್ ಗುಣಿಗಳ್
ಅಭಿಮಾನಿಗಳತ್ಯುಗ್ರರ್
ಗಭೀರ ಚಿತ್ತರ್ ವಿವೇಕಿಗಳ್ ನಾಡವರ್ಗಳ್

ಕವಿರಾಜಮಾರ್ಗಕಾರನ ಅಭಿಪ್ರಾಯವನ್ನು ಪೂರಕಗೊಳಿಸುವಂತೆ ನಂಜುಂಡ ಕವಿ ರಾಮನಾಥ ಚರಿತೆಯಲ್ಲಿ ಕನ್ನಡಿಗರ ಚಿತ್ರವನ್ನು ಹೀಗೆ ಕೊಡುತ್ತಾನೆ.

ವೀರರಲ್ಲದೆ ಹಂದೆಗಳು ವಿತರಣ ಗುಣ
ಶೂರರಲ್ಲದೆ ಲೋಭಿಗಳು
ಸಾರಗುಣಗ್ರಾಹಿ ರಸಿಕರಲ್ಲದೆ ದುರ್ವಿ
ಕಾರಿಗಳಿಲ್ಲಾ ನೆಲದೊಳು ।

ಆಡುವರಿಲ್ಲನೃತವನಾಜಿರಂಗದೊ
ಳೋಡವರಿಲ್ಲೆರೆದುದನು
ಕೊಡೆ ಕೊಡದರಿಲ್ಲಾ ನಾಡ ಮನುಜರ
ಗಾಡಿಯನೇನ ಬಣ್ಣಿಪೆನು ।

ಇಂಥ ಉನ್ನತ ಪರಂಪರೆಯಿಂದ ಬಂದ ಈ ನಾಡಿನ ಜನ ಅದಕ್ಕೆ ತಕ್ಕುದಾಗಿ ನಡೆದು ಉನ್ನತಿಯನ್ನು ಸಾಧಿಸುವುದು ಅಪೇಕ್ಷಣೀಯವಾಗಿದೆ.

ಪರಿಸರ ಸಂರಕ್ಷಣೆ ಕೆಲವರ ಕರ್ತವ್ಯವಲ್ಲ. ಇಡೀ ಜನ ಸಮುದಾಯದ ಕರ್ತವ್ಯವಾಗಿದೆ. ಈಚಿನ ಪರಿಸರ ಹೋರಾಟಗಳಲ್ಲಿ ಬಹುಮಹತ್ವದ ಕಾರ್ಯವನ್ನು ನಡೆಸಿರುವ ಶ್ರೀ ಸುಂದರಲಾಲ್ ಬಹುಗುಣ ಅವರು ಹೇಳುವ ಹಾಗೆ 'ನಿಸರ್ಗದ ತೊಟ್ಟಿಲಲ್ಲಿ ದೇವರು ಮಾನವನನ್ನು ಸೃಷ್ಟಿಸಿದ. ಆದರೆ ಈ ಮಾನವ ತೊಟ್ಟಿಲನ್ನೇ ಚಿಂದಿಚಿಂದಿ ಮಾಡಿದ. ಉಣಬಡಿಸ ಬಂದ ಪ್ರಕೃತಿಮಾತೆಯ ಶೀಲಭಂಗ ಮಾಡಿ ರಾಡಿ ಮಾಲಿನ್ಯದ ರಕ್ಕಸನನ್ನು ಸೃಷ್ಟಿಸಿದ... ಈವರೆಗೆ ಆಹಾರ ಬಟ್ಟೆ ಹಾಗೂ ವಸತಿ ಇವು ಮೂರು ಮಾತ್ರ ಮೂಲಭೂತ ಅವಶ್ಯಕತೆಗಳಾಗಿದ್ದವು. ಈಗ ಇದಕ್ಕೆಲ್ಲ ಮೂಲವಾದ ನೀರು ಮತ್ತು ಗಾಳಿಗೇ ಅಭಾವ ಉಂಟಾಗಿದೆ. ಜೀವಗೋಲ ಸಮತೋಲವಾಗಿದ್ದಷ್ಟು ದಿನ ನಮಗೆ ಪ್ರಾಣವಾಯು ಅಷ್ಟೊಂದು ಮುಖ್ಯ

ಅನಿಸಿರಲಿಲ್ಲ. ಆದರೆ ಈಗ ನಾವು ತಾಂತ್ರಿಕಗೊಂದಲದಲ್ಲಿದ್ದೇವೆ. ಇಡೀ ಜೀವರಾಶಿಗೆ ಬೇಕಾದ ಪ್ರಾಣವಾಯುವಿನ ಹದಿನೈದು ಪಟ್ಟು ಹೆಚ್ಚು ಪ್ರಾಣವಾಯುವನ್ನು ಕಾರ್ಖಾನೆಗಳೇ ಕಬಳಿಸುತ್ತಿವೆ. ಕಾರ್ಖಾನೆಗಳ ಸಂಖ್ಯೆ ಹೆಚ್ಚುತ್ತಿದೆ. ಶುದ್ಧಗಾಳಿಯನ್ನು ಉತ್ಪಾದಿಸುವ ನೈಸರ್ಗಿಕ ಯಂತ್ರ (ವೃಕ್ಷ)ಗಳ ಸಂಖ್ಯೆ ಕ್ಷೀಣಿಸುತ್ತಿದೆ.... ಎಲ್ಲ ಅನಿಷ್ಟಗಳನ್ನು ತಡೆಯಬೇಕೆಂದರೆ ಅರಣ್ಯ ಬೆಳೆಸುವುದೇ ಏಕೈಕ ಮಾರ್ಗ. ಅರಣ್ಯವೆಂದರೆ ಆಮ್ಲಜನಕದ ಬ್ಯಾಂಕು. [10]

ನಮ್ಮ ಹಿರಿಯರಿಗೆ ಈ ಆಧುನಿಕ ವೈಜ್ಞಾನಿಕ ತಿಳುವಳಿಕೆ ಬಹುಶಃ ತಿಳಿದಿರಲಾರದು. ಆದರೆ ಭವಿಷ್ಯದ ಬದುಕಿನ ಮುಂದಾಲೋಚನೆ ಅವರಿಗೆ ಇದ್ದಿತು ಎಂಬುದಕ್ಕೆ ಅವರು ಪರಿಸರದ ವಿಷಯದಲ್ಲಿ ನಡೆದುಕೊಂಡ ರೀತಿಯೇ ಸಾಕ್ಷಿಯಾಗಿದೆ. ಧರ್ಮದ ಹೆಸರಿನಲ್ಲಾಗಲೀ, ಸೌಂದರ್ಯದ ಮನೋಭಾವದಿಂದಾಗಲೀ, ವ್ರತದ ನಿಷ್ಠೆಯಿಂದಲಾಗಲೀ, ಕರ್ತವ್ಯದ ಪ್ರಜ್ಞೆಯಿಂದಲಾಗಲೀ ಪರಿಸರವನ್ನು ಸಂರಕ್ಷಿಸಿಕೊಟ್ಟಿದ್ದಾರೆ. ನಮ್ಮ ಪ್ರಾಚೀನರಿಗೆ ಪರಿಸರದ ಬಗ್ಗೆ ಅರಿವು ಮಾತ್ರವಲ್ಲ ವಿಶೇಷವಾದ ಕಳಕಳಿ ಇದ್ದಿತು ಎಂಬುದಕ್ಕೆ ಈ ಹಿಂದೆ ಗಮನಿಸಿರುವ ಶಾಸನ ಮತ್ತು ಕಾವ್ಯ ಪರಂಪರೆಯ ಉಲ್ಲೇಖಗಳು ಸ್ಪಷ್ಟವಾಗಿ ತೋರಿಸಿಕೊಡುತ್ತವೆ. ನಮ್ಮ ಹಿರಿಯರಿಗೆ ಪರಿಸರದ ಬಗ್ಗೆ ಮುಂಗಾಣ್ಕೆ ಇದ್ದಿತು.

---

10. ನಾಗೇಶ ಹೆಗಡೆ : ಇರುವುದೊಂದೇ ಭೂಮಿ ಪು. ೬೧-೬೨.

ತ್ರಿಪುರದಹನ ಸಾಂಗತ್ಯ - ಒಂದು ಸಾಂಕೇತಿಕ ಕಾವ್ಯ

ಡಾ. ಎಸ್. ವಿದ್ಯಾಶಂಕರ್

ಕರ್ನಾಟಕದಲ್ಲಿ ಧಾರ್ಮಿಕ ಸಂಘರ್ಷ ೧೦-೧೧ನೇ ಶತಮಾನದಿಂದಲೂ ನಡೆದಿದೆ. ಮೊದಲಿಗೆ ಬೌದ್ಧ - ಜೈನ ಧರ್ಮಗಳ ನಡುವೆ ಸಂಘರ್ಷವಿದ್ದುದು, ಬೌದ್ಧ ಧರ್ಮ ಹಿಮ್ಮೆಟ್ಟಿದ ಮೇಲೆ ಜೈನಧರ್ಮ ರಾಜಾಶ್ರಯದ ಬಲದಿಂದ ೧೦ನೇ ಶತಮಾನದಲ್ಲಿ ನೆಮ್ಮದಿಯ ವಾತಾವರಣದಲ್ಲಿ ಬೆಳೆಯಿತು. ರಾಜಾಶ್ರಯ ತಪ್ಪಿದ ಕಾರಣವಾಗಿ ಹಾಗೂ ವೀರಶೈವ ಧರ್ಮ ಒಂದು ಸ್ವತಂತ್ರ ಧರ್ಮವಾಗಿ ಬಲವಾಗಿ ಬೇರುಬಿಡಲು ಹೊರಟದ್ದರಿಂದಾಗಿ ಅದು ತನ್ನ ಮೊದಲಿನ ಭದ್ರತೆಯನ್ನು ಉಳಿಸಿಕೊಂಡು ಬರಲಾಗಲಿಲ್ಲ. ಇದರ ಜೊತೆಗೆ ಜೈನಧರ್ಮದ ಅನುಯಾಯಿಗಳಲ್ಲಿ ಧರ್ಮಶ್ರದ್ಧೆ ಕಡಿಮೆಯಾಗಿ ಮಾಟ ಮಂತ್ರಗಳ ಬಳಕೆ, ಯಕ್ಷೀ ಆರಾಧನೆ, ಬಸದಿಗಳಲ್ಲಿ ದೇವಾದಾಸಿಯರ ರಂಗಭೋಗಸೇವೆಗಳು ಆ ಧರ್ಮದಲ್ಲಿ ನುಸುಳಿದ್ದರಿಂದ ಜೈನಧರ್ಮ ತನ್ನ ಮೊದಲಿನ ವರ್ಚಸ್ಸನ್ನು ಉಳಿಸಿಕೊಳ್ಳಲಾಗಲಿಲ್ಲ. ಪ್ರಧಾನವಾಗಿ ವೀರಶೈವ ಧರ್ಮ ಸಾಮಾಜಿಕ ಹಾಗೂ ಧಾರ್ಮಿಕ ನೆಲೆಗಳಲ್ಲಿ ವರ್ಣಾಶ್ರಮಪದ್ಧತಿಯನ್ನು ಧಿಕ್ಕರಿಸಿ ಒಂದು ಬಲವಾದ ಸಂಘಟನೆಯ ಮೂಲಕ ಕೆಳವರ್ಗದವರ ಆಶೋತ್ತರಗಳನ್ನು ಈಡೇರಿಸಲು ಹೊರಟದ್ದು ಜೈನಧರ್ಮಕ್ಕೆ ವಿಶೇಷವಾದ ಆಘಾತವನ್ನುಂಟುಮಾಡಿತು.

ಈ ಘಟ್ಟದಲ್ಲಿ ಜೈನಧರ್ಮಕ್ಕೆ ಜೀವತುಂಬುವ ಹಾಗೂ ಅದರ ಪುನರುತ್ಥಾನ ಮಾಡುವ ಕಾರ್ಯದಲ್ಲಿ ಜೈನಕವಿಗಳು ಪ್ರಮುಖ ಪಾತ್ರವನ್ನು ವಹಿಸಿದರು. ಅದು ಜನ ಸಮ್ಮುಖವಾಗಲು ತನ್ನ ಧಾರ್ಮಿಕತತ್ತ್ವಗಳನ್ನು ಶ್ರಾವಕರಿಗೆ ತಿಳಿಯಹೇಳಲು ಪುರಾಣಪದ್ಧತಿಯನ್ನು ಬಿಟ್ಟು ದೇಸೀ ಪರಂಪರೆಯನ್ನು ಆಶ್ರಯಿಸಿತು. ನಯಸೇನನಂತಹವನು ತೀರ್ಥಂಕರ, ಚಕ್ರವರ್ತಿ, ಬಲದೇವ - ವಾಸುದೇವ - ಪ್ರತಿವಾಸುದೇವರ ಕಥೆಯನ್ನು ಹೇಳದೆ, ಸ್ವತಂತ್ರವಾಗಿ 'ಧರ್ಮಾಮೃತ'ದಂತಹ

ಕೃತಿಯ ಮೂಲಕ ಜೈನಧರ್ಮದ ತಾತ್ತ್ವಿಕಾಂಶಗಳನ್ನು ಜಾನಪದ ಕಥನ ಪರಂಪರೆಯ ಮೂಲಕ ಹೇಳಲು ಪ್ರಯತ್ನಿಸಿದನು. ತಾತ್ತ್ವಿಕಾಂಶಗಳನ್ನು ಜಾನಪದ ಕಥನ ಪರಂಪರೆಯ ಮೂಲಕ ಹೇಳಲು ಪ್ರಯತ್ನಿಸಿದನು. ತಾತ್ತ್ವಿಕಾಂಶಗಳು ಜನಸಾಮಾನ್ಯರಿಗೆ ತಿಳಿಯಲೆಂದು ಅವರ ಆಡುನುಡಿ, ಗಾದೆ, ಮಾಲೋಪಮೆಗಳನ್ನು ವಿಶೇಷವಾಗಿ ಬಳಸಿದನು. ಬ್ರಹ್ಮಶಿವನು (೧೧೮೯) 'ಸಮಯ ಪರೀಕ್ಷೆ'ಯಲ್ಲಿ ಜೈನಧರ್ಮದ ಹೆಚ್ಚಳವನ್ನು ಪ್ರಸ್ತಾಪಿಸುತ್ತಾ ನೇರವಾಗಿ ತನ್ನ ಸಮಕಾಲೀನವಾದ ಬ್ರಾಹ್ಮಣ ಹಾಗೂ ಶೈವ ಧರ್ಮಗಳ ದೇವತೆಗಳು, ಅವರನ್ನು ಕುರಿತ ಪುರಾಣಗಳು, ಅವುಗಳಲ್ಲಿನ ವೈರುದ್ಧ್ಯಗಳು; ಈ ಧರ್ಮಾನುಯಾಯಿಗಳ ನಂಬಿಕೆ, ಆಚರಣೆ, ಪದ್ಧತಿಗಳು, ವ್ರತ - ಹಬ್ಬಗಳು, ಪೂಜಾಕ್ರಮಗಳು - ಹೀಗೆ ಎಲ್ಲವನ್ನೂ ಸಮಾಜೋಧಾರ್ಮಿಕ ಹಿನ್ನೆಲೆಯಲ್ಲಿ ಟೀಕಿಸುವ, ವ್ಯಂಗ್ಯವಾಗಿ ಮೂದಲಿಸುವ, ವಿಡಂಬಿಸುವ ಮೂಲಕ ತನ್ನ ಧಾರ್ಮಿಕ ಅಸಹನೆಯನ್ನು ಪ್ರಕಟಪಡಿಸಿರುವನು. ಅವನು ತನ್ನ ಕೃತಿಯನ್ನು ಆಪ್ತಾಗಮ (ಬೇಕಾದದ್ದು), ಅನಾಪ್ತಾಗಮ (ಬೇಡವಾದದ್ದು) ಎಂದು ಎರಡು ಭಾಗಗಳಾಗಿ ವಿಂಗಡಿಸಿ, ಅನಾಪ್ತಾಗಮದಲ್ಲಿ ಅನ್ಯಮತ ವಿಡಂಬನೆಯಲ್ಲಿ ವಿಕೃತವಾದ ತೃಪ್ತಿ ಹೊಂದುವನು. ಜೈನೇತರ ಧರ್ಮಗಳ ಬಗೆಗಿನ ಅವನ ಅಸಹನೆ ಟೀಕೆ, ಮೂದಲಿಕೆ, ಅವಹೇಳನ, ಮರ್ಯಾದೆಯ ಗಡಿ ಮೀರಿದ ವ್ಯಂಗ್ಯ ಲೇವಡಿಗಳಲ್ಲಿ ಪರ್ಯವಸಾನಗೊಳ್ಳುವುದನ್ನು ನಾವು ಕಾಣುತ್ತೇವೆ. ಹೀಗೆ ಅನ್ಯಧರ್ಮಗಳನ್ನು ಟೀಕಿಸುವಲ್ಲಿ ಒಂದು ಬಗೆಯ ತೃಪ್ತಿ ಸಮಾಧಾನ ಹೊಂದುವ ಅವನ ಮನಸ್ಸು ಮನಶ್ಶಾಸ್ತ್ರೀಯ ಅಧ್ಯಯನಕ್ಕೆ ಯೋಗ್ಯವಾಗಿದೆ.

ಜೈನಧರ್ಮದ ಅವನತಿ ಬ್ರಹ್ಮಶಿವನಂತಹ ನಿಷ್ಠಾವಂತ ಅನುಯಾಯಿಗಳಿಗೆ ಅಸಹನೀಯ. ಅವನ ರೋಗಗ್ರಸ್ಥ ಮನಸ್ಸು ಅನ್ಯಧರ್ಮಗಳ ಬೆಳವಣಿಗೆಯನ್ನು ಕಂಡು ಮತ್ಸರಿಸುತ್ತದೆ; ಸ್ವೇಚ್ಛೆಯ ನೆಲೆಯಲ್ಲಿ ಅನ್ಯಧರ್ಮಗಳ ಮೇಲೆ ಹರಿಹಾಯುತ್ತದೆ. ಜೈನ ಹಾಗೂ ಶೈವ ಧರ್ಮಗಳ ನಡುವೆ ನಡೆದ ಸಂಘರ್ಷ ವಿನಾಶಕಾರಕ ರೀತಿಯಲ್ಲಿ ಪರಿಣಾಮ ಬೀರಿರುವುದನ್ನು ಸಾಮಾಜಿಕ ಹಾಗೂ ಧಾರ್ಮಿಕ ನೆಲೆಯಲ್ಲಿ (ಆ ಕಾಲಕ್ಕೆ) ಕಾಣಬಹುದು. ಹರಿಹರನ 'ಏಕಾಂತರಾಮಿ ತಂದೆಗಳ ರಗಳೆ' 'ಆದಯ್ಯನ ರಗಳೆ' ಈ ಧಾರ್ಮಿಕ ಸಂಘರ್ಷದ ಬಗೆಗೆ ಬೆಳಕು ಚೆಲ್ಲುತ್ತವೆ. ರಾಘವಾಂಕನ 'ಸೋಮನಾಥ ಚಾರಿತ್ರ'ವು ಅದರ ಪರಿಣಾಮ ಭೀಕರತೆಯನ್ನು ಚಿತ್ರಿಸಿದೆ. 'ಅಬ್ಬಲೂರು ಚರಿತೆ' ಏಕಾಂತರಾಮಯ್ಯನು ಜೈನರ ವಿರುದ್ಧ ಪಡೆದ ವಿಜಯವನ್ನು ಪವಾಡದ ನೆಲೆಯಲ್ಲಿ ವೈಭವೀಕರಿಸುತ್ತದೆ. ಶೈವ - ವೀರಶೈವಗಳು ಸಾಮಾಜಿಕ ನೆಲೆಯಲ್ಲಿ ಪ್ರತಿಷ್ಠಿತವಾಗ ಹೊರಟದ್ದು ಜೈನಕವಿಗಳ ಅಸಹನೆಗೆ ಕಾರಣವಾಗಿರುವುದು ನಾಗಚಂದ್ರ ಬ್ರಹ್ಮಶಿವ, ನೇಮಿಚಂದ್ರ, ಆಂಡಯ್ಯ, ಶಿಶುಮಾಯಣ, ವೃತ್ತ ವಿಲಾಸ - ಇವರೇ ಮೊದಲಾದ ಜೈನಕವಿಗಳ ಕೃತಿಗಳಿಂದ ವಿದಿತವಾಗುತ್ತದೆ.

ಜೈನಕವಿಗಳ ಅಸಹನೆ ಅನ್ಯಧರ್ಮಗಳ ಪುರಾಣನಾಯಕರ ವಿಡಂಬನೆಯಲ್ಲಿ, ಪರಂಪರೆಯಲ್ಲಿ ಪ್ರಚಲಿತವಿರುವ ಪುರಾಣ ಕಥೆಗಳನ್ನು ಜೈನೀಕರಿಸುವ ನೆಲೆಯಲ್ಲಿ ಪ್ರಕಟಗೊಂಡಿರುವುದನ್ನು ನಾವು ಗಮನಿಸಬಹುದು. ನಾಗಚಂದ್ರನು (ಸು.೧೧೦೦) 'ಮಲ್ಲಿನಾಥ ಪುರಾಣ'ದಲ್ಲಿ ವೇಶ್ಯಾವಾಟಿಯ ವರ್ಣನೆ ಮಾಡುತ್ತ ಶಿವನ ಮೊದಲಕಣ್ಣನ್ನು ಮನ್ಮಥ ನಂದಿಸಿದನೆಂದು ಹೇಳುವನು ('ಆ ವೇಶ್ಯಾವಾಟದೊಳ್ ದೂರ್ಜಟಿಯ ನೊಸಲ ಕಣ್ಣಂ ಸ್ಮರಂ ನಂದೆ ಪೊಯ್ದಂ' (೨.೫೬)). ಅವನ ಈ ಹೇಳಿಕೆ ಪ್ರಚಲಿತ ಕಥೆಗೆ ತದ್ವಿರುದ್ಧವಾದುದು. ಕಾಳಿದಾಸನ 'ಕುಮಾರ ಸಂಭವ' ಹಾಗೂ ಹರಿಹರನ 'ಗಿರಿಜಾ ಕಲ್ಯಾಣ' ಮತ್ತು ಸಂಸ್ಕೃತ ಶಿವಪುರಾಣಗಳಲ್ಲಿ ಶಿವನು ಮನ್ಮಥನನ್ನು ದಹಿಸಿದ ಕಥೆ ಪ್ರಸಿದ್ಧವಿದೆ.

ಜೈನಪುರಾಣಗಳಲ್ಲಿ ಮಹಾಪುರುಷರ ಶ್ರೇಣಿಯಲ್ಲಿ ಕಾಮನಿಗೆ ವಿಶಿಷ್ಟ ಸ್ಥಾನವಿದೆ. ತೀರ್ಥಂಕರನಿಗಿಂತ ಅವನು ಮಿಗಿಲಿಲ್ಲ, ಅವನಿಗೆ ಅಧೀನ. ಜಿನನ ಮುಂದೆ ಅವನ ಆಟ ಸಾಗದು. ಕಾಮನು ಒಂದೊಂದು ಯುಗದಲ್ಲಿ ಒಂದೊಂದು ಹೆಸರಿನಿಂದ ಪ್ರಸಿದ್ಧ. ಬಾಹುಬಲಿ, ಪ್ರಜಾಪತಿ, ಶ್ರೀಧರ, ಜಂಬೂಸ್ವಾಮಿ ಇವರೇ ಮೊದಲಾದ ೨೪ ಮಂದಿ ಕಾಮದೇವರಿರುವರು. ಶಿವ ಕಾಮನನ್ನು ದಹಿಸಿಬಿಟ್ಟಿದ್ದರೆ ಗಿರಿಜೆಯನ್ನೇಕೆ ಮದುವೆಯಾದ? ಗಣಪತಿ ಕುಮಾರಸ್ವಾಮಿಯರು ಹೇಗೆ ಹುಟ್ಟುತ್ತಿದ್ದರೆಂಬ ವಿತಂಡವಾದ ಜೈನರಲ್ಲಿದೆ. ಮನ್ಮಥ ಶಿವನನ್ನು ಅರೆವೆಣ್ಣನನ್ನಾಗಿ ಮಾಡಿದನೆಂದು ನೇಮಿಚಂದ್ರ (ಸು. ೧೨೦೦) 'ಲೀಲಾವತಿ'ಯಲ್ಲಿ ಹೇಳಿರುವನು.

ಪೂಸುವ ಬೂದಿಗಂಗಭವನಂ ಭವಸಾರನನಾರ್ದು ಸುಟ್ಟ ಭೂ -
ತೇಶನ ಬುದ್ಧಿಗುದ್ದವಱಿದಾಂ ಪೊಗೞೆಂ, ಪೊಗೞ್ವೆಂ ಮನೋಜನಂ
ಕೇಸುರಿಯಂತೆ ಪರ್ಬಿ ಪಟುವಾಗಿ ಪೊದೞ್ದೞುರ್ದಂತರಂಗಮಂ
ಕಾಸಿ ಕಪಾಲಿಯಂ ಪಿಡಿದೊಱಲ್ದರೆವೆಣ್ಣನೆ ಮಾಡಿಬಿಟ್ಟನಂ ॥ (೧.೮೫)

ನೇಮಿಚಂದ್ರನು ಮನ್ಮಥನನ್ನು ಬೂದಿಬಡುಕ ಶಿವನು ಸುಟ್ಟು ಬೂದಿ ಮಾಡಿದನೆಂಬ ಪ್ರಚಲಿತ ಕಥೆಯನ್ನು ನಾನು ಉಬ್ಬಿ ಹೊಗಳುವುದಿಲ್ಲವೆಂದು ಅದನ್ನು ನಿರಾಕರಿಸುತ್ತ, ನಾನು ಮನ್ಮಥನನ್ನು ಹೊಗಳುವೆನು, ಏಕೆಂದರೆ, 'ಅವನು ಕೇಸುರಿಯಂತೆ (=ಬೆಂಕಿಯ ಜ್ವಾಲೆಯಂತೆ) ಹಬ್ಬಿ ಕೆರಳಿ ಚೆನ್ನಾಗಿ ಹರಡಿ ಅಂತರಂಗವನ್ನು ಕಾಸಿ ಕಪಾಲಿ (=ಶಿವ)ಯನ್ನು ಹಿಡಿದು ಆರ್ಭಟಿಸುತ್ತ ಅವನನ್ನು ಅರೆವೆಣ್ಣನಾಗಿ ಮಾಡಿಬಿಟ್ಟನು'' ಎಂದಿರುವನು. ಶಿವನು ಅರ್ಧನಾರೀಶ್ವರನೆಂದು ಪ್ರಸಿದ್ಧ ಪಡೆದಿರುವುದನ್ನು ಬ್ರಹ್ಮಶಿವ 'ಸಮಯ ಪರೀಕ್ಷೆ'ಯಲ್ಲಿ ಹೀಗೆ ಗೇಲಿ ಮಾಡಿರುವನು :

ಒಡಲೊರ್ಭಾಗಮನಿತ್ತಂ
ಗಡ ಕಾಂತೆಗೆ ಶಂಭು, ಶಂಭುಗಂ ಕೊಟ್ಟಳು ತ -
ನ್ನೊಡಲೊರ್ಭಾಗಮನಗಸುತೆ
ಗಡ ಮಿಕ್ಕೆರಡರೆಯನಾರ್ಗೆ ಕೊಟ್ಟರೊ ಪೇಳಿಂ ॥ (೧೦.೭೪)

ಶಿವನ ಪಂಚವಿಂಶತಿ ಲೀಲೆಗಳಲ್ಲಿ ಅರ್ಧನಾರೀಶ್ವರಲೀಲೆಯೂ ಒಂದು (ನೋಡಿ ಚೆನ್ನಬಸವಪುರಾಣ ಸಂಧಿ ೧೭). ಮನ್ಮಥ ಶಿವನನ್ನು ಅರೆವೆಣ್ಣನನ್ನಾಗಿ ಮಾಡಿದನೆಂದು ನೇಮಿಚಂದ್ರ ಹೇಳುವುದು ಶಿವನ ಇಪ್ಪತ್ತೈದು ಲೀಲೆಗಳಲ್ಲಿ ಒಂದಾದ ಅರ್ಧನಾರೀಶ್ವರಲೀಲೆಯನ್ನು ಅಲ್ಲಗಳೆಯುವ ಸಲುವಾಗಿಯೇ. ಬ್ರಹ್ಮಶಿವನು, 'ಶಿವ - ಪಾರ್ವತಿಯರು ತಮ್ಮ ದೇಹದ ಉಳಿದೆರಡು ಭಾಗಗಳನ್ನು ಯಾರಿಗೆ ಕೊಟ್ಟರೊ' ಎಂದು ವ್ಯಂಗ್ಯವಾಡಿರುವುದು ಪ್ರಚಲಿತ ಶಿವಪರವಾದ ಕಥೆಯನ್ನು ಅಲ್ಲಗಳೆಯುವುದಕ್ಕಾಗಿಯೇ.

ಶಿವನನ್ನು ಕಾಮ ಗೆದ್ದನೆಂಬ ಕಲ್ಪಿತ ಕಥೆ ನೇಮಿಚಂದ್ರನ ಕಾಲಕ್ಕೆ ಹುಟ್ಟಿಕೊಂಡಿರಬೇಕು. ಆಂಡಯ್ಯನು (೧೨೧೭) ತನ್ನ 'ಕಬ್ಬಿಗರ ಕಾವ'ಕ್ಕೆ 'ಕಾವನ ಗೆಲ್ಲ' ಎಂದು ಮತ್ತೊಂದು ಹೆಸರನ್ನು ಕೊಟ್ಟಿರುವನು. ಶಿವನನ್ನು ಕಾಮ ಗೆದ್ದನೆಂಬ ಜೈನಪರವಾದ ಕಲ್ಪಿತ ಕಥೆಗೆ ತನ್ನ ಪ್ರತಿಭಾಶಕ್ತಿಯಿಂದ ಕಲ್ಪನೆಯ ಹೂರಣವನ್ನು ತುಂಬಿ ಸುಂದರವಾದೊಂದು ಖಂಡಕಾವ್ಯವನ್ನೇ ಸೃಷ್ಟಿ ಮಾಡಿರುವನು. ಅವನ ದೃಷ್ಟಿಯಲ್ಲಿ ಕಾಮನೇ ಜಿನ, ಜಿನನೇ ಕಾಮ. ಆದ ಕಾರಣ ಅವನ ಕೃತಿಗೆ ಕಾಮನೇ ಕಥಾನಾಯಕ. ಮನ್ಮಥ ತನ್ನ ಸೇನೆಯೊಂದಿಗೆ ಹೋಗಿ ಮುಕ್ಕಣ್ಣನನ್ನು ಪುಷ್ಪಬಾಣ ಪ್ರಯೋಗದಿಂದ ಅರೆವೆಣ್ಣು ಮಾಡಿದ ಕಥೆಯೇ 'ಕಬ್ಬಿಗರ ಕಾವ' ಅಥವಾ 'ಕಾಮನ ಗೆಲ್ಲ' ಕಾವ್ಯದ ವಸ್ತು.

ವೃತ್ತ ವಿಲಾಸನ (೧೩೬೦) 'ಧರ್ಮಪರೀಕ್ಷೆ'ಯೂ ವಿಡಂಬನ ಪರವಾದ ೧೦ ಆಶ್ವಾಸಗಳ ಕಾವ್ಯ. ಶಿವ, ಬ್ರಹ್ಮ, ಕೃಷ್ಣ ಸೂರ್ಯ, ಇಂದ್ರ ಮೊದಲಾದ ದೇವತೆಗಳ ಅವಗುಣಗಳನ್ನು ಎತ್ತಿ ಹೇಳುವುದು, ಪುರಾಣಗಳಲ್ಲಿ ಕಥೆಗಳನ್ನು ಪರಿಹಾಸ್ಯ ಮಾಡುವುದು ವೃತ್ತವಿಲಾಸನ ಪ್ರಧಾನ ಉದ್ದೇಶವಾಗಿರುವುದು. ಜಿನಧರ್ಮದ ಶ್ರೇಷ್ಠತೆಯ ಪ್ರತಿಪಾದನೆ, ತತ್ತ್ವವಿವರಣೆ ಹಾಗೂ ನಿರೂಪಣೆ ಕೃತಿಯಲ್ಲಿ ಮುಖ್ಯವಾಗಿ ಬರುತ್ತದೆ.

ಶಿಶುಮಾಯಣನ (೧೪೭೨) 'ತ್ರಿಪುರದಹನ ಸಾಂಗತ್ಯ'ವು ಶಿವಪರವಾದ ತ್ರಿಪುರದಹನದ ಕಥೆಯನ್ನು ಜೈನಪರವಾಗಿ ಹೊರಳಿಸುವ ಉದ್ದೇಶದಿಂದಲೇ ರಚನೆಯಾದಂತಿದೆ. ಶಿಶುಮಾಯಣನು 'ಆವುದು ತ್ರಿಪುರವಾ ಪುರವರವನು ಸುಟ್ಟು। ದೇವನದಾವನೆಂಬುದನು। ತಾವಱಿಯದೆ ತಮ್ಮ ಮನಕೆ ಬಂದಂದದಿ । ಭಾವಿಸುತಿಹರಿಂತೆಂದು॥ (ಪ. ೨೪) ಎಂದು ಹೇಳಿ, ಮೇದಿನಿಯನ್ನು ರಥವನ್ನಾಗಿ, ಚಂದ್ರಸೂರ್ಯರನ್ನು ರಥದ ಗಾಲಿಗಳನ್ನಾಗಿ, ನಾಲ್ಕು ವೇದಗಳನ್ನು ಕುದುರೆಗಳನ್ನಾಗಿ,

ಕ್ಷೀರಸಮುದ್ರವನ್ನು ಹೊರಜೆಯನ್ನಾಗಿ, ಜಪಗಳನ್ನು ಜೊತ್ತಗೆಯನ್ನಾಗಿ, ಮಂದರಗಿರಿಯನ್ನು ಬಿಲ್ಲನ್ನಾಗಿ, ನಾಗೇಂದ್ರನನ್ನು ಬಿಲ್ಲಿನ ಹೆದೆಯನ್ನಾಗಿ, ಮುಕುಂದನನ್ನು ಬಾಣವನ್ನಾಗಿ, ಸರಸಿಜಭವನನ್ನು ಸಾರಥಿಯನ್ನಾಗಿ ಮಾಡಿಕೊಂಡು ಶಿವನು ತ್ರಿಪುರವನ್ನು ಸುಟ್ಟು ಶಿವಪುರಾಣಗಳಲ್ಲಿ ಬರುವ ಕಥೆಯನ್ನು ಒಪ್ಪದೆ ಅದಕ್ಕೆ ಪರ್ಯಾಯವಾಗಿ ಜನಪರವಾಗಿ ಆ ಕಥೆಯನ್ನು ಶಿಶುಮಾಯಣ ಹೊರಳಿಸುವನು. ''ಲೋಕವೀರೇಳಕೆ ನೆಜೆ ಬಲ್ಲಿದನು ಪಿನಾಕಿಯೆಂಬರು ಕಥೆಯೊಳಗೆ ನಾಕಿಗಳನು ಕೂಡಿ ತ್ರಿಪುರಕೆ ನಡೆದ ಕಾಕುಮಾತ ಕೇಳಬಹುದೆ'' ಎಂದು ಕವಿ ಸಂದೇಹಿಸುವನು (ಪ. ೨೯). ಉರಿಗಣ್ಣಿನಿಂದ ಸುಟ್ಟು ಬೂದಿ ಮಾಡುವ ಶಕ್ತಿ ಈಶ್ವರನಿಗಿದ್ದೂ ಅವನು ಸಕಲ ಬಲವನ್ನು ಒಗ್ಗೂಡಿಸಿ ಯುದ್ಧವನ್ನು ಮಾಡಿದನೆಂಬ ಮಾತನ್ನು ಧರೆಯೊಳಗೆ ಹರಡಬಹುದೆ? ಎಂದು ವ್ಯಂಗ್ಯವಾಡುವನು (ಪ.೩೦). ನಿರ್ವಾಣ ರೂಪಿಗಲ್ಲದೆ ಬೇರೆ ಯಾರಿಗೂ ತ್ರಿಪುರವನ್ನು ವಶಪಡಿಸಿಕೊಳ್ಳಲು ಸರ್ವಥಾ ಸಾಧ್ಯವಿಲ್ಲವೆಂದು ದೇವತೆಗಳು ಹೇಳಿರುವಾಗ ಹರಿಯು ತಟಸ್ಥನಾದ (ಪ.೩೧). ಲೋಕಪೂಜಿತನಾದ ಹರಿ ತ್ರಿಪುರದೊಳಗುಳ್ಳ ಅನೇಕ ಪತಿವ್ರತೆಯರನ್ನು ಕೋಟಲೆಗೊಳಿಸಿ ಅವರ ವ್ರತಗಳನ್ನು ಕೆಡಿಸುವುದು ವಿವೇಕವೆ ಹೇಳಿ ಕೋವಿದರು (ಪ.೩೨) ಎಂದು ಕವಿ ಹರಿಯನ್ನು ವ್ಯಂಗ್ಯವಾಗಿ ಮೂದಲಿಸುವನು. ಮೊದಲಿಗೆ ಮೂರುಪುರವನ್ನು ನಿರ್ಮಿಸಿದ ಪದುಮನಾಭನು ಮುಂದೆ ತಾರಕಾಸುರನ ಮಕ್ಕಳು ತನಗೆ ಶತ್ರುಗಳಾಗುವರೆಂಬುದನ್ನು ತಿಳಿಯದೆ ಅವರಿಗೆ ವರವನ್ನು ಅನುಗ್ರಹಿಸುವ ರೀತಿ ಯಾವುದು? (ಪ.೩೩). ಹದಿನಾಲ್ಕು ಲೋಕಗಳು ಪುರುಷೋತ್ತಮನ ಹೊಟ್ಟೆಯಲ್ಲಿರುತ್ತಿದ್ದು ತಾನು ತಾರಕಾಸುರನ ಮಕ್ಕಳ ಮೇಲೆ ಯುದ್ಧವನ್ನು ಸಾರಿದುದು ವಿಚಿತ್ರವಲ್ಲವೆ? (ಪ.೩೪) ಎಂದು ಪದುಮನಾಭ ಹಾಗೂ ವಿಷ್ಣುವನ್ನು ಮೂದಲಿಸುವನು. ಇದು ಕ್ರಮವಲ್ಲ, ತ್ರಿಪುರವನ್ನು ಸುಟ್ಟವನು ಕೈಲಾಸನಗದಲ್ಲಿರುವ ಆದೀಶ್ವರನು. ಆ ಕೌತುಕವನ್ನು ಹೇಳುವೆನೆಂದು ಕಥೆಯನ್ನು ಪ್ರಾರಂಭಿಸುವನು. (ಪ.೩೫).

ಶಿವಪರವಾದ ತ್ರಿಪುರದಹನ ಕಥೆಯಲ್ಲಿ ತಾರಕಾಸುರನ ಮಕ್ಕಳಾದ ತಾರಕಾಕ್ಷ, ಕಮಲಾಕ್ಷ, ವಿದ್ಯುನ್ಮಾಲಿಗಳು ಬ್ರಹ್ಮನನ್ನು ಕುರಿತು ಉಗ್ರವಾದ ತಪಸ್ಸನ್ನು ಆಚರಿಸಿದರು. ಅವರ ತಪ್ಪಿಗೆ ಮೆಚ್ಚಿದ ಬ್ರಹ್ಮ ನಿಮ್ಮ ಮನದಭೀಷ್ಟವಾವುದೆಂದು ಕೇಳಿದನು. ರಕ್ಕಸರು ಗಗನಾಗ್ರದಲ್ಲಿ ಬಂಗಾರದ್ದೊಂದು, ಬೆಳ್ಳಿಯದೊಂದು ಕಬ್ಬಿಣದ್ದೊಂದು - ಹೀಗೆ ಮೂರು ಪಟ್ಟಣಗಳನ್ನು ರಚಿಸಿ ಅದಕ್ಕೆ ಒಂದೇ ಕೀಲವು ಇದ್ದು ಅದು ಯಾರಿಗೂ ಕಾಣದಂತಿರಬೇಕು. ಮುಂದೆ ಸುರಸಹಸ್ರ ವರುಷಕ್ಕೆ ಒಂದಾಗಿ ಪುನಃ ಅಗಲುವುದರೊಳಗಾಗಿ ಒಂದೇ ಬಾಣದಿಂದ ಹೊಡೆದರೆ ಅವು ನಾಶವಾಗಲಿ. ಇಲ್ಲಿದಿದ್ದರೆ ಅವು ಸತತವಾಗಿ ತಿರುಗುತ್ತಿರಲಿ. ಖಚರ, ಕಿನ್ನರ ಮುಂತಾದವರು ಎಡೆಬಿಡದೆ ನಮ್ಮ ಸೇವೆ ಮಾಡಲಿ. ಎಲ್ಲ ಲೋಕಗಳ ಜನರು ಭಯಗೊಂಡು ನಮ್ಮ ವಚನವನ್ನು ಅತಿಕ್ರಮಿಸದಿರಲಿ ಎಂಬ ವರನ್ನು ಬೇಡಿದರು. ಬ್ರಹ್ಮನು ಹಾಗೆಯೇ ಆಗಲಿ ಎಂದನು. ಮುಂದೆ ತಾರಕಾಕ್ಷ ಕಮಲಾಕ್ಷ ವಿದ್ಯುನ್ಮಾಲಿಗಳು ಲೋಕ ಕಂಟಕರಾಗಿ ಮೆರೆದಾಗ ಬ್ರಹ್ಮ - ವಿಷ್ಣು - ದೇವೇಂದ್ರಾದಿಗಳು ಶಿವನಲ್ಲಿ ಮೊರೆಹೊಕ್ಕರು. ಸುರಸಹಸ್ರವರ್ಷಗಳು ಮುಗಿಯಲು ಬೇರೆ ಬೇರೆ ಸುತ್ತುತ್ತಿದ್ದು ಪುರಗಳು ಒಂದಾದವು. ಈಶ್ವರನು ಲಲಾಟೇಕ್ಷಣಾಗ್ನಿಯನ್ನು ಹುರಿಗೊಳಿಸಿ ಬಾಣವನ್ನು ಬಿಡಲು ಪುರತ್ರಯದ ಕೀಲವು ಖಂಡಿಸಿ ಅದರ ಪರಿಕರಗಳೆಲ್ಲವು ಸುಟ್ಟುಹೋದವು. ಆ ಕ್ಷಣದಲ್ಲೇ ದೈತ್ಯಸಂಕುಲವು ನಾಶವಾಯಿತು. (ಚೆನ್ನ ಬಸವ ಪುರಾಣ ಸಂಧಿ ४೧-४४).

ಶಿಶುಮಾಯಣನು ಈ ಕಥೆಯನ್ನು ಜೈನೀಕರಿಸುವ ಪ್ರಯತ್ನ ನಡೆಸಿರುವನು. ಅಷ್ಟೇ ಅಲ್ಲದೆ, ಇದನ್ನು ಸಾಂಕೇತಿಕ ಕಾವ್ಯವಾಗಿಯೂ ನಿರೂಪಿಸಲು ಯತ್ನಿಸಿರುವನು. ಮೂರು ಪುರಗಳು ಜನನ -ಜರಾ - ಮರಣಗಳೆನ್ನುವನು. ಈ ತ್ರಿಪುರದ ಒಡೆಯ ಮೋಹಾಸುರನೆಂದೂ ಆತನ ಪತ್ನಿ ಮಾಯೆಯೆಂದೂ, ಅವನ ಮಕ್ಕಳು ನಾರಕಗತಿ - ನರಗತಿ (ಮಾನವಗತಿ) - ಅನಿಮಿಷಗತಿ - ತಿರಿಯಂಚಗತಿಯೆಂದೂ ಹೇಳುವನು. ಆ ಪುರಗಳನ್ನು ಅವಿನಯವೆಂಬ ವನವು ಸುತ್ತುವರೆದಿದೆ; ಆ ಪುರದ ಅಷ್ಟ ದಿಕ್ಕುಗಳಲ್ಲಿ ಜ್ಞಾನಾವರಣೀಯ ಮೊದಲಾದ ಎಂಟು ದುರ್ಗಗಳಿದ್ದು ಅವು ಆಗಸವನ್ನು ಮುಟ್ಟುವಂತಿವೆ; ಆ ದುರ್ಗಗಳನ್ನು ಅತಿಕಾಂಕ್ಷೆಯೆಂಬ ಅಗಳು ಬಳಸಿದೆ. ಆ ಮೂರು ಪಟ್ಟಣಗಳನ್ನು ಕೊಲೆಯೆಂಬ ಕೋಟೆಯು ಬಳಸಿರುವುದು; ಆಯ್ದು ಸಂಸಾರವೆಂಬ ಆಳ್ವೇರಿಯು ಬಳಸಿದೆ; ಹದಿನೈದು ಬಗೆಯ ಪ್ರಮಾದದಿಂದ ಚೆಲುವಾದ ಹುಲಿಮೊಗಗಳಿವೆ; ಆ ತ್ರಿಪುರದ

ಸುತ್ತುವಳಯದಲ್ಲಿ ಅಲ್ಲಲ್ಲಿ ಪರೀಷಹಗಳೆನ್ನುವ ಕೊತ್ತಳಗಳು ಶೋಭಿಸಿವೆ; ಹುಸಿ ಎಂಬ ಹೂಡೆಯವು ಆ ಮೂರು ಪುರದ ಸುತ್ತಲಿರುವುದು; ಅಷ್ಟಮದಗಳೆನ್ನುವ ಅಟ್ಟೆಗಳು ಮೂರು ಪಟ್ಟಣದ ಎರಡೂ ದಿಕ್ಕುಗಳಿಲ್ಲಿವೆ; ಪುರದ ಬಾಗಿಲುವಾಡಗಳನ್ನು ಹಗಲೂರಾತ್ರಿ ಕಾದಿರುತ್ತಿರುವ ಪರಭೀಕರವೆನಿಸುವ ವೀರ ಸೈನಿಕರಿರುವರು; ಹಲವು ಮಿಥ್ಯತ್ವದ ಕೇರಿಕೇರಿಗಳೊಳಗೆ ಹಲವು ಯೋನಿಗಳೆಂಬ ಗೃಹಗಳು ತೊಳಲುವರು. ಹೀಗೆ ಎಂದೆಂದಿಗೂ ಒಂದು ಮತ್ತೊಂದನ್ನು ಸೇರದೆ ಪ್ರತ್ಯೇಕವಾಗಿ ತಿರ್‍ರೆಂದು ತಿರುಗುತ್ತ ಆ ಪುರಗಳು ಶೋಭಿಸುವೆ ಎಂದು ಕವಿ ಸಾಂಕೇತಿಕವಾಗಿ ಹೇಳುವನು (ಪ.೩೬-೪೯) ತ್ರಿಪುರಗಳ ಒಡೆಯ ಮೋಹಾಸುರನಿಗೆ ಕ್ರೋಧ ಲೋಭ ಮಾಯವೇ ಮೊದಲಾದ ನಾಲ್ವರು ಮಂತ್ರಿ ಶ್ರೇಷ್ಠರು; ವ್ಯಸನಗಳೆನ್ನುವ ಅನುಪಮ ವೀರರು; ನಾನಾ ಕರ್ಮಗಳೆನ್ನುವ ಪರಿಹಾರ; ಮೀನಕೇತನನೆನ್ನುವ ದಳಪತಿ ಎನ್ನುವನು (ಪ.೬೦-೬೩). ತನ್ನ ಭುಜಬಲದಿಂದ ಮೋಹಾಸುರನು ಇಂದ್ರನನ್ನು ಮುಂದುಗೆಡಿಸಿ, ಅಗ್ನಿಯನ್ನು ಅಂದಗೆಡಿಸಿ, ಯಮನನ್ನು ಹೇಡಿಯಾಗಿಸಿ, ಪಿಶಿತಾಶಿಯ ಸೆರೆಗೆಯ್ದು ತಂದನು. ವರುಣನನ್ನು ಶಕ್ತಿಗುಂದಿಸಿ, ವಾಯವ್ಯನನ್ನು ಮರುಳು ಮಾಡುತ್ತ, ಕುಬೇರನನ್ನು ದೊರೆಗೆಡಿಸಿ, ಈಶಾನ್ಯನನ್ನು ಭುವಿಯಲ್ಲಿ ತಿರುಪೆಯೆತ್ತುವಂತೆ ಮಾಡಿ, ದೇವೇಂದ್ರನನ್ನು ವಂಚಿಸಿ, ದೇವತೆಗಳ ಸಮೂಹವನ್ನು ಭ್ರಮೆಗೊಳಿಸಿ, ಸೂರ್ಯನನ್ನು ಕ್ರಮಗೆಡಿಸಿ, ಚಂದ್ರನನ್ನು ರಾಹುವಿನ ಬಾಣದ ತುದಿಗೆ ಸಿಕ್ಕಿಸಿ, ಮಂಗಳ ಬುಧ ಮೊದಲಾದ ಗ್ರಹಗಳನ್ನು ಕಂಗೆಡಿಸಿ ಕಾಡಿದನೆಂದು ಕವಿ ವರ್ಣಿಸುವನು (ಪ. ೬೫-೬೮).

ಇತ್ತ ಮೋಹಾಸುರನನ್ನು ಸಂಹರಿಸಲು ಕೈಲಾಸ ಪರ್ವತದಲ್ಲಿ ಪರಮೇಶ್ವರ ಆದಿಜಿನನು ದೇವತೆಗಳಿಂದ ಸುತ್ತುವರಿದು ಶೋಭಿಸಿರುವನೆಂದೂ, ಆದಿಜಿನನ ಆವಾಸಸ್ಥಾನ ರಜತಾದ್ರಿ, ರಜತಾಚಲವೆಂದೂ, ಅದರ ಮಧ್ಯದಲ್ಲಿ ಆಧೀಶ್ವರನ ಆಲಯವಿದೆಯೆಂದೂ ವರ್ಣಿಸಿರುವನು (ಪ.೭೦-೭೪). ಪರಮೇಶ್ವರನು ಆದಿಜಿನಪನ ವಾಸಸ್ಥಾನವೇ ಮೊದಲಾಗಿ ಭೂತವರ್ತಮಾನ ಭವಿಷ್ಯತ್ ಕಾಲಗಳಲ್ಲಿ ಎಪ್ಪತ್ತೆರಡು ಜಿನಾಲಯಗಳನ್ನು ನಿರ್ಮಿಸಿದನೆಂದು ಕವಿ ಹೇಳುವನು (ಪ. ೮೨). ಲೋಕಕಂಟಕನಾದ ಮಹಾಸುರ ಹಾಗೂ ಅವನ ಮಕ್ಕಳನ್ನು ಕೊಲ್ಲಲು ಪರಮೇಶ್ವರನು ಜ್ಯೋತಿರೂಪವನ್ನು ಧರಿಸಿದನೆಂದು ಕವಿ ನಿರೂಪಿಸುವನು (ಪ. ೧೦೫).

ಶಿವಪರವಾದ ತ್ರಿಪುರದಹನದ ಕಥೆಯಲ್ಲಿ ಶಿವನು ತ್ರಿಪುರವನ್ನು ದಹಿಸಲು ಹೊರಟಾಗ ಸಮಸ್ತ ದೇವತೆಗಳು ಹೇಗೆ ನೆರವಾದರೆಂಬುದನ್ನು ಪುರಾಣಗಳಲ್ಲಿ ಹೇಳಲಾಗಿದೆ. ಅದನ್ನು ಶಿಶುಮಾಯಣನು ಅಲ್ಲಗಳೆದಿರುವುದನ್ನು ಹಿಂದೆಯೇ ಉಲ್ಲೇಖಿಸಲಾಗಿದೆ. ಶಿವಪುರಾಣಗಳು ಹೇಳುವುದಕ್ಕೆ ಪರ್ಯಾಯವಾಗಿ ಶಿಶುಮಾಯಣ ಹೀಗೆ ಹೇಳುವನು :

ಆದೀಶ್ವರನು ಜಾತರೂಪವ ಧರಿಸಿ ಭೂತೇಶನಾಗಿ ಪದ್ಮಾಸನವೆಂಬ ಅಚ್ಚಿನಲ್ಲಿ ಆರಾಧನೆಯೆಂಬ ಚಕ್ರಗಳನ್ನು ಅಳವಡಿಸಿ, ಸಮ್ಯಕ್ತ್ವವೆನ್ನುವ ಕೀಲುಗಳನ್ನು ಹಾಕಿ, ೮೪ ಲಕ್ಷ ಗುಣಗಳೆನ್ನುವ ಹಗ್ಗವನ್ನು ಬಿಗಿದು, ಬಂಭ್ರಮಿಸದ ಧ್ಯಾನವನ್ನುವ ನೊಗವನ್ನು ಮಾಡಿ, ಸಂಭ್ರಮದಿಂದ ರಥವನ್ನು ಹೂಡಿದನು. ಆ ರಥಕ್ಕೆ ಸದ್ವ್ರತವೆನ್ನುವ ಜೊತ್ತಗೆಗಳಿಗೆ ಚಾರಿತ್ರವೆನ್ನುವ ಶ್ರೇಷ್ಠ ಕುದುರೆಗಳನ್ನು ಕಟ್ಟಲಾಯಿತು. ದಶಧರ್ಮವೆನ್ನುವ ಧನುವಿನಲ್ಲಿ ಸ್ಮೃತಿಯೆಂಬ ಹೆದೆಯನ್ನು ಅಳವಡಿಸಿ ಅಸಮವೆನ್ನುವ ಪಂಚಮಂತ್ರಾಸ್ತ್ರಗಳನ್ನು ಹೊಸ ರೀತಿಯಲ್ಲಿ ತುಂಬಿದನು. ಕ್ಷಮೆಯೆನ್ನುವ ಖಡ್ಗ, ಸಂಯಮವೆನ್ನುವ ಖೇಟಕ, ಸತ್ವಶಕ್ತಿ ಪ್ರಮುಖವಾದ ಸಕಲ ಆಯುಧಗಳು, ಅಷ್ಟ ಗುಣಗಳೆನ್ನುವ ಅಷ್ಟ ಪತಾಕೆಗಳನ್ನು ಎಂಟು ದಿಕ್ಕುಗಳಿಗೆ ಹೊಂದಿಸಿ - ಹೀಗೆ ರಥವನ್ನು ಸಿಂಗರಿಸಲಾಯಿತು. ಹದಿನೆಂಟು ಸಾವಿರ ಶೀಲಗುಣಗಳೆನ್ನುವ ವೀರರುಗಳನ್ನು ಕೂಡಿಕೊಂಡು ನವವಿಧ ದೇವವ್ರತಗಳೆನ್ನುವ ಕುದುರೆಗಳನ್ನು ಬರಿಸಿದನು. ದ್ವಾದಶತಪಗಳೆನ್ನುವ ಆನೆಗಳನ್ನು ಸಮೂಹ ಚತುರಂಗ ಸೇನೆಗೆ ಸೇರಿತು. ಪಂಚ ಸಮಿತಿಗಳೆನ್ನುವ ಮಂತ್ರಿಶ್ರೇಷ್ಠರು, ಪಂಚಬಾಣ ಮೊದಲಾದ ಮನ್ನೆಯರು ಯುದ್ಧದಲ್ಲಿ ಭಾಗಿಗಳಾಗಲು ಸನ್ನದ್ಧರಾದರು. ಭೂತದಯಾಪರವೆಂದು ಪ್ರಸಿದ್ಧಿ ಪಡೆದ ಧರ್ಮಧ್ವಜವು ಜಾತರೂಪನ ಸೈನ್ಯದ ಮುಂಭಾಗದಲ್ಲಿ ಶೋಭಿಸಿದುವು. ರತ್ನತ್ರಯಗಳೇ ಸಾರಥಿಯಾಗಿ, ಜಿನಧರ್ಮಪರನು ಸೇನಾಪತಿಯಾಗಿ ತನ್ನ ಸೈನ್ಯವನ್ನು ಕೂಡಿಕೊಂಡು ಆ ಪುರುಪರಮೇಶ್ವರನು ಯುದ್ಧಕ್ಕೆ ಹೊರಟನು (ಪ. ೧೦೬-೧೨೨).

ಪರಮೇಶ್ವರನು ಮೋಹಾಸುರನ ಜೊತೆ ಯುದ್ಧಕ್ಕೆ ನಿಂತಾಗ ಆಕಾಶದಲ್ಲಿ ಮೂರು ಪುರಗಳು ಒಂದುಗೂಡದೆ ತಿರುಗುತ್ತಿದ್ದವು. ಆಗ ಪರಮೇಶ್ವರನು ಅಪರಾಜಿತವೆಂಬ ಮಂತ್ರಬಾಣವನ್ನು ತ್ರಿಪುರಕ್ಕೆ ನೇರವಾಗಿ ಗುರಿ ಮಾಡಿ ಪ್ರಯೋಗಿಸಲು ಮೋಹಾಸುರನ ರುಂಡಮುಂಡಗಳು ಬೇರ್ಪಡೆಯಾಗಿ ಬಿದ್ದನು. ಆಗ ಅತಿಕಾಂಕ್ಷೆಯೆಂಬ ಅಗಳು ಪಾತಾಳ ಸೇರಿತು. ಅದನ್ನು ನಿಷ್ಕಾಂಕ್ಷೆಯೆಂಬ ಧೂಳಿನಿಂದ ಮುಚ್ಚಿದನು. ಕೊಲೆಯೆಂಬ ಕೋಟೆಯನ್ನು ಅಹಿಂಸೆಯೆಂಬ ವಜ್ರದ ಹಾರೆಯಿಂದ ಬುಡಮೇಲು ಮಾಡಿದನು. ಮೋಹಾಸುರನನ್ನು ಗೆದ್ದಕೂಡಲೇ ವೃಷಭಾಂಕನ ಹಣೆಯಲ್ಲಿ ಕೇವಲ ಬೋಧವೆಂಬ ಅಸಮಲೋಚನ ಹುಟ್ಟಿತು. ಅದರಿಂದ ಮೂರು ಲೋಕಗಳನ್ನು ಅವನು ಸುಟ್ಟುಹಾಕಿದನು. ಆಗ ಮುಕ್ತಿಕನ್ಯೆ ಅವನಿಗೆ ಒಲಿದು ಅವನನ್ನು ಕೊಂಡೊಯ್ದಳು. ಹೀಗೆ ತ್ರಿಪುರವನ್ನು ಸುಟ್ಟು ಮೂರುಲೋಕಗಳಿಗೆ ಒಡೆಯನಾಗಿ ಆ ಪುರುಪರಮೇಶ್ವರನು ಮೋಕ್ಷವನ್ನು ಹೊಂದಿದನೆಂದು ಕವಿ ಕೃತಿಯನ್ನು ಮುಕ್ತಾಯಗೊಳಿಸುವನು (ಪ. ೨೫೧-೨೬೪).

ಪುರುಪರಮೇಶ್ವರನು ಮೋಹಾಸುರನನ್ನು ಕೊಂದಾಗ ಅವನ ಹಣೆಯಲ್ಲಿ ಕೇವಲ ಜ್ಞಾನವೆನ್ನುವ ಅಸಮಲೋಚನ ಹುಟ್ಟಿತೆಂದಿರುವುದು ಶಿವನಿಗೆ (ಮುಕ್ಕಣ್ಣ) ಅವನನ್ನು ಸಮೀಕರಿಸುವ ಉದ್ದೇಶವನ್ನು ಸ್ಪಷ್ಟಪಡಿಸುತ್ತದೆ. ಕೃತಿಯ ಉದ್ದಕ್ಕೂ ಲೋಕವಿನಾಶಕ ದುಷ್ಟಶಕ್ತಿಯಾಗಿ ಮೋಹಾಸುರ, ಲೋಕೋದ್ಧಾರಕ ಸಾತ್ವಿಕ ಶಕ್ತಿಯಾಗಿ ಆದೀಶ್ವರ ಸಂಘರ್ಷಕ್ಕೀಳಿಯುವರು

ಶಿಶುಮಾ.ಯಣನು ಶಿವನಿಗೆ ಪುರುಪರಮೇಶ್ವರನನ್ನು ಸಮೀಕರಿಸುವ ಉದ್ದೇಶದ ಹಿಂದೆ ಒಂದು ಜೈನ ಸಂಪ್ರದಾಯ ಸದ್ದಿಲ್ಲದೆ ಕೆಲಸ ಮಾಡಿದೆ. ವೈದಿಕ ರಾಮಾಯಣ, ಭಾರತಗಳನ್ನು ಜೈನೀಕರಿಸುವ ಒಂದು ಸಂಪ್ರದಾಯ ಶಿಶುಮಾಯಣನ ಕಾಲಕ್ಕಾಗಲೇ ಚಾಲನೆ ಪಡೆದಿದ್ದಿತು. ಇಲ್ಲಿ ಶೈವಪರಂಪರೆಯ ಕಥೆಯನ್ನು ಜೈನೀಕರಿಸುವ ಪ್ರಕ್ರಿಯೆ ನಡೆದಿದೆ. ಇವನಿಗೆ ಪೂರ್ವದಲ್ಲಿಯೇ ಶಿವನ ಆಧಿಕ್ಯವನ್ನು ಹತ್ತಿಕ್ಕುವ ಪ್ರಯತ್ನ ನಡೆದಿದ್ದಿತು. ಅರ್ಜುನನು ಶಿವನ ಗಂಟಲನ್ನು ಒತ್ತಿ ಮೆಟ್ಟಿದ್ದು, ಮನ್ಮಥನು ಶಿವನನ್ನು ಅರೆವೆಣ್ಣಾಗಿಸಿದುದು; ಮನ್ಮಥನು ಶಿವನನ್ನು ತನ್ನ ಪುಷ್ಪಬಾಣಗಳಿಂದ ಸುಟ್ಟುದು ಮೇಲಿನ ಮನೋಭಾವಕ್ಕೆ ಪುಷ್ಟಿಯೊದಗಿಸುವ ನಿರೂಪಣಾ ಕ್ರಮವೆಂದು ಸಹಜವಾಗಿ ತೋರುತ್ತದೆ. ಗಂಗೆಯನ್ನು ಭುವಿಗೆ ತರಲು ಸಗರನು ನಡೆಸಿದ ಸಾಹಸವು ಜೈನಕವಿಗಳ ಪಾಲಿಗೆ ಇತಿಹಾಸವನ್ನು ತಿರಿಚುವ ಸಂದರ್ಭವೆಂಬುದು ಹೊಳೆಯದೇ ಹೋದುದು, ಒಂದು ವಿಪರ್ಯಾಸವೇ ಆಗಿ ತೋರುತ್ತದೆ. ಜೈನಧರ್ಮದ ಅವನತಿಯ ದಿನಗಳಲ್ಲಿ ವೈದಿಕ ಹಾಗೂ ಶೈವ ಪುರಾಣಗಳ ದೇವಾದಿ ದೇವತೆಗಳನ್ನು, ಮಹಾಪುರುಷರನ್ನು ಜೈನೀಕರಿಸುವ ಹಿನ್ನೆಲೆಯಲ್ಲಿ ಒಂದು ಹತಾಶಮನೋಭಾವವನ್ನೂ, ಸಮೀಕರಿಸುವ ಮೂಲಕ ಜೈನೇತರರನ್ನು ತಮ್ಮೆಡೆಗೆ ಒಲಿಸಿಕೊಳ್ಳುವ ಪ್ರಯತ್ನವನ್ನು ಕಾಣಬಹುದಾಗಿದೆ.

ಶಿಶುಮಾಯಣ ಶೈವಪರವಾದ ಪುರಾಣದ ಕಥೆಯೊಂದನ್ನು ಜೈನೀಕರಿಸುವ ಸಂದರ್ಭದಲ್ಲಿ ಅದನ್ನು ರೂಪಕ ಅಥವಾ ಸಾಂಕೇತಿಕ ನೆಲೆಯಲ್ಲಿ ವೈಭವೀಕರಿಸುವನು. ತಾಮಸಿಕ ಪ್ರತಿನಿಧಿಯಾದ ಮೋಹಾಸುರನನ್ನೂ ಅವನ ಸೈನ್ಯವನ್ನೂ ಕುರಿತು ಹೇಳುವಾಗ ಜೈನಧರ್ಮದ ಪರಿಭಾಷೆಯು ತನಗೆ ತಾನೇ ಅಲ್ಲಾ ವಿಜೃಂಭಿಸಿಬಿಡುವುದು, ಸಾತ್ವಿಕ ಪ್ರತಿನಿಧಿಯಾದ ಆದೀಶ್ವರನನ್ನೂ ಅವನ ಪಡೆಯನ್ನೂ ವರ್ಣಿಸುವಾಗ ಆಧ್ಯಾತ್ಮಿಕ ಪರಿಭಾಷೆಯನ್ನೂ ಅರ್ಥಪೂರ್ಣವಾಗಿ ಸಂಯೋಜಿಸುವುದು ತನ್ನ ಕೃತಿಯನ್ನು ಸಾಂಕೇಂತಿಕ ನೆಲೆಯಲ್ಲಿ ಅತಿಶಯವಾಗಿಸುವ, ಬೇರೊಂದು ನೆಲೆಯಲ್ಲಿ ಅರ್ಥವನ್ನು ಸಂವಹಿಸುವ ಪೂರ್ವನಿರ್ಧರಿತ ಯೋಜನೆಯಾಗಿ ಕಣ್ಣಿಗೆ ಢಾಳವಾಗಿ ಕಾಣಬರುತ್ತದೆ.

ಶಿಶುಮಾಯಣ ಕನ್ನಡದ ಸಾಂಗತ್ಯಕವಿಗಳಲ್ಲಿ ಗಮನಾರ್ಹ ಕವಿಯಲ್ಲದಿರಬಹುದು. ಒಂದು ಪುಟ್ಟ ಕಥಾವಸ್ತುವನ್ನು ವಿಸ್ತರಿಸಿ ಹೇಳುವ ಸಂದರ್ಭದಲ್ಲಿ ಆತ ಜೈನನಾಗಿಯೂ ಯುದ್ಧ ಪ್ರಸಕ್ತಿ ತರುವನು. ಅವನ ಯುದ್ಧ ವರ್ಣನೆ ಸಾಂಪ್ರದಾಯಿಕವಾಗಿದ್ದರೂ ಕಥೆಯ ನಿರೂಪಣೆಯಲ್ಲಿ ಅವನು ಅದರ ಗತಿ ಸಾಂಕೇತಿಕ ನೆಲೆಯಲ್ಲಾಗುವಂತೆ ಉದ್ದಕ್ಕೂ ಎಚ್ಚರ ವಹಿಸಿರುವುದು, ಅದನ್ನು ಒಂದು ರೂಪಕ ಕಾವ್ಯವಾಗಿಸುವ ಅವನ ಉದ್ದೇಶ ಅನನ್ಯತೆಯನ್ನು ಪಡೆಯುವುದು ಒಬ್ಬ ಸಾಧಾರಣ ಕವಿಯ ಅಸಾಧಾರಣ ಪ್ರಯತ್ನವಾಗಿ ತೋರಿಬರುವುದು.

ಕಂಪ್ಯೂ - ಕನ್ನಡ

ಡಾ॥ ಶ್ರೀನಿವಾಸ ಹಾವನೂರ

ಇತ್ತೊಂದು ಕಾಲ - ಕನ್ನಡಕ್ಕೂ ಕಂಪ್ಯೂಟರಿಗೂ ಏನೂ ಸಂಬಂಧವಿಲ್ಲ - ಎಂದು ಹೇಳುತ್ತಿದ್ದ ಕಾಲ. ಗಣೇಶ ಚತುರ್ಥಿಗೂ ಇಮಾಮ ಸಾಬಿಗೂ ಎಲ್ಲಿಯ ಸಂಬಂಧ, ಎಂದು ಕೇಳುತ್ತಿದ್ದ ಹಾಗೆ, ಆದರೆ ಕಾಲ ಬದಲಾಗಿದೆ. ಗಣೇಶ ಚತುರ್ಥಿಯ ದಿನದಂದು ಪುಣೆ, ಮುಂಬಯಿಗಳಲ್ಲಿ ಎಷ್ಟೋ ಇಮಾಮಸಾಬಿಗಳು ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದಾರೆ!

ಕಂಪ್ಯೂಟರ್ ಮತ್ತು ಕನ್ನಡ - ಇವುಗಳ ವಿಚಾರವೂ ಹಾಗೇನೆ. ಮೂರು ದಶಕಗಳ ಹಿಂದೆ 'ಡಿಟಿಪಿ' ಎನ್ನುವ ಮೂರಕ್ಷರದ ಶಬ್ದ ಕನ್ನಡ ಮುದ್ರಣಾಲಯಗಳಲ್ಲಿ 'ಒಳಗೆ ಬರಲೇ' ಎಂದು ಕೇಳಕೇಳುತ್ತ ಧುತ್ತೆಂದು ಪ್ರವೇಶಿಸಿಬಿಟ್ಟಿತು. ಮುದ್ರಿತ ಪುಸ್ತಕಗಳು ಸೊಗಸಾಗಿ ಹೊರಬರತೊಡಗಿದ್ದು ಈಗ ಮಾಮೂಲಿಯ ಮಾತಾಗಿದೆ.

ಕನ್ನಡದ ಕಂಪೋಸಿಂಗ್‌ಗಾಗಿ ಹಲವಾರು ತಂತ್ರಾಂಶಗಳು, ಸಾಫ್ಟ್‌ವೇರ್ ಸಿದ್ಧವಾದದ್ದೊಂದು ಅಗತ್ಯದ ಸಾಧನೆ. ಶಬ್ದರತ್ನ, ಆಕೃತಿ, ಶ್ರೀಲಿಪಿ, ಸುರಭಿ, ಪ್ರಕಾಶಕ - ಏನೆಲ್ಲ. ಅಮೇರಿಕೆಯಲ್ಲಿ ಕುಳಿತೇ ಒಬ್ಬ ಕನ್ನಡ ಲಿಪಿಯ ಸಾಫ್ಟ್‌ವೇರ್ ಸಿದ್ಧಪಡಿಸಿ 'ಬರಹ' ಎನ್ನುವ ಅಚ್ಚಗನ್ನಡ ಶಬ್ದವನ್ನೇ ಅದಕ್ಕಿರಿಸಿದರು.

ಜಸ್ಟ್- ಕಾರ್ಡ್ ಎನ್ನುವ ಯಂತ್ರಾಂಶವೂ (ಹಾರ್ಡ್‌ವೇರ್) ಇದೆಯಲ್ಲ. ಭಾರತದ ಎಲ್ಲ ಲಿಪಿಗಳನ್ನೂ ಅದು ಒಳಗೊಂಡಿದೆ. ಇಷ್ಟೇ ಅಲ್ಲ, ಒಂದು ಲಿಪಿಯಿಂದ ಇನ್ನೊಂದು - ನಮಗೆ ಬೇಕಾದ - ಲಿಪಿಗೆ ಬದಲಿಸುವುದು ಸುಲಭ - ಸಾಧ್ಯ ಮರಾಠಿಯಿಂದ - ಕನ್ನಡಕ್ಕೆ, ಕನ್ನಡದಿಂದ ಬಂಗಾಲಿಗೆ ಕೂಡ.

ಇನ್ನೂ ನಮ್ಮ ಕನ್ನಡಲಿಪಿಯನ್ನು ಕಂಪ್ಯೂಟರಿಗೆ ಕೀಲಿಮಣೆಗೆ (ಕೀ-ಬೋರ್ಡ್) ಅಳವಡಿಸಬೇಕಲ್ಲವೆ - ಬೆರಳಚ್ಚಿನ ಯಂತ್ರಕ್ಕೆ ಮಾಡಿದ ಹಾಗೆ. ಅದೀಗ ಮಾಡಿದ್ದಾಗಿದೆ.

ಮಾತ್ರವಲ್ಲ - ಕೆಲವು ದ್ವಿತ್ವಾಕ್ಷರಗಳನ್ನು ಒಂದೇ ಒತ್ತುವಿಕೆಯಿಂದ ಮಾಡುವ ಅನುಕೂಲತೆಯೂ ಇದೆ. ಹಾಗಾಗಿ ಈಗ ಮನೆಯಲ್ಲಿ ಗಣಕಯಂತ್ರವೊಂದನ್ನಿಟ್ಟುಕೊಂಡು ಕನ್ನಡದಲ್ಲಿಯೇ ಪತ್ರ, ಲೇಖನ, ಏನೆಲ್ಲ ಸೊಗಸಾಗಿ ಮೂಡಿಸಬಹುದು. ಇಂಥ ಯಂತ್ರಕ್ಕಿರುವ 'ಪೀ.ಸಿ.' (ಪರ್ಸನಲ್ ಕಂಪ್ಯೂಟರ್) ಅನೇಕರ ಮನೆಗಳಲ್ಲಿಯೇ ಕಾಣತೊಡಗಿದೆ.

ಕಂಪ್ಯೂಟರ್ ಎಂಬ ದೈತ್ಯನಿಂದ ಇಷ್ಟು ಕೆಲಸ ಮಾಡಿಸಿದರೆ ಸಾಕೆ? ಕನ್ನಡಕ್ಕೆ ಸಂಬಂಧಿಸಿದ ವಿವಿಧ ಕೆಲಸಗಳಿಗೆ ಅದರಿಂದ ಪ್ರಯೋಜನ ಪಡೆಯಬೇಕಲ್ಲವೆ. ಯಾವದೊಂದು ಮಹಾಕಾವ್ಯದ ಅಭ್ಯಾಸ ಮಾಡಬೇಕಾಗಿದೆ; ಅದನ್ನು ಇಡಿಯಾಗಿ ಅರ್ಥ ಮಾಡಿಕೊಳ್ಳುವುದು, ನೆನಪಿಟ್ಟುಕೊಳ್ಳುವುದು ಕಷ್ಟಸಾಧ್ಯದ ಕೆಲಸ. ಆಗ ಸಮಗ್ರವಾಗಿ ಆ ಕಾವ್ಯವನ್ನು ಕಂಪ್ಯೂಟರಿಗೆ ಉಣಿಸಿರಿ (ಹೌದು! ಇಂಗ್ಲೀಷ್‌ನಲ್ಲಿ ಅದಕ್ಕೆ Feed ಮಾಡುವುದು ಎಂದೇ ಕರೆಯುತ್ತಾರೆ). ಆಮೇಲೆ ನಮಗೆ ಬೇಕಾದ ಆ ಕಾವ್ಯದ ಯಾವುದೇ ವಿಚಾರ ಅಥವಾ ಪರಿಕಲ್ಪನೆಯ ವಿವರಗಳಷ್ಟನ್ನೇ ಪಡೆಯಬಹುದು ಕ್ಷಣಾರ್ಧದಲ್ಲಿ. ಉದಾ.ಗೆ ಬೇಂದ್ರೆಯವರ 'ಪ್ರೇಮ'ದ ಕುರಿತ ಪರಿಕಲ್ಪನೆ ತಿಳಿಯಬೇಕಾದರೆ ಅವರ ಕವನಗಳೆಲ್ಲವನ್ನು ಕಂಪ್ಯೂಟರಿಗೆ ಉಣಿಸಿರಿ. ಆಮೇಲೆ, ಪ್ರೀತಿ, ಪ್ರೇಮ ಎಂಬ ಸಮಾನಾರ್ಥಕ ಪದಗಳಿರುವ ಪದ್ಯ ಸಾಲುಗಳನ್ನು ಕೇಳಿರಿ. ಥಟ್ಟನೆ ಉತ್ತರ ಸಿಕ್ಕುತ್ತದೆ.

ಈಚಿನ ಒಂದು ಬೆಳವಣಿಗೆಯೆಂದರೆ ಆರು ಶತಮಾನಗಳ ಹರಿದಾಸ ಸಾಹಿತ್ಯದ ಮಾಹಿತಿಯನ್ನು ಕಂಪ್ಯೂಟರಿಗೆ ಅಳವಡಿಸಿದ್ದು, ಯಾವದೊಂದು ಹಾಡನ್ನು ಯಾವ ದಾಸರು ರಚಿಸಿದ್ದಾರೆ? ಅವರ ಚರಿತ್ರೆಯ ವಿವರಗಳೇನು? ಅವರ ಮತ್ತು ಅವರ ಕೀರ್ತನೆಗಳ ಬಗ್ಗೆ ಅದಾವ ಪುಸ್ತಕ, ಲೇಖನಗಳು ಪ್ರಕಟವಾಗಿವೆ - ಎಂಬುದನ್ನು ಕಂಡುಕೊಳ್ಳಬಹುದು. ಅದರಂತೆ, ಇಂಥದೊಂದು ವಿಷಯದ ಕುರಿತು (ಉದಾಹರಣೆಗೆ ದಶಾವತಾರ, ರುದ್ರದೇವರು, ಲೋಕನೀತಿ) ಯಾವೆಲ್ಲ ಹಾಡುಗಳಾಗಲೀ, ಲೇಖನಾದಿಗಳೆಲ್ಲ ಕೈಗೆಟಕಿ ಹೆಚ್ಚಿನ ಅಭ್ಯಾಸ ಮಾಡಬಹುದು.

ಕಂಪ್ಯೂಟರನ್ನು ಹಲವು ವ್ಯಾವಹಾರಿಕ ಕ್ಷೇತ್ರಗಳಲ್ಲಿ ವ್ಯಾಪಕವಾಗಿ ಬಳಸುತ್ತಿದ್ದೇವಷ್ಟೆ. ಬ್ಯಾಂಕಿನ ವ್ಯವಹಾರ, ಇಲೆಕ್ಟ್ರಿಕ್ ಮುಂತಾದ ಬಿಲ್‌ಗಳು, ಸಂಬಳ ರಸೀದಿ - ಇವಕ್ಕೆ ಅದರ ಪ್ರಯೋಜನ ಪಡೆಯುತ್ತಿದ್ದೇವೆ. ಆದರೆ ಅದೆಲ್ಲ ರೋಮನ್ / ಇಂಗ್ಲೀಷ್ ಲಿಪಿಯಲ್ಲಿರುತ್ತದೆ. ಕನ್ನಡ ಲಿಪಿಯಲ್ಲೇ ನಾವು ಅದನ್ನು ಪಡೆಯತಕ್ಕದ್ದು. ಕರ್ನಾಟಕದಲ್ಲಿ ಕ್ರಮೇಣ ಆ ಮಾರ್ಪಾಟು ನಡೆಯುತ್ತಲಿದೆ.

ಅದರ ಮುಂದಿನ ಹೆಜ್ಜೆ ಕರ್ನಾಟಕ ಸರಕಾರದ ಆಡಳಿತದಲ್ಲಿ ಕನ್ನಡದ ಬಳಕೆ ಮತ್ತು ಅದಕ್ಕಾಗಿ ಕಂಪ್ಯೂಟರಿನ ನೆರವು ಎಂದರೆ ಆಡಳಿತಕ್ಕೆ ಸಂಬಂಧಿಸಿದ ಯಾವುದೇ ವಿಚಾರ - ಮಾಹಿತಿಯನ್ನು ಕಂಪ್ಯೂಟರಿಗೆ ಪೂರೈಸಬೇಕು ಹಾಗೂ ಇಂಟರ್‌ನೆಟ್ (ಅಂತರ್ಜಾಲ) ಮೂಲಕ, ನಾಡಿನ ವಿವಿಧ ಊರುಗಳಲ್ಲಿರುವ ಸರ್ಕಾರೀ ಕಚೇರಿಗಳಿಗೆ, ಅಗತ್ಯ ಕಂಡರೆ ಸಾರ್ವಜನಿಕವಾಗಿ ಅದರ ವಿತರಣವಾಗಬೇಕು. ಅಂದಾಗ ಆಡಳಿತವು ಪ್ರಭಾವಶಾಲಿಯಾಗಿ ಸಮರ್ಥ ರೀತಿಯಲ್ಲಿ ನಡೆದುಕೊಂಡು ಬರುತ್ತದೆ. ಪ್ರಸಕ್ತ ವರ್ಷ - ೨೦೦೧ರಲ್ಲಿ ಅದರ ಪೂರ್ವ ಪ್ರಯೋಜನ ಪಡೆಯಲಿದ್ದೇವೆ.

ಕಂಪ್ಯೂಟರ್ ಬಳಕೆಯ ಇನ್ನೂ ಹಲವು ಕ್ಷೇತ್ರಗಳಿವೆ : ಮಕ್ಕಳ ಶಾಲಾ ಶಿಕ್ಷಣ, ನಾಡಿನ ಇತಿಹಾಸ ಸಂಶೋಧನೆ, ಇತ್ಯಾದಿ. ಆ ದಿನಗಳೇನು ದೂರವಿಲ್ಲ. ಹಾಗೆ ಆದಾಗ ಕಂಪ್ಯೂಟರ್ ಕನ್ನಡಿಗರ ಜನಜೀವನದಲ್ಲಿ ಹಾಸುಹೊಕ್ಕಾಗಿ ಬಿಡುತ್ತದೆ. ಕಂಪ್ಯೂ - ಕನ್ನಡ ಎಂಬ ಶಬ್ದ ಜೋಡಣೆ ಅನ್ವರ್ಥಕವೆನಿಸುತ್ತದೆ.

ಹಿಂದೂ - ವೀರಶೈವ

ಡಾ|| ಎಂ. ಚಿದಾನಂದ ಮೂರ್ತಿ

ವೀರಶೈವ - ಬ್ರಾಹ್ಮಣ

ವೀರಶೈವರು ಹಿಂದೂಗಳಲ್ಲವೆಂಬ ವಾದ ಈಚೆಗೆ ಹುಟ್ಟಿಕೊಂಡುದಲ್ಲ, ಅದು ಬೀದಿ ಚಳವಳಿಯಾಗಿ ರೂಪುಗೊಂಡುದು ಮಾತ್ರ ಈಚೆಗೆ. ಹನ್ನೆರಡನೆಯ ಶತಮಾನದಲ್ಲಿ ನಡೆದ ಶರಣ ಚಳವಳಿಯು ವೀರಶೈವರಿಗೆ ಅಗಾಧ ಆತ್ಮವಿಶ್ವಾಸವನ್ನು ತಂದುಕೊಟ್ಟಿತೆಂಬುದು ಎಲ್ಲರಿಗೂ ತಿಳಿದ ವಿಷಯ. ಆ ಕಾಲದಲ್ಲೇ ಹಲವರು ಕನ್ನಡದಲ್ಲಿ ಎಂತೋ ಸಂಸ್ಕೃತದಲ್ಲೂ ಪಾಂಡಿತ್ಯವನ್ನು ಪಡೆದು ವೇದ, ಆಗಮ, ಸ್ಮೃತಿ, ಕಾವ್ಯ, ಪುರಾಣ, ಜ್ಯೋತಿಷ್ಯ, ಷಡ್ದರ್ಶನಗಳನ್ನು ಚೆನ್ನಾಗಿ ಓದಿಕೊಂಡಿದ್ದರು. ವಚನಕಾರ ಉರಿಲಿಂಗದೇವನ ಉದಾಹರಣೆಯನ್ನು ಇಲ್ಲಿ ಕೊಡುವುದರಲ್ಲಿ ಒಂದು ವಿಶೇಷವಿದೆ. ಅವನು ಕಾಶ್ಮೀರದಿಂದ ಬಂದವನೆಂದು ಹೇಳಲಾದ ಮಹಾ ಸಂಸ್ಕೃತ ಪಂಡಿತ ಮಂಚಣ್ಣ ಪಂಡಿತನ ಮಗನಾದುದರಿಂದ ತಂದೆಯಂತೆಯೇ ಮಹಾವಿದ್ವಾಂಸನಾಗಿದ್ದನು. ಆದರೂ ಅವನ ಕನ್ನಡ ರಚನೆಗಳಲ್ಲಿ ಆ ಪಾಂಡಿತ್ಯ ವ್ಯಕ್ತವಾಗಿಲ್ಲ. ಅವನು ಅತ್ಯಂತ ಸುಕುಮಾರ ಶೈಲಿಯ ಸತಿಪತಿಭಾವದ ವಚನಗಳನ್ನು ಬರೆದಿದ್ದಾನೆ. ಹುಟ್ಟಿನಿಂದ ದಲಿತನೂ ವೃತ್ತಿಯಿಂದ ಕಟ್ಟಿಗೆ ಮಾರುವವನು ಪ್ರವೃತ್ತಿಯಿಂದ ಕಳ್ಳನೂ ಆಗಿದ್ದ ಉರಿಲಿಂಗಪೆದ್ದಿ ಮತ್ತು ಆತನ ಪತ್ನಿ ಕಾಳವ್ವೆಯನ್ನು ಉರಿಲಿಂಗದೇವನು ಶಿಷ್ಯರನ್ನಾಗಿ ಸ್ವೀಕರಿಸಿ ಅವರಿಗೆ ಶಿಕ್ಷಣವನ್ನು ಕೊಟ್ಟು ತನ್ನ ವಿದ್ಯೆಯನ್ನೆಲ್ಲ ಅವರಿಗೆ ಧಾರೆ ಎರೆದ. ''ಶಿಷ್ಯಾದಿಚ್ಛೇತ್ ಪರಾಜಯಂ'' ಎಂಬಂತೆ ಗುರುವನ್ನು ಮೀರಿಸಿದ ಅಥವಾ ಕೊನೆಯ ಪಕ್ಷ ಗುರುವಿಗೆ ಸಮಾನನಾದ ಪಾಂಡಿತ್ಯವನ್ನು ಪಡೆದ ಉರಿಲಿಂಗಪೆದ್ದಿಯು ತನ್ನ ವಚನಗಳಲ್ಲಿ ಮಧ್ಯೆ ಮಧ್ಯೆ ವೇದ, ಆಗಮ, ಪುರಾಣ, ಸ್ಮೃತಿಗಳಿಂದ ಅಕ್ಷರಶಃ ನೂರಾರು ಶ್ಲೋಕಗಳನ್ನು ಉದಾಹರಿಸಿದ್ದಾನೆ.

ಅವನು ಇಡೀ ಭಾರತದ ಮೊತ್ತ ಮೊದಲ ದಲಿತ ವರ್ಗದ ಅತಿಶ್ರೇಷ್ಠ ಸಂಸ್ಕೃತ ವಿದ್ವಾಂಸನೆಂಬಲ್ಲಿ ಅನುಮಾನವಿಲ್ಲ. ಅವನ ಹೆಂಡತಿ ಕಾಳವ್ವೆಯೂ ತನ್ನ ವಚನಗಳ ಮಧ್ಯೆ ಸಂಸ್ಕೃತ ವಾಕ್ಯಗಳನ್ನು ಉದಾಹರಿಸುತ್ತಾಳೆ. ಇಲ್ಲಿ ಗಮನಿಸಬೇಕಾದ ಸಂಗತಿ - ಸ್ತ್ರೀಯರಿಗೆ, ಶೂದ್ರರಿಗೆ, ದಲಿತರಿಗೆ ವೇದಾಧ್ಯಯನದ ಅಧಿಕಾರವಿಲ್ಲವೆಂದು ಅಂದಿನ ಸಾಂಪ್ರದಾಯಿಕ ಸಮಾಜ ಸಾರಿದ್ದರೂ ಅದನ್ನು ಉಲ್ಲಂಘಿಸಿ ಹಲವು ವೀರಶೈವ ಗುರುಗಳು ಅವರಿಗೆ ಅದೆಲ್ಲವನ್ನೂ ಬೋಧಿಸಿ ನಿಷ್ಣಾತರನ್ನಾಗಿ ಮಾಡಿದ್ದರು. ಬಸವ, ಅಲ್ಲಮ, ಸಿದ್ಧರಾಮ, ಅಕ್ಕಮಹಾದೇವಿ ಇವರೇ ಮೊದಲಾದವರು ಸಂಸ್ಕೃತದಲ್ಲಿ ಪ್ರವೀಣರಾಗಿದ್ದರು. ಹರಿಹರನ ಸಮಕಾಲೀನ ಕೆರೆಯ ಪದ್ಮರಸನು ಆನೆಯ ಮೇಲೆ ಗ್ರಂಥ ಭಂಡಾರವನ್ನು ಹೇರಿಕೊಂಡು ಬಂದ ತ್ರಿಭುವನ ತಾತ ಎಂಬ ವೈಷ್ಣವಧರ್ಮದ ಬಹು ದೊಡ್ಡ ಸಂಸ್ಕೃತವಿದ್ವಾಂಸನನ್ನು ವಾದದಲ್ಲಿ ಸೋಲಿಸಿದ್ದು ವೀರಶೈವ ಧರ್ಮದ ಸಾಮಾಜಿಕ ಇತಿಹಾಸದ ದೊಡ್ಡ ಘಟನೆಗಳಲ್ಲೊಂದು. ಆ ಮೇಲೆ ಬಂದ ಚಾಮರಸ, ಶಿವಗಣ ಪ್ರಸಾದಿ ಮಹಾದೇವಯ್ಯ, ಹಲಗೆಯ ದೇವ, ಮಗ್ಗೆಯ ಮಾಯಿದೇವ, ಗುರುಬಸವ, ನಿಜಗುಣ ಶಿವಯೋಗಿ, ಗುಬ್ಬಿ ಮಲ್ಲಣಾರ್ಯ, ಚನ್ನವೀರದೇವ, ನೀಲಕಂಠಾಚಾರ್ಯ ಇವರೇ ಮೊದಲಾದವರ ಮೂಲಕ ವೀರಶೈವ ಸಂಸ್ಕೃತ ಪಾಂಡಿತ್ಯ ಪರಂಪರೆ ಮುಂದುವರಿಯಿತು. ಇಪ್ಪತ್ತನೇ ಶತಮಾನದ ಆದಿಯಲ್ಲಿ ಪಿ.ಆರ್. ಕರಿಬಸವಶಾಸ್ತ್ರಿ, ಎನ್.ಆರ್.ಕರಿಬಸವಶಾಸ್ತ್ರಿ 'ಅಭಿನವ ಕಾಳಿದಾಸ' ಬಸವಪ್ಪಶಾಸ್ತ್ರಿ, ಮೈಸೂರು ಗವಿಮಠದ ಗೌರೀಶಂಕರ ಸ್ವಾಮೀಜಿ ಇವರೂ ಅದೇ ಪರಂಪರೆಯನ್ನು ಮುಂದುವರಿಸಿದರು. ಹಾಗಲ್ವಾಡಿ ಸಂಸ್ಥಾನವು ನಡೆಯಿಸುತ್ತಿದ್ದ ಸಂಸ್ಕೃತ ಪಾಠಶಾಲೆಯ ಕಟ್ಟಡ ಈಗಲೂ ಇದೆ. ಕರ್ನಾಟಕದಲ್ಲಂತೂ ಸಂಸ್ಕೃತ ಪಾಂಡಿತ್ಯದಲ್ಲಿ ಬ್ರಾಹ್ಮಣರಿಗೆ ಸರಿಸಮನಾಗಿ, ಸವಾಲಾಗಿ ನಿಂತವರೆಂದರೆ ವೀರಶೈವರು. ತಮ್ಮನ್ನು ಬ್ರಾಹ್ಮಣರು ಶೂದ್ರರೆಂದು ವರ್ಗೀಕರಿಸಿ ಸ್ವಲ್ಪ ಹೀನಾಯವಾಗಿ ಕಾಣುವುದು ವೀರಶೈವರಿಗೆ ಸಹಜವಾಗಿಯೇ ಸಹ್ಯವಾಗಲಿಲ್ಲ. ಈ ವಿಷಯದಲ್ಲಿ ಬ್ರಾಹ್ಮಣರ ವಿರುದ್ಧ ಕರ್ನಾಟಕದ ಬ್ರಾಹ್ಮಣೇತರ ವರ್ಗದಲ್ಲಿ ಸಿಡಿದೆದ್ದು ನಿಂತ ಹಿಂದೂಗಳೆಂದರೆ ವೀರಶೈವರೇ. ಉಳಿದ ಹಿಂದೂ ಪಂಗಡಗಳಿಗೆ ಹಾಗೆ ಪ್ರತಿಭಟಿಸಲು ಬೇಕಾದ ಸಂಸ್ಕೃತ ಪಾಂಡಿತ್ಯ, ಪರಂಪರೆಯ ಹಿನ್ನೆಲೆ ಇವು ತಂದುಕೊಡುವ ಆತ್ಮವಿಶ್ವಾಸ ಇರಲಿಲ್ಲ. ಬ್ರಾಹ್ಮಣ ಮಠಗಳ ಅನುಯಾಯಿಗಳು ವೀರಶೈವ ಗುರುಗಳ ಅಡ್ಡಪಲ್ಲಕ್ಕಿ ಮೆರವಣಿಗೆಗಳಿಗೆ ಅಡ್ಡಿಪಡಿಸಿದ್ದು, ಜಿಲ್ಲಾ ಕಲೆಕ್ಟರ್ ಅದು ಸರಿಯಲ್ಲವೆಂದು ವೀರಶೈವರ ಪರವಾಗಿ ಆಜ್ಞೆ ಹೊರಡಿಸಿದ್ದು ಇಂಥ ಸಂಗತಿಗಳೂ ಗಮನಾರ್ಹ.

ಘರ್ಷಣೆಗಳು : ಮೈಸೂರಿನಲ್ಲಿ ೧೮೮೪ರಲ್ಲಿ ಬ್ರಾಹ್ಮಣರಿಗೂ ವೀರಶೈವರಿಗೂ ಬಹು ದೊಡ್ಡ 'ಧರ್ಮಯುದ್ಧ' ನಡೆಯಿತು. ಅದರಲ್ಲಿ ಬ್ರಾಹ್ಮಣರೇ ಕೌರವರು, ವೀರಶೈವರೇ ಪಾಂಡವರು, ಪಿ.ಆರ್.ಕರಿಬಸವಶಾಸ್ತ್ರಿಗಳೇ ಗಾಂಡೀವಿ, ಯಜಮಾನ್ ವೀರಸಂಗಪ್ಪನವರೇ ಕೃಷ್ಣ ಇತ್ಯಾದಿಯಾಗಿ ಮುಂದೆ ವೀರಶೈವ ಪತ್ರಿಕೆಗಳು ಬಣ್ಣಿಸಿದವು. ಅದರಲ್ಲಿ ತ್ರಿಮತಸ್ಥ ಬ್ರಾಹ್ಮಣರ ಜೊತೆ ಕರಿಬಸವಶಾಸ್ತ್ರಿಗಳು ವಾದಿಸಿ ಜಯಶೀಲರಾದರಂತೆ. ಜಯಶೀಲರಾದರೋ ಇಲ್ಲವೋ ತಿಳಿಯದು; ಆದರೆ ಬೌದ್ಧಿಕ ಘರ್ಷಣೆಗಳಾದುದು, ವೀರಸಂಗಪ್ಪನವರು ಒಂದು ಕರಪತ್ರ ಹೊರಡಿಸಿ ತಮ್ಮ ಧರ್ಮಗ್ರಂಥಗಳು ''ಪರಮತಸ್ಥರ ಕೈಗೇನಾದರೂ ಸಿಕ್ಕಿ ಪರಿಹರಿಸಲ್ಪಟ್ಟರೆ ನಿರ್ನಾಮವಾಗುವ'' ಅಪಾಯವಿರುವುದರಿಂದ ಅವುಗಳ ಮುದ್ರಣಕ್ಕೆ ಚಂದಾ ನೀಡಲು ವೀರಶೈವ ಸಮಾಜಕ್ಕೆ ಮನವಿ ಮಾಡಿಕೊಂಡರು. (ಆ ಮನವಿಯ ಪ್ರತಿ ಕರ್ನಾಟಕ ಸರ್ಕಾರದ ಪತ್ರಾಗಾರದಲ್ಲಿದೆ) ಬ್ರಾಹ್ಮಣರಂತೆಯೇ ತಾವೂ ಗಣ್ಯರು, ತಮಗೂ ಒಂದು ವಿದ್ವತ್ತಿನ, ಧಾರ್ಮಿಕ ಪರಂಪರೆಯಿದೆಯೆಂಬುದನ್ನು ವೀರಶೈವರಿಗೆ ಮರೆಯುವುದು ಕಷ್ಟವಾಗಿತ್ತು, ತಮ್ಮನ್ನು ಶೂದ್ರರೆಂದು ಕರೆಯುವುದನ್ನು ಅವರು ಸಹಿಸಲಿಲ್ಲ. ಒಂದು ಘಟ್ಟದಲ್ಲಿ 'ಹಿಂದೂ ಸಮಾಜದ ಅತ್ಯುನ್ನತ ವರ್ಗಕ್ಕೆ ಸೇರಿದವರು' ಎಂದೂ ಹೇಳಿಕೊಂಡರು. ಇದನ್ನೆಲ್ಲ ಯಾರಾದರೂ ಸುಲಭವಾಗಿ ಅರ್ಥೈಸಿಕೊಳ್ಳಬಹುದು.

ಇಲ್ಲಿ ಗಮನಿಸಬೇಕಾದ ವಿಶೇಷ ಮಹತ್ವದ ಸಂಗತಿಯೊಂದಿದೆ. ೧೯೦೦ಕ್ಕೆ ಸ್ವಲ್ಪ ಮುಂಚೆ ತಮ್ಮ ಜನಾಂಗದ ಬಗ್ಗೆ ಮಾಹಿತಿ ಕೊಡಲು ಮುಂಬೈ ಸರ್ಕಾರದಿಂದ ವೀರಶೈವ ಜನಾಂಗದ ಮುಖಂಡರಿಗೆ ಪತ್ರಬಂದಿತು. ಸೊಲ್ಲಾಪುರದ ವಾರದ ಮಲ್ಲಪ್ಪನವರು, ಮೈಸೂರಿನ ಯಜಮಾನ್ ವೀರಸಂಗಪ್ಪನವರು, ಧಾರವಾಡದ ಟೆಂಗಿನ ಕಾಯಿಯವರು ಸಭೆ ಸೇರಿ, ಕಾನೂನು ತಜ್ಞ ಹಾಲಬಾವಿಯವರ ಸಹಕಾರದೊಡನೆ ಹಾನಗಲ್ಲ ಕುಮಾರಸ್ವಾಮಿಗಳ ನೇತೃತ್ವದಲ್ಲಿ ವರದಿ ಸಿದ್ಧಪಡಿಸಿ ಕಳುಹಿಸಲಾಯ್ತು.

ಅದರಲ್ಲಿ ಲಿಂಗಾಯತರನ್ನು ೧೯೦೧ರ ಜನಗಣತಿಯಲ್ಲಿ ''ಶೂದ್ರ''ರೆಂದು ಪರಿಗಣಿಸದೆ ''ಹಿಂದೂ ಸಮಾಜದ ಮೇಲ್ವರ್ಗಕ್ಕೆ ಸೇರಿದ ವರ್ಣಾತೀತ'' ವರ್ಗದವರೆಂದು ಗುರುತಿಸಲು ಮನವಿ ಮಾಡಿಕೊಂಡಿತ್ತು. ಆ ವರದಿಯನ್ನಿಟ್ಟುಕೊಂಡ ಎಂಥೋಲೆನ್ ಎಂಬ ಬ್ರಿಟಿಷ್ ಅಧಿಕಾರಿ ಲಿಂಗಾಯತರು ತಮ್ಮನ್ನು ತಾವು ಹಿಂದೂಗಳೆಂದು ಕರೆದುಕೊಂಡರೂ ಅವರು ವಾಸ್ತವವಾಗಿ ಹಿಂದೂಗಳಲ್ಲವೆಂದು ತನ್ನ ವರದಿಯಲ್ಲಿ ದಾಖಲು ಮಾಡಿದ. ಆ ವರದಿ ೧೯೧೦ರಲ್ಲಿ ಕನ್ನಡಕ್ಕೆ ಅನುವಾದವೂ ಆಯ್ತು. 'ಒಡೆ, ಆಳು' ಎಂಬ ಬ್ರಿಟಿಷ್ ತಂತ್ರವು ಕೆಲಸ ಮಾಡಿರುವುದು ಇಲ್ಲಿ ಸ್ಪಷ್ಟವಾಗಿದೆ. ತಮ್ಮ ಆಳಿಕೆ ಭಾರತದ ನೆಲದಲ್ಲಿ ಭದ್ರವಾಗಿ ತಳವೂರಲು, ತಮ್ಮ ಕ್ರೈಸ್ತ ಧರ್ಮ ಪ್ರಚಾರವಾಗಲು ಇದ್ದ ಮಾರ್ಗವೆಂದರೆ ಹಿಂದೂಗಳಿಗೂ ಇತರರಿಗೂ ದ್ವೇಷವನ್ನುಂಟು ಮಾಡುವುದು; ಹಿಂದೂಗಳಲ್ಲೇ ಒಡಕನ್ನುಂಟು ಮಾಡಿ ಅವರಲ್ಲಿ ಭೇದ ಬೀಜವನ್ನು ಬಿತ್ತುವುದು, ಎಂಥೋಸಿನ್ ೧೯೦೦ರಲ್ಲಿ ಬಿತ್ತಿದ ಆ - ಹಿಂದೂ ವಿಷ ಬೀಜ ಕೆಲವು ವೀರಶೈವರ ಮನಸ್ಸಿಗೆ ಬಿದ್ದು ಅಲ್ಲಿ ನಿಧಾನವಾಗಿ ಮೊಳೆತು ಎಲೆಯಾಗಿ ಕವಲೊಡೆದದ್ದು ೧೯೨೫-೩೦ರಲ್ಲಿ. ಅದು ಸ್ಪಷ್ಟ ಗಿಡವಾಗಿ ತಲೆಯೆತ್ತಿದ್ದು ೧೯೪೦ರಲ್ಲಿ; ಅದು ಕ್ರಿ.ಶ. ೨೦೦೦ರಲ್ಲಿ ಹೂವನ್ನು ಬಿಡಲಾರಂಭಿಸಿದೆ. ತಾವು ಹಿಂದೂಗಳಲ್ಲವೆಂದು ಇಂದಿನ ವೀರಶೈವರಲ್ಲಿ ಕೆಲವರಿಗೆ ಅನ್ನಿಸುತ್ತಿರಲು ಮೂಲ ಪ್ರಚೋದನೆ ಬ್ರಿಟೀಷರ ನೂರು ವರ್ಷಗಳ ಹಿಂದಿನ ತಂತ್ರ.

ಇಂತಹುದೇ ಕೊಡಗಿನಲ್ಲೂ ನಡೆಯಿತು. ಕೊಡಗನ್ನು ಬ್ರಿಟಿಷರ ಅಧೀನಕ್ಕೆ ಒಳಪಡಿಸಲು ಮುಖ್ಯಪಾತ್ರ ವಹಿಸಿದ ಮೇಜರ್ ಫ್ರೇಜರನು ೧೮೩೦ರ ಸುಮಾರಿನಲ್ಲಿ ಬ್ರಿಟಿಷ್ ಸರ್ಕಾರಕ್ಕೆ ಕಳುಹಿಸಿದ ವರದಿಯಲ್ಲಿ 'ಕೊಡವರಿಗೂ ಹಿಂದೂಗಳಿಗೂ ಇರುವ ಸಂಬಂಧ ತೀರ ತೆಳುವಾದುದು. ಅರ್ಥಾತ್ ಒಂದು ದೃಷ್ಟಿಯಿಂದ ಅವರು ಹಿಂದೂಗಳೇ ಅಲ್ಲ, ಕ್ರೈಸ್ತ ಧರ್ಮ ಪ್ರಚಾರಕ್ಕೆ ಕೊಡಗು ಬಹು ಪ್ರಶಸ್ತವಾದ ರಾಜ್ಯ ಎಂದು ಹೇಳಿದ್ದಾನೆ. ಮುಂದೆ ಬಂದ ರೆ॥ ಮೊಗ್ಲಿಂಗ್ ಫ್ರೆಜರನಿಂದ ಸ್ಫೂರ್ತಿ ಪಡೆದು ಕೊಡಗಿನಲ್ಲಿ ಕ್ರೈಸ್ತ ಧರ್ಮ ಪ್ರಚಾರವನ್ನು ಕೈಕೊಂಡನು.

೧೯೨೫ರಷ್ಟು ಈಚೆಗೆ ನಿಜಾಂ ಪ್ರಾಂತದಲ್ಲಿದ್ದ ಪರಳಿ ವೈದ್ಯನಾಥೇಶ್ವರನ ರುದ್ರಾಭಿಷೇಕಕ್ಕೆ 'ಶೂದ್ರ'ರಾದ ವೀರಶೈವರಿಗೆ ಹಕ್ಕಿಲ್ಲವೆಂದು ಅಲ್ಲಿ ಬ್ರಾಹ್ಮಣರು ಅಡ್ಡಿ ಪಡಿಸಿದಾಗ, ವೀರಶೈವರು ಆ ಬಗ್ಗೆ ಮೊಕದ್ದಮೆ ದಾಖಲು ಮಾಡಿ, ಅವರಲ್ಲಿ 'ಲಿಂಗಿ ಬ್ರಾಹ್ಮಣರ ವೈದಿಕತ್ವ'ದ (ವೀರಶೈವರ ವೈದಿಕತ್ವದ) ಬಗ್ಗೆ ವಾದಿಸಿ ೧೯೨೯ರಲ್ಲಿ ತಮ್ಮ ಪರ ತೀರ್ಪನ್ನು ಪಡೆದರು. ೧೯೨೩ರಲ್ಲಿ 'ಶೂದ್ರ'ರಾದ ವೀರಶೈವರೊಬ್ಬರು ಬನವಾಸಿಯ ಮಧುಕೇಶ್ವರ ದೇವಾಲಯವನ್ನು ಪ್ರವೇಶಿಸಿದ್ದಕ್ಕಾಗಿ ದಂಡ ವಿಧಿಸಿದ ಬ್ರಾಹ್ಮಣರ ವಿರುದ್ಧ ವೀರಶೈವರು ಬೊಂಬಾಯಿ ಪ್ರಾಂತದ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿ, ತಾವು ನಿಜವಾದ 'ಲಿಂಗಿ ಬ್ರಾಹ್ಮಣ'ರೆಂದು ತಮ್ಮ ಶಿವದಾರವೇ ಯಜ್ಞೋಪವೀತವೆಂದು ವಾದಿಸಿದರು. ಆ ಮೊಕದ್ದಮೆಯಲ್ಲಿ ಫ.ಗು.ಹಳಕಟ್ಟಿಯವರು ವೀರಶೈವರ ಪರವಾಗಿ ವಕಾಲತ್ತು ವಹಿಸಿದ್ದವರಲ್ಲಿ ಒಬ್ಬರು. ೧೯೩೫ರಲ್ಲಿ ಬೊಂಬಾಯಿ ಉನ್ನತ ನ್ಯಾಯಾಲಯವು 'ವೀರಶೈವರು ಶೂದ್ರರಲ್ಲ, ಶ್ರೇಷ್ಠವರ್ಗದ ಲಿಂಗಿ ಬ್ರಾಹ್ಮಣರು ಅವರಿಗೆ ವೇದಾಧಿಕಾರವಿದೆ' ಎಂಬ ತೀರ್ಪು ನೀಡಿತು. ಇದು 'ವೇದಾಧಿಕಾರ ವಿಜಯಂ' ಕೃತಿಯಲ್ಲಿ ನಿರೂಪಿತವಾಗಿದೆ. ನಾನು ವಿದ್ಯಾರ್ಥಿಯಾಗಿದ್ದಾಗ (೧೯೫೦) ಮೈಸೂರಿನ ಬ್ರಾಹ್ಮಣರು ನನ್ನನ್ನು ಶೂದ್ರ ಎಂದು ಕರೆದುದು ನೆನಪಿದೆ.

ಹಿಂದೂಧರ್ಮದ ವಿರುದ್ಧ ಅಲ್ಲ

ಮೇಲಿನ ಮೂರು ಘಟನೆಗಳನ್ನು ಪ್ರಸ್ತಾಪಿಸುವ ಉದ್ದೇಶ ಆಯಾ ವರ್ಗಗಳ ಜನರ ಶ್ರೇಷ್ಠತೆ ಕನಿಷ್ಠತೆಗಳನ್ನು ಸೂಚಿಸುವುದಲ್ಲ. (ಇಬ್ಬರೂ ಸಮಾನ ಗೌರವಾರ್ಹರು). ಬ್ರಾಹ್ಮಣರು ತಮ್ಮನ್ನು ಶೂದ್ರರೆಂದು ಕರೆದಾಗ ವೀರಶೈವರು ಬ್ರಾಹ್ಮಣರ ವಿರುದ್ಧ ಪ್ರತಿಭಟಿಸಿದರೇ ಹೊರತು ತಾವು ಹಿಂದೂಗಳಲ್ಲವೆಂದು ವೇದಾಗಮಗಳನ್ನು ಧಿಕ್ಕರಿಸಿದ ಧರ್ಮಕ್ಕೆ ಸೇರಿದವರೆಂದು ಹೇಳಿಕೊಳ್ಳಲಿಲ್ಲ. ಕಳೆದ ಶತಮಾನದ ಸುಮಾರು ನಾಲ್ಕನೇ ದಶಕದಲ್ಲಿ (೧೯೩೦-೩೫ರ ಸುಮಾರಿನಲ್ಲಿ) ಹಿಂದುಗಳೆಂದರೆ ಬ್ರಾಹ್ಮಣರು, ಅವರ ರೀತಿ ನೀತಿಯೇ ಹಿಂದುತ್ವವೆಂದು ತಪ್ಪಾಗಿ ಭಾವಿಸಿದ ಕೆಲ ವೀರಶೈವರು ತಾವು ಹಿಂದುಗಳಲ್ಲವೆಂದು ಧ್ವನಿ ಎತ್ತಿದಾಗ ಅದರ ವಿರುದ್ಧ ಫ.ಗು. ಹಳಕಟ್ಟಿ ಮತ್ತು ಹರ್ಡೇಕರ್ ಮಂಜಪ್ಪನವರು ವಾದಿಸಿ

ವೀರಶೈವರು ಹಿಂದುಗಳೇ ಎಂದು ಪ್ರಬಲವಾಗಿ ಪ್ರತಿಪಾದಿಸಿದರು. ಆಲೂರು ವೆಂಕಟರಾಯರು, ವಿ.ಡಿ.ಸಾವರ್ಕರ್ ಅವರಿಗೆ ಬರೆದಿರುವ ಪತ್ರದಲ್ಲಿ (ಇದು ಕರ್ನಾಟಕ ಪತ್ರಾಗಾರದಲ್ಲಿದೆ) ಹಳಕಟ್ಟಿಯವರು ಬಿಜಾಪುರದ 'ಹಿಂದು ಸಭಾ'ದ ಅಧ್ಯಕ್ಷರಾಗಿರುವುದನ್ನು ತಿಳಿಸಿದ್ದಾರೆ. ಮಂಜಪ್ಪನವರು ತಮ್ಮ ಆತ್ಮಕಥನದಲ್ಲಿ ಹೇಳಿರುವಂತೆ ೧೯೨೦-೨೧ರ ಸುಮಾರಿನಲ್ಲಿ ಖಾದಿ ಧರಿಸುವುದು ಬ್ರಾಹ್ಮಣರ ಕಾರ್ಯವೆಂದು ಭಾವಿಸಿದ ವೀರಶೈವರು ತಾವು ಖಾದಿ ಧರಿಸಿದ್ದಕ್ಕೆ ತಮ್ಮನ್ನು ಬ್ರಾಹ್ಮಣರ ಗುಂಪಿಗೆ ಸೇರಿಸಿದ್ದನ್ನು ಮಂಜಪ್ಪ ದಾಖಲುಮಾಡಿದ್ದಾರೆ. ಬ್ರಿಟಿಷರ ಆಳ್ವಿಕೆ ವಿರುದ್ಧ ವೀರಶೈವರು ಕಾಂಗ್ರೆಸ್ ಸೇರಲು ನಿರ್ಧರಿಸಿದ್ದು ೧೯೩೦ರಲ್ಲಿ ಎಂದು ಅವರು ಹೇಳುತ್ತಾರೆ. ೧೯೨೭ರಲ್ಲಿ ಅನ್ಯ ಮತೀಯರ ಧಾಳಿಗೆ ತುತ್ತಾದ ಗುಲ್ಬರ್ಗಾ ಶರಣ ಬಸವೇಶ್ವರ ದೇವಾಲಯಕ್ಕೆ ಗಾಂಧೀಜಿಯವರನ್ನು ಮಂಜಪ್ಪ ಕರೆದೊಯ್ದಾಗ, ಆ ದೌರ್ಜನ್ಯದ ಸಮಯದಲ್ಲಿ ಓಡಿ ಹೋಗದೆ ಪ್ರಾಣವನ್ನು ಪಣವಾಗಿಟ್ಟು ಅದನ್ನು ಎದುರಿಸಬೇಕಿತ್ತೆಂದು ಗಾಂಧೀಜಿ ಅಲ್ಲಿನ ಅರ್ಚಕರಿಗೆ ಹೇಳಿದ್ದನ್ನು ಮತ್ತು ವಿಷಯವನ್ನು ಗಾಂಧೀಜಿ ಬಹಿರಂಗ ಸಭೆಯಲ್ಲಿ ಪ್ರಾಸ್ತಾಪಿಸಿದ್ದನ್ನು ಮಂಜಪ್ಪನವರು ದಾಖಲಿಸಿದ್ದಾರೆ. ವಚನ ವಾಙ್ಮಯವನ್ನು ವೀರಶೈವ ಸಿದ್ಧಾಂತವನ್ನೂ ಆಳವಾಗಿ ಅಭ್ಯಸಿಸಿರುವ ಮೇಲ್ಕಂಡ ವ್ಯಕ್ತಿಗಳಲ್ಲದೆ, ಶಿ.ಶಿ. ಬಸವನಾಳ, ಎಂ.ಆರ್.ಶ್ರೀನಿವಾಸಮೂರ್ತಿ, ಆರ್.ಸಿ. ಹಿರೇಮಠ, ಎಲ್.ಬಸವರಾಜು, ಎ.ಎಲ್. ಶಿವರುದ್ರಪ್ಪ (ತತ್ವಶಾಸ್ತ್ರ ಪ್ರಾಧ್ಯಾಪಕರು) ಇವರೇ ಮೊದಲಾದವರೂ ಭಾರತೀಯ ತತ್ವ ಶಾಸ್ತ್ರದಲ್ಲಿ ಅಂತಾರಾಷ್ಟ್ರೀಯ ಖ್ಯಾತಿಯ ಡಾ.ರಾಧಾಕೃಷ್ಣನ್‌ರಂಥವರೂ ವೀರಶೈವವು ಹಿಂದೂಧರ್ಮದ ಭಾಗವೆಂದೇ ಸಾರಿದ್ದಾರೆ (ಸಾಖರೆ, ಸೂರ್ಯಕಾಂತ್ ಘುಗ್ರಿ, ಹಿರೇಮಲ್ಲೂರು ಈಶ್ವರನ್‌ರಂತಹ ಕೆಲವು ವಿದ್ವಾಂಸರು ವೀರಶೈವರು ಹಿಂದೂಗಳಲ್ಲವೆಂದೂ ಹೇಳಿದ್ದಾರೆ)

ಹಿಂದೂ ಧರ್ಮದ ವ್ಯಾಖ್ಯೆ

ಹಿಂದೂ ಧರ್ಮವೆಂಬುದೇ ಇಲ್ಲ; ಅದೊಂದು ದೇಶದ ಹೆಸರು; ಪಶ್ಚಿಮದಿಂದ ಧಾಳಿಯಿಟ್ಟ ಗ್ರೀಕರೂ ಪರ್ಷಿಯನ್ನರೂ ಸಿಂಧೂ (ಹಿಂದೂ) ನದಿಯ ಪೂರ್ವಕ್ಕೆ ಇದ್ದ ಜನರನ್ನು ಹಿಂದುಗಳೆಂದು ಕರೆಯುತ್ತಿದ್ದುದರಿಂದ ಅದು ಬರೀ ದೇಶ ಅಥವಾ ಜನಾಂಗ ವಾಚಕವೆಂದೂ ಕೆಲವರು ಹೇಳುತ್ತಾರೆ. 'ಹಿಂದೂ' ಹೆಸರು ಈ ದೇಶಕ್ಕೆ ಬಂದ ರೀತಿ ಅದೇ ಅನುಮಾನವಿಲ್ಲ, ಆ ದೇಶದವರ ಧರ್ಮವೇ 'ಹಿಂದೂ ಧರ್ಮ'. ಹಿಂದೂ ಧರ್ಮವೆಂಬುದು ಇರುವುದು ಒಂದು ವಾಸ್ತವ. 'ಹಿಂದೂ' ಧರ್ಮದ ಸ್ಥಾಪಕ ಯಾರು? ಅವನ ಕಾಲ ಯಾವುದು? ಅವರ ಧರ್ಮ ಗ್ರಂಥ ಯಾವುದು ಇತ್ಯಾದಿ ಪ್ರಶ್ನೆಗಳನ್ನು ವೀರಶೈವ ಧರ್ಮದ ಬಗ್ಗೆಯೂ ಎತ್ತಬಹುದು. ಬೌದ್ಧ , ಕ್ರೈಸ್ತ, ಇಸ್ಲಾಂ, ಸಿಖ್ ಧರ್ಮಗಳಂತೆ ಹಿಂದೂಧರ್ಮವು ನಿರ್ದಿಷ್ಟ ವ್ಯಕ್ತಿಯ ಹೆಸರಲ್ಲಿ ರೂಪುಗೊಂಡದ್ದಲ್ಲ. ಅದಕ್ಕೆ ಒಂದು ನಿರ್ದಿಷ್ಟ ಧರ್ಮಗ್ರಂಥವಿಲ್ಲವೆಂಬುದು ನಿಜ. ವೀರಶೈವವೂ ಕೂಡ ಕೆಲವರ ಪ್ರಕಾರ ಪಂಚಾಚಾರ್ಯದಿಂದ, ಕೆಲವರ ಪ್ರಕಾರ ಬಸವಣ್ಣನವರಿಂದ ಸ್ಥಾಪಿತವಾಯಿತು. ಆ ಎರಡೂ ಅಭಿಪ್ರಾಯಗಳು ಮಾನ್ಯವಲ್ಲ. ಅದರ ಸ್ಥಾಪಕ ಯಾರು - ಅಂತಹ ವ್ಯಕ್ತಿ ಇದ್ದರೆ (ಇರುವುದು ಅಸಂಭವ) ನಮಗೆ ತಿಳಿಯದು ಎಂಬುದೇ ಸದ್ಯದ ತೀರ್ಮಾನ. ಸ್ಥಾಪಕರ ವಿಷಯದಲ್ಲಿ ಇರುವ ನಂಬಿಕೆಯ ಪ್ರಶ್ನೆ ಬೇರೆ. ಕೆಲವರ ಪ್ರಕಾರ ರೇಣುಕರು ಅಗಸ್ತ್ಯನಿಗೆ ಬೋಧಿಸಿದರೆಂದು ಹೇಳಲಾದ ಸಿದ್ಧಾಂತ ಶಿಖಾಮಣಿಯು ವೀರಶೈವರ ಧರ್ಮಗ್ರಂಥ; ಕೆಲವರ ಪ್ರಕಾರ ಶರಣರ ವಚನವಾಙ್ಮಯ ವೀರಶೈವರ ಧರ್ಮಗ್ರಂಥ. ಆದರೂ ವೀರಶೈವವೆಂಬ ಧರ್ಮದ ಅಸ್ತಿತ್ವವನ್ನು ಒಪ್ಪುವಂತೆ ಹಿಂದೂ ಧರ್ಮದ ಅಸ್ತಿತ್ವವನ್ನು ಎಲ್ಲ ಪ್ರಾಜ್ಞರೂ ಒಪ್ಪಿದ್ದಾರೆ. ಹಿಂದೂ ಎಂಬುದು ಹಲವು ಮತಗಳ, ನಂಬಿಕೆ ಶ್ರದ್ಧೆ ಆಚರಣೆಗಳ ಒಂದು ಒಕ್ಕೂಟ ಸಮನ್ವಯ. ಅದರ ಪ್ರಮುಖ ಲಕ್ಷಣವನ್ನು ಹೇಳಿರುವ ಬಾಲಗಂಗಾಧರ ತಿಲಕರ ಸೂತ್ರವು ಎಲ್ಲರಿಗೂ ಮಾನ್ಯವಾಗಿದೆ. (ಸರ್ವೋನ್ನತ ನ್ಯಾಯಾಲಯವೂ ಒಪ್ಪಿದೆ) ಅದು ಹೀಗಿದೆ : ೧. ವೇದಗಳನ್ನು ಗೌರವದಿಂದ ಕಾಣುವುದು, ೨. ಮೋಕ್ಷಕ್ಕೆ ಹಲವು ಮಾರ್ಗಗಳಿವೆ ಎಂಬ ಬಗ್ಗೆ ವಿಸ್ವಾಸ, ೩. ಸತ್ಯ ಸಾಕ್ಷಾತ್ಕಾರಕ್ಕಾಗಿ ಆರಾಧಿಸುವ ದೈವಗಳು ಹಲವು ಇವೆ ಎಂಬ ಬಗ್ಗೆ ನಂಬಿಕೆ'. ವಿವೇಕಾನಂದರು ಹೇಳುವಂತೆ ಹಿಂದೂ ಧರ್ಮದ ವೈಶಿಷ್ಟ್ಯವಿರುವುದು ತತ್ವವನ್ನು ಬರೀ ನಂಬುವುದರಲ್ಲಿ ಅಲ್ಲ, ಅದೇ ಆಗುವುದರಲ್ಲಿ ("..not in believing, but in becoming") ಈ ಎಲ್ಲ ಲಕ್ಷಣಗಳೂ ವೀರಶೈವರಲ್ಲಿವೆ.

ಹಿಂದೂ ಧರ್ಮದಂತೆಯೇ ವೀರಶೈವದಲ್ಲಿಯೂ ತೋರಿಕೆಗೆ ಕೆಲವು ವಿರೋಧಗಳಿವೆ. ಉದಾಹರಣೆಗೆ, ವೀರಶೈವದ ಒಂದು ಭಾಗವು ದೇವಾಲಯಗಳ ಶಿವಲಿಂಗಗಳಿಂದ ಮೂಡಿಬಂದ ಆಚಾರ್ಯರೇ ಸ್ಥಾಪಕರು ಎಂದು ನಂಬಿದರೆ, ದೇವಾಲಯಗಳ ಶಿವಲಿಂಗಗಳ ಆರಾಧನೆ ತಪ್ಪು ಎಂದು ಇನ್ನೊಂದು ಭಾಗ ಪ್ರತಿಪಾದಿಸುತ್ತದೆ. ಇಬ್ಬರೂ ಇಷ್ಟಲಿಂಗ ಧಾರಣೆಯ ಮಹತ್ವವನ್ನು ಒಪ್ಪುತ್ತಾರೆ. ಉತ್ತರ ಕರ್ನಾಟಕದಲ್ಲಿ ಅಗ್ನಿ ಪ್ರತಿಷ್ಠಾಪನೆಯ ನಿಷೇಧವಿದ್ದರೆ ದಕ್ಷಿಣ ಕರ್ನಾಟಕದಲ್ಲಿ ಗೃಹಪ್ರವೇಶ ಸಂದರ್ಭದಲ್ಲಿ ಹೋಮ ಹವನಾದಿಗಳನ್ನು ನೆರವೇರಿಸುತ್ತಾರೆ. ಅವರವರಿಗೆ ತಮ್ಮದೇ ಸರಿಯೆಂದೂ ಇನ್ನೊಬ್ಬರದು ಸರಿಯಲ್ಲವೆಂದು ಕಂಡುಬಂದರೆ ಅದು ಸ್ವಾಭಾವಿಕವೇ. ಎರಡೂ ವೀರಶೈವದ ಪ್ರಾದೇಶಿಕ ಪ್ರಭೇದಗಳೆಂದು - ಭಾಷಾ ಪ್ರಭೇದಗಳ ರೀತಿ - ಭಾವಿಸುವುದೇ ವಿವೇಕದ ಮಾರ್ಗ. ಮುಖ್ಯ ವಿಷಯವೆಂದರೆ ಶಿವಭಕ್ತಿ ಮತ್ತು ಶುಭ್ರ ಬದುಕು. ವೇದಗಳ ಕಾಲದಲ್ಲಿ ವರ್ಣವ್ಯವಸ್ಥೆಯು ವ್ಯಕ್ತಿಯ ಹುಟ್ಟಿನಿಂದ ನಿರ್ಣೀತವಾಗದೆ ಅವನ ವೃತ್ತಿಯಿಂದ ನಿರ್ಣೀತವಾಗುತ್ತಿತ್ತು ಎಂದರೆ, ಬ್ರಾಹ್ಮಣನು ಶೂದ್ರನಾಗುವ, ಶೂದ್ರನು ಬ್ರಾಹ್ಮಣನಾಗುವ ದ್ವಿಮುಖ ಸಂಚಾರವಿತ್ತು. ಮುಂದೆ ಅದು ಕೇವಲ ಹುಟ್ಟಿನಿಂದ ನಿರ್ಣೀತವಾಗುವ ಶ್ರೇಣೀಕೃತ ಜಾತಿವ್ಯವಸ್ಥೆಗೆ ಎಡೆಮಾಡಿಕೊಟ್ಟಿತು. ಬಸವಣ್ಣನವರೂ ಇತರ ಶರಣರೂ ಅಂತಹ ಜಾತಿಭೇದದ ವಿರುದ್ಧ ಧ್ವನಿ ಎತ್ತಿದರು ನಿಜ. ಮುಂದೆ ಏನಾಯ್ತು? ಈಗ ಏನಾಗಿದೆ? ವೀರಶೈವರಲ್ಲೇ ಜಂಗಮ, ಬಣಜಿಗ, ಪಂಚಮಸಾಲಿ, ನೊಣಬ, ಸಾದ, ಗಾಣಿಗ, ಕುಡುವೊಕ್ಕಲಿಗ, ರೆಡ್ಡಿ ಮಲವಗೌಡ, ಮಡಿವಾಳ, ಕ್ಷೌರಿಕ ಇತ್ಯಾದಿ ಶ್ರೇಣೀಕೃತ ಜಾತಿಭೇದಗಳಿವೆ. ಲಿಂಗಧಾರಿ ದಲಿತರನ್ನು ಇಂದಿಗೂ ಎಲ್ಲರೂ ದೂರ ಇಟ್ಟಿದ್ದಾರೆ. ಸ್ತ್ರೀಯರಿಗೆ ವೇದಗಳ ಕಾಲದಲ್ಲಿ ಪುರುಷ ಸಮಾನ ಸ್ಥಾನವಿತ್ತು ; ಅಂತೆಯೇ ಶರಣರ ಕಾಲದಲ್ಲಿ. ಮುಂದೆ? ಬ್ರಾಹ್ಮಣರಲ್ಲಿ ಕೊನೆಯ ಪಕ್ಷ ಹೆಳವನ ಕಟ್ಟೆ ಗಿರಿಯಮ್ಮನಂತಹ ಲೇಖಕಿ ಕಾಣಿಸಿದಳು, ವೀರಶೈವರಲ್ಲಿ ಹನ್ನೆರಡನೆಯ ಶತಮಾನ ಬಿಟ್ಟರೆ ಲೇಖಕಿಯರನ್ನು ಕಾಣಲು ಇಪ್ಪತ್ತನೇ ಶತಮಾನಕ್ಕೇ ಬರಬೇಕು. ಹಿಂದೂ ಧರ್ಮದಲ್ಲಿ ಬ್ರಾಹ್ಮಣ ಶ್ರೇಷ್ಠನಾದರೆ ವೀರಶೈವರಲ್ಲಿ ಜಂಗಮನೇ ಶ್ರೇಷ್ಠನೆಂಬ ಭಾವನೆ ಇದೆ. ಉತ್ತರ ಕರ್ನಾಟಕದಲ್ಲಿ ಜಂಗಮದ ಬಗ್ಗೆ ಇತರ 'ಲಿಂಗಾಯ್ತ'ರಿಗೆ ತೀವ್ರ ಅಸಮಾಧಾನವಿದೆ, ತಮ್ಮನ್ನು ಸ್ವಲ್ಪ ಕೆಳಗಾಗಿ ಕಾಣುತ್ತಾರೆ ಎಂದು. ಆ ಕಾರಣದಿಂದಲೇ 'ವೀರಶೈವ' ಬೇರೆ, 'ಲಿಂಗಾಯ್ತ' ಬೇರೆ ಎಂಬಂತಹ ವಾದ ಅಲ್ಲಿ ಏಳಲು ಕಾರಣವಾಯಿತು; 'ಹಿಂದೂ' ಬೇರೆ 'ವೀರಶೈವ' ಬೇರೆ ಎಂಬ ವಾದದಂತೆ ಅದೂ ಅತಾರ್ಕಿಕವೇ. ಬರೀ ಬ್ರಾಹ್ಮಣರೇ ಹಿಂದೂಗಳು ಎಂದು ಭಾವಿಸುವುದೂ, ಜಂಗಮರೇ ವೀರಶೈವರೆಂದು (ಲಿಂಗಾಯತ) ಭಾವಿಸುವುದೂ ಎರಡೂ ತಪ್ಪು. ಸಿದ್ಧಗಂಗೆಯ ಪೂಜ್ಯ ಡಾ.ಶಿವಕುಮಾರ ಸ್ವಾಮಿಯವರು ಪ್ರೊ.ದೇ.ಜ.ಗೌ. ಅವರ ಸಂದರ್ಶನದಲ್ಲಿ ಹೇಳಿರುವಂತೆ, 'ಬ್ರಾಹ್ಮಣ ಜಾತಿಯೊಡನೆ ಅದರ (ಹಿಂದೂ ಧರ್ಮದ) ಸಮೀಕರಣ ಸರಿಯಲ್ಲ'. ಹಿಂದೂ ಧರ್ಮವನ್ನೂ, ಅದರಲ್ಲಿನ ಬ್ರಾಹ್ಮಣ ಜಾತಿಯನ್ನೂ ಮಾತ್ರ ಖಂಡಿಸುವ ವೀರಶೈವರು ತಮ್ಮನ್ನು ಮಾತ್ರ ಆ ಖಂಡನೆಯಿಂದ ಹೊರಗು ಮಾಡಿಕೊಳ್ಳುವುದು ಸರಿಯಲ್ಲ. ವಿಮರ್ಶೆ ಯಾವಾಗಲೂ ತನ್ನಿಂದ, ತನ್ನ ವರ್ಗದಿಂದ ಮೊದಲು ಆರಂಭವಾಗಬೇಕು ಎಂಬುದನ್ನು ಇಲ್ಲಿ ಸೂಚಿಸುತ್ತಿದ್ದೇನೆ. ಇದು ಯಾವುದೇ ಪಕ್ಷಪಾತದ, ಅಸಹನೆಯ ಮಾತು ಅಲ್ಲ.

ವೀರಶೈವ ಧರ್ಮ; ಚರಿತ್ರೆ

ಈಗಾಗಲೇ ಸೂಚಿಸಿದಂತೆ ವೀರಶೈವ (ಲಿಂಗಾಯತ) ಧರ್ಮವನ್ನು ಯಾರು ಸ್ಥಾಪಿಸಿದರೋ ತಿಳಿಯದು. ಶರಣರು ಹನ್ನೆರಡನೆಯ ಶತಮಾನದಲ್ಲಿ ವಚನಗಳನ್ನು ಬರೆಯುವ ಹೊತ್ತಿಗೆ ಆಗಲೇ ಹೆಚ್ಚು ಜನಪ್ರಿಯವಲ್ಲದಿದ್ದರೂ ವೀರಶೈವ ಪಂಥವು ಪ್ರಚಾರದಲ್ಲಿತ್ತು. ಆ ವೀರಶೈವರಿಗೆ ಪಂಚಾಚಾರ, ಅಷ್ಟಾವರಣ, ಷಟಸ್ಥಲಗಳ ಅರಿವಿತ್ತು. ಇಷ್ಟಲಿಂಗಧಾರಿಗಳಾಗಿದ್ದ ಅವರಿಗೆ ದೇಹವೇ ದೇವಾಲಯವೆಂಬ ಅರಿವೂ ಇತ್ತು. ಇದು ಕನ್ನಡ ವಚನಗಳ ಮಧ್ಯೆ ಬರುವ ಅವಕ್ಕಿಂತ ಹಿಂದೆ ರಚಿತವಾಗಿದ್ದ ಸಂಸ್ಕೃತ ಶ್ಲೋಕಗಳಿಂದ ಸ್ಪಷ್ಟವಾಗುತ್ತದೆ. ಬಸವಣ್ಣ ಸಂಸ್ಕೃತ 'ಸಿದ್ಧಾಂತಶಿಖಾಮಣಿ'ಯ (ಇದು ಅಚ್ಚಾಗಿದೆ) ಶ್ಲೋಕವನ್ನು ಉದಾಹರಿಸುವುದರಿಂದ ಅದು ಅವನಿಗಿಂತ ಹಿಂದಿನದೆಂಬುದು ಸ್ಪಷ್ಟ. ಬಸವನಿಗಿಂತ ಸ್ಪಷ್ಟವಾಗಿ ಹಿಂದಿನ ಕೇಶಿರಾಜ, ತೆಲುಗು, ಬೊಮ್ಮಯ್ಯ, ಕೆಂಬಾವಿ, ಭೋಗಣ್ಣರಂತಹ ಶಿವಭಕ್ತರು ರಾಜಪ್ರಭುತ್ವವನ್ನು ತಿರಸ್ಕರಿಸಬಲ್ಲವರಾಗಿದ್ದರು. ಅವರು ಅಸ್ಪೃಶ್ಯರ

ಜೊತೆ ನಿರಾತಂಕವಾಗಿ ಬೆರೆತಿದ್ದರು, ಅವರನ್ನು ಸರಿಸಮನಾಗಿ ಕಂಡಿದ್ದರು ಎಂಬುದು ಖಚಿತ ಐತಿಹಾಸಿಕ ಸತ್ಯ. 'ಶುದ್ಧಶೈವ'ನಾಗಿದ್ದ ಬಸವಣ್ಣನವರಿಗೆ ಚನ್ನಬಸವಣ್ಣನವರ ಮೂಲಕ ವೀರಶೈವದ ಪರಿಚಯವಾಗಿ (ಅದು ವಚನಗಳಿಂದಲೇ ಸ್ಪಷ್ಟವಾಗಿ ತಿಳಿದುಬರುತ್ತದೆ). ಅದರ ಪ್ರಗತಿಪರ ಅಂಶಗಳಿಗೆ ಮಾರುಹೋದ ಬಸವಣ್ಣ 'ವೀರಶೈವ'ನಾಗುತ್ತಾನೆ. ತಮಗಿಂತ ಹಿಂದಿನ ವೀರಶೈವದಲ್ಲಿ ನಿಕ್ಷಿಪ್ತವಾಗಿದ್ದ ಜಾತಿ - ಲಿಂಗಭೇದ ತತ್ವಗಳು ಬಸವಣ್ಣನವರಿಂದಾಗಿ ಸಾರ್ವತ್ರೀಕರಣಗೊಂಡುವು, ಹೆಚ್ಚಿನ ವ್ಯಾಪಕತೆ, ಮೊನಚನ್ನು ಕಂಡುವು. ಅವರು ಸ್ವೀಕರಿಸಿದ ವೀರಶೈವವು ಶೈವದ ನಾಲ್ಕು ಪ್ರಭೇದಗಳಲ್ಲಿ ಒಂದಾಗಿತ್ತು. (ಉಳಿದ ಮೂರು : ಸಾಮಾನ್ಯ, ಮಿಶ್ರ, ಶುದ್ಧ). ಆಧುನಿಕ ಪೂರ್ವ ಭಾರತದ ಅತಿ ದೊಡ್ಡ ಸಮಾಜಸುಧಾರಕ ಬಸವಣ್ಣ ಎಂಬಲ್ಲಿ ಅನುಮಾನವಿಲ್ಲ.

ಅನೀತಿಯ ಖಂಡನೆ

ಅವರೂ ಸೇರಿದಂತೆ ಎಲ್ಲ ವಚನಕಾರರಲ್ಲಿ ವೇದಗಳನ್ನು ಅಭ್ಯಸಿಸಿದರೂ ಕರ್ಮಕ್ಕೆ ಅಂಟಿಕೊಂಡಿದ್ದ ಬ್ರಾಹ್ಮಣ ಜಾತಿಯ ಖಂಡನೆಯಂತೆಯೇ ವಚನಗಳನ್ನು ಓದಿದ ಅಥವಾ ಬರೆದ ಸಮಕಾಲೀನ ಶರಣರ ಖಂಡನೆಯೂ ಬಂದಿದೆ. ಕೆಳಜಾತಿಯ ಶಿಷ್ಯರು ಮನೆಗೆ ಹೋದ ಗುರು ಅಲ್ಲಿ ಊಟ ಮಾಡದೆ ಅಲ್ಲಿಂದ ಅಕ್ಕಿ, ಬೇಳೆ ಸಂಗ್ರಹ ಮಾಡಿಕೊಂಡು ಬರುವುದನ್ನೂ ಇಂದ್ರಿಯ ವಿಗ್ರಹವಿಲ್ಲದ ವಿರಕ್ತರನ್ನೂ ಖಂಡಿಸಲಾಗಿದೆ. ಅದರಲ್ಲೂ ಬಸವಣ್ಣನಲ್ಲಿ ಬ್ರಾಹ್ಮಣರ, ವಚನಕಾರ್ತಿಯರಲ್ಲಿ ವಿರಕ್ತರ ಖಂಡನೆ ತೀವ್ರವಾಗಿರುವುದು ಮನೋವೈಜ್ಞಾನಿಕ ವಿಶ್ಲೇಷಣೆಗೆ ಅರ್ಹ. ನಿಜವಾದ ಲಿಂಗವಂತನಾಗಬೇಕಾದರೆ ಶಿವಭಕ್ತಿ ಅಗತ್ಯವೆಂಬ, ಬ್ರಾಹ್ಮಣನಾಗಬೇಕಾದರೆ ಬ್ರಹ್ಮವಸ್ತುವನ್ನು ಅರಿಯಬೇಕೆಂಬ ಮಾತು ಹಲವೆಡೆ ಬಂದಿದೆ. ಹಿಂದೂಧರ್ಮದ ಆಧಾರಗ್ರಂಥಗಳಾದ ವೇದ, ಉಪನಿಷತ್ತು, ಆಗಮ, ಸ್ಮೃತಿ, ಪುರಾಣಗಳಿಂದ ಶರಣರ ಅಕ್ಷರಶಃ ನೂರಾರು ಉಕ್ತಿಗಳನ್ನು ಗೌರವದಿಂದ ಉಲ್ಲೇಖಿಸಿದ್ದಾರೆ. (ಉದಾ : 'ಓಂ ದ್ಯಾವಾ ಭೂಮೀ ಜನಯನ್ ದೇವ ಏಕೋ ದೇವ ಎಂದು ಶ್ರುತಿ ಸ್ಮೃತಿಗಳು ಸಾರುತ್ತಿದ್ದಾವು''- ಬಸವ). ಭವಿಯನ್ನು ಲಿಂಗವಂತನನ್ನಾಗಿ ಮಾಡುವ ದೀಕ್ಷೆಯ ಸಂದರ್ಭದಲ್ಲಿ ಅವನ ಮುಂದೆ ವೇದವನ್ನು ಪಠಿಸಿ ಅವನ ಬಾಯಿಂದ ವೇದ ಹೇಳಿಸಬೇಕು ಎಂದು ವಿಧಿಸಿದ್ದಾನೆ, ಚನ್ನಬವ (ಇವನೇ ಲಿಂಗವಂತರಿಗೆ ನೀತಿ ಸಂಹಿತೆ ನೀಡಿದವನು). ಉಪನಿಷತ್ತುಗಳಂತೆ ಶರಣರೂ ವೇದಗಳ ಕರ್ಮಕಾಂಡವನ್ನು ತಿರಸ್ಕರಿಸಿ ಜ್ಞಾನಕಾಂಡವನ್ನು ಪುರಸ್ಕರಿಸಿದರು. ವೀರಶೈವ ಭಕ್ತಿಚಳವಳಿಯ ಎಲ್ಲ ಲಕ್ಷಣಗಳೂ ಭಾರತದ ಇತರೆಡೆಯ ಭಕ್ತಿ ಚಳವಳಿಗಳಲ್ಲಿಯೂ ಇವೆ.

ಶಿವಶರಣರ ಬಳಿಕ

ಹರಿಹರ ಕವಿ ಬ್ರಾಹ್ಮಣರನ್ನು 'ವೇದಜಡ'ರೆಂದು ನಿಂದಿಸಿ, ಜನ್ನಿವಾರವನ್ನು ತಿರಸ್ಕರಿಸಿದ ಬಸವನ ಬಗ್ಗೆ ಕಾವ್ಯ ಬರೆದಿದ್ದರೂ ಯಜ್ಞೋಪವೀತಧಾರಿ ಶಿವನ ಆಸ್ಥಾನದ 'ಸಕಲಾಗಮ ಕೋವಿದ' ಬೃಹಸ್ಪತಿಯನ್ನು ಹೊಗಳಿದ್ದಾನೆ. ಈಗಿನ ಆರಾಧ್ಯರಂತೆ, ಹಲವು ವೀರಶೈವ ಉಪಜಾತಿಗಳ ಜನರಂತೆ ಹರಿಹರ ಕವಿ, ಪದ್ಮರಸ ಇಬ್ಬರೂ ಜನಿವಾರ ಧರಿಸಿದ್ದವರು. ರಾಘವಾಂಕನ ಪ್ರಕಾರ, ಯಾಗ ಮಾಡಿದರೂ ಸತ್ಯವಂತನಾಗಿದ್ದ ಹರಿಶ್ಚಂದ್ರನಿಗೆ ಶಿವ ಒಲಿದ. ತೆಲುಗು ಬಸವಪುರಾಣ ಕರ್ತೃ ಸೋಮನಾಥನ ಗುರು ವೇದಪ್ರವೀಣ. ಕನ್ನಡ ಬಸವ ಪುರಾಣ ಬರೆದ ಭೀಮಕವಿ ಒಬ್ಬ 'ಶೈವ ಬ್ರಾಹ್ಮಣ' (ವೀರಶೈವ). ಚಿತ್ರದುರ್ಗದ ಮುರಿಗಾಮಠದ ಸ್ಥಾಪಕರಾದ ಶಾಂತವೀರಾರ್ಯರು (೧೬೮೦) ''ವೇದ ವೇದಾಂತ ಆಗಮೋಪನಿಷತ್ ಪುರಾಣೋಕ್ತ ಶ್ರೀಮದ್ ವೀರಶೈವಾಚಾರ'' ಎಂಬ ಅಭಿಪ್ರಾಯವು ಅಂದಿನ ಎಲ್ಲ ವೀರಶೈವ ಪ್ರಾಜ್ಞರ ಅಭಿಪ್ರಾಯವೇ ಆಗಿದೆ. ವೀರಶೈವ ವಿದ್ವಾಂಸರು ವೇದಗಳಿಗೆ ಆಗಮಗಳಿಗೆ ಭಾಷ್ಯ ಬರೆದರು.

ಆಗಮಗಳು : ಪಂಚಪೀಠಗಳು

ವೀರಶೈವರ ಪಂಚಪೀಠಗಳ ಮೂಲ ಆಚಾರ್ಯರು ಐದು ಪ್ರಸಿದ್ಧ 'ಹಿಂದೂ' ದೇವಾಲಯಗಳ ಶಿವಲಿಂಗಗಳಿಂದ ಮೂಡಿ ಬಂದವರು ಎಂಬ ಶ್ರದ್ಧೆ ಇದೆ. ಕಾಶಿಯ ವಿಶ್ವೇಶ್ವರ ಲಿಂಗದಿಂದ ಮೂಡಿ ಬಂದ ವೀರಶೈವರ ವಿಶ್ವಾರಾಧ್ಯ ಪೀಠವು ಹಿಂದೂ

ಮಠವಲ್ಲವೆಂಬುದು ಹಾಸ್ಯಾಸ್ಪದ. ಕಲ್ಕತ್ತೆಯ ಶ್ರೀ ರಾಮಕೃಷ್ಣಾಶ್ರಮವು ತನ್ನದು ಹಿಂದೂಸಂಸ್ಥೆಯಲ್ಲವೆಂದು ಘೋಷಿಸಿ ಕೊಂಡದ್ದನ್ನು ಸರ್ವೋನ್ನತ ನ್ಯಾಯಾಲಯ ತಿರಸ್ಕರಿಸಿತು. ಪಂಚಪೀಠಗಳ ಪೂಜ್ಯರು ವೀರಶೈವರು ಹಿಂದೂಗಳೆಂಬುದನ್ನು ಈಗಾಗಲೇ ಬಹಿರಂಗವಾಗಿ ಸಾರಿದ್ದಾರೆ. ಆ ಪರಂಪರೆಯ ಗುರುಗಳೆಲ್ಲ ಶಿವಾಗಮಗಳಷ್ಟೇ ವೇದಗಳನ್ನೂ ಗೌರವಿಸುತ್ತಾರೆ. ಆಗಮಗಳು ಶಿವನ ವಾಣಿಯೆಂದೂ, ವೇದಗಳು ಶಿವನ ಉಸಿರೆಂದೂ ಆಗಮಗಳೇ ಹೇಳಿವೆ - ಎರಡಕ್ಕೂ ವಿರೋಧವೇ ಇಲ್ಲ. ಶಿವಾಗಮಗಳಲ್ಲಿ ವೀರಶೈವರನ್ನು ''ಲಿಂಗಿಬ್ರಾಹ್ಮಣ'' 'ವೀರಶೈವ ದ್ವಿಜ''ರೆಂದು ಕರೆದಿದೆ. ಅದನ್ನೇ ಹಿಂದೆ ಹೇಳಿದ ಸರಳಿ, ಬನವಾಸಿ ಮೊಕದ್ದಮೆಗಳಲ್ಲಿ ವೀರಶೈವ ವಿದ್ವಾಂಸರು ಎತ್ತಿ ಹಿಡಿದರು. ಇಂದಿನ ಭಾರತೀಯ ಸಮಾಜದ ಜೀವನವು ಕರ್ಮಪ್ರಧಾನ ಯಜ್ಞ, ಯಾಗ ಕೇಂದ್ರಿತವಾಗಿರುವುದಕ್ಕಿಂತ, ಮೂರ್ತಿ ಪ್ರತಿಷ್ಠಾಪನೆ, ದೇವತಾ ಪೂಜೆಗಳನ್ನು ಪ್ರತಿಪಾದಿಸುವ ಆಗಮಗಳ ಭಕ್ತಿ ಮಾರ್ಗಕೇಂದ್ರಿತವೆಂಬುದನ್ನು ನೆನೆದರೆ ಆಗಮಗಳ ಮಹತ್ವವು ವಿಧಿತವಾಗುತ್ತದೆ. (ಇದು ಹಿಂದೂ ಧರ್ಮ ಎಲ್ಲ ಪ್ರಭೇದಗಳಿಗೂ - ವೈಷ್ಣವಕ್ಕೂ - ಅನ್ವಯವಾಗುತ್ತದೆ).

ಆಧುನಿಕ ಕಾಲದಲ್ಲಿ

ಸಿದ್ಧಗಂಗೆ, ಸುತ್ತೂರು, ಹುಬ್ಬಳ್ಳಿಯ ಮಠಗಳಂತೆ ವೀರಶೈವ ಮಠಗಳು ನೂರಾರು 'ವೇದ ಆಗಮ ಸಂಸ್ಕೃತ ಪಾಠಶಾಲೆ' ನಡೆಸುತ್ತಿವೆ. ಹಿಂದಿನ ಯಾವುದೇ ವೀರಶೈವ ಪುರಾಣ ತೆಗೆದರೂ, ಶಿವನ ಕೈಲಾಸವು ವೇದಘೋಷದಿಂದ ತುಂಬಿದ್ದಿತೆಂಬ ವರ್ಣನೆ ದೊರಕುತ್ತದೆ. ವೇದಾಧ್ಯಯನವು ಸ್ತ್ರೀಯರಿಗೂ ಶೂದ್ರರಿಗೂ ಕೂಡದು ಎಂಬ ಬ್ರಾಹ್ಮಣರ ಪ್ರತಿಪಾದನೆಯನ್ನು ಉಲ್ಲಂಘಿಸಿದ ವೀರಶೈವರು ಇಬ್ಬರಿಗೂ ವೇದಾಧ್ಯಯನ ಮಾಡಿಸಿದರು, ದಲಿತರಿಗೂ ಮಾಡಿಸಿದರು. ಸಿದ್ಧರಾಮನ ಶಿಷ್ಯ ಹಾವಿನಹಾಳು ಕಲ್ಲಯ್ಯ ನಾಯಿ ಬಾಯಿಂದ ವೇದ ಹೇಳಿಸಿದನೆಂಬುದು ಒಂದು ಸಾಂಕೇತಿಕ ಕತೆ. ಕ್ರಿ.ಶ. ೧೪೩೦ರಲ್ಲಿದ್ದ ಗುಬ್ಬಿಯ ಮಲ್ಲಣ್ಣನು ಅಸ್ಪೃಶ್ಯರಿಗೆ ವೇದಗಳನ್ನು ಕಲಿಸಿದ ವಿಷಯ ದಾಖಲಾಗಿದೆ. ೧೮೬೮ರಲ್ಲಿ ಆರಂಭವಾದ ಮೈಸೂರಿನ ಮಹಾರಾಜ ಸಂಸ್ಕೃತ ಕಾಲೇಜಿನಲ್ಲಿ ಬ್ರಾಹ್ಮಣೇತರರಿಗೆ ಪ್ರವೇಶ ಸಿಕ್ಕಿದ್ದು ೧೯೫೦ರಲ್ಲಿ; ಅದೂ ಮುಖ್ಯವಾಗಿ ವೀರಶೈವರ ಹೋರಾಟದಿಂದ ೧೯೧೭ರಲ್ಲಿ ಸಿದ್ಧಗಂಗೆಯ 'ವೇದ, ಆಗಮ, ಸಂಸ್ಕೃತ ಪಾಠಶಾಲೆ' ವೀರಶೈವರಿಗಾಗಿ ಆರಂಭವಾದರೂ ಎಲ್ಲರಿಗೂ ತನ್ನ ಬಾಗಿಲನ್ನು ತೆರೆದಿಟ್ಟಿತು. ಸಿದ್ಧಗಂಗೆಯ ಪೂಜ್ಯ ಡಾ. ಶಿವಕುಮಾರ ಸ್ವಾಮೀಜಿಯವರ ಸ್ಪಷ್ಟ ಅಭಿಪ್ರಾಯಗಳು ಗಮನಾರ್ಹ - 'ವೀರಶೈವ ಧರ್ಮ ಹಿಂದೂಧರ್ಮದ ಅರ್ಥಾತ್ ಶೈವಧರ್ಮದ ಒಂದು ಶಾಖೆ. ಅನೇಕ ರಾಜಕಾರಣಿಗಳಿಗೆ ಹಿಂದೂ ಧರ್ಮದ ಜಾಯಮಾನವೇ ಗೊತ್ತಿಲ್ಲ''. ಪಂಚಪೀಠಗಳ ಪರವಾಗಿ ಹೇಳಿಕೆ ನೀಡಿರುವ ಪೂಜ್ಯ ಶ್ರೀ ರಂಭಾಪುರಿ ಸ್ವಾಮೀಜಿಯವರು 'ವೀರಶೈವರ ಹಕ್ಕುಗಳಿಗಾಗಿ ಹೋರಾಟ ಮಾಡೋಣ. ಆದರೆ ಪರಂಪರೆ ಹಾಗೂ ಸಾಂಸ್ಕೃತಿಕ ದೃಷ್ಟಿಯಿಂದ ವೀರಶೈವರು ಹಿಂದೂಗಳೇ'. ವಿರಕ್ತಪೀಠ, ಗುರುಪೀಠಗಳ ಇಬ್ಬರು ಪ್ರಮುಖ ಪೀಠಾಧ್ಯಕ್ಷರ ಅಭಿಪ್ರಾಯಗಳನ್ನು ಎಲ್ಲರೂ ಗಮನಿಸಬೇಕು.

ಅನ್ಯಧರ್ಮಗಳಲ್ಲಿ

ಕ್ರೈಸ್ತರಲ್ಲಿ ಹದಿನಾರನೇ ಶತಮಾನದ ಮಾರ್ಟಿನ್ ಲೂಥರ್ ಮತ್ತು ಜಾನ್ ಕೆಲ್ವಿನರು ಬಸವನಂತೆ ಸಾಂಪ್ರದಾಯಕ ಕ್ರೈಸ್ತ ಧರ್ಮದ ತತ್ವಗಳ ವಿರುದ್ಧ ಪ್ರತಿಭಟಿಸಿ ವಿಚಾರಕ್ರಾಂತಿ ಮಾಡಿ Protestants ಎನ್ನಿಸಿಕೊಂಡರೂ ಅವರು ಪ್ರತಿಭಟನೆ ಮಾಡಿದ್ದು ಕ್ರೈಸ್ತಧರ್ಮದ ಚೌಕಟ್ಟಿನ ಒಳಗೇ, ಬೌದ್ಧರಲ್ಲಿಯೂ ಹೀನಾಯನ, ಮಹಾಯಾನ, ವಜ್ರಯಾನಗಳೆಂಬ, ಜೈನರಲ್ಲಿ ದಿಗಂಬರ, ಶ್ವೇತಾಂಬರ, ಯಾಪನೀಯಗಳೆಂಬ ಪಂಥಗಳಿವೆ. ಹಿಂದೂ ಧರ್ಮವೂ ಸೇರಿದಂತೆ ಜಗತ್ತಿನ ಎಲ್ಲ ಧರ್ಮಗಳಲ್ಲೂ ಆಚರಣೆ ಭೇದ, ಕೆಲವೊಮ್ಮೆ ತತ್ವಭೇದಗಳಿದ್ದರೂ ಅವುಗಳ ಮೂಲ ಸಿದ್ಧಾಂತ ಒಂದೇ ಆಗಿರುತ್ತದೆ.

ಗಮನಿಸಬೇಕು : ಭಾರತೀಯರೇ ಆದ ಬೌದ್ಧ, ಜೈನ, ಸಿಖ್ ಧರ್ಮಗಳು ಹಿಂದೂ ದೇವತೆಗಳನ್ನು ಪೂಜಿಸುವುದಿಲ್ಲ, ವೇದಗಳನ್ನು ಮಾನ್ಯ ಮಾಡುವುದಿಲ್ಲ. ಭಾರತದ ಉಳಿದ ಭಾಗಗಳ ಶೈವರಂತೆ ವೀರಶೈವರಿಗೆ ವೇದಗಳು ಮಾನ್ಯವಾಗಿವೆ;

ವಿಭೂತಿ, ರುದ್ರಾಕ್ಷಿ, ಓಂ ನಮ ಶಿವಾಯ ಎಂಬ ಮಂತ್ರ ಎಲ್ಲರಿಗೂ ಸಮಾನ. ಬಸವಣ್ಣನ ಜನನವೇ ಶಿವದೇವಾಲಯದ ನಂದಿಯ ಅನುಗ್ರಹದಿಂದ ಎಂಬ ಕತೆಯನ್ನೂ, ಅವನ ಗುರು 'ಜಾತವೇದ ಮುನಿ' ಎಂಬುದನ್ನೂ ವೀರಶೈವರು ನಂಬುತ್ತಾರೆ. ಎಲ್ಲ ವೀರಶೈವರೂ ಶಿವ ದೇವಾಲಯಗಳಿಗೆ ಹೋಗುತ್ತಾರೆ. ಶಿವದೇವಾಲಯಗಳಿಗೆ ಹೋಗುವುದು ಸರಿಯಲ್ಲ ಎಂದು ಪ್ರಬಲವಾಗಿ ಪ್ರತಿಪಾದಿಸುವ ಈಗಿನ ಚಿತ್ರದುರ್ಗ ಮಠದ ಮುರುಗಾ ಸಂಸ್ಥಾನದ ಸ್ಥಾಪಕರಾದ ಮುರಿಗಾ ಶಾಂತವೀರ ಸ್ವಾಮಿಗಳ ಶಿಷ್ಯ ಇಮ್ಮಡಿ ಮುರಿಗಾ ಗುರುಸಿದ್ಧರು (೧೭೦೦) ಬರೆವ ಹಾಲಾಸ್ಯ ಪುರಾಣವು ಮಧುರೆಯ ಮೀನಾಕ್ಷಿ ದೇವಾಲಯದ ಸುಂದರೇಶ್ವರ ದೈವವನ್ನು ಕುರಿತದ್ದು. ವೀರಶೈವರು ಶಿವನ ನಿಷ್ಠಾವಂತ ಆರಾಧಕರಾದರೂ, ಶ್ರೀ ವಿಷ್ಣು, ಹನುಮಂತ ಇತ್ಯಾದಿ ದೈವಗಳನ್ನು ಪೂಜಿಸುತ್ತಾರೆ - ಅವರ ಪ್ರಕಾರ ಅವು ಶಿವನ ಅಧೀನ ದೈವಗಳು. ಹಾವೇರಿಯಲ್ಲಿ ಕೈಯಲ್ಲಿ ಶಿವಲಿಂಗ ಹಿಡಿದ ವಿಷ್ಣುವಿನ ಹದಿಮೂರನೇ ಶತಮಾನದ ಶಿಲ್ಪವೇ ಇದೆ.

ಅಪಾಯಕಾರಿ

ಇಂತಹ ವಾಸ್ತವವನ್ನು ಕೈಬಿಟ್ಟು, ವೀರಶೈವರು ಹಿಂದೂಗಳಲ್ಲವೆಂಬ ತಪ್ಪು ವಾದವನ್ನು ಹಿಡಿದು, ತಮ್ಮಲ್ಲಿ ಜಾತಿಭೇದವಿಲ್ಲ ಲಿಂಗಭೇದವಿಲ್ಲ ಇತ್ಯಾದಿ ಇಲ್ಲದ ಸಂಗತಿಗಳನ್ನು ಹೇಳಿಕೊಳ್ಳುತ್ತ ವಿಶೇಷವಾಗಿ ಹಿಂದೂ ಧರ್ಮವನ್ನು (ಅವರ ದೃಷ್ಟಿಯಿಂದ ಹಿಂದೂ ಎಂದರೆ ಬ್ರಾಹ್ಮಣ ವರ್ಗ) ನಿಂದಿಸುತ್ತ, ತಮ್ಮನ್ನು ವೈಭವೀಕರಿಸಿಕೊಂಡು ಮಾತನಾಡುವುದು. ವೀರಶೈವರಿಗೆ ಶೋಭೆ ತರುವ ವಿಷಯವಲ್ಲ. ಅವರು ಎಲ್ಲ ವಿಷಯಗಳಲ್ಲೂ ಹಿಂದೂಗಳೇ ಆಗಿದ್ದಾರೆ; ಅವರು ಹಿಂದೂಗಳಲ್ಲದಿದ್ದರೆ ಬ್ರಾಹ್ಮಣರಾಗಲಿ, ಒಕ್ಕಲಿಗರಾಗಲಿ, ಕುರುಬ, ದೇವಾಂಗದವರಾಗಲಿ ಹಿಂದೂಗಳು ಅಲ್ಲ. ಕಳೆದ ಒಂದು ಸಾವಿರ ವರ್ಷಗಳಲ್ಲಿ ಹಿಂದೂ ಸಮುದಾಯದಲ್ಲಿ ಆಗಾಗ್ಗೆ ಕಂಡು ಬಂದ ಒಡಕಿನಿಂದ ಆಗಿರುವ ಹಾನಿಯನ್ನು ಚರಿತ್ರಕಾರರು ಗುರುತಿಸಿದ್ದಾರೆ. ಕರ್ನಾಟಕದ ಹೆಮ್ಮೆಯ ವಿಜಯನಗರ ಸಾಮ್ರಾಜ್ಯವು ಉದಯವಾದುದೇ ವಿದೇಶೀ ಸಂಸ್ಕೃತಿಯ ಆಕ್ರಮಣದಿಂದ ಸನಾತನ ಸಂಸ್ಕೃತಿಯನ್ನು ಸಂರಕ್ಷಿಸಲು ಎಂದು ಇತಿಹಾಸಕಾರರು ಒಮ್ಮತದಿಂದ ಸಾರಿದ್ದಾರೆ. ಅಷ್ಟೇ ಅಲ್ಲ, ವೀರಶೈವರು ಹಿಂದೂಗಳಲ್ಲವೆಂಬುದನ್ನು ಇನ್ನೂ ಬೆಳಸಿದರೆ ವೀರಶೈವ ಸಮಾಜವೇ ಸ್ಪಷ್ಟವಾಗಿ ಇಬ್ಭಾಗವಾಗುವ ಸ್ಪಷ್ಟ ಕುರುಹುಗಳು ಈಗಾಗಲೇ ಕಾಣಿಸಿರುವುದನ್ನು ಹಿಂದೆ ಈ ಲೇಖನದಲ್ಲಿ ಸ್ಪಷ್ಟಗೊಳಿಸಲಾಗಿದೆ. ಹನ್ನೆರಡನೆಯ ಶತಮಾನದ ಬಸವಣ್ಣನಂತೆ ಇಂದಿನ ವೀರಶೈವರು ತಮ್ಮ ಪರಂಪರೆಯ ಉತ್ತಮಾಂಶಗಳಿಂದ ಪ್ರಚೋದಿತರಾಗಿ ಹಿಂದೂ ಸಮಾಜದ ಕೊರತೆಗಳನ್ನು ನೀಗಿಸಲು ಆ ಸಮಾಜದ ಒಳಗಿದ್ದುಕೊಂಡೇ ನಾಯಕತ್ವ ವಹಿಸುವ ಬಗ್ಗೆ ಯೋಚಿಸಬೇಕು. ಶಂಕರ, ರಾಮಾನುಜ, ಮಧ್ವ, ಪರಮಹಂಸ, ತಿಳಕ್, ಗಾಂಧಿ, ವಿನೋಬ, ಅರಬಿಂದೋ ಇಂಥವರು ಪರಂಪರೆಯಿಂದ ಕಳಚಿಕೊಳ್ಳಲು ಪ್ರಯತ್ನಿಸುವ ಮುನ್ನ ಯೋಚಿಸಬೇಕೆಂದು ನಾನು ನನ್ನ ವೀರಶೈವ (ಲಿಂಗಾಯತ) ಬಾಂಧವರಲ್ಲಿ ಮನವಿ ಮನವಿಮಾಡಿಕೊಳ್ಳುತ್ತೇನೆ. ಬಸವ, ಅಲ್ಲಮ, ತೋಂಟದ ಸಿದ್ಧಲಿಂಗಯತಿ ಇವರು ಆ ಪರಂಪರೆ ಬೆಳಸಿದವರು. ಈಗಾಗಲೇ ಬೆಂಕಿ ಹಚ್ಚಲಾಗಿದೆ; ಅದು ನಿಧಾನಕ್ಕೆ ಹಬ್ಬುತ್ತಿರುವುದೂ ನನ್ನ ಗಮನಕ್ಕೆ ಬಂದಿದೆ. ಅದನ್ನು ಈಗಲೇ ಆರಿಸುವುದು ಎಲ್ಲ ವಿವೇಕಿಗಳ ಕರ್ತವ್ಯವಾಗಿದೆ. ವೀರಶೈವರು ಹಿಂದೂಗಳೇ ಎಂದು ಸ್ಪಷ್ಟವಾಗಿ ಹೇಳುವ ಹಿಂದೂ ವಿವಾಹ ಕಾನೂನು ಇತ್ಯಾದಿ ಕಾನೂನುಗಳನ್ನು ತಿದ್ದಲು ಲೋಕ ಸಭೆಯ ಅನುಮತಿ ಅಗತ್ಯ. ಅದು ಸುಲಭದ ಕೆಲಸವಲ್ಲ. ಲೋಕಸಭೆ ಒಪ್ಪಿದರೂ, ಸರ್ವೋನ್ನತ ನ್ಯಾಯಾಲಯದ ಮುಂದೆ ವೀರಶೈವರು ಹಿಂದೂಗಳಲ್ಲವೆಂದು ವಾದಿಸಿ ಗೆಲ್ಲುವುದಂತೂ ಅಸಾಧ್ಯದ ಮಾತು. ಇದೂ ಎಲ್ಲರ ಗಮನದಲ್ಲಿರಲಿ.

●

ವಚನಗಳಲ್ಲಿ 'ತಾರ' ನಾಣ್ಯ - ಕೆಲವು ಸಂಗತಿಗಳು

ಪ್ರೊ. ಜಿ. ಅಶ್ವತ್ಥನಾರಾಯಣ

ವಚನಸಾಹಿತ್ಯ ತನ್ನ ಕಾಲದ ಬದುಕಿಗೆ ಕನ್ನಡಿ ಹಿಡಿದಂತೆ ಇನ್ನಾವ ಕನ್ನಡ ಸಾಹಿತ್ಯ ಪ್ರಕಾರವೂ ಕಂಡುಬರುವುದಿಲ್ಲ ಎಂದರೆ ಅತಿಶಯೋಕ್ತಿ ಆಗಲಾರದು. ಈ ವಿಚಾರದಲ್ಲಿ ದ್ವಿತೀಯಸ್ಥಾನ ಐತಿಹಾಸಿಕವಾಗಿಯೂ ಸಾಮಾಜಿಕವಾಗಿಯೂ ದಾಸಸಾಹಿತ್ಯಕ್ಕೆ ಸಿಗುತ್ತದೆ. ಬದುಕಿನ ವಿವಿಧ ಸ್ತರಗಳ ನೋಟಗಳ ಪ್ರತಿಫಲವನ್ನು ಸಾಕ್ಷಿಗಳು ವಚನ ಸಾಹಿತ್ಯದಲ್ಲಿ ಕಾಣಬಹುದು. ಸಾಂಸ್ಕೃತಿಕ ಇತಿಹಾಸದ ಹಿನ್ನೆಲೆಯಲ್ಲಿ ನಾಣ್ಯಗಳಿಗೆ ಸಂಬಂಧಿಸಿದಂತೆ ಹಲವು ಸಂಗತಿಗಳ ಬಗ್ಗೆ ಸಾಕಷ್ಟು ಬೆಳಕನ್ನು ವಚನಗಳು ಸೂಸುತ್ತವೆ.

ವಚನಗಳಲ್ಲಿ ಕರಡುಬರುವ ವರಹ ದಮ್ಮ ಹಾಗ ವೀಸ ಕಾಣಿ ಅರೆಕಾಣಿ ಕಾಸು ಅಡ್ಡ ದುಗ್ಗಾಣಿ ತಾರ ಮೊದಲಾದ ನಾಣ್ಯಗಳ ಪ್ರಸ್ತಾಪವನ್ನು ಕುರಿತು ಅದನ್ನು ಅಂದಿನ ಆರ್ಥಿಕ ವ್ಯವಸ್ಥೆಯ ಹಿನ್ನೆಲೆಯೊಂದಿಗೆ ಆಧ್ಯಾತ್ಮಿಕ ನಿರೂಪಣೆಯನ್ನು ಮಾಡಿದ ವೈಖರಿ ಅಧ್ಯಯನ ಯೋಗ್ಯವಾದ ಸಂಗತಿ ಆಗಿದೆ. ಪ್ರಸ್ತುತ ವಚನಗಳಲ್ಲಿ ಕಂಡುಬರುವ 'ತಾರ' ನಾಣ್ಯದ ಬಗ್ಗೆ ಕೆಲವು ಸಂಗತಿಗಳನ್ನು ಪರಿಶೀಲಿಸಲಾಗಿದೆ.

ಶಿವಶರಣರ ವಚನಗಳಲ್ಲಿ ಅಲ್ಲಲ್ಲಿ ಈ ನಾಣ್ಯದ ಪ್ರಸ್ತಾಪ ಸಾಕಷ್ಟು ಬರುತ್ತದೆ. ಈ ಪೈಕಿ ಮಲಹರ ಕಾಯಕದ ಚಿಕ್ಕದೇವಯ್ಯನ ೧೦ ವಚನಗಳ ಪೈಕಿ ೭ ವಚನಗಳು ಪರಿಶೀಲನಾರ್ಹವಾಗಿವೆ. ಆ ವಚನಗಳು ಹೀಗಿವೆ :

ಮುರಿಗಂಚು, ತವರ, ಹಿತ್ತಾಳೆ, ತಾಮ್ರ
ಇವು ಮೊದಲಾದ ಲೋಹವ ತನ್ನಿ
ಕಳ್ಳವಣ ಕಂದುವೆಳ್ಳ ಮೊದಲಾದ ರೊಕ್ಕವ ತನ್ನಿ
ನಿಮಗಲ್ಲದ ಒಡವೆ ಎನಗೆ
ನಿಮಗೆ ಬಳ್ಳಿತಹ ಒಡವೆಯ ಕೊಡುವೆ

ಎನ್ನಂಕ ಬಳಿಯ (ಚೀಲವಂ) ಬಿಡುವೆ
ಅದರಲ್ಲಿದ್ದ ಸಂಬಾರ ದ್ರವ್ಯವ ಕೊಡುವೆನೆಂಬುದಕ್ಕಿನ್ನ ನಂಬಿ ಬನ್ನಿ.
ಊರ್ದರೇತೋಮೂರ್ತಿ ಶ್ವೇತ ಸ್ವಯಂಭು
ಕಪಿಲೇಶ್ವರ ಲಿಂಗದಾಣತಿ

(ಸಂ.ವ.ಸಂ.೩ ವಚನ ಸಂಖ್ಯೆ ೧೧೪೩ ಪುಟ ೪೧೦)

ಮನ ಬುದ್ಧಿ ಚಿತ್ತ ಅಹಂಕಾರವೆಂಬ
ನಾಲ್ಕು ಲೋಹದಿಂದ ಸರ್ವೇಂದ್ರಿಯದ ಮೊತ್ತ
ಮನ ವಸ್ತುವ ಮುಟ್ಟದೆ, ನಿಜ ನಿಷ್ಠೆಯನರಿಯದೆ
ಬಹು ಮೊತ್ತದ ಮಾತಲ್ಲದ ಮಾತನಾಡುವುದು
ಕಳ್ಳವಣ ಸಲ್ಲದ ತಾರ ಇವೆಲ್ಲವ ತಿಳಿದು
ಕಂಬಳಿಯ ಚೀಲದವನ ಬೆಂಬಳಿಯಲಿ ಬನ್ನಿ
ನಿಮಗಲ್ಲದ ಒಡವೆಯನೊಳ್ಳಿತ್ತು ಮಾಡಿಕೊಡುವೆ
ಊರ್ಧ್ವ ರೇತೋಮೂರ್ತಿ ಶ್ವೇತ ಸ್ವಯಂಭು
ಕಪಿಲೇಶ್ವರಲಿಂಗ ಸಾಕ್ಷಿಯಾಗಿ

(ಸಂ.ವ.ಸಂ.೩ ವಚನ ಸಂಖ್ಯೆ ೧೧೪೨ ಪುಟ ೪೯೮)

ಚನ್ನಬಸವಣ್ಣನವರ ವಚನವೊಂದರಲ್ಲಿ 'ತಾರಾ'ನಾಣ್ಯದ ಉಲ್ಲೇಖವಿದೆ. ಆ ವಚನ ಹೀಗಿದೆ :

ಹಣವ ಕೊಟ್ಟು ಹಾದರನಾಡುವುದರಿಂದ
'ತಾರ'ವ ಕೊಟ್ಟು ಸೂಳೆಗೈಯಬಾರದೇ?
ಧರ್ಮವ ಮಾಡುವಲ್ಲಿ ಕರ್ಮವುಂಟೆ?
ಧರ್ಮ ಕರ್ಮದ ಭೇದವರಿದು ಮಾಡಲರಿಯರು
ಅಡಗು ಕಡಿವಂಗೆ ಸುರೆಯ ಕುಡಿವಂಗೆ ಕೊಡಬಾರದು
ಕೊಟ್ಟಡೆ ತತ್ಫಲ ತಪ್ಪದು ಕೂಡಲಚನ್ನಸಂಗಮದೇವಾ

(ಕವಿವಿ ಪ್ರಕಟನೆ : ಚನ್ನಬಸವಣ್ಣನವರ ವಚನಗಳು ಸಂಖ್ಯೆ ೩೬೯)

'ತಾರ' ನಾಣ್ಯದ ಬಳಕೆ ಕೆಲವು ಗಾದೆಗಳಲ್ಲಿ ಕಂಡುಬರುತ್ತವೆ. ಕಿಟೆಲ್ಲರು ತಮ್ಮ ನಿಘಂಟಿನಲ್ಲಿ ಈ ಗಾದೆಗಳನ್ನು ಕೊಟ್ಟಿದ್ದಾರೆ:

೧. ಹಣವ ಕೊಟ್ಟು ಹಾದರವನಾಡುವುದರಿಂದ ತಾರವ ಕೊಟ್ಟು ಸೂಳೆಗೈಯಬಾರದೆ?
(ಈ ಗಾದೆ ಚೆನ್ನಬಸವಣ್ಣನವರ ವಚನದಲ್ಲೂ ಕಂಡುಬರುತ್ತದೆ)
೨. ತಾರಕ್ಕೆ ಮೂರು ಸೇರು ಉಪ್ಪಾದರೂ ತರುವುದಕ್ಕೆ ಗತಿಬೇಡವೋ?
೩. ತಾರಕ್ಕೊಂದು ಸೀರೆಯಾದರೂ ನಾಯಿ ತಿಕ ಬತ್ತಲೆ

(ಕಿಟೆಲ್ ಇಂ.ಕ ಶಬ್ದಕೋಶ ಸಂಪುಟ : ೨, ಪುಟ ೭೫೨)

ಇನ್ನು ದಾಸರ ಕೀರ್ತನೆಗಳಲ್ಲಿ ದುಡ್ಡು ದುಗ್ಗಾಣಿ ಕಾಸು ಮೊದಲಾದ ಪದಗಳು ಬಳಕೆ ಆಗಿದ್ದರೂ 'ತಾರ' ನಾಣ್ಯದ ಮಾತಿನ ಪ್ರಯೋಗ ಆದಂತೆ ಕಂಡುಬರಲಿಲ್ಲ.

ಅಂತೆಯೇ ಮಗ್ಗಿ ಕೋಷ್ಟಕಗಳಲ್ಲಿ ನಾಣ್ಯಗಳ ಪಟ್ಟಿಯಲ್ಲೂ 'ತಾರ' ಕಂಡು ಬರುವುದಿಲ್ಲ.

ಕಾವ್ಯಗಳಲ್ಲಿ ಇದರ ಪ್ರಯೋಗ ಅತಿವಿರಳವೆಂದೇ ಹೇಳಬೇಕು. ಸರ್ವಜ್ಞನ ವಚನವೊಂದರಲ್ಲಿ 'ಆರಿಗಾದರೂ ಒಂದು ತಾರವನು ಕೊಡ ಲೋಭಿ' (ಕ.ಸಾ.ಪ. ಕನ್ನಡ ನಿಘಂಟು ಪುಟ ೩೪೩೮) ಎಂದು ಹೇಳಿದೆ.

ದೇಸಿ ಶಬ್ದವಾದ 'ತಾರ' ವಿದೇಶಿ ಪ್ರವಾಸಿಗರ ವರದಿಗಳಲ್ಲಿ ಕಂಡುಬರುವುದನ್ನು ಕುರಿತು ವರ್ತಮಾನ ಅಬ್ದುಲ್ ರಜಾಕ್ ಮೊದಲಾದವರು 'ತಾರ' ನಾಣ್ಯದ ಬಗ್ಗೆ ಉಲ್ಲೇಖಿಸಿರುವುದನ್ನು ಎ.ವಿ.ನರಸಿಂಹಮೂರ್ತಿ ಅವರು ಚರ್ಚಿಸಿದ್ದಾರೆ. (ನೋಡಿ ವಿವರಗಳಿಗೆ - ವಿಜಯನಗರದ ನಾಣ್ಯ ಸಂಪತ್ತು : ಎ.ವಿ.ನರಸಿಂಹಮೂರ್ತಿ)

ಶಾಸನಗಳಲ್ಲಿ ಕಂಡುಬರುವ ಉಲ್ಲೇಖಗಳು 'ತಾರ' ನಾಣ್ಯದ ಬಗ್ಗೆ ಹಲವಾರಿವೆ.

ಕಸಾಪ ನಿಘಂಟಿನಲ್ಲಿ ಕೊಟ್ಟಿರುವ ಶಾಸನೋಲ್ಲೇಖಗಳಿವು :

೧. ಹತ್ತಿಯ ಭಂಡಿಗೆ ತಾರಂ ಮೂಱು (ಎ.ಇ. XIII 22-54)

೨. ತುಪ್ಪ ಕುಡುತೆ ೨ಕ್ಕೆ ತಾರ ೫ ಮೋಯಿ ತಾ ೨, (ಸೌ.ಇ.ಎ ೧೯೨೯ ಮಂಗಳೂರು ೪೬೫-೩೩, ೧೩೧೨೩)

೩. ಆನೆಹಳ್ಳಿಯಿಂದ ತಾರ ೨೮೬ ಲೆಕ್ಕದಲ್ಲಿ ಗ ೨೦ (ಮೈಆರಿ. ೧೯೩೪ ಪು. ೩೦-೨೦; ೧೯೫೭ ಇ)

ಎ.ವಿ.ನರಸಿಂಹಮೂರ್ತಿಯವರು ವಿಜಯನಗರದ ಶಾಸನ II 1035 ಮತ್ತು ಅನಂತಪುರದ ಶಾಸನದಲ್ಲಿ 'ತಾರ' ನಾಣ್ಯದ ವಿಷಯ ಬರದಿರುವುದನ್ನು ತಮ್ಮ ವಿಜಯನಗರದ ನಾಣ್ಯ ಸಂಪತ್ತು ಗ್ರಂಥದಲ್ಲಿ ಪ್ರಸ್ತಾಪಿಸಿದ್ದಾರೆ.

ತುಳು ಕನ್ನಡ ನಘಂಟಿನಲ್ಲೂ 'ತಾರ' ನಾಣ್ಯದ ಬಗ್ಗೆ ಸುಮಾರು ವಿವರಗಳು ಸಿಗುತ್ತವೆ. ಮೇಲ್ಕಂಡ ಎಲ್ಲ ಉಲ್ಲೇಖಗಳನ್ನು ಕಂಡರೆ 'ತಾರ' ನಾಣ್ಯ ಸಾಕಷ್ಟು ಪ್ರಚಾರದಲ್ಲಿತ್ತು ಎಂಬ ಅಂಶ ನಿರ್ವಿವಾದವಾಗಿದೆ. ಆದರೆ ಈ ಬಗ್ಗೆ ನರಸಿಂಹಮೂರ್ತಿಗಳನ್ನು ಬಿಟ್ಟರೆ ವಿಶೇಷವಾಗಿ ಇತರರು ಚರ್ಚಿಸಿರುವುದು ನನಗೆ ತಿಳಿದುಬಂದಿಲ್ಲ.

ಕನ್ನಡದಲ್ಲಿ ಕರ್ನಾಟಕ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಮಾಡಿ ಮೇರುಕೃತಿ ರಚಿಸಿದ ಸಾಂಸ್ಕೃತಿಕ ಅಧ್ಯಯನ ಪದ್ಧತಿಯ ಮಹಾಪ್ರಬಂಧಗಳ ರಚನೆಗೆ ಅಡಿಪಾಯ ಹಾಕಿದ ಚಿದಾನಂದಮೂರ್ತಿಗಳಿಗೆ 'ತಾರ' ನಾಣ್ಯದ ಬಗ್ಗೆ ಶಾಸನಗಳ ಉಲ್ಲೇಖ ಗಮನಕ್ಕೇ ಬಂದಿಲ್ಲ. ಅವರು ಎಲ್ಲಿಯೂ ಆ ಪ್ರಬಂಧದಲ್ಲಿ 'ತಾರ' ನಾಣ್ಯದ ಬಗ್ಗೆ ಪ್ರಸ್ತಾಪಿಸಿಲ್ಲ.

ಬಹುಶಃ ಸಾಂಸ್ಕೃತಿಕ ಅಧ್ಯಯನದ ಮಹಾಪ್ರಬಂಧಗಳಲ್ಲಿ ಮೊದಲು ಸಾಕಷ್ಟು ಚರ್ಚಿಸಿದುದು ಎಂದರೆ ಪಿ.ವಿ.ನಾರಾಯಣ ಅವರು ತಮ್ಮ 'ವಚನ ಸಾಹಿತ್ಯ, ಒಂದು ಸಾಂಸ್ಕೃತಿಕ ಅಧ್ಯಯನ' ಗ್ರಂಥದಲ್ಲಿ 'ತಾರ' ನಾಣ್ಯದ ಉಲ್ಲೇಖ ಮತ್ತು ಖೋಟಾನಾಣ್ಯಗಳನ್ನಾಗಿ ಬಳಸುವುದರ ಬಗ್ಗೆ ಪ್ರಸ್ತಾಪಿಸಿದ್ದಾರೆ.

ಇನ್ನು ಈ ನಾಣ್ಯ ಯಾವ ಲೋಹದ್ದು ಎಂಬುದರ ಬಗ್ಗೆ ಸಾಕಷ್ಟು ಭಿನ್ನಾಭಿಪ್ರಾಯ ಸಂಶೋಧಕರಲ್ಲಿ ಕಂಡುಬರುತ್ತದೆ. ಎ.ವಿ.ನರಸಿಂಹಮೂರ್ತಿಯವರು 'ವಿಜಯನಗರ ಕಾಲದಲ್ಲಿ ಬೆಳ್ಳಿಯ ನಾಣ್ಯಗಳು ವಿರಳವಾಗಿದ್ದವು 'ತಾರ' ಎಂದು ಈವರೆಗೆ ತಿಳಿದಿರುವ ಒಂದೇ ಬೆಳ್ಳಿಯ ನಾಣ್ಯ ಎಂದು (ಪು. ೪೮) ಹೇಳಿದ್ದಾರೆ. ಪುಟ ೨೫ರಲ್ಲಿ (ವಿಜಯ ನಗರ ನಾಣ್ಯ ಸಂಪತ್ತು ಗ್ರಂಥ) ಕೊಟ್ಟಿರುವ ನಾಣ್ಯಕೋಷ್ಟಕದಲ್ಲಿ ಬೆಳ್ಳಿಯ ನಾಣ್ಯಗಳ ಕೋಷ್ಟಕವನ್ನು ಪ್ರತ್ಯೇಕಕೊಟ್ಟಿದ್ದಾರೆ.

ಬೆಳ್ಳಿಯ ನಾಣ್ಯಗಳು

ತಾರ್ = ತಾರ = ತೌರ್ = ತಾರೆ = ೧/೬ ಪಣ

ತಾರ (ಮತ್ತೊಂದು ನಮೂನೆ) = ೧/೬ ಪಣ

ಈ ಕೋಷ್ಟಕಕ್ಕೆ ಆಧಾರ ವಿದೇಶೀ ಪ್ರವಾಸಿಗರ ವರದಿಗಳು. ಈ ಬಗ್ಗೆ ನರಸಿಂಹಮೂರ್ತಿ ಅವರ ಚರ್ಚೆ ಗಮನಾರ್ಹವಾಗಿದೆ. ''....ಈ ಬೆಳ್ಳಿಯ ನಾಣ್ಯದ ಖಚಿತವಾದ ಮೌಲ್ಯವೂ ಸರಿಯಾಗಿ ತಿಳಿದಿಲ್ಲ. ಏಕೆಂದರೆ ವಿದೇಶೀ ಬರಹಗಾರರಲ್ಲಿ ಈ ವಿಷಯದಲ್ಲಿ ಸಹಮತವಿಲ್ಲ. ವರ್ತೆಮಿನ ಪ್ರಕಾರ ಈ ನಾಣ್ಯ ಒಂದು ಪಣದ ಹದಿನಾರನೇ ಒಂದು ಭಾಗ. ಆದರೆ ಅಬ್ದುಲ್ ರಜಾಕ್ ೬ ತಾರಗಳಿಗೆ ಒಂದು ಪಣ ಎನ್ನುತ್ತಾರೆ. ಬಹುಶಃ ಈ ಇಬ್ಬರ ಮಾಹಿತಿಗಳು ಸರಿಯಾಗಿದ್ದು, ವರ್ತೆಮ ಹೇಳುವ ತಾರ ಸಣ್ಣನಾಣ್ಯವಾಗಿಯೂ ಅಬ್ದುಲ್ ರಜಾಕ್ ಉಲ್ಲೇಖಿಸಿದ ತಾರ ದೊಡ್ಡ ಮೌಲ್ಯದ ನಾಣ್ಯವೂ ಆಗಿರಬೇಕು. ಏಕೆಂದರೆ ಸಾಮಾನ್ಯವಾಗಿ ಇವರು ನಾಣ್ಯದ ಬಗ್ಗೆ ಕೊಟ್ಟಿರುವ ಮಾಹಿತಿಗಳು ಸಮರ್ಪಕವಾಗಿಯೇ ಇರುವುದರಿಂದ ಇದು ತಾರ ಎಂಬ ನಾಣ್ಯದ ಬಗೆಗೂ ಸರಿಯೇ ಇರಬೇಕು.

ಹಾಗಾದರೆ ವಿಜಯನಗರ ಕಾಲದಲ್ಲಿ ಎರಡು ಮೌಲ್ಯದ ಬೆಳ್ಳಿಯ ನಾಣ್ಯಗಳು ಇರಬೇಕು. ಮೊದಲನೆಯದು ಒಂದು ಪಣಕ್ಕೆ ೬ ತಾರಗಳು, ಎರಡನೆಯದು ಒಂದು ಪಣಕ್ಕೆ ೧೬ ತಾರಗಳು. ಆದರೆ ಈಗ ದೊರಕಿರುವ ಬೆಳ್ಳಿಯ ನಾಣ್ಯ ಕೇವಲ ೫೨ ಗ್ರೇನ್ ತೂಕದ್ದಾಗಿದೆ. ಇದಕ್ಕಿಂತ ಕಡಿಮೆ ತೂಕದ ಅಥವಾ ಹೆಚ್ಚಿನ ತೂಕದ ಬೆಳ್ಳಿಯ ವಿಜಯನಗರ ನಾಣ್ಯ ದೊರಕಿದರೆ ಆಗ ಈ ಸಮಸ್ಯೆಯನ್ನು ಸುಲಭವಾಗಿ ಬಿಡಿಸಬಹುದು.

ನರಸಿಂಹಮೂರ್ತಿಯರ ಮಾತುಗಳಲ್ಲಿ ಒಂದಂಶ ಸ್ಪಷ್ಟವಾಗಿದೆ. ಅದೇಂದರೆ ತಾರ ಬೆಳ್ಳಿಯ ನಾಣ್ಯ ಸಾಕಷ್ಟು ದೊಡ್ಡ ನಾಣ್ಯ ಎಂಬುದು. ಆದರೆ ಇತರ ಆಧಾರಗಳನ್ನು ಗಮನಿಸುವುದಾದರೆ ತಾರ ತಾಮ್ರದ ನಾಣ್ಯ, ಕಡಿಮೆ ಬೆಲೆಯ ನಾಣ್ಯ ಎಂದು ತಿಳಿಯುತ್ತದೆ.

ನರಸಿಂಹಮೂರ್ತಿಅವರೇ ''ಕರ್ನಾಟಕ, ಕನ್ನಡ ವಿಷಯಕೋಶ (ಪು. ೮೩೮)ರಲ್ಲಿ ನಾಣ್ಯಗಳು ಎಂಬ ಬರಹದಲ್ಲಿ ನಾಣ್ಯಗಳ ಹೆಸರುಗಳನ್ನು ಹೇಳುತ್ತಾ ವಿಜಯನಗರದ ಕಾಲದಲ್ಲಿ ಇದ್ದ ನಾಣ್ಯಗಳ ಹೆಸರುಗಳನ್ನು ಕ್ರಮವಾಗಿ ಹೇಳುತ್ತಾ 'ಗದ್ಯಾಣ ವರಹ ಪೊನ್ ಪಗೋಡ ಪ್ರತಾಪ ಕಾಟಿ ಪಣ ಹಾಗ ವೀಸ ಆದಮೇಲೆ ತಾರ ಬೆಟಲ್ ಕಾಸು ಎಂಬ ನಾಣ್ಯಗಳ ಹೆಸರುಗಳನ್ನು ಹೇಳಿದ್ದಾರೆ. ಕೋಷ್ಟಕ ಕೊಡುತ್ತ ೧ ವೀಸ =೨ ಅರೆವೀಸ = ೧೬ ಕಾಸು ಎಂದಿದ್ದಾರೆ. ಆದ್ದರಿಂದ ಇದು ಚಿಕ್ಕ ನಾಣ್ಯ ಆಯಿತು. ಆದರೆ ನಿಘಂಟುಕಾರರು ಮತ್ತು ವಚನ, ಕಾವ್ಯಗಳಲ್ಲಿ ಉಲ್ಲೇಖಿಸಿರುವ ಪ್ರಕಾರ 'ತಾರ' ಎಂಬ ಬೆಳ್ಳಿಯ ನಾಣ್ಯ ಅಲ್ಲ, ತಾಮ್ರದ ನಾಣ್ಯ ಆಗಿದೆ. ಈ ಕೆಳಕಂಡ ಉಲ್ಲೇಖಗಳನ್ನು ಕಾಣಬಹುದು :

ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು (ಪು. ೩೪೩೮) ತಾರ ತಾಮ್ರದ ಒಂದು ಚಿಕ್ಕ ನಾಣ್ಯ ಎಂದಿದೆ.

ಕಿಟಲ್ ನಿಘಂಟಿನಲ್ಲಿ (ಪು. ೭೫೨ ಸಂಪುಟ ೨) ತಾರ ಎಂಬುದಕ್ಕೆ a copper coin of 2 kasu or cash ಎಂದಿದ್ದಾರೆ. ಇನ್ನೊಂದೆಡೆ 1/2 a pice or 1/3 fanam ಎಂದೂ ಕೊಟ್ಟಿದ್ದಾನೆ.

ಈಚೆಗೆ ಬಂದ (೧೯೯೭) ತುಳು-ಕನ್ನಡ ನಿಘಂಟಿನಲ್ಲಿ ತಾರ ಎಂದರೆ ''ಹಳೆಯ ಕಾಲದ ಒಂದು ಚಿಕ್ಕ ನಾಣ್ಯ, ರೂಪಾಯಿಯ ೧/೯೬ ಭಾಗ'' ಎಂದು ಹೇಳಿದೆ. ಇದಕ್ಕೊಂದು ಪ್ರಯೋಗ ಕೊಟ್ಟಿದ್ದಾರೆ : ಮತ್ತೊಂದು ಮರ ಕಡಿಯುವಾಗ ತಾರ ನಾಣ್ಯದಷ್ಟು ಚಿಕ್ಕೆ ಏಳಲಿಲ್ಲ; ಮಿಸ್ರಿ ನಾಣ್ಯದಷ್ಟು ತೊಗಟೆ ಏಳಲಿಲ್ಲ''.

ಪಿ.ವಿ.ನಾರಾಯಣ ಅವರು ತಮ್ಮ ಮಹಾಪ್ರಬಂಧದಲ್ಲಿ ನಾಣ್ಯಗಳನ್ನು ಕುರಿತು ಹೇಳುವಾಗ ಚೆನ್ನ ಬಸವೇಶ್ವರ ವಚನದಲ್ಲಿ ಕಂಡುಬರುವ ತಾರ ನಾಣ್ಯ - ಇದು ಅಲ್ಪ ಬೆಲೆಯ ನಾಣ್ಯವೆಂಬುದು ಆ ವಚನದಲ್ಲಿಯೇ ಸ್ಪಷ್ಟವಾಗಿದೆ ಎನ್ನುತ್ತಾರೆ. ಇದಕ್ಕೆ ಆಧಾರವೆಂಬಂತೆ ಚೆನ್ನಬಸವಣ್ಣನವರ ವಚನಗಳ ಕಠಿಣ ಶಬ್ದಕೋಶದಲ್ಲಿ 'ಎರಡು ಕಾಸು ಬೆಲೆಯ ತಾಮ್ರದ ನಾಣ್ಯ' ಎಂದಿದೆ.

'ತಾರ' ನಾಣ್ಯಕ್ಕಿಂತ ಚಿಕ್ಕನಾಣ್ಯಗಳಿದ್ದುದು ನಿಜ. ಆದರೆ 'ತಾರ' ನಾಣ್ಯ ಎರಡು ಬಗೆ ಆಗಿತ್ತು ಎಂಬ ನರಸಿಂಹಮೂರ್ತಿ ಅವರ ಮಾತು ಇನ್ನೊಂದು ರೀತಿಯಲ್ಲಿ ನಿಜವಾಗಿದೆ.

'ತಾರ' ನಾಣ್ಯದಂತೆ 'ಅರ್ಧತಾರ' ಎಂಬ ನಾಣ್ಯವೂ ಇತ್ತು ಎಂದು ತುಳು-ಕನ್ನಡ ನಿಘಂಟು (ಸಂಪುಟ ೧ ಪುಟ ೧೬೪) ಹೇಳುತ್ತದೆ.

ಅರ್ಧ ತಾರ (ಅರೆತಾರ, ಅರೆತಾರೊ) = ತಾಮ್ರದ ನಾಣ್ಯದ ಎರಡನೇ ಒಂದು ಭಾಗ ಎಂದು ಹೇಳಿದೆ. ಇದಕ್ಕೆ ಆಧಾರವಾಗಿ ಒಂದು ಪ್ರಯೋಗ ಕೊಟ್ಟಿದೆ. ಕೈಯಲ್ಲಿ ಅರ್ಧ ತಾರವೂ ಇಲ್ಲವಲ್ಲ ಈ ಬದುಕು ದೊಡ್ಡಕಷ್ಟ ಎಂದಿದೆ.

ಅರೆತಾರ ಎಂಬ ಪದವನ್ನು ಕಸಾಪ ನಿಘಂಟಿನಲ್ಲಿ (ಕನ್ನಡ ನಿಘಂಟು ಪು. ೩೯೩.) ಒಂದು ಅಳತೆ? ಎಂದು ಪ್ರಶ್ನಾರ್ಥಕ ಚಿಹ್ನೆ ಹಾಕಿದೆ. ಶಾಸನದ ಪ್ರಯೋಗವನ್ನು ನಿದರ್ಶನಕ್ಕೆ ಕೊಟ್ಟಿದೆ : ''ದಿನವೊಂದಕ್ಕೆ ಅರೆತಾರದ ಮೊಸರಲ್ಲಿ''.. ಇಲ್ಲಿ ಅರೆತಾರ ಎಂಬುದು ಅಳತೆ ಆಗಬೇಕಿಲ್ಲ, ನಾಣ್ಯ ಎಂಬುದುಂಟೇ ಸರಿ. ಅದಕ್ಕೆ ಸಂಪಾದಕರು ಪ್ರಶ್ನಾರ್ಥಕ ಚಿಹ್ನೆ ಹಾಕಿದ್ದಾರೆ ತಾವು ಕೊಟ್ಟ ಅರ್ಥಕ್ಕೆ ಕಿಟೆಲ್ ಮೊದಲಾದ ನಿಘಂಟುಗಳಲ್ಲಿ ಅರೆತಾರ ಶಬ್ದವಿಲ್ಲ.

ಇದರಿಂದ ಒಂದು ಸ್ಪಷ್ಟ ಸಂಗತಿ ತಾರ ಎಂಬ ನಾಣ್ಯ, ಅರೆತಾರ ಎಂಬ ನಾಣ್ಯಗಳು, ಕಾಣಿ, ಅರೆಕಾಣಿ ಎಂಬ ರೀತಿಯಲ್ಲಿ ಇತ್ತು ಎನ್ನಬಹುದು. ಇನ್ನು ನರಸಿಂಹ ಮೂರ್ತಿಯರು ಪುಟ ೭೪ (ವಿಜಯನಗರದ ನಾಣ್ಯ ಸಂಪತ್ತು ಗ್ರಂಥ)ದಲ್ಲಿ ಕೊಟ್ಟಿರುವ ಕೋಷ್ಟಕ ಹೀಗಿದೆ.

೧ ವರಹ	=	೨ ಪರ್ತಬ್ (ಅರ್ಧ ವರಹ ನಾಣ್ಯ)
೧ ಪರ್ತಬ್	=	೧೦ ಚಿನ್ನದ ಪಣಗಳು
೧ ಪಣ	=	೬ ಬೆಳ್ಳಿಯ ತಾರೆ
೧ ತಾರೆ	=	೩ ತಾಮ್ರದ ಜಿತಲ್

ಇಲ್ಲಿ ಇನ್ನೊಂದು ಮಾತು ಗಮನಿಸಬೇಕು. 'ಪಣಂ' ಎಂಬ ತಾಮ್ರದ ನಾಣ್ಯ ವಿಜಯನಗರದ ಕಾಲದಲ್ಲಿ ಬಳಕೆಯಲ್ಲಿ ಇದ್ದುದರಿಂದ ಶಾಸನದಲ್ಲಿ ಉಕ್ತವಾಗಿರುವ ನಾಣ್ಯ ಚಿನ್ನದ ಪಣವೇ ಅಥವಾ ತಾಮ್ರದ ಪಣವೇ ಎನ್ನುವುದನ್ನು ಜಾಗರೂಕತೆಯಿಂದ ಗಮನಿಸಬೇಕು ಎಂದಿದ್ದಾರೆ (ಪು. ೨೨) ಆದರೆ ಉಳಿದೆಲ್ಲ ಕಡೆ ತಾರ ತಾಮ್ರದ ನಾಣ್ಯವಾಗಿ ಉಲ್ಲೇಖವಾಗಿರುವುದಿರಂದ ಅಬ್ದುಲ್ ರಜಾಕ್ ಹೇಳುವ ಇಮ್ಮಡಿ ದೇವರಾಯನ ಕಾಲದಲ್ಲಿ ಚಿನ್ನ ಬೆಳ್ಳಿ ತಾಮ್ರ ಮೂರೂ ಬಳಕೆ ಇದ್ದುದರಿಂದ 'ತಾರ' ನಾಣ್ಯ ಬೆಳ್ಳಿಯದೇ, ತಾಮ್ರದ್ದೇ ಎಂದು ಹೇಳುವುದು ಕಷ್ಟವಾಗುತ್ತದೆ.

ತುಳುನಾಡಿನ ಪ್ರಯೋಗಗಳೂ, ನಿಘಂಟು, ಕಾವ್ಯಗಳು ಗಾದೆಗಳು ಎಲ್ಲವೂ ತಾಮ್ರದ ನಾಣ್ಯ 'ತಾರ' ಎಂದು ಹೇಳುವುದರಿಂದ ವಿಜಯನಗರದ ಕಾಲದ ಬೆಳ್ಳಿಯ ನಾಣ್ಯ ತಾರ ಬಗ್ಗೆ ಪುನರಾಲೋಚಿಸಬೇಕಾದ ಅಗತ್ಯವಿದೆ ಎನಿಸುತ್ತದೆ ಮತ್ತು 'ತಾರ' ನಾಣ್ಯದ ಮೌಲ್ಯ ನಿರ್ಣಯ, ತೂಕ ನಿರ್ಧಾರ ಮಾಡುವ ಅಗತ್ಯವಿದೆ.

ಈ ಸಂದರ್ಭದಲ್ಲಿ ವಚನಗಳಲ್ಲಿ ಕಂಡುಬರುವ 'ತಾರ' ನಾಣ್ಯ ಕಡಿಮೆ ಮೌಲ್ಯದ್ದು ತಾಮ್ರದ್ದು ಎಂಬ ಅರ್ಥಗಳಲ್ಲಿ ಬಳಕೆ ಆಗಿರುವುದರ ಜತೆಗೆ ಖೋಟಾ ನಾಣ್ಯವೂ ಆಗಿ ಪರಿಗಣಿತವಾಗಿತ್ತು ಎಂಬಂಶ ವಿಮರ್ಶಾರ್ಹವಾಗಿದೆ. ಈ ಬಗ್ಗೆ ಪಿ.ವಿ.ನಾರಾಯಣರು ತಮ್ಮ ಮಹಾಪ್ರಬಂಧದಲ್ಲಿ ಹೀಗೆ ಹೇಳಿದ್ದಾರೆ :

ಕಳ್ಳ ದ್ರಮ್ಮವೆಂಬಂತೆ ಸಲ್ಲದ 'ತಾರ'ದ ಹೆಸರೂ ವಚನಗಳಲ್ಲಿದೆ. ಈ ಮಾತಿನಿಂದ ಸಾಚಾನಾಣ್ಯಗಳ ಜತೆಗೆ ಕಳ್ಳ ನಾಣ್ಯಗಳನ್ನು ತಯಾರಿಸಿ ಚಲಾವಣೆಯಲ್ಲಿ ಬಿಡುತ್ತಿದ್ದರು ಎಂದು ತಿಳಿಯುತ್ತದೆ.

ಖೋಟಾ ನಾಣ್ಯ ತಯಾರಿ ಬಹಳ ಹಿಂದಿನಿಂದ ಬಂದಿದೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ 'ಖೋಟಾ ನಾಣ್ಯದ ತಯಾರಿಕರಿಗೆ ಮತ್ತು ಚಲಾವಣೆಕಾರರಿಗೆ ೧೦೦೦ ಪಣಗಳಷ್ಟು ದಂಡ ವಿಧಿಸುತ್ತಿದ್ದರೆಂದು' ತಿಳಿಸಲಾಗಿದೆ.

ಬಸವಣ್ಣನವರ ವಚನದಲ್ಲಿ 'ಕಳ್ಳದಮ್ಮ' ಸಿಕ್ಕಂತೆ ಅವರ ಸಮಕಾಲೀನವಾದ ಮಲಹರ ಕಾಯಕದ ಚಿಕ್ಕದೇವಯ್ಯನೆಂಬ ಲೋಹಕಾರ ವ್ಯಾಪಾರಿ ಶರಣ, ಬಹು ಮೊತ್ತದ ಮಾತಲ್ಲದ ಮಾತನಾಡುವುದು ಕಳ್ಳವಣ ಸಲ್ಲದ ತಾರ ಎಂದಿದ್ದಾನೆ. ತಿರಸ್ಕಾರ ಯೋಗ್ಯ ನಾಣ್ಯವೆಂದಿದ್ದಾನೆ.

ಒಟ್ಟಿನಲ್ಲಿ ವಚನಗಳನ್ನಷ್ಟೇ ಗಮನಿಸಿದರೆ 'ತಾರಾ' ನಾಣ್ಯ ತಾಮ್ರದ್ದು, ಕಡಿಮೆ ಬೆಲೆಯ ನಾಣ್ಯ ಮತ್ತು ಖೋಟಾ ತಾರಾ ನಾಣ್ಯಗಳು ಬಳಕೆಯಲ್ಲಿದ್ದುವು ಎಂದು ತಿಳಿಯುತ್ತವೆ. ಇತರ ಆಕರಗಳು ತಾಮ್ರದ್ದು, ಕಡಿಮೆ ಮೌಲ್ಯದ್ದು ಎಂಬುದನ್ನು ಸಮರ್ಥಿಸುತ್ತವೆ. ಆದರೆ ನರಸಿಂಹಮೂರ್ತಿಯ ತಾರ ಬೆಳ್ಳಿನಾಣ್ಯ 'ತಾರ' ಎಂದು ಹೇಳಿರುವುದು ಈ ದೃಷ್ಟಿಯಲ್ಲಿ ಮರು ಚಿಂತನೆಗೆ ಒಳಪಡಿಸಬೇಕಾಗಿದೆ.

ಆಕರ ಸೂಚಿ

೧. ವಚನ ಸಾಹಿತ್ಯ, ಒಂದು ಸಾಂಸ್ಕೃತಿಕ ಅಧ್ಯಯನ ೧೯೮೩
ಡಾ.ಪಿ.ವಿ. ನಾರಾಯಣ, ವೀರಶೈವ ಅಧ್ಯಯನ ಸಂಸ್ಥೆ, ಗದಗ.

೨. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ:೧೯೬೬, ಡಾ.ಎಂ.ಚಿದಾನಂದಮೂರ್ತಿ ಪ್ರ:ಪ್ರಸಾರಾಂಗ, ಮೈ.ವಿ.ವಿ., ಮೈಸೂರು.

೩. ನಾಗರಖಂಡ -೭೦ ಒಂದು ಅಧ್ಯಯನ ೧೯೯೫ ಭೋಜರಾಜ ಪಾಟೀಲ
ಪ್ರ : ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ಮುರುಘರಾಜೇಂದ್ರ ಮಠ, ಆನಂದಪುರಂ.

೪. ಚನ್ನಬಸವಣ್ಣನವರ ವಚನಗಳು ೧೯೬೫, (ಸಂ.): ಆರ್.ಸಿ.ಹಿರೇಮಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೫. ವಿಜಯನಗರದ ನಾಣ್ಯ ಸಂಪತ್ತು ೧೯೯೬, ಡಾ. ಎ.ವಿ.ನರಸಿಂಹಮೂರ್ತಿ, ಪ್ರ:ಪ್ರಸಾರಾಂಗ ಮೈ.ವಿ.ವಿ. ಮೈಸೂರು.

೬. ಕನ್ನಡ ನಿಘಂಟು : ಕನ್ನಡ ಸಾಹಿತ್ಯ ಪರಿಷತ್ತು ೮ ಸಂಪುಟಗಳು

೭. ತುಳು - ಕನ್ನಡ ನಿಘಂಟು ಸಂಪುಟ ೪, (ಸಂ.) : ಯು.ಪಿ.ಉಪಾಧ್ಯಾಯ ೧೯೯೭
ರಾಷ್ಟ್ರಕವಿ ಗೋವಿಂದಪೈ ಸಂಶೋಧನ ಕೇಂದ್ರ, ಉಡುಪಿ.

೮. ಕಿಟೆಲ್ಲರ ಕನ್ನಡ - ಇಂಗ್ಲೀಷ್ ನಿಘಂಟು ಸಂಪುಟ ೪ ೧೯೬೮, ಪರಿಷ್ಕೃತ ಮತ್ತು ವಿಸ್ತೃತ ಸಂ : ಎಂ.ಮರಿಯಪ್ಪ ಭಟ್ಟ
ಪ್ರ. : ಮದ್ರಾಸ್ ವಿಶ್ವವಿದ್ಯಾನಿಲಯ

೯. ಚೆನ್ನಬಸವಣ್ಣನವರ ವಚನ ಸಂಪುಟ - ೩ ೧೯೯೩, ಪ್ರ. : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಕಟಣೆ.

೧೦. ಸರ್ವಜ್ಞನ ವಚನಗಳು

೧೧. 'ಕರ್ನಾಟಕ' ಕನ್ನಡ ವಿಷಯಕೋಶ ೧೯೭೯ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು (ನಾಣ್ಯಗಳು-ಲೇಖನ ಎ.ವಿ.ನರಸಿಂಹಮೂರ್ತಿ)

೧೨. ಮಲಹರ ಕಾಯಕ ಚಿಕ್ಕದೇವಯ್ಯ, ಲೇ. : ನಿಂಗಣ್ಣ ಸಣ್ಣಕ್ಕಿ ('ಮಹಾಮನೆ' ಮಾಸಪತ್ರಿಕೆ), ಅಕ್ಟೋಬರ್ ೨೦೦೦ ಸಂಚಿಕೆ , ಸಂಪುಟ - ೩, ಸಂಚಿಕೆ ೩. ಪ್ರ : ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು.

೧೩. ಪ್ರಾಚೀನ ಮಗ್ಗಿ ಕೋಷ್ಟಕ. (ಶಾಲಾ ವಿದ್ಯಾರ್ಥಿಗಳಿಗೆ ಪ್ರಕಟಿಸಿ)

೧೪. ಸಂಕೀರ್ಣ ವಚನ ಸಂಪುಟ-೩,೧೯೯೩ (ಸಂ.)ಬಿ.ಆರ್. ಹಿರೇಮಠ, ಪ್ರ.ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೧೫. ಸಕಲ ಪುರಾತನರ ಬಿಡಗಿನ ವಚನಗಳು - ೧೯೭೮, (ಸಂ.) ಎಂ.ಎಸ್. ಸುಂಕಾಪುರ
ಕನ್ನಡ ಅಧ್ಯಯನ ಪೀಠ, ಕವಿವಿ, ಧಾರವಾಡ.

೧೬. ಪರಮಾರ್ಥ (ಸರ್ವಜ್ಞ ವಚನಗಳು) ೧೯೮೦ , (ಸಂ.) ಎಲ್. ಬಸವರಾಜು, ಪ್ರ. ಪ್ರಸಾರಾಂಗ, ಬೆಂ.ವಿ.ವಿ.

ಪರ್ವದ ಗಾಂಧಾರಿ

ಪ್ರೊ. ಎಂ.ಆರ್. ಲಕ್ಷ್ಮೀದೇವಿ

ಕನ್ನಡದಲ್ಲಿ ವಿಚಾರಪೂರ್ಣ ಕಾದಂಬರಿಗಳನ್ನು ನೀಡಿರುವ ಜನಪ್ರಿಯ ಕಾದಂಬರಿಕಾರರಾದ ಶ್ರೀ ಎಸ್. ಎಲ್. ಭೈರಪ್ಪನವರ ''ಪರ್ವ'' ಕನ್ನಡದ ವಿಶಿಷ್ಟ ಕಾದಂಬರಿಗಳಲ್ಲಿ ಒಂದಾಗಿದೆ. ವ್ಯಾಸಭಾರತವನ್ನು ಸ್ವತಂತ್ರದೃಷ್ಟಿಯಲ್ಲಿ ಸರಳವೂ, ವಿಚಾರಪೂರ್ಣವೂ ಆದ ರೀತಿಯಲ್ಲಿ ಆಧರಿಸಿ ರಚಿಸಿರುವ ಈ ಕಾದಂಬರಿಯ ವೈಶಿಷ್ಟ್ಯ ಅಲ್ಲಿನ ಪಾತ್ರ ಚಿತ್ರಣದಲ್ಲಿದೆ. ತಮ್ಮ ಅಲೌಕಿಕ-ಅತಿಮಾನುಷ ಸ್ವರೂಪವನ್ನು ಕಳೆದುಕೊಂಡು, ನಮಗೆ ಅತಿ ನಿಕಟವಾದ, ನಮ್ಮದೇ ವ್ಯಕ್ತಿತ್ವದ ಹಲವು ಮುಖವೆಂಬಂತೆ ಚಿತ್ರಿತವಾಗಿರುವ ಇಲ್ಲಿನ ಪಾತ್ರಗಳು ಗುಣಸ್ವಭಾವಗಳು ನಿಜವಾಗಿಯೂ ಆಳವಾಗಿ ಅಭ್ಯಾಸ ಮಾಡಲು ಯೋಗ್ಯವಾಗಿವೆ.

ವಿಭಿನ್ನ ದೃಷ್ಟಿಕೋನಗಳಿಂದ ದ್ರೌಪದಿ, ಕುಂತಿ ಮೊದಲಾದ ಪಾತ್ರಗಳು ಈ ಕಾದಂಬರಿಯಲ್ಲಿ ಚಿತ್ರಿತವಾಗಿದ್ದರೂ ಅವುಗಳಲ್ಲಿ ಗಾಂಧಾರಿ ಪಾತ್ರ ಉಳಿದೆಲ್ಲ ಪಾತ್ರಗಳಿಗಿಂತ ಪ್ರತ್ಯೇಕಸ್ಥಾನವನ್ನು ಗಳಿಸಿದೆ. ಗಾಂಧಾರಿ ಮಹಾಭಾರತದ ದುರಂತಜೀವಿಗಳಲ್ಲಿ ಅಗ್ರಗಣ್ಯಳು. ಎಲ್ಲ ಇದ್ದು ಏನೂ ಇಲ್ಲದವಳು. ರೂಪಯೌವ್ವನಗಳಿಂದ ಕೂಡಿದ್ದರೂ, ತನ್ನ ಪಾಪಕರ್ಮದ ಫಲವೋ, ಇಲ್ಲ ತಂದೆಯೇ ಸ್ವಾರ್ಥದ ಪರಿಣಾಮವೋ, ವಿಧಿಯ ಕೈವಾಡವೋ ಅಂತೂ ಯಾವುದೋ ಒಂದು ದುರ್ವಿಧಿಯಿಂದಾಗಿ ಕುರುಡು ಗಂಡನನ್ನು ಕಟ್ಟಿಕೊಂಡು, ನೂರೊಂದು ರಾಜಸಂತಾನದ ಮಾತೆಯಾದರೂ, ಅರಮನೆಯೇ ಶರಪಂಜರವಾಗಿ, ಮಕ್ಕಳೇ ಚಿಂತೆಯ ಕೊಳ್ಳಿಯಾಗಿ, ರಾಜ್ಯಭೋಗಗಳನ್ನು ಅನುಭವಿಸಲಾರದೆ ಕೊನೆಯವರೆಗೂ ಕಣ್ಣೀರಿನ ಕಡಲಲ್ಲಿ ಮುಳುಗೇಳುತ್ತ ದಾರುಣ ವ್ಯಥೆಯ ಕಥೆಯ ಜೀವಿಯಾದವಳು. ಇಂಥ ಚಿರದುಃಖಿ ನತದೃಷ್ಟ, ಹತಭಾಗ್ಯಳಾಗಿ ಬಾಳಿ, ಕೊನೆಗೆ ಕಾಡುಕಿಚ್ಚಿನಲ್ಲಿ ದಹಿಸಿ ಭಸ್ಮವಾದ ಗಾಂಧಾರಿಯ ಚಿತ್ರಣ, 'ಪರ್ವ' ಕಾದಂಬರಿಯಲ್ಲಿ

ರೂಪುಗೊಂಡಿರುವ ರೀತಿ ವ್ಯಾಸಭಾರತಕ್ಕಿಂತ ಭಿನ್ನವಾಗಿದೆ. ಮಾನವನ ಗುಣಸ್ವಭಾವಗಳ ಹಿನ್ನೆಲೆಯಲ್ಲಿ ಅಂತರಂಗದ ತುಡಿತಗಳನ್ನು ಅರ್ಥಪೂರ್ಣವಾಗಿ ಚಿತ್ರಿಸಿರುವ ಗಾಂಧಾರಿಯ ಪಾತ್ರ ನಮಗೆ ಹೆಚ್ಚು ಸಮೀಪವೆನಿಸುತ್ತದೆ.

ಮಹಾಭಾರತದ ಕಥೆಯ ಚೌಕಟ್ಟಿನಲ್ಲಿಯೇ ''ಪರ್ವ'' ಕಾದಂಬರಿ ಸಾಗಿದರೂ, ಮೂಲ ಕೃತಿಯಲ್ಲಿನ ಘಟನೆಗಳ ಯಥಾವತ್ತಾದ ನಿರೂಪಣೆ ಈ ಕಾದಂಬರಿಯಲ್ಲಿಲ್ಲ. ರಾಜಕೀಯ, ಆರ್ಥಿಕ, ಸಾಮಾಜಿಕ ಸಂಸ್ಕೃತಿಯ ಹಿನ್ನೆಲೆಯಲ್ಲಿ ಪಾತ್ರಗಳನ್ನು ಚಿತ್ರಿಸ ಹೊರಟಿರುವುದರಿಂದ ಪಾತ್ರಗಳ ಜೀವನದ ಸಮಗ್ರ ನಿರೂಪಣೆ ಇಲ್ಲಿ ಸಿಗುವುದಿಲ್ಲ. ಮೂಲ ಭಾರತದ ಪರಿಚಯವಿಲ್ಲದವರಿಗೆ ಇವರ ಸ್ವತಂತ್ರ ದೃಷ್ಟಿಯ ವೈಶಿಷ್ಟ್ಯ ಸುಲಭವಾಗುವುದು ಕಷ್ಟವೆನಿಸುತ್ತದೆ.

ಈ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಪರ್ವದ ಗಾಂಧಾರಿ ಚಿತ್ರಣವನ್ನು ಕುರಿತು ಕೆಲವು ವಿಚಾರಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

ಪರ್ವದಲ್ಲಿ ಗಾಂಧಾರಿ ಮೊದಲ ಬಾರಿಗೆ ಕಾಣಿಸಿಕೊಳ್ಳುವ ಸನ್ನಿವೇಶ ಹೀಗಿದೆ :

ದೇವಲೋಕದ ವೈದ್ಯರಿಂದ ವೀರ್ಯಾಭಿವೃದ್ಧಿ ಔಷಧಿಯ ಸೇವನೆ ಮಾಡುತ್ತಾ ಪಾಂಡು ಮಹಾರಾಜ ಪರ್ವತ ಪ್ರದೇಶದಲ್ಲಿ ಕುಂತಿ-ಮಾದ್ರಿಯರೊಂದಿಗೆ ವಾಸಿಸುತ್ತಿರುತ್ತಾನೆ. ಅವನ ಜೀವನಕ್ಕೆ ಹಸ್ತಿನಾವತಿಯಿಂದ ದವಸ-ಧಾನ್ಯಗಳೇ ಮೊದಲಾದ ಅನೇಕ ಪದಾರ್ಥಗಳು ಸರಬರಾಜು ಆಗುತ್ತಿರುತ್ತವೆ. ಇವುಗಳನ್ನು ತಂದುಕೊಡುತ್ತಿದ್ದ ದೂತನು ಒಮ್ಮೆ ಬಂದಾಗ ಧೃತರಾಷ್ಟ್ರನಿಗೆ ವಿವಾಹವಾದ ಸುದ್ದಿಯನ್ನು ತಿಳಿಸುವ ಸಂದರ್ಭದಲ್ಲಿ ಕನ್ಯಾ ಶುಲ್ಕ ಪ್ರತಿಯಾಗಿ ಧೃತರಾಷ್ಟ್ರನನ್ನು ವರಿಸಿದ ಗಾಂಧಾರಿಯ ವಿಷಯವನ್ನು ಪ್ರಸ್ತಾಪಿಸುತ್ತಾನೆ.

''ವಧುದಕ್ಷಿಣೆ ಸ್ವೀಕರಿಸಿದ ಗಾಂಧಾರದ ಹೆಂಗಸರು ಆರ್ಯಸ್ತ್ರೀಯರಷ್ಟು ಸುಸಂಸ್ಕೃತರಲ್ಲ. ಆರ್ಯಸ್ತ್ರೀಯರಂತೆ ಗಂಡ ಹೇಳಿದಂತೆ ಕೇಳುವುದಿಲ್ಲ ಅಲ್ಲವೇ ? ಎಂಬ ಪಾಂಡುವಿನ ಮಾತಿಗೆ ಉತ್ತರವಾಗಿ ''ಗಾಂಧಾರಿ ಆ ದೇಶದವಳಾದರೂ ಅಂತಹವಳಲ್ಲ. ಅವಳು ಆರ್ಯ ಸ್ತ್ರೀಯರನ್ನು ಮೀರಿಸಿದ ಪತಿಭಕ್ತೆ. ಗಂಡ ಕುರುಡ ಎಂದು ತಿಳಿದ ದಿನವೇ ಆಕೆ ಗಂಡನಿಗಿಲ್ಲದ ದೃಷ್ಟಿಭಾಗ್ಯ ತನಗೇಕೆ ಎಂದು, ಒಂದು ಅರಿವೆಬಳಲಿನಲ್ಲಿ ಕಣ್ಣಿಗೆ ಬಟ್ಟೆ ಕಟ್ಟಿಕೊಂಡು, ವಿವಾಹ ಕಾಲದಲ್ಲಿ ಸಪ್ತಪದಿಯನ್ನು ಧೃತರಾಷ್ಟ್ರನ ಜೊತೆಗೆ ಕುರುಡಿಯಂತೆಯೇ ತುಳಿದಳು. ಗಂಡನಿಗಾಗಿ ಪಟ್ಟಿ ಕಟ್ಟಿಕೊಂಡು ಕುರುಡಿ ಆದ ಅವಳನ್ನು ಹಸ್ತಿನಾವತಿಯ ಪ್ರಜೆಗಳು ಮಹಾಸಾಧ್ವಿ, ಮಹಾಪತಿಭಕ್ತೆ'' ಎಂದು ಅವಳ ಕಾಲಿಗೆ ಬೀಳುತ್ತಾರೆ. ಗುಣಗಾನ ಮಾಡುತ್ತಾರೆ' ಎಂದು ತಿಳಿಸುತ್ತಾನೆ. ಇದನ್ನು ಕೇಳಿ ಪಾಂಡು 'ಅಣ್ಣನ ಪುಣ್ಯ ದೊಡ್ಡದು' ಎನ್ನುತ್ತಾನೆ.

ಗಾಂಧಾರಿಯ ಈ ಪಾತಿವ್ರತ್ಯ ಮಹಿಮೆ ಕೇವಲ ಹಸ್ತಿನಾವತಿಯ ಸಾಮಾನ್ಯಪ್ರಜೆಗಳನ್ನು ಮಾತ್ರವಲ್ಲದೆ, ಧರ್ಮರಾಯ, ಕರ್ಣ, ವಿದುರನೇ ಮೊದಲಾದ ಹಿರಿಯ ಪ್ರಭೃತಿಗಳಲ್ಲೂ ಆಕೆಯ ಬಗ್ಗೆ ಪೂಜ್ಯಭಾವನೆಯನ್ನು ತಂದುಕೊಟ್ಟಿತ್ತು.

ಆದರೆ, ಜನ ಅಂದುಕೊಂಡಂತೆ ಗಾಂಧಾರಿಯು ಮಹಾಪತಿಭಕ್ತೆಯಾಗಿ ಕಣ್ಣಿಗೆ ಪಟ್ಟಿಕೊಳ್ಳಲಿಲ್ಲ ಎನ್ನುವುದು ಕಾದಂಬರಿಯ ಕೊನೆಯಲ್ಲಿ ತಿಳಿಯುತ್ತದೆ. ಭಾರತಯುದ್ಧ ಮುಗಿದು ಪಾಂಡವರನ್ನು ಕೃಷ್ಣ ಧೃತರಾಷ್ಟ್ರನ ಬಳಿ ಕರೆತಂದು ಅವನ ಕಾಲಿಗೆರಗಿಸಿದ ಸಂದರ್ಭದಲ್ಲಿ, ಆಪ್ತವಾಗಿ ವಿಷಯವನ್ನು ತಿಳಿಯುವ ಕುತೂಹಲದಿಂದ ಕೃಷ್ಣನು ಗಾಂಧಾರಿಯನ್ನು ಕೇಳುತ್ತಾನೆ. 'ಮಹಾರಾಜನಂತೂ ಕುರುಡನಾಗಿಯೇ ಹುಟ್ಟಿದ, ನೀನೇಕೆ ಹೀಗೆ ಕಣ್ಣುಕಟ್ಟಿಕೊಂಡೆ?' ಅದಕ್ಕೆ ಗಾಂಧಾರಿಗೆ ಬದಲು ಧೃತರಾಷ್ಟ್ರ ''ಗಂಡನಿಗಿಲ್ಲದ ದೃಷ್ಟಿಭಾಗ್ಯ ತನಗೆ ಬೇಡವೆಂದು''ಎಂದು ಉತ್ತರಿಸುತ್ತಾನೆ. ಆಗ ಕೃಷ್ಣನು ''ಮಹಾರಾಜ ಅವಳ ಅಂತರಂಗ ನುಡಿಯಲಿ, ಸ್ವಲ್ಪ ತಾಳಿರಿ'' ಎನ್ನುತ್ತಾನೆ. ಕೃಷ್ಣನ ಒತ್ತಾಯದ ನಂತರ ಗಾಂಧಾರಿ ಹೇಳುತ್ತಾಳೆ. 'ಭೀಷ್ಮ ದೊಡ್ಡ ಸೈನ್ಯ ಕಳುಹಿಸಿದ. ಭಯ ಸೂಚಕವಾಗಿ, ನೀವು ನನ್ನ ಕುರುಡ ಮಗನಿಗೆ ಹೆಣ್ಣುಕೊಡದಿದ್ದರೆ ಸೈನ್ಯವಿದೆ ಎಂಬರ್ಥದಲ್ಲಿ. ಜೊತೆಗೆ ಗಾಡಿಗಟ್ಟಲೆ ದಿನಸಿ, ಧಾನ್ಯ, ಲೋಹದ ಪಾತ್ರೆಗಳು, ಬಂಗಾರದ ಆಭರಣಗಳನ್ನು ಕಳುಹಿಸಿದ- ಮೈತ್ರಿ ಸೂಚಕವಾಗಿ. ನಮ್ಮಪ್ಪನಿಗೆ ಭಯವೂ

ಹುಟ್ಟಿತು. ಲೋಭವೂ ಹುಟ್ಟಿತು. ಲೋಭಕ್ಕೆ ಒಳಗಾಗಿ ಒಪ್ಪಿಗೆ ಕೊಟ್ಟ. ಆಗ ನಾನು ಅವನ ಎದುರಿಗೇ ನಾನು ಹೊದೆದಿದ್ದ ಮೇಲುವಸ್ತ್ರದ ಒಂದು ಸೆರಗನ್ನು ಸರ್‍ರನೆ ಸೀಳಿ, 'ಕುರುಡನಿಗೇ ಕೊಡುವುದಾದರೆ ನಾನು ಅವನ ಮುಖ ನೋಡುವುದಿಲ್ಲ' ಎಂದು ಎರಡು ಕಣ್ಣುಗಳನ್ನು ಕಟ್ಟಿಕೊಂಡೆ. ಆಗಲೂ ಅಪ್ಪನ ಅಂತಃಕರಣ ಜಾಗ್ರತವಾಗಲಿಲ್ಲ. ಮನೆಯನ್ನು ಬಿಟ್ಟು ಕದ್ದು ಓಡಿಹೋಗುವ ಯೋಚನೆಯನ್ನು ಮಾಡಿದ್ದೆ. ಆದರೆ ನಾನು ಓಡಿ ಹೋಗಿದ್ದರೆ ನನ್ನ ತಂದೆ ಬೇಕೆಂದೇ ಮಗಳನ್ನು ಮುಚ್ಚಿಟ್ಟಿದ್ದಾನೆಂದು ಭೀಷ್ಮನ ಸೈನಿಕರು ನಮ್ಮೂರನ್ನು ಸುಟ್ಟು ಬಿಡುತ್ತಿದ್ದರು. ಆದ್ದರಿಂದ ಓಡಿಹೋಗಲಿಲ್ಲ'' ಎಂದು ಹೇಳುತ್ತಾಳೆ. ''ಅದು ಸರಿ, ಆಮೇಲೆ ಇಲ್ಲಿಗೆ ಬಂದ ಮೇಲೆ ಮಕ್ಕಳು ಮರಿ ಆದ ಮೇಲೆ, ಎಲ್ಲ ನಿಲುಗಡೆಗೆ ಬಂದ ಮೇಲೆ ನೀನೇಕೆ ಕಣ್ಣುಪಟ್ಟಿಯನ್ನು ಕಿತ್ತು ಹಾಕಲಿಲ್ಲ ?'' ಎಂದು ಕೃಷ್ಣ ಕೇಳಿದ. ಆ ಪ್ರಶ್ನೆಗೆ ಗಾಂಧಾರಿ ಹೀಗೆ ಉತ್ತರಿಸುತ್ತಾಳೆ. ''ಇಲ್ಲಿ ಬಂದ ಮೇಲೆ ಜನರು ಮಹಾಸಾಧ್ವಿ, ಗಂಡನಿಗಿಲ್ಲದ ಭಾಗ್ಯ ತನಗೆ ಬೇಡವೆಂದು ಪಟ್ಟಿಕಟ್ಟಿಕೊಂಡಿದ್ದಾಳೆ. ಇಂಥವಳಿರುವ ಜಾಗ ಪಾವನ ಎಂದೆಲ್ಲಾ ಹೊಗಳಲು ಪ್ರಾರಂಭಿಸಿದರು. ಹೊಗಳಿಕೆಯ ರುಚಿ ಹತ್ತಿತ್ತು. ಅಲ್ಲದೆ ದೇವಿಯ ಪಟ್ಟವನ್ನು ಕಳೆದುಕೊಳ್ಳಲು ಮನಸ್ಸು ಬರಲಿಲ್ಲ. ಅದೂ ಅಲ್ಲದೆ ಇದುವರೆಗೆ ನನ್ನ ಮಕ್ಕಳಲ್ಲಿ ಒಬ್ಬರಾದರೂ 'ಅಮ್ಮಾ ನೀನೇಕೆ ಹೀಗೆ ಕುರುಡಿಯಾಗಿದ್ದೀಯಾ? ನನ್ನನ್ನು ನೋಡುವುದಕ್ಕಾದರೂ ಕಣ್ಣು ಬಿಡು' ಎಂದು ಕೇಳಲಿಲ್ಲ ನಿನ್ನಂತೆ. ಎಲ್ಲರೂ ಪಾವನ ದೃಷ್ಟಿಯಿಂದ ಕಾಲುಮುಟ್ಟಿ ನಮಸ್ಕರಿಸುತ್ತಿದ್ದರು - ಅಷ್ಟೆ'' ಎನ್ನುತ್ತಾಳೆ. ಆಗ ಮತ್ತೆ ಕೃಷ್ಣನು ಗಾಂಧಾರಿಯನ್ನು ಕುರಿತು ''ಮಕ್ಕಳಿಗನಿಸದಿದ್ದರೂ, ನಿನ್ನ ಹೊಟ್ಟೆಯಿಂದ ಮಗು ಹುಟ್ಟಿದಾಗ ಅದನ್ನಾದರೂ ನೋಡುವ ಬಯಕೆ ಆಗಲಿಲ್ಲವೇ ?' ಎಂದು ಅವಳ ಮಾತೃ ಪ್ರೇಮವನ್ನೇ ಕೆಣಕಿ ಪ್ರಶ್ನಿಸಲು ''ನೋಡುವ ಆಸೆಯಾಗದೆ ಇರಲಿಲ್ಲ. ಆದರೆ ಪಾವನತೆಯ ಭ್ರಾಂತಿ, ದೇವಿಪಟ್ಟದ ಲೋಭ, ಪರಿಣಾಮವಾಗಿ ಮಕ್ಕಳನ್ನು ಒಮ್ಮೆಯೂ ನೋಡಲಿಲ್ಲ'' ಎಂದು ಗಾಂಧಾರಿ ಉತ್ತರಿಸುತ್ತಾಳೆ.

ಈ ಪ್ರಸಂಗದಲ್ಲಿ ಲೇಖಕರು ಗಾಂಧಾರಿಯು ಕೇವಲ ಪತಿವ್ರತಾ ಶಿರೋಮಣಿ ಆಗಲು ಕುರುಡಿಯಾಗಲಿಲ್ಲ. ತಂದೆಯ ಮೇಲಿನ ರೋಷಕ್ಕೆ ಪಟ್ಟಿಕಟ್ಟಿಕೊಂಡಳು. ಆದರೆ ಪಟ್ಟಮಹಿಷಿಯ ಪದವಿ ಆಸೆ, ಜನರ ಹೊಗಳಿಕೆ, ಪಾವನತೆಯ ಭ್ರಾಂತಿ ಮೊದಲಾದ ಲೋಭಗಳಿಗೆ ಒಳಗಾಗಿ ಕಟ್ಟಿಕೊಂಡ ಪಟ್ಟಿಯನ್ನು ಬಿಚ್ಚುವ ಮನಸ್ಸು ಮಾಡಲಿಲ್ಲ ಎಂದು ಮನೋಜ್ಞವಾಗಿ ತಿಳಿಸಿದ್ದಾರೆ.

ಆದರೆ ಕೃಷ್ಣನು 'ಯುದ್ಧರಂಗವನ್ನು, ಹಸ್ತಿನಾವತಿಯನ್ನು ಹಾಗೂ ಎಲ್ಲರನ್ನೂ ನಿನ್ನ ಕಣ್ಣುಗಳ ಮೂಲಕ ನೋಡಲು ಅಂಧತ್ವವನ್ನು ನೀಗಿಕೊ' ಎಂದು ಬಲಾತ್ಕಾರವಾಗಿ ಗಾಂಧಾರಿಯ ಕಣ್ಣಪಟ್ಟಿ ಬಿಚ್ಚುತ್ತಾನೆ. ಮೂಲಭಾರತದಲ್ಲಿಲ್ಲದ ಈ ಪ್ರಸಂಗವನ್ನು ಈ ಕಾದಂಬರಿಯಲ್ಲಿ ಲೇಖಕರು ಅರ್ಥಪೂರ್ಣವಾಗಿ ನಿರೂಪಿಸಿದ್ದಾರೆ. ಮಾನವ ಸಹಜಗುಣಗಳ ನಿರೂಪಣೆಯಿಂದ ಗಾಂಧಾರಿ ನಮ್ಮಂತೆಯೆ ಸಹಜಸ್ವಭಾವದ ಸಾಮಾನ್ಯ ಸ್ತ್ರೀಯಾಗಿ ಕಾಣಸುತ್ತಾಳೆ. ವ್ಯಾಸಭಾರತದಲ್ಲಿ ನಿರೂಪಿತವಾಗಿರುವ ಆದರ್ಶಸತಿಯಾಗಿ ಅಲ್ಲ.

ಗಾಂಧಾರಿ ವ್ಯಕ್ತಿತ್ವದ ಮತ್ತೊಂದು ಮುಖವೆಂದರೆ ಮಾತ್ಸರ್ಯ. ಭೀಷ್ಮರ ಸೇನಾನಾಯಕತ್ವದಲ್ಲಿ ನಡೆದ ಯುದ್ಧದಲ್ಲಿ ಪಾಂಡವ ಸೇನೆ ತತ್ತರಿಸಿ ಜರ್ಝರಿತವಾದ ದಾರುಣ ಸ್ಥಿತಿಯನ್ನು ಸಂಜಯನು ಧೃತರಾಷ್ಟ್ರ ಗಾಂಧಾರಿಯರಿಗೆ ವರ್ಣಿಸುತ್ತಾನೆ. ಆಗ ಗಾಂಧಾರಿ ''ಪಾಂಡವ ಸೇನೆಯ ದುರ್ಗತಿಯನ್ನು ಮನೆಗೆ ಹೋಗಿ ಕುಂತಿಗೆ ಹೇಳು ಆಗ ಅವಳು ಬಿಕ್ಕಿ ಬಿಕ್ಕಿ ಅಳುತ್ತಾಳೆ. ಎಂದು ಅಲ್ಲಿಯೇ ಇದ್ದ ವಿದುರನಿಗೆ ಹೇಳುತ್ತಾಳೆ.

ಸಾಮಾನ್ಯ ಹೆಂಗಸಿನಂತೆ ಗಾಂಧಾರಿಯು ಆಡಿದ ಈ ಮಾತುಗಳನ್ನು ಕೇಳಿ ವಿದುರನು 'ನಾನು ಇದುವರೆಗೆ ಗಾಂಧಾರಿಯ ಬಗ್ಗೆ ನಿರ್ಮಿಸಿಕೊಂಡಿದ್ದ ಒಂದು ಸುಂದರ ಪರಿಪೂರ್ಣ ಪ್ರತಿಮೆಯ ಒಂದು ಮಗ್ಗಲು ಕಳಚಿಕೊಂಡು, ಕುರೂಪಗೊಂಡಿತು' ಎಂದು ಕಳವಳಿಸುತ್ತಾನೆ. ಅಲ್ಲದೆ ಗಂಡನಿಗಿಲ್ಲದ ದೃಷ್ಟಿ ತನಗೇಕೆ? ಎಂದು ಕಣ್ಣುಕಟ್ಟಿಕೊಂಡ ಈ ಮಹಾಪತಿವ್ರತೆಗೆ ಇದೊಂದು ದುರ್ಗುಣವಿಲ್ಲದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ?' ಎಂದು ಮರುಗುತ್ತಾನೆ. ಆದರೆ ಈ ಮತ್ಸರದ ಗುಣ ಆಕೆಯಲ್ಲಿ ಕೊನೆಯವರೆಗೂ ಉಳಿಯುವುದಿಲ್ಲ.

ಕಾದಂಬರಿಯ ಕೊನೆಯಲ್ಲಿ ಗಾಂಧಾರಿಯ ಕಣ್ಣಿನ ಪಟ್ಟಿಯನ್ನು ಕಳಚಿದ ಕೃಷ್ಣ ಆಕೆಯ ಮಕ್ಕಳ ಹೆಣಗಳನ್ನು ನೋಡಲು ಅವಳನ್ನು ಕುಂತಿಯೊಂದಿಗೆ ರಥದಲ್ಲಿ ಕರೆದೊಯ್ಯುತ್ತಾನೆ. ಆ ಸಂದರ್ಭದಲ್ಲಿ ಗಾಂಧಾರಿಯನ್ನು ಕುರಿತು ''ನೀನು ಕುಂತಿ ಇಬ್ಬರೂ ಓರಗಿತ್ತಿಯರು, ಅಕ್ಕ-ತಂಗಿಯರು. ಈಗ ಹಳೇ ವೈಷಮ್ಯ ಅವಳಿಗೂ ಇಲ್ಲ ನಿನಗೂ ಇಲ್ಲ ಅಲ್ಲವೇ? ಹಾಗಾಗಿ ಜೊತೆಗಿರಲಿ ಎಂದು ಇವಳನ್ನು ಕರೆತಂದೆ'' ಎಂದು ಹೇಳಿ ಅವರಿಬ್ಬರಲ್ಲಿಯೂ ವೈಷಮ್ಯ ಕೊನೆಗೊಂಡಿತೆಂದು ಸಾರುತ್ತಾನೆ. ಅದರಂತೆಯೆ ಕುಂತಿ ತನ್ನಿಂದಾಗಿ ಮಾತೃಪ್ರೇಮದಿಂದ ವಂಚಿತನಾದ ಕರ್ಣನಿಗೆ ತಾಯಿಯ ಪ್ರೀತಿಯನ್ನು ಗಾಂಧಾರಿ ತೋರಿದ್ದನ್ನು ಹೇಳಿದರೆ, ತನ್ನ ಮಕ್ಕಳು ಗೆದ್ದರೂ ಉಬ್ಬದೆ ದೂರ ಉಳಿದ ಕುಂತಿಯ ನಡತೆಯನ್ನು ಮೆಚ್ಚಿಕೊಳ್ಳುತ್ತಾಳೆ. ಹೀಗೆ ಪರಸ್ಪರ ಒಬ್ಬರಿಗೊಬ್ಬರು ಉದಾರೀ ಭಾವನೆಗಳನ್ನು ಗುರುತಿಸಿ ಮತ್ಸರಭಾವ ಮರೆಯುತ್ತಾರೆ.

ಗಾಂಧಾರಿಗೆ ಕರ್ಣನ ಬಗ್ಗೆ ಪುತ್ರವಾತ್ಸಲ್ಯವಿದ್ದಂತೆ, ಭೀಷ್ಮರ ಬಗ್ಗೆ ಒಂದು ಬಗೆಯ ಕ್ರೋಧ ತುಂಬಿತ್ತು. ಒಮ್ಮೆ ಧೃತರಾಷ್ಟ್ರನು ಭೀಷ್ಮರ ಪೂರ್ವ ಸಾಹಸಗಳನ್ನು ಸ್ಮರಿಸುತ್ತ ಅಂಬೆಯ ಪ್ರಸಂಗವನ್ನು ಬಣ್ಣಿಸ ಹೊರಡುತ್ತಾನೆ. ಆಗ ಸರಕ್ಕನೆ ಅವನ ಮಾತನ್ನು ತುಂಡರಿಸಿ, 'ಎಲ್ಲ ಕೇಳಿದ್ದೀನಿ ಬಿಡು ನಿನ್ನ ದೊಡ್ಡಪ್ಪನ ದೊಡ್ಡ ಗೌಡಿಕೆಯ ಕೆಲಸಗಳನ್ನು' ಎಂದು ಛೇಡಿಸುತ್ತಾಳೆ. ಈ ಮಾತಿನಲ್ಲಿ ಅವಳಿಗೆ ಆಂತರ್ಯದಲ್ಲಿ ಭೀಷ್ಮರ ಬಗ್ಗೆ ಇದ್ದ ಅಸಹನೆ ಎದ್ದು ಕಾಣುತ್ತದೆ. ನಾಣ್ಯದ ಎರಡು ಮುಖಗಳಲ್ಲದೆ (ಸ್ವಾರ್ಥ - ಮಾತ್ಸರ್ಯ) ನಾಣ್ಯದ ಮೂರನೆಯ ಮುಖ ಅಂದರೆ ಅದರ ಅಂಚು ಇರುವಂತೆ ಧೃತರಾಷ್ಟ್ರನ ಬಗ್ಗೆ ತಿರಸ್ಕಾರ ಭಾವನೆಯೂ ಗಾಂಧಾರಿಯಲ್ಲಿ ಮನೆ ಮಾಡಿತ್ತು ಎನ್ನುವುದು ಈ ಒಂದು ಪ್ರಸಂಗದಿಂದ ನಿರೂಪಿತವಾಗುತ್ತದೆ.

ದಾಸಿಯರಲ್ಲಿ ಹೀನ ಸಂತಾನ ಸೃಷ್ಟಿಸಿದ ಧೃತರಾಷ್ಟ್ರನ ಬಗ್ಗೆ ಒಂದು ಬಗೆಯ ತಿರಸ್ಕಾರ ಗಾಂಧಾರಿಗಿತ್ತು. ಯುದ್ಧ ಶಿಬಿರಕ್ಕೆ ಮಕ್ಕಳೊಂದಿಗೆ ಸೊಸೆಯರೂ, ಮೊಮ್ಮಕ್ಕಳ ಹೆಂಡಿರೂ ಹೋಗಿರುವರೆಂದು ತಿಳಿದಾಗ ಧೃತರಾಷ್ಟ್ರ 'ಯುದ್ಧ ಶಿಬಿರಕ್ಕೆ ಹೆಂಡತಿಯರು ಏಕೆ ಹೋಗಬೇಕಾಗಿತ್ತು? ಎಂದು ಕೇಳುತ್ತಾನೆ. ಕೂಡಲೇ ಗಾಂಧಾರಿಯು ಮುಖಕ್ಕೆ ರಾಚಿದಂತೆ ''ತಮ್ಮ ಗಂಡಂದಿರನ್ನು ದಾಸಿಯರ ವಶಕ್ಕೆ ಒಪ್ಪಿಸಿ ಕೂರಲು ಅವರೇನು ನನ್ನ ಹಾಗೆ ಕಣ್ಣಿಗೆ ಪಟ್ಟಿ ಕಟ್ಟಿಕೊಂಡವರೇ? '' ಎಂದು ನುಡಿಯುವಲ್ಲಿ ದೊರೆಯ ಬಗ್ಗೆ ಆಕೆಗಿರುವ ಅಸಹನೆ ಹಾಗೂ ತಿರಸ್ಕಾರ ಎದ್ದು ಕಾಣುತ್ತವೆ.

ತನ್ನ ಅಂತಸ್ತಿನ ಅಹಂ ಗಾಂಧಾರಿಯನ್ನು ಯಾವಾಗಲೂ ಬಲವಾಗಿ ಅಂಟಿಕೊಂಡಿರುತ್ತದೆ. ಹಾಗಾಗಿ ತನ್ನ ಮಕ್ಕಳೇ ಬೇರೆ ಧೃತರಾಷ್ಟ್ರನಿಗೆ ದಾಸಿಯರಲ್ಲಿ ಹುಟ್ಟಿದ ಮಕ್ಕಳೇ ಬೇರೆ ಎಂಬ ತಾರತಮ್ಯ ಅವಳಲ್ಲಿ ಬಲವಾಗಿ ಬೇರೂರಿತ್ತು. ''ನಾನು ಹೆತ್ತದ್ದು ಮಾತ್ರ ಹದಿನಾಲ್ಕು, ಮೇಲೆ ಒಬ್ಬ ಮಗಳು ಮಾತ್ರ'' ಎನ್ನುತ್ತಿದ್ದಳು. ಈ ಭಾವನೆ ಹಲವಾರು ಪ್ರಸಂಗಗಳಲ್ಲಿ ಎದ್ದು ಕಾಣುತ್ತದೆ.

ಸಂಜಯನು ಧೃತರಾಷ್ಟ್ರನಿಗೆ ಯುದ್ಧದಲ್ಲಿ ಭೀಮ ತೋರಿಸಿದ ಸಾಹಸವನ್ನು ವರ್ಣಿಸುತ್ತಾ ''ಭೀಮನು ನಿನ್ನ ಹದಿನೇಳು ಮಕ್ಕಳನ್ನು ಕೊಂದು ಬಿಸಾಡಿದ್ದಾನೆ ಎಂದು ಹೇಳುತ್ತಾನೆ. ಆ ಮಾತನ್ನು ಕೇಳುತ್ತಿದ್ದಂತೆಯೇ ಗಾಂಧಾರಿ ಗಾಬರಿಕೊಂಡು ಕಿರುಚಿಕೊಳ್ಳುತ್ತಾಳೆ. ಆಗ ಸಂಜಯನು ''ದೇವಿ ನಾನು ಹೇಳಿದುದು ಮಹಾರಾಜನ ಹದಿನೇಳು ಮಕ್ಕಳು ಎಂದು ಅವರಲ್ಲಿ ನಿನ್ನ ಒಬ್ಬರು ಮಕ್ಕಳೂ ಸೇರಿಲ್ಲ. ಅವರೆಲ್ಲ ಕ್ಷೇಮವಾಗಿದ್ದಾರೆ'' ಎಂದು ಹೇಳಿದರೂ ''ನನ್ನ ಮಕ್ಕಳು ಯಾರೂ ಸತ್ತಿಲ್ಲವೇ? ನಿಜ ಹೇಳು'' ಎಂದು ಕೇಳಿ ಇಲ್ಲವೆಂಬ ಉತ್ತರ ಪಡೆದು ಸಮಾಧಾನ ಹೊಂದುತ್ತಾಳೆ. ಕಣ್ಣಿನ ಪಟ್ಟಿಯನ್ನು ಬಿಚ್ಚುವಂತೆ ಕೃಷ್ಣನು ಒತ್ತಾಯಿಸಿದಾಗ ಇಷ್ಟು ವರ್ಷಗಳ ಅಂಧತ್ವದ ನಂತರ ಏನನ್ನು ನೋಡಬೇಕು ಎಂದು ನಿರಾಸೆ ವ್ಯಕ್ತಪಡಿಸುತ್ತಾಳೆ. ''ಎಲ್ಲವನ್ನು ನೋಡಿ ನೀನೇ ಮಹಾರಾಜನಿಗೆ ಪ್ರತ್ಯಕ್ಷವಾಗಿ ಹೇಳಿದರೆ ನಿನ್ನ ಕಣ್ಣುಗಳ ಮೂಲಕ ಅವನ ಅಂಧತ್ವವನ್ನು ನೀಗಬಹುದು'' ಎಂದು ಕೃಷ್ಣನು ಹೇಳಿದಾಗ, ಧೃತರಾಷ್ಟ್ರನ ಬಗ್ಗೆ ಗಾಂಧಾರಿಯಲ್ಲಿದ್ದ ಅಸಹನೆ, ತಿರಸ್ಕಾರ ಸಿಡಿದೇಳುತ್ತದೆ. ''ಅವನಿಗೆ ದಾಸಿಯರ ಸಹಾಯವಿದೆ'' ಎಂದು ಕಟಕಿಯಾಡುತ್ತಾಳೆ. ತನ್ನ ಮಕ್ಕಳನ್ನು ಕುಂತಿಯ ಮಕ್ಕಳನ್ನು ಹೋಲಿಸಿಕೊಂಡು ತೂಗಿ ನೋಡಿದ ಅವಳ ಮನಸ್ಸು ಹೀನ ತಳಿ ಸೃಷ್ಟಿಸಿದ ಗಂಡನ ಬಗ್ಗೆ ಜಿಗುಪ್ಸೆಗೊಳ್ಳುತ್ತದೆ. ಕುಂತಿಯ ಮಕ್ಕಳ ಭಾಗ್ಯ ನೆನೆದು'' ಕುಂತಿ ನೀನೇ ಪುಣ್ಯವಂತೆ' ಎಂದು ನಿಡುಸುಯ್ಯುತ್ತಾಳೆ.

ಗಾಂಧಾರಿ ಶುಲ್ಕಕನ್ಯೆಯಾಗಿ ಬಂದು ಕಣ್ಣಿಗೆ ಪಟ್ಟಿಕಟ್ಟಿಕೊಂಡು ಕುರುಡನ ರಾಣಿಯಾಗಿದ್ದರೂ, ಪಟ್ಟಮಹಿಷಿ ಎಂಬ ಅಹಂ ಅವಳನ್ನು ಆವರಿಸಿತು. ಸಂಜಯನು ಯುದ್ಧದಲ್ಲಿ ಭೀಮನು ತೋರಿಸಿದ ಸಾಹಸವನ್ನು ಬಣ್ಣಿಸುತ್ತ, 'ಭೀಮನ ಮೇಲೇರಿ ಬಂದ ಹದಿನೇಳು ಜನರನ್ನೂ ಒಂದೇ ಬಾರಿಗೆ ಕತ್ತರಿಸಿ ಬೆಂಡುಗಳಂತೆ ಎಸೆದ, ದುರ್ಯೋಧನನೇ ತನ್ನ ತಮ್ಮಂದಿರನ್ನು ಹುರಿದುಂಬಿಸಿ ಕಳುಹಿಸಿದ್ದನಂತೆ' ಎಂದು ಎರಡು ಬಾರಿ ತಮ್ಮಂದಿರು ಎನ್ನುತ್ತಿದ್ದಂತೆಯೇ, ಗಾಂಧಾರಿ ಸರಕ್ಕನೆ ಸಿಡುಕುತ್ತ ''ಯಾರಿಗೆ ತಮ್ಮಂದಿರು? ತಮ್ಮಂದಿರು ಅಂತ ದುರ್ಯೋಧನನ ಬಾಯಲ್ಲಿ ಬಂತೋ ಇಲ್ಲ ಸೂತ ಜಾತಿಯ ನೀನು ಕಲ್ಪಿಸಿಕೊಂಡು ಆಡುತ್ತಿದ್ದೀಯೋ? ರಾಜಸಾನ್ನಿಧ್ಯದಲ್ಲಿ ಗೌರವದಿಂದ ಮಾತನಾಡಬೇಕು'' ಎಂದು ಗದರಿಸುತ್ತಾಳೆ. ಈ ಮಾತುಗಳಲ್ಲಿ ಪದವಿ - ಅಧಿಕಾರಿಗಳ ಅಮಲು ಅವಳಲ್ಲಿ ಮೈಗೂಡಿರುವುದನ್ನು ಕಾಣಬಹುದು.

ಗಾಂಧಾರಿಗೆ ಮಕ್ಕಳು ಬದುಕಿದ್ದಾಗ ಅವರನ್ನು ಕಣ್ಣಾರೆ ನೋಡುವ ಸುಪ್ತವಾಗಿದ್ದ ಬಯಕೆ, ಕೃಷ್ಣ ಅವಳ ಕಣ್ಣ ಪಟ್ಟಿಯನ್ನು ತೆಗೆದ ನಂತರ ಭುಗಿಲ್ ಎಂದು ಮೇಲೇಳುತ್ತದೆ. ಸತ್ತ ಮಕ್ಕಳನ್ನು ಕಾಣಲು ರಣರಂಗಕ್ಕೆ ಕರೆದುಕೊಂಡು ಹೋಗಲು ಕೃಷ್ಣನ ಮೊರೆಹೊಗುತ್ತಾಳೆ. ಈ ವೇಳೆಗಾಗಲೇ ಹೆಣಗಳು ಕೊಳೆಯುತ್ತಿರುತ್ತವೆ, ಇಲ್ಲವೇ ಅವು ಹದ್ದುನಾಯಿಗಳ ಪಾಲಾಗಿರುತ್ತವೆ ಎಂದು ಶ್ರೀಕೃಷ್ಣನು ಎಷ್ಟೇ ಸಮಜಾಯಿಸಿ ನೀಡಿದರೂ ಅದನ್ನು ಕೇಳುವ ತಾಳ್ಮೆ ಅವಳಲ್ಲಿ ಉಳಿದಿರುವುದಿಲ್ಲ. ಕೊನೆಗೆ ಯುದ್ಧರಂಗ ಹೇಗಿರುತ್ತದೆ ಎಂದು ನೋಡುವ ಆಸೆ ಎಂದು ಹಂಬಲಿಸಿದ ಗಾಂಧಾರಿಯನ್ನು ಕುಂತಿಯೊಂದಿಗೆ ಕೃಷ್ಣ ರಣರಂಗಕ್ಕೆ ಕರೆದೊಯ್ಯುತ್ತಾನೆ. ಅಲ್ಲಿ, ಕೃಷ್ಣ ಮೊದಲೇ ಹೇಳಿದಂತೆ ಯಾವ ಹೆಣದ ಗುರುತೂ ಸಿಕ್ಕದೆ ರಥದಲ್ಲಿ ಹಿಂದಿರುಗುತ್ತಾಳೆ. ರಥದಲ್ಲಿ ಹಿಂದಿರುಗಿ ಬರುತ್ತಾ ಗಾಂಧಾರಿ 'ನನಗೆ ದೃಷ್ಟಿ ಕಾಣಿಸುತ್ತಿಲ್ಲ ನಿಜವಾಗಿ ಮತ್ತೆ ಕುರುಡಿ ಆದೆನೆಂದು' ಕಾಣಿಸುತ್ತದೆ. ಮೊದಲಿನಂತೆ ಧೃತರಾಷ್ಟ್ರನ ಸಂಗಡ ಇರುತ್ತೇನೆ. ಅದೂ ಒಂದು ತೆರನಾದ ನೆಮ್ಮದಿ'' ಎಂದು ಹೇಳಿ ನಿರ್ಭಾವದಿಂದ ಕುಳಿತ ಗಾಂಧಾರಿಯನ್ನು ಕೃಷ್ಣ ದಿಟ್ಟಿಸಿ ನೋಡುತ್ತಾನೆ. ಅಲ್ಲಿ ಕೃಷ್ಣನಿಗೆ ಯಾವ ಭಾವಸಂಚಾರವೂ ಇಲ್ಲದ, ಕೇವಲ ಕಣ್ಣು ಮೂಗು ಬಾಯಿ ಗದ್ದಗಳ ಮುಖವನ್ನು ತನ್ನ ಕುತ್ತಿಗೆಯ ಮೇಲೆ ಹೊತ್ತ ಒಂದು ನಿರ್ಭಾಗ್ಯ ಹೆಣ್ಣನ್ನು ಕಂಡಂತಾಗುತ್ತದೆ.

ಹೀಗೆ ಕೊನೆಯಲ್ಲಿ ಗಾಂಧಾರಿಗೆ ಬಂದ ಸಹಜ ಅಂಧತ್ವ ಆಕೆಗೆ ಅಂತರಂಗ ಚಿಂತೆಯಿಂದ ಪ್ರಾಪ್ತವಾದುದು ಎಂಬ ವಿಚಾರವನ್ನು ಸಾರ್ಥಕ ರೀತಿಯಲ್ಲಿ ಸಾಂಕೇತಿಕವಾಗಿ ಚಿತ್ರಿಸಿದ್ದಾರೆ. ಗಾಂಧಾರಿಗೆ ಕುರುಡು ಗಂಡನನ್ನು ಕಂಡಾಗ ಉಂಟಾದ ನಿರಾಸೆ, ಮಕ್ಕಳನ್ನು ಕಳೆದುಕೊಂಡ ಅಳಲು, ಪಾಂಡವರನ್ನು ಕಂಡಾಗ ತಾನು ಕಳೆದುಕೊಂಡ ಮಕ್ಕಳನ್ನು ನೆನೆದು ಉಂಟಾದ ದುಃಖ - ಎಲ್ಲಾ ಸೇರಿ ಅವಳಿಗೆ ಅಂಧತ್ವವೇ ಮೇಲು ಅನ್ನಿಸಿ ಮಾನಸಿಕವಾಗಿ ಅಂಧತ್ವ ಅಂತರಂಗದಲ್ಲಿ ಕವಿದಿರಬೇಕು. ಮನಸ್ಸಿಗೆ ಬೇಡವಾಗಿ ಹೊರ ಜಗತ್ತನ್ನು ಕಾಣಲು ಮನಸ್ಸು ಒಲ್ಲೆ ಎಂದಾಗ ಹೊರಗಿನ ಕಣ್ಣು ಕಂಡೀತೆ?

ಹೀಗೆ 'ಪರ್ವ' ಕಾದಂಬರಿಯಲ್ಲಿ ಭೈರಪ್ಪನವರು ಗಾಂಧಾರಿ ಕಣ್ಣಿಗೆ ಪಟ್ಟಿಕಟ್ಟಿಕೊಂಡು ಕುರುಡಿ ಆದದ್ದು, ಕಣ್ಣಿಗೆ ಪಟ್ಟಿ ಬಿಚ್ಚಿದಾಗ ಕಂಡ ದರ್ಶನದಿಂದ ಮತ್ತೆ ಅಂಧತ್ವಕ್ಕೆ ಸರಿದದ್ದನ್ನು ವಿಸ್ತಾರವಾಗಿ ವಿನೂತನ ರೀತಿಯಲ್ಲಿ ಚಿತ್ರಿಸಿದ್ದಾರೆ. ಈ ಘಟನೆಯೊಂದೇ ಗಾಂಧಾರಿಗೆ ಸಂಬಂಧಿಸಿದಂತೆ ಈ ಕಾದಂಬರಿಯಲ್ಲಿ ಪ್ರಮುಖ ಪ್ರಸಂಗವಾಗಿದೆ. ಅವಳಿಗೆ ಸಂಬಂಧಿಸಿದ ಉಳಿದ ಪ್ರಸಂಗಗಳು ಹಾಗೂ ವಿವರಗಳಲ್ಲಿ ಕೆಲವನ್ನು ಮಾತ್ರ ಲೇಖಕರು ಪ್ರಾಸ್ತಾಪಿಸಿದ್ದಾರೆ ಅಷ್ಟೇ. ವ್ಯಾಸ ಭಾರತದಲ್ಲಿದ್ದು ಇಲ್ಲಿ ಕಾಣಿಸದ ಸಂಗತಿಗಳು ಸಾಕಷ್ಟು ಇವೆ. ಉದಾಹರಣೆಗೆ ಬಾಲ್ಯದಲ್ಲಿಯೇ ಶಿವಾರಾಧನೆ ಮಾಡಿ ನೂರು ಮಂದಿ ಮಕ್ಕಳನ್ನು ಪಡೆಯುವ ವರ ಹೊಂದಿದ್ದು, ಕುಂತಿ ಮೇಲಿನ ಅಸೂಯೆಯಿಂದ ಹೊಸಕಿಕೊಂಡ ಗರ್ಭದಿಂದ ಶತಪುತ್ರರನ್ನು ಪಡೆದುದು, ಪಾಂಡವರೊಂದಿಗೆ ದ್ವೇಷ ಸಲ್ಲದು ಎಂದು ಮಕ್ಕಳಿಗೆ ಭೋದಿಸುವುದು, ಹಿರಿಯ ಮಗ ದುರ್ಯೋಧನ ಭಾರತ ಯುದ್ಧದ ಹದಿನೆಂಟು ದಿನಗಳೂ ಯುದ್ಧದಲ್ಲಿ ಗೆಲುವಾಗಲೆಂದು ತಾಯಿಯ ಆಶೀರ್ವಾದ ಬೇಡಲು ಬರುವುದು - ಆದರೆ ಪುತ್ರ ವ್ಯಾಮೋಹದಿಂದ ಕುರುಡಳಾಗದೆ ಧರ್ಮನಿಷ್ಠೆಯಿಂದ ಕೂಡಿದ ಸಂಯಮದಿಂದ 'ಧರ್ಮವಿದ್ದಲ್ಲಿ ಜಯವಾಗಲಿ' ಎಂದು ಹಾರೈಸುವುದು, ವ್ಯಾಸಮಹರ್ಷಿಯ ಅನುಗ್ರಹದಿಂದ ಸತ್ತಮಕ್ಕಳ ದರ್ಶನ ಪಡೆಯುವುದು, ಕೊನೆಗೆ ಧೃತರಾಷ್ಟ್ರ ಕುಂತಿ ವಿದುರರೊಂದಿಗೆ ಅರಣ್ಯಕ್ಕೆ ತೆರಳಿ ಆಶ್ರಮವೊಂದರಲ್ಲಿ ಕಾಳ್ಗಿಚ್ಚಿಗೆ ಬಲಿಯಾಗುವುದು ಇತ್ಯಾದಿ ಮೂಲಭಾರತದಲ್ಲಿರುವ

ಸಂಗತಿಗಳು ಇಲ್ಲಿ ಮೂಡಿಬಂದಿಲ್ಲ. ಆದರೂ, ಈ ಕಾದಂಬರಿಯಲ್ಲಿ ನಿರೂಪಿತವಾಗಿರುವಷ್ಟೇ ಪ್ರಸಂಗಗಳಲ್ಲಿ ಕಂಡುಬರುವ ಗಾಂಧಾರಿಯ ಚಿತ್ರಣ ಮನೋಜ್ಞವಾಗಿ ಬಂದಿದೆ. ಬಹಿರಂಗದಲ್ಲಿ ಆದರ್ಶ ಪತಿವ್ರತಾ ಶಿರೋಮಣಿಯಾಗಿ ಕಂಡುಬಂದರೂ, ಅಂತರ್ಯದಲ್ಲಿ ಸಾಮಾನ್ಯ ಹೆಣ್ಣೊಬ್ಬಳಲ್ಲಿ ಕಂಡುಬರುವ ಅಸೂಯೆ, ಪುತ್ರಮೋಹ, ಪತಿ ತಿರಸ್ಕಾರ, ಸವತಿಮಾತ್ಸರ್ಯ, ಕೀರ್ತಿ ವ್ಯಾಮೋಹ, ಅಧಿಕಾರ ಲಾಲಸೆ ಮೊದಲಾದ ಗುಣ ಸ್ವಭಾವಗಳು ನೆಲೆಯೂರಿತ್ತು, ಹೀಗೆ ವ್ಯಾಸಭಾರತಕ್ಕಿಂತಲೂ ಭಿನ್ನವಾದ ಸಹಜ ಸ್ತ್ರೀಸ್ವಭಾವಗಳಿಂದ ಕೂಡಿದ ನತದೃಷ್ಟ ರಾಜಕನ್ಯೆಯೊಬ್ಬಳನ್ನು 'ಪರ್ವ'ದಲ್ಲಿ ಭೈರಪ್ಪನವರು ಚಿತ್ರಿಸಿದ್ದಾರೆನ್ನಬಹುದು.

ಗತಕಾಲೀನ ಕೃತಿಯ ವ್ಯಕ್ತಿಯೊಬ್ಬರ ವ್ಯಕ್ತಿತ್ವವನ್ನು ವರ್ತಮಾನದ ಬದುಕಿನ ಹಿನ್ನೆಲೆಯಲ್ಲಿ ಚಿಂತಿಸಿ, ಸಮಕಾಲೀನ ಸಮಾಜದ ಆಗುಹೋಗುಗಳಂತೆ ಪಾತ್ರಚಿತ್ರಣ ಮಾಡುವುದು ಸಾಮಾನ್ಯ ಸಂಗತಿಯಲ್ಲ. ಪೌರಾಣಿಕ ಇಲ್ಲವೇ ಐತಿಹಾಸಿಕ ಎನ್ನಬಹುದಾದ ಗಾಂಧಾರಿ ಪಾತ್ರವನ್ನು ಸಾಮಾಜಿಕ ಹಿನ್ನೆಲೆಯಲ್ಲಿ, ಅದಕ್ಕಿಂತ ಹೆಚ್ಚಾಗಿ ಪಾತ್ರದ ಬದುಕಿನಲ್ಲಿ ವ್ಯಾಸರು ನಿರೂಪಿಸಿದ ಪವಾಡಗಳನ್ನು ಕಿತ್ತೆಸೆದು, ಆದರ್ಶಗಳನ್ನು ಪ್ರಶ್ನಿಸಿ, ಸ್ವಾಭಾವಿಕ ಪಾತ್ರವನ್ನಾಗಿ ಗಾಂಧಾರಿಯನ್ನು ಭೈರಪ್ಪನವರು 'ಪರ್ವ'ದಲ್ಲಿ ಚಿತ್ರಿಸಿ, ಆಕೆಯ ಬದುಕಿನ ಮತ್ತೊಂದು ಮುಖವನ್ನು ಓದುಗರಿಗೆ ನೀಡಿದ್ದಾರೆ. 'ಪರ್ವ' ವ್ಯಾಸಭಾರತಕ್ಕೆ ಬರೆದ 'ಆಧುನಿಕ ವ್ಯಾಖ್ಯಾನ' ಎನ್ನಬಹುದು. ಗಾಂಧಾರಿಯ ಪಾತ್ರ ಅದಕ್ಕೊಂದು ಶ್ರೇಷ್ಠ ನಿದರ್ಶನವಾಗಿದೆ.

ಅಡಿಗರ ಕಾವ್ಯದಲ್ಲಿ ಪ್ರತಿಮಾ ವೈಭವ

ಶ್ರೀ ಬಿ.ವಿ. ಕೆದಿಲಾಯ

ನವ್ಯಕಾವ್ಯದಲ್ಲಿ ಪ್ರತಿಮಾವಿಧಾನ ಅತ್ಯಂತ ಪ್ರಧಾನವಾದ ತಂತ್ರ ಸಮರ್ಥವಾದ ಪ್ರತಿಮೆ ಒಂದು ಅನುಭವವನ್ನು ತನ್ನ ವ್ಯಾಪಕವಾದ ಧ್ವನಿಶಕ್ತಿಯಿಂದ ಸಮಗ್ರ ಪರಿಣಾಮವನ್ನುಂಟುಮಾಡುವಂತೆ ವ್ಯಕ್ತಪಡಿಸಬಲ್ಲುದು. ಪ್ರತಿಮಾವಾದದ ಜನಕನಾದ ಕವಿ ಎಜ್ರಾ ಪೌಂಡ್ ವ್ಯಾಖ್ಯೆಯ ಪ್ರಕಾರ ''ಬೌದ್ಧಿಕ ಹಾಗೂ ಭಾವನಾತ್ಮಕವಾದ ಒಂದು ಸಂಕೀರ್ಣ ಅನುಭವವನ್ನು ಕ್ಷಣಮಾತ್ರದಲ್ಲಿ ವ್ಯಕ್ತಪಡಿಸಬಲ್ಲ ಮಾಧ್ಯಮವೇ ಪ್ರತಿಮೆ''. (An image is that which presents an intellectual and emotioal complex in an instant of time - Ezra Pound) ಇದನ್ನು 'ವಸ್ತು ಪ್ರತಿರೂಪ' (Objective correlative) ಎಂಬ ಪರಿಕಲ್ಪನೆಯ ಮುಖಾಂತರ ಖ್ಯಾತಕವಿ ಎಲಿಯಟ್ ಪ್ರಚುರಪಡಿಸಿದ. ಅನುಭವಗಳನ್ನು ಭಾವನೆಗಳನ್ನು ಕಲಾತ್ಮಕವಾಗಿ ವ್ಯಕ್ತಪಡಿಸುವುದಕ್ಕೆ ಇದು ಅತ್ಯುತ್ತಮ ವಿಧಾನ. ಪ್ರತಿಮೆಯ ಬಳಕೆ ಹಿಂದಿನಿಂದಲೂ ಇದ್ದಿತಾದರೂ ಅಡಿಗರ ಕಾವ್ಯದಲ್ಲಿ ಅದು ಹೊಸ ಆಯಾಮವನ್ನು, ಶಕ್ತಿಯನ್ನು ಗಳಿಸಿಕೊಂಡು ವಿಜೃಂಭಿಸಿದೆ. ಅಡಿಗರು ಪ್ರತಿಮೆಗಳನ್ನು ಬಳಸುವ ಕ್ರಮವೂ ವಿಶಿಷ್ಟವಾದದ್ದು. ಕೆಲವೊಮ್ಮೆ ಒಂದು ಕೇಂದ್ರಪ್ರತಿಮೆ ಇಡೀ ಕವನವನ್ನೇ ವ್ಯಾಪಿಸುತ್ತದೆ. ಇನ್ನಿತರ ಸಂದರ್ಭಗಳಲ್ಲಿ ಹಲವು ಪ್ರತಿಮೆಗಳು ಒಟ್ಟಾಗಿ ಅನುಭವದ ಅಭಿವ್ಯಕ್ತಿಗೆ ನೆರವಾಗುತ್ತವೆ. ಉದಾಹರಣೆಗೆ 'ವರ್ಧಮಾನ' ಕವನದಲ್ಲಿ ಬರುವ ಹನುಮಂತನ ಪ್ರತಿಮೆ ಕೇಂದ್ರಪ್ರತಿಮೆಯಾಗಿದ್ದು ಬಾಲ್ಯದ ಹುಡುಗಾಟದ ಹುಚ್ಚಿನಲ್ಲಿ ಸೂರ್ಯನನ್ನೇ ತಿನ್ನಲು ಪ್ರಯತ್ನಿಸಿ ಮೂತಿ ಬೀಗಿಸಿಕೊಂಡ ಹನುಮಂತ ಮುಂದೆ ಬೆಳೆಯುತ್ತ, ಪ್ರಬುದ್ಧನಾಗುತ್ತ, ಸೀತಾನ್ವೇಷಣೆಯ ಯತ್ನದಲ್ಲಿ ಸ್ವಯಂಪ್ರಭೆಯ ಅನುಗ್ರಹವನ್ನು ಪಡೆದು, ಕೊನೆಗೆ ಸಮುದ್ರೋಲ್ಲಂಘನದಂತಹ

ಮಹಾನ್ ಸಾಧನೆಯನ್ನು ಮಾಡಿ ಚಿರಂಜೀವಿಯಾಗುವ ಕವನದ ಆಶಯಕ್ಕೆ ಅತ್ಯಂತ ಸೂಕ್ತ ಹಾಗೂ ಪರಿಣಾಮಕಾರಿಯಾದ ಪ್ರತಿಮೆಯಾಗುತ್ತದೆ. ಮನುಷ್ಯ ಚೇತನದ ಬೆಳವಣಿಗೆಯ ವಿವಿಧ ಹಂತಗಳನ್ನು ಅತ್ಯಂತ ಸಮರ್ಥವಾಗಿ ಧ್ವನಿಸುತ್ತದೆ. 'ಕೂಪಮಂಡೂಕ'ವೆಂಬ ಕವನದಲ್ಲಿ ಬರುವ ''ಗೊನೆ ಮಾಗಿ ಬಾಳೆ ಜೀವನ್ಮುಕ್ತ ಹಳಸುತಿದೆ' ಎಂಬ ಪ್ರತಿಮೆ ಕವನದಲ್ಲಿ ಬರುವ ಹಲವು ಪ್ರತಿಮೆಗಳಲ್ಲಿ ಒಂದಾದರೂ ಕವನದ ಆಶಯಕ್ಕೆ ಅಮೂಲ್ಯ ಕೊಡುಗೆ ನೀಡುತ್ತದೆ. ಕವನದ ವಸ್ತು ಇಳಿವಯಸ್ಸಿನಲ್ಲಿ ಸೃಜನಶೀಲಶಕ್ತಿಯ ಅವನತಿ, ಅದರ ಬಗ್ಗೆ ವಿಷಾದ, ಅನಂತರ ಆ ಸ್ಥಿತಿಯ ಅನಿವಾರ್ಯತೆಯ ಸ್ವೀಕಾರ, ಕೊನೆಗೆ ತನ್ನ ಮಿತಿಯೊಳಗೇ ಸಾರ್ಥಕತೆಯನ್ನು ಕಂಡುಕೊಳ್ಳುವ ನಿರ್ಧಾರ. ಬಾಳೆಯಗಿಡ ಗೊನೆಯನ್ನು ಬಿಟ್ಟು - ಅಂದರೆ ತನ್ನ ಸವಿಯಾದ ಕೊಡುಗೆಯನ್ನು ನೀಡಿ ಸಾರ್ಥಕ್ಯವನ್ನು ಪಡೆದಿದೆ. ಆದರೆ ಅದು ಇನ್ನೊಮ್ಮೆ ಹಣ್ಣು ಬಿಡುವಂತಿಲ್ಲ. ಚಿಗುರುವಂತಿಲ್ಲ. ಜೀವಂತವಾಗಿದ್ದರೂ ಬೆಳವಣಿಗೆ, ಸೃಜನಶೀಲತೆ ಅಸಾಧ್ಯವಾಗಿದೆ, ಸ್ಥಗಿತಗೊಂಡಿದೆ. ಅದು ತನ್ನ ಕರ್ತವ್ಯವನ್ನು ಮಾಡಿ ಮುಗಿಸಿರುವುದರಿಂದ ಒಂದು ರೀತಿಯಲ್ಲಿ ಜೀವನ್ಮುಕ್ತ ಸ್ಥಿತಿಯಲ್ಲಿದೆ. ಆದರೆ ಅದು ಹಳಸುತ್ತಲೂ ಇದೆ ಎನ್ನುವುದೂ ಅಷ್ಟೇ ಸತ್ಯ. ಹೀಗೆ ಒಂದು ಅನುಭವವನ್ನು ಸಮಗ್ರವಾಗಿ, ಪರಿಣಾಮಕಾರಿಯಾಗಿ ಈ ಪ್ರತಿಮೆ ವ್ಯಕ್ತಪಡಿಸುತ್ತದೆ.

ಅಡಿಗರ ಪ್ರತಿಮಾಲೋಕದ ವ್ಯಾಪ್ತಿ ತುಂಬ ವಿಶಾಲವಾದದ್ದು. ವೇದ, ಪುರಾಣಗಳಿಂದ ಹಿಡಿದು ಆಧುನಿಕ ಜೀವನದವರೆಗೆ ವ್ಯಾಪಿಸಿದೆ. ರಾಮ, ಕೃಷ್ಣ, ದುರ್ಯೋಧನ, ಪರಶುರಾಮರಂತೆ ಈಡಿಪಸ್, ಕ್ಯಾಲಿಬನ್, ನೆಹರೂ, ಇಂದಿರಾಗಾಂಧಿ, ಗವಾಸ್ಕರ್, ಬಚ್ಚನ್, ರಾಜ್‌ಕುಮಾರರೂ ಅಲ್ಲಿ ಪ್ರತ್ಯಕ್ಷವಾಗುತ್ತಾರೆ. ಭೂಗೋಲ, ಇತಿಹಾಸಗಳ ಅಂಶಗಳೂ ಕತ್ತಲೆ, ಬೆಳಕುಗಳೂ ಹೊಸ ಅರ್ಥವನ್ನು ಹೊತ್ತು ಕಣ್ಣೆದುರು ಬಂದು ಕುಣಿಯುತ್ತವೆ. ಸಂಕೀರ್ಣ ಅನುಭವಗಳು ಯಥಾವತ್ತಾಗಿ ಶಬ್ದರೂಪದಲ್ಲಿ ಸಾಕ್ಷಾತ್ಕಾರಗೊಳ್ಳುವಂತಾಗುತ್ತದೆ. ಕೆಲವು ಉದಾಹರಣೆಗಳಿಂದ ಇದನ್ನು ಪರಿಶೀಲಿಸಬಹುದು.

'ನಡೆದುಬಂದದಾರಿ' ಸಂಕಲನದ 'ಇಂದು ನಮ್ಮೀ ನಾಡು' ಎಂಬ ಕವನದಲ್ಲಿ ಒಂದಾನೊಂದು ಕಾಲದಲ್ಲಿ ವೈಭವಯುತವಾಗಿ ಮೆರೆದಿದ್ದ ಭಾರತೀಯ ಸಂಸ್ಕೃತಿಯ ಇಂದಿನ ರೋಗಗ್ರಸ್ತ ಅವಸ್ಥೆಯನ್ನು, ಹಳೆಯ ದೇವಾಲಯದ ಪ್ರತಿಮೆಯ ಮುಖಾಂತರ, ಜಾತ್ರೆ ಮುಗಿದ ನಂತರದ ಶೂನ್ಯಸ್ಥಿತಿಯ ಮುಖಾಂತರ ಹೀಗೆ ಚಿತ್ರಿಸುತ್ತಾರೆ :

> ಉತ್ಸವದ ಮೂರ್ತಿ ರಥವಿಳಿದು ದೇವಾಲಯದ
> ಮೂಲೆಗತ್ತಲಿನಲ್ಲಿ ಮುಗ್ಗುತಿಹುದು
> ಬಾವಲಿಯ ಹಿಕ್ಕೆಗಾಗಿದೆ ಕುಕ್ಕೆ, ಇನ್ನೆಂದು
> ಜಾತ್ರೆ? ನಿಟ್ಟುಸಿರನ್ನು ಸೂಸುತಿಹುದು.

ಉತ್ಸವ ಮುಗಿದ ಮೇಲೆ ಮೂಲೆಗತ್ತಲಿನಲ್ಲಿ ಮುಗ್ಗುತ್ತಾ ಇನ್ನೊಂದು ಜಾತ್ರೆಗಾಗಿ ಕಾಯುತ್ತಿರುವ ಉತ್ಸವಮೂರ್ತಿ, ಕುಕ್ಕೆ (ಬುಟ್ಟಿ) ಯಾಗುವಷ್ಟು ದೇವಾಲಯದೊಳಗೆ ತುಂಬಿಕೊಂಡಿರುವ ಬಾವಲಿಗಳ ಹಿಕ್ಕೆ ಇವೆಲ್ಲವೂ ಸೇರಿ ಕವಿಯ ಅಶಯವನ್ನು ಕರಾರುವಾಕ್ಕಾಗಿ ವ್ಯಕ್ತಪಡಿಸುತ್ತವೆ.

'ಶರದ್ಗೀತ'ದ ಈ ಪ್ರಸಿದ್ಧ ಸಾಲುಗಳನ್ನು ನೋಡೋಣ :

> ಈ ಲೋಕ ಈಗ ಅಸ್ತವ್ಯಸ್ತ; ಗಡಿಯಾರ ಬಿಚ್ಚಿ
> ಯಂತ್ರೋಪಯಂತ್ರಗಳ ಚೆಲ್ಲಾಪಿಲ್ಲಿ ಚೆಲ್ಲಿ
> ಕೈಕಟ್ಟಿ ಕುಳಿತ ರಿಪೇರಿಯವನಂತೆ.
> ಯಾವ ತಿರುಗಣೆ ಮೊಳೆಯನೆಲ್ಲಿ ಹಾಕಲಿ? ಮತ್ತೆ ಈ
> ಸುರುಳಿ ತಂತಿಯನ್ನೆಲ್ಲಿ ತಿರುಕಲಿ?
> ಗಡಿಯಾರವಿದೆ, ಯಂತ್ರವಿದೆ, ಎಲ್ಲ ಇದೆ, ಇಲ್ಲ
> ಸಾವಯವ ಶಿಲ್ಪ ಸಮಗ್ರೀಕರಣ ಬಲ.

ಇಲ್ಲಿ ಸಾವಯವ ಶಿಲ್ಪ ಸಮಗ್ರೀಕರಣ ಬಲವಿಲ್ಲದ, ಅಸ್ತವ್ಯಸ್ತ ಜಗತ್ತಿನ ಚಿತ್ರ ಆಧುನಿಕ ಜೀವನದ ಪ್ರತಿಮೆಯಿಂದ ಕಣ್ಣಿಗೆ ಕಟ್ಟುವಂತೆ ವರ್ಣಿತವಾಗಿದೆ.

ಅಡಿಗರ ಮುಖ್ಯಕವನಗಳಲ್ಲಿ ಒಂದಾಗಿರುವ 'ಹಿಮಗಿರಿಯ ಕಂದರ' ಪ್ರತಿಮಾನಿಷ್ಠತೆಯ ದೃಷ್ಟಿಯಿಂದಲೂ ಅತ್ಯುತ್ತಮವಾಗಿದೆ. ಇಲ್ಲಿ ಆರಂಭದಲ್ಲಿ ಹೊಗೆ, ಬೆಂಕಿ, ಚಿತೆ, ಬಚ್ಚಲ ಹಂಡೆಯಲ್ಲಿ ಬೇಯುವ ಆಮೆ, ಬೆಂಕಿ, ಹೊಳೆ, ಅಗ್ನಿಕುಂಡವಾಗಿರುವ ಮೇಜು, ಖಾಂಡವವನ್ನು ತಿಂದು ತೇಗಿದ ಅಗ್ನಿ - ಹೀಗೆ ಸಾಲುಸಾಲಾಗಿ ಬೆಂಕಿಯ, ಬೇಗೆಯ, ವಿಧ್ವಂಸಕ ಶಕ್ತಿಯ ಪ್ರತಿಮೆಗಳು ದಟ್ಟವಾಗಿ ಬರುತ್ತವೆ. ಅನಂತರ 'ಗಟಾರದಂಚಿನಲ್ಲಿ ಹೊಟ್ಟೆ ಮೇಲಾಗಿ ಬಿದ್ದಿದ್ದ ಹಳಸುನಾಯಿ, ಕಾಗೆ ಕುಕ್ಕಿದ ಕಪ್ಪೆ, ಛತ್ರದ ಚರಂಡಿ ಬಳಿ ಹರಕು ಚಿಂದಿಯ ಕೆಳಗೆ ಸತ್ತುಬಿದ್ದ ಭಿಕ್ಷುಕ - ಇವು ಬಡಪಾಯಿ ಮನುಷ್ಯನ ದುರಂತ ಸ್ಥಿತಿಯನ್ನು ಹೃದ್ರಾವಕವಾಗಿ ಚಿತ್ರಿಸುತ್ತವೆ. ಅನಂತರದ ಭಾಗದಲ್ಲಿ ಸಾಲುಸಾಲಾಗಿ ಬರುವ - ತಣ್ಣಗೆ ಕೊರೆಯುವ ಇಳಿಜಾರು, ಹಿಮಹರ್ಮ್ಯ, ತಿಂಗಳಿನ (ಚಂದ್ರನ) ಹೋಳುಬೋದಿಗೆ, ಮಂಜುಗಡ್ಡೆಯ ಕಿಂಡಿ, ಕದ, ಜಂತಿ, ಹಾಲು ಖೋವದ ನೆಲಗಟ್ಟು, ಐಸ್‌ಕ್ರೀಮು, ಫ್ರುಟ್‌ಸಾಲಡ್‌ಗಳ ಪ್ರತಿಮೆಗಳು ಕವನದ ನಾಯಕ ಬಯಸುವ 'ತಂಪ'ನ್ನು ಸಂಕೇತಿಸುತ್ತವೆ. ಕಟ್ಟಕಡೆಗೆ ಬರುವ 'ಭಗ್ನಸೇತುವೆ'ಯ ಪ್ರತಿಮೆ ಐಂದ್ರಿಯ ಜೀವನಕ್ಕೂ ಆಧ್ಯಾತ್ಮಿಕ ಜೀವನಕ್ಕೂ ನಡುವೆ ಬಾಯ್ತೆರೆದಿರುವ ಕಂದಕಕ್ಕೆ ಇದ್ದ ಋಷಿನಿರ್ಮಿತ ಸೇತುವೆ ಮುರಿದು ಹೋಗಿರುವುದನ್ನು ಧ್ವನಿಸಿ ಕವನದ ಪರಾಕಾಷ್ಠೆಯನ್ನು ನಿರ್ಮಿಸುತ್ತದೆ. ಈ ಕವನದಲ್ಲಿ ಪ್ರತಿಮೆಗಳ ಸಮೂಹವೇ ಅನುಭವವನ್ನು ಪುನಃ ಸೃಷ್ಟಿಸುತ್ತದೆ.

'ಭೂಮಿಗೀತ'ದಲ್ಲಿ ಬರುವ ಮಲತಾಯಿ, ಕುಂತಿ ಕರ್ಣರ ಮುಖಾಮುಖಿ, ಉತ್ತಾನಪಾದನ ಸುರುಚಿ - ಇವರ ಬಗ್ಗೆ ಈಗಾಗಲೇ ಪರಿಶೀಲಿಸಿದ್ದೇವೆ. ಪ್ರಕೃತಿಯಲ್ಲಿ ನಿರಂತರವಾಗಿ ನಡೆಯುತ್ತಿರುವ ಸೃಷ್ಟಿ - ಲಯದ ಏಕಪ್ರಕಾರವಾದ ಪ್ರಕ್ರಿಯೆಯನ್ನು ವ್ಯಕ್ತಪಡಿಸುವ ಈ ಪ್ರತಿಮೆಗಳು ಕುತೂಹಲಕಾರಿಯಾಗಿವೆ.

ಡಾಕ್ಟರರು ನರ್ಸುಗಳು ಹೆರಿಗೆ ಮನೆಯೊಳ ಹೊರಗೆ
ಅವರ ಬೆನ್ನಿಗೆ ಸದಾ ನಾಲ್ಕು ಮಂದಿ
ತೊಟ್ಟಿಲಂಗಡಿಯಲ್ಲಿ ಬೊಂಬು ತುಂಬಾ ಅಗ್ಗ
ಜಾತಕರ್ಮಾದಿ ನಿರತ ಈ ಪುರೋಹಿತ ಭಟ್ಟ
ಅಪರ ಪ್ರಯೋಗದಲಿ ಪಾರಂಗತ.

ಇಲ್ಲಿ ಡಾಕ್ಟರು ನರ್ಸುಗಳು, ಹೆರಿಗೆಮನೆ ಹುಟ್ಟನ್ನೂ, ನಾಲ್ಕುಮಂದಿ (ಹೆಣ ಹೊರುವವರು) ಸಾವನ್ನೂ, ತೊಟ್ಟಿಲಂಗಡಿ ಪುನಃ ಹುಟ್ಟನ್ನೂ, ಅಪರಕ್ರಿಯೆಯಲ್ಲಿ ಪಾರಂಗತ ಭಟ್ಟ ಸಾವನ್ನೂ ಸಂಕೇತಿಸುತ್ತವೆ. ಹಾಗೆ ಕವನದ ಕೊನೆಗೆ ಬರುವ 'ಹಳವನ ಹೆಗಲ ಮೇಲೆ ಕುರುಡ ಕೂತಿದ್ದಾನೆ, ದಾರಿ ಸಾಗುವುದೆಂತೂ ನೋಡಬೇಕು' ಬದುಕಿನ ಪಯಣದ ಅನಿಶ್ಚಿತತೆಯನ್ನೂ, ಅವ್ಯವಸ್ಥೆಯನ್ನೂ, ನಿರೀಕ್ಷೆಯ ಆತಂಕವನ್ನೂ ನಿಚ್ಚಳವಾಗಿ ಧ್ವನಿಸುತ್ತದೆ.

'ಪ್ರಾರ್ಥನೆ' ಕವನ ಪ್ರತಿಮೆಗಳ ಸಮೃದ್ಧಿಗೆ, ಸಾರ್ಥಕತೆಗೆ ಉತ್ತಮ ನಿದರ್ಶನವಾಗಿದೆ. ಇದರಲ್ಲಿ ಮೊದಲು ಬರುವ ಹೊಗಳುಭಟ್ಟ, ಹೆಂಬೇಡಿ, ಸಂಧಿವಾತ ಪೀಡಿತ, ಜಿಗಣೆಗಳು ಸ್ವಾಭಿಮಾನರಹಿತ ದಾಸ್ಯಬುದ್ಧಿಯನ್ನು, ಸಂಕೇತಿಸಿದರೆ, ಬಗ್ಗಲಾರದ ಬೊಜ್ಜು, ಕೊಬ್ಬಿದ ಹುಂಜ - ಇವು ಸೊಕ್ಕಿನ, ಅಹಂಕಾರದ, ಅವಿನಯದ ಸಂಕೇತವಾಗುತ್ತವೆ. ಹಡಗು, ಬಂದರು, ಆಮದು - ರಫ್ತು, ಬದುಕಿನ ಚಲನಶೀಲತೆಯ ಕೊಡುಕೊಳ್ಳುವಿಕೆಯ ವ್ಯವಹಾರವನ್ನು ಸೂಚಿಸುತ್ತದೆ. ಕೊನೆಯಲ್ಲಿ ಬರುವ ಅರೆಹೊರೆದ ಮೊಟ್ಟೆ - ವಿನತಾ ಪುತ್ರರ ಪ್ರತಿಮೆ ಪರಿಪೂರ್ಣತೆಯ ಅವಿಷ್ಕಾರಕ್ಕಾಗಿ ಕಾಯಬೇಕಾದ ಅಗತ್ಯವನ್ನು ಸೂಚಿಸುತ್ತದೆ.

ಅಡಿಗರು ನಮ್ಮ ಧಾರ್ಮಿಕ, ಸಾಂಸ್ಕೃತಿಕ ಪರಂಪರೆಯಿಂದ ಪ್ರತಿಮೆಗಳನ್ನು ಅಗೆದು ತೆಗೆದು, ಸುಟ್ಟು ಸೋಸಿ ಅವನ್ನು ಆಧುನಿಕ ಅವಶ್ಯಕತೆಗೆ ತಕ್ಕಂತೆ ಬಳಸಿಕೊಳ್ಳುವ ಅಪರಂಜಿ ವಿದ್ಯೆಯಲ್ಲಿ ಅನನ್ಯರು. ನಮ್ಮ ಆಧುನಿಕ ಕವಿಗಳು ಪುರಾಣದ ಪಾತ್ರಗಳನ್ನು, ಸನ್ನಿವೇಶಗಳನ್ನು ಬಳಸಿಕೊಳ್ಳುವುದೇನೂ ಹೊಸತಲ್ಲ. ಅವರಲ್ಲನೇಕರು ಅವುಗಳ ಮೂಲರೂಪವನ್ನು ಬದಲಾಯಿಸಿ ಅಥವಾ ಅದಕ್ಕೊಂದು ತಿರುವನ್ನು ನೀಡಿ ಹೊಸ ಅರ್ಥಬರುವಂತೆ ಮಾಡುತ್ತಾರೆ. ಉದಾಹರಣೆಗೆ ಕುವೆಂಪುರವರು 'ರಾಮಾಯಣ ದರ್ಶನಂ'ದಲ್ಲಿ ಮಂಥರೆ, ವಾಲಿ ಮುಂತಾದ ಪಾತ್ರಗಳನ್ನು ಚಿತ್ರಿಸಿದ ರೀತಿಯನ್ನು ಗಮನಿಸಬಹುದು. ಅಡಿಗರು ಮೂಲರೂಪವನ್ನು ಬದಲಾಯಿಸದೇ ಹೊಸ ಅರ್ಥಗಳು ಸ್ಫುರಿಸುವಂತೆ ವಿಶಿಷ್ಟವಾಗಿ ಬಳಸುತ್ತಾರೆ. ಮೇಲೆ ಹೇಳಿದ ವಿನತಾಪುತ್ರ ಗರುಡನ ಪ್ರತಿಮೆಯಾಗಲೀ, 'ವರ್ಧಮಾನ' ಕವನದಲ್ಲಿ ಬರುವ ಹನುಮಂತನ ಪ್ರತಿಮೆಯಾಗಲಿ, ಸ್ವಯಂಪ್ರಭೆಯ ಪ್ರತಿಮೆಯಾಗಲಿ, 'ಭೂಮಿಗೀತ'ದಲ್ಲಿ ಬರುವ ಕೃಷ್ಣ, ಧೃತರಾಷ್ಟ್ರ, ವಿಶ್ವಾಮಿತ್ರ, ತ್ರಿಶಂಕು, ಕರ್ಣ, ಕುಂತಿಯರ ಪ್ರತಿಮೆಯಾಗಲೀ ಈ ಮಾತನ್ನು ಸಮರ್ಥಿಸುತ್ತವೆ.

ಯಜ್ಞ ಹಾಗೂ ವ್ರತ - ಇವಕ್ಕೆ ಸಂಬಂಧಿಸಿದ ಅನೇಕ ಪ್ರತಿಮೆಗಳನ್ನು ಅಡಿಗರ ಕಾವ್ಯದಲ್ಲಿ ಆಗಾಗ ಕಾಣಬಹುದು. ಯಜ್ಞ, ಅದರ ಅಂಗಗಳಾದ ಅಧ್ವರ್ಯು, ಹೋತೃ, ಉದ್ಗಾತೃ, ಬ್ರಹ್ಮ, ಯೂಪಸ್ತಂಭ, ಬಲಿಪಶು, ವಪೆ, ವ್ರತ, ಉದ್ಯಾಪನ, ಜಾತಕರ್ಮ, ಪುತ್ರಕಾಮೇಷ್ಟಿ ಇತ್ಯಾದಿಗಳನ್ನು ಇದಕ್ಕೆ ಉದಾಹರಿಸಬಹುದು ಹಾಗೆಯೇ ಜೀವನ್ಮುಕ್ತ, ಅವಧೂತ, ಅಂಧಂತಮಸ್ಸು, ದ್ವೈತಾದ್ವೈತ, ನೃಷ್ಕರ್ಮ್ಯಸಿದ್ಧಿ ಮುಂತಾದ ವೇದಾಂತದ ಪರಿಕಲ್ಪನೆಗಳೂ ಪ್ರತಿಮೆಗಳಾಗಿ ಬಳಕೆಯಾಗಿವೆ. ಆದರೆ ಇವನ್ನು ದುಡಿಸಿಕೊಂಡಿರುವುದು ಪರಂಪರೆಯ ಮೌಲ್ಯಗಳನ್ನು ಎತ್ತಿಹಿಡಿಯುವುದಕ್ಕಾಗಿ ಅಲ್ಲ ಎನ್ನುವುದನ್ನು ಗಮನಿಸಬೇಕು. ಉದಾಹರಣೆಗೆ 'ಸುಲಿಗೆ ಎಂಬ ಯಾಗ' ಎಂಬ ಕವನದಲ್ಲಿ ಯಜ್ಞದ ಪ್ರತಿಮೆಯನ್ನು ಜನಸಾಮಾನ್ಯರನ್ನು ದೀನದಲಿತರನ್ನು ಬಲಿಪಶುವಾಗಿಸುವ ಶೋಷಣೆಯನ್ನು ಚಿತ್ರಿಸಲು ಬಳಸಲಾಗಿದೆ. 'ನೈಷ್ಕರ್ಮ್ಯಸಿದ್ಧಿ'ಯನ್ನು ಕೆಲಸ ಮಾಡದೆ, ಸಂಬಳ ತೆಗೆದುಕೊಂಡು ಆರಾಮವಾಗಿರುವ ನೌಕರಶಾಹಿಯ ಮನೋವೃತ್ತಿಯನ್ನು ವ್ಯಂಗ್ಯವಾಗಿ ಟೀಕಿಸಲು ಬಳಸಲಾಗಿದೆ.

ಇದೇ ರೀತಿ 'ಶ್ರೀರಾಮನವಮಿಯ ದಿವಸ'ದಲ್ಲಿ ಸೀತೆಯ ಅಗ್ನಿಪರೀಕ್ಷೆಯ ಪ್ರಸಂಗವನ್ನು 'ಸುಟ್ಟಲ್ಲದೆ ಮುಟ್ಟೆನೆಂಬ ಉಡಾಫೆ' - ಅಂದರೆ 'ವರ್ತಮಾನದ ವಾಸ್ತವದಲ್ಲಿ ಸುಟ್ಟು ಶುದ್ಧವಾದುದಷ್ಟೇ ಸ್ವೀಕಾರಾರ್ಹ' ಎಂಬ ಧೀರನಿಲುವಿಗೆ ಪ್ರತೀಕವಾಗಿಸಲಾಗಿದೆ. ಈ ಕವನದಲ್ಲಿ ಬರುವ 'ಕತ್ತಲೆಗೆ ಹತ್ತೆ ತಲೆ', 'ಹುತ್ತಗಟ್ಟಿದೆ ಚಿತ್ತ' ಮುಂತಾದ ಪ್ರತಿಮೆಗಳೂ ಪ್ರತಿಮಾಸೃಷ್ಟಿಯ ಪ್ರಬುದ್ಧ ಕಲೆಗಾರಿಕೆಗೆ ಸಾಕ್ಷಿ. 'ಡೊಂಕುಬಾಲಕ್ಕೆ ಚಿನ್ನದ ನಳಿಗೆ' ಎಂಬ ಕವನದಲ್ಲಿ ಹಿಂಸೆ - ಅಹಿಂಸೆಯ ಮೂಲಭೂತ ಪ್ರಶ್ನೆಯನ್ನು ವಿಶ್ಲೇಷಿಸಲು, ಪರಶುರಾಮ ನಡೆಸಿದ ಹಿಂಸಾಕಾಂಡವನ್ನು ಹೀಗೆ ಬಳಸಿಕೊಂಡಿದ್ದಾರೆ :

> ಹಿಂಸೆಕೂಡದು, ಹಿಂಸೆಬೇಕು. ಶಸ್ತ್ರಕ್ರಿಯಾನಿರತ
> ಪರಶು ಮನೆಯಲಿ ಆರದ ಸಾಣೆಯಲ್ಲಿ
> ಕಾರ್ತವೀರ್ಯನ ಭಿನ್ನಭಿನ್ನ ಬಾಹುಸಹಸ್ರದ ವಿಪಾಕ
> ತಪೋವನ ಸಹಸ್ರದಾರೋಗ್ಯದ ಶಕ

ಸಾಮಾನ್ಯ ಪರಿಸ್ಥಿತಿಯಲ್ಲಿ ಹಿಂಸೆ ಮಾಡಬಾರದು. ಆದರೆ ಶಸ್ತ್ರಕ್ರಿಯೆ ಮಾಡಬೇಕಾದಂಥ ಪರಿಸ್ಥಿತಿಯಲ್ಲಿ ಹಿಂಸೆ ಅನಿವಾರ್ಯ. ಕಾರ್ತವೀರ್ಯನಂತೆ ಬದುಕಿನ ಎಲ್ಲ ಕ್ಷೇತ್ರಗಳಲ್ಲಿಯೂ ಹಸ್ತಕ್ಷೇಪ ಮಾಡುವ ಸಹಸ್ರಬಾಹುವಾಗಿರುವ ದುಷ್ಟ ರಾಜಕಾರಣಿಯನ್ನು ನಿಗ್ರಹಿಸದಿದ್ದರೆ ವಿದ್ಯೆ, ಅಧ್ಯಯನ, ತಪಸ್ಸುಗಳ ತಾಣವಾಗಿರುವ ತಪೋವನಗಳ ಆರೋಗ್ಯ ಉಳಿಯಲಾರದು. ಈ ದೃಷ್ಟಿಯಿಂದ ಅದು ಹಿಂಸೆಯಾದರೂ ಹಿಂಸೆಯಲ್ಲ. ಶಸ್ತ್ರಕ್ರಿಯೆ. ಅದು ಕೊಲ್ಲುವುದಕ್ಕಾಗಿ ಇರುವುದಲ್ಲ ಸಮಾಜದ ಆರೋಗ್ಯವನ್ನು ಉಳಿಸುವುದಕ್ಕಾಗಿರುವುದು - ಎಂಬುದನ್ನು ಈ ಪ್ರತಿಮೆ ಹೇಳುತ್ತದೆ.

ಅಡಿಗರು ಕೇವಲ ಪುರಾಣಗಳಲ್ಲಿಯೇ ಆಸಕ್ತರಲ್ಲ. ಅಧುನಿಕ ಜೀವನದಿಂದಲೂ ಅವರು ಪ್ರತಿಮೆಗಳನ್ನು ಆಯ್ದುಕೊಂಡಿದ್ದಾರೆ. ಕತ್ತಲೆ, ಬೆಳಕುಗಳು ಅವರ ಅನೇಕ ಕವನಗಳಲ್ಲಿ ಪ್ರತಿಮೆಯಾಗಿ ಬಳಕೆಯಾಗಿದೆ. 'ಶ್ರೀರಾಮನವಮಿಯ ದಿವಸ'ದಲ್ಲಿ ಬರುವ 'ಕತ್ತಲೆಗೆ ಹತ್ತ ತಲೆ?' ಎಂಬ ಸಾಲನ್ನು ನೆನಪಿಸಿಕೊಳ್ಳಬಹುದು. 'ಸಣ್ಣದೀಪ'ದ ಪ್ರತಿಮೆ ಸಾಮಾನ್ಯ ಮನುಷ್ಯನ ಪ್ರತೀಕವಾಗಿ, 'ಮಗು' ಮುಗ್ಧ ಮಾನವೀಯತೆಯ ಪ್ರತೀಕವಾಗಿ ಬಳಕೆಯಾಗಿವೆ. 'ಆಗ ಬೋಟ' ಕವನದಲ್ಲಿ ಸ್ಥಗಿತಗೊಂಡ ಸಂಸ್ಕೃತಿಗೆ 'ಹತ್ತು ಶತಮಾನದ ಹಿಂದೆ ಲಂಗರಿಕ್ಕಿ ನಿಲ್ಲಿಸಿದ್ದ ಹಡಗು, ಯಂತ್ರ ನಿಸ್ತಂತ್ರವಾಗಿ ನಿಂತಲ್ಲಿಯೇ ತುಕ್ಕು ಹಿಡಿಯುತ್ತಿರುವುದು' ಪ್ರತಿಮೆಯಾಗಿದೆ. ಇದೇ ರೀತಿ ಆಮದು, ರಫ್ತು, ಹಡಗು, ಕಡಲು, ದ್ವೀಪ, ಸೆರೆಮನೆ, ದಿಕ್ಸೂಚಿ, ನಕ್ಷೆ, ರಾಕೆಟ್ಟು, ಗಡಿಯಾರ, ಅಕ್ಷಾಂಶ, ರೇಖಾಂಶ ಮುಂತಾದ ನೂರಾರು ಆಧುನಿಕ ಜೀವನದ ವಸ್ತುಗಳೂ ಪ್ರತಿಮೆಗಳಾಗಿ ವಿಜೃಂಭಿಸಿವೆ. 'ದೆಹಲಿಯಲ್ಲಿ' ಎಂಬ ಕವನದ ಈ ಭಾಗವನ್ನು ನೋಡೋಣ :

> ಮಾಡಬೇಕಾದ್ದೆಷ್ಟೊ ಇದೆ....
> ಆರಾಧಿಸುವುದು ದೀಪಹಚ್ಚಿಟ್ಟು ಮರೆಯಾದವರ
> ತನ್ನ ಕಿರುಹಣತೆಗಳನ್ನು ಬೀಸುಗಾಳಿಯ ಮರೆಯೊಳಿಟ್ಟು
> ಅರಯ್ಯುವುದು, ಮಂಜು ಮಂಜಿನ ಮಧ್ಯೆ ಬಿದ್ದ ಕಣ್ಣನ್ನೆತ್ತಿ
> ಶಿಖರಗಳ ಮತ್ತೊಮ್ಮೆ ಗುರುತಿಸುವುದು
> ಬದುಕ ಬಯಸುವ ಮೊಳಕೆ ಹೀಚುಮರಗಳ ಸುತ್ತ
> ಮುಳ್ಳುಕಂಟಿಯ ಬೇಲಿಕಟ್ಟಿ ಹಾಲೆರೆಯುವುದು.

ಇಲ್ಲಿ 'ಆರಾಧಿಸುವುದು ದೀಪಹಚ್ಚಿಟ್ಟು ಮರೆಯಾದವರ' ಎಂಬುದು ಜ್ಞಾನದೀಪವನ್ನು ಹಚ್ಚಿಟ್ಟು ಕಣ್ಮರೆಯಾದವರನ್ನು ಆರಾಧಿಸಬೇಕು ಎಂದು ಹೇಳುತ್ತದೆ. 'ತನ್ನ ಕಿರುಹಣತೆಗಳ ಬೀಸುಗಾಳಿಯ ಮರೆಯೊಳಿಟ್ಟು ಆರಯ್ಯುವುದು' ಎಂಬ ಸಾಲು ಪ್ರತಿಯೊಬ್ಬನೂ ತನ್ನ ವ್ಯಕ್ತಿತ್ವದ ವೈಶಿಷ್ಟ್ಯಗಳನ್ನು ಉಳಸಿಕೊಳ್ಳಬೇಕು, ಯಾವುದೇ ಜನಪ್ರಿಯ ಇಸಮ್ಮುಗಳಿಗೆ, ಫ್ಯಾಶನ್ನುಗಳಿಗೆ ಬಲಿಯಾಗಿ ತನ್ನ ಸ್ವಂತಿಕೆಯನ್ನು ಕಳೆದುಕೊಳ್ಳಬಾರದೆಂದು ಸೂಚಿಸುತ್ತದೆ.

ಮಂಜು ಮಂಜಿನ ಮಧ್ಯೆ ಬಿದ್ದ ಕಣ್ಣನ್ನೆತ್ತಿ ಶಿಖರಗಳ ಮತ್ತೊಮ್ಮೆ ಗುರುತಿಸುವುದು ಎಂಬ ಮಾತು ಶ್ರೇಷ್ಠತೆಯ ಕಲ್ಪನೆಯನ್ನು ಸ್ಪಷ್ಟವಾಗಿರಿಸಿಕೊಳ್ಳುವ ಅಗತ್ಯವನ್ನು ತಿಳಿಸುತ್ತದೆ. ಇಂದು ಯಾವುದು ಶ್ರೇಷ್ಠ, ಯಾವುದಲ್ಲ ಎಂಬ ಬಗ್ಗೆ ಎಲ್ಲಾ ರಂಗಗಳಲ್ಲೂ ಗೊಂದಲವಿದೆ. 'ಶ್ರೇಷ್ಠತೆಯ ಕಲ್ಪನೆ' ಎಂಬ ಲೇಖನದಲ್ಲಿ ಅಡಿಗರು (ಸಮಗ್ರ ಗದ್ಯ : ಪು. ೨೭೫-೧೯೮) ಈ ಕುರಿತು ಹೀಗೆ ಹೇಳುತ್ತಾರೆ :

"....ಈ ಗೊಂದಲದ ನಡುವೆಯೇ ಸುಸ್ಥಿರವೂ, ಸ್ಪಷ್ಟವೂ ಆದೊಂದು ಆಶ್ರಯಸ್ಥಾನವನ್ನು ಪ್ರತಿಯೊಬ್ಬನೂ ಹುಡುಕುತ್ತಲೇ ಇರುತ್ತಾನೆ. ಈ ಹುಡುಕಾಟವೇ ಮೌಲ್ಯಸಂಶೋಧನೆ. ಈ ಸಂಶೋಧನೆಯಿಂದ ಲಭಿಸುವಂಥಾದ್ದೇ ಶ್ರೇಷ್ಠತೆಯ ಕಲ್ಪನೆ. ದೃಢವಾದ ಅಂಥ ಕಲ್ಪನೆ ದೊರೆತಾಗ, ಈ ಜಗತ್ತಿನ ಎಲ್ಲ ವಿದ್ಯಮಾನಗಳಿಗೂ ಅದರದರ ಸ್ಥಾನವನ್ನು ಗುರುತಿಸುವುದು ಸಾಧ್ಯವಾಗಿ ಗುರಿಯ ಬಗ್ಗೆ ನಿಚ್ಚಳವಾದ ಅರಿವು ಮೂಡುತ್ತದೆ. ಶತಕಡಾದ ಒಂದು ಕಲ್ಪನೆ ಇಲ್ಲದಿದ್ದರೆ ಉತ್ತರ ಪತ್ರಿಕೆಗಳ ಮೌಲ್ಯ ನಿರ್ಣಯ ಹೇಗೆ ಅವಶ್ಯಕವಾಗುವುದೋ ಹಾಗೆ ಶ್ರೇಷ್ಠತೆಯ ಕಲ್ಪನೆ ಇಲ್ಲವಾದರೆ ಯಾವ ಮನುಷ್ಯ ಉತ್ತಮ, ಯಾವ ಕೃತಿ ಶ್ರೇಷ್ಠ ಎಂಬ ನಿರ್ಣಯವೇ ಅಸಾಧ್ಯವಾಗಿ ನಮ್ಮ ವ್ಯವಹಾರವೆಲ್ಲವೂ ಅರ್ಥಹೀನವಾಗಿ ಹೋಗುತ್ತದೆ...

''ಶ್ರೇಷ್ಠತೆಯ ಈ ಕಲ್ಪನೆಯ ಕಾರ್ಯಸಾಧನವಾಗಿ ಇರುವಂಥದು. ಇದು ಅಧಮ, ಇದು ಮಧ್ಯಮ, ಇದು ಉತ್ತಮ ಎಂಬ ಮೌಲ್ಯ ವಿವೇಕ. ಯಾವ ಸಮಾಜದಲ್ಲಿ ಈ ವಿವೇಕ ನಿಚ್ಚಳವಾಗಿರುತ್ತದೋ ಅಲ್ಲಿ ಮಾತ್ರ ನಿಜವಾದ ಅಭಿವೃದ್ಧಿ ಸಾಧ್ಯವಾಗುತ್ತದೆ''.

ಮೇಲೆ ಹೇಳಿದ್ದನ್ನೇ ಅಡಿಗರು ಕೇವಲ ಒಂದು ಸಾಲಿನ - 'ಮಂಜು ಮೇಜಿನ ಮೇಲೆ ಬಿದ್ದ ಕಣ್ಣನ್ಸೆತ್ತಿ ಶಿಖರಗಳ ಮತ್ತೊಮ್ಮೆ ಗುರುತಿಸುವುದು' ಎಂಬ ಪ್ರತಿಮೆಯ ಮುಖಾಂತರ ಹೇಳಿದ್ದಾರೆ. 'ಗೊಂದಲದ ಮಂಜನ್ನು ಭೇದಿಸಿ, ಶ್ರೇಷ್ಠತೆಯ ಶಿಖರಗಳನ್ನು ಗುರುತಿಸಬೇಕು' ಎಂದು ಇದನ್ನು ಇನ್ನೊಂದು ರೀತಿಯಲ್ಲಿ ಸಂಕ್ಷೇಪಿಸಬಹುದು. ಈ ಪ್ರತಿಮೆಯ ಸೊಗಸು, ಸೂಕ್ತತೆ, ಧ್ವನಿಶಕ್ತಿ ಸ್ವಯಂವೇದ್ಯವಾಗಿವೆ.

ಹಾಗೆ 'ಬದುಕ ಬಯಸುವ ಮೊಳಕೆ ಹೀಚುಮರಿಗಳ ಸುತ್ತ ಮುಳ್ಳುಕಂಟಿಯ ಬೇಲಿಕಟ್ಟಿ ಹಾಲೆರೆಯುವುದು' ಎಂಬ ಪ್ರತಿಮೆ ಹೊಸದಾಗಿ ಹುಟ್ಟಿ ಬೆಳೆಯುತ್ತಿರುವ ಕಿರಿಯರಿಗೆ ರಕ್ಷಣೆ, ಪ್ರೋತ್ಸಾಹ, ಪೋಷಣೆಯನ್ನು ನೀಡಬೇಕೆಂಬುದನ್ನು ಧ್ವನಿಸುತ್ತದೆ. ಈ ಭಾಗದಲ್ಲಿರುವ ಇನ್ನೂ ಅನೇಕ ಪ್ರತಿಮೆಗಳನ್ನೂ ಇಂಥದೇ ಧ್ವನಿ ಶ್ರೀಮಂತಿಕೆಯನ್ನು ಕಾಣಬಹುದು.

ಅಡಿಗರ ಕಾವ್ಯಧೋರಣೆ ಅತ್ಯಂತ ಗಂಭೀರವಾದದ್ದು. ಯಾವ ಕಾವ್ಯವಸ್ತುವನ್ನು ಅವರು ನಿರ್ವಹಿಸಿದರೂ, ಯಾವ ಪ್ರತಿಮೆಯನ್ನೇ ಅವರು ಬಳಸಿದರೂ ಅದರಲ್ಲಿ ಒಂದು ಗಂಭೀರವಾದ ಮೂಲಭೂತವಾದ ತಥ್ಯ ಇರುತ್ತದೆ. 'ಪ್ರಾರ್ಥನೆ' ಕಾವ್ಯದಲ್ಲಿ ಬರುವ ಈ ಸಾಲುಗಳನ್ನು ನೋಡೋಣ :

> ಕ್ಷಣದ ಸಾರ್ಥಕ ರತಿಗೆ, ವರ್ಷವರ್ಷಗಳ
> ಶತಮಾನಗಳ ವಿಕೃತ ರತಿ, ವಿರತಿ ವಿಷಮ ರತಿ

ಇವು ಅಡಿಗರ ಕಾವ್ಯದ ಅತ್ಯುತ್ತಮ ಸಾಲುಗಳಲ್ಲಿ ಬರುವಂಥವು. ವೇದಾಂತದಲ್ಲಿ ಬರುವ 'ಮಹಾವಾಕ್ಯ'ಗಳಂತೆ ಅರ್ಥದ ಧ್ವನಿಯ ರಾಶಿಯನ್ನೇ ಇದು ಹೊತ್ತುಕೊಂಡಿದೆ. ಇದು ಲೈಂಗಿಕ ಪ್ರತಿಮೆಯೇ ಆದರೂ ಇಲ್ಲಿ ನಿಜವಾಗಿ ವ್ಯಕ್ತಪಡಿಸಿರುವುದು, ಧ್ವನಿಸಿರುವುದು ಅದನ್ನು ಮೀರಿದ ನಿತ್ಯಸತ್ಯಗಳನ್ನು. ಒಂದು ಶ್ರೇಷ್ಠ ಸಾಧನೆಯಾಗಬೇಕಾದರೆ ಎಷ್ಟೆಲ್ಲ ಅಪರಿಪೂರ್ಣ ಅಸಮರ್ಪಕ ಯತ್ನಗಳು, ಸೋಲುಗಳು, ನಿಷ್ಕ್ರಿಯಾವಸ್ಥೆಗಳು ಹಿನ್ನೆಲೆಯಲ್ಲಿರಲು ಸಾಧ್ಯ; ಹೀಗೆ ಅವೆಲ್ಲವನ್ನೂ ದಾಟಿದ ನಂತರವೇ ಅದು ಸಾಧ್ಯವಾಗುತ್ತದೆ ಎನ್ನುವುದನ್ನು ಈ ಪ್ರತಿಮೆ ಅದ್ಭುತವಾದ ರೀತಿಯಲ್ಲಿ ಧ್ವನಿಸುತ್ತದೆ. 'ಕ್ಷಣದ ಸಾರ್ಥಕ ರತಿ' ಎಂಬ ಪದಪುಂಜ ಸಿದ್ಧಿಯ ಪರಾಕಾಷ್ಠೆಯ ಅನನ್ಯ ಅನುಭವವನ್ನು ನೀಡಿದರೆ ವರ್ಷವರ್ಷಗಳ, ಶತಮಾನಗಳ ಎಂಬ ಶಬ್ದಗಳು ವ್ಯಕ್ತಿಯ ಮಿತಿಯನ್ನು ಮೀರಿ ಇಡೀ ಸಮಾಜವನ್ನು, ದೇಶವನ್ನು, ಮಾನವ ಕುಲವನ್ನು ವ್ಯಾಪಿಸುತ್ತದೆ. ಇದು ಯಾವುದೇ ವಿಜ್ಞಾನಿಯ ಸಂಶೋಧನೆಯ ಸಾಧನೆಯಾಗಬಹುದು. ಒಬ್ಬ ಕಲಾವಿದನ ಸಾಧನೆಯಾಗಬಹುದು. ಒಂದು ದೇಶದ ಸಾಧನೆಯೂ ಆಗಬಹುದು. ಭಾರತ ೧೯೭೧ರಲ್ಲಿ ಬಾಂಗ್ಲಾ ಯುದ್ಧದಲ್ಲಿ ಸುಸ್ಪಷ್ಟವಾದ ವಿಜಯವನ್ನು ಸಾಧಿಸಿತು. ಶತ್ರುಗಳನ್ನು ನಿರ್ಣಾಯಕವಾಗಿ ಸೋಲಿಸಿ, ಸೆರೆಹಿಡಿದು ತಂದು ಗೆಲುವನ್ನು ಸಂಪೂರ್ಣಗೊಳಿಸಿತು. ಎರಡನೆಯ ಮಹಾಯುದ್ಧದ ನಂತರ ಅಂಥ ನಿರ್ಣಾಯಕ ರೀತಿಯಲ್ಲಿ ಸೋಲು ಅಥವಾ ಗೆಲುವು ಯಾವ ಯುದ್ಧದಲ್ಲಿಯೂ ಆದುದಿಲ್ಲ. ಕದನವಿರಾಮ, ಅನಂತರ ಸೇನೆಗಳ ಹಿಂತೆಗೆಯುವಿಕೆ - ಇಷ್ಟರಲ್ಲೇ ಯುದ್ಧಗಳು ಪರ್ಯವಸಾನವಾಗುತ್ತ ಬಂದಿವೆ. ಆದರೆ ಬಾಂಗ್ಲಾ ಯುದ್ಧದಲ್ಲಿ ಹಾಗಾಗಲಿಲ್ಲ. ಈ ದೇಶದ ಶತಮಾನಗಳ ಇತಿಹಾಸದಲ್ಲೇ ಇದೊಂದು 'ಕ್ಷಣದ ಸಾರ್ಥಕ ರತಿ' ಯಂಥ ಶಿಖರಾನುಭವ ಅಡಿಗರ ಈ ಪ್ರತಿಮೆಯನ್ನು ಈ ಸಂದರ್ಭದಲ್ಲಿಯೂ ಬಳಸಬಹುದಾಗಿದೆ. ಆದರೆ ವ್ಯಾಪ್ತಿ ಅಷ್ಟು ಆಳವೂ, ವಿಶಾಲವೂ ಆಗಿದೆ.

'ಭೂತ' ಕವನದಲ್ಲಿ ಬರುವ 'ಹೊನ್ನ ಕಾಯಿಸಿ ಹಿಡಿದು ಬಡಿದು ಇಷ್ಟದೇವತಾ ವಿಗ್ರಹಕ್ಕೊಗಿಸುವ ಅಸಲುಕಸಬು' ಅದರ ಹಿಂದಿನ ಭಾಗದಲ್ಲಿ ಬರುವ 'ಚಿನ್ನದ ಗೆರೆ' ಮುಂದೆ ಬರುವ 'ಬಂಗಾರ ಶಿಖರ' ಎಂಬ ಪ್ರತಿಮೆಗಳ ಸಾರ್ಥಕತೆಯ

ಕುರಿತು ಅನೇಕ ವಿಮರ್ಶಕರು ವಿಸ್ತಾರವಾಗಿ ಬರೆದಿದ್ದಾರೆ. ಇದೂ ಒಂದು 'ಮಹಾವಾಕ್ಯ'ದ ಅರ್ಥವ್ಯಾಪ್ತಿಯುಳ್ಳ ಮಹಾನ್ ಪ್ರತಿಮೆ. ಪರಂಪರೆಯ ಸತ್ವವನ್ನು ಸ್ವಪ್ರಯತ್ನದಿಂದ, ಸಾಧನೆಯಿಂದ ಪಡೆದುಕೊಂಡು ಅದನ್ನು ಆಧುನಿಕ ಜೀವನಕ್ಕೆ ಹೇಗೆ ಅನ್ವಯಿಸಬೇಕೆಂಬುದನ್ನು ಈ ಪ್ರತಿಮೆ ಅನ್ಯಾದೃಶವಾಗಿ ಹೇಳುತ್ತದೆ. ಇದು ಸಾಹಿತ್ಯಕ್ಕೆ ಮಾತ್ರವಲ್ಲ ಸಮಗ್ರ ಮಾನವ ಜೀವನದ ಎಲ್ಲ ಅಂಗಗಳಿಗೂ, ರಂಗಗಳಿಗೂ ಅನ್ವಯಿಸುವ ಮಾತಾಗುತ್ತದೆ.

'ಸಾಮಾನ್ಯನಂತೆ ಈ ನಾನು' ಎಂಬ ಕವನದಲ್ಲಿ ಅಡಿಗರು ಸಾಮಾನ್ಯ ಮನುಷ್ಯನ ಅಸಾಮಾನ್ಯ ಶಕ್ತಿಯನ್ನು 'ಒಡಕು ಲಾಟೀನೊಳಗೆ ಕರಕು ಬತ್ತಿಯಲುರಿವ ಸಣ್ಣ ದೀಪ'ದ ಮತ್ತು ''ಕಂಭದೊಳಗಿದ್ದ ಅಣು ನರಸಿಂಹ''ನ ಪ್ರತಿಮೆಗಳ ಮೂಲಕ ಪ್ರತಿಬಿಂಬಿಸುತ್ತಾರೆ. ದೀಪ ಸಣ್ಣದಾದರೂ ಅದು ಬೆಳಕನ್ನು ಬೀರುತ್ತದೆ. ಕಾವನ್ನು ಅಷ್ಟಿಷ್ಟು ನೀಡಬಲ್ಲುದು. ಅಣು ಅತ್ಯಂತ ಚಿಕ್ಕದಾಗಿದ್ದರೂ ಸ್ಫೋಟಗೊಂಡಾಗ ಅಪಾರ ಶಕ್ತಿಯಾಗಿ ವಿಜೃಂಭಿಸುತ್ತದೆ. ಅಂತೆಯೇ ಸಾಮಾನ್ಯ ಮನುಷ್ಯ. ಅವನಿಗೂ ವ್ಯಕ್ತಿತ್ವವಿದೆ, ಶಕ್ತಿ ಇದೆ, ಐಡೆಂಟಟಿ ಇದೆ ಎನ್ನುವುದನ್ನು ಈ ಪ್ರತಿಮೆಗಳ ಮುಖಾಂತರ ಅಡಿಗರು ಒತ್ತಿಹೇಳುತ್ತಾರೆ. ಇದನ್ನು ಅವರು ಬರೆದದ್ದು ಇಂದಿರಾ ಗಾಂಧಿಯವರು ತುರ್ತುಪರಿಸ್ಥಿತಿಯನ್ನು ಹೇರಿದ್ದ ಕಾಲದಲ್ಲಿ. ಅನಂತರ ಅದು ರದ್ದಾಗಿ ಸಾಮಾನ್ಯ ಜನ ಎಚ್ಚೆತ್ತು ತಮ್ಮ ಶಕ್ತಿಯನ್ನು ತೋರಿಸಿದಾಗ ಬರೆದ 'ಸ್ವಾತಂತ್ರ್ಯ ೧೯೭೭' ಎಂಬ ಕವನದಲ್ಲೂ ಈ ಪ್ರತಿಮೆ ಮತ್ತೊಂದು ರೂಪದಲ್ಲಿ ಹೀಗೆ ಕೆಲಸ ಮಾಡುತ್ತದೆ :

ಅಂತರಂಗದ ಹೊಸ್ತಿಲಲ್ಲಿ ಸಣ್ಣಗೆ ದೀಪ
ಬೆಳಗುತ್ತಲೇ ಇರಲಿ, ಗಾಳಿಯೊಂದಿಗೆ ಸರಸವಾಡುತ್ತ
ಯಾವುದೋ ಯಂತ್ರ ಎಲ್ಲಿಯೋ ಗೋಣಸುಗೆಟ್ಟು
ಬೀದಿಗಳಲ್ಲಿ ಕತ್ತಲಿನ ಕರಗ ನಡೆದಾಗಲೂ ಕೂಡ
ಇರಲಿ ಕೊನೆಯವರೆಗೂ ಈ ಕರಗುಬತ್ತಿಯ ಸ್ಫುರಣ

ಸಣ್ಣ ಮನುಷ್ಯನಿಗೆ, ಸಾಮಾನ್ಯ ಮನುಷ್ಯನಿಗೆ ಅಡಿಗರು ನೀಡಿದ ಅಸಾಮಾನ್ಯ ಗೌರವ ಇಲ್ಲಿ ವ್ಯಕ್ತವಾಗಿದೆ. ಬಲಪಂಥೀಯ ರಾಜಕೀಯ ಒಲವು ಅವರದೆಂಬ ಅಭಿಪ್ರಾಯ ಇದ್ದರೂ ಅವರದು ಮೂಲಭೂತ ಮಾನವೀಯ ಕಾಳಜಿ ಎನ್ನುವುದಕ್ಕೆ ಇದು ಸಾಕ್ಷಿಯಾಗಿದೆ.

ಅಡಿಗರು ಬಳಸುವ ಅನೇಕ ಪ್ರತಿಮೆಗಳು ಬಾಲ್ಯದ ನೆನಪಿನಿಂದ ಮೂಡಿದಂಥವು. ಅವುಗಳ ಹಿನ್ನೆಲೆ ತಿಳಿಯದಿದ್ದರೆ ಸಾರ್ಥಕತೆ ಸ್ಪಷ್ಟವಾಗುವುದಿಲ್ಲ. ಉದಾಹರಣೆಗೆ ತುರ್ತುಪರಿಸ್ಥಿತಿಯಲ್ಲಿ ಅವರು ಬರೆದ 'ಅಜ್ಞಾತವಾಸ' ಎಂಬ ಕವನವನ್ನು ಪರಿಶೀಲಿಸಬಹುದು. ನಮ್ಮ ಪ್ರಜಾಪ್ರಭುತ್ವದಲ್ಲಿ ಪ್ರಭುವಾಗಿರಬೇಕಾದ ಪ್ರಜೆ ತನ್ನ ಪ್ರತಿನಿಧಿಯಾಗಿ ಅಧಿಕಾರ ನಡೆಸುವ ರಾಜಕಾರಣಿಯ ಸೇವೆ ಮಾಡುವ ದಾಸ್ಯಸ್ಥಿತಿಗೆ ಬಂದಿದ್ದಾನೆ. ಈ ಸ್ಥಿತಿಯನ್ನು ಅಡಿಗರು ಯಕ್ಷಗಾನದ ವೇಷಭೂಷಣಗಳ ಪೆಟ್ಟಿಗೆ ಹೊರುವ ಕೂಲಿಗಳ ಪ್ರತಿಮೆಯ ಮುಖಾಂತರ ಬಣ್ಣಿಸುತ್ತಾರೆ :

ಎರಡನೆಯ ಪಂತಿ, ಹರಕೆಲೆ, ಅನ್ನದ ಗುಡ್ಡೆಯ ಮೇಲೆ
ಅರೆಸೌಟು ಸಾಂಬಾರು, ಹೊಟ್ಟೆ ತುಂಬಿದ್ದಷ್ಟೆ ಮುನಾಫೆ.
ಸಾಲದೇ? ಹಾಗೆ ನಾವೇನು ವೇಷಧಾರಿಗಳೆ?
ಕೆಲವು ಸಲ ರಂಗಸ್ಥಳದ ಮೇಲೆ, ಭಾಗವತರ ಹಿಂದೆ
ತೆರೆಹಿಡಿದು ನಿಲ್ಲುತ್ತೇವೆ. ಮುಖ್ಯವೇಷಗಳ ಮುಖಕ್ಕೆ
ರಾಳದುರಿ ಬೆಳಗಿ, ಸ್ವತಃ ನಿಷ್ಪ್ರಭರಾಗಿ ಕತ್ತಲಲ್ಲಿಳಿಯುವವರು
ಆದರೂ ಆಟದಲ್ಲೇ ನಿಂತು, ನಿಂತೇ ಬೆಳಗು ಮಾಡಿದವರು.

ಈ ಕೂಲಿಗಳಿಗೆ ಇನ್ನು ಒಂದು ಮುಖ್ಯ ಕೆಲಸವಿತ್ತು. ರೌದ್ರವೇಷಗಳು ರಂಗಸ್ಥಳ ಪ್ರವೇಶಿಸಿದಾಗ, ಅವರ ಮುಖದ ಮುಂದೆ ದೀವಟಿಗೆ ಹಿಡಿದು, ಅದರ ಜ್ವಾಲೆಗೆ ರಾಳದ ಪುಡಿ ಎರಚುವುದು. ಆಗ ಭಗ್ಗನೆ ಏಳುವ ಉಜ್ವಲ ಬೆಳಕಿನಲ್ಲಿ ಅವರ ಮುಖ ಬೆಳಗಿಸುವುದು. ಹಾಗೆ ಮಾಡುವಾಗ ತಮ್ಮ ಮುಖಕ್ಕೆ ಬೆಳಕು ಬೀಳದಂತೆ ಹಿಂದಕ್ಕೆ ಮುಖ ತಿರುಗಿಸುವುದೂ ಅಗತ್ಯ. ಈ ಪ್ರತಿಮೆಯನ್ನು ಅಡಿಗರು ಅತ್ಯಂತ ಅರ್ಥಪೂರ್ಣವಾಗಿ ಬಳಸಿದ್ದಾರೆ. ರಾಳದುರಿ ಬೆಳಗುವುದು ರೌದ್ರ, ರಾಕ್ಷಸ ವೇಷಗಳಿಗೆ ಮಾತ್ರ ಎಂಬುದೂ ಅರ್ಥಪೂರ್ಣವಾಗಿದೆ. ಪ್ರಜೆಗಳ ಹೆಸರಿನಲ್ಲಿ, ಪ್ರಜೆಗಳನ್ನೇ ಶೋಷಿಸುವ ದುಷ್ಟ ರಾಜಕಾರಣಿಯ ಮುಖವನ್ನು ಪ್ರಜೆಗಳೇ ಬೆಳಗಿಸುತ್ತಾ ತಾವು ಸ್ವತಃ ನಿಷ್ಪ್ರಭರಾಗಿ ಕತ್ತಲಲ್ಲಿಳಿಯುವುದು ನಮ್ಮ ನಾಡಿನ ಇಂದಿನ ಒಂದು ದುರಂತ. ಇದನ್ನು ಈ ಪ್ರತಿಮೆ ಎಷ್ಟು ಸೊಗಸಾಗಿ ವ್ಯಕ್ತಪಡಿಸುತ್ತದೆ ಎನ್ನುವುದರಲ್ಲಿ ಕಾಣುತ್ತೇವೆ.

ಒಟ್ಟಿನಲ್ಲಿ ಅಡಿಗರು ಪ್ರತಿಮಾವಿಧಾನದ ಎಲ್ಲ ಸಾಧ್ಯತೆಗಳನ್ನು ಸೂರೆಗೊಂಡು ಕಾವ್ಯಾನುಭವವನ್ನು ಹೊಸ ಎತ್ತರಕ್ಕೆ ತಲುಪಿಸಿದ್ದಾರೆ. ಅವರು ಸೃಷ್ಟಿಸಿರುವ ಪ್ರತಿಮೆಗಳಲ್ಲಿ ಅಪಾರ ಅಧ್ಯಯನ ಸಾಮಗ್ರಿ ಅಡಗಿದೆ.

●

ಕೆಳದಿ ಇತಿಹಾಸ ರಚನೆಯಲ್ಲಿ ಜಾನಪದದ ಪಾತ್ರ

ಡಾ. ಕೆಳದಿ ವೆಂಕಟೇಶ ಜೋಯಿಸ್

ಜಾನಪದದ ಸಾಹಿತ್ಯವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಸತ್ಯದ ಕಣಗಳನ್ನು ಕಾಣಬಹುದಾದರೂ ಇತಿಹಾಸದ ರಚನೆಯಲ್ಲಾಗಲಿ, ವ್ಯಾಖ್ಯಾನದಲ್ಲಿಯಾಗಲಿ ಅವು ಸಂಪೂರ್ಣ ವಿಶ್ವಾಸಾರ್ಹವಾಗಲಾರದು ಎಂಬ ಅಭಿಪ್ರಾಯವಿದೆ. ಆದಿಕಾಲದ ಭಾರತೀಯ ಇತಿಹಾಸದಲ್ಲಿ ಹಲವು ಐತಿಹ್ಯ ಪುರಾಣ ಕಥೆಗಳ ಉಲ್ಲೇಖವಿದೆ. ಬೇರಾವುದೇ ಸಾಕ್ಷಿ, ಆಧಾರಗಳಿಲ್ಲದ ಕಡೆಗಳಲ್ಲಿ ಇಂತಹ ಮೌಖಿಕ ಆಕರಗಳಿಂದ ಸಹಾಯವನ್ನು ಪಡೆಯುವುದಿದೆ. ಜಾನಪದ ಸಾಹಿತ್ಯದ ಸತ್ಯಾಸತ್ಯತೆ ಏನೇ ಇರಲಿ ಜನರ ನಡೆ ನುಡಿ ಜೀವನವನ್ನು ರೂಪಿಸುವಲ್ಲಿ ಅವು ಮಹತ್ವದ ಪಾತ್ರ ವಹಿಸಿದೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಆಯಾ ಪ್ರದೇಶದಲ್ಲಿ ಪ್ರಚಲಿತವಾಗಿರುವ ಜಾನಪದ ಸಾಹಿತ್ಯ, ಸ್ಥಳಪುರಾಣ ಇವುಗಳ ಅಧ್ಯಯನವು ಜನರ ಜೀವನದಲ್ಲಿ ಶ್ರೇಷ್ಠ ಸಾಂಸ್ಕೃತಿಕ ಅಂಶಗಳ ಹೊಂದಾಣಿಕೆ ಇರುವುದನ್ನು ಮನಗಾಣಿಸುತ್ತದೆ.

ಕರ್ನಾಟಕದ ರಾಜಕೀಯ ಇತಿಹಾಸದ ಪ್ರಾರಂಭವಾದುದು ಕ್ರಿ.ಶ. ೨ನೇ ಶತಮಾನದಲ್ಲಿ. ಶಾತವಾಹನರ ಉದಯದಿಂದ, ಇವರ ನಂತರದ ಉತ್ತರದ ವೈಜಯಂತಿ (ಬನವಾಸಿ)ಯಿಂದ ಆಡಳಿತ ನಡೆಸಿದ ಪ್ರಥಮ ಕನ್ನಡ ದೊರೆಗಳು. ಈ ಕ್ರಿಸ್ತಶಕದ ಮೊದಲ ಶತಮಾನಗಳಲ್ಲಿ ಕರ್ನಾಟಕದ ರಾಜಮನೆತನಗಳ ಮೇಲೆ ವೈದಿಕ ಮತ್ತು ಪೌರಾಣಿಕ ಪ್ರಭಾವ ಬೀರಿದ್ದಿತೆಂಬುದು ಶಾಸನಗಳಿಂದ ಸ್ಪಷ್ಟವಾಗುತ್ತದೆ. ಇದೇ ವೇಳೆಯಲ್ಲಿ ರಾಜಚಿಹ್ನೆಗಳು ಹಾಗು ನಾಣ್ಯಗಳ ಅಧ್ಯಯನವನ್ನು ಸಹ ಪ್ರಸ್ತಾಪಿಸುವುದು ಸೂಕ್ತವೆನಿಸುತ್ತದೆ. ಸಿಂಹ, ಗರುಡ, ಹನುಮಂತ, ಚಕ್ರ, ತ್ರಿಶೂಲ, ವರಾಹ ಮೊದಲಾದುವುಗಳು ಕರ್ನಾಟಕದ ರಾಜಮನೆತನಗಳ ನಾಣ್ಯಗಳು ಹಾಗೂ ಮುದ್ರೆಗಳ ಮೇಲೆ ಚಿತ್ರಿತವಾಗಿರುವುದನ್ನು ನೋಡಬಹುದು. ಇಂತಹವುಗಳಿಗೆ ಸಂಬಂಧಿಸಿದ

ಐತಿಹ್ಯಗಳು ಮತ್ತು ಅವುಗಳೊಂದಿಗಿನ ಸಂಬಂಧ ಕಲ್ಪಿಸುವುದು ಭಾರತದ ಸ್ಥಳ ವೃತ್ತಾಂತಗಳಲ್ಲಿ ಬಹು ಸಾಮಾನ್ಯ ಚಾರಿತ್ರಿಕ ಮೌಲ್ಯವುಳ್ಳ ಇನ್ನೂ ಕೆಲವು ಐತಿಹ್ಯಗಳು ಕೂಡ ಇದೇ ಸಂದರ್ಭದಲ್ಲಿ ಗಮನಿಸಲು ತಕ್ಕುದಾಗಿವೆ. ಮೌರ್ಯರು ಮತ್ತು ಕರ್ನಾಟಕರಿಗೆ ಬೆಳದಿದ್ದ ಸಂಪರ್ಕವು 'ಮೋರುಗಡಿ' (ಮೋರೆರ ಅಥವಾ ಮೌರ್ಯರ ಮಳಿಗೆಗಳು) ಎಂಬ ಸ್ಥಳೀಯ ಸಂಪ್ರದಾಯಗಳಲ್ಲಿ ಬಿಂಬಿತವಾಗಿವೆ. ಸ್ಥಳಗಳ ಹೆಸರುಗಳ ಅಧ್ಯಯನವು ಸಹ ಚರಿತ್ರೆಯ ದೃಷ್ಟಿಯಿಂದ ಬಹಳ ಪ್ರಯೋಜನಕಾರಿ. ಉದಾ : ಚಿತ್ರದುರ್ಗ ಜಿಲ್ಲೆಯ ಜಟಂಗ ರಾಮೇಶ್ವರ ಗುಡ್ಡವು ಜಟಾಯುವು ರಾವಣನೊಂದಿಗೆ ಹೋರಾಡಿ ಪ್ರಾಣವನ್ನರ್ಪಿಸಿದ ಸ್ಥಳವೆಂದು ನಂಬಲಾಗಿದೆ. ಇದಕ್ಕೆ ಹತ್ತನೇ ಶತಮಾನದ ಶಾಸನವೊಂದರ ಆಧಾರವು ಇದೆ. (ಇ.ಐ. ಮೊಳಕಾಲ್ಮೂರು ಕ್ರಿ.ಶ. ೯೬೧).

ಇದೇ ರೀತಿಯ ಇನ್ನೊಂದು ಐತಿಹ್ಯವಾದ ಈಗಿನ ಕೆಳದಿ ಸಮೀಪದ ಹಳ್ಳಿಬಯಲಿನಲ್ಲಿದ್ದ ರೈತ ಕುಟುಂಬದ ಚೌಡಪ್ಪನಿಗೆ ಭೂಗತವಾದ ನಿಧಿ ಹಾಗೂ ನಾಗರಿಮುರಿ ಎಂಬ ಕತ್ತಿಯು ಸಿಕ್ಕಿತ್ತು. ಇವನ ಮನೆಯಲ್ಲಿ ಮಲಪಣ್ಣ ಎಂಬೊಬ್ಬ ಕೆಲಸದಲ್ಲಿದ್ದ. ಅವನ ಇಬ್ಬರು ಮಕ್ಕಳು ಎಡವ - ಮುರಾರಿ. ನಿಧಿ ಸಿಕ್ಕುವುದಾಗಿ ತಾವೇ ಬಲಿಯಾದರು ಎಂಬುದು ಆ ನಿಧಿಯಿಂದ ವಿಜಯನಗರದ ಅರಸರಿಂದ ಮನ್ನಣೆ ಪಡೆದು ಚೌಡಪ್ಪ ನಾಯಕನಾಗಿದ್ದುದನ್ನು ಇತಿಹಾಸವೇ ಹೇಳುತ್ತದೆ. ಇದೇ ಚೌಡಪ್ಪನು ಪಳ್ಳಿ ಬಯಲಿನ ಮೇಲುಭಾಗದಲ್ಲಿ ಆನೆಹಳ್ಳಕ್ಕೆ ಅಡ್ಡಕಟ್ಟಿ ಹಾಕಿ ದೊಡ್ಡಕೆರೆಯನ್ನು ಕಟ್ಟಿಸಿದನು. ಕೋಡಿ ನಿಲ್ಲಲಿಲ್ಲವಾದ್ದರಿಂದ ಅದಕ್ಕೆ ಗರ್ಭಿಣಿ ಸ್ತ್ರೀಯೊಬ್ಬಳು ಬಲಿಯಾದರೆ ಕೋಡಿ ನಿಲ್ಲುತ್ತದೆ ಎಂದು ತಿಳಿದ ಮೇರೆಗೆ 'ಕೆಳದಿ' ಎಂಬ ವೇಶ್ಯೆಯು ಕೆರೆಗೆ ಬಲಿಯಾದಳೆಂದೂ ಅನಂತರ ಸೀಗೆಹಟ್ಟಿ ಎಂದು ಹೆಸರಿದ್ದ ಊರು ಕೆಳದಿ ಎಂದು ಆಯಿತೆಂದೂ ಕಥೆಯಿದೆ. ಇದು ಅಂದಿನ ಸಾಹಿತ್ಯಕ ದಾಖಲೆಯಲ್ಲಿಯೂ ದೊರೆಯುವುದರಿಂದ ಇದಕ್ಕೆ ಚಾರಿತ್ರಿಕ ಮೌಲ್ಯ ದೊರೆಯುತ್ತದೆ. ಕೆಲವೊಮ್ಮೆ ಸ್ಥಳನಾಮಗಳ ಕುರಿತ ಇಂತಹ ಐತಿಹ್ಯಗಳು ಕಲ್ಪನೆ ಎನಿಸಿದರೂ ಇಲ್ಲಿ ವಾಸ್ತವಿಕತೆಯೂ ಇರುವುದಿದೆ. ಇದಕ್ಕೆ ಉದಾಹರಣೆಯಾಗಿ ಚನ್ನಗಿರಿಯ ಶಾಂತಿನಗರ ಎಂದು ಈಗ ಹೆಸರಿಸಿರುವ 'ಸೂಳೆಕೆರೆ'ಗೆ ಸಂಬಂಧಿಸಿದ ಐತಿಹ್ಯ ಹಾಗೂ 'ಮಾಯದಂತ ಮಳೆ ಬಂತಣ್ಣ ಮದಗಾದ ಕೆರೆಗೆ' ಎಂಬ ಗೀತೆಯೊಂದಿಗೇ ಪ್ರಸಿದ್ಧವಾಗಿರುವ ಶಿಕಾರಿಪುರ ತಾಲ್ಲೂಕಿನ ಮದಗಾದ ಕೆರೆ ಐತಿಹ್ಯವನ್ನು ಗಮನಿಸಬಹುದು. ಸೂಳೆಕೆರೆಗೆ ಸಂಬಂಧಿಸಿದಂತೆ ಸುಮಾರು ಮೂರಕ್ಕೂ ಹೆಚ್ಚು ಕೈಫಿಯತ್ತುಗಳಿದ್ದು ಅದು ಜನಪದದಿಂದಲೇ ಸಂಗ್ರಹಿಸಿರುವುದಾದ್ದರಿಂದ ಕೈಫಿಯತ್ತುಗಳನ್ನು ಚಾರಿತ್ರಿಕ ಅಧ್ಯಯನಕ್ಕೆ ಬಳಸುವುದರಿಂದ ಇದರ ಸತ್ಯಾಸತ್ಯತೆಯ ಅರಿವು ನಮಗಾಗುತ್ತದೆ. ಆದರೆ ಮದಗದ ಕೆರೆ ಮೊಗಲರ ಕಾಲದ್ದು. ಆದರೆ ಜನಪದರಲ್ಲಿ 'ಮದಗದ ವೀರ ಕೆಂಚಮ್ಮನ ಕೆರೆ' ಎಂದೇ ಪ್ರಸಿದ್ಧಿಯಾಗಿದೆ. ಮದಗ ಎಂಬುದು ಊರಿನ ಹೆಸರೂ ಹೌದು. ಅದು ಅತ್ಯಂತ ದೊಡ್ಡಕೆರೆಯಾದ್ದರಿಂದ ಆ ಹೆಸರು ಬಂದಿರಲೂಬಹುದು. ಇದಕ್ಕೆ ಸಂಬಂಧಿಸಿದಂತಿರುವ ಐತಿಹ್ಯವು ಪ್ರಚಲಿತವಿದೆ. (ಎಲ್ಲ ಐತಿಹ್ಯಗಳಲ್ಲಿ ಕಂಡುಬರುವಂತೆ ಇಲ್ಲಿಯೂ ಕೆಂಚಮ್ಮ ಎಂಬುವಳು ಕೆರೆಗೆ ಹಾರವಾಗಿ ಅವಳ ನೆನಪಿಗಾಗಿ ಈ ಕೆರೆಗೆ ಮದಗದ ವೀರ ಕೆಂಚಮ್ಮನ ಕೆರೆ ಎಂದು ಕರೆಯಲ್ಪಟ್ಟಿತು) ಇನ್ನು ತೀರ್ಥಹಳ್ಳಿ ತಾಲ್ಲೂಕಿನ ಅಂಬುತೀರ್ಥ ಎಂಬ ಹೆಸರು ಅಂಬುವಿನಿಂದ ಉಂಟಾದ ತೀರ್ಥ ಎಂಬ ಕಥೆಯನ್ನು ನಿರೂಪಿಸುತ್ತದೆ. ಇಂತಹ ಸ್ಥಳೈತಿಹ್ಯಗಳು ಚಾರಿತ್ರಿಕ ಅಧ್ಯಯನಕ್ಕೆ ಬಹು ಉಪಯುಕ್ತ ಮಾಹಿತಿ ಒದಗಿಸುತ್ತದೆ. ಬೆಂಗಳೂರಿಗೆ ಬೆಂದಕಾಳೂರು ಎಂದು ಹೆಸರಿದ್ದಿತೆಂಬ ಐತಿಹ್ಯ ಮೊದಲು ಬೆಂದಕಾಳೂರು ಎಂದಿದ್ದು ಅನಂತರ ಬೇಂಗಳೂರು - ಬೆಂಗಳೂರು ಎಂದಾಯಿತು ಎನ್ನುವುದಿದೆ. ಆದರೆ ಎಲ್ಲ ಸ್ಥಳೈತಿಹ್ಯಗಳಲ್ಲಿ ಈ ರೀತಿಯಾಗದೆ ಸರಿಯಾದ ನಿಷ್ಪತ್ತಿಯನ್ನು ಗುರುತಿಸುವುದು ಇದೆ. ಇತಿಹಾಸ ರಚನೆಯಲ್ಲಿ ಕೆಲವೊಮ್ಮೆ ರಚನೆಯಲ್ಲಿ ಸ್ಥಳನಾಮ ಐತಿಹ್ಯಗಳನ್ನು ಬಳಸಿಕೊಳ್ಳುವುದು ಅನಿವಾರ್ಯವಾಗುವುದೂ ಇದೆ. ಕೆಲವು ಸ್ಥಳ ವಿವರಣೆಯ ಕಥೆಗಳಲ್ಲಿ ಸ್ವಲ್ಪ ಸತ್ಯಾಂಶವಿದ್ದರೂ ಅದರಲ್ಲಿ ಕಾಲ್ಪನಿಕ ಅಂಶವೂ ಬೆರೆತಿರುವುದನ್ನು ಕಾಣಬಹುದು. 'ದೊಂಬನ ಕೊಡುಗೆ'ಯ ಬಗೆಗಿನ ಕತೆಯನ್ನು ಇದಕ್ಕೆ ಉದಾಹರಿಸಬಹುದು. ಒಬ್ಬ ದೊಂಬನು ಬ್ರಿಟೀಷ್ ಅಧಿಕಾರಿಯ ಜೊತೆ ಪಂಥಕಟ್ಟಿ ರೆಕ್ಕೆಕಟ್ಟಿಕಂಡು ಮೂವತ್ತು ಎಕರೆಯಷ್ಟು ದೂರ ಹಾರಿದನಂತೆ, ಇಳಿಯುವಾಗ ರೆಕ್ಕೆ ಮುರಿದು ಕೆಳಗೆ ಬಿದ್ದು ಸತ್ತನಾದರೂ ಪಂಥದ ಪ್ರಕಾರ ಅವನು ಹಾರಿದಷ್ಟು ಪ್ರದೇಶವನ್ನು ಅವನ ಹೆಸರಿಗೆ ಬಿಟ್ಟು ಕೊಡಲಾಯಿತಂತೆ. ಇಲ್ಲಿ ಸಾಹಸಿ ದೊಂಬನ ಮರಣದಿಂದಾಗಿ ಈ ರೀತಿಯ ಕಥೆ ಹುಟ್ಟಿ ಅದು ಹೆಚ್ಚು ಮಹತ್ವ ಪಡೆದಿದೆ.

ಈ ರೀತಿಯ ಸ್ಥಳನಾಮಗಳ ಕುರಿತ ಕಥೆ, ಐತಿಹ್ಯಗಳು ನಮ್ಮ ಸುತ್ತಲಲ್ಲಿ ಸಾಕಷ್ಟು ದೊರೆಕುತ್ತವೆ. ಇವು ಇತಿಹಾಸ ರಚನೆಗೆ ಹೆಚ್ಚಿನ ಮಾಹಿತಿ ಒದಗಿಸುತ್ತದೆ.

ಐತಿಹ್ಯಗಳು ಸಹ ಇತಿಹಾಸಾಧ್ಯಯನಕ್ಕೆ ಹೆಚ್ಚು ಪೂರಕವಾಗಿ ಮಾಹಿತಿ ಒದಗಿಸುತ್ತವೆ. ಚಾರಿತ್ರಿಕ ವ್ಯಕ್ತಿಗಳನ್ನು ಘಟನೆಗಳನ್ನು ಕುರಿತ ಐತಿಹ್ಯಗಳನ್ನು ಚಾರಿತ್ರಿಕಐತಿಹ್ಯಗಳೆನಿಸಿಕೊಳ್ಳುತ್ತದೆ. ವ್ಯಕ್ತಿಯ ಸ್ವಾರಸ್ಯ ಸಾಧನೆಗಳು ಮೊದಲಾದುವುಗಳನ್ನು ಐತಿಹ್ಯಗಳ ಮೂಲಕ ಹುಟ್ಟು ಹಾಕುವುದಿದೆ. ಇಲ್ಲಿ ಬಳಸಿರುವ ವಸ್ತುವು ತೀರ ಪ್ರಾಚೀನವಾಗಿರುವುದು ಇಲ್ಲ. ಅಲ್ಲದೆ ಅವು ಸಮಕಾಲೀನವೂ ಆಗಿರುವುದಿಲ್ಲ. ಈ ಹಿಂದೆ ಕೇಳಿರುವ ಕಥೆಯನ್ನು ಇಲ್ಲಿ ನಿರೂಪಿಸಲಾಗಿರುತ್ತದೆ. ಇಲ್ಲಿ ಸತ್ಯಾಂಶ ಇದ್ದೇ ಇರುವುದಾದರೂ ಇಲ್ಲಿ ಹೇಳಿರುವ ಎಲ್ಲ ವಿಷಯವೂ ಸತ್ಯವೆನ್ನುವ ಹಾಗಿಲ್ಲ. ಇದಕ್ಕೆ ದಕ್ಷಿಣ ಕನ್ನಡದಲ್ಲಿ ಪ್ರಚಲಿತವಿರುವ ಕೋಟಿ ಚನ್ನಯ್ಯ, ಅಗೋಳಿ ಮಂಜಣ್ಣರ ಐತಿಹ್ಯವನ್ನು ಉದಾಹರಿಸಬಹುದು. ಇವು ಕಲ್ಪಿತ ಕಥೆಗೆ ಹೆಚ್ಚು ಒತ್ತು ಕೊಟ್ಟಿರುವುದಾದರೂ ಇವುಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳುವುದರಿಂದ ಅಂದಿನ ಐತಿಹಾಸಿಕ ಘಟನೆಗಳ ಚಿತ್ರಣಕ್ಕೆ ಆಕರವಾಗುತ್ತದೆ. ಕೆಲವೊಮ್ಮೆ ಐತಿಹ್ಯಗಳು ಗಾದೆಯ ರೂಪದಲ್ಲಿ ಹೊರಹೊಮ್ಮಿ ಆ ಮೂಲಕ ಕಥೆಯನ್ನು ಹೊರ ಚಾಚುವುದಿದೆ. ಇದಕ್ಕೆ ಉದಾಹರಣೆಯಾಗಿ ಸಾವಿರ ತಲೆ ಹೋದರೂ ದೀವರ ತಲೆ ಹೋಗ ಎಂಬ ಗಾದೆ ಅಥವಾ 'ಶಿವಪ್ಪನಾಯಕ ಕೋಟೆ ಕಟ್ಟಿದ ಹಾಗೆ' ಎಂಬ ಗಾದೆ ಉತ್ತರ ದಕ್ಷಿಣ ಕನ್ನಡಗಳಲ್ಲಿ ಪ್ರಚಲಿತವಿರುವುದನ್ನು ಹೇಳಬಹುದು.

ದೀವರು ಅಳುಪರು, ವಿಜಯನಗರದ ಅರಸರು, ಟಿಪ್ಪುಸುಲ್ತಾನ್, ಕೆಳದಿ ಅರಸರು ಹೀಗೆ ಇವರುಗಳ ಕಾಲದಲ್ಲಿ ಸೈನಿಕ ಸೇವೆ ಸಲ್ಲಿಸಿ ಖ್ಯಾತರಾದಂತಹವರು. ಕೂಟಯುದ್ಧ ತಂತ್ರಗಾರಿಕೆಯಲ್ಲಿ ಇವರಿಗೆ ಮಿಗಿಲು ಇರುವಂತಹವರು ಅತೀ ಕಡಿಮೆ. ಹಾಗಾಗಿಯೇ ಸಾವಿರ ತಲೆ ಹೋದರೂ ದೀವರ ತಲೆ ಹೋಗ ಎನ್ನುವ ಗಾದೆಯ ಮಾತು ಇವರ ವೀರ ಪರಂಪರೆಗೊಂದು ಜ್ವಲಂತ ನಿದರ್ಶನ. ಈ ಗಾದೆಗೆ ಪೋಷಕವಾಗಿ ಕಾಸರಗೋಡು ತಿಮ್ಮಣ್ಣನಾಯಕನ ಐತಿಹ್ಯವನ್ನು ಉದಾಹರಿಸಬಹುದು. ಇವನು ಕೆಳದಿಯ ರಾಣಿ ಚೆನ್ನಮ್ಮಾಜಿಯ ಸೈನ್ಯದಲ್ಲಿ ಸೈನಿಕ ಹುದ್ದೆಯಲ್ಲಿದ್ದ ದೀವರ ವೀರ' ತನ್ನ ತಂತ್ರಬಲದಿಂದ ಸೇನಾಪತಿ ರಾಜರಕ್ಷಕ ಪದವಿಗೇರಿದ್ದನು. ರಾಣಿ ಚನ್ನಮ್ಮಳನ್ನು ನಿಯಂತ್ರಿಸಬಲ್ಲ ಸತ್ವಶಾಲಿಯಾಗಿದ್ದನು. ವೈರಿಗಳು ಅಂಕೋಲ ಮಿರ್ಜಾನ ಕೋಟೆಗಳನ್ನು ಮುತ್ತಿದಾಗ ವೈರಿಗಳ ಸದ್ದಡಗಿಸಲು ರಾಣಿ ಚನ್ನಮ್ಮ ತಿಮ್ಮಣ್ಣ ನಾಯಕನನ್ನು ಕಳುಹಿಸಿದಳು. ತಂತ್ರಗಾರ ತಿಮ್ಮಣ್ಣನಾಯಕನು ದಾಸಯ್ಯನ ವೇಷ ಧರಿಸಿ ವೈರಿಸೈನ್ಯದ ಶಿಬಿರವನ್ನು ಪ್ರವೇಶಿಸಿ ದಮಡಿ ಕಾಳನ್ನೆತ್ತಿ ವೈರಿಸೈನ್ಯದ ನೆಲೆಯನ್ನು ಅರಿತು ಹಿಂದಿರುಗಿ ಬಂದು ವೈರಿಗಳ ಮೇಲೇರಿ ಹೋಗಿ ಅವರನ್ನು ಸೋಲಿಸಿದನು. ವೈರಿಗಳ ದರೋಡೆಗೆ ಭಯಭೀತರಾದ ಅಲ್ಲಿಯ ಗರತಿಯರು ಬಂಗಾರದ ಆಭರಣಗಳನ್ನು ಬಂಗಾರದ ಮೂಗುತಿಯನ್ನು ಧರಿಸುತ್ತಿರಲಿಲ್ಲ. ಮರದ ಮೂಗುತಿ ಧರಿಸುತ್ತಿದ್ದರಂತೆ. ತಿಮ್ಮಣ್ಣನಾಯಕನು ವೈರಿಗಳನ್ನು ಹಣಿದು ಅಬಲೆಯರು ಮರದ ಮೂಗುತಿಗೆ ಬದಲಾಗಿ ಬಂಗಾರದ ಮೂಗುತಿಯನ್ನು ಧರಿಸಿ ನಿರ್ಭೀತಿಯಿಂದ ಅಲೆಯುವ ವಾತಾವರಣವನ್ನು ಕಲ್ಪಿಸಿಕೊಟ್ಟನಂತೆ. ಮುಂದೆ ಕೆಲವು ಪಿತೂರಿಗಾರರು ಚನ್ನಮ್ಮಗೆ ಚಾಡಿ ಹೇಳಿ ಇವನನ್ನು ಕೊಲ್ಲಲು ಪ್ರಯತ್ನಿಸಿದಾಗ ಅವರೊಡನೆ ಏಕಾಂಗಿಯಾಗಿ ಹೋರಾಡಿ ಸಾವಿರ ಸಾವಿರ ತಲೆಗಳನ್ನು ಉರುಳಿಸಿದನಂತೆ. ಪಿತೂರಿಗಾರರಿಗೆ ಇವನ ತಲೆಯನ್ನು ಉರುಳಿಸುವುದು ಅಸಾಧ್ಯವಾದಾಗ ರಾಣಿ ಚನ್ನಮ್ಮಾಜಿ ನಾರಾಯಣ ಸ್ವಾಮಿಯಲ್ಲಿ ಪ್ರಾರ್ಥಿಸಿದಳಂತೆ ಆಗ ದೇವರು ಸೂತ್ರಸುತ್ತಿ ಆತ ಕಾಯಗೂಡಿ ಕೈಲಾಸಕ್ಕೆ ಹೋದನೆಂದು ಒಂದು ಐತಿಹ್ಯವಿದೆ. ಇನ್ನೊಂದು ಐತಿಹ್ಯವು ಆತ ಪಿತೂರಿಗೆ ಸಿಲುಕದೆ ತಲೆಮರಿಸಿಕೊಂಡನೆಂದು ಹೇಳುತ್ತದೆ. ಈ ಐತಿಹ್ಯವು ಒಬ್ಬ ವೀರನ ತಲೆಯನ್ನು ಯಾರಿಂದಲೂ ಹಾರಿಸಲಾಗದೆ ಹೋದ್ದರಿಂದ ಸಾವಿರ ತಲೆ ಹೋದರು ದೀವರ ತಲೆ ಹೋಗ ಎಂಬ ಗಾದೆ ಹುಟ್ಟಿಗೆ ಕಾರಣವಾಯಿತು. ಇನ್ನೊಂದು ಐತಿಹ್ಯವು ಒಮ್ಮೆ ಯುದ್ಧದಲ್ಲಿ ವೈರಿಗಳಿಂದ ಸೈನ್ಯವೆಲ್ಲಾ ಸಾವನ್ನಪ್ಪಿದಾಗ ಚುರುಕು ಬುದ್ಧಿಯ ದೀವನೊಬ್ಬ ವೈರಿಗಳನ್ನೆದುರಿಸಿ ಏಕಾಂಗಿಯಾಗಿ ಹೋರಾಡಿ ವೈರಿಗಳನ್ನು ಗೆಲ್ಲುವುದು ಅಸಾಧ್ಯವೆಂದು ಮನಗಂಡು ತನ್ನ ಪೃಷ್ಠಕ್ಕೆ ಬೆಲ್ಲವನ್ನು ಹಚ್ಚಿಕೊಂಡು ಸತ್ತವನಂತೆ ನಟಿಸಿ ಮಲಗಿದನಂತೆ. ಶತ್ರು ಸೈನಿಕರು ಹೆಣಗಳನ್ನು ಪರೀಕ್ಷಿಸುತ್ತಾ ಬಂದಾಗ ಈ ದೀವನ ಮೈಗೆ ಗೊದ್ದವು ಅಲ್ಲದೆ ನೊಣವು ಮುತ್ತಿರುವುದನ್ನು ನೋಡಿ ಆತ ಸತ್ತಿರಬೇಕೆಂದು ತೀರ್ಮಾನಿಸಿ ಹೊರಟು

ಹೋದನಂತೆ. ಸಾವಿರ ತಲೆ ಉರುಳಿದ ಈ ಪ್ರಸಂಗದಲ್ಲಿ ದೀವರ ತಲೆ ಉರುಳದೆ ಆತ ಗಾದೆಯ ಮಾತಿಗೆ ವಸ್ತುವಾದ. ಈ ಗಾದೆ ಮಾತಿನ ಐತಿಹ್ಯವು ಅಂದಿನ ಸಾಮಾಜಿಕ ವ್ಯವಸ್ಥೆಯನ್ನು, ಸೈನಿಕ ಪದ್ಧತಿಯನ್ನು ಅಭ್ಯಸಿಸಲು ಪ್ರಮುಖ ಆಕರವಾಗಿದೆ.

ಇದೇ ರೀತಿಯ 'ಶಿವಪ್ಪನಾಯಕ ಕೋಟೆ ಕಟ್ಟಿದ ಹಾಗೆ' ಎಂಬ ಗಾದೆಯ ಐತಿಹ್ಯವು ಅಂದಿನ ಆಡಳಿತ ವೈಖರಿಯನ್ನು ಅಭ್ಯಸಿಸುವಲ್ಲಿ ನಮಗೆ ಸಹಕಾರಿಯಾಗುತ್ತದೆ. ಅಂದಿನ ಕಾಲದ ಧಾರ್ಮಿಕ ವ್ಯವಸ್ಥೆಯನ್ನು ಅಭ್ಯಸಿಸಲು ಅನುಕೂಲವಾಗುವಂತಹ 'ಪವಾಡದ ಬಸವ' ಎಂದೇ ಹೆಸರಾಗಿರುವ ಬಸವನ ಗುಡಿಯ ಐತಿಹ್ಯ ಇವುಗಳ ಹಲವಾರು ಕಥೆಗಳು ಈ ಪ್ರಾಂತ್ಯದಲ್ಲಿ ಪ್ರಚಲಿತವಿದೆ. ಐತಿಹ್ಯದಲ್ಲಿ ನೈಜ ಘಟನೆಯ ಸಣ್ಣ ಎಳೆಯೊಂದು ಮಾತ್ರವಿದ್ದು ಅದರ ಸುತ್ತ ಕಲ್ಪಿತಾಂಶಗಳು ತಬ್ಬಿಕೊಂಡಿರುತ್ತದೆ. ಹೀಗಿದ್ದರೂ ಈಗ ಐತಿಹ್ಯವನ್ನು ಜಾನಪದ ಸಾಹಿತ್ಯದ ಒಂದು ಪ್ರಕಾರವಾಗಿ ಪರಿಗಣಿಸಲಾಗುತ್ತದೆ. ಜೊತೆಗೆ ಜಾನಪದ ಸಾಹಿತ್ಯದ ಇತಿಹಾಸವೆಂದು ತಿಳಿಯಲಾಗಿದೆ. ಒಂದು ದೃಷ್ಟಿಯಿಂದ ನೋಡಿದಾಗ ಇತಿಹಾಸ ಮತ್ತು ಸಾಹಿತ್ಯ ಇವೆರಡೂ ಅಂಶಗಳು ಇದರೊಳಗಿವೆ. ಈ ಹಿಂದೆ ನಡೆದಿರುವ ನಡೆದಿರಬಹುದಾದ, ಕೇಳಿರುವಂತಹ ಘಟನೆಯ ಪುನರ್‌ಸೃಷ್ಟಿ ಇದಾಗಿದ್ದರೂ ಇಂದು ಇದಕ್ಕೆ ಇತಿಹಾಸ ರಚನೆಗೆ ಒಂದು ಆಕರವಾಗಿ ಬಳಕೆಯಾಗಿರುವ ಸ್ಥಾನ ಪಡೆದಿದೆ. ಇದನ್ನು ಮೌಖಿಕ ಪರಂಪರೆಯಲ್ಲಿ ಜನಪದರು ರಚಿಸಿದ, ಮೌಖಿಕ ಪರಂಪರೆಯಲ್ಲಿ ಉಳಿದುಬಂದ ಜನಪದರ ಮತ್ತು ಅವರ ಸಂಪರ್ಕಕ್ಕೆ ಬಂದ ಶಿಷ್ಟರೆನಿಸಿದವರ ಇತಿಹಾಸ ಎಂಬುದಾಗಿ ಹೇಳಬಹುದು.

ನಾವು ಇತಿಹಾಸವನ್ನು ಸಾಂಸ್ಕೃತಿಕ, ಧಾರ್ಮಿಕ, ಆರ್ಥಿಕ, ರಾಜಕೀಯ ಎಂಬುದಾಗಿ ವಿಂಗಡಿಸಿಕೊಳ್ಳಬಹುದು. ಅಂದರೆ ನಾವಿಂದು ಕಾಣುವ ಇತಿಹಾಸದಲ್ಲಿ ಹಿಂದಿನ ಕಾಲದ ಸಾಂಸ್ಕೃತಿಕ, ಧಾರ್ಮಿಕ, ಆರ್ಥಿಕ, ರಾಜಕೀಯ, ಸಾಮಾಜಿಕ ವ್ಯವಸ್ಥೆಗಳು ಅಡಕವಾಗಿವೆ. ಧರ್ಮವೆಂಬುದು ಸಂಸ್ಕೃತಿಯಲ್ಲಿ ಸಮಾವೇಶಗೊಳ್ಳುವುದರಿಂದ ಧಾರ್ಮಿಕ ವ್ಯವಸ್ಥೆಯನ್ನು ಸಾಂಸ್ಕೃತಿಕ ವ್ಯವಸ್ಥೆಯೊಳಗೆ ಅಧ್ಯಯನ ಮಾಡಬಹುದಾಗಿದೆ. ಜನಪದ ಅಧ್ಯಯನದಿಂದ ಕೇವಲ ಸಾಂಸ್ಕೃತಿಕ ವ್ಯವಸ್ಥೆಯೊಳಗೆ ಅಧ್ಯಯನ ಮಾಡಬಹುದಾಗಿದೆ. ಜನಪದ ಅಧ್ಯಯನದಿಂದ ಕೇವಲ ಸಾಂಸ್ಕೃತಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ತಿಳಿದುಕೊಳ್ಳುವುದು ಸಾಧ್ಯವೆಂದು ಮೇಲುನೋಟಕ್ಕೆ ಕಂಡುಬರುವುದಾದರೂ ಉಳಿದ ರಾಜಕೀಯ, ಆರ್ಥಿಕ ಸ್ಥಿತಿಗತಿಗಳು ಕೆಲಮಟ್ಟಿಗೆ ಇದರಿಂದ ವ್ಯಕ್ತವಾಗುವುದಿದೆ. ಜನಪದ ಸಾಹಿತ್ಯವು ಮೌಖಿಕವಾಗಿ ಹರಿದು ಬಂದಿದ್ದು ಅದು ಶಿಷ್ಟ ಸಾಹಿತ್ಯದಂತೆ ಯಾರೋ ಬರೆದಿಡುವ ಗೋಜಿಗೋ ಹೋಗಲಿಲ್ಲ. ಆ ಹರಿಯುವಿಕೆಯ ಸಂಗ್ರಹವೂ ಈಚೆಗೆ ಪ್ರಾರಂಭವಾದುದು. ಕೈಫಿಯತ್ತುಗಳ ರಚನೆಯ ಸಂದರ್ಭದಲ್ಲಿ ಕೆಲವೊಮ್ಮೆ ಜನಪದ ಸಾಹಿತ್ಯದ ರಚನೆಯನ್ನು ನೋಡಬಹುದು. ಹಾಗಾಗಿ ಈಗಾಗಲೇ ಪ್ರವಾಹದಲ್ಲಿ ಸಾಕಷ್ಟು ಕೊಚ್ಚಿಹೋಗಿದೆ. ಇನ್ನೂ ಕಳೆದುಕೊಳ್ಳುತ್ತಲೇ ಇದ್ದೇವೆ.

ಚರಿತ್ರೆಯ ರಚನೆಗೆ ಪ್ರಮುಖ ಆಕರವಾಗಿ ಬಳಸುವ ಇನ್ನೊಂದು ಶಿಷ್ಟ ಸಾಧನವೆಂದರೆ ಶಾಸನ. ಇದರಲ್ಲಿ ಸಹ ಸಾಹಿತ್ಯಕ ಅಂಶ ಇದ್ದೇ ಇರುತ್ತದೆ. ಇಂತಹ ಶಾಸನ ಸಾಹಿತ್ಯ ರಚನೆಕಾರರೆಲ್ಲ ಅಂದು ರಾಜ ಮಹಾರಾಜರ ಆಶ್ರಯದಲ್ಲಿದ್ದಂತಹವರು. ಅಂತಹವರು ತಮ್ಮ ಆಶ್ರಯದಾತರ ಅನುಗ್ರಹಕ್ಕಾಗಿ ಅವರ ಅನುಕೂಲಕ್ಕೆ ತಕ್ಕಂತೆ ಬರೆಯುತ್ತಿದ್ದರು. ಅಂತಹ ವೇಳೆಯಲ್ಲಿ ಪ್ರತಿಕೂಲ ಸಂಗತಿಗಳು ಮರೆಮಾಚಲ್ಪಡುತ್ತಿದ್ದವು. ವಿದೇಶಿ ಪ್ರವಾಸಿಗರೂ ಸಹ ಇಂದಿನಂತೆಯೇ ರಾಜರ ಕೃಪೆಗೆ ಒಳಗಾಗಿ ಅವರ ಹಂಗಿನಿಂದಾಗಿ ಅವರಂತೆಯೇ ಬರೆಯಬೇಕಾಗುತ್ತಿತ್ತು. ಅಂತಹ ಕಡೆಗಳಲ್ಲಿ ವೈಭವೀಕರಣವಿರುವುದು ಸಹಜ. ಈ ಜಾನಪದ ಸಾಹಿತ್ಯದಲ್ಲಿ ಕಲ್ಪನಾಂಶಗಳು ಸೇರಿರುವ ಸಾಧ್ಯತೆ ಇದ್ದರೂ ವಾಸ್ತವತೆಗೆ ಧಕ್ಕೆ ಉಂಟಾಗುತ್ತಿರಲಿಲ್ಲ. ಅರಸರುಗಳು, ಅಧಿಕಾರಿಗಳು ಮಾಡಿರುವಂತಹ ಅನ್ಯಾಯ ಅನಾಚಾರಗಳು ಸಹ ಇದರಲ್ಲಿ ವ್ಯಕ್ತವಾಗುತ್ತಿತ್ತು. ಆದರೆ ಶಿಷ್ಟಸಾಹಿತ್ಯ ಪ್ರಕಾರಗಳಲ್ಲಿ ಇಂತಹ ಸನ್ನಿವೇಶವೇ ಸಾಧ್ಯವಿರುತ್ತಿರಲಿಲ್ಲ. ಈ ಕಾರಣಗಳಿಂದ ನೈಜ ಇತಿಹಾಸ ರಚನೆಯಲ್ಲಿ ಜನಪದ ಸಾಹಿತ್ಯ ಗಣನೀಯ ಪಾತ್ರ ವಹಿಸುತ್ತದೆ. ತಮ್ಮ ಅನುಭವಕ್ಕೆ ಬಂದ, ತಾವು ಕಂಡ, ಕೇಳಿದ ಘಟನೆ, ಸನ್ನಿವೇಶಗಳನ್ನು ಆಧರಿಸಿ ಅದನ್ನು ಜನಪದದಲ್ಲಿ ಅಭಿವ್ಯಕ್ತಿಗೊಳಿಸುತ್ತಿದ್ದರು. ಅದು ಮೌಖಿಕ ಪರಂಪರೆಯಲ್ಲಿ ಹರಿಯುತ್ತಿದ್ದುದರಿಂದ ಕಾಲದಿಂದ ಕಾಲಕ್ಕೆ ಆಯಾ ಕಾಲದ ವೈಶಿಷ್ಟ್ಯಗಳಿಗನುಸಾರವಾಗಿ ಆಯಾ ವ್ಯಕ್ತಿ ವೈಶಿಷ್ಟ್ಯವಾದ ಕಲ್ಪನೆಯ ಮತ್ತು ವರ್ಣನೆಯ ಅಂಶಗಳು ಸಹ ಸೇರುತ್ತಿದ್ದುದು

ನೈಜವಾಗಿತ್ತು. ಹಾಗಾಗಿ ಚರಿತ್ರೆಯ ರಚನೆಗೆ ಆಕರವಾಗಿ ಬಳಸುವ ಸಂದರ್ಭದಲ್ಲಿ ಅವುಗಳ ಸತ್ಯತೆಯ ಬಗ್ಗೆ ಎಚ್ಚರ ವಹಿಸಬೇಕಾಗುತ್ತದೆ. ಶ್ರೀ ಪಿ.ಗುರುರಾಜ ಭಟ್ಟರು ಚರಿತ್ರೆಯ ರಚನೆಯಲ್ಲಿ ಐತಿಹ್ಯ ಪುರಾಣಗಳು ವಿಮರ್ಶೆಯ ಪರಧಿಗೆ ಒಳಗಾಗಬೇಕಾಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುವರಾದರೂ ಸಹ ನಂಬಿಕೆ ಸಂಪ್ರದಾಯ ಮೊದಲಾದುವುಗಳನ್ನು ಚರಿತ್ರೆರಚನೆಯ ಪ್ರಾಥಮಿಕ ಅಕರಗಳಡಿಯಲ್ಲಿ ಸೇರಿಸುತ್ತಾರೆ. ಕಾರಣ ಒಂದು ಕಾಲದ ಸಾಂಸ್ಕೃತಿಕ ಮತ್ತು ಸಾಮಾಜಿಕ ಚರಿತ್ರೆಯಲ್ಲಿ ಆ ಕಾಲದ ಜನರ ಜೀವನ ವಿಧಾನ, ರೀತಿ, ನೀತಿಗಳು, ಸಂಪ್ರದಾಯಗಳು, ನಡಾವಳಿ ಆಚರಣೆಗಳು ಬಂದೇ ಬರುತ್ತವೆ. ಹಾಗಾಗಿ ಅವುಗಳನ್ನು ಕೈಬಿಟ್ಟಲ್ಲಿ ಯಾವುದೇ ನಾಡಿನ ಸಾಂಸ್ಕೃತಿಕ ಅಧ್ಯಯನವು ಪರಿಪೂರ್ಣವೆನಿಸಲಾರವು. ಸಂಪ್ರದಾಯ, ನಂಬಿಕೆ ಇವು ಜಾನಪದೀಯ ಹಿನ್ನೆಲೆಯಲ್ಲಿ ನಮಗೆ ಚರಿತ್ರೆಯ ರಚನೆಯಲ್ಲಿ ಗಮನಾರ್ಹ ಪಾತ್ರ ವಹಿಸುತ್ತವೆ ಎನ್ನಬಹುದು.

ಇನ್ನು ಜಾನಪದ ಸಾಹಿತ್ಯದತ್ತ ಅದರಲ್ಲೂ ಐತಿಹ್ಯದತ್ತ ಗಮನ ಹರಿಸಿದಾಗ ಇದು ಶಿಷ್ಟ ಅಥವಾ ಲಿಖಿತ ಚರಿತ್ರೆಯಲ್ಲಿಲ್ಲದ ಎಷ್ಟೋ ಅಂಶಗಳನ್ನು, ಸನ್ನಿವೇಶಗಳನ್ನು ಘಟನೆಗಳನ್ನು ಒಳಗೊಂಡಿದೆ. ಅಧಿಕಾರಿ, ಅರಸುಗಳ ಉದಾತ್ತತೆ, ದುರ್ಗ, ಅನ್ಯಾಯ, ಭೌಗೋಳಿಕ ಸ್ಥಿತಿಗತಿ, ರೀತಿ ರಿವಾಜುಗಳು, ಧರ್ಮ ಇವುಗಳ ಮೇಲೆ ಬೆಳಕು ಚೆಲ್ಲುತ್ತದೆ. ಗ್ರಂಥಸ್ಥ ಚರಿತ್ರೆಗಳಲ್ಲಿ ಅವುಗಳಿಗೆ ಮೂಲವಾದ ಶಿಷ್ಟ ಆಕರಗಳಲ್ಲಿ ಉಲ್ಲೇಖವಾದವರು ಮಾತ್ರ ಇತಿಹಾಸದ ಪುರುಷರಾಗುವುದು ಸಾಧ್ಯವಿಲ್ಲ. ಅವರ ಜೊತೆ ಇತರರು ಇದ್ದರು. ಗ್ರಂಥಸ್ಥದಲ್ಲಿ ವರ್ಣಿತವಾಗಿರುವುದಕ್ಕೆ ಇತಿಹಾಸದಲ್ಲಿ ಅದಕ್ಕಿಂತ ಹೊರತಾಗಿ ಇತರ ವಿಷಯಗಳನ್ನು ಅದು ಒಳಗೊಂಡಿದೆ. ಇಂತಹವುಗಳನ್ನು ತಿಳಿಯುವಲ್ಲಿ ನಾವು ಜನಪದ, ಅದರ ಐತಿಹ್ಯವನ್ನೇ ಬಳಸಬೇಕಾಗುತ್ತದೆ. ದಕ್ಷಿಣ ಕನ್ನಡದ ಇತಿಹಾಸ ರಚನೆಯಲ್ಲಿ ಜಾನಪದದ ಪಾತ್ರ ಹಿರಿದು. ಇದಕ್ಕೆ ಅಲ್ಲಿಯ ಜಾನಪದದ ಮಿಗತೆಯ ವಿವಿಧ ಪ್ರಕಾರಗಳೂ ಕಾರಣವಾಗಿರಬಹುದು. ಕರಾವಳಿಯ ಉತ್ತರ ಕರ್ನಾಟಕದ ಇತಿಹಾಸ ರಚನೆಯಲ್ಲಿ ಇತಿಹಾಸಕಾರರಿಗೆ ಅಲ್ಲಿಯ ಜಾನಪದ ಆಕರಗಳನ್ನು ಬಳಸಿಕೊಳ್ಳದೆ ಮುಂದುವರಿಯುವುದು ಸಾಧ್ಯವಾಗಲಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸದ ಕರ್ತೃ ಗಣಪತಿರಾವ್ ಐಗಳ ಮೊದಲಾದವರು ತಮ್ಮ ಕೃತಿಗಳಿಗೆ ಜಾನಪದವನ್ನೇ ಪ್ರಾಥಮಿಕ ಆಕರವಾಗಿ ಬಳಸಿಕೊಂಡಿದ್ದಾರೆ. ಗೋವಿಂದ ಪೈ, ಶಂಬಾ ಜೋಷಿರವರಂತಹ ವಿದ್ವಾಂಸರು, ಬಿ.ಎ.ಸಾಲೆತ್ತೂರ್, ಪಿ.ಗುರುರಾಜಭಟ್ಟರಂತಹ ಪ್ರಸಿದ್ಧ ವಿದ್ವಾಂಸರು, ಇತಿಹಾಸಕಾರರು ಆನುವಂಶಿಕವಾಗಿ ಜನಪದವನ್ನೇ ಬಳಸಿಕೊಂಡಿರುವುದನ್ನು ನಾವು ಕಾಣುತ್ತೇವೆ. ಅದರಲ್ಲೂ ಎಂ.ಎಚ್. ಪುಟ್ಟಣ್ಣನವರು ಇಕ್ಕೇರಿ ಇರಸುಗಳ ರಚನೆಯ ಸಂದರ್ಭದಲ್ಲಿ ಸ್ಥಳ, ಸ್ಥಳಪುರಾಣ, ಐತಿಹ್ಯಗಳ ಬಳಕೆಯನ್ನು ಹೇರಳವಾಗಿ ಮಾಡಿಕೊಂಡಿರುವುದನ್ನು ನೋಡಬಹುದು.

ಇತಿಹಾಸ ರಚನೆಯಲ್ಲಿ ಜನಪದ ಪಾತ್ರವನ್ನು ಕುರಿತು ಚರ್ಚಿಸುವ ಮೊದಲು ಇತಿಹಾಸದ ಪದದ ಅರ್ಥವ್ಯಾಪ್ತಿಯನ್ನು ತಿಳಿಯುವುದು ಅನಿವಾರ್ಯ. ಹಿಂದೆ ನಡೆದಿರಬಹುದಾದ ಘಟನೆ, ಅಘಟನೆಗಳ ದಾಖಲಾತಿ ನಿರೂಪಣೆಯು ಇತಿಹಾಸ ಅಥವಾ ಚರಿತ್ರೆಯಾಗುತ್ತದೆ. ಘಟನೆಗಳು ಈಗಾಗಲೇ ಎಷ್ಟು ನಡೆದಿರಬಹುದು, ನಡೆಯುತ್ತಿರಲೂ ಬಹುದು, ಆದರೆ ಅವೆಲ್ಲವನ್ನೂ ಇತಿಹಾಸವೆಂದು ಕರೆಯಲು ನಾವು ಸಿದ್ಧವಿಲ್ಲ. ಅಂದಿನ ಜೀವನದಲ್ಲಿ ಮಹತ್ತರವಾದ ಸ್ಥಾನವನ್ನು ಪಡೆದುಕೊಂಡ, ಜನಜೀವನದ ಮಹತ್ತರ ತಿರುವಿಗೆ ಕಾರಣವಾದ ಇಂದಿನ ಸಮಾಜಕ್ಕೆ, ರಚನಾತ್ಮಕ ಜೀವನಗತಿಗೆ ಪ್ರೇರಕವಾಗಬಲ್ಲ ಘಟನೆಗಳನ್ನೇ ನಾವು ಇತಿಹಾಸವೆಂದು ಪರಿಗಣಿಸುತ್ತಿದ್ದೇವೆ. ಅದರೊಂದಿಗೆ ರಚನಾತ್ಮಕವೆನಿಸಬಲ್ಲ ಅಂದಿನ ಕಾಲದ ಉದಾತ್ತ ಜನಜೀವನವನ್ನು ಸಂಸ್ಕೃತಿಯನ್ನು ಎತ್ತಿ ತೋರಿಸಬಲ್ಲ ಇಂದಿನ ಸತ್ಯಸಮಾಜದ ರಚನೆಗೆ ಪ್ರೇರಣೆಯಾಗಬಲ್ಲ ಎಷ್ಟೋ ಘಟನೆಗಳು ಚರಿತ್ರೆಯಲ್ಲಿ ಎಷ್ಟೊ ದಾಖಲಾಗದೆ ಇರುವುದಿದೆ. ಕೇವಲ ರಾಜಕೀಯ ಭಾಗವಷ್ಟೇ ನಮ್ಮಲ್ಲಿ ಹಿಂದಿನ ಸಾಂಸ್ಕೃತಿಕ, ಧಾರ್ಮಿಕ, ಸಾಮಾಜಿಕ, ಆರ್ಥಿಕ ಇತ್ಯಾದಿ ವ್ಯವಸ್ಥೆಗಳೂ ಚಿತ್ರಿತವಾಗದಿರುವುದು ಶೋಚನೀಯ ಸಂಗತಿ. ರಾಜ ಮಹಾರಾಜರುಗಳ ಅಧಿಕಾರಿಗಳ, ರಾಜಕೀಯ ಜೀವನಕ್ಕಿಂತ ಹೊರಗೂ ಬೃಹತ್ತಾದ ಜೀವನ ಪ್ರವಾಹವಿತ್ತು. ಅದುವೇ ಜನಪದ ಜೀವನ.

ಜನಪದ ಗೀತೆಗಳು, ಲಾವಣಿಗಳು ಇಂತಹ ಜೀವನ ಪ್ರವಾಹವನ್ನು ಸ್ಫುರಿಸುತ್ತವೆ. ಅದೂ ರಾಜ ಮಹಾರಾಜರ, ಅಂದಿನ ವೈಭವದ ಜೀವನದ ಚಿತ್ರಣದ ಜೊತೆಯಲ್ಲಿ ಸಾಮಾನ್ಯನ ಜೀವನ ಚಿತ್ರಣವೂ ಇರುತ್ತದೆ. ಇಂತಹವು ಸ್ಫುರಿಸುವ ಚಾರಿತ್ರಿಕ ಅಂಶಗಳಿಗೆ ಅವುಗಳದೇ ಆದ ಹಿನ್ನೆಲೆ ಇತಿಹಾಸವಿರುತ್ತದೆ. ಅದನ್ನು ರಾಜಕೀಯ ಜೀವನದಲ್ಲಿ ತಿಳಿಯದೆ ಚರಿತ್ರೆಯ ಅಧ್ಯಯನ ಪರಿಪೂರ್ಣವಾಗವುದಿಲ್ಲ. ಅದರ ಕುರಿತು ಲಿಖಿತ ದಾಖಲೆಗಳು ಇಲ್ಲದಿರುವುದು ಇದಕ್ಕೆ ಕಾರಣವಾಗಿರಬಹುದು. ನಮಗೆ ನೈಜ ಇತಿಹಾಸ ರಚನೆಗೆ ದಾಖಲಾತಿಗಳು ಬೇಕು. ಅವು ಲಿಖಿತ ಅಥವಾ ಮೌಖಿಕವಾಗಿದ್ದರೂ ಅದು ದಾಖಲೆಯೇ ಎನ್ನುವುದನ್ನು ತಿಳಿಯಬೇಕು.

ಇಂದಿನ ಇತಿಹಾಸಜ್ಞರು ಜಾನಪದವನ್ನು ಇತಿಹಾಸ ರಚನೆಯಲ್ಲಿ ಬಳಸಿಕೊಳ್ಳುತ್ತಿರುವುದನ್ನು ಗಮನಿಸಬಹುದು. ಇಲ್ಲಿ ಇತಿಹಾಸ ರಚನೆಗೆ ಮೌಖಿಕ ಆಕರವನ್ನು ಬಳಸುವಾಗ ಅದನ್ನು ಮುದ್ರಿತ ದಾಖಲೆಯೊಂದಿಗೆ ಹೋಲಿಸಿ ದೃಢೀಕರಿಸುವುದು ಸೂಕ್ತ ಮೌಖಿಕ ಪರಂಪರೆಯನ್ನು ಬಳಸಿಕೊಂಡು ಇತಿಹಾಸ ರಚನೆಗೆ ತೊಡಗುವಾಗ ಇತಿಹಾಸಕಾರನಿಗೆ ಇತಿಹಾಸ ರಚನೆಯ ನಿಯಮಗಳ ಜೊತೆಗೆ ಜಾನಪದ ಮತ್ತು ಸಾಹಿತ್ಯದ ಸೂಕ್ಷ್ಮಪರಿಜ್ಞಾನವು ಅಗತ್ಯ. ಇದರಿಂದ ಕಂಠಸ್ಥ ಕಥನಗಳಲ್ಲಿ ಬೆರೆತುಹೋದ ಐತಿಹಾಸಿಕ ಸತ್ಯ ಮತ್ತು ಕಲ್ಪನೆಗಳ ಅಂಶಗಳನ್ನು ಪ್ರತ್ಯೇಕಿಸಿ ತೆಗೆಯಲು ಆತ ಶಕ್ತನಾಗಿರುವುದು ಅಗತ್ಯ.

ರವೀಂದ್ರನಾಥ ಠಾಕೂರರ ಕಥೆಗಳಲ್ಲಿ ಸ್ತ್ರೀ

ಡಾ. ಎಚ್.ಎಸ್. ಸುಜಾತಾ

ರವೀಂದ್ರನಾಥ ಠಾಕೂರರು (೧೮೬೧-೧೯೪೧) ನಮ್ಮ ದೇಶದ ಅಗ್ರಮಾನ್ಯ ಕವಿಗಳಲ್ಲಿ ಒಬ್ಬರು ಮಾತ್ರವಲ್ಲ, ಅವರು ಅಷ್ಟೇ ಹಿರಿಯ ಕಥೆಗಾರರೂ ಹೌದು. ಸ್ವಾತಂತ್ರ್ಯಪೂರ್ವದ ಬಂಗಾಳದ ಜನಜೀವನದ ನಾಡಿಮಿಡಿತವನ್ನು ರವೀಂದ್ರರು ಸ್ಪಷ್ಟವಾಗಿ ಅರಿತಿದ್ದರು. ರವೀಂದ್ರರ ದೃಷ್ಟಿ ಮೂಲತಃ ಮಾನವೀಯವಾದದ್ದು. ಸಹಾನುಭೂತಿ ಅವರ ಸಹಜ ಜೀವಾಳ. ಲೋಕಸ್ವಭಾವದ ಪರಿಚಯವುಳ್ಳ ಈ ಹಿರಿಯ ಚೇತನವು ಮರ್ತ್ಯಸಹಜವಾದ ರಾಗಗಳನ್ನು ಅರಿತದ್ದು, ಸಮಾಜ ಕ್ಷೇಮಕ್ಕಾಗಿ ಅಳವಡಿಸಿಕೊಂಡು ಕಟ್ಟುಪಾಡುಗಳನ್ನು ಅರ್ಥೈಸಿಕೊಂಡದ್ದು, ಮಹಿಳೆಯ ಅಂತರಂಗದ ತುಡಿತಗಳನ್ನು ರವೀಂದ್ರರು ಅಭಿವ್ಯಕ್ತಿಸಿರುವ ರೀತಿಯನ್ನು ಈ ಹಿನ್ನೆಲೆಯಲ್ಲಿ ಪರಿಭಾವಿಸಬಹುದು.

ರವೀಂದ್ರರ ಕಥೆಗಳಲ್ಲಿ ಕಂಡುಬರುವ ಸ್ತ್ರೀಪ್ರಪಂಚ ಬಹುವಿಸ್ತಾರವಾದದ್ದು, ಕಿಶೋರಿಯರು, ಯುವತಿಯರು, ಮುದುಕಿಯರು, ಮುಗ್ಧೆಯರು, ಪ್ರೌಢೆಯರು, ಪ್ರಣಯಿನಿಯರು, ವಿರಹಿಣಿಯರು, ವಿವಾಹಿತೆಯರು, ವಿಧವೆಯರು ಇಲ್ಲಿದ್ದಾರೆ. ಸುಖಿಗಳು, ದುಃಖಿನಿಯರು, ಜಾಣೆಯರು, ದಡ್ಡೆಯರು, ಮೃದುಸ್ವಾಭಾವದವರು, ಗಯ್ಯಾಳಿಯರು, ವಿಕಾಸಗೊಳ್ಳುತ್ತಿರುವವರು, ಪಕ್ವತೆ ಪಡೆದವರು ಎಲ್ಲರೂ ಇಲ್ಲಿ ಕಾಣಸಿಗುತ್ತಾರೆ. ಕಥೆಯ ಮಿಕ್ಕ ಪಾತ್ರಗಳಿಗೆ ಈ ಸ್ತ್ರೀಯರು ತಾಯಾಗಿ, ಸೋದರಿಯಾಗಿ, ಹೆಂಡತಿಯಾಗಿ, ಮಗಳಾಗಿ ಕಾಣಿಸಿಕೊಳ್ಳುತ್ತಾರೆ. ದೊಡ್ಡಮ್ಮ, ಚಿಕ್ಕಮ್ಮ, ಅತ್ತೆ, ಅತ್ತಿಗೆ, ನಾದಿನಿ, ಸೊಸೆ, ಮೊಮ್ಮಗಳಾಗಿ ಪ್ರತಿಕ್ರಿಯಿಸುತ್ತಾರೆ. ತವರಿನ ಸಂಬಂಧ, ಸೇರಿದ ಮನೆಯ ಆಶೋತ್ತರಗಳು, ಬಿಟ್ಟು ಕುಟುಂಬದಲ್ಲಿ ಅವಳ ಪಾತ್ರ ಮೊದಲಾದವು ಸ್ತ್ರೀಯರನ್ನು ನಿಯಂತ್ರಿಸುತ್ತವೆ.

ಮಾತೃಚೈತನ್ಯದ ಆಧಿಕ್ಯವುಳ್ಳ ಸ್ತ್ರೀಯರಲ್ಲಿ ರವೀಂದ್ರರಿಗೆ ಅಸೀಮ ಗೌರವ. ಒಂದು ಕುಟುಂಬದ ರಕ್ಷಣೆಯ ಕರ್ತವ್ಯವನ್ನೇ ತಮ್ಮ ಹಕ್ಕಾಗಿಸಿಕೊಳ್ಳುವ ಅನೇಕ ಸ್ತ್ರೀಯರನ್ನು ಇಲ್ಲಿ ಕಾಣುತ್ತೇವೆ. 'ಅನಧಿಕಾರ ಪ್ರದೇಶ' ಕಥೆಯ ಜಯಕಾಳಿ ಚುರುಕು ಬುದ್ಧಿಯ ಹೆಂಗಸು, ಗಂಡನ ಮರಣಾನಂತರ ಆಸ್ತಿಪಾಸ್ತಿಗಳನ್ನು ತಾನೇ ನೋಡಿಕೊಂಡು, ಗಂಡ ಕಳೆದದ್ದನ್ನು ಹಿಂದಕ್ಕೆ ಪಡೆದು, ಅಭಿವೃದ್ಧಿಗೊಳಿಸಿದವಳು. ಶಿಸ್ತುಬದ್ಧ ಜೀವನದ ಈ ಹೆಂಗಸಿಗೆ ತನ್ನ ಸುಪರ್ಧಿನಲ್ಲಿರುವ ರಾಮನಾಥ ಮಂದಿರದ ಬಗ್ಗೆ ಮಾರ್ದವತೆಯ ನಿಲುವು. ಮಡಿ, ಕುಡಿಗಳನ್ನು ಪಾಲಿಸದ ಮನುಷ್ಯರಿಗೆ ಮಂದಿರದೊಳಗೆ ಪ್ರವೇಶ ನೀಡದ ಜಯಕಾಳಿ ಪ್ರಾಣಭಯದಿಂದ ಓಡಿಬಂದ ಕೊಳಕು ಹಂದಿಗೆ ದೇವಾಲಯದೊಳಕ್ಕೆ ಆಶ್ರಯ ನೀಡಿ, ಬಲಿ ಕೊಡಲೆಂದು ಅದನ್ನು ಹಿಂಬಾಲಿಸಿ ಬಂದ ಜನರನ್ನು ಬೈದು ಅಟ್ಟುತ್ತಾಳೆ. ಇದನ್ನು ಕಣ್ಣಾರೆ ನೋಡಿದ ಅನೇಕರಿಗೆ ಆಘಾತವಾಗುತ್ತದೆ. ಜಯಕಾಳಿಯ ದರ್ಪಿಷ್ಟ ವ್ಯಕ್ತಿತ್ವದ ಒಳಗಿನ ಅಂತಃಕರಣ ಪ್ರಶ್ನೆಯಾಗಿ ಕಾಡುತ್ತದೆ.

'ರಾಸಮಣಿಯ ಮಗ' ಕಥೆಯ ರಾಸಮಣಿಯ ವ್ಯಕ್ತಿತ್ವವೂ ಮೂಲತಃ ನಿಭಾಯಿಸುವ ಶಕ್ತಿ, ಚೈತನ್ಯಗಳನ್ನು ಪಡೆದಿದ್ದು. ವಂಶ ಪಾರಂಪರ್ಯವಾಗಿ ಬರಬೇಕಿದ್ದ ಆಸ್ತಿಯಲ್ಲಿ ಮೋಸವಾಗಿದ್ದರೂ ಎಂದೋ ಒಂದು ದಿನ ತನ್ನ ನ್ಯಾಯವಾದ ಭಾಗ ತನ್ನ ಪಾಲಿಗೆ ಬಂದೇ ಬರುತ್ತದೆ. ಎಂಬ ಅಚಲ ನಂಬಿಕೆ, ಭೋಳ ಸ್ವಭಾವದ ವ್ಯಕ್ತಿಯ ಮಡದಿ ರಾಸಮಣಿ, ಕೆಲಸದಲ್ಲಿ ಗಟ್ಟಿಗಳು, ಮನೆಯ ಹೊಣೆಗಾರಿಕೆಯನ್ನರಿತವಳು. ಬಹುಕಾಲದ ನಂತರ ಹುಟ್ಟಿದ ಒಬ್ಬನೇ ಮಗನಿಗೆ ವಿದ್ಯೆ, ಸ್ವಾವಲಂಬನೆಗಳ ಅಗತ್ಯವನ್ನು ತಿಳಿಸಿಕೊಟ್ಟವಳು. ಮಗನ ಅಕಾಲ ಮರಣದ ನಂತರ ಹೃದಯವನ್ನು ಕಲ್ಲುಮಾಡಿಕೊಂಡು ಗಂಡನ ಬಗ್ಗೆ ಕಾಳಜಿಯಿಟ್ಟುಕೊಂಡವಳು.

ಬಾಳುವೆಯಲ್ಲಿ ಧೈರ್ಯವನ್ನು ಹೊಂದಿದ್ದ ಹೆಣ್ಣುಗಳು ರವೀಂದ್ರರ ಅಭಿಮಾನಕ್ಕೆ ಪಾತ್ರರು. ನಿಶ್ಚಯವಾಗಿದ್ದ ಮದುವೆ ಮುರಿದು ಬಿದ್ದಾಗ ಮನಸ್ಸನ್ನು ಕಹಿಮಾಡಿಕೊಳ್ಳದೆ ಹೆಣ್ಣು ಮಕ್ಕಳ ವಿದ್ಯಾಭ್ಯಾಸವನ್ನು ತನ್ನ ಜೀವನದ ವ್ರತವನ್ನಾಗಿಸಿಕೊಂಡು 'ಅಪರಿಚಿತಾ' ಕಥೆಯ ಕಲ್ಯಾಣಿ ಇದಕ್ಕೆ ಸಾಕ್ಷಿ.

ಕೈ ಹಿಡಿದವನು ತಪ್ಪುದಾರಿಗಳಿದರೆ ದಿಟ್ಟತನದಿಂದ ಅದನ್ನು ಎದುರಿಸುವ, ನ್ಯಾಯಕ್ಕಾಗಿ ಹೋರಾಡುವ ಸ್ತ್ರೀಯರು ರವೀಂದ್ರರ ಲೇಖನಿಗಳಿಗೆ ಚಿರಪರಿಚಿತರು. 'ಅಕ್ಕ' ಕಥೆಯ ಶಶಿಕಲಾ ವಿವಾಹಿತೆ, ತಾಯಿಯಾದವಳು. ತಂದೆಯ ಅಪರಿಮಿತ ಆಸ್ತಿಗೆ ಅವಳೇ ವಾರಸುದಾರಳು. ಆದರೆ ಅಪರ ವಯಸ್ಸಿನಲ್ಲಿ ತಾಯಿಗೆ ಗಂಡು ಮಗು ಜನಿಸಿದಾಗ ಈ ಕನಸು ನುಚ್ಚುನೂರಾಗಿ ಹೋಗುತ್ತದೆ. ತಾಯಿ ತಂದೆ ಸತ್ತ ಮೇಲೆ ಆ ಎಳೆಯ ತಮ್ಮ ಅಕ್ಕನ ಮಗುವೇ ಆಗಿಬಿಡುತ್ತಾನೆ. ವಿದ್ಯಾವಂತನಾದ ಗಂಡ ಕುತಂತ್ರದಿಂದ ಮಾವನ ಆಸ್ತಿಯನ್ನು ಕಬಳಿಸತೊಡಗಿದಾಗ ಅನಕ್ಷರಸ್ಥೆ ಶಶಿಕಲಾ ಪ್ರತಿಭಟಿಸುತ್ತಾಳೆ. ಜಿಲ್ಲಾ ಮ್ಯಾಜಿಸ್ಟ್ರೇಟರ ಬಳಿಗೆ ದೂರು ಒಯ್ಯುತ್ತಾಳೆ. ಅವರ ಆಶ್ರಯಕ್ಕೆ ತಮ್ಮನನ್ನು ಒಪ್ಪಿಸಿ ತಾನು ಒಂಟಿಯಾಗಿ ಗಂಡನ ಮನೆಗೆ ಬರುತ್ತಾಳೆ. ಅಸಹಜ ಸಾವಿಗೆ ಒಳಗಾಗುತ್ತಾಳೆ. 'ಮಾನಭಂಜನ' ಕಥೆಯ ಗಿರಿಬಾಲಾ ಹದಿನಾರು ವರ್ಷದ ಅಪ್ರತಿಮ ಸುಂದರಿ. ಗಂಡನ ಪ್ರೀತಿಗಾಗಿ ಹಂಬಲಿಸಿದವಳು. ನಾಟಕದ ಹೆಣ್ಣೊಬ್ಬಳಿಗೆ ಮರುಳಾದ ಗಂಡನನ್ನು ತನ್ನೆಡೆಗೆ ಎಳೆದುಕೊಳ್ಳುವ ಅವಳ ಪ್ರಯತ್ನ ವಿಫಲವಾಗುತ್ತದೆ. ಅವಳೂ ನಾಟಕಗಳಿಗೆ ಭೇಟಿಕೊಡುತ್ತಾಳೆ. ನಾಟಕದ ನಾಯಕಿಯನ್ನು ಗಂಡ ತನ್ನೊಡನೆ ಕರೆದೊಯ್ದಾಗ ಗಿರಿಬಾಲೆ ತಾನೇ ನಾಯಕಿಯಾಗಿ ರಂಗದ ಮೇಲೆ ಬರುತ್ತಾಳೆ. ರೂಪ, ಅಭಿನಯಗಳಿಂದ ಪ್ರೇಕ್ಷಕರನ್ನು ಗೆಲ್ಲುತ್ತಾಳೆ. ವಿಷಯ ತಿಳಿದು ದಿಗ್ಭ್ರಾಂತನಾದ ಗಂಡ ಗಲಭೆ ಎಬ್ಬಿಸಿದಾಗ ಪೋಲೀಸರ ವಶಕ್ಕೆ ಹೋಗುತ್ತಾನೆ. 'ವರದಕ್ಷಿಣೆ' ಕಥೆಯ ಹದಿಹರೆಯದ ನಿರುಪಮಾ ಬಡವರ ಮನೆಯ ಹೆಣ್ಣು ಮಗಳು, ಚೆಲುವೆ, ಸ್ವಾಭಿಮಾನದ ಮೂರ್ತಿ. ವರದಕ್ಷಿಣೆಯ ಹಣವನ್ನು ಪೂರ್ಣವಾಗಿ ತೆರಲು ತಂದೆ ಮಾಡುವ ಪ್ರಯತ್ನಗಳಿಗೆ ಅವಳು ಅಡ್ಡಿ ಮಾಡುತ್ತಾಳೆ. ತಾನು ಹಣದ ಚೀಲ ಅಲ್ಲವೆಂದೂ, ಹಣ ಹಾಕಿದರೆ

ಮಾತ್ರ ಬೆಲೆ ಎಂಬುದು ಇಲ್ಲಿ ಸಲ್ಲವೆಂದೂ, ಅವರ ವಾದ. ನೌಕರಿಯ ಸಂಬಂಧದಲ್ಲಿ ಪತಿ ಬೇರೆ ಊರಲ್ಲಿದ್ದಾಗ ಒಂಟಿಯಾಗಿ ಇಷ್ಟು ಧೈರ್ಯದಿಂದ ಇದ್ದ ಹೆಣ್ಣು ಮನೋವ್ಯಥೆಯಿಂದ ದೇಹದಂಡನೆಯಿಂದ ಕುಗ್ಗಿ ಕೊನೆಯುಸಿರೆಳೆಯುತ್ತಾಳೆ.

ಚಿಗುರು ಹರೆಯದ ಚಟುವಟಿಕೆಯ ಚಿಲುಮೆಗಳಂತಹ ಕಿಶೋರಿಯರನ್ನು ಕಂಡರೆ ರವೀಂದ್ರರಿಗೆ ವಾತ್ಸಲ್ಯಭಾವ ಉಕ್ಕಿ ಬರುತ್ತದೆ. 'ಸಮಾಪ್ತಿ' ಕಥೆಯ ಮೃಣ್ಮಯಿಯ ಮೂಲಕ ಬಿರಿಯಲಿರುವ ಮೊಗ್ಗು ನಿಧಾನವಾಗಿ ಅರೆಬರಿದು, ಅನಂತರ ಪೂರ್ಣ ವಿಕಾಸನಾ ಹೊಂದಿ, ನಳನಳಿಸುವ ಚೆಲುವಾದ ಹೂವಾಗುವುದನ್ನು ಹೇಳವಲ್ಲಿ ರವೀಂದ್ರರು ಕೌಶಲ್ಯವನ್ನು ತೋರಿದ್ದಾರೆ. ವಿವಾಹದ ಬಳಿಕವೂ ಮುಗ್ದತೆಯ ಸಾಕಾರವಾದ ಮೃಣ್ಮಯಿ ತನ್ನ ತುಂಟತನ, ಚೆಲ್ಲಾಟಗಳ ಬಾಲ್ಯದ ಕವಚವನ್ನು ಸೀಳಿ ಪ್ರಣಯಿನಿಯಾಗುವ, ನಿಜ ಅರ್ಥದಲ್ಲಿ ಪತ್ನಿಯಾಗುವ ಹಂತಗಳು ಹಾಸ್ಯದ ಲೇಪದಿಂದ ಕಂಗೊಳಿಸುತ್ತದೆ. 'ರಾಜ ಟೀಕೆ' ಕಥೆಯ ಲಾವಣ್ಯ ಲೇಖಾ ಲವಲವಿಕೆಯ ಮೂರ್ತಿ, ಹೆಣ್ಣುಮಕ್ಕಳು ತುಂಬಿರುವ ಕುಟುಂಬದ ಪ್ರಮೀಳಾರಾಜ್ಯದಲ್ಲಿ ಇವಳೇ ಅತ್ಯಂತ ಧೈರ್ಯಶಾಲಿನಿ. ಬ್ರಿಟಿಷರ ಗುಲಾಮನಾಗ ಬಯಸಿ ರಾವ್ ಬಹದ್ದೂರ್ ಬಿರುದಿಗೆ ಬಾಯಿ ಬಿಡುವ ತಂಗಿಯ ಗಂಡ ನವೇಂದುಶೇಖರನನ್ನು ಲೇವಡಿ, ಗೇಲಿಗಳ ಮೂಲಕ ದಾರಿಗೆ ತರುತ್ತಾಳೆ. ಭಾರತದ ಬಿಡುಗಡೆಗಾಗಿ ಹೋರಾಟ ನಡೆಸುತ್ತಿದ್ದ ಪಕ್ಷಕ್ಕೆ ಅವನಿಂದ ದೊಡ್ಡಮೊತ್ತದ ಹಣ ದೊರಕುವಂತೆ ಮಾಡುತ್ತಾಳೆ. ಅವನ ಬೂಟಾಟಿಕೆಯ ಬಲೂನು ವ್ಯಕ್ತಿತ್ವಕ್ಕೆ ಸೂಜಿ ಚುಚ್ಚಿ ಅವನ ಭ್ರಮೆಗಳನ್ನು ದೂರ ಮಾಡುತ್ತಾಳೆ.

ದುರಂತದ ಅಂಚಿಗೆ ಬಂದೂ ಪಾರಾಗುವ ಸ್ತ್ರೀ 'ತ್ಯಾಗ' ಕಥೆಯ ಕುಸುಮಾ. ಜಾತಿ ಸಂಬಂಧವಾದ ಹಗೆ ತೀರಿಸಿಕೊಳ್ಳುವ ಹಿರಿಯರ ಪಗಡೆ ಆಟದಲ್ಲಿ ಆಕೆ ಒಂದು ದಾಳವಾದರೂ, ಅವಳ ಪತಿಯ ದೃಢನಿರ್ಧಾರದಿಂದ ಬಾಳನ್ನು ಪಡೆಯುತ್ತಾಳೆ. ಇದರ ವಿರುದ್ಧ ಚಿತ್ರಣ 'ಸುಭಾ' ಕಥೆಯದು. ಸುಭಾಷಿಣಿ ಹುಟ್ಟುಮೂಕಿಯೆಂದು ಅರಿತಾಗ ಅವಳ ಗಂಡ ಬೇರೆ ಮದುವೆ ಮಾಡಿಕೊಳ್ಳುತ್ತಾನೆ. ಇನ್ನೂ ಹಲವು ಅಭಾಗಿನಿಯರ ವೃತ್ತಾಂತವನ್ನು ರವೀಂದ್ರರು ಕರುಣೆ, ವಿಷಾದಗಳಿಂದ ಆರ್ದ್ರವಾದ ಶೈಲಿಯಲ್ಲಿ ನೀಡಿದ್ದಾರೆ. 'ಶಾಸ್ತ್ರೀ' ಕಥೆಯ ಚಂದ್ರಾ ತನಗಾದ ಅನ್ಯಾಯಕ್ಕೆ ರೋಸಿ ತನ್ನನ್ನೇ ಹಿಂಸಿಸಿಕೊಂಡು ಆ ಮೂಲಕ ಅನ್ಯಾಯ ಮಾಡಿ ಹಿಂಜರಿಯುತ್ತಿರುವವರಿಗೆ ತನ್ನ ರೋಷದ ಪೆಟ್ಟನ್ನು ಕೊಡುತ್ತಾಳೆ. ಇದಕ್ಕಾಗಿ ಅವಳು ಕೊಡಬೇಕಾದ ಬೆಲೆ ಅವಳ ಜೀವ. ಆದರೂ ಅವಳು ಹಿಂಜರಿಯುವುದಿಲ್ಲ. 'ಸ್ನಾನ ಘಟ್ಟದ ಕಥೆ'ಯ ಕುಸುಮಾ ಎಳೆವರೆಯದಲ್ಲಿ ಮದುವೆಯಾಗಿ, ವಿಧವೆಯಾದೆ ಎಂದು ತಿಳಿದು ತವರಿಗೆ ಬಂದವಳು. ತನ್ನೂರಿಗೆ ಬಂದ ಒಬ್ಬ ಸಂನ್ಯಾಸಿಯನ್ನು ತನ್ನ ಗಂಡ ಎಂದು ಅರಿತುಕೊಳ್ಳುತ್ತಾಳೆ. ಅವಳ ಬದಲಾದ ಭಾವನೆಗಳನ್ನು ತಿಳಿದ ಸಂನ್ಯಾಸಿ ತಾನು ಅಲ್ಲಿಂದ ಹೊರಟು ಹೋಗುವುದಾಗಿಯೂ ಅವಳು ತನ್ನನ್ನು ಮರೆಯಬೇಕೆಂದೂ ಹೇಳಿ ಕಣ್ಮರೆಯಾಗುತ್ತಾನೆ. ಕುಸುಮಾ ಪ್ರಾಣಬಿಡುತ್ತಾಳೆ. 'ಪ್ರಾಯಶ್ಚಿತ' ಕಥೆಯಲ್ಲಿ ಗಂಡನಿಂದ ಪ್ರತಿಹಂತದಲ್ಲೂ ಮೋಸ ಹೋಗುವ ಹೆಂಡತಿ, 'ವಿಚಾರಕ' ಕಥೆಯಲ್ಲಿ ನಂಬಿದವನಿಂದ ಪೆಟ್ಟುತಿಂದ ವಿಧವೆ ಇದ್ದಾರೆ. ತನ್ನ ಗುರುಭಕ್ತಿಯನ್ನು ತಪ್ಪು ತಿಳಿದ ಗಂಡ ಆತ್ಮಹತ್ಯೆ ಮಾಡಿಕೊಂಡಾಗ, ಗುರು ಪತಿತನಾಗುವ ಸೂಚನೆ ತಿಳಿದಾಗ 'ಉದ್ಧಾರ' ಕಥೆಯ ಗೌರಿ ಆತ್ಮಹತ್ಯೆಗೆ ಶರಣು ಹೋಗುತ್ತಾಳೆ. ಕುಲೀನರ ಮನೆಯ ಸೊಸೆಯ ಅಸಹಾಯಕ ಚಿತ್ರಣ 'ಹೈಮಂತಿ' ಕಥೆಯಲ್ಲಿದೆ.

ಕೆಲವೆಡೆ ರವೀಂದ್ರರು ಒಂದೇ ಕಥೆಯಲ್ಲಿ ವಿರುದ್ಧ ಸ್ವಭಾವದ ಇಬ್ಬರು ಸ್ತ್ರೀಯರನ್ನು ಚಿತ್ರಿಸಿ, ಒಂದು ಪಾತ್ರದಿಂದ ಇನ್ನೊಂದು ಪಾತ್ರವನ್ನು ಸ್ಫುಟಗೊಳಿಸುತ್ತಾರೆ. 'ಮಧ್ಯವರ್ತಿನಿ' ಕಥೆಯ ಹರಸುಂದರಿ ಪ್ರೌಢೆ. ತನಗೆ ಮಕ್ಕಳಾಗುವ ಸಾಧ್ಯತೆ ಇಲ್ಲ ಎಂದು ತಿಳಿದು ತಾನೇ ಶೈಲಿಬಾಲೆ ಎಂಬ ಎಳೆಯಳೊಡನೆ ಗಂಡನ ಮದುವೆ ಮಾಡಿಸುತ್ತಾಳೆ. ಬರಬರುತ್ತ ಹರಸುಂದರಿ ಹಿನ್ನೆಲೆಗೆ ಸರಿದು ಶೈಲಬಾಲೆ ಮುನ್ನೆಲೆಗೆ ಬರುತ್ತಾಳೆ. ಹರಸುಂದರಿಯ ನಿಸ್ವಾರ್ಥ, ಶೈಲಬಾಲೆಯ ಆತ್ಮಮೋಹ ಒಂದಕ್ಕೊಂದು

ವಿರುದ್ಧವಾದವು. 'ಕಡೆಯ ಇರುಳು' ಕಥೆಯಲ್ಲಿ ತನ್ನ ರೋಗಿಪತಿಯ ಹಂಬಲವನ್ನು ತಿಳಿಯಲಾರದ, ಉದಾಸೀನೆಯಾದ, ಅಬೋಧ ಬಾಲಿಕೆ ಮಣಿಯ ಎದುರಿಗೆ ಆ ರೋಗಿಯನ್ನು ಸಾಕಿ ಬೆಳೆಸಿದ ಪ್ರೇಮಮಯಿ ಅತ್ತೆಯ ಚಿತ್ರಣವಿದೆ.

ಭಾರತೀಯ ಹಾಗೂ ಪಾಶ್ಚಾತ್ಯ ಸಂಸ್ಕೃತಿಗಳ ಘರ್ಷಣೆಯ ಕಾಲದಲ್ಲಿ ತಮ್ಮ ಜೀವನದ ಪ್ರಾರಂಭದ ವರ್ಷಗಳನ್ನು ಕಳೆದ ರವೀಂದ್ರರ ಲೇಖನಿಯಿಂದ ಹೊರಬಂದ ಎಂಬತ್ತಕ್ಕೂ ಹೆಚ್ಚಿನ ಸಣ್ಣಕತೆಗಳಲ್ಲಿ, ದೇಶವನ್ನು ಬಾಧಿಸುತ್ತಿದ್ದ ಹಲವು ಸಮಸ್ಯೆಗಳ ಚರ್ಚೆಯಿದೆ. ಸಂಪ್ರದಾಯ, ಪ್ರಗತಿಗಳ ಮಿತಿ ವ್ಯಾಪ್ತಿಗಳು, ಸಮಾಜ ವ್ಯಕ್ತಿಗಳ ಸಂಬಂಧ, ಧರ್ಮ ನೀತಿಗಳ ಕಟ್ಟುಪಾಡು, ರಾಷ್ಟ್ರೀಯತೆ ಮತ್ತು ಇತರ ಮೌಲ್ಯಗಳು, ಸಮಾಜದಲ್ಲಿ ಮಹಿಳೆಯ ಸ್ಥಾನ ಮೊದಲಾದ ಹಲವು ವಿಷಯಗಳನ್ನು ರವೀಂದ್ರರು ತಮ್ಮ ಸಣ್ಣಕಥೆಗಳ ವಸ್ತುವನ್ನಾಗಿಸಿಕೊಂಡಿದ್ದಾರೆ. ತಮ್ಮ ವಿಚಾರಮಂಥನದಿಂದ ಈ ಸಣ್ಣಕಥೆಗಳಲ್ಲಿ ಸ್ತ್ರೀಯ ಅಂತರಂಗದ ಅನೇಕ ನಿಗೂಢ ಸತ್ಯಗಳನ್ನು ಅನಾವರಣಗೊಳಿಸುತ್ತಾರೆ. ಈ ಕಾರಣದಿಂದಲೇ ಇಂದಿಗೂ ರವೀಂದ್ರರ ಸಣ್ಣಕಥೆಗಳಲ್ಲಿನ ಸ್ತ್ರೀ ಪಾತ್ರಗಳು ಜೀವಕಳೆಯಿಂದ ಓದುಗರನ್ನು ಆಕರ್ಷಿಸುತ್ತವೆ.

ವಿ.ಜಿ. ಭಟ್ಟರ ಕಾವ್ಯಭಾಷೆ

ಡಾ. ಶ್ರೀಕೃಷ್ಣಭಟ್ ಅರ್ತಿಕಜೆ

ಭಾಷೆಯೆನ್ನುವುದು ನಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ಪ್ರಕಟಿಸುವ ವಿಧಾನಗಳಲ್ಲಿ ಅತ್ಯಂತ ಪ್ರಬಲವಾದುದು. ಧ್ವನಿ, ಪದ, ವಾಕ್ಯ ಹಾಗೂ ಅರ್ಥಗಳ ವಿವಿಧ ಸಂಯೋಜನೆಗಳ ಮೂಲಕ ಭಾಷೆ ಉಂಟುಮಾಡಬಹುದಾದ ಪರಿಣಾಮಗಳು ಅನೇಕ. ಭಾಷೆಯ ಆಂತರಿಕ ಸಂರಚನೆ ಮಾತ್ರವಲ್ಲದೆ ಅದರ ಸಾಮಾಜಿಕ ಸಂದರ್ಭ ಕೂಡ ಸಾಹಿತ್ಯದ ಒಟ್ಟಾರೆ ಅರ್ಥದ ದೃಷ್ಟಿಯಿಂದ ಮುಖ್ಯವಾಗುತ್ತದೆ. ಯಾವುದೇ ಮಾತಿನ ಸಂದರ್ಭ ಸಾಧಾರಣವಾಗಿ ಒಂದಕ್ಕಿಂತ ಹೆಚ್ಚಿನ ಸಾಧ್ಯತೆಗಳನ್ನು ಒಳಗೊಂಡಿರುತ್ತದೆ. ಬೇರೆ ಬೇರೆ ಸನ್ನಿವೇಶ ಸಂದರ್ಭಗಳಿಗೆ ತಕ್ಕಂತೆ ಹಾಗೂ ಬೇರೆ ಬೇರೆ ಪಾತ್ರಗಳಿಗೆ ಭಾವನೆಗಳಿಗೆ ತಕ್ಕಂತೆ ವಿಭಿನ್ನ ರೀತಿಯ ಭಾಷೆಯನ್ನು ಸಾಹಿತ್ಯ ರಚನೆಯ ಸಂದರ್ಭದಲ್ಲಿ ಉಪಯೋಗಿಸಬೇಕಾಗುತ್ತದೆ. ಭಾಷೆ ಅತ್ಯಂತ ಶಕ್ತಿಯುತವಾದುದು; ಪ್ರಭಾವಯುತವಾದದು. ಒಂದು ಕೃತಿಯ ಸತ್ವ ಪರಿಪೂರ್ಣ ವಾಗಿ ಹಾಗೂ ಸುಂದರವಾಗಿ ಅಭಿವ್ಯಕ್ತವಾಗುವುದು ಉಚಿತವಾದ ಭಾಷೆಯ ಮೂಲಕ. ಒಂದು ಕಾವ್ಯವು ಚೆನ್ನಾಗಿ ಮೂಡಿಬರಬೇಕಾದರೆ ಅದಕ್ಕೆ ಸತ್ವಯುತವಾದ, ಶಕ್ತಿಯುತವಾದ ಉಚಿತ ಭಾಷೆಯ ಅಗತ್ಯವಿದೆ. ಕಾವ್ಯದಲ್ಲಿ ಭಾಷಾ ಸೌಂದರ್ಯವೂ ಒಂದು ಪ್ರಧಾನ ಅಂಶ. ಕಾವ್ಯಭಾಷೆಯು ಕವಿಯ ಮನೋಧರ್ಮಕ್ಕೆ ಅನುಗುಣವಾಗಿರುತ್ತದೆ. ಕವಿಯಿಂದ ಕವಿಗೆ ಅದು ಭಿನ್ನವಾಗಿರುತ್ತದೆ. ಕಾವ್ಯವಸ್ತುವಿಗೆ ಹೊಂದಿಕೊಳ್ಳುವ ಹಾಗೂ ತನಗೆ ಒಗ್ಗುವ ಭಾಷೆಯನ್ನು ಕವಿ ಬಳಸುತ್ತಾನೆ. ಪದ್ಯದ ಭಾಷೆ ಗದ್ಯದ ಭಾಷೆಗಿಂತ ಭಿನ್ನವಾದುದು. ಭಾಷಾಶೈಲಿ ಕವಿಪ್ರತಿಭೆಯ ನಿಕಷವೂ ಆಗಿದೆ.

ಹಳಗನ್ನಡದ ಚಂಪೂಕಾವ್ಯ ರಚಿಸಿದ ಪಂಪ - ರನ್ನರ ಶೈಲಿ - ಕಾವ್ಯಭಾಷೆ ಸಂಸ್ಕೃತ ಭೂಯಿಷ್ಠವಾಗಿದ್ದರೂ ಮಾರ್ಗ ದೇಸಿ ಸಮನ್ವಿತವಾಗಿದೆ. ಆ ಕುರಿತು ಪಂಪನೇ ತನ್ನ ಕೃತಿಯಲ್ಲಿ ''ಬಗೆ ಪೊಸತಪ್ಪುದಾಗಿ ಮೃದು ಬಂಧದೊಳೊಂದುವುದೊಂದಿ ದೇಸಿಯೊಳ್ ಪುಗುವುದು ಪೊಕ್ಕ ಮಾರ್ಗದೊಳೆ ತಳ್ವುದು ತಳ್ತೊಡೆ ಕಾವ್ಯ ಬಂಧಮೊಪ್ಪುಗುಂ'' ಎಂದು ಹೇಳಿದ್ದಾನೆ. ಸಾರಸ್ವತಮೆನಿಪ ಕವಿತೆಯಲ್ಲಿ ವಾಗ್ದೇವಿಯ ಭಂಡಾರದ ಮುದ್ರೆಯನ್ನೊಡೆದ ಕವಿರನ್ನನು ಶಕ್ತಿಕವಿ, ಮುಂದೆ ಬಂದ ರಗಳೆ, ಷಟ್ಪದಿ, ಸಾಂಗತ್ಯ, ತ್ರಿಪದಿ ಮುಂತಾದ ಕಾವ್ಯ ಪ್ರಕಾರಗಳ ಶೈಲಿ ದೇಶೀಶೈಲಿ. ಕಾಲದಿಂದ ಕಾಲಕ್ಕೆ ಕಾವ್ಯ ಭಾಷೆ - ಶೈಲಿ ಬದಲಾಗುತ್ತಾ ಬಂದಿದೆ. ಹೊಸಗನ್ನಡದ ಕಾಲಕ್ಕೆ ಬಂದಾಗ ಕವಿ ಮುದ್ದಣನು ''ಕರ್ಣಾಣ ಸರದೊಳ್ ಚೆಂಬವಳಮಂ ಕೋದಂತಿರೆ'' ಕನ್ನಡ - ಸಂಸ್ಕೃತ ಭಾಷೆಗಳ ಪದಗಳನ್ನು ಬೆರಸಿದ ಶೈಲಿಯೇ ಸುಂದರ ಎನ್ನುತ್ತಾನೆ. ಆಧುನಿಕ ಕನ್ನಡಕವಿಗಳಲ್ಲಿ ನಾವು ಕುವೆಂಪು ಶೈಲಿ, ಬೇಂದ್ರೆ ಶೈಲಿ, ಜಿ.ಪಿ. ರಾಜರತ್ನಂ ಶೈಲಿ ಎಂಬುದಾಗಿ ಗುರುತಿಸುತ್ತೇವೆ. ಬೇಂದ್ರೆಯವರ ಕಾವ್ಯಭಾಷೆಯನ್ನು ನಾವು ಗುರುತಿಸುವುದು ಉತ್ತರ ಕರ್ನಾಟಕದ ಜನಪದ ಭಾಷೆಯೊಂದಿಗೆ. ಅವರದು ಜನಪದ ಕಾವ್ಯಮಾರ್ಗ. ದಕ್ಷಿಣಕನ್ನಡದ ಲೇಖಕರು ಹೆಚ್ಚಾಗಿ ಶಿಷ್ಟಭಾಷೆಯನ್ನೇ ಬರವಣಿಗೆಯ ಮಾಧ್ಯಮವನ್ನಾಗಿ ಬಳಸಿರುವುದು ಕಂಡುಬರುತ್ತದೆ. ಪಂಜೆ, ಕಾಮತ್, ಪೈ ಮೊದಲಾದವರ ಕಾವ್ಯವನ್ನು ಈ ದೃಷ್ಟಿಯಿಂದ ಗಮನಿಸಬಹುದು. ವೈಯಕ್ತಿಕ ಶೈಲಿಯಲ್ಲಿ ಕವಿಯ ವ್ಯಕ್ತಿತ್ವದ ಮುದ್ರೆ ಆತನ ರಚನೆಯ ಮೇಲೆ ಮೂಡಿರುವುದನ್ನು ಕಾಣುತ್ತೇವೆ. ಕವಿ ಪ್ರತಿಯೊಂದು ಪದದ ಆಯ್ಕೆಯಲ್ಲೂ ತನ್ನತನವನ್ನು ಮೆರೆಯುತ್ತಾನೆ. ಆತನಿಗೆ ಭಾಷೆಯನ್ನು ಬಳಸುವುದು ಪ್ರಜ್ಞಾವಂತಿಕೆಯ ಕೆಲಸವಾಗಿರುತ್ತದೆ. ನವ್ಯಕವಿಗಳಲ್ಲಿ ಅಡಿಗ, ಎ.ಕೆ. ರಾಮಾನುಜನ್, ರಾಮಚಂದ್ರಶರ್ಮ ಮೊದಲಾದವರ ಕಾವ್ಯಗಳನ್ನು ಅವರ ಭಾಷಾ ಪ್ರಯೋಗಗಳ ವಿಧಾನದಿಂದ ಗುರುತಿಸಬಹುದು. ಎಲ್ಲ ಕಾವ್ಯಭಾಷೆಯೂ ಅರ್ಥವನ್ನು ಮೀರಿ ಭಾವವನ್ನು ಮೂಡಿಸುವುದಕ್ಕೆ ಪ್ರಯತ್ನಿಸುತ್ತದೆ. ಇಲ್ಲಿ ತರ್ಕಕ್ಕಿಂತ ಧ್ವನಿಯೇ ಪ್ರಧಾನ. ಆಧುನಿಕ ಕನ್ನಡಕವಿಗಳಲ್ಲಿ ವಿ.ಜಿ.ಭಟ್ಟರೂ ಪ್ರಮುಖರಾಗಿದ್ದಾರೆ. ಅವರ ಕಾವ್ಯ ಭಾಷೆ ವಿಶಿಷ್ಟವಾದುದು.

ವಿ.ಜಿ.ಭಟ್ಟರು ತಮ್ಮ 'ಅರಿಯುತೇನೆ ನಡೆ' ಕವನ ಸಂಕಲನದ ಅರಿಕೆಯಲ್ಲಿ 'ಓದುತ್ತೇನೆ. ವಿಚಾರಿಸುತ್ತೇನೆ. ಭಾವನೆಗಳು ಮೂಡುತ್ತವೆ. ಅವುಗಳನ್ನು ಶಬ್ದದಲ್ಲಿ ಹಿಡಿಯುವ ಯತ್ನ ಹಲವು ಸಲ ಸಫಲವಾಗುತ್ತದೆ. ಕೆಲವು ಸಲ ಶಬ್ದಗಳು ನುಣುಚಿಕೊಂಡು ಹೋಗಿಬಿಡುತ್ತವೆ' ಎಂದಿದ್ದಾರೆ. ಅದೇ ಅರಿಕೆಯಲ್ಲಿ ಮುಂದೆ 'ಅನಾರೋಗ್ಯದಲ್ಲಿ ಜೀವ ನರಳುತ್ತದೆ. ಆದರೂ ಕವಿತೆ ಅರಳುತ್ತದೆ' ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅವರ ಈ ಮಾತು ಸತ್ಯವೂ ಹೌದು. ಅದಕ್ಕೆ ಕಾರಣ ಕಾವ್ಯಭಾಷೆಯ ಮೇಲೆ ಅವರಿಗಿದ್ದ ಹಿಡಿತ - ನಿಯಂತ್ರಣ. ವಿ.ಜಿ.ಭಟ್ಟರ ಕಾವ್ಯಶೈಲಿ ಅವರ ಕಾಲದ ಇತರ ಎಲ್ಲ ಕವಿಗಳಿಗಿಂತ ತೀರಾ ಭಿನ್ನವಾದುದು. ಅದರಲ್ಲಿ ಅವರದೇ ಆದ ಒಂದು ವೈಶಿಷ್ಟ್ಯವಿದೆ; ತನ್ನತನವಿದೆ. ಅವರದು ಸತ್ವಯುತವಾದ ಶೈಲಿ.

ರಂ.ಶ್ರೀ.ಮುಗಳಿಯವರು ವಿ.ಜಿ.ಭಟ್ಟರ ಕಾವ್ಯದ ಕುರಿತು ಬರೆಯುತ್ತಾ 'ವಿ.ಜಿ.ಭಟ್ಟರು ತಮ್ಮ ವಿಡಂಬನಾತ್ಮಕ ಕವಿತೆಗಳನ್ನು ಬರೆಯ ತೊಡಗಿದರು. ಅವರು ಪಲಾಯನ, ಕಾವ್ಯವೇದನೆ, ರಕ್ತಾಂಜಲಿ, ತುಂಟನ ಪದಗಳು, ಅರಣ್ಯರೋದನ ಮುಂತಾದ ಸಂಗ್ರಹಗಳನ್ನು ಪ್ರಕಟಿಸಿ ತಮ್ಮದೇ ಆದ ಒಂದು ಕಾವ್ಯಪ್ರಪಂಚವನ್ನು ನಿರ್ಮಿಸಿಕೊಂಡಿದ್ದಾರೆ. ಅದರಲ್ಲಿ ಒಂದು ಕ್ಷಣಿಕ ವಿನೋದ, ಬರೀ ತುಂಟತನವಿದ್ದಂತೆ ಕಂಡರೂ ಮಾರ್ಮಿಕವಾದ ವಿಡಂಬನೆಯೂ ಬಂದಿದೆ. ಅವರ ಕೆಲವು ಕೃತಿಗಳಲ್ಲಿ ಕೊನೆಬಾಳ ಬಲ್ಲ ಗುಣವಿದೆ' (ಕನ್ನಡ ಸಾಹಿತ್ಯದ ಇತಿಹಾಸ ಪು. ೨೩೪) ಎಂದಿದ್ದಾರೆ. ಡಾ॥ ಜಿ.ಎಸ್. ಆಮೂರ ಅವರು ವಿ.ಜಿ.ಭಟ್ಟರ ಕಾವ್ಯವನ್ನು ವಿಮರ್ಶಿಸುತ್ತ ಹೇಳಿದ ಅಭಿಪ್ರಾಯಗಳು ಗಮನಾರ್ಹವಾಗಿವೆ. ಅವರ ಪ್ರಕಾರ 'ವಿ.ಜಿ.ಭಟ್ಟರ ಕಾವ್ಯವು ಒಂದು ಬೌದ್ಧಿಕ ಕ್ರಿಯೆಯೇ. ಅದು ಭಾವಗೀತೆಯಲ್ಲ, ಅ-ಭಾವಗೀತೆ. ಭಾವನೆಗಳ ವಿರುದ್ಧ ಬಂಡೇಳುವ ಒಂದು ಪ್ರವೃತ್ತಿ ಈ ಕಾವ್ಯದ ಮುಖ್ಯಲಕ್ಷಣ. ನವೋದಯ ಕಾವ್ಯ ಬಹಳ ಶಕ್ತಿಶಾಲಿಯಾಗಿದ್ದ ಕಾಲದಲ್ಲಿ ಭಟ್ಟರು ಬರೆಯಲು ಪ್ರಾರಂಭಿಸಿದರು. ಕಾವ್ಯದ ಮೇಲೆ ಭಟ್ಟರಿಗೆ ಪ್ರೀತಿ ಇದೆ. ಆದರೆ ಅದರ ಅಭಿವ್ಯಕ್ತಿ ಮಾತ್ರ ಬೇರೆ ವಿಧವಾದದ್ದು. ಭಟ್ಟರ

ಕಾವ್ಯವನ್ನು ಓದುವಾಗ ಬೇಂದ್ರೆ, ನರಸಿಂಹಸ್ವಾಮಿ, ಗೋಕಾಕ, ವಿ.ಸೀ. ಅದೇಕೆ, ಕಾಳಿದಾಸ ಕೂಡ ನೆನಪಿಗೆ ಬರುತ್ತಾರೆ. ಭಟ್ಟರು ಈ ಕವಿಗಳ ಅನುಕರಣ ಮಾಡುವುದಿಲ್ಲ. ಅವರ ಅಣಕವೂ ಅವರ ಗುರಿಯಲ್ಲ. ನವೋದಯ ಕಾವ್ಯದ ಮಟ್ಟುಗಳನ್ನು, ಲಯಗಳನ್ನು ಭಾಷೆಯನ್ನು ತಿರುಗು ಮುರುಗಾಗಿ ಬೇರೆ ರೀತಿಯ ಒಂದು ಕಾವ್ಯವನ್ನು ಅವರು ಸೃಷ್ಟಿಸಿದರು'. ವಿ.ಜಿ.ಭಟ್ಟರ ಮೊದಲ ಹಂತದ ಕವನಗಳನ್ನು ವಿಮರ್ಶಿಸುತ್ತ ಸಿ.ವಿ.ವೇಣುಗೋಪಾಲ ಅವರೂ ಇದೇ ಅಭಿಪ್ರಾಯವನ್ನು ಪ್ರಕಟಸಿದ್ದಾರೆ. 'ಇಲ್ಲಿ ನಮಗೆ ಭಟ್ಟರ ಕಾವ್ಯದಲ್ಲಿ ಕಂಡುಬರುವ ವೈಶಿಷ್ಟ್ಯವೆಂದರೆ ಹೆಸರಾಂತ ಸಮಕಾಲೀನ ಕವಿಗಳ ಸಂಪರ್ಕವಿದ್ದರೂ ಅವರು ಹಿಡಿದ ಜಾಡನ್ನು ಹಿಡಿಯದೆ ಕಾವ್ಯ ಮಾಧ್ಯಮದಲ್ಲಿ ಅವರಿಂದ ಯಾವ ಪ್ರಭಾವಕ್ಕೂ ಒಳಗಾಗದೆ ತನ್ನ ಸುತ್ತಲಿನ ಜೀವನವನ್ನು ನೋಡುವ ದೃಷ್ಟಿಯಲ್ಲಾಗಲೀ ತಾನು ಕಂಡದ್ದನ್ನು ತಾನು ಕಂಡಂತೆ ಅಭಿವ್ಯಕ್ತಿಗೊಳಿಸಲು ಸ್ವೀಕರಿಸುವ ಮಾಧ್ಯಮದಲ್ಲಾಗಲೀ ಒಂದು ವಿಶಿಷ್ಟ 'ಭಟ್ಟತನ'ವನ್ನು ಮೆರೆದಿದ್ದರು. ಅತ್ಯಂತ ಸರಳವೆನ್ನಬಹುದಾದ ಭಾಷೆಯಲ್ಲಿ ವ್ಯಂಗ್ಯ ವಿಡಂಬನೆಯ ಮೂಲಕ ಇಲ್ಲದ ಆದರ್ಶಗಳನ್ನು ಅಪ್ಪಿಕೊಂಡಿದ್ದವರನ್ನು, ಕನಸುಗಾರರನ್ನು ಚುಚ್ಚಿದರು. ವಾಸ್ತವಿಕ ಕಟುಸತ್ಯಗಳ ಯಾವ ಭಯವೂ ಇಲ್ಲದೆ ಪ್ರಕಟಿಸಿದರು''.

''ಹಾಸ್ಯ, ವಿಡಂಬನೆ, ಚುಟುಕು ಚಾಟೂಕ್ತಿಗಳು ನನಗೆ ಮೊದಲಿನಿಂದಲೂ ಅಂಟಿಬಂದ ಗೀಳು. ಈಗಲೂ ನಗೆಯ ಕಚಕುಳಿತನ ನನ್ನನ್ನೇ ಕಟ್ಟಾಡಿಸುತ್ತದೆ. ಜೀವನ ಸಹ್ಯವಾಗಲು ಎದೆ ಹಗುರವಾಗಲು ಈ ವಿಲಾಸ ಆಗಾಗ ಅಗತ್ಯವೆನಿಸುತ್ತದೆ'' ಎಂದು ವಿ.ಜಿ.ಭಟ್ಟರೇ ತಮ್ಮ 'ಕತ್ತೆಯ ಕನಸು' ಕವನ ಸಂಕಲನದ ಅರಿಕೆಯಲ್ಲಿ ಹೇಳಿದ್ದಾರೆ.

ಒಟ್ಟನಲ್ಲಿ ತುಂಟತನ, ಹಾಸ್ಯ ವಿಡಂಬನೆ, ಪ್ರಾಸ ಮುಂತಾದವು ವಿ.ಜಿ.ಭಟ್ಟರ ಕಾವ್ಯಭಾಷೆಯಲ್ಲಿ ಎದ್ದು ಕಾಣುವ ಲಕ್ಷಣಗಳು. ರಾಮಚಂದ್ರ ಶರ್ಮರ ಹೃದಯಗೀತ ಬಂದ ಕಾಲದಲ್ಲೇ ಪ್ರಕಟವಾದ ವಿ.ಜಿ.ಭಟ್ಟರ ಆತ್ಮಶೋಧನೆಯನ್ನು ಕುರಿತು ಲಂಕೇಶ್ ಅವರು ''ಶರ್ಮರ ಭಾಷಣಕ್ಕೆ ತುಂಟ ಪ್ರೇಕ್ಷಕನೊಬ್ಬ ಮಾಡಿದ ಕ್ಯಾಟ್‌ಕಾಲ್ ರೀತಿಯಲ್ಲಿದೆ ಇದು. ಇಲ್ಲಿ ಶರ್ಮರಲ್ಲಿ ಸಿಗದ ತುಂಟತನ, ಬುದ್ಧಿವಂತಿಕೆ ಇವೆ. ಯಾವುದೇ ಒಂದು ಸಿದ್ಧಾಂತ ಅಥವಾ ಆದರ್ಶಕ್ಕೆ ಸೇವಕರಾಗದೆ ನೋಡುವ ಬಿಡುವು ಇದೆ'' ಎಂದಿದ್ದಾರೆ. ಬಹುಶಃ ಇದಕ್ಕಿಂತ ಹೆಚ್ಚು ಗಮನಾರ್ಹವಾಗಿ ಭಟ್ಟರ ಹಾಸ್ಯ ಪ್ರವೃತ್ತಿ ಕವನದ ನಡಿಗೆಯಲ್ಲೆ ಬಂದಿದೆ.

ಆತ್ಮಶೋಧನೆ

ಹುಡುಕಿದೆ ಹಗಲೆಲ್ಲಾ
ಎಲ್ಲೂ ಸಿಗಲಿಲ್ಲಾ
ಹಳಬರು ಹೇಳಿದ ಆತ್ಮವು ನನಗೆ
ಎಲ್ಲೂ ಸಿಗಲಿಲ್ಲಾ
ಗುಡಿಯಲಿ ಬರಿಕಲ್ಲು
ವೇದಪುರಾಣದ ಪೀಠದ ಮೇಲೆ
ಬೆಳೆದಿದೆ ಒಣ ಹುಲ್ಲು
ಹುಡುಕಿದೆ ಮಗುವಿನ ಕಣ್ಣಿನಲಿ
ಮಸಣದ ಮಣ್ಣಿನಲಿ
ಸಿಗಲಿಲ್ಲ
....

ಮತ್ತೆಲ್ಲೆಲ್ಲೂ ಹುಡುಕೀ
ಹುಡುಕಿದೆ
ಆತ್ಮವು ಸಿಗಲಿಲ್ಲ
ಪುಣ್ಯಕೆ ಹುಚ್ಚಲೆದಾಡುವ ನನ್ನನು ನೋಡಿ
ಯಾರೂ ನಗಲಿಲ್ಲ!
....
ಮನೆಯಲಿ ಮಂಚದ ಮೇಲೊರಗಿ
ಆತ್ಮವ ಕಾಣದೆಯೆ ಕೊರಗಿ
ಏನೂ ತಿಳಿಯದೆ ಕುಳಿತಿರಲಾರೋ
ಕರೆದರು ನೋಡಿದೆ ಹಿಂತಿರುಗಿ
ಯಾರೂ ಇದ್ದಿಲ್ಲ, ನನ್ನುಸಿರಿನ ಸದ್ದಿಲ್ಲ
ಆ ಕರೆ ಬಂತು ತಡೆಯುವಂದೆಂತು?
ಕರೆಯನು ಹಿಂಬಾಲಿಸಿ ನಡೆದೆ
ದೊಡ್ಡ ಕಪಾಟಿನ ಬಳಿ ತಡೆದೆ
ಅದರೊಳಗಿಂದ 'ಬಾ ಬಾ ಕಂದ'
ಎಂದೆನ್ನಾರೋ ಕರೆ ಕರೆಯೆ
ಗುರುತಿಸಿ ಆ ಹೊತ್ತಿಗೆ ತೆರೆಯೆ
ಅದರೊಳಗಿಂದ ಇದೋ ಇದೋ ಕಂದ
ನಾನಿಹೆನಿಲ್ಲಿ ಹುಡುಕುವೆ ನೀನೆಲ್ಲಿ?
ಸಿಕ್ಕಿತು ! ಸಿಕ್ಕಿತು ! ಆತ್ಮವು ಸಿಕ್ಕಿತು
ಕಿಟ್ಟೆಲ್ ಕೋಶದ ನೂರಾ ಐವತ್
ಮೂರನೆ ಪುಟದಲ್ಲಿ
ಹರಿ ಓಂ ಹರಿ ಓಂ ಹರಿಹರ ಓಂ ಸತ್ । ಆತ್ಮವು ಇನ್ನೆಲ್ಲಿ
ಹಳಬರು ಹೇಳಿದ ಆತ್ಮವು ಇನ್ನೆಲ್ಲಿ?

ಸಂಸಾರದಲ್ಲಿ ದಾಂಪತ್ಯ ಜೀವನವು ಸುಖವಾಗಿರಬೇಕೆಂದು ಬಯಸುವ ವಿವಾಹಿತರಿಗೆ ಅವರು ನೀಡಿದ ಒಂದು ಸುಲಭಸೂತ್ರದ ವಿಡಂಬನೆ ಚೆನ್ನಾಗಿದೆ :

ನಿನ್ನಿಂದಾದರೆ ಏನೇ ತಪ್ಪು
ಕೂಡಲೆ ಖುಷಿಯಿಂದೊಪ್ಪು
ಅವಳಿಂದಾದರೆ
'ತುಂಬಾ ಉಪಕೃತ'
ಎಂದಾಕೆಯ ಬಿಗಿದಪ್ಪು

'ಸಂಶಯ' ಎಂಬ ಅವರ ಕವನ ವಿಡಂಬನೆಗೆ ಇನ್ನೊಂದು ಉದಾಹರಣೆ :

ಜಗದ ಹೆಂಗಳನೆಲ್ಲ ತಾಯಂತೆ ಕಾಣುವರು
ತಿಳಿಯಿತೇ ನಿನಗೆ ಮಗುವೆ?
ಲೇಸು ತುಸು ತಡೆ ಗುರುವೆ ಮನದಿ ಸಂಶಯವಿಹುದು
ತಂದೆಯನು ಕೇಳಿ ಬರುವೆ

ಅಗತ್ಯವಾಗಿ ಓದಿ ಚಪ್ಪರಿಸಬೇಕಾದ ಅನೇಕ ಕವನಗಳನ್ನು ವಿ.ಜಿ.ಭಟ್ಟರು ರಚಿಸಿದ್ದಾರೆ. ಇವರ ಕವನಗಳಲ್ಲಿ ಪ್ರಾಸ ಮಿಗಿಲಾದರೂ ಅದರಾಚೆಯ ಧ್ವನಿಗಳೂ ಅಲ್ಲಲ್ಲಿ ಕಂಡುಬರುತ್ತವೆ. ಹಾಸ್ಯ ವಿಡಂಬನೆಗಳು ಮುಖ್ಯವಾಗಿ ಭಟ್ಟರ ಲಯ. ಉದಾಹರಣೆಗೆ ಇನ್ನೊಂದು ಚಾಟೂಕ್ತಿ :

ನಿನ್ನಂತಹ ಸುರಸುಂದರಿಯನು ನಾ
ಕಂಡೇ ಇಲ್ಲವು ಹೆಣ್ಣೆ
ಈ ಬಗೆ ಸುಳ್ಳಿನ ನುಡಿ ಸಂಸಾರದ
ಗಾಡಿಯ ಕೀಲಕೆ ಎಣ್ಣೆ

ಕೆಲವು ಕವನಗಳ ಹೆಸರುಗಳಲ್ಲೇ ಒಂದು ರೀತಿಯ ವಿಡಂಬನೆಯಿದೆ. ಕತ್ತೆಯ ಕನಸು, ದೋಷಾಲಂಕಾರ, ಒತ್ತುವಳಿ, ಹರಕುಛತ್ರಿ, ಮೃತ್ಯುಕಲಾ ಮಹಾವಿದ್ಯಾಲಯ, ರೇಟು, ಕೋಳಿಯ ಸಾರು, ಮರಣಕ್ಕೆ ಕ್ಯೂ, ಎಲಾ ಎಲಾ ಬೆಪ್ಪಕ್ಕಿ, ಹತ್ತರ ಕೂಡ ಹನ್ನೊಂದು, ಗರುಡಗಮನ ಬಂದ, ಎಲೆ ಮತದಾನಿ ಹುಳವೇ, ಕಲ್‌ತುರಿಕೆ, ಬೆಕ್ಕಣ್ಣಾ ಬೆಕ್ಕಣ್ಣಾ, ನೊಣಕೊಲ್ಲುವ ಸಪ್ತಾಹ, ಅಯ್ಯೋ ಪಾಪ ಶಾರದೆ, ಹೋದ ಪುಟ್ಟ ಬಂದ ಪುಟ್ಟ, ಸಂಖ್ಯಾಶಾಸ್ತ್ರ, ಹೆಂ.ಪೋ. ಅಂಧೇರಿ ಸೇತುವೆಯ ಕೆಳಗೆ - ಮುಂತಾದ ಶೀರ್ಷಿಕೆಗಳಲ್ಲಿ ವಿನೋದವನ್ನು ಕಾಣಬಹುದು.

ಭಟ್ಟರು ಛಂದಸ್ಸಿನ ದೃಷ್ಟಿಯಿಂದ ಅಲ್ಲಲ್ಲಿ ಹಳಬರಂತೆಯೇ ಕಂಡುಬಂದರೂ ಅವರ ನಗುವನ್ನುಕ್ಕಿಸುವ ಕೆಲಸಕ್ಕೆ ಅದು ಸಹಾಯಕವಾಗಿಯೇ ಇದೆ. ಪಿ.ಲಂಕೇಶ್ ಅವರು ವಿ.ಜಿ.ಭಟ್ಟರ ಕಾವ್ಯದ ಬಗ್ಗೆ ಬರೆಯುತ್ತ ''ಇವರ ಸಾಂಸಾರಿಕ ಪದ್ಯಗಳು ಮತ್ತು ತುಂಟಪ್ರೇಮಗೀತೆಗಳನ್ನು ಓದಿದವರಿಗೆ ಎರಡರಲ್ಲೂ ಕಂಡುಬರುವ ಭ್ರಮೆಯಿಲ್ಲದ ಕಾಳಜಿ ಮತ್ತು ಭಾವಾಡಂಬರವಿಲ್ಲದ ಅನುಕಂಪೆ ಎಚ್ಚರಗಳು ಹೇಗೆ ಭಟ್ಟರಿಗೆ ದೊಡ್ಡಕವಿಯ ಸಿದ್ಧತೆ ಇದೆಯೆಂದು ತೋರುತ್ತದೆ. ನನಗೆ ಇಲ್ಲಿ ಮುಖ್ಯವಾಗಿರುವುದು ಭಟ್ಟರು ಇಲ್ಲಿ ಮಹಾತ್ವಾಕಾಂಕ್ಷೆಯ ಕಾವ್ಯ ಅಥವಾ ಮಾನವೀಯತೆ ಮೀರಿದ ಅನುಭವ ಕೊಟ್ಟಿದ್ದಾರೆಯೆ ಎಂಬುದಕ್ಕಿಂತ ಮನುಷ್ಯನ ಬುದ್ಧಿವಂತಿಕೆ, ತುಂಟತನ, ಒಳ್ಳೆಯತನ, ಸಣ್ಣತನ ಎಲ್ಲವನ್ನೂ ಒಳಗೊಂಡು ತೆಳುವಾದರೂ ವಾಸ್ತವತೆಗೆ ಹೊಂದಿಕೊಂಡ ಕವನ ಕೊಟ್ಟಿದ್ದಾರೆಂಬುದು. ಮುಖ್ಯವಾಗಿ ಭಟ್ಟರ ಕಾವ್ಯದ ವ್ಯಂಗ್ಯ ಮೂಲಭೂತ ಗಂಭೀರ ಆಸಕ್ತಿಗಳನ್ನು ಮರೆಯುವುದಿಲ್ಲ. ಲವಲವಿಕೆ ಬೇಜವಾಬ್ದಾರಿಯಾಗದೆ ಕಾಮಿಡಿಯಾಗುವುದರಿಂದ ಹೊಸ ವಾಸ್ತವತೆಯತ್ತ ಇವರು ಮುಖ ಮಾಡಿದ್ದಾರೆ. ಮಾಡಿಸುತ್ತಾರೆ' ಎಂದು ಅಭಿಪ್ರಾಯಪಟ್ಟಿದ್ದಾರೆ. ಮೊದಲಿನಿಂದಲೂ ಭಟ್ಟರು ವಿಡಂಬನವನ್ನೂ ಪ್ರಗತಿಶೀಲತೆಯನ್ನೂ ಆಶ್ರಯಿಸಿದವರು. ಅವರ ಮೊದಲಿನ ಸಂಗ್ರಹಗಳಾದ ರಕ್ತಾಂಜಲಿ ಮತ್ತು ಪಲಾಯನಗಳಲ್ಲಿ ಈ ಗುಣಗಳನ್ನು ಕಾಣಬಹುದು. 'ಕಾವ್ಯಭಾಷೆ ಎಷ್ಟೇ ಶಕ್ತಿಯುತವಾಗಿದ್ದರೂ ಭಟ್ಟರ ಕಾವ್ಯದಲ್ಲಿ ವಿಕೃತಿ ತಾನೇ ತಾನಾಗಿತ್ತು. ಜೀವನವನ್ನೂ ಕಾವ್ಯವನ್ನೂ ಕೂಡಿಯೇ ಪರಿಹಾಸ ಮಾಡುವಷ್ಟು ಅವರ ಕಾವ್ಯ ವಿಕೃತವಾಯಿತು. ಜೀವನದ ಅನಿವಾರ್ಯವಾದ ದುರ್ಬಲತೆಯನ್ನೇ ಅವರು ವಿಡಂಬಿಸಿದರು. ಅವರ ವಿಡಂಬನದ ಕಣ್ಣಿಗೆ ಕಂಡದ್ದೆಲ್ಲ ಅರ್ಥಹೀನವಾಗಿತ್ತು' ಎಂದು ಕೆ.ಡಿ. ಕುರ್ತಕೋಟಿಯವರು ಪ್ರಕಟಿಸಿದ ಅನುಭವವನ್ನು ವಿಮರ್ಶಿಸಬೇಕು. ಅನಂತರದ ಅವರ ಕವನಗಳಲ್ಲಿ ಕರುಣ ಹಾಗೂ ವಿಡಂಬನೆಗಳ ಮಿಲನವನ್ನು ಗಮನಿಸಬಹುದು. ಲಘುವಾಗಿ ಕಾಣುವ ಸಂಗತಿಗಳ ಹಿಂದೆ ಜೀವನದ ಗಂಭೀರತೆ ಇರುವುದನ್ನು ಭಟ್ಟರು ಗಮನಿಸಿರುವುದಕ್ಕೆ ಅವರ ಮುಂದಿನ ಕವನಗಳು ನಿದರ್ಶನವಾಗಿವೆ :

ತಂತ್ರದ ದೃಷ್ಟಿಯಿಂದಲೂ ಭಟ್ಟರು ಕಾವ್ಯತೀರ ಹೊಸ ಮಾದರಿಯಾದಾಗಿದೆ. ಕಾವ್ಯಕ್ಕೊಂದು ಪ್ರತ್ಯೇಕವಾದ ಭಾಷೆಯೊಂದು ಇರಬೇಕೆಂಬ ನಿಯಮವನ್ನು ಅವರು ಪಾಲಿಸುವುದಿಲ್ಲ. ಬಳಕೆ ಮಾತುಗಳ ಉಪಯೋಗ ಗಟ್ಟಿಮುಟ್ಟಾದ ಭಾಷೆ, ವಿಷಯ, ಲಯ ಇವು ಮೊದಲಿನಿಂದಲೂ ಅವರ ಅಭಿವ್ಯಕ್ತಿಯ ಲಕ್ಷಣಗಳಾಗಿದ್ದುವು.

ಅವರ ಕೆಲವು ಕವನಗಳಲ್ಲಿ ಸಂಸ್ಕೃತ ಪದಗಳ ಬಳಕೆ ಹೆಚ್ಚಾಗಿ ಕಾಣಿಸಿದರೆ ಕೆಲವು ಕವನಗಳು ಜನಪದ ಧಾಟಿಯಲ್ಲಿವೆ. ಕೆಲವು ಕವನಗಳಲ್ಲಿ ಹಿತಮಿತವಾಗಿ ಸಂಸ್ಕೃತ ಕನ್ನಡ ಪದಗಳ ಬಳಕೆಯಾಗಿದೆ.

ಸಂಸ್ಕೃತ ಭೂಯಿಷ್ಠ ಶೈಲಿಗೆ ಉದಾಹರಣೆ :

ಗೃಹಸ್ಥೀ ಽ ಪೃಥಿವೀ
ಸನ್ಯಾಸಾ ಽ ಆಕಾಶಾ
ನೀ ನಿಜಾ ಽ ಕ್ಷಿತಿಜಾ (ಕತ್ತೆಯ ಕನಸು)

ಇದು ನಿರ್ವಾಣಾ ಮೋಕ್ಷಾ ಬ್ರಹ್ಮಾ
ಒಳಗಿನ ಸಮೀಕ್ಷಾ ದೀಕ್ಷಾ
ವಂದನಾ ಜೀವ ಸ್ಪಂದನಾ ವಿಶ್ವಗೇಹಾ (ಧ್ಯಾನಪೀಠ)

ಶಬ್ದಾ ಽ ಧ್ವನೀ, ಸಂಗೀತಾ
ತೆರೆ ತರಂಗಾ ಽ ಚೇತಾ ಽ ನರ್ತನಾ
ಆಂತರಿಕಾ ಽ ರಾಸಾಯನಿಕಾ ಽ
ಪರಿವರ್ತನಾ (ಧ್ಯಾನಪೀಠ)

ಜನಪದ ಧಾಟಿಗೆ ಕೆಲವು ಉದಾಹರಣೆ :

ಕವಿತಾ ಬಂದಾಗ । ಬರೇತೇನೆ
ಬರದಿದ್ರೆ । ಗೊರೇತೇನೆ
ಇವನ ಗುರ್ತದೇ ಅಂತ । ಬರ್ತದೇ
ಅಲಗಿಸೂತಾದೆ । ನನ್ನಾ
ಫೌಂಟೇನ । ಪೆನ್ನಾ
ತಾನೇ ಽ ತರ್ತಾದೇ
ಪದೇ ಪದೇ (ಪೀಠಿಕೆ, ಕತ್ತೆಯ ಕನಸು)

ಸಗ್ಣೀ ಸುತ್ಲೂ ನೊಣ
ಮುತ್ಕೊಂಬಾಂಗೆ ಜನ
ಮುಂಬೈಗೆರ್ಗಿ ಸೊರ್ಗಿ
ಬರ್ಗಿ ಹಣ ಮಾಡ್ಕುಟ್ರಪ್ಪ
ನಮ್ಮೂರ್ ಭಣ ಭಣ (ತುಂಟನ ಪದಗಳು, ಕತ್ತೆಯ ಕನಸು)

ಮಗನಿಗೋ ಹಟ
ತಾನು ಪ್ರೀತಿಸಿದ ನೆರೆಮನೀ ಹುಡುಗೀ
ಜತೀಗೇನೆ ಮದವೀ
ಆಗಬೇಕೂ ಅಂತಾ
ಜೀವ ತಟ ಪಟಾ
ತಾಯಿಗೋ ಖುಶೀ
ಚೆಂದುಳ್ಳ ಹುಡುಗೀ
ತಾನೂ ಮೆಚ್ಚಿದ ಽ ಸೊಸೀ
ಬರತಾಳ ಮನಿಗ ಽ
ಚಲೋ ಜೋಡಿ ಮಗನಿಗ ಽ (ಸುಳ್ಳು೧, ಕತ್ತೆಯ ಕನಸು)

ಅವಳೀಗಿಲ್ಲ ಗಂಜೀಕಲ್ಕು
ನಿಲ್ಲೂದಿಲ್ಲ ಒಡ್ಯಾರ್ ಮೆಲ್ಕು
ಅದ್ಕೆ ಇವ್ರೀಗ್ ಅಜೀರ್ಣ
ಅವ್ಳೀಗ್ ಹಾಂಗೆ
ಇವ್ರೀಗ್ ಹೀಂಗೆ
ಸಾವ್ ಬರೋಕೆ ಕಾರ್ಣ (ತುಂಟನ ಪದಗಳು, ಕತ್ತೆಯ ಕನಸು)

ಎಲ ಎಲಾ ಬೆಪ್ಪಕ್ಕಿ। ನೀಯೇನ ತಿಳಕೊಂಡಿ?
ದೊಡ್ಡ ಸಾಯೇಬ್ರ ಹಿಡಿದಾಕೆಯೇ ಅವಳು
ಶುದ್ಧಾ ಸ್ವದೇಶೀಯ ಮ್ಯಾಡಮ್ಮ ದುರ್ದುಂಡಿ
ಕಪ್ಪು ಕನ್ನಡಕ ಜಂಬದ ಚೀಲ ಕಿಸಬಾಯಿ
ದುಂಡು ದುಂಡು.
ಯಾರಿಂದಲೋ ಬರೆಸಿಕೊಂಡು
ಭಾಷಣ ತಂದು
ಉಪರಾಟಿ ಓದುವಳು ಬೆವರು ಬಂದು
ಬಂಜೆಯರ ಸಂಘಕ್ಕೆ ಅಧ್ಯಕ್ಷಿಣಿಯು ಈಕೆ ಖಾಯಮ್ಮು
ರಠ ಈಕ ದರ ಬಂದಗಿ
ಹೀಂಗೈತಿಯೀ ಜಿಂದಗಿ
ಜೀಪಿನಲಿ ಹಾರಾಟ, ಯಾರಪ್ನದೇನೋಯ್ತು?
ಎಲ್ಲಿ ಬಿಟ್ಟಿ
ಬೆಣ್ಣೆ ಬೆಂಡೇಕಾಯಿ ಪೇಟೆಯಲಿ ತುಟ್ಟಿ
ಅದಕಾಗಿಯೇ ಏನೋ

ಹಳ್ಳಿ ಭೆಟ್ಟಿ
ಈ ಹಳ್ಳಿ ತಹಶೀಲು ಇಡೀ ಜಿಲ್ಲೆಗೂನುವೇ
ಸಾಯೇಬ್ರೆ ಉಚ್ಚಾಧಿಕಾರಿ
ಈಕೆಯೇ ಸಾಯೇಬ್ರ ಸೂತ್ರಧಾರಿ
ಅದಕೆಯೇ ಅಂದದ್ದು. ಸಾಯೇಬ್ರ ಆಫೀಸ್ಗೆ
ಅವರ ಬಂಗ್ಲೇ ಹಿತ್ಲ ಬಾಗ್ಲೆ ದಾರಿ. (ಎಲಎಲಾ ಬೆಪ್ಪಕ್ಕಿ, ಲಹರಿ)

ಕನ್ನಡ, ಸಂಸ್ಕೃತ ಪದಗಳಂತೆಯೇ ಅವರು ಇಂಗ್ಲೀಷ್, ಹಿಂದಿ, ಮರಾಠಿ ಪದಗಳನ್ನೂ ಲೀಲಾಜಾಲವಾಗಿ ಉಪಯೋಗಿಸುತ್ತಾರೆ. ಕೆಲವು ಉದಾಹರಣೆಗಳು :

ಯುನಿವರ್ಸಿಟಿ, ಯೂಜಿಸಿ, ಗೇರು (gear), ಡ್ರೈವರ, ರಜಿಸ್ಟ್ರಾರ, ರಿಪ್ಲೇ, ಕ್ಯೂ, ಝಿರೋ (zeero), ಸಿಲ್ಲಿ, ರೇಟು, ಸ್ಟ್ರಿಂಗ್, ಪಂಪು, ಹೆಡ್, ಏರುಮೇಲ್ (Air mail), ಪೊಲಿಟಿಕ್ಸು, ಪಾಸ್‌ಬೂಕು, ಫೌಂಟೆನ್‌ಪೆನ್ನು, ಸೆಕೆಂಡ್, Some ಸಾರ, ಟ್ರಿಕ್, ಅರ್ಜೆಂಟ್, ಕ್ರಿಮಿನಲ್, ರಶ್ಶು, ಟೆರಿಬಲ್ಲು, ಲೈಸನ್ಸು, ಫೈಲ್, ಹ್ಯಾಂಡ್‌ಬಿಲ್ಲು, ಪ್ರೊಮೋಷನ್ನು, ಸಬ್ಸಿಡಿ ಇತ್ಯಾದಿ ಅನೇಕ ಇಂಗ್ಲೀಷ್ ಪದಗಳನ್ನು ನೇರವಾಗಿ ಅಥವಾ ಅಲ್ಪಸ್ವಲ್ಪ ಬದಲಾಯಿಸಿ ಉಪಯೋಗಿಸಿದ್ದಾರೆ. ಕೆಲವು ಕವನಗಳ ಶಿರೋನಾಮೆಯೂ ಇಂಗ್ಲೀಷ್‌ನಲ್ಲಿದೆ. ಅದೇ ರೀತಿ ಅನೇಕ ಹಿಂದಿ, ಮರಾಠಿ ಮುಂತಾದ ಭಾಷೆಗಳ ಪದಗಳನ್ನು ಬಳಸಿದ್ದಾರೆ. ಉದಾ: ದುಕಾನ್, ಧೋಕೆ, ಆಜೂಬಾಜು, ಲುಕ್ಸಾನ, ದಸ್ತಾವೇಜು, ಹಿಕಮತ್ತು, ಉಲ್ಟಾ, ಉದಾಸ, ಶಂಕಾ, ಗಪ್‌ಚಿಪ್, ಸೀದಾಸಾದಾ, ಬಿಲ್‌ಕುಲ್, ಥೈಲಿ, ದೋಸ್ತಿ, ಅಂದಾಜ್, ತಲವಾರ, ಮಜಬೂತು, ಗಿರ್ಣೇಫ, ಷರತು, ತೇರಾಪಂಥಿ, ಸಾಮೀಲು, ಬಿಸಾತಿ, ಝುಗಡಾ, ಸಂಗಡಾ, ಪಸಂದ, ಜಿಂದಗಿ, ಮೆಹನತ್ತು, ಲಾಯಕು, ಚಾಲಾಕು, ಜಬರದಸ್ತೀ ಇತ್ಯಾದಿ. ಅವರ ಕೆಲವು ವಿಶಿಷ್ಟ ಪದ ಪ್ರಯೋಗಗಳನ್ನು ಗಮನಿಸಬಹುದು : ಭಾಷಣ - ಗೀಷಣ, ಗೋರಟಗಿರಿಟವ, ಬೇರುಗೀರಿನ, ನೋಟು ಗೀಟೂ, ತಂಡಿಗಿಂಡಿ, ಲೀಲಾಗೀಲಾ, ಕರುಣಾಗಿರುಣಾ, ಮುಕ್ತಿಲಿ ಗಿಕ್ತೀಲಿ, ಲಂಚಾಗಿಂಚಾ, ನಿಯಮಗಿಯಮ, ಪೂಜೆಗೀಜೆ, ಥಲಗಿಲ ಇತ್ಯಾದಿ ಪ್ರಾಸವುಳ್ಳ ಜೋಡಿಪದಗಳನ್ನು ಬಳಸಿದ್ದಾರೆ. ಕಚರಾ, ಸುರಳೀತಾ, ಸುಕದುಕ್ಕ, ಅನಾರ್ಯ, ಧೇನಿಸು, ಸೊತ ಮುಂತಾದ ಪದಗಳನ್ನು ಅವರು ಅನೇಕ ಕವನಗಳಲ್ಲಿ ಮತ್ತೆ ಮತ್ತೆ ಬಳಸಿರುವುದು ಕಂಡುಬರುತ್ತದೆ. ಇಂತಹ ಪದಗಳು ಅವರಿಗೆ ತುಂಬ ಇಷ್ಟವಾದವುಗಳೆಂದು ಕಂಡುಬರುತ್ತದೆ. ಕೆಲವು ಪದಗಳನ್ನು ದೇಶೀ ಅಥವಾ ಮಾತನಾಡುವ ಧಾಟಿಯಲ್ಲಿ ಬಳಸಿದ್ದನ್ನು ಗಮನಿಸಬಹುದು.

ನನ್‌ದೂ, ನಿನ್‌ದೂ, ಎರಡೂನೂ, ಅದೂನು, ಒಂತರ, ಸೊಲ್ಪ, ನಿನ್ನದೂನು, ಸಮಾಧಿಗೂನು, ಅದಕೂನು, ಈವರೆಗೂನೆ, ಹಿಡೀದ, ಒದಗಿಸುತ್ತೇ (ಒದಗಿಸುತ್ತಲೇ) ತಿಳಿಯುವುದೂನೂ, ಧ್ಯಾನಕೂನು, ಕುಂತೆ, ತಂತಂ(ಹೆಂಡಿರು), ನಂನಂ (ನಂಬುಗೆ), ತಂತಾನೆ, ತಂತಂ(ಏಳಿಗೆ), ಬರ್ತಾಬರ್ತಾ, ನಾನೀ, ಆತ್ಮಕೂನುವೆ, ಇತ್ಯಾದಿ. ಸುಕದುಕ್ಕ ಪದಗಳನ್ನು ಅಲ್ಪಪ್ರಮಾಣವಾಗಿ ಉಪಯೋಗಿಸಿದ್ದಾರೆ. ಅವನ್ನು ಮಾತ್ರ ಏಕೆ ಹಾಗೆ ಉಪಯೋಗಿಸಿದರೋ ತಿಳಿಯದು. ಕೆಲವೆಡೆ ಮಹಾಪ್ರಾಣವೂ ಇದೆ. ಪದಗಳನ್ನು ಅವರ ನಾದಕ್ಕೆ ಸರಿಯಾಗಿ ಎಳೆದು ದೀರ್ಘಗೊಳಿಸುತ್ತಾರೆ. ಹಲವಾರು ಕಡೆಗಳಲ್ಲಿ ಪ್ಲುತದ ಪ್ರಯೋಗವೂ ಇದೆ.

ಉದಾ :

ಬುದ್ಧ ವಚನಾ ऽ ಅಣುರಚನಾ ऽ
ವರ್ಣನಾತೀತಾ ऽ ಸ್ರೋತಾ ऽ
ಗರ್ಭಾ ऽ ಶೂನ್ಯದ ಪಿಂಡಾ
ಮುಕುಂದ ಮುಖದಲಿ ಬ್ರಹ್ಮಾಂಡಾ
ಪ್ರಾಚೀನಾ ऽ ತರ್ಕವಿಹೀನಾ ऽ (ಶೂನ್ಯ - ಮೌನ, ಧ್ಯಾನಪೀಠ)

ಶಬ್ದಾಽ ಧ್ವನೀಽ ಸಂಗೀತಾ
ತೆರೆ ತರಂಗಾಽ ಚೇತಾಽ ನರ್ತನಾ
ಆಂತರಿಕಾಽ ರಸಾಯನಿಕಾಽ
ಪರಿವರ್ತನಾ (ಪ್ರೇಮ, ಪ್ರಾರ್ಥನೆ, ಪೂಜೆ, ಧ್ಯಾನ - ಮೌನ, ಧ್ಯಾನಪೀಠ)

ಪ್ರೀತೀಽ ಧ್ವೇಷಾಽ ಸತ್ಯಾ ಸುಳ್ಳೂಽ
ಕಾಯೇ ಓ ತಾಯೇಽ ಅರಿಯಲಾರ್ಯಾ ಆಳಾ ಘನಾ
ಕ್ಷಮಿಸೂಽ ಉಪಶಮಿಸೂಽ

ನಂದೂಽ ನಿಂದೂಽ ಅಗಲಿಕೆ
ಸಾವಿರ ಸಾವಿರ ಕಲ್ಪಾ
ಆದರೂನೂಽ ನಾನೂಽ ನೀನೂಽ
ಬೆಸೆದಂತೇಽ ಗಿಡಗಿಡ ಕಸದಂತೇಽ
ಕೂಡಿರುವೆವು ಅಗಲೆವು
ಸೊಲ್ಪಾನೂ ಸೊಲ್ಪಾ (ಸುಕ, ದುಕ್ಕ, - ಧ್ಯಾನಪೀಠ)

ಅವರು ಪದಗಳನ್ನು ಕೆಲವೆಡೆ ದೀರ್ಘಗೊಳಿಸಿದ್ದಾರೆ :

ಉದಾ : ಅಗತ್ಯಾ, ಬಾಧಾ, ಶೋಧಾ, ಪ್ರತಿಷ್ಠಾ, ನಿರ್ದೋಶಾ, ಶ್ರದ್ಧಾ, ಶೂನ್ಯತಾ, ಚೇತನಾ ಕವನಾ, ಅವಶ್ಯಕತಾ, ವಿಪರೀತತಾ.

ಪ್ರಾಸ ಅಥವಾ ಧ್ವನಿಸಾಂಗತ್ಯ ಕವಿತೆಯ ಹಲವಾರು ಅಂಗಗಳಲ್ಲಿ ಒಂದು. ಪ್ರಾಸ ಕಾವ್ಯದಲ್ಲಿ ಸಹಜವಾಗಿ ಬರಬೇಕು. ಕೃತಕವಾಗಿರಬಾರದು. ವಿ.ಜಿ.ಭಟ್ಟರ ಹೆಚ್ಚಿನ ಕವನ ಸಂಕಲನಗಳಲ್ಲಿನ ಕವನಗಳು ನಾಲ್ಕು ಸಾಲಿನ ಪದ್ಯಗಳಿಂದ ಕೂಡಿದ್ದು ಎರಡನೆಯ ಹಾಗೂ ನಾಲ್ಕನೆಯ ಸಾಲುಗಳಲ್ಲಿ ಅಂತ್ಯ ಪ್ರಾಸ ನಿಯತವಾಗಿ ಬಂದಿರುವುದು ಗಮನಾರ್ಹ. ಕೆಲವು ಸಲ ಈ ಪ್ರಾಸಗಳಲ್ಲಿ ಕೃತಕತೆ ಕಾಣಿಸಿದ್ದೂ ಇದೆ. ವಿ.ಜಿ.ಭಟ್ಟರಿಗೆ ಪ್ರಾಸದ ಮೋಹ ಬಹಳವಾಗಿರುವುದು ಅವರ ಕವನಗಳಿಂದ ತಿಳಿಯುತ್ತದೆ. ಒಂದಲ್ಲ ಒಂದು ರೀತಿಯ ಪ್ರಾಸವನ್ನು ಅವರು ಬಳಸಿಯೇ ತೀರುತ್ತಾರೆ. ಅರ್ಥ ಧ್ವನಿಗಳ ಸ್ಫುರಣೆಗೆ ಅವರು ಪ್ರಾಸವನ್ನು ಬಳಸಿದ್ದಾರೆ. ಅತಿಯಾದ ಪ್ರಾಸದ ಬಳಕೆ ಕಾವ್ಯದ ಒಳಧ್ವನಿಗಳನ್ನು ಮರೆಮಾಡಿ ಕೇವಲ ಹೊರಮೈಯನ್ನೇ ತೋರಿಸುವ ಅಪಾಯವಿದೆ. ಆದರೆ ಪ್ರತಿಭಾವಂತ ಕವಿಯ ಕೈಯಲ್ಲಿ ಮಾತ್ರ ಪ್ರಾಸಗಳು ಬೇಕಾದಂತೆ ಕುಣಿಯುತ್ತವೆ. ಪ್ರಾಸದ ಕುರಿತು ಕವಿ ವಿ.ಜಿ.ಭಟ್ಟರೇ 'ಪ್ರತಿಮೆಗಳನ್ನು ಕ್ರೋಢೀಕರಿಸಿ' ತಕೋತಮ್ಮಾ ಎನ್ನುವುದೂ ಕಾವ್ಯವಾಗುವುದಾದರೆ ಪ್ರಾಸಗಳ ಜೋಮಾಲೆಗಳು ಕವನಕ್ಕೆ ಯಾವುದೋ ಒಂದು ಆಕಾರ ಕೊಟ್ಟು ಜೀವತುಂಬಿ ಕುಣಿಸಲು ಅವುಗಳನ್ನೇಕೆ ಬಿಡಬಾರದು? ಹಲವು ಕಡೆ ನನ್ನಿಂದ ಇಂಥ ಮಕ್ಕಳಾಟಿಕೆಗಳು ಹಿಂದೂ ಇಲ್ಲೂ ಆಗಿವೆ. ಮುಂದೆ ಆಗಲಾರವೆಂದು ಸದ್ಯ ಭರವಸೆ ನೀಡಲಾರೆ' ಎಂದು ತಮ್ಮ 'ಕತ್ತೆಯ ಕನಸು' ಸಂಕಲನದ ಅರಿಕೆಯಲ್ಲಿ ಹೇಳಿದ್ದಾರೆ.

ಪ್ರಾಸಗಳ ವೈವಿಧ್ಯಕ್ಕೆ ಉದಾಹರಣೆ :

ದಿನ ದಿನ ಝಣ ಝಣ ಕೂಡಿಸಿದನು ಹಣ
ಭರ್ತೀ...ಗರ್ತೀ....ಸರ್ತೀ....ಮರ್ತೀ

(ಹಳೆಯ ಕಾಲದ ಒಂದು ಕತೆ - ಕತ್ತೆಯ ಕನಸು)

ಆಶಾ ಇದೆ ಕಾಮನಾ
ಮೂಲ ಕಾರಣಾ। ಜೀವೇ ಷಣಾ
ಸಕಲ ಸ್ಥಿತಿಯಲೂ ಸುರಕ್ಷಾ
ಇಡುವ ಆಕಾಂಕ್ಷೆ
ಜೀವನಾ (ಕಾಮನಾ - ಧ್ಯಾನಪೀಠ)

ಅವರನು ನೀನೇ ಮಾಡಿದ ಹಾಗೇ
ಪೆದ್ದು ಬೊದ್ದು ಬುದ್ದು
ಕೆಳಗಡೆ ಹರಿಸಿದೆ ಕಾಮಾ
ಹೃದಯದಿ ನಿಲಿಸಿ ಪ್ರೇಮಾ
ಮೇಲ್ಗಡೆ ಒಯ್ದಿದೆ ಪ್ರಾರ್ಥನಾ

ಬೌದ್ಧಿಕಾ ಭಾವನಾತ್ಮಕ ಆಧ್ಯಾತ್ಮಿಕಾ
ಮೂರ್ತಿವೆಸ್ತ್ರಾ ತರ ತರಾ
ಪರಮಾತ್ಮನ ವರಾ
ಅರಿತವನೇ ನಿಜ ನರಾ
ಏತಕೆ ಅವರಾ ಇವರಾ
ಕೇಳುವೆ ನೋಡಿಕೋ ನಿನ್ನದೆ ತವರಾ (ಜ್ಞಾನ - ಧ್ಯಾನಪೀಠ)

ಕಾಮಾಽ ವಾಸನಾ ಽ ಶೋಷಣಾ
ಹೆರವರಿಗೇನೂ ಕೊಡದೇ
ಮಾಡುತ್ತಿದೆ ಗ್ರಹಣಾ ಕೃಪಣಾ
ಅಂತೇನೆ ದುಃಖ ಪೂರಣಾ
ಇಲ್ಲವು ಸುಖ ಸಂಭಾವನಾ

ಮೋಹಿನೀ ಮೋಹನಾ
ಸ್ವಯಂ ಸಮ್ಮೋಹನಾ
ಭಾವನಾ । ಮಾಯಾ ವಾಹನಾ
ಯೋಜಕನಿಲ್ಲದ ಪ್ರೇಕ್ಷಣಾ

ಬಂಧ ಬಂಧನ ಆಸಕ್ತಿ
ನಿರ್ಬಂಧ ಸ್ವಚ್ಛಂದ ವಿಮುಕ್ತಿ
ರೋಮ ರೋಮ ರಮ । ವಿರಮ। ಅಂತ್ಯ ವಿರಾಮ
ಯೋಜನಾ ಯೋಜನಾ ಸಂಯೋಜನಾ
ಯುಗ ಯುಗಾ ಯೋಗಾ
ಜೀವನ ಸಂಜೀವನ (ತ್ರಿಕೋಣ - ಅರಿಯುತೇನೆ ನಡೆ)

ಶರೀರಾ ಮನಾ ಆತ್ಮ - ತ್ರಿಕೋಣಾ
ಮನನಾ ಧ್ಯಾನಾ ಆರೋಹಣಾ
ಅನಂತ ಪ್ರಕಾಶಮಾನ
ಜ್ಯೋತಿ ಪುಂಜ ಲೀನ (ತ್ರಿಕೋಣ - ಅರಿಯುತೇನೆ ನಡೆ)

ಪ್ರಾಸದ ಬಳಕೆಯಲ್ಲಿ ಬೇಂದ್ರೆಯವರ ಪ್ರಭಾವ ಕಂಡು ಬರುತ್ತದೆ. 'ಶಬ್ದ ಶ್ರುತಿಯಾದಾಗ ಮಾತು ಕೃತಿಯಾಯಿತು' ಎಂದು ಬೇಂದ್ರೆಯವರು ಹೇಳಿದ್ದಾರೆ. ಕಾವ್ಯದಲ್ಲಿ ಪದಗಳ ಅರ್ಥ ಮುಖ್ಯವಲ್ಲ. ನಾದ, ಧ್ವನಿ - ಲಯ ಮುಖ್ಯವಾಗುತ್ತದೆ. ಶ್ರೇಷ್ಠವಾದ ಕವಿತೆಗಳು ವ್ಯಕ್ತವಾಗಿ ಹೇಳುವುದಕ್ಕಿಂತ ಹೆಚ್ಚಿನದನ್ನು ಧ್ವನಿಸುತ್ತವೆ. ಎ.ಜಿ.ಭಟ್ಟರ ಕವನಗಳಲ್ಲಿ ಈ ಗುಣವನ್ನು ನಾವು ಕಾಣಬಹುದು. ಅವರ ಕವನ ಸಂಗ್ರಹಗಳಲ್ಲಿ ಇದಕ್ಕೆ ಅನೇಕ ಉದಾಹರಣೆಗಳಿವೆ :

ಒಂದಿರುಳು ಸಹ ಅವನು ನಿದ್ದೆ ಹೋದುದೆ ಇಲ್ಲ
ಚೆಲುವೆಯನು ನೆನೆನೆನೆದು ನೊಂದ ಹೊರತು
ಮೂವತ್ತು ವರ್ಷಗಳ ಮೇಲೆ ಅವಳೇ ಎದುರು
ಬಂದಾಗ ಸಿಗಲಿಲ್ಲ ಅವಳ ಗುರುತು.

ಇದು ಉತ್ತರಕಾಂಡದ ಒಂದು ರಚನೆ. ಹರೆಯದಲ್ಲಿ ಒಲಿದ ಗಂಡು ಹೆಣ್ಣುಗಳು ಮಿಲನದ ಅವಕಾಶವಿಲ್ಲದೆ ಅಗಲಿ ಇಳಿ ವಯಸ್ಸಿನಲ್ಲಿ ಸಂಧಿಸಿದಾಗ ಅವರ ಪ್ರತಿಕ್ರಿಯೆಗಳು ಹೇಗಿರುತ್ತವೆ ಎಂಬುದನ್ನು ವಿ.ಜಿ.ಭಟ್ಟರು ಕುತೂಹಲಕಾರಿಯಾಗಿ ಹಿಡಿದಿರಿಸಿದ್ದಾರೆ. ಧ್ವನಿಪೂರ್ಣವಾದ ಇಂತಹ ಸಾಲುಗಳು ಕಾವ್ಯದ ಉನ್ನತ ಸ್ಥರವನ್ನು ಸೂಚಿಸುತ್ತವೆ. ಪದಪ್ರಯೋಗದಲ್ಲಿಯೇ ಕೆಲವೆಡೆ ಧ್ವನಿಶಕ್ತಿಯನ್ನು ತುಂಬಿದ್ದಾರೆ.

ಉದಾಹರಣೆಗೆ :

ಸಾಗುವದೀ ಸಂಸಾರವು ಯಥಾವತ್ತು
ಅದಕಿದೆ ಅಂಥಾ ಥಾಕತ್ತು
ನಿನಗೆಲ್ಲಿದೆ ಲೋಕದ ಕಂಬನಿ
ಒರಸುವ ಥಾಕತ್ತು

ಇಲ್ಲಿ 'ತಾಕತ್ತು' ಎಂಬ ಪದವನ್ನು 'ಥಾಕತ್ತು' ಎಂದು ಥ ಮಹಾಪ್ರಾಣ ಉಪಯೋಗಿಸಿದ್ದು ಔಚಿತ್ಯಪೂರ್ಣವೂ ಧ್ವನಿಪೂರ್ಣವೂ ಆಗಿದೆ.

ಗೌರೀಶ ಕಾಯ್ಕಿಣಿಯವರು 'ಸ್ವಾಗತಂ' ಬಗ್ಗೆ ಬರೆಯುತ್ತಾ 'ಆಧುನಿಕ ಕಾವ್ಯಕ್ಕೆ ಪ್ರತಿಮೆಯೇ ಕನಕನ ಕಿಂಡಿ. ಕೇವಲ ಪ್ರತಿಮಾ ಸೃಷ್ಟಿಯ ಕವಿಗಳ ಸಾಲಿಗೆ ಸೇರಿದ ಆಧುನಿಕರಲ್ಲಿ ವಿ.ಜಿ.ಭಟ್ಟರು ಅವರು ಪ್ರತಿಮೆಗಳನ್ನು ಯಥೇಷ್ಟವಾಗಿ, ಯಥಾರ್ಥವಾಗಿ ಬಳಸಬಲ್ಲರು. ಆದರೆ ಅವರು ಪ್ರತಿಮಾವಾದಿಗಳಲ್ಲ. ಪ್ರತಿಮೆ ಅವರ ಕಾವ್ಯಕ್ಕೆ ಒಂದು ಬಲಿಷ್ಠ ಸಂಶ್ಲಿಷ್ಟ ಘಟಕ. ಕೆಲವರ ಕಾವ್ಯದಲ್ಲಿ ಪ್ರತಿಮೆಗಳೇ ವಿಧಾನಗಳ ಕೆಲಸ ಮಾಡುವುದುಂಟು. ಹಾಗೆಯೇ ಇನ್ನು ಕೆಲವರಲ್ಲಿ ವಿಧಾನಗಳೇ ತಮ್ಮ ಸತ್ವದಿಂದ ಪರಿಸ್ಫುಟತೆಯಿಂದ ಸ್ಫಟಿಕತ್ವದಿಂದ ಪ್ರತಿಮೆಗಳಂತೆ ಪ್ರಭಾವಿಯಾಗುವುದೂ ಉಂಟು. ವಿ.ಜಿ.ಭಟ್ಟರ ಶೈಲಿ ಈ ಎರಡನೆಯದು. ಇದು ತತ್ವಕಾವ್ಯ. ಹಲವೆಡೆ ತತ್ವವೆಲ್ಲ ಕಾವ್ಯವಾಗಿ ಕಾಯಕಲ್ಪಗೊಂಡಿದೆ. ಇನ್ನೂ ಕೆಲವೆಡೆ ಗದ್ಯಗಂಧಿಯಾದರೂ ಗತ್ತಿನ ಗತಿಗೆಡದ ಪದ್ಯಬಂಧದಲ್ಲಿ ತಥ್ಯಗಳು ಮಾಣಿಕದಂತೆ ಪವಣಿಸಿವೆ' ಎಂದಿದ್ದಾರೆ. ಕೇವಲ ಇಡಿಯ

ಕವನವೇ ಪ್ರತಿಮೆಯಂತೆ ದೀಪ್ತಿ ಪಡೆದುದಕ್ಕೆ ಸ್ವಾಗತಂ ಸಂಕಲನದ ೨೫, ೨೭ ಹಾಗೂ ೨೮ನೆಯ ಕವನಗಳು ಉದಾಹರಣೆಗಳು. ಸ್ವಾಗತಂನ ೩೯ನೇ ಹಾಗೂ ೪೦ನೇ ಕವನಗಳು ದೃಷ್ಟಾಂತ ದರ್ಶನದ ನಿದರ್ಶನಗಳು. ಇಲ್ಲಿ ಮುರಲಿ, ಬಿದಿರು, ಕಲ್ಲು ಹಾಗೂ ಮೂರ್ತಿಗಳ ರೂಪಕಗಳನ್ನು ಕಾವ್ಯಭಾಷೆಯಾಗಿ ಬಳಸಿಕೊಳ್ಳಲಾಗಿದೆ.

೧೯೫೧ರಲ್ಲಿ ವಿ.ಜಿ.ಭಟ್ಟರ 'ತುಂಟನ ಪದಗಳು' ಕವನ ಸಂಕಲನಕ್ಕೆ ಮುನ್ನುಡಿ ಬರೆದ ವಿ.ಕೃ.ಗೋಕಾಕರು 'ಶ್ರೀಭಟ್ಟರ ಚುಟಕಗಳಲ್ಲಿ ಇಂಥ ಕೃತ್ರಿಮತೆಯಿಲ್ಲ. ಅವರ ಕಾವ್ಯವು ಸಹಜವಾಗಿಯೇ ಚುಟಕಗಳ ರೂಪವನ್ನು ತಳೆದಿದೆ. ಇಲ್ಲಿನ ಕಲ್ಪನಾ ವೈಚಿತ್ರ್ಯ, ವಿನೋದ, ಸಭ್ಯತೆ ಇವೆಲ್ಲ ಗುಣಗಳು ಈ ಚುಟಕಗಳು ಹಿರಿಯರಿಗೂ , ಕಿರಿಯರಿಗೂ ಕೂಡಿಯೇ ಪ್ರಿಯವಾಗಿಸುವುದರಲ್ಲಿ ಸಂಶಯವಿಲ್ಲ. ಇಲ್ಲಿಯ ಭಾಷೆಗಿದ್ದ ಮೊನೆ ಹಾಗೂ ವ್ಯಂಜನದಿಂದ ನುಡಿಯ ಆಳವನ್ನು ಓದುಗರು ಚೆನ್ನಾಗಿ ಅರಿಯಬಲ್ಲರು. ಭಟ್ಟರ ಚುಟಕಗಳಲ್ಲಿ ನಾವೀನ್ಯತೆಯಿದೆ. ಭಟ್ಟರ ಚುಟುಕಗಳ ಒಂದು ವಿಶೇಷ ಗುಣವೆಂದರೆ ಅವುಗಳ ಕಲ್ಪನಾ ವೈಚಿತ್ರ್ಯ. ಇದಕ್ಕೆ ನಾನು ಮನಸೋತಿದ್ದೇನೆ. ಅವರ ಚುಟುಕಗಳಲ್ಲಿಯ ಹಾಸ್ಯವೂ ರಮ್ಯವಾಗಿದೆ. ವಿ.ಜಿ.ಭಟ್ಟರ ಕಾವ್ಯಶಕ್ತಿಯು ಹೀಗೆಯೇ ವಿಶಿಷ್ಟವಾಗಿ ರೂಪುಗೊಂಡು ಹರಿಯಲಿ. ಅವರ ರಸಗಂಗೆ ತೆರೆತೆರೆಯಾಗಲಿ' ಎಂದು ಹಾರೈಸಿದ್ದಾರೆ. ಗೋಕಾಕರ ಹಾರೈಕೆ ವಿ.ಜಿ.ಭಟ್ಟರ ಮುಂದಿನ ಕವನ ಸಂಕಲನಗಳಲ್ಲಿ ಸಫಲವಾಗಿದೆ. ಭಟ್ಟರ 'ಅರಿಯುತೇನೆ ನಡ' ಸಂಕಲನದಲ್ಲಿ ಚೆನ್ನವೀರಕಣವಿಯವರು ಪ್ರಕಟಿಸಿದ 'ನಿಮ್ಮ ಕಾವ್ಯ ಚೇತನ ಕನ್ನಡದಲ್ಲಿಯೇ ವಿಶಿಷ್ಟವಾದದ್ದು. ಭಾಷೆ, ಲಯ, ಧಾಟಿಗಳನ್ನು ಹೀಗೆ ಕೈವಶಮಾಡಿಕೊಂಡು ಛಂದಗೆಡದಂತೆ ಬರೆಯುವ ಕಲೆ ನಿಮಗೇ ಮೀಸಲೆನಿಸುವಂತಿದೆ' ಎಂಬ ಅಭಿಪ್ರಾಯ ಸರಿಯಾದುದು. ವಿ.ಜಿ.ಭಟ್ಟರು ಯಾವುದೇ ಪಂಥಕ್ಕೆ ಕಟ್ಟುಬಿದ್ದು ಕಾವ್ಯ ರಚಿಸಿದವರಲ್ಲ. ಯಾವುದೇ ವರ್ಗೀಕರಣಕ್ಕೆ ಮಾರುಹೋಗದೆ ಯಾವೊಂದು ಸದ್ದುಗದ್ದಲವಿಲ್ಲದೆ ಹಲವು ಕವನ ಸಂಕಲನಗಳನ್ನು ರಚಿಸಿ ಹೊಸಜಾಡಿಗೆ ನಾಂದಿಹಾಡಿದವರು. ನಿರಂಜನರು ವಿ.ಜಿ.ಭಟ್ಟರ ಬಗ್ಗೆ ಹೇಳಿದ ''ಬಂಡಾಯಗಾರ ವಿಕಟಕವಿಯೀಗ ದಾರ್ಶನಿಕರು. ಅವರ ಕವಿತೆಗಳಲ್ಲಿವೆ ವಿಶಿಷ್ಟ ವಿ.ಜಿ.ಕಾಣ್ಕೆ. ಸಾಂದ್ರಜೀವನದರ್ಶನ. ಈ ಕವಿಯ ಕವನ ಸಂಗ್ರಹಗಳು ಸಾಬೀತು ಮಾಡುವುದೊಂದನ್ನೇ - ವಿ.ಜಿ.ಭಟ್ಟರು ಈ ಶತಮಾನದ ಮಹತ್ವದ ಕವಿ'' ಎಂಬ ಮಾತುಗಳು ಉಚಿತವಾಗಿವೆ. ತಮ್ಮ ಕಾವ್ಯದ ಬಗ್ಗೆ ವಿ.ಜಿ.ಭಟ್ಟರು ಹೇಳಿದ ಅಭಿಪ್ರಾಯಗಳು ಗಮನಾರ್ಹ :

ಗೊಮ್ಮಟನಂತಹ ಆಕೃತಿ ಕಟೆಯಲು
ಇಲ್ಲವು ಈತ ಸಮರ್ಥ
ಚಿಣ್ಣರಾಡಲಿಕೆ ಮಣ್ಣಿನ ಗೊಂಬೆಯ
ರಚಿಸಿಯೆ ಆದ ಕೃತಾರ್ಥ
ಪುನಃ ಪುನಃ ಈ ಸಂಭ್ರಮದಾಟವು
ಈತನ ಪಾಲಿಗೆ ಪರಮಾರ್ಥ (ರಚನೆ - ರಚನೆಯಿಂದ ವಿಸರ್ಜನೆಗೆ)

ಕವಿತಾ ಕವನಾ ಅಲ್ಲಮ
ಕೇವಲ ಶಾಬ್ದಿಕ ರಚನಾ
ಅದು ಅರ್ಚನಾ ಪ್ರಾರ್ಥನಾ ಭಜನಾ
ಕರೆದರು ಸರಿ ಪದ್ಯ
ಹೃದಯದ ನೈವೇದ್ಯ
ಪ್ರೇಮದ ಪರಮನ ಸ್ತೋತ್ರದ
ತೀರ್ಥದ ಸೃಜನಾ (ಕವಿತೆ - ರಚನೆಯಿಂದ ವಿಸರ್ಜನೆಗೆ)

ರಚನಾ ಅರ್ಚನಾ
ಆನಂದಾಶ್ರುತರ್ಪಣಾ
ಹೃದಯ ಸಮರ್ಪಣಾ
ಮುಗಿಯಿತು ಪ್ರಾರ್ಥನಾ
ಕೊನೆಗಿದು ವಿಸರ್ಜನಾ (ವಿಸರ್ಜನೆ, ರಚನೆಯಿಂದ ವಿಸರ್ಜನೆಗೆ)

ವಿ.ಜಿ.ಭಟ್ಟರ ಕಾವ್ಯಭಾಷೆಗೆ ತನ್ನತನವಿದೆ. ವಿಡಂಬನೆ ತುಂಟತನ ದಾರ್ಶನಿಕತೆ ಅವರ ಕಾವ್ಯಭಾಷೆಯ ಮುಖ್ಯಗುಣ. ಅನ್ನ ಬೆಂದಿದೆಯೋ ಎಂದು ನೋಡಬೇಕಾದರೆ ಎಲ್ಲಾ ಅಗುಳನ್ನು ಮುಟ್ಟಿ ನೋಡಬೇಕಾಗಿಲ್ಲ. ಅಂತೆಯೇ ವಿ.ಜಿ.ಭಟ್ಟರ ಕಾವ್ಯ ಭಾಷೆಯ ಪರಿಚಯ ಮಾಡಿಕೊಳ್ಳಲು ಅವರ ಕೆಲವು ಸಂಕಲನಗಳನ್ನು ನೋಡಿದರೂ ಸಾಕು. ಅವರ ಶಬ್ದಪ್ರಯೋಗ, ಅವುಗಳ ಧ್ವನಿಶಕ್ತಿ ಮುಂತಾದುವುಗಳ ಕುರಿತು ಇನ್ನಷ್ಟು ಆಳವಾದ ಅಧ್ಯಯನಕ್ಕೆ ಅವಕಾಶವಿದೆ.

ಅಕ್ಕನ ಅಕ್ಕ ಬೊಂತಾದೇವಿ

ಶ್ರೀಮತಿ ತ್ರಿವೇಣಿ ಶಿವಕುಮಾರ್

ವೇದಕಾಲದಲ್ಲಿ ಗಾರ್ಗಿ, ಸುಲಭಾ, ಮೈತ್ರೇಯಿ ಇತ್ಯಾದಿ ಸ್ತ್ರೀಯರು ವಿದ್ವಾಂಸರ ಜೊತೆ ಕುಳಿತು ವಿಚಾರಗೋಷ್ಠಿಗಳಲ್ಲಿ ಪಾಲ್ಗೊಳ್ಳುವುದಲ್ಲದೆ, ಆತ್ಮ, ಮೋಕ್ಷ ಇತ್ಯಾದಿಗಳ ಬಗ್ಗೆ ಮುಕ್ತವಾಗಿ ಚರ್ಚಿಸುತ್ತಿದ್ದರು. ಅವರೂ ಆಧ್ಯಾತ್ಮಿಕ ಸಾಧನೆಯನ್ನು ಮಾಡಿ ಮೋಕ್ಷವನ್ನೂ ಗಳಿಸಬಹುದಾಗಿತ್ತು. ಆದರೆ ಮುಂದೆ ಮನು ಸ್ತ್ರೀಯರ ದೈಹಿಕ ದುರ್ಬಲತೆಯನ್ನೇ ಮುಂದುಮಾಡಿಕೊಂಡೋ ಏನೋ ಪತಿಸೇವೆ, ಮಕ್ಕಳ ಲಾಲನೆ-ಪಾಲನೆಗಷ್ಟೇ ಅವಳನ್ನು ಮೀಸಲಾಗಿರಿಸಿ, ಉಪನಯನ ಸಂಸ್ಕಾರ ಯಜ್ಞಾಧಿಕಾರಗಳನ್ನು ಕಿತ್ತುಕೊಂಡು ಒಂದು ವಸ್ತುವೆಂಬಂತೆ ಮಾಡಿ ಅಡುಗೆ ಮನೆಯ ಕತ್ತಲೆಯಲ್ಲಿ ಆಕೆಯನ್ನು ಕೂಳೆಹಾಕಿದನು.

ಮುಂದೆ ನೂರಾರು ವರ್ಷಗಳೇ ಕಳೆದು, ಹನ್ನೆರಡನೆಯ ಶತಮಾನದಲ್ಲಿ ವಿಶ್ವಗುರು ಬಸವಣ್ಣ ಅವತರಿಸಿ ಬಂದು ಸೂರ್ಯನ ಬೆಳಕಿಗೆ ಆಕೆಯನ್ನು ಒಡ್ಡುವವರೆಗೆ ಯಾರಿಗೂ ಅದೊಂದು ಜೀವ ಅನಿಸಲೇ ಇಲ್ಲವೇನೋ! ಬಸವಣ್ಣ ಸ್ತ್ರೀಗೆ ಪುರುಷನ ಜೊತೆ ಜೊತೆಯಾಗಿ ಹೆಜ್ಜೆಹಾಕಲು ಕಲಿಸಿದ್ದಲ್ಲದೆ, ತನ್ನ ವಿಚಾರಗಳನ್ನು ಮಂಡಿಸಿ ಅನುಭಾವ ಚಿಂತನೆಗಳಲ್ಲಿ ಭಾಗವಹಿಸಲು ಅನುವು ಮಾಡಿಕೊಟ್ಟ. ಅದಕ್ಕೆ ಮೊದಲೇ ದೇವರ ದಾಸಿಮಯ್ಯ, 'ಮೊಲೆ ಮುಡಿ ಬಂದರೆ ಹೆಣ್ಣೆಂಬರು, ಗಡ್ಡ ಮೀಸೆ ಬಂದರೆ ಗಂಡೆಂಬರು, ನಡುವೆ ಸುಳಿವಾತ್ಮ ಗಂಡೂ ಅಲ್ಲ, ಹೆಣ್ಣೂ ಅಲ್ಲ' ಎಂದು ಹೇಳಿ ವೇದಿಕೆಯನ್ನು ಸಿದ್ಧಗೊಳಿಸಿದ್ದ. ಶರಣ ಸಿದ್ಧರಾಮ 'ಹೆಣ್ಣು ಮಾಯೆಯಲ್ಲ, ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧಮಲ್ಲಿಕಾರ್ಜುನಾ ನೋಡಾ' ಎಂದು ಸಾರಿ ಹೆಣ್ಣಿನ ಆತ್ಮವಿಶ್ವಾಸವನ್ನು ಹೆಚ್ಚಿಸಿದ್ದರೆ, ಅಲ್ಲಮಪ್ರಭುಗಳು 'ಹೆಣ್ಣು ಮಾಯೆಯಲ್ಲ ಮನದ ಮುಂದಣ ಆಸೆಯೇ ಮಾಯೆ ಕಾಣಾ' ಎಂದು ಹೇಳಿ, ಹೊನ್ನು ಮಣ್ಣುಗಳ ಜೊತೆ ಒಂದು ನಿರ್ಜೀವ ಪದಾರ್ಥವೆಂಬಂತಾಗಿ ಹೋಗಿದ್ದ ಹೆಣ್ಣಿಗೂ ಜೀವವಿದೆ, ಹೃದಯವಿದೆ, ಭಾವನೆಗಳಿವೆ

ಎಂದು ತೋರಿಸಿದ್ದಲ್ಲದೆ, ಅನುಭವ ಮಂಟಪದಲ್ಲಿ ಅವರನ್ನು ಪರೀಕ್ಷೆಯೆಂಬ ಬೆಂಕಿಗಿಟ್ಟು ಪುಟಕ್ಕಿಟ್ಟ ಚಿನ್ನವಾಗಿಸುವುದಲ್ಲದೆ ಅವರ ಶಕ್ತಿಯನ್ನು ಅನಾವರಣಗೊಳಿಸಿ ಸರ್ವರೂ ಅವರ ಬಗ್ಗೆ ಭಕ್ತಿ ಗೌರವಗಳನ್ನು ತಳೆಯುವಂತೆ ಮಾಡಿ ಸ್ತ್ರೀಯರ ಪಾಲಿಗೆ ಸಾಕ್ಷಾತ್ ಮಹದೇವನೇ ಆದ.

ಸ್ತ್ರೀಯರು ಸಮಾಜದ ಎಲ್ಲ ಆಗುಹೋಗುಗಳಿಗೆ ಸ್ಪಂದಿಸುವುದನ್ನೂ, ಎಲ್ಲ ಅನುಭವಗಳಿಗೆ ತಮ್ಮನ್ನು ಒಡ್ಡಿಕೊಳ್ಳುವ ಅವಕಾಶವನ್ನು ಕೊಟ್ಟು, ಸಮಾಜ ಕಲ್ಯಾಣದ ಮಹಾಮಣಿಹದಲ್ಲಿ ತನ್ನೊಡನೆ ಅವರನ್ನು ಸೇರಿಸಿಕೊಂಡ. ಆ ಮಹಾಮಹಿಮನ ಪ್ರಭಾವದಿಂದ ಅಂದು ಶಿವಶರಣೆಯರೆಂಬ ನೂರಾರು ಸುಮಗಳು ಅರಳಿದ್ದಲ್ಲದೆ, ತಮ್ಮ ನಡೆ ನುಡಿ ವಿಚಾರಗಳಿಂದ ಬಸವಣ್ಣನ ಮುಡಿಗೆ ಹೂವ ತಂದರು.

ಆದರೆ ಇಂದು ನಾವು ಮೂವತ್ತಮೂರು ಜನ ಶವಶರಣೆಯರನ್ನು ಮಾತ್ರ ಅವರ ವಚನಗಳ ಸಮೇತ ಗುರುತಿಸಿಬಹುದಾಗಿದೆ. ಈಗ ಸಿಕ್ಕಿರುವ ಇಪ್ಪತ್ತು ಸಾವಿರದಷ್ಟು ವಚನಗಳಲ್ಲಿ ಒಂದು ಸಾವಿರಕ್ಕೂ ಮೇಲ್ಪಟ್ಟ ವಚನಗಳು ಶಿವಶರಣೆಯರಿಂದಲೇ ರಚಿತವಾಗಿವೆ. ಅವರೆಲ್ಲರೂ ನಮ್ಮೆಲ್ಲರ ಪ್ರೀತಿ ಗೌರವಾದರಗಳಿಗೆ ಪಾತ್ರರಾಗಿದ್ದರೂ ಕೆಲವರು ಕೆಲವು ಕಾರಣಗಳಿಂದಾಗಿ ನಮ್ಮ ಹೃದಯವನ್ನು ಮುಟ್ಟುತ್ತಾರೆ. ತಟ್ಟುತ್ತಾರೆ. ಹಾಗೆ ತಟ್ಟಿ ನನ್ನ ಮನವನ್ನು ಬುದ್ಧಿಯನ್ನು ಕಲಕಿ ಆಲೋಚನೆಗೆ ಒಳಗು ಮಾಡಿದವಳು ಶರಣೆ ಬೊಂತಾದೇವಿ.

ಅಕ್ಕಮಹಾದೇವಿಯನ್ನು ಮೀರಿಸಿದ ಶ್ರೇಷ್ಠವಿರಾಗಿಣಿಯೆಂದು ಹಲವಾರು ಶರಣರು ಬೊಂತಾದೇವಿಯ ಬಗ್ಗೆ ಹೇಳಿರುವುದರಿಂದ ಅಕ್ಕನ ಅಕ್ಕ ಬೊಂತಾದೇವಿ ಎಂದು ಕರೆಯಲು ಅಡ್ಡಿಯಿಲ್ಲವೆಂದು ನನ್ನ ಭಾವನೆ. ಈಕೆ ಕಲ್ಯಾಣಕ್ಕೆ ಹೋಗಿ 'ತಿಪ್ಪೆಯುಪ್ಪರಿಗೆಯೆನ್ನದೆ ಶಯನವಂ ಮಾಡುತ್ತಂ ಮರುಳ ಮಂಕಿನಂತೆ' ಹತ್ತು ವರುಷಗಳಿಗೂ ಮೇಲ್ಪಟ್ಟು ಕಲ್ಯಾಣದಲ್ಲಿದ್ದು ಗುಪ್ತಭಕ್ತಿಯಲಿ ಸಾಧನೆಯಲ್ಲಿ ತೊಡಗಿದ್ದರೂ ಯಾರಿಗೂ ಇದು ಗೊತ್ತೇ ಆಗುವುದಿಲ್ಲ. ಶರಣೆ ಅಕ್ಕ ಮಹಾದೇವಿ ಕೆಲಕಾಲ ಶಿವಶರಣರೊಡನೆ ಇದ್ದು, ಅಲ್ಲಮಪ್ರಭು, ಚನ್ನಬಸವಣ್ಣ, ಬಸವಣ್ಣ ಇತ್ಯಾದಿ ಶರಣರಿಂದ ಬೀಳ್ಕೊಂಡು ಕದಳಿಯತ್ತ ನಡೆದಾದ ಮೇಲೆ, ಕೆಲವು ಶರಣರು ನಮಗೆ ಇನ್ನು ಅಂತಹ ಅಕ್ಕ ಈ ಪೃಥ್ವಿಯ ಮೇಲೆ ಸಿಕ್ಕುವಳೇ? ಎಂಬ ದುಃಖವನ್ನು ತೋಡಿಕೊಂಡಾಗ ಅಲ್ಲಮಪ್ರಭುಗಳು ಅಕ್ಕಮಹಾದೇವಿಯಂಥ ವೀರವಿರಾಗಿಣಿಗೆ ಸರಿಸಾಟಿಯಾದ, ಆದರೆ ಗುಪ್ತವಾಗಿ ಸಾಧನೆಯಲ್ಲಿ ತೊಡಗಿರುವ, ಬೊಂತಾದೇವಿಯ ಬಗ್ಗೆ ಹೇಳಿ ಆಕೆಯನ್ನು ಮೊದಲ ಬಾರಿಗೆ ತೆರೆಯ ಮೇಲೆ ತರುತ್ತಾರೆ.

ಬೊಂತಾದೇವಿಗೆ 'ನಿಜದೇವಿ' ಎಂಬ ಹೆಸರಿತ್ತೆಂದೂ, ಪ್ರಕೃತಿ ದೇವಿ ಕಾಲ್ಮುರಿದುಕೊಂಡು ಬಿದ್ದಿರುವ ಸುಂದರ ಕಾಶ್ಮೀರ ರಾಜ್ಯದರಸನ ಮಗಳೆಂದು 'ಪ್ರಭುದೇವರ ಪುರಾಣ' ಮತ್ತು 'ಅಮರಗಣಾಧೀಶ್ವರ ಚರಿತ್ರೆ'ಗಳಿಂದ ತಿಳಿದುಬರುತ್ತದೆ. ಹಾಗೆಯೇ ಕಾಶ್ಮೀರ ದೇಶದ ಮಾಂಡವ್ಯ ಪುರದರಸು ಮಾರಭೂಪಾಲನ - ಮುಂದೆ ಮೋಳಿಗೆ ಮಾರಯ್ಯನೆಂದು ಪ್ರಸಿದ್ಧನಾದವನ ತಂಗಿಯೆಂದು, ಅರವತ್ತಮೂರು ಶಿವಶರಣರ ಚರಿತ್ರೆ, ಶಿವಶರಣ ಕಥಾ ರತ್ನಕೋಶ, ಶಿವಶರಣೆಯರ ಚರಿತ್ರೆ'ಗಳಲ್ಲಿ ಉಲ್ಲೇಖವಾಗಿದೆ.

ಬೊಂತಾದೇವಿ ಎನ್ನುವ ನಾಮಧೇಯ ಚಾಲುಕ್ಯತೈಲಪನ ತಾಯಿಗೆ ಮತ್ತು ಕಾಶ್ಮೀರದ ದಹಲವಂಶದ ರಾಜಕುಮಾರಿಗೂ ಇದ್ದಿತೆಂದು ತಿಳಿದುಬಂದಿರುವುದರಿಂದ, ಜೊತೆಗೆ ಆಗ ಕಲ್ಯಾಣ ಚಾಲುಕ್ಯರ ಮನೆತನವಳಿದು ಆನಂತರ ಪ್ರಾಬಲ್ಯಗೊಂಡ ಕಲಚೂರ್ಯ ಬಿಜ್ಜಳನ ಕಾಲದಲ್ಲಿ ಈಕೆ ಜೀವಿಸಿದ್ದರಿಂದ ಈ ವೈರಾಗ್ಯಮೂರ್ತಿ ಅವಳೇ! ಎಂದು ಭಾವಿಸಲೂ ಅವಕಾಶವಿದೆ.

ಅದೇನೇ ಇದ್ದರೂ, ಎಲ್ಲರೂ ಸಾಮಾನ್ಯವಾಗಿ ಓದಿ, ಉತ್ತಮ ನೌಕರಿಗಳಿಗೆ ಸೇರಿ ಹಣ ಸಂಪಾದಿಸಿ ಉತ್ತಮ ಮಟ್ಟದ ಜೀವನವನ್ನು ನಡೆಸಲು ಹಂಬಲಿಸುತ್ತಾ, ಅದಕ್ಕಾಗಿ ಎಷ್ಟೆಲ್ಲಾ ಕಷ್ಟಪಡುತ್ತಾರೆ. ತಾಯ್ನಾಡನ್ನು ತೊರೆದು ಪರದೇಶಗಳಿಗೆ ಹೋಗಿ ಯಥೇಚ್ಛವಾಗಿ ಹಣ ಸಂಪಾದಿಸುತ್ತಾರೆ ಯಾಕೆ? ಭೂಲೋಕದ ಮೇಲೆ ಸಿಗುವ ಎಲ್ಲ ಸುಖ-ಭೋಗಗಳನ್ನು ಅನುಭವಿಸುವುದಕ್ಕಾಗಿ, ಎಲ್ಲ ಆಧುನಿಕ ಸೌಲಭ್ಯಗಳನ್ನು ಪಡೆಯುವುದಕ್ಕಾಗಿ; ಒಟ್ಟಿನಲ್ಲಿ ಸುಖವಾಗಿ ಇರಲಿಕ್ಕಾಗಿ. ಆದರೆ ಈ

ಬೊಂತಾದೇವಿ ಹುಟ್ಟುತ್ತಲೇ ಎಲ್ಲವನ್ನು ಪಡೆದು ಹುಟ್ಟಿದಳು. ಸಕಲಭೋಗಭಾಗ್ಯಗಳ ತುತ್ತತುದಿಯಲ್ಲಿದ್ದ ರಾಜವಂಶದಲ್ಲಿ ಹುಟ್ಟಿಯೂ ಆಕೆ ಬಾಲ್ಯದಲ್ಲೇ ವೈರಾಗ್ಯ ತಾಳಿದುದು ಬೆರಗು ಮೂಡಿಸಿದ ವಿಷಯ. ಸಕಲ ಭೋಗಭಾಗ್ಯಗಳನ್ನು ನಿರಾತಂಕವಾಗಿ ಸಮೃದ್ಧವಾಗಿ ಅನುಭವಿಸಿದ ಮೇಲೆ ಅದರ ಬಗ್ಗೆ ನಿರಾಸಕ್ತಿ ಮೂಡುವುದು ಒಂದು ತೆರ. ಬುದ್ಧನಂತೆ ಕಷ್ಟಗಳ ಬಡತನ, ಕಾಯಿಲೆ, ಮುಪ್ಪು ಸಾವು ಯಾವುದನ್ನೂ ಎಷ್ಟೋ ವರುಷಗಳು ನೋಡದೆ ಇದ್ದಕ್ಕಿದ್ದಂತೆ ಅವನ್ನೆಲ್ಲಾ ಒಮ್ಮೆಲೇ ಕಂಡಾಗ ಮೂಡುವ ಜೀವನದ ಬಗೆಗಿನ ನಿರಾಸಕ್ತಿ ವೈರಾಗ್ಯ ಇನ್ನೊಂದು ತೆರ. ಆದರೆ ಏನೂ ಅರಿಯದ ಆ ಮುಗ್ಧಬಾಲೆಗೆ ಆಟವಾಡಿಕೊಂಡಿರಬೇಕಾದ ವಯಸ್ಸಿನಲ್ಲೇ ಶಿವನ ಬಗ್ಗೆ ಪ್ರೀತಿ ಬಂದು, ಹಸಿವು, ಬಾಯಾರಿಕೆ ನಿದ್ದೆ ಯಾವುದೂ ಬೇಡವಾಗುವಂಥ ವೈರಾಗ್ಯಭಾವ ಹೇಗೆ ಬಂದಿತೋ!

ಯೌವನಕ್ಕೆ ಕಾಲಿಟ್ಟರೂ ಬೊಂತಾದೇವಿಯ ಮನಸ್ಥಿತಿ ಹಾಗೇ ಉಳಿದು, ತಂದೆ ಇದೇನು ಭ್ರಾಂತು ಮಗಳೇ ಎಂದು ದುಃಖಿಸುತ್ತಿದ್ದರೂ ನಿಲ್ಲದೆ ಆಕೆ ಅರಮನೆಯನ್ನು ಬಿಟ್ಟು ದಿಗಂಬರೆಯಾಗಿ 'ಮಹಾಕಲ್ಯಾಣದ ಪಥವಿಡಿದು' ಬರುತ್ತಾಳೆ. ಆಕೆಯ ಸೌಂದರ್ಯಕ್ಕೆ ಮರುಳಾಗಿ ಹಿಂದೆ ಬೀಳುವ ಅನೇಕರನ್ನು ನಿವಾರಿಸಿಕೊಂಡು ಹೇಗೋ ಮುಂದೆ ಸಾಗುತ್ತಾಳೆ. ಆದರೆ ಸಾಕ್ಷಾತ್ ಪರಶಿವನೇ ಅವಳನ್ನು ಪರೀಕ್ಷಿಸಲು ಸುಂದರ ಯುವಕನಾಗಿ ಬಂದು ಬೊಂತಾದೇವಿಯ ಎದುರು ನಿಂತು ತನ್ನನ್ನು ಮದುವೆಯಾಗೆಂದು ಕೇಳಿದಾಗ, ಶಿವನ ಗುರುತು ಹಿಡಿದ 'ಕಾಮವೈರಿ ನೀನು, ಕಾಮವೆನಗಿಲ್ಲ' ಎಂದು ತುಟಿಯಂಚಿನಲ್ಲಿ ನಗುತ್ತಾ ಉತ್ತರಿಸಲು ಶಿವ ನಾಚಿ ನೀರಾಗಿ ಮಾಯವಾದನಂತೆ. ಮತ್ತೊಮ್ಮೆ ವ್ಯಾಪಾರಿಯ ವೇಷದಲ್ಲಿ ಬಂದು 'ನನಗೆ ಯಾರೂ ಇಲ್ಲ , ನನಗೆ ಸತಿಯಾಗೆಂದು ಕೇಳಲು ಆಗಲೂ ಆಕೆ ಅವನ ಕುರುಹನ್ನು ತಿಳಿದು - 'ತೊಡೆಯ ಮೇಲೆ ಗೌರಿ, ಜಡೆಯಲ್ಲಿ ಗಂಗೆ, ಮತ್ತೆ ಗಣೇಶ ಷಣ್ಮುಖರೆಂಬ ಮಕ್ಕಳಿದ್ದೂ ನನ್ನನ್ನು ಕರೆದರೆ ಕಲ್ಯಾಣದ ಶರಣರು ನಗುವುದಿಲ್ಲವೇ? ಕೈಲಾಸದ ಪ್ರಮಥರು ಒಪ್ಪುತ್ತಾರೆಯೇ ಎಂದು ಹೇಳಿದಾಗ ಅವಳ ನಿಲುವಿಗೆ, ವೈರಾಗ್ಯಕ್ಕೆ ಮೆಚ್ಚಿದ ಶಿವ ಒಂದು ಬೊಂತೆಯನ್ನು ನೀಡಿ ಯಾವಾಗಲೂ ಅದನ್ನು ಧರಿಸಿಕೊಂಡು ಇರಬೇಕೆಂದು ಆಜ್ಞಾಪಿಸುತ್ತಾನೆ. ಬೊಂತಾದೇವಿ ಅದರಂತೆ ಅದನ್ನು ಸೀರೆಯ ರೀತಿ ಯಾವಾಗಲೂ ಅದನ್ನು ಉಪಯೋಗಿಸುತ್ತಿದ್ದುದರಿಂದ ಆಕೆಗೆ 'ಬೊಂತಾದೇವಿ' ಎಂಬ ಹೆಸರು ಬಂದಿರಬಹುದು. ಅಲ್ಲದೆ ಆಕೆ ಅದನ್ನು ಕೊಡವಿದಾಗ ಉದುರುತ್ತಿದ್ದ ಚಿನ್ನದ ನಾಣ್ಯಗಳನ್ನು ಆಕೆ ಜಂಗಮ ದಾಸೋಹಕ್ಕೆ ಉಪಯೋಗಿಸುತ್ತಿದ್ದರಿಂದಲೂ ಆ ಹೆಸರು ಬಂದಿರಲೂ ಸಾಕು. ಅಲ್ಲದೆ ಯಾವಾಗಲೂ ಆಕೆ ಬೊಂತೆಯನ್ನು ಉಡುತ್ತಿದ್ದುದರಿಂದ ಜನ 'ಬೊಂತಾದೇವಿ' ಎಂದು ಅಪಹಾಸ್ಯ ಮಾಡಿರಲೂಬಹುದು.

ಮರುಳಶಂಕರದೇವರಂತೆ ಗುಪ್ತಭಕ್ತಿಗೆ ಹೆಸರಾದ ಬೊಂತಾದೇವಿ ತಡವಾಗಿ ಬೆಳಕಿಗೆ ಬಂದರೂ, ಕಲ್ಯಾಣದ ಕ್ರಾಂತಿಯಾದ ಮೇಲೆ ಬಸವಣ್ಣ ಕೂಡಲ ಸಂಗಮದೆಡೆ, ಅಲ್ಲಮಪ್ರಭು ಕದಳಿಯೆಡೆ ತೆರಳುವ ಮೊದಲೇ ಸಿದ್ಧರಾಮ ಸೊನ್ನಲಿಗೆಯನ್ನು ಸೇರಿಯಾಗಿ, ಚನ್ನಬಸವಣ್ಣ ಉಳವಿಯೆಡೆ ಹೊರಟುಹೋಗಿ, ಅಳಿದುಳಿದ ಶರಣರು ದೇಶದ ನಾನಾ ಕಡೆ ಚೆಲ್ಲಾಪಿಲ್ಲಿಯಾಗಿ ಚದುರಿಹೋದ ಮೇಲೆ, ಮೋಳಿಗೆ ಮಾರಯ್ಯ ಮತ್ತು ಮಹಾದೇವಿಯಂತೆ, ಬೊಂತಾದೇವಿಯು ಕಲ್ಯಾಣದಲ್ಲಿಯೇ ಉಳಿಯುತ್ತಾಳೆ. ಭಕ್ತಿಸಾಧನೆಯಲ್ಲಿ ನಿರತಳಾಗಿ ಕೆಲಕಾಲ ಕಳೆದ ಮೇಲೆ ಪರಶಿವ ತನಗೆ ಕೊಟ್ಟಿದ್ದ ಬೊಂತೆಯನ್ನು ಗಗನಕ್ಕೆ ಹಾರಿಸಿದಾಗ ಅದು ಅಲ್ಲಿಯೇ ಬಯಲಾಗಿ, ಬೊಂತಾದೇವಿಯೂ ಕೂಡ ಬಯಲಲ್ಲಿ ಬಯಲಾಗಿ ಹೋದಳೆಂದು ತಿಳಿಯುತ್ತದೆ.

ಬೊಂತಾದೇವಿಯು ಹಲವಾರು ವಚನಗಳನ್ನು ರಚಿಸಿರಬಹುದಾದರೂ ಈಗ ದೊರಕಿರುವ ಆಕೆಯ ವಚನಗಳು ಕೇವಲ ಐದು. ಆಕೆಯ ವಚನಗಳಲ್ಲಿ ವೇದ, ಪುರಾಣ, ಆಗಮಗಳ ವಿಚಾರ ಬರುವುದರಿಂದ ಆಕೆ ವೇದಾಂತವನ್ನು ಕುರಿತು ಅಭ್ಯಾಸ ಮಾಡಿರಬಹುದೆಂದು ಊಹಿಸಬಹುದಾಗಿದೆ. ಬೊಂತಾದೇವಿಯ ವಚನಗಳ ಅಂಕಿತ 'ಬಿಡಾಡಿ', 'ಬೀಡಾಡಿ' ಎಂದರೆ ಯಾವ ನಿಯಂತ್ರಣಕ್ಕೂ ಬರದವನು ಅಥವಾ ಸಿಗದವನು, ಸರ್ವಸಂಗ ಪರಿತ್ಯಾಗಿ ಇತ್ಯಾದಿ ಅರ್ಥಗಳು ಹೊರಡುವುದರಿಂದ ಸ್ಮಶಾನದಲ್ಲಿ ಅಂಕೆಯಿಲ್ಲದಂತೆ ತಿರುಗಾಡುವ ಶಿವನೇ 'ಬಿಡಾಡಿ' ಎಂದಿರಬಹುದೆಂದು ಧಾರಾಳವಾಗಿ ಹೇಳಬಹುದು.

ಊರಒಳಗಣ ಬಯಲು, ಊರ ಹೊರಗಣ ಬಯಲೆಂಬುದುಂಟ?
ಊರೊಳಗ ಬ್ರಾಹ್ಮಣ ಬಯಲು, ಊರ ಹೊರಗೆ ಹೊಲೆ ಬಯಲೆಂಬುದುಂಟೆ?
ಎಲ್ಲಿ ನೋಡಿದೊಡೆ ಬಯಲೊಂದೆ
ಭಿತ್ತಿಯಿಂದ ಒಳಹೊರಗೆಂಬ ನಾಮವೈಸೆ
ಎಲ್ಲಿ ನೋಡಿದಡೆ ಕರೆದಡೆ 'ಓ' ಎಂಬಾತನೆ ಬಿಡಾಡಿ

ಎಂಬ ವಚನದಲ್ಲಿ ಬೊಂತಾದೇವಿ ಬಯಲು ಎಲ್ಲೆಡೆಯೂ ಒಂದೇ, ಬ್ರಾಹ್ಮಣ ಬಯಲು ಮತ್ತು ಹೊಲೆ ಬಯಲು ಎಂದು ಹೇಳಲು ಸಾಧ್ಯವೇ? ಗೋಡೆಯಾಚೆಯ ಬಯಲು, ಗೋಡೆಯೀಚೆಯ ಬಯಲು ಎಂದು ಹೇಳಬಹುದಷ್ಟೇ. ಎಲ್ಲ ಬಯಲುಗಳಲ್ಲೂ ವ್ಯಾಪಿಸಿರುವ ಶಿವ ಯಾರು ಹೇಗೆ ಕರೆದರು 'ಓ' ಎಂದು ಬರುತ್ತಾನೆ. ಆ ಪರಶಿವನ ಸೃಷ್ಟಿಯಲ್ಲಿ ಜಾತಿ ಭೇದ ಇಲ್ಲ ಎಂದು ಸ್ಪಷ್ಟಪಡಿಸಿರುವ ಆಕೆ ಮತ್ತೂ ಮುಂದುವರೆದು ತರಗೆಲೆಗಳನ್ನು ಹಾರಿಸುವ ಗಾಳಿಯೂ ಒಂದೇ, ಎಲ್ಲರ ದೇಹಸರಪಟ್ಟಿಗಳಲ್ಲಿಯೂ ಒಂದೇ ಉಸಿರಿರುವಾಗ ಜಾತಿ ಎಲ್ಲಿದೆ? ಅದು ಜಾತಿ ಎನ್ನುವುದರಿಂದಲಾದರೂ ತಾನು ಶ್ರೇಷ್ಠ, ಉತ್ತಮ ಎನಿಸಿಕೊಂಡು ಮೆರೆಯಲು ಸ್ವಾರ್ಥಿಯಾದ ಮನುಷ್ಯ ಮಾಡಿಕೊಂಡಿರುವ ಸೃಷ್ಟಿ ಅಷ್ಟೇ, ಅದನ್ನು ಆಕೆ,

ಪರಪುಟ್ಟನಾಥ ಎಂಬ ಲಿಂಗ
ತರಗೆಲೆಗಳಿಗೊಂದೇ ಗಾಳಿ, ಹಾರುತಿಪ್ಪ ಒಂದೇ ಅನಿಲದಿಂದ
ದೇಹಸರಪಟ್ಟಿಗಳೊಳಗೆಲ್ಲ ಕರೆದರೆ
ಓ ಎಂಬಾತನೇ ಬಿಡಾಡಿ.

ಎಂಬ ವಚನದಲ್ಲಿ ಸೊಗಸಾಗಿ ಹೇಳಿ ಒಬ್ಬ ಸಮಾಜದ ಸುಧಾರಕಿಯಂತೆ ಶೋಭಿಸುತ್ತಾಳೆ, ಅರಿವು ನಷ್ಟವಾಗಿ ಕುರುಹು ಇಲ್ಲದಾತನೇ ಪರಶಿವ ಎನ್ನುವುದನ್ನು ಅವಳು 'ಅಱಿವರತು ಕುಱುಹಿಲ್ಲದಾತ ನೀನೇ ಬಿಡಾಡಿ' ಎಂದು ಸ್ಪಷ್ಟವಾಗಿ ಹೇಳಿದ್ದಾಳೆ. ಎಲ್ಲೂಕ್ಕೂ ಮಿಗಿಲಾಗಿ ಬೊಂತಾದೇವಿ ತನ್ನ ಇನ್ನೊಂದು ವಚನದಲ್ಲಿ -

ಅಂತಾಯಿತ್ತಿಂತಾಯಿತ್ತೆನಬೇಡ
ಅನಂತ ನಿಂತಾತ್ಮನೆಂದಱಿಯಾ ಬಿಡಾಡಿ.
ಕರೆದಡೆ ಓ ಎಂಬುದು
ನಾದವೋ, ಬಿಂದುವೋ, ಪ್ರಾಣವೋ?
ಇದಾವುದು ಬಲ್ಲಡೆ ನೀ ಹೇಳಾ ಬಿಡಾಡಿ
ಶಬ್ದವೇ ಬ್ರಹ್ಮ, ಶಬ್ದವೇ ಸಿದ್ಧ, ಶಬ್ದವೇ ಶುದ್ಧ
ಕಾಣರೆ, ಬಿಡಾಡಿ

ಎಂದು ಭಾಷೆ ಮತ್ತು ಶಬ್ದಗಳ ಬಗ್ಗೆ ಹೇಳಿರುವುದರಿಂದ ಅವುಗಳಲ್ಲಿ ಆಕೆಗೆ ಬಹಳ ತಿಳುವಳಿಕೆ ಇದ್ದಿರಬಹುದೆಂದು ಊಹಿಸಬಹುದಾಗಿದೆ.

ಪ್ರಾತಃಸ್ಮರಣೀಯಳಾದ ಬೋಂತಾದೇವಿ ಶೂನ್ಯಸಿಂಹಾಸನಾಧೀಶ್ವರನಾದ ಅಲ್ಲಮಪ್ರಭುವಿನಿಂದಲೇ 'ಭೇಷ್' ಎನಿಸಿಕೊಂಡಿದ್ದಾಕೆ. ಗುಪ್ತಭಕ್ತಿಯಲ್ಲಿ ಶರಣ ಮರುಳಶಂಕರದೇವರಿಗೆ ಸಮಾನಳಾಗಿದ್ದ ಆಕೆ ವೈರಾಗ್ಯದಲ್ಲಿ ಅಕ್ಕನಿಗೆ ಅಕ್ಕನಾಗಿದ್ದಳು.

ಗ್ರಂಥ ಋಣ :

''ಇಪ್ಪತ್ತೈದು ವಚನಕಾರ್ತಿಯರ ಜೀವನ ಹಾಗೂ ಸಾಧನೆ''- ಜಗದಾಂಬ ಮಲ್ಲೇದೇವರು.
''ವಚನ ಸಾಹಿತ್ಯ ಮತ್ತು ಮಹಿಳೆ'' - ಡಾ॥ ಶೈಲಜಾ ಉಡಚಣ.

ಗೋಮಂತಕ = ಕನ್ನಡ + ಕರ್ನಾಟಕ

ಶ್ರೀ ಶಾ.ಮಂ. ಕೃಷ್ಣರಾಯ

ಇಂದಿನ ಗೋವೆ ಹಿಂದಿನ ಗೋಮಂತಕ. ಭಾರತದ ನಕ್ಷೆಯಲ್ಲಿ ಗೋವೆಯನ್ನು ನೋಡಿದರೆ ಪಶ್ಚಿಮಕ್ಕೆ ಕರಾವಳಿ, ದಕ್ಷಿಣಕ್ಕೆ ಕಾರವಾರ, ಪೂರ್ವಕ್ಕೆ ಹಳಿಯಾಳ, ಧಾರವಾಡ ಉತ್ತರಕ್ಕೆ ಬೆಳಗಾಂವ ರತ್ನಾಗಿರಿ. ಗೋವೆಯ ಮೂರು ದಿಶೆಗಳಲ್ಲಿ ಕರ್ನಾಟಕ ವ್ಯಾಪಿಸಿಕೊಂಡರೆ ಉತ್ತರದ ತುಣುಕಿನಲ್ಲಿ ಮಹಾರಾಷ್ಟ್ರ ಅಂಟಿಕೊಂಡಿದ್ದು ಈಗಲೂ ಸ್ಪಷ್ಟವಾಗಿ ನೋಡಬಹುದು. ಕರ್ನಾಟಕದ ಮಡಿಲಿನಲ್ಲಿ ಪುಟ್ಟ ಮಗುವಿನಂತೆ ಗೋವೆ ಪವಡಿಸಿದೆ.

ಗೋವೆಯ ಅತ್ಯಂತ ಪ್ರಾಚೀನ ಶಿಲಾಲೇಖ - ತಾಮ್ರಪಡಿಗಳು ಪ್ರೋಟೋ ಕನ್ನಡ ಅಥವಾ ಕನ್ನಡದಲ್ಲಿವೆ. ಐದನೆಯ ಶತಕದಿಂದಲೂ ಇಂಥ ದಾಖಲೆಗಳು ಸಿಕ್ಕಿವೆ. ಆನಂತರದ ಅನೇಕ ಶಿಲಾಲೇಖಗಳು, ತಾಮ್ರಪಟಗಳು, ಕಡತಗಳು ಕನ್ನಡ ಮೋಡಿ ಲಿಪಿಯನ್ನು ಹೊಂದಿವೆ. ಈಗಲೂ ಗೋವೆಯ ಪುರಾತತ್ವ ಇಲಾಖೆಯಲ್ಲಿ ಸಾವಿರಾರು ಕನ್ನಡದ ದಾಖಲೆಗಳನ್ನು ನೋಡಬಹುದು. ಸಂಶೋಧಕರಿಗೆ ಸವಾಲೆಸೆಯುವಂತಹ ದಾಖಲೆಗಳನ್ನು ಪರಿಶೀಲಿಸಿದರೆ, ಗೋಕರ್ಣ ಪರ್ತಗಾಳಿ ಮಠ, ಕೈವಲ್ಯ ಮಠಗಳ ದಾಖಲೆಗಳನ್ನು ಪರಿಶೋಧಿಸಿದರೆ ಕರ್ನಾಟಕದ ಇತಿಹಾಸದ ಮೇಲೆ ಹೊಸಬೆಳಕು ಚೆಲ್ಲಬಹುದು. ಈ ದಿಶೆಯಲ್ಲಿ ಕರ್ನಾಟಕ ಸರ್ಕಾರ, ಕರ್ನಾಟಕ ವಿಶ್ವವಿದ್ಯಾಲಯ ಹೆಜ್ಜೆಯಿಟ್ಟು ಪೂರ್ತಿ ನಷ್ಟವಾಗುವ ಮೊದಲೇ ಅಮೂಲ್ಯದಾಖಲೆಗಳನ್ನು ಪ್ರತಿ ಮಾಡಿಕೊಳ್ಳಬೇಕು.

ಮೌರ್ಯರು, ಭೋಜರ ರಾಜಧಾನಿಯಾದ ಚಂದ್ರಪುರ (ಇಂದಿನ ಚಾಂದರ)ದಿಂದ ಹೊರಡಿಸಿದ ಶಿಲಾಲೇಖಗಳ ಮೇಲೆ ಕನ್ನಡ ಲಿಪಿಯಿದೆ. ಆದರೆ ಭಾಷೆ ಸಂಸ್ಕೃತ. ಇದರಿಂದ ಆ ಕಾಲದಲ್ಲಿಯೂ ಕನ್ನಡ ಲಿಪಿಯ ಪ್ರಾಬಲ್ಯವಿತ್ತು ಎಂದು

ತಿಳಿಯಬಹುದು. ಈ ಶಿಲಾಲೇಖಗಳಲ್ಲಿ ಉಪಯೋಗಿಸಿದ ಮರ್ತಿಕಟ್ಟು, ಭಾಗಲಪಲ್ಲಿಕಾ, ಪೆಗ್ಗಿಲಿ, ನೆಲ್ಲಿಕಾಬಾಲಿಕಾ ಮೊದಲಾದ ಪದಗಳು ಕನ್ನಡವೆಂದು ಬೇರೆ ಹೇಳಬೇಕಾಗಿಲ್ಲ. ಇದನ್ನು ಭಾರತ ಸರಕಾರ ಪ್ರಕಟಿಸಿದ ಎಫಿಗ್ರಾಫಿಯಾ ಇಂಡಿಕಾದಲ್ಲಿ ನೋಡಬಹುದು.

ಏಳನೆಯ ಶತಮಾನದಲ್ಲಿ ಚಾಲುಕ್ಯರ ಇಮ್ಮಡಿ ಪುಲಕೇಶಿಯ ಕಾಲದಲ್ಲಿ ನಮ್ಮ ನಾಡು ಕಾವೇರಿಯಿಂದ ನರ್ಮದೆಯವರೆಗೆ ವಿಸ್ತರಿಸಿತ್ತು. ಅವನ ಅಧೀನ ಗೋಮಂತಕವೂ ಇತ್ತು. ಮುಂದೆ ರಾಷ್ಟ್ರಕೂಟ, ಸೇವುಣರು ಅಥವಾ ದೇವಗಿರಿಯ ಯಾದವರು, ಕಲ್ಯಾಣದ ಚಾಲುಕ್ಯರ ನಂತರ ವಿಜಯನಗರದ ಆಳ್ವಿಕೆಯಲ್ಲಿ ಬಂದ ಗೋವೆ ೧೫ನೆಯ ಶತಮಾನದವರೆಗೆ ಅವರ ಕೈಯಲ್ಲಿತ್ತು ಈ ಮಧ್ಯೆ ಕೆಲವು ದಶಕಗಳ ಆಳ್ವಿಕೆ ಮುಸ್ಲಿಮರದಾಗಿತ್ತು.

ಶಿಲಾಹಾರರು ಆಳುತ್ತಿದ್ದಾಗ ದಕ್ಷಿಣ ಭಾರತದಲ್ಲಿ ಕನ್ನಡದ ಪ್ರಾಬಲ್ಯವಿತ್ತು. ಅವರ ಆಳ್ವಿಕೆಯಲ್ಲಿ ಕನ್ನಡ ಪ್ರಚಲಿತವಿತ್ತು. ಅವರ ಅರಸರ ಹೆಸರುಗಳಾದ ವಪ್ಪುವಣ್ಣಾ, ಗೊಗ್ಗಿ, ಮುಮ್ಮುಣಿ ಎಂಬ ಹೆಸರುಗಳು ಕನ್ನಡ. ಅವರ ಮಂತ್ರಿಗಳ ಹೆಸರು ನೋಡಿ : ವಿಂಟಪ್ಪಯ್ಯ, ಜೋಗಲಯ್ಯ, ಇಂತಹ ಅನೇಕ ಹೆಸರುಗಳು ಶಿಲಾಹಾರದ ಶಾಸನಗಳಲ್ಲಿ ದೊರೆಯುತ್ತವೆ.

ಶಿಲಾಹಾರರನ್ನು ಸೋಲಿಸಿ ೧೧ನೆಯ ಶತಮಾನದಲ್ಲಿ ಸಿಂಹಾಸನಕ್ಕೆ ಬಂದ ಕದಂಬರು 'ಗೋವೆಯ ಕದಂಬರು' ಎಂದು ಚರಿತ್ರೆಯಲ್ಲಿ ಹೆಸರಾಗಿದ್ದಾರೆ. ಇವರು ಮೂಲತಃ ಬನವಾಸಿ ಕದಂಬರಿಂದ ಹೊರಟ ಕವಲುಗಳಲ್ಲಿ ಒಂದು. ಬನವಾಸಿಯಿಂದ ಹೊರಟ ಕದಂಬರ ಹನ್ನೆರಡು ಕವಲುಗಳಲ್ಲಿ ಹಾನಗಲ್ಲ ಕದಂಬರು, ಬನವಾಸಿ ಕದಂಬರು ಪ್ರಸಿದ್ಧರು.

ಗೋವೆಯ ಕದಂಬರ ಮೂಲಪುರುಷ ಚಟ್ಟಯ್ಯದೇವ. ಇವರಲ್ಲಿ ಇಮ್ಮಡಿ ಜಯಕೇಶಿ (೧೧೦೪-೧೧೪೭) ಶೂರನೂ, ವೀರನೂ ಸಾಹಸಿಯೂ ಆಗಿ 'ಕೊಂಕಣ ಚಕ್ರವರ್ತಿ' ಎಂಬ ಬಿರುದು ಸಂಪಾದಿಸಿದವನು. ಇವನ ಮಡದಿ ಕಲ್ಯಾಣ ಚಾಲುಕ್ಯರ ಪ್ರಸಿದ್ಧ ದೊರೆ ಆರನೆಯ. ವಿಕ್ರಮಾದಿತ್ಯನ (೧೦೭೬-೧೧೨೬) ಮಗಳು ಮೈಲಾಲದೇವಿ. ಕದಂಬರು ಮೊದಲಮೊದಲು ಚಾಂದರ (Chandor)ವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರೂ ಜಯಕೇಶಿಯ ಕಾಲದಲ್ಲಿ ರಾಜಧಾನಿ ವೆಹ್ಲಾಗೋವಾ (Velha Goa)ಕ್ಕೆ ಸ್ಥಳಾಂತರವಾಯಿತು. ಈ ಪ್ರದೇಶವನ್ನೆ ಅಂದಿನ ದಿನಗಳಲ್ಲಿ 'ಗೋಪಕಾ ಪಟ್ಟಣ' ಎಂದು ಕರೆಯುತ್ತಿದ್ದರು. ಅದು ಇಂದಿನ ಜುವಾರಿ ನದಿಯ (ಮೂಲ ಹೆಸರು ಅಘನಾಶಿನಿ) ದಂಡೆಯ ಮೇಲಿತ್ತು. ಇವರ ಕುಲದೈವ ಸಪ್ತಕೋಟೇಶ್ವರ. ಇಂದು ದಿವಾಡಿ ಬಳಿ ನಾರ್ವೆಗ್ರಾಮದಲ್ಲಿ ಈ ಮಂದಿರವಿದೆ. ಗೋವೆಯ ಕದಂಬರ ಬಿರುದುಗಳಲ್ಲಿ 'ಸಪ್ತಕೋಟೀಶ್ವರ ಲಬ್ಧ ವರಪ್ರಸಾದ' ಎಂಬ ಉಲ್ಲೇಖವಿದೆ. ಗೋವೆಯ ಕದಂಬರ ರಾಜ್ಯದಲ್ಲಿ ಉತ್ತರ ಕನ್ನಡದ, ಉತ್ತರ ಕೊಂಕಣದ ಕೆಲ ಭಾಗಗಳೂ, ಧಾರವಾಡ, ಬೆಳಗಾಂವ ಜಿಲ್ಲೆಯ ಕೆಲವು ಭಾಗಗಳು ಸೇರಿಕೊಂಡಿದ್ದುವು.

ಕದಂಬರು ಗೋವೆಯಲ್ಲಿ ಕನ್ನಡ ಸಂಸ್ಕೃತಿಯನ್ನು ಬೆಳೆಸಿದರು. ಸುಮಾರು ಎರಡು ನೂರಕ್ಕೂ ಹೆಚ್ಚು ವರ್ಷ ರಾಜ್ಯವಾಳಿದ್ದರಿಂದ ಗೋವೆಯಲ್ಲಿ ಕನ್ನಡ ಭಾಷೆ - ಕನ್ನಡ ಸಂಸ್ಕೃತಿ ಬೆಳೆಯಲು ಹುರುಪಿನ ವಾತಾವರಣ ನಿರ್ಮಾಣವಾಯಿತು. ಅಂದಿನ ದಿನಗಳಲ್ಲಿ ಸ್ಥಳೀಯರು ಕೊಂಕಣಿ ಭಾಷೆಯಲ್ಲಿ ಲೆಕ್ಕಪತ್ರಗಳನ್ನಿಟ್ಟರೂ ಅದು ಕನ್ನಡ ಲಿಪಿಯಲ್ಲಿ ಬರೆಯುತ್ತಿದ್ದರೆನ್ನುವುದು ಗಮನಾರ್ಹ. ಅವರ ಕಾಲದಲ್ಲಿ ಅನೇಕ ಗ್ರಾಮಗಳಿಗೆ ಕನ್ನಡ ಹೆಸರು ಬಂತು. ಈಗಲೂ ಅವು ಚಾಲ್ತಿಯಲ್ಲಿವೆ. ಉದಾ : ಅಗಸಿ (Agssaim) ಕುಟ್ಟಳ್ಳಿ (Cortalim) ಸಾಂಖವಾಳ (ಸಂಕವಳ್ಳಿ) ಚಿಕ್ಕಳ್ಳಿ (Chichlim). ಅವರ ಕಾಲದ ಶಾಸನಗಳು ಕನ್ನಡದಲ್ಲಿವೆ. ಅವರು ಬರೆಸಿದ ಅನೇಕ ತಾಮ್ರಪಟಗಳಲ್ಲಿ ನಾಗಣ್ಣ, ಅಣ್ಣಯ್ಯ, ತಿಕ್ಕಯ್ಯ, ಪಯ್ಯವಯ್ಯ, ಮ್ಹಾಲಯ್ಯ, ಸಾವಣ್ಣ, ಪಟ್ಟಯ್ಯ, ಅಜ್ಜಮ್ಮ ಎಂಬ ಹೆಸರುಗಳಲ್ಲದೆ ಕಿಸೂರ, ನೇವುರ, ಪಿರಿಯಾಲಾ, ಎಲಾ, ಕುಡತ್ತರಿ ಎಂಬ ಊರಿನ ಹೆಸರುಗಳು ಕಾಣುತ್ತವೆ. ಮುಸ್ಲಿಮರನ್ನು ಸೋಲಿಸಿ ವಿಜಯನಗರದರಸರು ಅಧಿಕಾರಕ್ಕೆ ಬಂದರು. ಇವರ ಕಾಲದಲ್ಲಿ ಕನ್ನಡ ಕೇವಲ ಆಡಳಿತ ಭಾಷೆಯಾಗದೆ ಜನರಾಡುವ ಭಾಷೆಯೂ ಆಗಿತ್ತು. ವಿಜಯನಗರದರಸರು ಗೋವೆಯ ಆಡಳಿತ ನಡೆಸಲು 'ಗೋವಾ ಪುರವರಾಧೀಶ್ವರ'ನನ್ನು ನೇಮಿಸಿದ್ದರು. 'ಗೋವೆಯ ಸಿಂಹಾಸನ' ವೆಂದು ಗೋವಾ ಆಡಳಿತ ಕೇಂದ್ರವನ್ನು ಕರೆಯುತ್ತಿದ್ದರು.

ವಿಜಯ ನಗರದರಸರು ಅಲ್ಲಲ್ಲಿಯ ಸ್ಥಾನೀಯ ಭಾಷೆಯಲ್ಲಿ ಶಾಸನಗಳನ್ನು ಬರೆಸುತ್ತಿದ್ದರೆನ್ನುವುದಕ್ಕೆ ಆಂಧ್ರಪ್ರದೇಶದಲ್ಲಿ ದೊರೆತ ತೆಲುಗು, ತಮಿಳು ನಾಡಿನಲ್ಲಿ ದೊರೆತ ತಮಿಳು ಶಾಸನಗಳು ಸಾಕ್ಷಿಯಾಗಿವೆ. ವಿಜಯನಗರದಾಳಿಕೆಯಲ್ಲಿ ಗೋವೆ ಕರ್ನಾಟಕದ ಭಾಗವಾಗಿತ್ತು.

ಗೋವೆಯನ್ನು ಪೋರ್ಚುಗೀಸರು ಆಕ್ರಮಿಸುವಾಗ (೧೫೧೦) ಬಿಜಾಪುರ ಆದಿಲಶಹನ ಆಳಿಕೆಯಿತ್ತು. ವಿಜಯನಗರದಲ್ಲಿ ಮುಮ್ಮುಡಿ ವಿರೂಪಾಕ್ಷ (ಕ್ರಿ.ಶ. ೧೪೬೫-೧೪೮೫) ಆಳುತ್ತಿದ್ದಾಗ ಮುಸ್ಲಿಮ ಬಹುಮನಿ ಸುಲ್ತಾನರು ಕ್ರಿ.ಶ.೧೪೬೯ರಲ್ಲಿ ಗೋವೆ ಗೆದ್ದುಕೊಂಡರು. ಮುಂದೆ ವಿಜಯನಗರದರಸರು ಗೋವೆಯನ್ನು ಮರಳಿ ಪಡೆಯಬೇಕೆಂದು ಅನೇಕ ಅಯಶಸ್ವಿ ಪ್ರಯತ್ನ ಮಾಡಿದರು. ಮಹಾಪರಾಕ್ರಮಿ ಶ್ರೀಕೃಷ್ಣದೇವರಾಯ ಮನಸ್ಸು ಮಾಡಿದರೆ ಗೋವೆಯನ್ನು ಪಡೆಯುವ ಸಾಧ್ಯತೆಯಿತ್ತು. ಆದರೆ ಆತನಿಗೆ ಬಿಜಾಪುರ, ಗೊಲ್ಕೊಂಡಾ ಮತ್ತು ಓರಿಸ್ಸಾದ ಗಜಪತಿಯೊಂದಿಗೆ ಕಾದಾಡಲು ಅಶ್ವಬಲ ಬೇಕಾಗಿತ್ತು. ಯುದ್ಧದ ಕುದುರೆಗಳು ಅರಬದೇಶಗಳಿಂದ ತರಿಸಿಕೊಳ್ಳಬೇಕಾಗಿತ್ತು. ಅದಕ್ಕೆ ಆತ ಪೋರ್ಚುಗೀಸರೊಂದಿಗೆ ಒಪ್ಪಂದ ಮಾಡಿಕೊಂಡು ಅರಬಕುದುರೆಗಳನ್ನು ಪಣಜಿಯ ಬಳಿ ಇರುವ ರಾಯಬಂದರಲ್ಲಿ ಹಡಗಿನಿಂದ ಇಳಿಸಿಕೊಂಡು ವಿಜಯನಗರಕ್ಕೆ ಕರೆದುಕೊಂಡು ಹೋಗುತ್ತಿದ್ದ. ಪಣಜಿಯ ಹತ್ತಿರ ಇರುವ Ribandour ಅಥವಾ ರಾಯಬಂದರ ಅಂದಿನ ದಿನಗಳಲ್ಲಿ 'ರಾಯರ ಬಂದರ' (ಕೃಷ್ಣದೇವರಾಯರ ಬಂದರ)ವಾಗಿತ್ತು.

ವಿಜಯನಗರದವರ ಇಳಿಗಾಲದಲ್ಲಿ ತಲೆಯೆತ್ತಿಕೊಂಡ ಇಂದು ಶಿರಸಿ (ಉ.ಕ.) ತಾಲ್ಲೂಕಿನಲ್ಲಿರುವ ಸೋಂದೆಯಲ್ಲಿ ಕ್ರಿ.ಶ. ೧೫೫೫ರಲ್ಲಿ ಅರಸಪ್ಪನಾಯಕನ ಹಿರಿತನದಲ್ಲಿ ಒಂದು ಅರಸುಮನೆತನ ತಲೆಯೆತ್ತಿತ್ತು. ಇತಿಹಾಸದಲ್ಲಿ ಇವರು ಸ್ವಾದಿ ಅರಸರು ಎಂದು ಹೆಸರಾಗಿದ್ದಾರೆ. ಇವರಲ್ಲಿ ಸದಾಶಿವರಾಯ (ಕ್ರಿ.ಶ. ೧೬೭೪-೧೬೯೭) ಮತ್ತು ಬಸವಲಿಂಗರಾಯರ (೧೬೯೭-೧೭೪೫) ಕಾಲದಲ್ಲಿ ಸ್ವಾದಿ ಅರಸುಮನೆತನ ಉಚ್ಛ್ರಾಯ ಸ್ಥಿತಿಗೇರಿತು. ಈ ಅರಸು ಮನೆತನದ ಆಳ್ವಿಕೆಯಲ್ಲಿ ಉತ್ತರ ಕನ್ನಡದ ಬಹುಭಾಗ, ಘೋಂಡಾ, ಜಾಂಬಾವಲಿ, ಕಾಣಕೋಣ, ಸಾಂಗೆಯಲ್ಲದೆ ಸಾಲಸೀತ (ಸಾಸಷ್ಟಿ) ತಾಲೂಕಿನ ಕೆಲ ಭಾಗಗಳೂ ಬಂದವು. ಕರಾವಳಿಯ ಬಂದರುಗಳಾದ ಕಾರವಾರ, ಕುಮಟಾ, ಹೊನ್ನಾವರ, ಭಟ್ಕಳ, ಮಿರ್ಜಾನ, ಅಂಕೋಲಾಗಳ ಮೇಲೆ ಇವರು ಅಧಿಕಾರ ಹೊಂದಿದ್ದರು.

ಸ್ವಾದಿ ಅರಸುಮನೆತನ ಆಳುವ ಪ್ರದೇಶದಲ್ಲಿ ವಿಪುಲವಾಗಿ ಅಡಿಕೆ, ಯಾಲಕ್ಕಿ, ಮೆಣಸು ಬೆಳೆಯುತ್ತಿತು. ಇದು ಪೋರ್ಚುಗೀಸರನ್ನು ಆಕರ್ಷಿಸಿತು. ಸೋಂದೆಯ ಅರಸರು ಪೋರ್ಚುಗೀಸರೊಂದಿಗೆ ಒಪ್ಪಂದ ಮಾಡಿಕೊಂಡು ತಮ್ಮಲ್ಲಿದ್ದ ಕಾಳುಮೆಣಸು, ಯಾಲಕ್ಕಿಗಳನ್ನು ಅವರಿಗೆ ಪೂರೈಸುತ್ತಿದ್ದುದರಿಂದ ಅವರಲ್ಲಿ ಸ್ನೇಹ ಬೆಳೆಯಿತು. ಕಾಲ ಕ್ರಮೇಣ ಸ್ವಾದಿ ಅರಸರು ಕಳೆಗುಂದಿದ್ದ ಸಮಯ ಹೈದರಾಲಿ ಮತ್ತು ಮರಾಠರ ದಾಳಿಗೆ ತುತ್ತಾದ ಸೋಂದೆಯ ಅರಸರು ಗೋವೆಗೆ ಹೋಗಿ ನೆಲೆಸಿದರು. (ಕ್ರಿ.ಶ. ೧೭೬೪) ಈಗಲೂ ಈ ಅರಸುಮನೆತನದ ದೊರೆ ಅಧಿಕಾರ ಕಳೆದುಕೊಂಡರೂ ನಾಗೇಶಿ (Nagesh) ದೇವಾಲಯದ ಪಕ್ಕದಲ್ಲಿದ್ದ ಕಟ್ಟಡದಲ್ಲಿ ವಾಸಿಸುತ್ತಿದ್ದಾರೆ.

೧೫೧೦ರಲ್ಲಿ ಬಂದು ಕಾಲೂರಿದ ಪೋರ್ಚುಗೀಸರು ಹಂತ ಹಂತವಾಗಿ ಎರಡು ನೂರು ವರ್ಷ ಹೋರಾಡಿ ಸಂಪೂರ್ಣ ಗೋವಾ ತನ್ನದಾಗಿ ಮಾಡಿಕೊಂಡರು. ಕ್ರಮೇಣ ಶಕ್ತಿಗುಂದಿದ ಇಮ್ಮಡಿ ಸದಾಶಿವರಾಯ ಕ್ರಿ.ಶ. ೧೭೯೧ರಲ್ಲಿ ಪೋಂಡಾ, ಜಾಂಬಾವಲಿಂ, ಕಾಣಕೋಣ, ಸಾಲಸೀತಗಳನ್ನು ಪೋರ್ಚುಗೀಸರಿಗೆ ಒಪ್ಪಿಸಿ ಶರಣಾದ.

ಸೋಂದಾ ಅರಸರು ವೀರಶೈವರೂ, ಕನ್ನಡ ಮಾತೃಭಾಷೆಯವರೂ ಆಗಿದ್ದರಿಂದ ಹದಿನೆಂಟನೆಯ ಶತಮಾನದವರೆಗೆ ಕನ್ನಡ ಭಾಷೆ - ಕನ್ನಡ ಸಂಸ್ಕೃತಿ ಗೋವೆಯಲ್ಲಿ ನೆಲೆಯೂರಿದ್ದವು.

ಹೀಗೆ ಸುಮಾರು ಒಂದು ಸಾವಿರ ವರುಷ ಗೋವೆಯಲ್ಲಿ ಕನ್ನಡಿಗರು ಆಳಿದ್ದರಿಂದ ಗೋವೆಯ ಸಂಸ್ಕೃತಿಯ ಮೇಲೆ, ಭಾಷೆಯ ಮೇಲೆ ಕನ್ನಡ ಪ್ರಭಾವವಾಗುವುದು ಸ್ವಾಭಾವಿಕವಾಯಿತು. ದಕ್ಷಿಣ ಭಾರತದಲ್ಲಿ ಚಾಲುಕ್ಯ ಶಿಲ್ಪಶೈಲಿಯ ಅನೇಕ

ಅವಶೇಷಗಳಿವೆ. ಗೋವೆಯಲ್ಲಿಯೂ ಅವರು ಕಟ್ಟಿಸಿದ ಅನೇಕ ಮಂದಿರಗಳಿದ್ದವು. ಹದಿನಾರನೆಯ ಶತಮಾನದಲ್ಲಿ ಪೋರ್ಚುಗೀಸರು ನಡೆಸಿದ ಧರ್ಮಾಂತರ ಹೋಮದಲ್ಲಿ ಕುರಿಗಳಂತೆ ಸಿಕ್ಕುಬಿದ್ದ ಹಿಂದುಗಳು 'ಸ್ವಧರ್ಮೇ ನಿಧನಂ ಶ್ರೇಯಃ' ಎಂದು ಕಂಡಕಂಡಲ್ಲಿ ತಮ್ಮ ದೇವರ ಮೂರ್ತಿಗಳನ್ನು ಹಿಡಿದುಕೊಂಡು ಓಡಿಹೋದರು. ಆ ಕಾಲದಲ್ಲಿ ಸಾವಿರಾರು ಮಂದಿರಗಳನ್ನು ಕೆಡವಿ ಅಲ್ಲಿ ಚರ್ಚುಗಳನ್ನು ಕಟ್ಟಿಸಿದರು ಎಂಬ ದಾಖಲೆಗಳಿವೆ. ದಾಮೋದರ, ಶಾಂತಾದುರ್ಗಾ, ಮಂಗೇಶ, ಸಪ್ತಕೋಟೇಶ್ವರ, ಮಹಾಲಕ್ಷ್ಮಿಯಂತಹ ಪ್ರಸಿದ್ಧ ದೇವಾಲಯಗಳು ಉಧ್ವಸ್ತಗೊಂಡು ಅಲ್ಲಿ ಚರ್ಚುಗಳು ತಲೆಯೆತ್ತಿದುವು. ಆ ಸಂದರ್ಭದಲ್ಲಿ ಅನೇಕ ಚಾಲುಕ್ಯ ವಾಸ್ತುಶಿಲ್ಪಗಳು ನಷ್ಟವಾಗಿರಬಹುದು ಎಂದು ಊಹಿಸಬಹುದು. ಇಂದು ತಾಂಡಬಿ ಸುರ್ಲ ಎಂಬಲ್ಲಿ ಕಾಡಿನಲ್ಲಿ ಚಾಲುಕ್ಯರು ಕಟ್ಟಿಸಿದ ಮಹಾದೇವ ಮಂದಿರವಿದೆ. ಅದೊಂದೇ ಗೋವೆಯಲ್ಲಿ ಉಳಿದಿರುವ ದೇವಾಲಯದ ವಾಸ್ತುಶಿಲ್ಪದ ಅವಶೇಷ. ಅಂದಿನ ಕಾಲದ ಶಿವಲಿಂಗಗಳು, ಉಮಾಪತಿ, ಚಾಮುಂಡೇಶ್ವರಿ, ಮೊದಲಾದ ವಿಗ್ರಹಗಳು, ಗಜಲಕ್ಷ್ಮಿ ದೇವಾಲಯದ ಪಟ್ಟಿಕೆಯಲ್ಲಿ ಕೊರೆದ ಅನೇಕ ವಿಗ್ರಹಗಳ ಅವಶೇಷಗಳನ್ನು ಓಲ್ಡ ಗೋವೆಯಲ್ಲಿರುವ ಪುರಾತತ್ವ ಇಲಾಖೆಯ ಮ್ಯೂಜಿಯಂನಲ್ಲಿ, ವೆಲ್ಹಾ ಗೋವೆಯಲ್ಲಿರುವ ಸೆಮಿನರಿಯಲ್ಲಿ ನೋಡಬಹುದು. ಇದೆಲ್ಲ ನೋಡಿದಾಗ ಕನ್ನಡಿಗರ ಗತವೈಭವ ಕಣ್ಣೆದುರು ನಿಂತು ಭಗ್ನಗೊಂಡ ಮೂರ್ತಿಗಳ ಮೌನರೋದನ ಕೇಳಿಸುತ್ತದೆ. ಇನ್ನು ಕೆಲವು ಮೂರ್ತಿಶಿಲ್ಪಗಳನ್ನು ಗೋವೆಯಲ್ಲಿ ಇತ್ತೀಚೆಗೆ ಆರಂಭಿಸಲಾದ ಕೇಂದ್ರ ಸರಕಾರದ ಪುರಾತತ್ವ ಇಲಾಖೆಯ ಮ್ಯೂಜಿಯಂನಲ್ಲಿ ಮತ್ತು ಮುಂಬಯಿ ಸೇಂಟ್ ಝೇವಿಯರ್ ಕಾಲೇಜಿನ ಮ್ಯೂಜಿಯಂನಲ್ಲಿ ನೋಡಬಹುದು. ಕದಂಬ, ವಿಜಯನಗರ, ಚಾಲುಕ್ಯರ ಕಾಲದ ಎಷ್ಟೋ ಶಿಲಾಲೇಖಗಳು ಸಿಕ್ಕಿವೆ. ಇನ್ನೆಷ್ಟೋ ಭಗ್ನಾವಸ್ಥೆಯಲ್ಲಿ ಅಲ್ಲಲ್ಲಿ ಬಿದ್ದುಕೊಂಡಿವೆ.

ಪೋರ್ಚುಗೀಸರು ಗೋವೆಗೆ ಬಂದಾಗ ಕನ್ನಡ ಹೆಚ್ಚು ಬಳಕೆಯಲ್ಲಿದ್ದಿರಬೇಕು. ಗೋವೆಗೆ ಬಂದಾಗ ಕನ್ನಡ ಯಾವುದು, ಕೊಂಕಣಿ ಯಾವುದು ಎಂದು ಕಂಡುಹಿಡಿಯುವುದು ಅವರಿಗೆ ಕಷ್ಟವಾಗಿರಬೇಕು. ಅದರಿಂದ ಕೊಂಕಣಿ ಭಾಷೆಯನ್ನು Canarim ಎಂದು ಕರೆದಿರಬೇಕು. ೧೬ನೆ ಶತಕದಲ್ಲಿ ಫಾದರ ಸ್ಟಿಫನ್‌ನು ಬರೆದ Lingua of camarim ಎಂಬ ಪುಸ್ತಕ ಕೊಂಕಣಿ ಭಾಷೆಯ ಕುರಿತು ಇದ್ದರೂ ಅದನ್ನು ಕಾನಾರಿ ಭಾಷೆಯೆಂದು ಕರೆದಿದ್ದಾನೆ. ಮುಂದೆ ಕ್ರಮೇಣ ಅವರಿಗೆ ಕೊಂಕಣಿ ಕನ್ನಡದ ಭೇದ ಗೊತ್ತಾಗಿ ಕನ್ನಡವನ್ನು canares ಎಂದು ಕರೆದರು.

ಹದಿನಾರನೆಯ ಶತಮಾನದಲ್ಲಿ ಪೋರ್ಚುಗೀಸರು ಇಲ್ಲಿಯ ಧರ್ಮ ಮತ್ತು ಭಾಷೆ ನಷ್ಟಗೊಳಿಸಿದ ಹೊರತು ತಮಗೆ ಉಳಿಗಾಲವಿಲ್ಲವೆಂದು ಇವೆರಡರ ವಿರುದ್ಧ ಸಮರ ಸಾರಿದರು. ಹಿಂದುಗಳನ್ನು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಿಸುವ ಕಾರ್ಯ ವ್ಯಾಪಕವಾಗಿ ಕೈಕೊಂಡರು. ಜೊತೆಗೆ ಕೊಂಕಣಿ ಭಾಷೆಯ ಮೇಲೂ ಗಧಾಪ್ರಹಾರ ತಂದರು.

ಮತಾಂತರದ ಹೋಮಕುಂಡದಲ್ಲಿ ಬೀಳಲು ಬಯಸದ ಜನ ತಮ್ಮ ತಮ್ಮ ದೇವಮೂರ್ತಿಗಳನ್ನು ಘನಾರಣ್ಯದಲ್ಲಿ ಅಡಗಿಸಿ ಇಟ್ಟರು. ಕೆಲವರು ತಮ್ಮೊಡನೆ ಹೊತ್ತು ನಡೆದರು. ಮುಖ್ಯವಾಗಿ ಕನ್ನಡ ದೊರೆಗಳ ಆಳ್ವಿಕೆಗೊಳಗಾದ ಪೋಂಡಾ ತಾಲ್ಲೂಕಿನಲ್ಲಿ ದೇವಮೂರ್ತಿಗಳನ್ನು ಅಡಗಿಸಿಟ್ಟರು. ಇಂದು ಕವಳೆ, ರಾಮನಾಥ, ಬಾಂದೋಡೆ ಮಾರ್ದೋಳ ಮಂಗೇಶಿಗಳಲ್ಲಿ ಕಾಣುವ ಮಂದಿರಗಳು ಹೀಗೆ ಅಡಗಿಸಲ್ಪಟ್ಟ ದೇವಮೂರ್ತಿಗಳು. ಪೋರ್ಚುಗೀಸರ ಧಾಳಿಗೆ ಅಂಜಿ ಓಡಿದವರು ಹೆಚ್ಚಾಗಿ ಕರ್ನಾಟಕಕ್ಕೆ ಹೋದರು. ಯಾಕೆ? ಕಾರಣ ಸಾವಿರ ವರ್ಷ ಕನ್ನಡಿಗರು ಆಳಿದ್ದರಿಂದ ಅವರಿಗೆ ಕನ್ನಡ ಭಾಷೆ ಬರುತ್ತಿತ್ತು. ಕನ್ನಡ ಸಂಸ್ಕೃತಿಯಲ್ಲಿ ಬೆಳೆದಿದ್ದರು. ಮಹಾರಾಷ್ಟ್ರಕ್ಕಿಂತ ಕನ್ನಡನಾಡು ಅವರಿಗೆ ಪ್ರಿಯವಾಗಿತ್ತು. ಕರ್ನಾಟಕಕ್ಕೆ ಬಂದು ಗೋಮಂತಕೀಯರು ಉತ್ತರ - ಕನ್ನಡ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೆಲೆನಿಂತರು. ಕೆಲವರು ಕೆಳದಿ ಸಂಸ್ಥಾನದಲ್ಲಿ ದೊಡ್ಡ ಹುದ್ದೆಗೇರಿದರು.

ಗೋವೆಯಲ್ಲಿ ೪೫೦ ವರ್ಷ ಪೋರ್ಚುಗೀಸರು ಆಳಿದರೂ, ಕೊನೆಯ ಕೆಲ ಕಾಲ ಕೆಲ ಭಾಗ ಮರಾಠಿಗರ ಆಳ್ವಿಕೆಗೆ ಬಂದರೂ ಇಪ್ಪತ್ತನೆಯ ಶತಮಾನದಲ್ಲಿ ಮರಾಠಿಯತ್ತ ಗೋಮಂತಕೀಯರ ಒಲವು ಮೂಡಿದ್ದರೂ ಕನ್ನಡದ ಪಳಿಯುಳಿಕೆ ಅವರಿಂದ ಅಳಿಸಲಾಗಲಿಲ್ಲ. ಉದಾ: ಊರುಗಳ ಹೆಸರು ನೋಡಿ :-

ಆಗೋಸಿ (ಅಗಸಿ) ಬಾಂಬೋಲಿಂ (ಬಾಂಬವಳ್ಳಿ) ಜಾಂಬಾವಲಿ (ಜಾಂಬವಳ್ಳಿ) ಹೊಂಡಾ (ಹೊಂಡ) ದೊಡಾಮಾರ್ಗ (ದೊಡ್ಡಮಾರ್ಗ) ಕಾಲಾಪುರ (ಕಲ್ಲಪುರ) ಕುಕ್ಕಲ್ಲಿ (ಕುಕ್ಕಹಳ್ಳಿ) ಕೇರಿ (ಕೇರಿ) ಮಾಂಡೂರ (ಮಾಂಡೂರು) ಚಿಕಾಲಿ (ಚಿಕ್ಕಳ್ಳಿ) ಮಾಂಗೂರ (ಮಾಂಗೂರು) ಪೋಂಡಾ (ಹೊಂಡ) ಶಿವೋಲಿ (ಶಿವಳ್ಳಿ) ಸಾಂಗೆಂ (ಸಂಗಮ), ಹರವಳೆಂ (ಹರಹಳ್ಳಿ - ಇಲ್ಲಿ ಮಹಾದೇವ ಮಂದಿರವಿದೆ) ಸಾಂಖವಾಳ (ಸಂಕವಳ್ಳಿ) ಕಾಸರಪಾಲ (ಕಾಸರಪಳ್ಳಿ) ಕೆಸರವಾಲ (ಕೆಸರಹಳ್ಳಿ) ಸಾಂತೆಮಾಳ (ಸಂತೆಮಾಳ) ಚಾವಡಿ (ಚಾವಡಿ) ಕುಟ್ಟಳ್ಳಿ (ಕುಟ್ಟಿಹಳ್ಳಿ). ಇದಲ್ಲದೆ ಇನ್ನೂ ಕೆಲವು ಶಬ್ದಗಳು ಊರ ಹೆಸರಾಗಿ ಇಂದಿಗೂ ಇವೆ.

ಕೊಂಕಣಿ ಭಾಷೆಯಲ್ಲಿ ಇಂದಿಗೂ ಪ್ರಚಲಿತವಿರುವ ಪದಗಳನ್ನು ನೋಡಿ. ಉತ್ತರ ಕನ್ನಡ ದಕ್ಷಿಣ ಕನ್ನಡದ ಕೊಂಕಣಿಯ ಮೇಲೆ ಕನ್ನಡ ಭಾಷೆಯ ಪ್ರಭಾವವಾಗಿದ್ದರೆ ಆಶ್ಚರ್ಯವಲ್ಲ. ಆದರೆ ಕಳೆದ ನಾಲ್ಕೈದು ಶತಮಾನಗಳಿಂದ ಕನ್ನಡದ ಸಂಪರ್ಕವಿಲ್ಲದ ಗೋವೆಯ ಕೊಂಕಣಿ ಭಾಷೆಯಲ್ಲಿ ಈ ಪದಗಳು ಕನ್ನಡವನ್ನು ಪ್ರತಿನಿಧಿಸುತ್ತದೆಯೆಂದು ತಿಳಿದರೆ ಗೋಮಂತಕೀಯರು ಆಶ್ಚರ್ಯಪಡುತ್ತಾರೆ.

ತುಬಕ (ತುಬಾಕಿ) ಕುರು(ಕುರುಹು) ಮಿರಯ (ಮೆರೆ) ಮೇಟ (ಮೆಟ್ಟಿಲು) ಕುಮಕ(ಕುಮ್ಮಕ್ಕು) ಬಾಗ (ಬಾಗು) ಜಗಾಟ (ಜಾಗಟೆ) ಬೊಬಾಟ (ಬೊಬ್ಬಾಟ) ತಾಕಟಿ (ತಕ್ಕಡಿ) ಬೇಗೋಬೇಗ (ಬೇಗ ಬೇಗ) ಗೂಡ (ಗುಟ್ಟು) ಸುಸ್ತ (ಸುಸ್ತು) ಪಾಕಳಿ (ಪಕಳೆ) ಕಾಟೆ (ಕಟ್ಟೆ) ಕಾಂಬಳ (ಕಂಬಳ) ಆಂಗಣ (ಅಂಗಣ) ತಾತಿ (ತತ್ರಿ) ಆಸ್ರೋ (ಆಸರೆ) ವೀರಗಳ (ವೀರಗಲ್ಲು) ತೋರ್ಣ (ತೋರಣ) ದುಡು (ದುಡ್ಡು) ಶ್ವೇತಕಾಮತಿ (ಶೇತ=ಹೊಲ, ಕಮತ=ಒಕ್ಕಲುತನ) ಹಿಂಡ (ಹಿಂಡು) ದಾಂಡೋ (ದಂಡೆ) ಬೂಡ (ಬುಡ) ಇಂಥ ಇನ್ನೂ ನೂರಾರು ಪದಗಳು ಗೋವೆಯ ಕೊಂಕಣಿಯಲ್ಲಿ ಇಂದಿಗೂ ಬಳಸುತ್ತಾರೆ. ಆದರೆ ಗೋಮಂತಕೀಯರಿಗೆ ಮಾತ್ರ ಇವು ಕನ್ನಡ ಪದಗಳೆಂದು ಗೊತ್ತಿಲ್ಲ!

ಸಾಂಸ್ಕೃತಿಕ ಪರಂಪರೆಯಲ್ಲಿಯೂ ಕರ್ನಾಟಕದ ದಟ್ಟವಾದ ಪ್ರಭಾವ ಗೋಮಂತಕದ ಮೇಲಾಗಿದೆ. ಇಲ್ಲಿರುವ 'ದಶಾವತಾರಿ ಕಾಲಾ, ಕರ್ನಾಟದಿಂದ ನೇರವಾಗಿ ಪ್ರಭಾವ ಪಡೆದಿದೆ ಎಂದು ಖ್ಯಾತ ಮೃದಂಗವಾದಕ ವಿಶ್ವಂಭರ ಪರ್ವತಕರ ಹೇಳುತ್ತಿದ್ದರು. (ಸಮರಸ - ೧೯೬೭) ನಮ್ಮಲ್ಲಿರುವ ದಶಾವತಾರ ಮೇಳಗಳ ಮಾದರಿಯಲ್ಲಿ ಪೌರಾಣಿಕ ಕಥೆಗಳನ್ನು ಹೇಳುವ ಗೋಮಂತಕೀಯ ಯಕ್ಷಗಾನವೆಂದರೆ 'ದಶಾವತಾರಿ ಕಾಲಾ! ಕಾಲಕ್ರಮೇಣ ವೇಷ ಭೂಷಣ ನೃತ್ಯಶೈಲಿ ಗಾನಶೈಲಿಯಲ್ಲಿ ವ್ಯತ್ಯಾಸವಾಗಿದ್ದರೂ ಇಂದಿಗೂ ಅವರ ನಾಂದಿ ಪದದಲ್ಲಿ ಕನ್ನಡದ ಸಾಲು ಇದೆ.

ಮಾರ್ಚ್ - ಏಪ್ರಿಲ್‌ನಲ್ಲಿ ಗಾವಡಿ ಜನಾಂಗದವರು ಮಾಡುವ ಜಾಗೋರ ಎಂಬ ಪದವೂ ಕನ್ನಡದ 'ಜಾಗರ' ಎಂಬ ಪದದಿಂದಲೇ ಬಂದಿರಬೇಕು. ಕಾರಣ ಇಲ್ಲಿನ ಗಾವಡಿ ಜನಾಂಗದವರು ಉತ್ತರ ಕನ್ನಡದ ಹಾಲಕ್ಕಿ ಒಕ್ಕಲಿಗರಾಗಿರಬೇಕು. ಅಲ್ಲಿಯೂ ಅವರನ್ನು ಹಾಲಕ್ಕಿ ಗೌಡರು ಎಂದು ಕರೆಯುತ್ತಾರೆ. ಆ 'ಗೌಡ' ಎಂಬ ಪದವೇ ಇಲ್ಲಿ 'ಗಾವಡಿ' ಎಂದಾಗಿರಬೇಕು. ಈ ಜಾಗರದಲ್ಲಿ ಹತ್ತೆಂಟು ಜಾಗರಗಳಿವೆ. ಬೇರೆ - ಬೇರೆ ಪರಿಸರದಲ್ಲಿ ಆಡುವ ಜಾಗರದ ವೈಶಿಷ್ಟ್ಯ ಬೇರೆ - ಬೇರೆ.

ಗೋವೆಯಲ್ಲಿ ಆಡುವ 'ತೋಣಿಯಾ ಮೇಳ' (ಕೋಲಾಟ) ಗೋಫ (ಜಡೆ ಕೋಲಾಟ), ಕುದುರೆ ಕುಣಿತ, ಫುಗಡಿ ಮೊದಲಾದ ಕುಣಿತಗಳು ಕರ್ನಾಟಕದಲ್ಲಿವೆ. ಇಲ್ಲಿ ಉಪಯೋಗಿಸುವ ಕಾಂಸಾಳೆ, ಮದ್ದಳೆ, ಗುಮ್ಮಟೆ, ಸನಾಮಿ, ಡೋಲು ಮೊದಲಾದ ವಾದ್ಯಗಳೂ ಕರ್ನಾಟಕದಲ್ಲಿ ಇಂದಿಗೂ ಪ್ರಚಲಿತವಾಗಿವೆ. ಇಲ್ಲಿ ಇಂದಿಗೂ ಕುಣಿಯುವ ವೀರಭದ್ರ ಕುಣಿತ ಅಪ್ಪಟ ಕರ್ನಾಟಕ ಸಂಸ್ಕೃತಿಯ ಪ್ರತೀಕ.

ವಿಧಿವತ್ತಾಗಿ ನಡೆಯುವ ಈ ಕುಣಿತ ಮಾಡುವ ವ್ಯಕ್ತಿ ಒಂದು ನಿಶ್ಚಿತ ಕುಟುಂಬದ ಸದಸ್ಯನಿರುತ್ತಾನೆ. ಹುಣ್ಣಿಮೆಯ ಮೊದಲ ವ್ಯಕ್ತಿ ಒಂದು ನಿಶ್ಚಿತ ಕುಟುಂಬದ ಸದಸ್ಯನಿರುತ್ತಾನೆ. ಹುಣ್ಣಿಮೆಯ ಮೊದಲ ಮೂರು ದಿನ ಈತ ವ್ರತಸ್ಥನಾಗಿರಬೇಕು. ಆತ ಉಪವಾಸ ಮಾಡಬೇಕು. ನೆಲದ ಮೇಲೆ ಮಲಗಬೇಕು. ಋತುಮತಿಯಾದ ಹೆಣ್ಣಿನ ಕಣ್ಣಿಗೆ ಬೀಳಬಾರದು. ವೀರಭದ್ರನ

ಮೇಕಪ್ ಮಾಡಿ ವಸ್ತ್ರಾಲಂಕಾರ ಮಾಡುವ ನಿಶ್ಚಿತಸ್ಥಳಕ್ಕೆ ವೀರಭದ್ರನ ಪಾತ್ರಧಾರಿ ಹುಣ್ಣಿಮೆಯ ಮಧ್ಯ ರಾತ್ರಿ ನಡೆದು ಬರುತ್ತಾನೆ. ದೇವರಿಗೆ ಹೇಳಿಕೆ ಮಾಡಿ ಕಾಯಿ ಒಡೆಯುತ್ತಾರೆ. ಅವನು ಮೇಲ್ಮುಖನಾಗಿ ಮಲಗುತ್ತಾನೆ. ಕಥಕ್ಕಳಿಯ ರಾಕ್ಷಸ ಪಾತ್ರಗಳಿಗೆ ಒಪ್ಪುವಂತಹ ಮುಖವರ್ಣಿಕೆ ಮಾಡುತ್ತಾರೆ. ರಾಕ್ಷಸ ಪಾತ್ರಕ್ಕೊಪ್ಪುವ ವೇಷಭೂಷಣ ಹಾಕುತ್ತಾರೆ. ತಲೆಗೆ ಮೈಸೂರು ಮಾದರಿಯ ಪೇಟ ಸುತ್ತುತ್ತಾರೆ. ಕೈಗೆ ಆಭರಣ ತೊಡಿಸುತ್ತಾರೆ. ಬೆನ್ನಹಿಂದೆ ಬಿದಿರಿನಿಂದ ಮಾಡಿ ಕಾಗದ, ಬಟ್ಟೆಯಿಂದ ಅಲಂಕರಿಸಿದ ಪ್ರಭಾವಳಿ ಇರುತ್ತದೆ. ಈ ಪಾತ್ರ ಎದ್ದು ನಿಂತಾಗ ದಕ್ಷಿಣ ಕನ್ನಡದ 'ಭೂತದ ಕೋಲ'ದ ನೆನಪು ಬರುತ್ತದೆ. ವೀರಭದ್ರನ ಎರಡು ಕೈಗಳಲ್ಲಿ ಎರಡು ಖಡ್ಗಗಳನ್ನು ಕೊಡುತ್ತಾರೆ. ಅವನ ಅಲಂಕಾರಪೂರ್ಣವಾದ ಬಳಿಕ ದೇವರಿಗೆ ಆರತಿ ಎತ್ತಿ, ಹೇಳಿಕೆ ಮಾಡಿ, ತೆಂಗಿನ ಕಾಯಿ ಒಡೆಯುತ್ತಾರೆ. ಆಗ ಅವನಲ್ಲಿ ವೀರಭದ್ರನ ರೌದ್ರ ಆವೇಶ ಮೈಯಲ್ಲಿ ಸೇರಿಕೊಳ್ಳುತ್ತದೆಯೆಂಬ ನಂಬಿಕೆಯಿದೆ.

ಒಂದು ಕಡೆ ದೇವಾಲಯದ ಮುಂದೆ ದಕ್ಷಯಜ್ಞನ ನಾಟಕ ನಡೆಯುತ್ತಿರುತ್ತದೆ. ಇನ್ನೊಂದು ಕಡೆ ವೀರಭದ್ರನ ಮೆರವಣಿಗೆ ನಡೆದಿರುತ್ತದೆ. ಅವನ ಇಕ್ಕೆಲದಲ್ಲಿ ಇಬ್ಬರು ಅವನ ಪ್ರಭಾವಳಿ ಹಿಡಿದುಕೊಳ್ಳಲು, ಅವನ ಮೈಮೇಲೆ ಬಂದು ಅವನು ತೂಕ ತಪ್ಪಿದರೆ ಹಿಡಿದುಕೊಳ್ಳಲು ಅವನ ಜೊತೆ ಜೊತೆಯಾಗಿ ನಡೆಯುತ್ತಿರುತ್ತಾರೆ. ಘೋಷಣೆ ಹಾಕುವ ಪರಿಚಾರಕರು ದೀವಟಿಗೆ, ದಂಡ, ಹಿಡಿದುಕೊಂಡು ನಡೆಯುತ್ತಿರುತ್ತಾರೆ. ಆಗಾಗ್ಗೆ ಧೋತರ ಹಾರಿಸುವ ಧೋಬಿ ವೀರಭದ್ರನ ಮುಂದೆ ನಡೆಯುತ್ತಿರುತ್ತಾನೆ. ವಾದ್ಯಮೇಳದವರೂ ಮುಂದೆ ಹೋಗುತ್ತಿರುತ್ತಾರೆ. ಬೆಳಗಿನ ಜಾವಕ್ಕಿಂತ ಒಂದು ಪ್ರಹರ ಮೊದಲು ನಡೆಯುವ ಈ ವೀರಭದ್ರ ಕುಣಿತ ರಾತ್ರಿಯ ಪ್ರಶಾಂತ ಮೌನವನ್ನು ಮುರಿದು ವಾತಾವರಣದಲ್ಲಿ ವೀರಾವೇಶ, ರೌದ್ರ ತುಂಬುತ್ತದೆ.

ವೀರಭದ್ರನ ಮೆರವಣಿಗೆ ಒಂದು ನಿಶ್ಚಿತಸ್ಥಳಕ್ಕೆ ಬಂದು ನಿಲ್ಲುತ್ತದೆ. ಗುಂಪಿನ ಪ್ರಮುಖ ಮುಂದೆ ಎರಡೂ ಕೈಗಳನ್ನು ಎತ್ತರಿಸಿ ಘೋಷಣೆ ಹಾಡುತ್ತಾನೆ. ಇದಕ್ಕೆ 'ವರಾವಣೆ' ಎನ್ನುತ್ತಾರೆ. ಘೋಷಣೆ ಮುಗಿದ ಮೇಲೆ ವೀರಭದ್ರ ನೃತ್ಯ ಆರಂಭವಾಗುತ್ತದೆ. ಯಕ್ಷಗಾನದ ರಾಕ್ಷಸ ಕುಣಿತ ಕಣ್ಣೆದುರು ನಿಲ್ಲುತ್ತದೆ. ಹೀಗೆ ಅಲ್ಲಲ್ಲಿ ನಿಲ್ಲುತ್ತ ಘೋಷಣೆಗಳನ್ನು ಸ್ವೀಕರಿಸುತ್ತ ಕೊನೆಗೊಮ್ಮೆ ದೇವಾಲಯದ ಮುಂದೆ ನಾಟಕ ನಡೆಯುತ್ತಿರುವ ಸ್ಥಳಕ್ಕೆ ಬರುತ್ತಾನೆ. ಅಷ್ಟೊತ್ತಿಗೆ ನಾಟಕ ಮುಗಿದು ಪಾತ್ರಧಾರಿಗಳು ಬಟ್ಟೆಬರೆ ಕಟ್ಟಿಕೊಂಡು ಅಲ್ಲಿಂದ ಓಡಿ ಹೋಗುತ್ತಾರೆ! ಕೈಯಲ್ಲಿದ್ದ ಖಡ್ಗಗಳನ್ನು ಬೀಸುತ್ತ ರಾಕ್ಷಸನಂತೆ ಹಾವಭಾವದೊಂದಿಗೆ ಹೆಜ್ಜೆಯಿಡುತ್ತ ರಂಗಭೂಮಿಗೆ ಬಂದು ಅಲ್ಲಿಟ್ಟ ಆಸನದ ಮೇಲೆ ಕುಳಿತುಕೊಳ್ಳುವ ಮೊದಲು ನೃತ್ಯ ಮಾಡುತ್ತಾನೆ. ಅವನು ಬೀಸುವ ಖಡ್ಗ ಮೈಗೆ ತಗುಲಿದರೆ 'ಶುಭ'ವೆಂದು ಭಾವಿಸುವ ಭಾವುಕರು ಇದ್ದಾರೆ. ಕುಣಿಕುಣಿದು ಸುಸ್ತಾದ ವೀರಭದ್ರ ನೆಲಕ್ಕುರುಳುತ್ತಾನೆ. ಆಗ ಅವನ ಮೇಲೆ ದೇವರ ತೀರ್ಥಪ್ರೋಕ್ಷಣೆ ಮಾಡುತ್ತಾರೆ.

ವೀರಭದ್ರ ನಿಂತಾಗ 'ವರಾವಣೆ' ಮಾಡುವ ಕಾಲದಲ್ಲಿ ನೀಡುವ ಘೋಷಣೆ ನೋಡಿ :

'ಕೈಲಾಸವಳಿಗೆ ವೀರಭದ್ರ ಅಣ್ಣಾ'

ಎಂದ ಕೂಡಲೆ ಸುತ್ತಲಿದ್ದ ಜನ 'ಹಾ ಉದೋ' ಎನ್ನುತ್ತಾರೆ.

'ಮಹಾಪ್ರತಾಪಿ ವೀರಭದ್ರ ಅಣ್ಣಾ 'ಹಾ ಉದೋ'

'ಪಾರ್ವತಿಪುತ್ರಾ ವೀರಭದ್ರ ಅಣ್ಣಾ 'ಹಾ ಉದೋ'

ಅನಂತರ ವೀರಭದ್ರ ಕುಣಿತ ನಡೆದು ಅವನು ಕುಸಿದುಬಿದ್ದ ನಂತರ ಅವನನ್ನು ಎತ್ತಿಕೊಂಡು ಒಳಗೆ ಒಯ್ಯುತ್ತಾರೆ. ಬಳಿಕ ದೇವಾಲಯದಲ್ಲಿ ಬೇರೆ ಶಾಸ್ತ್ರವಿಧಿಗಳು ನಡೆಯುತ್ತವೆ. ಇದೇ ಬಗೆಯ ವೀರಭದ್ರ ಕುಣಿತ, ತುಮಕೂರು ಜಿಲ್ಲೆಯಚಲ್ಲಿದೆಯನ್ನುತ್ತಾರೆ.

ಈ ವೀರಭದ್ರನ ಕುಣಿತ ಸಾಂಬಳಿ, ಸಾಂಗೆ, ಫೊಂಡಾ, ಬೋರಿಂ ಸಾವರ್ಡೆಗಳಲ್ಲಿ ಮಾತ್ರ ಇದೆ. ಸಾಂಬಳಿ ಒಂದು ಬಿಟ್ಟರೆ ಮಿಕ್ಕ ಕಡೆಗಳಲ್ಲಿ ಕನ್ನಡಿಗರ ಆಳ್ವಿಕೆಯಿತ್ತು. ಆ ಕಾಲದಲ್ಲಿ ಈ ನೃತ್ಯಪ್ರಕಾರ ಇಲ್ಲಿ ಪ್ರಾರಂಭವಾಗಿರಬೇಕು. ಸಾಂಬಳಿಯಲ್ಲಿ ವಿಧಿವಿಧಾನಗಳು ಒಂದೇಯಾದರೂ ಕೊಂಚ ಭಿನ್ನತೆ ಕಾಣುತ್ತೇವೆ.

ಹೀಗೆ ಗೋವೆಯ ಸಾಂಸ್ಕೃತಿಕ ಪರಂಪರೆಯಲ್ಲಿ ಕರ್ನಾಟಕದ ಪ್ರಭಾವ ದಟ್ಟವಾಗಿ ಬಿದ್ದಿದೆ. ಕರ್ನಾಟಕದಲ್ಲಿದ್ದ ಎಷ್ಟೊ ಕಲಾಪ್ರಕಾರಗಳು, ವಾದ್ಯಗಳು, ಜಾನಪದ ಕಥೆಗಳು ಇಲ್ಲಿಯೂ ಬಳಕೆಯಲ್ಲಿವೆ. ಇವು ಪೋರ್ಚುಗೀಸರ ದೀರ್ಘ ಆಳ್ವಿಕೆಯ ನಂತರವೂ ಜೀವಂತವಾಗಿರುವುದು ವೈಶಿಷ್ಟ್ಯ. ಕರ್ನಾಟಕದಲ್ಲಿ ಶಿವಪೂಜೆ ಹೆಚ್ಚು. ಗೋವೆಯಲ್ಲಿಯೂ ದಾಮೋದರ, ರಾಮನಾಥ, ಚಂದ್ರೇಶ್ವರ, ಸಿದ್ದೇಶ್ವರ, ಮಂಗೇಶ, ಸಪ್ತಕೋಟೇಶ್ವರ, ಮಹಾದೇವ ಮೊದಲಾದ ಹೆಸರಿನಲ್ಲಿ ಶಿವಲಿಂಗಗಳು ಪೂಜಿಸಲ್ಪಡುತ್ತವೆ. ಕೆಲವೆಡೆ ವೈಷ್ಣವರು ಭಜಕರಾದರೂ ಶಿವರಾತ್ರಿಯಂತಹ ವಿಶಿಷ್ಟ ದಿನಗಳಲ್ಲಿ ಶಿವಾರಾಧನೆ ಎಲ್ಲ ದೇವಾಲಯಗಳಲ್ಲಿಯೂ ನಡೆಯುತ್ತದೆ. ಅದೇ ರೀತಿ ಕರ್ನಾಟಕದಲ್ಲಿ ಆದಿಶಕ್ತಿಯ ಆರಾಧನೆ ಅಧಿಕ, ಗೋವೆಯಲ್ಲಿಯೂ ಶಾಂತಾದುರ್ಗಾ, ಆರ್ಯಾದುರ್ಗಾ, ಕಾಳಿಕಾ, ಭಗವತಿ, ಭೂಮಿಕಾ, ವಿಜಯದುರ್ಗಾ, ಮಹಾಮಾಯಿ, ಮಹಾಲಸಾ ಎಂಬ ಹೆಸರುಗಳಲ್ಲಿ ಪೂಜಿಸಲ್ಪಡುವುದು ಆದಿಶಕ್ತಿಯೇ. ಅಷ್ಟೇ ಏಕೆ ಎಷ್ಟೋ ಕಡೆಗಳಲ್ಲಿ ಚಾಮುಂಡೇಶ್ವರಿ ಮೂರ್ತಿಗಳು ಪೂಜಿಸಲ್ಪಡುತ್ತವೆ. ಚಾಮುಂಡೇಶ್ವರಿ ಮೂರ್ತಿಗಳು ಪೂಜಿಸಲ್ಪಡುತ್ತವೆ. ಚಾಮುಂಡೇಶ್ವರಿಯ ಅನೇಕ ಭಗ್ನಮೂರ್ತಿಗಳು ಇಲ್ಲಿರುವ ಮೂಜಿಯಂನಲ್ಲಿ ನೋಡಬಹುದು.

ಒಟ್ಟಿನಲ್ಲಿ ಹೇಳುವಾದರೆ ಇಂದು ಗೋಮಂತಕೀಯರು ಮಹಾರಾಷ್ಟ್ರದತ್ತ ಒಲವು ತೋರುತ್ತಿದ್ದರೂ ಕರ್ನಾಟಕ ಸರಕಾರ ಮನಸ್ಸು ಮಾಡಿದ್ದರೆ ಗೋಮಂತಕೀಯರಿಗೆ ಕನ್ನಡ ಭಾಷೆ, ಕನ್ನಡ ಸಂಸ್ಕೃತಿಯ ಕುರಿತು ಕುತೂಹಲ ಮೂಡಿಸಬಹುದಿತ್ತು. ವ್ಯಾಪಾರಿ - ವ್ಯವಹಾರಗಳಿಗೆ ಕರ್ನಾಟಕವನ್ನೇ ಅವಲಂಬಿಸಿದ ಗೋಮಂತಕೀಯರನ್ನು ಸಾಂಸ್ಕೃತಿಕವಾಗಿ ನಮ್ಮತ್ತ ಸೆಳೆದುಕೊಂಡರೆ ಆದರಿಂದ ಕರ್ನಾಟಕಕ್ಕೆ ಲಾಭವಿದೆ.

ಕನ್ನಡ ಗ್ರಂಥೋದ್ಯಮ

ಶ್ರೀ ಮಾಧವ ಎನ್.ರಟ್ಟೀಹಳ್ಳಿ

ಪ್ರಸ್ತಾವನೆ

ಮನುಷ್ಯ ಮೂಲಭೂತವಾಗಿ ಜ್ಞಾನಪಿಪಾಸು. ಹೆಚ್ಚುಹೆಚ್ಚಾಗಿ ತಿಳಿದುಕೊಳ್ಳ ಬೇಕೆನ್ನುವ ಅದಮ್ಯವಾದ ಬಯಕೆ ಅವನಲ್ಲಿ ಯಾವಾಗಲೂ ಪುಟಿಯುತ್ತಿರುತ್ತದೆ. ಈ ಪ್ರೇರಣೆಯಿಂದಾಗಿ ಆದಿಮಾನವನಿಂದ ಆಧುನಿಕ ಮಾನವನವರೆಗೆ ಅವನು ತನ್ನ ತಿಳಿವಳಿಕೆಯ ದಿಗಂತಗಳನ್ನು ವಿಸ್ತರಿಸಿಕೊಳ್ಳುತ್ತಾ ಬಂದಿದ್ದಾನೆ. ಅವನ ಜ್ಞಾನಕ್ಷೇತ್ರಗಳು ವಿಸ್ತೃತವಾಗಿವೆ. ತನ್ನ ಅದ್ಭುತವಾದ ಜ್ಞಾನಶಕ್ತಿಯಿಂದ ಮನುಷ್ಯ ಸೃಷ್ಟಿಯಲ್ಲೆಲ್ಲ ಅನನ್ಯನೆನಿಸಿಕೊಂಡು ವಿಶ್ವದ ಜೀವಿಗಳಲ್ಲಿ ಶೃಂಗೋಪಾದಿಯಲ್ಲಿದ್ದಾನೆ. ಅವನ ಈ ಜ್ಞಾನಪಿಪಾಸೆ ನಿರಂತರವಾಗಿ ಬೆಳೆಯುವ, ಬಗೆಬಗೆಯ ಸಂಕೀರ್ಣತೆಗಳನ್ನು ಮೈಗೂಡಿಸಿಕೊಳ್ಳುವ ದೃಢಲಕ್ಷಣಗಳನ್ನು ಹೊಂದಿರುವುದಾಗಿ ಕಂಡುಬರುತ್ತದೆ.

ದಾಖಲೆಗೊಂಡ ತಿಳಿವಳಿಕೆಯ ಮೊತ್ತ ಮನುಷ್ಯನ ಈ ಜ್ಞಾನಪಥದಲ್ಲಿ ಅವನನ್ನು ಮುನ್ನಡೆಸುವ ದಾರಿದೀಪವಾಗಿದೆ. ಅಂದಿನಿಂದ ಇಂದಿನವರೆಗೆ ಮಾನವಕುಲ ಸಂಪಾದನೆ ಮಾಡಿ ಅಪಾರವಾಗಿ ಬೆಳೆಸಿರುವ ಜ್ಞಾನರಾಶಿ ಇಂದು ನಮ್ಮ ಮುಂದೆ ಹಿಮಾಲಯೋಪಾದಿಯಲ್ಲಿ ಬೆಳೆದು ನಿಂತಿದೆ. ಈ ರಾಶಿಯ ಸಂರಕ್ಷಣೆಯನ್ನು ಮಾಡುವದರೊಟ್ಟಗೆ ಅದನ್ನು ಸೂಕ್ತವಾಗಿ, ಲಾಭದಾಯಕವಾಗಿ ಉಪಯೋಗಿಸಿ ಕೊಂಡು ಇಂದಿನ ಹಾಗೂ ಮುಂದಿನ ಜನಾಂಗಗಳ ಬಳಕೆಗಾಗಿ ಬೆಳೆಸುವ ಹೊಣೆಗಾರಿಕೆ ನಮ್ಮ ಮೇಲಿದೆ. ಈ ನಿಟ್ಟನಲ್ಲಿ ಗ್ರಂಥಗಳ ಹಾಗೂ ಗ್ರಂಥಾಲಯಗಳ ಪಾತ್ರವನ್ನು ಸಹ ಪರಿಶೀಲಿಸುವದು ಅವಶ್ಯಕವಾಗುತ್ತದೆ.

ಅಂದು

ವೇದೋಪನಿಷತ್ತುಗಳು, ಆಗಮಗಳು ಹಾಗೂ ನಮ್ಮ ಪ್ರಾಚೀನ ಅಧ್ಯಯನಗಳೆಲ್ಲ ಹಿಂದಿನ ಕಾಲದಲ್ಲಿ ಕಂಠಪಾಠದ ಮೂಲಕ ನಡೆಯುತ್ತಿದ್ದವು. ಗುರುಶಿಷ್ಯ ಪರಂಪರೆಯ ಮೂಲಕ ಜ್ಞಾನ ಬಾಯಿಂದ ಬಾಯಿಗೆ ಹರಿದುಬರುತ್ತಿತ್ತು. ತಿಳಿವಳಿಕೆಯನ್ನು ದಾಖಲು ಮಾಡಲು ಬರವಣಿಗೆಯ ಬಳಕೆ ಮೊದಲಾದೊಡನೆ ಕಂಠಪಾಠದ ಪದ್ಧತಿಗೆ ಬಹುಮಟ್ಟಿಗೆ ಕತ್ತರಿಬಿತ್ತು. ಧ್ವನಿಸಂಕೇತಗಳಿಗೆ ತಕ್ಕಂತೆ ಬರವಣಿಗೆಯ ರೂಪ ಕರಗತವಾಗುತ್ತಿದ್ದಂತೆ ಮಾನವನ ಜ್ಞಾನಸಾಧನೆಯ ಕ್ಷೇತ್ರದಲ್ಲಿ ಬಹುದೊಡ್ಡ ಕ್ರಾಂತಿಯೇ ಆದಂತಾಯಿತು. ಈ ದಿಕ್ಕಿನಲ್ಲಿ ಬರವಣಿಗೆಯ ಪ್ರಕಾರಗಳು ಎಷ್ಟು ಮುಖ್ಯವೊ ಬರವಣಿಗೆಗೆ ಅಗತ್ಯವಾಗುತ್ತಿದ್ದ ಸಾಧನ ಸಾಮಗ್ರಿಗಳೂ ಅಷ್ಟೇ ಮಹತ್ವಪೂರ್ಣ ಎನಿಸಿದವು. ಚಿತ್ರಲಿಪಿಯಿಂದ ಹಿಡಿದು ಅಕ್ಷರಲಿಪಿಯವರೆಗೂ ಬೆಳೆದು ಬಂದ ಈ ಹಾದಿಯಲ್ಲಿ ಗುಹಾಮಾನವ ಬಂಡೆಗಳ ಮೇಲೆ ಒರಟೊರಟಾಗಿ ಇದ್ದಿಲು ಮುಂತಾದ ಪದಾರ್ಥಗಳಿಂದ ಬರೆದು ಅಥವಾ ಕೆತ್ತಿ ತಿಳಿಸುತ್ತಿದ್ದ ಹಂತವನ್ನು ಒಳಗೊಂಡಂತೆ ಮಣ್ಣು, ಮರ, ಕಲ್ಲು, ಚರ್ಮ, ತಾಳೆಗರಿ, ಭೂರ್ಜಪತ್ರ ಮುಂತಾದ ಹಲವಾರು ಪದಾರ್ಥಗಳು ಬಳಕೆಯಾಗಿರುವದು ಕಂಡುಬರುತ್ತದೆ. ಇವೇ ಅಲ್ಲದೆ ಕಬ್ಬಿಣ, ಹಿತ್ತಾಳೆ, ಕಂಚು, ತಾಮ್ರ, ಚಿನ್ನ, ಬೆಳ್ಳಿ ಮುಂತಾದ ಲೋಹಗಳಿಂದ ಮಾಡಿದ ತಗಡುಗಳು ಕೂಡ ಬರವಣಿಗೆಯ ಸಾಮಗ್ರಿಗಳಾಗುತ್ತಿದ್ದವು. ಆದರೆ ಕಾಗದದ ಬಳಕೆ ಜನಪ್ರಚಲಿತವಾದ ಮೇಲೆ ಉಳಿದೆಲ್ಲ ಬರವಣಿಗೆ ಸಾಮಗ್ರಿಗಳ ಬಳಕೆ ಬಹುತೇಕ ಕಡಿಮೆಯಾಯಿತು. ಇಂಥವುಗಳ ಮೇಲೆ ಬರೆಯಲು ಉಪಯೋಗಿಸುತ್ತಿದ್ದ ಬರೆಯುವ ಸಾಮಗ್ರಿ, ಉದಾಹರಣೆಗೆ-ಲಾಳದ ಕಡ್ಡಿ, ಮುಳ್ಳು ಹಂದಿಯ. ಮುಳ್ಳು, ಬಿದುರಿನ ಸೀಳು, ನವಿಲಗರಿಯ ಕಾಂಡ ಇಂಥವುಗಳಿಂದ ಲೆಕ್ಕಣಿಕೆಗಳು ತಯಾರಾಗುತ್ತಿದ್ದವು - ಬರವಣಿಗೆಗೆ ಬಳಕೆಯಾಗುತ್ತಿದ್ದ ಮಶಿ ಇವುಗಳನ್ನು ಕುರಿತ ಅಧ್ಯಯನ ಸಹ ತುಂಬ ಕುತೂಹಲಕಾರಿಯಾದುದು.

ಸಾಹಿತ್ಯ ಸಾಧನೆ ಒಂದು ಕಾಲಕ್ಕೆ ಕೇವಲ ಉಪಜೀವಿಕೆಯ ಮಾರ್ಗವಾಗಿರಲಿಲ್ಲ. ಪಂಡಿತರು, ವನಿತೆಯರು. ಬಳ್ಳಿಗಳು ಆಶ್ರಯವಿಲ್ಲದೆ ಬದುಕಲಾರವು ಎಂಬುದು ಸಂಸ್ಕೃತದಲ್ಲಿ ಒಂದು ಪ್ರಾಚೀನೋಕ್ತಿ, ಉಪಜೀವಿಕೆಗೆ ಮಾರ್ಗವಾದೊಡನೆಯೇ ಕವಿ, ಪಂಡಿತ ತನ್ನ ಸಾಹಿತ್ಯಶಕ್ತಿಯನ್ನು ಸರಸ್ವತಿಯ ಆರಾಧನೆಗೆ ಮೀಸಲಿಡುತ್ತಿದ್ದ. ಬಹಳಷ್ಟು ವೇಳೆ ಸಾಹಿತ್ಯ, ಕೃಷಿ ಅವನ ಪಾಲಿಗೆ ವೃತ್ತಿಯಾಗಿರದೆ ಪ್ರವೃತ್ತಿಯಾಗಿರುತ್ತಿತ್ತು. ಅದರಲ್ಲೇ ತನ್ಮಯನಾಗಿ ಅವನು ಮುಡಪಿಟ್ಟು ಬರೆಯುತ್ತಿದ್ದ. ಬರೆದುದನ್ನು ಜನ ಆಸ್ವಾದಿಸಲಿ ಎಂಬುದು ಮುಖ್ಯ ಪ್ರೇರಣೆ ಹಾಗೂ ಆಶಯ ಆಗಿರುತ್ತಿದ್ದವು. ಗ್ರಂಥಪ್ರಸಾರ ಒಂದು ಸಾಮಾಜಿಕ ಧಾರ್ಮಿಕ ಕೈಂಕರ್ಯ ಎಂಬ ರೀತಿಯಲ್ಲಿ ನಡೆಯುತ್ತಿತ್ತು. ಪೊನ್ನಕವಿಯ ಶಾಂತಿಪುರಾಣದ ಒಂದು ಸಾವಿರ ಪ್ರತಿಗಳನ್ನು ಮಾಡಿಸಿ ದಾನಚಿಂತಾಮಣಿ ಅತ್ತಿಮಬ್ಬೆ ಗ್ರಂಥಪ್ರಸರಣ ಸೇವೆಯನ್ನು ಕೈಗೊಂಡ ಸಂಗತಿಯನ್ನು ಈ ನಿಟ್ಟಿನಲ್ಲಿ ನೆನಪಿಸಿಕೊಳ್ಳಬಹುದು.

ಇಂದು

ಗ್ರಂಥಪ್ರಕಾಶನ ಇಂದು ಒಂದು ಉದ್ಯಮವಾಗಿ ಬೆಳೆದು ನಿಂತಿದೆ. ಇತರ ಯಾವುದೇ ಉದ್ಯಮ ಅಥವಾ industry ತನ್ನ ಆಗುಹೋಗುಗಳನ್ನು ಅನೇಕ ದಿಕ್ಕುಗಳಿಂದ ಗಮನಿಸುವಂತೆ ಗ್ರಂಥೋದ್ಯಮ ಮಾನವನ ಬೌದ್ಧಿಕ ಚಟುವಟಿಕೆಗಳನ್ನು ಆಧಾರವಾಗಿ ಇಟ್ಟುಕೊಂಡಿರುವ ಒಂದು ಮಹತ್ತರವಾದ ಸ್ಥಾನಮಾನಗಳನ್ನು ಪಡೆದುಕೊಂಡಿರುವ ಕ್ಷೇತ್ರವೆನಿಸಿದೆ. ಯಾವುದೇ ಉದ್ಯಮಕ್ಕೆ ಅನ್ವಯಿಸುವಂತಹ ಕಚ್ಚಾಸಾಮಗ್ರಿ, ಸಿದ್ಧವಸ್ತು, ಮೂಲಬಂಡವಾಳ, ಲಾಭನಷ್ಟ, ಏರುಪೇರುಗಳು, ಮಾರಾಟಗಾರ, ಬಳಕೆದಾರ, ಗುಣಮಟ್ಟ ಪೈಪೋಟಿ ಇಂಥ ಪದಗಳೆಲ್ಲ ಇಂದು ಪುಸ್ತಕೋದ್ಯಮಕ್ಕೂ ಚೆನ್ನಾಗಿಯೇ ಅನ್ವಯಿಸುತ್ತದೆ. ಒಮ್ಮೊಮ್ಮೆ ಜ್ಞಾನಾರ್ಜನೆ, ಜ್ಞಾನಪ್ರಸಾರಕ್ಕೂ ಈ ವಾಣಿಜ್ಯ ಉದ್ಯಮ ಪ್ರಪಂಚಕ್ಕೂ ಇದೇನು ನಂಟು ಎಂದು ಸೋಜಿಗವಾಗುತ್ತದೆ.

''ಏ ಗ್ರಾಮರ್ ಆಫ್ ದಿ ಕರ್ನಾಟಕ ಲ್ಯಾಂಗ್ವೇಜ್'' ಎಂಬುದು ೧೮೧೭ರಲ್ಲಿ ಕನ್ನಡದಲ್ಲಿ ಕಲ್ಕತ್ತೆಯ ಸಮೀಪದ ಸೆರಾಂಪೂರನಲ್ಲಿ ಅಚ್ಚಾದ ಮೊದಲ ಗ್ರಂಥ. ಅಂದಿನಿಂದ ಇಂದಿನವರೆಗೆ ೧೮೩ ವರ್ಷಗಳ ಅವಧಿಯಲ್ಲಿ ಪ್ರಕಟಗೊಂಡಿರುವ

ಎಲ್ಲಾ ಪುಸ್ತಕಗಳ ಅಧಿಕೃತ ದಾಖಲೆ ನಮಗೆ ಲಭ್ಯವಿಲ್ಲ. ಕೆಲವು ಅಂಕಿ - ಅಂಶಗಳು, ವಿದ್ವಾಂಸರ ಅಂದಾಜುಗಳ ಮೇಲೆ ಅಂಕಿ - ಅಂಶಗಳನ್ನು ನಿರ್ಧರಿಸಬೇಕಾಗಿದೆ. ೧೯೭೧ರಲ್ಲಿ ಪ್ರಕಟವಾದ 'ಕನ್ನಡ ಗ್ರಂಥಸೂಚಿಯ' ಮೊದಲ ಸಂಪುಟದ ಮುನ್ನುಡಿಯಲ್ಲಿ ಅದರ ಸಂಪಾದಕರು ಸೂಚಿಸುವಂತೆ ಕನ್ನಡದಲ್ಲಿ ಅಂದಿಗೆ ೪೦,೦೦೦ ಕೃತಿಗಳು ಪ್ರಕಟವಾದ ವಿಚಾರ ತಿಳಿಯುತ್ತದೆ. ಅದರಲ್ಲಿಯೇ ಪ್ರೊ. ದೇ. ಜವರೇಗೌಡರು ಈಗಾಗಲೇ ಕನ್ನಡದಲ್ಲಿ ಅಚ್ಚಾಗಿರುವ ಗ್ರಂಥಗಳು ಸುಮಾರು ನಲವತ್ತೈದು ಸಾವಿರ ಎಂದು ಅಂದಾಜು ಮಾಡಿದ್ದಾರೆ. ಈ ಅಂದಾಜಿನ ಹಿನ್ನೆಲೆಯಲ್ಲಿ ೧೯೭೧ - ೯೩ರವರೆಗೆ ಸುಮಾರು ೭೨,೦೦೦ ಗ್ರಂಥಗಳು ಪ್ರಕಟವಾದ ಬಗ್ಗೆ ಶ್ರೀ ಬಿ. ನಾಗಪ್ಪ ಅವರು ದಾಖಲಿಸಿದ್ದಾರೆ. ನಂತರದ ೧೯೯೩-೨೦೦೦ರವರೆಗಿನ ಅವಧಿಯಲ್ಲಿ ಪ್ರತಿವರ್ಷ ಸುಮಾರು ೨೦೦೦ ರಿಂದ ೨೨೦೦ರ ಅಂದಾಜಿನಲ್ಲಿ ಗ್ರಂಥಗಳು ಪ್ರಕಟವಾದ ಬಗ್ಗೆ ಮಾಹಿತಿ ಇದೆ. ಆದ್ದರಿಂದ ಕಳೆದ ೭ ವರ್ಷಗಳಲ್ಲಿ ಪ್ರಕಟಿತ ಗ್ರಂಥಗಳು ೧೫,೪೦೦ಗಳನ್ನು ಸೇರಿಸಿದಲ್ಲಿ ಸದ್ಯ ೮೭,೪೦೦ ಗ್ರಂಥಗಳು ಕನ್ನಡದಲ್ಲಿ ಪ್ರಕಟವಾಗಿವೆ ಎಂದು ಹೇಳಬಹುದು.

ಕನ್ನಡ ಗ್ರಂಥೋದ್ಯಮವನ್ನು ವಾಸ್ತವವಾಗಿ ಭಾರತೀಯ ಹಾಗೂ ಅಂತರರಾಷ್ಟ್ರೀಯ ಗ್ರಂಥೋದ್ಯಮ ಹಿನ್ನೆಲೆಯಲ್ಲಿ ಪರಿಗಣಿಸುವದು ಸೂಕ್ತವಾಗುತ್ತವೆ. ಏಕೆಂದರೆ ಕನ್ನಡ ಪುಸ್ತಕಗಳ ಬಳಕೆದಾರ ಅನೇಕ ವೇಳೆ ಇತರ ಭಾರತೀಯ ಭಾಷೆಗಳಲ್ಲಿ ಹೊರಬರುವ ಪುಸ್ತಕಗಳ ಬಳಕೆದಾರನಾಗಿರುವದರೊಟ್ಟಿಗೆ ಭಾರತದಲ್ಲಿ ಹಾಗೂ ಹೊರದೇಶದಲ್ಲಿ ಪ್ರಕಟವಾಗುವ ಪುಸ್ತಕಗಳಲ್ಲಿ ಪ್ರಕಟವಾಗುವ ಸಾಪ್ತಾಹಿಕ ವಿಶೇಷ ಸಂಚಿಕೆಗಳಲ್ಲಿ ಪುಸ್ತಕ ಪರಿಚಯ ವಿಭಾಗವನ್ನು ಕ್ರಮವಾಗಿ ನೋಡುತ್ತಾ ಬಂದರೆ ಪುಸ್ತಕಗಳ ವೈವಿಧ್ಯ ಮತ್ತು ಅವುಗಳ ಸೂಕ್ಷ್ಮಗ್ರಾಮಿತ್ವ ನಡೆ ಸ್ಪಷ್ಟವಾಗಿ ಮನವರಿಕೆಯಾಗುತ್ತವೆ. ನಮ್ಮಲ್ಲಿ ಪ್ರಕಟವಾಗುವ ಹಲವಾರು ಪ್ರಸಿದ್ಧ ಪ್ರಕಾಶನ ಸಂಸ್ಥೆಗಳ ಪುಸ್ತಕಗಳ ಬೆಲೆ ಸಾಮಾನ್ಯ ಓದುಗನ ಕಿಸೆಗೆ ಮೀರಿದ್ದಾಗಿರುತ್ತದೆ.

ಕನ್ನಡ ಗ್ರಂಥೋದ್ಯಮದಲ್ಲಿ ಎದುರಾಗುವ ಸಮಸ್ಯೆಗಳ ಸ್ವರೂಪ, ವೈಶಿಷ್ಟ್ಯಗಳು, ಸಾಧ್ಯವಾಗಬಹುದಾದ ಪರಿಹಾರೋಪಾಯಗಳು ಇವೆಲ್ಲವುಗಳ ಸರ್ವಾಂಗೀಣ ವಿವೇಚನೆ ತುಂಬ ವಿಸ್ತೃತವಾದುದು. ಆದರೂ ಈ ಕಿರುಲೇಖನದ ಚೌಕಟ್ಟಿನಲ್ಲಿ ಈ ಬಗೆಗಿನ ಕೆಲವು ಮಾತುಗಳನ್ನು ಕುರಿತು ಪ್ರಸ್ತಾಪ ಮಾಡುವುದು ಉಚಿತ ಎನಿಸುತ್ತದೆ.

ಪುಸ್ತಕಗಳ ಉತ್ಪಾದನೆ, ಆಯ್ಕೆ, ಪ್ರಸಾರ ಇಂಥ ವಿಚಾರಗಳು ಭಾರತಾದ್ಯಂತ ಹೆಚ್ಚು ಕಡಿಮೆ ಒಂದೇ ಬಗೆಯ ಸಮಸ್ಯೆಗಳನ್ನು ಎದುರುಸುತ್ತಿವೆಯೆನ್ನಬಹುದು. ಹಾಗೆ ನೋಡಿದರೆ ಪ್ರಾಂತೀಯ ಭಾಷೆಗಳ ಪ್ರಕಾಶನೋದ್ಯಮದ ಮಂದಿ 'ಒಂದೇ ಬಗೆಯ ದೋಣಿಯ ಪ್ರಯಾಣಿಕರು' ಎನ್ನಬಹುದೇನೋ. ಕೆಲವು ಭಾಷಾ ಪ್ರದೇಶಗಳಲ್ಲಿ ಸಾಮಾನ್ಯ ಜನತೆಯ ಶಿಕ್ಷಣದ ಮಟ್ಟ, ವಾಚನಾಭಿರುಚಿ ತಮ್ಮ ತಮ್ಮ ಭಾಷಾ ಸಾಹಿತ್ಯ ಸಂಸ್ಕೃತಿಗಳ ಬಗೆಗೆ ಇರುವ ವಿಶೇಷವಾದ ಅದರ ಅಭಿಮಾನಗಳು ಇಂಥ ಕಾರಣಗಳ ದೆಸೆಯಿಂದಾಗಿ ಪ್ರಕಾಶನೋದ್ಯಮದಲ್ಲಿ ಸ್ವಲ್ಪ ಮಟ್ಟಿಗೆ ವೈಪರೀತ್ಯಗಳನ್ನು ಕಾಣಬಹುದು.

ಪುಸ್ತಕ ಪ್ರಪಂಚದಲ್ಲಿ ಪಠ್ಯಪುಸ್ತಕಗಳು, ಲಲಿತ ಸಾಹಿತ್ಯ, ಗಂಭೀರ ಸಾಹಿತ್ಯ, ಮಕ್ಕಳ ಪುಸ್ತಕಗಳು, ನವಸಾಕ್ಷರ ವಯಸ್ಕರ ಪುಸ್ತಕಗಳು ಇವೇ ಮೊದಲಾದ ವಿಭಾಗಗಳನ್ನು ಮಾಡಿಕೊಳ್ಳಬಹುದು. ಪ್ರಾಥಮಿಕ ತರಗತಿಗಳಿಂದ ಮೊದಲುಗೊಂಡು ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿಗಳ ಪ್ರಯೋಜನಕ್ಕೆ ಬರುವ ಪಠ್ಯಪುಸ್ತಕಗಳು, ಆಕರಗ್ರಂಥಗಳು, ಪರಾಮರ್ಶನ ಸಾಹಿತ್ಯ ಮುಂತಾದವು ಪಠ್ಯಪುಸ್ತಕಗಳ ಅಡಿಯಲ್ಲೇ ಬರುವಂತಹವು. ಕತೆ, ಕವನ, ಕಾದಂಬರಿ, ಪ್ರಬಂಧ, ನಾಟಕ, ಪ್ರವಾಸ ಸಾಹಿತ್ಯ, ಜೀವನ ಚರಿತ್ರೆ ಇತ್ಯಾದಿ ಲಲಿತ ಸಾಹಿತ್ಯ ವರ್ಗಕ್ಕೆ ಸೇರಬಹುದಾದ ಪ್ರಕಾರಗಳು - ಶ್ರೀ ಸಾಮಾನ್ಯರ ಪಾಲಿಗೆ ಈ ವರ್ಗ ತುಂಬ ಪ್ರಿಯವಾದುದು. ಕೆಲವೊಮ್ಮೆ ಈ ಪ್ರಕಾರಗಳಲ್ಲಿ ಲೇಖಕರು ಗಂಭೀರವಾದ ಅನಿಸಿಕೆಗಳನ್ನು ಧ್ಯೇಯೋದ್ದೇಶಗಳನ್ನು ಇಟ್ಟುಕೊಂಡು ಬರವಣಿಗೆ ಕೃಷಿ ನಡೆಸಿ ಗಂಭೀರ ಸಾಹಿತ್ಯವನ್ನು ಸೃಷ್ಟಿಸುವುದುಂಟು. ವಿಜ್ಞಾನ, ಕಲೆ, ಮಾನಸಿಕ ವಿಷಯಗಳು, ಶಾಸ್ತ್ರಗಳು ಇಂಥವೆಲ್ಲ ಶಾಸ್ತ್ರಸಾಹಿತ್ಯದ ಪರಿಧಿಯಲ್ಲಿ ಬರುವಂತಹವು. ಮಕ್ಕಳಿಗೆ ಅಗತ್ಯವೆನಿಸುವ ಆಹ್ಲಾದಕಾರಿಯೆನಿಸುವ, ಜ್ಞಾನವರ್ಧನೆ ಉಂಟುಮಾಡುವ ಸುಲಭವಾಗಿ ಬೋಧಗಮ್ಯವೆನಿಸುವ,

ಆಕರ್ಷಕವಾದ ಪ್ರಕಾಶನ ಮೌಲ್ಯಗಳನ್ನು ಹೊಂದಿರುವ ಮಕ್ಕಳ ಪುಸ್ತಕಗಳು ಬಗೆಬಗೆಯ ವಿಷಯಗಳನ್ನೊಳಗೊಂಡಂತೆ ಪ್ರಕಟವಾಗುತ್ತಿರುವುದನ್ನು ಗಮನಿಸಬಹುದು. ಹೊಸದಾಗಿ ಅಕ್ಷರಾಭ್ಯಾಸವನ್ನು ಮಾಡಿದ ವಯಸ್ಕರ ಸಲುವಾಗಿ ಅನೇಕ ಬಗೆಯ ವಯಸ್ಕ ಶಿಕ್ಷಣ ಪುಸ್ತಕಗಳನ್ನು ಸಹ ನಾವು ನೋಡಬಹುದು. ಇವೇ ಅಲ್ಲದೆ ಪರಾಮರ್ಶನೋಪಯೋಗಿಯಾದ ಶಬ್ದಕೋಶಗಳು, ಕೈಪಿಡಿಗಳು, ವರದಿಗಳು, ಹೊತ್ತಗೆಗಳು, ಮಾರ್ಗದರ್ಶಿಗಳು ಇವುಗಳ ಪ್ರಕಟಣೆಯನ್ನು ಇಲ್ಲಿ ಸೇರಿಸಬಹುದು. ವೃತ್ತಪತ್ರಿಕೆಗಳು ಅವುಗಳ ಸಾಪ್ತಾಹಿಕ ಹಾಗೂ ವಿಶೇಷ ಸಂಚಿಕೆಗಳು, ಮಾಸಪತ್ರಿಕೆಗಳು ನಿಯತಕಾಲಿಕೆಗಳು ಇವೇ ಮುಂತಾದವು ಒದಗಿಸುವ ಜ್ಞಾನಾರ್ಜನೆ ಸಂಬಂಧವಾದ ಮಾಹಿತಿಯ ಕ್ಷೇತ್ರಗಳನ್ನು ದಾಖಲಿಸಬಹುದು.

ಪಠ್ಯಪುಸ್ತಕಗಳು

ಪಠ್ಯಪುಸ್ತಕಗಳು ಸಮಾಜದ ಬೆಳವಣಿಗೆಯ ದೃಷ್ಟಿಯಿಂದ ತುಂಬ ಮಹತ್ವವಾದುದರಿಂದ ತಂದೆ ತಾಯಿಗಳು - ಪೋಷಕರು, ಸಮಾಜದ ಎಲ್ಲ ಕ್ಷೇತ್ರಗಳ ಜನ ಸರ್ಕಾರ ಈ ದಿಕ್ಕಿನಲ್ಲಿ ಉತ್ಪಾದನೆಯಾಗಬೇಕಾದ ಹಾಗೂ ಉತ್ಪಾದನೆಯಾಗುವ ಪುಸ್ತಕಗಳ ಬಗ್ಗೆ ಕಾಳಜಿ ವಹಿಸುವದು ಸಹಜವೆ. ಭವಿಷ್ಯದ ಪೀಳಿಗೆಯನ್ನು ಸಮರ್ಥವಾಗಿ ಬೆಳೆಸುವುದು ಮತ್ತು ಮುನ್ನಡೆಸುವ ಮೂಲ ಸಾಮಗ್ರಿಗಳಲ್ಲಿ ಪಠ್ಯಪುಸ್ತಕಗಳು ಪ್ರಮುಖವಾದುದರಿಂದ ಅವುಗಳ ಗುಣಮಟ್ಟ ಚೆನ್ನಾಗಿರಬೇಕು. ಪಠ್ಯಪುಸ್ತಕಗಳ ಮಹತ್ವ ಮತ್ತು ಪ್ರಯೋಜನಗಳ ಕುರಿತಂತೆ ೧೯೮೦ ರಲ್ಲಿ ಪುಸ್ತಕೋದ್ಯಮಕ್ಕೆ ಕಾಲಿರಿಸಿದ ವಿಶ್ವಬ್ಯಾಂಕ್ ತನ್ನ ೩೯೮ನೇ ಪ್ರಪತ್ರದಲ್ಲಿ ಹೇಳಿರುವ ಮಾತುಗಳು ಗಮನಾರ್ಹವಾಗಿದ್ದವು : (೧) ಪರಿಣಿತರಾದ ಅಧ್ಯಾಪಕರಿಲ್ಲದ ಬಡಾವಣೆಗಳಲ್ಲಿ ಶೈಕ್ಷಣಿಕ ಗುಣಮಟ್ಟವನ್ನು ಕಾಪಾಡಿಕೊಳ್ಳುವ ಪಠ್ಯಪುಸ್ತಕಗಳು ಕ್ರಿಯಾಶೀಲವಾದ ಮತ್ತು ಸ್ಥಿರವಾದ ಪಾತ್ರವನ್ನು ನಿರ್ವಹಿಸಬಲ್ಲವು. (೨) ಶೈಕ್ಷಣಿಕ ವ್ಯವಸ್ಥೆಯಲ್ಲಿ ಪಠ್ಯಪುಸ್ತಕಗಳ ಮೇಲೆ ಹೂಡಿದ ಬಂಡವಾಳ ನಷ್ಟದ ಪರಿಗಣನೆಯಿಂದ ಹೊರತಾಗಿರಬೇಕು. ಏಕೆಂದರೆ ಕಲಿಸಿದ ಮತ್ತು ಕಲಿತ ವಿದ್ಯೆ ಹಣಕಾಸಿನ ವ್ಯಾವಹಾರಿಕ ಲೆಕ್ಕಾಚಾರಗಳಿಗೆ ಅಳವಡುವಂತಾಗ ಬಾರದು. (೩) ಪಠ್ಯಪುಸ್ತಕಗಳ ಉತ್ಪಾದನೆ, ವಿತರಣೆ ಮತ್ತು ಅಭಿವೃದ್ಧಿ ಪರಿಣಿತರು ಹಾಗೂ ವೃತ್ತಿನಿರತರ ಕೈಯಲ್ಲಿರಬೇಕು. ಶೈಕ್ಷಣಿಕ ಕಾರ್ಯಾಚರಣೆಯಲ್ಲಿ ಇವು ಹಾಸುಹೊಕ್ಕಾಗಿರಬೇಕು. ಶೈಕ್ಷಣಿಕ ಕ್ಷೇತ್ರಕ್ಕಿಂತ ಭಿನ್ನವಾದ ಅಸ್ತಿತ್ವ ಅವಕ್ಕಿಲ್ಲ. (೪) ಶಿಕ್ಷಣ ಸಂಸ್ಥೆಗಳ ಬೆಳವಣಿಗೆ ಹಾಗೂ ಅಧ್ಯಾಪಕರ ತರಬೇತಿಯಲ್ಲಿ ಸರಕಾರ ಬದ್ಧವಾಗಿರುತ್ತದೆ. ಅಭಿವೃದ್ಧಿಶೀಲ ದೇಶಗಳಲ್ಲಿ ಈ ಬದ್ಧತೆಯ ಪ್ರಮಾಣ ಇನ್ನೂ ಹೆಚ್ಚಾಗಿರುತ್ತದೆ.

ಈ ಮೇಲಿನ ಅಂಶಗಳನ್ನು ಪರಿಗಣಿಸಿದಾಗ ಪಠ್ಯಪುಸ್ತಕಗಳ ಪ್ರಕಾಶನದಲ್ಲಿ ಸರಕಾರದ ಪಾತ್ರ ಮಹತ್ವಪೂರ್ಣವಾದದ್ದೆಂಬ ಅಂಶ ಸ್ಪಷ್ಟವಾಗುತ್ತದೆ. ಸರ್ಕಾರವೇ ಅಲ್ಲದೆ 'ಎಜುಕೇಷನಲ್ ಪಬ್ಲಿಷರ್ಸ್' ಎಂದು ಕರೆದುಕೊಳ್ಳುವ ಅನೇಕ ಪ್ರಕಾಶಕರು ಸಂಘ ಸಂಸ್ಥೆಗಳು ಈ ದಿಕ್ಕಿನಲ್ಲಿ ಯಶಸ್ವಿಯಾಗಿ ಕಾರ್ಯನಿರತವಾಗಿವೆ. ಪುಸ್ತಕಗಳ ವ್ಯವಸ್ಥೆಯಲ್ಲಿ ಕೆಲವೊಮ್ಮೆ ಪ್ರಭಾವ, ಮುಲಾಜು, ವಶೀಲಿಬಾಜಿಗಳ ದೆಸೆಯಿಂದಾಗಿ ಹೊಣೆಗಾರಿಕೆ ಕುಸಿದು ಪಠ್ಯಪುಸ್ತಕಗಳ ಗುಣಮಟ್ಟಕ್ಕೆ ಏಟು ಬೀಳುತ್ತಿರುವುದು ಸಹ ಕಂಡುಬರುತ್ತದೆ. ಖಾಸಗಿ ವಲಯಗಳಲ್ಲಿ ಅನೇಕ ವೇಳೆ ಉತ್ತಮ ಪುಸ್ತಕಗಳು ಹೊರಬಂದರೂ ಲೇಖಕರ ಶೋಷಣೆ ಹೆಚ್ಚಾಗಿದೆಯೇನೊ ಎಂಬ ಗುಮಾನಿ ಬರುತ್ತದೆ. ಲೇಖಕರಿಗೆ ಸಾಧ್ಯವಾದಷ್ಟು ಕನಿಷ್ಟ ಸಂಭಾವನೆ ನೀಡಿ, ಅವರಿಂದ ಹಕ್ಕುಗಳನ್ನು ಪಡೆದು (ಅಥವಾ ಪಡೆಯದಲೆ) ಅನೈತಿಕವಾಗಿ ಅನೇಕ ಹಲವಾರು ಮುದ್ರಣಗಳನ್ನು ಕಾಲಕ್ರಮದಲ್ಲಿ ಹೊರತಂದು ಹೆಚ್ಚು ಲಾಭವನ್ನು ಜೇಬಿಗಿಳಿಸುವ ಪ್ರಕಾಶಕರಿಗೇನೂ ಕೊರತೆಯಿಲ್ಲ.

ನಮ್ಮಲ್ಲಿ ಸರ್ಕಾರ ಹೊರತರುವ ಪುಠ್ಯಪುಸ್ತಕಗಳ ರೀತಿನೀತಿಗಳು ಒಂದಾದರೆ, ಹಲವಾರು ಮಂದಿ ಪ್ರಕಾಶಕರು ನಗರ ಮತ್ತು ಪಟ್ಟಣಗಳಲ್ಲಿರುವ ಇಂಗ್ಲೀಷ್ ಮಾಧ್ಯಮಗಳ ಶಾಲೆಗಳನ್ನು ಉದ್ದೇಶದಲ್ಲಿಟ್ಟುಕೊಂಡೇ ಬಗೆಬಗೆಯ ಪುಸ್ತಕಗಳನ್ನು ಹೊರತರುವುದುಂಟು. ಎಸ್.ಎಸ್.ಎಲ್.ಸಿ. ಶಿಕ್ಷಣದವರೆಗೆ, ಪ್ರಿಯೂನಿವರ್ಸಿಟಿ ಶಿಕ್ಷಣದವರಿಗೆ ಪಠ್ಯಪುಸ್ತಕ ಪ್ರಕಾಶನದಲ್ಲಿ ಸರ್ಕಾರದ ಸಂಬಂಧಪಟ್ಟ ವಿಭಾಗಗಳ ಮತ್ತು ಮಂಡಳಿಗಳ ಹತೋಟಿ ಹೆಚ್ಚಾಗಿದ್ದರೆ, ಅಲ್ಲಿಂದ ಮುಂದೆ ವಿಶ್ವವಿದ್ಯಾನಿಲಯಗಳ

ಹಾಗೂ ಖಾಸಗಿ ಪ್ರಕಾಶಕರ ಪಾತ್ರ ಹೆಚ್ಚಾಗಿ ಕಂಡುಬರುತ್ತದೆ. ವಿಶ್ವವಿದ್ಯಾನಿಲಯಗಳ ಪ್ರಕಾಶನ ಲಾಭವನ್ನು ದೃಷ್ಟಿಯಲ್ಲಿಟ್ಟುಕೊಂಡಿರುವ ಸಂದರ್ಭಗಳು ಬಹುತೇಕ ಇಲ್ಲವೆನಿಸುತ್ತದೆ. ಆದರೆ ಈ ಹಂತದಲ್ಲಿ ಖಾಸಗಿ ಪ್ರಕಾಶಕರ ನಡುವೆ ಪೈಪೋಟಿ ಹೆಚ್ಚು. ನಮ್ಮ ಪಠ್ಯಪುಸ್ತಕಗಳಿಗೆ ಸಂಬಂಧಪಟ್ಟ ಹಾಗೆ ಇಲ್ಲಿ ಪ್ರಸ್ತಾಪಿಸಬಹುದಾದ ಒಂದು ಮುಖ್ಯ ಅಂಶವೆಂದರೆ, ವಿಶ್ವವಿದ್ಯಾನಿಲಯಗಳು ಹೊರತಂದಿರುವ, ಹೊರತರುತ್ತಿರುವ ಅನೇಕ - ಅದರಲ್ಲೂ ಶಾಸ್ತ್ರ ವಿಜ್ಞಾನ ಗ್ರಂಥಗಳು - ಪುಸ್ತಕಗಳು ''ಔಟ್‌ಡೇಟೆಡ್'' ಆಗುತ್ತಿವೆ. ವೇಗವಾಗಿ ಬೆಳೆಯುತ್ತಿರುವ ಇಂದಿನ ಜ್ಞಾನ ಪ್ರಪಂಚದಲ್ಲಿ ಕಾಲದ ಮಹತ್ವ ಅಮೂಲ್ಯವಾದುದು. ''ಕಾಲಮೀರಿ'' ಹೊರಬಂದ ಪುಸ್ತಕಗಳಿಗೆ ಮನ್ನಣೆ ಸಿಗಲಾರದು, ಬೆಲೆಯೂ ಸಿಗಲಾರದು. ಈ ಅಂಶ ವ್ಯಾವಹಾರಿಕವಾಗಿ ತುಂಬ ಗಮನಾರ್ಹವಾದುದು.

ಕತೆ, ಕಾದಂಬರಿ, ನಾಟಕ, ಪ್ರಬಂಧ ಮುಂತಾದ ಲಲಿತ ಸಾಹಿತ್ಯ ಪ್ರಕಾರಗಳು ನಮ್ಮ ಶ್ರೀ ಸಾಮಾನ್ಯರ ಮನರಂಜನೆಯ, ಜ್ಞಾನವೃದ್ಧಿಯ ಸರಕು, ಹಾಗಾಗಿ ಪುಸ್ತಕದ ಅಂಗಡಿಗಳಲ್ಲಿ ಹಾಗೂ ಸಾರ್ವಜನಿಕ ಗ್ರಂಥಾಲಯಗಳಲ್ಲಿ ಇವುಗಳ ಚಲಾವಣೆ ಹೆಚ್ಚು. ಈ ಪ್ರಕಾರದ ಪುಸ್ತಕಗಳನ್ನು ಹೆಚ್ಚು ಶ್ರಮವಿಲ್ಲದೆ ಸಾಗಹಾಕಬಹುದು ಎಂಬುದು ನಮ್ಮ ಪ್ರಕಾಶಕರ ಮತ್ತು ಮಾರಾಟಗಾರರ, ನಿರೀಕ್ಷೆ ಮತ್ತು ಅನುಭವ. ಲೇಖಕರ ಶೋಷಣೆಯ ಪರಾಕಾಷ್ಠೆ ಕಂಡುಬರುವುದು ಇಲ್ಲಿಯೇ. ಸೂಕ್ತವಾದ ಕರಾರು ಮಾಡಿಕೊಂಡು, ಅದಕ್ಕನುಗುಣವಾಗಿ ಗೌರವದಿಂದ ಸಂಭಾವನೆಯನ್ನು ಹಕ್ಕಿನ ಮೂಲಕ ಪಡೆದುಕೊಳ್ಳುವ ಭಾಗ್ಯ ಲಭ್ಯವಾಗುವುದು ಕೆಲವೇ ಮಂದಿ ಗಣ್ಯ, ಪ್ರತಿಷ್ಠಿತ ಲೇಖಕರಿಗೆ ಮಾತ್ರ. ಒಂದು ಪುಸ್ತಕ ತನ್ನ ಹೆಸರಿನಲ್ಲಿ ಹೊರಬಂದು ನಾಲ್ಕುಮಂದಿ ಓದುಗರ ಕೈಸೇರಿದರೆ ಸಾಕು, ಕೃತಾರ್ಥನಾದೆ ಎಂಬ ಭಾವದಿಂದ ಬರೆಯುವ ಲೇಖಕರುಂಟು. ಅವರಿಗೆ ಸಂಭಾವನೆ ಅಥವಾ ಗೌರವ ಧನದ ಪರಿವೆಯಿಲ್ಲ. ವ್ಯವಹಾರ ಚತುರರಾದ ಪ್ರಕಾಶಕರ ಪಾಲಿಗೆ ಇಂಥ ಲೇಖಕರನ್ನು ಕಂಡರೆ ಸುಗ್ಗಿ. ಮುದ್ರಣ ವೆಚ್ಚದ ಒಂದು ಭಾಗವನ್ನು ಲೇಖಕರಿಂದಲೇ ಕಕ್ಕಿಸುವ ಚಾಣಾಕ್ಷ ಪ್ರಕಾಶಕರೂ ಉಂಟು. ಮಾರಾಟವಾದಾಗ ಹಣಕೊಡುತ್ತೇನೆಂದು ಪೊಳ್ಳು ಭರವಸೆ, ಗಾಳಿ ಇಳಿಯುತ್ತಿರುವ ಬಲೂನಿನಂತೆ ಕ್ಷೀಣವಾಗುತ್ತಾ ಬಂದು, ಅಂತಿಮವಾಗಿ ಲೇಖಕನ ಸ್ಮೃತಿಕೋಶದ ಮೂಲೆಯಲ್ಲಿ ಕಹಿನೆನಪಾಗಿ ಉಳಿದುಕೊಂಡು ಬಿಡುತ್ತದೆ ಅಷ್ಟೆ. ಪುಸ್ತಕದ ಜನ್ಮದಾತನಿಗೆ ಕೃತಾರ್ಥತೆಯ ಹುಸಿ ಸಮಾಧಾನವೇ ಲಾಭ.

ಪ್ರಕಾಶಕ + ಮಾರಾಟಗಾರರ ಸಮಸ್ಯೆಗಳು

ಪ್ರಕಾಶಕರ ಮತ್ತು ಮಾರಾಟಗಾರರ ಸಮಸ್ಯೆಗಳ ಸ್ವರೂಪ ಭಿನ್ನವಾದುದು. ಹಣ ಹೂಡಿ, ಮುದ್ರಣದ ಹೊಣೆಗಾರಿಕೆ ಹೊತ್ತು ಪುಸ್ತಕದ ಹೊರಗುಣಗಳ ಬಗ್ಗೆ ಕಾಳಜಿ ವಹಿಸಿ ಹೊರತರುವ ಪ್ರಕಾಶಕನ ಉತ್ಸಾಹ ಮಾರಾಟ ಮಾಡುವ ಹಂತದಲ್ಲಿ ಇಳಿದುಹೋಗುತ್ತದೆ. ಪ್ರತಿಷ್ಠಿತ ಪ್ರಕಾಶಕರ ಹಾಗೂ ಪ್ರಕಾಶನ ಸಂಸ್ಥೆಗಳ ವಿಚಾರ ಬೇರೆ. ಆದರೆ ಸಣ್ಣ ಸಣ್ಣ ಪ್ರಕಾಶಕರನ್ನು, ಲೇಖಕ - ಪ್ರಕಾಶಕರನ್ನು ಕಿತ್ತು ತಿನ್ನುವ ಮಾರಾಟಗಾರರು ಜಾಸ್ತಿ. ಮೂರನೇ ಒಂದು ಭಾಗದಷ್ಟು ಕಮೀಷನ್ ಕಳೆದು ಮುಂಗಡ ಹಣ ನೀಡುವ ಪುಸ್ತಕ ವ್ಯಾಪಾರಿಗಳು ಅಪರೂಪ. ಪುಸ್ತಕಗಳನ್ನು ಮಾರಾಟವಾಗದ ಸರಕೆಂದು ಮೂದಲಿಸಿ ಮುಲಾಜಿಗೆ ಎಂಬಂತೆ ಪಡೆದುಕೊಂಡು ಮಾರಾಟವಾದ ಮೇಲೆ ಬಡಲೇಖಕ ಅಥವಾ ಪ್ರಕಾಶಕ ಬಂದು ದುಂಬಾಲುಬಿದ್ದಾಗಷ್ಟೇ. ಶೇ. ೫೦ ಅಥವಾ ಅದಕ್ಕೂ ಹೆಚ್ಚು ಕಮೀಷನ್ ಕಟಾಯಿಸಿಕೊಂಡು ಉಳಿದುದನ್ನು ಅರೆಮನಸ್ಸಿನಿಂದ ಕೊಡುವ ವ್ಯಾಪಾರಿ ಮಹಾಶಯ ಬೇಕಾದಷ್ಟು ಸಂಖ್ಯೆಯಲ್ಲಿ ಕಂಡುಬರುತ್ತದೆ.

ನೀತಿನಿಯಮಗಳು ಇಟ್ಟುಕೊಂಡು ನಿಷ್ಠೆಯಿಂದ ವ್ಯಾಪಾರ ಮಾಡುವ ಪುಸ್ತಕ ವ್ಯಾಪಾರಿಗೆ ಪುಸ್ತಕಗಳನ್ನು ಮಾರಾಟಮಾಡುವುದು ನಿಜಕ್ಕೂ ಸುಲಭದ ಮಾತಲ್ಲ. ಕಮಿಷನ್ ರೂಪದಲ್ಲಿ ಬಹಳಷ್ಟು ಸೋರಿಹೋಗುವ ಕಾರಣದಿಂದ ಪ್ರಕಾಶಕ ಮುಂದಾಗಿಯೇ ಊಹಿಸಿ ಹೆಚ್ಚು ಮುಖಬೆಲೆಯನ್ನು ಹಾಕಿರುತ್ತಾನೆ. ಆ ಬೆಲೆ ತೆತ್ತು ಕೊಂಡು ಓದುವುದು ಶ್ರೀಸಾಮಾನ್ಯರ ಪಾಲಿಗೆ ದುಸ್ತರ. ತೀರ ಅನಿವಾರ್ಯವಾದ ಪುಸ್ತಕಗಳನ್ನು ಮಾತ್ರ ಕೊಂಡುಕೊಂಡು ಉಳಿದವಕ್ಕೆ ಗ್ರಂಥಾಲಯಗಳು ಅವಲಂಬಿಸುವುದು ಸಾಮಾನ್ಯ.

ಅಪಾರ ಸಂಖ್ಯೆಯಲ್ಲಿ ಪುಸ್ತಕಗಳು ಹೊರಬರುತ್ತಿರುವ ಸಂದರ್ಭದಲ್ಲಿ. ಲೇಖಕರು ಬರೆಯುವಾಗ ತಮ್ಮ ಉದ್ದೇಶ, ವ್ಯಾಪ್ತಿ ಮತ್ತು ವಿಷಯಗಳ ಆಯ್ಕೆಯನ್ನು ದೃಢಪಡಿಸಿಕೊಳ್ಳಬೇಕು. ಪ್ರಕಾಶನೋದ್ಯಮದಲ್ಲಿ ಲಭ್ಯವಾಗಬಹುದಾದ ಭೌತಿಕ ಹಾಗೂ ಸಾಮಾಜಿಕ ಸಂಪನ್ಮೂಲಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಬೌದ್ಧಿಕ ಸಂಪನ್ಮೂಲದ ಬಳಕೆಯಾಗಬೇಕು. ಅಂದರೆ ತೀರ ಅಗತ್ಯವಾದುದನ್ನು, ಉಪಯುಕ್ತವಾದುದನ್ನು ಆಯ್ಕೆ ಮಾಡಿ ಲೇಖಕ ಬರೆಯಬೇಕು. ಬಳಕೆದಾರರನ್ನು ದೃಷ್ಟಿಯಲ್ಲಿಟ್ಟುಕೊಂಡು ಅವರ ಜ್ಞಾನಾರ್ಜನೆಗಾಗಿ, ವ್ಯಕ್ತಿತ್ವದ ಉನ್ನತಿಗಾಗಿ ಬರವಣಿಗೆ ಕೃಷಿ ನಡೆಸಬೇಕು. ಏಕೆಂದರೆ ಇಂದು ಪುಸ್ತಕ ಸಾಗರದಲ್ಲಿ ಮುಳುಗುಹಾಕುವ ಓದುಗ ಸಾಕಷ್ಟು ಶ್ರಮ ವಹಿಸಿ ತನಗೆ ಬೇಕಾದ ಬಗೆಯ ಅಣಿಮುತ್ತುಗಳನ್ನು ಸಂಪಾದಿಸಿಕೊಳ್ಳುವ ಚಾಕಚಕ್ಯತೆಯನ್ನು ಪಡೆದುಕೊಂಡಿದ್ದಾನೆ.

ಕರ್ನಾಟಕ ಸರ್ಕಾರ ಗ್ರಂಥಾಲಯಗಳ ಬಗ್ಗೆ ಪುಸ್ತಕೋದ್ಯಮದ ಬಗ್ಗೆ ಇತರ ರಾಜ್ಯಗಳಿಗಿಂತ ಹೆಚ್ಚು ಮುತುವರ್ಜಿ ವಹಿಸಿದೆ ಎಂಬುದನ್ನು ಗಮನಿಸಬಹುದಾಗಿದೆ. ೧೯೬೫ರ ಕಾಯ್ದೆಯಡಿ ಗ್ರಂಥಾಲಯಗಳ ಅಭಿವೃದ್ಧಿ, ಪುಸ್ತಕ ಪ್ರಾಧಿಕಾರದ ರಚನೆಯಿಂದ ಲೇಖಕ, ಪ್ರಕಾಶಕ, ಮಾರಾಟಗಾರ ಇವರಿಗೆ ಸಹಾಯ ನೀಡಿರುವುದು 'ಪುಸ್ತಕ-ಸಂಸ್ಕೃತಿ'' ಪ್ರಸರಣವು ಬೆಳೆಯಲು ಸಾಧ್ಯವಾಗುತ್ತಿದೆ.

ಗ್ರಂಥ ಪ್ರಸಾರದಲ್ಲಿ ಗ್ರಂಥಾಲಯಗಳ ಪಾತ್ರ

ಪುಸ್ತಕಗಳ ಆಯ್ಕೆ ಮತ್ತು ಪ್ರಸಾರದಲ್ಲಿ ಗ್ರಂಥಾಲಯಗಳ ಪಾತ್ರ ಹಿರಿದಾಗುತ್ತದೆ. ಪುಸ್ತಕಗಳನ್ನು ಶಾಲಾ ಕಾಲೇಜುಗಳಿಗಾಗಿ, ವಿಶ್ವವಿದ್ಯಾನಿಲಯಗಳಾಗಿ, ವಯಸ್ಕರ ಶಿಕ್ಷಣ ಕೇಂದ್ರಗಳಿಗಾಗಿ ಶ್ರೀ ಸಾಮಾನ್ಯರ ಸಲುವಾಗಿ ಆಯ್ಕೆ ಮಾಡುವಲ್ಲಿ ಗ್ರಂಥಾಲಯಗಳ ಮತ್ತು ಗ್ರಂಥಪಾಲಕರ ಪಾತ್ರ ದೊಡ್ಡದು. ಡಾ॥ ಎಸ್.ಆರ್.ರಂಗನಾಥನ್‌ರವರ ಪಂಚ ಸೂತ್ರಗಳನ್ನು ಪುಸ್ತಕ ಆಯ್ಕೆ ಮತ್ತು ಪ್ರಸಾರದ ಹಿನ್ನೆಲೆಯಲ್ಲಿ ಸ್ಮರಿಸಿಕೊಳ್ಳುವುದು ಅವಶ್ಯಕ. ಏರುತ್ತಿರುವ ಪುಸ್ತಕಗಳ ಬೆಲೆ ಹಾಗೂ ಲಭ್ಯವಿರುವ ಹಣ ಇವೆರಡಕ್ಕೂ ಹೊಂದಾಣಿಕೆ ಮಾಡಿ ಪುಸ್ತಕಗಳನ್ನು ಆಯ್ಕೆ ಮಾಡಿ ಖರೀದಿಸುವುದು ತುಂಬ ದೊಡ್ಡ ಜವಾಬ್ದಾರಿಯೇ. ಪುಸ್ತಕಗಳ ಆಯ್ಕೆಯ ಹಿನ್ನೆಲೆಯಲ್ಲಿ ಆಧುನಿಕ ಪ್ರಸಾರ ಸಾಧನಗಳಾದ ರೇಡಿಯೋ, ಟೆಲಿವಿಷನ್, ವೀಡಿಯೋ, ಧ್ವನಿಸುರಳಿಗಳು ಇಂಥವುಗಳಿಂದ ಒದಗಬಹುದಾದ ಮಾಹಿತಿಗಳನ್ನು ಲಕ್ಷದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಬದಲಾಗುತ್ತಿರುವ ಸಮಾಜಕ್ಕೆ ಪುಸ್ತಕಗಳನ್ನು ಆಯ್ಕೆ ಮಾಡಬೇಕಾದರೆ, ಅವುಗಳಿಂದ ಚೊಕ್ಕವಾಗಿ ಮಾಹಿತಿ ಪ್ರಸಾರವಾಗಬೇಕಾದರೆ ಹೊಸ ಹೊಸ ಧೋರಣೆಗಳು ನೀತಿ ನಿಯಮಗಳು ಅವಶ್ಯಕ. ವೈಜ್ಞಾನಿಕ ಹಾಗೂ ತಾಂತ್ರಿಕ ಸಾಧನ ಸಾಮಗ್ರಿಗಳು ಕಛೇರಿಗಳಲ್ಲಿ, ಮನೆಗಳಲ್ಲಿ ಬಳಕೆಯಾಗುತ್ತಿರುವುದು ಹೆಚ್ಚಾಗುತ್ತಿರುವ ನಿಮಿತ್ತ ಜನರಿಗೆ ಬೇರೆ ಉತ್ಪಾದಕ ಉದ್ದೇಶಗಳಿಗೆ ಬಳಸಿಕೊಳ್ಳುವ ಸಲುವಾಗಿ ವಿರಾಮ ವೇಳೆ ಹೆಚ್ಚಾಗಿ ಈಚಿನ ದಿನಗಳಲ್ಲಿ ದೊರಕುತ್ತವೆ ಹಾಗೂ ಸಮಯವನ್ನು ಜನ ಸೂಕ್ತವಾಗಿ ಸದುಪಯೋಗಪಡಿಸಿಕೊಳ್ಳುವ ಸಲುವಾಗಿ ಅವರಿಗೆ ಉತ್ತಮ ದರ್ಜೆಯ ವೈವಿಧ್ಯಮಯವಾದ ವಿಷಯಗಳನ್ನೊಳಗೊಂಡ ಪುಸ್ತಕಗಳನ್ನು ಒದಗಿಸುವುದು ತುಂಬ ಅವಶ್ಯವಾಗಿದೆ.

ನಾಳೆ

ಒಂದು ರಾಷ್ಟ್ರದ ಮಾನವ ಸಂಪನ್ಮೂಲದ ಹಾದಿಯಲ್ಲಿ ಪುಸ್ತಕಗಳು ಒದಗಿಸುವ ನೆರವು ತನ್ಮೂಲಕ ಗ್ರಂಥಾಲಯಗಳು ಒದಗಿಸುವ ಸೇವೆ ಮಹತ್ತರವಾದುದು. ನಾಡನ್ನು ಸುಭದ್ರವಾದ ನೆಲೆಗಟ್ಟಿನ ಮೇಲೆ ನಿಲ್ಲಿಸುವಲ್ಲಿ ಶಿಕ್ಷಿತರಾದ ಜನರ ಹೊಣೆಗಾರಿಕೆ ಗಂಭೀರವಾದುದು. ಅವರು ನಿಜವಾದ ಅರ್ಥದಲ್ಲಿ ನಾಡನ್ನು ಕಟ್ಟಬಲ್ಲರು. ಜ್ಞಾನದೀವಿಗೆ ಜನಮನದಲ್ಲಿ ಮನೆ ಮಾಡಿರುವ ಅಂಧಕಾರವನ್ನು ದೂರಮಾಡಿ ಸಾಮಾಜಿಕ ಸಮುದಾಯವನ್ನು ಸಮರ್ಥವಾಗಿ ಮುನ್ನಡೆಸಬಲ್ಲದು. ಜನಶಿಕ್ಷಣ ಹಾಗೂ ಜ್ಞಾನ ಪ್ರಕಾರಗಳ ಹಾದಿಯಲ್ಲಿ ಗ್ರಂಥಾಲಯಗಳ ಪಾತ್ರ, ಆ ಮೂಲಕ ಗ್ರಂಥಪಾಲಕರ ಪಾತ್ರ ಗಣನೀಯವಾದುದು.

ಪುಸ್ತಕಗಳ ಭವಿಷ್ಯ ಏನು? ಇನ್ನೊಂದು ಮಾತಿನಲ್ಲಿ ಹೇಳುವುದಾದರೆ ಗ್ರಂಥಾಲಯಗಳ ಭವಿಷ್ಯ ಏನು? ಇನ್ನೂ ಕುತೂಹಲಕರವಾದ ಪ್ರಶ್ನೆಯೆಂದರೆ ಇನ್ನೊಂದು ಎರಡು - ಮೂರು ದಶಕಗಳಲ್ಲಿ ಗ್ರಂಥಾಲಯಗಳ ಸ್ವರೂಪ ಲಕ್ಷಣಗಳು, ಸಾಮಾಜಿಕ ಹೊಣೆಗಾರಿಕೆ ಹೇಗಿರಬಹುದು? - ಇಂದು ವಿಜ್ಞಾನ ತಂತ್ರಜ್ಞಾನಗಳನ್ನು ಬದುಕಿನ ಎಲ್ಲ ಕ್ಷೇತ್ರಗಳಲ್ಲಿ ಸಮರ್ಥವಾಗಿ ದುಡಿಸಿಕೊಳ್ಳುತ್ತಿರುವುದು ಎಲ್ಲರೂ ಬಲ್ಲ ವಿಚಾರ, ಎಲೆಕ್ಟ್ರಾನಿಕ್ ಯುಗದ ಕ್ರಾಂತಿ ಮುಟ್ಟದ ಕ್ಷೇತ್ರವೇ ಇಲ್ಲವೇನೋ! ಅಂತರಿಕ್ಷ ವಿಜ್ಞಾನದಿಂದ ಹಿಡಿದು ಸಂಗೀತ ಸಂಯೋಜನೆಯವರೆಗೆ, ಸರಳವಾದ ಲೆಕ್ಕಾಚಾರಗಳಿಂದ ಹಿಡಿದು ಅದ್ಭುತವಾದ ವೈಜ್ಞಾನಿಕ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವವರೆಗೆ ಎಲೆಕ್ಟ್ರಾನಿಕ್ಸ್ ಕ್ಷೇತ್ರದ ವಿಸ್ತಾರ ಚಾಚಿಕೊಂಡಿದೆ ''ಆಟೋಮೇಷನ್'' ಎಂಬುದು ಎಲ್ಲೆಡೆಯಲ್ಲೂ ಮನೆಮಾತಾಗಿದೆ. ಅಂದ ಮೇಲೆ ಭವಿಷ್ಯದ ಗ್ರಂಥಾಲಯಗಳನ್ನು ಈಗಲೇ ಕಲ್ಪಿಸಿಕೊಳ್ಳಬಹುದೇನೋ !, ಪುಸ್ತಕಗಳ ಜಾಗದಲ್ಲಿ ಮೈಕ್ರೋಫಿಲಂಗಳು, ಫ್ಲಾಪಿಗಳು, ಡಿಸ್ಕುಗಳು, ಟೇಪುಗಳು; ವಿವಿಧ ಬಗೆಯ ಕಂಪ್ಯೂಟರ್‌ಗಳು, ಟೆಲಿಪ್ರಿಂಟರ್‌ಗಳು; ಉಪಗ್ರಹಗಳೇ ಮುಂತಾದವುಗಳ ಮೂಲಕ ಮಾಹಿತಿ ರವಾನೆ; ಪುಸ್ತಕ ಕ್ಯಾಪ್ಸೂಲ್‌ಗಳು; ಅಗತ್ಯವಿರುವಿಕೆಯಲ್ಲಿ ರೋಬೋಗಳು ಅನಿವಾರ್ಯವೆನಿಸುವಲ್ಲಿ ಮಾತ್ರ ಮಾನವ ಮಿದುಳು.

ಹಾಗಾದರೆ ಪುಸ್ತಕಗಳು ಇವತ್ತಿನ ತಮ್ಮ ಸ್ವರೂಪವನ್ನು ಕಳೆದುಕೊಂಡು "Extinct" ಆಗಿಬಿಡುತ್ತವೆಯೇ? ಖಂಡಿತ ಇಲ್ಲ - ಏಕೆಂದರೆ ಪುಸ್ತಕಗಳು ಈಗಿನ ರೂಪದಲ್ಲಿ ನಮಗೆ ತುಂಬ ಪ್ರಿಯವಾದವು. ನಿಧಾನವಾಗಿ, ಬೇಕಾದಾಗ ಓದಿ, ಮತ್ತೆ ಮತ್ತೆ ಖುಷಿಯಾದಾಗ ತಿರುವಿಹಾಕಿ ಸಂತೋಷಪಡುವ ವಸ್ತುಗಳು, ಪುಸ್ತಕಗಳು ನಮ್ಮ ಆಪ್ತ ಸಂಗಾತಿ. ಕಾಂತಾಸಮ್ಮಿತವನ್ನು ನೀಡಬಲ್ಲ ಆಕರಗಳು. ಅವನ್ನು ಬೇರಾವ ಮಾಧ್ಯಮಗಳು - ರೇಡಿಯೋ, ಟೆಲಿವಿಷನ್, ವೀಡಿಯೋ, ಕಂಪ್ಯೂಟರ್ ಇತ್ಯಾದಿ - ಎಷ್ಟೇ ಸುಲಭಗಮ್ಯವಾದರೂ, ಕ್ಷಿಪ್ರಗಾಮಿಗಳಾದರೂ ಪುಸ್ತಕಕ್ಕೆ ಅದರದೇ ಬೆಲೆ ಉಂಟು - ಗ್ರಂಥೋದ್ಯಮದ ಸ್ವರೂಪ, ರೀತಿ ನೀತಿಗಳು, ಧೋರಣೆಗಳು ಇವುಗಳಲ್ಲಿ ಮಾರ್ಪಾಟುಗಳು ಭವಿಷ್ಯದಲ್ಲಿ ಕಂಡುಬರುವುದಾದರೂ ಮೂಲಭೂತವಾದ ಹೂರಣದಲ್ಲಿ ಮಹತ್ತರ ವ್ಯತ್ಯಾಸ ಕಂಡು ಬರಲಾರದೆನಿಸುತ್ತದೆ. ಹಾಗಾಗಿ ಕನ್ನಡ ಗ್ರಂಥೋದ್ಯಮವನ್ನು ವ್ಯವಸ್ಥಿತವಾಗಿ, ದೃಢವಾಗಿ, ಅಚ್ಚುಕಟ್ಟಾಗಿ, ಮೌಲ್ಯಾಧಾರಿತವಾಗಿ, ಸಮಾಜಕ್ಕೆ ಉಪಯೋಗಿಯಾಗಿ ಬೆಳೆಸುವ ಗಂಭೀರವಾದ ಹೊಣೆಗಾರಿಕೆ ಲೇಖಕರ, ಪ್ರಕಾಶಕರ, ಅಚ್ಚುಕೂಟದವರ, ಮಾರಾಟಗಾರರ ಗ್ರಂಥಪಾಲಕರ ಹಾಗೂ ಓದುಗರ ಮೇಲೆ ಗುರುತರವಾಗಿದೆಯೆಂದೂ ಕನ್ನಡ ಗ್ರಂಥೋದ್ಯಮದ ಭವಿಷ್ಯ ಇವರೆಲ್ಲರ ಸೂಕ್ತವಾದ, ಸಮಂಜಸವಾದ, ದೃಢವಾದ ಶ್ರದ್ಧೆ, ಕಾರ್ಯತತ್ಪರತೆ ಮತ್ತು ಉನ್ನತ ಧ್ಯೇಯೋದ್ದೇಶಗಳನ್ನು ಅವಲಂಬಿಸಿದೆಯೆಂದು ಹೇಳಬಹುದು.

ಸ್ವತಂತ್ರ ಸಿದ್ಧಲಿಂಗೇಶ್ವರರು

ಪ್ರೊ. ಎಸ್. ಉಮಾಪತಿ

ಅಂಕಿತವೇ ಸೂಚಿಸುವಂತೆ ಈ ಸಿದ್ಧಲಿಂಗೇಶ್ವರರು ಯಾರ ಯಾವ ಪ್ರಭಾವಕ್ಕೂ ಒಳಗಾದಂತೆ ತೋರುವುದಿಲ್ಲ. ತನ್ನ ಗುರುವಾದ ಎಡೆಯೂರು ಸಿದ್ಧಲಿಂಗೇಶ್ವರರ ಪ್ರಭಾವಕ್ಕೂ ಒಳಗಾದಂತೆ ಕಾಣುವುದಿಲ್ಲ. ಎಡೆಯೂರು ಸಿದ್ಧಲಿಂಗ ಯತಿಗಳ ಬಹುಮುಖ ಪ್ರತಿಭೆಯ ಪ್ರಭಾವಲಯದಿಂದ ದೂರ ಉಳಿದು ತನ್ನ ಸ್ವಂತಿಕೆಯನ್ನು ಮೆರೆದ ಬಹು ಅಪರೂಪದ ವಚನಕಾರರೆನ್ನಬಹುದು; ಶಿವಶರಣರನ್ನ ಬಹುದು. ಎಡೆಯೂರಿಗೆ ಹತ್ತಿರವೆ ಇದ್ದುಕೊಂಡು ತನ್ನ ಸಿದ್ಧಿ ಸಾಧನೆಗಳನ್ನು ಸಾಧಿಸಿದ ಸದೃಢ ವ್ಯಕ್ತಿತ್ವವನ್ನು ಪಡೆದ ವಿರಳ ಶರಣರೆನ್ನಬಹುದು. ಸ್ವತಂತ್ರ ಸಿದ್ಧಲಿಂಗೇಶ್ವರರು ಎಡೆಯೂರು ಸಿದ್ಧಲಿಂಗಯತಿಗಳ ಅಸಂಖ್ಯಾತ ಶಿಷ್ಯ ಪ್ರಶಿಷ್ಯವರ್ಗಕ್ಕೆ ಸೇರಿದವರಾದರೂ, ದೀಕ್ಷೆಯನ್ನು ಪಡೆದ ಹೊಸದರಲ್ಲಿಯೇ ಅವರಿಂದ ದೂರವಾಗಿರುವುದರಿಂದ, ಹತ್ತರಲ್ಲಿ ಹನ್ನೊಂದಾಗಿ ಉಳಿಯುವ ಅಪಾಯದಿಂದ ಪಾರಾಗಿದ್ದಾರೆ.

ಶ್ರೀ ತೋಂಟದ ಸಿದ್ಧಲಿಂಗ ಶಿವಯೋಗಿಗಳ ಬಳಿಗೈದಿ ಕರುಣ ಪ್ರಸಾದವನ್ನು ಪಡೆದ ನಿಜ ಶಿಷ್ಯರ ಹೆಸರುಗಳು ಶಿಲಾಶಾಸನ ಮತ್ತು ಕಾವ್ಯಗಳಲ್ಲಿ ದೊರಕುತ್ತವೆ. ಸ್ಪಷ್ಟವಾಗಿ ನೇರವಾಗಿ ಸ್ವತಂತ್ರ ಸಿದ್ಧಲಿಗೇಶ್ವರರ ಹೆಸರು ಅಲ್ಲಿ ಕಂಡು ಬರದಿದ್ದರೂ ಅವರ ಹೆಸರು ಕಾವ್ಯಗಳಲ್ಲಿ ಇರುವುದನ್ನು ಗುರುತಿಸಬಹುದಾಗಿದೆ.

ತೋಂಟದ ಸಿದ್ಧಲಿಂಗೇಶ್ವರರ ಶಿಷ್ಯ ಪರಂಪರೆಯಲ್ಲಿ 'ಸಿದ್ಧಲಿಂಗೇಶ್ವರ' ದೊಡ್ಡ ಸಿದ್ಧಲಿಂಗೇಶ್ವರ (ಗುರು ದೊಡ್ಡ ಸಿದ್ದೇಶ) 'ಗುಮ್ಮಾಳಾಪುರದ ಸಿದ್ಧಲಿಂಗೇಶ್ವರ (ಗುಮ್ಮಳಾಪುರದ ಸಿದ್ಧಲಿಂಗದೇವರು) ಈ ರೀತಿಯಾಗಿ ''ಸಿದ್ಧಲಿಂಗೇಶ'' ಎಂದು ಹೆಸರು ಪಡೆದ ಮೂವರು ವಿರತರು ಕಂಡುಬರುತ್ತಾರೆ. ಅವರಲ್ಲಿ ಗುಮ್ಮಳಾಪುರದ

ಸಿದ್ಧಲಿಂಗೇಶ್ವರರನ್ನು ಬಿಟ್ಟರೆ ಉಳಿದ ಇಬ್ಬರು, ವಿರತ ಸಿದ್ಧಲಿಂಗೇಶ್ವರರು ' ಮತ್ತು 'ದೊಡ್ಡ ಸಿದ್ಧಲಿಂಗೇಶ್ವರರು ಇಬ್ಬರಲ್ಲಿ ಸ್ವತಂತ್ರ ಸಿದ್ಧಲಿಂಗೇಶ್ವರರು ಯಾರು ಎಂಬುದನ್ನು ನಿರ್ಧರಿಸಬೇಕಾಗಿದೆ.

ಸ್ವತಂತ್ರ ಸಿದ್ಧಲಿಂಗೇಶ್ವರರ ಸಮಕಾಲೀನರಾಗಿ ಅವರ ಲೋಕೋತ್ತರ ವ್ಯಕ್ತಿತ್ವಕ್ಕೆ ಮತ್ತು ಅನುಭಾವಪೂರ್ಣ ವಚನಗಳಿಗೆ ಮಾರುಹೋಗಿ ವ್ಯಾಖ್ಯಾನ ಬರೆದಿರುವ ಶ್ರೀ ಚೆನ್ನದೇವರು ತಮ್ಮ ''ಮುಕ್ಯಂಗನಾಕಂಠ ಮಾಲೆ''ಯ ಕೊನೆಯಲ್ಲಿ ಹೇಳಿದ ಪದ್ಯದ ಆರಂಭದಲ್ಲಿ ''ದಯೆಯಿಂ ಶ್ರೀ ಗುರು ಸಿದ್ಧಲಿಂಗಯತಿ ವರ್ಯಂ'' ಎಂದು ಅವರ ಬಗೆಗೆ ಹೇಳಿರುವುದರಿಂದ, ಇದು ವ್ಯಾಖ್ಯಾನಕಾರನ ಪೂಜ್ಯಭಾವನೆಯನ್ನು ವ್ಯಕ್ತಪಡಿಸುತ್ತದೆ. ವಿರಕ್ತ ತೋಂಟದಾರ್ಯ ಮತ್ತಿತರ ಕವಿಗಳು ಪ್ರಾಯಶಃ ವಯಸ್ಸಿನಲ್ಲಿ ಅನುಭಾವದಲ್ಲಿ ಹಿರಿಯರಾದ ಸ್ವತಂತ್ರ ಸಿದ್ಧಲಿಂಗೇಶ್ವರರನ್ನು ಇತರರಿಂದ ಪ್ರತ್ಯೇಕಿಸಲು 'ದೊಡ್ಡ ಸಿದ್ಧಲಿಂಗೇಶ್ವರ'' ''ಗುರು ದೊಡ್ಡ ಸಿದ್ದೇಶ'' ಮುಂತಾಗಿ ಅತ್ಯಂತ ಗೌರವ ಆದರದಿಂದ ಸೂಚಿಸಿದ್ದಾರೆ. ಇದರಿಂದ ಸ್ವತಂತ್ರ ಸಿದ್ಧಲಿಂಗೇಶ್ವರರು ಅಸದೃಶ ವ್ಯಕ್ತಿತ್ವವನ್ನು ಪಡೆದುಕೊಂಡು ದೊಡ್ಡವರಾಗಿ, ಹಿರಿಯರಿಗೆ ಹಿರಿಯರಾಗಿದ್ದರೆಂದು ತಿಳಿದುಬರುತ್ತದೆ. ವಿರಕ್ತ ತೋಂಟದಾರ್ಯನು ತನ್ನ 'ಸಿದ್ದೇಶ್ವರ ಪುರಾಣದಲ್ಲಿ'.

ಒಡಲೊಳತಿ ಧವಳ ಭಸಿತವ ಪೂಸಿ ಮಿಗೆ ಕಾಂತಿ-
ವಡೆದ ಪೀತಾಂಬರವ ಪೊದೆದು ರುದ್ರಾಕ್ಷಿಗಳ
ಸಡಗರದೊಳಾಂತು ನಿಸ್ಪೃಹತೆಯಿಂದೆಸೆದು ರಂಜಿಸುವ ಯೋಗೀಶನಾರೆ ।
ಕೆಡೆಯೊದೆದು ಸಂಚಿತಾದಿಗಳನೆಲ್ಲವ ಹುಟ್ಟು
ಗೆಡಿಸಿ ದೃಢ ವೈರಾಗ್ಯದಿಂದೆಸೆದನಾರತಂ
ಮೃಡ ಸದೃಶನೆನಿಪ ಗುರು ದೊಡ್ಡ ಸಿದ್ದೇಶನೇ ಕಾಣೆ ಬಡನಡುವ ಚೆಲುವೆ॥ (ಸಂಧಿ ೧೫,ಪದ್ಯ ೪೨)

ಈ ಪದ್ಯದಲ್ಲಿ ಗುರು ದೊಡ್ಡ ಸಿದ್ದೇಶನ ವರ್ಣನೆಯನ್ನು ಕಣ್ಣಿಗೆ ಕಟ್ಟಿದಂತೆ ವಿವರಿಸಿದ್ದಾನೆ. ಸ್ವತಂತ್ರ ಸಿದ್ದಲಿಂಗೇಶ್ವರನ ವಚನಗಳನ್ನು ಅಧ್ಯಯನ ಮಾಡಿದವರಿಗೆ ವಿರಕ್ತ ತೋಂಟದಾರ್ಯನು ವಿವರಿಸಿರುವ ಮೇಲಿನ ಪದ್ಯದಲ್ಲಿಯ ವ್ಯಕ್ತಿಚಿತ್ರ ಉಚಿತವಾಗಿಯೆ ಇದೆ ಎಂದು ಎನಿಸದಿರದು. ಸ್ವತಃ ಕಣ್ಣಿಂದ ನೋಡಿ ಒಬ್ಬ ಕಲಾಕಾರ ಚಿತ್ರವನ್ನು ಬಿಡಿಸಿದಂತೆ ಕವಿ ಮೇಲಿನ ಚಿತ್ರವನ್ನು ಶಬ್ಧಗಳಲ್ಲಿ ಸೆರೆಹಿಡಿದಿದ್ದಾನೆ. ಅಷ್ಟು ಸಹಜ ಚಿತ್ರಣ ಆಗಿದೆ. ಸ್ವತಂತ್ರ ಸಿದ್ಧಲಿಂಗೇಶ್ವರರ ಪೂರ್ಣವ್ಯಕ್ತಿತ್ವದ ಸಂಪೂರ್ಣ ಪರಿಚಯವನ್ನು ಕವಿ ಈ ಪದ್ಯದಲ್ಲಿ ಕೊಟ್ಟಿದ್ದಾನೆ.

'ಗುರು ದೊಡ್ಡ ಸಿದ್ದೇಶ' 'ಶ್ರೀ ಗುರುಸಿದ್ಧಲಿಂಗ ಯತಿವರ್ಯ' 'ದೊಡ್ಡ ಸಿದ್ಧಲಿಂಗೇಶ್ವರ' ಎಂಬ ಈ ಮೂರು ಹೆಸರುಗಳು ಸ್ವತಂತ್ರ ಸಿದ್ಧಲಿಂಗೇಶ್ವರನ ಕಡೆ ಬೆರಳು ಮಾಡಿ ತೋರುತ್ತವೆ. ಆದುದರಿಂದ ಇವರಿಗೆ ಗುರು. ಯತಿವರ್ಯ, ದೊಡ್ಡ ಎಂಬ ಪದಗಳು ವಿಶೇಷಣಗಳಾಗಿ ಅವರ ವ್ಯಕ್ತಿತ್ವವನ್ನು ನಿರ್ದೇಶಿಸುವ ಗುಣವಾಚಕಗಳಾಗಿ ಬಂದಿವೆ. ಇದರಿಂದ ಅವರು ಅಸಾಧಾರಣ ವ್ಯಕ್ತಿತ್ವವನ್ನು ಪಡೆದ ಒಬ್ಬ ಹಿರಿಯ ಶರಣರಾಗಿದ್ದರೆಂದು ಹೇಳಬಹುದು.

ಇಂತಹ ಮಹಾನುಭಾವಿಗಳೂ ಸಂಕಲ್ಪಶಕ್ತಿಸಂಪನ್ನರೂ, ಆದ ಅವರು ಸದಾಶಿವಯೋಗ ಮಗ್ನರಾಗಿರಬೇಕೆಂಬ ಅಭಿಲಾಷೆಯಿಂದ ಎಡೆಯೂರು ಸಿದ್ಧಲಿಂಗರ ಸಾನಿಧ್ಯದಿಂದ ದೂರ ಸರಿದು ಸಂಚರಿಸುತ್ತ ಏಕಾಂತ ಪ್ರಶಾಂತಸ್ಥಳವನ್ನು ಹುಡುಕಿಕೊಂಡು ಬಂದು ಗಜರಾಜಗಿರಿಯತ್ತ ಪ್ರಯಾಣ ಮಾಡುತ್ತಾರೆ.

''ಸಮತೆಯೆಂಬ ಕಂಥೆಯ ಧರಿಸಿ
ಕ್ಷಮೆಯೆಂಬ ಭಸ್ಮ ಧಾರಣವನಳವಡಿಸಿ
ಸರ್ವಜೀವ ದಯಾಪರವೆಂಬ ಕಮಂಡಲವ ತಳೆದುಕೊಂಡು
ಸುಜ್ಞಾನವೆಂಬ ದಂಡವ ಹಿಡಿದು

ವೈರಾಗ್ಯವೆಂಬ ಭಿಕ್ಷಾಪಾತ್ರೆ ಸಹಿತ, ಭಕ್ತಿ ಭಿಕ್ಷವ ಬೇಡ ಬಂದನಯ್ಯಾ
ಸತ್ಯಶರಣರಾದ ಭಕ್ತರನರಸುತ್ತ ಭಕ್ತಿ ಭಿಕ್ಷವ ಬೇಡುತ್ತ ಬಂದನಯ್ಯಾ ।
ಕಾಯದ ಕಳವಳವ ಕಳೆದು, ಜೀವನೋಪಾಯವಿಲ್ಲದೆ ಸುಳಿವನಯ್ಯಾ ।
ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನ ಶರಣ, ಭಕ್ತಿ ಕಾರಣವಾಗಿ'' (ವಂ.ಸಂ. ೩೪೩)

ನಿಜವಾದ ಅರ್ಥದಲ್ಲಿ ಸುಳಿವ ಜಂಗಮಮೂರ್ತಿಯಾಗಿ ವೈರಾಗ್ಯನಿಧಿಯಾಗಿ, ಮಹಾಜ್ಞಾನಿಯಾಗಿ ಸುಳಿಯುತ್ತಿದ್ದುದನ್ನು ಮೇಲಿನ ವಚನವು ಸಾಕ್ಷಿಯಾಗಿ ನುಡಿಯುತ್ತಿದೆ.

''ಶಿವಯೋಗಿ ಸುಳಿದ ಸುಳುಹು ಜಗತ್ಪಾವನ,
ಮೆಟ್ಟಿದ ಧರೆಯೆಲ್ಲಾ ಪವಿತ್ರ,
ನಿಮಿಷವಿರ್ದಾ ಸ್ಥಲವೆಲ್ಲಾ ಅವಿಮುಕ್ತಿ ಕ್ಷೇತ್ರ,
ಹೊಕ್ಕ ಜಲವೆಲ್ಲಾ ಪುಣ್ಯ ತೀರ್ಥಂಗಳು,
ಏರಿದ ಬೆಟ್ಟವೆಲ್ಲ ಶ್ರೀ ಪರ್ವತ,
ಕೃಪೆಯಿಂದ ನೋಡಿದ ಜನರೆಲ್ಲ ಸಾಲೋಕ್ಯರು,
ಒಡನೆ ಸಂಭಾಷಣೆಯ ಮಾಡಿದವರೆಲ್ಲಾ ಸದ್ಯೋನ್ಮುಕ್ತರು,
ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ,
ನಿಮ್ಮ ಸುಳುಹಿನ ಘನತೆಯನುಪಮಿಸಬಾರದು. (ವ.ಸಂ. ೩೧೧)

ಸ್ವತಂತ್ರ ಸಿದ್ಧಲಿಂಗರು ಶಿವಯೋಗಿಯಾಗಿ ಬಾಳಿ, ತಮ್ಮ ಕೃಪಾಕಟಾಕ್ಷದಿಂದ ಭಕ್ತರನ್ನು ಉದ್ಧರಿಸಿದ್ದಾರೆ ಎಂಬುದನ್ನು ಈ ಮೇಲಿನ ವಚನ ಸೂಚಿಸುತ್ತದೆ.

ಈ ಗಜರಾಜಗಿರಿಯ ಈಗಿನ ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕಿನ ಕಾಪನಹಳ್ಳಿಗೆ ಸಮೀಪದಲ್ಲಿದೆ. ಇವರು ಅಲ್ಲಿಯೆ ನೆಲೆಸಿ ಶಿವಯೋಗವನ್ನು ಸಾಧಿಸಿ, ಆ ಕ್ಷೇತ್ರವನ್ನು ಪವಿತ್ರ ಹಾಗೂ ಪಾವನವನ್ನಾಗಿ ಮಾಡಿ, ಪ್ರಖ್ಯಾತಿ ಹೊಂದುವಂತೆ ಮಾಡಿದ್ದಾರೆ. ಈ ಪರ್ವತದ ಪಕ್ಕದಲ್ಲಿ ಪಶ್ಚಿಮ ವಾಹಿನಿಯು ಹರಿಯುತ್ತದೆ. ಇದರಿಂದಾಗಿ ಈ ಕ್ಷೇತ್ರ ಇನ್ನೂ ಹೆಚ್ಚಿನ ಪವಿತ್ರ ಕ್ಷೇತ್ರವಾಗಿ ಭಕ್ತರಿಗೆ ಪರಿಣಮಿಸಿದೆ.

ಸಿದ್ಧಲಿಂಗೇಶ್ವರರು ಶ್ರೀ ಗುರುವಿನುಪದೇಶದಿಂದ ಪಂಚಾಕ್ಷರಿ ಮಂತ್ರ ಉಪದೇಶ ಪಡೆದು 'ಅಂಗದ ಮೇಲೆ ಲಿಂಗವ ಧರಿಸಿ, ಇದಾದ ಮೇಲೆ ಕಾಯವೆ ಶಿವಕಾಯವಾಗಿ, ಪ್ರಾಣವೆ ಪರಶಿವವಾಗುತ್ತದೆ. ಹೀಗೆ ಶರಣರಾಗಿ ತಮ್ಮ ಬದುಕಿನುದ್ದಕ್ಕೂ ಜಂಗಮವಾಗಿ ಸುಳಿದು, ಸ್ವಾನುಭಾವ ಸಿದ್ಧಿಯಿಂದ ಲಿಂಗಾಂಗ ಸಾಮರಸ್ಯವನ್ನು ಸಾಧಿಸಿ, ಭಕ್ತಾದಿ ಐಕ್ಯಾಂತದ ಷಟಸ್ಥಲ ಮಾರ್ಗದಲ್ಲಿ ನಡೆದು ನುಡಿದು, ತಮ್ಮ ಜೀವನವನ್ನು ಸಾಗಿಸಿ, ನೀರು ನೀರು ಕೂಡಿದಂತೆ, ಕ್ಷೀರ ಕ್ಷೀರ ಕೂಡಿದಂತೆ ಲಿಂಗೈಕ್ಯರಾಗಿದ್ದಾರೆ. ಸತ್ಯಶರಣರಾದ ಇವರ ಮುಂದೆ ''ಸಪ್ತ ವ್ಯಸನಂಗಳು ಹೆಸರಿಲ್ಲದೆ ಹೋದವು. ಅಷ್ಟಮದಂಗಳು ನಷ್ಟವಾದವು. ಅರಿಷಡ್ವರ್ಗಗಳು ನಿಲ್ಲದೆ ಓಡಿದವು. ಕಾಮನ ಬಾಣ ಬತ್ತಳಿಕೆಯಿಂದ ಹೊರ ಬರಲಿಲ್ಲ. ಕಾಲನ ಅಧಿಕಾರ ಸಾಗದಾಯಿತು. ಹೀಗೆ ಮಾನವಸಹಜವಾದ ಸಪ್ತವ್ಯಸನಗಳನ್ನು ಅಷ್ಟಮದಗಳನ್ನು, ಅರಿಷಡ್ವರ್ಗಗಳನ್ನು ಪಂಚೇಂದ್ರಿಯಗಳನ್ನು ಕಾಲಕಾಮರನ್ನು ಗೆದ್ದು ನಿಜವಾದ ವೈರಾಗ್ಯದತ್ತ ಧಾವಿಸುತ್ತಾರೆ. ಹೀಗೆ ಶಿವಯೋಗಿಗಳಾದ ಸಿದ್ಧಲಿಂಗೇಶ್ವರರ ಸಾನಿಧ್ಯದಿಂದ ಈ ಗಿರಿ ಶಿವಯೋಗ ಗಿರಿಯಾಗುತ್ತದೆ. ಅವರು ಆ ಗಿರಿಯ ಒಂದು ಗುಹೆಯಲ್ಲಿದ್ದುಕೊಂಡು ಪರಮ ನಿರ್ವಾಣಿಯಾಗಿ ನಿರಾಳ ಲಿಂಗದಲ್ಲಿ ಐಕ್ಯರಾದರು ಎಂಬುದನ್ನು ಅವರ ಒಂದು ವಚನವು ತಿಳಿಸುತ್ತದೆ.

''ಆರಾಧಾರದ ನಿಚ್ಚಣಿಗೆಯನೇರಿ'' ಎಂದು ಪ್ರಾರಂಭವಾಗುವ ಅವರ ಒಂದು ವಚನ (ವ. ಸಂ. ೩೪೮) ಅವರು ಮಾಡುತ್ತಿದ್ದ ಲಿಂಗಪೂಜೆಯ ಸೊಬಗು ಸೌಂದರ್ಯವನ್ನು ಸೊಗಸಾಗಿ ಚಿತ್ರಿಸುತ್ತದೆ. ಹೀಗೆ ಪೂಜೆ ಮಾಡುತ್ತ ಮಾಡುತ್ತ ಪರಮ ನಿರ್ವಾಣ ಹಂತವನ್ನು ತಲುಪುತ್ತಾರೆ.

ಸ್ವತಂತ್ರ ಸಿದ್ಧಲಿಂಗೇಶ್ವರರ ಕಾಲ ಕ್ರಿ. ಶ. ೧೫೦೦ಕ್ಕೆ ಸ್ವಲ್ಪ ಮೊದಲು ಮತ್ತು ನಂತರದ ಕಾಲಮಾನದಲ್ಲಿ ಇದ್ದು ತಮ್ಮ ಕಾಯಕವನ್ನು ನಿರ್ವಹಿಸಿರಬಹುದೆಂದು ಸಧ್ಯಕ್ಕೆ ನಿರ್ಧರಿಸಬಹುದಾಗಿದೆ.

ಕೃತಿಗಳು

ಸ್ವತಂತ್ರ ಸಿದ್ಧಲಿಂಗೇಶ್ವರರು, ''ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ'' ಎಂಬ ಅಂಕಿತವನ್ನು ತಮ್ಮ ವಚನಗಳಿಗೆ ಇಟ್ಟುಕೊಂಡಿದ್ದಾರೆ. ಇವರ ವಚನಗಳು ಷಟಸ್ಥಲ ವಿಚಾರ ವಿವರಣೆ ಪ್ರತಿಪಾದನೆಯನ್ನು ಮಾಡುತ್ತವೆ. ಅವುಗಳ ಸಂಖ್ಯೆ ೪೩೦. ಬಹುಶಃ ಇವರ ವಚನಗಳು ಅಲ್ಲಲ್ಲಿ ಚದುರಿ ಹೋಗದೆ, ಒಂದೇ ಕಟ್ಟಿನಲ್ಲಿ ದೊರಕುವುದೊಂದು ಸೌಭಾಗ್ಯವೇ ಸರಿ. ಅವರ ಕೆಲವು ಬೆಡಗಿನ ವಚನಗಳಿಗೆ ಟೀಕೆ ಬರೆದಿರುವ ಶ್ರೀ ಚೆನ್ನದೇವರಂತಹವರು, ಅವರ ವಚನಗಳನ್ನು ಒಂದೆಡೆ ಸಂಗ್ರಹಿಸಿ ಒಪ್ಪಮಾಡಿ ಓರಣದಿಂದ ಜತನ ಮಾಡಿರಬಹುದೆಂದು ಊಹಿಸಬಹುದಾಗಿದೆ. ಈ ಕಾರ್ಯದಲ್ಲಿ ಸಹಕರಿಸಿದ ಅವರ ಶಿಷ್ಯ ಪ್ರಶಿಷ್ಯ ವರ್ಗಕ್ಕೆ ಇಂದು ನಾವು ಎಷ್ಟು ಧನ್ಯವಾದಗಳನ್ನು ಅರ್ಪಿಸಿದರೂ ಸಾಲದು. ಆ ವಚನಗಳಲ್ಲಿ ಕೆಲವನ್ನು ಆರಿಸಿ ಒಂದು ವಿಶಿಷ್ಟ ಪೂರ್ಣವಾದ ಸಂಕಲನವನ್ನು ಮಾಡಿದ್ದರೆಂದೂ, ಆ ಸಂಕಲನದಲ್ಲಿಯ ಇಪ್ಪತ್ತೊಂದು ವಚನಗಳನ್ನು ಆರಿಸಿಕೊಂಡು ಶ್ರೀ ಚೆನ್ನದೇವರು ವ್ಯಾಖ್ಯಾನವನ್ನು ಬರೆದು, ಅದಕ್ಕೆ 'ಮುಕ್ತ್ಯಂಗನಾ ಕಂಠಮಾಲೆ'' ಎಂಬ ಹೆಸರಿಟ್ಟರೆಂದು ತಿಳಿದುಬರುತ್ತದೆ. ಇದಲ್ಲದೆ ''ಜಂಗಮರಗಳೆ ಎಂಬ ಐವತ್ತು ನಾಲ್ಕು ಪದ್ಯಗಳುಳ್ಳ ಲಲಿತರಗಳೆಯನ್ನು ರಚಿಸಿದ್ದಾರೆ. ಜಂಗಮ ಮಹತ್ವವನ್ನು ಈ ರಗಳೆ ಪ್ರತಿಪಾದಿಸುತ್ತದೆ. ಈ ರಗಳೆಯ ಆದಿ ಅಂತ್ಯದಲ್ಲಿ ಎರಡು ಕಂದಗಳು ಇವೆ.

ಸ್ವತಂತ್ರ ಸಿದ್ಧಲಿಂಗೇಶ್ವರರು ಇತರ ವಚನಕಾರರಂತೆಯೆ ತಮ್ಮ ವಚನ ರಚನೆಯನ್ನು ಪಿಂಡ ಸ್ಥಲ, ಪಿಂಡಜ್ಞಾನ ಸ್ಥಲ, ಸಂಸಾರಹೇಯ ಸ್ಥಲ, ಗುರುಕರುಣ ಸ್ಥಲ, ಲಿಂಗಧಾರಣ ಸ್ಥಲ, ವಿಭೂತಿ ಸ್ಥಲ, ರುದ್ರಾಕ್ಷಿ ಸ್ಥಲ ಎಂದು ಆರಂಭಿಸಿ ಭಕ್ತ ಸ್ಥಲಕ್ಕೆ ಮುನ್ನಡೆದಿದ್ದಾರೆ.

'ಪಿಂಡ' ಎಂಬ ಪದಕ್ಕೆ ತಮ್ಮದೇ ಆದ ವಿವರಣೆಯನ್ನು ನೀಡಿದ್ದಾರೆ. ಬಹು ಜನ್ಮಗಳ ಸುಕೃತ ವಿಶೇಷದಿಂದ ಪಾಪವೆಲ್ಲ ನಶಿಸಿ, ಶುದ್ಧಾಂತಃಕರಣನಾದ ಜೀವಿಯೆ, 'ಪಿಂಡ' ಎಂದು ಹೇಳಿದ್ದಾರೆ. ಅಂದರೆ ಜೀವಿಯು ಆ ಪರಾತ್ಪರ ವಸ್ತುವಿನ ಅಂಶವೇ ಹೊರತು ಬೇರೆಯಲ್ಲ. ಪಿಂಡವೆಂದರೆ ಪರವಸ್ತು ಎಂದು ಅರ್ಥೈಸಿದ್ದಾರೆ. ಅಂತಹ ಪಿಂಡವು ಜೀವಿಯಲ್ಲಿ

'ಚಂದ್ರಕಾಂತದ ಶಿಲೆಯಲ್ಲಿ ಉದಕವೊಸರದಿಪ್ಪಂತೆ,
ಸೂರ್ಯಕಾಂತದ ಶಿಲೆಯಲ್ಲಿ ಅಗ್ನಿ ಸ್ಫುರಿಸದಿಪ್ಪಂತೆ,
ಬೀಜದೊಳಗಣ ವೃಕ್ಷ ಅಂಕುರಿಸದಿಪ್ಪಂತೆ
ಇಪ್ಪನಯ್ಯ ಶಿವನು ಪಿಂಡದೊಳಗೆ ಪಿಂಡರೂಪಾಗಿ,
ಈ ಪರಿಯಲ್ಲಿ ಗೋಪ್ಯವಾಗಿರ್ದೆನ್ನಲ್ಲಿ ಕಾಣಿಸಿಕೊಳ್ಳದಿರ್ದಿರಿ.
ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ (ವ.ಸಂ. ೯)

''ಕ್ಷೀರದೊಳಗಣ ಆಜ್ಯದಂತೆ, ಪಾಷಾಣದೊಳಗಣ ಪಾವಕನಂತೆ'' ಪರವಸ್ತು ಜೀವಿಯಲ್ಲಿ ಅಡಗಿರುತ್ತದೆ ಎಂದು ವಿವರಿಸಿದ್ದಾರೆ. ಹೀಗೆ ಪಿಂಡ ಸ್ವರೂಪಿಯಾದ ಪರವಸ್ತುವನ್ನು ಸಂಸಾರದ ಮಾಯಾ ಮೋಹಗಳು ಆವರಿಸಿದಾಗ, ಆ ವಸ್ತುವಿನ ಜ್ಞಾನ ಮರವೆಯಿಂದ ಮರೆತು ಹೋಗಿ, ಜೀವಿಯ ಅರಿಷಡ್ವರ್ಗಗಳ ವಶನಾಗಿ ಬಳಲಿ ಬೆಂಡಾಗಿ, ಪುನಃ ಅವುಗಳನ್ನು

ಜಯಿಸಿ, ಮುಕ್ತನಾಗಿ, ವೈರಾಗ್ಯವನ್ನು ಪಡೆದು ಸ್ವರೂಪಜ್ಞಾನವನ್ನು ಪಡೆಯುತ್ತಾನೆ'' ಎಂಬುದು ವೀರಶೈವ ದರ್ಶನದ ವಿವರಣೆ. ಈ ಕಾರ್ಯವನ್ನು ಜೀವಿಯು ಸಾಧಿಸಲು, ಭಕ್ತಾದಿ ಐಕ್ಯಾಂತವಾದ ಷಟಸ್ಥಲ ಮಾರ್ಗವನ್ನು ಅನುಸರಿಸುವನು. ಇದು ಆ ಧರ್ಮದ ಒಂದು ವಿಶೇಷ ಲಕ್ಷಣವೆನ್ನಬಹುದು.

ಹೀಗೆ ವೀರಶೈವ ದರ್ಶನ ಸಾಕ್ಷಾತ್ - ಷಟಸ್ಥಲ ಮಾರ್ಗ-ದ್ವೈತದಿಂದ ಪ್ರಾರಂಭವಾಗಿ ಅಧ್ವೈತದಲ್ಲಿ ಮುಕ್ತಾಯವಾಗುತ್ತದೆ. ಸರ್ವಾತ್ಮರು ಮಾಯಾ ಮೋಹದ ವಶರಾಗಿ ಪಶುಗಳಾದರೆ, ಅವರನ್ನು ಉದ್ಧಾರ ಮಾಡುವವನು ಪಶುಪತಿಯಾಗುತ್ತಾನೆ, ಎಂಬ ಕಲ್ಪನೆ ಎಲ್ಲ ವಚನಕಾರರಲ್ಲಿ ಕಂಡುಬರುತ್ತದೆ. ಇದನ್ನೇ ಸ್ವತಂತ್ರ ಸಿದ್ಧಲಿಂಗೇಶ್ವರರು ಅನುಮೋದಿಸಿದ್ದಾರೆ. ''ಸರ್ವಾತ್ಮರು ಮಲ ಪಾಶದಿಂದ ಬಂಧಿಸಿಕೊಂಡು ಪಶುಗಳಾದರು. ತಾ ಪಶುಪತಿಯಾದ'' ಮುಂದುವರಿದು ''ತನ್ನ ಪಿಂಡವ ! ಮನ ಪಿಂಡವೇ । ವಾಯು ಪಿಂಡವೇ ! ಅಲ್ಲ, ಆದಿ ಪಿಂಡವಿಡಿದು ಬಂದ ಜ್ಞಾನ ಪಿಂಡ ಅದು'' ಎಂದಿದ್ದಾರೆ.

ಸಂಸಾರ ಹೇಯ ಎಂಬ ವಿಚಾರವನ್ನು ಭಕ್ತನಾದವನಿಗೆ-ಜೀವಿಗೆ, ಮನದಟ್ಟಾಗುವಂತೆ, ಸಾದೃಶ್ಯ ಉಪಮಾನಗಳ ಮೂಲಕ ಸ್ವತಂತ್ರ ಸಿದ್ಧಲಿಂಗೇಶ್ವರರು ಸರಳವಾಗಿ, ಸಹಜ ಮಾತುಗಳಿಂದ ವಿವರಿಸಿದ್ದಾರೆ. ''ದೇಹವೆಂಬುದೊಂದು ನಡು ಮನೆಗೆ'' ಎಂದು ಆರಂಭವಾಗುವ ವಚನದಲ್ಲಿ ದೇಹವನ್ನು ಒಂದು ಮನೆಗೆ ಹೋಲಿಸಿದ್ದಾರೆ. ''ಒಡೆಯರಿಲ್ಲದ ಮನೆಯಂತೆ, ಆವಾಗ ಕೆಡುವದೆಂದರಿಯಬಾರದು, ಬಿಡು ಮನೆಯಾಸೆಯ ಬೇಗ, ವಿರಕ್ತನಾಗು ಮರುಳೆ, ಪಡೆವೆ ಮುಂದೆ ಮುಕ್ತಿಯ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನಲ್ಲಿ ಒಂದಹ ಸೌಖ್ಯವನು''- (ವ. ಸಂ. ೧೯) ಎಂದು ದೇಹದ ವ್ಯಾಮೋಹದಲ್ಲಿ ಇದ್ದು ಒದ್ದಾಡುತ್ತಿರುವ ಜೀವಿಗೆ ಎಚ್ಚರಿಸಿದ್ದಾರೆ. ಮನೆಯೆಂಬ ಈ ದೇಹ ಯಾವಾಗ ಬಿದ್ದು ಹೋಗುವುದೋ ಆರಿಗೂ ತಿಳಿಯದು, ಅದನ್ನು ರೋಗ-ರುಜಿನ, ಬಾಲ್ಯ ಯೌವ್ವನ ಮುಪ್ಪು, ಕಾಲನ ಬಾಧೆ ಕಾಡುತ್ತಿರುತ್ತವೆ. ಕಾರಣ ಅಶಾಶ್ವತವಾದ ಈ ದೇಹವನ್ನು ನಂಬಿ ಕೆಟ್ಟು ಹೋಗಬೇಡ, ಈ ಸಂಸಾರ ಈ ದೇಹ, ಎಲ್ಲವೂ 'ತೋರಿಯಡಗುವ ಮೇಘಾಡಂಬರದಂತೆ'' ಯಾವಾಗ ಕರಗಿ ಹೋಗುವುದೆಂದು ಯಾರಿಗೂ ತಿಳಿಯದು ದೇವ ದಾನವ ನರರು ಅಳಿದು ಹೋದದ್ದನ್ನು ಕಂಡು ಕಂಡೂ ಸಹ, ಕೇಳಿ ಸಹ ಏಕೆ ಈ ಸಂಸಾರದ, ಈ ತನುವಿನ ಆಸೆ, ಮರುಳೆ ! ವಿರಕ್ತನಾಗು, ಕಾಯಜವೈರಿಯ ಪಾದವ ಬಿಡದಿರು'' ಎಂದಿದ್ದಾರೆ. ಮುಂದುವರಿದು ಸಂಸಾರದ ಬಗೆಗೊಂದು ಸುಂದರವಾದ ಉಪಮಾನವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ :

''ಸಂಸಾರವೆಂಬ ವಿಷವೃಕ್ಷಕ್ಕೆ ಪಂಚೇಂದ್ರಿಯಂಗಳೆ ಶಾಖೆಗಳು ಪಂಚಕ್ಲೇಶಂಗಳೆ ಫಲಂಗಳು, ಪಂಚ ವಿಷಯಂಗಳೇ ರಸವು, ಈ ಫಲವ ಬಯಸಿ ಮೆದ್ದವರೆಲ್ಲಾ ಮರಣಕ್ಕೊಳಗಾದರು. ಅದನರಿದು ಆ ಫಲವ ನಾನು ಮುಟ್ಟೆನು ಕಾಣಾ! ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ''(ವ.ಸಂ.೨೧) ಎಂದು ತಾವು ವೈರಾಗ್ಯದತ್ತ ದಾಪುಗಾಲು ಹಾಕುತ್ತೇನೆಂಬ ದೃಢ ನಿರ್ಧಾರಕ್ಕೆ ಬರುತ್ತಾರೆ. ಇದಕ್ಕೆ ಸುತ್ತಮುತ್ತಲಿನ ದೈನಂದಿನ ಜಗತ್ತೇ ಕಾರಣ ಎಂದು ಊಹಿಸಬಹುದಾಗಿದೆ. ಸಂಸಾರವೆಂಬ ರಾಹು ಆವರಿಸಿಸದಾಗ, ಮರವೆ, ಕಳವಳ, ಮಾಯೆ ಆವರಿಸಿ, ಅರಿವು ಜಾರಿ, ಮರಹು ಹೆಚ್ಚಿ, 'ಕೈಯ ತುತ್ತು ಬಾಯಿಗೆ ಬಾರದಂತಾಯಿತ್ತು' ಇನ್ನೆಲ್ಲಿಯ ಅಂಗ, ಇನ್ನೆಲ್ಲಿಯ ಜಂಗಮ, ಇನ್ನೆಲ್ಲಿಯ ಪ್ರಸಾದ ಅಕಟಕಟ'' ಎಂದು ಸಂಸಾರದ ವ್ಯಾಮೋಹಕ್ಕೆ ಒಳಗಾದವರ ಬಗೆಗೆ ಕನಿಕರಿಸಿದ್ದಾರೆ. ಹೊನ್ನು ಹೆಣ್ಣು ಮಣ್ಣು ಎಂಬ ವಿಷವನ್ನು ಉಣಬಡಿಸಿ, ಜೀವಿಗಳಿಗೆ ಠಕ್ಕಿಸಿ, ಕಾಲನಿಗೊಪ್ಪಿಸಿ, ತಾನು ತಪ್ಪಿಸಿಕೊಂಡಿದ್ದಾನೆ, ಆ ಪರಶಿವನು. ಆದುದರಿಂದ ಈ ವಿಷಪ್ರಾಶನವಾಗದಂತೆ ಜೋಕೆಯಿಂದಿರುವವನೆ ಜಾಣನು ಎಂದು ಅಭಿಪ್ರಾಯಪಟ್ಟಿದ್ದಾರೆ. ಹೊನ್ನು ಹೆಣ್ಣು ಮಣ್ಣು ಎಂಬ ಮಾಯೆ ಎಲ್ಲರ ಮೋಹಿಸಿ, ಹಲ್ಲ ಕಿತ್ತು ತರಕಟ ಕಾಡಿತ್ತು, ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ, ನಿಮ್ಮ ಶರಣರಲ್ಲದವರ ಹುಲ್ಲಿಂದ ಕಡೆ ಮಾಡಿತ್ತು ಮಾಯೆ! ಮುಂದುವರಿದು ಮಾಯೆಯೆಂಬುದನು ಗೆಲ್ಲಲು ಯಾರ ಅಳವಲ್ಲ. ತರಗೆಲೆಯ ಮೆದ್ದು ತಪವಿದ್ದವರೂ, ಗಾಳಿಯ ಆಹಾರವ ಕೊಂಡವರೂ, ಗುಹೆಯಲ್ಲಿ ಹೊಕ್ಕವರೂ, ಯಾರಾದರೂ ಇರಲಿ, ಅವರನ್ನೆಲ್ಲ ಈ ಮಾಯೆ ಹಿರಿಯರಿಗೆ ಹಿರಿದಾಗಿ ಕಿರಿಯರಿಗೆ ಕಿರಿದಾಗಿ ಕಾಡಿ ಘಾಸಿ ಮಾಡುತ್ತದೆ. ಕಾರಣ ಆಗ ಹುಟ್ಟಿ ಬೇಗ ಸಾಯುವವರ ಕಂಡು ಮತ್ತೇಕೆ ಸಂಸಾರದಾಸೆ ।

ನಿನ್ನ ದೇಹ ಸ್ಥಿರವಲ್ಲ. ನೀ ಬಂದುದನರಿದು, ಹೋಹ ಗತಿ ಪಥವನರಿ- ಎಂದಿದ್ದಾರೆ. ಇಂತಹ ''ಮಾಯೆ ಅನೇಕ ಕಾಲದಿಂದ ಸಿಕ್ಕವರನೆಲ್ಲ ತಿಂದು ಸವಿಗಲಿತು ಮಾಯಾರಕ್ಕಸಿಯಾಗಿ, ಬಿಡೆಂದರೆ ಬಿಡುವಳೆ ! ಇಲ್ಲ, ಇವಳ ಬಾಧೆಯ ಗೆಲ್ಲುವರೆ ಒಂದುಪಾಯವ ಕಾಬುದು ಪರಶಿವನ ಮರೆಹೊಕ್ಕರೆ ಇವಳ ಬಾಯ ಟೊಣೆವುದು'' ಎಂದಿದ್ದಾರೆ.

ಈ ಮನಸ್ಸಿನ ಚಂಚಲತೆ, ಚಪಲತೆಯನ್ನು ಸಿದ್ಧಲಿಂಗೇಶ್ವರರು ಚೆನ್ನಾಗಿ ವಿವರಿಸಿದ್ದಾರೆ. ಒಮ್ಮೆ ಸಂಸಾರದತ್ತ ಒಲಿವುದು. ಇನ್ನೊಮ್ಮೆ ಪಾರಮಾರ್ಥದತ್ತ ಒಲಿವುದು. ಈ ಮನದ ಮರ್ಕಟತನವ ಮಾಣಿಸಾ ಎಂದು ತನ್ನ ಆರಾಧ್ಯ ದೈವದಲ್ಲಿ ಮೊರೆ ಇಟ್ಟಿದ್ದಾರೆ. ಮಾಯೆ ಮರಹು ಆಸೆ - ಇವುಗಳಿಗೆ ಸಿಲುಕಿದ ಜೀವನು ಉದ್ಧಾರವಾಗುವುದಾದರೂ ಹೇಗೆ ಎಂದು ಪ್ರಶ್ನಿಸಿದ್ದಾರೆ! ಮರಹೆಂಬ ಕತ್ತಲೆಯಲ್ಲಿ ತೇಲುತ್ತ ಮುಳುಗುತ್ತಲಿರುವ ಈ ಮೂಜಗದ ಪ್ರಾಣಿಗಳು ನಿನ್ನನ್ನು ಕಾಣಲು ಹೇಗೆ ಸಾಧ್ಯ ! ಅವರಿಗೆ ಮುಕ್ತಿ ಎಂದಿಗೆ! ಎಂದು ಸಂದೇಹಿಸಿದ್ದಾರೆ.

''ಆಸೆಯೆಂಬ ವೇಶಿ ಆರನಾದರೂ ತನ್ನತ್ತ ಕರೆವಳು, ಈ ಆಸೆಯೆಂಬವಳು ಆರನಾದರೆಯೂ ಘಾಸಿ ಮಾಡುವಳು''- ಆಸೆಯೆಂಬ ಸ್ತ್ರೀಗೆ ಮನ ಸೋತವರೆಲ್ಲಾ ಕೆಟ್ಟ ಕೇಡನೇನೆಂಬೆನಯ್ಯಾ ! ಯತಿಗಳಾಗಲಿ, ವೇದಾಧ್ಯಾಯಿಗಳಾಗಲಿ, ವ್ರತಿಗಳಾಗಲಿ, ಸರ್ವವಿದ್ಯಾಕಲಾವಂತರಾಗಲಿ, ನರರೊಳಗಾಗಲಿ ಸುರರೊಳಗಾಗಲಿ, ಇವರೆಲ್ಲರ ಧನವುಳ್ಳವರ ಬಾಗಿಲ ಕಾಯಿಸಿದಳು. ನೋಡಾ ! ಇವಳಿಗಾರಾರು ಮರುಳಾಗಿದಿರರು. ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನ ಶರಣರಲ್ಲದವರ, ಕಿವಿಯ ಹಿಡಿದು ಕುಣಿಸಿದಳು ನೋಡಾ'' (ವ.ಸಂ. ೪೭) ''ಬಂದುದ ಕಿರಿದು ಮಾಡಿ ಬಾರದುದ ಹಿರಿದು ಮಾಡಿ''- ಏಕೆ ಬಳಲುವಿರಿ! ಚಿಂತೆಯಲ್ಲಿ! ಅರಿದು ಸಲಹುವ ಶಿವನಿರುವಾಗ ಬರಿದೆ ಆಸೆಯಿಂದಲೇಕೆ ಸಾವಿರಿ! ಎಂದು ಎಚ್ಚರಿಸಿದ್ದಾರೆ. ಇರುಹೆ ಆನೆಯ ಸುಂದರವಾದ ಉಪಮಾನವನ್ನು ಈ ಸಂದರ್ಭದಲ್ಲಿ ಹೇಳಿರುವುದು ಔಚಿತ್ಯಪೂರ್ಣವಾಗಿದೆ.

''ಮರಹು ಆವರಿಸಿದಾಗ ದೇವ ದಾನವ ಮಾನವರೊಳು ಯಾರಾದರಾಗಲಿ, ಅವರಿಂದ ಮಾಡಬಾರದ ಕರ್ಮವ ಮಾಡಿಸಿ, ಬರಬಾರದ ಭವದಲಿ ಬರಿಸಿ, ಉಣ್ಣದುದ ಉಣಿಸಿ ಸಾಯದ ನಾಯ ಸಾವ ಸತ್ತು ಹೋಹಂತೆ ಮಾಡುತ್ತದೆ. ಶಿವ! ಶಿವ! ಮಹದೇವ ನಿನ್ನ ಜಿನ್ನಾಣದ ಮರವೆಯ ಕಂಡು ನಾನು ಬೆರಗಾದೆ'' ಎಂದಿದ್ದಾರೆ. ''ಸಂಸಾರದ ಸುಖವೆತ್ತ! ನಿಮ್ಮ ನಿಜವೆತ್ತ! ಕತ್ತಲೆಯೆತ್ತ ಬೆಳಗೆತ್ತ!.... ಎನ್ನ ನೀನರಿದು ಸಲಹು''- ಎಂದು ಬೇಡಿಕೊಂಡಿದ್ದಾರೆ. ಜನಸಾಮಾನ್ಯರಿಗೆ ಚಿರಪರಿಚಯವಾದ ವಸ್ತು ವಿಷಯಗಳನ್ನು ಉಪಯೋಗಿಸಿಕೊಂಡು, ಸಾದೃಶ್ಯ, ಉಪಮಾನಗಳಿಂದ ಜನಸಾಮಾನ್ಯರಿಗೆ ಸುಲಭವಾಗಿ ಅರ್ಥವಾಗುವಂತೆ ತಮ್ಮ ಅನುಭವದ ಸವಿಯನ್ನು ಉಣಬಡಿಸಿದ್ದಾರೆ ಸ್ವತಂತ್ರ ಸಿದ್ಧಲಿಂಗೇಶ್ವರರು. 'ಎರವಿನ ಬದುಕು ಸ್ಥಿರವಲ್ಲ, ಏಕೆಂದರೆ ಅದು ಅಭ್ರಛಾಯೆ, ಬರಿಯ ಬಯಲ ಭ್ರಮೆ, ಸಟೆಯ ಸಂಸಾರ, ಇದರಲ್ಲೇನು ಲೇಸಿಲ್ಲ. ಕಾರಣ ದೃಢವಿಡಿ ಶಿವನ ಶ್ರೀ ಚರಣಂಗಳನು' ಎಂದಿದ್ದಾರೆ. 'ತಟಿದಂಕುರದಂತೆ ಕ್ಷಣದಲ್ಲಿ ತೋರಿಯಡಗುವ ಸಂಸಾರ' ಇದಿರಲ್ಲೇನು ಲೇಸು ಕಂಡೆ! ನಿತ್ಯಾನಂದ ಚಿದಾತ್ಮ ಸುಖವ ಏಕೆ ಬಿಡುವೆ! ಈ ಸಂಸಾರ ಸ್ಥಿರವಲ್ಲ. ಬೇಗ ಗುರುಚರಣವ ದೃಢವಿಡಿ, ಕಾಬೆ ಮುಂದೆ ನೀನು ಕೈವಲ್ಯವ'' ಎಂಬ ಸರಳ ಸುಂದರ ಮಾತುಗಳಿಂದ ಕೇಳುವವರನ್ನು ಮೋಡಿಮಾಡಿ ತಮ್ಮತ್ತ ಸಿದ್ಧಲಿಂಗೇಶ್ವರರು ಸೆಳೆದಿದ್ದಾರೆ ಎಂದರೆ ತಪ್ಪಾಗಲಾರದು. ಹೀಗೆ ಸಂಸಾರ ಅಸ್ಥಿರ, ಮಾಯೆ ಮೋಹಗಳಿಗೆ ಅವಕಾಶ ವೀಯುತ್ತದೆ. ಕಾರಣ ವೈರಾಗ್ಯವನ್ನು ತಾಳು. ಶಿವನ ಪಾದವ ಶರಣು ಹೋಗು, ನಿಜ ಪದವ ಸೇರಬಹುದೆಂದು ವಿವಿಧ ರೀತಿಯಲ್ಲಿ ವಿವರಿಸಿದ್ದಾರೆ.

ಗುರು ಬೇರೆ ಅಲ್ಲ, ಪರಶಿವ ಬೇರೆ ಅಲ್ಲ, ''ಗುರುವನರಸಿಕೊಂಡು ಬಂದ ಶಿಷ್ಯನ ಕಣ್ಣ ಮುಂದೆ ಪರಶಿವನು ಗುರುವಾಗಿ ಪ್ರತ್ಯಕ್ಷನಾದನಯ್ಯ!'' ಎಂದಿದ್ದಾರೆ. ಗುರು ಪ್ರತ್ಯಕ್ಷ ಶಿವನು, ಕಣ್ಣಿಗೆ ಕಾಣುವ ಶಿವನು ಶಿಷ್ಯನನ್ನು ಉದ್ಧರಿಸುವುದರಲ್ಲಿ ಅನುಮಾನವೇ ಇಲ್ಲ. ಶ್ರೀಗುರುವಿನ ಉಪದೇಶದಿಂದ ಕಾಯವೇ ಶಿವಕಾಯವಾಗಿ, ಪ್ರಾಣವೇ ಪರಶಿವನಾಗಿ, ಸದ್ಯೋನ್ಮುಕ್ತನಾಗುವನು ಜೀವ ಎಂದಿದ್ದಾರೆ. ''ಶಿವನೆ ತಾನೆನಗೆ ಗುರುವಾಗಿ ಬಂದು ಎನ್ನ ಸಂಸಾರ ಸಾಗರವ ದಾಂಟಿಸಿ,

ಅಖಂಡ ಪರಮ ಚೈತನ್ಯ ಶಿವಲಿಂಗವ, ವಿಶ್ವದೊಳಗೆಲ್ಲಿಯೂ, ಕಾಬಂತೆ ತೋರಿಸಿ, ವಿಶ್ವವಲಿಂಗದೊಳಗೆ ತೋರಿ, ಲಿಂಗವ ನೆನ್ನಂಗದೊಳ ಹೊರಗೆ ತೋರಿ, ಅಂಗವ ಲಿಂಗದೊಳಗಿರಿಸಿ ರಕ್ಷಿಸಿದನಯ್ಯಾ! ಎನ್ನ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನು (ವ.ಸಂ. ೬೩).

'ಸುಜ್ಞಾನವೆಂಬ ಹಡಗನೇರಿದ ಗುರು, ತನ್ನನಾಶ್ರಯಿಸಿದ ಶಿಷ್ಯನ, ಸಂಸಾರವೆಂಬ ಮಹಾಸಮುದ್ರವ ದಾಂಟಿಸಿ ತಡಿಗೆ ಸೇರಿಸಿ, ಮುಕ್ತಿ ಎಂಬ ಗ್ರಾಮಕ್ಕೆ ಎಯ್ದುವ ಭಕ್ತಿಮಾರ್ಗವ ತೋರಿಸುವನಲ್ಲದೆ, ಸುಜ್ಞಾನಿಯಲ್ಲದ ಗುರು ತನ್ನನಾಶ್ರಯಿಸಿದ ಶಿಷ್ಯನ ಸಂಸಾರ ಸಮುದ್ರವ ದಾಂಟಿಸಲರಿಯ'- ಸುಜ್ಞಾನಿಯಾದ ಗುರು ಮಾತ್ರ ಶಿಷ್ಯನನ್ನು ಉದ್ಧರಿಸಬಲ್ಲನೆ ಹೊರತು ಅಜ್ಞಾನಿ ಅಲ್ಲ ಎಂದಿದ್ದಾರೆ. (ವ.ಸಂ. ೨೦೫)

ಶಂಕರಾಚಾರ್ಯರು ಎಂಥ ಗುರುವನ್ನು ಮರೆ ಹೊಗಬೇಕೆಂದು ತಮ್ಮ ವಿವೇಕ ಚೂಡಾಮಣಿಯಲ್ಲಿ ಹೇಳಿದ್ದಾರೆ :

ಶ್ರೋತ್ರಿಯೋಽವೃಜಿನೋಽಕಾಮಹತೋ ಯೋ ಬ್ರಹ್ಮವಿತ್ತಮಃ ।
ಬ್ರಹ್ಮಣ್ಯುಪರತಃ ಶಾಂತೋ ನಿರಿಂಧನ ಇವಾನಲಃ ॥
ಅಹೇತುಕ ದಯಾಸಿಂಧುರ್ಬಂಧುರಾನಮತಾಂ ಸತಾಮ್ ॥ ೩೩

ಯಾವನು ಶ್ರೋತ್ರಿಯನೊ, ಪಾಪರಹಿತನೊ ಕಾಮವಿಲ್ಲದವನೊ ಬ್ರಹ್ಮವಿದರಲ್ಲಿ ಶ್ರೇಷ್ಠನೋ ಬ್ರಹ್ಮದಲ್ಲಿ ನೆಲೆಸಿರುವನೋ, ಕಟ್ಟಿಗೆಯನ್ನೆಲ್ಲ ಸುಟ್ಟ ಬೆಂಕಿಯಂತೆ ಶಾಂತನೋ, ಯಾವ ಪ್ರತಿಫಲವನ್ನೂ ಬಯಸದೆ ದಯಾಸಿಂಧುವಾಗಿರುವನೋ ನಮಿಸಿದ ಸಾಧುಗಳಿಗೆ ಬಂಧುವೊ ಅಂತಹ ಗುರುವನ್ನು ಮೊರೆಹೋಗಬೇಕೆಂದಿದ್ದಾರೆ''. ಮುಂದುವರಿದು,

ನಡೆವ ಬಟ್ಟೆಯ ಬಿಡಿಸಿ, ನಡೆಯದ ಬಟ್ಟೆಯಲ್ಲಿ ನಡೆವಂತೆ ಮಾಡಿದನಯ್ಯ.
ನೋಡುವ ನೋಟವ ಬಿಡಿಸಿ, ನೋಡದುದ ನೋಡುವಂತೆ ಮಾಡಿದನಯ್ಯಾ.
ಕೇಳುವುದ ಕೇಳಲೀಯದೆ ಬಿಡಿಸಿ, ಕೇಳದುದ ಕೇಳುವಂತೆ ಮಾಡಿದನಯ್ಯ.
ಕೂಡಬಾರದ ಘನವ ಕೂಡುವಂತೆ ಮಾಡಿ
ಪರಮಸುಖದೊಳಗಿರಿಸಿದನಯ್ಯಾ ಎನ್ನ
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು. (ವ.ಸಂ. ೨೪೫)

''ಸೇವ್ಯ ಗುರುವಿನ ಮಹಾ ಪ್ರಸಾದವನನುಭವಿಸಿ
ತಾನೇ ಗುರುತತ್ತ್ವವಾದ ಮಹಾಪ್ರಸಾದಿಗೆ ಬೇರೆ
ಜ್ಞಾನವುಂಟೆ!'' (ವ.ಸಂ. ೩೬೧)

ಹೀಗೆ ಲಿಂಗೋಪದೇಶ ಮಾಡಿ ಲಿಂಗ ಧಾರಣ ಮಾಡಿದ ಮೇಲೆ ಗುರು ಶಿಷ್ಯರು ಇಬ್ಬರೂ ಒಂದಾಗುತ್ತಾರೆ ಎಂಬುದು ವೀರಶೈವ ಧರ್ಮದ ಅನಿಸಿಕೆ. ಗುರು ಕೊನೆಯವರೆಗೂ ಗುರುವಾಗಿಯೇ, ಶಿಷ್ಯ ಶಿಷ್ಯನಾಗಿಯೇ ಉಳಿಯುವುದಿಲ್ಲ ಎಂಬುದು ಈ ಧರ್ಮದ ಹೆಗ್ಗಳಿಕೆ. ಹೀಗೆ ಜೀವಿಯು ಪಿಂಡಜ್ಞಾನ ಸ್ಥಲದಿಂದ ಮುಂದೆ ನಡೆದು ಸಂಸಾರ ಮಾಯಾ ಮೋಹಗಳಿಂದ ಬಿಡಿಸಿಕೊಳ್ಳಲು ಗುರುವನ್ನಾಶ್ರಯಿಸಿದ ನಂತರ ಭಕ್ತನಾಗುತ್ತಾನೆ. ಮುಂದೆ ಭಕ್ತಸ್ಥಲಕ್ಕೆ ಬರುತ್ತೇವೆ.

ಭಕ್ತನಿಗೆ ಜ್ಞಾನ, ಆಚಾರ, ಕ್ರಿಯೆ ಬೇಕೂ ಜ್ಞಾನವಿಲ್ಲದವನಿಗೆ ಆಚಾರವಿಲ್ಲ. ಆಚಾರವಿಲ್ಲದನಿಗೆ ಭಕ್ತಿಯಿಲ್ಲ. ಭಕ್ತಿಯಿಲ್ಲದವನಿಗೆ ವಿರಕ್ತಿ ಇಲ್ಲ. ವಿರಕ್ತಿ ಇಲ್ಲದವಂಗೆ ಮುಕ್ತಿ ಇಲ್ಲ. ಕಾರಣ ಭಕ್ತನಾದವನಿಗೆ ಭಕ್ತಿ ಜ್ಞಾನ ಆಚಾರ ವೈರಾಗ್ಯವು ಮುಖ್ಯವೆಂದು ಸ್ವತಂತ್ರ ಸಿದ್ದೇಶ್ವರರು ಅಭಿಪ್ರಾಯಪಟ್ಟಿದ್ದಾರೆ. ಇದಕ್ಕೆ ಒಂದು ಸೊಗಸಾದ ದೃಷ್ಟಾಂತವನ್ನು ಕೊಟ್ಟಿದ್ದಾರೆ. ಕಣ್ಣು

ಕಾಲುಗಳು ಎರಡೂ ಸರಿ ಇರುವವನು ಎಷ್ಟು ದೂರ ಬೇಕಾದರೂ ನಡೆಯಬಲ್ಲನು. ಅವುಗಳಲ್ಲಿ ಒಂದು ಇಲ್ಲದಿದ್ದರೆ, ಆತ ಹೆಚ್ಚು ದೂರ ನಡೆಯಲಾರನು ಎಂಬ ದೃಷ್ಟಾಂತದ ಮೂಲಕ ಭಕ್ತನಿಗೆ ಜ್ಞಾನ ಕ್ರಿಯೆ ಎರಡೂ ಅವಶ್ಯಕವೆಂಬ ಸಮುಸಮುಚ್ಚಯವಾದವನ್ನು ಎತ್ತಿ ಹಿಡಿದಿದ್ದಾರೆ. ಆಚಾರವಿಲ್ಲದವನಿಗೆ ಜ್ಞಾನವಿಲ್ಲ. ಜ್ಞಾನವಿಲ್ಲದವನಿಗೆ ಭಾವಶುದ್ಧಿ ಇಲ್ಲ, ಅಂತಹವನಿಗೆ ಧ್ಯಾನ ಮುಕ್ತಿ ಇವಾವುದೂ ಇಲ್ಲವೆಂದಿದ್ದಾರೆ. ಹೀಗೆ ಭಕ್ತನಿಗೆ ಅಂತರಂಗ, ಬಹಿರಂಗ ಎರಡೂ ಶುದ್ಧಿ ಇರಬೇಕೆಂದು ಹೇಳಿದ್ದಾರೆ. (ಹೆಳವ ಮತ್ತು ಕುರುಡನ ದೃಷ್ಟಾಂತವನ್ನು ಕೊಟ್ಟಿದ್ದಾರೆ) ಭಕ್ತಿಯು ನಿಷ್ಠೆಯಿಂದ ಕೂಡಿದುದಾದರೆ ಶಿವನ ವಶ ಮಾಡುತ್ತದೆ. ನಡೆಸುತ್ತದೆ. ನುಡಿಸುತ್ತದೆ. ಉಣಿಸಿ ಉಡಿಸಿ ತೊಡಿಸುತ್ತದೆ. ಇಂತಲ್ಲದೆ, ವಿರಕ್ತಿ ಇಲ್ಲ, ಜ್ಞಾನವಿಲ್ಲ. ಇದು ಕಾರಣ '' ಭಕ್ತಿಯೇ ಮುಕ್ತಿಯ ಜನನಿ ತಾನೆ ಬೇರಿಲ್ಲ.... ನಿಜವನೈದುವಡೆ ಭಕ್ತಿಯಿಂದಲ್ಲದಾಗದು'' ಎಂದು ಭಕ್ತಿಯ ಉನ್ನತಿಯನ್ನು ಮೆರೆದಿದ್ದಾರೆ. ಭಕ್ತಿಯ ಪಾರಮ್ಯವನ್ನು ತೋರಿದ್ದಾರೆ. ಹೀಗಿದ್ದರೂ ಮುಕ್ತಿಗೆ ಭಕ್ತಿಯೊಂದೆ ಸಾಲದೆಂತಲೂ, ಜೊತೆಗೆ ಜ್ಞಾನ ವೈರಾಗ್ಯವು ಮುಕ್ತಿಮಾರ್ಗಕ್ಕೆ ತ್ರಿವಿಧ ಸೋಪಾನವೆಂದು ಹೇಳಿದ್ದಾರೆ. ತನ್ನ ಸ್ವರೂಪವನರಿದು ಶಿವಸ್ವರೂಪವನರಿದು ಶಿವನ ತನ್ನ ಐಕ್ಯವನರಿವುದೇ ಜ್ಞಾನವೆಂದು ವಿಶ್ಲೇಷಿಸಿದ್ದಾರೆ. ಭಕ್ತನಾದವನು ಇಂದ್ರಿಯಗಳನ್ನು ಜಯಿಸಬೇಕು, ದೇಹಧರ್ಮದಿಚ್ಛೆಗೆ ಕುಣಿದರೆ, ಆತ ಭಕ್ತನಲ್ಲ, ಕಾರಣ ಭಕ್ತನಾದವನು ವಿರಕ್ತನಾಗಿರಬೇಕು. ನಡೆ-ನುಡಿ, ಶುದ್ಧವಾಗಿರಬೇಕು'' ಎಲುವಿಲ್ಲದ ನಾಲಗೆಯ ಪಡೆದೆವೆಂದು ಹಲವು ಪರಿಯಲಿ ಉಲಿವರಯ್ಯಾ ! ಎಂದು ಮಾಯಾ ಮಲಿನ ದೇಹಿಗಳನ್ನು ವಿಡಂಬಿಸಿದ್ದಾರೆ. ಅಂತಹವರನ್ನು ಆ ಪರಶಿವನು ಅಘೋರ ನರಕದ ಕಗ್ಗಸರಲ್ಲಿ ಅದ್ದುವನು ಎಂದಿದ್ದಾರೆ. ಹೀಗೆ ಅರಳಿಯಮರದ ಉಲುಹಿನಂತೆ ಬಾಯಿಗೆ ಬಂದಂತೆ ಬೊಗಳುವವರನ್ನು ''ಕೊರಳುದ್ದಕ್ಕೆ ಹೂಳಿಸಿಕೊಂಡು ಮುಗಿಲುದ್ದಕ್ಕೆ ನೆಗೆದಹೆನೆಂಬುವನ ಹಾಗೆ'' ಎಂದು ವಿವರಿಸಿದ್ದಾರೆ.

ಜಪ ತಪ ಪಂಚಾಚಾರಗಳನ್ನು ಮಾಡಿದ ಬಳಿಕ ಮನ ಶುದ್ಧವಾಗಿರಬೇಕು. ಅದಲ್ಲದೆ ಬೇರೆಯವರಿಗೆ ಕೇಡನ್ನು ಬಯಸುವುದಾಗಲಿ ಶರಣರನ್ನು ಕಂಡು ಸುಳ್ಳು ಆರೋಪವನ್ನು ಮಾಡುವುದಾಗಲಿ ಪಾತಕಕ್ಕೆ ಮನಸ್ಸು ಮಾಡುವುದಾಗಲಿ, ಲೋಕರಂಜನೆ ಆಗುತ್ತದೆ. ಅಲ್ಲದೆ ಸಜ್ಜನಿಕೆ ಸದಾಚಾರವಾಗಲಾರದು. ಅಂತಹವರನ್ನು ಕಂಡು ನಾನಂಜುವೆ. ನೀನು ಕೂಡ ದೂರದಲೋಡವೆ! ಹಾವಾಡಿಗ ತನ್ನ ಪ್ರಾಣವನ್ನು ರಕ್ಷಿಸಿಕೊಂಡು ಹಾವನಾಡಿಸುವಂತೆ, ಯಾರಾದರಾಗಲಿ, ಮಾತನಾಡುವಾಗ ತಮ್ಮನ್ನು ರಕ್ಷಿಸಿಕೊಂಡು ಆಡಬೇಕು. ಏಕೆಂದರೆ ತನ್ನ ವಚನವೇ ತನಗೆ ಹಗೆಯಾಗಿ ಕಾಡುತ್ತದೆ. ಆಗ ಇತರರಿಂದ ತನಗೆ ಕೇಡು ಬಂದಿತ್ತೆಂದು ದುಃಖಿಸಬೇಡ, ಅಳಿವುದು ಉಳಿವುದು ತನ್ನ ವಚನದಲ್ಲಿಯೆ ಇದೆ. ಹಗೆಯು ಕೆಳೆಯು ತನ್ನ ವಚನವೆ ಆಗಿದೆ. ''ಏನಿ ಬಂದಿರಿ ಹದುಳವಿದ್ದಿರೆ ಎಂದರೆ ತನ್ನ ಮೈಸಿರಿ ಹಾರಿಹೋಹುದೆ'' ಎಂಬ ಬಸವಣ್ಣನವರ ವಚನವನ್ನು ಇಲ್ಲಿ ನೆನಪಿಸಿಕೊಳ್ಳಬಹುದು ಮತ್ತು ''ಮಾತು ಬಲ್ಲವನಿಗೆ ಜಗಳವಿಲ್ಲ, ಊಟ ಬಲ್ಲವನಿಗೆ ರೋಗವಿಲ್ಲ''- ಎಂಬ ಸರ್ವಜ್ಞನ ವಚನವನ್ನು ಸಹ ನೋಡಬಹುದು. ಹೀಗೆ ಸ್ವತಂತ್ರ ಸಿದ್ಧಲಿಂಗೇಶ್ವರರು ಲೋಕದ ಜನಸಾಮಾನ್ಯರಿಗೆ ಮಾತಿನ ಬಗೆಗೆ ಒಂದು ಉತ್ತಮವಾದ ಮಾರ್ಗವನ್ನು ತೋರಿದ್ದಾರೆ ಎನ್ನಬಹುದು. ಭಕ್ತನ ಕಾಯವೆ ಶಿವನ ಕಾಯ, ಶಿವನ ಕಾಯವೆ ಭಕ್ತನ ಕಾಯ, ಶಿವ ಶಿವ ಭಕ್ತ ಬೇರೆಯೆ, ಶಿವ ಬೇರೆಯೆ! ಒಂದೇ ಕಾಣಿರಣ್ಣ'' ಅದೆಂತೆಂದಡೆ 'ಭಕ್ತದೇಹಿಕ ದೇವ ದೇವದೇಹಿಕ ಭಕ್ತ'' ಕಾರಣ ಭಕ್ತರಿಗೂ ದೇವಂಗೂ ಕಾಯವೊಂದೇ ಪ್ರಾಣ ಒಂದೇ, ಎರಡೆಂಬ ಪರಿಭಾಷೆಯ ನುಡಿಯಲಾಗದು ಭಕ್ತರಾದವರು, ಸ್ವತಂತ್ರ ಸಿದ್ಧಲಿಂಗೇಶ್ವರ '' (ವ. ಸಂ. ೧೩೩)

ಶಿವಭಕ್ತರ ನಡೆ, ನುಡಿ, ನೋಟ, ಮಾಟ, ನೆನಹು, ಅನುಭಾವ, ಕಾಯ, ಪ್ರಾಣ-ಎಲ್ಲವೂ ಶುದ್ಧ. ಶಿವಭಕ್ತನಿಗೆ ಪುಣ್ಯವಿಲ್ಲ. ಪಾಪವಿಲ್ಲ. ಸ್ವರ್ಗವಿಲ್ಲ, ನರಕವಿಲ್ಲ. ಅದಕ್ಕೆ ಚಂಡೇಶ ಸಿದ್ದರಾಮರ ಉದಾಹರಣೆ ಕೊಟ್ಟು ಸ್ಪಷ್ಟಪಡಿಸಿದ್ದಾರೆ. ಮದಗಜವು ಬಿಸಜತಂತುವಿನಿಂದ ಹೇಗೆ ಕಟ್ಟುವಡೆವುದಿಲ್ಲವೋ ಹಾಗೆ, ಕತ್ತಲೆ ಸೂರ್ಯನನ್ನು ಹೇಗೆ ಬಾಧಿಸಲಾರದೋ ಹಾಗೆ, ಮಂಜಿನ ಸೈನ್ಯ ಸೂರ್ಯನನ್ನು ಹೇಗೆ ಮುತ್ತಲಾರದೋ ಹಾಗೆ, ನಿಮ್ಮವನಾದ ಶರಣನಿಗೆ ಪುಣ್ಯ ಪಾಪ ಲೋಪವಿಲ್ಲ ಎಂದು ಅನೇಕ ಉಪಮಾನಗಳ ಮೂಲಕ ವಿವರಿಸಿದ್ದಾರೆ. ಹೀಗೆಯೇ, ಶಿವಶರಣನನ್ನು ಸಂಸಾರವು ಕೂಡ ಬಾಧಿಸಲಾರದು.

''ಅಂತರಂಗ ಶುದ್ಧವಿಲ್ಲದವರು
ಬಹಿರಂಗದಲ್ಲಿ ಸದಾಚಾರ ಸತ್ಕ್ರಿಯೆಯ
ಸರ್ವಜನ ಮೆಚ್ಚುವಂತೆ ಮಾಡುತ್ತಿರ್ದರೇನು!
ಅದು ಲೋಕ ರಂಜನೆಯಲ್ಲದೆ ಶಿವ ಮೆಚ್ಚ
ಶಿವಶರಣರು ಮೆಚ್ಚರು.....ನಿಜಗುರು ಸ್ವತಂತ್ರ
ಸಿದ್ಧಲಿಂಗೇಶ್ವರ (ವ.ಸಂ. ೧೪೮)

ಶಮೆ, ದಮೆ, ವಿವೇಕ, ವೈರಾಗ್ಯ, ಶಾಂತಿ, ಕಾರುಣ್ಯ, ಶ್ರದ್ಧೆ, ಸತ್ಯ, ಸದ್ಭಕ್ತಿ, ಶಿವಜ್ಞಾನ, ಶಿವಾನಂದ ಇವು ಸದ್ಭಕ್ತನಲ್ಲಿ ಉದಯವಾದರೆ ಅವನ ಹೃದಯದಲ್ಲಿ ಶಿವನಿಪ್ಪ. ಆತನ ದರ್ಶನ ಸ್ಪರ್ಶನ ಸಂಭಾಷಣೆಯಿಂದ ಮುಕ್ತಿ ತಪ್ಪದು ಎಂದಿದ್ದಾರೆ.

ಶಂಕರಾಚಾರ್ಯರು ತಮ್ಮ ವಿವೇಕ ಚೂಡಾಮಣಿಯಲ್ಲಿ ಇದೇ ಅಭಿಪ್ರಾಯವನ್ನು ಮಂಡಿಸಿದ್ದಾರೆ :

''ಶ್ರದ್ಧಾ ಭಕ್ತಿ ಧ್ಯಾನಯೋಗಾನ್ ಮುಮುಕ್ಷೋ
ರ್ಮುಕ್ತೇರ್ಹೇತೂನ್ ವಕ್ತಿ ಸಾಕ್ಷಾಚ್ಛ್ರುತೇರ್ಗೀಃ ॥ ೪೬

ಶ್ರದ್ಧೆ ಭಕ್ತಿ ಧ್ಯಾನ ಯೋಗ ಇವುಗಳೇ ಮುಮುಕ್ಷುವಿಗೆ ಮುಕ್ತಿಗೆ ಕಾರಣಗಳೆಂದು ಶ್ರುತಿವಾಕ್ಯ ಹೇಳುತ್ತಿದೆ. ತನ್ನಲ್ಲಿರುವ ನಿಜವಸ್ತುವನ್ನು ತಾನು ಅರಿಯದೆ ಇದ್ದು, ಏನನೋದಿ ಏನು ಫಲ, ಏನ ಹೇಳಿ ಏನು ಫಲ? ಅತ್ತಲಿತ್ತ ಹರಿವ ಮನವ ನಿಲಿಸದಿದ್ದರೆ ಏನು ಫಲ. ಚಿನ್ನದ ಲೇಪನವನ್ನು ಪಡೆದ ತಾಮ್ರದಂತೆ, ಒಳಗೆ ಕಾಳಿಕೆ ಬಿಡದು, ಮೇಲೆ ನುಣ್ಣಗೆ ಬಣ್ಣಗೆ ನುಡಿವ ಮನುಜರು ಕಣ್ಣು ಕಾಣದೆ ಕಾಡು ಬೀಳುವುದೆ ನಿಜ ಎಂದು ಅಂತರಂಗ ಬಹಿರಂಗದ ಶುದ್ಧಿಯನ್ನು ಪ್ರತಿಪಾದಿಸಿದ್ದಾರೆ.

'ತಾಯಿಯ ಸ್ತನದಲ್ಲಿ ಅಮೃತವ ತುಂಬಿ ಊಡಿಸಿ ಸಲಹುವ ದೇವ'' ಎಂಬ ಮಾತಿನಲ್ಲಿ ಸೃಷ್ಟಿಯ ರಹಸ್ಯವನ್ನು ಸ್ವತಂತ್ರ ಸಿದ್ಧಲಿಂಗೇಶ್ವರರು ಭೇದಿಸಿದ್ದಾರೆ.

'ನಾನು' 'ನೀನು' ಎಂಬ ಭಿನ್ನ ಭೇದವಿಲ್ಲ, ಏಕೆಂದರೆ ಒಳಗಿದ್ದ ಚೇತನವು ನೀವೆ! ಒಳಗೆ ನೀವು, ಹೊರಗೆ ನೀವು, ನಾನೆಂಬುದಿಲ್ಲ. ನಾನೇನು ಮಾಡಿತ್ತಲ್ಲ ನಿಮ್ಮ ವಿನೋದ, ನೀನಾಡಿಸಿದಂತೆ ನಾನು ಆಡುವೆನಲ್ಲದೆ ನನಗೆ ಸ್ವತಂತ್ರವಿಲ್ಲ. ನಾನು ನಿನ್ನ ಕೈಯೊಳಗಿನ ಗೊಂಬೆ. ನೀ ನನ್ನೊಳಗೆ, ನಾ ನಿನ್ನೊಳಗೆ, ಇಬ್ಬರಲ್ಲಿ ಯಾವ ಭೇದವೂ ಇಲ್ಲ. ಹೀಗೆ ದೇವ ಭಕ್ತರು ಬೇರೆ ಬೇರೆ ಅಲ್ಲ. ಒಂದೇ ಎಂದಿದ್ದಾರೆ. ಹೀಗೆ ತನ್ನ ಸರ್ವಸ್ವವೂ ಶಿವನ ಅಧೀನ ಎನ್ನುವುದರಿಂದ ವ್ಯಕ್ತಿಯ ಅಹಂಕಾರ ಮಮಕಾರಗಳು ಬಯಲಾಗುವುವು ಅಲ್ಲದೆ, ಮುಂದುವರಿದು ಇಬ್ಬರ ಮನ ಒಂದೇ ಆದ ಬಳಿಕ, ನನ್ನ ಮನ ನಿಮ್ಮಲ್ಲಿ ಬೆರಸಿದ ಬಳಿಕ, ಇಬ್ಬರು ಒಂದಾದ ಬಳಿಕ 'ನಿನ್ನ ನೆನೆವುತ್ತಿಪ್ಪೆ ನಾನು, ನನ್ನ ನೆನೆವುತ್ತಿಪ್ಪೆ ನೀನು', 'ನನಗೂ ನಿನಗೂ ಏನೂ ಭೇದವೂ ಇಲ್ಲ, ಇದ ನೀ ಬಲ್ಲೆ, ನಾ ಬಲ್ಲೆ'', ನಿನ್ನನಗಲದಿಪ್ಪೆ ನಾನು, ನನ್ನನಗಲದಿಪ್ಪೆ ನೀನು, ಹೇಗೆಂದರೆ ಚಿನ್ನ ಬಣ್ಣದಂತೆ ಇಪ್ಪೆವಾಗಿ ಇನ್ನು ಭಿನ್ನವುಂಟೆ!' (ವ.ಸಂ.೨೧೩) ಎಂಬ ಒಂದು ಸುಂದರವಾದ ಉಪಮಾನವನ್ನು ಕೊಟ್ಟು ತಮ್ಮ ಅಭಿಪ್ರಾಯವನ್ನು ಮುಂದಿಟ್ಟಿದ್ದಾರೆ. ಕಾರಣ,

''ನಡೆವ ಗತಿಯಲ್ಲಿ ನಿಮ್ಮ ಕೂಡಿ ನಡೆವೆನಯ್ಯಾ,
ಹಿಡಿವಲ್ಲಿ, ಬಿಡುವಲ್ಲಿ ನಿಮ್ಮ ಕೂಡಿ ಹಿಡಿವೆನು ಬಿಡುವೆನಯ್ಯಾ।
ನುಡಿವಲ್ಲಿ ನಿಮ್ಮ ಕೂಡಿ ನುಡಿವೆನು.
ಒಡಲಿಂದ್ರಿಯಂಗಳೆಲ್ಲಾ ನಿಮ್ಮವಾಗಿ, ಎನಗೊಂದೊಡೆತನವಿಲ್ಲ,
ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ
ನಾನು ನಿಮ್ಮೊಳಗಾಗಿ'' (ವ.ಸಂ. ೨೧೫)

ಮತ್ತು

''ಶಿರದೊಳಗೆ ಶಿರ, ಕರದೊಳಗೆ ಕರ
ಕರಣದೊಳಗೆ ಕರಣ, ಕಂಗಳೊಳಗೆ ಕಂಗಳು
ಕರ್ಣದೊಳಗೆ ಕರ್ಣ, ಘ್ರಾಣದೊಳಗೆ ಘ್ರಾಣ
ಜಿಹ್ವೆಯೊಳಗೆ ಜಿಹ್ವೆ, ದೇಹದೊಳಗೆ ದೇಹ,
ಪಾದದೊಳಗೆ ಪಾದ, ಕೂಡಿ ಶರಣರೊಡನಾಡುವ
ನಿಮ್ಮ ಬೆಡಗಿನ ಲೀಲೆಯನಾರು ಬಲ್ಲರು ।
ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ ನಿಮ್ಮ ಶರಣರಲ್ಲದೆ ।'' (ವ.ಸಂ. ೨೮೦)

ಅಲ್ಲದೆ ದೇವ, ಭಕ್ತರು ಇಬ್ಬರೂ ಒಂದಾಗಿ ಬಿಡದೆ ಕೂಡಿ ಸಮಭೋಗವಾಗಿ ಭೋಗಿಸಿ ಸಮರಸ ಸುಖದಲ್ಲಿರ್ದುದ ನಂತಿಂತೆಂದು ಉಪಮಿಸಬಾರದು ಎಂದಿದ್ದಾರೆ.

ಮುಂದೆ ಪ್ರಸಾದ ಸ್ಥಲಕ್ಕೆ ಬರುತ್ತೇವೆ. 'ಪ್ರಸಾದ' 'ಪ್ರಸಾದಿ' ಎಂಬ ಪದಗಳ ಅರ್ಥವನ್ನು ತಮ್ಮದೇ ಆದ ಒಂದು ವಿಶಿಷ್ಟ ರೀತಿಯಲ್ಲಿ ವಿವರಿಸಿದ್ದಾರೆ. ಲಿಂಗಾಣತಿಯಿಂದ ದೊರೆತುದನ್ನು ಲಿಂಗಕ್ಕೆ ಅರ್ಪಿಸಿ ಪ್ರಸಾದವನ್ನಾಗಿಸಿಕೊಳ್ಳುವುದು ಒಂದು ರೀತಿ. ಇದು ಸಾಮಾನ್ಯವಾಗಿ ಎಲ್ಲರೂ ತಿಳಿದುಕೊಂಡಿರುವ ಅರ್ಥ. ತನ್ನನ್ನೇ ಪದಾರ್ಥವೆಂದು ಬಗೆದು ಪೂರ್ಣವಾಗಿ ತನ್ನನ್ನು ಪ್ರಸಾದ ಸ್ವರೂಪನಾದ ಪರಮಾತ್ಮನಿಗರ್ಪಿಸಿ ತಾನೂ ಕೂಡ ಪ್ರಸಾದ ಸ್ವರೂಪನಾಗುವ ರೀತಿ ಮತ್ತೊಂದು, ಇದನ್ನೇ ಸ್ವತಂತ್ರ ಸಿದ್ಧಲಿಂಗೇಶ್ವರರು ಪ್ರತಿಪಾದಿಸಿದ್ದಾರೆ. ಶೂನ್ಯಸಂಪಾದನೆಯಲ್ಲಿ ಬರುವ ''ಪ್ರಭು ಆರೋಗಣೆ''ಯ ಸನ್ನಿವೇಶ ಇಂಥದ್ದನ್ನೇ ವಿವರಿಸುತ್ತದೆ. ಭಕ್ತನೇ ಪ್ರಸಾದವೂ ಹೌದು, ಪ್ರಸಾದಿಯೂ ಹೌದು, ಎಂಬ ತತ್ವವನ್ನು ವೀರಶೈವ ದರ್ಶನ ಭಾವಿಸಿರುವುದು ಕಂಡುಬರುತ್ತದೆ. ಕಾರಣ ಪ್ರಸಾದಿಯ ಬಿಟ್ಟು ಪ್ರಸಾದವಿಲ್ಲ. ಪ್ರಸಾದವ ಬಿಟ್ಟು ಪ್ರಸಾದಿ ಇಲ್ಲ.

ತಿರುಳು ಕರಗಿದ ಬೀಜ ಮರಳಿ ಹೇಗೆ ಹುಟ್ಟಲಾರದೋ ಹಾಗೆ, ತೊಟ್ಟುಬಿಟ್ಟ ಹಣ್ಣು ಮರಳಿ ತೊಟ್ಟ ಹೇಗೆ ಪತ್ತಲಾರದೋ ಹಾಗೆ, ಪ್ರಾಣಲಿಂಗದ ನಿಜವನರಿದವನು ಪುನಃ ಹುಟ್ಟಬಲ್ಲನೆ, ಹುಟ್ಟಲಾರ.

ಮಹಾಶಿವಯೋಗಿಗಳಾದ ಸಿದ್ಧಲಿಂಗೇಶ್ವರರು ಪ್ರಾಣಲಿಂಗದ ಪರಮ ರಹಸ್ಯವನ್ನು ಅರಿತಿದ್ದರಲ್ಲದೆ, ಇತರ ಎಲ್ಲ ಯೋಗಗಳ ಅನುಸಂಧಾನ ಕ್ರಮವೂ ಅವರಿಗೆ ಕರಗತವಾಗಿತ್ತು. ಈ ಅಂಶ ಅವರ ಅನೇಕ ವಚನಗಳಿಂದ ತಿಳಿದುಬರುತ್ತದೆ. ಅಂತರಂಗದಲ್ಲಿ ತೊಳತೊಳಗುವ ನಿರ್ಮಲ ಪರಂಜ್ಯೋತಿ ಪ್ರಾಣಲಿಂಗವನ್ನು ಅರಿಯದೆ ಬಹಿರಂಗದಲ್ಲಿ ತೊಳಲುವುದು ನಿಷ್ಪ್ರಯೋಜನ ತಿಳಿದು ನೋಡಲು ತಾನಲ್ಲದೆ ಮತ್ತೇನೂ ಇಲ್ಲ, ಆದಿ ಪ್ರಾಣಮಯಲಿಂಗ ತಾನೇ ಎಂದಿದ್ದಾರೆ.

''ಪೂರ್ವದ್ವಾರಮಂ ಬಂಧಿಸಿ ಅಧೋದ್ವಾರ ಬಲಿದು
ಊರ್ಧ್ವದ್ವಾರವ ತೆಗೆದು ಎವೆ ಹಳೆಚದ ಒಳಗೆ ನಿಮ್ಮ ನೋಡುತ್ತಿದ್ದೆನಯ್ಯಾ !
ಬಂದುದ ಹೋದುದನರಿಯದೆ ನಿಮ್ಮ ನೋಡುತ್ತಿದ್ದೆನಯ್ಯಾ!
ಮನ ನಿಂದುದು ನಿಮ್ಮಲ್ಲಿ, ಹೆರೆಹಿಂಗದ ಪರಮ ಸುಖ ದೊರಕೊಂಡಿತ್ತು.
ಇನ್ನಂಜೆನಂಜೆ ಜನನ ಮರಣವೆರಡೂ ಹೊರಗಾದವು
ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನಲ್ಲಿ ನಿಜಸುಖ ಸಮನಿಸಿತ್ತಾಗಿ, (ವ.ಸಂ. ೨೫೭)

ಹೀಗೆ ಪ್ರಾಣಲಿಂಗದ ಅರಿವು ಉಂಟಾಗಿ, ಶಿವಯೋಗದಲ್ಲಿ ನಿಂತಾಗ, ಮನಸ್ಸು ಆ ಪರಾತ್ಪರ ವಸ್ತುವಿನಲ್ಲಿ ನಿಂತಾಗ ಜನನ ಮರಣಗಳು ಇಲ್ಲವಾಗಿ, ಪರಮ ಸುಖವುಂಟಾಗುತ್ತೆಂದು ಯೋಗಾಭ್ಯಾಸದ ವಿವರವನ್ನು ಕೊಟ್ಟಿದ್ದಾರೆ. ಹೀಗೆ ಶಿವಯೋಗದಲ್ಲಿ ನಿಂತ ಶರಣರು,

ಕಾಣಬಾರದ ವಸ್ತುವ ಕಾಣಿಸಿ ಹಿಡಿದರು ಶರಣರು,
ಭೇದಿಸಬಾರದ ವಸ್ತುವ ಭೇದಿಸಿ ಕಂಡರು,
ಸಾಧಿಸಬಾರದ ವಸ್ತುವ ಸಾಧಿಸಿ ಕಂಡರು
ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ ನಿಮ್ಮ ಶರಣ. (ವ.ಸಂ. ೨೬೩)

ಮನದ ಸಂಕಲ್ಪ ವಿಕಲ್ಪವನ್ನು ಹೋಗಲಾಡಿಸಿ ಅದರ ಚಂಚಲತೆಯನ್ನು ಕಳೆದು ಏಕಾಗ್ರತೆಗೊಳಿಸಿ, ಅದನ್ನು ಪ್ರಾಣಲಿಂಗದಲ್ಲಿ ನೆಲೆ ನಿಲ್ಲಿಸಬಲ್ಲವನೆ, ನಿಜ ಸಾಧಕ, ಅವನೇ ರಾಜಯೋಗಿ. ಸಿದ್ಧರಾಮ ಶಿವಯೋಗಿ ಮತ್ತು ಅಲ್ಲಮಪ್ರಭು ಇವರ ನಡುವೆ ಯೋಗದ ಬಗೆಗೆ ಸಂಭಾಷಣೆ ನಡೆದಾಗ, 'ಮನ ಉಂಟೆ ಮರುಳೆ, ಶಿವಯೋಗಿಗೆ' ಎಂದು ಅಲ್ಲಮಪ್ರಭು ಪ್ರಶ್ನಿಸಿದ್ದಾರೆ. ಸಹಜ ಶಿವಯೋಗಿಗೆ ಸಂಕಲ್ಪ ವಿಕಲ್ಪವು ಇರುವುದಿಲ್ಲ. ಅದು ಭಾವ ನಿರ್ಭಾವವಾಗಿರುವ ಹಂತ. ಅಲ್ಲಿ ಆನಂದವೇ ಸರ್ವಸ್ವ. ಚಂಚಲತೆಗೆ ಅವಕಾಶವಿಲ್ಲ. ಕೇವಲ ನಿರ್ಮಲಜ್ಯೋತಿ ಎಂದಿದ್ದಾರೆ. ಹೀಗೆ ಮನದ ಪ್ರಾಮುಖ್ಯತೆಯನ್ನು ಸ್ವತಂತ್ರಸಿದ್ಧಲಿಂಗೇಶ್ವರರು ಒಂದು ಉತ್ತಮ ದೃಷ್ಟಾಂತದಿಂದ ವಿವರಿಸಿದ್ದಾರೆ :

''ಮರ ಮೊದಲಿಗೆ ಬೀಳಲು, ಕೊನೆ ಎಲೆ ಹೂವು ಕಾಯಿಗಳನಿರಿಸಿ ತಾ ಬೀಳದು ನೋಡಾ''! ಯೋಗಿಯ ಮನವಳಿಯಲು... ಮನದ ಜೊತೆಯಲ್ಲಿರುವ ಇಂದ್ರಿಯ ವಿಷಯಗಳು ಬೇರೆ ಉಳಿಯವು ಎಂದಿದ್ದಾರೆ.

ಷಟಸ್ಥಲದಲ್ಲಿ ಪ್ರಾಣಲಿಂಗಿಸ್ಥಲ ಬಹುಪ್ರಾಮುಖವಾದುದು, ಇದು ಅಂತರಂಗದಲ್ಲಿಯೇ ಸಾಧಿಸಿ ಕಂಡುಕೊಳ್ಳಬಹುದಾದ ಸ್ಥಲ. ಇದನ್ನು ಲಿಂಗಸ್ಥಲವೆಂದು ಕರೆದಿದ್ದಾರೆ. ಈ ಸ್ಥಲವನ್ನು ಸ್ವಾನುಭವದಿಂದ ಅರಿದ ಸಿದ್ಧಲಿಂಗೇಶ್ವರರು ತುಂಬಾ ವಿವರವಾಗಿ ತಮ್ಮ ಅನೇಕ ವಚನಗಳಲ್ಲಿ ವಿವರಿಸಿದ್ದಾರೆ.

ಒಳಹೊರಗೆ ತೊಳಗಿ ಬೆಳಗುವ ಚಿದಾಕಾರ ಪರಬ್ರಹ್ಮವೆ ಪ್ರಾಣಲಿಂಗ. ಒಳ ಹೊರಗು ಕೂಡಿದ ತ್ರಿಮಂಡಲದ ಬೆಡಗಿನ ತಾವರೆಯ ಒಳಗೆ ಥಳಥಳಿಸುವ ದಿವ್ಯಪೀಠದ (ಹೃದಯ) ಮೇಲೆ ಹೊಳೆವ ಪ್ರಾಣಲಿಂಗವನು ಸಾಧಕನು ಅರ್ಚಿಸುವ ರೀತಿ ನೂತನವಾಗಿದ್ದು ಅಸದೃಶವಾಗಿದೆ. ಹೊರಗಿನ ಲಿಂಗವನು ಪೂಜಿಸುವ ಕ್ರಮವನ್ನು ವಿವರಿಸದೆ, ಅಂತರಂಗದ ಪ್ರಾಣಲಿಂಗವನು ಅಂತರಂಗದ ಉಪಚಾರದಿಂದ ಅರ್ಚಿಸುವ ಕ್ರಮವನ್ನು ವಿವರಿಸಿದ್ದಾರೆ.

''ಅನುಭಾವವಿಲ್ಲದವನ ಭಕ್ತಿ, ಆಯುಧವಿಲ್ಲದ ವೀರನಂತೆ,
ಅನುಭಾವವಿಲ್ಲದವನ ಆಚಾರ, ಕಾಲಿಲ್ಲದ ಹೆಳವನಂತೆ,
ಅನುಭಾವವಿಲ್ಲದವನ ವಿಚಾರ ಕಣ್ಣಿಲ್ಲದ ಕುರುಡನಂತೆ...
ಅನುಭಾವವಿಲ್ಲದವನ ಯೋಗ ಬರಿಕೈಯಲ್ಲಿ
ಹುಡಿಯ ಹೊಯ್ದುಕೊಂಬ ಗಜಸ್ನಾನದಂತೆ.
ಭಕ್ತಿ ವಿರಕ್ತಿ ಮುಕ್ತಿಗೆ ಅನುಭಾವವೆ ಬೇಕು. ಅನುಭಾವವಿಲ್ಲದಾತಂಗೆ ಮುಕ್ತಿಯಿಲ್ಲ,
ಇದು ಸತ್ಯ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನ ಸಾಕ್ಷಿಯಾಗಿ''. (ವ.ಸಂ. ೧೭೯)

ಶರಣನಿಗೆ ಅನುಭಾವವೆ ಕಾಲು, ಕಣ್ಣು, ಮುಕ್ತಿಗೆ ಕಾರಣವೆಂದು ಹೇಳಿದ್ದಾರೆ.

''ಅನುಭಾವ ನೆಲೆಗೊಂಡಲ್ಲದೆ, ಅಂಗಲಿಂಗದ ಹೋಲಬನರಿಯಬಾರದು, ಅನುಭಾವ ನೆಲೆಗೊಂಡಲ್ಲದೆ, ಭಕ್ತಿ ವಿರಕ್ತಿ ನೆಲೆಗೊಳ್ಳದು, ಅನುಭಾವ ನೆಲೆಗೊಂಡಲ್ಲದೆ, ಜ್ಞಾನ ಸುಜ್ಞಾನದ ನೆಲೆಯ ಕಾಣಬಾರದು. ಅನುಭಾವ ನೆಲೆಗೊಂಡಲ್ಲದೆ, ತಾನು ಇದಿರೆಂಬುದ ತಿಳಿದು, ತಾನು ತಾನಾಗಬಾರದು, ಇದು ಕಾರಣ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ, ನಿಮ್ಮ ಅನುಭಾವದ ಅನುವಿನಲ್ಲಿಪ್ಪವರ ನೀವೆಂದು ಕಾಂಬೆನು' - (ವ.ಸಂ. ೨೪೩) ಎಂದು ಅನುಭಾವದ ಮಹತ್ವವನ್ನು ಸಾರಿದ್ದಾರೆ ಮತ್ತು ಒಳಗೆ

ತೊಳಗಿ ಬೆಳಗಿ ತೋರುವ ಚಿದಾಕಾರ ಪರಬ್ರಹ್ಮ ಪ್ರಾಣಲಿಂಗವನವರೆತ್ತ ಬಲ್ಲರು! (ಅನುಭಾವವಿಲ್ಲದವರು) ಮಹಾನುಭಾವದಿಂದ ತಿಳಿದು ನೋಡಲು ತನ್ನಲ್ಲಿಯೇ ತೋರುತ್ತದೆ - ಎಂದಿದ್ದಾರೆ.

ಪ್ರಾಣಲಿಂಗದ ನಿಜವನರಿದವನಿಗೆ ಮರಳಿ ಭವವಿಲ್ಲ. ತಿರುಳು ಕರಗಿದ ಬೀಜ ಮರಳಿ ಹುಟ್ಟದಂತೆ, ಆತ ಮತ್ತೆ ಭವಕ್ಕೆ ಬರುವುದಿಲ್ಲ. ಪ್ರಾಣಲಿಂಗಿಯ ಇರವು ಬೆಂದ ಪಟದಂತೆ, ಬಯಲ ಚಿತ್ರದಂತೆ. ಆದುದರಿಂದ ಆತನು ವಿಧಿ ನಿಷೇಧ ಪುಣ್ಯಗಳಿಗತೀತನು ಎಂದಿದ್ದಾರೆ.

ಹಿರಿಯರು ಯಾರು ಎಂಬ ಬಗೆಗೆ ತಮ್ಮದೇ ಆದ ವ್ಯಾಖ್ಯಾನವನ್ನು ಕೊಟ್ಟಿರುತ್ತಾರೆ. ಕಾಮ ಲೋಭ ಮೋಹ ಮದ ಮತ್ಸರಕ್ಕೊಳಗಾದವರು ಹಿರಿಯರೇ! ಅಲ್ಲ. ಕುಟಿಲ ಕುಹಕ ಪಿಸುಣತನಕ್ಕೆ ಬಲಿಯಾದವರು ಹಿರಿಯರೆ! ಅಲ್ಲ. ಕುಟಿಲ ಕುಹಕ ಪಿಸುಣತನಕ್ಕೆ ಬಲಿಯಾದವರು ಹಿರಿಯರೆ! ಅಲ್ಲ. ಸಾವಿರ ಕಾಲ ಬದುಕಿದರೇನು, ಹಾವು ತನ್ನ ವಿಷವನ್ನು ಬಿಡುವುದೇ! ಇಲ್ಲ. ಹಾವು ಮೆಕ್ಕೆಯ ಕಾಯಿ ಹಣ್ಣಾದರೇನು ಮಧುರವಪ್ಪುದೇ! ಇಲ್ಲ, ಕಾರಣ ಅರಿಷಡ್ವರ್ಗಗಳ ಬವಣೆಗೆ ಒಳಗಾದವನು ಅದು ಹೇಗೆ ಹಿರಿಯನಾದಾನು! ಇವುಗಳನ್ನು ಜಯಿಸಿ, ಸಮತೆ, ಸಮಾಧಾನ ತುಂಬಿತುಳುಕಿ, ಸುಜ್ಞಾನಭರಿತನಾದವನೆ ಹಿರಿಯನು ಎಂದಿದ್ದಾರೆ. ಈ ಸಂದರ್ಭದಲ್ಲಿ ಪ್ರಭುದೇವರ ಒಂದು ವಚನವನ್ನು ನೆನಪು ಮಾಡಿಕೊಳ್ಳಬಹುದು :

''ಕಾಮವ ಸುಟ್ಟು ಹೋಮವನುರುಹಿ, ತ್ರಿಪುರ ಸಂಹಾರದ
ಕೀಲರಿಯ ಬಲ್ಲೊಡೆ, ಯೋಗಿಯಾದೊಡೇನು! ಭೋಗಿ
ಯಾದೊಡೇನು! ಶೈವನಾದೊಡೇನು! ಸನ್ಯಾಸಿಯಾದೊಡೇನು!
ಅಶನವ ತೊರೆದಾತ, ವ್ಯಸನವ ಮರದಾತ, ಗುಹೇಶ್ವರ
ಲಿಂಗದಲ್ಲಿ ಅವರ ಹಿರಿಯರೆಂಬೆನು! (ವ.ಸಂ. ೩೩೪ ಟೀಕಿನ ವಚನಗಳು)

ಶ್ರೀಗುರುವಿನ ಪ್ರಸಾದವನ್ನು ಸವಿದು ಸಮರಸ ಸಂಬಂಧವಾದ ಬಳಿಕ, ಇಬ್ಬರಲ್ಲಿ ಯಾವ ಭೇದವೂ ಉಳಿಯುವುದಿಲ್ಲ. ಸಾಕ್ಷಾತ್ ಶಿವ ತಾನಾಗುತ್ತಾನೆ. ಲಿಂಗಾಂಗ ಒಂದಾಗುತ್ತದೆ. ತನ್ನ ನಿಜವನ್ನು ಅರಿದವ ಶರಣನು ತಾನೇ ಲಿಂಗವಲ್ಲದೆ ಬೇರೆ ಅಂಗವಿಲ್ಲ. ತಾನೆ ಪರಬ್ರಹ್ಮ ಸ್ವರೂಪ ಹೊರತು ಬೇರಿಲ್ಲ. ಕಾಷ್ಟದಲ್ಲಿ ಅಗ್ನಿ ಹುಟ್ಟಿ ಭಾವ ನಿರ್ಭಾವವಾಗುತ್ತದೆ. ಆಗ ನಿರ್ಮಾನಸ ಸ್ಥಿತಿ, ಸಹಜ ಸ್ಥಿತಿ ಏರ್ಪಡುತ್ತದೆ. ಶಿವಶರಣನು ಸ್ವಾನುಭಾವದಿಂದ ತನ್ನ ಸಹಜಸ್ಥಿತಿಯನ್ನು ಅರಿಯುತ್ತಾನೆ. ಆ ಸ್ಥಿತಿಯಲ್ಲಿ 'ಅರಿವೆ ಗುರು' ಎಂಬ ಮಾತು ಬರುತ್ತದೆ. ಈ ಭಾವನೆ ವೀರಶೈವ ಧರ್ಮದ ಒಂದು ವಿಶಿಷ್ಟ ಲಕ್ಷಣ. ಸ್ವಾನುಭಾವಕ್ಕೆ ಈ ಧರ್ಮ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಟ್ಟಿದೆ. ಕಾರಣ ಹೊರಗಿನ ಯಾವ ಮೂರ್ತಿಗಳನ್ನಾಗಲಿ, ಆಡಂಬರದಿಂದ ಪೂಜಿಸಿ ಆರಾಧಿಸುವ ಇಂದಿನ ಕ್ರಮವನ್ನು ತೋರಿಕೆಯ ಭಕ್ತಿಯೆಂದು ಈ ಧರ್ಮ ನಿರಾಕರಿಸಿದೆ. ಅಂತರಂಗದ ಜ್ಞಾನ ಭಕ್ತಿ ಪೂಜೆ ಆರಾಧನೆಗೆ ಒತ್ತುಕೊಟ್ಟಿದೆ. ಸೂರ್ಯನು ನೀರು ತುಂಬಿದ ಅನೇಕ ಘಟಗಳಲ್ಲಿ ಪ್ರತಿಬಿಂಬಿಸುವಂತೆ ಸರ್ವಾಂತರ್ಯಾಮಿಯಾಗಿ ಶರಣನು ಕಾಣಿಸಿಕೊಳ್ಳುತ್ತಾನೆ ಎಂದಿದ್ದಾರೆ ಸ್ವತಂತ್ರ ಸಿದ್ಧಲಿಂಗೇಶ್ವರರು.

ಶರಣನು ಅಂತರಂಗ ಬಹಿರಂಗವಿಲ್ಲದ ಆನಂದ ಸ್ವರೂಪಿ ದಶದಿಗ್ಭರಿತನಾಗಿ ಬೆಳಗುತ್ತಿಹನು. ಅವನು ಸಾಕ್ಷಾತ್ ಪರಶಿವ ತಾನೆ. ಹೀಗೆ ಶಿವನೊಳಗೆ ತಾನು ತನ್ನೊಳಗೆ ಶಿವನು ಅಡಗಿ ಸಮರಸವಾದುದೇ ಪರಮ ನಿರ್ವಾಣ, ಐಕ್ಯ=ಸ್ಥಿತಿ ಎಂದಿದ್ದಾರೆ. ಅರಿವು ಮರವು ಅದೊಂದಿಲ್ಲದ ತೆರೆಯಡಗಿದ ಅಂಬುಧಿಯಂತೆ ಐಕ್ಯಸ್ಥಿತಿ. ಬಯಲಿಂದ ಹುಟ್ಟದ ಶಿಶು ತಾನೆಂದರಿದು, ಬಯಲಲ್ಲಿ ಒಂದಾಗಿ ಸೇರಿ, ಬಯಲೊಳಗೆ ಬಯಲು ತಾನಾಗಿತ್ತು, ಲಿಂಗವೆತಾನಾಗಿ, ತಾನೇ ಲಿಂಗವಾಗಿ, ಲಿಂಗಲೀಯವಾದ ಲಿಂಗೈಕ್ಯ ಶರಣ, ಆಗ

ನಾನು ನಾನೆಂಬ ಅಹಂಭಾವವಳಿದು
ಜ್ಞಾನಾನಂದಮಯ ತಾನು ಶರಣ

ಚಂದ್ರ ಚಂದ್ರಿಕೆಯಂತೆ, ಅಗ್ನಿ ಉಷ್ಣದಂತೆ, ರತ್ನ ಕಾಂತಿಯಂತೆ,
ಚಿನ್ನ ಬಣ್ಣದಂತೆ, ಬ್ರಹ್ಮವೇತಾನಾದವನು ಶರಣ,
ನೀರು ನೀರು ಕೂಡಿದಂತೆ, ಕ್ಷೀರ ಕ್ಷೀರ ಕೂಡಿದಂತೆ,
ಅಗ್ನಿ ಅಗ್ನಿಯ ಕೂಡಿದಂತೆ ತನ್ನೊಳಗೆ ಶಿವನು,
ಶಿವನೊಳಗೆ ತಾನು, ಅಡಗಿ ಏಕವಾದವನು ಶರಣ.

ಪಿಂಡಸ್ಥಲದಿಂದ ಜೀವನು ತನ್ನ ಸ್ಥಿತಿಯನ್ನು ಅರಿತು, ಸಂಸಾರದ ಮಾಯಾ ಮೋಹಗಳನ್ನು ಜಯಿಸಿ, ಸಂಸಾರವನ್ನು ಜಯಿಸಿ, ಗುರುಕರುಣೆಯಿಂದ ಭಕ್ತಾದಿ ಐಕ್ಯಾಂತವಾದ ಷಟಸ್ಥಲ ಮಾರ್ಗದಲ್ಲಿ ನಡೆದು ನುಡಿದು ತನ್ನ ಜೀವನವನ್ನು ಸಾಗಿಸಿ ಐಕ್ಯವನ್ನು ಹೊಂದುತ್ತಾನೆ; ಮುಕ್ತಿಯನ್ನು ಪಡೆಯುತ್ತಾನೆ. ಹಾಗೆಯೇ ಸ್ವತಂತ್ರ ಸಿದ್ಧಲಿಂಗೇಶ್ವರರು ಸ್ವಾನುಭಾವದಿಂದ ಲಿಂಗಾಂಗ ಸಾಮರಸ್ಯವನ್ನು ಸಾಧಿಸಿ, ನಿಜದ ನಿಲವನರಿದು ನೀರು ನೀರು ಸೇರಿದಂತೆ ಆ ಪರಾತ್ಪರ ವಸ್ತುವಿನಲ್ಲಿ ಐಕ್ಯವಾಗಿದ್ದಾರೆ ಎನ್ನಬಹುದು.

ಹೀಗೆ ತಮ್ಮ ವಚನಗಳ ಉದ್ದಕ್ಕೂ ಸರಳವಾದ, ಜನಜನಿತವಾದ ಉಪಮಾನ, ಸಾದೃಶ್ಯ, ದೃಷ್ಟಾಂತಗಳಿಂದ ತಮ್ಮ ಅನುಭಾವದ ಸವಿಯನ್ನು ಸರಳ ಸುಂದರ ಭಾಷೆಯಲ್ಲಿ ಜನ ಸಾಮಾನ್ಯರಿಗೂ ಅರ್ಥವಾಗುವಂತೆ ವಿವರಿಸಿದ್ದಾರೆ. ಜೈನ ದಾರ್ಶನಿಕರಿಗೆ ಚಿರಪರಿಚಯವೂ ಪದೇ ಪದೇ ಉಪಯೋಗವಾಗುತ್ತಾ ಬಂದಿರುವ 'ಅಭ್ರಛಾಯೆ' 'ತಟಿದಂಕುರ' ಎಂಬ ಉಪಮಾನಗಳನ್ನು ಸಂಸಾರದ ಅಸಾರತೆಯನ್ನು, ಅಶಾಶ್ವತತೆಯನ್ನು, ಕ್ಷಣಿಕತೆಯನ್ನು ವಿವರಿಸಲು ಸ್ವತಂತ್ರ ಸಿದ್ಧಲಿಂಗೇಶ್ವರರು ಉಪಯೋಗಿಸಿದ್ದಾರೆ.

''ಅಭ್ರಛಾಯದಂತೆ ನಿಮುಷದಲ್ಲಿ ತೋರಿಯಡಗಲುಳ್ಳ ಈ ಸಂಸಾರ'', ''ತಟಿದಂಕುರದಂತೆ ಕ್ಷಣದಲ್ಲಿ ತೋರಿಯಡಗುವ ಸಂಸಾರ'' ಎಂದಿದ್ದಾರೆ.

''ಆಸೆ ಎಂಬುವ ವೇಶಿ'' - ''ಪುಣ್ಯವ ಬೆನ್ನಲ್ಲಿ ಕಟ್ಟಿ ರಾಟಳದಂತೆ'' - ''ತನುವ ತೊಡುತ್ತ, ಬಿಡುತ್ತ, ತಿರುಗುತ್ತಿಹರಲ್ಲ'' ಎಂದು ಪಾಪಿಗಳನ್ನು ಕರ್ಮಿಗಳನ್ನು ವಿಡಂಬಿಸಿದ್ದಾರೆ. ಅಂತಹವರು ಜನ್ಮ ಜನ್ಮಾಂತರಗಳಲ್ಲಿ ಹುಟ್ಟುತ್ತಾ ಸಾಯುತ್ತಿರುವ ಚಿತ್ರವನ್ನು ರಾಟಳಕ್ಕೆ ಹೋಲಿಸಿದ್ದಾರೆ. ಕರಣ ದೇಹದ ಮೋಹ ತರವಲ್ಲ ಎಂದಿದ್ದಾರೆ. 'ಮರಹೆಂಬ ಕತ್ತಲೆ' ಮಾಯೆಗೊಳಗಾದವರು 'ಹುಲ್ಲಿಂದ ಕಡೆ' ಎಂದು ವಿವರಿಸಿದ್ದಾರೆ. 'ಪಂಚೇಂದ್ರಿಯವೆಂಬ ಹೆಡೆಯನುಳ್ಳ ಸಂಸಾರಸರ್ಪ' 'ಸಂಸಾರವೆಂಬ ಘೋರಾರಣ್ಯ' ಎಂದು ಸಂಸಾರದ ಬಗೆಗೆ ವ್ಯಾಖ್ಯಾನ ನೀಡಿ ಎಚ್ಚರಿಸಿದ್ದಾರೆ.

''ಹೊನ್ನು, ಹೆಣ್ಣು, ಮಣ್ಣು ಎಂಬ ಸೊಕ್ಕು'' ಎಂದು ಬಹು ಸಮರ್ಪಕವಾಗಿ ವಿವರಿಸಿದ್ದಾರೆ.

ತಮ್ಮ ಸಮಕಾಲೀನರಾದ ಯಡೆಯೂರು ಸಿದ್ಧಲಿಂಗ ಶಿವಯೋಗಿಗಳ ವಚನಗಳಿಗಿಂತಲೂ ಉತ್ತಮವಾದ ಅನೇಕ ವಚನಗಳನ್ನು ರಚಿಸಿ ಅವುಗಳ ಮೂಲಕ ಸಮಾಜವನ್ನು, ಜನಸಾಮಾನ್ಯರನ್ನು ತಿದ್ದುವ, ಓರೆಕೋರೆಗಳನ್ನು ಸರಿಪಡಿಸುವ ಸಾಮಾಜಿಕ ಕಳಕಳಿಯಿಂದ ಕೂಡಿದ, ಒಬ್ಬ ಶಿವಯೋಗಿಗಳಾಗಿ ಸ್ವತಂತ್ರ ಸಿದ್ಧಲಿಂಗೇಶ್ವರರು ನಮ್ಮ ಮುಂದೆ ದುತ್ತೆಂದು ಬಂದು ನಿಲ್ಲುತ್ತಾರೆ. ಅವರ ವಚನಗಳನ್ನು ಅಭ್ಯಾಸ ಮಾಡಿದ ಯಾವ ಸಹೃದಯ ಮಹನೀಯನಿಗೂ ಈ ಅನುಭವ ಬಾರದೆ ಇರದು ಎಂಬುದು ನನ್ನ ಸವಿನಯ ಅನಿಸಿಕೆ.

ಲೇಪಾಕ್ಷಿಯ ಭಿತ್ತಿಚಿತ್ರಗಳು

ಶ್ರೀ ಕೃಷ್ಣಾನಂದ ಕಾಮತ್

ಆಂಧ್ರದವರು ಉತ್ಪಾದಿಸಿದ ಕರಕುಶಲ ಸಾಮಗ್ರಿಗಳನ್ನು ಮಾರಾಟ ಮಾಡುವ ಮಳಿಗೆ ಎಲ್ಲಿ ಇದ್ದರೂ ಅದಕ್ಕೆ 'ಲೇಪಾಕ್ಷಿ' ಎಂಬ ಹೆಸರಿರುತ್ತದೆ. ನಮ್ಮ ಸಂಸ್ಕೃತಿಯಲ್ಲಿ ಲೇಪಾಕ್ಷಿಗೆ ಅಂಥ ವಿಶೇಷ ಸ್ಥಾನವೇನೂ ಇಲ್ಲ. ಹೆಚ್ಚೆಂದರೆ ರಾಜಧಾನಿಯಲ್ಲಿ 'ಲೇಪಾಕ್ಷಿ' ಹೆಸರಿನ ಬಾರ್‌ಗಳನ್ನು ಅಲ್ಲಲ್ಲಿ ನೀವು ನೋಡಬಹುದು, ಕನ್ನಡಿಗರು ಅಭಿಮಾನದಿಂದ ಎದೆಯುಬ್ಬಿಸಬೇಕಾದ ಅತ್ಯುನ್ನತ ಮಟ್ಟದ ಶಿಲ್ಪ ಹಾಗೂ ಭಿತ್ತಿಚಿತ್ರಗಳ ಆಗರವೇ ಲೇಪಾಕ್ಷಿಯಾಗಿದೆ ಎಂಬುದು ನಮಗೆ ಮರೆತೇ ಹೋಗಿದೆ.

ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ 'ಲೇಪಾಕ್ಷಿ ನಗರ'ವೆಂದು ವೈಭವದಿಂದ ಮೆರೆದ ಪಟ್ಟಣ ಇಂದು ಅಜ್ಞಾತವಾದ ಕಿರಿಯ ಗ್ರಾಮ. ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಯ ಹಿಂದುಪುರದ ಪೂರ್ವಕ್ಕೆ. ಇಪ್ಪತ್ತು ಕಿಲೋಮೀಟರ್ ದೂರದಲ್ಲಿದೆ. ಅಲ್ಲಿರುವ ಶಿವಾಲಯದಿಂದಾಗಿ ಈ ಸ್ಥಳವನ್ನು 'ಪಾಪನಾಶೇಶ್ವರ' ಕ್ಷೇತ್ರವೆಂದು ಕರೆಯಲಾಗುತ್ತಿತ್ತು. ಅಲ್ಲಿಯ ವೀರಭದ್ರಸ್ವಾಮಿ ದೇವಾಲಯವನ್ನು ಆಮೆಯನ್ನು ನೆನಪಿಗೆ ತರುವ ಕೂರ್ಮ ಶಿಲೆಯನ್ನು ನೆಲೆಗಟ್ಟಾಗಿಸಿ ಕಟ್ಟಲಾಗಿದೆ. ಭವ್ಯವಾದ ಈ ದೇವಾಲಯದಲ್ಲಿ ಮುಖಮಂಟಪ. ನಾಟ್ಯಮಂಟಪ, ಕಲಾ ಮಂಟಪ, ಗರ್ಭಗುಡಿಗಳನ್ನು ಸುಲಭವಾಗಿ ಗುರುತಿಸಬಹುದು. ಅಲ್ಲದೆ ಇನ್ನುಳಿದ ಶ್ರೀರಾಮ, ದುರ್ಗಾದೇವಿಯರ ಕಿರಿಯ ದೇವಾಲಯಗಳನ್ನೂ ವಿಸ್ತೃತವಾದ ಸಭಾ ಮಂಟಪದಿಂದ ಜೋಡಿಸಲಾಗಿದೆ. ಈ ಎಲ್ಲ ದೇವರಿಗೆ ಪೋಲಿಗಳಿಂದ, ಕಳ್ಳಕಾಕರಿಂದ ಸಂರಕ್ಷಣೆ ನೀಡಲು ಹೊರಗೋಡೆ ನಿಲ್ಲಿಸಿ, ದಕ್ಷಿಣದಿಕ್ಕಿನಲ್ಲಿರುವ ಹೆಬ್ಬಾಗಿಲಿಗೆ ಮಂಟಪ ನಿರ್ಮಿಸಿ ಅಲಂಕರಿಸಲಾಗಿದೆ.

ಈ ದೇವಾಲಯದ ಒಳಹೊರಗೆ ವಿಜಯನಗರ ಕಾಲದ ಕನ್ನಡ ಶಾಸನಗಳಿವೆ. ಅವುಗಳನ್ನು ಅಭ್ಯಸಿಸಿದಾಗ, ಈ ಕಲಾ ಸಿರಿಯ ನಿರ್ಮಿತಿಯ ಹಿನ್ನೆಲೆಯನ್ನು ಅರಿಯಲು ಸಹಾಯವಾಗುತ್ತದೆ. ಲೇಪಾಕ್ಷಿಯ ಲಕುಶೆಟ್ಟಿ ಮತ್ತು ಮುದ್ದಮ್ಮ ಅವರ ಮೂವರು ಪುತ್ರರಲ್ಲಿ ಹಿರಿಯವನಾದ ವಿರುಪಣ್ಣನು ಆಗಿನ ವಿಜಯನಗರದ ಆಳರಸು. ಅಚ್ಚುತ ದೇವರಾಯನ (ಕ್ರಿ.ಶ.೧೫೩೦-೪೨) ಕಾಲದಲ್ಲಿ ಪ್ರತೀಹಾರಿಯಾಗಿ ಕೆಲಸಕ್ಕೆ ಸೇರಿ ತನ್ನ ಕಾರ್ಯಕ್ಷಮತೆ ಹಾಗೂ ಸ್ವಾಮಿನಿಷ್ಠೆಯಿಂದ ಪೆನುಗೊಂಡೆ ಮತ್ತು ಚಂದ್ರಗಿರಿ ಪ್ರಾಂತಗಳ ಆಡಳಿತಾಧಿಕಾರಿಯ ಹುದ್ದೆಗೇರಿದ. ಇದರಿಂದಾಗಿ ಆತನಿಗೆ ಈ ಭವ್ಯ ದೇವಾಲಯ ನಿರ್ಮಾಣಕ್ಕೆ ಭಕ್ತರಿಂದ, ಪ್ರಜೆಗಳಿಂದ ಧನ ಸಹಾಯ ಪಡೆಯುವುದು ಸುಲಭವಾಯಿತು. ಈತನು ತನ್ನ ಸೋದರ ವೀರಣ್ಣನಾಯಕನ ನೆರವಿನಿಂದ ಕ್ರಿ.ಶ. ೧೫೩೫ರಲ್ಲಿ ಈ ದೇವಾಲಯವನ್ನು ವಿಸ್ತರಿಸಿ ಕಟ್ಟಿಸಿದನೆಂದು ಶಾಸನವೊಂದು ಸಾರುತ್ತದೆ. ಇಷ್ಟಲ್ಲದೆ ಕಾಲಕಾಲಕ್ಕೆ ಪೂಜೆ, ನೈವೇದ್ಯಗಳಿಗೆ ಉಂಬಳಿ ಕೊಡಮಾಡಿ ಶಾಸನ ಮಾಡಿಸಿದೆ.

ಕೊನೆಯುಸಿರಿನ ಚಿತ್ರಗಳು

ಅಂದಿನ ಪ್ರಚಲಿತ ಪದ್ಧತಿಯಂತೆ. ಈ ದೇವಾಲಯಗಳ ಮುಚ್ಚಣಿಕೆಗೆ ಚಪ್ಪಡಿ ಕಲ್ಲುಗಳನ್ನು ಹಾಸಿ, ಗಾರೆಯನ್ನು ಬಳಿದು ಒಳ ಮೈಯನ್ನು ಭಿತ್ತಿಚಿತ್ರಗಳಿಗಾಗಿ ಬಳಸಲಾಗಿದೆ. ಕಾಲಾಂತರದಲ್ಲಿ ಜೋಡಣೆಗೆ ಬಳಸಿದ ಗಾರೆಯ ಕವಚ ಬಿದ್ದು ಹೋಗಿ. ಮಳೆ ನೀರು ಒಳಸೇರಿ. ಅಪೂರ್ವವಾದ ಚಿತ್ರಗಳನ್ನು ಆಹುತಿ ತೆಗೆದುಕೊಂಡಿದೆ. ಕಗ್ಗತ್ತಲು ಇರುವಲ್ಲಿ ಬಾವಲಿಗಳು ರಾಜ್ಯವಾಳಿ ಇನ್ನಷ್ಟು ಹಾಳುಗೆಡವಲು ನೆರವಾಗಿವೆ ಆದ್ದರಿಂದ ಈ ಚಿತ್ರಗಳು ರಚಿತವಾದಾಗಿನ ಕಾಲದ ಅವುಗಳ ಸೌಂದರ್ಯವನ್ನು ಕಲ್ಪಿಸಿಕೊಳ್ಳಲಾರದಷ್ಟು ಶೋಚನೀಯ ಸ್ಥಿತಿಯಲ್ಲಿವೆ. ಪುಣ್ಯವಶಾತ್, ವೀರಭದ್ರ ಮತ್ತು ಶಿವಾಲಯಗಳ ಮಾಡಿನಲ್ಲಿ ಅಲ್ಲೊಂದು ಇಲ್ಲೊಂದು ಚಿತ್ರಗಳು ಇನ್ನೂ ಉಸಿರು ಹಿಡಿದುಕೊಂಡು ಬದುಕಿವೆ. ಹಿಂದಿನ ಕನ್ನಡಿಗರ ಭಿತ್ತಿಚಿತ್ರಗಳ ಸಾಧನೆಯನ್ನು ಮನದಣಿಯ ಸವಿಯಬೇಕು ಎನ್ನುವವರು ದೂರ ದರ್ಶಕ ಹಾಗೂ ಕ್ಯಾಮರಾಗಳೊಂದಿಗೆ ಲೇಪಾಕ್ಷಿಯ ಪಾಪನಾಶೇಶ್ವರದ ನಾಟ್ಯ ಮಂಡಪ ಮತ್ತು ಆರಾಧನಾ ಮಂಡಪಗಳ ಸೂರಿನ ಮುಚ್ಚಿಗೆಯನ್ನು ವೀಕ್ಷಿಸಬೇಕು.

ಈ ಚಿತ್ರಕಾರರ ತಂಡ ಮೂಲತಃ ಎಲ್ಲಿಯವರು? ಎಲ್ಲಿಂದ ಇಲ್ಲಿಗೆ ಬಂದರು? ಯಾವ ಗುಂಪಿಗೆ ಸೇರಿದವರು? ಎಂಬುದಕ್ಕೆ ಯಾವ ದಾಖಲೆಗಳೂ ಲಭ್ಯವಿಲ್ಲ. ಇವರು ಇನ್ನೂ ಹಲವಾರು ದೇವಾಲಯ. ಅರಮನೆ, ಪ್ರತಿಷ್ಠಿತರ ಧಾಮಗಳನ್ನು ತಮ್ಮ ಭಿತ್ತಿಚಿತ್ರಗಳಿಂದ ಅಲಂಕರಿಸಿರಬಹುದು. ಆದರೆ ಆವಾವವೂ ಈವರೆಗೆ ಜೀವಹಿಡಿದು ಬಾಳಲೇ ಇಲ್ಲ. ಬಹುಶಃ ಪೆನುಗೊಂಡೆ, ಚಂದ್ರಗಿರಿ ಮುಂತಾದ ಪ್ರಾಂತಗಳಿಂದ ಚಿತ್ರಕಾರರು ಬಂದಿರಬಹುದು ಎಂದು ಅನಿಸುತ್ತದೆ. ದೇವಾಲಯ ಕಟ್ಟುತ್ತಿರುವಂತೆಯೇ ಈ ಚಿತ್ರಗಳ ನಿರ್ಮಾಣವಾಗಿದ್ದರಿಂದ, ಹಸಿಗಾರೆಯ ಮೇಲೆ, ಲೇಪ ಬಳಿದು ಈ ಚಿತ್ರಗಳನ್ನು ಬರೆದಿರುವದು ಸ್ಪಷ್ಟ. ಸ್ಥಳೀಯವಾಗಿ ಸಿಗುವ ಕಲ್ಲು, ಹರಳು, ಸಸ್ಯಗಳಿಂದಲೇ ತಮಗೆ ಬೇಕಾದ ಬಣ್ಣಗಳನ್ನು ತಾವೇ ಸಿದ್ಧಪಡಿಸಿ, ಇಣಚಿ ಕೂದಲಿನ ಬ್ರಶ್‌ಗಳನ್ನು ಬಳಸಿರಲು ಸಾಕು. ಕೆಂಪು, ಹಸಿರು, ನೀಲಿ, ಹಳದಿ, ಕಪ್ಪು ಬಣ್ಣಗಳನ್ನು ಹೆಚ್ಚಾಗಿ ಬಳಸಿದ್ದಾರೆ. ಆದರೆ ದುರ್ದೈವ ವಶಾತ್ ಕಾಲಾಂತರದಲ್ಲಿ ಹಸಿರು, ಹಳದಿ, ನೀಲಿ ಬಣ್ಣಗಳು ಮಾಯ ಆಗಿದ್ದರಿಂದ ಇಂದು ಕೆಂಪು, ಕಪ್ಪು ವರ್ಣಗಳೇ ಪ್ರಾಧಾನ್ಯ ಕೊಟ್ಟಂತೆ ಅನಿಸುತ್ತದೆ. ಅಂದು ಎಲ್ಲ ಬಣ್ಣಗಳನ್ನು ಅತ್ಯಂತ ಸಮತೋಲ ಪ್ರಮಾಣದಲ್ಲಿ ಬಳಸಿದಾಗ ಈ ಚಿತ್ರಗಳು ಹೇಗೆ ಕಾಣುತ್ತಿದ್ದಿರಬಹುದು!

ರೇಖೆಗಳು ಮತ್ತೆ ಗೋಚರ

ಸಂಕಲ್ಪಿಸಿಕೊಂಡ ಚಿತ್ರವನ್ನು ಮೊದಲಿಗೆ ಕರಿಯ ಬಣ್ಣದಿಂದ ರೇಖಾಚಿತ್ರದಲ್ಲಿ ಬರೆದುಕೊಳ್ಳುತ್ತಿದ್ದರು. ಚಿತ್ರ ಬಿಡಿಸಲು ಹೊಸ ಹೊಸ ವಿಚಾರಗಳು ಹೊಳೆದರೆ, ವರ್ಣಸಂಯೋಜನೆಯ ಸಂಪೂರ್ಣ ಸ್ವಾತಂತ್ರ್ಯ. ಚಿತ್ರಗಾರನಿಗಿರುತ್ತಿತ್ತು. ನಂತರ ಬಳಸಿದ ರಬ್ಬಾದ ಬಣ್ಣಗಳಿಂದ ರೇಖಾಚಿತ್ರವು ಮುಚ್ಚಿ ಹೋಗುತ್ತಿದ್ದುದರಿಂದ ಅದು ವೀಕ್ಷಕರಿಗೆ ಗೋಚರಿಸುವ ಸಾಧ್ಯತೆ ಇರಲಿಲ್ಲ. ಆದರೆ ಇಂದು ಹೆಚ್ಚಿನ ವರ್ಣಗಳು ಹಾರಿ ಹೋಗಿವೆ. ಹೀಗಾಗಿ ಅನೇಕ ಚಿತ್ರಗಳಲ್ಲಿ ಮೂಲಚಿತ್ರಗಳ ರೇಖಾ -

ವಿನ್ಯಾಸ ಹೇಗಿರುತ್ತಿತ್ತೆಂಬ ಕಲ್ಪನೆ ಬರುವಂತಿದೆ. ಅರ್ಧ ಮಂಟಪದಲ್ಲಿ ಇಂಥ ಒಂದು ಅಪೂರ್ವ ಚಿತ್ರ ಇದೆ. ಇದರಲ್ಲಿ ಉಮೆಯನ್ನು ವರಿಸುವ ಪೂರ್ವದ. ಯೌವನಭರಿತ ಮಹೇಶ್ವರನು ಚಿತ್ರಿತನಾಗಿದ್ದಾನೆ. ಇಲ್ಲಿ ಪ್ರಕಟವಾದ ರೇಖೆಗಳಿಂದ ಅಂದಿನ ಶ್ರಮಿಕ ಕಲಾಕಾರರ ಕುಂಚ ಹಿಡಿದ ಕೈ. ಅದೆಷ್ಟು ಲೀಲಾಜಾಲವಾಗಿ ಭಿತ್ತಿ ತುಂಬ ನಿರ್ದಿಷ್ಟ ಕಲಾಕೃತಿಗಳನ್ನು ನಿರ್ಮಿಸಿರಬಹುದೆಂಬ ಕಲ್ಪನೆ ಮೂಡುತ್ತದೆ. ಸರಳ, ವಕ್ರ, ವರ್ತುಳಾಕೃತಿಗಳು ಎಲ್ಲಿಯೂ ಅಡ್ಡಿ - ಆತಂಕಗಳಿಲ್ಲದೆ ಹರಿದಿವೆ. ವರ್ಣಗಳ ಆಯ್ಕೆ ಹಾಗೂ ಚಿತ್ರ ಸಂಯೋಜನೆಗಳಲ್ಲಿ ಕಲಾಕಾರರ ಉತ್ತಮ ಅಭಿರುಚಿ ವ್ಯಕ್ತವಾಗಿದೆ.

ಮಾನವ, ಮತ್ತಿತ್ತರ ಜೀವಿಗಳ ಅಂಗಾಂಗಗಳ ರಚನೆಯನ್ನು ಆಳವಾಗಿ ಅಭ್ಯಸಿಸಿದವರು ಮಾತ್ರ ಅವುಗಳನ್ನು ಇಷ್ಟೊಂದು ನೈಜವಾಗಿ ಚಿತ್ರಿಸಲು ಸಾಧ್ಯ. ಸ್ತ್ರೀ - ಪುರುಷ ಶರೀರಗಳನ್ನು ಸರಳವಾಗಿ ಚಿತ್ರಿಸಿದರೂ ಪಾದಗಳನ್ನು ಮುಂದೆ ವಾಲಿದಂತೆ ಬಿಡಿಸಲಾಗಿದೆ. ಹೀಗೆ ಮಾಡಿದ್ದು ಸ್ಥಿತ ವ್ಯಕ್ತಿಗಳಿಗೂ ಚಾಲನೆ ಇದ್ದಂತೆ ತೋರಿ ಜೀವಕಳೆ ತುಂಬುವ ಉದ್ದೇಶಕ್ಕಿರಬೇಕು. ಕಲಾವಿದರು, ಚಿತ್ರಕಲೆಯ ಸೂತ್ರಗಳನ್ನು ಚಾಚೂತಪ್ಪದೇ ಬಳಸಿದ್ದರಿಂದ ಜನಸಾಮಾನ್ಯರಿಗೆ ಚಿತ್ರಗಳಲ್ಲಿ ವಾಸ್ತವಿಕತೆಯ ಕೊರತೆ ಅನಿಸಿದರೆ ಆಶ್ಚರ್ಯ ಇಲ್ಲ. ದೇವ - ದೇವತೆಗಳನ್ನು ವಿರಾಟ್ ಆಕಾರದಲ್ಲಿ ಚಿತ್ರಿಸಿ, ಭಕ್ತಾಧಿಗಳನ್ನು, ಸೇವಕ ವರ್ಗವನ್ನು, ಚಿಕ್ಕ ಆಕೃತಿಗಳಲ್ಲಿ ರೂಪಿಸಲಾಗಿದೆ. ಅದರಂತೆ ವಿರೂಪಣ್ಣ, ವೀರಣ್ಣ ಬಂಧುಗಳಿಗೆ ಪ್ರಸಾದ ನೀಡುವ ಪುರೋಹಿತರು, ಎಳೆಯ ವಟುವಿನಂತೆ ಚಿತ್ರಿತರಾಗಿದ್ದಾರೆ. ಭವ್ಯರಥಗಳನ್ನು ಎಳೆಯುವ ಅಶ್ವಗಳು ತೀರ ಅಶಕ್ತವೆಂದು ಅನಿಸಿದಿರದು. ಇವೆಲ್ಲ ಆಯಾ ವ್ಯಕ್ತಿ ಪ್ರಾಣಿಗಳ ಸ್ಥಾನಮಾನಗಳನ್ನು ಸೂಚಿಸುತ್ತವಲ್ಲದೇ ಕೆಲವೊಮ್ಮೆ ಕೇವಲ ಸಾಂಕೇತಿಕವಾಗಿ ಚಿತ್ರಿಸುವದೂ ರೂಢಿ. ಈ ಚಿತ್ರಗಳೆಲ್ಲ ಛಾಯಾಚಿತ್ರಗಳು ಅಲ್ಲವಲ್ಲ!

ಮೂಡ್ ಮೂಡಿಸುವ ಯತ್ನ

ಗೌರವರ್ಣದವರಿಗೆ ತಿಳಿಬಣ್ಣ ಬಳಸಿದರೆ, ಕೃಷ್ಣ ವರ್ಣಗಳಲ್ಲಿ ಮುಖಭಾವ ಅಥವಾ ಮೂಡ್ ಮೂಡಿಸುವ ಯತ್ನ ಯಶಸ್ವಿಯಾಗಿ ಅವು ಜೀವಕಳೆಯಿಂದ ತುಂಬಿಕೊಂಡಿವೆ. ಶಿವನು ಹೊರಹೊಮ್ಮಿಸುವ ಮುಗುಳ್ನಗೆ, ಉಮೆಯ ಸ್ತ್ರೀ ಸಹಜ ನಾಚಿಕೆ, ಭಕ್ತಾಧಿಗಳ ಭಯ, ಭಕ್ತಿಭಾವ, ರಭಸದಿಂದ ಓಡಿ ಬರುತ್ತಿರುವ ಕಾಡುಹಂದಿಗಳನ್ನು ಎದುರಿಸುವವರ ಭಯ - ಭೀತಿಗಳನ್ನೆಲ್ಲ ಸುಲಭವಾಗಿ ಗುರುತಿಸಬಹುದಾಗಿದೆ. ನೆರೆದ ಭಕ್ತಾದಿಗಳಲ್ಲಿ ಹಲಬಗೆಯ ಮುಖಭಾವಗಳನ್ನು ಚಿತ್ರಿಸಲಾಗಿದೆ. ಓರ್ವ ಸಾಧುವಿನ ಕೋಪ ಕಾರುತ್ತಿರುವ ಮುಖಭಾವ ಮರೆಯುವಂತೆಯೇ ಇಲ್ಲ. ಅದರಂತೆ ತನ್ನ ಮೃತ ಕರುವನ್ನು ನೆಕ್ಕುವ ತಾಯಿ ಗೋವನ್ನು ವೀಕ್ಷಿಸಿದಾಗ, ಮನಸ್ಸು ಕರಗದೇ ಇರದು!

ಯಾವುದೇ ಅಂಕಣದ ಹೆಚ್ಚಿನ ಭಾಗ ಹುಸಿ ಹೋಗದಂತೆ ಎಚ್ಚರಿಕೆ ವಹಿಸಿದ್ದಾರೆ. ದೇವ ದೇವತೆಯರ ಚೌಕಟ್ಟಿನಲ್ಲಿ ಗಗನ ವಿಹಾರಿಗಲಾದ ಅಪ್ಸರೆಯರು ಪುಷ್ಪವೃಷ್ಟಿ ಮಾಡುತ್ತಿರುವುದನ್ನು ಸೇರಿಸಲಾಗಿದೆ. ಶಿವನ ಗಣಸ್ತೋಮ ಹೊತ್ತಿರುವ ನಿಶಾನೆಗಳು ಎತ್ತರದಲ್ಲಿ ಕಂಗೊಳಿಸಿದರೆ ಮಾಡಿನಿಂದ ಸುಂದರವಾದ ಗುಳೋಪುಗಳನ್ನು ಇಳಿಬಿಟ್ಟಂತೆ, ಮರೆಯದೇ ಸೇರಿಸಲಾಗಿದೆ.

ಧಾರ್ಮಿಕ ಚಿತ್ರಗಳು

ಇಲ್ಲಿಯ ಚಿತ್ರಗಳೆಲ್ಲ ಮಹಾಭಾರತ. ರಾಮಾಯಣ ಹಾಗೂ ಶಿವ ಪುರಾಣಗಳ ಕಥೆಗಳನ್ನು ಆಧರಿಸಿವೆ. ಸಜೀವ ವ್ಯಕ್ತಿಗಳಿಗಿಂತ ಹಿರಿದಾಗಿಸಿದ ಈ ದೇವ - ದೇವತೆಗಳನ್ನು ಸುಲಭವಾಗಿ ಗುರುತಿಸಬಹುದು. ಶಿವ - ಪಾರ್ವತಿ ವಿವಾಹ, ದಕ್ಷಿಣಾಮೂರ್ತಿ, ಶ್ರೀರಾಮ ಪಟ್ಟಾಭಿಷೇಕ, ಶ್ರೀಕೃಷ್ಣಲೀಲಾ ಅಂಕಣಗಳು ತಕ್ಕಮಟ್ಟಿಗೆ ಸುಸ್ಥಿತಿಯಲ್ಲಿವೆ. ಕಿರಾತಾರ್ಜುನೀಯ ಪ್ರಸಂಗವನ್ನು ವಿವಿಧ ಹಂತಗಳಲ್ಲಿ ರೂಪಿಸಲಾಗಿದೆ. ಮಹೇಶ್ವರನ ಮದುವೆಯ ಚಿತ್ರೀಕರಣವನ್ನು ಮದುಮಗಳ ಶೃಂಗಾರದ ಸನ್ನಿವೇಶದಿಂದಲೇ ಪ್ರಾರಂಭಿಸಲಾಗಿದೆ. ಬ್ರಹ್ಮದೇವನ ಮೇಲ್ವಿಚಾರಣೆಯಲ್ಲಿ ನಡೆಯಲಿದ್ದ ಈ ಶುಭಕಾರ್ಯಕ್ಕೆ ವಿಷ್ಣು ಪರಮಾತ್ಮ, ಕುಬೇರ, ಅಗ್ನಿ, ವರುಣ, ವಾಮುದೇವರಂಥ ದೇವಾಧೀದೇವತೆಗಳೆಲ್ಲ ನೆರೆದಿದ್ದಾರೆ. ನಂತರದ ಚಿತ್ರಪಟ್ಟಿಕೆಯಲ್ಲಿ ನವದಂಪತಿಗಳು ಚದುರಂಗದಾಟದಲ್ಲಿ ಮೈಮರೆತದ್ದನ್ನು ಕಾಣಬಹುದಾಗಿದೆ.

ಅರ್ಧ ಮಂಡಪದಲ್ಲಿ ಶಿವಲೀಲಾ ಪ್ರಸಂಗಗಳನ್ನು ಪ್ರತಿನಿಧಿಸುವ ಅನೇಕ ಚಿತ್ರಗಳಿವೆ. ಮೊಟ್ಟ ಮೊದಲಿಗೆ, ಶಿವನು ಲಿಂಗದಿಂದ ಪ್ರತ್ಯಕ್ಷನಾಗಿ ನೆರೆದ ಭಕ್ತಾದಿಗಳನ್ನು ಆಶೀರ್ವದಿಸುತ್ತಾನೆ. ಸನಿಹದಲ್ಲಿ ಭಕ್ತ ಮಾರ್ಕಂಡೇಯನು ಕಿರಿಯ ಬಾಲಕನಾಗಿ ಕಾಣಿಸಿಕೊಂಡಿದ್ದಾನೆ. ಇನ್ನೊಂದರಲ್ಲಿ ದುಷ್ಟಸಂಹಾರಿಯಾಗಿ, ರಾಕ್ಷಸನನ್ನು ಮೆಟ್ಟಿ ನಿಂತು. ಕೈಯಲ್ಲಿದ್ದ ತ್ರಿಶೂಲದಿಂದ ತಿವಿಯುತ್ತಿದ್ದಾನೆ. ಕಿರಿಯ ಬೆಟ್ಟ ಒಂದರ ಮೇಲೆ ಆರೂಢನಾಗಿದ್ದ ದಕ್ಷಿಣಾಮೂರ್ತಿಯನ್ನು ಸಾಧು ಸಂತರು ಸುತ್ತುವರಿದಿದ್ದಾರೆ. ತನ್ನ ಪರಮಭಕ್ತ ಚಂಡಿಕೇಶ್ವರನಿಗೆ ಶಿವನು ಪರಶುವನ್ನು ದಯಪಾಲಿಸುತ್ತಿರುವ ಚಿತ್ರವು ಅಪರೂಪದ್ದಾಗಿದೆ. 'ಭಿಕ್ಷಾಟನ ಶಿವ'ದಲ್ಲಿ ಭಿಕ್ಷೆ ನೀಡಲು ಬಂದ ಋಷಿ ಪತ್ನಿ, ಶಿವನ ಅನುಪಮ ಸೌಂದರ್ಯಕ್ಕೆ ಮನಸೋತಾಗ, ಉಟ್ಟ ಸೀರೆ ಸೊಂಟದಿಂದ ಜಾರಿಕೊಂಡಿದ್ದೂ ಅವಳ ಗಮನಕ್ಕೆ ಬಂದಿಲ್ಲ! ಭಕ್ತಾದಿಗಳ ಗುಂಪಿನಲ್ಲಿ ಹರಿಹರಮೂರ್ತಿ, ಮೋಹಿನಿಯನ್ನು ಎದುರುಗೊಳ್ಳುತ್ತಿರುವ ಶಿವ - ಪಾರ್ವತಿ, ಉಮಾಮಹೇಶ್ವರ ಚಿತ್ರಗಳನ್ನು ಕಾಣಬಹುದು. ಇನ್ನೊಂದು ಚಿತ್ರದಲ್ಲಿ, ಸೂರ್ಯ ಚಂದ್ರರು, ಚಕ್ರಗಳಾಗಿರುವ ರಥದ ಸಾರಥಿ ಬ್ರಹ್ಮ, ರಥದಲ್ಲಿ ಆರೂಢನಾಗಿರುವ ತ್ರಿಪುರಾಂತಕ ಶಿವನು, ಅಲ್ಲಿಂದಲೇ ತ್ರಿಪುರವನ್ನು ಸಂಹರಿಸುತ್ತಿರುವಂತೆ ಚಿತ್ರಿಸಲಾಗಿದೆ.

ಆರಾಧನಾ ಮಂಟಪದ ಮುಚ್ಚಿಗೆಯಲ್ಲಿ ಶಿವಲೀಲೆಯ ಲಿಂಗೋದ್ಭವ, ಅಂಧಕಾಸುರ ವಧೆ, ಚಂಡಿಕಾನುಗ್ರಹ, ಹರಿಹರ ದಕ್ಷಿಣಾಮೂರ್ತಿ ಅರ್ಧನಾರೀಶ್ವರ, ಕಲ್ಯಾಣಸುಂದರ, ಗೌರೀಪ್ರಸಾದಿತ, ಅನಂತತಾಂಡವ, ವೃಷಭರುದ್ರ ಮುಂತಾದ ಭಂಗಿಗಳನ್ನು ಗುರುತಿಸಬಹುದು. ರಘುನಾಥ ದೇವಾಲಯದ ಮುಚ್ಚಿಗೆಯಲ್ಲಿ ಬೃಹದಾಕಾರದ ವಿಷ್ಣು ಪರಮಾತ್ಮನನ್ನು ಚಿತ್ರಿಸಿ ಸುತ್ತಲೂ ದಶಾವತಾರಗಳನ್ನು ರೂಪಿಸಲಾಗಿದೆ. ಮುಖಮಂಟಪದಲ್ಲಿ ದ್ರೌಪದಿ ಕಲ್ಯಾಣ, ಗೌರೀ ಕಲ್ಯಾಣ, ಭೂಕೈಲಾಸ ಶ್ರೀರಾಮ ಪಟ್ಟಾಭಿಷೇಕ ಮುಂತಾದವುಗಳನ್ನು ಕಾಣಬಹುದು. ಈ ಭಿತ್ತಿಚಿತ್ರಗಳಲ್ಲೆಲ್ಲ ಹರಿ - ಹರರಲ್ಲಿ ಸಮತೋಲನ ಕಾಯ್ದುಕೊಳ್ಳಲು ಯತ್ನಿಸಿದರೂ, ಶಿವನಿಗೇ ಸಿಂಹಪಾಲು ಸಂದಾಯವಾಗಿದೆ ಎನ್ನುವದರಲ್ಲಿ ಸಂದೇಹವೇ ಇಲ್ಲ!

ವ್ಯಕ್ತಿ ಚಿತ್ರಣಗಳು

ಈ ಭಿತ್ತಿಚಿತ್ರಗಳ ಐತಿಹಾಸಿಕ ಪ್ರಾಮುಖ್ಯವನ್ನು ಮರೆಯುವಂತಿಲ್ಲ. ಸಮಕಾಲೀನ ವ್ಯಕ್ತಿಗಳ ಚಿತ್ರಣದ ಅತ್ಯಪೂರ್ವ ದಾಖಲೆ ಇಲ್ಲಿದೆ. ದೇವಸ್ಥಾನದ ನಿರ್ಮಾಣ ಹಾಗೂ ವಿಸ್ತರಣೆಗೆ ಕಾರಣೀಭೂತರಾದ ಸೋದರರ ಚಿತ್ರದರ್ಶನ ಇಲ್ಲಿ ಮಾತ್ರ ಲಭ್ಯ. ಮುಖಮಂಟಪದ ಎರಡನೇ ಚೌಕಟ್ಟಿನಲ್ಲಿ ಈ ಬಂಧುಗಳು. ತಮ್ಮ ಇಷ್ಟದೈವತವಾದ ವೀರಭದ್ರಸ್ವಾಮಿಗೆ ಕೈ ಜೋಡಿಸಿ ಭಯ ಭಕ್ತಿಯಿಂದ ವಂದಿಸುತ್ತಿದ್ದಾರೆ. ನಲವತ್ತು ವರ್ಷಗಳ ಗಡಿ ದಾಟಿರಬಹುದಾದ ವಿರುಪಣ್ಣ ದೃಢಕಾಯನಾಗಿ ಗೌರವರ್ಣದವನಾಗಿದ್ದರೆ, ತಮ್ಮನಾದ ವೀರಣ್ಣ ನಾಯಕನು ಸುಮಾರು ಮೂವತ್ತೈದು ವರ್ಷದವನಾಗಿದ್ದು ಕೃಶಾಂಗನಾಗಿ ಕೃಷ್ಣವರ್ಣದವನು. ಬಂಧುಗಳ ಜೊತೆಯಲ್ಲಿ ಅನೇಕ ಭಕ್ತಾದಿಗಳಲ್ಲಿ ಸಮಕಾಲೀನ ಗಣ್ಯರು ಇದ್ದಿರಬಹುದು. ಆರಾಧನಾ ಮಂಟಪದ ಮಾಡಿನ ಮುಚ್ಚಿಗೆಯಲ್ಲಿ, ವೀರಭದ್ರಸ್ವಾಮಿಯ ಬೃಹದಾಕಾರದ ಚಿತ್ರಣವಿದ್ದು ಬಲಬದಿಗೆ ವಿರುಪಣ್ಣನು ಕೈ ಜೋಡಿಸಿ ನಮ್ರತೆಯಿಂದ ನಿಂತಿದ್ದರೆ, ಎಡಬದಿಯಲ್ಲಿ ಆತನ ಧರ್ಮಪತ್ನಿಯನ್ನು ಚಿತ್ರಿಸಲಾಗಿದೆ.

ಕರಪೂರ ಪಟ್ಟಣದ ಧರ್ಮಚೋಳನ ಪಕ್ಷಪಾತರಹಿತ ನ್ಯಾಯದಾನದ ಕತೆಯನ್ನು ಇಲ್ಲಿ ಚಿತ್ರಿಸಲಾಗಿದೆ. ಆತನ ಮಗ ಭೀಮಚೋಳನು ವಿಹಾರಕ್ಕೆ ಹೋದಾಗ ಅವನ ರಥದ ಅಡಿಯಲ್ಲಿ ಹಸುವಿನ ಕರು ಸಿಕ್ಕಿಹಾಕಿಕೊಂಡು ಸಾಯುತ್ತದೆ. ಶೋಕತಪ್ತ ಗೋಮಾತೆ, ಅರಸನೆಡೆಗೆ ಧಾವಿಸಿ ನ್ಯಾಯದಾನವನ್ನು ಮಾಡಿಸುತ್ತಾಳೆ. ರಾಜನೋ ಅಪರಾಧ - ಶಿಕ್ಷೆಗಳು ಸಮಪ್ರಮಾಣದಲ್ಲಿ ಇರಬೇಕೆಂದು ನಂಬಿದಂತಿದೆ! ತನ್ನ ಮಗನ ಶಿರಚ್ಛೇದ ಮಾಡಿಸಿದ. ಅಲ್ಲದೇ ಮೃತಪಟ್ಟ ಕರುವಿಗೆ ಜೀವದಾನ ನೀಡುವಂತೆ ಶಿವನನ್ನು ಮೆಚ್ಚಿಸುತ್ತಾನೆ. ಆತನ ಧರ್ಮನಿಷ್ಠೆಗೆ ಮೆಚ್ಚಿದ ಶಿವನು ಗೋಮಾತೆಗೆ ಸಜೀವ ಕರುವನು ಹಿಂದಿರುಗಿಸುವ ಜೊತೆಗೆ, ಭೀಮಚೋಳನಿಗೆ ಪ್ರಾಣದಾನ ಮಾಡಿ ಕೈಲಸಾಕ್ಕೆ ಕರೆದೊಯ್ಯುತ್ತಾನೆ. ಚಿತ್ರಪಟ್ಟಿಯಲ್ಲಿ ಜೋಡಿಕುದುರೆ ಎಳೆದೊಯ್ಯುವ ಆರು ಚಕ್ರಗಳ ರಥದ ಮುಂಭಾಗದಲ್ಲಿ ಭೀಮಚೋಳನು ನಿಂತಿದ್ದಾನೆ. ಕರುವಿನ ಪಾರ್ಶ್ವದೇಹ, ರಥದಲ್ಲಿ ಗೋಚರಿಸುತ್ತದೆ.

ಶೋಕಾರ್ತ ಹಸು ಅದನ್ನು ನೆಕ್ಕುತ್ತ ರಥವನ್ನು ಹಿಂಬಾಲಿಸುತ್ತಿದೆ. ರಥದ ಎದುರಿನಲ್ಲಿ ಧರ್ಮಚೋಳನು ಭಯ - ಭಕ್ತಿಯಿಂದ ಕೈ ಜೋಡಿಸಿ ನಂದಿಯನ್ನೇರಿ ತನ್ನೆಡೆಗೆ ಬರುತ್ತಿರುವ ಶಿವ - ಪಾರ್ವತಿಯರನ್ನು ಸ್ವಾಗತಿಸುತ್ತಿದ್ದಾನೆ.

ಚಿತ್ರಕಾರರು, ದೇವ - ದೇವತೆಗಳನ್ನು, ಪೌರಾಣಿಕ ವ್ಯಕ್ತಿಗಳನ್ನು ಚಿತ್ರಿಸುವಾಗ, ಜನ ಸಾಮಾನ್ಯರನ್ನು ಕಡೆಗಣಿಸಿಲ್ಲ. ಸಾಧ್ಯವಿದ್ದೆಡೆ ಮರೆಯದೇ ಅವರನ್ನು ಸೇರಿಸಿದ್ದಾರೆ. ಶಿವದರ್ಶನಕ್ಕೆ ಹಾತೊರೆದು ಧಾವಿಸಿ ಬರುವವರು, ದೇವಾಧಿದೇವನ ಆಶೀರ್ವಾದ ನಿರೀಕ್ಷಿಸುತ್ತಿರುವವರು, ಉಮೆಯ ಅಲಂಕಾರಕ್ಕೆ ನೆರವು ನೀಡುವ ಹೆಂಗಳೆಯರು, ಬೇಟೆಗಾರರು ಇದಕ್ಕೆ ಉತ್ತಮ ಉದಾಹರಣೆ. ಈ ಜನ ಸಾಮಾನ್ಯರ ಅಲ್ಲಲ್ಲಿಯ ಚಿತ್ರಣವನ್ನು ಅಭ್ಯಾಸ ಮಾಡಿದಾಗ, ಸಮಕಾಲೀನ ಸಾಮಾಜಿಕ ಜೀವನ ಅರಿಯಲು ನೆರವಾಗುವುದರಲ್ಲಿ ಸಂದೇಹವೇ ಇಲ್ಲ.

ಹೆಂಗಳೆಯರ ಚಿತ್ರಣ

ಚಿತ್ರಕಾರರು ಮಹಿಳಾ ಪಕ್ಷಪಾತಿಗಳಾಗಿದ್ದರೇ? ಎಂದು ಶಂಕಿಸುವಷ್ಟು ತಮ್ಮ ಕೃತಿಗಳಲ್ಲಿ ಗಣ್ಯಸ್ಥಾನವನ್ನು ಕೊಟ್ಟಿದ್ದಾರೆ! ಉಮೆ, ಮೋಹಿನಿ, ಗಣ್ಯರ ಪತ್ನಿಯರು. ಸೇವಕಿಯರು ಎಂದು ಭೇದಭಾವ ಕಲ್ಪಿಸದೆ ಸರ್ವರಿಗೂ ರಂಭೆ - ಊರ್ವಶಿಯರಿಗೆ ಮೀಸಲಿಡಬೇಕಾದ ಉಚ್ಚಸ್ಥಾನವನ್ನು ಕೊಡಲಾಗಿದೆ. ಒಮ್ಮೆ ನೋಡಿದರೆ ಸಾಲದು! ಎನಿಸುವಂಥ ಲಾವಣ್ಯವತಿಯರು ಅವರೆಲ್ಲ!

ಕೇಶಾಲಂಕಾರ : ಶಿವನನ್ನು ಏರಿಸಲು ಸಿದ್ಧಳಾಗುತ್ತಿರುವ ಗಿರಿಜೆಯು ತನ್ನ ನೀಳ ಕೇಶರಾಶಿಯನ್ನು ಮಾರುದ್ದ ಜಡೆಯಾಗಿ ಹೆಣೆದುಕೊಂಡಿದ್ದಾಳೆ. ಅವಳ ಸಿಂಗಾರಕ್ಕೆ ನೆರವಾಗಲು ಟೊಂಕಕಟ್ಟಿ ನಿಂತ ಆರು ಸಖಿಯರು ಸ್ವತಃ ವಿವಿಧ ರೀತಿಯಲ್ಲಿ ಕೇಶಾಲಂಕಾರ ಮಾಡಿಕೊಂಡಿದ್ದಾರೆ! ದಟ್ಟವಾದ ಗಿಡ್ಡ ಕೂದಲನ್ನು, ಎಡಮುಡಿ, ಬಲಮುಡಿ, ಎತ್ತರದ ಮುಡಿಗಳಲ್ಲಿ ಕಟ್ಟಿಕಂಡಿದ್ದಾರೆ. ಉದ್ದವಾದ ಕೂದಲಿನವರು ಜೋಲ್ಮುಡಿಯ ರೂಪದಲ್ಲಿ ಬೆನ್ನ ಹಿಂದೆ ಇಳಿಬಿಟ್ಟಿದ್ದಾರೆ. ಓರ್ವಳು ಬಹುಶಃ ಚಂದ್ರಾಕೃತಿಯ ತಗಡಿಗೆ ಅಥವಾ ಬೆಂಡಿಗೆ ಕೇಶರಾಶಿಯನ್ನು ಸುತ್ತಿ 'ಸೆಕ್ಕುಂದುರುಬು' ರಚಿಸಿಕೊಂಡಿದ್ದಾಳೆ. ಇನ್ನೊಬ್ಬಳು ತನ್ನ ಕಿರಿಗೂದಲಿಗೆ, ಚೆಂಡಿನಾಕಾರದ ಚವರಿ ಸೇರಿಸಿ ಬೃಹದಾಕಾರದ 'ಧಮಿಲ್ಲ' ಹೊತ್ತಿದ್ದಾಳೆ. ತಲೆ ತುಂಬ ಉದ್ದ ಕೂದಲಿನಾಕೆ, ಅಭಿಮಾನದಿಂದ ಮೊಣಕಾಲನ್ನು ಸ್ಪರ್ಶಿಸುವ ಜಡೆ ಹೆಣೆದುಕೊಂಡರೆ, ಚೋಟುದ್ದ ಕೂದಲಿನಾಕೆ ಕುತ್ತಿಗೆಯ ಹಿಂಭಾಗದಲ್ಲಿ 'ಪಿನ್' ಸಿಗಿಸಿದ್ದಾಳೆ. ಕೇಶರಾಶಿಯನ್ನು ಗಾಳಿಗೆ ತೂರಬಿಟ್ಟವರೂ ಇಲ್ಲದಿಲ್ಲ.

ಎಂದಿನಂತೆ ಅಂದಿನ ಹೆಂಗಳೆಯರಿಗೂ ಹೂವುಗಳೆಂದರೆ ಪಂಚಪ್ರಾಣ ಇದ್ದಿರಬೇಕು. ಸೇವಂತಿಗೆಯಂತಹ ಒಂಟಿ ಹೂವನ್ನು ತುರುಬಿಗೆ ಸೇರಿಸಿದವರಿದ್ದಾರೆ. ದಾಸವಾಳದಂತಹ ಹಿರಿದಾದ ಹೂವನ್ನು ಮುಡಿದವರಿದ್ದಾರೆ. ಪೂಮುಡಿ ಎದ್ದು ತೋರುವಂತೆ ಹತ್ತಾರು ಹೂ ಸಿಗಿಸಿದವರಿದ್ದಾರೆ. ಇಡೀ ಜಡೆಗೆ ಹೂವಿನ ಅಲಂಕಾರ ಮಾಡಿದ್ದಾರೆ. ಮುಡಿಯ ಕೆಳಭಾಗಕಷ್ಟೆ ಹೂವನ್ನು ಜೋಡಿಸಿಕೊಂಡು ಮೆರೆದಿದ್ದಾರೆ. ಬಿಳಿ ಮತ್ತು ಹಳದಿ ಹೂಗಳ ಪ್ರಾಧಾನ್ಯ ಚಿತ್ರಗಳಲ್ಲಿ ಎದ್ದು ಕಾಣುತ್ತದೆ.

ಆಭರಣಗಳು

ಲೇಪಾಕ್ಷಿ ಭಿತ್ತಿಚಿತ್ರಗಳ ನಾರಿಯರೆಲ್ಲ ತಮ್ಮ ಸೌಂದರ್ಯ ಹಾಗೂ ವ್ಯಕ್ತಿತ್ವದ ಮೆರುಗು ಹೆಚ್ಚಿಸಲು ಅನೇಕಾನೇಕ ಆಭರಣಗಳನ್ನು ಕಲಾತ್ಮಕವಾಗಿ ಬಳಸಿಕೊಂಡಿದ್ದಾರೆ. ಅವುಗಳಲ್ಲಿ ಹೆಚ್ಚಿನವು ಮುತ್ತುಗಳಿಂದ ರಚಿತವಾದವುಗಳು. ಕನ್ನಡ ಕಾವ್ಯಗಳಲ್ಲಿ ಬರುವ ವರ್ಣನೆಯಿಂದ ಕೂಡ ಮುತ್ತುಗಳ ಆಭರಣಗಳು ಅತ್ಯಂತ ಜನಪ್ರಿಯವಾಗಿದ್ದದ್ದು ತಿಳಿದುಬರುತ್ತದೆ. ಬೈತಲೆಯಲ್ಲಿ ಮುತ್ತಿನ ಆಭರಣ (ಬೈತಲಮಣಿ) ಹಾಗೂ ಮುತ್ತಿನ ಸರಗಳ ಕೇಶಾಲಂಕಾರ ಸಾಮಾನ್ಯವಾಗಿತ್ತು. 'ಮುತ್ತಿನ ಮುಡಿ' 'ಮುತ್ತಿನ ಬಲೆ'ಗಳ ಉಲ್ಲೇಖ ಸಿಗುತ್ತದೆ. ಮುತ್ತುಗಳೊಂದಿಗೆ ಹವಳ. ಪಚ್ಚೆ. ಕೆಂಪುಗಳನ್ನು ಜೋಡಿಸಿದ ಜಡೆ ಬಂಗಾರ ವಿಶೇಷ ಸಂದರ್ಭಗಳಲ್ಲಿ ಶೋಭಿಸುತ್ತಿತ್ತು. ಶಿರೋಲಂಕಾರಕ್ಕೆ ಒಪ್ಪುವ ಕರ್ಣಭೂಷಣಗಳನ್ನು ಗುರುತಿಸಬಹುದು. ಹೆಚ್ಚಿನವು ವರ್ತುಲಾಕಾರದವಿದ್ದು, ಅರೆಕಿವಿ ಮುಚ್ಚುವಷ್ಟು ದೊಡ್ಡದಿರುತ್ತಿದ್ದವು. ಕೆಲ ಯುವತಿಯರ ಕಿವಿಯ ಮೇಲ್ಗಡೆ ಬುಗುಡಿಗಳಿದ್ದರೆ ಕೆಲವರ ಮೂಗುಬಟ್ಟು ಸ್ಫುಟವಾಗಿ ತೋರುತ್ತದೆ.

ಕೊರಳಿನಲ್ಲಿ ಅನೇಕ ಪ್ರಕಾರದ ಆಭರಣಗಳನ್ನು ಧರಿಸುತ್ತಿದ್ದರು. ಬಿಗಿಯಾದ ಸುವರ್ಣ ಪಟಿಕೆಗಳು (ಇಂದಿನ ನೆಕ್‌ಲೇಸ್ ಮಾದರಿಯವು) ; ಚಿಕ್ಕ ದೊಡ್ಡ ಮುತ್ತಿನ, ಪದಕಗಳಿದ್ದ ಸರಗಳು ; ಸರಿಕೆ, ಕಂಠಿಕೆಗಳು, ಉದ್ದವಾದ ನಾಭಿಯವರೆಗಿನ ಸರಗಳು ಬಾಹುಪೂರ (ತೋಳ್‌ಬಂದಿ), ಕೇಯೂರಗಳು, ಕೈಬಳೆಗಳ ಪ್ರದರ್ಶನವೇ ಏರ್ಪಟ್ಟಂತೆ ನಾರಿಯರೆಲ್ಲ ಬೆಳ್ಳಿ, ಬಂಗಾರ ಮತ್ತಿತರ ಧಾತುಗಳ ಮಣಿಖಚಿತ ಬಳೆಗಳನ್ನು ತೊಟ್ಟಿದ್ದಾರೆ. ಗಾಜಿನವು ಇದ್ದವೇ? ಎಂದು ಬೇರ್ಪಡಿಸಿ ಹೇಳುವದು ಕಷ್ಟ! ಉಟ್ಟಸೀರೆಗೆ ಒಪ್ಪುವಂಥ ರತ್ನ ಖಚಿತ ಆಭರಣಗಳನ್ನೇ ತೊಡುತ್ತಿದ್ದರು.

ಹೂಬಳ್ಳಿ ಹಚ್ಚೆಯ ಲತಾಂಗಿ

ಈ ಚಿತ್ರಗಳನ್ನು ವೀಕ್ಷಿಸುತ್ತಿದ್ದಂತೆ, ಅಂದಿನ ಹೆಂಗಳೆಯರು ತಮ್ಮ ಅಂಗಾಂಗಗಳ ಸೌಂದರ್ಯವನ್ನು ಹೆಚ್ಚಿಸಲು ಅದೆಷ್ಟು ಲಕ್ಷ್ಯ ಪೂರೈಸುತ್ತಿದ್ದರು ಎಂಬುದರ ಅರಿವಾಗುತ್ತದೆ. ಮೇಲು ಹಣೆಗೆ ಅಡ್ಡಲಾಗಿ ಎಳೆದ ವಿಭೂತಿ ಪಟ್ಟಿಯಿಂದ ಅವರೆಲ್ಲ ಶಿವಭಕ್ತೆಯರೆಂದು ಖಚಿತವಾದರೆ, ಅದರಡಿಯಲ್ಲಿ ಅರ್ಧಚಂದ್ರಾಕೃತಿಯ ಕುಂಕುಮ ಅವರ ಸುಮಂಗಲತ್ವವನ್ನು ಸಾರಿ ಹೇಳುವಂತಿದೆ. ಅನೇಕ ಮಹಿಳೆಯರು, ಸೀರೆ ಮುಚ್ಚದ ಮೈಭಾಗ ಅನಾವಶ್ಯಕ ಆಕರ್ಷಣೆಗೆ ಒಳಪಡದಂತೆ, ಶ್ರೀಗಂಧ, ಕುಂಕುಮ, ಕಸ್ತೂರಿ ಲೇಪದಿಂದ ಹೂ ಬಳ್ಳಿಗಳನ್ನು ಚಿತ್ರಿಸಿಕೊಂಡಿದ್ದಾರೆ. ಕೆಲವಾದರೂ ಶಾಶ್ವತವಾಗಿರಲು ಹಚ್ಚೆಯ ಹೂ ಮತ್ತಿತರ ಆಕೃತಿಗಳನ್ನು ಹಾಕಿಕೊಂಡಿರುವ ಸಂಭವವಿದೆ.

ಬಟ್ಟೆ ಬರೆಗಳು

ಚಿತ್ರಿತಗೊಂಡ ಹೆಂಗಳೆಯರೆಲ್ಲ ಸುಂದರ ಕೃಶಾಂಗಿಯರು! ಆಹಾರ ಕುರಿತು ತಲೆಕೆಡಿಸಿಕೊಳ್ಳದೇ ಕೇವಲ ದೈಹಿಕ ಶ್ರಮದಿಂದಲೇ ಇದನ್ನು ಸಾಧಿಸಿಕೊಂಡಿರಲು ಸಾಕು, ಯಾರೊಬ್ಬರಿಗೂ ಕೊಬ್ಬು, ಬೊಜ್ಜು ಇಲ್ಲವೇ ಇಲ್ಲ! ಏಳು ಗಜದ ಸೀರೆಗಳನ್ನು ಮಾಟವಾಗಿ ಉಡುವ ಕಲೆಯನ್ನು ಕರಗತ ಮಾಡಿಕೊಂಡಿದ್ದಾರೆ. ಲಂಗ ತೊಡದೇ ಕುಪ್ಪಸ ಧರಿಸದೇ ಕೇವಲ ಒಂದೇ ಸೀರೆಯಿಂದ ತಮ್ಮ ಹೆಣ್ತನವನ್ನು ಇನ್ನೊಬ್ಬರ ಕಣ್ಣಿಗೆ, ಕಾಮುಕ 'ದೃಷ್ಟಿ'ಯಾಗದಂತೆ ಅತ್ಯಂತ ಕಲಾತ್ಮಕವಾಗಿ ಮೈಮುಚ್ಚುವ ಕಲೆ, ಇಂದಿನವರಿಗೆ ಸೀರೆಯುಡುಗೆಯ ಪಾಠದಂತಿದೆ! ಸೀರೆಯ ನಿರಿಗೆಗಳು ಪಾದದವರೆಗೆ ಇಳಿಬಿಟ್ಟು, ನಡುವಿಗೆ ಸೀರೆಯ ನಕ್ಷೆ, ಕಲೆ ಕೃತಿಗಳು ಎದ್ದುಕಾಣುವಂತೆ ಸುತ್ತಿರುತ್ತಾರೆ. ಸೆರಗು ಎಡಭುಜದಿಂದ ಮೇಲೇರಿ ಹೋಗುವಾಗ ವಕ್ಷಸ್ಥಳವನ್ನು ಸರಿಯಾಗಿ ಮುಚ್ಚಿಯೇ ಹಾದಿರುತ್ತದೆ. ಕಂಡೂ ಕಾಣದಂತೆ ಮುಚ್ಚಿದ ಸ್ತ್ರೀತ್ವ! ಸ್ತ್ರೀ ದೇವತೆಗಳೂ ಇದೇ ಮಾದರಿಯನ್ನು ಅನುಸರಿಸಿವೆ.

ಸೀರೆಗಳ ವರ್ಣವೈಖರಿ, ಚಿತ್ತಾರಗಳು ಮುಂತಾದವನ್ನು ಸ್ವಲ್ಪದರಲ್ಲಿ ವಿವರಿಸುವದು ಕಷ್ಟ! ಅಡ್ಡ, ಉದ್ದ, ದಪ್ಪ, ತೆಳು, ಸೂಕ್ಷ್ಮಗೀರುಗಳನ್ನೆ ಚಮತ್ಕಾರವಾಗಿ ಬಳಸಿ ಅದೆಷ್ಟೋ ನಕ್ಷೆಗಳನ್ನು ರಚಿಸಲಾಗಿದೆ. ನೇಯ್ಗೆಯ ಕಲೆ ಎದ್ದುಕಾಣುವಂತೆ ಹಾಸುಹೊಕ್ಕಾಗಿದ್ದ ಚೌಕುಡಿಗಳು. ಚಚ್ಚೌಕಗಳು, ಕಾಟಕೋನಗಳು, ಡೈಮಂಡ್‌ಕಟ್ ಮುಂತಾದ ಅದೆಷ್ಟೋ ಆಕಾರಗಳನ್ನು ಗುರುತಿಸಬಹುದು. ಇದರಂತೆ ವರ್ತುಲಾಕೃತಿಯ ಅಸಂಖ್ಯ ಅವತಾರಗಳ ದರ್ಶನ ಇಲ್ಲಿ ಆಗುತ್ತದೆ. ಲಕ್ಷಾಂತರ ಬಂದುಗಳು, ಸಾವಿರಾರು ಗೋಲಕಗಳು, ನೂರಾರು ವಠಾಣಿಗಳು ಹತ್ತಾರು ಚಕ್ರಗಳಿಂದ ಉಟ್ಟ ಬಟ್ಟೆಯನ್ನು ತುಂಬಿ ತುಳುಕಿಸಿದ್ದಾರೆ. ಹೂಬಳ್ಳಿಗಳ ಕಲಾಪತ್ತಿನ ಕೆಲಸ, ಬನಾರಸ್ ಅಥವಾ ಕಾಂಜೀವರಂ ಸೀರೆಗಳನ್ನು ನಾಚಿಸುವಂತೆ. ಈ ರೀತಿಯ ಸೀರೆಗಳು ಆ ಕಾಲಕ್ಕೆ ಕರ್ನಾಟಕದಲ್ಲಿ ಮೈದಾಳುತ್ತಿದ್ದ ಪ್ರತ್ಯಕ್ಷ ಪುರಾವೆ ಇದ್ದುದರಿಂದ ಇದು ಕೇವಲ ಚಿತ್ರಕಾರರ ಕಲ್ಪನಾ ಸೃಷ್ಟಿ ಎನ್ನುವಂತಿಲ್ಲ. ಅತ್ಯಾಧುನಿಕ ಸೀರೆ ತಯಾರಕರು ಇಲ್ಲಿಯ ಡಿಸೈನ್‌ಗಳಿಂದ ಸ್ಫೂರ್ತಿ ಪಡೆಯುವಷ್ಟು ಅವು ನಿತ್ಯನೂತನವಾಗಿವೆ. ನಾವೀನ್ಯದ ಹಪಾಹಪಿಗೆ ಯುಗದ ಪರಿಮಿತಿ ಇಲ್ಲ, ಅಲ್ಲವೇ?

ಪುರುಷರ ಚಿತ್ರಣ

ಶಿರೋಲಂಕಾರಗಳು

ವಿಜಯನಗರ ಕಾಲದಲ್ಲಿ ಕುಲ್ಲಾಯಿ ಅಥವಾ ಕುಲಾವಿ ಎಂಬ ಎತ್ತರವಾದ ಟೋಪಿಗಳನ್ನು ಧರಿಸುವುದು ಆಗಿನ ಕಾಲದಲ್ಲಿ ವಾಡಿಕೆಯಾಗಿತ್ತೆಂದು ವಿದೇಶೀ ಪ್ರವಾಸಿಗಳಿಂದ ತಿಳಿದುಬರುತ್ತದೆ. ತಿರುಪತಿ ಮತ್ತು ಕಾಳಹಸ್ತಿಗಳಲ್ಲಿರುವ ಕೃಷ್ಣದೇವರಾಯನ

ಪ್ರತಿಮೆ ಹಾಗೂ ಕೆಲವು ಶಿಲ್ಪಗಳಿಂದ ಅದರ ಒಟ್ಟಾರೆ ಸ್ವರೂಪ ಅರಿಯಬಹುದಾದರೂ, ಅವುಗಳ ರಚನೆ, ವೈವಿಧ್ಯ ಕುಸುರಿನ ಕೆಲಸಗಳನ್ನು ಗುರುತಿಸಲು ಲೇಪಾಕ್ಷಿಯ ಭಿತ್ತಿಚಿತ್ರಗಳ ಅಧ್ಯಯನ ಸಹಾಯ ಮಾಡುತ್ತದೆ. ತಲೆಯ ಸುತ್ತಳತೆಗೆ ಅನುಗುಣವಾಗಿ ವೆಲ್ವೆಟ್, ಬಂಬಾಸ್ಟ್, ಸ್ಯಾಟೀನ್ ಮುಂತಾದ ವಿದೇಶಿ ಬಟ್ಟೆಯ ಪ್ರಕಾರಗಳನ್ನು ಕತ್ತರಿಸಿ, ಹೊಲಿದು ಸಿದ್ಧಮಾಡಿದ ಟೋಪಿಗಳೇ 'ಕುಲಾಯಿ' ಅನಿಸಿಕೊಳ್ಳುತ್ತಿದ್ದವು. ಅವುಗಳಿಗೆ ಜರಿಯ ಹೂ, ಬಳ್ಳಿಗಳ ಕಸೂತಿ ಇರುತ್ತಿದ್ದು, ಅಂತಸ್ತಿಗೆ ತಕ್ಕಂತೆ ಮುತ್ತು, ರತ್ನ, ವಜ್ರಗಳನ್ನು ಸೇರಿಸಿದ ಕಲಾಕೃತಿಗಳನ್ನು ಅಳವಡಿಸುತ್ತಿದ್ದರು.

ವಿರುಪಣ್ಣನು ಆರು ಅಂಗುಲ ಎತ್ತರದ ಕುಲಾವಿಯನ್ನು ಧರಿಸಿದ್ದಾನೆ. ಅದರ ಚೂಪಾದ ತುದಿಯಿಂದ ಗೊಂಡೆಗಳನ್ನು ಗಾಳಿಗೆ ಹಾರಿ ಬಿಡಲಾಗಿದೆ. ನೇರಳೆಬಣ್ಣದ ಚೆಂಡುಮಲ್ಲಿಗೆಯಂಥ ಹೂಗಳನ್ನು ಕುಸುರಿ ಕೆಲಸದಲ್ಲಿ ಟೋಪಿಯ ಉದ್ದಕ್ಕೂ ರಚಿಸಲಾಗಿದೆ. ವೀರಣ್ಣ ನಾಯಕನು ಇಂಥದೇ ಕುಲಾವಿಯನ್ನು ಧರಿಸಿದರೂ ಅದರ ಮೇಲೆ ಹಸಿರುಬಣ್ಣದ ಬಳ್ಳಿಗಳನ್ನು ಒಂದರ ಮೇಲೊಂದು ಹಾಯ್ದು ಹೋದಂತೆ ಕಸೂತಿ ರಚಿಸಿ, ನಡುನಡುವೆ ಹೂಗಳನ್ನು ಬಿಡಿಸಲಾಗಿದೆ. ಇನ್ನಿತರರ ಕುಲಾವಿಗಳಿಗೆ ಮುತ್ತಿನ ಗೊಂಡೆಗಳು ಇಲ್ಲದ್ದರಿಂದ, ಅವು ಧರಿಸುವವರ ಅಂತಸ್ತಿಗೆ ಸರಿಯಾಗಿ ಹೊಂದಿಸಿದ್ದಿರಬೇಕು ಅನಿಸುತ್ತದೆ. ಕೆಲ ಊರ ಪ್ರತಿಷ್ಠಿತರು, ಕುಲಾವಿಯ ಅಡಿ ಒಳಟೋಪಿಗಳನ್ನು ಧರಿಸಿದ್ದಾರೆ. ಬಿಸಿಲು ಕಾಲದ ಬೆವರು. ತಲೆಗೆ ಹಾಕುತ್ತಿದ್ದ ಎಣ್ಣೆ ಇವು ಬೆಲೆ ಬಾಳುವ ಕುಲಾವಿಗಳಿಗೆ ತಟ್ಟದೆ, ತಾಳಿಕೆ ಬರಲು ಈ ಕ್ರಮ ಕೈಗೊಂಡಿರಬೇಕು. ಚಿತ್ರಿತವಾದ ಹಲವಾರು ಕುಲಾವಿಗಳನ್ನು ಧರಿಸಿದ್ದಾರೆ. ಇವರೆಲ್ಲ ಕೆಳದರ್ಜೆಯ ಅಧಿಕಾರಿಗಳಿರಲು ಸಾಕು. ಇನ್ನೂ ಕೆಲವರು ಫೆಲ್ಟ್ ಹ್ಯಾಟ್ ಮಾದರಿಯಲ್ಲಿ ರುಮಾಲು ಸುತ್ತಿದ್ದಾರೆ. ಒಂದರಲ್ಲಿ ಕೊಂಬಿನಂತೆ ತುದಿಯನ್ನು ಜೋಡಿಸಲಾಗಿದೆ. ಭಕ್ತಾದಿಗಳಲ್ಲಿ ಓರ್ವನು ತಲೆಬುರುಡೆಗೆ ಅಂಟಿಕೊಳ್ಳುವಂತೆ ಟೋಪಿಯನ್ನು ಧರಿಸಿದ್ದಾನೆ.

ಪುರುಷರಿಗೂ ಸೀರೆ !

ಆಧುನಿಕ ಮಹಿಳಾವೃಂದ ನಾಗವೇಣಿಯನ್ನು ಕತ್ತರಿಸಿ ಹಾಕಿ, ಬಾಬ್ ಮಾಡಿಸಿ, ಜುಬ್ಬಾ, ಟೀಶರ್ಟ್, ಜೀನ್ಸ್ ಧರಿಸಿ ಪುರುಷರ ಅನುಕರಣೆ ಮಾಡಿದರೆ, ವಿಜಯನಗರ ಕಾಲದ ಪುರುಷರು ತಲೆಗೂದಲನ್ನು ಬೆಳೆಸಿ, ಮುಡಿ ಕಟ್ಟಿಕೊಂಡು, ಹೂ ಮುಡಿದು, ಆಭರಣಗಳನ್ನೆಲ್ಲ ಧರಿಸಿ, ಸೀರೆಯನ್ನುಟ್ಟು ಸ್ತ್ರೀಯರೊಂದಿಗೆ ಫ್ಯಾಶನ್‌ಗಳಲ್ಲಿ ಸ್ಪರ್ಧಿಸುತ್ತಿದ್ದರು ಎಂದರೆ ನಂಬುವದು ಕಷ್ಟವಾದೀತು! ಆದರೆ ಲೇಪಾಕ್ಷಿ ಭಿತ್ತಿಚಿತ್ರಗಳೆಲ್ಲ ಇದು ಸತ್ಯವೆಂದು ಸಾಕ್ಷಿ ನೀಡುತ್ತವೆ.

ವಿರುಪಣ್ಣ - ವೀರಣ್ಣ ಬಂಧುಗಳು ಉದ್ದ ತೋಳಿನ ಮೊಣಕಾಲಿನವರೆಗೆ ಬರುವ ನಿಲುವಂಗಿ ತೊಟ್ಟರೂ, ಅದರ ಮೇಲೆ ಸೆರಗು ಹಾಕದೇ ಕಲಾಪತ್ತಿನ 'ಸೀರೆ'ಯನ್ನು ಓರಣವಾಗಿ ಸುತ್ತಿಕೊಂಡಿದ್ದಾರೆ. 'ಚೀರ' ಸಂಸ್ಕೃತ ಶಬ್ದದಿಂದ ಸೀರೆ ಬಂದಿದ್ದು, ಗಂಡಸರು - ಹೆಂಗಸರು ಉಡುತ್ತಿದ್ದ ವಿವಿಧ ಉದ್ದಳತೆಯ ಹತ್ತಿ, ರೇಷ್ಮೆ, ನಾರುಗಳ, ಕಲಾಪತ್ತಿನ ಅರಿವೆಗೆ 'ಸೀರೆ'ಯೆಂದೇ ಕರೆಯುತ್ತಿದ್ದರು. ಜನಸಾಮಾನ್ಯರು ಈ ಸೀರೆಗಳನ್ನು ಅಂಗವಸ್ತ್ರದಂತೆ, ಶಾಲಿನಂತೆ, ದಟ್ಟಿಯಂತೆ ಧೋತರದಂತೆ ಉಟ್ಟು ಖುಷಿಪಡುತ್ತಿದ್ದರು. ಸೀರೆಗಳಿಗೆ ಜರತಾರಿ ಅಂಚು, ಜರಿಯ ಜುಟ್ಟಾಗಳು ಮೈತುಂಬ ಇರುತ್ತಿದ್ದವನ್ನು ಅರಸರು, ಮಾಂಡಲಿಕರು, ಪ್ರತಿಷ್ಠಿತರು ಉಡುತ್ತಿದ್ದರು. ಇವು ಬಹುಮಟ್ಟಿಗೆ ಸ್ತ್ರೀಯರು ಉಡುತ್ತಿದ್ದ ಬೆಳ್ಳಿ - ಬಂಗಾರದ ಜರಿಗೆಲಸದ ಸೀರೆಗಳನ್ನೇ ಹೋಲುತ್ತಿದ್ದವು. ವೀರಣ್ಣನ ಕೆಂಪು ಚುಕ್ಕಿಯ ಸೀರೆಗೆ, ನಾಶೀಪುಡಿ ಬಣ್ಣದ ಅಂಚನ್ನು ಸೇರಿಸಲಾಗಿದೆ.

ಸಸ್ಯ - ಪ್ರಾಣಿ ಚಿತ್ರಣ

ಸಾಧ್ಯವಿದ್ದಲ್ಲೆಲ್ಲ ಕಲಾಕಾರರು, ತಮ್ಮ ಪರಿಸರ ಪ್ರೇಮ, ನಿಸರ್ಗಪ್ರೀತಿಗಳನ್ನು ಸೂರೆಗೊಂಡಿದ್ದಾರೆ. ಕಾಡಿನಲ್ಲಿ ಅರ್ಜುನನ ತಪಸ್ಸಿನ ಸನ್ನಿವೇಶವನ್ನು ಬಳಸಿ ಹೂ ಬಳ್ಳಿ, ಗಿಡ - ಮರಗಳನ್ನು ಚಿತ್ರಿಸಿದ್ದಾರೆ. ಅದರಂತೆ ಪ್ರತಿಯೊಂದು ಅಂಕಣದ ಮೇಲೆ, ಕೆಳಗೆ, ವಿವಿಧ ಹೂಗಳಿಂದ ಅಲಂಕೃತ ಪಟ್ಟಿಕೆಗಳನ್ನು ರಚಿಸಿದ್ದಾರೆ. ಶಾಲು, ಸೀರೆ, ಪೀಠ, ರಥಗಳ ಮೇಲೂ ಹೂ - ಬಳ್ಳಿಗಳ ಕಸೂತಿ ಮಾಡಲಾಗಿದೆ.

ಅರ್ಜುನನ ತಪೋಭಂಗ ಮಾಡಲು ಧಾವಿಸಿ ಬಂದ ಕಾಡುಹಂದಿ, ನೈಜವಾಗಿ ಒಡಮೂಡಿದೆ. ಅದರ ಆರ್ಭಟಕ್ಕೆ ಕಾಡಿನಲ್ಲುಂಟಾದ ಅಲ್ಲೋಲ - ಕಲ್ಲೋಲದಿಂದ ಪಶು, ಪಕ್ಷಿಗಳೆಲ್ಲ ಗಾಬರಿಗೊಂಡ, ಜೀವರಕ್ಷಣೆಗೆ ಧಾವಿಸುತ್ತಿರುವಂತೆ ಚಿತ್ರಿಸಲಾಗಿದೆ. ಚಿಗರೆಯ ಹಿಂಡು ಹಿಂತಿರುಗಿ ನೋಡುತ್ತ ಮುಂದೆ ಓಡುತ್ತಿದೆ. ಜೀವದಾಸೆಗೆ ಮೊಲವೊಂದು ಚಿಕ್ಕ ಪೊದೆಬಿಟ್ಟು ದೊಡ್ಡದರಲ್ಲಿ ಆಶ್ರಯ ಪಡೆಯಲು ನಾಗಾಲೋಟ ಕಿತ್ತಿದೆ. ಹಕ್ಕಿಗಳು ಚಿಲಿಪಿಲಿ ಎನ್ನುತ್ತ, ಬರಲಿರುವ ಗಂಡಾಂತರದ ಕುರಿತು ಮರಿಗಳಿಗೆ ಎಚ್ಚರಿಸುತ್ತ ಮರದಿಂದ ಮರಕ್ಕೆ ಹಾರುವಂತೆ ತೋರುತ್ತದೆ. ಕರುವನ್ನು ಕಳೆದುಕೊಂಡ ಗೋಮಾತೆ. ತಿಂದುಂಡು ದಷ್ಟಪುಷ್ಟವಾಗಿದ್ದು, ಉಮಾ ಮಹೇಶ್ವರರ ವಾಹನವಾದ ನಂದಿಯಿಂದ ಅವಳನ್ನು ಬೇರ್ಪಡಿಸುವದು ಭಾರೀ ಕಷ್ಟದ ಪ್ರಸಂಗವೇ ಆಗುತ್ತದೆ!

ಶಿವನ ಪರಮಭಕ್ತ, ಕಿನ್ನರ, ಕಿಂಪುರುಷರಂಥ ವ್ಯಕ್ತಿಗಳು ಅಸ್ತಿತ್ವದಲ್ಲಿ ಇಲ್ಲವಾದ್ದರಿಂದ ಅವರನ್ನು ರಚಿಸುವ ಚಿತ್ರಕಾರರು ತಮ್ಮ ಊಹಾ ಸಾಮರ್ಥ್ಯವನ್ನು ಸಂಪೂರ್ಣವಾಗಿ ಬಳಸಿಕೊಳ್ಳಬೇಕಾಗುತ್ತದೆ. ಮಾನವ ಶರೀರಕ್ಕೆ ಕುದುರೆಯ ಮುಖವನ್ನು, ಅದೂ ಭಾವಪೂರ್ಣವಾಗಿ ಜೋಡಿಸುವುದು ಸುಲಭವಾದ ಕೆಲಸವಲ್ಲ, ಆದರೆ ಲೇಪಾಕ್ಷಿಯ ಚಿತ್ರಕಾರರು ಇದನ್ನು ಅತ್ಯಂತ ಯಶಸ್ವಿಯಾಗಿ ಮಾಡಿದ್ದಾರೆ. ಇದರಂತೆ ಈಶ್ವರನ ಅನುಯಾಯಿ ಭೃಂಗಿಗೆ ಮೂರು ಕಾಲುಗಳು ದ್ವಿಪಾದಿಯಾದ ಮಾನವನಿಗೆ ಇನ್ನೊಂದು ಕಾಲನ್ನು ಎಲ್ಲಿ ಹೇಗೆ ಜೋಡಿಸುವದೆಂದು ಸಮಸ್ಯೆ ಎದುರಿಗೆ ನಿಲ್ಲುವದು ಸಹಜ. ಆದರೆ ಕಲಾತ್ಮಕವಾಗಿ ಇಲ್ಲಿ ಮೂರುಕಾಲಿನ ಭೃಂಗಿ ಸೃಷ್ಟಿಯಾಗಿದ್ದಾನೆ.

ವಾನರವರ್ಗಕ್ಕೆ ಸೇರಿದ ಮುಚಕುಂದನು ಪರಮ ಶಿವಭಕ್ತ ತನ್ನ ಪರಿವಾರದೊಂದಿಗೆ ಶಿವನ ದರ್ಶನಕ್ಕೆಂದು ಭಯ ಭಕ್ತಿಯಿಂದ ಕಾತರತೆಯಿಂದ ಕಾದುಕೊಂಡಿದ್ದಾನೆ. ಅವರಿಗೆ ಕೋತಿಯ ಮುಖ, ಬಾಯಿಗಳು ಇದ್ದರೂ ಉಳಿದ ಅಂಗಾಗಗಳೆಲ್ಲ ಮಾನವರವು. ಕುಲಾವಿಯಂತೆ ಎತ್ತರವಾದ ಕಿರೀಟ, ಕಿವಿ, ಕೊರಳು, ಕೈಕಾಲುಗಳಿಗೆ ಭರ್ಜರಿ ಆಭರಣಗಳು, ಸೊಂಟಕ್ಕೆ ವಿವಿಧ ಬಣ್ಣದ ನಕ್ಷೆಗಳ 'ಸೀರೆ'ಗಳನ್ನು ಸುತ್ತಲಾಗಿದೆ.

ಶಿವನ ಜಡೆಯಿಂದ ಹರಿಯುವ ಗಂಗೆಯಲ್ಲಿ ಮೀನುಗಳು ಈಜಾಡುತ್ತಿರುವಂತೆ ಚಿತ್ರಿಸಿದರೆ, ವಿಷ್ಣುವಿನ ದಶಾವತಾರಗಳೆಲ್ಲ ಮತ್ಸ್ಯ, ಕೂರ್ಮ ವರಾಹಗಳೆಲ್ಲ ಸಜೀವವಾಗಿವೆ.

ಅತಿಮಾನವರು

ನೋಡಲು ಸಿಗದ ಅತಿ ಮಾನವರನ್ನು ಚಿತ್ರಿಸುವದು ಕಷ್ಟದ ಕೆಲಸ! ಇದಕ್ಕಾಗಿ ಶಿಲ್ಪ ಸೂತ್ರಗಳ ಜೊತೆಗೆ ರಾಮಾಯಣ, ಮಹಾಭಾರತ, ಪುರಾಣಗಳನ್ನು ಆಳವಾಗಿ ಅಭ್ಯಸಿಸಿ, ಸರಿಯಾಗಿ ಅರ್ಥೈಸಿಕೊಳ್ಳಬೇಕಾಗುತ್ತದೆ. ಶಿಲ್ಪಗಳು, ಚಿತ್ರಕಾರರು, ಒಂದೇ ಸೂತ್ರಗಳನ್ನು ಬಳಸಿಕೊಂಡರೂ ಅದಕ್ಕೆ ಸರಿಯಾದ ಮೂರ್ತಿಸ್ವರೂಪವನ್ನು ಕೊಡುವ ವಿಧಾನ ಮಾತ್ರ, ತುಂಬ ಭಿನ್ನವಾದದ್ದು. ಚಿತ್ರಕಾರರು ಚಪ್ಪಟೆ ಆಕೃತಿಯಲ್ಲಿ, ಗಾತ್ರವನ್ನು ಸರಿಯಾಗಿ ಜೋಡಿಸಿ ಜೀವಕಳೆ ತುಂಬುವದು ಅನಿವಾರ್ಯ! ಹೀಗಾಗಿ ಯಕ್ಷಗಾನದ ಕಟ್ಟುವೇಷದಂತೆ, ತಮ್ಮ ಚಿತ್ರ ಪುರುಷರಿಗೆ ಭರ್ಜರಿಯಾದ ಪೋಷಾಕು ಹಾಗೂ ಆಭರಣಗಳ ಅಲಂಕಾರ ಮಾಡಿದಾಗಲೇ ಇವರು ಸಾಮಾನ್ಯ ಮಾನವರಿಗಿಂತ ಉಚ್ಚಸ್ತರದಲ್ಲಿದ್ದವರು! ಎಂಬ ಭಯಭಕ್ತಿ ನೋಡುವವರಲ್ಲಿ ಉಂಟಾಗಲಿ ಎಂಬ ಭಾವನೆ ಚಿತ್ರಕಾರರಲ್ಲಿ ಇದ್ದಂತಿದೆ.

ಕುಲಾವಿಯನ್ನು ಹೋಲುವಂಥ ಎತ್ತರದ ಕಿರೀಟಗಳನ್ನು ಅಥವಾ ಜಟಾಜೂಟಗಳನ್ನೆ ಆ ಆಕಾರದಲ್ಲಿ ಎತ್ತಿಕಟ್ಟಿ ಅವಕ್ಕೆ ಆಭರಣಗಳನ್ನು ಕೂಡ್ರಿಸಿರುತ್ತಾರೆ. ಕೆಲಮೊಮ್ಮೆ ಹೂಗಳನ್ನೂ ಸೇರಿಸುವದು ಇದೆ. ಹಣೆಗೆ ನಾಮವನ್ನೋ, ವಿಭೂತಿ ಪಟ್ಟೆಯನ್ನೋ ಎಳೆಯುವುದು ಸಾಮಾನ್ಯ. ಸರ್ವರಿಗೂ ಬೊಗಸೆಗಂಗಳು. ಕಣ್ಣು ಗುಡ್ಡೆಗಳು ಹಿರಿದಾಗಿರುತ್ತವೆ. ಪುರಾಣ - ಪುರುಷರನ್ನು ಅವರ ಶರೀರ ರಚನೆಯಿಂದಲೇ ಗುರುತಿಸಲು ಬರುವಂತೆ, ಎರಡು, ಮೂರು, ನಾಲ್ಕು ಮುಖಗಳನ್ನು ಹೊಂದಿಸಿರುತ್ತಾರೆ. ಆಭರಣ ತೊಡುವದರಲ್ಲಿ ಈ ಆಕೃತಿಗಳು ಎಂಥ ಸ್ತ್ರೀಯರನ್ನೂ ಮೀರಿಸಿರುತ್ತಾರೆ. ಇಲ್ಲಿಯ ದೇವಾಧಿ

ದೇವತೆಗಳಿಗೆ ಲೇಪಾಕ್ಷಿ ಕಲಾಕಾರರು ತೊಡಿಸಿದ ಆಭರಣಗಳೆಲ್ಲ ಬೇರೆಲ್ಲೂ ನೋಡಲು ದೊರೆಯಲಾರವು ಎಂದರೆ ಅತಿಶಯೋಕ್ತಿಯಾಗಲಾರದು. ಎರಡು ಕೈಗಳು ಸಾಮಾನ್ಯ. ಆದರೆ ಕೆಲವಕ್ಕೆ ನಾಲ್ಕು, ಆರು, ಎಂಟು, ಹತ್ತು ಕೈಗಳನ್ನು ಕಾಣಿಸಿದ್ದಿದೆ. ಕೈ ಬೆರಳುಗಳು ವಿವಿಧ ಮುದ್ರೆಗಳನ್ನು ಸೂಚಿಸುತ್ತವೆ; ಇಲ್ಲವೇ ತ್ರಿಶೂಲ, ಅಂಕುಶ, ಪರಶು, ಗದೆಗಳಂಥ ಆಗಿನ ಕಾಲದ ಆಯುಧಗಳನ್ನು ಹಿಡಿದಿರುತ್ತವೆ. ಯಜ್ಞೋಪವೀತ, ಬ್ರಹ್ಮಸೂತ್ರ, ಕಾಂಚೀದಾಮಗಳನ್ನು ಧರಿಸಿರುವದು ತೀರ ಸಾಮಾನ್ಯ. ಅವರು ನಕ್ಷೆಯ 'ಸೀರೆ' ಉಟ್ಟಿರಬಹುದು; ಇಲ್ಲವೆ ಚಿಗರೆ, ಹುಲಿಯ ಚರ್ಮಾಂಬರವನ್ನು ಧರಿಸಿರಬಹುದು, ಶಲ್ಯ ಹೊದ್ದಿರುವದನ್ನು, ಪಾದುಕೆಗಳನ್ನು ಮೆಟ್ಟಿರುವದನ್ನು ಕಾಣಬಹುದು.

ದೇವದೇವತೆಗಳ ಗಣಗಳೂ ಅನುಯಾಯಿಗಳೂ ಸ್ವಾರಸ್ಯಕರ ರೀತಿಯಲ್ಲಿ ಚಿತ್ರಿತರಾಗಿದ್ದಾರೆ. ಶಾಮವರ್ಣದ ಗೋಪಾಲಕನ ಶಾರೀರಿಕ ಅಲಂಕಾರಗಳನ್ನು ನೋಡಿದಷ್ಟು ಕಡಿಮೆ! ಸರ್ಕಸ್ಸಿನ ಕೋಡಂಗಿಯಂತೆ ಟೋಪಿ ಧರಿಸಿದವರಿದ್ದಾರೆ. ತಲೆಕೂದಲು (ಎಣ್ಣೆ ಕಾಣದೆ) ಹುಲ್ಲಿನ ಹೊರೆಯಂತೆ ಸುತ್ತಿಕೊಂಡವರಿದ್ದಾರೆ. ಜಡೆಗಟ್ಟಿದ ಕೇಶರಾಶಿಯವರು ಗಡ್ಡ, ಮೀಸೆಗಳನ್ನು ಹುಲುಸಾಗಿ ಬೆಳೆಸಿದವರು ಇದ್ದಾರೆ. ಶಿವನಗಣದವರು ತಮ್ಮ ಆಸ್ತಿತ್ವವನ್ನು ತೋರ್ಪಡಿಸಲು ಏನೆಲ್ಲ ಕಸರತ್ತಗಳಲ್ಲಿ ತೊಡಗಿದ್ದಾರೆ. ಇವನ್ನೆಲ್ಲ ಕಣ್ಣಲ್ಲಿ ಕಣ್ಣಿಟ್ಟು ನೋಡಿ, ವಿಂಗಡಿಸಲು ಸಮಯ ಇದ್ದಷ್ಟೂ ಸಾಲದು !

ಆಗಬೇಕಾದ ಸಂರಕ್ಷಣಾ ಕೆಲಸ

ಲೇಪಾಕ್ಷಿಯ ಭಿತ್ತಿಚಿತ್ರಗಳನ್ನೆಲ್ಲ ಮಾಡಿನ ಮುಚ್ಚಿಗೆಗೇ ಸೀಮಿತಗೊಳಿಸಿದ್ದರಿಂದ, ಅವನ್ನು ಅಭ್ಯಸಿಸಲು ಹೆಚ್ಚಿನ ಶ್ರಮ ಬೇಕಾಗುತ್ತದೆ. ಅಂತೆಯೇ ಅವನ್ನು ವಿವರವಾಗಿ ವೀಕ್ಷಿಸಿ, ಕ್ಲಿಕ್ಕಿಸಿ, ಅಭ್ಯಸಿಸಿದ ಕನ್ನಡಿಗರು ಅತಿ ವಿರಳರೆಂದರೆ ತಪ್ಪಿಲ್ಲ, ಲೇಪಾಕ್ಷಿ ಶೈಲಿಯ ವಿಮರ್ಶಕರೋ! ಲಭ್ಯವಿರುವ ಕೆಲವೇ ಛಾಯಾಚಿತ್ರಗಳನ್ನು ಬಳಸಿದ್ದರಿಂದ ಈ ಅಪರೂಪದ ಚಿತ್ರಕಾರರಿಗೆ ಸಿಗಬೇಕಾದ ಗೌರವ ಸಿಕ್ಕಿಲ್ಲ. ಉತ್ತರ ಭಾರತದ ಕಲಾಪ್ರಾಜ್ಞರೋರ್ವರು ಇದು ಅಜಂತಾ - ಎಲ್ಲೋರಾ ಶೈಲಿಯ ಮುಂದರಿಕೆ ಎಂದು ಪಟಾಕ್ಷಿ ಹಾರಿಸಿದರೆ, ತಾಳೆಗರಿ ಪರಿಣಿತರು, ಜೈನ ತಾಳವೋಲೆಗಳ ಆಕೃತಿಗಳನ್ನೇ ಇಲ್ಲಿ ಬೃಹತ್ ಆಕಾರದಲ್ಲಿ ಚಿತ್ರಿಸಿದ್ದಾರೆ ಎಂಬ ತೀರ್ಪನ್ನು ಇತ್ತಿದ್ದಾರೆ! ತಮಿಳುನಾಡಿನ ಕೆಲ ತಜ್ಞರು, ತಂಜಾಪೂರಿನ ಬೃಹದೇಶ್ವರ ದೇವಾಲಯದ ಭಿತ್ತಿ ಚಿತ್ರಗಳ ಪಡಿನೆಳಲನ್ನು ಲೇಪಾಕ್ಷಿಯಲ್ಲಿ ಗುರುತಿಸಿದ್ದಾರೆ. ಕರ್ನಾಟಕದವರು ಕೂಡ ವಿಜಯನಗರದ ಆಗಿನ ವೈಭವದ ಕುರುಡು ವ್ಯಾಮೋಹದಿಂದ ಇಲ್ಲಿಯ ಚಿತ್ರಗಳೆಲ್ಲ ಹಂಪಿ ವಿರೂಪಾಕ್ಷ ದೇವಾಲಯದ ಭಿತ್ತಿಚಿತ್ರಗಳದೇ ಇನ್ನೊಂದು ರೂಪವೆಂದು ಸಾರಿದ್ದಾರೆ. ಆದರೆ ಲೇಪಾಕ್ಷಿಯ ಅಳಿದುಳಿದ ಭಿತ್ತಿಚಿತ್ರಗಳೆಲ್ಲ ಬೇರೆ ಎಲ್ಲೂ ಕಾಣಸಿಗದ ಅಪರೂಪದ ಕಲಾನಿಧಿಯಾಗಿವೆ. ಇವು ಸ್ಥಳೀಯರಾಗಿದ್ದ ಅಂದಿನ ಕಲಾಕಾರರು ಬರೆದ, ಅಪ್ಪಟ ಕನ್ನಡಿಗರವೇ ಕಲಾಕೃತಿಗಳಾಗಿವೆ. ಅವರು ತಮಗೆ ಚಿರಪರಿಚಿತವಾದ ಸುತ್ತಮುತ್ತಿಲಿನ ಜನಜೀವನ, ಪ್ರಾಣಿ - ಪರಿಸರ, ವೇಷ -ಭೂಷಣಗಳನ್ನೇ ಚಿತ್ರಗಳಲ್ಲಿ ಅಳವಡಿಸಿಕೊಂಡಿದ್ದಾರೆ. ಇಂದು ಆಂಧ್ರಕ್ಕೆ ಸೇರಿದ ಪ್ರಜೆಗಳು, ಅಂದಿನ ಕನ್ನಡಿಗರೇ ಆಗಿದ್ದರು ಎಂಬ ಮಾತನ್ನು ಮರೆಯುವಂತೆ ಇಲ್ಲ. ವಿಜಯನಗರ ಸಾಮ್ರಾಜ್ಯ ದಕ್ಷಿಣದ ತುದಿಯನ್ನು ಮುಟ್ಟಿತ್ತು.

ಶತಕಗಳ ಅಲಕ್ಷ್ಯದಿಂದಾಗಿ ಕನ್ನಡಿಗರ ಈ ಕಲಾಸಿರಿ ಕಣ್ಮರೆಯಾಗುವದರಲ್ಲಿದೆ. ಕನ್ನಡ ಸಂಸ್ಕೃತಿ, ಕಲೆಗಳು ಎಲ್ಲಿಯೇ ಇದ್ದರೂ ಅವನ್ನು ಭಾವೀ ಪೀಳಿಗೆಗಾಗಿ ರಕ್ಷಿಸಿಡುವದು ಕರ್ನಾಟಕ ಲಲಿತ ಕಲಾ ಅಕಾಡೆಮಿಯಂಥ ಸಂಸ್ಥೆಗಳ ಹೊಣೆ. ಲೇಪಾಕ್ಷಿಯನ್ನು ಕರ್ನಾಟಕದಲ್ಲಿ ಸೇರಿಸುವದು ಅಸಾಧ್ಯವಾಗಿರಬಹುದು. ಆದರೆ ಕರ್ನಾಟಕ ಸಂಸ್ಕೃತಿಯ ಪ್ರತೀಕಗಳಾದ ಚಿತ್ರ ಸಿರಿಯನ್ನು ಛಾಯಾಚಿತ್ರಗಳಲ್ಲಿ, ವೀಡಿಯೋ ರೂಪದಲ್ಲಿ ಸಚಿತ್ರ ಗ್ರಂಥದಲ್ಲಿ ಕಾಯ್ದಿರಿಸುವ ಕೆಲಸ ತ್ವರಿತವಾಗಿ ಆಗಲೇಬೇಕಾಗಿದೆ.

ದಾಂಪತ್ಯ ಜೀವನದಲ್ಲಿ ಕ್ರೌರ್ಯ - ಪರಿಹಾರಕ್ಕೆ ಹೊಸತಂತ್ರ

ಶ್ರೀಮತಿ ಹೆಚ್. ಪ್ರಭಾ ಶರ್ಮ

ಮನುಕುಲದ ಸಾಮಾಜಿಕ ವ್ಯವಸ್ಥೆಯಲ್ಲಿ ಮಾತೃಪ್ರಧಾನ ಕುಟುಂಬಗಳು ಕಣ್ಮರೆಯಾಗಿ ಅವುಗಳ ಸ್ಥಾನದಲ್ಲಿ ಪಿತೃಪ್ರಧಾನ ಕುಟುಂಬಗಳು ಸ್ಥಾಪನೆಗೊಳ್ಳುತ್ತಿದ್ದಂತೆಯೇ ಕ್ರಮಕ್ರಮವಾಗಿ ದೈಹಿಕ ದುರ್ಬಲತೆಯನ್ನು ನೆಪ ಮಾಡಿಕೊಂಡು ರಕ್ಷಣೆಯ ಸೋಗಿನಲ್ಲಿ ಮಹಿಳೆಯ ಮೇಲೆ ದಬ್ಬಾಳಿಕೆ ಆರಂಭಗೊಂಡು ದಿನದಿಂದ ದಿನಕ್ಕೆ ಹೆಚ್ಚು ಹೆಚ್ಚು ಗಂಭೀರವಾಗಿ ಬೇರು ಬಿಟ್ಟಿರುವುದು ಇತಿಹಾಸ. ಹೀಗೆ ಸ್ಥಾಪಿತಗೊಂಡ ದಬ್ಬಾಳಿಕೆ ದೌರ್ಜನ್ಯವಾಗಿ ಪರಿವರ್ತಿತವಾಗುವುದಕ್ಕೆ ಹೆಚ್ಚಾ ಕಾಲವೂ ಹಿಡಿಯಲಿಲ್ಲ. ಸಾಮಾನ್ಯ ಸ್ವರೂಪದ ದೌರ್ಜನ್ಯವು ಸಾಲದೋ ಎಂಬಂತೆ ವಿವಿಧ ಮಜಲುಗಳ ಕ್ರೌರ್ಯವೇ ಸ್ಥಾಪಿತಗೊಂಡ ದಬ್ಬಾಳಿಕೆ ದೌರ್ಜನ್ಯವಾಗಿ ಪರಿವರ್ತಿತವಾಗುವುದಕ್ಕೆ ಹೆಚ್ಚು ಕಾಲವೂ ಹಿಡಿಯಲಿಲ್ಲ. ಸಾಮಾನ್ಯ ಸ್ವರೂಪದ ದೌರ್ಜನ್ಯವು ಸಾಲದೋ ಎಂಬಂತೆ ವಿವಿಧ ಮಜಲುಗಳ ಕ್ರೌರ್ಯವೇ ಸ್ಥಾಪಿತಗೊಂಡು, ಅದರ ಕಬಂಧ ಬಾಹುಗಳು ಬದುಕಿನ ಎಲ್ಲ ಮಗ್ಗಲುಗಳಿಗೂ ಆವರಿಸಿಕೊಂಡಿದ್ದು, ಈ ಬಾಹುಗಳ ಹಿಡಿತ ಈಗ ಪ್ರಾಣಾಂತಿಕ ಮಟ್ಟವನ್ನು ತಲುಪಿರುವುದು ಪ್ರಜ್ಞಾವಂತ ನಾಗರಿಕರ ಎದೆ ನಡುಗುವಂತೆ ಮಾಡಿದೆ.

ಮಹಿಳೆಗೆ ಸಂಬಂಧಿತ ವಿಚಾರಗಳಲ್ಲಿ ಸಂಸ್ಕೃತಿ, ಸದಾಚಾರಗಳು ಅರ್ಥ ಕಳೆದು ಅವುಗಳ ಸ್ಥಾನವನ್ನು ಅಪಮಾನ, ಅವಹೇಳನ, ಲಜ್ಜೆಗೇಡಿತನಗಳು ಅಕ್ರಮಿಸುತ್ತಿದ್ದು, ಇದಕ್ಕೆ ಸಂಪೂರ್ಣವಾಗಿ ಪುರುಷ ವರ್ಗವಷ್ಟೇ ಹೊಣೆಯಾಗದೆ ಸ್ವತಃ ಹೆಣ್ಣು ಕೂಡ ತನ್ನ ಅವನತಿಗೆ ಗೋರಿ ತೋಡಿಕೊಳ್ಳುತ್ತಿರುವುದು ಸಾಮಾಜಿಕ ಭದ್ರತೆಯಲ್ಲಿ ವಿಶ್ವಾಸ

ಹೊಂದಿರುವ ಎಲ್ಲರಿಗೂ ಆಘಾತ ತಂದಿರುವ ವಿಷಯ. ಇದಾವುದೂ ಒಂದು ನೆಲದ ಅಥವಾ ಒಂದು ವರ್ತಮಾನದ ಸ್ಥಿತಿಯಾಗದೆ ದಿನದಿಂದ ದಿನಕ್ಕೆ ವೃದ್ಧಿಸುತ್ತಾ ವ್ಯಾಪಕತೆಯನ್ನು ವಿಸ್ತರಿಸುತ್ತಾ ಒಟ್ಟು ಸೃಷ್ಟಿಯನ್ನೇ ನುಂಗಿಬಿಡುವಂತೆ ಕಾಣಿಸಿಕೊಳ್ಳುತ್ತಿರುವುದು ಒಂದೆಡೆಯಾದರೆ, ಸಭ್ಯತೆಯನ್ನೇ ಲೇವಡಿ ಮಾಡುತ್ತಾ, ಸಜ್ಜನಿಕೆಯನ್ನೇ ಹಳಿಯುತ್ತಾ ಕ್ಷಣಿಕ ಆಡಂಬರವನ್ನು ಅಪ್ಪಿಕೊಳ್ಳುತ್ತಿರುವ ಯುವ ಜನಾಂಗದ ನಡವಳಿಕೆ ಮತ್ತೊಂದೆಡೆ ಭ್ರಾಂತಜೀವನಕ್ಕೆ ತೆರೆದುಕೊಳ್ಳುತ್ತಿದೆ - ಇದೂ ಕೂಡ ಮಹಿಳಾ ಕ್ರೌರ್ಯದ ಮತ್ತೊಂದು ಮಗ್ಗಲು.

ಆಧುನಿಕ ನಾಗರೀಕತೆಯ ಗಾಳಿ ದಟ್ಟವಾಗಿ ಬೀಸುತ್ತಿದ್ದಂತೆ ೧೯೮೦ರ ದಶಕದಲ್ಲಿ ಕ್ರೌರ್ಯದ ಬೇರುಗಳನ್ನೇ ಕಿತ್ತು ಹಾಕಲು ನಮ್ಮ ನೆಲದಲ್ಲಿ (ಭಾರತ ಮಾತೆಯ ಮಡಿಲಲ್ಲಿ!) ಕೆಲವು ವಿಶಿಷ್ಟವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ಸರ್ಕಾರದ ಕಡೆಯಿಂದ, ಸರ್ಕಾರದ ನೆರವಿನೊಂದಿಗೆ ಹಾಗೂ ಸ್ವತಂತ್ರವಾಗಿ ಕೆಲವು ಸ್ವಯಂಸೇವಾ ಸಂಸ್ಥೆಗಳು ರಚನೆಗೊಂಡು ಮಹಿಳೆಯರ ಮೇಲಿನ ದೌರ್ಜನ್ಯವನ್ನು ತಡೆಗಟ್ಟಲು ಕಟಿಬದ್ಧವಾದವು.

ಮಹಿಳೆಯ ಮೇಲೆ ನಡೆಯುವ ಅತಿಕ್ರಮಣ ಅದರ ಬಹಿರಂಗ ರೂಪದಲ್ಲಿ ಎಲ್ಲರಿಗೂ ಕಾಣುವಂತಹದು. ಇದಕ್ಕೆ ಚಿಕಿತ್ಸೆ ನೀಡುವ ಮಾರ್ಗವಿದೆ. ಆದರೆ ಆಕೆಯ ಮೇಲೆ ನಡೆಯುವ ಆಂತರಿಕ ಅತಿಕ್ರಮಣ ಬಹು ಸೂಕ್ಷ್ಮಸ್ವರೂಪದ್ದು. ಇದು ಕುಟುಂಬದ ಒಳಗಷ್ಟೇ ಅಲ್ಲ, ದಾಂಪತ್ಯದಲ್ಲೂ ಹೆಣ್ಣು ಅನುಭವಿಸುವ ನೋವು ಯಾರಿಗೂ ಹೇಳಿಕೊಳ್ಳಲಾಗದು. ಹೇಳಿಕೊಂಡರೆ 'ನಗೆಪಾಟಲು' ಎಂದು ಸಹಿಸಿಕೊಂಡು ಹೋಗುವಂತಹದ್ದು. ಹೆಣ್ಣು - ಗಂಡಿನ ಸಂಬಂಧದ ದೈಹಿಕ ಹಿಂಸೆ, ಮಾನಸಿಕ ಅಸಮತೋಲನ, ಆಕೆಯ ವೃತ್ತಿ ಘನತೆಗೆ ಆಗುವ ಅವಮಾನ, ಸ್ವಾಭಿಮಾನಕ್ಕೆ ಬೀಳುವ ಬರೆ - ಈ ಬಗೆಯವು. ಇಂತಹ ಸಂದರ್ಭದಲ್ಲಿ ಆಕೆ ಸುಂದರಿಯಾದರೂ ಕಷ್ಟ, ಜಾಣೆಯಾದರೂ ಕಷ್ಟ ಕುರೂಪಿಯಾದರಂತೂ ತೀರಿತು; ಸುಲಿಗೆಯ ಮಹಾಪೂರ, ಒಟ್ಟಿನಲ್ಲಿ ದೈಹಿಕ ಮಾನಸಿಕ ದಾಸ್ಯ.

ಹಾಗಾದರೆ ಎಲ್ಲ ಕುಟುಂಬಗಳಲ್ಲೂ ಹೀಗಿದೆಯೇ? ಎಂಬ ಪ್ರಶ್ನೆ ಏಳಬಹುದು. 'ಬಹುತೇಕ' - ಎಂದು ಉತ್ತರ ನೀಡಬೇಕಾಗುವುದು ದೌರ್ಭಾಗ್ಯ. ನೆಮ್ಮದಿಯಿಂದ ಇರುವವರ ಬಗ್ಗೆ ನಮಗೆ ಯಾವ ಕಾಳಜಿಯೂ ಬೇಕಿಲ್ಲ. ಅವರು ಅದೃಷ್ಟವಂತರು ಎನ್ನುವಾ. ನಮ್ಮ ಸ್ವಯಂಸೇವಾ ಸಂಸ್ಥೆಗಳ ಗುರಿ 'ಹದಗೆಟ್ಟದ್ದನ್ನು ಸರಿ ಮಾಡುವುದು' ಮಾತ್ರ. ನೊಂದ ಮಹಿಳೆಗೆ ಆಸರೆ ಕೊಟ್ಟು ಬದುಕನ್ನು ಹಸನು ಮಾಡುವ ಕಾಯಕ. ಒಬ್ಬ ಹೆಣ್ಣುಮಗಳು ಅವಳೆಷ್ಟೇ ತಿಳಿವಳಿಕೆಯುಳ್ಳವಳಾಗಿದ್ದಾಗ್ಯೂ ಸೇರಿದ ಮನೆಯಲ್ಲಿ ಮೂಕಪಶುವಿನಂತಿರಬೇಕು. ಒಂದು ವ್ಯಕ್ತಿ ಎಲ್ಲರಿಗೂ ಹೊಂದಿಕೊಂಡು ಹೋಗಬೇಕು. 'ಹೊಂದಿಕೊಂಡು ಹೋಗುವ' ಜವಾಬ್ದಾರಿ ಗಂಡಿನದು ಅಲ್ಲ ಎಂಬಂತಹ ಮನೋಭಾವ ಇಂದಿನ ನವಯುಗದ ಯುವ ಜನತೆಯಲ್ಲೂ ಜೀವಂತವಿದೆ.

ದಿನದಿಂದ ದಿನಕ್ಕೆ ಮದುವೆಯ ಖರ್ಚು, ಆಡಂಬರ, ಬೇಡಿಕೆಗಳು ಹಿಗ್ಗುತ್ತಿದ್ದು, ಕನ್ಯಾಪಿತೃ ಕಂಗಾಲಾಗುವುದರ ಜತೆಗೆ ಮನೆಗೆ ಬಂದ ಸೊಸೆ ಹೀಗಿರಬೇಕು ಎಂದು ನಿರೀಕ್ಷಿಸುವ ಜನ, ತಮಗೆ ಬರುವ ಅಳಿಯ ಇಂತಿರಬೇಕು ಎಂದು ಹೇಳುವ ಸಾಹಸ ಮಾಡುವುದಿಲ್ಲ. ಇಂತಹ ಸಂದರ್ಭದಲ್ಲೇ ದಾಂಪತ್ಯಜೀವನಕ್ಕೆ ಕಾಲಿಡುವ ಬಾಲೆಯ ಮೇಲೆ ಎಷ್ಟೊಂದು ಜವಾಬ್ದಾರಿ. ಅದರ ಮೇಲೆ ಶೋಷಣೆ - ನೆಮ್ಮದಿಯ ಬದುಕು ಬಹು ದೂರ ಎನ್ನುವ ಸ್ಥಿತಿ. ನಾನು ಹೇಳುತ್ತಿರುವುದು ಮಧ್ಯಮ ಮತ್ತು ಕೆಳವರ್ಗದ ಕುಟುಂಬಗಳ ಪರಿಸ್ಥಿತಿ. ಅಳಿಯನನ್ನು ಕೊಂಡುಕೊಳ್ಳುವ ಸ್ಥಿತಿವಂತರ ಬಗ್ಗೆ ಅಲ್ಲ.

ಈ ಮೇಲಿನ ಹಿನ್ನೆಲೆಯಲ್ಲಿ ಈಗ ಆಂತರಿಕ ಅಪಮಾನಕ್ಕೆ ಒಳಗಾದ ಮಹಿಳೆಯ ಸ್ಥಿತಿ - ಗತಿ, ಅದರ ಪರಿಹಾರಕ್ಕೆ ಸ್ವಯಂ ಸೇವಾ ಸಂಸ್ಥೆಗಳು ಕೈಗೊಂಡಿರುವ ಕ್ರಮಗಳು - ಸಾಫಲ್ಯ - ವೈಫಲ್ಯ, ಕಾನೂನಿನ ಒತ್ತಾಸೆ, ಇತ್ಯಾದಿ ವಿಚಾರಗಳನ್ನೊಂದಿಷ್ಟು ಪರಿಶೀಲಿಸೋಣ.

ಕಿರುಕುಳ ನಿವಾರಣೆಗೆಂದೇ ವಿಶೇಷ ಶಾಸನ

ದಾಂಪತ್ಯದಲ್ಲಿ ಮಹಿಳೆಯ ಮೇಲೆ ನಡೆಯುವ ಹಿಂಸೆ, ಆಕ್ರಮಣ, ಅತ್ಯಾಚಾರಗಳನ್ನು ತಡೆಗಟ್ಟಿ ಅದರ ನಿವಾರಣೆಗಾಗಿ ಕ್ರಮ ಜರುಗಿಸಲೆಂದೇ ಭಾರತೀಯ ದಂಡ ಸಂಹಿತೆಗೆ ೧೯೮೩ರಲ್ಲಿ ಒಂದು ತಿದ್ದುಪಡಿ ತಂದು 'ಅಪರಾಧ ಕಾನೂನು ತಿದ್ದುಪಡಿ ಶಾಸನ - ೧೯೮೩' ಎಂದು ಕರೆಯಲಾಯಿತು. ಸೆಕ್ಷನ್ ೪೯೮-ಎ ಎಂಬುದನ್ನು ಈ ಮೂಲಕ ಸೇರಿಸಲಾಯ್ತು. ಪ್ರಧಾನವಾಗಿ ವರದಕ್ಷಿಣೆಯ ಪಿಡುಗನ್ನು ಹೊಡೆದೋಡಿಸುವುದು ಈ ತಿದ್ದುಪಡಿಯ ಉದ್ದೇಶವಾದರೂ ಒಟ್ಟು ಆಂತರಿಕ ಅಪಮಾನವನ್ನು ದೂರ ಮಾಡುವ ಸಾಹಸವೂ ಸೇರಿಕೊಂಡಿದೆ. ಭಾರತೀಯ ದಂಡ ಸಂಹಿತೆಯ ತಿದ್ದುಪಡಿ (೪೯೮-ಎ) ಹೀಗೆ ಹೇಳುತ್ತದೆ :

ಮಹಿಳೆಯ ಪತಿ ಅಥವಾ ಸಂಬಂಧಿ ಯಾರೇ ಆಗಿರಲಿ ಆಕೆಯನ್ನು ಕೌರ್ಯಕ್ಕೆ ಒಳಪಡಿಸಿದಲ್ಲಿ ಆತನಿಗೆ ಮೂರು ವರ್ಷಗಳವರೆಗೆ ಸಜೆ ಮತ್ತು ದಂಡಶುಲ್ಕವನ್ನು ವಿಧಿಸತಕ್ಕದ್ದು.

ವಿವರಣೆ : ಈ ಭಾಗಕ್ಕೆ ಸಂಬಂಧಿಸಿದ್ದಂತೆ ಕ್ರೌರ್ಯ ಎಂದರೆ -

ಎ) ಮಹಿಳೆಯನ್ನು ಅತ್ಮಹತ್ಯೆಗೆಳಸುವಂತೆ ಮಾಡುವ ಅಥವಾ ಆಕೆಯ ಜೀವಕ್ಕೆ ಯಾವುದೇ ಅಪಾಯವನ್ನು ತಂದುಕೊಳ್ಳುವಂತಹ ಸ್ಥಿತಿಗೆ ಪ್ರೇರೇಪಿಸುವ ಯಾವುದೇ ಉದ್ದೇಶಿತ ಕ್ರಿಯೆ.

ಬಿ) ಮಹಿಳೆಯರು - ಯಾವುದೇ ಕಾನೂನು ಬಾಹಿರವಾದ ಬೇಡಿಕೆಯನ್ನು (ಆಕೆಯ ಪತಿಯ ಮನೆಯವರಿಗಾಗಿ) ಈಡೇರಿಸುವಂತೆ ಮಾಡುವ ಅಥವಾ ಆಕೆಯ ಸಂಬಂಧಿಗಳನ್ನು ಯಾವುದೇ ಅಮೂಲ್ಯ ಚರ - ಸ್ಥಿರ ಆಸ್ತಿಯನ್ನು ನೀಡುವಂತೆ ಒತ್ತಾಯಿಸಲು ಕಿರುಕುಳ ನೀಡುವುದು ಮತ್ತು ಬೆದರಿಕೆ ಹಾಕುವುದು.

ತಿದ್ದುಪಡಿಯ ವಿವರಣೆ ವಿಭಾಗದಲ್ಲಿ ಬರುವ 'ಬಿ' ವಿಭಾಗದ ವಿವರಗಳನ್ನು ವರದಕ್ಷಿಣೆಯ ಸಂಬಂಧವಾಗಿಯೇ ಉದ್ದೇಶಿತ ನಿವಾರಣೆಗೆ ಸೇರಿಸಲಾಯ್ತು. ಇದೇ ಸಂದರ್ಭದಲ್ಲಿ ಭಾರತೀಯ ಸಾಕ್ಷ್ಯಾಧಾರ ಶಾಸನಕ್ಕೂ (ಇಂಡಿಯನ್ ಎವಿಡೆನ್ಸ್ ಆಕ್ಟ್) - ಸೆ ೧೧೩ ಎ ಸೇರಿಸುವುದರ ಮೂಲಕ ತಿದ್ದುಪಡಿ ತರಲಾಯ್ತು. ಕ್ರೌರ್ಯ ಎನ್ನುವುದು ಅದು ಮಹಿಳಾ ಸಂಬಂಧಿತ ಅಪರಾಧ ಆಗಿದ್ದಲ್ಲಿ ದೈಹಿಕ ಮಾತ್ರವಲ್ಲ ಮಾನಸಿಕವೂ ಆಗಿರಬಹುದು ಎಂಬ ಸೂಕ್ಷ್ಮ ವಿಚಾರವನ್ನು ಕಾನೂನಿನ ವ್ಯಾಪ್ತಿಯಲ್ಲಿ ತಂದಿದ್ದು, ಈ ತಿದ್ದುಪಡಿಯ ಒಂದು ದೊಡ್ಡ ಪ್ರಯತ್ನವೇ ಸರಿ.

ಶಾಸನದ ಕಡೆಯಿಂದ ಈ ಬಗೆಯ ಒತ್ತಾಸೆ ದೊರಕಿದ್ದಾಗ್ಯೂ ಅವುಗಳನ್ನು ಜಾರಿಗೊಳಿಸುವಾಗ ಹೆಜ್ಜೆ ಹೆಜ್ಜೆಗೂ ವಿಧಿ - ವಿಧಾನಗಳಲ್ಲಿ ತೊಡಕು ಹೇರಳವಾಗಿವೆ.

ಇನ್ನು ದಾಂಪತ್ಯದಲ್ಲಿ ಕ್ರೌರ್ಯದ - ಅಂದರೆ, ಮಹಿಳೆಗೆ ಆಂತರಿಕ ಉಂಟಾಗುವ ದೈಹಿಕ, ಮಾನಸಿಕ, ಭಾವನಾತ್ಮಕ, ಲೈಂಗಿಕ ಅತಿಕ್ರಮಣಗಳ ವಿರುದ್ಧ ಹೋರಾಟ ನಡೆಸುವ ಖಚಿತ ಉದ್ದೇಶದೊಂದಿಗೆ ಮೈ ತಳೆದ ಸ್ವಯಂಸೇವಾ ಸಂಸ್ಥೆಗಳು ಈ ಬಗೆಯ ಕ್ರೌರ್ಯದ ಮೂಲ ಶೋಧಿಸುವ ಪ್ರಯತ್ನ ಮಾಡುತ್ತಿವೆ.

ಸಾಮಾನ್ಯವಾಗಿ ಅಭಿಪ್ರಾಯ ಭೇದ, ದಾಂಪತ್ಯ ಹೊಂದಾಣಿಕೆಯಲ್ಲಿ ವ್ಯತ್ಯಯ, ಕುಡಿತಕ್ಕೆ ದಾಸನಾದ ಪತಿ - ಈ ವಿಚಾರಗಳು ಕ್ರೌರ್ಯಕ್ಕೆ ಹಾದಿಮಾಡಿ ಕೊಡುತ್ತವೆ. ಆದರೆ ದಾಂಪತ್ಯಜೀವನದಲ್ಲಿ ಇವುಗಳು 'ಸರ್ವೇ ಸಾಮಾನ್ಯ' ಎಂಬಂತಹ ಧಾರ್ಮಿಕ ಧೋರಣೆ, ಮಹಿಳೆಯ ಹಕ್ಕನ್ನು, ಆತ್ಮಗೌರವವನ್ನು ಅಪಮಾನಗೊಳಿಸುತ್ತಿರುವುದು ಒಂದು ಸಾಮಾಜಿಕ ದುರಂತ.

ಕೆಲವು ಪ್ರಮುಖ ಮಹಿಳಾ ಸೇವಾ ಸಂಸ್ಥೆಗಳು ಈ ಬಗೆಯ ಕ್ರೌರ್ಯದ ನಿವಾರಣೆಯ ನಿಟ್ಟಿನಲ್ಲಿ ೧೯೮೦ರ ದಶಕದಲ್ಲಿ ಹುಟ್ಟಿಕೊಂಡವು. ಅವುಗಳಲ್ಲಿ ಈ ಕೆಲವನ್ನು ಹೆಸರಿಸಬಹುದು :

(ಕೆಳಗೆ ಹೆಸರಿಸಲಾದ ಸಂಸ್ಥೆಗಳು ಕರ್ನಾಟಕ ರಾಜ್ಯ ಮತ್ತು ಗುಜರಾತ್ ರಾಜ್ಯಗಳಿಗೆ ಸೇರಿವೆ)

೧) ಅಸ್ತಿತ್ವ ಮಹಿಳಾ ಉತ್ಕರ್ಷ ಸಂಘ (ಎ.ಎಂ.ಯು.ಎಸ್.)

೨) ಅಹಮದಾಬಾದ್ ವುಮೆನ್ಸ್ ಆಕ್ಷನ್ ಗ್ರೂಪ್ (ಎ.ಡಬ್ಲ್ಯು.ಎ.ಜಿ.)

೩) ಜಾಗೃತ ಮಹಿಳಾ ಸಂಘಟನೆ (ಜೆ.ಎಂ.ಎಸ್.)

೪) ವಿಮೆನ್ಸ್ ಲಿಬರೇಶನ್ ಅಂಡ್ ರಿಹೆಬಿಲಿಟೇಶನ್ ಸೊಸೈಟಿ (ಡಬ್ಲ್ಯು.ಎಲ್.ಎ.ಆರ್ಎಸ್.)

ಇವುಗಳಲ್ಲದೆ ಐತಿಹಾಸಿಕ ಮಹತ್ವವನ್ನುಳ್ಳ ಅಸೋಸಿಯೇಶನ್ ಆಫ್ ಸೋಶಿಯಲ್ ಹೆಲ್ತ್ ಆಫ್ ಇಂಡಿಯಾ (ಎ.ಎಸ್.ಹೆಚ್.ಐ.) ಕಸ್ತೂರ್ಬಾ ಸ್ತ್ರೀ ವಿಕಾಸ ಗೃಹ (ಕೆ.ಎಸ್.ವಿ.ಜಿ.) ಇವುಗಳೂ ದಾಂಪತ್ಯದಲ್ಲಿ ಹಿಂಸೆ, ಕ್ರೌರ್ಯ - ಇವುಗಳ ವಿರುದ್ಧ ಸಮರ ಘೋಷಿಸಿವೆ.

ಕೆಲವೊಂದು ಸೇವಾಸಂಸ್ಥೆಗಳಿಗೆ ಕೇಂದ್ರೀಯ ಸಮಾಜ ಕಲ್ಯಾಣ ಮತ್ತು ರಾಜ್ಯ ಸಮಾಜ ಕಲ್ಯಾಣ ಮಂಡಳಿಯಿಂದ ಹಣಕಾಸಿನ ಒತ್ತಾಸೆ ದೊರಕಿದರೆ ಮತ್ತೆ ಕೆಲವು ತಮ್ಮ ಹಣಕಾಸಿನ ಮೂಲವನ್ನು ತಾವೇ ಶೋಧಿಸಿಕೊಳ್ಳಬೇಕಾಗುತ್ತದೆ.

ಹೆಚ್ಚಿನ ವೇಗದಿಂದ ಕಾರ್ಯನಿರ್ವಹಿಸಬೇಕಾದಾಗ (ಅಂದರೆ ತುರ್ತು ನೆರವಿನ ಸಂದರ್ಭಗಳಲ್ಲಿ) ರಾಷ್ಟ್ರೀಯ ಮಹಿಳಾ ಆಯೋಗದಿಂದಲೂ ಧನ ಸಹಾಯ ಬರುವುದುಂಟು.

ಒಟ್ಟಿನಲ್ಲಿ ಐದು ಬಗೆಯ ಸಂಸ್ಥೆಗಳು ದಾಂಪತ್ಯ ಕ್ರೌರ್ಯದ ವಿರುದ್ಧ ಹೋರಾಟ ನಡೆಸುತ್ತಿವೆ. ಅವುಗಳನ್ನು ಹೀಗೆ ಪಟ್ಟಿ ಮಾಡಬಹುದು :

೧. ಐತಿಹಾಸಿಕ ಮಹತ್ವದ ಸಂಸ್ಥೆಗಳು

೨. ಸರ್ಕಾರೀ ಮುಂದಾಳುತನದ ಸಂಸ್ಥೆಗಳು

೩. ಸರ್ಕಾರದೊಡನೆ ಸಹಯೋಗದಿಂದ ಕೆಲಸ ಮಾಡುವ ಸೇವಾ ಸಂಸ್ಥೆಗಳು

೪. ಮಹಿಳಾ ಪರವಾದ ಸಂಸ್ಥೆಗಳು (ಸ್ತ್ರೀ ವಿಮೋಚನಾ)

೫. ಸಮುದಾಯ ನೆರವಿನ ಸಂಸ್ಥೆಗಳು

ಇವುಗಳಲ್ಲಿ ಮಹಿಳಾ ಪರವಾದ ಸ್ತ್ರೀ ವಿಮೋಚನೆ ಎನಿಸಿಕೊಳ್ಳುವ ಸಂಸ್ಥೆಗಳು ಮತ್ತು ಸರ್ಕಾರದ ಸಹಯೋಗದಿಂದ ಕೆಲಸ ಮಾಡುವ ಸಂಸ್ಥೆಗಳು, ಕ್ರೌರ್ಯಕ್ಕೊಳಗಾದ ಹೆಣ್ಣು ತಮ್ಮಲ್ಲಿಗೆ ಬಂದು ನೆರವು ಕೋರಲೆಂದು ಕಾಯುವುದಿಲ್ಲ. ತಾವೇ ಅವಳ ಬಳಿಗೆ ಹೋಗಿ ನೆರವು ನೀಡುತ್ತವೆ. ಕ್ರೌರ್ಯದಿಂದ ಬದುಕು ದುರ್ಭರವಾಗಿದ್ದ ಸಂದರ್ಭದಲ್ಲಿ ಮತ್ತೆ ದಂಪತಿಗಳ ಸಹಬಾಳ್ವೆ ಸಾಧ್ಯವೆ? ಎಂದು ಅಂತಹ ಸಂದರ್ಭಕ್ಕೆ ಕಾರಣ ಶೋಧಿಸುತ್ತವೆ. ಇನ್ನು ಸಹಬಾಳ್ವೆ ಅಸಾಧ್ಯ ಎನಿಸಿದಾಗ, ನೊಂದ ಬದುಕಿನ ಮುಂದಿನ ಜೀವನಕ್ಕೆ ಮಾರ್ಗಮಾಡಿಕೊಡುತ್ತದೆ. ಅದು ಕೆಲವೊಮ್ಮೆ ರಕ್ಷಣಾ ಗೃಹಗಳಲ್ಲಿ ಆಶ್ರಯ ನೀಡುವ ಮೂಲಕ ಇರಬಹುದು, ಕೆಲವೊಮ್ಮೆ ಅಗತ್ಯ ಕಾನೂನು ನೆರವು, ಶಾಲಾ ಶಿಕ್ಷಣ, ಅವುಗಳೊಂದಿಗೆ - ವೃತ್ತಿಪರ ತರಬೇತಿ ನೀಡುವುದಾಗಿರಬಹುದು - ಒಟ್ಟಿನಲ್ಲಿ ಗೌರವಯುತ ಬದುಕಿಗೆ ಹಾದಿ ಮಾಡಿಕೊಡುತ್ತವೆ ಮತ್ತು ಭವಿಷ್ಯಕ್ಕೆ ಭರವಸೆ ನೀಡುವ ಕಾಯಕ ನಡೆಸುತ್ತವೆ.

ದಾಂಪತ್ಯ ಕ್ರೌರ್ಯದ ಕಾರಣದಿಂದ ಸಾವು ಸಂಭವಿಸಿದ್ದಲ್ಲಿ ಅದರ ತನಿಖೆಗೆ ಈ ಸಂಸ್ಥೆಗಳು ಪ್ರಯತ್ನಿಸಿ ಅಪರಾಧಿಗೆ ತಕ್ಕ ಶಿಕ್ಷೆ ಕೊಡಿಸುವ ಪ್ರಯತ್ನ ಮಾಡುತ್ತಿವೆಯಾದರೂ ಇಂತಹ ಸಂದರ್ಭಗಳಲ್ಲಿ ಅಪರಾಧಿ ತುಂಬಾ ಚಾಣಾಕ್ಷನಿದ್ದು,

ಸಾಕ್ಷ್ಯಾಧಾರಗಳನ್ನು ಅಳಿಸಿ ಹಾಕುವ ಪ್ರಯತ್ನ ಮಾಡುತ್ತಾನೆ. ಅದಕ್ಕೆ ಅವನ ಸಂಬಂಧಿಗಳ ಬೆಂಬಲವೂ ಇರುತ್ತದೆ. ಅದರ ಜೊತೆಗೆ ಪೋಲೀಸ್ ಇಲಾಖೆಯ ಲಂಚಗುಳಿತನ, ಪೋಸ್ಟ್ ಮಾರ್ಟಮ್ ಮಾಡುವ ವೈದ್ಯರ ಅಪ್ರಾಮಾಣಿಕತೆಗಳು ನ್ಯಾಯ ಒಲಿಯುವಲ್ಲಿ ಅಡ್ಡಗಾಲಾಗುತ್ತಿವೆ. ಈ ಸಂಬಂಧ ಶ್ರೀಮತಿ ಡೋನಾ ಫರ್ನಾಂಡೀಸ್ ಅವರ ಸಂಶೋಧನ ತಂಡ ಬೆಂಗಳೂರಿನಲ್ಲಿ (೧೯೭೭ರ ಜನವರಿಯಿಂದ ಸೆಪ್ಟೆಂಬರ್‌ವರೆಗೆ ೫೫೦ ಮೊಕದ್ದಮೆಗಳನ್ನು) ನಡೆಸಿದ ಒಂದು ಸಮೀಕ್ಷೆಯಲ್ಲಿ ಶೇ. ೭೦ರಷ್ಟು ಮೊಕದ್ದಮೆಗಳಲ್ಲಿ ಎಫ್.ಐ.ಆರ್ ದೋಷಪೂರಿತವಾಗಿತ್ತು! ಅನಗತ್ಯ ವಿಳಂಬ, ಸಂಬಂಧಪಟ್ಟ ಅಧಿಕಾರಿಗಳ ಉಡಾಫೆ, ತನಿಖೆ ಸಂಬಂಧ ನಿಯಮಗಳ ಉಲ್ಲಂಘನೆ ಇಂತಹ ದೋಷಗಳು ಗಾಬರಿ ಮೂಡಿಸುತ್ತವೆ. ಗೃಹಿಣಿಯ ಸಾವಿನ ಸಂದರ್ಭ ಅದನ್ನು 'ಅಡುಗೆ ಮನೆಯಲ್ಲಿ ಸ್ಟೋವ್ ಹತ್ತಿಕೊಂಡು ಮರಣ' ಎಂದೋ, 'ಅಡಿಗೆ ಮನೆಯ ಆಕಸ್ಮಿಕ' ಎಂದೋ ಬಣ್ಣಿಸಿ ಮುಚ್ಚಿ ಹಾಕುವ ಪ್ರಯತ್ನ ಉಳ್ಳವರಿಂದ ನಡೆಯುತ್ತದೆ. ಆದರೂ ನ್ಯಾಯ ದೊರಕಿಸುವ ನಿಟ್ಟಿನಲ್ಲಿ ಸೇವಾ ಸಂಸ್ಥೆಗಳಿಂದ ಸಕ್ರಿಯ ಪ್ರಯತ್ನ ನಡೆಯುತ್ತಿದ್ದು ದೊಡ್ಡ ದೊಡ್ಡ ಸಂಸ್ಥೆಗಳೊಂದಿಗೆ ಸ್ಥಳೀಯ ಸಂಸ್ಥೆಗಳೂ ಕೈಗೂಡಿಸುತ್ತಿರುವುದು ಒಂದು ಸಮಾಧಾನಕರ ಅಂಶ. ಉದಾಹರಣೆಗೆ ಸುಮಂಗಲಿ ಸೇವಾ ಆಶ್ರಮ, ಕಚ ಮಹಿಳಾ ಸಂಘಟನೆ, 'ಪೀಪಲ್ಸ್ ಮೂವ್‌ಮೆಂಟ್ ಫಾರ್ ಸೆಲ್ಫ್ ರಿಲಯನ್ಸ್' - ಈ ಬಗೆಯ ಸಂಸ್ಥೆಗಳು ಅಲ್ಲಲ್ಲಿ ತಮ್ಮ ಕೈಲಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ.

೧೯೮೭ರಲ್ಲಿ ರಾಜ್ಯಮಟ್ಟದ ಕಟ್ಟೆಚ್ಚರ ಸಂಸ್ಥೆಗಳು (ಎಂ.ಎಸ್.ಎಸ್.) ಉದಯಿಸಿದ್ದು ಇವುಗಳ ಶಾಖೆಗಳು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಕೆಲಸ ಮಾಡುತ್ತಿವೆ. ಎಂ.ಎಸ್.ಎಸ್.ನ ಸದಸ್ಯ ಕಾರ್ಯದರ್ಶಿಯಾಗಿ ಸಿ.ಐ.ಡಿ. ವಿಭಾಗದ ಮುಖ್ಯಸ್ಥರು ನೇಮಕಗೊಂಡಿರುವುದು ಇದರ ದಕ್ಷತೆಯಲ್ಲಿ ನಂಬಿಕೆ ಮೂಡಿಸಿದೆ.

ಸೇವಾ ಸಂಸ್ಥೆಗಳು ಸಾಮೂಹಿಕ ಶಕ್ತಿಯಲ್ಲಿ ವಿಶ್ವಾಸ ಹೊಂದಿದ್ದು, ಸ್ಥಳೀಯ ಸಂಸ್ಥೆಗಳ ನೆರವು ಪಡೆಯುತ್ತಿವೆ. ಹಾಗೆ ಪ್ರಜ್ಞಾ ಕೌನ್ಸಲಿಂಗ್ ಸೆಂಟರ್, ಭಗಿನಿ ಸಮಾಜ, ದೇವದಾಸಿ ಪುನರ್ವಸತಿ ಕೇಂದ್ರಗಳು ಅಲ್ಲಲ್ಲಿ ಕಾರ್ಯನಿರ್ವಹಿಸುತ್ತಿವೆ.

ಸರ್ಕಾರದ ಕಡೆಯಿಂದ ಮಹಿಳೆಯರ ಪ್ರತ್ಯೇಕ ಪೋಲೀಸ್ ಕೇಂದ್ರಗಳು ಆರಂಭಗೊಂಡಿದ್ದು ಕೂಡ ೧೯೮೦ರ ದಶಕದಲ್ಲಿ. ಆದರೆ ಸಾಕಷ್ಟು ನೆರವು ಒತ್ತಾಸೆಗಳು ಬಾರದೆ ನಲುಗಿ ಹೋಗಿರುವುದೊಂದು ದೌರ್ಭಾಗ್ಯ.

ಆಶಯಗಳು - ವೈಫಲ್ಯಗಳು

ಹೆಣ್ಣಿನ ದಾಂಪತ್ಯ ಜೀವನದಲ್ಲಿ ಕೌಟುಂಬಿಕ ಚೌಕಟ್ಟಿನಲ್ಲಿ ಬಂದೊದಗುವ ಲೈಂಗಿಕ ಕಿರುಕುಳ, ಮಾನಸಿಕ ಹಿಂಸೆ, ವಿವಿಧ ಬಗೆಯ ದೈಹಿಕ ಶೋಷಣೆಗಳನ್ನು ನಿವಾರಿಸುವ ಉದ್ದೇಶಕ್ಕಾಗಿ ಅವುಗಳನ್ನು ಮೂರು ಬಗೆಯಾಗಿ ವಿಂಗಡಿಸಿ ಕ್ರಮ ಕೈಗೊಳ್ಳಲಾಗಿದೆ : (೧) ಹಿಂಸೆ ಗಂಡಿನಿಂದ ಹೆಣ್ಣೆ ಬರುವುದು (೨) ಹೆಣ್ಣಿನಿಂದ ಹೆಣ್ಣಿಗೆ ಬರುವುದು (೩) ಸೇರಿದ ಮನೆಯಲ್ಲಿ ಅಲ್ಲಿನ ಸದಸ್ಯರಿಂದ ಬರುವುದು.

ಸಮಸ್ಯೆಗೆ ಐದು ಮುಖಗಳನ್ನು ಗುರುತಿಸಿಕೊಂಡು 'ಚಿಕಿತ್ಸೆ' ನೀಡಲಾಗುತ್ತಿದೆ. ಅವುಗಳೆಂದರೆ (೧) ಹೆಣ್ಣಿಗೆ ಉಂಟಾಗುತ್ತಿರುವ 'ಮುಸುಕಿನಲ್ಲಿ ಗುದ್ದಿನ' ಈ ಹಿಂಸೆಯ ಸಂಬಂಧ ಅಕ್ಕಪಕ್ಕದವರಲ್ಲಿ ಅರಿವು ಮೂಡಿಸಿ, ಹೆಣ್ಣಿನ ಪರ ಅಭಿಪ್ರಾಯ ರೂಪುಗೊಳ್ಳುವಂತೆ ಮಾಡುವುದು. (೨) ಹಿಂಸೆಯ ವಿರುದ್ಧ ಸಾಮೂಹಿಕ ಅಭಿಪ್ರಾಯ ರೂಪಿಸುವುದು (೩) ಗಂಡಿನ ಮನೆಯ ಸದಸ್ಯರಲ್ಲಿ ಸೊಸೆಯಾಗಿ ಬಂದ ಹೆಣ್ಣಿನ ಪರವಾಗಿ ಅಭಿಪ್ರಾಯ ರೂಪಿಸುವುದು (೪) ಹಿಂಸೆ ಮತ್ತು ಶೋಷಣೆಯ ಬಗ್ಗೆ ಕಟ್ಟೆಚ್ಚರ ವಹಿಸಲು ಒಂದು ತಂಡವನ್ನು ರೂಪಿಸುವುದು (೫) ಹಿಂಸೆಗೊಳಗಾದ ಹೆಣ್ಣಿಗೆ ಭವಿಷ್ಯದ ಬಗ್ಗೆ ಭರವಸೆ ಮೂಡಿಸಿ, ಸುಧಾರಣಾ ಕ್ರಮಕೈಗೊಳ್ಳುವುದು.

ಇಷ್ಟೆಲ್ಲಾ ಏರ್ಪಾಡುಗಳು ಇದ್ದಾಗ್ಯೂ ಪ್ರಾಯೋಗಿಕ ಸಮಸ್ಯೆಗಳು ಪರಿಹಾರ ಕಾರ್ಯಕ್ಕೆ ತೊಡಕಾಗಿವೆ. ಮೊದಲನೆಯದಾಗಿ ಸರ್ಕಾರ ನಡೆಸುವ ರಕ್ಷಣಾ ಗೃಹಗಳಿಗೆ ಸಂಪರ್ಕದ ತೊಂದರೆ. ಕಷ್ಟಕ್ಕೀಡಾದ ಮಹಿಳೆಗೆ ಇವುಗಳನ್ನು

ಸುಲಭವಾಗಿ ತಲುಪಿಸಲಾಗುತ್ತಿಲ್ಲ. ಕೆಲವೊಂದು ಸುಧಾರಣಾ ಕೇಂದ್ರಗಳಲ್ಲಿ ತಕ್ಷಣ ವೈದ್ಯಕೀಯ, ಕಾನೂನು ನೆರವುಗಳನ್ನು ಒದಗಿಸಲು ಸಾಧ್ಯವಾಗುತ್ತಿಲ್ಲ. ಶೋಷಿತ ಮಹಿಳೆಗೆ ಮಗುವಿದ್ದಲ್ಲಿ ಅದರ ಪಾಲನೆ ಪೋಷಣೆಯ ಏರ್ಪಾಟು ಸುಲಭವಲ್ಲ. ಈ ಸಂಬಂಧ ಸಂಪನ್ಮೂಲಗಳ ಕೊರತೆ ಇದೆ. ಎಷ್ಟೋ ಬಾರಿ ವಿಧಿ - ವಿಧಾನಗಳ ವಿಳಂಬದಿಂದಾಗಿ ನ್ಯಾಯಾಲಯದ ಹೊರಗೆ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕಾಗುತ್ತದೆ. ಅಪಾಯಕಾರೀ ಪುರುಷರನ್ನು ಸಂಪರ್ಕಿಸಿ ಅವರಿಗೆ ತಿಳುವಳಿಕೆ ನೀಡಿ ಸನ್ಮಾರ್ಗಕ್ಕೆ ತರುವ ಸಂದರ್ಭ ಕ್ಲಿಷ್ಟವಾಗಿದೆ. ಕೆಲವು ಸಂದರ್ಭಗಳಲ್ಲಿ ಸಾಂಪ್ರದಾಯಿಕ ತೊಡಕುಗಳು ಏಳುತ್ತವೆ. ವ್ಯವಸ್ಥೆ - ನಾಯಕತ್ವದ ಕೊರತೆಗಳು, ಸೇವಾ ಸಂಸ್ಥೆಗಳಲ್ಲಿ ಅವುಗಳ ಸಂಬಂಧದಲ್ಲೇ ತೊಡಕು ಇವುಗಳನ್ನೆಲ್ಲಾ ದಾಟಿಕೊಂಡು ಪರಿಹಾರದ ಹಾದಿಯನ್ನು ಸುಗಮಗೊಳಿಸಬೇಕು. ಇಷ್ಟೆಲ್ಲಾ ಪ್ರಾಯೋಗಿಕ ಸಮಸ್ಯೆಗಳು - ನೈಜ ಸಮಸ್ಯೆಗಳು ಇದ್ದಾಗ್ಯೂ ದಾಂಪತ್ಯದಲ್ಲಿ ಹೆಣ್ಣಿಗೆ ಆಗುತ್ತಿರುವ ಅಪಮಾನ - ಹಿಂಸೆಗಳನ್ನು ಗುರುತಿಸಿ ಅವುಗಳ ನಿವಾರಣೆಗೆ ಕಟಿಬದ್ಧ ಆಗಿರುವ ಸ್ವಯಂ ಸೇವಾ ಸಂಸ್ಥೆಗಳಿಗೆ ನಮ್ಮ ನಮನ ಸಲ್ಲಲೇಬೇಕು. ಹೊಸ ವರ್ಷದಲ್ಲಿ ಈ ಬಗೆಯ ಸಮಸ್ಯೆಗಳಿಗೆ ಮತ್ತಷ್ಟು ತೀವ್ರವಾದ ಪರಿಹಾರ ಕಾರ್ಯ ನಡೆಯಲೆಂದು, ಸಮಗ್ರವಾದ ಸಾಮಾಜಿಕ ಒತ್ತಾಸೆ ದೊರಕಲೆಂದು ಹಾರೈಸೋಣ.

ಮಿತಾಕ್ಷರಾದಲ್ಲಿ ಸಮಾಜ ವ್ಯವಸ್ಥೆ

ಡಾ॥ ಜ್ಯೋತ್ಸ್ನಾ ಕಾಮತ್

ಭಾರತದಲ್ಲಿ ಮನು ಮತ್ತು ಯಜ್ಞವಲ್ಕ್ಯ ಸ್ಮೃತಿಗಳಿಗೆ ಬರೆದ ಟೀಕಾ ಗ್ರಂಥಗಳು ಹಲವಾರು ಇದ್ದರೂ ಹನ್ನೊಂದನೇ ಶತಕದಲ್ಲಿ ಕರ್ನಾಟಕದಲ್ಲಿ ರೂಪ ತಾಳಿದ, ಯಾಜ್ಞವಲ್ಕ್ಯ ಸ್ಮೃತಿಯ ಟೀಕಾಗ್ರಂಥವಾದ ಮಿತಾಕ್ಷರಾ ಅಥವಾ ಪ್ರಮಿತಾಕ್ಷರಾ ಮಹತ್ವಪೂರ್ಣವಾದದ್ದು. ಸ್ವತಂತ್ರ ಭಾರತ, ತನ್ನದೇ ಸಂವಿಧಾನಾತ್ಮಕ ಸರ್ವಮಾನ್ಯ ಕಾನೂನು ವ್ಯವಸ್ಥೆಯನ್ನು ಜಾರಿಗೊಳಿಸುವ ತನಕ, ದೇಶವ್ಯಾಪಿ ಮನ್ನಣೆ ಪಡೆದ ಧರ್ಮಶಾಸ್ತ್ರದ ಗ್ರಂಥವು ಇದಾಗಿತ್ತು ಎಂಬುದನ್ನು ನೆನೆಸಿಕೊಂಡರೆ ಭಾರತೀಯರ ಮಾನಸದ ಮೇಲೆ (ಕೆಲವೇ ಪ್ರದೇಶಗಳನ್ನು ಬಿಟ್ಟರೆ) ಮಿತಾಕ್ಷರಾ ಗ್ರಂಥದ ಪ್ರಭಾವದ ಕಲ್ಪನೆ ಬರುವಂತಿದೆ. ಮೊದಲಿಗೆ ಈಸ್ಟ್ ಇಂಡಿಯಾ ಕಂಪನಿ, ನಂತರ ಬ್ರಿಟೀಷರು, ಆಸ್ತಿ ವಿಭಜನೆ, ದತ್ತು ಸ್ವೀಕಾರ, ಸ್ತ್ರೀಧನಗಳಂತಹ ವಿಚಾರಗಳಲ್ಲಿ ಮಿತಾಕ್ಷರ ಸಂಹಿತೆಯನ್ನೆ ಪ್ರಮಾಣಗ್ರಂಥವಾಗಿ ಸ್ವೀಕರಿಸಬೇಕೆಂದು ಬನಾರಸದ ಪಂಡಿತರನ್ನಾಗಲಿ, ಗವರ್ನರ ಜನರಲ್‌ರ ಸಲಹಾ ಸಮಿತಿಯ ಸದಸ್ಯರನ್ನಾಗಲಿ ಕೇಳಿಕೊಳ್ಳುತ್ತಿದ್ದುದು, ಅದರ ಸಾಮಾಜಿಕ ಮನ್ನಣೆಯ ವ್ಯಾಪ್ತಿಯನ್ನು ತೋರಿಸುತ್ತದೆ. ಒಂಭತ್ತು ಶತಕಗಳ ಕಾಲ. ಭಾರತೀಯರ ದೈನಂದಿನ ಜೀವನದ ಹಲವಾರು ಸಮಸ್ಯೆಗಳಿಗೆ ಉತ್ತರ ಒದಗಿಸಲೆತ್ನಿಸಿ ಎಲ್ಲರಿಗೂ ಮಾನ್ಯವಾಗುವಂಥ, ನ್ಯಾಯಶಾಸ್ತ್ರದ ವ್ಯಾಖ್ಯಾನ ನೀಡಿದ ಕನ್ನಡಿಗ ವಿಜ್ಞಾನೇಶ್ವರ, ಕಲ್ಯಾಣದ ಚಾಲುಕ್ಯ ಚಕ್ರವರ್ತಿ ವಿಕ್ರಮಾದಿತ್ಯನ ಕಾಲದಲ್ಲಿ ಬಾಳಿದವ (ಕ್ರಿ.ಶ.ಸು. ೧೦೫೦ ರಿಂದ ೧೧೫೦).

ಸ್ಮೃತಿಗ್ರಂಥಗಳು ಧಾರ್ಮಿಕ, ಸಾಮಾಜಿಕ, ನೈತಿಕ ವಿಚಾರಗಳನ್ನೆಲ್ಲ ಒಳಗೊಂಡು ಭಾರತೀಯ ಸಮಾಜಕ್ಕೆ ದೈನಂದಿನ ವ್ಯವಹಾರಗಳಲ್ಲಿ ಪಾಲಿಸಬೇಕಾದ ಕಟ್ಟುಪಾಡುಗಳನ್ನು ಕೂಡ ಮಾಡಿವೆ. ಆಳರಸರಿಗೆ ತಮ್ಮ ವಿವಿಧ ಹೊಣೆಗಳ ಮತ್ತು

ಅವುಗಳ ನಿರ್ವಹಣೆಯ ಕುರಿತಾದ ಮಾರ್ಗದರ್ಶನ ನೀಡುತ್ತವೆ. ಸಾಮಾನ್ಯರಿಗೆ ಸಂಕಟ ಪ್ರಸಂಗಗಳಲ್ಲಿ, ಬಿಕ್ಕಟ್ಟಿನ ಸಂದರ್ಭಗಳಲ್ಲಿ ವ್ಯಾವಹಾರಿಕ ಸಲಹೆ, ಸೂಚನೆಗಳನ್ನು ಒದಗಿಸುತ್ತವೆ. ಮುಖ್ಯವಾದ ಮನುಸ್ಮೃತಿಯ ಕಾಲ ಕ್ರಿಸ್ತಶಕ ಪೂರ್ವ ೨೦೦ನೇ ವರ್ಷವಾದರೆ ಯಜ್ಞವಲ್ಕ್ಯ ಸ್ಮೃತಿಯು ಮನುಸ್ಮೃತಿಯ ಹಲವು ಅಂಶಗಳನ್ನು ಹೊಂದಿ, ಹೆಚ್ಚು ಕಡಿಮೆ ಇದೇ ಅಂದರೆ ೨೦೦ನೇ ಕ್ರಿ.ಪೂ.ದಿಂದ ಕ್ರಿ.ಶ ೨ನೇ ಶತಕವೆಂಬ ಅಭಿಪ್ರಾಯವಿದೆ. ಈ ಅವಧಿಯಲ್ಲಿ ಭಾರತೀಯ ಸಮಾಜ ಹಲವಾರು ಏರು - ಪೇರುಗಳನ್ನು ಕಂಡಿತು. ನಂತರದ ಶತಕಗಳವರೆಗೂ ವಿದೇಶಿಯರ ಆಕ್ರಮಣ, ಕಾಡು ಜನಾಂಗಗಳ ಎಡಬಿಡದ ಹಾವಳಿ, ಭಿನ್ನ ಭಿನ್ನ ಆಂತರಿಕ ವ್ಯವಹಾರಗಳಿಂದಾಗಿ ಭಾರತೀಯತೆಯ ಮೂಲ ಚೌಕಟ್ಟು ಒಡೆದು ಚೂರಾಗದಂತೆ ನೋಡಿಕೊಳ್ಳು ಜವಾಬ್ದಾರಿ ಸ್ಮೃತಿಕಾರರ ಮೇಲೆ ಇತ್ತು. ಆ ಚೌಕಟ್ಟಿನೊಳಗಿನ ಆಚರಣೆ, ದುಸ್ಸಹವಾಗದಂತೆ, ಸಾಮೂಹಿಕ ಬದಲಾವಣೆಗಳಿಗೂ ಕೊಂಚಮಟ್ಟಿಗೆ ಅವಕಾಶ ಮಾಡಿಕೊಟ್ಟು ಅವಕ್ಕೆ ಸ್ಮೃತಿಯ ಆಧಾರ ಕಲ್ಪಿಸುವ ಹೊಣೆ ವ್ಯಾಖ್ಯಾನಕಾರರ ಮೇಲಿತ್ತು. ವ್ಯಾಖ್ಯಾನಕಾರರಲ್ಲೆಲ್ಲ ವಿಜ್ಞಾನೇಶ್ವರ ತುಂಬ ಮನ್ನಣೆ ಗಳಿಸಿದ. ಮಿತಾಕ್ಷರಾ, ಕಡಿಮೆ ಶಬ್ದಗಳಲ್ಲಿ ವಿಪುಲ ಅರ್ಥಕ್ಕೆ ಎಡೆಮಾಡಿಕೊಡುವ ಸಾಧ್ಯತೆ ಹೊಂದಿದ್ದು, ಅಂದಿನ ಯುಗದ ಹಿನ್ನೆಲೆ ಗಮನಿಸಿದರೆ, ಎಷ್ಟೋ ವಿಷಯಗಳಲ್ಲಿ ಔದಾರ್ಯ ಪೂರ್ಣ ವಿಶ್ಲೇಷಣೆಯನ್ನು ನೀಡಲು ಹವಣಿಸಿದೆ ಎನ್ನಬೇಕು. ಟೀಕಾಕಾರರು ಹೊಸ ವಿಚಾರಗಳಿಗೆ ಹುಟ್ಟು ಹಾಕುವಂತೆ ಇರಲಿಲ್ಲ.

ಯಾವ ಸಮಾಜವೂ ನಿಂತ ನೀರಾಗಲಾರದು! ಬದಲಾವಣೆಯ ಅವಕಾಶವಿರುವಲ್ಲಿ ಅದಕ್ಕೆ ಅನುವು ಮಾಡಿಕೊಡುವಂತೆ ಪ್ರಾಚೀನ ಸ್ಮೃತಿಗಳ ಪ್ರಮಾಣವನ್ನು ಉಲ್ಲೇಖಿಸಿ ಜನರಿಗೆ ಮನದಟ್ಟು ಮಾಡಿಕೊಡಬೇಕಾಗುತ್ತಿತ್ತು. ವಿಜ್ಞಾನೇಶ್ವರನನಂತರ ಒಂದೂವರೆ ಶತಮಾನ ಕಳೆಯುವದರೊಳಗೆ ಮುಸ್ಲಿಂ ಧಾಳಿ, ದಕ್ಷಿಣಕ್ಕೆ ಕಾಲಿಟ್ಟಿತು. ಇಸ್ಲಾಂ ಮತಪ್ರಚಾರ, ಹರಡತೊಡಗಿತು. ಜನಜೀವನ ಅಸ್ತವ್ಯಸ್ತವಾಯಿತು. ಇಷ್ಟಾದರೂ ಸನಾತನ ಸಂಸ್ಕೃತಿ, ಪೂರಾ ಮಣ್ಣುಗೂಡದೇ ಇರುವುದಕ್ಕೆ ಭಾರತೀಯ ಜನಜೀವನಕ್ಕೊಂದು ಸ್ಥಿರವಾದ ಕಟ್ಟುಪಾಡುಗಳನ್ನು ಕಲ್ಪಿಸಿಕೊಟ್ಟ ಧರ್ಮಶಾಸ್ತ್ರಗಳು ಬಹುಮಟ್ಟಿಗೆ ಕಾರಣವಾದವೆಂಬುದನ್ನು ಅಲ್ಲಗಳೆಯುವಂತಿಲ್ಲ. ಜಾತಿ ಪದ್ಧತಿ, ಕತೆ, ವೃತ್ತಿ ಸ್ವಾತಂತ್ರ್ಯ, ನೀತಿ ಸಂಹಿತೆಯ ಅರಿವು, ಸಾಮಾಜಿಕ ಹೊಣೆಗಾರಿಕೆಯ ಪರಿಕಲ್ಪನೆಯನ್ನು ಮೈಗೂಡಿಸಿಕೊಳ್ಳುತ್ತಲೇ, ಹೊಸ ಹೊಸ ಆಕ್ರಮಣಗಳನ್ನು ಎದುರಿಸುವ ದಿವ್ಯತನವನ್ನು ಭಾರತೀಯ ಸಮಾಜ ಈ ಮಧ್ಯಯುಗದಲ್ಲಿ ತೋರ್ಪಡಿಸಲು ಸಾಧ್ಯವಾದದ್ದು, ದೇವಲಸ್ಮೃತಿ ಮಿತಾಕ್ಷರಾ ಕೈಕೊಂಡಂಥ ಸ್ಮೃತಿಗಳ ವಿಶಾಲ ದೃಷ್ಟಿಕೋನದ ವ್ಯಾಖ್ಯಾನದಿಂದ ಇರಬಹುದೇ ಎಂಬ ಅಂಶ ಈ ವಿಷಯದ ಕುರಿತಾದ ಹೆಚ್ಚಿನ ಅಧ್ಯಯನಕ್ಕೆ ಗ್ರಾಸ ಒದಗಿಸಬಹುದು.

ಈ ಪ್ರಬಂಧದಲ್ಲಿ ಮುಖ್ಯವಾಗಿ ಸಮಾಜ ವ್ಯವಸ್ಥೆ, ಗೃಹಜೀವನ, ಸ್ತ್ರೀಯರ ಸ್ಥಾನಮಾನಗಳು, ಸ್ತ್ರೀಧನ, ದಾಸಪದ್ಧತಿ ಮುಂತಾದ ಕೆಲವೇ ವಿಷಯಗಳನ್ನು ಸೇರಿಸಲಾಗಿದೆ. ಕೆಲ ವಿಚಾರಗಳು ಸಮಕಾಲೀನ ಶಾಸನಗಳಲ್ಲಿ ಬಿಂಬಿತವಾಗಿದ್ದರೆ ಅವನ್ನು ಉಲ್ಲೇಖಿಸುವ ಪ್ರಯತ್ನ ಮಾಡಿದಂತೆ ಇತರ ಬೆಳವಣಿಗೆಗಳನ್ನೂ ಗಮನಿಸಲಾಗಿದೆ.

ಸಮಾಜ ವ್ಯವಸ್ಥೆ

ಪ್ರಾಚೀನ ಕಾಲದಿಂದಲೂ ನಡೆದುಬಂದ ವರ್ಣಾಶ್ರಮ ವ್ಯವಸ್ಥೆಯನ್ನೇ ಪೂರ್ವಸ್ಮೃತಿಗಳ ಮಾದರಿಯಲ್ಲಿ ಮಿತಾಕ್ಷರಾ ಉಲ್ಲೇಖಿಸುತ್ತದೆ. ಬ್ರಾಹ್ಮಣರಿಗೆ ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ, ಪ್ರತಿಗ್ರಹಗಳೇ ಗತಿ! ಪ್ರಜಾಪಾಲನೆ ಕ್ಷತ್ರಿಯರ ಹೊಣೆ. ಆದ್ದರಿಂದ ಸೈನ್ಯದ ಮೂಲಕ ರಕ್ಷಣೆ ಮತ್ತು ಆಡಳಿತ ಅವರಿಗೆ ಸೇರಿದ್ದು. ಕೃಷಿ, ವಾಣಿಜ್ಯ, ಪಶುಪಾಲನ ವೈಶ್ಯರಿಗೆ ವೃತ್ತಿಗಳು ಮೀಸಲು. ಶೂದ್ರನಿಗೆ ಸವರ್ಣೀಯರ ಸೇವೆಯೇ ಗತಿ ಎಂಬುದು ಸಾರ್ವತ್ರಿಕ ನಂಬಿಗೆಯಾದರೂ ಇಷ್ಟರಿಂದಲೇ ಜೀವನ ನಡೆಯದು ಎಂದು ಮನಗಂಡ ವಿಜ್ಞಾನೇಶ್ವರನು ಚತುರ್ಥ ವರ್ಗದವರು ಯಾವ ಯಾವ ವ್ಯಕ್ತಿಗಳನ್ನು

ಕೈಕೊಳ್ಳಬಹುದು? ಎಂದು ಸ್ಪಷ್ಟೀಕರಿಸಿದ್ದಾನೆ. ವಣಿಕ್ ವೃತ್ತಿ ಅಂದರೆ ವ್ಯಾಪಾರವನ್ನು ಕೈಕೊಳ್ಳುವದಲ್ಲದೇ ನಾನಾ ವಿಧ ಶಿಲ್ಪ ಮತ್ತು ಕೈಗಾರಿಕೆಗಳನ್ನು ಅವರು ರೂಢಿಸಿಕೊಳ್ಳಬಹುದು ಎಂದು ದೇವಲಋಷಿಯ ಅಭಿಪ್ರಾಯವನ್ನು ಎತ್ತಿ ಹಿಡಿಯುತ್ತಾನೆ. ಕೃಷಿ, ಪಶುಪಾಲನ , ಸಾಮಾನುಗಳ ಸಾಗಾಟ, ಹಣಕಾಸಿನ ವ್ಯವಹಾರ ಇತ್ಯಾದಿ ವೈಶ್ಯರ ಕಸಬುಗಳಲ್ಲದೆ ಚಿತ್ರಕರ್ಮ, ನೃತ್ಯ - ಗೀತಾದಿಗಳು, ವೇಣು - ವೀಣಾ, ಮುರಜ-ಮೃದಂಗಾದಿ ವಾದನಗಳನ್ನು ಅರ್ಥಾತ್ ಯಾವತ್ತೂ ಲಲಿತಕಲೆಗಳನ್ನು ಉಪಜೀವನಕ್ಕಾಗಿ ಅವರು ಕೈಕೊಳ್ಳಬಹುದಿತ್ತು.

ಇಂದು, ಹಿಂದುಳಿದವರೆಂದು ಭಾವಿಸಲಾಗುವ ಬಹುಸಂಖ್ಯಾತ ವರ್ಗಕ್ಕೆ ವಿಜ್ಞಾನೇಶ್ವರನು ಸಾಮಾಜಿಕ ನಿರ್ಬಂಧಗಳನ್ನು ಎಲ್ಲಿ ಹಾಕಿದಂತಾಯಿತು? ಅಂದಿನವರ ಜೀವನೋಪಯೋಗಿ ಹಲವಾರು ಕೈಗಾರಿಕೆಗಳು ಅವರಿಗೆ ಮುಕ್ತವಿದ್ದವು. ಉಚ್ಚವರ್ಗದವರೆನಿಸಿಕೊಳ್ಳುವ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಂತೆ, ಶೂದ್ರರಿಗೂ ಹಲವು ಕಸುಬುಗಳು ತೆರೆದುಕೊಂಡಿದ್ದವು. ಸಮಕಾಲೀನ ಶಾಸನಗಳನ್ನು ನೋಡಿದರೆ ಧನಗರರು (ಕುರುಬರು), ನಾಪಿತರು. ತೆಲ್ಲಿಗರು, ಇಂದಿನ ಹಿಂದುಳಿದ ವರ್ಗದವರೆನಿಸಿಕೊಳ್ಳುವವರಲ್ಲಿ ಹಲವರು ಹಿಂದೆಯೂ ವಿದ್ಯೆಪಡೆದು ಸುಸಂಸ್ಕೃತರಾಗಿದ್ದರು. ದಾನ ಧರ್ಮಗಳಲ್ಲಿ ಮಿಗಿಲಾಗಿ ದೇಗುಲಗಳನ್ನು ಕಟ್ಟಿಸುವಲ್ಲಿ ಮುಂದಾಗಿ ಇಷ್ಟದೇವತೆಗೆ ತಮ್ಮ ಹೆಸರನ್ನೋ ತಮ್ಮ ವೃತ್ತಿಯ ಹೆಸರನ್ನೋ ಕೊಟ್ಟುಬಿಡುತ್ತಿದ್ದರು. ದಾನ ಮಾಡಿ ಶಾಸನ ನಿಲ್ಲಿಸುವಾಗ ಜಾತಿ, ಕುಲ, ವಂಶ, ಪರಂಪರೆಯನ್ನು ಅಭಿಮಾನದಿಂದ ಹೇಳಿಕೊಳ್ಳುತ್ತಿದ್ದರು.

ವಿದ್ಯಾಕರ್ಮವಯೋ ಬಂಧುವಿತ್ತೈರ್ಮಾನ್ಯಾ ಯಥಾಕ್ರಮಂ
ಏತೈಃ ಪ್ರಭೂತೈಃಶ್ರದ್ರೋಽಐ ವಾರ್ಧಕೆ ಮಾನಮರ್ಹತಿ

ವಿದ್ಯೆ, ಕರ್ಮ, ವಿತ್ತ, ಬಂಧು ಬಲವಿದ್ದ ವೃದ್ಧಶೂದ್ರನೂ ಮನ್ನಣೆಗೆ ಅರ್ಹನು ಎಂಬ ಯಾಜ್ಞವಲ್ಕ್ಯನ ವಾಕ್ಯವನ್ನು ಮಿತಾಕ್ಷರಾ ಎತ್ತಿ ಹಿಡಿಯುತ್ತದೆ. ಆಡಳಿತ ವರ್ಗದಲ್ಲಿ ತನ್ನ ಶೂದ್ರ ಜನಾಂಗದ ಸಾಮಾಜಿಕ ಸ್ಥಾನಮಾನ ಕಾಯ್ದುಕೊಳ್ಳಲು ಆ ಕುಲದ ಹಿರಿಯನಿಗೆ ವಿದ್ಯೆ, ಕರ್ಮ, ಧನ ಮತ್ತು ಬಂಧುಗಳ ಬಲದ ಅಗತ್ಯವಿರುತ್ತಿತ್ತು. ಇದರಿಂದ ಮನ್ನಣೆ ದೊರೆಯುತ್ತಿತ್ತು.

ಸೈನ್ಯವಂತೂ ಜಾತಿ ಭೇದವಿಲ್ಲದೇ ಸರ್ವರಿಗೂ ತೆರೆದ ಬಾಗಿಲು ಆಗಿತ್ತು. ಬರೇ ಕ್ಷತ್ರಿಯರು ಮಾತ್ರ ಯುದ್ಧ ಮಾಡಿ ಸಾಯುತ್ತಿರಲಿಲ್ಲ! 'ಗೆರಿಲ್ಲಾ' ತಂತ್ರದ ಯುದ್ಧಕಾರಿಕೆಯಲ್ಲಿ ಗುಡ್ಡಗಾಡು ಮತ್ತು ಕಾಡಿನ ಪ್ರದೇಶದ ಚೆನ್ನಾದ ಪರಿಚಯವಿದ್ದ ವ್ಯಾಧ, ನಿಷಾದ, ಬೇಡ ಜನಾಂಗಗಳನ್ನು ನಿರ್ಲಕ್ಷಿಸಿ ಯಾವ ಅರಸು ತಾನೇ ಯುದ್ಧವನ್ನು ಗೆಲ್ಲಲು ಸಾಧ್ಯವಿತ್ತು? ಅವರೆಲ್ಲ ಉತ್ತಮ ಯೋಧರಾಗುವದರ ಜೊತೆಗೆ ಅವರ ತಂಡಗಳ ನಾಯಕರು ಅರಸರ ಆಪ್ತ ಬಂಟರಾಗಿರುತ್ತಿದ್ದರು. ಚಾಲುಕ್ಯರ ಸಮಕಾಲೀನ ಹೊಯ್ಸಳ ಅರಸು ವೀರಬಲ್ಲಾಳನ ಪ್ರಸಿದ್ಧ ದಂಡನಾಯಕನು ಅಮಿತೆಯ ನಾಯಕ ಅವನ ನೆನಪಿಗೆ ಅಮೃತೇಶ್ವರ ದೇವಾಲಯ ರೂಪಗೊಂಡಿತು. (ಶಿವಮೊಗ್ಗ ಜಿಲ್ಲೆಯ ತರಿಕೆರೆ). ಅಲ್ಲಿಯ ಶಾಸನದಲ್ಲಿ ಅಮಿತೆಯ ನಾಯಕ ಚತುರ್ಥಕುಲದವ ಎಂದು ಹೇಳಿದೆಯಲ್ಲದೇ ಬಲ್ಲಾಳನ ಬಲಗೈಯಾಗಿದ್ದ ಎಂಬ ಉಲ್ಲೇಖವಿದೆ. ಶಸ್ತ್ರ ಹಿಡಿದ ಕಲಿ ಕ್ಷತ್ರಿಯನಾಗಿ ಬಿಡುತ್ತಿದ್ದ !

ಇನ್ನು ಆಳುವ ವರ್ಗವಂತೂ ಯಾವ ಜಾತಿ? ಎಂದು ಕೇಳುವ ಮಿತಿಯನ್ನು ದಾಟಿರುತ್ತಿದ್ದರು. ಸಂಕಟಕಾಲದಲ್ಲಿ ಊರು, ಪ್ರದೇಶ, ಜನಗಳನ್ನು ರಕ್ಷಿಸಿದ ಕಡುಗಲಿ, ಕೊನೆಗೊಮ್ಮೆ ಊರವರ ಬೆಂಬಲದಿಂದ ತುಂಡರಸನೋ, ದೊಡ್ಡರಸನೋ ಆದಾಗ ಜಾತಿಯ ಪ್ರಶ್ನೆ ಬರುತ್ತಿರಲಿಲ್ಲ. ಆತನ ಮುಂದಿನ ತಲೆಮಾರಿನವರು, ಇತರ ರಾಜರ ಕನ್ಯೆಯರನ್ನು ಮದುವೆಯಾಗುತ್ತಿದ್ದರು. ಸೂರ್ಯಅಥವಾ ಚಂದ್ರವಂಶದ ಕ್ಷತ್ರಿಯರೆಂದು ಕೊನೆಗೊಮ್ಮೆ ಗುರುತಿಸಲ್ಪಡುತ್ತಿದ್ದರು. ಕರ್ನಾಟಕದ ಎಷ್ಟೋ ರಾಜ ಮನೆತನಗಳ ಮೂಲ ಪುರುಷರು ಇಂಥವರೇ! ಕದಂಬರು ಬ್ರಹ್ಮಕ್ಷತ್ರಿಯರು, ಹೊಯ್ಸಳರು ಗುಡ್ಡಗಾಡು ಮಲೆಯರು. ವಿಜಯನಗರದ ಸ್ಥಾಪಕರು ಕುರುಬರು, ಮದಕರಿ ನಾಯಕರ ಚರಿತ್ರೆ ಎಲ್ಲರಿಗೂ ಗೊತ್ತು. ಇದೆಲ್ಲ ರೂಢಿಗತವಾಗಿ ಶಾಸ್ತ್ರ ಸಮ್ಮತವಾಗಿದ್ದ ಪದ್ಧತಿ ಸ್ಮೃತಿಗ್ರಂಥಗಳಲ್ಲಿ ಉಲ್ಲೇಖಿತವಾಗಿದ್ದ ವರ್ಣವ್ಯವಸ್ಥೆ ಕಟ್ಟುನಿಟ್ಟಾಗಿ ಪಾಲಿಸಲ್ಪಡುತ್ತಿರಲಿಲ್ಲವೆಂಬುದು ಸ್ಪಷ್ಟ. ಪ್ರಾದೇಶಿಕ ಭಿನ್ನತೆಗನುಸಾರವಾಗಿ ಆಡಳಿತ ವರ್ಗ / ಅರಸುವರ್ಗ ರೂಪಗೊಳ್ಳುತ್ತಿತ್ತು. ಬಹು ವರ್ಗಗಳ ಮನ್ನಣೆ ಪಡೆದಾತ ನಾಯಕನು ಅರಸನಾಗಿ ವಂಶ ಸ್ಥಾಪಿಸುವುದು ಅಪರೂಪವಾಗಿರಲಿಲ್ಲ.

ವ್ಯಾಪಾರ : ಮಾರುಕಟ್ಟೆಗಳು ಇತ್ಯಾದಿ

ಬಂಗಾರ, ಬೆಳ್ಳಿ, ತಾಮ್ರ, ಹಿತ್ತಾಳೆ, ಸತುವು, ಸೀಸ, ಕಬ್ಬಿಣಗಳ ಬಳಕೆಯ ಉಲ್ಲೇಖ ಮಿತಾಕ್ಷರದಲ್ಲಿ ಬರುತ್ತದೆ. ಇವನ್ನೆಲ್ಲ ಕರಗಿಸಿದಾಗ ತ್ರುಟಿ ಎಷ್ಟು ಬರುತ್ತದೆ? ಎಂದು ನಿರ್ದಿಷ್ಟಪಡಿಸಲಾಗಿದೆ. ಅದರಂತೆ ನಾರು, ನೂಲು, ರೇಶಿಮೆ ಯಕ್ಷಯ ಅಭಿವೃದ್ಧಿಗಳನ್ನು ತಿಳಿದುಕೊಳ್ಳಳು ತಜ್ಞರು ಇರುತ್ತಿದ್ದರು. ಪ್ರತಿ ವಸ್ತುವಿನ ಉತ್ಪನ್ನದ ಲಾಭ-ನಷ್ಟಗಳನ್ನು ಅರಸನಿಗೆ ತಿಳಿಸಲು ಸಹಾಯ ಮಾಡುತ್ತಿದ್ದರು. ಅಂದಿನ ಮಾರುಕಟ್ಟೆಗಳಲ್ಲಿ ಬಗಬಗೆಯ ವಸ್ತುಗಳು ದೊರೆಯುತ್ತಿದ್ದವು. ಶ್ರೀಗಂಧ, ಸುಗಂಧದ್ರವ್ಯಗಳು, ಹತ್ತಿ ಭತ್ತ, ಅಕ್ಕಿ, ಮೆಣಸಿನ ಹೇರು, ಇಂಗು, ಅಲ್ಲ, ಅರಿಸಿನ, ಎಣ್ಣೆ, ಅಡಕೆ, ಎಲೆ, ತೆಂಗು, ಓಲೆಗರಿಗಳ ಹೇರು, ಬೆಲ್ಲ, ಬಾಳೆ, ನೆಲ್ಲಿ, ಕಬ್ಬು, ಬಳಪ ಮುಂತಾದವನ್ನು ರಟ್ಟರ ೧೦೩೪ನೇ ವರ್ಷದ ಸಮಕಾಲೀನ ಶಾಸನವೊಂದು ಹೆಸರಿಸುತ್ತದೆ. ಅದರಂತೆ ಚಿನ್ನದ ಜರಿಯ ಕೆಲಸ ಮಾಡಿದ ಹತ್ತಿ, ರೇಶ್ಮೆಯ ಬಟ್ಟೆಗಳೂ ಹೇರಳವಾಗಿ ಹೊರಗಿನ ದೇಶಗಳಿಂದ ಬರುತ್ತಿದ್ದವು. ವಸ್ತ್ರದ ನೇಯ್ಗೆಯಲ್ಲಿ ಬಗೆಬಗೆಯ ಹೂಬಳ್ಳಿ, ಚಿತ್ರಾಕೃತಿಗಳನ್ನು , ಸ್ವಸ್ತಿಕ ಚಕ್ರಾದಿ ಉಲ್ಲೇಖಿಸಿದ ವಿಜ್ಞಾನೇಶ್ವರ ಇವನ್ನು 'ಕಾರ್ಮಿಕ' ವಸ್ತ್ರಗಳೆಂದು ಕರೆದಿದ್ದಾನೆ. ಇಲ್ಲಿಯ ರತ್ನಗಂಬಳಿಗಳೂ ಹೆಸರಾಗಿದ್ದವು. ಮಿತಾಕ್ಷರಾಗಿಂತ ಕೆಲವೇ ವರ್ಷ ನಂತರದ ಕೃತಿಯಾದ ಚಾಲುಕ್ಯ ಸೋಮೇಶ್ವರನ ಮಾನಸೋಲ್ಲಾಸದಲ್ಲಿ ಬಟ್ಟೆಬರೆಗಳ ಸೊಗಸಾದ ವರ್ಣನೆಯಿದೆ. ಯಂತ್ರಗಳಿಂದ ಬಟ್ಟೆಗೆ ಬಣ್ಣ ಹಾಕುವ ಕಲೆ ಅಂದಿನವರಿಗೆ ಸಾಧಿಸಿತ್ತು. (ರಂಜಿತಾನಿ ಸುಯಂತ್ರಕೈ) ಒಗೆದಂತ ಅಚ್ಚ ಬಣ್ಣ ಪಡೆಯುವ ಬಟ್ಟೆಗಳಿದ್ದವು.. ಜೊತೆಗೆ ಆಂಧ್ರ, ಕಲಿಂಗ, ಅನಹಿಲವಾಡ (ಗುಜರಾತ) ತೊಂಡೈಮಂಡಲ (ತಮಿಳು ನಾಡು)ಗಳಿಂದಲೂ ದೊಡ್ಡ ಪ್ರಮಾಣದಲ್ಲಿ ಕರ್ನಾಟಕ್ಕೆ ಬಟ್ಟೆಗಳು ಬರುತ್ತಿದ್ದವು.

ಇದೇ ಸಮಯದಲ್ಲಿ ಕರ್ನಾಟಕ ವರ್ತಕರು ಭಾರತವಷ್ಟೇ ಅಲ್ಲ. ಮಲಯಾ, ಜಾವಾ, ಕಾಂಬೋಜಗಳಂತೆ ಪಶ್ಚಿಮದ ಬರ್ಬರ, ಪಾರಸ (ಅರಬ್‌ದೇಶ, ಪರ್ಶಿಯ), ದೇಶಗಳಿಗೆ ಹೋಗುತ್ತಿದ್ದರು. ಐಯಾವೊಳೆಯ ಐನೂರು ಎಂಬ ವರ್ತಕರ ಮಹಾಸಂಘವು, ವಜ್ರ, ವೈಡೂರ್ಯ, ಬೆಳ್ಳಿ ಬಂಗಾರಾದಿಗಳಿಂದ ದೈನಂದಿನದ ಅವಶ್ಯಕತೆಯ ಯಾವತ್ತೂ ಸಾಮಾನುಗಳ ಯಾತಾಯಾತವನ್ನು ನಿಯಂತ್ರಿಸುತ್ತಿತ್ತು. ಅರಸರಿಗೂ ಸಾಲಕೊಡುವಷ್ಟು ಮತ್ತು ಅದನ್ನು ಶಾಸನಗಳಲ್ಲಿ ಬರೆಸುವಷ್ಟು ಶ್ರೀಮಂತ ಬಣಜಿಗರಿದ್ದರು. ನೆರೆನಾಡುಗಳಿಂದಲೂ ಕರ್ನಾಟಕಕ್ಕೆ ಈ ಸಮಯದಲ್ಲಿ ಬಂದು ನೆಲೆಸಿ, ವ್ಯಾಪಾರ ಬೆಳೆಸಿದ ಶ್ರೇಷ್ಠಿ (ಸೆಟ್ಟಿ) ಜನಾಂಗದ ಪಾತ್ರ ದೊಡ್ಡದು. ಸಮುದ್ರಯಾನಕ್ಕೆ ನಿಷೇಧವಾಗಲಿ, ವಿದೇಶ ಪ್ರಯಾಣ ಕೈಕೊಳ್ಳುವವರಿಗೆ ಬಹಿಷ್ಕಾರವಾಗಲೀ ಸೂಚಿಸುವ ಯಾವ ಸಂದರ್ಭವೂ ಮಿತಾಕ್ಷರದಲ್ಲಿ ಇಲ್ಲ. ಆದ್ದರಿಂದ ಈ ಕಟ್ಟುಪಾಡುಗಳೆಲ್ಲ ನಂತರದ ಶತಮಾನದ್ದು ಇರಬಹುದು.

ದಾಸ ಪದ್ಧತಿ

ಪಶ್ಚಿಮ ದೇಶಗಳಲ್ಲಿ ಪ್ರಚಲಿತವಿದ್ದ ಗುಲಾಮರ ಪದ್ಧತಿ ಭಾರತದಲ್ಲಿ ಇಲ್ಲವಾದ್ದರಿಂದ ಗ್ರೀಕ್ ರಾಯಭಾರಿ ಮೆಗಾಸ್ಥನೀಸನು ಭಾರತದಲ್ಲಿ ಗುಲಾಮರ (ಮಾರಾಟ?) ಪದ್ಧತಿಯಿಲ್ಲವೆಂದು ಉದ್ಗರಿಸಿದ್ದ. ಆದರೆ ದಾಸ ಪದ್ಧತಿ ಅನಾದಿಕಾಲದಿಂದ ಇಲ್ಲಿ ನಡೆದುಬಂದಿದೆ. ಬಹುಶಃ ಇತರ ದೇಶಗಳಂತೆ ಮುಕ್ತ ಮಾರಾಟ ಮತ್ತು ಕ್ರೌರ್ಯದ ಮಾದರಿಗಳು ವಿದೇಶೀಯರಿಗೆ ನೋಡಲು ಸಿಕ್ಕಿರಲಿಲ್ಲ. ಸೇವಕರನ್ನು ಮನೆಯ ಸದಸ್ಯರಂತೆ ಕಾಣುತ್ತಿದ್ದುದು, ಅವರ ಕಷ್ಟ - ಸುಖಗಳನ್ನು ಗಮನಿಸುವುದು ಈ ದೇಶದ ವಾಡಿಕೆಯಾಗಿತ್ತು. ಬಹುಶಃ ಶತಕಗಳಿಂದ ನಡೆದುಬಂದ ಪದ್ಧತಿಯೇ ಮಿತಾಕ್ಷರಾದಲ್ಲಿ ಬಿಂಬಿತವಾಗಿದೆ.

ಬಾಲಸ್ವವಾಸಿನೀ ವೃದ್ಧಗರ್ಭಿಣ್ಯಾತುರ ಕನ್ಯಕಾಃ
ಸಂಭೋಜ್ಯಾತಿಥಿ ಭೃತ್ಯಾಂಶ್ಚ ದಂಪತ್ಯೋಃ ಶೇಷ ಭೋಜನಂ

ಬಾಲಕ, ವಿವಾಹದ ನಂತರ ತಂದೆಯ ಮನೆಯಲ್ಲಿದ್ದ ಕನ್ಯೆ, ವೃದ್ಧ, ಗರ್ಭಿಣಿ, ರೋಗಿ, ಕುಮಾರಿ, ಅತಿಥಿ, ಸೇವಕ ಮೊದಲಾದವರಿಗೆ ಮುಂಚಿತವಾಗಿ ಊಟಕ್ಕೆ ಹಾಕಿ ನಂತರವೇ ದಂಪತಿಗಳು ಭೋಜನ ಮಾಡಬೇಕೆಂದು ಯಾಜ್ಞಾವಲ್ಕ್ಯನ ನಿರ್ದೇಶ. ಬಳಗ ಮತ್ತು ಅತಿಥಿಗಳ ಜೊತೆಗೇ ಸೇವಕರನ್ನು ಉಲ್ಲೇಖಿಸಿದ್ದು, ವಿಶೇಷ! ಆದರೆ ಈ ಪದ್ಧತಿ ಸಾರ್ವತ್ರಿಕವಾಗಿ ಇರುವ ಸಂಭವ ಕಡಿಮೆಯಾಗಿತ್ತು. ದಾಸರು, ಸೇವಕರ ರೂಪದಲ್ಲಿ ಯಾವತ್ತೂ ಸೇವೆಯನ್ನು ಸಲ್ಲಿಸುತ್ತಿದ್ದರು. ವಿಜ್ಞಾನೇಶ್ವರನು ದಾಸರಲ್ಲಿ ಮೂರು ವರ್ಗಗಳನ್ನು ಗುರುತಿಸಿದ್ದಾನೆ. ಉತ್ತಮ, ಮಧ್ಯಮ ಮತ್ತು ಕನಿಷ್ಟರು. ಮೊದಲನೆಯವರು ಆಯುಧಗಳನ್ನು ಬಳಸಬಲ್ಲವರು, ಖಾಸಗಿ ಜಮೀನುದಾರರು ಇವರನ್ನು ಪೋಷಿಸುತ್ತಿದ್ದಿರಬೇಕು. ಪಹರೆಯಲ್ಲಿ, ಹೊಲ, ಬೇಟೆಯ ಅರಣ್ಯಗಳ ಗಸ್ತಿಯಲ್ಲಿ ಇವರ ಬಳಕೆಯಾಗುತ್ತಿತ್ತು. ಎರಡನೆಯ ವರ್ಗದವರು ಕೃಷಿಕಾರ್ಯದಲ್ಲಿ ಸಹಾಯಕರು ಮೂರನೆಯವರು ಭಾರ ಹೊರುವವರು ಮತ್ತು ಕೂಲಿಕೆಲಸದವರಾಗಿದ್ದರು.

ಅರಸರೊಳಗೆ ನಡೆಯುವ ಯುದ್ಧಗಳು, ಬರಗಾಲ, ನೆರೆ ಮುಂತಾದ ರಾಜಕೀಯ ಮತ್ತು ನೈಸರ್ಗಿಕ ವಿಪತ್ತುಗಳು ಸಂಭವಿಸಿದಾಗ ಬಡವರ್ಗದವರಿಗೆ ಸುರಕ್ಷಿತತೆಯಿರಲಿಲ್ಲ. ಗುಳೇ ಹೋಗುವುದು ಸಾಮಾನ್ಯವಾಗಿತ್ತು. ಆಕ್ರಮಿತ ಅಥವಾ ಗೆದ್ದುಕೊಂಡ ಪ್ರದೇಶದಿಂದ ಸಹಾಯಕರನ್ನು ನಂಬಿಸಿಯೋ, ವಂಚಿಸಿಯೋ, ಕದ್ದೋ ಬೇರೆಡೆ ಒಯ್ದು ಮಾರಾಟ ಮಾಡುವದು ಸಾಮಾನ್ಯವಾಗಿದ್ದಿರಬೇಕು. 'ಅಭ್ಯುಪೇ ತ್ಯಾಶುಶ್ರೂಷಾ ಪ್ರಕರಣ' ಎಂಬ ಚಿಕ್ಕ ಅಧ್ಯಾಯವೇ ಇಂಥ ದುರ್ದೈವಿಗಳಿಗೆ ಮೀಸಲಾಗಿದೆ.

ಬಲಾತ್ಕಾರದಿಂದ ದಾಸರನ್ನಾಗಿಸಿದವರನ್ನು, ಅನ್ಯಾಯದಿಂದ ಅಪಹರಿಸಿದವರನ್ನು, ಅಡವು ಇಟ್ಟು ಹೋದವರನ್ನು ಯಜಮಾನನು ಬಿಟ್ಟು ಬಿಡಬೇಕು. ಇದು ಸಾಧ್ಯವಾಗದಿದ್ದರೆ, ರಾಜನೇ ಮಧ್ಯ ಪ್ರವೇಶಿಸಿ ಅವರನ್ನು ವಿಮುಕ್ತರನ್ನಾಗಿಸಬೇಕು. ಸಾಲಕ್ಕಾಗಿ ಒತ್ತೆಯಿಡಲ್ಪಟ್ಟವರು ಅಥವಾ 'ಋಣದಾಸ'ರು ತಮ್ಮ ಸಲುವಾಗಿ ಕೊಟ್ಟ ಹಣ ವಾಪಸ್ಸು ಮಾಡಿದರೆ ದಾಸ್ಯದಿಂದ ಮುಕ್ತರಾಗುತ್ತಿದ್ದರು. ದುರ್ಭಿಕ್ಷ ಕಾಲಕ್ಕೆ ತಾವಾಗಿ ಜೀತದಾಳುಗಳಾಗಿ ಬಂದು ಸೇರಿಕೊಂಡವರು, ಪರಿಸ್ಥಿತಿ ಸುಧಾರಿಸಿದ ನಂತರ ಗೋವುಗಳ ಒಂದು ಜೋಡಿಯನ್ನು ಯಜಮಾನನಿಗೆ ಕೊಡಮಾಡಿ ದಾಸ್ಯ ವಿಮುಕ್ತಿಯನ್ನು ಪಡೆಯಬಹುದಿತ್ತು.

ಕೆಲವು ಹೆಂಗಸರು, ಮಕ್ಕಳು ಮತ್ತು ಸ್ತ್ರೀಯರು ಅಪರಹರಣವನ್ನೇ ಕಾಯಕವನ್ನಾಗಿ ಮಾಡಿಕೊಂಡಂತೆ ತೋರುತ್ತದೆ. 'ವಡವಾ'ಸ್ತ್ರೀ ಎಂದು ಇವರನ್ನು ಕರೆಯಲಾಗಿದೆ. ಇವರು ಮಕ್ಕಳನ್ನು ಮಾರಿ ಪಡೆದ ಹಣ ವಾಪಸು ಮಾಡಿದರೆ ಸ್ವಾತಂತ್ರ್ಯ ಸಾಧ್ಯವಿತ್ತು. ಅಡವು ಇಡಲ್ಪಟ್ಟವರು ಕೊಟ್ಟ ಹಣ ಹಿಂದಿರುಗಿಸುವ ಸಾಧ್ಯತೆಯಿದ್ದರೆ ಮುಕ್ತರಾಗುತ್ತಿದ್ದರು. (ಕನ್ನಡದ ಭಡವ ಬೈಯುವಿಕೆಯ ಶಬ್ದದ ಮೂಲ ಇಲ್ಲಿದೆ!)

ಇಂದು ಇಪ್ಪತ್ತನೇ ಶತಕದ ಕೊನೆಯಂಚಿನಲ್ಲಿ ಮಾನವ ಹಕ್ಕುಗಳ ಪ್ರತಿಪಾದನೆ ಜೋರಾದ ದಿನಗಳಲ್ಲಿ, ನಾವಿನ್ನೂ ಜೀತದಾಳುಗಳ (ಹಿಂದಿನ ಋಣದಾಸರು) ವಿಮುಕ್ತಿ ಮತ್ತು ಜೀತ ನಿರ್ಮೂಲನ ಪದ್ಧತಿಯ ಪ್ರಚಾರ ಹಾಗೂ ಪತ್ರಿಕಾ ವರದಿಗಳನ್ನು ಓದುತ್ತಲೇ ಇರುತ್ತೇವೆ! ಈ ಕುರಿತಾದ ಕ್ರಮಗಳನ್ನು ಕೈಕೊಂಡ ಸರಕಾರೀ ಹೇಳಿಕೆಗಳು ಬರುತ್ತಲೇ ಇರುತ್ತವೆ. ಕಾಗದದ ಮಟ್ಟಿಗೆ ಜೀತ ನಿರ್ಮೂಲನವೂ ಆಗಿದೆ. ಆದರೆ ಜೀತವಿಮುಕ್ತರಿಗೆ ಪರ್ಯಾಯ ವ್ಯವಸ್ಥೆಯಾದ ಬಗ್ಗೆ ಯಾವ ಸಮಾಚಾರವೂ ಇರುವದಿಲ್ಲ. ಪರಿಹಾರ ಕ್ರಮಗಳೂ ಕಂಡುಬರುವುದಿಲ್ಲ. ಇಂಥವರ ಪುನರ್ನಿವೇಶನ ವಾದವಿಚಾರವಾಗಲಿ, ಅವರು ಮುಂದೆ ಜೀವನದಲ್ಲಿ ಯಶಸ್ವಿಗಳಾದ ಸುದ್ದಿಯಾಗಲಿ ನಮಗೆ ತಲುಪುವದಿಲ್ಲ. ಆ ಕುರಿತಾದ ಅಧ್ಯಯನ ನಡೆದದ್ದೂ ತಿಳಿಯುವದಿಲ್ಲ. ದಾಸ - ಜೀತ ಪದ್ಧತಿ ನಿಜಕ್ಕೂ ನಿರ್ಮೂಲವಾಗಿದೆಯೇ?

ವಿಜ್ಞಾನೇಶ್ವರ ಉಲ್ಲೇಖಿಸಿದ ಒಂದು ಮಾನವೀಯ ವಿಚಾರವನ್ನು ಹೇಳಬಹುದು. ಡಕಾಯಿತರು, ಹಿಂಸ್ರಪಶುಗಳ ಆಕ್ರಮಣ, ಜಲಸಮಾಧಿಯಂತಹ ಅನಾಹುತಗಳಿಂದ ಯಜಮಾನನ್ನು ರಕ್ಷಿಸಿದ ದಾಸನನ್ನು ಬಿಡುಗಡೆ ಮಾಡಬೇಕು ಅಷ್ಟೇ

ಅಲ್ಲ, ಆಸ್ತಿಯಲ್ಲಿ ಪುತ್ರನ ಪಾಲನ್ನು ಕೊಡಬೇಕು ಎಂದು ನಾರದ ಸ್ಮೃತಿಯ ವಾಕ್ಯಗಳನ್ನು ಆತ ಉದ್ಧರಿಸಿದ್ದಾನೆ. ಜೀವ ಉಳಿಸಿದ ಕೃತಜ್ಞತೆಯನ್ನು ಉದಾತ್ತತೆಯಿಂದ ತೋರ್ಪಡಿಸುವ ಜನ ಇದ್ದೇ ಇರುತ್ತಾರೆ. ಆದರೆ ಸ್ಮೃತಿಗ್ರಂಥದಲ್ಲಿ ಈ ಅಂಶವನ್ನು ಸೇರಿಸಬೇಕಾದರೆ, ಹೆಚ್ಚಿನ ಮಾಲೀಕರು ಎಂಥವರು ಇರುತ್ತಿದ್ದರು, ಎಂಬ ಸೂಚನೆ ದೊರೆಯುತ್ತದೆ! ಅಸಹಾಯಕರ ಶೋಷಣೆ ಯಾವ ಕಾಲಕ್ಕೂ ಇದ್ದದ್ದೇ! ಆದರೆ ಇಂಥವರಿಗೂ ಬಿಡುಗಡೆಯ ಅವಕಾಶವನ್ನು ಮಿತಾಕ್ಷರಾ ಕಲ್ಪಿಸಿಕೊಟ್ಟದೆ ಮತ್ತು ಇಂದಿನ ಪ್ರಜಾಪ್ರಭುತ್ವದಲ್ಲಿ ಸಹ ಕಾಣದ ಹಾಗೂ ವಾಸ್ತವಿಕತೆಗಳಲ್ಲಿ ಇರಬಹುದಾದ ಅಂತರವನ್ನು ತೋರಿಸುತ್ತದೆ.

ಇದೇ ಅಧ್ಯಾಯದಲ್ಲಿ ವಿವಿಧ ಶಿಲ್ಪಗಳು ಮತ್ತು ಆಯುರ್ವೇದ ವಿದ್ಯೆಯ ಅಭ್ಯಾಸದ ಅಂತೇವಾಸಿಗಳ ಅಥವಾ ಉಮೇದುವಾರರ ಪ್ರಸ್ತಾಪ ಬರುತ್ತದೆ. ಆಚಾರ್ಯನಾದವನು ಶಿಷ್ಯರಿಗೂ ಇಂಥ ಉಮೇದುವಾರರ ಪ್ರಸ್ತಾಪ ಬರುತ್ತದೆ. ಆಚಾರ್ಯನಾದವನು ಶಿಷ್ಯರಿಗೂ ಇಂಥ ಉಮೇದುವಾರರಿಗೂ ಊಟ - ವಸತಿಯ ಏರ್ಪಾಡಿನೊಂದಿಗೆ ವಿದ್ಯಾದಾನವನ್ನೂ ನೀಡಬೇಕಾಗಿತ್ತು. ಕಲಿಕೆಯ ಅವಧಿ ನಿರ್ದಿಷ್ಟವಾಗಿತ್ತು. ಕಲಿಕೆ, ಆ ಅವಧಿಗೂ ಮುಂಚಿತವಾಗಿ ಮುಗಿದರೂ ಶಿಷ್ಯನಾದವನು ಕೂಡಲೇ ಹಿಂದಿರುಗುವಂತಿರಲಿಲ್ಲ. ಗುರುವಾದವನು ಶಿಷ್ಯ ಮತ್ತು ಅಂತೇಪಾಸಿಗಳನ್ನು ಮಗನಂತೆ ನೋಡಿಕೊಳ್ಳಬೇಕು. ಬೇರೆ ಮನೆಗೆಲಸಗಳನ್ನು ಮಾಡಿಸಬಾರದು, ಎಂದು ಎಚ್ಚರಿಸುವದರ ಜೊತೆಗೆ ಉಡಾಳ ಶಿಷ್ಯರು ಓಡಿ ಹೋದರೆ ದಂಡಿಸಬೇಕು! ಎಂಬ ಸೂಚನೆಯೂ ಇದೆ.

ವೇದಾಭ್ಯಾಸಿ ಶಿಷ್ಯರು, ಶಿಲ್ಪಗಳನ್ನು ಕಲಿಯುತ್ತಿದ್ದ ವಿದ್ಯಾರ್ಥಿಗಳು, ಭೃತ್ಯರು, ದಾಸರು ಒಂದೇ ಆಶ್ರಯದೊಳಗೆ ವಿದ್ಯಾರ್ಜನೆ ಮಾಡುತ್ತಿದ್ದದ್ದು ನಿಜವಾಗಿದ್ದರೆ, ಸ್ಮೃತಿ ವ್ಯಾಖ್ಯಾನಕಾರರು ಅಂದಿನ ದಿನಗಳಲ್ಲಿ ಶ್ರಮಗೌರವಕ್ಕೆ ಕೊಡುತ್ತಿದ್ದ ಮಹತ್ವದ ಜೊತೆಗೆ ಸಾಮಾಜಿಕ ಸಮಾನತೆ ಸಾಧಿಸಲು ಮಾಡುತ್ತಿದ್ದ ಪ್ರಯತ್ನದ ಅರಿವು ಆಗುತ್ತದೆ.

ಗೃಹ ಜೀವನ

೧) ವಿವಾಹ - ಮನುಷ್ಯ ಜೀವನದಲ್ಲಿ ಅತಿಮುಖ್ಯ ಘಟ್ಟವಾದ ವಿವಾಹ ವ್ಯವಸ್ಥೆಯ ಬಗ್ಗೆ ನಮ್ಮ ಪೂರ್ವಜರು ವಿಶೇಷ ಲಕ್ಷ್ಯ ಪೂರೈಸಿದ್ದರು. ಆರೋಗ್ಯವಂತ ಸಂತತಿ ಪಡೆಯಲು ರಕ್ತಸಂಬಂಧಿ ವಿವಾಹಗಳು ನಿಷಿದ್ಧವೆಂದು ಸಾರಿ ಶತಕಗಳೇ ಕಳೆದಿದ್ದವು. ಸಗೋತ್ರ ಮತ್ತು ಸಪಿಂಡ ವಿಹಾಗಳನ್ನು ವಿರೋಧಿಸಲಿಕ್ಕೆ ಕಾರಣ ಹೊಸ ಹೊಸ ಜನಾಂಗಗಳು ವರ್ಣ ವ್ಯವಸ್ಥೆಯನ್ನು ತಮ್ಮದನ್ನಾಗಿ ಮಾಡಿಕೊಳ್ಳುತ್ತಿದ್ದು ದೊಡ್ಡಸಂಖ್ಯೆಯಲ್ಲಿ ವೈದಿಕ ಸಂಸ್ಕೃತಿ ಹರಡುತ್ತಿದ್ದರಿಂದ ಎಲ್ಲರನ್ನು ಸನಾತನ ಧರ್ಮದಲ್ಲಿ ಸೇರ್ಪಡೆ ಹೊಂದಲು ಅವಕಾಶ ಕಲ್ಪಿಸಿಕೊಡಲಾಯಿತು. ವಿದ್ಯಾಭ್ಯಾಸ ಮುಗಿಸಿ ಸ್ನಾತಕನಾದ ಯುವಕನು ಅಸ ಪಿಂಡಾ, ಅರೋಗಿಣಿ, ಭ್ರಾತೃಮತಿ (ಸೋದರನಿದ್ದವಳು) ವಯಸ್ಸಿನಲ್ಲಿ ಕಿರಿಯಳು ಮತ್ತು ಅನ್ಯಋಷಿ ಗೋತ್ರದ ಕನ್ಯೆಯನ್ನು ವರಿಸಬೇಕಾಗಿತ್ತು.

ಸಪಿಂಡತೆಯನ್ನು ನಿವಾರಿಸಲು ಮುಖ್ಯ ಕಾರಣವಿತ್ತು. ಶ್ರಾದ್ಧದಲ್ಲಿ ಪಿತೃಗಳಿಗೆ ಪಿಂಡಾರ್ಪಣ ಕ್ರಿಯೆ ಅತಿಮುಖ್ಯವಾಗಿತ್ತು. ಅನ್ನಪಿಂಡದ ಅರ್ಹತೆ ಬರಬೇಕಿದ್ದರೆ ಸಪಿಂಡತೆ ಇರಬಾರದು. ಸಪಿಂಡರು ಯಾರು ಅಂದರೆ ಮೂಲಪುರುಷನಿಂದ ಉದ್ಭೂತರಾದ ಸಂತತಿ: ತಂದೆ, ಮಗ, ಮೊಮ್ಮಗ, ಮರಿಮಗ ಎಲ್ಲರೂ ಸಪಿಂಡರಾಗುತ್ತಾರೆ. ಇದರಲ್ಲಿ ಸ್ತ್ರೀ ಸಂತಾನವೂ ಸೇರ್ಪಡೆಯಾಗುತ್ತದೆ. ಮನುವಿನ ಕಾಲದಿಂದಲೂ ತಾಯಿಯ ಕಡೆಯಿಂದ ೫ ತಲೆಮಾರಿನ ಮತ್ತು ತಂದೆಯ ಕಡೆಯಿಂದ ೭ ತಲೆಮಾರಿನ ಅಂತರವಿರಬೇಕು ಎಂಬುದು ನಡೆದು ಬಂದ ಪದ್ಧತಿಯಾಗಿತ್ತು. ತಂದೆ - ತಾಯಿಯ ಕಡೆಯಿಂದ ಸಮಾನ ತಲೆಮಾರುಗಳ ಅಂತರದ ಮೇಲೆ ಒತ್ತು ಕೊಟ್ಟದ್ದನ್ನು ಯಾಜ್ಞವಲ್ಕ್ಯನೂ ಸೇರಿದಂತೆ ಹಲವಾರು ಸ್ಮೃತಿಕಾರರು ಎತ್ತಿಹಿಡಿದರು. ದಕ್ಷಿಣದಲ್ಲಿ ಸೋದರಿಕೆಯ ಸಂಬಂಧ ಅಥವಾ ಸೋದರ ಮಾವನ ಮಗಳನ್ನು (ಮಾತುಲ ಸುತಾ) ಮದುವೆಯಾಗುವ ಪದ್ಧತಿ ಇದ್ದರೂ ಬರೇ ೨ ಪಿಂಡಗಳ ಅಥವಾ ತಲೆಮಾರುಗಳ ಅಂತರದ ಈ ವ್ಯವಸ್ಥೆ ವಿಜ್ಞಾನೇಶ್ವರನ ಕಾಲದಲ್ಲೂ ರೂಢಿಯಲ್ಲಿರಲಿಲ್ಲ.

ಉತ್ತರ ಕರ್ನಾಟಕದ ಒಂದು ಬ್ರಾಹ್ಮಣ ಉಪಪಂಗಡ, ವಿಜ್ಞಾನೇಶ್ವರನ ಕುಲದ್ದೆಂದು ಹೇಳಿಕೊಳ್ಳುತ್ತದೆ. ಅವರಲ್ಲಿ ಸೋದರ ಮಾವನಿಗೇ ಹುಡುಗಿಯನ್ನು ಕೊಡುವ ಪದ್ಧತಿ ಇದೆ. ಇದೂ ಸ್ಮೃತಿ ನಿಷಿದ್ಧವಾಗಿತ್ತು. ೧೪ನೇ ಶತಕದ ನಂತರ ಈ ಪದ್ಧತಿ ಹೆಚ್ಚು ಬಳಕೆಯಲ್ಲಿ ಬಂದಿರಬೇಕು. ಪರಾಶರ ಮಾಧವೀಯ (೧೪ನೇ ಶತಕ) ಸಂಸ್ಕಾರ ಕೌಸ್ತುಭ (೧೭ನೇ ಶತಕ), ಧರ್ಮಸಿಂಧು (೧೮ನೇ ಶತಕ) ಗ್ರಂಥಗಳು ಮಾತುಲ ಸುತಾ ಮತ್ತು ಮಾತುಲ ವಿವಾಹಗಳಿಗೆ ಸಮ್ಮತಿ ನೀಡಿವೆ - ಈ ಕಲಿಯುಗದಲ್ಲಿ ಇಂಥ ಮದುವೆಗಳು ನಡೆಯುತ್ತವೆ, ಎಂಬ ಟೀಕೆ ಸಹಿತ! ಸಾಮಾಜಿಕ ಸುರಕ್ಷಿತತೆ ಕಡಿಮೆಯಾಗುತ್ತ ಬಂದಂತೆ, ಕಟ್ಟುಪಾಡುಗಳು ಬಿಗಿಯಾಗಿ ಕನ್ಯೆಯರಿಗೆ ವರಶೋಧ ಕಠಿಣವಾಗುತ್ತ ಬಂದಿತು. ಮದುವೆ ಆದಾಕ್ಷಣ ಹೆಣ್ಣು, ಗೋತ್ರ ಮತ್ತು ಸಪಿಂಡತೆ ಕಳೆದುಕೊಂಡು ಬಿಡುತ್ತಾಳೆ! ಎಂಬುದು ಸಮರ್ಥನೀಯ ಅಂಶವಾಯಿತು. ಉತ್ತರ ಭಾರತದಲ್ಲಿ ಮಾತ್ರ ಈಗಲೂ ಈ ಪ್ರಕಾರದ ಎರಡೂ ಸಂಬಂಧಗಳಿಗೆ ನಿಷೇಧವಿದೆ. ತಾಯಿಯ ಕಡೆಯ ಭ್ರಾತೃಸಂಬಂಧಿಗಳಲ್ಲಿ ಸಾಪಿಂಡ್ಯವಿಲ್ಲವೆಂದು ಸಮುದಾಯಶಕ್ತಿಯು ರೂಢಿಹಾಕಿಕೊಂಡಿರುವ ಸಾಧ್ಯತೆಯನ್ನು ಅರೆಮನಸ್ಸಿನಿಂದ ಒಪ್ಪಿಕೊಂಡಂತೆ, ವಿಜ್ಞಾನೇಶ್ವರ ಹೇಳಿದ್ದಾನೆ. ಸಮುದಾಯ ಶಕ್ತಿಯೇ ಮುಖ್ಯ! ಅವರಿಂದಾಗಿ ಹಿಂದಿನಿಂದ ನಡೆದು ಬಂದ ರೂಢಿಯೇ ಪಾಲನೆಗೆ ಯೋಗ್ಯವಾಗಿತ್ತು.

ವಿವಾಹದ ವಯಸ್ಸು

ವಿಜ್ಞಾನೇಶ್ವರನು ಕನ್ಯೆಯ ವಿವಾಹದ ವಯಸ್ಸು ಎಷ್ಟು ಇರಬೇಕು ಎಂದು ಖಚಿತವಾಗಿ ಹೇಳುವದಿಲ್ಲ! ತಂದೆ, ಅಜ್ಜ, ಸೋದರರು, ತಂದೆಯ ಕುಲದವರು, ತಾಯಿ ಇವರಿಗೆಲ್ಲ ಕನ್ಯಾದಾನದ ಅಧಿಕಾರವಿದ್ದು ಅದನ್ನು ಚಲಾಯಿಸದಿದ್ದರೆ ಭ್ರೂಣ ಹತ್ಯೆಯ ಪಾಪಕ್ಕೆ ಒಳಗಾಗುತ್ತಾರೆ ಎಂಬ ಯಾಜ್ಞವಲ್ಕ್ಯ ವಾಕ್ಯವನ್ನು ವಿವರಿಸಿದರೂ ಅದಾಗಲೇ ಬಾಲವಿವಾಹ ಪ್ರಚಲಿತವಿತ್ತು ಎಂಬುದು ಸ್ಪಷ್ಟ. ೮ ವರ್ಷಕ್ಕೆ ಹುಡುಗರಿಗೆ ಉಪನಯನದ ಸಂಸ್ಕಾರದ ವಯಸ್ಸು. ಹೆಣ್ಣು ಮಕ್ಕಳಿಗೆ ಆ ಸಂಸ್ಕಾರವಿಲ್ಲದ್ದರಿಂದ ಅದೇ ವಯಸ್ಸಿನ ವಿವಾಹ ಆದರ್ಶಪ್ರಾಯವೆನಿಸಿಕೊಂಡಿತ್ತು. ಆದರೆ ಸ್ಮೃತಿ ವಾಕ್ಯವನ್ನು ಎಲ್ಲ ವರ್ಣದವರೂ ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರೆಂದು ಹೇಳಲಾಗದು! ಬ್ರಾಹ್ಮಣರಲ್ಲಿ ಮತ್ತು ಅವರನ್ನು ಎಲ್ಲ ವಿಧದಲ್ಲಿ ಅನುಕರಿಸುತ್ತಿದ್ದ ವೈಶ್ಯವರ್ಣದಲ್ಲಿ ಬಾಲ ವಿವಾಹ ಸರ್ವಸಾಮಾನ್ಯವಿರಲು ಸಾಕು. ದೊಡ್ಡವಳಾಗುವ ತನಕ ಕನ್ಯೆ ಪಿತೃಗೃಹದಲ್ಲಿದ್ದು ಇಂಥ ಹುಡುಗಿಯನ್ನು 'ಸ್ವವಾಸಿನಿ' ಎಂದು ಮಿತಾಕ್ಷರಾ ಬೇರೊಂದು ಸಂದರ್ಭದಲ್ಲಿ ಹೆಸರಿಸುತ್ತದೆ. ಈಗಲೂ ಗ್ರಾಮಾಂತರ ಪ್ರದೇಶಗಳಲ್ಲಿ ಬಾಲವಿವಾಹವೇ ರೂಢಿಯಲ್ಲಿದೆ. ಬಿಹಾರ, ರಾಜಸ್ಥಾನ, ಮಧ್ಯಪ್ರದೇಶಗಳಲ್ಲಿ ಅಂತೂ ರಾಜಾರೋಷವಾಗಿ ಬಾಲವಿವಾಹಗಳು ನಡೆಯುತ್ತವೆ. ಕರ್ನಾಟಕವೂ ಹೊರತಾಗಿಲ್ಲ.

ಆದರೆ ಕ್ಷತ್ರಿಯರ ಮಟ್ಟಿಗೆ ಯುವಾವಸ್ಥೆಯ ಮದುವೆಗಳೇ ಸಾಮಾನ್ಯವಿದ್ದವು. ವಿಜ್ಞಾನೇಶ್ವರನ ಸಮಕಾಲೀನ ಬಿಲ್ಹಣಕವಿಯ ವಿಕ್ರಮಾಂಕ ದೇವ ಚರಿತದಲ್ಲಿ, ಚಂದಲೆಯ 'ಶೃಂಗಾರಮಿತ್ರ' ವಯಸ್ಸಿನಲ್ಲಿ ಆಕೆಯ ಸ್ವಯಂವರದ ಏರ್ಪಾಡು ನಡೆಯಿತು ಎಂಬ ವಿಚಾರ ಬರುತ್ತದೆ. ೧೬ ರಿಂದ ೧೮ ವರ್ಷದವಳಿರಬದಾದ ಆಕೆ, ವಿಕ್ರಮಾದಿತ್ಯನನ್ನೇ ವರಿಸುತ್ತಾಳೆ. ಕೊಂಚ ನಂತರದ ಕಾಲದ ಮಾನಸೋಲ್ಲಾಸದಲ್ಲೂ ಮದುವೆಯಾದೊಡನೆ ರಾಜದಂಪತಿಗಳು ವೈವಾಹಿಕಜೀವನವನ್ನು ಪ್ರಾರಂಭಿಸಬೇಕೆಂದು ಹೇಳಿದೆ. ಹತ್ತನೆಯ ಶತಕದ ಸೊಮದೇವ ಸೂರಿಯ, ಯಶಸ್ತಿಲಕ ಮತ್ತು ನೀತಿ ವಾಕ್ಯಾಮೃತಗಳಲ್ಲಿ ಹುಡುಗನಿಗೆ ಹದಿನಾರು, ಹುಡುಗಿಗೆ ಹನ್ನೆರಡು ವರ್ಷ ವಿವಾಹಯೋಗ್ಯ ವಯಸ್ಸು ಎಂದು ಹೇಳಿರುವದರಿಂದ ಬಾಲ ಮತ್ತು ಕಿಶೋರಾವಸ್ಥೆಯ ಮದುವೆಗಳು ಸಾಮಾನ್ಯವಾಗಿದ್ದವು ಎಂದು ಹೇಳಬಹುದು.

ವಿಧವೆಯರ ಪಾಡು

ಈ ಬಾಲವಿವಾಹದ ಅನಿಷ್ಟ ಪದ್ಧತಿ ಹೆಣ್ಣುಮಕ್ಕಳನ್ನು ಜೀವನದುದ್ದಕ್ಕೂ ಕಾಡುತ್ತಿದ್ದುದು ದುರ್ದೈವ ವಶಾತ್ ಆಕೆ ವಿಧವೆಯಾದಾಗ. ವಿಶ್ವದ ಯಾವುದೇ ಜನಾಂಗದಲ್ಲಿ ಹಿಂದೂ ಮೇಲುವರ್ಗದ ಬಾಲವಿಧವೆಯಂತೆ ನಿರಂತರ ದುಃಖದ

ಬಾಳುವೆಗೆ ಹೆಣ್ಣು ಗುರಿಯಾದದ್ದು ನೋಡಲು ಸಿಗುವುದಿಲ್ಲ. ನಂತರದ ಶತಕಗಳಲ್ಲಿ ಕೇಶವಪನ ಅಥವಾ ಮುಂಡನದ ಘೋರ ಪದ್ಧತಿಯೂ ಕಾಣಿಸಿಕೊಂಡು ಮುಂಡನದ ಸನ್ಯಸನ ಜೀವನ ಅಥವಾ ಸಹಗಮನ ಎರಡೂ ಅಮಾನುಷ ಪದ್ಧತಿಗಳಲ್ಲಿ ಒಂದನ್ನು ಆ ವರ್ಗದ ಹೆಣ್ಣು ಆರಿಸಬೇಕಾಗಿತ್ತು. ತೀರ ಕನಿಷ್ಠ ದರ್ಜೆಯ ಶುದ್ಧ ಕನ್ನಡ ಬೈಗಳು ಹೆಣ್ಣಿನ ಮುಂಡನಕ್ಕೆ ಸಂಬಂಧಪಟ್ಟದ್ದೆಂದು ನೆನೆಸಿಕೊಂಡರೆ ಹೆಣ್ಣಿನ ದುಃಖದ ಆಳ ಅರ್ಥವಾದೀತು! ಆದರೆ ಮಿತಾಕ್ಷರಾದಲ್ಲಿ ಮುಂಡನದ ಪ್ರಸ್ತಾಪವೇ ಇಲ್ಲ!

ವಿದ್ವತ್ ವಿಪ್ರ ನೃಪ ಸ್ತ್ರೀಣಾಂ ನೇಷ್ಯತೆ ಕೇಶವಾಪನಂ
ಋತೇ ಮಹಾಪಾತಕಿನೋ ಗೋ ಹಂತಃ ಚ ಅವಕೀರ್ಣಿನಃ

ಇತಿ ಮನುಸ್ಮರಣಾತ್ ಎಂದು ಗೋಹತ್ಯೆ ಹಾಗೂ ಮಹಾಪಾತಕ ಮಾಡಿದರೂ ಸಹ ವಿದ್ವಾಂಸರು ವಿಪ್ರರು, ಅರಸು ಮತ್ತು ಸ್ತ್ರೀಯರ ತಲೆ ಬೋಳಿಸತಕ್ಕದ್ದಲ್ಲ! ಎಂದು ಮನುವಿನ ವಾಕ್ಯವನ್ನು ವಿಜ್ಞಾನೇಶ್ವರ ಎತ್ತಿ ಹಿಡಿದಿದ್ದಾನೆ. ಬಹುಶಃ ೧೪ನೇ ಶತಕದ ನಂತರ, ಮುಸ್ಲಿಂ ಆಕ್ರಮಣ ಹೆಚ್ಚುತ್ತ ಹೋದಂತೆ, ಸಾಮಾಜಿಕ ಕಟ್ಟುಗಳು ಬಿಗಿಯಾಗುತ್ತ ಬಂದಂತೆ ಈ ರೂಢಿ, ಬಳಕೆಯಾಗಿರಬೇಕು. ವಿಧವೆಯಾದಾಕೆ ಸನ್ಯಾಸಿಯ ಕಠಿಣವ್ರತವನ್ನು ಆಚರಿಸಬೇಕಿತ್ತು. ಸನ್ಯಸನ ಪದ್ಧತಿಗೆ ಅತ್ಯವಶ್ಯವಿದ್ದ ಕೇಶವಪನ ಪದ್ಧತಿಯನ್ನು ಸಲೀಸಾಗಿ ವಿಧವೆ ಹೆಂಗಳೆಯರಿಗೆ ಅನ್ವಯಿಸಲಾಯಿತು.

ಸಹಗಮನ

ಸತಿ ಹೋಗುವ ವಿಚಾರದಲ್ಲಿ ವಿಜ್ಞಾನೇಶ್ವರ ಮೀರಿದ ಔದಾರ್ಯ ತೋರಿಸಿದ್ದಾನೆ! ಜಾತಿಭೇದವಿಲ್ಲದೇ ಎಲ್ಲಾ ವರ್ಣಗಳ, ಅದೇಕೆ ಪಂಚಮವರ್ಗದ ಚಾಂಡಾಲಿಯರೂ ಕೂಡ ಸಹಗಮನ ಮಾಡಲಿ! ಎನ್ನುವ ವಿಶಾಲ ಮನೋಭಾವ ಅವನದು. ಕೆಲವು ಸ್ಮೃತಿಕಾರರ ಪ್ರಕಾರ ಬ್ರಾಹ್ಮಣೆಗೆ ಸಹಗಮನ ನಿಷಿದ್ಧವಿತ್ತು. ಆದರೆ ಮಿತಾಕ್ಷರದ ಅಭಿಪ್ರಾಯದಲ್ಲಿ ಅದೊಂದು ಸರ್ವರಿಗೂ ಮಹಾಭ್ಯುದಯದ ಉಪಾಯ. ವ್ಯಾಸ, ಶಂಖ, ಅಂಗೀರಸ, ಹಾರೀತ ಎಲ್ಲಾ ಸ್ಮೃತಿಕಾರರನ್ನೂ ವಿಜ್ಞಾನೇಶ್ವರ ತಮ್ಮ ವಾದ ಸಮರ್ಥನೆಯ ಈ ಸಂದರ್ಭದಲ್ಲಿ ಉದ್ಧರಿಸುತ್ತಾನೆ. ''ಸತಿ ಹೋಗುವವಳ ತಾಯಿಯ ಕುಲ, ತಂದೆಯ ಕುಲ, ಪತಿಯ ಕುಲದ ಯಾವತ್ತೂ ಪಿತೃಗಳು ಶಾಶ್ವತವಾಗಿ ಸ್ವರ್ಗದಲ್ಲಿ ನಲಿಯುತ್ತಾರೆ. ಅವರೆಗೆ ನರಕದಲ್ಲಿ ಕೊಳೆಯುವ ಹಿಂದಿನ ಎಲ್ಲಾ ಪಿತೃಗಳಿಗೂ ಸಹ ಅದು ಸ್ವರ್ಗಕ್ಕೆ ದಾರಿ ಮಾಡಿಕೊಡುತ್ತದೆ. ಒಬ್ಬ ಸ್ತ್ರೀ, ಪತಿಯ ಶವದೊಂದಿಗೆ ಸುಟ್ಟುಕೊಂಡು ಸತ್ತರೆ ಶಾಶ್ವತ ಸ್ವರ್ಗ, ಆಕೆ ತನಗೂ ಇತರರಿಗೂ ಸ್ವರ್ಗ ಸಿಗುವದನ್ನು ತಪ್ಪಿಸದಿರಲಿ! ಅದು ಆತ್ಮಘಾತವಲ್ಲ. ಮೋಕ್ಷ ವಿಧಾನ ಎಂದು ವಿಧವಿಧವಾಗಿ ಸಹಗಮನ (ಇದರಲ್ಲಿ ಅನುಗಮನ, ಅನ್ವಾರೋಹಣಗಳೂ ಸೇರ್ಪಡೆಯಾಗಿವೆ)ವನ್ನು ಪ್ರೋತ್ಸಾಹಿಸಿದ್ದಾನೆ. ಮಹಾಮಹೋಪಾಧ್ಯಾಯ ಪಿ.ವಿ. ಕಾಣೆಯವರು 'The reasoning of Mitakshara looks like special pleading' ಎಂದು ಉದ್ಗರಿಸಿದ್ದಾರೆ! ಗರ್ಭಿಣಿ ಮತ್ತು ಚಿಕ್ಕಮಕ್ಕಳಿದ್ದವರು ಮಾತ್ರ ಸತಿ ಹೋಗಬೇಕಾಗಿಲ್ಲ ಎಂಬ ಅಂಶವನ್ನು ಮಿತಾಕ್ಷರಾದಲ್ಲಿ ಸೇರಿಸಲಾಗಿದೆ. ಗಂಡ ಸತ್ತಾಗ, ಸಾವನ್ನು ಎದುರಿಸುವವಳೇ ನಿಜವಾದ ಪತಿವ್ರತೆ ಎಂದು ಸಾರಿ ಸಾರಿ ಹೇಳಿದಾಗ ಈ ಆದರ್ಶಕ್ಕಾಗಿ ಸತಿ ಹೋಗುವ ಧೈರ್ಯಶಾಲಿ ಮಹಿಳೆಯರು ಇದ್ದೇ ಇದ್ದರು.

ಇಷ್ಟೆಲ್ಲ ಸಹಗಮನವನ್ನು ವೈಭವೀಕರಿಸಿದರೂ ಜನ ಸಾಮಾನ್ಯರಲ್ಲಿ ಹೆಚ್ಚಿನವರು ಸಹಗಮನ, ಅನ್ವಾರೋಹಣ ಅಥವಾ ಅನುಗಮನವನ್ನು ಕೈಗೊಳ್ಳುತ್ತಿದ್ದರು ಎಂದು ನಂಬುವಂತಿಲ್ಲ! ಕ್ಷತ್ರಿಯರಲ್ಲಿ ಅದು ಸಾಮಾನ್ಯವಾಗಿತ್ತು. ಬ್ರಾಹ್ಮಣ - ವೈಶ್ಯರಲ್ಲಿ ಆಯಾ ಮಹಿಳೆಯರು ಆಳುವ ವರ್ಗಕ್ಕೆ ಸೇರಿದ್ದಾದರೆ ಸತಿ ಹೋಗುತ್ತಿದ್ದರು. ಅವರನ್ನು ಅನುಕರಿಸಲು ಯತ್ನಿಸುವ ಮತ್ತು ಮಹಾಸತಿಯ ದೇವತ್ವವನ್ನು ಪಡೆಯಲೆತ್ನಿಸುವ ಕಲ್ಲುಮನಸ್ಸಿನ ಇತರ ಮಹಿಳೆಯರೂ ಸತಿ ಹೋಗುತ್ತಿದ್ದರು. ಇಂಥವರ ಸಂಖ್ಯೆ ಪತ್ತೆ ಹೆಚ್ಚುವುದು ಕಷ್ಟ ಸಾಧ್ಯ! ಯಾಜ್ಞವಲ್ಕ್ಯನು ಈ ಪದ್ಧತಿಯನ್ನು ಎತ್ತಿಹಿಡಿದಿಲ್ಲ. ಮನುವೂ ಹೇಳಿಲ್ಲ. ಅನಾರ್ಯವಾದ ಈ ದುಷ್ಟಪದ್ಧತಿ, ಹೇಗೋ ತೀರ ಪ್ರಾಚೀನ ಕಾಲದಲ್ಲೇ. ಭಾರತವನ್ನು ಪ್ರವೇಶಿಸಿ ಮಧ್ಯಯುಗದ ಹೊತ್ತಿಗೆ ಭಾರತದಾದ್ಯಂತ

ಜನಪ್ರಿಯವಾಗಿಬಿಟ್ಟಿತು. ದಾನ ಚಿಂತಾಮಣಿ ಅತ್ತಿಮಬ್ಬೆಗೆ ಕಿರಿಯವಯಸ್ಸಿನ ಮಗನಿದ್ದು ಆಕೆಯ ತಂಗಿ ಗುಂಡಮಬ್ಬೆಯೇ ಮುಂದಾಗಿ ಸಹಗಮನ ಮಾಡಿದ್ದನ್ನು ಈ ಸಂದರ್ಭದಲ್ಲಿ ನೆನೆಸಿಕೊಳ್ಳಬಹುದು. ಹೆಗ್ಗಡೆದೇವನ ಕೋಟೆಯ ಬೆಳತೂರಿನ ದೇಕಬ್ಬೆಯೆಂಬವಳ ಸತಿಯ ಕುರಿತು ಹೇಳವದೂ ಉಚಿತವೆನಿಸುತ್ತದೆ ಈ ದೇಕಬ್ಬೆ, ನುಗುನಾಡಿನ ಅಧಿಪತಿ ರವಿಗನ ಮಗಳಾಗಿದ್ದಳು. ನವಿಲೆನಾಡಿನ ಅರಸು ಏಚನನ್ನು ಮದುವೆಯಾಗಿದ್ದಳು. ಚೋಳ ಅರಸನ ವ್ಯಕ್ತಿಗತ ವೈರದ ಪ್ರಸಂಗದಲ್ಲಿ ಏಚನು ಕೊಲ್ಲಲ್ಪಟ್ಟಾಗ ದೇಕಬ್ಬೆ ತನ್ನ ಊರಿನಲ್ಲಿ (ಅನುಮರಣ) ಸತಿ ಹೋಗಲು ನಿರ್ಧರಿಸುತ್ತಾಳೆ. ಆಕೆಯ ತಂದೆ, ತಾಯಿ ಸಂಬಂಧಿಕರೆಲ್ಲ ಅವಳ ಮನಸ್ಸನ್ನು ತಿರುಗಿಸಲು ಎಷ್ಟು ಪ್ರಯತ್ನಿಸಿದರೂ ಆಕೆ ಕೇಳದೇ. ತಾನು ಹುಟ್ಟಿದ ಮತ್ತು ಕೊಟ್ಟ ಕುಲಕ್ಕೆ ಕೆಟ್ಟಹೆಸರು ತರುವವಳಲ್ಲವೆಂದು ಚಿತೆಯನ್ನು ಹೊಕ್ಕು ದೇವಲೋಕಕ್ಕೆ ಹೋದಳೆಂದು ವಿಜ್ಞಾನೇಶ್ವರನ ಸಮಕಾಲೀನ ಶಾಸನವೊಂದು ಸಾರುತ್ತದೆ (ಕ್ರಿ.ಶ. ೧೦೫೭). ದೇಕಬ್ಬೆ ಕುಡಿಯರ ವಂಶಕ್ಕೆ ಸೇರಿದವಳಿದ್ದಳು. ಶೂದ್ರಕುಲದ ಮಹಿಳೆಯೊಬ್ಬಳು ಸತಿಹೋದ ಮೊದಲ ನಿದರ್ಶನ ಇದೆಂದು ಈ ಶಾಸನವನ್ನು ಸಂಪಾದಿಸಿದ ರೆವೆರಂಡ್ ಕಿಟ್ಟೆಲ್ ಹೇಳುತ್ತಾರೆ. ಮಿತಾಕ್ಷರಾ ರೂಪಗೊಳ್ಳುತ್ತಿದ್ದ ಕಾಲಕ್ಕೆ ವರ್ಣಭೇದವಿಲ್ಲದೇ ಸ್ತ್ರೀಯರು ಸತಿಹೋಗುತ್ತಿದ್ದುದು ಸಾಮಾನ್ಯವಾಗಿದ್ದಿರಬೇಕು. ಆದರೆ ಇದಕ್ಕೆ ಸಮಾಜದ ಪ್ರೋತ್ಸಾಹ ಅಷ್ಟೊಂದು ಇರಲಿಲ್ಲವೆಂದು ದೇಕಬ್ಬೆಯ ಶಾಸನದಿಂದ ಊಹಿಸಬಹುದು. ಕೆಲ ಸ್ಮೃತಿ ವ್ಯಾಖ್ಯಾನಕಾರರು, ಈ ಪದ್ಧತಿ ಕಲಿವರ್ಜಿತ ಎಂದು ಸಾರಿದ್ದರಿಂದ ವಿಜ್ಞಾನೇಶ್ವರನ ನಂತರದ ಶತಕಗಳಲ್ಲಿ ಸತಿಹೋಗುವವರ ಸಂಖ್ಯೆ ಗಾಬರಿಪಡಿಸುವಷ್ಟು ಹೆಚ್ಚಿ ಅದಕ್ಕೆ ಕಡಿವಾಣ ಹಾಕುವ ಪ್ರಯತ್ನ ಇದ್ದರೂ ಇರಬಹುದು.

ಸ್ತ್ರೀಯ ಪರಾಧೀನತೆ

'ಕ್ವಚಿದಪಿ ಸ್ತ್ರೀಣಾಂ ನೈವ ಸ್ವಾತಂತ್ರ್ಯಂ' ಎಂದು ಯಾಜ್ಞವಲ್ಕ್ಯ ಸ್ಮೃತಿ, ಮನುವಿನ 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂಬ ಅಭಿಪ್ರಾಯವನ್ನೇ ಎತ್ತಿ ಹಿಡಿಯುತ್ತದೆ. ಮದುವೆಗೆ ಮೊದಲು ತಂದೆ, ನಂತರ ಪತಿ, ಮುಪ್ಪಿನಲ್ಲಿ ಮಕ್ಕಳು ಇವರೆಲ್ಲರ ಅಭಾವದಲ್ಲಿ ಜ್ಞಾತಿಗಳು ರಕ್ಷಣೆ ನೀಡಬೇಕು. ಯಾರೂ ಇಲ್ಲದಿದ್ದರೆ, ರಾಜಾಭರ್ತಾ ಪ್ರಭುಃ ಸ್ತ್ರೀಯಾಃ - ಅಂದರೆ ಅಂತಹ ಸ್ತ್ರೀಯರ ರಕ್ಷಣೆ ಅರಸನ ಜವಾಬ್ದಾರಿ ಎಂದು ಸ್ಪಷ್ಟವಾಗಿ ಮಿತಾಕ್ಷಾರ ಹೇಳುತ್ತದೆ. ರಕ್ಷಣೆ ಅಂದರೆ ತಂದೆ, ಪತಿ ಮುಂತಾದವರು 'ಅಕಾರ್ಯ ತರಣಾತ್ ರಕ್ಷೇದ್' ಅಂದರೆ ಸಲ್ಲದ ಚಟುವಟಿಕೆಗಳಿಂದ ಸ್ತ್ರೀಯರನ್ನು ರಕ್ಷಿಸಬೇಕು! ಎಂದು ಹೇಳಿದೆಯಾದರೂ ಆ ಅಲ್ಲಸಲ್ಲದ ಚಟುವಟಿಕೆಗಳು ಯಾವವು? ಎಂಬುದನ್ನು ಹೆಸರಿಸಿಲ್ಲ. ಅವನ್ನು ನಿರ್ಧರಿಸುವವರೂ ಗಂಡಸರೇ ಅಲ್ಲವೇ?

ಬಹುಪತ್ನಿತ್ವ ರೂಢಿಯಲ್ಲಿತ್ತು. ಆದರೂ ಬಲವಾದ ಕಾರಣಗಳಿಲ್ಲದೇ ಎರಡನೇ ಮದುವೆ ಮಾಡಿಕೊಳ್ಳುವಂತಿರಲಿಲ್ಲ. ಮದ್ಯಪಾನದ ಚಟವಿದ್ದವಳು ರೋಗಿಷ್ಟೆ. ಧೂರ್ತೆ, ಬಂಜೆ, ಹಣ ದುಂದು ಮಾಡುವವಳು, ಬರೇ ಹೆಣ್ಣು ಹಡೆಯುವವಳು, ಪುರುಷ ದ್ವೇಷಿಣಿ ಮುಂತಾದವು ದೋಷಗಳೆಂದು ಪರಿಗಣಿಸಲ್ಪಡುತ್ತಿದ್ದವು. ಬಂಜೆತನಕ್ಕೆ ಕೇವಲ ಹೆಣ್ಣೇ ಕಾರಣವಲ್ಲ! ಎಂದು ಗೊತ್ತಿಲ್ಲದ ಮತ್ತು ಹೆಣ್ಣುಸಂತಾನವನ್ನು ತಪ್ಪಿಸಲು ಸಾಧ್ಯವಾಗದ ಯುಗದಲ್ಲಿ ಹೆಣ್ಣಿಗೇ ಅನ್ಯಾಯ ಕಟ್ಟಿಟ್ಟದ್ದು! ಆದರೂ ಬೇಕುಬೇಕಾದಂತೆ ಹೆಣ್ಣನ್ನು ತ್ಯಜಿಸುವಂತಿರಲಿಲ್ಲ. ಆಕೆಗೆ ಸಲ್ಲಬೇಕಾದ ಸ್ತ್ರೀಧನದ ವ್ಯವಸ್ಥೆ ಮಾಡಬೇಕಾಗುತ್ತಿತ್ತು. ಗಂಡು ಸಂತತಿ ಅತಿಮುಖ್ಯ..ಪಿಂಡದಾನ ಕಡ್ಡಾಯ. ಮನೆತನ ಮುಂದುವರಿಯಬೇಕು. ಸಮಾಜ ದುರ್ಬಲವಾಗಬಾರದು. ಈ ವಿಚಾರಗಳೇ ಸ್ಮೃತಿಕಾರರಿಗೆ ಮುಖ್ಯವಾಗಿದ್ದವು. ಸಜೀವ ಹೆಂಡತಿಯನ್ನು ಗಂಡನ ಶವದೊಟ್ಟಿಗೇ ಸುಡಲು ಸಿದ್ಧರಿದ್ದ ಜನ, ಹೆಂಡತಿ, ಯೇನಕೇನ ಕಾರಣದಿಂದ ಮೃತಳಾದರೆ ಅವಳನ್ನು ದಹನ ಮಾಡಿ ಬಂದು ಆ ಕೂಡಲೇ (ಅವಿಲಂಬಯನ್) ಮರು ಮದುವೆಯನ್ನು ಗಂಡನಾಗಿದ್ದವನು ಮಾಡಿಕೊಳ್ಳಬೇಕು ಎಂದು ವಿಧಿಸಿದ್ದಾರೆ. ಅದಕ್ಕೆ ಕಾರಣವನ್ನೂ ಮಿತಾಕ್ಷರಾ ಕೊಡುತ್ತದೆ. ಸಂಸಾರದ ಬಗ್ಗೆ ವ್ಯಕ್ತಿಯು ಪೂರ್ಣ ವಿರಕ್ತನಾಗಿರುವದಿಲ್ಲ. ಆತನ ಗುರುತರ ಗೃಹಸಥನ ಜವಾಬ್ದಾರಿ ನಿರ್ವಹಿಸಲು ಗೃಹಿಣಿಯ ಸಹಾಯ ಬೇಕೇಬೇಕು. ವಿಧುರನು ಯಜ್ಞ-ಯಾಗ-ಅಗ್ನಿಹೋತ್ರಾದಿ ವಿಧಿಗಳನ್ನು ಒಬ್ಬನೇ ನಿರ್ವಹಿಸಲಾರ. ದಾನ ಧರ್ಮಗಳನ್ನು ಸ್ವೀಕರಿಸಲಾರ, ಹೀಗಾಗಿ ಮರುಮದುವೆಯ ಅವಸರವಂತೆ!

ನಿಯೋಗ ಮತ್ತು ವಿಧವಾ ವಿವಾಹಗಳ ಉಲ್ಲೇಖ ಇದ್ದರೂ ಅವುಗಳ ವಿವರಣೆಯಿಲ್ಲ. ಇವೆರಡೂ ನಿಂತು ಹೋಗಿ ಶತಕಗಳೇ ಕಳೆದುಹೋಗಿದ್ದವು. ಅದರಂತೆ ಸ್ವಯಂವರದ ಪ್ರಸ್ತಾಪವಿದ್ದರೂ ಬಾಲವಿವಾಹವೇ ಪ್ರಚಲಿತವಿದ್ದ ಯುಗದಲ್ಲಿ ಅದನ್ನು ಚಲಾಯಿಸುವದಾದರೂ ಹೇಗೆ?

ಇಷ್ಟೆಲ್ಲಾ ಹೀನಾಯವಾಗಿ ಕಂಡರೂ ಸ್ತ್ರೀಯರಿಗೆ ಸಮಾಜದಲ್ಲಿ ಗೌರವಾನ್ವಿತ ಸ್ಥಾನವಿದೆಯೆಂದು ಮತ್ತೆ ಮತ್ತೆ ಸ್ಮೃತಿಕಾರರು ನೆನಪಿಸುತ್ತಾರೆ. ಯಾಜ್ಞವಲ್ಕ್ಯನು ಮನುವನ್ನು ಅನುಸರಿಸಿ ಹೇಳಿದ ಕೆಲವು ಅಂಶಗಳು ಇಂತಿವೆ:

೧. ರಸ್ತೆಯಲ್ಲಿ ಹೆಂಗಸರಿಗೆ ದಾರಿ ಬಿಡಬೇಕು, ವೃದ್ಧ, ಭಾರ ಹೊರುವವನು, ರಾಜ, ಸ್ನಾತಕ, ರೋಗಿ, ವಾಹನಗಳಂತೆಯೇ!

೨. ಕನ್ಯೆಯ ಕುರಿತು ದೋಷಾರೋಪ ಮಾಡಿದರೆ, ರೋಗಿಷ್ಟೆ ಎಂದು ಸುಳ್ಳು ಸುದ್ದಿ ಹರಡಿದರೆ, ಶಿಕ್ಷೆಯಾಗುತ್ತಿತ್ತು.

೩. ಹೆಣ್ಣು ಮಕ್ಕಳಿಗೆ ಗಲ್ಲುಶಿಕ್ಷೆ ಇರಲಿಲ್ಲ.

೪. ಯಾವ ವರ್ಣದ ಹೆಂಗಸೂ ಕರ (Tax) ಕಟ್ಟಬೇಕಾಗಿರಲಿಲ್ಲ.

೫. ದಿವ್ಯಪರೀಕ್ಷೆಗಳಲ್ಲಿ ಕ್ರೂರವಾದುದನ್ನು ಕೊಡುತ್ತಿರಲಿಲ್ಲ.

೬. ಪತಿತನ ಮಗಳು ಪತಿತಳಲ್ಲ, ಮಗ ಪತಿತ! ಮಗಳಿಗೆ ಯಾವತ್ತೂ ಸಲ್ಲಬೇಕಾದ ಒಡವೆ - ವಸ್ತ್ರಗಳನ್ನು ಕೊಡಮಾಡಿ ಸವರ್ಣೀಯನಿಗೆ ಕೊಟ್ಟು ಮದುವೆ ಮಾಡಬೇಕು, ಎಂದು ಸ್ಪಷ್ಟವಾಗಿ ಹೇಳಿದೆ. ಅರ್ಥಾತ್ ತಂದೆಯ ಮಹಾಪರಾಧಕ್ಕೆ ಮಗಳಿಗೆ ಕಷ್ಟ ಕೊಡುವಂತಿರಲಿಲ್ಲ.

ಪತಿಯು ದೇಶಾಂತರಕ್ಕೆ ಹೋದಾಗ ಪತ್ನಿಯು ಸಂಯಮ ಪಾಲಿಸಬೇಕಿತ್ತು. ಉತ್ಸವ ಜಾತ್ರೆ ಆಟ ಪಾಟಗಳಲ್ಲಿ ಭಾಗವಹಿಸಬಾರದು. ಮದುವೆ, ವಿನೋದ ಸಮಾರಂಭಗಳಲ್ಲಿ ಭಾಗವಹಿಸಬಾರದು ಎಂದಿದೆ. ಅರ್ಥಾತ್ ಪತಿಯು ಊರಲ್ಲಿ ಇದ್ದರೆ ಸಾಮಾಜಿಕ ಜೀವನ ಅವಳಿಗೆ ಲಭಿಸುತ್ತಿತ್ತು. ಕ್ಷತ್ರಿಯ ಸ್ತ್ರೀಯರಿಗೆ ಹೆಚ್ಚಿನ ಸ್ವಾತಂತ್ರ್ಯವಿತ್ತು. ಮಾನಸೋಲ್ಲಾಸದಲ್ಲಿ ಅರಸನ ಓಲಗಕ್ಕೆ ಬೇರೆ ಬೇರೆ ವರ್ಗಗಳ ಸ್ತ್ರೀಯರು ಆನೆ, ಕುದುರೆ, ಮೇಣೆಗಳಲ್ಲಿ, ರಾಜಮಾರ್ಗಗಳಿಂದ ನಡೆದು ಬರುತ್ತಿದ್ದ ಉಲ್ಲೇಖವಿದೆ. ಮುಸ್ಲಿಂ ಆಕ್ರಮಣದ ನಂತರ ಘರ್ದಾಪದ್ಧತಿ ಜಾರಿಗೆ ಬಂದಿರಬೇಕು.

ಹೊಯ್ಸಳ ಚಾಲುಕ್ಯ ರಾಣಿಯರೆಲ್ಲ ವಿವಿಧ ಕಲೆಗಳಲ್ಲಿ ಕುಶಲೆಯರಿರುವಂತೆ ಆಡಳಿತದಲ್ಲೂ ಮುಂದಾಗಿದ್ದರು. ವಿಜ್ಞಾನೇಶ್ವರನ ಆಶ್ರಯದಾತ, ಚಾಲುಕ್ಯ ವಿಕ್ರಮಾದಿತ್ಯನಿಗೆ ಹಲವಾರು ಹೆಂಡಂದಿರು, ಅವರೆಲ್ಲ ಗ್ರಾಮದ, ಊರು, ಪ್ರದೇಶಗಳನ್ನು ಆಳುತ್ತಿದ್ದರಲ್ಲದೇ ನೆಲೆವೀಡು, ಅಥವಾ ಯುದ್ಧಕ್ಕೆ ಬೀಡು ಬಿಟ್ಟಲ್ಲಿಯೂ ಅರಸನ ಜೊತೆಗೆ ಹೋಗುತ್ತಿದ್ದರು. ಭೇಟಿ, ವಿಜಯಯಾತ್ರೆಗಳಲ್ಲೂ ಅವನೊಡನಿರುತ್ತಿದ್ದರು. ಸ್ಮೃತಿಗ್ರಂಥಗಳಲ್ಲಿ ಚಿತ್ರಿಸಲ್ಪಟ್ಟ ಭಾರೀ ಕಟ್ಟುನಿಟ್ಟುಗಳು, ದೈನಂದಿನ ಜೀವನದಲ್ಲಿ ಅಕ್ಷರಶಃ ಪಾಲಿಸಲ್ಪಡುತ್ತಿದ್ದವೇ ಎಂಬುದು ಅನುಮಾನಾಸ್ಪದ!

ಬ್ರಾಹ್ಮಣ ವರ್ಗದಲ್ಲಿ ಮಾತ್ರ ಸ್ಮೃತಿವಾಕ್ಯವನ್ನು ವೇದವಾಕ್ಯದಂತೆ ಪರಿಗಣಿಸುವ ವೃತ್ತಿ ಬೆಳೆದು ಶತಕಗಳು ಜಾರಿದಂತೆ ಮಹಿಳೆಯರು ಸ್ಥಿತಿ ದಯನೀಯವಾಗುತ್ತ ನಡೆಯಿತು. ಬಾಲವಿವಾಹ, ಬಹುಸಂತಾನ, ವಿಧವಾಜೀವನದ ದುಸ್ಸಹ ಪರಿಸ್ಥಿತಿಗಳಿಗೆ ವಿದ್ಯೆಯ ಅಭಾವ, ಪರಾವಲಂಬನೆಗಳು ಸೇರಿಕೊಂಡರೆ ಏನು ಸಾಧನೆಯಾಗಬಲ್ಲದು? ರಾಜಕೀಯ ಗೊಂದಲವು, ಸಾಮಾಜಿಕ ಅರಕ್ಷಿತತೆಗೆ ದಾರಿ ಮಾಡಿಕೊಡುತ್ತದೆ. ಹೊರಗಿನ ಸಹಾಯ ದುರ್ಲಭವಾದಾಗ ಇದ್ದದ್ದನ್ನೇ ಹೇಗಾದರೂ ಕಾಪಾಡಿಕೊಂಡು ಜೀವ ನಿರ್ವಹಣೆ ಸಾಗಿಸುವದು ಮಾನವ ಪ್ರವೃತ್ತಿ. ಸೋತ ಪ್ರದೇಶದಲ್ಲಿ ಕೊಲೆ, ಸುಲಿಗೆಗಳು ಸಾಮಾನ್ಯವಿದ್ದಾಗ, ಸ್ತ್ರೀಯರ ಪರಿಸ್ಥಿತಿ ಅತ್ಯಂತ ಅಸಹಾಯಕವಾಗುತ್ತದೆಯಾದ್ದರಿಂದ ಅವರನ್ನು ಕಾಯ್ದುಕೊಳ್ಳುವದು ಆದ್ಯ ಕರ್ತವ್ಯ ಎಂದು ಭಾವಿಸಿರಲು

ಸಾಕು. ಸ್ತ್ರೀಯ ನಿಕೃಷ್ಟ ಸ್ಥಾನ, ಭಾರತಕ್ಕೆ ಮಾತ್ರ ಸೀಮಿತವಾಗಿರದೇ ಸಮಕಾಲೀನವಾದ ವಿಶ್ವದ ವಿವಿಧ ಸಮಾಜಗಳಲ್ಲೂ ಕಂಡುಬರುತ್ತಿತ್ತು. ದಮನದ ಪದ್ಧತಿಗಳು ಮಾತ್ರ ಬೇರೆಬೇರೆಯಾಗಿದ್ದವು.

ಸ್ತ್ರೀಧನ

ಬಹುಚರ್ಚಿತವಾದ ಈ ವಿಷಯ ಶತಕದಿಂದ ಶತಕಕ್ಕೆ ವಿವಿಧ ರೂಪ ತಾಳಿ ಈ ಶತಕದಲ್ಲೂ ಚರ್ಚಾಸ್ಪದವಾಗಿಯೇ ಮುಂದುವರಿದಿದೆ. ಕ್ರಿಸ್ತಶಕದ ಮೊದಲ ಶತಕಗಳಲ್ಲಿ ಸ್ತ್ರೀಧನದ ವ್ಯಾಪ್ತಿ ವಿಶಾಲವಾಗಿತ್ತು. ಕಾತ್ಯಾಯನನ ವ್ಯಾಖ್ಯೆ ನೋಡಿದರೆ, ಮಹಿಳೆಯು ಮದುವೆಗೆ ಮೊದಲು ಮತ್ತು ನಂತರ ಹೊಂದಿದ ಚರಾಚರ ಆಸ್ತಿಯೆಲ್ಲ ಸ್ತ್ರೀಧನದಲ್ಲಿ ಸೇರ್ಪಡೆಯಾಗಿತ್ತು. ಹೆಣ್ಣು ಮಕ್ಕಳು ಸಮಾಜದ ಅವಿಭಾಜ್ಯ ಮತ್ತು ಸ್ವತಂತ್ರ ಸದಸ್ಯರೆಂದು ಗುರುತಿಸಲ್ಪಟ್ಟ ದಿನಗಳಲ್ಲಿ ಆರ್ಥಿಕ ನಿರ್ಭರತೆಯೂ ಮುಖ್ಯವಾಗಿತ್ತು. ಈ ಆರ್ಥಿಕ ಅನುಕೂಲವನ್ನು ಮೊದಲು ಸೂತ್ರಕಾರರು, ನಂತರ ಸ್ಮೃತಿಕಾರರು ಎತ್ತಿಹಿಡಿದರು. ಮಗಳಾಗಿ, ಮಡದಿಯಾಗಿ, ತಾಯಿಯಾಗಿ, ಅಕಸ್ಮಾತ್ ವಿಧವೆಯಾದರೂ ಅವಳ ಆಸ್ತಿಯ ಹಕ್ಕಿಗೆ ಚ್ಯುತಿಬಾರದಂತೆ ಕೆಲ ನಿಯಮಗಳನ್ನು ಹಾಕಿಕೊಟ್ಟರು. ಕಾಣೆಯವರ ಅಭಿಪ್ರಾಯದಲ್ಲಿ ಶತಕಗಳಲ್ಲಿ ಸ್ತ್ರೀಯರ ಪಾಲಿನ ಆಸ್ತಿಯೂ ಬೆಳೆಯುತ್ತ ಹೋಗಿ, ಅವಿಭಕ್ತ ಕುಟುಂಬದಲ್ಲಿ ಅದಕ್ಕೆ ಕಡಿವಾಣ ಹಾಕಬೇಕಾದ ಕಾಲವೊದಗಿ, ಸ್ತ್ರೀ ಧನದ ಮೂಲಕಲ್ಪನೆ ಬದಲಾಗಿರಬೇಕು. ಕೊನೆಗೊಮ್ಮೆ ಅವಳ ಪಾಲನ್ನು ಸ್ಥಿರ ಆಸ್ತಿಯಲ್ಲಿ ನಿರ್ಧರಿಸಿಬಿಟ್ಟು 'ಸ್ತ್ರೀಧನ'ದ ವಿಚಾರ 'ಚರ'ಕ್ಕೆ ಸೀಮಿತವಾಗಿರುವಂತಾಯಿತು.

ಸ್ತ್ರೀಧನದಲ್ಲಿ 'ಪ್ರಾಪ್ತ', 'ಲಬ್ಧ' ಮತ್ತು 'ದತ್ತ' ಭಾಗಗಳಿವೆ. ಗಂಡುಮಕ್ಕಳಂತೆ ತಂತಾನೆ ಪಾಲಿಗೆ ಬಂದದ್ದು 'ಲಬ್ಧ'ವಾದರೆ, ಮದುವೆಯ ಸಮಯದಲ್ಲಿ ಒಡವೆ, ಬಟ್ಟೆ, ಬರೆ, ಪಾತ್ರೆಗಳು 'ಪ್ರಾಪ್ತ'ವಾಗುತ್ತಿದ್ದವು. 'ದತ್ತ'ವೆಂಬುದು ಕಾಣಿಕೆಗಳ ರೂಪದಲ್ಲಿ ಬರುತ್ತಿದ್ದ ದ್ರವ್ಯವೆಂದು ಸ್ಥೂಲವಾಗಿ ಹೇಳಬಹುದು. ಹಿಂದೆ ಕನ್ಯಾಶುಲ್ಕವೂ ಇತ್ತು. ವರನಾದವನು ಗೋವುಗಳ ರೂಪದಲ್ಲಿ ಅಥವಾ ತತ್ಸಮ ಇನ್ನೊಂದು ಉಡುಗೊರೆಯನ್ನು Goodwill ರೂಪದಲ್ಲಿ ಕನ್ಯಾಪಿತೃವಿಗೆ ಕಾಣಿಕೆ ಸಲ್ಲಿಸಬೇಕಿತ್ತು. ಅದು ಕೂಡ ಮದುವೆಯ ನಂತರ ಮಗಳಿಗೇ ಸೇರುತ್ತಿತ್ತು. ಸ್ತ್ರೀಧನದ ಮೊತ್ತ ಸಾಕಷ್ಟು ಇರುತ್ತಿತ್ತು. ಮನುಧರ್ಮಶಾಸ್ತ್ರದಲ್ಲಿ, ಸ್ತ್ರೀಧನ ಎತ್ತಿಹಾಕಿದವರನ್ನು ಅರಸನಾದವನು ಪತ್ತೆ ಹಚ್ಚಿ, ಶಿಕ್ಷೆ ವಿಧಿಸಬೇಕೆಂದು ಹೇಳಿದೆ. ಅದೇ ಅಭಿಪ್ರಾಯವನ್ನು ಯಾಜ್ಞವಲ್ಕ್ಯ ಸ್ಮೃತಿ ಮತ್ತು ಮಿತಾಕ್ಷರಾ ಸಮರ್ಥಿಸುತ್ತವೆ.

> ಯದಿ ಹ್ಯೇಕತ ರೋ ಹ್ಯೇಷಾಂ ಸ್ತ್ರೀಧನಂ ಭಕ್ಷಯೇತ್ ಬಲಾತ್ ।
> ಸವೃದ್ಧಿಕಂ ಸದಾಪ್ಯಃ ಸ್ಯಾದ್ । ದಂಡಂ ಚೈವ ಸಮಾಪ್ನುಯಾದ್

ಸ್ತ್ರೀಧನ ಎತ್ತಿ ಹಾಕಿದವರಿಗೆ ಅದರ ಬಡ್ಡಿಯ ಜೊತೆಗೆ ದಂಡವನ್ನೂ ವಿಧಿಸಲಾಗುತ್ತಿತ್ತು. ಇಲ್ಲಿ 'ವೃದ್ಧಿ' ಅಥವಾ ಬಡ್ಡಿಯ ಉಲ್ಲೇಖ ಇರುವದರಿಂದ ಒಡವೆ - ವಸ್ತುಗಳ ಜೊತೆಗೆ ಸ್ತ್ರೀಧನದಲ್ಲಿ ದುಡ್ಡೂ ಸಂದಾಯವಾಗುತ್ತಿತ್ತು ಎಂಬುದು ಸ್ಪಷ್ಟ.

ತಂದೆಯು ತನ್ನ ಆಸ್ತಿಯನ್ನು ಸ್ವಂತ ಇಚ್ಛೆಯಿಂದ ಸಮಾನ ವಿಭಾಗ ಮಾಡಿ ಪುತ್ರರಿಗೆ ಕೊಡಮಾಡಿದಾಗ ಪತ್ನಿಗೂ ಅಷ್ಟೇ ಪಾಲನ್ನು ಕೊಡಬೇಕು ಎಂಬ ಯಾಜ್ಞವಲ್ಕ್ಯನ ನಿರ್ದೇಶನವನ್ನು ಮಿತಾಕ್ಷರಾ ಎತ್ತಿ ಹಿಡಿದಿದೆ. ಸ್ಮೃತಿಕಾರ ಯಾಜ್ಞವಲ್ಕ್ಯ ಮತ್ತು ಟೀಕಾಕಾರ ವಿಜ್ಞಾನೇಶ್ವರರ ನಡುವೆ ಶತಕಗಳ ಅಂತರವಿದ್ದರೂ ಸ್ತ್ರೀಧನದ ಮಟ್ಟಿಗೆ ತನ್ನ ಯುಗ ಧರ್ಮಕ್ಕೆ ಮೀರಿಯೇ ವಿಜ್ಞಾನೇಶ್ವರ ಉದಾರ ಮನೋಭಾವ ತೋರಿದ್ದಾನೆ ಎಂದು ಹೇಳಬೇಕಾಗುತ್ತದೆ.

> ಯದಿಕುರ್ಯಾತ್ ಸಮಾನಾಂಶನ್ ಪತ್ನ್ಯಃ ಕಾರ್ಯಾ ಸಮಾಂಶಿಕಾಃ
> ನ ದತ್ತಂ ಸ್ತ್ರೀಧನಂ ಯಾಸ್ಯಾಂ ಭರ್ತ್ರಾ ವಾಶ್ವಶುರೇಣವಾ ।

ಸ್ತ್ರೀಧನವು ಪತಿ ಅಥವಾ ಮಾವನಿಂದ ದತ್ತ ಅಥವಾ ಕೊಡಲ್ಪಡದೇ ಇದ್ದಿದ್ದರೆ ಈ ಸಮಾನಾಂಶದ ಭಾಗ ಪತ್ನಿಗೆ ಸಿಗುತ್ತಿತ್ತು. ಸ್ತ್ರೀಧನ ಪ್ರಾಪ್ತವಾಗಿದ್ದರೆ ಆ ಪಾಲಿನ ಅರ್ಧಾಂಶ ದೊರೆಯುತ್ತಿತ್ತು. ಸ್ತ್ರೀಧನ ನೇರವಾಗಿ ಆಕೆಯ ಹೆಣ್ಣುಮಕ್ಕಳಿಗೇ

ಹೋಗುತ್ತಿತ್ತು. ಕನ್ಯೆಯರು ಇರದಿದ್ದರೆ ಮಾತ್ರ ಗಂಡುಮಕ್ಕಳಿಗೆ ಹೋಗುತ್ತಿತ್ತು. ಅದರ ಋಣ ಅಥವಾ ಸಾಲವಿದ್ದರೂ ಗಂಡುಮಕ್ಕಳು ಹಂಚಿಕೊಳ್ಳಬೇಕು. ಹೆಣ್ಣುಮಕ್ಕಳು ಋಣಭಾರದಿಂದ ಮುಕ್ತರು! ಗಂಡನಿಗೆ ಕೂಡ ಸ್ತ್ರೀಧನದ ಮೇಲೆ ಅಧಿಕಾರವಿರಲಿಲ್ಲ. ಬರಗಾಲ, ಧರ್ಮಕಾರ್ಯ, ಕಾಯಿಲೆ ಮುಂತಾದ ಸಂಕಟ ಸಮಯಗಳಲ್ಲಿ ಮಾತ್ರ ಸ್ತ್ರೀ ಧನ ಬಳಸಿಕೊಳ್ಳಬಹುದಾಗಿತ್ತು.

ಈಗಿನ secular ಪದಕ್ಕೆ ಬಹಳ ಹತ್ತಿರದ ನಿಲುವನ್ನು ಆಸ್ತಿಯ ದಾಯಭಾಗದ ಸಂದರ್ಭದಲ್ಲಿ ವಿಜ್ಞಾನೇಶ್ವರನು ತಳೆದಿದ್ದಾನೆ. ಆಸ್ತಿ (ಸೊತ್ತು) ಎಂಬುದು (ಲೌಕಿಕಂ ಏವ ಸತ್ವಂ) ಲೌಕಿಕವಾದದ್ದು. ಅದಕ್ಕೆ ಧಾರ್ಮಿಕ ಹಿನ್ನೆಲೆ ಇಲ್ಲ, ಎಂಬುದನ್ನು ಸ್ಪಷ್ಟಪಡಿಸಿ, ಆಸ್ತಿಯುಳ್ಳ ಜನರ ಸ್ವಂತ ಸಂಪಾದನೆ, ದಾಯಾದಿಗಳಿಗೆ ಹೋಗುವದಿಲ್ಲ! ಇತ್ಯಾದಿ ಹಲವಾರು ವ್ಯಾವಹಾರಿಕ ಸಲಹೆಗಳನ್ನು ಕೊಟ್ಟಿದ್ದಾನೆ. ಅರ್ಥಾತ್ ಅದು ಸ್ತ್ರೀ ಸಂತಾನಕ್ಕೆ ಸಲ್ಲಬೇಕು.

ತಾಯಿಯಿಂದ ಮಗಳಿಗೆ ಸ್ತ್ರೀತ್ವದ ಅಂಶ ಹರಿದು ಬರುತ್ತೆಯಾದ್ದರಿಂದ ಅವಳ ಸಂಪತ್ತಿಗೆ ಹೆಣ್ಣು ಮಕ್ಕಳು ಬಾಧ್ಯಸ್ಥರು. ಯುರೋಪಿನಲ್ಲಿ Married womens property act ಬಳಕೆಯಲ್ಲಿ ಬಂದದ್ದು ೧೮೧೬ರಲ್ಲಿ 'ಕೋಡ್ ನೆಪೊಲಿಯನ್' ಮಹಿಳೆಯರ ಮೂಲಭೂತ ಹಕ್ಕುಗಳನ್ನು ಗುರುತಿಸುವ ಪ್ರಥಮ ಪ್ರಯತ್ನವಾಗಿದೆ. ಆ ತನಕ ಪಾಶ್ಚಾತ್ಯ ಹೆಂಗಳೆಯರಿಗೆ, ಕಾಯದೆ ಪ್ರಕಾರ ಯಾವ ಆಸ್ತಿ ಅಥವಾ ಹಣಕ್ಕೂ ಹಕ್ಕು ಇರಲಿಲ್ಲ ಎಂಬುದನ್ನು ನೆನೆಸಿಕೊಂಡಾಗ. ನಮ್ಮ ಸ್ಮೃತಿಕಾರರು ಸಹಸ್ರಾರು ವರ್ಷ ಮೊದಲೇ ಅದನ್ನು ಗುರುತಿಸಿದ್ದರು ಮತ್ತು ತಲೆತಲಾಂತರವಾಗಿ ಹೆಣ್ಣಿನಿಂದ ಹೆಣ್ಣಿಗೆ ಆಸ್ತಿ ಸೇರುವ ವ್ಯವಸ್ಥೆ ಮಾಡಿದ್ದರು. ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣಿಗೆ ಸ್ವಲ್ಪವಾದರೂ ಆರ್ಥಿಕಭದ್ರತೆ ನೀಡಲು ಸಹಾಯ ಮಾಡಿದರಲ್ಲ! ಶತಕದಿಂದ ಶತಕಕ್ಕೆ ವಸ್ತು ಸ್ಥಿತಿ ಬದಲಾಗಿ ವ್ಯಾಖ್ಯಾನ, ವಿಶ್ಲೇಷಣೆಗಳೂ ಬದಲಾಗಿ ಸ್ತ್ರೀಯರಿಗೆ ಅನ್ಯಾಯವಾಗಿದ್ದರೆ, ಅದು ಸ್ಮೃತಿಕಾರರ ತಪ್ಪಲ್ಲ!

ಹಿಂದಿನ ಯಾವುದೇ ಸ್ಮೃತಿಕಾರರಿಗಿಂತ ಸ್ತ್ರೀಧನದ ವಿಚಾರದಲ್ಲಿ ವಿಜ್ಞಾನೇಶ್ವರ ಉದಾರ ನಿಲುವನ್ನು ತಳೆದಿದ್ದ. ಆದರೂ ಸ್ತ್ರೀಧನದ ಮೊತ್ತ ಕಡಿಮೆ ಆಗುತ್ತ ಬಂದಿತು. ಒಂದು ದೃಷ್ಟಿಯಲ್ಲಿ ಇದು ಒಳ್ಳೆಯದೇ! ಜೀಮೂತವಾಹನನ ದಾಯಭಾಗ ಪದ್ಧತಿ ಪ್ರಚಲಿತವಿದ್ದ ಬಂಗಾಲದಲ್ಲಿ ಅವಿಭಕ್ತ ಕುಟುಂಬ ವಿಧವೆಗೆ ನಿಧನ ಹೊಂದಿದ ಪತಿಯ ಪಾಲಿನ ಹಕ್ಕನ್ನು ಕೊಡಮಾಡಿ ತೋರಿಸಿದ ಔದಾರ್ಯವೇ ಆಕೆಯ ಪಾಲಿಗೆ ಉರುಳು - ಅಲ್ಲ. ದಹಿಸುವ ಅಗ್ನಿಯಾಗಿ ಪರಿಣಮಿಸಿತು! ಸತಿಹೋಗಲು ಒತ್ತಾಯ ನಾಲ್ಕೂ ಕಡೆಯಿಂದ ಬರಲಾರಂಭಿಸಿತು. ಅಲ್ಲಿ ಕಂಡುಬಂದಷ್ಟು ಸಹಗಮನ ಪ್ರಕರಣಗಳು ಭಾರತದ ಬೇರೆ ಪ್ರದೇಶಗಳಲ್ಲಿ ಇರಲಿಲ್ಲ. ಆಸ್ತಿ ಮತ್ತು ಬಂಗಾರಗಳೇ ಇದಕ್ಕೆ ಕಾರಣವೆಂದು ಬೇರೆ ಹೇಳಬೇಕೆ? ಬಲವಂತವಾಗಿ ಸ್ತ್ರೀಯರನ್ನು ಬೆಂಕಿಗೆ ನೂಕಿದ ಉದಾಹರಣೆಗಳು ಬೇಕಾದಷ್ಟು ಇದ್ದವು. ಕಾಲಾಂತರದಲ್ಲಿ ಕನ್ನಡ ಮಹಿಳೆಗೆ ದೊರೆಯುತ್ತಿದ್ದ ಸ್ತ್ರೀಧನ ಅಲ್ಪವಾದದ್ದೇ ಆಕೆಯ ಜೀವ ಉಳಿಯಲು ಸಹಾಯ ಮಾಡಿತು!

ವೇಶ್ಯಾವರ್ಗದ ಸ್ಥಾನಮಾನಗಳು

ವೇಶ್ಯಾವರ್ಗವೆಂಬುದು ಭಾರತೀಯ ಸಮಾಜದ ಅವಿಭಾಜ್ಯ ಅಂಗವೆಂದು ಗುರುತಿಸಲ್ಪಟ್ಟು ಅನೇಕ ಶತಕಗಳು ಗತಿಸಿದ್ದವು. ವಿದ್ಯಾವಂತ ಮತ್ತು ಹಲವಾರು ಕಲೆಗಳನ್ನು ರೂಢಿಸಿಕೊಂಡ ಗಣಿಕೆಯರು ಸಂಗೀತಗೋಷ್ಠಿ ಮತ್ತು ಕಾವ್ಯ ಗೋಷ್ಠಿಗಳನ್ನು ರಸಿಕರಿಗಾಗಿ ತಮ್ಮ ಮನೆಗಳಲ್ಲಿ ನಡೆಸುವಷ್ಟು ಸಮರ್ಥರಿದ್ದರು. ವಾತ್ಸ್ಯಾಯನನಿಂದ, ಕವಿ ರಾಜಶೇಖರನ ಕೃತಿಗಳಿಂದ ದೊರೆಯುವ ಚಿತ್ರ ಇದು. ಸಮಾಜದ ಶ್ರೀಮಂತ ವರ್ಗ, ಅವರಿಗೆ ಪೋಷಕವಾಗಿತ್ತು. ಆದರೆ ಸಾಮಾನ್ಯ ವರ್ಗಕ್ಕೆ ಕಟ್ಟುಪಾಡುಗಳನ್ನು ವಿಧಿಸುವ ಸ್ಮೃತಿಗಳೇನೂ ಈ ವರ್ಗದ ಬಗ್ಗೆ ಹೆಚ್ಚಿನ ಗೌರವ ತಳೆದಂತಿಲ್ಲ. ಪಂಚ ಚೂಡಾ ಎಂಬ ಅಪ್ಸರೆಯರಿಂದ ಹುಟ್ಟಿದ ಕುಲದ ಇವರಿಗೆ ಲೈಂಗಿಕ ಸ್ವಾತಂತ್ರ್ಯವಿತ್ತು. ಆದರೆ ವೇಶ್ಯಾಗಮನ ಅಪರಾಧವೆನಿಸಿಕೊಳ್ಳುತ್ತಿತ್ತು.

ಗಂಡಸರಿಗೂ ಕಟ್ಟುನಿಟ್ಟಿನ ಸಂಯಮದ ಜೀವನ ಬೋಧಿಸುವ ಧರ್ಮಶಾಸ್ತ್ರಗಳು, ಕೌಟುಂಬಿಕ ಜೀವನಕ್ಕೆ ಹೆಚ್ಚಿನ ಮಹತ್ವ ನೀಡಿದ್ದವು.

ಆದರೆ ಸಮಾಜದ ಅಂಗವಾಗಿ ಬೆಳೆದ, ಬೆಳೆಯುತ್ತಲೇ ಇದ್ದ ವರ್ಗವನ್ನು ಅಲಕ್ಷಿಸುವಂತೆ ಇರಲಿಲ್ಲ. ಸವರ್ಣಸ್ತ್ರೀಯರೂ ದಾರಿ ತಪ್ಪಿ ಮನೆಯಿಂದ ಹೊರಹಾಕಲ್ಪಡುವ ಸಾಧ್ಯತೆಯನ್ನು ಸ್ಮೃತಿಕಾರರು ಗಮನಿಸಿದ್ದರು. ಸ್ವೈರಿಣಿ, ಅಬ್ರಾಹ್ಮಣಿ, ವೇಶ್ಯಾ, ದಾಸೀ, ನಿಷ್ಕಾಸಿನಿ, (ಹೊರ ಹಾಕಲ್ಪಟ್ಟವಳು) ಎಂಬ ಈ ವರ್ಗ ದುರದೃಷ್ಟೆಯರ ವಿಭಜನೆ ಮನುವಿನ ಕಾಲದಿಂದಲೂ ನಡೆದುಬಂದಿತ್ತು. ಆಯಾವರ್ಣದ ಕಟ್ಟುಪಾಡುಗಳು, ಅಂಥವರಿಗೆ ಸಲ್ಲುತ್ತಿದ್ದ ಅಶನಾರ್ಥ ವೇತನದ ಸೂಚನೆ ಮಿತಾಕ್ಷರದ್ದೆ. ಅಂದರೆ ಅವರೆಲ್ಲ ಕಾಮಿಸುವ ಪುರುಷರಿಗೆ ಲಭ್ಯರಲ್ಲ! ಎಂದು ವಿಜ್ಞಾನೇಶ್ವರನು ಎಚ್ಚರಿಸಿದ್ದಾನೆ. ಒಬ್ಬನೇ ಗಂಡಸಿನ ರಕ್ಷಣೆಯಲ್ಲಿದ್ದು ಇತರರು ತಡವಿದರೆ ಶಿಕ್ಷೆಯಿತ್ತು.

ಹೊಟ್ಟೆಪಾಡಿಗೆ ವೇಶ್ಯಾವೃತ್ತಿ ಕೈಕೊಳ್ಳಬೇಕಾಗಿ ಬಂದ ಸ್ತ್ರೀಯರಿಗೆ ನಿರ್ದಿಷ್ಟವಾಗಿದ್ದ ಶುಲ್ಕ ಕೊಡದೇ ಮೋಸ ಮಾಡಿದರೆ ದಂಡವಿತ್ತು. ಹಣಕ್ಕೆ ಲಭ್ಯವಿದ್ದವರನ್ನೂ ಬಲಾತ್ಕರಿಸಿದರೆ ಶಿಕ್ಷೆಯಿತ್ತು. ಹಲ್ಲು - ಉಗುರುಗಳಿಂದ ಹಿಂಸೆ ಮಾಡುವವರಿಗೆ, ವಿಕೃತ ಕಾಮಿಗಳಿಗೆ ಶಿಕ್ಷೆಯಿದ್ದು ಮಾನವ ಸ್ವಭಾವದ ವಿಕೃತಿಗಳನ್ನು ಅಂದಿನವರು ಗುರುತಿಸಿದ್ದು ವಿಶೇಷ !

ಪರಸ್ತ್ರೀಯರನ್ನು ಉಪಭೋಗಿಸಿದ ನಂತರ ಹಣ ಕೊಡದವನಿಂದ, ಆಕೆಗೆ ನಿರ್ದಿಷ್ಟಪಡಿಸಿದ ೮ ಪಟ್ಟು ಹಣವನ್ನು ಕೊಡಿಸಬೇಕು ಮತ್ತು ಅಷ್ಟೇ ಮೊತ್ತದ ದಂಡವನ್ನು ರಾಜನು ವಿಧಿಸಬೇಕು ಎಂದು ಹೇಳಲಾಗಿದೆ. ದಣಿದವರು, ವ್ಯಾಧಿಗ್ರಸ್ತರು, ರಾಜಕಾರ್ಯದಲ್ಲಿ ತೊಡಗಿದವರು ಹಣಪಡೆದೂ ಭೋಗಕ್ಕೆ ಒಪ್ಪದಿದ್ದರೆ ಶಿಕ್ಷೆಯಿರಲಿಲ್ಲ.

ಉಪಪತ್ನಿಯರ ಬಗ್ಗೆ ಒಂದು ಮಾತು. ಗೃಹಸ್ಥನಾದವನು ಸಮಾಜ ಸಾಕ್ಷಿಯಾಗಿ ಕೈಹಿಡಿದಾಕೆಯ ಹೊಟ್ಟೆ ಬಟ್ಟೆಯ ವ್ಯವಸ್ಥೆ ಮಾಡಬೇಕಿತ್ತು. ಇವರಲ್ಲಿ 'ಅವರುದ್ಧಾ' ಮತ್ತು 'ಭುಜಿಷ್ಯಾ' ಎಂಬ ವರ್ಗಭೇದವಿತ್ತು. ಅವರುದ್ಧೆಯರು ಶ್ರೀಮಂತರ ವಾಡೆಯಲ್ಲಿದ್ದರೆ ಭುಜಿಷ್ಯೆಯರು ಹೊರಗಿದ್ದು ಕೃಪಾಪಾತ್ರರು. ಅವರನ್ನು ಇತರರು ತಡವಿದರೆ ಶಿಕ್ಷೆಯಾಗುತ್ತಿತ್ತು. ವಿವಾಹಿತ ಪತ್ನಿಯರಂತೆ ಇವರಿಗೆ ಆಸ್ತಿ ಆಶನಾರ್ಥದ ಹಕ್ಕನ್ನು ಮಿತಾಕ್ಷಾರದ ಆಧಾರದ ಮೇಲೆ ಕೊಡಮಾಡಿದ ಕೆಲ ಉದಾಹರಣೆಗಳನ್ನು ಕಾಣೆಯವರ ಧರ್ಮಶಾಸ್ತ್ರದ ಚರಿತ್ರೆಯಲ್ಲಿ ಕಾಣಬಹುದು.

ಈ ಕಾಲಕ್ಕೆ ದೇವಸ್ಥಾನಗಳನ್ನು ಕಟ್ಟಿಸಿ ಪಾತ್ರದ ಹೆಂಗಳೆಯರನ್ನು, ಸೂಳೆಯರನ್ನೂ ದೇವರ ಸೇವೆಗೆ ಬಿಡುವುದು ಕರ್ನಾಟಕದಲ್ಲಿ ಸಾಮಾನ್ಯವಾಗಿತ್ತು. ಅನೇಕ ಶಾಸನಗಳು ಈ ವಿಚಾರದ ಕುರಿತು ವಿವರಗಳನ್ನು ಕೊಡುತ್ತವೆ. ಆದರೆ ಈ ಪದ್ಧತಿ ಸ್ಮೃತಿ ಸಮ್ಮತವಿದ್ದಿರಲಿಲ್ಲ. ಮಿತಾಕ್ಷರಾದಲ್ಲಿ ಅದರ ಉಲ್ಲೇಖವಿಲ್ಲ. ದಾಸಿಯರನ್ನು ಹೆಸರಿಸುತ್ತದೆಯೇ ಹೊರತು ದೇವದಾಸಿಯರನ್ನಲ್ಲ.

ಉಪಸಂಹಾರ

ಒಟ್ಟಿನಲ್ಲಿ ಮಿತಾಕ್ಷರ ಸಂಹಿತೆ, ಯಾಜ್ಞವಲ್ಕ್ಯ ಸ್ಮೃತಿಯ ಚೌಕಟ್ಟನ್ನು ತನ್ನ ಬದಲಾದ ಕಾಲಕ್ಕೆ ಅನುಗುಣವಾಗಿ ಸರ್ವಜನಕ್ಕೂ ಉಪಯೋಗಿಯಾಗುವಂತೆ ವಿಶ್ಲೇಷಿಸಲು ಪ್ರಯತ್ನಿಸಿದೆ. ತನ್ನ ಕಾಲದ ಸಾಮಾಜಿಕ ವ್ಯವಹಾರ ಮತ್ತು ನಂಬಿಕೆಗಳನ್ನು ಗುರುತಿಸಿ ಅವಕ್ಕೆ ಶಾಸ್ತ್ರ ಸಮ್ಮತಿಯನ್ನು ಕೊಡಮಾಡಲು ವಿಜ್ಞಾನೇಶ್ವರ, ಯಥಾಶಕ್ತಿ ಪ್ರಯತ್ನಿಸಿದ ಹೊಸದನ್ನು ಹುಟ್ಟುಹಾಕುವದು ವ್ಯಾಖ್ಯಾನಕಾರನ ಕೆಲಸವಲ್ಲ. ಹಳೆಯದು ಹೊಸ ರೂಪದಲ್ಲಿ ಮುಂದುವರಿಯುವಂತೆ ನೋಡಿಕೊಳ್ಳುವದು ಮುಖ್ಯವಾಗಿತ್ತು. ಸುರಾಪಾನ, ಜೂಜು ಮುಂತಾದವಕ್ಕೆ ಕೊಡಮಾಡಿದ ಶಿಕ್ಷೆ - ಪ್ರಾಯಶ್ಚಿತ್ತಗಳನ್ನು ಗಮನಿಸಿದರೆ ಇವು ಹಿಂದೆ ಇಂದು ಎಂದೆಂದಿಗೂ ಸಾಮಾಜಿಕ ದೌರ್ಬಲ್ಯಗಳಾಗಿದ್ದವು ಎಂದು ತೋರುತ್ತದೆ! 'ಶಾಸ್ತ್ರಾದ್ ರೂಢಿರ್ಬಲೀಯಸೀ' ಎಂಬ ಸತ್ಯವನ್ನು ಸ್ಮೃತಿಕಾರರೂ ಸಾಮಾನ್ಯರೂ ಒಟ್ಟಿಗೇ ನಂಬಿದ್ದರು ಎಂಬ ಸತ್ಯವನ್ನು ಸ್ಮೃತಿಕಾರರೂ ಸಾಮಾನ್ಯರೂ ಒಟ್ಟಿಗೇ

ನಂಬಿದ್ದರು ಎಂಬ ಮಾತು ಮರೆಯುವಂತಿಲ್ಲ!'' ಆದರ್ಶ ಗೃಹಸ್ಥಧರ್ಮ, ಗೃಹಿಣೀಧರ್ಮವೆಂಬುದು ಹೀಗೆ ಇರುತ್ತದೆ. ಅದನ್ನು ಪಾಲಿಸಲು ಯತ್ನಿಸಿರಿ'' ಎಂಬ ಮಾತನ್ನು ಪದೇ ಪದೇ ನೆನಪಿಸಲು ಸನಾತನ ಧರ್ಮವು ಸ್ಮೃತಿಕಾರರ ಮೂಲಕ ಜನತೆಯನ್ನು ಎಚ್ಚರಿಸಿತು ಎಂಬುದನ್ನು ಗ್ರಹಿಸಿದರೆ ನಾವಿಂದು ೨೧ನೇ ಶತಕದ ಆದಿಯಲ್ಲಿರುವವರು, ಮಿತಾಕ್ಷರದ ಪ್ರಭಾವವು, ಮುಸ್ಲಿಂ ದಾಳಿಗಳು, ಇಸ್ಲಾಂ ಮತ ಪ್ರಸಾರ, ಮೊಗಲರ ಆಡಳಿತ ಈ ಪ್ರದೇಶದಲ್ಲಿ ನಾಲ್ಕುಶಾಹೀ ಆಡಳಿತಗಳ ಪ್ರಭಾವ ಒಂದೇ ಸಮನೇ ಮುಂದುವರಿದರೂ ಮೂಲ ಭಾರತೀಯ ಸಂಸ್ಕೃತಿ ಪೂರಾ ಮಣ್ಣುಗೂಡಿ ಹೋಗದಿರುವದಕ್ಕೆ ಕೆಲಮಟ್ಟಿಗೆ ಕಾರಣವಾಗಿದೆಯೆಂದು ಅನಿಸುತ್ತದೆ. ಸಾಮಾಜಿಕ ನ್ಯಾಯದ ಮಟ್ಟಿಗೆ ಈ ಶತಕದ ೪ನೇ ದಶಕದವರೆಗೂ ಮಿತಾಕ್ಷರಾ ಪ್ರಮಾಣ ಗ್ರಂಥವಾಗಿದ್ದರೆ ಅದರಲ್ಲಿರುವ ಸರ್ವಸಮ್ಮತವಾದ ಕೆಲವು ಅಂಶಗಳು ಕಾರಣವಾಗಿವೆ.

ಒಳ್ಳೆಯ ಶಾಸ್ತ್ರಪಂಡಿತರು, ಧರ್ಮಸಿಂಧುವನ್ನು ಅನುಕೂಲಸಿಂಧುವಾಗಿಸಲು ಸಹಾಯಮಾಡುತ್ತಿದ್ದರು. ಪ್ರಾಯಶ್ಚಿತ್ತಾದಿಗಳನ್ನು ವಿಧಿಸಿ ತಪ್ಪಿತಸ್ಥರಿಗೆ ತಿರುಗಿ ಸನ್ಮಾರ್ಗಕ್ಕೆ ತರುವ ಪ್ರಯತ್ನ ಮಾಡುತ್ತಿದ್ದರು. ಕೆಲವು ಅಜ್ಞಾನಿಗಳು, ಮುಗ್ಧರಿಗೆ ದಾರಿಯನ್ನು ತಪ್ಪಿಸುತ್ತಿದ್ದರು. ಶಿಕ್ಷಣ, ಸಾಕ್ಷರತಾ ಪ್ರಸಾರ, ಕಾಗದ ಮುದ್ರಣಗಳ ಸೌಲಭ್ಯ. ಸಮೂಹ ಮಾಧ್ಯಮಗಳ ಸಂಪರ್ಕಜಾಲಗಳ, ಮೂಲಕ ಸಾರ್ವಜನಿಕರ ಅರಿವು ಬೆಳಸುವ ಎಲ್ಲಾ ಅನುಕೂಲಗಳು ಇದ್ದಂದಿನ ದಿವಸಗಳಲ್ಲಿ ಕೂಡ, ಬಾಲ ಕಾರ್ಮಿಕರು, ಜೀತ, ದೇವದಾಸಿ ಪದ್ಧತಿ, ಬಾಲವಿವಾಹ, ಹೆಣ್ಣು ಮಕ್ಕಳ ಮಾರಾಟ ಮುಂತಾದ ದುಷ್ಟಪದ್ಧತಿಗಳಿಂದ ನಮ್ಮ ಸಮಾಜ ಮುಕ್ತವಾಗಿಲ್ಲ! ಇವು ಯಾವನ್ನೂ ವ್ಯಾಖ್ಯಾನಕಾರ ವಿಜ್ಞಾನೇಶ್ವರ ಉಲ್ಲೇಖಿಸಿಲ್ಲ, ಪ್ರೋತ್ಸಾಹಿಸಿಲ್ಲ. ವಿಜ್ಞಾನೇಶ್ವರ ಕಂಡ, ವ್ಯಾಖ್ಯಾನಿಸಿದ ಸಮಾಜಕ್ಕಿಂತ ನಾವು ಬದುಕುತ್ತಿರುವ ಸಮಾಜ, ಎಷ್ಟರ ಮಟ್ಟಿಗೆ, ಯಾವ ವಿಧದಲ್ಲಿ ಭಿನ್ನವಾಗಿದೆ? ಎಂದು ನಮಗೆ ನಾವೇ ಪ್ರಶ್ನಿಸಿಕೊಳ್ಳಬೇಕಾಗಿದೆ!

●

ಆರ್.ರಘುನಾಥ್‌ರವರ
'ದಿ ಆರ್ಟ್ ಆಫ್ ಟ್ರಾನ್ಸ್‌ಲೇಷನ್'

ಪ್ರೊ. ಎಲ್.ಎಸ್. ಶೇಷಗಿರಿ ರಾವ್

ಕನ್ನಡ ಸಾಹಿತ್ಯದ ನವೋದಯ ಯುಗದಲ್ಲಿ ಸಮೃದ್ಧವಾಗಿ ಅನುವಾದವಾಯಿತು. ನಾಟಕ, ಕಾದಂಬರಿ, ಕಾವ್ಯ-ಎಲ್ಲ ಪ್ರಕಾರಗಳೂ ಈ 'ರಕ್ತದಾನ'ದಿಂದ ಪ್ರಯೋಜನವನ್ನು ಪಡೆದುಕೊಂಡವು. ನವೋದಯ ಸಾಹಿತಿಗಳು ಬರೆದಿಟ್ಟುದರಲ್ಲಿ ಕಾಣುವುದಕ್ಕಿಂತ ಹೆಚ್ಚಾಗಿ ತಮ್ಮ ಮಾಧ್ಯಮ ಮತ್ತು ಸೃಷ್ಟಿಗಳನ್ನು ಕುರಿತು ಆಲೋಚನೆ ಮಾಡಿದ್ದರೆಂದು ಕಾಣುತ್ತದೆ. ಬಿ. ಎಂ.ಶ್ರೀ ಅವರು ಕಾವ್ಯದ ಅನುವಾದವನ್ನು ಕುರಿತು ಬರೆದಿದ್ದರೆ, ಅದು ಮೌಲಿಕವಾದ ಕೊಡುಗೆಯಾಗುತ್ತಿತ್ತು.

ಅನುವಾದವನ್ನು ಕುರಿತು ೧೯೧೦ರಲ್ಲಿ ಪ್ರಕಟವಾದ ಒಂದು ಪುಸ್ತಕ, 'ದಿ ಆರ್ಟ್ ಆಫ್ ಟ್ರಾನ್ಸ್‌ಲೇಷನ್ - ಎ ಕ್ರಿಟಿಕಲ್ ಸ್ಟಡಿ' ಕುತೂಹಲಕಾರಿಯಾಗಿದೆ. (ಈ ಪುಸ್ತಕವನ್ನು ನನ್ನ ಗಮನಕ್ಕೆ ತಂದವರು ಈಗ ದೇವಿ ಅಹಲ್ಯಾ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿರುವ ಪ್ರೊ. ಬಿ. ವೈ. ಲಲಿತಾಂಬ ಅವರು. ೧೯೯೦ರಲ್ಲಿ ದೆಹಲಿಯ ಭಾರತೀಯ ಅನುವಾದ ಪರಿಷತ್ ಈ ಪುಸ್ತಕವನ್ನು ಅಚ್ಚು ಮಾಡಿದೆ. ಈ ಸಂಸ್ಥೆಯನ್ನು ಡಾ॥ ಗಾರ್ಗಿ ಗುಪ್ತಾ ಎನ್ನುವಾಕೆ ತುಂಬಾ ಸಾಹಸದಿಂದ ಸಮರ್ಥವಾಗಿ ನಡೆಸುತ್ತಾರೆ ಎಂದು ಪ್ರೊ. ಲಲಿತಾಂಬ ನನಗೆ ಹೇಳಿದರು.)

ಪುಸ್ತಕವನ್ನು ಬರೆದವರು ಆರ್. ರಘುನಾಥರಾವ್ ಎನ್ನುವವರು. ಅವರ ಮುನ್ನುಡಿಯೂ ಕುತೂಹಲಕಾರವಾಗಿದೆ. ಮೈಸೂರು ಮಹಾರಾಣಿ ಬಾಲಕಿಯರ ಪಾಠಶಾಲೆಯ ವಿದ್ಯಾರ್ಥಿನಿಯರಿಗಾಗಿ ತಾವು ಈಸೋಪನ ನೀತಿಕಥೆಗಳನ್ನು ಅನುವಾದ ಮಾಡುತ್ತಿದ್ದಾಗಲೇ ಭಾಷಾಂತರ ಕಲೆಯನ್ನು ಕುರಿತು ಗಮನಾರ್ಹ ಪುಸ್ತಕ

ಯಾವುದಾದರೂ ಉಂಟೇ ಎಂದು ತಿಳಿಯಲು ಬಹಳ ಪ್ರಯತ್ನ ಪಟ್ಟುದಾಗಿಯೂ ಅಂತಹ ಕೃತಿ ಯಾವುದೂ ಲಭ್ಯವಾಗದಿದ್ದುದರಿಂದ ತಮ್ಮ ವಿವೇಚನೆಯನ್ನೆ ಅವಲಂಬಿಸಬೇಕಾಯಿತೆಂದೂ ಹೇಳುತ್ತಾರೆ. ೧೮೮೪ರಲ್ಲಿ ಇವರು ಈಸೋಪನ ಕಥೆಗಳ ಅನುವಾದದ ಮೊದಲ ಆವೃತ್ತಿಯನ್ನು 'ನೀತಿ ರತ್ನಾಕರ' ಎನ್ನುವ ಶೀರ್ಷಿಕೆಯಲ್ಲಿ ಪ್ರಕಟಿದರಂತೆ. ಇದನ್ನು ಓದುಗರು ಬಹುವಾಗಿ ಮೆಚ್ಚಿಕೊಂಡರಂತೆ. ಆದುದರಿಂದ ಇವರು ಅನುವಾದ ಕಾರ್ಯವನ್ನು ಮುಂದುವರೆಸಿದರು.

೧೮೮೬ರಲ್ಲಿ ರಘುನಾಥ್‌ರಾಯರಿಗೆ ಸೆಂಟ್ರಲ್ ಕಾಲೇಜಿಗೆ ವರ್ಗವಾಯಿತು. (ಇಂಗ್ಲಿಷ್ ವಿಭಾಗಕ್ಕೆ) ಎಫ್. ಎ. (ಈಗಿನ ಪಿ. ಯು. ಸಿ. ತರಗತಿಗೆ ಸಮಾನ) ಮತ್ತು ಬಿ. ಎ. ತರಗತಿಗಳಿಗೆ 'ಅನುವಾದ'ವನ್ನು ಪಾಠ ಹೇಳಬೇಕಾಯಿತು. ಇವರು ಅನುವಾದ ಕಲೆಯನ್ನು ಮತ್ತಷ್ಟು ಅಧ್ಯಯನ ಮಾಡಿದರು. ತಮ್ಮ ಅನಿಸಿಕೆಗಳನ್ನು ಪ್ರಯೋಗ ಮಾಡಿಯೂ ನೋಡಿದರು. ಹಲವು ವರ್ಷಗಳ ಕಾಲ ಕನ್ನಡಪಂಡಿತರ ಪರೀಕ್ಷೆಗೆ ಪರೀಕ್ಷಕರಾಗಿದ್ದುದರಿಂದ, ನಾಗವರ್ಮನ 'ಕಾದಂಬರಿ'ಯನ್ನು ಅಧ್ಯಯನ ಮಾರ್ಗದರ್ಶಕ ಸೂತ್ರಗಳನ್ನು ನಾಗವರ್ಮ ಸಂಸ್ಕೃತದಿಂದ ಅನುವಾದ ಮಾಡುವಾಗಲೂ ಅನುಸರಿಸಿದಂತೆ ಕಂಡದ್ದು ಇವರಿಗೆ ಧೈರ್ಯವನ್ನು ಕೊಟ್ಟಿತು. ಸನಾತನ ಧರ್ಮವನ್ನು ಸನಾತನ ವಿವಾಹ ಸಂಪ್ರದಾಯವನ್ನೂ ಕುರಿತು ಇಂಗ್ಲೀಷಿನಲ್ಲಿ ಪುಸ್ತಕಗಳನ್ನು ಬರೆದಾಗ ಅನೇಕ ಶ್ಲೋಕಗಳನ್ನು ಸಂಸ್ಕೃತದಿಂದ ಇಂಗ್ಲೀಷಿಗೆ ಅನುವಾದಿಸಬೇಕಾಯಿತು.

೧೯೦೮ರಲ್ಲಿ ದಸರಾ ವಸ್ತುಪ್ರದರ್ಶನದ ಸಂದರ್ಭದಲ್ಲಿ ಅನುವಾದ ಕಲೆಯನ್ನು ಕುರಿತು ಭಾಷಣ ಮಾಡಬೇಕೆಂದು ವಿದ್ಯಾಭ್ಯಾಸ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್ ಭಾಭಾ ಅವರಿಂದ ಆಹ್ವಾನ ಬಂದಿತು. ಆಗ ಮಾಡಿದ ಭಾಷಣದ ವಿಸ್ತೃತ ರೂಪವೇ 'ದಿ ಆರ್ಟ್ ಆಫ್ ಟ್ರಾನ್ಸ್‌ಲೇಷನ್'. ರಘುನಾಥ್‌ರಾಯರು ಅಧ್ಯಯನ ಮತ್ತು ಅನುವಾದ ಕಾರ್ಯದ ಅನುಭವ ಇವುಗಳ ಆಧಾರದ ಮೇಲೆ ಪುಸ್ತಕವನ್ನು ಬರೆದಿದ್ದಾರೆ. ಇಲ್ಲಿರುವುದು ಸುಮಾರು ಕಾಲು ಶತಮಾನದ ಅನುವಾದ ಮತ್ತು ಚಿಂತನೆಯ ಫಲ.

(ಇದೇ ಮುನ್ನುಡಿಯಲ್ಲಿ ಮತ್ತೊಂದು ಸ್ವಾರಸ್ಯಕರವಾದ ಅಂಶವಿದೆ. ಸಂಸ್ಕೃತ 'ಶಾಕುಂತಳ'ದ ಬಸವಪ್ಪ ಶಾಸ್ತ್ರಿಗಳ ಅನುವಾದದಿಂದ ಭಾಗಗಳನ್ನು ಉದ್ಧರಿಸುವಾಗ ಕೆಲವಡೆಗಳಲ್ಲಿ 'ಅಮೆಂಡೆಡ್' ಎಂದು ಸೂಚಿಸಿದ್ದಾರೆ. ಇದಕ್ಕೆ ಹೀಗೆ ವಿವರಣೆ ನೀಡಿದ್ದಾರೆ. 'ರಾಜಶೇಖರ ವಿಳಾಸ'ವನ್ನು ಬಸವಪ್ಪ ಶಾಸ್ತ್ರಿಗಳ ಬಳಿ ಎರಡು ವರ್ಷ ಕಾಲ ಅಧ್ಯಯನ ಮಾಡುವ ಸುಯೋಗವು ನನಗೆ ದೊರಕಿತು. ಅವರೊಡನೆ ಆತ್ಮೀಯವಾಗಿ ಮಾತನಾಡುವಾಗ, ಕನ್ನಡ ಅಷ್ಟೇನೂ ತಿಳಿಯದಿದ್ದರೂ ಹಿರಿಯ ಸ್ಥಾನಗಳಲ್ಲಿದ್ದ ಹಲವರು ಸದಸ್ಯರಾಗಿದ್ದ ಸಮಿತಿಯ ಅಭಿಪ್ರಾಯಗಳಿಗೆ ತಾವು ಮನ್ನಣೆ ಕೊಡಬೇಕಾಯಿತು. ಇಲ್ಲವಾದರೆ ಕೆಲವೆಡೆಗಳಲ್ಲಿ ತಾವು ಬೇರೆ ರೀತಿಯಲ್ಲಿ ಅನುವಾದ ಮಾಡುತ್ತಿದ್ದುದಾಗಿ ಶಾಸ್ತ್ರಿಗಳು ಹೇಳಿದರು. ಮುಂದಿನ ಆವೃತ್ತಿಯಲ್ಲಿ ಆ ಭಾಗಗಳನ್ನು ಮಾರ್ಪಡಿಸುವುದಾಗಿಯೂ ತಿಳಿಸಿದರು. ಆದರೆ ಮತ್ತೊಂದು ಆವೃತ್ತಿ ಪ್ರಕಟವಾಗುವುದರೊಳಗೆ ಅವರು ತೀರಿಕೊಂಡರು. ಅವರೇ ಬದುಕಿದ್ದಿದ್ದರೆ ಹೇಗೆ ತಿದ್ದಿ ಪ್ರಕಟಿಸುತ್ತಿದ್ದರೂ ಹಾಗೆ ನಾನು ಈ ಭಾಗಗಳನ್ನು ಮುದ್ರಿಸಿದ್ದೇನೆ.

ತಮ್ಮ ಪುಸ್ತಕದಲ್ಲಿ ನಾಲ್ಕು ವರ್ಗಗಳ ಅನುವಾದಗಳನ್ನು ಗಮನದಲ್ಲಿ ಇಟ್ಟುಕೊಂಡಿರುವುದಾಗಿ ಮುನ್ನುಡಿಯಲ್ಲಿ ಹೇಳಿದ್ದಾರೆ. ೧) ಸಂಸ್ಕೃತದಿಂದ ಕನ್ನಡಕ್ಕೆ ಅಥವಾ ಬೇರೊಂದು ದ್ರಾವಿಡ ಭಾಷೆಗೆ (೨) ಸಂಸ್ಕೃತದಿಂದ ಇಂಗ್ಲೀಷಿಗೆ (೩) ಇಂಗ್ಲೀಷಿನಿಂದ ಕನ್ನಡಕ್ಕೆ ಅಥವಾ ಬೇರೊಂದು ದ್ರಾವಿಡ ಭಾಷೆಗೆ (೪) ಕನ್ನಡ ಅಥವಾ ಬೇರೊಂದು ದ್ರಾವಿಡ ಭಾಷೆಯಿಂದ ಇಂಗ್ಲೀಷಿಗೆ.

ಸುಮಾರು ೮೫ ವರ್ಷಗಳ ಹಿಂದೆ, ಕನ್ನಡದಲ್ಲಿ ಅನುವಾದಗಳು ಬೆಳಕುಕಾಣಲು ಪ್ರಾರಂಭಿಸುತ್ತಿದ್ದ ದಿನಗಳಲ್ಲಿ ರಘುನಾಥರಾಯರು ಎಷ್ಟು ಶಾಸ್ತ್ರೀಯವಾಗಿ, ವಿವೇಚನೆಯಿಂದ ಬರೆಯುತ್ತಾರೆ ಎಂದು ಕಂಡಾಗ ಮೆಚ್ಚಿಕೆಯಾಗುತ್ತದೆ.

'ಟ್ರಾನ್ಸ್‌ಲೇಷನ್' ಎನ್ನುವ ಶಬ್ಧದ ಅರ್ಥವೇನು ಎನ್ನುವ ಪ್ರಶ್ನೆಯಿಂದ ಪುಸ್ತಕವನ್ನು ಪ್ರಾರಂಭಿಸುವ ರಾಯರು ಎಂಟು ಅರ್ಥಗಳನ್ನು ಪಟ್ಟಿ ಮಾಡುತ್ತಾರೆ. ಅನಂತರ ಈ ಪದದ ವಿವರಣೆಯನ್ನು ಕೊಡುತ್ತಾರೆ. ''ಮೂಲಪ್ರತಿಯು ತನ್ನ ಓದುಗನ ಮೇಲೆ ಯಾವ ಪರಿಣಾಮವನ್ನುಂಟು ಮಾಡಿತೋ ಅದೇ ಪ್ರಭಾವವನ್ನು ಓದುಗನ ಮೇಲೆ ಮಾಡುವಂತೆ, ಕೃತಿಕಾರನ ವಿಚಾರ (ಐಡಿಯಾಸ್)ಗಳನ್ನು ಸ್ಪುಟವಾಗಿ ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ವರ್ಗಾವಣೆ ಮಾಡುವ ಕಲೆಯೇ ಅನುವಾದ'' (ಈಚೆಗಿನ ವರ್ಷಗಳಲ್ಲಿ ಇಂತಹ ವಿವರಣೆ ಟೀಕೆಗೆ ಒಳಗಾಗಿದೆ. ಮುಖ್ಯ ಆಕ್ಷೇಪಣೆ ಎಂದರೆ ಮೂಲಕೃತಿ ತನ್ನ ಓದುಗನ ಮೇಲೆ ಯಾವ ಪರಿಣಾಮವನ್ನು ಮಾಡಿತು ಎಂದಾಗಲಿ ಅನುವಾದವು ತನ್ನ ಓದುಗನ ಮೇಲೆ ಯಾವ ಪರಿಣಾಮವನ್ನು ಮಾಡಿತು ಎಂದಾಗಲಿ ನಿರ್ಧರಿಸುವುದು, ಇವನ್ನು ಹೋಲಿಸುವುದು ಹೇಗೆ?)

ಈ ವಿವರಣೆಯಿಂದ ನಾಲ್ಕು ಅಂಶಗಳನ್ನು ರಾಯರು ನಿರ್ಧರಿಸುತ್ತಾರೆ: (೧) ಅನುವಾದವಾಗುವುದು ಕೃತಿಕಾರನ ವಿಚಾರಗಳು, ಪದಗಳು ಮಾತ್ರವಲ್ಲ, ಮೂಲದ ಭಾಷೆಯ ಶಬ್ಧಗಳ ಬದಲು ಶಬ್ಧಗಳನ್ನು ಜೋಡಿಸಿದರೆ ಅನುವಾದ ಆಗುವುದಿಲ್ಲ. (೨) ಮೂಲದ ವಿಚಾರಗಳನ್ನು ಸ್ಪಷ್ಟ ಮಾಡಿಕೊಂಡ ನಂತರ ಅವನ್ನು ಎರಡನೆಯ ಭಾಷೆಯಲ್ಲಿ ಸ್ಪಷ್ಟವಾಗಿ ನಿರೂಪಿಸಬೇಕು. ಕೆಲವೆಡೆಗಳಲ್ಲಿ ವಿವರಣೆ, ವಿಸ್ತರಣೆ ಅಗತ್ಯವಾಗಬಹುದು. (೩) ಮೂಲದ ಶೈಲಿಯನ್ನು ಕಟ್ಟುನಿಟ್ಟಾಗಿ ಅನುಸರಿಸಬೇಕು. (೪) ಮೂಲಕೃತಿ ತನ್ನ ಓದುಗನ ಮೇಲೆ ಮಾಡಿದ ಪರಿಣಾಮವನ್ನೆ ಅನುವಾದವು ತನ್ನ ಓದುಗನ ಮೇಲೆ ಮಾಡಬೇಕು. ಆದುದರಿಂದ ಮೂಲದ ಅಲಂಕಾರಗಳನ್ನು ಉಳಿಸಿಕೊಳ್ಳಬೇಕು.

ಅನುವಾದವು ಒಂದು ಕಲೆ ಎಂದು ಪ್ರತಿಪಾದಿಸುವ ರಾಯರು ಅನುವಾದಕನು ಅನುಸರಿಸಬೇಕಾದ ವಿಧಾನವನ್ನು ವಿಶ್ಲೇಷಿಸಿ ಐದು ಅಂಶಗಳನ್ನು ಒತ್ತಿ ಹೇಳುತ್ತಾರೆ :

೧) ಮೂಲಕೃತಿ ನಿಜವಾದ ಮತ್ತು ಸಮಗ್ರ ಅರ್ಥವನ್ನು ಗ್ರಹಿಸಿದ್ದೇನೆ ಎಂದು ಖಚಿತವಾಗುವವರೆಗೆ ಅನುವಾದಕನು ಕೃತಿಯನ್ನು ಮತ್ತೆ ಮತ್ತೆ, ಮತ್ತೆ ಮತ್ತೆ ಅಧ್ಯಯನ ಮಾಡಬೇಕು.

೨) ಮೂಲಕೃತಿ ಪ್ರಮುಖ ವಿಚಾರಗಳನ್ನು ಮೂಲದಲ್ಲಿ ಹೇಳುವ ಶಬ್ಧಗಳನ್ನು ಗಮನಿಸಿ, ಅನುವಾದದ ಭಾಷೆಯಲ್ಲಿ ಅದಕ್ಕೆ ಸಮನಾದ ಶಬ್ದಗಳಿಗಾಗಿ ಶ್ರಮಪಟ್ಟು ಕಂಡುಕೊಳ್ಳಬೇಕು. ಸಮಾನ ಶಬ್ಧಗಳು ಲಭ್ಯವಾಗದಿದ್ದರೆ ಅದಕ್ಕೆ ಅತ್ಯಂತ ಸಮೀಪದ ಶಬ್ಧಗಳನ್ನು ಕಂಡುಕೊಳ್ಳಬೇಕು.

೩) ಮೂಲದ ಭಾಷೆಯ ಒಟ್ಟು ಶೈಲಿಯನ್ನು ಗಮನಿಸಬೇಕು. ಅದು ಗಂಭೀರವಾಗಿರಬಹುದು. ವಿನೋದ ರೀತಿ (ಪ್ಲೇಫುಲ್) ಆಗಿರಬಹುದು, ಸರಳವಾಗಿರಬಹುದು. ಅಲಂಕೃತವಾಗಿರಬಹುದು, ವರ್ಣನಾತ್ಮಕವಾಗಿರಬಹುದು, ಸಂಭಾಷಣೆಯ ರೀತಿಯದಾಗಿರಬಹುದು. ಅನುವಾದಕನು ಮೂಲದ ಶೈಲಿಯ ವೈಶಿಷ್ಟ್ಯವನ್ನು ಸಾಧಿಸಬೇಕು.

೪) ಮೂಲದ ವಿಚಾರವಾಹಿನಿಯನ್ನೂ, ಅಲಂಕಾರಗಳ ಬಳಕೆಯನ್ನೂ ಗಮನಿಸಬೇಕು ; ಸಾಧ್ಯವಾದ ಮಟ್ಟಿಗೂ ಇವನ್ನು ಉಳಿಸಿಕೊಳ್ಳಬೇಕು.

೫) ಅನುವಾದಕನು ಕಲ್ಪನೆಯ (ಇಮ್ಯಾಜಿನೇಷನ್‌ನ) ಮೂಲಕೃತಿಯ ಕರ್ತೃವಿನ ಆವರಣಕ್ಕೆ ತಾನು ಪ್ರವೇಶಿಸಿ, ಅವರ ವಿಚಾರಗಳನ್ನೂ, ಭಾವನೆಗಳನ್ನೂ ತನ್ನದನ್ನಾಗಿ ಮಾಡಿಕೊಳ್ಳಲು ಶ್ರದ್ಧೆಯಿಂದ ಪ್ರಯತ್ನಿಸಬೇಕು. ಮೂಲಲೇಖಕನು ತನ್ನ ಶಬ್ದಗಳಿಂದ ಯಾವ ಪರಿಣಾಮವನ್ನುಂಟು ಮಾಡಲು ಉದ್ದೇಶಿಸಿದ್ದ ಎನ್ನುವುದನ್ನು ತಾನು ಮನಸ್ಸಿನಲ್ಲಿ ರೂಪಿಸಿಕೊಳ್ಳಲು ಶ್ರಮಿಸಿಬೇಕು. ಅದೇ ಉದ್ದೇಶವನ್ನು ಸಾಧಿಸುವಂತೆ ತಾನು ಮಾತುಗಳನ್ನು ಪೋಣಿಸಲು ಶ್ರಮಿಸಬೇಕು. ಅನುವಾದಕನ ಕರ್ತವ್ಯದ ಅತ್ಯಂತ ಕಠಿಣವಾದ ಭಾಗ ಇದು.

ಆ ನಂತರ ರಾಯರು ಅನುವಾದಕನು ಮನಸ್ಸಿನಲ್ಲಿರಿಸಿಕೊಳ್ಳಬೇಕಾದ ಕೆಲವು ಎಚ್ಚರಿಕೆಗಳನ್ನು ಹೇಳುತ್ತಾರೆ. ಮೂಲದ ಭಾಷೆ, ಅನುವಾದದ ಭಾಷೆ ಇವುಗಳ ವೈದೃಶ್ಯಗಳನ್ನು ಅಧ್ಯಯನ ಮಾಡಬೇಕು ಎನ್ನುತ್ತಾರೆ. (೮೫ ವರ್ಷಗಳ ಹಿಂದೆ ರಾಯರು, ಅನುವಾದಕನು ಎರಡು ಭಾಷೆಗಳ ಸ್ವರೂಪವನ್ನು ಸಮಗ್ರವಾಗಿ ತಿಳಿದುಕೊಳ್ಳಬೇಕು ಎನ್ನುವ ಮಾತನ್ನು ಹೇಳಿದರು ಎನ್ನುವುದು ಗಮನಾರ್ಹ.) ಇಂಗ್ಲಿಷ್ ಮತ್ತು ದ್ರಾವಿಡ ಭಾಷೆಗಳು ತೀರ ವಿಭಿನ್ನವಾದವು ಎಂದು ಒತ್ತಿ ಹೇಳುತ್ತ ಒಂದು ಮುಖ್ಯವಾದ ಮಾತನ್ನು ಹೇಳುತ್ತಾರೆ. ''ನಮಗೆ ಮುಖ್ಯವಾದದ್ದು (ಎರಡು ಭಾಷೆಗಳ) ಹೊರಗಿನ ಶಬ್ದ ಸಂಪತ್ತಿನ ಬಾಂಧವ್ಯವಷ್ಟೇ ಅಲ್ಲ, ಒಳಗಿನ ವ್ಯಾಕರಣದ ಬಾಂಧವ್ಯ''. ಭಾಷಾಭಂಡಾರಕ್ಕೆ ಪ್ರಾಧಾನ್ಯ ನೀಡದೆ ವಾಕ್ಯಗಳ ರಚನೆಯ ಸ್ವರೂಪವನ್ನು ರಾಯರು ಒತ್ತಿ ಹೇಳಿದರೆನ್ನುವುದು, ಅನುವಾದ ಕಾರ್ಯದಲ್ಲಿ ಅವರ ಅನುಭವದ ಆಧಾರದ ಮೇಲೆ ಬರೆಯುತ್ತಿದ್ದಾರೆ ಎನ್ನುವುದನ್ನು ಸ್ಪಷ್ಟವಾಗಿ ತೋರಿಸುತ್ತದೆ.

ಸಂಸ್ಕೃತದಿಂದ ಮತ್ತು ದ್ರಾವಿಡ ಭಾಷೆಗಳಿಂದ ಇಂಗ್ಲೀಷಿಗೆ ಅನುವಾದ ಮಾಡುವ ಯೂರೋಪಿನ ವಿದ್ವಾಂಸರು ಈ ಅಂಶಕ್ಕೆ ಸಾಕಷ್ಟು ಗಮನ ಕೊಡುತ್ತಿಲ್ಲ. ಭಾರತೀಯ ಭಾಷೆಗಳ ಸೂಕ್ಷ್ಮತೆಗಳನ್ನು ನುಡಿಗಟ್ಟುಗಳನ್ನೂ ಅರಗಿಸಿಕೊಳ್ಳಲಾರದ ಈ ವಿದ್ವಾಂಸರು ಸಮೀಪದ ಭಾಷೆಗಳ ನಡುವಣ ಅನುವಾದಗಳ ಮಾನದಂಡಗಳನ್ನೇ ವಿಭಿನ್ನಭಾಷೆಗಳ ನಡುವಣ ಅನುವಾದಗಳಿಗೂ ಅನ್ವಯಿಸಬಹುದು ಎಂದು ಭಾವಿಸುತ್ತಾನೆ. ಇದು ತೀರ ತಪ್ಪು ಭಾವನೆ ಎಂದು ಹೇಳಿ, ''ಕಷ್ಟವಾದ ಒಂದು ಸಂಸ್ಕೃತ ಶ್ಲೋಕವನ್ನು ತಡವರಿಸಿದೆ ರಾಗವಾಗಿ ಓದಬಲ್ಲ ಒಬ್ಬ ಯೂರೋಪಿನ ವಿದ್ವಾಂಸನನ್ನು ನಾವು ಕಾಣೆವು'' ಎನ್ನುತ್ತಾರೆ. ಪದಶಃ ಅನುವಾದ, ಹತ್ತಿರದ ಅನುವಾದ, ಭಾವಾನುವಾದ ಇವುಗಳಲ್ಲಿ, ಪ್ರತಿಯೊಂದು ಯಾವಾಗ ಉಚಿತ ಎನ್ನುವುದನ್ನು ಗಮನಿಸಬೇಕು ಎನ್ನುತ್ತಾರೆ.

ರಘುನಾಥ್‌ರಾಯರ ಪುಸ್ತಕದಲ್ಲಿ ಬಹುವಾಗಿ ಮೆಚ್ಚಬೇಕಾದ ಅಂಶ ಎಂದರೆ ಅದರಲ್ಲಿ 'ಥಿಯರಿ'ಗಿಂತ ಅನ್ವಯ ವಿಮರ್ಶೆ ಸಮೃದ್ಧವಾಗಿದೆ, ಉದಾಹರಣೆಗಳನ್ನು ಕೊಟ್ಟು ಅವನ್ನು ವಿಶ್ಲೇಷಿಸುತ್ತಾರೆ ಎನ್ನುವುದು. ಸಾಮಾನ್ಯ ವಾಕ್ಯಗಳಿಂದ ಹಿಡಿದು 'ಶಾಕುಂತಳ' ಮತ್ತು ಶಾಸನಗಳವರೆಗೆ ಇವರ ನಿದರ್ಶನಗಳು ಹಬ್ಬಿವೆ. ಮುಖ್ಯವಾಗಿ ಬಸವಪ್ಪ ಶಾಸ್ತ್ರಿಗಳ ಅನುವಾದವನ್ನೂ ಸರ್ ಮೋನಿಯರ್ ವಿಲಿಯಂಸ್‌ನ ಪ್ರಸಿದ್ಧ ಅನುವಾದವನ್ನೂ ಪಕ್ಕ ಪಕ್ಕದಲ್ಲಿಟ್ಟು ನೋಡುತ್ತಾರೆ. ವಿಲಿಯಂಸ್‌ನ ಅನುವಾದ ಎಲ್ಲೆಲ್ಲಿ ಅಸಮರ್ಪಕ ಎಂದು ತಮಗೆ ಕಂಡರೆ ಅಲ್ಲಿ ಅದನ್ನು ಹೇಳಿ, ತಾವೇ ಆ ಭಾಗವನ್ನು ಅನುವಾದಿಸಿ, ತಮ್ಮ ಅನುವಾದವನ್ನು ಸಮರ್ಥಿಸಿಕೊಳ್ಳುತ್ತಾರೆ. (ಉದಾಹರಣೆಗೆ, 'ಶಾಕುಂತಳ'ದ ನಾಂದೀ ಶ್ಲೋಕವನ್ನು ವಿಲಿಯಂಸ್ ಅನುವಾದಿಸಿರುವ ಭಾಗವನ್ನು ಕೊಟ್ಟು, ''ಇದು ಬಹು ಅರ್ಥವನ್ನು ಒಳಗೊಂಡ ಶ್ರೀಮಂತ ಶ್ಲೋಕ. ಆದರೆ ವಿಲಿಯಂಸ್ ಶ್ಲೋಕದ ಸಮಗ್ರ ಅರ್ಥದ ಕಡೆಗೆ ಗಮನವನ್ನೆ ಕೊಟ್ಟಿಲ್ಲ'' ಎನ್ನುತ್ತಾರೆ. ''ಅನುವಾದದಲ್ಲಿ ಭಕ್ತಿಭಾವನೆಯೇ ಮಾಯವಾಗಿದೆ. ಇಂಗ್ಲೀಷಿನ 'ವಾಟರ್, ಫೈರ್, ಪ್ರೀಸ್ಟ್, ಈಥರ್, ಅರ್ತ್, ಏರ್ ಶಬ್ದಗಳಿಗೆ ತಮ್ಮದೇ ಧ್ವನಿಸ್ತರಗಳಿರುವುದರಿಂದ ಅರ್ಥವು ಅನರ್ಥವಾಗಿದೆ. ಶ್ಲೋಕದ ವೇದಾಂತದ ಸೂಕ್ಷ್ಮವನ್ನು ಯೂರೋಪಿನವರ ಬುದ್ಧಿ ಗ್ರಹಿಸಲಾರದೆ ಹೋಗಿದೆ'' ಎನ್ನುತ್ತಾರೆ) ಕನ್ನಡ ಶಾಸನದಲ್ಲಿಯ 'ಗಂಡರ ಗಂಡ' ಎನ್ನುವುದನ್ನು ಇಂಗ್ಲೀಷಿನ 'ಎಫಿಗ್ರ್ಯಾಫಿಯ ಕರ್ನಾಟಕ'ದ ಮೂರನೆ ಸಂಪುಟದಲ್ಲಿ 'ಮೇಲ್ ಆಫ್ ಮೇಲ್ಸ್' (Male of Males) ಎಂದು ಅನುವಾದಿಸಿರುವುದನ್ನು ಹಾಸ್ಯ ಮಾಡುತ್ತಾರೆ.

ರಘುನಾಥರಾಯರು ಅನುವಾದಕನಿಗೆ ಏಳು ಮಾರ್ಗದರ್ಶಕ ಸೂತ್ರಗಳನ್ನು ಹೇಳುತ್ತಾರೆ :

೧) ಅನುವಾದವನ್ನು ಪ್ರಾರಂಭಿಸುವ ಮುನ್ನ ಮೂಲವನ್ನು ಸಮಗ್ರವಾಗಿ ಓದಿ, ಅದರ ಗಮನವನ್ನು ಅರ್ಥಮಾಡಿಕೊ. ಭಾಷೆಗಿಂತ ಆಲೋಚನೆಗೆ ಪ್ರಾಧಾನ್ಯ ನೀಡು.

೨) ಮೂಲದ ಒಟ್ಟು ಶೈಲಿಯನ್ನು ಮನಸ್ಸಿನಲ್ಲಿರಿಸಿಕೊಂಡು ನಿನ್ನ ಅನುವಾದದಲ್ಲಿ ಅದರ ಸ್ವರೂಪವನ್ನು ಸಾಧಿಸಲು ಪ್ರಯತ್ನಿಸು.

೩) ಮೂಲದಲ್ಲಿ ಬಳಸಿದ ಅಲಂಕಾರಗಳನ್ನು ಲಕ್ಷ್ಯದಲ್ಲಿಟ್ಟುಕೊ, ಇಲ್ಲವಾದರೆ ನಿನ್ನ ಅನುವಾದ ಸಪ್ಪೆಯಾಗುತ್ತದೆ.

೪) ಸೋದರ ಭಾಷೆಗಳ ನಡುವಣ ಅನುವಾದದಲ್ಲಿ ಮೂಲದಲ್ಲಿನ ಶಬ್ದಗಳಿಗೆ ಬಾಂಧವ್ಯವಿರುವ ಶಬ್ದಗಳನ್ನು ಬಳಸಲು ಯತ್ನಿಸು.

೫) ತೀರ ವಿಭಿನ್ನವಾದ ಭಾಷೆಗಳ ನಡುವಣ ಅನುವಾದದಲ್ಲಿ ಮೂಲದ ಕರ್ತೃವಿನ ಅರ್ಥವನ್ನು ಅಥವಾ ಅರ್ಥ ಛಾಯೆಯನ್ನು ಅಭಿವ್ಯಕ್ತಿಗೊಳಿಸುವ ಮಾತುಗಳನ್ನು ಆರಿಸಿ, ಅಗತ್ಯವಾದ ವ್ಯಾಕರಣದ ಅಂಶಗಳಿಗೆ ಗಮನಕೊಟ್ಟು ವಾಕ್ಯಗಳನ್ನು ರಚಿಸು.

೬) ಇಂಗ್ಲೀಷಿನಿಂದ ಯಾವುದೇ ಭಾರತೀಯ ಭಾಷೆಗೆ ಅನುವಾದಿಸುವಾಗ ದೀರ್ಘವಾದ ಮತ್ತು ತೊಡಕಿನ ರಚನೆ ಇರುವ ವಾಕ್ಯಗಳನ್ನು ಸಣ್ಣವಾಕ್ಯಗಳಾಗಿ ಮಾಡು.

೭) ನೀನು ಬರೆಯುತ್ತಿರುವ ಭಾಷೆಯ ವ್ಯಾಕರಣದ ವಿಶಿಷ್ಟಾಂಶಗಳಿಗೆ ಗಮನಕೊಡು ; ಅವನ್ನು ಉಲ್ಲಂಘಿಸಬೇಡ.

ಈ ಸೂತ್ರಗಳನ್ನು ಹಲವು ಬರಹಗಳಿಗೆ ಅನ್ವಯಿಸಿ ವಿಶ್ಲೇಷಿಸುತ್ತಾರೆ.

ಆಗಲೇ ಹೇಳಿದಂತೆ ಇಲ್ಲಿ ದೃಷ್ಟಾಂತಗಳ ಸಂಪತ್ತೊಂದು ವಿಶಿಷ್ಟವಾದ ಅಂಶ ಆರಿಸಿದ ಭಾಗಗಳನ್ನು ಮೂಲ (ಸಂಸ್ಕೃತ ಅಥವಾ ಇಂಗ್ಲಿಷ್) ಭಾಷೆಯಲ್ಲಿ ಕೊಟ್ಟು, ಅನುವಾದವನ್ನೂ ಕೊಟ್ಟಿದೆ. (ಅನುಬಂಧದಲ್ಲಿ ಹಿಂದೀ ಅನುವಾದಗಳಿವೆ.) ಕೆಲವಡೆಗಳಲ್ಲಿ ಮೋನಿಯರ್ ವಿಲಿಯಂಸ್‌ನ ಅನುವಾದವನ್ನು ಟೀಕಿಸಿ ತಮ್ಮ ಅನುವಾದವನ್ನು ಕೊಟ್ಟು ಇದೂ ಅಷ್ಟು ಸಮರ್ಪಕವಲ್ಲ. ಕಾಳಿದಾಸನ ಚಿಂತನೆಯನ್ನು ಪರಿಚಯಿಸಲು ಈ ಅನುವಾದ'' ಎಂದು ನಮ್ರತೆಯಿಂದ ಹೇಳುತ್ತಾರೆ.

ಇವತ್ತಿನ ವಿಚಾರದೃಷ್ಟಿಯಿಂದ ನೋಡಿದರೆ ತೃತೀಯ ಮಿತಿಗಳೆಂದು ನಮಗೆ ಕೆಲವು ಅಂಶಗಳು ಭಾಸವಾಗಬಹುದು. ಉದಾಹರಣೆ ಮೂಲದ ಭಾಷೆ - ಅನುವಾದದ ಭಾಷೆ ಇವುಗಳ ಸ್ವರೂಪಗಳನ್ನೇ ಅಧ್ಯಯನ ಮಾಡಬೇಕು ಎಂಬ ಮುಖ್ಯವಾದ ಮಾತನ್ನು ರಾಯರೇ ಹೇಳುತ್ತಾರೆ. ಆದರೆ, ವಾಕ್ಯರಚನೆ ಅಥವಾ ವಾಕ್ಯಬಂಧದ ವಿಷಯಕ್ಕೆ ಹೆಚ್ಚು ಗಮನ ಕೊಡುವುದಿಲ್ಲ. ಅರ್ಥ= ಶಬ್ಧ + ವಾಕ್ಯರಚನೆ + ಆವರ್ತ + ಸಾಂಸ್ಕೃತಿಕ ಅಂಶಗಳು. ಆದರೆ ತೊಂಭತ್ತು ವರ್ಷಗಳ ಹಿಂದೆ ಬರೆದ ಕೃತಿಯಲ್ಲಿ ಇದನ್ನು ನಿರೀಕ್ಷಿಸುವುದೂ ನ್ಯಾಯವಲ್ಲ. ಇವತ್ತು ನಾವು ಮಾತನಾಡುವುದು, 'ಅರ್ಥದ ಅರ್ಥ'ದ ವಿಶಾಲ ಅಧ್ಯಯನವಾಗುವ ಯುಗವೇ.

೮೫ ವರ್ಷಗಳ ನಂತರವೂ ನಾವು ಗಂಭೀರವಾಗಿ ಯೋಚಿಸಬೇಕಾದ ವಿಚಾರ ರೀತಿಯ, ನಿರ್ದೇಶನ ಶ್ರೀಮಂತಿಕೆಯ ಪುಸ್ತಕವನ್ನು ರಘುನಾಥರಾಯರು ಬಿಟ್ಟುಹೋಗಿದ್ದಾರೆ. ಇದರ (ಪುನರ್?) ಮುದ್ರಣ ದೂರದ ದೆಹಲಿಯಲ್ಲಾಯಿತು ಎನ್ನುವುದು ಕೌತುಕದ ಅಂಶ.

ಶ್ರುತಿ, ಮಂತ್ರಶಾಸ್ತ್ರಗಳಲ್ಲಿ ಪ್ರಣವ - ಒಂದು ನೋಟ

- ಡಾ||. ಎಸ್. ಆರ್. ಲೀಲಾ

ಹಿರಿದಾದದ್ದನ್ನು ಕಿರಿದಾಗಿ ಹೇಳಬೇಕೆಂಬುದು ನಮ್ಮ ಪ್ರಾಚೀನರಲ್ಲಿ ಕಾಣುವ ಒಂದು ಪ್ರಬಲ ಆಕಾಂಕ್ಷೆ. ಇದರಿಂದಲೇ ಜಗತ್ತಿನಲ್ಲಿ ಎಲ್ಲೂ ಕಾಣದ 'ಸೂತ್ರ ಸಾಹಿತ್ಯ' ಇಲ್ಲಿ ಹುಟ್ಟಿಕೊಂಡಿತು. ವ್ಯಾಕರಣ ಸೂತ್ರಗಳು, ಮೀಮಾಂಸಾ ಸೂತ್ರಗಳು, ನ್ಯಾಯ ಸೂತ್ರಗಳು, ವೈಶೇಷಿಕ ಸೂತ್ರಗಕಳು, ಬ್ರಹ್ಮಸೂತ್ರಗಳು - ಹೀಗೆ ಎಲ್ಲ ಗಹನ ಗಂಭೀರ ಶಾಸ್ತ್ರಗಳೂ ಸಣ್ಣ ಸಣ್ಣ ಸೂತ್ರಗಳಲ್ಲಿ ಮೈ ತಾಳಿದವು.

ಆದರೆ ಮಹತ್ತನ್ನು ಅಣುರೂಪದಲ್ಲಿ ಸಾಧಿಸಬೇಕೆಂಬ ಈ ಆಸೆ ನಿಜವಾಗಿಯೂ ಸಾರ್ಥಕವಾಗಿರುವುದು ಪ್ರಣವದ ಪ್ರತಿಪಾದನೆಯಲ್ಲಿ. ಅನೇಕ ಸಂಪುಟಗಳಲ್ಲಿ ಸುದೀರ್ಘವಾಗಿ ವಿವರಿಸಬೇಕಾದ ಒಂದು ಇಡೀ ದರ್ಶನವನ್ನು 'ಓಂ'ಕಾರವು ಅಡಗಿಸಿಕೊಂಡಿದೆ.

'ಓಂ'ಕಾರವು ಅ, ಉ, ಮ ಕಾರಗಳು ಸೇರಿ ಆಗಿದೆ. ಮೊದಲೆರಡು ಸೇರಿ (ಗುಣಸಂಧಿ) ಓಕಾರವಾಗಿ, ಮೇಲೆ ಚಂದ್ರ ಬಿಂದು ಅಥವಾ ನಾದ ಮತ್ತು ಬಿಂದು-ಅರ್ಧ ಚಂದ್ರದಲ್ಲಿ ಕೂಡಿಸಿದ ಬಿಂದುವೋಪಾದಿಯಲ್ಲಿ ಕೊಡಲಾಗಿದೆ- ಓಂ||

ಭಾರತೀಯ ದರ್ಶನದ ಎರಡು ಆಧಾರ ಸ್ತಂಭಗಳೆಂದರೆ ಒಂದು ''ಅವಿಕಾರ'' (Changeleassness), ಇನ್ನೊಂದು 'ವಿಕಾರ' (change) ಜಗನ್ಮೂಲವಾದ ಪರಬ್ರಹ್ಮದಲ್ಲಿ ವಿಕಾರವಿಲ್ಲ. ಶಕ್ತಿಯಾದ ಬ್ರಹ್ಮದಲ್ಲಿ ವಿಕಾರವಿದೆ. ಅವಿಕಾರಿಯಾದ ಬ್ರಹ್ಮವಿಕಾರಿಯಾದ ಜಗತ್ತಿನಲ್ಲಿ ಸ್ವ ಸ್ವರೂಪಕ್ಕೆ ಚ್ಯುತಿ ಬಾರದಂತೆ ಇದೆ. ಹೇಗೆಂದರೆ, ಸಾಮಾನ್ಯರ ಅನುಭವದಲ್ಲಿ ನಾಮರೂಪಾತ್ಮಕವಾದ (ವಿಕಾರಿ) ಜಗತ್ತಿದೆ. ಯೋಗಿಯ ಅನುಭವದಲ್ಲಿ ಅದ್ವೈತ ಸಮಾಧಿ ಸ್ಥಿತಿ (ಅವಿಕಾರಿ) ಇದೆ. ಎರಡೂ 'ಅನುಭವಗಳೇ'. ಹೇಗೆಂಬುದು ಮಾತ್ರ ನಿಗೂಢ .ಇದು ವೇದಾಂತಶಾಸ್ತ್ರ

ಇದೇ ದರ್ಶನವನ್ನು, ಮಂತ್ರಶಾಸ್ತ್ರವು ತನ್ನದೇ ಆದ ರೀತಿಯಲ್ಲಿ ಪ್ರತಿಪಾದಿಸುತ್ತದೆ, ತಾನು ಪ್ರತಿಪಾದಿಸುವ ವಿಷಯಕ್ಕನುಸಾರವಾದ ಪರಿಭಾಷೆಯಲ್ಲಿ. ಮಂತ್ರಶಾಸ್ತ್ರದ ವಿಷಯ ಶಬ್ಧ-ಮಂತ್ರಗಳು 'ಶಬ್ದ'ದ ನಾನಾರೂಪಗಳು,

ಎಲ್ಲಿ ಸ್ಪಂದವಿದೆಯೋ ಅಲ್ಲಿ ಶಬ್ಧವಿದೆ. ಎಲ್ಲಿ ಸ್ಪಂದವಿಲ್ಲವೋ ಅಲ್ಲಿ ಶಬ್ಧವಿಲ್ಲ. ಪರಬ್ರಹ್ಮ ನಿರ್ವಿಕಾರ. ಆದ್ದರಿಂದ ನಿಷ್ಪಂದ, ಅಶಬ್ಧ. ಈ ನಿರ್ವಿಕಾರ ಸ್ಥಿತಿಗೆ ಚ್ಯುತಿಬಾರದಂತೆ ಸೃಷ್ಟಿಸ್ಪಂದ ಮೂಡಿದಾಗ ಅದೇ ಚರಾಚರ ಜಗತ್ತಿಗೆ ಕಾರಣವಾಗುತ್ತದೆ. ಪರಬ್ರಹ್ಮದ ಈ ಅಂಶವೇ ಸಕ್ರಿಯ ಬ್ರಹ್ಮ, ಈಶ್ವರ, ಶಕ್ತಿ, ಮಾಯೆ, ಶಬ್ಧ ಬ್ರಹ್ಮ ಮುಂತಾದ ನಾನಾ ಹೆಸರುಗಳಿಂದ ಕರೆಯಲ್ಪಡುತ್ತದೆ. ಪರಬ್ರಹ್ಮ ನಿಷ್ಪಂದ, ನಿಶ್ಶಬ್ಧ ; ಶಬ್ಧಬ್ರಹ್ಮ ಸಸ್ಪಂದ, ಪರಶಬ್ಧ. ಶಬ್ದಬ್ರಹ್ಮವೇ ಸೃಷ್ಟಿಮೂಲ. ಏಕೆಂದರೆ ಜಗತ್ತು ನಾಮರೂಪಾತ್ಮಕ, ಶಬ್ದಶಬ್ದಾರ್ಥಾತ್ಮಕ. ಶಬ್ಧಬ್ರಹ್ಮದ ಮೊದಲ ಸೃಷ್ಟಿಯ ಸ್ಪಂದವೇ ನಾದ ಅಥವಾ 'ಓಂ'ಕಾರ. ಇಲ್ಲಿಂದಲೇ ಎಲ್ಲ ಶಬ್ಧಗಳು ಅಂದರೆ ಧ್ವನ್ಯಾತ್ಮಕವಾದ (ಭೇರಿ, ಮೃದಂಗಾದಿಗಳಿಂದ ಹೊರಡುವ ಧ್ವನಿ) ಮತ್ತು ವರ್ಣಾತ್ಮಕವಾದ (ಭಾಷೆಗಳು) ಶಬ್ಧಗಳು ಹೊಮ್ಮುವುವು. ಈ ನಿಟ್ಟನಿಂದ ನೋಡಿದಾಗ ಓಂಕಾರವೇ ಸೃಷ್ಟಿಮೂಲವಾಗುತ್ತದೆ. ತೈತ್ತಿರೀಯೋಪನಿಷತ್ತು ಹೇಳುತ್ತದೆ -

ಓಮಿತಿ ಬ್ರಹ್ಮ, ಓ ಮಿತೀದಗಂ ಸರ್ವಂ
ಓಮಿತಿ ಬ್ರಹ್ಮಾ ಪ್ರಸೌತಿ ॥

ಬ್ರಹ್ಮಸೃಷ್ಟಿ (ಪ್ರಸೂತಿ) ಪ್ರಾರಂಭವಾಗುವುದು 'ಓಂ'ಕಾರದಿಂದ. ಸರ್ವವ್ಯಾಪಿಯಾದ ಪರಬ್ರಹ್ಮದ ಮೊದಲ ವ್ಯಕ್ತರೂಪ ಓಂ. ಈ ಓಂ ಕಾರವೇ ಉಳಿದೆಲ್ಲ ಸೃಷ್ಟಿಗೂ ಆಧಾರ, ಬೀಜ ಉತ್ಪತ್ತಿ ಸ್ಥಾನ. ಆದಿಶಕ್ತಿಯ ಮೊದಲ ಸ್ಪಂದವೇ ಓಂ ಕಾರವಾದ್ದರಿಂದ, ಮಂತ್ರಶಾಸ್ತ್ರದಲ್ಲಿ ಇದನ್ನು ಮಹಾಬೀಜವೆನ್ನುತ್ತಾರೆ. ಬೀಜಾಕ್ಷರಗಳಲ್ಲಿ ಸರ್ವಪ್ರಥಮ ಓಂಕಾರ. ಇಷ್ಟಮಂತ್ರಗಳಲ್ಲಿ ಪ್ರಧಾನ ಓಂಕಾರ. ಜಪ ಮಾಡುತ್ತಾ ಮಾಡುತ್ತಾ ಕೊನೆಗೊಂದು ದಿನ ಜಪಕರ್ತನ ಮನಸ್ಸು ಲೀನವಾಗುವುದು ಈ ಓಂ ಕಾರದಲ್ಲಿ. ಮಂತ್ರಶಾಸ್ತ್ರ ಪ್ರಕ್ರಿಯೆಗನುಸಾರವಾಗಿ ಹೇಳಬೇಕೆಂದರೆ, ಕುಂಡಲಿನಿ ಶಕ್ತಿಯು ಷಟ್‌ಚಕ್ರ (ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರ, ಅನಾಹತ, ವಿಶುದ್ಧ, ಆಜ್ಞಾ) ಭೇದನ ಮಾಡುವಾಗ ಯೋಗಿಯು ಈ ಮಹಾಬೀಜಮಂತ್ರವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ.

ಮನುಷ್ಯನಲ್ಲಡಗಿರುವ ಅಮೇಯ ಆಧ್ಯಾತ್ಮಿಕ ಸಂಪತ್ ಸಾಮರ್ಥ್ಯವನ್ನು ಎತ್ತಿತ್ತೋರುವ ಕಠೋಪನಿಷತ್ತು ಓಂಕಾರದ ಮಹಿಮೆಯನ್ನು ಅದ್ವಿತೀಯವಾಗಿ ಎತ್ತಿ ಹಿಡಿಯುತ್ತದೆ. ಶ್ರೇಯಸ್ಸು, ಪ್ರೇಯಸ್ಸುಗಳೆರಡರ ದಾರಿಯೂ ಮನುಷ್ಯನಿಗೆ ತೆರೆದಿರುವಾಗ ಧೀರಬಾಲಕ ನಚಿಕೇತ ಶ್ರೇಯಸ್ಸನ್ನೇ ಆರಿಸಿಕೊಳ್ಳುತ್ತಾನಷ್ಟೆ. ತಾನು ಕೊಟ್ಟ ವರಕ್ಕೆ ಕಟ್ಟುಬಿದ್ದು ಯಮದೇವ ನಚಿಕೇತನನಿಗೆ ಬ್ರಹ್ಮವಿದ್ಯೆಯನ್ನೇ ಉಪದೇಶಿಸಬೇಕಾಗಿ ಬರುತ್ತದೆ. ಗಹನವೂ, ನಿಗೂಢವೂ ಆದ ಈ ವಿದ್ಯೆಯನ್ನು ವಿಸ್ತಾರವಾಗಿಯೇ ಬೋಧಿಸುತ್ತಾನೆ, ಬ್ರಹ್ಮವಿದ್ಯಾಚಾರ್ಯನಾದ ಯಮದೇವ. ತಾನು ಉಪದೇಶಿಸಲಿರುವ ಪರಾವಿದ್ಯೆಗೆ ಪೀಠಿಕೆಯಾಗಿ ಹೇಳುತ್ತಾನೆ :

ಸರ್ವೇ ವೇದಾ ಯತ್ಪದಮಾಮನಂತಿ
ತಪಾಂಸಿ ಸರ್ವಾಣಿ ಚ ಯದ್ವದಂತಿ
ಯದಿಚ್ಛಂತೋ ಬ್ರಹ್ಮಚರ್ಯಂ ಚರಂತಿ
ತತ್ತೇ ಪದಂ ಸಂಗ್ರಹೇಣ ಬ್ರವೀಮಿ
'ಓಮಿತ್ಯೇತತ್' ॥

ಸಕಲವೇದಗಳು ಒಕ್ಕೊರಲಿನಿಂದ ಯಾವ ಧ್ಯೇಯವನ್ನೇ ಪ್ರತಿಪಾದಿಸುತ್ತಿವೆಯೋ, ಎಲ್ಲ ತಪಸ್ಸು ಯಾವುದನ್ನೇ ಕುರಿತು ಹೇಳುತ್ತಿದೆಯೋ, ಯಾವುದನ್ನು ಲಕ್ಷಿಸಿ ಬ್ರಹ್ಮಚರ್ಯ, ಸನ್ಯಾಸ ವ್ರತವನ್ನಾಚರಿಸುತ್ತಾರೋ, ಆ ಸ್ಥಾನವನ್ನು ಸಂಗ್ರಹವಾಗಿ ಹೇಳುವೆ. ಅದೇ 'ಓಂ' ಎಂಬುದು. ವೇದಾಧ್ಯಯನ, ತಪಾಚರಣೆ, ವೈರಾಗ್ಯದಿಂದ ಪಡೆಯಬೇಕಾದ ಒಂದೇ ವಸ್ತು, ಸೇರಬೇಕಾದ ಒಂದೇ ಗುರಿ 'ಓಂ'. ಈ ಮಹಾಮಂತ್ರದ ಗರಿಮೆಯನ್ನು ಅದೇ ಕಠೋಪನಿಷತ್ತು ಮತ್ತೆ ಮೊಳಗುತ್ತದೆ :

ಏತದಾಲಂಬನಂ ಶ್ರೇಷ್ಠಂ ಏತದಾಲಂಬನಂ ಪರಂ ।
ಏತದಾಲಂಬನಂ ಜ್ಞಾತ್ವಾ ಬ್ರಹ್ಮಲೋಕೇ ಮಹೀಯತೇ ॥

ಓಂಕಾರವೇ ಶ್ರೇಷ್ಠವಾದ ಆಲಂಬನ, ಮಾಧ್ಯಮ. ಇದಕ್ಕಿಂತ ಮಿಗಿಲಾದದ್ದು ಇಲ್ಲವೇ ಇಲ್ಲ. ಬ್ರಹ್ಮ ಸಾಕ್ಷಾತ್ಕಾರಕ್ಕೆ ಪ್ರಣವೋಪಾಸನೆಗಿಂತ ಮಿಗಿಲಾದ ಉಪಾಯವಿಲ್ಲ.

ಮಹಾನಾರಾಯಣೋಪನಿಷತ್ತು ಪ್ರಣವಮಂತ್ರದ ಸ್ವರೂಪವನ್ನೂ, ವಿನಿಯೋಗವನ್ನು ಹೇಳುತ್ತದೆ :

ಓಮಿತ್ಯೇಕಾಕ್ಷರಮ್ ಬ್ರಹ್ಮ ।.....
ಸಾಯುಜ್ಯಂ ವಿನಿಯೋಗಮ್ ।

ಬ್ರಹ್ಮಸಾಯುಜ್ಯದಲ್ಲೇ ಈ ಮಂತ್ರದ ವಿನಿಯೋಗ.

ಅ, ಉ, ಮ ಕಾರಗಳು ಓಂಕಾರದ ಅವಯವಗಳೆಂದಾಗ ಒಂದು ಸಂದೇಹ ಮೂಡಬಹುದು. ಆದ್ಯಸ್ಪಂದವು ಓಂಕಾರವಾಗಿರುವಾಗ ಮತ್ತು ಅದರಿಂದಲೇ ವರ್ಣಾತ್ಮಕವಾದ, ಧ್ವನ್ಯಾತ್ಮಕವಾದ ಸಕಲ ಶಬ್ದಗಳೂ ಹೊಮ್ಮುವಾಗ ಆಕಾರವಾದಿಗಳಿಗೆ ಓಂಕಾರವು ಕಾರಣ ಸ್ಥಾನದಲ್ಲಿರುವಾಗ, ಕಾರ್ಯವಾದ ಆಕಾರ, ಉಕಾರ, ಮಕಾರಗಳು ಹೇಗೆ ತಾನೇ ತಮ್ಮ ಕಾರಣವನ್ನು ತೋರುತ್ತವೆ ? ಎಂಬುದೇ ಆ ಸಂದೇಹ.

ಆದ್ಯಸ್ಪಂದವು 'ಓಂ'ಕಾರ ಸ್ವರೂಪಿಯಾಗಿದೆ ಎಂದು ಹೇಳುವುದರ ಅರ್ಥ ಇಷ್ಟೆ. ಸ್ಥೂಲ ಶ್ರವಣೇಂದ್ರಿಯಕ್ಕೆ ಕೇಳಬಹುದಾದ ಆಕಾರ 'ಓಂ'ಕಾರ. ವೈಖರೀವಾಕ್ಕು ಆದ್ಯಸ್ಪಂದವನ್ನು ಹೊರಗೆಡುಹುವ ಪರಿ 'ಓಂ'.

ಓಂಕಾರದ ಅವಯವಗಳಾದ ಅ, ಉ, ಮ ಕಾರಗಳು ಸೃಷ್ಟಿ, ಸ್ಥಿತಿ, ಲಯಕರ್ತರಾದ ತ್ರಿಮೂರ್ತಿಗಳ ಪ್ರತೀಕವೂ ಹೌದು. ಸೃಷ್ಟಿ, ಸ್ಥಿತಿ ಲಯಗಳು ಅನುದಿನವೂ, ಅನುಕ್ಷಣವೂ ನಡೆಯುತ್ತಿರುವ ಕ್ರಿಯೆ. ಆಧುನಿಕ ವಿಜ್ಞಾನ ಪ್ರಚುರಪಡಿಸಿರುವ "Theory of Conservation of Energy" ಶಕ್ತಿ ಸ್ಥಿತಿ ಸಿದ್ಧಾಂತವು ಈ ತ್ರಿಮೂರ್ತಿ ತತ್ವಕ್ಕೆ ಪೋಷಕವಾಗಿದೆ ಎಂದೇ ಹೇಳಬಹುದು. ಏಕೆಂದರೆ ಸೃಷ್ಟಿಯಾದದ್ದು ಲಯವಾಗುತ್ತಲೇ ಇದೆ. ಲಯವಾಗುವವರೆಗೆ ಸ್ಥಿತಿಯಲ್ಲಿರುತ್ತದೆ. ಲಯವಾದದ್ದೇ ಪುನಃ ಸೃಷ್ಟಿಯಾಗುತ್ತದೆ. ಓಂಕಾರವು ಈ ಅರ್ಥದಲ್ಲಿ ಮೂಲಶಕ್ತಿಯ ಪ್ರತೀಕವಾಗಿದೆ.

ಶ್ರುತಿಯ ತತ್ವಪ್ರತಿಪಾದನೆಗೆ ಮಂತ್ರಶಾಸ್ತ್ರವು, ಪ್ರಯೋಗದ ವಿಧಿ, ವಿಧಾನಗಳನ್ನು ನಿರೂಪಿಸಿ ಓಂಕಾರವನ್ನು ಸಾಕ್ಷಾತ್ಕಾರ ಸಾಧನವನ್ನಾಗಿ ರೂಪಿಸಿದೆ.

ಅನ್ಯೋಕ್ತಿ ವಿಲಾಸ

ಪ್ರೊ. ಬಿ.ಜಿ. ಶ್ರೀಲಕ್ಷ್ಮಿ

ಜಗನ್ನಾಥನ ಅನ್ಯೋಕ್ತಿ ವಿಲಾಸವು ಭಾಮಿನೀ ವಿಲಾಸದ ಕಾವ್ಯಗುಚ್ಛದಲ್ಲಿ ಮೊದಲನೆಯದು. ಈ ಕಾವ್ಯಮಾಲೆಯ ಇತರ ಮೂರು ಕಾವ್ಯಭಾಗಗಳು ಹೀಗಿವೆ - ೧) ಶೃಂಗಾರ ವಿಲಾಸ ೨) ಕರುಣಾ ವಿಲಾಸ ಮತ್ತು ೩) ಶಾಂತ ವಿಲಾಸ. 'ಭಾಮಿನೀ ವಿಲಾಸ'ದ ಶೀರ್ಷಿಕೆಯಲ್ಲಿ ಭಾಮಿನೀ ಪದಕ್ಕೆ 'ಸುಂದರ ಸ್ತ್ರೀ' ಎಂಬ ಅರ್ಥ ಇದೆ. ಅಲ್ಲದೆ, ಈ ಪದವು ಓರ್ವ ಸ್ತ್ರೀಯ ಹೆಸರನ್ನೂ ನಿರ್ದೇಶಿಸಬಹುದುದಾಗಿದೆ.[1] ಮತ್ತು ಕವಿಯು ಕವಿತೆಯನ್ನೇ ಭಾಮಿನೀ ಎಂದು ರೂಪಿಸಿದಂತೆಯೂ ಕಾಣುತ್ತದೆ.[2] ಈ ಭಾಮಿನಿಯ ಸೊಬಗೇ ಭಾಮಿನೀ ವಿಲಾಸ. ನಾಲ್ಕು ವಿಲಾಸಗಳುಳ್ಳ ಭಾಮಿನೀ ವಿಲಾಸದಲ್ಲಿ ಭಾಮಿನಿಗೆ ಸಂಬಂಧಿಸಿದಂತಹ ಅಥವಾ ಶೃಂಗಾರ ವಿಷಯಕವಾದ ಪದ್ಯಗಳು ಹೆಚ್ಚಾಗಿವೆ. ಇವು ಕೇವಲ ಶೃಂಗಾರ ವಿಲಾಸದಲ್ಲಿಯೇ ಅಲ್ಲ, ಅನ್ಯೋಕ್ತಿ ವಿಲಾಸ ಮತ್ತು ಕರುಣಾ ವಿಲಾಸಗಳಲ್ಲಿಯೂ ಇವೆ. ಅಲ್ಲದೆ, ನಾಲ್ಕು ವಿಲಾಸಗಳ ಪೈಕಿ ಶೃಂಗಾರ ವಿಲಾಸವು ಅತ್ಯಂತ ದೊಡ್ಡ ವಿಲಾಸ. ಇದರಲ್ಲಿ ಸುಮಾರು ೧೫೦ ಶ್ಲೋಕಗಳಿವೆ. ಅನ್ಯೋಕ್ತಿ, ಕರುಣಾ ಮತ್ತು ಶಾಂತ ವಿಲಾಸಗಳಲ್ಲಿ ಕ್ರಮವಾಗಿ ಸುಮಾರು ೧೨೦, ೨೦ ಮತ್ತು ೪೦ ಶ್ಲೋಕಗಳುಂಟು. ಈ ಕೆಲಕಾರಣಗಳಿಂದ ಜಗನ್ನಾಥನು ತನ್ನ ಕಾವ್ಯ ಸಮುಚ್ಚಯಕ್ಕೆ ಭಾಮಿನೀ ವಿಲಾಸವೆಂಬ ಹೆಸರು ಕೊಟ್ಟಿದ್ದಾನೆ ಎಂದು ಹೇಳುವುದರಲ್ಲಿ ಔಚಿತ್ಯವಿದೆ.

ಅನ್ಯೋಕ್ತಿ ವಿಲಾಸಕ್ಕೆ ಅನ್ಯೋಕ್ತಿ ಉಲ್ಲಾಸ, ಅನ್ಯೋಕ್ತಿ ಸಮುಲ್ಲಾಸ ಮತ್ತು ಪ್ರಾಸ್ತಾವಿಕ ವಿಲಾಸಗಳೆಂಬ ನಾಮಾಂತರಗಳಿವೆಯೆಂದು ಹಸ್ತಪ್ರತಿಗಳಿಂದ ತಿಳಿದುಬರುತ್ತದೆ. ಹೆಚ್ಚು ಬಳಕೆಯಲ್ಲಿರುವ ಹೆಸರೆಂದರೆ ಅನ್ಯೋಕ್ತಿ ವಿಲಾಸ.[3] ಅನ್ಯೋಕ್ತಿ ವಿಲಾಸವೆಂದರೆ ಅನ್ಯೋಕ್ತಿಗಳ ಸೊಬಗು ಎಂದು. ಇದನ್ನು ಎಲ್ಲಿ

ಕಾಣುತ್ತೇವೆಯೋ ಅದು ಅನ್ಯೋಕ್ತಿ ವಿಲಾಸ ಕಾವ್ಯ - ಅನ್ಯೋಕ್ತೀನಾಂ ವಿಲಾಸಃ ಯತ್ರ; ಇದೇ ರೀತಿ ಅನ್ಯೋಕ್ತಿಗಳ ವೈಭವ ಮತ್ತು ವೈಭವದ ಪರಿಚಯವು ಎಲ್ಲಿ ಆಗುವುದೋ ಅದೇ ಅನ್ಯೋಕ್ತಿ ಉಲ್ಲಾಸ : ಅನ್ಯೋಕ್ತೀನಾಂ ಉಲ್ಲಾಸಃ ಯಂತ್ರ; ಅಥವಾ ಅನ್ಯೋಕ್ತಿಗಳಿಂದ ಮೂಡಿಬರುವ ಉಲ್ಲಾಸ[4] ಅಂದರೆ ಆನಂದ ಮತ್ತು ಆನಂದದಾಯಕವಾದ ಅನ್ಯೋಕ್ತಿ ಕಾವ್ಯ ಅನ್ಯೋಕ್ತಿ ಉಲ್ಲಾಸ - ಅನ್ಯೋಕ್ತಿಭಿಃ ಉಲ್ಲಾಸಃ ಯತ್ರ ಎಂತಲೂ ವಿವರಿಸಬಹುದು. 'ಅನ್ಯೋಕ್ತಿ' ಪದವನ್ನಾದರೋ ಅನ್ಯಂ ಪ್ರತಿ ಉಕ್ತಿಃ; ಅನ್ಯಾ ಉಕ್ತಿಃ; ಅನ್ಯಸ್ಯ ಉಕ್ತಿಃ - ಎಂದು ಮೂರು ವಿಧವಾಗಿ ವಿಗ್ರಹ ಮಾಡಬಹುದು. ಅಂದರೆ ಹೇಳಬೇಕಾದ ವ್ಯಕ್ತಿಗೆ ಹೇಳುವ ಮಾತನ್ನು ನೇರವಾಗಿ ಅವನಿಗೆ ಹೇಳದೆ ಬೇರೆ ವಸ್ತುವನ್ನು ನಿರ್ದೇಶಿಸಿ ಹೇಳುವುದು ಅನ್ಯೋಕ್ತಿ ಅಥವಾ ಪ್ರಸ್ತುತಕ್ಕೆ ಸಂಬಂಧಿಸಿರುವ ವೃತ್ತಾಂತವನ್ನು ಮರೆಮಾಡಿ (ಅದಕ್ಕೆ ಸಂಬಂಧಿಸದ ಹಾಗೆ) ಅಪ್ರಸ್ತುತಕ್ಕೆ ಸಂಬಂಧಿಸುವಂತಹ ವೃತ್ತಾಂತದ ವರ್ಣನೆಯು ಅನ್ಯೋಕ್ತಿಯಾಗುತ್ತದೆ. ಇದು ಮೊದಲನೆಯ ವಿಗ್ರಹವಾಕ್ಯದ ಅರ್ಥವಾಗುತ್ತದೆ. ಎರಡನೆಯ ಪ್ರಕಾರ, ಅನ್ಯೋಕ್ತಿ ಪದಕ್ಕೆ ಹೇಳಬೇಕಾದ ರೀತಿಯಲ್ಲಿ ಅಥವಾ ಹೇಳಬೇಕಾದುದನ್ನು ಹೇಳದೆ ಬೇರೆ (ರೀತಿಯಲ್ಲಿ) ಹೇಳುವುದು ಎಂದು ಅರ್ಥವಾಗುತ್ತದೆ. ಇನ್ನು ಮೂರನೆಯ ಪಕ್ಷದಲ್ಲಿ (ಕವಿಯು ಈಗ ನಮಗೆ ತಿಳಿಸಿಕೊಡುವಂತೆ) ಮೂರನೆಯ ವ್ಯಕ್ತಿಯು ಪ್ರಸ್ತುತ ವ್ಯಕ್ತಿಗೆ ತಿಳಿಸುವ ಮಾತು ಎಂದಾಗುತ್ತದೆ. ಈ ಮೂರು ಪ್ರಕಾರಗಳು ಮೇಲ್ನೋಟಕ್ಕೆ ಬೇರೆಯಾಗಿ ಕಂಡರೂ ಪ್ರಯೋಜನವು ಒಂದೇಯಾದುದರಿಂದ ಅನ್ಯೋಕ್ತಿಯ ಮೂಲತತ್ವಕ್ಕೆ ಭಂಗ ಬರುವುದಿಲ್ಲ.

ನಮ್ಮ ನಿತ್ಯಜೀವನದಲ್ಲಿ ಕೆಲವು ಸಂಗತಿಗಳನ್ನು ಪ್ರತ್ಯಕ್ಷನಾಗಿ ಹೇಳಲಾಗದೆ ಪರೋಕ್ಷವಾಗಿ ಹೇಳಬೇಕಾಗುವ ಸಂದರ್ಭಗಳು ಒದಗುತ್ತವೆ ಮತ್ತು ಸಂದರ್ಭಗಳಿಗೆ ತಕ್ಕ ಮಾತುಗಳನ್ನು ಆಡುತ್ತೇವೆ. ಪ್ರಕೃತ ವ್ಯಕ್ತಿಗೆ ಅನ್ವಯಿಸುವಂತೆ ಇನ್ನೊಬ್ಬನನ್ನೋ ಅಥವಾ ಇನ್ನೊಂದು ವಸ್ತುವನ್ನೋ ಉದ್ದೇಶಿಸಿ ತಿಳಿಸುವುದು ಸಾಮಾನ್ಯ ವ್ಯವಹಾರವಾಗಿರುತ್ತದೆ. ಕೆಲವು ವೇಳೆ ಬಳಸು ಮಾತುಗಳನ್ನಾಡುತ್ತೇವೆ. ಅಥವಾ ಮಾತಿನ ಭಂಗಿಯನ್ನೇ ಬೇರೆ ಮಾಡುತ್ತೇವೆ. ಇದಕ್ಕೆ ಸಂಕೋಚ - ದುಃಖ - ವಿನೋದಗಳು ಕಾರಣವಾಗಿರಬಹುದು. ಆದರೆ ಇವುಗಳ ಹಿನ್ನೆಲೆಯಲ್ಲಿ ಹೊರಡುವ ಬಳಸು ಮಾತುಗಳು ನವಿರಾಗಿಯೂ, ಸಭ್ಯರಾಗಿಯೂ ಮತ್ತು ಸುಂದರವಾಗಿಯೂ ತೋರುತ್ತವೆ. ಸ್ತುತಿ ಮಾಡುವ ತರದಲ್ಲಿ ನಿಂದೆ ಮಾಡುವುದು ಮತ್ತು ನಿಂದಿಸುವ ಮೂಲಕ ಸ್ತುತಿಸುವುದು ಇದರ ವೈಖರಿ. ಈ ಬಗೆಯ ನುಡಿ ಆಡುವವನ ಮತ್ತು ಅರಿಯುವವನ ಜಾಣ್ಮೆ, ಸೂಕ್ಷ್ಮ ಪರಿಜ್ಞಾನ ಮತ್ತು ಜಾಗ್ರತೆಗಳನ್ನು ಅವಲಂಬಿಸಿರುತ್ತದೆ. ಇದನ್ನೇ ಕವಿಯು ಆಡುವುದೆಂದರೆ ರಮಣೀಯತೆಯು ಇದರ ಪ್ರಯೋಜನವಾಗುತ್ತದೆ ಮತ್ತು ಸಹೃದಯತೆ ಮತ್ತು ಸೌಂದರ್ಯ ಪ್ರಜ್ಞೆಗಳೇ ಇದರ ಆಧಾರವಾಗುತ್ತವೆ. ಇಂತಹ ಸನ್ನಿವೇಶಗಳ ಮತ್ತು ಅವುಗಳನ್ನು ವರ್ಣಿಸುವ ಪದವಾಕ್ಯಗಳ ಆವಲಿಯೇ ಅನ್ಯೋಕ್ತಿ ವಿಲಾಸ.

ಸಂಸ್ಕೃತ ಕಾವ್ಯಮೀಮಾಂಸೆಯಲ್ಲಿ 'ಅನ್ಯೋಕ್ತಿ' ಪದವು ಒಂದು ಕಾವ್ಯಾಲಂಕಾರ ಪ್ರಕಾರದ ಹೆಸರಾಗಿ ರುದ್ರಟನ ಕಾವ್ಯಾಲಂಕಾರ ಸಾರಸಂಗ್ರಹದಲ್ಲಿ ಪ್ರಯುಕ್ತವಾಗಿದೆ.[5] ರುದ್ರಟನು ಇದನ್ನು ಔಪಮ್ಯ ವರ್ಗದ ಅಲಂಕಾರಗಳಲ್ಲಿ ವಿಂಗಡಿಸುತ್ತ ಇದರ ಲಕ್ಷಣವನ್ನೂ ಕೊಡುತ್ತಾನೆ.[6] ಉಪಮಾನ ವೃತ್ತಾಂತ ವರ್ಣನೆಯಿಂದ ಉಪಮೇಯ ವೃತ್ತಾಂತವನ್ನು ಸೂಚಿಸುವುದೇ ಇದರ ತತ್ವ. ಇದು ಇತರ ಆಲಂಕಾರಿಕರು ಹೇಳಿರುವ ಅಪ್ರಸ್ತುತ ಪ್ರಶಂಸಾಲಂಕಾರದ ತತ್ವಕ್ಕಿಂತ ಬೇರೆಯಲ್ಲ. ರುದ್ರಟನ ಪೂರ್ವಾಲಂಕಾರಿಕರಾದ ಭಾಮಹ, ದಂಡಿ ಮತ್ತು ಉದ್ಭಟರ ಕಾವ್ಯಶಾಸ್ತ್ರ ಗ್ರಂಥಗಳಲ್ಲಿ ಈಗಾಗಲೇ ಅಪ್ರಸ್ತುತಾಲಂಕಾರವು ಉಕ್ತವಾಗಿದೆ ಮತ್ತು ಇವನ ನಂತರದ ಅಲಂಕಾರಿಕರೆಲ್ಲರೂ ಇದನ್ನು ಪರಿಗಣಿಸಿದ್ದಾರೆ.

ಅಪ್ರಸ್ತುತ ಪ್ರಶಂಸಾ ಎಂದರೆ ಅಪ್ರಸ್ತುತದ ಮಾತು, ವರ್ಣನೆಯೆಂದರ್ಥ. ಅಪ್ರಸ್ತುತವೃತಾಂತವು ಪ್ರಸ್ತುತವೃತ್ತಾಂತವನ್ನು ಸೂಚಿಸುವುದಾದರೆ ಅದು ಅಪ್ರಸ್ತುತ ಪ್ರಶಂಸೆ.[7] ಇದು ಕೆಲವು ವೇಳೆ ಅಪ್ರಸ್ತುತದ ಸ್ತುತಿಯಲ್ಲಿ ಇಲ್ಲವೆ ನಿಂದೆಯಲ್ಲಿ ಪರ್ಯವಸಾನವಾಗುವುದುಂಟು.[8] ಇದರ ತತ್ವವನ್ನು ರುದ್ರಟನ ಅನ್ಯೋಕ್ತಿ ತತ್ವಕ್ಕೆ ಹೋಲಿಸಿ ನೋಡಿದರೆ ರುದ್ರಟನು ಪ್ರಸ್ತುತ - ಅಪ್ರಸ್ತುತ ಶಬ್ದಗಳಿಗೆ ಬದಲಾಗಿ ಉಪಮೇಯ - ಉಪಮಾನ ಶಬ್ದಗಳನ್ನು ಪ್ರಯೋಗಿಸಿದ್ದಾನೆಂದು ವಿದಿತವಾಗುತ್ತದೆ ಮತ್ತು

ಇನ್ನೊಂದು ಗಮನೀಯ ಅಂಶವೆಂದರೆ ರುದ್ರಟನು ಅಪ್ರಸ್ತುತ ಪ್ರಶಂಸೆಯೆಂದು ಪ್ರತ್ಯೇಕ ಅಲಂಕಾರವನ್ನು ಹೇಳಿಲ್ಲ.[9] ಆದುದರಿಂದ ರುದ್ರಟನ ಅನ್ಯೋಕ್ತಿಯು ಇತರರು ಹೇಳಿರುವ ಅಪ್ರಸ್ತುತ ಪ್ರಶಂಸೆ. ಹೀಗೆಂದ ಮಾತ್ರಕ್ಕೆ, ಕೇವಲ ಈ ಕಾರಣದಿಂದ, ಅನ್ಯೋಕ್ತಿ ಅಥವಾ ಅನ್ಯಾಪದೇಶ ಸಾಹಿತ್ಯವೇ ಅಪ್ರಸ್ತುತಾಲಂಕಾರದಿಂದ ಬೆಳೆದು ಬಂತೆಂದು ಪ್ರತಿಪಾದಿಸುವುದು ತಪ್ಪಾಗುತ್ತದೆ. ಹೀಗೆ ನಿಶ್ಚಯಕ್ಕೆ ಬರುವುದು ಸಂಕುಚಿತ ದೃಷ್ಟಿಯೆಂತಲೂ ಅನಿಸುತ್ತದೆ. ಹಾಗೆ ನೋಡಿದರೆ ಅನ್ಯೋಕ್ತಿ ಪದ್ಯಗಳಲ್ಲಿ ವ್ಯಾಜಸ್ತುತಿ. ವ್ಯಾಜನಿಂದಾ, ಪ್ರಸ್ತುತಾಂಕುರಾದಿ ಅಲಂಕಾರಗಳಿಗೂ ಪ್ರವೇಶವಿರುತ್ತದೆ.[10] ಇಲ್ಲವೆ, ಅನ್ಯೋಕ್ತಿ ಕಾವ್ಯಗಳು ಧ್ವನಿಯಿಂದ ಕೂಡಿರುವ ಉತ್ತಮ ಕಾವ್ಯಗಳಾಗಬಹುದು. ಆದರೆ ಈ ಅಂಶವಂತೂ ನಿಜ. ಇದು - ಅಪ್ರಸ್ತುತ ಪ್ರಶಂಸೆಯನ್ನು ಬಹುಮಟ್ಟಿಗೆ ಅನ್ಯೋಕ್ತಿ ಶ್ಲೋಕಗಳಲ್ಲಿ ಗುರುತಿಸಬಹುದು.

ಸಾಮಾನ್ಯವಾಗಿ, ನೀತಿಬೋಧೆಯು ಎಲ್ಲ ಅನ್ಯೋಕ್ತಿಗಳ ಉದ್ದೇಶವಾಗಿದೆ. ಅನ್ಯೋಕ್ತಿ ಕಾವ್ಯವು ನೀತಿಕಾವ್ಯಗಳ ಪ್ರಭೇದವೆಂದು ಪರಿಗಣಿತವಾಗಿದೆ ಕೂಡ. ಈ ದೃಷ್ಟಿಯಿಂದ ನೋಡಿದಾಗ, ಇದರ ತುಣುಕುಗಳು ಋಗ್ವೇದ ಸಾಹಿತ್ಯದಲ್ಲಿ ಕಂಡು ಬರುತ್ತವೆ. ಐತರೇಯ ಬ್ರಾಹ್ಮಣದ ಉಪಾಖ್ಯಾನಗಳಲ್ಲಿ ವಿಶೇಷವಾಗಿ ಶುನಃಶೇಪ ಆಖ್ಯಾನದಲ್ಲಿ ಉಪದೇಶಾತ್ಮಕ ಮಾತುಗಳು ಹೇರಳವಾಗಿವೆ. ಪಾಲಿಭಾಷೆಯ, ಧಮ್ಮಪದವು ಬೌದ್ಧರ ನಡವಳಿಕೆ - ನಿಯಮಗಳನ್ನು ಬೋಧಿಸುವ ಧರ್ಮ ಗ್ರಂಥವೇ ಆಗಿದೆ. ಸ್ಮೃತಿ - ಸೂತ್ರಗಳಂತೂ ಬಹುಮಟ್ಟಿಗೆ ನೀತಿಯ ಆಕರಗಳಾಗಿವೆ. ಹೀಗೆಯೇ ಪುರಾಣ, ಮಹಾಕಾವ್ಯ ಗದ್ಯ ಮತ್ತು ನಾಟಕಗಳಲ್ಲಿ ಹಲವೆಡೆ ಸಾಮಾನ್ಯ ನೀತಿಗಳು ಕಂಡುಬರುತ್ತವೆ. ಮಹಾಭಾರತದ 'ವಿದುರನೀತಿ' ಎಂದು ಪ್ರಖ್ಯಾತವಾಗಿರುವ ಭಾಗವು ಇದಕ್ಕೆ ಅತ್ಯಂತ ಸ್ಪಷ್ಟ ಮತ್ತು ಪ್ರಸಿದ್ಧ ಉದಾಹರಣೆ. ಈ ಸಂದರ್ಭದಲ್ಲಿ ವ್ಯಾಖ್ಯಾನಕಾರನಾದ ನೀಲಕಂಠನು ಇಲ್ಲಿ ವಿದುರನು, ಧೃತರಾಷ್ಟ್ರನಿಗೆ ಸಜ್ಜನನ ಕರ್ತವ್ಯ, ದುರ್ಜನನ ಸ್ವಭಾವ, ಸಜ್ಜನ - ದುರ್ಜನರ ಸಂಬಂಧ ಮತ್ತು ಪರಿಣಾಮವೇನೆಂದು ತಿಳಿಸುತ್ತಾನೆ ಮತ್ತು ಈ ಹಿತ - ಪಥ ಕಾವ್ಯಗಳು ಕೆಲವು ಪ್ರಾಸಂಗಿಕವಾದರೂ ಕೆಲವು ಸಾರ್ವಕಾಲಿಕ ನೀತಿ ವಾಕ್ಯಗಳೆಂದು ಬರೆಯುತ್ತಾನೆ.[11] ಇದರಿಂದ, ಇವು ಅನ್ಯೋಕ್ತಿ ಕಾವ್ಯ ಪ್ರಕಾರಗಳೆಂಬುದು ಹೆಚ್ಚು ಸ್ಪಷ್ಟವಾಗುತ್ತದೆ. ಆದರೆ ಇವು ಪ್ರಾಯಶಃ ಸಾಮಾನ್ಯ ಅಪ್ರಸ್ತುತದ ಪ್ರಕಾರದಿಂದ ಅನ್ಯೋಕ್ತಿಗಳಾಗಿರುತ್ತವೆ.

ಮತ್ತು ನೀತಿಯನ್ನು ಬೋಧಿಸುವಾಗ್ಗೆ ಅದು ನೇರವಾಗಿ ಪ್ರತಿಪಾದಿತವಾಗಿರದೆ ಒಂದು ವಸ್ತುವಿನ ವಿಶೇಷ ವರ್ತನೆಯ ಮೂಲಕ ಸಾಂಕೇತಿಕವಾಗಿ ನಿರೂಪಿತವಾಗಿರುತ್ತದೆ. ಇದು ಅನ್ಯೋಕ್ತಿ ಕಾವ್ಯದ ವಿಶೇಷ. ಸಾಂಕೇತಿಕ ಪ್ರಯೋಗಗಳು ವೇದೋಪನಿಷತ್ತುಗಳಲ್ಲಿ ಸಾಕಷ್ಟಿವೆ. ಉದಾಹರಣೆಗಾಗಿ :

> ದ್ವಾಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷಸ್ವಜಾತೇ ।
> ತಯೋರೇಕಃ ಪಿಪ್ಪಲು ಸ್ವಾದತ್ಯನಶ್ನನ್ನ್ಯೋ ಅಭಿಚಾಕಶೀತಿ ॥ ಋ. ೧.೧೬೪.೨೦

ಈ ಸೂಕ್ತದಲ್ಲಿ ವರ್ಣಿಸಿರುವ ಎರಡು ಹಕ್ಕಿಗಳು, ಮರ ಮತ್ತು ಫಲಗಳು ಕ್ರಮವಾಗಿ ಜೀವಾತ್ಮ - ಪರಮಾತ್ಮ, ಸಂಸಾರ ಮತ್ತು ಕರ್ಮಫಲಗಳ ಸಂಕೇತಗಳು.[12] ಈ ವಿಧಾನವನ್ನು ಪಾಲಿಜಾತಕಗಳಲ್ಲಿಯ ಕಥೆಗಳು ಪ್ರಧಾನವಾಗಿ ಅಳವಡಿಸಿಕೊಂಡಿವೆ. ಸಾಂಕೇತಿಕ ಉಪಾಖ್ಯಾನಗಳಂತೂ ಮಹಾಭಾರತದ ವೈಶಿಷ್ಟ್ಯ. ಅಲ್ಲದೆ ರಾಮಾಯಣ ಮಹಾಭಾರತಗಳ ಹಲವಾರು ರೂಪಕೋಕ್ತಿಗಳು ಇಂತಹ ಪ್ರಯೋಗಗಳಿಗೆ ಉಪಸ್ಕಾರಕವಾಗಿ ಬಂದಿವೆ.[13] ಮುಂದೆ ಬಂದ ಪಂಚತಂತ್ರ ಮತ್ತು ಹಿತೋಪದೇಶ ಕಥಾ ಸಾಹಿತ್ಯವು ಇವುಗಳಿಗೆ ಆಕರವೆಂದು ಬೇರೆ ಹೇಳಬೇಕಾಗಿಲ್ಲ. ಇವೆರಡು ಕೃತಿಗಳು, ಪೂರ್ಣವಾಗಿ ಬೆಳೆದು ರೂಢವಾದ ಅನ್ಯೋಕ್ತಿ ಕಾವ್ಯಗಳ ಪೂರ್ವತನ ಸ್ಥಿತಿಯೆನ್ನಬಹುದು.[14]

ಇಲ್ಲಿಯವರೆಗಿನ ಇತಿಹಾಸ ಪುರಾಣಗಳಲ್ಲಿ ಸಾಮಾನ್ಯ ನೀತಿಬೋಧಕ ಉಕ್ತಿಗಳು ಮತ್ತು ಸಾಂಕೇತಿಕ ಪ್ರಯೋಗಗಳು ಪ್ರಯುಕ್ತವಾಗಿದ್ದರೂ ಕಥೆಗಳ ಮಧ್ಯದಲ್ಲಿ ಹೆಣೆದುಕೊಂಡು ಸೇರಿವೆಯಷ್ಟೆ. ಅಂದರೆ ಇವೇ ಕವಿಯ ಪ್ರಧಾನ ಉದ್ದೇಶವಾಗಿರದೆ

ಇವು ಕಾವ್ಯತಂತ್ರಗಳಲ್ಲಿ ಒಂದಾಗಿದ್ದವು. ನಂತರ ಇವುಗಳಿಗೆ ಮನ್ನಣೆ ದೊರಕಿ 'ನೀತಿಕಾವ್ಯಗಳು' ಎಂಬುದಾಗಿ ಸಾಮಾನ್ಯ ರೀತ್ಯ ಕರೆಯಲ್ಪಟ್ಟವು. ಇವುಗಳನ್ನು, ನೀತಿ - ವೈರಾಗ್ಯ ತತ್ವಗಳನ್ನು ಪದ್ಯರೂಪದಲ್ಲಿ ಹೇಳುವ ಸಾಹಿತ್ಯ ಪ್ರಭೇದಗಳೆನ್ನುವುದಕ್ಕಿಂತ ನೈತಿಕ ಮನೋಧರ್ಮಗಳ ಕಾವ್ಯೋದ್ಗಾರವೆಂದರೆ ತಪ್ಪಾಗಲಾರದು. ಬೇರೆ ಮಾತಿನಲ್ಲಿ ಹೇಳುವುದಾದರೆ, ಇವು ಶಾಸ್ತ್ರಗ್ರಂಥಗಳಲ್ಲದೆ ಕಾವ್ಯಗುಣಗಳಿಂದ ಕೂಡಿದ ಕಲಾಕೃತಿಗಳು. ಈ ಕಾರಣದಿಂದ ಮನುಧರ್ಮಶಾಸ್ತ್ರ ಮತ್ತು ಚಾಣಕ್ಯ ನೀತಿಶಾಸ್ತ್ರ ಸಾಹಿತ್ಯಗಳು ನೀತಿಕಾವ್ಯಗಳಿಗಿಂತ ಭಿನ್ನವೆಂದು ಪರಿಗಣಿಸಲ್ಪಟ್ಟಿರುವುದು. ಆದುದರಿಂದ ನೀತಿಸಾಹಿತ್ಯವೆಲ್ಲವನ್ನೂ ನೀತಿಕಾವ್ಯಗಳೆಂದು ಕರೆಯಲಾಗುವುದಿಲ್ಲ. ಆದರೆ ಹಲವು ಬಾರಿ ಶಾಸ್ತ್ರ ಕೃತಿಗಳ ಆಚಾರ-ವ್ಯವಹಾರ ಭಾಗಗಳು ಹೃದಯಂಗಮವಾದ ಉಪಮೆಗಳನ್ನು ಮತ್ತು ಪ್ರತಿಮೆಗಳನ್ನು ಬಳಸಿಕೊಂಡಿರುವುದು ಕಾಣುತ್ತದೆ. ಹೀಗೆ ಶಾಸ್ತ್ರಗ್ರಂಥಗಳು ಕಾವ್ಯಾಂಶಗಳಿಂದ ಬೆರೆತು ಹೋಗಿರುವುದರಿಂದ ಶಾಸ್ತ್ರ ಮತ್ತು ಕಾವ್ಯಗಳಿಗೆ ಪರಸ್ಪರ ಭೇದವನ್ನು ಕಂಡುಕೊಳ್ಳುವುದು ಕಷ್ಟವಾದೀತು. ಆದಾಗ್ಯೂ, ನೀತಿಶಾಸ್ತ್ರ ಪ್ರವರ್ತಕನೆಂದು ಪರಿಗಣಿಸಲ್ಪಟ್ಟಿರುವ ಕೌಟಿಲ್ಯ(ಚಾಣಕ್ಯ)ನ ಶಾಸ್ತ್ರಗ್ರಂಥಕ್ಕೂ ಮತ್ತು ನೀತಿಕಾವ್ಯಗಳು ಬೇರೊಡೆದು ಬೆಳೆಯಲು ಮೊದಲಾದ ಭರ್ತೃಹರಿಯ (ಕಾಲದ) ನೀತಿ ಶತಕಗಳಿಗೂ ವ್ಯತ್ಯಾಸವನ್ನು ಮಾಡದಿರುತ್ತೇವೆಯೇ ?

ಉಪದೇಶಾತ್ಮಕ ನೀತಿಕಾವ್ಯಗಳು ಕಾವ್ಯದೃಷ್ಟಿಯಿಂದ ಗೀತಕಾವ್ಯ, ಭಕ್ತಿ ಕಾವ್ಯ, ಶೃಂಗಾರಾದಿ ಕಾವ್ಯಗಳನ್ನು ಬಹುಮಟ್ಟಿಗೆ ಹೋಲುತ್ತವೆ ನಿಜ. ಅಲ್ಲದೆ ಹಲವು ಕಾವ್ಯಗಳಲ್ಲಿ ಪ್ರೇಮ, ನೀತಿ ಮತ್ತು ವೈರಾಗ್ಯ ವಿಷಯಗಳ ಒಕ್ಕಣೆ ಮಾಡುವ ಪ್ರಯತ್ನವೂ ನಡೆದಿದೆ ಮತ್ತು ಇವೆಲ್ಲ ಕಾವ್ಯ ಪ್ರಭೇದಗಳಿಗೂ ವಸ್ತು-ವಿಷಯಗಳು ಸಾಧಾರಣವಾಗಿರುತ್ತವೆ-ಲೋಕದ ನಡೆ-ನುಡಿ, ಪುರುಷ ಪ್ರಯತ್ನ-ವಿಧಿ, ಋತ-ಅನೃತ, ದುರ್ಬಲತೆ-ದೃಢತೆ, ದಾರಿದ್ರ್ಯ-ಶ್ರೀಮಂತಿಕೆ, ವಿರಹ-ಮಿಲನ, ಔತ್ಸುಕ್ಯ-ವೈರಾಗ್ಯ ಇತ್ಯಾದಿ ತಾರತಮ್ಯಗಳ ತುಲನೆ. ಇವು ವಿಶಾಲ ವೈಯಕ್ತಿಕ ಅನುಭವಗಳಾದುದರಿಂದ ಜೀವನದ ಸಮಗ್ರ ಕ್ಷೇತ್ರಗಳನ್ನೊಳಗೊಂಡಿದೆ. ಧರ್ಮ, ಅರ್ಥ, ಕಾಮ, ಅಧ್ಯಾತ್ಮ ಮೊದಲ್ಗೊಂಡು ನಿತ್ಯಜೀವನ;ವನ್ನು ನಡೆಸುವುದಕ್ಕೆ ದಾರಿಗೋಲಾಗಿವೆ. ಇಂದಿಗೂ ಇವನ್ನು ವಿದ್ಯೆ ಕಲಿತವರು ಪ್ರಸಂಗಾಂತರಗಳಲ್ಲಿ ಜ್ಞಾಪಕದಲ್ಲಿಟ್ಟು ಉಲ್ಲೇಖಿಸುವುದು ಅವಶ್ಯ ಅಭ್ಯಾಸವಾಗಿರುವುದನ್ನು ಕಾಣುತ್ತೇವೆ.

ಹಿಂದೆ ಹೇಳಿದ ಕಾರಣಗಳಿಂದ ಪ್ರತ್ಯೇಕವಾಗಿ ಉಳಿದ ನೀತಿಕಾವ್ಯಗಳ ಉಪಭೇದವಾಗಿರುವುದು ಅನ್ಯೋಕ್ತಿ ಕಾವ್ಯ. ಇದು ಇನ್ನೊಂದು (ನೀತಿ)ಕಾವ್ಯ ವಿಧಾನವಷ್ಟೆ. ನೀತಿಶತಕಾದಿ ಕಾವ್ಯಗಳಿಗೂ ಅಥವಾ ಕಲಾವಿಲಾಸಾದಿ ವಿಡಂಬದ ಕಾವ್ಯಗಳಿಗೂ ಮತ್ತು ಅನ್ಯೋಕ್ತಿ ವಿಲಾಸಾದಿ ಕಾವ್ಯಗಳಿಗೂ ಇರುವ ವ್ಯತ್ಯಾಸ ಹಿತೋಪದೇಶದಲ್ಲಿ ಅಲ್ಲ ; ಹಿತೋಪದೇಶದ ಮಾಧ್ಯಮದಲ್ಲಿ. ಅನ್ಯೋಕ್ತಿಗಳು ಹಿತೋಪದೇಶವನ್ನು ಸಂಕೇತಗಳ ಮೂಲಕ ಕೊಡುವ ಮುಕ್ತಕಗಳು. ಇವುಗಳಲ್ಲಿ ಅಪ್ರಸ್ತುತ ವಾಚ್ಯಾರ್ಥಗಳಿಗೂ ಮತ್ತು ಪ್ರಸ್ತುತ ವ್ಯಂಗ್ಯಾರ್ಥಗಳಿಗೂ ನಿಕಟ ಸಂಬಂಧವಿರುತ್ತದೆ. ಈ ವಾಚ್ಯಾರ್ಥ-ವ್ಯಂಗ್ಯಾರ್ಥಗಳ ಪ್ರಧಾನತೆ ಅಪ್ರಧಾನತೆಯಿಂದ ಅನ್ಯೋಕ್ತಿಯು ಆಸ್ವಾದನೀಯವಾಗಿ ಉತ್ತಮ ಕಾವ್ಯವಾಗುತ್ತದೆ. ಇದಲ್ಲದೆ ಸದರ್ಥವನ್ನು ಬೋಧಿಸುವ ಇದು ಈ ದೃಷ್ಟಿಯಿಂದ ಸುಭಾಷಿತವೂ ಆಗಿದೆ. ಅಂದರೆ, ಕವಿಯು ತನ್ನ ಅನ್ಯೋಕ್ತಿಗಳ ಮೂಲಕ ಓದುಗರಿಗೆ ಪರೋಕ್ಷವಾಗಿ ಉಪದೇಶನ್ನೀಯುತ್ತಿದ್ದಾನೆಂದು ಇದರ ಫಲಿತಾರ್ಥ. ನೇರವಾಗಿ ವಿಧಿ-ನಿಷೇಧಗಳನ್ನು ತಿಳಿಸದೆ, ಕಾಂತೆಯಂತೆ ರಂಜನೀಯ ರೀತಿಯಲ್ಲಿ ಅಲಂಕಾರ, ಭಾವ ಮತ್ತು ರಸಗಳ ಮೂಲಕ ಪಥ್ಯವಾದುದನ್ನು ಸೂಚಿಸುತ್ತದೆ.

ಇಂತಹ ಅಮೂಲ್ಯ ಅನ್ಯೋಕ್ತಿಗಳ ಕೊಡುಗೆಯಿಂದ ಕವಿಯು ಲೋಕವನ್ನು ಎಚ್ಚರಿಸುವ ಮತ್ತು ಅದರ ಏಳಿಗೆಗಾಗಿ ಶ್ರಮಿಸುವ ಆತ್ಮೀಯನಂತೆ ಕಂಡುಬರುತ್ತಾನೆ. ಇವರ ಅನ್ಯೋಕ್ತಿಗಳು ಗುಣವಂತನನ್ನು, ಹೆಚ್ಚು ಗುಣವಂತನಾಗಲು ಮತ್ತು ದುರ್ಜನನ್ನು ಗುಣಗಳಲ್ಲಿ ವಿಶೇಷ ಒಲವು ತೋರಿಸುವಂತೆ ಮಾಡಲು ಸಹಾಯಕವಾಗುತ್ತವೆ.

ಹಿಂದೆ ತಿಳಿಸಿರುವ ಹಾಗೆ, ಹಲವು ಪ್ರಾಚೀನ ಕಾವ್ಯೇತಿಹಾಸಗಳ ನೀತಿವಾಕ್ಯಗಳಲ್ಲಿ ಸಾಂಕೇತಿಕ ಪ್ರಯೋಗಗಳಲ್ಲಿ ಮತ್ತು ಕಾವ್ಯಶಾಸ್ತ್ರ ಗ್ರಂಥಗಳಲ್ಲಿ ಚರ್ಚಿಸಲ್ಪಟ್ಟ ಅಪ್ರಸ್ತುತ ಅಲಂಕಾರದ ಬೆಳವಣಿಗೆಯಲ್ಲಿ ಅನ್ಯೋಕ್ತಿ ಕಾವ್ಯಪ್ರಕಾರದ ಉಗಮವನ್ನು ಗುರುತಿಸಿದ್ದಾಯಿತು, ನಿಜ. ಆದರೆ ಅನ್ಯೋಕ್ತಿ ಸಾಹಿತ್ಯವೆಂದೇ ಪ್ರತ್ಯೇಕವಾಗಿ ಹೊರಟದ್ದು ಎಂಟನೇ ಶತಮಾನದಿಂದೀಚೆಗೆ.

ಅನ್ಯಕಾವ್ಯ ಪ್ರಕಾರಗಳು ಬೆಳೆದು ಹೆಮ್ಮರವಾಗಿ ನಿಂತ ಈ ಸಮಯದಲ್ಲಿ ಎಂಟನೆಯ ಶತಮಾನಕ್ಕೆ ಸೇರಿದ ಭಲ್ಲಟ ಶತಕ ಮತ್ತು ಹತ್ತನೆಯ ಶತಮಾನದ ಅನ್ಯೋಕ್ತಿ ಮುಕ್ತಾಕಲಾಪ ಕೃತಿಗಳ ಮೂಲಕ ಈ ಸಾಹಿತ್ಯವು ಆರಂಭವಾಯೆನ್ನಬಹುದು. ಇದಕ್ಕೂ ಮೊದಲು ಸುಭಾಷಿತಗಳಲ್ಲಿ ಅನ್ಯೋಕ್ತಿಗಳೆಂದೇ ಕರೆಯಲ್ಪಡುವ ಹಲವಾರು ಪದ್ಯಗಳು ಕಂಡುಬರುತ್ತವೆ. ಆದರೂ ಸಾಮಾನ್ಯ ನೀತಿಕಾವ್ಯಗಳಿಗಿಂತ ಬೇರೆಯಾಗಿ ನಿಂತು ಅವುಗಳಿಂದ ಕವಲೊಡೆದು ಅವುಗಳ ವಿಶೇಷ ಪ್ರಕಾರವೆಂದು ಪ್ರಚಾರಕ್ಕೆ ಬಂದುದು ನಂತರ. ಜಗನ್ನಾಥನ ಕಾಲಕ್ಕಾಗಲೇ ಇವು ರೂಢಬದ್ಧವಾಗಿದ್ದವು. ಎಷ್ಟರಮಟ್ಟಿಗೆ ರೂಢಿಬದ್ಧವಾಗಿದ್ದವೆಂದರೆ ಇವುಗಳಲ್ಲಿ ಹಲವು ಪುನರುಕ್ತವಾಗಿವೆ. ಮತ್ತೆ ಕೆಲವು ತಮ್ಮ ಸಾಮಾನ್ಯ ನೀತಿಯಿಂದ ಅತ್ಯಂತ ಜನಪ್ರಿಯವಾಗಿವೆ. ಈ ಕಾರಣದಿಂದ ಇವುಗಳ ಮೂಲಕರ್ತೃವು ಮರೆಯುವಂತಾಗಿ ಅನಾಮಧೇಯವಾಗಿಯೇ ಉಳಿದುಬಿಟ್ಟಿವೆ. ಇಂತಹ ಹಲವಾರು ಅನ್ಯೋಕ್ತಿ ಶ್ಲೋಕಗಳು ಸುಭಾಷಿತ ಸಂಕಲನಗಳಲ್ಲಿ ಸೇರಿವೆ. ಆದರೆ ಎಷ್ಟೇ ಜನಗತವಾಗಿ, ಅನಾಮಧೇಯವಾಗಿ ದೊರಕಿದರೂ ಇವನ್ನು ದೇಶೀಯ ಗಾದೆಗಳಂತೆ ಜನ(ಪದ) ಸಾಹಿತ್ಯವೆನ್ನಲೂ ಬಾರದು. ಏಕೆಂದರೆ ಇವು ಕವಿತಾ ಸಾಮರ್ಥ್ಯದಿಂದ ಮೂಡಿ ಬಂದ ಕಾವ್ಯಗಳು ಮತ್ತು ಇವುಗಳಲ್ಲಿ ವೈವಿಧ್ಯವನ್ನು ಕಾಣುತ್ತೇವೆ. ಈ ಸಂದರ್ಭದಲ್ಲಿ ನಾವು ವಿಂಟರ್‌ನಿಟ್ಸ್ ಮತ್ತು ಕೀತ್ ಅವರ, ನೀತಿಕಾವ್ಯಗಳ ಉಗಮವನ್ನು ಕುರಿತ ಅಭಿಪ್ರಾಯಗಳನ್ನು ಸ್ಮರಿಸಬಹುದು. ''ಇವನ್ನು ಜನ ಸಾಹಿತ್ಯವೆಂದು ಕರೆಯುವುದು ತಪ್ಪಾಗುತ್ತದೆ. ಇವು ಮೂಲತಃ ಪಂಡಿತಗೋಷ್ಠಿಯಲ್ಲಿಯೇ ಬೆಳೆದು, ಇವುಗಳ ಕವಿನಾಮಧೇಯವು ಮರೆತು ಹೋಗಿದೆಯಷ್ಟೆ''. [15] ''ಇವು ನಾಣ್ನುಡಿಗಳಲ್ಲ. ವೈವಿಧ್ಯವುಳ್ಳ ಇವು ಕವಿಪ್ರತಿಭೆ ಮತ್ತು ಧೀಮಂತಿಕೆಗಳ ಪರಿಣಾಮ''. [16]

ಅನ್ಯೋಕ್ತಿ ವಿಲಾಸ

ಅನ್ಯೋಕ್ತಿ ವಿಲಾಸವು ಹಲವಾರು ಸಂದರ್ಭಗಳಲ್ಲಿ ಮೂಡಿಬಂದ ಅನ್ಯೋಕ್ತಿ ಕಾವ್ಯಗಳ ಸಂಕಲನ (ಅಥವಾ ಕೋಶ). [17] ಇದು ಸಂಕಲನವೆಂಬುದಕ್ಕೆ ನಮಗೆ ಕವಿಯೇ ಪ್ರಮಾಣ. ತನ್ನ ಕಾವ್ಯರತ್ನಗಳನ್ನು ಕದ್ದಾರೆಂಬ ಭಯದಿಂದ ಇವೆಲ್ಲವನ್ನೂ ಒಟ್ಟುಗೂಡಿಸಿದ್ದೇನೆಂದು ಜಗನ್ನಾಥನು ಶಾಂತ ವಿಲಾಸದಲ್ಲಿ (ಹೆಮ್ಮೆಯಿಂದ) ಹೇಳಿಕೊಂಡಿದ್ದಾನೆ. [18] ಈ ಕಾರಣದಿಂದ ಇವುಗಳಿಗೆ ಪರಸ್ಪರವಾಗಿ ಪ್ರಕೃತಾರ್ಥ ಸಂಬಂಧವನ್ನು ಕಲ್ಪಿಸದೆ ಇವುಗಳನ್ನು ಕೇವಲ ಬಿಡಿಪದ್ಯಗಳನ್ನಾಗಿ ಉಳಿಸಿಕೊಳ್ಳುವುದು ಉಚಿತವೆಂದು ತೋರುತ್ತದೆ [19] ಹೀಗೆ ಉಳಿಸಿಕೊಂಡಾಗ ಇವುಗಳ ಪ್ರಕೃತಾರ್ಥವನ್ನು ಸುಲಭವಾಗಿ ವಿವರಿಸಬಹುದೂ ಕೂಡ. ಈ ಅಂಶವು ಮುಂದೆ ಸ್ಪಷ್ಟವಾಗುತ್ತದೆ. ಇದರಲ್ಲಿ ಸುಮಾರು ನೂರರಿಂದ ನೂರಮೂವತ್ತು ಶ್ಲೋಕಗಳಿವೆ. ಉಪಲಬ್ಧವಾಗಿರುವ ಇದರ ನಾನಾ ಪ್ರತಿಗಳಲ್ಲಿ ಶ್ಲೋಕಗಳ ಸಂಖ್ಯೆಯು ವ್ಯತ್ಯಾಸವಾಗುತ್ತಾ ಹೋಗುತ್ತದೆ. ಆದರೆ ಸಾಮಾನ್ಯವಾಗಿ ವಿದ್ವಾಂಸರು ನೂರೆಂದು ಒಪ್ಪುತ್ತಾರೆ. ಇದರ ಸುಮಾರು ನಲವತ್ತು ಶ್ಲೋಕಗಳ ಸಂದರ್ಭಗಳು ಕವಿಯ ಇನ್ನೊಂದು ಕೃತಿಯಾದ ರಸಗಂಗಾಧರದಲ್ಲೇ ಚರ್ಚಿಸಲ್ಪಟ್ಟಿರುವುದರಿಂದ ಈ ವಿಮರ್ಶೆಗಳು ಶ್ಲೋಕ ವಿವರಣೆಗೆ ಸಹಾಯಕವಾಗುತ್ತವೆ.

ಪ್ರಸಕ್ತ ಕಾವ್ಯದಲ್ಲಿ ಕವಿಯು ತನ್ನ ಉದ್ದೇಶ ಸಫಲತೆಗಾಗಿ ಹಲವಾರು ವಸ್ತುಗಳು, ಅವುಗಳ ಪರಸ್ಪರ ಸಂಬಂಧ ವಿಶೇಷಗುಣ, ವರ್ತನೆ ಮತ್ತು ದೋಷಗಳನ್ನು ಪರಿಶೀಲಿಸಿ ಅವುಗಳನ್ನು ಸಂಕೇತ ಮಾಧ್ಯಮಗಳನ್ನಾಗಿ ಬಳಸಿದ್ದಾನೆ. ಸಾಮಾನ್ಯವಾಗಿ ಕಮಲ, ದುಂಬಿ, ಸಿಂಹ, ಚಂದನ, ಹಂಸ ಇತ್ಯಾದಿ ವಸ್ತುಗಳ ಗುಣದೋಷಗಳನ್ನು ಪಥಿಕ, ವ್ಯಾಧ ಮೊದಲಾದವರ ಮನೋಧರ್ಮಗಳನ್ನು, ಕಮಲ-ದುಂಬಿ-ಮಾರುತ, ಕುಟಜ-ದುಂಬಿ, ಕೋಗಿಲೆ-;ಮಾವು, ಚಂದನ-ಸರ್ಪ, ಸಮುದ್ರ-ಮೋಡ, ಹಂಸ-ಸರೋವರ, ಮೃಗ-ಮೃಗರಾಜ, ಆನೆ-ಸಿಂಹ.......ಇತ್ಯಾದಿ ಸಂಬಂಧಗಳನ್ನು, ಸಜ್ಜನನ ಸೌಜನ್ಯ, ಔದಾರ್ಯ..... ದುರ್ಜನನ ದೌರ್ಜನ್ಯ ಕಾಪಟ್ಯ..... ಮೊದಲಾದ ಸಾಮಾನ್ಯ ಗುಣದೋಷಗಳನ್ನು ಮತ್ತು ಸೀತಾ, ಮನ್ಮಥ ಇತ್ಯಾದಿ ಪೌರಾಣಿಕ ದೃಷ್ಟಾಂತಗಳನ್ನೂ ಕವಿಯು ಪ್ರಯೋಗಿಸಿದ್ದಾನೆ. ಇವುಗಳನ್ನು ಅಪ್ರಸ್ತುತ ವೃತ್ತಾಂತದಲ್ಲಿ ಅಳವಡಿಸಿಕೊಂಡು ತನ್ಮೂಲಕ ಸಜ್ಜನನೊಬ್ಬನ ಸ್ವಭಾವ, ದುರ್ಜನನೊಬ್ಬನ ಎಲ್ಲೆ ಮೀರಿದ ನಡತೆ, ವಿಧಿ ವಿಪರ್ಯಾಸಾದಿಗಳ

(ಪ್ರಕೃತ) ವೃತ್ತಾಂತವನ್ನು ವ್ಯಕ್ತಗೊಳಿಸುತ್ತಾನೆ. ಈ ವರ್ಣನೆಗಳನ್ನು ಕವಿಯು ನಿದರ್ಶನ, ದೃಷ್ಟಾಂತ, ಪ್ರತಿವಸ್ತೂಪಮೆ, ರೂಪಕ, ಉಪಮಾದಿ ಅಲಂಕಾರಗಳಿಂದ ಶೋಭಿತಗೊಳಿಸಿ ರಮ್ಯವಾಗುವಂತೆ ಮಾಡಿದ್ದಾನೆ. ಪದ್ಯಗಳು ವಿವಿಧ ರಸ-ಭಾವಗಳಿಂದ ಪುಷ್ಟವಾಗಿದೆ. ಆದರೆ ಕೆಲವೊಮ್ಮೆ ಇವುಗಳ ತೆರೆಯಲ್ಲಿ ಕವಿಯು ತನ್ನ ಕವಿತಾ ನೈಪುಣ್ಯದ ಬಗ್ಗೆ ಇರುವ ಸ್ವಾಭಿಮಾನ ಅಥವಾ ಹೆಮ್ಮೆಯ ಮನೋಭಾವವನ್ನು ಸೂಕ್ಷ್ಮವಾಗಿ ತೋರಿಸಿದ್ದಾನೆ''. [20]

ಅನ್ಯೋಕ್ತಿ ವಿಲಾಸಕ್ಕೆ (ಭಾಮಿನೀ ವಿಲಾಸಕ್ಕೆ) ಅಚ್ಯುತರಾಯ ವಿರಚಿತ ಪ್ರಣಯ ಪ್ರಕಾಶ ಮತ್ತು ಮಹದೇವ ದೀಕ್ಷಿತ ರಚಿತ ಪ್ರದೀಪಿಕಾ (ಪ್ರೋಲ್ಲಾಸ)ಗಳೆಂಬ ಎರಡು ವ್ಯಾಖ್ಯಾನಗಳಿವೆ.

ಮೇಲಿನ ಅಂಶಗಳನ್ನು ದಿಟಪಡಿಸುವುದಕ್ಕಾಗಿ ಆಯ್ದ ಕೆಲವೇ ಪದ್ಯಗಳನ್ನು ಉದಾಹರಣೆ ರೂಪದಲ್ಲಿ ಕೆಳಗೆ ಕೊಡಲಾಗಿದೆ. ಇವುಗಳಿಂದ ಜಗನ್ನಾಥನ ಕಾವ್ಯ ಸೊಬಗಿನ ಪರಿಚಯವೂ ನಮಗಾಗುತ್ತದೆ.

೧) ದಿಗಂತೇ ಶ್ರೂಯಂತೇ ಮದಮಲಿನಗಂಡಾಃ ಕರಟಿನಃ
ಕರಿಣ್ಯಃ ಕಾರುಣ್ಯಾಸ್ಪದಮಸಮಶೀಲಾಃ ಖಲು ಮೃಗಾಃ
ಇದಾನೀಂ ಲೋಕೇಸ್ಮಿನ್ನನುಪಮ ಶಿಖಾನಾಂ ಪುನರಯಂ
ನಖಾನಾಂ ಪಾಂಡಿತ್ಯಂ ಪಕಟಯೆತು ಕಸ್ಮಿನ್ ಮೃಗಪತಿಃ

ಮದಜಲದಿಂದ ಮಲಿನವಾದ ಕುಂಭಸ್ಥಲಗಳುಳ್ಳ ಆನೆಗಳು ದಿಕ್ಪಾಪಾಲಾಗಿವೆ. ಹೆಣ್ಣಾನೆಗಳು ಅನುಕಂಪೆಗೆ ಪಾತ್ರವಾಗಿವೆ. ಜಿಂಕೆಗಳು ಸಮನಾದ ಸಾಮರ್ಥ್ಯವಿಲ್ಲದಾಗಿವೆ. (ಹೀಗಾಗಿ), ಈ ಮೃಗರಾಜನು ಈಗ ಈ ಲೋಕದಲ್ಲಿ ಅತ್ಯಂತ ಚೂಪಾದ ತುದಿಗಳುಳ್ಳ ತನ್ನ ಉಗುರುಗಳ ನೈಪುಣ್ಯವನ್ನು ಪುನಃ ಯಾರ ಮೇಲೆ ತೋರಿಸಬೇಕು ?

ಇದು ಅನ್ಯೋಕ್ತಿ ವಿಲಾಸದ ಆರಂಭ ಶ್ಲೋಕ, ಸಕಲ ಪ್ರಾಣಿಗಳಿಗೂ ಶ್ರೇಷ್ಠವೆನಿಸಿದ ಮೃಗಪತಿಯ ಅನ್ಯೋಕ್ತಿಯಿಂದ ಕೃತಿಯನ್ನು ಪ್ರಾರಂಭಿಸಿರುವುದು ಉಚಿತವಾಗಿದೆ. ಈ ಸಿಂಹಾನ್ಯೋಕ್ತಿಯಲ್ಲಿ ಸಿಂಹವು ವಾಚ್ಯಾರ್ಥವು. ಪರಾಕ್ರಮಿಯಾದ ರಾಜನೊಬ್ಬನು ವ್ಯಂಗ್ಯಾರ್ಥವು. ಸಿಂಹಕ್ಕೆ ಸಂಬಂಧಿಸಿದ ವಾಚ್ಯಾರ್ಥ್ಯವು ಸ್ಪಷ್ಟವಾಗಿದೆ, ಇದರ ಮೂಲಕವಾಗಿ ಕವಿಯು ವರ್ಣಿಸಬಯಸುವ ಪ್ರಸ್ತುತ ಅರ್ಥ ಹೀಗಿದೆ : ಪರಾಕ್ರಮಿಯಾದ ರಾಜನೊಬ್ಬನು ಎಲ್ಲ ಶತ್ರುರಾಜರನ್ನು ಯುದ್ಧದಲ್ಲಿ ಪರಾಜಿತಗೊಳಿಸಿದ್ದಾನೆ. ತತ್ಪರಿಣಾಮವಾಗಿ ಆ ರಾಜರೆಲ್ಲರೂ ದಿಕ್ಪಾಪಾಲಾಗಿದ್ದಾರೆ. ಈ ರಾಜರ ಸ್ತ್ರೀಯರು ತಮ್ಮ ಒಡೆಯರಿಲ್ಲದೆ ಅನಾಥರಾಗಿದ್ದು ಕರುಣೆಗೆ ಪಾತ್ರರು. ಸುತ್ತಲೂ ಕಣ್ಣಿಗೆ ಬೀಳುತ್ತಲಿರುವ ಇತರರಾದರೋ ಕೇವಲ ನಿರ್ಬಲರು. ಹೀಗಿರುವುದರಿಂದ ರಾಜನು ತನ್ನ ಪರಾಕ್ರಮವನ್ನು ಯಾರಲ್ಲೂ ತೋರಿಸಲು ಸಾಧ್ಯವಿಲ್ಲವಾಗಿದೆ.

ಆದರೆ ಈ ಅನ್ಯೋಕ್ತಿಯು ಚಕ್ರವರ್ತಿಯೊಬ್ಬನ ವೀರ್ಯಾತಿಶಯದ ವರ್ಣನೆಗಾಗಿಯೇ ಸೀಮಿತವಾಗಿರದೆ ಶ್ರೇಷ್ಠ ಪಂಡಿತನೊಬ್ಬನ ಪಾಂಡಿತ್ಯವರ್ಣನೆಯಾಗಿರಬಹುದು. ಆ ಪಂಡಿತನು ಜಗನ್ನಾಥನೇ ಆಗಿರಬಹುದು. ಅಥವಾ ಹಿರಣ್ಯ ಕಶಿಪುವನ್ನು ಈಗಾಗಲೇ ಸಂಹರಿಸಿದ ಮೃಗಪತಿ ನರಸಿಂಹನ ಶೌರ್ಯ ವರ್ಣನೆಯಾಗಿದ್ದು ಮಂಗಳಾರ್ಥವು ವ್ಯಂಜಿತವಾಗಿರಲು ಸಾಧ್ಯ. ಮೃಗಸಿಂಹನು ಅಸುರನಾದ ಹಿರಣ್ಯಕಶಿಪುವನ್ನು ಕೊಂದಿದ್ದಾನೆ. ಉಳಿದಿರುವ ಅಸುರಸ್ತ್ರೀಯರು ಅನುಕಂಪನೀಯರು. ಇತರ ದೈತ್ಯರೂ ನಿರ್ಬಲರು. ಆದುದರಿಂದ, ಮೃಗಸಿಂಹನಿಗೆ ತನ್ನ ಪರಾಕ್ರಮವನ್ನು ಮತ್ತೊಮ್ಮೆ ತೋರಿಸಲು ಅವಕಾಶವೇ ಇಲ್ಲವಾಗಿದೆ. ಇದರಂತೆ ವಿಷ್ಣುವಿನ ಅಪರಾವತಾರವಾದ ಪರಶುರಾಮನ ಪರಾಕ್ರಮದ ವರ್ಣನೆಯೂ ಇದಾಗಿರಬಹುದು. ಹೀಗೆ, ಒಂದೊಂದು ಅನ್ಯೋಕ್ತಿಯಲ್ಲೂ ನಾನಾ ಪ್ರಸ್ತುತಾರ್ಥಗಳನ್ನು ಸಂದರ್ಭಕ್ಕನುಗುಣವಾಗಿ ಹೊಂದಿಸಲು ಶಕ್ಯ.

ಈ ಪದ್ಯದಲ್ಲಿ ಕಾವ್ಯಲಿಂಗಾಲಂಕಾರದಿಂದ ಉಪಸ್ಕೃತವಾದ ಅಪ್ರಸ್ತುತ ಪ್ರಶಂಸಾಲಂಕಾರವು ಸ್ಪಷ್ಟವಾಗಿದೆ. ಇವುಗಳಿಂದ ವ್ಯಂಜಿತವಾದ ವೀರರಸವು ಬಹುರಮ್ಯವಾಗಿದೆ. ಹಾಗೆಯೇ ಸನ್ನಿವೇಶಕ್ಕೆ ಹೊಂದಿಕೊಳ್ಳುವಂತೆ ಶಿಖರಿಣಿವೃತ್ತ ಮತ್ತು ಪದಗಳ ರಚನೆ. ಇಲ್ಲಿ ನೀತಿಬೋಧನೆಯು ಪ್ರಮುಖವಾಗಿ ಕಾಣದೆ ವರ್ಣನೆಯ ಪ್ರಾಮುಖ್ಯವಿದೆಯೆಂದು ತೋರುತ್ತದೆ.

೨) ಆಯಿ ದಲದರವಿಂದ ! ಸ್ಯಂದಮಾನಂ ಮರಂದಂ
ತವಕಿಮಪಿ ಲಿಹಂತೋ ಮಂಜು ಗುಂಜಂತು ಭೃಂಗಾಃ ।
ದಿಶಿ ದಿಶಿ ನಿರಪೇಕ್ಷಸ್ತಾವಕೀನಂ ವಿದೃಣ್ವನ್
ಪರಿಮಲಮಯಮನ್ಯೋ ಬಾಂಧವೋ ಗಂಧವಾಹಃ ॥

ಅರಳುತ್ತಿರುವ ಕಮಲವೇ ! ಸುರಿಯುತ್ತಿರುವ ನಿನ್ನ ಮಕರಂದವನ್ನು ಅಸ್ವಾದಿಸುತ್ತಿರುವ ದುಂಬಿಗಳು ಮನೋಹರವಾಗಿ ಏನಾದರೂ ಗುಂಜಾರವ ಮಾಡಲಿ (ಆದರೆ) ದಿಕ್ಕು ದಿಕ್ಕುಗಳಲ್ಲಿಯೂ ಯಾವ ಪ್ರತಿಫಲದ ಆಸೆಯೂ ಇಲ್ಲದೆ ನಿನ್ನ ಸುಗಂಧವನ್ನು ಪಸರಿಸುತ್ತಿರುವ ಪವನನು ಬೇರೆ ಬಗೆಯ ಬಂಧುವಾಗಿದ್ದಾನೆ.

ದುಂಬಿಗಳು ಕಮಲಗಳಿಗೆ ಸಂತೋಷವನ್ನುಂಟು ಮಾಡುವಂತೆ ಮನೋಹರವಾದ ಧ್ವನಿಯಿಂದ ಕಮಲಗಳ ಬಂಧುವಿನಂತೆ ವರ್ತಿಸಬಹುದು. ಆದರೆ ಈ ಬಾಂಧವ್ಯ ಸಹಜವಾದುದಲ್ಲ. ಕಮಲಗಳ ಮಕರಂದ ರಸದ ಅಸ್ವಾದನೆಯಿಂದ ಉಂಟಾದದ್ದು. ಆದರೆ ಪವನ ಕಮಲಗಳಿಂದೇನನ್ನೂ ಸ್ವೀಕರಿಸದೆ ಅವುಗಳ ಸುಗಂಧವನ್ನು ಮಾತ್ರ ಎಲ್ಲೆಡೆಯಲ್ಲಿಯೂ ಹರಡುತ್ತಾ ತೋರಿಸುವ ಬಾಂಧವ್ಯವು ಅಕೃತಿಮವಾದದ್ದು. ಈ ಅಪ್ರಸ್ತುತವರ್ಣನೆಯಿಂದ ಕವಿಯು ಪ್ರಸ್ತುತ ವ್ಯಕ್ತಿಗಳ ಕೃತ್ರಿಮ ಮತ್ತು ಅಕೃತಿಮ ಸ್ವಭಾವವನ್ನು ಬಣ್ಣಿಸಿದ್ದಾನೆ. ಧನಕನಕ ಮೊದಲಾದ ಪ್ರತಿಫಲಾಪೇಕ್ಷೆಯಿಂದ ಪ್ರೀತಿಯ ಮಾತನಾಡುತ್ತ ಸ್ನೇಹವನ್ನು ಪ್ರದರ್ಶಿಸುವವರು ಕೃತಿಮ ಬಂಧುಗಳು ; ನಿಸ್ವಾರ್ಥಬುದ್ಧಿಯಿಂದ ಸ್ನೇಹಬಯಸುವವರು ಅಕೃತಿಯ ಬಂಧುಗಳು.

ಇಲ್ಲಿ, ಕಮಲವು (ಅಚೇತನವಾದುದರಿಂದ) ಅದನ್ನು ಸಂಬೋಧಿಸಿರುವುದು ಅನುಪಪನ್ನವಾಗುತ್ತದೆ. ಆದುದರಿಂದ ಪ್ರಸ್ತುತ ವ್ಯಕ್ತಿಯ ತಾದಾತ್ಮ್ಯವು ಅಪೇಕ್ಷಿತವಾಗುತ್ತದೆ. ಹೀಗೆ ವಾಚ್ಯಾರ್ಥಕ್ಕೆ ವ್ಯಂಗ್ಯಾರ್ಥ ತಾದತ್ಮ್ಯ ಮತ್ತು ವ್ಯಂಗ್ಯಾರ್ಥಕ್ಕೆ ವಾಚ್ಯಾರ್ಥ ತಾದಾತ್ಮ್ಯದಿಂದ ಅರ್ಥೋಪಪತ್ತಿಯನ್ನು ಹೇಳಬೇಕಾಗುತ್ತದೆ. ಅಪ್ರಸ್ತುತ ದುಬಿ ಮತ್ತು ಪವನಗಳ ನಡುವಿನ ವಿಸದೃಶ್ಯತೆಯಿಂದ ಪ್ರಸ್ತುತ ಕೃತ್ರಿಮ ಮತ್ತು ಅಕೃತ್ರಿಮ ಬಂಧುಗಳ ವ್ಯತಿರೇಕವು ಸುಂದರವಾಗಿ ಮೂಡಿದೆ. ಇದರಿಂದ ಅಪ್ರಸ್ತುತ ಪ್ರಶಂಸಾಲಂಕಾರವು ಇನ್ನಷ್ಟು ಚಮತ್ಕಾರಕವಾಗಿದೆ. ಇದಲ್ಲದೆ, ಈ ಪದ್ಯದಲ್ಲಿ ವಿದ್ವಾಂಸರು ಕುಂತಕನು ತಿಳಿಸುವ ' 'ಸಂವೃತಿ ವಕ್ರತೆ'ಯನ್ನು (ವಕ್ರೋಕ್ತಿ ಜೀ. ೨.೧೬) ಗುರುತಿಸುತ್ತಾರೆ.

೩) ನಿತರಾಂ ನೀಚೋ ಸ್ಮೀತಿ ತ್ವಂ ಖೇದಂ ಕೂಪ ಮಾಕದಾಪಿ ಕೃಥಾಃ ।
ಅತ್ಯಂತ ಸರಸ ಹೃದಯೋ ಯತಃ ಪರೇಷಾಂ ಗುಣಗ್ರಹೀತಾಸಿ ॥

ಕೂಪವೇ ಅತ್ಯಂತ ತಗ್ಗಿನಲ್ಲಿದ್ದೇನೆಂದು ನೀನೆಂದೂ ದುಃಖಿಸಬೇಡ, ಏಕೆಂದರೆ ಅತ್ಯಂತ ಸರಸಹೃದಯನಾದ ನೀನು ಪರರರ ಗುಣಗ್ರಾಹಿಯಾಗಿದ್ದೀಯೆ.

ನೀರೆಳೆಯುವ ಹಗ್ಗವನ್ನು ಆಕರ್ಷಿಸುವ (ಗುಣಗ್ರಹೀತಾ), ನೀರಿನಿಂದ ತುಂಬಿರುವ (ಅತ್ಯಂತ ಸರಸಹೃದಯ) ಕೂಪವು ತಾನು ಕೆಳಗಿದ್ದೇನೆಂದು ದುಃಖಿಸಬೇಕಾಗಿಲ್ಲ. ಇದರಿಂದ, ತನ್ನ ಬಗ್ಗೆ ನೈಚ್ಯಾನುಸಂಧಾನದಿಂದ ದುಃಖಿಯಾಗಿರುವ ಆದರೆ ಸಹೃದಯನೂ, ಅತ್ಯಂತ ಮಾರ್ದವದಿಂದ ಕೂಡಿದ ಅಂತಃಕರಣವುಳ್ಳವನೂ (ಅತ್ಯಂತ ಸರಸ ಹೃದಯ) ಮತ್ತು ಪರರ ಗುಣಗಳನ್ನು ಮೆಚ್ಚುವ (ಗುಣಗ್ರಹೀತಾ) ಓರ್ವ ವ್ಯಕ್ತಿಯ ಪ್ರಶಂಸೆ, ತನ್ಮೂಲಕ ಅವನನ್ನು ಸ್ವಾಂತನಗೊಳಿಸುವುದು ಧ್ವನಿತವಾಗುತ್ತದೆ. ಇದನ್ನು ಶ್ಲಿಷ್ಟ ವಿಶೇಷಣಗಳಿಂದ ಅಥವಾ ದ್ವಂದ್ವಾರ್ಥದ ಶಬ್ದಗಳಿಂದ ಸಾಧಿಸಲಾಗಿದೆ. ಯಾರು ವಿನಮ್ರರು, ಸರಸಹೃದಯಿಗಳೂ ಆಗಿ ಇತರರ ಗುಣಗ್ರಾಹಿಯಾಗಿರುತ್ತಾರೋ ಅವರು ಕ್ಷುದ್ರರಲ್ಲ, ಮಹಾವ್ಯಕ್ತಿಗಳು ಎಂದು ಒಟ್ಟು ಭಾವ. ಇಲ್ಲಿ, ಅನ್ಯೋಕ್ತಿಯ ಮೂಲಕ ಹಿತವಚನವನ್ನು ಹೇಳಬಯಸುವ ಕವಿಯು ನಮಗೆ ಅತ್ಯಂತ ಆತ್ಮೀಯವಾಗಿ ಕಾಣಿಸುತ್ತಾನೆ. ಇದರಲ್ಲಿಯ ಕಾವ್ಯಲಿಂಗಾಲಂಕಾರವು ಅತ್ಯಂತ ರಂಜನೀಯವಾಗಿದೆ. ಅದು ಅಪ್ರಸ್ತುತ ಪ್ರಶಂಸೆಗೆ ಇಂಬು ಕೊಟ್ಟಿದೆ.

೪) ಆಯಿ ಮಲಯಜ । ಮಹಿಮಾಯಂ ಕಸ್ಯ ಗಿರಾಮಸ್ತು ವಿಷಯಸ್ತೇ ।
ಉದ್ಗಿರತೋ ಯದ್ಗರಲಂ ಫಣಿನಃ ಪುಷ್ಣಾಸಿ ಪರಿಮಲೋದ್ಗಾರೈಃ ॥

ಚಂದನವೇ, ವಿಷವನ್ನುಗುಳುತ್ತಿರುವ ನಾಗರಗಳನ್ನು ಸುಗಂಧದ ಪ್ರಸರಣದಿಂದ ಪೋಷಿಸುತ್ತಿದ್ದೀಯಲ್ಲ, ಈ ನಿನ್ನ ಮಹಿಮೆಯು ಯಾರ ನುಡಿಗೆ ಸಿಲುಕುವುದು ?

ಸ್ವಭಾವದಿಂದ ದುಷ್ಟರಾದವರನ್ನು ಪ್ರೀತಿಯಿಂದ ಪೋಷಿಸುವ ಗುಣಶಾಲಿಯಾದ ಸಜ್ಜನನೊಬ್ಬನ ಸ್ತುತಿಯನ್ನು ಇಲ್ಲಿ ಚಂದನಾನ್ಯೋಕ್ತಿಯ ಮೂಲಕ ಮಾಡಲಾಗಿದೆ. ಸರ್ಪಗಳು ಚಂದನವೃಕ್ಷದ ಪರಿಮಳಕ್ಕೆ ಮನಸೋತು ಅವುಗಳಲ್ಲಿ ಆಶ್ರಯ ಪಡೆಯುತ್ತವೆಯೆಂದು ಪ್ರಸಿದ್ಧಿಯಿದೆ. ಹೀಗೆ ವಿಷಮಯವಾದ ಸರ್ಪಗಳಿಗೂ ತನ್ನ ಸುಗಂಧ ಪ್ರಸರಣದಿಂದ ಪೋಷಿಸುವ ಚಂದನವು ದುಷ್ಟರಲ್ಲಿಯೂ ಔದಾರ್ಯವನ್ನು ತೋರಿ ಸಲಹುವ ಗುಣಶಾಲಿ ಪುರುಷನನ್ನು ನಿರ್ದೇಶಿಸುತ್ತದೆ. ಸ್ತುತಿಪರವಾದ ಈ ಅಭಿಪ್ರಾಯವನ್ನು ಹೇಳಿದಾಗ ಈ ಶ್ಲೋಕದಲ್ಲಿ ಕಾವ್ಯಲಿಂಗಾಲಂಕಾರವು ಸೊಗಸಾಗಿ ಕಾಣಬರುತ್ತದೆ.

ಅಥವಾ, ಈ ಅನ್ಯೋಕ್ತಿಯ ಮೂಲಕ ಅವಿವೇಕಿಯೊಬ್ಬನ ನಿಂದೆಯನ್ನು ಕವಿಯು ಮಾಡುತ್ತಿರುವನೆಂದು ಹೇಳಬಹುದು. ಇದು ಪ್ರಕರಣದ ಮೂಲಕ ತಿಳಿಯಲು ಸಾಧ್ಯವಾಗುತ್ತದೆ. ಭಯಂಕರ ಸರ್ಪಗಳಿಗೂ ಆಶ್ರಯವನ್ನೀಯವುದು ಚಂದನಕ್ಕೆ ಭೂಷಣವಲ್ಲ. ಇದರಿಂದ ವಿವೇಕವಿಲ್ಲದ ಲೋಕಕಂಟಕರಾದ ದುಷ್ಟರಿಗೂ ಆಶ್ರಯ ನೀಡುವ ವ್ಯಕ್ತಿಯ ನಿಂದೆಯು ಸೂಚಿತವಾಗುತ್ತದೆ. ಹೀಗೆ ಸ್ತುತಿಯ ಮೂಲಕ ನಿಂದೆಯು ವ್ಯಕ್ತವಾಗುವುದರಿಂದ ವ್ಯಾಜಸ್ತುತಿ ಅಲಂಕಾರವಿದೆ.

೫) ನೀರಕ್ಷೀರವಿವೇಕೇ ಹಂಸಾಲಸ್ಯಂ ತ್ವಮೇವ ತನುಷೇ ಚೇತ್ ।
ವಿಶ್ವಸ್ಮಿನ್ನಧುನಾನ್ಯಃ ಕುಲವ್ರತಂ ಪಾಲಯಿಷ್ಯತಿ ಕಃ ॥

ಹಂಸವೇ, ನೀರುಹಾಲುಗಳನ್ನು ಬೇರ್ಪಡಿಸುವ ಕಾರ್ಯದಲ್ಲಿ ನೀನೆ ಉದಾಸೀನ ತೋರುವೆಯಾದರೆ ಈಗ ಲೋಕದಲ್ಲಿ ಕಾಲಕ್ರಮದಿಂದ ಬಂದ ಪದ್ಧತಿಯನ್ನು ಪಾಲಿಸುವವರು ಬೇರೆ ಯಾರಿದ್ದಾರೆ ?

ನೀರು ಬೆರೆತ ಹಾಲಿನಿಂದ ನೀರನ್ನು ಬೇರ್ಪಡಿಸುವ ಸಾಮರ್ಥ್ಯ ಹಂಸಕ್ಕೆ ಇರುವುದೆಂದು ನಂಬಿಕೆ ಅಥವಾ ಕವಿಸಮಯ. ಇದರ ಮೂಲಕ ಕವಿಯು, ನ್ಯಾಯಾನ್ಯಾಯಗಳನ್ನು ತೀರ್ಮಾನಿಸುವ ಹೊಣೆ ಹೊತ್ತಿರುವ ರಾಜನೋ ಅಥವಾ ಅಧಿಕಾರಿಯೋ ತನ್ನ ಕರ್ತವ್ಯದಲ್ಲಿ ಉದಾಸೀನವಾಗಿರುವುದನ್ನು ಕಂಡು, ತಾನೇ ಕರ್ತವ್ಯಲೋಪಿಯಾದರೆ ಇನ್ನು ಯಾರು ತಾನೇ ಕರ್ತವ್ಯಪಾಲನೆ ಮಾಡುತ್ತಾರೆ ? ಯಾರೂ ಮಾಡುವುದಿಲ್ಲವೆಂಬ ಅಭಿಪ್ರಾಯವನ್ನು ಕಾಕುವಿನಿಂದ ಅರುಹುವುದರ ಮೂಲಕ ಹಿತೋಕ್ತಿಯನ್ನು ಹೇಳುತ್ತಿದ್ದಾನೆ - ಇದೇ ಪ್ರಸ್ತುತವೃತ್ತಾಂತ.

ಇಲ್ಲಿ, ಪ್ರಕೃತ ವ್ಯಕ್ತಿಯನ್ನು ಕಂಡು ಅವನ ಹಿತವನ್ನು ಬಯಸುವ ಕವಿಯೋ ಅಥವಾ ತಟಸ್ಥಪುರುಷನೋ 'ನೀನು ಕರ್ತವ್ಯ ಭ್ರಷ್ಟನಾಗಿದ್ದೀಯೆ. ಹಾಗಾಗಕೂಡದು' ಎಂದು ಪ್ರತಿಷೇಧವನ್ನು ನೇರವಾಗಿ ತಿಳಿಸದೇ ಈ ರೀತಿ ಸಭ್ಯವಾಗಿ, ಸೂಕ್ಷ್ಮವಾಗಿ ಮತ್ತು ಅಷ್ಟೇ ಪರಿಣಾಮಕಾರಿಯಾಗಿ ತಿಳಿಸುತ್ತಿದ್ದಾನೆ.

೬) ಉಪರಿ ಕರವಾಲಧಾರಾಕಾರಾಃ ಕ್ರೂರಾ ಭುಜಂಗಮಪುಂಗವಾಃ ।
ಅಂತಃ ಸಾಕ್ಷಾತ್ ದ್ರಾಕ್ಷಾದೀಕ್ಷಾಗುರುವೋ ಜಯತಿ ಕೇಽಪಿ ಜನಾಃ ॥

ಮೇಲುನೋಟಕ್ಕೆ ಖಡ್ಗದ ಅಲಗಿನಂತೆ ಕ್ರೂರವಾಗಿ ತೋರುವ, ಸರ್ವಶ್ರೇಷ್ಠನಂತೆ (ಕೇಳಲು ಕಟುವಾದ ಉದ್ಗಾರವನ್ನು ಮಾಡುವ) ದಾರುಣಸ್ವಭಾವವುಳ್ಳ ಆದರೆ ಅಂತಃಕರಣದಲ್ಲಿ ಮಧುರವಾದ ದ್ರಾಕ್ಷಾಫಲಕ್ಕೂ ಮಾಧುರ್ಯವನ್ನು ಕಲಿಸಿಕೊಡುವಷ್ಟು ಮಧುರತೆಯನ್ನು ಹೊಂದಿರುವ ಕೆಲವು ಜನರು ಎಲ್ಲರಿಗಿಂತಲೂ ಶ್ರೇಷ್ಠರು.

ಹೊರ ನೋಟಕ್ಕೆ ಅತ್ಯಂತ ಕಠಿಣಸ್ವಭಾವದವನೆಂದು ತೋರುವ ಆದರೆ ಹೃದಯದಲ್ಲಿ ಅತ್ಯಂತ ಮಾರ್ಧವವನ್ನು ಪಡೆದಿರುವ ಒಬ್ಬ ವ್ಯಕ್ತಿಯನ್ನು ಕವಿಯು ಇಲ್ಲಿ ಅನ್ಯೋಕ್ತಿಯ ಮೂಲಕ ಪ್ರಶಂಸೆ ಮಾಡುತ್ತಿದ್ದಾನೆ. ಆ ವ್ಯಕ್ತಿಯನ್ನು ನೇರವಾಗಿ ನಿರ್ದೇಶಿಸದೆ ಆ ಸ್ವಭಾವದವರನ್ನು ಸಾಮಾನ್ಯವಾಗಿ ನಿರ್ದೇಶಿಸಿ ಅದರ ಮೂಲಕ ಪ್ರಸಕ್ತ ವ್ಯಕ್ತಿಯನ್ನು ಸೂಚಿಸುವುದರಿಂಡ ಇದು ಸಾಮಾನ್ಯ-ವಿಶೇಷ ರೂಪವಾದ ಅಪ್ರಸ್ತುತ ಪ್ರಶಂಸೆಯಾಗಿದೆ. ಇಲ್ಲವೆ ಹೀಗೆ ಸಾಮಾನ್ಯ ನೀತಿ ಕಾವ್ಯವಾಗುತ್ತದೆ- ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ ।

ಇಲ್ಲಿ ಒಂದೇ ವಸ್ತುವನ್ನು (ಜನಾಃ)ಕರವಾಲಧಾರಾಕಾರ, ಭುಜಂಗಮ ಪುಂಗವ, ದ್ರಾಕ್ಷಾದೀಕ್ಷಾಗುರುವೆಂದು ನಾನಾವಿಧವಾಗಿ ಉಲ್ಲೇಖ ಮಾಡಿರುವುದರಿಂದ ಉಲ್ಲೇಖಾಲಂಕಾರವಿದೆ.

ಹೀಗೆ, ಕೇವಲ ದಿಕ್ಸೂಚಿಯಾಗಿ ಕೊಡಲ್ಪಟ್ಟ ಮೇಲಿನ ಉದಾಹರಣೆಗಳಲ್ಲಿ ಜಗನ್ನಾಥನ ಕಾವ್ಯತ್ವವು ಕೂಡಲೆ ಭಾಸವಾಗುತ್ತದೆ. ಪ್ರತಿಯೊಂದು ಕಾವ್ಯದಲ್ಲೂ ಕವಿಯ ಪ್ರತಿಭೆ ಮತ್ತು ಕವಿತಾ ಚಾತುರ್ಯ ಹೊರಹೊಮ್ಮುತ್ತದೆ. (ಅನ್ಯೋಕ್ತಿ) ಕವಿಗಿರಬೇಕಾದ ಸೂಕ್ಷ್ಮಪರಿಜ್ಞಾನ ಧರ್ಮಾಧರ್ಮವಿವೇಚನೆ, ವಿಸ್ತಾರವಾದ ಲೋಕಾನುಭವ ಮತ್ತು ಹೃದಯವಂತಿಕೆ ಕಾವ್ಯಗಳೆಲ್ಲೆಡೆ ಕಾಣುತ್ತದೆ. ಇವನ ಶಬ್ದಾರ್ಥಗಳ ಸಮನ್ವಯ ಮತ್ತು ರಸಾನುಭವ ಸ್ಪಂದನಗಳು ಬೆರಗುಗೊಳಿಸುತ್ತವೆ. ಪದ್ಯಗಳು ಅತ್ಯಂತ ಮಧುರ ಹಾಗೂ ಲಲಿತ. ಕಾವ್ಯವೇ ಸ್ವಭಾವವಾಗಿರುವ ಇವನು ಪ್ರಥಮ ವರ್ಗದ ಕವಿ. ಸಕಲ ಕಾವ್ಯ ಗುಣಗಳಿಂದ ತುಂಬಿರುವ ಇವನ ಕವಿತೆಗಳು ಯಾರ ಮನವನ್ನು ತಾನೇ ಅಪಹರಿಸುವುದಿಲ್ಲ ? ಕವಿಯೇ ಒಂದೆಡೆ ತನ್ನ ಕಾವ್ಯಗಳ ಬಗ್ಗೆ ಇಂತೆಂದಿದ್ದಾನೆ :

ಧುರ್ಯ್ಯೈರಪಿ ಮಾಧುರ್ಯ್ಯೈರ್ದ್ರಾಕ್ಷಾಕ್ಷೀರೇಕ್ಷುಮಾಕ್ಷಿಕ ಸುಧಾನಾಮ'
ವಂದ್ಯೇವ ಮಾಧುರೀಯಂ ಪಂಡಿತರಾಜಸ್ಯ ಕವಿತಾಯಾಃ ॥ (ಭಾಮಿನೀ. ೪-೪೪)

ಇದು ಹೆಮ್ಮೆಯ ಮಾತೆಂದು ತೋರಿದರೂ ಸತ್ಯ ಸಂಗತಿ.

ಅಡಿ ಟಿಪ್ಪಣಿಗಳು

1. (ಅ) ಜನ್ನಾಥನು ದಿಲ್ಲಿಯಲ್ಲಿದ್ದಾಗ ಯವನ ತರುಣಿ ಲವಂಗಿಕೆಯೊಡನೆ ನಿಕಟಸಂಪರ್ಕ ಹೊಂದಿದ್ದನು. ಆದರೂ ತನ್ನ ದೂರದ ಪತ್ನಿ ಭಾಮಿನಿಯನ್ನು ನೆನೆಯುತ್ತಲಿದ್ದನು. ಈ ನೆನಪಿನ ಫಲವೇ ಭಾಮಿನೀ ವಿಲಾಸ. ಇದು ಕವಿಯು ಪತ್ನಿಯ ಮೇಲಿನ ಪ್ರೇಮಕ್ಕಿತ್ತ ಬೆಲೆ - ಎಂಬ ಅಭಿಪ್ರಾಯವಿದೆ. ಇದಕ್ಕೆ ಪುರಾವೆಗಳೂ ಸಾಕಷ್ಟಿವೆಯೆಂಬ ಅಂಶವನ್ನು ಜ್ಞಾಪಕದಲ್ಲಿಡಬೇಕು.

   (ಬ) 'ಭಾಮಿನೀ' ಪದವು ಶೃಂಗಾರವಿಲಾಸದ ಆರಂಭ ಪದ್ಯದಲ್ಲಿ ಮತ್ತು ಇನ್ನೂ ಹಲವು ಸ್ಥಳಗಳಲ್ಲಿ ಪ್ರಯುಕ್ತವಾಗಿದೆ - ಶೃ.೧;೧೭; ಕ, ೧೭; ಇದೇ ರೀತಿ ಹಲವೆಡೆ ಉಲ್ಲಾಸ - ವಿಲಾಸ ಪದಗಳು ಬಳಸಲ್ಪಟ್ಟಿವೆ - ಶೃ. ೪; ೧೧೮; ಕ, ೫;೮;
2. ಕ, ೬ ; ೧೦;
3. ಉಲ್ಲಾಸ ಪದಕ್ಕೆ ಅಧ್ಯಾಯವೆಂಬ ಅರ್ಥವೂ ಇದೆ.
4. ಶ್ರೀ ರಾಧೇಶ್ಯಾಮರು ಅನ್ಯೋಕ್ತಿ ವಿಲಾಸವೆಂಬ ಹೆಸರು ನಂತರದಲ್ಲಿ ಬಂದಿದ್ದು ಮೂಲ ಹೆಸರು ಪ್ರಾಸ್ತಾವಿಕ ವಿಲಾಸವೇ ಆಗಿರುವುದೆಂದು ಅಭಿಪ್ರಾಯಪಡುತ್ತಾರೆ.
5. ಇದಕ್ಕಿಂತ ಮೊದಲು ಭರತನ ನಾಟ್ಯ ಶಾಸ್ತ್ರದಲ್ಲಿ 'ಅನ್ಯಾಪದೇಶ' ಪದವು ಮನೋರಥವೆಂಬ ಕಾವ್ಯಭೂಷಣದ ಲಕ್ಷಣದಲ್ಲಿ ಉಪಯೋಗಿಸಲ್ಪಟ್ಟಿರುವುದನ್ನು ಕಾಣುತ್ತೇವೆ.

   ಅ) ಹೃದಯಾರ್ಥಸ್ಯ ವಾಕ್ಯಸ್ಯ ಗೂಢಾರ್ಥಸ್ಯ ವಿಭಾವಕಮ್ ।
   ಅನ್ಯಾಪದೇಶೈಃ ಕಥನಂ ಮನೋರಥ ಇತಿ ಸ್ಮೃತಃ ॥

ಆ) ಹೋಲಿಸಿ - ಸ್ವಾಭಿಪ್ರಾಯಸ್ಯ ಕಥನಂ ಯದಿ ವಾಪ್ಯನ್ಯಭಾವನಾ ।
ಅನ್ಯಾಪದೇಶೋ ವಾ ಯಸ್ತು ತ್ರಿವಿಧಂ ಭಾವಿಕಂ ವಿದುಃ ।। ಸರಸ್ವತೀ .ಕಂ. ೪, ೮೬.

ಇ) 'ದಶರೂಪಕ' ಕಾರನಾದ ಧನಂಜಯನು ಅನ್ಯೋಕ್ತಿ ಆಧಾರಿತ ಪಾತಾಕಾಸ್ಥಾನ ಭೇದವನ್ನು ಪರಿಗಣಿಸಿದ್ದಾನೆ :
ಪ್ರಸ್ತುತಾಗಂತುಭಾವಸ್ಯ ವಸ್ತುನೋಽನ್ಯೋಕ್ತಿ ಸೂಚಕಮ್ ।
ಪತಾಕಾಸ್ಥಾನಕಂ ತುಲ್ಯಸಂವಿಧಾನ ವಿಶೇಷಣಮ್ । ದ.ಶ. ೧, ೧೪.

6. ಅಸಮಾನ ವಿಶೇಷಣಮಪಿ ಯತ್ರ ಸಮಾನೇತಿವೃತ್ತಮುಪಮೇಯಮ್ ।
ಉಕ್ತೇನ ಗಮ್ಯತೇ ಪರಮುಪಮಾನೇನ ಸಾಽನ್ಯೋಕ್ತಿಃ ರುದ್ರಟ.ಕಾ. ೮, ೭೪

7. ಅಪ್ರಸ್ತುತ ಪ್ರಶಂಸಾ ಸ್ಯಾತ್ ಸಾ ಯತ್ರ ಪ್ರಸ್ತುತಾಶ್ರಯಾ । ಕುವಲಯ ಪು. ೮೨

8. ಪ್ರಶಂಸಾ ಪದಕ್ಕೆ ಸ್ತುತಿಯೆಂದು ಅರ್ಥ ಮಾಡಿರುವುದೂ ಉಂಟು.

9. ರುದ್ರಟನು ವಾಸ್ತವ ವರ್ಗದಲ್ಲಿ ಹೇಳಿರುವ ಪರ್ಯಾಯವೆಂಬ ಮತ್ತೊಂದು ಅಲಂಕಾರದ ಪ್ರಭೇದದಲ್ಲಿ ನವ್ಯಾಲಂಕಾರಿಕರು ಹೇಳಿರುವ ಅಪ್ರಸ್ತುತ ಪ್ರಶಂಸೆಯ ಪ್ರಭೇದವನ್ನು ಗುರುತಿಸಬಹುದು - ರುದ್ರಟ. ಕಾ. ೭.೪೨.

10. ಪ್ರಸ್ತುತ - ಅಪ್ರಸ್ತುತ ವೃತ್ತಾಂತವನ್ನೊಳಗೊಂಡ ಸಮಾಸೋಕ್ತಿ ಅಲಂಕಾರದ ಮೊದಲನೆಯ ಹಂತದ ಬೆಳವಣಿಗೆಯಲ್ಲಿ ಇದಕ್ಕೂ ಮತ್ತು ನವ್ಯಾಲಂಕಾರಿಕರ ಅಪ್ರಸ್ತುತ ಪ್ರಶಂಸೆಯ ಪ್ರಭೇದಕ್ಕೂ ವ್ಯತ್ಯಾಸವು ಕಾಣುವುದಿಲ್ಲ. ಭೋಜನು 'ಅನ್ಯೋಕ್ತಿ' ಎಂಬ ಸಮಾಸೋಕ್ತಿ ಭೇದವನ್ನೇ ಹೇಳಿದ್ದಾನೆ. ಆದರೆ ನಂತರದಲ್ಲಿ ಸಮಾಸೋಕ್ತಿ ಮತ್ತು ಅಪ್ರಸ್ತುತ ಪ್ರಶಂಸೆಗಳು ಪರಸ್ಪರ ವಿರುದ್ಧಾಲಂಕಾರಗಳಾದವು. ಹೆಚ್ಚಿನ ವಿವರಗಳಿಗೆ ನೋಡಿ: Evolution of Anyokti Poetry in Sanskrit by Narayana Das.

11. ಅತಃ ಪ್ರಭೃತಿ ಧೃತರಾಷ್ಟ್ರವಿದುರ ಸಂವಾದೇ ವಿದುರವಾಕ್ಯಾನಿ ಕಾನಿಚಿತ್ ಧೃತರಾಷ್ಟ್ರ ನಿಂದಾಪರಾಣಿ ಕಾನಿಚಿತ್ ಯುಧಿಷ್ಠಿರ ಪ್ರಶಂಸಾಪರಾಣಿ ಕಾನಿಚಿತ್ ಸಾಧಾರಣೋಪದೇಶ ಪರಾಣಿ ಬೋದ್ಧವ್ಯಾನಿ । ಮ.ಭಾ.ಉ.ಪ.ನೀಲ.ವ್ಯಾ.ಪು.೫೨

12. ಅ) ಈ ಹಕ್ಕಿಗಳು ಬುದ್ಧಿ ಮತ್ತು ಮನಸ್ಸುಗಳು ಎಂದು ಕೆಲವರೂ, ಪಂಡಿತ ಮತ್ತು ಪಾಮರ ಎಂದು ಇನ್ನೂ ಕೆಲವರು ವ್ಯಾಖ್ಯಾನಿಸುತ್ತಾರೆ.

ಅ) ಇಲ್ಲಿ ಲೋಕನೀತಿಯ ಉದ್ದೇಶವಾಗಿರದೆ ಜಟಿಲವಾದ ವೇದಾಂತ ವಿಚಾರವು ಈ ಸಂಕೇತಗಳ ಮೂಲಕ ಸುಲಭವಾಗಿ ವಿಧಿತವಾಗುತ್ತದೆ.

13. ಲತಾಧರ್ಮಾ ಧಾರ್ತರಾಷ್ಟ್ರಾಃ ಶಾಲಾಃ ಸಂಜಯ ಪಾಂಡವಾಃ ।
ನಲತಾ ವರ್ಧತೇ ಜಾತು ಅನಾಶ್ರಿತ್ಯ ಮಹಾದ್ರುಮಮ್ ಮ.ಭಾ.೫.೨೯.೪೯.

14. ''ಅನ್ಯೋಕ್ತಿ ಕಾವ್ಯಗಳು ಸಾಮಾನ್ಯ ಮನುಷ್ಯನನ್ನು ಕುರಿತು ಹೇಳುವ ನೀತಿ ಮಾತುಗಳಾದರೆ ಪಂಚತಂತ್ರವು ರಾಜರಿಗಾಗಿ ಮತ್ತು ರಾಜಕಾರಣಗಳಿಗಾಗಿ ''- Evolution of Anyokti Poetry in Sanskrit Poetry P. 118.

15. History of Indian Literature. Vol. III Pr. 1. P. 151 Prof. Winternitz.

16. A Histroy of Sanskrit literature - P. 227. Prof. Keith

17. ಕೋಶಃ ಶ್ಲೋಕ ಸಮೂಹಸ್ತು ಸ್ಯಾದನ್ಯೋನ್ಯಾನಪೇಕ್ಷಕಃ । ಸಾ.ದ. ೬. ೩೨೯.

18. ದುರ್ವೃತ್ತಾ ಜಾರಜನ್ಮಾನಃ ಹರಿಷ್ಯಂತೀತಿ ಶಂಕಯಾ ।
ಮದೀಯ ಪದ್ಯರತ್ನಾನಾಂ ಮಂಜೂಷೈಷಾ ಮಯಾಕೃತಾ ।। ಶಾ.ತ.ವಿ. ೪೫

19. ಅಚ್ಯುತರಾಯ ಮೋಡಕರ ವ್ಯಾಖ್ಯಾನದಲ್ಲಿ ಹಲವೆಡೆ ಪ್ರಕೃತಿ ಸಂಬಂಧ ಶ್ರೇಣಿಯನ್ನು ಗುರುತಿಸಬಹುದು.

20. ಅನ್ಯೋಕ್ತಿ ವಿಲಾಸ : ೬೦, ೪೮, ೧.

ಕನ್ನಡದಲ್ಲಿ ಷೇಕ್ಸ್‌ಪಿಯರ್ ನಾಟಕಗಳು

ಡಾ॥ ಗಿರಡ್ಡಿ ಗೋವಿಂದರಾಜ

ಹೊಸಸಗನ್ನಡ ಸಾಹಿತ್ಯದ ಆರಂಭ ಕಾಲದಿಂದಲೂ ಷೇಕ್ಸ್‌ಪಿಯರ್ ಕನ್ನಡ ಲೇಖಕರನ್ನು ಪ್ರಬಲವಾಗಿ ಆಕರ್ಷಿಸಿರುವ ನಾಟಕಕಾರ. ೧೮೮೦ರ ಸುಮಾರಿನಿಂದಲೂ ಅವನ ನಾಟಕಗಳು ಬೇರೆ ಬೇರೆ ರೂಪಗಳಲ್ಲಿ ಕನ್ನಡಕ್ಕೆ ಬರಲು ಆರಂಭವಾದವು. ೧೯೧೦ರ ಸುಮಾರಿಗೆ ಆಗಲೇ ಹತ್ತು-ಹನ್ನೆರಡು ನಾಟಕಗಳು ಬೆಳಕು ಕಂಡಿದ್ದುದಾಗಿ ತಿಳಿದುಬರುತ್ತದೆ. ಆಗ ಆರಂಭವಾದ ರೂಪಾಂತರ -ಅನುವಾದಗಳ ಕೆಲಸ ಇಂದಿನವರೆಗೂ ನಡೆಯುತ್ತ ಬಂದಿದೆ. ಹೀಗೆ ನಡೆದಿರುವ ಅನುವಾದ-ಮರು ಅನುವಾದದ ಸ್ವರೂಪ ಕಾಲಕಾಲಕ್ಕೆ ಬದಲಾಗುತ್ತ ಬಂದಿರುವುದು ಗಮನಿಸಬೇಕಾದ ವಿಷಯ. ಈ ಸ್ವರೂಪವನ್ನು ಆಧುನಿಕ ಕನ್ನಡ ಸಾಹಿತ್ಯದ ಮೂರು ಮುಖ್ಯ ಕಾಲ ಖಂಡಗಳಿಗೆ ಸಂವಾದಿಯಾಗಿ ಹೀಗೆ ವಿಂಗಡಿಸಬಹುದು :

೧. ನವೋದಯಪೂರ್ವ ಕಾಲ
೨. ನವೋದಯ ಕಾಲ
೩. ನವೋದಯದ ನಂತರದ ಕಾಲ

ಹೀಗೆ ಕಾಲಖಂಡಗಳನ್ನು ಗುರುತಿಸುವಾಗ ನಿರ್ದಿಷ್ಟ ವರ್ಷಗಳು ಅಷ್ಟೇನು ಮುಖ್ಯವಾಗಬೇಕಾಗಿಲ್ಲ. ಎಷ್ಟೋ ಸಂದರ್ಭದಲ್ಲಿ ಕೃತಿಯ ಪ್ರಕಟಣೆಯ ವರ್ಷಕ್ಕೂ ಅದರ ಸ್ವರೂಪಕ್ಕೂ ಸಂಬಂಧವಿರುವುದಿಲ್ಲ. ಉದಾಹರಣೆಗೆ, ಕೆರೂರು ವಾಸುದೇವಾಚಾರ್ಯರ ''ಸುರತನಗರದ ಶ್ರೇಷ್ಠಿಯು'' ೧೯೨೯ರಲ್ಲಿ, ನವೋದಯ ಕಾಲದಲ್ಲಿ, ಪ್ರಕಟವಾಗಿದ್ದರೂ ಅದು ರಚಿತವಾದದ್ದು ನವೋದಯಪೂರ್ವ ಕಾಲದಲ್ಲಿ ; ಸ್ವರೂಪದ ದೃಷ್ಟಿಯಿಂದಲೂ ಅದು ಅದೇ ಕಾಲಕ್ಕೆ ಸೇರಿದ್ದು. ಹಾಗೆಯೇ ಮೂರ್ತಿರಾವ್ ಅವರ ''ಚಂಡಮಾರುತ'' ತೀರ ಈಚಿನ (೧೯೮೧) ಕೃತಿಯಾದರೂ

ಸ್ವರೂಪದ ದೃಷ್ಟಿಯಿಂದ ನವೋದಯ ಕಾಲಕ್ಕೆ ಸೇರುತ್ತದೆ. ಒಂದು ಕೃತಿ ಯಾವುದೇ ವರ್ಷದಲ್ಲಿ ಪ್ರಕವಾಗಿದ್ದರೂ ಅದು ಯಾವ ಕಾಲದ ಗುಣಧರ್ಮಕ್ಕೆ ಸೇರಿದ್ದು ಎಂಬುದನ್ನೇ ಇಲ್ಲಿ ಮುಖ್ಯವಾಗಿ ಗಮನಿಸಲಾಗಿದೆ.

ನವೋದಯದ ಪೂರ್ವಕಾಲದಲ್ಲಿ ಷೇಕ್ಸ್‌ಪಿಯರ್‌ನ ಅನೇಕ ನಾಟಕಗಳು ಕನ್ನಡಕ್ಕೆ ಬಂದಿವೆ. ಬಸವಪ್ಪ ಶಾಸ್ತ್ರಿಗಳ ''ಶೂರಸೇನ ಚರಿತ್ರೆ'' (Othello), ಎಂ. ಎಲ್.ಶ್ರೀಕಂಠೇಶಗೌಡರ ''ಪ್ರತಾಪ ರುದ್ರದೇವ'' (Macbeth) ಆನಂದ ರಾಯರ ''ರಾಮವರ್ಮ ಲೀಲಾವತಿ'' (Romeo and Juliet) ಗಂಡೋ ಕೃಷ್ಣ ಚುರಮುರಿಯವರ ''ರಾಘವೇಂದ್ರ ರಾವ್'' (Othello) ಕೆರೂರು ವಾಸುದೇವಾಚಾರ್ಯರ ''ವಸಂತ ಯಾಮಿನೀ ಸ್ವಪ್ನ ಚಮತ್ಕಾರ'' (Midsummer Night's Dream) ಗದಿಗೆಯ್ಯ ಹೊನ್ನಾಪುರಮಠರ ''ತ್ರಾಟಿಕಾ ನಾಟಕ'' (The Taming of the Shrew) ಎಂ.ಎಸ್. ಪುಟ್ಟಣ್ಣನವರ ''ಹೇಮಚಂದ್ರರಾಜ ವಿಲಾಸ'' (King Lear) ಮೊದಲಾದ ಅನುವಾದಗಳ ಹೆಸರುಗಳೇ ಅವುಗಳ ಸ್ವರೂಪವನ್ನೂ ಹೇಳುತ್ತಿವೆ.

ಇವು ವಿಶ್ವವಿದ್ಯಾಲಯಗಳ ವಿದ್ವಜ್ಜನರು, ಇಲ್ಲವೆ ಯಶಸ್ವಿ ಕವಿಗಳು ಮಾಡಿದ ಅನುವಾದಗಳಲ್ಲ . ಅನುವಾದಗಳೇ ಅಲ್ಲ; ಎಲ್ಲವೂ ರೂಪಾಂತರಗಳು, ಮುಖ್ಯವಾಗಿ, ರಂಗಭೂಮಿಯ ಮೇಲೆ ಪ್ರಯೋಗವಾಗಬೇಕೆಂಬ ಉದ್ದೇಶದಿಂದಲೇ, ಆಗಿನ ಕಾಲದಲ್ಲಿ ಪ್ರಚಲಿತವಿದ್ದ ರಂಗಭೂಮಿಯನ್ನು ಗಮನದಲ್ಲಿರಿಸಿಕೊಂಡು, ರಂಗ ನಾಟಕಗಳ ಪರಂಪರೆಯಲ್ಲಿ ರಚಿತವಾದವುಗಳು, ಮೂಲ ನಾಟಕದ ಕಥೆಯನ್ನೇ ಪ್ರಧಾನ ಗುರಿಯನ್ನಾಗಿ ಹೊಂದಿದಂಥವು. ಭಾರತೀಯ ವಾತಾವರಣಕ್ಕೆ ಹೊಂದುವಂತೆ ಹೆಸರುಗಳನ್ನೂ, ಕಥೆಯಲ್ಲಿ ಅಷ್ಟಿಷ್ಟು ಬದಲಾವಣೆಗಳನ್ನೂ ಮಾಡಿಕೊಂಡವು. ಎಲ್ಲ ನಾಟಕಗಳೂ ಗದ್ಯದಲ್ಲಿಯೇ ಬಂದಿದೆ. ಮೈಸೂರಿನ ಕಡೆಯ ಅನುವಾದಗಳಲ್ಲಿ ಆ ಕಾಲದ ಕಂಪನಿ ನಾಟಕಗಳ ಸಂಪ್ರದಾಯದಂತೆ ಸೂತ್ರಧಾರ- ನಟಿ ಪ್ರವೇಶಗಳೂ, ಕಂದ ವೃತ್ತಗಳೂ ಕರ್ನಾಟಕದ ಪದ್ಧತಿಯ ಹಾಡುಗಳೂ ಸೇರಿದ್ದರೆ, ಉತ್ತರ ಕರ್ನಾಟಕದ ಅನುವಾದಗಳಲ್ಲಿ ಅಂಥವೇನೂ ಇಲ್ಲ. ಕೆರೂರರ ಅನುವಾದಗಳಲ್ಲಿ ಮಾತ್ರ ಕೆಲವು ಹಾಡುಗಳಿವೆ. ಈ ಅನುವಾದಗಳನ್ನು ಮಾಡಿದವರು ಯಾರೂ ಕವಿಗಳಾಗಿರಲಿಲ್ಲ. ಜೊತೆಗೆ, ಸಾಮಾನ್ಯ ಪ್ರೇಕ್ಷಕರಿಗೆ ಅರ್ಥವಾಗುವಂತೆ ಕಥೆ-ಸಂಭಾಷಣೆಗಳ ನಿರ್ವಹಣೆಯ ಕಡೆಗೇ ಲಕ್ಷ್ಯವನ್ನು ಕೇಂದ್ರೀಕರಿಸಿದರು. ಇದರಿಂದಾಗಿ ಷೇಕ್ಸ್‌ಪಿಯರ್‌ನ ನಾಟಕಗಳ ಕಾವ್ಯಕ್ಕೆ ಇವರಾರೂ ಸ್ಪಂದಿಸಲಿಲ್ಲ ಮತ್ತು ಅದನ್ನು ಹಿಡಿಯುವ ಪ್ರಯತ್ನವನ್ನೂ ಮಾಡಲಿಲ್ಲ. ಷೇಕ್ಸ್‌ಪಿಯರ್‌ನ ಕಾವ್ಯದ ಸಾಂದ್ರತೆ ಸಂಕೀರ್ಣತೆಗಳನ್ನು ಹಿಡಿಯಬಲ್ಲಷ್ಟು ಆ ಕಾಲದ ಹೊಸಗನ್ನಡದ ಕಾವ್ಯಭಾಷೆ ಇನ್ನೂ ಹದಗೊಂಡಿರಲಿಲ್ಲವೆನ್ನುವುದೂ ಒಂದು ಕಾರಣವಾಗಿತ್ತು. ಸಾಂಸ್ಕೃತಿಕವಾಗಿ ಈ ಬಗೆಯ ಪ್ರಯತ್ನಗಳು ಮಹತ್ವದವಾದರೂ ಇವುಗಳಿಗೆ ಹಲವು ಬಗೆಯ ಮಿತಿಗಳಿವೆ ಎಂಬುದನ್ನು ಮರೆಯುವಂತಿಲ್ಲ.

ಈ ಕಾಲದ ನಂತರ ಬಂದ ನವೋದಯ ಯುಗದಲ್ಲಿ ಮೇಲೆ ವಿವರಿಸಿದ ರೀತಿಯ ರೂಪಾಂತರಗಳೂ, ಗದ್ಯಾನುವಾದಗಳೂ ಮುಂದುವರಿದವು. ಪರ್ವತವಾಣಿಯವರ ''ಬಹದ್ದೂರ್ ಗಂಡ'' (The taming of the Shrew) ರಂಗ ಭೂಮಿಯ ಮೇಲೆ ಸಾಕಷ್ಟು ಯಶಸ್ವಿಯಾಗಿ, ಪ್ರೇಕ್ಷಕರನ್ನು ರಂಜಿಸಿದ ಇಂಥ ಒಂದ ಗದ್ಯ ರೂಪಾಂತರ. ಇದೇ ನಾಟಕವನ್ನು ಎ. ಎಸ್. ಮೂರ್ತಿಯವರು ''ಗಯ್ಯಾಳಿ ಗಂಡ''ನನ್ನಾಗಿಸಿದ್ದಾರೆ. ಇವೆರಡೂ ನಾಟಕಗಳು ಷೇಕ್ಸ್‌ಪಿಯರ್‌ನ ಮೂಲ ನಾಟಕದಲ್ಲಿಯ ಹಾಸ್ಯವನ್ನು ಹಿಡಿಯುವ ಪ್ರಯತ್ನಗಳಾಗಿದೆ. ಕನ್ನಡದಲ್ಲಿ ಒಂದು ಕಾಲಕ್ಕೆ ಹವ್ಯಾಸಿ ರಂಗಭೂಮಿಯಲ್ಲಿ ಬಹಳ ಜನಪ್ರಿಯವಾಗಿದ್ದ ಹಾಸ್ಯನಾಟಕಗಳ ಪರಂಪರೆಗೆ ಇವನ್ನು ಸೇರಿಸಬಹುದು.

ಷೇಕ್ಸ್‌ಪಿಯರ್‌ನ ಗಂಭೀರನಾಟಕಗಳನ್ನು ಗದ್ಯರೂಪದಲ್ಲಿ ಭಾಷಾಂತರಿಸುವ ಕೆಲಸವೂ ಈ ಕಾಲದಲ್ಲಿ ಮುಂದುವರಿಯಿತು. ಶಿವರಾಮ ಕಾರಂತರ ''ಹೇಮಂತ'' (Hamlet) ಪರ್ವತವಾಣಿಯವರ ''ಹ್ಯಾಮ್ಲೆಟ್''ಗಳನ್ನು ಇಲ್ಲಿ ಹೆಸರಿಸಬಹುದು. ಮೊದಲಿನದು ಗದ್ಯರೂಪಾಂತರ, ಎರಡನೆಯದರಲ್ಲಿ ರೂಪಾಂತರ ಪ್ರಕ್ರಿಯೆ ಇಲ್ಲವಾದರೂ, ಇವು ಷೇಕ್ಸ್‌ಪಿಯರ್‌ನ ನಿಕಟ ಅನುವಾದಗಳಲ್ಲ. ವೈ.ಎಂ. ಷಣ್ಮುಖಯ್ಯನವರು ''ರೋಮಿಯೊ ಜುಲಿಯೆಟ್''ಮತ್ತು ''ಹ್ಯಾಮ್ಲೆಟ್''

ನಾಟಕಗಳನ್ನು ಮೂಲಕ್ಕೆ ಹತ್ತಿರವಾಗುವಂತೆ ಅನುವಾದಿಸಿದ್ದಾರೆ. ಇವುಗಳ ಮುಖ್ಯ ಮಾಧ್ಯಮ ಮೂಲಕ್ಕೆ ಹತ್ತಿರವಾಗುವಂತೆ ಅನುವಾದಿಸಿದ್ದಾರೆ. ಇವುಗಳ ಮುಖ್ಯ ಮಾಧ್ಯಮ ಗದ್ಯ. ಅಲ್ಲಲ್ಲಿ ಭಾವ ತೀವ್ರತೆ ಕಂಡಾಗ ಪದ್ಯವನ್ನು ಬಳಸಲಾಗಿದೆ. ಆದರೆ ಪದ್ಯಕ್ಕೆ ನಿಯತ ಛಂದೋರೂಪವನ್ನೇನೂ ಬಳಸಿಲ್ಲ. ಸರಳರಗಳೆಯನ್ನು ಬಳಸುವ ಪ್ರಯತ್ನವೂ ಇಲ್ಲ. ಅಲ್ಲಲ್ಲಿ ''ಕವಿತೆಗಳನ್ನು ಗೀತಿಕೆಗಳನ್ನು'' ಸೇರಿಸಿದ್ದಾರೆ. ಈ ಬಗೆಯ ಇನ್ನೊಂದು ಉದಾಹರಣೆ ಡಿ.ವಿ.ಜಿ. ಅವರ ''ಜಾಕ್ ಕೇಡ್''. ಇದು ಷೇಕ್ಸ್‌ಪಿಯರ್‌ನ King Henry VI ಎಂಬ ಐತಿಹಾಸಿಕ ನಾಟಕದ ೨ನೆಯ ಭಾಗದಲ್ಲಿ ಬರುವ ಜಾಕ್‌ಕೇಡ್‌ನ ಬಂಡಾಯವನ್ನು ಕುರಿತ ಕೆಲವು ದೃಶ್ಯಗಳ ಅನುವಾದ. ಅನುವಾದ ಪೂರ್ತಿ ಗದ್ಯದಲ್ಲಿದೆ. ಷೇಕ್ಸ್‌ಪಿಯರ್ ಕಾಲದ Prologue, Epilogue ಗಳಂತೆ ಇಲ್ಲಿ 'ಪೀಠಿಕಾ ಗೀತ'ಗಳನ್ನು ಸೇರಿಸಿದ್ದು, ಅವು ಮಾತ್ರ ಪದ್ಯರೂಪದಲ್ಲಿವೆ. ಈ ಭಾಗ ನಮ್ಮ ದೇಶದ ರಾಜಕೀಯ ಪರಿಸ್ಥಿತಿಗೂ ಪ್ರಸ್ತುತವೆಂಬ ಕಾರಣದಿಂದ ಇದನ್ನು ಅನುವಾದಿಸಿರುವುದಾಗಿ ಡಿ.ವಿ.ಜಿ. ಹೇಳಿದ್ದಾರೆ. ಹೀಗೆ ವರ್ತಮಾನದ ತುರ್ತಿಗಾಗಿ ಷೇಕ್ಸ್‌ಪಿಯರ್‌ನ ನಾಟಕಭಾಗವೊಂದು ಅನುವಾದವಾಗಿರುವುದು ಒಂದು ಹೊಸ ಬೆಳವಣಿಗೆ.

ಮೇಲೆ ಹೆಸರಿಸಿರುವ ಅನುವಾದ ರೂಪಾಂತರಗಳು ನವೋದಯದ ಕಾಲದಲ್ಲಿ ಬಂದಿದ್ದರೂ ಸ್ವರೂಪದ ದೃಷ್ಟಿಯಿಂದ ಇವು ನವೋದಯ ಪೂರ್ವಕಾಲದ ಮುಂದುವರಿಕೆಯಾಗಿದೆ. ಸ್ವರೂಪದ ದೃಷ್ಟಿಯಿಂದ ನವೋದಯ ಕಾಲದ ಅನುವಾದಗಳ ವೈಶಿಷ್ಟ್ಯವೆಂದರೆ ಷೇಕ್ಸ್‌ಪಿಯರ್‌ನ ನಾಟಕಗಳ ಕಾವ್ಯವನ್ನು ಹಿಡಿಯುವ ಪ್ರಯತ್ನ. ಇದು ಈ ಕಾಲದ ಹೊಸ ಬೆಳವಣಿಗೆ.

ಬಿ. ಎಂ. ಶ್ರೀ. ಅವರಿಗೆ ಷೇಕ್ಸ್‌ಪಿಯರ್‌ನ ಕೆಲವಾದರೂ ನಾಟಕಗಳನ್ನು ಅನುವಾದಿಸುವ ಆಸೆ ಇತ್ತಂತೆ. ಆದರೆ, ಬಹುಶಃ, ಷೇಕ್ಸ್‌ಪಿಯರ್‌ನ ಅನುವಾದಕ್ಕೆ ತಮ್ಮ ಭಾಷೆ ಇನ್ನಷ್ಟು ಹದಗೊಳ್ಳಬೇಕೆಂಬ ಭಾವನೆಯಿಂದ ಅವರು ಆ ಕೆಲಸಕ್ಕೆ ಕೈ ಹಚ್ಚಲಿಲ್ಲ. ಬದಲಾಗಿ ಕಥಾನಿರೂಪಣೆಯೇ ಪ್ರಧಾನವಾದ ಗ್ರೀಕ್ ಪದ್ಯನಾಟಕಗಳ ಕಡೆಗೆ ತಿರುಗಿದರು. ಈ ಉದ್ದೇಶಕ್ಕಾಗಿ ಅವರು ''ಇಂಗ್ಲೀಷ್ ಗೀತೆಗಳ'' ಅನುವಾದಕ್ಕಾಗಿ ಸಿದ್ಧಪಡಿಸಿಕೊಂಡಿದ್ದ ಹೊಸಗನ್ನಡವನ್ನು ಬಳಸಲಿಲ್ಲ. ''ಅಶ್ವತ್ಥಾಮನ್'' (೧೯೨೯) ನಾಟಕದಲ್ಲಿ ಸೊಫೋಕ್ಲಿಸ್‌ನ Ajax ನಾಟಕವನ್ನು ಅಶ್ವತ್ಥಾಮನ ಕಥೆಗೆ ಹೊಂದಿಸಿಕೊಂಡು ರೂಪಾಂತರಿಸಿದರು. ಈ ನಾಟಕದಲ್ಲಿ ಹಳಗನ್ನಡವನ್ನು ನಾಟಕೀಯ ಉದ್ದೇಶಕ್ಕಾಗಿ ಅವರು ಬಳಸಿಕೊಂಡ ರೀತಿ ಅನ್ಯಾದೃಶವಾದುದು. ಹಳಗನ್ನಡವನ್ನು ಆಡುಮಾತಿನ ಲಯಕ್ಕೆ ಹದಗೊಳಿಸಿ ಅವರು ಅದಕ್ಕೆ ಒದಗಿಸಿರುವ ಬೀಸು, ಸುಭಗತೆ, ವೈವಿಧ್ಯಗಳು ಆಶ್ಚರ್ಯಕರವಾಗಿವೆ. ಕಾವ್ಯ, ನಾಟಕೀಯತೆ, ಕಥನ, ಸಂಭಾಷಣೆಗಳೆಲ್ಲದಕ್ಕೂ ಒಗ್ಗುವ ಆ ಶೈಲಿ, ಕೇಳುತ್ತಿದ್ದರೆ ಇದು ಹಳಗನ್ನಡವೆಂಬ ಅರಿವು ಕೂಡ ಬರದಂತೆ ನಿರಾಯಾಸವಾಗಿ ಹರಿಯುತ್ತದೆ. ಇಲ್ಲಿ ಅವರು ಹೊಸಗನ್ನಡವನ್ನು ಬಳಸಿ ಯಶಸ್ವಿಯಾಗಿದ್ದರೆ, ಅಥವಾ ಷೇಕ್ಸ್‌ಪಿಯರ್‌ನ ನಾಟಕಗಳನ್ನು ಅನುವಾದಿಸಿದ್ದರೆ. ಮುಂದಿನ ಷೇಕ್ಸ್‌ಪಿಯರ್ ನಾಟಕಗಳ ಕಾವ್ಯಾನುವಾದಕ್ಕೆ ಒಂದು ಹೊಸ ದಾರಿಯೇ ಕಾಣಬಹುದಾಗಿತ್ತು. ಯಾಕೆಂದರೆ ಎ.ಎನ್.ಮೂರ್ತಿರಾವ್ ಅವರು ಹೇಳುವಂತೆ ''ಅಶ್ವತ್ಥಾಮನ್'' ನಾಟಕದ ಕಾವ್ಯಭಾಷೆಯ ''ವೈವಿಧ್ಯ, ಸೌಲಭ್ಯ, ಸ್ವಾಭಾವಿಕತೆ, ಅರ್ಥಕ್ಕೆ ತಕ್ಕಂತೆ ಷೇಕ್ಸ್‌ಪಿಯರ್ ತನ್ನ ಪಂಕ್ತಿಯ ನಡಗೆಯನ್ನೂ ತಡೆಹಿಡಿಯುವುದು, ಸಡಿಲಿಸುವುದು, ಓಡಿಸುವುದು ಸರಳರಗಳೆ (blank verse) ಯನ್ನು ನಿರ್ವಹಿಸಿರುವ ರೀತಿಯನ್ನು ಪರಿಶೀಲಿಸಿ ಪಡೆದದ್ದು (೧೯೮೨:೧೩೦-೩೧). ಏನೋ ಕಾರಣದಿಂದ ಶ್ರೀ ಅವರು ಷೇಕ್ಸ್‌ಪಿಯರ್‌ನನ್ನು ಅನುವಾದಿಸಲಿಲ್ಲ. ಬದಲಾಗಿ ಒಂದು ಗ್ರೀಕ್ ನಾಟಕವನ್ನು ಹಳಗನ್ನಡ ಪದ್ಯಶೈಲಿಯಲ್ಲಿ ರೂಪಾಂತರಿಸಿದರು. ಇನ್ನೊಂದು (''ಪಾರಸಿಕರು'') ಅನುವಾದಿಸಿದರು. ಇದೇ ಮೇಲ್ಪಂಕ್ತಿಯಾಗಿ ಮತ್ತೆ ಕೆಲವು ಗ್ರೀಕ್ ನಾಟಕಗಳು ಹಳಗನ್ನಡದಲ್ಲಿ ಬಂದಿವೆ.

ನವೋದಯ ಸಂದರ್ಭದಲ್ಲಿ ಮೊದಲು ಬಂದ ಷೇಕ್ಸ್‌ಪಿಯರ್‌ನ ನಾಟಕಗಳೆಂದರೆ ಕುವೆಂಪು ಅವರ ''ಬಿರುಗಾಳಿ' (೧೯೩೦, The Tempest) ಮತ್ತು ''ರಕ್ತಾಕ್ಷಿ'' (೧೯೩೮, Hamlet). ಇವೆರಡೂ ನಾಟಕಗಳು ಶ್ರೀ ಅವರ ''ಅಶ್ವತ್ಥಾಮನ್'' ಹಾಕಿಕೊಟ್ಟ ಪರಂಪರೆಯನ್ನು ಮುಂದುವರಿಸಿದಂತೆ ಅದನ್ನು ಬೆಳೆಸುವುದಕ್ಕೂ ಕಾರಣವಾದವೆನ್ನಬಹುದು.

ಶ್ರೀ ಅವರ ನಾಟಕಗಳಂತೆ ಕುವೆಂಪು ಅವರ ನಾಟಕಗಳೂ ರೂಪಾಂತರವಾಗಿವೆ. ಆದರೆ ಶ್ರೀ ಅವರ ನಾಟಕಗಳಲ್ಲಿಯಂತೆ ಭಾಷೆ ಹಳಗನ್ನಡವಾಗಿದ್ದರೂ ಅದರಲ್ಲಿ ಹಳಗನ್ನಡ - ನಡುಗನ್ನಡಗಳ ರೂಪಗಳು ಸಾಕಷ್ಟು ಸೇರಿಕೊಂಡಿವೆ. ಮುಖ್ಯವಾಗಿ ಮೂರು ವಿಷಯಗಳಲ್ಲಿ ಈ ರೂಪಾಂತರಗಳು ಹೊಸ ಹೆಜ್ಜೆಯನ್ನಿಟ್ಟವು. ೧. ಷೇಕ್ಸ್‌ಪಿಯರ್‌ನ ನಾಟಕಗಳ ಕಾವ್ಯಾತ್ಮಕ ಅನುವಾದಕ್ಕೆ ಆರಂಭವಾದದ್ದು ಈ ನಾಟಕಗಳಲ್ಲಿ. ೨. ಷೇಕ್ಸ್‌ಪಿಯರ್ ಅನುವಾದಕ್ಕೆ ಸರಳರಗಳೆಯ ವ್ಯಾಪಕ ಬಳಕೆ ಆರಂಭವಾದದ್ದು ಇಲ್ಲಿಂದ. ೩. ಷೇಕ್ಸ್‌ಪಿಯರ್‌ನ ಮೂಲ ನಾಟಕಗಳಲ್ಲಿದ್ದಂತೆ ಪದ್ಯಕ್ಕೆ - ಪದ್ಯ, ಗದ್ಯಕ್ಕೆ- ಗದ್ಯ ಅನುವಾದ ಆರಂಭವಾದದ್ದು ಈ ಪ್ರಯೋಗಗಳಲ್ಲಿ. ಕುವೆಂಪು (೧೯೦೪) ಆಗಿನ್ನೂ ಕೇವಲ ೨೬-೨೮ರ ತರುಣ ಎಂಬುದನ್ನು ಸ್ಮರಿಸಿಕೊಂಡರೆ ಈ ಪ್ರಯತ್ನಗಳು ಸಾಕಷ್ಟು ಯಶಸ್ವಿಯಾಗಿವೆ ಎಂದೇ ಹೇಳಬೇಕು.

ಈ ಹೊತ್ತಿಗೆ ಕನ್ನಡ ರಂಗಭೂಮಿಯಲ್ಲಿ ಕೆಲವು ಮಹತ್ವದ ಬದಲಾವಣೆಗಳಾಗಿದ್ದವು. ''ಶಾಕುಂತಲ'', ''ಮೃಚ್ಛಕಟಿಕ'', ''ರಾಜವರ್ಮ-ಲೀಲಾವತಿ''ಯಂಥ ನಾಟಕಗಳನ್ನು ಆಡುತ್ತಿದ್ದ ಕಂಪನಿಗಳ ಕಾಲ ಮುಗಿದು ವೃತ್ತಿರಂಗಭೂಮಿಗೆ ಪೌರಾಣಿಕ, ಸಾಮಾಜಿಕ ನಾಟಕಗಳು ಬಂದಿದ್ದವು. ಸಾಹಿತ್ಯದಲ್ಲಿ ಕೈಲಾಸಂ, ಶ್ರೀರಂಗರ ಹೊಸ ಬಗೆಯ ನಾಟಕಗಳು ಬಂದು, ಆಧುನಿಕ ಸಾಮಾಜಿಕ ಗದ್ಯ ನಾಟಕದ ಯುಗ ಆರಂಭವಾಗಿತ್ತು. ರಂಗಭೂಮಿ ವೃತ್ತಿ ಮತ್ತು ಹವ್ಯಾಸಿ ಎಂದು ಟಿಸಿಲೊಡೆದು, ವೃತ್ತಿರಂಗಭೂಮಿ ಬೆಳ್ಳಾವೆ ನರಹರಿಶಾಸ್ತ್ರಿ, ಪುಟ್ಟಸ್ವಾಮಯ್ಯ, ಗರೂಡ ಸದಾಶಿವರಾವ್, ಕಂದಗಲ್ಲ ಹನುಮಂತರಾವ್ ಮೊದಲಾದವರ ಪೌರಾಣಿಕ, ಜಾನಪದ ನಾಟಕಗಳಿಗೆ ಸೀಮಿತವಾದರೆ, ಹವ್ಯಾಸಿ ರಂಗಭೂಮಿ ಕೈಲಾಸಂ, ಶ್ರೀರಂಗರ ವಾಸ್ತವತಾ ವಾದಿ ಸಾಮಾಜಿಕ ಗದ್ಯ ನಾಟಕಗಳಿಗೆ ಸೀಮಿತವಾಯಿತು. ಪರಿಣಾಮವೇಂದರೆ, ಎರಡೂ ಕಡೆ ಷೇಕ್ಸ್‌ಪಿಯರ್‌ನ ನಾಟಕಗಳಿಗೆ ನೆಲೆ ತಪ್ಪಿತು. ಅದರಿಂದಾಗಿ, ಮುಂದೆ ಬಂದ ಷೇಕ್ಸ್‌ಪಿಯರ್ ಅನುವಾದ - ರೂಪಾಂತರಗಳು ರಂಗಭೂಮಿಯನ್ನು ಗಮನದಲ್ಲಿಟ್ಟುಕೊಳ್ಳಲಿಲ್ಲ.

ಎರಡನೆಯದಾಗಿ, ಈ ಕಾಲದಲ್ಲಿ ಮೊದಲ ಬಾರಿಗೆ ವಿಶ್ವವಿದ್ಯಾಲಯಗಳ ವಿದ್ವಜ್ಜನರು ಮತ್ತು ಕವಿ ಸಾಹಿತಿಗಳು ಷೇಕ್ಸ್‌ಪಿಯರ್‌ನ ಅನುವಾದಕ್ಕೆ ತೊಡಗಿದರು. ಇವರು ಷೇಕ್ಸ್‌ಪಿಯರ್‌ನ ನಾಟಕಗಳನ್ನು ಸಾಹಿತ್ಯವಾಗಿ ಗ್ರಹಿಸಿದವರು; ವಿಮರ್ಶಾತ್ಮಕವಾದ ಅಭ್ಯಾಸ ಮಾಡಿದವರು; ಅವನ ನಾಟಕಗಳ ಕಥೆಗಿಂತ, ನಾಟಕೀಯ ಗುಣಕ್ಕಿಂತ ಅವುಗಳಲ್ಲಿಯ ಕಾವ್ಯಕ್ಕೆ ಮಾರುಹೋದವರು. ಸೂಕ್ಷ್ಮ ಭಾವನೆಗಳನ್ನೂ, ಪಾತ್ರಗಳ ಮನಸ್ಥಿತಿಗಳನ್ನೂ, ಪ್ರತಿಮೆಗಳನ್ನೂ - ಒಟ್ಟನಲ್ಲಿ ಅಲ್ಲಿಯ ಕಾವ್ಯವನ್ನು - ಅನುವಾದದಲ್ಲಿ ತರಬೇಕೆಂಬುದು ಅವರ ಮುಖ್ಯ ಉದ್ದೇಶವಾಗಿತ್ತು. ಈ ಹೊತ್ತಿಗೆ ಹೊಸಗನ್ನಡದ ಕಾವ್ಯಭಾಷೆ ಆಗಲೇ ರೂಪಗೊಂಡಿತ್ತು. ಅಲ್ಲದೆ ಅನುವಾದಕ್ಕೆ ಕೈಹಾಕಿದವರಲ್ಲಿ ಕೆಲವರು ಕುವೆಂಪು, ಡಿ.ವಿ.ಜಿ., ಮಾಸ್ತಿ ಅವರಂತೆ ಕನ್ನಡದ ಮಹತ್ವದ ಕವಿಗಳು. ಷೇಕ್ಸ್‌ಪಿಯರ್‌ನ ಅನುವಾದವನ್ನು ಇವರು ಒಂದು ಆಹ್ವಾನವೆಂದು ತೆಗೆದುಕೊಂಡು, ಅದಕ್ಕಾಗಿ ಕಾವ್ಯಾಂಶವೇ ಪ್ರಧಾನವಾಗಿದ್ದ ನಾಟಕಗಳನ್ನು ಆರಿಸಿಕೊಂಡು ಅನುವಾದದಲ್ಲಿ ತಮ್ಮ ಸಾಮರ್ಥ್ಯವನ್ನೆಲ್ಲ ತೊಡಗಿಸಿದರು. ಒಟ್ಟನಲ್ಲಿ, ಈ ಅವಧಿಯಲ್ಲಿ ಷೇಕ್ಸ್‌ಪಿಯರ್‌ನ ನಾಟಕಗಳು ನಾಟಕಗಳೆಂಬುದಕ್ಕಿಂತ ಹೆಚ್ಚಾಗಿ, ಕಾವ್ಯಗಳೆಂದು ಭಾವಿಸ್ಪಟ್ಟವು. ಈ ರೀತಿಯಲ್ಲಿ ಅವರು ಕಾವ್ಯಕ್ಕೆ ಮಹತ್ವ ಕೊಟ್ಟದ್ದರಲ್ಲಿ ತಪ್ಪೇನೂ ಇಲ್ಲ. ಯಾಕೆಂದರೆ ಕಾವ್ಯ ಷೇಕ್ಸ್‌ಪಿಯರ್ ನಾಟಕದ ಅನಿವಾರ್ಯ ಅಂಶವಾಗಿದೆ. ಅಲ್ಲಿಯ ಅನುಭವ ನಮಗೆ ನಿಜವಾಗುವುದೇ ಅದರ ಕಾವ್ಯದ ಮೂಲಕ. ಬರ್ನಾಡ್ ಷಾನಂಥವರ ವಾಸ್ತವತಾವಾದಿ ಗದ್ಯನಾಟಕಗಳ ಸಮಸ್ಯೆ ನಮಗೆ ನಿಜವಾಗುವುದು ಅವರ ತರ್ಕದ ಮೂಲಕ, ಬುದ್ಧಿಯ ಮೂಲಕ. ಷೇಕ್ಸ್‌ಪಿಯರ್‌ನ ನಾಟಕಗಳಲ್ಲಿ ಈ ಬಗೆಯ ಗದ್ಯತರ್ಕ ಸಿಗುವುದಿಲ್ಲ; ಅದು ಕಾವ್ಯ ತರ್ಕ. ಕಾವ್ಯವನ್ನು ಕೈಬಿಟ್ಟರೆ ಅಲ್ಲಿ ಏನೂ ಉಳಿಯುವುದಿಲ್ಲ. ಏ.ಸಿ.ಬ್ರ್ಯಾಡ್ಲಿ(೧೯೬೦)ಯಂಥ ವಿಮರ್ಶಕರು ಮಾಡಿದ ಮುಖ್ಯ ತಪ್ಪೆಂದರೆ ಕಾವ್ಯವನ್ನು ಬಿಟ್ಟೇ ಷೇಕ್ಸ್‌ಪಿಯರ್‌ನ ನಾಟಕಗಳನ್ನು ಚರ್ಚಿಸಿದ್ದು. ಇದನ್ನು ಸರಿಪಡಿಸಲು ಯತ್ನಿಸಿದ ಇಂಗ್ಲಿಷ್ ವಿಮರ್ಶೆ (ಜಿ.ವಿಲ್ಸನ್ ನಾಯಿಟ್, ೧೯೩೦, ೧೯೩೧;

ಕ್ಯಾರೊಲಾಯಿನ್ ಸ್ಪರ್ಜನ್, ೧೯೫೧ ಇತ್ಯಾದಿ) ಕೇವಲ ಕಾವ್ಯಕ್ಕೇ ವಿಶೇಷ ಲಕ್ಷ್ಯಕೊಟ್ಟು ಆ ಕಾವ್ಯದ ನಾಟಕೀಯ ವೈಶಿಷ್ಟ್ಯವನ್ನು ಕಡೆಗಣಿಸಿತು.

ನವೋದಯ ಕಾಲದ ವಿಶಿಷ್ಟ ಅನುವಾದಗಳೂ ಕಾವ್ಯದ ಕಡೆಗೆ ಹೆಚ್ಚಿನ ಗಮನ ನೀಡಿ ರಂಗಭೂಮಿಯನ್ನು ಕಡೆಗಣಿಸಿದವು. ಇದಕ್ಕೆ ಮುಖ್ಯ ಕಾರಣವೆಂದರೆ ಆಗಿನ ರಂಗಭೂಮಿಯ ಸ್ಥಿತಿಯಲ್ಲಿ ಈ ಅನುವಾದಗಳು ರಂಗದ ಮೇಲೆ ಬರಬಹುದೆಂಬ ನಂಬಿಕೆಯೇ ಅನುವಾದಕರಿಗೆ ಇರಲಿಲ್ಲ. ಕುವೆಂಪು ಅವರ ''ರಕ್ತಾಕ್ಷಿ''ಯ ಕೆಲವು ಪ್ರಯೋಗಗಳನ್ನು ಬಿಟ್ಟರೆ ಡಿ.ವಿ.ಜಿ., ಮಾಸ್ತಿ, ಮೂರ್ತಿರಾವ್ ಅವರ ಈ ಅನುವಾದಗಳು ರಂಗದ ಮೇಲೆ ಬರಲೇ ಇಲ್ಲ. ವಿಶ್ವವಿದ್ಯಾಲಯಗಳ ವಿದ್ವಜ್ಜನರೇ ಹೆಚ್ಚಾಗಿ ಅನುವಾದಕ್ಕೆ ತೊಡಗಿದ್ದರಿಂದ ಅವರಿಗೆ ರಂಗಭೂಮಿಗಿಂತ ಸಾಹಿತ್ಯದ ಕಾಳಜಿಯೇ ಹೆಚ್ಚಾಗಿತ್ತು. ಇದೇ ಕಾರಣಗಳಿಂದಾಗಿ ಈ ಅನುವಾದಗಳಲ್ಲಿ ಪ್ರೇಕ್ಷಕರಿಗಿಂತ ಓದುಗರನ್ನು ಮತ್ತು ಸಾಹಿತ್ಯದ ವಿದ್ಯಾರ್ಥಿಗಳನ್ನೆ ಗಮನದಲ್ಲಿಟ್ಟುಕೊಂಡಂತಿದೆ. ದೀರ್ಘವಾದ ಪ್ರಸ್ತಾವನೆಗಳು (ಡಿ.ವಿ.ಜಿ., ಷಣ್ಮುಖಯ್ಯ, ಮಾಸ್ತಿ, ಮೂರ್ತಿರಾವ್) ಮತ್ತು ಟಿಪ್ಪಣಿಗಳು (ಮಾಸ್ತಿ, ಕುವೆಂಪು, ಮೂರ್ತಿರಾವ್, ಜಿ.ಗುಂಡಪ್ಪ) ಸಾಹಿತ್ಯದ ವಿದ್ಯಾರ್ಥಿಗಳಿಗಾಗಿಯೇ ಬರೆದಂಥವು. ಹೀಗೆ ಈ ಅನುವಾದಗಳು ಓದುಗರಿಗಾಗಿಯೇ ಬರೆದುವಾಗಿವೆ. ಅನೇಕರು ತಮ್ಮ ಪ್ರಸ್ತಾವನೆಗಳಲ್ಲಿ ಓದುಗರನ್ನು ಕುರಿತೇ ಮಾತಾಡಿದ್ದಾರೆ. ಉದಾಹರಣೆಗಾಗಿ ಡಿ.ವಿ.ಜಿ. ಅವರ ''ಮ್ಯಾಕ್‌ಬೆಥ್''ದ 'ಪೀಠಿಕೆ'ಯ ಈ ಮಾತುಗಳನ್ನು ನೋಡಬಹುದು : ''ಈ ಲೇಖಕನು ವಾಚಕರಿಂದ ಅಪೇಕ್ಷಿಸುವ ಸಹಕಾರವು ಅನೇಕ ವಿಧದ್ದಾಗಿದೆ. ಅವರು ಸ್ವಲ್ಪ ವಿಶೇಷವಾಗಿಯೇ ಶ್ರಮವಹಿಸಲು ಒಪ್ಪದೇ ಹೋದರೆ ಅವನ ಶ್ರಮ ಸಾರ್ಥಕವಾಗದು. ಕಥಾ ವಸ್ತುವೂ ಅದರಂತೆಯೇ ವಾಕ್ಯರೀತಿಯೂ ಹೊಸವಾದದ್ದರಿಂದ, ವಾಚಕರು ಸಾವಧಾನವಾಗಿ ಪದವಿಭಾಗ ಮಾಡುವುದರಲ್ಲಿಯೂ, ಅನ್ವಯ ಮಾಡುವುದರಲ್ಲಿಯೂ ಜಾಗರೂಕರಾಗಿ ಓದಬೇಕು''.

ನವೋದಯಪೂರ್ವ ಕಾಲದ ಅನುವಾದ - ರೂಪಾಂತರಗಳಲ್ಲಿ ಕಾವ್ಯಕ್ಕೆ ಮಹತ್ವವೇ ಇರಲಿಲ್ಲವೆಂಬ ಕಾರಣಕ್ಕಾಗಿ ಗದ್ಯವೇ ಅವುಗಳ ಮಾಧ್ಯಮವಾದದ್ದು ಸಹಜವೇ ಆಗಿತ್ತು. ಈಗ ಕಾವ್ಯಕ್ಕೆ ಒತ್ತು ಬಿದ್ದುದರಿಂದ ಷೇಕ್ಸ್‌ಪಿಯರ್‌ನ 'ಬ್ಲ್ಯಾಂಕ್ ವರ್ಸ್'ಗೆ (blank verse) ಸಂವಾದಿಯಾದ ಪದ್ಯರೂಪವೊಂದನ್ನು ರೂಪಿಸಿಕೊಳ್ಳುವ ಅಗತ್ಯ ಬಿತ್ತು. ಷೇಕ್ಸ್‌ಪಿಯರ್‌ನ ಕಾಲದಲ್ಲಿ ಬ್ಲ್ಯಾಂಕ್ ವರ್ಸ್ ಅತ್ಯಂತ ವಿಕಸನಶೀಲವಾದ ಕಾವ್ಯಮಾಧ್ಯಮವಾಗಿ ರೂಪುಗೊಂಡಿತು. ಜೊತೆಗೆ ನಾಟಕೀಯ ಸಾಧ್ಯತೆಗಳ ದೃಷ್ಟಿಯಿಂದಲೂ ಅದು ಮಾರ್ಲೋನಂಥ ನಾಟಕಕಾರರ ಕೈಯಲ್ಲಿ ಸಾಕಷ್ಟು ಹದಗೊಂಡಿತು. ಷೇಕ್ಸ್‌ಪಿಯರ್‌ನ ಕೈಯಲ್ಲಿ ಅದು ಕಾವ್ಯ ಹಾಗೂ ನಾಟಕೀಯ ಸಾಧ್ಯತೆಗಳೆರಡನ್ನೂ ಒಟ್ಟಿಗೆ ಮೇಳೈಸಿ ಶಿಖರವನ್ನು ಮುಟ್ಟಿತು. ಪದ್ಯವಾಗಿಯೂ ಪದ್ಯವೆಂಬ ಪ್ರತ್ಯೇಕ ಅರಿವನ್ನುಂಟು ಮಾಡದಷ್ಟು ಪಾರದರ್ಶಕವಾಗಿ, ಕಾವ್ಯವಾಗಿಯೂ ಆಡುನುಡಿಯ ಲಯಕ್ಕೆ ಹತ್ತಿರವಾಗಿ, ಯಾವ ಭಾವನೆಯನ್ನೂ ಸಹಜವಾಗಿ ಅಭಿವ್ಯಕ್ತಿಸಬಲ್ಲಷ್ಟು ಸಮರ್ಥವಾಗಿ ಬೆಳೆಯಿತು. ಜೊತೆಗೆ ಆ ಕಾಲದ ಎಲ್ಲ ನಾಟಕಗಳಿಗೂ ಅದು ಏಕೈಕ ಮಾಧ್ಯಮವಾಗಿದ್ದರಿಂದ (ನಡುನಡುವೆ ಸೋದ್ದಿಶ್ಯವಾಗಿ ಬರುವ ಗದ್ಯದ ತುಣುಕುಗಳನ್ನು ಬಿಟ್ಟರೆ) ಅದನ್ನು ಗದ್ಯ ನಾಟಕಗಳಿಂದ ಬೇರ್ಪಡಿಸಿ ನೋಡುವ ಸಂದರ್ಭವೂ ಇರಲಿಲ್ಲ. ಈ ಬ್ಲ್ಯಾಂಕ್ ವರ್ಸಿಗೆ ಸಂವಾದಿಯಾಗಿ ನವೋದಯದ ಕಾಲದಲ್ಲಿ ಸರಳರಗಳೆ ಬಳಕೆಗೆ ಬಂತು. ಇದು ಆಡುಮಾತಿನ ಲಯಕ್ಕೆ ಹತ್ತಿರವಾದ ಬೀಸನ್ನು ಪಡೆದಿದ್ದರೂ ಅದಕ್ಕೆ ಷೇಕ್ಸ್‌ಪಿಯರ್‌ನ ಬ್ಲ್ಯಾಂಕ್ ವರ್ಸಿಗೆ ಇದ್ದ ಅನೇಕ ಅನುಕೂಲಗಳು ಇರಲಿಲ್ಲ. ಮೊದಲನೆಯದಾಗಿ, ಇದು ಪದ್ಯ ಎಂಬ ಪ್ರತ್ಯೇಕ ಅನಿಸಿಕೆಗಳನ್ನು ಸರಳರಗಳೆ ಅಳಿಸಿಹಾಕುವಂತಿರಲಿಲ್ಲ. ಜೊತೆಗೆ, ಉಳಿದ ಸಾಮಾಜಿಕ ನಾಟಕಗಳಲ್ಲಿ ವ್ಯಾಪಕವಾಗಿ ಬಳಕೆಯಾಗುತ್ತಿದ್ದ ಗದ್ಯದೊಂದಿಗೆ ಅದು ಸ್ಪರ್ಧಿಸಬೇಕಾಗಿತ್ತು. ಎರಡನೆಯದಾಗಿ, ಗದ್ಯದಲ್ಲಿ ಸಾಧಿಸಬಹುದಾದುದನ್ನೆಲ್ಲ ಸಾಧಿಸಿ, ಗದ್ಯಕ್ಕೆ ಸಾಧ್ಯವಿಲ್ಲದ್ದನ್ನೂ ಒಳಗೊಂಡು ತನ್ನ ವಿಶಿಷ್ಟ ಅಸ್ತಿತ್ವವನ್ನು ಸಮರ್ಥಿಸಿಕೊಳ್ಳಬೇಕಾಗಿತ್ತು. ಮೂರನೆಯದಾಗಿ ಹೊಸದಾಗಿ ರೂಪುಗೊಂಡ ಪದ್ಯ ಪ್ರಕಾರವಾಗಿ ಅದು ನಾಟಕೀಯ ಸಾಧ್ಯತೆಗಳಿಗೆ ಇನ್ನೂ ಒಗ್ಗಿಕೊಳ್ಳಬೇಕಾಗಿತ್ತು. ಯಾಕೆಂದರೆ, ಸರಳರಗಳೆ ಈ ಮೊದಲು ಕಾವ್ಯದಲ್ಲಿ ಬಳಕೆಗೆ ಬಂದಿದ್ದರೂ ನಾಟಕದ ವಿಶೇಷ ಅಪೇಕ್ಷೆಗಳನ್ನು ಪೂರೈಸುವುದೂ ಅವಶ್ಯವಾಗಿತ್ತು. ಬಹುಶಃ ಎಂ.ಆರ್.ಶ್ರೀ. ಅವರ ''ನಾಗರಿಕ'' ನಾಟಕವೇ ಈ ದಿಸೆಯಲ್ಲಿ ಮೊದಲ ಪ್ರಯತ್ನವೆಂದು ಕಾಣುತ್ತದೆ. ಅದು ಕುವೆಂಪು ಅವರ

''ಬಿರುಗಾಳಿ'' ೧೯೩೦ರಲ್ಲಿ ಪ್ರಕಟವಾಗಿದ್ದರೂ ಕೆಲವು ವರ್ಷ ಮೊದಲೇ ರಚನೆಯಾದಂತೆ ತಿಳಿದುಬರುತ್ತದೆ. (''ನಾಗರೀಕ''-೧೯೩೦-ಮೊದಲ ಮುದ್ರಣದ ಮುನ್ನುಡಿ). ಸರಳರಗಳೆಯನ್ನು ನಾಟಕಕ್ಕಾಗಿ ಬಳಸಿದವರಲ್ಲಿ ಕುವೆಂಪು ಅವರೇ ಮೊದಲಿಗರೆಂದು ಟಿ.ಎಸ್.ವೆಂಕಣ್ಣಯ್ಯನವರು ಭಾವಿಸಿದ್ದರೂ. (''ಬಿರುಗಾಳಿ'' ಮುನ್ನುಡಿ), ಷೇಕ್ಸ್‌ಪಿಯರ್ ಅನುವಾದಕ್ಕೆ ಬಳಸಿದ ಮೊದಲಿಗರೆಂದು ಭಾವಿಸುವುದೇ ಸೂಕ್ತ. ಅಲ್ಲಿಂದ ಅನುವಾದದಲ್ಲಿ ಸರಳರಗಳೆಯ ಬಳಕೆಯೇ ರೂಢಿಯಾಯಿತು.

ಇದರ ಜೊತೆಗೆ ಅನುವಾದಗಳ ಭಾಷೆಯಲ್ಲಿ ಹಳಗನ್ನಡ - ನಡುಗನ್ನಡದ ರೂಪಗಳನ್ನು ಬಳಸುವ ಪರಿಪಾಠವೂ ಆರಂಭವಾಯಿತು. ಬಿ.ಎಂ.ಶ್ರೀ. ತಮ್ಮ ಗ್ರೀಕ್ ನಾಟಕಗಳ ಅನುವಾದದಲ್ಲಿ ಹಳಗನ್ನಡವನ್ನು ಬಳಸಿದ್ದರೂ, ಕುವೆಂಪು ಹೊಸಗನ್ನಡದ ಜೊತೆಗೆ ಹಳೆಯ ಭಾಷಾರೂಪಗಳನ್ನೂ ಬೆರೆಸಿದರು. ಡಿ.ವಿ.ಜಿ. ಅವರಲ್ಲಿ ಹಳಗನ್ನಡದ ಬಳಕೆ ಹೆಚ್ಚು. ಜಿ.ಗುಂಡಣ್ಣ ಹಾಗೂ ಮೂರ್ತಿರಾವ್ ಅವರು ಕುವೆಂಪು ಅವರ ಕ್ರಮವನ್ನೇ ಅನುಸರಿಸಿದಂತೆ ಕಾಣುತ್ತದೆ. ಹೀಗೆ ಸರಳ ರಗೆಗಳೇ ಮತ್ತು ಹಳೆಯ ಭಾಷಾರೂಪಗಳ ಬಳಕೆ ಸೇರಿ ಅನುವಾದದ ಭಾಷೆಯನ್ನು ಆಡುಮಾತಿನ ಸಹಜತೆಯಿಂದ ದೂರವಾಗಿಸಿದವು. ಇದರ ಅರ್ಥ ಸರಳರಗಳೆಯನ್ನಾಗಲಿ, ಹಳಗನ್ನಡವನ್ನಾಗಲಿ ಬಳಸಕೂಡದೆಂದಲ್ಲ. ಇವುಗಳ ಬಳಕೆಯಿಂದ ಪ್ರೇಕ್ಷಕ ನಾಟಕದ ಕ್ರಿಯೆಯಲ್ಲಿ ಸಹಜವಾಗಿ ತೊಡಗಿಕೊಳ್ಳುವುದಕ್ಕೆ ಅಡ್ಡಿಯಾಗಿ, ಮಾಧ್ಯಮದ ಕಡೆಗೆ ಅವನ ಲಕ್ಷ್ಯ ಹರಿಯುತ್ತದೆ. ತಾನು ಕೇಳುತ್ತಿರುವುದು ಕಾವ್ಯ ಎಂಬುದು ಸದಾ ಅವನ ಗಮನದಲ್ಲಿ ನಿಲ್ಲುತ್ತದೆ. ಗದ್ಯವೇ ಇರಲಿ, ಪದ್ಯವೇ ಇರಲಿ, ಅದು ಪಾರದರ್ಶಕವಾಗಿದ್ದು ನೇರವಾಗಿ ಕ್ರಿಯೆಯನ್ನು ತಲುಪಿರಬೇಕು. ಅಲ್ಲದೇ, ಪ್ರೇಕ್ಷಕ ತಾನೊಂದು ನಾಟಕ ನೋಡುತ್ತಿದ್ದೇನೆಂದು ಮಾತ್ರ ತಿಳಿದಿದ್ದರೆ ಸಾಕು. ಪದ್ಯನಾಟಕವನ್ನು ಅಥವಾ ಗದ್ಯ ನಾಟಕವನ್ನು ನೋಡುತ್ತಿದ್ದೇನೆಂಬ ಪ್ರತ್ಯೇಕ ಮನಸ್ಥಿತಿಯಲ್ಲಿ ಪ್ರತ್ಯೇಕ ನಿರೀಕ್ಷೆಗಳನ್ನು ಹೊಂದಿರಬೇಕಾಗಿಲ್ಲ. ಷೇಕ್ಸ್‌ಪಿಯರ್‌ನ ಕಾಲದಲ್ಲಿ ಇದ್ದುದು ಪದ್ಯನಾಟಕವೊಂದೇ ಆದ್ದರಿಂದ ಅವನಿಗಾಗಲಿ, ಅವನ ಕಾಲದ ಪ್ರೇಕ್ಷಕರಿಗಾಗಲಿ ಈ ಸಮಸ್ಯೆ ಇರಲಿಲ್ಲ. ಇದು ನಮ್ಮ ಕಾಲದ ಹೊಸ ಸಮಸ್ಯೆ. ವಾಸ್ತವತಾವಾದ ಬಂದ ನಂತರ ಹುಟ್ಟಿದ್ದು, ಟಿ.ಎಸ್.ಎಲಿಯಟ್ (೧೯೨೦, ೧೯೫೩) ತನ್ನ ಕಾವ್ಯ ನಾಟಕಗಳ ಭಾಷೆಯ ವಿಷಯದಲ್ಲಿ ನಡೆಸಿದ ಗಂಭೀರ ಚಿಂತನೆ ಮತ್ತು ಪ್ರಯೋಗಗಳನ್ನು ಉದಾಹರಣೆಗಾಗಿ ನೋಡಬಹುದು. ಆದರೆ ನವೋದಯದ ಅನುವಾದಕರಿಗೆ ಈ ಸಮಸ್ಯೆಯನ್ನು ಗಂಭೀರವಾಗಿ ಎದುರಿಸುವ ಪ್ರಸಂಗವೇ ಬಂದಂತೆ ಕಾಣುವುದಿಲ್ಲ. ಯಾಕೆಂದರೆ ರಂಗಭೂಮಿ ಅವರ ದೃಷ್ಟಿಯಲ್ಲಿ ಇರಲೇ ಇಲ್ಲ. ಪದ್ಯನಾಟಕದ ಹೊಸ ರೂಪವೊಂದನ್ನು ಓದುಗರಿಗೆ ಕೊಡುವುದೇ ಅವರ ಮುಖ್ಯ ಉದ್ದೇಶವಾಗಿತ್ತು.

ನವೋದಯ ಪೂರ್ವದ ಅನುವಾದಗಳು ರೂಪಾಂತರಗಳಾಗಿದ್ದರಿಂದ ಮತ್ತು ಗದ್ಯದಲ್ಲಿದ್ದು ಕಂದ ವೃತ್ತ ಹಾಡುಗಳನ್ನು ಒಳಗೊಂಡಿದ್ದರಿಂದ ಷೇಕ್ಸ್‌ಪಿಯರ್‌ನ ಮೂಲದಿಂದ ಯಾವುದನ್ನೂ ಕೈಬಿಡದೆ, ಯಾವುದಕ್ಕೂ ಧಕ್ಕೆ ತಾರದೆ ಅನುವಾದಿಸಬೇಕೆಂಬ ಸವಾಲನ್ನು ಎದುರಿಸುವ ಪ್ರಸಂಗವೇ ಅವುಗಳಿಗೆ ಬರಲಿಲ್ಲ. ಬೇಕಾದಲ್ಲಿ ಬದಲಾವಣೆ ಮಾಡಿಕೊಂಡು, ಭಾರತೀಯ ಸನ್ನಿವೇಶಕ್ಕೆ ಹೊಂದದ ಸಂಗತಿಗಳನ್ನು ಬಿಟ್ಟು (ಎಲ್ಲ ಕಡೆಗೂ ಈ ಎಚ್ಚರ ಕಾಣುವುದಿಲ್ಲ). ತೊಂದರೆ ಕೊಟ್ಟುದನ್ನು ತೆಗೆದು, ತಮಗೆ ಚಂದವೆನಿಸಿದ ಒಂದಿಷ್ಟು ಹೊಸದಾಗಿ ಸೇರಿಸಿ ಮುಂದುವರಿದವು. ನವೋದಯ ಕಾಲದಲ್ಲಿ ಕುವೆಂಪು ಅವರ ''ರಕ್ತಾಕ್ಷಿ'' ಬಹಳ ಮಟ್ಟಿಗೆ, ''ಬಿರುಗಾಳಿ'' ಕೆಲವು ಮಟ್ಟಿಗೆ ಇದೇ ಮಾರ್ಗವನ್ನು ಅನುಸರಿಸಿದ ಕೃತಿಗಳಾಗಿವೆ. ನಂತರ ಮಾತ್ರ ಡಿ.ವಿ.ಜಿ, ಗುಂಡಣ್ಣ, ಮಾಸ್ತಿ, ಮೂರ್ತಿರಾವ್ ಮೊದಲಾದವರು ಮೂಲಕ್ಕೆ ಸಾಧ್ಯವಾದಷ್ಟೂ ಪ್ರಾಮಾಣಿಕವಾಗಿ ಅನುವಾದಿಸುವ ಹೊಣೆಯನ್ನು ಹೊಸದಾಗಿ ಹೊತ್ತರು. ಇದು ನವೋದಯ ಕಾಲದ ಹೊಸ ಬೆಳವಣಿಗೆ. ಅನುವಾದಕರಲ್ಲಿದ್ದ ಅಕಾಡಮಿಕ್ ದೃಷ್ಟಿಯೂ ಇದಕ್ಕೆ ಕಾರಣವಾಗಿತ್ತು.

ಈ ಅನುವಾದಗಳ ಯಶಾಪಯಶಗಳನ್ನು ಪರಿಶೀಲಿಸುವಾಗ ಷೇಕ್ಸ್‌ಪಿಯರ್‌ನ ನಾಟಕಗಳ ಕಾವ್ಯಭಾಷೆಯೊಂದಿಗೆ ಇವುಗಳ ಕಾವ್ಯಭಾಷೆಯನ್ನು ಹೋಲಿಸುವುದು ಅನಿವಾರ್ಯ. ಷೇಕ್ಸ್‌ಪಿಯರ್‌ನದು ದಟ್ಟವಾದ ರೂಪಕನಿಷ್ಠ ಭಾಷೆ, ಅಭಿನಯಪೂರ್ಣವಾದದ್ದು. ಹಾಡು, ಭಾವಗೀತೆ, ಪ್ರಾಸಬದ್ಧ ದ್ವಿಪದಿ, ಸರಳರಗಳೆ, ಗದ್ಯ ಇತ್ಯಾದಿಗಳನ್ನು ಸೋದ್ದೇಶ್ಯವಾಗಿ

ಬಳಸಿ ಅವನು ಪಾತ್ರಗಳ ಮಾನಸಿಕ ಚಲನೆ, ಮನಸ್ಥಿತಿ, ಧ್ವನಿ, ಅನುಭವ, ಸಂಗತಿಗಳನ್ನು ಒಟ್ಟೊಟ್ಟಿಗೆ ಸೂಚಿಸಬಲ್ಲ. ಪ್ರತಿಮೆಗಳ ಆಂತರಿಕ ವಿನ್ಯಾಸಗಳನ್ನು ನಿರ್ಮಿಸುತ್ತ ಒಟ್ಟು ಕಾವ್ಯವನ್ನು ಹಲವು ಬಗೆಯ ನಾಟಕೀಯ ಉದ್ದೇಶಗಳಿಗೆ ಬಳಸಬಲ್ಲ. ಈ ಬಗೆಯ ಸಂಕೀರ್ಣವಾದ, ದಟ್ಟ ನಾಟಕೀಯ ನೆಯ್ಗೆಯುಳ್ಳ ಭಾಷೆ ನವೋದಯ ಕವಿ ಲೇಖಕರಲ್ಲಿ ಹೆಚ್ಚಿನವರಿಗೆ ಇರಲಿಲ್ಲ. ಅಂಥ ಕಾವ್ಯಭಾಷೆ ಇದ್ದದ್ದು ಬೇಂದ್ರೆ ಒಬ್ಬರಲ್ಲಿ. ಆದರೆ ಅವರು ಷೇಕ್ಸ್‌ಪಿಯರ್‌ನ ಅನುವಾದಕ್ಕೆ ಮನಸ್ಸು ಮಾಡಲಿಲ್ಲ. ಕುವೆಂಪು ಅವರದು ಉಪಮಾನಿಷ್ಠ, ವರ್ಣನಾತ್ಮಕ, ವಿಜೃಂಭಣೆಯ ಭಾಷೆ. ಡಿ.ವಿ.ಜಿ. ಅವರದು ಜಡವಾದ, ಪೆಡಸು ಭಾಷೆ, ಮಾಸ್ತಿಯವರುದು ವಿವರಣಾತ್ಮಕವಾದ ತರಲ ಭಾಷೆ; ಸಹಜವಾದ ಸಂಧಿಗಳನ್ನು ಬಿಡಿಸಿ ಇಡುವ ಪದಗಳಲ್ಲಿ ಲಯ ಹರಿಯುವುದಿಲ್ಲ; ಅದಕ್ಕೆ ಕಾವ್ಯದ ಕಾವೂ ಏರುವುದಿಲ್ಲ. ಮೂರ್ತಿರಾವ್ ಅವರ ಭಾಷೆ ಕೃತಕವಾಗಿದೆ. ಇವುಗಳಲ್ಲಿ ಯಾವುದೂ ಷೇಕ್ಸ್‌ಪಿಯರ್‌ನ ಕಾವ್ಯಭಾಷೆಗೆ ತಕ್ಕದಾಗಿರುಲಿಲ್ಲವೆಂದೇ ಹೇಳಬೇಕು. ಉಳಿದ ಗದ್ಯಾನುವಾದಗಳ ಬಗ್ಗೆ ಹೇಳಬೇಕಾಗಿಯೇ ಇಲ್ಲ.

ಷೇಕ್ಸ್‌ಪಿಯರ್‌ನ ನಾಟಕಗಳಿಗೆ ತಕ್ಕುದಾದ ಭಾಷೆ ನಿರ್ಮಾಣವಾದದ್ದು ನವ್ಯಕಾವ್ಯದಲ್ಲಿ. ಅಡಿಗರ ಭಾಷೆಯ ರೂಪಕನಿಷ್ಠತೆ, ಧ್ವನಿಪೂರ್ಣತೆ, ನಾಟ್ಯ ಪೂರ್ಣತೆಗಳನ್ನು ಇಲ್ಲಿ ಸ್ಮರಿಸಬಹುದು. ಈ ಬಗೆಯ ಭಾಷೆ ನವ್ಯಕಾವ್ಯದ ಸಿದ್ಧಶೈಲಿಯೇ ಆಯಿತು. ಇದರಿಂದಾಗಿ ಷೇಕ್ಸ್‌ಪಿಯರ್‌ನ ನಾಟಕಗಳನ್ನು ಹೆಚ್ಚು ಯಶಸ್ವಿಯಾಗಿ ಅನುವಾದಿಸುವುದು ಸಾಧ್ಯವಾಯಿತು. ಬಹುಶಃ ಪಿ.ಲಂಕೇಶ್ ಅವರು ತಮ್ಮ ''ದೊರೆ ಈಡಿಪಸ್'' ಅನುವಾದದಲ್ಲಿ ಮೊದಲ ಬಾರಿ ಬಳಸಿದ, ಲಯಬದ್ಧವಾಗಿದ್ದರೂ ಆಡುಮಾತಿಗೆ ಸಮೀಪವಾದ, ಆಡು ಮಾತಿನಂತಿದ್ದರೂ ಕಾವ್ಯದ ಕಾವನ್ನು ಉಳಿಸಿಕೊಳ್ಳುವ ಮುಕ್ತಛಂದದ ನಾಟಕೀಯ ಭಾಷೆ ಒಂದು ಮಾದರಿಯಾಯಿತು. ಮುಂದೆ ಕೆ.ಎಸ್.ನಿಸಾರ್‌ಅಹ್ಮದ್ ಅವರ ''ಮಿಡ್ ಸಮರ್ ನೈಟ್ಸ್ ಡ್ರೀಮ್'', ರಾಮಚಂದ್ರದೇವರ ''ಮ್ಯಾಕ್‌ಬೆಥ್'', ಎಚ್.ಎಸ್.ಶಿವಪ್ರಕಾಶರ ''ಕಿಂಗ್ ಲಿಯರ್'' ಮೊದಲಾದ ಉತ್ತಮ ಅನುವಾದಗಳು ಬಂದವು. ಇಲ್ಲಿ ಕಾವ್ಯಕ್ಕೆ ನಾಟಕವೂ ಆಗುವ ಹೊಸದೊಂದು ಆಯಾಮ ಸೇರಿಕೊಂಡಿತು.

ಹೀಗೆ ಕನ್ನಡ ಸಾಹಿತ್ಯದ ಈ ಮೂರು ಮಹತ್ವದ ಕಾಲಾವಧಿಗಳು ಷೇಕ್ಸ್‌ಪಿಯರ್‌ನನ್ನು ಹಿಡಿಯಲು ಯತ್ನಿಸಿದ ಮೂರು ಭಿನ್ನ ರೀತಿಗಳಲ್ಲಿ ಕನ್ನಡ ಭಾಷೆಯಲ್ಲಿ ನಡೆದ ಬೆಳವಣಿಗೆಯ ಮೂರು ಹಂತಗಳನ್ನು, ಆಯಾ ಕಾಲಧರ್ಮ ಷೇಕ್ಸ್‌ಪಿಯರ್‌ನಲ್ಲಿ ಗುರುತಿಸಿದ ತನ್ನ ಪ್ರತಿಮೆಗಳನ್ನು, ಕನ್ನಡ ಸಾಹಿತ್ಯ ಸಂಸ್ಕೃತಿ ಷೇಕ್ಸ್‌ಪಿಯರ್‌ನನ್ನು ಅರ್ಥಮಾಡಿಕೊಂಡ ಪ್ರಕ್ರಿಯೆಯ ಬೆಳವಣಿಗೆಯನ್ನು ಗುರುತಿಸಬಹುದು. ಈ ಮೂರೂ ಮೂಲತಃ ಒಂದು ಇನ್ನೊಂದರ ಕಾರಣ-ಪರಿಣಾಮಗಳೆರಡೂ ಆಗಿವೆ.

ಉಲ್ಲೇಖಗಳು

೧. ಮೂರ್ತಿರಾವ್, ಎ.ಎನ್.(೧೯೮೨), ''ವಿಮರ್ಶಾತ್ಮಕ ಪ್ರಬಂಧಗಳು'' ಡಿ.ವಿ.ಕೆ. ಮೂರ್ತಿ, ಮೈಸೂರು.

2. Bradley, A.C. (1960), Shakespearean Tragedy, Macmillan, London (F.P. 1904)

3. Eliot, T.S. (1920) the Sacred wood, Methuen, London.

4. Eliot, T.S. (1953) Selected Prose, Penguin, Harmondsworth.

5. Knight, Wilson G. (1930), The Wheel of Fire Methuen, London..

6. Knight, Wilson G. (1931), The Imperial Theme, Methuen, London.

7. Spurgeon, Caroline (1935), Shekespear's Imagery, Cambridge University Press, Cambridge.

ಮಹಾಭಾರತದಲ್ಲಿ ಪರಿಭ್ರಮಣ

ಪ್ರೊ. ಎಂ. ರಾಮಚಂದ್ರ

ಋಗ್ವೇದದ ಐತರೇಯ ಬ್ರಾಹ್ಮಣದ ಹರಿಶ್ಚಂದ್ರ ಉಪಾಖ್ಯಾನದಲ್ಲಿ ಬರುವ ಒಂದು ಮಂತ್ರ ಹೀಗಿದೆ :

ಕಲಿಃ ಶಯಾನೋ ಭವತಿ । ಸಂಜಿಹಾನಸ್ತು ದ್ವಾಪರಃ

ಉತ್ತಿಷ್ಠನ್ ತ್ರೇತಾಭವತಿ । ಕೃತಃ ಸಂಪದ್ಯತೇ ಚರನ್ ॥

ಉಪಾಖ್ಯಾನದ ಮುಂದಿನ ಮಂತ್ರಗಳು ಚರೈವೇತಿ, ಚರೈವೇತಿ, ಚರೈವೇತಿ ಎಂದು ಅಂತ್ಯವಾಗುತ್ತವೆ. 'ಮಲಗಿರೆ ಕಲಿಯು, ಕುಳ್ಳಿರೆ ದ್ವಾಪರ, ನಿಂತರೆ ತ್ರೆತಾ, ನಡೆವುದೆ ಕೃತವು, ಅದರಿಂದ ನಡೆವುದು, ನಡೆಯುತ್ತ ಇರುವುದು' ಎಂಬುದು ಮಂತ್ರ ತಾತ್ಪರ್ಯ. ಚತುರ್ಯುಗಗಳಲ್ಲಿ ಕೃತವೆಂಬುದು ಪ್ರಥಮ ಮತ್ತು ಪರಮ ಶ್ರೇಷ್ಠ ಎನ್ನುತ್ತೇವೆ. 'ಕೃತ'ವೆಂಬ ಹೆಸರೇ ಅದನ್ನು ಹೇಳುತ್ತದೆ. ಕೃತ ಎಂದರೆ ದುಡಿಮೆ, ದುಡಿಮೆಯಿಂದ ಗಳಿಕೆ ಗಳಿಕೆಯಿಂದ ಹಿರಿತನ. 'ನಡವುದೇ ಕೃತವು' ಎಂದರೆ ಒಂದಲ್ಲೊಂದು ಬಗೆಯಲ್ಲಿ ದುಡಿಯುತ್ತಲೇ ಇರುವುದು ಎಂದೇ ಅರ್ಥ. ಆದುದರಿಂದ ಕೃತಯುಗವೆಂಬುದು ಕ್ರಿಯಾ ಶೀಲತೆಯ ಉತ್ಕರ್ಷದ ಸಂಕೇತವಾಗುತ್ತದೆ.

ಚರಿಸು ಎಂದರೂ ಚಲಿಸು ಎಂದರೂ ಒಂದೇ ಅರ್ಥ. ಚರ್ಯೆ, ಚಾಲನೆಯೆಂಬವು ಒಂದೇ ಮೂಲದಿಂದ ನಿಷ್ಪನ್ನವಾದ ಪದಗಳು : ಲೋಕದಲ್ಲಿ ಮಾನವ ಜೀವಿ ಮಾತ್ರವಲ್ಲ - ತರುಗುಲ್ಮ ಲತಾದಿ ಸ್ಥಾವರಗಳನ್ನುಳಿದು, ಮಿಕ್ಕ ಎಲ್ಲಾ ಪ್ರಾಣಿಗಳೂ ಚರಿಸುತ್ತವೆ. (ಅಥವಾ ಚಲಿಸುತ್ತವೆ) ಚರಿಸುತ್ತಲೇ ಇರುತ್ತವೆ. ಈ ಚರಣ ಅಥವಾ ಚಲನ ಕಾಲುಗಳಿಂದ ಇರಬಹುದು. ಹೊಟ್ಟೆ ಹೊಸೆಯುವುದರಿಂದ ಇರಬಹುದು, ತೆವಳುವುದರಿಂದ ಇರಬಹುದು, ರೆಕ್ಕೆ ಬೀಸುವುದರಿಂದ ಇರಬಹುದು ಅಥವಾ ಪಕ್ಕೆಗಳನ್ನು ಬಡಿದು ಈಜುವುದರಿಂದಲೂ ಇರಬಹುದು. ಚರ್ಯೆ ಅಥವಾ

ಚಾಲನೆಯ ಮತ್ತೊಂದು ರೂಪ ಭ್ರಮಣ - ಪರಿಭ್ರಮಣ, ಚಲನೆ ಚರ್ಯೆ ಎಂದರೆ ನಡೆಯುವಿಕೆ, ಹೋಗುವಿಕೆಯಾದರೆ ಪರಭ್ರಮಣ - ಪರಿಭ್ರಮಣಗಳಿಗೆ ಸುತ್ತುವಿಕೆ ಎಂಬ ಅರ್ಥ: - ಲಂಬವಾಗಿ ಹೋಗುವುದು, ವೃತ್ತವಾಗಿ ಸುತ್ತುವುದು, ಹೀಗೆ ನಾನಾ ವಿಧವಾಗಿ ಈ ಪದಗಳ ಅರ್ಥಗಳನ್ನು ಹೇಳಬಹುದು. ಒಟ್ಟಿನಲ್ಲಿ ಮನುಷ್ಯ ಸಹಿತವಾಗಿ ಎಲ್ಲ ಜೀವಿಗಳದೂ 'ಚಾರಣ ಸಂಸ್ಕೃತಿ' ಎನ್ನಬಹುದು. ಮನುಷ್ಯೇತರವಾದ ಎಲ್ಲಾ ಜೀವಿಗಳಲ್ಲೂ ಚಾರಣ ಅಥವಾ ಭ್ರಮಣ ಕಾರಣವು ಮುಖ್ಯವಾಗಿ ಉದರಂಭರಣ ಅಥವಾ ದೇಹ ರಕ್ಷಣೆಯಾದರೆ ಮನುಷ್ಯನಲ್ಲಿ ಅದು ಅನ್ನ ಸಂಪಾದನೆಯೊಂದಿಗೆ ಸಾಹಸದ ಉತ್ಕರ್ಷದ, ವಿಕಾಸದ, ಪಥಕ್ರಮಣವೂ ಆಗುತ್ತದೆ.

ಕವಿ ಕುವೆಂಪು ಅವರು ತಮ್ಮ 'ಮಹಾಶ್ವೇತೆಯ. ತಪಸ್ಸು' ಎಂಬ ಗದ್ಯಪ್ರಬಂಧವನ್ನು ಹೀಗೆ ಪ್ರಾರಂಭಿಸುತ್ತಾರೆ. 'ಮನುಷ್ಯನ ಮನಸ್ಸು ಊರ್ಧ್ವಮುಖಿ. ಅವನ ಕನಸು ಗಗನಗಾಮಿ. ಅವನ ಕಲ್ಪನೆ ನಕ್ಷತ್ರಯಾತ್ರಿ..... ಇಂದಿಲ್ಲದಿದ್ದರೂ ಮುಂದೆ ಕೈಗೂಡಬಹುದೆಂದು ನಂಬಿರುವ ಸುಖ ಶಾಂತಿಗಳ ಸಂಪಾದನೆಯೇ ಮಾನವ ಸಾಹಸಕ್ಕೆ ಪರಮ ಗಂತವ್ಯ. ಆ ಸಾಹಸ ಅಲೆಗ್ಸಾಂಡರನ ದಂಡಯಾತ್ರೆಯಾಗಿ, ಕಾಳಿದಾಸನ ಮೇಘದೂತವಾಗಿ, ಶ್ರವಣಬೆಳಗೊಳದ ಗೋಮಟೇಶ್ವರನಾಗಿ, ನಾನಾ ರೂಪಿಯಾಗಿ ವ್ಯಕ್ತವಾಗುತ್ತದೆ.

ಸುಖ ಶಾಂತಿಗಳ ನೆಲೆಗಳನ್ನು ಹುಡುಕಿ ಅವನು ಪಡೆಯಬಲ್ಲ ಮಾನವನ ಸಾಹಸಪ್ರಿಯ ಕಲಾಪ್ರಕಾರವಾದ ಕಾವ್ಯ ಅಥವಾ ಸಾಹಿತ್ಯ ಸೃಷ್ಟಿಯಲ್ಲೂ ಪ್ರಕಟವಾಗುತ್ತದೆ. ಭರತಖಂಡದ ಆ ಮಹಾಕಾವ್ಯಗಳೆನಿಸಿರುವ ವಾಲ್ಮೀಕಿ ರಾಮಾಯಣ ಮತ್ತು ವ್ಯಾಸ ಮಹಾಭಾರತ, ಕಾಳಿದಾಸನ 'ರಘುವಂಶ' ಮತ್ತು 'ಶಾಕುಂತಲ', ಬಾಣ ಭಟ್ಟನ 'ಕಾದಂಬರಿ' ಗ್ರೀಕ್ ಕವಿ ಹೋಮರನ 'ಈಲಿಯಡ್' ಮತ್ತು 'ಒಡಿಸ್ಸಿ' ರೋಮನ್ ಕವಿ ವರ್ಜಿಲನ 'ಈನಿಯತ್' ಇಟಾಲಿಯನ್ ಕವಿ ಡಾಂಟೆಯ 'ಡಿವೈನ್ ಕಾಮೇಡಿ', ಆಂಗ್ಲೇಯ ಮಿಲ್ಟನ್ನನ 'ಪ್ಯಾರಡೈಸ್ ಲಾಸ್ಟ್' ಇವೆಲ್ಲವೂ ಮಾನವನಿಗೆ ಶಾಂತಿ, ಸಮಾಧಾನಗಳನ್ನು ಊಡುತ್ತಿರುವ ಎಂದಿಗೂ ಬತ್ತದ ರಸ ಸಮುದ್ರಗಳೇ ಆಗಿವೆ. ಈ ಕಾವ್ಯ ಪ್ರಬಂಧಗಳಲ್ಲಿ ಇವುಗಳಲ್ಲಿ ಚಿತ್ರಿತವಾಗಿರುವ ಕಾವ್ಯ ಭೂಮಿಕೆಗಳಲ್ಲಿ ಕೆಲವು ಅಥವಾ ಹಲವು ಒಂದಲ್ಲೊಂದು ಸಂದರ್ಭದಲ್ಲಿ ಯಾನ, ಚಾರಣ, ಪ್ರಸ್ಥಾನ ಅಥವ ಪರಿಭ್ರಮಣ ನಿರತವಾದುದನ್ನು ಕಾಣುತ್ತೇವೆ. ಅದಕ್ಕೆ ಕಾರಣ ಕೇವಲವಾದ ವಿಹಾರ ವ್ಯಸನಗಳಿರಬಹುದು. ದಂಡಯಾತ್ರೆ ಅಥವಾ ಜೈತ್ರಯಾತ್ರೆಗಳಿರಬಹುದು, ಅಧಿಕಾರ ನಷ್ಟ ರಾಜ್ಯ ತ್ಯಾಗ ಕಾರಣಗಳಿರಬಹುದು ಅಥವಾ ತೀರ್ಥಯಾತ್ರೆ ಪುಣ್ಯ ಸಂಪಾದನೆಯೇ ಆಗಿರಬಹುದು.

ವಾಲ್ಮೀಕಿಯ ರಾಮಾಯಣದಲ್ಲಿ ಅದರ ಹೆಸರೇ ಹೇಳುವಂತೆ ರಾಮನ ಅಯನವೇ ಪ್ರಧಾನ, ಹೋಮರನ ಒಡೆಸ್ಸಿಯಲ್ಲಿ ಒಡಿಸ್ಯೂಸ್ ಅಥವಾ ಯೂಲಿಸಿಸ್ಸನ ಸುದೀರ್ಘ ಸಾಗರ ಸಂಚಾರಕ್ಕೆ ಪ್ರಾಶಸ್ತ್ಯ ಅದರಿಂದಾಗಿಯೇ 'ಒಡಿಸ್ಸಿ' ಎಂಬ ಪದ ಮಹಾಯಾನ ಎಂಬ ಅರ್ಥದಲ್ಲೂ ಪ್ರಯುಕ್ತವಾಗುತ್ತಿದೆ. ಆಂಗ್ಲಲೇಖಕ ಬುನಿಯನ್ನನ 'ದ ಪಿಲಿಗ್ರಿಮ್ಸ್ ಪ್ರೋಗ್ರೆಸ್' ಎಂಬುದು ಒಂದು ಪ್ರಸಿದ್ಧ ಕಥೆ. ಅದು ಕ್ರಿಶ್ಚಿಯನ್ ಎಂಬ ವ್ಯಕ್ತಿಯು - ಹೇಗೆ ಮಾನವನ ಊರ್ಧ್ವಗಾಮಿಯಾದ ದೀರ್ಘ ಪರಿಭ್ರಮಣವನ್ನು ಸಾಂಕೇತಿಕವಾಗಿ ನಿರೂಪಿಸುತ್ತದೆ. ನಮ್ಮ ಭರತ ವರ್ಷದ ಎರಡನೆಯ ರಾಷ್ಟ್ರೀಯ ಕಾವ್ಯ ಅದನ್ನು ಇತಿಹಾಸವೆಂದು ಹೇಳುವುದುಂಟು - ಮಹಾಭಾರತದಲ್ಲಿ ಆ ಖ್ಯಾನ ಉಪಾ ಖ್ಯಾನಗಳು ಅನೇಕವಿದ್ದರೂ ಅಧಿಕ ಅಧಿಕವಾದ ವಸ್ತು ಪಾಂಡವ - ಕೌರವರ ದಾಯಾದಿ ಮಾತ್ಸರ್ಯ ಮತ್ತು ರಣ ಕೋಲಾಹಲಗಳೆ ಆಗಿವೆ. ಇವುಗಳಿಗೆ ಹೊಂದಿಕೊಂಡಂತೆ ಪಾಂಡವರ ಕೌರವರ ಅವರ ಬಂಧುಗಳ, ಸಹಚರಿಗಳ ಅನೇಕ ಪರಿಭ್ರಮಣ ಸನ್ನಿವೇಶಗಳು ಮಹಾಭಾರತದಲ್ಲಿ ವರ್ಣಿತವಾಗಿವೆ. ಅಂತಹ ಪರಿಭ್ರಮಣಗಳ ಉದ್ದೇಶ, ಅವಧಿ, ಪರಿಣಾಮಗಳು ಏನು, ಎಷ್ಟು , ಯಾವುದು ಎಂಬುದನ್ನು ಸೋದಾಹರಣವಾಗಿ ವಿವರಿಸುವ ಪ್ರಯತ್ನವನ್ನು ಈ ನಿಬಂಧದಲ್ಲಿ ಮಾಡಲಾಗಿದೆ.

ನಮ್ಮ ದೇಶ ಭರತವರ್ಷ, ಭರತಖಂಡ ಅಥವಾ ಭರತ ದೇಶವೆಂದು ಹೆಸರಾಗುವುದಕ್ಕೂ ವ್ಯಾಸ ಮಹರ್ಷಿ ತಮ್ಮ ಮಹಾಕಾವ್ಯವನ್ನು ಮಹಾಭಾರತವೆಂದು ಕರೆಯುವುದಕ್ಕೂ ಮೂಲ ಬೀಜವೆನಿಸಿದ್ದು, ಹಸ್ತಿಪುರಾಧಿಪ ದುಶ್ಯಂತನ ಮೃಗಯಾ ವ್ಯಸನ ಮತ್ತು ಆ ನಿಮಿತ್ತವಾದ ನವಪರಿಭ್ರಮಣ. ಜಿಂಕೆಯನ್ನು ಬೆನ್ನಟ್ಟಿ ಕಾಡಿಗೆ ನುಗ್ಗಿದ ದುಶ್ಯಂತ ಅಕಸ್ಮಾತ್ ಕಣ್ವಾಶ್ರಮವನ್ನು

ಹೊಕ್ಕು ಅಲ್ಲಿ ಶಕುಂತಲೆಯನ್ನು ಕಂಡು, ಒಲಿದು, ಅವಳ ಕೈ ಹಿಡಿದು ಅವಳಿಂದ ಪಡೆದ ಪುತ್ರರತ್ನ ಸರ್ವದಮನನೇ ಭರತನೆಂದು ಹೆಸರಾದ, ಆರ್ಯಾವರ್ತದ ಪ್ರಥಮ ಚಕ್ರವರ್ತಿಯೆನಿಸಿದ. ಅವನ ಹೆಸರಿಂದಲೇ ಈ ದೇಶವೂ ಪ್ರಸಿದ್ಧವಾಯಿತು. ಚಂದ್ರವಂಶದ ಪ್ರಭಲ ಪ್ರಭುವಾದ ಭರತನ ಆಖ್ಯಾನ ಮಾತ್ರದಿಂದಲೇ ವ್ಯಾಸ ಕೃತಿ 'ಮಹಾಭಾರತ'ವೆಂದು ಜನ ಮಾನ್ಯವಾಯಿತು. (ಅದಕ್ಕೆ 'ಜಯ' ವೆಂಬ ಮತ್ತೂ ಒಂದು ಹೆಸರಿದ್ದರೂ ಜನ ಅದನ್ನು 'ಭಾರತ'ವೆಂದೇ ಗುರುತಿಸುತ್ತಾರೆ) ವ್ಯಾಸೋದಧಿಯಿಂದ ಅದೇ ಕಥಾ ಬಿಂದುವನ್ನು ಎತ್ತಿಕೊಂಡ ಮಹಾಕವಿ ಕಾಳಿದಾಸ ಅದನ್ನು ಆ ವಂಶದ ನಾಟಕವಾಗಿ ಚಿತ್ತರಿಸಿದ. ದುಷ್ಯಂತ ಶಕುಂತಲೆಯರ ಪ್ರಣಯ, ಪರಿಣಯ, ವಿರಹ, ಸಮಾಗಮಗಳಲ್ಲಿ ಅವರಿಬ್ಬರ ಜೀವ ಭಾವಗಳು ಹೇಗೆ ಕಾಮದ ಸಜ್ಜಲವನ್ನು ಕಳೆದು, ಪರಿಶುದ್ಧವಾಗಿ ಬೆಳಗಿದುವು, ಎಂಬುದನ್ನು ಸರಸವಾಗಿ ನಿರೂಪಿಸಿದ; 'ವಸಂತ ಋತುವಿನ ಪುಷ್ಪ ಸೌಂದರ್ಯವು ಮಾಘಮಾಸದ ಫಲಸಮೃದ್ಧಿಯೂ ಶಾಕುಂತಲ ನಾಟಕದಲ್ಲಿ ಏಕೀಭವಿಸಿದೆ' ಯೆಂಬ ಜರ್ಮನ್ ಕವಿತ ಗಯಟೆ ಬಾಯ್ತುಂಬ ಬಣ್ಣಿಸುವಂತೆ ಬರೆದ, ಮನ್ನಣೆಯ ಮಣೆಯೇರಿ ಮೆರೆದ.

ಪಾಂಡುಮಹಾರಾಜ ತನ್ನ ಪತ್ನೀದ್ವಯರೊಂದಿಗೆ ವನ ಭ್ರಮಣ ಕಾಲದಲ್ಲಿ ಮೃಗರೂಪದಲ್ಲಿ ಸುರತ ನಿಮಗ್ನವಾದ ಋಷಿ ದಂಪತಿಗಳನ್ನು ನೋಡಿದ, ಚಪಲತೆಯನ್ನು ತಡೆಯಲಾರದೆ ಮೃಗ ಮಿಥುನದ ಮೇಲೆ ಬಾಣವನ್ನು ಪ್ರಯೋಗಿಸಿದ. ಹರಿಣನಾಗಿದ್ದ ಋಷಿ ಕೊಂಡನು ಸಾಯುವ ಮೊದಲು ನಿಜರೂಪ ತಳೆದು, 'ರತಿ ಕ್ರೀಡಾಸಕ್ತರಾಗಿದ್ದ ನಮ್ಮ ಮೇಲೆ ವಿನಾಕಾರಣ ಬಾಣ ಪ್ರಯೋಗಿಸಿದೆ, ಪಾಪವನ್ನು ಕಟ್ಟಿಕೊಂಡೆ, ನಿನಗೂ ಹೀಗೆಯೇ ಸುರತ ಸಂದರ್ಭದಲ್ಲಿ ಸಾವು ಸನ್ನಿಹಿತವಾಗಲಿ' ಎಂದು ಶಪಿಸಿದ. ಮುಂದೆ ಆದದ್ದೂ ಹಾಗೆಯೇ - ಪಾಶ್ಚಾತ್ತಾಪದಗ್ಧನಾದ ಪಾಂಡು ರಾಜ್ಯತ್ಯಾಗ ಮಾಡಿ, ಕುಂತಿ ಮಾದ್ರಿಯರೊಂದಿಗೆ ಶತಶೃಂಗ ಪರ್ವತದಲ್ಲಿ ಆಶ್ರಮವಾಸಿಯಾದ ಅಲ್ಲಿಯೇ ಆತ ದುರ್ವಾಸ ಮಂತ್ರ ಬಲದಿಂದ ಕುಂತಿ ಮಾದ್ರಿಯರಲ್ಲಿ ಪಂಚ ಪಾಂಡವರನ್ನು ಪಡೆದ. ಕ್ರಮೇಣ ಪಾಂಡುರಾಜನಿಗೆ ಋಷಿ ಶಾಪದ ದುರ್ವಾರತೆ ಮರೆತು ಹೋಯಿತು. ವಸಂತ ಋತುವಿನ ಒಂದು ಸುಂದರ ದಿನ ಕಾಮುವಶನಾಗಿ ಮಾದ್ರಿಯನ್ನು ಸಮೀಪಿಸಿದ, ಸ್ಪರ್ಶಿಸಿದ, ಅವನ ಹೆಡತಲೆಯಲ್ಲೇ ಅವಿತು, ಕುಳಿತು ಹೊಂಚುತ್ತಿದ್ದ ಸಾವು ಅವನ ಗಂಟಲನ್ನು ಒತ್ತಿ ಉಸಿರನ್ನು ಹೀರಿತು. 'ನಿಯತಿಃಕೇನ ಲಂಘ್ಯಾತೇ?' ಎಂಬುದೊಂದು ಸೂಕ್ತಿ ಪಾಂಡು - ಮಾದ್ರಿ ಪ್ರಕರಣದಿಂದ ವಿಧಿ ನಿಯಮ ಅನುಲ್ಲಂಘ್ಯ ಎಂಬುದು ಮತ್ತೊಮ್ಮೆ ಸ್ಥಾಪಿತವಾಯಿತು.

ಪಾಂಡವ ಕೌರವರು ಹುಟ್ಟಿ ಬೆಳೆಯುತ್ತಿದ್ದಂತೆ ಅವರೊಂದಿಗೆ ದಾಯಾದ ಮತ್ಸರ್ಯದ ವಿಷ ಬೀಜವು ಮೊಳಕೆಯೊಡೆದು, ಹುಲುಸಾಗಿ ಬೆಳೆದು ಹೆಮ್ಮರವಾಯಿತು. ಒಂದೇ ಒರೆಯಲ್ಲಿ ಎರಡು ಕತ್ತಿಗಳನ್ನು ಸೇರಿಸಿ ಇಡಲಾಗದು. ಮಗ ದುರ್ಯೋಧನನ ಒತ್ತಾಯಕ್ಕೆ ಮಣಿದ ಧೃತರಾಷ್ಟ್ರ ಪಾಂಡವರನ್ನು ವಾರಣಾವತಕ್ಕೆ ಹೋಗವುಂತೆ ಒಲಿಸಿದ. ತಮ್ಮ ಯೋಗಕ್ಷೇಮದ ಭಾರವನ್ನು ಭಗವಂತನಿಗೆ ಒಪ್ಪಿಸಿದ ಪಾಂಡವರು ತಾಯಿ ಕುಂತಿಯೊಂದಿಗೆ ವಾರಣಾವತಕ್ಕೆ ಹೋಗಿ ಅಲ್ಲಿ ನೆಲಸಿದರು. ವಿದುರ ಈ ಮೊದಲೇ ಎಚ್ಚರಿಸಿದ್ದರಿಂದ ಪಾಂಡವರು ಹಗಲು ಮಾತ್ರವಲ್ಲ ಇರುಳೂ ಕಣ್ತೆರದುಕೊಂಡೇ ಇದ್ದರು. ಒಂದಿರುಳ ಅವರಿದ್ದ - ಅರಮನೆಯಲ್ಲ ಅರಗಿನ ಮನೆಗೆ ಬೆಂಕಿಬಿತ್ತು ಎಲ್ಲವೂ ಸುಟ್ಟು ಬೂದಿಯಾಯಿತು. ಆದರೆ ಆ ಮೊದಲೇ ಅಲ್ಲಿಂದ ಪಾರಾಗಿದ್ದ ಪಾಂಡವರು ವಿಪ್ರರೂಪದಲ್ಲಿ ಏಕಚಕ್ರ ಪುರವನ್ನು ಸೇರಿದರು. ಅಲ್ಲಿ ಲೋಕಕಂಟಕನಾಗಿದ್ದ ಬಕಾಸುರನನ್ನು ಭೀಮ ವಧಿಸಿದ. ಅಲ್ಲಿದ್ದಾಗಲೇ, ದ್ರೌಪದೀ ಸ್ವಯಂವರ ವಾರ್ತೆಯನ್ನು ಕೇಳಿದ ಪಾಂಡವರು ಪಾಂಚಾಲ ದೇಶಕ್ಕೆ ಹೋದರು. 'ಗಡ್ಡದುಪಾಧ್ಯ'ನಾಗಿದ್ದ ಅರ್ಜುನ ದ್ರುಪದ ರಾಜ ಪಣವಾಗಿ ಒಡ್ಡಿದ್ದ ಮತ್ಸ್ಯ ಲಾಂಛನವನ್ನು ಭೇದಿಸಿ, ದ್ರೌಪದಿಯನ್ನು ಗೆದ್ದ. ಅದೇ ವಿವಾಹ ಮಂಟಪದಲ್ಲಿ ಅವನಿಗೆ ಶ್ರೀಕೃಷ್ಣ ದರ್ಶನವೂ ಆಯಿತು. ಭಗವತ್ಕೃಪೆಯಿಂದ ವಿಷ ಅಮೃತವಾಗುತ್ತದೆ. ಬೆಂಕಿ ಹೂವಿನ ಮಳೆಯೆನಿಸುತ್ತದೆ ಎಂಬುದನ್ನು ಪಾಂಡವರ ಈ ಪರಿಭ್ರಮಣ ಕಥೆ ನಿರೂಪಿಸುತ್ತದೆ.

ದ್ರೌಪದೀ ವಿವಾಹದ ಅನಂತರ ಸ್ವಲ್ಪ ಕಾಲ ಪಾಂಡವರು ಖಾಂಡವ ಪ್ರಸ್ಥದಲ್ಲಿ ವಾಸವಾಗಿದ್ದರು. ಆ ಸಂದರ್ಭದಲ್ಲಿ ಪಂಚಮಲ್ಲಭೆ ದ್ರೌಪದಿಯನ್ನು ಕುರಿತಂತೆ ಒಂದು ನಿಯಮವನ್ನು ಅನುಸರಿಸುತ್ತಿದ್ದರು. ಒಕ್ಷದು ವಿಶಿಷ್ಟ ಸಂದರ್ಭದಲ್ಲಿ ಅರ್ಜುನ ಆ ನಿಯಮವನ್ನು ಅತಿಕ್ರಮಿಸಿದುದರಿಂದ ಹನ್ನೆರಡು ವರ್ಷ ದೇಶಾಂತವಾಸ ಮಾಡಬೇಕಾಯಿತು. ಆ ಅವಧಿಯಲ್ಲೇ ಅವನು

ಗಂಗಾಧ್ವಾರದಲ್ಲಿ ನಾಗಕನ್ನಿಕೆ ಉಲೂಪಿಯನ್ನು ಮಣಿಪುರದಲ್ಲಿ ರಾಜಕುಮಾರಿ ಚಿತ್ರಾಂಗದೆಯನ್ನು ಮತ್ತು ದ್ವಾರಾವತಿಯಲ್ಲಿ ಬಲರಾಮ - ಕೃಷ್ಣರ ಪ್ರಿಯ ಸಹೋದರಿ ಸುಭದ್ರೆಯನ್ನು ವರಿಸಿದುದು. ನಮ್ಮ ಕನ್ನಡದ ಆದಿಕವಿ ಪಂಪ ಕರ್ನಾಟಕ ಪರಿಭ್ರಮಣದಲ್ಲಿದ್ದ ಅರ್ಜುನನನ್ನು ಸೋಗಸಿತಾಣ ಬನವಾಸಿಗೂ ಕರೆತಂದು 'ಅರಂಕುಶ ಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ' ಎಂದು ಮೊದಲಾಗಿ ಅವರು ಉದ್ಗರಿಸುವಂತೆ ಮಾಡಿದರೆ, ನಾಲ್ಕಗ್ಗಳಿಕೆಯ ನಾರಣಪ್ಪ ಅವನನ್ನು 'ಕೇರಳ - ಪಾಳನ - ಕೊಂಕಣಗಳ ವಿಷಮವೀಧಿ'ಗಳಲ್ಲಿ ಸುತ್ತಾಡಿಸಿ ಅವನಿಗೆ ಅಲ್ಲಿಯ ಕಾರ್ಗಾಲದ ಉರವಣೆಯನ್ನು ಕಾಣಿಸುತ್ತಾನೆ !

ರಾಜಸೂಯ ಯಾಗ ನಿಮಿತ್ತವಾಗಿ ಮತ್ತೆ ಪಾಂಡವರಿಗೆ ಪರಿಭ್ರಮಣಯೋಗ ಪ್ರಾಪ್ತಿಸುತ್ತದೆ. ಆ ಸಂದರ್ಭದ ಘಟನಾ ವಿಶೇಷಗಳಲ್ಲಿ ಕೆಲವೆಂದರೆ ಭೀಮಾರ್ಜುನರು ಶ್ರೀ ಕೃಷ್ಣನೊಂದಿಗೆ ವಿಪ್ರವೇಷದಲ್ಲಿ ಮಗಧ ದೇಶಕ್ಕೆ ಹೋಗಿ ಜರಾಸಂಧನನ್ನು ವಧಿಸಿದ್ದು, ಭೀಮಸೇನ ಯಾಗಕ್ಕಾಗಿ ಕೃಷ್ಣಮೃಗವನ್ನು ತಂದದ್ದು ಇತ್ಯಾದಿ. ವೈಭವೋಪೇತವಾಗಿ ಜರುಗಿದ ರಾಜಸೂಯದ ಅಂತ್ಯದಲ್ಲಿ ಏರ್ಪಟ್ಟ ಕಪಟ ದ್ಯೂತದಲ್ಲಿ ಸಂಪೂರ್ಣ ಪರಾಜಿತರಾದ ಪಾಂಡವರು ದ್ಯೂತದ ಷರತ್ತಿನಂತೆ ಪತ್ನೀ ಸಹಿತ ವನವಾಸಕ್ಕೆ ಹೊರಡುತ್ತಾರೆ. ವನವಾಸವೆಂದರೆ ಮತ್ತೆ ಪರಿಭ್ರಮಣ. ಕಾಮ್ಯಕ ವನ, ದ್ವೈತವನ ಹೀಗಿರುತ್ತದೆ. ಅವರ ಪರ್ಯಟನ. ತನ್ಮಧ್ಯೇ ಅರ್ಜುನ ಇಂದ್ರಕೀಲಕ ಪರ್ವತಕ್ಕೂ ತೆರಳಿ ತಪಶ್ಚರ್ಯೆಯಿಂದ ಪರಶಿವನನ್ನು ಒಲಿಸಿ ಪಾಶುಪತವನ್ನು ಗಳಿಸುತ್ತಾನೆ. ಮತ್ತೆ ಇಂದ್ರನ ಆಮಂತ್ರಣದಂತೆ ಸ್ವರ್ಗಲೋಕಕ್ಕೂ ಹೋಗಿ ಪೀಠಕರಾಗಿದ್ದ ನಿವಾಕ ಕವಚರನ್ನು(?) ವಧಿಸಿ ಇಂದ್ರನಿಂದ ದಿವ್ಯಾಸ್ತ್ರಗಳನ್ನು ಪಡೆಯುತ್ತಾನೆ. ಅಪರರಾತ್ರಿಯಲ್ಲಿ ತನ್ನ ಶಯ್ಯಾಗೃಹವನ್ನು ಪ್ರವೇಶಿಸಿದ ಊರ್ವಶಿಯನ್ನು ನಿರಾಕರಿಸಿದುದಕ್ಕೆ ಆಕೆಯಿಂದ ಶಪಿತನಾದರೂ ಇಂದ್ರ ಕೃಪೆಯಿಂದ ಅದನ್ನೇ ವರವಾಗಿಸಿಕೊಂಡು ಅರ್ಜುನ ಮತ್ತೆ ಭೂಮಂಡಲಕ್ಕೆ ಇಳಿದು ಬರುತ್ತಾನೆ. ಅದೇ ಕಾಲದಲ್ಲಿ ದ್ರೌಪದಿಯ ಆಸೆಯನ್ನು ಪೂರೈಸುವುದಕ್ಕಾಗಿ ಸೌಗಂಧಿಕಾಪುಷ್ಪವನ್ನು ಹುಡುಕಿ ಹೊರಟ ಭೀಮನಿಗೆ ಪವನಪುತ್ರ - ತನ್ನ ಅಗ್ರಜನೇ ಆದ ಹನುಮಂತನ ದರ್ಶನ ಲಾಭವಾಗುತ್ತದೆ. ಬ್ರಾಹ್ಮಣನೊಬ್ಬನಿಗೆ ಅವನ ಅರಣಿಯನ್ನು ತಂದುಕೊಡುವುದಕ್ಕಾಗಿ ಹೊರಟಿದ್ದ ಪಾಂಡವರನ್ನು ಮಹಾಭಾರತದ ಋಷಿ ಕವಿ ಯಕ್ಷ ಪ್ರಶ್ನೆಗಳ ನಿಕಷಕ್ಕೆ ಒಡ್ಡುತ್ತಾನೆ. ಆ ಪರೀಕ್ಷೆಯಲ್ಲಿ ಒಡಹುಟ್ಟಿದವರೆಲ್ಲ ಸೋತು ಸತ್ತುಬಿದ್ದರೂ ಯುಧಿಷ್ಟಿರ ಗೆಲ್ಲುತ್ತಾನೆ; ಸತ್ತ ತಮ್ಮಂದಿರನ್ನು ಬದುಕಿಸುತ್ತಾನೆ. ಹೀಗೆ ವನವಾಸದ ಅವಧಿಯಲ್ಲಿ ಪಾಂಡವರು ಪಟ್ಟಪಾಡು ಹತ್ತಾರು, ಪಡೆದ ಪರಮ ಫಲಗಳೂ ಹತ್ತು ಹಲವು.

ವನವಾಸ, ಅಜ್ಞಾತವಾಸಗಳ ಅನಂತರ, ಅನಿವಾರ್ಯವಾದ ಕುರುಕ್ಷೇತ್ರ ಯುದ್ಧದಲ್ಲಿ ಪಾಂಡವರು ವಿಜಯಿಗಳಾದರೆಂಬುದು ನಿಜ. ಆದರೆ ಗುರುಜನರು, ಬಂಧು ವರ್ಗದ ಹತ್ಯೆಯ ಮಹಾಪಾಪ ತಮ್ಮ ತಲೆಯನ್ನು ಸುತ್ತಿಕೊಂಡಿದೆಯೆಂದು ದುಃಖಿತರಾದರು. ಆ ಪಾಪ ನಿವಾರಣಾರ್ಥ ಅಶ್ವಮೇಧವನ್ನು ಸಂಕಲ್ಪಿಸಿದರು. ಅಶ್ವಮೇಧವೆಂದರೆ ಯಜ್ಞಾಶ್ವದ ಲೋಕ ಸಂಚಾರ, ಅದರ ರಕ್ಷಣಾರ್ಥ ಮಧ್ಯಮ ಪಾಂಡವನ ಪರಿಭ್ರಮಣ, ಆ ಪರ್ಯಟನ ಸಂದರ್ಭದಲ್ಲಿ ದೇಹ ಬಲ, ಚಾಪಾಗಮ, ಕೃಷ್ಣಭಕ್ತಿಗಳಲ್ಲಿ ತನಗೆ ಸಮಾನರೂ, ಸಮಧಿಕರೂ ಇದ್ದಾರೆಂಬ ತಥ್ಯ ಅರ್ಜುನನ ಬುದ್ಧಿಗೋಚರವಾಗುತ್ತದೆ. ಸುಧನ್ವ, ಚಂದ್ರಹಾಸಾದಿಗಳಿಂದ ಸೋತು ಗೆಲ್ಲುವ, ಮಗ ಬಭ್ರುವಾಹನನ ಕೈಯಲ್ಲಿ ಸತ್ತು ಬದುಕಿದ ಸನ್ನಿವೇಶಗಳಲ್ಲಿ ಮನುಷ್ಯ ಶಕ್ತಿಗೆ ಅತೀತವಾದದ್ದು ಒಂದಿದೆ - ಇದೇ ದೈವಶಕ್ತಿ, ಭಗವತಕೃಪೆಯೆಂಬ ಸತ್ಯವನ್ನು ಕವಿ ಸಾರುತ್ತಾನೆ.

ಮಹಾಭಾರತದಲ್ಲಿ ವರ್ಣಿತವಾಗಿರುವ ಪರಿಭ್ರಮಣ ಪ್ರಸಂಗಗಳಲ್ಲಿ ಅಂತಿಮವಾಗಿ ಉಲ್ಲೇಖನೀಯವಾದದ್ದು ಪಾಂಡವರ ಮಹಾಪ್ರಸ್ಥಾನ ಮತ್ತು ಸ್ವರ್ಗಾರೋಹಣ. ಕಾಲ ಮಹಿಮೆಯಿಂದ ಧರ್ಮಕ್ಷಯವಾಗಿ, ಪಾಪಭಾರ ಹೆಚ್ಚುತ್ತಿದ್ದಂತೆ ಇಹ ಲೋಕದಲ್ಲಿ ತನ್ನ ಕರ್ತವ್ಯ ಭಾಗ ಮುಗಿಯಿತೆಂದು ಲೀಲಾ ಮನುಷ ವಿಗ್ರಹ ಶ್ರೀಕೃಷ್ಣನೂ ಜರಾವ್ಯಾಧನ ಬಾಣ ಪ್ರಯೋಗವೇ ನಿಮಿತ್ತವಾಗಿ ಶರೀರ ತ್ಯಾಗ ಮಾಡಿದ, ಸ್ವಸ್ಥಾನವನ್ನು ಸೇರಿದ. ಪಾಂಡವರಿಗೂ ರಾಜ್ಯಭೋಗಸಾಕು, ಪರಿಗತಿಬೇಕು ಎಂದು ತೋರಿ ದ್ರೌಪದೀ ಸಹಿತವಾಗಿ ಹಸ್ತಿನಾವತಿಯಿಂದ ಮಹಾಯಾತ್ರೆಗೆ ಹೊರಟರು. ನಗರ, ಖೇಟಗಳನ್ನು

ಕಳೆದು, ನದೀ ನದಗಳನ್ನು ದಾಟಿ, ಮೇರು ಪರ್ವತವನ್ನು ಮುಟ್ಟಿ ಅದನ್ನು ಏರುತ್ತಿರುವಂತೆಯೇ, ದಾರಿಯಲ್ಲಿ ದ್ರೌಪದಿ, ಆ ಮೇಲೆ ಸಹದೇವ, ಮತ್ತೆ ನಕುಲ, ಬಳಿಕ ಅರ್ಜುನ, ಮುಂದೆ ಭೀಮ - ಹೀಗೆ ಒಬ್ಬೊಬ್ಬರಾಗಿ ನೆಲಕ್ಕೆ ಬಿದ್ದರು. ಕಾಯವನ್ನು ಕಳಚಿದರು. ಸ್ವಶರೀರಿಯಾಗಿ ಸ್ವರ್ಗಸೇರಿದವನು ಧರ್ಮರಾಜ ಮತ್ತು ಶ್ವಾನ ರೂಪದಲ್ಲಿ ಅವನನ್ನು ಅನುಸರಿಸಿ ಧರ್ಮ ದೇವತೆ ಮಾತ್ರ. ಇದು ಸಾಂಕೇತಿಕವೆಂದು ತೋರುತ್ತದೆ. ಪಾಂಡವಾಗ್ರಜನಾದ ಯುಧಿಷ್ಠಿರ ಧರ್ಮಪರವಾದ ಜೀವಾತ್ಮನಾದರೆ ಪತ್ನಿ ದ್ರೌಪದಿ ಮತ್ತು ನಾಲ್ವರು ಸಹೋದರರ ಜೀವಾತ್ಮಕ್ಕೆ ಆವರಣವಾಗಿದ್ದ ಅಗ್ನಿಯೇ ಮೊದಲಾದ ಪಾಂಚಭೌತಿಕವಾದ ಶರೀರ. ನಾಯಿಯೆಂಬುದು ಧರ್ಮರಾಜನ ಆತ್ಮಸಾಕ್ಷಿ, ಧರ್ಮಪ್ರಜ್ಞೆಯ ಮೂರ್ತರೂಪ. ಮಹಾಪರಿಭ್ರಮಣದ ಅಂತ್ಯದಲ್ಲಿ ಪಂಚಭೂತಗಳೆಲ್ಲ ಒಂದೊಂದಾಗಿ, ಕಳಚಿಕೊಂಡಾಗ ಜೀವಾತ್ಮ ಪರಿಶುದ್ಧವಾಯಿತು, ಪ್ರಜ್ವಲಿಸಿತು, ಪುಣ್ಯಭಾಜನವೆನಿಸಿತು.

ಮಹಾಭಾರತದಲ್ಲಿ ಪರಿಭ್ರಮಣ ಸನ್ನಿವೇಶಗಳು ಇನ್ನೂ ಎಷ್ಟೋ ಇವೆ. ಉದಾಹರಣೆಗೆ ವನವಾಸಿಗಳಾದ ಪಾಂಡವರ ತೀರ್ಥಯಾತ್ರೆ ಮತ್ತು ಅವರನ್ನು ಅಪಮಾನಿಸುವುದಕ್ಕಾಗಿ ಕೌರವರು ಮಾಡುವ ಘೋಷಯಾತ್ರೆಯೂ ಪರಿಭ್ರಮಣಗಳೇ ಆಗಿವೆ. ಇಲ್ಲದೆ ಉಪಾಖ್ಯಾನಗಳಾಗಿ ಬರುವ ರಾಮಕಥೆ, ಸಾವಿತ್ರೀ ಸತ್ಯವಾನರ ಕಥೆ, ನಳ-ದಯಮಂತೀ ಕಥೆಗಳಲ್ಲೂ ಪರಿಭ್ರಮಣಗಳನ್ನು ಕಾಣುತ್ತೇವೆ. ಈ ಪರಿಭ್ರಮಣಗಳ ಕಾರಣಗಳು ವಿಭಿನ್ನ, ಪರಿಣಾಮಗಳು ಪ್ರತ್ಯೇಕ. ಮಹಾಭಾರತದಲ್ಲಿ ಪರಿಭ್ರಮಣಗಳೆಲ್ಲವೂ ಸಾಂಕೇತಿಕ ಎನ್ನಲಾಗದು. ಕೆಲವು ಸಾಂಕೇತಿಕ, ಮತ್ತೆ ಕೆಲವು ಸಾಂದರ್ಭಿಕ ಎಲ್ಲವಕ್ಕೂ ವಿಶಿಷ್ಟ ಉದ್ದೇಶ, ಸಾಮಾಜಿಕ ಫಲ ಇದ್ದೇ ಇರುತ್ತದೆ.

ಮಹಾಭಾರತದ ಪಾರಮ್ಯವನ್ನು ವರ್ಣಿಸುವಾಗ ಈಯೊಂದು ಉಕ್ತಿಯನ್ನು ಉದ್ಧರಿಸುವುದು ಸರ್ವಸಾಮಾನ್ಯ :

ಯದಿ ಹಸ್ತಿ ತದನ್ಯತ್ರ ಯೆನ್ನೇ ಹಾಸ್ತಿ ನ ಕುತ್ರಚಿತ್

ಇದು ಶ್ಲೋಕದ ಉತ್ತರಾರ್ಧ. ಪೂರ್ವಾರ್ಧ ಹೀಗಿದೆ :

'ಧರ್ಮೇ ಚಾರ್ಥೇ ಚ ಕಾಮೇಚ ಮೋಕ್ಷೇ ಚ ಭರತರ್ಷಭ'

ಶ್ಲೋಕ ಪಾದಗಳನ್ನು ಒಟ್ಟಾಗಿ ಓದಿಕೊಂಡರೆ ಅರ್ಥ ಸಂಪೂರ್ಣವೆನಿಸುತ್ತದೆ. 'ಧರ್ಮ, ಅರ್ಥ, ಕಾಮ, ಮೋಕ್ಷಗಳಲ್ಲಿ ಯಾರು ಯಾರಿಗೆ ಏನೇನು ಬೇಕೋ ಅವೆಲ್ಲವೂ ಮಹಾಭಾರತದಲ್ಲಿವೆ. ಅಲ್ಲಿ ಇಲ್ಲದುದು ಇನ್ನೆಲ್ಲೂ ಇರಲಾರದು' - ಮಹಾಭಾರತದಲ್ಲಿ ವರ್ಣಿತವಾಗಿರುವ ಪರಿಭ್ರಮಣಗಳು, ಪರಿಭ್ರಮಣ ನಿರತವಾಗಿರುವ ವ್ಯಕ್ತಿಗಳು ಚತುರ್ವಿಧ ಪುರುಷಾರ್ಥಗಳಲ್ಲಿ ಧರ್ಮಮೋಕ್ಷಗಳನ್ನು ಅಲ್ಲವೇ ಅರ್ಥ ಕಾಮಗಳನ್ನು ಅಥವಾ ನಾಲ್ಕನ್ನೂ ಲಕ್ಷಿಸಿತ ಇರತಕ್ಕವು. ಅವುಗಳನ್ನು 'ಕವೀನಾಂ ಕವಿ'ಯಾಗಿರುವ ಮಹರ್ಷಿ ವ್ಯಾಸರು ವರ್ಣಿಸಿದ್ದಾರೆ. ಮಹಾಭಾರತದ ಚೌಕಟ್ಟಿನಲ್ಲಿ ದೊಡ್ಡದು, ಹದವಾದದ್ದು, ಇಲ್ಲವೇ ಸಣ್ಣದಾದದ್ದು ಇರಬಹುದು, ಆದರೆ ಅಡಕವಾಗಿರುವ ಚಿತ್ರಗಳು ಮಾತ್ರ ಸ್ಪಷ್ಟ, ಸಮಗ್ರ ಮತ್ತು ಸುಂದರವಾಗಿಯೇ ಇವೆ.

ಬಸವ ಪುರಾಣದ ಪುಷ್ಪಿಕೆಗಳು

ಶ್ರೀ ಎಸ್. ಶಿವಣ್ಣ

ಬಸವಪುರಾಣ - ಭೀಮಕವಿ (೧೩೬೯)

ಶ. ೧೪೪೧ [1]

ಅಂತ್ಯ : ಕೆಂಪಿನ ಪರಾಂಬಿಕಾ ವಾತಾಣ ಗುರುಪಾದ ಸ್ವಾಮಿಗಳ ಬಸವಲಿಂಗ ಸ್ವಾಮಿಗಳ ಪುಸ್ತಕವು,

ಶ. ೧೫೩೬,[2]

ಶ. ೧೫೪೧,[3]

ಶ. ೧೫೬೨.[4]

ಅಂ : ಸ್ವಸ್ತಿ ಶ್ರೀ ಜಯಭ್ಯುದಯ ಶಾಲಿವಾಹನ ಶಕ ವರುಷ ೧೫೬೨ನೆಯ ಪಾರ್ತಿವ ಸಂವತ್ಸರದ ಭಾದ್ರಪದ ಶು ಇಲ್ಲು ವಿರಕ್ತ ಗುರುಲಿಂಗದೇವ ಅನ್ನೈಯ್ಯನವರು ವೋದಿಸುವ ಹಂಪಯ್ಯನ ಹಸ್ತದಲ್ಲಿ ಬರಸಿದ ಬಸವಪುರಾಣಕ್ಕೆ ಶುಭಮಸ್ತು ಶೋಭನ ಮಸ್ತು.

ಶ. ೧೫೬೮ [5]

ಅಂ : ಸ್ವಸ್ತಿ ಶ್ರೀ ಜಯಾಭ್ಯುದಯ ಸಾಲಿವಾಹನ ಶಕ ವರ್ಷ ೧೫೬೮ನೆಯ ಸಂವಸರ್ವಜಿತು ಸಂವಸ್ಸರದ ಜೇಷ್ಠ ಸು ೧೦ ಬುಧವಾರದಲ್ಲು ಪೆನುಗೊಂಡೆಯ ಗಾಣಿಗರ ಹಂಪಸೆಟ್ಟಿ ಮಕ್ಕಳು ಅಪ್ಪುಸೆಟ್ಟಿಗೆ ಮಹಿಸೂರ ಗುರುದೇವರ ಮಕ್ಕಳು ಭೋಗಿವಡೆಯರು ಬರೆದ ಬಸವ ಪುರಾಣದ ಪುಸ್ತಕಕ್ಕೆ ಶುಭಮಸ್ತು.

ಶ. ೧೫೭ [6]

ಅಂ : ಶಾಲಿವಾಹನ ಶಕ ವರ್ಷ ೧೫೭೨ ವರ್ಷ ಸಂದು ವರ್ತ್ತಮಾನ ವಿಕೃತಿ ಸಂವತ್ಸರದ ಚೈತ್ರಶುದ್ಧ ಪೌರ್ನ್ಣಮೆ ಸೋಮವಾರದಲ್ಲಿ ಪೂರ್ಣ....

ಬೋಳಬಸವರಾಜ ದೇವೇನ ಲಿಖಿತಂ.

ಶ. ೧೫೭೬ [7]

ಆದಿ : ಶ್ರೀ ಗುರುಭ್ಯೋಂನಮಃ

ಬಸವೇಶ್ವರ ನಿಂನ ಶ್ರೀಪಾದವೇ ಗತಿ

ಪಾಲ್ಕುಱಿಕೆ ಸೋಮೇಶ್ವರ ನಿರೂಪಿತ ಬಸವ ---

ಅಂ : ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾಹನ ಶಕ ವರುಷ ೧೫೭೬ನೆಯ ಆ ಕರಡಿಗೆಯ ಚೆಂನಬಸವರಾಜದೇವರು ಬರದ ಬಸವೇಶ್ವರ ದೇವರ ಪುರಾಣ ಸಂಪೂರ್ಣ ಮಂಗಳ ಮಹಾ ಶ್ರೀ ಶ್ರೀ ಶ್ರೀ

ಸಂಪಾದನೆಯ ಪರುವತ್ತ ಸ್ವಾಮಿಗಳಲ್ಲಿ ಸಾಸ್ತ್ರಂಮಂದನವ ಕೇಳಿದ ಕರಡಿಗ ಚೆಂನಬಸವ ರಾಜದೇವರು ಬರದ ಬಸವೇಶ್ವರ ದೇವರ ಪುರಾಣ ಸಂಪೂರ್ನ್ನ ಮಂಗಳ ಮಹಾ ಶ್ರೀ ಶ್ರೀ ಶ್ರೀ.

ಶ. ೧೫೭೭ [8]

ಅಂ : ವಿಜಯಾಭ್ಯುದಯ ಶಾಲಿವಾಹನ ಶಕ ವರುಷ ೧೫೭೭ ಮನ್ಮಥನಾಮ ಸಂ।ದ ಫಾಲ್ಗುಣ ಶುದ್ಧ ೧೫ಯಲ್ಲು ಸಜ್ಜನ ಶುದ್ಧ ಶಿವಾಚಾರ್ಯ ಸಂಪನ್ನರಾದ ದೇವಾಪೃಥ್ವಿ ಮಹಾ ಮಹಾತ್ತಿನೊಳಗಾದ ವಿರಕ್ತಮೂರ್ತಿ ನೀಲಕಂಠ ಸ್ವಾಮಿಗಳಿಗೆ ತಳಕಾಡ ಪಾದರಾಜಯ್ಯನ ಕುಮಾರ ಸೋಮರಾಜ ಒಡೆಯರು ಭಕ್ತಿಯಿಂದ ಬರೆದ ಬಸವಪುರಾಣ.

ಶ. (೧೫೮೦) [9]

ಶ. ೧೫೮೩ [10]

ಅಂ : ಶಾಲಿವಾಹನ ಶಕ ವರ್ಷ ೧೫೮೩ರ ಸ್ವಭಾನು ಸಂವತ್ಸರದ ಜೇಷ್ಠ ಶು. ೧೦ ಬೃಹಸ್ಪತಿ ವಾರದಲ್ಲೂ ಕಿತ್ತಾವಾರದ ಓದಿಸುವ ಬಸವಲಿಂಗನು ಹಳೆಯಬೀಡ ವಿರಕ್ತಮಠದ ಚೆನ್ನಮಲ್ಲಿಕಾರ್ಜುನ ದೇವರಿಗೆ ಬರೆದುಕೊಟ್ಟ ಬಸವಪುರಾಣ........ ಶ್ರೀ ತೋಂಟದ ಸಿದ್ಧಲಿಂಗೇಶ್ವರನ ಶ್ರೀ ಪಾದಪದ್ಮಂಗಳಿಗೆ ಶರಣು ಶರಣಾರ್ಥಿ.

ಶ. ೧೫೮೯ [11]

ಅಂ. : ಉಡುಗುಣಿ ಉಪುರಿಗೆ ಮಠದ ಚಂನಬಸಪ್ಪನವರಿಗೆ ಕರಿದಿಗೆ ಕೊಡದು / ರು. ೧೨ ರ ಉದ್ರಿ ಸಂ. ಜೇಷ್ಠ ಬ. ೧೦ರಲ್ಲೂ.....

ಶ. ೧೫೯೨ [12]

ಅಂ : ಶಾ ೧೫೯೨ ಆನಂದ ಸಂವತ್ಸರದ ಚೈತ್ರ ಶುದ್ಧ ೧ಲು ಮುಗಿದ ಬಸವೇಶ್ವರ ದೇವರ ಪುರಾಣ ಸಮಾಪ್ತ....

ಉತ್ತಮಂ ತತ್ತ್ವಚಿಂತಾನಾ
ಮಧ್ಯಮಂ ವೇದ ಪಾಠಯೇ ।
ಕನಿಷ್ಠಂ ಗೀತವಾದ್ಯಂಚ
ತರ್ಕಸ್ಯ ಪಶುಲಕ್ಷಣಂ

ಶ್ರೀ ಮತು ಸಚ್ಚಿದಾನಂದ ನಿತ್ಯ ಪರಿಪೂರ್ಣ, ಪರಂಜ್ಯೋತಿ, ಪರಶಿವ ಪರಾತ್ಪರ ಷಟ್‌ಸ್ಥಲ ಲೀಲಾ ಸಲ್ಲಾಪ ನಲಕ್ಷ ವೀರಶೈವ ಸಾರ್ವ ಭೌಮರಾದ ಗುರುನಂಜಯ್ಯನವರ ಪುಸ್ತಕ.

ಶ. ೧೫೫೪ [13]

ಅಂ : ಶ್ರೀ ಭುಜಂಗ ಲಿಂಗ ಸಾಂಪ್ರದಾಯಿಕ ಪ್ರಸಿದ್ಧಾಚಾರ್ಯ ವಂಚಶಜರಾದ ಸಕಳ ಶಿವಗಣ ಚರಣಾರವಿಂದ ಮಕರಂದ ಮಧುಕರಾಯಮಾನರಾದ ಓಂ ನಮಃ ಶಿವಾಯ ದೇವರ ಮಕ್ಕಳು ಶ್ರೀಕಂಠದೇವರು ನಯ ವಿನಯ ವಿದ್ಯಾವಿವೇಕ ಸದ್ಗುಣ ಸಂಪನ್ನರಾದ ಪದಿನಾಡ ಭೂವರ ಲಿಂಗರಾಜೇಂದ್ರ ತನೂಭವ ಲಿಂಗರಾಜಯ್ಯನವರಿಗೆ ವೇದೋಕ್ತಾ ಆಯುಷ್ಯ ಸಂತತಾರೋಗ್ಯ ಸಮಾಧಿ ವೈಶ್ವರ್ಯ ಮಿತ್ರ. ಶಿವು ಪುತ್ರ... ಶಿವಗಣ ಕೃಪೆಯಿಂದೆ ಸರ್ವತ್ರ ಸರ್ವದಾ ಸಿದ್ಧ ಸುಸ್ಥಿರಲಿಯೆಂದು ಸಂಭ್ರಮೆಯಿಂದಾಶೀರ್ವಾದಗೈದು ಬರೆದ ಬಸವಪುರಾಣ ಶ್ರೀ ಮತ್ಶಾಲಿವಾಹನ ಶಕ ವರುಷ ೧೫೫೪ನೆಯ ಪರಿಧಾರಿ ಸಂ॥ದ ಆಶ್ವೀಜ ಶುದ್ಧ ೫ ಸೋಮವಾರಕ್ಕೆ ಬರೆದು ಪೂರ್ಣಮಾದ ಬಸವೇಶ್ವರ ಪುರಾಣಕ್ಕೆ ಗ್ರಂಥ ೧೦೩೫೦ ಮಂಗಳಮಸ್ತು

ಶ್ರೀ ಮತ್ಕನಕ ಪುರವರಾಧೀಶ ಭುಜಂಗಲಿಂಗಾಯ ನಮಃ

ಶ. ೧೬೦೧ [14]

ಅಂ : ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರುಷ ಸಾವಿರದಾರನೂರ ಸಂದ ರುಧಿರೋದ್ಗಾರಿ ಸಂವತ್ಸರದ ಕಾರ್ತೀಕ ಶುದ್ಧ ದಶಮಿ ಆದಿತ್ಯ ವಾರದಲ್ಲೂ ಅರುಣಾಚಲ ಸ್ವಾಮಿಗಳ ಜ್ಞಾನ ಪ್ರಸನ್ನ ಪಾತ್ರರಾದ ಮುದ್ವೀರಮರಿ ವಸುತ ಪುರಾಣ ಬರೆದು ಸಂಪೂರ್ಣ

ಶ. ೧೬೦೧ [15]

ಶ. ೧೬೦೨ [16]

ಶ. ೧೬೦೨ [17]

ಆದಿ : ಶ್ರೀ ಗಣಾಧಿಪಾಯ ನಮಃ

ಶ್ರೀ ವೃಷಭೇಶ್ವರಾಯ ನಮಃ

ಶ್ರೀ ಶಿವಾಯನಮಃ

ಶ್ರೀಮತ್ಕಲ್ಯಾಣ ಪುರವರಾಧಿ(ೀ)ಶ ಬಸವ ದಂಡನಾಯಕ ಪ್ರಮಥಗಣ ರುದ್ರಗಣ ಭಕ್ತಗಣೇ (ಭ್ಯೋ)ೀ ನಮಃ

ಶುಭ ಮಸ್ತು ॥ ಬಸವೇಶ್ವರ ದೇವರ ವರ್ಣಕ ಪುರಾಣ.

ಅಂ : ಶ್ರೀ ವೀರಶೈವ ಷಟ್ಸ್ಥಲ ಶಿವಯೋಗ ಶಿವಾದ್ವೈತ ವಿದ್ಯಾಚಾರ್ಯರಾದ ರಾಮಸಮುದ್ರದಲ್ಲಿಹ ಆರಾಧ್ಯ ಶ್ರೀಕಂಠದೇವ ಕುಮಾರನಾದ ಬಸವಲಿಂಗದೇವರು । ಭೀಮಕವಿ ವಿರಚಿತಮಾದ ವರ್ಣಕ ಪುರಾಣ

ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರುಷ ಸಾವಿರದಾರನೂರಯರಡನೆಯ ಸಂವತ್ಸರದ ಪ್ಲವ ಸಂವತ್ಸರದ ಕಾರ್ತೀಕ ಶುದ್ಧ ಬಿದಿಗೆಯ ಸೌಮ್ಯವಾರ ಹಸ್ತ ನಕ್ಷತ್ರದಲ್ಲಿಯೂ ಬರೆದು ಪೂರ್ನ್ನವಾದುದು ಬಸವೇಶ್ವರ ದೇವರ ವರ್ನ್ನಕ ಪುರಾಣ ಸಮಾಪ್ತಿ ಮಂಗಳ ಮಹಾ ಶ್ರೀ ಶ್ರೀ ಶ್ರೀ

ಶ್ರೀ ಶಿವಾಯ ನಮಃ

ಶ್ರೀ ಮತ್ಕನಕಪುರ ನಿವಾಸ ಶ್ರೀಭುಜಂಗೇಶ್ವರಾಯ ನಮಃ

ಶ್ರೀ ನಂದೀಶ್ವರಾಯ ನಮಃ

ಶ್ರೀ ಮತ್ಕಲ್ಯಾಣ ಪುರವರಾಧೀಶ ದಂಡ ನಾಯಕ ಪ್ರಮಥಗಣ ರುದ್ರಗಣ ಅಮರಗಣ ದೇವಗಣ ಭಕ್ತ ಮಹಾಗಣ ಷೋಡಶ ತೇರಸಮಸಂಖ್ಯಾತ ಗಣೇಭ್ಯ ನಮಃ

ಶ್ರೀ ಗಣದಿಪಾಯ ನಮಃ

ಶ್ರೀ ನಂದಿಕೇಶ್ವರ ಶ್ರೀ ಬ್ರಂಗೀಶ್ವರ ಶ್ರೀ ವೀರಭದ್ರ ಶ್ರೀ ಕುಮಾರ ಶ್ರೀ ಪರಮೇಶ್ವರ ಶ್ರೀ ಪಾರ್ವತೇ ನಮಃ ಶ್ರೀ ವೀರಭದ್ರ ಶ್ರೀ ಕುಮಾರ ಶ್ರೀ ಬಸವೇಶ್ವರ ದೇವರ ವರ್ನ್ಣಕ ಪುರಾಣ ಸಂಪೂರ್ನ್ಣ ಮಂಗಳ ಮಸ್ತು ಮಹಾ ಶ್ರೀ ಶ್ರೀ ಶುಭಮಸ್ತು

ಶ. ೧೬೧೪ [18]

ಅಂ : ಶಾಲಿವಾಹನ ಶಕ ವರುಷ ೧೬೧೬ನೆಯ ಸಂದ ವರ್ತಮಾನ, ಭಾವ ಸಂವತ್ಸರದ ಮಾಘ ಬ. ೫ ಗುರುವಾರ ಪ್ರತಃಕಾಲ ನಾರುವೆಗೆಣಸಿ ಮಲ್ಲಿಕಾರ್ಜುನ ಸ್ವಾಮಿಯವರ ಪಾದವೇ ಗತಿ.

ನಾರುವೆ ಬದ್ಧ ಪ್ರಗೌಡನ ರಾಣಿ ಕುಂಬದೇವನ ಹಳ್ಳಿಯ ಮಲ್ಲಂಣ್ಣನ ಭಕ್ತಿಯ ಶಿಶುವಾಗಿರುವ ಶ್ಯಾನಭೋಗ ಲಿಂಗಪ್ಪನು ಮೊದಲ ಪ್ರತಿಯಲ್ಲಿ ಇದ್ದ ಹಾಗೆ...

ಶ. ೧೬೫೭ [19]

ಆದಿ : ಶ್ರೀ ಗುರುಲಿಂಗಾಯ ನಮಃ

★; ಶ್ರೀ ನಂದಿನಾಥಾಯ ನಮಃ

ಶ್ರೀ ಮದ್ಗುರುವೆಯಂ ನಮಃ

ಈ ಪುಸ್ತಕದ ಆರಭ್ಯ ಮಾಡಿದ ಬರದ್ದು ವಿರೋಧಿಕೃತು ನಾಮ ಸಂವತ್ಸರದಲ್ಲು ಆಸಿವಿಜಿ ಸು ॥

೭ ಭಾನುವಾರ ಮೂಲಾನಕ್ಷತ್ರದಲ್ಲೂ

ಅಂ : ಸಾಲಿವಾಹನ ಸಕ ೧೬೫೭ನೆ ರಾಕ್ಷಸನಾಮ ಸಂವತ್ಸರದಲ್ಲು ಚೈತ್ರ ಸುದ್ಧ ೧ ಸುಕ್ರವಾರ ರೇವತಿ ನಕ್ಷತ್ರ ಸುಭವಾರೆ ಉದಯಕಾಲದಲ್ಲೂ ಬಸವ ಪುರಾಣ ಸಂಪೂರ್ನ್ಣವಾಗಿ ಮುಗಿಯಿತ್ತೂ ॥ ಯಟಗಿ ಬಂನಿಕೊಪ್ಪದ ಕೌಲೂರು ತಳಕಲಗೊತಿಗೆ ಬೆಳೆಹಾಳವೊತಿಗೆರೆ ಸರಸಮ (ಶಿವಲೆಂಕಣ) ಗೌಡನ ಆತ್ಮಜನಾದ ಗುಡ್ಡಣಗೌಡನು ತಮ್ಮ ಸ್ವಹಸ್ತದಿಂದ ಖಾಸಕ್ಕೆ ಬರಕೊಂಡ ಪುಸ್ತಕ--

ಶ. ೧೬೭೦ [20]

ಅಂ : ವಿಭವ ಸಂವತ್ಸರದ ಮಾಘ ಶುದ್ಧ ಪೌರ್ನ್ಣಮಿ ಸೀರವಾರ ಉಪಾಧ್ಯಾ ಐಮ್ಮರಾಯ ಶ್ರೀ ಮನ್ಮಹಾದಳವಾಯಿ ಅಯ್ಯನವರ ಹಟ್ಟಿ ಬೊಕ್ಕಸದ ಚಂಗಣ್ಣನವರ ಕುಮಾರ್ರು ಕೆಂಪೈಯ್ಯನವರಿಗೆ ಆಯುರಾ..ಬರದುಕೊಟ್ಟ ಬಸವ...ಶುಭ ಮಸ್ತು...ಶಾಲಿವಾಹನ ಶಕ ವರ್ಷಂಗಳು ೧೬೭(೦) ಸಂದ ವರ್ತಮಾನದ ವಿಭವ ಸಂವತ್ಸರ ಮಾಘ ಶುದ್ಧ ೧೫ ಸ್ಥಿರವಾಸರದಲ್ಲಿ ಬರೆದ ಬಸವಪುರಾಣದ ಪುಸ್ತಕ

ಶ. ೧೭೨೬ [21]

ಆದಿ : ಮೋಟಗಿ ಸಿದ್ಧಲಿಂಗೇಶ್ವರಾಯ ನಮಃ

ಅಂ : ಶ್ರೀ ಮದ್ದೇಶಿಕ ವೀರಶೈವ ಸಿದ್ಧಾಂತ ಸ್ಥಾಪನಾಚಾರ್ಯ ಷಡುಸ್ಥಳ ಚಕ್ರವರ್ತಿ ಮಾಯಾಕೋಳಾಹಳ ವಿರಕ್ತ ಶಿಖಾಮಣಿ ಶ್ರೀ ಮನ್ಮುರಿಗಾ ಶಾಂತ ವೀರ ಸ್ವಾಮಿಗಳ ಮಶೀಭೂತರಾದ ಶ್ರೀ ಲೋಚಿನ ಚರಮಾರ್ತಿಗಳಾದ ಸಿದ್ಧಲಿಂಗಾರ್ಯರ ಕರಕಂಜಸಂಜಾತರಾದ ಮುರಿಗ್ಯ ಪಾನು ತನ್ನ ಶಿಥಿಲಬುದ್ಧಿಯಿಂದೆ ಶಾಲಿವಾಹನ ಭೂಪತಿ ಸಖೆ ೧೭೬೬ನೆ ಕ್ರೋಧನಾಮ ಸಂವತ್ಸರದ ಆಷಾಡ ಶುದ್ಧ ೧೦ ದಿನದಲ್ಲಿ ಬಸವ ಪೌರಾಣವ ಲೇಖಿಸಿದ.

ಶ. ೧೭೪೩ [22]

ಶ. ೧೭೪೪ [23]

ಅದಿ : ಶ್ರೀ ಗುರು ದೇಶಿಕೇಂದ್ರವನುಭಾವ ಚರಮೂರ್ತಿ ಗುರುಸಿದ್ಧಸ್ವಾಮಿಗೆಕರಕಮಲಸಂಜಾತರಾದ

ಶ್ರೀ ಮದ್ಗುರು ಏಕಾರ್ಪಿತ ಸ್ವಾಮಿನೇ ನಮಃ

ಶ್ರೀ ರಾಚವಟ್ಟಿ ಸ್ವಾಮಿನೇ ನಮಃ

ಶ್ರೀ ಶಾಂತನ್ನಷಭಾಯ ನಮಃ

...ಶಾಲಿವಾಹನ ಶಕ ವರುಷಂಗಳು ೧೭೪೪ನೆಯ ವಿಷು ಸಂ।ದ ಆಷಾದ ಶುದ್ಧ...

ಅಂ : ಶ್ರೀ ವೀರಶೈವಾಗಮ ಭಕ್ತಿಯುಕ್ತನೆನಿಪ ಶ್ರೀ ಮದ್ಬನ ಶಿವಲಿಂಗ ಪಂಡಿತಾರಾಧ್ಯೇಶಿಕರ ಜ್ಯಾತಂ ಶ್ರೀ ಉಜ್ಜೈನಿಪುರವರದಿರುತಿಹ ತುಂಬುಗೆರೆ ಮಠಾಧೀಶ್ವರ ವೀರಣ್ಣಾರ್ಯರ ಸುತಂ ಬಸವಲಿಂಗಾರ್ಯನಾತೋದ್ಧವಂ ಪ್ರೀತಂ ಸದ್ಗುರುಲಿಂಗ ಜಂಗಮ ಪಾದತೀರ್ಥ ಪ್ರಸಾದ ಸೇವಿತ ಶ್ರೀ ಗುರು ಏಕಾರ್ಪಿತ ಪದಾರ್ಚಕ ಕಂದರ್ಪ ಸದ್ರೂಪನು ಬಸವಲಿಂಗಾರ್ಯರ ಸುತಂ ಮುದದಿಂ ಬಸವಪುರಾಣ ಲೇಖ ಸಾನುಗ್ನೆಯಿಂ... ಉರುಗಪುರಕ್ಕಧಿನಾಥಂ ವರವೀವಂ । ನಂಬೆ। ದಿದರ್ಗೆ ಬೇಡಿದ ದಕ್ಷಾಧ್ವರ ಹರ ವೀರಭದ್ರನ ಕರುಣದಿ ಕೆಂಚವೀರಾಹ್ವರ ಸುತ ಬಸವಲಿಂಗ...ಬರೆದು...ವಿಷು ಸಂವತ್ಸರದಾದೇವ ಭಾದ್ರಪದ ಶುಕ್ಲ ಪಕ್ಷ ಶಶಿವತಾ ಸಾಮ್ಯವಾರ ಧನಲಗ್ನ ಗಂಗಾಮಾಲಿ.

ಶ. ೧೭೪೮ [24]

(ಮರಕತ ಕಂಥಿ ಶ್ರೀ ಗುರುಸಿದ್ಧ ದೇಶಿಕೇಂದ್ರನ ಶಿಷ್ಯ ವೃಷಭಂಲಿಂಗದೇವ ಬರೆದಿದ್ದಾನೆ)

ಹಂಸಪುರಕ್ಕೆ ಅಧಿಪತಿಗಳಾದ ವೀರಪ್ಪ ಗೌಡರ ಗೃಹದಲ್ಲಿ ಲಿಖಿತವಾಗಿದೆ. ಕೃತಿವ್ಯಯ ಸಂ. ಭದ್ರಸದ ಬ. ೧೦ ಕುಜವಾರ ಪುನರ್ವಸು ನಕ್ಷತ್ರದಲ್ಲಿ ಪ್ರತಿಯಾಗಿದೆ.

ಶ. ೧(೭)೫೭ [25]

ವಿಕೃತಿ ನಾನು ಸಂವತ್ಸರದ ಶ್ರಾವಣ ಬ ೧೬. ಪಾರಿಶ್ವಾಡದ ಸಿದ್ಧರಾಮಪ್ಪನ ಉಲ್ಲೇಖ

ಶ. ೧(೭) ೫(೭) [26]

ಆದಿ : ಶ್ರೀ ಬಸವೇಶ್ವರ ಪುರಾಣವನ್ನು ಲೇಖನಂಗೈವುದಕ್ಕೆ ಮಂಗಳಮಕ್ಕೆ ಭಾಮಿನೀ ಷಟ್ಪದಂ

ಅಂ : ಅಂತು ಸಂಧಿ ॥೬೦॥ಕ್ಕಂ॥ ಪದಗಳೂ ॥ ೩೬೨೪॥ಕ್ಕಂ॥ ಕಾಂಡ॥೮॥ಕ್ಕಂ॥ ಮಂಗಳ ಮಹಾ ॥ಶ್ರೀ॥ಶ್ರೀಮನ್‌ನೃಪಶಾಲಿವಾಹನ ಶಕಬ್ಧಪರಿಮಿತ ೧(೭)೫(೭) ಮನ್ಮಥನಾಮ ಸಂವತ್ಸರೆ॥ ಫಾಲ್ಗುಣ ಮಾಸೆ॥ ವುತ್ತರಾಯಣೆ ಶಶಿರುತಾ ಶುಕ್ಲಪಕ್ಷೆ ಸೋಮವಾಸರೆ ಪುಷ್ಯ ನಕ್ಷತ್ರೆ ॥ ಶೋಭನ ನಾಮಯೋಗೇ॥ ವೈಯಾಕರಣಕ್ಕೆ ॥೦॥ ಶ್ರೀ ಬಸವೇಶ್ವರ ದೇವರ ಪುರಾಣ ಬರುದು ಸಂಪೂರ್ಣವಾಯಿತು.

ಯೀ ಪುಸ್ತಕವಂ ಬರಸಿದವರು ಆರುಯೆಂದರೆ ॥ ಶ್ರೀಮನ್ ಮಹಾನಿರಂಜನ ಜಗದ್ಗುರು ಸೂನ್ಯ ಸಿಂಹ್ವಾಸನಾಧೀಶ್ವರ ಭೂಪುರದ ಮೂರು ಸಹಸ್ರ ಮಠಾಧಿಕಾರಿಗಲಾದ ಗಂಗಾಧರ ಸ್ವಾಮಿಯವರ ಕರಕಮಲೋದ್ಭವರಾದ ಗುರುಶಿದ್ಧಸ್ವಾಮಿಯವರು ಬರಿಸಿದ್ದು ಸಿದ್ಧಾಂತವೂ ॥ಶ್ರೀ ರಸ್ತು॥ ಜಿಲ್ಲಾ ಧಾರವಾಡ ಕಸಬ ಮಂಗಳವಾರ ಪೇಟ ವಿರಕ್ತಮಠದಲ್ಲಿ ಬರೆಸಿದ್ದು ಪ್ರಸಿದ್ಧವೂ॥ ಶ್ರೀ ಶ್ರೀ ಯೀ ಪುಸ್ತಕವ ಬರದವರು ಆರುಯಂದರೆ ॥ ನಿಡುಮಾಮಿಡಿ ಕರಿಬಸವಸ್ವಾಮಿಯವರ ವಂಶ ಪಾರಂಪರಿಯಲ್ಲಿ ಜನಿಸಿದ॥ ಶ್ರೀ ರೇವಣಾಸಿದ್ಧೇಶ್ವರರ ಸಂಪ್ರದಾಯಕರಾದ ಷಡ್ವದೀಸೂತ್ರದ ವೀರೇಶ್ವರ ಗೋತ್ರದ ಕಿತ್ತೂರದೇಶದ ಬಯಲ ಹೊಂಗಲದ ಮಠದ ಶಂಕ್ರಪ್ಪನವರ ಆತ್ಮಜನಾದ ಷಣ್ಮುಖಯ್ಯನಿಂ ಬರಿಯಲ್ಪಟ್ಟಿತು.

ಶ. ೧೭೬೨ (ಕಲ್ಲಚ್ಚು)[27]

ಶ. ೧೭೬೨ (-''-)[28]

ಶ. ೧೭೬೨ (-''-)[29]

ಶ. ೧೭೬೨ (-''-)[30]

ಶ. ೧೭೬೨ (-''-)[31]

ಶ. ೧೭೬೩ (ಪ್ಲವ)[32]

'ಆಶಾಢ ಶುದ್ಧ ತ್ರಯೋದಶಿ ಗುರುವಾರ'

ಶ. ೧೭೬೪[33]

ಶಾಲಿವಾಹನ ಶಕವರ್ಷ ೧೭೬೪ನೆ ಪ್ರಜೋತ್ಪತ್ತಿ ನಾಮಸಂವತ್ಸರದ ಪುಷ್ಯ ಬಹುಳ ೫ ಶ್ರೀ ಮುಖನಾಮ ಸಂಪತ್ಸರದ ಚೈಯಿತ್ರಶುದ್ಧ ೧೧ಯಲ್ಲು ಸಿರಿಗೆರೆ ತರಳಬಾಳು ದೊಡ್ಡಮಠದ ಮಹಾಸ್ವಾಮಿಗಳವರಿಗೆ ಅಜ್ಜಂಪುರದ ಶ್ರೀಮೆ ಸೋನ್ನಲಾಪುರದ ಮಠದ ಕಂತ್ಯಪ್ಪನು ಬರಕೊಟ್ಟದ್ದು.

ಶ. ೧೭೬೭[24] (=೨೧-೩-೧೮೪೬)

ಆದಿ : -; ಶ್ರೀ ಗುರು ಮಂತ್ರಮೂರ್ತಿಗಳ ಚರಣಃ

ಅಂ : ಅಂತುಸಂಧಿ ೬೦ಕ್ಕಂ ಪದನು ೩೬೧ ೯॥ಕ್ಕೆ ಸಮಾಪ್ತಮಂಗಲ ಮಹಾ ಶ್ರೀ ಶ್ರೀ ಶ್ರೀ ಶ್ರೀ ನೃಪ ಶಾಲಿವಾಹನ ಶಖ ೧೭೬೭ ವಿಶ್ವಾವಸು ಸಂ॥ ಫಾಲ್ಗುಣ ಬ॥ ೯ ಮಂದವಾರ ಮೂಲಾನಕ್ಷತ್ರ ಶುಭಯೋಗ ಶುಭಕರಣ ತಾರೀಖ ೨೧ ಮಾಹೆ ಮಾರ್ಚಿ ಸನ್ ೧೮೪೬ ಯಿಸ್ವಿ ಮುತಾದಿಕ ಸನ್ನ ೧೨೫೫ ಫಸಲಿಯೆಲ್ಲಿ ಜಿಲ್ಲಾ ಧಾರವಾಡ ತಾ॥ ಡಂಬಳ ಪೈಕಿ ಸಮತ ಸವುಡಿ ಪುರಾಣ ಮಠದ ಓದಿಸುವ ಅಯ್ಯನವರು ಬರದು ಸಮಾಪ್ತ ಮಂಗಳ ಮಹಾ ಶ್ರೀ ಶ್ರೀ

ಶ. ೧೭೭೪[35]

ಆದಿ : ಶ್ರೀ ಗುರು ಸದಾನಂದ ಸಿದ್ಧಲಿಂಗಾಯ ನಮಃ

ಅಂ : ಅಂತುಸಂಧಿ ೬೦ಕ್ಕಂ ಪದನು ೩೬೨ಕ್ಕಂ ಖಾಂಡ (೮)ಕ್ಕಂ, ಮಂಗಳ ಮಹಾ ಶ್ರೀ

ಶಖ ೧೭೭೪ ಪರಿಧಾವಿ ನಾಮ ಸಂವತ್ಸರದ ಭಾದ್ರಪದ ಶುದ್ಧ ಹುಂಣಿವಿ ಸೋಮವಾರ(ದ)ಲು ಮೂಲಪ್ರತಿಯೊಳಗಿದ್ದಷ್ಟು ಬರದೆನೂ-॥ ಬರೆಸಿದರಾರೆದರೆ ಕೋರಿ ಶಿವರುದ್ರಪ್ಪನು ಬರೆದವರಾರುಯೆಂದರೆ ಹುಕ್ಕೇರಿ ದಂಡಿಮಠದ ಪುರಾಣಿಕ ಸಂಗನಬಸಪ್ಪನು ಲೇಖನವ ಮಾಡಿದರೂ ಬಸವದೇವರ ಪುರಾಣ ಸಮಾಪ್ತ ಮಂಗಳ ಮಹಾ ಶ್ರೀ ಶ್ರೀ ಶ್ರೀ

ಶ. ೧೭೭೭[36]

ಆದಿ : ಶ್ರೀ ಶಿವಲಿಂಗೇಶ್ವರಾಯ ನಮಃ

ಅಂ : ಶಾಲಿವಾಹನ ಶಕ ವರ್ಷ ೧೭೭೭ನೆ ರಾಕ್ಷಸ ನಾಮ ಸಂವತ್ಸರದ ಭಾದ್ರಪದ ಬಹುಳ ೧೦ ಶುಕ್ರವಾರ ಪುಷ್ಯನಕ್ಷತ್ರವು ಸಿದ್ಧನಾಮಯೋಗ ಭದ್ರವಾಕರಣ ೨೬ನೆ ಘಳಿಗೆ ಕುಂಬ ಲಗ್ನದಲ್ಲಿ ಹಿರೆ ಜಂಬೂರ ಬಾಳೆಕೊಪ್ಪಲ ಮಠದ ಮಹಲಿಂಗಯ್ಯನವರಿಂದ ಬರೆಯಲ್ಪಟ್ಟ ಬಸವಪುರಾಣ ಸಂಪೂರ್ಣ ಮಂಗಳ ಮಹಾಶ್ರೀ

ಶ. ೧೭೭೯ [37]

ಆ : - ; ಸಕಲ ಪುರಾತನರ ಪಾದಾರವಿಂದವೇ ಗತಿ..ಶ್ರೀಮದ್ವ್ರುಷಭೇಂದ್ರ ಪುರಾಣವ ಬರವ್ದಕ್ಕೆ ಶುಭಮಸ್ತು

ಅಂ : ತಪ್ಪಂಬರದಿವನಿಂದನೆಂ

ದೊಪ್ಪದೆ ಮನಬಂದ ತೆರದಿ ಬೈಯ್ಯಲಿ ಬೇಡಂ

ಕಪ್ಪವನಿಕ್ಕುವೆ ನಿಂಮಯ

ವೊಪ್ಪುಳ್ಳಡಿಗೆಂನ ಸಿರಸ ಸರಸಿಜ ಮುದದಿಂ ।೧।

ಯೀ ಬಸವರಾಜ ಮಹಾಪೌರಣವು ದಾವಾಗಲು ಮುಗಿಯಿತುಯೆಂದಡೆ ಸೆಕೆ ೧೭೭೯ ಪಿಂಗಳ ನಾಮ ಂವತ್ಸರದ ಮಿತಿ ಆಶ್ವಿನ ಸುದಥ ಪ್ರತಿಪದೆ ಸೆನಿವಾರ ದಿವಸ ಹಸ್ತ ನಕ್ಷತ್ರದಲ್ಲಿ ಬಸವ ಪೌರಾಣವು ಸಮಾಪ್ತಿಯಾಯಿತು. ಯೀ ಬಸವಪುರಾಣವು ದಾರದುಯೆಂದರೆ ಮುದೆಬ್ಯಾ ಸ್ಥಳದಲ್ಲಿಯಿರುವಂತ ಹಿರೇಮಠದ ರಾಚೋಟ್ಯಪ್ಪನವರ ಅಣುಗನಾದಂತ ಗುರುಮಲ್ಲೈಯನು ಯೀ ಬಸವಪುರಾಣವ ಮಠಕೆ ವೋದಲಿಕ್ಕಿ ಬೇಕೆಂದು ಬರದಿದ್ದು ಸ್ವಹಸ್ತ ದಸೂ್ತರು ಪುರಾಣವು ಸಮಾಪ್ತ ಮಂಗಳ ಮಹಾ ಶ್ರೀ ಶ್ರೀ ಶ್ರೀ

ಶ. ೧೭೮೬ (ಕಲ್ಲಚ್ಚು) [38]

ಆದಿ : ಶಕೆ ೧೭೮೬ ರಕ್ತಾಕ್ಷಿ ಸಂವತ್ಸರ ಭಾದ್ರಪದ ಶು. ೮

ಶ್ರೀ ಗುರುಭ್ಯೋನಮಃ

ಶ್ರೀ ವಿರೂಪಾಕ್ಷಾಯ ನಮಃ

ಶ್ರೀ ಗಣೇಶಾಯ ನಮಃ

ಶ. ೧೭೮೭ [39]

ಅಂ : (ಶಾಲಿವಾಹನ ಶಕ ಕ್ರೋಧನ ಸಂ । ಶ್ರಾವಣ ಶುದ್ಧ ಪೌರ್ನಮಿ ಸೋಮವಾರ)

ಶ. ೧೭೮೭ [40]

ಶ. ೧೭೮೯ (ಕಲ್ಲಚ್ಚು) [41]

ಅಂ : ಶಕ ೧೭೮೯ ರಕ್ತಾಕ್ಷಿ ಸಂವತ್ಸರ ಭಾದ್ರಪದ ಶುದ್ಧ ೮ ಮಣಿ ರಾಮ ಪ್ರಾಗದತ್ತ ವಾಜಪೇಯಿಯಿವರು ಸವಣೂರಲ್ಲಿ ಜ್ಞಾನಭೋದಕ ಛಾಪಖಾನೆಯೊಳಗೆ ಹುಚ್ಚಣ್ಣ ಬಿನ್ ಸಂಗಪ್ಪಯ್ಯನ ಹಸ್ತಾಕ್ಷರಂಗಳಿಂದೆ ಛಾಪಿಸಲ್ಪಟ್ಟುದು.

ಶ. ೧೭೮೯ [42]

(ಪ್ರತಿಕಾರ : ಆಲಂದೆ ಪೌರಾಣಿಕ ಬಸವಯ್ಯ)

ಶ. ೧೭೯೧ [43]

ಆದಿ : - ; ಶ್ರೀ ಗುರುಭ್ಯೋ ನಮಃ

ಅಂ : ಶ್ರೀ ಜಯಾಭ್ಯುದಯ ಶಾಲಿವಾಹನ ಶಕ ವರುಷಂಗಳು ೧೭೯೧ನೆಯ ಪ್ರವರ್ತಮಾನಕ್ಕೆ ಸಲ್ಲುವಂತ್ತ ಶುಕ್ಲ ಸಂ॥ರದ ಮಾರ್ಗಶಿರ ಬ॥೯॥ ಚಂದ್ರವಾರ ತಾಸು ೧೨ ಸ್ವಾತಿ ನಕ್ಷತ್ರ ಯೀ ದಿವಸದಲ್ಲೂ ಬಸವಪುರಾಣ ಸಂಪೂರ್ಣ ಮುಗಿದುದು. ಶ್ರೀ ರಸ್ತು ಮಂಗಳ ಮಹಾ ಶ್ರೀ ಶ್ರೀ

ಶ್ರೀ ಹಂಪೆ ಹರೀಶ್ವರಾಯ ನಮಃ

ಶ್ರೀ ವಿರೂಪಾಕ್ಷಯಾ ನಮಃ

ಶ. ೧೭೯೨ [44] (ಪ್ರಮೋದ)

ಅಂ : ಪಾಲ್ಗುಣ ೧ ಶು ೧೧ ಗುರುವಾರ

ಶ. ೧೭೯೬ [45]

ಶ. ೧೮೩೭ [46] (ರಾಕ್ಷಸ)

ಆದಿ : ಆನಂದ ಸಂ. ಶ್ರಾವಣ ಬೌಳ ೫

ಅಂ : ಶ್ರಾವಣ ಶುಕ್ಲಪಕ್ಷ ೫ ಭಾನುವಾರ

ಶ. ೧೮೩೮ [47] (ಶುಕ್ಲ) (=೨೧-೧-೧೯೧೭)

ಅಂ : ಸಪ್ತಮಿ ಸೋಮವಾರ

ಆದಿ : - ; ತೋಂಟದ ಸಿದ್ಧೇಶ್ವರನ ಪಾದವೇ ಗತಿ

ಶ್ರೀ ಗುರು ಬಸವರಾಜ ದೇವರ ಪಾದವೇ ಗತಿ [48]

ಅಂ : ಶ್ರೀ ಮಳೆಯ ಮಲ್ಲಿಕಾರ್ಜುನದೇವರ ಶಿಷ್ಯರು ಕಲ್ಲೇಶ್ವರ ದೇವರ ಕಾರುಣ್ಯದ ಶಿಶುಗಳು ಚೆನವೀರಂಣೊಡೆಯರ ದೇವರ ಪುಸ್ತಕವೂ ॥ [49]

ಅಂಗೀರಸ ಸಂವತ್ಸ(ರ)ದ ಮಾರ್ಗಶಿರ ಶು ೧೫ ಸೋಮವಾರದಲೂ ಜ್ಞಾನಮೂರ್ತಿಯ ಶಿಷ್ಯರು ಅಲ್ಲಪಯ್ಯನ ಮಗ ಲಿಂಗಯ್ಯನ ಬರಹದಲ್ಲೂ ತುಱುವೆಕೆಱೆಯ ಸುಲ್ಲಪ(ಲ್ಲೊ)ಡೆಯರ ಪ್ರತಿಯಲ್ಲೂ ಹಾಲಕುಱಿಕೆಯ ಓದಿಸುವ ಮಲ್ಲಿಕಾರ್ಜುನದೇವರ ಪ್ರತಿಯಲ್ಲೂ ನೋಡಿ ಉಳ್ಳ ಹಾಂಗೆ ಬರೆದೆನು ಮಾಹೇಶ್ವರರು ತಿದ್ದಿಕೊಂಬುದು ಶರಣಾರ್ಥಿ - ಶರಣಾರ್ಥಿ.

ಯೀ ಪುರಾಣವನು ನಾಗಮಂಗಲದ ದಡಿಗದ ದೊಡ್ಡೊಡೆಯರ ತಂಮ ಹಲಗೆಯಪ್ಪನ ಮಕ್ಕಳು ಮಲ್ಲಪ್ಪನು ಪರ್ವತಯ್ಯನು ಪ್ರಭುಲಿಂಗನೂ ಈ ಮೂವರೂ, ಚೆಂನವೀರಂಣೊಡೆಯ ದೇವರಿಗೆ ಬರೆಸಿಕೊಟ್ಟರು. ಅವರುಗಳೂ ಅವರ ಶಿಷ್ಯರೂ ಮಕ್ಕಳು ಶರಣಾರ್ಥಿ - ಶರಣಾರ್ಥಿ - ಶರಣಾರ್ಥಿ ಮಂಗಳ ಮಹಾ ಶ್ರೀ ಶ್ರೀ ಶ್ರೀ

ಈ ಬಸವ ಪುರಾಣವನೂ ಚೆಂವನವೀರಂಣೊಡೆಯರು ನಮ್ಮ ಗುರು ಕಲ್ಲೇಶ್ವರ ದೇವರಿಗೆ ದೀರ್ಘದಂಡ ನಮಸ್ಕಾರವಂ ಮಾಡಿ ಎಲೆ ಸ್ವಾಮಿ ಈ ಪುರಾಣವನೂ ನಿಮ್ಮ ಕರುಣದಿಂದ ಓದಿ ಮಾಡುತ್ತಿದ್ದೆನು ಬರಯಿಸಿಕೊಡಬೇಕೆನಲು

ತಮ್ಮ ಕೃಪಾವಲೋಕನದಿಂದ ನೋಡಿ ಸಂತಯಿಸಿ ನಲ್ಮೆ ದೋರಿ 'ಎಲೆ ಮಗನೆ ನೀನೆ---ಈ ಬಸವಪುರಾಣಕ್ಕೆ ಮುಟ್ಟಿದಂತ ವಸ್ತುವಂ ಕೊಟ್ಟು ಬರೆಯಿಸಿ ಕೊಟ್ಟರು. ಕೊಡಲಾಗಿ ಇತ್ತಲೀ ಚೆನವೀರನು ಬದುಕಿದೆ ಬಾಳ್ದೆಂ ಕೃತಾರ್ಥನಾದೆಂ, ಚಾರುವೆಸೆದ ಶಿವಜ್ಞಾನಕರುಹನಾದೆಂ ಗುರುವೇ, ತಾಪತ್ರಯಾದಿಗಳ ನೀಗಿದೆಂ ನಿಜಗುರುವೆ, ಕೋಪ ಮೋಹಾದಿಗಳ ನಿಟ್ಟೊರೆಸಿದೆಂ ಗುರುವೆ, ಅಷ್ಟಮದಗಳ ಹಿಟ್ಟು ಗುಟ್ಟಿದಂ ಸದ್ಗುರುವೆ, ಕಷ್ಟಕರ್ಮವ ನಿಕ್ಕಿ ಮೆಟ್ಟಿದೆಂ ಸದ್ಗುರುವೆ, ಎಂದೀಪರಿಯಲಿ ಸ್ತೋತ್ರವಂ ಮಾಡಿ ನಮಸ್ಕರಿಸಿ ಯೀ ಬಸವ ಪುರಾಣದೊಳಗೆ ಇದ್ದಂಥ ಮಹಾಘನ ಪ್ರಮಥ ಗಣಂಗಳ ಕೃಪಾ ಪ್ರಸಾದವನುಭವಿಸಿ ಸಂತುಷ್ಟರಾಗಿ ಇರುತ್ತಿಹರು. ಇಂತಪ್ಪಸದ್ಗುರುವಂಥ ಈ ಪ್ರಮಥ ಗಣಂಗಳೆ ಶರಣಾರ್ಥಿ - ಶರಣಾರ್ಥಿ ಶರಣಾರ್ಥಿ ಮಂಗಳ ಮಹಾ ಶ್ರೀ ಶ್ರೀ ಶ್ರೀ

ಅಂ : (ತಾರಣ ಸಂ) ಕಾರ್ತೀಕ ಶುದ್ಧ ೧೦ರಲ್ಲಿ ಬುಕ್ಕರಾಯ ಸಮುದ್ರದ ಗವಿಮಠದ ಗುರುಶಾಂತ ಮೂರ್ತಿ ಕೃಪಾಪ್ರಸನ್ನ ಚನ್ನವೀರಸ್ವಾಮಿಗಳು ತಮ್ಮ ಸಮಯಾಚಾರ ಮೂರ್ತಿಗಳಾದ ಚೆನ್ನಮಲ್ಲಪ್ಪನವರಿಗೆ ತಮ್ಮ ಪ್ರಿಯ ಸೇವಕನಾದ ಕಂಬ್ಬಾಳ ಕೊಟ್ಟೂರಯ್ಯನ ಕೈಯಲ್ಲಿ ಬರಸಿದಂಥ ಬಸವೇಶ್ವರನ ಪುರಾಣ. [50]

ಅಂ : ಪ್ರಮಾಥಿನಾಮ ಸಂವತ್ಸರದ ಕಾರ್ತೀಕ ಮಾಸದ ಶುದ್ಧ ಪೌರ್ನಮಿ ಗುರುವಾರದ ಭರಣಿ ನಕ್ಷತ್ರದಲು ಬಸವರಾಜದೇವರ ಪುರಾಣ ಸಂಪೂರ್ಣ.

ಶ್ರೀಮತುಸಜ್ಜನ ಶುದ್ಧ ಸಿವಾಚಾರ ಸಂಪಂನ ಗುರುಲಿಂಗ ಜಂಗಮಪ್ರೇಮಿ ಆಚಾರ ಪ್ರತಿಪಾಲಕ ಅನಾಚಾರ ಸಂಹಾರ ಷಟ್ಸ್ಥಲ ಸಂಪಂನ ಪೃಥ್ವಿ ಮಹಾ ಮಹಂತಿನೊಳಗಾದ ಅವಧೂತ ಚೆಂನಬಸವರಾಜ ದೇವರ ದಿವ್ಯ ಕರಕಂಜಾತ ಮೊಜೆಯದ ನಾಯಕ ಶಿಖಾಮಣಿ ನಾಯಕ ನಿಃಕಳಂಕ ಅರಿನಾಯಕ ಗಜ ಸಿಂಹ ಲುಬ್ಧನಾಯ್ಕರ್ಗೆ ಉರಗ ಕುಲಕ್ಕೆ ಗರುಡ ವಿಶ್ವಾಸ ನಾಯಕ ಕಮಲ ಭಾಸ್ಕರ ಪ್ರಜಾಪಾಲನಾಯಕರ್ಗೆ ಶಿಖಾಮಣಿ ಅನಾತರ ಬಾಂಧವ ಶಿವಸಮಯಕ್ಕೆ ಪಕ್ಷ ಹುಲಿಯ ಜೋಡು ಹೊಕ್ಕುಳ ಗಂಠೆ ತಲೆಶವುಳ ಮುಖರ ಕನ್ನಡಿ ಎತ್ತಿದ ಖಂಡೇವು ಕಿತ್ತಭಲ್ಲೆಯಮಂ ಕಂಡು ಹಿಮ್ಮೆಟ್ಟುವ ನಾಯಕರ್ಗೆ ಭೀತಿ ಭಯಂಕರನಾಗಲ್ಪಟ್ಟ ಮಲ್ಲೆನಾಯಕರ ಗರ್ಭಾಬ್ಧಿ ಸುಧಾಕರ ಸೊಗಲಿ ನಾಯಕರ ಉದರೋದ್ಭವ ಮಧ್ಯನಾಯಕರಾದ ಸಿದ್ಧನಾಯಕರ ಗರ್ಭಾಬ್ಧಿ ಸುಧಾಕರನಾಗಲ್ಪಟ್ಟ ನಾಗನೂರಲ್ಲಿಗೆ ಅಧಿನಾಯಕರಾದಂಥ ಬರಮಿನಾಯಕರು ಅತ್ಯಂತ ಸಂಪ್ರೀತಿಯಿಂದ ಬಸವರಾಜದೇವರ ಪುರಾಣವ ಬರಸಿಕೊಂಡು ಪ್ರಾಣಪದಕವ ಮಾಡಿ ಇಟ್ಟುಕೊಂಡರು ಬರಹದ ಸಿದ್ಧಲಿಂಗ ದೇವರು ಬರದುಕೊಟ್ಟರು. ಆಯುರಾರೋಗ್ಯ ನಿರ್ವಿಘ್ನ ಮಸ್ತು ಶುಭ ಮಸ್ತು ಮಂಗಳ ಮಹಾ ಶ್ರೀ

ಆದಿ : - ; ಶ್ರೀ ವೀರಮಾಹೇಶ್ವರ ಪಾದವೇ ಗತಿ.

ಅಂ : ಪ್ರಮಾಥಿನಾಮ ಸಂವತ್ಸರದ ವೈಶಾಖಶುದ್ಧ ೧೦ಯಲ್ಲು ಬಸವೇಶ್ವರನ ಪುರಾಣ ಮಂಗಳ ಮಹಾ ಶ್ರೀ [52]

(ರಕ್ಷಾಕವಚದ ಮರದ ಹಲಗೆಯಲ್ಲಿ) ನಂದೀಶ್ವರ ನೀಲಕಂಠ ಸಿದ್ಧಲಿಂಗ ಬಸವ ಶ್ರೀ ಗುಡಾಣಚರದ ಗುರುಪುರದ ಮಠದ ಚರಮೂರ್ತಿ ಚಂನಬಸವೇಶ್ವರ ಸ್ವಾಮಿಗಳು [53]

ಅಂ : ಕ್ರೋಧಿ ಸಂವತ್ಸರ ಆಶಾಢ ಶುದ್ಧ ೫ ಸೋಮವಾರದಲ್ಲಿ ಪುರಾಣವನು ಸಿದ್ಧ ನಂಜೇದೇವರ ಶಿಷ್ಯರು ಶಿವಲಿಂಗದೇವರಿಗೆ ಬರದು ಷಟ್ಸ್ಥಲ ಚಕ್ರವರ್ತಿ ಶ್ರೀ ಸಾರ್ವಭೌಮನಪ್ಪ ಶ್ರೀ ಶಾಂತಮಲ್ಲಿಕಾರ್ಜುನ ದೇವರು ಸಂಪೂರ್ತಿಯನೆಯ್ದಿಸಿದರು. [54]

ಆದಿ : ಕಪ್ಪಿನಿಪತಿ ಚೆಂನಬಸವಯ್ಯ [55]

ಅಂ : ಗುರು ಕಪ್ಪಿನಿ ಪತಿ ಚೆಂಬಸವಯ್ಯ ಕೃಪಾನಿಧಿ ಶ್ರೀ ಸುತ್ತೂರ ಚರಮೂರ್ತಿಯ ಹೆಸರು ಬಸವಲಿಂಗ ದೇವರ ಪುರಾಣದ ಪುಸ್ತಕ

ಪುರಾಣದ ಗುರುಲಿಂಗಪ್ಪನಾರುಕ್ರಯ ಸನಾಯ ಮಾಡಿ ತೆಗೆದುಕೊಂಡು ಬಸವಲಿಂಗಪ್ಪನ ಕೈಯ್ಯಲ್ಲಿ ವಿಜಯ ಸಂ॥ದ ಮಾಗ ಬೋಳ ದಸಮಿಯಲ್ಲು ಸಿರಿವಂತಿಕೆ ಮುಟ್ಟದ ಪಚ್ಚಿಕಂತೆ ಬಸವಲಿಂಗಪ್ಪನವರು ಮುಕ್ತರಾದಲ್ಲಿ

ಅಂ : ವಿಕೃತಿ ನಾಮ ಸಂವತ್ಸರದ ಪುಸ್ಯ ಬ. ೬ ಷಷ್ಠಿಯಲ್ಲಿ ಮುಗಿಯಿತ್ತು. [56]

ಅಂ : ರೇವಣಸಿದ್ದದೇವರು ಕೊಟ್ಟ ಪುಸ್ತಕ ಗುರುಲಿಂಗದೇವರಿಗೆ---- ಗುರುಲಿಂಗದೇವರ ಪುಸ್ತಕ [57]

ಆದಿ : ----

ಅಂ : ವಿಕ್ರುತಿ ಸಂವತ್ಸರದ ಮಾಗಮಾಸದ ಸೋಮವಾರ ಅಷ್ಟ(ಮಿ)ಯಲ್ಲಿ ಚೆನವೀರದೇವರು ಬಸವೇಶ್ವರನ ಪೌರಾಣ ಬರದು ಸಮಾಪ್ತಿಯಾಯಿತ್ತು. [58]

ಅಂ : ಮುದಗಲ್ಲ ವಿರಕ್ತಮಠದಲ್ಲಿ ಶ್ರೀ ಸಿದ್ಧರಾಮಯ್ಯ ದೇವರ ಹಸ್ತದಿಂದ ಮುಕ್ತವಾಯಿತ್ತು. ನಿಂಮ ಶಿಶುವಿನ ಮೇಲೆ ದಯವಿಟ್ಟು ರಕ್ಷಿಸುವುದೂ. [59]

ಅಂ : ಕೃತಿ ಸಂವತ್ಸರದ ಮಾಗ ಮಾಸದ ಸೋಮವಾರದಲಿ ಅಪ್ಪಯ್ಯಲ್ಲಿ ಚೆಂವೀರದೇವರು ಬಸವೇಶ್ವರನ ಪುರಾಣ ಬರೆದು ಸಮಾಪ್ತಿಯಾಯಿತು. [60]

ಅಂ : ವಿಕ್ರಮನಾಮ ಸಂವತ್ಸರದ ವೈಶಾಖ ಬಹುಳ ಪಾಡ್ಯವಾ ಬೃಹಸ್ಪತಿ ವಾರಕ್ಕೆ ಬಸವಪುರಾಣವ ಬರೆದು ಆಯಿತು.

ದೊಡ್ಡ ಹಳ್ಳಿ ಸೊಡ್ಡಾಳಯ್ಯನವರ ಮನೆ ಪ್ರತಿ... [61]

ಅಂ : ಶ್ರೀ ಶಾಂತವೀರದೇವನ

ಭಾಸುರ ಚರಣಾಬ್ಜ ಭೃಂಗಶಿವಲಿಂಗಂ ಸಂ

ತೋಷಮಿಗೆ ಬರೆದ.... [62]

ಆದಿ : - ; ಶ್ರೀ ಗುರುರೇವಣೇಶಾಯ ನಮಃ

ಶ್ರೀ ಗುರು ಮಳೆಯ ಮಲ್ಲೇಶ್ವರಾಯ ನಮಃ

ಬಸವರಾಜದೇವರ ಪುರಾಣವ ಬರೆಯಲು ಶುಭ ಮಸ್ತು

ಶ್ರೀ ಗುರುಷಟ್ಸಲಾಚಾರ್ಯ ವಿರಕ್ತ ಚೆಂನವೀರೇಶ್ವರಾಯನ

ಶ್ರೀ ಗುರುಸಿದ್ದಲಿಂಗೇಶ್ವರಾಯ ನಮಃ

ಅಂ : ದುಂದುಭಿ ನಾಮ ಸಂವತ್ಸರದ ಚೈತ್ರ ಶುದ್ಧ ೩ ಗುರುವಾರವು ಬಸವಪುರಾಣ...

ಮಾಸ ಶ್ರೀ ಗೌರಿ ಪಾರ್ವತಿ ಪತಿ ನಿಮ್ಮಪಾದವೆ ಗತಿ --- ನೀಲಕಂಠಾಯ ನಿರ್ಮಳಾಯ ನಿತ್ಯ ನಿರಂಜನಾಯ ನಿಮ್ಮ ಪಾದಪದ್ಮಂಗಳಿಗೆ ಶರಣು ಶರಣಾರ್ಥಿ --- ಸಲಹು ಗುರುಗುಹೇಶ್ವರಾ ನಿಮ್ಮ ಶ್ರೀ ಶ್ರೀ [63]

ಆದಿ : - ; ಬಸವಂಣ ಚನ್ನಬಸವಣ್ಣ ಪ್ರಭುದೇವರು ಸಿದ್ಧರಾಮೇಶ್ವರ --- ಶುಭ ಮಸ್ತು ನಿರ್ವಿಘ್ನ ಮಸ್ತು

ಅಂ : ಫಲಬರ---ಬರೆದು ತಪ್ಪಂ

ನೆಲೆಗೊಳಿಸಿಜಡಬುದ್ಧಿಯಿಂದ

ತುಲು ಭೀಮಕವೀಂದ್ರ ವಿರಚಿತಮಪ್ಪ ಕೃತಿಯೊಳಗ

ಮೊಲದಿ ನಿಂದಾಲೇಖ ದೋಷಮ

ನ--ದು ಸುಜನರ್ಮೆಚ್ಚುವಂದದಿ

ನಲಿದು ಬರೆದಂ ಸುಗುಣವಾ ನಿಧಿ ನೀಲಕಂಠಾಯ್ಯಂ

ತಪ್ಪಂಬರ ದಾತಂ ಕಡು

ಜಡನಪ್ಪಾತನೆಂದು ಬೈಯ್ಯಳ್ ಬೇಡಂ ।

ತಪ್ಪುಕ್ಕು ಶುದ್ಧಮಕ್ಕುಂ

ತಪ್ಪಿಲ್ಲದೆ ಬರದೆ ಪ್ರತಿ ಸಮದಿಂದಂ ॥ [64]

ಆದಿ : ಶ್ರೀ ಶಾಂತವೃಷಭಯೇ ನಮಃ

ಮಳೆಯ (ಮ)ಲ್ಲೇಶಾನ್ವಯಾಂಬುಧಿ ಚಂದ್ರ ಪಲ್ಲಕ್ಕಿಯ ವೀರಣಾರ್ಯರ್ಯೇ ನಮಃ [65]

ಆದಿ : -- [66]

ಆದಿ : ಶ್ರೀ ಗುರು ಪ್ರಸನ್ನ --

ಶ್ರೀ ಗಣಾಧಿಪತಯೇ ನಮಃ [67]

ಅಂ : ಅಂತು ಸಂಧಿ ೭ಕಂ ಪದ ೪೯೫ ಕಂ ಮಂಗಳ ಮಹಾ ಶ್ರೀ ಅಂತು ಕಾಂಡ ೮ಕ್ಕಂ ಸಂಧಿ ೬೦ಕ್ಕಂ ಪದ ೩೦೫೭. ಇದಕ್ಕೆ ಸ್ತೋತ್ರ ಪದ ಆಶೀರ್ವಾದ ಪದಗಳಿಂದ ೨೧ ಪದನು ಕಳೆದು ಕಥಾ ಲಾವಣಿಗೆಗೆ ೩೧೩೧ ಪದನು ಭೀಮಕವಿಯ ಪ್ರೋಕ್ತಂಗಳು. ಗುರು ಭಕ್ತನ ಕಥೆ ಮೊದಲಾದವು ಪ್ರಕ್ಷಿಪ್ತಂಗಳು. ಆ ಕಥೆಗೆ ಸೇರಿದ ಪದಗಳು ಸಂಧಿ ೧೦ಕ್ಕಂ ಪದ ೫೬೭. ಅಂತೂ ಉಭಯಂಕೂಡಿ ಸಂಧಿ ೬೦ಕ್ಕಂ ಪದ ೩೬೭೧ಕ್ಕಂ ಮಂಗಳ ಮಹಾ ಶ್ರೀ ಅಂತು ಉಭಯಂ. [68]

ಅಂ : ಶ್ರೀ ಮದ್ಘನಲಿಂಗ ಚಕ್ರವರ್ತಿಗಳಾದ ರಾಜಾಧಿರಾಜ ಪೂಜಿತ ರಾಜಮಾನ್ಯ ಶ್ರೀ... ಹನಗಂಡಿ ಹಿರೇಮಠದ ಪ್ರಭುದೇವರ ಪುತ್ರ ಪಂಚಾಕ್ಷರಿಯಪ್ಪನವರ ಗರ್ಭ ಸಂಜಾತಕ ಚಲೂರಪ್ಪಾಟಿ ಸಾಲಿಮಠದ ಚನ್ನಬಸವಯ್ಯನು ತನ್ನ ಮನಿಯೊಳಗೆ ಓದಿ ಹಾಡುವುದರ ಪ್ರೀತಿಯಿಂದ ಬರಕೊಂಡು ಇದ್ದಾನೆ. [69]

ಅಂ : (ಕರಿ ಸಿದ್ದೇಶ್ವರ ಸ್ವಾಮಿ, ಬಸವ ಪ್ರಭುದೇವರ ಉಲ್ಲೇಕ + ಯುವ ನಾಮ ಸಂ । ಚೈತ್ರ ಬ. ಶು. ೧೦ ಚಂದ್ರವಾರದ ಉಲ್ಲೇಖವಿದೆ). [70]

ಅಂ : ಕಾವೇರಿ ದೇವರು ಪರ್ವತ ದೇವರಿಗೆ ಬರೆದ ಪುರಾಣ ಪ್ರತಿ ಸುಭಕ್ರುತು ಸಂವತ್ಸರದ ಪಾಲ್ಗುಣ ಬ ೮ ಯು ಸೋಮವಾರ ಉದೆಯದಲ್ಲಿ ಬರದು ಸಮಾಪ್ತಿಯಾಯಿತ್ತು. [71]

ಪ್ರತಿ ಸಂಧಿಯ ಆರಂಭದಲ್ಲಿ ಶ್ರೀ ಗುರು ಬೋಳ ಮಲ್ಲಿಕಾರ್ಜುನಾಯ ನಮಃ ಎಂದಿದೆ. [72]

ಅಂ : ಶ್ರೀಮತು ಮಧ್ಯಮ ಬಿಸಿಗೆಯ ಶುಭ ಕೃತಿ ನಾಮ ಸಂವತ್ಸರದ ಜೇಷ್ಠ ಬಹುಳ ಪಂಚಮಿ ಬೃಹಸ್ಪತಿ ವಾರದ ಯೇಳುತಾಸೊತ್ತಿನಲ್ಲಿ ಸಮಾಪ್ತಿಯಾಯಿತ್ತು...

ಒಂದು ಪದಕ್ಕೆ ೧೭ ಅಕ್ಷರವು. ಮೂರು ಸಾವಿರದ ಯಿಪ್ಪತ್ತೊಂದು (೩೨೨೧) ಪದಕ್ಕೆ ಯೆಷ್ಟು ಅಕ್ಷರವೆಂದರೆ ಮೂರು ಲಕ್ಷದ ಅರುವತ್ತಾವಂಬತ್ತು ಸಾವಿರದ ಮೂರ ನೂರ ನಾಲ್ವತ್ತೆರಡು ೩೬೯೩೪೨ ಅಕ್ಷರವು॥

॥ಗ್ರಂಥ॥ ಯಾದೃಶಂ ಪುಸ್ತಕಂ... [73]

ಆದಿ : - ; ಶ್ರೀ ಗುರುಸಿದ್ದಲಿಂಗಾಯ ನಮಃ (೧೪೧ನೇ)

ಶ್ರೀ ಗುರುಕೊಟ್ಟೂರಾಚಾರ್ಯರೇ ನಮಃ (೧೨೦ನೇ)

ಶ್ರೀಗುರುವೇ ಗತಿ (೧೩೨ ಹಿಂ)

ಅಂ : ಪ್ರಭವ ನಾಮ ಸಂವಚ್ಚರದಾ ಜೇಷ್ಠ ಮಾಸದಲ್ಲೂ ಕಾರಹುಂಣಿಮೆ ಸೋಮವಾರದಲ್ಲೂ ಯಿಟ್ಟಿಗಿಯ ವಿರಕ್ತಮಠದಲ್ಲೂ ಬೈಗಿನ ಹತ್ತೇನ ತಾಸಿನಲ್ಲಿ ಜೇಷ್ಠ ನಕ್ಷತ್ರದಲ್ಲಿ ಬಸವೇಶ್ವರನ ಚಾರಿತ್ರವೇ ಬಸವ ಪುರಾಣ ಸಮಾಪ್ತ ಮಂಗಳ ಮಹಾ ಶ್ರೀ ಶ್ರೀ ಶ್ರೀ [74]

ಅಂ : ಸೌಮ್ಯ ಸಂವತ್ಸರದ ಆಶ್ವವೈಜ ಶುದ್ಧ ೧೫ ಗುರುವಾರ ಸುಭ ಮೂಹೂರ್ತದಲ್ಲಿ ಆಡಹಳ್ಳಿಯ ಶಂಭುಗೌಡನ ಹಂಪಯ್ಯನ ಮಗ ಶಾಂತಮಲ್ಲನು ಬರೆದ ಬಸವೇಶ್ವರ ಪುರಾಣ ಮಂಗಲ ಮಹಾ ಶ್ರೀ ಶ್ರೀ ಶ್ರೀ [76]

- (೮೭ನೇ ಗರಿ ಹಿಂಭಾಗ) [76]

ಆದಿ : - [77]

ಅಂ : ಕೆಂಪು ಮಹಾಂತದೇವರು ಮೇಗಳಗೆರೆ ಕೆಂಚವೀರಯ್ಯನ ಕೈಯಲಿ ಬರಸಿದ ಪುಸ್ತಕ

ಅಂ : ಯೀ ಪುರಾಣವ ಬರದು , ಪಾರ್ತಿವ ಸಂವತ್ಸರದಲ್ಲೂ ಗಂಡುಗತ್ರಿ ಕರೆಬಸವರಾಜ ದೇವರು ಕುಮಾರು ಚೆನ್ನ ವೀರದೇವರು ಬರದು ಸಮಾ(ಪ್ತಿ)ಯಾಯಿತ್ತು ಮಂಗಳ ಮಹಾ [78]

ಆದಿ : ಗುರುಸಿದ್ದೇಶ್ವರಾಯ ನಮಃ [79]

ಅಂ : ಪ್ಲವ ಸಂವತ್ಸರ ವೈಶಾಖ ಬಹುಳ ೪೧೧ಲು ಬಸವೇಶ್ವರ ಪುರಾಣ ಬರದು ಸಂಪೂರ್ನ್ನವಾಯಿತು. [80]

ಅಂ : ತಾರಣ ಸಂ। ಕಾರ್ತೀಕ ಶು. ೧೦ಲ್ಲೂ ಬಸವೇಶ್ವರನ ಪುರಾಣ ಪುರಾತನ ಸಿದ್ಧರಾಮದೇವರಿಗೆ ಗವಿ ಮಠದ ಬಸವಲಿಂಗದೇವರು ಶಿವಲಿಂಗ ದೇವರ ಕೈಯ್ಯಲ್ಲು ಬರಿಯಿಸಿದರು. [81]

ಅಂ : ವರಚಿಲ್ಲುಮಲಗಿರಿ ಪಡವಿವಡಿ ಬಗಿಗೆ ಕಾರಣಕರ್ತರಾದ ಶಾಂತಸ್ವಾಮಿಗಳ ಕರಜಾತನಾದ ನಾಗಲಿಂಗಪ್ಪನ ಪುಸ್ತಕವು... ಗುರುವಾರಕ್ಕೆ ಬಸವಪುರಾಣ ಮೂರನೆ ಪ್ರಹರಕ್ಕೆ ಮುಗಿಯಿತು. [82]

ಅಂ : (ಭಿಕ್ಷದ ರಾಚೋಟ ಸ್ವಾಮಿ + ಸೌಮ್ಯ ಸಂವತ್ಸರದ ಉಲ್ಲೇಖ) [83]

ಅಂ : ಶ್ರೀಮದ್ ಸಚ್ಚಿದಾನಂದ ನಿತ್ಯ ಪರಿಪೂರ್ಣ ಅವಿರಳ ಪರಂಜ್ಯೋತಿ ಸ್ವರೂಪಾಯ ಮಾನರಾದಂತಹ ಶಿವಾನುಭವ ಚರಮೂರ್ತಿಗಳು ಆದಂತಹ ಬಸವಲಿಂಗಸ್ವಾಮಿಗಳವರ ಕರಕಂಜಾತರಾದ ಚಿತ್ತರಗಿ ಅನ್ನದಾನ ಸ್ವಾಮಿಗಳ ಪಾದಕ್ಕೆ ಬಸವೇಶ್ವರ ದೇವರ ಪುರಾಣವನ್ನು ಎಚರೆಡ್ಡಿ ಗೌಡಪ್ಪನ ಮುಮ್ಮಗ ಬಸವಲಿಂಗಪ್ಪ ಶರಣು ಮಾಡಿದ ಅಸಮಗ್ರ ಪುಸ್ತಕ. ಸುರಸನ ೧೨೧೭ ಪ್ರಭವ ನಾಮ ಸಂವತ್ಸರದ ಫಾಲ್ಗುಣ ೧ ಬಹುಳ ೮ ಭಾನುವಾರ ಮಾಡಿದ ಭಕ್ತಿಸಹ ಶ್ರೀ ಶ್ರೀ [84]

ಅಂ : ವಿಕೃತ ಸಂ॥ದ ಮಾಗ ಬಳ ಇಲ್ಲು ಬಯಿಲೂರ ವೀರಪ್ಪನಾಯಕನ ಮಗ ಭದ್ರಪ್ಪನು ಸುಬೇದಾರ ಲಿಂಗಪ್ಪನವರಿಗೆ ಬರಕೊಟ್ಟ ಬಸವಪುರಾಣದ ವಸ್ತುಕಕ್ಕೆ ಮಂಗಳ ಮಹಾ. [85]

ಆದಿ : -, ಶ್ರೀ ಶಿವಾಯ ನಮಃ, ಶ್ರೀಮದ್ ಬಸವೇಶ್ವರಾಯ

ಅಂ : ಶ್ರೀ ಮುಖ ಸಂವತ್ಸರ ವೈಶಾಖ ಬಹುಳ ೫ ಗುರುವಾರದಲ್ಲಿ ಶ್ರೀಮತುದದ್ದಿಗಿಹಳ್ಳಿಯ ಸಂಗನಬಸವರಾಜ ದೇವರಿಗೆ ಚನ್ನಬಸವರಾಜ ದೇವರು ಮಹಾಂತ ದೇವರು ಯಿವರೀರ್ವರನು ಕಳುಹಿಸಿ ಗುರುದೇವರ ಕೈಯಿಂದ ಬರೆಯಿಸಿ ಕೆರೆಗೋಡ ಲಿಂಗಣ್ಣಗೌಡ ಕಿತ್ತಾವರದ ಚನ್ನನಗೌಡ ಇವರೀರ್ವರೂ ಭಕ್ತಿಯಿಂದ ನಮಸ್ಕಾರವ ಮಾಡಿದ ಬಸವೇಶ್ವರ ದೇವರ

ಪುಸ್ತಕಕ್ಕೆ ಭದ್ರಂ ಭೂಯಾತ್ ಶ್ರೀಮದ್ ಪ್ರಥಮ ಗಣೇಭ್ಯೋ ನಮಃ [86]

ಆದಿ : -

ಅಂ : ಕೀಲಕಾಬ್ದದ ಚೈತ್ರ ಶುದ್ಧದ ಮೇಲೆ ನವ ಪೌರ್ಣಮಿಯು ಗುರುದಿನ ಕಾಲದೊಳಗೆ ಬಸವಪುರಾಣಂ ಸಂಪೂರ್ಣ। ಶೈಲಬಾಂಕ ಶಿಷ್ಯನ ಪಾದ ಪರಾಗಧೂಳಿವಿತಾಂಗ ವಿಶಾಲ ಪರಮೇಶ್ವರ ಶಿಷ್ಯನಿಂದ ಬರದು ಮುಗಿಸಿದನು. ಕೀಲಕ ಸಂವತ್ಸರದ ಚೈತ್ರ ಶುದ್ಧ ೧೫ ಗುರುವಾರ ಶುಭ ಲಗ್ನದಲ್ಲಿ ಕನಗೊಡಮಾಗಿ ಪರಮೇಶ್ವರಯಿದನ ಬರೆದ ಬಸವ ಪುರಾಣ.[87]

ಆದಿ : -

ಅಂ : ಹೇವಳಂಬಿ ಸಂವತ್ಸರದ ಪುಸ್ಯ ಮಾಸದ ಚೋಳ ಪಾಂಡ್ಯದ ಶುಕ್ರವಾರದಲ್ಲು ೨೪ ಗಳಿಗೆಯಲ್ಲಿಬಸವಪುರಾಣ ಬರದು... ಬಸವಣ್ಣ ಚನ್ನಬಸವಣ್ಣ ಪ್ರಭು ಮಡಿವಾಳ ಸಿದ್ಧರಾಮ ಮಹಾದೇವಿ ಮುಂತಾದ ಶಿವಗಣಂಗಳ ಪಾದವ ನೆನೆದು ನಾನು ಬದುಕಿದೆನಯ್ಯಾ ಗುರುಬಸವಸಿದ್ಧಸೋಮನಾಥ ಲಿಂಗವೇ ನೂತನ ಪುರಾತನ ಗಣಂಗಳ ನೆನೆದು ಬದುಕಿದನಯ್ಯ ಸಿದ್ಧಸೋಮನಾಥ ಲಿಂಗವೇ ಯಿನ್ನುಳಿದ ಶಿವಶರಣರ ಪಾದವ ನೆನೆನೆದು ಬದುಕಿದೆನಯ್ಯ ಗುರು ಬಸವಸಿದ್ಧನಾಥ ಲಿಂಗ(ವೇ).[88]

ಆದಿ : - ; ಶ್ರೀ ಗಣಾಧಿಪತಿಯೇ ನಮಃ

ಶ್ರೀ ಶಂಕರೇಶಾಯ ನಮಃ

ಶ್ರೀ ಮದ್ಗುರುಭ್ಯೋ ನಮಃ

ಶ್ರೀ ಸದಾಶಿವಾಯ ನಮಃ

ಪರಾಭವ ಸಂವತ್ಸರದ ಕಾರ್ತೀಕ ಮಾಸ ಶುಕ್ಲಪಕ್ಷ ಶು ೧೩ರವಿವಾರ ಬಸವೇಶ್ವರ ದೇವರ ಪುರಾಣ ಪ್ರಾರಂಭಕ್ಕೆ ಶುಭ ಮಸ್ತು

ಅಂ : ಶ್ರೀ ಪ್ಲವಂಗ ನಾಮ ಸಂವತ್ಸರದ ಶ್ರಾವಣ ಬ ೧೩ಯಲ್ಲು ಬಸವೇಶ್ವರ ಪುರಾಣ ಸಮಾಪ್ತಿ ಮಂಗಳ ನಿಭವಂತು ಮಂಗಳ ಮಸ್ತು ಶ್ರೀ ಶ್ರೀ ಶ್ರೀ [89]

ಆದಿ : -

ಶ್ರೀ ಮತ್ಸಕಲ ಪುರಾತ ನವನೂತನ ಗಣಾಭ್ಯೋ ನಮಃ ಬಸವೇಶ್ವರನ ಪುರಾಣಂ

ಅಂ : ಸ್ವಸ್ತಿ ಸಮಸ್ತ ಪ್ರಶಸ್ತಿ ಸಹಿತಂ ಶ್ರೀ ನಂದಿನಾಥ ಶ್ರೀ ಭೃಂಗಿನಾಥ ಶ್ರೀ ವೀರಭದ್ರದೇವರು ಮುಖ್ಯವಾದ (ಸಂ)ಖ್ಯಾತ ದೇವ ಪೃಥ್ವಿ ಮಹಾ ಗಣಂಗಳಿಗೆ ಶರಣು ಶರಣಾರ್ಥಿ ಮಂಗಳ ಮಹಾ ಶ್ರೀ ಶ್ರೀ ಶ್ರೀ. [90]

ಆದಿ : ಶ್ರೀಗುರು ದಕ್ಷಿಣಾ ಮೂರ್ತೀಯ ನಮಃ ;- [91]

ಅಂ : -; (ಹಾವೇರಿಯಲ್ಲಿರುವ ಕಟೇನಹಳ್ಳಿ ಶ್ರೀ ಬಸವಲಿಂಗಪ್ಪ ಚೆನ್ನಬಸವಪ್ಪ ನೆಲವಿಗಿ)[92]

(೫ನೇ ಗರಿ ಅಂಚಿನಲ್ಲಿ 'ನೆಲದುರುಗದ ನೀಲಕಂಠ ಬರೆದ ಪುಸ್ತಕ ಎಂದಿದೆ) [93]

ಆದಿ : -[94]

ಆದಿ : -[95]

ಅಡಿಟಿಪ್ಪಣಿ :

1. (ಓ) (ಸಂ) ಆರ್.ಸಿ. ಹಿರೇಮಠ, ೧೯೭೧.
2. (ಓ) ೫೪೨ ಕ.ಅ.ಕೇಂ. (ಬೆಂ)
3. (ಓ) ೪೯೮ (೧-೨೮೯) ವ.ವಾ.ಭಂ. (ಧಾ)
4. (ಓ) ೮೧೧ (೧-೨೪೫)
5. (ಓ) ೭೬ (೧-೧೯೬=೨)
6. (ಓ) ೧೦೫ /. ೧ (೧-೧೮೬) ಕ.ಅ.ಕೇಂ. (ಬೆಂ)
7. (ಓ) ೫೪೨(೧-೨೧೯) -''-
8. (ಓ) ೧೯೫೩/೧, (೧-೧೮೧) ಕ.ಅ.ಸಂ. (ಮೈ)
9.
10. (ಓ) ೩೮ (೧-೨೧೯) ಬೃಹಸ್ಮಠ, (ಸಿರಿಗೆರೆ)
11. ಕೆಳದಿ ಸೂಚಿ ಕ್ರಮಾಂಕ ೬೯ (ಪು. ೭೧)
12. ಡಾ|| ಬಿ.ನಂಜುಂಡಸ್ವಾಮಿಗಳ ಬಳಿ ನೋಡಿದ್ದು.
13. (ಓ) ೪೪೭ ಬೃಹನ್ಮಠ (ಚಿತ್ರದುರ್ಗ)
14. (ಓ) ೧-೧೭೫ ರಂಭಾಪುರಿ ಮಠ
15. ಬಸವಜರ್ನಲ್, ೩-೨-೨೨೨.
16. (ಓ) ೪೩೦/೧, (೧-೧೦೯) ತೋಂಟದಾರ್ಯ ಮಠ, ಗದಗ
17. (ಓ) ೮೦/೧, (೧-೨೧೪) ಕ.ಅ.ಪೀ.ಹ.ಸೂ. I-೧೮೦
18. (ಓ) ೨೩೯/೧, (೧-೧೧೫) ಬೃಹನ್ಮಠ ಸಿರಿಗೆರೆ.
19. (ಕಾ) (೧-೨೩೧) ಶ್ರೀ ಷಡಾಕ್ಷರ ಸ್ವಾಮಿ ಬೆಂಗಳೂರು.
20. (ಓ) ೧೩೦೧ (೧-೨೯೧ ಮ.ಸಂ.ಪ. (ಮೈ)
21. (ಓ) (೧೮೭ ಗರಿ) ತೋಂಟದಾರ್ಯ ಮಠ (ಗದಗ)
22. (ಕಾ) ೧೯೦, (೧-೩೨೯) -''-
23. (ಓ) ೨೦೧೩ (೧-೧೧೧) ಕ.ಸಂ.ಸಂ. (ಮೈ)
24. (ಓ) ೩೧೪೩ (೧-೨೧೦) ವ.ವಾ.ಭಂ. (ಧಾರವಾಡ)
25. (ಸಂ) ಆರ್.ಸಿ.ಹಿರೇಮಠ, ಧಾರವಾಡ, ೧೯೭೧.
26. (ಕಾ) ೩೧೨ (೧-೨೨೦) ಕ.ಹ.ವ.ಸೂ. III ೧೦೨೬ (ಮೈ)
27. (ಕಾ) (೧-೬೭೦) ಒಳ ಬಳ್ಳಾರಿ ತಾತನ ವರಮಠ
28. (ಕಾ) ೧೧ (೧೫-೩೩೪) ತೋಂಟದಾರ್ಯ ಮಠ, ಗದಗ.
29. (ಕಾ) ಲಿಂ|| ಬಿ.ಶಿವಶಂಕರಪ್ಪ, ನೆಹ್ರೂ ನಗರ, ಬೆಂಗಳೂರು.
30. (ಕಾ) ಕೆ.ಎ. ೫೮ (೧-೬೭೦) ಕ.ಹ.ವ.ಸು. IV-೧೦೨೪
31. (ಕಾ) ಕೆ.ಎ. ೫೮ (೧-೬೭೦) ಕ.ಹ.ವ.ಸು. IV-೧೦೨೫
32. ೧೬೧೨ (೧೨೨೫)

33. (ಓ) (೧-೨೮೭) ಬೃಹನ್ಮಠ (ಸಿರಿಗೆರೆ).
34. (ಕಾ) ೫೬ (೨೯೧) ಹುಬ್ಬಳ್ಳಿ ಸೂಚಿ ಕ್ರಮಾಂಕ ೨೦೩.
35. (ಕಾ) ೭೬೮ ಹಂಪಿ ಸೂಚಿ-೨ ಪುಟ ೯೮೯
36. (ಓ) ೩೫೧(೧-೨೦೪) ಕ.ಸಾ.ಪ.೭೧-೨, ೧೯೮೬-೮೭,
37. (ಕಾ) (೧-೩೭೯) ತೊಂಟದಾರ‍್ಯಮಠ, ಗದಗ.
38. (ಕಾ) ೧೧೯೪ (೧-೩೩೫) ಕ.ಅ.ಕೇಂ. (ಬೆಂ)
39. (ಕಾ) (೧-೨೮೫) ವ.ವಾ.ಭಂ. (ಧಾ)
40. (ಕಾ) ಒಳಬಳ್ಳಾರಿ ತಾತನವರ ಮಠ ಹೇಮಕೂಟ, ೪-೧೨, ೧೯೭೯, ೧೦-೧೧.
41. (ಕಾ) (೧-೩೩೬) ಕ.ಅ.ಕೇಂ. (ಬೆಂ)
42. ಆಲಂದೆ 'ಸಿದ್ದೇಶ್ವರಮಠ' ದಲ್ಲಿದೆ, ಶ.ಸಾ. ೪, ೫-೬, ೧೯೪೧, ೧೩೩
43. (ಕಾ) ೮೬೨/೨ (೧-೨೭೫) ಕ.ಅ.ಕೇಂ. (ಬೆಂ)
44. ೪೮೪, ವ.ವಾ.ಭಂ. (ಧಾ)
45. (ಕಾ) ೧೬೯ (೧-೨೭೭) ತೋಂಟದಾರ‍್ಯ ಮಠ, ಗದಗ.
46. ೪೮೦, ವ.ವಾ.ಭಂ. (ಧಾ.)
47. (ಕಾ) ೩೧೭೩ -''-
48. (ಓ) (೧-೨೨೫) ಒಳಬಳ್ಳಾರಿ ತಾತವನರ ಮಠ, ಹೇಮಕೂಟ, ೪.೧೨, ೧೯೭೯.೮.
49. (ಓ) (೧-೨೩೩) ದೇಗುಲಮಠ (ಕನಕಪುರ)
50. (ಓ) ಕೊಪ್ಪಳದ ಗವಿಮಠದಲ್ಲಿದೆ (ಸಂ) ಡಾ।। ಆರ್.ಸಿ.ಹಿರೇಮಠ, ೧೯೭೧.
51. (ಓ) (೧-೧೬೬) ತೋಂಟದಾರ‍್ಯಮಠ, ಗದಗ.
52. (ಓ) ಹಿರೇಮಠ ಗುಬ್ಬಿ ಹೊಸಳ್ಳಿ.
53. ಗುರುಪುರದ ಮಠ, ಮಂಗಳೂರು, ಬಸವಪಥ, ೨-೩, ೮೮.
54. (ಓ) ೩೯೦/೧ (೧-೧೫೯) ಬೃಹನ್ಮಠ (ಚಿತ್ರದುರ್ಗ)
55. (ಓ) ೫೪೬ (೧-೧೭೨) -''-
56. (ಓ) ೭೫೨ (೧-೧೨೨) -''-
57. (ಓ) ೮೧೫/೧ (೧-೧೨೨೯) -''-
58. (ಓ) ೯೩ (೧-೨೦೬) ಧರ್ಮಸ್ಥಲ
59. (ಓ) ೧೧೧ (೧-೧೮೧) -''-
60. (ಓ) (೧-೨೦೬) -''-; ವೀರಶೈವ, (೧-೩, ೧೯೬೦, ೩.
61. ಡಾ।। ಬಿ.ಕೆ.ಹಿರೇಮಠ, ಕನ್ನಡ ಹಸ್ತಪ್ರತಿಗಳು : ಒಂದು ಅಧ್ಯಯನ, ೧೯೯೨, ೧೬೯.
62. (ಓ) (೧-೧೧೨) ಜಿ.ಎಂ. ಉಮಾಪತಿ ಶಾಸ್ತ್ರಿಗಳು, ಧರ್ಮಸ್ಥಳ.
63. (ಓ) ೭೮೨ (೧-೧೪೮) ಕ.ಅ.ವೀ.ಹ.ಸೂ. VIII -೧೩೨.
64. (ಓ) ೭೮೮ (೧-೨೦೫) ಕ.ಅ.ವೀ.ಹ.ಸೂ. VIII -೧೩೧.
65. (ಓ) ೮೨೫ (೧-೧೫೭) ಕ.ಅ.ವೀ.ಹ.ಸೂ. IX -೧೬೯.
66. (ಕಾ) ೮೧೭ (೧-೨೫೫) ಕ.ಅ.ವೀ.ಹ.ಸೂ. IX -೧೭೮.

67. (ಶಾ) ೯೬೩ (೧-೪೩೦) ಕ.ಅ.ವೀ.ಹ.ಸೂ. X-೧೨೪.
68. (ಶಾ) ೧೧೯೩; ಬಿ.ಆರ್.ಹಿರೇಮಠ, ೧೯೮೪, ೨೦
69. (ಶಾ) ೨೮೮೭ ; ಬಿ.ಆರ್.ಹಿರೇಮಠ, ೧೩,೭.
70. ೩೨೩೬ (೧-೧೫೮) ವ.ಪಾ.ಭಂ. (ಧಾ)
71. (ಓ) (೧-೨೪೦) ಅಡವಿಯಮಠ, ಪಡುಗೂರು
72. (ಓ) ೨೨(೧೩-೧೬೦) ಕ.ಅ. ಕೇಂ. (ಬೆಂ)
73. (ಓ) ೫೬೭/೧, (೧-೧೭೭) -''-
74. (ಓ) ೮೮೫ (೧-೧೬೦) ಕ.ಅ.ಕೇಂ. (ಬೆಂ)
75. (ಓ) ೧೧೫೧ (೧-೨೨೩) -''-
76. (ಓ) ೧೧೭೮/೨, (೮೭-೧೮೭) -''-
77. (ಓ) (೧೭೧-೨೨೧) -''-
78. (ಓ) (೧-೧೮೦) ಕ.ಸಾ.ಪ. (ಬೆಂ)
79. (ಓ) ಶ್ರೀ ವೈ.ಸಿ. ಪಾಟೀಲ (ಬೆಂ.)
80. (ಓ) ೪೭೦ (೩೧-೧೮೮) ಕ.ಹ.ವ.ಸೂ. III, ೧೦೨೪
81. (ಓ) (೧-೨೧೫) ಕು.ಕ.ಅಂ.ಸಂ. (ಮೈ)
82. (ಶಾ) (೧-೨೭೪) -''-
83. (ಸಂ) ಡಾ|| ಆರ್.ಸಿ.ಹಿರೇಮಠ, ೧೯೭೧.
84. (ಓ) ೩೦ (   ) ಸಿದ್ದಗಂಗಾಮಠ, ಸಿದ್ದಗಂಗೆ
85. (ಓ) (೧-೧೦೯) ಬೃಹನ್ಮಠ, ಸಿರಿಗೆರೆ
86. (ಓ) ೨೧(೧-೨೧೫) ಹಂಪಿ ಸೂಚಿ I, ೩೩೦೯
87. (ಓ) ೨೫(೧-೩೦೩) -''- I, ೩೪೦
88. (ಓ) ೨೦೧/೧, (೧-೧೫೫) ಹಂಪಿ ಸೂಚಿ I, ೩೪೩
89. (ಓ) ೨೨೨ (೧-೯೮) ಹಂಪಿ ಸೂಚಿ I, ೩೪೨
90. (ಓ) ೩೨೮ (೧-೯೮) ಹಂಪಿ ಸೂಚಿ I, ೩೪೧
91. (ಶಾ) ೫೯೧ (೧-೧೨೭) ಹಂಪಿ ಸೂಚಿ II, ೨೯೧
92. (ಸಂ) ಇ.ಸಿ.ಪಾವಟೆ ಇ. ಧಾರವಾಡ. ೧೯೬೯.
93. (ಓ) (೧-೯೫) ಕರಿಸಿದ್ದೇಶ್ವರ ಮಠ (ಹೊನ್ನಾವಳಿ)
94. (ಓ) ೧೬೩ (೨೦೬) ಹುಬ್ಬಳ್ಳಿ ಸೂಚಿ - ೨೦೫
95. (ಓ) ೮೨ (೨೫೦) ಹುಬ್ಬಳ್ಳಿ ಸೂಚಿ - ೨೦೪.

ಅನುಬಂಧ :

೧. ದೈವಗಳು

೨. ಮಠಾಧೀಶರು

೩. ವ್ಯಕ್ತಿಗಳು

೪. ಸ್ಥಳಗಳು

೫. ಮಠಗಳು

೬. ಆಡಳಿತಗಾರರು

೭. ಸಂಕೀರ್ಣ

೮. ಸಂವತ್ಸರ

೯. ವಾರದ ದಿನಗಳು

೧೦. ನಕ್ಷತ್ರಗಳು

೧೧. ಲಗ್ನ

೧೨. ಯೋಗಗಳು

೧೩. ಮಾಸ

೧೪. ಪಾರಿಭಾಷಿಕ ಪದಗಳು

(ವೀರಶೈವಕ್ಕೆ ಸಂಬಂಧಿಸಿದಂತೆ)

೧೫. ಇತರ

ನಾನು ನಾನಾಗಲು

ಸಾಶಿಮ.

ಆತ್ಮಕಥನ

ಎನ್ನ ನಾನರಿಯದಂದು ಮುನ್ನ ನೀನೇನಾಗಿರ್ದೆ ಹೇಳಾ ?

ಮುನ್ನ ನೀ ಬಾಯಮುಚ್ಚಿಕೊಂಡಿರ್ದೆ ಎಂಬುದ

ನಾ ನಿನ್ನ ಕಣ್ಣಿಂದ ಕಂಡೆನು!

ಎನ್ನ ನಾನರಿದ ಬಳಿಕ ಇನ್ನು ನೀ ಬಾಯ್ದೆರೆದು ಮಾತನಾಡಿದಡೆ

ಅದನೆನ್ನ ಕಣ್ಣಿಂದ ಕಂಡು ನಾಚಿದೆ ನೋಡಾ!

ಎನ್ನ ಕಾಂಬ ನಿನಗೆ ನಿನ್ನ ಕಾಂಬ ಎನಗೆ

ಸಂಚದ ನೋಟ ಒಂದೆ ನೋಡಾ!

ಗುಹೇಶ್ವರ, ನಿನ್ನ ಬೆಡಗಿನ ಬಿನ್ನಾಣವರಿದೆ ನೋಡಾ !

- ಅಲ್ಲಮಪ್ರಭು

ನಾನು ನಾನಾಗಲು ನಿನ್ನಂದ 'ನಾನು' ಬಿಡಿಸಿಕೊಳ್ಳಬೇಕು. ಅಂದಿನವರೆಗೆ ನಾನು ನಾನಾಗಲಾರೆ!

ಕಡೆಯಲ್ಲಿ ,

ನಾನು ನೀನೆ

ನೀನು ನಾನೆ,

ನಾವಿಬ್ಬರೂ ಅಭಿನ್ನರು.

ನಾನು ನಾನಾಗಲು

ಡಾ। ಸಾ.ಶಿ. ಮರುಳಯ್ಯ

ಈ ಜಗತ್ತಿಗೆ ನಾನು ಅವತರಿಸಿದ್ದು ತುಂಬಾ ತಡವಾಗಿ. ಎಂಟು ವರ್ಷಕ್ಕೆ ನನ್ನ ಮಗ ದಂಟು ಅಂದ ಅನ್ನೊ ಹಾಗೆ ನಮ್ಮ ಪಾಪ ಹುಟ್ಟಿದ್ದು ನನ್ನ ಮದುವೆಯಾದ 'ಎಂಟು ವರ್ಷಕ್ಕೆ' ಎನ್ನುತ್ತಿದ್ದರು ನಮ್ಮಮ್ಮ. ನಾನು ನಮ್ಮಮ್ಮನಿಗೆ ಪಾಪ! ಅಯ್ಯೋ ಪಾಪ! ಅಲ್ಲ; ಇದು ತಾವು ಮಾಡಿದ ಪಾಪ ಅಂತಲೂ ಅಲ್ಲ. ನಮ್ಮಮ್ಮನಿಗೆ ಹಾಗೆಂದು ಕರೆಯುವಲ್ಲಿ ತುಂಬಾ ಅಕ್ಕರೆ. ನಾನು ಮದುವೆಯಾಗಿ ಮಕ್ಕಳಾಗಿ ನನ್ನ ಮಗ ಮತ್ತು ಮಗಳಿಗೆ ಮಕ್ಕಳಾಗಿದ್ದರೂ ನಮ್ಮಮ್ಮನಿಗೆ ನಾನು ಪಾಪನೆ! ಅದು ಅವಳ ಒಲವಿನ ಸಂಬೋಧನೆ ಕೂಡ. ನಾನು ನಮ್ಮಮ್ಮನನ್ನು 'ಅಮ್ಮ' ಎಂದು ಕರೆಯುತ್ತಿರಲಿಲ್ಲ. 'ಅವ್ವ' ಎನ್ನುತ್ತಿದ್ದೆ. ನಮ್ಮ ದೊಡ್ಡಮ್ಮನ ಮಕ್ಕಳು ತಮ್ಮ ತಾಯಿಯನ್ನು 'ಅಮ್ಮ' ಎಂದು ಕರೆಯುತ್ತಿದ್ದರು. ನನಗೂ ಹಾಗೆ ಕರೆಯಬೇಕು ಅನ್ನಿಸಿತು. ಏಕೆ ಅಂದರೆ 'ಅವ್ವ' ಎನ್ನೋದು ಹಳ್ಳಿಗರ ಭಾಷೆ; ಅಮ್ಮ ಅನ್ನೋದು ಸುಸಂಸ್ಕೃತರ ನುಡಿ ಎಂಬ ಭಾವನೆ. ಅದರಿಂದಾಗಿ ನಾನು ಎಂಟು ಹತ್ತು ವರ್ಷದವನಾದ ಮೇಲೆ 'ಅಮ್ಮ' ಅನ್ನಲು ಶುರು ಮಾಡಿದೆ. ನನ್ನ ತಮ್ಮನಿಗೂ ಹಾಗನ್ನಲು ಕಲಿಸಿದೆ.

ನಮ್ಮ ತಾಯಿ ಸಿದ್ದಮ್ಮನವರು, ತಂದೆ ಶಿವರುದ್ರಯ್ಯನವರು. ನನ್ನ ಹುಟ್ಟೂರು ಸಾಸಲು. ಅದಿರುವುದು ತುಮಕೂರು ಜಿಲ್ಲೆಯಲ್ಲಿ, ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ, ಶೆಟ್ಟೀಕೆರೆ ಸಮ್ಮತಿನಲ್ಲಿ. ನಮ್ಮೂರು ನಾನು ಚಿಕ್ಕವನಿದ್ದಾಗ ನನ್ನಷ್ಟೇ ಚಿಕ್ಕದು. ಸುಮಾರು ಎಪ್ಪತ್ತು - ಎಂಬತ್ತು ಮನೆಗಳ ಪುಟ್ಟ ಗ್ರಾಮ. ಈಗ ನೂರು - ನೂರೈವತ್ತು ಮನೆಗಳಿವೆ. ಅದರ ಸುತ್ತ ತೆಂಗಿನ ತೋಟಗಳು. ಪೂರ್ವ ದಿಕ್ಕಿನಲ್ಲಿ ಹಬ್ಬಿಗೆ ಗುಡ್ಡ, ದಕ್ಷಿಣದಲ್ಲಿ ಕಾಡು. ನಮ್ಮ ತೋಟದ ಪಕ್ಕದಲ್ಲೇ ಹಿರೀಹಳ್ಳ. ಅದು ನಮ್ಮ ಜೀವನದಿ, ಕೃಷ್ಣೆ ಕಾವೇರಿ, ಗೋದಾವರಿ ಎಲ್ಲ! ಊರ ಹತ್ತಿರ ಬಂದಾಗಲೇ ಊರು ಕಾಣಿಸೋದು.

ಅಲ್ಲಿನವರೆಗೂ ತೆಂಗು, ಮಾವು ಮೊದಲಾದ ಮರಗಿಡಗಳಿಂದ ಆವೃತವಾದ ಹಸಿರು ದ್ವೀಪ. ಊರಿಗೆ ಮೊದಲು ಸಿಕ್ಕುವುದು ಎಡ-ಬಲ ಭಾಗಗಳಿಗಿರುವ ಎರಡು ಚಿಕ್ಕ ಕಟ್ಟೆಗಳು ಅವು ಊರಿಗೆ ಬರುವವರಿಗೆ ಎತ್ತುವ ಆರತಿ ತಟ್ಟೆಗಳಿದ್ದಂತೆ! ಊರ ಮುಂದೆ ಒಂದು ಅಶ್ವತ್ಥಕಟ್ಟೆ. ಮಧ್ಯದ ಅರಳೀಮರವನ್ನು ಯಾವ ಪುಣ್ಯಾತ್ಮ ಯಾವಾಗ ಹಾಕಿದನೊ ತಿಳಿಯದು. ಅದೊಂದು ಕಳಶದಂತೆ ಛತ್ರಿ ತೆರೆದುಕೊಂಡು ಬೃಹದಾಕಾರವಾಗಿ ನಿಂತಿದೆ. ಸಾಸಲಿಗೆ ಶೋಭೆ ತಂದಿದೆ ಕೂಡ. ಬನಶಂಕರಿ ನಮ್ಮ ಗ್ರಾಮ ದೇವತೆ. ಜೊತೆಯಲ್ಲಿ ಶ್ರೀ ಮರುಳುಸಿದ್ದೇಶ್ವರ ಸ್ವಾಮಿಯೂ ಇದ್ದಾನೆ. ಊರಾಚೆ ಮೂಡಣ ದಿಕ್ಕಿನಲ್ಲಿ ಸುಮಾರು ಕಾಲು ಕಿಲೋಮೀಟರ್‌ನಲ್ಲಿ ಒಂದು ಸುಂದರ ಹಿಪ್ಪೆಮರದ ತೋಪು. ಅಲ್ಲಿ ಹಣ್ಣು ಕೊಡುವ ಜಮ್ಮನೇರಿಲೆ ಮರವೂ ಇದೆ. ಅದರ ದಕ್ಷಿಣ ಭಾಗದಲ್ಲಿ ಬನಶಂಕರಿ ಗುಡಿ, ಗುಡಿಯಲ್ಲಿ ಬನಶಂಕರಿಯ ಸ್ಥಾವರ ಮೂರ್ತಿ; ಮರೆಮೂರ್ತಿ (ಊತ್ಸವದೇವತೆ) ಊರೊಳಗಿನ ದೇಗುಲದಲ್ಲಿ. ಅಂದಿನ ಜನಸಂಖ್ಯೆ ಹೆಚ್ಚೇನು ಇಲ್ಲದಿದ್ದರೂ ವೀರಶೈವರು ಬಹುಸಂಖ್ಯಾತರು, ಅಕ್ಕಸಾಲಿಗರು, ನಾಯಕರು, ಸರ್ಪಒಕ್ಕಲಿಗರು, ಅಗಸರು, ಗಾಣಿಗರು, ಹೊಲೆಯರು, ಮಾದಿಗರು, ಅಲ್ಪಸಂಖ್ಯಾತರು. ರಾಮೋಜಿರಾವ್ ಎಂಬ ಮರಾಠೆಯವರು ದರ್ಜಿಗಳು ಕುಟುಂಬ ಸಮೇತ ಬಂದು ಬಹಳ ವರ್ಷಗಳಿದ್ದು ಅನಂತರ ಚಿಕ್ಕನಾಯಕನಹಳ್ಳಿ, ತಿಪಟೂರು ಮೊದಲಾದೆಡೆಗಳಿಗೆ ಹೋದರು. ಆದರೆ ಎಲ್ಲಿಂದಲೋ ಬಂದ ಹುಸೇನ್ ಸಾಬರ ಕುಟುಂಬ ನೆಲೆಯೂರಿನಿಂತಿದೆ. ಈಗಲೂ ಇದೆ ಊರವರೊಡನೆ ಸೌಹಾರ್ದದ ಬಾಳುವೆ ಮಾಡುತ್ತಾ. ಬ್ರಾಹ್ಮಣರದು ಒಂದೇ ಒಂದು ಮನೆ. ಮಕ್ಕಳೆಲ್ಲಾ ನಗರಸೇರಿಕೊಂಡ ಮೇಲೆ, ನಾವ್ಯಾಕಿಲ್ಲಿರೋದು ಅಂತಾ ಶ್ಯಾನುಭೋಗ ನಾರಾಯಣಪ್ಪನವರು ನಮ್ಮೂರು ಬಿಟ್ಟು ಕಂದಿಕೆರೆಗೆ ಹೋದದ್ದು ನನಗೆ ಗೊತ್ತು.

ಸಾಸಲು ಚಿಕ್ಕಹಳ್ಳಿಯಾದರೂ ಸ್ವಲ್ಪ ಹೆಚ್ಚು ಕಡಿಮೆ ಹಳೇ ಮೈಸೂರಿನ ಅರ್ಧ ಭಾಗದ ವ್ಯವಹಾರ ಕೇಂದ್ರವಾಗಿತ್ತು. ತುಮಕೂರು, ತಿಪಟೂರು, ಗುಬ್ಬಿ, ಶಿವಮೊಗ್ಗ, ಚಿತ್ರದುರ್ಗ ಮೊದಲಾದ ಕಡೆಯ ವ್ಯಾಪಾರಿಗಳು ಸಾಸಲಿಗೆ ಬಂದು ಕೈಸಾಲ ಪಡೆದುಕೊಂಡು ಹೋಗುತ್ತಿದ್ದರು. ಬಳ್ಳಾರಿ ವ್ಯಾಪಾರ ಮಾಡುವವರ ಲೇವಾದೇವಿ ನಮ್ಮೂರಲ್ಲಿತ್ತು. ಸಾಸಲು ಪುಟ್ಟಣ್ಣ ಶೆಟ್ಟರು, ರೇವಣ್ಣ ಶೆಟ್ಟರು, ಚನ್ನವೀರ ಶೆಟ್ಟರು, ಕೊಟ್ಟೂರ ಶೆಟ್ಟರು, ಗುದ್ಲಪ್ಪ ಶೆಟ್ಟರು - ಇವರೇ ಮೊದಲಾದ ಲಿಂಗಾಯತ ಶೆಟ್ಟರು ಆಗರ್ಭ ಶ್ರೀಮಂತರಿದ್ದರು. ಒಳ್ಳೆ ವ್ಯವಹಾರವಿಟ್ಟುಕೊಂಡಿದ್ದರು. ಊರಿನ ಅಭಿವೃದ್ಧಿ ಕಾರ್ಯಗಳಿಗೆ ಅವರ ನೆರವು ನಿರಂತರ ಇರುತ್ತಿತ್ತು. ಊರಿನ ಅರ್ಧ ಜನಕ್ಕೆ ಸಾಸಲು ಸಾಹುಕಾರರ ಮನೆಯಿಂದಲೇ ಬೆಳಕು. ಸಂಜೆ ಆಯಿತೆಂದರೆ ಎಲ್ಲರೂ ಅವರ ಮನೆಗೆ ಹೋಗಿ ದೀಪ ಹಚ್ಚಿಕೊಂಡು ಬಂದು ತಮ್ಮ ತಮ್ಮ ಮನೆಗಳನ್ನು ಬೆಳಗಿಸಿಕೊಳ್ಳುತ್ತಿದ್ದರು. ಬೆಂಕಿ ಕಡ್ಡಿ ಪರಿಚಯ ಇರಲಿಲ್ಲ ಎಂದಲ್ಲ. ಹೆಚ್ಚು ಜನ ಬೆಂಕಿಪೊಟ್ಟಣಕೊಳ್ಳಲು ಹಣ ವ್ಯಯ ಮಾಡುತ್ತಿರಲಿಲ್ಲ. ಊರಿನವರಾರೂ ಹಾಲು ಹಣ್ಣುಗಳನ್ನು ಮಾರಿದ್ದೂ ಇಲ್ಲ, ಕೊಂಡದ್ದೂ ಇಲ್ಲ. ನಮಗೆಲ್ಲಾ ಮರಿಬಸವೇಗೌಡರ ಮನೆಯ ಮಜ್ಜಿಗೆ ನಿರಂತರ ಸಿಗುತ್ತಿತ್ತು.

ಊರ ಪಟೇಲರು ಊರಿಗೆ ಯಜಮಾನರು. ಹಾಗೇ ಉಗ್ರೇಗೌಡರ ಸಿದ್ದಪ್ಪನವರು ನಮ್ಮೂರ ಗೌರವಸ್ಥರು. ಊರ ಜಗಳಗಳಿದ್ದರೆ ಈ ಗಣ್ಯರೇ ತೀರ್ಪು ಕೊಟ್ಟು ಸರಿಪಡಿಸುತ್ತಿದ್ದರು. ಊರಲ್ಲಿ ಕಳ್ಳತನವಾಗಲಿ, ಕೊಲೆಯಾಗಲಿ, ಕುಡಿತ ಜೂಜು ಮೊದಲಾದವುಗಳಾವೂ ಇರಲೇ ಇಲ್ಲ. ಪೊಲೀಸ್‌ನವನೇನಾದರೂ ಬಂದರೆ ಜನ ಹೆದರಿ ಓಡುತ್ತಿದ್ದರು. ಯಾವುದೇ ಕೇಸು ಚಿಕ್ಕನಾಯಕನಹಳ್ಳಿ ಪೊಲೀಸ್ ಸ್ಟೇಷನ್ನಿನಲ್ಲಿ ದಾಖಲಾದದ್ದನ್ನು ನಾನು ಕಾಣೆ. ಆದರೆ ಈಗಿನ ಮಾತು ಬೇರೆ!

ಊರಿನಲ್ಲಿ ಯಾರ ಮನೆಯಲ್ಲೇ ಶುಭ ಅಶುಭ ಕಾರ್ಯಗಳಾದರೂ ಎಲ್ಲರೂ ಪಾಲ್ಗೊಳ್ಳುತ್ತಿದ್ದರು. ನನ್ನ ಮದುವೆಯನ್ನೇ ಹೇಳುವುದಾದರೆ, ಗಾಣಿಗರ ತಿಮ್ಮಪ್ಪ ಎಣ್ಣೆ ತಂದು ದೀಪ ಹಚ್ಚಿದ, ಮಡಿವಾಳರ ಕರಿಯಮ್ಮ ಪತ್ತು ಹಚ್ಚಿಕೊಂಡು ಕುಳಿತರು, ಮಾದಿಗರ ಹಟ್ಟಿಯವರು ಕಾಡಿನಿಂದ ಸೌದೆ ಕಡಿದು ತಂದು ರಾಶಿ ಹಾಕಿದರು. ಹೊಲೆರಟ್ಟಿಯವರು ಓಲಗ ಮಾಡಿದಳು. ನಾಯಕರು (ಅವರನ್ನು ಪಾಳೇಗಾರರು ಎಂದನ್ನುತ್ತೇವೆ) ಮದುವೆ ಚಪ್ಪರ ಹಾಕಿದರು. ಕುಳವಾಡಿ ಊರ ಬೀದಿ ಗುಡಿಸಿದ, ಊರಿನ ಹೆಣ್ಣು ಮಕ್ಕಳು ಹಪ್ಪಳ ಸೊಂಡಿಗೆ ಇಟ್ಟರು, ಯುವಕರು ಬತ್ತ ಕುಟ್ಟಿದರು. ಬಳೆತೊಡಿಸಲು ಬಳೆಗಾರರ ಗುಂಡಪ್ಪನ ಹೆಂಡತಿ ಮತ್ತು ಮದುಮಗನ ಕ್ಷೌರಕ್ಕೆ ವೀರಣ್ಣ - ಇವರು ಮಾತ್ರ ಶೆಟ್ಟೀಕೆರೆಯಿಂದ ಬರಬೇಕು. ಇವರಿಗಾರಿಗೂ

ಕೂಲಿಕೊಡುವುದಿಲ್ಲ, ಕೇವಲ ಆಯಾ ಕೊಡುವುದು ಅಂದರೆ ವರ್ಷಕ್ಕಿಷ್ಟು ಕಾಳು ಕಡಿ, ತೆಂಗಿನ ಕಾಯಿ ಇತ್ಯಾದಿ ಇದು ರಿವಾಜು. ಊರಿನ ಕೆಲಸಗಳೂ ಇದೇ ರೀತಿ. ಜಾತ್ರೆಯಾದರೆ ಭೈರಾಚಾರ್ಯರು ಬಂದು ತೇರಿಗೆ ಬೇಕಾಗುವ ಮರದ ಸಾಮಾನುಗಳನ್ನು ಒದಗಿಸಬೇಕು. ಪುಟ್ಟಚಾರ್ಯರು ಕರಡಿವಾದ್ಯ ಬಾರಿಸಬೇಕು. ಮಡಿವಾಳರ ಗಿರಿಯಪ್ಪ ಪತ್ತು ಹಿಡಿಯಬೇಕು, ಕರಿಯಪ್ಪ ನಡೆಮುಡಿ ಹಾಸಬೇಕು.

ಹೀಗೆ ಊರು ಬಿಟ್ಟಿ, ದೇವರ ಬಿಟ್ಟಿ ಮೊದಲಾಗಿ ಊರಿನ ಯಾವುದೇ ಕೋಮಿನ ಯಾವುದೇ ಕಾರ್ಯ ಸಹಕಾರ ಮನೋಭಾವದಿಂದಲೇ ನಡೆಯುತ್ತಿತ್ತು.

ಆದರೆ ಈಗ, ಕಾಲ ಬದಲು, ಬದುಕು ಸಂಕೀರ್ಣ, ಸಮಸ್ಯೆಗಳು ಬಹಳ, ಮನೋಧರ್ಮಗಳೂ ಭಿನ್ನ. ಆದರೂ ಬೇರೆ ಊರುಗಳಿಗೆ ಹೋಲಿಸಿದರೆ ನಮ್ಮೂರು ಸಾವಿರಪಾಲು ಉತ್ತಮ.

ಸಾಸಲು ಶಿವರುದ್ರಯ್ಯನವರು ಮತ್ತು ಸಿದ್ದಮ್ಮನವರ ಜೇಷ್ಠ ಪುತ್ರನಾದ ನಾನು ಹುಟ್ಟಿದ್ದು ಜನವರಿ ೨೮, ೧೯೩೧. ನಾನಾದ ನಾಲ್ಕು ವರ್ಷಗಳ ಮೇಲೆ ಒಬ್ಬ ತಮ್ಮ, ಹೆಸರು ಶಾಂತಮೂರ್ತಿ. ನಾವಿಬ್ಬರೇ ಮಕ್ಕಳು. ಅನಂತರ ಶಾಂತಮೂರ್ತಿ ಹೆಸರಿಗೆ ತಕ್ಕ ಶಾಂತಸ್ವಭಾವದವನು. ನಾನಂತೂ ಮರುಳ, ದುರುಳನಲ್ಲ, ಆದರೆ ಅರೆ ಮರುಳ.

ನನ್ನ ಪ್ರಾಥಮಿಕ ಶಿಕ್ಷಣ ನಮ್ಮೂರಲ್ಲೇ ನಡೆಯಿತು. ರಾಮಚಂದ್ರಯ್ಯನವರು, ಗುಂಡೂರಾಯರು, ರಾಮಣ್ಣ ಮೇಷ್ಟ್ರು ಇವರೇ ಮೊದಲಾದ ಸದ್ಗುರುಗಳ ಶಿಷ್ಯ ನಾನು. ಆದರೆ ನನ್ನ ತಂದೆಯೇ ನನ್ನ ಮೊದಲ ಗುರು. ನಮ್ಮದು ಓಚಯ್ಯಗಳ ಮನೆತನ. ನಮ್ಮ ದೊಡ್ಡಪ್ಪ, ನನ್ನ ತಂದೆ, ನಮ್ಮ ಸೋದರಮಾವ (ಶೆಟ್ಟೀಕೆರೆಯಲ್ಲಿದ್ದರು) ಎಲ್ಲರೂ ಓಚಯ್ಯಗಳೇ. ನನ್ನ ತಂದೆಯ ಶಾಲೆ ಊರ ಮುಂದಿನ ಬಸವಣ್ಣನ ಗುಡಿಯ ಪಡಸಾಲೆಯಲ್ಲಿ, ಹಗಲೆಲ್ಲಾ ಹೊಲ ತೋಟಗಳಲ್ಲಿ ಕೆಲಸ ಮಾಡಿ ಬಂದ ರೈತರ ಮಕ್ಕಳು ಸಂಜೆ ಅಲ್ಲಿ ಸೇರುತ್ತಿದ್ದರು. ನನ್ನ ತಂದೆ ಒಂದು ಲಾಟೀನು ಹಚ್ಚಿ ಪ್ರಾರ್ಥನೆ ಮಾಡಿಸಿ, ಪಾಠ ಶುರು ಮಾಡುತ್ತಿದ್ದರು. ಅಕ್ಷರ ಕಲಿಯಬೇಕಾದರೆ ಎಲ್ಲರೂ ನೆಲದ ಮೇಲೆ ಹಾಸಿದ ಮರಳಿನ ಮೇಲೆ ಬರೆಯಬೇಕಾಗಿತ್ತು. ಬರೆಯುವ ಬೆರಳು ಗಾಯವಾಗದಿರಲಿ ಎಂದು ಅದಕ್ಕೆ ಗೆಜ್ಜುಗವನ್ನು ಕೊರೆದು ಒಂದು ಟೋಪಿಮಾಡಿ ತರ್ಜನಿ ಬೆರಳಿಗೆ ಹಾಕಿಕೊಳ್ಳುತ್ತಿದ್ದುಂಟು. ಅಕ್ಷರಾಭ್ಯಾಸದ ನಂತರ 'ಅಮರಕೋಶ' ಬಾಯಿಪಾಠ. ತದನಂತರ ಜೈಮಿನಿ ಭಾರತ, ರಾಜಶೇಖರ ವಿಳಾಸ, ಹರಿಭಕ್ತಿಸಾರ, ನಳಚರಿತ್ರೆ ಮೊದಲಾದ ಕಾವ್ಯಗಳ ಓದು, ಅರ್ಥ. ಪಾಠದ ಕಡೆಯಲ್ಲಿ ಮಗ್ಗಿ, ಕೋಷ್ಟಕ ಇತ್ಯಾದಿಗಳ ಬಾಯಿಪಾಠ.

ನನ್ನ ತಂದೆ ನನ್ನನ್ನು ತಮ್ಮ ಶಾಲೆಗೆ ನಿತ್ಯವೂ ಕೈ ಹಿಡಿದು ನಡೆಸಿಕೊಂಡು ಹೋಗುತ್ತಿದ್ದರು. ನಾನವರ ಪಕ್ಕದಲ್ಲಿ, ಅವರ ತೊಡೆ ಒರಗಿಕೊಂಡು ಕುಳಿತುಕೊಳ್ಳುತ್ತಿದ್ದೆ. ಪಾಠಗಳನ್ನೆಲ್ಲಾ ಕೇಳುತ್ತಿದ್ದೆ. ಇತರರಂತೆ ನಾನೂ ಮರಳಿನ ಮೇಲೆ ಅಕ್ಷರ ಬರೆಯಲು ಯತ್ನಿಸುತ್ತಿದ್ದೆ. ನನ್ನ ತಂದೆ ಕಾವ್ಯಗಳನ್ನು ಓದುವ, ವ್ಯಾಖ್ಯಾನಿಸುವ ವೈಖರಿ ನನ್ನನ್ನು ಬೆರಗುಗೊಳಿಸುತ್ತಿತ್ತು. ಆಗ ಕೇಳುತ್ತಿದ್ದೆ 'ಅಯ್ಯಾ (ನನ್ನ ತಂದೆಯನ್ನು 'ಅಯ್ಯ' ಎಂದೇ ಕರೆಯುತ್ತಿದ್ದೆವು) ಈ ಕಾವ್ಯಗಳನ್ನು ದೇವರು ಬರೆಯುತ್ತಾನೋ ಅಥವಾ ಮನುಷ್ಯರೋ' ಎಂದು. ಅದಕ್ಕೆ ಅಯ್ಯಾ ಹೇಳಿದರು 'ದೇವರಲ್ಲ, ಬರೆಯೋರು ಮನುಷ್ಯರೆ' ಎಂದು. 'ಹಾಗಾದರೆ ನಾನು ಮನುಷ್ಯ ನಾನೂ ಬರೆಯಬಹುದೋ?' 'ಓಹೋ, ಖಂಡಿತ ಬರೆಯಬಹುದು. ಆದರೆ ದೇವರ ಕೃಪೆ ಇರಬೇಕು; ಅಷ್ಟೇ. ನನಗೆ ಖುಷಿ ಆಯಿತು. ಜೊತೆಯಲ್ಲೇ 'ಅಹುದು ದೇವರ ಕೃಪೆ ಹೇಗೆ ಎನ್ನುವ ಚಿಂತೆಯೂ ಬಂತು. ಆಗ ಅದು ನನಗೆ ಅರ್ಥವಾಗಲಿಲ್ಲ. ಅದನ್ನು ಅಲ್ಲಿಗೇ ಬಿಟ್ಟು ಅಮರ ಕಲಿಯಲು ಪ್ರಾರಂಭಿಸಿದೆ.

ನನಗೆ ಪ್ರಾಥಮಿಕ ಶಾಲೆಯಲ್ಲಿ ಪ್ರವೇಶ ಸಿಕ್ಕಿದ್ದು, ನಾನು ಆರೂವರೆ ವರ್ಷದವನಾಗಿದ್ದಾಗ. ಎಲ್ಲಾ ಮಕ್ಕಳಿಗೂ ಅಷ್ಟು ವಯಸ್ಸಾಗಿರಬೇಕು ಎಂದು ಹೇಳುತ್ತಿತ್ತು ಸರ್ಕಾರದ ಕಾನೂನು. ಆ ಮೊದಲ ತರಗತಿ ಎರಡು ವರ್ಷದ ಅವಧಿಯುಳ್ಳದ್ದಾಗಿತ್ತು. ಮೊದಲ ವರ್ಷ 'ಎ' ಕ್ಲಾಸ್, ಎರಡನೆ ವರ್ಷ 'ಬಿ' ಕ್ಲಾಸ್. ಅವೆರಡರಲ್ಲಿ ತೇರ್ಗಡೆಯಾದರೆ ಮುಂದಿನ ತರಗತಿಗೆ ಪ್ರವೇಶಾವಕಾಶವಿತ್ತು. ನಾನು ನನ್ನ ಪ್ರಾಥಮಿಕ ಶಾಲೆಯ ಪ್ರಥಮ ಪ್ರವೇಶದ ಹೊತ್ತಿಗೆ ತ್ರಿಕಾಂಡ ಅಮರ ಕೋಶದಲ್ಲಿ ಬಹು

ಭಾಗವನ್ನು ಬಾಯಿಪಾಠ ಮಾಡಿದ್ದೆ. ನಮ್ಮಮ್ಮನ ಮಾತಿನಲ್ಲಿ ಹೇಳುವುದಾದರೆ - ಹುರುಳೀ ಕಾಳು ಹುರಿದ ಹಾಗೆ ಪಟಪಟ ಹೇಳುತ್ತಿದ್ದೆ! ನನಗೆ 'ಎ' ಕ್ಲಾಸ್, 'ಬಿ' ಕ್ಲಾಸ್‌ಗಳ ಲೆಕ್ಕ ಇರಲಿಲ್ಲ. ನಾಲ್ಕನೇ ತರಗತಿಗಿಟ್ಟಿದ್ದ ಕನಕದಾಸರ 'ಹರಿಭಕ್ತಸಾರ'ದ ಅನೇಕ ಪದ್ಯಗಳನ್ನು ಹಾಡುತ್ತಿದ್ದೆ. ಮೊದಲ ವರ್ಷದ ರಜಾ ದಿನದಲ್ಲಿ ನನಗೆ ಶಿವದೀಕ್ಷೆ ಆಯಿತು. ಕುಪ್ಪೂರು ಗದ್ದಿಗೆ ಮಠಾಧೀಶರಾದ ಷಟ್‌ಸ್ಥಲ ಬ್ರಹ್ಮಿ ಶ್ರೀ ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರು ನನಗೆ, ನನ್ನಂತೆ ಅನೇಕ ಜಂಗಮ ವಟುಗಳಿಗೆ ಶಿವದೀಕ್ಷೆ ದಯಪಾಲಿಸಿದರು. ಶೆಟ್ಟೀಕೆರೆಯಲ್ಲಿ, ಅದೇ ಬೇಸಗೆಯಲ್ಲಿ ನನಗೊಂದು ಸುವರ್ಣಾವಕಾಶ ಸಿಕ್ಕಿತು. ಕೆಲವರು ಶ್ರೀಮಂತರು ಉತ್ತರ ಭಾರತ ಪ್ರವಾಸ ಕೈಕೊಂಡರು. ಅವರಲ್ಲಿ ಯಳನಡು ಶಿವನಂಜಪ್ಪ ಶೆಟ್ಟರು ಒಬ್ಬರು. ಅವರು ಶುದ್ಧ ಪ್ರಸಾದಿಗಳು. ಅವರ ಮನೆಯಲ್ಲಿ ಪ್ರತಿದಿನವೂ ಜಂಗಮಾರಾಧನೆ ಆಗಲೇಬೇಕು. ಪಾದೋದಕ ಪ್ರಸಾದವಾದ ಮೇಲೆ ಅವರು ಊಟ ಮಾಡುತ್ತಿದ್ದುದು. ಅವರ ನಿತ್ಯ ಜಂಗಮ ಸೇವೆಗೆ ಬಾಲದೀಕ್ಷಾ ವಟುವಾದ ನನ್ನನ್ನು ನಮ್ಮ ದೊಡ್ಡಪ್ಪನವರು ಆಯ್ಕೆ ಮಾಡಿದರು. ನಮ್ಮ ದೊಡ್ಡಪ್ಪನವರು ಸಿದ್ಧಾಂತಿ ಗುರುಬಸವಶಾಸ್ತ್ರಿಗಳು. ಬೆಂಗಳೂರು ಚಿಕ್ಕಪೇಟೆಯಲ್ಲಿ, ದಿವಾನ್ ಖಾನಾ ಲೇನ್‌ನಲ್ಲಿ ಕಠಿಸಿದ್ಧ ದೇವರ ಮಠದ ಒಡೆಯರಾಗಿದ್ದರು. ಜಾತಕ, ಕುಂಡಲಿ ಇತ್ಯಾದಿಗಳನ್ನು ಬರೆಯುವುದರಲ್ಲಿ ತುಂಬಾ ಹೆಸರಾಗಿದ್ದರು. ಅವರ ಸಲಹೆಯಂತೆ ನನ್ನ ಭಾರತ ದರ್ಶನದ ಅವಕಾಶ ಸಿಕ್ಕಿತು. ಅದರಲ್ಲಿ ನನಗೆ ಸಿಕ್ಕ ಅತ್ಯಂತ ಹೆಚ್ಚಿನ ಲಾಭವೆಂದರೆ ಮಹಾತ್ಮಾ ಗಾಂಧೀಜಿಯವರ ದರ್ಶನ. ಸಬರಮತಿ ಆಶ್ರಮದಲ್ಲಿ ಅವರ ದರ್ಶನ ಪಡೆದರು ಎಲ್ಲರೂ. ನಮ್ಮ ದೊಡ್ಡಪ್ಪನವರು ಗಾಂಧೀಜಿಯ ಮುಂದೆ ನನ್ನನ್ನು ನಿಲ್ಲಿಸಿ ನಮಸ್ಕಾರ ಮಾಡು ಅಂದರು. ನಾನು ದೂರದಿಂದಲೇ ಅಡ್ಡಬಿದ್ದೆ. ಗಾಂಧಿ ಯಾರು? ಅವರ ಮಹಾತ್ಮೆ ಎಂಥದು, ನನಗೊಂದೂ ಗೊತ್ತಿರಲಿಲ್ಲ. ನೋಡಿದಷ್ಟು ಮಾತ್ರ ನನ್ನ ನೆನಪಿನಲ್ಲಿ ಉಳಿದಿದೆ. ಅದು ನನ್ನ ಜೀವಿತದ ಅತ್ಯಂತ ಪುಣ್ಯದಿನ ಎಂದು ಅನಂತರ ವರ್ಷಗಳಲ್ಲಿ ನನಗೆ ಭಾಸವಾಯಿತು.

ನನ್ನಲ್ಲಿ ಸ್ವಾಭಿಮಾನವನ್ನು ತುಂಬಿದವರು ನಮ್ಮಮ್ಮ; ಕಲಾಭಿರುಚಿ ಮೂಡಿಸಿದವರು ನಮ್ಮಯ್ಯ, ನಾನು ಏಳೆಂಟು ವರ್ಷದ ಹುಡುಗ, ನಮ್ಮೂರಿನಲ್ಲಿ ಪ್ರಹ್ಲಾದ ಚರಿತ್ರೆ ನಾಟಕ. ನಾನು ಪ್ರಹ್ಲಾದ. ನಾನೊಬ್ಬನೇ ಚಿಕ್ಕವನು. ಮಿಕ್ಕವರೆಲ್ಲಾ ತುಂಬಾ ವಯಸ್ಸಾದವರು. ಹಿರಣ್ಯಕಶಿಪು ಪಾತ್ರಧಾರಿ ಕಪಿನಯ್ಯನನ್ನು ಕಂಡರೆ ನನಗೆ ಭಯವಾಗುತ್ತಿತ್ತು. ಖಯಾದು ಪಾತ್ರಧಾರಿ ಬೊಮ್ಮಣ್ಣ, ನನ್ನನ್ನು ತುಂಬಾ ಮುದ್ದು ಮಾಡುತ್ತಿದ್ದರು. ಪ್ರಹ್ಲಾದ ನಾಟಕದ ಒಂದು ದೃಶ್ಯದಲ್ಲಿ ಹಿರಣ್ಯಕಶಿಪು ಹೇಳಿಕೊಟ್ಟದ್ದನ್ನು ಪ್ರಹ್ಲಾದ ಹೇಳದಿದ್ದಾಗ, ಮಗನನ್ನು ತಿರಸ್ಕರಿಸಿ ದೂರಬಿಸಾಡುತ್ತಾನೆ ಕಶಿಪು. ಕಪಿನಯ್ಯ (ಹಿರಣ್ಯ ಕಶಿಪು) ನನ್ನನ್ನು ಎತ್ತಿಕೊಂಡು ಮುದ್ದಾಡಿ 'ಓಂ ನಮಃ ಶಿವಾಯ' ಅನ್ನು ಅಂದರು. ನಾನು (ಪ್ರಹ್ಲಾದ) ಓಂ ನಮೋ ನಾರಾಯಣಾಯ' ಅಂದೆ. ಏಕ್‌ದಂ ಎಸೆದುಬಿಟ್ಟರು. ನಾನು ರಂಗಭೂಮಿಯ ಒಂದು ಮೂಲೆಗೆ ಹೋಗಿ ಬಿದ್ದೆ. ಬಿದ್ದವನು ಎದ್ದು ಓಡಿಬಿಟ್ಟೆ. ಸ್ಟೇಜ್ ಹಾಕಿದ್ದು ನಮ್ಮ ಮನೆಯ ಮುಂದೆಯೇ. ಓಡಿ ಹೋಗಿ ನಮ್ಮಮ್ಮನ ತೊಡೆಯ ಮೇಲೆ ಮಲಗಿಕೊಂಡು ನಾನು ಸ್ಟೇಜಿಗೆ ಹೋಗೋಲ್ಲ ಅಂತಾ ಅಳ್ತಾ ಮಲಗಿದೆ. ಪೆಟ್ಟಿಗೆ ಮಾಸ್ತರು, ನಿರ್ದೇಶಕರು ಎಲ್ಲ ಆಗಿದ್ದ ಆಲೂರು ಸಂಗಯ್ಯನವರು ಮತ್ತಿತರರು ಬಂದು ನನ್ನನ್ನು ಮುದ್ದಿಸಿದರು. ನಮ್ಮಯ್ಯ ಶುಂಠಿ ಪೆಪ್ಪರ್‌ಮಿಂಟ್ ಕೊಟ್ಟು ರಮಿಸಿ ಎತ್ತಿಕೊಂಡು ಹೋದರು. ಮುಖದ ಬಣ್ಣ ಅಳಿಸಿತ್ತು ಮತ್ತೆ ಮೇಕಪ್ ಆಯಿತು. ಕಪಿನಯ್ಯ 'ಹೆದರಬೇಡ ನಾನು ನಿನ್ನನ್ನು ಏನೂ ಮಾಡುವುದಿಲ್ಲ ಮರೀ' ಎಂದು ಪುಸಲಾಯಿಸಿದರು. ಅಂತೂ ನಾಟಕ ಆಯಿತು. ಅದು ಬೆಳಕು ಹರಿಯುವತನಕ, ಸೂರ್ಯೋದಯ ಆದಾಗ ಕಂಬವನ್ನು ಭೇದಿಸಿಬಂದ ನರಸಿಂಹನ ದರ್ಶನ. ನಿದ್ದೆ ಬಂದಂತಾದಾಗಲೆಲ್ಲಾ ನಮ್ಮಯ್ಯ ಸ್ಟೇಜಿನ ಹೊರಗಡೆ ನನ್ನನ್ನು ಎತ್ತಿಕೊಂಡು ಹೋಗುತ್ತಿದ್ದುದು, ನನಗೆ ಶುಂಠಿ ಪೆಪ್ಪರ್‌ಮೆಂಟ್ ಕೊಡುತ್ತಿದ್ದುದು ನನಗೀಗಲೂ ನೆನಪಿದೆ.

ನಮ್ಮಮ್ಮ ಕಲಿಸಿದ ಸ್ವಾಭಿಮಾನಕ್ಕೆ ಒಂದು ನಿದರ್ಶನ: ನಮ್ಮ ದೊಡ್ಡಪ್ಪ ನಮ್ಮಯ್ಯನಿಗೆ ಪಾಲು ಕೊಟ್ಟು ಕಳುಹಿಸಿದರು. ನಾನು ನಮ್ಮಜ್ಜಿ (ರುದ್ರಮ್ಮಜ್ಜಿ) ಮೊರ, ಕುಕ್ಕೆ, ಕುಡಿಕೆ ಮಡಿಕೆ ಹಿಡಿದುಕೊಂಡು ಒಂದು ಸಣ್ಣ ಮನೆಗೆ ವಲಸೆ ಹೋದೆವು. ನಮ್ಮಮ್ಮ ನನ್ನ ತಮ್ಮನನ್ನು ಕೊಂಕುಳಲ್ಲಿ ಎತ್ತಿಕೊಂಡು ಕೈಯಲ್ಲಿ ರಾಗಿ ಚೀಲ ಹಿಡಿದುಕೊಂಡು ಬಂದರು.

ಹೊಸದಾಗಿ ಒಲೆ ಹತ್ತಿಸಲು ನಮ್ಮಮ್ಮನ ಚಿಕ್ಕಪ್ಪನ ಮಗ ನಂಜುಂಡಯ್ಯ ಎಂಬುವರು ಶನಿವಾರ, ಭಾನುವಾರ ಬಂದು ಒಲೆ ಹಾಕುವುದು, ಗೋಡೆ ಕಟ್ಟುವುದು, ನೆಲ ಸರಿಮಾಡುವುದು ಇತ್ಯಾದಿ ಕೆಲಸಗಳಲ್ಲಿ ನೆರವಾಗುತ್ತಿದ್ದರಂತೆ. ನಾನು ನಂಜಮಾಮನನ್ನು ಬಹಳ ಹಚ್ಚಿಕೊಳ್ಳುತ್ತಿದ್ದೆ. ಅವರು ತಿಪಟೂರು ಹೈಸ್ಕೂಲ್‌ನಲ್ಲಿ ಓದುತ್ತಿದ್ದರು. ವಾರಕ್ಕೆ ಎರಡು ದಿನ ಊರಿಗೆ ಬರುತ್ತಿದ್ದರು. ಅವರ ಬರವನ್ನೇ ಕಾಯುತ್ತಿದ್ದೆ. ಏಕೆಂದರೆ ಅವರು ಕಿತ್ತಲೆತೊಳೆ ಆಕಾರದ ಪೆಪ್ಪರ್‌ಮೆಂಟ್ ತರುತ್ತಿದ್ದರು ನನಗಾಗಿ. ಆ ವರ್ಷ ನಮ್ಮಯ್ಯ ತಿಪಟೂರು ಅರಸೀಕೆರೆ ಬಳಿಯಿರುವ ಗುಂಡಕಾನಹಳ್ಳಿಯಲ್ಲೋ, ಮೈಲನಹಳ್ಳಿಯಲ್ಲೊ ಕೂಲಿಮಠ ನಡೆಸುತ್ತಿದ್ದರು. ಅವರಿಗೆ ವರ್ಷಕ್ಕೆ ೧೦-೧೫ ರೂಪಾಯಿ ಸಂಬಳ. ಆದರೆ ಭತ್ತ, ರಾಗಿ ಇತ್ಯಾದಿಗಳು ಬೇರೆ ಆಯಾ ಬರುತ್ತಿತ್ತು. ಇಷ್ಟಾದರೂ ಸಂಸಾರವನ್ನು ಸಾಗಿಸುವುದು ಕಷ್ಟವಾಗುತ್ತಿತ್ತು ನಮ್ಮಮ್ಮನಿಗೆ. ಅದನ್ನು ತುಂಬಲು ಆಕೆ ಹೊಲದ ಕೆಲಸಕ್ಕೆ ಕೂಲಿ ಹೋಗುತ್ತಿದ್ದರಂತೆ. ಆ ದಿನಗಳಲ್ಲಿ ಬೆಳಗ್ಗೆ ೧೦ ಗಂಟೆಯಿಂದ ಸಂಜೆ ೬ ಗಂಟೆಯವರೆಗೆ ಹೊಲದಲ್ಲಿ ಕೆಲಸ ಮಾಡಿದರೆ ಹೆಣ್ಣಾಳಿಗೆ ಒಂದೂವರೆ ಆಣೆ (ಸುಮಾರು ೧೦ ಪೈಸೆ), ಗಂಡಾಳಿಗೆ ನಾಲ್ಕಾಣೆ (ಸುಮಾರು ೨೫ ಪೈಸೆ) ದಿನಗೂಲಿ ಎಂಬುದು. ನಮ್ಮಮ್ಮ ಹಾಗೆ ದುಡಿದು ಎಂಬತ್ತು ಮನೆಗಳಿರೊ ನಮ್ಮೂರಿನಲ್ಲಿ ನಮ್ಮದೂ ಒಂದು ಒಕ್ಕಲು ಅಂತಾ ಅನ್ನಿಸಿದಳು.

ಆ ವರ್ಷದ ಯುಗಾದಿ ಹಬ್ಬಕ್ಕೆ ನಮ್ಮಯ್ಯ ಊರಿಗೆ ಬರಲಿಲ್ಲ. ನಮ್ಮಮ್ಮ ಹಬ್ಬ ಮಾಡುವುದಕ್ಕೆ ಮನೆಯಲ್ಲಿ ಏನೇನು ಇರಲ್ಲಿಲ್ಲ. ನಮ್ಮಮ್ಮ, ನಮ್ಮಜ್ಜಿ ಮತ್ತು ಚಿಕ್ಕ ಮಕ್ಕಳಾದ ನಾನು, ನನ್ನ ತಮ್ಮ ಆ ದಿನ ರಾಗಿ ಅಂಬಲಿಗೆ ತೆಂಗಿನಕಾಯಿ ಬೆಲ್ಲದ ಚಟ್ನಿ ಬೆರಸಿ ತಿಂದೆವು. ಅಮ್ಮ ರಾಗಿ ರೊಟ್ಟಿ ಸುಟ್ಟು ಕೊಟ್ಟಿದ್ದರು. ಅದನ್ನು ತಿಂದು ತೃಪ್ತರಾದೆವು. ನನಗದನ್ನು ಕೊಡುತ್ತಾ ನಮ್ಮಮ್ಮ 'ಪಾಪು, ಯಾರೇ ಕರೆಯಲಿ ಈ ದಿನ ಅವರ ಮನೆಗೆ ಊಟಕ್ಕೆ ಹೋಗಬೇಡ. ನಮ್ಮ ಮನೆಯಲ್ಲಿ ಭಾರೀ ಊಟ ಮಾಡಿದೆ ಅಂತಾ ಹೇಳಬೇಕು' ಅಂತಾ ಹೇಳಿಕೊಟ್ಟರು. ನಮ್ಮ ಬಡತನ ತಿಳಿದಿದ್ದ ದಾಯಾದಿ ಬಂದು ನನ್ನನ್ನು, 'ಬಾ ಹೋಳಿಗೆ ಉಂಡು ಬರುವೆಯಂತೆ' ಎಂದು ಕರೆದಾಗ, 'ಇಲ್ಲ ಚಿಕ್ಕಪ್ಪಾ, ನಾನು ಹೊಟ್ಟೆ ಬಿರಿಯುವಂತೆ ಹೋಳಿಗೆ ತಿಂದಿದ್ದೇನೆ' ಅಂತ ಹೇಳಿ ತಪ್ಪಿಸಿಕೊಂಡೆ. ನನಗಾಗ ನಾಲ್ಕೈದು ವರ್ಷ ವಯಸ್ಸು.

'ಬಡತನಕ್ಕೆ ಉಂಬುವ ಚಿಂತೆ' ಎಂಬ ಅಂಬಿಗರ ಚೌಡಯ್ಯನ ಮಾತು ಸತ್ಯ ಎಂಬುದಕ್ಕೆ ಒಂದು ನಿದರ್ಶನ : ಸ್ಕೂಲಿನಿಂದ ಬಂದ ನನಗೆ ಹೊಟ್ಟೆ ಹಸಿದಿತ್ತು. ಕೊಟ್ಟೂರು ಶೆಟ್ಟರ ಹೊಸ ಮನೆಯ ಗೃಹಪ್ರವೇಶ ಕಾರ್ಯಕ್ರಮ. ಅಲ್ಲಿ ಊಟ ಹಾಕ್ತಾರೆ ಅಂತಾ ತಿಳೀತು. ನಾನೂ ಊಟ ಮಾಡುವ ಆಸೆಯಿಂದ ಹೋದೆ. ದೊಡ್ಡ ಶ್ರೀಮಂತರು ಅನ್ನದಾನ ಬಹಳ ಮಾಡುವರು. ಆದರೆ ಊಟಕ್ಕೆ ಬಡಿಸುವವರ ಬಡಾಯಿ ತುಂಬಾ. ನಾವು ಸುಮಾರು ೨೫-೩೦ ಹುಡುಗರು ಗಿಜಿಬಿಜಿ ಮಾತನಾಡುತ್ತ ಮುತ್ತುಗದ ಎಲೆಗೆ ನೀರು ಹಾಕಿ ತಟ್ಟುತ್ತಾ ಕುಳಿತೆವು ಸಾಲಾಗಿ. ಒಬ್ಬ ವ್ಯಕ್ತಿ ಬಂದವನೆ, 'ಲ್ರೋ, ಪೀಡೆಗಳ ಗಲಾಟೆ ಮಾಡ್ತೀರಾ' ಅಂತಾ ಹೇಳಿ ಎತ್ತಿ ನನ್ನ ಕೆನ್ನೆಗೆ ಹೊಡೆದ. ಹಸಿದ ಹೊಟ್ಟೆ ಅನ್ನಕ್ಕೆ ಬದಲು ಒದೆ ತಿಂದು ತೃಪ್ತವಾಯಿತು !. ಕಣ್ಣಲ್ಲಿ ನೀರು ಬಂತು. ಎಲೆ ಬಿಟ್ಟು ಎದ್ದು ನೇರವಾಗಿ ಮನೆಗೆ ಹೋಗಿ ನಮ್ಮಮ್ಮನಿಗೆ ನಡೆದದ್ದು ಹೇಳಿದೆ. ಅಮ್ಮನಿಗೆ ಅಳು ತಡೆಯಲಾಗಲಿಲ್ಲ. ನನ್ನಪ್ಪಿ ಸಂತೈಸಿ ಕೂಡಲೇ ರಾಗಿ ರೊಟ್ಟಿ ಮಾಡಿಕೊಟ್ಟರು. ತಿನ್ನಿಸುತ್ತಾ, 'ಪಾಪು ಎಂದೂ ಯಾರ ಮನೆಗೂ ಕರೆಯದೇ ಹೋಗಬೇಡ. ಹೋಗುವ ಆಸೆ ಇದ್ದರೂ ಸ್ವಾಭಿಮಾನಕ್ಕೆ ಧಕ್ಕೆ ತಂದುಕೊಳ್ಳಬೇಡ' ಎಂದರು. ನಾನು ಅಳುತ್ತಲೆ, 'ನಾನೇನೂ ಗಲಾಟೆ ಮಾಡಲಿಲ್ಲ ಅಮ್ಮ. ಆದರೆ ಗಲಾಟೆ ಮಾಡಿರುವವರನ್ನು ಬಿಟ್ಟು ನೇರವಾಗಿ ಬಂದು ನನ್ನನ್ನೇ ಹೊಡೆದುಬಿಟ್ಟ ಆತ' ಅಂದೆ. ಅದೇ ನಾ ಹೇಳಿದ್ದು. ಅವನಿಗೆ ನೀನು ಹೊಟ್ಟೆಗಿಲ್ಲದವನು ತಿನ್ನಲಿಕ್ಕಾಗಿಯೇ ಬಂದಿರೋನು ಅನ್ನಿಸಿತ್ತು ಅದಕ್ಕೆ ಹೊಡೆದ. ಹೊಟ್ಟೆ ಕೆಟ್ಟದ್ದು , ಮಾನ ದೊಡ್ಡದು, ಅದನ್ನು ಉಳಿಸಿಕೊಳ್ಳಬೇಕಾದರೆ 'ಬಡವ ನೀನು ಮಡಗಿದ ಹಾಗಿರು' ಅನ್ನುತ್ತೆ ಗಾದೆ. ಹೋಗ್ಲಿ ಬಿಡು. ದೇವ್ರು ನಮಗೇನು ಕಡಿಮೆ ಮಾಡಿದ್ದಾನೆ. ಬಾ, ಹಿಟ್ಟೋ, ರೊಟ್ಟಿನೊ ತಿಂದು ಹಾಯಾಗಿರೋಣ. ಸರ್ವಜ್ಞ ಅನ್ನೊ ಕವಿ ಹೇಳಿದ್ದಾನೆ: 'ಬಂಗಪಟ್ಟುಂಬ ಬಿಸಿ ಅನ್ನಕಿಂತಲೂ ತಂಗುಳನ್ನವೇ ಲೇಸು' ಎಂದು. ನಮ್ಮಮ್ಮ ಕನ್ನಡ ಓದಿದವಳು. ಹಾಡು ಹಾಡುತ್ತಿದ್ದಳು ಕೂಡ. ಜಾನಪದ ಗೀತೆಗಳನ್ನು ಕಟ್ಟುತ್ತಿದ್ದಳು. ಅವಳ ಮಾತು ನನ್ನಲ್ಲಿ ಸಮಾಧಾನ ತಂದಿತು. ನನ್ನಲ್ಲಿ ಸ್ವಾಭಿಮಾನವನ್ನು ಹುಟ್ಟು ಹಾಕಿತು.

ಪುಟ್ಟಣ್ಣ ಶೆಟ್ಟರು ನಮ್ಮೂರಿನ ಆಗರ್ಭ ಶ್ರೀಮಂತರು. ಅವರನ್ನು ಹೊಸಮನೆಯವರು ಎಂದು ಕರೆಯುತ್ತಿದ್ದರು. ಹಳೇ ಮನೆಯಾಗಿದ್ದರೂ ಈಗಲೂ ಅದನ್ನು ಹೊಸಮನೆಯವರ ಮನೆ ಎಂದೇ ಕರೆಯುತ್ತಾರೆ. ಅವರ ಮನೆಯ ಗ್ರಾಮಫೋನ್ ನಮ್ಮೂರ ಜನರ ಮನೋರಂಜನೆಯ ವಸ್ತು. ತಿಂಗಳಿಗೊ, ಎರಡು ತಿಂಗಳಿಗೊಮ್ಮೆ ಅವರು ರಾತ್ರಿ ಊಟ ಆದ ಮೇಲೆ ತಮ್ಮ ಮನೆಯ ಪಡಸಾಲೆಯಲ್ಲಿ ದೊಡ್ಡ ಜಮಖಾನ ಹಾಸಿಸಿ, ಒಂದು ಗ್ಯಾಸ್‌ಲೈಟ್ ಹಚ್ಚಿಸಿ, ಗ್ರಾಮಫೋನ್ ಹಾಕೋರು. ಆ ದಿನ ಊರ ಜನ ಸುಮಾರು ಅರ್ಧ ಭಾಗ ಅವರ ಮನೆ ಮುಂದೆ ನೆರೆಯುತ್ತಿತ್ತು. ನಮ್ಮೂರವರು ಅಷ್ಟೇ ಅಲ್ಲ ನಮ್ಮೂರ ಸುತ್ತಮುತ್ತಲ ಹಳ್ಳಿ ಜನರು ಗ್ರಾಮಫೋನ್ ಕಾರ್ಯಕ್ರಮ ಕೇಳಲು ಬರುತ್ತಿದ್ದರು. ಸುಮಾರು ಅರ್ಧ ರಾತ್ರಿವರೆಗೆ ಆ ಮನೋರಂಜನಾ ಕಾರ್ಯಕ್ರಮ ನಡೆಯುತ್ತಿತ್ತು. ಹಿಸ್ ಮಾಸ್ಟರ್ಸ್ ವಾಯ್ಸ್ ಗ್ರಾಮಫೋನ್ ರೆಕಾರ್ಡ್‌ಗಳು ಅನೇಕವು. ಬಿಡಾರಂ ಕೃಷ್ಣಪ್ಪನವರ ಹಾಡುಗಾರಿಕೆಯು ಕೆಲವು. ರೆಕಾರ್ಡ್‌ನ ಒಂದು ಹಾಡು ಮುಗಿದ ಕೂಡಲೆ 'ಬಿ. ಕೃಷ್ಣಪ್ಪ ಮೈಸೂರು' ಎಂದು ಹಾಡುಗಾರರೇ ತಮ್ಮ ಹೆಸರು ಹೇಳುತ್ತಿದ್ದುದು ಉಂಟು. ಅದನ್ನು ಕಂಡು ನಮಗೆಲ್ಲಾ ಆಶ್ಚರ್ಯ. ಸಣ್ಣ ಸೂಜಿಯ ಒಂದು ಪುಟ್ಟ ಕುಡಿಕೆಯನ್ನು ಗ್ರಾಮಫೋನ್ ತಟ್ಟೆಯ ಮೇಲೆ ಇಟ್ಟರೆ ಅದು ಹಾಡುತ್ತೆ. ಹೇಗೆ ? ಎಂಬುದು ನಮ್ಮ ಹಳ್ಳಿಯವರಿಗೆ ಸಮಸ್ಯೆ. ಒಬ್ಬ ಹೇಳ್ತಿದ್ದ ಬಿ. ಕೃಷ್ಣಪ್ಪ ಅಂತ ಹೇಳಲಿಲ್ವೆ ಅವನೇ ಅದರೊಳಗಿದಾನೆ. ಇವರು ಹಾಕದ ಮುಳ್ಳಿನಂಥ ಸೂಜಿ ಅವನ ತಲೆ ಕುಕ್ಕುತ್ತೆ. ಆಗ ಅವನು ಹಾಡ್ತಾನೆ ಅನ್ನುತ್ತಿದ್ದ. ಅಂತೂ ಅದೊಂದು ಯಾರಿಗೂ ಅರ್ಥವಾಗದ ಆಶ್ಚರ್ಯಗಳಲ್ಲಿ ಒಂದಾಗಿತ್ತು. ಗ್ರಾಮಫೋನ್ ಬಿಟ್ಟರೆ ಮೀಸೆ ರಂಗಪ್ಪ , ದಾಸನಾಯಕ, ಶಂಕರನಾಯಕ ಮೊದಲಾದವರು ಒಂದು ವರ್ಷಕ್ಕೊ, ಎರಡು ವರ್ಷಕ್ಕೊ ಆಡುತ್ತಿದ್ದ 'ಮ್ಯಾಳ' ಅಥವಾ ಬಯಲಾಟ ಊರ್‍ನಲ್ಲಿ ಹಬ್ಬದ ವಾತಾವರಣ ತರುತ್ತಿತ್ತು. ನಾನು ಕೆಲವು ಬಯಲು ನಾಟಕಗಳಲ್ಲಿ ಗಣೇಶನ ಪ್ರವೇಶ ಪೂಜೆಯ ಮೊದಲ ದೃಶ್ಯದಲ್ಲಿ ಪೂಜಾರಿ ಪಾತ್ರ ಮಾಡುತ್ತಿದ್ದೆ. ತಾಲೀಮು ಹನುಮಂತರಾಯನ ಗುಡಿಯಲ್ಲಿ ನಡೆಯುತ್ತಿತ್ತು. ಅಲ್ಲಿಗೆ ಬರುತ್ತಿದ್ದ ನನ್ನ ಸಹಪಾಠಿ ಹೊಲೆಯರ ನರಸಿಂಹ ಬೀಡಿ ಸೇದುವುದನ್ನು ಕಲಿತಿದ್ದ. ನಮ್ಮಮ್ಮನ ಸಲಹೆಯಂತೆ ನಮ್ಮಯ್ಯ ಒಂದು ಚಿಕ್ಕ ಚಿಲ್ಲರೆ ಅಂಗಡಿ ಆರಂಭಿಸಿದ್ದರು. ನರಸಿಂಹ ಬೀಡಿ ತಗೊಂಡು ಬಾ ಅನ್ನುತ್ತಿದ್ದ. ನಾನು ಕೊಟ್ಟದ್ದನ್ನು ಸೇದಿ, ನನಗೂ ಒಂದು ದಿನ ಅದರ ರುಚಿ ತೋರಿಸಿದ, 'ಯಪ್ಪಾ, ಇಂಗ್ ಹಚ್ಕಾ. ಒಳೀಕೆ ಒಗೆ ಎಳ್ಕಾ ಅಂತ ನನ್ನನ್ನು ನೋಡು ಅಂದ. ಅವನು ಹೇಳಿದ ಹಾಗೆ ಮಾಡಿ ಎಳೆದೆ ಕೆಮ್ಮು ಬಂತು ; ಕಣ್ಣಲ್ಲಿ ನೀರು ಬಂತು. ತಡೆಯಲಾರದೆ ಮನೆಗೆ ಓಡಿದೆ. ನಮ್ಮಮ್ಮ ನನ್ನ ಬಾಯಿನ ಬೀಡಿ ವಾಸನೆ ಹಿಡಿದು ಬಡಿದರು. ಅಲ್ಲಿಗೆ ನರಸಿಂಹನ ಸಹವಾಸ ಬಿಟ್ಟೆ.

ಹುಟ್ಟೂರು ಸಾಸಲಿನ ಪ್ರೈಮರಿ ವಿದ್ಯಾಭ್ಯಾಸ ಮುಗಿದ ಮೇಲೆ ನಮ್ಮೂರಲ್ಲಿ ಮಿಡಲ್‌ಸ್ಕೂಲ್ ಇಲ್ಲ. ಅದಿದ್ದದ್ದು ಶೆಟ್ಟೀಕೆರೆಯಲ್ಲಿ. ನಮ್ಮಯ್ಯ ಶೆಟ್ಟೀಕೆರೆ ಮಾಧ್ಯಮಿಕ ಶಾಲೆಗೆ ಸೇರಿಸಿ ಬಂದರು. ನಿತ್ಯವೂ ನಮ್ಮೂರಿಂದ ಆ ಊರಿಗೆ ನಡೆದು ಹೋಗಿ ಬರಬೇಕಾಗಿತ್ತು. ನಮ್ಮೂರಿನವರೇ ಸುಮಾರು ಇಪ್ಪತ್ತೈದು ಹುಡುಗರು ಶೆಟ್ಟೀಕೆರೆ ಮಿಡಲ್‌ಸ್ಕೂಲ್‌ಗೆ ಹೋಗುತ್ತಿದ್ದವು. ರಸ್ತೆಯಲ್ಲಿ ನಮ್ಮ ಹುಡುಗಾಟ ಚೆನ್ನಾಗಿರುತ್ತಿತ್ತು. ಒಂದ ದಿನ ಬೆಂಗಳೂರಿನಿಂದ ನೆಟ್ಟಕಲ್ಲಪ್ಪನವರು ಹುಲಿ ಬೇಟೆಗೆ ನಮ್ಮೂರ ಕಾಡಿಗೆ ಬಂದರು. ಬೇಟೆ ಸಿಕ್ಕಿತೊ ಇಲ್ಲವೊ ಗೊತ್ತಿಲ್ಲ. ಆದರೆ ಶೆಟ್ಟೀಕೆರೆಗೆ ಅವರ ಜೀಪು ಹೋಗುವಾಗ ಹೊಲದ ಬದುವಿನಲ್ಲಿ ಸಿಕ್ಕಿಹಾಕಿಕೊಂಡಿತು. (ರಸ್ತೆ ಇರಲಿಲ್ಲವಾದ್ದರಿಂದ ಹಾಗೆ ಹೊಲಗಳ ಮೇಲೆ ನುಗ್ಗಿಸಿಕೊಂಡು ಬಂದರು.) ನಾವು ೨೦-೨೫ ಹುಡುಗರು, ವ್ಯಾನನ್ನು ತಳ್ಳಿಕೊಟ್ಟವು. ಆಗ ಹರ್ಷಿತರಾದ ವ್ಯಾನ್ ಯಜಮಾನರು ನಮ್ಮೆಲ್ಲರನ್ನೂ ತಮ್ಮ ವ್ಯಾನ್‌ನಲ್ಲಿ ಕೂರಿಸಿಕೊಂಡು ಹೋಗಿ, ನಮ್ಮ ಶಾಲೆ ಮುಂದೆ ಇಳಿಸಿದರು. ಅದೇ ನಾನು ಮೋಟಾರ್ ವಾಹನವನ್ನು ಮೊದಲು ಕೈಯಿಂದ ಮುಟ್ಟಿದ್ದು ಮತ್ತು ಹತ್ತಿ ಕುಳಿತಿದ್ದು. ಆ ದಿನ ನನಗಾದದ್ದು ಪುಷ್ಪಕವಿಮಾನದಲ್ಲಿ ಹೋದಂತಹ ಅನುಭವ !

ನಮ್ಮಯ್ಯ ಓಚಯ್ಯನ ಕೆಲಸ ಬಿಟ್ಟು , ವ್ಯಾಪಾರಿಯಾದ ಮೇಲೆ ನಮ್ಮ ಬಡತನ ಬಯಲಾಗಿತ್ತು. 'ಹಿಟ್ಟು ಬಟ್ಟೆಗೆ ನೇರೂಪಾಗಿದ್ದೆವು!' ಆ ದಿನಗಳ ಎರಡು ಘಟನೆಗಳು ನನಗೆ ನೆನಪಿವೆ :

ನಾನಾಗ ಶೆಟ್ಟೀಕೆರೆ ಮಿಡಲ್‌ಸ್ಕೂಲಿನ ಒಂದನೇ ತರಗತಿ ವಿದ್ಯಾರ್ಥಿ. ನಮ್ಮ ತರಗತಿ ಉಪಾಧ್ಯಾಯರು ಶ್ರೀ ಬಿಳಿಗೆರೆ ಸಿದ್ಧಲಿಂಗಯ್ಯನವರು ತರಗತಿಗೆ ಬಂದು ಒಂದು ಸರಕಾರಿ ಆದೇಶ ಓದಿ, ಯಾರಾದರೂ ಬಡ ವಿದ್ಯಾರ್ಥಿಗಳಿದ್ದರೆ ಕೈಯೆತ್ತಿ. ನಿಮಗೆ ಅರ್ಜಿ ಫಾರಂ ಕೊಡುತ್ತೇನೆ. ಅದನ್ನು ಭರ್ತಿ ಮಾಡಿ ಕೊಡಿ. ಫೀಜು ವಜಾ ಆಗುತ್ತೆ. ಕೆಲವರಿಗೆ ಸ್ಕಾಲರ್‌ಶಿಪ್ ಕೂಡ ಬರುತ್ತೆ ಎಂದು. ನನ್ನ ಸಹಾಧ್ಯಾಯಿಗಳು ಅನೇಕರು ಪಡೆದರು. ಅವರಲ್ಲಿ ಕೆಲವರು ಶ್ರೀಮಂತರ ಮಕ್ಕಳೂ ಇದ್ದರು. ನಾನು ಕೈಯೆತ್ತಲಿಲ್ಲ. ಅರ್ಜಿ ಫಾರಂ ಪಡೆಯಲಿಲ್ಲ. ಏಕೆಂದರೆ ನಾವು ಬಡವರು ಎಂಬ ಭಾವನೆ ನನಗಿರಲಿಲ್ಲ. ನಮ್ಮೂರಿಗೂ ಶೆಟ್ಟೀಕೆರೆ ಶಾಲೆಗೂ ಸುಮಾರು ೨ ಕಿ. ಮೀ. ದೂರ. ನಾನು ಸಂಜೆ ಮನೆಗೆ ಬರುವಷ್ಟರಲ್ಲೇ ನನಗಿಂತಲೂ ಮುಂಚೆ ಬಂದ ನಮ್ಮ ದೊಡ್ಡಪ್ಪನ ಮಗ ಪಂಚಣ್ಣ ನಮ್ಮಮ್ಮನ ಮುಂದೆ ನಿಂತು ಫ್ರೀಶಿಪ್, ಸ್ಕಾಲರ್‌ಶಿಪ್ ಬಗ್ಗೆ (ಅದರರ್ಥವೇ ನಮಗಾಗ ತಿಳಿದಿರಲಿಲ್ಲ) ವರ್ಣಿಸಿ ಹೇಳಿ, ನಾನು ಅರ್ಜಿ ಫಾರಂ ಪಡೆಯಲಿಲ್ಲ ಎಂದು ದೂರು ಹೇಳಿದ್ದ. ಮನೆಗೆ ಬಂದ ಕೂಡಲೆ ನಿತ್ಯವೂ ರೊಟ್ಟಿ ಇಲ್ಲವೆ ರಾಗಿಮುದ್ದೆಗೆ ಉಪ್ಪಿನಕಾಯಿ ಮಿದ್ದು ಉಂಡೆ ಕಟ್ಟಿ ಕೊಡುತ್ತಿದ್ದ ನಮ್ಮಮ್ಮ ಆ ದಿನ ಏನನ್ನೂ ಕೊಡಲಿಲ್ಲ. ಕೇಳಿದೆ. ಗುರ್ ಅಂದಳು. 'ಯಾಕಮ್ಮಾ' ಅಂದೆ. 'ಏನೋ ನೀ ಎಲ್ಲರ ಹಾಗೆ ಫೀಜು ವಜಾ ಆಗೋ ಅರ್ಜಿ ಫಾರಂ ತಗೊಳ್ಳಿಲ್ಲವಂತೆ !' ಅಂದಳು. 'ಹೌದಮ್ಮಾ', 'ಏಕೆ? ನಾವೇನು ಸಾಹುಕಾರರೇ?' 'ಅಲ್ಲವೇ? ನಾವು ಬಡವರೇ?' ಪ್ರಶ್ನೆಗೆ ಪ್ರತಿಪ್ರಶ್ನೆಯನ್ನು ನಮ್ಮಮ್ಮ ನಿರೀಕ್ಷಿಸಿರಲಿಲ್ಲಾ ಅಂತಾ ಕಾಣುತ್ತೆ. ಮಾತೇ ಆಡಲಿಲ್ಲ. ನಾನೇ ಮುಂದುವರೆದು 'ಅಲ್ಲಮ್ಮಾ, ದೇವ್ರು ನಮಗೇನು ಕಡಿಮೆ ಮಾಡಿದ್ದಾನೆ? ನನ್ನ ಜೊತೆಯಲ್ಲಿ ಬರೋ ೨೫ ಹುಡುಗರಲ್ಲಿ ೧೬-೧೮ ಹುಡುಗರಿಗೆ ಮಧ್ಯಾಹ್ನದ ತಿಂಡಿಗೆ ರಾಗಿರೊಟ್ಟಿ ಕೂಡ ಗತಿಯಿಲ್ಲ. ನನಗೆ ನೀನು ದಿನಾಲು ಮೊಸರನ್ನ, ರೊಟ್ಟಿ ಈರುಳ್ಳಿ ಎಲ್ಲಾ ಕಟ್ಟಿ ಕೊಡ್ತೀಯಾ ಅಂದ ಮೇಲೆ ನಾವು ಅವರಿಗಿಂತ ಉತ್ತಮ ಅಲ್ಲವೆ? ಅವರಿಗೆ ಹೋಲಿಸಿದಾಗ, ಶ್ರೀಮಂತರಲ್ಲವೆ? ಆದ್ದರಿಂದ ಅರ್ಜಿ ಫಾರಂ ಪಡೆಯಲಿಲ್ಲ.' ಅಂದೆ. ನನ್ನ ಮಾತು ನಮ್ಮಮ್ಮನಿಗೆ ಹಿಡಿಸಿತು. ಸ್ವಲ್ಪ ಹೊತ್ತು ಸುಮ್ಮನಿದ್ದು ಹುರಿದ ಹುರುಳಿಕಾಳು, ಕೊಬ್ಬರಿ-ಬೆಲ್ಲ ಕೊಟ್ಟು, 'ಹೋಗಲಿ ಬಿಡು. ನಮ್ಮ ಅನ್ನ ನಮ್ಮ ಮಡಿಲಲ್ಲೈತೆ. ಅದನ್ಯಾಕೆ ಇಲ್ಲಾ ಅನ್ನಾನ. ಇನ್ನೊಬ್ಬರ ತುತ್ತನ್ನು ನಾವ್ಯಾಕೆ ಕಿತ್ಕೋಬೇಕು' ಅಂದಳು. ನನ್ನ ಬಗ್ಗೆ , ನಾನು ನಡೆದುಕೊಂಡದ್ದರ ಬಗ್ಗೆ ತುಂಬ ಅಭಿಮಾನ ಮೂಡಿತು ನನ್ನ ತಾಯಿಗೆ.

ಆದರೆ ಒಂದು ಅನ್ಯಾಯ ಆಯಿತು. ಅದು ಕ್ವಿಟ್ ಇಂಡಿಯಾ ಚಳವಳಿಯ ದಿನ ತಿಪಟೂರು, ತುಮಕೂರುಗಳಲ್ಲಿ ಓದುತ್ತಿದ್ದ ಶೆಟ್ಟೀಕೆರೆ, ಕುಪ್ಪೂರು, ಚಿಕ್ಕನಾಯಕನಹಳ್ಳಿ ಮೊದಲಾದ ಊರುಗಳ ನಮ್ಮ ಹಿರಿಯ ಅಣ್ಣಗಳು, 'ಮಹಾತ್ಮ ಗಾಂಧೀಕಿ ಜೈ..., ಬೋಲೋ ಭಾರತ್ ಮಾತಾ ಕೀ ಜೈ...' ಎಂದು ಘೋಷಿಸುತ್ತ ಶೆಟ್ಟೀಕೆರೆಗೂ ಬಂದರು. ನಾವು ಅನೇಕರು ಅವರ ಹಿಂದೆ ಹೋದೆವು. ಅವರು ಯಾವ ಯಾವುದೋ ಊರುಗಳಿಗೆ ಕರೆದುಕೊಂಡು ಹೋದರು. ಕೊನೆಗೆ ತಿಪಟೂರು ಗುಡ್‌ಶೆಡ್‌ಗೆ ಬೆಂಕಿ ಹಚ್ಚುವುದರಲ್ಲೂ ನಮಗೆ ಪಾಲು ಕೊಟ್ಟರು. ಪೊಲೀಸರು ಹಿಡಿದು, ಬಡಿದು ಒಂದು ಲಾರಿಯಲ್ಲಿ ತುಂಬಿಕೊಂಡು ಹೋಗಿ ಯಾವುದೊ ಕಾಡಿನಲ್ಲಿ ನಮ್ಮನ್ನು ಸುರಿದುಬಿಟ್ಟರು. ನಾವು ಬೆಳಗಾಗುವ ತನಕ ಮರದಡಿ ಬಿದ್ದುಕೊಂಡಿದ್ದು, ಬೆಳಗಾದ ಮೇಲೆ ಕರಡಿ ರೈಲ್ವೆ ಸ್ಟೇಷನ್ ಮಾರ್ಗವಾಗಿ ಕಾಡು-ಮೇಡು ತುಳಿದು ಮಧ್ಯಾಹ್ನದ ಹೊತ್ತಿಗೆ ಊರು ಮುಟ್ಟಿದೆವು. ಹತ್ತಿಪ್ಪತ್ತು ದಿನಗಳಿಂದಲೂ ಮಗನ ಮುಖ ಕಾಣದಿದ್ದ ನಮ್ಮಮ್ಮ ಅತ್ತು ಕರೆದು ಅನೇಕ ದಿನ ಊಟ ಬಿಟ್ಟಳಂತೆ. ಊರಿಗೆ ಬಂದೆ, ಕೆಟ್ಟ ಸುದ್ದಿ ಬಂತು. ನಮ್ಮ ಚಳವಳಿಯ ದಿನಗಳಲ್ಲಿ ವಾರ್ಷಿಕ ಪರೀಕ್ಷೆ ನಡೆದು, ನಾನು ಗೈರುಹಾಜರಾದ್ದರಿಂದ ಫೇಲಾಗಿದ್ದೆ. ನಮ್ಮಮ್ಮನಿಗೆ ಆಕಾಶವೇ ಕಳಚಿ ಬಿದ್ದಂತಾಯಿತು. 'ನನ್ನ ಮಗ ಇಡೀ ಶಾಲೆಗೇ ಬುದ್ಧಿವಂತ ಅವನು ಫೇಲಾಗೋದು ಅಂದರೇನು?' ಅಂತಾ ಆರ್ಭಟಿಸಿದಳು. ಆಗ ಆಕೆಗೆ ಯಾರೋ ಹೇಳಿದರಂತೆ ಚಿಕ್ಕನಾಯಕನಹಳ್ಳಿ ಆಸ್ಪತ್ರೆ ಡಾಕ್ಟರಿಂದ ಒಂದು ಮೆಡಿಕಲ್ ಸರ್ಟಿಫಿಕೇಟ್ ತಂದರೆ ಪಾಸ್ ಮಾಡ್ತಾರೆ ಅಂತಾ. ನಮ್ಮಯ್ಯ ೭ ಮೈಲಿ (ಸುಮಾರು ೧೨ ಕಿ.ಮೀ.) ದೂರ ನಡೆದು ಹೋಗಿ ನಿರಾಶರಾಗಿ ಬಂದರು. ಡಾಕ್ಟರ್ ಮುಂದೆ ನಮ್ಮಯ್ಯ ಸತ್ಯಸಂಗತಿ ಹೇಳಿದರಂತೆ. ಅದಕ್ಕೆ ಡಾಕ್ಟರು, 'ನೋಡಿ, ಸುಳ್ಳು ಸರ್ಟಿಫಿಕೇಟ್ ಕೊಡಬಹುದು. ಆದರೆ ನಿಮ್ಮ ಹುಡುಗ ರಾಜಕೀಯ ಖೈದಿ ಆಗಿದ್ದ, ಅರೆಸ್ಟ್ ಆಗಿದ್ದ.

ಇಂಥವನು, ಇಂಥಾ ತಾರೀಖು ಚಿಕ್ಕನಾಯಕನಹಳ್ಳಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೇಗೆ ಪಡೆಯುತ್ತಿದ್ದ ಎಂದೆಲ್ಲಾ ತನಿಖೆ ನಡೆದರೆ ನಾನು ಮನೆಗೆ ಹೋಗಬೇಕಾಗುತ್ತೆ. ನಾನು ಸರ್ಟಿಫಿಕೇಟ್ ಕೊಡಕಾಗೋಲ್ಲ' ಅಂದರಂತೆ. ನಾನು ಫೇಲಾದೆ. 'ಏನಾಗಬೇಕೊ ಅದು ಆಗದೇ ಇರುವುದಿಲ್ಲ' ಅಂದರು ನಮ್ಮಯ್ಯ.

ನನ್ನ ಜೊತೆಯವರೆಲ್ಲ ಮುಂದಿನ ತರಗತಿಗೆ ಹೋದರು. ನಾನು ಅದೇ ತರಗತಿಯಲ್ಲಿ ಓದಬೇಕೆ? ನಾಚಿಕೆಯಾಯಿತು. ನಾನು ಓದೋದಿಲ್ಲ ಎಂದು ಹಟ ಹಿಡಿದೆ. ಆ ಸಮಯದಲ್ಲಿ ನಮ್ಮ ದೂರದ ಸಂಬಂಧಿಗಳಾದ ಶೆಟ್ಟೀಕೆರೆ ಭದ್ರಯ್ಯನವರು ಇದ್ದರು. ಅವರು ನನ್ನನ್ನು ಸಮಾಧಾನ ಮಾಡಿ, 'ಬಾ, ನಮ್ಮೂರಿಗೆ ಕರದುಕೊಂಡು ಹೋಗ್ತೇನೆ. ನಿನಗೆ ನಿಮ್ಮೂರಿನ ಸಹಪಾಠಿಗಳ ಜೊತೆಗೆ ಶಾಲೆಗೆ ಬರಲು ನಾಚಿಕೆಯಾದರೆ ನಮ್ಮ ಮನೆಯಿಂದ ಹೋಗುವಿಯಂತೆ' ಎಂದು ನನ್ನನ್ನು ಕರೆಯದೊಯ್ದರು. ಬಟ್ಟೆ, ಪುಸ್ತಕ ತೆಗೆದುಕೊಂಡು ಅವರ ಜೊತೆ ಹೊರಟೆ. ನಮ್ಮಮ್ಮನಿಗೆ ಅದೆಷ್ಟೋ ಸಮಾಧಾನ ಆಯಿತು.

ಶೆಟ್ಟೀಕೆರೆ ನನ್ನನ್ನು ಬಹಳ ಮಟ್ಟಿನ ನಾಗರಿಕನನ್ನಾಗಿಸಿತು. ನಾನು ಅಲ್ಲಿ ಕಾಫಿ ಕುಡಿಯುವುದನ್ನು ಕಲಿತೆ. ಹೋಟೆಲ್ ಪ್ರವೇಶ ಕಲಿತೆ, ಅಜ್ಜನ ಕೆರೆಯಲ್ಲಿ ಈಜು ಕಲಿತೆ, ತೆಂಗಿನಮರ ಹತ್ತೋದು, ಸೈಕಲ್ ಹೊಡೆಯೋದು, ನಾಟಕ ಆಡೋದು, ಏನೇನೋ ಕಲಿತೆ. ವರ್ಷದ ಕೊನೇ ಹೊತ್ತಿಗೆ ನನ್ನಲ್ಲಿ ಸಾಕಷ್ಟು ಮಾರ್ಪಾಟಾಗಿತ್ತು. ಒಂದು ರೀತಿಯಲ್ಲಿ ಮುಗ್ಧತೆಯ ಕೋಶದಿಂದ ಜ್ಞಾನದ ಬೆಳಕಿನೆಡೆಗೆ ಬಂದಂತೆ ಭಾಸವಾಗುತ್ತಿತ್ತು.

೬ ರೂಪಾಯಿ ಪರೀಕ್ಷಾ ಶುಲ್ಕ ಕಟ್ಟಿ , ಲೋಯರ್ ಸೆಕೆಂಡರಿ ಪರೀಕ್ಷೆಗೆ ಕುಳಿತೆ. ಶ್ರೀ ವೆಂಕಟರಮಣಯ್ಯನವರೆಂಬ ಶಾಲೆಯ ಮುಖ್ಯೋಪಾಧ್ಯಾಯರು, ಬಿಳಿಗೆರೆ ಸಿದ್ದಲಿಂಗಯ್ಯನವರು, ನಾಗಪ್ಪ ಮೇಸ್ಟ್ರು ಇವರೇ ಮೊದಲಾದ ಶ್ರೇಷ್ಠ ಗುರುಗಳ ಬೋಧನೆ ಆಶೀರ್ವಾದಗಳಿಂದ ಉತ್ತಮ ದರ್ಜೆಯಲ್ಲಿ ತೇರ್ಗಡೆಯಾದೆ.

ಹೈಸ್ಕೂಲ್ ಇದ್ದದ್ದು ತಿಪಟೂರಿನಲ್ಲಿ ಮಾತ್ರ. ದಾವಣಗೆರೆ ಬಿಟ್ಟರೆ ತಿಪಟೂರು, ತಿಪಟೂರು ಬಿಟ್ಟರೆ ತುಮಕೂರು ಅನಂತರ ಬೆಂಗಳೂರು-ಇಷ್ಟೇ ಕಡೆಗಳಲ್ಲಿ ಹೈಸ್ಕೂಲ್‌ಗಳಿದ್ದುದು. ನಮ್ಮಮ್ಮನಿಗೆ ತನ್ನ ಮಗ ವಿದ್ಯಾವಂತನಾಗಬೇಕು ಎಂಬ ಹಂಬಲ, ಅಪ್ಪಾಜಿಗೂ ಆಸೆ ಇತ್ತು. ಮೂರು ವರ್ಷ ಹೇಗೋ ಕಳೆದು ಹೋಗುತ್ತವೆ. ಮಗ ಓದಲಿ ಎಂದಂದುಕೊಂಡು ನನ್ನನ್ನು ತಿಪಟೂರಿಗೆ ಕರೆದುಕೊಂಡು ಹೋದರು. ಶಾಲೆಗೆ ಸೇರಿದ್ದಾಯಿತು. ಆದರೆ ಊಟ, ವಸತಿ? ಸಾಸಲಿಂದ ತಿಪಟೂರಿಗೆ ೯ ಮೈಲಿ ಯಾವುದೇ ವಾಹನ ಸೌಕರ್ಯ ಇರಲಿಲ್ಲ. ನಿತ್ಯವೂ ನಡೆದು ಹೋಗಿ ಬರುವುದು ಸಾಧ್ಯವಲ್ಲದ ಮಾತು. ಆದ್ದರಿಂದ ತಿಪಟೂರು ಜಯದೇವ ವಿದ್ಯಾರ್ಥಿ ನಿಲಯಕ್ಕೆ ಸೇರಿಸಲು ನಮ್ಮಯ್ಯ ಪ್ರಯತ್ನಿಸಿದರು. ಆದರೆ ಹಾಸ್ಟೆಲಿನ ಟ್ರಸ್ಟಿಗಳು ಫ್ರೀ ಬೋರ್ಡಿಂಗ್ ಕೊಡಲು ಸಾಧ್ಯವಿಲ್ಲ. ಅರ್ಧ ಮಾಫಿ ಮಾಡುತ್ತೇವೆ. ತಿಂಗಳಿಗೆ ಊಟ, ವಸತಿಗಳಿಗಾಗಿ ಐದು ರೂಪಾಯಿ ಫೀ ಕೊಡಬೇಕು ಎಂದು ತೀರ್ಮಾನ ಹೇಳಿದರು. ನಮ್ಮಯ್ಯನಿಗೆ ಏನೂ ತೋಚದಾಯಿತು. ಹಾಸ್ಟೆಲಿನ ಆವರಣದ ಒಂದು ಕಟ್ಟೆ ಮೇಲೆ ನನ್ನನ್ನು ಕೂರಿಸಿಕೊಂಡು, ಬಹಳ ಯೋಚಿಸಿ, 'ಏನ್ ಮಾಡೋಣೊ' ಅಂದರು. 'ಅಯ್ಯಾ, ತಿಂಗಳಿಗೆ ಐದು ರೂಪಾಯಿಯಷ್ಟು ಹಣವನ್ನು ಎಲ್ಲಿಂದಾ ತರುತ್ತೀರಿ. ಬೇಡಿ. ನಾನು ಓದಲೇಬೇಕು ಅಂತ ಅಮ್ಮನ ಒತ್ತಾಸೆ ನನಗೂ, ನಿಮಗೂ ಅದೇ ಭಾವನೆ ಇದೆ. ನೀವು ಏಳು ಮನೆಗಳನ್ನು ವಾರಾನ್ನಕ್ಕೆ ಗೊತ್ತು ಮಾಡಿ ಕೊಡಿ. ನಾನು ಹೇಗೋ ನಮ್ಮ ಸ್ನೇಹಿತರ ಕೊಠಡಿಗಳಲ್ಲಿದ್ದುಕೊಂಡು ಕಲೀತೇನೆ' ಎಂದೆ. ನಮ್ಮಯ್ಯನಿಗೆ ಖುಷಿ ಆಯಿತು. ಆದರೆ ಏಳು ಮನೆಗಳನ್ನು ಹುಡಕಬೇಕಲ್ಲ. ಮೊದಲು ಒಂದು ಮನೆಗೆ ಹೋದೆವು. ಅವರು ನಮ್ಮ ಹತ್ತಿರದ ಬಂಧುಗಳಂತೆ. ನಮ್ಮಯ್ಯ ಮನೆಯ ಯಜಮಾನಿ ಕುರಿತು, 'ಅಕ್ಕಾ, ಮಧ್ಯಾಹ್ನ ಮೀರ್ತಾ ಇದೆ ಊರಲ್ಲಿಷ್ಟು ತಿಂಡಿ ತಿಂದು ಬಂದದ್ದು. ನನಗೆ ಬೇಡ ನಮ್ಮ ಮಗುವಿಗೆ ಸ್ವಲ್ಪ ಊಟಕ್ಕೆ ಹಾಕ್ತೀಯಾ?' ಆಕೆ,'ಅಯ್ಯೋ, ಶಿವರುದ್ರಯ್ಯ ಇವತ್ತು ನಾವು ಅಡಿಗೇನೇ ಮಾಡಿಲ್ಲ' ಅಂದಳು ಎಂಜಲು ತಟ್ಟೆ ತೊಳೆಯುತ್ತಾ. ನನಗೆ ನಮ್ಮಯ್ಯನ ಮೇಲೆ ಸಿಕ್ಕಾಪಟ್ಟೆ ಸಿಟ್ಟು ಬಂತು. 'ಅಯ್ಯಾ, ಬನ್ನಿ ಹೋಗೋಣ ನಿಮಗಿಲ್ಲದ ಹಸಿವು ನನಗಾಗಿದೆಯೆ? ನಡಿಯಿರಿ ಸುಮ್ಮನೆ' ಎಂದು ಸ್ವಲ್ಪ ಒರಟಾಗಿ ಅಂದೆ.

ಕೊಬ್ಬರಿ ಮಂಡಿ ವರ್ತಕರ ಐದು ಮನೆಗಳು ಮತ್ತು ನಮ್ಮ ದಾಯಾದಿ ನಂಜಯ್ಯನವರ ಮನೆ ಆರನೆಯ ಮನೆ ಸಿಕ್ಕಿದವು. ಇನ್ನೊಂದು ಬೇಕಾಗಿತ್ತು. ನಮ್ಮಯ್ಯನ ಬಾಲ್ಯ ಸ್ನೇಹಿತನಂತೆ ಆತ ತಿಪಟೂರಿನಲ್ಲಿ ಓರ್ವ ಸರಕಾರಿ ಉನ್ನತಾಧಿಕಾರಿಯಾಗಿದ್ದರು. ಅವರ ಮನೆ ಕೃಷ್ಣರಾಜೇಂದ್ರ ಬಡಾವಣೆಯ ಹೈಸ್ಕೂಲ್ ಬಳಿ ಇತ್ತು. ಅಲ್ಲಿಗೆ ನಡೆದು ಹೊರಟೆವು. 'ನೋಡ್ ಪಾಪು ನಾವಿಷ್ಟೆಲ್ಲಾ ಕಷ್ಟಪಡಬೇಕಾಗಿಲ್ಲ. ನಾನು ಮರೆತಿದ್ದೆ. ನನ್ನ ಬಾಲ್ಯಸ್ನೇಹಿತ ಒಳ್ಳೆ ಹುದ್ದೆಯಲ್ಲಿದ್ದಾನೆ. ಕೈತುಂಬಾ ಸಂಬಳ. ಬಂಗಲೆಯಂಥಾ ಮನೆ. ಅವರನ್ನು ಕೇಳಿದರೆ ನಿನ್ನನ್ನು ತನ್ನ ಮನೆಯಲ್ಲೇ ಇಟ್ಟುಕೊಂಡು ಓದಿಸುತ್ತಾನೆ. ವಾರಾನ್ನದ ತಾಪತ್ರಯವೇ ಬೇಡ' ಅಂತಾ ಒಂದು ಸುಂದರ ಆಶಾಗೋಪುರವನ್ನು ಕಟ್ಟಿ ನನ್ನ ಮುಂದಿಟ್ಟರು. ಅದು ಗಾಳಿಗೋಪುರ ಎಂದು ಅವರಿಗೆ ಆಗ ತಿಳಿಯಲಿಲ್ಲ. ನನಗೂ ತಿಳಿಯಲಿಲ್ಲ. ನಾನು ಖುಷಿಯಿಂದ ಅವರ ಹಿಂದೆ ಹೋದೆ. ನಮ್ಮಯ್ಯ ತಮ್ಮ ಬಾಲ್ಯ ಸ್ನೇಹಿತರ ಮನೆ ಬಾಗಿಲು ತಟ್ಟಿದರು. ಸ್ನೇಹಿತರು ಬಂದರು. ಹಸನ್ಮುಖಿಗಳಾಗಿ ಬೋಲ್ಟ್ ಸರಿಸಿ, ಬಾಗಿಲು ಮುಂದೆ ನಿಂತು, 'ಏನು ಶಿವರುದ್ರಯ್ಯ ಅಪರೂಪಕ್ಕೆ ಬಂದೆ. ಏನ್ ಸಮಾಚಾರ ಇವನಾರು ಮಗನೊ?' ಎಂದು ಪ್ರಶ್ನಿಸಿದರು. ನಮ್ಮ ತಂದೆ 'ಹು ಹು ಹು... ನನ್ಮಗ' ಎಂದು ಹಲ್ಲು ಕಿರಿದರು. ಏನ್ ಬಂದೆ?' 'ಏನಿಲ್ಲ. ನಮ್ಮ ಹುಡುಗನನ್ನು ಹೈಸ್ಕೂಲಿಗೆ ಸೇರಿಸಿದೆ. ಅವನಿಗೆ ಊಟಕ್ಕೆ ಸ್ವಲ್ಪ ಸಹಾಯ ಮಾಡಬೇಕು. ನಿಮ್ಮನ್ನು ಕೇಳೋಣ ಅಂತ ಬಂದೆ'. ಅಂದ ಕೂಡಲೇ ಆ ಪುಣ್ಯಾತ್ಮರು ಸರಿಸಿದ ಬೋಲ್ಟನ್ನು ಮೇಲೇಕ್ಕೇರಿಸಿ, 'ನಾನೇನಪ್ಪಾ ಮಾಡ್ಲಿ? ನಮ್ಮಲ್ಲಿ ಅಂಥಾ ವ್ಯವಸ್ಥೆ ಇಲ್ಲಪ್ಪಾ' ಅಂದರು. 'ದಿನಾ ಬೇಡ ವಾರಕ್ಕೊಂದಿನ ಬರ್ತಾನೆ. ವಾರಾನ್ನವಾದರೂ ಕೊಡಿ' 'ದಯವಿಟ್ಟು ಅವೆಲ್ಲಾ ಕೇಳಬಾರ್ದು ನೀನು. ಹೋಗು ಹೋಗು' ಎಂದು ಬಾಗಿಲು ಬಡಿದುಕೊಂಡು ಒಳಗೆ ಹೋಗೇ ಬಿಟ್ಟರು. ನಮ್ಮಯ್ಯ ಮೆಟ್ಟಿಲ ಕೆಳಗಿಳಿದು ನಿಂತು ಗಳಗಳ ಅತ್ತು ಬಿಟ್ಟರು. ನನಗೂ ತಡೆಯಲಾರದಷ್ಟು ದುಃಖ ಆಯಿತು. ರಸ್ತೆ ಬದಿಯ ಗೋಣಿಮರದ ಕೆಳಗೆ ಸ್ವಲ್ಪ ಹೊತ್ತು ಇಬ್ಬರೂ ಒದ್ದೆಗಣ್ಣವರಾಗಿ ಕುಳಿತೆವು. ಆಮೇಲೆ ಚೇತರಿಸಿಕೊಂಡು ನಾನೇ ಹೇಳಿದೆ, 'ಅಯ್ಯಾ, ಒಂದು ದಿನ ಸಿಗದಿದ್ದರೆ ಚಿಂತೆಯಿಲ್ಲ. ನಾನು ಉಪವಾಸ ಮಾಡ್ತೀನಿ. ಇಲ್ಲವೇ ಎಲ್ಲಿಯಾದರೂ ಒಂದು ಮನೆ ಹುಡುಕಿಕೊಳ್ತೀನಿ' ಎಂದು. ಅಯ್ಯನಿಗೆ ಧೈರ್ಯ ಬಂತು. ನಾನು ತಿಪಟೂರು ಗುರುಕುಲ ಹಾಸ್ಟೆಲ್‌ನ ಮ್ಯಾನೇಜರ್‌ರವರನ್ನು ಕಂಡೆ. ಅವರು ತುಂಬಾ ಸಂತೋಷದಿಂದ ವಾರಕ್ಕೊಂದು ದಿನ ಊಟ ಕೊಡಲು ಒಪ್ಪಿದರು. ಆದರೆ ವಸತಿಗೆ ಅಭಾವ. ಅದರಿಂದಾಗಿ ನಾನು ನಮ್ಮೂರಿನ ನನ್ನ ಬಾಲ್ಯದ ಗೆಳೆಯ ಮಂಡಿ ವರ್ತಕರ ಮಗ ಎಸ್.ಎಂ. ಸೋಮಶೇಖರಪ್ಪನ ಕೊಠಡಿಯಲ್ಲಿ ಉಳಿದೆ. ಆತ ಕೊಟ್ಟ ಆಶ್ರಯವನ್ನು ನಾನೆಂದಿಗೂ ಮರೆಯಲಾರೆ. ಮುಂದಿನ ವರ್ಷ ಬೆಲಗೂರು ಚನ್ನಬಸಪ್ಪ ತನ್ನ ಕೊಠಡಿಗೆ ನನ್ನನ್ನು ಕರೆದುಕೊಂಡು ಹೋದ. ಅಲ್ಲಿ ಸಿ. ವಿ. ವೆಂಕಟಾಚಲಯ್ಯ ಎಂಬ ಓರ್ವ ಪ್ರತಿಭಾವಂತ ಶಿಕ್ಷಕರು ಚನ್ನಬಸಪ್ಪನಿಗೆ ಇಂಗ್ಲೀಷ್ ಪಾಠ ಹೇಳಲು ಬರುತ್ತಿದ್ದರು. ಸಿ. ವಿ. ವಿ. ಈಗ ದಿವಂಗತರು. ಚಲಚ್ಚಿತ್ರ ರಂಗದ ಖ್ಯಾತ ನಿರ್ದೇಶಕ ಸಿ. ವಿ. ಶಿವಶಂಕರ್‌ರವರ ಹಿರಿಯ ಅಣ್ಣ. ಇಂಗ್ಲೀಷ್ ಭಾಷೆಯ ಬನಿ ಅವರ ಬಾಯಲ್ಲಿ ರಸಪೂರಿತ. ನಾನು ಬಡವ ಟ್ಯೂಷನ್ ಫೀ ಕೊಡಲಾರದವನು ಎಂದು ತಿಳಿದ ಅವರು ಒಂದು ದಿನ 'ನೋಡು ಚನ್ನಬಸಪ್ಪ ಈ ಹುಡುಗ ಪ್ರತಿಭಾವಂತ ಇವನು ನನ್ನಲ್ಲಿ ಪಾಠ ಕೇಳಲಿ. ಫೀ ಕೊಡುವುದು ಬೇಡ. ಇವನನ್ನು ನೀನು ಕೈಬಿಡಬೇಡ, ನಾನು ಬಿಡುವುದಿಲ್ಲ' ಎಂದು ಹೇಳಿದ್ದನ್ನು ನಾನು ಕದ್ದು ಕೇಳಿದ್ದುಂಟು. ಅವರಿತ್ತ ಇಂಗ್ಲೀಷ್ ಶಿಕ್ಷಣ ನನಗಿನ್ನೂ ನೆನಪಿನಲ್ಲಿ ಉಳಿದಿದೆ. ವಿಜ್ಞಾನವನ್ನು ಹೊನ್ನವಳ್ಳಿಯ ಹೆಚ್.ಎನ್.ವೆಂಕಟರಾಮಯ್ಯನವರು ಹೇಳಿಕೊಟ್ಟರು. ಅನೇಕ ಜನ ತಾಯಂದಿರು ತಮ್ಮ ಹೊಟ್ಟೆಯಲ್ಲಿ ಹುಟ್ಟಿದ ಮಗನಂತೆ ನನ್ನನ್ನು ಕಂಡು ವಾರ ವಾರ ೨ ಊಟ ಕೊಟ್ಟು ಸಲಹಿದರು. ಅವರಿತ್ತ ಅನ್ನ ನನ್ನ ಧಮನಿಯಲ್ಲಿ ರಕ್ತವಾಗಿದೆ. ತಿಂಡಿ ಆಗಾಗ ಸಾಸಲು ಮುರಿಗೆಪ್ಪನವರ ಮನೆಯಲ್ಲಿ ಸಿಗುತ್ತಿತ್ತು. ತಾಯಿ ಗಂಗವ್ವ ತಿಂಡಿ ಕೊಡುತ್ತಿದ್ದರು. ನಾನು ಅವರ ಮನೆಗೆ ನೀರು ಸೇದಿ ಹಾಕುತ್ತಿದ್ದೆ. ಆಗ ಈಗ ದೇವರ ಪೂಜೆ ಮಾಡುತ್ತಿದ್ದೆ. ಬೇರೊಬ್ಬ ವರ್ತಕರ ಮನೆಯಲ್ಲಿ ಅವರ ಇಬ್ಬರು ಹೆಣ್ಣು ಮಕ್ಕಳುಗಳಿಗೆ ಸಂಜೆ ಪಾಠ ಹೇಳುತ್ತಿದ್ದೆ. ತಿಂಗಳಿಗೆ ೩ ರೂಪಾಯಿ ಸಂಭಾವನೆ ಸಿಗುತ್ತಿತ್ತು. ಅದಷ್ಟೂ ಶಾಲಾ ಫೀಜಿಗೆ ಹೋಗುತ್ತಿತ್ತು. ಬಡವರಿಗೆ ಯಾರೂ ನೆರವಾಗುವುದಿಲ್ಲ. ನನಗೆ ಫೀಜು ಕೂಡ ವಜಾ ಆಗಲಿಲ್ಲ. ಓದುವುದಕ್ಕೆ ಪುಸ್ತಕಗಳಿಲ್ಲ. ನೋಟ್ಸ್ ಬರೆದುಕೊಳ್ಳಲು ಸಹ ಕಾಗದ ಇಲ್ಲ. ಶಾಲೆಯಲ್ಲಿ ಗುರುಗಳು ಹೇಳಿದ್ದರ ನೆನಪು ಮಾತ್ರ ನನಗೆ

ಪರೀಕ್ಷೆಯಲ್ಲಿ ಸಹಾಯ ಮಾಡುತ್ತಿತ್ತು. ಹೀಗಾಗಿ ಪ್ರತಿಭೆ ಇದ್ದರೂ ಹೆಚ್ಚು ಅಂಕ ಪಡೆಯಲು ವಿಫಲವಾದೆ. ಆದರೆ ತಪ್ಪದೆ ಪ್ರತಿ ವರ್ಷವೂ ಪಾಸು ಮಾಡುತ್ತಿದ್ದೆ. ಎಸ್ಸೆಸ್ಸೆಲ್ಸಿ ಕೂಡ ಯಶಸ್ವಿಯಾಗಿ ಮುಗಿಯಿತು. ಉತ್ತಮ ವರ್ಗದಲ್ಲೇ ಪಾಸು ಮಾಡಿದೆ.

ಅನೇಕ ಜನ ಬಡವರಿಗೆ ಶಿಕ್ಷಣ ಬಹಳ ದುಬಾರಿ ವ್ಯಾಪಾರ ಕೆಲವರ ಪಾಲಿಗೆ ಅದು ಮರದ ಕೊಂಬು ಆದರೆ ಸಾಹಸಿಗೆ ಸಾಧ್ಯ ಎಂಬುದು ನನ್ನ ಅನಿಸಿಕೆ ಪ್ರಯತ್ನಪಟ್ಟರೆ ಫಲ ಸಿಕ್ಕಿಯೇ ಸಿಕ್ಕುತ್ತೆ. ನನ್ನ ಜೀವಿತದಲ್ಲಿ ಆದ ಘಟನೆ ಅದಕ್ಕೆ ನಿದರ್ಶನ. ನಾನು ಎಸ್ಸೆಸ್ಸೆಲ್ಸಿ ಪಾಸ್ ಮಾಡಿದ ಮೇಲೆ ಆಗಿನ ಇಂಟರ್‌ಮೀಡಿಯಟ್ ಕಾಲೇಜು ಶಿಕ್ಷಣ ಕೊಡಿಸುವುದು ನನ್ನ ತಂದೆಗೆ ಸಾಧ್ಯವಿರಲಿಲ್ಲ. ಅವರು ಆ ಬಗ್ಗೆ ಕೈ ಚೆಲ್ಲಿ ಕುಳಿತರು. ಆದರೆ ನಮ್ಮಮ್ಮನಿಗೆ ಮಗನನ್ನು ಪದವೀಧರನನ್ನಾಗಿ ಮಾಡಬೇಕೆಂಬ ಹಂಬಲ. ಆದರೆ ಅದು ನಮ್ಮ ಪಾಲಿಗೆ ನುಂಗಲಾರದ ತುತ್ತಾಗಿತ್ತು. ನಾವು ಅದೃಷ್ಟವನ್ನು ನಂಬಿದವರಾದ್ದರಿಂದ ಒಂದ ಅಮೃತ ಘಳಿಗೆ ಬಂತು. ದೇವರು ನೇರವಾಗಿ ಬಂದು ನಮ್ಮ ಕೈ ಹಿಡಿದು ನಡೆಸುವುದಿಲ್ಲ. ಮನುಷ್ಯ ರೂಪದಲ್ಲಿ ಬಂದು ಮಾರ್ಗದರ್ಶನ ಮಾಡುತ್ತಾನೆ, ನೆರವಾಗುತ್ತಾನೆ. ಅದಕ್ಕೆ ನನ್ನ ಬದುಕಿನ ಒಂದು ಘಟನೆ ಸಾಕ್ಷಿ. ನಮ್ಮೂರಿನಲ್ಲಿ ನೀಲಕಂಠಪ್ಪನವರ ತಂಗಿ ಮದುವೆ. ನನ್ನ ಅದೃಷ್ಟ ದೇವತೆ ಬಿ.ಎಸ್.ಶಂಕರಪ್ಪನವರ ರೂಪದಲ್ಲಿ ಆ ಮದುವೆಗೆ ಬಂದರು. ಶಂಕರಪ್ಪನವರು ಚಿತ್ರದುರ್ಗ ಜಿಲ್ಲೆ , ಹೊಸದುರ್ಗ ತಾಲ್ಲೂಕು ಬೆಲಗೂರು ಗ್ರಾಮದವರು. ತುಂಬಾ ಜನಪ್ರಿಯ ವ್ಯಕ್ತಿ : ಕಾರುಣ್ಯಮೂರ್ತಿ. ದೀನದಲಿತರಿಗೆ ಅನ್ನವಾಗಿದ್ದವರು. ನಮ್ಮೂರ 'ಸಾಸಲು ಬ್ರದರ್ಸ್' ಕೊಬ್ಬರಿ ಮಂಡಿ ವರ್ತಕರ ಅಂದರೆ ನೀಲಕಂಠಪ್ಪನವರು, ಸಿದ್ದಲಿಂಗಪ್ಪನವರು, ಗಂಗಾಧರಪ್ಪನವರು-ಇವರ ಸೋದರಿ ರುದ್ರಮ್ಮನವರನ್ನು ಅವರಿಗೆ ಕೊಟ್ಟು ಲಗ್ನ ಮಾಡಿತ್ತು. ಅವರಿಗೆ ಹೆಣ್ಣು ಗಂಡು ನಾಲ್ಕು ಮಕ್ಕಳು. ಬೇಕಾದಷ್ಟು ಆಸ್ತಿ ಪಾಸ್ತಿ ಬೆಲಗೂರಲ್ಲಿ. ಸಗ್ಗಕ್ಕೆ ಕಿಚ್ಚು ಹಚ್ಚು ಎನ್ನುವಂತಹ ಸಂಸಾರ. ಹೊಸದುರ್ಗ-ಅಷ್ಟೇಕೆ-ಇಡೀ ಚಿತ್ರದುರ್ಗ ಜಿಲ್ಲೆಯಲ್ಲೇ ದೇವಮಾನವ ಎಂಬ ಗೌರವಕ್ಕೆ ಪಾತ್ರರಾಗಿದ್ದರು ಶಂಕರಪ್ಪನವರು. ೧೯೪೯ರಲ್ಲಿ ಅವರು ಚಿತ್ರದುರ್ಗದ ಜಿಲ್ಲಾ ಬೋರ್ಡ್‌ನ ಉಪಾಧ್ಯಕ್ಷರಾಗಿದ್ದರು. ಅನಂತರ ಶಾಸಕರು ಆಗಿ, ರಾಜ್ಯ ವಿಧಾನಸಭೆಯ ಸದಸ್ಯರಾಗಿ ಚುನಾಯಿತರಾಗಿದ್ದರು. ಆದರೆ ರಾಜಕೀಯದಲ್ಲಿ ಅವರು ದುಡಿದುಕೊಂಡದ್ದು ಹೊರಲಾರದ ಸಾಲದ ಹೊರೆಯನ್ನು. ಶುದ್ಧ ಹಸ್ತರಾದ ಇವರು ಪ್ರಜಾಹಿತಕ್ಕಾಗಿ, ಸಮಾಜಕ್ಕಾಗಿ, ದೀನದಲಿತರಿಗಾಗಿ ಶ್ರೀಗಂಧದಂತೆ ತೇಯ್ದುಕೊಂಡವರು. ಇಂತಹ ಮಹಾಮಾನವರು ನಮ್ಮ ತಂದೆಯ ಬಾಲ್ಯ ಸ್ನೇಹಿತರು. ಮೇಲಾಗಿ ಅನಾದಿ ಕಾಲದಿಂದಲೂ ನಮ್ಮ ಹಿರಿಯರು ಅವರ ಹಾಗೂ ಅವರ ಸಾಸಲಿನ ನೆಂಟರ ಮನೆಯ ಗುರುಗಳು. ಬಿನ್ನ - ಬಿಡುಗಡೆಗಳಿಗಾಗಿ ನಮ್ಮವರು ಅವರ ಮನೆಗಳಿಗೆ ಹೋಗುತ್ತಿದ್ದರು ಮನೆಯ 'ಅಯ್ಯ'ಗಳಾಗಿ (ಜಂಗಮರಾಗಿ). ಈ ಬಾಂಧವ್ಯದಿಂದಾಗಿ ನಮ್ಮ ತಂದೆಯವರ ಬಗೆಗೆ ಅಪಾರ ಭಕ್ತಿ ಶಂಕರಪ್ಪನವರಿಗೆ. ಅವರು ಧಾರಾಮುಹೂರ್ತವಾದ ಮೇಲೆ ನಮ್ಮ ಮನೆಗೆ ಬಂದರು. ಬಂದವರೇ ನಮ್ಮ ತಂದೆಯ ಪಾದಕ್ಕೆ ನಮಸ್ಕಾರ ಮಾಡಿ ಯೋಗಕ್ಷೇಮ ವಿಚಾರಿಸುತ್ತಾ, 'ಮಕ್ಕಳು ಎಷ್ಟು ಜನ ಸ್ವಾಮಿ' ಅಂದರು. ನಮ್ಮ ತಂದೆ ಇಬ್ಬರೇ ಗಂಡುಮಕ್ಕಳು ಎಂದರು. ಏನು ಮಾಡುತ್ತಿದ್ದಾರೆ ಅಂದಾಗ ಚಿಕ್ಕವನು ಶೆಟ್ಟೀಕೆರೆ ಸ್ಕೂಲಿಗೆ ಹೋಗಿಬರ್‍ತಾ ಇದಾನೆ. ದೊಡ್ಡವನು ತಿಪಟೂರು ಹೈಸ್ಕೂಲ್ ಮುಗಿಸಿದ ಅಂದರು. ಶಂಕರಪ್ಪನವರ ಕರುಣಾದೃಷ್ಟಿ ನನ್ನ ಮೇಲೆ ಬಿತ್ತು. ಮಾರ್ಕ್ಸ್‌ಕಾರ್ಡ್ ತರಿಸಿ ನೋಡಿದರು. ''ಕಾಲೇಜಿಗೆ ಸೇರಿಸಿದಿರಾ?'' ಅಂದರು. ನಮ್ಮ ತಂದೆ ತಮ್ಮ ಅಸಹಾಯಕತೆ ಸೂಚಿಸಿ, 'ನೀವು ಚಿತ್ರದುರ್ಗ ಜಿಲ್ಲೆಯಲ್ಲಿ ದೊಡ್ಡ ಸ್ಥಾನದಲ್ಲಿದ್ದೀರಿ. ನಾನು ಓದಿಸೋಕಾಗೊಲ್ಲ. ನಮ್ಮ ಹುಡುಗನಿಗೆ ಒಂದು ಕೆಲಸ ಕೊಡಿಸಿ' ಅಂದರು. ಶಂಕರಪ್ಪನವರಿಗೆ ಏನನ್ನಿಸಿತೋ ಮುಂದಿನ ಭಾನುವಾರ ಚಿತ್ರದುರ್ಗಕ್ಕೆ ನಿಮ್ಮ ಮಗನನ್ನು ಕಳುಹಿಸಿ ಎಂದು ಹೇಳಿ, ಹಾಲು ಕುಡಿದು ಹೋದರು.

ನಾನು ಶನಿವಾರ ಬೆಲಗೂರಿಗೆ ಹೋಗಿ ಭಾನುವಾರ ಚಿತ್ರದುರ್ಗ ಸೇರಿದೆ. ಶಂಕರಪ್ಪನವರು ಕೇಳಿದರು, 'ಮರಿ, (ನನ್ನನ್ನು ಮರಿ ಎಂದೇ ಸಂಬೋಧಿಸುತ್ತಿದ್ದರು) ಕೆಲಸ ಕೊಡಿಸಬಹುದು. ಆದರೆ ಕೇವಲ ೫೦ ರೂಪಾಯಿ ಸಂಬಳ, ೬ ರೂಪಾಯಿ ಭತ್ಯ ನೀವು ಜೀವನ ಮಾಡಬಹುದು. ಆದರೆ ಓದುವುದು ಒಳ್ಳೆಯದು. ನಿಮ್ಮಿಚ್ಚೆ ಏನು?' ಎಂದರು. 'ನಾನು ಓದಲೆಂದೇ ಬಂದವನು. ನಮ್ಮ ತಂದೆ ಓದಿಸಲು ಶಕ್ತರಲ್ಲ. ಆದರೂ ನೀವು ನನಗೆ ಹಾಸ್ಟೆಲ್‌ನಲ್ಲಿ ಸೀಟ್ ಕೊಡಿಸಿದರೆ ಖಂಡಿತ ಓದುತ್ತೇನೆ.

ನಿಮಗೆ ಒಳ್ಳೆಯ ಹೆಸರು ತರುತ್ತೇನೆ' ಅಂದೆ. ಅವರು ಕೂಡಲೇ ಹಾಗಾದರೆ ಇದೇ ದಿನ ಜಯದೇವ ವಿದ್ಯಾರ್ಥಿ ನಿಲಯದ ಮೀಟಂಗ್ ಇದೆ. ಹೋಗಿ ಅರ್ಜಿಕೊಟ್ಟು ಬನ್ನಿ. ನಾನು ಮ್ಯಾನೇಜರ್‌ರವರಿಗೆ ಹೇಳುತ್ತೇನೆ ಎಂದರು. ಅದೇ ರೀತಿ ಮಾಡಿದೆ. ಸೋಮವಾರ ಬೆಳಗ್ಗ ಫ್ರೀಬೋರ್ಡಿಂಗ್ ಸಿಕ್ಕಿದೆ ಎಂದು ನನ್ನ ಹೆಸರು ಪ್ರಕಟವಾಗಿತ್ತು. ಆಗ ಸುಮಾರು ೯ ಗಂಟೆ. ಓಡಿಬಂದು ಶಂಕರಪ್ಪನವರಿಗೆ ಹೇಳಿದೆ ಅವರು ೫೦ ರೂಪಾಯಿ ಕೊಟ್ಟು 'ಕಾಲೇಜಿಗೆ ಹೋಗಿ ಅರ್ಜಿ ಕೊಟ್ಟು ಸೇರಿಕೊಳ್ಳಿ' ಎಂದರು. ಕಾಲೇಜಿಗೆ ಹೋದೆ. ಅರ್ಜಿಫಾರಂ ಕೊಡಲಿಲ್ಲ. 'ಕೇಳಿದೆ ಪ್ರವೇಶದ ಅವಧಿ ಮುಗಿದಿದೆ' ಎಂದರು. ನೇರವಾಗಿ ಸೂಪರಿಂಟೆಂಡೆಂಟ್‌ರವರನ್ನು (ಇಂಟರ್ ಮೀಡಿಯೇಟ್ ಕಾಲೇಜಿನ ಮುಖ್ಯಸ್ಥರನ್ನು ಆಗ ಪ್ರಿನ್ಸಿಪಾಲ್ ಎಂದು ಕರೆಯುತ್ತಿರಲಿಲ್ಲ) ಕಂಡೆ. 'ಅವರೂ ಸಹ ಆಗುವುದಿಲ್ಲ. ಪ್ರವೇಶದ ಕಡೆಯ ತಾರೀಖು ೧೪ ನೀವು ಬಂದಿರುವುದು ೨೯. ೧೫ ದಿನ ತಡ ನಾವು ಅಡ್ಮಿಷನ್ ಮುಗಿಸಿದ್ದೇವೆ' ಅಂದರು. ನಾನು ವಿನೀತನಾಗಿ ಕೇಳಿಕೊಂಡೆ. ನನ್ನ ಮಾರ್ಕ್ಸ್‌ಕಾರ್ಡ್ ನೋಡಿದರು. ಬಹುಶಃ ದಯೆಬಂತು ಅವರಿಗೆ ಅಂದುಕೊಂಡೆ. ಆದರೆ ಅವರು 'ನೀವು ತುಮಕೂರು ಜಿಲ್ಲೆಯಿಂದ ಬಂದವರು ನೀವು ಅಲ್ಲಿಯೇ ಹೋಗಿ ಸೇರಿಕೊಳ್ಳಿ, ಇಲ್ಲಿ ಆಗುವುದಿಲ್ಲ' ಅಂದರು. 'ನನಗಲ್ಲಿ ಅನುಕೂಲ ಇಲ್ಲದ್ದಕ್ಕೇ ಓರ್ವರು ದಯಾಳುಗಳ ಕರುಣೆಯಿಂದ ನಾನಿನಲ್ಲಿಗೆ ಬಂದಿದ್ದೇನೆ' ಎಂದೆ. ಅವರು ತಲೆಯಲ್ಲಾಡಿಸಿದರು. ನಾನು ಕಡೆಯದಾಗಿ ಬೇಡಿಕೊಂಡೆ, 'ಸಾರ್, ನೀವು ಈ ಅವಕಾಶ ಕೊಡದಿದ್ದರೆ ನನ್ನ ವಿದ್ಯೆ ಮಣ್ಣು ಪಾಲು, ಕೊಟ್ಟರೆ ಆ ಪುಣ್ಯ ನಿಮ್ಮದು ಅಂತ ಭಾವಿಸ್ತೇನೆ. ನನಗೆ ಅನುಕೂಲವಿದ್ದಿದ್ದರೆ ಅಲ್ಲಿಯೇ ಎಂದೋ ಸೇರುತ್ತಿದ್ದೆ. ನನ್ನ ಶಿಕ್ಷಣ ಎಸ್.ಎಸ್.ಎಲ್.ಸಿ.ಗೆ ಮುಗಿಯಿತು ಎಂದು ಭಾವಿಸಿ ಅದರ ಯೋಚನೆಯನ್ನೇ ಬಿಟ್ಟಿದ್ದೆ. ಒಬ್ಬರು ಪುಣ್ಯಾತ್ಮರು ದಯೆ ತೋರಿದರು. ನಾನು ಬಡವ. ನನ್ನ ಬಾಳಿಗೆ ಒಂದು ಬೆಳಕು ಕೊಡಿ' ಅಂದೆ. ನನ್ನ ಆಗಿನ ಮಾತು ಕಾವ್ಯಮಯವಾಗಿಯೇ ಇತ್ತು. ಸೂಪರಿಂಟೆಂಡೆಂಟ್ ಶ್ರೀ ಎಂ.ಎಂ. ನಾರಾಯಣಸ್ವಾಮಿ ಅಯ್ಯರ್‌ರವರಿಗೆ ಕರುಣೆ ಬಂತು. 'ಆಗಲಿ, ಫೀಜುಕಟ್ಟಿ ಹೋಗಿ. ಆದರೆ ನಮ್ಮಲ್ಲಿ ಆರ್ಟ್ಸ್‌ಗೆ ಮಾತ್ರ ಅವಕಾಶವಿದೆ, ಸೈನ್ಸಿಗಿಲ್ಲ' ಎಂದು ಹೇಳಿ ಸಹಿ ಮಾಡಿ ಕೊಟ್ಟರು. ಯಾವುದೋ ಸಿಕ್ಕಿದ್ದೇ ಸಾಕು ಎಂದು ಒಪ್ಪಿ ಬಂದೆ.

ಹೀಗೆ ನನ್ನ ಭಾಗದ ದೈವ ಸ್ವರೂಪರಾದ ಶ್ರೀ ಬಿ.ಎಸ್.ಶಂಕರಪ್ಪನವರಿಂದ ನನ್ನ ಶಿಕ್ಷಣ ಮುಂದುವರಿಯಿತು. ಇಂಟರ್ ಪಾಸು ಮಾಡಿದೆ ಯಶಸ್ವಿಯಾಗಿ.

ಚಿತ್ರದುರ್ಗ ಕಾಲೇಜು ಜೀವನ ಅವಿಸ್ಮರಣೀಯವಾದದ್ದು. ಅದಕ್ಕೆ ಕಾರಣರಾದವರು ನುರಿತ ಉತ್ತಮ ಅಧ್ಯಾಪಕರು ಮತ್ತು ನನ್ನ ಆತ್ಮೀಯ ಮಿತ್ರರು. ನನ್ನ ಸ್ನೇಹಿತರೆಲ್ಲರೂ ಓದುವ ಗೀಳುಳ್ಳವರಾಗಿದ್ದರು. ಅವರ ಸಹವಾಸದಿಂದ ನಾನು ಅನೇಕ ಪಠ್ಯೇತರ ಕನ್ನಡ, ಇಂಗ್ಲಿಷ್ ಪುಸ್ತಕಗಳನ್ನು ಓದಿದೆ. ಒಂದು ಬಗೆಯ ಸ್ಪರ್ಧೆಯೇ ನಡೆಯುತ್ತಿತ್ತು ಓದುವುದರಲ್ಲಿ. ಅಂತಹವರಲ್ಲಿ ನನ್ನ ಆತ್ಮದಾತ್ಮ ಆಗಿದ್ದವರು ತುರುವನೂರು ಜಿ.ಎಸ್.ಈಶ್ವರಪ್ಪ ಮತ್ತು ಶ್ರೀರಾಂಪುರದ ಪಿ.ಈಶ್ವರಾಚಾರಿ (ಈತ ಈಗ ದಿವಗಂತ) ನಾವು ಮೂವರೂ ಕ್ಲಾಸ್‌ಮೇಟ್‌ಗಳು, ಈಶ್ವರಪ್ಪ ನಾನು ಜಯದೇವ ಹಾಸ್ಟೆಲ್‌ನಲ್ಲಿದ್ದೆವು, ಈಶ್ವರಾಚಾರಿ ನಮ್ಮ ಹಾಸ್ಟಲಿನ ಎದುರಿಗಿದ್ದ ಅನಾಥಾಲಯದಲ್ಲಿದ್ದ. ಈಶ್ವರಾಚಾರಿ ತುಂಬಾ ಮೇಧಾವಿ ವಿಶ್ವಕರ್ಮ; ಪ್ರತಿಭಾವಂತ. ಅವನ ಅಕ್ಷರಗಳು ಇಂಗ್ಲಿಷ್ ಕನ್ನಡ ಎರಡೂ ಮುತ್ತಿನಂತೆ; ಕಣ್ಣಿಗೆ ಒತ್ತಿಕೊಳ್ಳುವಂತೆ ಇರುತ್ತಿದ್ದವು. ಆತನೇ ನನ್ನ ಕಾವ್ಯ ಗುರು! ನನ್ನಲ್ಲಿನ ಪ್ರತಿಭೆ ಗುರುತಿಸಿ ಕವನ ರಚಿಸಲು ಪ್ರೋತ್ಸಾಹಿಸಿದ ಅದಕ್ಕೊಂದು ಘಟನೆ ಕಾರಣವಾಯಿತು.

ನಾವು ಹಾಸ್ಟಲ್ ವಿದ್ಯಾರ್ಥಿಗಳು ವಾರಕ್ಕೊಮ್ಮೆ ಭಾನುವಾರ ಊರಾಚೆ ಇದ್ದ ಕರುವರ್ತಿಗೆ (ಅದೊಂದು ಕೊಳವಿದ್ದ ಸ್ಥಳ) ಹೋಗುತ್ತಿದ್ದೆವು. ಬಟ್ಟೆ ತೊಳೆದುಕೊಂಡು ಚೆನ್ನಾಗಿ ಸ್ನಾನ ಮಾಡಿ ಬರುತ್ತಿದ್ದೆವು. ಒಂದು ಭಾನುವಾರ ನನ್ನ ಸಹಪಾಠಿ ಹಾಸ್ಟೆಲ್‌ನ ಊಟಾಟಿ ನಂಜುಂಡಪ್ಪ ಎಂಬುವನು ಬಟ್ಟೆ ತೊಳೆದು ಒಣಗಹಾಕಿ, ಸ್ನಾನ ಮಾಡಿ ಬಂದವನೆ ಬೀಡಿ ಹಚ್ಚಿದ. ಅವನಿಗೆ ಬೀಡಿ ಸೇದೋ ಚಟ ಇತ್ತು. ಕಡ್ಡಿ ಕೆರೆದು ಬೀಡಿ ಹಚ್ಚಿ ಉರಿಯುತ್ತಿದ್ದ ಕಡ್ಡಿಯನ್ನು ದೂರ ಎಸೆದ. ಅದು ಅವನ ಒಣಹಾಕಿದ ಬಟ್ಟೆ ಮೇಲೆ ಬಿದ್ದು ಬಟ್ಟೆ ಸುಡಹತ್ತಿತು. ನಾವು ಮೂವರುನಾಲ್ಕು ಜನ ಸ್ನೇಹಿತರು ಸ್ನಾನ ಮಾಡಿಬಂದು 'ಏನು ಬಟ್ಟೆ ಸುಟ್ಟ ವಾಸನೆ ಬರುತಿದೆಯಲ್ಲಾ' ಎಂದು ನೋಡಿದೆವು. ನೋಡಿದರೆ ಅವನ ಬಟ್ಟೆಗಳೆಲ್ಲಾ ಸುಟ್ಟದ್ದು ಕಂಡಿತು. ನಂಜುಂಡಿಗೆ ಅಳು ಬಂತು.

ಆವರ ನನಗೆ ನಗು. ಹಾಸ್ಟಲಿಗೆ ಬಂದವನೆ ಕಂಡ ಆ ಬಟ್ಟೆಸುಟ್ಟ ಸನ್ನಿವೇಶ, ನಂಜುಂಡಿಯ ಮನಸ್ಥಿತಿ ಕುರಿತು ಒಂದು ಪದ್ಯ ಬರೆದು, ಹಾಸ್ಟಲಿನ ನೋಟೀಸ್ ಬೋರ್ಡಿಗೆ ಅಂಟಿಸಿದೆ. ರಾತ್ರಿ ಊಟಕ್ಕೆ ಬಂದಾಗ ಹಾಸ್ಟೆಲ್‌ನ ಎಲ್ಲಾ ಮಿತ್ರರು ಓದಿಕೊಂಡು ನಂಜುಂಡಿಯನ್ನು ಗೇಲಿ ಮಾಡ ಹತ್ತಿದರು. ನಂಜುಂಡಿಗೆ ಬಟ್ಟೆಗಳು ಸುಟ್ಟುಹೋದ ಹೊಟ್ಟೆ ಉರಿ, ಇಲ್ಲಿ ನನ್ನ ಪದ್ಯದಿಂದಾದ ಪ್ರಚಾರ ಇವುಗಳಿಂದಾಗಿ ಸಿಟ್ಟುಬಂತು. ನನ್ನ ಕವಿತೆಯನ್ನು ಕಿತ್ತಿಕೊಂಡು ದೊಡ್ಡ ಪೇಟೆಯಲ್ಲಿದ್ದ ಹಾಸ್ಟಲಿನ ಕಾರ್ಯದರ್ಶಿ ಮನೆಗೆ ಹೋಗಿ ದೂರು ಕೊಟ್ಟ. ಕಾರ್ಯದರ್ಶಿಗಳು ನನಗೆ ಮೂರು ದಿನ ಹಾಸ್ಟಲ್ ಊಟ ಕೊಡಕೂಡದೆಂದು ಆಜ್ಞೆ ಮಾಡಿದರು. ನಡೆದ ವಿಚಾರವನ್ನು ಈಶ್ವರಾಚಾರಿಗೆ ಹೇಳಿದೆ. ಅವನು ಆ ಕವನ ಓದಿ ಬೈದ. 'ಮರುಳಯ್ಯ, ನಿನ್ನಲ್ಲಿ ಪ್ರತಿಭೆ ಇದೆ. ಅದನ್ನು ಸದುಪಯೋಗ ಮಾಡಿಕೊ. ಈ ರೀತಿ ವ್ಯಂಗ್ಯ, ವಕ್ರ ಗೀತೆ ಬೇಡ, ಒಳ್ಳೊಳ್ಳೆಯ ವಸ್ತು ಚಿಂತನೆ ಮಾಡಿ. ನಿನಗೆ ಆಗ ಏನನ್ನಿಸುತ್ತೋ ಅದನ್ನು ಬರೆ. ಬರೆಯುವಾಗ ಗಣ ಪ್ರಾಸ ಅಂತಾ ಒದ್ದಾಡಬೇಡ. ಕ್ರಮೇಣ ನಿನ್ನದೇ ಹಾದಿ ನಿನಗೆ ಸಿಗುತ್ತೆ ಬರಿ' ಅಂದ. ಈಶ್ವರಾಚಾರಿಯ ಮಾತು ನನಗೆ ಹಿಡಿಸಿತು. ಅದೇ ಉಪದೇಶ ಎಂದು ಭಾವಿಸಿದೆ. ಅಂದಿನಿಂದ ಬರೆಯ ತೊಡಗಿದೆ.

ನಾನು ನನ್ನ ವಿದ್ಯಾರ್ಥಿ ಜೀವನದಲ್ಲಿ ವ್ಯರ್ಥ ಕಾಲಹರಣ ಮಾಡುತ್ತಿರಲಿಲ್ಲ. ತಿಪಟೂರು ಹೈಸ್ಕೂಲ್‌ನಲ್ಲಿ ಓದುತ್ತಿದ್ದಾಗ ಹಿಂದಿ ಶಿಕ್ಷಣ ಪಡೆದು ರಾಷ್ಟ್ರಭಾಷಾ ಪರೀಕ್ಷೆ ಪಾಸು ಮಾಡಿದ್ದೆ. ಚಿತ್ರದುರ್ಗಕ್ಕೆ ಬಂದಾಗ ಟೈಪ್‌ರೈಟಿಂಗ್ ಕಲಿತು ಜೂನಿಯರ್ ಪಾಸು ಮಾಡಿದ್ದೆ. ಇವು ನನಗೆ ಮುಂದೆ ಸಹಾಯವಾದವು. ರಜಾ ದಿನಗಳಲ್ಲಿ ನಾನು ಕೆಲಸ ಹುಡುಕಿಕೊಂಡು ಹೋಗುತ್ತಿದ್ದೆ. ಜೂನಿಯರ್ ಇಂಟರ್ ಪರೀಕ್ಷೆ ಆದ ಮೇಲಿನ ಬೇಸಿಗೆ ರಜೆಯಲ್ಲಿ ಜೋಗಿಗೆ ಹೋದೆ. ಯಾರೋ ಹೇಳಿದರು. ಅಲ್ಲಿ ಹಂಗಾಮಿ ಕೆಲಸ ಸಿಗುತ್ತೆ ಎಂದು. ನಾನು ನೇರವಾಗಿ ಹಿರೇಭಾಸ್ಕರ್ ಡ್ಯಾಂ ಕಾಮಗಾರಿ ನಡೆಯುತ್ತಿದ್ದ ಸ್ಥಳಕ್ಕೆ ಹೋದೆ. ಓರ್ವ ಇಂಜನಿಯರ್ ಅಲ್ಲಿನ ಕೆಲಸ ಮುಗಿದಿದೆ. ನೀವು ಜೋಗಿಗೆ ಹೋಗಿ ಎಂದು ಹೇಳಿ ತಮ್ಮ ಮನೆಯಲ್ಲಿ ಊಟ ಹಾಕಿ, ಇಲಾಖೆಯ ಲಾರಿಯೊಂದರಲ್ಲಿ ಕೂರಿಸಿ ಕಳುಹಿಸಿದರು. ಜೋಗ್ ಗೊತ್ತಿಲ್ಲದ ಜಾಗ. ಬಂದೆ. ಎರಡು ದಿನ ಅಲೆದು ನದಿಯ ಮಡಿಲಲ್ಲಿದ್ದ ಜನರೇಟಿಂಗ್ ಸ್ಟೇಷನ್‌ನಲ್ಲಿ ಒಂದು ಕೆಲಸ ಗಿಟ್ಟಿಸಿಕೊಂಡೆ. ಒಬ್ಬರು ಇಂಜನಿಯರ್‌ರವರ ಕೈಕೆಳಗೆ ದಿನಗೂಲಿ (Daily wages) ಒಂದೂವರೆ ರೂಪಾಯಿಯಂತೆ ಕೆಲಸ ಮಾಡತೊಡಗಿದೆ. ಭಾನುವಾರ ರಜಾ ಇದ್ದದ್ದರಿಂದ ಆ ದಿನ ಕೂಲಿ ಇಲ್ಲ. ವಾರಕ್ಕೆ ಕೇವಲ ಆರು ದಿನ ಮಾತ್ರ. ಸಾಮಾನ್ಯ ರಜೆಗಳಲ್ಲೂ ಕೂಲಿ ಇರುತ್ತಿರಲಿಲ್ಲ. ಆದರೂ ಕೆಲವು ಪುಡಿಗಾಸು ಕೂಡಿಸಿಕೊಂಡು ಸೀನಿಯರ್ ಇಂಟರ್ ಮೀಡಿಯೇಟ್ ಓದಲು ಬಂದೆ. ಸೀನಿಯರ್ ಪರೀಕ್ಷೆ ಆದ ಮೇಲೆ ಬೇಸಗೆಯಲ್ಲಿ ಎಲ್ಲೂ ಕೆಲಸ ಸಿಗಲಿಲ್ಲ. ಒಬ್ಬರು ನಿವೃತ್ತ ಶೇಕ್‌ದಾರರು ತಮ್ಮ ತೋಟಕ್ಕೆ ಕರೆದುಕೊಂಡು ಹೋದರು. ಅವರ ತೋಟ ನಮ್ಮೂರಿಗೆ ಸುಮಾರು ೨೦-೩೦ ಕಿ.ಮೀ. ದೂರದಲ್ಲಿತ್ತು. ಅವರ ತೋಟದಲ್ಲಿ ತೋಟದ ಕೆಲಸ, ಉಳುವುದು, ಹೊಲ ಕೊಯ್ಯುವುದು, ತೆಂಗಿನ ಕಾಯಿ ಕೀಳಿಸಿ ಅಟ್ಟಕ್ಕೆ ತುಂಬಿಸುವುದು - ಇದೇ ಮೊದಲಾದ ಕೆಲಸ ಮಾಡಿದೆ. ಅವರು ಸಂಬಳ ಕೊಡಲಿಲ್ಲ. ಒಂದು ಜೊತೆ ಬಟ್ಟೆ ಕೊಟ್ಟರು. ಊರಿಗೆ ಹೋಗ್ತೇನೆ ಅಂತಾ ಹೇಳಿ ಬಂದೆ. ನಾನು ಒಣಗಿದ ಸೀಗೆಕಾಯಿಯಂತಾಗಿದ್ದೆ. ನಮ್ಮಮ್ಮ ನನ್ನನ್ನು ಅಪ್ಪಿಕೊಂಡು ಗೋಳೋ ಅಂತಾ ಅತ್ತಳು. ತನ್ನ ಮಗ ತುಂಬಾ ಸೊರಗಿದ್ದಾನೆ ಎಂದು ಅಂದುಕೊಂಡು ಅಂದುಕೊಂಡು ಅತ್ತಳು. ಮಗ ಎಲ್ಲೂ ಯಾರ ಬಳಿಗೂ ಕೂಲಿಯಾಳಾಗಿ ಹೋಗುವುದು ಬೇಡ, ಅಂದಳು. ನಾನು ಇಂಟರ್‌ಮೀಡಿಯೇಟ್ ಪಾಸಾಗಿದ್ದೆ. 'ಮುಂದೆ ಓದು ನಾನಿದ್ದೇನೆ ಎಲ್ಲಿಯಾದರೂ ಭಿಕ್ಷೆ ಬೇಡಿ ನಿನ್ನನ್ನು ಓದಿಸುತ್ತೇನೆ' ಅಂದಳು ಅಮ್ಮ. ನಮ್ಮಯ್ಯನಿಗೆ ಕ್ಷಯರೋಗ ಕಾಲು ಹಾಕಿಕೊಂಡಿತು. ಕ್ಷಯ ಆ ದಿನಗಳಲ್ಲಿ ಗುಣಕಾಣದ ರೋಗವಾಗಿತ್ತು. ನಮ್ಮಮ್ಮ ಕೂಲಿನಾಲಿ ಮಾಡಿ, ತಲೆಮೇಲೆ ಎಲೆ ಅಡಿಕೆ ಹೊಗೆಸೊಪ್ಪು ಹೊತ್ತುಕೊಂಡು ಸಾಸಲು ಗೊಲ್ಲರಹಟ್ಟಿ, ಕೆಲವು ಪಾಳ್ಯಗಳಿಗೆ ಹೋಗಿ ಮಾರಿಕೊಂಡು ಬಂದ ದುಡ್ಡಿಗೆ ಬೆಣ್ಣೆ ತರುತ್ತಿದ್ದಳು. ಆ ಬೆಣ್ಣೆಯನ್ನು ಕಾಯಿಸಿ ತುಪ್ಪ ಮಾಡಿ ಸೋಮವಾರ ಚಿಕ್ಕನಾಯಕನಹಳ್ಳಿಯಲ್ಲಿ ಸಂತೆ ಸೇರುವ ಮೊದಲು ಪೇಟೆಯೊಳಗೆ ಮಾರಿಕೊಂಡು ಬಂದು, ಬಂದ ಹಣದಲ್ಲಿ ಅಂಗಡಿ ಸಾಮಾನು ತಂದು ವ್ಯಾಪಾರ ಮಾಡುತ್ತಿದ್ದಳು. ನಮ್ಮ ಜೀವನ, ನನ್ನ ತಂದೆಯ ರೋಗಕ್ಕೆ ಮಾತ್ರ ಔಷಧಿಗಳು ಹೇಗೋ ನಡೆಯುತ್ತಿದ್ದವು.

ನಾನು ಶೇಕ್‌ದಾರರ ತೋಟದಲ್ಲಿ ಹೆಚ್ಚು ದಿನ ಇರಲಿಲ್ಲ. ಇಂಟರ್‌ಮೀಡಿಯೇಟ್ ಪರೀಕ್ಷೆ ಆದ ಮೇಲೆ ಸಾಕಷ್ಟು ದಿನಗಳ ಬಿಡುವು ಇದ್ದದ್ದರಿಂದ ನಾನು ಚಿಕ್ಕನಾಯಕನಹಳ್ಳಿಗೆ ಹೋದೆ. ಅಲ್ಲಿ ನಮ್ಮ ಸೋದರ ಮಾವನವರು ಎಸ್.ನಾಗಪ್ಪನವರು ಇದ್ದರು. ಅವರು ಮ್ಯಾಂಗನೀಸ್ ಗಣಿ ಕಂಟ್ರ್ಯಾಕ್ಟರಾಗಿದ್ದರು. ಚಿಕ್ಕನಾಯ್ಕನಹಳ್ಳಿಯ ಮೂಡಲಗುಡ್ಡದ ತುಂಬಾ ಮ್ಯಾಂಗನೀಸ್ ಸಿಗುತ್ತಿತ್ತು. ನಾನು ಅವರಲ್ಲಿ ಹೋಗಿ ಕೆಲಸಕ್ಕೆ ಸೇರಿಕೊಂಡೆ ನೂರಾರು ಜನ ಗಣಿ ಕಲಸದವರ ಲೆಕ್ಕ ಬರೆಯುವುದು. ಅವರಿಗೆ ವಾರಕ್ಕೊಮ್ಮೆ ಬಟವಾಡೆ ಮಾಡುವುದು ನನ್ನ ಭಾಗದ ಕೆಲಸ. ನಾಗಪ್ಪ ಮಾವನರ ಮನೆಯಲ್ಲೇ ಊಟ ವಸತಿ, ತಿಂಗಳಿಗೊಮ್ಮೆ ಸಂಬಳ, ಇಷ್ಟೆಲ್ಲ ಇದ್ದ ಮೇಲೆ ನೀನು ಧೈರ್ಯವಾಗಿ ಮೈಸೂರಿಗೆ ಹೋಗು. ಎಂ.ಎ. ಪಾಸು ಮಾಡಿಕೊಂಡು ಬಾ ಅಂದರು ಅಮ್ಮ. ಆಗಿದ್ದದ್ದು ಮೈಸೂರು ವಿಶ್ವವಿದ್ಯಾಲಯ ಮಾತ್ರ. ಬಿ.ಎಸ್‌ಸಿ. , ಎಂ.ಎಸ್‌ಸಿ. ಬೆಂಗಳೂರು, ಬಿ.ಎ., ಎಂ.ಎ. ಮೈಸೂರು - ಇವೆರಡೇ ಕಡೆ ಸ್ನಾತಕ ಮತ್ತು ಸ್ನಾತಕೋತ್ತರ ಶಿಕ್ಷಣದ ವ್ಯವಸ್ಥೆ ಇದ್ದದ್ದು. ನನಗೆ ಕನ್ನಡದಲ್ಲಿ ಎಂ.ಎ. ಪಾಸು ಮಾಡಬೇಕು; ಶ್ರೀ ಕುವೆಂಪು ಅವರ ಶಿಷ್ಯನಾಗಬೇಕು ಎಂಬ ಆಸೆ ಚಿತ್ರದುರ್ಗದಲ್ಲಿ ಓದುವಾಗ ಹಲವು ಪಠ್ಯೇತರ ಪುಸ್ತಕಗಳನ್ನು ಓದಿದಾಗಿನಿಂದಲೂ ತುಂಬಿತ್ತು. ನನ್ನ ಆಸೆಯನ್ನು ನನ್ನ ಪೂಜ್ಯ ತಂದೆ ತಾಯಿಯರ ಮುಂದಿಟ್ಟೆ. ಅಯ್ಯ ನಿಸ್ಸಹಾಯಕರಾದ್ದರಿಂದ ಅಮ್ಮನ ಮೇಲೆ ಹಾಕಿದರು. ಅಮ್ಮ ಒಪ್ಪಿ ಕಳುಹಿಸಿದರು.

ನನಗೆ ಚಿಕ್ಕಂದಿನಲ್ಲಿ ಗಾಂಧಿ ದರ್ಶನ ಮಾಡಿಸಿದ ನಮ್ಮ ದೊಡ್ಡಪ್ಪನವರ ಬಳಿಗೆ ಕಳುಹಿಸಿದರು ನಮ್ಮಯ್ಯ. ನಾನು ಬೆಂಗಳೂರಿಗೆ ಬಂದು ನಮ್ಮ ದೊಡ್ಡಪ್ಪ ಸಿದ್ಧಾಂತಿ ಗುರುಬಸವ ಶಾಸ್ತ್ರಿಗಳನ್ನು, ಚಿಕ್ಕಪೇಟೆ ದಿವಾನ್‌ಖಾನೆಯಲ್ಲಿದ್ದ ಅವರ ಮನೆಯಲ್ಲಿ ಕಂಡೆ. ಅದೇ ನಾನು ಬೆಂಗಳೂರನ್ನು ಮೊದಲು ಕಂಡದ್ದು. ಅವರು ಚೆನ್ನಾಗಿ ಕಂಡು, 'ಭೇಷ್, ನೀನು ಮೈಸೂರಿಗೆ ಹೋಗು. ಅಲ್ಲಿ ನನ್ನ ಶಿಷ್ಯ ಹೆಚ್.ಎನ್.ಪಾಳೇಗಾರ್ ಅಂತಾ ಇದಾರೆ. ಅವರು ಜಿಲ್ಲಾಧಿಕಾರಿಗಳಾಗಿದ್ದರು. ಈಗ ಮೈಸೂರು ಮಹಾರಾಜರಿಗೆ ಹುಜೂರ್ ಸೆಕ್ರೆಟರಿ ಆಗಿದ್ದಾರೆ. ಅವರಿಗೆ ಈ ಪತ್ರ ಕೊಡು ನಿನ್ನ ಉನ್ನತ ಶಿಕ್ಷಣಕ್ಕೆ ಸಹಾಯ ಮಾಡ್ತಾರೆ' ಎಂದು ಹೇಳಿ ಒಂದು ಪತ್ರ ಕೊಟ್ಟರು. ನಾನು ಮಾರನೇ ದಿನವೇ ಮೈಸೂರಿಗೆ ಹೋದೆ. ಪಾಳೇಗಾರರ ಮನೆ ಹುಡುಕಿಕೊಂಡು ಹೋದೆ. ಮನೆಯಲ್ಲಿ ಸಾಹೇಬರಿರಲಿಲ್ಲ. ಮನೆಯ ಮುಂದೆ ಕಾವಲುಗಾರ ಇದ್ದ. 'ಬುದ್ದಿಯವರು ಸ್ವಲ್ಪ ಹೊತ್ತಿನಲ್ಲಿ ಬರ್ತಾರೆ ಇಲ್ಲೇ ಮರದ ಕೆಳಗೆ ಕೂತಿರಿ. ಕಾರು ಬಂದ ಕೂಡಲೇ ನಿಮಗೆ ಸಂಜ್ಞೆ ಮಾಡ್ತೇನೆ. ಬಂದು ನೋಡಿ' ಅಂದ. ಸುಮಾರು ಒಂದು ಅಥವಾ ಒಂದೂವರೆ ಗಂಟೆ ಕಾದೆ. ಬುದ್ಧಿಯವರ ಕಾರು ಬಂತು. ಸಂಜ್ಞೆ ಮಾಡಿದ ಜವಾನ. ಕಾರಿನ ಡೋರ್ ತೆಗೆದ. ನಾನು ಸರಸರ ಹೋಗಿ, 'ಸಾರ್, ನಾನು ಬೆಂಗಳೂರಿಂದ...' ಅಂದೆ. ಪಾಳೇಗಾರರು ನನ್ನ ಮುಖ ನೋಡಿ ಯಾವನೋ ಭಿಕ್ಷುಕ ಅಂತಾ ತಿಳಿದರೋ ಏನೋ! ಲೋ ಯಾಕೋ ಇವರನ್ನೆಲ್ಲಾ ಮನೆ ಹತ್ರಾ ಬಿಡ್ತೀಯ ಕಳಿಸೋ ಆಚ್ಗೆ' ಅಂತ ಆಜ್ಞೆ ಮಾಡಿ ಒಳಗೆ ಹೊರಟರು. ನಾನು ಬಿಡಲಿಲ್ಲ 'ಸ್ವಾಮಿ, ನಾನು ಭಿಕ್ಷುಕ ಅಲ್ಲ, ಓರ್ವ ವಿದ್ಯಾರ್ಥಿ. ನಮ್ಮ ದೊಡ್ಡಪ್ಪ ಕಾಗದ ಕೊಟ್ಟಿದ್ದಾರೆ. ದಯವಿಟ್ಟು ನೋಡಿ' ಅಂದೆ. ಅವರಿಗೆ ನನ್ನ ಗಟ್ಟಿ ಮಾತು ಸಿಟ್ಟು ತಂದಿತೆಂದು ತೋರುತ್ತೆ ಅಥವಾ ವೈಯಕ್ತಿಕ ಕಾರಣವೊ ಏನೋ ರೇಗಿ 'ಲೋ ಇವನನ್ನು ಒದ್ದು ಆಚೆಗೆ ನೂಕೋ' ಎಂದು ಅಪ್ಪಣೆ ಕೊಡಿಸಿ ಒಳಗೆ ದಯಮಾಡಿಸಿದರು. (ಇಂಥದೇ ಒಂದು ಅನುಭವ ಡಾ|| ಹೆಚ್.ತಿಪ್ಪೇರುದ್ರಸ್ವಾಮಿಯವರಿಗೂ ಆಗಿದ್ದನ್ನು ನಾನು ಇತ್ತೀಚೆಗೆ ಓದಿದ್ದೇನೆ). ನಾನು ಪೆಚ್ಚಾಗಿ ನಿಂತಲ್ಲೇ ನಿಂತೆ. ಜವಾನ ಬಂದು, 'ಅಪ್ಪಾ ಬಡವನ ಕೋಪ ದವಡೆಗೆ ಮೂಲ ಅಂತಾ ಗಾದೆ. ಹೆಚ್ಚೇನೂ ಮಾತಾಡಬೇಡ. ಹೋಗು ದೇವರಿದ್ದಾನೆ. ನಮ್ಮ ಬುದ್ಧಿಯೋರು ದೇವರಂಥಾ ಮನುಷ್ಯರು. ಆದರೆ ಇವೊತ್ತು ಯಾಕೋ ಕೆಂಡ ಆಗಿಬಿಟ್ಟಿದ್ದಾರೆ. ನಿನ್ನ ಗ್ರಾಚಾರ ಚೆನ್ನಾಗಿಲ್ಲ ಅಂತಾ ಕಾಣುತ್ತೆ. ನೀನು ವಿದ್ಯಾರ್ಥಿ ಅಂದೆ. ವಿದ್ಯಾಭ್ಯಾಸ ಮಾಡೋದು ಮಾತ್ರ ಬಿಡಬೇಡ. ದೇವರು ಒಳ್ಳೇದು ಮಾಡಲಿ' ಎಂದು ತಲೆದಡವಿ ಕಳುಹಿಸಿದ. ನಾನು ಒದ್ದೆಗಣ್ಣವನಾಗಿ ಮೈಸೂರಿನ ನೂರಡಿ ರಸ್ತೆ ಪಕ್ಕದ ಡಿ.ಸುಬ್ಬಯ್ಯ ರೋಡಿನ ಶೆಟ್ಟೀಕೆರೆ ಶಂಕರಲಿಂಗಪ್ಪನವರ ಮನೆ ಹುಡುಕಿಕೊಂಡು ಹೋದೆ. ಮನೆ ಸಿಕ್ಕಿತು. ಶಂಕರಲಿಂಗಪ್ಪನವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಧಿಕಾರಿಗಳಾಗಿದ್ದರು. ಅವರೂ ಶೆಟ್ಟೀಕೆರೆಯವರು. ನನ್ನ ತಾಯಿಯ ತವರುಮನೆಯ ಪಕ್ಕದ್ದೇ ಅವರ ಮನೆ ಅವರನ್ನು ಚಿಕ್ಕಂದಿನಲ್ಲಿ ಎಂದೋ ನೋಡಿದ ನೆನಪು. ಹೋದೆ. ಅವರನ್ನು ಕಂಡು ಕಥೆ ಹೇಳಿದೆ. ಅವರು

ಕನಿಕರಿಸಿ, ಕಾಲೇಜಿಗೆ ಸೇರಿಕೊಳ್ಳಿ ಸುತ್ತೂರು ಜಗದ್ಗುರುಗಳಿಗೆ ಹೇಳಿ ಒಂದು ಹಾಸ್ಟೆಲ್ ಸೀಟು ಕೊಡಿಸೋಣ. ಆದರೆ ಹಾಸ್ಟೆಲ್ ಆರಂಭವಾಗುವುದು ಇನ್ನೂ ಎರಡು ಮೂರು ತಿಂಗಳು ಆಗುತ್ತೆ. ಗವಿಮಠದ ಪೂಜ್ಯ ಶ್ರೀ ಗೌರೀಶಂಕರ ಸ್ವಾಮಿಗಳಿಗೆ ಕ್ಯಾನ್ಸರ್ ಆಗಿ ವೆಲ್ಲೂರು ಆಸ್ಪತ್ರೆ ಸೇರಿದ್ದಾರೆ. ನಮ್ಮ ಸುತ್ತೂರು ಜಗದ್ಗುರುಗಳು ಅವರ ಆರೋಗ್ಯದ ಬಗ್ಗೆ ತುಂಬಾ ಹಚ್ಚಿಕೊಂಡು ವೆಲ್ಲೂರಿನಲ್ಲೇ ಇದ್ದಾರೆ. ಹಾಸ್ಟಲ್ ಆರಂಭ ತಡವಾಗುತ್ತೆ. ಅಲ್ಲಿಯವರೆಗೆ ಊಟ, ವಸತಿ ಏನು ಮಾಡಿಕೊಳ್ಳುತ್ತೀರಿ?' ಅಂದರು. 'ಸಾರ್ ನನಗೆ ವಾರಾನ್ನ ಮಾಡಿ ಉಂಡ ಅನುಭವವಿದೆ. ತಮಗೆ ಗೊತ್ತಿರುವ ಏಳು ಮನೆಗಳ ವಿಳಾಸ ಕೊಡಿ, ಪತ್ರ ಕೊಡಿ' ಅಂದೆ. ಪತ್ರ ಕೊಟ್ಟರು. ಅವರದೂ ಒಂದು ಮನೆ ಸೇರಿ ಏಳು ಮನೆ ಸಿಕ್ಕಿದವು. ಚಾಮುಂಡಿಪುರದಲ್ಲಿ ಒಂದು, ಸರಸ್ವತಿ ಪುರದಲ್ಲಿ ಒಂದು. ಹೀಗೆ ದಿಕ್ಕು ದಿಕ್ಕುಗಳಲ್ಲಿ ವಾರಾನ್ನ. ಎಲ್ಲಾ ಮನೆಯ ತಾಯಂದಿರು ತಮ್ಮ ಮಗನಂತೆ ನೋಡಿಕೊಂಡರು. ಒಂದು ಮನೆಯ ಅಜ್ಜಿ ತಮ್ಮ ಸೊಸೆಗೆ ಹೇಳಿತ್ತಂತೆ. 'ಅಮ್ಮ, ವಾರಾನ್ನದ ವಿದ್ಯಾರ್ಥಿ ನಾಡಿದ್ದು ಬರ್ತಾನೆ. ಅವನಿಗೆ ಈ ದಿನದ ಹಬ್ಬದ ಸಿಹಿ ತೆಗೆದಿಡಮ್ಮ ಮರೆಯಬೇಡ, ಪಾಪ, ಎಲ್ಲಿ ತಿನ್ನಬೇಕು ಬಡ ಮಕ್ಕಳು!' ಎಂದಂದು ತೆಗೆಸಿಟ್ಟಿದ್ದರಂತೆ. ನಾನು ಹೋದ ಕೂಡಲೇ ಊಟ ಆದ ಮೇಲೆ ಒಂದು ಪೊಟ್ಟದಲ್ಲಿ ಸಿಹಿ ಕೊಡಿಸಿತು. ಇಂತಹ ಅವ್ಯಾಜ ಪ್ರೇಮ ವಾತ್ಸಲ್ಯ ನನ್ನ ಬದುಕನ್ನು ತುಂಬಿತು. ನನ್ನ ಶಿಕ್ಷಣ ವೆಚ್ಚಕ್ಕೆ ನನ್ನ ಆರಾಧ್ಯ ದೈವ ಸ್ವರೂಪರೂ, ನನಗೆ ಜಂಗಮ ದೀಕ್ಷೆಯಿತ್ತ ದೀಕ್ಷಾ ಗುರುಗಳೂ ಆದ ಚಿಕ್ಕನಾಯಕನಹಳ್ಳಿ ತಾಲ್ಲೂಕು, ಕುಪ್ಪೂರು ಗದ್ದಿಗೆಯ ಮಠಾಧಿಪತಿಗಳಾದ ಷಟ್‌ಸ್ಥಲ ಬ್ರಹ್ಮಿ ಶ್ರೀ ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರು ಇಪ್ಪತ್ತೈದು ರೂಪಾಯಿಗಳನ್ನು ಆಶೀರ್ವಾದಪೂರ್ವಕವಾಗಿ ಕೊಟ್ಟು, ನಮ್ಮೂರಿನ ಎಸ್.ಕೆ. ಚೆನ್ನವೀರಪ್ಪನವರಿಗೆ ತಿಂಗಳಿಗೆ ೧೫ ರೂಪಾಯಿಗಳನ್ನು ನನಗೆ ಕಳುಹಿಸಿಕೊಡುವಂತೆ ಅಪ್ಪಣೆ ಮಾಡಿದರು. ಚೆನ್ನವೀರಪ್ಪನವರು ಆಗರ್ಭ ಶ್ರೀಮಂತರು, ಅಷ್ಟೇ ಪ್ರಮಾಣದ ಹೃದಯ ಶ್ರೀಮಂತಿಕೆ ಉಳ್ಳವರು. ದಯಾಳುವಾದ ಅವರು 'ತಿಂಗಳಿಗೆ ಹದಿನೈದು ರೂಪಾಯಿಗಳಂತೆ ನಿಮ್ಮ ಬಿ.ಎ. ಆನರ್ಸ್ ಓದುವತನಕ ಕಳುಹಿಸುತ್ತೇನೆ. ದಾಖಲೆಗೆ ನಿಮ್ಮ ತಂದೆಯವರು ಒಂದು ಪತ್ರ ಬರೆದುಕೊಡಲಿ. ನೀವು ನಿಮ್ಮ ವಿದ್ಯಾಭ್ಯಾಸ ಮುಗಿದು, ಕೆಲಸಕ್ಕೆ ಸೇರಿದ ಮೇಲೆ ತಿಂಗಳಿಗೆ ಇಷ್ಟು ಅಂತಾ ತೀರಿಸಿ. ಆದರೆ ನನ್ನ ಹಣಕ್ಕೆ ಬಡ್ಡಿಬೇಡ' ಅಂದರು. ಅದೇ ರೀತಿ ನಡೆಸಿದರು. ನನ್ನ ಮೂರು ವರ್ಷದ ಬಿ.ಎ. (ಆನರ್ಸ್) ಓದಿಗೆ ಒಟ್ಟು ಆರುನೂರ ಎಂಬತ್ತು ರೂಪಾಯಿಗಳ ಸಾಲ ಆಗಿತ್ತು. ಅದನ್ನು ನಾನು ತುಮಕೂರಿನ ಪ್ರಥಮ ದರ್ಜೆ ಕಾಲೇಜಿಗೆ ಅಧ್ಯಾಪಕನಾಗಿ ಬಂದ ಮೇಲೆ ನನ್ನ ೧೧೦ ರೂ. ಸಂಬಳ, ೨೦೦ ಆಯಿತು. ಆದರ ಪೂರ್ವಾನ್ವಯವಾಗಿ ಬಂದ ಹಣ ಸಾಲ ತೀರಿಸಲು ಸಮ ಆಯಿತು. ಸಾಲ ತೀರಿಸಿದೆ; ನನ್ನ ತಂದೆಯವರನ್ನು ಋಣಮುಕ್ತರನ್ನಾಗಿ ಮಾಡಿದೆ. ಶ್ರೀ ಚೆನ್ನವೀರಪ್ಪನವರು ನನ್ನ ಮೇಲಿಟ್ಟಿದ್ದ ಸೋದರ ಪ್ರೇಮಕ್ಕೆ ನಾನು ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ದಿವಂಗತರಾಗಿರುವ ಅವರ ಪವಿತ್ರಾತ್ಮಕ್ಕೆ ಸಹಸ್ರ ನಮನಗಳನ್ನು ಸಲ್ಲಿಸುತ್ತೇನೆ.

ಮಹಾರಾಜಾ ಕಾಲೇಜು ನೋಡಿದಾಗ ನನಗೆ ಆಶ್ಚರ್ಯ, ಆನಂದ ಏಕ ಕಾಲದಲ್ಲಾದವು. ನಾನು ನೇರವಾಗಿ ಪ್ರೊ.ಕೆ.ವಿ.ಪುಟ್ಟಪ್ಪನವರನ್ನು ಅವರ ಕೊಠಡಿಯಲ್ಲಿ ನೋಡಿದೆ, 'ಒಳ್ಳೆಯದಾಗಲಿ, ಬನ್ನಿ' ಎಂದು ಆಶೀರ್ವದಿಸಿದರು. ನಾವು ಕೇವಲ ಆರು ಜನ ಮಾತ್ರ ಕನ್ನಡ ಆನರ್ಸ್‌ಗೆ ಸೇರಿದೆವು. ಹಾ.ಮಾ.ನಾಯಕ, ಜಿ.ಎಸ್. ಸಿದ್ದಲಿಂಗಯ್ಯ, ಕೆ.ನಾಗೇಂದ್ರಪ್ಪ, ಕೆ.ಎಂ.ಮರಿಯಪ್ಪ, ಕೆ.ಎಂ.ಸೀತಾರಾಮಯ್ಯ ಮತ್ತ ನಾನು. ಸಿದ್ಧಲಿಂಗಯ್ಯ ಆ ವೇಳೆಗಾಗಲೇ ಪ್ರತಿಭಾವಂತ ಕವಿಯಾಗಿ ಹೆಸರಾಗಿದ್ದ. ಆತನ ಅನೇಕ ಕವನಗಳು ಪ್ರಜಾವಾಣಿ ಮೊದಲಾದ ಪ್ರಸಿದ್ಧ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದವು. ಚಿಕ್ಕಂದಿನಲ್ಲಿಯೇ ಪ್ರಬುದ್ಧತೆಗೇರಿದ್ದ ಕವಿ ಸಿದ್ಧಲಿಂಗಯ್ಯ ಸಹಧ್ಯಾಯಿ ಎಂದು ಹೇಳಿಕೊಳ್ಳುವಲ್ಲಿ ನನಗೆ ಹೆಮ್ಮೆ ಎನಿಸುತ್ತಿತ್ತು. ಒಳ್ಳೆಯ ಮಾತುಗಾರ ಹಾರಗದ್ದೆ ಮಾನಪ್ಪನಾಯಕ, ವಿಚಾರವಾದಿ ನಾಗೇಂದ್ರಪ್ಪ, ರಸಿಕ ಕತೆಗಾರ ಸೀತಾರಾಮಯ್ಯ, ಸಾತ್ವಿಕ ಸ್ವಭಾವದವನು ಮರಿಯಪ್ಪ, ಅವರ ನಡುವೆ ನಾನೊಬ್ಬ ಸಾರ್ಥಕ ಶಿರೋನಾಮೆಯ ಮರುಳ! ಡಿ.ಎಲ್.ನರಸಿಂಹಾಚಾರ್, ದೇಜಗೌ, ಕ.ವೆಂ. ರಾಘವಾಚಾರ್, ತ.ಸು. ಶಾಮರಾಯ, ಎಸ್.ವಿ. ಪರಮೇಶ್ವರಭಟ್ಟ, ಎಸ್.ವಿ.ರಂಗಣ್ಣ, ಡಾ.ಎಸ್.ಶ್ರೀಕಂಠಶಾಸ್ತ್ರಿ - ಇವರೇ ಮೊದಲಾದವರು ನಮ್ಮ ಗುರುಗಳಾಗಿದ್ದರು. ಕಾಲೇಜಿನ ವಾತಾವರಣ ಚೆನ್ನಾಗಿತ್ತು. ಅಷ್ಟೇ ಚೆನ್ನಾಗಿತ್ತು ನಮ್ಮ ಹಾಸ್ಟಲ್ ಪರಿಸರ.

ನನಗೆ ಬನ್ನಿಮಂಟಪ ಹಾಸ್ಟಲ್‌ನಲ್ಲಿ ಸೀಟು ಸಿಕ್ಕಿತು. (ಅದೀಗ ಜೆ.ಎಸ್.ಎಸ್.ಡೆಂಟಲ್ ಕಾಲೇಜ್, ಮೆಡಿಕಲ್ ಕಾಲೇಜ್ ಆಗಿದೆ).

ನನ್ನ ಜೊತೆಯಲ್ಲಿ ನನ್ನ ಸಹಪಾಠಿಗಳಾದ ಸಿದ್ಧಲಿಂಗಯ್ಯ, ನಾಗೇಂದ್ರಪ್ಪ ಇದ್ದರು. ನಾವು ಮೂವರು ಜೊತೆಯಲ್ಲೇ ಅಭ್ಯಾಸ ಮಾಡುತ್ತಿದ್ದೆವು. ಟಾರ್ ರಸ್ತೆಯ ಮೇಲೆ ರಾತ್ರಿ ಹೊತ್ತು ಕೇಶಿರಾಜನ ವ್ಯಾಕರಣ ಸೂತ್ರಗಳನ್ನು ಸೀಮೆಸುಣ್ಣದಲ್ಲಿ ಬರೆದು ಬಾಯಿಪಾಠ ಮಾಡುತ್ತಿದ್ದುದು ನೆನಪು. ಟೀ ಕುಡಿದರೆ ನಿದ್ದೆ ಬರುವುದಿಲ್ಲ ಎಂದು ಹೇಳ್ತಾರೆ. ಬನ್ನಿ ಟೀ ಕುಡಿದು ಬರೋಣ ಅಂದು ನಮ್ಮ ಬನ್ನಿಮಂಟಪ ಹಾಸ್ಟಲಿನಿಂದ ಎರಡು ಕಿ.ಲೋ. ದೂರ ಮೈಸೂರು ಸಿಟಿಗೆ ನಡೆದು ಹೋಗಿ ಟೀ ಕುಡಿದು ಅಷ್ಟೇ ದೂರ ನಡೆದು ಬಂದು ಮಲಗಿದ್ದೂ ಉಂಟು! ನಮ್ಮ ಹಾಸ್ಟಲಿಗೂ ಮಹಾರಾಜಾ ಕಾಲೇಜಿಗೂ ಸುಮಾರು ೭-೮ ಕಿ.ಮೀ. ದೂರ ಒಳ ಹಾದಿಯಲ್ಲಿ. ನಾವು ಅನೇಕ ವಿದ್ಯಾರ್ಥಿಗಳು ಬೆಳಗಿನ ಪ್ರಸಾದ ಆದ ಕೂಡಲೆ ಕಾಲೇಜು ಹಾದಿ ಹಿಡಿಯುತ್ತಿದ್ದೆವು. ಆ ದಿನಗಳು ನನಗೆ ನನ್ನ ಶೆಟ್ಟಿಕೆರೆ ಮಾಧ್ಯಮಿಕ ಶಾಲೆಗೆ ನಮ್ಮೂರಿನಿಂದ ಹೋಗುತ್ತಿದ್ದ ದಿನಗಳನ್ನು ನೆನಪಿಗೆ ತರುತ್ತಿದ್ದವು.

ಸುತ್ತೂರು ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳಂತಹ ಮಹಾಮೂರ್ತಿಯನ್ನು ನಾನು ಬೇರೆಲ್ಲೂ ಕಾಣೆ. ಅವರ ವಾತ್ಸಲ್ಯದ ವಕ್ಷದಲ್ಲಿ ನಾನು ಬೆಳೆದೆ. ಅವರ ಕೆಲವೇ ಜನ ಪ್ರೀತಿಯ ಶಿಷ್ಯರಲ್ಲಿ ನಾನೂ ಒಬ್ಬನಾಗಿದ್ದುದು ನನ್ನ ಭಾಗ್ಯ. ಅವರ ಹೃದಯ ದಯಾಸಾಗರ, ಅವರ ಕಣ್ಣುಗಳಲ್ಲಿ ಕರುಣೆಯ ಕಡಲುಗಳು ಉರುಳುತ್ತಿದ್ದವು. ನಾನು ಬನ್ನಿ ಮಂಟಪ ಹಾಸ್ಟಲಿಗೆ ಸೇರಿ ಕೆಲವೇ ದಿನಗಳಾಗಿದ್ದವು. ನಮ್ಮ ಹಾಸ್ಟಲಿನ ವಿದ್ಯಾರ್ಥಿ ಸಂಘದ ಚುನಾವಣೆ ಘೋಷಿತವಾಯಿತು.

ನನ್ನ ಮಿತ್ರ ಪುಟ್ಟಬುದ್ಧಿ ಎಂಬಾತ ನನ್ನನ್ನು ಚುನಾವಣೆಗೆ ನಿಲ್ಲುವಂತೆ ಪ್ರೇರೇಪಿಸಿ ಮತದಾರರಿಗೆ ಬೇಕಾಗುವ ಕರಪತ್ರಗಳನ್ನು ತಾನೇ ಅಚ್ಚು ಹಾಕಿಸಿ ಹಂಚಿದ. ಹಾಸ್ಟಲಿನ ಕಂಬಗಳ ಮೇಲೆ, ಗೋಡೆಗಳ ಮೇಲೆ ನನ್ನನ್ನು ಚುನಾಯಿಸುವಂತೆ ಕೇಳಿಕೊಂಡು ಬಣ್ಣದಲ್ಲಿ ನನ್ನ ಹೆಸರು ಬರೆದಿದ್ದ. ನಾಳೆ ಚುನಾವಣೆ, ಹಿಂದಿನ ದಿನ ಸಂಜೆ ಜಗದ್ಗುರುಗಳು ಹಾಸ್ಟಲಿಗೆ ದಯಮಾಡಿಸಿದರು. ಗೋಡೆಗಳ ಮೇಲೆ ಬರೆದಿದ್ದ ನನ್ನ ಹೆಸರು ಓದಿ, 'ಆತನನ್ನು ಕರೆ' ಅಂದರಂತೆ, ಸಿದ್ದಪ್ಪ ಬಂದು, 'ಮರುಳಯ್ಯ ನೀನೇ ಏನಪ್ಪಾ? ಬಾ, ಜಗದ್ಗುರುಗಳು ಕರೀತಾರೆ. ಗೋಡೆ ಮೇಲೆಲ್ಲಾ ಗೀಚಿಸಿಕೊಂಡಿದ್ದೀಯಾ' ಅಂದ. ನನ್ನ ಜಂಘಾ ಬಲವೇ ಉಡುಗಿ ಹೋಯಿತು. ಊಟಕ್ಕೊಂದು ಅವಕಾಶ ಸಿಕ್ಕಿತ್ತು, ಅದಕ್ಕೂ ಕಲ್ಲು ಬಿತ್ತೇ ಅಂದುಕೊಂಡು ಹೋದೆ ನಡುನಡುಗುತ್ತಾ. ಪೂಜ್ಯರು ಊಟದ ಹಾಲ್‌ನಲ್ಲಿ ಕುರ್ಚಿ ಮೇಲೆ ಕುಳಿತಿದ್ದರು. ಹೋಗಿ ಪಾದ ಮುಟ್ಟಿ ನಮಸ್ಕಾರ ಮಾಡಿದೆ. ಸಿದ್ದಪ್ಪ, 'ಇವನೇ ಮರುಳಯ್ಯ' ಅಂದ. ಪೂಜ್ಯರು ನನ್ನನ್ನು ನೋಡಿ, 'ನೀನು ಪ್ರಚಾರ ಮಾಡು ನಿಮ್ಮ ಸ್ನೇಹಿತರಲ್ಲಿ. ಬೇಡ ಅನ್ನೊಲ್ಲ. ಆದರೆ ಗೋಡೆಗಳಿಗೆಲ್ಲ ಪ್ರಚಾರ ಮಾಡಿಬಿಟ್ಟಿದ್ದೀಯ! ಗೋಡೆ ಕೆಡಿಸಬಾರದು ಅಲ್ಲವೆ?' ನಾನು ಮೂಕನಾಗಿ ನಿಂತೆ. 'ಹೋಗು ಒಳ್ಳೆಯದಾಗಲಿ' ಅಂದರು. ಬದುಕಿದೆಯಾ ಬಡಜೀವವೇ ಒಂದು ಓಡಿಬಂದೆ ನನ್ನ ಕೊಠಡಿಗೆ. ಚುನಾವಣೆಯಲ್ಲಿ ಬಹುಮತಗಳಿಸಿ ವಿಜಯಿಯಾಗಿದ್ದೆ.

ಎರಡನೆಯ ವರ್ಷ ನಮ್ಮೆಲ್ಲರನ್ನೂ ಬನ್ನಿಮಂಟಪದಿಂದ ವಾಣೀವಿಲಾಸ ರಸ್ತೆಯ ಮುಖ್ಯ ಕಟ್ಟಡಕ್ಕೆ ವರ್ಗಾಯಿಸಲಾಗಿತ್ತು. ಸರಸ್ವತಿ ಪುರದಲ್ಲಿದ್ದ 'ವಿದ್ಯಾಶ್ರಮ'ದಲ್ಲಿ ಬಾಡಿಗೆ ಇಲ್ಲದೆ ಕೊಠಡಿ. ಇಲ್ಲಿಗೆ ಬಂದು ಸೇರಿದ ಮೇಲೆ ಹಾಸ್ಟಲಿನ ಬಹುದೊಡ್ಡ ಚುನಾವಣೆ. ನಾನು ಕಾರ್ಯದರ್ಶಿ ಸ್ಥಾನಕ್ಕೆ ಸ್ಪರ್ಧಿಸಿ, ಬಹುದೊಡ್ಡ ಮತಗಳಿಸಿದೆ. ವಿದ್ಯಾರ್ಥಿ ಸಂಘದ ಕಾರ್ಯಕ್ರಮಗಳು ತುಸು ಕುಂಟಿದವು ಕಾರಣಾಂತರಗಳಿಂದ. ಸರಿಪಡಿಸಲು ಕೆಲವು ಕಾರ್ಯಕ್ರಮ ಮಾಡಲು ಜಗದ್ಗುರುಗಳನ್ನು ಕಾಣಲು ಸುತ್ತೂರಿಗೆ ಹೋದ. ಆಗ ಅಪರಾಹ್ನ ಮೂರು ಗಂಟೆ ಪೂಜ್ಯರಿದ್ದರು ಶ್ರೀಮಠದಲ್ಲಿ. ನಾನು ಹೋಗಿ ನಮಸ್ಕರಿಸಿ ಕುಳಿತೆ. ಹೋಗು ಪ್ರಸಾದ ಮಾಡಿ ಬಾ ಅಂದರು. ನನಗೆ ಸ್ವಲ್ಪ ಕೋಪ ಬಂದಿತ್ತು. 'ನಾನು ಪ್ರಸಾದಕ್ಕಾಗಿ ಇಲ್ಲಿಗೆ ಬರಲಿಲ್ಲ ಬುದ್ಧಿ' ಅಂದೆ. ಪೂಜ್ಯರಿಗೆ ಅರ್ಥವಾಯಿತು. 'ಮೊದಲು ಊಟ ಮಾಡು ಆ ಮೇಲೆ ಮಾತನಾಡೋಣ' ಅಂದರು ಪ್ರಸಾದ ಆಯಿತು. ಬಂದೆ

'ಬುದ್ಧಿ, ಒಂದೂ ಕಾರ್ಯಕ್ರಮ ನಡೀಲಿಲ್ಲ. ಎಲ್ಲ ವಿದ್ಯಾರ್ಥಿಗಳೂ ಬೇಜಾರಾಗಿ ನನ್ನನ್ನು ಸಿಕ್ಕಾಬಟ್ಟೆ ಬಯ್ತಾರೆ. ತಾವೂ...., 'ನೋಡು ಮರುಳಯ್ಯ, ಸ್ವಲ್ಪ ಹಣಕ್ಕೆ ತೊಂದರೆ ಆಯ್ತು. ಎರಡು ಮೂರು ಸಾವಿರ ವಿದ್ಯಾರ್ಥಿಗಳಿಗೆ ಪ್ರಸಾದಕ್ಕೆ ವ್ಯವಸ್ಥೆ ಮಾಡಲು ಹೋದೆ. ಏನಾಯ್ತು ಗೊತ್ತಾ, ಹಣ ಇಲ್ಲ, ಕಾಳಿಲ್ಲ, ವಿದ್ಯಾರ್ಥಿಗಳಿಗೆ ಪ್ರಸಾದ ವ್ಯವಸ್ಥೆ ಆಗಬೇಕು. ಆಗ ಯಾರೋ ನಮಗೆ ದಾನ ಕೊಟ್ಟಿದ್ದ ಚಿನ್ನದ ಕರಡಿಗೆಯನ್ನ ಮಾರಿ ದವಸ ತರಿಸಿ ಪ್ರಸಾದಕ್ಕೆ ವ್ಯವಸ್ಥೆ ಮಾಡಿದೆವು. ಇದೆಲ್ಲಾ ನಿಮಗೆ ಅರ್ಥವಾಗೊಲ್ಲ. ನೋಡಪ್ಪಾ, ನಾವಾರೂ ಶಾಶ್ವತ ಅಲ್ಲ. ಸುತ್ತೂರು ವೀರಸಿಂಹಾಸನ ಮಹಾಸಂಸ್ಥೆ ದೊಡ್ಡದು. ಅದರ ಗೌರವ ಕಾಪಾಡುವುದು ನಮ್ಮದಷ್ಟೇ ಅಲ್ಲ. ನಿಮ್ಮೆಲ್ಲರದು' ಅಂದರು.

ನನಗೆ ಕಣ್ಣಲ್ಲಿ ನೀರು ಬಂತು. ಪೂಜ್ಯರು ತಲೆಸವರಿ ಸಮಾಧಾನ ಮಾಡಿ, ಧೈರ್ಯ ಹೇಳಿ ಕಳುಹಿಸಿಕೊಟ್ಟರು. ನಾನು ಬಿ.ಎ.(ಆನರ್ಸ್) ಪಾಸುಮಾಡಿದೆ, ನನ್ನ ತಂದೆಗೆ ರೋಗ ಉಲ್ಬಣಗೊಂಡು ಬೆಂಗಳೂರು ಆಸ್ಪತ್ರೆ ಸೇರಿದರು. ಕಷ್ಟ ಹೇಳತೀರದಾಗಿತ್ತು. ನಾನು ಕೆಲಸಕ್ಕೆ ಸೇರುವುದು ಅನಿವಾರ್ಯವಾಯಿತು. ಎಂ.ಎ. ಮುಂದುವರಿಸಲಾಗದೆ ಮೈಸೂರಿಗೆ ಬಂದು ನನಗೊಂದು ಕೆಲಸಕೊಡಿಸುವಂತೆ ನನ್ನ ಪೂಜ್ಯ ವಿದ್ಯಾಗುರುಗಳಾದ ದೇ.ಜವರೇಗೌಡರನ್ನು ಕೇಳಿಕೊಂಡೆ. ಪೂಜ್ಯರು, 'ನೋಡಿ ಮರುಳಯ್ಯ, ಆನರ್ಸ್, ಅಪೂರ್ಣ, ಎಂ.ಎ. ಮಾಡುವುದು ಉತ್ತಮ. ಈಗ ನಿಮ್ಮ ಕಷ್ಟ ನನಗೆ ಗೊತ್ತಾಯಿತು. ಒಂದು ಕೆಲಸ ಮಾಡಿ, ಸುತ್ತೂರ ಜಗದ್ಗುರುಗಳು ಚಾಮರಾಜ ನಗರದಲ್ಲಿ ಒಂದು ಇಂಟರ್ ಮೀಡಿಯೇಟ್ ಕಾಲೇಜು ಆರಂಭ ಮಾಡಿದ್ದಾರೆ. ಅಲ್ಲಿಗೆ ಒಬ್ಬ ಅರೆಕಾಲಿಕ ಕನ್ನಡ ಅಧ್ಯಾಪಕನ ಅವಶ್ಯಕತೆ ಇದೆ. ಅವರನ್ನು ಕೇಳಿಕೊಳ್ಳಿ. ಅತ್ತ ಸಂಬಳವೂ ಬಂತು, ಇತ್ತ ಎಂ.ಎ. ಶಿಕ್ಷಣವೂ ಆಯಿತು, ಅಂದರು. ಕೂಡಲೇ ಅವರಿಗೆ ನಮಸ್ಕಾರ ಮಾಡಿ, ಕ್ಯಾತನಹಳ್ಳಿ ಹಾಸ್ಟಲಿಗೆ ಬಂದೆ. ಪೂಜ್ಯ ಜಗದ್ಗುರುಗಳನ್ನು ಕಂಡು ವಿಷಯ ನಿವೇದಿಸಿಕೊಂಡೆ. 'ಆಗಲಿ, ಸಂತೋಷ, ಈ ಪತ್ರವನ್ನು ಉಡಿಗಾಲದ ಮಾದಪ್ಪನವರಿಗೆ ಕೊಡು. ಅವರು ಅನುಕೂಲ ಮಾಡಿಕೊಡುತ್ತಾರೆ' ಅಂದರು. ನಾನು ಮಾರನೆಯ ದಿನ ಬೆಳಗ್ಗೆ ರೈಲಿನಲ್ಲಿ ಚಾಮರಾಜ ನಗರಕ್ಕೆ ಹೋದೆ. ಅಲ್ಲಿ ಊರಾಚೆ ಒಂದೇ ಒಂದು ಸಣ್ಣ ಹೆಂಚಿನ ಮನೆಯಿಲ್ಲಿತ್ತು ಕಾಲೇಜು. ಅಲ್ಲಿ ವಿಚಾರಿಸಿದೆ. ಮಾದಪ್ಪನವರ ಮನೆಯಲ್ಲಿ ಒಂದು ಮಂಗಲ ಕಾರ್ಯ ಅವರು ಈ ದಿನ ಬರುವುದು ಕಾಣೆ. ಅಲ್ಲಿಗೇ ಹೋಗಿ ಅಂದರು. ಒಂದು ಬಾಡಿಗೆ ಸೈಕಲ್ ತೆಗೆದುಕೊಂಡು ಹೋದೆ. ನನ್ನ ದುರಾದೃಷ್ಟ ಮಾದಪ್ಪನವರು ಚಾಮರಾಜನಗರಕ್ಕೆ ಹೋದರೆಂದು ತಿಳಿಯಿತು. ಉರಿ ಬಿಸಿಲಲ್ಲಿ ಸೈಕಲ್ ತುಳಿದೆ. ಮಾದಪ್ಪನವರನ್ನು ಪ್ರವಾಸಿ ಮಂದಿರದಲ್ಲಿ ಕಂಡೆ ಒಪ್ಪಿ ಪ್ರಿನ್ಸಿಪಾಲರಿಗೆ ಪತ್ರ ಕೊಟ್ಟರು. ಪ್ರಿನ್ಸಿಪಾಲ್ ಓ.ಎನ್.ಕುಮಾರಸ್ವಾಮಿಯವರು ಮೊದಮೊದಲು ಅನುಭವವಿಲ್ಲದ ಅಧ್ಯಾಪಕ ಬೇಡ ಅಂದರು, ಕಡೆಗೆ ಒಪ್ಪಿದರು. ಕೆಲಸ ಕೊಟ್ಟರು, ತಿಂಗಳಿಗೆ ೬೦ ರೂಪಾಯಿ ಸಂಬಳ. ವಾರಕ್ಕೆ ಎರಡು ದಿನ, ನಾಲ್ಕು ಗಂಟೆಗಳ ಪಾಠ, ಪೂಜ್ಯ ಕುವೆಂಪುರವರನ್ನು ಕಂಡು ನನ್ನ ಸ್ಥಿತಿ, ವ್ಯವಸ್ಥೆ ಹೇಳಿದೆ. ಅವರು ಗುರುವಾರ, ಶನಿವಾರ ಹೋಗಿ ಬನ್ನಿ. ಆ ದಿನಗಳ ವೇಳಾಪಟ್ಟಿಯನ್ನು ಮಧ್ಯಾಹ್ನಕ್ಕೆ ವ್ಯವಸ್ಥೆಗೊಳಿಸುವುದಾಗಿ ಹೇಳಿ; ಅದರಂತೆ ಮಾಡಿಕೊಟ್ಟರು. ಪೂಜ್ಯರಾದ ಕುವೆಂಪುರವರ ಹಾಗೂ ಪೂಜ್ಯರಾದ ದೇಜಗೌ.ರವರಿಗೆ ಕೃತಜ್ಞತೆಗಳನ್ನು ಅರ್ಪಿಸಿದೆ.

ಫೆಬ್ರವರಿಗೆ ನನ್ನ ಕಾಲೇಜು ಅಧ್ಯಾಪಕಗಿರಿ ಮುಕ್ತಾಯವಾಯಿತು. ಆನರ್ಸ್ ಆದ ಮೇಲೆ ಎಂ.ಎ. ಒಂದೇ ವರ್ಷದ ಕೋರ್ಸ್. ಆದರೆ ಅದರ ಪರೀಕ್ಷೆ ನಡೆಯುತ್ತಿದ್ದುದು ಪದವಿ ಪರೀಕ್ಷೆಗಳೆಲ್ಲ ಮುಗಿದ ಮೇಲೆ ಜೂನ್ - ಜುಲೈ ತಿಂಗಳುಗಳಲ್ಲಿ. ಅಲ್ಲಿನವರೆಗೆ ಉಂಬಳ ಎಂದಿನಂತೆ ಹಾಸ್ಟಲ್‌ನಲ್ಲಿ ಆಗುತ್ತಿತ್ತು. ಆದರೆ ಸಂಬಳ? ಮತ್ತೆ ಜಗದ್ಗುರುಗಳ ಬಳಿ ಹೋದೆ. ಪೂಜ್ಯರು ನಿನಗೆ ಹಣ ಬೇಕಾದಾಗ ಬಾ ಕೊಡ್ತೇವೆ' ಅಂದರು. ನಾನು ಎಂ.ಎ. ಪರೀಕ್ಷೆ ಫೀ ಮಾತ್ರ ಪೂಜ್ಯ ಜಗದ್ಗುರುಗಳಿಂದ ಪಡೆದೆ ಉಳಿದಂತೆ ನನಗೆ ವೀರಶೈವ ವಿದ್ಯಾಭಿವೃದ್ಧಿ , ಬೆಂಗಳೂರು ಇವರಿಂದ ಸಾಲವಾಗಿ ಸ್ಕಾಲರ್‌ಷಿಪ್ ಸಿಕ್ಕಿತ್ತು. ಅಂತೂ ಇಂತೆಲ್ಲಾ ಎಂ.ಎ. ಪರೀಕ್ಷೆ ಮುಗಿಯಿತು. ಸಂದರ್ಶನ ಪರೀಕ್ಷೆಯ ವೇಳೆಗೆ ಪೂಜ್ಯ ಗುರುಗಳಾದ ಶ್ರೀ ಕುವೆಂಪುರವರು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದರು. ನಮ್ಮ 'ವೈವ' ಕ್ರಾಫರ್ಡ್ ಹಾಲ್‌ನಲ್ಲಿ, ವಿ.ಸಿ. ಛೇಂಬರ್‌ನಲ್ಲಿ . ನಾನು ಸಿಕ್ಕಾಬಟ್ಟೆ ತಯಾರಾಗಿ ಹೋದೆ. ಪ್ರೊ॥ ಸ.ಸ.ಮಾಳವಾಡರು, ಶಾಮರಾಯರು, ಇನ್ನೂ ಮೊದಲಾದ ಮಹಾನ್ ವಿದ್ವನ್ಮಣಿಗಳಿದ್ದರು. ಯಾರೂ ಹೆಚ್ಚು ಪ್ರಶ್ನೆ ಕೇಳಲಿಲ್ಲ. ಪೂಜ್ಯ ಕುವೆಂಪುರವರು, 'ರಿಜಿಸ್ಟ್ರಾರ್ ನರೋನ್ಹರನ್ನು ಕಂಡು ಹೋಗಿ ಅಂದರು. ನಾನು

ರಿಜಿಸ್ಟ್ರಾರರ ಕೊಠಡಿಗೆ ಹೋದೆ. ನರೋನ್ಹರು ಹಂಗಾಮಿ ಕನ್ನಡ ಉಪನ್ಯಾಸಕನಾಗಿ ತುಮಕೂರು ಕಾಲೇಜಿಗೆ ಆಜ್ಞೆ ಆಗಿದೆ ಎಂದು ಹೇಳಿ ಆರ್ಡರ್ ಕೈಗೆ ಕೊಟ್ಟರು. ಅಂದಿನಿಂದ ನನ್ನ ಭಾಗ್ಯದ ಬಾಗಿಲು ತೆರೆಯಿತು.

ಮೈಸೂರಿಂದ ನೇರವಾಗಿ ತುಮಕೂರಿಗೆ ಬಂದೆ. ಆಗಸ್ಟ್ ೮ನೇ ತಾರೀಖು ರಿಪೋರ್ಟ್ ಮಾಡಿಕೊಂಡು ಭಾನುವಾರ ಊರಿಗೆ ಹೋದೆ. ಅಮ್ಮ ಅಯ್ಯರಿಗೆ ನಮಸ್ಕಾರ ಮಾಡಿದೆ. ಕೆಲಸ ಸಿಕ್ಕಿದ ವಿಚಾರ ಹೇಳಿದೆ. ನಮ್ಮ ತಂದೆ ಹಿಗ್ಗಿದರು. ನಮ್ಮೂರಿಗೆ ನಮ್ಮದೇ ಮೊದಲ ಮನೆ. ಮನೆ ಮುಂದೆ ಬಂದವರಿಗೆಲ್ಲ ತಮ್ಮ ಮಗನಿಗೆ ಕೆಲಸ ಸಿಕ್ಕಿದ ಸುದ್ದಿ ಮುಟ್ಟಿಸಿದರು ಹಿಗ್ಗಿನಿಂದ. ನಾನು ಅತ್ತಿತ್ತ ಅಡ್ಡಾಡುತ್ತಿದ್ದರೆ, ನನ್ನನ್ನೇ ತೃಪ್ತಿಯ ಕಣ್ಣುಗಳಿಂದ ನೋಡುತ್ತಿದ್ದರು. ನಮ್ಮಮ್ಮ 'ಏನು ಹಾಗೆ ನೋಡ್ತಿದ್ದೀರಿ. ಎಂದೂ ನೋಡಿಲ್ಲದೆ ಇರೋರ ಹಾಗೆ', 'ನೋಡಬೇಕು ಅನ್ನಿಸಿತು ಕಣೇ', 'ಹಾಗೇ ನೋಡಿ, ನನ್ನ ಮಗನಿಗೆ ದೃಷ್ಟಿ ಏನಾದರೂ ಆಗಲಿ!' ಅನ್ನೋರು.

ಸುಖ ದುಃಖಗಳು ಸಮಾನ ಸ್ಪರ್ಧಿಗಳು. ಅದು ಭಾರತದ ಪ್ರಥಮ ಮಹಾ ಚುನಾವಣೆಯ ವರ್ಷ, ನನ್ನನ್ನು ಓರ್ವ ಪ್ರಿಸೈಡಿಂಗ್ ಆಫೀಸರಾಗಿ ಹಾಕಿದ್ದರು. ನಾನೂ ಸಿದ್ಧನಾಗಿದ್ದೆ. ಏಕೋ ಏನೋ ಚುನಾವಣೆ ನಡೆಯುವ ನಾಲ್ಕು ದಿನಗಳ ಮುಂಚೆ ಅಯ್ಯನನ್ನು ನೋಡಬೇಕು ಅನ್ನಿಸಿತು. ಊರಿಗೆ ಹೋದೆ. ಆ ದಿನ ಬಹಳ ಹೊತ್ತು ಮಾತಾಡಿದೆವು. ನಾನು ಅಟ್ಟದ ಮೇಲೆ ಹೋಗಿ ಮಲಗಿದೆ. ಬೆಳಗಿನ ಸಮಯ ನಮ್ಮಮ್ಮನನ್ನು ಅಯ್ಯ ಕರೆದರಂತೆ, 'ಏನು ಬೇಕು' ಕೇಳಿದಾಗ 'ಮರುಳಯ್ಯ ಎಲ್ಲಿ? ಕರಿ, ನೋಡಬೇಕು ಅಂದರಂತೆ' ಅಮ್ಮ ನನ್ನನ್ನು ಕೂಗಿ ಕರೆದರು. ನಾನು ಅಟ್ಟ ಇಳಿದು ಬಂದೆ. ನಮ್ಮಯ್ಯ ನನ್ನನ್ನೊಮ್ಮೆ ಕಣ್ತುಂಬ ನೋಡಿದರು. ಏನೋ ಹೇಳಬೇಕು, ಅನ್ನಲು ಹೋದರು. ಹಾಗೆ ಕಣ್ಣುಗಳು ಮುಚ್ಚಿದವು. ತಲೆ ಒರೆಯಾಯಿತು. ಅಮ್ಮ ಆತು ಹಿಡಿದುಕೊಂಡು ಗೋಳೋ ಅತ್ತರು. ಅತ್ತ ಸೂರ್ಯ ಉದಯಿಸಿದ, ಇತ್ತ ನಮ್ಮ ಮನೆಯ ಸೂರ್ಯ ಅಸ್ತಮಿಸಿದ. ನಮ್ಮ ತುಂಡೇರಿ ತೋಟದಲ್ಲಿ ಸಮಾಧಿಯಾಯಿತು. ಚುನಾವಣಾಧಿಕಾರಿಗೆ ಟೆಲಿಗ್ರಾಂ ಮೂಲಕ ತಿಳಿಸಿಯಾಯಿತು. ಮನೆಯ ಮಂಗಳ ದೇವತೆಯಂದಿದ್ದ ನಮ್ಮಮ್ಮನ ಹಣೆಯ ಕುಂಕುಮ ಅಳಿಸಿತು.

ನಾನು ತುಮಕೂರಲ್ಲಿದ್ದುದ್ದು ಒಂದೇ ವರ್ಷ. ಮುಂದಿನ ವರ್ಷ ದಾವಣಗೆರೆಯ ಡಿ.ಆರ್.ಎಂ. ಕಾಲೇಜಿಗೆ ವರ್ಗ ಮಾಡಲಾಗಿತ್ತು. ನಾನು ಆ ವೇಳೆಗೆ ಅತ್ಯಂತ ಜನಪ್ರಿಯ ಅಧ್ಯಾಪಕನಾಗಿದ್ದೆ. ಭಾಷಣ ಕಲೆ ನನಗೆ ತುಂಬಾ ಚೆನ್ನಾಗಿ ಒಲಿದು ಬಂದಿತ್ತು. ದಾವಣಗೆರೆಯಲ್ಲಿ ನಾಲ್ಕು ವರ್ಷ ತುಂಬಾ ಚೆನ್ನಾಗಿದ್ದೆ. ಇನ್ನೂ ಚೆಂದಮಾಡಿದ್ದು ನನ್ನ ಮದುವೆಯ ಸುದ್ದಿ. ಕುಪ್ಪೂರು ಗದ್ದಿಗೆ ಮಠದ ಏಜೆಂಟ್ ರುದ್ರಯ್ಯನವರ ಮೂರನೆಯ ಮಗಳನ್ನು ನಾನು ಮದುವೆಯಾಗಲು ಇಷ್ಟಪಟ್ಟಿದ್ದೆ. ನಮ್ಮಯ್ಯನಿಗೆ ಅವಳನ್ನು ಕಂಡರೆ ತುಂಬಾ ಅಕ್ಕರ. ಅವರು ಆಗಾಗ ಹೇಳುತ್ತಿದ್ದರು, ಸ್ವಾಮೀಜಿಯವರನ್ನು ಕಂಡು ಹೆಣ್ಣು ಕೊಡಿ ಎಂದು ಕೇಳಲೇ ಎಂದು. ನಾನು ಸುಮ್ಮನಿರಿ ಕಾಲ ಬರಲಿ ಅಂದೆ. ಕಾಲ ಬರಲಿ ಅಂದರೆ ಹೇಗೋ ನಾನು ಇರೋವಾಗ್ಲೇ ಕಣ್ತುಂಬ ನೋಡಬೇಡವೆ? ಅನ್ನೋರು. ನಾನು ಸ್ವಲ್ಪ ಹಿಂದೆ ಮುಂದೆ ನೋಡಿದ್ದು ಏಕೆ ಅಂದರೆ ಆ ಸಂಬಂಧ ಮುರಿಯಲು ನಮ್ಮವರೇ ಪ್ರಯತ್ನಿಸುತ್ತಿರುವುದು ತಿಳಿದದ್ದರಿಂದ. ಅವರು ಗುರುಗಳ ಸಂಗಡ ಮಾತನಾಡುತ್ತ 'ಅವನು ಕನ್ನಡ ಮೇಷ್ಟ್ರು, ಅವನಿಗೆ ಹೆಂಡತಿ ಸಾಕುವ ಯೋಗ್ಯತೆ ಇದೆಯೇ? ಅಡವಿಲ್ಲ ಆಸ್ತಿ ಇಲ್ಲ. ಕೊಡಬೇಡಿ' ಅಂದರಂತೆ. ಅದು ನನ್ನ ಕಿವಿಗೆ ಬಿತ್ತು 'ನಮ್ಮ ಕೈಗೆ ಎಟುಕದ್ದಕ್ಕೆ ಕೈ ಚಾಚುವುದು ಸೂಕ್ತ ಅಲ್ಲ ಅಂದು ತೆಪ್ಪಗಿದ್ದೆ. ನನ್ನ ತಂದೆಯವರು ಆ ಆಸೆಯನ್ನು ಕಟ್ಟಿಕೊಂಡೇ ಕಣ್ಣುಮುಚ್ಚಿದರು. ಆದರೆ ನನ್ನ ಒಬ್ಬರು ಸೋದರ ಮಾವನವರು ಚನ್ನಪ್ಪಶಾಸ್ತ್ರಿಗಳು ಪೂಜ್ಯರನ್ನು ಕಂಡು, ಲಗ್ನ ನಿಶ್ಚಯ ಮಾಡಿದರು. ಆಶ್ರಯವನ್ನಾಗಿಸಿಕೊಂಡಂತೆ ನಾನು ಕುಪ್ಪೂರು ಗದ್ದಿಗೆ ಮಠದಲ್ಲಿದ್ದ ಏಜೆಂಟರ ಮಗಳನ್ನು ಮಡದಿಯನ್ನಾಗಿ ಪಡೆದೆ. ದಾವಣಗೆರೆಯಲ್ಲಿ ಮನೆ ಮಾಡಿದೆ. ನನ್ನ ಹೆಂಡತಿಯ ತಮ್ಮ ಮಲ್ಲಿಕಾರ್ಜುನಯ್ಯ ನಮ್ಮ ಜೊತೆಯಲ್ಲೇ ಇದ್ದ ಹೈಸ್ಕೂಲ್ ವಿದ್ಯಾರ್ಥಿಯಾಗಿ. ದಾವಣಗೆರೆಯಲ್ಲಿ ಕಲೆಗೆ ತುಂಬಾ ಪ್ರೋತ್ಸಾಹ ಸಿಕ್ಕಿತು. ವಾರಕ್ಕೊಂದು ನಾಟಕ ಆಡುತ್ತಿದ್ದೆವು. ದಾವಣಗೆರೆ ಕಾಟನ್ ಮಿಲ್ಸ್ ಸಾಹುಕಾರರಾದ ಶ್ರೀ ಶ್ರೀನಿವಾಸ ಮೂರ್ತಿಯವರು, ಪುರಸಭಾಧ್ಯಕ್ಷ ಸಿ.ಕೇಶವಮೂರ್ತಿ, ಡಾ.ನಂಜುಪ್ಪ ಬಿ.ಟಿ.ಸೋಮಣ್ಣ, ವಕೀಲ್ ನಾಗರಾಜರಾವ್, ನನ್ನ ಸಹೋದ್ಯೋಗಿ ಎಚ್.ಚನ್ನಬಸವಯ್ಯ, ಇಂಜಿನಿಯರಿಂಗ್ ಕಾಲೇಜ್

ಪ್ರಿನ್ಸಿಪಾಲ್ ಇ.ಎಸ್.ಗುರುಬಸಪ್ಪ - ಎಲ್ಲರೂ ಸೇರಿ ನಾಟಕ ಆಡುತ್ತಿದ್ದುದುಂಟು. ಹೀಗಾಗಿ ನನಗೆ ದಾವಣಗೆರೆ ಬಿಡಲು ಮನಸ್ಸೇ ಇರಲಿಲ್ಲ. ಆದರೆ ಕೆ.ವಿ.ಪುಟ್ಟಪ್ಪನವರು ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದಾಗ, ಒಂದೇ ಜಿಲ್ಲೆಗೆ ಎರಡು ಪ್ರಥಮ ದರ್ಜೆ ಕಾಲೇಜು ಕೊಡಬಾರದೆಂದು ಕಾನೂನಿತ್ತು. ದಾವಣಗೆರೆಯ ಹಿರಿಯರು ಚಿತ್ರದುರ್ಗ ಜಿಲ್ಲಾ ಮುಖ್ಯಸ್ಥರ, ಆದರೆ ನಮ್ಮ ದಾವಣಗೆರೆ ಅತ್ಯಂತ ಜಗತ್ಪ್ರಸಿದ್ಧ ವ್ಯಾಪಾರಕೇಂದ್ರ. ಇಲ್ಲಿಗೆ ಕೊಡಿ ಎಂದು ಬಲಾತ್ಕರಿಸಿದಾಗ ಕುವೆಂಪುರವರು 'ನೀನೊಂದು ಪ್ರೈವೇಟ್ ಅಸೋಸಿಯೇಷನ್ ಮಾಡಿಕೊಳ್ಳಿ ಕೊಡೋಣ' ಅಂದರು. ಮಾರನೇ ದಿನವೇ 'ಬಾಪೂಜಿ ಎಜುಕೇಷನ್ ಸೊಸೈಟಿ' ಜನ್ಮ ತಾಳಿತು. ಸರ್ಕಾರಿ ನೌಕರರಾಗಿದ್ದ ನಮ್ಮನ್ನು ಶಿವಮೊಗ್ಗೆ ಮೊದಲಾದೆಡೆಗಳಿಗೆ ವರ್ಗ ಮಾಡಿದರು. ಆದರೂ ಒಂದು ವರ್ಷ ಖಾಸಗಿ ಸಂಸ್ಥೆಯವರು ನಮ್ಮನ್ನು ಉಳಿಸಿಕೊಂಡರು.

ನಾನು ಶಿವಮೊಗ್ಗೆಯಲ್ಲಿ ೮ ವರ್ಷ ಇದ್ದೆ. ದಾವಣಗೆರೆಯಲ್ಲಿದ್ದಾಗ ಶಿವು ಹುಟ್ಟಿದ್ದ. ಶಿವಮೊಗ್ಗೆಯಲ್ಲಿ ರಾಗಿಣಿ ಮತ್ತು ರವಿ ಹುಟ್ಟಿದರು. ಶಿವಮೊಗ್ಗೆ ನನಗೆ ತೌರಾಗಿತ್ತು. ಅಷ್ಟು ಆತ್ಮೀಯತೆ ಬೆಳೆಯಿತು. ಅನಂತರ ನನಗೆ ಬೆಂಗಳೂರಿಗೆ ವರ್ಗವಾಯಿತು. ಬೆಂಗಳೂರಿನಲ್ಲಿದ್ದಾಗ ಒಂದು ತುಂಟ ಹುಡುಗರ ತರಗತಿ. ನನ್ನ ಗೆಳೆಯ ಜಿ.ಎಸ್.ಸಿದ್ಧಲಿಂಗಯ್ಯ ಆ ಹುಡುಗರನ್ನು ಬಗ್ಗಿಸಲು ನೀನೇ ಸಮರ್ಥ, ನೀನು ಆ ಕ್ಲಾಸ್ ತೆಗೆದುಕೊ ಎಂದು ಕೊಟ್ಟರು. ನಾನು ಮೊದಲ ದಿನ ಮೊದಲ ತರಗತಿಗೆ ಕಾಲಿರಿಸಿ ಪಾಠಕ್ಕೆ ಮೊದಲು ನಾಲ್ಕು ಮಾತು ಆಡಿದೆ. ತುಂಟ ಹುಡುಗರು ತಣ್ಣಗಾದರು. ಭೇಷ್ ಗೆದ್ದೆ ಎಂದು ನನ್ನ ಬೆನ್ನು ನಾನೇ ತಟ್ಟಿಕೊಂಡೆ. ಇನ್ನೇನು ಪಾಠ ಆರಂಭಿಸಬೇಕು. ಅಷ್ಟರಲ್ಲಿ ವಿಕ್ಟೋರಿಯಾ ಆಸ್ಪತ್ರೆಯಿಂದ ಫೋನ್. ನಿಮ್ಮ ಕಿರಿ ಮಗ ಮೂರು ವರ್ಷದ ಮಗು ಮಹಡಿಯಿಂದ ಕೆಳಗೆ ಬಿದ್ದಿದ್ದಾನೆ. ಆಸ್ಪತ್ರೆಗೆ ತೆಗೆದುಕೊಂಡು ಹೋಗಿದೆ. ಬೇಗ ಬರಬೇಕು' ಎಂದು. ನನಗೆ ಏನೂ ತೋಚಲಿಲ್ಲ. ಆದರೂ ಪಾಠ ಮುಂದುವರಿಸಿದೆ. ಮತ್ತೊಮ್ಮೆ ಫೋನ್ ಬಂತು, ಬೇಗ ಬರಬೇಕಂತೆ ಎಂದು. ನಾನು ವಾರ್ತೆ ತಂದ ಜವಾನನಿಗೆ ಹೇಳಿದೆ 'ಹೇಗೋ ಮಗು ಆಸ್ಪತ್ರೆಯಲ್ಲಿ ತುರ್ತು ವಿಭಾಗದಲ್ಲಿದೆ. ನಾನು ಬಂದು ಏನೂ ಮಾಡಬರುವುದಿಲ್ಲ. ಈ ಗಂಟೆ ಆದ ಕೂಡಲೇ ಬರುತ್ತೇನೆ' ಎಂದು. ಅದೇ ರೀತಿ ಮಾಡಿದೆ.

ಮತ್ತೊಂದು ಘಟನೆ ನಮ್ಮ ಸಂಬಂಧಿಗಳ ಮಗು ತೀರಿಕೊಂಡಿತ್ತು. ಅವರ ಮನೆಯಲ್ಲಿ ಯಾರೂ ಇರಲಿಲ್ಲ. ನಾನು ಪಿ.ಯು.ಸಿ. ಪರೀಕ್ಷೆಯ ಮೌಲ್ಯ ಮಾಪನ ಕೇಂದ್ರದ ಮುಖ್ಯಸ್ಥನಾಗಿದ್ದೆ. ಸುಮಾರು ಐದಾರು ನೂರು ಜನ ಮೌಲ್ಯಮಾಪಕರು ಕರ್ನಾಟಕದ ಬೇರೆ ಬೇರೆ ಕಡೆಯಿಂದ ಬಂದಿದ್ದರು. ಅವರಿಗೆ ವ್ಯವಸ್ಥೆ ಮಾಡಬೇಕು. ತುಂಬಾ ಜವಾಬ್ದಾರಿ ಕೆಲಸ ಆದ್ದರಿಂದ ನಾನು ಹೋಗಲಿಲ್ಲ. ನನ್ನ ಹೆಂಡತಿ ಬೇಗ ಬನ್ನಿ ಮಗುವನ್ನು ಸಮಾಧಿ ಮಾಡಿ ಬರೋಣ ಅಂದಳು. ನಾನು ಹೇಳಿದೆ, ನಾವಿದ್ದ ಮನೆಯ ಮಾಲೀಕರ ಮನೆಯ ಪತ್ನಿಯನ್ನು ಕರೆದುಕೊಂಡು ಹೋಗಿ ಸಮಾಧಿ ಮಾಡಿ ಬಾ' ಎಂದು. ನಾನು ಎರಡೂ ವೇಳೆಗಳಲ್ಲಿ ನಡೆದುಕೊಂಡದ್ದು ಸರಿಯೋ, ತಪ್ಪೋ ಕಾಣೆ ಆದರೆ 'ಕಾಯಕದಲ್ಲಿ ನಿರತನಾದಡೆ ಗುರುವನ್ನಾದರೂ ಮರೆಯಬೇಕು, ಲಿಂಗವನ್ನಾದರೂ ಮರೆಯಬೇಕು, ಜಂಗಮನನ್ನಾದರೂ ಮರೆಯಬೇಕು' ಎಂಬ ಶರಣರ ನುಡಿ ನನಗೆ ಮಾನ್ಯವಾದದ್ದು ಸತ್ಯ.

ಬೆಂಗಳೂರಲ್ಲಿದ್ದ ನಾಲ್ಕು ವರ್ಷಗಳಲ್ಲಿ ಕೊಕ್, 'ರೀಡರ್' ಆಗಿ ತುಮಕೂರಿಗೆ ವರ್ಗ. ತುಮಕೂರು ನಾಲ್ಕು ವರ್ಷ. ಅನಂತರ ಚನ್ನಪಟ್ಟಣದ ಖಾಸಗಿ ಕಾಲೇಜಿಗೆ ಪ್ರಿನ್ಸಿಪಾಲನಾಗಿ, ಕಳುಹಿಸಲ್ಪಟ್ಟೆ. ಅಲ್ಲಿ ಮೂರು ವರ್ಷ ಕೆಟ್ಟ ಕನಸುಗಳನ್ನು ಕಂಡು 'ಜ್ಞಾನ ಗಂಗೋತ್ರಿ' ಎಂಬ ಮಕ್ಕಳ ವಿಶ್ವಕೋಶದ ಏಳನೆಯ ಸಂಪುಟದ ರಚನೆಯ ಪ್ರಧಾನ ಸಂಪಾದಕನಾಗಿ ಬೆಂಗಳೂರಿಗೆ ಬಂದೆ. ಮೂರು - ನಾಲ್ಕು ವರ್ಷದಲ್ಲಿ, ನನ್ನ ಭಾಗದ ಕೆಲಸವನ್ನೆಲ್ಲಾ ಮುಗಿಸಿದೆ. ನನಗೆ ಸರ್ಕಾರಿ ಆಜ್ಞೆ ಬಂತು ಮಂಗಳೂರು ಕಾಲೇಜಿಗೆ ಪ್ರಿನ್ಸಿಪಾಲನಾಗಿ ಹೋಗುವುದೆಂದು. ನನ್ನ ಆರ್ಥಿಕ ಪರಿಸ್ಥಿತಿ ಆಗ ತುಂಬಾ ಕೆಟ್ಟಿತ್ತು. ಮನೆ ಕಟ್ಟಲು ಸಾಲ ತೆಗೆದಿದ್ದೆ. ಅದಕ್ಕೆ, ಇನ್ಶೂರೆನ್ಸಿಗೆ, ಅದಕ್ಕೆ ಇದಕ್ಕೆ ಎಲ್ಲಾ ಹೋಗಿ ೬೮೦ ರೂಪಾಯಿ ಉಳಿಯುತ್ತಿತ್ತು. ಅದರಲ್ಲಿ ಮನೆ ಬಾಡಿಗೆ, ಖರ್ಚು ಇತ್ಯಾದಿಗಳನ್ನು ನಿಭಾಯಿಸಬೇಕಾಗಿತ್ತು. ಅದೇ ಕಷ್ಟ. ಅದರ ಮೇಲೆ ಬೇರೆ ಕಷ್ಟಗಳು - ಅಂದರೆ ನನ್ನ ಹಿರಿಯ ಮಗ ಶಿವು ಗುಲ್ಬರ್ಗ ವಿಶ್ವವಿದ್ಯಾಲಯಕ್ಕೆ ಎಂ.ಎ. ಓದಲು ಹೋದ. ಅಲ್ಲಿ ಗಣಿತ ಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿದ್ದ ಡಾ। ಸಿದ್ದಪ್ಪನವರು

ನಿಮ್ಮ ಮಗ ಎಂ.ಎ. ನಮ್ಮಲ್ಲಿಯೇ ಓದಲಿ ಎಂದು ಕರೆದೊಯ್ದರು. ಮಗಳು ರಾಗಿಣಿ ಮೈಸೂರಿನಲ್ಲಿ ಸ್ಪೀಚ್ ಅಂಡ್ ಹಿಯರಿಂಗ್ ಎಂ.ಎಸ್‌ಸಿ. ಓದಲು ಹೋದಳು. ಚಿಕ್ಕ ಮಗ ರವಿ ತುಮಕೂರಲ್ಲಿ ಎಸ್.ಐ.ಟಿ.ಯಲ್ಲಿ ಎಂಜಿನಿಯರಿಂಗ್, ನಾನು ಮಂಗಳೂರು, ನನ್ನ ಹೆಂಡತಿ ಬೆಂಗಳೂರು. ಐದು ಜನ ಐದು ದಿಕ್ಕು. ನನ್ನ ಸಂಬಳ ಸಾಕಾಗುತ್ತಿರಲಿಲ್ಲ. ಸಾಲ ಮಾಡಿದೆ. ತೀರಿಸಲು ಬೆಂಗಳೂರಿಗೆ ಬಂದ ಮೇಲೆ ಅಂದರೆ ಮಾರನೆಯ ವರ್ಷವೇ ತೆರಪಿನ ಶಿಕ್ಷಣದ ವಿದ್ಯಾರ್ಥಿಗಳಿಗೆ ಎಂ.ಎ.ಪಾಠ ಮಾಡತೊಡಗಿದೆ. ಶ್ರೀ ಕೆ.ಶಿವರಾಮು ಎಂಬುವರು ಐ.ಎ.ಎಸ್. ಪರೀಕ್ಷೆಯನ್ನು ಕನ್ನಡದಲ್ಲಿ ಬರೆಯುತ್ತೇನೆ. ನೀವು ಕನ್ನಡ ಪಾಠವನ್ನು ಹೇಳಿ ಅಂದರು. ಅವರಿಗಾಗಿ ಐ.ಎ.ಎಸ್. ಕನ್ನಡ ಪಾಠ ಹೇಳ ತೊಡಗಿದೆ. ಶ್ರೀ ಶಿವರಾಮುರವರು ಈಗ ದಾವಣಗೆರೆಯಲ್ಲಿ ಜಿಲ್ಲಾಧಿಕಾರಿಗಳಾಗಿದ್ದಾರೆ. ಅವರಂತಹ ದಕ್ಷ ಹಾಗೂ ಪ್ರಾಮಾಣಿಕ ಆಡಳಿತಗಾರನನ್ನು ನಾನು ಕಾಣಲಿಲ್ಲ. ಅಷ್ಟೇ ಗುರುಭಕ್ತಿ ಸಂಪನ್ನರು. ಅವರು ಹಾಕಿದ ಐ.ಎ.ಎಸ್.ಪಾಠದ ಪೀಠಿಕೆಯಿಂದಾಗಿ ನನ್ನ ಸಾಲ ತೀರುತ್ತ ಬಂತು. ನಾನು ಬೆಂಗಳೂರಿಗೆ ಬಂದದ್ದು ಕಾಲೇಜು ಪ್ರಾಧ್ಯಾಪಕನಾಗಿ ಅಲ್ಲ. ರಾಜಭಾಷಾ ಆಯೋಗದ ಸದಸ್ಯನಾಗಿ. ಐದು ವರ್ಷ ಅಲ್ಲಿ ಶ್ರೀ ವೈ.ಎಂ.ಸಿ.ಶರ್ಮರವರ ನೇತೃತ್ವದಲ್ಲಿ ಕೆಲಸ ಮಾಡಿದೆ. ಅಲ್ಲಿಯೇ ನಿವೃತ್ತನಾದೆ.

ಈ ಮಧ್ಯೆ ನನ್ನ ಮಗಳ ಮದುವೆ ಕೈಗೂಡಿಬಂತು. ಉತ್ತರ ಅಮೇರಿಕೆಯ ಕ್ಯಾಲಿಫೋರ್ನಿಯಾದಲ್ಲಿದ್ದ ಹಿರಿಯೂರು ತಾಲ್ಲೂಕು ಅಬ್ಬಿನಹೊಳೆಯ ಗೌರಣ್ಣನವರ ಕಿರಿಯ ಮಗ ಶ್ರೀ ಎಸ್. ಸಂಗಮೇಶ್ವರ್‌ರವರು ನನ್ನ ಮಿತ್ರರೊಬ್ಬರಿಂದ ತಿಳಿದು ಅವರ ಬಂಧುಗಳು ಮನೆಗೆ ಬಂದು ಹೆಣ್ಣು ನೋಡಿದರು. ನಾನು ಸ್ವಲ್ಪ ಹಿಂದೆ ಮುಂದೆ ನೋಡಿದೆ. ಏಕೆ ಅಂದರೆ ಆ ದಿವಸ ನನ್ನಲ್ಲಿ ಹತ್ತು ಪೈಸೆ ಕೂಡ ಇರಲಿಲ್ಲ. ಮದುವೆ ಕೇವಲ ಒಂಬತ್ತು ದಿನಗಳಲ್ಲಿ ಆಗಬೇಕು. ಬಂದ ಸುವರ್ಣಾವಕಾಶವನ್ನು ಕಳೆದುಕೊಳ್ಳಲಾರೆ, ಉಳಿಸಿಕೊಳ್ಳಲು ಶಕ್ತಿ ಇಲ್ಲ. ಅದರಿಂದಾಗಿ ನಾಳೆ ಹೇಳ್ತೇನೆ ಅಂದೆ. ಅವರು 'ನಾಳೆ ಹಾಳು ಈ ದಿನವೇ ಮಾತುಕೊಡಿ. ಒಂದು ವೇಳೆ ಹಣದ ತೊಂದರೆ ಇದ್ದರೆ ಹೇಳಿ ನಾವೇ ಎಲ್ಲಾ ನೋಡಿಕೊಳ್ಳುತ್ತೇವೆ' ಅಂದರು. ನಾನು 'ಏನೂ ಬೇಡ. ನನ್ನ ಹೆಂಡತಿ ಮಗ, ಮಗಳು ಕೇಳ್ತೇನೆ ಅಂದೆ' ಕೇಳಿದೆ. ಒಪ್ಪಿದರು. ಒಪ್ಪಿಗೆಕೊಟ್ಟೆ. ಕೈಯಲ್ಲಿ ಕಾಸು ಇರಲಿಲ್ಲ. ಆದರೆ, ಸುಲಭವಾಗಿ ಛತ್ರ ಸಿಕ್ಕಿತು. ನಂಜುಂಡೇಗೌಡರು ಮೈಸೂರಿನಿಂದ ಲಗ್ನಪತ್ರಿಕೆ ಮುದ್ರಣ ಮಾಡಿಸಿಕಳುಹಿಸಿದರು. ತಿಪಟೂರಿನಿಂದ ತೆಂಗಿನಕಾಯಿ, ಕೊಬರಿ, ಬುಕ್ಕಾಂಬುಧಿಯಿಂದ ಸಿದ್ಧಲಿಂಗಸ್ವಾಮಿ ವತಿಯಿಂದ ಬಾಳೆ ಎಲೆ, ಬಾಳೆಹಣ್ಣು ಇತ್ಯಾದಿ, ಚನ್ನಪಟ್ಟಣದಿಂದ ಶ್ರೀ ಸ್ವಪ್ರಭಾನಂದಶರ್ಮರ ಮನೆಯಿಂದ ವೀಳೆದೆಲೆ, ಹೊಂಬಾಳೆ ಮೊದಲಾದವು. ಸ್ವಾಮಿಗಳೊಬ್ಬರಿಂದ ಸೌದೆ, ಉಡುಗೊರೆ ವಸ್ತುಗಳು ಬಂದವು. ಆತ್ಮೀಯ ಆಡಿಟರ್ ಸದಾಶಿವಪ್ಪ ಮದುವೆಯ ಊಟಕ್ಕೆ ಬೇಕಾಗುವ ದವಸ ಧಾನ್ಯಗಳನ್ನು ತರಿಸಿಕೊಟ್ಟರು, ನನ್ನ ಮಿತ್ರರನೇಕರು ಒಂದು ಸಾವಿರ ದಿಂದ ಹಿಡಿದು ಐದು ಸಾವಿರದವರೆಗೂ ಹಣ ಕಳುಹಿಸಿಕೊಟ್ಟರು. ಬಡ ಅಧ್ಯಾಪಕನ ಮಗಳ ಮದುವೆ ಅದ್ದೂರಿಯಿಂದ ನಡೆದು ಹೋಯಿತು.

ಶಿಕ್ಷಣ ಮುಗಿಸಿಕೊಂಡು ಗುಲ್ಬರ್ಗಾದಿಂದ ಶಿವು ಬಂದ. ತುಮಕೂರಿನಿಂದ ಬೆಂಗಳೂರು ಆರ್.ವಿ. ಕಾಲೇಜಿಗೆ ವರ್ಗಾ ಮಾಡಿಸಿಕೊಂಡು ರವಿ ಬಂದ, ನಾನೂ ರಾಜಭಾಷಾ ಆಯೋಗಕ್ಕೆ ಸದಸ್ಯನಾಗಿ ಮಂಗಳೂರಿನಿಂದ ಬಂದೆ. ಎಲ್ಲರೂ ಕೂಡಿ ರಾಗಿಣಿ ಮದುವೆ ಮಾಡಿ ಸಂತೋಷದಿಂದ ಅಳಿಯ ಸಂಗಮೇಶ್ವರ ಜೊತೆಯಲ್ಲಿ ಅಮೇರಿಕಾಕ್ಕೆ ಕಳಿಸಿಕೊಟ್ಟೆವು.

ಸುಖ ತಾನು ಬರುವಾಗ ಗುಳೆಯೆತ್ತಿ ಬರುವುದು

ಒಂದಲ್ಲ ಎರಡಲ್ಲ ಪರಿವಾರವೆ!

ಎಂದು ವರಕವಿ ಬೇಂದ್ರೆ ಹೇಳುತ್ತಾರೆ.

ನನ್ನ ಕೈ ಹಿಡಿದ ಹೆಂಡತಿಯ ಪುಣ್ಯದಿಂದಲೋ ಅಥವಾ ಹುಟ್ಟಿದ ಮಕ್ಕಳ ಭಾಗ್ಯದಿಂದಲೋ ನನ್ನ ಬಾಳಿನಲ್ಲಿ ಸುಖದ ದಿನಗಳು ಆರಂಭವಾದವು. ಶಿವು ಕಾಲೇಜೊಂದರಲ್ಲಿ ಅಧ್ಯಾಪಕನಾದ. ರವಿ ಇಂಜಿನಿಯರ್ ಆದ, ಅವರಿಬ್ಬರಿಗೂ ಒಳ್ಳೆಯ ಕಡೆ ಹೆಣ್ಣು ತಂದು ಮದುವೆ ಮಾಡಿ ಆಯಿತು. ಹಿರಿಯ ಸೊಸೆ ಸುವರ್ಣ ಗುಲ್ಬರ್ಗಾದಲಲಿ ಶರಣ ಬಸಪ್ಪ ಕಾಲೇಜಿನಲ್ಲಿ

ಮೂವತ್ತು ನಾಲ್ವತ್ತು ವರ್ಷಗಳವರೆಗೆ ಇಂಗ್ಲೀಷ್ ಪ್ರಾಧ್ಯಾಪಕರಾಗಿ ದುಡಿದ ಈಗ ದಾವಣಗೆರೆಯಲ್ಲಿ ವಿಶ್ರಾಂತ ಜೀವನ ಸಾಗಿಸುತ್ತಿರುವ ಶರಣ ಕವಿ, ನಿಜಗುಣ ಶಿವಯೋಗಿ ಮಾರ್ಗಾನುಯಾಯಿ ಡಾ॥ಪಿ.ಎಂ.ಸಿದ್ದಯ್ಯನವರ ಸುಪುತ್ರಿ. ವಿದ್ಯಾವಂತೆ, ಬುದ್ಧಿವಂತೆ, ಸಂಗೀತದಲ್ಲಿ ಅದ್ವಿತೀಯ ಪಾಂಡಿತ್ಯ ಉಳ್ಳವಳು. ಈಗ ಆಶು, ಅಂಶು ಎಂಬೆರಡು ಗಂಡು ಮಕ್ಕಳ ತಾಯಿ. ಕಿರಿಯ ಸೊಸೆ ಶೈಲಜಾ. ಬೆಂಗಳೂರಿನವಳು. ಸಜ್ಜನಿಕೆಯ ಸಹಕಾರಮೂರ್ತಿ, ದುಧನಿ ಮಹಾಸ್ವಾಮಿಗಳ ಪದಭಕ್ತ ಎಸ್. ಸೋಮಶೇಖರ್‌ರವರ ಮಗಳು. ಇವಳು ವಿದ್ಯಾವಂತೆ, ಮಹಾಮೇಧಾವಿ ಹಾಗೂ ಪ್ರತಿಭಾ ಸಂಪನ್ನೆ, ಸ್ಕೇಟಿಂಗ್ ಸ್ಪರ್ಧೆಯಲ್ಲಿ ಭಾರತ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದವಳು. ಅವಳೀಗ 'ಇಷ' ಎಂಬ ಹೆಣ್ಣು ಮಗುವಿನ ತಾಯಿಯಾಗಿದ್ದಾಳೆ. ಅಮೇರಿಕೆಯಲ್ಲಿ ತನ್ನ ಗಂಡನೊಡನೆ ತಾನೂ ಸಾಫ್ಟ್‌ವೇರ್ ಇಂಜಿನಿಯರ್ ಆಗಿ ದುಡಿಯುತ್ತಿದ್ದಾಳೆ. ನಮ್ಮ ಬೀಗಿತ್ತಿಯರಾದ ವಿಜಯಾ ಸಿದ್ಧಯ್ಯ, ನಾಗರತ್ನ ಸೋಮಶೇಖರ್ ಸಾಧ್ವೀ ಶಿರೋಮಣಿಯರು. ನಮ್ಮ ಬೀಗರಿಬ್ಬರೂ ಮಿತ ಸಂತಾನಿಗಳು. ಇಬ್ಬರಿಗೂ ತಲಾ ಒಂದೊಂದು ಗಂಡು, ಒಂದೊಂದು ಹೆಣ್ಣು, ನಮಗೆ ಒಂದು ಹೆಣ್ಣು, ಎರಡು ಗಂಡು. ಒಟ್ಟಿನಲ್ಲಿ ಮಿತ ಸಂಸಾರಿಗಳಾದ ನಾವು ಹಿತ ಕಂಡಿದ್ದೇವೆ. ತುಂಬು ಜೀವನ ಸನ್ನದಾಗಿದೆ. ಬದುಕಿನಲ್ಲಿ ಏಳು ಬೀಳು ಸಹಜ. ಆದರೆ ಕಡೆಯ ದಿನಗಳಲ್ಲಿ ಯಾರಿಗೂ ಮಾನಸಿಕ ನೆಮ್ಮದಿ ಹಾಳಾಗಬಾರದು. ನನ್ನ ಪಾಲಿಗೆ ಯಾವ ಕೊರತೆಯೂ ಇಲ್ಲ. ಸರ್ವಜ್ಞನ ಜೀವನ ದರ್ಶನದಂತೆ ಬೆಚ್ಚನೆಯ ಮನೆಯಿದೆ, ವೆಚ್ಚಕ್ಕೆ ಹೊನ್ನಿದೆ, ಇಚ್ಛೆಯನರಿತು ನಡೆವ ಸತಿಯಿದ್ದಾಳೆ. ಅಕ್ಕರೆಯ ಸಕ್ಕರೆಯ ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರು, ಸುಖ, ಶಾಂತಿ, ಆರೋಗ್ಯ ಭಾಗ್ಯ ಎಲ್ಲ ಎಲ್ಲ ಇವೆ. ಇದಕ್ಕಿಂತ ಹೆಚ್ಚೇನು ಬೇಕು? ಅಂತೂ ನೆಮ್ಮದಿಯ ಜೀವನ ನೆಮ್ಮದಿಯ ಸಾವು ಬಯಸುತ್ತಾ ಈಗ ಎಪ್ಪತ್ತರ ಹೊಸ್ತಿಲಲ್ಲಿ ನಿಂತಿದ್ದೇನೆ.

ಆತ್ಮೀಯರೇ,

ನನ್ನ ಬಾಳಸಂಪುಟದಲ್ಲಿ ಅನೇಕ ಅಧ್ಯಾಯಗಳನ್ನು ಓದಿದ ತಮ್ಮನ್ನು ನನ್ನ ಸಾಹಿತ್ಯ ಸೃಷ್ಟಿಯ ಮತ್ತೊಂದು ಮಜಲಿಗೆ ಕರೆದೊಯ್ಯಲಿಚ್ಛೆಸುತ್ತೇನೆ. ನನ್ನ ಕಾವ್ಯ ರಚನೆ ನಾನು ಚಿತ್ರದುರ್ಗದ ಇಂಟರ್‌ಮೀಡಿಯೇಟ್ ಕಾಲೇಜಿನಲ್ಲಿ ಓದುತ್ತಿದ್ದಾಗ, ಅಂದರೆ ೧೯೫೦ರಲ್ಲಿ ಮಿತ್ರ ಈಶ್ವರಾಚಾರಿಯ ಮಾರ್ಗದರ್ಶನದಲ್ಲಿ ವಾಸ್ತವವಾಗಿ ಆರಂಭವಾಯಿತಷ್ಟೆ. ಅದನ್ನು ಮುಂದುವರಿಸಿ ನಾನು ಮೊದಲ ಬಿ.ಎ. (ಆನರ್ಸ್) ತರಗತಿಗೆ ಬರುವಷ್ಟರಲ್ಲಿ ೩೦-೪೦ ಭಾವಗೀತಗಳನ್ನು ರಚಿಸಿದೆ. ಅವೆಲ್ಲವನ್ನೂ ಒಟ್ಟಿಗೆ ಸೇರಿಸಿ ೧೯೫೭ನೇ ಇಸವಿಯಲ್ಲಿ 'ಶಿವತಾಂಡವ' ಎಂಬ ಶೀರ್ಷಿಕೆಯಡಿಯಲ್ಲಿ ಒಂದು ಕವನ ಸಂಕಲನವನ್ನು ಹೊರತಂದೆ. ಇದಕ್ಕೆ ನನ್ನ ಸ್ನೇಹಿತರು ಮುಖ್ಯ ಪ್ರೇರಕ ಶಕ್ತಿಗಳಾದರು. ಮೈಸೂರಿನ ಸರಸ್ವತಿ ಪುರದಲ್ಲಿದ್ದ ವಿದ್ಯಾಶ್ರಮ ಎಂಬ ಬಡ ವಿದ್ಯಾರ್ಥಿಗಳ ಉಚಿತ ವಸತಿಗೃಹದಲ್ಲಿ ಖ್ಯಾತ ಜಾನಪದ ತಜ್ಞ ಡಾ। ಜಿ.ಶಂ.ಪರಮಶಿವಯ್ಯ, ಕಲಾವಿದ ಪಿ.ಆರ್.ತಿಪ್ಪೇಸ್ವಾಮಿ ಪ್ರಸಿದ್ಧ ವಿಮರ್ಶಕ ಪೋಳಂಕಿ ರಾಮಮೂರ್ತಿ, ನಾನು, ನನ್ನ ಸಹಪಾಠಿ ನಾಗೇಂದ್ರಪ್ಪ ಮೊದಲಾದವರು ಇದ್ದೆವು. ಇವರೆಲ್ಲರೂ ತಮ್ಮ ವರದ ಹಸ್ತ ನೀಡಿದರು. 'ಶಿವತಾಂಡವ' ಹೊರಬಂತು. ಪೂಜ್ಯ ಗುರುಗಳಾದ ಎಸ್.ವಿ.ಪರಮೇಶ್ವರ ಭಟ್ಟರು ಅದಕ್ಕೆ ಮುನ್ನುಡಿಯ ತಿಲಕವಿಟ್ಟು ಆಶೀರ್ವದಿಸಿದರು. ಗೆಳೆಯ ಪಿ.ಆರ್.ತಿಪ್ಪೇಸ್ವಾಮಿಯವರ ಚಿತ್ರ, ಮುದ್ರಣ ಎಲ್ಲಾ ಸೇರಿ ನನಗೆ ಆ ಪುಸ್ತಕದ ೧೦೦೦ ಪ್ರತಿಗಳಿಗೆ ತಗುಲಿದ ಖರ್ಚು ೧೧೦ ರೂ.ಗಳು! ಪ್ರಕಾಶನಕ್ಕೆ 'ರಾಗಿಣಿ ಪ್ರಕಾಶನ' ಎಂದು ಹೆಸರಿಟ್ಟೆ. ಅದೇ ಹೆಸರನ್ನು ನನ್ನ ಮಗಳಿಗೂ ಇಟ್ಟೆ.

ಮುಂದೆ ೧೯೬೭ರ ವರೆಗೆ ನನ್ನ ಯಾವ ಕೃತಿಯೂ ಹೊರಬರಲಿಲ್ಲ. ಶಿವಮೊಗ್ಗೆಯಲ್ಲಿ ಯಥಾ ಪ್ರಕಾರ ನನ್ನ ಆತ್ಮೀಯ ಗೆಳೆಯರ ಪ್ರೇರಣೆಯಂತೆ 'ಕೆಂಗನಕಲ್ಲು' ಕವನ ಸಂಕಲನ ಹೊರತಂದೆ. ಇದು ನನಗೆ ನಿಜವಾದ ಕವಿ ಎಂಬ ಕೀರ್ತಿ ತಂದುಕೊಟ್ಟಿತು. ೧೯೬೭ರ ರಾಜ್ಯ ಸರ್ಕಾರದ ಪ್ರಶಸ್ತಿಯೂ ಇದಕ್ಕೆ ಲಭಿಸಿತು. ಇದರಲ್ಲಿನ 'ಸುಮ ಸುಂದರ ತರುಲತೆಗಳ ಬೃಂದಾವನ ಲೀಲೆ' ಅತ್ಯಂತ ಜನಪ್ರಿಯ ಗೀತೆಯಾಯಿತು. 'ಕೆಂಗನಕಲ್ಲು' ಎಂಬ ನೀಳ್ಗವನದಲ್ಲಿ ಬರುವ ಬರಗಾಲದ ವರ್ಣನೆಯನ್ನು ಬಳ್ಳಾರಿ ಸಾಹಿತ್ಯ ಸಮ್ಮೇಳನದಲ್ಲಿ ಪುತಿನ. ರವರ ಕವಿಗೋಷ್ಠಿಯ ಅಧ್ಯಕ್ಷತೆಯಲ್ಲಿ ಓದಿ, ವಿ.ಕೃ.ಗೋಕಾಕರ ಅಧ್ಯಕ್ಷತೆಯಲ್ಲಿ ನಡೆದ ಬಹುದೊಡ್ಡ ಸಾಹಿತ್ಯ ಸಮ್ಮೇಳನದ ಲಕ್ಷ ಲಕ್ಷ ಜನರ ಪ್ರೀತಿ ಗೌರವಗಳಿಗೆ ಪಾತ್ರನಾದೆ, ಅನಂತರ

ಬರೆದು ಪ್ರಕಟಿಸಿದ 'ಭಾಸನ ಮಕ್ಕಳು' ಎಂಬ ವಿಮರ್ಶಾ ಗ್ರಂಥಕ್ಕೆ ೧೯೬೩ರ ರಾಜ್ಯ ಸರ್ಕಾರದ 'ದೇವರಾಜ ಬಹದ್ದೂರ್ ಬಹುಮಾನ ಬಂತು' ಮುಂದೆ ೮ ಕವನ ಸಂಕಲನಗಳು, ೪೩ ನೃತ್ಯರೂಪಕಗಳು, ಹಲವು ಜೀವನ ಚರಿತ್ರೆಗಳು, ಸಂಪಾದಿತ ಕೃತಿಗಳು, ಅನುವಾದಗಳು, ಕತೆ, ಕಾದಂಬರಿಗಳು, ನಾಟಕಗಳು, ಚಿಂತನೆಗಳು ರಚನೆಯಾದವು. 'ಕೆಳದಿಯ ಅರಸರು ಮತ್ತು ಕನ್ನಡ ಸಾಹಿತ್ಯ' ಎಂಬ ಸಂಶೋಧನಾ ಗ್ರಂಥವನ್ನು ಡಾ। ಆರ್.ಸಿ. ಹಿರೇಮಠರ ಮಾರ್ಗದರ್ಶನದಲ್ಲಿ ರಚಿಸಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ ಪಡೆದೆ. ಅದು ಬೆಂಗಳೂರು ವಿಶ್ವವಿದ್ಯಾಲಯದಿಂದ ಪ್ರಕಟವಾಯಿತು.

ಹೀಗೆ ನನ್ನ ಕೈಲಾದ ಮಟ್ಟಿಗೆ ಬುದ್ಧಿಗೆ ಎಟುಕಿದ ಮಟ್ಟಿಗೆ, ಪ್ರತಿಭೆಗೆ ಸಿಲುಕಿದ ಮಟ್ಟಿಗೆ, ಕನ್ನಡ ತಾಯಿ ನುಡಿ ಸೇವೆ ಮಾಡಿಕೊಂಡು ಬಂದಿದ್ದೇನೆ. ನನ್ನದಾದ ಆಚಾರ್ಯ ಕೃತಿ ಇನ್ನೂ ಬರಬೇಕಾಗಿದೆ! ನನ್ನ ದುಡಿಮೆಯನ್ನು ಗುರುತಿಸಿ ತಡವಾಗಿಯಾದರೂ ೧೯೯೯ರ ನವೆಂಬರ್‌ನಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ಕನ್ನಡ ರಾಜ್ಯೋತ್ಸವ ಪ್ರಶಸ್ತಿಯಿತ್ತು ಗೌರವಿಸಿದೆ. ಅದೇ ವರ್ಷ ಅದೇ ತಿಂಗಳು ೨೩ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಸಾಹಿತ್ಯ ಪ್ರಶಸ್ತಿ ಪ್ರದಾನಗೈದು ಸನ್ಮಾನಿಸಿದೆ. ಗುರುಪೀಠಗಳಿಂದ, ಸಂಘ ಸಂಸ್ಥೆಗಳಿಂದ, ಅಭಿಮಾನಿಗಳಿಂದ ನೂರಾರು ಗೌರವ ಪ್ರಶಸ್ತಿಗಳು, ಬಿರುದುಗಳು ಬಂದಿವೆ. ಸಾವಿರಾರು ಸಮಾರಂಭಗಳಲ್ಲಿ ಸನ್ಮಾನಿತನಾಗಿದ್ದೇನೆ.

ಸಾಹಿತ್ಯ ಸೇವೆಯಷ್ಟೇ ಪ್ರಮಾಣದಲ್ಲಿ ದೇಶಸೇವೆ, ಸಮಾಜಸೇವೆ, ದೀನದಲಿತ ಸೇವೆ ಮಾಡಿದ ಸಮಾಧಾನ ನನಗಿದೆ. ನಾನು ಯಾವ ಊರಿನಲ್ಲೇ ಇರಲಿ ನನ್ನ ಮನೆಯಲ್ಲಿ ಕನಿಷ್ಟ ಮೂರು ನಾಲ್ಕು ಜನ ವಿದ್ಯಾರ್ಥಿಗಳಿಗೆ ಊಟ ಹಾಕಿ, ಅವರಿಗೊಂದು ಬದುಕುಕೊಟ್ಟ ಭಾಗ್ಯ ನನ್ನ ಪಾಲಿಗಿದೆ. ತುಂಬಾ ಆರ್ಥಿಕ ತೊಂದರೆಯಿಂದ ತಹತಹಪಡುತ್ತಿದ್ದ ಮಹದೇವಸ್ವಾಮಿ ಸಂಸ್ಥಾಪಿತ ಕಂಪನಿ, 'ಹೊನ್ನಪ್ಪ ಭಾಗವತರ ಕಂಪನಿ' (ಹೆಸರುಗಳು ಮರೆತು ಹೋಗಿವೆ) ಮೊದಲಾದವುಗಳಿಗೆ ನನ್ನ ಶಕ್ತಿಮೀರಿ ನೆರವಾಗಿ ಕಲಾಸೇವೆ ಮಾಡಿದ್ದೇನೆ. ೧೯೯೪ರಲ್ಲಿ ದಕ್ಷಿಣ ಭಾರತ ಅಂಧ ಮತ್ತು ಅಂಗವಿಕಲರ ಪ್ರಾಂತೀಯ ಸಮ್ಮೇಳನದ ಕಾರ್ಯಾಧ್ಯಕ್ಷನಾಗಿ ನನ್ನ ಅಂಧ ಬಂಧುಗಳ ಸೇವೆ ಮಾಡಿದ್ದೇನೆ. ಗುರು, ಜಗದ್ಗುರುಗಳ ಸೇವೆ ಧರ್ಮ, ದೇವರುಗಳ ಸೇವೆ ಇವೇ ಮೊದಲಾದವುಗಳನ್ನು ನಿರಂತರ ಮಾಡಿಕೊಂಡು ಬರುತ್ತಿದ್ದೇನೆ. ಇವೆಲ್ಲವೂ ನನಗೆ ನೆಮ್ಮದಿ ತಂದಿವೆ. ನಾನು ಎಲ್ಲ ವಿಧದಿಂದಲೂ ಧನ್ಯತೆಗೆ ಪಾತ್ರನಾಗಿದ್ದೇನೆ ಎಂಬ ಭಾವನೆ ನನ್ನದಾಗಿದೆ.

ನಾನು ಅನೇಕ ಸಾಹಿತ್ಯ ಸಮ್ಮೇಳನಗಳಲ್ಲಿ ಸಕ್ರಿಯವಾಗಿ, ಭಾಗವಹಿಸಿದ್ದೇನೆ. ಅತಿ ಮುಖ್ಯವಾಗಿ ತಿಪಟೂರಿನಲ್ಲಿ ಡಿಸೆಂಬರ್ ೨೭ ಮತ್ತು ೨೮, ೧೯೮೦ರಲ್ಲಿ ಕೆ.ವೆಂಕಟರಾಮಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಎರಡನೆಯ ತುಮಕೂರು ಜಿಲ್ಲಾ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷನಾಗಿದ್ದೆ. ಜನವರಿ ೬ ಮತ್ತು ೭, ೧೯೯೨ರಲ್ಲಿ ತುಮಕೂರಲ್ಲಿ ನಡೆದ ತುಮಕೂರು ಜಿಲ್ಲಾ ಮೂರನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷನಾಗಿ ಆಯ್ಕೆಯಾಗಿದ್ದೆ. ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿದ್ದೆ. ಆನಂತರ ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿ ಒಮ್ಮೆ ಸೋತು, ಮತ್ತೊಮ್ಮೆ ಗೆದ್ದಿದ್ದೇನೆ. ಆದರೆ ಈ ಯಾವ ಸ್ಥಾನ, ಪದವಿಗಳು ನನಗೆ ತೃಪ್ತಿ ತಂದಿಲ್ಲ. ನನ್ನ ಅಧ್ಯಾಪನ, ನನ್ನ ಬರವಣಿಗೆ ಇವಷ್ಟೇ ನನಗೆ ಆನಂದ ತಂದ ಅಂಶಗಳು.

ನಾನು ಪ್ರಿನ್ಸಿಪಾಲನಾಗಿ ಅನುಭವಿಸಿದ್ದು ಕಹಿ ಅನುಭವ, ಅಧ್ಯಕ್ಷನಾಗಿ ಅನುಭವಿಸಿದ್ದು ವಿಷದ ಅನುಭವ. ನನ್ನ ಸ್ನೇಹಿತರು ನನ್ನನ್ನು ಕಷ್ಟದಲ್ಲಿ ಕೈ ಹಿಡಿದು ಮೇಲೆತ್ತಿದ್ದಾರೆ, ಸುಖದಲ್ಲಿ ನನ್ನನ್ನು ಕಂಡು ಹಿಗ್ಗಿದ್ದಾರೆ. ಆದರೆ ನನ್ನ ವಿದ್ಯಾರ್ಥಿಗಳು ಕೆಲವರಿಂದ ನಾನು ತುಂಬಾ ನೊಂದಿದ್ದೇನೆ. 'ಉಪಾಧ್ಯಾಯಾಶ್ಯ ವೈದ್ಯಾಶ್ಯ ಕಾರ್ಯಾಂತೇ ಅಪ್ರಯೋಜಕಃ' ಎಂಬ ಉಕ್ತಿಗೆ ನಾನು ನಿದರ್ಶನವಾಗಿದ್ದೇನೆ. ಎಲ್ಲಕ್ಕೂ ಮಿಗಿಲಾಗಿ ನನ್ನ ಅನೇಕ ವಿದ್ಯಾರ್ಥಿಗಳಿಂದ ಅವಮಾನಿತನಾಗಿದ್ದೇನೆ. ನನ್ನ ಪಾಠ ಸಹಸ್ರಾರು ಜನಕ್ಕೆ ಮೆಚ್ಚು, ಅನೇಕರು ವಿದ್ಯಾರ್ಥಿಗಳು ನನ್ನ ಪಾಠ ಪ್ರವಚನಗಳಿಗೆ ಶಿರಬಾಗಿದ್ದಾರೆ. ಆದರೆ ಕೆಲವರು ಅಷ್ಟೇ ಪ್ರಮಾಣದಲ್ಲಿ ನನಗೆ ದ್ರೋಹ ಬಗೆದಿದ್ದಾರೆ. ಹಾಲೆರೆದ ಕೈಯಲ್ಲಿ ಹಾವಾಗಿ ಕಚ್ಚಿ ವಿಷ ಕಕ್ಕಿದ್ದಾರೆ. ಒಬ್ಬ ಸಭ್ಯನಂತಿದ್ದ ವೇಷಧಾರಿ ಮತ್ತೊಬ್ಬ ಶಿಷ್ಯನ ಜೊತೆ ಸೇರಿ ಹಳದಿ ಪತ್ರಿಕೆಯಲ್ಲಿ ಅಲ್ಲ ಸಲ್ಲದ ಸುದ್ದಿ ಹರಡಿದ. ನನ್ನ ಹತ್ತಿರದ ಬಂಧು ಆ ಪತ್ರಿಕೆಯ ಪ್ರತಿಗಳನ್ನು ಕೊಂಡು, ನನ್ನ ಬಗೆಗೆ ಕೆಟ್ಟ ಅಭಿಪ್ರಾಯ ಮೂಡಲಿ ಎಂದು ನನ್ನ ನೆಂಟರಿಷ್ಟರಿಗೆಲ್ಲಾ ಪೋಸ್ಟ್ ಮೂಲಕ ಕಳುಹಿಸಿ ಅಪಪ್ರಚಾರ

ಮಾಡಿದ. ನಾನು ಯಾವನನ್ನು 'ಸತ್ಯ ಹರಿಶ್ಚಂದ್ರ' ಎಂದು ನಂಬಿದ್ದೆನೋ ಅವನೇ ನಕ್ಷತ್ರಕನಾಗಿ ಕಾಡಿದ. ಇಂಥವರಿಂತೋ ಗೋಮುಖವ್ಯಾಘ್ರಗಳ ಮಧ್ಯದಲ್ಲಿ ಸಾಯದೆ ಬದುಕಿ ಬಂದೆ. ಇದೇ ನನ್ನ ಪವಾಡ.

ಇಷ್ಟಾದರೂ ದೇವರು ಕೈಬಿಟ್ಟರೂ ನನ್ನ ಭಾಗದ ದೈವ ಸ್ವರೂಪರಾದ ಸ್ನೇಹಿತರುಗಳು ನನ್ನ ಕೈಬಿಡಲಿಲ್ಲ. ಅವರಲ್ಲಿ ಬಾಲ್ಯಗೆಳೆಯ, ತುಮಕೂರು ವಕೀಲ ಎಸ್.ಎಂ.ಸೋಮಶೇಖರಪ್ಪ, ಬೆಲಗೂರು ಚನ್ನಬಸಪ್ಪ, ಬೆಂಗಳೂರಿನ ಎಂ.ಸದಾಶಿವಪ್ಪ, ಎನ್.ಎಂ.ಶಿವಕುಮಾರ್, ಎ.ಎಸ್.ಭಟ್ ಇವರೇ ಮೊದಲಾದವರು ನನ್ನ ಹೃದಯದಲಿ, ನನ್ನ ನೆನಪಿನಲ್ಲಿ ನೆಲೆ ನಿಂತರು. ಇವರುಗಳಿಂದ ನಾನು ತುಂಬಾ ಉಪಕೃತನಾಗಿದ್ದೇನೆ. ಅದನ್ನು ಬಣ್ಣಿಸಲು ನನ್ನಲ್ಲಿ ಮಾತು ಸೋತು ಹೋಗುತ್ತವೆ. ಋತುಗಳು ಉಳಲುತ್ತವೆ, ಮಾಸಗಳು ಮಾಸುತ್ತವೆ. ಇದನ್ನು ಆಲಂಕಾರಿಕವಾಗಿ ಹೇಳುತ್ತಿಲ್ಲ. ಆತ್ಮಸಾಕ್ಷಿಯಿಂದ ನುಡಿಯುತ್ತಿದ್ದೇನೆ. ಆದರೆ ನನ್ನಲ್ಲಿ ವಿಶೇಷ ನಂಬಿಕೆ ಭರವಸೆ ಇಟ್ಟದ್ದವರಿಗೆ ನಾನು ಅನ್ಯಾಯ ಮಾಡಿದ್ದೇನೆ. ಡಾ। ಪುಟ್ಟಶಂಕರಪ್ಪನವರು ಮತ್ತು ಜಯಮ್ಮ ಕರಿಯಣ್ಣನವರು, ನನಗಾಗಿ, ನನ್ನ ಪ್ರಗತಿಗಾಗಿ ತುಂಬಾ ಶ್ರಮಿಸಿದವರು. ನಾನು ಪರಿಷತ್ತಿನ ಅಧ್ಯಕ್ಷ ಪದವಿಗೆ ಸ್ಪರ್ಧಿಸಿ ಸೋತ ಮತ್ತು ಗೆದ್ದ ಎರಡು ಸಂದರ್ಭಗಳಲ್ಲೂ ನನ್ನ ಪ್ರಾಣದ ಪ್ರಾಣವಾಗಿ ದುಡಿದವರು. ಆದರೆ ನಾನು ಗೆದ್ದ ಮೇಲೆ ಬಾಹ್ಯ ಶಕ್ತಿಗಳ ಪ್ರಭಾವಕ್ಕೆ ಒಳಗಾಗಿ ಅವರನ್ನು ಕಾರ್ಯದರ್ಶಿಗಳಾಗಿ ತೆಗೆದುಕೊಳ್ಳಲಿಲ್ಲ. ಅದು ಒಂದು ಅರ್ಥದಲ್ಲಿ ನಾನು ಮಾಡಿದ ಮಿತ್ರದ್ರೋಹ. ಈ ಅಪರಾಧಕ್ಕೆ ಆ ಇಬ್ಬರು ಸೋದರ ಸೋದರಿಯರ ಕ್ಷಮೆಯೇ ಪರಿಹಾರ ಎಂದು ಅವರಲ್ಲಿ ವಿನಂತಿಸಿಕೊಳ್ಳುತ್ತೇನೆ. ಶ್ರೀಮತಿ ಜಯಮ್ಮ ಕರಿಯಣ್ಣನವರಂತೂ ನನ್ನ ಯಾವುದೋ ಜನ್ಮದ ತಾಯಿ, ತಂಗಿ ಆಗಿದ್ದಿರಬಹುದು. ನಾನು ಈ ಜನ್ಮದಲ್ಲಿ ಅವರನ್ನು ನನ್ನ ಮಗಳು ರಾಗಿಣಿ ಎಂಬ ಭಾವನೆಯಿಂದಲೇ ನೋಡುತ್ತಿದ್ದೇನೆ. ಅವರೂ ಸಹ ನನ್ನನ್ನು ತಮ್ಮ ಗುರು ತಂದೆ ಎಂಬ ದೃಷ್ಟಿಯಿಂದ ನೋಡಿದ್ದಾರೆ, ನಡೆದುಕೊಂಡಿದ್ದಾರೆ ಕೂಡ. ನನ್ನ ಮಗಳಲ್ಲಿಟ್ಟ ಸಲುಗೆಯನ್ನು ಅವರಲ್ಲಿಟ್ಟದ್ದೆ. ಅವರೂ ಸಹ ಅದೇ ರೀತಿ ನಡೆದುಕೊಳ್ಳುತ್ತಿದ್ದರು. ಬಹುಶಃ ನೋಡಿದವರು ತಪ್ಪು ತಿಳಿದುಕೊಳ್ಳುವಷ್ಟು ಸಲುಗೆ ನಮ್ಮಲ್ಲಿತ್ತು. ಆದರೆ ಆತ್ಮಸಾಕ್ಷಿಯಾಗಿ ನಮ್ಮ ಹೃದಯಗಳು ಪವಿತ್ರ ಭಾವನೆಯಿಂದ ತುಂಬಿದ್ದವು; ಈಗಲೂ ತುಂಬಿವೆ. ಇಂತಹ ಪ್ರಾಂಜಲವಾದ ಮಾತೃ ಹೃದಯದ ಜಯಮ್ಮನವರಿಗೂ ಸೋದರನಿಗೂ ಮಿಗಿಲಾದ ಆತ್ಮೀಯತೆಯ ಡಾ॥ ಪುಟ್ಟಶಂಕರಪ್ಪನವರಿಗೂ ಬೇಸರ ತಂದ ನಾನು ನಿಜಕ್ಕೂ ಅಪರಾಧವಸಗಿದ್ದೇನೆ. ಅವರಿಬ್ಬರೂ ನನ್ನನ್ನು ಕ್ಷಮಿಸಲಿ ಎಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

ನಾನು ಪರಿಷತ್ತಿನ ಅಧ್ಯಕ್ಷ ಪದವಿ ಸ್ವೀಕರಿಸಿದ ತರುಣದಲ್ಲಿ ನನ್ನ ಸಹಪಾಠಿಗಳೂ, ಹಿತೈಷಿಗಳೂ ಆದ ಹಾ.ಮಾ.ನಾಯಕರು ತರಂಗ ಪತ್ರಿಕೆಯ 'ಸ್ವಗತ'ದಲ್ಲಿ ಹೀಗೆ ಹೇಳಿ ಎಚ್ಚರಿಸಿದರು. ಅದು ಹೀಗಿದೆ :

> ಕನ್ನಡ ಸಾಹಿತ್ಯ ಪರಿಷತ್ತಿಗೆ (ಕಸಾಪ) ಈಗ ಎಂಬತ್ತು! ಅದರ ನೂತನ ಅಧ್ಯಕ್ಷರಿಗೆ ಅರುವತ್ತನಾಲ್ಕು. ಅನೇಕ ಕನಸುಗಳನ್ನು ಹೊತ್ತುಕೊಂಡು ಅಧ್ಯಕ್ಷ ಗದ್ದುಗೆಗೆ ಏರಿರುವ ಸಾಸಲು ಶಿವರುದ್ರಯ್ಯ (ಸಾ.ಶಿ.) ಮರುಳಯ್ಯನವರು ಉತ್ಸಾಹಿಗಳು, ಅಧ್ಯಾಪಕ ವೃತ್ತಿ ಅವರಿಗೆ ತುಂಬ ಪ್ರಿಯವಾದದ್ದು. ಅತ್ತ ಇತ್ತ ತಿರುಗಿ ನೋಡದೆ ಅರುವತ್ತು ತುಂಬಿ ನಿವೃತ್ತರಾಗುವವರೆಗೂ ಅಧ್ಯಾಪಕರಾಗಿದ್ದರು. ಅರುವತ್ತು ಆದಮೇಲೂ ಅಧ್ಯಾಪಕ ವೃತ್ತಿಯನ್ನು ಮುಂದುವರಿಸಿದವರು. ಅಂಚೆ ತೆರಪಿನ ಶಿಕ್ಷಣಕ್ಕೆ ಬಂದ ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡುತ್ತಾ ಅಧ್ಯಾಪಕ ವೃತ್ತಿಯ ದಾಹವನ್ನು ಆರಿಸಿಕೊಂಡವರು. ಬೋಧನೆಯ ಜತೆಗೆ ಕವಿ, ಲೇಖಕ ಮತ್ತು ಸಂಶೋಧನಕರು ಕೂಡ.
>
> ಪರಿಷತ್ತಿಗೆ ಮೊದಲಿನಿಂದಲೂ ಇರುವ ತೊಂದರೆ ಎಂದರೆ ಹಣಕಾಸಿನದು. ಸರಕಾರ ಕೊಟ್ಟರೆ ಉಂಟು; ಇಲ್ಲದಿದ್ದರೆ ಇಲ್ಲ. ಅನೇಕ ವರ್ಷ ಇದನ್ನು ಕಂಡ ನಾನು ಬೀದರ್‌ನ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದಲ್ಲಿ ಈ ಕುರಿತು ಹೀಗೆ ಪ್ರಸ್ತಾವ ಮಾಡಿದ್ದೆ.

''ಕನ್ನಡ ಸಾಹಿತ್ಯ ಪರಿಷತ್ತು ಸಂಪೂರ್ಣವಾಗಿ ಸರಕಾರದ ಸಹಾಯವನ್ನು ಅವಲಂಬಿಸಿರುವ ಸಂಸ್ಥೆ. ಸರಕಾರದ ಸಹಾಯಧನ ಬರದೆಹೋದರೆ ಪರಿಷತ್ತು ಬಾಗಿಲು ಮುಚ್ಚಬೇಕಾಗುತ್ತದೆ. ಇಂಥ ಪರಿಸ್ಥಿತಿಯಿಂದ ಪರಿಷತ್ತನ್ನು ಪಾರು ಮಾಡುವ ಯೋಜನೆಯನ್ನು ಸಿದ್ಧಪಡಿಸಬೇಕಾದ ಕಾಲವೀಗ ಬಂದಿದೆ. ಸಾಹಿತ್ಯ ಸಂಸ್ಕೃತಿಗಳತ ವಿಷಯದಲ್ಲಿ ಈವರೆಗಿನ ಕರ್ನಾಟಕದ ಮಂತ್ರಿ ಮಂಡಳಗಳೆಲ್ಲವೂ ಬಹು ಉದಾರವಾಗಿ ನಡೆದುಕೊಂಡು ಬಂದಿವೆ ಎಂಬುದನ್ನು ನಾವು ಅಭಿಮಾನದಿಂದ ಸ್ಮರಿಸಬೇಕು. ಅವೆಲ್ಲವೂ ಪರಿಷತ್ತಿನ ಕಾರ್ಯ ಚಟುವಟಿಕೆಗಳಿಗೆ ಬೆಂಬಲ ನೀಡಿವೆ. ಆದರೂ ಪರಿಷತ್ತು ಸ್ವಾಯತ್ತ ಸಂಸ್ಥೆಯಾಗಿ ತನ್ನ ಕಾಲಮೇಲೆ ತಾನು ನಿಲ್ಲುವುದು ಅಗತ್ಯವೆಂದು ನನ್ನ ಅಭಿಪ್ರಾಯ. ಇಂದಲ್ಲ ನಾಳೆ ಯಾವುದೇ ಒಂದು ಸರಕಾರ ಅಥವಾ ಒಬ್ಬ ಮಂತ್ರಿ ಪರಿಷತ್ತು ತನ್ನ ತಾಳಕ್ಕೆ ಸರಿಯಾಗಿ ಕುಣಿಯಬೇಕೆಂದು ಅಪೇಕ್ಷಿಸಬಹುದು. ಪರಿಷತ್ತಿನ ಆಡಳಿತದಲ್ಲಿ ಹಸ್ತಕ್ಷೇಪ ಮಾಡಬಹುದು. ಸಹಾಯಧನವನ್ನು ನಿಲ್ಲಿಸಬಹುದು ಅಥವಾ ಕಡಿಮೆ ಮಾಡಬಹುದು. ಅದರಿಂದ ಪರಿಷತ್ತಿನ ಚಟುವಟಿಕೆಗಳು ಕುಂಟ ಬಹುದು ಅಥವಾ ನಿಲ್ಲಬಹುದು.

''ಪರಿಷತ್ತು ಸರ್ಕಾರದ ದನಿಯಾಗಬೇಕಿಲ್ಲ; ಆಗಬಾರದು. ಕನ್ನಡದ ಸರ್ವಾಂಗೀಣ ಅಭಿವೃದ್ಧಿಯ ವಿಷಯದಲ್ಲಿ ಸರ್ಕಾರ ತಪ್ಪು ಹೆಜ್ಜೆ ಇಡುವ ಸಂದರ್ಭದಲ್ಲಿ ಅದನ್ನು ಎಚ್ಚರಿಸಿ ಮಾರ್ಗದರ್ಶನ ನೀಡುವ ಶಕ್ತಿಯನ್ನು ಗಳಿಸಿಕೊಳ್ಳಬೇಕು. ಕನ್ನಡ ಭಾಷೆ ಸಾಹಿತ್ಯಗಳ ವಿಷಯದಲ್ಲಿ ಪರಿಷತ್ತಿನದೇ ಕೊನೆಯ ಮಾತಾಗಬೇಕು. ಇದು ಸರ್ಕಾರದ ಸಹಾಯಧನವನ್ನು ಅವಲಂಬಿಸಿರುವವರೆಗೂ ಸಾಧ್ಯವಾಗುವುದಿಲ್ಲ.

''ಆದ್ದರಿಂದ ಪರಿಷತ್ತು ತನ್ನದೇ ಒಂದು ನಿಧಿಯನ್ನು ಸ್ಥಾಪಿಸುವ ಯೋಜನೆ ಹಾಕಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಸೂಚಿಸ ಬಯಸುತ್ತೇನೆ. 'ಒಬ್ಬ ಕನ್ನಡಿಗ ಒಂದು ರೂಪಾಯಿ' ಎಂಬ ಯೋಜನೆ ಹಾಕಿಕೊಂಡು ಒಂದು ಕೋಟಿ ರೂಪಾಯಿಗಳ ನಿಧಿಯೊಂದನ್ನು ಆರಂಭಿಸಬೇಕು. ನಿಧಿ ಸಂಗ್ರಹ ಕಷ್ಟವಾಗಲಾರದೆಂದು ಭಾವಿಸುತ್ತೇನೆ. ಮಾತು ಮಾತಿಗೆ ನಾವು ಮುಕ್ಕೋಟಿ ಕನ್ನಡಿಗರೆಂದು ಹೇಳುತ್ತೇವೆ. ಈ ಮುಕ್ಕೋಟಿಯಲ್ಲಿ ಎರಡು ಕೋಟಿಯನ್ನು ಬಿಟ್ಟರೂ ಮಿಕ್ಕ ಒಂದು ಕೋಟಿ ಜನ ಪರಿಷತ್ತಿಗೆ ಒಂದೊಂದು ರೂಪಾಯಿ ಕೊಡಲು ಮನಸ್ಸು ಮಾಡುತ್ತಾರೆ ಎಂದು ನಂಬಿದ್ದೇನೆ. ಹೆಚ್ಚು ಕೊಡುವವರಿದ್ದರೆ ಬೇಡ ಎನ್ನುವುದಿಲ್ಲ. ಈ ಒಂದು ಕೋಟಿ ರೂಪಾಯಿಗಳ ಬಡ್ಡಿಯಲ್ಲಿಯೇ ಪರಿಷತ್ತು ಸರ್ಕಾರದ ಮರ್ಜಿಯನ್ನು ಕಾಯದೆ ತನ್ನ ಕೆಲಸ ಮಾಡಬಹುದು''.

ಇದು ಪರಿಷತ್ತು ಈಗ ಮಾಡುತ್ತಿರುವ 'ಒಬ್ಬ ಕನ್ನಡಿಗ ಒಂದು ರೂಪಾಯಿ' ಘೋಷಣೆಯ ಹಿನ್ನೆಲೆಯ ಕಥೆ ಇದೀಗ ಅಧ್ಯಕ್ಷಸ್ಥಾನ ಬಿಟ್ಟಿರುವ ಗೊ.ರು.ಚನ್ನಬಸಪ್ಪನವರು ೬೧.೩ ಲಕ್ಷ ರೂಪಾಯಿಗಳನ್ನು ತಾವು ಸಂಗ್ರಹಿಸಿರುವುದಾಗಿ ಆ ಮೊಬಲಗು ಪರಿಷತ್ತಿನ ಶಾಶ್ವತ ಠೇವಣಿಯಾಗಿರುವುದಾಗಿಯೂ ಹೇಳಿದ್ದಾರೆ. ಅದು ಶಾಶ್ವತ ಠೇವಣಿ ನಿಜ. ಆದರೆ 'ಒಬ್ಬ ಕನ್ನಡಿಗ ಒಂದು ರೂಪಾಯಿ' ಹೆಸರಿನ ಠೇವಣಿಯಲ್ಲ. ಚನ್ನಬಸಪ್ಪನವರು ಸಂಗ್ರಹಿಸಿದ್ದು ದತ್ತಿ ಭಾಷಣಗಳಿಗಾಗಿ 'ದತ್ತಿನಿಧಿ'. ಇದು ಪರಿಷತ್ತಿಗೆ ಶಾಶ್ವತ ನಿಧಿಯನ್ನು ಗೊತ್ತಾದ ಕಾರಣಗಳಿಗಾಗಿ ಮಾತ್ರ ಸಂಪಾದಿಸುತ್ತದೆ. ಹಾಗೆ ನೋಡಿದರೆ ಇದು ಪರಿಷತ್ತಿಗೆ ಲಾಭದಾಯಕವಲ್ಲ. ದತ್ತಿ ಭಾಷಣಗಳಿಗಾಗಿ ಖರ್ಚು ಮಾಡುವ ಮೇಲು ಖರ್ಚನ್ನು ಪರಿಷತ್ತೇ ಭರಿಸಬೇಕಾಗುತ್ತದೆ! ಆದುದರಿಂದ ಮರುಳಯ್ಯನವರು ಈ ಸೂಕ್ಷ್ಮವನ್ನು ಅರಿತು ಅರ್ಥ ಮಾಡಿಕೊಂಡು. ಮುಂದಿನ

ಮೂರು ವರ್ಷ ಅಮೃತ ನಿಧಿಯ ಸಂಗ್ರಹಣೆಗೆ ಪ್ರಯತ್ನಿಸಬೇಕು. ಅವರು ಪರಿಷತ್ತನ್ನು ಬಿಟ್ಟುಹೋಗುವಾಗ ಕನಿಷ್ಠ ಒಂದು ಕೋಟಿ ರೂಪಾಯಿಗಳನ್ನಾದರೂ ಶೇಖರಿಸಬೇಕು! ವಾಸ್ತವವಾಗಿ ನಾನು ಈ ಕೋಟಿ ರೂಪಾಯಿಗಳ ಪ್ರಸ್ತಾವ ಮಾಡಿ ಹತ್ತು ವರ್ಷಗಳೇ ಆಗಿವೆ. ಆಗ ಕೋಟಿಗಿದ್ದ ಬೆಲೆ ಈಗ ಇಲ್ಲ. ದಿನ ದಿನಕ್ಕೂ ಹಣದ ಬೆಲೆ ಇಳಿಯುತ್ತಿದೆ. ಈಗ ಅದು ಕೋಟಿಯ ಮೇಲೆ ಐವತ್ತು ಲಕ್ಷವಾದರೂ ಆಗಬೇಕಾದ ಅಗತ್ಯವಿದೆ.

ಪರಿಷತ್ತಿನ ಸಿಬ್ಬಂದಿ ವೆಚ್ಚವನ್ನು ಸರಕಾರವೇ ವಹಿಸುವುದಾಗಿ ಮುಖ್ಯಮಂತ್ರಿ ಹೆಚ್.ಡಿ.ದೇವೇಗೌಡರು ಮುಧೋಳ ಸಮ್ಮೇಳನದಲ್ಲಿ ಹೇಳಿದ್ದಾರೆ. ಇದು ಸಮ್ಮೇಳನದ ಸಭಿಕರೆದುರು ಆಡಿದ ಉತ್ಸಾಹದ ಮಾತೋ ಅಥವಾ ನಿಜವಾಗಿಯೂ ಹೇಳಿದ ಮಾತೋ ನನಗೆ ಗೊತ್ತಿಲ್ಲ. ಅದು ನಿಜವೇ ಆಗಿದ್ದರೆ ಪರಿಷತ್ತಿನ ಸದ್ಯದ ದೃಷ್ಟಿಯಿಂದ ಒಳ್ಳೆಯದೇ. ಇದರಲ್ಲಿ ಕೆಲವು ಅಪಾಯಗಳೂ ಇವೆ. ಪರಿಷತ್ತಿನ ಸಿಬ್ಬಂದಿ ವರ್ಗ ಸರ್ಕಾರಿ ನೌಕರರಾಗಿ ಬಿಡುತ್ತಾರೆ. ಸರಕಾರದ ಮಹಾ ಸಮುದ್ರದಲ್ಲಿ ಇವರೂ ಪಾಲುದಾರರಾಗಿರುತ್ತಾರೆ. ಆದ್ದರಿಂದ ಇವರು ಪರಿಷತ್ತಿನ ಖಾಯಂ ನೌಕರರಾಗಿರುವುದಿಲ್ಲ. ಈ ವರ್ಷ ಬಂದು ಮುಂದಿನ ವರ್ಷ ಹೋಗುವಂಥವರಾಗಿರುತ್ತಾರೆ. ಇಲ್ಲಿದೆ ನಿಜವಾದ ಅಪಾಯ! ಸರಕಾರ ಸಂಬಳ ಕೊಡಲು ಮುಂದಾದ ಮೇಲೆ, ಪರಿಷತ್ತಿನ ಸ್ವಾಯತ್ತತೆ ಎಲ್ಲಿ ಉಳಿಯುತ್ತದೆ? ಈಗ ತಮಗಿರುವ ತೊಂದರೆ ತಪ್ಪಿಸಿಕೊಳ್ಳಲು ಪರಿಷತ್ತು ಈ ಪದ್ಧತಿಗೆ ಒಪ್ಪಿಗೆ ನೀಡಿದರೆ, ಪರಿಷತ್ತನ್ನು ಸರಕಾರಕ್ಕೆ ಒಪ್ಪಿಸಿಕೊಟ್ಟ ಹಾಗಾಗುತ್ತದೆ. ಪರಿಷತ್ತಿನ ಶಕ್ತಿ ವೃದ್ಧಿಸುವವರೆಗೆ ಸರಕಾರದ ಯಾವ ಸಹಾಯವಾದರೂ ಸರಿಯೆ. ಅದು ಸಹಾಯಧನ ರೂಪದಲ್ಲಿಯೇ ಬರುವುದು ಅತ್ಯಂತ ಶ್ರೇಯಸ್ಕರವಾದದ್ದು.

ಆಡಳಿತ ವಿಕೇಂದ್ರೀಕರಣದ ಮಾತನ್ನಾಡಿದ್ದಾರೆ ಮರುಳಯ್ಯ. ಜಿಲ್ಲಾ ಪರಿಷತ್ತುಗಳ ಮುಂದೆ ಮತ್ತೇನು ವಿಕೇಂದ್ರೀಕರಣ? ಜಿಲ್ಲೆ ಜಿಲ್ಲೆಗಳಲ್ಲಿ ಪರಿಷತ್ತಿನ ಶಾಖೆಗಳಿವೆ. ಅಷ್ಟು ಸಾಕು. ಒಂದು ವೇಳೆ ವಿಭಾಗೀಯ ಕಚೇರಿಗಳನ್ನು ತೆರೆಯುವುದೇ ವಿಕೇಂದ್ರೀಕರಣ ಎನ್ನುವುದಾದರೆ ಅನಾವಶ್ಯಕ ವೆಚ್ಚವನ್ನು ಪರಿಷತ್ತು ಭರಿಸಬೇಕಾಗುತ್ತದೆ. ಅದಕ್ಕಾಗಿ ಕಟ್ಟಡ, ಸಿಬ್ಬಂದಿ ಇವಕ್ಕಾಗಿ ವೆಚ್ಚ ಮಾಡಬೇಕಾಗುತ್ತದೆ. ಬದಲಿಗೆ ವಿಭಾಗೀಯ ಕಚೇರಿಗಳನ್ನು ತೆರೆಯಲು ಉದ್ದೇಶಿಸಿರುವ ಮಂಗಳೂರು, ಧಾರವಾಡ, ಕಲ್ಬುರ್ಗಿ ಮೊದಲಾದ ಕಡೆ ಆಯಾ ಜಿಲ್ಲಾ ಪರಿಷತ್ತುಗಳೊಡನೆ ಹೊಂದಾಣಿಕೆ ಮಾಡಿಕೊಂಡು ಆ ಕೆಲಸ ಮಾಡಬಹುದಾಗಿದೆ. ಅಷ್ಟು ಮಾಡಿದರೆ ಸಾಕು.

ಭಾಷಾಂತರಗಳಿಗಾಗಿ ಪರಿಷತ್ತಿನಲ್ಲಿ ಒಂದು ಪ್ರತ್ಯೇಕ ಘಟಕವನ್ನು ಸ್ಥಾಪಿಸುವುದೂ ಮರುಳಯ್ಯನವರ ಮತ್ತೊಂದು ಆಶಯ. ಭಾರತೀಯ ಹಾಗೂ ಭಾರತದ ಹೊರಗಿನ ಅನೇಕ ಭಾಷೆಗಳ ಮುಖ್ಯ ಕೃತಿಗಳನ್ನು ಕನ್ನಡಕ್ಕೆ ತರುವುದೇನೋ ಒಳ್ಳೆಯ ಕೆಲಸವೇ. ಅದರಂತೆ ಕನ್ನಡದ ಮುಖ್ಯ ಕೃತಿಗಳನ್ನು ಹೊರಗಿನ ಭಾಷೆಗಳಿಗೆ ಭಾಷಾಂತರಿಸುವುದೂ ಅಗತ್ಯವೇ. ಆದರೆ ಅದಕ್ಕಾಗಿ ಪ್ರತ್ಯೇಕ ಘಟಕ ತೆರೆಯುವುದು ಈ ಸಮಯದಲ್ಲಿ ಪರಿಷತ್ತು ಬಿಳಿಯಾನೆಯನ್ನು ಕಟ್ಟಿಕೊಂಡ ಹಾಗಾಗುತ್ತದೆ. ಬದಲಿಗೆ ಮೊದಲು ಯಾವ ಯಾವ ಕೃತಿಗಳನ್ನು ಭಾಷಾಂತರಿಸಬೇಕು ಎಂಬುದು ತೀರ್ಮಾನವಾಗಲಿ. ಅನಂತರ ಅವನ್ನು ಬಾಷಾಂತರಿಸುವಲ್ಲಿ ಆಸಕ್ತರಾದವರಿಗೆ, ಪರಿಣಿತರಾದವರಿಗೆ ಈ ಕೆಲಸವನ್ನು ವಹಿಸಬಹುದು. ಭಾಷಾಂತರಕ್ಕಾಗಿ ಒಂದು ಪ್ರತ್ಯೇಕ ಘಟಕವನ್ನೇ ಆರಂಭಿಸಿದರೆ ಅಲ್ಲಿ

ಭಾಷಾಂತರಕ್ಕಿಂತ ಇತರ ಕೆಲಸಗಳೇ ಹೆಚ್ಚಾಗುತ್ತವೆ! ಎಂಬುದನ್ನು ಮರೆಯಬಾರದು. ಖರ್ಚಿನ ವಿಚಾರದಲ್ಲಿ ಎಚ್ಚರಬೇಕು.

ನಿಜವಾಗಿ ನೋಡಿದರೆ, ಪರಿಷತ್ತು ಈಗ ಮಾಡುತ್ತಿರುವ ಕೆಲಸಗಳಿಗೇ ಬದ್ಧವಾಗಿದ್ದರೆ ಸಾಕು. ಹೊಸ ಹೊಸ ಯೋಜನೆಗಳಿಗೆ ಆಸ್ಪದವೇ ಇಲ್ಲ. ಪರಿಷತ್ತು ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳಿಗೆ ಈಗ ಮಾಡುತ್ತಿರುವ ಕೆಲಸಗಳಿಗಿಂತ ಹೊಸದಾದುದನ್ನು ಮಾಡುವ ಅಗತ್ಯವೇ ಇಲ್ಲ. ಪರಿಷತ್ತು ಈಗ ಎರಡು ನಿಯತಕಾಲಿಕಗಳನ್ನು ತರುತ್ತಿದೆ. 'ಕನ್ನಡ ನುಡಿ' ಮತ್ತು 'ಸಾಹಿತ್ಯ ಪರಿಷತ್ಪತ್ರಿಕೆ' ಈ ಎರಡನ್ನೂ ಕಾಲಕ್ಕೆ ತಕ್ಕಂತೆ ಮಾರ್ಪಡಿಸಿ ನಿಯತವಾಗಿ ಪ್ರಕಟಿಸುವ ಕಡೆ ಮರುಳಯ್ಯನವರು ಗಮನ ಕೊಡಬೇಕು. ಈ ಪ್ರಕಟಣೆಗಳು ಈಗ ಬೇಕಾಬಿಟ್ಟಿಯಾಗಿ ಪ್ರಕಟವಾಗುತ್ತಿವೆ. ಇದಕ್ಕೆ ಕಾರಣ ಪರಿಷತ್ತಿನ ಆರ್ಥಿಕ ಕೊರತೆಯೇ ಎಂದು ಕೇಳಿದ್ದೇನೆ. ಇದು ತಪ್ಪಬೇಕು. ಉಳಿದ ಪ್ರಕಟಣೆಗಳ ವಿಷಯದಲ್ಲಿಯೂ ಪರಿಷತ್ತು ವಿಶೇಷ ಗಮನ ತಾಳಬೇಕು. ಪರಿಷತ್ತಿನ ಪ್ರಕಟಣೆಗಳು, ಏನಿಲ್ಲವೆಂದರೂ ಮುದ್ರಣ ದೋಷಗಳಿಲ್ಲದೇ ಪ್ರಕಟಗೊಳ್ಳುವಂತಾಗಬೇಕು.

ಮರುಳಯ್ಯನವರು ತಮ್ಮನ್ನು ಕನಸುಗಾರರೆಂದು ಕರೆದುಕೊಂಡಿದ್ದಾರೆ. ಆದರೆ ಅಷ್ಟರಿಂದಲೇ ಪರಿಷತ್ತು ನಡೆಯಲಾರದು. ಮರುಳಯ್ಯನವರಿಗೆ ಇದು ಗೊತ್ತಿಲ್ಲದೇ ಇಲ್ಲ. ಆಡಳಿತದಲ್ಲಿ ಬಿಗಿಯಿರಬೇಕು. ಎಲ್ಲರನ್ನೂ ಎಲ್ಲ ಕಾಲದಲ್ಲಿಯೂ ಸಂತಸಪಡಿಸಲು ಹೋಗಬಾರದು. ಆಡಳಿತ ನಿರ್ವಹಣೆಯ ಈ ಕೆಲವು ಸೂತ್ರಗಳನ್ನು ಅರಿತುಕೊಂಡರೆ ಅವರು ಯಶಸ್ವಿಯಾಗುತ್ತಾರೆ. ಹಾಗೆ ಆಗಲಿ ಎಂಬುದೇ ನಮ್ಮ ಹೃದಯಪೂರ್ವಕವಾದ ಹಾರೈಕೆ. ಪರಿಷತ್ತಿನ ಬಗೆಗೆ, ಪರಿಷತ್ತಿನ ಹಣಕಾಸಿನ ಬಗೆಗೆ ಅವರು ತುಂಬಾ ಕಾಳಜಿಯ ಮಾತುಗಳನ್ನು ಆಡಿದ್ದಾರೆ. ತಮ್ಮ ಯೊಜನೆಗಳೇನು ಎಂಬುದನ್ನೂ ಹೇಳಿದ್ದಾರೆ. ಅದನ್ನೆಲ್ಲ ತುಂಬ ಎಚ್ಚರಿಂದ ಪರಿಶೀಲಿಸಿ ಕಾರ್ಯೋನ್ಮುಖರಾಗಲಿ. ಕನ್ನಡ ಸಾಹಿತ್ಯ ಪರಿಷತ್ತು ಹೊಸ ದಿನಗಳನ್ನು ಕಾಣುವಂತಾಗಲಿ.

ಇವುಗಳಲ್ಲಿ ಕೆಲವನ್ನು ಪೂರ್ಣಗೊಳಿಸಿದ್ದೇನೆ. ಹಲವನ್ನು ಪೂರ್ಣಗೊಳಿಸಲಾಗದ್ದಕ್ಕೆ ವಿಷಾದಿಸಿದ್ದೇನೆ. ಪರಿಷತ್ತಿಗೆ ಒಳ್ಳೆಯದು ಮಾಡ ಹೋಗಿ ಕೆಲವು ಕೆಡಕುಗಳು ಆಗಿರುವುದು ನನಗೆ ಈಗೀಗ ಗೊತ್ತಾಗುತ್ತಿದೆ. ಹಾಮಾನಾ.ರವರ ಮಾತಿನ ಸತ್ಯಾಂಶ ಈಗ ನನ್ನ ಅರಿವಿಗೆ ಬರುತ್ತಿದೆ.

ನಾನು ಪರಿಷತ್ತಿನ ಅಧ್ಯಕ್ಷನಾದ ಮೇಲೆ ತುಂಬಾ ನೋವಿಗೀಡಾದೆ. ನನ್ನ ಮಿತ್ರರಾದ ಎನ್.ಎಂ.ಶಿವಕುಮಾರ್‌ರವರು ಹೇಳುತ್ತಿದ್ದರು. 'ಚುನಾವಣೆಗೆ ಮೊದಲು ನಿಮಗೆಷ್ಟು ಜನ ಮಿತ್ರರಿದ್ದಾರೋ ಅವರ ಎರಡರಷ್ಟು ಮಂದಿ ನೀವು ಗೆದ್ದ ಮೇಲೆ ನಿಮ್ಮ ಶತ್ರುಗಳಾಗುತ್ತಾರೆ' ಎಂದು. ಆ ಮಾತು ಸತ್ಯವಾಯಿತು. ಶಿಷ್ಯರು ಅನ್ನಿಸಿಕೊಂಡವರು ಕೆಲವರು ದ್ರೋಹ ಬಗೆದರು; ಸರಕಾರ ನನ್ನೊಡನೆ ಸಹಕರಿಸಲಿಲ್ಲ. ಆದರೆ ನನ್ನ ಸ್ನೇಹಿತರು ನನ್ನ ಕೈ ಬಿಡಲಿಲ್ಲ. ಜವಾಬ್ದಾರಿ ಸ್ಥಾನದಲ್ಲಿದ್ದ ಒಬ್ಬ ಹೆಂಗಸು ದಿನ ಬೆಳಗಾದರೆ ಪರಿಷತ್ತಿನ ಮೇಲೆ ಆಪಾದನೆಯ ಹೇಳಿಕೆ ಕೊಡುತ್ತಾ ಬಂದಳು ಪತ್ರಿಕೆಗಳಲ್ಲಿ. ನಾನವುಗಳಿಗೆ ಸತ್ಯವಾದ ಸಮಂಜಸ ಉತ್ತರ ಬರೆದರೂ ಅವಳಲ್ಲಿ ಅಧಿಕಾರವಿದ್ದರಿಂದ ಅವಳ ಕೈ ಮೇಲಾಯಿತು. ಜನರಲ್ಲಿ ಪರಿಷತ್ತಿನ ಬಗೆಗೆ, ನನ್ನ ಪ್ರಾಮಾಣಿಕತೆ ಬಗೆಗೆ ತಪ್ಪು ಅಭಿಪ್ರಾಯ ಬರುವಂತೆ ಮಾಡಿದಳು. ನೈಚ್ಯತೆ ಈ ಮಟ್ಟಕ್ಕೇರುತ್ತದೆ ಎಂದು ಗೊತ್ತಾದದ್ದು ಆಗಲೆ. ಆದರೂ ಧೈರ್ಯಗೆಡದೆ ಒಳ್ಳೆಯ ಕಾರ್ಯಗಳನ್ನು ನಾನು ಮಾಡಿದ್ದೇನೆ. ನಾನು ಒಂದು ಪೈಸವನ್ನೂ ಪರಿಷತ್ತಿನಿಂದ ಪಡೆದಿಲ್ಲ. ಅದಕ್ಕೆ ಬದಲು ಸಹಸ್ರಾರು ರೂಪಾಯಿಗಳನ್ನು ಕೊಟ್ಟಿದ್ದೇನೆ. ನಾನು ಅಧ್ಯಕ್ಷ ಸ್ಥಾನದಿಂದ ನಿವೃತ್ತನಾದ ದಿನ ಪ್ರಕಟಿಸಿದ 'ಕನ್ನಡ ನುಡಿ'ಯಲ್ಲಿ ಎಲ್ಲ ವಿವರ ಕೊಟ್ಟಿದ್ದೇನೆ. ಆಸಕ್ತರು ನೋಡಿಕೊಳ್ಳಬಹುದು. ಸ್ವಂತ ಕೆಲಸಕ್ಕೆ ಪರಿಷತ್ತಿನ ಬಳಸಿಕೊಂಡಾಗ, ಸ್ವಂತ ವಿಷಯಕ್ಕಾಗಿ ಪರಿಷತ್ತಿನ ಫೋನ್ ಬಳಸಿಕೊಂಡಾಗ ಅದರ ಖರ್ಚನ್ನು ಕೊಟ್ಟು ರಸೀದಿ ಪಡೆದಿದ್ದೇನೆ. ಇಷ್ಟಾದರೂ ಬೊಗಳುವ

ಬಾಯಿಗಳಿಗೆ ಬೀಗವಿಲ್ಲವಾಯಿತು. ಅದು ನನ್ನ ದುರಾದೃಷ್ಟ. ಆದರೂ ನನ್ನಲ್ಲಿ ಧೈರ್ಯ ತುಂಬಿ ಬದುಕನ್ನು ಸಹ್ಯಗೊಳಿಸಿದ ನನ್ನ ಅನಿಮಿತ ಬಂಧು, ಪ್ರಾಣ ಮಿತ್ರ ಎಂ.ಎಂ.ಕಲಬುರ್ಗಿಯವರ ಸಮಯೋಚಿತ ಸಲಹೆಯಿಂದ ನಾನು ಬದುಕಿದ್ದೇನೆ. ಅವರ ಒಂದು ಪತ್ರ ಹೀಗಿದೆ. ನೋಡಿ :

ಆತ್ಮೀಯರಾದ

ಡಾ। ಸಾ.ಶಿ.ಮರುಳಯ್ಯ ಅವರಿಗೆ

ನಮಸ್ಕಾರಗಳು.

ಜನೇವರಿ ೨೬ರ ಪತ್ರ ತಲುಪಿದೆ. ಅನ್ಯಾಯಕ್ಕೆ ಗುರಿಯಾದ ನೀವು ನೋವು, ವಿಷಾದ ವ್ಯಕ್ತಪಡಿಸಿದುದು ಸಹಜವೇ ಆಗಿದೆ. ಬೆಂಗಳೂರಿನ ಬಹಳಷ್ಟು ಜನ ಸ್ನೇಹಿತರು ನಿಮ್ಮಿಂದ ಸಹಾಯಪಡೆದು, ಮರು ಕ್ಷಣದಲ್ಲಿಯೇ ಮರೆಯುವುದನ್ನು, ತಿರುಗಿ ಬೀಳುವುದನ್ನು ಗಮನಿಸಿದ್ದೇನೆ. ಇದು ಇಂದಿನ ವ್ಯಕ್ತಿಗಳ ಗುಣವಿಶೇಷ. ಇಂಥ ಅನುಭವ ನನಗೂ ಆಗಿದೆ, ಆಗುತ್ತಲಿದೆ. ಅದೇನೇ ಇರಲಿ, ಯಾವುದಕ್ಕೂ ಧೈರ್ಯಗೆಡಬಾರದು. ನಿಮ್ಮ ಒಳ್ಳೆಯ ಗುಣವೇ ನಿಮಗೆ ಮುಳುವಾಗುತ್ತಲಿದೆ. ನಿಮ್ಮ ಜೊತೆ ನಾನಿದ್ದೇನೆ. ಇದನ್ನು ನೀವು ನಂಬಬೇಕು. ಕಾಲ ಕೂಡಿಬರುವುದನ್ನು ನಾನು ನಿರೀಕ್ಷಿಸುತ್ತಿದ್ದೇನೆ? ಅಷ್ಟೇ.

ಪರಿಷತ್ತಿನ ಆರ್ಥಿಕ ಸ್ಥಿತಿಯ ಬಗ್ಗೆ ಬರೆದಿರುವಿರಿ. ಇಂದು ಎಲ್ಲ ಸಂಸ್ಥೆಗಳ ಹಣೆಯ ಬರಹ ಹೀಗೆಯೇ ಆಗಿದೆ. ನಿಮ್ಮ ಅವಧಿಯಲ್ಲಿ ದತ್ತಿ ನಿಧಿ ಸಂಗ್ರಹಿಸಿರುವಿರಿ, ಉತ್ತಮ ಕೃತಿ ಪ್ರಕಟಿಸಿರುವಿರಿ, ಸಮ್ಮೇಲನಕ್ಕೆ ಘನತೆವೆತ್ತ ಅಧ್ಯಕ್ಷರನ್ನು ಆಯ್ಕೆ ಮಾಡಿರುವಿರಿ, ಸಿಬ್ಬಂದಿಗಳ ಪಗಾರ ವ್ಯವಸ್ಥೆ ಮಾಡಿರುವಿರಿ. ಇಂದಿನ ಸಂದರ್ಭದಲ್ಲಿ ಇದಕ್ಕಿಂತ ಹೆಚ್ಚು ಮಾಡಲು ಯಾರಿಗೂ ಸಾಧ್ಯವಿಲ್ಲ.

ಪರಿಷತ್ತಿಗೆ ಕಂಪ್ಯೂಟರ್ (ರಾಗಿಣಿ ಕೊಡುಗೆ) ನೀಡಿ ತಪ್ಪು ಮಾಡಿದಿರಿ. ಈಗ ೪೩೨ ಹಸ್ತ ಪ್ರತಿ ಕೊಟ್ಟು ಇನ್ನೊಂದು ತಪ್ಪು ಮಾಡಿದಿರಿ. ಔದಾರ್ಯದ ಉರುಳಿನಲ್ಲಿ ನೀವಾಗಿಯೇ ಕತ್ತು ಚಾಚುತ್ತಿದು ನಿಮ್ಮ ಹುಟ್ಟುಗುಣ. ಯಾರೇನು ಮಾಡುವುದು? ನಿಮ್ಮ ಹಸ್ತಪ್ರತಿಗಳನ್ನು ಹಿಂದಕ್ಕೆ ತೆಗೆದುಕೊಳ್ಳಬೇಡಿರಿ. ಅದೇ ಒಂದು ಸುದ್ಧಿಯಾಗುತ್ತದೆ.

ಇದಕ್ಕಿಂತ ಹೆಚ್ಚಿಗೆ ಬರೆಯಲಾರದವನಾಗಿದ್ದೇನೆ. ನಾನು ಹಿಂದೆ, ಇಂದು, ಮುಂದೆಯೂ ನಿಮ್ಮ ಜೊತೆ ಇರುವವನಾಗಿದ್ದೇನೆ. ನೀರ ನಿರಾಳ ಸ್ವಭಾವದ ನಿಮ್ಮಂಥ ಸ್ನೇಹಿತರು ಲಭಿಸಿದುದು ನನ್ನ ಭಾಗ್ಯ. ಮನೆಯಲ್ಲಿ ಸೋದರಿ ವೀಣಾ ಅವರಿಗೆ ನಮಸ್ಕಾರ ಹೇಳಿರಿ.

ವಂದನೆಗಳು,

ವಿಶ್ವಾಸದ

೩೦-೧-೯೮ ಎಂ.ಎಂ. ಕಲಬುರ್ಗಿ

ನನ್ನ ಸಾವಿರ ಮಾತುಗಳಿಗೆ ಕಲಬುರ್ಗಿಯವರ ಇದೊಂದು ಪತ್ರ ಸಾಕ್ಷಿ ಹೇಳುತ್ತದೆ. ಅಲ್ಲವೇ?

ದಿನಾಂಕ ೨೮-೧-೨೦೦೧ಕ್ಕೆ ಸರಿಯಾಗಿ ನನಗೆ ಎಪ್ಪತ್ತು ವರ್ಷ ತುಂಬುತ್ತದೆ. ಇದರ ಸುಸ್ಮೃತಿಯ ಕುರುಹಾಗಿ ನನ್ನ ಅಭಿಮಾನಿಗಳು ಸಹಸ್ರ ಸಂಖ್ಯೆ ಸೇರಿ ರಾಜ್ಯಮಟ್ಟದಲ್ಲಿ ಒಂದು ಸಂಮಾನ ಸಮಾರಂಭ ಏರ್ಪಡಿಸಿದ್ದಾರೆ. ಇದು

ಹರ್ಷದಾಯಕವೆ. ಇದು ಡಾ|| ಪುಟ್ಟಶಂಕರಪ್ಪನವರ ಕಾರ್ಯದರ್ಶಿತ್ವದಲ್ಲಿ ೧೯೯೫ರಲ್ಲಿ ಆರಂಭವಾಗಿತ್ತು. ಕಾರಣಾಂತರಗಳಿಂದ ಅಜ್ಞಾತವಾಗಿದ್ದು ಈಗ ಬೆಳಕಿಗೆ ಬಂದಿದೆ. ಇದಕ್ಕೆ ಕಾರಣರಾದ ಎಲ್ಲ ನನ್ನ ಸೋದರ ಸೋದರಿಯರಿಗೂ ಹಿರಿಯರಿಗೂ ನನ್ನ ನಮನಗಳು ಸಲ್ಲುತ್ತವೆ. ನನಗೆ ಸಂದಾಯವಾಗುತ್ತಿರುವ ಈ ಮನ್ನಣೆಯ ಮಣೆಯ ಹಿನ್ನೆಲೆಯಲ್ಲಿ ನನ್ನ ತಂದೆ ತಾಯಂದಿರು ಮಾಡಿದ ಪುಣ್ಯ, ನನ್ನ ಆತ್ಮೀಯ ಅಭಿಮಾನಿಗಳ ಆಶಯ, ಗುರು ಹಿರಿಯರ ಆಶೀರ್ವಾದಗಳಿವೆ. ನನ್ನನ್ನು ದ್ವೇಷಿಸಿದವರ ಮಾಡಬಾರದ್ದನ್ನು ಮಾಡಿದ ಮಹನೀಯರ ಮರೆಯ ಆಶೀರ್ವಾದವೂ ಇದೆ. ಆದರೆ ಇವೆಲ್ಲವನ್ನೂ ಮೈಗೂಡಿಸಿಕೊಂಡು ನಾನು ನಾನಾಗಲು ಯತ್ನಿಸಿದ್ದೇನೆ. ಇದರ ಸೋಲು ಗೆಲವುಗಳನ್ನು ನಿಷ್ಪಕ್ಷಪಾತದ ಸಹೃದಯ ವಿಮರ್ಶಕರು ಗುರುತಿಸಿಕೊಳ್ಳಬೇಕಿದೆ. ಕಡೆಯದಾಗಿ ನನ್ನ ಮನವಿ ಇಷ್ಟೇ:

ನಾನೊಬ್ಬ ಕನಸುಣಿ. ಹಲವಾರು ಸುಂದರ ಸ್ವಪ್ನಗಳನ್ನು ಕಟ್ಟಿಕೊಂಡು ಹುಟ್ಟಿದೆನೆಂದು ತೋರುತ್ತದೆ. ಚಿಕ್ಕಂದಿನಿಂದಲೂ ನಾನು ಅದಾಗಬೇಕು, ಇದಾಗಬೇಕು ಎಂಬೆಲ್ಲ ಹಂಬಲಗಳನ್ನು ತುಂಬಿಕೊಂಡಿದ್ದೆ. ತುಂಬು ಆಶಾವಾದಿಯಾಗಿಯೇ ಬದುಕಿನ ಹಾದಿಯಲ್ಲಿ ದಿಟ್ಟ ಹೆಜ್ಜೆ ಇಟ್ಟೆ. ನನ್ನ ಹಲವು ಆಸೆಗಳು ಹಣ್ಣಾಗಿವೆ, ಕೆಲವು ಮಣ್ಣಾಗಿವೆ. ಅವು ಈಡೇರಿದ್ದರಿಂದ ಹಿಗ್ಗಿಲ್ಲ, ಈಡೇರದಿದ್ದರಿಂದ ಕುಗ್ಗಿಲ್ಲ. ಆದರೂ ಚಣದ ನೋವು ನನ್ನೆದೆಯನ್ನು ಮಿಡಿಯದಿಲ್ಲ. ಅದು ಸಹಜ ಅಲ್ಲವೆ? ನಾನೂ ಮನುಷ್ಯನಲ್ಲವೆ? ಮಾನವ ಸಹಜವಾದ ಗುಣಗಳನ್ನು ಮೆರೆದಿದ್ದೇನೆ. ದೋಷಗಳೂ ನನ್ನಲ್ಲಿವೆ. ಇಲ್ಲವೆನ್ನುವುದಿಲ್ಲ. ಆದರೆ ದೋಷಗಳನ್ನು ತಿದ್ದಿಕೊಂಡಿದ್ದೇನೆ. ಈಗಲೂ ತಿದ್ದಿಕೊಳ್ಳುತ್ತಲೇ ಇದ್ದೇನೆ. ತಪ್ಪು ಮಾಡದ ಅಪ್ಪಗಳೇ ಇಲ್ಲ ಎಂಬುದಾಗಿ ನನಗೆ ನಾನೇ ಸೈದ್ಧಾಂತಿಸಿಕೊಂಡಿದ್ದೇನೆ. ನಾನು ದೊಡ್ಡ ಕವಿ, ಶ್ರೇಷ್ಠ ವಿಮರ್ಶಕ, ತಲಸ್ಪರ್ಶಿ ಸಂಶೋಧಕ ಅಲ್ಲದಿದ್ದರೂ ಅಹಂಭಾವದ ಮೊಟ್ಟೆಯಂತೂ ಆಗಿಲ್ಲ. ವಿನಯ ನನ್ನ ತಂದೆಯಿಂದ ಬಂದದ್ದು, ಸ್ವಾಭಿಮಾನ ನನ್ನ ತಾಯಿಯ ಬಳುವಳಿ, ಸಹಜತೆ ನನ್ನ ಹೆಂಡತಿಯ ಕೊಡುಗೆ. ಇವೆಲ್ಲವುಗಳಿಂದ ನಾನು ಪರಿಪೋಷಿತನಾಗಿದ್ದೇನೆ. ನನ್ನಾತ್ಮವನ್ನು ಬೆಳೆಸಿಕೊಂಡಿದ್ದೇನೆ. ಹೆತ್ತ ತಾಯಿಯಷ್ಟೇ. ಭಕ್ತಿಯನ್ನು ಹೊತ್ತ ನೆಲದ ಮೇಲೂ ಇಟ್ಟಿದ್ದೇನೆ. ನನ್ನ ತಾಯ್ನುಡಿಯನ್ನು ಅಷ್ಟೇ ಪ್ರಮಾಣದಲ್ಲಿ ಅಪ್ಪಿದ್ದೇನೆ. ನನ್ನ ಮಿತಿಯಲ್ಲಿ ನಾನು ದೇಶ ಸೇವೆ, ಸಮಾಜ ಸೇವೆ, ಸಾಹಿತ್ಯ ಸೇವೆ ಮಾಡಿದ್ದೇನೆ. ಆ ತೃಪ್ತಿ ನನಗಿದೆ. ನಾನು ಏನಾಗದಿದ್ದರೂ, ನಾನು ನಾನಾಗಿದ್ದೇನೆ, ಮನುಷ್ಯನಾಗಿದ್ದೇನೆ. ನನಗಷ್ಟು ಸಾಕು. ಅದಕ್ಕೂ ಮಿಗಿಲಾದ ಮುಕ್ತಿ ಎಂಬುದಿದ್ದರೆ, ಅದು ನನಗೆ ಬೇಡ.

ನಮಸ್ಕಾರ.

ಅನುಬಂಧಗಳು :

ಸಾಶಿಮ. ಸಾಹಿತ್ಯ ಸಂಪದ

I. ಕವಿತೆ :
ಶಿವ ತಾಂಡವ
ಕೆಂಗನಕಲ್ಲು (ರಾಜ್ಯ ಸರ್ಕಾರದ ಪ್ರಶಸ್ತಿ ಪಡೆದ ಕೃತಿ)
ವಿಪರ್ಯಾಸ
ಘೋಷವತಿ
ರಾಸಲೀಲೆ
ರೂಪಸಿ
ಸುರಭಿ
ನನ್ನ ಕವನಗಳು

II. ಸಂಶೋಧನೆ :
ಶೂನ್ಯ ಸಂಪಾದನೆಗೊಂದು ಮುನ್ನುಡಿ
ಮನೀಷ
ಕೆಳದಿಯ ಅರಸರು ಮತ್ತು ಕನ್ನಡ ಸಾಹಿತ್ಯ
(ಪಿಎಚ್.ಡಿ. ಮಹಾಪ್ರಬಂಧ)

III. ವಿಮರ್ಶೆ :
ಅಭಿವ್ಯಕ್ತಿ
ಭಾಸನ ಮಕ್ಕಳು
(ದೇವರಾಜ ಬಹದ್ದೂರ್ ಬಹುಮಾನಿತ ಕೃತಿ)
ಮಾಸ್ತಿಯವರ ಕಾವ್ಯ ಸಮೀಕ್ಷೆ
ಅನುಶೀಲನ

IV. ಶಾಸ್ತ್ರಸಾಹಿತ್ಯ :
ಭಾಷೆ : ಕನ್ನಡ ಭಾಷೆಯ ಚರಿತ್ರೆ
ವ್ಯಾಕರಣ : ಕೇಶಿ ರಾಜನ ಗರಡಿಯಲ್ಲಿ
(ಸಹಯೋಗ ಡಾ। ಶಾಲಿನಿ ವಿ. ಪ್ರಭು)
ಛಂದಸ್ಸು : ಛಂದೋ ಪ್ರಬಂಧಗಳು
(ಸಹಯೋಗ ಶ್ರೀಮತಿ ತ್ರಿವೇಣಿ ಶಿವಕುಮಾರ್)
ಕಲೆ : ಕಲಾ ಸಮೀಕ್ಷೆ
ಕಾವ್ಯ ಮೀಮಾಂಸೆ : ಅನ್ವಯಿಕ ಕಾವ್ಯ ಮೀಮಾಂಸೆ

V. ನಾಟಕ :
ಮರೀಬೇಡಿ (ಪ್ರಹಸನ)
ವಿಜಯ ವಾತಾಪಿ (ರಂಗನಾಟಕ)
ಸ್ವಪ್ನ ನಾಟಕ (ಅನುವಾದ)
ಎರಡು ನಾಟಕಗಳು (ರೂಪಾಂತರಗಳು)
ಶಿಶುಪಾಲ
ಜಗದಣ್ಣ ಬಸವಣ್ಣ
ಕೆಲವು ಹಿಂದಿ ಭಾಷಾಂತರಗಳು.

VI. ಕಥೆ, ಕಾದಂಬರಿ :
ನೆಲದ ಸೊಗಡು
ಪುರುಷ ಸಿಂಹ
ಹೇಮಕೂಟ,
ಸಾಮರಸ್ಯದ ಶಿಲ್ಪಿ
ಜನಪದ ಕತೆಗಳು

VII. ಜೀವನ ಚರಿತ್ರೆ :
ವಿಭೂತಿ ಪುರುಷರು
ಭಾರತರತ್ನ
ಶಿವಮೂರ್ತಿ ಶಾಸ್ತ್ರೀ
ಕೇಳು ಅನಿತಾ
ಹೂವ ತಂದವರು
ಅಪರೂಪದವರು
ಮಹಾ ಪ್ರಸಾದಿ
ಮುದ್ದಣ ದೇವರು
ಭಾರತೀಯ ಜ್ಞಾನಪೀಠ ಪ್ರಶಸ್ತಿ ವಿಜೇತ ಕನ್ನಡಿಗರು
ಬಲ್ಲವರ ಒಡನಾಟ

VIII. ಚಿಂತನ ಸಾಹಿತ್ಯ :
ವಚನ ಚಿಂತನ
ಮಳ್ಳಿಗೊಂದು ಒಳ್ಳೆ ಮಾತು
ಬದುಕು ಕ್ರೀಡಾರಂಗ

IX. ಮುನ್ನುಡಿಗಳು :
ಸ್ಪಂದನ
ಅವಲೋಕನ
ಪ್ರತಿಸ್ಪಂದನ

X. ಸಂಪಾದಿತ :
ಕೆಳದಿ ರಾಜಾಭ್ಯುದಯಂ
ಶ್ರೀ ಮರುಳಸಿದ್ದೇಶ್ವರ ಮಹಾ ಪುರಾಣಂ
ಶ್ರೀ ಚನ್ನಬಸವ ಶಿವಯೋಗಿಗಳ ಚರಿತ್ರೆ
ಹರಿಹರನ ಹತ್ತು ರಗಳೆಗಳು
ಕಾವ್ಯಾನಂದ
ವೀರಶೈವ ವಿಚಾರ ಸಂಕಿರಣ
ಸಾಹಿತ್ಯೋಪಾಸಕ
ಶೂನ್ಯ ಸಂಪಾದನೆ : ಒಂದು ಅಧ್ಯಯನ
ತೋಂಟದಾರ್ಯ ವಚನ ವ್ಯಾಖ್ಯೆ
ಶ್ರೀ ಸಿದ್ಧಲಿಂಗೇಶ್ವರ ಶತಕಂ
ಅರುವಿನಾಗರದಲ್ಲಿ
ಕನಕ ಸಂಪುಟ - ಭಾಗ ೨
ಅಕ್ಕಗಳ ವಚನಗಳು
ನೀಲಮ್ಮನ ವಚನಗಳು

XI. ನೃತ್ಯ ರೂಪಕಗಳು :
ಸಾಶಿಮ. ರೂತ್ಯರೂಪಕಗಳು
(೨೫ ರೂಪಕಗಳು)
ಸ್ನೋವೈಟ್ ಮತ್ತು...
(೧೦ ರೂಪಕಗಳು)
ಹೋರಾಟದ ಹೆಜ್ಜೆಗಳು
(೮ ನೃತ್ಯ ರೂಪಕಗಳು)
ಒಟ್ಟು ೪೩ ನೃತ್ಯ ರೂಪಕಗಳು.

XII. ಇತರೆ :
ಸಿದ್ಧಗಿರಿ (ಕ್ಷೇತ್ರ ಪರಿಚಯ)
ಕನ್ನಡ ಪಡೆನುಡಿಗಳು (ಕೋಶ)

XIII. ಧ್ವನಿ ಸುರಳಿಗಳು :
ಬಾರೊ ಮೈಲಾರಕೆ
ಸ್ನೋವೈಟ್
ಭಾವ ಸಂಗಮ
ಮದುವೆ, ಮದುವೆ, ಮದುವೆ
ಭಾವ ದೀಪ್ತಿ
ಗೀತ ಭಾರತಿ
ಎಡೆಯೂರು ಸಿದ್ಧಲಿಂಗೇಶ್ವರರ ಭಕ್ತಿ ಗೀತೆಗಳು







ನಾನೊಬ್ಬ ಕನಸುಗಾರ. ಹಲವಾರು ಸುಂದರ ಸ್ವಪ್ನಗಳನ್ನು
ಕಟ್ಟಿಕೊಂಡು ಬದುಕಿದೆನೆಂದು ತೋರುತ್ತದೆ. ಚಿಕ್ಕಂದಿ
ನಿಂದಲೂ ನಾನು ಅದಾಗಬೇಕು, ಇದಾಗಬೇಕು
ಎಂಬೆಲ್ಲ ಹಂಬಲಗಳನ್ನು ತುಂಬಿಕೊಂಡಿದ್ದೆ. ತುಂಬ
ಆಶಾವಾದಿಯಾಗಿಯೇ ಬದುಕಿನ ದಾರಿಯಲ್ಲಿ ಹೆಜ್ಜೆ
ಹೆಜ್ಜೆ ಇಟ್ಟೆ. ನನ್ನ ಹಲವು ಆಸೆಗಳು ಹಣ್ಣಾಗಿವೆ,
ಕೆಲವು ಮಣ್ಣಾಗಿವೆ. ಅವು ಈಡೇರಿದ್ದರಿಂದ ಹಿಗ್ಗಿಲ್ಲ,
ಈಡೇರದಿದ್ದರಿಂದ ಕುಗ್ಗಿಲ್ಲ. ಆದರೂ ಜಗದ ನೋವು
ನನ್ನೆದೆಯನ್ನು ಮುಟ್ಟಿಯದಲ್ಲ. ಅದು ಸಹಜ ಅಲ್ಲವೆ?
ನಾನೂ ಮನುಷ್ಯನಲ್ಲವೆ? ಮಾನವ ಸಹಜವಾದ ಗುಣ
ಗಳನ್ನು ತುಂಬಿಕೊಂಡಿದ್ದೇನೆ. ದೋಷಗಳೂ ನನ್ನಲ್ಲಿವೆ.
ಇಲ್ಲವೆನ್ನುವುದಿಲ್ಲ. ಆದರೆ ದೋಷಗಳನ್ನು ತಿದ್ದಿಕೊಂಡಿದ್ದೇನೆ.
ಈಗಲೂ ತಿದ್ದಿಕೊಳ್ಳುತ್ತಲೇ ಇದ್ದೇನೆ. ನನ್ನ ಮಾತಿನ
ತಪ್ಪುಗಳಿಲ್ಲ ಎಂಬುದಾಗಿ ನನಗೆ ನಾನೇ ಸ್ವಾಂತ್ವನ
ಕೊಂಡಿದ್ದೇನೆ. ನಾನು ದೊಡ್ಡವ, ಶ್ರೇಷ್ಠ ವಿಚಾರಕ,
ತಲಸ್ಪರ್ಶಿ ಸಂಶೋಧಕ ಎನ್ನುವ ಹಮ್ಮಿನವ
ಹೊಟ್ಟೆ ಅಲ್ಲ. ವಿನಯ ನನ್ನ ತಂದೆಯಿಂದ ಬಂದದ್ದು;
ಸ್ವಾಭಿಮಾನ ನನ್ನ ತಾಯಿಯ ಬಳುವಳಿ; ಸಹಜತೆ ನನ್ನ
ಹುಟ್ಟಿನ ಗುಣ. ಇವೆಲ್ಲವುಗಳಿಂದ ನಾನು
ಸಂತೋಷವಾಗಿದ್ದೇನೆ; ನನ್ನದೇ ನನ್ನ ಬೆಳೆಸಿಕೊಂಡಿ
ದ್ದೇನೆ. ಹುಟ್ಟು ತಾಯಿಯ ಪ್ರೀತಿಯನ್ನು ಹೊತ್ತು
ನೆಲದಮೇಲೂ ಇಟ್ಟಿದ್ದೇನೆ. ನನ್ನ ತಾಯ್ನುಡಿಯನ್ನು
ಒಪ್ಪಿ ಉಪಾಸಕನಾಗಿದ್ದೇನೆ. ನನ್ನ ಮತಿಯಲ್ಲಿ
ನಾನು ಕಥೆ ಹೇಳಿ, ನಾಟಕ ಹೇಳಿ, ಕಾದಂಬರಿ ಹೇಳಿ
ಮಾಡಿದ್ದೇನೆ. ಆ ತೃಪ್ತಿ ನನಗಿದೆ. ನಾನು ಸಾಮಾನ್ಯರೊಳಗಿರುವ
ಮನುಷ್ಯನಾಗಿದ್ದೇನೆ. ನನಗಷ್ಟು ಸಾಕು. ಅದಕ್ಕೆ
ಜನರ ಪ್ರೀತಿ ಬಂದಿದ್ದರೆ, ಅದು ನನಗೆ ಬೇಕು.

ನಾ. ಡಿ'ಸೋಜ